5-5-69

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

~~ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.~~

ಜಾತಿಸಾಂಕರ್ಯವು ವೀರಶೈವ ತತ್ವವಲ್ಲ.

ವೀರಶೈವ ಮತವು ವೇದಾಗಮಾದಿ ಸರ್ವಮಾನ್ಯಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಬ್ರಾಹ್ಮಣಾದಿ ನಾಲ್ಕು ವರ್ಣದವರಲ್ಲಿಯೂ ಅನೇಕರು ಈ ಮತದ ಧರ್ಮಾಚರಣೆಗಳನ್ನು ವಿಶ್ವಾಸದೊಡನೆ ಅನುಷ್ಠಿಸಿ ಕೃತಾರ್ಥರಾಗುತ್ತಿರುವದು ಬಹುಕಾಲದಿಂದ ನಡೆದುಬಂದ ಸಂಗತಿಯಾಗಿದೆಯಷ್ಟೆ! ಆದರೆ ಗಂಡು ಹೆಣ್ಣು ಎಂಬುದೆರಡೇ ಜಾತಿ, ಬೇರೆಬೇರೆ ಕುಲಜಾತಿಗಳೆಂಬುದೆಲ್ಲ ಸುಳ್ಳೆಂದು ಗಳಹುವ ಕೆಲವು ಜನರ ಹಾವಳಿಯು ಇತ್ತೀಚೆಗೆ ದಿನೇದಿನೇ ಹೆಚ್ಚಾಗುತ್ತ ನಡೆದು ಎಲ್ಲಿ ನೋಡಿದಲ್ಲಿ ಜಾತಿ ಸುಳ್ಳು, ಕುಲ ಸುಳ್ಳು, ಮನುಷ್ಯರೆಂಬುವರೆಲ್ಲರೂ ಒಬ್ಬ ದೇವರ ಮಕ್ಕಳು, ಯಾರಾದರೇನು, ಬೇಕಾದವರು ಪರಸ್ಪರ ರೋಟಿ, ಬೇಟಿ ವ್ಯವಹಾರವನ್ನು ನಿರಾತಂಕವಾಗಿ ಮಾಡಬಹುದು ಎಂಬ ತಮ್ಮ ಸ್ವೇಚ್ಛಾಚಾರ ಸಿದ್ಧಾಂತವನ್ನು ರಾದ್ಧಾಂತಗೊಳಿಸಲು ಹೆಣಗುವ ಬುದ್ಧಿವಂತರಲ್ಲಿ ಕೆಲವು ಲಿಂಗಧಾರಿಗಳು ಕಲೆಯುತ್ತಿದ್ದಾರೆ. ಇವರಲ್ಲಿ ಮುಂದಾಳುಗಳೆನಿಸುವ ಯಾವ, ಯಾವ ತಿರುಕರೇ ಆಗಲಿ ಅಥವಾ ಬೇರೆ ನಟವಿಟಾದಿಗಳ ವಂಶೀಯರಾಗಲಿ ಅವರೆಲ್ಲ ಅವ್ಯಾಪಾರವ್ಯಾಪೃತರೆಂದೇ ಹೇಳಿಸಿಕೊಳ್ಳುವರಲ್ಲವೇ? ಯಾರು ವೇದ ಬಾಹ್ಯರೋ ಅವರಿಗೆ ಮಾತ್ರ ಜಾತಿಸಾಂಕರ್ಯವೆಂಬುದು ಒಂದು ತತ್ವವಾಗಿರಬಹುದು. ಆದರೆ ವೇದಾಗಮ ಪ್ರತಿಪಾದಿತವಾದ ವೀರಶೈವತತ್ವಮಣಿಮಾಲಿಕೆಯಲ್ಲಿ ಜಾತಿಸಾಂಕರ್ಯವೆಂಬ ಹುಳುಕು ಕವಡಿಯೊಂದನ್ನು ಪೋಣಿಸಿ ಶುದ್ಧವಂಶೀಯರಾದ ವೀರಶೈವರ ಕೊರಳಿನಲ್ಲಿ ಹಾಕಬೇಕೆಂಬ ಹವ[illegible] ಎಂದೂ ಫಲಿಸದು. ~~ವೀರಶೈವ ಮತದಲ್ಲಿ ಸರ್ವಶಿಷ್ಟಾಂಗೀಕಾರಯೋಗ್ಯವಾದ ಉತ್ಕೃಷ್ಟತಮ ತತ್ವಗಳನೇಕ ಇರುತ್ತಿರಲು ಅವುಗಳಲ್ಲಿ ಯಾವುದಾದರೊಂದು ತತ್ವದ ಪ್ರಚಾರಕ್ಕಾಗಿ ಈ ಸಂಘವು ಪ್ರಯತ್ನಪಡುವದಾದರೆ ಅದರಿಂದ ವೀರಶೈವ ಮತತತ್ವಪ್ರಚಾರದ ಉದ್ದೇಶವನ್ನಾದರೂ ನೆರವೇರಿ ಸಂತೋಷವಾಗುತ್ತದೆ.~~ ವೀರಶೈವ ಮತದಲ್ಲಿ ಜಾತಿಸಾಂಕರ್ಯವೆಂಬುದು ಒಂದು ತತ್ವವಿದೆ ಎಂದು ಅಪಲಪಿಸುವವರು ವೀರಶೈವ ಸಿದ್ಧಾಂತಾನುವರ್ತಿಗಳಲ್ಲವೆಂದೇ ಹೇಳಬಹುದು. ವೀರಶೈವ ಮತತತ್ವಗಳಾದರೋ ವೇದಾಗಮೋಪನಿಷತ್ತುಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ವೇದಾಗಮೋಪನಿಷತ್ತುಗಳಲ್ಲಿಯೇ ಜಾತಿಸಾಂಕರ್ಯವೆಂಬುದು ಒಂದು ತತ್ವವೆಂದು ಪ್ರತಿಪಾದಿಸಲ್ಪಡದಿರಲು ಅದು ವೀರಶೈವಮತದಲ್ಲಿ ಹೇಗೆತಾನೇ ಒಂದು ತತ್ವವಾಗಿ ಸಿದ್ಧಿಸುವದು? ವೇದಾಗಮಗಳೊಪ್ಪದ ಜಾತಿಸಾಂಕರ್ಯವನ್ನು ವೀರಶೈವ ಮತಸ್ಥಾಪನಾಚಾರ್ಯರಾದರೋ ಅದುಹೇಗೆತಾನೇ ಸಮ್ಮತಿಸುವರು? ಶ್ರೀ ಸ್ವಯಂಭು ಆಗಮಕ್ಕೆ ಗಂಭೀರವಾದ ವೃತ್ತಿಯನ್ನು ಬರೆದ ದಿವ್ಯಾಗಮರಹಸ್ಯಾರ್ಥಬೋಧಕರಲ್ಲಿ ಮುಂದಾಳುಗಳಾದ ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯರು ಮೋಕ್ಷಕಾರಿಕೆಯಲ್ಲಿ,

ನಚಸ್ವಗೋಚರೇ ತಾಸಾಂ ಬಾಧತೇ ತತ್ಪ್ರಮಾಣವತ್ |
ತಾಸು ವರ್ಣಾಶ್ರಮಾಚಾರಾನಧ್ಯನುಜ್ಞಾತವತ್ತತ್ ||
ನಚಾನ್ಯೇನ ಪ್ರಮಾಣೇನ ಸಂರುದ್ಧಸ್ತಸ್ಯಗೋಚರಃ |
ಶ್ರೋತ್ರಿಯೈರಪ್ಯತೋಗ್ರಾಹ್ಯಂ ತತ್ಫಲಾಧಿಕಸಾಧನಂ ||

ಎಂಬ ನುಡಿಗಳಿಂದ ವೇದಗಳಲ್ಲಿ ವರ್ಣಾಶ್ರಮಾಚಾರಂಗಳು ವಿಧಿಸಲ್ಪಡುವಂತೆ ಶಿವಾಗಮಗಳಲ್ಲಿಯೂ ವರ್ಣಾಶ್ರಮಾಚಾರದ ಕಟ್ಟಳೆಯುಂಟೆಂಬಭಿಪ್ರಾಯವನ್ನು ತೋರಿಸಿದ್ದಾರೆ.

ಸ್ವಾಯಂಭು ಆಗಮದಲ್ಲಿ,

ಅಥಾಚಾರ್ಯವರಃ ಶ್ರೀಮಾನಗ್ರಜನ್ಮಾ ಸುವೇಶಲಃ |

ಎಂಬ ವಾಕ್ಯವು ಲಿಂಗಧಾರಿಗಳಾದ ಬ್ರಾಹ್ಮಣಾದಿ ನಾಲ್ಕು ವರ್ಣದವರಲ್ಲಿ ಗುರುತ್ವವಾದರೋ ಬ್ರಾಹ್ಮಣನಿಗೇ ಇರುವದೆಂದು ವಿಧಿಸುವದು. ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೂ ಸಾಧಕದೀಕ್ಷಾದಿಗಳನ್ನು ಪಡೆಯುವದರಲ್ಲಿ ಅಧಿಕಾರವಿದೆ. ಆದರೂ ಗುರುತ್ವವು ಬ್ರಾಹ್ಮಣನಿಗೆ ಉಂಟೆಂಬ ಮೇಲೆ ತೋರಿಸಿದ ಸ್ವಾಯಂಭು ಆಗಮದ ವಾಕ್ಯದ ಅರ್ಥವನ್ನೇ ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯರು ಹೀಗೆ ಪಠಿಸುತ್ತಾರೆ.

ದೀಕ್ಷಾಯಾಂ ಸಾಧಕತ್ವೇಚ ಚತುರ್ಣಾಂ ವರ್ಣಿನಾಮಿಹ |
ಅಧಿಕಾರೋ ಗುರುತ್ವೇನ ಬ್ರಾಹ್ಮಣಸ್ಯೈವ ಕೀರ್ತಿತಃ ||೯೯||

ಮತ್ತು ಶ್ರೀ ಶಿವಾಗಮಗಳು ಶಿವದೀಕ್ಷೆಯನ್ನು ಪಡೆದ ಬೇರೆ ಬೇರೆ ವರ್ಣಾಶ್ರಮಿಗಳು ಶಿವಭಕ್ತಿ, ಶಿವಪೂಜೆ, ಶಿವವ್ರತ, ಶಿವಧ್ಯಾನ, ಶಿವಜ್ಞಾನ ಎಂಬೀ ಶಿವಯೋಗಾಂಗಗಳ ಅನುಸಂಧಾನ ಬಲದಿಂದ ಶಿವೋಹಂ ಭಾವನೆಯು ಬಲಿದು ಜೀವನ್ಮುಕ್ತರಾದರೂ ಶಿವೋಕ್ತಗಳಾದ ತಮ್ಮ ತಮ್ಮ ವರ್ಣಾಶ್ರಮಾಚಾರಗಳನ್ನು ಉಲ್ಲಂಘಿಸಿ 'ಅಹಂ ಬ್ರಹ್ಮ' ಎಂಬ ಹೆಮ್ಮೆಯಿಂದ ಯಥೇಷ್ಟಾಚಾರಪರರಾಗಬಾರದೆಂದು ವಿಧಿಸುತ್ತವೆ. ಇದೇ ಅರ್ಥವನ್ನು ಪ್ರತಿಪಾದಿಸತಕ್ಕ ಶಿವಾಗಮದ ವಾಕ್ಯವನ್ನು ಶ್ರೀ ಅಘೋರ ಶಿವಾಚಾರ್ಯರು ಮೃಗೇಂದ್ರಾಗಮದ ದೀಪಿಕೆಯಲ್ಲಿ ಉದಾಹರಿಸಿದ್ದಾರೆ, ಅದು ಹೇಗೆಂದರೆ—

ಇತಿ ವರ್ಣಾಶ್ರಮಾಚಾರಾನ್ ಮನಸಾಪಿನಲಂಘಯೇತ್ |
ಯೋಯಸ್ಮಿನ್ನಾಶ್ರಮೇ ತಿಷ್ಠೇತ್ ಪ್ರಾಪ್ತೇ ದೀಕ್ಷಾಂ
ಶಿವಾತ್ಮಿಕಾಂ ||
ಸತಸ್ಮಿನ್ನೇವ ಸಂತಿಷ್ಠೇಚ್ಛಿವಧರ್ಮಾಂಶ್ಚ ಪಾಲಯೇತ್ |

ಈ ರೀತಿಯಾಗಿ ಶಿವಾಗಮಗಳೂ ಆ ದಿವ್ಯಾಗಮಗಳ ರಹಸ್ಯಾರ್ಥಪ್ರವರ್ತಕರೂ ಶಿವಸಂಸ್ಕಾರ ಯುತರಲ್ಲಿ ವರ್ಣಾಶ್ರಮಾಚಾರಗಳನ್ನು ಪ್ರತಿಪಾದಿಸುತ್ತಿರುವದು, ಸರ್ವತ್ರ ಶಿಷ್ಟಜನೋಪಾದೇಯವಾಗಿರುವುದು. ಹಾಗೂ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಭಗವತ್ಪಾದರು—

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾತಯಃ |
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ||

ಎಂಬದಾಗಿ ಸಿದ್ಧಾಂತ ಶಿಖಾಮಣಿಯ ಒಂಭತ್ತನೆಯ ಪರಿಚ್ಛೇದದಲ್ಲಿ ಹೇಳಿರುವದೇನೆಂದರೆ, ಶಿವದೀಕ್ಷೆಯನ್ನು ಪಡೆದ ದ್ವಿಜರು ತ್ರೈವರ್ಣಿಕರು ತಮ್ಮಂತೆಯೇ ಶಿವಸಂಸ್ಕಾರವನ್ನು ಪಡೆದು ವೀರಶೈವ ಮತೋಚಿತಾಚಾರ ನಿಷ್ಠರಾದ ಸ್ವಜಾತಿಯವರ ಮನೆಗಳಲ್ಲಿಯೂ, ಅವರ ಪಂಕ್ತಿಯಲ್ಲಿಯೂ ಭೋಜನ ಮಾಡಬೇಕು. ಇತರ ಜಾತಿಯವರಲ್ಲಿ ಭೋಜನ ಬಳಕೆಮಾಡಲಾಗದು. ಮತ್ತು

ಸ್ವಮಾರ್ಗಾಚಾರವರ್ತಿಭ್ಯಸ್ಸ್ವಜಾತಿಭ್ಯಸ್ಸದಾವ್ರತೀ |
ದದ್ಯಾತ್ಕನ್ಯಾಃ ಸಮಾದದ್ಯಾತ್ಕನ್ಯಾಂ ಕುಲಸಮುದ್ಭವಾಂ||

ಎಂಬ ವಾಕ್ಯದಿಂದ ಅಪ್ರತಿಹತ ಶಿವವ್ರತಾಚಾರ ಸಂಪನ್ನನಾದ ದ್ವಿಜನು ತನ್ನ ಕುಲದಲ್ಲಿ ಹುಟ್ಟಿದ ಕನ್ನೆಯನ್ನು ಸ್ವಮಾರ್ಗಾಚಾರವರ್ತಿಗಳಾದ ತನ್ನ ಜಾತಿಯವರಿಗೇ ಕೊಡಬೇಕು. ಹಾಗೂ ಅಂತಹ ತನ್ನ ಜಾತಿಯವರಲ್ಲಿಯೇ ಕನ್ನೆಯನ್ನು ತೆಗೆದುಕೊಳ್ಳಬೇಕು, ಎಂದು ಕಟ್ಟಪ್ಪಣೆಮಾಡಿದ್ದಾರೆ. ಇನ್ನು—

ಬ್ರಾಹ್ಮಣಃ ಕ್ಷತ್ರಿಯೋವಾಪಿ ವೈಶ್ಯೋ ವಾ ಶೂದ್ರ ಏವವಾ |
ಅಂತ್ಯಜೋ ವಾ ಶಿವೇಭಕ್ತಃ ಶಿವವನ್ಮಾನ್ಯ ಏವಸಃ ||
ಶಿವಭಕ್ತಿ ಸಮಾವೇಶೇತ್ವ ಜಾತಿಪರಿಕಲ್ಪನಾ |
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕಲ್ಪ್ಯತೇ ||

ಎಂಬೀ ಮುಂತಾದ ವಾಕ್ಯಗಳಾದರೋ ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ, ಅಂತ್ಯಜನಾಗಲೀ ಯಾವ ಜಾತಿಯವನಾದರೂ ಶಿವಭಕ್ತಿ, ಶಿವಪೂಜೆ, ಶಿವಧ್ಯಾನ, ಶಿವಜ್ಞಾನಾದಿಗಳಲ್ಲಿ ಅಧಿಕಾರವಿದೆ ಎಂಬ ಭಾವವನ್ನು ಬೋಧಿಸುವವಲ್ಲದೆ ವರ್ಣಾಶ್ರಮಧರ್ಮಗಳ ಲೋಪವನ್ನು ವಿಧಿಸುವದಿಲ್ಲ. ಪಾರಮಾರ್ಥಿಕ ವಿಚಾರವನ್ನು ತಿಳಿದು ಅದರಂತೆ ನಡೆದು ಕೃತಾರ್ಥರಾಗಲು ಸರ್ವರಿಗೂ ಅಧಿಕಾರವಿದೆ. ಆ ವಿಷಯದಲ್ಲಿ ಸ್ತ್ರೀ-ಪುರುಷ ಅಥವಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಇತ್ಯಾದಿ ಜಾತಿಭೇದವಿರುವದಿಲ್ಲ. ಅಂತೇ ಗೀತೆಯಲ್ಲಿ ಭಗವಂತನು—

ಮಾಂಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ |
ಸ್ತ್ರಿಯೋವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿಪರಾಂಗತಿಂ ||

ಎಂಬುದಾಗಿ ಉಪದೇಶಿಸಿದ್ದಾನೆ. ಶಿವಭಕ್ತನು, ಶಿವಧ್ಯಾನಪರಾಯಣನೂ, ಶಿವಪೂಜಕನೂ, ಶಿವಜ್ಞಾನಿಯೂ ಆದ ಮನುಷ್ಯನು ಯಾವ ಜಾತಿಯವನಾದರೇನು, ಅವನು ಶಿವನಿಗೆ ಪ್ರಿಯನಾಗಿರಲು ಇತರರಿಗೆ ಹೇಗೆತಾನೇ ಅಮಾನ್ಯನಾಗುವನು? ಗುಣಗ್ರಾಹಿಗಳು ಅವನ ಜಾತಿಯಕಡೆಗೆ ಲಕ್ಷ್ಯಗೊಡುವರೇ? ಅಂತೇ ಶ್ರೀ ಶಂಕರಾಚಾರ್ಯರು ಮನೀಷಾಪಂಚಕದಲ್ಲಿ—

ಜಾಗ್ರತ್ಸ್ವಪ್ನ ಸುಷುಪ್ತಿಷು ಸ್ಫುಟತರಾಯಾಸಂವಿದುಜ್ಜೃಂಭತೇ |
ಯಾಬ್ರಹ್ಮಾದಿಪಿಪೀಲಿಕಾಂತತನುಷು ಪ್ರೋತಾ ಜಗತ್ಸಾಕ್ಷಿಣೀ |
ಸೈವಾಹಂ ನಚದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಸ್ತಿಚೇತ್ |
ಚಂಡಾಲೋಸ್ತು ಸತುದ್ವಿಜೋಸ್ತು ಗುರುರಿತ್ಯೇಷಾ ಮನೀಷಾ
ಮಮ ||

ಎಂಬುದಾಗಿ ಶಿವಜ್ಞಾನಿಯಾದವನು ಹೊಲೆಯನಿರಲಿ ಅಥವಾ ಬ್ರಾಹ್ಮಣನಿರಲಿ ಯಾವನಾದರೇನು ಅವನು ನನಗೆ ಪೂಜ್ಯನೇ ಎಂಬುದಾಗಿ ಶಿವಜ್ಞಾನಿಗಳಲ್ಲಿ ತಮ್ಮ ಪೂಜ್ಯಭಾವನೆಯನ್ನು ಮನಃಪೂರ್ವಕವಾಗಿ ತೋರಿಸುವ ಮೂಲಕ ಬ್ರಹ್ಮೈಕ್ಯ ಜ್ಞಾನದ ಮೆಲ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಇಷ್ಟುಮಾತ್ರದಿಂದ ಅವರು ತಮ್ಮ ವರ್ಣಾಶ್ರಮಧರ್ಮಮರ್ಯಾದೆಯನ್ನು ಉಲ್ಲಂಘಿಸಿ ವ್ಯವಹರಿಸಿದರೆಂದಾಗಲೀ ಹಾಗೆ ಪರರಿಗೆ ಬೋಧಿಸಿದರೆಂದಾಗಲೀ ಸಿದ್ಧವಾಗುವದೇ? ಬಲ್ಲವರು ಅವರು ಬರೆದ ಪ್ರಸ್ಥಾನತ್ರಯಭಾಷ್ಯಗಳನ್ನಾದರೂ ಪರಿಶೀಲಿಸಿನೋಡಲಿ. ಹೀಗೆ ವೇದಾಗಮಗಳಿಂದಲೂ ಪೂರ್ವಾಚಾರ್ಯರ ನಡೆನುಡಿಗಳಿಂದಲೂ ಸರ್ವರಿಗೂ ತಮ್ಮ ತಮ್ಮ ವರ್ಣಾಶ್ರಮ ಧರ್ಮಪರಿಪಾಲನೆಯು ವಿಹಿತವಾದುದೆಂದು ಸಿದ್ಧವಾಗುವುದು. ಈ ವಿಷಯವನ್ನು ಈವರೆಗೆ ಶಿಷ್ಟರು ಪ್ರತ್ಯಕ್ಷ ಆಚರಿಸುತ್ತಿರುವರು. ಆದರೆ ವೇದದ ಹೊರಕಟ್ಟಿನ ಆಗಮದ ಮಣಿಗುಳೆಯುಳ್ಳ ಬಸವನ ವಚನವನ್ನು ಪ್ರಮಾಣವೆಂದು ನಂಬುವವರಿಗೆ ಈ ಮೇಲೆ ಹೇಳಿದ ಸತ್ಪ್ರಮಾಣವಾದ ವಾಕ್ಯವು ಹೇಗೆತಾನೇ ಒಪ್ಪಿಗೆಯಾದೀತು? ಪ್ರಾಕೃತನಾದ ಆ ಬಸವನು ವೀರಶೈವಮತದ ಕೆಲವು ತತ್ವಗಳನ್ನು ಬಹಿರಂಗವಾಗಿ ಅಂಗೀಕರಿಸಿರಬಹುದು. ಆದರೆ ಅಷ್ಟುಮಾತ್ರದಿಂದೇ ಅವನಿಗೆ ವೀರಶೈವಮತಪರನೆಂದು ಹೇಳುವದೇ ಕಷ್ಟವಾಗಿದೆ. ಏಕೆಂದರೆ— ಅವನು ತನ್ನನ್ನು ವೀರಶೈವನೆಂದು ಭಾವಿಸಿದ್ದಿಲ್ಲವೆಂದು ಕಂಡುಬರುತ್ತದೆ. ಅಂತೇ ಅವನ ವಚನಗಳೆಂದು ಈಚೆಗೆ ಬೈಲಿಗೆ ಬಂದಿರುವ ಕನ್ನಡಮಾಡಿಗಳಲ್ಲಿ ವೀರಶೈವ ಎಂಬ ಶಬ್ದದ ಪ್ರಯೋಗವಾಗದಿರುವದು ಆ ಬಸವಪಂಥಿಗಳ ದುರದೃಷ್ಟವೆಂದೇ ಹೇಳಬೇಕಲ್ಲವೇ? ಹೀಗಿರಲು ಜಾತಿಸಾಂಕರ್ಯಪ್ರಿಯರಾದ ಕೆಲವರು ತಮ್ಮ ಇಷ್ಟಾರ್ಥಸಾಧನೆಗೋಸ್ಕರ ಬಸವನ ಕೆಲವು ನುಡಿಗಳ ಮುಂದೆಮಾಡಿ ಹೋರಾಡುತ್ತಿರುವರು. ಇಷ್ಟೇ ಅಲ್ಲ. ತಮ್ಮ ಮತದ ಬಯಕೆಯನ್ನೀಡೇರಿಸಿಕೊಳ್ಳಲು ಶುದ್ಧವಂಶೀಯರಾ ವೀರಶೈವರಲ್ಲಿಯೂ ಕೆಲವರನ್ನು ಒಂದೆರಡು ಕೃತ್ರಿಮಕ್ರಿ ಗಳ ಬಲೆಯನೊಡ್ಡಿ ವಶಪಡಿಸಿಕೊಳ್ಳಲು ಯತ್ನಿಸುತ್ತಿರುವ ಜಾತಿಸಾಂಕರ್ಯವನ್ನು ಹಬ್ಬಿಸಬೇಕೆಂದು ಮನದಲ್ಲಿ ಮಂ ಯನ್ನು ಮಾಡಿದ ಮಂದಿಗೆ ಮಾದರಸನ ಮಗನಾದ ಬಸವ ಅದರಿಂದ ಕೋಟಲೆಗೊಳಗಾಗಿ ತನ್ನನುಯಾಯಿಗಳನ್ನು ಶಾಸನಕ್ಕೆ ಗುರಿಮಾಡಿ 'ಸ್ವಯಂನಷ್ಟಃ ಪರಾನ್ನಾಶಯತಿ' ಎ ಗಾದೆಯಂತೆ ಕೊನೆಗೆ ತಾನೂ ಪ್ರಾಯೋಪವೇಶದಿಂದ ಪ್ರಾ ವನ್ನು ನೀಗಿದನು. ಹೀಗೆ ಆ ಕಾಲದಲ್ಲಿ ಆ ಬಸವನ ಜಾತಿ ಅಪಸ್ವರವಾಗಿರಲು ಈ ಇಂದಿನ ಕಾಲದಲ್ಲಿ ಮೈದೋರಿ ಬಸವನ ಪಂಥಿಗಳು ವೀರಶೈವ ದ್ವಿಜರಲ್ಲಿ ಲಿಂಗಧಾರಣಸಾ ದಿಂದ ಬಾದರಾಯಣಸಂಬಂಧವನ್ನು ಕಲ್ಪಿಸಿ ಹೆಣಗಾಡುವ ಯಾದರೋ ಕೇಲೋತ್ಪಾಟಿತ ಕಪಿಯ ಅವ್ಯಾಪಾರೇಷು ವ್ಯಾ ರವನ್ನು ಹೋಲುವದಲ್ಲವೇ? ಮತ್ತು ಜಾತಿಸಾಂಕರ್ಯಗೊ ಸುವದು ಬಸವನ ತತ್ವವೆಂದು ಪ್ರಸಿದ್ಧಗೊಳಿಸದೆ ವೀರಶೈವತ ವೆಂಬ ಹೊಳಪಿನ ಗಿಲೀಟನ್ನು ಮೇಲೆಮಾಡಿ ಲಿಂಗಧಾರಣವ ಒಂದು ಕುಂಟ ನೆವವನ್ನು ಮುಂದುವರಿಸಿ ಶುದ್ಧವಂಶೀಯರಾ ಕೆಲವು ವೀರಶೈವರನ್ನು ತಮ್ಮ ವಾಗ್ಜಾಲದಿಂದ ಮರುಳುಗೊ ಸಲು ಸಾಹಸಪಡುತ್ತಿರುವ ಈ ಅರ್ಥಮಂಡಿಗಳ ಮನೋರಥ ಕೊನೆಗೆ ಹುಲಿದೊಗಲನ್ನು ಹೊದ್ದ ಮಡಿವಾಳನ ಕತ್ತೆಯ ಮಾ ಮಂದಿಗೆಯ ಪರಿಣಾಮವನ್ನು ಸಂಗಟ್ಟುವದೆಂದೂ ಕೈಯೆತ್ತಿ ಹೇ ಬಹುದು.

ಗುರುಲಿಂಗಪ್ಪ ಜಗದೀಶಪ್ಪ ಅಂಬ
ವಿಜಾಪೂರ.

ಬ್ರಹ್ಮತೇಜಸ್ಸಿಗೆರಗುವ ಪತಂಗಗಳು.

ಲೇಖಕ—'ದೈವಜ್ಞ ವಿನೋದ' ಶಿರೋಳ.

ವೈದಿಕಧರ್ಮದ ತಿರುಳನ್ನರಿಯದ ಕೆಲಮರುಳರು ಜಗನ್ಮಾ ರಾದ ಸಪ್ತರ್ಷಿಗಳಲ್ಲಿ ಗಣನೆಯಾದ ಅಗಸ್ತ್ಯಾದಿ ಮಹರ್ಷಿಗ ವರನ್ನು ಜಾತಿಸಂಕರರೆನ್ನುವಲ್ಲಿ ಎನಿಸುವ ದುರ್ಬುದ್ಧಿ ಪ್ರಲಾ ವನ್ನು ಪಠಿಸತೊಡಗಿದ್ದನ್ನು ನೋಡಿ ಪರಮವಿಷಾದವಾಗುತ್ತ ಶ್ರುತಿದೇವಿಯಿಂದ ಹೊಗಳಲ್ಪಟ್ಟ ಬ್ರಹ್ಮತೇಜಸ್ಸಿನ ಪ್ರಭಾವ ಗೂಗೆಗಳಿಗೆ ಹೇಗೆ ಗೊತ್ತಾಗಬೇಕು? ಆ ಜಗದ್ವಂದ್ಯರಾ ಬ್ರಹ್ಮರ್ಷಿಗಳು ತಮ್ಮ ಆಯುರ್ದಾಯವನ್ನೇ ಧಾರೆಯೆರೆ ವರ್ಣಾಶ್ರಮ ವ್ಯವಸ್ಥೆಯಬಗ್ಗೆ ಲೋಕಮಾನ್ಯಗಳಾದ ಗ್ರಂಥ ಗಳನ್ನು ಬರೆದಿಡುತ್ತಿದ್ದಿಲ್ಲ. ಶಂಕರಾಚಾರ್ಯರೇ ಆಗಲಿ ರಾಮಾನುಜಾಚಾರ್ಯರೇ ಆಗಲಿ, ಬ್ರಹ್ಮಸೂತ್ರಗಳ ಮೇಲೆ ಭಾಷ್ಯ ದಿಗಳನ್ನು ರಚಿಸಿ ಸ್ವಮತರಕ್ಷಣೆಗಾಗಿ ಚತುರ್ವರ್ಣಾಶ್ರಮಗ ವಿಭಾಗವನ್ನು ಮಾಡುತ್ತಿರಲಿಲ್ಲ. ಚಾತುರ್ವರ್ಣ್ಯ ವ್ಯವಸ್ಥೆಯ ಲೋಕಹಿತಕಾರಿಯೂ ಸಮಾಜೋದ್ಧಾರಕವೂ ಆಶ್ರೋತ್ರಿಯ ಕವೂ ಆಗಿರುವುದೆಂಬುವದು ಸಂಕರವರ್ಗಕ್ಕೆ ಹೇಗೆ ಗೊತ್ತಾ ಬೇಕು? ಆರ್ಯಮಹರ್ಷಿಗಳ ಬ್ರಹ್ಮತೇಜೋಬಲವನ್ನು ಅರಿಯ ಮಂದಮತಿಗಳು ಅವರ ನಿಂದೆಯನ್ನು ಬಿಡುವದು ವಿಹಿತವಾ ದುದು. ಆ ಮಹರ್ಷಿಗಳೂ ಮತಸ್ಥಾಪನಾಚಾರ್ಯರೂ ರಚಿಸಿ ಸಿದ್ಧಾಂತಗ್ರಂಥಗಳನ್ನು ಕಣ್ತೆರೆದು ನೋಡುವಷ್ಟು ಬುದ್ಧಿಯ ಇಲ್ಲದೆ 'ಅಗಸ್ತ್ಯನು ಅಂಥ ಜಾತಿಯವ, ವ್ಯಾಸನು ಇಂಥ ಜಾ ಯವ, ರಾಮಾನುಜಾಚಾರ್ಯ ಶೂದ್ರ ಗುರುವಿನಲ್ಲಿ ಅಧ್ಯಯ ಮಾಡಿದ' ಎಂದು ಬಡಬಡಿಸುವರು. ಇವರು ಜಾತಿಸಂಕರವಾದ ಕೆಲಸಕ್ಕೆ ಕೈಹಾಕಿ ಆ ಮಹಾನುಭಾವರ ಹೆಸರನ್ನೆತ್ತಿಕೊಂಡಿರು ದು ಅಜ್ಞಾನದ ಲಕ್ಷಣವಾಗಿದೆ. ವರ್ಣವ್ಯವಸ್ಥೆಯನ್ನೂ ಜಾತಿ ರಕತ್ವವನ್ನೂ ವಿಚಾರಿ ನಡೆಯುವದು ಮಹತ್ತರವಾದ ನ ಸಾಧನವಾದುದು. ಬ್ರಹ್ಮತೇಜಸ್ಸಿಗೆ ಮಾಲಿಕೆಯಲ್ಲಿ ಬಸವ ಬರುವನೇ? ಹಾಗಾದರೆ ಆತನ ಬ್ರಹ್ಮರ್ಷಿತ್ವವನ್ನು ಪ್ರಕಟಗೊ ಳಿಸಲಿ. ಬಸವನ ಬೆಳಕನ್ನು ಹೊರಗೆ ಹಾಕುವಭರದಲ್ಲಿ ಅದ್ವಿ ಯ ಬ್ರಹ್ಮಜ್ಞಾನಿಗಳಾದ ಮಹರ್ಷಿಗಳನ್ನಾಗಲಿ, ಶಿವಜ್ಞಾ ಗಳಾದ ಆಚಾರ್ಯರನ್ನಾಗಲಿ ಅವಹೇಳನಗೈಯಸಹೋದ ಬ್ರಹ್ಮತೇಜಸ್ಸಿಗೆರಗಿದ ಪತಂಗದ ಪರಿಣಾಮವಾಗುವದು.

ನೂತನವಾಚನಾಲಯ ಪ್ರಾರಂಭೋತ್ಸವ.

ದಾವಣಗೆರೆ ತಾಲೂಕ್ ಅಣಜಿಗ್ರಾಮದ ವಿದ್ಯಾಭಿಮಾನಿ ಲದ ಈ ಕೆಳಗೆ ಕಂಡ ಮಹಾಶಯರು ಉತ್ಸಾಹದಿಂದ ವಾ ನಾಲಯಕ್ಕೆ ಒಂದೊಂದು ಪತ್ರಿಕೆಯನ್ನು ತರಿಸಿಕೊಟ್ಟು, ಸ ವಾಚನಾಲಯವನ್ನು ಸ್ಥಿರಗೊಳಿಸಿದರು.

ಮೇಲ್ಕಂಡ ವಾಚನಾಲಯ ಪ್ರಾರಂಭೋತ್ಸವವು ತಾರೀ 12-7-32 ರಲ್ಲಿ ದಾವಣಗೆರೆ ರೇಂಜ್‌ಸ್ಕೂಲ್‌ಬೋರ್ಡು ಅಸಿ ಟ್‌ಸಾಹೇಬರವರಾದ ಬಿ. ರಂಗರಾವ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರವರು ವಾಚನಾಲಯದಿಂದ ಪ್ರ ಗೆ ಎಷ್ಟರಮಟ್ಟಿಗೆ ಉಪಯೋಗವೆಂಬುದನ್ನು, ಚರ್ಚಿಸಿ ಬ ಸ್ವಾರಸ್ಯವಾಗಿ ಭಾಷಣಮಾಡಿ ಅಲ್ಲಿ ನೆರೆದಿದ್ದ ಪ್ರಜೆಗಳ ಮ ಸ್ಸನ್ನು ಆನಂದಪಡಿಸಿದರು. ಗ್ರಾಮದ ಮುಖಂಡರಾದ ಮ ರಾ|| ಶಾನುಭೋಗ ಶಿವಲಿಂಗಪ್ಪನವರೂ, ಚೇರ್‌ಮನ್ ಶಿವ ನವರೂ, ಪಟೇಲ್ ಚನ್ನಬಸಪ್ಪನವರೂ, ಇನ್ನೂ ಮುಂತಾ ಸಹ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮ|| ರಾ|| ಸ್ಕೂಲ್ ರ್ಮ ಅ|| ಸಾಹೇಬರವರನ್ನು ಬಹು ಕೃತಜ್ಞತೆಯಿಂದಲೂ ಪುಷ್ಪಮಾಲಿಕೆಯನ್ನರ್ಪಿಸಿದರು. ತರುವಾಯ ನಮ್ಮ ನ್ಯಾ ಮಹಾಸ್ವಾಮಿಯವರಾದ ಮೈಸೂರ್ ಶ್ರೀಮನ್ಮಹಾ ರವರ ಶ್ರೇಯಃಪ್ರಾರ್ಥನೆಯೂ ಮಂಗಳವೂ ನಡೆದು ನೆರೆದಿದ್ದ ಸಭಿಕರೆಲ್ಲರಿಗೂ, ಫಲಹಾರ, ಗಂಧಪುಷ್ಪ ತಾಂಬೂಲ ವಿನಿಯೋಗವಾದನಂತರ ಸಭೆಯು ಮುಕ್ತಾಯವಾಯಿತು.

ಪತ್ರಿಕೆಗಳನ್ನು ತರಿಸುವವರ ಹೆಸರು.

1) ಮ|| ರಾ|| ಗಳಾದ ಶಿವಲಿಂಗಪ್ಪನವರು, (2) ಶಾಂತ ಪ್ಪನವರು, (3) ಚೇರ್‌ಮನ್ ಶಿವಪ್ಪಯ್ಯನವರು, (4) ಅಂಗ ಪ್ಪನವರು, (5) ಪಿ. ಹೊಸಕ್ಕರ್‌ಸಾಹೇಬರು ಸ್ಕೂಲ್ ಮಾಸ್ಟರ್, (6) ಕೆ. ಕಳಕಪ್ಪನವರು, (7) ಮುಪ್ಪಣ್ಣ , (8) ಸಿ. ಬಾಲಾಚಾರ್‌ರವರು ಹೆ|| ಮಾಸ್ಟರ್, (9) ಸಂಗಪ್ಪನವರು, (10) ಸೂರಪ್ಪನವರು, (11) ಬಿ. ಎಂ. ಯ್ಯನವರು, (12) ಗ್ರಾಮಪಂಚಾಯ್ತಿ (13) ಜಿ. ರುದ್ರ ರು, (14) ಪಟೇಲ್ ಚನ್ನಬಸಪ್ಪನವರು, (15) ಮ|| ಪ್ರಹ್ಲಾದಾಚಾರ್‌ರವರು ಇನಾಂದಾರ್ ಹಂಚಿಕಟ್ಟಿ, ಸಿ. ಎಚ್. ರಾಮಚಂದ್ರರಾವ್‌ರವರು [illegible]

ಉಪಾಧ್ಯಾಯರ ಸಂಘ.

ದಾವಣಗೆರೆ ತಾಲ್ಲೂಕ್ ಅಣಜಿ ಪ್ರಾಥಮಿಕ ಪಾಠಶಾಲೆಯ ದಲ್ಲಿ ದಾವಣಗೆರೆ ರೇಂಜ್ ಸ್ಕೂಲ್ ಬೋರ್ಡು ಅಸಿಸ್ಟೆಂ ಸಾಹೇಬರವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಎರಡನೆಯ ವು ತಾ|| ೧೩-೭-೩೨ ರಲ್ಲಿ ನೆರವೇರಿತು. ಈ ಉಪಾ ಯರ ಸಂಘಕ್ಕೆ ಅಜುಬಾಜು ಗ್ರಾಮಗಳ ಉಪಾಧ್ಯಾಯರು ರೂ ಹಾಜರಾಗಿದ್ದರು. ಸದರಿ ಉಪಾಧ್ಯಾಯರ ಸಂಘಕ್ಕೆ ೧೮-೬-೩೨ ರಲ್ಲಿ ನೆರೆದಿದ್ದ ಉಪಾಧ್ಯಾಯರುಗಳ ಕೋರಿಕೆ . ಸ್ಕೂ|| ಬೋ|| ಅ|| ಸಾಹೇಬರವರು ದಯಮಾಡಿಸಿದ್ದ ಅಲ್ಲಿ ನೆರೆದಿದ್ದ ಸಭಿಕರೆಲ್ಲರೂ, ಬಹಳ ವಿಧೇಯತೆಯಿಂದ ನ್ನು ಕೊಂಡಾಡಿ ಅಧ್ಯಕ್ಷಸ್ಥಾನವನ್ನು ವಹಿಸುವಂತೆ ವಿಜ್ಞಾ ಡು, ಕರತಾಡನವನ್ನು ಮಾಡಿ ಪುಷ್ಪಮಾಲಿಕೆಯನ್ನರ್ಪಿಸಿ ಈ ರೀತಿ ವಿನಯದಿಂದ ಬೇಡಿಕೊಂಡ ಸಂಘದವರ ಕೋರಿ ಕೆ ಸ್ಕೂ|| ಅ|| ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸಿ ಪಾಠಮಾಡುವುದರಲ್ಲಿರುವ ನ್ಯೂನತೆಗಳ ವಿಷಯವಾಗಿ ಅನುಭವವನ್ನು ಸೂಚಿಸಿದ್ದಲ್ಲದೆ ಉಪಾಧ್ಯಾಯರ ಸಂಘ ವೇನು? ಎಂಬ ವಿಷಯದಲ್ಲಿ ತಮ್ಮ ಅಮೋಘವಾದ ಭಾಷಣ ಮಾಡಿ ಸಭಿಕರ ಮನಸ್ಸನ್ನು ಆನಂದಗೊಳಿಸಿದರು. ತರುವಾ ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೇಯಃಪ್ರಾರ್ಥನೆಯೂ, ಮಂಗಳವೂ ನಡೆದು ಫಲಹಾರ, ಪುಷ್ಪತಾಂಬೂಲಗಳ ವಿನಿಯೋಗವಾಯಿತು.

ಕೆ. ಕಳಕಪ್ಪ ಅಣಜಿ.

ಶ್ರೀ ಕೇದಾರ ಜಗದ್ಗುರು ಕೈಲಾಸಲಿಂಗ ಶಿವಾಚಾರ್ಯರ ವಿಜಯಯಾತ್ರಾ.

ಶ್ರೀ ಕೇದಾರಮಹಾಕ್ಷೇತ್ರವು ಶ್ರೀ ವೇದವ್ಯಾಸಮುನಿಯಿಂದ ಕೋಮುಖವಾಗಿ ಶೈವಪುರಾಣಗಳಲ್ಲಿ ವರ್ಣಿಸಲ್ಪಟ್ಟ ಮಾಹಾತ್ಮ್ಯರಿಂದಲೂ ವಿಶೇಷವಾಗಿ ವರ್ಣಿತವಾಗಿರುವದು. ಕಲಿಯುಗದಲ್ಲಿ ಅನೇಕ ಸಹಸ್ರ ಕ್ರತುಗಳಿಂದಾಗುವ ಕ್ಕಿಂತಲೂ ವಿಶೇಷವಾದ ಫಲವು ಈ ಕೇದಾರಸೇವೆಯೊಂದರಿಂದ ಲಭಿಸುವುದು. "ಅನೇಕಾನಿ ಸಹಸ್ರಾಣಿ ಕ್ರತೂನಾಂ ಸುಪಿಕೇ | ಕಲೌಕೃತ್ವಾ ಗತಿರ್ಯಾ ಸಾ ಕೇದಾರೇಶಸ್ಯ ಯಾ ತ್ || ಕೈದಾರಮುದಕಂಪೀತ್ವಾ ಯತ್ರ ದೇಶೇಪ್ರಪದ್ಯತೇ | ಕ್ಷಿದೇಶೋ ಧವೇತೂಜ್ಯಃ ಕಿಂಪುನಸ್ಸ್ವಬಾಂಧವಾಃ | ದಾರೋದಕಂಪೀತ್ವಾ ಪುನರ್ಜನ್ಮ ನವಿದ್ಯತೇ ||" ಇತ್ಯಾದಿಯಾಗಿ ಕೇಶ್ವರ ಸ್ಟೀಮ್ ಪ್ರೆಸ್‌ನಲ್ಲಿ ಮುದ್ರಿತವಾದ ಕೇದಾರ ದ ಆರನೆಯ ಘಟದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಇಂಥ ದಾರಮಹಾಕ್ಷೇತ್ರವು ನಮ್ಮ ವೀರಶೈವ ಮತಸ್ಥಾಪಕರಾದ ಗ್ಗುರು ಏಕೋರಾಮಾರಾಧ್ಯರ ಪೀಠವೆನಿಸಿರುವದು. ಇಂಥ ಧಿಪತಿಗಳಾದ ಮಹಾಚಾರ್ಯರ ಸೇವೆಯನ್ನು ಅದ್ಯಾಪಿ ೀಯ ರಾಜಾಧಿರಾಜರೂ ಸಹ ಪ್ರತಿ ಸಂವತ್ಸರದಲ್ಲಿಯೂ ಸುತ್ತಲಿರುವದು. ಪ್ರಸ್ತುತವೇನೆಂದರೆ— ಶ್ರೀ ಸತ್ಯಯುಗೀಯ ರಾಚಾರ್ಯ (ಓಂಕಾರೇಶ್ವರಾಚಾರ್ಯ) ಮಹಾಶಕ್ಯಾರ್ಯಸ್ವಾ ಮೂರ್ತಿಯು ಶ್ರೀ ಕೇದಾರಸಂಸ್ಥಾನದೊಳಿರುವ ಉಷಾಮಠ ನೆಲಸಿದೆ. ಈ ಆಚಾರ್ಯಮೂರ್ತಿಯು ಸನ್ನಿಧಿಯಲ್ಲಿ ಸತ್ಯಯುಗೀ ಶ್ರೀ ಮಾಂಧಾತಾ ಚಕ್ರವರ್ತಿಯು ಅನೇಕವಿಧವಾಗಿ ಪ್ರಾರ್ಥಿ ಣಾಮಂಗೈದು ಪ್ರಾರ್ಥಿಸಿರುತ್ತಾನೆ. ಹಾಗೂ ಶ್ರೀ ಉಷಾ ರೀ, ಶ್ರೀ ಅನಿರುದ್ಧ, ಶ್ರೀ ಚಿತ್ರಲೇಖಾಮೂರ್ತಿಗಳೂ ಸನ್ನಿಹಿತವಾಗಿ ಪ್ರಾರ್ಥನಾ ಮುದ್ರಾಮುದ್ರಿತಗಳಾಗಿವೆ. ಹಾಚಾರ್ಯರ ಲಿಂಗಾಕಾರ ಮಹಾಮೂರ್ತಿಯನ್ನು ಶ್ರೀ ಗ್ಗುರು ಕೈಲಾಸಲಿಂಗ ಶಿವಾಚಾರ್ಯರು ಕರ್ಕಸಂಕ್ರಮಣ ಶು ೧ ಗತಿಯ ದಕ್ಷಿಣಾಯನ ಶುಭಮುಹೂರ್ತದಲ್ಲಿ ಸಮ ಶ್ರೀ ಪೂರ್ವಾಚಾರ್ಯರ ಮಹಾಪ್ರಸಾದವನ್ನು ಪಡೆದರು. ೧೦-೭-೩೨ ರಲ್ಲಿಯೇ ಜಗದ್ಗುರುಗಳು ಶ್ರೀ ಭೋಲಾನಾ ಮಹಾಲಿಂಗವನ್ನು ಸಂದರ್ಶನಮಾಡಿ ಬಂದರು. ಪುನಃ ಅಪ್ರಸಾದ ಸಬ್-ಏಜಂಟ್ ಮುಂತಾದ ಪರಿಮಿತ ಸಿಬ್ಬಂದಿ ಅಕ್ಷಾರೂಢರಾಗಿ ರಾಜಕೀಯ ಬಂದೋಬಸ್ತಿನೊಡನೆ ಶ್ರೀ ಗುರುಪೂರ್ಣಿಮಾ ತಿಥಿಗೆ ಸರಿಯಾಗಿ ಶ್ರೀ ಕೇದಾರನಾಥ ಮಹಾಸ್ವಾಮಿ ಸನ್ನಿಧಿಗೆ ವಿಜಯಂಗೈಸಿದ್ದು ಪೂರ್ಣಮಾನಂತರ ದಕ್ಷಿಣಭಾರತಕ್ಕೆ ದಯಮಾಡಿಸುವದಾಗಿ ನಿಶ್ಚಯಿಸಲ್ಪಟ್ಟಿದೆ.

ಸಿದ್ಧಲಿಂಗಪೂಜಾರಿ.

ಇಬ್ಬರು ವೀರಶೈವಪಂಡಿತರು ಬೇಕಾಗಿದ್ದಾರೆ.

ಶ್ರೀ ಮದಸಗೋಡು ಪಟ್ಟಾಧ್ಯಕ್ಷ ಶ್ರೀ ರುದ್ರಮುನಿ ಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ 'ಬಳ್ಳಾರಿ ಕರಡೆಪ್ಪನವರ ಚೌಕಿ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯಕ್ಕೆ ಮದ್ರಾಸ್ ಯೂನಿವರ್ಸಿಟಿಯ ಸಾಹಿತ್ಯ, ನ್ಯಾಯ, ವ್ಯಾಕರಣ, ವೇದಾಂತ, ಮೀಮಾಂಸಾ, ಇವುಗಳಲ್ಲಿ ಯಾವುದಾದರೊಂದು ಶಿರೋಮಣಿ ಪಾಸಾದ ಸರ್ಟಿಫಿಕೆಟ್ಟುಳ್ಳ ಪಂಡಿತರೊಬ್ಬರು ಮತ್ತು ವಿದ್ವಾನ್ ಪದವಿಯನ್ನಾಗಲಿ, ಕಾಶೀ ಯೂನಿವರ್ಸಿಟಿಯ ಸಾಹಿತ್ಯಾದಿ ಮೇಲ್ಕಾಣಿಸಿದ ಭಾಗಗಳಲ್ಲಿ ಯಾವುದಾದರೊಂದು ಆಚಾರ್ಯ ಪರೀಕ್ಷೆಯ ಪದವಿಯನ್ನಾಗಲಿ ಇಲ್ಲವೇ ಮೇಲ್ಕಾಣಿಸಿದ ಭಾಗಗಳಲ್ಲಿ ಮೈಸೂರು ಗೌರ್ನಮೆಂಟಿನ ವಿದ್ವತ್ ಪರೀಕ್ಷೆಯ ಸರ್ಟಿಫಿಕೆಟ್ಟನ್ನಾಗಲಿ ಹೊಂದಿದ ಪಂಡಿತರೊಬ್ಬರು ಕನ್ನಡವೇ ಮಾತೃಭಾಷೆಯುಳ್ಳರಾದರೂ ಇದ್ದು ಇಲ್ಲಿಗೆ ಬರಲಿಚ್ಛೆಯಿದ್ದರೆ ಅಗಸ್ಟು 15 ರೊಳಗೆ ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳಬೇಕು. ಇಲ್ಲಿ ವೇತನ 35 ರಿಂದ 40 ರೂ. ವರೆಗೆ ದೊರೆಯುತ್ತದೆ.

ಕೊಂಡಿಕುಂದಿ ಭೋಗಪ್ಪ, ಸೆಕ್ರೆಟರಿ.
ಶ್ರೀ ಗುರುನಿವಾಸ ಸಂಸ್ಕೃತವಿದ್ಯಾಲಯ,
ಕರಡೆಪ್ಪನವರ ಚೌಕಿ, ಬಳ್ಳಾರಿ.

ಸಂಸ್ಕೃತ ವಿದ್ಯಾರ್ಥಿಗಳಿಗೆ ಸೂಚನೆ.

ಶ್ರೀಮದಸಗೋಡು ಪಟ್ಟಾಧ್ಯಕ್ಷ ಶ್ರೀರುದ್ರಮುನಿ ಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಕರಡೆಪ್ಪನವರ ಚೌಕಿ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯದಲ್ಲಿ ಮದ್ರಾಸ್ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಎಂದರೆ ನ್ಯಾಯ, ವ್ಯಾಕರಣ, ಮೀಮಾಂಸಾ, ವೇದಾಂತ, ಸಾಹಿತ್ಯ ಈ ಐದು ಭಾಗಗಳ ಎಂಟ್ರನ್ಸ್ ಪರೀಕ್ಷೆಗಳಿಗನುಸರಿಸಿ ಇಂಗ್ಲೀಷ್ ಹೈಸ್ಕೂಲ್ ಶಿಕ್ಷಣ ಪದ್ಧತಿಪ್ರಕಾರಕ್ಕೆ ಪಿರಿಯಡ್ ಪ್ರಕಾರ ಅಭ್ಯಾಸಗೊಳಿಸಿ ವಿದ್ಯಾರ್ಥಿಗಳನ್ನು 5 ರಲ್ಲಿ ಅವರಿಷ್ಟಾನುಸಾರ ಗೌರ್ನಮೆಂಟು ಪರೀಕ್ಷೆಗಳಿಗೆ ಕಳುಹಿಸಿ ಮದ್ರಾಸ್ ಪ್ರಸಿಡೆನ್ಸಿಯಲ್ಲಿಯೇ ಮೆರೆಯುತ್ತಿರುವ ಸಂಸ್ಕೃತ ಕಾಲೇಜುಗಳಲ್ಲಿ ಸೇರಿ ಶಿರೋಮಣಿ ವಿದ್ವಾನ್ ಇಲ್ಲವೆ ಕಾಶೀ ಹಿಂದೂ ವಿಶ್ವವಿದ್ಯಾಲಯದ ಮಧ್ಯಮ ಈ ಪರೀಕ್ಷೆಗಳಿಗನುಸರಿಸಿ ಅಭ್ಯಾಸ ಮಾಡಲಿಕ್ಕೆ ಸಮರ್ಥರನ್ನಾಗಿ ಮಾಡುವುದಾಗುವದು. ಅದಕ್ಕನುಗುಣವಾಗಿಯೇ ಪ್ರಾರಂಭದ ತರಗತಿಗಳೂ ಕೂಡಾ ಇಲ್ಲಿಯೇ ನಡೆಯುತ್ತವೆ. ಅಪೇಕ್ಷೆಯುಳ್ಳ ಚಿಕ್ಕ ಮತ್ತು ಪ್ರೌಢ ಸರ್ವವಿದ್ಯಾರ್ಥಿಗಳು 15-8-1932 ತಾರೀಖಿನೊಳಗೆ ಬಂದು ಸೇರಬೇಕು. ಸರ್ವರಿಗೂ ಊಟದ ವ್ಯವಸ್ಥೆಯು ಇಲ್ಲಿಯೇ ಮಾಡಲಾಗುವುದು. ಸದ್ಗುಣಾದಿಗಳ ಬಗ್ಗೆ ವಿದ್ಯಾರ್ಥಿಗಳು ತಮ್ಮ ಗ್ರಾಮಗಳ ಪ್ರಮುಖರಿಂದ ಪತ್ರಗಳನ್ನು ತರತಕ್ಕದ್ದು. ಮದ್ರಾಸ್ ಪ್ರಸಿಡೆನ್ಸಿಗೆ ಸೇರಿದ ಬಡ ವಿದ್ಯಾರ್ಥಿಗಳು ಅಭ್ಯಾಸ ಮಾಡಿ ಕಾಲೇಜುಗಳಿಗೆ ಹೋಗಿಸೇರಿದರೆ ನಮ್ಮ ಬಳ್ಳಾರಿ, ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದಿಂದ ಮಾಸಾಶನವು ಕೂಡಾ ದೊರೆಯುತ್ತದೆ.

ಸೆಕ್ರೆಟರಿ.

ಹುಟ್ಟಿಗಿ (ಜಿಲ್ಲಾ ಸೋಲಾಪುರ.)

ಈಗಿನ ಜಾಗ್ರತೆಯಕಾಲದಲ್ಲಿ ಪ್ರತಿಯೊಂದು ಸಮಾಜವು ಒಕ್ಕಟ್ಟಿನಿಂದ ಮುಂದಡಿಯನ್ನಿಡುತ್ತಿರುತ್ತದೆ. ಪ್ರತಿಯೊಂದು ಧರ್ಮದವರು ತಮ್ಮೊಳಗೆ ಇದ್ದ ಒಡಕುಗಳನ್ನು ಸರಿಪಡಿಸಿಕೊಂಡು ತಮ್ಮ ಸಮಾಜವನ್ನು ಉನ್ನತಸ್ಥಿತಿಗೆ ತರಲು ಪ್ರಯತ್ನಿಸುತ್ತಿರುವರು. ಇದು ಜಾಗ್ರತೆಯ ಯುಗವು. ಆದರೆ ನಮ್ಮ ವೀರಶೈವಸಮಾಜದ ಜನರುಮಾತ್ರ ಇದಕ್ಕೆ ವಿಪರೀತವಾಗಿ ವರ್ತಿಸಲಾರಂಭಿಸಿರುತ್ತಾರೆ. ಪತಿಯೊಂದು ಸಣ್ಣಹಳ್ಳಿಯಲ್ಲಿಯೂ ಸಹ ವೀರಶೈವರಲ್ಲಿಯೇ ಇಬ್ಬಣಗಳಾಗಿ ಹೊಡೆದಾಡುತ್ತಿರುವದು ನಮಗೆ ಎಲ್ಲೆಲ್ಲಿಯೂ ಕೇಳಬರುತ್ತದೆ. ಹೀಗಿರುವದು ನಮ್ಮ ವೀರಶೈವಧರ್ಮಕ್ಕೆ ವಿಘಾತಕವಾಗಿರುತ್ತದೆ. ಈ ವಿಷಮಪರಿಸ್ಥಿತಿಯನ್ನು ಸರಿಪಡಿಸಲು ಈಗೀಗ ಕೆಲವು ಗುರುವರ್ಗದ ಮಹಾನುಭಾವರುಗಳು ಟೊಂಕಕಟ್ಟಿರುವದು ಮಹಾಸಂತೋಷದ ಸಂಗತಿಯಾಗಿರುತ್ತದೆ. ಈ ಹುಟ್ಟಿಗಿಗ್ರಾಮದ ವೀರಶೈವರಲ್ಲಿ ಎರಡು ಪಾರ್ಟಿಗಳಾಗಿ ಬಹುದಿವಸಗಳಾಗಿದ್ದವು. ಅವುಗಳನ್ನು ಏಕೀಕರಣಮಾಡುವ ಸದುದ್ದೇಶದಿಂದ ಇಲ್ಲಿಯ ಶ್ರೀಗುರು ವೇ|| ಷ|| ಬ್ರ|| ಪಟ್ಟಾಧ್ಯಕ್ಷಮಹನೀಯರು ಕಳೆದ ವೈಶಾಖ ಶುದ್ಧ ಪಂಚಮಿಯ ದಿವಸ ಶ್ರೀ ದಾರುಕಜಯಂತಿಯ ಸಮಯದಲ್ಲಿ ಐಕ್ಯಮಾಡಲಿಕ್ಕೆಂದು ಒಂದು 'ಪಂಚಕಮಿಟಿಯನ್ನು' ನಿಯಮಿಸಿದ್ದರು. ಈ ಮಂಡಳಿಯಿಂದ ನಿನ್ನಿನ ದಿವಸ ಅಂದರೆ ತಾ|| ೨೫-೭-೩೨ ಕ್ಕೆ ಇಲ್ಲಿಯ ವೀರಶೈವರಲ್ಲಿ ಐಕ್ಯವು ನೆಲೆಗೊಂಡಿತೆಂದು ಸಂತೋಷದಿಂದ ಹೇಳಬೇಕಾಯಿತು. ಈ ಕಾರ್ಯದಲ್ಲಿ ವೀರಪ್ಪ ಥಬ್ಬಿ ಇವರು ವಿಶೇಷವಾಗಿ ಶ್ರಮವಹಿಸಿದರು. ಉಳಿದ ಸ್ಥಳದಲ್ಲಿ ಪಟ್ಟಾಧಿಕಾರಿಗಳು ಇಂಥ ಕಾರ್ಯವನ್ನು ಕೈಕೊಳ್ಳುವರೋ?

ಎಚ್. ಬಿ. ದೇಸಾಯಿ, ಹೆಡ್ ಮಾ. ಸ್ಕೂ. ಹುಟ್ಟಿಗಿ.

ಜಾಹೀರ ನೋಟೀಸ.

ವಾದಿ ಶ್ರೀ ವಿ. ಪಟ್ಟದಸ್ವಾಮಿಗಳು ಮುತ್ತಿನಕಂತಿ ಮಠ ಸಾ|| ಆಲೂರ ತಾ|| ಹಾನಗಲ್ಲ ಜಿ|| ಧಾರವಾಡ ಇವರಿಂದ.

೧. ಗಂಗಾಧರಯ್ಯ, ೨. ಮುತ್ತಿನಕಂತಯ್ಯ, ೩. ಚನ್ನಬಸಯ್ಯ, ಬಿನ್ ಗುರುಸಿದ್ದಯ್ಯ ಮುತ್ತಿನಕಂತಿ ಮಠ ಸಾ|| ಆಲೂರ ತಾ|| ಹಾನಗಲ್ಲ ಈ ಮೂರು ಮಂದಿ ಪ್ರತಿವಾದಿಗಳ ನಡುವೆ ಹಾವೇರಿ ಕೋರ್ಟಿನ ಅ|| ನಾ|| ೫೦೭/೨೧ ನ ೩೬೬/೨೨ ಇದರ ಮೇಲೆ ಧಾರವಾಡ ಡಿ|| ಕೋರ್ಟಿನ ಅಪೀಲ ನಾ|| ೭/೨೪ ಈ ನಂಬರಗಳ ಠರಾವುಗಳ ಮೇಲೆ ಹಾವೇರಿ ಕೋರ್ಟಿನ ಅ|| ಸ|| ೭೧೯/೨೪ ಧಾರವಾಡ ಡಿ|| ಕೋರ್ಟಿನ ಅಪೀಲನ ೩೯/೨೭ ನೇದ್ದರಲ್ಲಿ ಈ ಮುತ್ತಿನಕಂತಿ ಮಠವು ಪಟ್ಟದ ಮಠವಿದ್ದು ಈ ಮಠಕ್ಕೆ ಈ ವಾದಿಯು ಪಟ್ಟಾಧ್ಯಕ್ಷನಾಗಿರುತ್ತಾನೆ. ಈ ಮಠಕ್ಕೆ ಈ ಮಠದ ಶಿಷ್ಯರಿಂದ ಬರತಕ್ಕ ಕಪ್ಪುಕಾಣಿಕೆ ಹಕ್ಕುಬಾಬುಗಳನ್ನು ವಸೂಲ ತೆಗೆದುಕೊಳ್ಳುವ ಹಕ್ಕು ಈ ವಾದಿಗೆ ಇರುತ್ತದೆ. ಮುತ್ತಿನಕಂತಿ ಮಠದ ಹೆಸರು ಹೇಳತಕ್ಕ ಶಿಷ್ಯರಿಂದ ಈ ಪ್ರತಿವಾದಿಗಳು ಯಾವ ಬಾಬುಗಳನ್ನು ವಸೂಲಮಾಡಬಾರದೆಂದೂ ಮಠದ ಸಂಬಂಧಿ ಕಬ್ಜಾ ವಗೈರೆ ವಹಿವಾಟ ವಿಷಯಗಳಲ್ಲಿ ವಾದಿಗೆ ಹರಕತ್ತಮಾಡಬಾರದೆಂದೂ ೧೯೩೦ ನೆಯ ಇಸವಿಯಲ್ಲಿ ಕೋರ್ಟಿನಿಂದ ನಿರಂತರ ತಾಕೀದಿ ಹುಕುಂ ಆಗಿದ್ದು ೧ ನೆಯ ಗಂಗಾಧರಯ್ಯನು ಈ ಹಿಂದೆ ಮಠದ ಮ್ಯಾನೇಜರ ನಾತೆಯಿಂದ ವಹಿವಾಟಮಾಡಿದ ಶಿಷ್ಯರ ವಂಶಾವಳಿಯ ಕಾಗದಪತ್ರಗಳನ್ನು ತನ್ನ ಹತ್ತಿರ ಇಟ್ಟುಕೊಂಡು ಕೋರ್ಟಿನ ಹುಕುಮಿನ ವಿರುದ್ಧ ಗೈರಕಾಯಿದೇಶೀರ ನಮಗೆ ಗೊತ್ತಾಗದಂತೆ ಶಿಷ್ಯರಿಂದ ಬರತಕ್ಕ ಕಾಣಿಕೆ ವಸೂಲ ಮಾಡುತ್ತಿರುವನೆಂದು ಕೇಳುತ್ತೇವೆ. ಕಾರಣ ಯಾವತಸ್ತು ಶಿಷ್ಯರು ಸದರಿಯವರ ಹತ್ತಿರವಿದ್ದ ಕಾಗದಪತ್ರಗಳನ್ನು ಜಪ್ತಿ ಮಾಡಿಸಬೇಕು. ಹಾಗೂ ಕಾಣಿಕೆ ವಗೈರೆ ಕೊಡಬಾರದು. ಮತ್ತು ನಿಮ್ಮ ಕಡೆಗೆ ಕಾಣಿಕೆ ಕೇಳಲಿಕ್ಕೆ ಬಂದರೂ ಈ ಎಲ್ಲ ವಿಷಯಕ್ಕೆ ನಮಗೆ ತಿಳಿಸಿರಿ.

ಶ್ರೀ|| ವಿ. ಪಟ್ಟದ ಸ್ವಾಮಿಗಳು.
ಮುತ್ತಿನಕಂತಿ ಮಠ ಸಾ|| ಆಲೂರ.

ಜುಲೈ 25 ನೇ ತಾರೀಖಿನ ದಿವಸ ಮುಂಬಯಿಯ ಸುಪ್ರಸಿದ್ಧ ಅಡ್ವೋಕೇಟರುಗಳಾದ ಶ್ರೀ|| ಭುಲಾಭಾಯಿ ದೇಸಾಯಿಯವರು ಮತ್ತು ಮಿ|| ಮಂಗಲದಾಸ್ ಪಾಕರ್ಸೆಯವರು ಸ್ಪೆಶಲ್ ಪವರ್ಸ್ ಆರ್ಡಿನೆನ್ಸಿನ ಪ್ರಕಾರ ದಸ್ತಗಿರಿಮಾಡಲ್ಪಟ್ಟರು.

ಪಂಚಾಚಾರ್ಯ ಪ್ರಭಾ

೧೯೩೨ ನೇ ಅಗಸ್ಟ ತಾ|| ೧ ನೇ ಸೋಮವಾರ.

ಚುನಾವಣೆಯ ಪದ್ಧತಿ.

ಭರತಖಂಡದ ರಾಜಕೀಯ ಸುಧಾರಣೆಗೆ ಸಂಬಂಧಪಟ್ಟ ಪ್ರಶ್ನೆಗಳಲ್ಲಿ ಚುನಾವಣೆಯ ಪ್ರಶ್ನೆಯು ಅತ್ಯಂತ ಮುಖ್ಯವಾಗಿರುವದು. ಇಂದು ನಾವು ಪ್ರತಿನಿತ್ಯವೂ ಎಲ್ಲೆಲ್ಲಿಯೂ ಹಿಂದೂ ಮುಸಲ್ಮಾನರ ಮತ್ತು ಸ್ಪೃಶ್ಯಾಸ್ಪೃಶ್ಯರ ಹೊಡೆದಾಟದ ಕಥೆಗಳನ್ನೇ ಕೇಳುತ್ತಿರುವೆವು. ಚುನಾವಣೆಯ ಪ್ರಶ್ನೆಯು ಮಾತ್ರ ಸರ್ವಸಮ್ಮತವಾಗಿ ತೀರ್ಮಾನಿಸಲ್ಪಟ್ಟರೆ, ನಮ್ಮ ನಮ್ಮಲ್ಲಿ ಹುಟ್ಟಿರುವ ಈ ದ್ವೇಷಾಗ್ನಿಯು ನಾಶವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕೋಮುವಾರು ಗಲಭೆಗಳಿಗೆ ಚುನಾವಣೆಯ ತತ್ವವು ಬಹುಮಟ್ಟಿಗೆ ಕಾರಣವಾಗಿರುವದು. ಕಾಂಗ್ರೆಸ್ಸಿನವರು, ರಾಷ್ಟ್ರೀಯ ಮುಸಲ್ಮಾನರು, ಮತ್ತು ಲಿಬರಲ್‌ಗಳು, ಸಂಯುಕ್ತ ಚುನಾವಣೆಯನ್ನೂ, ಸಾರ್ವತ್ರಿಕ ಓಟಿನ ಹಕ್ಕನ್ನೂ ಅಪೇಕ್ಷಿಸುವರು. ಆದರೆ ಸ್ವಾರ್ಥಪರರಾದ ಕೆಲವು ಜನ ಮುಸಲ್ಮಾನರು ಮತ್ತು ಅಸ್ಪೃಶ್ಯರು ತಮಗೆ ಪ್ರತ್ಯೇಕ ಚುನಾವಣೆಯೇ ಬೇಕೆಂದು ಹಠಮಾಡುತ್ತಿರುವರು. ಈ ಮಧ್ಯದಲ್ಲಿ ಭರತಖಂಡಕ್ಕೆ ವಿರೋಧಿಗಳಾದ ಜನರು ಪ್ರತ್ಯೇಕಚುನಾವಣೆಯ ತತ್ವಪ್ರತಿಪಾದಕರಾದ ಅಲ್ಪಸಂಖ್ಯಾಕರ ಬೆನ್ನು ತಟ್ಟುತ್ತಾರೆ. ಸಂಯುಕ್ತಚುನಾವಣೆಯ ಪದ್ಧತಿಯು ಜಾರಿಗೆ ಬಂದರೆ, ನ್ಯಾಯವಿಧಾಯಕ ಸಭೆಗಳನ್ನು ಸಂಪೂರ್ಣವಾಗಿ ಹಿಂದುಗಳೇ ಆಕ್ರಮಿಸಿ, ಹಿಂದುಳಿದವರನ್ನು (ಮುಸಲ್ಮಾನರು ಮತ್ತು ಅಸ್ಪೃಶ್ಯರನ್ನು) ಮುಂದುವರಿಯದಂತೆ ಮಾಡುವರೆಂದೂ, ನ್ಯಾಯವಿಧಾಯಕ ಸಭೆಗಳಲ್ಲಿ ಪ್ರತ್ಯೇಕ ಚುನಾವಣೆಯ ತತ್ವದಮೇಲೆ ತಮ್ಮ ತಮ್ಮ ಸಂಗಡಗಳಿಗೆ ಅವಶ್ಯಕವಾದಷ್ಟು ಸ್ಥಾನಗಳನ್ನು ಕಾದಿಟ್ಟುಕೊಂಡಹೊರತು ಅಲ್ಪಸಂಖ್ಯಾಕರ ಶ್ರೇಯೋಭಿವೃದ್ಧಿಯಾಗುವದಿಲ್ಲವೆಂದೂ, ಹೇಳುತ್ತಾ ಕೋಮುವಾರು ದ್ವೇಷಾಗ್ನಿಯನ್ನು ಹೆಚ್ಚಿಸುತ್ತಿರುವರು. ಹಿಂದುಗಳು, ಮುಸಲ್ಮಾನರು, ಅಸ್ಪೃಶ್ಯರು ಎಂಬ ಭೇದಭಾವವು ಭರತಖಂಡದಲ್ಲಿ ಶಾಶ್ವತವಾಗಿ ಉಳಿಯಬೇಕೆಂಬುದೇ ಈ ವಿರೋಧಸಂಗಡದವರ ಆಶೆಯಾಗಿರುವದು. 'ಇಬ್ಬರ ಜಗಳ ಮೂರನೆಯವನಿಗೆ ಲಾಭ' ಎಂಬಂತೆ, ಎಂದಿನವರೆಗೆ ಈ ಕೋಮುವಾರು ಭೂತವು ನಾಶವಾಗುವದಿಲ್ಲವೋ ಅಂದಿನವರೆಗೆ ವಿರೋಧಸಂಗಡದವರ ಸ್ವಾರ್ಥವು ಅವ್ಯಾಹತವಾಗಿ ಸಾಧಿಸುತ್ತಿರುವದು. ಈ ಕೋಮುವಾರು ದ್ವೇಷವು ನಾಶವಾಗದೆ ಭರತಖಂಡದಲ್ಲಿ ಶಾಂತಿಸುಖಗಳು ನೆಲಸಲಾರವು. ಈ ವಿಷಮವಾತಾವರಣದಲ್ಲಿ ಯಾವ ರಾಜಕೀಯಸುಧಾರಣೆಯೂ ಸುಲಲಿತವಾಗಿ ನಡೆಯಲಾರದು. ಈ ಎಲ್ಲ ಅನರ್ಥಪರಂಪರೆಗಳು ಹೋಗಬೇಕಾದರೆ ಸಂಯುಕ್ತಚುನಾವಣೆಯ ಪದ್ಧತಿಯೇ ಉತ್ತಮವಾದ ಉಪಾಯವು. ಹಿಂದೂಮುಸಲ್ಮಾನರ ಐಕಮತ್ಯಕ್ಕಾಗಿ ಅನೇಕವರ್ಷಗಳಿಂದಲೂ ಒಂದೇ ಸಮನೆ ಕೆಲಸಮಾಡುತ್ತಿರುವ ಮುಖಂಡರೆಲ್ಲರೂ ಈ ತತ್ವವನ್ನೇ ಪ್ರತಿಪಾದಿಸುತ್ತಿರುವರು.

ಮೇಲೆ ಹೇಳಿದಂತೆ ಚುನಾವಣೆಯಲ್ಲಿ ಸಂಯುಕ್ತಚುನಾವಣೆ, ಪ್ರತ್ಯೇಕಚುನಾವಣೆ ಎಂದು ಎರಡು ಭೇದಗಳುಂಟು. ಸಂಯುಕ್ತಚುನಾವಣೆಯಲ್ಲಿ ಕೋಮುವಾರು ಭೇದವಿಲ್ಲ. ಈ ತತ್ವದಲ್ಲಿ ಹಿಂದು, ಮುಸಲ್ಮಾನ್, ಕ್ರಿಶ್ಚಿಯನ್ ಎಂಬ ಮತಶಬ್ದಗಳಿಗೆ ಅವಕಾಶವಿಲ್ಲ. ಪ್ರಜೆಗಳಲ್ಲಿ ಬೇಕಾದವರು ಬೇಕಾದವರಿಗೆ ಓಟನ್ನು ಕೊಡಬಹುದು. ಯಾರು ಪ್ರಜಾನುರಾಗವನ್ನು ಸಂಪಾದಿಸುವರೋ ಅವರಿಗೆ ಮಾತ್ರ ನ್ಯಾಯವಿಧಾಯಕಸಭೆಗಳಿಗೆ ಪ್ರವೇಶಿಸುವ ಅಧಿಕಾರವು ದೊರೆಯುವುದು. ಯಾರು ಪ್ರಜಾನುರಾಗವನ್ನು ಹೆಚ್ಚಾಗಿ ಸಂಪಾದಿಸುವರೋ ಅವರಿಗೇ ಹೆಚ್ಚಿನಸ್ಥಾನಗಳು ದೊರಕುವವು. ಈ ಪದ್ಧತಿಯಲ್ಲಿ ಹಿಂದುಗಳು ಮುಸಲ್ಮಾನರಿಗೂ, ಮುಸಲ್ಮಾನರು ಹಿಂದುಗಳಿಗೂ ಓಟು ಕೊಡಬಹುದಾದ್ದರಿಂದ ಹಿಂದೂಮುಸಲ್ಮಾನರು ಒಬ್ಬರನ್ನೊಬ್ಬರು ದ್ವೇಷಿಸುವದನ್ನು ಬಿಟ್ಟು, ಹೆಚ್ಚು ಓಟುಗಳನ್ನು ಪಡೆಯುವ ಉದ್ದೇಶದಿಂದ ಎಲ್ಲರೊಡನೆಯೂ ಸ್ನೇಹವನ್ನು ಬೆಳೆಯಿಸಲಾರಂಭಿಸುವರು. ಹೀಗೆ ಉತ್ಪನ್ನವಾದ ಸ್ನೇಹಭಾವವು ಕೋಮುವಾರುಭೂತವನ್ನು ನಿರಾಯಾಸವಾಗಿ ಮತ್ತು ನಿಸ್ಸಂದೇಹವಾಗಿ ನಿರ್ಮೂಲನಮಾಡಿಬಿಡುವದು. ಇದರಂತೆಯೇ ಸಂಯುಕ್ತಚುನಾವಣೆಯಲ್ಲಿ ಅಸ್ಪೃಶ್ಯರಿಗೂ ಸಹ ನ್ಯಾಯವಿಧಾಯಕಸಭೆಗಳಲ್ಲಿ ಇತರ ಮತೀಯರಂತೆ ಸರಿಸಮಾನವಾದ ಸ್ಥಾನಮಾನಗಳು ದೊರೆಯುವುವು. ದೇಶದಲ್ಲಿ ಸುಖಶಾಂತಿಗಳು ನಿರಾಯಾಸವಾಗಿ ನೆಲಸುವವು. ಪ್ರತ್ಯೇಕಚುನಾವಣೆಯೆಂದರೆ ಎಲ್ಲ ಮತೀಯರಿಗೂ ಬೇರೆ ಬೇರೆ ಚುನಾವಣೆಯನ್ನು ಏರ್ಪಡಿಸುವುದು. ಈ ಪದ್ಧತಿಯಲ್ಲಿ ಬೇಕಾದವರು ಬೇಕಾದವರಿಗೆ ಓಟನ್ನು ಕೊಡುವ ಸ್ವಾತಂತ್ರ್ಯವಿಲ್ಲ. ಹಿಂದುಗಳು ಹಿಂದುಗಳಿಗೇ, ಮುಸಲ್ಮಾನರು ಮುಸಲ್ಮಾನರಿಗೇ, ಅಸ್ಪೃಶ್ಯರು ಅಸ್ಪೃಶ್ಯರಿಗೇ ಓಟುಗಳನ್ನು ಕೊಡಬೇಕು. ಹೀಗೆ ಪ್ರತಿಯೊಬ್ಬರೂ ಅವರವರ ಸಂಗಡದವರಿಂದಲೇ ಚುನಾಯಿಸಲ್ಪಡುವದರಿಂದ ಒಬ್ಬರನ್ನೊಬ್ಬರು ಅವಲಂಬಿಸುವ ಕಾರಣವೇ ಇಲ್ಲದೆ, ಇವರು ಹಿಂದುಗಳು, ಇವರು ಮಹಮ್ಮದೀಯರು, ಇವರು ಅಸ್ಪೃಶ್ಯರು ಎಂಬಿವೇ ಮೊದಲಾದ ಭೇದಭಾವಗಳು ಶಾಶ್ವತವಾಗಿ ಉಳಿಯುವುವು. ಇದರಿಂದ ದ್ವೇಷಾಗ್ನಿಯು ಪುನಃ ಉತ್ಪನ್ನವಾಗುವದು. ಸುಖಶಾಂತಿಗಳು ಸ್ವಪ್ನಪ್ರಾಯವಾಗಿ ಕೋಮುವಾರು ಗಲಭೆಗಳು ಮತ್ತಿಷ್ಟು ಪ್ರಬಲಿಸುವುವು. ಇಂಥ ಮಹಾನರ್ಥಕಾರಿಯಾದ ಪ್ರತ್ಯೇಕ ಚುನಾವಣೆಯನ್ನು ಅಪೇಕ್ಷಿಸುವವರು ಮಾತೃಭೂಮಿಗೆ ಮಹಾದ್ರೋಹವನ್ನೇ ಮಾಡುತ್ತಿರುವರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಸಂಯುಕ್ತಚುನಾವಣೆಯಲ್ಲಿ ಇಂಥ ಅನರ್ಥಗಳಿಗೆ ಅವಕಾಶವೇ ಇಲ್ಲ. ಪ್ರಜೆಗಳ ಅನುರಾಗವನ್ನು ಸಂಪಾದಿಸಿದವರಿಗೇ ಹೆಚ್ಚಿನ ಓಟುಗಳು ದೊರಕುವದರಿಂದ ಹಿಂದುಗಳಾಗಲಿ, ಮಹಮ್ಮದೀಯರಾಗಲಿ ಅಥವಾ ಅಸ್ಪೃಶ್ಯರಾಗಲಿ ಮತ್ತೊಬ್ಬರು ತಮ್ಮನ್ನು ಹಿಂದಕ್ಕೆ ತಳ್ಳುವರೆಂದು ಹೆದರಬೇಕಾದ ಕಾರಣವಿಲ್ಲ. ಮುಸಲ್ಮಾನ್ ಮುಖಂಡರೇ ಹೆಚ್ಚಿನ ಪ್ರಜಾನುರಾಗವನ್ನು ಸಂಪಾದಿಸಿದರೆ ಅವರ ಪ್ರತಿನಿಧಿಗಳೇ ಹೆಚ್ಚಾಗಿ ಆರಿಸಿಬರುವರು. ಹಿಂದೂಮುಖಂಡರು ಹೆಚ್ಚಿನ ಪ್ರಜಾನುರಾಗವನ್ನು ಸಂಪಾದಿಸಿದರೆ ಹಿಂದೂಪ್ರತಿನಿಧಿಗಳೇ ಹೆಚ್ಚಾಗಿ ಆರಿಸಿಬರುವರು. ಒಂದಾವರ್ತಿ ಚುನಾಯಿಸಿ ಬಂದವರು ಪ್ರಜೆಗಳಿಗೆ ವಿರೋಧವಾಗಿ ವರ್ತಿಸಿದರೆ ಮತ್ತೊಮ್ಮೆ ತಮಗೆ ಓಟು ದೊರೆಯದೆಹೋಗಬಹುದೆಂಬಭೀತಿಯಿಂದ ಪ್ರಜೆಗಳಿಗೆ ಸಮ್ಮತವಾಗಿಯೇ ವರ್ತಿಸಬೇಕಾಗುವದು. ಒಟ್ಟಿನಲ್ಲಿ ಪ್ರತಿಯೊಬ್ಬರೂ ಸ್ನೇಹಭಾವದಿಂದಿರಬೇಕೆಂಬುದೇ ಈ ಸಂಯುಕ್ತಚುನಾವಣೆಯ ಮುಖ್ಯಾಶಯವಾಗಿರುವದು.

ಇಂಥ ಸರ್ವಶ್ರೇಷ್ಠವಾದ ಸಂಯುಕ್ತಚುನಾವಣೆಯ ಪದ್ಧತಿಯನ್ನು ಅಲ್ಲಗಳೆಯುತ್ತಿರುವ ಮುಖಂಡರು ಈಗಲಾದರೂ ಇದರ ನಿಜತತ್ವವನ್ನು ಸರಿಯಾಗಿ ಅರಿತುಕೊಂಡು ಸಂಯುಕ್ತಚುನಾವಣೆಯ ಪದ್ಧತಿಯನ್ನೇ ಏಕವಾಕ್ಯದಿಂದ ಸಮರ್ಥಿಸಿ, ದೇಶದಲ್ಲಿ ಸುಖಶಾಂತಿಗಳು ನೆಲಸುವಂತೆ ಇವರಿಗೆ ಸದ್ಬುದ್ಧಿಯನ್ನೀಯಲೆಂದು ದಯಾಮಯನಾದ ಜಗದೀಶ್ವರನನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಮಹಮುದ್ ಪೈಗಂಬರ್‌ರವರ ಜನ್ಮದಿವಸ ಸಂಸ್ಥಾನದ ಸ್ಕೂಲುಗಳಿಗೆಲ್ಲಾ ರಜಾ ಕೊಡತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಶ್ರೀಮದ್ಯುವರಾಜರವರು ಕಳೆದ ಜುಲೈ 23 ನೇ ತಾರೀಖು ಶನಿವಾರ ಬೊಂಬಾಯಿನಲ್ಲಿ ಜಹಜು ಹತ್ತಿ ಯೂರೋಪಿಗೆ ಪ್ರಯಾಣ ಬೆಳೆಯಿಸಿದರು.

ಹಾಸನದ ಶ್ರೀಮತಿ ಕಮಲಮ್ಮ ರಂಗಸ್ವಾಮಿ ಅಯ್ಯಂಗಾರ್ಯರವರು ಎರಡು ವರ್ಷಗಳವರೆಗೆ ಬೆಂಚ್ ಕೋರ್ಟಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾ|| ಎಸ್. ನಾರಾಯಣಪ್ರಸಾದರವರು, ತಮ್ಮ ಕೆಲಸದ ಜೊತೆಗೆ ಜೈಲ್ ಸೂಪರಿಂಟೆಂಡೆಂಟರವರ ಕೆಲಸವನ್ನೂ ನೋಡತಕ್ಕದ್ದೆಂದು ಸರಕಾರದವರು ಅಪ್ಪಣೆಮಾಡಿ ತ್ತಾರೆ.

ಕೊಡಗಿನ ಪ್ರಸಿದ್ಧ ಕಾಫೀಪ್ಲಾಂಟರೂ, ಮೈಸೂರ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಹಿಳೆಯರ ಪ್ರತಿನಿ ಗಳೂ ಆಗಿರುವ ಶ್ರೀಮತಿ ಸಾಕಮ್ಮನವರು ಮುಂದಿ ರಾಜ್ಯಾಂಗರಚನೆಯಲ್ಲಿ ಕೊಡಗು ದೇಶವು ಮೈಸೂ ರಿಗೇ ಸೇರತಕ್ಕದೆಂದು ಒಂದು ದೀರ್ಘವಾದ ಲೇಖ ವನ್ನು ಬರೆದು ಪ್ರಕಟಗೊಳಿಸಿರುತ್ತಾರೆ.

ಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ ಸರ್ ಸಿ. ವಿ ರಾಮನ್‌ರವರು 1933 ನೇ ಇಸವಿಯ ಏಪ್ರಿಲ್ ತಿಂಗ ಲಾಗಾಯಿತು 15 ವರ್ಷಗಳ ವರೆಗೆ ಬೆಂಗಳೂರಿ ಇಂಡಿಯನ್ ಸೈನ್ಸ್ ಇನ್ಸ್ಟಿಟ್ಯೂಟಿನ ಡೈರೆಕ್ಟರಾ ನೇಮಿಸಲ್ಪಟ್ಟಿರುತ್ತಾರೆ. ಈ ಕೆಲಸಕ್ಕೆ ಇದುವರೆ ಯೂರೋಪಿಯನ್ನರು ಮಾತ್ರವೇ ನೇಮಿಸಲ್ಪಡುತ್ತಿದ್ದರು.

ಸಕಲೇಶಪುರದ ತಾಲೂಕು ಅತ್ತಿಗನಹಳ್ಳಿಯ ಬಸವೇಗೌಡನೆಂಬವನು ದಾಯಾದಿಯಾದ ಪುಟ್ಟಮಲ್ಲೇಗೌಡನನ್ನು ಕೊಂದುಹಾಕಿದನೆಂಬ ಕಾರಣದಮೇಲೆ ಮೈಸೂರು ಸೆಷನ್ಸ್ ಜಡ್ಜರವರು ವಿಚಾರಣೆಯನ್ನು ಮಾಡಿ ಅಪರಾಧಿಗೆ 2 ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರು. ಸರಕಾರದವರು ಇದರ ಮೇಲೆ ಹೈಕೋರ್ಟಿನಲ್ಲಿ ಅಪೀಲ್ ಮಾಡಲು ಹೈಕೋರ್ಟಿನ ಇಬ್ಬರು ಜಡ್ಜರು ಮೊಕದ್ದಮೆಯನ್ನು ಪುನಃ ವಿಚಾರಣೆಮಾಡಿ ಅಪರಾಧಿಗೆ ಜೀವಾವಧಿ ಕಠಿಣ ಸಜೆಯನ್ನು ವಿಧಿಸಿದರು.

ಕಡೂರಿನಿಂದ ಚಿಕ್ಕಮಗಳೂರಿಗೆ ಹೊಸದಾಗಿ ರೈಲ್ವೆ ರಸ್ತೆಯನ್ನು ಹಾಕಿಸುವ ವಿಚಾರದಲ್ಲಿ ಕಡೂರು ಡಿಸ್ಟ್ರಿಕ್ಟಿನ ಮ|| ರಾ|| ಹೊಸಕೊಪ್ಪ ಕೃಷ್ಣರಾಯರೇ ಮೊದಲಾದ ಪ್ರಜಾಪ್ರಮುಖರು ಕಳೆದವಾರ ಬೆಂಗಳೂರಿನಲ್ಲಿ ದಿವಾನರನ್ನು ಭೇಟಿಮಾಡಿ ತಮ್ಮ ಅಭಿಪ್ರಾಯವನ್ನು ಅರಿಕೆಮಾಡಿಕೊಂಡರು. ದಿವಾನರವರು ಅವರ ವಿಜ್ಞಾಪನೆಗಳನ್ನು ಸಾವಧಾನವಾಗಿ ಲಾಲಿಸಿ, ಸದ್ಯಃ ಹಣಕಾಸಿನ ಕೊರತೆಯು ಬಹಳವಾಗಿರುವದರಿಂದ ಈಗಲೇ ಈ ಕಾರ್ಯವನ್ನು ಕೈಕೊಳ್ಳುವದು ಸಾಧ್ಯವಿಲ್ಲವೆಂದು ಅಪ್ಪಣೆ ಕೊಡಿಸಿದರು.

ಬೆಂಗಳೂರು ಸರ್ಕಾರಿ ವೈದ್ಯಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದ ಬಿ. ಆರ್. ಕೃಷ್ಣಯ್ಯಂಗಾರ್ ಎಂಬ ತರುಣನು ಮೈಸೂರಿನ ಒಂದಾನೊಂದು ಜವಳಿ ಅಂಗಡಿಯಲ್ಲಿ ಒಪ್ಪಿಗೆಯ ಮೇಲೆ 3 ಸೀರೆಗಳನ್ನು ತೆಗೆದುಕೊಂಡು ಹೋಗಿ ಎರಡು ಸೀರೆಗಳನ್ನು ತನ್ನ ಹೆಂಡತಿಗೆ ರವಾನಿಸಿ, ಮೂರನೆಯದನ್ನು ಒತ್ತೆಯಿಟ್ಟನೆಂದೂ, ಹೀಗೆಯೇ ಬಾಡಿಗೆಗೆ ಪಡೆದ ಒಂದು ಬೈಸಿಕಲ್ಲನ್ನು ಒತ್ತೆಯಿಟ್ಟನೆಂದೂ ಮೊಕದ್ದಮೆಯಾಗಿತ್ತು. ಮೈಸೂರು ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ ಎರಡು ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

ರಾಜಧಾನಿಯಲ್ಲಿ ಕೇವಲ ಸ್ವದೇಶೀ ವಸ್ತುಪ್ರಚಾರಕಾರ್ಯದಲ್ಲಿಯೇ ನಿರತರಾಗಿರುವ 'ಪಾಪ್ಯುಲರ್ ಸ್ಟೋರ್ಸ್' ನವರು ಕಲ್ಕತ್ತೆಯ ಮೆಸರ್ಸ್ ಎಫ್. ಎನ್. ಗುಪ್ತ ಅಂಡ್ ಕಂಪನಿಯವರಿಂದ ತಯಾರಿಸಲ್ಪಟ್ಟ ಕೆಲವು ಉಕ್ಕಿನ ಮತ್ತು ಹಿತ್ತಾಳೆಯ ನಿಬ್ಬುಗಳನ್ನು ನಮಗೆ ಕಳುಹಿಸಿರುತ್ತಾರೆ. ಈ ನಿಬ್ಬುಗಳ ಖರೀದಿಯು ಬಹಳ ಕಡಿಮೆಯಾಗಿರುವುದಲ್ಲದೆ, ಗುಣದಲ್ಲಿ ಹೆಚ್ಚು ಕ್ರಯದ ಪರದೇಶೀ ನಿಬ್ಬುಗಳಿಗಿಂತಲೂ ಪ್ರಶಸ್ತವಾಗಿರುತ್ತವೆ. ಪ್ರತಿಯೊಬ್ಬರೂ ಈ ನಿಬ್ಬುಗಳನ್ನೇ ತರಿಸಿಕೊಂಡು ಈ ನೂತನಸ್ವದೇಶೀ ಕೈಗಾರಿಕೆಗೆ ಪ್ರೋತ್ಸಾಹಕೊಡುವರೆಂದು ನಂಬುತ್ತೇವೆ. ಕ್ರಯ ಬಿಳೀಲೋಹದ ನಿಬ್ಬುಗಳು 12 ಡಜನ್ನಿಗೆ 12 ಆಣೆ. ಹಿತ್ತಾಳೆಯ ನಿಬ್ಬುಗಳು 12 ಡಜನ್ನಿಗೆ 9 ಆಣೆ.

ಭರತಖಂಡದಲ್ಲಿರುವ ದೇಶೀಯಸಂಸ್ಥೆಗಳಿಗೂ ಭರತಖಂಡದ ಮುಂದಿನ ರಾಜ್ಯಪದ್ಧತಿಗೂ ಯಾವ ವಿಧವಾದ ಸಂಬಂಧವಿರಬೇಕೆಂಬ ಬಗ್ಗೆ ವರದಿಯನ್ನೊಪ್ಪಿಸಲು ನಿಯಮಿಸಲ್ಪಟ್ಟಿದ್ದ ಡೇವಿಡ್‌ಸನ್ ಕಮಿಟಿಯವರು ತಮ್ಮ ವರದಿಯನ್ನು ಈಗತಾನೆ ಪ್ರಕಟಗೊಳಿಸಿರುತ್ತಾರೆ. ಕಮಿಟಿಯವರು ರಾಜಧಾನಿಗೆ ಬಂದಿದ್ದಕಾ ದಲ್ಲಿ ನಡೆದ ಮಾತುಕಥೆಗಳ ಆಧಾರದಮೇಲೆ, ಸಂ ನವು ಬ್ರಿಟಿಷ್‌ಸರಕಾರಕ್ಕೆ ಪ್ರತಿವರ್ಷವೂ ಕೊಡು ರುವ ಪೊಗದಿಯಹಣವನ್ನು ಸಂಪೂರ್ಣವಾಗಿ ವಜಾ ಮಾಡುವಂತೆ ಕಮಿಟಿಯವರು ಶಿಫಾರಸುಮಾಡುವ ರೆಂದು ಭಾವಿಸಲ್ಪಟ್ಟಿತ್ತು. ಆದರೆ ವರದಿಯು ಈ ವಿಷ ಯದಲ್ಲಿ ಎಲ್ಲರಿಗೂ ಆಶಾಭಂಗವನ್ನುಂಟುಮಾಡಿರು ದೆ. ಕಮಿಟಿಯವರು ಸದ್ಯಃ ಒಟ್ಟಿನ ಉತ್ಪತ್ತಿ ಯಲ್ಲಿ ಶೇಕಡಾ 5 ಕ್ಕಿಂತಲೂ ಹೆಚ್ಚಾಗಿಕೊಡುತ್ತಿರುವ ಪೊಗದಿಯಹಣವನ್ನು ಮಾತ್ರ ವಜಾಮಾಡಬೇಕೆಂದು ಶಿಫಾರಸುಮಾಡಿರುತ್ತಾರೆ. ಇದರಿಂದ ಮೈಸೂರುಸಂ ಸ್ಥಾನಕ್ಕೆ 5-6 ಲಕ್ಷ ರೂಪಾಯಿಗಳು ಮಾತ್ರ ಉಳಿಯುವವೆಂದು ಭಾವಿಸಲ್ಪಟ್ಟಿದೆ.

ಸತ್ಯಾಗ್ರಹಸಮರವಾರ್ತೆ.

ಇಂಡಿಯನ್ ಸೆಂಟ್ರಲ್ ಕಾರ್ಟ್‌ಕಮಿಟಿಯ ಮೆಂಬರಾದ ಮಿ|| ಕೋಟಾರರವರು ಜುಲೈ 25 ನೇ ತಾರೀಖಿನ ದಿವಸ ಕರಾಚಿಯಲ್ಲಿ ದಸ್ತಗಿರಿಮಾಡಲ್ಪಟ್ಟರು.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಮಿ|| ರೂಯಿಕರ್‌ರವರು ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಆಪಾದನೆಯ ಮೇಲೆ ನಾಗಪುರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರು ವಿಚಾರಣೆಯನ್ನು ನಡೆಯಿಸಿ 2 ವರ್ಷ ಕಠಿಣ ಸಜೆಯನ್ನು ವಿಧಿಸಿದರು.

ಜುಲೈ 24 ನೇ ತಾರೀಖಿನ ದಿವಸ ಮುಂಬಯಿಯ 1ನೇ ಎಮರ್ಜನ್ಸಿ ಕೌನ್ಸಿಲ್ಲಿನ ಮೆಂಬರರು ಗಿರಗಾಂವ್ ಬ್ಯಾಕ್ ರೋಡಿನಲ್ಲಿರುವ ಹಳೆಯ ಕಾಂಗ್ರೆಸ್ ಭವನದ ಮೇಲೆ ದಾಳಿಯಿಟ್ಟರು. ಪೋಲೀಸರು ಮೆರವಣಿಗೆ ಮಾಡಿಕೊಂಡು ಬರುತ್ತಿದ್ದ ಎಮರ್ಜನ್ಸಿ ಕೌನ್ಸಿಲ್ಲಿನ 3 ಜನ ಸದಸ್ಯರನ್ನೂ 55 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಜುಲೈ 24 ನೆಯ ತಾರೀಖಿನ ದಿವಸ ಅಲಹಾಬಾದಿನ ಕಾಂಗ್ರೆಸ್‌ಭವನವನ್ನು ಆಕ್ರಮಿಸಲು ಪ್ರಯತ್ನಿಸಿದ 27 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು.

ಹೊಸಆರ್ಡಿನೆನ್ಸನ್ನು ಖಂಡಿಸುವಬಗ್ಗೆ ಬಹಿರಂಗ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದ ಮೇಲೆ ನಾಗಪುರದ ಪೋಲೀಸರು ಸದರಿ ಜಿಲ್ಲೆಯ 7 ಜನರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆ.

ಜುಲೈ 25 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ಕುಂಬಾರ್‌ವಾಡಿಯಲ್ಲಿ ಒಂದು ಮನೆಯನ್ನು ಶೋಧಮಾಡಿ ಒಂದು ಗಾಡಿಯ ತುಂಬಾ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಜಪ್ತುಮಾಡಿಕೊಂಡು ಹೋದರು. ಮುಂಬಯಿಯ ಪ್ರಸಿದ್ಧ ಹತ್ತಿ ದಲ್ಲಾಳಿಗಳಲ್ಲೊಬ್ಬರಾದ ಮಿ|| ಶ್ರೀನಿವಾಸಜಿಯವರು ಇದೇ ದಿವಸ ಹೊಸ ಆರ್ಡಿನೆನ್ಸಿನ ಪ್ರಕಾರ ದಸ್ತಗಿರಿ ಮಾಡಲ್ಪಟ್ಟರು.

ಜುಲೈ 26 ನೆಯ ತಾರೀಖಿನ ದಿವಸ ಅಲಹಾಬಾದಿನ ಸ್ವರಾಜ್ಯಭವನವನ್ನು ಆಕ್ರಮಿಸಲು ಪ್ರಯತ್ನಿಸಿದ 16 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು.

ಅಲಹಾಬಾದ್ ಡಿ|| ಜಂಬುಸಾರ್ ತಾಲೂಕಿನಲ್ಲಿ ಕಂದಾಯವನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ 375 ಎಕರೆ ಜಮೀನು ಸರಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿದೆ.

ಜುಲೈ 27 ನೆಯ ತಾರೀಖಿನ ದಿವಸ ಬೆನಾರಿಸ್ ಕಾಂಗ್ರೆಸ್‌ಭವನವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಾಂಗ್ರೆಸ್ ಭವನದ ಮೇಲೆ ಹತ್ತಿ ರಾಷ್ಟ್ರೀಯ ಧ್ವಜವನ್ನು ಏರಿಸಿದ 20 ಜನ ಸ್ವಯಂಸೇವಿಕೆಯರನ್ನೂ ಮತ್ತು 4 ಜನ ಸ್ವಯಂಸೇವಕರನ್ನೂ ಪೋಲೀಸರು ದಸ್ತಗಿರಿಮಾಡಿದರು.

ಜುಲೈ 27 ನೆಯ ತಾರೀಖಿನ ದಿವಸ ಅಹಮದಾಬಾದ್ ಡಿ|| ವಿರಂಗಾಮಿನಲ್ಲಿ ರಾಜಕೀಯ ಸಮ್ಮೇಳನವನ್ನು ಸೇರಿಸಿದ 10 ಜನರನ್ನು ಪೋಲೀಸರು ದಸ್ತಗಿರಿಮಾಡಿದರು.

ಜುಲೈ 27 ನೆಯ ತಾರೀಖಿನ ದಿವಸ (ಸಿಂಧ್) ಹೈದರಾಬಾದಿನ ಕಾಂಗ್ರೆಸ್ ಭವನವನ್ನು ಆಕ್ರಮಿಸಲು ಪ್ರಯತ್ನಿಸಿದ 6 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು. ಅವರೆಲ್ಲರಿಗೂ ಆರಾರು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಬೆಳಗಾಂವ ಡಿ|| ಕಾಂಗ್ರೆಸ್ ಕಮಿಟಿಯ ಕಚೇರಿಯನ್ನು ಆಕ್ರಮಿಸಲು ಪ್ರಯತ್ನಿಸಿದ 6 ಜನ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಜುಲೈ 29 ನೆಯ ತಾರೀಖಿನ ದಿವಸ ಅಲಹಾಬಾದಿನಲ್ಲಿ ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ 8 ಜನ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ದೆಹಲಿಯಲ್ಲಿ ಸರ್ ಸ್ಯಾಮುಯಲ್‌ಹೋರ್‌ರವರ ಹೇಳಿಕೆಯನ್ನು ಖಂಡಿಸಲು ಬಹಿರಂಗಸಭೆಯನ್ನು ಸೇರಿಸಿದ್ದ 5 ಜನ ಲಾಯರುಗಳಿಗೆ ಪೋಲೀಸ್ ಕಮಿಷನರು ಎಚ್ಚರಿಕೆಯನ್ನು ಕೊಟ್ಟಿರುವರು.

ನಾಗಪುರ ಡಿ|| ಯವತಮಾಳಿನ ಮಿ|| ಎಂ. ಎಸ್. ಆಣೆ ಮತ್ತು ಮಿ|| ದಾಮ್ಲೆ ಎಂಬಿಬ್ಬರು ವಕೀಲರು ಕಾಂಗ್ರೆಸ್ ಚಳವಳಿಯನ್ನು ಪ್ರೋತ್ಸಾಹಿಸುವರೆಂಬ ಕಾರಣದ ಮೇಲೆ ಜುಡಿಷಿಯಲ್ ಕಮಿಷನರವರು ಸದರಿ ವಕೀಲರ ಸನ್ನದನ್ನು ಹಂಗಾಮಿಯಾಗಿ ರದ್ದುಮಾಡಿರುತ್ತಾರೆ.

ಮದರಾಸಿನ ಮೌಂಟ್‌ರೋಡಿನಲ್ಲಿರುವ ಲಾರ್ಡ್ ವಿಲ್ಲಿಂಗ್‌ಡನ್‌ರವರ ಪ್ರತಿಮೆಯನ್ನು ಕೆಡಿಸಲು ಪ್ರಯತ್ನಿಸಿದ 2 ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು.

ವರ್ತಮಾನಸಂಗ್ರಹ

ಅಖಿಲಭಾರತ ಕ್ರಿಕೆಟ್ ಆಟಗಾರರಿಗೂ, ಸ್ಕಾಟ್ಲೆಂಡಿನವರಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಭಾರತೀಯರೇ ಜಯಶಾಲಿಗಳಾದರು.

ಪೆಶಾವರಿನ ಸಿವಿಲ್ ಸರ್ಜನ್ನರಾದ ಮಿ|| ಕೋಲ್ಡ್‌ಸ್ಟ್ರೀಂ ರವರನ್ನು ಕೊಲೆಮಾಡಿದ ಅಬ್ದುಲ್ ರಹೀದನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು.

ಭರತಖಂಡದ ಹಿತೈಷಿಗಳಲ್ಲೊಬ್ಬರಾದ ಸರ್ ಯಂಗ್ ಹಸ್ಬೆಂಡ್‌ರವರು ಕ್ಷಿಪ್ರದಲ್ಲಿಯೇ ಇಂಗ್ಲೆಂಡಿನಲ್ಲಿ ಭಾರತಚಿತ್ರಕಲಾಪ್ರದರ್ಶನವನ್ನು ಏರ್ಪಡಿಸಲಿರುವರು.

ತನ್ನ ಸೊಳೆಯನ್ನು ಕೊಲೆಮಾಡಿದನೆಂಬ ಅಪವಾದನೆಯ ಮೇಲೆ ಪುಣೆಯ ರಾಮಚಂದ್ರ ಉರವಣೆ ಎಂಬ ಧನಿಕವರ್ತಕನಿಗೆ ಸೆಷನ್ ಜಡ್ಜಿಯವರು ಜೀವಾವಧಿ ಕಠಿಣಸಜೆಯನ್ನು ವಿಧಿಸಿದರು.

ಲಾಹೋರ್ ಮುನಿಸಿಪಲ್ ಆಫೀಸಿನ ಸೂಪರಿಂಟೆಂಡೆಂಟರಾದ ಗಾಜಿ ಅಬ್ದುಲ್ ಲತೀಫ್‌ರವರು 50 ರೂಪಾಯಿ ಲಂಚವನ್ನು ತೆಗೆದುಕೊಂಡರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾರೆ.

ಮದರಾಸಿನ "ಬೈ ಇಂಡಿಯನ್ ಲೀಗ್" ನವರು ಟ್ಯುಟಿಕಾರನ್, ಮಧುರೆ ಮತ್ತು ಇತರ ನಗರಗಳಲ್ಲಿ ಸ್ವದೇಶೀ ವಸ್ತುಪ್ರದರ್ಶನಗಳನ್ನು ಏರ್ಪಡಿಸಬೇಕೆಂದಿರುವರು. ಪ್ರತಿಯೊಂದು ಪ್ರದರ್ಶನವೂ ಹತ್ತು ದಿವಸಗಳವರೆಗೆ ನಡೆಯುವದು.

ಕಾಶ್ಮೀರ ಸಂಸ್ಥಾನದಲ್ಲಿ ಹವೆಯ ವ್ಯತ್ಯಾಸದಿಂದ ಭತ್ತದ ಬೆಳೆಯು ಸರಿಯಾಗಿ ಆಗದೆ ಅಕ್ಕಿಯ ಖರೀದಿಯು ಹೆಚ್ಚಿಹೋಗಿರುತ್ತದೆ. ಅದಕ್ಕಾಗಿ ಸರ್ಕಾರದವರು 30,000 ಮಣ ಅಕ್ಕಿಯನ್ನು ತರಿಸಿ ಪ್ರತಿಯೊಬ್ಬನಿಗೂ ತಿಂಗಳು 1ಕ್ಕೆ 3 ಸೇರಿನಂತೆ ವಿಕರ ಮಾಡಬೇಕೆಂದು ನಿಶ್ಚಯಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ 50,000 ರೂಪಾಯಿಗಳ ನಷ್ಟವಾಗುವುದು.

ಲಾಹೋರ್ ಮುನಿಸಿಪಾಲಿಟಿಯ ಕ್ಯಾಷಿಯರಾದ ದೌಲತ್‌ರಾಮ ಮತ್ತು ಜವಾನ್ಸಿ ಸುಭಾನಾ ಎಂಬಿಬ್ಬರು 24 ಸಾವಿರ ರೂಪಾಯಿಗಳನ್ನು ದುರುಪಯೋಗಪಡಿಸಿದರೆಂಬ ಕಾರಣದ ಮೇಲೆ ಸ್ಪೆಷಲ್ ಮ್ಯಾಜಿಸ್ಟ್ರೇಟರವರು ವಿಚಾರಣೆಮಾಡಿ ಮೊದಲನೆ ಅಪರಾಧಿಗೆ 4 ವರ್ಷಗಳ ಕಠಿಣಸಜೆಯನ್ನೂ, ಎರಡನೇ ಅಪರಾಧಿಗೆ 2½ ವರ್ಷಗಳ ಕಠಿಣಸಜೆಯನ್ನೂ ವಿಧಿಸಿದರು.

ಡಾ|| ಅನ್ಸಾರಿಯವರು ಇದೇ ಅಗಸ್ಟ 8 ನೇ ತಾರೀಖಿನ ದಿವಸ ಯೂರೋಪಿಗೆ ಪ್ರಯಾಣ ಬೆಳೆಯಿಸುವರೆಂದೂ, ಅದಕ್ಕೆ ಮುಂಚಿತವಾಗಿ ಮಹಾತ್ಮರನ್ನು ಕಾಣುವದಕ್ಕಾಗಿ ಇಂಡಿಯಾ ಸರ್ಕಾರದವರ ಅನುಮತಿಯನ್ನು ಕೇಳಿರುವರೆಂದೂ ತಿಳಿದುಬಂದಿದೆ. ಈ ಮಧ್ಯೆ ಡಾ|| ಅನ್ಸಾರಿಯವರು ಪಂ|| ಜವಾಹರಲಾಲನೆಹರೂರವರನ್ನು ನೋಡುವದಕ್ಕಾಗಿ ಡೆಹರಾಡೂನಿಗೆ ಪ್ರಯಾಣಮಾಡಿರುತ್ತಾರೆ.

ಕಳೆದ ಜುಲೈ 26 ನೇ ತಾರೀಖಿನ ದಿವಸ ಯಾರೋ ಕೆಲವು ದುಷ್ಟರು ರಾಯಪುರ (ಅಹಮದಾಬಾದ್) ದ ಪೋಸ್ಟಾಫೀಸಿಗೆ ಬೆಂಕಿಹಾಕುವ ಪ್ರಯತ್ನವನ್ನು ಮಾಡಿದರು. ಸೀಮೆ ಎಣ್ಣೆಯಲ್ಲಿ ಅದ್ದಿದ ಬಟ್ಟೆಯ ಚೂರುಗಳನ್ನು ಆಫೀಸಿನ ಬಾಗಿಲಲ್ಲಿ ಇಟ್ಟು ಬೆಂಕಿಯನ್ನು ಹಚ್ಚಿದರು. ಇದರಿಂದ ಮುಂಭಾಗದ ಬಾಗಿಲು ಸ್ವಲ್ಪ ಸುಟ್ಟಿತು. ಪೋಲೀಸರು ತನಿಖೆಕ್ರಮಗಳನ್ನು ನಡೆಯಿಸುತ್ತಿರುವರು.

ಜುಲೈ 27 ನೇ ತಾರೀಖಿನ ದಿವಸ ಅಹಮದಾಬಾದಿನ ಸಿಟಿ ಮ್ಯಾಜಿಸ್ಟ್ರೇಟರವರು ಒಬ್ಬ ಅಪರಾಧಿಗೆ 3½ ವರ್ಷ ಕಠಿಣಸಜೆಯನ್ನು ವಿಧಿಸಿ ತೀರ್ಪನ್ನು ಓದುತ್ತಿದ್ದಾಗ ಅಪರಾಧಿಯು ತನ್ನ ಕಾಲಿನಲ್ಲಿದ್ದ ಜೋಡನ್ನು ಮ್ಯಾಜಿಸ್ಟ್ರೇಟರ ಕಡೆಗೆ ಎಸೆದನು. ಅದು ಮ್ಯಾಜಿಸ್ಟ್ರೇಟರಿಗೆ ತಗಲಲಿಲ್ಲ. ಅಪರಾಧಿಯು ಮತ್ತೊಂದು ಜೋಡನ್ನು ಎಸೆಯುವಷ್ಟರಲ್ಲಿ ಪೋಲೀಸರು ಅವನನ್ನು ದಸ್ತಗಿರಿಮಾಡಿ ತೆಗೆದುಕೊಂಡು ಹೋದರು.

ಕರಾಚಿ ಪಟ್ಟಣದ ಒಂದು ಹೋಟೇಲಿನಲ್ಲಿ ವಾಸವಾಗಿದ್ದ ರೋಸೆನ್‌ಫೀಲ್ಡ್ ಮತ್ತು ವಾಂಬರ್ಗ್ ಎಂಬ ಇಬ್ಬರು ಪರದೇಶೀಯರು ಮುಂಬಯಿ ಮತ್ತು ಕರಾಚಿ ಪಟ್ಟಣದ ಬ್ಯಾಂಕುಗಳಿಗೆ ಅನೇಕ ಲಕ್ಷ ರೂಪಾಯಿಗಳವರೆಗೆ ಮೋಸಮಾಡಿದರೆಂಬ ಕಾರಣದ ಮೇಲೆ ಪೋಲೀಸರು ಅವರೀರ್ವರನ್ನು ದಸ್ತಗಿರಿಮಾಡಿರುತ್ತಾರೆ. ರೋಸೆನ್‌ಫೀಲ್ಡನು ಮಲಗುತ್ತಿದ್ದ ಕೊಠಡಿಯಲ್ಲಿ ಹಾಸಿಗೆಯ ಕೆಳಗೆ 2,75,000 ರೂಪಾಯಿಗಳ ಕರೆನ್ಸಿನೋಟುಗಳು ದೊರಕಿರುತ್ತವೆ.

ಇದೇ ಜುಲೈ 24 ನೇ ತಾರೀಖಿನ ದಿವಸ ಲಕ್ನೋದಲ್ಲಿ ಮುಸ್ಲಿಂಸ್ವತಂತ್ರಪಕ್ಷದ ಆಶ್ರಯದಲ್ಲಿ ಮುಸಲ್ಮಾನರ ಪ್ರಚಂಡಸಭೆಯು ಸೇರಿತ್ತು. ಮಿ|| ಎ. ಎಚ್. ಕಿದ್ವಾಯಿಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಮಿ|| ಕಿದ್ವಾಯಿಯವರು ಸಂಪೂರ್ಣಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದೂ, ಕೋಮುವಾರು ಭೇದವಿಲ್ಲದ ಫೇಡರೇಷನ್ ರಾಜ್ಯಸ್ಥಾಪನೆಯಸಲುವಾಗಿ ತಮ್ಮ ಶಕ್ತಿಮೀರಿ ಕೆಲಸಮಾಡುವೆನೆಂದೂ ದೀರ್ಘವಾದ ಭಾಷಣಮಾಡಿದರು. ಕಡೆಯಲ್ಲಿ ನೂತನಆರ್ಡಿನೆನ್ಸು ಸರ್ವಾನುಮತದಿಂದ ಖಂಡಿಸಲ್ಪಟ್ಟಿತು.

ಜುಲೈ 24 ನೆಯ ತಾರೀಖಿನ ದಿವಸ ಸಾಯಂಕಾಲ ಬನಾರಸ್ಸಿನ ಲಿಬರಲ್ ಮತ್ತು ಮಂದ ಪಕ್ಷದ ಮುಖಂಡರನೇಕರು ಪಂಡಿತ ಮದನಮೋಹನ ಮಾಳವೀಯರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಸೇರಿಸಿ ಸರ್ ಸ್ಯಾಮುಯಲ್ ಹೋರ್‌ರವರ ಹೇಳಿಕೆಯನ್ನೂ, ಹೊಸ ಆರ್ಡಿನೆನ್ಸನ್ನೂ ಖಂಡಿಸಿದುದಲ್ಲದೆ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿ ಶಾಂತಿಸ್ಥಾಪನೆ ಮಾಡಬೇಕೆಂಬ ಠರಾವನ್ನೂ ಸರ್ವಾನುಮತದಿಂದ ಅಂಗೀಕರಿಸಿದರು. ಇದೇ ದಿವಸ ಕರಾಚಿಯಲ್ಲಿ ಮಿ|| ಜೆಮ್‌ಶೆಡ್ ಮೆಹತಾರವರ ಅಧ್ಯಕ್ಷತೆಯಲ್ಲಿಯೂ ಒಂದು ಬಹಿರಂಗಸಭೆಯು ಸೇರಿ, ಸರ್ ಹೋರ್‌ರವರ ಹೇಳಿಕೆಯೂ, ಹೊಸ ಆರ್ಡಿನೆನ್ಸೂ ಖಂಡಿಸಲ್ಪಟ್ಟವು.

ಚಳ್ಳಕೆರೆ ತಾಲ್ಲೂಕು 3ನೆಯ ಕುಂಚಿಟಿಗರ ಸಮ್ಮೇಳನ.

ಈ ಸಮ್ಮೇಳನವು ಇದೇ ತಾಲ್ಲೂಕು ದೊಡ್ಡಬೀರನಹಳ್ಳಿ ಗ್ರಾಮದಲ್ಲಿ ತಾ|| 7-7-32 ನೆಯ ಗುರುವಾರ ಪ್ರಾತಃಕಾಲ 9 ಘಂಟೆಯಲ್ಲಿ ಮ|| ರಾ|| ಎಂ. ಆರ್. ಎ. ಮೆಂಬರು ಗೋಪನಹಳ್ಳಿ ಪಾ|| ತಮ್ಮೇಗೌಡರೂ, ಗೊಂಚಿಕಾರ ಮುದ್ದಪ್ಪನವರೂ ಮುಂತಾದ ಅನೇಕ ಕುಲಬಾಂಧವರ ಉದಾರ ಆಶ್ರಯದಿಂದ ನೆರವೇರಿಸಲ್ಪಟ್ಟಿತು. ಈ ಸಭೆಗೆ ಬೆಂಗಳೂರು ಮ|| ರಾ|| ಎಸ್. ಕೆ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸುಮಾರು ೧೫೦೦ ಜನಗಳು ಈ ಸಭೆಗೆ ದಯಮಾಡಿಸಿದ್ದರು. ದೇವತಾ ಪ್ರಾರ್ಥನೆಯಾದನಂತರ ಮ|| ರಾ|| ಪಿ. ಚನ್ನಪ್ಪನವರು ಸಂಘದ ವರದಿಯನೊಪ್ಪಿಸಿದರು. ಮ|| ರಾ|| ಚಿತ್ರದುರ್ಗ ವಾಸಿಗಳಾದ ಎಂ. ಆರ್. ಎ. ಮೆಂಬರು ಎಸ್. ಬಿ. ಹನುಮಂತರಾಜಯ್ಯನವರು ಕುಂಚಿಟಿಗರ ಸಂಘ ಮತ್ತು ಹಾಸ್ಟಲುಗಳ ಅವಶ್ಯಕತೆ ವಿಚಾರವಾಗಿ ಬಹು ಸ್ವಾರಸ್ಯವಾದ ಭಾಷಣಮಾಡಿದರು. ಮ|| ರಾ|| ಹುಚರ ಕೆ. ಕೆಂಚಪ್ಪ, ಎಂ.ಎ., ಎಲ್‌ಎಲ್.ಬಿ., ಅಡ್ವೋಕೇಟ್ ಶಿವಮೊಗ್ಗ ಇವರು ಏಕಮತ್ಯ ವಿಚಾರವಾಗಿ ಭಾಷಣಮಾಡುತ್ತಾ ತಾವು ದೊಡ್ಡ ವಕೀಲರಾಗಿದ್ದರೂ ಕೂಡ ಲಕ್ಷ್ಯದಲ್ಲಿಡದೆ ವ್ಯಾಜ್ಯವ್ಯವಹಾರಗಳಿಗೆ ಹೋಗಿ ಕೋರ್ಟಿಗೂ, ವಕೀಲರುಗಳಿಗೂ ಹಣ ಖರ್ಚುಮಾಡಬೇಡಿರೆಂದೂ, ಏಕಮತ್ಯವೆಂಬುದನ್ನೇ ಧ್ಯೇಯವಾಗಿಟ್ಟುಕೊಂಡು ತಮ್ಮ ತಮ್ಮ ವ್ಯಾಜ್ಯಗಳನ್ನು ತಮ್ಮಲ್ಲಿಯೇ ಫೈಸಲ್‌ಮಾಡಿಕೊಳ್ಳಬೇಕೆಂದೂ ಬಹು ಸ್ವಾರಸ್ಯವೂ, ವಿಷಯಗರ್ಭಿತವೂ, ಸಂಕ್ಷಿಪ್ತವೂ ಆದ ಭಾಷಣಮಾಡಿದರು. ಮ|| ರಾ|| ಎಂ. ಗೋವಿಂದರೆಡ್ಡಿ ಎಂ.ಎ., ಚಿತ್ರದುರ್ಗ ಇವರು ವಿದ್ಯಾಭ್ಯಾಸ ವಿಚಾರವಾಗಿ ಭಾಷಣಮಾಡುತ್ತಾ ಪ್ರತಿಯೊಬ್ಬ ಕುಂಚಿಟಿಗ ಮಹಾಶಯರೂ ತಮ್ಮ ತಮ್ಮ ಮಕ್ಕಳನ್ನು 5 ವರ್ಷ ಮೊದಲ್ಗೊಂಡು 16 ವರ್ಷ ವಯಸ್ಸಿನವರೆಗೂ ವಿದ್ಯಾಭ್ಯಾಸಮಾಡಿಸಲೇ ಬೇಕೆಂಬುದೂ ಹಾಗಿಲ್ಲದ ಪಕ್ಷದಲ್ಲಿ ಮುಂದಿನ ನಾಗರೀಕ ಪ್ರಪಂಚದಲ್ಲಿ ಈ ಹಿಂದುಳಿದ ಕುಂಚಿಟಿಗ ಜನಾಂಗದವರು ಎಂದಿಗೂ ಮುಂದುವರಿಯಲಾರರೆಂದೂ ಮುಂತಾಗಿ ದೀರ್ಘವಾಗಿಯೂ ಸ್ವಾರಸ್ಯವಾಗಿಯೂ ಭಾಷಣಮಾಡಿದರು. ಮ|| ರಾ|| ಪಿ. ಚನ್ನಪ್ಪ, ಬಿ. ಜಿ. ಮುದ್ದಪ್ಪನವರು ಹಾಸ್ಟಲು ಸ್ಥಾಪನೆ ವಿಚಾರವಾಗಿಯೂ, ಮ|| ರಾ|| ಜವರೇಗೌಡರು ನಾಗರೀಕತೆ ವಿಚಾರವಾಗಿಯೂ, ಮ|| ರಾ|| ಹಾಲೇನಹಳ್ಳಿ ಪಾ|| ತುಡಿಗೌಡರು ಲಗ್ನಕಾಲದಲ್ಲಿ ದುಂದುವೆಚ್ಚ ವಿಚಾರವಾಗಿಯೂ ಭಾಷಣಮಾಡಿದರು. ಅನಂತರ ಅಧ್ಯಕ್ಷರ ಉಪಸಂಹಾರ ಭಾಷಣವಾಯಿತು. ನಂತರ ಈ ಕೆಳಗಿನ ಠರಾವುಗಳು ಪಾಸಾದನಂತರ ಸಂಘಸ್ಥಾಪನೆಗೆ ಮೆಂಬರುಗಳ ಚುನಾವಣೆ ನಡೆದು ಪ್ರತಿಯೊಬ್ಬ ಮೆಂಬರೂ 5 ರೂಪಾಯಿ ಪ್ರವೇಶ ರುಸುಂ ಕೊಡಬೇಕೆಂದು ತೀರ್ಮಾನಿಸಿದ್ದರ ಮೇಲೆ 93-10-0 ವಸೂಲಾಗಿ ಸಭೆಯು ನಮ್ಮ ಶ್ರೀಮನ್ ಮಹಾರಾಜರವರ, ಯುವರಾಜರವರ ಮತ್ತು ನಮ್ಮ ಕುಲೋದ್ಧಾರಕರೂ, ವೃದ್ಧಪಿತಾಮಹರೂ ಆದ ಮೈಸೂರು ಮ|| ರಾ|| ಧರ್ಮಪ್ರಕಾಶ ರಾವ್ ಬಹದ್ದೂರ್ ಸಾಹುಕಾರ್ ಡಿ. ಬನುಮಯ್ಯನವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಬರಖಾಸ್ತು ಮಾಡಲಾಯಿತು.

ಠರಾವುಗಳು.

1. ಮ|| ರಾ|| ಸಾಹುಕಾರ್ ಡಿ. ಬನುಮಯ್ಯನವರಿಗೆ ನಮ್ಮನ್ನಾಳುವ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರು ರಾವ್ ಬಹದ್ದೂರ್ ಎಂಬ ಬಿರುದನ್ನು ದಯಪಾಲಿಸಿದ್ದಕ್ಕಾಗಿ ಈ ಸಭೆಯವರು ಸರ್ವಾನುಮತದಿಂದ ತಮ್ಮ ಸಂತೋಷವನ್ನು ತೋರ್ಪಡಿಸುತ್ತಾರೆ. 2. ಚಿತ್ರದುರ್ಗದಲ್ಲಿ ಒಂದು ಕುಂಚಿಟಿಗರ ಹಾಸ್ಟಲನ್ನು ಸ್ಥಾಪಿಸತಕ್ಕದ್ದು. 3. ಹಾಸ್ಟಲಿಗಾಗಿ ಮಹಜನರಿಂದ ಚಂದಾ ವಸೂಲ್ಮಾಡಿ ಸಂಘದ ಹೆಸರಿನಲ್ಲಿ ಟ್ರಿಜರಿಯಲ್ಲಿ ಡಿಪಾಜಿಟ್ ಮಾಡತಕ್ಕದ್ದು. 4. ಸದರಿ ಸಂಘವನ್ನು ಮೈಸೂರಿನ ಅಖಿಲ ಕುಂಚಿಟಿಗರ ಸಂಘಕ್ಕೆ ಉಪಸಂಘವನ್ನಾಗಿ ಮಾಡಿಕೊಳ್ಳತಕ್ಕದ್ದು. 5. ಚಿತ್ರದುರ್ಗ ಟೌನ್‌ನಲ್ಲಿ ನಮ್ಮ ಹಾಸ್ಟಲ್ ಕಟ್ಟಡಕ್ಕಾಗಿ ಒಂದು ಸೈಟನ್ನು ಕೊಡಿಸಕೊಡಬೇಕೆಂದು ಮ|| ಡೆಪ್ಯುಟಿ ಕಮೀಷನರನ್ನು ಪ್ರಾರ್ಥಿಸುವುದು. 6. ಚಳ್ಳಕೆರೆ ತಾಲ್ಲೂಕಿನಲ್ಲಿರುವ ನಮ್ಮ ಕುಲಸ್ಥರುಗಳು ಪ್ರತಿವರ್ಷವೂ ಯುಗಾದಿ ಹಬ್ಬದಲ್ಲಿ ಮನೆಯೊಂದಕ್ಕೆ ಎಂಟು ಆಣೆಯಂತೆ ನಮ್ಮ ಹಾಸ್ಟಲ್‌ಗೆ ಚಂದಾ ಕೊಡತಕ್ಕದ್ದು. 7. ನಮ್ಮವರು ಕನ್ಯಾಶುಲ್ಕ ತೆಗೆದುಕೊಳ್ಳಕೂಡದು. ಲಗ್ನಕಾಲದಲ್ಲಿ ದುಂದುವೆಚ್ಚ ಮಾಡಕೂಡದು. 8. ಲಗ್ನಕಾಲದಲ್ಲಿ ಮೈಸೂರು ಸಂಘಕ್ಕೆ ಗಂಡಿನ ಕಡೆಯಿಂದ 2 ರೂಪಾಯಿಗಳು ಹೆಣ್ಣಿನ ಕಡೆಯಿಂದ 1 ರೂಪಾಯಿ ವಸೂಲುಮಾಡಿ ಕಳುಹಿಸತಕ್ಕದ್ದು. 9. ಪೂರ್ವದಿಂದಲೂ ನಮ್ಮ ಜನಗಳಲ್ಲಿ ಪ್ರಚಾರದಲ್ಲಿದ್ದು ಈಗ ಮೂಲೆಗಿಟ್ಟಿರುವ ರಾಟೆಗಳಿಂದ ಅರಳೆಯನ್ನು ಮಾಡಿ ನಮ್ಮ ಬಟ್ಟೆಗಳನ್ನು ನಾವೇ ಮಾಡಿಕೊಳ್ಳತಕ್ಕದ್ದು. ಈ ಸಭೆಗೆ ದಯಮಾಡಿಸಿದ್ದ ಸುಮಾರು 1½ ಸಾವಿರ ಕುಲಸ್ಥರುಗಳಿಗೆ ಊಟೋಪಚಾರ ಮನೆಗಳೇರ್ಪಡಿಸಿದ್ದು ತುಂಬಾ ಸಂತೋಷವಾಗಿರುತ್ತದೆ.

ಪ್ರೇಕ್ಷಕ.

ಸ್ವದೇಶೀ ವ್ರತಾಚರಣೆ.

ಆಂಗ್ಲೇಯರ ಮೇಲ್ಪಂಕ್ತಿಯನ್ನು ಅನುಸರಿಸಿ

(ಮಧುರಾಂಬೆಯು ಬರೆದದ್ದು.)

ದೇಶಾಭಿಮಾನವೆಂದರೆ ಏನೆಂಬುದನ್ನು ತಿಳಿದು ಆಚರಣೆಗೆ ತಂದಿರುವರಲ್ಲಿ ಇಂಗ್ಲೀಷರು ಅಗ್ರಗಣ್ಯರು. ಅವರಲ್ಲಿ ಒಳಗೊಳಗೆ ವ್ಯತ್ಯಾಸಗಳೂ ಭಿನ್ನಾಭಿಪ್ರಾಯಗಳೂ ಎಷ್ಟೇ ಇರಲಿ, ದೇಶದ ಗೌರವ ಮತ್ತು ರಕ್ಷಣೆಗಳ ವಿಷಯದಲ್ಲಿ ಒಗ್ಗಟ್ಟು ಅತಿಶಯವಾಗಿರುವುದು. ಹೋದವರುಷದ ಮಧ್ಯಭಾಗದಲ್ಲಿ ಸರ್ಕಾರಕ್ಕೆ ಹಣಕಾಸಿನ ಮುಗ್ಗಟ್ಟಿನಿಂದ ತೊಂದರೆಯುಂಟಾಗಿ ತೆರಿಗೆ ಹೆಚ್ಚಿಸಿದ ಕಾಲದಲ್ಲಿ ಜನಗಳೆಲ್ಲರೂ ಏಕವಾಕ್ಯತೆಯಿಂದ ಅದಕ್ಕೆ ಒಪ್ಪಿದುದಲ್ಲದೆ ಮುಂಗಡವಾಗಿಯೇ ತೆರಿಗೆಗಳನ್ನು ಕೊಟ್ಟರಂತೆ! ಇದಲ್ಲವೇ ನಿಸ್ವಾರ್ಥವಾದ ದೇಶಾಭಿಮಾನ? ಈಗ ಪ್ರಕೃತ ವಿಷಯವಾದ ಮತ್ತೊಂದು ಸಂದರ್ಭ. ಅದೇನೆಂದರೆ—ಅಲ್ಲಿ ಸರ್ಕಾರದ ಸಾಲ ಅಗಾಧವಾಗಿದೆ. ಈಗಿನ ಸಾಲದ ಮೇಲೆ ಕೊಡಬೇಕಾದ ಬಡ್ಡಿಯೇ ಸಾಲಿಯಾನಾ ೩೬೮ ಕೋಟಿ ರೂಪಾಯಿಗಳಷ್ಟಾಗುತ್ತದೆ. ಇದು ಬಹಳ ದುಬಾರಿಯೆಂದೂ, ಇದನ್ನು ಕಡಿಮೆ ಮಾಡುವವರೆಗೆ ದೇಶೋನ್ನತಿಗೆ ಕುಂದುಕ ಉಂಟೆಂದೂ ತಿಳಿದು, ಬ್ರಿಟಿಷ್ ಸರ್ಕಾರದವರು ಶೇಕಡಾ ೫ ರಂತೆ ಕೊಡಬೇಕಾಗಿದ್ದ ಸುಮಾರು ೩೬೦೦ ಕೋಟಿ ರೂಪಾಯಿಗಳಷ್ಟು ಸಾಲದ ಮೇಲೆ ಬಡ್ಡಿಯನ್ನು ಶೇಕಡಾ ೩½ ಗೆ ಇಳಿಸಿದ್ದಾರೆ. ಈ ವಿಧವಾದ ಬದಲಾವಣೆ ಕಡ್ಡಾಯವಲ್ಲ. ಇದಕ್ಕೆ ಒಪ್ಪದಿದ್ದವರಿಗೆ ಹಣವನ್ನು ವಾಪಸ್ಸು ಕೊಡಲು ಸರ್ಕಾರದವರು ಸಿದ್ಧರಾಗಿದ್ದರೂ ಶೇಕಡಾ ೯೫ಕ್ಕೆ ಮೇಲ್ಪಟ್ಟು ಜನಗಳು ಬದಲಾವಣೆಗೆ ಒಪ್ಪಿರುವುದಾಗಿ ತಿಳಿದುಬಂದಿದೆ. ಈ ವ್ಯವಹಾರದಿಂದ ಸರ್ಕಾರಕ್ಕೆ ಪ್ರತಿವರ್ಷ ೪೦ ಕೋಟಿ ರೂಪಾಯಿಗಳಷ್ಟು ಖರ್ಚು ಉಳಿತಾಯವಾಗುವುದೆಂದು ಅಂದಾಜು ಮಾಡಲ್ಪಟ್ಟಿರುವದು. ದೇಶವು ಕಷ್ಟದೆಶೆಯಲ್ಲಿರುವಾಗ ಪ್ರಜೆಗಳು ತ್ಯಾಗಕ್ಕೆ ಸಿದ್ಧರಾಗಿರುವುದು ದೇಶಾಭಿಮಾನದ ಮುಖ್ಯಚಿಹ್ನವಲ್ಲವೇ! ದೇಶದ ಹಿತವನ್ನೂ ಮತ್ತು ಗೌರವವನ್ನೂ ಎಣಿಸದೆ ಸ್ವಾರ್ಥದೃಷ್ಟಿಯಿಂದ ನಷ್ಟವನ್ನೆಣಿಸತಕ್ಕ ಪ್ರಜೆಯು ಇದ್ದರೂ ಸಹ ಶ್ವಾನಕ್ಕೆ ಸಮಾನವಾದವನು! ಪಶುಪ್ರಾಯದವನು!

ಇಂಗ್ಲೆಂಡಿನ ಚರಿತ್ರೆಯಲ್ಲಿ ಈ ತೆರನಾದ ದೇಶಾಭಿಮಾನದ ಉದಾಹರಣೆಗಳು ಹೇರಳವಾಗಿವೆ. ಸ್ವದೇಶೀ ವ್ರತದ ಆಚರಣೆಯಲ್ಲಿಯೂ ಈ ಸದ್ಗುಣವನ್ನು ಯಾವರೀತಿ ಬಳಕೆಗೆ ತಂದಿರುವರೆಂಬ ವಿಷಯದಲ್ಲಿ ಮದ್ರಾಸಿನ "ವೈ ಇಂಡಿಯನ್ ಲೀಗಿನ" ಕಾರ್ಯದರ್ಶಿಗಳಾದ ಮ|| ಬಿ. ಶಿವರಾಯರು "ಹಿಂದೂ" ಪತ್ರಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅದರ ಸಾರಾಂಶವನ್ನು ದೇಶಾಭಿಮಾನಿಯಾದ ಪ್ರತಿಯೊಬ್ಬ ಭಾರತೀಯನೂ ಯಾವಾಗಲೂ ಮನಸ್ಸಿನಲ್ಲಿಟ್ಟಿರತಕ್ಕದ್ದಾಗಿದೆ.

ಇಂಗ್ಲೀಷಿನವರು ಸ್ವದೇಶೀ ಸಾಮಾನುಗಳನ್ನೇ ಕೊಳ್ಳಲು ಚಳವಳಿಯನ್ನೆಬ್ಬಿಸಿರುವರು. ಆಕರ್ಷಣೀಯವಾದ ಹೆಸರುಳ್ಳ ಒಂದು ಸಂಸ್ಥೆಯನ್ನೇರ್ಪಡಿಸಿ ಅದನ್ನು ಜನಗಳಲ್ಲಿ ಪ್ರಚುರಪಡಿಸಲು ರಾಜವಂಶದವರನ್ನೂ ಮತ್ತು ದೊಡ್ಡಮನೆತನದವರನ್ನೂ ಅದಕ್ಕೆ ಮುಖ್ಯಸ್ಥರನ್ನಾಗಿ ಮಾಡಿರುವರು. ಈ ಸಂಸ್ಥೆಗೆ ಇಂಗ್ಲೆಂಡಿನ ಯುವರಾಜರೂ, ಅವರ ಸಹೋದರ ಸಹೋದರಿಯರೂ ಸದಸ್ಯರಾಗಿರುವರು. ಹೋದ ವರ್ಷ ಮೂವತ್ತು ಸಾವಿರ ಸದಸ್ಯರಿದ್ದದ್ದು ಈಗ ಆ ಸಂಖ್ಯೆಯು ಎರಡುಲಕ್ಷದ ಇಪ್ಪತ್ತು ಸಾವಿರಕ್ಕೆ ಏರಿಬಿಟ್ಟಿದೆ. ಇದಕ್ಕೆ ಆಜೀವಸದಸ್ಯರು ಕೊಡಬೇಕಾದದ್ದು ಕೇವಲ "ಆರಾಣೆ" ಗಿಂತಲೂ ಕಡಿಮೆಯಾದ ಚಂದಾ. ಈ ಸಂಸ್ಥೆಯ ಸದಸ್ಯರುಗಳು ಒಂದು ಚಿಹ್ನವನ್ನು ಧರಿಸಿರುವರು. ಇದನ್ನು ನೋಡಿದೊಡನೆಯೇ ಅಂಗಡಿಯವನು ಆ ಗಿರಾಕಿಗೆ ಮೊದಲು ಸ್ವದೇಶೀ ಪದಾರ್ಥಗಳನ್ನು ತೋರಿಸತಕ್ಕದ್ದೆಂದು ಅರ್ಥಮಾಡಿಕೊಳ್ಳುವನು. ಅಲ್ಲದೆ ರಾಜಮನೆತನದವರು ಸಾಧಾರಣವಾ ಅಂಗಡಿಗಳಿಗೆ ಪ್ರವೇಶಿಸಿ ನೋಡಿದ ಸಾಮಾನುಗಳನ್ನು "ಇ ನಮ್ಮ ದೇಶದ್ದೇ" ಎಂದು ವಿಚಾರಿಸುವರು. ಇಂಗ್ಲೆಂಡಿನ ರಾಣಿಯೇ ತನ್ನ ಉನ್ನತಸ್ಥಾನದಿಂದ ಈರೀತಿ ಉತ್ತೇಜನ ಕೊಡುತ್ತಿರುವಾಗ ಜನಸಾಮಾನ್ಯದಲ್ಲಿ ಈ ಚಳವಳಿಯು ಬೇರೂರು ದೇನತಿಶಯ ?

ಚಳಿಗಾಲದಲ್ಲಿ ಇಂಗ್ಲೆಂಡಿನ ಅನುಕೂಲಸ್ಥರು ಉಷ್ಣದೇಶಗಳಿಗೆ ಹೋಗುವುದು ವಾಡಿಕೆ. ಆದರೆ ಹೋದವರ್ಷದಿಂದ ಪರರಾ ಷ್ಟ್ರಗಳಿಗೆ ಹೋಗುವುದನ್ನು ಬಿಟ್ಟು ಇಂಗ್ಲೆಂಡಿನ ಉಷ್ಣದೇಶಗಳಲ್ಲಿ ಕಾಲಕಳೆಯುತ್ತಿರುವರು. ಇಂಗ್ಲೆಂಡಿನ ಶ್ರೇಷ್ಠ ಕವಿಗಳಾದ ಗಾಲ್ಸ್‌ವರ್ದೀಯವರು ತಮ್ಮ ಪತ್ನೀಸಮೇತರಾಗಿ ಇದಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ಇದರಿಂದ ದೇಶದಲ್ಲಿ ಕೆಲಸವು ಹೆಚ್ಚಾಗಿ ದೇಶದ ಕುಂದಿದ್ದ ಆರ್ಥಿಕಸ್ಥಿತಿಯನ್ನು ಬಲು ಬೇಗನೆ ಉತ್ತಮಪಡಿಸಲು ಅನುಕೂಲಿಸಿರುವುದು.

ಕೆಲವು ದೇಶಗಳು ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಪರದೇಶದ ವ್ಯಾಪಾರಕ್ಕೆ ಸುಂಕದಕಟ್ಟೆಗಳನ್ನು ಕಟ್ಟಿ ಇತರ ಜನಾಂಗದವರ ಸಂಗಡ [illegible] ಕಟ್ಟಿಕೊಂಡಿರುವವು. ಆದರೆ ಬ್ರಿಟಿಷರು ಗಾಂಭೀರ್ಯದಿಂದಲೂ, ಬಹು ಮರ್ಯಾದೆಯಿಂದಲೂ, ಈ ಉದ್ದೇಶವನ್ನು ದೇಶಾಭಿಮಾನದ ಸಹಾಯದಿಂದ ಸಾಧಿಸಿರುವರು. ಇವರ ರೀತಿ, ನೀತಿ ಯಾವುದೊಂದೂ ಆಕ್ಷೇಪಣೆಗೆ ಒಳಗಾಗಲಿಲ್ಲ. ಈ ಆಚರಣೆಗೆ ಯಾರೊಬ್ಬರ ಅಡ್ಡಿ ಇಲ್ಲದಿದ್ದರೂ ವ್ಯಾಪಾರಮಾಡತಕ್ಕ ಇತರ ದೇಶಗಳಿಗೆ ಇದರಿಂದಾ ತಕ್ಕ ನಷ್ಟವು ಸಹಿಸಲಸಾಧ್ಯ.

ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಕೆಲಸದಲ್ಲಿ ಉದ್ಯುಕ್ತರಾಗಿರುವ ನಮಗೆ ಅನುಸರಿಸಲು ಇದು ಒಳ್ಳೆ ಮೇಲ್ಪಂಕ್ತಿಯಲ್ಲವೇ?

ಪಂಡಿತಜನಗಳಲ್ಲಿ

ನಿವೇದನ.

ವೀರಶೈವಮತಸ್ಥಾಪನಾಚಾರ್ಯರ ವಿಷಯದಲ್ಲಿ ಪೂರ್ವದ ಪಂಡಿತರೂ ಈಗಿನ ಪಂಡಿತರೂ ಬರೆದಿರುವ ಸ್ತೋತ್ರಗಳನ್ನು ಒಟ್ಟುಗೂಡಿಸಿ "ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ" ಎಂಬ ಹೆಸರಿನಿಂದ ಒಂದು ದೊಡ್ಡ ಗ್ರಂಥವನ್ನು ಮುದ್ರಣಮಾಡಿಸಿ ಜಗತ್ತಿನಲ್ಲಿರತಕ್ಕ ಸಕಲ ಗುರುಭಕ್ತರ ಮನಸ್ಸಿಗೆ ಆನಂದವನ್ನುಂಟುಮಾಡಬೇಕೆಂದು ನಿಶ್ಚಯಿಸಿದ್ದೇವೆ. ಆದುದರಿಂದ ಮೂಲಪಂಚಾಚಾರ್ಯರ ವಿಷಯದಲ್ಲೇ ಆಗಲಿ ಅಥವಾ ಒಬ್ಬೊಬ್ಬ ಆಚಾರ್ಯರ ವಿಷಯದಲ್ಲೇ ಆಗಲಿ ಕನ್ನಡ ಅಥವಾ ಸಂಸ್ಕೃತದಲ್ಲಿ ಮನೋಹರವಾದ ಸ್ತೋತ್ರಗಳಿದ್ದರೆ ದಯವಿಟ್ಟು ಕಳುಹಿಸಬೇಕೆಂದು ಪ್ರಾರ್ಥಿಸುತ್ತೇವೆ. ಪೂರ್ವದ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದರೆ ಆ ಸ್ತುತಿಗಳನ್ನೂ ಕಳುಹಿಸಬಹುದು. ಆಚಾರ್ಯರ ವಿಷಯದಲ್ಲಿ ಅಸಾಧಾರಣ ಭಕ್ತಿಯುಳ್ಳ ಪ್ರತಿಯೊಬ್ಬ ಪಂಡಿತರು ಈ ಕಾರ್ಯವನ್ನು ಕೈಕೊಂಡು ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯಿದೆಕಟ್ಟಿ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡ್ಸ್—ಕಫ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, [illegible], ಪಿತ್ತ ಕಾರುವದು, ಮುಖ ಕಣ್ಣು ಹಳದಿ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬತ್ತಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0

ಕಂಪೌಂಡ್ ಸಿರಪ್ ಬ್ಲಟ—ಉಬ್ಬಸ ಸೀತದ ದಂ ರೋಗಕ್ಕೆ ವಿಶೇಷವಾದದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆತ, ಶ್ವಾಸಕ್ಕೆ ಕಷ್ಟ ಇತ್ಯಾದಿ ಮೂಮನ್ನು ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅನೋಗ—ರಕ್ತಶುದ್ಧಿ ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬದ್ಧಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ಪರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಶ್ಚಿಂತನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಘೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ದಿವ್ಯೌಷಧ. ಮೂತ್ರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ಕ್ಷಿಪ್ರದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವದು. 8 ಔನ್ಸಿಗೆ ರೂ. 3-8.

☞ ಇನ್ನು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[51] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು, ದ. ಕ.**

ಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೋಹಭಸ್ಮ	೧	೦-೧೨—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಾಳಿಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦-೧೨—೦
ಭ್ರಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಳಭಸ್ಮ	೧	೦—೮—೦
ಬಿಭಸ್ಮ	೧	೦—೪—೦
ವಡಿಭಸ್ಮ	೧	೦—೪—೦
ಪ್ಪಿಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಳಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಲಾಬಿತ ಸೂರ್ಯಪುಟಿ	೧	೧—೦—೦
ಲಾಬಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಬಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಚಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲಾ ಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸದೆ ಕ್ಷೀಣತೆ ಕಳಾಯ್ದು ಕೊಳ್ಳಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು, ತನ್ನು ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧವಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸೆ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿನಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲೆ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕನಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕೆ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

37 ಮು. ಪೋ. **ಮಿರಜ,** ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳೆತ (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವವರಿಗೂ [illegible] ಕೂಡಲೇ ಕೊಡಿಸಬೇಕಾದವರಿಗೂ, [illegible] ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮದ್ದಾಗಿ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರುತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[5] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಏಕವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೬ ಆಣೆ**
पंडित श्रीकाशीनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**
ಏಕವರ್ಧ್ವಾಂತ ದಿವಾಕರ (೩ನೆಯ ಆವೃತ್ತಿ)	೮
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧
ವೀರಶೈವಸಿದ್ಧಾಂತಸುಧಾಕರ	೨
ಲಿಂಗೋತ್ಪತ್ತಿ ಲಾಕೆಟ್ಸ್	೨

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವು ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡ ಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕೆಲ ಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆ ಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮ ಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ಕೊ ಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿ ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರ ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೩
ಸದ್ಯೋಜಾತಾದಿ ಪಂಚಮುಖಗಳಿಂದ ಐದುಜನ ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ದೇವಾಲಯದ? ಮುಂದಿನ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ ಯವರ

ಸುಗಂಧ ನಶ್ಯವಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[6] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಆಗಸ್ಟ್ ೧೯೩೨ [ಸಂಚಿಕೆ ೧೩

NOTICE

A HOLSTEIN BULL and a INDI BULL are at stud at the yankere Palace Dairy Farm, ysore, the rates being Rs. 5 and . 2 respectively. Both bulls are of od milk pedigree.

Dr. McISAAC,
Manager,
(1) *Rayankere Dairy Farm.*

ಸಿದ್ಧಾಪುರದ ಪಟ್ಟದಸ್ವಾಮಿಗಳವರ ಸನ್ನಿಧಿಯಿಂದ.

ಆದವಾನಿ ಸಮಸ್ತ ವೀರಶೈವದೈವದವರಿಗೆ ಬರೆ ಸಿದ ಹುಕುಂ ಏನೆಂದರೆ—

ಸನ್ ೧೯೩೨ ನೆಯ ಜನವರಿ ೨೫ ನೇ ತಾರೀಖಿನ ಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ಆದವಾನಿಪೇಟೆ ರಭದ್ರಸ್ವಾಮಿ ದೇವಾಲಯದಲ್ಲಿ ನಮ್ಮ ಅಧ್ಯಕ್ಷತೆ ಲ್ಲಿ ೧೧ ಜನ ವಟುಗಳಿಗೆ ಅಯ್ಯಾಚಾರವಾಯಿ ಂದು ಯಾರೋ ಪ್ರಸಿದ್ಧಮಾಡಿದ್ದಾರೆ. ನಾವು ನಿಮ್ಮ ಮದ ಮಠಪತ್ತಿಯವರ ಮಕ್ಕಳಿಗೂ ಇನ್ನುಳಿದ ಧಾರಣ ಜಂಗಮರ ಮಕ್ಕಳಿಗೂ ಪೂಜ್ಯವೆನಿಸಿ ಂಡ ಅಯ್ಯಾಚಾರವನ್ನು ಮಾಡಿಲ್ಲ. ಮಠಪದ್ಧತಿ ಕಾರ ಅವರಿಗೆ ಸಲ್ಲತಕ್ಕ ಸಾಧಾರಣ ದೀಕ್ಷೆಯನ್ನು ಡಿರುತ್ತೇವೆ. ಅವರು ಪತ್ರಿಕೆಯಲ್ಲಿ ಪ್ರಸಿದ್ಧಪಡಿ ರುವುದು ಸರಿಯಾಗಿಲ್ಲವೆಂದು ಈ ಮೂಲಕ ಸರ್ವ ಗೂ ತಿಳುಹಿಸಿದ್ದೇವೆ.

ಇತ್ಯಾಶೀಃ.

ನೀಲನಾಗಿಣಿದೇವಿ

ಹಿಂದೂ ಧರ್ಮವನ್ನು ಅಂಗೀಕರಿಸಿದಳು.

ಅಮೆರಿಕೆಯಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅವಿಶ್ರಾಂತವಾಗಿ ದುಡಿದ ಮಾನನೀಯ ಬೆಂಜಮಿನ್ ಫ್ರಾಂಕ್ಲಿನ್ ಮಹಾಶಯನ ವಂಶದವಳು ನೀಲನಾಗಿಣಿ.

ಇವಳಿಗಿನ್ನೂ ೨೨ ವರ್ಷ; ವಯಸ್ಸು ಚಿಕ್ಕದಾದಮಾತ್ರಕ್ಕೆ ಇವಳ ಪ್ರಜ್ಞೆ ಚಿಕ್ಕದಲ್ಲ. ಗ್ರೀಕ್ ಮತ್ತು ಸಂಸ್ಕೃತ ಸಾಹಿತ್ಯದ ರುಳನ್ನು ಬಲ್ಲವಳಿವಳು. ತನ್ನ ೧೯ನೆಯ ವಯಸ್ಸಿನಲ್ಲಿ ಗ್ರೀಕ್ ತತ್ವಜ್ಞಶ್ರೇಷ್ಠರಾದ ಪೈಥಾಗರಸ್ ಮತ್ತು ಟಾಲಮಿಯವರ ತತ್ವಗಳಿಗೂ ಹಿಂದೂ ಮತಗಳ ಬೋಧೆಗೂ ಇರುವ ಸಾಮ್ಯವನ್ನು ಕುರಿತು ಅಥೆನ್ಸಿನ ವಿಶ್ವವಿದ್ಯಾಲಯದಲ್ಲಿ ನಾಲ್ಕಾರು ಕಲನಾತ್ಮಕ ಉಪನ್ಯಾಸಗಳನ್ನಿತ್ತಳೆಂದಮೇಲೆ ಇವಳ ಧೀಶಕ್ತಿಯನ್ನು ಕುರಿತು ಮತ್ತೇನು ಹೇಳಬೇಕು! ಉನ್ನತವೂ ಪ್ರೌಢವೂ ವಿದ್ವತ್ಪ್ರಭಾಭಾಸಿತವೂ ಆದ ಈ ವ್ಯಾಖ್ಯಾನಗಳನ್ನು ಕೇಳಿದ ಅಥೆನ್ಸಿನ ವಿಶ್ವವಿದ್ಯಾಲಯದ ಪಂಡಿತೋತ್ತಮರು ಈಕೆಯ ವಿದ್ವತ್ತೆಯನ್ನು ಮನ್ನಿಸಿ ಈಕೆಗೆ ಎಂ. ಎ. ಪ್ರಶಸ್ತಿಯನ್ನು ದಯಪಾಲಿಸಿದರು.

ನೀಲನಾಗಿಣಿಗೆ ಅಧ್ಯಾತ್ಮವಿದ್ಯೆಯಲ್ಲಿ ಬಹು ಆದರ. ಹಿಂದೂ ದೇಶದ ಮೇಲೆ ಬಹು ಅಭಿಮಾನ; ಹಿಂದೂ ಧರ್ಮದಲ್ಲಿ ಬಹು ಗೌರವ. ಅಧ್ಯಾತ್ಮವಿದ್ಯೆಯಲ್ಲೀಕೆಗೆ ಬಹು ಆದರವಿರುವುದಾದ ೦. ಮೂರಿಯಲ್ಲಿ ಕೋಟು ಮೂಗುಹಿಡಿದು ಮಂತ್ರವಟ ಗುಟ್ಟುಗಳ ಕಾಣಿರುವವಳಲ್ಲ ಈಕೆ. ಲೋಕಸೇವೆಯಲ್ಲಿ ಈಕೆಗೆ ಬಹು ಆಸಕ್ತಿ. ಮಹಾತ್ಮಾ ಗಾಂಧಿಯವರನ್ನು ಈಕೆಯು ಗುರುಭಾವದಿಂದ ಕಾಣುವಳು. ಈಕೆಯು ಗ್ರೀಸ್ ದೇಶದಲ್ಲಿದ್ದಷ್ಟು ಕಾಲವೂ ಇಂಡಿಯಕ್ಕೆ ಬರುವುದಕ್ಕೆ ಮುಂಚೆ ಹಲವು ವರ್ಷಗಳು ಅಲ್ಲಿದ್ದಳು. ಅಲ್ಲಿಯ ಹಳ್ಳಿಗಾಡಿನವರ ಉನ್ನತಿಗಾಗಿ ಬಹು ಶ್ರಮಿಸಿದಳು. ಅವರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಮನೆಮನೆಯಲ್ಲಿಯೂ ಚರಕವನ್ನು ಸ್ಥಾಪಿಸಿದವಳೂ ಈಕೆಯೇ. ಅಷ್ಟೇ ಅಲ್ಲ. ಹಳ್ಳಿಗಾಡಿನ ಕುಶಲವಿದ್ಯೆಗಳಿಗೆ ಉತ್ತೇಜನವನ್ನು ಕೊಟ್ಟು ಅವುಗಳನ್ನು ಅಭಿವೃದ್ಧಿಗೆ ತಂದವಳೂ ಇವಳೇ. ಜನತಾ ಜನಾರ್ದನನ ಸೇವೆಯಲ್ಲಿ ನಿರತಳಾಗಿದ್ದ ಈ ಕಾಲದಲ್ಲಿ ಕೂಡ ಈಕೆಯ ಅಧ್ಯಾತ್ಮವಿದ್ಯಾಭಿಲಾಷೆಯು ತಗ್ಗಲಿಲ್ಲ. ಕೆಲವು ವರ್ಷಗಳ ವರೆಗೆ ಈ ಪುನರುಜ್ಜೀವನ ಕಾರ್ಯವನ್ನು ನಡೆಸಿದನಂತರ ಗ್ರೀಕ್ ದೇಶದ ಹತ್ತಿರದ ಸಮುದ್ರದಲ್ಲಿದ್ದ ನಡುಗುಡ್ಡೆಯೊಂದನ್ನು ಸೇರಿ ಅಲ್ಲಿ ಕಠೋರ ತಪವನ್ನಾಚರಿಸಲಾರಂಭಿಸಿದಳು. ಪಾಶ್ಚಾತ್ಯ ಆಹಾರ ವ್ಯವಹಾರಗಳನ್ನು ತ್ಯಜಿಸಿದಳು. ತನ್ನ ಜೀವನವನ್ನು ಸರಳವಾಗಿಸಿಕೊಂಡಳು. ಮಾಂಸಾಹಾರವನ್ನು ಬಿಟ್ಟುಬಿಟ್ಟಳು. ಮದ್ಯಪಾನವನ್ನು ದೂರೀಕರಿಸಿದಳು. ಸತ್ಯಾನ್ವೇಷಣ ದೀಕ್ಷಾಬದ್ಧಳಾದಳು. ತಾನು ಇದುವರೆಗೆ ಓದಿ ತಿಳಿದಿದ್ದ ಅಧ್ಯಾತ್ಮಿಕ ತತ್ವಗಳನ್ನು ತನ್ನ ಜೀವನದಲ್ಲಿ ಸಾಧಿಸಲಾರಂಭಿಸಿದಳು. ಐದು ತಿಂಗಳುಗಳ ಕಾಲ ಅಖಂಡ ಮೌನವ್ರತವನ್ನಾಚರಿಸಿ ತಪಸ್ಸುಮಾಡಿದಳು. ಅನಂತರ ಇಂಡಿಯಾಕ್ಕೆ ಬಂದು ಗಂಗಾನದಿಯಲ್ಲಿ ಮಿಂದು ಹಿಂದೂ ಧರ್ಮವನ್ನಂಗೀಕರಿಸಲು ಯೋಗ್ಯಳಾದೆನೆಂದಳು. ಅಲ್ಲಿಂದ ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಸಂಸ್ಕೃತ ಪಂಡಿತರಲ್ಲಿ ಪ್ರೌಢ ಗೀರ್ವಾಣ ಸಾಹಿತ್ಯಾಧ್ಯಯನಮಾಡಿದಳು.

ಈಕೆಯು ಹಿಂದೂದೇಶಕ್ಕೆ ಬರುವ ಹಾದಿಯಲ್ಲಿ ಈಜಿಪ್ಟ್ ಅರೇಬಿಯಗಳಲ್ಲಿ ಸಂಚರಿಸಿ ಈಜಿಪ್ಟ್ ದೇಶದ ಇಸ್ಲಾಂ ತತ್ವಜ್ಞಾನಿಯೊಬ್ಬನಿಂದ ಸೂಫಿಮತ ತತ್ವಗಳನ್ನೆಲ್ಲಾ ಗ್ರಹಿಸಿದಳು. ಈಕೆಯು ಆ ಮತಸ್ಥರೀಯ ರಾಜ್ಯಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಅಲ್ಲಿಯ ಜನರು ಈಕೆಯ ಪ್ರಾಚ್ಯಸಂಸ್ಕೃತಿಯ ಬಗ್ಗೆ ತೋರುತ್ತಿದ್ದ ಅದ್ವಿತೀಯ ಅಭಿಮಾನವನ್ನು ಕಂಡು ಈಕೆಯನ್ನವರು ಪ್ರಶಂಸಿಸಿದರಲ್ಲದೆ, ವಿಧವಿಧವಾಗಿ ಗೌರವಿಸಿದರು.

ಈಕೆಯು ಇಸ್ಲಾಂ ಧರ್ಮವನ್ನು ಅಧ್ಯಯನಮಾಡಿದಳಾದರೂ, ಇವಳ ಮನಸ್ಸು ಆ ಧರ್ಮದಕಡೆಗೆ ಜೋಲಲಿಲ್ಲ. ಸಂಸ್ಕೃತಸಾಹಿತ್ಯವೂ, ಭಾರತೀಯ ಸಂಸ್ಕೃತಿಯೂ ಆಕೆಯ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿಬಿಟ್ಟಿದ್ದುವು.

ಭಾರತೀಯ ಸಂಸ್ಕೃತಿಯನ್ನು ಕುರಿತು ಆಕೆಯು ಅಂದ ಮಾತುಗಳಿವು— ಇಂದಿನ ಜಗತ್ತಿನ ಸಂಸ್ಕೃತಿಗಿಂತ ಉದಾತ್ತವೂ ಶ್ರೇಷ್ಠವೂ ಆದ ಸಂಸ್ಕೃತಿಯು ಭಾರತದೇಶದಲ್ಲಿದೆ. ಈ ಸಂಸ್ಕೃತಿಯು ಬಹು ಪ್ರಾಚೀನವಾದುದು. ಆದರೂ ಭಾರತದೇಶವು ಈ ಸಂಸ್ಕೃತಿಯು ಭಿನ್ನವಾಗಿಹೋಗದಂತೆ ಕಾಪಾಡಿಕೊಂಡುಬಂದಿದೆ.

ಇಂದಿನ ವಿದ್ಯಾಭ್ಯಾಸದ ಸುಪ್ರಸಿದ್ಧಫಲಗಳಾದ ಕಲಿಕರಟಿಯೂ, ಚಾರಿತ್ರಶಿಥಿಲವೃತ್ತಿಯೂ ಸತ್ಯಾನ್ವೇಷಕರ ಮನಸ್ಸಿಗೆ ಶಾಂತಿಯನ್ನು ತಾರದು. ಈ ವಿಷಮಫಲಗಳ ಕಹಿರಸವನ್ನುಂಡ ಪಾಶ್ಚಾತ್ಯಜಗತ್ತು ತನ್ನ ಮೋರೆಯನ್ನು ವಿಕಾರವಾಗಿ ಕುಗ್ಗಿಸುತ್ತಿದೆ. ಈ ದುಷ್ಫಲದ ದುರಂತ ಪರಿಣಾಮವನ್ನು ನೀಗಿಸಬೇಕಾದರೆ, ನಾವು ಮೂಢನಂಬಿಕೆಯ ಜೊಂಪೆ ಎಂದು ಮೂಲೆಗೆ ತಳ್ಳುವ ಹಿಂದೂ ಸಂಸ್ಕೃತಿಗೆ ಶರಣುಹೊಗಬೇಕು! ಧಾರ್ಮಿಕಶಕ್ತಿಗೆ ವಿಜ್ಞಾನದ ಮಿರಗನ್ನೂ, ಕಾರ್ಯಶಕ್ತಿಗೆ ಕವಿತೆಯ ಪ್ರತಿಭೆಯನ್ನೂ ಕೊಟ್ಟಿರುವ ಆ ಉದಾತ್ತ ಸಂಸ್ಕೃತಿಯ ಸೊಬಗೆನಿತು! ಈ ಅದ್ಭುತ ಸಂಯೋಜನೆಯೇ ವಿಶ್ವಸೌಂದರ್ಯದ ರಹಸ್ಯ! ಈ ವಿಶ್ವಸೌಂದರ್ಯವೇ ಸ್ವರ್ಣಯುಗದ ಅಮೂಲ್ಯ ಸಾಧನೆ!

ಕಾಶ್ಮೀರದ 'ಸನಾತನ ಧರ್ಮಪ್ರಚಾರಕಸಭೆ' ಯವರು ಈಕೆಗೆ ಈಗ್ಗೆ ಕೆಲವುಕಾಲದಹಿಂದೆ 'ಹಿಂದೂಧರ್ಮದೀಕ್ಷೆ' ಯನ್ನು ಕೊಟ್ಟರು. ಹಿಂದೂಧರ್ಮವನ್ನಂಗೀಕರಿಸಿದಂದು ಆಕೆಯು ಎಂತಹ ಹೇತುವಾದಿಯ ತೀಕ್ಷ್ಣವಿಮರ್ಶೆಯನ್ನು ಬೇಕಾದರೂ ಇದಿರಿಸಿ ನಿಲ್ಲಬಲ್ಲ ಶಕ್ತಿಯು ಹಿಂದೂಧರ್ಮಕ್ಕಿದೆ. ಅದು ವಿಶ್ವಧರ್ಮ. ಎಂದು ಹೇಳಿದಳು.

ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯೆಂಬುದಿಹಯೋಗಭೋಗದ ಆಕಾಂಕ್ಷಾಜಾಲದಿಂದ ಹೊರಹೊಮ್ಮಿದ ವೈರಾಗ್ಯರತ್ನ— ಈ ನೀಲನಾಗಿಣೀದೇವಿ!

ಮಾ. ಶಾ. ಬ.

ಈಗ್ಗೆ ಸುಮಾರು ಎರಡು ತಿಂಗಳ ಹಿಂದೆ ಕಾಂಗ್ರಾ ಜಿಲ್ಲೆಯ ನಾದುಂ ಎಂಬ ಗ್ರಾಮದ 18 ವರ್ಷ ವಯಸ್ಸಿನ ಒಬ್ಬ ತರುಣಿಯು ಪತಿಯು ಕಾಯಿಲೆಯಾಗಿ ಮೃತಪಟ್ಟನು. ಇದರಿಂದ ಮಹಾ ವ್ಯಸನಾಕ್ರಾಂತಳಾದ ಆಕೆಯು ಪ್ರಪಂಚದಲ್ಲಿ ಸಂಪೂರ್ಣ ನಿರಾಶಳಾಗಿ ಅಸಾಧಾರಣವಾದ ವೈರಾಗ್ಯದಿಂದ ಸರ್ವಸಂಗಪರಿತ್ಯಾಗ ಮಾಡಿ ಗಿಡಮರಗಳು ಸಹ ಇಲ್ಲದ ಒಂದು ನಿರ್ಜನವಾದ ಸ್ಥಳಕ್ಕೆ ಹೋಗಿ ಹಗಲು ರಾತ್ರಿ ಮಳೆಬಿಸಿಲುಗಳೆನ್ನದೆ ಒಂದೇ ಸಮನೆ ನಿಂತುಕೊಂಡು ತಪಸ್ಸು ಮಾಡುತ್ತಿರುವಳು. ಆಕೆಯ ಬಂಧುಗಳನೇಕರು ಆಹಾರವನ್ನು ತೆಗೆದುಕೊಳ್ಳುವಂತೆ ಎಷ್ಟು ಬಲಾತ್ಕರಿಸಿದರೂ ಆಕೆಯು ಗಮನಿಸದಿರುವಳು. ನೊಣಗಳ ಕಡಿತದಿಂದ ಮೈಕೈಗಳೆಲ್ಲಾ ಬಾತಿರುವುವಂತೆ!

ಕೋಮುವಾರು ಸಮಸ್ಯೆಯ ಬಗ್ಗೆ ಬ್ರಿಟಿಷ್ ಸರಕಾರದವರು ಯಾವ ತೀರ್ಮಾನವನ್ನು ಮಾಡುವರೋ ಎಂದು ಎಲ್ಲರೂ ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿರುವರು. ಈ ಮಧ್ಯೆ ಸಿಖ್ ಜನರು ಪಂಜಾಬ್ ಪ್ರಾಂತದಲ್ಲಿ ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವು ಕೊಡಲ್ಪಡುವದೆಂಬ ವರ್ತಮಾನವನ್ನು ಕೇಳಿ ಮುಂಬಯಿ, ಲಾಹೋರ್, ಕರಾಚಿ ಮೊದಲಾದ ಮುಖ್ಯ ಮುಖ್ಯ ನಗರಗಳಲ್ಲಿ ಬಹಿರಂಗ ಸಭೆಗಳನ್ನು ಸೇರಿಸಿ, ಪಂಜಾಬಿನಲ್ಲಿ ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡುವುದಾದರೆ, ತಾವು ಆ ಬಗ್ಗೆ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಪ್ರತಿಭಟಿಸುವೆವೆಂದೂ, ಸಂಯುಕ್ತ ಚುನಾವಣೆಯ ಪದ್ಧತಿಯನ್ನು ಮಾತ್ರ ತಾವು ಅಂಗೀಕರಿಸುವೆವೆಂದೂ ಠರಾವುಗಳನ್ನು ಪಾಸುಮಾಡುತ್ತಿರುವರು.

ಮುಂಬಯಿಯ ಪ್ರಸಿದ್ಧ ವಕೀಲರಲ್ಲೊಬ್ಬರಾದ ಮಿ|| ಬಿ ಸಿ. ಹರಬಾರಿಯವರು ಹೈಕೋರ್ಟಿನ ಚೀಫ್ ಜಡ್ಜರ ಮತ್ತು ಜಸ್ಟಿಸ್ ನಾನವಟ್ಟಿಯವರ ಮುಂದೆ ಒಂದು ಅರ್ಜಿಯನ್ನು ಹಾಕಿ ವೈಸರಾಯರು ಹೊರಡಿಸಿರುವ ಆರ್ಡಿನೆನ್ಸುಗಳು 1858 ನೇ ಇಸವಿಯ ವಿಕ್ಟೋರಿಯಾ ಮಹಾರಾಣಿಯವರ ಸಂದೇಶದ ನಿಬಂಧನೆಗಳಿಗೆ ವಿರೋಧವಾಗಿವೆಯೆಂದೂ, ಚಕ್ರವರ್ತಿಯವರ ಗೌರವಕ್ಕೆ ಚ್ಯುತಿಯನ್ನುಂಟುಮಾಡುವುವೆಂದೂ, ಆದುದರಿಂದ ಗವರ್ನರ್ ಜನರಲ್‌ರವರು ಇದುವರೆಗೆ ಹೊರಡಿಸಿರುವ ಎಲ್ಲ ಆರ್ಡಿನೆನ್ಸುಗಳನ್ನೂ ಅಕ್ರಮವಾದವುಗಳೆಂಬ ಕಾರಣದ ಮೇಲೆ ರದ್ದುಮಾಡಿ ಮುಂಬಯಿಯಲ್ಲಿ ದಸ್ತಗಿರಿಮಾಡಲ್ಪಟ್ಟಿರುವ ಮಿ|| ಸರ್ದಾರ್ ವಲ್ಲಭಭಾಯಿಪಟೇಲ್ ಮೊದಲಾದವರನ್ನೆಲ್ಲಾ ಬಿಡುಗಡೆಮಾಡಬೇಕೆಂದೂ ವಾದಿಸಿದರು. ಜಡ್ಜರು ಇನ್ನೂ ಯಾವ ತೀರ್ಪನ್ನೂ ಕೊಟ್ಟಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಯಾದಗಿರಿ ಶಂಕರಕಾಲೇಜಿನ ಪರಿಸ್ಥಿತಿಯು.

ಸಮಸ್ತ ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆ.

ಮಹಾಶಯರೆ! ಯಾದಗಿರಿಯಲ್ಲಿ ಧರ್ಮವೀರ ಶಂಕರಣ್ಣ ಸಜ್ಜನಶೆಟ್ಟಿ ಎಂಬ ನನ್ನ ಪತಿಗಳು ತಮ್ಮ ಸ್ವಂತ ಸಂಪಾದಿಸಿದ್ದ ಒಂದುಲಕ್ಷ ರೂಪಾಯಿಯ ಆಸ್ತಿಯನ್ನು ರಿಜಿಸ್ಟರು ಮಾಡಿಸಿ ಒಂದು ಸಂಸ್ಕೃತ ಕಾಲೇಜನ್ನು "ನಿಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜ" ಎಂಬ ಹೆಸರಿನಿಂದ ಸ್ಥಾಪನೆಮಾಡಿರುವದು ಸರ್ವರಿಗೂ ಗೋಚರವಿದೆಯಷ್ಟೆ! ಈ ಕಾಲೇಜಿನ ವ್ಯವಸ್ಥೆಯು ಬೆಸಿಯಿಂದ ಹನ್ನೆರಡು ಜನ ಮೆಂಬರರು ಕೆಳಗೆ ಬರೆದ ಪ್ರಕಾರ ನಿಯುಕ್ತರಾಗಿರುತ್ತಾರೆ.

೧. ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳು, ಗುರುಮಠಕಲ್ಲು, ಅಧ್ಯಕ್ಷರು. ೨. ಶ್ರೀಮಂತ ಪಂ|| ಬಾಪುರಾವಜೀ ಸಾ|| ವಕೀಲ ಹೈಕೋರ್ಟ್, ಹೈದ್ರಾಬಾದ್ ಉಪಾಧ್ಯಕ್ಷರು. ೩. ಶ್ರೀಯುತ ಎಸ್. ರುದ್ರಪ್ಪ ವಕೀಲ ಹೈಕೋರ್ಟ್, ಸಾ|| ಯಾದಗಿರಿ. ೪. ಮ|| ರಾ|| ಫಕ್ಕೀರಪ್ಪ ಶೃಂಗೇರಿ, ಸಾ|| ಯಾದಗಿರಿ. ೫. ಮ|| ರಾ|| ಕೋನಪ್ಪ ಲಿಂಗೇರಿ, ಸಾ|| ಯಾದಗಿರಿ. ೬. ಮ|| ರಾ|| ಶರಣಪ್ಪ, ರೊಟ್ನಡಗಿ, ಸಾ|| ಯಾದಗಿರಿ. ೭. ಮ|| ರಾ|| ಚನ್ನಬಸಪ್ಪ ಹುಂಡೇಕಾರ, ಸಾ|| ಯಾದಗಿರಿ. ೮. ವೀರನಗೌಡ, ಪೊ|| ಪಾ|| ಸಾ|| ಯಾದಗಿರಿ. ೯. ಮ|| ರಾ|| ಶರಣಪ್ಪ, ಸಾ|| ಖಾನಾಗಡ್ಡ. ೧೦. ವೀರಣ್ಣನವರು, ಪೆದ್ದೇಮುಲ. ೧೧. ಹಂಪಣ್ಣ ವಂಕಸಮುದ್ರ, ಸಾ|| ಯಾದಗಿರಿ. ೧೨. ನನ್ನ ಪತಿಗಳು ಒಬ್ಬ ಮೆಂಬರರು. ಇವರಲ್ಲಿ ಕೋನಪ್ಪ ಲಿಂಗೇರಿ ಈ ಮೆಂಬರರು ತೀರಿಕೊಂಡ ನಂತರ ಅವರ ಸ್ಥಾನದಲ್ಲಿ ಚನ್ನಪ್ಪ, ವಲ್ಲದ ರಾಚಪ್ಪ, ಸಜ್ಜನಶೆಟ್ಟಿ ಸಾ|| ಯಾದಗಿರಿ ಮತ್ತು ವೀರಣ್ಣ ಪೆದ್ದೇಮುಲ ಇವರ ಸ್ಥಾನದಲ್ಲಿ ನಾಗಪ್ಪ ವಕೀಲ ಸಾ|| ಸುಲೇಪೇಟೆ ಮತ್ತು ನನ್ನ ಪತಿಗಳು ಶಿವಾಧೀನವಾದ ನಂತರ ಅವರ ಸ್ಥಾನದಲ್ಲಿ ದೊಡ್ಡ ಚನ್ನಪ್ಪ, ವಲ್ಲದ ಹಂಪಣ್ಣ, ಸಜ್ಜನಶೆಟ್ಟಿ, ಸಾ|| ಯಾದಗಿರಿ, ಇವರನ್ನು ಮೆಂಬರರನ್ನಾಗಿ ನೇಮಿಸಿದ್ದಾರೆ.

ಪರಮಾತ್ಮನ ಅಧಿಕವಾದ ಕೃಪಾಬಲದಿಂದ ಕೆಲವು ವರ್ಷಗಳ ವರೆಗೂ ಕಾಲೇಜಿನ ಕೆಲಸಗಳು ಸುಲಲಿತವಾಗಿ ನಡೆದುವು. ತಾ|| ೯-೧೧-೨೬ ರಲ್ಲಿ ನನ್ನ ಪತಿಗಳು ಕೈಲಾಸವಾಸಿಯಾದನಂತರ ನಾನು ಸ್ವಂತ ಐವತ್ತುಸಾವಿರ ರೂಪಾಯಿಗಳನ್ನು ಕಾಲೇಜಿಗೆ ಕೊಟ್ಟು ಕಾಲೇಜಿನ ಆಸ್ತಿಯನ್ನು ಒಂದುವರೆಲಕ್ಷ ರೂಪಾಯಿಗಳನ್ನು ಮಾಡಿರುವೆನು. ಕಾಲೇಜು ಸ್ಥಾಪಿತವಾದ ಬಳಿಕ ಕೆಲವು ಕಾಲದ ವರೆಗೆ ಶ್ರೀಯುತ ಎಸ್. ರುದ್ರಪ್ಪ ವಕೀಲ ಹೈಕೋರ್ಟ್, ಸಾ|| ಯಾದಗಿರಿ. ಇವರು ಸೆಕ್ರೆಟರಿ ಕೆಲಸವನ್ನು ಮಾಡಿದರು. ಅನಂತರ ಕೆಲವು ಕಾಲದ ವರೆಗೆ ನನ್ನ ಪತಿಗಳು ಸೆಕ್ರೆಟರಿಯ ಕೆಲಸವನ್ನು ಮಾಡಿದರು. ಕಡೆಗೆ ನನ್ನ ಪತಿಗಳು ಜೀವಂತರಿರುವಾಗಲೇ ಮುಂದೆ ಹಣದ ವ್ಯವಸ್ಥೆಯು ಚೆನ್ನಾಗಿ ನಡೆದು ಯಾರಿಗೂ ಅಪಹರಿಸಲಿಕ್ಕೆ ಅವಕಾಶ ದೊರೆಯಬಾರದೆಂಬುವ ಉದ್ದೇಶದಿಂದಲೇ ತಮ್ಮ ಖಾಸ ಅಳಿಯಮಗನಾದ ಮತ್ತು ನನ್ನ ಖಾಸ ತಮ್ಮನಾದ ಹಂಪಣ್ಣ, ವಲ್ಲದ ರಾಚಪ್ಪ, ಸಜ್ಜನಶೆಟ್ಟಿ ಇವರನ್ನು ಜನರಲ್ ಸೆಕ್ರೆಟರಿಯ ಅಧಿಕಾರದ ಮೇಲೆ ನೇಮಿಸಿದರು. ಅಂದಿನಿಂದ ಈಗಲೂ ಜನರಲ್ ಸೆಕ್ರೆಟರಿಯ ಕೆಲಸವನ್ನು ಹಂಪಣ್ಣ ಇವರೇ ಮಾಡುತ್ತಿರುವರು. ಹಣದ ವ್ಯವಸ್ಥೆಯ ಮತ್ತು ರಕ್ಷಣೆಯ ಬಗ್ಗೆ ಹಂಪಣ್ಣನವರ ವಿಷಯದಲ್ಲಿ ಯಾವ ತರಹದ ಆರೋಪವೂ ಇಲ್ಲದೆ ಎಲ್ಲಾ ಕೆಲಸಗಳು ಚೆನ್ನಾಗಿ ನಡೆಯುತ್ತಿದ್ದವು.

ಮತ್ತು ಅಧ್ಯಕ್ಷರಾದರೂ ಕೆಲವು ದಿವಸಗಳ ವರೆಗೆ ಬಹಳ ಉತ್ಸುಕತೆಯಿಂದ ಕಾಲೇಜಿನ ಯಾವತ್ತೂ ಕಾರ್ಯಗಳ ನಿಗರಾಣಿ ಮಾಡುತ್ತ ಹೋದರು. ಕೆಲವು ವರ್ಷಗಳ ಪೂರ್ವದಲ್ಲಿ ಕಾಲೇಜಿನ ಅಧ್ಯಾಪಕರಾಗಿದ್ದ ಅಂಗ್ರೇಜಿ ಇಲಾಖೆಯ ಹೊಳಲ ಚಂದ್ರಶೇಖರಶಾಸ್ತ್ರಿಗಳು ಮತ್ತು ಅಧ್ಯಕ್ಷರು ಈ ಉಭಯರು ಕೂಡಿ ಯಾವ ಆಲೋಚನೆ ಮಾಡಿಕೊಂಡರೋ ತಿಳಿಯದು. ಆದರೆ ಹಣದ ಉಪಯೋಗವು ಮಾತ್ರ ಬೇಜಾಪ್ತ ಆಗಹತ್ತಿತು. ಈ ರೀತಿ ಬೇಜಾಪ್ತ ಉಪಯೋಗಿಸುವದನ್ನು ಹಂಪಣ್ಣ ಸೆಕ್ರೆಟರಿ ಇವರು ಪ್ರತಿಬಂಧ ಮಾಡಹತ್ತಿದರು. ಮತ್ತು ಒಂದೆರಡುಸಾರೆ ಚಂದ್ರಶೇಖರಶಾಸ್ತ್ರಿಗಳು ಮತ್ತು ಅಧ್ಯಕ್ಷರು ಕಾಲೇಜಿನ ಆಸ್ತಿಯಿಂದ ಸ್ವಂತಕ್ಕಾಗಿ ಸಾಲಾ ಕೇಳಿದರು. ಪರಂತು ಹಂಪಣ್ಣನವರು ಸಾಲಾ ಕೊಡುವದಕ್ಕೆ ಬರುವದಿಲ್ಲೆಂದು ಹೇಳಿದರು. ಈ ಕಾರಣಗಳಿಂದಲೇ ಪರಸ್ಪರ ವಿರೋಧಭಾವವು ಹುಟ್ಟಿ ಉಭಯರಲ್ಲಿ ಮನಸ್ತಾಪವಾಯಿತು. ಅಂದಿನಿಂದ ಹಂಪಣ್ಣನವರು ಸೆಕ್ರೆಟರಿಗಳಾಗಿದ್ದರೆ ನಮ್ಮ ಕಾರ್ಯವು ನಡೆಯುವದಿಲ್ಲೆಂದು ಯೋಚಿಸಿ ಇವರನ್ನು ತೆಗೆಯುವ ವಿಷಯದಲ್ಲಿ ಅಧ್ಯಕ್ಷರ ಮನಸ್ಸಿನೊಳಗೆ ಭೇದಭಾವವು ಪ್ರಾರಂಭವಾಯಿತು. ಇಷ್ಟಾದರೂ ಜನರಿಗೆ ಕಾಲಕೊಡಿಸುವ ಕಾರ್ಯ ಹಾಗೆಯೇ ನಡೆದಿತ್ತು. ಅಗ್ಗೆ ಕಾಲೇಜಿನ ಒಬ್ಬ ಮೆಂಬರರಾದ ಫಕ್ಕೀರಪ್ಪ ಶೃಂಗೇರಿ ಇವರಿಗೆ ಖಾಸಗೀ ರೂಪಾಯಿಗಳನ್ನು ಶರಣಪ್ಪನೆಂಬ ಮೆಂಬರರು ಕೊಡಬೇಕಾಗಿತ್ತು. ಆದರೆ ಫಕ್ಕೀರಪ್ಪ ಶೃಂಗೇರಿ, ಚಂದ್ರಶೇಖರಶಾಸ್ತ್ರಿ ಹೊಳಲು ಮತ್ತು ಅಧ್ಯಕ್ಷರು ಈ ಮೂವರು ಜನರು ಒಳಸಂಚಿನಿಂದ ಶರಣಪ್ಪನೆಂಬ ಮೆಂಬರನ ಹೆಸರಿಗೆ ಕಾಲೇಜಿನಲ್ಲಿ ಹತ್ತುಸಾವಿರ ರೂಪಾಯಿಗಳನ್ನು ಫಕ್ಕೀರಪ್ಪನೆಂಬ ಮೆಂಬರನು ಜಮಾನತ ಆಗಿ ತಾನು ಜಮಾನತ ಪತ್ರ ಬರೆದು ಕೊಟ್ಟು ಸಾಲಾ ಕೊಡಿಸಿ ಆ ರೂಪಾಯಿಗಳನ್ನು ತನ್ನ ಬಾಕಿಯಲ್ಲಿ ಜಮಾಮಾಡಿಕೊಂಡನು. ಯಾರಲ್ಲಿ ಸಾಲಾ ತೀರಿಸುವ ಯೋಗ್ಯತೆಯಿಲ್ಲವೋ? ಅವರಿಗೆ ಸಾಲಾ ಕೊಡಿಸಿದಂತೆ ಮಾಡಿ ಆ ಹಣವನ್ನೆಲ್ಲಾ ತಾವು ತೆಗೆದುಕೊಂಡುದುದರಿಂದಲೂ, ನಾಗಪ್ಪ ವಕೀಲ ಸಾ|| ಸುಲೇಪೇಟೆ ಎಂಬ ಮತ್ತೊಬ್ಬ ಕಾಲೇಜಿನ ಮೆಂಬರರಿಗೆ ಒಂದುಸಾವಿರ ರೂಪಾಯಿಗಳನ್ನು ಸಾಲಾ ಕೊಡಿಸಿದುದರಿಂದಲೂ, ಇಂಥ ಕಾರ್ಯಗಳಿಗೆ ಅಧ್ಯಕ್ಷರೇ ಮೊದಲಾದವರು ಸಹಾಯ ಮಾಡಿದುದರಿಂದಲೂ, ಮೆಂಬರುಗಳಲ್ಲಿ ವೈಮನಸ್ಸು ಹುಟ್ಟಿ ಪರಸ್ಪರ ಫಿರ್ಯಾಯತ ಮಾಡುವದಕ್ಕೆ ಹತ್ತಿದರು. ಹೀಗೆ ಮೆಂಬರುಗಳಲ್ಲಿ ಪರಸ್ಪರ ವಿರೋಧಭಾವವು ಬೆಳೆಯುತ್ತ ಹೋದುದನ್ನು ಅಧ್ಯಕ್ಷರಿಗೆ ಸಮಾಧಾನ ಪಡಿಸಲು ಅಶಕ್ಯವಾಯಿತು. ಇದರ ಸುಧಾರಣೆಯ ಸಲುವಾಗಿ ಕಮಿಟಿಗಳು ನೇಮಿಸಲ್ಪಟ್ಟವು. ಕಡೆಗೆ ಬಂದು ಕಮಿಟಿಯಲ್ಲಿ ಶ್ರೀಮಂತ ಪಂ|| ಬಾಪುರಾವಜೀ ಸಾ|| ವಕೀಲ ಹೈಕೋರ್ಟ್, ಹೈದ್ರಾಬಾದ್. ಉಪಾಧ್ಯಕ್ಷರು ಹಾಜರಿದ್ದರು. ಮೊದಲು ಒಂದು ದಿವಸ ಸಮಾಧಾನದಿಂದ ಕಮಿಟಿಯ ಕೆಲಸವು ನಡೆಯಿತು. ಮರುದಿನ ಸಾಲಗಳ ವಿಷಯವನ್ನು ವಿಚಾರಮಾಡುವ ಪ್ರಸಂಗವು ಬಂದಾಕ್ಷಣವೇ ಯಾವ ಮೆಂಬರರು ಕಾಲೇಜಿನಲ್ಲಿ ಸಾಲಾ ತೆಗೆದುಕೊಂಡಿದ್ದರೋ ಅವರ ಉದ್ದೇಶವು ಸಾಲಾ ತೀರಿಸಬೇಕೆಂಬುವದಿಲ್ಲದುದರಿಂದಲೋ ಏನೋ ಅಧ್ಯಕ್ಷರಿಗೆ ಯಾವದೋ ಒಂದು ವಿಷಯವನ್ನು ಗೋಪ್ಯವಾಗಿ ತಿಳಿಸಿ ಅವರ ಮನಸ್ಸನ್ನು ಕೆಡಿಸಿದರು. ಅಗ್ಗೆ ಕಮಿಟಿಯಲ್ಲಿ ಗೊಂದಲವೆದ್ದು ಕಡೆಗೆ ಕಲಹದ ಪ್ರಸಂಗವು ಬಂದೊದಗಿತು. ಅಂತೂ ಯಾವುದೂ ಠರಾವಾಗದೆ ಕಮಿಟಿಯು ನಿಲ್ಲಿಸಲ್ಪಟ್ಟಿತು. ಇದಾದ ಕೆಲವು ದಿವಸಗಳ ಮೇಲೆ ಅಧ್ಯಕ್ಷರ ಅಪ್ಪಣೆಯ ಪ್ರಕಾರ ಕಾಲೇಜಿನ ರೂಲ್ಸಿಗನುಸರಿಸಿ ತಾ|| ೨೦-೩-೧೩೪೧ ಫಸಲಿ ತಾ|| ೨೪-೧೨-೧೯೩೧ ಇಸವಿ ದಿವಸ ವಾರ್ಷಿಕ ಕಮಿಟಿಯು ನೇಮಿಸಲ್ಪಟ್ಟಿತು. ಪರಂತು ಅಧ್ಯಕ್ಷರು ಮತ್ತು ಅವರ ಅನುಯಾಯಿಮೆಂಬರರು ಬಾರದಿರುವ ಕಾರಣ ಕೋರಂಫುರ್ತಿಯಾಗದುದಕ್ಕಾಗಿ ಕಮಿಟಿಯು ನಡೆಯಲಿಲ್ಲ. ಇದಾದನಂತರ ಅಧ್ಯಕ್ಷರು ಕೆಲವು ಖರ್ಚುಗಳಿಂದ ನನ್ನ ಯೋಗ್ಯತೆಗೆ ಮೀರಿದಷ್ಟು ಹಣವನ್ನು ನನಗೆ ಕೊಡಬೇಕೆಂದರು. ಈ ಮೊದಲೇ ನನಗೆ ಕೆಲವು ಕಾರಣಗಳಿಂದ ಬೇಸರವಾಗಿತ್ತು. ಇದರಿಂದಂತೂ ಅದು ಮತ್ತಿಷ್ಟು ಅಧಿಕವಾಯಿತು. ಆದರೂ ನಾನು ಯಾವುದನ್ನೂ ಹೇಳದೆ ಸುಮ್ಮನಿದ್ದೆನು. ಇದಾದನಂತರ ಅಧ್ಯಕ್ಷರು ನಿಜಾಮ ಇಲಾಖೆಯನ್ನು ಬಿಟ್ಟು ಬ್ರಿಟಿಷ ಇಲಾಖೆಯಲ್ಲಿ ಸಂಚರಿಸಲಿಕ್ಕೆ ಹತ್ತಿದರು. ಇದೇ ಕಾಲದಲ್ಲಿ ಕೆಲವು ಜನರು ವರ್ತಮಾನ ಪತ್ರಿಕೆಗಳಲ್ಲಿ ನನ್ನ ಮತ್ತು ಅಧ್ಯಕ್ಷರ ಮೇಲೆ ಮನಬಂದಂತೆ ಲೇಖಗಳನ್ನು ಬರೆದು ಹರಡಿಸುವದಕ್ಕೆ ಪ್ರಾರಂಭಿಸಿದರು. ಸದರಿ ವಾರ್ಷಿಕ ಕಮಿಟಿಯನಂತರ ಬೇಸಿಗೆಯ ಸೂಟಿಯೊಳಗಾಗಿ ಅರುಸಾರೆ ಕಮಿಟಿನೇಮಿಸಿ ಅಧ್ಯಕ್ಷರೇ ಮೊದಲಾದವರಿಗೆ ಸೂಚನಾಕೊಟ್ಟಿತು. ಪರಂತು ಒಂದು ಕಮಿಟಿಗಾದರೂ ಅಧ್ಯಕ್ಷರೂ ಅವರ ಅನುಯಾಯಿ ಮೆಂಬರರೂ ಯಾರೂ ಬರಲಿಲ್ಲ. ಇದೇ ಕಾಲದಲ್ಲಿ ಕಮಿಟಿಯು ನಿರ್ಣಯದ ಪ್ರಕಾರ ಸಾಲಾತೆಗೆದುಕೊಂಡಿದ್ದ ಶರಣಪ್ಪ ರೊಟ್ನಡಗಿ ಜಾಮಿನಾದ ಫಕ್ಕೀರಪ್ಪ ಶೃಂಗೇರಿ ಈ ಉಭಯರ ಮೇಲೆ ಹಂಪಣ್ಣ ಸೆಕ್ರೆಟರಿ ಇವರು ಕಾಲೇಜಿನ ಪರಿಯಿಂದ ತಾ|| ೨೩-೬-೧೩೪೧ ಫಸಲಿ ತಾ|| ೨೭-೪-೧೯೩೨ ಇಸ್ವಿ ದಿವಸ ಸಾಲದ ಹಣದ ಬಗ್ಗೆ ದಿವಾನೀಕೋರ್ಟಿನಲ್ಲಿ ದಾವಾ ಮಾಡಿದರು. ಮತ್ತು ಇನ್ನು ಕೆಲವು ಸಾಲಾತೆಗೆದುಕೊಂಡ ಮೆಂಬರರುಗಳ ಮೇಲೆ ದಾವಾ ಮಾಡುವ ವಿಚಾರನಡೆದಿತ್ತು. ಇಷ್ಟರಲ್ಲಿ ಸಾಲಾತೆಗೆದುಕೊಂಡ ಮೆಂಬರರು ಅಧ್ಯಕ್ಷರಿಗೆ ಏನು ಹೇಳಿಕೊಂಡರೋ ಯಾವ ಆಲೋಚನೆಯನ್ನು ಮಾಡಿಕೊಂಡರೋ ತಿಳಿಯದು. ಅಧ್ಯಕ್ಷರು ಬ್ರಿಟಿಷ ಇಲಾಖೆಯಿಂದ ತಾ|| ೨೦-೫-೩೨ ನೇ ಇಸ್ವಿ ದಿವಸ ಎಲ್ಲಾ ಮೆಂಬರರುಗಳ ಹೆಸರಿಗೆ "ಮುಂದೆ ನನ್ನ ಮಂಜೂರಿಯಿಲ್ಲದಲೆ ಯಾವ ಕಮಿಟಿಯೂ ಆಗಕೂಡದು, ಮತ್ತು ಯಾವ ಕಾರ್ಯಗಳನ್ನೂ ಮಾಡಬಾರದು." ಈ ಪ್ರಕಾರ ಪತ್ರದ್ವಾರಾ ಅಪ್ಪಣೆಮಾಡಿದರು. ಅನಂತರ ಬ್ರಿಟಿಷ ಇಲಾಖಾ ಬಾಗಿಲಕೋಟೆಯಿಂದ ಅಧ್ಯಕ್ಷರು ತಾ|| ೨೪-೬-೧೯೩೨ ಇಸ್ವಿದಿವಸ ಒಂದು ತಾರನ್ನು "ತಾ|| ೫-೭-೩೨ ಇಸ್ವಿ ದಿವಸ ಸ್ಪೆಷಲ್ ಜನರಲ್ ಕಮಿಟಿಯನ್ನಿಟ್ಟು ಸರ್ವ ಮೆಂಬರರಿಗೆ ಸೂಚನಾಕೊಡಬೇಕೆಂದು" ಹಂಪಣ್ಣ ಸೆಕ್ರೆಟರಿ ಇವರ ಹೆಸರಿಗೆ ಕೊಟ್ಟರು. ಕಾಲೇಜಿನ ರೂಲ್ಸಿನಲ್ಲಿ ವಾರ್ಷಿಕ ಕಮಿಟಿ (ಜನರಲ್ ಕಮಿಟಿ) ಯನ್ನು ಒಂದೇಸಾರೆ ಮಾಡುವ ನಿಯಮವಿರುತ್ತದೆ.

ಇವಲ್ಲದೆ ಕಾಲೇಜಿನ ಜನರಲ್ ಕಮಿಟಿಮಾಡುವದಾದರೆ ೧೫ ದಿವ ಮುಂಚಿತವಾಗಿಯೇ ಸರ್ವ ಮೆಂಬರರಿಗೂ ಸೂಚನಾ ಕೊಡಬೇಕಾಗುತ್ತದೆ. ಆದರೆ ತಾರುಬಂದ ತಾರೀಖಿನಿಂದ ನೋಟೀಸ್ ಪ್ರಚಾರಮಾಡುವದಕ್ಕೆ ಕಾಯದೆಪ್ರಕಾರ ದಿವಸಗಳಿದ್ದಿಲ್ಲ. ಪೂರ್ವದಲ್ಲಿ ವಾರ್ಷಿಕ ಕಮಿಟಿಯಾದುವ ಬಗ್ಗೆ ಅಧ್ಯಕ್ಷರು ತಾವು ಅಪ್ಪಣೆಮಾಡಿದ್ದರೂ ಕೂಡಾ ತಾವೇ ಬಂದಿರಲಿಲ್ಲ ಮತ್ತು ನನ್ನ ಮನಸ್ಸಿಗೆ ಬೇಸರವಾಗುವ ಕಾರ್ಯಗಳನ್ನು ಸೂಚಿಸಿದ್ದರು. ಈ ಎಲ್ಲಾ ಕಾರಣಗಳಿಂದ ಈ ಸಾರೆ ಕಮಿಟಿ ಇಡುವ ಬಗ್ಗೆ ಶ್ರೀಮಂತ ಬಾಪೂರಾವಜೀ ಉಪಾಧ್ಯಕ್ಷರು ಇವರೊಡನೆ ಆಲೋಚಿಸಿ ಮೆಂಬರರಿಗೆ ಸೂಚನಾ ಕೊಡಬೇಕೆನ್ನುವ ವಿಚಾರವನ್ನು ಹಂಪಣ್ಣ ಸೆಕ್ರೆಟರಿ ಇವರು ಮಾಡಿದ್ದರು. ಇಷ್ಟರಲ್ಲಿ ಬ್ರಿಟಿಷ್ ಇಲಾಖಾ ವಿಜಾಪುರ ಮೊಕ್ಕಾಮಿನಿಂದ ಸ್ವತಃ ಅಧ್ಯಕ್ಷರೇ ತಮ್ಮ ಕಡೆಯಿಂದಲೇ ತಾ|| ೫-೭-೩೨ ನೆಯ ಸ್ಪೆಷಲ್ ಜನರಲ್ ಕಮಿಟಿ ಇಟ್ಟಿರುತ್ತದೆಂದು ಎಲ್ಲಾ ಮೆಂ ಗಳಿಗೆ ಏಳು ದಿವಸ ಮುಂಚೆ ಸೂಚನಾ ಕೊಟ್ಟರು. ಮೆಂಬರರಿಗೆ ಬಂದ ಸೂಚನಾಪತ್ರದಲ್ಲಿ ಕಮಿಟಿ ಇಟ್ಟ ತಾರೀಖನ್ನೇ ತಿಳಿಸಿದ್ದಿಲ್ಲ. ಏಕಾಏಕಿ ತಾ|| ೪-೭-೩೨ ದಿವಸ ರಾತ್ರಿ ಎರಡು ಘಂಟೆಗೆ ಅಧ್ಯಕ್ಷರು ಮತ್ತು ಅವರ ಯಾಯಿ ಮೆಂಬರರು ಯಾದಗಿರಿಗೆ ಬಂದರು. ಯಾದಗಿರಿ ಮು ಮಿನಿಂದ ತಾ|| ೫-೭-೩೨ ನೆಯ ದಿವಸಕ್ಕೆ ಬದ ತಾ|| ೬-೭-೩೨ ಕ್ಕೆ ಜನರಲ್ ಕಮಿಟಿಯನ್ನಿಟ್ಟು ಎರಡನೇ ಮೆಂಬರರಿಗೆ ಸೂಚನಾಮಾಡಿದರು. ಸೂಚನಾಪ್ರ ತಾ|| ೬-೭-೩೨ ನೆಯ ದಿವಸ ಕಾಲೇಜಿನ ಬಿಲ್ಡಿಂಗಿನಲ್ಲಿ ಕಮಿ ಮಾಡದೆ ತಾವು ಇಳಿದುಕೊಂಡ ಸ್ಥಲದಲ್ಲಿ ಕಮಿಟಿಮಾಡಿ ಅದೇ ಅನುಯಾಯಿ ಮೆಂಬರರು (ಅವರಲ್ಲಿ ಕೆಲವರು ಕಾ ಜಿನಲ್ಲಿ ಸಾಲಾ ತೆಗೆದುಕೊಂಡಿದ್ದು ಅದನ್ನು ಕೊಡಬಾರದೆ ಉದ್ದೇಶದಲ್ಲಿದ್ದವರು ಮತ್ತು ಇತರರೂ) ಕಮಿಟಿಮಾಡಿ ಯಾವ ಕೆಲಸಗಳನ್ನು ಮಾಡಲಿಲ್ಲ. ಪರಂತು ಹಂಪಣ್ಣ ಸೆಕ್ರೆ ಇವರನ್ನು ಸೆಕ್ರೆಟರಿಯ ಕೆಲಸದಿಂದ ತೆಗೆದು ದೊಡ್ಡ ಚನ್ನ ವಲ್ಲದ ಹಂಪಣ್ಣ (ಯಾರದು ಶ್ರೀ|| ವಾ|| ಧರ್ಮವೀರ ಶಂಕರ ನವರ ಆಸ್ತಿಯಲ್ಲಿ ವಿರುದ್ಧ ದಾವಾಯಿದ್ದು ಮತ್ತು ನನ್ನ ಸ ವೈರವಿದೆಯೋ ಹಾಗೂ ಸೆಕ್ರೆಟರಿಯ ಕೆಲಸಮಾಡುವ ಯೋ ತ ಬಿಲ್ಕುಲು ಇಲ್ಲವೋ) ಇವರನ್ನು ಸೆಕ್ರೆಟರಿಯ ಜಾಗದ ಮೇ ನೇಮಕಮಾಡಿದರು. ಕಮಿಟಿಯಲ್ಲಿ ಯಾವ ಕೆಲಸಮಾಡದೆ ಬದಲಾವಣೆಯೊಂದನ್ನೇ ಮಾಡಿದ್ದರಿಂದ ಅಧ್ಯಕ್ಷರ ಮತ್ತು ಅವ ಅನುಯಾಯಿ ಮೆಂಬರರುಗಳ ಉದ್ದೇಶವು ಯಾವ ರೀತಿಯಿ ಲಾದರೂ ಇದ್ದ ಸಾಲಾ ವಸೂಲಾಗಬಾರದೆಂದೂ, ಮತ್ತು ಫ ರಪ್ಪನ ಮೇಲೆ ಮಾಡಿದ ದಾವಾ ಅಲ್ಪದಲ್ಲಿ ಬೀಳಲೆಂ ಮತ್ತು ಮುಂದೆ ಯಾವ ದಾವಾಗಳು ದಾಖಲ್ಮಾಡುವ ವವೋ ಅವು ದಾಖಲ್ ಆಗಬಾರದೆಂದೂ ತೋರುತ್ತದೆ. ರಿಂದಲೂ ಅವರಿಗೆ ಸಮಾಧಾನವಾಗದೆ ಅಸೂಯೆಯಿಂದ ಒಂ ನೋಟೀಸನ್ನು 'ಇನ್ನು ಮುಂದೆ ಕಾಲೇಜಿನ ಮೆಂಬರರು ಮ ಇತರರು ಹಂಪಣ್ಣ ಸಜ್ಜನಶೆಟ್ಟಿ ಇವರ ಸಂಗಡ ಪತ್ರವ್ಯವಹಾ ಮಾಡಬಾರದು, ಮತ್ತು ಕಾಲೇಜಿಗೆ ಕೊಡತಕ್ಕ ಧನವನ್ನು ಹಂ ಣ್ಣನವರಿಗೆ ಕೊಡಕೂಡದು, ಹೊಸದಾಗಿ ನೇಮಿಸಲ್ಪಟ್ಟ ದೊ ಚನ್ನಪ್ಪನಿಗೆ ಕೊಡಬೇಕು' ಎಂದು ಪ್ರಕಟಿಸಿರುವರು. ನೋಟೀಸಿನಿಂದ ಕಾಲೇಜಿಗೆ ಬರತಕ್ಕ ಹಣವನ್ನು ವಸೂಲುಮ ಅಧ್ಯಕ್ಷರು ಅವರ ಅನುಯಾಯಿ ಮೆಂಬರರು ವಗೈರೆ ವ್ರ ಮಾಡಿ ಕಾಲೇಜಿನ ಕಾರ್ಯಭಾಗದಲ್ಲಿ ತೊಂದರೆ ತರಬೇಕೆಂ ಅಭಿಪ್ರಾಯವಿದ್ದಂತೆ ತೋರುತ್ತದೆ. ಅಧ್ಯಕ್ಷರಿಗೂ ಅವರ ಅನು ಯಾಯಿ ಮೆಂಬರರಿಗೂ, ಜನರಲ್ ಕಮಿಟಿ ನೇಮಿಸಿ ಮೆಂಬರರಿ ಸೂಚನಾ ಕೊಡುವಷ್ಟು ದಿವಸಗಳೂ ಇಲ್ಲವೆಂಬುವದೂ, ಕಮಿ ಟಿಯು ಕಾಲೇಜಿನ ಬಿಲ್ಡಿಂಗಿನ ಹೊರತು ಬೇರೆ ಸ್ಥಳದಲ್ಲಿ ಆ ಕೂಡದೆಂಬುವದೂ, ಕೋರಂಫುರ್ತಿಯಾಗದಿದ್ದರೆ ಕೂಡಿದ ಮೆಂ ರರು ಯಾವ ಠರಾವುಗಳನ್ನೂ ಮಾಡಲಿಕ್ಕೆ ಯೋಗ್ಯರಲ್ಲವೆಂ ವದೂ ತಿಳಿದೂ ತಿಳಿದು ಸ್ಮರಣೆಯಲ್ಲಿ ತಾರದಿದ್ದುದು ಆಶ್ಚರ್ಯ ವಾಗಿದೆ. ಹಂಪಣ್ಣನವರನ್ನು ತೆಗೆದದ್ದು ಚನ್ನಪ್ಪನವರನ್ನು ನೇಮಿ ಸಿದ್ದು ಪೂರ್ವದಲ್ಲಿ ತಿಳಿಸಿದಂತೆ ಐದನೆಯ ತಾರೀಖಿಗೆ ಕಮಿ ಮಾಡದೆ ಮರುದಿವಸವೇ ಕಮಿಟಿ ನೇಮಿಸಿದ್ದು ಈ ಎಲ್ಲಾ ವಿ ಯಗಳು ಕಾಲೇಜಿನ ರೂಲ್ಸುಗಳಿಗೆ ಅತ್ಯಂತ ವಿರುದ್ಧಗಳಾಗಿರು ವದರಿಂದ ಅವು ಪ್ರಚಾರದಲ್ಲಿ ಬರಲು ಯೋಗ್ಯವಾದವುಗಳಲ್ಲ. ಕೇವಲ ಸ್ವಾರ್ಥಪರರಾದ ಮೆಂಬರರು ತಮ್ಮ ಮನೋರಥವನ್ನು ಪೂರ್ಣಮಾಡಿಕೊಳ್ಳುವದಕ್ಕಾಗಿ ಈ ಪ್ರಕಾರ ಠರಾವುಮಾ ಕೊಂಡಿರುವದರಿಂದ ಆ ಠರಾವುಗಳು ಬಿಲ್ಕುಲು ರದ್ದು ಇರು ವವು. ನನ್ನ ಪತಿಗಳು ಸ್ಥಾಪಿಸಿದ ಈ ಕಾಲೇಜಿಗೆ ಸದೃಶವಾ ದದ್ದು ನಿಜಾಂರಿಯಾಸತ್ತಿನಲ್ಲಿಯೇ ಏಕೆ ಇಡೀ ಇಂಡಿಯಾದಲ್ಲಿ ಯು ಇಲ್ಲವೆಂದರೂ ಆಶ್ಚರ್ಯವಲ್ಲ. ಸಂಸ್ಥಾನಿಕರೂ ಅನೇಕ ಶ್ರೀಮಂ ತರೂ ಕೂಡಿ ಇದಕ್ಕಿಂತಲೂ ದೊಡ್ಡ ಪ್ರಮಾಣವನ್ನು ತೆಗೆದಿರಬಹು ದು. ಆದರೆ ಒಬ್ಬ ಬಡವರ್ತಕರಾದ ನನ್ನ ಪತಿಗಳು ತಾವು ಬಹು ದಿವಸದಿಂದ ಸ್ವಂತವಾಗಿ ಸಂಪಾದಿಸಿದ ಆಸ್ತಿಯನ್ನು ದಾನಮಾ ನಿಜಾಂರಿಯಾಸತ್ತಿನಲ್ಲೇ ಸ್ಥಾಪನೆಮಾಡಿರುವರು. ಈ ಪವಿತ್ರ ಕಾರ್ಯವೆಂಬ ತೀರ್ಥದಲ್ಲಿ ಆನೆಯು ಹೊಕ್ಕು ಹೊಲಸು ಮಾಡುವಂತೆ ದೂರಾಲೋಚನೆಯಿಲ್ಲದ ಕೆಲವು ಜನರ ಪ್ರೋ ತ್ಸಾಹದಿಂದ ಅಧ್ಯಕ್ಷರು ಇಂಥ ಕೆಟ್ಟ ನಡಾವಳಿಗೆ ಆಸ್ಪದ ಕೊಟ್ಟದ್ದು ವಿಷಾದಕರವಾಗಿದೆ. ಇದರಿಂದ ಸ್ವಾಮಿಗಳಿ ಯಕಸ್ಸು ಬರುವದಲ್ಲದೆ ಸುರುಳಿತವಾಗಿ ನಡೆಯುವ ಕಾಲೇಜಿ ಕೆಲಸದಲ್ಲಿ ಆತಂಕವೂ, ಮತ್ತು ಅಧಿಕವಾದ ಹಾನಿಯೂ ಇರು ತ್ತದೆ. ಇಷ್ಟೇ ಅಲ್ಲ ಮೆಂಬರರ ಪರಸ್ಪರವಾದ ಈ ಕಲಹದಿಂ ಕಾಲೇಜಿಗೆ ಬರತಕ್ಕ ಆದಾಯಬಾಬುಗಳೆಲ್ಲವೂ ಹಟಸ್ಥಗಳಾಗಿ ಧನಾಭಾವಮೂಲಕ ಕಾಲೇಜೇ ಬಂದಾಗುವ ಪ್ರಸಂಗವು ಪ್ರಾಪ್ತ ವಾಗಬಹುದು. ಇಂಥ ಭಯಂಕರವಾದ ಪ್ರಸಂಗದಲ್ಲಿ ನಮ್ಮ ವೀರಶೈವಮಹಾಜನಗಳು ಲಕ್ಷ್ಯಗಮನಿಸದೆ ಹೋದರೆ ಸರಿಯಾದ ವ್ಯವಸ್ಥೆಯಾಗದೆ ಒಂದುವರೆ ಲಕ್ಷ ರೂಪಾಯಿಗಳು ನಿರ್ನಾಮವಾಗಿ ಹೋಗಬಹುದು. ನಮ್ಮ ವೀರಶೈವ ಬಾಂಧವರು ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿ ಸಮಾಜದ ಶಿಕ್ಷಣದ ಬಗ್ಗೆ ಅಧಿಕವಾಗಿ ಪ್ರಯತ್ನಿಸುತ್ತಿರುವರು. ಆದರೆ ಒಬ್ಬ ವಾಮಾಖಿ ಬಡ ವರ್ತಕರಾದ ನನ್ನ ಪತಿಗಳು ತಮ್ಮ ಮನಃಸಂಕಲ್ಪವನ್ನು ಪೂರ್ಣಮಾಡಿಕೊಳ್ಳುವದಕ್ಕಾಗಿ ಹಣವನ್ನು ಸಮಾಜಕ್ಕೊಟ್ಟಿರುವರು. ಈ ಹಣದಿಂದ ಕಾಲೇಜು ಆಚಂದ್ರಾರ್ಕವಾಗಿ ನಡೆಯುವಂತೆ ಧರ್ಮಾಭಿಮಾನಿಗಳಾದ ವೀರಶೈವಮಹಾ ಬಹು ತೀವ್ರವಾಗಿ ಪ್ರಯತ್ನಿಸಿ ಇದರ ವಿಚಾರವಿ ಲ್ಲಿ ನ್ಯಾಯವಾದ ನಿರ್ಣಯವನ್ನು ಮಾಡಬೇಕೆಂದು ವಿಜ್ಞಾ ಪ್ಯುತ್ತೇನೆ.

ಗಂಗಮ್ಮ, ಜೌಜ ಶ್ರೀ|| ಶಂಕರಣ್ಣ ಧರ್ಮವೀರ,
ಸಜ್ಜನಶೆಟ್ಟಿ, ಸಾ|| ಯಾದಗಿರಿ,
ಜಿಲ್ಲಾ ಗುಲಬರ್ಗಾ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕರ್ನಾಟಕ ಬಂಧುಪ್ರೇಕ್ಷಕರೇ ಇತ್ತಗಮನಕೊಡಿರಿ.

2 ಜುಲೈ 27ನೇ ಕರ್ನಾಟಕ ಬಂಧು ಪತ್ರಿಕೆಯಲ್ಲಿ "ಬಳ್ಳಾ ವೀರಶೈವರಿರುವರೇ?" ಎಂಬ ಶಿರೋಲೇಖನದಿಂದ ಲೇಖ ಹುದುದೂರದೇಶದವನೆಂತಲೂ, ತಾನು ವೀರಶೈವನಲ್ಲವೆಂಬೊ ವಂತೆಯೂ ಕಾಣುತ್ತದೆ. ಇರಲಿ, ಆತನ ಹೆಸರಿನ ಮೇಲೆ ಈ ನ್ನು ತಿಳಿಯಬಹುದಾಗಿತ್ತು. ಅದಲ್ಲದೆ ತಾನಾಗಿ ಓರ್ವ ವನೆಂದು ಬರೆದಿರುವದರಿಂದಲೂ ವೀರಶೈವರ ಪಕ್ಷವನ್ನೇ ಪಾದಿಸಿರುವುದರಿಂದಲೂ ವೀರಶೈವನೆಂದು ಸ್ಪಷ್ಟಮಾಡಿ ತ್ಯೇತ.

ಮ್ಮ ದೊರಪ್ರಾಂತೀಯನೆಂದರೆ ಬಳ್ಳಾರಿಯಲ್ಲಿ 24 ಮಠಗ ಅವುಗಳಲ್ಲಿ ಮೊದಲಿನಿಂದಲೂ ಸರಿಯಾಗಿ ತಮ್ಮ ಸ್ವಾಧೀನ ದ್ದು ಈಗಿನ ಪರಿಸ್ಥಿತಿಗೆ ತಕ್ಕಷ್ಟು ಯೋಗ್ಯರೀತಿಯಿಂದಿದ್ದವು ನ್ನು ಬಿಟ್ಟು ಗ್ರಾಮಾಂತರಗಳಲ್ಲಿ ರಕ್ಷ ಹಾಗೂ ಅತಿವ್ಯ ವಿದ್ಯಾದಿ ದರ್ಮಾಭಿಮಾನಂಬಿತರೂ ಅಗಿರತಕ್ಕ ಮತ್ತು ಮೂರು ನಾಲ್ಕು ಕೋಣೆಗಳ ವರಮಾನದಿಂದಲೇ ಬಡತನ ಯಿಂದುಪಜೀವನ ನಡೆಯಿಸಿಕೊಳ್ಳತಕ್ಕ 4-5 ಮಠಗಳ ತ್ತದವರನ್ನೂ (1) ಬಳಲುಮಲ್ಲೇಶ್ವರ ಲಿಂಗಸ್ಥಿಂತೇನೂ ವಲ್ಲದ ಹಾಗೂ ಸರಿಯಾಗಿ ಪೂಜೋಪಚಾರಗಳಿಂದೊಪ್ಪುವ ಶ್ರೀ ಶಿವಾಲಯಗಳನ್ನು ಬಿಟ್ಟು ವೀರಶೈವರ ನಿವಾಸಸ್ಥಾನ ಯೋ ಇಲ್ಲದ ಅತಿಚಿಕ್ಕದಾದ ಒಂದು ಶಿವಾಲಯವನ್ನೂ ಳಪು ಪ್ರಾರಂಭದಲ್ಲಿ ತೋರಿಸಿರುವ ತಿಳಮಾನದಿಂದಲೂ ದಾಸ್ಪದವಾದ ಗೋತ್ರಪುರುಷನಾಲಯವನ್ನೂ ಉದ್ದೇಶಿಸಿ ರುವ ದೋಷಗಳನ್ನೂ (2) ಈತನ ಬರವಣಿಗೆಯಲ್ಲಿ ವರ್ತ ಕಾಲದ ಪ್ರತಿಯೊಂದು ಕ್ರಿಯಾಪದಗಳು ತನ್ನಿಂದಲೇ ನೋಡ ಪ್ಪವುಗಳೆಂದು ನಿರ್ಧರಿಸುವುದನ್ನೂ (3) 8 ಕಲಮಿನಲ್ಲಿ ಯೋಗಿಸಿಕೊಂಡಿರುವ "ಇದನ್ನು ಇಲ್ಲಿಯು ಮತ್ತು ಇಲ್ಲಿಯ ಶೈವರು ಇವರ ವರ್ಣನೆಲ್ಲಾ, ಇವರನ್ನು ಪುರೋಹಿತಿಪ್ಪ ೀ ಬೋಧಿಸುವ ಇವರು" ಈ ಪದಗಳನ್ನೂ ವಿಚಾರಿಸಿನೋಡಿ ಬಳ್ಳಾರಿ ಪಟ್ಟಣದವನಾಗಿರಬೇಕೆಂದೂ ಅದೇ 8 ನೇ ಕಲ 4 ನೇ ಸಾಲಿನಲ್ಲಿರುವ "ವೀರಶೈವರು ಯಾವಸ್ಥಿತಿಯಲ್ಲಿರು ರೋ" ಎನ್ನುವ ಮಾತನ್ನೂ (4) ಶ್ರೀಗುರುನಿವಾಸ ಸಂಸ್ಕೃತ ಲಯವು ಬಹುಕಾಲದಿಂದ ಪ್ರತ್ಯೇಕವಾಗಿ ನಡೆಯುತ್ತಿದ್ದರೂ ಸ್ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಸೇರಿಸಿಕೊಂಡಿರು ರೆಂಬ ಅಸತ್ಯಮಾತನ್ನೂ (5) ಅದೇ ಕಲಮಿನ 15 ನೇ ಸಾಲಿ ರುವ "ಕೇಳಿರುತ್ತೇನೆ" ಎನ್ನುವ ಮಾತನ್ನೂ (6) ಹಾಗೂ ನ್ನು ಬಿಟ್ಟೇ ಕೇವಲ "ಬಳ್ಳಾರಿ ವೀರಶೈವರು, ಇಲ್ಲಿಯ ಶೈವರು" ಎಂದು ಬಳ್ಳಾರಿವೀರಶೈವರನ್ನೇ ಹೀಯಾಳಿಸಿರುವ ನ್ನು (7) ವಿಚಾರಿಸಿ ನೋಡಿದರೆ ಬಳ್ಳಾರಿ ಪಟ್ಟಣದವನಲ್ಲೆಂದೂ ಬುವುದಲ್ಲ? ಇದೇನಾಶ್ಚರ್ಯ ಓಹೋ? ತಿಳಿಯದು.

"ಒಳ್ಳಿತ್ತಿನಿಂದ ಮುಂದೆ ಬಂದಿದ್ದರು, ಎದುರಿಸುವ ಎದೆಗಾ ರರೂ ಇದ್ದಿಲ್ಲ" ಎನ್ನುವ ಭೂತಕ್ರಿಯಾಪದಗಳಿಂದ ಆಗಹೆಸ ರಾಸಿಗಳಾಗಿದ್ದ ಆ ಪುಣ್ಯಾತ್ಮರನ್ನು ಕೇಳಿ ಆಗಾಗ್ಗೆ ಅವರು ಬುತ್ತಲಿದ್ದ ಗಣಾರಾಧನಾದ್ಯುತ್ಸವಗಳಿಗೆ ಬಂದುಹೋಗುತ್ತ ತ್ತವರಂತೆಯೂ (1) "ಈಗ ಬಳ್ಳಾರಿಯಲ್ಲಿ ವೀರಶೈವರ ಸ್ತೇ ಇರುವುದಿಲ್ಲ" ಎನ್ನುವ ಪದದಿಂದ ಈಗ 7-8 ವರ್ಷಗ ದಲೂ ಪ್ರಾಪ್ತವಾಗಿರುವ ಬರಗಾಲದ ಹೆದರಿಕೆಯನ್ನು ತಾಳದೆ ರೇ ಬಳ್ಳಾರಿಯನ್ನಾಶ್ರಯಿಸಿರುವಂತೆಯೂ (2) "1909 ವರು ಆತನಿಗೆ ಜ್ಞಾಪಕವಿರಬೇಕಾಗಿದ್ದರೆ ಕನಿಷ್ಠ 34-35 ವರ್ಷ ಯಸ್ಕನಾಗಿರಬಹುದೆಂಬಂತೆಯೂ (3) ತಾನು ವೀರಶೈವನಾ ದ್ದು ಬಳ್ಳಾರಿಯಲ್ಲಿದ್ದರೂ ಕೂಡಾ "ಬಳ್ಳಾರಿಯಲ್ಲಿ ವೀರಶೈ ಯುವರೇ" ಎಂದು ಬರೆದಿರುವುದರಿಂದ ತನ್ನನ್ನರಿಯದ ತಾನು ರಮನಕಕ್ಕಿ ಬಾರದ ಅಪ್ರಸಿದ್ಧ ಪುರುಷನೆಂದೂ (4) ಹೆಸ ವಾಸಿಗಳಾದ ಪುಣ್ಯಾತ್ಮರನ್ನು "ಮೂರುಕುದುರೆಯ ಸಾರ ಟಿನ ಹಾಗೂ ಕಲ್ಲಿಮೀಸೆಯ ವೀರಭದ್ರಪ್ಪನವರೆಂದೂ" ವಿಜಯ ಯು, ಉದಾಹರಣಾರ್ಥವಾಗಿ ಆಶ್ರಮಿಸಿಕೊಳ್ಳಲ್ಪಟ್ಟರು ದಿ. ಮಲಮೂತ್ರವಿಸರ್ಜನೆಗೆ, ಧನಾಢ್ಯರೊಬ್ಬರು, ನಾಟ್ಯ, ಪ್ತವರು, ಕಾವ್ಯತೀರ್ಥರು ವ್ಯಾಕರಣ ನ್ಯಾಯತೀರ್ಥ ರೂ ಬರೆದಿರುವುದರಿಂದ ವಿಕಟಪಂಡಿತನೆಂದೂ (5) "ನೇಮಿ ವ ಯೋಜನೆಯಲ್ಲಿ, ನಾಮಕೇವಲರಾಗಿರುತ್ತಾರೆ" ಈ ಪದ ಮೇಲಿಂದ ಸಂಪೂರ್ಣ ಸಂಸ್ಕೃತಜ್ಞನಲ್ಲೆಂದೂ (6) ಸಂಘದ 8 ವರ್ಷಗಳಿಂದಲೂ ಪರಮತೀಯ ಪಂಡಿತರನ್ನು ಯೋಜಿಸಿ ದೂ ಇಲ್ಲಿಯವರಿವಿಗೂ ಸುಮ್ಮನಿದ್ದು ಈಗ ಮಾತ್ರ ಅವರನ್ನು ನಿಸಬೇಕಾಗಿದ್ದರೆ ಅವರಿಂದ ತನ್ನ ಕೆಲಸವು ಕೈಗೂಡದ ಹಾಗಿದೆ ದೂ (7) ಸಂಖ್ಯಾಮಗುಣವಾಗಿ ಉದಹರಿಸಿರುವವರಿಂದ ಪರಾಕೆಯುಳ್ಳವನಾಗಿರುವುದರಿಂದ ಅವರೆಲ್ಲರನ್ನೂ ದೂಷಿಸಿರಬಹುದೆಂದೂ (8) ಕೈಸಾಗದೆ ಸ್ವರಶಕ್ತಿಯಿಂದ ಹಿಂದಿನ ಪುಣ್ಯಾತ್ಮರನ್ನು ಜ್ಞಾಪಿಸಿಕೊಂಡು ತನ್ನ ದುರದೃಷ್ಟವಶಾತ್ ಅವರು ಕೈಲಾಸವಾಸಿಗಳಾಗಿರೋಣದರಿಂದ ಮತಿಗೆಟ್ಟು ಅವರನ್ನು ಸಹಾ ಮನಬಂದಂತೆ ಹೀಯಾಳಿಸಿರಬಹುದೆಂದೂ (9) ಈ ದುರವಸ್ಥೆಗೊಳಗಾಗಿರೋಣದರಿಂದಲೇ ಪರರಿಗೆ ಮತ್ತು ಹಂಚುವುದನ್ನು ಕೇಳಿ ಬಡಬಡಿಸೋಣದರಿಂದ ಹೊಟ್ಟೆಗಿಚ್ಚು ಪ್ರಾಪ್ತವಾಗಿರಬಹುದೆಂದೂ (10) ಲೇಖಕನು ಲೇಖನದಲ್ಲಿ ಎಷ್ಟು ಹೀಯಾಳಿಸಿದರೂ ಕೊನೆಗೆ ತನ್ನ ಉದ್ದೇಶವೇನೆನ್ನುವುದನ್ನು ತೋರಿಸದಿರೋಣದರಿಂದ ಕೇವಲ ನಿಂದಕನೆಂದೂ (11) ಕಾಣುತ್ತದೆಯಲ್ಲವೆ ಹಾಗಿಲ್ಲದಿದ್ದರೆ ಬಳ್ಳಾರಿ ಟವನ್ನಿನಲ್ಲಿ "ಯಥಾ ರಾಜಾ ತಥಾ ಪ್ರಜಾಃ" ಎನ್ನುವಗಾದೆಯನುಸರಿಸಿ ಹಣದಿಂದ ಮಾತ್ರ ಎಲ್ಲರಂತೆ ವೀರಶೈವರೂ ತಗ್ಗಿರಬಹುದೇ ವಿನಾ ವಿದ್ಯೆಯಿಂದಾಗಲಿ, ವಾಣಿಜ್ಯದಿಂದಾಗಲಿ, ಧರ್ಮದಿಂದಾಗಲಿ, ಭಕ್ತಿಯಿಂದಾಗಲಿ, ಹೆಸರಿನಿಂದಾಗಲಿ, ಪರೋಪಕಾರದಿಂದಾಗಲಿ, ಕಾರ್ಯದಕ್ಷತೆಯಿಂದಾಗಲಿ ತಗ್ಗಿರುವುದಿಲ್ಲ. 4-6 ಜನ ವಕೀಲರೂ, ದೊಡ್ಡ ದೊಡ್ಡ ವ್ಯಾಪಾರಿಗಳೂ, ಅಲ್ಲಲ್ಲಿ ಅನ್ನಸತ್ರಗಳೂ ಅಂಗ್ಲ, ಸಂಸ್ಕೃತ ಶಾಲೆಗಳೂ ನೌಕರರ ಮೊದಲ್ಗೊಂಡು ಧನಿಕರವರೆಗೂ ವಿದ್ಯಾರ್ಥಿವರ್ಗದವರ ಹಾಗೂ ಪರಸ್ಥಳೀಯರ ಅತಿಥಿಸತ್ಕಾರವುಳ್ಳವರೂ ಮುನಿಸಿಪಾಲಿಟಿ ವಗೈರೆ ಗೌರ್ನಮೆಂಟು ಸಭೆಗಳಲ್ಲಿಯೂ ಧಾರ್ಮಿಕಸಭೆಗಳಲ್ಲಿಯೂ ಅಗ್ರಸ್ಥಾನವನ್ನು ವಹಿಸುವವರೂ ಉಚಿತವಾಗಿ ಸಂಘದ ಸರ್ವಕಾರ್ಯಗಳನ್ನು ನಡೆಯಿಸಿಕೊಡತಕ್ಕವರೂ, ಗುರುಗಳ ದೊಡ್ಡ ಉತ್ಸವಾಗಿ ಸರ್ವಕಾರ್ಯಗಳಲ್ಲಿ ಅನ್ಯರಿಂದಾತಂಕಗಳು ಬಂದಾಗ್ಯೂ ಧೈರ್ಯದಿಂದ ಸಾಧಿಸಿದವರೂ ಆಗಿರೋಣದರಿಂದ ಬಳ್ಳಾರಿಯಲ್ಲಿ ಎಲ್ಲಿ ನೋಡಿದರೂ ವೀರಶೈವ ವಿದ್ಯಾರ್ಥಿಗಳ ಸಮೂಹದಿಂದ ತುಂಬಿ ಆನಂದವನ್ನುಂಟುಮಾಡುವ ಕಾಲವನ್ನೀದು ವಿದ್ಯಾವಿಹೀನರಾಗಿ ಪಶುಗಳಂತೆ ಆಹಾರ ದಕ್ಷಿಣೆಗಾಗಿ ಬೀದಿ ಬೀದಿ ಅಲೆದಾಡುತ್ತಿರುವ ಕಾಲವನ್ನು ನೆನೆಸಿಕೊಂಡು ಹಿಗ್ಗುತ್ತಿದ್ದನೆ?

ಮತಾಭಿಮಾನಿಗಳನ್ನೆಚ್ಚರಗೊಳಿಸಲುದ್ಯುಕ್ತನಾದ ಲೇಖಕನೇ, ನಿನ್ನ ಉದ್ದೇಶವನ್ನು ಬಿಟ್ಟು ಅಷ್ಟು ದೊಡ್ಡ ಪಟ್ಟಣದಲ್ಲಿ ಇಬ್ಬರು ಮೂವರ ತಪ್ಪುಗಳನ್ನು ಹಿಡಿದು ಇದ್ದದಾಕ್ಷವೀರಶೈವರನ್ನೆಲ್ಲಾ ಅಲ್ಲಗೆಳೆಯಲಿಕ್ಕೆ ಕಾರಣರು ಅವರೇನು ಮಾಡುವರು? ಅವರೇನು ಸಾಧಾರಣರೆಂದು ಭಾವಿಸಿರುವೆಯೋ ಹೇಗೆ? ಅಶ್ವಯುಜ ಮೊದಲ್ಗೊಂಡು ವೈಶಾಖ ಶು|| ೫|| ವರೆವಿಗೂ ಶಿವಕೀರ್ತನೆ, ಶಿವಭಜನೆ ಉತ್ಸವ ಹಾಗೂ ಗೋತ್ರಪುರುಷರ ಪಲ್ಲಕ್ಕಿ ಸೇವೆ ಜಗದ್ಗುರುಗಳ ಜಯಂತಿ ಮಹೋತ್ಸವ ಗಣಾರಾಧನಾದಿಗಳಿಂದ ಕುದ್ಧಾತ್ಮರಿರುವರೆಂದು ತಿಳಿದು ಇನ್ನು ಮುಂದೆಯಾದರೂ ಈ ಎಲ್ಲಾ ವೈಭವಗಳನ್ನು ನೋಡಿ ಸಂತೋಷಪುಳ್ಳವನಾಗಿ ಶಾಂತಸ್ವಭಾವದಿಂದ ಪರನಿಂದೆಯೆಂಬ ಪಾಪಕಾರ್ಯದಲ್ಲೊಲಿದ ನಿನ್ನ ಬುದ್ಧಿಯನ್ನು ಸ್ವಾಧೀನಪಡಿಸಿಕೊಂಡು ಆ ಪಾಪನಿವೃತ್ತಿಗಾಗಿ ನಿನ್ನೆದೆಯ ಮೇಲಿನ ಗುರುವಿನಿಂದಿತ್ತಲಿಂಗವನ್ನು ಪೂಜಿಸಿ ಧ್ಯಾನಿಸುವಂತೆಯೂ ಪುನಃ ಇಂಥ ಶಿವಭಕ್ತರನ್ನು ದೂಷಿಸಬಾರದೆಂಬುದಾಗಿಯೂ ತಿಳಿಯಪಡಿಸಿ ವಿರಮಿಸಿರುವ.

ಕರ್ನಾಟಕಬಂಧು ಪ್ರೇಕ್ಷಕ, ವೀರಭದ್ರಪ್ಪಕಮರ್.

ಇಂಡಿಯಾದೇಶದ ಪೂರ್ವಸ್ಥಿತಿ ಪ್ರಕೃತಸ್ಥಿತಿ ಮತ್ತು ಭವಿಷ್ಯದಸ್ಥಿತಿ.

ಈ ಮೂರು ಸ್ಥಿತಿಗಳನ್ನು ಕುರಿತು ವರ್ತಮಾನ ಪತ್ರಿಕೆಗಳಲ್ಲಿ ಅನೇಕರು ಅನೇಕವಿಧವಾಗಿ ಬರೆಯುತ್ತಲಿದ್ದಾರೆ. ಹೀಗೆ ಬರೆಯುತಕ್ಕವರಲ್ಲಿ ಅಕೃತ್ರಿಮವಾದ ಲೋಕಹಿತೈಷಿಗಳು ಇರುವರು. ಸ್ವಾರ್ಥಪರರಾದವರಿರುವರು. ಗೇಣುದ್ದ ಹೊಟ್ಟೆಗೋಸ್ಕರ ಅವರಲ್ಲಿ ಮನಶ್ಶಾಂತಿಯ ರೂಪವಾಗಿರುವ ಪರಮೇಶ್ವರನ ಸಂಕಲ್ಪಗಳನ್ನು ಉಲ್ಲಂಘಿಸಿ ದೇವರು ಮತ್ತು ಪಿಶಾಚ ಇವರಿಬ್ಬರಿಗೂ ಮನಸ್ಸಂತೋಷವಾಗಲಿ ಎಂದು ಕೆಲಸ ಮಾಡತಕ್ಕವರಿರುವರು. ದೇವರಿಗೂ ಪಿಶಾಚಿಗೂ ಇಬ್ಬರಿಗೂ ಸಂತೋಷವಾಗುವಂತೆ ನಡೆಯುವದು ಕಷ್ಟ. ಆದರೂ ಪರಿಣಾಮದಲ್ಲಿ ದೇವರ ಸಂಕಲ್ಪಕ್ಕೆ ಅನುಕೂಲವಾಗುವಂತೆ ಪಿಶಾಚಿಗಳೂ ಕೆಲಸಮಾಡುತ್ತವೆ. ಸಕಲ ವೇದಶಾಸ್ತ್ರಪುರಾಣೇತಿಹಾಸಗಳ ಪರಿಣಾಮ ಫಲವನ್ನು ನೋಡಿದರೆ ಇದು ಸ್ಪಷ್ಟವಾಗಿ ಗೊತ್ತಾಗುವುದು. ರಾಮರಾವಣರ ಯುದ್ಧವನ್ನು ಪರಿಶೀಲಿಸಿ ನೋಡೋಣ. ಶ್ರೀರಾಮನಿಗೆ ದೇವರು ರುಜುಮಾರ್ಗದಿಂದ ನಡೆಯುವ ಬುದ್ಧಿಯನ್ನೂ ಕೊಟ್ಟನು. ರಾವಣನಿಗೆ ಪಿಶಾಚವು ವಕ್ರಮಾರ್ಗದಲ್ಲಿ ನಡೆಸುವ ಬುದ್ಧಿಯನ್ನು ಕೊಟ್ಟನು. ಶ್ರೀರಾಮನು ಧರ್ಮವನ್ನವಲಂಬಿಸಿ ಧರ್ಮವನ್ನು ರಕ್ಷಿಸಿದನು. ರಾವಣನು ಧರ್ಮವನ್ನು ಉಲ್ಲಂಘಿಸಿ ತನ್ನ ಬಂಧುಮಿತ್ರರೆಲ್ಲರೂ ನಾಶವಾಗುವಂತೆ ಮಾಡಿ ತಾನೂ ನಾಶವಾದನು. ಹೀಗೆ ದೇವರೂ ಪಿಶಾಚವೂ ಇಬ್ಬರೂ ಒಟ್ಟಾಗಿ ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡುವುದು ಉಂಟು. ಧರ್ಮೋಲ್ಲಂಘನಕ್ಕೆ ಕಡತರೀ ಶಿಕ್ಷೆಯಾಗುವುದೂ ಉಂಟು. ಧರ್ಮೋಲ್ಲಂಘನವಾದ ವಿಷವು ಬಹಳ ಜಾಗ್ರತೆಯಾಗಿ ಕೆಲವು ಸಂದರ್ಭಗಳಲ್ಲಿ ಕೆಲಸಮಾಡುವುದು ಇನ್ನು ಕೆಲವು ಸಂದರ್ಭದಲ್ಲಿ ನಿಧಾನವಾಗಿ ಕೆಲಸ ಮಾಡುವುದು. ವಿಷವನ್ನು ಸೇವಿಸಿದವರಿಗೆ ಅದರ ಫಲವು ತಪ್ಪುವದಿಲ್ಲ. ಈಗ ಎರಡು ಸಾವಿರ ವರುಷಗಳ ಮುಂಚೆ ಭಾರತೀಯರು ವೇದಶಾಸ್ತ್ರಪುರಾಣೇತಿಹಾಸಗಳಲ್ಲಿ ನಿಪುಣರಾಗಿ ಭೂಸುರರೆಂದು ಎನ್ನಿಸಿಕೊಂಡಿದ್ದರು. ಬ್ರಿಟಿಷ್ ಜನಗಳು ಭೀಗಾಳಿಯನ್ನು ತಪ್ಪಿಸಿಕೊಳ್ಳುವದಕ್ಕೆ ಬಟ್ಟೆಗಳೂ ಕೂಡ ಇಲ್ಲದೇ ಕಾಡು ಜನರಂತಿದ್ದರು. ಈಗ ಕೃತಯುಗಾಲಂಕಾರಭೂತರಾಗಿದ್ದ ವಸಿಷ್ಠಾದಿ ಬ್ರಹ್ಮರ್ಷಿಗಳು ಹರಿಶ್ಚಂದ್ರಾದಿ ರಾಜರ್ಷಿಗಳು ಅಪೂರ್ವರಾದರು. ಅನುಷ್ಠಾನದಲ್ಲಿ ಬ್ರಹ್ಮಜ್ಞಾನವನ್ನಿಟ್ಟುಕೊಂಡಿರತಕ್ಕ ಬ್ರಹ್ಮರ್ಷಿಗಳನ್ನು ಎಲೆಕ್ಟ್ರಿಕ್ ಪಂಜುಹಿಡಿದುಕೊಂಡು ನೋಡಿದರೂ ಸಿಕ್ಕುವದು ಕಷ್ಟ. ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯವೆಂದು ತಿಳಿದುಕೊಂಡಿರತಕ್ಕ ರಾಜರ್ಷಿಗಳು ಇಂಡಿಯಾದೇಶದಲ್ಲಿರುವರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಈ ಪ್ರಪಂಚದ ಪ್ರಭುಗಳಲ್ಲಿ ಮಹಾತ್ಮಗಾಂಧಿಯಂಥ ಪುರುಷರೂ ಕೂಡ ಇರುವುದಿಲ್ಲವೆಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಪೂರ್ವದ ರಾಜರ್ಷಿಗಳು ಬ್ರಹ್ಮರ್ಷಿಗಳು ಮನುಷ್ಯರಾಗಿದ್ದಾಗ್ಯೂ ದೇವರಂತಿದ್ದರು. ಈ ಕಲಿಗಾಲದಲ್ಲಿ ಇಂಥವರು ಇರುವುದಿಲ್ಲವೆಂದು ಈಗಿನ ಕಲಿಪುರುಷರನ್ನು ನೋಡಿ ಅನೇಕರು ತಿಳಿದುಕೊಂಡಿದ್ದರು. ಮಹಾತ್ಮಗಾಂಧಿ ಮೊದಲಾದ ವೈರಾಗ್ಯ ಚಕ್ರವರ್ತಿಗಳನ್ನು ನೋಡಿದ ಮೇಲೆ ಈ ಭೂಮಂಡಲದಲ್ಲಿ ಯನ್ನೋಜನ ಮಹಾನುಭಾವರು ಇರುವರೆಂದು ಗೊತ್ತಾಗುತ್ತದೆ. ಇವರ ಮಹಾನುಭಾವತೆಯು ಸಾಂಕ್ರಾಮಿಕವಾಗಿ ಪರಿಣಮಿಸಿ ಸ್ವಲ್ಪಕಾಲದಲ್ಲಿಯೇ ಈ ಭರತಖಂಡವು ಧರ್ಮಕ್ಕೆ ಮಾತೃಭೂಮಿಯಾಗುವುದೆಂದು ತೋರುತ್ತದೆ. ಹೀಗಾಗುವುದಕ್ಕೆ ಬ್ರಿಟಿಷ್ ಜನಗಳೇ ಕಾರಣಭೂತರಾಗಿದ್ದಾರೆ. ಮಹಾತ್ಮರಾದ ಬ್ರಿಟಿಷ್ ಜನಗಳು ಬ್ರಿಟಿಷ್ ಸಾಂಕೇತ ಪ್ರವರ್ತಕಧರ್ಮಗಳು ಈ ಭರತಖಂಡದಲ್ಲಿ ಆಚರಣೆಗೆ ಬರುವಂತೆ ಮಾಡುತ್ತಲಿದ್ದಾರೆ. ಸ್ವಾರ್ಥಪರರಾದ ಬ್ರಿಟಿಷ್ ಜನಗಳು ತಮ್ಮ ಸ್ವಾರ್ಥಪರತೆಯಿಂದ ಬ್ರಿಟಿಷ್ ಪ್ರಭುತ್ವಕ್ಕೆ ಅನುಕೂಲರಾಗಿರುವ ಮಾಡರೇಟುಗಳನ್ನೂ ಕೂಡ ಯಕ್ಸ್ಟ್ರಿಮಿಸ್ಟುಗಳನ್ನಾಗಿ ಮಾಡುತ್ತಲಿದ್ದಾರೆ. ಈ ಉಭಯಸ್ತರ ಪ್ರಯತ್ನಗಳಿಂದಲೂ ಇಂಡಿಯಾದೇಶದಲ್ಲಿ ಬ್ರಿಟಿಷ್ ಧರ್ಮಗಳು ರೂಢಮೂಲಗಳಾಗುವುದಕ್ಕೆ ಉಪಕ್ರಮವಾಗಿದೆ. ಇದು ಇಂಡಿಯಾದೇಶದ ಪ್ರಕೃತಸ್ಥಿತಿ. ಬಹುಕೊಂಚಕಾಲದಲ್ಲಿಯೇ ಬ್ರಿಟಿಷ್ ಜನಗಳ ಅನುಗ್ರಹದಿಂದಲೂ ಇಂಡಿಯಾದೇಶಕ್ಕೆ ಪೂರ್ಣಸ್ವರಾಜ್ಯವು ಬರುವುದು. ಅಧರ್ಮಕ್ಕೆ ವನವಾಸವಾಗುವುದು. ಧರ್ಮಯುಗವು ಉಪಕ್ರಮವಾಗುವುದು. ಇದಕ್ಕೆ ದೇವರ ಸಹಾಯವು, ಬ್ರಿಟಿಷ್ ಮಹಾಜನಗಳ ಸಹಾಯವುಂಟಾಗುವದು. ವೈರಾಗ್ಯ ಚಕ್ರವರ್ತಿಗಳಾದ ಗಾಂಧಿ ಅಥವಾ ಅವರ ಶಿಷ್ಯರ ಪೈಕಿ ಯಾರಾದರೂ ಒಬ್ಬರು ನಜರುದ್ದೀನ್ ಮಹಮ್ಮದನಂತೆ ಸಂಬಳ ಅಲೋವೆನ್ಸು ಮೊದಲಾದವುಗಳನ್ನು ಅಪೇಕ್ಷಿಸದೇ ಅನರರಿ ಪ್ರಭುಗಳಾಗಿ ಪ್ರಭುತ್ವಮಾಡುವುದಕ್ಕೆ ಬರುವರು. ಶೀಘ್ರದಲ್ಲಿಯೇ ಅಂಥಾಪ್ರಭುತ್ವವು ಇಂಡಿಯಾದೇಶಕ್ಕೆ ಲಭ್ಯವಾಗಲೆಂದು ನಾನು ಕೋರುತ್ತೇನೆ.

ಎಂ. ಬಿ.

ನೀತಿಬೋಧಾಮೃತ

9. ಕನಿಕರವೇ ಮಾನವನಿಗೆ ಒಂದು ಆಭರಣವು.

(ಕನ್ನಡಕರು ಮ|| ರಾ|| ಅನವಟ್ಟಿ ರಾಮರಾಯರವರಿಂದ)

ವಸಂತಕಾಲವು ಪ್ರಾಪ್ತವಾದಾಗ್ಗೆ ಮಾಮರಗಳು ಚಿಗುರಿ, ಹೂವಾಗಿ, ಫಲಗಳನ್ನು ಬಿಟ್ಟು ನೋಟಕ್ಕೆ ಆನಂದಕರವಾಗಿಯೂ, ಜನಗಳು ಫಲರುಚಿನೋಡಿದಾಗ್ಗೆ ಸವಿಯಾಗಿಯೂ ಇರುತ್ತಾ ಪರಮಾನಂದಕರವಾಗಿರುವಂತೆ, ಈ ಪ್ರಪಂಚದಲ್ಲಿ ಕನಿಕರವೆಂಬ ತರುಣಿಯು ಮೊದಲು ನೋಡಿದ ಅನಾಥರಾದ ಜೀವಿಗಳಿರುವ ಕಷ್ಟಗಳನ್ನು ನೋಡಿ, ಪರೋಪಕಾರಮಾಡಬೇಕೆಂದಾಶಿಸಿ, ತಾನಾಗಿಯೇ ಬಂದು ಸದಾ ಸಹಾಯಮಾಡುತ್ತಿರುವಾಗ್ಗೆ, ಜನರು ಆನಂದಪರವಶರಾಗಿರುವರಲ್ಲವೆ? ಇದೇ ರೀತಿಯಾಗಿ ಪರರು ಅಸದಳವಾದ ಕಷ್ಟಗಳಿಗೀಡಾಗಿ ನರಳುತ್ತಿರುವಾಗ್ಗೆ, ಕನಿಕರವನ್ನು ತೋರಿಸಿ ಸಹಾಯಮಾಡಬೇಕೆಂದಿರುವ ಪುರುಷನು ಕಷ್ಟಸದ್ಗುಣದ ಪರಿಮಳವನ್ನು ಹರಡಿ, ಲೋಕವು ಸೌಖ್ಯದಲ್ಲಿರುವುದನ್ನು ನೋಡಿ, ಸಂತೋಷಪಡೋಣವೆಂದು ಬಯಸುವಂತೆ ವರ್ತಿಸುತ್ತಿರುವುದಾದರೆ ಜನರು ಅಂಥವನ ವಿಷಯದಲ್ಲಿ ಗೌರವವೂ, ಖ್ಯಾತಿಯೂ ಕೊಡುವುದರಿಂದ ಪ್ರಖ್ಯಾತನಾದ ಆ ಪುರುಷನ ಜನ್ಮವು ಸಾರ್ಥಕವೆಂದು ಎಲ್ಲರೂ ಹೇಳುವರು.

ಹಾಗಲ್ಲದೆ ಘೋರವಾದ ದುರ್ಗುಣಜಾಲದಿಂದ ತುಂಬಿಕೊಳ್ಳುತ್ತಾ ನಿಷ್ಕರುಣೆಯಿಂದಿರುತ್ತಿರುವುದನ್ನು ನೋಡಿದುದಾದರೆ ಬಲಿಗುಡುವುದಕ್ಕಾಗಿ ತಂದಿರುವ ಕುರಿಯು ಅರಚುತ್ತಾ ಮರಿಯ ಹತ್ತಿರ ನಿಂತಿರುವುದನ್ನು ನೋಡಿ ನಗುತ್ತಿರುವ ಕಟುಕನಂತೆ ಕತ್ತರವಾದ ಗುಣಗಳಿಂದ ತುಂಬಿ ರಸವತ್ತಾದ ಸದ್ಗುಣಗಳ ಸೇವೆಯೇ ಇಲ್ಲದಿರುವ ದುಷ್ಟಮಾನವನು ಆ ಕಟುಕನವನ ಹೃದಯಕ್ಕಿಂತಲೂ ಅತ್ಯಂತ ಘೋರವಾಗಿರುವುದೆಂದು ಯಾರುತಾನೇ ಹೇಳದೇ ಇರುವರು?

ಪರಹಿತವೇ ಸ್ವರ್ಗಪಾಥೆಯವೆಂದು ತಿಳಿದು ಕನಿಕರ ರಸದಿಂದ ತುಂಬಿತುಳುಕುತ್ತಿರುವ ಮಾನವನು ಪರರ ಕಷ್ಟವನ್ನು ನೋಡಿ ಕನಿಕರ ಪಡುತ್ತಾ ನೇತ್ರಗಳಿಂದ ಧಾರಾಪೂರ್ವಕವಾಗಿ ಬಿಡುತ್ತಿರುವ ಕಂಬನಿಯು ವಸಂತಕಾಲದಲ್ಲಿ ಬಿಡುವ ಪುಷ್ಪಗಳಿಂದ ಸುರಿವ ಮಧುರಸದ ಪ್ರವಾಹದಂತಾಗಿ, ವಿಹಂಗಗಳ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಮಧುವಿಗೆ ಸಾಟಿಯಾಗಿರುವುದೆಂದು ಹೇಳಬಹುದು.

ಎಲೈ ಮಾನವನೆ! ಜೀವಿಸುವುದಕ್ಕೆ ಅಸದಳವಾದ ಬಡತನದಿಂದ ಬಹಳವಾಗಿ ಕೊರಳ ಬಳಲುತ್ತಿರುತ್ತಾ ಅತಿ ದೈನ್ಯಪಡುತ್ತಿರುವ ಜನರು ನಿನ್ನನ್ನು ನೋಡಿ, ದೀನಸ್ವರಗಳಿಂದ ಸಹಾಯಕ್ಕಾಗಿ

[6ನೆಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೦ ನೇ ಆಗಸ್ಟ್ ತಾ|| ೮ ನೇ ಸೋಮವಾರ.

ಬಾಹ್ಯಾಭ್ಯಂತರೋಪಾಸನೆ.

ಈ ಪ್ರಪಂಚದಲ್ಲಿರುವ ಮಾನವರೆಲ್ಲರೂ ಸೃಷ್ಟಿಕರ್ತನಾದ ಈಶ್ವರನೊಬ್ಬನು ಇರುವನೆಂದು ನಂಬುತ್ತಾರಷ್ಟೆ! ಆದರೆ ಇಂಥ ಸರ್ವಕರ್ತನಾದ ಈಶ್ವರನ ಅನುಗ್ರಹವಾಗುವವರೆಗೂ ಮಾನವರಿಗೆ ಉಂಟಾಗಿರುವ ದುಃಖವು ಪರಿಹರವಾಗುವಂತಿಲ್ಲ. ಈಶ್ವರನ ಅನುಗ್ರಹವಾಗಬೇಕಾದರೆ ಯಾವಾಗಲೂ ಯಾವರೂಪದಿಂದಾದರೂ ಆತನ ಉಪಾಸನೆಯನ್ನು ಮಾಡುತ್ತಿರಬೇಕು. ಈಶ್ವರನ ಉಪಾಸನೆಯನ್ನು ಅವರವರ ಇಚ್ಛಾನುಸಾರವಾಗಿ ಅನೇಕರು ಅನೇಕವಿಧವಾಗಿ ಆಚರಿಸುತ್ತಾರೆ. ಕೆಲವರು ಬಾಹ್ಯೋಪಾಸನೆಯಿಂದಲೇ ಈಶ್ವರನು ಒಲಿಯುತ್ತಾನೆಂದು ಹೇಳುತ್ತಾರೆ. ಇನ್ನು ಕೆಲವರು ಅಭ್ಯಂತರೋಪಾಸನೆಯಿಂದಲೇ ಈಶ್ವರನು ಪ್ರಸನ್ನನಾಗುತ್ತಾನೆಂದು ಹೇಳುತ್ತಾರೆ.

ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ |
ಯಥಾಚಾಲಿಂಗಿತಃ ಪುತ್ರಃ ತಥಾಚಾಲಿಂಗಿತಃ ಪತಿಃ ||

ಅಂದರೆ ಮನುಷ್ಯನ ಬಂಧಕ್ಕಾಗಲಿ ಮೋಕ್ಷಕ್ಕಾಗಲಿ ಅವರವರ ಮನಸ್ಸೇ ಕಾರಣವಾಗಿರುವುದು. ಯಾವಳು ಪುತ್ರನನ್ನು ಆಲಿಂಗಿಸುವಳೋ ಅವಳೇ ಗಂಡನನ್ನೂ ಆಲಿಂಗಿಸುವಳು. ಆಲಿಂಗನರೂಪವಾದ ಬಾಹ್ಯಧರ್ಮವೇನೋ ಒಂದೇಯಾಗಿದ್ದರೂ ಮನೋಭಾವವೇ ಬೇರೆಯಾಗಿರುವಂತೆ, ಪರಮೇಶ್ವರನ ಪ್ರೀತಿಗೆ ಮಾನಸಿಕವಾದ ಅಂತರಾರಾಧನೆಯೇ ಸಾಕಾಗಿದೆಯಲ್ಲದೆ ಕಾಯಿಕವಾದ ಬಾಹ್ಯ ಆರಾಧನೆಯ ಅವಶ್ಯಕತೆಯಿಲ್ಲವೆಂದು ತಿಳಿದುಬರುತ್ತದೆ.

ಗವಾಂ ಸರ್ಪಿಃ ಶರೀರಸ್ಥಂ ನಕರೋತ್ಯಾತ್ಮಪೋಷಣಂ |
ನಿಸ್ಸೃತಂ ಕರ್ಮರಚಿತಂ ಪುನಸ್ತಾಸಾಂತು ಭೇಷಜಂ ||
ಏವಮಂತಃಶರೀರಸ್ಥಃ ಸರ್ಪಿವತ್ಪರಮೇಶ್ವರಃ |
ವಿನಾಚೋಪಾಸನಾಂ ದೇವೋ ನಕರೋತಿ ಹಿತಂ ನೃಣಾಂ ||

ಗೋವುಗಳ ಶರೀರದಲ್ಲಿ ತುಪ್ಪವಿದ್ದರೂ ಆ ತುಪ್ಪವು ಆ ಗೋವಿನ ಆತ್ಮವನ್ನು ರಕ್ಷಿಸಲಾರದು. ಆ ಶರೀರದಲ್ಲಿರುವ ತುಪ್ಪವನ್ನು ಹೊರಗೆ ಕಾಣಿಸುವಂತೆ ಮಾಡಬೇಕಾದರೆ, ಹಾಲುಕರೆಯುವದೂ, ಕಾಸುವದೂ, ಹೆಪ್ಪುಹಾಕುವದೂ, ಕಡೆಯುವದೂ ಮೊದಲಾದ ಹೊರಗಿನ ಕ್ರಿಯೆಗಳನ್ನು ಆಚರಿಸಬೇಕಾಗುವದು. ಆಗ ಆ ತುಪ್ಪವು ಕಾಣಿಸಿಕೊಂಡು ಆ ಗೋವುಗಳ ರೋಗಕ್ಕೆ ಉಪಯೋಗವಾಗುತ್ತದೆ. ಇಲ್ಲಿ ಪರಮೇಶ್ವರನು ಗೋವಿನ ದೇಹದಲ್ಲಿರುವ ತುಪ್ಪದಂತೆ ಎಲ್ಲ ಶರೀರಗಳಲ್ಲಿ ಸೂಕ್ಷ್ಮರೂಪವಾಗಿದ್ದರೂ ಬಾಹ್ಯವಾದ ಸ್ಥೂಲಾರಾಧನೆಯ ಹೊರತು ಆ ಪರಮೇಶ್ವರನು ಪ್ರಸನ್ನನಾಗುವುದಿಲ್ಲ. ಪ್ರಸನ್ನನಾದ ಹೊರತು ಭವರೋಗವು ನಾಶವಾಗಲಾರದು. ಎಂಬ ಪ್ರಮಾಣಪರ್ಯಾಲೋಚನೆಯಿಂದ ಪರಮೇಶ್ವರನ ಪ್ರೀತಿಗೆ ಬಾಹ್ಯ ಆರಾಧನೆಯೇ ಸಾಕಾಗಿದೆ. ಅಭ್ಯಂತರ ಉಪಾಸನೆಗಳೊಂದೂ ಬೇಕಿಲ್ಲವೆಂದು ಅರ್ಥವಾಗುತ್ತದೆ. ಹೀಗೆ ಕೆಲವರು ಬಾಹ್ಯಾರಾಧನೆಯಲ್ಲಿಯೇ ವಿಶ್ರಾಂತರೂ, ಕೆಲವರು ಅಭ್ಯಂತರಾರಾಧನೆಯಲ್ಲಿಯೇ ವಿಶ್ರಾಂತರೂ ಆಗಿದ್ದಾರೆ. ಬಾಹ್ಯಾರಾಧನೆಯನ್ನು ಬಿಟ್ಟು ಕೇವಲ ಮಾನಸಿಕವಾದ ಆರಾಧನೆಯಿಂದಾಗಲಿ, ಮಾನಸಿಕವಾದ ಆರಾಧನೆಯನ್ನು ಬಿಟ್ಟು ಕೇವಲ ಬಾಹ್ಯಾರಾಧನೆಯಿಂದಾಗಲಿ ಈಶ್ವರನು ಪ್ರಸನ್ನನಾಗುವುದಿಲ್ಲ. ಎಂಬುವುದೇ ವೀರಶೈವಸಿದ್ಧಾಂತದ ರಹಸ್ಯವು. ಬಾಹ್ಯ ಮತ್ತು ಅಭ್ಯಂತರ ಉಪಾಸನೆಗಳೆರಡರಿಂದಲೇ ಮಾನವನು ಈಶ್ವರನ ಪ್ರಸನ್ನತೆಯನ್ನು ಹೊಂದಿ ಭವರೋಗದಿಂದ ಬಿಡುಗಡೆಯನ್ನು ಹೊಂದುತ್ತಾನೆಂಬ ವಿಷಯದಲ್ಲಿ—

ತಥಾಂತರ್ಯಜನಂ ನಿತ್ಯಂ ಬಹಿರ್ಯಜನಪೂರ್ವಕಂ |
ಕರ್ತವ್ಯಂ ಸ್ವೇಷ್ಟಲಿಂಗಸ್ಯ ಚಾರ್ಚನಂ ತನ್ಮನೀಷಿಭಿಃ ||

ಬಾಹ್ಯ, ಅಭ್ಯಂತರ ಉಪಾಸನೆಗಳೆರಡೂ ಮುಮುಕ್ಷುವಿಗೆ ಉಪಾದೇಯವೆಂದು ಶಿವಾಗಮಗಳು ಸ್ಪಷ್ಟವಾಗಿ ಹೇಳುತ್ತವೆ. ಆದುದರಿಂದ ತನ್ನ ಸಂಪ್ರದಾಯಾನುಸಾರವಾಗಿ ವೀರಶೈವನಾದವನು ಲಿಂಗರೂಪನಾದ ಈಶ್ವರನ ಬಹಿರಾಕಾರವನ್ನು ಹೊರಗೆ ಪೂಜಿಸುತ್ತಲೂ ಪೂಜಿಸಿದ ಆ ಮೂರ್ತಿಯನ್ನು ತದಾಕಾರವಾಗಿ ಮನಸ್ಸಿನಲ್ಲಿ ಧ್ಯಾನಿಸುತ್ತಲೂ ಇರುವವನಾವನೋ ಅಂಥವನಿಗೆ ಮಾತ್ರ ಈಶ್ವರನೊಲುಮೆಯುಂಟಾಗುವುದು. ಅದಿಲ್ಲದೆ ಮನಸ್ಸಿನಲ್ಲಿ ಯಾವುದೊಂದೂ ಮೂರ್ತಿಯ ಧ್ಯಾನಸ್ಮರಣಗಳಿಲ್ಲದೆ ಶೂನ್ಯಹೃದಯನಾಗಿ ಹೊರಗೆ ಮಾತ್ರ ಪೂಜಾಡಂಬರಗಳನ್ನು ಅಭಿನಯಿಸಿದರೂ ಪ್ರಯೋಜನವಿಲ್ಲ. ಒಳಗೆ ಮಾತ್ರ ಧ್ಯಾನಿಸುತ್ತಲೂ ಸ್ಮರಿಸುತ್ತಲೂ ಇದ್ದು ಹೊರಗೆ ಕೇವಲ ವ್ರಾತ್ಯನಾಗಿಯೂ ಕ್ರಿಯಾಭ್ರಷ್ಟನಾಗಿಯೂ ಇರುವವನಿಗೂ ಸಹ ಈ ಭವದ ಸಂಕೋಲೆಯು ತಪ್ಪಲಾರದು. ಆದುದರಿಂದ—

ಇಷ್ಟಲಿಂಗಂ ಪ್ರಾಣಲಿಂಗಮೇಕೀಕೃತ್ಯ ಸಮರ್ಚಯೇತ್ |
ಮಣಿಮಾಲಾಂ ಮಂತ್ರಮಾಲಾಮೇಕೀಕೃತ್ಯ ಜಪೇತ್ಸದಾ ||

ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನೂ, ಹೃದಯದಲ್ಲಿ ವಿರಾಜಮಾನವಾದ ಪ್ರಾಣಲಿಂಗವನ್ನೂ, ರುದ್ರಾಕ್ಷಮಾಲೆಯನ್ನೂ, ಮಂತ್ರಮಾಲೆಯನ್ನೂ, ಒಂದುಮಾಡಿ ಪೂಜಿಸುತ್ತಲೂ, ಜಪಿಸುತ್ತಲೂ ಇರುವವನೇ ವೀರಶೈವನೆಂದು ಶಿವಾಗಮಗಳು ಎರಡು ಉಪಾಸನೆಗಳಿಗೂ ಅವಕಾಶವನ್ನು ಕೊಟ್ಟಿರುತ್ತವೆ. ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನು ಯಾವಾಗಲೂ ಆರಾಧಿಸುತ್ತಿರುವುದೇ ಬಹಿರುಪಾಸನೆಯು. ಹೃದಯಾಕಾಶದಲ್ಲಿ ಪ್ರಾಣಲಿಂಗವನ್ನು ಆರಾಧಿಸುತ್ತಿರುವುದೇ ಅಂತರುಪಾಸನೆಯು. ಮನಸ್ಸಿನಲ್ಲಿ ಯಾವವಿಧವಾದ ಜ್ಞಾನವಿರುವುದೋ ಆ ಜ್ಞಾನಾನುಗುಣವಾದ ಫಲವು ಕೈಸೇರಬೇಕಾದರೆ ಆ ಜ್ಞಾನವು ಕ್ರಿಯಾರೂಪದಿಂದ ಪರಿಣಮಿಸಲೇಬೇಕು. ಲೋಕದಲ್ಲಿ ಒಬ್ಬನು ಧನಾರ್ಜನೆಯನ್ನು ಮಾಡಿ ಸುಖವನ್ನು ಸಂಪಾದಿಸಬೇಕೆಂಬ ಜ್ಞಾನವಿದ್ದು ಅದಕ್ಕನುಗುಣವಾದ ಬಹಿರ್ವ್ಯಾಪಾರದಲ್ಲಿ ತೊಡಗಿ ಜನಾನುರಾಗಿಯಾಗಿಯೂ, ಸತ್ಯಶೀಲನಾಗಿಯೂ ವರ್ತಿಸಬೇಕಾಗುವಂತೆ ಮನಸ್ಸಿನಲ್ಲಿ ಲಿಂಗರೂಪನಾದ ಈಶ್ವರನ ಜ್ಞಾನವೊಂದಿದ್ದರೆ ಅಷ್ಟುಮಾತ್ರದಿಂದ ಇವನು ಭವಸಮುದ್ರದಿಂದೆದ್ದು ಸುಖಪಡೆಯಲಾರನು. ಅಂತರ್ವ್ಯಾಪ್ತವಾದ ಆ ಈಶ್ವರಜ್ಞಾನಕ್ಕನುಗುಣವಾಗಿ ಸತ್ಯ, ಅಶೌಚಾದಿ ವ್ರತಗಳನ್ನು ಪಾಲಿಸುತ್ತ ಗುರುವಿನ ಅನುಜ್ಞೆಯನ್ನು ಸ್ವಲ್ಪವೂ ಮೀರದಂತೆ ಲಿಂಗಮೂರ್ತಿಯನ್ನು ಧೂಪದೀಪಾದಿಗಳಿಂದ ಅರ್ಚಿಸುತ್ತ ಬರುವುದರಿಂದ ಕ್ರಿಯಾಜ್ಞಾನವು ಏಕತ್ರ ಸಮ್ಮಿಳಿತವಾಗಿ ಈ ಕ್ರಿಯಾಜ್ಞಾನಾಶ್ರಯನಾದ ಈಶ್ವರನು ಪ್ರಸನ್ನನಾಗುತ್ತಾನೆ. ಹಾಗಿಲ್ಲದೆ ತಿಳುವಳಿಕೆಯಿಲ್ಲದೆ, ಬಹಿರಾಡಂಬರದಿಂದ ವ್ಯಾಪಾರ ಮಾಡುವವನಾಗಲಿ ಬಹಿರ್ವ್ಯಾಪಾರವನ್ನೇ ಮಾಡದೆ ಸೋಮಾರಿಯಾಗಿ ಕುಳಿತುಕೊಂಡು ಮನಸ್ಸಿನಲ್ಲಿ ಸುಖವನ್ನು ನೆನಸುವವನಾಗಲಿ ಇಬ್ಬರಿಗೂ ಧನಾರ್ಜನೆಯಾಗದೆ ದುಃಖಪಡುವಂತೆ ಮನಸಾ ಪರಮಾತ್ಮನನ್ನು ಸ್ಮರಿಸುತ್ತಿರುವವನಾಗಲಿ ಅಥವಾ ಜ್ಞಾನವಿಲ್ಲದೆ ಹೊರಗೆ ಈಶ್ವರಪೂಜಾದಿಕ್ರಿಯೆಗಳನ್ನು ಮಾಡುವವನಾಗಲಿ ಒಬ್ಬರೂ ಮುಕ್ತಿಸಾಮ್ರಾಜ್ಯ ಸೌಖ್ಯವನ್ನು ಪಡೆಯದೆ ದುಃಖಿಗಳಾಗಬೇಕಾಗುವದು. ಆದ್ದರಿಂದ ಮೋಕ್ಷಸೌಖ್ಯವನ್ನು ಅಪೇಕ್ಷಿಸುವ ಮನುಷ್ಯನಿಗೆ ಪರಮಾತ್ಮ ಸಂಬಂಧವಾದ ಕ್ರಿಯೆಯೂ, ಒಳಗೆ ಪರಮಾತ್ಮ ಸಂಬಂಧವಾದ ಜ್ಞಾನವೂ ಇವೆರಡೂ ಹಾರುವ ಪಕ್ಷಿಗೆ ಸಹಾಯವಾಗಿರುವ ಎರಡು ರೆಕ್ಕೆಗಳಂತೆ ಸದಾಸಹಾಯಕಗಳಾಗಿವೆಯೆಂದು ಭಗವತ್ಪಾದ ರೇಣುಕಾಚಾರ್ಯರು ಜ್ಞಾನಕ್ರಿಯೆಗಳಿಗೆ ಸಮಸಮುಚ್ಚಯವನ್ನು ಬೋಧಿಸಿರುತ್ತಾರೆ. ಆದುದರಿಂದ ಮೋಕ್ಷಾಪೇಕ್ಷಿಗಳಾದ ಮಾನವರು ಬಾಹ್ಯಾಭ್ಯಂತರೋಪಾಸನೆಗಳನ್ನು ಮಾಡಿ ಧನ್ಯಾತ್ಮರಾಗಬೇಕೆಂದಾಶಿಸುತ್ತೇವೆ.

ಹೈದರಾಬಾದ್ ರಾಜಕುಮಾರರು ಮತ್ತು ಯುವರಾಣಿಯವರು ಪರಿವಾರಸಮೇತರಾಗಿ ಕಳೆದ ಜುಲೈ 31ನೇ ತಾರೀಖಿನದಿವಸ ಸಾಯಂಕಾಲ 5 ಗಂಟೆಗೆ ಬೆಂಗಳೂರಿನಿಂದ ಹೈದರಾಬಾದಿಗೆ ಸ್ಪೆಷಲ್ ಟ್ರೇನಿನಲ್ಲಿ ಪ್ರಯಾಣಮಾಡಿದರು. ದಿವಾನ್‌ಸಾಹೇಬರು ರಾಜಕುಟುಂಬದವರನ್ನು ಬೆಂಗಳೂರು ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಬೀಳ್ಕೊಟ್ಟರು.

ಒಳದೇಶದ ವೃತ್ತಾಂತಗಳು

ರಾಜಧಾನಿಯಲ್ಲಿ ಮುಂದಿನ ತಿಂಗಳು ನಡೆಯ ರುವ ವಿಶ್ವವಿದ್ಯಾಲಯದ ಪದವೀಪ್ರದಾನ ಸಮಾರಂ ದಲ್ಲಿ ಮದ್ರಾಸಿನ ಮಾಜಿ ಹೈಕೋರ್ಟ್ ಜಡ್ಜರಾ ಸರ್ ಸಿ. ವಿ. ಕುಮಾರಸ್ವಾಮಿ ಶಾಸ್ತ್ರಿಗಳು ಉ ನ್ಯಾಸಮಾಡುವರು.

ರಾಜಧಾನಿಯ ಲಕ್ಷ್ಮೀವಿಲಾಸರಸ್ತೆಯಲ್ಲಿ ವಾ ವಾಗಿರುವ ಕೆ. ನಾರಾಯಣಸ್ವಾಮಿ ಅಯ್ಯಂಗಾ ಎಂಬವನು ಎರಡು ಬೈಸಿಕಲ್‌ಗಳನ್ನು ಬಾಡಿಗೆಗೆ ತೆ ದುಕೊಂಡುಹೋಗಿ ಸಿದ್ಧಲಿಂಗಪುರದಲ್ಲಿ ಗಿರವಿ ಇ ನೆಂಬ ಕಾರಣದಮೇಲೆ ಪೋಲೀಸರು ಅವನನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ತಯಾ ರಾಗುವ ಕಬ್ಬಿಣದ ಸಾಮಾನುಗಳಿಗೆ ಗಿರಾಕಿಗಳನ್ನು ದೊರಕಿಸುವುದಕ್ಕಾಗಿ ಉತ್ತರದೇಶದಲ್ಲಿ ಸಂಚಾರ ಹೊ ರಟಿದ್ದ ಕಾರ್ಖಾನೆಯ ಸೂಪರಿಂಟೆಂಡೆಂಟರಾದ ಮ ರಾ|| ಎಂ. ವೆಂಕಟನಾರಣಪ್ಪನವರು ಭಾವನಗರ ಸಂ ಸ್ಥಾನಕ್ಕೆ ಸುಮಾರು 5 ಲಕ್ಷ ರೂಪಾಯಿಗಳ ಸಲ್ಲಿಗ ನ್ನು ತಯಾರುಮಾಡಿ ಕಳುಹಿಸುವಂತೆ ಗೊತ್ತುಮಾ ಕೊಂಡು ಬಂದಿರುತ್ತಾರೆ.

ಮೈಸೂರು ಸರಕಾರದವರು 1932 ನೇ ಇಸ ಡಿಸೆಂಬರ್ ತಿಂಗಳ ಅಂತ್ಯದೊಳಗಾಗಿ ಸಂಸ್ಥಾನದಲ್ಲಿ ರುವ ಎಲ್ಲ ತುಪಾಕಿ ಮತ್ತು ಮದ್ದುಗುಂಡುಗಳ ಲೆ ವನ್ನು ತಯಾರಿಸಬೇಕೆಂದು ಎಲ್ಲ ತಾಲ್ಲೂಕುಗಳ ಅಮ ರರಿಗೂ, ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಅಧಿಕಾರಿಗಳಿಗೂ, ಹಾಗು ಕೋಲಾರದ ಚಿನ್ನದಗಣಿಗಳಲ್ಲಿರುವ ಪೋಲೀಸು ಅಧಿ ಕಾರಿಗಳಿಗೂ ಅಪ್ಪಣೆಮಾಡಿರುತ್ತಾರೆ.

ಕಳೆದ ಜುಲೈ 31 ನೆಯ ತಾರೀಖಿನ ದಿವಸ ಮು ದ್ಯದ ಸಬ್-ಡಿವಿಜನ್ ಸಾಹೇಬರಾದ ಮ|| ರಾ|| ಆರ್. ಎ. ನರಸಿಂಹಯ್ಯಂಗಾರ್ರವರು ಹಿರೋಡೆಯಲ್ಲಿ ಕ್ಯಾಂಪ್‌ಮಾಡಿದ್ದು ಬೆಳಗ್ಗೆ ತಿರುಗಾಡಿಕೊಂಡು ಬರುವದಕ್ಕೆ ಹೋದವರು ಪುನಃ ಹಿಂತಿರುಗಿ ಬರಲೇ ಇಲ್ಲ. ಆ ದಿವಸವೂ ಮರುದಿವಸವೂ ಅವರ ಸುಳಿವೇ ಇಲ್ಲದೆ 3ನೆಯ ದಿವಸ ಅವರ ಶವವು ಹಿರೋಡೆಯ ಕೆರೆಯಲ್ಲಿ ತೇಲಿತು. ಅವರು ಹಾಕಿಕೊಂಡಿದ್ದ ಕನ್ನಡಕವೂ ಕೈಯಲ್ಲಿದ್ದ ಉಂಗುರವೂ ಹಾಗೆಯೇ ಇದ್ದುದರಿಂದ ಕೆರೆಗೆ ಕೈಕಾಲು ತೊಳೆಯಲು ಹೋಗಿದ್ದಾಗ ಕಾಲುಜಾರಿ ಕೆರೆಯಲ್ಲಿಬಿದ್ದು ಮೃತಪಟ್ಟರೆಂದು ಊಹಿಸಲ್ಪಟ್ಟಿದೆ. ಇವರು ಅತ್ಯಂತ ಗುಣಾಢ್ಯರಾಗಿದ್ದು ಮೇಲ್ಪಟ್ಟ ಮತ್ತು ಕೈಕೆಳಗಿನ ನೌಕರರ ಸಂಪೂರ್ಣ ಪ್ರೇಮಕ್ಕೆ ಪಾತ್ರರಾಗಿದ್ದರು. ಜಗದೀಶ್ವರನು ಇವರ ಪತ್ನೀಪುತ್ರರ ದುಃಖವನ್ನು ಶಮನಮಾಡಲೆಂದೂ, ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದೂ, ಕೋರುತ್ತೇವೆ.

ಸತ್ಯಾಗ್ರಹಸಮರವಾರ್ತೆ.

ಜುಲೈ 29 ನೇ ತಾರೀಖಿನ ದಿವಸ ಮದ್ರಾಸ್ ಹೈಕೋರ್ಟಿನಲ್ಲಿ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದಾಗ ಇಬ್ಬರು ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಅಹಮದಾಬಾದಿನ ಪೋಲೀಸ್ ಇನ್‌ಸ್ಪೆಕ್ಟರಾದ ಖಾನ್‌ಸಾಹೇಬ್ ಕೈಕೋಬಾದ್‌ರವರು ಬರೋಡಾದಲ್ಲಿ ಸ್ಥಳೀಯ ಪೋಲೀಸರ ಸಹಾಯದಿಂದ ಒಂದು ಮನೆಯನ್ನು ಶೋಧಮಾಡಿ ಅಲ್ಲಿ ಸಿಕ್ಕಿದ ಒಂದು ಸೈಕ್ಲೋಸ್ಟೈಲ್ ಯಂತ್ರವನ್ನೂ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನೂ ಲೆಖ್ಖದ ಪುಸ್ತಕಗಳನ್ನೂ ಜಪ್ತುಮಾಡಿಕೊಂಡು ಹೋದರು.

ಜುಲೈ 31 ನೇ ತಾರೀಖಿನ ದಿವಸ ಮುಂಬಯಿಯ ಕಾಲ್ಬಾದೇವಿ ರಸ್ತೆಯಲ್ಲಿ ರಾಷ್ಟ್ರೀಯ ಧ್ವಜವನ್ನು ವಂದಿಸುವ ಪ್ರಯತ್ನ ಮಾಡಿದ 36 ಜನ ಸ್ವಯಂಸೇವಕರನ್ನೂ ಇಬ್ಬರು ಸ್ತ್ರೀಯರನ್ನೂ ಪೋಲೀಸರು ದಸ್ತಗಿರಿ ಮಾಡಿದರು.

ಜುಲೈ 30 ನೇ ತಾರೀಖಿನ ದಿವಸ ಅಹಮದಾಬಾದಿ ರಾಷ್ಟ್ರೀಯ ಧ್ವಜವಂದನೆಯನ್ನು ಮಾಡಲು ಪ್ರ ಸಿದ ಇಬ್ಬರು ಸ್ವಯಂಸೇವಕರನ್ನು ಪೋಲೀಸರು ಗಿರಿ ಮಾಡಿದರು. ಅದೇ ದಿವಸ ಕಾಂಗ್ರೆಸ್ ಭವ ನ್ನು ಆಕ್ರಮಿಸಲು ಪ್ರಯತ್ನಿಸಿದ 50 ಜನ ಸ್ವಯಂ ಕರನ್ನೂ ಪೋಲೀಸರು ದಸ್ತಗಿರಿ ಮಾಡಿದರು.

ಜುಲೈ 31 ನೇ ತಾರೀಖಿನ ದಿವಸ ಮಧ್ಯಾಹ್ನ ಹಾಬಾದಿನ ಪೋಲೀಸರು ಅನೇಕ ಕಾಂಗ್ರೆಸ್ ಆಶ್ರ ಳನ್ನು ಜಪ್ತುಮಾಡಿ ಸುಮಾರು 45 ಜನ ಸ್ವಯಂ ರಕರನ್ನು ದಸ್ತಗಿರಿ ಮಾಡಿದರು. ಇವರಲ್ಲಿ ಅನೇ ಸ್ವರಾಜ್ಯಭವನವನ್ನು ಮುತ್ತಬೇಕೆಂಬ ಉದ್ದೇಶ ದ ಫರೂಕಾಬಾದ್, ಮಥುರಾ, ಬೆನಾರಸ್ ಮೊದ ದ ಸ್ಥಳಗಳಿಂದ ಬಂದಿದ್ದರು.

ಆಗಸ್ಟ್ 1 ನೇ ತಾರೀಖಿನ ದಿವಸ ನಾಗಪುರದ ಂಗ್ರೆಸ್ ಜನರು ಜಂಗಲ್ ಸತ್ಯಾಗ್ರಹವನ್ನು ಆಚರಿ ೇಕೆಂದು ಪ್ರಯತ್ನಿಸಿದರು. ಪೋಲೀಸರು ಜಂಗ ಹೋಗುವ ಮಾರ್ಗದಲ್ಲಿ ನಿಂತು ಜನರನ್ನು ತಡೆ . ಆ ದಿವಸ ಒಟ್ಟು 38 ಜನರು ದಸ್ತಗಿರಿ ಮಾಡ ಟ್ಟರು.

ಆಗಸ್ಟ್ 1 ನೇ ತಾರೀಖಿನ ದಿವಸ ಹೈದರಾಬಾದಿ ಂಧ್) ನ ಸೆಂಟ್ರಲ್ ಜೈಲಿನಿಂದ 15 ಜನ ಸ್ವಯಂ ವಕರೂ, ಇಬ್ಬರು ಸ್ತ್ರೀಯರೂ ಬಿಡುಗಡೆಹೊಂದಿ ರು.

ಆಗಸ್ಟ್ 1 ನೇ ತಾರೀಖಿನ ದಿವಸ ಮುಂಬಯಿ ಲ್ಲಿ ತಿಲಕ ದಿನಾಚರಣೆಗಾಗಿ ಬಹಿರಂಗಮೆರವಣಿಗೆ ಯನ್ನು ಹೊರಡಿಸಿದ ಇಬ್ಬರು ಸ್ವಯಂಸೇವಕರನ್ನು ೋಲೀಸರು ದಸ್ತಗಿರಿಮಾಡಿದರು.

ಮುಂಬಯಿಯ ಸುಪ್ರಸಿದ್ಧ ಜವಾಹಿರಿವ್ಯಾಪಾರಿಗ ದ ಮಿ|| ಜವ್ಹೇರಿಯವರ ಪುತ್ರನಾದ ಶ್ರೀ|| ವಿ. ಜವ್ಹೇರಿಯವರು ಮತ್ತು ಅವರ ಮಿತ್ರರಿಬ್ಬರು ಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದರೆಂಬ ಾರಣದಮೇಲೆ ದಸ್ತಗಿರಿಮಾಡಲ್ಪಟ್ಟರು. ಪೋಲೀ ರು ಅವರು ಕುಳಿತುಹೋಗುತ್ತಿದ್ದ ಮೋಟಾರನ್ನು ೋಧಿಸಿದಾಗ 3000 ಕಾಂಗ್ರೆಸ್ ಹಸ್ತಪತ್ರಿಕೆಗಳು ೊರೆತವು. ಶ್ರೀ|| ಜವ್ಹೇರಿಯವರು ತಮ್ಮ ಕಾರ್ಯ ್ರಮವನ್ನು ಪೋಲೀಸರಿಗೆ ಮುಂಚಿತವಾಗಿಯೇ ಳುಹಿಸಿದ್ದರಂತೆ!

ಮುಂಬಯಿ ಕಾಂಗ್ರೆಸ್ ಆಸ್ಪತ್ರೆಯ ಮುಖ್ಯಾಧಿ ರಿಗಳೂ ಮತ್ತು ವಿ. ಜೆ. ಪಟೇಲರ ಖಾಸಗಿ ಡಾ ರೂ ಆದ ಡಾಕ್ಟರ್ ಭಾಸ್ಕರ ಪಟೇಲರ ಪತ್ನಿ, ಶ್ರೀ ತಿ ಶಾಂತಿಬೆನ್ ಪಟೇಲರು ಆಗಸ್ಟ್ 1 ನೇ ತಾರೀ ನ ದಿವಸ ಸ್ಪೆಷಲ್ ಪವರ್ಸ್ ಆರ್ಡಿನೆನ್ಸಿನ ಪ್ರಕಾರ ಸ್ತಗಿರಿಮಾಡಲ್ಪಟ್ಟರು.

ಮಹಾತ್ಮ ಗಾಂಧಿಯವರ ಪುತ್ರರಾದ ಶ್ರೀ|| ೇವದಾಸ್‌ಗಾಂಧಿಯವರು ಆಗಸ್ಟ್ 1 ನೇ ತಾರೀ ನ ದಿವಸ ಗೋರಖಪುರದ ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರು. ಅವರ ಶಿಕ್ಷೆಯ ಅವಧಿಯು ಇನ್ನೂ ಂದು ತಿಂಗಳವರೆಗಿದ್ದರೂ, ದೇಹಾರೋಗ್ಯದ ನಿಮಿ ್ತವಾಗಿ ಮುಂಚಿತವಾಗಿಯೇ ಬಿಡಲ್ಪಟ್ಟಿರುವರೆಂದು ಳಿದುಬರುತ್ತದೆ. ಅದೇ ದಿವಸ ಅವರು ಕಾಶಿಗೆ ಪ್ರಯಾ ಬೆಳೆಯಿಸಿದರು. ಅಲ್ಲಿ ಶ್ರೀ|| ಬಾಬು ಶಿವಪ್ರಸಾದ ುಪ್ತರೊಡನೆ ಕೆಲವುಕಾಲ ಇರುವರು.

ಆಗಸ್ಟ್ 2 ನೇ ತಾರೀಖಿನ ದಿವಸ ಅಲಹಾಬಾದಿ ಲ್ಲಿ ಸ್ವರಾಜ್ಯಭವನವನ್ನು ಆಕ್ರಮಿಸಲು ಪ್ರಯತ್ನಿ ದ 8 ಜನ ಸ್ವಯಂಸೇವಕರನ್ನೂ, ತಹಶೀಲಿ ಎಂಬ ಳದಲ್ಲಿ ರಾಷ್ಟ್ರೀಯ ಧ್ವಜಗಳನ್ನು ಹಿಡಿದು ಬಹಿ ಂಗ ಮೆರವಣಿಗೆಯನ್ನು ಮಾಡಿಕೊಂಡು ಹೋಗು ದ್ದ 3 ಜನ ಸ್ವಯಂಸೇವಕರನ್ನೂ ಪೋಲೀಸರು ದಸ್ತಗಿರಿಮಾಡಿದರು.

ಆಗಸ್ಟ್ 1 ನೇ ತಾರೀಖಿನ ದಿವಸ ಅಹಮದಾಬಾದಿ ನಲ್ಲಿ ಬಹಿರಂಗ ಮೆರವಣಿಗೆಯನ್ನು ಹೊರಡಿಸಿದ 7 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಆಗಸ್ಟ್ 1 ನೇ ತಾರೀಖಿನ ದಿವಸ ಪಾಟ್ನಾದಲ್ಲಿರುವ ಬೀಹಾರ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು 'ಸದಾ ಕತ ಆಶ್ರಮ'ವನ್ನು ಆಕ್ರಮಿಸುವ ಉದ್ದೇಶದಿಂದ ಸ್ವಯಂಸೇವಕರು ತಂಡತಂಡವಾಗಿ ಬಂದು ಆಶ್ರಮವನ್ನು ಮುತ್ತಿದರು. ಪೋಲೀಸರು ಈ ಸಂಬಂಧವಾಗಿ ಒಟ್ಟು 177 ಜನರನ್ನು ದಸ್ತಗಿರಿ ಮಾಡಿದರು. ಕಳೆದ 15 ದಿವಸಗಳಿಂದ ಈ ಸಂಬಂಧವಾಗಿ ಒಟ್ಟು 600 ಜನರು ದಸ್ತಗಿರಿ ಮಾಡಲ್ಪಟ್ಟಿರುವರು.

ಆಗಸ್ಟ್ 2 ನೆಯ ತಾರೀಖಿನ ದಿವಸ ಕಲ್ಕತ್ತೆಯ ಉತ್ತರ ಭಾಗದಲ್ಲಿರುವ ಕಾಂಗ್ರೆಸ್ ಸ್ವಯಂಸೇವಕರ ಶಿಬಿರವನ್ನು ಆಕ್ರಮಿಸಬೇಕೆಂದು ಪ್ರಯತ್ನಿಸಿದ 8 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಮುಂಬಯಿ 'ಫ್ರೀ ಪ್ರೆಸ್ ಪತ್ರಿಕೆ'ಯ ಸಂಪಾದಕರಾದ ಮಿ|| ಎಸ್. ಸದಾನಂದರವರು ದಸ್ತಗಿರಿ ಮಾಡಲ್ಪಟ್ಟಿದ್ದಾಗ ಸದರಿ ಪತ್ರಿಕೆಯ ಸಂಪಾದಕರಾಗಿದ್ದ ಮಿ|| ಕೆ. ಶ್ರೀನಿವಾಸನ್‌ರವರು ಜೂನ್ ತಿಂಗಳ ಪ್ರಾರಂಭದಲ್ಲಿ ಎಮರ್ಜನ್ಸಿ ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟಿದ್ದರು. ಅಧಿಕಾರಿಗಳು ಅವರನ್ನು ಇದೇ ಆಗಸ್ಟ್ 3ನೇ ತಾರೀಖಿನ ದಿವಸ ಬಿಡುಗಡೆಮಾಡಿ ಕೂಡಲೇ ಪೋಲೀಸರಲ್ಲಿ ಹೋಗಿ ಹಾಜರಾತಿಯನ್ನು ಕೊಡಬೇಕೆಂದು ಅಪ್ಪಣೆಮಾಡಿದರು. ಆದರೆ ಮಿ|| ಶ್ರೀನಿವಾಸನ್‌ರವರು ಆರೀತಿಮಾಡಲಿಲ್ಲವಾಗಿ ಪೋಲೀಸರು ಅವರನ್ನು ಪುನಃ ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ಅವರಿಗೆ 1 ವರ್ಷ ಕಠಿಣ ಸಜೆಯನ್ನು ವಿಧಿಸಿದರು. ಇದೇ ದಿವಸ ಈಸ್ಟ್‌ಇಂಡಿಯಾ ಹತ್ತಿಯ ಸಂಘದ ಸದಸ್ಯರೊಬ್ಬರು ಸ್ಪೆಷಲ್‌ಪವರ್ಸ್ ಆರ್ಡಿನೆನ್ಸ್ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟರು. ಹಾಗೂ ಬುಲಿಯನ್‌ಮಾರ್ಕೆಟ್ಟಿನ ಬಳಿ ಓಡಾಡುತ್ತಿದ್ದ 5 ಜನ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು.

ಕಲ್ಕತ್ತಾ ಪೌರಸಭೆಯ ಇಬ್ಬರು ಉಪಾಧ್ಯಾಯರು ಬಂಗಾಳಾ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನ ಪ್ರಕಾರ ದಸ್ತಗಿರಿ ಮಾಡಲ್ಪಟ್ಟರು.

ಬೆನಾರಸ್ಸಿನ ಪ್ರಮುಖಕಾಂಗ್ರೆಸ್ ಮುಖಂಡರಾದ ಸ್ವಾಮಿಪೂರ್ಣಾನಂದರವರು ಆಗಸ್ಟ್ 1 ನೇ ತಾರೀಖಿನ ದಿವಸ ರಾಯಬರೇಲಿ ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರು. ಕಾನೂನು ಭಂಗದ ಚಳವಳಿಯ ಸಂಬಂಧವಾಗಿ ಬನಾರಸ್ಸಿನಲ್ಲಿ ದಸ್ತಗಿರಿ ಮಾಡಲ್ಪಟ್ಟವರ ಪೈಕಿ ಇವರೇ ಮೊದಲನೆಯವರು.

ಅಲಹಾಬಾದಿನಲ್ಲಿ ಸ್ವರಾಜ್ಯಭವನವನ್ನು ಆಕ್ರಮಿಸಲು ಪ್ರಯತ್ನಿಸಿದ ಮತ್ತು ಬಹಿರಂಗ ಮೆರವಣಿಗೆಯನ್ನು ಹೊರಡಿಸಿದ ಬೇರೆಬೇರೆ ಗುಂಪಿನವರಿಗೆ ಆರಾರು ತಿಂಗಳ ಕಠಿಣ ಸಜೆಯೂ 10 ರುಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಇದೇ ಆಗಸ್ಟ್ 3ನೇ ತಾರೀಖಿನ ದಿವಸ ಮಧುರಾ ಡಿ|| ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಅಲ್ಲಾಡಿಸಿದ ಇಬ್ಬರು ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು. ಅದೇ ದಿವಸ ಕಲೆಕ್ಟರವರ ಕೋರ್ಟಿನ ಮೇಲೆ ರಾಷ್ಟ್ರೀಯ ಧ್ವಜವನ್ನು ಏರಿಸಲು ಪ್ರಯತ್ನಿಸಿದ ಇಬ್ಬರು ಸ್ವಯಂಸೇವಕರೂ, ಪೋಲೀಸರ ವಶದಲ್ಲಿದ್ದ ಕಾಂಗ್ರೆಸ್ ಕಚೇರಿಗೆ ಹಾಕಿದ್ದ ಮೊಹರನ್ನು ಕಿತ್ತು ಸದರಿ ಕಚೇರಿಯ ಮೇಲೆ ಪುನಃ ರಾಷ್ಟ್ರೀಯ ಧ್ವಜವನ್ನು ಏರಿಸಿದ ಇಬ್ಬರು ಸ್ವಯಂಸೇವಕರೂ ದಸ್ತಗಿರಿ ಮಾಡಲ್ಪಟ್ಟರು.

ವರ್ತಮಾನಸಂಗ್ರಹ

ಡಾ|| ಅನ್ಸಾರಿಯವರಿಗೆ ಎರವಾಡಾ ಜೈಲಿನಲ್ಲಿ ಮಹಾತ್ಮರನ್ನು ಸಂದರ್ಶಿಸುವುದಕ್ಕೆ ಸರಕಾರದವರು ಅನುಮತಿಯನ್ನು ಕೊಟ್ಟಿರುತ್ತಾರೆ.

ಪಂಡಿತ ಮದನ ಮೋಹನ ಮಾಳವೀಯವರು ಕರಾಚಿಯಲ್ಲಿ ಸೇರಲಿರುವ "ಜೈ ಇಂಡಿಯನ್" ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಲು ಒಪ್ಪಿಕೊಂಡಿರುತ್ತಾರೆ.

ದೆಹಲಿ ನ್ಯಾಯವಿಧಾಯಕ ಸಭೆಯು ಸೆಪ್ಟೆಂಬರ್ 5 ನೇ ತಾರೀಖಿನ ದಿವಸ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಸಭೆಯು ಸೆಪ್ಟೆಂಬರ್ 20 ನೇ ತಾರೀಖಿನ ದಿವಸ ಪ್ರಾರಂಭವಾಗುವದು.

ಇದೇ ಆಗಸ್ಟ್ 3 ನೇ ತಾರೀಖಿನ ದಿವಸ ಬಂಗಳಾ ನ್ಯಾಯವಿಧಾಯಕ ಸಭೆಯಲ್ಲಿ ಸಂಯುಕ್ತ ಚುನಾವಣೆಯೇ ಭರತಖಂಡದ ಅಭಿವೃದ್ಧಿಗೆ ಸರ್ವೋತ್ತಮವಾದ ಮಾರ್ಗವೆಂಬ ಠರಾವು ಬಹುಮತದಿಂದ ಅಂಗೀಕರಿಸಲ್ಪಟ್ಟಿತು.

ಇದೇ ಆಗಸ್ಟ್ 5 ನೇ ತಾರೀಖಿನ ದಿವಸ ಕಲ್ಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕರಾದ ಸರ್ ವಾಟ್ಸನ್ನರ ಮೇಲೆ ಯಾರೋ ಕ್ರಾಂತಿಕಾರರು ಗುಂಡುಹಾರಿಸಿದರು. ಆದರೆ ಅವರಿಗೆ ಯಾವ ಅಪಾಯವೂ ಸಂಭವಿಸಲಿಲ್ಲ.

ಅಬ್ದುಲ್ ಸತ್ತಾರ್ ಅನ್ಸಾರಿ ಎಂಬೊಬ್ಬ ತರುಣ ಮುಸಲ್ಮಾನನು ತಾನು ಡಾಕ್ಟರ್ ಅನ್ಸಾರಿಯವರ ಪುತ್ರನೆಂದು ಹೇಳಿಕೊಳ್ಳುತ್ತ ಅನೇಕಜನರನ್ನು ಮೋಸಪಡಿಸಿದನೆಂಬ ಕಾರಣದಮೇಲೆ ಮುಂಬಯಿ ಪೋಲೀಸರು ಅವನನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಕರಾಚಿಯ ಎರಡನೆಯ ರಾಜದ್ರೋಹದ ಮೊಕದ್ದಮೆಯಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದು, ಪರಾರಿಯಾಗಿದ್ದ ದಿವಾನ್‌ಚಂದನು ಕಸ್ಟಂಸ್ ಕ್ಯಾಷಿಯರ ಹತ್ತಿರ ದರೋಡೆ ಮಾಡಿದನೆಂಬ ಆಪಾದನೆಯಮೇಲೆ ಪುನಃ ದಸ್ತಗಿರಿಮಾಡಲ್ಪಟ್ಟು ಒಂದುವರ್ಷ ಕಠಿಣ ಸಜೆಗೆ ಗುರಿಯಾದನು.

ಕಳೆದ ಜೂನ್ ತಿಂಗಳಲ್ಲಿ ಪರದೇಶಗಳಿಂದ ಭರತಖಂಡಕ್ಕೆ ಸುಮಾರು 1 ಕೋಟಿ ಗಜ ಕೃತಕರೇಷ್ಮೆಯ ಬಟ್ಟೆಗಳು ಬಂದಿರುವವೆಂದು ಮುಂಬಯಿಯ ಮಿಲ್ ಮಾಲೀಕರು ಪ್ರಕಟಿಸಿರುತ್ತಾರೆ. ಈ ಸಂಖ್ಯೆಯು ಕಳೆದ ಎರಡು ವರ್ಷಗಳ ಜೂನ್ ತಿಂಗಳುಗಳಲ್ಲಿ ಬಂದದ್ದಕ್ಕಿಂತಲೂ ಹೆಚ್ಚಾಗಿರುತ್ತದೆ.

ಕಳೆದ ಜುಲೈ 29 ನೇ ತಾರೀಖಿನ ದಿವಸ ಕ್ರಾಂತಿಕಾರರ ಗುಂಡಿನೇಟಿಗೆ ಗುರಿಯಾಗಿ ಈಚೆಗೆ ಢಕ್ಕಾದಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ ಕೊಮಿಲ್ಲಾ ಅಡಿಷನಲ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಲ್ಲಿಸನ್‌ರವರು ಇದೇ ಆಗಸ್ಟ್ 5 ನೇ ತಾರೀಖು ಸಾಯಂಕಾಲ ಮೃತಪಟ್ಟರು.

ಮುನಷೀಗಂಜಿನ ಮ್ಯಾಜಿಸ್ಟ್ರೇಟರಾದ ಮಿ|| ಸೇನರವರನ್ನು ಕೊಲೆಮಾಡಿದನೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ ಇಂದುಭೂಷಣಗುಪ್ತನು ನಿರಪರಾಧಿಯೆಂದು ಬಿಡುಗಡೆಮಾಡಲ್ಪಟ್ಟನು. ಆದರೆ ಪೋಲೀಸರು ಆತನನ್ನು ಬಂಗಾಳಾ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನ ಪ್ರಕಾರ ಪುನಃ ದಸ್ತಗಿರಿ ಮಾಡಿರುತ್ತಾರೆ.

ಸದ್ಯಃ ಲಂಡನ್ನಿನಲ್ಲಿರುವ ಶ್ರೀ|| ವಿಟ್ಠಲಭಾಯಿ ಪಟೇಲರವರು ಇಷ್ಟರಲ್ಲಿಯೇ ಅಮೇರಿಕಾಕ್ಕೆ ಪ್ರಯಾಣಬೆಳೆಯಿಸಿ ಅಲ್ಲಿ 3 ತಿಂಗಳುಗಳವರೆಗೆ ಭರತಖಂಡದ ನಿಜವಾದ ಸ್ಥಿತಿಗಳನ್ನು ಉಪನ್ಯಾಸಗಳ ಮೂಲಕ ಅಲ್ಲಿಯ ಜನರಿಗೆ ತಿಳಿಯಪಡಿಸುವರೆಂದೂ, 1933 ನೇ ವರ್ಷದ ಆದಿಭಾಗದಲ್ಲಿ ಜಪಾನಿನ ಮುಖಾಂತರ ಭರತಖಂಡಕ್ಕೆ ಹಿಂತಿರುಗುವರೆಂದೂ ತಿಳಿದುಬಂದಿದೆ.

ಲಂಡನ್ನಿನ ಇಂಡಿಯಾ ಲೀಗಿನವರು ಭರತಖಂಡದ ಸದ್ಯಃಸ್ಥಿತಿಯನ್ನು ಪರಿಶೀಲಿಸುವದಕ್ಕಾಗಿ ಮಿಸ್ ವಿಲ್ಕಿನ್ಸನ್, ಮಿಸ್ ಮಾಣಿಕಾ ವ್ಹಿಟ್ಲಿ, ಮಿ|| ಲಿನಾರ್ಡ್ ಮ್ಯಾಟರ್ಸ್ ಮತ್ತು ಮಿ|| ಕೃಷ್ಣ ಮೆನನ್ ಈ ನಾಲ್ಕು ಜನರನ್ನು ಕಳುಹಿಸುವರು. ಇವರೆಲ್ಲರೂ ವೆನಿಸ್ ಪಟ್ಟಣದ ಮುಖಾಂತರವಾಗಿ ಪ್ರಯಾಣಮಾಡಿ ಇದೇ ಆಗಸ್ಟ್ 17 ನೆಯ ತಾರೀಖಿನ ದಿವಸ ಮುಂಬಯಿಯನ್ನು ತಲಪುವರು.

ಚಿತಗಾಂಗಿನ ಪ್ಲೀಡರ್ ಮಿ|| ನಂದಲಾಲಗುಹರವರ ಮಗನಾದ ಮತ್ತು ಆಯುಧಶಾಲೆಯ ದರೋಡೆಯ ಮೊಕದ್ದಮೆಯಲ್ಲಿ ಅಪಾದಿತನಾಗಿ ತಪ್ಪಿಸಿಕೊಂಡು ಹೋಗಿದ್ದ ಸರೋಜಕಾಂತಗುಹನು ಇದೇ ಆಗಸ್ಟ್ 3 ನೆಯ ತಾರೀಖಿನ ದಿವಸ ಧರ್ಮಪುರದಲ್ಲಿ ಬಹಿರಿಯಾಬ್‌ಘೋಷರವರ ಮನೆಯಲ್ಲಿ ದಸ್ತಗಿರಿಮಾಡಲ್ಪಟ್ಟನು. ಆತನ ಜೊತೆಯಲ್ಲಿ ನಿದ್ರಿಸುತ್ತಿದ್ದ ಬಹಿರಿಯಾಬ್ ಘೋಷ್ ಮೊದಲಾದ 3 ಜನರೂ ದಸ್ತಗಿರಿಮಾಡಲ್ಪಟ್ಟರು. ಸರೋಜಕಾಂತಗುಹನು ಎರಡು ತಿಂಗಳುಗಳಿಂದಲೂ ಆ ಗ್ರಾಮದಲ್ಲಿ ಉಪಾಧ್ಯಾಯನಾಗಿದ್ದನಂತೆ! ಸರಕಾರದವರು ಅವನ ದಸ್ತಗಿರಿಗಾಗಿ 5000 ರೂ. ಗಳ ಬಹುಮಾನವನ್ನು ಕೊಡುವುದಾಗಿ ಪ್ರಕಟಿಸಿದ್ದರು.

[3ನೆಯ ಪುಟದಿಂದ ಮುಂದುವರಿದುದು.]

ಬೇಡಿಕೊಳ್ಳುತ್ತಿರುವವರು ನಿನ್ನ ಸನಿಹಕ್ಕೆ ಬಂದಾಗ್ಗೆ, ಅವರ ದೀನಸ್ವರಕ್ಕೆ ನಿನ್ನ ಕರ್ಣಗಳನ್ನು ಮುಚ್ಚಿಕೊಳ್ಳದೆ, ನಿರ್ದೋಷಿಗಳಾಗಿರುವವನ ವಿಷಯದಲ್ಲಿ ಹೃದಯವನ್ನು ಕಠಿಣವಾಗಿ ಮಾಡಿಕೊಳ್ಳದಂತೆ ಅವರಿಗೆ ಸೌಖ್ಯವನ್ನುಂಟುಮಾಡು. ತಂದೆ ತಾಯಿಗಳಿಲ್ಲದೆ ಅನಾಥರಾದ ಮಕ್ಕಳು ಬಂದು ಸಹಾಯಕ್ಕಾಗಿ, ನಿನ್ನ ಪಾದಗಳ ಮೇಲೆ ಬಿದ್ದಾಗ್ಗೆ, ನಾನಾವಿಧವಾದ ಕುಂದುಕೊರತೆಗಳಿಂದ ವಿಶೇಷವಾಗಿ, ಮನವು ನೊಂದಿರುವ ಪತಿವಿಹೀನೆಯರು, ಬಂದು ತಮಗೆ ಪಾಲಕರಿಲ್ಲವೆಂದು ಕೊರಗುತ್ತಿರುವ ಸಮಯದಲ್ಲಿ ಅಂಥವರ ವಿಷಯದಲ್ಲಿಯೇ ನಿನ್ನ ಹೃದಯವನ್ನು ಕಠಿಣವಾಗಿರುವಂತೆ ಮಾಡಿಕೊಳ್ಳದೆ ಸೌಖ್ಯವನ್ನುಂಟುಮಾಡು. ತಂದೆತಾಯಿಗಳಿಲ್ಲದೆ ಅನಾಥರಾದ ಮಕ್ಕಳು ಬಂದು ಸಹಾಯಮಾಡೆಂದು ನಿನ್ನ ಪಾದಗಳ ಮೇಲೆ ಬಿದ್ದಾಗ್ಗೆ, ನಾನಾವಿಧವಾದ ತೊಂದರೆಗಳಿಂದಲೂ ಕುಂದುಕೊರತೆಗಳಿಂದಲೂ ವಿಶೇಷವಾಗಿ ಮನವು ನೊಂದು ಕೊರಗುತ್ತಿರುವ ಸಮಯದಲ್ಲಿಯೂ, ಅಂಥವರ ವಿಷಯದಲ್ಲಿಯೂ ನಿನ್ನ ಕೊಡುಗೈಯ್ಯ ಮಹಿಮೆಯನ್ನು ತೋರಿಸಿ, ಅವರನ್ನು ಪರಿಪಾಲಿಸುವುದೇ ನಿನ್ನ ಕರ್ತವ್ಯವಾಗಿರುವುದು.

ಹೊದೆಯಲು ಬಟ್ಟೆಯಿಲ್ಲದೆ ನಿರ್ವಾಣದಿಂದ ಬೀದಿಬೀದಿಗಳಲ್ಲಿ ತಿರುಪೆಗಾಗಿ ತಿರುಗುತ್ತಿರುತ್ತಾ, ಚಳಿಗಾಳಿಗೆ ಶರೀರವನೊಡ್ಡಿ, ಮಳೆಯಿಂದ ನೆನೆಯುತ್ತಾ, ಮನೆಮಠಗಳಿಲ್ಲದೆ ಇರುವವರಿಗೆ ಮಾನವನು ಆಶ್ರಯವನ್ನು ಮೋದದಿಂದ ಕೊಡುತ್ತಾ ಇರುವುದು ಅವನ ಹೃದಯದಲ್ಲಿರುವ ಅನುಕಂಪೆಗೆ ಸಾಕ್ಷಿಭೂತವಾಗಿ ನಡೆಯುತ್ತಿತ್ತು. ಮತ್ತು ವೃದ್ಧಾಪ್ಯದ ದೆಸೆಯಿಂದ ನಾನಾ ಕಷ್ಟಗಳಿಂದ ಕೂಡಿ ರೋಗದಿಂದ ನರಳುತ್ತಾ, ಕೃಶಾಂಗರಾಗಿ ಅದೃಷ್ಟಹೀನತೆಯಿಂದ ವ್ಯಸನಕ್ಕೆ ಗುರಿಯಾಗಿರುವ ಮಾನವರನ್ನು ನೋಡಿದಾಗ್ಗೆ ಅಂಥವರನ್ನು ನಿರಾಕರಿಸಿ, ತಾನುಮಾತ್ರ ಸೌಖ್ಯಸಾಗರದಲ್ಲಿ ಮುಳುಗಿರುವವನೇ ಮಾನವರಲ್ಲಿ ಅಧಮಾಧಮನೆಂದು ತಿಳಿಯಬೇಕು. ಮಾನವನು ತಾನು ಜನಿಸಿರುವಾಗ ಶಕ್ತ್ಯಂದಾಗಬಹುದಾದ ಸತ್ಕಾರ್ಯಗಳನ್ನು ಮಾಡುತ್ತಾ, ಅದೃಷ್ಟಹೀನರಿಗೆ ಸುಖವನ್ನು ತೋರಿಸುವ ಕನಿಕರವುಳ್ಳ ಮಾನವನೇ, ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಸದ್ಗತಿಯನ್ನೂ ಹೊಂದುವುದರಲ್ಲಿ ಸಂಶಯವಿಲ್ಲವೆಂದು ಶಾಸ್ತ್ರವು ನಿರೂಪಿಸುವುದು

ಶಾರದಾ ಸ್ತ್ರೀ ಸಮಾಜದವರು ಒಪ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ದಿವಾನರವರು ಅಪ್ಪಣೆ ಕೊಡಿಸಿದ ಭಾಷಣ.

(೧೯೩೨ ನೆಯ ಇಸವಿ ಆಗಸ್ಟು ೪ ನೆಯ ತಾರೀಖು.)

ಲೇಡಿ ಪುಟ್ಟಣ್ಣಶೆಟ್ಟರವರೇ, ಮಹಾಶಯರೇ ಮತ್ತು ಮಹಿಳೆಯರೇ—

ನಿಮ್ಮ ಸಮಾಜವನ್ನು ನೋಡುವುದಕ್ಕಾಗಿ ನಾನು ಬಹಳ ಸಂತೋಷದಿಂದ ಬಂದೆನು. ಇಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿ ನನ್ನ ಮನಸ್ಸಿಗೆ ವಿಶೇಷ ಆನಂದವುಂಟಾಗಿದೆ. ನಿಮ್ಮ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಸೂಚಿಸಿರುವ ಸ್ತುತಿಗಳಿಗಾಗಿ ನಾನು ಬಹಳ ಕೃತಜ್ಞನಾಗಿದ್ದೇನೆ.

ನಮ್ಮ ದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸವೇನೋ ತಕ್ಕಮಟ್ಟಿಗೆ ಮುಂದುವರಿದಿದೆ. ಆದರೂ, ಸ್ತ್ರೀಯರ ಮೇಲ್ಮೆಗಾಗಿ ನಡೆಯುತ್ತಿರುವ ಪ್ರಯತ್ನಗಳಿಗೆ ಎಷ್ಟುಮಟ್ಟಿನ ಪ್ರೋತ್ಸಾಹವು ಮಹಾಜನರಿಂದ ದೊರೆಯಬೇಕೋ ಅಷ್ಟುಮಟ್ಟಿನ ಪ್ರೋತ್ಸಾಹವು ಇನ್ನೂ ದೊರೆಯುತ್ತಾ ಇಲ್ಲ. ಸ್ತ್ರೀಯರ ಏಳಿಗೆಗಾಗಿ ಶ್ರದ್ಧೆಯಿಂದ ಕೆಲಸಮಾಡುವವರ ಸಂಖ್ಯೆಯೂ ಬಹಳ ಹೆಚ್ಚಾಗಿಲ್ಲ. ಈ ಬಗೆಯ ಸ್ಥಿತಿಯಲ್ಲಿಯೂ, ಈ ಸಮಾಜವನ್ನು ಕಳೆದ ಹತ್ತೊಂಬತ್ತು ವರುಷಗಳಿಂದಲೂ ನಡೆಯಿಸಿಕೊಂಡು ಬಂದು ಅದನ್ನು ಅಭಿವೃದ್ಧಿಸ್ಥಿತಿಗೆ ತಂದಿರುವುದು ಅಭಿನಂದನಕ್ಕೆ ಯೋಗ್ಯವಾದ ಅಂಶವೇ ಸರಿ. ಇದರಿಂದ ನಮ್ಮ ದೇಶದ ಮಹಿಳೆಯರ ಪುರೋಭಿವೃದ್ಧಿಗೆ ದೊಡ್ಡ ಸಹಾಯವೆನ್ನಲು ಅಡ್ಡಿಯಿಲ್ಲ. ಲೇಡಿ ಪುಟ್ಟಣ್ಣಶೆಟ್ಟರವರ ಉತ್ಸಾಹವೂ ಸಾಮರ್ಥ್ಯವೂ, ಇದಕ್ಕೆ ಬಹುಮಟ್ಟಿಗೆ ಕಾರಣವೆನ್ನಬಹುದಾಗಿದೆ.

ಈ ಸಮಾಜದಲ್ಲಿ ಕೈಗಾರಿಕೆಯ ಕೆಲಸಗಳೂ, ಸೂಜಿಗೆ ಕೆಲಸಗಳೂ, ಚಿತ್ರದ ಕೆಲಸಗಳೂ, ಹೊಲಿಗೆ ಕೆಲಸಗಳೂ, ಕಸೂತಿ ಕೆಲಸಗಳೂ, ನಡೆಯುತ್ತಿರುವುದು ನನಗೆ ಬಹಳ ಸಂತೋಷಕರವಾಗಿದೆ. ಬಡವರಾದವರು ಹಣವನ್ನು ಸಂಪಾದಿಸುವುದಕ್ಕಾಗಿ ಇವುಗಳನ್ನು ಕಲಿತರೆ, ಹಣಗಾರರಾದವರು ಜೀವನದ ಸೊಗಸಿಗಾಗಿ ಇವುಗನ್ನು ಕಲಿಯಬಹುದಾಗಿದೆ. ಮನೆಯ ಒಡತಿಯೇ ತನ್ನ ಕೌಶಲದಿಂದ ಮನಸ್ಸಿಟ್ಟು ಅಂದವಾದ ನಾನಾಸಾಮಾನುಗಳನ್ನು ರಚಿಸಿ ಮನೆಯನ್ನು ಅಲಂಕರಿಸಿದರೆ, ಅದರಿಂದ ಜೀವನವು ಎಷ್ಟು ರಮಣೀಯವಾಗುವುದು ನೋಡಿ! ಇಂಥ ಸನ್ನಿವೇಶದಲ್ಲಿ ತಮ್ಮ ಹೆಂಗಸರೇ ತಂತಮ್ಮ ಜೀವನದ ಬೆಳಕೆಂದು ಜನಗಳು ಆನಂದಪಡುವರು. ಬಡವರ ಹೆಂಗಸರು ಈ ರೀತಿ ಮಾಡಿದರೆ, ಹಣ ಸಂಪಾದನೆಗೂ ಸಹಾಯವಾಗುವುದು. ಸಂಸಾರವನ್ನು ನಿರ್ವಹಿಸುವುದರಲ್ಲಿ ಹೀಗೆ ತಮಗೆ ನೆರವಾದ ಹೆಂಗಸರ ಸಹಾಯವನ್ನು ಕಂಡು ಯಾವ ಗಂಡಸು ತಾನೆ ಉಲ್ಲಾಸಪಡುವುದಿಲ್ಲ? ಹೆಂಗಸರು ಸಾಮಾನುಗಳನ್ನು ಮಾಡಿ ಮಾರಿ, ಅದರಿಂದ ಹಣವನ್ನು ಗಳಿಸುವುದು ಮಾನಕ್ಕೆ ಕಡಿಮೆಯೆಂದು ಭಾವಿಸುವವರೂ ಕೆಲವರಿರಬಹುದು. ಅಂಥವರು ಬಳಕೆಗೆ ಬೇಕಾದ ಮಕ್ಕಳ ಉಡುಪುಗಳು, ಕಸೂತಿಯ ಚೌಕಗಳು ಸಣ್ಣಪುಟ್ಟ ಮರದಸಾಮಾನುಗಳು ಚಿತ್ರದ ಪಟ್ಟಿ, ಬುಟ್ಟಿ, ಮುಂತಾದುವುಗಳು, ಇವುಗಳನ್ನೆಲ್ಲಾ ತಾವೇ ಒದಗಿಸಿಕೊಳ್ಳಬಹುದು. ಆ ರೀತಿ ಮಾಡಿದರೆ ಮನೆಯಿಂದ ಹೊರಗೆ ಹೊರಟುಹೋಗುತ್ತಿದ್ದ ಹಣವು ಮನೆಗೇ ಉಳಿಯುವುದು. ಅದೂ ಒಂದು ವಿಧದಲ್ಲಿ ಹಣಸಂಪಾದನೆಯೇ ತಾನೆ? ಅಂತೂ, ಯಾವ ದೃಷ್ಟಿಯಿಂದ ಹೇಗೇ ನೋಡಿದರೂ, ನೀವು ಇಲ್ಲಿ ಮಾಡಿರುವ ಏರ್ಪಾಡುಗಳು ಬಹಳ ಪ್ರಯೋಜನಕರವಾಗಿದೆ.

ಇಲ್ಲಿ ವಿದ್ಯಾಭ್ಯಾಸದ ತರಗತಿಗಳೂ, ವಾಚನಾಲಯವೂ, ಪುಸ್ತಕಭಂಡಾರವೂ ಇರುವುದರ ಜೊತೆಗೆ, ಅಂಗಸಾಧನೆಯ ಅನುಕೂಲಗಳೂ ಏರ್ಪಟ್ಟಿರುವುದು ಶ್ಲಾಘ್ಯವಾಗಿದೆ. ಮನಸ್ಸೂ, ದೇಹವೂ, ಎರಡೂ ಬೆಳೆಯಲು ಇದರಿಂದ ಸಹಾಯವಾಗುತ್ತದೆ. ಉಪನ್ಯಾಸಗಳು, ಉತ್ಸವಕೂಟಗಳು, ಮಹಾತ್ಮರ ಜಯಂತಿಗಳು, ಇವುಗಳು ನಡೆಯುವುದೂ ಉತ್ತಮವಾದ ಏರ್ಪಾಡೇ ಸರಿ. ಇವುಗಳೂ, ಸಂತೋಷಕೂಟಗಳೂ, ಎಷ್ಟು ಹೆಚ್ಚಾಗಿ ನಡೆದರೆ ಅಷ್ಟು ಹೆಚ್ಚು ಪ್ರಯೋಜನವುಂಟು. ಆದರೆ, ಅವುಗಳ ಪ್ರಯೋಜನವು ಹೆಚ್ಚು ಹೆಚ್ಚು ಮಂದಿಗಳಿಗೆ ದೊರೆಯಲನುಕೂಲಿಸುವಂತೆ, ಸಾಧ್ಯವಾದಷ್ಟು ಹೆಚ್ಚು ಮಂದಿಗಳನ್ನು ಅವಕ್ಕೆ ಬರಮಾಡಬೇಕು. ಇವುಗಳೆಲ್ಲಾ ಆದಷ್ಟುಮಟ್ಟಿಗೂ ದೇಶಭಾಷೆಯಾದ ಕನ್ನಡಭಾಷೆಯಲ್ಲೇ ನಡೆಯುತ್ತಿವೆಯೆಂದು ನಂಬಿದ್ದೇನೆ. ಜನರು ಕನ್ನಡದ ಪುಸ್ತಕಗಳನ್ನೂ ಕನ್ನಡದ ಪತ್ರಿಕೆಗಳನ್ನೂ ಹೆಚ್ಚು ಹೆಚ್ಚಾಗಿ ಓದುವ ಅಭಿರುಚಿಯನ್ನು ಹುಟ್ಟಿಸಿ, ಕನ್ನಡಭಾಷೆಯನ್ನು ಬಂಗಾಳಿ ಮರಾಠಿ, ತೆಲುಗು, ತಮಿಳು, ಮಲೆಯಾಳಿ ಮುಂತಾದವುಗಳಿರುವ ಮಟ್ಟಕ್ಕೇ ಏರಿಸಿ ಅಭಿವೃದ್ಧಿಸ್ಥಿತಿಗೆ ತರುವ ಕಾರ್ಯವು ಪುರುಷರಿಗಿಂತಲೂ ಹೆಚ್ಚಾಗಿ ಸ್ತ್ರೀಯರಿಂದಲೇ ನಡೆಯುವುದು ಸಾಧ್ಯವಿದೆ. ಕನ್ನಡ ಗ್ರಂಥಗಳು, ಪತ್ರಿಕೆಗಳು, ಮುಂತಾದುವುಗಳಿಗೆ ತಕ್ಕಷ್ಟು ಉತ್ತೇಜನವು ದೊರೆಯದೆ ಇರುವುದಕ್ಕೂ, ದೇಶದಲ್ಲಿ ಸಂಸ್ಕೃತಿಯ ಮಟ್ಟವು ಬೇಗ ಬೇಗ ಹೆಚ್ಚದೆ ಇರುವುದಕ್ಕೂ, ಓದುವವರ ಸಂಖ್ಯೆಯು ಕಡಿಮೆಯಾಗಿರುವುದೇ ಕಾರಣವಾಗಿದೆ. ಸ್ತ್ರೀಯರು ಮನಸ್ಸುಮಾಡಿದರೆ, ಈ ನ್ಯೂನತೆಯು ಪರಿಹಾರವಾಗುವ ಭಾಗದಲ್ಲಿ ಬಹಳ ಸಹಾಯವಾಗುವುದು ಸಾಧ್ಯ. ಸಾಹಿತ್ಯದಂತೆಯೇ ಸಂಗೀತವು ಮುಂದಕ್ಕೆ ಬರುವ ಭಾಗದಲ್ಲೂ ಹೆಂಗಸರು ಬಹುವಾಗಿ ಕೆಲಸಮಾಡಬಹುದಾಗಿದೆ. ಸಂಗೀತಸಾಹಿತ್ಯಗಳೆರಡಕ್ಕೂ ಹೆಂಗುಸಾದ ಸರಸ್ವತಿಯೇ ಅಧಿದೇವತೆಯೆಂದು ಹೇಳಿರುವುದಕ್ಕೆ ವಿಶೇಷ ಕಾರಣವಿರಬೇಕಲ್ಲವೆ?

ಇಲ್ಲಿ ನಡೆಯುತ್ತಿರುವ ಕಾರ್ಯಗಳೆಲ್ಲಾ ಸ್ವಪ್ರಯತ್ನದಿಂದಲೇ ನಡೆಯುತ್ತಿವೆಯೆಂಬುದನ್ನು ಕೇಳಿ, ನನಗೆ ವಿಶೇಷ ಹರ್ಷವುಂಟಾಯಿತು. ಮುಂದೆ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ದ್ರವ್ಯಸಹಾಯಮಾಡಬೇಕೆಂದು ಕೋರಿದ್ದೀರಿ. ಇಂಥ ಅಭಿವೃದ್ಧಿ ಕಾರ್ಯಗಳಿಗೆ ದ್ರವ್ಯಸಹಾಯ ಮಾಡಬೇಕಾದುದು ಯುಕ್ತವಾದರೂ, ಈಗ ಸರ್ಕಾರದವರಲ್ಲಿ ತಕ್ಕಷ್ಟು ಹಣದ ಅನುಕೂಲತೆಯು ಇಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಆದಕಾರಣ, ಈ ಸಂಸ್ಥೆಗೆ ಅವಶ್ಯಕವಾದಷ್ಟು ಹಣವಾಗಲಿ, ಅಥವಾ ಯುಕ್ತವಾದಷ್ಟು ಹಣವಾಗಲಿ, ಸರ್ಕಾರದವರಿಂದ ದೊರೆಯುವುದು ಸಾಧ್ಯವಾಗದೆ ಇರಬಹುದು. ಹೀಗೆಂದಮಾತ್ರವೇ ಸರ್ಕಾರದವರಿಗೆ ಈ ಪ್ರಯತ್ನಗಳಲ್ಲಿ ಸಹಾನುಭೂತಿಯಿಲ್ಲವೆಂದು ಅರ್ಥವಲ್ಲ. ಅವರಿಗೆ ವಿಶೇಷ ಸಹಾನುಭೂತಿಯು ಖಂಡಿತವಾಗಿಯೂ ಉಂಟು. ಅವರಿಗೆ ಸಾಧ್ಯವೆಂದರೆ, ಆದಷ್ಟು ಧನಸಹಾಯವನ್ನು ಅವರು ಅವಶ್ಯವಾಗಿ ಮಾಡುವರು.

ಅದಾಗ್ಗ್ಯೂ, ಈ ವಿಚಾರಗಳಲ್ಲಿ ಸ್ವಪ್ರಯತ್ನದ ಅವಲಂಬನದಿಂದಲೂ, ಉತ್ಸಾಹಶೀಲಿಯ ಆರಾಧನೆಯಿಂದಲೂ, ಕಾರ್ಯಸಾಧನೆಯಾಗಬೇಕು. ಸರ್ಕಾರದವರ ಸಹಾಯದಿಂದಲೇ ಆಗಲಿ, ಅಥವಾ ಇತರರ ಸಹಾಯದಿಂದಲೇ ಆಗಲಿ, ಅನ್ಯರಿಂದಲೇ ನೇರುವ ಕಾರ್ಯಸಾಧನೆಯು ವಿಶೇಷ ಹೆಚ್ಚಾಗಿರಲಾರದು. ವಿಚಾರಗಳಲ್ಲಿ ಹಣವೇನೋ ಅಗತ್ಯವಾಗಿ ಬೇಕೇಬೇ ಆದರೂ ಕೆಲವು ಗುಣಗಳು ಹಣಕ್ಕಿಂತಲೂ ಹೆಚ್ಚಾಗಿ ಸಹಾಯ ವಾಗಿರುವುವು. ಉತ್ಸಾಹ, ಶ್ರದ್ಧೆ, ಏಕಮತ್ಯ, ಸೌಹಾ ಸ್ನೇಹಪರತೆ, ಇವುಗಳೇ ಆ ಗುಣಗಳು. ಅವುಗಳಿಂದ ಜನಸ ಯವೂ, ಧನಸಹಾಯವೂ, ತಾವಾಗಿಯೇ ಒದಗುವುವು. ಕೆ ದಲ್ಲಿ ಪ್ರೀತಿಯನ್ನಿಟ್ಟುಕೊಂಡು ಸ್ನೇಹಪರರಾಗಿ ವರ್ತಿಸುವ ಗು ಶಾಲಿಗಳ ಕಾರ್ಯಸಾಧನೆಯು ಸುಸೂತ್ರವಾಗಿ ಮುಂದೆ ಸಾಗು ವುದು. ನಿಮ್ಮ ಶಾರದಾ ಸ್ತ್ರೀ ಸಮಾಜದ ಕಾರ್ಯಕಲಾಪಗ ಇನ್ನೂ ಚೆನ್ನಾಗಿ ಮುಂದುವರಿದು, ಮಹಿಳೆಯರಿಗೆ ಉಪಕಾ ವಾಗಲೆಂದು ಹಾರೈಸುವೆನು. ನಿಮ್ಮ ಬಿನ್ನವತ್ತಳೆಯಲ್ಲಿ ನ ವಿಷಯವಾಗಿ ಸೂಚಿಸಿರುವ ಮಧುರವಚನಗಳಿಗಾಗಿ ಮತ್ತೊಮ್ಮೆ ನನ್ನ ಕೃತಜ್ಞತೆಯನ್ನು ಸೂಚಿಸುವೆನು. ಲೇಡಿ ಪುಟ್ಟಣ್ಣಶೆಟ್ಟರವ ಅಧ್ಯಕ್ಷತೆಯಲ್ಲಿ ಈ ಸಮಾಜವು ದಿನೇ ದಿನೇ ವೃದ್ಧಿಹೊಂ ಮಹಿಳೆಯರ ಸೇವೆಯನ್ನು ಇನ್ನೂ ಅತಿಶಯವಾಗಿ ಮಾಡುವಂತಾ ಗಲೆಂದು ಭಗವಂತನನ್ನು ಪ್ರಾರ್ಥಿಸುವೆನು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರಕ್ಷಕಸ್ತಂಭವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೪ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲುಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಮ್ಯಾನೇಜರ,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯಿದೆಕಟ್ಟಿ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್ ಕಾರ್ಡ್ಸ್—ಕಲೆಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ಸೆಳೆಸುತುವದು, ಪಿತ್ತ ಕಾರುವದು, ಮುಖ ಕಣ್ಣುಹಳದಿ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿ ಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ—ರಕ್ತಶುದ್ಧಿ, ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಇದ್ದಿರುವ ಬೊಕ್ಕೆ, ತಿಜ್ಜ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಗಳನ್ನು ಗುಣಪಡಿಸಿ ದೇಹದ ರೂಪವನ್ನು ಬಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅವ್ಯಾಹತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1-4.

ಕಂಪೌಂಡ್ ಸಿರಪ್ ವೆಸಿಭೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ಸ್ವಲ್ಪಕಾಲದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇಷ್ಟು ಮದ್ದುಗಳೂ ಹೋಮಿಯೊಪತಿ ಔಷಧಿಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[52] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ) **ಮಂಗಳೂರು, ದ. ಕ.**

ಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ
ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು
ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೩—೦—೦
ಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಹಭಸ್ಮ	೧	೦–೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಾಳಿಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦–೧೨—೦
ಭ್ರಕಭಸ್ಮ	೧	೩—೦—೦
ುಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಂಖಭಸ್ಮ	೧	೦—೪—೦
ಪದಿಭಸ್ಮ	೧	೦—೪—೦
ಪ್ಪಿಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ
ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು
ಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.
ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ
ಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು
ಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ
ಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ.
ವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋ
ರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ
ೀಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ
ಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆ
ದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ
ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣ
ುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ
ಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ
ೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು
ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅಜಿವಿಸು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶಿ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಪ್ರವೃತ್ತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗ ನಿವಾರಣೆ ಬಾಟ್ಲಿಯನ್ನು ತಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸೆ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲೆ.

ಎಲ್ಲಾ ಬಣ್ಣದ ಸೆರಗು, ಮುಟ್ಟುಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟುಚೆಟ್ಟು ಆಗೋಣ, ಮುಟ್ಟುಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಪ್ರಕೃತಿ ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆ ಹತ್ತುವವೋ. ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಮಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

38 ಮು. ಪೋ. **ಮಿರಜ**, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನದ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲಾಗದೆ ಎಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಸಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಹಿತಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮಾತಾಗಿ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[6] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
पंडित श्रीकाशीनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಲಿಂಗೋತ್ಪತ್ತಿ ಲಾಕೆಟ್ಸ್	೨ ಆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ಇರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜ಼ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[7] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

GISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ ನೇ ಆಗಸ್ಟ್ ೧೯೩೨ [ಸಂಚಿಕೆ ೧೪

NOTICE

A HOLSTEIN BULL and a CINDI BULL are at stud at the yankere Palace Dairy Farm, ysore, the rates being Rs. 5 and s. 2 respectively. Both bulls are of od milk pedigree.

Dr. McIsaac,
Manager,
Rayankere Dairy Farm.

(2)

ಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.
ಅಥವಾ
ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ಥಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಗೆ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವವೇ ಈ ಭಾಷಣಗಳಲ್ಲಿರುವುವು. ಪರಮತೀಯರಂತೂ ಈ ಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ತ್ತಿರುವರು. ಈ ಭಾಷಣಗಳ ಮಹತ್ತವನ್ನು ಕಂಡು ಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರಕ್ಷಸ್ತ್ರರೂಪ ಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗ ರರು. ಅದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿ ಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ೀರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ನ್ನಡ ಭಾಷಣ	೪ ಆಣೆ.
ುರಾಠಿ ಭಾಷಣ	೮ ಆಣೆ.
ಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಮ್ಯಾನೇಜರ,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಬ್ರಿಟಿಷ್ ಮಂತ್ರಿಮಂಡಲದವರು ಕೋಮುವಾರು ಮಸ್ಯೆಯ ತೀರ್ಮಾನವನ್ನು ಇದೇ ಆಗಸ್ಟ 17 ನೇ ರೀಖಿನ ದಿವಸ ಇಂಗ್ಲೆಂಡಿನಲ್ಲಿಯೂ ಮತ್ತು ಇಂಡಿ ಾದಲ್ಲಿಯೂ ಏಕಕಾಲದಲ್ಲಿ ಪ್ರಕಟಿಸುವರು.

ಬಿಡದಿ ವಿದ್ಯುದ್ದೀಪೋತ್ಸವ
ತಿದ್ದುಪಡಿ.

ತಾ|| 25-7-32 ನೇ ಪ್ರಭಾ ಸಂಚಿಕೆಯಲ್ಲಿ ಪ್ರಕಟವಾಗಿರುವ ಬರವಣಿಗೆಯಲ್ಲಿ ಈ ಕೆಳಗೆ ಕಂಡ ವಿಷಯವು ತಪ್ಪಿ ಹೋಗಿದ್ದುದರಿಂದ ಪ್ರಕಟಿಸಲಾಗಿದೆ.

ಮ|| ರಾ|| ಸೋಮಲಿಂಗಯ್ಯನವರು ಎಂಬುವದಕ್ಕೆ ಬದಲಾಗಿ ಮ|| ರಾ|| ಗುರುಲಿಂಗಯ್ಯನವರು ಎಂದು ಓದುವದು. ಮತ್ತು ಆ ದಿವಸ ಕಾರ್ಯವು ಜಯಪ್ರದವಾಗಿ ಜರುಗುವದಕ್ಕೆ ಶ್ರದ್ಧೆವಹಿಸಿ ಕೆಲಸ ಮಾಡಿದ್ದಕ್ಕೆ ಈ ಕೆಳಗಿನ ಕಂಡ ಮಹನೀಯರುಗಳು ಸಹ ಭಾಗಿಗಳಾಗಿದ್ದರು (1) ಮ|| ರಾ|| ಪುಟ್ಟಕಾಮೇ ಅರಸರವರು. (2) ಮ|| ರಾ|| ಚಿಕ್ಕ ಗಂಗೆಶೆಟ್ರು. (3) ಮ|| ರಾ|| ಚಿಕ್ಕ ವೆಂಕಟಪ್ಪನವರು. (4) ಮ|| ರಾ|| ಸಂಜೀವಪ್ಪನವರು. (5) ಮ|| ರಾ|| ಅಣ್ಣಯ್ಯಪ್ಪನವರು. (6) ಮ|| ರಾ|| ರಾಮಕೃಷ್ಣಪ್ಪನವರು. (7) ಮ|| ರಾ|| ಬಾಬಾಮಿಯಾ ಸಾಹೇಬರು. (8) ಮ|| ರಾ|| ದೇವರಾಜೇ ಅರಸರವರು. ಮತ್ತು ಇತರ ವಿಲೇಜ್ ಪಂಚಾಯತಿ ಸದಸ್ಯರುಗಳು ಮತ್ತು ಇತರ ದೊಡ್ಡಮನುಷ್ಯರುಗಳು.

ಪ್ರತ್ಯಕ್ಷದರ್ಶಿ.

ಚುನಾವಣೆಯ ಪದ್ಧತಿ.
ಡಾ|| ಅನ್ಸಾರಿಯವರ ಹೇಳಿಕೆ.

ಬೊಂಬಾಯಿ ಆ. ೧೧

ಡಾ|| ಅನ್ಸಾರಿಯವರು ಈ ಮಧ್ಯಾಹ್ನ ವಿಕ್ಟೋರಿಯಾ ಎಂಬ ಹಡಗಿನಲ್ಲಿ ಯೂರೋಪಿಗೆ ಪ್ರಯಾಣ ಮಾಡಿದರು. ಆಗ ಅವರು ಈ ಕೆಳಗೆ ಕಂಡ ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ.

“ಪ್ರತ್ಯೇಕ ಚುನಾವಣೆಯೊಡನೆ ಜವಾಬ್ದಾರಿಯು ಕೇವಲ ಒಂದು ವಿಚಿತ್ರಸ್ವರೂಪವೆಂದೇ ಹೇಳಬೇಕಾಗಿದೆ. ಇದರಿಂದ ಕೋಮುವಾರು ವ್ಯಾಧಿಯು ಉಲ್ಬಣವಾಗಿ ಪರಸ್ಪರ ವಿದ್ವೇಷಕ್ಕೆ ಕಾರಣವಾಗುವುದು. ಈಗಾಗಲೇ ಆ ಕೋಮುವಾರು ವ್ಯಾಧಿಯು ದೇಶದಲ್ಲಿ ವಿಶೇಷವಾಗಿದೆ. ಕೋಮುವಾರು ಚುನಾವಣೆ ಪದ್ಧತಿ, ಸಂಯುಕ್ತ ಇಲ್ಲವೇ ಮೈನಾರಿಟಿಗಳಿಗೆ ಸ್ಥಾನಗಳನ್ನು ಕಾದಿಡುವುದು ಈ ತೀರ್ಮಾನವನ್ನು ಕೊಟ್ಟು ಕೋಮುವಾರು ಸಮಸ್ಯೆಯನ್ನು ಪರಿಹರಿಸಿದರೆ ಅದರಿಂದ ಉಭಯ ಕೋಮುಗಳಿಗೆ ಸಮಾಧಾನವಾಗಲಿಕ್ಕಿಲ್ಲ. ಇದಕ್ಕೆ ಬದಲಾಗಿ ಕೋಮುವಾರು ಹೊಡೆದಾಟವು ಮತ್ತಿಷ್ಟು ಜಾಸ್ತಿಯಾಗುವುದು. ಈ ತರಹದ ಕೋಮುವಾರು ಪ್ರಾತಿನಿಧ್ಯತೆಯಿಂದ ಕೂಡಿದ ನ್ಯಾಯವಿಧಾಯಕ ಸಭೆಗಳ ಪಾಡಂತೂ ವರ್ಣಿಸಲಸಾಧ್ಯವಾಗುವುದು. ಒಂದುವೇಳೆ ಕೋಮುವಾರು ಸಮಸ್ಯೆಯ ತೀರ್ಮಾನವು ಕೋಮುವಾರು ಚುನಾವಣೆ ಪದ್ಧತಿಯಮೇಲೆ ಅವಲಂಬಿಸಿದ್ದರೆ, ಈ ಪದ್ಧತಿಯೇ ಬೇಕೆಂದು ಹೊಡೆದಾಡುತ್ತಿರುವರು ಅದರ ಸತ್ಯವನ್ನು ಶೀಘ್ರದಲ್ಲೇ ಅರಿತುಕೊಳ್ಳುವರೆಂದೂ, ಕೊನೆಗೆ ರಾಷ್ಟ್ರೀಯಭಾವನೆಯ ಗುಂಪಿನವರ ಅಭಿಪ್ರಾಯವನ್ನೇ ಅನುಮೋದಿಸುವಂತಾಗುವರೆಂದೂ ತಿಳಿಯುವೆನು. ಆದರೆ ಅದರಿಂದ ಜಗಳಗಳೂ, ಉದ್ವೇಗವೂ ಉಂಟಾಗುವುದೆಂದು ನನ್ನಲ್ಲಿ ಭೀತಿಯುಂಟಾಗಿದೆ.”

ಡಾ|| ಅನ್ಸಾರಿಯವರು ಯೂರೋಪಿನಲ್ಲಿ ೮ ತಿಂಗಳಕಾಲ ಇರುವರೆಂದೂ ತಮ್ಮ ದೇಹಸ್ಥಿತಿಯನ್ನು ಪೂರ್ತಿಯಾಗಿ ಸರಿಪಡಿಸಿಕೊಂಡು ಹಿಂದೂಸ್ಥಾನಕ್ಕೆ ವಾಪಸು ಬರುವರೆಂದೂ, ಕಳೆದ ೬ ವರುಷಗಳಿಂದ ತಡೆಬಿಡೆಯಿಲ್ಲದೆ ಕೆಲಸಮಾಡಿದ ಸಲುವಾಗಿ ಅವರ ಆರೋಗ್ಯವು ಕೆಟ್ಟುಹೋಗಿದೆಯೆಂದೂ ತಿಳಿದುಬಂದಿದೆ.

ಬಾಗಲಕೋಟೆಯ ವ್ಯಾಯಾಮಶಿಕ್ಷಣ ಸಂಸ್ಥೆಯ ಡೈರೆಕ್ಟರಾದ ಶ್ರೀ|| ಕೆ. ಎ. ವೆಂಕಟರಾಮಯ್ಯನವರು ಸಿದ್ದಾಪುರದಲ್ಲಿ ಕಂದಾಯನಿರಾಕರಣ ಚಳವಳಿಯ ಮುಖ್ಯಚಾಲಕರಾಗಿರುವರೆಂದು ತಿಳಿದು ಅಧಿಕಾರಿಗಳು ಅವರನ್ನು ದಸ್ತಗಿರಿಮಾಡಲು ವಿಶೇಷ ಪ್ರಯತ್ನಗಳನ್ನು ಮಾಡುತ್ತಿರುವರು. ಅವರನ್ನು ಹಿಡಿದುಕೊಟ್ಟವರಿಗೆ 200 ರೂಪಾಯಿಗಳ ಇನಾಮನ್ನು ಕೊಡುವುದಾಗಿ ಸಿದ್ದಾಪುರಟವನ್ನಿನಲ್ಲಿ ಸಾರಿಸಿರುವರು.

ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರು ಹಿಂಡಲಗಿಯಿಂದ ಎರವಾಡಾ ಜೈಲಿಗೆ ಸಾಗಿಸಲ್ಪಟ್ಟಿರುವರು.

ಬೆಳಗಾಂವಿಯಲ್ಲಿ ಕಾಂಗ್ರೆಸ್‌ಭವನವನ್ನು ಆಕ್ರಮಿಸಲು ಪ್ರಯತ್ನಿಸಿದ 6 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು.

ಅಂಕೋಲಾ ತಾಲೂಕು ರಾಜಕೀಯ ಸಮ್ಮೇಲನವು ಬಾಸಗೋಡು ಗ್ರಾಮದ ಬೊಮ್ಮಯ್ಯದೇವಸ್ಥಾನದ ಬಳಿಯಲ್ಲಿ ಶ್ರೀ|| ರಾಮಚಂದ್ರ ಪಡುನಾಯಕರ ಅಧ್ಯಕ್ಷತೆಯಲ್ಲಿ ನೆರವೇರಿತು. 600 ಜನಕ್ಕಿಂತಲೂ ಹೆಚ್ಚಾಗಿ ಪ್ರತಿನಿಧಿಗಳು ಬಂದಿದ್ದರು. ಇವರಲ್ಲಿ ಸುಮಾರು 100 ಜನ ಸ್ತ್ರೀಯರಿದ್ದರು. ಅಧ್ಯಕ್ಷರೇ ಮೊದಲಾದವರ ಭಾಷಣಗಳು ಮುಗಿದನಂತರ ಠರಾವುಗಳ ಪ್ರತಿಗಳು ಹಂಚಲ್ಪಟ್ಟವು. ಅಷ್ಟರಲ್ಲಿ ಫೌಜುದಾರರು ಅನೇಕ ಜನ ಪೋಲೀಸರೊಡನೆ ಬಂದು 4 ಜನ ಸ್ತ್ರೀಯರನ್ನೂ ಇತರ 15 ಜನರನ್ನೂ ದಸ್ತಗಿರಿಮಾಡಿದರು.

ಮುಂಬಯಿಯ ಸಿ. ಐ. ಡಿ. ಪೋಲೀಸರು ಇದೇ ಆಗಸ್ಟ 18 ನೇ ತಾರೀಖಿನ ದಿವಸ ಬೆಳಿಗ್ಗೆ ಬೋರಾಬಜಾರ್ ರಸ್ತೆಯಲ್ಲಿ ಒಂದು ಮನೆಯನ್ನು ಜಪ್ತಮಾಡಿ ಅಲ್ಲಿ ದೊರೆತ ಅನೇಕ ಕಾಗದಪತ್ರಗಳನ್ನು ವಶಪಡಿಸಿಕೊಂಡರು. ಪೋಲೀಸರು ಒಂದು ಗಂಟೆಯವರೆಗೆ ಶೋಧನಮಾಡಿದರು.

ಆಗಸ್ಟ 10 ನೇ ತಾರೀಖಿನದಿವಸ ಮುಂಬಯಿಯ ವೈಟವೇ ಲೇಡ್‌ಲಾ ಕಂಪೆನಿಯ ಮುಂದೆ ಪಿಕೆಟಿಂಗ್ ಮಾಡಿದ ಇಬ್ಬರು ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು. ಚಾರ್ನಿರೋಡಿನಲ್ಲಿ ಇದೇ ಕಾರಣದ ಮೇಲೆ ಆಗಸ್ಟ 9 ನೇ ತಾರೀಖು ಮಂಗಳವಾರದ ದಿವಸ 3 ಜನ ಸ್ವಯಂಸೇವಕರೂ 10 ನೇ ತಾರೀಖು ಬುಧವಾರದ ದಿವಸ 4 ಜನ ಸ್ವಯಂಸೇವಕರೂ ದಸ್ತಗಿರಿಮಾಡಲ್ಪಟ್ಟರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಹೀಗಾದಮೇಲೆ ಮುಕ್ತಿಯು ಅಗ್ಗವೇಸರಿ?

ಲೇಖಕರು—ಶ್ರೀ. ಷ. ಬ್ರ. ಪಟ್ಟಾಧ್ಯಕ್ಷ ಬೃಹನ್ಮಠ ಪಾಲೀಕೊಪ್ಪ ಪುಣ್ಯಾಶ್ರಮ ಶ್ರೀ ರೇಣುಕಭಾಗ.

ಮಹಾಜನರೇ? ಪ್ರತಿಯೊಬ್ಬಮನುಷ್ಯನೂ ಪುನರಾವೃತ್ತಿರಹಿತವಾದ ಮೋಕ್ಷವನ್ನು ಬಯಸುತ್ತಾನಷ್ಟೆ? ಅದು ನಿಜವಾಗಿಯೂ ಮನುಷ್ಯಸಾಧ್ಯವಾದ ಚತುರ್ವಿಧಪುರುಷಾರ್ಥಗಳಲ್ಲಿ ಒಂದಾಗಿರುವದು. ಅಂದರೆ—ಧರ್ಮ, ಅರ್ಥ, ಕಾಮ, ಇವುಗಳಿಗಿಂತಲೂ ಮುಂದಿನದಾಗಿರುವದು. ಈ ಕಡೆಯದಾದ ಮೋಕ್ಷವನ್ನು ಪಡೆಯಬೇಕಾದರೆ ಮೊದಲಿನ ಮೂರರಲ್ಲಿ ನಾವು ಮೊದಲು ನಿಷ್ಣಾತರಾಗಬೇಕಾಗುವದು. ಒಂದು ಇಯತ್ತೆಯನ್ನು ಮುಗಿಸಿ, ಅದರಲ್ಲಿ ಉತ್ತೀರ್ಣರಾದರೆ, ಮುಂದಿನವರ್ಗಕ್ಕೆ ಸೇರಲು ಅರ್ಹನಾಗುತ್ತಾನೆ. ಮೊದಲಿನ ಪುಸ್ತಕವು ಅಶಕ್ತಾವಸ್ಥೆಯಲ್ಲಿದ್ದು ಅದರ ಪರೀಕ್ಷೆಯ ಪರಿಣಾಮವೇ ಸಂಶಯಗ್ರಸ್ತವಾಗಿರುತ್ತಿರಲು ಮುಂದಿನ ಪರೀಕ್ಷೆಯಲ್ಲಿ ಪಾಸಾಗುವ ಬಗೆಹೇಗೆ? ಅದರಂತೆಯೇ ಧರ್ಮಾದಿಗಳ ಮರ್ಮವನ್ನರಿಯದೆ ಮೋಕ್ಷಪಡೆಯುವದೆಂದರೆ ಬೀಜಬಿತ್ತದೆ ಬೆಳೆಯನ್ನು ಬಯಸಿದಂತೆಯೇಸರಿ. ಮೋಕ್ಷರೂಪಫಲಕ್ಕೆ ಬೀಜವಂತಿರುವ ಧರ್ಮದಾಶ್ರಯವು ಅವಶ್ಯವಾಗಿ ಬೇಕೇಬೇಕು. ಅಹಿಂಸಾ, ನೀತಿ, ಸದಾಚಾರ, ಸತ್ಯ, ಬ್ರಹ್ಮಚರ್ಯ, ಮೊದಲಾದುವುಗಳನ್ನು ಸಂಗ್ರಹಿಸಬೇಕು. ಇಂತಹ ಸದ್ಗುಣಗಳು ದೊರೆಯಬೇಕಾದರೆ—ದೊರೆಯುವದಷ್ಟೇ ಅಲ್ಲಾ. ಹೃದಯ ಭೂಮಿಯಲ್ಲಿ ಅಂತಹ ಸದ್ಗುಣಗಳು ಬಲವಾಗಿನೆಟ್ಟು ಫಲವನ್ನೀಯಬೇಕಾದರೆ ಅಂತಹ ಗುರುಕುಲವಾಸವು ಅವಶ್ಯವಾಗಿ ಆಗಲೇಬೇಕು. ಸತ್ಯ ಮೊದಲಾದವುಗಳು ಧರ್ಮದ ಅಂಗಗಳಾಗಿರುವವು. ನೀತಿಹೀನನಲ್ಲಿ ಎಷ್ಟುಜ್ಞಾನವಿದ್ದರೂ ನಿಷ್ಫಲವೇಸರಿ. ಪಾತರದವರಲ್ಲಿಯ ನಾಚಿಕೆಯು ಎಷ್ಟು ಗಡಣವಾಗಿದ್ದರೇನು ಮಾಡಲಿಕ್ಕೆ ಬರುವದು? ಅಂತೆಯೇ ಒಬ್ಬಜ್ಞಾನಿಯು "ಧಿಗ್ ಧಿಗ್ಜ್ಞಾನಂ ನೀತಿಶೂನ್ಯಂನರಾಣಾಂ" ನೀತಿಇಲ್ಲದ ಜ್ಞಾನಕ್ಕೆ ಧಿಕ್ಕಾರ ಧಿಕ್ಕಾರ ಎಂದು ಅಂದಿರುವನು. ನೀತಿಶಾಸ್ತ್ರವು ಈಗ ಸಹಿತ ಕೆಟ್ಟು ಬೀಳಹತ್ತಿರುವದು. ಯಾರು ಯಾರ ವಿಷಯದಲ್ಲಿ ಹ್ಯಾಗೆ ನಡೆಯಬೇಕೆಂಬ ದಾರಿಯೇ ತಪ್ಪಿಹೋಗಿರುವದು. ಸದಾಚಾರದ ಸುಳಿಯು ಅಳಿದಿರುವದು. ಸತ್ಯದ ಸದ್ದು ಅಡಗಿದಂತಾಗಹತ್ತಿದೆ. ಎಲ್ಲಿ ನೋಡಿದರೂ ಬ್ರಹ್ಮಚರ್ಯದಬಲವು ಕುಂದತೊಡಗಿದೆ. ಹಿಂಸೆಯು ಮುಂದಾಗಲನುವಾಗಿದೆ. ನೀತಿ ಮೊದಲಾದವುಗಳು ಪ್ರಪಂಚವನ್ನೇ ಬಿಟ್ಟುಹೋಗಿವೆಯಂತೇನಲ್ಲ. ಎಲ್ಲಿಯಾದರೂ ಒಬ್ಬ ಮಹಾತ್ಮನಲ್ಲಿ ನಿಜವಾಗಿದ್ದರೂ ಬಹಳ ಕಡೆಯಲ್ಲಿ ಅವುಗಳ ಸೋಗುಮಾತ್ರ ಕಂಡುಬರುವದು. ಒಟ್ಟಿನ ಮೇಲೆ ಸದ್ಗುಣಗಳು ಬೆಳೆದಂತೆ ಅಸುರೀಸಂಪತ್ತು ಕಡಿಮೆಯಾಗಿ ದೈವೀಸಂಪತ್ತು ಬೆಳೆದು ತದ್ದ್ವಾರಾ ಮುಂದೆ ಪುನರಾವೃತ್ತಿಯನ್ನು ನೀಗಬಹುದು. ಇಂತಹ ಉಪದೇಶವು ಗ್ರಂಥಗಳಲ್ಲೇನೂ ಕಡಿಮೆಯಾಗಿಲ್ಲ. ಉಪದೇಶಕರು ಹೇರಳವಾಗಿರುವರು, ಪರಂತು "ಅವರವರ ಮನಸ್ಸಿಗೆ ಬಂದದ್ದೇಬ್ರಹ್ಮ" ಎಂಬಂತೆ ತಮಗೆ ತಿಳಿದದ್ದೇ ದಾರಿಯಾಗಿರುವದು, ಗುರುಪರಂಪರೆಯಂತೂ ಬಹುಜನರ ದೃಷ್ಟಿಯಲ್ಲಿ ಇಲ್ಲವೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅಲ್ಪಬೆಲೆಗೆ ಮಹಾಫಲವನ್ನು ಬಯಸುವ ಮೂರ್ಖನಂತೆ, ಈಗಿನ ಸ್ಥಿತಿಯಾಗಿರುವದು. ಇದಕ್ಕನುಗುಣವಾಗಿ ಕೆಲವು ಬೋಧಕರು ಯಾವುದೋ ಒಂದು ಸ್ವಾರ್ಥದ ಬೆನ್ನುಹತ್ತಿ ಅಜ್ಞಜನರು ಕುಣಿದಂತೆ ತಾವೂ ಡೋಲುಬಾರಿಸಿ, ಅವರು ಎಂತಹ ಮಾರ್ಗದಲ್ಲಿದ್ದರೂ ಅವರು ಕೆಟ್ಟುಹಾಳಾಗಿಹೋಗುತ್ತಿದ್ದರೂ ಸದುಪದೇಶದಿಂದ ಅವರ ಅಜ್ಞಾನವನ್ನು ಹೋಗಲಾಡಿಸಿ ಸದ್ಗುಣಗಳನ್ನು ಅವರ ಹೃದಯದಲ್ಲಿ ಬಿತ್ತಿ ಸನ್ಮಾರ್ಗವನ್ನು ತೋರಿಸದೆ, ಅವರಿಗೆ ಸಿಟ್ಟುಬಂದಿತೆ ಅವರ ಮನಸ್ಸಿನ ವಿರುದ್ಧ ಬೋಧಿಸಿದರೆ ಅವರು ಮಾಡಬೇಕಾದ ಸಹಾಯವನ್ನು ಮಾಡಲಿಕ್ಕಿಲ್ಲೆಂಬ ಭಯದಿಂದ ಅವರ ಸುಖಪ್ರತಿಬಂಧಕ ಅನಾಚಾರಗಳನ್ನು ಇದ್ದಹಾಗೆಯೇ ಇರಿಸಿ ಮುಕ್ತಿದೊರೆಯುವದೆಂದು ಹೇಳುವದು ಯೋಗ್ಯವೇ? ಮನೆಯು ಬೆಂಕಿಹತ್ತಿ ಉರಿಯುತ್ತಿದ್ದು ಒಳಗಿನ ಜನರು ಯಾವುದೋ ಒಂದು ಮೂಲೆಯಲ್ಲಿ ಅಜಾಗರೂಕತೆಯಿಂದ ಮಲಗಿರಲು ಒಬ್ಬ ಕಪಟಮಿತ್ರನು ಉರಿಯುತ್ತಿರುವ ಮನೆಗೆ ಹುಲ್ಲುಹೊಚ್ಚಿ ಬೆಂಕಿಯನ್ನು ಆರಿಸಿ, ಮನೆಯವರನ್ನು ಕಾಪಾಡುವೆನೆಂದ ಹಾಗೆಯೇಸರಿ. ಉರಿಯುವ ಮನೆಗೆ ನೀರು ಮಣ್ಣು ಮೊದಲಾದವುಗಳನ್ನು ಹಾಕಿ ಆರಿಸುವಂತೆ ದುಷ್ಕೃತ್ಯಗಳಿಂದ ಉರಿಯುತ್ತಿರುವವರಿಗೆ ಸತ್ಯ, ಸದಾಚಾರ ಮೊದಲಾದವುಗಳಿಂದ ಶಾಂತಿಯನ್ನೀಯಬೇಕಾಗಿರುವದು. ಇಂದ್ರಿಯನಿಗ್ರಹವಂತೂ ಪ್ರತಿಯೊಬ್ಬನಿಗೆ ಅವಶ್ಯಕವಾದದ್ದು. ಇಂದ್ರಿಯದ ದುರುಪಯೋಗದಿಂದಲೇ ಬೇಕಾದ ಅನರ್ಥವಾಗುತ್ತಿರಲು ಶರೀರಸಮಷ್ಟಿರೂಪ ಸರ್ವೇಂದ್ರಿಯಗಳು ಅಮಾರ್ಗದಲ್ಲಿ ಬಿದ್ದರೆ ಮನುಷ್ಯನ ಗತಿಯೇನು? ಅಂತೆಯೆ "ಇಂದ್ರಿಯಾಣಾಂ ಜಯೇಯೋಗಂ ಸಮಾತಿಷ್ಠೇದಹರ್ನಿಶಂ" (ಹಗಲಿರುಳು ಚಂಚಲಗಳಾದ ಇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಲು ಪ್ರಯತ್ನಿಸಬೇಕು.) ಎಂದು ಮನುವಾದರೂ ಹೇಳಿರುವನು. ಚಿತ್ತಶುದ್ಧಿಯಾಗಬೇಕಾದರೆ ಇಂದ್ರಿಯಜಯವು ಬೇಕು. ಇಂದ್ರಿಯಜಯವಿಲ್ಲದಿದ್ದರೆ ಚಿತ್ತಶುದ್ಧಿಯಾಗುವುದಿಲ್ಲ. ಚಿತ್ತಶುದ್ಧಿಯಿಲ್ಲದವನು ಯಾವ ಲೌಕಿಕ ಕಾರ್ಯಗಳನ್ನು ಮಾಡಲೂ ಅಸಮರ್ಥನಿರುವಾಗ ಹೆಚ್ಚಿನ ಫಲವನ್ನು ಪಡೆಯುವದಂತೂ ದೂರೇ ಉಳಿಯಿತು. ಜ್ಞಾನೋದಯವಾದ ಮೇಲೆ ಇಂದ್ರಿಯಗಳ ಸೆಳತವು ಕಡಿಮೆಯಾಗಿ ಮನಸ್ಸು ಸುಸಂಸ್ಕೃತವಾಗಿ ದೈವೀವೈಭವದ ಹಾದಿಗೆ ಹತ್ತುತ್ತದೆ. "ತಜ್ಜ್ಞಾನಂ ಪ್ರಶಮಕರಂ ಯದಿಂದ್ರಿಯಾಣಾಂ" (ಯಾವದು ಇಂದ್ರಿಯಗಳ ಬಲವನ್ನು ಬಗ್ಗುಬಡಿಯುವದೋ ಅದೇ ಜ್ಞಾನವು) ಎಂದು ಶಂಕರಾಚಾರ್ಯರು ತಮ್ಮ ಅಮೃತವಾಣಿಯಿಂದ ಉದ್ಘೋಷಿಸಿರುವರು. ಇಂತಹ ಅನೇಕ ವಾಕ್ಯಗಳಿದ್ದರೂ ಅವುಗಳ ಕಡೆಗೆ ಲಕ್ಷವೆಲ್ಲಿ? ಒಣಗಿದವನದಲ್ಲಿ ಬೆಂಕಿಹಬ್ಬಿದಂತೆ ಈಗಂತೂ ಇಂದ್ರಿಯಸುಖದ ಚೆಲ್ಲಾಟವೇ ಚೆಲ್ಲಾಟ, ಅದ್ದರಿಂದಲೇ ನಮ್ಮ ಪುಣ್ಯಭೂಮಿಯು ಹಣ್ಣಾಗಿರುವದು. ಇರಲಿ, ಬ್ರಹ್ಮಬೋಧವಂತೂ ಬೇಕಾದಲ್ಲಿ ದೊರೆಯುವದು. ಇದು ಒಂದು ಆನಂದದ ಸಂಗತಿಯೇಸರಿ! ಪರಂತು ಅದರಿಂದ ಯಾವ ಸುಪರಿಣಾಮವೂ ಆಗದ್ದರಿಂದ ಬಹಳ ಮರುಗಬೇಕಾಗಿರುವದು. ಆ ಬ್ರಹ್ಮಬೋಧವಾದರೂ ಬಿಗಿ ಇದ್ದಂತೆ ತೋರುವದಿಲ್ಲ. ಯಾಕೆಂದರೆ, ಯಾವ ವಿಧಿನಿಷೇಧಗಳ ಭೀತಿಯೂ ಇಲ್ಲದ ಈಗಿನ ಸ್ವಾತಂತ್ರ್ಯದ ಮನ್ವಂತರದಲ್ಲಿ ಹೇಗಿದ್ದರೂ ಮೋಕ್ಷ ದೊರೆಯುವದೆಂದು ಸಿದ್ಧವಾದಂತಾಗಿರುವದು. ಏನು ಕುಡಿದರೂ, ಏನು ತಿಂದರೂ, ಏನು ಆಡಿದರೂ, ಏನು ಮಾಡಿದರೂ, ಎಲ್ಲಿ ಬಿದ್ದರೂ ಆತ್ಮನು ನಿರ್ಲಿಪ್ತನಿರುವನು. ನೀವು ಸ್ಥೂಲಶರೀರದಿಂದ ಮಾಡಿದ ಆಚರಣೆಗಳು ಆತ್ಮನಿಗೆ ಸಂಬಂಧಿಸಿಲ್ಲವೆಂಬ ಬೋಧವು ಕೆಲವೆಡೆಯಲ್ಲಿ ನಡೆಯುವದೆಂದು ತಿಳಿಯುತ್ತದೆ. ಇದರಿಂದ ಜನತೆಯು ಉನ್ನತಿಯಾಗುವದರ ಬದಲು ಅಧಃಪಾತವೇ ಆಗುವದು. ಒಡೆದ ಕೆರೆಯಕಟ್ಟಿಗೆ ಉಸುಗು ಹಾಕಿದರೆ ನಿಲ್ಲುವದೇ? ಛೇ! ಛೇ! ಎಂದಿಗೂ ನಿಲ್ಲಲಾರದು. ಚಿತ್ತಶುದ್ಧಿಯು ಉನ್ನತಿಗೆ ಕಾರಣವಾಗಿರುವದು. ಅದಿಲ್ಲದೇ ಬಡೆದಾಡುವದು ಅಚ್ಚಿಲ್ಲದ ಬಂಡಿಯನ್ನು ಹೊಡೆದಂತಾಗುವದು. ಪರಮಾತ್ಮನು ಯಾವಾಗಲೂ ಅಲಿಪ್ತನಿರುವನು. ಅವನಿಗಾರ ಭಯವೇನು? ಮಲತ್ರಯವನ್ನು ನೀಗಿ ಇನ್ನೂ ಅನೇಕ ವಿಷಯಗಳನ್ನು ಬಿಟ್ಟು ಯುಕ್ತಿಯನ್ನು ಪಡೆಯುವದೆತ್ತ. ಏನೂ ಇಲ್ಲದೇ ಬರೇಬಾಯಿಯಿಂದ "ಅಹಂಬ್ರಹ್ಮಾಸ್ಮಿ" "ತತ್ವಮಸಿ" ಮೊದಲಾದ ದೊಡ್ಡಮಾತುಗಳನ್ನು ಹೇಳಿದರೆ ಕೇಳಿದರೆ ಬ್ರಹ್ಮಪದವಿಯು ಪ್ರಾಪ್ತವಾದಂತಾಯಿತೇ? ಮಹಾರಾಜರೇ? ನೀತಿ ಸದಾಚಾರ ಹೀನನಾದವನಿಗೆ ಆ ಮೋಕ್ಷವು ದೊರೆಯುವದಿಲ್ಲವೆಂದು ಅನೇಕರು ಹೇಳಿರುವರು ಇದನ್ನು ಲಕ್ಷದಲ್ಲಿಡಿರಿ. ಬರೆ ದೊಡ್ಡಸ್ತಿಕೆಗೆ ಮರುಳಾಗಬೇಡಿರಿ, ಅಭ್ಯಾಸಮಾಡದೇ ಪರೀಕ್ಷೆಯನ್ನು ಕೊಡಲಿಕ್ಕೆ ಹೋಗಬೇಡಿರಿ, ಪೂರ್ವಾಚಾರ್ಯರ ಮತಾಚಾರಗಳನ್ನು ಮರೆಯಬೇಡಿರಿ, ಭಕ್ತಿಯಿಂದ ಭಗವಂತನು ಪ್ರಸನ್ನನಾಗುವನೆಂದು ನೀವು ಅನೇಕ ಪುರಾಣಗಳಲ್ಲಿ ಕೇಳಿಯೂ ಇರಬಹುದು. ಆ ಭಕ್ತಿಯು ಸುಮ್ಮನೆ ದೊರೆಯುವದೇ? "ದುರ್ಲಭಾಹಿ ಶಿವೇಭಕ್ತಿಃ ಸಂಸಾರಾರ್ಣವ ತಾರಿಣೀ | ಸಾಯತ್ತವರ್ತಕೇ ಸಾಕ್ಷಾತ್ಭಕ್ತಿಃಪರಿಗೀಯತೇ" (ಸಂಸಾರಸಾಗರವನ್ನು ದಾಟಿಸಲು ಸಮರ್ಥವಾದ ಭಗವದ್ಭಕ್ತಿಯು ಸುಲಭಸಾಧ್ಯವಲ್ಲ. ಆ ನಿರ್ಮಲಭಕ್ತಿಯು ಉತ್ಪನ್ನವಾದರೆ ಅವನು ಧನ್ಯನು) ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಋಷಿಗಳಿಗೆ ಬೋಧಿಸಿದ್ದನ್ನು ಮನಸ್ಸಿನಲ್ಲಿಡಿರಿ, ಏನೂ ಇಲ್ಲದೇ ನೀನೂ ಬ್ರಹ್ಮ ನಾನೂ ಬ್ರಹ್ಮ ಎಲ್ಲಾ ಬ್ರಹ್ಮವೆಂದು ಸುಮ್ಮನೇ ನುಡಿದರೆ ಏನು? ಎಷ್ಟೋವರ್ಷ ತಪಸ್ಸುಮಾಡಿದರೂ ದೊರೆಯದ ಮುಕ್ತಿಯು ಅವಿಚಾರಿಗಳಾದ ಕೊಳಕಮನಸಿನವರಿಗೆ ದೊರೆಯುವದೆಂದರೆ ಮಿದುವಾದ ಅರಿವೆಯನ್ನು ಹೊಲಿಯಲಿಕ್ಕೆ ಬರಬಾರದ ಮಂದಸೂಜಿಯನ್ನು ಹಿಡಿದು ದೊಡ್ಡ ಗುದ್ದವನ್ನಿತ್ತು ವೆಸೆದಂತೆಯೇಸರಿ? ಮಹಾರಾಜರೇ? ಸುಮ್ಮನೇ ಬಾಯಸುಖಕ್ಕೆ ಬೀಳಬೇಡಿರಿ, ಮಾತಿನ ಕುದುರೆಯನ್ನು ಹತ್ತಬೇಡಿರಿ, ಮಾತಿನ ಕುದುರೆಯನ್ನು ಹೂಡಿದ ಕೃತಿಯರಥವನ್ನು ಹತ್ತುವದುತ್ತಮವು. ಈ ವಿಷಯಕವಾಗಿ ವಿಶೇಷವರ್ಣನೆಯು ಅನೇಕ ಗ್ರಂಥಗಳಲ್ಲಿರುವದನ್ನು ನೀವು ಕೇಳಬಹುದು. ವಿಶೇಷ ಬರೆದರೆ ಲೇಖವು ವಿಶದವಾಗಬಹುದು. ಹೆಚ್ಚಿಗೆ ಹೇಳುವದೇನು? ಬ್ರಹ್ಮಜ್ಞಾನರೂಪ ಪಂಚಾಮೃತವನ್ನು ಸವಿಯುವಾಗ ಚಿತ್ತಶುದ್ಧಿ ಇಲ್ಲವೇ ಶಾಂತಿರೂಪವಾದ ಲಾಲಾ (ಜೊಲ್ಲು) ರಸವು ಅವಶ್ಯವಾಗಿರಬೇಕೆಂಬುದನ್ನು ದೃಢವಾಗಿ ನಂಬಿರಿ. ಇಲ್ಲದ ಹಾಳು ಬೋಧಕ್ಕೆ ಒಳಗಾಗಿ ಹಾಳಾಗಬೇಡಿರಿ. ಪ್ರಾಪಂಚಿಕಸುಖಕ್ಕೆ ಮೋಹಿಸಿ ವಿಷಯಸುಖದ ದಾಸರಾಗಿ ನಾನು ಬ್ರಹ್ಮಜ್ಞಾನಿಯು—ಬ್ರಹ್ಮನೆಂದು ಬೊಗಳುತ್ತ ಧರ್ಮಕರ್ಮಹೀನನಾದವನನ್ನು ಚಾಂಡಾಲನಂತೆ ಬಹಿಷ್ಕರಿಸಬೇಕೆಂದು ಮಹಾಜ್ಞಾನಿಗಳು ಹೇಳುವರು. ಅಲ್ಲದೇ "ಖಂಡಿಸದೆ ಕರಣವನು ದಂಡಿಸದೆ ದೇಹವನು | ಉಂಡುಂಡು ಸ್ವರ್ಗವನು ಪಡೆವರವನೇನು ದಂಡೆಯಾಳುವಳೆ?" ||೧|| ಎಂದು ಸರ್ವಜ್ಞನು ಅಂದಿರುವನು. ಶಕ್ತಿಪಾತಾದಿಗಳಿಂದ ಉಪದೇಶಾರ್ಹನಾದ ಶಿಷ್ಯೋತ್ತಮನಿಗೆ ತಾರಕಮಹಾಮಂತ್ರೋಪದೇಶವನ್ನು ಆಯಾ ಮತಕ್ಕನುಸರಿಸಿ ಆಯಾ ಗೋತ್ರದ ಗುರುಪುಂಗವರೇ ಮಾಡಬೇಕೆಂದು ಶಾಸ್ತ್ರವು ವಿಧಿಸುವದು. ಆದರೂ ಕೆಲವರು ಗುರುಸೇವೆಯ ಗಂಧವಿಲ್ಲದ ಸದಾಚಾರಹೀನ ವ್ಯಸನೋನ್ಮತ್ತ ಸ್ವೇಚ್ಛಾಚಾರಪರಾಯಣರಾದವರಿಗೆ ನಾವು ಉಪದೇಶಕೊಡುವೆವೆಂದು ಏನೇನೋ ಗದ್ದಲವನ್ನೆಬ್ಬಿಸಿ ಅವರ ಕಿವಿಯಲ್ಲಿ ಯಾವ ತಾರಕವ್ಯೂಹ ಇಲ್ಲದೆ ಗುಳುಗುಳು ಊದುತ್ತಿರುವರು. ಶಿವಶಿವ ಇದಾವ ಧರ್ಮವೋ? ಇದಾವ ಮತಾಚಾರವೋ? ತಿಳಿಯದು. ಭಕ್ತರ ಉದ್ಧಾರವಸಲುವಾಗಿ ಪೂರ್ವಾಚಾರ್ಯರಿಂದ ನಿಯಮಿಸಲ್ಪಟ್ಟ ಕ್ರಮಾಗತ ಗುರುಗಳೆಂದು ದೊಡ್ಡ ಹೆಸರನ್ನು ಪಡೆದು, ಶಿಷ್ಯ ದ್ಧಾರವೇ ಸರ್ವಸ್ವವಾಗಿ, ಜ್ಞಾನವೈರಾಗ್ಯಗಳಿಂದ ಬೆಳಗು ಗುರುಮೂರ್ತಿಗಳೇ? ನಿಮ್ಮ ಹೊಲದೊಳಗಿನ ಕುಸುಗ ಳನ್ನು ಹೊಡೆಯಲು ಎಚ್ಚರಾಗಿರಿ. ಉಪದೇಶದ ಮಳೆಗರೆ ಇದಕ್ಕಾಗಿಯೇ ನಿಮ್ಮ ಅವತಾರವಾಗಿರುವದು. ರಾಜ ರಾಷ್ಟ್ರ ಹಿತಕ್ಕೆ ಗುರುಗಳೇ ಕಾರಣರು. ಗುರುಗಳ ಬೋಧವು ಜಾಗ ವಾಗಿದ್ದರೆ ರಾಜ-ರಾಷ್ಟ್ರಗಳಿಗೆ ಯಾವ ಕಂಟಕವೂ ಇ ಗುರುಶಿಕ್ಷೆಯು ದೊರೆಯದಿದ್ದರೆ ಮನುಷ್ಯನು ದುರಾಚಾರಿಯ ಅನೇಕ ನಿಂದ್ಯಕೃತಿಗಳನ್ನು ಮಾಡುವನು. ತದ್ದ್ವಾರಾ ರಾ ದಂಡವನ್ನು ಅನುಭವಿಸಬೇಕಾಗುವದು. ಈ ಗುರೂಪದೇ ಅಭಾವದಿಂದ ರಾಜನಿಗೂ ತೊಂದರೆಯಾಗುವದು. ಈ ಎ ದೋಷಗಳು ಗುರುಗಳ ಪಾಲಿಗೇಸ್ಯೆ? ನಿಮ್ಮ ಉಪದೇಶದ ಪ್ರ ಕವಿಲ್ಲದ್ದರಿಂದ ಜಗತ್ತು ಅಂಧವಾಗಿರುವದು. ಇದು ನಿಮ್ ಭೂಷಣವೋ? ನಿಮ್ಮ ಮಕ್ಕಳು ಅನೇಕಯಾತನೆಗಳನ್ನು ಹೊಂ ಬಳಲುತ್ತಿದ್ದು, ಇನ್ನೂ ಅನೇಕ ಸಂಕಟಗಳೀಡಾಗುವ ಸಂ ವವು ನಿಮಗೆ ತಿಳಿದಿದ್ದರೂ ಸುಮ್ಮನೇ ಇರುವದೆಂದರೆ ದಯ ರಸವು ನಿಮ್ಮ ಆಭರಣವಲ್ಲವೋ? ಅಸ್ತು, ಕೆಲವು ಹೊಸಬೋ ಕರು ತಮ್ಮ ನವೀನ ಶಿಷ್ಯರನ್ನು ಸಂಪಾದಿಸುವ ನೆವದಿಂದ ಹ್ಯಾ ದ್ದರೂ ಮೋಕ್ಷವು ದೊರೆಯುವದೆಂದು ಹೇಳುವರು. ಹೀಗಾ ದರೆ ಮುಕ್ತಿಯು ಅಗ್ಗವೇಸರಿ? ಶಾಂತಿ.

ಶ್ರೀ ಬಸವಜಯಂತಿಯು.
ಅದರಲ್ಲಿ ಆದ ವ್ಯಾಖ್ಯಾನಗಳ ಸಾರಾಂಶವು.

ಬಸವ ಜಯಂತಿ ಬಗ್ಗೆ ತಾ|| ೮-೫-೩೨ ನೇ ದಿವಸ ಪ್ರಸಿ ಪಡಿಸಿದ ಮೇರೆಗೆ ಸಂಜೆಯ ೫ ಗಂಟೆಯ ಸುಮಾರಕ್ಕೆ ಶ್ರೀ|| ಬಸವೇಶ್ವರರ ಫೋಟೋ ಮೆರವಣಿಗೆಯು ಆಗಿ ಶೆಫರ್ಡ ಹಾ ನಲ್ಲಿ ಸಭೆಯು ೬ ಗಂಟೆಗೆ ಪ್ರಾರಂಭವಾಯಿತು. ಶ್ರೀ|| ಶಂ ರಪ್ಪ ಧನಶೆಟ್ಟಿ ಇವರು ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಒಬ್ಬರ ಜಯಂತಿಯು ಈ ದಿವಸವೇ ಇದ್ದು ಅದನ್ನು ಸಹ ಇಲ್ಲಿಯೇ ಮಾಡಿದ್ದರೆ ನೆಟ್ಟಗಾಗುತ್ತಿತ್ತು. ಅದನ್ನು ಬಿಟ್ಟದ್ದು ತಪ್ಪಾಯಿತು. ಶ್ರೀ|| ಶಂಭುಲಿಂಗಸ್ವಾಮಿಗಳ ಮ ದಲ್ಲಿ ಈಹೊತ್ತು ಆ ಜಯಂತಿಯನ್ನು ಮತ್ತೆ ಕೆಲವರು ಮಾಡುತ್ತಿರುವರೆಂದು ಹೇಳಿ ಲೋ. ಬೋ. ಪ್ರ. ಶ್ರೀ|| ಶಂಕರಗೌ ಪಾಟೀಲ ಬಿ. ಎ. ಎಲ್.ಎಲ್. ಬಿ. ಇವರು ಈ ಸಭೆಗೆ ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ಅದಕ್ಕೆ ಶ್ರೀ|| ಬನ್ನೂ ವಕೀಲರು ಅನುಮೋದಿಸಿದರು. ಶ್ರೀ|| ಪಾಟೀಲರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ, ಸಭೆಗೆ ಸ್ವಲ್ಪೇ ಜನರು ಬಂದದ್ದನ್ನು ನೋಡಿ ಖೇದ ವ್ಯಕ್ತಪಡಿಸಿದರು. ಆ ಮೇಲೆ ದರ್ಗಾ ಸಾಲೆಯ ಹೆಡ್ ಮಾಸ್ತರರಾದ ಶ್ರೀ|| ಮಹಾಂತಣ್ಣನವರಿಗೆ ವ್ಯಾಖ್ಯಾನ ಮಾಡಲು ಸೂಚಿಸಿದರು. ಅದರಂತೆ ಮಾಸ್ತರರು ಒಂದು ಸ್ತುತ್ಯವನ್ನು ಅಂದು ವ್ಯಾಖ್ಯಾನ ಪ್ರಾರಂಭಿಸಿ ಎಲ್ಲಕ್ಕೂ ಮೊದಲು ಶ್ರೀ ಪಂಚಾಚಾರ್ಯರೇ ವೀರಶೈವ ಮತವನ್ನು ಸ್ಥಾಪಿಸಿದರೆಂದು ಆಮೇಲೆ ಕೆಲವು ಕಾಲದ ನಂತರ ಶ್ರೀ ಶಂಕರದಾಸಿಮಯ್ಯರು ಶ್ರೀ ಜೇಡರದಾಸಿಮಯ್ಯರು ವೀರಶೈವಮತ ತತ್ವಗಳನ್ನು ಪ್ರಚಾರ ಮಾಡಿದರೆಂದೂ ಆ ಮೇಲೆ ಶ್ರೀ ಬಸವಣ್ಣನವರು ಈ ಮತವನ್ನು ಹೆಚ್ಚಾಗಿ ಪ್ರಚಾರಕ್ಕೆ ತಂದರೆಂದೂ ಮುಂತಾಗಿ ಹೇಳಿ ಮುಗಿಸಿದರು. ಅನಂತರ ಶ್ರೀ|| ಮುಧೋಳಕರ ವಕೀಲರು ಅಧ್ಯಕ್ಷರ ಅಪ್ಪಣೆಯ ಮೇರೆಗೆ ತಮ್ಮ ಭಾಷಣವನ್ನಾರಂಭಿಸಿದರು. ಬಸವನೆಂದರೆ ಎತ್ತು. ಆ ಎತ್ತನ್ನು ಎತ್ತಿನೋಡಿದರೆ ಅದರಲ್ಲಿ ಏನು ಇದೆ ಎಂಬುದು ತಿಳಿಯುವದು. ಆ ಎತ್ತಿಗೆ ೪ ಪಾದಗಳು ಇರುವವು ಆ ನಾಲ್ಕು ಪಾದಗಳು ಧರ್ಮಸ್ವರೂಪವಾಗಿರುವವೆಂದು ವೇದಾಂತ ರೀತಿಯಿಂದ ಹೇಳಿದರು. ಆ ಮೇಲೆ ಶ್ರೀ|| ಧನಶೆಟ್ಟಿಯವರು ವೀರಶೈವರಲ್ಲಿ ಜಾತಿಭೇದವನ್ನು ಬಿಡಿಯದೆ ಒಳಪಂಗಡಗಳನ್ನೆಲ್ಲ ಮುರಿದು ಒಂದೇ ಆಗದ ಹೊರತು ಎಂದೂ ವೀರಶೈವ ಮತವು ಸುಧಾರಿಸುವದಿಲ್ಲ ಎಂದು ಶ್ರೀ ಬಸವಣ್ಣನವರು ಡೋಹರ ಕಕ್ಕಯ್ಯ ಸಮಗಾರ ಹರಳಯ್ಯ ಮೇದಾರ ಚೆನ್ನಯ್ಯ ಮೊದಲಾದವರ ಕೂಡ ಸಮರಸ ಮಾಡುತ್ತಿದ್ದರೆಂದು ಒಟ್ಟಿಗೆ ಜಾತಿಭೇದ ಇಲ್ಲವೆಂಬ ವಚನಗಳನ್ನು ಉದಾಹರಿಸಿ ಹೇಳಿದರು. ಇಲ್ಲಿಯ ರೆವ್ಹರೆಂಡ ಮಕಫಿ ಇವರು ಬಸವಣ್ಣನವರ ಗುಣಾನುವರ್ಣನೆಯನ್ನು ಮಾಡಿ ಮುಗಿಸಿದರು. ಶ್ರೀ|| ವಿರಕ್ತ ಮರಿದೇವರೊಬ್ಬರು ಶ್ರೀ ಬಸವಣ್ಣನವರ ತತ್ವದ ಪ್ರಕಾರ ನಾವು ಕೃತಿಯಲ್ಲಿ ತಂದರೆ ನೆಟ್ಟಗಾಗುವದೆಂದು ಹೇಳಿದರು.

ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣ ಸುರುಮಾಡಿ ಹೇಳಿದ್ದೇನಂದರೆ ಶ್ರೀ|| ಮುಧೋಳಕರ ವಕೀಲರು ಬಸವೇಶ್ವರರಿಗೆ ಎತ್ತು ಎಂದು ನಂದೀ ಅವತಾರವೆಂದು ಧರ್ಮಸ್ವರೂಪದ ೪ ಪಾದಗಳೆಂದು ಹೇಳಿದ್ದು ಸರಿಯಲ್ಲ. ಶ್ರೀ ಬಸವಣ್ಣನವರು ನಮ್ಮಂತೆ ಮನುಷ್ಯರೆಂದು ಅವರ ಕಾಲದಲ್ಲಿ ಸಣ್ಣ ಸಣ್ಣ ರಾಜಧಾನಿಗಳು ಬಹಳ ಇದ್ದು ಅವರಲ್ಲಿ ಒಕ್ಕಟ್ಟು ಇಲ್ಲದ್ದರಿಂದ ಬಹಳ ದಂಗೆ ವಗೈರೆ ಆಗಿ ಅಶಾಂತತೆ ಇದ್ದುದರಿಂದ ಶ್ರೀ ಬಸವಣ್ಣನವರು ದೊಡ್ಡರಾಜಧಾನಿಯಾದ ಬಿಜ್ಜಳನ ರಾಜ್ಯದಲ್ಲಿ ತಾನು ಮಂತ್ರಿಯಾಗಿ ನಿಂತು ಬಹಳ ಉತ್ತಮರೀತಿಯಿಂದ ರಾಜ್ಯದ ಕೆಲಸ ಮಾಡುತ್ತ ಲಿಂಗವಂತ ಧರ್ಮದ ಕಳಕಳಿಯುಳ್ಳವನಾಗಿ ಲಿಂಗವಂತ ದೀಕ್ಷೆಯನ್ನು ಕೊಡುತ್ತ ದೀಕ್ಷಿತರೆಲ್ಲರೂ ಒಂದೇ ಎಂದು ಹೇಳುತ್ತ ಜಾತಿತಾರತಮ್ಯವನ್ನು ತೆಗೆದುಹಾಕಿ ಪುನರ್ವಿವಾಹ ಶುದ್ಧ ಬಳಕೆಯಲ್ಲಿ ತರಬೇಕೆಂದು ತನ್ನ ಅಕ್ಕನ

ಸತ್ಯದ್ದರಿಂದಲೋ ಏನೋ ಬಸವಣ್ಣನವರು ಅಕ್ಕನಾಗಮ್ಮ ದೋಹರ ಕಕ್ಕಯ್ಯನಿಗೆ ಪುನರ್ವಿವಾಹ ಮಾಡಿ ಕೊಟ್ಟಿದ್ದ ಅಂತೆಯೇ ಕಕ್ಕಯ್ಯನಿಂದ ಅಕ್ಕನಾಗಮ್ಮನಲ್ಲಿ ಜನಿಸಿದ ಸವೀಗೆ ಗುರುತ್ವದ ದೊಡ್ಡ ಪಟ್ಟವನ್ನು ಕಟ್ಟಿದನೆಂದು ನು ಸ್ತ್ರೀಸ್ವಾತಂತ್ರ್ಯ ಕೊಟ್ಟಿದ್ದನೆಂದು ಜಾತಿ ತಾರ ವನ್ನೆಲ್ಲ ತೆಗೆದುಹಾಕಿದ್ದು ಕಲ್ಯಾಣದಲ್ಲಿ ಕರುವ ಯಿಂದ ಬ್ರಾಹ್ಮಣರ ಮಧುವಯ್ಯನ ಮಗಳನ್ನು ಸಮಗಾರ ಯ್ಯನ ಮಗನಿಗೆ ಕೊಟ್ಟು ಮದುವೆಮಾಡುವುದನ್ನು ನಿಶ್ಚ ದನು. ಅಗ್ಗಿ ತನ್ನ ಕಡೆಯ ಬಹುಜನರು ಮತ್ತು ರಾಜನು ಲಾದ ಎಷ್ಟೋ ಜನರು ಈ ಮಿಶ್ರ ವಿವಾಹವು ನೆಟ್ಟಗಲ್ಲ ು ಇದರಿಂದ ಹಿನ್ನ ಪರಿಣಾಮವು ನೆಟ್ಟಗಾಗುವದಿಲ್ಲ ಎಂದು ದರು. ಮಿಶ್ರವಿವಾಹ ಮಾಡುವದನ್ನು ಬಿಟ್ಟರೆ ನಾನು ಬಹು ದಿಂದ ಬೋಧಿಸಿದ್ದು ವ್ಯರ್ಥವಾಗುವದು. ಒಂದು ವೇಳೆ ವಿವಾಹವನ್ನು ಮಾಡಿದರೆ ಭಯಂಕರ ಸಂಕಟ ಒದಗುವದು ಆಗಲಿ ಲಗ್ನ ಮಾಡೇ ತಿರುವೆನೆಂದು ಲಗ್ನ ಮಾಡಿದನು. ಇದ ಆ ಕಾಲಕ್ಕೆ ಮಿಶ್ರವಿವಾಹದ ಬಗ್ಗೆ ಬಹಳೇ ಕ್ಷೋಭವಾದ್ದ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದರೆಂದೂ ಗೆ ಆಗಲಿ ಬಸವನು ನುಡಿದಂತೆ ನಡೆದನೆಂಬುವದರ ಭಾವವನ್ನು ರಿಸಿದನೆಂದು ಅಧ್ಯಕ್ಷರು ಹೇಳಿದರು.

ಮೇಲೆ ಶ್ರೀ. ಧನಶೆಟ್ಟಿಯವರು ಅಧ್ಯಕ್ಷರ ಆಭಾರಮನ್ನಿಸ ಎದ್ದು, ಅಧ್ಯಕ್ಷರು ಅಕ್ಕನಾಗಮ್ಮನನ್ನು ಕಕ್ಕಯ್ಯನಿಗೆ ವಣ್ಣನವರು ಪುನರ್ವಿವಾಹವನ್ನು ಮಾಡಿಕೊಟ್ಟದ್ದರೆಂಬದು ರು ಅನುಮಾನಮಾಡಿ ಹೇಳಿದಾರೆ. ಅದು ನಿಜವಲ್ಲ. ಅಕ್ಕ ಗಮ್ಮನಿಗೆ ಗಂಡನಿದ್ದನೆಂದೂ ಗಂಡನಿಂದ ಚೆನ್ನಬಸವನನ್ನು ದಳೆಂದೂ ಸಿಂಗಿರಾಜ ಪುರಾಣದಲ್ಲಿ ಬರೆದದೆ. ಇದರ ವಿಷ ವಾಗಿ ಬಸವ ಪುರಾಣ ಚೆನ್ನಬಸವ ಪುರಾಣ ತಪ್ಪು ಅದೆ ು ಹೇಳಿ ಅನಂತರ ಅಧ್ಯಕ್ಷರ ಆಭಾರ ಮನ್ನಿಸಿದರು. ಆ ಲೆ ಸಭೆಯ ಕೆಲಸವು ಮುಕ್ತಾಯ ಗೊಳಿಸಲ್ಪಟ್ಟಿತು.

ಪುರ. ಪ್ರತ್ಯಕ್ಷದರ್ಶಿ.
ಮಂತಯ್ಯ ಬಸಯ್ಯ ಕರ್ಪೂರ ಮಠ.

ಂಗಳೂರು ಶಾರದಾಸಮಾಜಕ್ಕೆ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಭೇಟಿಕೊಟ್ಟದ್ದು.

ಈ ತಿಂಗಳು 3 ನೇ ತಾರೀಖು ಸಾಯಂಕಾಲ ಬೆಂಗಳೂರು ರದಾ ಸ್ತ್ರೀ ಸಮಾಜಕ್ಕೆ ಸರ್. ಮಿರ್ಜಾ ಎಂ. ಇಸ್ಮಾಯಿಲ್ ರು ದಯಮಾಡಿಸಿದ್ದರು. ಈ ಸಮಾಜದ ಸ್ತ್ರೀಯರು ಅವರಿಗೆ ರವನ್ನು ಮಾಡಿ ಸ್ತ್ರೀಯರ ವಿದ್ಯಾಭಿವೃದ್ಧಿಗೂ ಆತ್ಮಾವಲಂ ಕ್ಕೂ ದಿವಾನ್ ಸಾಹೇಬರವರು ಮಾಡಿದಕಕ್ಕೆ ಗುಣಕಥನ ನ್ನು ಗರ್ಭೀಕರಿಸಿ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಇದಕ್ಕೆ ರ್ ಸಾಹೇಬರವರು ಅಪ್ಪಣೆ ಕೊಡಿಸಿದ್ದೇನೆಂದರೆ:—

ಈ ಸಮಾಜದಲ್ಲಿ ಸ್ತ್ರೀಯರ ವಿದ್ಯಾಭಿವೃದ್ಧಿಗೂ ಆತ್ಮಾವಲಂ ಕ್ಕೂ ಸಾಧಕವಾದ ಕೆಲಸಗಳನ್ನು ಮಾಡುವುದರಲ್ಲಿ ನೀವು ರಿಸುತ್ತಲಿರುವ ಶ್ರದ್ಧೆಯನ್ನು ನೋಡಿ ನನಗೆ ತುಂಬಾ ಸಂತೋಷ ಯಿತು. ಈ ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಶ್ರೀಮ ಹಾರಾಜರವರು ಅಸಾಧಾರಣವಾದ ಉತ್ತೇಜನವನ್ನು ಕೊಡು ದ್ದಾರೆ. ಕಳೆದ 19 ವರ್ಷಗಳಿಂದ ಸ್ತ್ರೀಯರ ಪುರೋಭಿವೃದ್ಧಿ ಕ್ಕಾಗಿ ಈ ಸಮಾಜದ ಪ್ರೆಸಿಡೆಂಟರಾದ ಶ್ರೀ (ಲೇಡಿ ಪುಟ್ಟ ಶೆಟ್ಟರು) ಮಾಡುತ್ತಿರುವ ಮೆಹನತ್ತಿನಿಂದ ಈ ಪಟ್ಟಣದ ಅನೇ ಸ್ತ್ರೀಯರಿಗೆ ತುಂಬಾ ಉಪಕಾರವಾಗಿರುವುದು. ಸ್ತ್ರೀಯರಿಗೆ ಯುವುದು, ಬರೆಯುವುದು ಮೊದಲಾದ ಶಿಕ್ಷಣಗಳಜೊತೆಗೆ ಚಿತ್ರದ ಸ, ಹೊಲಿಗೆಯಕೆಲಸ, ಕಸೂತಿಕೆಲಸ, ನೇಯ್ಗೆಯ ಕೆಲಸ ದಲಾದುವುಗಳಲ್ಲಿ ಶಿಕ್ಷಣಗಳನ್ನುಕೊಟ್ಟು, ಮನೆಯಕೆಲಸದ ಗೆ ವಿರಾಮಕಾಲಗಳಲ್ಲಿ ಪರಾಧೀನರಾಗದೆ ಬದುಕುವುದಕ್ಕೆ ಧಕವಾದ ಉದ್ಯೋಗಗಳನ್ನು ಕಲ್ಪಿಸುತ್ತೀದ್ದೀರಿ. ಮಕ್ಕಳ ಗೆಗಳು, ಕರವಸ್ತ್ರಗಳು, ಚಿತ್ರದ ಸಾಮಾನುಗಳು ಇವುಗಳನ್ನು ಬೆಳೆಮಾಡುವುದರಿಂದ ಬಡವರಾದ ಹೆಂಗಸರಿಗೆ ಜೀವನೋ ಯಗಳು ದೊರೆಯುವಂತೆ ಮಾಡುತ್ತಲಿದ್ದೀರಿ. ಸಾಮಾಜಿಕವಿಷ ಗಳಲ್ಲಿಯೂ, ಮತವಿಷಯಗಳಲ್ಲಿಯೂ ಈ ಸಮಾಜದಲ್ಲಿ ಕೊಡ ತ್ತಲಿರುವ ಶಿಕ್ಷಣಗಳಿಂದ ಸ್ತ್ರೀಯರು ಶೀಲವತಿಯರಾ ಯೂ, ಗುಣಶಾಲಿನಿಯರಾಗಿಯೂ, ಮನೋವಾಕ್ಕರ್ಮಗಳಲ್ಲಿ ಶುದ್ಧರಾಗಿಯೂ, ದುರಭಿಮಾನರಹಿತರಾಗಿಯೂ ದೇಶಸೇವೆ ಲಕ ಆತ್ಮಸೇವೆಯನ್ನು ಮಾಡಿಕೊಳ್ಳುವ ಶಕ್ತಿಯುಳ್ಳವರಾಗು ಮಾಡುತ್ತಲಿದ್ದೀರಿ. ಸ್ತ್ರೀಯರ ಅಭಿವೃದ್ಧಿಗೆ ಎಷ್ಟೋ ಅಡಚ ರುತ್ತವೆ. ಅವುಗಳಿಗೆ ಭಯಪಡದೆ ಯಾವ ಸ್ತ್ರೀಯರು ಗೃಹ ಗಳನ್ನು ಸರಿಯಾಗಿಮಾಡುವುದರಲ್ಲಿಯೂ, ವಿರಾಮಕಾಲಗ ಕೆಲಸಮಾಡಿ ಜೀವಿಕೆಯನ್ನು ಸಂಪಾದಿಸಿಕೊಳ್ಳುವುದರಲ್ಲಿಯೂ, ಕನವಾದ ಸ್ತ್ರೀಧರ್ಮಗಳಿಗೆ ನ್ಯೂನತೆಬಾರದಂತೆಮಾಡಿಕೊಳ್ಳುವು ಲ್ಲಿಯೂ, ಸ್ವಶಕ್ತಿಯಿಂದ ಕುಟುಂಬಭರಣವನ್ನು ಮಾಡುವುದರ ಯೂ, ದುಂದುಗಾರಿಕೆಗೆ ಬೀಳದೆ ಗೃಹಕೃತ್ಯಗಳನ್ನು ನಡೆಸಿ ಂದು ಅರ್ಥಶಾಸ್ತ್ರವಿಶಾರದೆಯರಾಗುವಕ್ಕೆ ವಿಷಯದಲ್ಲಿಯೂ ಸಮಾಜದಲ್ಲಿ ಶಿಕ್ಷಣವನ್ನು ಹೊಂದತಕ್ಕವರು ಸಾಧ್ಯವಾದ ಗೂ ಚತುರೆಯರಾಗುತ್ತಲಿದ್ದಾರೆ. ಈ ಭರತಖಂಡದಲ್ಲಿ ಮಾರು 18 ಕೋಟಿ ಸ್ತ್ರೀಯರಿರುವರು. ಎಲ್ಲರೂ ದಿನಕ್ಕೆ 10 ರಿಗಳಾದರೂ ಕೆಲಸವನ್ನು ಮಾಡಿ ಆತ್ಮಾವಲಂಬಿಗಳಾದರೆ ಇಂ ದೇಶವೇ ಸ್ವರ್ಗವಾಗುವುದು. ಸ್ತ್ರೀಯರು ವಿದ್ಯಾವತಿಯ ಯೂ, ಗುಣಶಾಲಿನಿಯರಾಗಿಯೂ, ಭುಜಬಲದಿಂದಲೂ, ಬುದ್ಧಿಬಲದಿಂದಲೂ ಕೆಲಸಮಾಡತಕ್ಕವರಾಗಿಯೂ ಆದರೆ ಅವರ ಮಕ್ಕಳು ಲೋಕೈಕವೀರರಾಗಿ ಇಂಡಿಯಾದೇಶವು ಆತ್ಮಾವಲಂಬನಕ್ಕೆ ಮಾತೃಭೂಮಿಯಾಗುವುದು. ಹೀಗೆ ಆಗುವಂತೆ ಮಾಡಬೇಕೆಂದು ನೀವೇ ಮೊದಲಾದ ನಮ್ಮ ದೇಶದ ಅನೇಕ ಸ್ತ್ರೀಯರು ಸರ್ವತೋಮುಖವಾದ ಆತ್ಮಾವಲಂಬನಕ್ಕೆ ಮೇಲ್ಪಂಕ್ತಿಯನ್ನು ಹಾಕುತ್ತಲಿದ್ದೀರಿ. ನಿಮಗೆ ಉದಾರವಾಗಿ ಪ್ರೋತ್ಸಾಹವನ್ನು ಮಾಡತಕ್ಕ ಶ್ರೀಮನ್ಮಹಾರಾಜರವರ ಗೌರ್ನಮೆಂಟಿಗೆ ಮುಖ್ಯ ಕರ್ತವ್ಯ. ಸಾಧ್ಯವಾದಮಟ್ಟಿಗೂ ಶ್ರೀಮನ್ಮಹಾರಾಜರವರ ಗೌರ್ನಮೆಂಟಿನವರು ನಿಮ್ಮ ಪ್ರಾರ್ಥನೆಗಳನ್ನು ನೆರವೇರಿಸುವರು.

ಈ ಅಭಿಪ್ರಾಯಬರುವಂತೆ ಸರ್ ಮಿರ್ಜಾಸಾಹೇಬರವರು ಉತ್ತರವನ್ನು ಕೊಟ್ಟರು. ಇದು ಬಹಳ ಯುಕ್ತಿಯುಕ್ತವಾಗಿದೆ. ಸರ್. ಪುಟ್ಟಣ್ಣಸೆಟ್ಟರವರು ಸುಮಾರು 50-60 ವರ್ಷಗಳಿಂದ ನಿಸರ್ಗವಾದ ದೇಶಭಕ್ತಿಯಿಂದಲೂ, ನಿಸ್ಪೃಹತೆಯಿಂದಲೂ ಹೇಗೆ ದೇಶಸೇವೆಯನ್ನು ಮಾಡುತ್ತಲಿರುವರೋ ಹಾಗೆ ತಾವೂ ಮಾಡಬೇಕೆಂದು ಲೇಡಿ ಪುಟ್ಟಣ್ಣಸೆಟ್ಟರವರು ಈ ಸಮಾಜದ ಕೆಲಸಗಳನ್ನು ಪರಿಗ್ರಹಿಸಿರುವರು. ಇವರ ಮೆಹನತ್ತಿಗೆ ಅನುರೂಪವಾದ ಪ್ರತಿಫಲವು ಸರಕಾರದಿಂದ ದೊರೆಯುವುದು. ಸರ್ ಪುಟ್ಟಣ್ಣಶೆಟ್ಟರವರಂತೆ ಲೇಡಿ ಪುಟ್ಟಣ್ಣಸೆಟ್ಟರೂ ಕೂಡ ತಮ್ಮ ಸರ್ವಸ್ವವನ್ನೂ ದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಿ, ಕೈಲಾಸಾಧಿಪತಿಯಾದ ಶ್ರೀ ಪರಮೇಶ್ವರನ ಪ್ರಸನ್ನತೆಗೆ ಪಾತ್ರರಾಗಲೆಂದು ನಾನು ಕೋರುತ್ತೇನೆ. ಸರ್. ಮಿರ್ಜಾಸಾಹೇಬರೂ ಮತ್ತು ಲೇಡಿ ಮಿರ್ಜಾರವರೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಡುತ್ತಲಿರುವ ಉತ್ತೇಜನಕ್ಕೋಸ್ಕರ ದೇವರು ಇವರಿಗೆ ಸಕಲಸನ್ಮಂಗಳಗಳನ್ನೂ ಕೊಡಲೆಂದು ನಾನು ಕೋರುತ್ತೇನೆ.

ಎಂ. ವೆಂಕಟಕೃಷ್ಣಯ್ಯ.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ ಸರ್ಕೀಟು ಆಗಮನವು,

ಕಲ್ಯಾಣದುರ್ಗ ಟೌನ್.

ಶ್ರೀಗಿರಿರಾಜಸೂರ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಟ್ಟಾಧ್ಯಕ್ಷ ಶ್ರೀ ೧೦೮ ನಾಗಲಿಂಗ ಭಿಕ್ಷಾವೃತ್ತಿ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸರ್ಕೀಟಿನ ಗುರುತ್ವಾಧಿಕಾರಿಗಳಾದ ಶ್ರೀ|| ಷ|| ಬ್ರ|| ಕೌಂಡಿನ್ಯಪುರ ಶಿಲಾಮಠಾಧ್ಯಕ್ಷ ಶಿವಶಂಕರಶಿವಾಚಾರ್ಯ ಪಟ್ಟದಸ್ವಾಮಿಗಳು (ವೇದಾಂತಭೂಷಣ) ಇವರು ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಕಾಡಪ್ರ ಕೆಂಬಾಳಮಠದ ಸಣ್ಣಮಲ್ಲಯ್ಯನವರು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಗಂಗವರ ಮುಕ್ಕಾಮಿನಿಂದ ತಾ|| ೮-೮-೩೨ ಸೋಮವಾರ ಸಾಯಂಕಾಲ ೬ ಘಂಟೆಗೆ ಕಲ್ಯಾಣದುರ್ಗಕ್ಕೆ ಚತುರಂಗಬಲ ಸಮೇತರಾಗಿ ಬಿಜಯಂಗೈಸಿದರು. ಸವಾರಿಯು ದಯಮಾಡಿಸುವದರೊಳಗಾಗಿ ಪುರಪ್ರಮುಖರಾದ ವೇ|| ಮಠದ ಈಶ್ವರಯ್ಯನವರು ಮತ್ತು ಗ್ರಾಮದ ಶಾನಭೋಗರಾದ ಚಿಕ್ಕಪ್ಪನವರು ಯಜಮಾನ ಮಳೀ ರಾಚೂಟಪ್ಪನವರು ವೀರಭದ್ರಪ್ಪನವರು ಘಟಪರ್ತಿ ಚೆಲುಮಪ್ಪನವರು ಮುಂತಾದ ಸಮಸ್ತ ಭಕ್ತ ಮಾಹೇಶ್ವರರು ಇಸ್ತಕಬಾಲ್ ಮತ್ತು ಮಂಗಳವಾದ್ಯ ವೈಭವಗಳೊಡನೆ ಭಕ್ತಿ ವಿಶ್ವಾಸಪೂರ್ವಕವಾಗಿ ಮಹಾಸವಾರಿಯನ್ನು ಎದುರುಗೊಂಡು ಉತ್ಸವಪೂರ್ವಕವಾಗಿ ರಾಜಬೀದಿಗಳಲ್ಲಿ ಹೊರಡಿಸಿಕೊಂಡು ಊರುಹೊರಗಿನ ಮಠದಲ್ಲಿ ಅಲಂಕರಿಸಲ್ಪಟ್ಟ ಸಿಂಹಾಸನದ ಮೇಲೆ ಧರ್ಮಗುರುಗಳನ್ನು ಆರೋಹಣಮಾಡಿಸಿದರು. ಅನಂತರ ಶ್ರೀಗಳವರು ತಮ್ಮ ಅಮೃತವಾಣಿಯಿಂದ ಅನೇಕ ಉದಾಹರಣೆಗಳೊಡನೆ ಸಭಿಕರಿಗೆ ಶ್ರವಣಾನಂದವಾಗುವಂತೆ ವೀರಶೈವ ಮತತತ್ವವನ್ನು ಬೋಧಿಸಿದರು. ಅನಂತರ ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಕಾಡಪ್ರ ಕೆಂಬಾಳಮಠದ ಸಣ್ಣಮಲ್ಲಯ್ಯನವರು ಶ್ರೀ ಜಗದ್ಗುರು ಪಂಚಾಚಾರ್ಯರು ಜಗತ್ತಿನಲ್ಲಿ ಮಾಡಿದ ಅದ್ಭುತ ಲೀಲಾವೈಭವಂಗಳನ್ನೂ ಮತ್ತು ನಾಗನೂರು ಬೃಹನ್ಮಠಾಧ್ಯಕ್ಷ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ವೀರಶೈವಮತಕ್ಕೆ ಮಾಡಿದ ಮಹೋಪಕಾರದ ವಿಷಯವನ್ನೂ ಶ್ರೋತೃಗಳ ಹೃದಯದಲ್ಲಿ ಪ್ರತಿಬಿಂಬಿಸುವಂತೆ ಭಾಷಣವನ್ನು ಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜೈ ಎಂಬುವ ಜಯಜಯಕಾರದೊಡನೆ ಮಂಗಳವನ್ನು ಮಾಡಿ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಶ್ರೀ ಜಗದ್ಗುರು ಪಾದಸೇವಕ,
ಯಜಮಾನ್ ಮಳೀ ರಾಚೂಟಪ್ಪ,
ತಾಲೂಕು ಕಲ್ಯಾಣದುರ್ಗ ಟೌನ್.

ಆಧುನಿಕ ಕಬೀರರು

ಈ ತಿಂಗಳು ೩೧ ನೆಯ ತಾರೀಖಿನ ಡೇಲಿಪೋಸ್ಟ್ ಪತ್ರಿಕೆಯಲ್ಲಿ ಸರ್ ಮಿರ್ಜಾಸಾಹೇಬರವರು ಆಧುನಿಕ ಕಬೀರರೆಂಬುವುದಾಗಿ ಒಂದು ಲೇಖನವು ಬರೆಯಲ್ಪಟ್ಟಿರುವುದು. ಇದನ್ನು ಸಮರ್ಥಿಸುವುದಕ್ಕೋಸ್ಕರ ಅವರು ಆಗಾಗ್ಗೆ ಮಾಡಿರುವ ಕೆಲವು ಉಪನ್ಯಾಸಗಳು ಉದಾಹರಿಸಲ್ಪಟ್ಟಿರುವುವು. ಈ ಪ್ರಪಂಚವು ಕೇವಲ ವಿಚಿತ್ರವಾದದ್ದು. ಜನಗಳ ಮಾತುಗಳಿಗೂ, ಅವರ ಕಾರ್ಯಗಳಿಗೂ ಸಂಬಂಧವಿರುವುದು ಅಪೂರ್ವ. ಮಕಿವೆಲ, ಅವರಂಗಜೇಬ್ ಮೊದಲಾದ ರಾಜತಂತ್ರವಿಶಾರದರು ಇಂಥಾ ಗುಂಪಿಗೆ ಸೇರದವರಲ್ಲ. ನಮ್ಮ ಖಾವಂದರಾದ ಶ್ರೀ ನಾಲ್ವಡಿ ಕೃಷ್ಣರಾಜಒಡೆಯರವರ ಬಿರುದು 'ಸತ್ಯಮೇವೋದ್ಧರಾಮ್ಯಹಂ' ಎಂಬುವುದು. ಸರ್ ಮಿರ್ಜಾರವರು ಶ್ರೀಮನ್ಮಹಾರಾಜರವರ ಪ್ರತಿಬಿಂಬದೋಪಾದಿಯಲ್ಲಿರುವರು. ಶ್ರೀಮನ್ಮಹಾರಾಜರವರ ಬಿರುದೇ ಇವರ ಬಿರುದಾಗಿರುವುದು. ವಾಸ್ತವಾಂಶಗಳು ತಿಳಿಯದೇ ಪ್ರಮಾದಗಳು ನಡೆಯುವುದುಂಟು. ನಿಜಸ್ಥಿತಿಯು ಗೊತ್ತಾದಕೂಡಲೇ ಸರ್ ಮಿರ್ಜಾರವರು ಅಧಿಕಾರದ ಚಲಾವಣೆಗಳಲ್ಲಿ ತಪ್ಪುಗಳೇನಾದರೂ ನಡೆದಿದ್ದರೆ ಅದನ್ನು ತಿದ್ದಿಕೊಳ್ಳುವರು. ಅವರಿಗೆ ಜಾತಿಭೇದ, ಮತಭೇದ, ಕೋಮಿನಭೇದಗಳಿರುವುದಿಲ್ಲ. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾದವರೆಲ್ಲಾ ಉತ್ತಮರೆಂಬುದಾಗಿಯೂ, ಅಪರಿಶುದ್ಧರೆಲ್ಲಾ ಉತ್ತಮರಾಗುವಂತೆ ಸರ್ಕಾರದವರು ಕೃಷಿಯನ್ನು ಮಾಡಬೇಕೆಂಬುದಾಗಿಯೂ, ಇವರಿಗೆ ಮನೋಭಾವವು ಇರುವುದು. ಪ್ರಭುತ್ವಮಾಡತಕ್ಕವರಿಗೂ, ಅಧಿಕಾರವನ್ನು ಚಲಾಯಿಸತಕ್ಕವರಿಗೂ ಬುದ್ಧಿಶಕ್ತಿಯೂ, ದಯಾರ್ದ್ರಹೃದಯವೂ ಇವೆರಡೂ ಇದ್ದರೆ ಸತ್ಯವೂ, ಧರ್ಮವೂ ರೂಢಮೂಲವಾಗುವುವು. ಬರೀ ಬುದ್ಧಿಶಕ್ತಿಯು ಇದ್ದರೆ ಪ್ರಭುಗಳೂ, ಅಧಿಕಾರಿಗಳೂ ರಾವಣಾದಿಗಳಾಗಬಹುದು. ತೀಕ್ಷ್ಣವಾದ ಬುದ್ಧಿಯು ಇಲ್ಲದೇ ಇದ್ದಾಗ್ಯೂ, ದಯಾರ್ದ್ರಹೃದಯವು ಇದ್ದರೆ ಪ್ರಭುಗಳೂ, ಅಧಿಕಾರಿಗಳೂ ಹರಿಶ್ಚಂದ್ರಾದಿಗಳಂತೆ ಪ್ರಜಾರಂಜಕರಾಗುವರು. ಸರ್ ಮಿರ್ಜಾರವರಿಗೆ ಭೂತದಯೆಯು ಚೆನ್ನಾಗಿರುವುದು. ಲೋಕಪಕ್ಷಗಳಿಗೆ ಅಧೀನರಾಗಿ ಕೆಲಸವನ್ನು ಮಾಡತಕ್ಕ ಮನೋಭಾವವು ಇವರಿಗೆ ಇರುವುದಿಲ್ಲ. ಗುಣೈಕಪಕ್ಷಪಾತಿತೆಯು ಇವರಲ್ಲಿರುವುದು. ಅನೇಕಸಂದರ್ಭಗಳಲ್ಲಿ ಇವರು ಅಪಕಾರಿಗಳಿಗೂ ಉಪಕಾರಮಾಡಿರುತ್ತಾರೆ. ಆದುದರಿಂದ ಮೇಲೆಹೇಳಿದ ಲೇಖನವನ್ನು ಬರೆದವರು ಇವರಿಗೆ ಆಧುನಿಕ ಕಬೀರರೆಂದು ಕೊಟ್ಟಿರುವ ಹೆಸರು ಅನ್ವರ್ಥವಾಗಿರುವುದೆಂದು ನನಗೆ ತೋರುತ್ತದೆ. ಮನುಷ್ಯರು ದೇವತೆಗಳಲ್ಲ. ಒಳ್ಳೇ ಮನುಷ್ಯರಲ್ಲಿಯೂ ಕೆಲವು ಒಂದೆರಡು ನ್ಯೂನತೆಗಳಿದ್ದರೆ ಹಲವಾರು ಗುಣಗಳನ್ನು ಮರೆತು ಒಂದೆರಡು ದೋಷಗಳಿಗೋಸ್ಕರ ಅವರನ್ನು ನಿಂದಿಸಬಾರದೆಂದು ಮಹಾತ್ಮರು ಹೇಳುವರು. ಕಾಳಿದಾಸನೂ ಕೂಡ ಚಂದ್ರನಲ್ಲಿ ಕಳಂಕವಿದ್ದ ಮಾತ್ರದಿಂದಲೇ ಅವನಿಂದ ಉಂಟಾಗತಕ್ಕ ಬೆಳದಿಂಗಳಿನಲ್ಲಿ ದೋಷವು ಇರುವುದೇ ಎಂದು ಕೇಳಿದ್ದಾನೆ. ಚಂದ್ರನು ಲೋಕದಲ್ಲಿ ಸಮಸ್ತರಿಗೆ ಹೇಗೆ ಸಂತೋಷಜನಕನೋ ಹಾಗೆ ನಮ್ಮ ಮಹಾರಾಜರವರೂ ಮತ್ತು ಸರ್ ಮಿರ್ಜಾರವರೂ ಲೋಕೋಪಕಾರಿಗಳಲ್ಲಿ ಅಗ್ರಗಣ್ಯರಾಗಿ ಆಧುನಿಕ ಕಬೀರರಾಗಿ ಪರಿಣಮಿಸಿರುವರೆಂದು ಈ ಲೇಖಕರು ಬರೆದಿರುವುದನ್ನು ಗುಣೈಕಪಕ್ಷಪಾತಿಗಳೆಲ್ಲಾ ಅನುಮೋದಿಸಿರುತ್ತಾರೆ. ಇದರಲ್ಲಿ ನಾನು ಒಬ್ಬನಾಗಿರುತ್ತೇನೆ. ನಮ್ಮ ಖಾವಂದರವರಿಗೂ, ಸರ್ ಮಿರ್ಜಾರವರಿಗೂ ದೇವರು ಸಕಲಸನ್ಮಂಗಳಗಳನ್ನು ಕೊಡಲೆಂದು ನಾನು ಕೋರುತ್ತೇನೆ.

ಎಂ. ವಿ.

ಕೇದಾರಪ್ರಾಂತದ ಸಮಾಚಾರ.

ವೀರಶೈವ ಮಹಾಮತಸ್ಥಾಪನಾಚಾರ್ಯ ದ್ವಾಪರಾರಾಮ ರಾಮನಾಥಲಿಂಗೋದ್ಭವ ಶ್ರೀ ಹಿಮವತ್ಕೇದಾರ ವಿಕೋರಾಮ ವೈರಾಗ್ಯ ಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಕೈಲಾಸಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ತಾ|| 19-7-32 ರಲ್ಲಿ ದಕ್ಷಿಣದೇಶಕ್ಕೆ ಪ್ರಯಾಣಬೆಳಸಿದರು. ಮಹಾ ಸನ್ನಿಧಿಯವರಿಗೆ ಬ್ರಿಟಿಷ್ ಗವರ್ನಮೆಂಟಿನಿಂದ ದೊರೆತ ಸನದಾರಿಯಲ್ಲಿ ನಮೂದಿಸಿದ ಬಿರುದಾವಳಿಗಳ ಲಿಷ್ಟು ಕೆಳಗೆ ಬರೆದಿದೆ. ಇನ್ನುಮುಂದೆ ಶ್ರೀ ಜಗದ್ಗುರು ಕೈಲಾಸಲಿಂಗ ಮಹಾಸ್ವಾಮಿಗಳು ಈ ಬಿರುದಾವಳಿಗಳಿಂದ ದೇಶಮಧ್ಯದಲ್ಲಿ ಸಂಚರಿಸುವರು.

ಸಿದ್ಧಲಿಂಗಕುಮಾರ.

ಬಿರುದುಗಳ ತಪಶೀಲು.

ಅಡ್ಡಪಾಲಕಿ, ಸುವರ್ಣಪಾಲಕಿ, ರಜತಪಾಲಕಿ, ಪಾಲಕಿ, ಮೇಣೆ, ಪಂಚಕಲಶ, ವ್ಯಾಘ್ರಹಸ್ತ, ಶ್ವೇತಚ್ಛತ್ರ, ನಂದಿಧ್ವಜ, ಅಪ್ತಾಗಿರಿ, ಪಂಚವರ್ಣದ ಛತ್ರ, ಚಾಮರ, ವ್ಯಜನ, ಭೂಚಕ್ರದ ಕೊಡೆ, ಮಕರತೋರಣ, ರಾಜಗೊಂಡೆ, ಹಗಲುದೀವಟಿಗೆ, ಪಂಚದೀವಟಿಗೆ, ಬ್ರಹ್ಮಕಪಾಲ, ಸುವರ್ಣಪಾದಪೆಂಡೆ, ರತ್ನಖಚಿತ, ವಾಯುಮುಸ್ತ, ಸಿಂಹಲಲಾಟ, ಸುವರ್ಣದಂಡ, ರಜತದಂಡ, ಸುವರ್ಣಭಲ್ಲೆ, ರಜತಭಲ್ಲೆ, ತ್ರಿಶೂಲ, ಹಸುರುನಿಶಾನಿ, ಕೆಂಪುನಿಶಾನಿ, ಕಾವಿಯನಿಶಾನಿ, ನಾನಾವರ್ಣದನಿಶಾನಿ, ನೀಲಿನಿಶಾನಿ, ಅಶ್ವ, ಗಜ, ಒಂಟೆ ಆನೆಯಮೇಲೆ ಹಸುರುನಿಶಾನಿ, ಒಂಟೆಯಮೇಲೆ ಹಸುರುನಿಶಾನಿ, ಆನೆಯಮೇಲೆ ಕಾಷಾಯಧ್ವಜ, ಕುದುರೆಯಮೇಲೆ ಢಂಕಾ, ಆನೆಯಮೇಲೆಢಂಕಾ, ಒಂಟೆಯಮೇಲೆಢಂಕಾ, ಜಯಭೇರಿ, ಜಯಘಂಟೆ, ಜಂಗು, ಡಮರು, ಕಹಳೆ, ಕರ್ಣ, ಜಾಗಟೆ, ಸುನಾದ, ಸೂರ್ಯವಾದ್ಯ, ಚಂದ್ರವಾದ್ಯ, ಮೃದಂಗ, ತಾಳ, ಪದಾತಿಗಣ, ಶಸ್ತ್ರಧಾರಿ, ತ್ರಿಶೂಲಧಾರಿ, ರಥ, ಪಂಚಾಕ್ಷರಥ, ಬಲೀವರ್ದ, ಬಲೀವರ್ದರಥ, ಪರ್ಣ, ವೇದಪಾಠಕ, ವಿಪ್ರವೀರ, ಮಾಹೇಶ್ವರಗಣ, ಭಜನಮಂಡಳಿ, ಭಟ್ಟಂಗಿ, ಸುಮಂಗಲಆರತಿ, ಪೌರಾಣಿಕ, ಕೀರ್ತನಕಾರ, ವೈಯ್ಯಾಕರಣ, ನೈಯ್ಯಾಯಿಕ, ಷಡ್ದರ್ಶನಪಾರಂಗತ.

3-2-69

ಪಂಚಾಚಾರ್ಯ ಪ್ರಭಾ.

೧೯೩೦ನೇ ಆಗಸ್ಟ್ ತಾ|| ೧೮ನೇ ಸೋಮವಾರ.

~~ಗುರುಸನ್ನಾಹ~~

ಗುರುವರ್ಗಕ್ಕೆ ಎಚ್ಚರಿಕೆ ಕೊಳ್ಳಲಿ.

ಅಜ್ಞಾನಮಲಿನಂ ಚಿತ್ತದರ್ಪಣಂ ಯೋವಿಶೋಧಯೇತ್ |
ಪ್ರಜ್ಞಾವಿಭೂತಿಯೋಗೇನ ತಮಾಹು ಗುರುಸತ್ತಮಂ ||

ಶಿಷ್ಯರ ಪರಿಶುದ್ಧವಾದ ಚಿತ್ತವೆಂಬ ಕನ್ನಡಿಯ ಮೇಲೆ ಹತ್ತಿರುವ ಅಜ್ಞಾನವೆಂಬ ಕೊಳೆಯನ್ನು ಯಾವನು ಜ್ಞಾನವೆಂಬ ವಿಭೂತಿಯಿಂದ ಬೆಳಗುವನೋ ಅವನೇ ಗುರುವೆನಿಸಲ್ಪಡುವನು ಎಂದು ಶ್ರೀರೇಣುಕ ಭಗವತ್ಪಾದರು ಅಗಸ್ತ್ಯಮಹರ್ಷಿಗೆ ಬೋಧಿಸಿರುವ ಮಹಾವಾಕ್ಯವನ್ನು ಪರಿಶೀಲಿಸಿನೋಡಿದರೆ ಅನವರತವೂ ಶಿಷ್ಯರಿಗೆ ತತ್ವಾರ್ಥವನ್ನು ಬೋಧಿಸುತ್ತ, ಶಿಷ್ಯರ ಅವಿವೇಕವನ್ನು ನಾಶಗೊಳಿಸಿ ವಿವೇಕವನ್ನು ಹೆಚ್ಚಿಸುವುದೇ ಗುರುಗಳ ಕರ್ತವ್ಯವೆಂದು ಸ್ಪಷ್ಟವಾಗುತ್ತದೆ. ಹೀಗೆ ಬಹುಕಾಲದಿಂದ ಶಿಷ್ಯರ ಹೃದಯಮುಕುರವನ್ನಾವರಿಸಿದ ಅಜ್ಞಾನಮಾಲಿನ್ಯವು ನಷ್ಟವಾಗಬೇಕಾದರೆ ಜ್ಞಾನವೆಂಬ ಭಸ್ಮವು ಗುರುಗಳಲ್ಲಿರಬೇಕು. ಆ ಭಸ್ಮವು ಲೇಶಮಾತ್ರವೂ ಅವರಲ್ಲಿಲ್ಲದೆ ಇದ್ದರೆ ಶಿಷ್ಯರ ಹೃದಯಮುಕುರವು ಸ್ವಚ್ಛವಾಗುವುದೆಂತು? ಅಂಥ ಮಲಿನ ಹೃದಯದಲ್ಲಿ ಪರಮಾತ್ಮನು ಪ್ರತಿಫಲಿಸುವುದೆಂತು? ಆದುದರಿಂದ ಗುರುವು ಜ್ಞಾನವೆಂಬ ಭಸ್ಮವನ್ನು ತನ್ನ ಹೃದಯಘುಂಟಿಕೆಯಲ್ಲಿ ತುಂಬಿಕೊಂಡಿದ್ದು ಶಿಷ್ಯರ ಅಜ್ಞಾನವನ್ನು ನಾಶಗೊಳಿಸುತ್ತಿರಬೇಕು. ಅಂಥ ಧನ್ಯಾತ್ಮರಾದ ಶಿಷ್ಯರಿಂದ ಕೊಡಲ್ಪಟ್ಟ ಕಾಣಿಕಾದ್ರವ್ಯದಿಂದ ಗುರುಗಳು ಲೋಕಹಿತವನ್ನು ಮಾಡುತ್ತಿರಬೇಕು. ಇದೇ ಗುರುಗಳ ಧರ್ಮಾಚರಣೆಯು. ಅನೇಕ ಕಡೆಗಳಲ್ಲಿ ಗುರುಗಳೆಂಬವರು ತಮ್ಮಲ್ಲಿ ಅವಶ್ಯಕವಾಗಿರಬೇಕಾದ ಶಾಸ್ತ್ರಾವಲೋಕನದಿಂದಾಗುವ ಜ್ಞಾನನಿಧಿಯನ್ನು ಕಳೆದುಕೊಂಡು ಶಿಷ್ಯರಿಗೆ ಏನೊಂದೂ ಉಪಕಾರ ಮಾಡದೆ ಅವರು ಕಷ್ಟದಿಂದ ಆರ್ಜಿಸಿದ ದ್ರವ್ಯವನ್ನು ಸಂಗ್ರಹಿಸಿ ಪಾರಮಾರ್ಥಿಕ ಸಮಾಜಕಾರ್ಯಗಳಿಗೆ ಉಪಯೋಗಿಸದೆ ತಮ್ಮ ಬಂಧುಬಾಂಧವರ ಹೊಟ್ಟೆಯನ್ನು ಹೊರೆಯುತ್ತಿರುವುದು ಬಹು ಶೋಚನೀಯವಾದ ವಿಷಯವಾಗಿದೆ. ಶಿಷ್ಯರಾದರೋ ಗುರುಗಳ ಆಗಮನವೆಂದರೆ "ಯತ್ಕಿವಸ್ಯಗುರುರ್ಜ್ಞೇಯಃ" ಎಂಬಂತೆ ಶಿಷ್ಯರ ಭವರೋಗವನ್ನು ಪರಿಹರಿಸಲು ಆಗಮಿಸಿದ ಸಾಕ್ಷಾತ್ ಈಶ್ವರನೆಂದು ಭಾವಿಸಿ ಭಕ್ತಿರಸ ಪಾನದಿಂದ ತೃಪ್ತರಾಗಿ ಗುರುಗಳ ಪಾದಾರ್ಚನೆಮಾಡಿ ಚರಣೋದಕವನ್ನು ಸೇವಿಸಿ ಯಥಾಶಕ್ತಿ ದ್ರವ್ಯವನ್ನು ಒಪ್ಪಿಸುತ್ತಾರಷ್ಟೆ. ಹೀಗೆ ಶಿಷ್ಯರಿಗೆ ಗುರುಗಳನ್ನು ಆದರಿಸುವುದರಲ್ಲಿ ಎಷ್ಟು ಸಂಭ್ರಮವಿರುತ್ತದೆಯೋ ಗುರುಗಳಿಗೂ ಶಿಷ್ಯೋದ್ಧಾರದಲ್ಲಿ ಅಷ್ಟು ಸಂಭ್ರಮವು ಇರಲೇ ಬೇಕಾಗುವುದು. ಶಿಷ್ಯರೂ ತಮ್ಮ ತನುಮನೋಧನಗಳಿಂದ ಗುರುಗಳನ್ನು ಆರಾಧಿಸುತ್ತಾ ಬರುವಲ್ಲಿ ಗುರುಗಳು ಅಂಥ ಶಿಷ್ಯರಿಗೆ ಪ್ರತ್ಯುಪಕಾರವನ್ನು ತತ್ವಾರ್ಥಬೋಧೆಯೊಂದಲ್ಲದೆ ಇನ್ನಾವದರಿಂದಲೂ ಮಾಡಲಾರರು. ಶಿಷ್ಯನೂ ಇನ್ನಾವ ವಿಧವಾದ ಪ್ರತ್ಯುಪಕಾರವನ್ನು ಗುರುಗಳ ದೆಸೆಯಿಂದ ಅಪೇಕ್ಷಿಸುವವನಲ್ಲ ಗುರುಗಳಿಂದ ಶಿಷ್ಯರಿಗೆ ಆಗಬೇಕಾದ ಉಪಕಾರವೆಂದರೆ ಶಿಷ್ಯನ ಶಕ್ತಿಪಾತವನ್ನು ನೋಡಿ ಶಾಸ್ತ್ರೀಯವಾದ ಸಂಸ್ಕಾರದಿಂದ ಪರಿಶುದ್ಧಗೊಳಿಸುವದು. ಅನಂತರ ಭವತಾರಕವಾದ ಮಹಾಮಂತ್ರವನ್ನುಪದೇಶಿಸುವುದು. ಬಳಿಕ ತತ್ವಮಸ್ಯಾದಿ ಮಹಾವಾಕ್ಯಾರ್ಥಗಳನ್ನು ಯುಕ್ತಿಯುಕ್ತವಾಗಿ ಸುಲಭೋಪಾಯದಿಂದ ಬೋಧಿಸಿ ಉಪಾಸನಾಮಾರ್ಗವನ್ನರುಹುವುದೂ ಭಗವಂತನ ಗುಣಾವಳಿಗಳನ್ನು ಹೊಗಳುವುದೂ ಪಾಪಪುಣ್ಯಗಳ ರೀತಿನೀತಿಗಳನ್ನು ತಿಳುಹಿಸಿ ಅವುಗಳಿಂದಾಗುವ ಸುಖದುಃಖಗಳನ್ನು ವಿವರಿಸುವುದೂ, ಹಿತಾಹಿತಗಳನ್ನು ತಿಳುಹಿಸುವುದೂ ಆಚಾರಮಾರ್ಗ ಬೋಧಿಸುವುದೂ, ವೇದಶಾಸ್ತ್ರಪುರಾಣಗಳಲ್ಲಿ ಶ್ರದ್ಧೆಯನ್ನುಂಟುಮಾಡುವದೂ ಇವೇ ಮುಂತಾದ ಕಾರ್ಯಗಳೆಲ್ಲವೂ ಗುರುಗಳ ಕರ್ತವ್ಯಗಳಾಗಿವೆ.

ಪ್ರಶ್ನಾ

ಹೀಗೆ ಗುರುಶಿಷ್ಯರು ಪರಸ್ಪರ ಪ್ರೀತಿಯಿಂದ ತಮ್ಮ ತಮ್ಮ ಸ್ವತ್ವನ್ನು ವಿನಿಮಯಮಾಡುವುದರಿಂದ ಉಭಯರ ಮಧ್ಯದಲ್ಲಿ ಮಹಾವೈದ್ಯನಾದ ಪರಮೇಶ್ವರನು ಪ್ರಸನ್ನನಾಗಿ ಭವರೋಗವನ್ನು ನಿವಾರಿಸಿ ಆತ್ಮಕಲ್ಯಾಣವನ್ನುಂಟುಮಾಡುವನು. ಇಂಥ ಕಾರ್ಯವು ಗುರುಗಳಿಂದಾಗುವುದಲ್ಲದೆ ಇನ್ನಾರಿಂದಲೂ ಆಗಲಾರದು.

ಗುರುರೇವಹರಂತತ್ವಂ ಪ್ರಕಾಶಯತಿದೇಹಿನಾಂ |
ಕೋವಾಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತಕಃ ||
ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರನಿಷ್ಕೃತಿಃ |
ನಿದಾನಜ್ಞಂ ವಿನಾ ವೈದ್ಯಂ ಕಿಂವಾ ರೋಗೋ ನಿವರ್ತತೇ ||

ಪ್ರಪಂಚವನ್ನು ಆವರಿಸಿದ ಗಾಢಾಂಧಕಾರವನ್ನು ತೊಲಗಿಸುವ ಶಕ್ತಿಯನ್ನು ಸೂರ್ಯನಲ್ಲದೆ ಇನ್ನಾರೂ ಪಡೆಯದೆ ಇರುವಂತೆ ಮಾನವರಿಗೆ ಸಂಭವಿಸಿದ ಅಜ್ಞಾನಾಂಧಕಾರವನ್ನು ತೊಲಗಿಸಿ ದಿವ್ಯಜ್ಞಾನವನ್ನುಂಟುಮಾಡಬೇಕಾದರೆ ಗುರುವಲ್ಲದೆ ಇನ್ನಾರೂ ಸಮರ್ಥರಲ್ಲ. ಪ್ರಪಂಚದಲ್ಲಿ ರೋಗನಿದಾನವನ್ನು ತಿಳಿದ ವೈದ್ಯನಿಲ್ಲದಿದ್ದಲ್ಲಿ ರೋಗವು ಹೇಗೆ ಹೋಗುವುದಿಲ್ಲವೋ ಹಾಗೆ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿಲ್ಲದೆ ಈ ಭಯಾವಹವಾದ ಜನನಮರಣರೂಪವಾದ ಸಂಸಾರವು ತೊಲಗಲಾರದು. ಎಂದು ಜಗದ್ಗುರು ರೇಣುಕಭಗವತ್ಪಾದರು ಗುರುಮಹಿಮೆಯನ್ನು ತೋರಿಸಿರುತ್ತಾರೆ.

ಇಂಥ ಗುರುತ್ವದ ಸಂಖ್ಯೆಯು ಪೂರ್ವದಲ್ಲಿ ಊರು ಊರುಗಳಲ್ಲಿ ಬಹಳವಾಗಿ ಕಾಣಿಸಿಕೊಳ್ಳುತ್ತಲಿದ್ದು ಈ ಕಾಲದಲ್ಲಿ ವೇಷಮಾತ್ರದಲ್ಲಿ ಪರ್ಯವಸನ್ನವಾಗಿದೆ. ಯಾರು ಹೊಟ್ಟೆಗಿಲ್ಲದೆ ಅಲೆಯುತ್ತಲಿರುವರೋ ಅಂಥವರು ಒಂದು ರುದ್ರಾಕ್ಷಿಯ ಸರವನ್ನು ಒಂದು ಕಾಷಾಯವಸ್ತ್ರವನ್ನು ಮಾತ್ರ ದೊರಕಿಸಿಕೊಂಡರೆ ಸಾಕಾಗಿದೆ. ತಾವೇ ಗುರುಗಳೆಂದು ಹೇಳಿಕೊಳ್ಳಲು ಪ್ರಾರಂಭಿಸುತ್ತಾರೆ. ಆದರ ಮೇಲೆ ಒಂದೆರಡು ವಚನಗಳನ್ನು ಕಷ್ಟಪಟ್ಟು ಕಲಿತುಕೊಂಡರಂತೂ ಅವನು ಯಾವ ಜಾತಿಯವನಾದರೂ ಗುರುವಾಗಲು ಹವಣಿಸುತ್ತಾನೆ. ಇಂಥವನಿಗೆ ಯಾವ ವೇದವಾಗಲಿ, ವೇದಾರ್ಥವಿಚಾರವಾಗಲಿ, ಸಿದ್ಧಾಂತವಾಗಲಿ ಒಂದೂ ಬೇಕಾಗುವುದಿಲ್ಲ. ಇದನ್ನು ತಿಳಿದ ಕ್ರಮವನ್ನರಿತ ಸಂಪ್ರದಾಯಸಿದ್ಧನಾದ ಯಾವನಾದರೂ ಒಬ್ಬ ಸದ್ಗುರುವು ಮುಂದೆ ಬಂದರೆ ಈ ದುರುಳವೇದಾಂತಿಗಳು ರಾಕ್ಷಸರಂತೆ ಆತನ ಮೇಲೆ ಬೀಳುತ್ತಾರೆ. ಇಂಥ ಹಾವಳಿಗಳು ಈ ಕಲಿಯುಗದಲ್ಲಿ ಅಲ್ಲಲ್ಲಿ ಅನೇಕವಾಗಿ ನಡೆಯುತ್ತಲಿವೆ.

ಕಲೌ ವೇದಾಂತಿನಃ ಸರ್ವೇ ಫಾಲ್ಗುನೇ ಬಾಲಕಾ ಇವ |

ಎಂಬಂತೆ ಹೋಳಿಯಹುಣ್ಣಿವೆಯಲ್ಲಿ ಬಾಲಕರು ಬಾಯ ಬಡೆದುಕೊಂಡು ತಿರುಗುವಂತೆ ಇಂಥ ದುರುಳವೇದಾಂತಿಗಳು ಈ ಕಲಿಯುಗದಲ್ಲಿ ಹೆಚ್ಚಿದ್ದರಿಂದಲೇ ಧರ್ಮಕರ್ಮಗಳ ನಿಬಂಧನೆಯೂ ಸದಾಚರಣೆಗಳೂ ಮಾನವಸಾಮಾನ್ಯವಾದನೀತಿಗಳು ಕ್ಷಯೋನ್ಮುಖಗಳಾಗುತ್ತಬಂದವು. ಈ ಮಧ್ಯದಲ್ಲಿ ಆಚಾರ್ಯಪರಂಪರಾಗತರಾದ ಗುರುವರ್ಗದವರು ತಮ್ಮ ಕರ್ತವ್ಯಗಳಿಂದ ಪರಾಙ್ಮುಖರಾಗಿ ಕೇವಲ ಜೋಳಿಗೆ ಬೆತ್ತಗಳನ್ನು ಮಾತ್ರ ಭದ್ರವಾಗಿ ಹಿಡಿದುಕೊಂಡಿದ್ದರಿಂದ ಉಪಾಧ್ಯಾಯನಿಲ್ಲದ ವಿದ್ಯಾರ್ಥಿಗಳಂತೆ ಇಂಥ ಅನಾಹುತಗಳು ನಡೆಯಲು ಹತ್ತಿದವು. ಆಚಾರ್ಯವಂಶಾನುಗತವಾದ ಗುರುಗಳು ಇನ್ನಾದರೂ ಇಂಥ ಆಲಸ್ಯದ ನಿದ್ರೆಯಿಂದ ಎಚ್ಚತ್ತು ಗುರುಕುಲವಾಸವನ್ನು ಮಾಡಿ ಶಾಸ್ತ್ರಸಿದ್ಧಾಂತಗಳಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಆರ್ಜಿಸಿ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತ ಅಭ್ಯಾಸಕ್ರಮದಿಂದ ಶಮದಮೋಗುಣಯುಕ್ತರಾಗಿ ವೈರಾಗ್ಯಧುರಂಧರರಾಗಿ ಶ್ರೀ ರೇಣುಕಭಗವತ್ಪಾದರು ಹೇಳಿದಂತೆ ಪ್ರತಿಯೊಬ್ಬ ಗುರುಮನೆತನದವನು ಜ್ಞಾನವೆಂಬ ವಿಭೂತಿಯನ್ನಾರ್ಜಿಸಿ ಪೂರ್ವಕಾಲದಿಂದ ಬಂದ ತಮ್ಮ ತಮ್ಮ ಶಿಷ್ಯವೃಂದವನ್ನು ದೀಕ್ಷಾದಿ ಸಂಸ್ಕಾರಗಳಿಂದ ಪರಿಶುದ್ಧಗೊಳಿಸಿ ತಮ್ಮ ಉಪದೇಶವಾಣಿಯಿಂದ ಶಿಷ್ಯರ ಅಜ್ಞಾನವೆಂಬ ಮಾಲಿನ್ಯವನ್ನು ಹೋಗಲಾಡಿಸಿ ಪರಿಶುದ್ಧವಾದ ಹೃದಯ ದರ್ಪಣದಲ್ಲಿ ಲಿಂಗರೂಪನಾದ ಪರಮಾತ್ಮನು ಪ್ರತಿಬಿಂಬಿಸುವಂತೆ ಮಾಡಿ ಪರಿಶುದ್ಧವಾದ ವೀರಶೈವಮತಸರೋವರದಲ್ಲಿ ನುಗ್ಗಿ ಬೊಗ್ಗಡಮಾಡುತ್ತಿರುವ ಜಾತಿಕುಲಗೋತ್ರವಿಹೀನರಾದ ದುರುಳವೇದಾಂತಿಗಳು ಪುನಃ ತಲೆಹಾಕದಂತೆ ಮಾಡಿ ತಮ್ಮ ಗುರುತ್ವವನ್ನು ಶಿಷ್ಯಮಂಡಲಿಯ [illegible] ಹಿತವಾಗಿ ಬೆಳಗುವಂತೆ ಮಹಾಗುರು[illegible] ಶ್ರೀ [illegible]ಣುಕಾದಿ ಪಂಚಾಚಾರ್ಯರು ಈ [illegible]ವರ್ಗವನ್ನು ಎಚ್ಚರಗೊಳಿಸಲೆಂದು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು

ಕಳೆದವಾರ ಕೋಲಾರ ಚಿನ್ನದಗಣಿಗಳಲ್ಲಿ ಒಂದಾ ಛಾಂಪಿಯನ್ ರೀಫ್ಸ್ ಗಣಿಯಲ್ಲಿ ಕಲ್ಲುಸಿಡಿದು ಗಣಿಯೊ ಳಗೆ ಕೆಲಸಮಾಡುತ್ತಿದ್ದವರಲ್ಲಿ ೮ ಜನಗಳು ಮೃ ಯನ್ನು ಹೊಂದಿದರೆಂದೂ ೧೯ ಜನಗಳು ಗಾ ಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಲಿದ್ದಾರೆ ದೂ ಕೇಳುತ್ತೇವೆ.

ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗದ ದೃಢಕಾಯರಾದ ಯುವಕರನ್ನು ಸೈನ್ಯದ ಶಾಲೆಗೆ ಸೇರಿಸಿ ಅವರಿಗೆ ಶಿಕ್ಷಣವನ್ನು ಕೊಟ್ಟು ಅಂ ವರನ್ನು ಅಧಿಕಾರಿಗಳನ್ನಾಗಿ ನಿಯಮಿಸುವ ಪದ್ಧ ಯನ್ನು ಸರ್ಕಾರದ ಸೈನ್ಯಶಾಖಾಧಿಕಾರಿಗಳು ತಯಾರುಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಇದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಬೆಂಗಳೂರು ಸಿಟಿ ಮಾವಳ್ಳಿಯಲ್ಲಿ ಹೋದವಾ ಮಕ್ಕಳ ಸಂಬಂಧವಾಗಿ ನಡೆದ ಕಲಹವು ದೊಡ್ಡದಾ ಹರಿದಿ ಖಲೆಂದರ್‌ಬೇಗ್ ಎಂಬುವನು ಅಬ್ದುಲ್‌ಲತೀಫ್. ಸಯ್ಯದ್ ಇಬ್ರಾಹಿಂ, ಉಸ್ಮಾನ್‌ಬೇಗ್ ಎಂ ಮೂರು ಜನಗಳನ್ನು ಚೂರಿಯಿಂದ ತಿವಿದು ಗಾಯಪಡಿಸಿದನೆಂದೂ ಇವರಲ್ಲಿ ಮೊದಲನೆಯವನು ಆಸ್ಪತ್ರೆಯಲ್ಲಿ ಮೃತಿಹೊಂದಿದನೆಂದೂ ಉಳಿದಿಬ್ಬರು ಚಿಕಿತ್ಸೆ ಹೊಂದುತ್ತಿದ್ದಾರೆಂದೂ ಪೋಲೀಸಿನವರು ಖಲೆಂದ ನನ್ನು ದಸ್ತಗಿರಿಮಾಡಿ ವಿಚಾರಣೆ ನಡೆಯಿಸುತ್ತಿರುವ ರೆಂದೂ ತಿಳಿದುಬಂದಿದೆ.

ಬೆಂಗಳೂರು ಸಿಟಿ ವಿಶ್ವಕರ್ನಾಟಕಪತ್ರಿಕಾ ಸಂಪಾದಕರಮೇಲೆ ಕುಣಿಗಲ್ ತಾಲೂಕು ಅಮಲ್ದಾರ್ ಮಿ|| ಅಬ್ದುಲ್ ಖಾದರ್ ಸಾಹೇಬರು ಹೇಮಗಿರಿ ಮಲ್ಲಿಕಾರ್ಜುನ ದೇವಸ್ಥಾನದ ವಿಷಯವಾಗಿ ಮಾನನಷ್ಟದ ಮೊಕದ್ದಮೆಮಾಡಿದ್ದಕ್ಕಾಗಿ ತುಮಕೂರು ಮ್ಯಾಜಿಸ್ಟ್ರೇಟರಾದ ಮ|| ಎಂ ಸುಬ್ಬಣ್ಣನವರು ಕೇಸನ್ನು ವಿಚಾರಿಸಿ 200 ರೂ ಅರ್ಥದಂಡವನ್ನು ವಿಧಿಸಿದರು. ಸಂಪಾದಕರು ಇದರಮೇಲೆ ಮಾಡಿದ್ದ ಎರಡು ಅಪೀಲನ್ನು ಸೆಷನ್ಸ್ ಜಡ್ಜರೂ ಬೆಂಗಳೂರು ಹೈಕೋರ್ಟಿನ ಚೀಫ್ ಜಡ್ಜರೂ ಪರಾಂಬರಿಸಿ ಕೆಳಕೋರ್ಟಿನ ತೀರ್ಮಾನವನ್ನೇ ಖಾಯಂ ಮಾಡಿದರು.

ಹೆಗ್ಗಡದೇವನಕೋಟೆ ತಾಲೋಕು ಬೀಚನಹಳ್ಳಿಯಲ್ಲಿರುವ ಕುಂಟನೆಂಬ 14 ವರ್ಷದ ಹುಡುಗನು ಕಳೆದ ತಿಂಗಳ 19 ನೆಯ ತಾರೀಖಿನ ರಾತ್ರಿ ಚಾವಡಿಯಲ್ಲಿದ್ದ ತನ್ನ ಅಣ್ಣನಾದ ಚಲುವನೆಂಬುವನ ಸಂಗಡ ಇನ್ಸ್ಪೆಕ್ಟರ ಮನೆಯ ಜಗುಲಿಯ ಮೇಲೆ ಮಲಗಿದ್ದನು. ಅದೇ ಗ್ರಾಮದ ಸಿಂಗಯ್ಯನೆಂಬುವನು ಬಂದು ತನ್ನ ಜಮೀನಿನಲ್ಲಿ ದನಗಳನ್ನು ಬಿಟ್ಟು ಮೇಯಿಸಿದನೆಂದು ಚಲುವನೊಡನೆ ಜಗಳವಾಡಲು ಪ್ರಾರಂಭಿಸಿ ಜುಟ್ಟುಹಿಡಿದು ಪಟೇಲನ ಬಳಿಗೆ ಎಳೆದುಕೊಂಡು ಹೋಗಲು ಪ್ರಯತ್ನಿಸಿದನು. ತನ್ನ ಅಣ್ಣನಿಗೆ ಏನು ಮಾಡುವನೋ ಎಂಬ ಭೀತಿಯಿಂದ ತಮ್ಮನಾದ ಕುಂಟನು ಜಗುಲಿಯಿಂದಿಳಿದು ಬಂದು ಸಿಂಗಯ್ಯನ ಹೊಟ್ಟೆಯಮೇಲೆ ಒದ್ದನು. ಸಿಂಗಯ್ಯನು ತಕ್ಷಣವೇ ಕೆಳಕ್ಕೆ ಬಿದ್ದು ಸ್ವಲ್ಪಹೊತ್ತಿನಲ್ಲಿಯೇ ಪ್ರಾಣಬಿಟ್ಟನು. ಮೈಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ನಡೆಯಲು ಕುಂಟನು ತಾನು ಒದ್ದದುಂಟೆಂದು ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರು ಕುಂಟನು ಇಂ|| ಪೀ|| ಕೋ|| 323 ನೆಯ ಸೆಕ್ಷನ್ ಪ್ರಕಾರ ತಪ್ಪಿತಸ್ಥನೆಂದು ನಿರ್ಧರಿಸಿ ಅವನ ಚಿಕ್ಕವಯಸ್ಸನ್ನೂ ಅಪರಾಧವು ನಡೆದ ಸಂದರ್ಭವನ್ನೂ ಪರ್ಯಾಲೋಚಿಸಿ ಕುಂಟನಿಗೆ ಎಚ್ಚರಿಕೆಯನ್ನು ಮಾತ್ರ ಕೊಟ್ಟು ಬಿಡುಗಡೆ ಮಾಡಿದರು.

ರಾಜಧಾನಿಯಲ್ಲಿರುವ ಇರ್ವಿನ್ ರೋಡಿನಲ್ಲಿ ಲೇವಾದೇವಿಯನ್ನು ಮಾಡುತ್ತಿದ್ದ ಪರಶುರಾಂಸೇಟರು ನೂರು ರೂಪಾಯಿನ ಅರ್ಧನೋಟನ್ನು ಮದರಾಸ್ ಕರೆನ್ಸಿ ಸಿಗೆ ಕಳುಹಿಸಿ ಮಿಕ್ಕ ಅರ್ಧನೋಟು ಕಳೆದುಹೋ ವದರಿಂದ ೧೦೦ ರೂಪಾಯಿಗಳನ್ನು ಕೊಡಬೇ ದು ಕೇಳಿದಹಾಗೂ ಇದಕ್ಕೆ ಹಿಂದೆಯೇ ಈ ಅರ್ಧ ಟು ಚನ್ನಪಟ್ಟಣದ ವರ್ತಕನೊಬ್ಬನಿಂದ ಹೋಗಿ ಸಿ ಆಫೀಸರವರು ಆ ವರ್ತಕರಿಗೆ 100 ರೂಪಾ ಪಾವತಿಮಾಡಿದ್ದರಿಂದ ಕರೆನ್ಸಿ ಆಫೀಸಿನವರು ಶುರಾಂಸೇಟರ ಮೋಸಕೃತಿಗಾಗಿ ಮೊಕದ್ದಮೆ ಡಬೇಕೆಂದು ಬರೆದಿರುವರೆಂದೂ, ಮೈಸೂರು ಪೋ ಸರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ರ್ಜುಮಾಡಿದರು. ಈ ಮೊಕದ್ದಮೆಯು ಎರಡು ರ್ಷಗಳಿಂದ ವಿಚಾರಣೆಯಲ್ಲಿದ್ದು ಕಳೆದವಾರ ಸಿಟಿ ಜಿಸ್ಟ್ರೇಟ್ ಮಿ|| ಡಿ. ಸಿ. ಸುಬ್ಬರಾಯಪ್ಪನವರು ರ್ಮಾನವನ್ನು ಹೇಳಿ ಸೇಟರಿಗೆ ಆರುತಿಂಗಳು ಕಠಿಣ ಯನ್ನೂ 2000 ರೂ. ಜುಲ್ಮಾನೆಯನ್ನೂ ವಿಧಿಸಿ ಲ್ಲದೆ ಈ ಮೊಕದ್ದಮೆಯಲ್ಲಿ ಪೋಲೀಸಿನವರು ತನಿಖೆ ಮುಗಳನ್ನು 15 ತಿಂಗಳವರೆಗೂ ಬಹುನಿಧಾನವಾಗಿ ಯಿಸಿದರೆಂದೂ ಇದಕ್ಕೆ ಸಂಬಂಧಪಟ್ಟ ಒಂದು ಗದವನ್ನು ಅವರು ಹಾಜರು ಮಾಡಲಿಲ್ಲವೆಂದೂ ಈ ಕಾರಗಳನ್ನು ತನಿಖೆಮಾಡುವುದು ಅತ್ಯವಶ್ಯವೆಂದೂ ಕ್ಷೇಪಣೆಮಾಡಿದ್ದಾರೆ. ಮತ್ತು ಅಪರಾಧಿಯು ಕಡೆ ಯರಾದ ಮ|| ಎಂ. ವಿ. ವೆಂಕಟರಾಯರು ತಕ್ಷ ವೇ ಸೆಷನ್‌ಕೋರ್ಟಿಗೆ ಅರ್ಜಿಕೊಟ್ಟು ಅಪರಾಧಿಯು ಜಾಮೀನಿನಮೇಲೆ ಬಿಡಿಸಿರುತ್ತಾರೆ. ಮುಂದೆ ಲು ನಡೆಯುವುದಾಗಿದೆ.

ಸತ್ಯಾಗ್ರಹಸಮರವಾರ್ತೆ.

ಇದೇ ಆಗಸ್ಟ್ 10 ನೆಯ ತಾರೀಖಿನ ದಿವಸ ಒಂ ಬಾಲಾ ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದ ಮೆಂಬರರು ಬಂಗಾಲದಲ್ಲಿ ನಡೆಯುತ್ತಿರುವ ಚಳವಳಿಯ ವಿಷಯವಾಗಿ ಈ ಕೆಳಗೆ ಕಂಡಂತೆ ಹೇಳಿ ರು. "ಕಾನೂನು ಭಂಗದ ಚಳವಳಿಯಿಂದ ಜನವರಿ ಂಗಳಾಗಾಯ್ತು ನೇ ತಿಂಗಳವರೆಗೆ 10,823 ಜನರು ದಸ್ತಗಿರಿಮಾಡಲ್ಪಟ್ಟರು, ಅವರ ಪೈಕಿ 571ಜನ ಸ್ತ್ರೀಯರು ಮತ್ತು 8,401 ಜನ ಗಂಡಸರು ಒಟ್ಟು 8,972 ಜನ ಶಿಕ್ಷಿಸಲ್ಪಟ್ಟರು. ಎಮರ್ಜನ್ಸಿ ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ 651 ಜನರು ಬಂಧನದಲ್ಲಿಡಲ್ಪಟ್ಟಿರು ರು. ಇವರಲ್ಲಿ 29 ಜನ ಸ್ತ್ರೀಯರಿರುವರು. ಶಿಕ್ಷೆಯು ಮುಗಿಯುವದಕ್ಕಿಂತ ಮುಂಚಿತವಾಗಿಯೇ ಬಿಡುಗಡೆ ಹೊಂದಿದವರ ಸಂಖ್ಯೆ 953, ಇವರಲ್ಲಿ 23 ಜನ ಹೆಂಗ ರು. ಜುಲ್ಮಾನೆಯ ಹಣವನ್ನು ವಸೂಲ್ಮಾಡಲು 388 ಜಪ್ತೀಕ್ರಮಗಳನ್ನು ಕೈಕೊಳ್ಳಲಾಯಿತು. 1955 ಜನರಿಗೆ ಜುಲ್ಮಾನೆಯು ವಿಧಿಸಲ್ಪಟ್ಟಿತು. ಇವರಿಗೆ ವಿಧಿಸಿದ್ದ ಒಟ್ಟು ಜುಲ್ಮಾನೆಯ ಹಣ, 1,34,448 ರೂ. ಗಳು.

ಇದೇ ಆಗಸ್ಟ್ 10 ನೆಯ ತಾರೀಖಿನ ದಿವಸ ಯೂ ಫಾರಂಗಳನ್ನು ಧರಿಸಿದ ಎರಡುಗುಂಪು ಕಾಂಗ್ರೆಸ್ ಸ್ವಯಂಸೇವಕರು ಮಧುರೆಯ ಹತ್ತಿರ ಎರಡು ಸ್ಟೇಷನ್ನುಗಳಲ್ಲಿ ಎರಡು ರೈಲುಗಳನ್ನು ನಿಲ್ಲಿಸಿ ಕಾಂಗ್ರೆಸ್ಸಿನ ಜಯಘೋಷವನ್ನು ಮಾಡುತ್ತಾ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಪ್ರಯಾಣಿಕರಿಗೆ ಹಂಚಿದರು. ಪೋಲೀಸರು ಅವರೆಲ್ಲರನ್ನೂ ದಸ್ತಗಿರಿಮಾಡಿದರು.

ಅಲಹಾಬಾದಿನಲ್ಲಿ 'ಸ್ವರಾಜ್ಯಭವನ' ವನ್ನು ಮುತ್ತಿವ ಸಂದರ್ಭದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ 35 ಜನ ಸ್ವಯಂಸೇವಕರ ಪೈಕಿ 21 ಜನರಿಗೆ ಆರಾರು ತಿಂಗಳ ಣ ಸಜೆಯು ವಿಧಿಸಲ್ಪಟ್ಟಿತು. 12 ಜನರು ಕ್ಷಮಾಪಣೆ ಬೇಡಿದ್ದರಿಂದ ಬಿಡುಗಡೆಮಾಡಲ್ಪಟ್ಟರು. ಇದೇ ಸ ರೈಲನ್ನು ನಿಲ್ಲಿಸುವ ಪ್ರಯತ್ನ ಮಾಡಿದ್ದಕ್ಕಾಗಿ ಜನ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು.

ಲಕ್ನೋದಲ್ಲಿ ಕಾನೂನುಭಂಗದ ಚಳವಳಿಯು ರಂಭವಾದಂದಿನಿಂದ ಇದೇ ಆಗಸ್ಟ್ 4 ನೇ ತಾರೀ ನವರೆಗೆ ಒಟ್ಟು 831 ಜನರು ಶಿಕ್ಷಿಸಲ್ಪಟ್ಟಿರುವರು. ವರಲ್ಲಿ 21 ಜನ ಸ್ತ್ರೀಯರಿರುವರು. ಕ್ಷಮಾಪಣೆ ಡಿದ್ದರಿಂದ ಬಿಡುಗಡೆ ಹೊಂದಿದವರ ಸಂಖ್ಯೆ 187.

ಮುಂಬಯಿಯ ಪ್ರಸಿದ್ಧ ಇನ್ಷ್ಯೂರೆನ್ಸ್ ಏಜಂ ರಾದ ಮಿ|| ಗಂಗಾದಾಸ್ ಖುಶಾಲದಾಸ್ ಪರೇಖರವರು ಇದೇ ಆಗಸ್ಟ್ 8 ನೇ ತಾರೀಖಿನ ದಿವಸ ಬೆಳಿಗ್ಗೆ ಸ್ಪೆಷಲ್ ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟರು.

ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ ಕಾರಾಗೃಹವಾಸವನ್ನನುಭವಿಸುತ್ತಿರುವ ಡಾಕ್ಟರ್ ಅಭ್ಯಂಕರ್‌ರವರ ದೇಹಸ್ಥಿತಿಯು ಬಹಳ ಕಳವಳಕ್ಕೆ ಆಸ್ಪದವನ್ನು ಕೊಟ್ಟಿರುವದರಿಂದ ಅವರನ್ನು ಕೂಡಲೇ ಕಾರಾಗೃಹದಿಂದ ಬಿಡುಗಡೆ ಮಾಡಬೇಕೆಂದು ನಾಗಪುರದ ಹೈಕೋರ್ಟ್ ಬಾರ್ ಅಸೋಸಿಯೇಷನ್ನಿನವರು ಒಂದು ಠರಾವನ್ನು ಪಾಸುಮಾಡಿದರು.

ಅಹಮದನಗರದ ಡಿಸ್ಟ್ರಿಕ್ಟ್ ರಾಜಕೀಯ ಸಮ್ಮೇಲನವು ಇದೇ ಆಗಸ್ಟ್ 8 ನೇ ತಾರೀಖಿನ ದಿವಸ ಕೋಪರ್‌ಗಾಂವ್ ತಾಲೂಕಿನಲ್ಲಿ ಶ್ರೀಮತಿ ದುರ್ಗಾಬಾಯಿ ಜೋಗ್ ಬಿ.ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕೋಪರಗಾಂವದ ಶ್ರೀಯುತ ಅಣ್ಣಾಸಾಹೇಬ ಸಾಲುಂಕೆಯವರು ಸ್ವಾಗತಸಮಿತಿಯ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ದೆಹಲಿ ಕಾಂಗ್ರೆಸ್ಸಿನ ಠರಾವುಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಮತ್ತು ಅಧ್ಯಕ್ಷರ ಭಾಷಣದ ನೂರಾರು ಪ್ರತಿಗಳು ಊರಿನಲ್ಲೆಲ್ಲಾ ಹಂಚಲ್ಪಟ್ಟವು. ರಾತ್ರಿಯಲ್ಲಿ ಒಂದು ಪ್ರಚಂಡ ಬಹಿರಂಗಸಭೆಯು ಸೇರಿತ್ತು. ಸಭೆಯು ಮುಗಿಯುವ ಹೊತ್ತಿಗೆ ಸರಿಯಾಗಿ ಪೋಲೀಸರು ಬಂದು ಶ್ರೀಮತಿ ದುರ್ಗಾಬಾಯಿ ಜೋಗರವರನ್ನೂ ಸೆಕ್ರೆಟರಿಯವರೇ ಮೊದಲಾಗಿ ಇನ್ನೂ 3 ಜನರನ್ನೂ ದಸ್ತಗಿರಿ ಮಾಡಿದರು.

ಮಹಿಷಬಥನ್ನಲ್ಲಿರುವ ಪೋಲೀಸರ ಠಾಣೆಯ ಮೇಲೆ ದಾಳಿಯನ್ನಿಟ್ಟರೆಂಬ ಕಾರಣದಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ 18 ಜನ ಕಾಂಗ್ರೆಸ್ ಸ್ವಯಂಸೇವಕರಿಗೆ ಅಲೀಪುರದ ಸಬ್‌ಡಿವಿಜನಲ್ ಆಫೀಸರವರು ಆರಾರು ತಿಂಗಳು ಕಠಿಣಸಜೆಯನ್ನು ವಿಧಿಸಿದರು.

ಇದೇ ಆಗಸ್ಟ್ 10 ನೆಯ ತಾರೀಖಿನ ದಿವಸ ಕಲ್ಕತ್ತೆಯ ಜೋರಾಬಾಗ್ ಕೋರ್ಟಿನ ಮುಂಭಾಗದಲ್ಲಿ ರಾಷ್ಟ್ರೀಯ ಧ್ವಜವನ್ನು ಸ್ಥಾಪಿಸಲು ಪ್ರಯತ್ನಿಸಿದ ಇಬ್ಬರು ತರುಣರೂ, ಮನೋಹರದಾಸ್ ಕಟ್ರಾದಲ್ಲಿ ಪರದೇಶೀ ವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ 4 ಜನ ಸ್ವಯಂಸೇವಕರೂ, ರಾಯಲ್‌ಎಕ್ಸ್‌ಚೇಂಜಿನಮುಂದೆ ಇಬ್ಬರು ಸ್ವಯಂಸೇವಕರೂ, ಅಲೀಪುರದ ಮುನ್‌ಸೀಫರ ಕೋರ್ಟಿನಮುಂದೆ ರಾಷ್ಟ್ರೀಯ ಧ್ವಜಗಳನ್ನು ಹಿಡಿದು ಬಹಿರಂಗ ಸಭೆಯನ್ನು ಸೇರಿಸಲು ಪ್ರಯತ್ನಿಸಿದ 3 ಜನ ಸ್ವಯಂಸೇವಕರೂ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟರು.

ಇದೇ ಆಗಸ್ಟ್ 9 ನೆಯ ತಾರೀಖಿನ ದಿವಸ ಮಂಗಳೂರಿನಲ್ಲಿ ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರೆಂಬ ಕಾರಣದ ಮೇಲೆ 4 ಜನ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು. ಕಾಸರಗೋಡು ಸರ್ಕಲ್ಲಿನಲ್ಲಿ ಶೇಂದಿಹರಾಜಿನ ಕಾಲಕ್ಕೆ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚಿದರೆಂಬ ಕಾರಣದ ಮೇಲೆ 23 ಜನ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಡೆಕ್ಕನ್‌ವರ್ತಕರ ಸಂಘದ ಸದಸ್ಯರಾದ ಮಿ|| ಆರ್. ಭಟ್ಟರವರು ಆಗಸ್ಟ್ 11 ನೇ ತಾರೀಖಿನ ದಿವಸ ಸ್ಪೆಷಲ್‌ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ಮುಂಬಯಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ರಂಗೂನಿನ 'ದೇಶೋಪಕಾರಿ' ಪತ್ರಿಕಾಕರ್ತರಾದ ಮಿ|| ಎ. ವಿ. ಚೆಲ್ಲಂಪಿಳ್ಳೆಯವರು ರಾಜದ್ರೋಹದ ಅಪಾದನೆಯ ಮೇಲೆ ಎರಡು ವರ್ಷಗಳ ಕಠಿಣ ಸಜೆಗೆ ಗುರಿಯಾದರು.

ಗುಜರಾತಿನ 25ನೇ ಸರ್ವಾಧಿಕಾರಿಗಳೂ ಸರ್ದಾರ್ ವಲ್ಲಭಭಾಯಿ ಪಟೇಲರವರ ಪುತ್ರಿಯೂ ಆದ ಶ್ರೀಮತಿ ಮಣಿಬೆನ್ ಪಟೇಲರವರಿಗೆ 24 ಗಂಟೆಗಳೊಳಗಾಗಿ ಅಹಮದಾಬಾದನ್ನು ಬಿಟ್ಟು ಹೊರಡಬೇಕೆಂದೂ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಕೂಡದೆಂದೂ ಅಹಮದಾಬಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಇದೇ ಆಗಸ್ಟ್ 12 ತಾರೀಖಿನ ದಿವಸ ಅಪ್ಪಣೆಮಾಡಿದ್ದರು. ಶ್ರೀಮತಿಯವರು ಅದರಂತೆ ನಡೆಯಲಿಲ್ಲವಾದ್ದರಿಂದ ಪೋಲೀಸರಿಂದ ಪುನಃ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಬರ್ಮಾದ ಪೆಗು ಎಂಬಲ್ಲಿ ಒಬ್ಬ ಸ್ತ್ರೀಯು 4 ಕೈಗಳೂ ಮತ್ತು 4 ಕಾಲುಗಳೂ ಉಳ್ಳ ಒಂದು ಮಗುವನ್ನು ಹೆತ್ತಳೆಂದೂ ಅದು 15 ನಿಮಿಷಗಳವರೆಗೆ ಮಾತ್ರ ಬದುಕಿದ್ದಿತೆಂದೂ ತಿಳಿದುಬಂದಿದೆ.

ಪೇಷಾವರಿನಲ್ಲಿ ಕ್ಯಾಪ್ಟನ್ ಕೋಲ್ಡ್‌ಸ್ಟ್ರೀಂರವರನ್ನು ಕೊಲೆಮಾಡಿದನೆಂಬ ಅಪಾದನೆಯ ಮೇಲೆ ಅಬ್ದುಲ್ ರಷೀದ್ ಎಂಬುವನಿಗೆ ವಿಧಿಸಿದ್ದ ಮರಣದಂಡನೆಯ ಶಿಕ್ಷೆಯನ್ನು ಜುಡಿಷಿಯಲ್ ಕಮಿಷನರವರು ಖಾಯಂ ಪಡಿಸಿದರು.

ಲಾಹೋರಿನ ಸಭ್ರಾಜ್‌ಖಾನ್ ಎಂಬೊಬ್ಬ ಎಂ.ಎ., ತರಗತಿಯ ವಿದ್ಯಾರ್ಥಿಯು ಲೈಸನ್ಸಿಲ್ಲದೆ ಒಂದು ಪಿಸ್ತೂಲನ್ನೂ ಆರು ತೋಟಾಗಳನ್ನೂ ತನ್ನ ಬಳಿಯಲ್ಲಿ ಇಟ್ಟುಕೊಂಡಿದ್ದನೆಂಬ ಕಾರಣದಮೇಲೆ 18 ತಿಂಗಳ ಕಠಿಣಸಜೆಗೆ ಗುರಿಯಾದನು.

ಕ್ರಾಂತಿಕಾರರ ಗುಂಡಿನೇಟಿನಿಂದ ಮೃತಿಹೊಂದಿದ ಕೋಮಿಲ್ಲಾದ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಎಲ್ಲಿಸನ್‌ರವರ ಪತ್ನಿ ಮತ್ತು ಪುತ್ರಿಯರು ಇದೇ ಆಗಸ್ಟ್ 12 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಜಹಜುಹತ್ತಿ ಇಂಗ್ಲೆಂಡಿಗೆ ಪ್ರಯಾಣಮಾಡಿದರು.

ಈಗ್ಗೆ ಸುಮಾರು 4 ವರ್ಷಗಳ ಹಿಂದೆ ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಶ್ರೀ ವಿಟ್ಠಲಭಾಯಿ ಪಟೇಲರವರ ಹಿರಿಯ ಸಹೋದರರಾದ ಶ್ರೀ ನರಸಿಂಹಭಾಯಿ ಪಟೇಲರನ್ನು ಕೊಲೆಮಾಡಿ ತಲೆತಪ್ಪಿಸಿಕೊಂಡಿದ್ದನೆಂಬ ಅಪಾದನೆಯ ಮೇಲೆ ಸೂರತ್ ಪ್ರಾಂತದ ಪೋಲೀಸರು ಛಾಯಿಲಾಲ ಶಂಕರಲಾಲ ಪಟೇಲ್ ಎಂಬುವನನ್ನು ಉಮ್ರೇತ್ ಎಂಬಲ್ಲಿ ದಸ್ತಗಿರಿಮಾಡಿರುತ್ತಾರೆ.

ಲಾಹೋರ್ ಪ್ರಾಂತಕ್ಕೆ ಸೇರಿದ ಕಪ್‌ಬೂಲ್‌ಪುರದ ಜಮೀನ್ದಾರರಾದ ಲಾಲಾ ಶ್ರೀ ವಲ್ಲಭರವರು ಗ್ರಾಮಾಂತರಗಳಲ್ಲಿ ಗುತ್ತಿಗೆ ಹಣವನ್ನು ವಸೂಲು ಮಾಡಿಕೊಂಡು ಹಿಂತಿರುಗಿ ಬರುತ್ತಿರುವಾಗ ಯಾರೋ ಕೆಲವು ಜನ ದುರಾತ್ಮರು ಮಧ್ಯಮಾರ್ಗದಲ್ಲಿ ಅವರ ಮೇಲೆ ಬಿದ್ದು ಲಾಠಿಗಳಿಂದ ಅವರನ್ನು ಕೊಂದು ಹಣವನ್ನು ದೋಚಿಕೊಂಡು ಓಡಿಹೋಗಿರುತ್ತಾರೆ. ಜಮೀನ್ದಾರರ ಜತೆಯಲ್ಲಿದ್ದ 12 ಜನರು ಪ್ರಾಣಭೀತಿಯಿಂದ ಓಡಿಹೋದರು. ಅಪರಾಧಿಗಳು ಯಾರೆಂಬುದು ಇದುವರೆಗೂ ಪತ್ತೆಯಿಲ್ಲ.

ಮುಂಬಯಿ 'ಫ್ರೀಪ್ರೆಸ್ ಜರ್ನಲ್ಲಿ'ನ 6000 ರೂಪಾಯಿಗಳ ಠೇವಣಾತಿಯನ್ನು ಸರಕಾರದವರು ಜಪ್ತುಮಾಡಿಕೊಂಡ ಸಂಬಂಧದಲ್ಲಿ 'ಫ್ರೀಪ್ರೆಸ್' ಪತ್ರಿಕಾಕರ್ತರು ಚೀಫ್‌ಕೋರ್ಟಿನಲ್ಲಿ ಅಪ್ಪೀಲುಮಾಡಿರುತ್ತಾರೆ. ಮಿ|| ಎಂ. ಆರ್. ಜಯಕರ್‌ರವರು 'ಫ್ರೀಪ್ರೆಸ್' ಪತ್ರಿಕೆಯ ಪರವಾಗಿ ಇದೇ ಆಗಸ್ಟ್ 12 ನೆಯ ತಾರೀಖಿನ ದಿವಸ ವಾದಮಾಡಿದರು. ಚೀಫ್‌ಜಡ್ಜಿಗಳು ಠೇವಣಾತಿ ಹಣದ ವಿಷಯದಲ್ಲಿ ಸರ್ಕಾರದವರು ಮಾಡಿರುವ ಆರ್ಡರನ್ನು ಏಕೆ ರದ್ದುಪಡಿಸಬಾರದೆಂಬ ಬಗ್ಗೆ ಕಾರಣಗಳನ್ನು ತೋರಿಸಬೇಕೆಂದು ಸರ್ಕಾರದವರಿಗೆ ನೋಟೀಸ್ ಕೊಟ್ಟಿರುತ್ತಾರೆ.

ವೀರಂಗಾಮಿನ 5 ಜನ ವಿದ್ಯಾರ್ಥಿಗಳು 'ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿರಿ' ಎಂಬ ಶಿರೋನಾಮವುಳ್ಳ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದರೆಂಬ ಕಾರಣದಮೇಲೆ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ ಪ್ರಕಾರ 50 ರೂಪಾಯಿಗಳ ಜುಲ್ಮಾನೆಗೆ ಗುರಿಯಾಗಿದ್ದರು. ಸದರಿ ವಿದ್ಯಾರ್ಥಿಗಳು ಮುಂಬಯಿ ಹೈಕೋರ್ಟಿನಲ್ಲಿ ಅಪೀಲುಮಾಡಿರಲು ಚೀಫ್ ಜಡ್ಜರವರು ಸದರಿ ಮೊಕದ್ದಮೆಯನ್ನು ಪುನಃ ವಿಚಾರಣೆಮಾಡಿ 'ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿರೆಂದು ಹಸ್ತಪತ್ರಿಕೆಗಳನ್ನು ಹಂಚುವದು ಅಪರಾಧವಲ್ಲವೆಂದೂ, ಅದರಿಂದ ಅಕ್ರಮಕೂಟಗಳಿಗೆ ಸಹಾಯಮಾಡಿದರೆಂಬ ರುಜುವಾತಾಗುವುದಿಲ್ಲವೆಂದೂ ಹೇಳಿ ಕೆಳಕೋರ್ಟಿನವರು ವಿಧಿಸಿದ್ದ ಜುಲ್ಮಾನೆಯನ್ನು ವಜಾ ಮಾಡಿದರು.

ಶ್ರೀ ಜಗದ್ಗುರು ಏಕೋರಾಮಾರಾಧ್ಯಃ ಪ್ರಸೀದತು.

ಶ್ರೀ ಶಕ್ತಿವಿಶಿಷ್ಟಾದ್ವೈತ ವೀರಶೈವಸಿದ್ಧಾಂತ ಸ್ಥಾಪನಾಚಾರ್ಯ ಶ್ರೀ ಹಿಮವತ್ಕೇದಾರ ಜಗದ್ಗುರು ಕೈಲಾಸಲಿಂಗಶಿವಾಚಾರ್ಯ ಭಗವಚ್ಚರಣ ಸನ್ನಿಧಾನದಿಂದ.

ಶ್ರೀ ಗುರುಪೀಠ ಸೇವಾಸಕ್ತರಿಗೆ ಈ ಮೂಲಕ ಅಪ್ಪಣೆಕೊಡಿಸುವದೇನಂದರೆ—

ಶ್ರೀ ಸನ್ನಿಧಿಯು ನೈಜಾಂ, (ದಕ್ಷಿಣ) ಪ್ರಾಂತಕ್ಕೆ ಶಿವಧರ್ಮೋದ್ಧಾರಕ್ಕಾಗಿ ಬಿಜಯಂಗೈಸಿ ರಾವೂರ ಮುಕ್ಕಾಮಿನಲ್ಲಿ ಜನತೋಪಸ್ಥಾನದಿಂದ ವಿರಾಜಿಸುತ್ತಿದೆ. ಆದರೆ ಶ್ರೀ ಪೀಠಕ್ಕೆ ತಿರ್ಯಗಾಂದೋಲನಾದಿ ದ್ವಿಸಪ್ತತಿ ಬಿರುದುಗಳು ಪಂಚಾಶತ್ತರಥಾದ್ಯಸಾಧಾರಣ ರಾಜಗೌರವವು ಭಾರತಸರಕಾರ ನೈಜಾಂಸರಕಾರ ಟಿಹರಿ ಮುಂತಾದ ಸರಕಾರಗಳಿಂದ ಪ್ರಾಪ್ತವಾಗಿರುವದಷ್ಟೆ ? ಆದರೆ ಸದ್ಯಃ ಕರ್ನಾಟಕ ನೈಜಾಂ ಪ್ರಾಂತದಲ್ಲಿ ಮಹಾಸನ್ನಿಧಿಯ ಸಂಚಾರವಿರುವದರಿಂದ ಈ ಕೆಳಗೆ ಕಂಡ ಮೇರೆಗೆ ಅಧಿಕಾರಿಗಳು ಬೇಕಾಗಿರುತ್ತಾರೆ.

೧. ಕರ್ನಾಟಕ ಉರ್ದುವಿದ್ಯೆಗಳಲ್ಲಿ ಸರ್ಟಿಫಿಕೇಟು ಪಡೆದ ಗೌರ್ನಮೆಂಟ್ ಕಾರ್ಯಗಳಲ್ಲಿಯೂ ಶ್ರೀ ಗುರುಪೀಠ ಸಂಸ್ಥಾನ ಕಾರ್ಯಗಳಲ್ಲಿಯೂ ಚತುರರಾದ ಏಜಂಟರೂ ಮ್ಯಾನೇಜರರೂ,

೨. ಹಾಗೂ ಧಾರ್ಮಿಕ ನಿರ್ಣಯಗಳನ್ನು ವಿಚಾರಿಸುವ ಬಗ್ಗೆ ಓರ್ವ ಸ್ಮೃತ್ಯಾಗಮಸಿದ್ಧಾಂತಾದಿಗ್ರಂಥಗಳನ್ನು ನೋಡಿದ ಪಂಡಿತರೊಬ್ಬರು.

೩. ಕಾಶೀ ಕಲಕತ್ತಾ ಪರೀಕ್ಷೋತ್ತೀರ್ಣರೇ ಆಗಲಿ (ಯೋಗ್ಯತೆಯುಳ್ಳವರೇ ಆಗಲಿ) ವೇದಾಂತ ಶಾಸ್ತ್ರ ಶಾಂಕರಭಾಷ್ಯ ಭಾಮತೀ ಅದ್ವೈತಸಿದ್ಧಿ ಶ್ರೀಕಂಠಭಾಷ್ಯ ಶ್ರೀಕರಭಾಷ್ಯ ಶಿವಸೂತ್ರವಿಮರ್ಶಿನೀ ಪ್ರಭೃತಿ ಗ್ರಂಥಗಳನ್ನೋದಿದ ಪಂಡಿತೋತ್ತಮರೊಬ್ಬರು.

೪. ಇಂಗ್ಲಿಷ್. ಸಾಧಾರಣವಾದ ಉರ್ದು, ಸರಿಯಾದ ಕನ್ನಡ, ಇವುಗಳನ್ನು ಬಲ್ಲ ಒಬ್ಬ ಮುನಷಿಗಳು (ಕ್ಲಾರ್ಕರು).

ಇಷ್ಟವುಳ್ಳವರು ಪ್ರಾರ್ಥನಾಪತ್ರಿಕೆಯನ್ನು ಸೆಪ್ಟೆಂಬರ್ ೫ನೇ ತಾರೀಖಿನೊಳಗಾಗಿ ಶ್ರೀ ಸನ್ನಿಧಾನಕ್ಕೆ ಕಳುಹಿಸಬೇಕು. ತಮ್ಮ ತಮ್ಮ ಪ್ರಶಂಸಾಪತ್ರಗಳನ್ನು ಸರ್ವಿಸ್ ಪತ್ರಗಳನ್ನು ಲಗತ್ತಾಗಿ ಕಳುಹಿಸಬೇಕು. ಪಗಾರವನ್ನು ಅವರವರ ಯೋಗ್ಯತೆಗನುಸಾರ ೨೫ ರಿಂದ ೫೦ರವರೆಗೂ ಕೊಡುವದಾಗುತ್ತದೆ. (ಪ್ರಶಂಸಾಪತ್ರಿಕೆಗಳು ಅವಶ್ಯವಾಗಿಬೇಕು.)

ಶ್ರೀ ಕೇದಾರಜಗದ್ಗುರು ಮಹಾಸಂಸ್ಥಾನ ಆಫೀಸ್,
ಪೋ|| ಆರ್-ಎಸ್-ವಾಡೀ, ಮುಕ್ಕಾಂ ರಾವೂರ,
ನೈಜಾಂಸ್ಟೇಟ್.

ರಾಂ. ಟೇ. ರೀತಿನೀತಿಯನ್ನೇ ಅನುಸರಿಸಬೇಕು.

ಮುಖಂಡರ ಹೇಳಿಕೆ.

ಹಿಂದೂಸ್ಥಾನದ ಅನೇಕಮಂದಿ ರಾಜಕಾರಣ ಮುಖಂಡರು ಸಹಿಮಾಡಿರುವ ಒಂದು ಪ್ರಕಟನೆಯನ್ನು ಈ ದಿನ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯವರು ಹೊರಗೆಡವಿದ್ದಾರೆ. ಅದು ಈ ಪ್ರಕಾರವಿದೆ—

'ಜೂನ 27 ನೆಯ ತಾರೀಖಿನ ದಿವಸ ಸ್ಟೇಟ್ ಸೆಕ್ರೆಟರಿಯವರು ಮುಂದಿಟ್ಟ ಹೊಸ ನಡವಳಿಕೆಗಳು ರಾಂ. ಟೇ. ಸಮ್ಮೇಳನದ ರೀತಿನೀತಿಗಳಿಗೆ ಬಹಳವಿರುದ್ಧವಾಗಿವೆಯೆಂದೂ, ಅವನ್ನು ಒಪ್ಪುವಂತಿಲ್ಲವೆಂದೂ ನಾವುಗಳು ಭಾವಿಸುತ್ತೇವೆ. ಬ್ರಿಟಿಷ್ ಮತ್ತು ಭಾರತೀಯ ಪ್ರತಿನಿಧಿಗಳು ಕಲೆತು ಚರ್ಚಿಸಿದಾಗ ಮತ್ತು ಅವರವರಲ್ಲಿ ಒಪ್ಪಿಗೆಗೆ ಬಂದು ಅದರ ಆಧಾರದ ಮೇಲೆ ಬ್ರಿಟಿಷ್ ಪಾರ್ಲಿಮೆಂಟಿನ ಮುಂದಿಡುವ ಪ್ರಯತ್ನದ ವೇಳೆಯಲ್ಲಿಯೂ ಪರಿಸಮಾಪ್ತದ ಭಾವನೆಯೇ ಇಲ್ಲದಂತೆ ಮಾಡಿದೆ. ಈ ಎರಡು ಉದ್ದೇಶಗಳನ್ನೊಳಗೊಂಡೇ ರಾಂ. ಟೇ. ಸಮ್ಮೇಳನದ ವಿಧಾನವು ಅನುಸರಿಸಲ್ಪಟ್ಟಿತು. ಮುಂದಿನ ಕಾರ್ಯಗಳನ್ನು ತ್ವರಿತಗೊಳಿಸಬೇಕಾದರೆ ರಾಂ. ಟೇ. ಸಮ್ಮೇಳನದ ವಿಧಾನವನ್ನು ಸುಲಭವಾಗಿ ಅನುಸರಿಸಬಹುದು. ಪಾರ್ಲಿಮೆಂಟಿನ ಶ್ರೇಷ್ಠಾಧಿಕಾರವನ್ನು ರಾಂ. ಟೇ. ಸಮ್ಮೇಳನವು ಹೇಗೆ ಕಸುಕೊಳ್ಳುವುದೋ ನಮಗಂತೂ ತಿಳಿಯದು. ಈ ಸಂದರ್ಭದಲ್ಲಿ ದೇಶವು ಆಶಿಸುವುದೇನೆಂದರೆ, ರಾಂ. ಟೇ. ಸಮ್ಮೇಳನದ ವಿಧಾನಗಳು ಪುನಃ ಅನುಸರಿಸಲ್ಪಡುವವರೆಗೂ, ಮುಂದಿನ ರಾಜ್ಯಶಾಸನ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಬೇಕೆಂದು ಯಾರು ಯಾರು ಆಹ್ವಾನಿಸಲ್ಪಟ್ಟಿರುವರೋ ಅವರೆಲ್ಲರೂ ಸಹಕರಿಸಲಾಗದು.''

ಸಹಿಮಾಡಿರುವವರು— ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ, ಸರ್ ಸಯುದ್ ಅಲಿ ಇಮಾಮ್, ಸರ್ ತೇಜಬಹದ್ದೂರ್ ಸಪ್ರು, ರಾಯ್ ರಾಜೇಶ್ವರ ಬಲಿ, ರಾಜಾ ಸರ್. ರಾಮ್ ಪಾಲಸಿಂಗ್, ಸಾದಿಕ್ ಹುಸೇನ್. ಸರ್ದಾರ್ ಮೆಹತಬ್‌ಸಿಂಗ್, ಸರ್ ಕವಾಸ್ಜಿ ಜಹಾಂಗೀರ್ (ಜೂನಿಯರ್). ಸರ್ ಫಿರೋಜ್‌ಷಹಾ ಸೇತ್ನಾ, ಡಾ|| ನಾಯಿಡು (ಪೂನ). ಎನ್. ಎಮ್. ಜೋಶಿ, ಎನ್. ಸಿ. ಕೇಳ್ಕರ್. ಸಿ. ವೈ. ಚಿಂತಾಮಣಿ, ಎಂ. ಆರ್. ಜಯಕರ್. ಬಿ. ಎಸ್. ಕಾಮತ್, ಹೃದಯನಾಥ್ ಕುಂಜ್ರು, ಜಿ. ಕೆ. ದೇವಧರ್, ಎ. ಪಿ. ಸೇನ್ ಸಯ್ಯದ್ ಅಲಿಜಹೀರ್, ಪಿ. ಎಸ್. ರಾಜಭೋಜ್ (ಅಂತ್ಯಜವರ್ಗದ ಮುಖಂಡರು), ಸಚ್ಚಿದಾನಂದ ಸಿನ್ಹ, ಆರ್. ಪಿ. ಮಸಾನಿ, ಅಮರನಾಥ ಅಗ್ರವಲ್, ವಿ. ಎಸ್. ಚಂದಾವರ್ಕರ್ (ಬೊಂಬಾಯಿನ ಪೌರಸಭೆಯ ಅಧ್ಯಕ್ಷರು), ಎಂ. ಎಲ್. ಪೂರಿ, ಫೂಕನ್‌ವಾಲಾ, ಬದ್ರೂಲ್ ಇಸ್ಲಾಮ್ ಅಲಿಖಾನ್, ಅಬ್ದುಲ್ ಕುಯ್ಯೂಮ್ ಮಲಿಕ್, ಹರನಂದನ್ ಪ್ರಸಾದ್, ಷಂಸುದ್ದೀನ್ ಹುಸನ್. ಜೆ. ಬಿ. ಬೋಮನ್ ಬೆಹ್ರಾಮ್, ಸೈಯದ್ ಹೈದರ್ ಮಹಲಿ, ಆರ್. ಎನ್. ಬಸು, ಎಸ್. ಸಿ. ಚೌಧುರಿ ಮತ್ತು ಸಾಬಿರೆ (ಅಂತ್ಯಜರ ಮುಖಂಡರು).

ಈಗಿನ ಪಾಠಶಾಲೆಗಳು,

ಒಬ್ಬ ಆಂಗ್ಲೇಯ ಅಧ್ಯಾಪಕರ ಹೇಳಿಕೆ.

ಅಲಹಾಬಾದಿನ ಮಿಷನರಿ ಪಾಠಶಾಲಾಧ್ಯಾಪಕರಾದ ಮಿ|| ಡೆಂಕನ್ ಗ್ರೀನ್‌ಲೀಸ್ ಎಂಬುವರು ಭಾರತಪ್ರೇಮಿಗಳು. ಖಾದಿಯನ್ನು ಧರಿಸುತ್ತಾರೆ. ಅವರು ಕೋರ್ಟಿನಲ್ಲಿ ಹೀಗೆ ಹೇಳಿದರು.

''ನಾನೊಬ್ಬ ಉಪಾಧ್ಯಾಯ ; ಅದೇ ನನ್ನ ವೃತ್ತಿ. ಬಾಲಕರ ಮಧ್ಯೆ ಇದ್ದುಕೊಂಡು, ಅವರ ಆಟ ಆದರ್ಶಗಳಲ್ಲಿ ನಾನು ಭಾಗಿಯಾಗಿರುವುದೇ ನನ್ನ ಭಾಗ್ಯ. ಅವರ ಅಂತರಾತ್ಮಗಳಲ್ಲಿ ಐಕ್ಯವಾಗುವುದೇ ನನ್ನ ಪುರುಷಾರ್ಥ. ಅದಕ್ಕಿಂತ ಮಿಗಿಲಾದ ಆನಂದವಿಲ್ಲ. ಅದಕ್ಕಿಂತ ಪವಿತ್ರ ಬಾಂಧವ್ಯವಿಲ್ಲ. ಹೀಗಿರಲು ಕಳೆದ ಫೆಬ್ರವರಿ ತಿಂಗಳಲ್ಲಿ ಕಲೆಕ್ಟರಿಂದ ನನಗೊಂದು ಆಜ್ಞೆ ಬಂತು. ಅದೇನು? ನನ್ನ ಪವಿತ್ರದ ಬಳಗದವಿದ್ಯಾರ್ಥಿಗಳ ಮೇಲೆ ನಾನು ಸದಾ ಗೂಢಚಾರನಂತೆ (ಸಿ. ಐ. ಡಿ.) ಕಣ್ಣಿಟ್ಟಿರಬೇಕಂತೆ. ಅವರಲ್ಲಿ ಯಾರಾದರೂ ಕಾಂಗ್ರೆಸ್‌ಸಭೆಗೆ ಹೋದರೆ ತಕ್ಷಣ ನಾನದನ್ನು ಪೋಲೀಸಿಗೆ ತಿಳಿಸಬೇಕಂತೆ. ಇದಕ್ಕಿಂತ ಇನ್ನು ಹೀನಕೆಲಸವುಂಟೆ? ನನ್ನ ಪಾಲನೆಗೊಳಗಾದ ಬಾಲಕರು ಅಪಾಯಕ್ಕೊಳಗಾದರೆ ಅವರನ್ನು ರಕ್ಷಿಸುವುದು; ಅಂತಹ ಅಪಾಯಕ್ಕವರು ಒಳಗಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ಆದರೆ ಕಲೆಕ್ಟರ ಅನ್ಯಾಯವಾದ ಆಜ್ಞೆಯನ್ನು ನೆರವೇರಿಸಲು ನಾನು ಒಪ್ಪಲಿಲ್ಲ. ನನ್ನ ದಸ್ತಗಿರಿಯಾಗುವುದೆಂದು ನಂಬಿದ್ದೆ. ಆದರೆ ಹಾಗಾಗಲಿಲ್ಲ. ನನ್ನ ನೌಕರಿಯು ಹೋಯಿತು. ಆದರೆ ನನ್ನನ್ನವರು ಮರೆಯಲಿಲ್ಲ. ಸದ್ಯಕ್ಕೆ ಅಂತಹ ಆಜ್ಞೆಗಳನ್ನು ಮತ್ತೆ ಕಳುಹಿಸಲಿಲ್ಲ. ಉಳಿದ ಹೆಡ್‌ಮಾಸ್ತರರೆಲ್ಲ 'ಕಿಮಕ್ ಕಮಕ್' ಅನ್ನದೆ ಆ ಆಜ್ಞೆಯನ್ನು ಶಿರಸಾವಹಿಸಿದರೆಂದು ಹೇಳಲು ನನಗೆ ನಾಚಿಕೆಯಾಗುತ್ತದೆ. ಭರತಖಂಡದಲ್ಲಿ ಗುರುಶಿಷ್ಯರಿಗಿರುವ ಪವಿತ್ರಬಾಂಧವ್ಯವನ್ನು ಹೀಗೆ ಹಾಳುಮಾಡಲು ಪೋಲೀಸು ಅಧಿಕಾರಿಗಳಿಗೆ ಬಲಕೊಟ್ಟಿರುವುದು ದುಃಖಕರವಾಗಿದೆ. ಈ ಬಗೆಯ ಆಜ್ಞೆಗಳು ಉಪಾಧ್ಯಾಯರನ್ನು ತಾವಾಗಿಯೇ ರಾಜಕಾರಣಕ್ಕೆ ತಳ್ಳಿದಂತಾಗುತ್ತದೆ.

ಸರಕಾರದಿಂದ ಅನುಗ್ರಹಿಸಲ್ಪಟ್ಟು ನಡೆಯುತ್ತಿರುವ ಶಾಲೆಗಳ ವಾತಾವರಣವೆಲ್ಲ ವಿಷಪೂರಿತವಾಗಿದೆ. ಅದನ್ನು ಊಹಿಸಲಾಗದು. ದೇಶಭಕ್ತಿಯ ಸುಳಿವಿನ ವಾಸನೆಯಿರುವ ಹಾಡುಗಳ ಕೂಡ ಆ ಶಾಲೆಗಳ ಗೋಡೆಗಳೊಳಕ್ಕೆ ಬರಗೊಡಿಸುವುದಿಲ್ಲ. ಯಾವ ಸರಕಾರೀ ಅಧಿಕಾರಿಯ ಕಿವಿಗೆ ಬೀಳುತ್ತದೋ ಎಂಬ ಭಯ. ಶಾಲೆಗಳಲ್ಲಿ ಹುಡುಗರಿಗೆ ಸುಳ್ಳು, ಮೋಸ, ಹಲ್ಲುಕಿರಿಯುವುದನ್ನು ಗುಲಾಮಗಿರಿಯನ್ನು ಕಲಿಸುವುದಕ್ಕಾರಂಭವಾಗಿದೆ.

ಶಿಕ್ಷಣ ಶಾಸನದ ವಿಧಿಗಳು (ಎಜುಕೇಷನಲ್ ಕೋಡ್) ಬಹಳ ಅನ್ಯಾಯವಾಗಿವೆ. ನನ್ನ ಪಾಠಶಾಲೆಯ ಇತ್ತೀಚಿನ ಚರಿತ್ರೆಯಿಂದಲೇ ಅದು ಗೊತ್ತಾಯಿತು. ಸರಕಾರದ ಭರವಸೆಗಳಂತೆ ಆ ಶಾಸನ ವಿಧಿಗಳು ಉಪಾಧ್ಯಾಯರನ್ನು ಅನ್ಯಾಯದಿಂದ ರಕ್ಷಿಸುವುದಿಲ್ಲ. ತಮ್ಮ ದೇಶವನ್ನು ಯಾರು ಪ್ರೀತಿಸುವರೋ ಅಂಥವರನ್ನು ಈ 'ಕೋಡು' ಗಳು ತಿವಿದು ಹಿಂಸೆಮಾಡುತ್ತವೆ. ಬಾಲ್ಯದಲ್ಲೇ ಮಾತೃದೇಶದ ಕಡೆಗೆ ಮುಖಮಾಡಿ ಅದರ ಏಳಿಗೆಗಾಗಿ ಹೆಣಗಾಡುವ ಮಕ್ಕಳನ್ನು ತುಳಿದುಹಾಕುತ್ತವೆ.

''ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಯಾವನಾದರೂ ಉಪಾಧ್ಯಾಯನಾಗಲಿ ವಿದ್ಯಾರ್ಥಿಯಾಗಲಿ ಹೋರಾಡುವ ದಳದಲ್ಲಿ ಸೇರಿದ್ದನೆಂದು ತಿಳಿದುಬಂದರೆ ಅಂತಹವರನ್ನು ಶಾಲೆಗೆ ಸೇರಿಸಬೇಡಿ'' ರೆಂದು ರಹಸ್ಯವಾಗಿ ಆಜ್ಞೆಗಳನ್ನು ಕಳುಹಿಸುತ್ತಾರೆ. ಇಂಗ್ಲೆಂಡಿನಲ್ಲಾದರೋ ಅಂತಹ ದೇಶಭಕ್ತನಾದ ಉಪಾಧ್ಯಾಯನ ಅಥವಾ ವಿದ್ಯಾರ್ಥಿಯ ಹೆಸರನ್ನು ಸುವರ್ಣಾಕ್ಷರಗಳಿಂದ ಶಾಲಾ ಮಂಟಪದಲ್ಲಿ ಕೆತ್ತಿ ಗೌರವಿಸುತ್ತಾರೆ.

ಇನ್ನು ಓದುವ ವಿಚಾರಗಳು ನಿಜವಾದ ಶಿಕ್ಷಣಕ್ಕೆ ಕಾಲವೇ ಇಲ್ಲ. ಮೋಸಗಾರರೂ, ಹಂದರೂ ಆದ ಗುಮಾಸ್ತೆಗಳನ್ನು, ಪರದೇಶಿ ಸರಕಾರದ 'ರಾಜಭಕ್ತಶಿರೋಮಣಿ' ಗಳನ್ನು ತಯಾರು ಮಾಡುವ ಕಾರ್ಖಾನೆಗಳವು. ಈ ಬಗೆಯ ಅಪವಿತ್ರ ವಾತಾವರಣದಿಂದ, ದುರ್ವಾಸನೆಯಿಂದ ಶಾಲೆಗಳನ್ನು ಉದ್ಧಾರಮಾಡಬೇಕು. ಈ ಉದ್ಧಾರಕಾರ್ಯವು—ಅಲ್ಲ—ಕರ್ತವ್ಯವು ಉಪಾಧ್ಯಾಯರಿಗೆ ಸೇರಿದ್ದು. ಹಾಗೆ ಮಾಡಲು ಸಂಕಲ್ಪಮಾಡಿ ಕರ್ತವ್ಯಪರರಾಗುವವರಿಗೆ ಬರುವ ಬಹುಮಾನವೇನು? ಬಹುಶಃ ಸೆರೆಮನೆಯ ಪ್ರವೇಶ! ಈ ಕಾಣಿಕೆಯನ್ನು ಪ್ರಪಂಚದಲ್ಲಿ ಎಲ್ಲೆಲ್ಲೂ ಎಲ್ಲರೂ ತೆತ್ತಿರುವರು. ಸಂತೋಷದಿಂದ ತೆತ್ತಿರುವರು.''

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ— ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯಿದೆಕಟ್ಟಿ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾಡ್ಗಸ್— ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ನೆತ್ತಿ ಸುಡುವದು, ಪಿತ್ತ ಕಾರುವದು, ಮುಖ ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬತ್ತಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0

ಕಂಪೌಂಡ್ ಸಿರಪ್ ಬ್ಲಿಟ— ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ— ರಕ್ತಶುದ್ಧಿ. ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್— ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವೃದ್ಧಿಯಾಗದೆ, ನರ ನಾಡಿಗಳಲ್ಲಿ ಸತ್ವಾಂಶ ಕುಂದಿ ಒಡನೆ ಹೆತ್ತವರು ಈ ಅವ್ಯಾಹತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1-4.

ಕಂಪೌಂಡ್ ಸಿರಪ್ ಮೆಸಿಫೂಜ— 20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ಮೂತ್ರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರಿಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಟಿಕ್ಕು ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿಕಿತ್ಸೆಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ ''**ಆರೋಗ್ಯಭಾಗ್ಯದ ನೀತಿಸೂತ್ರ**'' ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಜಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟ್ಯಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[1] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ.) ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಭಸ್ಮ	೧	೦—೪—೦
ಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ರ (೧ನೇ ನಂಬರ್)	೧	೫೦—೦—೦
ರ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿ ಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟ್ಯಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ— ಮ್ಯಾನೇಜರ,

ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೀತಿಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಗೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಸ್ರವಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ತೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲ.

ಎಲ್ಲಾ ಬಣ್ಣದ ತೆರಗು, ಮುಟ್ಟಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟಿಚೆಟ್ಟು ಆಗೋಣ, ಮುಟ್ಟಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮುಟ್ಟಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಪ್ರಕೃತಿ ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ. ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
39 ಮು. ಪೋ. **ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗುಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಯವರಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[7] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧
ವೀರಶೈವಸಿದ್ಧಾಂತಸುಧಾಕರ	೨
ಲಿಂಗೋತ್ಪತ್ತಿ ಲಾಕೆಟ್ಸು	೨

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡ ಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ ಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆ ಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ಕೊ ಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿ ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೩
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಧವಳಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ ರೆ:—ಪಿನಶಿ, ಒಂ ತಲೆನೋವು, ತಲೆ ಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಲಿಟ್ಟ ಕಟಿ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪- ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸ

[8]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

GISTERED No. M. 2266 ‖ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ‖
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ‖

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಆಗಸ್ಟ್ ೧೯೩೨ [ಸಂಚಿಕೆ ೧೫

ಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪ ಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗ ರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿ ಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೪ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಮ್ಯಾನೇಜರ,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

NOTICE

A HOLSTEIN BULL and a SCINDI BULL are at stud at the Rayankere Palace Dairy Farm, Mysore, the rates being Rs. 5 and Rs. 2 respectively. Both bulls are of good milk pedigree.

Dr. McISAAC,
Manager,
Rayankere Dairy Farm.

(3)

ANNOUNCEMENT.

Insure your Life with **Unique Life Assurance Co. Ltd.,** to support Swadeshism & to save money for rainy days. This Company was founded in 1912 by the late illustrious Deshabandhu C. R. Das. Its business has increased largely in the last two years, because it offers **Lowest Premium Rates, High Bonus, Protection against Permanent Disability,** and all available benefits to Policy Holders.

Applications from educated and influential persons desirous to earn a solid side income as Insurance Agents in all parts of Mysore State are invited by

MR. E. K. PALIA M.A., ETC.,
Chief Agent,
Mysore State & Bangalore.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುಕೀರ್ತನೆ.

ಬಳ್ಳಾರಿ ಡಿ॥ ಹುವಿನಹಡಗಲಿ ತಾಲೂಕು ಹೊಳಗುಂದಿಗ್ರಾಮದ ಪ್ರಮುಖರಾದ ಮ॥ ರಾ॥ ಯಜಮಾನ್ ಶಾ॥ ಮುಂದಿನಮನೆ ಸಿದ್ಧಲಿಂಗಪ್ಪನವರು, ಪಾಟೀಲ ವಿರೂಪಾಕ್ಷಗೌಡರು, ಶಾ॥ ಛ॥ ಗುಡ್ಡದಸಿದ್ಧಪ್ಪನವರು, ಹಲಗಪ್ಪನವರ ಹಾಲಪ್ಪನವರೇ ಮೊದಲಾದ ಗುರುಭಕ್ತಿಧುರೀಣಮಂಡಳಿಯು ಶ್ರೀ ವೇ॥ ಹಿರೇಹಡಗಲಿ ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳವರಿಂದ ಶ್ರೀ ಬಳ್ಳೇಶ್ವರದೇವಾಲಯದಲ್ಲಿ ರೇಣುಕವಿಜಯದ ಗೋರಕ್ಷಗರ್ವಭಂಗ ಎಂಬ ಕೀರ್ತನವನ್ನು ಹೇಳಿಸಿ ಸಮಸ್ತ ಪುರುಷಸಮೂಹಕ್ಕೆ ಧರ್ಮ-ನೀತಿ-ಸತ್ಕೃತ-ಪವಿತ್ರಭಾವನೆಗಳನ್ನು ಚೆನ್ನಾಗಿ ಬೋಧಿಸಿ ಸಂತೋಷಗೊಳಿಸಿದರು.

ಸಮಾಜಸುಧಾರಣೆಯಾಗಬೇಕಾದರೆ, ದೇಶದಲ್ಲಿ ಪ್ರತಿಯೊಂದು ಸಣ್ಣಪುಟ್ಟ ಹಳ್ಳಿಗಳಲ್ಲಿ ಕೀರ್ತನಮೂಲಕವಾಗಿ ಪ್ರಾಜ್ಞಜನರಿಗೆ ಬೋಧಿಸುತ್ತಾ ಒಂದು ವರುಷಕ್ಕೆ ೨ ಸಾರೆಯಾದರೂ ಕೀರ್ತನಕಾರರು ಸಂಚಾರಮಾಡಬೇಕು. ಪ್ರತಿಯೊಂದು ಗ್ರಾಮದವರು ಶಿವಕೀರ್ತನಕಾರರನ್ನು ಕರೆಯಿಸಿಕೊಂಡು ೨-೩ ಕೀರ್ತನಗಳನ್ನಾದರೂ ಹೇಳಿಸಿ ಧನ್ಯರಾಗಬೇಕೆಂದು ಬಯಸುವ,

ಸಮಾಜಸುಧಾರಣಾಭಿಮಾನಿ.

ಕೇದಾರಪ್ರಾಂತದ ಸಮಾಚಾರ.

ಶ್ರೀ ಚಿದ್ಘನಲಿಂಗಶಿವಾಚಾರ್ಯಮಹಾಸ್ವಾಮಿಗಳ ಶುಭಾಗಮನ.

೫-೬ ವರ್ಷಗಳಿಂದ ಮಹಾಸ್ವಾಮಿಗಳು ದಕ್ಷಿಣಹಿಂದುಸ್ಥಾನದ ಭಕ್ತರ ಭಕ್ತಿಯಲ್ಲಿಯೇ ಇದ್ದರು. ಆದರೆ ಶ್ರೀ ಜಗದ್ಗುರು ಕೈಲಾಸಲಿಂಗಶಿವಾಚಾರ್ಯಮಹಾಸ್ವಾಮಿಗಳ ಸವಾರಿಯು ದಕ್ಷಿಣಹಿಂದುಸ್ಥಾನಕ್ಕೆ ಬಿಜಯಂಗೊಳಿಸಿದ್ದರಿಂದ ಮಹಾಸ್ವಾಮಿಗಳವರು ಸರ್ಕಾರ್ಯವನ್ನು ಶ್ರೀ ಜಗದ್ಗುರು ಕೈಲಾಸಲಿಂಗ ಸನ್ನಿಧಿಯವರಿಗೆ ಒಪ್ಪಿಸಿ, ತಾ॥ ೧೦-೮-೩೨ ಉದಯ ೧೦ ಗಂಟೆಗೆ ಶ್ರೀ ಸಂಸ್ಥಾನ ಹಿಮಾಲಯ ಉಖಾಮಠಕ್ಕೆ ಬಿಜಯಂಗೊಳಿಸಿದರು. ಮಹಾಸನ್ನಿಧಿಯ ಸವಾರಿಯು ಬಹಳ ದಿವಸಗಳಿಂದ ಸಂಸ್ಥಾನಕ್ಕೆ ದಯಮಾಡಿಸದೆ ಇದ್ದುದರಿಂದ ಈ ಪ್ರಾಂತೀಯ ಭಕ್ತಾದಿಗಳು ಸನ್ನಿಧಿಯ ದರ್ಶನದಲ್ಲಿ ಅತ್ಯಂತ ಲವಲವಿಕೆಯುಳ್ಳವರಾಗಿದ್ದರು. ಮಹಾಸನ್ನಿಧಿಯ ಸ್ವಾಗತಕ್ಕಾಗಿ ಮಾರ್ಗವು ಸುಂದರವಾದ ಕಮಾನುಗಳಿಂದಲೂ, ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ನೀಲಕಂಠಮಿಡ್ಲಸ್ಕೂಲಿನ ವಿದ್ಯಾರ್ಥಿಗಳು, ಮಾಸ್ತರರು, ಕೇದಾರನಾಥಮಹಾವಿದ್ಯಾಲಯದಲ್ಲಿರುವ ವ್ಯಾಕರಣ, ಜ್ಯೋತಿಷ, ಆಯುರ್ವೇದ ವಿದ್ಯಾರ್ಥಿಗಳು ಮತ್ತು ಪಂಡಿತರುಗಳು ವೇದಮಂತ್ರಗಳನ್ನು ಉಚ್ಚರಿಸುತ್ತ ಪಾಲಕಿಯಮುಂಭಾಗದಲ್ಲಿ ಸಾಗಿದ್ದರು. ಭಕ್ತಾದಿಗಳು ಹಿಮಾಲಯದಲ್ಲಿ ಬೆಳೆಯುವ ಮನೋಹರ ಸುಗಂಧಪುಷ್ಪಗಳನ್ನು ಮಹಾಸನ್ನಿಧಿಯ ಪಲ್ಲಕ್ಕಿಯಮೇಲೆ ಎರಚುತ್ತಿದ್ದರು. ಪೋಲೀಸ್ ಸಬ್ಇನ್ಸ್ಪೆಕ್ಟರರು ತಮ್ಮ ಸಿಬ್ಬಂದಿಯೊಡನೆ ವ್ಯವಸ್ಥೆಗಾಗಿ ಬಂದಿದ್ದರು. ಮಹಾಸನ್ನಿಧಿಯವರು ಸರಿಯಾಗಿ ೧೦ ಗಂಟೆ ಉದಯಕ್ಕೆ ಸಂಸ್ಥಾನಮಠಕ್ಕೆ ಬಿಜಯಗೊಳಿಸಿ ದಿವ್ಯವಾದ ಸಿಂಹಾಸನದ ಮೇಲೆ ಮೂರ್ತಮಾಡಿದರು. ವಿದ್ಯಾರ್ಥಿಗಳು ಮಹಾಸ್ವಾಮಿಗಳ ಗುಣಕೀರ್ತನವನ್ನು ಗದ್ಯಪದ್ಯರೂಪದಿಂದ ಹಾರ್ಮೋನಿಯಮ್ನಲ್ಲಿ ಕೇಳುವವರ ಮನಸ್ಸಿಗೆ ಇಂಪಾಗುವಂತೆ ಹಾಡಿದರು. ಅನಂತರ ಕೆಲವು ಪಂಡಿತರು ಮಹಾಸನ್ನಿಧಿಯ ವಿದ್ಯಾ-ಬುದ್ಧಿ-ಪರೋಪಕಾರ, ಶಾಂತಿ, ರಾಜಕಾರ್ಯಕುಶಲತೆ, ಮಹತ್ವ, ಅಖಂಡಬ್ರಹ್ಮಚರ್ಯ ಇತ್ಯಾದಿಗಳ ಮೇಲೆ ಸರ್ವರಿಗೂ ಸಂತೋಷವಾಗುವಂತೆ ಭಾಷಣಮಾಡಿದರು. ಅನಂತರ ಸರ್ವರೂ ಮಹಾಸನ್ನಿಧಿಗೆ ಮಂಗಳಾರತಿಯನ್ನು ಮಾಡಿ ಆಶೀರ್ವಾದವನ್ನು ಪಡೆದು ಮಹಾಸನ್ನಿಧಿಯ ಜಯಜಯಕಾರಮಾಡುತ್ತಾ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು.

ಸಿದ್ಧಲಿಂಗಶರ್ಮ, ಓಖಿಮಠ.

ಪ್ರಸಿದ್ಧ ಕಾಂಗ್ರೆಸ್ಮುಖಂಡರಾದ ಶ್ರೀ॥ ಬಾಬು ಶಿವಪ್ರಸಾದಗುಪ್ತರು ಮತ್ತು ಮಿ॥ ಮುರಳೀಧರರವರು ಅಗಸ್ಟ 17 ನೆಯ ತಾರೀಖಿನ ಸಾಯಂಕಾಲ ಬಹಿರಂಗ ಮೆರವಣಿಗೆಯಲ್ಲಿ ಭಾಗವಹಿಸಿದರೆಂಬ ಕಾರಣದಮೇಲೆ ಬನಾರಸ್ಸಿನಲ್ಲಿ ದಸ್ತಗಿರಿಮಾಡಲ್ಪಟ್ಟರು. ಅದೇ ದಿವಸ ಬೆಳಗ್ಗೆ ಪೋಲೀಸರು 24 ಗಂಟೆಗಳೊಳಗಾಗಿ ಮುಂಬಯಿಯನ್ನು ಬಿಟ್ಟು ಹೊರಡಬೇಕೆಂದು ಶ್ರೀ॥ ಗುಪ್ತರಿಗೂ, ಮಿ॥ ದಾಮೋದರದಾಸ್ ನಾರವರಿಗೂ ನೋಟೀಸು ಕೊಟ್ಟಿದ್ದರು.

ಅಗಸ್ಟ 18 ನೆಯ ತಾರೀಖಿನ ದಿವಸ ಮುಂಬಯಿಯ ಒಬ್ಬ ಅಕ್ಕಿಯ ವ್ಯಾಪಾರಿಯು ಪರದೇಶದ ಹಡಗು ಕಂಪೆನಿಗಳ ಮೂಲಕವಾಗಿ ಅಕ್ಕಿಯನ್ನು ತರಿಸಿಕೊಳ್ಳುತ್ತಿದ್ದನೆಂಬ ಕಾರಣದಮೇಲೆ ಸ್ವಯಂಸೇವಕರು ಅವನ ಅಂಗಡಿಯಮುಂದೆ ಪಿಕೆಟಿಂಗ್ ಮಾಡಿದರು. ಪೋಲೀಸರು 4 ಜನರನ್ನು ದಸ್ತಗಿರಿಮಾಡಿರುತ್ತಾರೆ.

ಅಗಸ್ಟ 18 ನೆಯ ತಾರೀಖಿನ ದಿವಸ 35 ಜನ ಕಾಂಗ್ರೆಸ್ ಸ್ವಯಂಸೇವಕರು ಮುಂಬಯಿಯ 'ಸೆಕ್ರೆಟೇರಿಯಟ್' ಕಟ್ಟಡಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಪೋಲೀಸರು ಎಲ್ಲರನ್ನು ದಸ್ತಗಿರಿಮಾಡಿದರು. 19 ನೇ ತಾರೀಖಿನ ದಿವಸ ಬೆಳಿಗ್ಗೆ ಇದೇ ಕಾರಣದಮೇಲೆ ಮತ್ತೆ 21 ಜನರು ದಸ್ತಗಿರಿಮಾಡಲ್ಪಟ್ಟರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ದೀರ್ಘಾಯುರಾರೋಗ್ಯಪ್ರಾಪ್ತಿಗೆ ಮುಖ್ಯ ಸಾಧನಗಳು.

ನಮ್ಮ ಶರೀರಕ್ಕೆ ಸಂಬಂಧಪಟ್ಟ ಎಲ್ಲಾ ಅವಯವಗಳೂ ಪಂಚಭೂತಾತ್ಮಕವಾಗಿರುವುವು. ಮಣ್ಣು, ನೀರು, ವಾಯು, ತೇಜಸ್ಸು, ಆಕಾಶ ಇವುಗಳು ಸೇರಿ ದೇಹವಾಗಿರುವುದು. ಈ ದೇಹವು ಪ್ರತಿನಿಮಿಷದಲ್ಲಿಯೂ ಬದಲಾವಣೆಯನ್ನು ಹೊಂದುವುದು. ಶರೀರದಲ್ಲಿ ಸೃಷ್ಟಿಸ್ಥಿತಿಲಯಗಳು ಪ್ರತಿನಿಮಿಷವೂ ನಡೆಯುವುವು. ನಮ್ಮ ಶರೀರದ ರಕ್ತವೇ ಮೊದಲಾದುವುಗಳಲ್ಲಿ ಎಷ್ಟೋ ಪ್ರಾಣಿಗಳಿರುವುವು. ಅವುಗಳು ಸಾಯುತ್ತವೆ. ಅವುಗಳ ಶವಗಳು ದೇಹದಿಂದ ವಿಸರ್ಜನೆಯಾಗಬೇಕು. ನಾವು ಎಷ್ಟೋ ಪದಾರ್ಥಗಳನ್ನು ಭುಂಜಿಸುತ್ತೇವೆ. ಜಲಾವಸ್ಥೆಯಲ್ಲಿ ರಕ್ತಕ್ಕೆ ಎಷ್ಟೋ ಪದಾರ್ಥಗಳನ್ನು ಸೇವಿಸುತ್ತೇವೆ. ಅನಿಲಾವಸ್ಥೆಯಲ್ಲಿ ಇರತಕ್ಕ ಎಷ್ಟೋ ಪ್ರಾಣಿಗಳು ಉಚ್ಛ್ವಾಸದಲ್ಲಿ ನಮ್ಮ ದೇಹಕ್ಕೆ ಸೇರುವುವು. ನಿಶ್ವಾಸದಲ್ಲಿ ನಮ್ಮ ದೇಹದಿಂದ ವಿಸರ್ಜನೆಯಾಗುವುವು. ನಾವು ತಿಂದ ಪದಾರ್ಥಗಳಲ್ಲಿ ಸಾರಭೂತವಾದವುಗಳು ನಮ್ಮ ದೇಹವನ್ನು ಸೇರಿ ನಮ್ಮ ದೇಹಕ್ಕೂ ನಮ್ಮ ದೇಹವನ್ನು ಆಶ್ರಯಿಸಿಕೊಂಡಿರತಕ್ಕ ಪ್ರಾಣಿಗಳಿಗೂ ನಮಗೆ ಪ್ರತಿಕೂಲವನ್ನು ಮಾಡತಕ್ಕ ಪ್ರಾಣಿಗಳಿಗೂ ಆಹಾರವನ್ನು ಸರಬರಾಜುಮಾಡುವುವು. ನಮಗೆ ಹೇಗೋ ಹಾಗೆ ಆಹಾರವನ್ನು ತೆಗೆದುಕೊಳ್ಳುವುದು, ಜಲಮಲವಿಸರ್ಜನೆಯನ್ನು ಮಾಡುವುದು ಈ ಪ್ರಾಣಿಗಳಿಗೂ ಇರುತ್ತವೆ. ಈ ಕಶ್ಮಲಗಳೆಲ್ಲಾ ದೇಹದಿಂದ ವಿಸರ್ಜನೆಯಾಗುತ್ತಾ ಇರಬೇಕು. ಹಾಗೆ ವಿಸರ್ಜನೆಯಾದರೆ ಆರೋಗ್ಯವಿರುವುದು. ಆಯುಸ್ಸು ವೃದ್ಧಿಯಾಗುವುದು. ಯಾರಿಗೆ ಆರೋಗ್ಯವೂ ಆಯುಸ್ಸೂ ಇರುವುದೋ ಅವರಿಗೆ ದೇಹಶಕ್ತಿಯೂ, ಬುದ್ಧಿಶಕ್ತಿಯೂ ಪರಿಪೂರ್ಣವಾಗಿರುವುವು. ಇವೆರಡು ಶಕ್ತಿಗಳೂ ಯಾರಿಗೆ ಸಮಗ್ರವಾಗಿರುವುವೋ ಅವರು ಜಗದೀಶ್ವರನಿಗೆ ಸಮಾನರಾಗುವರು. ಅವರು ಸಕಲಶಾಸ್ತ್ರವಿಶಾರದರಾಗುವರು. ಅವರು ತಪ್ಪುಗಳನ್ನು ಮಾಡುವುದು ಅಪೂರ್ವವಾಗುವುದು. ತಪ್ಪುಗಳನ್ನು ಮಾಡಿದಾಗ್ಯೂ ಕೂಡಲೇ ತಿದ್ದಿಕೊಳ್ಳುವರು. ವಸಿಷ್ಠಾದಿ ಬ್ರಹ್ಮರ್ಷಿಗಳಂತೆಯೂ ಶ್ರೀರಾಮನೇ ಮೊದಲಾದ ರಾಜರ್ಷಿಗಳಂತೆಯೂ ನಸಿರುದ್ದೀನ್ ಮಹಮ್ಮದನೇ ಮೊದಲಾದ ಮುಸಲ್ಮಾನ ಮಹಾತ್ಮರಂತೆಯೂ, ಬುದ್ಧನೇ ಮೊದಲಾದ ಪರಮಹಂಸರಂತೆಯೂ, 'ಪೀಟರ್ ದಿ ಗ್ರೇಟ್' ನೇ ಮೊದಲಾದ ಚಕ್ರವರ್ತಿಗಳಂತೆಯೂ, ಪಟೋನೇ ಮೊದಲಾದ ದೇಶಬಂಧುಗಳಂತೆಯೂ, ಡಾ|| ಸನ್‌ಯಾಟ್‌ಸೇನನೇ ಮೊದಲಾದ ಲೋಕಸೇವಾಧುರಂಧರರಂತೆಯೂ, ಯುಕ್ತಾಹಾರವಿಹಾರಗಳನ್ನು ತಿಳಿದುಕೊಂಡು ಆಯುರಾರೋಗ್ಯಗಳಿಗೆ ಸ್ಥಾನಕಬರದಂತೆ ನೋಡಿಕೊಳ್ಳತಕ್ಕವರು ಮೇಲೆ ಹೇಳಿದ ಮಹನೀಯರಂತೆ ನಿಜವಾದ ಅವತಾರಪುರುಷರಾಗುವರು. ಮಹಾತ್ಮ ಗಾಂಧಿಯವರಂತೆ ಅವತಾರಪುರುಷರಲ್ಲಿ ಅಗ್ರಗಣ್ಯರಾಗಿಯೂ ಆಗುವರು. ಚಕ್ರವರ್ತಿಪದವಿಗಿಂತಲೂ ಹೆಚ್ಚಾದ ಪದವಿಯು ಅವರಿಗೆ ಲಭ್ಯವಾಗುವುದು. ಯಾರು ಆಯುರಾರೋಗ್ಯಗಳ ರಕ್ಷಣೆಗೆ ಬೇಕಾದ ವಿಧಿನಿಷೇಧಗಳನ್ನು ತಿಳಿದುಕೊಂಡು ಅನುಷ್ಠಾನದಲ್ಲಿಟ್ಟುಕೊಳ್ಳುವರೋ ಅವರು ಪಾರ್ ಎಂಬ ಮಹನೀಯನಂತೆ 120 ನೇ ವಯಸ್ಸಿನಲ್ಲಿ 20 ವರ್ಷದ ಹುಡುಗರ ಜೊತೆಯಲ್ಲಿ ಓಡತಕ್ಕ ಆಜಿನಲ್ಲಿ ಗೆಲ್ಲುವ ಶಕ್ತಿಯನ್ನು ಕೂಡ ಹೊಂದುವರು. ಆರೋಗ್ಯವಿಧಿನಿಷೇಧಗಳನ್ನು ಅನುಷ್ಠಾನದಲ್ಲಿಟ್ಟುಕೊಂಡಿರತಕ್ಕವರೇ ಅಪೂರ್ವ. ಜಿತೇಂದ್ರಿಯರಾಗಿ ಅರಿಷಡ್ವರ್ಗಗಳನ್ನು ಗೆದ್ದು ಪರಿಪೂರ್ಣವಾದ ಶಾಂತಿಯನ್ನು ಹೊಂದಿ, ಸಂಪತ್ತು ಬಂದಾಗ ಹಿಗ್ಗದೆ, ವಿಪತ್ತು ಬಂದಾಗ ತಗ್ಗದೆ, ಜನಕಾದಿಗಳಂತೆ ನಿರ್ಲಿಪ್ತರಾಗಿರತಕ್ಕವರು ಕೋಟಿಗೊಬ್ಬರು ಸಿಕ್ಕುವುದು ಕಷ್ಟ. ಶುಕಾದಿಗಳಂತೆ ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿ ಪರಮಹಂಸಪದವಿಗೆ ಅಲಂಕಾರಪ್ರಾಯರಾಗಿರತಕ್ಕವರು ತಪೋಜನೀಸನಂತೆ ಲಕ್ಷಾಂತರ ವರ್ಷಗಳಲ್ಲಿ ಒಬ್ಬಿಬ್ಬರು ಸಿಕ್ಕುವುದು ಕಷ್ಟ. ಸಾಮಾನ್ಯವಾಗಿ ಕ್ರಿಮಿಕೀಟಗಳೇ ಮೊದಲಾದ ತಿರ್ಯಗ್ಜಂತುಗಳು ಹೇಗೋ ಹಾಗೆ ಸಾಮಾನ್ಯಜನರೂ ಕೂಡ ಆಹಾರ, ವಿಹಾರ, ನಿದ್ರೆ, ಪ್ರಜಾವೃದ್ಧಿಯ ಕೆಲಸಗಳು, ಹೊನ್ನು, ಹೆಣ್ಣು, ಮಣ್ಣು, ಅಧಿಕಾರಗಳನ್ನು ಹೊಂದಿ ಅವುಗಳನ್ನು ಸ್ವಾರ್ಥಪರತೆಗೋಸ್ಕರವೂ, ದುಷ್ಟಪರಿಪಾಲನೆಗೋಸ್ಕರವೂ, ವಿನಿಯೋಗಿಸುವುದು ಈ ಮೊದಲಾದ ಜಘನ್ಯವಾದ ಕೆಲಸಗಳಿಗೆ ತಮ್ಮ ದೇಹಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ವಿನಿಯೋಗಿಸಿ ಈ ಲೋಕವೂ ಲೋಕಾಂತರವೂ ನರಕವಾಗುವಂತೆ ಮಾಡಿಕೊಳ್ಳತಕ್ಕವರೇ ಹೆಚ್ಚಾಗಿ ಸಿಕ್ಕುವರು. ಈ ವಿಷಯವನ್ನು ಎಲ್ಲ ಸ್ತ್ರೀಪುರುಷರೂ ಪರ್ಯಾಲೋಚಿಸಿ ಆಹಾರ ವಿಹಾರನಿಯಮಗಳನ್ನು ಕ್ರಮಪಡಿಸಿಕೊಂಡು ಕೃತಾರ್ಥರಾಗುವುದು ಉತ್ತಮ. ಸ್ತ್ರೀಯರಲ್ಲಿ ಅನೇಕರು ಅಕಾಲಮರಣಕ್ಕೆ ಗುರಿಯಾಗುತ್ತಲಿದ್ದಾರೆ. ನಿವಾರಣೀಯವಾದ ರೋಗಗಳಿಗೂ ಗುರಿಯಾಗುತ್ತಲಿದ್ದಾರೆ. ಹೀಗಾಗುವುದಕ್ಕೆ ಇವರ ಅಜ್ಞಾನವೇ ಮುಖ್ಯಕಾರಣ. ಸ್ತ್ರೀಯರಲ್ಲಿ ಓದುಬರಹಗಳನ್ನು ಬಲ್ಲವರು ಶೇಕಡಾ ಇಬ್ಬರು ಮೂವರು ಸಿಕ್ಕುವುದು ಕೂಡ ಕಷ್ಟವಾಗಿದೆ. ಗರ್ಭಾದಾನವಾದ್ದು ಮೊದಲುಗೊಂಡು ಜನನವಾಗುವವರೆಗೂ ಅವರು ಆರೋಗ್ಯದೃಢಕಾಯರಾಗಿರಬೇಕಾದರೂ ಮಕ್ಕಳು ಆರೋಗ್ಯದೃಢಕಾಯರಾಗಿರಬೇಕಾದರೂ ಅವರು ಆಹಾರ ವಿಹಾರಗಳಲ್ಲಿ ಹೇಗಿರಬೇಕೋ ಅವುಗಳ ಓನಾಮಗಳೂ ಸಹ ಅವರಿಗೆ ತಿಳಿದಿರುವುದಿಲ್ಲ. ಮಕ್ಕಳನ್ನು ಪೋಷಿಸುವ ಯೋಗ್ಯತೆಯಿಲ್ಲದವರು ಮಕ್ಕಳನ್ನು ಹೊಂದುವರು. ಯಥಾಜಾತೆಯರಾದ ಸ್ತ್ರೀಯರು ಪುತ್ರವತಿಯರಾದರೆ ನಿವಾರಣೀಯವಾದ ರೋಗಗಳಿಗೂ ಅಕಾಲಮರಣಕ್ಕೂ ಅವರು ಗುರಿಯಾಗುವುದೇನೂ ಆಶ್ಚರ್ಯವಲ್ಲ. ಈ ಅನರ್ಥಗಳಿಗೆಲ್ಲಾ ಅಜ್ಞಾನವೇ ಮುಖ್ಯಕಾರಣ. ಯುಕ್ತಾಹಾರವಿಹಾರಗಳನ್ನು ತಿಳಿದುಕೊಳ್ಳದೆ ಇರತಕ್ಕದ್ದು ಒಂದು ಮುಖ್ಯಕಾರಣ. ಆರೋಗ್ಯಸೂತ್ರಗಳನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತರದೇ ಇರತಕ್ಕದ್ದು ಇನ್ನೊಂದು ಮುಖ್ಯಕಾರಣ. ಅದೃಷ್ಟದಲ್ಲಿ ನಂಬಿಕೆಯನ್ನಿಟ್ಟು ಮಾಡಬೇಕಾದ ಕೆಲಸಗಳನ್ನು ಮಾಡದೆ ಇರುವುದು ಇನ್ನೊಂದು ಮುಖ್ಯಕಾರಣ. ದೃಷ್ಟವೆಂದರೆ ಇಂದ್ರಿಯಗಳಿಗೆ ಗೊತ್ತಾಗತಕ್ಕದ್ದು. ಪಂಚೇಂದ್ರಿಯಗಳಿಗೆ ಗೊತ್ತಾಗದೇ ಇದ್ದಾಗ್ಯೂ, ಜ್ಞಾನೇಂದ್ರಿಯಗಳಿಗೆ ಗೊತ್ತಾಗುವುದೆಂದು ತಿಳಿದುಕೊಳ್ಳಬೇಕು. ಜ್ಞಾನೇಂದ್ರಿಯಕ್ಕೆ ಗೊತ್ತಾಗದೇ ಇರತಕ್ಕ ವಿಷಯಗಳು ಅನೇಕವಿರಬಹುದು. ಅವುಗಳು ತಿಳಿಯದೇ ಇದ್ದರೆ ಅದರಿಂದ ಬಾಧಕವಿಲ್ಲ. ಪಂಚೇಂದ್ರಿಯಗಳಿಗೂ ಜ್ಞಾನೇಂದ್ರಿಯಗಳಿಗೂ ತಿಳಿಯಬಹುದಾದ್ದನ್ನು ನಾವು ತಿಳಿದುಕೊಂಡರೆ ಅಂಥಾ ತಿಳುವಳಿಕೆಯ ಜ್ಞಾನದಿಂದ ಆಹಾರವಿಹಾರಗಳ ನಿಯಮವನ್ನು ಅನುಷ್ಠಾನಕ್ಕೆ ತಂದುಕೊಂಡರೆ ಇಹಪರಸೌಖ್ಯಗಳು ನಮಗೆ ಹಸ್ತಗತವಾಗುತ್ತವೆ. ಈ ವಿಷಯಗಳೆಲ್ಲಾ ಸ್ತ್ರೀಯರಿಗೆ ತಿಳಿಯುವುದರಿಂದ ಲೋಕವೇ ಉದ್ಧಾರವಾಗುವುದು. ಆದ್ದರಿಂದ ಶಾರೀರಕ ಧರ್ಮಶಾಸ್ತ್ರ, ಆರೋಗ್ಯಶಾಸ್ತ್ರ, ಬ್ರಹ್ಮಚರ್ಯನಿಯಮಗಳು, ಯೋಗಶಾಸ್ತ್ರ, ಇವೇ ಮೊದಲಾದುವುಗಳನ್ನು ತಿಳಿದುಕೊಳ್ಳುವವರೆಗೂ ಸ್ತ್ರೀಪುರುಷರು ಗೃಹಸ್ಥಾಶ್ರಮಕ್ಕೆ ಅರ್ಹತೆಯುಳ್ಳವರಲ್ಲವೆಂದು ಶಾಸ್ತ್ರಜ್ಞರು ಹೇಳುವರು. ಈ ವಿಷಯಗಳು ಸರ್ವರ ಪರ್ಯಾಲೋಚನೆಗೂ ಅರ್ಹವಾದವುಗಳು.

ಎಂ. ವಿ.

ನೀತಿಬೋಧಾಮೃತ
11. ಪಾತಿವ್ರತ್ಯವೇ ಸತಿಯರಿಗೆ ಭೂಷಣ.

(ಕನ್ನಡಕವಿ ಮ|| ರಾ|| ಅನವಟ್ಟಿ ರಾಮರಾಯರವರಿಂದ)

ಲೋಕವು ಮೇಲ್ಮೆಗೆ ಬರಬೇಕಾಗಿದ್ದರೆ ಸ್ತ್ರೀಯರ ಸದ್ವರ್ತನವೇ ಪ್ರಾಮುಖ್ಯವಾಗಿರುವುದು. ಲೋಕನಾಶಕ್ಕೆ ಅವರ ದುರ್ವರ್ತನವೇ ಕಾರಣವಾಗಿರುವುದು. ಆದ್ದರಿಂದ ಸ್ತ್ರೀಯರ ವರ್ತನವನ್ನು ಪರಿಪಾಲಿಸಿಕೊಂಡು ಅತ್ಯಂತ ವಿವೇಕದಿಂದ ನಡೆಯಬೇಕಾಗಿರುವ ಭಾರವು ಪುರುಷನಮೇಲೆ ಬಿದ್ದಿರುವದು. ಅಲ್ಲದೆ ಸ್ತ್ರೀಯು ವಿವೇಕವಂತಳಾದ ಮೇಲೆ ತನ್ನ ಗುಣಕ್ಕೆ ಕುಂದುಬಾರದಂತೆ, ಮರ್ಯಾದೆಗೆ ಪಾತ್ರಳಾಗಿ ಸನ್ಮಾರ್ಗದಲ್ಲಿ ನಡೆಯುತ್ತಾ ಇರಬೇಕು. ಆದುದರಿಂದ ಎಲೌ ಮಾನಿನೀ ಮಣಿಯೆ! ಸತ್ಯವೆನ್ನುವುದು ಮಾನವಜೀವಿತಕ್ಕೆ ತಳಹದಿಯಾಗಿರುವುದು. ಸತ್ಯದ ಬೆಲೆಯನ್ನು ತಿಳಿದು ಅದನ್ನು ನಿನ್ನ ಚಿತ್ತದಲ್ಲಿ ಸ್ಥಾಯಿಯಾಗಿ ನಿಲ್ಲಿಸಿಕೊಂಡು ನಡೆದುದಾದರೆ, ಸಜ್ಜನರು ಹೇಳುವ ವಿವೇಕಬೋಧೆಗಳು ನಿನ್ನ ಅಂಗಕ್ಕೆ ಭೂಷಣಪ್ರಾಯವಾಗಿದ್ದು, ಅವರ ಕಾಂತಿಯಿಂದ ನಿನ್ನ ಅಂಗಸೌಂದರ್ಯಕ್ಕೆ ಹೆಚ್ಚು ಬೆಲೆಯನ್ನು ಕೊಟ್ಟು ಅರಳಿದ ಕಮಲಪುಷ್ಪದಂತೆ ಪ್ರಕಾಶಮಾನಳಾಗಿ, ಲೋಕದಲ್ಲಿ ಅನುಪಮ ಮನ್ನಣೆಯನ್ನು ಹೊಂದುವುದೇನೂ ಅತಿಶಯವಲ್ಲ.

ಎಲೌ ಮಾನಿನಿ! ನೀನು ಅಸದೃಶವಾದ ಆನಂದಕರವೆನಿಸಿರುವ ವಸಂತಕಾಲಸದೃಶವಾದ ಯೌವನದಲ್ಲಿ ಜೀವಿಸಿಕೊಂಡಿರುವಾಗ್ಗೆ ನಿನ್ನನ್ನು ನೋಡುತ್ತಿರುವ ಪುರುಷರ ನಿಮುಷದೃಷ್ಟಿಗಳ ಅರ್ಥವೇನೆಂಬುದನ್ನು ಚೆನ್ನಾಗಿ ತಿಳಿದುಕೊ. ಪುರುಷರು ನಿನ್ನ ಚಿತ್ತಕ್ಕೆ ಮರುಳನ್ನು ಹುಟ್ಟಿಸುವ ಮೋಹಕರವಾದ ಮೃದು ನುಡಿಗಳಿಗೆ ಮರುಳಾಗದೆ ನೀನು ವರ್ತಿಸುವುದೇ ಪ್ರಥಮಕರ್ತವ್ಯವಾಗಿರುವುದು.

ಸ್ತ್ರೀಯಾದವಳು ಪುರುಷನಿಗೆ ನಿಜಸಖಿಯಾಗಿರುವಳಲ್ಲದೆ ವಿರಹ ಪುರುಷನಿಗೆ ದಾಸ್ಯಳಾಗಿರುವುದಿಲ್ಲ. ಪತಿಯು ದುಃಖಾಗ್ನಿಯಲ್ಲಿ ಬಿದ್ದು ಕಲ್ಲಣಿಸುತ್ತಿರುವ ಕಾಲಗಳಲ್ಲಿ ನಿನ್ನ ನಯವಾದ ವಾಕ್ಯಗಳೆಂಬ ಧಾರೆಯಿಂದ ಶಾಂತಿಗೊಳಿಸಿ, ಅವನ ಹೃದಯಕ್ಕೆ ಶಾಂತತೆಯನ್ನು ಹುಟ್ಟಿಸುವ ಸರಸೋಕ್ತಿಗಳನ್ನಾಡಿ, ಚಿತ್ತಾಹ್ಲಾದಗೊಳಿಸುತ್ತಾ, ಅವನ ದುಃಖವನ್ನು ಮರೆಯಿಸುತ್ತಾ, ಧರ್ಮಮಾರ್ಗದ ಬೋಧೆಗಳು ಚಿತ್ತಕ್ಕೆ ಸ್ಫುರಿಸುವಂತೆ ಮಾಡುತ್ತಿರಬೇಕು. ಸ್ತ್ರೀಯಾದವಳು ಪತಿಯೇ ದೇವರೆಂದು ಭಾವಿಸಿ, ಸೇವಿಸುತ್ತಾ, ತನ್ನಲ್ಲಿರುವ ಪತಿವಿಶ್ವಾಸಕ್ಕೆ ಸಹಜವೃತ್ತಿಯಲ್ಲಿ ನಡೆದುಕೊಳ್ಳುತ್ತಾ, ಬ್ರಹ್ಮನು ಕಮಲದ ಮಧ್ಯದಲ್ಲಿ ವಿರಾಜಿಸುತ್ತಿರುವಂತೆ, ಪತಿಯು ವಿಷಯದಲ್ಲಿ ವಿಶೇಷ ಮಮತೆಯನ್ನು ತೋರಿಸುತ್ತಾ, ಅವನ ವಿಷಯದಲ್ಲಿ ಕಲ್ಪವೃಕ್ಷದೋಪಾದಿಯಿರುತ್ತಾ ಪತಿಯು ಮನೋಭೀಷ್ಟವೇನೆಂದು ತಿಳಿದು ಅದನ್ನು ಸಲ್ಲಿಸುತ್ತಿರುವುದೇ ಪತಿವ್ರತೆಯಾದವಳಿಗೆ ಸಹಜವೃತ್ತಿಯೆಂದು ಶಾಸ್ತ್ರವೂ ಹೇಳುವುದು. ನಡಿಗೆಯಲ್ಲಿ ಹಂಸಗಮನದಂತಿರುತ್ತಾ, ನಿರ್ಮಲಮಾನಸಳಾಗಿ, ಗರ್ವರಹಿತಳಾಗಿರುತ್ತಾ, ಸಂಸಾರಕಾರ್ಯಗಳಲ್ಲಿ ಸಮಯಾಸಮಯಗಳನ್ನು ನೋಡಿ ವರ್ತಿಸುವ ರೀತಿಯನ್ನು ಅನುಸರಿಸುತ್ತಾ, ಕರೆಯದವರಮನೆಗೆ ನೀನಾಗಿಯೇ ಹೋಗದೆ, ನಿರ್ಮಲಗುಣಶಾಂತಿಯೆಂಬ ಕಿರೀಟವನ್ನು ಧರಿಸಿ ವಿರಾಜಿಸುತ್ತಾ ಇರಬೇಕು. ಅಲ್ಲದೆ ಪತಿಯ ಪ್ರೀತಿಯೆಂಬ ಪುಷ್ಪವನ್ನು ಮುಡಿದು ನಾಚಿಕೆಯೆಂಬ ಗಂಧವನ್ನು ಪೂಸಿಕೊಂಡು ಸದ್ಗುಣಾಭರಣ ಯಾಗಿ, ಪತಿವ್ರತಾಧರ್ಮವೆಂಬ ಸೀರೆಯನ್ನುಟ್ಟು ಪತಿ ಮಾಡುವ ಮಹಾತ್ಮಳಿಗೆ ಸಾಟಿಯಾದವಳು ಯಾರೂ ಇಲ್ಲವೆ ಮಹಾತ್ಮರ ಬುದ್ಧಿವಾದವು. ಸ್ತ್ರೀಯಾದವಳು ಪತಿಯಲ್ಲಿ ರುವ ಸುಗುಣಾವಳಿಯನ್ನು ಹೊಗಳುತ್ತಾ ಪತಿಯೇ ಪರ ರೆಂದು ಭಾವಿಸುತ್ತಾ ಪತಿಯು ಹೇಳುವ ಹಿತವಚನವೆಂಬ ವನ್ನು ಪಾನಮಾಡುತ್ತಾ ಸತತವೂ ಸತ್ಯವನ್ನು ಬಿಡದೆ ಅನಾ ಬೇಕಾದ ಸಹಾಯಗಳನ್ನು ಮಾಡುತ್ತಾ, ವಿವಿಧಜ್ಞಾನಕ್ಕೆ ನಭೂತವಾದ ವಿವಿಧಕಥೆಗಳನ್ನು ತಿಳಿದು ಪ್ರೋತ್ಸಾಹಕೊಡು ಇರಬೇಕು. ಸ್ತ್ರೀಯು ತನ್ನ ಸುತರಿಗೆ ಶಕ್ತಿ ವಿವೇಕ ಮೊದಲಾ ವುಗಳನ್ನು ಬೋಧಿಸಿ, ವಿದ್ಯಾವಂತರಾಗಲು ಪ್ರಯತ್ನ ಗೃಹಕೃತ್ಯದ ಮರ್ಮಗಳನ್ನು ಯಾರೊಡನೆಯೂ ಹೇಳಕೊ ನೀನು ಮಾಡುವ ಆಡುವ ನುಡಿಗಳನ್ನು ನಿನ್ನ ಮಕ್ಕಳು ನಡೆಯುವಂತೆ ಇಹವೃತ್ತಿಯಲ್ಲಿ ನೀನೂ ನಡೆದು ಅವ ಹಾಗೆಯೇ ನಡೆಯಿಸುತ್ತಾ ಧರ್ಮಮಾರ್ಗಗಾಮಿಯಾಗಿ ಯ ವಂತಳಾಗಿರುವಂತೆ ನಡೆಯುತ್ತಿರಬೇಕು.

ಸ್ತ್ರೀಯಾದವಳು ಸಂಸಾರಿಯಾಗಿರುವಾಗ್ಗೆ, ತನ್ನ ಮನೆಯ ರುವ ಸೇವಕರು ನೀನು ಹೀಗೆ ಮಾಡಬೇಕೆಂದು ತೋರಿ ಕರಸಂಜ್ಞೆಗಳನ್ನು ನೋಡಿ ತಿಳಿದು ನಿನ್ನ ಮನದ ಕೋರಿಕೆ ನಡೆವ ರೀತಿಯಲ್ಲಿರುವಂತೆಯೂ ಪತಿಯು ಮನೋವಿನೋದ ಸಲು ಗೀತಾದಿಗಳನ್ನು ಹಾಡುತ್ತಿರುತ್ತಾ ಅಕಸ್ಮಾತ್ತಾಗಿ ಸಿದ ತಪ್ಪುಕಾರ್ಯಗಳಿಗೆ ಕ್ಷಮಾಪಣೆಯನ್ನು ಬೇಡಿಕೊಳ್ಳು ಮತ್ತೊಬ್ಬರು ನಿನ್ನನ್ನು ನೋಡಿ ಹಾಸ್ಯಮಾಡುತ್ತಿರುವುದು ಗೋಚರಕ್ಕೆ ಬಂದಾಗ್ಗೆ ನೀನು ಶಾಂತಮನಸ್ಕಳಾಗಿ ಲಕ್ಷ್ ಶಾಂತಯುಕ್ತವಾದ ಮುಗುಳುನಗೆಯನ್ನು ಬೀರಿ ನಗುತ್ತಿರುವ ನಿನಗುಚಿತವು.

ಲೋಕಸನ್ಮಾರ್ಗದಾಯಕಿಯಾದ ನೀನು ನಿನ್ನ ಜನ್ಮವ ಸಾರ್ಥಕಗೊಳಿಸಿಕೊಳ್ಳಲು, ಹಿರಿಯರಿಗೆ ವಿಧೇಯಳಾಗಿ ಯುತ್ತಾ ಸಜ್ಜನರ ಸೇವೆಗೈಯುತ್ತಾ ಅವರು ಬೋಧಿ ಬೋಧಾಮೃತವನ್ನು ಉಂಟುತ್ತಾ ಮನಸ್ಸಿಗೆ ಶಾಂತತೆಯನ್ನು ಮಾಡಿಕೊಂಡು ಅಪಾರಮಹಿಮಾಶ್ಚರ್ಯಶಾಲಿಯಾದ ಭಗವಂ ಭಕ್ತರ ಅಭೀಷ್ಟಗಳನ್ನು ಸಲಿಸುತ್ತಾ ಅನುಪಮಮೋಕ್ಷಸಾಮ್ರಾ ವನ್ನು ದಯಪಾಲಿಸುವ ಭಗವಂತನ ಕೃಪೆಗೆ ಪಾತ್ರಳಾಗಿರಬೇಕು ಮೇಲೆ ವರ್ಣಿಸಿದ ಸುಗುಣಾವಳಿಯಿಂದ ವಿರಾಜಿಸುವ ಸ ತೀಮಣಿಯನ್ನು ಕಾಪಾಡಿಕೊಂಡುಬರುತ್ತಾ, ಸಂಸಾರವ ಮಾಡುತ್ತಾ, ಭಗವಂತನನ್ನು ಪೂಜಿಸುತ್ತಾ ಇರುವ ಪುರುಷ ರಾಜನಿಗಿಂತಲೂ ಅಧಿಕಸೌಖ್ಯವನ್ನು ಹೊಂದಿ ಸುಖದಿಂದಬಾ ವನು. ಈತನ ಮೇಲುಪಂಕ್ತಿಯನ್ನು ಎಲ್ಲರೂ ಅನುಸ ಸಂಸಾರಸೌಖ್ಯಾನುಭವವನ್ನು ಮಾಡುವರು.

ಕೋಮುವಾರು ಸಮಸ್ಯೆಯ ಬಗ್ಗೆ ಮುಖಂಡರ ಅಭಿಪ್ರಾಯಗಳು.

ಮಿ|| ಜಮ್ನಾದಾಸ್ ಮೆಹತಾ.

ಬೊಂಬಾಯಿ ಅ. ೧

ಕೋಮುವಾರು ಸಮಸ್ಯೆಯ ತೀರ್ಮಾನದ ಬಗ್ಗೆ ಮಿ|| ಜಮ್ನಾದಾಸ್ ಮೆಹತಾರವರು ಹೇಳಿದ್ದೇನೆಂದ

"ನ್ಯಾಯವಿಧಾಯಕ ಸಭೆಗಳನ್ನು ನಪುಂಸಕ ಯುಳ್ಳವುಗಳನ್ನಾಗಿ ಮಾಡುವುದೇ ಕೋಮುವಾ ಸಮಸ್ಯೆಯ ತೀರ್ಮಾನದ ಉದ್ದೇಶ. ಭಾರತದ ಮು ದಿನ ಜನಾಂಗದವರು ಕೋಮುವಾರು ವ್ಯಾಧಿಯಿಂ ಕೂಡಿ ಹೊಡೆದಾಡುತ್ತಿರುವವರನ್ನು ಅಡಗಿಸದೆ ಇದ್ದ ರೆ, ಬ್ರಿಟಿಷರು ಹಿಂದೂಸ್ಥಾನ ರಾಜಕೀಯ ಮತ್ತು ಆರ್ಥಿಕ ಸೂತ್ರವನ್ನು ಹಿಡಿದೇ ಹಿಡಿಯುವರು. ಈ ತೀರ್ಮಾನದಿಂದ ಹಿಂದೂಗಳಿಗೆ ಬಹಳ ನಷ್ಟವಾಗಿದೆ. ಆದರೆ ಮುಸಲ್ಮಾನರಿಗೆ ಹೆಚ್ಚು ಹೆಚ್ಚು ಪ್ರಾತಿನಿಧ್ಯವೂ ಹೆಚ್ಚು ಹೆಚ್ಚು ರಕ್ಷಣೆಗಳೂ ಕೊಡಲ್ಪಟ್ಟಿದ್ದರೂ, ಅವ ರು ಇನ್ನೂ ಗುಲಾಮಗಿರಿಯ ಪ್ರಜೆಗಳಂತೆಯೇ ಇರು ವರು. ರಾಜಕೀಯ ಸೈಪುಣ್ಯಕ್ಕೋಸ್ಕರ ಹಿಂದೂ ಸ್ಥಾನದ ರಾಷ್ಟ್ರೀಯತೆಯನ್ನು ಬಲಿಕೊಡಲಾಗಿದೆ."

ಮಿ|| ಚಾಗಲಾ.

ಬೊಂಬಾಯಿ ಅ. ೧

"ಬಹಳಕಾಲದಿಂದ ನಿರೀಕ್ಷಿಸಲಾಗಿದ್ದ ಪ್ರೈಮ್ ಮಿನಿಸ್ಟರ ಕೋಮುವಾರು ತೀರ್ಮಾನವು ಪ್ರೈಮ್ ಮಿನಿಸ್ಟರ ಧ್ಯೇಯಕ್ಕೆ ಅಂದರೆ—ಯಾವ ಪಂಗಡಕ್ಕೂ ಸಂತೋಷಪಡಿಸಕೂಡದು, ಯಾವ ಕೋಮನ್ನೂ ಸಮಾಧಾನಪಡಿಸಕೂಡದು ಎಂಬುದಕ್ಕೆ ಅನುಸಾ ವಾಗಿದೆ." ಎಂಬುದಾಗಿ ಮಿ|| ಎಂ. ಸಿ. ಚಾಗಲಾ ರವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ ನುಡಿಯುವುದೇನೆಂದರೆ—

"ಮುಸಲ್ಮಾನ್" ಕೋಮುವಾರು ವ್ಯಾಧಿಗ್ರಸ್ತರು ಎಲ್ಲವನ್ನೂ ಕಳೆದುಕೊಳ್ಳುತ್ತಾ ಬರುತ್ತಿರುವರು

ಸತ್ಯಾಗ್ರಹಸಮರವಾರ್ತೆ.

ಗ್ಗೆ ಸುಮಾರು 8-10 ದಿನಗಳ ಪೂರ್ವದಲ್ಲಿ ರಸ್ಸಿನಲ್ಲಿ ಪಂಡಿತ ಮದನಮೋಹನಮಾಳವೀ ು, ಮೌಲಾನಾ ಅಬುಲ್ ಕಲಾಮ್ ಅಜಾದ್‌ರವ ಡಾಕ್ಟರ್ ಕಿಚಲೂರವರು, ಶ್ರೀಮತಿ ಮೀರಾ ವರು, ಬಾಬು ರಾಜೇಂದ್ರಪ್ರಸಾದರವರು, ಡಾ|| ದ್ ಮಹಮ್ಮದಾರವರು, ಶ್ರೀ|| ಸಿ. ರಾಜಗೋ ಾಚಾರಿಯವರು, ಬಾಬು ಶಿವಪ್ರಸಾದ ಗುಪ್ತರವ ಮತ್ತು ಇತರ ಮುಖಂಡರುಗಳು ಸಭೆಸೇರಿ ಸದ್ಯದ ಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದರೆಂದು ಬಂದಿರುವುದು. ವಿವರಗಳು ಮಾತ್ರ ಹೊರ ಲ್ಲ.

ಭರತಖಂಡದಲ್ಲಿ ಸರಕಾರದವರು ಆರ್ಡಿನೆನ್ಸುಗಳ ಲಕ ರಾಜ್ಯಭಾರಮಾಡುತ್ತಿರುವುದನ್ನು ನಿಷೇಧಿ ಬಗ್ಗೆ ಲಂಡನ್ನಿನಲ್ಲಿರುವ ಭಾರತಮಿತ್ರರು ಕೆಲವು ಗಳ ಪೂರ್ವದಲ್ಲಿ ಒಂದು ಬಹಿರಂಗ ಮೆರವಣಿಗೆ ನ್ನು ಏರ್ಪಡಿಸಿದ್ದರು. ಮೆರವಣಿಗೆಯು, ಮಹಾ ು ಲಂಡನ್ನಿನಲ್ಲಿ ವಸತಿಮಾಡಿದ್ದ ಕಿಂಗ್ಸ್ಲೇಹಾಲಿ ದ ಹೊರಟಿತು. ಕೆಲವರು ಕಾಲುನಡಿಗೆಯಲ್ಲಿಯೂ ವರು ಮೋಟಾರುಗಳಲ್ಲಿಯೂ ಹೊರಟರು. ಮುಂ ಗದಲ್ಲಿ ಒಂದು ಶಿಲುಬೆಯು ಇತ್ತು. ಶಿಲುಬೆಯ ಲೆ 'ಕ್ರೈಸ್ತನು ಇಂದು ಭರತಖಂಡದಲ್ಲಿ ಏನು ಡುತ್ತಿರುವನು?' ಎಂದು ಬರೆಯಲ್ಪಟ್ಟಿತ್ತು. ಮೆರ ಗೆಯಾದನಂತರ ಎಲ್ಲರೂ ಬಹಿರಂಗಸಭೆಯನ್ನು ಡಿ ಕೆಲವು ಠರಾವುಗಳನ್ನು ಪಾಸುಮಾಡಿದರು.

ಮುಂಬಯಿಯ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾ ಶ್ರೀ|| ಉಮಾಶಂಕರದೀಕ್ಷಿತರವರು ಇದೇ ಅಗಸ್ಟ ಯ ತಾರೀಖಿನ ದಿವಸ ಬಿಜಾಪುರದಲ್ಲಿ ಬಿಡುಗಡೆ ಂದಿದರು. ಪೋಲೀಸರು ಸ್ಪೆಷಲ್ ಪವರ್ಸ್ ಆರ್ಡಿ ನ್ಸ ಪ್ರಕಾರವಾಗಿ ಶ್ರೀ|| ದೀಕ್ಷಿತರ ಮೇಲೆ ಡಲೇ ಒಂದು ನೋಟೀಸನ್ನು ಜಾರಿಮಾಡಿ ದಿವ ಎರಡು ವೇಳೆ ಪೋಲೀಸರಿಗೆ ವರದಿಯನ್ನು ಕೊಡ ಕೆಂದು ಅಪ್ಪಣೆಮಾಡಿದರು. ಶ್ರೀ|| ದೀಕ್ಷಿತರವರು ಆಜ್ಞೆಯನ್ನು ಉಲ್ಲಂಘಿಸಿದುದರಿಂದ ಪೋಲೀಸರು ರನ್ನು ಪುನಃ ದಸ್ತಗಿರಿಮಾಡಿ ವಿಚಾರಣೆಗೆ ಗುರಿ ಸಿದರು. ಬಿಜಾಪುರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇ ವರು ವಿಚಾರಣೆಮಾಡಿ ಶ್ರೀ|| ದೀಕ್ಷಿತರವರಿಗೆ ದು ವರ್ಷ ಕಠಿಣ ಸಜೆಯನ್ನು ವಿಧಿಸಿದರು.

ಹೌರಾಪ್ರಾಂತಕ್ಕೆ ಸೇರಿದ ಸಕೇಲಾ ಎಂಬಲ್ಲಿ ಅಕ್ರ ವಾದ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರ ಮೇಲೆ 15 ಜನರು ದಸ್ತಗಿರಿ ಮಾಡಲ್ಪಟ್ಟರು.

ಶ್ರೀಮತಿ ಮೀರಾಬೇನ್‌ರವರು ಇದೇ ಅಗಸ್ಟ 17 ರ ತಾರೀಖಿನ ದಿವಸ ಅಹಮದಾಬಾದಿನಿಂದ ಮುಂ ಗೆ ಬಂದರು. ಸಿ. ಐ. ಡಿ. ಇನ್ಸ್ಪೆಕ್ಟರಾದ ಮಿ|| ಹನಲಾಲ ದೇಸಾಯಿರು ಅವರನ್ನು ಕೂಡಲೇ ದ ಗಿರಿಮಾಡಿದರು. ಪೋ|| ಕಮಿಷನರ ಅಪ್ಪಣೆಗೆ ರೋಧವಾಗಿ ಮುಂಬಯಿಯನ್ನು ಪ್ರವೇಶಿಸಿದರೆಂಬ ಪಾದನೆಯಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ಾಡಿ ಶ್ರೀಮತಿಯವರಿಗೆ 6 ತಿಂಗಳ ಸಜೆಯನ್ನು ವಿಧಿ ದರು. ಆದರೆ ಮುಂಬಯಿ ಹೈಕೋರ್ಟ್ ಜಡ್ಜರವರು ರಿ ಶಿಕ್ಷೆಯನ್ನು ವಜಾಮಾಡಿ 300 ರೂಪಾಯಿಗಳ ಮ್ಮಾನೆಯನ್ನು ಮಾತ್ರ ವಿಧಿಸಿರುತ್ತಾರೆ.

ಅಗಸ್ಟ 17 ನೆಯ ತಾರೀಖಿನ ದಿವಸ ಕಲ್ಕತ್ತಾನ ದ ಅನೇಕ ಭಾಗಗಳಲ್ಲಿ ರಾಷ್ಟ್ರೀಯಧ್ವಜಾರೋ ಮಾಡಲು ಪ್ರಯತ್ನಿಸಿದರೆಂಬ ಕಾರಣದ ಮೇಲೆ ಜನ ಕಾಂಗ್ರೆಸ್ ಸ್ವಯಂಸೇವಕರು ದಸ್ತಗಿರಿ ಡಲ್ಪಟ್ಟರು.

ಅಗಸ್ಟ 16 ನೆಯ ತಾರೀಖಿನ ದಿವಸ ಸಾಯಂ ಲ 6 ಜನ ಸ್ವಯಂಸೇವಕರು ಎಂ. ಎಸ್. ಎಂ. ಗೆ ಸೇರಿದ ಕೊರಟೂರು ಮತ್ತು ಅಂಬತ್ತೂರು ಸ್ಟೇಷನ್ನುಗಳ ಮಧ್ಯೆ ರೈಲಿನ ಸರಪಣಿಯನ್ನು ಎಳೆದು ಯನ್ನು ನಿಲ್ಲಿಸಿ, ಪ್ರಯಾಣಿಕರಲ್ಲಿ ಕಾಂಗ್ರೆಸ್ ಪತ್ರಿಕೆಗಳನ್ನು ಹಂಚಿದರು. ಆದರೆ ಪೋಲೀಸರು ಅವರನ್ನು ದಸ್ತಗಿರಿ ಮಾಡುವದರೊಳಗಾಗಿ ಎಲ್ಲರೂ ಕಾಡಿನೊಳಕ್ಕೆ ನುಗ್ಗಿ ಪರಾರಿಯಾದರು.

ಅಗಸ್ಟ 18 ನೆಯ ತಾರೀಖಿನ ದಿವಸ ಮದ್ರಾಸಿನ ಬ್ರಾಡ್ವೇ ರಸ್ತೆಯಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದ 5 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿ ಸ್ವಲ್ಪಕಾಲಾನಂತರ ಎಲ್ಲರನ್ನೂ ಬಿಡುಗಡೆಮಾಡಿದರು.

ಅಗಸ್ಟ 1 ನೆಯ ತಾರೀಖಿನ ದಿವಸ ಮದ್ರಾಸಿನಿಂದ ಮುಂಬಯಿಗೆ ಹೋಗುತ್ತಿದ್ದ ಎಕ್ಸ್‌ಪ್ರೆಸ್‌ಗಾಡಿಯನ್ನು ಶಿವ್ರಾಪೇಟ್ ಮತ್ತು ತಿನ್ನಾನೂರು ಸ್ಟೇಷನ್ನುಗಳ ಮಧ್ಯದಲ್ಲಿ ಸರಪಳಿಯನ್ನು ಎಳೆದು ನಿಲ್ಲಿಸಿದ 6 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು.

ಅಗಸ್ಟ 18 ನೇ ತಾರೀಖಿನ ದಿವಸ ಬನಾರಸ್ಸಿನ ಟೌನ್‌ಹಾಲಿನಮೇಲೆ ರಾಷ್ಟ್ರಧ್ವಜವನ್ನು ಏರಿಸಲು ಪ್ರಯತ್ನಪಟ್ಟ 3 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು. ಶ್ರೀಯುತ ಬಾಬುಪ್ರಸಾದ ಗುಪ್ತರ ದಸ್ತಗಿರಿಯ ಸಲುವಾಗಿ ಆ ದಿವಸ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ವರ್ತಮಾನಸಂಗ್ರಹ

ಜರ್ಮನಿಯ ಮಾಜೀ ಕೈಸರರು ಆ ದೇಶದಲ್ಲಿ ತಮ್ಮ ಪ್ರಭುತ್ವವನ್ನು ಪುನಃ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿರುವರಂತೆ!

ಹಿಂದೂ ಮಹಾಸಭೆಯ ಅಧ್ಯಕ್ಷರಾಗಿರುವ ಡಾಕ್ಟರ್ ಮೂಂಜೆಯವರು ಸರಕಾರದವರೊಡನೆ ಸಹಕರಿಸುತ್ತಿರುವರೆಂದೂ, ಆ ಬಗ್ಗೆ ಹಿಂದೂ ಮಹಾಸಭೆಯವರು ಎಚ್ಚರಿಕೆಯಿಂದ ವರ್ತಿಸಬೇಕೆಂದೂ ಡಾಕ್ಟರ್ ಖಾರೆಯವರು ಒಂದು ಹೇಳಿಕೆಯನ್ನು ಪ್ರಕಟಿಸಿರುವರು.

ಬನಾರಸ್ಸಿನ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ|| ಬಾಬು ಶಿವಪ್ರಸಾದಗುಪ್ತರವರು ತಮ್ಮ ಮೋಟಾರಿನ ನಂಬರನ್ನು ಇತರರಂತೆ ಇಂಗ್ಲೀಷಿನಲ್ಲಿ ಬರೆಯದೆ ಹಿಂದೀ ಭಾಷೆಯಲ್ಲಿ ಹಾಕಿದರೆಂಬ ಕಾರಣದ ಮೇಲೆ ಪೋಲೀಸರು ಶ್ರೀ|| ಗುಪ್ತರಮೇಲೆ ಒಂದು ಮೊಕದ್ದಮೆಯನ್ನು ಹೂಡಿರುತ್ತಾರೆ.

ಲಾಂಕಾಷೈರಿನ ಹತ್ತಿಯ ಕೆಲಸಗಾರರ ಕೂಲಿಯನ್ನು ಪೌಂಡ್ 1 ಕ್ಕೆ 2¾ ಷಿಲಿಂಗುಗಳಂತೆ ಕಡಿಮೆಮಾಡುವುದಾಗಿ ಮಿಲ್ ಮಾಲಕರು ಕೆಲಸಗಾರರಿಗೆ ಒಂದು ತಿಂಗಳ ನೋಟೀಸನ್ನು ಜಾರಿಮಾಡಬೇಕೆಂದು ನಿರ್ಧರಿಸಿರುವರು. ಇದರಿಂದ 2 ಲಕ್ಷ ಜನ ಕೆಲಸಗಾರರಿಗೆ ತೊಂದರೆಯಾಗುವುದು.

ಇದೇ ಅಗಸ್ಟ 16 ನೆಯ ತಾರೀಖಿನ ದಿವಸ ಸರ್ ತೇಜ್ ಬಹದ್ದೂರ್ ಸಪ್ರೂರವರು ಅಲಹಾಬಾದಿನ ಸ್ವದೇಶೀ ಮತ್ತು ಖಾದೀ ಭಂಡಾರಗಳಿಗೆ ಹೋಗಿ ಅಲ್ಲಿಯ ವಸ್ತುಗಳನ್ನು ಪರಾಂಬರಿಸಿ, ಅದರಿಂದ ತಮಗುಂಟಾದ ಸಂತೋಷವನ್ನು ವ್ಯಕ್ತಪಡಿಸಿದುದಲ್ಲದೆ ಸುಮಾರು 275 ರೂಪಾಯಿಗಳ ಪದಾರ್ಥಗಳನ್ನು ಕೊಂಡುಕೊಂಡರು.

ಬಂಗಾಳಾ ಪ್ರಾಂತದಲ್ಲಿ ಸರಕಾರದವರು ಕ್ರಾಂತಿಕಾರರ ಚಳವಳಿಯನ್ನು ನಿಲ್ಲಿಸುವದರ ಸಲುವಾಗಿ ಎಷ್ಟೋ ಕ್ರಮಗಳನ್ನು ಜರುಗಿಸಿದರೂ, ಅಧಿಕಾರಿಗಳ ಕೊಲೆ, ರಾಜಕೀಯ ಸಂಬಂಧವಾದ ಡಕಾಯಿತಿಗಳು, ಮೇಲ್ ಮತ್ತು ಆಯುಧಗಳ ದರೋಡೆಗಳು ಇನ್ನೂ ನಡೆಯುತ್ತಲೇ ಇರುವವೆಂಬ ಕಾರಣದಮೇಲೆ ಬಂಗಾಳಾ ಸರಕಾರದವರು ತಮ್ಮ ಪ್ರಾಂತದಲ್ಲಿ ಸೈನ್ಯವನ್ನು ಹೆಚ್ಚಿಸಬೇಕೆಂದು ನಿರ್ಧರಿಸಿರುತ್ತಾರೆ. ಈ ವಿಷಯಕ್ಕೆ ಇಂಡಿಯಾ ಸರಕಾರದವರು ತಮ್ಮ ಒಪ್ಪಿಗೆಯನ್ನಿತ್ತಿರುವರು.

ಆಂಗ್ಲೇಯ ಶಾಸ್ತ್ರಜ್ಞನೊಬ್ಬನು 14 ವರ್ಷಗಳ ಕಾಲ ಕಷ್ಟಪಟ್ಟು ಒಂದು ವಿಚಿತ್ರವಾದ ಯಂತ್ರವನ್ನು ತಯಾರುಮಾಡಿರುವನು. ಇದು ಆಕೃತಿಯಲ್ಲಿ ಒಬ್ಬ ಶಿಪಾಯಿಸಂತಿದ್ದು, ಇತರರೊಡನೆ ಮಾತನಾಡುವುದು. ಓದುವುದು ಹಾಡುವುದು ಮತ್ತು ಪಿಸ್ತೂಲನ್ನು ಹಾರಿಸುವುದು. ಇದನ್ನು ನಿರ್ಮಿಸಿದವನು ಹಾಲ್ಬರ್ನ್ ಎಂಪೈರ್ ಥಿಯೇಟರಿನಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಿದಾಗ ಆ ಯಂತ್ರವು ಅರ್ಧಗಂಟೆಗಳ ಕಾಲ ಮಾತನಾಡಿತಂತೆ! ಮತ್ತು ಸಣ್ಣ ಅಕ್ಷರದ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿ ಓದಿತಂತೆ!

ಭರತಖಂಡದ ನಿಜವಾದ ವಿದ್ಯಮಾನಗಳನ್ನು ತಿಳಿದುಕೊಂಡು ಹೋಗುವುದಕ್ಕೋಸ್ಕರ ಇಂಗ್ಲೆಂಡಿನಿಂದ ಹೊರಟಿದ್ದ ಇಂಡಿಯಾ ಲೀಗ್ ಡೆಪ್ಯುಟೇಷನ್ನಿನ ಮಿಸ್. ವಿಲ್ಕಿನ್ಸನ್, ಮಿಸ್. ಮಾರಿಸ್ ವೈಟ್ಲೆ, ಮಿ|| ಲಿನಾರ್ಡ್ ಮತ್ತು ಮಿ|| ಕೃಷ್ಣಮೆನನ್‌ರವರು ಇದೇ ಅಗಸ್ಟ 18 ನೆಯ ತಾರೀಖಿನ ದಿವಸ ಮುಂಬಯಿಗೆ ಬಂದರು. ಇವರು ತಮ್ಮ ಸಂಚಾರದ ಮಧ್ಯದಲ್ಲಿ ಮಹಾತ್ಮ ಗಾಂಧಿ, ಪಂ|| ಜವಾಹರಲಾಲನೆಹರು, ಪಂ|| ಮದನಮೋಹನಮಾಳವೀಯ, ಸರ್ ಸಪ್ರೂ, ಮಿ|| ಜಯಕರ್, ಮಿ|| ಜೋಷಿ, ಮೌಲಾನಾಷೌಕತ್‌ಅಲಿ ಮೊದಲಾದ ಮುಖಂಡರುಗಳನ್ನು ಕಂಡು ಸಂಭಾಷಿಸುವರೆಂದೂ, ಡೆಲಿಗೇಷನ್ನಿನವರು ನವೆಂಬರ್ ತಿಂಗಳಲ್ಲಿ ತಮ್ಮ ದೇಶಕ್ಕೆ ಹಿಂದಿರುಗುವರೆಂದೂ ತಿಳಿದುಬಂದಿದೆ.

ಮಿ|| ವಿಠಲಭಾಯಿ ಪಟೇಲ್.

"ಇಂಡಿಯಾದಲ್ಲಿನ ಕೋಮುಗಳನ್ನು ಛಿದ್ರಛಿದ್ರವನ್ನಾಗಿ ಮಾಡಿ, ಒಂದು ಕೋಮಿನ ಮೇಲೆ ಇನ್ನೊಂದು ಕೋಮನ್ನು ಎತ್ತಿಕಟ್ಟಿ ಆ ಮೂಲಕ ತಮ್ಮ ಅಂಕುಶವನ್ನು ಇಟ್ಟೇ ಇರಬೇಕೆಂಬ ಅಭಿಪ್ರಾಯದಿಂದ ಬ್ರಿಟಿಷರು ಈ ತೀರ್ಮಾನವನ್ನು ಕೊಟ್ಟಿರುವರೆಂದು ಗೊತ್ತಾಗುತ್ತದೆ. ಈ ತೀರ್ಮಾನದಿಂದ ದೇಶದಲ್ಲಿ ಅನಾಯಕತ್ವವೂ ಹೊಡೆದಾಟಗಳೂ ಉಲ್ಬಣಾವಸ್ಥೆಯನ್ನು ಮುಟ್ಟುವುವು. ಆ ತೀರ್ಮಾನವು ಸ್ತ್ರೀಯರಲ್ಲಿಯೂ ಕೋಮುವಾರು ವ್ಯಾಧಿಯನ್ನು ಎಬ್ಬಿಸುತ್ತದೆ. ಲೋಥಿಯನ್ ಕಮಿಟಿಯ ಮುಂದೆ ಏಕವಾಕ್ಯತೆಯಿಂದ ಸ್ತ್ರೀಯರು ಅದನ್ನು ವಿರೋಧಿಸಿದರು. ಹಿಂದೂಸ್ಥಾನದಲ್ಲಿ ವಿಶೇಷವಾದ ಭಿನ್ನ ಭಿನ್ನತೆಯುಂಟಾಗಿರುವುದೆಂದೂ, ತಾವು ಕಾಂಗ್ರೆಸ್ಸಿನ ಬೇಡಿಕೆಯನ್ನು ಒಪ್ಪುವುದಿಲ್ಲವೆಂದೂ ಬ್ರಿಟನ್ನಿನವರು ಪ್ರಪಂಚದಲ್ಲಿ ತೋರ್ಪಡಿಸುತ್ತಿರುವರು. ಎಲ್ಲ ಜನರ ಹಿತವನ್ನು ಕಾಪಾಡಿ ಕೋಮುವಾರು ಸಮಸ್ಯೆಯನ್ನು ಇತ್ಯರ್ಥಪಡಿಸುವ ಶಕ್ತಿಯನ್ನು ಹೊಂದಿರತಕ್ಕದ್ದು ಕಾಂಗ್ರೆಸ್ಸೇ."

ಮೇಜರ್ ಅಟ್ಲಿ.

ಮೇಜರ್ ಅಟ್ಲಿಯವರು 'ಡೇಲಿ ಹೆರಾಲ್ಡ್' ಪತ್ರಿಕೆಯಲ್ಲಿ ಈ ಪ್ರಕಾರ ಬರೆದಿರುತ್ತಾರೆ. "ಈಗ ಭಾರತೀಯರು ಪಡುತ್ತಿರುವ ಕಷ್ಟಗಳಿಗೆಲ್ಲಾ ಅವರವರ ಮತ ಪದ್ಧತಿಗಳೂ, ಸಮಾಜ ಪದ್ಧತಿಗಳೂ ಕಾರಣವಾಗಿವೆ. ಇದನ್ನು ಸುಧಾರಿಸಿಕೊಳ್ಳುವ ಚೈತನ್ಯವು ಭಾರತೀಯರಲ್ಲಿಯೇ ಇರುವುದು. ಈ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಅಧಿಕಾರವು ಜನಸಾಮಾನ್ಯದಲ್ಲಿರಬೇಕಾದುದು ಅವಶ್ಯಕ."

ಮಿ|| ಬಾಸು.

"ಈ ತೀರ್ಮಾನವು ನಮ್ಮನ್ನು ಮಿಂಟೋಮಾರ್ಲೆ ರಾಜಕೀಯಸುಧಾರಣೆಯಕಾಲದ ಹಿಂದಕ್ಕೆ ಒಯ್ಯುತ್ತದೆ."

ಮಿ|| ಯಾಕೂಬ್ ಹಸನ್.

"ಈಗ ದೇಶದಲ್ಲಿ ರಾಷ್ಟ್ರೀಯಭಾವನೆಯ ಗುಂಪಿನ ಮುಸಲ್ಮಾನರ ಬಲವು ಅಧಿಕವಾಗಿದೆ. ಅದನ್ನು ಅಲಕ್ಷ್ಯದಿಂದ ಕಾಣುವಂತಿಲ್ಲ. ರಾಷ್ಟ್ರೀಯಭಾವನೆಯ ಮುಸಲ್ಮಾನರೂ ಕಾಂಗ್ರೆಸ್ ಮುಸ್ಲಿಂಗಳೂ ಕೋಮಿನ ಮತಗುರುಗಳೂ ಅಂದರೆ ಜಮಿಯತ್-ಉಲ್-ಉಲೇಮಾದ ನಾಯಕರೂ (ಈಗ ಅವರೆಲ್ಲರೂ ಜೈಲಿನಲ್ಲಿದ್ದಾರೆ) ಮತ್ತು ಆರ್ಡಿನೆನ್ಸಿನ ನಿರ್ಬಂಧಕ್ಕೆ ಒಳಪಡಿಸಲ್ಪಟ್ಟಿರುವ ಮುಸಲ್ಮಾನರೂ ಆ ತೀರ್ಮಾನಕ್ಕೆ ತಮ್ಮ ಸಮ್ಮತಿಯನ್ನು ಕೊಡದೆ ಇರುವ ಪರ್ಯಂತರ ಅದು ಯಶಸ್ವಿಯಾಗಲಿಕ್ಕಿಲ್ಲ. ಆಯಾ ಕೋಮುಗಳು ಹೊರಗಿನ ಕೈಯಿಲ್ಲದೆ ತಮ್ಮ ತಮ್ಮಲ್ಲಿ ಒಪ್ಪಿಗೆಗೆ ಬರುವಂತೆ ಮಾಡಬೇಕಾದರೆ, ಸರಕಾರದವರು ಕೂಡಲೇ ಆರ್ಡಿನೆನ್ಸುಗಳನ್ನು ರದ್ದುಪಡಿಸಬೇಕು. ಕಾಂಗ್ರೆಸ್ಸಿನಮೇಲೆ ಹಾಕಿರುವ ನಿರ್ಬಂಧವನ್ನು ತೆಗೆಯಬೇಕು. ಎಲ್ಲ ರಾಜಕೀಯಖೈದಿಗಳನ್ನೂ ಬಿಡುಗಡೆಮಾಡಬೇಕು.

(3ನೆಯ ಪುಟದಿಂದ ಮುಂದುವರಿದುದು.)

ರದೂ ಸೇರಿದೆ) ೧೧೯, ಇಂಡಿಯನ್ ಕ್ರಿಶ್ಚಿಯನ್ನರು ೨, ಆಂಗ್ಲೋ ಇಂಡಿಯನ್ನರು (ಒಂದು ಹೆಂಗಸರದೂ ಸೇರಿದೆ) ೪, ಯೂರೋಪಿಯನ್ನರು ೧೧, ವ್ಯಾಪಾರ ಇತ್ಯಾದಿ ೧೯, ಲ್ಯಾಂಡ್ ಹೋಲ್ಡರುಗಳು ೫, ಯೂನಿವರ್ಸಿಟಿ ೨, ಲೇಬರ್ ೮, ಒಟ್ಟು—೨೫೦.

ಸಂಯುಕ್ತ ಪ್ರಾಂತ.

ಸಾಮಾನ್ಯ ಸ್ಥಾನಗಳು (ನಾಲ್ಕು ಸ್ತ್ರೀಯರದೂ ಸೇರಿದೆ) ೧೩೨, ನಿಮ್ನ ವರ್ಗದವರು ೧೨, ಮಹಮ್ಮದೀಯರು (ಎರಡು ಸ್ತ್ರೀಯರದೂ ಸೇರಿದೆ) ೬೬, ಇಂಡಿಯನ್ ಕ್ರಿಶ್ಚಿಯನ್ನರು ೨, ಆಂಗ್ಲೋ ಇಂಡಿಯನ್ನರು ೧, ಯೂರೋಪಿಯನ್ನರು ೨, ವ್ಯಾಪಾರ ಇತ್ಯಾದಿ ೩, ಲ್ಯಾಂಡ್ ಹೋಲ್ಡರುಗಳು ೬, ಯೂನಿವರ್ಸಿಟಿ ೧, ಲೇಬರ್ ೩, ಒಟ್ಟು—೨೨೮.

ಪಂಜಾಬ್.

ಸಾಮಾನ್ಯ ಸ್ಥಾನಗಳು (ಒಂದು ಹೆಂಗಸರದೂ ಸೇರಿದೆ) ೪೩, ಸಿಖ್ಖರು (ಒಂದು ಹೆಂಗಸರದೂ ಸೇರಿದೆ) ೩೨, ಮಹಮ್ಮದೀಯರು ೮೬, ಇಂಡಿಯನ್ ಕ್ರಿಶ್ಚಿಯನ್ನರು ೨, ಆಂಗ್ಲೋ ಇಂಡಿಯನ್ನರು ೧, ಯೂರೋಪಿಯನ್ನರು ೧, ವ್ಯಾಪಾರ ಇತ್ಯಾದಿ ೧, ಲ್ಯಾಂಡ್ ಹೋಲ್ಡರುಗಳು ೫, ಯೂನಿವರ್ಸಿಟಿ ೧, ಲೇಬರ್ ೩, ಒಟ್ಟು—೧೭೫.

ಬಿಹಾರ ಮತ್ತು ಒರಿಸ್ಸಾ.

ಸಾಮಾನ್ಯ ಸ್ಥಾನಗಳು (ಮೂರು ಹೆಂಗಸರದೂ ಸೇರಿದೆ) ೯೯, ನಿಮ್ನ ವರ್ಗದವರು ೭, ಹಿಂದುಳಿದ ಪ್ರದೇಶಗಳು ೮, ಮಹಮ್ಮದೀಯರು (ಹೆಂಗಸರದೂ ಒಂದು) ೪೨, ಇಂಡಿಯನ್ ಕ್ರಿಶ್ಚಿಯನ್ನರು ೨, ಆಂಗ್ಲೋ ಇಂಡಿಯನ್ನರು ೧, ಯೂರೋಪಿಯನ್ನರು ೨, ವ್ಯಾಪಾರ ಇತ್ಯಾದಿ ೪, ಲ್ಯಾಂಡ್ ಹೋಲ್ಡರುಗಳು ೫, ಯೂನಿವರ್ಸಿಟಿ ೧, ಲೇಬರ್ ೪, ಒಟ್ಟು—೧೭೫.

ಸೆಂಟ್ರಲ್ ಪ್ರಾವಿನ್ಸಸ್ (ಬಿಹಾರ್ ಸೇರಿ)

ಸಾಮಾನ್ಯ ಸ್ಥಾನಗಳು (ಹೆಂಗಸರೂ ೩ ಸೇರಿ) ೭೭, ನಿಮ್ನ ವರ್ಗದವರು ೧೦, ಹಿಂದುಳಿದ ಪ್ರದೇಶಗಳು ೧, ಮಹಮ್ಮದೀಯರು ೧೪ ಆಂಗ್ಲೋ ಇಂಡಿಯನ್ನರು ೧, ಯೂರೋಪಿಯನ್ನರು ೧, ವ್ಯಾಪಾರ ಇತ್ಯಾದಿ ೨, ಲ್ಯಾಂಡ್ ಹೋಲ್ಡರುಗಳು ೩, ಯೂನಿವರ್ಸಿಟಿ ೧, ಲೇಬರ್ ೨, ಒಟ್ಟು—೧೧೨.

ಅಸ್ಸಾಂ.

ಸಾಮಾನ್ಯ ಸ್ಥಾನಗಳು (ಹೆಂಗಸರದೂ ಒಂದು ಸೇರಿ) ೪೪, ನಿಮ್ನ ವರ್ಗದವರು ೪, ಹಿಂದುಳಿದ ಪ್ರದೇಶಗಳು ೯, ಮಹಮ್ಮದೀಯರು ೩೪, ಇಂಡಿಯನ್ ಕ್ರಿಶ್ಚಿಯನ್ನರು ೧, ಯೂರೋಪಿಯನ್ನರು ೧, ವ್ಯಾಪಾರ ಇತ್ಯಾದಿ ೧೧, ಲೇಬರ್ ೪, ಒಟ್ಟು—೧೦೮.

ವಾಯುವ್ಯ ಸರಹದ್ದು ಪ್ರಾಂತಗಳು.

ಸಾಮಾನ್ಯ ಸ್ಥಾನಗಳು ೯, ಸಿಖ್ಖರು ೩. ಮಹಮ್ಮದೀಯರು ೩೬, ಲ್ಯಾಂಡ್ ಹೋಲ್ಡರುಗಳು ೨, ಒಟ್ಟು—೫೦.

ಸಿಂಧ್ ಇಲ್ಲದೆ ಮುಂಬಯಿಗೂ, ಸಿಂಧಿಗೂ ಪ್ರತ್ಯೇಕವಾಗಿ ಸ್ಥಾನಗಳು ಈ ಕೆಳಗೆ ಕಂಡಂತೆ ವಿಂಗಡಿಸಲ್ಪಟ್ಟಿವೆ.

ಸಿಂಧಿಲ್ಲದ ಮುಂಬಯಿ.

ಸಾಮಾನ್ಯ ಸ್ಥಾನಗಳು (ಸ್ತ್ರೀಯರದೂ ೫ ಸೇರಿ) ೧೦೯, ನಿಮ್ನ ವರ್ಗದವರು ೧೦, ಹಿಂದುಳಿದ ಪ್ರದೇಶಗಳು ೧, ಮಹಮ್ಮದೀಯರು (ಒಂದು ಹೆಂಗಸರದೂ ಸೇರಿದೆ) ೩೦, ಇಂಡಿಯನ್ ಕ್ರಿಶ್ಚಿಯನ್ನರು. ೩, ಆಂಗ್ಲೋ ಇಂಡಿಯನ್ನರು ೨, ಯೂರೋಪಿಯನ್ನರು ೩, ವ್ಯಾಪಾರ ಇತ್ಯಾದಿ ೭, ಲ್ಯಾಂಡ್ ಹೋಲ್ಡರುಗಳು ೨, ಯೂನಿವರ್ಸಿಟಿ ೧, ಲೇಬರ್ ೭, ಒಟ್ಟು—೧೭೫.

ಸಿಂಧ್.

ಸಾಮಾನ್ಯ ಸ್ಥಾನಗಳು (ಹೆಂಗಸರದೂ ಒಂದು ಸೇರಿ) ೧೯, ಮುಸ್ಲೀಮರು (ಒಂದು ಹೆಂಗಸರದೂ ಸೇರಿ) ೩೪, ಯೂರೋಪಿಯನ್ನರು ೨, ವ್ಯಾಪಾರ ಇತ್ಯಾದಿ ೨, ಲ್ಯಾಂಡ್ ಹೋಲ್ಡರುಗಳು ೨, ಲೇಬರ್ ೧, ಒಟ್ಟು—೬೦.

ಮಿ॥ ವಾಟ್ಸ್ನರವರು.

ಇವರು 'ಕಲ್ಕತ್ತಾ ಸ್ಟೇಟ್ಸ್‌ಮ್ಯಾನ್' ಎಂಬ ಪತ್ರಿಕೆಯ ಸಂಪಾದಕರು.

ಬ್ರಿಟಿಷ್ ಚಕ್ರಾಧಿಪತ್ಯವು ಆಚಂದ್ರಾರ್ಕಸ್ಥಾಯಿಯಾಗಿರಬೇಕಾದರೆ ಬಲವೂ ದರ್ಪವೂ ಮುಖ್ಯ ಕಾರಣವೆಂದು ತಿಳಿದುಕೊಂಡು ಪತ್ರಿಕೆಯನ್ನು ನಡೆಸುವರು. ಪಾಶ್ಚಾತ್ಯವಿದ್ಯಾಭ್ಯಾಸವನ್ನು ಮಾಡಿ ಅಧಿಕಾರಿಗಳ ಹಕ್ಕುಬಾಧ್ಯತೆಗಳು ಹೇಗಿರಬೇಕೋ ಅದನ್ನು ತಿಳಿದುಕೊಂಡ ಭಾರತೀಯ ವಿದ್ಯಾರ್ಥಿಗಳಲ್ಲಿ ಕೆಲವರು ಒಂದನೆಯ 'ಚಾರ್ಲಸ್' ರವರ ಕಾಲದಲ್ಲಿ ಬ್ರಿಟಿಷ್ 'ಲಾಂಗ್ ಪಾರ್ಲಿಮೆಂಟ್'ನವರು ಮತ್ತು ಬ್ರಿಟಿಷ್ ಮಹಾಜನಗಳು ಹೇಗೆ ನಡೆದರೋ ಅದು ಪರಮಧರ್ಮವೆಂದು ತಿಳಿದುಕೊಂಡು ನಮ್ಮ ಸನಾತನಧರ್ಮಗಳನ್ನು ಮರೆತು ಧರ್ಮೋಲ್ಲಂಘನಮಾಡತಕ್ಕವರು ಪ್ರಭುಗಳಾಗಿದ್ದಾಗ್ಯೂ ಅವರು ದಂಡನೆಗೆ ಅರ್ಹರೆಂದು ತಿಳಿದುಕೊಂಡು ಧರ್ಮೋಲ್ಲಂಘನಮಾಡತಕ್ಕವರನ್ನು ಗುಂಡಿನಿಂದ ಹೊಡೆದು ಕೊಲ್ಲುವಪ್ರಯತ್ನವನ್ನು ಮಾಡುವುದು. ಒಬ್ಬ ಬಂಗಾಳದ ವಿದ್ಯಾರ್ಥಿಯು ಮಿ॥ ವಾಟ್ಸ್ನರವರು, ಬ್ರಿಟಿಷ್ ಧರ್ಮಗಳು ಇಂಡಿಯಾದೇಶದಲ್ಲಿ ರೂಢಮೂಲವಾಗುವಂತೆ ಮಾಡುವುದಕ್ಕೆ ಪ್ರತಿಕಕ್ಷಿಗಳೆಂದು ತಿಳಿದುಕೊಂಡು ಅವರನ್ನು ಗುಂಡಿನಿಂದ ಹೊಡೆದನು. ದೈವಯೋಗದಿಂದ ಅವರಿಗೆ ಏಟುತಪ್ಪಿತು. ಕೂಡಲೇ ಅವನು ದಸ್ತಗಿರಿಮಾಡಲ್ಪಟ್ಟನು. ಜೇಬಿನಲ್ಲಿ ವಿಷವನ್ನಿಟ್ಟುಕೊಂಡಿದ್ದನು. ದಸ್ತಗಿರಿಯಾದ ಕೂಡಲೆ ಸದರಿ ವಿಷವನ್ನು ತೆಗೆದುಕೊಂಡು ಮೃತಪಟ್ಟನು. ಹೀಗೆ ಭಾರತಪುತ್ರರೂ, ಪುತ್ರಿಯರೂ ಪ್ರಾಣವನ್ನು ಬಿಡುವುದು ಶುದ್ಧತಪ್ಪು. ಪ್ರತಿಕಕ್ಷಿಗಳನ್ನು ಕೊಲ್ಲಬೇಕೆಂದು ಪ್ರಯತ್ನಮಾಡುವುದೂ ಶುದ್ಧತಪ್ಪು. ಅಧರ್ಮಪ್ರವರ್ತನಕ್ಕೆ ಅಜ್ಞಾನವೇ ಮುಖ್ಯಕಾರಣ. ಅಜ್ಞಾನದಿಂದ ಪಾಪವೂ ಬರುವುದು. ಕೋಪಕ್ಕೂ ಹುಚ್ಚಿಗೂ ವ್ಯತ್ಯಾಸವೇನೂ ಇರುವುದಿಲ್ಲ. ಹುಚ್ಚರು ತಮಗೆ ತಾವೇ ಶತ್ರುಗಳು. ನಮ್ಮ ಸಂಸ್ಥಾನದ ಕುಣಿಗಲಿನಲ್ಲಿ ಒಬ್ಬ ಹೆಂಗಸು ಬಹಳ ಸುಂದರನಾದ ಒಬ್ಬ ಪುತ್ರನನ್ನು ಹೆತ್ತಳು. ಅವಳಿಗೆ ಹುಚ್ಚುಹಿಡಿಯಿತು. ಆ ಮಗುವನ್ನು ಒರಳಿನಲ್ಲಿ ಹಾಕಿ, ಕೊಂದು ಮುದ್ದೆಮಾಡಿ, ಆ ಮುದ್ದೆಯನ್ನು ಬಾಣಲೆಯಲ್ಲಿ ಹುರಿಯುವುದಕ್ಕೆ ಉಪಕ್ರಮಿಸಿದಳು. ಅದನ್ನು ನೋಡಿ ಅವಳ ತಂದೆಯೇ ಮೊದಲಾದ ಬಂಧುಗಳು ತುಂಬಾ ವಿಷಾದಿಸಿದರು. ಹುಚ್ಚರಿಗೆ ಮಿತ್ರರು ಶತ್ರುಗಳಂತೆ ಕಾಣುವರು. ಸತ್ಯವು ಅಸತ್ಯವಾಗಿ ತೋರುವುದು. ಧರ್ಮವು ಅಧರ್ಮವಾಗಿ ಕಾಣುವುದು. ಪಾಪವು ಪುಣ್ಯವಾಗಿ ತೋರುವುದು. ಮನೋವೃತ್ತಿಯಲ್ಲಿ ಹುಚ್ಚಿನಿಂದ ಇಂಥಾ ವ್ಯತ್ಯಾಸಗಳು ಬರುವುದುಂಟು. ಅಧರ್ಮಗಳನ್ನು ಮಾಡತಕ್ಕವರಿಗೆ ಈ ಹುಚ್ಚನ್ನು ಬಿಡಿಸುವ ಚಿಕಿತ್ಸೆಯನ್ನು ಮಾಡಬೇಕೆ ಹೊರತು ಅವರನ್ನು ಸಂಹರಿಸುವುದು ಯೋಗ್ಯವಲ್ಲ. ಯಾರಿಗೆ ಹುಚ್ಚಿಲ್ಲವೋ ಅವರೆಲ್ಲರೂ ಸೇರಿ ಯುಕ್ತಾಹಾರವಿಹಾರಗಳೇ ಮೊದಲಾದುವುಗಳಿಂದಲೂ, ಸರಿಯಾದ ಚಿಕಿತ್ಸೆಗಳಿಂದಲೂ ಹುಚ್ಚನ್ನು ಬಿಡಿಸಬೇಕು. ಅಧಿಕಾರಿಗಳಿಗೆ ಹುಚ್ಚುಹಿಡಿಯುವುದುಂಟು. ಈ ಪ್ರಪಂಚವೇ ದೊಡ್ಡ ಹುಚ್ಚರ ಆಸ್ಪತ್ರೆ. ಜಾರ್ಜ್‌ನಿಕಲಸ್ಸರೇ ಮೊದಲಾದವರ ಗತಿಗೆ ಯಾರೂ ಬರದಂತೆ ಮಾಡುವುದು ಎಲ್ಲರಿಗೂ ಕರ್ತವ್ಯ. ಈ ಕರ್ತವ್ಯವನ್ನು ಸರಿಯಾಗಿ ಮಾಡತಕ್ಕವರೆಲ್ಲರೂ ದೇವರ ಪ್ರೀತಿಗೆ ಪಾತ್ರರಾಗುವರು. ಹೀಗೆ ಪಾತ್ರರಾಗುವರ ಸಂಪತ್ತು ನಿರ್ಭಾಗ್ಯರಾದ ಹುಚ್ಚರಿಗೆಲ್ಲಾ ಲಭ್ಯವಾಗಲೆಂದು ನಾನು ಕೋರುತ್ತೇನೆ.

ಬಿಸಿನೀರಿನ ಸ್ನಾನ.

(ಪರ್ಸಿವಲ್ ಕಾರ್ಕೆ ಎಂಬವರಿಂದ.)

ಬಿಸಿನೀರಿನ ಸ್ನಾನವು ಹೃದಯಕ್ಕೂ, ಮಾಂ
ಖಂಡಗಳಿಗೂ ಬಲಕಾರಿ. ಅದು ಚರ್ಮರಂಧ್ರ
ಬಾಯನ್ನು ತೆರೆದು, ರಕ್ತವನ್ನು ಮೇಲಕ್ಕೆಳೆಯುತ್ತ
ಅನೇಕ ವಿಧಗಳಲ್ಲಿ ತಣ್ಣೀರಿನ ಸ್ನಾನದಿಂದಾಗು
ಪ್ರಯೋಜನವೂ, ಬಿಸಿನೀರಿನ ಸ್ನಾನದಿಂದಾಗು
ಪ್ರಯೋಜನವೂ ಒಂದೇ! ಆದರೆ, ತಣ್ಣೀರಿನ ಸ್ನಾ
ದಿಂದಾಗುವ ಗುಣವೂ, ಬದಲಾವಣೆಗಳೂ ಒ
ಕಾಣಿಸಿಕೊಳ್ಳುವುವು. ಬಿಸಿನೀರಿನ ಗುಣವು ನಿಧಾ
ವಾಗಿ ಕಾಣುತ್ತ ಬರುವುದು. ಉಪಯೋಗಿಸುವು
ಪ್ರಾರಂಭಿಸಿದೊಡನೆ ಗುಣವನ್ನು ತೋರಿಸುವ ಔಷ
ಗಳು ಅನೇಕರಿಗೆ ಅನುಕೂಲಿಸದೆ, ಗುಣಭಾಗವು ನಿಧಾ
ನವಾಗಿ ಹೆಚ್ಚುತ್ತ ಬರುವ ಪದಾರ್ಥಗಳಿಂದ ಬಹುಜ
ರಿಗೆ ಮೇಲುಂಟಾಗುವಂತೆ ಇದನ್ನೂ ತಿಳಿಯಬೇಕು.

ತಣ್ಣೀರಿನ ಸ್ನಾನದಲ್ಲಿ ಕೆಲವು ಅಪಾಯಗಳು.

ತಣ್ಣೀರಿನಲ್ಲಿ ಸ್ನಾನಮಾಡಿದೊಡನೆ ಯಾರ ದೇಹ
ಬೆಚ್ಚಗಾಗಿ ಕಳೆಯೇರುವುದಕ್ಕೆ ಪ್ರಾರಂಭಿಸುವು
ಲ್ಲವೋ, ಅಂಥವರು ತಣ್ಣೀರಿನ ಸ್ನಾನವನ್ನು ಮಾಡು
ವುದುಚಿತವಲ್ಲ. ತಣ್ಣೀರಿನಲ್ಲಿ ಸ್ನಾನಮಾಡಿದಮೇಲೆ
ಅನೇಕರ ಮುಖವೂ, ಕೈಗಳೂ ನೀಲಿಗಟ್ಟುವುವು.
ದರಿಂದ ಅವರ ಹೃದಯಗಳಿಗೆ ಹೆಚ್ಚು ಶ್ರಮವಾಗು
ದನ್ನು ಅವರು ತಿಳಿಯರು. ಅಂಥವರು ತಣ್ಣೀರಿ
ಪ್ರತಿಯಾಗಿ ಬಿಸಿನೀರನ್ನೇ ಉಪಯೋಗಿಸಿದ್ದರೆ, ಅ
ರ ದೇಹವು ಬೆಚ್ಚಗಾಗಿ ಹಿತಕರವಾಗುತ್ತಿತ್ತು. ಬಿ
ನೀರೆಂಬುದು ಹೃದಯಕ್ಕೆ ಶಕ್ತಿವರ್ಧಕವಾಗಿರುವುದು.
ಬಿಸಿನೀರು ರಕ್ತವನ್ನು ಚರ್ಮದ ಕಡೆಗೆಳೆಯುವುದ
ರಿಂದ ರಕ್ತಚಲನೆಯ ಕಾರ್ಯವನ್ನು ಸ್ವಲ್ಪ ಚುರುಕು
ಮಾಡುವುದು. ಮತ್ತು ರಕ್ತವು ಮಾಂಸಖಂಡಗಳ
ಧಾರಾಳವಾಗಿ ಪ್ರವಹಿಸುವಂತೆ ಮಾಡುವದು. ಅದ
ದರಿಂದಲೇ, ಬೇಗ ವಾಯುಸಂಚಾರಮಾಡಿ ಹಿಂತಿರು
ಗಿದಮೇಲೆ, ಬಿಸಿನೀರಿನಲ್ಲಿ ಸ್ನಾನಮಾಡಿದರೆ, ಬಹ
ಶೀಘ್ರದಲ್ಲಿ ಆಯಾಸಪರಿಹಾರವಾಗಿ ಸುಖವು ತೋರು
ವುದು. ಮಾಂಸಖಂಡಗಳು ಬಾತು, ಅದರ ನೋವಿ
ನಿಂದ ಬಾಧೆಪಡುತ್ತಿರುವವರು, ಪ್ರತಿದಿನವೂ ಬೆಳಗಿನ
ಕಾಲಗಳಲ್ಲಿ ಬಿಸಿನೀರಿನಲ್ಲಿ ಸ್ನಾನಮಾಡುವುದೊಳ್ಳೆ
ಯದು. ಅದರಿಂದ ಮಾಂಸಖಂಡಗಳಲ್ಲಿಯೂ, ಕೀಲು
ಗಳಲ್ಲಿಯೂ, ರಕ್ತವು ಧಾರಾಳವಾಗಿ ಹರಿದು, ಆ
ಭಾಗಗಳಲ್ಲಿದ್ದ ಬಾಧೆಯು ಸಂಪೂರ್ಣವಾಗಿ ನಿವಾರಣೆ
ಯಾಗುವುದು. ಬಿಸಿನೀರು ಉಗುರುಬೆಚ್ಚಗಿದ್ದರೆ ಸಾಕ
ಸಾಲದು. ಅದು ಚೆನ್ನಾಗಿ ಕಾದಿರಬೇಕು. ಉಗುರು
ಬೆಚ್ಚಗಿರುವ ನೀರಿನಲ್ಲಿ ಸ್ನಾನಮಾಡುವಾಗಲೂ, ಸ್ನಾನ
ಮಾಡಿದ ಮೇಲೆಯೂ ಛಳಿಯಾಗುವುದು. ತಣ್ಣೀರಿನ
ಸ್ನಾನದಲ್ಲಿರುವ ಗುಣವು ಇದರಲ್ಲಿರದು. ಮತ್ತು ಅದು
ಬಿಸಿನೀರಿನ ಸ್ನಾನದಂತೆ ಹಿತಕರವಾಗಿರುವುದೂ ಇಲ್ಲ.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯುದೆಸೆಯಿಂದ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್ ಕಾರ್ಡಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ಪಿತ್ತ ಸುಡುವದು, ಪಿತ್ತ ಕಾರುವದು, ಮುಖ ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟಿ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿ ಯಾವತ್ತು ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ—ರಕ್ತಶುದ್ಧಿ ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬದ್ಧಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋ—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1-4.

ಕಂಪೌಂಡ್ ಸಿರಪ್ ವೆಸಿಫೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಎಲ್ಲ ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಊರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[2] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ.) **ಮಂಗಳೂರು, ದ. ಕ.**

ಸ್ತ್ರೋಕ್ತ ದಿವ್ಯೌಷಧಗಳು.

ೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ
ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು
ಸುಲಭಕ್ರಯದಲ್ಲಿ ದೊರೆಯುವವು.

ಷಧ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ರ್ಣವಂಗ	೧	೫—೦—೦
ಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭ್ರಭಸ್ಮ	೧	೦—೮—೦
ೀಸಭಸ್ಮ	೧	೦-೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತಾಳಿಭಸ್ಮ	೧	೦—೮—೦
ಜಸಭಸ್ಮ	೧	೦—೮—೦
ಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦-೧೨—೦
ಕಭಸ್ಮ	೧	೫—೦—೦
ಕಾಂತಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ೀದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ
ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು
ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.
ಆಣೆ ಟಿಕೇಟ್ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ
ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು
ಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ
ಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ.
ವುಗಳನ್ನು ಚತುರರಾದ ನೇಯ್ಗಿಯವರಿಂದ ಮನೋ
ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ
ಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ
ೂ ಮತ್ತು ನಯವಾಗಿಯೂ ಇರುವದರಿಂದ ತೊಳೆ
ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ
ವಾಗಲೂ ಕಡದೆ ಹೊಸಪೇಟಾಗಳಂತೆಯೇ ಕಾಣ
ವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ
ದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ
ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು
ಯಬೇಕೆಂದು ಕೋರುತ್ತೇವೆ.

ಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಆದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶಿ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನು ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟುಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಪ್ಪಟ್ಟೆಯಲ್ಲಿ, ನಡುನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ನೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

40 ಮು. ಪೋ. **ಮಿರಜ,** ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SHREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಶಕ್ತಿಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳತು (ಶಕ್ತಿ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನವಾಗಿ ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಬೇಕಾಗಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಭೋಗಾಸಕ್ತರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[8] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವತತ್ವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಲಿಂಗೋತ್ಪತ್ತಿ ಲಾಕೆಟ್ಸ್	೨ ಆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ಇರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಆಶ ಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆ ಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿ ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆರಿ ಗಿಲ್ಟ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆರಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆರಿ ಗಿಲ್ಟ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆರಿ ಗಿಲ್ಟ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆರಿ ಗಿಲ್ಟ	೦—೦—೬
ಸದ್ಯಃ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆರಿ ಗಿಲ್ಟ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಿಲ್ಟ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆರಿ ಗಿಲ್ಟ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಿಲ್ಟ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಿಲ್ಟ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಸಿ, ಒಂ ತಲೆನೋವು, ತಲೆ ಳ್ಳಿನ ರೋಗಗಳು ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೭೭ ವ್ಯಾಧಿಗಳನ್ನು ನ್ಯಸ್ತಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪- ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[9] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಖಾಲಿತವಿದ್ಯಾ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

GISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಖಾಲಿತ ವಿದ್ಯಾ ವೇದಿ ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಆಗಸ್ಟ್ ೧೯೩೨ [ಸಂಚಿಕೆ ೧೬

ಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವ ವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಳುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರಕ್ಷಕರೂಪ ಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗ ರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿ ಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ೀರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಿತ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ನ್ನಡ ಭಾಷಣ	೧೨ ಆಣೆ.
ರಾಠಿ ಭಾಷಣ	೮ ಆಣೆ.
ಲಗು ಭಾಷಣ	೮ ಆಣೆ.
ಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ANNOUNCEMENT.

Insure your Life with **Unique Life urance Co. Ltd.,** to support vadeshism & to save money for rainy ys. This Company was founded in 12 by the late illustrious Deshandhu C. R. Das. Its business has creased largely in the last two years, cause it offers **Lowest Premium Rates, gh Bonus, Protection against Permanent bility,** and all available benefits to licy Holders.

Applications from educated and luential persons desirous to earn a id side income as Insurance Agents all parts of Mysore State are invited

MR. E. K. PALIA M.A., ETC.,
Chief Agent,
Mysore State & Bangalore.

ದುಃಖವಾರ್ತೆ.

ವಿಜಾಪುರ ಜಿ॥ ಮಸೂತಿ ಗ್ರಾಮದ ಪಾಟೀಲರಾದ ಶ್ರೀಯುತ ರುದ್ರಗೌಡರು ತಾ॥ ೨೨-೮-೧೯೩೨ ನೇ ರವಿವಾರದ ದಿವಸ ಶಿವಾಧೀನರಾದರು. ಇವರ ನಿಧನದಿಂದ ಇವರ ಕುಟುಂಬದ ಜನಗಳಿಗಾದ ದುಃಖವು ಅಪಾರವಾದುದಾಗಿದೆ. ಕೇವಲ ಚಿಕ್ಕ ವಯಸ್ಸಿನಲ್ಲಿಯೇ ವಿಧಿಯು ಇವರನ್ನು ಎತ್ತಿಕೊಂಡು ಹೋಯಿತು. ಇವರು ವಿದ್ಯಾವಂತರೂ ಲೇಖಕರೂ ಸಮಾಜಸೇವಕರೂ ಸ್ವಧರ್ಮನಿಷ್ಠರೂ ಸದಾಚಾರ ಶೀಲರೂ ಆಗಿದ್ದರು. ರಾಜಕೀಯ ಕಾರ್ಯಕ್ಷೇತ್ರದಲ್ಲಿಯೂ ಮುಂದಾಳುಗಳಾಗಿ ಕೆಲಸ ಮಾಡುತ್ತಿದ್ದರು. ಬಹು ದಿವಸಗಳಿಂದ ತಾಲೂಕು ಬೋರ್ಡಿನಲ್ಲಿ ಚನ್ನಾಗಿ ದುಡಿದು ಜನರ ಪ್ರೇಮವನ್ನು ಸಂಪಾದಿಸಿದ್ದರು. ರಾಜಪ್ರಜಾನುರಾಗಿಗಳಾದ ಇವರು ವೀರಶೈವ ಸಮಾಜೋದ್ಧಾರದ ಕಾರ್ಯಗಳಿಗೆ ಬಹು ಸಹಾಯಕರಾಗುತ್ತಿದ್ದರು. ಇವರಿಗೆ ವಯೋವೃದ್ಧರಾದ ಜನಕ ತಂದೆಯವರಿದ್ದಾರೆ. ದತ್ತಕ ತಂದೆಯವರು ಶಿವಾಧೀನರಾಗಿರುವರು. ಕೇವಲ ಚಿಕ್ಕ ವಯಸ್ಸಿನ ಇಬ್ಬರು ಪತ್ನಿಯರಿದ್ದಾರೆ. ಇವರಿಗೆ ಸಂತಾನವಿಲ್ಲ. ಸಂಸಾರವೇ ಸ್ವರ್ಗವೆಂದು ಅತ್ಯಂತ ಆನಂದಸಾಗರದಲ್ಲಿ ತೇಲಾಡುತ್ತಿರುವಾಗ ವಿಧಿಯು ಇವರನ್ನು ಅಗಲಿಸಿ ಪತ್ನಿಯರನ್ನೂ ಮಾತಾಪಿತೃಗಳನ್ನೂ ಮಹತ್ತರವಾದ ದುಃಖ ಸಮುದ್ರದಲ್ಲಿ ಮುಳುಗಿಸಿತು. ವಿಧಿಯ ವಿಚಿತ್ರಲೀಲೆಯು ಅತ್ಯಗಾಧವಾದುದು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಂತರ ಶಾಂತಿಯನ್ನೀಯಲೆಂದೂ ಅವರ ಕುಟುಂಬದ ಜನಗಳ ದುಃಖ ಶಮನವಾಗಲೆಂದೂ ಆ ದಯಾಮಯನನ್ನು ಪ್ರಾರ್ಥಿಸುತ್ತೇವೆ.

ವೇ॥ ಪಂಚಾಕ್ಷರಶಾಸ್ತ್ರಿಗಳು, ಹಿರೇಮಠ
ಶಿರೋಳ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಬೆಂಗಳೂರಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ 'ಮೈಸೂರು ಸಂಸ್ಥಾನದ ವರ್ತಮಾನ ಪತ್ರಿಕಾ ಸಂಪಾದಕರ ಮತ್ತು ವಾರ್ತೀದಾರರ ಸಮಾಜ'ಕ್ಕೆ 500 ರೂಪಾಯಿಗಳನ್ನು ದಯಪಾಲಿಸಿರುತ್ತಾರೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯು ಚಾಲ್ತಿಗೆ ಬಂದನಂತರ ಕೆಮ್ಮಣ್ಣುಗುಂಡಿಯು ಬಹು ಪ್ರಾಶಸ್ತ್ಯಕ್ಕೆ ಬರಲಾರಂಭಿಸಿರುವುದು. ಶ್ರೀಮನ್ಮಹಾರಾಜರವರು ಈ ಸ್ಥಳದಲ್ಲಿ ವಿಶೇಷದ್ರವ್ಯವನ್ನು ವೆಚ್ಚಮಾಡಿ ಒಂದು ಬಂಗಲೆಯನ್ನು ಕಟ್ಟಿಸುತ್ತಿರುವರಲ್ಲದೆ, 30 ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಮೋಟಾರು ರಸ್ತೆಯನ್ನು ರಚಿಸಿರುವರು.

ಕೋಲಾರದ ಚಿನ್ನದಗಣಿಯ ಹೆಂಗಸರ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರಾಗಿದ್ದ ಮಿಸ್ ವಯೋಲೆಟ್ ಆರ್ನಾಲ್ಡ್ ಎಂಬಾಕೆಯು ಇದೇ ಆಗಸ್ಟ 21 ನೆಯ ತಾರೀಖಿನ ದಿವಸ ಮಂಗಳೂರು ಆರ್ಯಸಮಾಜದವರ ನೇತೃತ್ವದಲ್ಲಿ ಹಿಂದೂಧರ್ಮವನ್ನು ಅಂಗೀಕಾರಮಾಡಿ, ಆ ಮೇಲೆ ಶಿವಮೊಗ್ಗೆಯ ಆಸ್ಪತ್ರೆಯಲ್ಲಿ ಡಾಕ್ಟರಾಗಿರುವ ಮಿ॥ ಎಂ. ಆರ್. ಪಾರ್ಥಸಾರಥಿಯವರನ್ನು ವಿವಾಹವಾದಳು.

ಬೆಂಗಳೂರಿನಲ್ಲಿರುವ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್' ಎಂಬ ವಿಜ್ಞಾನಸಂಶೋಧಕಶಾಲೆಗೆ ಮೈಸೂರು ಸರಕಾರದವರು ಪ್ರತಿವರ್ಷವೂ ಕೊಡುತ್ತಿದ್ದ 50 ಸಾವಿರ ರೂಪಾಯಿಗಳ ಪೋಷಕದ್ರವ್ಯವನ್ನು ಆರ್ಥಿಕಮುಗ್ಗಟ್ಟಿನ ದೆಸೆಯಿಂದ 20 ಸಾವಿರ ರೂಪಾಯಿಗಳಿಗೆ ಇಳಿಸಿರುತ್ತಾರೆ. ಇದೇ ಸಂಬಂಧವಾಗಿ ಇನ್ಸ್ಟಿಟ್ಯೂಟಿನ ಗವರ್ನಿಂಗ್ ಕೌನ್ಸಿಲ್ ಮೆಂಬರರೂ, ಸರಕಾರದ ದ್ವಿತೀಯ ಸಚಿವರೂ ಆದ ರಾಜಮಂತ್ರಪ್ರವೀಣ ಮಿ॥ ಕೆ. ಮ್ಯಾಥ್ಯೂರವರು ಸಿಮ್ಲಾಕ್ಕೆ ದಯಮಾಡಿಸಿದ್ದರು.

ರಾಜಧಾನಿಯ ನ್ಯೂಸ್ಪನ ಠಾಣೆಯ ಬಳಿ ಕಳೆದ ಆಗಸ್ಟ 14 ನೇ ತಾರೀಖು ರಾತ್ರಿ ಒಬ್ಬ ಹಳ್ಳಿಯವನು ದೀಪವಿಲ್ಲದೆ ಗಾಡಿಯನ್ನು ಹೊಡೆದುಕೊಂಡು ಹೋಗುತ್ತಿದ್ದುದರಿಂದ ಪೋಲೀಸಿನವನು ಗಾಡಿಯವನನ್ನು ಹೊಡೆಯುತ್ತಿದ್ದನೆಂದೂ, ಅದನ್ನು ನೋಡಿದ ಮಿ॥ ಕೆ. ಸಿದ್ದೇಗೌಡ ಎಂಬ ಕಾಲೇಜು ವಿದ್ಯಾರ್ಥಿಯು ಪೋಲೀಸಿನವನಿಗೆ ಹಾಗೆ ಹೊಡೆಯಬಾರದೆಂದು ಹೇಳಲು ಪೋಲೀಸರು ಆ ವಿದ್ಯಾರ್ಥಿಯನ್ನು ಹೊಡೆದು ಲಾಕಪ್ಪಿಗೆ ಹಾಕಿದರೆಂದೂ, ಈ ವರ್ತಮಾನವು ಅಡ್ವೊಕೇಟ್ ಮಿ॥ ಎಚ್. ಸಿ. ದಾಸಪ್ಪನವರಿಗೂ ಮತ್ತು ಕಾಲೇಜಿನ ಪ್ರೊಫೆಸರ್ ಮಿ॥ ಎ. ಆರ್. ವಾಡಿಯಾರವರಿಗೂ ತಿಳಿದು ಅವರಿಬ್ಬರೂ ರಾತ್ರಿ ಸುಮಾರು 12 ಗಂಟೆಯ ಸಮಯದಲ್ಲಿ ಸ್ಟೇಷನ್ನಿಗೆ ಬಂದು ವಿದ್ಯಾರ್ಥಿಯನ್ನು ಲಾಕಪ್ಪಿನಿಂದ ಬಿಡಿಸಿದರೆಂದೂ, ವಿದ್ಯಾರ್ಥಿಯ ಮೈಮೇಲೆ ತುಂಬಾ ಗಾಯಗಳಾಗಿದ್ದುದರಿಂದ ಆ ಕ್ಷಣವೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಮಾಡಿಸಿ ಡಾಕ್ಟರರ ಸರ್ಟಿಫಿಕೇಟನ್ನು ಪಡೆದು, ಮೇಲಿನ ಅಧಿಕಾರಿಗಳಿಗೆ ತಂತೀವರ್ತಮಾನವನ್ನು ಕಳುಹಿಸಿದುದಲ್ಲದೆ, ಮರುದಿವಸ ಪೋಲೀಸ್ ಸೂಪರಿಂಟೆಂಡೆಂಟರವರಿಗೆ 24 ಗಂಟೆಗಳೊಳಗಾಗಿ ಕ್ಷಮಾಪಣೆಯನ್ನು ಕೇಳಿಕೊಳ್ಳದಿದ್ದರೆ ಮುಂದಿನ ಕ್ರಮವನ್ನು ಜರುಗಿಸುವದಾಗಿ ನೋಟೀಸ್ ಕೊಟ್ಟರೆಂದೂ, ಈ ಮಧ್ಯೆ ಗಲಾಟೆಯು ನಡೆದ ದಿವಸ ಡ್ಯೂಟಿಯ ಮೇಲಿದ್ದ ಸಾರ್ಜಂಟ್ ಎಸ್. ಶೇಷಪ್ಪ ಎಂಬುವರು ಇಂಡಿಯನ್ ಪಿನಲ್ ಕೋಡು 353 ನೇ ಸೆಕ್ಷನ್ ಪ್ರಕಾರ ಟ್ರಾಫಿಕ್ ಡ್ಯೂಟಿಗೆ ಆತಂಕಪಡಿಸಿದನೆಂಬ ಅಪವಾದನೆಯ ಮೇಲೆ ಮಿ॥ ಸಿದ್ದೇಗೌಡರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆಂದೂ ತಿಳಿದುಬಂದಿದೆ.

ಸ್ವೀಕಾರ

ಧಾರವಾಡ ಜಿ॥ ಗದಗ ತಾ॥ ಬಳಗಾನೂರು ಗ್ರಾಮನಿವಾಸಿಗಳಾದ ಮ॥ ರಾ॥ ಗುಂಡಪ್ಪ ಗಡ್ಡೆಪ್ಪನವರ ಇವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿದ್ದಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಡಿತಾರಾಧ್ಯರ ಪ್ರಸೀದತು.

ಮುದೇನೂರು ಮಠಕ್ಕೆ ವಿಶೇಷಾಧಿಕಾರ.

(ಶ್ರೀ|| ವಾಗೀಶಶಿವಾಚಾರ್ಯ ಹಿರೇಮಠ, ಮುದೇನೂರು.)

ಈ ಮುದೇನೂರು ಮಠವು ಧಾರವಾಡ ಜಿಲ್ಲಾ ರಾಣಿಬೆನ್ನೂರು ತಾಲೂಕಿಗೊಳಪಟ್ಟುದಾಗಿಯೂ ಶಿಷ್ಯಪ್ರಶಿಷ್ಯರುಳ್ಳುದಾಗಿಯೂ ಪಂಡಿತಾರಾಧ್ಯ ಪೀಠದ ಶಾಖಾಮಠವಾಗಿಯೂ ಇರುವುದು. ಅದರೆ ಕಾಲವೈಚಿತ್ರ್ಯದಿಂದ ಈ ಮಠವು ಬಹಳವಾಗಿ ಹಿಂದುಳಿಯುತ್ತ ಬಂದಿದೆ. ಪಟ್ಟಾಧಿಕಾರವು ಮಾತ್ರ ಬಹುದಿನಗಳಿಂದ ಕ್ರಮವಾಗಿಯೇ ಸಾಗುತ್ತ ಬಂದಿರುವದೆಂಬುದು ಸರ್ವರೂ ಅನುಭವಿಸುವ ವಿಷಯವಾಗಿದೆ. ನಮ್ಮ ಹಿಂದಿನ ಗುರುಗಳಾದ ವೀರೇಶ್ವರ ಶಿವಾಚಾರ್ಯಸ್ವಾಮಿಯವರೂ, ಶಾಂತವೀರಶಿವಾಚಾರ್ಯಸ್ವಾಮಿಯವರೂ, ದೇಶಕಾಲಾನುಗುಣವಾಗಿ ವಿದ್ಯಾಭ್ಯಾಸಂಗವಾಡಿದವರಾದರೂ ಶಿಷ್ಯೋದ್ಧಾರ ಕಾರ್ಯದಲ್ಲಿ ತಕ್ಕಮಟ್ಟಿಗೆ ಪ್ರಯತ್ನಿಸಿದುದರಿಂದ ಈ ಮಠದ ಸಮಸ್ತ ಶಿಷ್ಯರೂ ಗುರುಬೋಧೆಯನ್ನು ಹೊಂದಲು ಅನುಕೂಲವಾಗಿಲ್ಲವೆಂಬುದು ಶೋಚನೀಯವಾದ ಸಂಗತಿಯು. ಅದರೆ ಸದ್ಯದ ಪರಿಸ್ಥಿತಿಯಲ್ಲಿ ಶಿಷ್ಯೋದ್ಧಾರ ಮಾಡುವ ಕಾರ್ಯವು ಅತ್ಯಂತ ಗಹನವಾದುದೆಂಬುದನ್ನರಿತ ಪಂಚ ಜಗದ್ಗುರು ಪೀಠದವರು ತಮ್ಮ ತಮ್ಮ ಸಿಂಹಾಸನಾಂತರ್ಗತಗಳಾದ ಶಾಖಾಮಠಗಳಿಗೆ ಯೋಗ್ಯತಾಪದವಿಗಳನ್ನು ದಯಪಾಲಿಸಿ ಆಯಾಯ ಮಠಾಧೀಶ್ವರರಿಂದ ವೀರಶೈವ ಸಮಾಜೋದ್ಧಾರ ಕಾರ್ಯವನ್ನು ನೆರವೇರಿಸುತ್ತಲಿರುವುದು ಸಮಸ್ತ ವೀರಶೈವರಿಗೂ ಆನಂದದಾಯಕವಾದ ಸಂಗತಿಯಾಗಿದೆ.

ನಮ್ಮ ಗುರುಗಳಾದ ಶ್ರೀ ಜಗದ್ಗುರು ಸೂರ್ಯಸಿಂಹಾಸನಾಧೀಶ್ವರ ನಾಗಲೂಟಿ ಭಿಕ್ಷಾವೃತ್ತಿ ಶಿವಾಚಾರ್ಯ ಮಹಾಸ್ವಾಮಿಪಾದರವರು ನಮ್ಮ ಮುದೇನೂರು ಮಠವು ಸೂರ್ಯಸಿಂಹಾಸನಕ್ಕೆ ಸೇರಿರುವ ಶಾಖಾಮಠವೆಂಬುದನ್ನು ದಿವ್ಯಚಕ್ಷುವಿಗೆ ತಂದು ಈ ಮಠಕ್ಕೆ ಯೋಗ್ಯಗಳಾದ ಬಿರುದುಗಳನ್ನೊಳಗೊಂಡ ರಿಕಾರ್ಡ ಒಂದನ್ನೂ, ಧಾರವಾಡ ಜಿಲ್ಲೆಯಲ್ಲಿ ಶ್ರೀ ಸೂರ್ಯಸಿಂಹಾಸನದ ಶಾಖಾಧಿಕಾರವನ್ನು ವಹಿಸಿಕೊಂಡು ಸಂಚರಿಸಬೇಕಾಗಿ ಅಧಿಕಾರ ಪತ್ರಿಕೆಯೊಂದನ್ನೂ ಪರಮ ಕೃಪೆಯಿಂದ ಅನುಗ್ರಹಿಸಿರುವುದಕ್ಕಾಗಿ ಅತ್ಯಂತ ಪ್ರೇಮದಿಂದಲೂ ಭಕ್ತಿಯಿಂದಲೂ ಗ್ರಹಿಸಿರುವೆನು. ಸಮಸ್ತ ವೀರಶೈವ ಜನಾಂಗದ ಅವಗಾಹನೆಗಾಗಿ ಅವುಗಳ ಯಥಾ ನಕಲನ್ನು ಈ ಕೆಳಗೆ ವಿವರಿಸುತ್ತೇನೆ.—

ಶ್ರೀ ಜಗದ್ಗುರು ಮಲ್ಲಿಕಾರ್ಜುನಲಿಂಗೋದ್ಭವ ಪಂಡಿತಾರಾಧ್ಯ ಪ್ರಸೀದತು.

(ಇಲ್ಲಿ ಲಿಂಗೋದ್ಭವಮೂರ್ತಿಯದೆ)

(ಇಲ್ಲಿ ಸಂಸ್ಥಾನದ ಮೊಹರು ಇದೆ)

ಶಿವಾಯಿಬಾಬು
ಗೆ. ನಂ. S.P.
32

ಶ್ರೀಮದ್ವೇದವೇದಾಂತಸಿದ್ಧಾಂತ ಪುರಾಣಾಗಮೇತಿಹಾಸ ಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮತ್ಪಂಡಿತಾಚಾರ್ಯ ಪರಂಪರಾಗತ ಶ್ರೀಮತ್ಪ್ರಾಪ್ತ (ಶ್ರೀಶೈಲಪರ್ವತ) ಶ್ರೀಗಿರಿರಾಜಸೂರ್ಯಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಭಿಕ್ಷಾವೃತ್ತಿ ಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿನಾಂ ಸನ್ನಿಧಾನೇನ.

ಅಧಿಕಾರಸ್ಥಾನದಿಂದ.

ಪರಮಸದ್ಗುರುಪದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯಮಾನ ಕೇವಲಾಸ್ಮದೀಯಕಾರುಣ್ಯಾಮೃತಸರಸೀಮರಾಳೋಪಮಾನರಾದ ಬೆಳಂಬಾಯ ಪ್ರಸಿದ್ಧ ಧಾರವಾಡ ಜಿಲ್ಲಾ ರಾಣೀಬೆನ್ನೂರು ತಾಲೂಕುವಾರ್ ಗ್ರಾಮಾಂತರಗಳ ಸಮಸ್ತ ವೀರಶೈವ ಸಮಾಜದವರಿಗೂ, ವೀರಶೈವ ಮತಾನುಯಾಯಿಗಳಾದ ಸದ್ಭಕ್ತಾದಿಗಳವರಿಗೂ ಬರಸಿದ ಹುಕುಂ ಏನಂದರೆ—

ರಾಣೀಬೆನ್ನೂರು ತಾಲೂಕು ಪೈಕಿ ಮುದೇನೂರು ಗ್ರಾಮದಲ್ಲಿ ಈ ಮಹಾಪೀಠದ ಶಾಖಾಸಂಸ್ಥೆಗೆ ಒಳಪಟ್ಟ ಉಪಾಚಾರ್ಯರ ಪುತ್ರವರ್ಗದ ಬೃಹನ್ಮಠವಿದ್ದು ಈ ಮಠದ ಉತ್ತರಾಧಿಕಾರಿಗಳು ಪಟ್ಟಾಧ್ಯಕ್ಷರು ಶ್ರೀ ವಾಗೀಶಶಿವಾಚಾರ್ಯರು ಸದ್ವಂಶೀಯರಾಗಿಯೂ, ವಿದ್ಯಾವಿನಯಾದಿ ಲೌಕಿಕಪಾರಮಾರ್ಥ ಧರ್ಮಸುಧಾರಕರಾಗಿಯೂ ಆಚಾರವಿಚಾರಾದಿ ಧರ್ಮೋಪದೇಶದಲ್ಲಿ ಭಕ್ತಾದಿಗಳವರಿಗೆ ಭಕ್ತಿವಿಶ್ವಾಸ ಹುಟ್ಟಿಸುವದರಲ್ಲಿ ಗುರುಭಕ್ತಿ ಕ್ರಿಯಾಪಾತ್ರಂತರಾಗಿಯೂ, ಶಿವಪೂಜಾಧುರೀಣ ಶಾಂತಮೂರ್ತಿಗಳಾಗಿರುತ್ತಾರೆಂಬುದು ಸನ್ನಿಧಿ ಸರ್ವಾಧಿಕಾರಿಯವರಿಗೆ ಬಾಹಾವರ ಮೊಕ್ಕಾಮಿನಲ್ಲಿ ಸಂದರ್ಶಿಸಿರುವದು. ಮತ್ತು ಇವರು ಪ್ರಸಿದ್ಧ ವಿದ್ಯಾನಗರವಾದ ಶ್ರೀ ಕಾಶೀಕ್ಷೇತ್ರದಲ್ಲಿ ಪ್ರೌಢವಿದ್ಯಾಭ್ಯಾಸಂಗಿಗಳಾಗಿರುತ್ತಾರೆಂಬುದು ಸಹಾ ಅರಿಕೆಯಾಗಿರುವದರಿಂದ ಇವರ ಬಗ್ಗೆ ಅಪ್ಪಣೆಮಾಡುವದೇನಂದರೆ—

ಈ ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷರು ವಾಗೀಶಶಿವಾಚಾರ್ಯರು ಶ್ರೀ ಜಗದ್ಗುರು ಪಂಚಪೀಠಾಧೀಶರ ಮಹಿಮಾತಿಶಯಗಳ ಮತ್ತು ಮಹಾಮತಸ್ಥಾಪನಾದಿ ದೃಷ್ಟಾಂತರಗಳನ್ನು ಪ್ರಕಾಶಪಡಿಸುವದರಲ್ಲಿ ತತ್ಪರರಾಗಿರುವದರಿಂದಲೂ, ಈ ಉಪಾಚಾರ್ಯಮೂರ್ತಿಯವರನ್ನು ಧಾರವಾಡಜಿಲ್ಲಾ ತಾಲೂಕು ವಾರ್ ಗ್ರಾಮಾಂತರಗಳಲ್ಲಿ ಧರ್ಮೋಪದೇಶಕರಾಗಿಯೂ, ಧರ್ಮಸಂಬಂಧಿ ಆಚಾರ ಬಾಬು, ಶಿವಾಯಿಬಾಬು, ಮೊಖದ್ದಮೆಗಳನ್ನು ಹಿಡಿದು ನ್ಯಾಯಪರಿಪಾಲನೆ ವಿಚಾರದಿಂದ ತೀರ್ಮಾನಿಸುವದರಲ್ಲಿಯೂ, ದಂಡನಖಂಡನೆಗಳನ್ನು ವಿಧಿಸುವದರಲ್ಲಿಯೂ, ಮಹಾ ಸಂಸ್ಥಾನಕ್ಕೆ ವರದೀ ಮಾಡಲೂ ಮತ್ತು ಆ ಪೀಠಕ್ಕೆ ಸಲ್ಲುವ ವರ್ಷಾಶನ ಕಾಣಿಕಾವಗೈರೆ ವಸೂಲಾದಿ ಖಾನೇಷುಮಾರಿ ತೆಗೆಯುವದಕ್ಕೂ, ವೀರಶೈವಮತಾನುಯಾಯಿಗಳಾಗತಕ್ಕವರಿಗೆ ವಿಧಿಪ್ರಕಾರ ಲಿಂಗಧಾರಣಾದಿ ದೀಕ್ಷಾಸಂಸ್ಕಾರವಮಾಡಿಸುವದಕ್ಕೂ, ಧರ್ಮವಿರುದ್ಧ ಪರರಿಗೆ ಬಹಿಷ್ಕರಿಸುವದಕ್ಕೂ ಸಹಾ ಅಧಿಕಾರ ಅಪ್ಪಣೆಮಾಡಿದೆ.

ಇವರ ಸರ್ಕ್ಯೂಟ ಚಾಲನಾ ಬಗ್ಗೆ ಬೆಳ್ಳಿ ಬಿಲ್ಲೆ, ಹಿತ್ತಾಳೀ ಬಿಲ್ಲೆ, ಬೆಳ್ಳಿಪಟ್ಟಿನ ಬೆತ್ತಗಳು ೨, ಶಾಖಾಧಿಕಾರ ಮೊಹರು ೧, ಗೆ ರಜಿಸ್ಟರ್, ಡೈರಿ, ವಗೈರೆ ಸಂಸ್ಥಾನ ದಪ್ತರದಿಂದ ಕೊಡಿಸಿಕೊಟ್ಟಿರುತ್ತೆ. ಸದರಿ ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷರು ನಿಮ್ಮ ಪ್ರಾಂತ್ಯ ಗ್ರಾಮಾಂತರಗಳಿಗೆ (ಸಂಚಾರ) ಸರ್ಕ್ಯೂಟ ಬಂದಲ್ಲಿ ಸಂಸ್ಥಾನ್ ಗೌರವಪದ್ಧತಿಯಂತೆ ಸನ್ಮಾನಿಸಿ ನಡೆಸುತ್ತಕೊಳ್ಳತಕ್ಕದ್ದೆಂದು ಮಹಾ|| || ಸಂಸ್ಥಾನ ಹುಕುಂ ಆಗಿರುತ್ತೆ. ಗ್ರಹಿಸುವದು. ಬ. ತಾರೀಖು 11 ನೇ ಮಾಹೇ ಅಗೆಸ್ಟು ಸನ್ 1932 ಇಸ್ವಿ—

ಮೊಕ್ಕಾಂ ದರ್ಗಾಸಂಸ್ಥಾನ್,
ಗುಂತಕಲ್ ತಾಲೂಕು ಗುತ್ತಿ,
ಜಿ|| ಅನಂತಪುರಂ.

R. C. Aradhyaswami, Hiremutt.
ಶ್ರೀ ಜಗದ್ಗುರು ಸಂಸ್ಥಾನ್ ಸರ್ವಾಧಿಕಾರೀ.

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಲಿಂಗೋದ್ಭವ ಪಂಡಿತಾರಾಧ್ಯ ಪ್ರಸೀದತು.

(ಇಲ್ಲಿ ಲಿಂಗೋದ್ಭವಮೂರ್ತಿಯದೆ)

(ಇಲ್ಲಿ ಸಂಸ್ಥಾನ ಮೊಹರು ಇದೆ)

ಶಿವಾಯಿಬಾಬು
ಗೆ. ನಂ S.P.
32

ಶ್ರೀಮದ್ವೇದವೇದಾಂತಸಿದ್ಧಾಂತ ಪುರಾಣಾಗಮೇತಿಹಾಸ ಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮತ್ಪಂಡಿತಾಚಾರ್ಯ ಪರಂಪರಾಗತ ಶ್ರೀಮತ್ಪ್ರಾಪ್ತ (ಶ್ರೀಶೈಲಪರ್ವತ) ಶ್ರೀಗಿರಿರಾಜಸೂರ್ಯಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಭಿಕ್ಷಾವೃತ್ತಿ ಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿನಾಂ ಸನ್ನಿಧಾನೇನ.

ಅಧಿಕಾರಸ್ಥಾನದಿಂದ.

ಪರಮಸದ್ಗುರುಪದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯಮಾನ ಕೇವಲಾಸ್ಮದೀಯಕಾರುಣ್ಯಾಮೃತಸರಸೀಮರಾಳೋಪಮಾನರಾದ ಧಾರ್ವಾಡ ಜಿಲ್ಲಾ ರಾಣಿಬೆನ್ನೂರು ತಾಲೂಕು ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷ ವಾಗೀಶ ಶಿವಾಚಾರ್ಯರಿಗೆ ಬರೆಯಿಸಿದ ನಿರೂಪದುದಾಗಿ—ನೀವು ತಾ|| 13-11-31 ನೇ ಇಸ್ವಿ ಮದ್ರಾಸಿನಲ್ಲಿ ಏಜಂಟರವರ ಮೂಲಕ ಅರಿಕೆ ಮಾಡಿಕೊಂಡ ಲೇಖ ಮೂಲಕವಾಗಿಯೂ ಸಹ ಬಿನ್ನೈಸಿಕೊಂಡ ಮನವಿಯು ಹಾಜೀರಾಯಿತು. ನಿಮ್ಮ ಮುದೇನೂರು ಬೃಹನ್ಮಠವು ಈ ಮಹಾಪೀಠದ ಶಾಖಾ ಸೂತ್ರಾಧಿಕಾರಕ್ಕೆ ಒಳಪಟ್ಟ ಪುತ್ರವರ್ಗದ ಉಪಾಚಾರ್ಯರ ಸದ್ವಂಶೀಯ ಪುರಾತನ ಮಠವಾಗಿರುವದರಿಂದಲೂ, ನೀವು ಪ್ರಾಪ್ತವಯಸ್ಕರಾಗಿ ವಿದ್ಯಾ ವಿನಯಾದಿ ಸದ್ಗುಣಗಳಿಂದ ಆಚಾರನಿಷ್ಠರಾಗಿ ಶಿಷ್ಯಪ್ರಶಿಷ್ಯಾದಿಗಳವರಿಗೆ ಧರ್ಮೋಪದೇಶದಿಂದ ಸುಧಾರಿಸುವದರಲ್ಲಿ ಶ್ರೀ ಜಗದ್ಗುರು ಪಂಚಪೀಠಾಧೀಶರಾದ ಮಹಾಮತಸ್ಥಾಪಕರ ವಾಂಛಲ್ಯಪರರಾಗಿರುವದರಿಂದ ಧಾರವಾಡ ಜಿಲ್ಲಾಕ್ಕೆ ತಾ|| 11-8-32 ಲಾಗಾಯ್ತು ಧರ್ಮೋಪದೇಶಕರನ್ನಾಗಿ ಮುಕರರ್ ಮಾಡಿ ಮಹಾ|| || ಸಂಸ್ಥಾನದಿಂದ ಇದರೊಂದಿಗೆ ಅಧಿಕಾರದ ಸನ್ನಾಪತ್ರವನ್ನು ದಯಪಾಲಿಸೋಣವಾಗಿರುತ್ತೆ.

ನಿಮ್ಮ ಮಠಕ್ಕೆ ಸೇರಿದ ಸ್ಥಲ ಬಾಜು ಗ್ರಾಮಾಂತರಗಳ ವೀರಶೈವಮಂಡಲಿಯವರು ವಿಶಿಷ್ಟಧರ್ಮಸಂಬಂಧಿ ಪುರೋಭಿವೃದ್ಧಿಯಲ್ಲಿ ನಿಮ್ಮ ಅನುಜ್ಞೆಯಂತೆ ವರ್ತಿಸುವದರಲ್ಲಿಯೂ, ನಿಮ್ಮ ಇಚ್ಛಾನುಸಾರ ವೈದಿಕಧರ್ಮದಲ್ಲಿ ಕರಪೇಕ್ಷಾದ ನಿಮ್ಮ ಮಠದ ವಂಶೀಕರಿಗೆ ಪೌರೋಹಿತ್ಯಾದಿ ಕಾರ್ಯಕ್ರಮಗಳಿಗೆ ನೇಮಿಸುವದಕ್ಕೂ, ನಿಮಗೆ ಸಂಪೂರ್ಣ ಹಕಾಟೀ ಇರುತ್ತೆ. ನಿಮ್ಮ ಸ್ಥಲ ಬಾಜುದಲ್ಲಿ ವೀರಶೈವಮಂಡಲಿ ಭಕ್ತಾದಿಗಳು ಧರ್ಮಸುಧಾರಣೆಯಲ್ಲಿ ವ್ಯತಿರೇಕವಾಗಿ ನಡೆಯುತ್ತಾರೆಂದು ಕಂಡುಬಂದವರಿಗೂ, ನಿಮ್ಮ ಅನುಜ್ಞೆ ವಿನಾ ನಡೆಯತಕ್ಕವರಿಗೂ, ದಂಡನಖಂಡನೆಗಳಿಂದ ಬಹಿಷ್ಕರಿಸುವದರಲ್ಲಿ ಮಹಾ|| || ಸಂಸ್ಥಾನಕ್ಕೆ ವರದೀ ಮಾಡಲು ರಿಕಾರ್ಡು ಕ್ರಮದ ವಿಚಾರದಕ್ಷರಾಗಿಯೇ ಇರುತ್ತೀರಿ.

ಪ್ರಾಚೀನಪದ್ಧತಿಯಂತೆ ನಿಮ್ಮ ಮಠದ ಪುರೋಭಿವೃದ್ಧಿಗೆ ನಿಮ್ಮ ಮಠದ ವಂಶಪಾರಂಪರ್ಯವಾದ ಪುತ್ರವರ್ಗದ ನಿಬಂಧನಾ ಮೇರೆ ನಿಮ್ಮ ಉತ್ತರಾಧಿಕಾರವನ್ನು ನೆರವೇರಿಸುವದರಲ್ಲಿ, ನಿಮಗೆ ಸ್ವತಂತ್ರ ವಿತಕ್ಕದ್ದಾಗಿರುತ್ತೆ. ನಿಮ್ಮ ಮಠದ ಗೌರವ ಪ್ರತಿಷ್ಠೆಗೆಗೆ ತಕ್ಕಂತೆ ಪಾಲಕಿ, ಪನ್ಯಾ, ಛತ್ರಿ, ಚಾಮರ, ಕಾವೀನಿಶಾನ್ ಇತ್ಯಾದಿ ಉಪಾಚಾರ್ಯರ ಮಠಕ್ಕೆ ತಕ್ಕಷ್ಟು ಬಿರುದಾವಳಿಯಿಂದ ಸಂಚರಿಸಲು ಈ ಮಹಾ|| || ಪೀಠದಿಂದ ಸನ್ನಾಪಿತರಾದ ಶಾಖಾಧಿಕಾರಿಗಳಾಗಿರುತ್ತೀರಿ. ನಿಮ್ಮ ಮಠದ ಪುರೋಭಿವೃದ್ಧಿಯ ಗೌರವಕ್ಕಾಗಿ ಒಂದು ಬೆಳ್ಳೀ ಬಿಲ್ಲೆಯೂ, ಒಂದು ಹಿತ್ತಾಳೀ ಬಿಲ್ಲೆಯೂ ಸಹ ಉಪಯೋಗಿಸಿಕೊಳ್ಳಲು ಸನ್ಮಾನಾರ್ಥ ದಯಪಾಲಿಸೋಣವಾಗಿರುತ್ತದೆಂದೂ ಮಹಾ|| || ಸಂಸ್ಥಾನ್ ಸನ್ನಿಧಿಯವರ ಅಪ್ಪಣೆಯಾಗಿರುತ್ತೆ. ಗ್ರಹಿಸುವದು ಬ|| ತಾ|| 13 ನೇ ಮಾಹೇ ಅಗೆಸ್ಟು ಸನ್ 1932 ನೇ ಇಸ್ವಿ.

ಮೊಕ್ಕಾ ದರ್ಗಾ ಸಂಸ್ಥಾನ್
ಗುಂತಕಲ್, ತಾ|| ಗುತ್ತಿ ಜಿ|| ಅನಂತಪುರಂ,
ಮದ್ರಾಸ್ ಪ್ರೆಸಿಡೆನ್ಸಿ.

R. C. Aradhyaswami Hiremutt.
ಶ್ರೀ ಜಗದ್ಗುರು ಸಂಸ್ಥಾನ್ ಸರ್ವಾಧಿಕಾರಿ.

ಶ್ರೀ ಜಗದ್ಗುರು ಏಕೋರಾಮಾರಾಧ್ಯ ಶಿವಾಚಾರ್ಯ ಪ್ರಸೀದತು

ಶ್ರೀಮಚ್ಛಕ್ತಿವಿಶಿಷ್ಟಾದ್ವೈತ ವೀರಶೈವ ಮತಸ್ಥಾಪನಾಚಾರ್ಯ ಶ್ರೀ ಹಿಮವತ್ಕೇದಾರ ಜಗದ್ಗುರು ಕೈಲಾಸಲಿಂಗಶಿವಾಚಾರ್ಯ ಭಗವಚ್ಚರಣ ಸನ್ನಿಧಾನದಿಂದ

ಶ್ರೀ ಗುರು ಪೀಠಾಭಿಮಾನಿಗಳಿಗೆ ಶುಭಾಶೀಃ ಪೂರ್ವಕ ಅಪ್ಪಣೆ ಕೊಡಿಸುವದೇನಂದರೆ—ಶ್ರೀ ಸನ್ನಿಧಾನವು ದಕ್ಷಿಣ ಭಾರತಕ್ಕೆ ಸನಾತನ ಧರ್ಮೋಪದೇಶ ಶ್ರೀ ಗುರು ಪೀಠದ ಧಾರ್ಮಿಕ ಕರಗ್ರಹಣಕ್ಕಾಗಿ ಶ್ರೀ ಹಿಮಗಿರಿಯಿಂದ ದಯಮಾಡಿರುವದಾಗಿರುತ್ತೆ. ಸದ್ಯ ನೈಜಾಮಿಲಾಖಾ ಅರ್. ಯೆಸ್. ವಾಡಿಯ ಸ್ಟೇಶನದ ಹತ್ತಿರ ರಂಪೂರ ಮುಕ್ಕಾಮಿನಲ್ಲಿ ಪ್ರತಿನಿತ್ಯ ಶ್ರೀರುದ್ರ, ನಮಕ, ಚಮಕ, ಪುರುಷಸೂಕ್ತ, ಶ್ರೀ ಮೃತ್ಯುಂಜಯಾದಿ ವೈದಿಕಮಂತ್ರಾಭಿಷೇಕ, ಶ್ರೀ ಶಿವಮಂತ್ರಾದಿ ಪುರಶ್ಚರಣ ಪೂರ್ವಕ ಜಪತಪೋನುಷ್ಠಾನವು ನಿರ್ವಿಘ್ನವಾಗಿ ನಡೆಯುತ್ತಲಿದ್ದು, ನೈಜಾಂ ಸದ್ಭಕ್ತರು ಶ್ರೀ ಜಗದಾಚಾರ್ಯ ಪ್ರವಚನೋಪದೇಶ ಶೋಡಶಾಸ್ತ್ರ ಪುರಾಣಾದಿಗಳನ್ನು ಕೇಳಿ ಧನ್ಯರಾಗುತ್ತಲಿರುವರು. ಶ್ರೀ ಸನ್ನಿಧಾನದವರು ಸರ್ವದಾ ಶ್ರೀ ಶಿವಭಕ್ತಿ, ಶ್ರೀ ಗುರುಭಕ್ತಿ ಸನಾತನಾಚಾರ ಪದ್ಧತಿಯನ್ನೇ ಬೋಧಿಸುತ್ತಿರುವರು. ಶ್ರೀ ಶ್ರಾವಣ ಪೂಜಾ ಪ್ರಯುಕ್ತ ಮಹೇಶ್ವರ ಗಣಾರಾಧನೆಯು ಭಾದ್ರಪದ ಶು|| ೫ ಸೋಮವಾರ ತಾ|| ೫ ಸಪ್ಟಂಬರ ನಡೆಯುವದು. ಚತುರ್ಥಿಯ ದಿವಸ ಶ್ರೀ ಗಣೇಶ ಪೂಜೋತ್ಸವವು ವಿಜೃಂಭಣೆಯಿಂದ ನಡೆಯುವದು. ಅದ್ದರಿಂದ ಶ್ರೀ ಜಗದ್ಗುರು ಸನ್ನಿಧಿಯ ಸಂದರ್ಶನ ಸದ್ಬೋಧಾದಿಗಳಲ್ಲಿ ಅಪೇಕ್ಷೆಯುಳ್ಳವರು ಬಂದು ಆಶೀರ್ವಾದಕ್ಕೆ ಪಾತ್ರರಾಗಬೇಕು. ಇತ್ಯಾಶಿಷಃ

ಸೂಚನೆ—ಭಾದ್ರಪದ ಶು|| ೫ ತಾ|| ೫ ಸಪ್ಟಂಬರ ದಿವಸ ಶ್ರೀ ಜಗದ್ಗುರು|| || ಮಹಾ ಸನ್ನಿಧಾನದ ಶ್ರೀ ಚರಣ ಸಮರ್ಪಣವು ಸಹಸ್ರ ಬಿಲ್ವಧಾರಾ ಪೂರ್ವಕ ಅತ್ಯಂತ ವೈಭವದಿಂದ ನಡೆಯುವದು. ಶ್ರೀ ತೀರ್ಥ ಪ್ರಸಾದವನ್ನು ಸೇವಿಸಿ ಧನ್ಯರಾಗಬೇಕಾಗಿ ಸೂಚಿಸಿದ್ದಾಗಿದೆ.

ಮುಕ್ಕಾಂ—ರಂಪೂರು.
ವಾಡಿ-ಜಂಕ್ಷನ್

ಶ್ರೀ ಜಗದ್ಗುರು ಕೇದಾರ
ಸಂಸ್ಥಾನ ಸರ್ವಾಧಿಕಾರಿಗಳು.

ಸಣ್ಣಮಾರ್ಗದ ಸನ್ಯಾಸಿಗಳ ಸಮಾಚಾರ.

ಲೇಖಕ—'ದೈವಜ್ಞ ವಿನೋದ'

ವೀರಶೈವೇತರ ಮತೀಯ ಸನ್ಯಾಸಾಶ್ರಮಿಗಳು ತಮ್ಮ ಆಶ್ರಮ ಧರ್ಮಪಾಲನೆಯನ್ನು ಚೆನ್ನಾಗಿ ಮಾಡುತ್ತಿರುವರು. ಅವರು ತಮ್ಮ ಮತಸ್ಥಾಪನಾಚಾರ್ಯರ ಅನುಜ್ಞೆಯ ಮೇರೆಗೆ ಆಶ್ರಮ ಸ್ವೀಕಾರವನ್ನು ಸನ್ಯಾಸಾಶ್ರಮಾನುಷ್ಠಾನ ಮಾಡುತ್ತಿರುವರು. ನಮ್ಮ ಪವಿತ್ರವಾದ ವೀರಶೈವ ಮತದಲ್ಲಿಯಾದರೂ ಇದೇ ರೀತಿಯಾಗಿತ್ತು. ಅದರೆ ಸಂಕರಜಾತಿ ಪ್ರವರ್ತಕನಾದ ಕಲ್ಯಾಣಬಸವನಿಂದ ಸನ್ಯಾಸಿಗಳ ಇರುವಿಕೆಯು ಬದಲಾವಣೆಯಾಯಿತು. ಸರ್ವಸಂಗ ಪರಿತ್ಯಾಗವಾಡಿದ ಇವರಿಗೆ ಮಠಮನೆಗಳ ಅವಶ್ಯಕತೆ ಇದ್ದಿಲ್ಲ. ಈ ಸನ್ಯಾಸಿಗಳು ಸ್ವಧರ್ಮಾನುಷ್ಠಾನತತ್ಪರರಾಗಿದ್ದರು. ಇವರು ಮತಸ್ಥಾಪನಾಚಾರ್ಯರಲ್ಲಿ ನಿಸ್ಸೀಮವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರು. ಮತರಕ್ಷಣೆ-ಶಿಕ್ಷಣೆಗಾಗಿ ಸ್ಥಾಪಿತವಾದ ಪಂಚಸಿಂಹಾಸನಗಳಿಗೆ ವಿರೋಧವಾಗಿ ಕಲ್ಯಾಣದಲ್ಲಿ ಬಸವನು ಧರ್ಮಾಂತರ ಹೊಂದಿದ ಅಲ್ಲಮನೆಂಬವನನ್ನು ಶೂನ್ಯಸಿಂಹಾಸನವೆಂಬ ಅಪಾರ್ಥಕಲ್ಪಿತ ಹೆಸರಿನ ಮಠವನ್ನು ಕಟ್ಟಿಸಿ ಕೂಡ್ರಿಸಿದನು. ಅಂದಿನಿಂದಲೇ ಸನ್ಯಾಸಿಗಳು ಸಂಸಾರಿಕರಂತೆ ಮಠಮನೆಗಳನ್ನು ಕಟ್ಟಿಕೊಂಡು ಭೂಮ್ಯಧಿಕಾಯ ಬಡ್ಡೀಖಾತೆ ಮೊದಲಾದ ವ್ಯವಹಾರಾದಿಗಳಲ್ಲಿ ತೊಡಗಿದರು. ಪ್ರಾಚೀನಕಾಲದ ಸನ್ಯಾಸಾಶ್ರಮಿಗಳ ಜೀವನ ಚರಿತ್ರೆಯು ಅತ್ಯಂತ ನಿರ್ಮಲವಾಗಿರುವದು. ಅರ್ವಾಚೀನ ಕಾಲದಲ್ಲಿಯೂ ಸಹ ಪರಮವೈರಾಗ್ಯಶಾಲಿಗಳಾದ ಮಹನೀಯ ಸನ್ಯಾಸಿಗಳು ಅನೇಕರು ಆಗಿಹೋಗಿದ್ದಾರೆ. ಪ್ರಾಪಂಚಿಕರು ತಮ್ಮ ವಂಶಪರಂಪರೆಯನ್ನು ಹೇಳುತ್ತಿರುವಂತೆ ಈಗಿನ ಸನ್ಯಾಸಿಗಳು ಪರಂಪರೆಯನ್ನು ಹೇಳುತ್ತಿರುವದು ಧರ್ಮವಿರೋಧವಾದುದೂ, ಪಾಪದಾಯಕವಾದುದೂ ಆಗಿದೆ.

ನಿಸ್ಸಂಗವನ್ನೇ ತುಚ್ಛೀಕರಿಸಿಕೊಳ್ಳುತ್ತಿರುವವರು ತಮ್ಮ ಮಠಾಂಗಗಳ ಬಿರುದುಗಳನ್ನು ಪೋಣಿಸುವುದೇಕೆ? ಒಂದು ತರಹ ವಿಲಕ್ಷಣ ಪ್ರಾಪಂಚಿಕರಾದ ಇವರು ತಮಗೆ ವಿರಕ್ತರು, ನಿರಾಸಂಗಿಗಳು, ನಿರಂಜನರು ಮುಂತಾದ ಬಾಹ್ಯಾಡಂಬರ ಪದವಿಗಳನ್ನು ಬರೆದುಕೊಳ್ಳುತ್ತಿರುವದು ಅತ್ಯಂತ ಹಾಸ್ಯಾಸ್ಪದವಾಗಿದೆ.

ಗಳಿ ವಿರಕ್ತರಾದರೆ, ಮಠಮನೆಗಳೇಕೆ? ಭೂಮಿಸೀಮೆ
ಕೆ? ನಿರಾಭಾರಿಗಳಾದರೆ, ಸಂಸ್ಕಾರಾದಿ ಕ್ರಿಯೆಗಳಲ್ಲಿ ಪ್ರವೆ
ತಮ್ಮದೊಂದು ಕಲಶವನ್ನು ಬಲಾತ್ಕಾರವಾಗಿ ಹೂಡಿಸಿ ಧ
ತ್ರೀಹಿಗಳಾಗುವದೇಕೆ? ನಿರಂಜನರಾದರೆ ಕಾವಿಯ ಬಟ್ಟೆಗ
ಬೆಯಲ್ಲಿ ಅವರಿಗೆ ಮಲದ ಸಮಾನವಾದ ಭಂಗಾರದ ಕರಡಿ
ಮುತ್ತಿನಸರ, ರತ್ನದ ಕಂಕಣ, ಕಾಶ್ಮೀರದ ಶಾಲು, ೨ ದಿನಕೆ
ನ್ನು ನಾಲ್ಕಾಗಿ ತಾವೇ ಮಾಡಿಕೊಳ್ಳುವ
ಯಕಾರ್ಯಗಳಿಂದ ರಂಜಿಸುವದೇಕೆ? ಈಗಿನ ಈ ಸನ್ಯಾಸಿ
ಪಟಜಾಲದ ಬಲೆಗೆ ಸಿಲುಕಿ ಕೆಲ ಜನ ಭಕ್ತರು ಮರುಳರ
ನೆಯ ತೊಡಗಿದ್ದಾರೆ. ಇದೀಗ ಗುರುವರ್ಗದ ಜಾಗರ
ಯಿಂದ ಸನ್ಯಾಸಿಗಳ ಹುಳುಕು ಹೊರಬೀಳ ತೊಡಗಿದ್ದರಿಂದ
ಸನ್ಯಾಸಿಗಳ ಅಗ್ರಸ್ಥಾನಗಳು ಬುಡ ಮೇಲಾಗ ತೊಡಗಿವೆ.
ವೇ ಕತ್ತರಿಸಿ ಹೋಗುತ್ತಿರುವಾಗ ಚಿಕ್ಕ ಪುಟ್ಟ ನಾಮಧಾರಿ
ಬಿಕೀಹವಾಗುವುದರಲ್ಲಿ ಸಂದೇಹವೇನು? ಅಲ್ಲಲ್ಲಿ ಗುರುವ
ರಲ್ಲಿ ಭಕ್ತಿಶೂನ್ಯರಾಗಿ ಕೂಪ ಮಂಡೂಕದಂತೆ ಅಪಕಲ್ಪ
ಕ್ಷರಿಸುತ್ತಿರುವ ಚಿಕ್ಕ ಪುಟ್ಟ ಮಠದ ಅರ್ಧಮರ್ಧ ಜಿಡಾಡಿ ಸ
ಗಳು ಈ ತರಹದ ದುರ್ಮಾರ್ಗವನ್ನು ಬಿಟ್ಟು ಗುರುಭಕ್ತ
ರ್ವಾಸಿ ಮೋಕ್ಷಸುಖವನ್ನು ಹೊಂದಲೆಂಬಾಶೆಯಿಂದ ಈ
ವನ್ನು ಪ್ರಕಟಿಸಿದೆ.

ಬರುವ ದಸರಾ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿಸಲು ಚಿಕ್ಕಮಗಳೂರು ಬಿ. ಪಿ. ಬಸಪ್ಪಶೆಟ್ಟ ಕೆಳಗೆ ಕಂಡ ನಿರ್ಣಯ, ಅರಿಕೆ ಮತ್ತು ಪ್ರ ಗಳನ್ನು ಕಳುಹಿಸಿದ್ದಾರೆ—

(1) ಮೈಸೂರಲ್ಲಿರುವ ಸರ್ಕಾರಿ ಸಂಸ್ಕೃತ ಕಾಲೇಜಿಗೆ
ವನ್ನೂ ಸೇರಿಸಬೇಕೆಂದು ಈ ಸಭೆಯು ಶ್ರೀಮನ್ಮಹಾರಾಜಾ ಸ
ರವರಿಗೆ ಶಿಫಾರಸು ಮಾಡುತ್ತದೆ.

(2) ಮೈಸೂರು ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು
ಹೆಚ್ಚು ಪ್ರಚಾರ ಮಾಡುವ ಸಂಭವದಲ್ಲಿ ಒದಗಬಹುದ
ಲ್ಲಾ ಖರ್ಚನ್ನೂ ಡಿಸ್ಟ್ರಿಕ್ಟು ಬೋರ್ಡಿನವರ ಮೇಲೆ ಹಾ
ಸರ್ಕಾರದವರೇ ಅದನ್ನು ವಹಿಸಬೇಕಾಗಿ ಈ ಸಭೆಯು ಶ್ರೀಮ
ಮಹಾರಾಜ ಸರ್ಕಾರದವರಿಗೆ ಶಿಫಾರಸು ಮಾಡುತ್ತದೆ.

ಘನಸರ್ಕಾರದವರು ಈ ಕೆಳಗೆ ಕಾಣಿಸಿದ ವಿಷಯಗಳ
ತೀರ್ಮಾನಿಸುವರೇ?

(a) ಕಡೂರು ತಾಲೂಕು ಯುಗಟಿ ಗ್ರಾಮದಲ್ಲಿ ಶ್ರೀ
ಕಾರ್ಜುನಸ್ವಾಮಿಯ ಪೂಜಾ ಸಂಬಂಧದಲ್ಲಿ ಸ್ಮಾರ್ತರಿಗೂ
ತ್ತು ವೀರಶೈವರಿಗೂ ವ್ಯಾಜ್ಯವಾಗಿದ್ದು ಯಾವಾಗ? ಇದಕ್ಕೆ
ಣಗಳೇನು?

(b) ಆದಿಯಿಂದಲೂ ಈ ದೇವರನ್ನು ಪೂಜೆಮಾಡುತ್ತಿದ್ದವರು
ಯಾವ ಪಂಗಡಕ್ಕೆ ಸೇರಿದವರು? ಈಗ ಅವರನ್ನು ಬದಲಾಯಿ
ಸಲು ಕಾರಣವೇನು?

(c) ವರ್ಷವೆಲ್ಲಾ ವೀರಶೈವ ಪೂಜಾರಿಯು ದೇವರನ್ನು
ಮಾಡಿ ವರ್ಷಾಂತ್ಯದಲ್ಲಿ ಉತ್ಸವಕ್ಕೆ ಮೂರ್ತಿಯನ್ನು ಹೊರ
ವಾಗ ಈ ವೀರಶೈವ ಪೂಜಾರಿಯು ಗರ್ಭಗುಡಿಗೆ ಪ್ರವೇಶ
ಲು ಅವಕಾಶವಿಲ್ಲದೆ ಇರುವುದು ಮತ್ತು ಸ್ಮಾರ್ತ ಪೂಜಾ
ಆ ದಿವಸ ಮಾತ್ರ ಒಳಗೆ ಪ್ರವೇಶಿಸಿ ಅಭಿಷೇಕ ಪೂಜೆ
ಮಾಡುತ್ತಿರುವುದು ನಿಜವೇ?

(d) ಮೇಲ್ಕಂಡ ವ್ಯಾಜ್ಯದಲ್ಲಿ ಸರ್ಕಾರದವರು ಹೊರಡಿಸಿ
ಆರ್ಡರನ್ನು ಸರ್ಕಾರದವರು ಸಭೆಯ ಮುಂದಿಡುವರೇ?

(1) ಮದ್ರಾಸಿನಲ್ಲಿರುವ ಹಾಗೆ ಮೈಸೂರು ವಿಶ್ವವಿದ್ಯಾ
ಯದಲ್ಲಿ ಸೀನಿಯರ್ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ
ಪ್ ಸಿಸ್ಟಂ ಪದ್ಧತಿಯನ್ನು ಇಡಿಸಿಕೊಡುವಂತೆ ಮಾಡಬೇ
ಪ್ರಾರ್ಥನೆ

2. ಸೀನಿಯರ್ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಉ
ರ್ಣರಾದ ವಿದ್ಯಾರ್ಥಿಗಳಿಗೆ 6 ತಿಂಗಳಿಗೊಮ್ಮೆ ಪರೀಕ್ಷೆ ಕ
ವಂತೆ ಅನುಕೂಲವನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ.

ಅಖಿಲ ಭಾರತೀಯ ಗುರುವರ್ಗ ಸಂಘಸ್ಥಾಪ

ಬಾತ್ಮಿ.

ಇದೇ ಶ್ರಾವಣ ಶು|| ೫ ದಿವಸ ಬಾರ್ಶಿ ಟವನ್ನಿನಲ್ಲಿ
ವಿಶಾಪುರೆ ಮಾರುತಿ ದೇವಸ್ಥಾನದಲ್ಲಿ ಅಖಿಲ ಭಾರತೀಯ ಗು
ವರ್ಗ ಸಂಘಸ್ಥಾಪನೆಗಾಗಿ ಸಭೆಯು ಸಮ್ಮಿಲಿತವಾಗಿತ್ತು.
ಸಭೆಗೆ ಅನೇಕ ಜನ ಗುರುವರ್ಗದ ಪಟ್ಟಾಧಿಕಾರಿಗಳೂ, ಪ್ರ
ಮ ಭಕ್ತರೂ ಆಗಮಿಸಿದ್ದರು. ಶ್ರೀ ಪರಂಡೆಕರ್ ಸ್ವಾಮಿಗಳ
ಸೂಚನೆಯ ಮೇರೆಗೆ ಶ್ರೀ ಹೋಟಗಿ ಬೃಹನ್ಮಠದ ಪಟ್ಟದಸ್ವಾ
ಗಳು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಮ|| ರಾ|| ಕ
ಸ್ವಾಮಿ ಜಾಯಗಾಂವಕರ ಇವರು ಈ ಸಂಘದ ಸ್ಥಾಪನೆಯ
ಶ್ಯಕತೆಯನ್ನೂ, ಇದರಿಂದ ಶಿಷ್ಯಮಂಡಲಿಯು ಉದ್ಧಾರವಾ
ದೆಂಬ ವಿಷಯವನ್ನೂ ವಿವರಿಸಿ ಹೇಳಿದರು. ಅನಂತರ ಶ್ರೀ
ಬೋಳೆಕರ ಸ್ವಾಮಿಗಳವರು ಶಿನ್ನದಭಾಷೆಯಿಂದ ಗುರುವ
ವರ ಕರ್ತವ್ಯಕರ್ಮವನ್ನು ಕುರಿತು ಸಂಭಾಷಿಸಿದರು. ಶ್ರೀ
ಕವಸ್ವಾಮಿಗಳವರು ಈ ಸಂಘಸ್ಥಾಪನೆಯು ಅತ್ಯಾವಶ್ಯಕವ
ದೆಂದೂ ಯಾವತ್ತೂ ಗುರುವರ್ಗದವರು ತಮ್ಮ ಶಿಷ್ಯಮ
ಯನ್ನು ಉದ್ಧರಿಸುವ ಕಾರ್ಯದಲ್ಲಿ ತತ್ಪರರಾಗಬೇಕೆಂದೂ
ಸಂಘಕ್ಕೆ ಸರ್ವರೂ ಸಹಾಯ ಮಾಡಬೇಕೆಂದೂ ತಮ್ಮ ಅ

ಹೋರಿಯನ್ನು ಕೊಂಡುಕೊಂಡು ಅದರಿಂದ ಹೊಲವನ್ನು ಉಳುತ್ತಿದ್ದನು. ಈಚೆಗೆ ಆ ಹೋರಿಯು ಆಕಳವಾಗಿ ಹೊತ್ತಿಗೆ 1½ ಸೇರು ಹಾಲು ಕರೆಯುತ್ತಿರುವದಂತೆ! ಅನೇಕ ಜನರು ಆ ಆಕಳವನ್ನು ಪೂಜಿಸುತ್ತಿರುವರು.

ಹಾಲೀವರ್ ಸಿಬ್‌ಪುರದಲ್ಲಿ (ಬಂಗಾಳಾ) ವಾಸವಾಗಿದ್ದ ಮಿ|| ಬಿ. ಡಬ್ಲ್ಯೂ. ವೈಟ್ ಎಂಬ ಆಂಗ್ಲೇಯ ಕಂಟ್ರಾಕ್ಟರರವರು ಇದೇ ಅಗಸ್ಟ 24ನೆಯ ತಾರೀಖಿನ ದಿವಸ ರಾತ್ರಿ ಅವರ ಸ್ವಂತ ಬಂಗಲೆಯಲ್ಲಿ ಕೊಲ್ಲಲ್ಪಟ್ಟರು. ದರೋಡೆಯೇ ಈ ಕೊಲೆಗೆ ಮೂಲಕಾರಣವೆಂದು ಊಹಿಸಲ್ಪಟ್ಟಿದೆ. ಪೋಲೀಸರು ಅನುಮಾನದ ಮೇಲೆ ಇಬ್ಬರು ಆಳುಗಳನ್ನು ದಸ್ತಗಿರಿಮಾಡಿರುತ್ತಾರೆ.

ಇದೇ ಅಗಸ್ಟ 20 ನೇ ತಾರೀಖಿನ ದಿವಸ ಮುಂಬಯಿಯಿಂದ ಹೊರಟ "ಎಸ್. ಎಸ್. ಮಲೋಜಾ" ಎಂಬ ಮೇಲ್ ಸ್ಟೀಮರಿನಲ್ಲಿ 56,28,218 ರೂ. ಗಳ ಭಂಗಾರದ ಗಟ್ಟಿಗಳು ಇಂಗ್ಲಂಡಿಗೆ ರವಾನಿಸಲ್ಪಟ್ಟವು. ಇಂಗ್ಲಂಡ್ ದೇಶವು 'ಗೋಲ್ಡ್ ಸ್ಟ್ಯಾಂಡರ್ಡ'ನ್ನು ರದ್ದುಮಾಡಿದಂದಿನಿಂದ ಇಂಡಿಯಾದಿಂದ ಒಟ್ಟು 78,05,34,247 ರೂ. ಗಳ ಭಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿರುತ್ತದೆ.

ಬಾಗಲಕೋಟೆಯ ಹಿರೇಮಠದಲ್ಲಿ ಈ ತಿಂಗಳು 23 ನೆಯ ತಾರೀಖು ಸೋಮವಾರ ದಿವಸ ಶಿರೋಳ ಬೃಹನ್ಮಠಾಧ್ಯಕ್ಷ ವೇ|| ಪಂಚಾಕ್ಷರಶಾಸ್ತ್ರಿಗಳವರು 'ವೀರಶೈವ ಮತತತ್ವ' ಎಂಬ ವಿಷಯದ ಮೇಲೆ ಅಮೋಘವಾದ ಭಾಷಣಮಾಡಿದರೆಂದೂ ಇದರಿಂದ ಜಾತಿಸಾಂಕರ್ಯವೆಂಬ ಹೊಲಸನ್ನು ಹೊರಗೆ ಹಾಕಬೇಕೆಂಬ ಪರಿಣಾಮವಾಗಿ ಜನರಲ್ಲಿ ಜಾಗ್ರತೆಯಾಗ ತೊಡಗಿದೆ ಎಂದೂ ತಿಳಿದುಬರುತ್ತದೆ.

ಮುಂಬಯಿಯ ಒಬ್ಬ ಹಿಂದೂ ಗೃಹಸ್ಥನು ತನ್ನ ಇಬ್ಬರು ಪತ್ನಿಯರಿಗೂ ಉರಿಯುವ ಕೊಳ್ಳಿಯಿಂದ ಬರೆಗಳನ್ನು ಹಾಕಿದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟ್ ಜಂಗಲ್‌ವಾಲಾರವರು ಅಪರಾಧಿಗೆ 100 ರೂ. ಜುಲ್ಮಾನೆ ತಪ್ಪಿದರೆ 4 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು. ಅಪರಾಧಿಯು, ವ್ಯಭಿಚಾರಿಯೆಂಬ ಅನುಮಾನದಿಂದ ಒಬ್ಬಳಿಗೂ, ಈ ವಿಷಯವನ್ನು ತಿಳಿದಿದ್ದರೂ ತನಗೆ ತಿಳಿಸಲಿಲ್ಲವೆಂಬ ಕಾರಣದ ಮೇಲೆ ಮತ್ತೊಬ್ಬಳಿಗೂ ಬರೆ ಹಾಕಿದನಂತೆ!

ಮುಂಬಯಿಯ ಮಿ|| ಪಿ. ವಿ. ಕುಲಕರ್ಣಿ ಎಂಬ ಒಬ್ಬ ಹಿಂದೂ ಇಂಜನಿಯರು ಮಿಸ್ ಆಲೂ ಫಿರೋಜಶಾ ಎಂಬ ಪಾರ್ಶಿಯುವತಿಯನ್ನು ಮೋಹಿಸಿ, ಇರ್ವರೂ ಕೆಲವು ದಿವಸಗಳವರೆಗೆ ಒಂದೇ ಕಡೆಯಲ್ಲಿ ವಾಸಿಸುತ್ತಿದ್ದರು. ಯುವತಿಯ ಬಂಧುಗಳು ಇವರೀರ್ವರ ವಿವಾಹಕ್ಕೆ ಸಮ್ಮತಿಸದೆ ಅವರ ಆಶಯಕ್ಕೆ ವಿಘ್ನಪರಂಪರೆಗಳನ್ನುಂಟುಮಾಡಿದುದರಿಂದ ಮಿ|| ಕುಲಕರ್ಣಿಯವರು ಆ ತರುಣಿಯ ವಿಯೋಗದುಃಖವನ್ನು ತಡೆಯಲಾರದೆ ವಿಷಪಾನಮಾಡಿ ಆತ್ಮಹತ್ಯಮಾಡಿಕೊಂಡರಂತೆ!

ಇಂಗ್ಲೆಂಡಿನ ಪ್ರಸಿದ್ಧ ಗ್ರಂಥಕರ್ತರಾದ ಮಿ|| ಜಾರ್ಜ್ ಬರ್ನಾರ್ಡ್‌ಷಾರವರು 10,000 ಪೌಂಡುಗಳಿಗೆ ಒಂದು ಹೊಸ ಲೈಫ್ ಇನ್ಶೂರೆನ್ಸ್ ಪಾಲಿಸಿಯನ್ನು ತೆಗೆದುಕೊಂಡಿರುವರು. ಅವರಿಗೆ ಈಗ 76 ವರ್ಷಗಳಾಗಿರುವುವು. ಇಷ್ಟು ವೃದ್ಧಾಪ್ಯದಲ್ಲಿ 'ಲೈಫ್ ಇನ್ಶೂರ್' ಮಾಡಲು ಇದುವರೆಗೆ ಯಾವ ಕಂಪೆನಿಯವರೂ ಯಾರಿಗೂ ಅವಕಾಶ ಕೊಟ್ಟಿರಲಿಲ್ಲ! ಅದರೂ ಮಿ|| ಷಾರವರ ಪಾಲಿಸಿಯು ಸರ್ವೋತ್ತಮವಾದುದೆಂದು ಇನ್ಶೂರೆನ್ಸ್ ಕಂಪೆನಿಯವರು ಅಭಿಪ್ರಾಯಪಟ್ಟಿರುವರು.

ಮಹಾತ್ಮ ಗಾಂಧಿಯವರು ಕೆಲವು ದಿವಸಗಳಿಂದ ಆಡಿನ ಹಾಲನ್ನೂ ಉಪ್ಪನ್ನೂ ಬಿಟ್ಟು, ರೊಟ್ಟಿಯನ್ನೂ ಖರ್ಜೂರವನ್ನೂ ನೀರಿನಲ್ಲಿ ನೆನಸಿ ಬಾದಾಮಿಯೊಡನೆ ಸೇವಿಸುತ್ತಿದ್ದರು. ಇದರಿಂದ ಅವರ ತೂಕವು ಒಂದು ತಿಂಗಳಲ್ಲಿ 94 ಪೌಂಡುಗಳಿಂದ 82 ಪೌಂಡುಗಳಿಗೆ ಇಳಿದಿದ್ದುದರಿಂದ ಮಹಾತ್ಮರು ಜೈಲ್ ಸೂಪರಿಂಟೆಂಡೆಂಟರವರ ಕೋರಿಕೆಯ ಮೇಲೆ, ಪುನಃ ಆಡಿನ ಹಾಲನ್ನು ತೆಗೆದುಕೊಳ್ಳಲು ಪ್ರಾರಂಭಿಸಿರುವರು. ಇದರಿಂದ ಅವರ ತೂಕವು ಪುನಃ ಹೆಚ್ಚುತ್ತಿರುವದು. ಮಹಾತ್ಮರು ಸದಾ ನೂಲುವುದು ಮತ್ತು ಓದುವುದು ಇವೆರಡರಲ್ಲಿಯೇ ಕಾಲಕಳೆಯುತ್ತಿರುವರು. ಅವರಿಗೆ ಅಮೇರಿಕೆಯಿಂದ ಅನೇಕ ಪತ್ರಗಳು ಬರುತ್ತಿರುವುವು. ಬಹು ದೂರದಲ್ಲಿರುವ ಆ ದೇಶದ ಮಿತ್ರರು ಕೇಳುವ ವಿಚಿತ್ರ ಪ್ರಶ್ನೆಗಳಿಗೆ ಉತ್ತರ ಕೊಡುವುದೆಂದರೆ ಮಹಾತ್ಮರಿಗೆ ಬಹಳ ಆನಂದವಂತೆ!

ಜರ್ಮನಿಯಲ್ಲಿ ಉಂಟಾಗಿರುವ ರಾಜಕೀಯ ಕ್ರಾಂತಿಯ ಸಂಬಂಧದಲ್ಲಿ 5 ಜನ ನಾಜಿಪಕ್ಷದ ಕ್ರಾಂತಿಕಾರರು ಮರಣದಂಡನೆಗೆ ಗುರಿಯಾಗಿರುವರು. ಕಮ್ಯೂನಿಸ್ಟ್‌ಗುಂಪಿನ ಮುಖಂಡರಾದ ಹೆರ್‌ಹಿಟ್ಲರ್‌ರವರು ಇದನ್ನು ಅತ್ಯುಗ್ರವಾಗಿ ಖಂಡಿಸಿ ಸದರಿ 5 ಜನ ನಾಜಿಗಳ ಮೇಲಿನ ಶಿಕ್ಷೆಯನ್ನು ವಜಾಮಾಡದಿದ್ದರೆ ಅಥವಾ ಅವರ ಮೇಲಿನ ಅಪಾದನೆಯ ಸಂಬಂಧವಾಗಿ ನ್ಯಾಯಸ್ಥಾನದಲ್ಲಿ ಪುನರ್ವಿಚಾರಣೆ ಮಾಡದಿದ್ದರೆ ಸರ್ಕಾರದಮೇಲೆ ಯುದ್ಧವನ್ನು ಹೂಡುವದಾಗಿ ನೋಟೀಸುಕೊಟ್ಟಿರುವರು. ಇತ್ತ ಸರ್ವಾಧಿಕಾರಿಗಳಾದ ವಾನ್‌ಪಾಪೆನ್‌ರವರು ಹೆರ್‌ಹಿಟ್ಲರ್‌ರವರ ನೋಟೀಸಿಗೆ ಹೆದರದೆ ಸರ್ವಶಕ್ತಿಯನ್ನೂ ಉಪಯೋಗಿಸಿ, ತಮ್ಮ ಆಜ್ಞೆಯು ನೆರವೇರುವಂತೆ ಮಾಡುವದಾಗಿ ಪ್ರತ್ಯುತ್ತರವನ್ನು ಕೊಟ್ಟಿರುವರು. ಇದರಿಂದ ಜರ್ಮನಿಯಲ್ಲಿ ಸಿವಿಲ್‌ಯುದ್ಧವು ನಡೆಯಬಹುದೆಂದು ಪ್ರಪಂಚವೆಲ್ಲವೂ ಗಾಬರಿಯಾಗಿ ಮುಂದಿನ ವಿದ್ಯಮಾನಗಳನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿರುವದು.

ಸದ್ಯದ ರಾಜಕೀಯ ಸ್ಥಿತಿಯನ್ನು ಪರಿಶೀಲಿಸುವುದಕ್ಕೋಸ್ಕರ ಇಂಡಿಯಾದಲ್ಲಿ ಸಂಚಾರ ಮಾಡುತ್ತಿರುವ, ಪಾರ್ಲಿಮೆಂಟಿನ ಕನ್ಸರ್ವೇಟಿವ್ ಪಂಗಡದ ಸದಸ್ಯರಾಗಿರುವ ಮಿ|| ಹೇಲ್ಸ್‌ರವರು 'ಹಿಂದೂ' ಪತ್ರಿಕೆಗೆ ಒಂದು ದೀರ್ಘವಾದ ಲೇಖನವನ್ನು ಬರೆದಿರುವರು. ಅದರಲ್ಲಿ 'ಬೈ ಇಂಡಿಯನ್' ಚಳವಳಿಯ ವಿಷಯವಾಗಿ ಈ ರೀತಿ ಬರೆದಿರುತ್ತಾರೆ.—"ನಮ್ಮ ದೇಶದಲ್ಲಿ ನಾವು ಬ್ರಿಟಿಷ್ ವಸ್ತುಗಳನ್ನೇ ಕೊಳ್ಳಿರಿ" ಎಂದು ಹೇಳುತ್ತಿದ್ದೇವೆ. ಹೀಗಿರುವಲ್ಲಿ ಈ ದೇಶದಲ್ಲಿ 'ಬೈ ಇಂಡಿಯನ್' ಚಳವಳಿಗೆ ಆತಂಕಪಡಿಸಿದರೆ ನಾವು ತಕ್ಕರೆನಿಸಿಕೊಳ್ಳುವದಿಲ್ಲವೇ? ಸ್ವದೇಶಿಯನ್ನು ಕೊಳ್ಳಿರಿ ಎಂದು ಹೇಳುವುದಕ್ಕೆ ನಾವು ಅಡ್ಡಿ ಬರಬಹುದೇ? ಹಿಂದೂಸ್ಥಾನದಲ್ಲಿ ತಯಾರಾಗುತ್ತಿರುವ ಪದಾರ್ಥಗಳನ್ನು ಬಿಟ್ಟು ಬ್ರಿಟಿಷ್ ವಸ್ತುಗಳನ್ನು ಕೊಂಡುಕೊಂಡರೆ ನೀವು ದೇಶದ್ರೋಹಿಗಳಾಗುವಿರಿ. ಹಿಂದೂಸ್ಥಾನದ ಹೃದಯವು ಶಾಂತವಾಗಿದೆ. ಎಂದಾದರೊಂದು ದಿನ ಧೈರ್ಯಶಾಲಿಯಾದ ಬ್ರಿಟಿಷ್ ರಾಜಕಾರ್ಯಧುರಂಧರನು ಭರತಖಂಡಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟು, ಭರತಖಂಡವು ಬ್ರಿಟಿಷ್ ಕಿರೀಟದಲ್ಲಿ ಒಂದು ಪ್ರಕಾಶಮಾನವಾದ ವಜ್ರದಂತಿರುವಂತೆ ಮಾಡುವನೆಂದು ಆಶಿಸುವೆನು. ಆ ದಿನವು ಶೀಘ್ರದಲ್ಲಿಯೇ ಪ್ರಾಪ್ತವಾಗಲಿ."

ಅಹಮದಾಬಾದಿನಿಂದ ಒಂದು ವಿಚಿತ್ರವಾದ ವರ್ತಮಾನವು ಬಂದಿರುವುದು. ಪಾರ್ವತಿ ಉರುಫ್ ಪ್ರಭಾ ಎಂಬ 18 ವರ್ಷ ವಯಸ್ಸಿನ ಗುಜರಾತಿ ಹುಡುಗಿಯು ಜೈಸಿಂಗ್‌ರಾಂಛೋಡ್ ಎಂಬ ತರುಣನೊಡನೆ ಗಾಡಿಯಲ್ಲಿ ಹೋಗುತ್ತಿದ್ದಾಗ ಪೋಲೀಸರು ಅನುಮಾನದಿಂದ ಅವರಿಬ್ಬರನ್ನೂ ತಡೆದರು. ಹುಡುಗಿಯು ತಾನು ಜೈಸಿಂಗನಿಗೆ ನಿಶ್ಚಿತಳಾಗಿರುವೆನೆಂದು ಹೇಳಿದಳು. ಅಷ್ಟರಲ್ಲಿ ಆ ಹುಡುಗಿಯ ತಂದೆಯಾದ ಕೇಶವಲಾಲ ಭೀಮಜಿಯು ಅಲ್ಲಿಗೆ ಬಂದು ತನ್ನ ಮಗಳು ಜೈಸಿಂಗನಿಗೆ ನಿಶ್ಚಿತವಾಗಿರುವದು ನಿಜವೆಂದೂ, ಅವಳು ಇನ್ನಾರಿಗೂ ಮದುವೆಯಾಗಿಲ್ಲವೆಂದೂ ಹೇಳಿದನು. ಈ ಮಧ್ಯೆ ಮೋತೀಲಾಲಕಾಂಜಿಯೆಂಬವರೊಬ್ಬರು ಕೆಲವು ತಿಂಗಳುಗಳ ಹಿಂದೆ ತನ್ನ ಮಗನು ಪಾರ್ವತಿಯನ್ನು ಮದುವೆಯಾಗಿರುವನೆಂದೂ, ಆದುದರಿಂದ ಪಾರ್ವತಿಯನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದೂ ಫಿರ್ಯಾದುಮಾಡಿರುವರು. ಇತ್ತ ಹುಡುಗಿಯು ಕೋರ್ಟಿನಲ್ಲಿ ತಾನು ಜೈಸಿಂಗನಿಗೆ ನಿಶ್ಚಿತವಾಗಿರುವೆನೆಂದೂ ಇದುವರೆಗೆ ಬೇರೆ ಯಾರನ್ನೂ ಮದುವೆಯಾಗಿಲ್ಲವೆಂದೂ ಹೇಳಿಕೆಯನ್ನು ಕೊಟ್ಟಿರುವಳು. ಮ್ಯಾಜಿಸ್ಟ್ರೇಟರು ಇದರ ಸಂಬಂಧವಾದ ವಿದ್ಯಮಾನಗಳನ್ನು ಪರಿಶೀಲಿಸುವವರೆಗೆ ಪಾರ್ವತಿಯನ್ನು ಮಹಿಪಾತ್ರ ಅನಾಥಾಶ್ರಮದಲ್ಲಿರಿಸುವಂತೆ ಅಪ್ಪಣೆಮಾಡಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಡಿತಾಚಾರ್ಯಃ ಪ್ರಸೀದತು.

ಮುದೇನೂರು ಮಠಕ್ಕೆ ವಿಶೇಷಾಧಿಕಾರ.

(ಶ್ರೀ|| ವಾಗೀಶಶಿವಾಚಾರ್ಯ ಹಿರೇಮಠ, ಮುದೇನೂರು.)

ಈ ಮುದೇನೂರು ಮಠವು ಧಾರವಾಡ ಜಿಲ್ಲಾ ರಾಣಿಬೆನ್ನೂರು ತಾಲೂಕಿಗೊಳಪಟ್ಟಿದ್ದಾಗಿಯೂ, ಶಿಷ್ಯಪ್ರಶಿಷ್ಯರುಳ್ಳದ್ದಾಗಿಯೂ ಪಂಡಿತಾರಾಧ್ಯ ಪೀಠದ ಶಾಖಾಮಠವಾಗಿಯೂ ಇರುವುದು. ಆದರೆ ಕಾಲವೈಚಿತ್ರ್ಯದಿಂದ ಈ ಮಠವು ಬಹಳವಾಗಿ ಹಿಂದುಳಿಯುತ್ತ ಬಂದಿದೆ. ಪಟ್ಟಾಧಿಕಾರವು ಮಾತ್ರ ಬಹುದಿನಗಳಿಂದ ಕ್ರಮವಾಗಿಯೇ ಸಾಗುತ್ತ ಬಂದಿರುವುದೆಂದು ಸರ್ವರೂ ಅನುಭವಿಸುವ ವಿಷಯವಾಗಿದೆ. ನಮ್ಮ ಹಿಂದಿನ ಗುರುಗಳಾದ ವೀರೇಶ್ವರ ಶಿವಾಚಾರ್ಯಸ್ವಾಮಿಯವರೂ, ಶಾಂತವೀರಶಿವಾಚಾರ್ಯಸ್ವಾಮಿಯವರೂ, ದೇಶಕಾಲಾನುಗುಣವಾಗಿ ವಿದ್ಯಾವ್ಯಾಸಂಗವಿಲ್ಲದವರಾದರೂ ಶಿಷ್ಯೋದ್ಧಾರ ಕಾರ್ಯದಲ್ಲಿ ತಕ್ಕಮಟ್ಟಿಗೆ ಪ್ರಯತ್ನಿಸಿದುದರಿಂದ ಈ ಮಠದ ಸಮಸ್ತ ಶಿಷ್ಯರೂ ಗುರುಬೋಧೆಯನ್ನು ಹೊಂದಲು ಅನುಕೂಲವಾಗಿಲ್ಲವೆಂಬುದು ಶೋಚನೀಯವಾದ ಸಂಗತಿಯು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಶಿಷ್ಯೋದ್ಧಾರ ಮಾಡುವ ಕಾರ್ಯವು ಅತ್ಯಂತ ಗಹನವಾದುದೆಂಬುದನ್ನರಿತ ಪಂಚ ಜಗದ್ಗುರು ಪೀಠದವರು ತಮ್ಮ ತಮ್ಮ ಸಿಂಹಾಸನಾಂತರ್ಗತಗಳಾದ ಶಾಖಾಮಠಗಳಿಗೆ ಯೋಗ್ಯರಹದಾರಿಗಳನ್ನು ದಯಪಾಲಿಸಿ ಆಯಾಯ ಮಠಾಧೀಶ್ವರರಿಂದ ವೀರಶೈವ ಸಮಾಜೋದ್ಧಾರ ಕಾರ್ಯವನ್ನು ನೆರವೇರಿಸುತ್ತಿರುವುದು ಸಮಸ್ತ ವೀರಶೈವರಿಗೂ ಆನಂದದಾಯಕವಾದ ಸಂಗತಿಯಾಗಿದೆ.

ನಮ್ಮ ಗುರುಗಳಾದ ಶ್ರೀ ಜಗದ್ಗುರು ಸೂರ್ಯಸಿಂಹಾಸನಾಧೀಶ್ವರ ನಾಗಲೂಟಿ ಭಕ್ತವೃತ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಸದರಿ ಮುದೇನೂರು ಮಠವು ಸೂರ್ಯಸಿಂಹಾಸನಕ್ಕೆ ಸೇರಿರುವ ಶಾಖಾಮಠವೆಂಬುದನ್ನು ದಿವ್ಯಚಕ್ಷುವಿನಿಂದ ಕಂಡು ಈ ಮಠಕ್ಕೆ ಯೋಗ್ಯಗಳಾದ ಬಿರುದುಗಳನ್ನೊಳಗೊಂಡ ರಿಕಾರ್ಡ ಒಂದನ್ನು, ಧಾರವಾಡ ಜಿಲ್ಲೆಯಲ್ಲಿ ಶ್ರೀ ಸೂರ್ಯಸಿಂಹಾಸನದ ಶಾಖಾಧಿಕಾರವನ್ನು ವಹಿಸಿಕೊಂಡು ಸಂಚರಿಸಬೇಕಾಗಿ ಅಧಿಕಾರ ಪತ್ರಿಕೆಯೊಂದನ್ನೂ ಪರಮ ಕೃಪೆಯಿಂದ ಅನುಗ್ರಹಿಸಿರುವುದಕ್ಕಾಗಿ ಅತ್ಯಂತ ಪ್ರೇಮದಿಂದಲೂ ಭಕ್ತಿಯಿಂದಲೂ ಗ್ರಹಿಸಿರುವೆನು. ಸಮಸ್ತ ವೀರಶೈವ ಜನಾಂಗದ ಅವಗಾಹನೆಗಾಗಿ ಅವುಗಳ ಯಥಾ ನಕಲನ್ನು ಈ ಕೆಳಗೆ ವಿವರಿಸುತ್ತೇನೆ.—

ಶ್ರೀ ಜಗದ್ಗುರು ಮಲ್ಲಿಕಾರ್ಜುನಲಿಂಗೋದ್ಭವ ಪಂಡಿತಾರಾಧ್ಯಃ ಪ್ರಸೀದತು.
(ಇಲ್ಲಿ ಲಿಂಗೋದ್ಭವಮೂರ್ತಿಯದೆ)
(ಇಲ್ಲಿ ಸಂಸ್ಥಾನದ ಮೊಹರು ಇದೆ) ಶಿವಾಯಬಾಬು
ಗೆ. ನಂ. S.P.
32

ಶ್ರೀಮದ್ವೇದವೇದಾಂತಸಿದ್ಧಾಂತ ಪುರಾಣಾಗಮೇತಿಹಾಸ ಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮತ್ಪಂಡಿತಾಚಾರ್ಯ ಪರಂಪರಾಗತ ಶ್ರೀಮತ್ಸಾಕ್ಷಾತ್ (ಶ್ರೀಶೈಲಪರ್ವತ) ಶ್ರೀಗಿರಿರಾಜಸೂರ್ಯಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಭಕ್ತವೃತ್ತಿ ಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿನಾಂ ಸನ್ನಿಧಾನೇನ.
ಅಧಿಕಾರಸ್ಥಾನದಿಂದ.

ಪರಮಸದ್ಗುರುಪದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಛಿರೋರಾಯಮಾಣ ಕೇವಲಾಕ್ಷದೀಯಕಾರುಣ್ಯಾಮೃತಸರಸೀಮರಾಳೋಪಮಾನರಾದ ಬೆಂಬಾಯಿ ಪ್ರಸಿದ್ಧ ಧಾರವಾಡ ಜಿಲ್ಲಾ ರಾಣೀಬೆನ್ನೂರು ತಾಲೂಕುವಾರ್ ಗ್ರಾಮಾಂತರಗಳ ಸಮಸ್ತ ವೀರಶೈವ ಸಮಾಜದವರಿಗೂ, ವೀರಶೈವ ಮತಾನುಯಾಯಿಗಳಾದ ಸದ್ಭಕ್ತಾದಿಗಳವರಿಗೂ ಬರಸಿದ ಹುಕುಂ ಏನೆಂದರೆ—

ರಾಣೀಬೆನ್ನೂರು ತಾಲೂಕು ಪೈಕಿ ಮುದೇನೂರು ಗ್ರಾಮದಲ್ಲಿ ಈ ಮಹಾಪೀಠದ ಶಾಖಾಮಠಕ್ಕೆ ಒಳಪಟ್ಟ ಉಪಾಚಾರ್ಯರ ಪುತ್ರವರ್ಗದ ಬೃಹನ್ಮಠವಿದ್ದು ಈ ಮಠದ ಉತ್ತರಾಧಿಕಾರಿಗಳು ಪಟ್ಟಾಧ್ಯಕ್ಷರು ಶ್ರೀ ವಾಗೀಶಶಿವಾಚಾರ್ಯರು ಸದ್ವಂಶೀಯರಾಗಿಯೂ, ವಿದ್ಯಾವಿನಯಾದಿ ಲೌಕಿಕಪಾರಮಾರ್ಥ ಧರ್ಮಸುಧಾರಕರಾಗಿಯೂ ಆಚಾರವಿಚಾರಾದಿ ಧರ್ಮೋಪದೇಶದಲ್ಲಿ ಭಕ್ತಾದಿಗಳವರಿಗೆ ಭಕ್ತಿವಿಶ್ವಾಸ ಹುಟ್ಟಿಸುವದರಲ್ಲಿ ಗುರುಭಕ್ತಿ ಕ್ರಿಯಾಶೀಲ ವಂಶರಾಗಿಯೂ, ಶಿವಪೂಜಾಧುರೀಣ ಶಾಂತಮೂರ್ತಿಗಳಾಗಿರುತ್ತಾರೆಂಬುದು ಸನ್ನಿಧಿ ಸರ್ವಾಧಿಕಾರಿಯವರಿಗೆ ಬಾಣಾವರ ಮೊಕ್ಕಾಮಿನಲ್ಲಿ ಸಂದರ್ಶಿಸಿರುವದು. ಮತ್ತು ಇವರು ಪ್ರಸಿದ್ಧ ವಿದ್ಯಾಪೀಠವಾದ ಶ್ರೀ ಕಾಶೀಕ್ಷೇತ್ರದಲ್ಲಿ ಪ್ರೌಢವಿದ್ಯಾವ್ಯಾಸಂಗಿಗಳಾಗಿರುತ್ತಾರೆಂಬುದು ಸಹಾ ತಿಳಿಯಬಂದಿರುವದರಿಂದ ಇವರ ಬಗ್ಗೆ ಅಪ್ಪಣೆಮಾಡುವದೇನೆಂದರೆ—

ಈ ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷರು ವಾಗೀಶಶಿವಾಚಾರ್ಯರು ಶ್ರೀ ಜಗದ್ಗುರು ಪಂಚಪೀಠಾಧೀಶರ ಮಹಿಮಾತಿಶಯಗಳ ಮತ್ತು ಮಹಾಮತಸ್ಥಾಪನಾದಿ ವೃತ್ತಾಂತರಗಳನ್ನು ಪ್ರಕಾಶಪಡಿಸುವದರಲ್ಲಿ ಕರ್ತರಾಗಿರುವದರಿಂದಲೂ, ಈ ವಾಗೀಶಾಚಾರ್ಯಮೂರ್ತಿಯವರನ್ನು ಧಾರವಾಡಜಿಲ್ಲಾ ತಾಲೂಕು ವಾರ್ ಗ್ರಾಮಾಂತರಗಳಲ್ಲಿ ಧರ್ಮೋಪದೇಶಕರಾಗಿಯೂ, ಧರ್ಮಸಂಬಂಧಿ ಆಚಾರ ಬಾಬು, ಶಿವಾಯಬಾಬು, ಮೊಕದ್ದಮೆಗಳನ್ನು ಹಿಡಿದು ನ್ಯಾಯಪರಿಪಾಲನೆ ವಿಚಾರದಿಂದ ತೀರ್ಮಾನಿಸುವುದರಲ್ಲಿಯೂ, ದಂಡನಖಂಡನೆಗಳನ್ನು ವಿಧಿಸುವದರಲ್ಲಿಯೂ, ಮಹಾ ಸಂಸ್ಥಾನಕ್ಕೆ ವರದೀಮಾಡಲೂ ಮತ್ತು ಆ ಪೀಠಕ್ಕೆ ಸಲ್ಲುವ ವರ್ಷಾಶನ ಕಾಣಿಕಾವಗ್ಗೈರೆ ವಸೂಲಾದಿ ಖಾನೇಷುಮಾರಿ ತೆಗೆಯುವದಕ್ಕೂ, ವೀರಶೈವಮತಾನುಯಾಯಿಗಳಾಗತಕ್ಕವರಿಗೆ ವಿಧಿಪ್ರಕಾರ ಲಿಂಗಧಾರಣಾದಿ ದೀಕ್ಷಾ ಸಂಸ್ಕಾರಮಾಡಿಸುವದಕ್ಕೂ, ಧರ್ಮವಿರುದ್ಧರಾದವರಿಗೆ ಬಹಿಷ್ಕರಿಸುವದಕ್ಕೂ ಸಹಾ ಅಧಿಕಾರ ಅಪ್ಪಣೆಮಾಡಿದೆ.

ಇವರ ಸಹಕ್ಯಾಂಪ ಚಾಲನಾ ಬಗ್ಗೆ ಬೆಳ್ಳಿ ಬೆತ್ತ, ಹಿತ್ತಾಳೆ ಬೆತ್ತ, ಬೆಳ್ಳಿಕಟ್ಟಿನ ಬೆತ್ತಗಳು ೨, ಶಾಖಾಧಿಕಾರ ಮೊಹರು ೧ ಗೆ ರಜಿಸ್ಟರ್, ಡೈರಿ, ವಗೈರೆ ಸಂಸ್ಥಾನ ದಸ್ತೈರಿಸಿಕೊಟ್ಟಿರುತ್ತೆ. ಸದರಿ ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷರು ನಿಮ್ಮ ಪ್ರಾಂತ್ಯ ಗ್ರಾಮಾಂತರಗಳಿಗೆ (ಸಂಚಾರ) ಸಹಕ್ಯಾಂಪ ಬಂದಲ್ಲಿ ಸಂಸ್ಥಾನ್ ಗೌರವಪದ್ಧತಿಯಂತೆ ಸನ್ಮಾನಿಸಿ ನಡೆಸುಕೊಳ್ಳತಕ್ಕದ್ದೆಂದು ಮಹಾ|| || ಸಂಸ್ಥಾನ ಹುಕುಂ ಆಗಿರುತ್ತೆ. ಗ್ರಹಿಸುವದು. ಬ. ತಾರೀಖು 11 ನೇ ಮಾಹೆ ಆಗಸ್ಟ ಸನ್ 1932 ಇಸ್ವಿ—

ಮೊಕ್ಕಾಂ ದಿಜಾರಗಾಸಂಸ್ಥಾನ್,
ಗುಂತಕಲ್ ತಾಲೂಕು ಗುತ್ತಿ,
ಜಿ|| ಅನಂತಪುರಂ.

R. C. Aradhyaswami, Hiremutt.
ಶ್ರೀ ಜಗದ್ಗುರು ಸಂಸ್ಥಾನ್ ಸರ್ವಾಧಿಕಾರೀ.

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಲಿಂಗೋದ್ಭವ ಪಂಡಿತಾರಾಧ್ಯಃ ಪ್ರಸೀದತು.
(ಇಲ್ಲಿ ಲಿಂಗೋದ್ಭವಮೂರ್ತಿಯದೆ)
(ಇಲ್ಲಿ ಸಂಸ್ಥಾನ ಮೊಹರು ಇದೆ) ಶಿವಾಯಬಾಬು
ಗೆ. ನಂ S.P.
32

ಶ್ರೀಮದ್ವೇದವೇದಾಂತಸಿದ್ಧಾಂತ ಪುರಾಣಾಗಮೇತಿಹಾಸ ಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮತ್ಪಂಡಿತಾಚಾರ್ಯ ಪರಂಪರಾಗತ ಶ್ರೀಮತ್ಸಾಕ್ಷಾತ್ (ಶ್ರೀಶೈಲಪರ್ವತ) ಶ್ರೀಗಿರಿರಾಜಸೂರ್ಯಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಭಕ್ತವೃತ್ತಿ ಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿನಾಂ ಸನ್ನಿಧಾನೇನ.
ಅಧಿಕಾರಸ್ಥಾನದಿಂದ.

ಪರಮಸದ್ಗುರುಪದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಛಿರೋರಾಯಮಾಣ ಕೇವಲಾಕ್ಷದೀಯಕಾರುಣ್ಯಾಮೃತಸರಸೀಮರಾಳೋಪಮಾನರಾದ ಧಾರವಾಡ ಜಿಲ್ಲಾ ರಾಣೀಬೆನ್ನೂರು ತಾಲೂಕು ಮುದೇನೂರು ಬೃಹನ್ಮಠದ ಪಟ್ಟಾಧ್ಯಕ್ಷ ವಾಗೀಶ ಶಿವಾಚಾರ್ಯರಿಗೆ ಬರೆಯಿಸಿದ ನಿರೂಪವೇನೆಂದರೆ—ನೀವು ತಾ|| 13-11-31 ನೇ ಇಸ್ವಿ ಮದ್ರ್ಯಾಂನಲ್ಲಿ ಏಜಂಟರವರ ಮೂಲಕ ಅರಿಕೆ ಮಾಡಿಕೊಂಡ ಲೇಖ ಮೂಲಕವಾಗಿಯೂ ಸಹ ಬಿನ್ನೈಸಿಕೊಂಡ ಮನವಿಯು ಜಾಹೀರಾಯಿತು. ನಿಮ್ಮ ಮುದೇನೂರು ಬೃಹನ್ಮಠವು ಈ ಮಹಾಪೀಠದ ಶಾಖಾ ಸೂತ್ರಾಧಿಕಾರಕ್ಕೆ ಒಳಪಟ್ಟ ಪುತ್ರವರ್ಗದ ಉಪಾಚಾರ್ಯರ ಸದ್ವಂಶೀಯ ಪುರಾತನ ಮಠವಾಗಿರುವದರಿಂದಲೂ, ನೀವು ಪ್ರಾಪ್ತವಯಸ್ಕರಾಗಿ ವಿದ್ಯಾ ವಿನಯಾದಿ ಸದ್ಗುಣಗಳಿಂದ ಆಚಾರನಿಷ್ಠರಾಗಿ ಶಿಷ್ಯಪ್ರಶಿಷ್ಯಾದಿಗಳವರಿಗೆ ಧರ್ಮೋಪದೇಶದಿಂದ ಸುಧಾರಿಸುವದರಲ್ಲಿ ಶ್ರೀ ಜಗದ್ಗುರು ಪಂಚಪೀಠಾಧೀಶರಾದ ಮಹಾಮತಸ್ಥಾಪಕರ ವಾಂಛಲ್ಯಪರರಾಗಿರುವದರಿಂದ ಧಾರವಾಡ ಜಿಲ್ಲಾಕ್ಕೆ ತಾ|| 11-8-32 ಲಾಗಾಯ್ತು ಧರ್ಮೋಪದೇಶಕರನ್ನಾಗಿ ಮುಕರರ್ ಮಾಡಿ ಮಹಾ|| || ಸಂಸ್ಥಾನದಿಂದ ಇದರೊಂದಿಗೆ ಅಧಿಕಾರದ ಸನ್ನದಪತ್ರವನ್ನು ದಯಪಾಲಿಸೋಣವಾಗಿರುತ್ತೆ.

ನಿಮ್ಮ ಮಠಕ್ಕೆ ಸೇರಿದ ಸ್ಥಲ ಬಾಜು ಗ್ರಾಮಾಂತರಗಳ ವೀರಶೈವಮಂಡಲಿಯವರು ವಿಶಿಷ್ಟಧರ್ಮಸಂಬಂಧಿ ಪುರೋಭಿವೃದ್ಧಿಯಲ್ಲಿ ನಿಮ್ಮ ಅನುಜ್ಞೆಯಂತೆ ವರ್ತಿಸುವದರಲ್ಲಿಯೂ, ನಿಮ್ಮ ಇಚ್ಛಾನುಸಾರ ವೈದಿಕಧರ್ಮದಲ್ಲಿ ನಡೆಯತಕ್ಕ ನಿಮ್ಮ ಮಠದ ವಂಶೀಕರಿಗೆ ಪಾರೋಹಿತ್ಯಾದಿ ಕಾರ್ಯಕ್ರಮಗಳಿಗೆ ನೇಮಿಸುವದಕ್ಕೂ, ನಿಮಗೆ ಸಂಪೂರ್ಣ ಹಕ್ಕಾಗಿ ಇರುತ್ತೆ. ನಿಮ್ಮ ಸ್ಥಲ ಬಾಜುದಲ್ಲಿ ವೀರಶೈವಮಂಡಲಿ ಭಕ್ತಾದಿಗಳು ಧರ್ಮಸುಧಾರಣೆಯಲ್ಲಿ ವ್ಯತಿರೇಕವಾಗಿ ನಡೆಯುತ್ತಾರೆಂದು ಕಂಡುಬಂದವರಿಗೂ, ನಿಮ್ಮ ಅನುಜ್ಞೆ ವಿನಾ ನಡೆಯತಕ್ಕವರಿಗೂ, ದಂಡನಖಂಡನೆಗಳಿಂದ ಬಹಿಷ್ಕರಿಸುವದರಲ್ಲಿ ಮಹಾ|| || ಸಂಸ್ಥಾನಕ್ಕೆ ವರದೀ ಮಾಡಲು ರಿಕಾರ್ಡ ಕ್ರಮದ ವಿಚಾರಕ್ಕಾರಾಗಿಯೇ ಇರುತ್ತೀರಿ.

ಪ್ರಾಚೀನಪದ್ಧತಿಯಂತೆ ನಿಮ್ಮ ಮಠದ ಪುರೋಭಿವೃದ್ಧಿಗೆ ನಿಮ್ಮ ಮಠದ ವಂಶಪಾರಂಪರ್ಯವಾದ ಪುತ್ರವರ್ಗದ ನಿಬಂಧನಾ ಮೇರೆ ನಿಮ್ಮ ಉತ್ತರಾಧಿಕಾರವನ್ನು ನೆರವೇರಿಸುವದರಲ್ಲೂ, ನಿಮಗೆ ಸ್ವತಂತ್ರ ವಿತಕಕ್ಕದ್ದಾಗಿರುತ್ತೆ. ನಿಮ್ಮ ಮಠದ ಗೌರವ ಪ್ರತಿಷ್ಠೆಗಳಿಗೆ ತಕ್ಕಂತೆ ಪಾಲಕಿ, ಮ್ಯಾನಾ, ಛತ್ರಿ, ಚಾಮರ, ಕಾವೀನಿಶಾನ್ ಇತ್ಯಾದಿ ಉಪಾಚಾರ್ಯರ ಮಠಕ್ಕೆ ತಕ್ಕಷ್ಟು ಬಿರುದಾವಳಿಯಿಂದ ಸಂಚರಿಸಲು ಈ ಮಹಾ|| || ಪೀಠದಿಂದ ಸನ್ನಾಹಿತರಾದ ಶಾಖಾಧಿಕಾರಿಗಳಾಗಿರುತ್ತೀರಿ. ನಿಮ್ಮ ಮಠದ ಪುರೋಭಿವೃದ್ಧಿಯ ಗೌರವಕ್ಕಾಗಿ ಒಂದು ಬೆಳ್ಳಿ ಬೆತ್ತವೂ,

ವಸಗಳವರೆಗೆ ಪೆರೋಲಿನಮೇಲೆ ಬಿಡುಗಡೆ ಹೊಂದಿರುತ್ತಾರೆ.

ಧಾರವಾಡ ಜಿಲ್ಲಾ ರಾಜಕೀಯ ಸಮ್ಮೇಲನದ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟು ಹಿಂಡಲಗಿ ಜೈಲಿನಲ್ಲಿಡಲ್ಪಟ್ಟಿದ್ದ 9 ಜನ ಕಾಂಗ್ರೆಸ್ ಮುಖಂಡರು ಕಳೆದ ೧೬ ನೇ ತಾರೀಖಿನ ದಿವಸ ಬಿಡುಗಡೆಮಾಡಲ್ಪಟ್ಟರು.

ಕಾನೂನು ಭಂಗದ ಚಳವಳಿಯ ಸಂಬಂಧವಾಗಿ ಜುಲೈ ತಿಂಗಳಲ್ಲಿ ಬಂಗಾಳಾದಲ್ಲಿ 3190 ಜನ ಗಂಡಸರೂ 203 ಜನ ಸ್ತ್ರೀಯರೂ ಕಾರಾಗೃಹವಾಸಿಗಳಾದರು.

ಮುಂಬಯಿಯ ಸುಪ್ರಸಿದ್ಧ ಮಾರ್ವಾಡಿ ಕೋಟ್ಯಾಧೀಶ್ವರರಾದ ರಾವ್‌ಬಹದ್ದೂರ್ ಗೋವಿಂದಲಾಲ ಶಿವಲಾಲ ಮೋತೀಲಾಲರವರ ಪುತ್ರರಾದ ಮಂ ಲಾಲ ಗೋವಿಂದಲಾಲ ಪಿಲ್ಲಿಯವರು ಇದೇ ಆಗ 25 ನೇ ತಾರೀಖು ರಾತ್ರಿ ಸ್ಪೆಷಲ್ ಪವರ್ಸ್ ನೆನ್ಸಿನ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟರು. ಅದೇ ದಿವಸ ಆರ್ಡಿನೆನ್ಸಿನ ಪ್ರಕಾರವಾಗಿ ಮತ್ತೊಬ್ಬ ಮುಖಂಡರೂ, ಪಿಕೆಟಿಂಗಿಗಾಗಿ ಇಬ್ಬರು ಸ್ವಯಂಸೇವಕರೂ ದಸ್ತಗಿರಿಮಾಡಲ್ಪಟ್ಟರು.

ಅಂಕೋಲಾ ತಾಲೂಕು ಕಾಂಗ್ರೆಸ್ ಕಚೇರಿಯು ಪತ್ತೆಮಾಡುವದರ ಸಲುವಾಗಿ ಪೋಲೀಸರು 8 ಗಳುಗಳಿಂದಲೂ ಶ್ರಮಪಡುತ್ತಿದ್ದು ಈಚೆಗೆ ಅದು ಡಮಲೆ ಅರಣ್ಯದಲ್ಲಿರುವದೆಂಬ ವರ್ತಮಾನವನ್ನು ಪೋಲೀಸರು ಅಲ್ಲಿಗೆ ಹೋಗಿ ಕಚೇರಿಯನ್ನು ಪ್ತಮಾಡಿ, ಅಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಇದೇ ಆಗಸ್ಟ್ 24 ನೇ ತಾರೀಖಿನ ದಿವಸ ಸದಿ ದಿನಲ್ಲಿ ತಾಲೂಕು ರಾಜಕೀಯ ಸಮ್ಮೇಲನವನ್ನು ಸುವ ಪ್ರಯತ್ನವನ್ನು ಮಾಡಿದಾಗ ಪೋಲೀಸರು ಜನರನ್ನು ದಸ್ತಗಿರಿಮಾಡಿ, ಸ್ವಲ್ಪಹೊತ್ತಿನನಂತರ ಕ್ಕರು ಮತ್ತು ಇನ್ನಿಬ್ಬರು ಮುಖಂಡರ ಹೊರತು ವರನ್ನೆಲ್ಲಾ ಬಿಡುಗಡೆಮಾಡಿದರು.

ಇದೇ ಆಗಸ್ಟ್ 26 ನೇ ತಾರೀಖಿನ ದಿವಸ ಮುಂಬ ಯ ಮಂಗಲದಾಸ ಮಾರ್ಕೆಟ್ಟಿನ ಬಳಿ ಪಿಕೆಟಿಂಗ್ ಡಿದ ಇಬ್ಬರು ದೇಶಸೇವಿಕೆಯರನ್ನು ಪೋಲೀಸರು ಗಿರಿಮಾಡಿದರು.

ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾದ ಡಾಕ್ಟರ್ ಲೂರರವರು ಲೈಲ್‌ಪುರದ ಪ್ರಾಂತಿಕರಾಜಕೀಯಸಮ್ಮೇಲನದ ಅಧ್ಯಕ್ಷರಾಗಲು ಹೋಗಿದ್ದಾಗ ದಸ್ತಗಿರಿ ಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರು ಡಾ|| ಕಿಚಲು ಗೆ ೨ ವರ್ಷ ಕಠಿಣಶಿಕ್ಷೆಯನ್ನೂ ೨೫೦ ರೂ. ಜುಲ್ಮಾನೆಯನ್ನೂ ವಿಧಿಸಿದರು.

ಕಾಶಿಯ ಸುಪ್ರಸಿದ್ಧ ಬಾಬುಶಿವಪ್ರಸಾದಗುಪ್ತರು ೨೪ ಗಂಟೆಗಳೊಳಗಾಗಿ ಕಾಶಿಯನ್ನು ಬಿಡದ್ದರಿಂದ ಮ್ಯಾಜಿಸ್ಟ್ರೇಟರು ಸದರಿಯವರಿಗೆ ೧ ವರ್ಷ ಕಠಿಣಶಿಕ್ಷೆ ಮತ್ತು ೧೦೦ ರೂ. ಗಳ ದಂಡವನ್ನು ವಿಧಿಸಿದರು.

'ಎ' ತರಗತಿಯ ರಾಜಕೀಯ ಕೈದಿಗಳಾಗಿ ನೈನಿಜೈಲಿನಲ್ಲಿರುವ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಮತ್ತು ಶ್ರೀಮತಿ ಕೃಷ್ಣಾನೆಹರೂರವರು (ಪಂಡಿತ ಮೋತಿಲಾಲನೆಹರೂರವರ ಪುತ್ರಿಯರು) ಸರಕಾರದವರಿಂದ ಮಿ|| ಆರ್. ಎಸ್. ಪಂಡಿತರವರ ಮೇಲೆ ಹಾಕಲ್ಪಟ್ಟಿರುವ ನಿರ್ಬಂಧಗಳ ನಿಷೇಧಾರ್ಥವಾಗಿ ತಾವು ಇನ್ನು ಮುಂದೆ 'ಎ' ತರಗತಿಯ ರಿಯಾಯಿತಿಗಳನ್ನು ಅನುಭವಿಸುವದಿಲ್ಲವೆಂದು ಹೇಳಿರುತ್ತಾರೆ.

ಇದೇ ಆಗಸ್ಟ್ 24 ನೆಯ ತಾರೀಖಿನ ದಿವಸ ಂಬಯಿಯಲ್ಲಿ ಹಿಂದುಗಳು ಗೋಕುಲಾಷ್ಟಮಿ ಸಂಬಂಧವಾದ ಮೆರವಣಿಗೆಯಲ್ಲಿ ಪೋ|| ಕಮಿಷನರ ಗೆ ವಿರುದ್ಧವಾಗಿ ಲಾಠಿಗಳನ್ನು ಹಿಡಿದುಕೊಂಡು ಗುತ್ತಿದ್ದರೆಂಬ ಕಾರಣದಮೇಲೆ ಪೋಲೀಸರು 12 ಹಿಂದುಗಳನ್ನು ದಸ್ತಗಿರಿಮಾಡಿದರು. ಇದೇ ಸಂ ವಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಎರಡು ಪಿನ ಜನರಿಗೂ, ಪೋಲೀಸರಿಗೂ ಹೊಡೆದಾಟ 3 ಜನ ಕಾನ್‌ಸ್ಟೆಬಲರಿಗೂ, ಕೆಲವು ಜನರಿಗೂ ಯಗಳಾದವು. ಒಬ್ಬನು ಮೃತಪಟ್ಟನು. ಪೋಲೀ 80 ಜನರನ್ನು ದಸ್ತಗಿರಿಮಾಡಿರುತ್ತಾರೆ.

ವರ್ತಮಾನಸಂಗ್ರಹ

ಮದರಾಸ್ ಸರಕಾರದ ಹೆಂಡದ ವರಮಾನವು ಶೇಕಡಾ 52 ರಷ್ಟು ಹೆಚ್ಚಿರುವುದಂತೆ!

ಕರಾಚಿಯಲ್ಲಿ ರಾತ್ರಿಯವೇಳೆ ದೀಪವಿಲ್ಲದೆ ಬೈಸಿಕಲ್‌ಗಳ ಮೇಲೆ ಸವಾರಿಮಾಡುತ್ತಿದ್ದ 500 ಜನರನ್ನು ಪೋಲೀಸರು ದಸ್ತಗಿರಿಮಾಡಿರುತ್ತಾರೆ.

ಕಲ್ಕತ್ತೆಯ ಬಳಿ ಒಂದು ಸರ್ಪವು ಮೊಟ್ಟೆಗಳಿಗೆ ಬದಲಾಗಿ ಮರಿಗಳನ್ನೇ ಹಾಕಿರುವದಂತೆ! ಈ ವಿಚಿತ್ರವನ್ನು ನೋಡಲು ಜನರು ತಂಡೋಪತಂಡವಾಗಿ ಬರುತ್ತಿರುವರು.

ಪ್ಯಾರಿಸ್‌ನಗರದಲ್ಲಿ ಒಂದು ಮಾತನಾಡುವ ಗಡಿಯಾರವು ಸ್ಥಾಪಿಸಲ್ಪಡುತ್ತಿರುವುದು. ಇದು ಕೇಳಿದವರಿಗೆ ಸರಿಯಾದ ಕಾಲವನ್ನು ಟೆಲಿಫೋನ ಮೂಲಕವಾಗಿ ತಿಳಿಸುವದು. ಮಾತನಾಡುವ ಚಲನಚಿತ್ರದ ತತ್ವದಮೇಲೆ ಇದನ್ನು ತಯಾರಿಸಿರುವರಂತೆ!

ಲಂಡನ್ನಿನ ಸ್ಕಾ ರೇ ಲೈಟ್ ಕಂಪೆನಿಯವರು 'ಸ್ಕಾರೇ ಲೈಟ್' ಎಂಬ ಹೊಸವಿಧವಾದ ಗಾಜನ್ನು ಕಂಡುಹಿಡಿದಿರುತ್ತಾರೆ. ಇದು ಕಾಗದದಂತಿರುವುದು. ಗಾಜಿಗಿಂತಲೂ ತೂಕದಲ್ಲಿ ಕಡಿಮೆ, ಕೈಯಿಂದ ಬಗ್ಗಿಸಬಹುದು ಮತ್ತು ಕತ್ತರಿಯಿಂದ ಕತ್ತರಿಸಬಹುದು.

ಆಕ್ಸ್‌ಫರ್ಡಿನ ಕ್ಲಾರೆಂಡ ಲ್ಯಾಬೊರೇಟರಿಯಲ್ಲಿ ಒಂದು ಎಲೆಕ್ಟ್ರಿಕ್ ಗಂಟೆಯಿರುವುದು. ಇದು 92 ವರ್ಷಗಳಿಂದ ಒಂದೇ ಸಮನೆ ಬಾರಿಸುತ್ತಲೇ ಇರುವದು. ಇದು 1840 ನೇ ಇಸವಿಯಲ್ಲಿ 'ಜೇರಿಂಗ್ ಕ್ಯಾಸಿಸ' ಒಬ್ಬ ಯಂತ್ರಗಾರನಿಂದ ತಯಾರಿಸಲ್ಪಟ್ಟಿತು.

ಮುಜಫರ್‌ಪುರ ಡಿಸ್ಟ್ರಿಕ್ಟಿನಲ್ಲಿ ಸಕ್ರಾ ಠಾಣಾಕ್ಕೆ ಸೇರಿದ ಸಕ್ರಫರೀದ್ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು 3 ಗಂಡುಮಕ್ಕಳನ್ನು ಹೆತ್ತಿರುವಳು. ಮೊದಲನೆಯ ಮಗುವು ಜನಿಸಿದ 12 ಗಂಟೆಗಳನಂತರ ಎರಡನೆಯ ಮಗುವೂ, ಮತ್ತೆ 12 ಗಂಟೆಗಳನಂತರ ಮೂರನೆಯ ಮಗುವೂ ಜನಿಸಿರುವುವು.

ಲಂಡನ್ನಿನಿಂದ ಕಲ್ಕತ್ತೆಗೆ ಮೋಟಾರಿನಲ್ಲಿ ಹೊರಟಿದ್ದ ಕ್ಯಾಪ್ಟನ್ ಯೇಟ್ಸ್ ಬೆಯರ್ಡ್‌ರವರು ಇದೇ ಆಗಸ್ಟ್ 22 ನೆಯ ತಾರೀಖು ಸಾಯಂಕಾಲ ಕಲ್ಕತ್ತೆಯನ್ನು ತಲುಪಿದರು. ಇವರು ದಿನ 1 ಕ್ಕೆ ಸುಮಾರು 230 ಮೈಲುಗಳ ಮೇರೆ 44 ದಿವಸಗಳಲ್ಲಿ 8600 ಮೈಲುಗಳ ಪ್ರಯಾಣವನ್ನು ಮಾಡಿರುತ್ತಾರೆ.

ಬ್ರಿಟಿಷ್‌ಸರಕಾರದವರು ಅಮೇರಿಕಾದೇಶಕ್ಕೆ ಕೊಡಬೇಕಾಗಿರುವ 5,00,00,000 ಡಾಲರುಗಳಿಗೆ ಹೆಚ್ಚು ಅವಧಿಯನ್ನು ಕೊಡುವದಕ್ಕಾಗುವದಿಲ್ಲವೆಂದು ಅಮೇರಿಕಾದವರು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಬ್ರಿಟಿಷರು ಈ ಸಾಲವನ್ನು ಇದೇ ಆಗಸ್ಟ್ 27 ನೆಯ ತಾರೀಖಿನ ದಿವಸ ಸಲ್ಲಿಸಬೇಕಾಗಿತ್ತು.

ರಷ್ಯಾದೇಶದ ರಾಜಧಾನಿಯಾದ ಮಾಸ್ಕೋ ನಗರದ ಒಬ್ಬ ಶಾಸ್ತ್ರಜ್ಞನು 12 ವರ್ಷಗಳಿಂದಲೂ ಶೋಧ ಮಾಡಿ ಎರಡು ಸಣ್ಣ ರೆಕ್ಕೆಗಳನ್ನು ನಿರ್ಮಿಸಿರುವನು. ಇವುಗಳ ಸಹಾಯದಿಂದ ಮನುಷ್ಯನು ಅಂತರಿಕ್ಷದಲ್ಲಿ ಒಂದು ಮೈಲಿಯ ಎತ್ತರದಲ್ಲಿ ಸ್ವಲ್ಪವೂ ಆಯಾಸವಿಲ್ಲದೆ ಪಕ್ಷಿಗಳಂತೆ ಹಾರಾಡಬಹುದಂತೆ!

ಶಾಂಘೈಪಟ್ಟಣದಲ್ಲಿರುವ ಬಿಲ್ ಎಂಬ ಅಮೇರಿಕಾ ದೇಶದವನೊಬ್ಬನು ತಾನು ಇನ್ನು ಸ್ವಲ್ಪ ದಿವಸಗಳಲ್ಲಿಯೇ ಅಲ್ಲಿಯ ಉದ್ಯಾನವನದಲ್ಲಿರುವ ಬಾವುಟದ ಕಂಬದ ಮೇಲೆ 78 ದಿವಸಗಳವರೆಗೆ ವಾಸಮಾಡುವೆನೆಂದು ಹೇಳುತ್ತಿರುವನು. ಈ ವರ್ತಮಾನವು ಚೀಣಾ ದೇಶೀಯರಲ್ಲಿ ಅತ್ಯಾಶ್ಚರ್ಯವನ್ನುಂಟುಮಾಡಿರುವದು.

ಮುಂಬಯಿ ಸರಕಾರದ ಹೋಮ್ ಮತ್ತು ಜನರಲ್ ಮೆಂಬರರಾದ ಮಿ|| ಹಡ್ಸನ್‌ರವರು ದೇಹಾಲಸ್ಯದ ನಿಮಿತ್ತವಾಗಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ. ಚಕ್ರವರ್ತಿಯವರು ಇದನ್ನು ಅಂಗೀಕರಿಸಿ ಅವರ ಸ್ಥಾನಕ್ಕೆ ಚೀಫ್ ಸೆಕ್ರೆಟರಿಗಳಾಗಿದ್ದ ಮಿ|| ಆರ್. ಡಿ. ಬೆಲ್‌ರವರನ್ನು ನೇಮಿಸಿರುತ್ತಾರೆ.

ಧರ್ಮಾವರದ ಸಮೀಪದಲ್ಲಿರುವ ಕಮೂರಿನ ತಿಪ್ಪಣ್ಣನೆಂಬುವನು ಕಳೆದವರ್ಷ 150 ರೂ. ಗಳಿಗೆ ಒಂದು ಹೋರಿಯನ್ನು ಕೊಂಡುಕೊಂಡು ಅದರಿಂದ ಹೊಲವನ್ನು ಉಳುತ್ತಿದ್ದನು. ಈಚೆಗೆ ಆ ಹೋರಿಯು ಆಕಳವಾಗಿ ಹೊತ್ತಿಗೆ 1½ ಸೇರು ಹಾಲು ಕರೆಯುತ್ತಿರುವದಂತೆ! ಅನೇಕ ಜನರು ಆ ಆಕಳವನ್ನು ಪೂಜಿಸುತ್ತಿರುವರು.

ಪಾಲೀಮಾರ್ ಸಿಬ್‌ಪುರದಲ್ಲಿ (ಬಂಗಾಳಾ) ವಾಸವಾಗಿದ್ದ ಮಿ|| ಬಿ. ಡಬ್ಲ್ಯು. ವೈಟ್ ಎಂಬ ಆಂಗ್ಲೇಯ ಕಂಟ್ರಾಕ್ಟರವರು ಇದೇ ಆಗಸ್ಟ್ 24ನೆಯ ತಾರೀಖಿನ ದಿವಸ ರಾತ್ರಿ ಅವರ ಸ್ವಂತ ಬಂಗಲೆಯಲ್ಲಿ ಕೊಲ್ಲಲ್ಪಟ್ಟರು. ದರೋಡೆಯೇ ಈ ಕೊಲೆಗೆ ಮೂಲಕಾರಣವೆಂದು ಊಹಿಸಲ್ಪಟ್ಟಿದೆ. ಪೋಲೀಸರು ಅನುಮಾನದ ಮೇಲೆ ಇಬ್ಬರು ಆಳುಗಳನ್ನು ದಸ್ತಗಿರಿಮಾಡಿರುತ್ತಾರೆ.

ಇದೇ ಆಗಸ್ಟ್ 20 ನೇ ತಾರೀಖಿನ ದಿವಸ ಮುಂಬಯಿಯಿಂದ ಹೊರಟ "ಎಸ್. ಎಸ್. ಮಲೋಜಾ" ಎಂಬ ಮೇಲ್ ಸ್ಟೀಮರಿನಲ್ಲಿ 56,28,218 ರೂ. ಗಳ ಭಂಗಾರದ ಗಟ್ಟಿಗಳು ಇಂಗ್ಲೆಂಡಿಗೆ ರವಾನಿಸಲ್ಪಟ್ಟವು. ಇಂಗ್ಲೆಂಡ್ ದೇಶವು 'ಗೋಲ್ಡ ಸ್ಟ್ಯಾಂಡರ್ಡ'ನ್ನು ರದ್ದುಮಾಡಿದಂದಿನಿಂದ ಇಂಡಿಯಾದಿಂದ ಒಟ್ಟು 78,05,34,247 ರೂ. ಗಳ ಭಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿರುತ್ತದೆ.

ಬಾಗಲಕೋಟೆಯ ಹಿರೇಮಠದಲ್ಲಿ ಈ ತಿಂಗಳು 23 ನೆಯ ತಾರೀಖು ಸೋಮವಾರ ದಿವಸ ಶಿರೋಳ ಬೃಹನ್ಮಠಾಧ್ಯಕ್ಷ ವೇ|| ಪಂಚಾಕ್ಷರಶಾಸ್ತ್ರಿಗಳವರು 'ವೀರಶೈವ ಮತತತ್ವ' ಎಂಬ ವಿಷಯದ ಮೇಲೆ ಅಮೋಘವಾದ ಭಾಷಣಮಾಡಿದರೆಂದೂ ಇದರಿಂದ ಜಾತಿಸಾಂಕರ್ಯವೆಂಬ ಹೊಲಸನ್ನು ಹೊರಗೆ ಹಾಕಬೇಕೆಂಬ ಪರಿಣಾಮವಾಗಿ ಜನರಲ್ಲಿ ಜಾಗ್ರತೆಯಾಗತೊಡಗಿದೆ ಎಂದೂ ತಿಳಿದುಬರುತ್ತದೆ.

ಮುಂಬಯಿಯ ಒಬ್ಬ ಹಿಂದೂ ಗೃಹಸ್ಥನು ತನ್ನ ಇಬ್ಬರು ಪತ್ನಿಯರಿಗೂ ಉರಿಯುವ ಕೊಳ್ಳಿಯಿಂದ ಬರೆಗಳನ್ನು ಹಾಕಿದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟ್ ಬಂಗಲ್‌ವಾಲಾರವರು ಅಪರಾಧಿಗೆ 100 ರೂ. ಜುಲ್ಮಾನೆ ತಪ್ಪಿದರೆ 4 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು. ಅಪರಾಧಿಯು, ವ್ಯಭಿಚಾರಿಯೆಂಬ ಅನುಮಾನದಿಂದ ಒಬ್ಬಳಿಗೂ, ಈ ವಿಷಯವನ್ನು ತಿಳಿದಿದ್ದರೂ ತನಗೆ ತಿಳಿಸಲಿಲ್ಲವೆಂಬ ಕಾರಣದ ಮೇಲೆ ಮತ್ತೊಬ್ಬಳಿಗೂ ಬರೆ ಹಾಕಿದನಂತೆ!

ಮುಂಬಯಿಯ ಮಿ|| ಪಿ. ವಿ. ಕುಲಕರ್ಣಿ ಎಂಬ ಒಬ್ಬ ಹಿಂದೂ ಇಂಜನಿಯರು ಮಿಸ್ ಅಲೂ ಫಿರೋಜಷಾ ಎಂಬ ಪಾರ್ಶಿಯುವತಿಯನ್ನು ಮೋಹಿಸಿ. ಈರ್ವರೂ ಕೆಲವು ದಿವಸಗಳವರೆಗೆ ಒಂದೇ ಕಡೆಯಲ್ಲಿ ವಾಸಿಸುತ್ತಿದ್ದರು. ಯುವತಿಯ ಬಂಧುಗಳು ಇವರೀರ್ವರ ವಿವಾಹಕ್ಕೆ ಸಮ್ಮತಿಸದೆ ಅವರ ಆಶಯಕ್ಕೆ ವಿಘ್ನಪರಂಪರೆಗಳನ್ನುಂಟುಮಾಡಿದುದರಿಂದ ಮಿ|| ಕುಲಕರ್ಣಿಯವರು ಆ ತರುಣಿಯ ವಿಯೋಗದುಃಖವನ್ನು ತಡೆಯಲಾರದೆ ವಿಷಪಾನಮಾಡಿ ಆತ್ಮಹತ್ಯಮಾಡಿಕೊಂಡರಂತೆ!

ಇಂಗ್ಲೆಂಡಿನ ಪ್ರಸಿದ್ಧ ಗ್ರಂಥಕರ್ತರಾದ ಮಿ|| ಜಾರ್ಜ್ ಬರ್ನಾರ್ಡ್‌ಷಾರವರು 10,000 ಪೌಂಡುಗಳಿಗೆ ಒಂದು ಹೊಸ ಲೈಫ್ ಇನ್ಷ್ಯೂರೆನ್ಸ್ ಪಾಲಿಸಿಯನ್ನು ತೆಗೆದುಕೊಂಡಿರುವರು. ಅವರಿಗೆ ಈಗ 76 ವರ್ಷಗಳಾಗಿರುವುವು. ಇಷ್ಟು ವೃದ್ಧಾಪ್ಯದಲ್ಲಿ 'ಲೈಫ್ ಇನ್ಷ್ಯೂರ್' ಮಾಡಲು ಇದುವರೆಗೆ ಯಾವ ಕಂಪೆನಿಯವರೂ ಯಾರಿಗೂ ಅವಕಾಶ ಕೊಟ್ಟಿರಲಿಲ್ಲ! ಆದರೂ ಮಿ|| ಷಾರವರ ಪಾಲಿಸಿಯು ಸರ್ವೋತ್ತಮವಾದುದೆಂದು ಇನ್ಷ್ಯೂರೆನ್ಸ್ ಕಂಪೆನಿಯವರು ಅಭಿಪ್ರಾಯಪಟ್ಟಿರುವರು.

ಮಹಾತ್ಮ ಗಾಂಧಿಯವರು ಕೆಲವು ದಿವಸಗಳಿಂದ ಆಡಿನ ಹಾಲನ್ನೂ ಉಪ್ಪನ್ನೂ ಬಿಟ್ಟು, ರೊಟ್ಟಿಯನ್ನೂ ಖರ್ಜೂರವನ್ನೂ ನೀರಿನಲ್ಲಿ ನೆನೆಸಿ ಬಾದಾಮಿಯೊಡನೆ ಸೇವಿಸುತ್ತಿದ್ದರು. ಇದರಿಂದ ಅವರ ತೂಕವು ಒಂದು ತಿಂಗಳಲ್ಲಿ 94 ಪೌಂಡುಗಳಿಂದ 82 ಪೌಂಡುಗಳಿಗೆ ಇಳಿದಿದ್ದುದರಿಂದ ಮಹಾತ್ಮರು ಜೈಲ್ ಸೂಪರಿಂಟೆಂಡೆಂಟರವರ ಕೋರಿಕೆಯ ಮೇಲೆ, ಪುನಃ ಆಡಿನ ಹಾಲನ್ನು ತೆಗೆದುಕೊಳ್ಳಲು ಪ್ರಾರಂಭಿಸಿರುವರು. ಇದರಿಂದ ಅವರ ತೂಕವು ಪುನಃ ಹೆಚ್ಚುತ್ತಿರುವದು. ಮಹಾತ್ಮರು ಸದಾ ನೂಲುವುದು ಮತ್ತು ಓದುವುದು ಇವೆರಡರಲ್ಲಿಯೇ ಕಾಲಕಳೆಯುತ್ತಿರುವರು. ಅವರಿಗೆ ಅಮೇರಿಕೆಯಿಂದ ಅನೇಕ ಪತ್ರಗಳು ಬರುತ್ತಿರುವುವು. ಬಹುದೂರದಲ್ಲಿರುವ ಆ ದೇಶದ ಮಿತ್ರರು ಕೇಳುವ ವಿಚಿತ್ರ ಪ್ರಶ್ನೆಗಳಿಗೆ ಉತ್ತರ ಕೊಡುವುದೆಂದರೆ ಮಹಾತ್ಮರಿಗೆ ಬಹಳ ಆನಂದವಂತೆ!

ಜರ್ಮನಿಯಲ್ಲಿ ಉಂಟಾಗಿರುವ ರಾಜಕೀಯ ಕ್ರಾಂತಿಯ ಸಂಬಂಧದಲ್ಲಿ 5 ಜನ ನಾಜಿಪಕ್ಷದ ಕ್ರಾಂತಿಕಾರರು ಮರಣದಂಡನೆಗೆ ಗುರಿಯಾಗಿರುವರು. ಕಮ್ಯೂನಿಸ್ಟ್‌ಗುಂಪಿನ ಮುಖಂಡರಾದ ಹೆರ್‌ಹಿಟ್ಲರ್‌ರವರು ಇದನ್ನು ಅತ್ಯುಗ್ರವಾಗಿ ಖಂಡಿಸಿ ಸದರಿ 5 ಜನ ನಾಜಿಗಳ ಮೇಲಿನ ಶಿಕ್ಷೆಯನ್ನು ವಜಾಮಾಡದಿದ್ದರೆ ಅಥವಾ ಅವರ ಮೇಲಿನ ಆಪಾದನೆಯ ಸಂಬಂಧವಾಗಿ ನ್ಯಾಯಸ್ಥಾನದಲ್ಲಿ ಪುನರ್ವಿಚಾರಣೆ ಮಾಡದಿದ್ದರೆ ಸರ್ಕಾರದಮೇಲೆ ಯುದ್ಧವನ್ನು ಹೂಡುವದಾಗಿ ನೋಟೀಸುಕೊಟ್ಟಿರುವರು. ಇತ್ತ ಸರ್ವಾಧಿಕಾರಿಗಳಾದ ವಾನ್‌ಪಾಪೆನ್‌ರವರು ಹೆರ್‌ಹಿಟ್ಲರ್‌ರವರ ನೋಟೀಸಿಗೆ ಹೆದರದೆ ಸರ್ವಶಕ್ತಿಯನ್ನೂ ಉಪಯೋಗಿಸಿ, ತಮ್ಮ ಆಜ್ಞೆಯು ನೆರವೇರುವಂತೆ ಮಾಡುವದಾಗಿ ಪ್ರತ್ಯುತ್ತರವನ್ನು ಕೊಟ್ಟಿರುವರು. ಇದರಿಂದ ಜರ್ಮನಿಯಲ್ಲಿ ಸಿವಿಲ್‌ಯುದ್ಧವು ನಡೆಯಬಹುದೆಂದು ಪ್ರಪಂಚವೆಲ್ಲವೂ ಗಾಬರಿಯಾಗಿ ಮುಂದಿನ ವಿದ್ಯಮಾನಗಳನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿರುವದು.

ಸದ್ಯದ ರಾಜಕೀಯ ಸ್ಥಿತಿಯನ್ನು ಪರಿಶೀಲಿಸುವದಕ್ಕೋಸ್ಕರ ಇಂಡಿಯಾದಲ್ಲಿ ಸಂಚಾರ ಮಾಡುತ್ತಿರುವ, ಪಾರ್ಲಿಮೆಂಟಿನ ಕನ್ಸರ್ವೇಟಿವ್ ಪಂಗಡದ ಸದಸ್ಯರಾಗಿರುವ ಮಿ|| ಹೇಲ್ಸ್‌ರವರು 'ಹಿಂದೂ' ಪತ್ರಿಕೆಗೆ ಒಂದು ದೀರ್ಘವಾದ ಲೇಖನವನ್ನು ಬರೆದಿರುವರು. ಅದರಲ್ಲಿ 'ಬೈ ಇಂಡಿಯನ್' ಚಳವಳಿಯ ವಿಷಯವಾಗಿ ಈ ರೀತಿ ಬರೆದಿರುತ್ತಾರೆ.—"ನಮ್ಮ ದೇಶದಲ್ಲಿ ನಾವು ಬ್ರಿಟಿಷ್ ವಸ್ತುಗಳನ್ನೇ ಕೊಳ್ಳಿರಿ" ಎಂದು ಹೇಳುತ್ತಿದ್ದೇವೆ. ಹೀಗಿರುವಲ್ಲಿ ಈ ದೇಶದಲ್ಲಿ 'ಬೈ ಇಂಡಿಯನ್' ಚಳವಳಿಗೆ ಆತಂಕಪಡಿಸಿದರೆ ನಾವು ತಕ್ಕರೆನಿಸಿಕೊಳ್ಳುವದಿಲ್ಲವೇ? ಸ್ವದೇಶಿಯನ್ನು ಕೊಳ್ಳಿರಿ ಎಂದು ಹೇಳುವುದಕ್ಕೆ ನಾವು ಅಡ್ಡಿ ಬರಬಹುದೇ? ಹಿಂದೂಸ್ಥಾನದಲ್ಲಿ ತಯಾರಾಗುತ್ತಿರುವ ಪದಾರ್ಥಗಳನ್ನು ಬಿಟ್ಟು ಬ್ರಿಟಿಷ್ ವಸ್ತುಗಳನ್ನು ಕೊಂಡುಕೊಂಡರೆ ನೀವು ದೇಶದ್ರೋಹಿಗಳಾಗುವಿರಿ. ಹಿಂದೂಸ್ಥಾನದ ಹೃದಯವು ಶಾಂತವಾಗಿದೆ. ಎಂದಾದರೊಂದು ದಿನ ಧೈರ್ಯಶಾಲಿಯಾದ ಬ್ರಿಟಿಷ್ ರಾಜಕಾರ್ಯಧುರಂಧರನು ಭರತಖಂಡಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟು, ಭರತಖಂಡವು ಬ್ರಿಟಿಷ್ ಕಿರೀಟದಲ್ಲಿ ಒಂದು ಪ್ರಕಾಶಮಾನವಾದ ವಜ್ರದಂತಿರುವಂತೆ ಮಾಡುವನೆಂದು ಆಶಿಸುವೆನು. ಆ ದಿನವು ಶೀಘ್ರದಲ್ಲಿಯೇ ಪ್ರಾಪ್ತವಾಗಲಿ."

ಅಹಮದಾಬಾದಿನಿಂದ ಒಂದು ವಿಚಿತ್ರವಾದ ವರ್ತಮಾನವು ಬಂದಿರುವುದು. ಪಾರ್ವತಿ ಉರುಫ್ ಪ್ರಭಾ ಎಂಬ 18 ವರ್ಷ ವಯಸ್ಸಿನ ಗುಜರಾತಿ ಹುಡುಗಿಯು ಜೈಸಿಂಗ್‌ರಾಂಛೋಡ್ ಎಂಬ ತರುಣನೊಡನೆ ಗಾಡಿಯಲ್ಲಿ ಹೋಗುತ್ತಿದ್ದಾಗ ಪೋಲೀಸರು ಅನುಮಾನದಿಂದ ಅವರಿಬ್ಬರನ್ನೂ ತಡೆದರು. ಹುಡುಗಿಯು ತಾನು ಜೈಸಿಂಗನಿಗೆ ನಿಶ್ಚಿತಳಾಗಿರುವೆನೆಂದು ಹೇಳಿದಳು. ಅಷ್ಟರಲ್ಲಿ ಆ ಹುಡುಗಿಯ ತಂದೆಯಾದ ಕೇಶವಲಾಲ ಭೀಮಜಿಯು ಅಲ್ಲಿಗೆ ಬಂದು ತನ್ನ ಮಗಳು ಜೈಸಿಂಗನಿಗೆ ನಿಶ್ಚಿತವಾಗಿರುವದು ನಿಜವೆಂದೂ, ಅವಳು ಇನ್ನಾರಿಗೂ ಮದುವೆಯಾಗಿಲ್ಲವೆಂದೂ ಹೇಳಿದನು. ಈ ಮಧ್ಯೆ ಮೋತೀಲಾಲಕಾಂಜಿಯೆಂಬವರೊಬ್ಬರು ಕೆಲವು ತಿಂಗಳುಗಳ ಹಿಂದೆ ತನ್ನ ಮಗನು ಪಾರ್ವತಿಯನ್ನು ಮದುವೆಯಾಗಿರುವನೆಂದೂ, ಆದುದರಿಂದ ಪಾರ್ವತಿಯನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದೂ ಫಿರ್ಯಾದುಮಾಡಿರುವರು. ಇತ್ತ ಹುಡುಗಿಯು ಕೋರ್ಟಿನಲ್ಲಿ ತಾನು ಜೈಸಿಂಗನಿಗೆ ನಿಶ್ಚಿತವಾಗಿರುವೆನೆಂದೂ ಇದುವರೆಗೆ ಬೇರೆಯಾರನ್ನೂ ಮದುವೆಯಾಗಿಲ್ಲವೆಂದೂ ಹೇಳಿಕೆಯನ್ನು ಕೊಟ್ಟಿರುವಳು. ಮ್ಯಾಜಿಸ್ಟ್ರೇಟರು ಇದರ ಸಂಬಂಧವಾದ ವಿದ್ಯಮಾನಗಳನ್ನು ಪರಿಶೀಲಿಸುವವರೆಗೆ ಪಾರ್ವತಿಯನ್ನು ಮಹಿಪಾತ್ರ ಅನಾಥಾಶ್ರಮದಲ್ಲಿರಿಸುವಂತೆ ಅಪ್ಪಣೆಮಾಡಿರುವರು.

[3ನೇ ಪುಟದಿಂದ ಮುಂದುವರಿದುದು]

ತತ್ವಗಳನ್ನು ತಿಳಿದುಕೊಂಡು ಅವುಗಳಲ್ಲಿ ಮುಖ್ಯವಾದ ವಿಧಿನಿಷೇಧಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಇವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಶಾರೀರಕಧರ್ಮಶಾಸ್ತ್ರ. ಈ ಶಾಸ್ತ್ರದಲ್ಲಿ ಬಾಯಿ, ಹಲ್ಲುಗಳು, ನಾಲಗೆ, ಅನ್ನಕೋಶ, ಜಠರ, ಚಿಕ್ಕಕರಳು, ದೊಡ್ಡಕರಳು, ಬಾಯಿನಜೊಲ್ಲು ಮೊದಲಾದುವುಗಳನ್ನು ಜಠರಕ್ಕೆ ಪಿಂಡಗಳು, ಶ್ವಾಸಕೋಶ, ಅನ್ನಕೋಶಕ್ಕೆ ಸಂಬಂಧಪಟ್ಟ ಅಪೆಂಡಿಕ್ಸ್ ಎಂಬ ಒಂದು ಕೊನೆ. ಮೇಲಕ್ಕೆ ಹೋಗತಕ್ಕ ದೊಡ್ಡಕರಳು, ಅಡ್ಡಡ್ಡಲಾಗಿರತಕ್ಕ ದೊಡ್ಡಕರಳು ಕೆಳಕ್ಕೆ ಇಳಿಯತಕ್ಕ ದೊಡ್ಡಕರಳು ಅದರ ಕೊನೆ. ಆನಿಸ ಇವುಗಳ ಸ್ವರೂಪವನ್ನು ತಿಳಿದುಕೊಳ್ಳಬೇಕು. ನಾವು ತೆಗೆದುಕೊಂಡ ಆಹಾರವು ಠಳ್ತವಾಂಗಿ ದೇಹಕ್ಕೆ ಪುಷ್ಟಿಯನ್ನು ಕೊಡಬೇಕಾದರೆ, ನಾವು ಸೇವಿಸಿದ ಪದಾರ್ಥಗಳನ್ನು ಜೀರ್ಣಕ್ಕೆ ತರತಕ್ಕ ಅವಯವಗಳಿಗೆ ಜೀರ್ಣಶಕ್ತಿಯು ಎಷ್ಟಿರುವುದೋ, ಅಷ್ಟು ಆಹಾರವನ್ನು ಮಾತ್ರ ತೆಗೆದುಕೊಂಡು ಅದರಿಂದ ನಮ್ಮ ದೇಹಕ್ಕೂ ಬುದ್ಧಿಗೂ ಶಕ್ತಿಯುಂಟಾಗುವಂತೆ ಮಾಡಿಕೊಳ್ಳಬೇಕು. ಅನ್ನೋದಕಗಳಿಲ್ಲದೆ ಕೆಲವು ದಿವಸಗಳು ಬದುಕಿರಬಹುದು. ವಾಯುಸೇವನೆಯಿಲ್ಲದೆ ಕೆಲವು ನಿಮಿಷಗಳಿಂದಲೂ ಹೆಚ್ಚಾಗಿ ಬದುಕಿರುವುದು ಅಸಾಧ್ಯ. ಸಮಾಧಿಯಲ್ಲಿಯೂ, ಹಿಮದಲ್ಲಿ ಹೂಳಲ್ಪಟ್ಟಾಗಲೂ ವಾಯುಸೇವನೆಯಿಲ್ಲದೆ ಇದ್ದಾಗ್ಯೂ, ಪ್ರಾಣವು ಕೆಲವುಕಾಲ ಇರುವುದುಂಟು. ಅದಕ್ಕೆ ಬೇರೆ ಕಾರಣಗಳಿರುತ್ತವೆ. ಆದ್ದರಿಂದ ಆರೋಗ್ಯದೀರ್ಘಾಯುಷ್ಯಗಳಿಗೂ ಅಸಾಧಾರಣವಾದ ಬುದ್ಧಿಶಕ್ತಿಯನ್ನು ಹೊಂದುವುದಕ್ಕೂ ದುರ್ವಿಷಯಗಳಿಗೆ ಮನಸ್ಸು ಹೋಗದಂತೆ ಮಾಡಿಕೊಳ್ಳುವುದಕ್ಕೂ ಸದ್ವಿಷಯಗಳಲ್ಲಿ ಮನಸ್ಸು ನಿಲ್ಲುವಂತೆ ಮಾಡಿಕೊಳ್ಳುವುದಕ್ಕೂ ಅಸಾಧಾರಣವಾದ ಮನಶ್ಶಾಂತಿಗೂ ಕೈವಲ್ಯಪ್ರಾಪ್ತಿಗೂ, ಯುಕ್ತಾಹಾರವಿಹಾರಗಳು ಅತ್ಯಂತ ಆವಶ್ಯಕ. ಅವುಗಳಿಗೆ ಸಂಬಂಧಪಟ್ಟ ಕಟ್ಟಳೆಗಳನ್ನು ತಿಳಿದುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತಂದುಕೊಂಡರೆ ದೀರ್ಘಾಯುರಾರೋಗ್ಯಗಳು ದೊರೆಯುತ್ತವೆ. ಅವುಗಳ ಜೊತೆಯಲ್ಲಿ ಧರ್ಮಾರ್ಥಕಾಮಮೋಕ್ಷಗಳ ಪ್ರಾಪ್ತಿಯೂ ಬರುತ್ತದೆ. ಸಕಲ ಇಷ್ಟಾರ್ಥಸಿದ್ಧಿಗೂ ಜೀರ್ಣಶಕ್ತಿಯನ್ನು ಸಂಪಾದಿಸಿಕೊಳ್ಳುವುದು ಮುಖ್ಯಕಾರಣವಾಗಿರುವುದು. ಜೀರ್ಣಶಕ್ತಿಯು ಬರಬೇಕಾದರೆ ಪುಷ್ಟಿಯನ್ನು ಕೊಡತಕ್ಕ ಆಹಾರವನ್ನು ಗೊತ್ತುಮಾಡಿಕೊಳ್ಳಬೇಕು. ಆ ಆಹಾರವನ್ನು ಹೇಗೆ ಸೇವಿಸಬೇಕೋ ಅದನ್ನು ತಿಳಿದುಕೊಳ್ಳಬೇಕು. ಎಲ್ಲಾ ವೈದ್ಯಶಾಸ್ತ್ರಗಳ ಗುಣಪಾಠಗಳಲ್ಲಿ ಯಾವ ಆಹಾರಪಾನಗಳು ಯುಕ್ತವಾದವುಗಳೋ, ಯಾವ ಆಹಾರಪಾನಗಳು ಅಯುಕ್ತವಾದವುಗಳೋ ಅವು ಹೇಳಲ್ಪಟ್ಟಿರುವುವು. ಆರೋಗ್ಯವಾಗಿರತಕ್ಕ ವ್ಯಕ್ತಿಗಳ ಅನುಷ್ಠಾನದಲ್ಲಿಯೂ ಈ ನಿಯಮಗಳು ಇದ್ದೇ ಇರುವುವು. ಶಕ್ತಿಯುಳ್ಳವರು ಶಾಸ್ತ್ರಗಳನ್ನು ಪರಿಶೀಲಿಸಿ ಅವುಗಳನ್ನು ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳುವುದಕ್ಕೆ ಅಸಾಧ್ಯವಾದರೆ ತಮ್ಮ ನೆರೆಹೊರೆಯವರಲ್ಲಿ ಆರೋಗ್ಯದೀರ್ಘಾಯುರಾಗಿರತಕ್ಕ ಜನಗಳನ್ನು ನೋಡಿ ಅವರು ಆಹಾರವಿಹಾರಗಳಲ್ಲಿ ಹೇಗೆ ನಡೆಯುತ್ತಾರೋ ಅದನ್ನು ತಿಳಿದುಕೊಳ್ಳಬಹುದು. ಮತ್ತು ಅಸಾಧಾರಣವಾದ ದೇಹಶಕ್ತಿ, ಬುದ್ಧಿಶಕ್ತಿಯುಳ್ಳವರು ಕೂಡ ಅಜಿತೇಂದ್ರಿಯರಾಗಿ, ಅಕಾಲಮರಣಕ್ಕೆ ಸಾಧಕವಾದ ಕೆಲಸಗಳನ್ನು ಮಾಡಿ ಕಳೆಯುವವನ್ನು ಹೇಗೆ ಬರುತ್ತಲಿರುವರೋ ಅದನ್ನು ಪರಿಶೀಲಿಸಿ, ಅವರು ಮಾಡಿದ ತಪ್ಪುಗಳನ್ನು ನಾವು ಮಾಡದೆ ಇರಬೇಕಾದರೆ ನಾವು ಹೇಗೆ ಜಿತೇಂದ್ರಿಯರಾಗಿರಬೇಕೋ ಅದನ್ನು ತಿಳಿದುಕೊಳ್ಳಬೇಕು. ಅನ್ನಕೋಶಕ್ಕೆ ಆಹಾರವು ಬಾಯಿಯಿಂದ ಹಾಕಲ್ಪಡುವುದು. ಬಾಯಿನಲ್ಲಿ ನಾಲಗೆ, ಹಲ್ಲು, ಜೊಲ್ಲನ್ನು ಸುರಿಸುವ ಗ್ರಂಥಿಗಳು ಇರುವುವು. ಆಹಾರಪದಾರ್ಥಗಳು ಜೀರ್ಣವಾಗಬೇಕಾದರೆ ಜೊಲ್ಲಿನ ರಸವು ಆಹಾರಕ್ಕೆ ಸರಿಯಾಗಿ ಸೇರಬೇಕು. ಆಹಾರವು ರುಚಿಯಾಗಿದ್ದರೆ ಅದನ್ನು ಜೀರ್ಣಿಸುವುದಕ್ಕೆ ಬೇಕಾದಷ್ಟು ಜೊಲ್ಲು ಹೊರಡುವುದು. ಅನೇಕರಿಗೆ ಊಟಮಾಡುವುದೇ ತಿಳಿಯದು. ಸಕಲ ರೋಗಗಳಿಗೂ ಈ ಅಜ್ಞಾನವೇ ಮುಖ್ಯಕಾರಣ. ನಾವು ತಿನ್ನತಕ್ಕ ಪದಾರ್ಥಗಳನ್ನು ಬಾಯಿಗೆ ಹಾಕಿಕೊಂಡ ಕೂಡಲೆ ಜೊಲ್ಲು ಬರುವುದು. ಹಲ್ಲುಗಳು ಅವುಗಳ ಕೆಲಸವನ್ನು ಮಾಡಬೇಕು. ಜೊಲ್ಲಿನ ಗ್ರಂಥಿಗಳು ಅವುಗಳ ಕೆಲಸವನ್ನು ಮಾಡಬೇಕು. ಈ ಎರಡು ಕೆಲಸಗಳಿಂದ ಆಹಾರವು ಬೆಣ್ಣೆಯಂತೆ ಅಥವಾ ಹಾಲಿನಂತೆ ಆಗಬೇಕು. ಅನಂತರ ಈ ಆಹಾರವು ನುಂಗಲ್ಪಡಬೇಕು. ಆದುದರಿಂದ ಆಹಾರವನ್ನು ಬಾಯಿಗೆ ಹಾಕಿಕೊಂಡು ಸದರಿ ಆಹಾರವು ಜೊಲ್ಲಿನಿಂದ ಪರಿಪೂರ್ಣವಾಗಿ ಸೇರದಂತೆ ಮಾಡಿಕೊಂಡು ನುಂಗಿದರೆ ಆಹಾರದಲ್ಲಿ ಪುಷ್ಟಿಯನ್ನುಂಟುಮಾಡತಕ್ಕ ರಸಗಳು ಅನ್ನಕೋಶದಲ್ಲಿ ಪುಷ್ಟಿರಸವನ್ನು ದೇಹಕ್ಕೆ ಕೊಡುವುದಿಲ್ಲ. ಆಹಾರ, ಪದಾರ್ಥಗಳನ್ನು ನುಂಗಿದ ಕೂಡಲೆ, ಆಹಾರವು ಜಠರಕ್ಕೆ ಹೋಗುವುದು. ಬಾಯಿನಲ್ಲಿ ಜೊಲ್ಲು ಸೇರುವಂತೆ ಜಠರದಲ್ಲಿ ಜಠರ ರಸವು ಸೇರಬೇಕು. ಅನಂತರ ಪಿತ್ತರಸವು ಸೇರಬೇಕು. ಪ್ಯಾಂಕ್ರಿಯಾ ಎಂಬದಾಗಿ ಒಂದು ಗ್ರಂಥಿಯು ಇರುವುದು. ಅದು ಒಂದು ರಸವನ್ನು ಬಿಡುವುದು. ಅದರೊಡನೆ ಆಹಾರವು ಮಿಶ್ರವಾಗಬೇಕು. ಅದರೊಡನೆ ಚಿಕ್ಕಕರುಳುಗಳಲ್ಲಿ ಅನೇಕ ರಸಗಳು ಸೇರುತ್ತವೆ. ಇವುಗಳಲ್ಲಿ ಮಿಶ್ರವಾದ ಆಹಾರವು ದೊಡ್ಡಕರಳಿಗೆ ಹೋಗುತ್ತದೆ. ಸದರಿ ದೊಡ್ಡಕರಳು ಚಿಕ್ಕಕರಳುಗಳನ್ನು ಸುತ್ತಿಕೊಂಡು ಮಲವಿಸರ್ಜನೆಯಸ್ಥಾನಕ್ಕೆ ಬರುವುದು. ದೊಡ್ಡಕರಳಿನಲ್ಲಿ ಒಂದುಕೊನೆಗೆ ಅಪೆಂಡಿಕ್ಸ್ ಎಂದು ಹೆಸರು. ಚಿಕ್ಕಕರುಳಿಂದ ದೊಡ್ಡಕರುಳು ಮೇಲಕ್ಕೆ ಹೊರಟು ಚಿಕ್ಕಕರಳನ್ನು ಸುತ್ತಿಕೊಂಡು ಕೆಳಕ್ಕೆ ಇಳಿಯುವುದು. ಮೇಲಕ್ಕೆ ಹೋಗುವಾಗ್ಯೆ ಇದಕ್ಕೆ 'ಅಸೆಂಡಿಂಗ್ ಕೊಲನ್' ಎಂದೂ ಅಡ್ಡಲಾಗಿ ಹೋಗುವಾಗ 'ಟ್ರಾನ್ಸ್‌ವರ್ಸ್ ಕೊಲನ್' ಎಂದೂ ಕೆಳಕ್ಕೆ ಇಳಿಯುವಾಗ 'ಡಿಸೆಂಡಿಂಗ್ ಕೊಲನ್' ಎಂದೂ ಈ ಮಲಕೋಶದ ಕೊನೆಗೆ 'ರೆಕ್ಟಂ' ಎಂದೂ ಮತ್ತು ದ್ವಾರಕ್ಕೆ 'ಅನಸ್' ಎಂದೂ ಹೆಸರು. ಈ ಭಾಗಗಳೆಲ್ಲಾ ಅವುಗಳ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ನಾವು ಆಹಾರವಿಹಾರನಿಯಮಗಳಿಗೆ ಸರಿಯಾದ ಗಮನವನ್ನು ಕೊಡಬೇಕು. 'ಅತಿಸರ್ವತ್ರ ವರ್ಜಯೇತ್' ಎಂಬ ನಿಯಮಕ್ಕೆ ಭಂಗವನ್ನು ತರಬಾರದು. ಈ ಅನ್ನಕೋಶಕ್ಕೆ ಎಷ್ಟು ಶಕ್ತಿಯಿದೆಯೋ ಅಷ್ಟು ಕೆಲಸವನ್ನು ಮಾತ್ರ ಕೊಡಬೇಕು. ಹೆಚ್ಚು ಕೆಲಸವನ್ನು ಕೊಟ್ಟರೆ ಜೀರ್ಣವನ್ನು ಮಾಡತಕ್ಕ ಶಕ್ತಿಯು ಕಡಿಮೆಯಾಗುವುದು. ಈ ವಿಷಯವನ್ನು ತಿಳಿದುಕೊಂಡಿರತಕ್ಕ ಜನಗಳೇ ಅಪೂರ್ವ. ಆಹಾರವಿಹಾರನಿಯಮಗಳು ನಮಗೆ ತಿಳಿಯದು. ಊಟಬಲ್ಲವನಿಗೆ ರೋಗವಿಲ್ಲ ಎಂದು ಗಾದೆಯು ಇರುವುದು. ಇದಕ್ಕೂ ತಕ್ಕಗಮನವನ್ನು ಕೊಡುತ್ತಲಿಲ್ಲ. ಎಷ್ಟು ಆಹಾರವು ಜೀರ್ಣಕ್ಕೆ ಬರುವುದೋ ಅದಕ್ಕಿಂತಲೂ ಹೆಚ್ಚಾಗಿ ತಿಂದು ಅನ್ನಕೋಶಕ್ಕೂ ಮಲಕೋಶಗಳಿಗೂ ನಿಶ್ಶಕ್ತಿಯನ್ನುಂಟುಮಾಡಿ ಅದನ್ನು ಸರಿಮಾಡಿಕೊಳ್ಳುವುದಕ್ಕೆ ಉಪವಾಸಾದಿಗಳನ್ನು ಮಾಡಿ ಉಪವಾಸದಿಂದ ದುರ್ಬಲವಾದ ಕೋಶಗಳಿಗೆ ಪಾರಣೆಯಕಾಲದಲ್ಲಿ ಎಷ್ಟು ತಿಂದರೆ ಜೀರ್ಣವಾಗಬೇಕೋ ಅದಕ್ಕಿಂತಲೂ ಹೆಚ್ಚು ಆಹಾರವನ್ನು ಹಾಕಿ ಅಶಿಕ್ಷಿತವಾದರೆಯುವಲ್ಲದ ರೋಗಗಳಿಗೆ ಅನ್ನಕೋಶ ಮಲಕೋಶಗಳೇ ಕಾರಣವಾಗುವಂತೆ ಮಾಡಿ ತಮ್ಮ ತಪ್ಪನ್ನು ನಾವು ತಿಳಿದುಕೊಳ್ಳದೆ ಈ ಕಷ್ಟಗಳಿಗೆಲ್ಲಾ ಹಣೆಯಬರಹವೇ ಕಾರಣವೆಂದು ಹೇಳುತ್ತಾ, ನಮ್ಮ ಅಜ್ಞಾನವೇ ಇದಕ್ಕೆ ಕಾರಣವಾಗಿದ್ದಾಗ್ಯೂ, ನಾವು ನಿರ್ದೋಷಿಗಳೆಂದು ಭಾವಿಸಿಕೊಂಡು ಅನಿವಾರ್ಯವಾದ ರೋಗಗಳಿಂದ ಉಂಟಾಗತಕ್ಕ ಕಷ್ಟಗಳಿಗೆ ಅನೇಕರು ಗುರಿಯಾಗುತ್ತಲಿದ್ದಾರೆ. ಭಾರತೀಯರಲ್ಲಿ ಬಹುಜನರು ಆಹಾರವಿಹಾರನಿಯಮಗಳಲ್ಲಿ ಪ್ರಸಿದ್ಧರು. ಇವರ ಪಂಚಾಂಗಗಳನ್ನು ನೋಡಿದರೆ ಹುಟ್ಟಿನ್ನು ಮೊದಲುಗೊಂಡು ಸಾಯುವವರೆಗೂ ಎಷ್ಟೋ ನಿತ್ಯನೈಮಿತ್ತಿಕಕರ್ಮಗಳನ್ನು ಏರ್ಪಡಿಸಿಕೊಂಡಿರುವರು. ಈ ಕರ್ಮಗಳಲ್ಲೆಲ್ಲಾ ನಾನಾವಿಧವಾದ ಭಕ್ಷ್ಯಭೋಜ್ಯಗಳನ್ನು ಮಾಡಿ ಭಕ್ಷಿಸುವರು. ಹಾಗೆ ಭಕ್ಷಿಸುವುದರಲ್ಲಿ ಎಷ್ಟು ಜೀರ್ಣವಾಗುವುದೋ ಅದಕ್ಕಿಂತ ಹೆಚ್ಚಾಗಿ ಭಕ್ಷಿಸುವುದರಿಂದ ಜೀರ್ಣಕೋಶಗಳಿಗೆ ಶಕ್ತಿಯು ಕಡಿಮೆಯಾಗಿ ಅಜೀರ್ಣಕ್ಕೆ ಅವಕಾಶವಾಗುವುದು. ಅಜೀರ್ಣದಿಂದ ಅನೇಕ ರೋಗಗಳು ಹುಟ್ಟುವುವು. ನಮ್ಮ ದೇಶದಲ್ಲಿ ರೋಗದ ನಿದಾನವನ್ನು ತಿಳಿದುಕೊಳ್ಳುವುದಕ್ಕೆ ಶಕ್ತಿಯುಳ್ಳ ವೈದ್ಯರು ಇಲ್ಲದೆ ಇರತಕ್ಕವರು ಎಷ್ಟೋ ಜನರಿರುವರು. ಯಾವುದೋ ಒಂದು ರೋಗಕ್ಕೆ ಯಾವುದೋ ಒಂದು ಚಿಕಿತ್ಸೆಯನ್ನು ಮಾಡುವರು. ಔಷಧಗಳಿಂದ ಹೊಸರೋಗಗಳು ಹುಟ್ಟುವುದೂ ಉಂಟು. ಅದರಿಂದ ಅಕಾಲಮರಣಗಳೂ ಆಗುವುವು. ಆಹಾರ ತಪ್ಪುಗಳನ್ನು ಮಾಡಿ ಸದರಿ ತಪ್ಪುಗಳಿಂದ ಅನೇಕರು ಪತ್ತೆಹಚ್ಚಿ ರೋಗದ ಕಾರಣವನ್ನು ತಿಳಿದುಕೊಳ್ಳುವ ಶಕ್ತಿಯು ಕೆಲವರಿಗೆ ಬರುವುದು. ಈ ಶಕ್ತಿ ಇಲ್ಲದೆ ರೋಗಮುಕ್ತಿಯನ್ನು ಪಡೆಯತಕ್ಕ ದಾರಿಯುಗಳೂ ಉಂಟು. ಹೀಗೆ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಅಜೀರ್ಣವಾಗುವಂತೆ ತಿಂದು ಅದರಿಂದ ಉಂಟಾದ ರೋಗಗಳನ್ನು ಪರಿಹಾರಮಾಡಿಕೊಳ್ಳುವುದಕ್ಕೆ ಉಪವಾಸಗಳನ್ನೂ ಪಾರಣೆಗಳನ್ನೂ ಮಾಡುವುದೂ ಉಂಟು. ಹಿಂದೂಗಳಲ್ಲಿ ಏಕಾದಶಿ ಮೊದಲಾದ ದಿವಸಗಳಲ್ಲಿ ಉಪವಾಸವೂ ಮುಸಲ್ಮಾನರಲ್ಲಿ ರಂಜಾನ್ ಮೊದಲಾದ ಕಾಲಗಳಲ್ಲಿ ಉಪವಾಸವೂ ಆಚರಣೆಗೆ ಬರುವುದಕ್ಕೆ ಆಹಾರನಿಯಮಕ್ಕೆ ವಿರೋಧವಾಗಿ ತಿನ್ನುವುದೇ ಮುಖ್ಯಕಾರಣ. ಉಪವಾಸಮಾಡುವುದರಿಂದ ದೇವರಿಗೆ ತೃಪ್ತಿಯುಂಟಾಗುತ್ತದೆಂದು ಒಂದು ಪ್ರತ್ಯಯವನ್ನುಂಟುಮಾಡಿ ಹೊಟ್ಟೆಬಾಕತನಕ್ಕೆ ಚಿಕಿತ್ಸೆಯ ರೂಪವಾಗಿ ಉಪವಾಸಗಳನ್ನು ಏರ್ಪಡಿಸಿಕೊಂಡಿರುವರು. ಉಪವಾಸದಿಂದ ಜೀರ್ಣಕೋಶಗಳು ಪಕೋಟಿಗೆ ಬಂದಕೂಡಲೆ, ಪಕೋಟಿಗೆ ಬರುತ್ತಿರುವ ಜೀರ್ಣಕೋಶಗಳಿಗೆ ಎಷ್ಟು ಭಾರವನ್ನು ಹೊರಿಸಿದರೆ ತಡೆಯಬಹುದೋ ಅದನ್ನು ತಿಳಿದುಕೊಂಡಿರತಕ್ಕವರೇ ಅಪೂರ್ವ. ಪ್ರಭುಗಳೇ ಮೊದಲಾದ ಉಪಪನ್ನರು ಜಿಹ್ವಾಚಾಪಲ್ಯವನ್ನು ತಡೆಯುವುದು ಕಷ್ಟ. ಕೇವಲ ವೃದ್ಧರಾದವರು ಕೂಡ ಈ ಚಾಪಲ್ಯದಿಂದ ಪರವಶರಾಗಿ ಜೀರ್ಣಕೋಶಗಳಿಗೆ ಹೆಚ್ಚು ಕೆಲಸವನ್ನು ಕೊಟ್ಟು ಅವುಗಳಿಗೆ ನಿಶ್ಶಕ್ತಿಯನ್ನುಂಟುಮಾಡಿ ಅಂಥ ಜನಗಳ ಲೋಕಯಾತ್ರೆಯೇ ಪೂರೈಸುವಂತೆ ಮಾಡಿಕೊಳ್ಳುವರು. ಸ್ವಯಂಕೃತಾಪರಾಧದಿಂದ ಉಂಟಾಗತಕ್ಕ ಅಕಾಲಮರಣಗಳಿಗೆ ಅದೃಷ್ಟವೇ ಕಾರಣವೆಂದು ಈ ಅಜ್ಞಾನಿಗಳು ಹೇಳಿಕೊಳ್ಳುವರು. ಇದು ಸುಳ್ಳಲ್ಲ. ಅದೃಷ್ಟವೆಂದರೆ ಕಣ್ಣಿಗೆ ಕಾಣದೇ ಇರತಕ್ಕದ್ದು ಅಂದರೆ ಅಜ್ಞಾನ. ಜ್ಞಾನವಿಲ್ಲದವರಿಗೆ ತೋರುತ್ತವಿಲ್ಲ. ಅಜ್ಞಾನಿಗಳಿಗೆ ಈ ಕಷ್ಟಪರಂಪರೆಗಳು ಬರುವುದೇನೂ ಆಶ್ಚರ್ಯವಲ್ಲ. ಈ ಅಜ್ಞಾನದಿಂದ ಜನಗಳು ಕಷ್ಟಪಡುವುದನ್ನು ನೋಡಿ ಅದರ ಪ್ರಯೋಜನವನ್ನು ಹೊಂದುವುದು ಕಠಿನ. ಅನೇಕರಿಗೆ ಈ ಶಕ್ತಿಯು ಇರುವುದಿಲ್ಲ. ತಮಗೆ ತಲೆಗಳ ಮೇಲೆ ಬುದ್ಧಿಯು ಬರಬೇಕೇ ಹೊರತು ಕಷ್ಟಕ್ಕೆ ಗುರಿಯಾದವರನ್ನು ನೋಡಿ, ಅಂಥ ಕಷ್ಟಕ್ಕೆ ಗುರಿಯಾಗಬಾರದೆಂಬ ಭಾವನೆಯನ್ನು ಸಂಪಾದಿಸಿಕೊಳ್ಳತಕ್ಕವರೇ ಅಪೂರ್ವವಾಗಿರುತ್ತಾರೆ. ಅದು ಹೇಗಾದರೂ ಇರಲಿ, ಸರ್ವರೂ ಸ್ವಲ್ಪಮಟ್ಟಿಗಾದರೂ ವಿಚಾರಮಾಡುವುದನ್ನು ಕಲಿತುಕೊಳ್ಳಬೇಕು. ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣವಿರುವುದು. ಪ್ರತಿಯೊಂದು ಕಾರಣದಿಂದಲೂ ಅನೇಕ ಕಾರಣದಿಂದಲೂ ಅನೇಕ ಕಾರ್ಯಗಳು ನಡೆಯುವುವು. ಬೀಜಗಳಿಂದ ವೃಕ್ಷಗಳಾಗುವುವು. ವೃಕ್ಷಗಳಿಂದ ಬೀಜಗಳಾಗುವುವು. ಹಾಗೆಯೇ ರೋಗಗಳಿಗೆ ಕಾರಣಗಳು ಇರುವುವು. ಸದರಿ ಕಾರಣವನ್ನು ನಿವಾರಣೆಮಾಡಿದರೆ ರೋಗವು ಶಾಂತಿಯಾಗುವುದು. ಆ ಕಾರಣವನ್ನು ನಿವಾರಣೆಮಾಡತಕ್ಕ ಔಷಧಗಳೇ ನಿಜವಾದ ಸಿದ್ಧೌಷಧಗಳು. ಕಾರಣವನ್ನು ತಿಳಿದುಕೊಳ್ಳದೆ ರಸಗಂಧಕ ಪಾಷಾಣಗಳನ್ನು ಚಿಕಿತ್ಸೆಗಾಗಿ ಉಪಯೋಗಿಸಿದರೆ ಅವುಗಳಿಂದ ಹೊಸರೋಗಗಳು ಹುಟ್ಟುವುದುಂಟು. ಆ ರೋಗಗಳಿಂದ ಅಕಾಲಮರಣಗಳುಂಟಾಗುವುದುಂಟು. ನಿವಾರಣೀಯವಾದ ರೋಗಗಳೂ ಅಕಾಲಮರಣವೂ ತಪ್ಪಬೇಕಾದರೆ ಮೊದಲನೇ ಕೆಲಸವು ಆಹಾರವಿಹಾರಗಳ ನಿಯಮವನ್ನು ತಿಳಿದುಕೊಳ್ಳತಕ್ಕದ್ದು. ಎರಡನೇ ಕೆಲಸವು ಸದರಿ ನಿಯಮಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳತಕ್ಕದ್ದು. ಧನ್ವಂತರಿಯೇ ಮೊದಲಾದ ವೈದ್ಯಶಾಸ್ತ್ರವಿಶಾರದರು 'ಅತಿಸರ್ವತ್ರ ವರ್ಜಯೇತ್' ಎಂಬ ಅಸಾಧಾರಣವಾದ ನಿಯಮವನ್ನು ಮಾಡಿರುವರು. ಇದೊಂದು ನಿಯಮವನ್ನು ಅನುಷ್ಠಾನಕ್ಕೆ ತಂದುಕೊಂಡಾಗ್ಯೂ, ಜನಗಳು ಆರೋಗ್ಯದೀರ್ಘಾಯುರಾಗಿ ದೀರ್ಘಾಯುರಾರೋಗ್ಯಗಳನ್ನು ಹೊಂದಿ, ಅಷ್ಟೈಶ್ವರ್ಯಗಳನ್ನು ಪಡೆದು ಈ ಲೋಕವೇ ಸ್ವರ್ಗವಾಗುವಂತೆ ಮಾಡಬಹುದು. ಈ ವಿಷಯಕ್ಕೆ ಮಹಾಜನಗಳ ಗಮನವು ಕೊಡಲ್ಪಡುವುದೆಂದು ನಂಬಿದ್ದೇನೆ.

ಎಂ. ವೆಂಕಟಕೃಷ್ಣಯ್ಯ.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯುದೆಶಟ್ಟಿ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೇರಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ಸಿಡಿತ ಸುಡುವದು, ಪಿತ್ತ ಕಾರುವದು, ಮುಖ ಕಣ್ಣುಹಳ್ದಿ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅಮವಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ—ರಕ್ತಶುದ್ಧಿ, ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋ—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ಸಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ನೆಸಿಫೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇತ್ಯ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[3] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು. ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಮಠಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೬—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅಜಿವಿಸು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶಿ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂತ, ನಡ ಬೆನ್ನುನೋವು, ನಿದ್ದೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ. ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸೆ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿನಶೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚುಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಸ್ಬಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಹತ್ತುವವ್ರೋ, ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾನ್ಹಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

41 ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಛರ್ದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ. ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಾರಿಲ್ಲದೆ ಕೊಡಲೇ ಕೊಡಬೇಕಾದವರಿಗೂ, ಶೋಕಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಲ್ಪೀಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಡಿವಾರಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[9] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಜಪವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಶಾಸ್ತ್ರನ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಜನವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೩
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[10] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2206 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ ನೇ ಸೆಪ್ಟಂಬರ್ ೧೯೩೨ [ಸಂಚಿಕೆ ೧೭

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.
ಅಥವಾ
ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಮಹಾಭಿಮಾನಿಗಳು ಅವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಚರ್ಚೆಗೆ ಮುಂದಾಗಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲುಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Insure with
UNIQUE ASSURANCE Co., Ltd.

and thereby support Swadeshism, for Deshabandhu late Mr. C. R. Das was the First Patron of this Company. 50% increase in New Business even in an year of world-wide financial crisis speaks for the Company's popularity. Lowest Premium Rates. Last quinquennial Bonus Rs. 50/- per thousand. Better result expected in next valuation upto 31-5-32 now being made.

For particulars of liberal Hereditary Commision etc.

Please apply to—
MR. E. K. PALIA M.A., ETC.,
Chief Agent,
3 16, Church Road, Mysore.

ಒಳದೇಶದ ವೃತ್ತಾಂತಗಳು

ಇದೇ ಸೆಪ್ಟಂಬರ್ 1 ನೇ ತಾರೀಖಿನಿಂದ ಮೈಸೂರು ರೈಲ್ವೆಗಳ ಕಾಲನಿಯಮಗಳು ಬದಲಾಯಿಸಲ್ಪಟ್ಟಿರುವುವು. ಪೂರ್ವದಂತೆ ಮೈಸೂರಿನಿಂದ ಶಿವಮೊಗ್ಗಾಕ್ಕೆ ಸೀದಾ ಗಾಡಿಯು ಬಿಡಲ್ಪಡುತ್ತಿರುವುದು.

ರಾಜಸೇವಾಸಕ್ತ ದಿವಾನಬಹದ್ದೂರ್ ಕೆ. ಆರ್. ಶೇಷಾಚಾರ್ಯರವರೂ, ಹೈಕೋರ್ಟ ಜಡ್ಜರಾದ ಶ್ರೀ|| ಪಿ. ಮಹಾದೇವಯ್ಯನವರೂ ಮೈಸೂರುಯೂನಿವರ್ಸಿಟಿ ಕೌನ್ಸಿಲ್ಲಿನ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬೆಂಗಳೂರಿನ 'ತಾಯಿನಾಡು' ಪತ್ರಿಕೆಯ 6ನೆಯ ವಾರ್ಷಿಕೋತ್ಸವದ ಸಂಬಂಧವಾಗಿ ಇದೇ ಸೆಪ್ಟೆಂಬರ್ 11 ನೆಯ ತಾರೀಖು ಭಾನುವಾರ ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಮೈಸೂರು, ತಿರುವಾಂಕೂರು ಮತ್ತು ಬರೋಡಾ ಸಂಸ್ಥಾನಗಳ ಮಾಜಿ ದಿವಾನರಾದ ಶ್ರೀ|| ವಿ. ಪಿ. ಮಾಧವರಾವ್ ಸಿ.ಐ. ಇವರ ಅಧ್ಯಕ್ಷತೆಯಲ್ಲಿ ಮೈಸೂರಿನ ವೃದ್ಧಪಿತಾಮಹರಾದ ಶ್ರೀ|| ಎಂ. ವೆಂಕಟಕೃಷ್ಣಯ್ಯನವರ ಭಾವಚಿತ್ರದ ಅನಾವರಣೋತ್ಸವವು ನಡೆಸಲ್ಪಡುವುದು. ಶ್ರೀ|| ಡಿ. ಪಿ. ಗುಂಡಪ್ಪನವರು, ಶ್ರೀ|| ಎಂ. ವೆಂಕಟಕೃಷ್ಣಯ್ಯನವರ ಜೀವಮಾನಚರಿತ್ರೆಯ ವಿಷಯವಾಗಿ ಭಾಷಣವನ್ನು ಮಾಡುವರು. ಮಹಾಜನರು ದಯವಿಟ್ಟು ಆಗಮಿಸಿ ಸಮಾರಂಭವು ನಿರ್ವಿಘ್ನವಾಗಿ ನೆರವೇರುವಂತೆ ಮಾಡಬೇಕೆಂದು ಕೋರಲ್ಪಟ್ಟಿದೆ.

ಭರತಖಂಡದ ಸದ್ಯದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುವದಕ್ಕೋಸ್ಕರ ಇಂಡಿಯಾಕ್ಕೆ ಬಂದಿರುವ ಲಂಡನ್ನಿನ ಇಂಡಿಯಾ ಲೀಗಿನವರು ಕಳೆದ ಆಗಸ್ಟ ೨೯ ನೇ ತಾರೀಖಿನ ದಿವಸ ಬೆಂಗಳೂರಿಗೆ ಬಂದರು. ಮಿ|| ಬೇಲೂರ್‌ರವರು, ವೆಂಕಟಪತಯ್ಯನವರು, ಸುಬ್ಬರಾಮಶೆಟ್ಟರು, ರಜ್ಜಯವರು, ರಾಮಶರ್ಮರವರು, ವಾಜಪೇಯಂ ವೆಂಕಟೇಶಯ್ಯನವರೇ ಮೊದಲಾದವರು ಸ್ಟೇಷನ್ನಿನಲ್ಲಿ ಕಾದಿದ್ದು ಲೀಗಿನವರನ್ನು ಸತ್ಕರಿಸಿದರು. ಲೀಗಿನ ಮೆಂಬರರಲ್ಲಿ ಒಬ್ಬರಾದ ಮಿ|| ಎಲ್. ಡಬ್ಲ್ಯೂ. ಮ್ಯಾಟರ್ಸ್‌ರವರು ಎರಡು ದಿವಸಗಳ ವರೆಗೆ ಮಿ|| ಬೇಲೂರ್‌ರವರ ಅತಿಥಿಗಳಾಗಿದ್ದು ಸದ್ಯದ ರಾಜಕೀಯ ವಿಚಾರವಾಗಿ ಅನೇಕ ಮುಖಂಡರೊಡನೆ ಮಾತುಕಥೆಗಳನ್ನಾಡಿ ಮುಂದಕ್ಕೆ ಪ್ರಯಾಣ ಬೆಳೆಸಿದರು.

ರಾಜಧಾನಿಯಲ್ಲಿ ಸುಪ್ರಸಿದ್ಧ ಅಡ್ವೋಕೇಟರಾಗಿದ್ದ ಶ್ರೀಮಾನ್ ಕೆ. ಚಂದ್ರಶೇಖರಯ್ಯನವರು ಕೆಲವು ತಿಂಗಳು ಅಸ್ವಸ್ಥರಾಗಿದ್ದು ಈ ತಿಂಗಳು ೧ನೇ ತಾರೀಖಿನ ದಿವಸ ದಿವಂಗತರಾದರೆಂಬ ವರ್ತಮಾನವನ್ನು ತಿಳುಹಿಸಲು ವಿಷಾದಪಡುತ್ತೇವೆ. ಇವರು ಸಂಸ್ಕೃತ ಇಂಗ್ಲಿಷ್ ಮತ್ತು ಉರ್ದುಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರಲ್ಲದೆ ಅಡ್ವೋಕೇಟರುಗಳಲ್ಲೆಲ್ಲಾ ಅಗ್ರಸ್ಥಾನವನ್ನು ಪಡೆದಿದ್ದರು. ಮತ್ತು ಧಾರ್ಮಿಕರೂ ನ್ಯಾಯವಾದಿಗಳೂ ನಿಷ್ಪಕ್ಷಪಾತಿಗಳೂ ಕರ್ಮಠರೂ ಧೈರ್ಯಶಾಲಿಗಳೂ ಆಗಿದ್ದರು. ಇವರು 70 ವರ್ಷದವರಾಗಿದ್ದರೂ ಇವರಲ್ಲಿದ್ದ ಅನಿತರಸಾಧಾರಣವಾದ ಬುದ್ಧಿಕೌಶಲ ಉತ್ಸಾಹಶಕ್ತ್ಯಾದಿಗಳನ್ನು ನೋಡಿ ಇವರ ವಿಯೋಗದಿಂದ ರಾಜಧಾನಿಯ ಪ್ರಜೆಗಳು ಬಹಳವಾಗಿ ಪರಿತಪಿಸುತ್ತಿರುವರು. ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯುವುದಲ್ಲದೆ ಇವರ ಕುಟುಂಬವರ್ಗಕ್ಕುಂಟಾದ ದುಃಖವನ್ನು ಶಮನಗೊಳಿಸಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಸರಕಾರದವರು ಬ್ರಿಟಿಷ್‌ಸರಕಾರಕ್ಕೆ ಪಾವತಿಮಾಡುತ್ತಿರುವ ಪೊಗದಿಯ ವಿಷಯವಾಗಿ ಡೇವಿಡ್‌ಸನ್ ಕಮಿಟಿಯವರು ಮಾಡಿರುವ ಶಿಫಾರಸನ್ನು ನಿಷೇಧಿಸುವದಕ್ಕೂ, ಬೆಂಗಳೂರುದಂಡನ್ನು ಮೈಸೂರು ಸರ್ಕಾರಕ್ಕೇ ಹಿಂತಿರುಗಿ ಕೊಡಬೇಕೆಂಬ ಪ್ರಜೆಗಳ ಅಭಿಪ್ರಾಯವನ್ನು ಬ್ರಿಟಿಷ್ ಸರಕಾರಕ್ಕೆ ತಿಳುಹಿಸುವುದಕ್ಕೂ ಸಂಸ್ಥಾನದ ಮುಖಂಡರ ಮಹಾಸಭೆಯು ಇದೇ ಸೆಪ್ಟಂಬರ್ 11ನೆಯ ತಾರೀಖು ಭಾನುವಾರ ಸಾಯಂಕಾಲ ಬೆಂಗಳೂರು ಲಾಲ್‌ಬಾಗ್ ಉದ್ಯಾನವನದ ಕನ್ನಡಿಯಮಂದಿರದಲ್ಲಿ ನಡೆಯುವಂತೆ ಏರ್ಪಾಡಾಗಿರುವುದು. ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು, ಮಿ|| ಎಂ. ಶಾಮರಾಯರು, ಎಂ. ಹಿರಿಯಣ್ಣನವರು, ಬಿ. ಅಬ್ದುಲ್ ರಹಿಮಾನ್, ಎಸ್. ಸಜ್ಜನರಾವ್, ಪಿ. ಸುಬ್ಬರಾಮಶೆಟ್ಟರು, ವಿ. ವೆಂಕಟಪ್ಪನವರು, ಬಿ. ಕೆಂಪಣ್ಣನವರು, ಎ. ವಿ. ನರಸಿಂಹಯ್ಯಂಗಾರ್ರವರೇ ಮೊದಲಾದವರು ಈ ಸಭೆಯ ಸಂಚಾಲಕರಾಗಿ ನಿಂತಿರುತ್ತಾರೆ. ಸಂಸ್ಥಾನದ ಪ್ರಜಾಪ್ರತಿನಿಧಿಸಭೆ, ಡಿಸ್ಟ್ರಿಕ್ಟ್‌ಬೋರ್ಡ್, ಮುನಿಸಿಪಾಲಿಟಿ ಮತ್ತು ಇನ್ನೂ ಇತರ ಎಲ್ಲ ಸಂಸ್ಥೆಗಳ ಮೆಂಬರರಿಗೂ ಆಹ್ವಾನಗಳು ಕಳುಹಿಸಲ್ಪಟ್ಟಿವೆ.

ಇಂಡಿಯಾಸರಕಾರದವರು ಭರತಖಂಡದ ಮುಂದಿನ ರಾಜ್ಯಾಂಗರಚನೆಯ ಸಂಬಂಧವಾಗಿ ಮೂರನೆಯ ದುಂಡುಮೇಜಿನ ಪರಿಷತ್ತೊಂದನ್ನು ಕೂಡಿಸುವ ವಿಷಯವಾಗಿ ಹಲವು ಮುಖಂಡರೊಡನೆ ಮಾತುಕಥೆಗಳನ್ನು ನಡೆಸುತ್ತಿರುವರು. ಇದೇ ಸಂಬಂಧದಲ್ಲಿ ಸರ್ ಸಪ್ರೂರವರು ವೈಸರಾಯರವರಿಂದ ಡೆಹರಾಡೂನಿಗೆ ಆಹ್ವಾನಿಸಲ್ಪಟ್ಟಿದ್ದರು. ಈ ಮಧ್ಯೆ ಮಿ|| ಎಂ. ಆರ್. ಜಯಕರ್‌ರವರು ತಮ್ಮದೊಂದು ಹೇಳಿಕೆಯಲ್ಲಿ 1-2 ನೆಯ ದುಂಡುಮೇಜಿನ ಪರಿಷತ್ತುಗಳ ಕಾಲದಲ್ಲಿನ ವಾತಾವರಣವನ್ನು ಪುನಃ ಕಲ್ಪಿಸುವವರೆಗೂ ಹಾಗೂ, ಬ್ರಿಟಿಷ್ ಮತ್ತು ಹಿಂದೂಸ್ಥಾನದ ಪ್ರತಿನಿಧಿಗಳು ಸರಿಸಮಾನಸ್ಕಂದರಂತೆ ಕಲೆತು ತೀರ್ಮಾನಿಸುವ ವಿಷಯಗಳ ಮೇಲೆ ಮುಂದಿನ ರಾಜ್ಯಪದ್ಧತಿಯನ್ನು ರಚಿಸುವೆವೆಂದು ಬ್ರಿಟಿಷ್ ಸರಕಾರದವರು ಭರವಸೆಯನ್ನು ಕೊಡುವವರೆಗೂ ತಾವು ಯಾರೂ ಮುಂದಿನ ಕೆಲಸಗಳಲ್ಲಿ ಸಹಕರಿಸುವದಿಲ್ಲವೆಂದು ಹೇಳಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪರಿಶುದ್ಧವಾದ ಸತ್ಯವೇದ.

ಈ ಪ್ರಪಂಚದಲ್ಲಿ ಅನೇಕ ದೇಶಗಳಿರುವುವು. ಜನಾಂಗಗಳೂ ಅನೇಕವಾಗಿರುತ್ತವೆ. ಎಲ್ಲಾ ಜನಾಂಗದಲ್ಲಿಯೂ ದುಷ್ಟನಿಗ್ರಹ ಶಿಷ್ಟಪರಿಪಾಲನಕ್ಕೂ ಲೌಕಿಕಪಾರಲೌಕಿಕ ಸುಖಪ್ರಾಪ್ತಿಗೂ ಸಾಧಕಗಳಾದ ನಿಯಮಗಳು ಮಾಡಲ್ಪಟ್ಟಿರುವುವು. ಆ ನಿಯಮಗಳು ದೈವಿಕವಾಗಿಯೂ ಮಾನುಷಿಕವಾಗಿಯೂ ನಿರೂಪಿಸಲ್ಪಟ್ಟಿರುವುವು. ದೇವರಿಂದ ಹೇಳಲ್ಪಟ್ಟದ್ದು ದೈವಿಕ ಮನುಷ್ಯರಿಂದ ಮಾಡಲ್ಪಟ್ಟದ್ದು ಮಾನುಷಿಕ. ದೈವಿಕವಾದ ವಿಷಯಗಳು ಕಾಲದೇಶವರ್ತಮಾನಗಳಿಂದ ವ್ಯತ್ಯಾಸವನ್ನು ಹೊಂದುವುದಿಲ್ಲ. ನಮ್ಮ ದೃಷ್ಟಿಪಥಕ್ಕೆ ಬೀಳತಕ್ಕ ಸಕಲವಸ್ತುಗಳಿಗೂ ಸೃಷ್ಟಿಸ್ಥಿತಿಪ್ರಳಯಗಳು ಇರುತ್ತವೆ. ಇದು ಅನುಭವಸಿದ್ಧವಾಗಿ ಇದೆ. ಹೀಗೆ ಪ್ರತ್ಯಕ್ಷ ಅನುಮಾನಪ್ರಮಾಣಗಳಿಗೆ ಗೊತ್ತಾಗತಕ್ಕವುಗಳು ದೈವಿಕವೆಂದು ಹೇಳಬಹುದು. ಆ ವಿಧಿನಿಷೇಧಗಳನ್ನು ದೇವರು ಮಾಡಿರುವನೆಂದು ನಿರೂಪಿಸುವುದು ಕಷ್ಟವಾದಾಗ್ಯೂ ಇವುಗಳಿಗೆ ಕಾಲದೇಶವರ್ತಮಾನಗಳಿಂದ ಯಾವಬಾಧಕವೂ ಉಂಟಾಗದೆ ಇರುವುದರಿಂದ ಇವುಗಳು ದೈವಿಕವೆಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಮಾನುಷಿಕವಾದ ವಿಧಿನಿಷೇಧಗಳು ಕಾಲದೇಶವರ್ತಮಾನಗಳಿಂದ ವ್ಯತ್ಯಾಸವಾಗುತ್ತವೆ. ಮನುಷ್ಯರ ಮನೋಭಾವಗಳು ವ್ಯತ್ಯಾಸವಾದ ಹಾಗೆಲ್ಲಾ ಈ ವಿಧಿನಿಷೇಧಗಳೂ ವ್ಯತ್ಯಾಸವಾಗುವುವು. ಇದಕ್ಕೆ ಎಷ್ಟೋ ಉದಾಹರಣೆಗಳಿರುವುವು. ಒಂದೆರಡನ್ನು ಉದಹರಿಸಿದರೆ ಸಾಕು. ಅಹಿಂಸೆಯೇ ಪರಮಧರ್ಮವೆಂದು ಅನೇಕ ಮತಗ್ರಂಥಗಳು ಹೇಳುತ್ತವೆ. ದೇವತೆಗಳ ಪ್ರೀತ್ಯರ್ಥವಾಗಿ ಹಿಂಸೆಯನ್ನು ಮಾಡಿದರೆ ಅದೂ ಪರಮಧರ್ಮವೆಂದು ಕೆಲವು ಮತಗ್ರಂಥಗಳು ಹೇಳುತ್ತವೆ. ಪ್ರಾಣಿಗಳಿಗೆ ಹಿಂಸೆಯನ್ನು ಮಾಡಕೂಡದೆಂದು ಒಂದು ಕಡೆ ಹೇಳುವುದು. ಯಜ್ಞಯಾಗಗಳಲ್ಲಿ ಪ್ರಾಣಿಹಿಂಸೆಯನ್ನು ಮಾಡಬಹುದೆಂದು ಮತ್ತೊಂದು ಕಡೆ ಹೇಳುವುದು ಇದನ್ನು ಪೋಷಿಸುವುದಕ್ಕೆ ಈ ಎರಡು ಪಕ್ಷದವರು ತಮ್ಮ ಕೌಶಲ್ಯವನ್ನು ತೋರಿಸುವರು. ಇದನ್ನು ನೋಡಿದರೆ ಗೆಲ್ಲಬೇಕೆಂದು ವಾಕ್ಯಾರ್ಥವನ್ನು ಮಾಡತಕ್ಕವರು ಹೇಗೆ ತಮ್ಮ ಬುದ್ಧಿಶಕ್ತಿಯನ್ನು ದುರುಪಯೋಗಪಡಿಸುವರೋ ಅದು ಗೊತ್ತಾಗುತ್ತದೆ. ಅಹಿಂಸೆಯೇ ಪರಮಧರ್ಮವೆಂದು ಹೇಳತಕ್ಕವರು ಹಿಂಸೆಯೂ ಕೂಡ ಪರಮಧರ್ಮವೆಂದು ಸಾಧಿಸುವರು. ಬಲಿಯೆಂದರೆ ಪೂಜೆಯೆಂದು ಅರ್ಥಹೇಳುವರು. ಯಜ್ಞವೆಂದರೆ ದುರ್ವಿಷಯಗಳಲ್ಲಿ ಆಸಕ್ತಿಗಳಾದ ಇಂದ್ರಿಯಗಳನ್ನು ನಿಗ್ರಹಿಸುವುದೆಂದು ಅರ್ಥಮಾಡುವರು. ಇಂದ್ರಿಯಗಳೇ ಪಶುಗಳೆಂದು ಅರ್ಥಹೇಳುವರು. ಈ ರೀತಿಯಲ್ಲಿ ಕೆಲವರು ಈ ಅಸಂಬದ್ಧಪ್ರಲಾಪಗಳಿಗೆ ತಮ್ಮ ಬುದ್ಧಿಶಕ್ತಿಯಿಂದ ಐಕಮತ್ಯವನ್ನುಂಟುಮಾಡುವರು. ಅನೇಕರು ಪದಗಳಿಗೆ ಶಬ್ದಾರ್ಥವೇ ನಿಜವಾದ ಅರ್ಥವೆಂದು ತಿಳಿದುಕೊಂಡು ನರಬಲಿ, ಪಶುಬಲಿ, ಮೊದಲಾದುವುಗಳನ್ನು ಕೊಟ್ಟು ಈ ಬಲಿಯಿಂದ ದೇವರು ತೃಪ್ತನಾಗಿರುವನೆಂದು ಭಾವಿಸಿಕೊಂಡು, ನರಮೇಧ, ಅಶ್ವಮೇಧ, ನಾನಾವಿಧವಾದ ಪಶುಮೇಧಗಳನ್ನು ಮಾಡಿ ದೇವರು ಮಾಂಸಭಕ್ಷಕನೆಂದು ನಿರೂಪಿಸಿ ಅಪಚಾರದ ಪರಾಕಾಷ್ಠೆಯನ್ನು ಹೊಂದುತ್ತಾರೆ. ಇದು ತುಂಬಾ ಶೋಚನೀಯವಾದದ್ದು. ವೇದಶಾಸ್ತ್ರಪುರಾಣೇತಿಹಾಸಗಳಲ್ಲಿ ಇಂಥಾ ಪ್ರಕ್ಷಿಪ್ತವಚನಗಳು ದೇವರಿಂದ ಹೇಳಲ್ಪಟ್ಟ ಧರ್ಮಗಳೆಂದು ತಿಳಿದುಕೊಂಡು ಅನೇಕರು ಪಾಪಕರ್ಮಗಳನ್ನು ಮಾಡಿ ಇಹಪರ ಸೌಖ್ಯಗಳನ್ನು ಕಳೆದುಕೊಳ್ಳುವರು. ವಿಚಾರಪರರಿಗೆ ಅವಕಾಶವನ್ನುಂಟುಮಾಡಿ ಇವುಗಳನ್ನು ತಪ್ಪಿಸುವುದು ಅತ್ಯಾವಶ್ಯಕ. ಈ ವಿಚಾರವನ್ನು ಮಾಡದೇ "ಕೋಣ ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು" ಎಂದು ಹೇಳತಕ್ಕವರಿಗೆ ಅನೇಕ ಪಾಪಗಳು ಸಂಘಟನೆಯಾಗುತ್ತವೆ. ಇವುಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ನಿಜವಾದ ಮುಮುಕ್ಷುಗಳಿಗೆ ಮುಖ್ಯ ಕರ್ತವ್ಯ.

ಎಂ. ವೆಂಕಟಕೃಷ್ಣಯ್ಯ.

ದೇವದಾಸಿಯರು.

ದೇವದಾಸಿಯರೆಂಬ ಪಂಗಡವು ಪೂರ್ವಕಾಲದಲ್ಲಿ ಯಾವ ಸದುದ್ದೇಶದಿಂದ ಏರ್ಪಾಡುಮಾಡಲ್ಪಟ್ಟಿತೋ ಅದು ಕಾಲಾಂತರಗಳಿಂದ ಪ್ರಪಂಚವೆಲ್ಲವೂ ಆವರಿಸಿ ಮಾನವಕೋಟಿಗೆ ಶರೀರಸಂಬಂಧವಾಗಿಯೂ, ನೈತಿಕಸಂಬಂಧವಾಗಿಯೂ ಹೇಳಲಾರದಷ್ಟು ಕೇಡನ್ನುಂಟುಮಾಡಿರುವುದು ಸರ್ವರಿಗೂ ವೇದ್ಯವಾಗುತ್ತಲೇ ಇದೆ. ಇಂಥ ನವೀನಕಾಲದಲ್ಲಿಯೂ ದೇವದಾಸಿಯರು ವಿವಾಹವಾಗದೆ ಅವರ ಯಾವಜ್ಜೀವಪರ್ಯಂತರವೂ ಬ್ರಹ್ಮಚಾರಿಣಿಯರಾಗಿದ್ದು ಮಾನವಸೇವೆಗೂ ಭಗವತ್ಸೇವೆಗೂ ತಮ್ಮ ಶರೀರವನ್ನು ಅರ್ಪಿಸಬೇಕೆಂಬ ನಿಯಮವೇ ಬಹಳಕಾಲದಿಂದಲೂ ಆಚರಣೆಗೆ ಬಂದ ತಮ್ಮ ಮತಧರ್ಮಪ್ರವೃತ್ತಿಯೆಂದು ಈ ಪಂಗಡಕ್ಕೆ ಸೇರಿದ ಅನೇಕರು ಅಭಿಪ್ರಾಯಪಡುತ್ತಾರೆ.

ನೀತಿವಿರುದ್ಧವಾದ ಈ ಪ್ರವರ್ತನೆಯು ತುಂಬಾಶೋಚನೀಯವಾದದ್ದು. ಈ ಪಂಗಡದ ದುರಾಚಾರಪರಿಣಾಮವು ಮುಖ್ಯವಾಗಿ ಪಟ್ಟಣಗಳಲ್ಲಿ ಅಧಿಕವಾಗಿ ವ್ಯಾಪಿಸಿ ಅವರ ಗೃಹಗಳಲ್ಲಿ ಕಳ್ಳತನ, ಜೂಜು, ಮಾದಕದ್ರವ್ಯಗಳ ಸೇವನೆ ವ್ಯಾಜ್ಯಗಳೇ ಮುಂತಾದ ನೀಚಕೃತ್ಯಗಳು ವಿಶೇಷವಾಗಿ ನಡೆಯುತ್ತಾ ಬರುತ್ತಿರುವುವು. ನಮ್ಮ ಮೈಸೂರುದೇಶದಲ್ಲಿ ಅಲ್ಲದೆ ಇತರ ದೇಶಗಳಲ್ಲಿಯೂ ಹೆಚ್ಚುರೀತಿಗೆ ಬಂದ ಸಾಮಾನ್ಯವಿಷಯವಾಗಿದೆ. ಅಲ್ಲದೆ ದೇಶದ ಸ್ತ್ರೀಪುರುಷರ ದೌರ್ಬಲ್ಯಕ್ಕೂ, ಬಡತನಕ್ಕೂ, ಬಗೆಬಗೆಯ ಭಯಂಕರವಾದ ಮೇಹರೋಗಗಳಿಗೂ ಈ ಪಂಗಡದವರ ದುರಾಚಾರವೇ ಕಾರಣವೆಂದು ಅನೇಕ ಆಂಗ್ಲೇಯ ಮತ್ತು ಹಿಂದು ವೈದ್ಯ ಪಂಡಿತರು ಅನೇಕ ಸಲಹೆಗಳನ್ನು ಕೊಟ್ಟಿರುತ್ತಾರೆ. ಅನಾದಿಯಿಂದ ಬಂದ ಈ ವೃತ್ತಿಯನ್ನು ಸಾಧ್ಯವಾದಮಟ್ಟಿಗೂ ನಿಲ್ಲಿಸಲು ಇಂಡಿಯಾದೇಶದ ದೊಡ್ಡದೊಡ್ಡ ಪಟ್ಟಣಗಳಲ್ಲಿ ಒಂದುಬಗೆ ಕಾನೂನನ್ನು ಜಾರಿಗೆ ತಂದಿರುವುದಲ್ಲದೆ ಮದ್ರಾಸು ಮತ್ತು ತಿರುವಾಂಕೂರುನಗರಗಳಲ್ಲಿ ಇದೇ ಕಾನೂನನ್ನೇ ಜಾರಿಗೆತರಲು ಅಲ್ಲಿನ ಗಣ್ಯಪ್ರಜೆಗಳು ಹೆಚ್ಚು ಶ್ರದ್ಧೆಯನ್ನು ವಹಿಸಿರುವುದಕ್ಕಾಗಿ ಅಲ್ಲಿನ ಪ್ರಜೆಗಳು ಅವರಿಗೆ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸಲ್ಲದೇ. ನಮ್ಮ ಮೈಸೂರು ದೇಶದಲ್ಲಿಯೂ ದಿನದಿನಕ್ಕೂ ಪ್ರಬಲವಾಗುತ್ತಿರುವ ವೇಶ್ಯಾವೃತ್ತಿಯನ್ನು ಸಾಧ್ಯವಾಗುವ ಮಟ್ಟಿಗೂ ಅಡಗಿಸುವುದಕ್ಕಾಗಿಯೇ ಮೇಲ್ಕಂಡ ಕಾನೂನನ್ನೇ ಇಲ್ಲಿಯೂ ಜಾರಿಗೆ ತರುವುದಕ್ಕಾಗಿ ಮ|| ಡಿ. ಎಸ್. ಮಲ್ಲಪ್ಪನವರೇ ಮೊದಲಾದ ಸದಸ್ಯರುಗಳು ಬಹಳ ವಿಶ್ವಾಸದಿಂದ ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ಅರಿಕೆಮಾಡಿಕೊಂಡಿರುವುದು ನಮ್ಮ ದೇಶದ ಸರ್ವಜನಾಂಗದವರಿಗೂ ವಿಶೇಷ ಹೆಮ್ಮೆಯನ್ನುಂಟುಮಾಡತಕ್ಕದ್ದಾಗಿದೆ. ಮಹದಾಶಯಸ್ಥಾನವಾದ ನಮ್ಮ ಮೈಸೂರುಸರ್ಕಾರದವರು ಮೇಲ್ಕಂಡ ಕಾನೂನನ್ನು ಇಲ್ಲಿಯೂ ಜಾರಿಗೆತಂದು ದೇಶಕ್ಕೆ ದೇವದಾಸಿಯರ ಪಂಗಡದವರಿಂದುಂಟಾಗುವ ಅನಾಹುತಗಳನ್ನು ತಪ್ಪಿಸುತ್ತಾರೆಂದು ನಂಬುತ್ತೇನೆ.

ಜರಗನಹಳ್ಳಿ, ನಂಜುಂಡಪ್ಪ.

4-11-68

ನೀತಿಬೋಧಾಮೃತ

ಮಾನವನ ಸೌಖ್ಯಕ್ಕೆ ತೃಪ್ತಿಯೇ ಮುಖ್ಯಸಾಧನೆ.

(ತತ್ವ[illegible])

ಭಗವಂತನು ಮಾನವನ ಸುಖಕ್ಕಾಗಿಯೇ ಈ ಬ್ರಹ್ಮಾಂಡವನ್ನೂ, ಅನಂತಚರಾಚರವಸ್ತುಗಳನ್ನೂ ನಿರ್ಮಿಸಿ, ಅನಂತರ ಅವುಗಳ ಮಧ್ಯದಲ್ಲಿ ಮಾನವರಾದ ನಮ್ಮನ್ನು ಸೃಷ್ಟಿಸಿರುತ್ತಾನೆ. ಮಾನವನ ಜೀವಿತಸೌಖ್ಯಕ್ಕಾಗಿ ಅನಂತವಸ್ತುಗಳೂ, ಜೀವಿಗಳೂ ಕೋಟ್ಯನುಕೋಟಿಯಾಗಿ ಭಗವಂತನು ನಿರ್ಮಿಸಿರುವುದು ನಮ್ಮ ದೃಷ್ಟಿಗೆ ಗೋಚರವಾಗುತ್ತಲೇ ಇದೆ. ಇಂತಹ ಜೀವಿಗಳಿಗೆ ಸಾಧಕವಾದವಸ್ತುವನ್ನೂ, ನಿರಂತರವೂ ಬೇಕಾಗಿರುವ ಪಂಚಭೂತಗಳನ್ನೂ, ಸಾರವತ್ತಾದ ಧಾನ್ಯಗಳ ಬೀಜರಾಶಿಗಳನ್ನೂ ಸೃಷ್ಟಿಸಿ, ತಾನಾಗಿಯೇ ಬೆಳೆಯುವಶಕ್ತಿಯನ್ನು ಅವುಗಳಲ್ಲಿಟ್ಟು ವಿರಾಜಿಸುವಂತೆ ಮಾಡಿರುವನು. ಇಷ್ಟುಅನುಕೂಲವಾದ ಸಕಲಸಾಮಗ್ರಿಗಳನ್ನು ಮಾನವರಾದ ನಮಗೆ ಕೊಟ್ಟಿರುತ್ತಾ, ಅವುಗಳಮಧ್ಯೆ ನಮ್ಮನ್ನು ಸೃಷ್ಟಿಸಿ—'ಎಲೈ ಮಾನವನೇ! ನನ್ನಿಂದ ಸೃಷ್ಟಿಸಲ್ಪಟ್ಟ ನಿನ್ನ ಶರೀರವನ್ನು ಪೋಷಿಸಿಕೊಳ್ಳುವಂತಹ ಸಮೀಚೀನವಾದ ಇಂದ್ರಿಯಗಳನ್ನು ಕೊಟ್ಟಿರುವೆನು. ಇವುಗಳ ಸಹಾಯದಿಂದ, ಸುಖಜೀವನಮಾಡಿಕೊಂಡಿರು. ಯಾರನ್ನೂ, ಏನನ್ನೂ ಯಾಚಿಸಬೇಡ' ಎಂದು ಅಪ್ಪಣೆಕೊಟ್ಟಿರುವನು. ಈ ಮಾನವನು ಹಾಗೆಮಾಡಿಕೊಳ್ಳದೆ ಸೋಮಾರಿಯಾಗಿ, ವಿವೇಕವನ್ನು ಹಾಳುಮಾಡಿಕೊಂಡು, ಇಂದ್ರಿಯಗಳನ್ನು ತೃಪ್ತಿಪಡಿಸಲೋಸುಗ ಮೇರೆಯನ್ನು ಮೀರಿ ವರ್ತಿಸುವವನಾಗಿದ್ದಾನೆ. ಹೀಗೆ ಹೋಗಲು ಇವನ ಆಶೆಯೇ ಮುಖ್ಯಕಾರಣವು. ಈ ಆಶೆಗೆ ಕೊನೆ ಮೊದಲೇ ಇಲ್ಲ. ಇಂತಹ ಆಶಾಸ್ತ್ರೀಯನ್ನು ದಾಸಳನ್ನಾಗಿಮಾಡಿಕೊಂಡು ವರ್ತಿಸುವುದಲ್ಲದೆ, ಭಗವಂತನು ನಮಗೆ ಕೊಟ್ಟಿರುವಷ್ಟರಲ್ಲಿಯೇ ತೃಪ್ತಿಹೊಂದಿ ಬಾಳುವವರೇ ಲೋಕದಲ್ಲಿ ಮಾನ್ಯರೆನಿಸಿ, ಸುಖಜೀವಿತವುಳ್ಳವರಾಗಿ ಬಾಳುವರು.

ಮೇಲ್ಕಂಡ ವಿಷಯಗಳನ್ನು ಪರ್ಯಾಲೋಚಿಸಿ, ದೇವನ ಮಹಿಮೆಯನ್ನು ಕುರಿತು ಯೋಚಿಸುತ್ತಾ ಹೋದರೆ, ಅವನ ಅಪಾರವಾತ್ಸಲ್ಯವನ್ನು ಪರಿಗಣಿಸಲು ಅಸಾಧ್ಯವೂ ಮತ್ತು ಆಶ್ಚರ್ಯವೂ ಆಗಿರುವುದು. ಎಲೈ ಮಾನವನೇ! ನೀನು ಚಿತ್ತದಲ್ಲಿ ನೆನಸುವ ಆಶಾತರಂಗಗಳೇನೆಂಬುದನ್ನು ಭಗವಂತನು ಬಲ್ಲನು. ನೀನೂ ಬಲ್ಲೆ. ಮನೋಗತವಾದ ವಿಷಯಗಳ ಫಲಾಫಲಗಳನ್ನು ಪಡೆಯಲು ಕಾರಣಗಳನ್ನು ಕೋರಿಸುತ್ತಾ, ಮೋಹದಭಿಲಾಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಭಾರಕರ್ತನಾದ ಪರಮಾತ್ಮನ ಸಹಾಯದಿಂದ ಕಾರ್ಯಗಳನ್ನು ಸಾಧನೆಮಾಡುತ್ತಾ, ಅವುಗಳಿಂದ ಹೊಂದುವ ಫಲಾಫಲಗಳನ್ನು ಪಡೆಯಲು ಕಾರಣಗಳನ್ನು ಕೋರಿಸುತ್ತಾ, ಮೋಹದಿಂದ ಕೋರಿದ ಅಭಿಲಾಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಭಾರಕರ್ತನಾದ ಪರಮಾತ್ಮನ ಸಹಾಯದಿಂದ ಕಾರ್ಯಗಳನ್ನು ಸಾಧನೆಮಾಡುತ್ತಾ, ಅವುಗಳಿಂದ ಹೊಂದುವ ಫಲಾಫಲಗಳ ಸಮೂಹವನ್ನು ಯೋಚಿಸಿದುದಾದರೆ, ಹಿಂದಣಜನ್ಮದ ಪಾಪಪುಣ್ಯಗಳಿಗನುಸಾರವಾದ ಫಲಗಳು ಲಭಿಸುವುವು ಎಂದು ತಿಳಿದುಕೊಳ್ಳುವುದು ನಿನ್ನ ಮೊದಲನೆಯ ಕರ್ತವ್ಯವಾಗಿರುವುದು. ಅವುಗಳನ್ನು ನಿವಾರಣೆಮಾಡಿಕೊಳ್ಳುವೆನೆಂದು ಪ್ರಯತ್ನಿಸಿದರೆ ಅಸಾಧ್ಯವಾಗುವುದರಿಂದ ಸುಖವೋ, ದುಃಖವೋ ಇವುಗಳಲ್ಲಿಯೇ ತೃಪ್ತಿಯನ್ನು ಹೊಂದುತ್ತಿರಬೇಕು.

ಈ ರೀತಿಯಲ್ಲಿ ಪ್ರಾಪ್ತವಾದ ಸುಖದುಃಖಗಳು ಭಗವಂತನ ಪ್ರೇರಣೆಯಂತೆ ಪ್ರಾಪ್ತವಾಗಿರುವುವೆಂದು ತಿಳಿದುಕೊಂಡು ಮನಸ್ಸನ್ನು ದೃಢಮಾಡಿಕೊಂಡು ಅಡಿಗಡಿಗೆ ಪ್ರಾಪ್ತವಾಗುತ್ತಿರುವ ತೊಂದರೆಗಳಿಗೆ ಕಾರಣವೇನೆಂಬುದನ್ನು ತಿಳಿದು ತಿದ್ದಿಕೊಳ್ಳುತ್ತಾ ಪ್ರಾಪ್ತವಾಗಿರುವ ಭಾಗ್ಯ ಮತ್ತು ಅಧಿಕಾರ ಇವುಗಳೆಲ್ಲಾ ನಿನ್ನ ಹಿಂದಣಸಂಸ್ಕಾರಬಲದಿಂದ ಪ್ರಾಪ್ತವಾಗಿರುವುದೆಂದು ಭಾವಿಸಿ ಶಾಂತಚಿತ್ತನಾಗಿರಬೇಕು. ಈ ಮಾನವಲೋಕದಲ್ಲಿ ಧನವೇ ಮಾನವನ ಬಹಿಃಪ್ರಾಣವೆಂಬುದಾಗಿ ತಿಳಿದಿರುತ್ತಾ, ಅದನ್ನು ನಷ್ಟಪಡಿಸಿಕೊಳ್ಳಲು ಹಿಂಜರಿಯುತ್ತಾ, ಅದನ್ನು ಕಾಪಾಡಿಕೊಳ್ಳಲು ಮುಂದುವರಿಯುತ್ತಾ' ಇರುವನು. ಇಂತಹ ಗುಣವಿಲ್ಲದೆ ಧನಿಕನಿಗೆ ಪ್ರಾಪ್ತವಾಗುವ ಕೋಪವಾದರೋ ತಾಕುತಡೆಯಿಲ್ಲದಂತಿರುವುದು. ಈ ಗುಣಹೀನನ ದರ್ಪ ಅಹಂಕಾರ ಇವುಗಳನ್ನು ಸದ್ಗುಣಿಯಾದ ಬಡವನು ಸ್ವಲ್ಪವೂ ಲಕ್ಷ್ಯೀಕರಿಸದೆ ಅವನುಂಟುಮಾಡುವ ಕಷ್ಟನಷ್ಟಗಳನ್ನೂ, ಮನಸ್ಸಿಗಾತಂಕವುಂಟಾಗುವ ತೊಂದರೆಗಳನ್ನೂ ತೃಣಕ್ಕೆ ಸಾಟಿಯಾಗಿ ಗಣಿಸುವನಲ್ಲದೆ ತಾನು ಧನಹೀನನಾಗಿರುವೆನಲ್ಲ ಎಂಬ ಒಂದಂಶದಲ್ಲಿ ಮಾತ್ರ ಯೋಚಿಸಿ, ಜೀವಿಸಿಕೊಂಡಿರುವನೇ ಹೊರತು ಅಪಮಾರ್ಗದಲ್ಲಿ ಮಾತ್ರ ಎಂದಿಗೂ ಪ್ರವೇಶಿಸನು.

ಅತೃಪ್ತಿಯುಳ್ಳ ಮಾನವನಾದರೋ, ಅನ್ಯರು ಸುಖದಲ್ಲಿರುವುದನ್ನು ನೋಡಿ ಅಯ್ಯೋ! ನನಗೆ ಅಂತಹ ಸುಖವು ಲಭಿಸಲಿಲ್ಲವಲ್ಲಾ ಎಂದು ಕರುಬುತ್ತಾ ಇರುವನು. ಈ ವಿಧವಾದ ವರ್ತನೆಯಿಂದ ಈ ಮನುಷ್ಯನು ಹೊಟ್ಟೆಕಿಚ್ಚಿನಪ್ರಾಣಿ ಎಂದು ಜನರು ನಿನ್ನನ್ನು ಹೀಯಾಳಿಸುವರು, ನಿರ್ಲಕ್ಷ್ಯದಿಂದ ಕಾಣುವರು. ಇಂತಹ ವಿಷಯಗಳು ನಿನ್ನ ಮನಸ್ಸಿಗೆ ಗೋಚರಕ್ಕೆ ಬಂದಾಗ್ಗೆ ಅಯ್ಯೋ! ನನಗೆ ತುಂಬ ಅವಮಾನವಾಯಿತಲ್ಲ, ಏನುಮಾಡಲಿ ಎಂದು ದುಃಖಪಡುತ್ತಿರುವೆ. ಈ ರೀತಿಯಲ್ಲಿ ವರ್ತಿಸುವ ಮಾನವನು ಎಷ್ಟು ಕಾಲ ಬದುಕಿದ್ದರೂ ಪ್ರಯೋಜನವೇನಾಯಿತು? ಮೇಲೆ ಹೇಳಿದ ಕಾರಣಗಳಿಂದ ದುರಾಶೆ, ಅಹಂಕಾರ ಅತೃಪ್ತಿ ಇವೇ ಮುಂತಾದ ದುರ್ಗುಣಗಳನ್ನು ಹೊಂದದೆ ಭಗವಂತನು ನಮ್ಮ ಕರ್ಮಕ್ಕನುಸಾರವಾಗಿ ದಯಪಾಲಿಸುವ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿರುವನೆಂದು ಭಾವಿಸಿ, ಅದರಲ್ಲಿಯೇ ತೃಪ್ತಿಪಟ್ಟುಕೊಂಡಿರುವುದಾದರೆ ಇವನಿಗೆ ಮುಂದಕ್ಕೆ ಸುಖವೂ ಮನ್ನಣೆಯೂ ಉಂಟಾಗುವುವು. ಇಷ್ಟೂ ಅಲ್ಲದೆ ತೃಪ್ತಿಯಲ್ಲಿರುವ ಮಾನವನು ಸದಾಸಂತೋಷಚಿತ್ತನಾಗಿರುತ್ತಾ, ತನ್ನಿಂದ ಪರರಿಗೆ ಸಾಧ್ಯವಾದಷ್ಟು ಪರೋಪಕಾರಕಾರ್ಯಗಳು ಅನುಗೊಳಿಸಿರುವುದನ್ನು ನೋಡಿದ ಜನರು ಅಂತವನಿಗೆ ವಿಶೇಷಮರ್ಯಾದೆಯನ್ನು ಕೊಡುತ್ತಾ ಇರುವರು. ಇಂತಹ ಮಾನವನೇ ನಿಜವಾದ ಮಾನವನೆಂದೆನಿಸಿಕೊಂಡು ಮಾನ್ಯತೆಯೊಂದಿ ರಾರಾಜಿಸುತ್ತಿರುವನು. ಇವೆಲ್ಲಾ ತೃಪ್ತಿಯಮಹಿಮೆಯು.

ಎಲೈ ಮಾನವನೆ! ನೀನು ಮಾನವನಾಗಿ ಜನ್ಮಿಸಿರುವುದಕ್ಕೆ ಸದ್ಗುಣಗಳನ್ನು ಹೊಂದಿರುವುದು ಯೋಗ್ಯವೆಂದು ತಿಳಿಯುತ್ತಾ, ಭಗವಂತನು ನಮ್ಮನ್ನು ಏತಕ್ಕಾಗಿ ಈ ಭೂಮಿಯಲ್ಲಿ ಸೃಷ್ಟಿಸಿರುವನೆಂಬುದನ್ನು ಪರ್ಯಾಲೋಚಿಸಿ ಭಗವಂತನನ್ನು ಪೂರ್ಣ ಭಕ್ತಿಯಿಂದ

ಸೇವೆಮಾಡುತ್ತಾ ಬಂದುದಾದರೆ ಅನ್ಯಾದೃಶವಾಗಿ ಜ್ಞಾನವನ್ನು ಪಡೆದು ಭಗವಂತನ ಪ್ರೀತಿಗೆ ಪಾತ್ರನಾಗುತ್ತಾ ಲಭಿಸಿದ ಸತ್ಕಾರ್ಯಗಳನ್ನು ನಡಿಸುತ್ತಾ ಬರುತ್ತಿದ್ದರೆ ದೇವನು ಮೆಚ್ಚಿ ನಿನ್ನ ಹೃದಯಾಂತರ್ಗತವಾದ ಕುತೂಹಲಗಳನ್ನು ಪೂರ್ಣಗೊಳಿಸಿಕೊಡುವನು. ಅಂತಹ ಫಲವನ್ನು ಹೊಂದಿದ ಮೇಲೆ ಭಗವಂತನಿಗೆ ದಾಸನಾಗಿ ನಿನ್ನ ಕೃತಜ್ಞತೆಯನ್ನು ತೋರಿಸುತ್ತಾ, ತೃಪ್ತಿಯನ್ನು ಪಡೆದು ಸುಖವನ್ನು ಹೊಂದಲು ಅವಕಾಶವಾಗುವುದು. ಮುಖ್ಯವಾಗಿ ತೃಪ್ತಿ ಎಂಬ ಸದ್ಗುಣರತ್ನವನ್ನು ಹೊಂದಿದ್ದುದಾದರೆ ಮಾನವನು ತನ್ನ ಜೀವಿತಕಾಲದಲ್ಲಿ ಸುಖಜೀವಿಯಾಗಿರುವನು. ಅಂತಹ ತೃಪ್ತಿಯನ್ನು ಮಾನವನು ಹೊಂದಿರದಿದ್ದರೆ ದುರಾಶೆ ಎಂಬುವುದು ಹುಟ್ಟಿ ಎಷ್ಟು ತನಗೆ ಲಭಿಸಿದರೂ ಇನ್ನೂ ಬೇಕೆಂಬ ದುರಾಶೆಯೆಂಬ ಪಿಶಾಚಿಗೆ ದಾಸನಾಗಿ ನೀಚಕೃತ್ಯಗಳಿಗೆ ಪ್ರಾರಂಭಿಸಿ ಸುಖಲೇಶವೂ ಇಲ್ಲದಂತೆ ಕೊರಗಿ ಪ್ರಾಣಬಿಡುವನು. ಅದ್ದರಿಂದ ಮಾನವನ ಉದ್ದೇಶಗಳೆಲ್ಲಾ ತನ್ನ ಮನೋಗತದಂತೆ ಹೊಂದುವೆನೆಂಬ ಅಹಂಕಾರಪಡದೆ ಅವು ಭಗವಂತನ ಇಚ್ಛೆಯಂತೆ ಪ್ರಾಪ್ತವಾಗುವುವೆಂದು ಭಾವಿಸಿ, ದೇವನು ದಯಪಾಲಿಸಿರುವಷ್ಟರಲ್ಲಿಯೇ ತೃಪ್ತಿಪಟ್ಟುಕೊಂಡಿರುವುದೇ ಸರ್ವೋತ್ತಮವೆಂದು ತಿಳಿಯಬೇಕಾದ ಮುಖ್ಯಾಂಶವಾಗಿದೆ.

ತಿರುಮಕೂಡ್ಲು ಕಾವೇರೀ ಸೇತುವೆ.

ಈ ಸೇತುವೆಯ ಕಾಮಗಾರಿಗೆ ಸಂಬಂಧಪಟ್ಟ ಕೆಲವು ಅಂಶಗಳು.

ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಂಸ್ಥಾನದ ಚೀಫ್ ಇಂಜಿನಿಯರ್ ಮ|| ಎಂ. ಜಿ. ರಂಗಯ್ಯನವರು ಅರಿಕೆಮಾಡಿದ್ದು.

ತಿರುಮಕೂಡಲು ನರಸೀಪುರವು ಮೈಸೂರು ನಗರದ ಪೂರ್ವದಿಕ್ಕಿಗೆ ಸುಮಾರು 21 ಮೈಲಿಗಳ ದೂರದಲ್ಲಿ ಕಾವೇರೀ ಕಪಿನಿ ನದಿಗಳ ಸಂಗಮ ಸ್ಥಾನದಲ್ಲಿದೆ. ಮೈಸೂರು ಸಂಸ್ಥಾನದಲ್ಲಿಯೂ, ಅದರ ಹೊರಗಡೆಯೂ ಇರತಕ್ಕ ಅನೇಕ ಮುಖ್ಯ ಪಟ್ಟಣಗಳಿಗೆ ತಿರುಮಕೂಡಲು ನರಸೀಪುರದಿಂದ ರಸ್ತೆಗಳು ಏರ್ಪಟ್ಟಿವೆ. ನದಿಗಳಲ್ಲಿ ಪ್ರವಾಹವು ಬಂದ ಕಾಲದಲ್ಲಿ ವರುಷದಲ್ಲಿ ಕೆಲವು ತಿಂಗಳುಗಳ ಕಾಲ ಅವುಗಳನ್ನು ದಾಟುವುದಕ್ಕಾಗುವುದಿಲ್ಲ. ಆಗ್ಗ ದೋಣಿಗಳಲ್ಲಿ ಅವುಗಳನ್ನು ದಾಟುವುದು ಕೂಡ ಅಸಾಧ್ಯವಾಗಿರುತ್ತದೆ.

ಸೇತುವೆ ಕಟ್ಟುವ ಯೋಚನೆ.

ಈ ಸ್ಥಳದಲ್ಲಿ ಕಾವೇರೀ ನದಿಗೂ ಕಪಿಲಾನದಿಗೂ ಸೇತುವೆಗಳನ್ನು ಕಟ್ಟಬೇಕೆಂಬುದಾಗಿ ಕಳೆದ ಅನೇಕ ವರುಷಗಳಿಂದಲೂ ಅರಿಕೆಗಳು ಬಂದಿದ್ದುವು. ಈ ವಿಚಾರವನ್ನು ಸರ್ಕಾರದವರು ಬಹುಕಾಲ ಪರ್ಯಾಲೋಚಿಸಿದರು. ಕೊನೆಗೆ ಈ ಸೇತುವೆಗಳನ್ನು ಕಟ್ಟಬಹುದೆಂದು 1918 ನೆಯ ಇಸವಿಯಲ್ಲಿ ಸರ್ಕಾರದವರು ಅಪ್ಪಣೆಮಾಡಿದರು. ಆದರೂ ಸೇತುವೆಗಳನ್ನು ಕಟ್ಟುವುದಕ್ಕಾಗಿ ಪ್ರಶಸ್ತವಾದ ಸ್ಥಳಗಳನ್ನು ಗೊತ್ತುಮಾಡುವುದಕ್ಕೆ ಬಹುಕಾಲವು ಹಿಡಿಯಿತು. ಅಲ್ಲದೆ ಒಡನೆಯೇ ಕೆಲಸವನ್ನು ಪ್ರಾರಂಭಿಸುವುದಕ್ಕೆ ದ್ರವ್ಯಾನುಕೂಲತೆಯೂ ಇರಲಿಲ್ಲ. ಕೊನೆಗೆ 1927 ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ಈ ಸೇತುವೆಗಳನ್ನು ನಿರ್ಮಿಸುವುದಕ್ಕಾಗಿ 8,75,000 ರೂಪಾಯಿಗಳ ವೆಚ್ಚವು ತಗಲುವ ಒಂದು ಅಂದಾಜು ಏರ್ಪಾಡು ಮಂಜೂರಾಯಿತು. ಆ ವೆಚ್ಚದ ಮೊಬಲಗಿನಲ್ಲಿ ಅರ್ಧ ಭಾಗದ ಮೊತ್ತವನ್ನು ಕೊಡುವುದಾಗಿ ಮೈಸೂರು ಡಿಸ್ಟ್ರಿಕ್ಟು ಬೋರ್ಡಿನವರು ಒಪ್ಪಿಕೊಂಡರು. ಆದರೆ ಈ ಎರಡು ಸೇತುವೆಗಳ ನಿರ್ಮಾಣಕ್ಕೂ ಏಕಕಾಲದಲ್ಲಿ ಹಣವನ್ನು ಒದಗಿಸುವುದು ಸಾಧ್ಯವಿಲ್ಲವೆಂದು ಕಂಡುಬಂದಿತು. ಅದಕಾರಣ ವೆಚ್ಚದ ಅಂದಾಜು 5 ಲಕ್ಷ 38 ಸಾವಿರ ರೂಪಾಯಿಗಳೆಂದು ಲೆಕ್ಕಾಚಾರವಾಗಿದ್ದ ಕಾವೇರೀ ನದಿಯ ಈ ಸೇತುವೆಯನ್ನೇ ಮೊದಲು ಕಟ್ಟಿಸಬೇಕೆಂದು ಡಿಸ್ಟ್ರಿಕ್ಟು ಬೋರ್ಡಿನವರು ಕೋರಿದ ಪ್ರಕಾರವೇ ತೀರ್ಮಾನಿಸಲಾಯಿತು. ಕಲ್ಲಿನ ಕೆಲಸವನ್ನೂ, ಉಕ್ಕಿನ ಕೆಲಸವನ್ನೂ, ಎರಡನ್ನೂ ಸೇರಿಸಿ ಈ ಸೇತುವೆಯನ್ನು ಕಟ್ಟಲಾಗಿದೆ. ನದೀಪಾತ್ರದಲ್ಲಿಯೂ, ನದಿಯ ದಡಗಳ ಬಳಿಯಲ್ಲಿಯೂ ಇರುವ ಕಂಬಗಳನ್ನು ಕಲ್ಲುಗಳಿಂದಲೂ ಗಾರೆಯಿಂದಲೂ ಕಟ್ಟಲಾಗಿದೆ. ಆ ಕಂಬಗಳ ಮೇಲೆ ಉಕ್ಕಿನ ತೊಲೆ ಚೌಕಟ್ಟುಗಳನ್ನು ಜೋಡಣೆಗೊಳಿಸಿ ಅವುಗಳ ಮೇಲೆ ಸಂಚಾರಮಾರ್ಗವನ್ನು ಏರ್ಪಡಿಸಲಾಗಿದೆ.

ಸೇತುವೆಯ ಕಾಮಗಾರಿ.

ಸೇತುವೆಯ ಕೆಲಸವನ್ನು ಶೀಘ್ರವಾಗಿ ಮುಗಿಸುವುದಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ ಇಲ್ಲಿಗೇ ಪ್ರತ್ಯೇಕವಾಗಿ ಒಂದು ಸಬ್-ಡಿವಿಜನನ್ನು ಏರ್ಪಡಿಸಲಾಯಿತು. ಸೇತುವೆ ಕಾಮಗಾರಿಯ ಕೆಲಸವನ್ನು ಮೈಸೂರುನಗರದಲ್ಲಿರುವ ಕಂಟ್ರಾಕ್ಟುದಾರರು ಮೆಸ್ಸರ್ಸ್ ಎಂ. ನಾರಾಯಣಸ್ವಾಮಿ ಅಂಡ್ ಸನ್ಸ್ ಇವರಿಗೆ ವಹಿಸಲಾಯಿತು. 1928 ನೆಯ ಇಸವಿ ನವಂಬರು ತಿಂಗಳಿನಲ್ಲಿ ಕಾಮಗಾರಿಯು ಪ್ರಾರಂಭವಾಯಿತು. 1929 ನೆಯ ಇಸವಿ ಜೂನ್ ತಿಂಗಳಿನಲ್ಲಿ ನದಿಯ ಪ್ರವಾಹವು ಬರುವುದರೊಳಗಾಗಿ ಹೊಳೆಯ ಮಧ್ಯದ ಎರಡು ಕಂಬಗಳು ಮತ್ತು ಬಲದಡದ ಬಳಿಯ ಕಂಬ ಇವುಗಳನ್ನು ಕಟ್ಟಿಸಲಾಯಿತು. ಅಲ್ಲಿಂದ ಮುಂದೆ 1929 ನೆಯ ಇಸವಿ ಡಿಸೆಂಬರು ತಿಂಗಳಿನಿಂದ 1930 ನೆಯ ಇಸವಿ ಜೂನ್ ತಿಂಗಳ ವರೆಗೆ ಮತ್ತೆ ಕಾಮಗಾರಿಯು ನಡೆದು ಮತ್ತೆ ಆರು ಕಂಬಗಳ ಕೆಲಸವು ಪೂರ್ತಿಯಾಯಿತು. ಸೇತುವೆಗೆ ಬೇಕಾದ ಉಕ್ಕಿನ ಸಾಮಾನುಗಳನ್ನು ಕಳುಹಿಸುವಂತೆ ಬೊಂಬಾಯಿ ನಗರದ ಮೆಸ್ಸರ್ಸ್ ರಿಚರ್ಡ್‌ಸನ್ ಅಂಡ್ ಕ್ರುಡ್ಡಾಸ್ ಕಂಪನಿಯವರಿಗೆ ಬರೆಯಲಾಯಿತು. 1930 ನೆಯ ಇಸವಿ ಜೂನ್ ತಿಂಗಳಿನಲ್ಲಿ ಅವು ಇಲ್ಲಿಗೆ ಬಂದು ತಲಪಿದವು. ಆ ಬಳಿಕ ಮಳೆಗಾಲವು ಕಳೆಯುವ ವರೆಗೂ ಉಕ್ಕಿನ ಸಾಮಾನುಗಳನ್ನು ಜೋಡಣೆಗೊಳಿಸುವ ಕಾರ್ಯಕ್ಕೆ ಗಮನಕೊಟ್ಟೆವು. ಮಳೆಗಾಲವು ಕಳೆದ ಮೇಲೆ 1930 ನೆಯ ಇಸವಿ ನವಂಬರು ತಿಂಗಳಿನಿಂದ 1931 ನೆಯ ಇಸವಿಯ ಜೂನ್ ತಿಂಗಳಿನ ಹೊತ್ತಿಗೆ ಎಡಭಾಗದ ದಡದ ಕಂಬದ ಕೆಲಸ ಮತ್ತು ಇತರ ನಾಲ್ಕು ಕಂಬಗಳ ಕೆಲಸ ಇವುಗಳ ಹೊರತು ಉಳಿದ ಕಾಮಗಾರಿಯೆಲ್ಲಾ ಸಮರ್ಪಕವಾಗಿ ಪೂರ್ತಿಯಾಯಿತು. ಉಕ್ಕಿನ ತೊಲೆ ಚೌಕಟ್ಟುಗಳನ್ನು ಜೋಡಣೆಗೊಳಿಸುವ ಕೆಲಸವನ್ನು ಬಲಗಡೆಯಿಂದ ಎಂದರೆ ಮೈಸೂರಿನ ಕಡೆಯಿಂದ ಪ್ರಾರಂಭಿಸಿ ಎಂಟು 'ಕಣ್ಣು'ಗಳ ಅಂತರದವರೆಗೂ ಅದನ್ನು ಪೂರ್ತಿಗೊಳಿಸಲಾಯಿತು. ಆ ವೇಳೆಗೆ ಮಳೆಗಾಲವು ಬಂದುದರಿಂದ 1931 ನೆಯ ಇಸವಿ ನವಂಬರು ತಿಂಗಳಿನವರೆಗೂ ಕೆಲಸವನ್ನು ನಿಲ್ಲಿಸಿದ್ದು ಮತ್ತೆ ಅದನ್ನು ಮುಂದುವರಿಸಲಾಯಿತು. ಸೇತುವೆಯ ಕೆಲಸವು ಮುಗಿದು ಈಗ್ಗೆ ಕೆಲವು ದಿನಗಳ ಹಿಂದೆ ಮಾತ್ರವೇ ಅದು ಸಂಚಾರಯೋಗ್ಯವೆನಿಸಿ ಸಿದ್ಧವಾಯಿತು.

ಸೇತುವೆಯ ಲಕ್ಷಣವೂ ಅದರ ಖರ್ಚೂ.

ಕೆಲವು ವಿಚಾರಗಳಲ್ಲಿ ಈ ಸೇತುವೆಯು ಗಮನಾರ್ಹವಾಗಿದೆ. ಇದರಷ್ಟು ಉದ್ದವಾದ ಸೇತುವೆಯು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಮತ್ತಾವುದೂ ನಿರ್ಮಿತವಾಗಿರಲಿಲ್ಲ. ಸೇತುವೆಯು ಒಂದು ದಡದ ಕೊನೆಯಿಂದ ಮತ್ತೊಂದು ದಡದ ಕೊನೆಯ ವರೆಗೆ 1,434 ಅಡಿಗಳಷ್ಟು ಉದ್ದವಾಗಿದೆ. ಎಂಬತ್ತು ಎಂಬತ್ತು ಅಡಿಗಳ ಅಂತರವುಳ್ಳ 16 „ಕಣ್ಣು" ಗಳೂ, ಅರವತ್ತು ಅಡಿಗಳ ಅಂತರವುಳ್ಳ ಒಂದು „ಕಣ್ಣು" ಇದರಲ್ಲಿವೆ. ಈ ಸೇತುವೆಗಾಗಿ ಉಪಯೋಗಿಸಿರತಕ್ಕ „ಬಾಲ್ಟಿಮೋರ್" ಮಾದರಿಯ ಉಕ್ಕಿನಜೋಡಣೆಯನ್ನು ಮೈಸೂರು ಸಂಸ್ಥಾನದಲ್ಲಿ ಕಟ್ಟಿರುವ ಮತ್ತಾವ ಸೇತುವೆಗೂ ಉಪಯೋಗಿಸಿಲ್ಲ. ಕಂಬಗಳಿಗೆ ತಳಹದಿಯನ್ನು ಅಗೆದು ಅವುಗಳನ್ನು ಕಟ್ಟುವಾಗ ಹೊಳೆಯ ನೀರು ಆ ಸ್ಥಳಕ್ಕೆ ನುಗ್ಗದಂತೆ ಸುತ್ತಲೂ ಅಡ್ಡಗಟ್ಟೆಯನ್ನು ಹಾಕುವುದಕ್ಕೆ ಬದಲಾಗಿ ಉಕ್ಕಿನ ಹಾಳೆಗಳನ್ನು ಉಪಯೋಗಿಸಿದುದೂ ಇದೇ ಮೊದಲು. ಕಂಟ್ರಾಕ್ಟುದಾರರು ಈ ನೂತನ ವಿಧಾನವನ್ನನುಸರಿಸಿ ಕೆಲಸಮಾಡಿದರು. ಅದುದರಿಂದಲೇ ಇಷ್ಟು ದೊಡ್ಡ ನದಿಯಲ್ಲಿ ಈ ತಳಹದಿ ಮುಂತಾದ ಕೆಲಸವನ್ನು ವರುಷದಲ್ಲಿ ಐದಾರು ತಿಂಗಳ ಕಾಲ ಮಾತ್ರವೇ ಸಿಕ್ಕುತ್ತಿದ್ದ ಮೂರು ವರುಷಗಳ ಅವಧಿಯಲ್ಲಿ ಪೂರ್ತಿಗೊಳಿಸಲು ಸಾಧ್ಯವಾಯಿತು. ಕೆಲವು ಕಡೆಗಳಲ್ಲಂತೂ ತಳಹದಿಗೆ ಬಂಡೆಯು ಸಿಕ್ಕಬೇಕಾದರೆ ಮರಳನ್ನೂ ಜೇಡಿಯ ಮಣ್ಣನ್ನೂ ನದೀ ಪಾತ್ರದ ಮಟ್ಟದಿಂದ ಕೆಳಕ್ಕೆ 27 ಅಡಿಗಳ ಆಳದ ವರೆಗೆ ತೋಡಬೇಕಾಗಿದ್ದಿತು. ಅದಕಾರಣ ಈ ನೂತನ ವಿಧಾನವನ್ನು ಅನುಸರಿಸದೆಹೋಗಿದ್ದರೆ ಇಷ್ಟು ಶೀಘ್ರವಾಗಿ ಸೇತುವೆಯನ್ನು ಕಟ್ಟುವುದು ಅಸಾಧ್ಯವಾಗುತ್ತಿದ್ದಿತೆಂದೇ ಹೇಳಬಹುದಾಗಿದೆ.—ಈ ಸೇತುವೆಯ ಕೆಲಸಕ್ಕೆ ಒಟ್ಟು ಆರು ಲಕ್ಷ ರೂಪಾಯಿಗಳು ವೆಚ್ಚವಾದವು. ಎಂದರೆ ಮಂಜೂರಾಗಿದ್ದ ಅಂದಾಜಾ ವೆಚ್ಚಕ್ಕಿಂತಲೂ ನೂರು ಹತ್ತರಲ್ಲೊಂದು ಭಾಗ ವೆಚ್ಚವು ಹೆಚ್ಚಾದಂತಾಯಿತು. ಒಟ್ಟಿನಲ್ಲಿ ನದೀ ಪಾತ್ರದಲ್ಲಿ ಪ್ರತಿನೂರು ಚದರ ಅಡಿಯ ಸೇತುವೆ ಪ್ರದೇಶಕ್ಕೆ 2,040 ರೂಪಾಯಿಗಳಂತೆ ಮುಟ್ಟಿದಂತಾಯಿತು. ಇಂಥಾ ಇತರ ಭಾರೀ ನದಿಗಳ ವಿಷಯದಲ್ಲಿ ಸೇತುವೆಯನ್ನು ಕಟ್ಟಲು ವೆಚ್ಚವಾಗಿರುವ ಹಣದೊಡನೆ ಇದನ್ನು ಹೋಲಿಸಿದರೆ ಇಲ್ಲಿ ನಡೆದಿರುವ ವೆಚ್ಚವು ಯುಕ್ತಪ್ರಮಾಣದಲ್ಲೇ ಇದೆಯೆಂದು ಭಾವಿಸಬಹುದಾಗಿದೆ.

ಸೇತುವೆಯ ಪ್ರಯೋಜನ.

ಮೈಸೂರು ನಗರಕ್ಕೂ, ಮದರಾಸ್ ಅಧಿಪತ್ಯದಲ್ಲಿ ಗಣನೀಯವಾದ ಮುಖ್ಯ ಪ್ರದೇಶಕ್ಕೂ ಈ ಸೇತುವೆಯಿಂದ ಸಂಚಾರ ಸೌಲಭ್ಯವು ಇನ್ನುಮುಂದೆ ನಿರುಪಾಧಿಕವಾಗಿ ದೊರೆಯುವುದಾಗಿದೆ. ಬೆಳಕವಾಡಿಯ ಸಮೀಪದಲ್ಲಿ ಇದೇ ಕಾವೇರೀ ನದಿಗೆ ಶಿವನಸಮುದ್ರದಿಂದ ಕೆಲವು ಮೈಲಿಗಳ ದೂರದಲ್ಲಿ ಮದರಾಸು ಸರ್ಕಾರದವರು ಈಚೆಗೆ ಒಂದು ಸೇತುವೆಯನ್ನು ಕಟ್ಟಿಸಿದ್ದಾರೆ. ಇವೆರಡು ಸೇತುವೆಗಳ ಸಹಾಯದಿಂದ ಇನ್ನು ಮುಂದೆ ಕೊಯಮುತ್ತೂರು ಮತ್ತು ಕಾಲ್ಯದ ಜಿಲ್ಲೆಗಳ ನಾನಾ ವ್ಯಾಪಾರ ಸ್ಥಳಗಳಿಗೂ ಹೋಗಿಬರಲು ಬಹಳ ಅನುಕೂಲವಾಗುತ್ತದೆ. ಮೈಸೂರು ಸಂಸ್ಥಾನಕ್ಕೆ ಬರತಕ್ಕ ಪ್ರಯಾಣಿಕರು ಮೈಸೂರಿಗೆ ಹೋಗುವಾಗಲೇ ಆಗಲಿ ಅಥವಾ ಮೈಸೂರಿನಿಂದ ಹಿಂತಿರುಗುವಾಗಲೇ ಆಗಲಿ ಶಿವನಸಮುದ್ರದ ಕಾವೇರೀ ಜಲಪಾತವನ್ನೂ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಯಂತ್ರಾಲಯವನ್ನೂ ಇನ್ನು ಮುಂದೆ ಬಹುಸುಲಭವಾಗಿ ನೋಡಿಕೊಂಡು ಬರಬಹುದು. ಈ ಸೇತುವೆಯನ್ನು ಕಟ್ಟುವುದರಲ್ಲಿ ಕಂಟ್ರಾಕ್ಟುದಾರರು ಉತ್ಸಾಹದಿಂದ ಕೆಲಸಮಾಡಿ ಈ ಕಾರ್ಯದಲ್ಲಿ ಆಧುನಿಕ ಸಾಧನಗಳನ್ನೆಲ್ಲಾ ಉಪಯೋಗಿಸಿ ಬಹು ಶೀಘ್ರವಾಗಿ ಸೇತುವೆಯನ್ನು ಕಟ್ಟಿ ಸಿದ್ಧಗೊಳಿಸಿರುವುದಕ್ಕಾಗಿ ಅವರು ಶ್ಲಾಘನೆಗೆ ಪಾತ್ರರಾಗಿದ್ದಾರೆ.

ವೃ. ಪ.

ಪ್ಲೇಗುರೋಗವು ಬಾರದಂತೆ ಮಾಡುವ ಉಪಾಯವೇನು?

(ಒಂದು ಸಣ್ಣಕಥೆ)

ನೂರಾರುವರ್ಷಗಳಹಿಂದೆ, ಪ್ರಸಿದ್ಧವಾದ ಒಂದು ಪಟ್ಟಣದಲ್ಲಿ, ಬಲಶಾಲಿಯಾದ ಒಬ್ಬ ತುರ್ಕಿರಾಜನು (ಕಾಲಿಫನು) ಇದ್ದನು. ಆ ದೇಶದಲ್ಲಿ ಒಂದಾನೊಂದು ಸಮಯದಲ್ಲಿ ಪ್ಲೇಗ್‌ರೋಗವು ಕಾಣಿಸಿಕೊಂಡು, ಆ ಕಾಲಿಫನ ಪಟ್ಟಣದ ಸುತ್ತಲಿರುವ ಹಳ್ಳಿಗಳಲ್ಲೆಲ್ಲ ವ್ಯಾಪಿಸಿತ್ತು.

ಕಾಲಿಫನು ಮನಸ್ಸಿನಲ್ಲಿ ತುಂಬಾ ವ್ಯಥೆಪಟ್ಟು, ಪ್ಲೇಗ್‌ರೋಗವು ತನ್ನ ಪಟ್ಟಣಕ್ಕೂ ಬಂದುಬಿಟ್ಟರೆ, ಅಸಂಖ್ಯಾತಜನರು ಅದರಿಂದ ಸತ್ತುಹೋಗಿ, ಪಟ್ಟಣವೆಲ್ಲ ನಿರ್ನಾಮವಾಗುವುದೆಂದು ಯೋಚಿಸಿ, ತನ್ನ ಪ್ರಧಾನಮಂತ್ರಿಯಾದ ವಜೀರನನ್ನು ಕರೆಯಿಸಿ, ಅವನೊಡನೆ ಹೀಗೆಂದನು—ಪ್ಲೇಗ್‌ರೋಗವು ನಮ್ಮ ಪಟ್ಟಣದಲ್ಲಿ ಬಾರದಂತೆಮಾಡಲು ಮಾರ್ಗವೇನಾದರೂ ಇದೆಯೋ? ಈ ರೋಗವು ನಮ್ಮ ಪಟ್ಟಣಕ್ಕೆ ಬರುವಪಾಯದಲ್ಲಿದೆ. ಈ ವಿಷಯದಲ್ಲಿ ನಾವು ಸುಮ್ಮನಿದ್ದರೆ, ಕೆಲವು ವಾರಗಳೊಳಗೆ ಅದು ನಮ್ಮ ಪಟ್ಟಣಕ್ಕೆ ಬಾರದಿರದು ಎಂದನು. ಆಗ ವಜೀರನು ಕಾಲಿಫನನ್ನು ಕುರಿತು ಈ ರೋಗವನ್ನು ನಾನು ಎಂದೂ ನೋಡಿದುದಿಲ್ಲ. ಈ ರೋಗವನ್ನು ಕುರಿತು ನಾನು ಏನನ್ನೂ ಅರಿ

(6ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೦ನೇ ಸೆಪ್ಟಂಬರ್ ತಾ|| ೫ ನೇ ಸೋಮವಾರ.

ಗಣೇಶಚತುರ್ಥೀವ್ರತ

ಸೃಷ್ಟಿಸ್ಥಿತಿಸಂಹಾರಾನುಗ್ರಹಕರ್ತನಾದ ಪರಮೇಶ್ವರನು ಈ ನವಖಂಡಪೃಥ್ವಿಯನ್ನು ಸೃಷ್ಟಿಸಿ ಆಯಾಯ ದೇಶಾನುಗುಣವಾಗಿ ಪರಮಾರ್ಥಸಾಧಕಗಳೂ ಐಹಿಕಸುಖಸಾಧಕಗಳೂ ಆದ ಅನಂತ ವ್ರತಗಳನ್ನು ಏರ್ಪಡಿಸಿದನು. ವೇದಾಗಮ ಪುರಾಣಾವಲಂಬಿಗಳಾದ ನಮ್ಮ ಭಾರತೀಯರಲ್ಲಿ ಇಂಥ ವ್ರತಗಳು ಅಸಂಖ್ಯಗಳಾಗಿರುತ್ತವೆ. ಇವುಗಳಲ್ಲಿ ಕೆಲವು ವ್ರತಗಳು ಸ್ತ್ರೀಯರಿಂದುಪಾಸಿಸಲ್ಪಡತಕ್ಕವುಗಳಾಗಿಯೂ ಕೆಲವು ವ್ರತಗಳು ಪುರುಷರಿಂದುಪಾಸಿಸಲ್ಪಡತಕ್ಕವುಗಳಾಗಿಯೂ, ಕೆಲವು ವ್ರತಗಳು ಉಭಯರಿಂದ ಉಪಾಸಿಸಲ್ಪಡತಕ್ಕವುಗಳಾಗಿಯೂ ಇರುತ್ತವೆ. ಗಣೇಶವ್ರತವೆಂಬುವುದು ಸಾಮಾನ್ಯವಾಗಿ ಸ್ತ್ರೀಪುರುಷರೀರ್ವರಿಂದಲೂ ಆಚರಿಸಲ್ಪಡತಕ್ಕ ವ್ರತವೆಂದು ಹೇಳಬಹುದಾಗಿದೆ. ಭಾದ್ರಪದ ಶುದ್ಧ ಚತುರ್ಥಿಯೇ ಈ ವ್ರತಾಚರಣೆಯ ದಿವಸವಾಗಿದೆ. ಈ ಗಣೇಶಚತುರ್ಥಿಯ ವ್ರತಕ್ಕೆ ನಮ್ಮ ಧಾರ್ಮಿಕ ಹಿಂದೂ ಸಮಾಜದವರು ಸೃಷ್ಟ್ಯಾರಂಭದಿಂದಲೂ ಅತಿಶಯವಾದ ಮಹತ್ವವನ್ನು ಕೊಟ್ಟಿರುತ್ತಾರೆ. ನಮ್ಮ ಭರತಖಂಡದಲ್ಲಿ ಈ ಗಣೇಶ ಚತುರ್ಥಿಯ ವ್ರತವನ್ನು ಆಚರಿಸದ ಭಾರತೀಯನೇ ಇಲ್ಲ. ಭಾದ್ರಪದಮಾಸದಲ್ಲಿ ಸಸ್ಯಾದಿಗಳು ಅಭಿವೃದ್ಧಿಯನ್ನು ಪಡೆದು ಫಲೋನ್ಮುಖವಾಗಿರುವುದರಿಂದ ಅವುದೊಂದು ವಿಘ್ನವಿಲ್ಲದೆ ಧಾನ್ಯಸಮೃದ್ಧಿಯು ಕೈಸೇರಲೆಂಬ ಮಹತ್ವಾಕಾಂಕ್ಷೆಯಿಂದ ನಮ್ಮ ಹಿರಿಯರು ವಿಘ್ನಾಧಿಪತಿಯಾದ ಈ ಗಣೇಶನನ್ನು ಪೂಜಿಸುವ ಸಂಪ್ರದಾಯವನ್ನು ಇಟ್ಟಿರುತ್ತಾರೆ. ಲೋಕದಲ್ಲಿ ಯಾವ ಮನುಷ್ಯನಾಗಲಿ ಒಂದು ಕೆಲಸವನ್ನು ಪ್ರಾರಂಭಿಸಬೇಕಾದರೆ, ತಾನು ಪ್ರಾರಂಭಿಸಿದ ಕೆಲಸವು ನಿರ್ವಿಘ್ನವಾಗಿ ಪೂರೈಸಲೆಂಬ ಇಚ್ಛೆಯುಳ್ಳವನಾಗಿರುತ್ತಾನೆ. ಆದರೆ ಅಸ್ವತಂತ್ರನಾದುದರಿಂದ ಈತನ ಇಚ್ಛೆಯಂತೆ ಆವಕಾರ್ಯವೂ ನಡೆಯಲಾರದು. ವಿಘ್ನವಿಲ್ಲದೆ ಕಾರ್ಯವನ್ನು ಪೂರೈಸಿಕೊಡುವ ಶಕ್ತಿಯನ್ನು ಶ್ರೀ ವಿನಾಯಕಮೂರ್ತಿಯು ಪಡೆದಿರುವುದರಿಂದ ಈತನನ್ನು ಪ್ರತಿಯೊಬ್ಬ ಆಸ್ತಿಕಪುರುಷನೂ ಕಾರ್ಯಾರಂಭದಲ್ಲಿಯೂ, ಕಾರ್ಯಮಧ್ಯದಲ್ಲಿಯೂ ಕಾರ್ಯಾವಸಾನದಲ್ಲಿಯೂ ಸ್ಮರಿಸುತ್ತಿರುವುದಲ್ಲದೆ ಭಾದ್ರಪದ ಶುದ್ಧ ಚತುರ್ಥಿಯ ದಿವಸ ಮಣ್ಣಿನಿಂದ ಮಾಡಿದ ಗಣಪತಿಯನ್ನು ಷೋಡಶೋಪಚಾರಗಳಿಂದ ವಿಶೇಷವಾಗಿ ಪೂಜಿ~~[illegible]~~ .ವ್ರತ.

ವಿನಾಯಕ ಗಣೇಶಾದ್ಯ ಸರ್ವದೇವ ನಮಸ್ಕೃತ
ಪಾರ್ವತೀಪ್ರಿಯ ವಿಘ್ನೇಶ ಮಮ ವಿಘ್ನಂ ವಿನಾಶಯ ||
ಸರ್ವತ್ರ ಸರ್ವದಾ ದೇವ ನಿರ್ವಿಘ್ನಂ ಕುರು ಸರ್ವಶಃ
ಮಾನೋನ್ನತಿಂ ಚ ರಾಜ್ಯಂ ಚ ಪುತ್ರಪೌತ್ರಾನ್ ಪ್ರದೇಹಿ ಮೇ ||
ನಮೋನಮೋವಿಘ್ನವಿನಾಶಕಾಯ ನಮೋನಮಸ್ತೇಹಿ ಕೃಪಾಕರಾಯ
ನಮೋಸ್ತುತೇಽಭೀಷ್ಟವರಪ್ರದಾಯ ತಸ್ಮೈ ಗಣೇಶಾಯ ನಮೋ ನಮಸ್ತೇ ||
ವಕ್ರತುಂಡಮಹಾಕಾಯ ಸೂರ್ಯಕೋಟಿಸಮಪ್ರಭ
ನಿರ್ವಿಘ್ನಂ ಕುರುಮೇದೇವ ಸರ್ವಕಾರ್ಯೇಷು ಸರ್ವದಾ ||

ಎಂದು ಸ್ತೋತ್ರಮಾಡುತ್ತ ೧ ಅಥವಾ ೫-೭-೧೧ ಹೀಗೆ ಅವರವರ ಸಂತೋಷವಿದ್ದಷ್ಟು ದಿವಸ ಪೂಜಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಹೀಗೆ ವಿಗ್ರಹವನ್ನಿಟ್ಟು ಪೂಜಿಸುವ ಬದಲು ಗಣಹವನವನ್ನು ಮಾಡುವಸಂಪ್ರದಾಯವುಂಟು.

ಈ ಭಾದ್ರಪದಮಾಸದ ಚತುರ್ಥಿಯ ದಿವಸವೇ ಈ ಗಣೇಶವ್ರತವು ರೂಢಿಯಲ್ಲಿ ಬರಲು ಪುರಾಣಗಳಲ್ಲಿ ಒಂದು ಕಥೆಯು ಸಹ ಹೇಳಲ್ಪಟ್ಟಿದೆ.

ಪೂರ್ವಕಾಲದಲ್ಲಿ ಗಜಾಸುರನೆಂಬ ರಾಕ್ಷಸನು ದೇವತೆಗಳಿಗೂ ಮಾನವರಿಗೂ ಬಹಳವಾದ ಬಾಧೆಯನ್ನು ಕೊಡುತ್ತಿದ್ದುದನ್ನು ನೋಡಿ ಸಹಿಸಲಾರದೆ ಒಂದು ದಿವಸ ದೇವತೆಗಳೆಲ್ಲರೂ ಒಟ್ಟುಗೂಡಿ ಪರಮೇಶ್ವರನ ಬಳಿಗೆ ಹೋಗಿ ಈ ರಾಕ್ಷಸನಿಂದುಂಟಾಗುತ್ತಿರುವ ಘೋರಹಿಂಸೆಯನ್ನು ಅರಿಕೆಮಾಡಿ ಪರಮೇಶ್ವರನಿಂದ ಅಭಯದಾನವನ್ನು ಪಡೆದರು. ಹೀಗಿರುತ್ತಿರುವಲ್ಲಿ ಆ ಗಜಾಸುರನ ಪ್ರಾಬಲ್ಯದಿಂದ ರಾಕ್ಷಸರೆಲ್ಲರೂ ಮದೋನ್ಮತ್ತರಾಗಿ ಅನೇಕ ದುಷ್ಕೃತ್ಯಗಳನ್ನು ಮಾಡುತ್ತ ಒಂದು ದಿವಸ ಸಿಂಹಾಸನಾಸೀನನಾಗಿ ತನ್ನ ಪರಿವಾರದಿಂದ ಹೊಗಳಿಸಿಕೊಳ್ಳಲ್ಪಡುತ್ತ ತನ್ನ ಪ್ರತಾಪವನ್ನು ತಾನೇ ಹೊಗಳಿಕೊಳ್ಳಲು ಪ್ರಾರಂಭಿಸಿ ಯಾವ ದೇವತೆಗಳಿಂದಾಗಲಿ, ಯಾವ ಮಾನವನಿಂದಾಗಲಿ ನನಗೆ ಮರಣ ಸಂಭವಿಸದು. ಆದರೆ ಮನುಷ್ಯಶರೀರವುಳ್ಳ ಮುಖವು ಹೀಗೆ ವಿಜಾತೀಯವಾದ ಶರೀರವನ್ನು ಯಾರು ಧರಿಸುವರೋ ಅಂಥವರಿಂದಲೇ ಮರಣವಲ್ಲದೆ ಇನ್ನಾರಿಂದಲೂ ನನಗೆ ಮರಣವು ಸಂಭವಿಸಲಾರದು. ಇಂಥ ವಿಜಾತೀಯವಾದ ಸೃಷ್ಟಿಯು ಲೋಕದಲ್ಲಿಯೂ ಇಲ್ಲವಾದುದರಿಂದ ನಾನು ಸ್ಥಿರಶರೀರಿಯಾಗಿದ್ದೇನೆ. ನನ್ನನ್ನು ತಡೆಯುವವರು ತ್ರಿಲೋಕಗಳಲ್ಲಿಯೂ ಇಲ್ಲನೆಂದು ತನ್ನ ಪೌರುಷವನ್ನು ಹೇಳಿಕೊಳ್ಳುತ್ತಿದ್ದನು. ಸರ್ವವ್ಯಾಪಕನಾದ ಪರಮೇಶ್ವರನು ಈತನನ್ನು ಸಂಹರಿಸದಿದ್ದಲ್ಲಿ ಅಲ್ಪಕಾಲದಲ್ಲಿಯೇ ಜಗತ್ಪ್ರಳಯವಾಗುವುದು. ಆದುದರಿಂದ ಈತನನ್ನು ಸಂಹರಿಸಲು ಯೋಗ್ಯನಾದ ಗಜಮುಖನನ್ನು ಸೃಷ್ಟಿಮಾಡುವೆನೆಂದು ಸಂಕಲ್ಪಿಸಿದನು. ಸ್ವಲ್ಪದಿವಸಗಳಲ್ಲಿ ಪಾರ್ವತಿಯ ಗರ್ಭದಲ್ಲಿ ನಾಲ್ಕು ತೋಳುಗಳುಳ್ಳ, ಮನುಷ್ಯಶರೀರವುಳ್ಳ ಮತ್ತು ಆನೆಯಂತೆ ಸುಂಡಿಲು ಕಿವಿಗಳು ತಲೆಯು ಉಳ್ಳ ಒಂದು ಶಿಶುವು ಉತ್ಪನ್ನವಾಯಿತು. ಈ ಪುತ್ರೋತ್ಪತ್ತಿಯ ಸಮಾಚಾರವನ್ನು ಕೇಳಿ ಇನ್ನು ಲೋಕಕಂಟಕನಾದ ಗಜಾಸುರನ ಉಪದ್ರವವು ನಾಶವಾಗುವುದೆಂದು ಜನಗಳು ಸಂತೋಷಪಟ್ಟರು. ಪಾರ್ವತೀಪರಮೇಶ್ವರರು ಆ ಮಗುವಿಗೆ ಗಜಾನನ ಎಂಬ ಅನ್ವರ್ಥವಾದ ನಾಮಕರಣಮಾಡಿದರು. ಶಿಶುವು ಬೆಳೆಯುತ್ತ ಹೋದಹಾಗೆಲ್ಲ ಚೌಲೋಪನಯನಾದಿ ಸಂಸ್ಕಾರಗಳು ನಡೆಯಿಸಲ್ಪಟ್ಟುವು. ಅಷ್ಟಸಿದ್ಧಿಯು ಆ ಗಣಪತಿಯ ಪಟ್ಟಮಹಿಷಿಯಾದಳು. ಪಾರ್ವತೀಪರಮೇಶ್ವರರು ನಂದಿಯಮೇಲೆಯೂ ಗಜಾನನ ಮೂರ್ತಿಯು ಇಲಿಯಮೇಲೆಯೂ ಕುಳಿತು ಮೆರವಣಿಗೆ ಹೊರಟರು. ಗಜಾಸುರನು ಇವರ ಅಟ್ಟಹಾಸವನ್ನು ನೋಡಿ ಸಹಿಸಲಾರದೆ ತನ್ನ ಸೈನ್ಯದೊಂದಿಗೆ ಬಂದು ಯುದ್ಧಕ್ಕೆ ಪ್ರಾರಂಭಮಾಡಿದನು. ಒಬ್ಬರಿಗೊಬ್ಬರಿಗೆ ಭಯಂಕರವಾದ ಆಯುಧಯುದ್ಧವು ನಡೆದು ಗಣಪತಿಗೂ ಗಜಾಸುರನಿಗೂ ಮಲ್ಲಯುದ್ಧವು ಪ್ರಾರಂಭವಾಗಿ ಇದೇ ಭಾದ್ರಪದಶುದ್ಧ ಚತುರ್ಥಿದಿವಸ ಗಜಾಸುರನು ಯಮಲೋಕಕ್ಕೆ ಅತಿಥಿಯಾದನು. ಅಂದಿನಿಂದಲೂ ಲೋಕಕ್ಕೆ ಶಾಂತಿಯನ್ನುಂಟುಮಾಡಿದ ವಿನಾಯಕಮೂರ್ತಿಯನ್ನು ಆ ದಿವಸ ಪೂಜಿಸುವ ಸಂಪ್ರದಾಯವು ಬಂದಿರುತ್ತದೆಂದು ತಿಳಿದುಬರುತ್ತದೆ.

ಈ ದಿವಸ ಚಂದ್ರನನ್ನು ನೋಡಕೂಡದೆಂದೂ, ಒಂದುವೇಳೆ ಚಂದ್ರದರ್ಶನವಾದರೆ ಅನೇಕ ಅಪವಾದಗಳು ಅತನ ಮೇಲೆ ಬರುವುವೆಂದೂ, ನಮ್ಮ ಭಾರತೀಯರಲ್ಲಿ ಪೂರ್ವಕಾಲದಿಂದ ಒಂದು ವಿಧವಾದ ನಂಬಿಕೆಯು ಬಂದಿರುತ್ತದೆ. ಇದಕ್ಕೆ ಅನೇಕ ಇತಿಹಾಸಗಳು ಸಹ ಇರುತ್ತವೆ.

ಪೂರ್ವದಲ್ಲಿ ಯಾದವಕುಲದಲ್ಲಿ ಸತ್ರಾಜಿತನೆಂಬೊಬ್ಬನು ಕಾಡಿನಲ್ಲಿ ಸೂರ್ಯನನ್ನು ಕುರಿತು ತಪಸ್ಸನ್ನು ಮಾಡಿದನು. ಸೂರ್ಯನು ಅತನ ತಪಸ್ಸಿಗೆ ಮೆಚ್ಚಿ ಪ್ರಸನ್ನನಾಗಿ ಸ್ಯಮಂತಕಮಣಿಯನ್ನು ಅನುಗ್ರಹಿಸಿದನು. ಉಜ್ವಲವಾದ ಆ ರತ್ನವನ್ನು ಮನೆಗೆ ತೆಗೆದುಕೊಂಡು ಬಂದು ದೇವರ ಮನೆಯಲ್ಲಿಟ್ಟು ಪೂಜಿಸುತ್ತಿದ್ದನು. ಪ್ರತಿ ದಿವಸವೂ ಆ ಸ್ಯಮಂತಕಮಣಿಯು ಅತನಿಗೆ ಯಥೇಷ್ಟವಾದ ಭಂಗಾರವನ್ನು ಕೊಡುತ್ತಿರುವುದಲ್ಲದೆ ಅದು ಇದ್ದ ಗ್ರಾಮದಲ್ಲಿ ಕ್ಷಾಮ ಗ್ರಹಪೀಡೆ ಸರ್ಪಭೀತಿ ವ್ಯಾಧಿ ಮುಂತಾದ ಉಪದ್ರವಗಳೊಂದೂ ಇರುತ್ತಿದ್ದಿಲ್ಲ. ಕೃಷ್ಣನು ಆಶೆಯಿಂದ ಈ ಮಣಿಯನ್ನು ಕೇಳಲು ಅತನು ಕೊಡಲು ಒಪ್ಪಲಿಲ್ಲ. ಒಂದು ದಿವಸ ಸತ್ರಾಜಿತನ ತಮ್ಮನಾದ ಪ್ರಸೇನನೆಂಬುವನು ಈ ರತ್ನವನ್ನು ಧರಿಸಿಕೊಂಡು ಬೇಟೆಗೆ ಹೋದನು. ಅಲ್ಲಿ ಒಂದು ಸಿಂಹವು ಆತನನ್ನೂ ಅತನು ಹತ್ತಿದ ಕುದುರೆಯನ್ನೂ ಕೊಂದು ಮಣಿಯನ್ನು ಅಪಹರಿಸಿತು. ಅಷ್ಟರಲ್ಲಿ ಒಂದು ಕರಡಿಯು ಆ ಸಿಂಹವನ್ನೂ ಕೊಂದು ರತ್ನವನ್ನು ತನ್ನ ವಶಕ್ಕೆ ತೆಗೆದುಕೊಂಡು ತನ್ನ ಗವಿಗೆ ಹೋಗಿ ತನ್ನ ಮಗುವಿಗೆ ಆಡುವುದಕ್ಕೆ ಕೊಟ್ಟಿತು. ಸತ್ರಾಜಿತನು ತಮ್ಮನು ಬಾರದೆ ಇರುವುದನ್ನು ನೋಡಿ ಈ ರತ್ನದ ಆಶೆಗಾಗಿ ಕೃಷ್ಣನು ನನ್ನ ತಮ್ಮನನ್ನು ಕೊಂದು ರತ್ನವನ್ನಪಹರಿಸಿರುವನೆಂದು ಜನಗಳಲ್ಲಿ ದೂರಲು ಪ್ರಾರಂಭಿಸಿದನು. ಕೃಷ್ಣನು ಈ ಅಪವಾದಕ್ಕೆ ಹೆದರಿ ಕಾಡಿಗೆ ಹೋಗಿ ಅಲ್ಲಿ ಸತ್ತುಬಿದ್ದಿರುವ ಈ ಭಯಂಕರವಾದ ಚಿನ್ಹೆಗಳನ್ನು ನೋಡಿ ಕರಡಿಯ ಗವಿಯಲ್ಲಿ ಪ್ರವೇಶಿಸಿ ಕರಡಿಯ ಜೊತೆಯಲ್ಲಿ ಯುದ್ಧಮಾಡಿ ಅದನ್ನು ಸೋಲಿಸಿ ಆ ರತ್ನವನ್ನು ತೆಗೆದುಕೊಂಡು ಬಂದು ಸತ್ರಾಜಿತನಿಗೆ ಒಪ್ಪಿಸಿ ಅತನ ಸಂಶಯವನ್ನು ಪರಿಹರಿಸಿದನು. ಹೀಗೆ ಸ್ಯಮಂತಕರತ್ನದ ಅಪಹಾರದೋಷವು ಕೃಷ್ಣನ ಮೇಲೆ ಬರಬೇಕಾದರೆ ಈತನು ಹಿಂದೆ ಇದೇ ಭಾದ್ರಪದ ಶುದ್ಧ ಚತುರ್ಥಿ ಚಂದ್ರನದರ್ಶನಮಾಡಿದುದೇ ಕಾರಣವಾಯಿತು. ಕೃಷ್ಣನಂಥ ಮಹಾತ್ಮನನ್ನೇ ಆವರಿಸಿದ ಇಂಥ ನಿಷಿದ್ಧವಾದ ಚತುರ್ಥಿ ಚಂದ್ರದರ್ಶನದೋಷವು ಅಲ್ಪಜ್ಞರಾದ ಮಾನವರಿಗೆ ಕೇಡನ್ನುಂಟುಮಾಡದಿರಲಾರದೆಂದು ಈ ಇತಿಹಾಸದಿಂದ ನಮಗೆ ಗೊತ್ತಾಗುತ್ತದೆ. ಒಂದು ಪಕ್ಷ ಪ್ರಮಾದದಿಂದ ಚಂದ್ರದರ್ಶನವಾದರೆ ಇದೇ ಚರಿತ್ರವನ್ನು ನಿರ್ದೇಶಿಸಿರುವ

ಸಿಂಹಃಪ್ರಸೇನಮವಧೀ ಸ್ಸಿಂಹೋ ಜಾಂಬವತಾ ಹತಃ |
ಸುಕುಮಾರಕ ಮಾರೋದೀಸ್ತವಹ್ಯೇಷ ಸ್ಯಮಂತಕಃ ||

ಎಂಬುವ ಶ್ಲೋಕವನ್ನು ಉಚ್ಚರಿಸುವುದರಿಂದ ಈ ದೋಷವು ಪರಿಹಾರವಾಗುವುದೆಂಬ ನಂಬಿಕೆಯು ಜನಗಳಲ್ಲಿ ಬಂದಿದೆ. ಆದುದರಿಂದ ಧಾರ್ಮಿಕರಾದ ಮನುಷ್ಯರಿಗೆ ಸಂಭವಿಸುವ ಎಡರುಗಳು ಪರಿಹಾರವಾಗಿ ತಾನು ಅವಲಂಬಿಸಿದ ಕಾರ್ಯವು ಜಯಪ್ರದವಾಗಬೇಕಾದರೆ ಈ ಭಾದ್ರಪದ ಶುದ್ಧ ಚತುರ್ಥಿಯ ದಿವಸ ಬಲ್ಲಿದರೂ, ಭಾಗ್ಯಶಾಲಿಗಳೂ, ವಿದ್ಯಾರ್ಥಿಗಳು, ಬೇಸಾಯಗಾರರು ಮುಂತಾದ ಎಲ್ಲರೂ ಸೃಷ್ಟಿಕರ್ತನಾದ ಪರಮೇಶ್ವರನ ಪುತ್ರನಾದ ಶ್ರೀ ಗಣೇಶಮೂರ್ತಿಯ ವ್ರತವನ್ನು ಪ್ರತಿವರ್ಷವೂ ತಪ್ಪದೆ ಆಚರಿಸುತ್ತ ಸರ್ವರೂ ಆ ವಿಘ್ನೇಶ್ವರನ ಪ್ರೀತಿಗೆ ಪಾತ್ರರಾಗಿ ತಮ್ಮ ತಮ್ಮ ಅಭೀಷ್ಟಗಳನ್ನು ಪಡೆಯಲೆಂದಾಶಿಸುತ್ತೇವೆ.

ಸತ್ಯಾಗ್ರಹಸಮರವಾರ್ತೆ.

ಆಗಸ್ಟ 28 ನೆಯ ತಾರೀಖಿನ ದಿವಸ ಮುಂಬಯಿಯ ಭೂಲೇಶ್ವರದಲ್ಲಿ ರಾಷ್ಟ್ರಧ್ವಜವಂದನೆಯನ್ನು ಮಾಡಿದ 4 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು. ಇವರೆಲ್ಲರಿಗೂ ಆರಾರು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಅಲಹಾಬಾದಿನಲ್ಲಿ ಬಹಿಷ್ಕಾರದ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದ ಮೇಲೆ ಪೋಲೀಸರು ಮಿಸೆಸ್ ಕಮಲಾದೇವಿಶರ್ಮರವರನ್ನು ದಸ್ತಗಿರಿ ಮಾಡಿದರು.

ಆಗಸ್ಟ 29 ನೆಯ ತಾರೀಖಿನ ದಿವಸ ಅಲಹಾಬಾದಿನ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಮಿ|| ಮುಜರ್‌ಅಲಿ ಸೋಕ್ತಾರವರು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನಪ್ರಕಾರವಾಗಿ ದಸ್ತಗಿರಿ ಮಾಡಲ್ಪಟ್ಟರು.

ಆಗಸ್ಟ 28 ನೆಯ ತಾರೀಖಿನ ದಿವಸ ಯಹಪುರದ ಕಾಂಗ್ರೆಸ್ ಆಶ್ರಮವನ್ನು ಪೋಲೀಸರು ಜಪ್ತುಮಾಡಿ 7 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ಆಗಸ್ಟ 30 ನೆಯ ತಾರೀಖಿನ ದಿವಸ ಅಹಮದಾಬಾದಿನ ದೇವಬಜಾರಿನಲ್ಲಿ ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ 6 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಕಳೆದ ಆಗಸ್ಟ 30 ನೆಯ ತಾರೀಖಿನ ದಿವಸ ಮೊರಾದಾಬಾದಿನ ಲಾಲಾಮುಕ್ತಪ್ರಸಾದರವರ ಪರದೇಶೀವಸ್ತ್ರದ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದ 67 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು. ಇದುವರೆಗೆ ಈ ಸಂಬಂಧವಾಗಿ 380 ಜನರು ದಸ್ತಗಿರಿ ಮಾಡಲ್ಪಟ್ಟಿರುವರು.

ನವಜವಾನ್ ಭಾರತ ಸಭೆಯ ಮಾಜಿ ಅಧ್ಯಕ್ಷರಾದ ಮಿ|| ಗೋಹಿಮಾಲ್‌ವಾಸ್ವಾನಿಗೊಂಡ್ ಸರುಶ್‌ರವರು ಆಗಸ್ಟ 30 ನೇ ತಾರೀಖಿನ ಬೆಳಿಗ್ಗೆ ಸಿಂಧ್ ಹೈದರಾಬಾದಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು ಸಿಂಧ್ ಹೈದರಾಬಾದಿನಲ್ಲಿ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದರೆಂಬ ಕಾರಣದಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ 9 ಜನರಿಗೆ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೂ 9 ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಕಳೆದ ಆಗಸ್ಟ 30 ನೆಯ ತಾರೀಖಿನ ದಿವಸ ಕಲ್ಕತ್ತೆಯ ಪೋಲೀಸರು ಕಾರ್ನವಾಲೀಸ್ ಬೀದಿಯಲ್ಲಿರುವ ಒಂದು ಮನೆಯನ್ನು ಜಪ್ತುಮಾಡಿ 5 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಆಗಸ್ಟ 31 ನೆಯ ತಾರೀಖಿನ ರಾತ್ರಿ ಮುಂಬಯಿ ಪೋಲೀಸರು ಪ್ರಮುಖ ಮುಸ್ಲಿಂ ಜಮಿನ್‌ದಾರರಾದ ದೋಸ್ತ್ ಮಹಮುದ್‌ಜಾ ಮಹಮುದ್‌ರವರನ್ನೂ, 4 ಜನ ಕಾಂಗ್ರೆಸ್ ಕೆಲಸಗಾರರನ್ನೂ ದಸ್ತಗಿರಿಮಾಡಿದರು.

ಆಗಸ್ಟ 31 ನೇ ತಾರೀಖಿನ ದಿವಸ ಲಾಹೋರಿನಲ್ಲಿ ಕಾಂಗ್ರೆಸ್ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದಮೇಲೆ ಇಬ್ಬರು ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಇಬ್ಬರಿಗೂ ಆರಾರು ತಿಂಗಳು ಕಠಿಣ ಸಜೆಯನ್ನು ವಿಧಿಸಿದರು.

ಆಗಸ್ಟ 31 ನೇ ತಾರೀಖಿನ ದಿವಸ ಅಲಹಾಬಾದಿನ ಪೋಲೀಸರು ಅಜರಿಘರಿನಲ್ಲಿ ಅನೇಕ ಸ್ಥಳಗಳನ್ನು ಶೋಧಿಸಿ ಅಲ್ಲಿ ದೊರೆತ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನೆಲ್ಲಾ ತಮ್ಮ ವಶಪಡಿಸಿಕೊಂಡರು. ಖಾದೀವಸ್ತ್ರಾಲಯದ ಮ್ಯಾನೇಜರವರೂ ದಸ್ತಗಿರಿ ಮಾಡಲ್ಪಟ್ಟರು

ಸರ್ಕಾರದವರು ಮಿ|| ಆರ್. ಎಸ್. ಪಂಡಿತರ ಮೇಲೆ ಹಾಕಿದ್ದ ನಿರ್ಬಂಧಗಳ ನಿಷೇಧಾರ್ಥವಾಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮತ್ತು ಶ್ರೀಮತಿ ಕೃಷ್ಣಾನೆಹರೂರವರು ತಮಗಿದ್ದ 'ಎ' ತರಗತಿಯ ರಿಯಾಯತಿಗಳನ್ನು ತಿರಸ್ಕರಿಸಿದ್ದುದು ಸರಿಯಷ್ಟೇ! ಈಚೆಗೆ ಸರ್ಕಾರದವರು ಮಿ|| ಪಂಡಿತರ ಮೇಲೆ ಹಾಕಿದ್ದ ನಿರ್ಬಂಧಗಳನ್ನು ತೆಗೆದುಹಾಕಿರುವರೆಂದು ತಿಳಿದುಬಂದಿದೆ

ಸೆಪ್ಟೆಂಬರ್ 1ನೇ ತಾರೀಖಿನ ದಿವಸ ಮುಂಬಯಿಯ ದಾವಾ ಬಜಾರಿನಲ್ಲಿ ಪಿಕೆಟಿಂಗ್ ನಡೆಯಿಸುತ್ತಿದ್ದ 3 ಜನ ಸ್ವಯಂಸೇವಕರು ತಲಾ 9 ತಿಂಗಳ ಕಠಿಣ ಸಜೆಗೆ ಗುರಿಯಾದರು.

ಇದೇ ಸೆಪ್ಟೆಂಬರು 1ನೇ ತಾರೀಖಿನ ದಿವಸ ಸಿಂಧ್ ಹೈದರಾಬಾದಿನ ಸೆಂಟ್ರಲ್ ಜೈಲಿನಿಂದ 6 ಜನ ಕಾಂಗ್ರೆಸ್ ಮುಖಂಡರು ಬಿಡುಗಡೆಹೊಂದಿದರು. ಪೋಲೀಸರು ಕೂಡಲೇ ಅವರೆಲ್ಲರಿಗೂ ಹೈದರಾಬಾದನ್ನು ಬಿಟ್ಟು ಹೊರಡಕೂಡದೆಂದೂ, ಕಾನೂನುಭಂಗದ ಚಳವಳಿಯಲ್ಲಿ ಭಾಗವಹಿಸಕೂಡದೆಂದೂ ಅಪ್ಪಣೆಯನ್ನು ಮಾಡಿರುತ್ತಾರೆ.

ಇದೇ ಸೆಪ್ಟಂಬರ್ 1ನೇ ತಾರೀಖಿನ ದಿವಸ ಅಹಮದಾಬಾದ್ ಪ್ರಾಂತಕ್ಕೆ ಸೇರಿದ ಭೀಮನಾಥ ಎಂಬಲ್ಲಿ ಧಂಡೂಕ ತಾಲೂಕು ರಾಜಕೀಯ ಸಮ್ಮೇಲನವನ್ನು ನಡೆಯಿಸಲು ಹೋಗುತ್ತಿದ್ದ ಗುಜರಾತ್ ಕಾಂಗ್ರೆಸ್ ಕಮಿಟಿಯ 23ನೆಯ ಸರ್ವಾಧಿಕಾರಿಗಳಾದ ಶ್ರೀ ಬಲವಂತರಾವ್ ಮೆಹೆತಾರವರನ್ನೂ, ಇತರ 12 ಜನರನ್ನೂ ಪೋಲೀಸರು ದಸ್ತಗಿರಿಮಾಡಿದರು.

ಡೆಕ್ಕಾದಲ್ಲಿ ಕ್ರಿಮಿನಲ್ ಕೋರ್ಟುಗಳ ಒಳಗಡೆಯಲ್ಲಿ ರಾಷ್ಟ್ರೀಯಧ್ವಜಗಳನ್ನು ಏರಿಸಿದರೆಂಬ ಕಾರಣದ ಮೇಲೆ 4 ಜನ ಬಂಗಾಲಿ ಯುವಕರು ಆರಾರು ತಿಂಗಳ ಕಠಿಣಸಜೆಗೆ ಗುರಿಯಾದರು. ಕೋರ್ಟಿನಲ್ಲಿ ಕಾಂಗ್ರೆಸ್ ಜಯಘೋಷಗಳನ್ನು ಮಾಡಿದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟ ಇಬ್ಬರು ಸ್ವಯಂಸೇವಕರೂ ಮೇಲ್ಕಂಡಂತೆ ಶಿಕ್ಷಿಸಲ್ಪಟ್ಟರು.

ಸೆಪ್ಟೆಂಬರ್ 2 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಭೂಲೇಶ್ವರದಲ್ಲಿ ಒಂದು ಮನೆಯನ್ನು ಜಪ್ತುಮಾಡಿ ಅಲ್ಲಿ ಸಿಕ್ಕಿದ ಕೆಲವು ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ತಮ್ಮ ವಶಪಡಿಸಿಕೊಂಡರು. ಇಬ್ಬರು ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು.

ವರ್ತಮಾನಸಂಗ್ರಹ

ಲಾಂಕಾಷೈರಿನಲ್ಲಿ 1,50,000 ಜನ ಗಿರಣಿ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಅಫ್ಘಾನಿಸ್ಥಾನದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ನಾದಿರ್‌ಷಾರವರು ಆಲೋಚಿಸುತ್ತಿರುವರು.

ಕಳೆದವಾರ ಭರತಖಂಡದಿಂದ ಒಂದು ಕೋಟಿ 20 ಲಕ್ಷ ರೂಪಾಯಿಗಳ ಭಂಗಾರವು ಪರದೇಶಗಳಿಗೆ ರಫ್ತುಮಾಡಲ್ಪಟ್ಟಿತು.

ದೆಹಲಿಯಲ್ಲಿ ಸೇರಲಿರುವ ಹಿಂದೂ ಮಹಾಸಭೆಗೆ ಮಿ|| ಎಂ. ಆರ್. ಜಯಕರ್‌ರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ನೇಪಾಳದ ಮಹಾರಾಜಾ ಭೀಮ ಷಂಷೇರ್‌ಜಂಗ್ ಬಹದ್ದೂರ್ ರಾಣಾರವರು ಇದೇ ಸೆಪ್ಟೆಂಬರ್ 1 ನೇ ತಾರೀಖಿನ ರಾತ್ರಿ ಮೃತಪಟ್ಟರು.

ರಾಜಕೋಟೆಯ ಥಾಕೋರ್‌ಸಾಹೇಬರವರು ಕಾಥೇವಾರ್ ಸ್ವದೇಶೀಪ್ರದರ್ಶನಕ್ಕೆ ಹೋಗಿ ಸುಮಾರು 600 ರುಪಾಯಿಗಳು ಬೆಲೆಬಾಳುವ ಸ್ವದೇಶೀಪದಾರ್ಥಗಳನ್ನು ಕೊಂಡುಕೊಂಡರು.

ಅಖಿಲಭಾರತ ಅರ್ಥಿಕಸಮ್ಮೇಳನವು ಮುಂದಿನ ಜನವರಿಯಲ್ಲಿ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ನೆರವೇರುವುದು. ವೈಸರಾಯರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಪೆಷಾವರಿನ ಅಸಿಸ್ಟೆಂಟ್ ಕಮಿಷನರೂ ಮತ್ತು ಸಿವಿಲ್ ಜಡ್ಜರೂ ಆದ ಮುಸಲ್ಮಾನ್ ಅಧಿಕಾರಿಯೊಬ್ಬರು ಲಂಚವನ್ನು ತೆಗೆದುಕೊಂಡರೆಂಬ ಕಾರಣದ ಮೇಲೆ ಕೆಲಸದಿಂದ ವಜಾಮಾಡಲ್ಪಟ್ಟರು.

ಕಳೆದ ಆಗಸ್ಟ 31 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ಸಂಶಯದ ಮೇಲೆ ಒಂದು ಮನೆಗೆ ನುಗ್ಗಿ ಒಳಗೆ ಜೂಜಾಡುತ್ತಿದ್ದ 41 ಜನರನ್ನು 200 ರೂಪಾಯಿಗಳ ಸಮೇತ ದಸ್ತಗಿರಿಮಾಡಿದರು.

ವಿಯನ್ನಾದೇಶದಲ್ಲಿ ಸುಮಾರು 413 ಪೌಂಡು ತೂಕವಿರುವ ಫ್ರಾನ್ಸ್‌ಸ್ಕೇಲ್‌ಸಿಂಗಲ್ ಎಂಬ ಮನುಷ್ಯನಿರುವನು. ಇವನನ್ನು 336 ಪೌಂಡುಗಳ ತೂಕವುಳ್ಳ ಒಬ್ಬ ಸ್ತ್ರೀಯು ಗುದ್ದಾಟದಲ್ಲಿ ಸೋಲಿಸಿದಳು.

ಕ್ಯಾಪ್ಟನ್ ಕೋಲ್ಡ್‌ಸ್ಟ್ರೀಂರವರನ್ನು ಕೊಂದನೆಂಬ ಕಾರಣದ ಮೇಲೆ ಮರಣದಂಡನೆಗೆ ಗುರಿಯಾಗಿದ್ದ ಅಬ್ದುಲ್ ರಷೀದನು ಇದೇ ಸೆಪ್ಟಂಬರ್ 1 ನೇ ತಾರೀಖಿನ ದಿವಸ ಪೆಷಾವರಿನಲ್ಲಿ ಗಲ್ಲಿಗೇರಿಸಲ್ಪಟ್ಟನು.

ಸಿಂಧ್-ಹೈದರಾಬಾದಿಗೆ ಸೇರಿದ ಸಿಂಜಾರೋ ಎಂಬ ಸ್ಥಳದಲ್ಲಿ ಕೆಲವು ಜನ ಮುಸಲ್ಮಾನರು ಒಬ್ಬ ಹಿಂದೂ ಜಮೀನ್‌ದಾರನನ್ನು ಖೂನಿಮಾಡಿರುವರು. ಪೋಲೀಸರು ತನಿಖೆಕ್ರಮಗಳನ್ನು ಜರುಗಿಸುತ್ತಿರುವರು.

ಕೆಲವುದಿನಗಳ ಪೂರ್ವದಲ್ಲಿ ಫಿರೋಜ್‌ಪುರದ ಜೈಲಿನಹೊರಭಾಗದಲ್ಲಿ ಕೆಲವುಜನ ಖೈದಿಗಳಿಗೂ ಪೋಲೀಸು ಕಾವಲುಗಾರರಿಗೂ ಹೊಡೆದಾಟವಾಗಿ 5 ಜನ ಖೈದಿಗಳು ಪರಾರಿಯಾದರು. ಇಬ್ಬರು ಪುನಃ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

ಅಹಮದಾಬಾದ್ ಡಿ|| ಬರಿಯಾಪುರದ ಒಂದು ಮನೆಯಲ್ಲಿ ಶೇಖರಿಸಲ್ಪಟ್ಟಿದ್ದ ಸಿಡಿಮದ್ದಿನ ಸಾಮಾನುಗಳು ಕಳೆದ ಆಗಸ್ಟ 29 ನೇ ತಾರೀಖು ಸಾಯಂಕಾಲ, ಇದ್ದಕ್ಕಿದ್ದ ಹಾಗೆ ಸಿಡಿದು 13 ಜನ ಸ್ತ್ರೀಯರು ಮತ್ತು ಒಬ್ಬ ಗಂಡಸು ಕೂಡಲೇ ಮೃತಿಹೊಂದಿದರು.

ತಾನೆಷ್ಟುಬಗೆಯಾಗಿ ಪ್ರಾರ್ಥಿಸಿದರೂ ತನ್ನನ್ನು ಮದುವೆಯಾಗಲಿಲ್ಲವೆಂಬ ಕಾರಣದ ಮೇಲೆ ಲಾಹೋರಿನ ಒಬ್ಬ ಸ್ತ್ರೀಯು ತನ್ನ ಪ್ರೇಮಪಾತ್ರನಾದ ಒಬ್ಬ ಮಹಮ್ಮದೀಯ ಯುವಕನ ಮೂಗನ್ನು ಕೊಯ್ದಳು. ಮ್ಯಾಜಿಸ್ಟ್ರೇಟರು ಅಪರಾಧಿಗೆ 4 ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರು.

ಅಲಹಾಬಾದಿನ ರಾಮಲಾಲಮೋನಿಯ ಎಂಬೊಬ್ಬ ಕಾಂಗ್ರೆಸ್ ಸ್ವಯಂಸೇವಕನು ತನ್ನ ಹೆಂಡತಿಯನ್ನು ಚಳುವಳಿಯಲ್ಲಿ ಭಾಗವಹಿಸಲು ಬಲಾತ್ಕರಿಸಿ, ಆಕೆಯು ಅದಕ್ಕೆ ಒಪ್ಪದಿರಲು ಅವಳನ್ನು ಕತ್ತಿಯಿಂದ ತಿವಿದು ಘಾಯಪಡಿಸಿದನೆಂಬ ಕಾರಣದ ಮೇಲೆ ಸೆಷನ್ಸ್‌ಜಡ್ಜರವರು ವಿಚಾರಣೆಯನ್ನು ನಡೆಯಿಸಿ ಸದರಿ ರಾಮಲಾಲನಿಗೆ 1 ವರ್ಷ ಕಠಿಣಸಜೆಯನ್ನು ವಿಧಿಸಿದರು.

ಗ್ವಾಲಿಯರ್ ಸಂಸ್ಥಾನದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರು ಅವರ ಸಂಸ್ಥಾನದ ಚೌಕೀದಾರರಿಗೆಬೇಕಾಗಿರುವ ಪಟ್ಟುಗಳನ್ನು, ನಿಕ್ಕರುಗಳನ್ನು ಮತ್ತು ಜೋಡುಗಳನ್ನು ಸಪ್ಲೈಮಾಡುವವರು ತಮ್ಮ ಟೆಂಡರ್‌ಗಳನ್ನು ಕಳುಹಿಸಬೇಕೆಂದು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಪಟ್ಟುಗಳು ಮತ್ತು ನಿಕ್ಕರುಗಳು ಶುದ್ಧ ಖಾದಿಯಾಗಿರಬೇಕು. ಜೋಡುಗಳು ಸ್ವದೇಶಿಯಾಗಿರಬೇಕು.

ಭರತಖಂಡದ ಹತ್ತಿಯ ಕೈಗಾರಿಕೆಯನ್ನು ರಕ್ಷಿಸುವ ಉದ್ದೇಶದಿಂದ ಬ್ರಿಟಿಷ್ ಇಂಡಿಯಾ ಸರಕಾರದವರು ಇಂಗ್ಲೆಂಡಿನಿಂದ ಬರುವ ಬಟ್ಟೆಗಳ ವಿನಾ ಇತರ ಬಟ್ಟೆಗಳಿಗೆ ಶೇಕಡಾ 50 ರಂತೆ ಸುಂಕವನ್ನು ಹೆಚ್ಚಿಸಿರುತ್ತಾರೆ. ಆದರೆ ಜಪಾನಿನ ನಾಣ್ಯದ ಬೆಲೆಯು ಇನ್ನೂ ಇಳಿಯುತ್ತಲೇ ಇರುವದರಿಂದ. ಇಂಡಿಯಾ ಸರಕಾರದವರಿಂದ ಹಾಕಲ್ಪಟ್ಟಿರುವ ಈ ಹೆಚ್ಚಿನ ತೆರಿಗೆಯಿಂದ ಜಪಾನಿನ ವ್ಯಾಪಾರಕ್ಕೆ ಯಾವ ಕುಂದಕವೂ ಉಂಟಾಗುವುದಿಲ್ಲವೆಂದು ಅನೇಕ ಮುಖಂಡರು ಅಭಿಪ್ರಾಯಪಟ್ಟಿರುವರು.

ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ ಕಾರಾಗೃಹವಾಸಿಗಳಾಗಿರುವ ಶ್ರೀಯುತ ಸುಭಾಷ್ ಚಂದ್ರಬೋಸರಲ್ಲಿ ಕ್ಷಯರೋಗದ ಚಿನ್ಹೆಗಳು ಕಂಡುಬಂದಿವೆಯೆಂದೂ, ಆದುದರಿಂದ ಅವರನ್ನು ಕೂಡಲೇ ಉತ್ತರಹಿಂದುಸ್ಥಾನದಲ್ಲಿರುವ ಯಾವುದಾದರೊಂದು ಉತ್ತಮವಾದ ಸ್ಯಾನಿಟೋರಿಯಮ್ಮಿಗಾಗಲೀ ಇಲ್ಲವೇ ಸ್ವಿಟ್ಜರ್ಲೆಂಡಿಗಾಗಲಿ ಕಳುಹಿಸಬೇಕೆಂದು ಡಾಕ್ಟರುಗಳು ಸಲಹೆಯನ್ನು ಕೊಟ್ಟಿರುತ್ತಾರೆ. ಈ ವರದಿಯ ಮೇಲೆ ಇಂಡಿಯಾಸರಕಾರದವರು ಇನ್ನೂ ಯಾವ ತೀರ್ಮಾನವನ್ನೂ ಮಾಡಿಲ್ಲ.

ಮುಂಬಯಿಯ ವ್ಯಾಕ್ಯುಯಮ್ ಆಯಿಲ್ ಕಂಪೆನಿಯ ಚೀಫ್ ಇಂಜನಿಯರಾದ ಮಿ|| ಜೇಮ್ಸ್‌ಸ್ಮಿತ್‌ರವರು ಒಬ್ಬ ತೋಟಗಾರನ ಮೇಲೆ ಗುಂಡುಹಾರಿಸಿದರೆಂಬ ಕಾರಣದಮೇಲೆ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಮಿ|| ಸ್ಮಿತ್‌ರವರಿಗೆ 40 ರೂ. ಜುಲ್ಮಾನೆಯನ್ನು ವಿಧಿಸಿದರು. ಮಿ|| ಸ್ಮಿತ್‌ರವರು ಅವರ ತೋಟದಲ್ಲಿ ಸದಾ ಬೊಗಳುತ್ತಿದ್ದ ಒಂದು ನಾಯಿಯಮೇಲೆ ಹಾರಿಸಿದ ಗುಂಡು ಗುರಿತಪ್ಪಿ ಎದುರಿನಲ್ಲಿ ಕೆಲಸಮಾಡುತ್ತಿದ್ದ ಒಬ್ಬ ತೋಟಗಾರನಿಗೆ ತಗಲಿತು. ಗಾಯವೇನೂ ಅಷ್ಟು ಅಪಾಯಕರವಾಗಿಲ್ಲ.

ಸ್ವೀಕಾರ

ಶ್ರೀ ಜಗದ್ಗುರು ಗಿರಿರಾಜಸೂರ್ಯಸಿಂಹಾಸನಾಧೀಶ್ವರರು ಮುದೇನೂರು ಬೃಹನ್ಮಠಕ್ಕೆ ಸನ್ಮಾನಕರಗಳಾದ ರಿಕಾರ್ಡುಗಳನ್ನು ದಯಪಾಲಿಸಿದ ಸಂತೋಷಾರ್ಥವಾಗಿ ಮುದೇನೂರು ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ವಾಗೀಶಶಿವಾಚಾರ್ಯರು ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ನಿವಾಸಿಗಳಾದ ಮ|| ರಾ|| ಕಲ್ಲಪ್ಪಾ ಭೂಸಪ್ಪಾ ಘಟಕಣ್ಣನವರ ಇವರು ೧೦೮ ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯಸಿದ್ಧಾಂತಿಜಿಯವರ ನವೀನ ಆಶ್ರಮದ ಕಾಣಿಕೆಯೆಂದು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿಯ ನಿವಾಸಿಗಳಾದ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರ ಪುತ್ರನ ಲಿಂಗಧಾರಣ ಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ಪಟ್ಟಾಧ್ಯಕ್ಷ ಶ್ರೀ ತ್ರಿಲೋಚನಶಿವಾಚಾರ್ಯರು, ಸಿದ್ಧಾಪುರ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೩ನೆಯ ಪುಟದಿಂದ ಮುಂದುವರಿದುದು.)

ಯೆನು. ಆದರೆ, ಈಗ ಈ ಪಟ್ಟಣಕ್ಕೆ ಬುದ್ಧಿಶಾಲಿಯೂ, ವಿದ್ಯಾವಂತನೂ ಆದ ಒಬ್ಬ ಪ್ರಯಾಣಿಕನು ಬಂದಿರುವನು. ಚೀನಾ, ಟಿಬೆಟ್ ಮುಂತಾದ ಪೂರ್ವದಿಕ್ಕಿನಲ್ಲಿರುವ ದೂರದೇಶಗಳಲ್ಲಿ ಸಂಚಾರಮಾಡಿರುವನು. ಆ ದೇಶಗಳಲ್ಲಿ ಪ್ಲೇಗ್‌ರೋಗದಿಂದ ಜನರು ತುಂಬಾಕಷ್ಟಪಡುವರಂತೆ! ಆ ದೇಶಸಂಚಾರಕನು ಇನ್ನೂ ಇಲ್ಲಿಂದ ಹೊರಟುಹೋಗದಿರುವ ಪಕ್ಷದಲ್ಲಿ ಪ್ಲೇಗ್‌ರೋಗವು ಬಾರದಂತೆ ಏನಾದರೂ ಒಂದು ಉಪಾಯವನ್ನು ಹೇಳಿಕೊಡಬೇಕು ಎಂದನು.

ಅದರಂತೆ, ವಜೀರನು ವಿಚಾರಿಸಿದಾಗ, ಆ ಪ್ರಯಾಣಿಕನು ಇನ್ನೂ ಹೊರಟುಹೋಗಿಲ್ಲವೆಂದು ತಿಳಿಯಿತು. ವಜೀರನು ಆತನನ್ನು ಕಾಲಿಫನಮುಂದೆ ಕರೆದುಕೊಂಡುಹೋಗಲು, ಕಾಲಿಫನು ಎಲೈ ಪ್ರಯಾಣಿಕನೇ! ಪ್ಲೇಗ್‌ರೋಗದಿಂದ ಈ ಪಟ್ಟಣವನ್ನು ರಕ್ಷಿಸಲು ಏನಾದರೂ ದಾರಿಯನ್ನು ಹೇಳಿಕೊಡಬಲ್ಲೆಯಾ? ಎಂದನು. ಆಗ ಆ ಪ್ರಯಾಣಿಕನು ನಾನು ಹೇಳುವುದೆಲ್ಲವನ್ನೂ ಮಾಡುವುದಾದರೆ, ಈ ಪಟ್ಟಣದಲ್ಲಿ ಪ್ಲೇಗ್ ರೋಗವು ಎಂದೂ ಉಂಟಾಗಲಾರದು. ಎಂದನು.

ಆಗ ಕಾಲಿಫನು ನೀನು ಆಡುವ ಮಾತುಗಳು ನಿಜವಿರಬಹುದಾದರೂ, ಅಹಂಕಾರದ ಮಾತುಗಳಾಗಿವೆ: ಆದರೂ ನೀನು ಹೇಳುವಂತೆಲ್ಲ ವಜೀರನು ಮಾಡುವನು. ಈ ಪಟ್ಟಣದಲ್ಲಿ ಪ್ಲೇಗ್‌ರೋಗವು ಬಾರದಂತೆ ನೀನು ಮಾಡಿದಪಕ್ಷದಲ್ಲಿ ನಿನಗೆ ತುಂಬ ಐಶ್ವರ್ಯವನ್ನು ಕೊಡುವೆನು ಇದಕ್ಕೆ ತಪ್ಪಿದಪಕ್ಷದಲ್ಲಿ ಶಿಕ್ಷೆಗೆ ಗುರಿಯಾಗಬೇಕು. ಎಂದನು.

ಪ್ರಯಾಣಿಕನು ಅದಕ್ಕೊಪ್ಪಿ ಅಯ್ಯಾ! ಈ ಪಟ್ಟಣದಲ್ಲಿರುವ ಇನ್ನೂರುಮಂದಿ ರತ್ನವ್ಯಾಪಾರಿಗಳನ್ನು ಕರೆಯಿಸಿ, ಬಹಳ ಬೆಲೆಯುಳ್ಳ ಮತ್ತು ಜವೆಗೋಧಿಯ ಕಾಳಿನಷ್ಟು ದೊಡ್ಡದಾದ ಒಂದೊಂದು ವಜ್ರವನ್ನು ಪ್ರತಿವರ್ತಕನೂ ತಂದು ಕೊಡಬೇಕೆಂದು ಅಪ್ಪಣೆಕೊಡು' ಎಂದನು.

ವಜೀರನು ಅವನು ಹೇಳಿದಂತೆ ಅಪ್ಪಣೆಮಾಡಲು, ವರ್ತಕರು ಇನ್ನೂರು ವಜ್ರಗಳನ್ನು ತಂದು ಕಾಲಿಫನ ಮುಂದೆ ಇಟ್ಟರು. ಆಗ ಆ ಪ್ರಯಾಣಿಕನು ಪಟ್ಟಣದಿಂದ ಇನ್ನೂರು ಇಲಿಗಳನ್ನು ಸಜೀವವಾಗಿ ತರಿಸಿ, ಒಂದೊಂದು ಇಲಿಯನ್ನು ಒಂದೊಂದು ಬೋನಿನಲ್ಲಿ ಕೂಡಿಟ್ಟನು. ಆವೇಳೆ ಆ ಪ್ರಯಾಣಿಕನು ಒಂದೊಂದೇ ಇಲಿಯನ್ನು ಗೂಡಿನಿಂದ ಹೊರಗೆ ತೆಗೆದು, ಅದರ ಹೊಟ್ಟೆಯ ಮೃದುವಾದ ಚರ್ಮದಲ್ಲಿ ಬಹಳ ಹದವಾಗಿರುವ ಕತ್ತಿಯಿಂದ ಉಪಾಯವಾಗಿ ಒಂದು ಚಿಕ್ಕ ಗಾಯವನ್ನು ಮಾಡಿ, ಆ ಚರ್ಮದ ಒಳಭಾಗದಲ್ಲಿ ಒಂದೊಂದು ವಜ್ರವನ್ನು ಒಂದೊಂದು ಇಲಿಯಲ್ಲಿ ಸೇರಿಸಿ, ಇಲಿಯನ್ನು ತಿರುಗಿ ಗೂಡಿನಲ್ಲಿ ಹಾಕಿ ಬಿಟ್ಟನು. ಇನ್ನೂರು ಇಲಿಗಳೊಳಗೆ ಪ್ರತಿಯೊಂದಕ್ಕೂ ಹೀಗೆಯೇ ಮಾಡಿದನು. ಆಬಳಿಕ ಪ್ರತಿ ಗೂಡಿನಲ್ಲಿಯೂ ಸ್ವಲ್ಪ ಧಾನ್ಯದ ಕಾಳನ್ನೂ, ನೀರನ್ನೂ ಇಡುವಂತೆ ವಜೀರನಿಗೆ ಹೇಳಿ, ಆ ಬೋನುಗಳನ್ನೆಲ್ಲಾ ಒಂದು ಕೋಣೆಯಲ್ಲಿಟ್ಟು ಬಾಗಿಲಿಗೆ ಮುದ್ರೆಹಾಕಿ ಇಡುವಂತೆಯೂ ವಜೀರನಿಗೆ ಹೇಳಿದನು. ಪ್ರಯಾಣಿಕನು ಮಾಡಿದುದನ್ನೆಲ್ಲ ನೋಡಿ ವಜೀರನು ಆಶ್ಚರ್ಯಪಟ್ಟನು.

ಎರಡು ದಿವಸಗಳ ಬಳಿಕ, ಆ ಪ್ರಯಾಣಿಕನು ಮಧ್ಯರಾತ್ರಿ ಸಮಯದಲ್ಲಿ ವಜೀರನೊಡನೆ ಕೋಣೆಯಕಡೆಗೆ ಬಂದು, ಮುದ್ರೆಗಳು ಸರಿಯಾಗಿರುವುದನ್ನು ವಜೀರನಿಗೆ ತೋರಿಸಿ ಬಾಗಿಲನ್ನು ತೆಗೆಸಿದನು. ದೀಪದ ಬೆಳಕಿನಲ್ಲಿ ಪರೀಕ್ಷಿಸಿ ಇಲಿಗಳ ಮೈಗಾಯಗಳೆಲ್ಲ ಪೂರ್ಣಗುಣವಾಗಿ ವಜ್ರಗಳು ಚರ್ಮದೊಳಗೆ ಇರುವುದನ್ನು ನೋಡಿಕೊಂಡನು.

ಪ್ರಯಾಣಿಕನು ಆಗ ಕೆಲವುಆಳುಗಳಿಗೆ ಇಲಿಗೂಡುಗಳನ್ನು ತೆಗೆದುಕೊಂಡು, ಪಟ್ಟಣದೊಳಗೆತನ್ನ ಸಂಗಡ ಬರುವಂತೆ ಅಪ್ಪಣೆ ಕೊಡಲು, ಇಲಿಗಳ ಗೂಡುಗಳನ್ನು ಹೊತ್ತುಕೊಂಡು ಆ ಆಳುಗಳೆಲ್ಲ ಆ ಪ್ರಯಾಣಿಕನೊಡನೆ ಆ ಪಟ್ಟಣದ ಬೀದಿಗಳಲ್ಲಿ ಹೊರಟುಬಂದರು. ಕೊಂಚದೂರ ಹೋದಮೇಲೆ ಆ ಪ್ರಯಾಣಿಕನು ಆ ಆಳುಗಳೊಳಗೊಬ್ಬನ ಕೈಯಿಂದ ಒಂದು ಗೂಡನ್ನು ತೆಗೆದು ಅದನ್ನು ತೆರೆದು, ಅದರಲ್ಲಿದ್ದ ಇಲಿಯನ್ನು ಹೊರಗೆ ಬಿಟ್ಟುಬಿಟ್ಟನು. ಇಲಿಯು ಕತ್ತಲೆಯಲ್ಲಿ ಓಡಿಬಿಟ್ಟಿತು. ಬಳಿಕ ಆ ಪ್ರಯಾಣಿಕನು ಪಟ್ಟಣದ ಪ್ರತಿಯೊಂದು ಭಾಗಕ್ಕೆ ಹೋಗಿ, ಅಲ್ಲಲ್ಲಿ ನಿಂತು ಒಂದೊಂದು ಇಲಿಯನ್ನು ಹೊರಗೆ ಬಿಡುತ್ತ ಬಂದನು. ಹೀಗೆ ಇಲಿಗಳೆಲ್ಲ ಬಿಡಲ್ಪಟ್ಟುವು.

ಆಗ ಪ್ರಯಾಣಿಕನು ಮಾಡಿದುದನ್ನು ವಜೀರನೂ, ಆಳುಗಳೂ ಕಂಡು ಆಶ್ಚರ್ಯಪಟ್ಟರು. ಬೆಳಿಗ್ಗೆ ಆ ಪ್ರಯಾಣಿಕನು ಪಟ್ಟಣದಲ್ಲೆಲ್ಲ ಹೀಗೆಂದು ಪ್ರಕಟಿಸಬೇಕೆಂದು ವಜೀರನಿಗೆ ಹೇಳಿದನು. ಏನೆಂದರೆ— ಇನ್ನೂರು ಇಲಿಗಳು ಈ ಪಟ್ಟಣದಲ್ಲಿ ಬಿಡಲ್ಪಟ್ಟಿವೆ. ಇವುಗಳಲ್ಲಿ ಪ್ರತಿಯೊಂದಕ್ಕೂ ಅದರ ಹೊಟ್ಟೆಯ ಚರ್ಮದೊಳಗೆ ಬೆಲೆಯುಳ್ಳ ಜವೆಗೋಧಿಯ ಕಾಳಿನಷ್ಟು ದೊಡ್ಡದಾಗಿರುವ ಒಂದು ವಜ್ರವಿದೆ. ಅಪೇಕ್ಷೆಯಿದ್ದವರು ಅಂತಹ ಇಲಿಯನ್ನು ಹಿಡಿದು ಕೊಂದು ಆ ವಜ್ರವನ್ನು ಪಡೆಯಬಹುದು. ಅವರವರು ಆವಜ್ರವನ್ನು ತನಗೆ ಇಷ್ಟವಿದ್ದಂತೆ ಮಾಡಬಹುದು, ಮಾರಬಹುದು ಅಥವಾ ಇಟ್ಟುಕೊಳ್ಳಬಹುದು.

ಪಟ್ಟಣದಲ್ಲೆಲ್ಲ ಹೀಗೆ ಪ್ರಕಟಪಡಿಸಲಾಗಿ, ಜನರಲ್ಲಿ ಅನೇಕರು ಪರಿಹಾಸ್ಯಮಾಡಿದರು. ಹೀಗೆ ನಿಜವಾಗಿ ಮಾಡಿರುವರೆಂದು ಯಾರೂ ನಂಬಲಿಲ್ಲ. ಆದರೂ ಕೆಲವು ಬಡಜನರು, ಇಲಿಗಳನ್ನು ಹಿಡಿದು ಅವುಗಳನ್ನು ಕೊಂದು ವಜ್ರಗಳಿಗೋಸ್ಕರ ಹುಡುಕಿದರು. ಅದೇ ದಿನ ಸಾಯಂಕಾಲ ಬಡ ದ್ವಾರಪಾಲಕನೊಬ್ಬನಿಗೆ, ಅವನು ಕೊಂದ ಒಂದು ಇಲಿಯೊಳಗೆ ಈ ವಜ್ರಗಳಲ್ಲಿ ಒಂದು ಸಿಕ್ಕಿತು. ಅವನು ಆ ವಜ್ರವನ್ನು ಮಾರಿ ಒಂದು ಸ್ವಂತಮನೆಯನ್ನು ತೆಗೆದುಕೊಂಡನು. ಈ ಸಮಾಚಾರವು ಪಟ್ಟಣದಲ್ಲೆಲ್ಲಾ ಹರಡಿದ ಕೂಡಲೆ, ಎಲ್ಲರೂ ಈ ವಿಷಯವಾಗಿಯೇ ಮಾತನಾಡುತ್ತಿದ್ದರು. ಜನರಿಗೆ ಅಪರಿಮಿತವಾದ ಲವಲವಿಕೆ ಉಂಟಾಯಿತು. ಬರೆಯುವ ಕೆಲಸದವನು ತಾನು ಬರೆಯುವ ಮೇಜನ್ನು ಬಿಟ್ಟುಬಿಟ್ಟನು. ವರ್ತಕನು ತನ್ನ ಅಂಗಡಿಯನ್ನು ಬಿಟ್ಟುಬಿಟ್ಟನು; ಮೇಲುತರದವರೂ, ಕೀಳುತರದವರೂ, ಐಶ್ವರ್ಯವಂತರೂ, ಬಡವರೂ, ಧನಿಗಳೂ ದಾಸರೂ ಗಂಡಸರೂ, ಹೆಂಗಸರೂ, ಮಕ್ಕಳೂ ಸಹ ಎಲ್ಲರೂ ತಮ್ಮ ತಮ್ಮ ಕೆಲಸಕಾರ್ಯಗಳನ್ನು ಬಿಟ್ಟುಬಿಟ್ಟು, ಬಹಳ ಅವಸರದಿಂದ ಇಲಿಗಳನ್ನು ಹುಡುಕಿಕೊಂಡು ಅವುಗಳ ಚರ್ಮದ ಅಡಿಯಲ್ಲಿ ವಜ್ರಗಳನ್ನು ಹುಡುಕಿನೋಡುವ ಕೆಲಸದಲ್ಲಿ ಬಿದ್ದರು. ಮನೆಗಳ ಅಂತಸ್ತುಗಳಿಂದಲೂ, ನೆಲದ ಅಡಿಯಿಂದಲೂ, ಧಾನ್ಯ ತುಂಬುವ ಕಣಜಗಳಿಂದಲೂ, ಚರಂಡಿಗಳಿಂದಲೂ ಇಲಿಗಳನ್ನು ಹೊರಡಿಸಿ ಕಲ್ಲುಗಳಿಂದಲೂ, ದೊಣ್ಣೆಗಳಿಂದಲೂ, ಕತ್ತಿಗಳಿಂದಲೂ ಅವುಗಳನ್ನು ಕೊಂದರು. ಕೆಲವು ದಿವಸಗಳವರೆಗೆ ಪಟ್ಟಣದ ಎಲ್ಲಾ ಕೆಲಸಗಳೂ ನಿಂತುಹೋದವು. ಮತ್ತು ಯಾವುದನ್ನಾದರೂ ತರಲಿಕ್ಕೂ ಹೊರಲಿಕ್ಕೂ ಕೂಲಿಯವನೊಬ್ಬನೂ ಸಿಕ್ಕುತ್ತಿರಲಿಲ್ಲ. ಇಲಿಗೂಡುಗಳನ್ನು ಮಾಡುವ ಬಡಗಿಯವರ ವ್ಯಾಪಾರವೇ ವ್ಯಾಪಾರವಾಯಿತು. ಬೆಕ್ಕುಗಳನ್ನು ಒಂಟೆಗಳ ಬೆಲೆಗೆ ಮಾರುವರಾದರು. ಒಂದು ವಾರದೊಳಗೆ ಅನೇಕ ಸಾವಿರಾರು ಇಲಿಗಳು ಕೊಲ್ಲಲ್ಪಟ್ಟವು. ಮತ್ತು ಪ್ರತಿನಿತ್ಯವೂ 5, 6, 7, 8, ವಜ್ರಗಳು ಸಿಕ್ಕಿದ ವರ್ತಮಾನಗಳು ಬಂದವು. ಎರಡು ವಾರಗಳ ಮೇಲೆ ಪಟ್ಟಣದಲ್ಲೆಲ್ಲಾ ಒಂದಿಲಿಯಾದರೂ ಸಿಕ್ಕಲಿಲ್ಲ. ಆದರೂ ಆ ಇನ್ನೂರು ವಜ್ರಗಳೊಳಗೆ ಕೆಲವು ಇನ್ನೂ ಸಿಕ್ಕದೆ ಇದ್ದುವು. ಮತ್ತು ಇಲಿಯು ಎಲ್ಲಿಯಾದರೂ ಕಾಣಿಸಿಕೊಂಡರೆ ಕೂಡಲೇ ಅದರ ಮೇಲೆ ಬಿದ್ದು ಕೊಂದು ಬಿಡುತ್ತಿದ್ದರು.

ಪಟ್ಟಣದಲ್ಲಿದ್ದ ಇಲಿಗಳನ್ನೆಲ್ಲ ಹೀಗೆ ಕೊಂದಬಳಿಕ ಆ ಪ್ರಯಾಣಿಕನು ಕಾಲಿಫನಿದ್ದೆಡೆಗೆ ಬಂದು ಈ ಪಟ್ಟಣದಲ್ಲಿ ಪ್ಲೇಗ್‌ರೋಗವುಂಟಾಗದಂತೆ ಮಾಡುವೆನೆಂದು ನಾನು ನಿನಗೆ ಆಣೆಯಿಟ್ಟು ಕೊಡಲಿಲ್ಲವೆ? ಅದರಂತೆ ಇನ್ನು ಮೇಲೆ ನಿನಗೆ ಆ ರೋಗದ ಅಂಜಿಕೆಗೆ ಅವಕಾಶವಿಲ್ಲ. ನಾನು ಚಮತ್ಕಾರವಾದ ಉಪಾಯವನ್ನು ಮಾಡಿರುತ್ತೇನೆ. ಪ್ಲೇಗ್‌ರೋಗವು ಇಲಿಗಳ ರೋಗವಾಗಿದೆ. ಮೊಟ್ಟಮೊದಲು ರೋಗವು ಇಲಿಗಳಲ್ಲಿ ಪ್ರಾರಂಭವಾಗಿ, ಇಲಿಗಳಿಂದ ಜನಗಳಿಗೆ ತಗಲುವುದು. ಇಲ್ಲಿ ಇಲಿಗಳೇ ಇಲ್ಲದ್ದರಿಂದ ಪಟ್ಟಣದಲ್ಲಿ ಪ್ಲೇಗ್ ರೋಗವೂ ಉಂಟಾಗದು ಎಂದನು.

ಅದರಂತೆ ಬಹಳಕಾಲ ಕಳೆದರೂ ಕಾಲಿಫನು ಆ ತನ್ನ ಪಟ್ಟಣದಲ್ಲಿ ಪ್ಲೇಗ್‌ರೋಗವು ಉಂಟಾಗದೆ ಇರುವುದನ್ನು ಕಂಡು, ಆ ಪ್ರಯಾಣಿಕನ ಮಾತುನಿಜವೆಂದು ತಿಳಿದು ತನ್ನ ಭಂಡಾರದಿಂದ ತುಂಬ ಹಣವನ್ನು ಆತನಿಗೆ ಕೊಡುವಂತೆ ಅಪ್ಪಣೆಕೊಟ್ಟನು. ಆ ಪ್ರಯಾಣಿಕನು ಆ ಪಟ್ಟಣದಲ್ಲೇ ಸ್ಥಿರವಾಗಿ ನಿಂತು ಪಟ್ಟಣದವರಿಂದೆಲ್ಲ ಸನ್ಮಾನಿತನಾಗಿದ್ದನು. ಪಟ್ಟಣದ ಜನರಿಂದ ಅಷ್ಟು ವಿಶೇಷವಾಗಿ ಸನ್ಮಾನಿತನಾಗಿದ್ದ ಈ ಮನುಷ್ಯನನ್ನು ಭಯಂಕರವಾದ ರೋಗದಿಂದ ಜನರನ್ನು ರಕ್ಷಿಸಿದ ಪ್ರಸಿದ್ಧನಾದ ಪ್ರಯಾಣಿಕನು ಈತನೇ ಎಂದು ಜನರು ಹೇಳುವರು.

(ಆರೋಗ್ಯಚಂದ್ರಿಕೆ.)

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯಿದೆಕಟ್ಟಿ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡ್‌ಕಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ. ಕರೆಕರುಗುವದು, ನೆತ್ತಿಸುಡುವದು, ಪಿತ್ತ ಕಾರುವದು, ಮುಖ ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟ—ಉಬ್ಬಸ ಕೆಮ್ಮಿನ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಕಣ್ಣಿಗೆ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿ ಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸ್‌ಅನೋಗೆ—ರಕ್ತಶುದ್ಧಿ. ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ತುಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣ ಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನಿಕ—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಫೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಆತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇಷ್ಟು ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಗದಲ್ಲಿ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[4] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ.) **ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪಿಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

ಪೋ|| ಗುಳೇದಗುಡ್ಡ, ಜಿ|| ವಿಜಾಪುರ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು.** [ಅಜಿವಿಸು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯ ಕ್ಕಾಗಿ ಕ್ಷೀಣ ರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ಏಳ ತೊಲೆಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿನಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಟ್ಟುಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟುಚೆಟ್ಟು ಆಗೋಣ, ಮುಟ್ಟುಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ಸೊಂಟದಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ. ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. ೮ ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

42 ಮು. ಪೋ. **ಮಿರಜ,** ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಾಡೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಕಣ್ಣುಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಹಕ್ಕಿ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಕಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಹಿತಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನುಷ್ಯನಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[10] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸಂನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಷಡ್ವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸಂನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
पंडित श्रीकाशीनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಟು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಅವಶ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಸಿಂಹಾಸನಾರೋಹಣಮಾಡಿರತಕ್ಕ ಐದರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಲಂಕಾಪಟ್ಟಣದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
[illegible] ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೨—೯

ಸೂಚನೆ!—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[11] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೇ ಸೆಪ್ಟಂಬರ್ ೧೯೩೨ [ಸಂಚಿಕೆ ೧೮

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

Insure with
UNIQUE ASSURANCE Co., Ltd.
and thereby support Swadeshism, for Deshabandhu late Mr. C. R. Das was the First Patron of this Company. 50% increase in New Business even in an year of world-wide financial crisis speaks for the Company's popularity. Lowest Premium Rates. Last quinquennial Bonus Rs. 50/- per thousand. Better result expected in next valuation upto 31-5-32 now being made.
For particulars of liberal Hereditary Commision etc.
Please apply to—
MR. E. K. PALIA M.A., ETC.,
Chief Agent,
4 16, Church Road, Mysore.

RAYANKERE PALACE
DAIRY FARM,
MYSORE.

Bull calves, a good half-bred bull and some bullocks for sale.

Apply to—
McIsaac, Manager.

ಕಾಫಿ ಪ್ರೊಪಗ್ಯಾಂಡಾ ಅಸೋಸಿಯೇಷನ್, ಚಿಕ್ಕಮಗಳೂರು.

ಈ ಅಸೋಸಿಯೇಷನ್ ಈಗ್ಗೆ ಒಂದು ವರ್ಷದೊಳಗೆ ಏರ್ಪಡಿಸಲ್ಪಟ್ಟು ಅತ್ಯಂತ ಅಧ್ಯವಸಾಯತೆಯುಳ್ಳ ಸೆಕ್ರೆಟರಿಯ ಕಾರ್ಯತತ್ಪರತೆಯಿಂದ ಸ್ವಲ್ಪಕಾಲದಲ್ಲೇ ದಕ್ಷಿಣಇಂಡಿಯಾದಲ್ಲೆಲ್ಲಾ ಮೈಸೂರು ಕಾಫಿಯ ಸಹಜವಾದ ಅತ್ಯುತ್ಕೃಷ್ಟತೆಯನ್ನು ಪ್ರಚಾರಮಾಡಿ ಬಹುವಾಗಿ ಕಮ್ಮಿ ದರ್ಜೆಯ ಬೇರೆದೇಶಗಳ ಕಾಫಿಯು ಖರ್ಚಾಗುತ್ತಲಿದ್ದ ಸ್ಥಳಗಳಲ್ಲೆಲ್ಲಾ ಈ ಕಾಫಿಯ ಉಪಯೋಗವು ದಿನೇದಿನೇ ಹೆಚ್ಚುವಂತೆ ಪ್ರಚಾರ ಮಾಡಲ್ಪಟ್ಟಿರುವದಲ್ಲದೆ "ಬೈ ಇಂಡಿಯನ್ ಲೀಗ್" ನವರ ಸಹಾನುಭೂತಿಯನ್ನೂ ದೊರಕಿಸಿಕೊಂಡು ಪ್ಲಾಂಟರುಗಳಿಂದಲೂ ಮತ್ತು ಈ ಸಂಘದ ಮೆಂಬರುಗಳಿಂದ ದೊರೆತ ಅತ್ಯಲ್ಪ ಸಹಾಯದಿಂದಲೂ ಅಮೋಘವಾದ ಕಾರ್ಯಕ್ರಮವನ್ನು ಜರುಗಿಸಿ ಅನೇಕ ಸ್ವದೇಶಿ ಎಗ್ಜಿಬಿಷನ್‌ಗಳಲ್ಲಿ ಶ್ರೇಷ್ಠ ಯೋಗ್ಯತಾಪತ್ರಗಳನ್ನು ಪಡೆದಿರುವದು. ಈ ಸಂಘದ ಮ್ಯಾನೇಜಿಂಗ್ ಕಮಿಟಿ ಮೀಟಿಂಗು ತಾ|| 18 ನೇ ಗುರುವಾರ ಬೆಳಗ್ಗೆ ಮತ್ತು ಸಾಯಂಕಾಲ ಮ|| ಹಾಜಿ ಮಹಮದ್ ಹುಸೇನ್ ಸಾಹೇಬರು ಮ|| ಉದರ್ ಖಾನ್, ಕಳಸೇಗೌಡರು ವಗೈರೆ ಪ್ಲಾಂಟರುಗಳ ಹಾಜರಿಯೊಂದಿಗೆ ನಡೆಸಲ್ಪಟ್ಟು ಮಾರನೇ ದಿವಸ ಈ ಕಮಿಟಿಯವರು ಆರೇಹಳ್ಳಿ, ಸಕಲೇಶಪುರ, ಬೇಳಗೋಡು ವಗೈರೆ ಸ್ಥಳಗಳಿಗೆ ಹೋಗಿ ಈ ಪ್ರಚಾರ ಕಾರ್ಯದಿಂದ ಎಷ್ಟರ ಮಟ್ಟಿಗೆ ಕಾರ್ಯಗಳು ನಡೆದಿರುತ್ತೆಂಬುದನ್ನೂ ಮತ್ತು ಅತ್ಯಗತ್ಯವಾದ ಕಾರ್ಯಗಳು ದ್ರವ್ಯಾಭಾವದಿಂದ ಕೈಕೊಳ್ಳಲು ಆಗದೆ ಹಾಗೆಯೇ ಸುಮ್ಮನೆ ಬಿದ್ದಿರುತ್ತೆಂಬುದನ್ನೂ ವಿಶದಪಡಿಸಿ ಇನ್ನೂ ಹೆಚ್ಚಿನ ಪ್ರಚಾರವನ್ನು ಕೈಕೊಂಡು ಕಾಫಿಬೆಳೆಯುವವರಿಗೂ ಕುಡಿಯುವವರಿಗೂ ಹಾಲಿ ಇರತಕ್ಕ ಮಾರ್ಜಿನವನ್ನು ಅದನ್ನು ಜಾಗ್ರತೆ ಕಮ್ಮಿ ಮಾಡತಕ್ಕ ಆವಶ್ಯಕತೆಯನ್ನೂ ಕಾಫಿಬೀಜ ಮತ್ತು ಪುಡಿಯನ್ನು ಉಪಯೋಗಿಸತಕ್ಕವರು ಫಾಯಿದೆಯ ದೃಷ್ಟಿಯಿಂದ ಮಿಶ್ರವಾದ ಪುಡಿ ಮತ್ತು ಬೀಜವನ್ನು ಕೊಂಡುಕೊಂಡು ದ್ರವ್ಯನಷ್ಟವನ್ನೂ ಆರೋಗ್ಯಹಾನಿಯನ್ನೂ ಉಂಟುಮಾಡಿಕೊಳ್ಳುತ್ತಿರುವದನ್ನೂ ಈ ಪ್ರಚಾರಕಾರ್ಯದಿಂದ ಹ್ಯಾಗೆ ಕಮ್ಮಿ ಮಾಡಬಹುದೆಂಬುದನ್ನೂ ವಿಶದಪಡಿಸಿ ಸಂಘಿತ ಸರ್ವ ಪ್ಲಾಂಟರುಗಳ ಭರವಸೆಯನ್ನೂ ಪಡೆದುಕೊಂಡು ಈ ಪ್ರಚಾರ ಕಾರ್ಯವನ್ನು ಅತ್ಯಂತ ಉತ್ಸಾಹದಿಂದ ಮುಂದುವರಿಸಲು ತಂದೂ ನಡೆಸುತ್ತಿರುವದು ಈ ಪ್ರೊಪಗ್ಯಾಂಡಾ ಅಸೋಸಿಯೇಷನ್ನಿನ ಮ್ಯಾನೇಜಿಂಗ್ ಕಮಿಟಿಯವರ ಕಾರ್ಯತತ್ಪರತೆಯನ್ನೂ ದೃಢನಿಷ್ಠೆಯನ್ನೂ ಸೂಚಿಸತಕ್ಕದ್ದಾಗಿರುತ್ತೆ. ಈ ಕಾರ್ಯಕ್ಕೆ ಪ್ಲಾಂಟರುಗಳ ಪ್ರೋತ್ಸಾಹವೂ ಮತ್ತು ಬೆಂಬಲವೂ ದೊರೆತು ಈ ಕಾರ್ಯವು ಮುಂದುವರಿಯಲು ಸಾಧಕವಾಗುವದರಲ್ಲಿ ಏನೂ ಸಂದೇಹವಿಲ್ಲವಾಗಿ ಎಣಿಸಲಾಗಿದೆ.

ಕಾಫೀಭಕ್ತ.

ಪದವೀಪ್ರದಾನ.

ಗುಳೇದಗುಡ್ಡ.

ಕಳೆದ ತಿಂಗಳು 27-8-32 ನೆಯ ದಿವಸ ಮುರಗಿಸ್ವಾಮಿಮಠದಲ್ಲಿ ತರುಣ ಸಂಘದವರು ಸಭೆಗೂಡಿ ಕೀರ್ತನಕಾರರಾದ ವೀರಯ್ಯನವರು ಹಿರೇಮಠ ಸೂರಕೋಡ ಇವರಿಗೆ ಕೀರ್ತನರತ್ನವೆಂಬ ಪ್ರಶಸ್ತಿಯಿಂದೊಡಗೂಡಿದ ಭಂಗಾರದ ಪದಕವನ್ನು ಕೊಟ್ಟರು. ಈ ಕೀರ್ತನಕಾರರು ಶ್ರಾವಣಮಾಸದಾದಿಯಿಂದಲೂ ಜನಗಳ ಮೇಲೆ ಪರಿಣಮಿಸುವಂತೆ ಕೀರ್ತನಮಾಡಿರುತ್ತಾರೆ. ಇದಕ್ಕಾಗಿ ನಾವು ಬಹಳ ಆಭಾರಿಗಳಾಗಿದ್ದೇವೆ. ಆದರೆ ಇಲ್ಲಿಯವರೆಗೂ ಎಷ್ಟೋ ಕೀರ್ತನಕಾರರು ಬಂದು ಕೀರ್ತನೆಮಾಡಿ ಹೋದರೂ ನಮ್ಮ ವೀರಶೈವರ ಮತದ ಸುಧಾರಣೆಯಬಗ್ಗೆ ಇವರಷ್ಟು ಕಳಕಳಿಯಿಂದ ಯಾರೂ ಕೀರ್ತನೆ ಮಾಡಿರಲಿಲ್ಲ. ಇವರು ನಮ್ಮ ವೀರಶೈವರಲ್ಲಿರುವ ಅಜ್ಞಾನಾಂಧಕಾರವನ್ನು ನಿವಾರಣೆ ಮಾಡಲೋಸುಗ ಕೀರ್ತನರೂಪದಲ್ಲಿ ನಮ್ಮ ಧರ್ಮತತ್ವಗಳನ್ನು ಸುಲಭಶೈಲಿಯಲ್ಲಿ ತಿಳಿಸುವುದರಲ್ಲಿ ನಿಪುಣರಾದ್ದರಿಂದ ಈ ಬಿರುದಿಗೆ ಇವರು ಅರ್ಹರಾಗಿರುವರು. ರತ್ನವನ್ನು ಗಾಢವಾದ ಕತ್ತಲೆಯಲ್ಲಿಟ್ಟರೆ ಆ ಕತ್ತಲೆಯು ಹೋಗಿ ಬೆಳಕುಬಿದ್ದು ಅಲ್ಲಿದ್ದ ಪದಾರ್ಥಗಳು ಹೇಗೆ ಕಾಣಿಸುತ್ತವೆಯೋ ಹಾಗೆ ಈ ರತ್ನವು ನಮ್ಮ ವೀರಶೈವರಲ್ಲಿರತಕ್ಕ ಕತ್ತಲೆ ಅಂದರೆ ಬಹಳ ಕುಡಿಯುವದು ಸಿಕ್ಕಸಿಕ್ಕ ಹಾಗೆ ಸ್ತ್ರೀಲಂಪಟರಾಗಿರುವದು ಮುಂತಾದ ಕತ್ತಲೆಯನ್ನು ಹೋಗಲಾಡಿಸಿ ವೀರಶೈವಷಟ್ಸ್ಥಲತತ್ವಗಳೆಂಬ ರತ್ನವನ್ನು ಅಂದರೆ ವೀರಶೈವರು ಹ್ಯಾಗೆ ನಡೆಯಬೇಕು? ಅಷ್ಟಾವರಣಗಳೆಂದರೇನು? ಪಂಚಾಚಾರವೆಂದರೇನು? ಮೋಕ್ಷವು ಹೇಗೆ ಸಿಗುತ್ತದೆ? ಪ್ರಾಪಂಚಿಕರು ಹೇಗೆ ಇರತಕ್ಕದ್ದು! ವಿರಕ್ತರ ವರ್ತನವೇನು? ಮುಂತಾದ ವಿಷಯಗಳಮೇಲೆ ಜನಗಳಹೃದಯದಲ್ಲಿ ಬಿಂಬಿಸುವಂತೆ ಕೀರ್ತನ ಮಾಡಿದ್ದಾರೆ. ಇದೇ ಮೇರೆಗೆ ಇವರು ಎಲ್ಲ ಕಡೆಗೂ ಕೀರ್ತನರೂಪದಿಂದ ಜನಗಳ ಅಜ್ಞತೆಯನ್ನು ಹೋಗಲಾಡಿಸುವರೆಂದು ನಂಬಿದ್ದೇವೆಂದು ತರುಣಸಂಘದ ಪರವಾಗಿ ದೊಡ್ಡಮಣಿಮಾಸ್ತರವರು ಭಾಷಣಮಾಡಿದರು. ತರುಣಸಂಘದವರು ಕೀರ್ತನಕಾರರಿಗೆ ಪದಕವನ್ನು ಕೊಟ್ಟ ಬಳಿಕ ಸಭೆಗೆ ಸುಗಂಧ ಸಮರ್ಪಣೆ ಮಾಡಲ್ಪಟ್ಟು ಸಭೆಯು ವಿಸರ್ಜನೆಯಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಕಾಶಿಯ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಬಾಬು ಶಿವಪ್ರಸಾದಗುಪ್ತರವರು ತಮ್ಮ ಎರಡು ಮೋಟಾರುಗಳ ಮೇಲೆ ಲೈಸೆನ್ಸ್ ನಂಬರನ್ನು ಇಂಗ್ಲೀಷಿನಲ್ಲಿ ಬರೆಯದೆ ಹಿಂದೀ ಭಾಷೆಯಲ್ಲಿ ಬರೆದರೆಂಬ ಕಾರಣದಮೇಲೆ ಪ್ರತಿ ಮೋಟಾರಿಗೂ 5 ರೂ. ನಂತೆ ಜುಲ್ಮಾನೆಗೆ ಗುರಿಯಾದರು.

ಬಳ್ಳಾರಿ ಜಿಲ್ಲಾ ಕೊಟ್ಟೂರು ಗ್ರಾಮದ ಸುಪ್ರಸಿದ್ಧ ಶ್ರೀಮಂತರಾದ ವೇ|| ಮ|| ಮ|| ಜಾಗಟಗೇರಿ ಚನ್ನಬಸವಯ್ಯನವರು 29-8-32 ನೆಯ ದಿವಸ ಹೆಚ್ಚು ಓಟಿನಿಂದ ತಾಲೂಕು ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟರೆಂದು ತಿಳಿಯಿಸಲು ಬಹಳ ಸಂತೋಷಪಡುತ್ತೇವೆ. ಇವರು ಚಿಕ್ಕವಯಸ್ಸಿನವರಾಗಿದ್ದರೂ ಪ್ರಜಾಸೇವೆಯಲ್ಲಿಯೂ ದೇಶಸೇವೆಯಲ್ಲಿಯೂ ಉತ್ಸುಕರಾಗಿರುವದಲ್ಲದೆ ಸುಶೀಲರೂ ದಯಾರ್ದ್ರಹೃದಯರೂ ಅಸಾಧಾರಣ ಗುರುಭಕ್ತರೂ ಆಗಿರುತ್ತಾರೆ. ಇವರು ತಮ್ಮ ಪೂರ್ವಜರಂತೆ ಜನೋಪಕಾರಿಗಳಾಗಿ ಪ್ರಪಂಚದಲ್ಲಿ ಯಶಸ್ವಿಗಳಾಗುವಂತೆ ಪರಮೇಶ್ವರನು ಅನುಗ್ರಹಿಸಲಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಯಮ್ಮಿಹಟ್ಟಿಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತ ಮಹಾಸಂಸ್ಥಾನ ಸರ್ಕೀಟಿನ ಶುಭಾಗಮನ.

ಅನಂತಪುರ ಜಿಲ್ಲಾ ಕಲ್ಯಾಣದುರ್ಗ ತಾಲೂಕ ಪೈಕಿ ಯಮ್ಮಿಹಟ್ಟಿಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಸರ್ಕೀಟಿನ ಗುರುಅಧಿಕಾರಿಗಳಾದ ಶ್ರೀ|| ಷ|| ಬ್ರ|| ಶಂ|| ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಸಕಲ ಸಿಬ್ಬಂದಿಯಿಂದ ಇಲ್ಲಿಗೆ ತಾ|| 31-4-32ನೆಯ ದಿವಸ ಬಿಜಯಂಗೈಸಿದರು. ಪುರಪ್ರಮುಖರೂ, ಗುರುಭಕ್ತರೂ ಆದ ವೇ|| ಚಲಮಯ್ಯನವರು ಮಠದ, ಶ್ರೀಮಂತ ಬಸವನಗೌಡರು ಪಾಟೀಲ, ಆಲೂರು ಹನುಮಂತಪ್ಪನವರು, ಕಾರೇಕಲ್ಲು ಲಿಂಗಪ್ಪನವರು ಇವರೇ ಮೊದಲಾದ ಭಕ್ತಮಾಹೇಶ್ವರರು, ಇನ್ನುಳಿದ ಪರಮತೀಯರು ಅಸ್ತಕಪಾಲಸಹಿತರಾಗಿ ಭಜಂತ್ರಿಯೊಡನೆ ಬಂದು ಗುರುಗಳನ್ನು ಎದುರ್ಗೊಂಡು ಉತ್ಸವದೊಡನೆ ಈಶ್ವರದೇವಸ್ಥಾನಕ್ಕೆ ಬಿಜಮಾಡಿಸಿಕೊಂಡು ಬಂದರು. ಸನ್ನಿಧಿಯವರು ಭದ್ರಾಸನದಲ್ಲಿ ಮೂರ್ತಮಾಡಿದ ಕೂಡಲೆ ಸರ್ವರೂ ಕರತಾಡನಮೂಲಕ ಜಯಜಯಕಾರಗಳನ್ನು ಮಾಡಿದರು. ಮಹಾಸಂಸ್ಥಾನದಲ್ಲಿ ಹುರ್ತಕ್ಕೆ 210 ಜನ ಸಿಬ್ಬಂದಿ ಇದ್ದು ಡ್ರೆಸ್ಸು ಬಿಲ್ಲೆಗಳನ್ನು ಹಾಕಿಕೊಂಡು ಸರ್ವರೂ ಸನ್ನಿಧಿಗೆ ನಮಸ್ಕರಿಸಿ ಇಂತೀಜಾಮು ಚನ್ನಾಗಿ ಮಾಡುತ್ತಿದ್ದರು. ಸಂಸ್ಥಾನಸರ್ವಾಧಿಕಾರಿಗಳಾದ ವೇ|| ಶೀ|| ಎಂ. ಶಿ. ಮಲ್ಲಯ್ಯನವರು ಶಾಸ್ತ್ರಿ ಇವರು ವ್ಯಾಖ್ಯಾನಿಕ ಭಾಷಣವನ್ನು ಮಾಡಿದರು. ಆ ಮೇಲೆ ಮಹಾಸ್ವಾಮಿಗಳು ಸಭಿಕರಿಗೆ ತಮ್ಮ ಅಮೃತವಾಣಿಯಿಂದ ಬೋಧಮಾಡಿದ್ದೇನಂದರೆ ಯಾವ ರಾಷ್ಟ್ರವಾಗಲಿ, ಸಮಾಜವಾಗಲಿ, ಸುಧಾರಿಸಬೇಕಾದರೆ ಆಯಾಯ ಧರ್ಮಪೀಠದ ಗುರುಗಳು ದೇಶಮಧ್ಯದಲ್ಲಿ ಸಂಚರಿಸಿ ಯಾವತ್ತು ಭಕ್ತವೃಂದಕ್ಕೆ ಬೋಧೆಯಂಮಾಡುತ್ತ ಗುರುಕಾಣಿಕೆಯಂ ವಸೂಲುಮಾಡುತ್ತ ಇದ್ದರೇನೆ ಮತವಿಷಯಗಳು ಗುರುಸಾರ್ವಭೌಮರ ಮಹತ್ವಗಳು ಭಕ್ತರಿಗೆ ತಿಳಿಯುತ್ತವೆ. ಜಗದ್ಗುರು ಪೀಠದವರು ಸಂಚರಿಸದೆ ಇದ್ದರೆ ಧರ್ಮದಲ್ಲಿ ಯಾವದೂ ಕಟ್ಟು ಉಳಿಯದೆ ಯಾರದೂ ಭಯವಿಲ್ಲದೆ ಅಧರ್ಮಕ್ಕೆ ಬೀಳುವ ಪ್ರಸಕ್ತಿಯುಂಟು. ಎಷ್ಟೋ ವೀರಶೈವರು ಪರಧರ್ಮದವರ ಉಪದೇಶಕ್ಕೆ ತಲೆದೂಗಿ ಪರಮತಾವಲಂಬಿಗಳಾಗಿರುತ್ತಾರೆ. ಈ ವಿಷಯವು ಪೀಠಾಚಾರ್ಯರಿಗೆ ತಿಳಿದ ಕಾರಣ ಪ್ರತಿಯೊಂದು ಪೀಠದವರು ಒಂದೊಂದು ಪ್ರಾಂತದಲ್ಲಿ ಸರ್ಕೀಟುಮಾಡುತ್ತ ತಮ್ಮ ತಮ್ಮ ಭಕ್ತರಿಗೆ 'ಸ್ವಧರ್ಮೇನಿಧನಂ ಶ್ರೇಯಃ' ಎಂಬೀ ವಾಕ್ಯಾರ್ಥವನ್ನು ಬೋಧಮಾಡುತ್ತ ಎಷ್ಟೋ ಕಷ್ಟಪಡುತ್ತಿರುವರು. ಇದೂ ಅಲ್ಲದೆ ಕೆಲ ಧರ್ಮಲಂಡರು ಸಮಾಜದಲ್ಲಿ ಸಹಪಂಕ್ತಿ ಶರೀರಸಂಬಂಧ ಮಾಡಬೇಕೆಂದು ಸಮಾಜವೆಂಬ ಹಾಲಲ್ಲಿ ಉಪ್ಪುಹಾಕುವದಕ್ಕೆ ಪ್ರಯತ್ನಮಾಡುತ್ತಾರೆ. ಇಂಥವರ ಉಪಟಳಕ್ಕೆ ಯಾರೂ ಮನಕೊಡಬಾರದೆಂದು ಬೋಧಮಾಡಿದರು. ಸಮಾಜಬಾಂಧವರೇ ಚಿಕ್ಕಮಣ್ಣೂರ ಮಹಾಸ್ವಾಮಿಗಳು ಸರ್ಕೀಟಿಗೆ ದಯಮಾಡಿಸಿದ ಬಳಿಕ ಸ್ವಮತೀಯರು, ಪರಮತೀಯರು ಅಜುಬಾಜು ಗ್ರಾಮಗಳ ಭಕ್ತರೂ ಬರುತ್ತಿರುವರು. ಕೇವಲ ಧಾರ್ಮಿಕ, ಸಾಮಾಜಿಕ, ನೈತಿಕರೀತಿಗಳಿಂದ ಬಂದ ಭಕ್ತರಿಗೆ ಶ್ರುತ್ಯಾಗಮಗಳ ಪ್ರಮಾಣಗಳನ್ನು ಕೊಟ್ಟು ಬೋಧಮಾಡುತ್ತಿರುವರು. ಇವರ ಬೋಧಾಮೃತವನ್ನು ಕೇಳಿ ಸರ್ವರೂ ತಲೆದೂಗುತ್ತ ಬಹು ಸಂತೋಷಪಡುತ್ತಿರುವರು. ಸಂಸ್ಥಾನ ಸರ್ವಾಧಿಕಾರಿಗಳು ಪೂಜ್ಯಪಾದ ಶ್ರೀ ಪಟ್ಟದ ಮಹಾಸ್ವಾಮಿಗಳು ಶಿರಾಮಠ ಕೊಂಡಕುಂದಿ ಇವರನ್ನು ಅಮಾತ್ಯರನ್ನಾಗಿ ಮಾಡಿ ಭಡೀಸರ್ಕೀಟಿಗೆ ಕಳುಹಿಸಿರುತ್ತಾರೆ. ಇವರಾದರೂ ಭಕ್ತರಿಗೆ ಬೋಧೆಯಂಮಾಡುತ್ತಿರುವದನ್ನು ನೋಡಿದರೆ ಯಾರಿಗೆತಾನೆ ಸಂತೋಷವಾಗಲಿಕ್ಕಿಲ್ಲ. ಮುಂದೆ ಈ ಮಹಾತ್ಮರ ಸರ್ಕೀಟು ಮಡಕಸಿರಪ್ರಾಂತಕ್ಕೆ ಬೆಳೆಯುವದು.

ನಾಗರಡ್ಡಿ ಮಲ್ಲಪ್ಪ, ಯಮ್ಮಿಹಟ್ಟಿ

ವೀರಶೈವಮತದಲ್ಲಿ ಜಾತಿಸಾಂಕರ್ಯವಿಲ್ಲ.

ಲೇಖಕ—'ದೈವಜ್ಞ ವಿನೋದ' ಶಿರೋಳ

ವಿಶಾಲವಾದ ವೀರಶೈವ ಮತಸಾಮ್ರಾಜ್ಯಕ್ಕೆ ಒಳಪಟ್ಟು ಅನೇಕ ಜಾತಿಗಳು ಪ್ರಕಾಶಮಾನವಾಗಿವೆ. ವೀರಶೈವಮತದ ಹೆಗ್ಗುರುತಾದ ಲಿಂಗಧಾರಣೆಯು ಸಮಸ್ತಜಾತಿಯವರಿಗೂ ಉಂಟು. ಲಿಂಗವನ್ನು ಧರಿಸಿದ ಪ್ರತಿಯೊಂದು ಜಾತಿಯವರೂ ವೀರಶೈವಮತಾಭಿಧಾನವನ್ನೇ ಹೇಳುತ್ತಿರುವದು ಸುಪ್ರಸಿದ್ಧವಿದೆ. ಇದು ಶಾಸ್ತ್ರಸಮ್ಮತವಾದುದು. ಮತಾಭಿಧಾನವನ್ನು ಹೇಳಿದ ಮಾತ್ರದಿಂದ ತನ್ನ ಜನ್ಮಜಾತಿತ್ವವು ಲೋಪವಾಗಲಾರದು. 'ಭಾರತಸಾಮ್ರಾಜ್ಯದ ಕರ್ನಾಟಕದ ಪ್ರಜೆಯು ಭಾರತೀಯನೆಂದೇ ಹೇಳಿಸಿಕೊಳ್ಳುವನು. ಆದರೆ ಸೀಮಾಪ್ರಾಂತೀಯನು? ಎಂದರೆ ಭಾರತಸೇನಾಧುರೀಣಾಚಾರ್ಯರಲ್ಲಿ ಮುಂದಿರುವ ಬಂಗಾಲಿಯನೆಂದು ಹೇಳಲಾರನು, ತಾನು ಜನ್ಮವೆತ್ತಿದ ಕರ್ನಾಟಕವು ಹೇಗಿದ್ದರೂ ಕರ್ನಾಟಕೀಯನೆಂದು ಹೇಳುವಂತೆ ವೀರಶೈವಮತಸಾಮ್ರಾಜ್ಯದಲ್ಲಿ ಯಾವನೇ ಜಾತಿಯವನಾಗಲಿ ಅತ್ಯಂತ ಮಹತ್ವವಾದ ವೀರಶೈವಮತೀಯನೆಂದು ಹೇಳುತ್ತಾನೆ. ಆದರೆ ತನ್ನ ಜಾತಿ ತಾರತಮ್ಯವನ್ನು ವಿಚಾರ ನಡೆದರೆ ಧರ್ಮದ್ರೋಹವು ಒದಗದಿರದು. ಈ ಮತಾಬ್ಧಿಯಲ್ಲಿ ಉದಯವಾದ ಅನೇಕ ಜಾತಿರತ್ನಗಳಿಗೆ ಉಚ್ಚನೀಚಭಾವನೆಗಳಿಲ್ಲ. ಆದರೂ ಆ ರತ್ನಗಳಿಗೆ ಶಕ್ತ್ಯಂಶ ಸಾಣೆಯೆಂಬ ಕ್ರಿಯೆಯು ಆಗಿದ್ದರೆ ಪ್ರಕಾಶವಾಗಿ ಪರಶಿವನ ಖರೀದಿಗೆ ಶಕ್ತವುಗಳಾಗುತ್ತವೆ. ಆ ಪರಶಿವನು ಸಮಸ್ತಜಾತಿಯವರಿಗೂ ಸುಲಭಸಾಧ್ಯನಾಗಿದ್ದಾನೆ. ಅಂತೇ ಅವನೊಡನೆ ಬೆರೆಯುವ ಸಾಧನಕ್ರಿಯೆಗಳಾದ ಶಿವದೀಕ್ಷಾಸಂಸ್ಕಾರಾದಿಗಳನ್ನು ಮತಸ್ಥಾಪನಾಚಾರ್ಯರು ನಿರ್ಣಯಿಸಿದ್ದಾರೆ. ಈ ದೀಕ್ಷಾದಿಸಂಸ್ಕಾರಗಳಿಂದ ಪರಿಶುದ್ಧನಾಗಿ ಮುಮುಕ್ಷುರೂಪನಾದ ಪರಶಿವಸ್ವರೂಪವಾದ ತನ್ನ ಲಿಂಗದಲ್ಲಿ ಅಂಗವನ್ನು ಐಕ್ಯಗೊಳಿಸುವದಾಗಿದೆ. ಇದನ್ನು ಬಿಟ್ಟು ದೀಕ್ಷೆಯಾದೊಡನೆ ಜಾತಿಭೇದವು ಅಳಿದುಹೋಯಿತು. ಯಾವತ್ತರೂ ಕೂಡಿ ಊಟಮಾಡೋಣ ಹೆಣ್ಣು ಕೊಡೋಣ ಗಂಡು ಕೊಳ್ಳೋಣವೆಂಬ ಜಾತಿಸಾಂಕರ್ಯದ ಮಹಾಪಾತಕಾರ್ಯಕ್ಕೆ ಈಗ ಕೆಲವರು ಪ್ರವರ್ತಿಸಹತ್ತಿದ್ದಾರೆ. ದೀಕ್ಷೆಯು ಪರಸ್ಪರ ಜಾತಿಗಳನ್ನು ಕಲಬೆರಕೆಮಾಡುವದಕ್ಕಾಗಿ ಅಲ್ಲ; ಸ್ವಾತ್ಮೋನ್ನತಿಗಾಗಿ ಅದೆ. ಈ ದೀಕ್ಷಾಮಹತ್ವಾತಿಶಯವನ್ನು ತಿಳಿಯದೆ ಈಗ ಕೆಲವರು ಜಾತಿಸಾಂಕರ್ಯವೆಂಬ ಪಿಶಾಚಿಯನ್ನು ಅಂತರಂಗದಲ್ಲಿಟ್ಟುಕೊಂಡು ವೀರಶೈವಸ್ವಪ್ರಚಾರಕಸಂಘವೆಂಬ ಸೋಗುಹಾಕಿಕೊಂಡು ತಿರುಗುತ್ತಿರುವರು. ಇವರ ಮೋಸದ ಬಲೆಗೆ ಯಾರೂ ಮರುಳಾಗಬಾರದೆಂದು ಸೂಚಿಸುತ್ತೇನೆ.

ಶ್ರೀ ವೀರೇಶಾಯನಮಃ

ಶಿಂಗಟಾಲೂರ ಶ್ರೀ ದೇವಸ್ಥಾನದ ಜನರಲ್ ಕಮಿಟಿ.

ಸದರಿ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಈ ಮೊದಲೇ ಪ್ರಸಿದ್ಧಪಡಿಸಿದಂತೆ ತಾ|| 30-8-32 ನೆಯ ಇಸವಿ ಮಂಗಳವಾರದ ದಿವಸ ಶ್ರೀಮಂತ ಹುಚ್ಚಪ್ಪ ಗುಗ್ಗರಿ ಚಿತ್ರವಾಡಿಗಿ ಇವರ ಅಧ್ಯಕ್ಷತೆಯ ಕೆಳಗೆ ಜನರಲ್ ಕಮಿಟಿಯು ಕೂಡಿತ್ತು. ಸಭೆಗೆ ಶ್ರೀಮಂತ ಬಾಪೂ ಸಾಹೇಬ್ ದೇಸಾಯಿ ಹಂದಿಗನೂರ (ಮುಗಳಿ), ಶ್ರೀಮಂತ ರಾಚಪಗೌಡ ಬಹದ್ದೂರ ದೇಸಾಯಿ ಹಮ್ಮಿಗಿ. ಲಿಂಗಯ್ಯನವರು ಪಾಟೀಲ ಶಾಂಬಳಗುಂಡಿ ನವಲಿ ಕಂಠಿ ಸಣ್ಣತಮ್ಮಪ್ಪನವರು, ಡಿ. ಎಲ್. ಬಿ. ಮೆಂಬರ ಶಿವಪ್ಪನವರು, ಪಾಲಿ ಹುಮ್ಮಿನಹಗಲಿ ವಗೈರೆ ಪ್ರಮುಖಜನರು ಹಾಗೂ ಹಮ್ಮಿಗಿ ನವಲಿ ಶಿಂಗಟಾಲೂರ ಗ್ರಾಮದ ಪಂಚಜನರೂ ಇತರ ಪ್ರಮುಖರೂ ಕೂಡಿದ್ದರು. ಸದರಿ ಕಮಿಟಿಯಲ್ಲಿ ಕೆಳಗೆ ಬರೆದ ಠರಾವುಗಳು ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟವು.

1. ಶಿಂಗಟಾಲೂರ ನವಲಿ ಗ್ರಾಮದ ಪಂಚಜನರಲ್ಲಿ ಸೆಕ್ರೆಟರಿಯ ನೇಮಣೂಕಿಯ ಬಗ್ಗೆ ಜಾತ್ರೆಕಾಲಕ್ಕೆ ಕೂಡುವ ವಾರ್ಷಿಕ ಜನರಲ್ ಕಮಿಟಿಯಲ್ಲಿ ನಿರ್ಣಯಿಸತಕ್ಕದೆಂದು ತೀರ್ಮಾನಿಸಿತು.

2. ಸಧ್ಯಕ್ಕೆ ಇಲ್ಲಿ ನಡೆಯಬೇಕಾಗಿರುವ ತೇರಿನಮನೆ ವಗೈರೆ ಕಾಮಗಾರಿಗಳನ್ನು ಪ್ರೆಸಿಡೆಂಟರೇ ನಡೆಯಿಸಿಕೊಂಡು ಶೀಘ್ರದಲ್ಲಿ ಪೂರ್ತಿಗೊಳಿಸಲು ನಿರ್ಣಯಿಸಲ್ಪಟ್ಟಿತು.

3. ಶ್ರೀ ಸ್ವಾಮಿಯ ರಥದ ಇನ್ನುಳಿದ ಅಲ್ಪಸ್ವಲ್ಪ ಕೆಲಸವನ್ನು ಈ ವರ್ಷ ಜಾತ್ರೆಯೊಳಗಾಗಿ ಕೊನೆಗಾಣಿಸಿ ಆ ಸಂಬಂಧಿ ಜಮಾಖರ್ಚನ್ನು ಕೂಡಲೇ ಪ್ರಸನ್ನಗೊಳಿಸುವ ಬಗ್ಗೆ ತೇರಿನಕೆಲಸದಲ್ಲಿ ಮುಂದಾಳುಗಳಾದ ಗದಗಿನ ಪ್ರಮುಖಜನರಿಗೆ ಪ್ರೆಸಿಡೆಂಟರು ವಿನಂತಿಮಾಡಿಕೊಳ್ಳತಕ್ಕದೆಂದು ಗೊತ್ತುಮಾಡಲ್ಪಟ್ಟಿತು.

4. ಸದರಿ ದೇವಸ್ಥಾನದ ಉನ್ನತಿಯ ಬಗ್ಗೆ ವಾಗ್ದಾನ ಮಾಡಿದ ಶ್ರೀ|| ಶೀ|| ವಾ|| ಹಮ್ಮಿಗಿ ಕಣವಿಮಠದ ಸೋಮಯ್ಯನವರ ಬಾಬಶು ಐವತ್ತು ರುಪಾಯಿಗಳನು ಶೀಘ್ರದಲ್ಲಿ ಕಳುಹಿಸಿಕೊಡಲು ಅವರ ಮಕ್ಕಳಾದ ಗ|| ಸೋ|| ಕಣವಿಮಠ ಅನ್ನದಕಾಲಾ ಅಸಿಸ್ಟೆಂಟಮಾಸ್ತರ ಗುತ್ತಲ ಇವರಿಗೂ ಮತ್ತು ಜಾತ್ರೆಯಲ್ಲಿ ನಡೆಯುವ ಶ್ರೀ ರುದ್ರಾಭಿಷೇಕದ ಬಗ್ಗೆ ವರ್ಷಾಶನ ಕೊಡಲು ವಾಗ್ದಾನಮಾಡಿದ ಜನರ ಪೈಕಿ ಬಾಕಿನಿಂತ ರಾ|| ರಾ|| ಗುರುಬಸಪ್ಪನವರು ಹುಬ್ಬಳ್ಳಿ ಸಾ|| ಗದಗ ರಾ|| ರಾ|| ಕರವೀರಪ್ಪನವರು ತಾನುಭೋಗರ ಭದ್ರಪ್ಪನವರ ಸಾ|| ಹೊಳಗುಂದಿ ಇವರುಗಳಿಗೂ ಶೀಘ್ರ ಹಣಕಳುಹಿಸಲು ಇನ್ನೊಂದಾವರ್ತಿ ಪ್ರೆಸಿಡೆಂಟರು ಟಪಾಲ ದ್ವಾರಾ ವಿನಂತಿಮಾಡಿಕೊಳ್ಳತಕ್ಕದ್ದು. ಮತ್ತು ಬಾಕೀದಾರ ಬರತಕ್ಕ ಬಾಕಿ ವಸೂಲಿಯ ಬಗ್ಗೆ ಈಗಿನ ಕಾಲಮಾನಕ್ಕನುಸರಿಸಿ ಪ್ರೆಸಿಡೆಂಟರು ತಮಗೆ ಸೂಕ್ತ ಕಂಡ ಮಾರ್ಗವನ್ನು ಅನುಸರಿಸತಕ್ಕದ್ದು. ಈ ಪ್ರಕಾರ ಠರಾವು ಪಾಸಾದನಂತರ ಸ್ವಾಮಾಧಿಪತಿಯಾದ ವೀರೇಶನ ಪ್ರಾರ್ಥನೆಯೊಂದಿಗೆ ಸಭಾವಿಸರ್ಜಿಸಲ್ಪಟ್ಟಿತು.

ಶ್ರೀ|| ದೇವಸ್ಥಾನ
ತಾ|| 1-9-32.

ಎಸ್. ವಿ. ಕಲಬುಸದ,
ಪಂಚಕಮಿಟಿ ಪ್ರೆಸಿಡೆಂಟ.

ಭಾರತೀಯ ಸ್ತ್ರೀಯರು.

ಇವರು ವೀರಮಾತೆಯರಾಗಿಯೂ ವೀರಪತ್ನಿಯರಾಗಿಯೂ ಆಗುತ್ತಲಿದ್ದಾರೆ. ದೇಶದ ಕ್ಷೇಮಕ್ಕೋಸ್ಕರ ಎಲ್ಲಿ ಪಿಕಟಿಂಗು ಆದಂಗೆಲ್ಲಾ ಅಲ್ಲಿಗೆ ಹೋಗಿ ದೇಶಭಕ್ತರಿಗೆ ಸಹಾಯ ಮಾಡುತ್ತಲಿದ್ದಾರೆ. ದೇಶಸೇವೆಯ ಉತ್ಸಾಹದಲ್ಲಿ ಮುಂದಾಳುಗಳಾಗುತ್ತಲಿದ್ದಾರೆ. ಸ್ವದೇಶೀಸಾಮಾನುಗಳನ್ನು ಉಪಯೋಗಿಸಬೇಕೆಂದು ಜನಗಳಿಗೆ ಬೋಧಿಸುತ್ತಲಿದ್ದಾರೆ. ನಮ್ಮ ದೇಶದಲ್ಲಿ ಯಾವ ಸ್ವದೇಶೀಸಾಮಾನುಗಳು ಸಿಕ್ಕುವದಿಲ್ಲವೋ ಅಂಥ ಸಂದರ್ಭಗಳಲ್ಲಿ ವಿದೇಶೀಸಾಮಾನುಗಳನ್ನು ಉಪಯೋಗಿಸಿ ಕ್ರಮೇಣ ಅವುಗಳನ್ನು ನಮ್ಮ ದೇಶದಲ್ಲಿ ತಯಾರುಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಉಪದೇಶ ಮಾಡುತ್ತಲಿದ್ದಾರೆ. ಎಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಬಾವುಟಗಳ ಮೆರವಣಿಗೆಯು ನಡೆಯುವುದೋ ಅಲ್ಲಿ ತಾವು ಮೆರವಣಿಗೆಯಲ್ಲಿ ಭಾಗಿಗಳಾಗುತ್ತಲಿದ್ದಾರೆ. ಬ್ರಿಟಿಷ್ ಧರ್ಮಗಳಿಗೆ ಎಲ್ಲಿ ನ್ಯೂನತೆಗಳು ಬರುವವೋ ಅಲ್ಲಿ ಆ ನ್ಯೂನತೆಗಳ ಪರಿಹಾರಕ್ಕೋಸ್ಕರ ನಡೆಯತಕ್ಕ ಚಳವಳಿಗಳಿಗೆ ಉತ್ತೇಜನವನ್ನು ಕೊಡುತ್ತಲಿದ್ದಾರೆ. ತಮ್ಮ ಗೃಹಕೃತ್ಯಗಳನ್ನು ಮಾಡಿಕೊಂಡು ವಿದ್ಯಾಭ್ಯಾಸ, ಕಲೆಗಳ ಅಭ್ಯಾಸ ಇವುಗಳಿಗೆ ಪ್ರೋತ್ಸಾಹವನ್ನು ಕೊಡುತ್ತಾ ದೇಶಸೇವಾಧುರಂಧರೆಯರಾಗುತ್ತಲಿದ್ದಾರೆ.

ಈಗ ಸಧ್ಯಕ್ಕೆ ವಿದ್ಯಾವತಿಯರು ಈ ಕೆಲಸಗಳಲ್ಲಿ ವಿಶೇಷ ಮುಂದಾಳುಗಳಾಗುತ್ತಲಿರುವರು. ಇತರ ಹೆಂಗಸರು ಕೂಡ ದೇಶಸೇವೆಯಲ್ಲಿ ಭಾಗಿಗಳಾಗುವುದಕ್ಕೆ ಪ್ರಯತ್ನ ಮಾಡುತ್ತಲಿರುವರು. ಈ ಪ್ರಯತ್ನಗಳು ನಡೆಯುವುದಕ್ಕೆ ಕಾರಣಭೂತರಾದ ಸ್ವಾರ್ಥಪರರಾದ ಬ್ರಿಟಿಷ್ (Diehard) ಗಳು, ಇಂಡಿಯಾ ದೇಶದ ಶತ್ರುಗಳೆಂದು ಕೆಲವರು ಭಾವಿಸುತ್ತಾರೆ. ಇವರೆಂದಿಗೂ ನಮಗೆ ಶತ್ರುಗಳಲ್ಲ. ನಮ್ಮಲ್ಲಿ ಭಾರತೀಯ ಸ್ತ್ರೀಪುರುಷರು ಬಹುಕಾಲದಿಂದಲೂ ದೇಶಸೇವೆಯ ವಿಷಯದಲ್ಲಿ ಉದಾಸೀನರಾಗಿದ್ದರು. ದೇಶಸೇವೆಯೇ ಆತ್ಮಸೇವೆಯೆಂಬ ವಿಧಿಯನ್ನು ಮರೆತಿದ್ದರು. ಈ ಭಾಗದಲ್ಲಿ ತಿಳುವಳಿಕೆಯೂ ಹೋಗಿತ್ತು. ಬ್ರಿಟಿಷ್ ಧರ್ಮಕ್ಕೆ ಲೋಪಬಂದದ್ದರಿಂದಲೂ, ಭಾರತೀಯ ದೇಶಭಕ್ತರನ್ನು ನಾನಾ ವಿಧವಾದ ಹಿಂಸೆಗಳಿಗೆ ಗುರಿಮಾಡಿದ್ದರಿಂದಲೂ ನಮ್ಮ ದೇಶದ ಹೆಂಗಸರು ಕೂಡಾ ಝಾನ್ಸಿ ಮಹಾರಾಣಿಯಂತೆ ದೇಶಸೇವೆಗೋಸ್ಕರ ಪ್ರಾಣವನ್ನು ಒಪ್ಪಿಸುವುದಕ್ಕೆ ಸಿದ್ಧರಾಗುತ್ತಲಿದ್ದಾರೆ. ಇವಕ್ಕೆಲ್ಲಾ ಕಾರಣಭೂತರು ಬ್ರಿಟಿಷ್ (Diehard) ಗಳು ಮಾತ್ರವೇ ಅಲ್ಲ. ಈ ಡೈಹಾರ್ಡುಗಳಿಗೆ ನಿರಂಕುಶವಾದ ಅಧಿಕಾರವನ್ನು ಕೊಟ್ಟಿರತಕ್ಕ ಜನಗಳೂ ಕಾರಣಭೂತರೆಂದು ನನಗೆ ತೋರುತ್ತದೆ.

ಮೈಸೂರು ಭೀಷ್ಮ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಕಲ್ಯಾಣದುರ್ಗಕ್ಕೆ ಚಿಕ್ಕಮಣ್ಣೂರ ಮಹಸ್ವಾಮಿಗಳವರ ಆಗಮನ.

ಸಮಾಜಬಂಧುಗಳೇ ಅನಂತಪುರಜಿಲ್ಲಾ ಪೈಕಿ ಕಲ್ಯಾಣದುರ್ಗಕ್ಕೆ ಸಮಾಜೋದ್ಧಾರಕ ಶ್ರೀ|| ಷ|| ಬ್ರ|| ಶಂ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರ ಇವರು ತಾರೀಖು 25-8-32 ಕ್ಕೆ ದಯಮಾಡಿಸಿದರು. ಪುರಪ್ರಮುಖರೂ, ಯೂನಿಯನ್ ಛೇರಮನ್ನರೂ, ಆಗರ್ಭಶ್ರೀಮಂತರೂ ಆದ ಕರ್ಣಂ ಚಿಕ್ಕಪ್ಪನವರು ತಮ್ಮ ಗೃಹಕ್ಕೆ ಗೌರವಿಸಿ ಕರೆದುಕೊಂಡು ಬಂದರು. ಶ್ರಾವಣಮಾಸದಲ್ಲಿ ಲಕ್ಷಬಿಲ್ವಾರ್ಚನ, ನಿತ್ಯವೂ 50 ಮಂದಿಗೆ ಅನ್ನದಾನವೂ ಈ ಪ್ರಕಾರ ಶ್ರಾವಣಮಾಸಾಂತ್ಯದವರೆಗೂ ನಡೆಸುತ್ತ ತಾರೀಖು 26-8-32 ನೇ ದಿವಸ ತಮ್ಮ ಭವ್ಯವಾದ ಮನೆಯಲ್ಲಿ ಸಭೆಯನ್ನು ಏರ್ಪಡಿಸಿದರು. ಸಭೆಗೆ ಸ್ವಮತ ಪರಮತೀಯ ಸ್ತ್ರೀಪುರುಷರು ಬಂದಿದ್ದರು. ಯಾವತ್ತರಿಗೂ ಸಂತೋಷವಾಗುವಂತೆ ಚಿಕ್ಕಮಣ್ಣೂರ ಮಹಸ್ವಾಮಿಗಳು ಅನ್ನದಾನದ ಮಹತ್ವವನ್ನು ಕುರಿತು, "ಹಿಂದಕ್ಕೆ ಬಳ್ಳಾರಿ ಕಂಡೆಪ್ಪನವರು ಸತ್ಯನಿಧಿ ಸೊಲ್ಲಾಪುರ ಶಿವಶರಣಪ್ಪನವರು ಅನ್ನದಾನದಿಂದಲೇ ಪುಣ್ಯಾಂಶವನ್ನು ಸಂಪಾದಿಸಿ ಕೀರ್ತಿವಂತರಾದರು" ಎಂಬೀ ಮುಂತಾದ ದೃಷ್ಟಾಂತಗಳನ್ನು ತಮ್ಮ ಅಮೃತವಾಣಿಯಿಂದ ಬೋಧಮಾಡಿದರು.

ತಿಪ್ಪೇಸ್ವಾಮಿ,
ತಾಲೂಕುಬೋರ್ಡ ಮೆಂಬರ್,
ಜಿಲ್ಲಾ ಟವನ್‌ಬೋರ್ಡು ಮೆಂಬರು ಕಲ್ಯಾಣದುರ್ಗಂ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣ ಸಮಾಪ್ತಿ ಮಹೋತ್ಸವ.

ಹಾನಗಲ್ಲು.

ಧಾರವಾಡ ಜಿಲ್ಲಾ ಹಾನಗಲ್ಲ ಶ್ರೀಮನ್ನಿರಂಜನ ಕುಮಾರಸ್ವಾಮಿಗಳವರ ಮಠದಲ್ಲಿ ಪ್ರತಿವರ್ಷ ಪದ್ಧತಿ ಪ್ರಕಾರ ಇದೇ ಶ್ರಾವಣ ಶು|| ೧ ರಿಂದ ಬ|| ೩೦ ರ ವರೆಗೆ ಶ್ರೀ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವು ವೇ|| ಗುರುಮೂರ್ತಿಶಾಸ್ತ್ರಿಗಳು ಕಜ್ಜರಿ ಇವರ ಅರ್ಥಮಾಡುವಿಕೆಯಿಂದಲೂ ಮತ್ತು ವೇ|| ಮಣ್ಣೂರ ಗವಾಯಿ ತೋಟಯ್ಯನವರ ಓದುಗಾರಿಕೆಯಿಂದಲೂ ನಡೆದು. ಭಾದ್ರಪದ ಶು|| ೧ ಗುರುವಾರ ಪ್ರಾತಃಕಾಲ ೮ ಘಂಟೆಗೆ ಸದರಿ ವಿರಕ್ತಮಠದಿಂದ ಶ್ರೀ ಜಗದ್ಗುರು

ಸತ್ಯಾಗ್ರಹಸಮರವಾರ್ತೆ.

ಇದೇ ಸೆಪ್ಟಂಬರು 4 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಎಂಟನೇ ಗಾಂಧಿ ದಿನಾಚರಣೆಯ ನಿಮಿತ್ತವಾಗಿ ಚೌಪಾತಿ ಸಮುದ್ರತೀರದ ಬಳಿ ಬಹಿರಂಗಮೆರವಣಿಗೆಯನ್ನು ಮಾಡಿಕೊಂಡು ಹೋಗುತ್ತಿದ್ದ 21 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ ಇದುವರೆಗೆ 2711 ಜನ ಸ್ತ್ರೀಯರು ಕಾರಾಗೃಹವಾಸಿಗಳಾಗಿರುವರು.

ಸೆಪ್ಟೆಂಬರ್ 4 ನೇ ತಾರೀಖಿನ ದಿವಸ ಕರಾಚಿಯ ಜೋಡಿಯಾ ಬಜಾರಿನಲ್ಲಿ ಪಟಾಕಿಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದ ಇಬ್ಬರು ಸ್ತ್ರೀಯರನ್ನೂ 9 ಜನ ಸ್ವಯಂಸೇವಕರನ್ನೂ ಪೋಲೀಸರು ದಸ್ತಗಿರಿ ಮಾಡಿ, ರಾತ್ರಿಯಾದನಂತರ ಎಲ್ಲರನ್ನೂ ಬಿಡುಗಡೆ ಮಾಡಿದರು.

ಇದೇ ಸೆಪ್ಟೆಂಬರು 5 ನೇ ತಾರೀಖಿನ ದಿವಸ ಬೆಳಗಾಮಿನಲ್ಲಿ ಕಾಂಗ್ರೆಸ್‌ಹಸ್ತಪತ್ರಿಕೆಗಳನ್ನು ಹಂಚಿ ರಾಷ್ಟ್ರಧ್ವಜವಂದನೆಯನ್ನು ಮಾಡಿದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ 6 ಜನ ಸ್ವಯಂಸೇವಕರಿಗೆ ಸಿಟಿಮ್ಯಾಜಿಸ್ಟ್ರೇಟರವರು ಆರಾರುತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಬಂಗಾಲಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕ್ರಮಗಳೊಡನೆ ಸಹಕರಿಸಿದರೆಂಬ ಅಪಾದನೆಯ ಮೇಲೆ ಕಲ್ಕತ್ತೆಯಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ 24 ಜನರಿಗೆ ನಾಲ್ಕು ನಾಲ್ಕು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು. 20 ನೆಯ ಸರ್ವಾಧಿಕಾರಿಗಳಾದ ಅಮೂಲ್ಯಕುಮಾರ ರಾಯರವರಿಗೆ ಒಂದು ವರ್ಷ ಕಠಿಣಸಜೆಯು ವಿಧಿಸಲ್ಪಟ್ಟಿತು.

ಇದೇ ಸೆಪ್ಟೆಂಬರು 6 ನೆಯ ತಾರೀಖಿನ ದಿವಸ ಮುಂಬಯಿಯ ಪ್ರಿನ್ಸೆಸ್ ಸ್ಟ್ರೀಟ್ ಪೋಲೀಸ್ ಇನ್ಸ್ಪೆಕ್ಟರೊಬ್ಬರು ಮೋಟಾರಿನಲ್ಲಿ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಇಟ್ಟುಕೊಂಡು ಹೋಗುತ್ತಿದ್ದ ಇಬ್ಬರು ಸ್ವಯಂಸೇವಕರನ್ನು ಅರ್ಧ ಮೈಲಿಯವರೆಗೆ ಅಟ್ಟಿಸಿಕೊಂಡುಹೋಗಿ ದಸ್ತಗಿರಿ ಮಾಡಿದರು. ಅವರ ಬಳಿಯಲ್ಲಿ 4 ಸಾವಿರ ಕಾಂಗ್ರೆಸ್ ಹಸ್ತಪತ್ರಿಕೆಗಳಿದ್ದುವು.

ಇದೇ ಸೆಪ್ಟಂಬರ್ 6 ನೇ ತಾರೀಖಿನ ದಿವಸ ಕಲ್ಕತ್ತೆಗೆ ಸೇರಿದ ಜೋರಾಬಾಗಂ ಪೋಲೀಸ್ ಕೋರ್ಟಿನ ಮೇಲೆ ರಾಷ್ಟ್ರೀಯ ಧ್ವಜವನ್ನು ಏರಿಸಿದರೆಂಬ ಕಾರಣದಮೇಲೆ 4 ಜನ ಸ್ವಯಂಸೇವಕರಿಗೆ ಐದೈದು ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಮಹಾತ್ಮಾ ಗಾಂಧಿಯವರನ್ನೂ ಇತರ ಕಾಂಗ್ರೆಸ್ ಖೈದಿಗಳನ್ನೂ ಬಿಡುಗಡೆಮಾಡಬೇಕೆಂಬ ಠರಾವು ಇದೇ ಸೆಪ್ಟಂಬರ್ 22 ನೇ ತಾರೀಖಿನ ದಿವಸ ಸಿಮ್ಲಾ ನ್ಯಾಯವಿಧಾಯಕಸಭೆಯಲ್ಲಿ ಚರ್ಚಿಸಲ್ಪಡುವುದು.

ಇದೇ ಸೆಪ್ಟಂಬರ್ 22 ನೆಯ ತಾರೀಖಿನ ದಿವಸ ದಿಹಲಿಯಲ್ಲಿ ಗಾಂಧಿ ದಿನಾಚರಣೆಯ ಸಂಬಂಧವಾಗಿ ಕ್ಲಾಕ್‌ಟವರಿನಬಳಿ ಸ್ವಾಮಿ ಶ್ರದ್ಧಾನಂದರ ಸೊಸೆಯಾದ ಶ್ರೀಮತಿ ಚಂದ್ರಾವತಿಯೇ ಮೊದಲಾದ 6 ಜನ ಸ್ವಯಂಸೇವಿಕೆಯರೂ 4 ಜನ ಸ್ವಯಂಸೇವಕರೂ ದಸ್ತಗಿರಿ ಮಾಡಲ್ಪಟ್ಟರು. ಕ್ಲಾಕ್‌ಟವರಿನ ಬಳಿ ಜನರು ತಂಡೋಪತಂಡವಾಗಿ ಸೇರಿದ್ದರು. ಸ್ವಯಂಸೇವಕರು ವ್ಯಾಖ್ಯಾನಮಾಡಲು ಪ್ರಾರಂಭಿಸಿದಕೂಡಲೇ ಪೋಲೀಸರು ಎಲ್ಲರನ್ನೂ ದಸ್ತಗಿರಿ ಮಾಡಿದರು. ಸ್ತ್ರೀಪೋಲೀಸರು ಸ್ವಯಂಸೇವಿಕೆಯರಬಳಿಯಲ್ಲಿದ್ದ ರಾಷ್ಟ್ರೀಯ ಧ್ವಜಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದಾಗ, ಸ್ವಯಂಸೇವಿಕೆಯರು ಅವುಗಳನ್ನು ತಮ್ಮ ಸೀರೆಯೊಳು ಮುಚ್ಚಿಟ್ಟುಕೊಂಡರು.

ಇದೇ ಸೆಪ್ಟೆಂಬರ್ 5 ನೇ ತಾರೀಖಿನ ದಿವಸ ರಾತ್ರಿ 8 ಗಂಟೆಯ ಸಮಯದಲ್ಲಿ ಮುಂಬಯಿ ಪೋಲೀಸರು ಮೋಲರ್‌ರಾಂಡ್ ರೋಡಿನಲ್ಲಿರುವ ಅಹ್ರಾರ್ ಕಛೇರಿಗೆ ನುಗ್ಗಿ ಅದನ್ನು 3 ಗಂಟೆಗಳವರೆಗೆ ಶೋಧಿಸಿದರು. ಕಡೆಯಲ್ಲಿ ಪೋಲೀಸರು ಅಹ್ರಾರ್ ಸ್ವಯಂಸೇವಕರ 300 ಕೆಂಪುಷರ್ಟುಗಳನ್ನೂ ಒಂದು ಸೈಕ್ಲೋಸ್ಟೈಲ್ ಯಂತ್ರವನ್ನು 20 ಪೋಸ್ಟರುಗಳನ್ನೂ ಕೆಲವು ಫೈಲುಗಳು, ರಿಜಿಸ್ಟರುಗಳು ಪೋಟೋಗಳೇ ಮೊದಲಾದ ಒಂದು ಗಾಡಿಯತುಂಬ ಸಾಮಾನುಗಳನ್ನೂ ಹೊತ್ತುಕೊಂಡುಹೋದರು. ಇಬ್ಬರು ದಸ್ತಗಿರಿ ಮಾಡಲ್ಪಟ್ಟರು.

ಬಿಹಾರ್‌ಪ್ರಾಂತಿಕ ಸಮ್ಮೇಳನದ 18 ನೇ ಅಧಿವೇಶನವನ್ನು ಕೂಡಿಸಲು ಪ್ರಯತ್ನಮಾಡುತ್ತಿರುವರೆಂಬ ಅನುಮಾನದ ಮೇಲೆ ಗಯಾ ಪೋಲೀಸರು ಸ್ವಾಗತ ಸಮಿತಿಯ ಮೆಂಬರರೇ ಮೊದಲಾದ 150 ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಅವರಲ್ಲಿ 5 ಜನ ಸ್ತ್ರೀಯರಿರುವರು.

ಸೆಪ್ಟೆಂಬರ್ 9 ನೇ ತಾರೀಖಿನ ದಿವಸ ಮಧ್ಯಾಹ್ನ ಕಲ್ಕತ್ತೆಯ ಪೋಲೀಸರು ಕಾಲೇಜ್ ಸ್ಟ್ರೀಟಿನಲ್ಲಿ ಬಹಿರಂಗಮೆರವಣಿಗೆಯನ್ನು ಮಾಡಿಕೊಂಡು ಹೋಗುತ್ತಿದ್ದ ಜನರ ಗುಂಪನ್ನು ಚದುರಿಸಿ, ಅವರ ಪೈಕಿ 11 ಜನರನ್ನು ದಸ್ತಗಿರಿಮಾಡಿದರು.

ವರ್ತಮಾನಸಂಗ್ರಹ

ಅಮೆರಿಕೆಯಲ್ಲಿ ಸರಾಸರಿ ೧ ಘಂಟೆಗೆ ಹತ್ತು ಕಳ್ಳತನಗಳೂ ದರೋಡೆಗಳೂ ನಡೆಯುವುವಂತೆ.

ಸೆಪ್ಟೆಂಬರು 2 ನೇ ತಾರೀಖಿನ ದಿವಸ ಅಮೇರಿಕೆಯ ನ್ಯೂಯಾರ್ಕ್‌ನಗರದಲ್ಲಿ ಸಂಪೂರ್ಣ ಸೂರ್ಯಗ್ರಹಣವುಂಟಾಯಿತು.

ಇಂಗ್ಲೆಂಡಿನ ಕೆಲವು ಶಾಸ್ತ್ರಜ್ಞರು ಸತ್ತವರನ್ನು ಎರಡು ದಿವಸಗಳವರೆಗೆ ಬದುಕಿಸುವ ಒಂದು ಯಂತ್ರವನ್ನು ತಯಾರಿಸಿರುವರಂತೆ!

ಮುಂಬಯಿಯ ವಿಠಲ ಎಂಬ ಗಿರಣಿ ಕೆಲಸಗಾರನು ತನ್ನ ಯಜಮಾನನು ರಜವನ್ನು ಕೊಡಲಿಲ್ಲವೆಂಬ ಕಾರಣದಮೇಲೆ ಆತ್ಮಹತ್ಯಮಾಡಿಕೊಂಡನು.

ಕಲ್ಕತ್ತೆಯ ಒಬ್ಬ ಪೋಲೀಸ್ ಸಬ್ ಇನ್ಸ್ಪೆಕ್ಟರು 50 ರೂಪಾಯಿಗಳ ಲಂಚವನ್ನು ತೆಗೆದುಕೊಂಡರೆಂಬ ಕಾರಣದ ಮೇಲೆ 3 ತಿಂಗಳ ಕಠಿಣಸಜೆಗೆ ಗುರಿಯಾದರು.

ಹೈದರಾಬಾದಿನ ರಾಜಕುಮಾರರಾದ ಮೊಜಂಜಾರವರು ಇದೇ ಸೆಪ್ಟಂಬರ್ 8 ನೆಯ ತಾರೀಖಿನ ದಿವಸ ಕುಟುಂಬಸಮೇತರಾಗಿ ಯೂರೋಪಿಗೆ ಪ್ರಯಾಣ ಬೆಳಸಿದರು.

ಈಕ್ವೇಟರಿಗೆ ಪೂರ್ವಭಾಗದಲ್ಲಿ ದೊಡ್ಡ ಭಂಗಾರದ ಗಣಿಯೊಂದು ಸಿಕ್ಕಿರುವುದೆಂಬ ವರ್ತಮಾನವನ್ನು ಕೇಳಿ ನೂರಾರು ಜನ ನಿರುದ್ಯೋಗಿಗಳು ಅಲ್ಲಿಗೆ ಹೊರಟಿರುತ್ತಾರೆ.

ಹಿಂದೂಸ್ಥಾನದಲ್ಲಿ ಬಹು ದಿವಸಗಳಿಂದ ವಾಸವಾಗಿರುವ ಮಿ|| ಎಸ್. ಇ. ಸ್ಟೋಕ್ಸ್‌ರವರು ಸಂಸಾರಸಮೇತರಾಗಿ ಇದೇ ಸೆಪ್ಟಂಬರ್ 5 ನೇ ತಾರೀಖಿನ ದಿವಸ ಕೋಲಫರ್‌ನಲ್ಲಿ ಹಿಂದೂಮತವನ್ನು ಸ್ವೀಕರಿಸಿದರು.

ಇದೇ ಸೆಪ್ಟಂಬರು 4 ನೇ ತಾರೀಖಿನ ದಿವಸ ದೆಹಲಿಯ ಪೋಲೀಸರು ಅನೇಕ ಸ್ಥಳಗಳಲ್ಲಿ ಶೋಧಮಾಡಿ ಕ್ರಾಂತಿಕಾರರ ಗುಂಪಿಗೆ ಸೇರಿದವರೆಂಬ ಅನುಮಾನದ ಮೇಲೆ 8 ಜನ ಬಂಗಾಳಿ ತರುಣರನ್ನು ದಸ್ತಗಿರಿ ಮಾಡಿದರು.

ಸೂರತ್ತಿನ ಕಲೆಕ್ಟರವರು ಎರವಾಡಾದಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ರಾಷ್ಟ್ರೀಯ ಕೆಲವಾಣಿ ಮಂಡಲಕ್ಕೆ ಸೇರಿದ ಜಮೀನಿನ ಕಂದಾಯದ ಬಾಕಿ ರೂ 38-14-6 ಗಳಿಗಾಗಿ ನೋಟೀಸನ್ನು ಕೊಟ್ಟಿರುತ್ತಾರೆ.

ದೆಹಲಿಯ ಪ್ರಮುಖಕಾಂಗ್ರೆಸ್ ಮುಖಂಡರಾದ ಶ್ರೀಮತಿ ಪಾರ್ವತೀದೇವಿಯವರ ಪುತ್ರನಾದ ಬದರೀನಾಥನನ್ನು ಯಾರೋ ಎತ್ತಿಕೊಂಡು ಹೋಗಿರುತ್ತಾರೆ. ಪೋಲೀಸರು ತನಿಖೆಕ್ರಮಗಳನ್ನು ಜರುಗಿಸುತ್ತಿರುವರು.

ಇದೇ ಸೆಪ್ಟಂಬರು 4 ನೇ ತಾರೀಖಿನ ದಿವಸ ಡೇರಾ ಇಸ್ಮಾಯಿಲ್‌ಖಾನ್ ಜಿಲ್ಲೆಗೆ ಸೇರಿದ ಮುಲ್‌ಜಾಯಿಯ ಪೋಲೀಸ್ ಸಬ್ ಇನ್ಸ್ಪೆಕ್ಟರಾದ ಅತ್ತಮುಹಮದ್ ಖಾನರನ್ನು ರಾಜೋರಿ ಎಂಬ ಹಳ್ಳಿಯಲ್ಲಿ ಯಾರೋ ಕೊಲೆಮಾಡಿದರು.

ಚಿಕಾಗೋ ಪೋಲೀಸರು ಸುಳ್ಳುಹೇಳುವುದನ್ನು ತಪ್ಪಿಸಲು ಒಂದು ಹೊಸ ವಿಧಾನವನ್ನು ಕಂಡುಹಿಡಿದಿರುವರು. ಪೋಲೀಸರು ಅಪರಾಧಿಗೆ ಒಂದು ಹೊಸ ನಮೂನೆಯ ಇಂಜಕ್ಷನ್ ಕೊಡುವರು. ಇದರಿಂದ ಅಪರಾಧಿಯು ನಿಜವನ್ನೇ ಹೇಳುವನಂತೆ!

ಪಂ|| ಜವಾಹರಲಾಲ ನೆಹರೂರವರ ಪತ್ನಿಯಾದ ಶ್ರೀಮತಿ ಕಮಲಾನೆಹರೂರವರು ಇದೇ ಸೆಪ್ಟಂಬರ್ 5 ನೆಯ ತಾರೀಖಿನ ದಿವಸ ಮುಂಬಯಿ ಸ್ವದೇಶೀಲೀಗಿನವರಿಂದ ಏರ್ಪಡಿಸಲ್ಪಟ್ಟಿರುವ ಸ್ವದೇಶೀವಾರದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಹಿಂದೂಮಹಾಸಭೆಯ ಅಧ್ಯಕ್ಷರಾದ ಡಾ|| ಮೂಂಜೆಯವರು ಕೋಮುವಾರುಸಮಸ್ಯೆಯ ತೀರ್ಮಾನದ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಗೊಳಿಸುವ ಸಲುವಾಗಿ ಕನ್ಸಲ್ಟೇಟಿವ್ ಕಮಿಟಿಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಪ್ರಷ್ಯಾ ಸರ್ಕಾರದವರು ತಮ್ಮ ದೇಶದಲ್ಲಿ ಇನ್ನು ಮುಂದೆ ಯಾರೂ ಶೃಂಗಾರಪ್ರದರ್ಶನಗಳನ್ನು ಮಾಡಕೂಡದೆಂದು ಅಪ್ಪಣೆಮಾಡಿರುತ್ತಾರೆ. ಇದರಿಂದ ನಾಟಕಗಳಲ್ಲಿ ತೋರಿಸುತ್ತಿದ್ದ ಚಿತ್ರಲೇಖನಿಕ, ಈಜುವ ನರ್ತನ ಮುಂತಾದ ಶೃಂಗಾರಪ್ರದರ್ಶನಗಳು ನಿಲ್ಲಿಸಲ್ಪಟ್ಟಿರುತ್ತವೆ.

ಇಂಗ್ಲೆಂಡಿನ ಮಿಸೆಸ್ ಜೂರ್ಡೇಸ್ ಎಂಬ 28 ವರ್ಷದ ಸ್ತ್ರೀಯು ತನ್ನ ಗಂಡನ ಕಾಟವನ್ನು ತಡೆಯಲಾರದೆ ಮನೆಯನ್ನು ಬಿಟ್ಟು ಲಂಡನ್ ವೆಸ್ಟರ್ನ್ ರೈಲ್ವೆ ಗಾಡಿಯಲ್ಲಿ ಟಿಕೆಟ್ಟಿಲ್ಲದೆ ಪ್ರಯಾಣಮಾಡಿ ತನ್ಮೂಲಕ ರೈಲ್ವೆಯವರಿಗೆ ಮೋಸಮಾಡಿದಳೆಂಬ ಕಾರಣದಮೇಲೆ 2 ಪೌಂ. ಗಳ ಜುಲ್ಮಾನೆ ತಪ್ಪಿದರೆ 21 ದಿವಸಗಳ ಸಜೆಗೆ ಗುರಿಯಾದಳು.

ಇಂಡಿಯಾ ಸರ್ಕಾರದವರು ಜಪಾನ್ ಹತ್ತಿಯಬಟ್ಟೆಗಳ ಮೇಲೆ ಹಾಕಿರುವ ಹೆಚ್ಚಿನ ತೆರಿಗೆಯ ವಿಷಯದಲ್ಲಿ ಜಪಾನಿನ ಹತ್ತಿ ಕೈಗಾರಿಕೆಯವರು ಬಹಳ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವರು. ಇಂಡಿಯಾ ಸರ್ಕಾರದವರು ಇದನ್ನು ವಜಾಮಾಡದಿದ್ದರೆ ಪ್ರತಿಯಾಗಿ ಕಾರ್ಯಕ್ರಮಗಳನ್ನು ಜರುಗಿಸಬೇಕಾಗುವುದೆಂದು ಹೇಳುತ್ತಿರುವರು.

ಅಮೇರಿಕಾ ದೇಶದ ಪ್ರಸಿದ್ಧ ಇಂಜನಿಯರಾದ ಡಾ|| ಹರ್ಬರ್ಟ್ ಡಾರ್ಸಿಯವರು ಒಂದು ವಿಚಿತ್ರ ಯಂತ್ರವನ್ನು ತಯಾರಿಸಿರುತ್ತಾರೆ. ಈ ಯಂತ್ರದಿಂದ ಜಹಜುಗಳಿಗೆ ಸಮುದ್ರ ಮಧ್ಯದಲ್ಲಿ ಮಂಜಿನಿಂದ ಸಂಭವಿಸಬಹುದಾದ ಆತಂಕಗಳು ನಿವಾರಣೆಯಾಗುವುವು. ಸಮುದ್ರದಲ್ಲಿ 3 ಮೈಲಿಗಳ ಕೆಳಭಾಗದಲ್ಲಿ ಆಗುವ ಶಬ್ದಗಳನ್ನು ಈ ಯಂತ್ರವು ತಿಳುಹಿಸುವುದಂತೆ!

ಮೂರನೇ ದುಂಡುಮೇಜಿನ ಪರಿಷತ್ತು ಲಂಡನ್ನಿನಲ್ಲಿ ನವೆಂಬರು ತಿಂಗಳಿನಲ್ಲಿ ಸೇರುವುದೆಂದೂ, ಅದಕ್ಕೆ ಸುಮಾರು 25 ಜನ ಪ್ರತಿನಿಧಿಗಳು ಚುನಾಯಿಸಲ್ಪಡುವರೆಂದೂ, ಅವರೆಲ್ಲರೂ ಬ್ರಿಟಿಷ ಪ್ರತಿನಿಧಿಗಳೊಡನೆ ಸರಿಸಮಾನಸ್ಕಂದರಂತೆ ಕಲೆತು ಕೆಲವು ಗೊತ್ತಾದ ವಿಷಯಗಳ ಸಂಬಂಧವಾಗಿ ಚರ್ಚಿಸಿ ತೀರ್ಮಾನಕ್ಕೆ ಬಂದ ವಿಷಯಗಳನ್ನು ಪಾರ್ಲಿಮೆಂಟಿನ ಜಾಯಿಂಟ್ ಕಮಿಟಿಯ ಮುಂದಿಡುವರೆಂದೂ ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ನವೆಂಬರ್ ತಿಂಗಳಲ್ಲಿ ಲಂಡನ್ನಿನಲ್ಲಿ ಸೇರಲಿರುವ 3 ನೇ ದುಂಡುಮೇಜಿನ ಪರಿಷತ್ತಿಗೆ ಬ್ರಿಟಿಷ್ ಸರ್ಕಾರದವರು ಈ ಮುಂದೆ ಸೂಚಿಸಿರುವ ಮುಖಂಡರನ್ನು ಆಹ್ವಾನಿಸುವರಂತೆ! ಆಗಾಖಾನರವರೂ, ಸರ್ ತೇಜ್ ಬಹದ್ದೂರ್ ಸಪ್ರೂ, ಮಿ|| ಜಯಕರ್, ಡಾ|| ಸಾಫತ್ ಮಹಮದ್‌ಖಾನ್, ಮಿ|| ಚಿಂತಾಮಣಿ ಮಿ|| ಎ. ಎಚ್. ಗಜನಾವಿ, ಮಿ|| ಜಫರುಲ್ಲಾಖಾನ್, ನವನಗರ, ಭೋಪಾಲ, ಬಿಕಾನೀರ್ ಮತ್ತು ಪಾಟಿಯಾಲಾ ಮಹಾರಾಜರು ಸರ್ ಮಿರ್ಜಾಮಹಮದ್ ಇಸ್ಮಾಯಿಲ್ ರವರು ಸರ್ ಹೈದರಿ ಮತ್ತು ಕರ್ನಲ್ ಹಕ್ಸಾರ್ ರವರು.

(3ನೆಯ ಪುಟದಿಂದ ಮುಂದುವರಿದುದು.)

ವಾದಷ್ಟು ವಿಷಮಸ್ಥಿತಿಗೆ ತಲ್ಪಟ್ಟಿತ್ತು. ಈ ಎರಡು ಅನರ್ಥಕಾರಿಗಳಾದ ಚಳವಳಿಗಳನ್ನು ತಡೆಯುವುದಕ್ಕೋಸ್ಕರ ನಾವು ನಿರ್ವಾಹವಿಲ್ಲದೆ ಮಾಡಿದ ಪ್ರಯತ್ನಗಳ ವಿರುದ್ಧವಾಗಿ ಕಾಂಗ್ರೆಸ್ಸಿನವರು ಇದೀದೇಶದಲ್ಲಿ ಪುನಃ ಕಾಯಿದೆ ಭಂಗದ ಚಳವಳಿಯನ್ನು ಪ್ರಾರಂಭಿಸಿದರು.

ಕಳೆದ ಜನವರಿ 25 ನೆಯ ತಾರೀಖಿನ ದಿವಸ ನಾನು ನಿಮ್ಮೆಲ್ಲರ ಮುಂದೆ ಭಾಷಣಮಾಡಿದಾಗ ಈ ವಿದ್ಯಮಾನಗಳು ನಮ್ಮ ಸ್ಮೃತಿಪಥದಲ್ಲಿ ಹೊಸದಾಗಿದ್ದುವು. ಅವುಗಳ ಪರಿಣಾಮದ ವಿಷಯದಲ್ಲಿ ನಾವು ಇನ್ನೂ ಸಂಶಯಗ್ರಸ್ತರಾಗಿಯೇ ಇದ್ದೆವಾದರೂ, ಈ ವಿಷಯದಲ್ಲಿ ರಾಜಿಯ ಪ್ರಸ್ತಾಪವೇ ಇಲ್ಲವೆಂದೂ, ನಾನೂ ಮತ್ತು ನನ್ನ ಸರಕಾರದವರೂ ಕಾಯಿದೆಬದ್ಧವಾಗಿರುವ ಸರ್ಕಾರಕ್ಕೆ ವಿರುದ್ಧವಾದ ಚಳವಳಿಯನ್ನು ಅಡಗಿಸುವದರಲ್ಲಿ ಸರ್ವಶಕ್ತಿಯನ್ನೂ ಉಪಯೋಗಿಸಬೇಕೆಂದು ನಿರ್ಧರಿಸಿರುವೆವೆಂದೂ, ಚಳವಳಿಯು ಸಂಪೂರ್ಣವಾಗಿ ನಿಲ್ಲುವವರೆಗೆ ನಾವು ನಮ್ಮ ವಜ್ರಮುಷ್ಟಿಯನ್ನು ಸಡಲಿಸುವುದಿಲ್ಲವೆಂದೂ ಹೇಳಿದ್ದೆನು.

ಕಳೆದ 8 ತಿಂಗಳುಗಳಿಂದಲೂ ನಮ್ಮ ತತ್ವವು ಇದೇ ಆಗಿರುವುದು. ಮತ್ತು ನಮ್ಮ ತತ್ವವು ಇನ್ನು ಮುಂದಾದರೂ ಇದೇ ಆಗಿರುವುದೆಂದು ಸಾರಿಸಾರಿ ಹೇಳುವೆನು. ಈ ತತ್ವದಿಂದ ವಿಶೇಷ ಜಯವೇ ದೊರೆತಿರುವುದು. ಸಂಯುಕ್ತಪ್ರಾಂತಗಳ ಕಂದಾಯನಿರಾಕರಣ ಚಳವಳಿಯು ಮೃತಪ್ರಾಯವಾಗಿರುವುದು. ವಾಯುವ್ಯಪ್ರಾಂತದ 'ರೆಡ್‌ಷರ್ಟ' ಚಳವಳಿಯೂ ಬಹು ಜಾಗ್ರತೆಯಾಗಿ ಹತೋಟಿಗೆ ತರಲ್ಪಟ್ಟಿತು.

ಭರತಖಂಡದ ಹೆಚ್ಚಿನ ಭಾಗದಲ್ಲಿ ಜನರು ಚಳವಳಿಯಲ್ಲಿ ಉದಾಸೀನರಾಗಿರುತ್ತಾರೆ. ಮೊದಲು 2 ತಿಂಗಳುಗಳಲ್ಲಿ 32,000 ಜನರು ಶಿಕ್ಷೆಗೊಳಗಾದರು. ಅಲ್ಲಿಂದೀಚೆಗೆ ಶಿಕ್ಷೆಯು ಕಡಿಮೆಯಾಗುತ್ತ ನಡೆದಿರುವುದು. ಅನೇಕರು ಶಿಕ್ಷೆಯ ಅವಧಿಯು ಪೂರೈಸಿದಮೇಲೂ, ಮತ್ತೆ ಕೆಲವರು ತಮ್ಮ ಮುಂದಿನ ನಡತೆಯ ಬಗ್ಗೆ ಭರವಸೆಯನ್ನು ಕೊಟ್ಟಿದುದರಿಂದಲೂ, ಬಿಡುಗಡೆಮಾಡಲ್ಪಟ್ಟರು. ಅಂತೂ ಜೈಲಿನಲ್ಲಿರುವವರ ಸಂಖ್ಯೆಯು ಜಾಗ್ರತೆಯಾಗಿ ಕಡಿಮೆಯಾಗುತ್ತಿರುವುದು. ಎಪ್ರಿಲ್ ತಿಂಗಳ ಕೊನೆಯಲ್ಲಿ 34,500 ಜನರು ಜೈಲಿನಲ್ಲಿದ್ದರು. ಇದಕ್ಕಿಂತ ಹೆಚ್ಚಾಗಿ ಯಾವಾಗಲೂ ಇರಲಿಲ್ಲ. ಜುಲೈ ತಿಂಗಳ ಕೊನೆಯಲ್ಲಿ 24,000 ಜನರಿದ್ದರು. ಅಂದಮಾತ್ರಕ್ಕೆ ಚಳವಳಿಯು ಸದ್ಯಃ ನಿಂತುಹೋಗಿರುವುದೆಂದಾಗಲಿ, ಅದರಿಂದ ಇನ್ನು ಹೆಚ್ಚಿನ ಬಾಧಕವಿಲ್ಲವೆಂದಾಗಲಿ ನಾನು ಎಂದಿಗೂ ಹೇಳಲಾರೆನು. ಕಾಂಗ್ರೆಸ್ ಎಂಬುದು ಅತ್ಯಂತ ದೊಡ್ಡ ಸಂಸ್ಥೆಯಾಗಿದೆ. ಅದರ ಹಿಂಬಾಲಕರು ಮಾತ್ರವಲ್ಲದೆ, ಇತರ ವಿದ್ಯಾವಂತ ಜನರನೇಕರು ಅದರ ಬಗ್ಗೆ ಸಹಾನುಭೂತಿಯನ್ನು ಹೊಂದಿರುತ್ತಾರೆ. ಅದು ಕಾನೂನುಭಂಗದ ಚಳವಳಿಯನ್ನು ಮುಂದುವರಿಸುವುದರಲ್ಲಿ ಇನ್ನೂ ಬದ್ಧಕಂಕಣವುಳ್ಳದ್ದೇ ಆಗಿದೆ ಮತ್ತು ಚಳವಳಿಯನ್ನು ಮುಂದುವರಿಸಲು ಕೈಲಾದ ಪ್ರಯತ್ನಗಳನ್ನು ಮಾಡುತ್ತಲೇ ಇರುವದು. ಆದುದರಿಂದ ಕಾಂಗ್ರೆಸ್ ಮುಖಂಡರು ತಮಗಾದ ಅಪಜಯವನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಇನ್ನೂ ಎಷ್ಟುಕಾಲ ಹಿಡಿಯಬಹುದೆಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ಎಲ್ಲಿಯವರೆಗೆ ಸರಕಾರದವರು ಈಗಿನ ತತ್ವವನ್ನೇ ಅನುಸರಿಸುವರೋ ಅಲ್ಲಿಯವರೆಗೆ ಚಳವಳಿಯು ಜಯಪ್ರದವಾಗಲಾರದೆಂದು ನನಗೆ ಚೆನ್ನಾಗಿ ನಿದರ್ಶನಕ್ಕೆ ಬಂದಿರುವುದು.

ಇನ್ನು ಕಾಂಗ್ರೆಸ್ಸಿನವರು ಪುನಃ ಕಾನೂನು ಭಂಗದ ಚಳವಳಿಯನ್ನು ಪ್ರಾರಂಭಿಸುವುದಾಗಿ ಪ್ರಕಟಿಸಿದನಂತರ ನಾವು ಕೈಕೊಳ್ಳಬೇಕಾಗಿ ಬಂದ ಕಾರ್ಯಕ್ರಮಗಳನ್ನು ಪ್ರಸ್ತಾಪಿಸುತ್ತೇನೆ. ನಾನು ನನ್ನ ಸರ್ಕಾರದೊಡನೆ ಆಲೋಚಿಸಿ, ಕೆಲವು ಆರ್ಡಿನೆನ್ಸುಗಳ ಮುಖಾಂತರ ವಿಶೇಷ ಅಧಿಕಾರಗಳನ್ನು ತೆಗೆದುಕೊಳ್ಳುವುದು ಅವಶ್ಯಕವೆಂದು ನಿರ್ಧರಿಸಿದೆನು. ಆರುತಿಂಗಳ ನಂತರ ಈ ಆರ್ಡಿನೆನ್ಸುಗಳು ರದ್ದಾದುವು. ಇವುಗಳ ಅಂತ್ಯವು ಸಮೀಪಿಸಿದ ಹಾಗೆಲ್ಲಾ ಆ ವಿಶೇಷ ಅಧಿಕಾರಗಳಿಲ್ಲದೆ ಚಳವಳಿಯನ್ನು ಇನ್ನು ಮುಂದೆ ತಡೆಯುವದು ಸಾಧ್ಯವಿಲ್ಲವೆಂದು ನಮಗೆ ಗೋಚರವಾಯಿತು. ಅದರಂತೆ ಜೂನ್ ತಿಂಗಳ ಅಂತ್ಯದಲ್ಲಿ ನಾನು ಮತ್ತೊಂದು ಸಂಯುಕ್ತ ಆರ್ಡಿನೆನ್ಸನ್ನು ಹೊರಡಿಸಿದೆನು. ಮತ್ತು ಈ ಅಧಿಕಾರಗಳು ಅವಶ್ಯಕವಿಲ್ಲದ ಪ್ರದೇಶಗಳಿಗೆ ಅನ್ವಯಿಸದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಯಿತು. ಈ ಸಂಯುಕ್ತ ಆರ್ಡಿನೆನ್ಸಿನ ಅವಧಿಯು ವರ್ಷಾಂತ್ಯದಲ್ಲಿ ಮುಗಿಯುವುದು.

ಆರ್ಡಿನೆನ್ಸು ಮುಗಿದನಂತರ ಏನು ಮಾಡಬೇಕೆಂದು ನನ್ನ ಸರಕಾರದವರು ಆಲೋಚಿಸುತ್ತಿರುವರು. ಮತ್ತು ಆರ್ಡಿನೆನ್ಸಿನಲ್ಲಿರುವ ಹೆಚ್ಚಿನ ಭಾಗಗಳನ್ನು ಕಾಯಿದೆಯನ್ನಾಗಿಯೇ ಮಾಡಬೇಕೆಂದು ನಾವು ತೀರ್ಮಾನಿಸಿರುವೆವು. ಈಗಿನ ಕಾಯಿದೆಭಂಗದ ಚಳವಳಿಯನ್ನು ಅಡಗಿಸುವುದಕ್ಕೂ, ಇಂಥ ಚಳವಳಿಗಳು ಇನ್ನು ಮುಂದೆ ನಡೆಯದಂತೆ ಮಾಡುವುದಕ್ಕೂ ಈ ಕಾರ್ಯವು ಅತ್ಯವಶ್ಯಕವಾಗಿರುತ್ತದೆ.

ಈ ಚಳವಳಿಯನ್ನು ಅಡಗಿಸಿ ಅದು ಪುನಃ ತಲೆಯೆತ್ತದಂತೆ ಮಾಡದಿದ್ದರೆ, ನಾವು ಕರ್ತವ್ಯಲೋಪದ ದೋಷಕ್ಕೆ ಗುರಿಯಾಗುವೆವು. ಇಂತಹ ವಿಶೇಷ ಅಧಿಕಾರಗಳನ್ನು ಕಾಯಿದೆಯನ್ನಾಗಿ ಮಾಡುವುದು ನನ್ನ ಸರ್ಕಾರಕ್ಕೆ ಸ್ವಲ್ಪವೂ ಸಮ್ಮತವಾದ ಕಾರ್ಯವಾಗಿಲ್ಲ. ಆದರೆ ನಮ್ಮನ್ನು ಪ್ರತಿಭಟಿಸುತ್ತಿರುವ ತತ್ವಗಳು ನಿರ್ವಾಹವಿಲ್ಲದೆ ದಬ್ಬಾಳಿಕೆಯ ತತ್ವವನ್ನೇ ಅನುಸರಿಸುವಂತೆ ಮಾಡುತ್ತಿರುವುವು.

ಕಾಂಗ್ರೆಸ್‌ಮುಖಂಡರು ರಾಜಕೀಯ ಸಮಸ್ಯೆಗಳನ್ನು ಬಲಪ್ರದರ್ಶನದಿಂದ ಪರಿಹರಿಸಬೇಕೆಂಬ ತತ್ವವುಳ್ಳವರಾಗಿರುತ್ತಾರೆ. ಸಾರ್ವಭೌಮ ಸರಕಾರದವರು ಭರತಖಂಡದ ವಿಷಯದಲ್ಲಿ ಅನುಸರಿಸಲು ಪ್ರಯತ್ನಿಸುತ್ತಿರುವ ಜವಾಬ್ದಾರಿ ಸರಕಾರದ ತತ್ವಕ್ಕೆ ಇದು ವಿರೋಧವಾಗಿರುವುದು. ಮಂತ್ರಿಶ್ರೇಷ್ಠರವರು ದುಂಡುಮೇಜಿನ ಪರಿಷತ್ತಿನ ಅಂತ್ಯದಲ್ಲಿ ನ್ಯಾಯವಿಧಾಯಕ ಸಭೆಗಳಿಗೆ ಅದಷ್ಟು ಹೆಚ್ಚಿನ ಅಧಿಕಾರಗಳನ್ನು ವಹಿಸಬೇಕೆಂದೂ, ಅರ್ಥಾತ್ ಪ್ರಜಾಭಿಪ್ರಾಯದ ಅಂದರೆ ಚರ್ಚೆ ಮತ್ತು ತೀರ್ಮಾನಗಳ ಮೇಲೆ ನೂತನ ರಾಜ್ಯಪದ್ಧತಿಯನ್ನು ರಚಿಸಬೇಕೆಂದೂ ಹೇಳಿದರು.

ಆದರೆ ಕಾಂಗ್ರೆಸ್ಸಿನವರು ಚರ್ಚೆಯಿಂದಲೂ ಪರಸ್ಪರ ಸಮ್ಮತಿಯಿಂದಲೂ ತಮ್ಮ ಅಭಿಲಾಷೆಯನ್ನು ಸಾಧಿಸಿಕೊಳ್ಳದೆ ಬಲವಂತದಿಂದ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ಸಿನವರು ಯಾವುದು ಸರಿಯೆಂದು ಹೇಳುವರೋ ಅದರಂತೆ ಜನರು ಹಾಗೂ ಸರ್ಕಾರವು ನಡೆಯಬೇಕೆಂಬುದು ಕಾಂಗ್ರೆಸ್ಸಿನವರ ತತ್ವವಾಗಿದೆ. ಮುಖ್ಯವಾಗಿ ಅವರ ತತ್ವಕ್ಕೆ ವಿರೋಧವಾಗಿರುವವರೂ ಸಹ ಅವರ ತತ್ವವನ್ನೇ ಒಪ್ಪಿಕೊಳ್ಳಬೇಕೆಂಬುದು ಅವರ ಮುಖ್ಯ ಉದ್ದೇಶವಾಗಿರುವದು.

ಈ ಚಳವಳಿಯ ದೆಸೆಯಿಂದ ವ್ಯಾಪಾರಕ್ಕೂ, ಪ್ರಜೆಗಳ ಸ್ವಾತಂತ್ರ್ಯಕ್ಕೂ ಉಂಟಾಗಿರುವ ತೊಂದರೆಗಳು ಮುಂಬಯಿಯ ನಿದರ್ಶನಗಳಿಂದ ನಮಗೆ ವಿಶದವಾಗಿರುತ್ತದೆ. ಇಂಥ ಅನರ್ಥಕಾರಿಯಾದ ಚಳವಳಿಯನ್ನು ತಮ್ಮ ಸರ್ವಶಕ್ತಿಯಿಂದಲೂ ಅಡಗಿಸುವುದು ಸರ್ಕಾರದ ಕರ್ತವ್ಯವಾಗಿದೆ.

ಬಂಗಾಳದ ಚಳವಳಿಯ ಸ್ವರೂಪವೇ ಬೇರೆಯಾಗಿರುವದು. ಇಲ್ಲಿಯ ಚಳುವಳಿಗಾರರು ತಮ್ಮ ವಿರೋಧವನ್ನು ಕೊಲೆ, ದರೋಡೆ ಮೊದಲಾದ ಹಿಂಸಾಕೃತ್ಯಗಳಿಂದ ತೋರ್ಪಡಿಸುತ್ತಿರುವರು. ಈ ಕ್ರಾಂತಿಕಾರರ ಕೃತ್ಯಗಳ ಪಟ್ಟಿಯು ಒಂದೇ ಸಮನೆ ಬೆಳೆಯುತ್ತಲೇ ಇರುವುದು. ಮೊನ್ನೆ ಮಿಡ್ನಾಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ|| ಡೊಗ್ಲಾಸ್‌ರವರು, ಢಾಕ್ಕಾ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮಿ|| ಕೆ. ಪಿ. ಸೇನ್‌ರವರು ಮತ್ತು ಢಾಕ್ಕಾ ಅಡಿಷನಲ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಲ್ಲಿಸನ್‌ರವರು ಕೊಲೆಯಾದುದನ್ನೂ 'ಸ್ಟೇಟ್ಸ್‌ಮನ್' ಪತ್ರಿಕಾ ಸಂಪಾದಕರಾದ ಸರ್ ಅಲ್‌ಫ್ರೆಡ್‌ವಾಟ್ಸನ್‌ರವರನ್ನು, ಢಾಕ್ಕಾ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಗ್ರಾಸ್‌ಬಿಯವರನ್ನು ಕೊಲೆಮಾಡಲು ಮಾಡಿದ ಪ್ರಯತ್ನಗಳು ದೈವಯೋಗದಿಂದ ವಿಫಲವಾದುದನ್ನೂ ನಾನು ನಿಮಗೆ ಹೇಳಬೇಕಾಗಿಲ್ಲ. ಇದಲ್ಲದೆ ಈ ಚಳವಳಿಯ ಅಂಗವಾಗಿ ಅನೇಕ ಢಕಾಯಿತಿಗಳೂ ಮತ್ತು ಕೊಲೆಗಳೂ ನಡೆಯುತ್ತಲೇ ಇರುವುವು.

ಸದ್ಯಃ ಈ ಚಳವಳಿಯು ಸರ್ಕಾರಿ ಉದ್ಯೋಗಸ್ಥರ ಮತ್ತು ಅವರಿಗೆ ಸಹಾಯಮಾಡುತ್ತಿರುವವರ ವಿರೋಧವಾಗಿ ನಡೆಯುತ್ತಿರುವದು. ಅದು ಜಯಪ್ರದವಾದರೆ, ಅದರ ಚಾಲಕರು ಅದೇ ತತ್ವವನ್ನು ತಮ್ಮ ಅಭಿಪ್ರಾಯಕ್ಕೆ ವಿರೋಧವಾಗಿ ವರ್ತಿಸುವವರೆಲ್ಲರ ವಿಷಯದಲ್ಲಿಯೂ ಪ್ರಯೋಗಿಸದೆ ಬಿಡರು. ಅದರಿಂದ ಸ್ವರಾಜ್ಯದ ಆಶೆಯೆಲ್ಲವೂ ಬಯಲಾಗುವುದು. ಆದುದರಿಂದ ಸ್ವದೇಶಾಭಿಮಾನದ ತಪ್ಪು ತಿಳುವಳಿಕೆಗಳಿಂದ ಈ ಚಳವಳಿಯ ಘೋರ ಪರಿಣಾಮಗಳ ಕಡೆಗೆ ಕಣ್ಣುಮುಚ್ಚಿಕೊಂಡು ಸಹಾನುಭೂತಿಯನ್ನು ತೋರಿಸಬೇಡಿರೆಂದು ಕಾಯಿದೆಗೆ ಬದ್ಧರಾದ ಎಲ್ಲ ಪ್ರಜೆಗಳನ್ನು ಒತ್ತಾಯಪಡಿಸುತ್ತೇನೆ.

ಸರ್ಕಾರದವರು ಈ ಚಳವಳಿಯನ್ನು ಅಡಗಿಸಲು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಬೇಕೆಂದು ನಿರ್ಧರಿಸಿರುತ್ತಾರೆ. ಮತ್ತು ಈ ಕಾರ್ಯದಲ್ಲಿ ಎಲ್ಲ ದೇಶಾಭಿಮಾನಿಗಳ ಸಹಾಯವನ್ನೂ ಅಪೇಕ್ಷಿಸಬಹುದಾಗಿದೆ. ಬಂಗಾಳಾ ಸರ್ಕಾರದವರು ಸದ್ಯಃ ಈ ಚಳವಳಿಯನ್ನು ಅಡಗಿಸುವ ಸಲುವಾಗಿ ತಮ್ಮ ನ್ಯಾಯವಿಧಾಯಕ ಸಭೆಗೆ ವಿಶೇಷ ಅಧಿಕಾರಗಳನ್ನು ಕೊಡಬೇಕೆಂದು ಕೇಳುತ್ತಿದ್ದಾರೆ ಮತ್ತು ಈ ಸಂಬಂಧವಾಗಿ ನನ್ನ ಸರ್ಕಾರವೂ ಸಹ ನಿಮ್ಮ ಮುಂದೆ ಬಂದು 'ಕಾಂಪ್ಲಿಮೆಂಟರಿ ಬಿಲ್ಲ'ನ್ನು ಇಡಬೇಕಾಗಿ ಬರುವುದು.

(ಸಶೇಷ)

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯುದೆಕಟ್ಟು ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್ ಕಾಡ್‌ರ್ಸ್—ಕರುಳು ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ನೆತ್ತಿ ಸುಡುವದು, ಪಿತ್ತ ಕಾರುವದು, ಮುಖ ಕಣ್ಣುಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬತ್ತಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟಿ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾದವಸ್ತು ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಆವೋಗ—ರಕ್ತಶುದ್ಧಿ, ಮೇಲ್ಪಟ್ಟು ಮುಖ್ಯವಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ತುರಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣ ಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿಶ್ಶಕ್ತಿ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ಮೆಸಿಥೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇಷ್ಟು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರೀರದಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[5] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅಡವಿನ ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯುವು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ಸಾಮರ್ಥತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಬನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ **ಪೂರ್ಣಗುಣವುಳ್ಳ** ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ನೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

43 ಮು. ಪೋ. **ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನದ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಸಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[11] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬಿಳಿ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬಿಳಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬಿಳಿ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬಿಳಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬಿಳಿ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬಿಳಿ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬಿಳಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ನರವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೭೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಘೂರುಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಸಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[12] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರ್ಯನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರದೇಶದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ ನೇ ಸೆಪ್ಟಂಬರ್ ೧೯೩೨ [ಸಂಚಿಕೆ ೧೯

RAYANKERE PALACE DAIRY FARM, MYSORE.

Bull calves, a good half-bred bull and some bullocks for sale

Apply to—
McIsaac, Manager

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಮತಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲುಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಕ್ರಾಪೋಲೀಸಿನ ಪ್ರಾಚೀನ ವೈಭವಗಳ ಮಧ್ಯದಲ್ಲಿ ಒಂದು ವಿಚಿತ್ರವಾದ ಗಿಡವು ಪ್ರತಿನಿತ್ಯವೂ ತನ್ನ ಕೊಂಬೆಗಳಿಂದ ರಕ್ತವನ್ನು ಕಾರುತ್ತಿರುವುದಂತೆ! ಈ ವೈಚಿತ್ರವನ್ನು ನೋಡಲು ಪ್ರತಿನಿತ್ಯವೂ ಸಾವಿರಾರು ಜನರು ಹೋಗುತ್ತಿರುವರಂತೆ!

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಗದ್ಗುರುಗಳವರ ಆಗಮನ.

ಬಾರ್ಸಿ.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಸ್ವಾರಿಯು ಬಾರ್ಸಿಶಹರನಿವಾಸಿಗಳಾದ ನಮ್ಮೆಲ್ಲರ ಪ್ರಾರ್ಥನಾನುಸಾರವಾಗಿ ಈ ಪಟ್ಟಣಕ್ಕೆ ಬಿಜಯಂಗೈಸುವರು. ಮಹಾರಾಷ್ಟ್ರದೇಶನಿವಾಸಿಗಳಾದ ಸಮಸ್ತ ವೀರಶೈವರನ್ನುದ್ಧರಿಸುವದಕ್ಕೋಸ್ಕರ ಮತಸ್ಥಾಪನಾಚಾರ್ಯರು ನಮ್ಮಾ ದೇಶಕ್ಕಾಗಮಿಸುವದು ನಮ್ಮಗಳ ಪುಣ್ಯಕ್ಕೆ ಬೆಲೆಯಿಲ್ಲವೆಂದು ಅತ್ಯಾನಂದದಿಂದ ಹೇಳಬೇಕಾಗಿದೆ. ಪರಮತಪೋನಿಧಿಗಳೂ ಗುರುಸಾರ್ವಭೌಮರೂ ಆದ ಶ್ರೀ ಜಗದ್ಗುರುಗಳವರ ಉತ್ಸವವು ಬಾರ್ಸಿಪಟ್ಟಣದಲ್ಲಿ ಅಡ್ಡಪಲ್ಲಕ್ಕಿ ಪಂಚಕಲಶ ಮೊದಲಾದ ೩೨ ಬಿರುದಾವಳಿಗಳೊಡನೆ ೨೫—೯—೧೯೩೨ ದಿವಸ ಪ್ರಾತಃಕಾಲ ೮ ಘಂಟೆಗೆ ಅತ್ಯಂತ ವೈಭವದಿಂದ ನೆರವೇರುವುದು. ಆದುದರಿಂದ ಯಾವತ್ತು ಪ್ರಾಂತಗಳ ಗುರುಭಕ್ತರು ಆ ಕಾಲಕ್ಕೆ ಆಗಮಿಸಿ ಶ್ರೀ ಜಗದ್ಗುರುಗಳವರ ದರ್ಶನಮಾಡಿಕೊಂಡು ಪುನೀತರಾಗಬೇಕೆಂದಾಶಿಸುವ—

ವೀರಶೈವಮಂಡಳಿ, ಬಾರ್ಸಿ.

ನೋಟ್—ಬಾರ್ಸಿಪಟ್ಟಣಕ್ಕೆ ಆಗಮಿಸುವವರು ಸೊಲ್ಲಾಪುರ ಮಾರ್ಗದಿಂದ ಕುರುಡವಾಡಿ ಜಂಕ್ಷನ್ನಿಗೆ ಇಳಿದು ಬಾರ್ಸಿಗೆ ಬರಬೇಕು. ಬಾರ್ಸಿಗೆ ರೈಲ್ವೆಸ್ಟೇಷನ್ ಇರುವದು. ಸೊಲ್ಲಾಪುರದಿಂದ ಮೋಟಾರುಬಸ್ಸುಗಳು ವಿಶೇಷವಾಗಿ ದೊರೆಯುವುವು.

ಮಹಾತ್ಮರ ಬಿಡುಗಡೆ!

ಇಂಡಿಯಾ ಸರ್ಕಾರದ ಹೇಳಿಕೆ.

ಸಿಮ್ಲಾ ಸೆ. ೧೫

ಅಸೆಂಬ್ಲಿಯಲ್ಲಿ ಹೋಂಮೆಂಬರರಾದ ಹೇಗ್‌ರವರು ಈ ಕೆಳಗಿನ ಹೇಳಿಕೆಯನ್ನು ಪ್ರಕಟಿಸಿರುತ್ತಾರೆ.

"ಪ್ರೀಮಿಯರ್‌ರವರೊಡನೆ ನಡೆಸಿದ ಪತ್ರವ್ಯವಹಾರದಲ್ಲಿ ಗಾಂಧಿಜಿಯವರು ಒಂದು ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಅವರು ಪ್ರಾಣ ಹಾರಿಹೋಗುವವರೆಗೂ ಉಪವಾಸ ಮಾಡುವುದಾಗಿ ನಿಶ್ಚಯಿಸಿದ್ದಾರೆ. ಈ ಪ್ರತಿಜ್ಞೆಯು ಅವರಿಗಿರುವ ಬಂಧನಕ್ಕೋಸ್ಕರವಲ್ಲ. ಬಂಧನದಿಂದ ಬಿಡಿಸಿಕೊಳ್ಳಬೇಕೆಂದು ಅವರು ಈ ಪ್ರತಿಜ್ಞೆಯನ್ನು ಮಾಡಿಲ್ಲ. ಅವರ ಪ್ರತಿಜ್ಞೆಯು ಕಾನೂನುಭಂಗದ ತತ್ವಕ್ಕೆ ಸಂಬಂಧಿಸಿದ್ದಲ್ಲ. ಆದುದರಿಂದ, ಸರ್ಕಾರದವರು ನಿಶ್ಚಯಿಸಿರುವುದೇನೆಂದರೆ, ಗಾಂಧಿಯವರು ಉಪವಾಸವನ್ನು ಆರಂಭಿಸಿದ ಕೂಡಲೇ ಅವರನ್ನು ಜೈಲಿನಿಂದ ಯಾವುದಾದರೂ ಅನುಕೂಲವಾದ ಜಾಗಕ್ಕೆ ರವಾನಿಸಿ, ಖಾಸಗೀ ನಿವಾಸದಲ್ಲಿ ಇಡತಕ್ಕದ್ದು. ಅವರ ಮೇಲೆ ಈಗ ಹಾಕಬೇಕೆಂದಿರುವ ನಿರ್ಬಂಧವಿಷ್ಟೇ. ಅವರು ಆ ಸ್ಥಳವನ್ನು ಬಿಟ್ಟು ಕದಲಕೂಡದು. ಅದಕ್ಕಿಂತ ಹೆಚ್ಚಾಗಿ ಯಾವ ನಿರ್ಬಂಧವೂ ಅನವಶ್ಯಕವೆಂದು ನಾವು ಭಾವಿಸುತ್ತೇವೆ. ಆದರೆ ಗಾಂಧಿಯವರು ಈ ಸ್ವಾತಂತ್ರ್ಯವನ್ನು ಕಾನೂನುಭಂಗದ ಚಳುವಳಿಯ ಅಥವಾ ಸರಕಾರಕ್ಕೂ ಮತ್ತು ಕಾನೂನು ಮತ್ತು ಶಿಸ್ತಿಗೂ ವಿರೋಧದ ಚಳುವಳಿಯ ಪ್ರೋತ್ಸಾಹಕ್ಕೆ ಉಪಯೋಗಿಸುತ್ತಾರೆಯೋ ಇಲ್ಲವೋ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ."

ಸ್ವೀಕಾರ

ಧಾರವಾಡ ಜಿ|| ಗದಗ ಶಹರ ಪ್ರೊಕ್ಕಲಗೇರಿಯ ಸದ್ಭಕ್ತರು ಶ್ರಾವಣಮಾಸದಲ್ಲಿ ನೆರವೇರಿದ ಶ್ರೀ ಶರಣಬಸವೇಶ್ವರ ಪುರಾಣದ ಸಮಾಪ್ತಿಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಚನವೀರಯ್ಯನವರು ಹುಚ್ಚಯ್ಯನ ಮಠದ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ಚಿಕ್ಕನರಗುಂದದಲ್ಲಿರುವ ಮ|| ರಾ|| ಬಸೆಟ್ಟೆಪ್ಪನವರು ಉಪ್ಪಿನ ಇವರು ಶ್ರೀ ರೇಣುಕಾಚಾರ್ಯರ ಪುರಾಣಸಮಾಪ್ತಿ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಶ್ರೀ|| ಷ|| ಬ್ರ|| ಕೊಣ್ಣೂರು ಹಿರೇಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಗವರ್ನಮೆಂಟ್ ಹೈಸ್ಕೂಲಿನ ಕನ್ನಡ ಪಂಡಿತರಾಗಿ ತಮಗೆ ವರ್ಗವಾದ ಸಂತೋಷಾರ್ಥವಾಗಿ ಮ|| ರಾ|| ಪಂಡಿತ ಬಸವಯ್ಯನವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಇದೇ ಸೆಪ್ಟೆಂಬರ್ 24,25 ಮತ್ತು 26 ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ಸೇರಲಿರುವ ಅಖಿಲಭಾರತ ಹಿಂದೂ ಮಹಾಸಭೆಗೆ ಶ್ರೀ|| ಎನ್. ಸಿ. ಕೇಳ್ಕರ್‌ರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಗಾಂಧಿಯವರ—ಬ್ರಿಟಿಷ್ ಮಂತ್ರಿಗಳ ಪತ್ರವ್ಯವಹಾರ.

ದಬ್ಬಾಳಿಕೆಯ ತೀವ್ರಖಂಡನೆ.

ಉಪವಾಸ ವ್ರತಕ್ಕೆ ಕೈಹಾಕುವರಂತೆ.

ಸಿಮ್ಲಾ ಸೆ. ೧೨

ಗಾಂಧಿಯವರಿಗೂ, ಸರ್ ಹೋರ್ ಮತ್ತು ಪ್ರಿಮಿಯರ್‌ರವರಿಗೂ ನಡೆದ ಪತ್ರವ್ಯವಹಾರಗಳು ಈಗ ಹೊರಬಿದ್ದಿವೆ. ಒಂದು ಕಾಗದದಲ್ಲಿ ಗಾಂಧಿಯವರು ತಾವು ಸಾಯುವ ಪರ್ಯಂತರ ಉಪವಾಸ ವ್ರತವನ್ನು ಕೈಕೊಳ್ಳುವುದಾಗಿ ತಿಳಿಸಿದ್ದಾರೆ. ಗಾಂಧಿಯವರು ಮಾರ್ಚಿ ೧೧ ನೇ ತಾರೀಖಿನ ದಿವಸ ಪ್ರಿಮಿಯರ್‌ರವರಿಗೂ ಮತ್ತು ಸರ್ ಹೋರರಿಗೂ ಒಂದು ಕಾಗದವನ್ನು ಬರೆದು ಅಂತ್ಯಜ ವರ್ಗದವರಿಗೆ ಪ್ರತ್ಯೇಕ ಚುನಾವಣೆಯನ್ನು ಕಲ್ಪಿಸಿ ಹಿಂದೂಜನಾಂಗವನ್ನು ಛಿನ್ನಭಿನ್ನವಾಗಿ ಮಾಡುವುದಾದರೆ, ತಾವು ಸಾಯುವ ಪರ್ಯಂತರ ಉಪವಾಸವ್ರತವನ್ನು ಆಚರಿಸುವುದಾಗಿಯೂ ಕೋಮುವಾರು ತೀರ್ಮಾನದಲ್ಲಿನ ಇತರ ಅಂಶಗಳಲ್ಲಿ ದೇಹತ್ಯಾಗ ಮಾಡುವಷ್ಟು ಆಕ್ಷೇಪಕರವಾದ್ದು ಯಾವುದಿಲ್ಲದಿದ್ದರೂ, ತಾವು ಸೆ. ೨೦ ನೇ ತಾರೀಖಿನಿಂದ ಉಪವಾಸವ್ರತವನ್ನು ಆಚರಿಸುವುದಾಗಿ ಈಗ ತಿಳಿಸುವುದಾಗಿಯೂ, ಈ ಉಪವಾಸವ್ರತಕ್ಕೆ ಸರ್ಕಾರದವರು ಅಡ್ಡಿಬರದಂತೆ ಇರಬೇಕೆನ್ನುವುದಾದರೆ ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿ, ಅಂತ್ಯಜರಿಗೆ, ಇತರ ಪ್ರಜಾ ಸಾಮಾನ್ಯರಿಗೆ ಅನ್ವಯಿಸುವ ಚುನಾವಣೆ ಪದ್ಧತಿಯನ್ನು ಕೊಡಬೇಕೆಂದೂ, ಅದು ಎಷ್ಟೇ ವಿಶಾಲವಾಗಿದ್ದರೂ ಚಿಂತೆಯಿಲ್ಲವೆಂದೂ ಮುಂತಾಗಿ ತಿಳಿಸಿರುತ್ತಾರೆ.

ಪ್ರಿಮಿಯರ್‌ರವರ ಜವಾಬು.

ಆ ತೀರ್ಮಾನದಲ್ಲಿ ಕಂಡುಬರುವ ಪದ್ಧತಿಯ ಹೊರತಾಗಿ ಸರ್ಕಾರದ ತೀರ್ಮಾನವನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲವೆಂದು ಪ್ರಿಮಿಯರ್‌ರವರು ಜವಾಬು ಕೊಟ್ಟಿರುತ್ತಾರೆ.

ಸರ್ಕಾರದ ದಬ್ಬಾಳಿಕೆಯ ಖಂಡನೆ

ಗಾಂಧಿಯವರ ಪತ್ರದ ವಿವರವು ಈ ಕೆಳಗೆ ಕಂಡಂತೆ ಇರುವುದು.

'ನಾನು ಉಪವಾಸವ್ರತವನ್ನು ಕೈಕೊಳ್ಳುವುದಕ್ಕೆ ಮತ್ತೊಂದು ಕಾರಣವಿದೆ. ಇದರ ವಿಷಯವಾಗಿ ನಾನು ಬಹಳ ತವಕಪಡುತ್ತಿರುವೆನು. ಅದೇನೆಂದರೆ, ಈಗ ಇಂಡಿಯಾದಲ್ಲಿ ಸರಕಾರದವರು ನಡೆಯಿಸುತ್ತಿರುವ ದಬ್ಬಾಳಿಕೆಯ ದೆಸೆಯಿಂದ ನನ್ನ ಆಶೆಯು ಹಾರಿಹೋಗುವ ಪ್ರಸಂಗವು ಎಂದು ಪ್ರಾಪ್ತವಾಗುವುದೋ ನಾನು ಹೇಳಲಾರೆ. ಈಗ ಅನುಸರಿಸಲ್ಪಡುತ್ತಿರುವ ಕ್ರಮಗಳು ನ್ಯಾಯವಾದ ದಾರಿಯ ಎಲ್ಲೆಯನ್ನು ಮೀರಿಯುತ್ತವೆ ಎಂದು ನನ್ನ ಮನವರಿಕೆ. ಸರ್ಕಾರದ ಹಿಂಸಾಕೃತಿಗಳು ಇಡೀ ದೇಶದಲ್ಲೆಲ್ಲಾ ಅವ್ಯಾಹತವಾಗಿ ನಡೆಯುತ್ತಿವೆ. ಭಾರತೀಯ ಮತ್ತು ಆಂಗ್ಲೇಯ ಅಧಿಕಾರಿಗಳು ಈ ಕೃತ್ಯಗಳ ಸೆಳಕ್ಕೆ ಸಿಕ್ಕಿ, ಅತಿಕ್ರೂರ ಕರ್ಮಿಗಳಾಗುತ್ತಿದ್ದಾರೆ. ರಾಜದ್ರೋಹಿಗಳೆಂದು ಕರೆಯಲ್ಪಡುವ ಪ್ರಜೆಗಳಮೇಲೆಯೂ, ತಮ್ಮ ಬಾಂಧವರ ಮೇಲೆಯೂ ಹಿಂಸಾಕೃತ್ಯಗಳನ್ನು ಅನುಸರಿಸುವುದು ಬಹಳ ಅನೋಘವಾದ ಕಾರ್ಯವೆಂದು ಸರ್ಕಾರದವರು ಬೆನ್ನುತಟ್ಟುತ್ತಿರುವುದರಿಂದ ಮೇಲಿನಿಂದ ಕೆಳಗಿನವರೆಗೂ ಅಧಿಕಾರಿಗಳು ನೀತಿ ಬಾಹಿರರಾಗುತ್ತಿರುವರು. ಈ ಅಧಿಕಾರಿಗಳು ಅಮಾನುಷ ಕೃತ್ಯಗಳನ್ನು ಆಚರಿಸುತ್ತಿರುವರು. ಪ್ರಜೆಗಳನ್ನು ತುಳಿಯುತ್ತಿದ್ದಾರೆ. ವಾಕ್‌ಸ್ವಾತಂತ್ರ್ಯವು ಮುರಿದಾಗಿದೆ. ಕಾನೂನು ಮತ್ತು ಸಿಸ್ತಿನ ಹೆಸರಿನಲ್ಲಿ ಅನ್ಯಾಯವಾದ ರಾಕ್ಷಸೀಕೃತ್ಯಗಳನ್ನು ಆಚರಣೆಯಲ್ಲಿ ತರಲಾಗಿದೆ. ದೇಶಸೇವೆ ಮಾಡಬೇಕೆಂಬ ಉದಾತ್ತಭಾವನೆಯಿಂದ ಮುಂದೆ ಬಂದ ಮಹಿಳೆಯರು ತಮ್ಮ ಮಾನಭಂಗವಾಗುವದೆಂಬ ಭೀತಿಯಿಂದಲೂ ಅವಮಾನಗೊಳಿಸಲ್ಪಡುವರೆಂಬ ಕಳವಳದಿಂದಲೂ ಕೂಡಿದ್ದಾರೆ. ರಾಷ್ಟ್ರಮಹಾಸಭೆಯು ಜನರಲ್ಲಿ ಯಾವ ಸ್ವಾತಂತ್ರ್ಯಭಾವನೆಯನ್ನುಂಟುಮಾಡಿದೆಯೋ ಆ ಭಾವನೆಯನ್ನು ತಾಳಿದ ಜನರನ್ನು ಸರ್ಕಾರದವರು ನಾಶಪಡಿಸಲು ಸತತವಾದ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಕೇವಲ ಸಾಮಾನ್ಯವಾದ ಕಾಯಿದೆಗಳನ್ನು ಮುರಿಯುವವರ ಮೇಲೆ ಮಾತ್ರ ದಬ್ಬಾಳಿಕೆಯು ತನ್ನ ಕೆಟ್ಟಹಾವಳಿಯನ್ನು ಮಾಡುತ್ತಿರುವುದಲ್ಲದೆ, ಹೊಸಹೊಸದಾಗಿ ಚಲಾಯಿಸಲ್ಪಟ್ಟಿರುವ ನಿರಂಕುಶವಾದ ಕಾಯಿದೆಗಳನ್ನು ಜನರು ಮುರಿಯುವಂತೆ ಪ್ರೇರೇಪಿಸುತ್ತದೆ.

"ಸರ್ಕಾರದ ಪ್ರಜಾಸತ್ತಾತ್ಮಕತೆಯು ಭಾವನೆಯೇ ಕಂಡುಬರುವುದಿಲ್ಲ. ನಾನು ಮೊನ್ನೆತಾನೆ ಇಂಗ್ಲೆಂಡಿಗೆ ಬಂದಿದ್ದಾಗ ನನ್ನ ಅನುಭವವು ಈ ಪ್ರಕಾರವಿದೆ. ನಿಮ್ಮ ದೇಶದಲ್ಲಿರುವ ಪ್ರಜಾಸತ್ತಾತ್ಮಕತೆಯು ಕೇವಲ ಟೊಳ್ಳು ವಸ್ತುವೇ ಸರಿ. ಈ ಅಭಿಪ್ರಾಯವು ನನ್ನಲ್ಲಿ ಚೆನ್ನಾಗಿ ಬೇರೂರಿದೆ. ಕೆಲವು ವ್ಯಕ್ತಿಗಳಿಂದ ಅಥವಾ ಒಂದು ಪಂಗಡದಿಂದ ಅನೇಕ ಮುಖ್ಯವಾದ ತೀರ್ಮಾನಗಳು ಆಗುತ್ತವೆ. ಪಾರ್ಲಿಮೆಂಟಿನ ಅನುಮತಿಗೇ ಹೋಗುವದಿಲ್ಲ. ತಾವು ಏನು ಮಾಡುತ್ತಿರುವರೆಂಬುದನ್ನೇ ತಿಳಿಯದ ಸದಸ್ಯರು ಸರ್ಕಾರದವರು ಮುಂದಿಟ್ಟ ತೀರ್ಮಾನಕ್ಕೆ ಒಪ್ಪಿಗೆಯನ್ನು ಕೊಟ್ಟುಬಿಡುವರು. ಇದಕ್ಕೆ ಉದಾಹರಣೆಯು ಈಜಿಪ್ಟಿನ ಪ್ರಕರಣ ೧೯೧೪ ನೇ ಸಾಲಿನ ಮಹಾಯುದ್ಧ. ಹಿಂದೂಸ್ಥಾನವೂ ಇದೇ ಪರಿಸ್ಥಿತಿಗೊಳಗಾಗಿರುವುದು. ಪ್ರಜಾಸತ್ತಾತ್ಮಕತೆಯೆಂದು ಹೇಳಿಕೊಳ್ಳುತ್ತಾ, ಒಬ್ಬ ವ್ಯಕ್ತಿಯು ನಿರಂಕುಶ ಅಧಿಕಾರಗಳನ್ನು ಹೊಂದಿ ೩೦೦ ಮಿಲಿಯನ್ ಜನರ ಭವಿಷ್ಯವನ್ನು ಕೈಯಲ್ಲಿ ಹಿಡಿದು, ಆ ತಮ್ಮ ಅಧಿಕಾರವನ್ನು ಕೇವಲ ಕೆಲವು ದುಷ್ಟ ಸಂಗತಿಗಳ ಸಹಾಯದೊಡನೆ ಬಲಾತ್ಕಾರದಿಂದ ತೋರಿಸುವುದೆಂದರೆ, ಅದು ಪ್ರಜಾಸತ್ತಾತ್ಮಕತೆಯ ಬುಡಕ್ಕೆ ಕೊಡಲಿ ಹಾಕಿದಂತಾಗುವುದೆಂದು ನನ್ನ ಮನವರಿಕೆ. ಅಂಥ ಪದ್ಧತಿಯ ಮೇಲೆ ನಾನು ಮೊದಲಿನಿಂದಲೂ ಬಂಡಾಯಗಾರನಾಗಿದ್ದೇನೆ. ಎರಡು ದೇಶಗಳ ಪ್ರಜೆಗಳಲ್ಲಿ ಈಗಾಗಲೇ ಸೌಹಾರ್ದ ಭಾವನೆಯು ತೊಲಗಿ ಮನಸ್ತಾಪಗಳುಂಟಾಗಿರುವಾಗ, ಈ ದಬ್ಬಾಳಿಕೆಯ ಕ್ರಮಗಳನ್ನು ಮುಂದುವರಿಸಿದ್ದೇ ಆದರೆ ಮೇಲಿನದನ್ನು ನಿವಾರಿಸುವ ಬದಲಾಗಿ, ಅದು ಪರಸ್ಪರ ಸಂಬಂಧವನ್ನು ಮುರಿದುಹಾಕುವಂತೆ ಮಾಡುವುದರಲ್ಲಿ ಸಂಶಯವೇ ಇರುವುದಿಲ್ಲ. ನನ್ನ ಜವಾಬ್ದಾರಿಯ ಮಟ್ಟಿಗೆ, ಕಾನೂನುಭಂಗದ ಚಳುವಳಿಯನ್ನು ನಿಲ್ಲಿಸಿದ ಮಾತ್ರದಿಂದಲೇ ಅದನ್ನು ನಿವಾರಿಸಲು, ತಡೆಗಟ್ಟಲು ಸಾಧ್ಯವಿಲ್ಲವೆಂದು ಹೇಳುವೆನು. ನನಗೆ ಅದು ಮುಖ್ಯ ಧ್ಯೇಯವಾಗಿದೆ. ಹೆಗ್ಗುರುತಾಗಿದೆ. ನಾನು ನನ್ನ ಸ್ವಭಾವಕ್ಕನುಗುಣವಾಗಿ ಪ್ರಜಾಸತ್ತಾತ್ಮಕತೆಯ ಒಬ್ಬ ವ್ಯಕ್ತಿಯೆಂದು ಭಾವಿಸುವೆನು. ನನ್ನ ಅಭಿಪ್ರಾಯವನ್ನು ಬಲಾತ್ಕಾರದಿಂದ ಪಶುಬಲದಿಂದ ಇನ್ನೊಬ್ಬರ ಮೇಲೆ ಹೊರಿಸುವುದು ಪ್ರಜಾಸತ್ತಾತ್ಮಕತೆಗೆ ಅತ್ಯಂತ ವಿರುದ್ಧವಾದ ಕಾರ್ಯವೆಂದು ನನ್ನ ತಿಳುವಳಿಕೆ. ಎಲ್ಲಿ ಸತ್ಯಾಗ್ರಹವು ಅವಶ್ಯಕವೋ, ನ್ಯಾಯವೋ, ಅದನ್ನು ಅಲ್ಲಲ್ಲಾ ಪ್ರಯೋಗಿಸುವೆನು. ಪಶುಬಲಕ್ಕಿಂತ ಸಫಲೀಕೃತವಾದ ಮತ್ತೊಂದು ತೀರ್ಮಾನಿಸಲಾಗಿದೆ. ಅದು ಕಷ್ಟ ಸಹಿಷ್ಣುತೆಯ ಮಾರ್ಗ. ಇಂಥ ಸಂದರ್ಭದಲ್ಲಿ ನಿಜವಾದ ಸತ್ಯಾಗ್ರಹಿಯು ಉಪವಾಸ ವ್ರತಕ್ಕೆ ಕೈಹಾಕುವುದರ ಮೂಲಕ [illegible] ಮಾಡುವುದು ಸ್ವತಸ್ಸಿದ್ಧವಾದ ಪಕ್ಷದ ತಿರುಳು. ಅಂಥ ವೇಳೆಯು, ನಮಗೆ ಇನ್ನೂ ಪ್ರಾಪ್ತವಾಗಿಲ್ಲ. ಅಂಥ ಪ್ರಯತ್ನಕ್ಕೆ ನನ್ನ ಆತ್ಮದಿಂದ ಇನ್ನೂ ಪ್ರೇರೇಪಣೆಯಾಗಿಲ್ಲ. ಆದರೆ ಹೊರಗಡೆ ನಡೆಯುತ್ತಿರುವ ವಿಷಯ ಸನ್ನಿವೇಶಗಳು ಬಹಳ ಕಳವಳಕ್ಕೆ ಆಸ್ಪದ ಕೊಡುತ್ತವೆ. ಇವು ನನ್ನನ್ನು ಅಲ್ಲಕಲ್ಲೋಲ ಮಾಡಬಲ್ಲವು.

"ಅಂತ್ಯಜರ ವಿಷಯವಾಗಿ ನಾನು ಬರೆದ ಕಾಗದದಲ್ಲಿ ನಾನು ಉಪವಾಸ ವ್ರತವನ್ನು ಕೈಕೊಳ್ಳುವ ಸೂಚನೆಯನ್ನು ಕೊಟ್ಟಿದ್ದೆನು. ಆದರೆ ಅಂಥ ಕೃತ್ಯಕ್ಕೆ ಮತ್ತೊಂದು ಸನ್ನಿವೇಶವು ಪ್ರಾಪ್ತವಾಗುವ ಸಂಭವವುಂಟೆಂದು ಮತ್ತೊಮ್ಮೆ ನಾನು ತಿಳಿಸದೆ ಇರಲಾರೆನು.

"ನಾನು ನಿಮ್ಮೊಡನೆ ನಡೆಸಿರುವ ಪತ್ರವ್ಯವಹಾರಗಳನ್ನು ಬಹಳ ಗುಟ್ಟಾಗಿ ಇಟ್ಟಿರುವೆನೆಂದು ನಾನು ನಿಮಗೆ ಭರವಸೆ ಕೊಡಬಲ್ಲೆ. ಆದರೆ ನನ್ನೊಡನೆ ಇರುವ ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತು ಮಿ|| ಮಹದೇವ ದೇಸಾಯಿಯವರಿಗೆ ಮಾತ್ರ ಇದು ಗೊತ್ತುಂಟು. ಈ ಪತ್ರವ್ಯವಹಾರವನ್ನು ಯಾವ ಪ್ರಕಾರದಿಂದಲಾದರೂ ಉಪಯೋಗಿಸಿಕೊಳ್ಳಬಹುದೆಂದು ನೀವು ಹೇಳಿದರೆ ಆ ಪ್ರಕಾರ ನಾನು ಮಾಡಲಿರುವೆನು."

ನಿಮ್ಮ ವಿಶ್ವಾಸಪಾತ್ರ,
(ರುಜು) ಎಂ. ಕೆ. ಗಾಂಧಿ.

ಗಾಂಧಿಯವರಿಗೆ ಸರ್ ಹೋರರ ಜವಾಬಿನ ವಿವರ.

ಲಂಡನ್ ಏ. ೧೩

ಪ್ರಿಯ ಗಾಂಧಿಯವರೇ—ತಾವು 11ನೆಯ ತಾರೀಖಿನಲ್ಲಿ ಬರೆದ ಕಾಗದಕ್ಕೆ ನಾನು ಈಗ ಜವಾಬು ಕೊಡುತ್ತಿರುವೆನು. ಅಂತ್ಯಜ ವರ್ಗದವರಿಗೆ ಪ್ರತ್ಯೇಕ ಚುನಾವಣೆಯನ್ನು ಕೊಡುವ ವಿಷಯದಲ್ಲಿ ನೀವು ಯಾವ ಪ್ರಕಾರ ಕಳವಳಗೊಂಡಿದ್ದೀರಿ ಎಂಬ ಅಂಶವನ್ನು ನಾನು ಚೆನ್ನಾಗಿ ಅರಿತಿರುವೆನು. ಆಯಾ ಅಂಶಗಳ ಯೋಗ್ಯತೆಯಮೇಲೆ, ಅವಶ್ಯಕವಾದ ತೀರ್ಮಾನವನ್ನು ಮಾತ್ರ ನಾವು ಕೊಡಲುದ್ದೇಶಿಸಿರುವೆವು. ನಿಮಗೆ ಗೊತ್ತಿರುವಂತೆ ಲಾರ್ಡ್ ಲೋಥಿಯನ್ ಕಮಿಟಿಯವರು ಇನ್ನೂ ತಮ್ಮ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿಲ್ಲ. ಲೋಥಿಯನ್ ಕಮಿಟಿಯವರಿಂದ ಬಂದ ತೀರ್ಮಾನಗಳ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದರೆ, ಇನ್ನೂ ಕೆಲವು ವಾರಗಳಾಗಬಹುದು. ನಮಗೆ ಅವರ ವರದಿಯು ಬಂದಮೇಲೆ ನಾವು ಬಹಳ ತೀವ್ರಾಸಕ್ತಿಯಿಂದ ಪರಿಶೀಲಿಸಬೇಕಾಗುವುದು. ಲೋಥಿಯನ್ ಕಮಿಟಿಯವರು ಹೊರಪಡಿಸಿದ ಅಭಿಪ್ರಾಯಗಳ ಜೊತೆಗೆ ನೀವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ಮತ್ತು ನಿಮ್ಮಂತೆ ಭಾವಿಸುವವರ ಅಭಿಪ್ರಾಯಗಳನ್ನೂ ನಾವು ಚೆನ್ನಾಗಿ ಪರ್ಯಾಲೋಚಿಸಿ, ತರುವಾಯ ಯಾವುದಾದರೊಂದು ತೀರ್ಮಾನಕ್ಕೆ ಬರುವೆವು. ನೀವು ನನ್ನ ಸ್ಥಾನದಲ್ಲಿದ್ದರೆ. ನಾವು ಯಾವ ದಾರಿಯನ್ನು ಅನುಸರಿಸಬೇಕೆಂದಿರುವೆವೋ ಅದನ್ನೇ ನೀವೂ ಸಹ ಅನುಸರಿಸುತ್ತಿದ್ದಿರೆಂದು ನಾನು ತಿಳಿಯುವೆನು. ಕಮಿಟಿಯ ವರದಿಯನ್ನು ನಿರೀಕ್ಷಿಸುತ್ತಿದ್ದಿರಿ. ತರುವಾಯ ದೀರ್ಘವಾಗಿ ವರದಿಯನ್ನು ಪರಿಶೀಲಿಸುತ್ತಿದ್ದಿರಿ. ಅಖೈರು ತೀರ್ಮಾನಕ್ಕೆ ಬರುವುದರ ಮುಂಚಿತವಾಗಿ ಎರಡು ಪಕ್ಷದವರೂ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿದ್ದಿರಿ. ಇದಕ್ಕಿಂತಲೂ ಬೇರೆ ನಾನು ಹೇಳಲಾರೆ. ಆ ಪ್ರಕಾರ ಹೇಳಬೇಕೆಂದು ನೀವು ನಿರೀಕ್ಷಿಸುವುದಿಲ್ಲವಾಗಿ ಭಾವಿಸುವೆನು.

"ಇನ್ನು ಆರ್ಡಿನೆನ್ಸುಗಳ ವಿಷಯ ? ಈ ಬಗ್ಗೆ ಈಗಾಗಲೇ ಬಹಿರಂಗವಾಗಿಯೂ ಗುಟ್ಟಾಗಿಯೂ ಹೇಳಿರುವುದನ್ನೇ ಪುನಃ ಹೇಳಬೇಕಾಗಿದೆ. ಸುವ್ಯವಸ್ಥಿತವಾದ ಸರ್ಕಾರದ ತಳಹದಿಗೆ ಅಪಾಯವನ್ನು ಉದ್ದಿಷ್ಟಪೂರ್ವಕವಾಗಿ ತಂದೊಡ್ಡಬೇಕೆಂದು ಪ್ರಯತ್ನಿಸಿದಾಗ ಆರ್ಡಿನೆನ್ಸುಗಳನ್ನು ಚಲಾಯಿಸಬೇಕಾಯಿತು. ಇಂಡಿಯಾ ಸರ್ಕಾರದವರೂ ಸ್ಥಳೀಯ ಸರ್ಕಾರದವರೂ ತಮಗೆ ಒಪ್ಪಿಸಲಾಗಿರುವ ವಿಶಾಲವಾದ ಅಧಿಕಾರಗಳನ್ನು ದುರುಪಯೋಗಪಡಿಸುತ್ತಿಲ್ಲವೆಂದು ನನ್ನ ಮನಸ್ಸಿಗೆ ಚೆನ್ನಾಗಿ ನಾಟಿದೆ. ಪ್ರತಿಕ್ರಿಯಾರೂಪವಾದ ಯಾವುದೇ ಅತ್ಯಾಚಾರಗಳನ್ನು ತಪ್ಪಿಸಲು ಅವರುಗಳು ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆ."

ಮ್ಯಾಕ್ಡೋನಾಲ್ಡರಿಗೆ ಗಾಂಧಿಯವರ ಕಾಗದ.

ಆಗಸ್ಟ ೧೮ ನೇ ತಾರೀಖಿನ ದಿವಸ ಗಾಂಧಿಯವರು ಮಿ|| ಮ್ಯಾಕ್ಡೋನಾಲ್ಡರವರಿಗೂ, ಸರ್ ಹೋರರಿಗೆ ಬರೆದ ಪತ್ರವನ್ನೇ ಬರೆದರು.

ಅದಕ್ಕೆ ಮಿ|| ಮ್ಯಾಕ್ಡೋನಾಲ್ಡರವರು ಜವಾಬು ಬರೆದು ಸರ್ಕಾರದವರು ತಮ್ಮ ತೀರ್ಪನ್ನು ಬದಲಾಯಿಸಲು ಸಾಧ್ಯವಿಲ್ಲವೆಂದೂ, ಕೋಮುಗಳು ತಮ್ಮ ತಮ್ಮಲ್ಲಿ ಒಪ್ಪಿಗೆಗೆ ಬಂದು ಒಂದು ತೀರ್ಪನ್ನು ಮುಂದಿಟ್ಟರೆ ಆಗ್ಗೆ ಮಾತ್ರ ಬದಲಾಯಿಸಲು ಸಾಧ್ಯವುಂಟೆಂದೂ ತಿಳಿಸಿದ್ದಾರೆ.

ಗಾಂಧಿಯವರ ಜವಾಬು.

ಗಾಂಧಿಯವರು ಅಖೈರಾಗಿ ಈ ಪ್ರಕಾರ ಜವಾಬು ಬರೆದಿದ್ದಾರೆ.

"ನಾನು ನಿಮಗೆ ಈ ಮೊದಲೇ ತಿಳಿಸಿದ ನನ್ನ ತೀರ್ಮಾನವನ್ನು ಅನುಸರಿಸದೆ ಬೇರೆ ಗತ್ಯಂತರವೇ ಇಲ್ಲ."

ಸರ್ ಹೋರರ ಜವಾಬು.

ಸರ್ ಹೋರರು ಈ ಪ್ರಕಾರ ಜವಾಬು ಕೊಟ್ಟಿದ್ದಾರೆ.

"ಕಾನೂನು ಮತ್ತು ಸಿಸ್ತಿನ ರಕ್ಷಣೆಯ ಸಲುವಾಗಿಯೂ ಮತ್ತು ಸರ್ಕಾರಿ ಅಧಿಕಾರಿಗಳನ್ನೂ ಪ್ರಜಾವರ್ಗದವರನ್ನೂ ಅಹಿಂಸಾಕೃತ್ಯಗಳಿಂದ ಕಾಪಾಡುವ ಸಲುವಾಗಿಯೂ ಅತ್ಯವಶ್ಯಕವಾಗಿ ಬೇಕೆನ್ನುವ ಕಾಲವು ಕಳೆದನಂತರ ಒಂದು ನಿಮಿಷವೂ ಸಹ ವಿಶೇಷ ಕ್ರಮಗಳನ್ನು ಜಾರಿಯಲ್ಲಿಡುವುದಿಲ್ಲ."

ನಿಮ್ಮ ವಿಶ್ವಾಸಪಾತ್ರ,
(ರುಜು) ಸರ್ ಹೋರ್.

ಮಹಾತ್ಮರ ಉಪವಾಸವ್ರತದ ಸಂಬಂಧವಾಗಿ ಮುಖಂಡರ ಅಭಿಪ್ರಾಯಗಳು.

ಮೈಸೂರು ವೃದ್ಧ ಪಿತಾಮಹರಾದ ಶ್ರೀ|| ಎಂ ವೆಂಕಟಕೃಷ್ಣಯ್ಯನವರು.

'ಮಹಾತ್ಮರು ಸತ್ತರೆ ನಾವೇಕೆ ಬದುಕಿರಬೇಕು? ನಮ್ಮಲ್ಲಿರುವ ಕೋಮುವಾರು ಜಗಳಗಳನ್ನು ನಾವೇ ಪರಿಹರಿಸಬೇಕು. ಎಲ್ಲರೂ ಏಕಮುಖದಿಂದ ಕೆಲಸ ಮಾಡಬೇಕು. ಗಾಂಧಿಯವರನ್ನು ಬದುಕಿಸಿಕೊಳ್ಳುವುದು ನಮ್ಮ ಕೈಲೇ ಇದೆ.''

ಮಿ|| ರಜ್ಜಿಯವರು.

"ಮಹಾತ್ಮರು ಉಪವಾಸ ವ್ರತಕ್ಕೆ ಕೈಹಾಕಿದರೆ ಲೋಕವೇ ತಲೆಕೆಳಗಾಗುತ್ತದೆ. ನಾವೆಲ್ಲರೂ ಐಕ್ಯತೆಯಿಂದ ಕೆಲಸ ಮಾಡಿ ಈ ಘೋರ ವಿಪತ್ತನ್ನು ತಪ್ಪಿಸಬೇಕು."

ಸರ್ ತೇಜ್‌ಬಹದ್ದೂರ್ ಸಪ್ರು.

"ಮಹಾತ್ಮರು ತಮ್ಮ ಮಹಾತ್ಯಾಗವನ್ನು ಆರಂಭಿಸುವ ಮುಂಚೆಯೇ ಅವರನ್ನು ಬಿಡುಗಡೆ ಮಾಡಬೇಕು. ಕೋಮುವಾರು ಸಮಸ್ಯೆಯನ್ನು ಅವರಿಗಿಂತಲೂ ಬೇರೆ ಯಾರೂ ಸಡಿಲಿಸಲಾರರು. ಕಾಲವು ಅತಿಕ್ರಮಣವಾಗುವುದಕ್ಕೆ ಮುಂಚೆಯೇ ಅವರ ಬಿಡುಗಡೆಯಾಗಬೇಕು. ಅವರ ಪ್ರಾಣವನ್ನು ಉಳಿಸಬೇಕು. ಸಾರ್ವತ್ರಿಕವಾದ ಶಾಂತಿಯನ್ನು ಸ್ಥಾಪಿಸಲು ಮಹಾತ್ಮರೊಬ್ಬರೇ ಸಮರ್ಥರು."

ಡಾ|| ಅಂಬೇಡ್ಕರ್‌ರವರು.

"ಈ ರಾಜಕೀಯ ಟೊಳ್ಳುಬೆದರಿಕೆಗಳಿಗೆ ನಾನು ಲಕ್ಷ್ಯಕೊಡುವವನಲ್ಲ. ತಾವು ಉಪವಾಸದಿಂದ ಸಾಯುವುದಾಗಿ ಬೆದರಿಸಿರುವುದು ನೀತಿಯುತವಾದ ಹೊಡೆದಾಟವಲ್ಲ. ಅದು ಕೇವಲ ರಾಜಕೀಯ ಬೆದರಿಕೆಯೇ ಸರಿ. ಅವರು ತಮ್ಮ ಹಟವನ್ನೇ ಸಾಧಿಸುವುದಾದರೆ, ಅವರು ಕೇವಲ ಕೃತಕರೀತಿಯಲ್ಲಿ ಸಾಯುವವರು. ಸ್ವಾಭಾವಿಕರೀತಿಯಲ್ಲಿ ಸಾಯುವುದಿಲ್ಲ. ತಮ್ಮ ಎದುರುಪಕ್ಷದವರ ಪ್ರಾಮಾಣಿಕತೆಗೆ ಬೆಲೆಯನ್ನು ಕೊಟ್ಟು ಅವರೊಡನೆ [illegible] ಮೇಲೆ ವ್ಯವಹಾರ ನಡಿಸುವ ರೀತಿಯನ್ನು ನಾನು ಅರಿಯಬಲ್ಲೆ. ಆದರೆ ನಾನು ಅಂಥ ಯಾವ ಬೆದರಿಕೆಗೂ ಸೊಪ್ಪುಹಾಕುವವನಲ್ಲ. ನಾನು ನನ್ನ ನಿಶ್ಚಯತೆಯ ಬಾಹಿರನಾಗುವುದಿಲ್ಲ. ಗಾಂಧಿಯವರು ಹಿಂದೂಜನಾಂಗದ ಸಲುವಾಗಿ ತಮ್ಮ ಜೀವವನ್ನು ಬಿಟ್ಟು ಕಾದಾಡುವುದಾದರೆ, ಅಂತ್ಯಜ ವರ್ಗದವರೂ ಸಹ ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ತಮ್ಮ ಪ್ರಾಣಗಳನ್ನು ಬಿಡಲು ತಯಾರಾಗಿದ್ದಾರೆ.'

ಮಿ|| ಬಿ. ಜೆ. ದೇವರೂರಕರ್.

"ಅಂತ್ಯಜರ ಪ್ರಜಾವರ್ಗದ ಒಟ್ಟು ಅಭಿಪ್ರಾಯವನ್ನು ತೆಗೆದುಕೊಂಡರೆ ಸಂಯುಕ್ತಚುನಾವಣೆಗೆ ಸಂಪೂರ್ಣವಾದ ಬೆಂಬಲವು ದೊರೆಯುವುದು."

ಮಿ|| ಕೇಲ್ಕರ್‌ರವರು.

ಸಾಯುವ ಪರ್ಯಂತರ ಉಪವಾಸವ್ರತವನ್ನು ಆಚರಿಸುವುದಾಗಿ ಮಹಾತ್ಮಾ ಗಾಂಧಿಯವರು ಮಾಡಿರುವ ದೃಢಸಂಕಲ್ಪದ ಸಮಾಚಾರವು ನಮ್ಮನ್ನು ಸ್ತಂಭೀಭೂತರನ್ನಾಗಿ ಮಾಡಿದೆ. ನಾನು ಯಾವಾಗಲೂ ಆಶಾಜನಕವ್ಯಕ್ತಿಯಾಗಿದ್ದೇನೆ. ಆದಕಾರಣ ಮಹಾತ್ಮಾಜಿಯವರು ಸಾಯುವುದಕ್ಕೆ ಆಸ್ಪದಕೊಡಲಾಗುವುದಿಲ್ಲವೆಂದು ಹೇಳುತ್ತೇನೆ. ಈಗಿನ ಪರಿಸ್ಥಿತಿಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆಯದು ಅಂತ್ಯಜ ಜನಾಂಗದ ಪ್ರಾತಿನಿಧ್ಯತೆಯ ಗೊಂದಲವು ವಿಶಾಲವಾಗಬಹುದು. ಗಾಂಧಿಯವರು

ಜೈಲಿನಿಂದ ಹೊರಬಿದ್ದರೆ, ದೇಶವು ಅವರನ್ನು ಕಾನೂನು ಭಂಗ ಚಳುವಳಿಯನ್ನು ನಿಲ್ಲಿಸುವಂತೆ ಪ್ರೇರೇಪಿಸಬಹುದು. ಅದೇ ಕಾಲದಲ್ಲಿ ಆರ್ಡಿನೆನ್ಸುಗಳು ವಾಪಸ್ ತೆಗೆದುಕೊಳ್ಳುವಂತೆ ಮಾಡಬಹುದು. ರೌಂ. ಟೇ. ಸಮ್ಮೇಳನದಲ್ಲಿ ಸರ್ಕಾರ, ಕಾಂಗ್ರೆಸ್ ಮತ್ತು ಲಿಬರಲ್ ಈ ಮೂವರ ಒಪ್ಪಂದವಾಗುವಂತೆ ಮಾಡಬಹುದು. ಅನಿರೀಕ್ಷಿತದಷ್ಟು ನಾವು ಹೊಂದಬಹುದು. ಗಾಂಧಿಯವರು ಜೀವಿಸಿದ್ದರೆ, ದೇಶದ ಸ್ವಾರ್ಥತ್ಯಾಗ ಭಾವನೆಯು ಅವರ ಹಿಂದಿದ್ದರೆ, ಗಾಂಧಿಯವರು ಇನ್ನೂ ಅತಿಶಯವಾದ ಆಶ್ಚರ್ಯ ಕಾರ್ಯಗಳನ್ನು ನಡೆಸಬಹುದು. ತಮ್ಮ ಅನುಯಾಯಿಗಳನ್ನು ಬಹಳ ಜಾಗರೂಕತೆಯಿಂದಲೂ ಉಪಾಯದಿಂದಲೂ ಮುಂದೆ ನಡೆಸಿದರೆ ಅಪ್ರತಿಮಕಾರ್ಯಗಳನ್ನು ಅವರು ಮಾಡಬಲ್ಲರು.

ಸರ್ ಸೇಠ್ನಾ.

"ಈ ಕಠಿಣ ಪರಿಸ್ಥಿತಿಯನ್ನು ಪರಿಹರಿಸುವ ಉಪಾಯವು ಅಂತ್ಯಜ ಜನಾಂಗದಲ್ಲಿಯೇ ಇರುವುದು. ಅವರೇ ಪರಿಹರಿಸಬೇಕು" ಎಂಬುದಾಗಿ ಸರ್ ಫಿರೋಜ್‌ಷಾ ಸೇಠ್ನಾರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಅವರು ತಮ್ಮ ತಮ್ಮಲ್ಲಿಯೇ ಈಗಲೂ ಸಹ ಒಪ್ಪಿಗೆಗೆ ಬರುವುದಾದರೆ ಪ್ರೈಮ್ ಮಿನಿಸ್ಟರು ಆಬಗ್ಗೆ ಅಖೈರು ತೀರ್ಮಾನ ಕೊಡುವರೆಂದೂ, ಆದಕಾರಣ, ಡಾ|| ಅಂಬೇಡ್ಕರ್, ರಾವ್ ಬಹದ್ದೂರ್ ಎಂ. ಸಿ. ರಾಜಾ ಮತ್ತು ಇತರ ಮುಖಂಡರುಗಳು ಒಟ್ಟಿಗೆ ಸೇರಿ ಈಗಿನ ಪರಿಸ್ಥಿತಿಯನ್ನು ತಿಳಿಯಾಗಿ ಮಾಡಬೇಕೆಂದೂ, ಹಿಂದೂ ಜನಾಂಗದ ವೈದಿಕಗುಂಪಿನವರು ಬಹಳ ಹಠವಾದಿಗಳಾಗಿರುವರೆಂದೂ, ಗಾಂಧಿಯವರಂತಹ ಸುಧಾರಕರಿಗೂ ಅವರನ್ನು ದಾರಿಗೆ ತರುವುದು ಸಾಧ್ಯವಾಗಿಲ್ಲವೆಂದೂ, ಗಾಂಧಿಯವರಂತಹ ವ್ಯಕ್ತಿಗಳೇ ಈ ಪ್ರಯತ್ನದಲ್ಲಿ ವಿಫಲರಾದರೆ, ಅಂತ್ಯಜ ವರ್ಗದವರನ್ನು ಮೇಲಕ್ಕೆ ತರುವ ಪ್ರಯತ್ನವು ಯಶಸ್ವಿಯಾಗುವುದೇ ಎಂಬ ಸಂಶಯವು ಉಂಟಾಗುತ್ತದೆಂದೂ, ಗಾಂಧಿಯವರು ಅಂತ್ಯಜ ವರ್ಗದವರಲ್ಲಿ ಮಾತ್ರ ಉತ್ಸುಕತೆಯನ್ನು ತೆಗೆದುಕೊಳ್ಳುತ್ತಿಲ್ಲವೆಂದೂ. ಸರ್ ಸೇಠ್ನಾರವರು ಹೇಳಿದರು ಕಾಂಗ್ರೆಸ್ಸಿನವರು ಗಾಂಧಿಯವರನ್ನು ತಮ್ಮ ನಾಯಕನೆಂದು ಭಾವಿಸುವುದಾಗಿಯೂ, ಗಾಂಧಿಯವರು ಕಾಂಗ್ರೆಸ್ಸಿನವರನ್ನು ಹತೋಟಿಯಲ್ಲಿಟ್ಟಿರುವರೆಂದೂ, ಆದರೆ ಅವರ ಹತೋಟಿಯು ಇಲ್ಲದಿರುವ ಸಂಭವ ಒದಗಿದರೆ, ಪರಿಸ್ಥಿತಿಯು ಏನಾಗುವುದೋ ಹೇಳಲು ಸಾಧ್ಯವಿಲ್ಲವೆಂದೂ ತಿಳಿಸಿ ಕೊನೆಗೆ ಈ ಪ್ರಕಾರ ಹೇಳಿದರು. 'ಗಾಂಧಿಯವರ ಬಗ್ಗೆ ಯಾರು ಎಷ್ಟು ಬೇಕಾದರೂ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಲಿ, ಅವರು ಸಾಯುವುದಕ್ಕಿಂತ, ಜೀವಂತರಾಗಿದ್ದರೆ ದೇಶಕ್ಕೆ ಅಪಾರವಾದ ಮಹತ್ಕಾರ್ಯಗಳನ್ನು ಮಾಡಬಲ್ಲರು.'

ನಿಮ್ನ ಪಂಗಡದವರಿಗೆ ಎಂ. ಸಿ. ರಾಜಾರವರ ಪ್ರಾರ್ಥನೆ.

ಗಾಂಧಿಯವರನ್ನು ಉಳಿಸಬೇಕಾದುದು ಅವಶ್ಯಕ. ಸಾಮಾನ್ಯ ಚುನಾವಣೆಗಳ ಮುಖಾಂತರ ನಿಮ್ನವರ್ಗದವರಿಗೆ ಪ್ರಾತಿನಿಧ್ಯವನ್ನು ದೊರಕಿಸುವುದೂ ಅವಶ್ಯಕ. ಎಲ್ಲರೂ ಒಗ್ಗಟ್ಟಾಗಿ ಸಹಕರಿಸಿ ಕೆಲಸಮಾಡಬೇಕಾದುದು ಅಗತ್ಯ. ಗಾಂಧಿಯವರು ಯಾವಜ್ಜೀವವೂ ನಿಮ್ನವರ್ಗದವರ ಉದ್ಧಾರಕ್ಕಾಗಿ ಶ್ರಮಪಡುತ್ತಿದ್ದಾರೆ. ಉತ್ತಮವರ್ಗದ ಹಿಂದೂಗಳಿಗೆ ಜ್ಞಾನೋದಯವಾಗುವಂತೆ ಮಾಡಿದ್ದಾರೆ. ಇಂತಹ ಮಹಾತ್ಮರನ್ನು ನಮಗೋಸ್ಕರವಾಗಿ ಸಾಯುವಂತೆ ಬಿಡಬಾರದು. ಇದರ ಜವಾಬ್ದಾರಿಯು ಅಸ್ಪೃಶ್ಯವರ್ಗದವರ ಮೇಲೆ ಬಿದ್ದಿರುವುದು.

ಮಿ|| ಜಾರ್ಜ್ ಲ್ಯಾನ್ಸ್‌ಬರಿ.

ಗಾಂಧಿಯವರು ಒಂದು ಸತ್ಯಕ್ಕೋಸ್ಕರ ಪ್ರಾಣತ್ಯಾಗ ಮಾಡಿದ್ದೇ ಆದರೆ ಅವರ ಕೀರ್ತಿಯು ಜಾಜ್ವಲ್ಯಮಾನವಾಗಿ ಬೆಳಗುವುದು. ಅವರ ಪ್ರಭಾವಶಕ್ತಿಯು ಅಪಾರವಾಗುವುದು. ಗಾಂಧಿಯವರನ್ನೂ ಭಾರತ ಮುಖಂಡರನ್ನೂ ಪುನಃ ಸೇರಿಸಿ ಒಂದು ಒಪ್ಪಂದಕ್ಕೆ ಬರುವಂತೆ ಮಾಡಿರಿ. ಮನಃಕಷಾಯಗಳಿಗೂ ವಿದ್ವೇಷಕ್ಕೂ ಕಾರಣವಾಗುವ ಯಾವ ತೀರ್ಮಾನವನ್ನೇ ಆಗಲಿ ನಾವು ಬಲಾತ್ಕಾರದಿಂದ ಹೊರಿಸಲಾಗದು.

ಮಿ|| ಯಾಕೂಬ್ ಹುಸೇನ್‌ರವರು.

ಭಗವಂತನು ಗಾಂಧಿಯವರನ್ನು ಕಾಪಾಡಲಿ, ಆಶೀರ್ವದಿಸಲಿ ಎಂದು ಮುಂತಾಗಿ ಹೇಳುತ್ತಾ ಮೌಲಾನಾ ಯಾಕೂಬ್ ಹುಸೇನ್‌ರವರು ದೇಶದ ಸರ್ವ ಜನಾಂಗದವರೂ ಒಟ್ಟಿಗೆ ಸೇರಿ ಗಾಂಧಿಯವರನ್ನು ಉಳಿಸಲು ಮಾರ್ಗಗಳನ್ನು ಅನುಸರಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಸರ್ ಯಾಕೂಬ್.

ಗಾಂಧಿಯವರ ತೀರ್ಮಾನವು ದೇಶದ ಬಹು ಭಾಗದವರಲ್ಲಿ ಕಳವಳವನ್ನುಂಟುಮಾಡದೆ ಇರದು. ಅವರ ರಾಜಕೀಯ ಅಭಿಪ್ರಾಯಗಳನ್ನು ಒಪ್ಪದೇ ಇರುವವರಲ್ಲಿಯೂ ಸಹ ಕಳವಳ ಉಂಟಾಗಿದೆ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮಹಾತ್ಮರಂತಹ ಅಮೂಲ್ಯವಾದ ವ್ಯಕ್ತಿಯನ್ನು ಕಳೆದುಕೊಳ್ಳುವುದು ಬಹಳ ಸಂಕಟದ ವಿಷಯ. ಈಗ ಎರಡು ಉಪಾಯಗಳು ಮಾತ್ರ ಮುಂದಿವೆ. ಒಂದು, ಆಯಾಯ ಕೋಮುಗಳನ್ನು ಕೇಳದೆ ಸರ್ಕಾರದವರು ತಮ್ಮ ತೀರ್ಮಾನವನ್ನು ಬದಲಾಯಿಸುವುದು. ಎರಡನೆಯದು, ಹಿಂದೂಗಳೂ ಅಂತ್ಯಜ ವರ್ಗದವರೂ ತಮ್ಮ ತಮ್ಮಲ್ಲೇ ಒಪ್ಪಿಗೆಗೆ ಬರುವುದು.

ಸರ್ ಹರಿಸಿಂಗ್ ಗೋರ್

ಗಾಂಧಿಯವರು ಶಾಂತಿಸ್ಥಾಪನೆಯ ರಾಯಭಾರಿಯಂತೆ ಮಾತನಾಡುತ್ತೀರುವರು. ಅವರು ಇಂಡಿಯಾಕ್ಕೆ ಬಂದೊಡನೆಯೇ ರೆಗೂ ಉಪವಾಸವ್ರತವನ್ನಾಚರಿಸುವೆನೆಂದು ತೀರ್ಮಾನಿಸಿರುತ್ತಾರೆ.

ಮಹಾತ್ಮರ ಉಪವಾಸವ್ರತದ ವರ್ತಮಾನವನ್ನು ಕೇಳಿದ ಕೂಡಲೇ ಮ್ಯಾಂಚೆಸ್ಟರಿನಲ್ಲಿದ್ದ ಮಿ|| ಸಿ. ಎಫ್. ಆಂಡ್ರ್ಯೂಸ್‌ರವರು ತಕ್ಷಣವೇ ಲಂಡನ್ನಿಗೆ ಬಂದು ಪ್ರಮುಖ ಅಧಿಕಾರಿಗಳೊಡನೆ ಮಾತುಕಥೆಗಳನ್ನಾಡುತ್ತಿರುವರು. ಮತ್ತು ಅವರು ಇಷ್ಟರಲ್ಲಿಯೇ ಇಂಡಿಯಾದೇಶಕ್ಕೆ ಹೊರಟು ಬರುವವರಾಗಿರುವರು. ಈ ಸಂಬಂಧವಾಗಿ ಮಿ|| ಆಂಡ್ರ್ಯೂಸರವರು ಮಹಾತ್ಮರಿಗೆ ಬರೆದಪತ್ರಕ್ಕೆ ಮಹಾತ್ಮರು ತಾವು ಉಪವಾಸವ್ರತವನ್ನು ಕೈಕೊಂಡಿರುವುದು ದೈವಾಜ್ಞೆಯೆಂದೂ, ಅವರು ಭರತಖಂಡಕ್ಕೆ ಬರುವದು ಅನವಶ್ಯಕವೆಂದೂ ಜವಾಬು ಕೊಟ್ಟಿರುತ್ತಾರೆ.

ಈ ಪತ್ರಿಕೆಯು ಬೇರೊಂದೆಡೆಯಲ್ಲಿ ಪ್ರಕಟಿಸಿರುವಂತೆ ಸರಕಾರದವರು ಕೆಲವು ನಿರ್ಬಂಧಗಳನ್ನು ಕಲ್ಪಿಸಿ ಮಹಾತ್ಮರನ್ನು ಬಿಡುಗಡೆಮಾಡಬೇಕೆಂದಿರುವರು. ಆದರೆ ಮಹಾತ್ಮರು ಈ ನಿರ್ಬಂಧದ ಬಿಡುಗಡೆಗೆ ಎಂದಿಗೂ ಒಪ್ಪಲಾರರು. ಸ್ವರಾಜ್ಯವನ್ನು ಸಂಪಾದಿಸುವವರೆಗೆ ಸಾಬರ್ಮತಿ ಆಶ್ರಮವನ್ನು ಪ್ರವೇಶಿಸುವುದಿಲ್ಲವೆಂದು ದಂಡಿಯಾತ್ರೆಗೆ ಹೊರಟಾಗಲೇ ಪ್ರತಿಜ್ಞೆಮಾಡಿರುವುದರಿಂದ ಸರ್ಕಾರದವರು ಅವರನ್ನು ಸಾಬರ್ಮತಿಗೆ ಕಳುಹಿಸುವಂತೆಯೂ ಇಲ್ಲ. ಆದ್ದರಿಂದ ಸರಕಾರದವರು ಈ ಸಂಬಂಧದಲ್ಲಿ ನಿಮ್ಮನ್ನು ಎಲ್ಲಿಗೆ ಕಳುಹಿಸಿದರೆ ಅನುಕೂಲವೆಂದು ಮಹಾತ್ಮರನ್ನೇ ಕೇಳಿರುವರಂತೆ!

ಭರತಖಂಡದ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿರುವ ಇಂಡಿಯಾಲೀಗಿನ ಮೆಂಬರರು ಗಾಂಧಿಯವರೇ ಮೊದಲಾದವರನ್ನೆಲ್ಲಾ ಕೂಡಲೇ ಬಿಡುಗಡೆಮಾಡಬೇಕೆಂದೂ, ಮುಂದಿನ ಕಾರ್ಯಕ್ರಮಗಳ ಬಗ್ಗೆ ವ್ಯವಹಾರವನ್ನು ನಡೆಯಿಸಲು ಅವರಿಗೆ ಸಂಪೂರ್ಣಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಹಿಂದೂಸ್ಥಾನದಲ್ಲಿರುವ ಎಲ್ಲ ಜನಾಂಗದವರೂ ಗಾಂಧಿಯವರನ್ನೇ ತಮ್ಮ ಮುಂದಾಳುಗಳೆಂದು ಭಾವಿಸಿರುವರೆಂದೂ, ಗಾಂಧಿಯವರು ಮೃತರಾದರೆ ಶಾಂತಿಯಮೂರ್ತಿಯು ಮಾಯವಾಗುವದಲ್ಲದೆ, ಬ್ರಿಟಿಷರು ತಮ್ಮ ಮಿತ್ರರನ್ನು ಕಳೆದುಕೊಳ್ಳುವರೆಂದೂ, ಸ್ಟೇಟ್‌ಸೆಕ್ರೆಟರಿಯವರಿಗೂ, ಲಾರ್ಡ್ ಸ್ಯಾಂಕಿಯವರಿಗೂ ತಂತೀವರ್ತಮಾನಗಳನ್ನು ಕಳುಹಿಸಿರುತ್ತಾರೆ.

ಮಹಾತ್ಮರ ಘೋರ ಉಪವಾಸವ್ರತ.

ಚಿತ್ತೂರಿನ ಮಿ|| ದೊರೆಸಾಮಿ ಅಯ್ಯಂಗಾರ್ಯರ ಹೇಳಿಕೆ.

ಸತ್ಯದ ತತ್ವಗಳಲ್ಲಿ ತನಗಿದ್ದ ದೃಢವಾದ ನಂಬಿಕೆಯನ್ನು ಉಳಿಸಿಕೊಳ್ಳುವುದಕ್ಕಾಗಿ—ಶಿಲುಬೆಯ ಮೇಲೆ ಚೆಲ್ಲಿದ ಯೇಸುಕ್ರಿಸ್ತನ ರಕ್ತವು. ಪ್ರಹ್ಲಾದ ಮತ್ತು ಹರಿಶ್ಚಂದ್ರಾದಿಗಳು ಅನುಭವಿಸಿದ ಕಷ್ಟಪರಂಪರೆಗಳ ನೆನಪು. ಇವೆಲ್ಲವೂ ನವ್ಯ ನವೀನ ಜನಾಂಗದ ಸ್ಮೃತಿಪಥದಿಂದ ಅಳಿಸಿ ಹೋಗುತ್ತಿರುವುವೇ? ದೊಡ್ಡ ದೊಡ್ಡ ಆತ್ಮರು ಈ ಭವಬಂಧನವನ್ನು ಕಿತ್ತೊಗೆಯುವುದರಿಂದ ಸತ್ಯ ಮತ್ತು ನ್ಯಾಯ ಪಕ್ಷಕ್ಕೆ ಜಯವುಂಟಾಗುವುದೆಂಬುದನ್ನು ಸಿದ್ಧಪಡಿಸಬೇಕೆಂದು ಮಹಾತ್ಮರು ನಿಶ್ಚಯಿಸಿರುತ್ತಾರೆ. ಈ ಭೂಮಿಯು ಇನ್ನು ತಮ್ಮ ವಾಸಕ್ಕೆ ಅಯೋಗ್ಯವಾಯಿತೆಂದು ಮಹಾತ್ಮರು ಅರಿತಿದ್ದಾರೆ. ಈ ಅನರ್ಥಕ್ಕೆ ಜವಾಬ್ದಾರರು ಯಾರು? ಅವರ ದೇಶೀಯರಾದ ನಾವೇ ಇದಕ್ಕೆ ಜವಾಬ್ದಾರರು! ಮಹಾತ್ಮರ ದೃಷ್ಟಿಯಿಂದ ಎಲ್ಲ ವಿಷಯಗಳನ್ನೂ ಪರಿಶೀಲಿಸದೆ ಇರತಕ್ಕವರು ನಮ್ಮಲ್ಲಿ ಅನೇಕರಿರುತ್ತಾರೆ. ಭಾರತಮಾತೆಯು ಅಖಿಲ ಪ್ರಪಂಚದ ಉದ್ಧಾರಕ್ಕೋಸ್ಕರ ಅಭಿಮಾನದಿಂದ ಒಪ್ಪಿಸಿರುವ ಈ ಮಹಾನುಭಾವರನ್ನು ಬಲಿಕೊಟ್ಟು, ಈ ದೇಶದ ಸತ್ವಹೀನವಾದ ನ್ಯಾಯವಿಧಾಯಕ ಸಭೆಯಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನವರ ಕೃಪೆಯಿಂದ ಕೆಲವು ಸ್ಥಾನಗಳನ್ನು ಪಡೆಯುವದೇ ತಮಗೆ ಹೆಚ್ಚು ಲಾಭದಾಯಕವೆಂದು ಭಾವಿಸುವವರನೇಕರಿರುವರು. ಆದರೆ—ಅಯ್ಯೋ? ಅಂಬೇಡ್ಕರರೇ ?—ಪವಿತ್ರಾತ್ಮನ ನಾಶದಿಂದ ಪ್ರಜ್ವಲಿತವಾಗುವ ಅಗ್ನಿಜ್ವಾಲೆಯಿಂದ ತಮ್ಮ ಜನಾಂಗದ ಉದ್ಧಾರವಾಗುವುದೆಂದು ಭಾವಿಸುತ್ತಿರುವರಲ್ಲಾ ! ಈ ವಿಷಯದಲ್ಲಿ ಬ್ರಿಟಿಷ್ ಜನಾಂಗವು ದೋಷರಹಿತವಾಗಿರುವುದೇ? ನಿಜವಾಗಿಯೂ ಇಲ್ಲ. ಬ್ರಿಟಿಷ್ ಮಂತ್ರಿಶ್ರೇಷ್ಠರು ಯಾರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿರುವೆವೆಂದು ನಟಿಸುತ್ತಿರುವರೋ, ಅಂಥ ಹಿಂದುಳಿದ ಪಂಗಡಗಳ ನಿಜವಾದ ಅಭಿಪ್ರಾಯವೇನೆಂಬುದನ್ನು ಅರಿತುಕೊಂಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮೂಢಭಕ್ತಿಯುಳ್ಳ ಜನರ ಮೇಲೆ ಭೇದೋಪಾಯದ ಆಟವನ್ನಾಡುತ್ತಿರುವೆವೆಂಬುದನ್ನು ಅವರು ಚೆನ್ನಾಗಿ ಬಲ್ಲರು. ಬ್ರಿಟಿಷ್ ಜನಾಂಗವು ಈಗಲಾದರೂ ಮತ್ತಷ್ಟು ಭೂತದಯಾಪಶ್ಚಾತ್ತಾಪಗಳಿಂದ ಕೂಡಿದವರಾಗಿ ಈ ಪವಿತ್ರಾತ್ಮನ ನಾಶವಾಗದಂತೆ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿರುವ ತಮ್ಮ ಪ್ರತಿನಿಧಿಗಳನ್ನು ಒತ್ತಾಯ ಪಡಿಸಬೇಕು. ಬ್ರಿಟಿಷರು ತಮ್ಮ ಹಿಂದಿನ ಸಂಧಾನಗಳನ್ನು ಬಿಡುವುದರಿಂದಲಾಗಲಿ, ಅಥವಾ ಭಾರತೀಯರು ತಮ್ಮ ಕರ್ತವ್ಯವನ್ನು ಅರಿತುಕೊಳ್ಳುವುದರಿಂದಲಾಗಲಿ ಈ ಮಹಾ ಅನರ್ಥವನ್ನು ಈಗಲೂ ತಪ್ಪಿಸಬಹುದಾಗಿದೆ. ಸಕಲ ಜಗದ್ರಕ್ಷಕನು ಎಲ್ಲಂಗೂ ಸದ್ವಿವೇಕವನ್ನು ಕೊಟ್ಟು ತನ್ನ ಪ್ರತಿಬಿಂಬವು ಈ ಭೂತಲದಲ್ಲಿ ಇನ್ನೂ ಕೆಲವು ಕಾಲ ನೆಲಸಿರುವಂತೆ ಅನುಗ್ರಹಿಸಲಿ !

ಮಹಾತ್ಮರ ಸತ್ವದ ಕಾಲವಿದು !

ಲಕ್ನೋ ಜ್ಯೋತಿಷ್ಯರ ಭವಿಷ್ಯ.

ಲಕ್ನೋವಿನ ಪ್ರಸಿದ್ಧ ಜ್ಯೋತಿಷ್ಯರಾದ ಡಾಕ್ಟರ್ ಲಕ್ಷ್ಮೀಸಹಾಯರವರು ಮಹಾತ್ಮಾ ಗಾಂಧಿಯವರ ವಿಷಯವಾಗಿ ಈ ರೀತಿ ಭವಿಷ್ಯವನ್ನು ಹೇಳಿರುತ್ತಾರೆ :—

ಮಹಾತ್ಮರ ಸತ್ವದಕಾಲವು ಇದೇ ಸೆಪ್ಟೆಂಬರ್ 8 ನೆಯ ತಾರೀಖಿನ ದಿವಸ ಪ್ರಾರಂಭವಾಗಿರುವುದು. ಈ ತಿಂಗಳ 28 ನೆಯ ತಾರೀಖಿನ ಹೊತ್ತಿಗೆ ಮಹಾತ್ಮರ ಸತ್ವವು ಇತೋಪ್ಯತಿಶಯವಾಗುವದು. ಮತ್ತು ಮುಂದೆ 1 ವಾರದೊಳಗಾಗಿ ಅದರ ಪರಿಣಾಮವು ಹಿಂದೂದೇಶದಲ್ಲಿ ಮಾತ್ರವೇ ಅಲ್ಲದೆ, ಇಡೀಪ್ರಪಂಚವನ್ನೇ ಆವರಿಸುವುದು. ಇದುವರೆಗೆ ಅವರಿಗೆ ವಿರುದ್ಧವಾಗಿ ಸಂಧಾನಮಾಡುತ್ತಿರುವ ಶಕ್ತಿಗಳೆಲ್ಲವೂ ಅತ್ಯಂತ ಶೀಘ್ರವಾಗಿ ರೂಪಾಂತರವನ್ನು ಹೊಂದಿ, ಈ ದೇಶದಲ್ಲಿ ಪ್ರಾಪ್ತವಾಗಿರುವ ಸಮರವು ಗೌರವಯುಕ್ತವಾಗಿ ಮುಕ್ತಾಯವಾಗುವುದು. ಸದ್ಯಃ ಮಹಾತ್ಮರ ಜಾತಕದಲ್ಲಿ ಹನ್ನೊಂದನೆಯ ಮನೆಯಲ್ಲಿರುವ ಶುಕ್ರನು ಉಚ್ಚಸ್ಥಾನಕ್ಕೆ ಬರುವುದೇ ಈ ಎಲ್ಲ ಅನಿರೀಕ್ಷಿತವಾದ ಬದಲಾವಣೆಗಳಿಗೆ ಕಾರಣವಾಗಿದೆ. ಇದಲ್ಲದೆ ಶನಿಯ ಪ್ರಾಬಲ್ಯವೂ ಬಹುಮಟ್ಟಿಗೆ ಕಡಿಮೆಯಾಗುವುದು.

"ವೀರಭಾರತ" ಪತ್ರಿಕೆಯ ಎಚ್ಚರಿಕೆ.

"ಭರತಖಂಡದ ಪ್ರಾಣವು ಇಂದು ಎರವಾಡಾ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದೆ! ಮಹಾತ್ಮರಿಗೆ ಏನಾದರೂ ಅಪಾಯ ಸಂಭವಿಸಿದರೆ ಅದರಿಂದ ಎಂಥ ಪ್ರಚಂಡ ಬಿರುಗಾಳಿಯು ಹುಟ್ಟಬಹುದೆಂಬುದನ್ನು ಸರ್ಕಾರದವರು ಈಗಲೇ ಅರಿತುಕೊಳ್ಳಬೇಕು."

ಆಚಾರ್ಯ ಪಿ. ಸಿ. ರಾಯರು.

"ಗಾಂಧಿಜಿಯವರು ಟೆರೆನ್ಸ್ ಮ್ಯಾಕ್‌ಸ್ವೀನಿ ಮತ್ತು ಜತೀನ್‌ದಾಸರವರಂತೆ ಸಂತೋಷದಿಂದಲೂ ದೃಢನಿಶ್ಚಯದಿಂದಲೂ ಮೃತ್ಯುವನ್ನು ಎದುರಿಸುವರು. ಏಕೆಂದರೆ ಅವರೆಂದೂ ಬೆದರಿಕೆ ತೋರುವ ಆಟಗಾರರಲ್ಲ.

ಇದನ್ನು 'ಶಿಲುಬೆಗೆ ಎರಡನೆಯ ಬಲಿ' ಯೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಅದೂ ಏಷ್ಯಾಖಂಡದಲ್ಲಿಯೇ ನಡೆಯುವುದಾಗಿದೆ.

ಹಿಂದೂ ಸಮಾಜವು ಛಿನ್ನಭಿನ್ನವಾಗುವುದನ್ನು ತಡೆಯುವದಕ್ಕಾಗಿ ಅವರು ಕೈಕೊಂಡಿರುವ ಈ ಭೀಷಣತ್ಯಾಗದಿಂದ ಭರತಖಂಡವೊಂದೇ ಅಲ್ಲ, ಇಡೀ ಪ್ರಪಂಚವೇ ನಡುಗಿಹೋಗುವುದು.

ಗಾಂಧಿಯವರ—ಬ್ರಿಟಿಷ್ ಮಂತ್ರಿಗಳ ಪತ್ರವ್ಯವಹಾರ.

ದಬ್ಬಾಳಿಕೆಯ ತೀವ್ರ ಖಂಡನೆ.

ಉಪವಾಸ ವ್ರತಕ್ಕೆ ಕೈಹಾಕುವರಂತೆ.

ಸಿಮ್ಲಾ ಸೆ. ೧೩

ಗಾಂಧಿಯವರಿಗೂ, ಸರ್ ಹೋರ್ ಮತ್ತು ಪ್ರೀಮಿಯರ್ ರವರಿಗೂ ನಡೆದ ಪತ್ರವ್ಯವಹಾರಗಳು ಈಗ ಹೊರಬಿದ್ದಿವೆ. ಒಂದು ಕಾಗದದಲ್ಲಿ ಗಾಂಧಿಯವರು ತಾವು ಸಾಯುವ ಪರ್ಯಂತರ ಉಪವಾಸ ವ್ರತವನ್ನು ಕೈಕೊಳ್ಳುವುದಾಗಿ ತಿಳಿಸಿದ್ದಾರೆ. ಗಾಂಧಿಯವರು ಮಾರ್ಚಿ ೧೧ ನೇ ತಾರೀಖಿನ ದಿವಸ ಪ್ರೀಮಿಯರ್‌ರವರಿಗೂ ಮತ್ತು ಸರ್ ಹೋರರಿಗೂ ಒಂದು ಕಾಗದವನ್ನು ಬರೆದು ಅಸ್ಪೃಶ್ಯ ವರ್ಗದವರಿಗೆ ಪ್ರತ್ಯೇಕ ಚುನಾವಣೆಯನ್ನು ಕಲ್ಪಿಸಿ ಹಿಂದೂಜನಾಂಗವನ್ನು ಛಿನ್ನಭಿನ್ನವಾಗಿ ಮಾಡುವುದಾದರೆ, ತಾವು ಸಾಯುವ ಪರ್ಯಂತರ ಉಪವಾಸವ್ರತವನ್ನು ಆಚರಿಸುವುದಾಗಿಯೂ ಕೋಮುವಾರು ತೀರ್ಮಾನದಲ್ಲಿನ ಇತರ ಅಂಶಗಳಲ್ಲಿ ದೇಹತ್ಯಾಗ ಮಾಡುವಷ್ಟು ಆಕ್ಷೇಪಣೆ ಯಾವುದಿಲ್ಲದಿದ್ದರೂ, ತಾವು ಸೆ. ೨೦ ನೇ ತಾರೀಖಿನಿಂದ ಉಪವಾಸವ್ರತವನ್ನು ಆಚರಿಸುವುದಾಗಿ ಈಗ ತಿಳಿಸುತ್ತಿದಾಗಿಯೂ, ಈ ಉಪವಾಸವ್ರತಕ್ಕೆ ಸರ್ಕಾರದವರು ಅಸ್ಪದಕೊಡದಂತೆ ಇರಬೇಕೆನ್ನುವುದಾದರೆ ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿ, ಅಸ್ಪೃಶ್ಯರಿಗೆ, ಇತರ ಪ್ರಜಾ ಸಾಮಾನ್ಯರಿಗೆ ಅನ್ವಯಿಸುವ ಚುನಾವಣೆ ಪದ್ಧತಿಯನ್ನು ಕೊಡಬೇಕೆಂದೂ, ಅದು ಎಷ್ಟೇ ವಿಶಾಲವಾಗಿದ್ದರೂ ಚಿಂತೆಯಿಲ್ಲವೆಂದೂ ಮುಂತಾಗಿ ತಿಳಿಸಿರುತ್ತಾರೆ.

ಪ್ರೀಮಿಯರ್‌ರವರ ಜವಾಬು.

ಆ ತೀರ್ಮಾನದಲ್ಲಿ ಕಂಡುಬರುವ ಪತ್ರಿನ ಹೊರತಾಗಿ ಸರ್ಕಾರದ ತೀರ್ಮಾನವನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲವೆಂದು ಪ್ರೀಮಿಯರ್‌ರವರು ಜವಾಬು ಕೊಟ್ಟಿರುತ್ತಾರೆ.

ಸರ್ಕಾರದ ದಬ್ಬಾಳಿಕೆಯ ಖಂಡನೆ

ಗಾಂಧಿಯವರ ಪತ್ರದ ವಿವರವು ಈ ಕೆಳಗೆ ಕಂಡಂತೆ ಇರುವುದು.

'ನಾನು ಉಪವಾಸವ್ರತವನ್ನು ಕೈಕೊಳ್ಳುವುದಕ್ಕೆ ಮತ್ತೊಂದು ಕಾರಣವಿದೆ. ಇದರ ವಿಷಯವಾಗಿ ನಾನು ಬಹಳ ತವಕಪಡುತ್ತಿರುವೆನು. ಅದೇನೆಂದರೆ, ಈಗ ಇಂಡಿಯಾದಲ್ಲಿ ಸರಕಾರದವರು ನಡೆಯಿಸುತ್ತಿರುವ ದಬ್ಬಾಳಿಕೆಯ ದೆಸೆಯಿಂದ ನನ್ನ ಆಶ್ರಮ ಹಾರಿಹೋಗುವ ಪ್ರಸಂಗವು ಎಂದು ಪ್ರಾಪ್ತವಾಗುವುದೋ ನಾನು ಹೇಳಲಾರೆ. ಈಗ ಅನುಸರಿಸಲ್ಪಡುತ್ತಿರುವ ಕ್ರಮಗಳು ನ್ಯಾಯವಾದ ದಾರಿಯ ಎಲ್ಲೆಯನ್ನು ಮೀರಿಯುತ್ತವೆ ಎಂದು ನನ್ನ ಮನವರಿಕೆ. ಸರ್ಕಾರದ ಹಿಂಸಾಕೃತ್ಯಗಳು ಇಡೀ ದೇಶದಲ್ಲೆಲ್ಲಾ ಅವ್ಯಾಹತವಾಗಿ ನಡೆಯುತ್ತಿವೆ. ಭಾರತೀಯ ಮತ್ತು ಆಂಗ್ಲೇಯ ಅಧಿಕಾರಿಗಳು ಈ ಕೃತ್ಯಗಳ ಸೆಳತಕ್ಕೆ ಸಿಕ್ಕಿ ಅತಿಕ್ರೂರ ಕರ್ಮಿಗಳಾಗುತ್ತಿದ್ದಾರೆ. ರಾಜದ್ರೋಹಿಗಳೆಂದು ಕರೆಯಲ್ಪಡುವ ಪ್ರಜೆಗಳಮೇಲೆಯೂ, ತಮ್ಮ ಬಾಂಧವರ ಮೇಲೆಯೂ ಹಿಂಸಾಕೃತ್ಯಗಳನ್ನು ಅನುಸರಿಸುವುದು ಬಹಳ ಅಮೋಘವಾದ ಕಾರ್ಯವೆಂದು ಸರ್ಕಾರದವರು ಬೆನ್ನುತಟ್ಟುತ್ತಿರುವುದರಿಂದ ಮೇಲಿನಿಂದ ಕೆಳಗಿನವರೆಗೂ ಅಧಿಕಾರಿಗಳು ನೀತಿ ಬಾಹಿರರಾಗುತ್ತಿರುವರು. ಈ ಅಧಿಕಾರಿಗಳು ಅಮಾನುಷ ಕೃತ್ಯಗಳನ್ನು ಆಚರಿಸುತ್ತಿರುವರು. ಪ್ರಜೆಗಳನ್ನು ತುಳಿಯುತ್ತಿದ್ದಾರೆ. ವಾಕ್ಸ್ವಾತಂತ್ರ್ಯವು ಮೂಲೆಪಾಲಾಗಿದೆ. ಕಾನೂನು ಮತ್ತು ಶಿಸ್ತಿನ ಹೆಸರಿನಲ್ಲಿ ಅನ್ಯಾಯವಾದ ರಾಕ್ಷಸೀಕೃತ್ಯಗಳನ್ನು ಆಚರಣೆಯಲ್ಲಿ ತರಲಾಗಿವೆ. ದೇಶಸೇವೆ ಮಾಡಬೇಕೆಂಬ ಉದಾತ್ತಭಾವನೆಯಿಂದ ಮುಂದೆ ಬಂದ ಮಹಿಳೆಯರು ತಮ್ಮ ಮಾನಭಂಗವಾಗುವದೆಂಬ ಭೀತಿಯಿಂದಲೂ ಅಪಮಾನಗೊಳಿಸಲ್ಪಡುವರೆಂಬಕಳವಳದಿಂದಲೂ ಕೂಡಿದ್ದಾರೆ. ರಾಷ್ಟ್ರಮಹಾಸಭೆಯು ಜನರಲ್ಲಿ ಯಾವ ಸ್ವಾತಂತ್ರ್ಯ ಭಾವನೆಯನ್ನುಂಟುಮಾಡಿದೆಯೋ ಆ ಭಾವನೆಯನ್ನು ತಾಳಿದ ಜನರನ್ನು ಸರ್ಕಾರದವರು ನಾಶಪಡಿಸಲು ಸತತವಾದ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಕೇವಲ ಸಾಮಾನ್ಯವಾದ ಕಾಯಿದೆಗಳನ್ನು ಮುರಿಯುವವರ ಮೇಲೆ ಮಾತ್ರ ದಬ್ಬಾಳಿಕೆಯು ತನ್ನ ಕೆಟ್ಟಹಾವಳಿಯನ್ನು ಮಾಡುತ್ತಿರುವುದಲ್ಲದೆ, ಹೊಸಹೊಸದಾಗಿ ಚಲಾಯಿಸಲ್ಪಟ್ಟಿರುವ ನಿರಂಕುಶವಾದ ಕಾಯಿದೆಗಳನ್ನು ಜನರು ಮುರಿಯುವಂತೆ ಪ್ರೇರೇಪಿಸುತ್ತದೆ.

"ಸರ್ಕಾರದ ಪ್ರಜಾಸತ್ತಾತ್ಮಕತೆಯ ಭಾವನೆಯೇ ಕಂಡುಬರುವುದಿಲ್ಲ. ನಾನು ಮೊನ್ನೆ ತಾನೆ ಇಂಗ್ಲೆಂಡಿಗೆ ಬಂದಿದ್ದಾಗ ನನ್ನ ಅನುಭವವು ಈ ಪ್ರಕಾರವಿದೆ. ನಿಮ್ಮ ದೇಶದಲ್ಲಿರುವ ಪ್ರಜಾಸತ್ತಾತ್ಮಕತೆಯು ಕೇವಲ ಟೊಳ್ಳು ವಸ್ತುವೇಸರಿ. ಈ ಅಭಿಪ್ರಾಯವು ನನ್ನಲ್ಲಿ ಚೆನ್ನಾಗಿ ಬೇರೂರಿದೆ. ಕೆಲವು ವ್ಯಕ್ತಿಗಳಿಂದ ಅಥವಾ ಒಂದು ಪಂಗಡದಿಂದ ಅನೇಕ ಮುಖ್ಯವಾದ ತೀರ್ಮಾನಗಳು ಆಗುತ್ತಿವೆ. ಪಾರ್ಲಿಮೆಂಟಿನ ಅನುಮತಿಗೇ ಹೋಗುವುದಿಲ್ಲ. ತಾವು ಏನು ಮಾಡುತ್ತಿರುವರೆಂಬುದನ್ನೇ ತಿಳಿಯದವರಷ್ಟು ಸರ್ಕಾರದವರು ಮುಂದಿಟ್ಟ ತೀರ್ಮಾನಕ್ಕೆ ಒಪ್ಪಿಗೆಯನ್ನು ಕೊಟ್ಟುಬಿಡುವರು. ಇದಕ್ಕೆ ಉದಾಹರಣೆಯು ಈಜಿಪ್ಟಿನ ಪ್ರಕರಣ ೧೯೧೪ ನೇ ಸಾಲಿನ ಮಹಾಯುದ್ಧ. ಹಿಂದೂಸ್ಥಾನವೂ ಇದೇ ಪರಿಸ್ಥಿತಿಗೊಳಗಾಗಿರುವುದು. ಪ್ರಜಾಸತ್ತಾತ್ಮಕತೆಯೆಂದು ಹೇಳಿಕೊಳ್ಳುತ್ತಾ, ಒಬ್ಬ ವ್ಯಕ್ತಿಯು ನಿರಂಕುಶ ಅಧಿಕಾರಗಳನ್ನು ಹೊಂದಿ ೩೦೦ ಮಿಲಿಯನ್ ಜನರ ಭವಿಷ್ಯವನ್ನು ಕೈಯಲ್ಲಿ ಹಿಡಿದು, ಆ ತಮ್ಮ ಅಧಿಕಾರವನ್ನು ಕೇವಲ ಕೆಲವು ದುಷ್ಟ ಪಂಗಡಗಳ ಸಹಾಯದೊಡನೆ, ಬಲಾತ್ಕಾರದಿಂದ ಹೊರಿಸುವುದೆಂದರೆ, ಅದು ಪ್ರಜಾ ಸತ್ತಾತ್ಮಕತೆಯ ಬುಡಕ್ಕೆ ಕೊಡಲಿ ಹಾಕಿದಂತಾಗುವದೆಂದು ನನ್ನ ಮನವರಿಕೆ. ಅಂಥ ಶಕ್ತಿಯ ಮೇಲೆ ನಾನು ಮೊದಲಿನಿಂದಲೂ ಬಂಡಾಯಗಾರನಾಗಿದ್ದೇನೆ. ಎರಡು ದೇಶಗಳ ಪ್ರಜೆಗಳಲ್ಲಿ ಈಗಾಗಲೇ ಸೌಹಾರ್ದ ಭಾವನೆಯು ಕುಂದಿಹೋಗಿ ಮನಸ್ತಾಪಗಳುಂಟಾಗಿರುವಾಗ, ಈ ದಬ್ಬಾಳಿಕೆಯ ಕ್ರಮಗಳನ್ನು ಮುಂದುವರಿಸಿದ್ದೇ ಆದರೆ ಮೇಲಿನದನ್ನು ನಿವಾರಿಸುವ ಬದಲಾಗಿ, ಅವು ಪರಸ್ಪರ ಸಂಬಂಧವನ್ನು ಮೂಲೋತ್ಪಾಟನ ಮಾಡುವುದರಲ್ಲಿ ಸಂಶಯವೇ ಇರುವುದಿಲ್ಲ. ನನ್ನ ಜವಾಬ್ದಾರಿಯ ಮಟ್ಟಿಗೆ, ಕಾನೂನುಭಂಗದ ಚಳುವಳಿಯನ್ನು ನಿಲ್ಲಿಸಿದ ಮಾತ್ರದಿಂದಲೇ ಅದನ್ನು ನಿವಾರಿಸಲು, ತಡೆಗಟ್ಟಲು ಸಾಧ್ಯವಿಲ್ಲವೆಂದು ಹೇಳುವೆನು. ನನಗೆ ಅದು ಮುಖ್ಯ ಧ್ಯೇಯವಾಗಿದೆ. ಹೆಗ್ಗುರುತಾಗಿದೆ. ನಾನು ನನ್ನ ಸ್ವಭಾವಕ್ಕನುಗುಣವಾಗಿ ಪ್ರಜಾಸತ್ತಾತ್ಮಕತೆಯ ಒಬ್ಬ ವ್ಯಕ್ತಿಯೆಂದು ಭಾವಿಸುವೆನು. ತನ್ನ ಅಭಿಪ್ರಾಯವನ್ನು ಬಲೋತ್ಕಾರದಿಂದ ಪಶುಬಲದಿಂದ ಇನ್ನೊಬ್ಬರ ಮೇಲೆ ಹೊರಿಸುವುದು ಪ್ರಜಾ ಸತ್ತಾತ್ಮಕತೆಗೆ ಅತ್ಯಂತ ವಿರುದ್ಧವಾದ ಕಾರ್ಯವೆಂದು ನನ್ನ ತಿಳುವಳಿಕೆ. ಎಲ್ಲೆಲ್ಲಿ ಸತ್ಯಾಗ್ರಹವು ಅವಶ್ಯಕವೋ, ನ್ಯಾಯವೋ, ಅದನ್ನು ಅಲ್ಲೆಲ್ಲಾ ಪ್ರಯೋಗಿಸುವೆನು. ಪಶುಬಲಕ್ಕಿಂತ ಸಫಲೋತ್ತಮವಾದ ಮದ್ದೆಂದು ತೀರ್ಮಾನಿಸಲಾಗಿದೆ. ಅದು ಕಷ್ಟ ಸಹಿಷ್ಣುತೆಯ ಮಾರ್ಗ. ಇಂಥ ಸಂದರ್ಭದಲ್ಲಿ ನಿಜವಾದ ಸತ್ಯಾಗ್ರಹಿಯು ಉಪವಾಸ ವ್ರತಕ್ಕೆ ಕೈಹಾಕುವುದರ ಮೂಲಕ ಆತ್ಮಾರ್ಪಣ ಮಾಡುವುದು ಸ್ವತಃಸಿದ್ಧವಾದ ಸತ್ಯದ ತಿರುಳು. ಅಂಥ ವೇಳೆಯು, ನನಗೆ ಇನ್ನೂ ಪ್ರಾಪ್ತವಾಗಿಲ್ಲ. ಅಂಥ ಪ್ರಯತ್ನಕ್ಕೆ ನನ್ನ ಆತ್ಮದಿಂದ ಇನ್ನೂ ಪ್ರೇರೇಪಣೆಯಾಗಿಲ್ಲ. ಆದರೆ ಹೊರಗಡೆ ನಡೆಯುತ್ತಿರುವ ವಿಷಮ ಸನ್ನಿವೇಶಗಳು ಬಹಳ ಕಾಲದವರಕ್ಕೆ ಆಸ್ಪದ ಕೊಡುತ್ತಿವೆ. ಇವು ನನ್ನನ್ನು ಅಲ್ಲಕಲ್ಲೋಲ ಮಾಡಬಲ್ಲವು.

"ಅಸ್ಪೃಶ್ಯರ ವಿಷಯವಾಗಿ ನಾನು ಬರೆದ ಕಾಗದದಲ್ಲಿ ನಾನು ಉಪವಾಸ ವ್ರತವನ್ನು ಕೈಕೊಳ್ಳುವ ಸೂಚನೆಯನ್ನು ಕೊಟ್ಟಿದ್ದೆನು. ಆದರೆ ಅಂಥ ಕೃತ್ಯಕ್ಕೆ ಮತ್ತೊಂದು ಸನ್ನಿವೇಶವು ಪ್ರಾಪ್ತವಾಗುವ ಸಂಭವವುಂಟೆಂದು ಮತ್ತೊಮ್ಮೆ ನಾನು ತಿಳಿಸದೆ ಇರಲಾರೆನು.

"ನಾನು ನಿಮ್ಮೊಡನೆ ನಡೆಸಿರುವ ಪತ್ರವ್ಯವಹಾರಗಳನ್ನು ಬಹಳ ಗುಟ್ಟಾಗಿ ಇಟ್ಟಿರುವೆನೆಂದು ನಾನು ನಿಮಗೆ ಭರವಸೆ ಕೊಡಬಲ್ಲೆ. ಆದರೆ ನನ್ನೊಡನೆ ಇರುವ ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತು ಮಿ|| ಮಹದೇವ ದೇಶಾಯಿಯವರಿಗೆ ಮಾತ್ರ ಇದು ಗೊತ್ತುಂಟು. ಈ ಪತ್ರವ್ಯವಹಾರವನ್ನು ಯಾವ ಪ್ರಕಾರದಿಂದಲಾದರೂ ಉಪಯೋಗಿಸಿಕೊಳ್ಳಬಹುದೆಂದು ನೀವು ಹೇಳಿದರೆ ಆ ಪ್ರಕಾರ ನಾನು ಮಾಡಲಿರುವೆನು."

ನಿಮ್ಮ ವಿಶ್ವಾಸ ಪಾತ್ರ,
(ರುಜು) ಎಂ. ಕೆ. ಗಾಂಧಿ.

ಗಾಂಧಿಯವರಿಗೆ ಸರ್ ಹೋರರ ಜವಾಬಿನ ವಿವರ.

ಲಂಡನ್ ಏ. ೧೩

ಪ್ರಿಯ ಗಾಂಧಿಯವರೇ—ತಾವು 11ನೆಯ ತಾರೀಖಿನಲ್ಲಿ ಬರೆದಕಾಗದಕ್ಕೆ ನಾನು ಈಗ ಜವಾಬು ಕೊಡುತ್ತಿರುವೆನು. ಅಸ್ಪೃಶ್ಯವರ್ಗದವರಿಗೆ ಪ್ರತ್ಯೇಕ ಚುನಾವಣೆಯನ್ನು ಕೊಡುವ ವಿಷಯದಲ್ಲಿ ನೀವು ಯಾವ ಪ್ರಕಾರ ಕಳವಳಗೊಂಡಿದ್ದೀರಿ ಎಂಬ ಅಂಶವನ್ನು ನಾನು ಚೆನ್ನಾಗಿ ಅರಿತಿರುವೆನು. ಆಯಾ ಅಂಶಗಳ ಯೋಗ್ಯತೆಯಮೇಲೆ, ಅವಶ್ಯಕವಾದ ತೀರ್ಮಾನವನ್ನುಮಾತ್ರ ನಾವು ಕೊಡಲುದ್ದೇಶಿಸಿರುವೆವು. ನಿಮಗೆ ಗೊತ್ತಿರುವಂತೆ ಲಾರ್ಡ್ ಲೋಥಿಯನ್ ಕಮಿಟಿಯವರು ಇನ್ನೂ ತಮ್ಮ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿಲ್ಲ. ಲೋಥಿಯನ್ ಕಮಿಟಿಯವರಿಂದ ಬಂದ ತೀರ್ಮಾನಗಳ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದರೆ, ಇನ್ನೂ ಕೆಲವು ವಾರಗಳಾಗಬಹುದು. ನಮಗೆ ಅವರ ವರದಿಯು ಬಂದಮೇಲೆ ನಾವು ಬಹಳ ತೀವ್ರಾಸಕ್ತಿಯಿಂದ ಪರಿಶೀಲಿಸಬೇಕಾಗುವುದು. ಲೋಥಿಯನ್ ಕಮಿಟಿಯವರು ಹೊರಪಡಿಸಿದ ಅಭಿಪ್ರಾಯಗಳ ಜೊತೆಗೆ, ನೀವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ಮತ್ತು ನಿಮ್ಮಂತೆ ಭಾವಿಸುವವರ ಅಭಿಪ್ರಾಯಗಳನ್ನೂ ನಾವು ಚೆನ್ನಾಗಿ ಪರ್ಯಾಲೋಚಿಸಿ, ತರುವಾಯ ಯಾವುದಾದರೊಂದು ತೀರ್ಮಾನಕ್ಕೆ ಬರುವೆವು. ನೀವು ನನ್ನ ಸ್ಥಾನದಲ್ಲಿದ್ದರೆ, ನಾವು ಯಾವ ದಾರಿಯನ್ನು ಅನುಸರಿಸಬೇಕೆಂದಿರುವೆವೋ ಅದನ್ನೇ ನೀವೂ ಸಹ ಅನುಸರಿಸುತ್ತಿದ್ದಿರೆಂದು ನಾನು ತಿಳಿಯುವೆನು. ಕಮಿಟಿಯ ವರದಿಯನ್ನು ನಿರೀಕ್ಷಿಸುತ್ತಿದ್ದಿರಿ. ತರುವಾಯ ದೀರ್ಘವಾಗಿ ವರದಿಯನ್ನು ಪರಿಶೀಲಿಸುತ್ತಿದ್ದಿರಿ. ಆಮೇಲೆ ತೀರ್ಮಾನಕ್ಕೆ ಬರುವುದರ ಮುಂಚಿತವಾಗಿ ಎರಡು ಪಕ್ಷದವರೂ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿದ್ದಿರಿ. ಇದಕ್ಕಿಂತಲೂ ಬೇರೆ ನಾನು ಹೇಳಲಾರೆ. ಆ ಪ್ರಕಾರ ಹೇಳಬೇಕೆಂದು ನೀವು ನಿರೀಕ್ಷಿಸುವುದಿಲ್ಲವಾಗಿ ಭಾವಿಸುವೆನು.

"ಇನ್ನು ಆರ್ಡಿನೆನ್ಸುಗಳ ವಿಷಯ? ಈ ಬಗ್ಗೆ ಈಗಾಗಲೇ ಬಹಿರಂಗವಾಗಿಯೂ ಗುಟ್ಟಾಗಿಯೂ ಹೇಳಿರುವುದನ್ನೇ ಪುನಃ ಹೇಳಬೇಕಾಗಿದೆ. ಸುವ್ಯವಸ್ಥಿತವಾದ ಸರ್ಕಾರದ ತಳಹದಿಗೆ ಅಪಾಯವನ್ನು ಉದ್ದಿಷ್ಟಪೂರ್ವಕವಾಗಿ ತಂದೊಡ್ಡಬೇಕೆಂದು ಪ್ರಯತ್ನಿಸಿದಾಗ ಆರ್ಡಿನೆನ್ಸುಗಳನ್ನು ಚಲಾಯಿಸಬೇಕಾಯಿತು. ಇಂಡಿಯಾ ಸರ್ಕಾರದವರೂ ಸ್ಥಳೀಯ ಸರ್ಕಾರದವರೂ ತಮಗೆ ಒಪ್ಪಿಸಲಾಗಿರುವ ವಿಶಾಲವಾದ ಅಧಿಕಾರಗಳನ್ನು ದುರುಪಯೋಗಪಡಿಸುತ್ತಿಲ್ಲವೆಂದು ನನ್ನ ಮನಸ್ಸಿಗೆ ಚೆನ್ನಾಗಿ ನಾಟಿದೆ. ಪ್ರತಿಕ್ರಿಯಾವಾದ

ಒಳದೇಶದ ವೃತ್ತಾಂತಗಳು

ಈ ಸಾರಿ ಬೆಂಗಳೂರಿನ ಹಿಂದೂ ಮಹಾಸಭೆಯವರ ಅಧ್ಯಕ್ಷತೆಯ ಕೆಳಗೆ ಶ್ರೀ ಗಣಪತಿಯ ಉತ್ಸವವು ಅತ್ಯಂತ ವೈಭವದಿಂದ ನೆರವೇರಿತು.

ನಮ್ಮ ಸಂಸ್ಥಾನದ ದಿವಾನ್ ಸಾಹೇಬರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಇದೇ ಸೆಪ್ಟೆಂಬರ್ 15 ನೇ ತಾರೀಖಿನ ದಿವಸ ಮಿತಪರಿವಾರದೊಡನೆ ಸಿಮ್ಲಾಕ್ಕೆ ಪ್ರಯಾಣ ಬೆಳೆಸಿದರು.

ಸಂಸ್ಥಾನದಲ್ಲಿ ಸಕ್ಕರೆಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅವಶ್ಯಕವಾದ ಸಾಧನಗಳನ್ನು ಒದಗಿಸಿಕೊಂಡು ಬರಲು ಕಾನ್‌ಪುರಕ್ಕೆ ಹೋಗಿದ್ದ ಮ|| ರಾ|| ನವರತ್ನರಾಮರಾಯರು ಕಳೆದವಾರ ರಾಜಧಾನಿಗೆ ಆಗಮಿಸಿದರು.

ಬೆಂಗಳೂರು ಕಂಟೋನ್ಮೆಂಟಿನ ಕೋದಂಡರಾಮಶೆಟ್ಟಿಯೆಂಬ ಸ್ವಯಂಸೇವಕನಿಗೆ ಸುಬ್ರಹ್ಮಣ್ಯಸ್ವಾಮಿಯ ದೇವಾಲಯದಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಿದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು 3 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

ಮೈಸೂರುದೇಶದ ಶ್ರೀಮತಿ ಕಮಲಮ್ಮ ಸುಬ್ಬಮ್ಮ ಎಂಬಿಬ್ಬರು ಸ್ತ್ರೀಯರು 31-8-32 ರಲ್ಲಿ ಶಿರಸಿ ತಾ|| ತಿಗಣೆಗ್ರಾಮದ ಗವಿಗಪ್ಪನವರ ಮನೆಯಮುಂದೆ ಸತ್ಯಾಗ್ರಹವನ್ನಾಚರಿಸಿದರೆಂಬ ಕಾರಣದಮೇಲೆ 6 ತಿಂಗಳ ಕಠಿಣಸಜೆಗೆ ಗುರಿಯಾದರು. ಲಂಡನ್ನಿಂದ ಬಂದಿರುವ ಇಂಡಿಯಾಲೀಗಿನ ಮೆಂಬರರಲ್ಲೊಬ್ಬರಾದ ಮಿ|| ಎಲ್. ಡಬ್ಲ್ಯು. ಮ್ಯಾಟರ್ಸ್‌ರವರು ಇವರನ್ನು ಶಿರಸಿ ಲಾಕಪ್ಪಿನಲ್ಲಿ ಕಂಡು ಸಂಭಾಷಿಸಿದರು.

ಮಹಾತ್ಮಾ ಗಾಂಧಿಯವರು ನಿಶ್ಚಯಿಸಿರುವ ಘೋರ ಉಪವಾಸವ್ರತದ ಸಂಬಂಧವಾಗಿ ಜನರಲ್ಲಿ ಅವಶ್ಯಕವಾದ ತಿಳುವಳಿಕೆಯನ್ನುಂಟುಮಾಡಿಕೊಡುವುದಕ್ಕೂ ಹಾಗೂ ಸ್ಪೃಶ್ಯಾಸ್ಪೃಶ್ಯರಲ್ಲಿರುವ ಭೇದಭಾವನೆಗಳನ್ನು ತೊಲಗಿಸುವುದಕ್ಕೂ ಕಳೆದ 3-4 ದಿವಸಗಳಿಂದಲೂ ರಾಜಧಾನಿಯಲ್ಲಿ ಪ್ರತಿನಿತ್ಯವೂ ಅನೇಕ ಬಹಿರಂಗ ಉಪನ್ಯಾಸಗಳು ನಡೆಯುತ್ತಿರುವುವು. ಬೆಂಗಳೂರಿನಲ್ಲಿಯೂ ಇದೇ ರೀತಿ ಕಾರ್ಯಕ್ರಮಗಳು ನಡೆಯುತ್ತಿರುವುವೆಂದು ತಿಳಿದುಬಂದಿದೆ.

ಸತ್ಯಾಗ್ರಹಸಮರವಾರ್ತೆ.

ನೆಲ್ಲೂರುಪೇಟೆಯಬಳಿ ಒಂದುನೂರಕ್ಕೆ ಮೇಲ್ಪಟ್ಟು ಜನರು ಕಾಯಿದೆಗೆ ವಿರೋಧವಾಗಿ ಅನೇಕ ಗಾಡಿಗಳಲ್ಲಿ ಉಪ್ಪನ್ನು ಸಾಗಿಸಿಕೊಂಡು ಹೋಗುತ್ತಿರಲು ಪೋಲೀಸರು ಎಲ್ಲರನ್ನೂ ದಸ್ತಗಿರಿಮಾಡಿದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 11 ಜನರಿಗೆ 25 ರೂ. ಗಳಿಂದ 125 ರೂ. ಗಳವರೆಗೆ ಜುಲ್ಮಾನೆಯನ್ನು ವಿಧಿಸಿದ್ದಲ್ಲದೆ ಉಪ್ಪನ್ನು ಸಾಗಿಸುತ್ತಿದ್ದ 5 ಗಾಡಿಗಳನ್ನೂ ಮತ್ತು 10 ಎತ್ತುಗಳನ್ನೂ ಸರ್ಕಾರಕ್ಕೆ ಸೇರಿಸಿಕೊಳ್ಳುವಂತೆ ಅಪ್ಪಣೆಮಾಡಿದರು.

ಅಲಹಾಬಾದಿಗೆ 20 ಮೈಲಿ ದೂರದಲ್ಲಿರುವ ಭವಾರಿ ಎಂಬಲ್ಲಿ ಸಂತೆಯ ದಿವಸ ಕಾಂಗ್ರೆಸ್ಸಿನವರು ಬಹಿರಂಗ ಮೆರವಣಿಗೆಯನ್ನು ಸೇರಿಸಿದ್ದರು. ಪೋಲೀಸರು 20 ಜನರನ್ನು ದಸ್ತಗಿರಿ ಮಾಡಿದರು.

ಸೆಪ್ಟೆಂಬರ್ 14 ನೆಯ ತಾರೀಖಿನ ದಿವಸ ಕಲ್ಕತ್ತೆಯ ಪೋಲೀಸರು ಕಾಂಗ್ರೆಸ್ ಹಸ್ತಪತ್ರಿಕೆಗಳ ಸಲುವಾಗಿ ನಾಲ್ಕು ಮನೆಗಳನ್ನು ಶೋಧನಮಾಡಿ 4 ಜನ ತರುಣರನ್ನು ದಸ್ತಗಿರಿಮಾಡಿದರು.

ಸೆಪ್ಟೆಂಬರ್ 13 ನೆಯ ತಾರೀಖಿನ ದಿವಸ ಮುಂಬಯಿಯ ದಾವಾಬಜಾರಿನಲ್ಲಿ ಸ್ಪೆಷಲ್ ಪವರ್ಸ್‌ಆರ್ಡಿನೆನ್ಸಿನ ಪ್ರಕಾರ ಇಬ್ಬರು ದಸ್ತಗಿರಿಮಾಡಲ್ಪಟ್ಟರು.

ಸೆಪ್ಟೆಂಬರ್ 14 ನೆಯ ತಾರೀಖಿನ ದಿವಸ ಕಲ್ಕತ್ತೆಯಲ್ಲಿ 'ಜತೀಂದ್ರನಾಥ' ನ ದಿನದ ಸಂಬಂಧವಾಗಿ ಬಹಿರಂಗ ಮೆರವಣಿಗೆಯನ್ನು ಹೊರಡಿಸಿ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚಿದರೆಂಬ ಕಾರಣದಮೇಲೆ 20 ಜನ ವಿದ್ಯಾರ್ಥಿಗಳೂ 10 ಜನ ವಿದ್ಯಾರ್ಥಿನಿಯರೂ ದಸ್ತಗಿರಿಮಾಡಲ್ಪಟ್ಟರು. ಇದೇ ಸಂಬಂಧವಾಗಿ ಕ್ಲೈವ್ ಸ್ಟ್ರೀಟಿನಲ್ಲಿ ಬಹಿರಂಗ ಮೆರವಣಿಗೆಯನ್ನು ಹೊರಡಿಸಿದ ಶ್ರೀಮತಿ ರಾಧಾರಾಣಿದೇವಿ ಮತ್ತು 7 ಜನ ವಿಧವೆಯರಿಗೆ ನಾಲ್ಕುನಾಲ್ಕು ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಸೆಪ್ಟೆಂಬರ್ 14 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ದಾವಾಬಜಾರಿನಲ್ಲಿ ನರೋತ್ತಮ ಗಿರಿಧರ್‌ರವರ ಅಂಗಡಿಯ ಮುಂದೆ ಪಿಕೆಟಿಂಗ್‌ಮಾಡುತ್ತಿದ್ದ 4 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಕಲ್ಕತ್ತೆಯಲ್ಲಿ ಪೋಲೀಸ್‌ಕೋರ್ಟಿನಮೇಲೆ ರಾಷ್ಟ್ರೀಯಧ್ವಜವನ್ನು ಏರಿಸಲು ಪ್ರಯತ್ನಮಾಡಿದರೆಂಬ ಕಾರಣದಮೇಲೆ ಇಬ್ಬರು ಸ್ವಯಂಸೇವಕರು 4 ತಿಂಗಳ ಕಠಿಣಸಜೆಗೆ ಗುರಿಯಾದರು.

ಸೂರತ್ತಿನ 55 ನೇ ಸರ್ವಾಧಿಕಾರಿಗಳಾದ ಶ್ರೀ|| ರಾಂಛೋಡಜಿ ನಾಥುಬಾಯಿ ದೇಸಾಯರು ಮತ್ತು ಒಬ್ಬ ಸ್ವಯಂಸೇವಕನು "ಮಾರ್ಚ್‌ದಿನ" ದ ಆಚರಣೆಯ ಸಂಬಂಧದಲ್ಲಿ ಬಹಿರಂಗ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟರು

ಸೆಪ್ಟೆಂಬರ್ 7 ನೇ ತಾರೀಖಿನ ದಿವಸ ಮುಂಬಯಿಯ ನ್ಯೂಸಿಂಚ್ ಬಂದರ್ ರಸ್ತೆಯಲ್ಲಿರುವ ಪ್ರೇಮಜಿ ರಾಮಜಿಯವರ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದ 3 ಜನ ಸ್ವಯಂಸೇವಕರಿಗೆ ಆರನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ನಾಲ್ಕುನಾಲ್ಕು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ವರ್ತಮಾನಸಂಗ್ರಹ

ಪಂಡಿತ ಮದನಮೋಹನ ಮಾಳವೀಯರವರು ಮಹಾತ್ಮರ ಉಪವಾಸವ್ರತದ ದೆಸೆಯಿಂದ ಉಂಟಾಗುವ ವಿಷಮ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ಪರಿಹರಿಸಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕಾಗಿ ಈ ದಿವಸ ಮುಂಬಯಿಯಲ್ಲಿ ಎಲ್ಲ ಪಂಗಡದ ಪ್ರತಿನಿಧಿಗಳ ಸಭೆಯನ್ನು ಸೇರಿಸುವರು.

ಡಾಕ್ಟರ್ ಬಿ. ಎಸ್. ಮೂಂಜೆಯವರು ಮಹಾತ್ಮರ ಉಪವಾಸವ್ರತದ ಬಗ್ಗೆ ಹೊರಡಿಸಿರುವ ಒಂದು ಹೇಳಿಕೆಯಲ್ಲಿ ಹಿಂದೂಗಳೆಲ್ಲರೂ ಏಕವಾಕ್ಯದಿಂದ ಅಸ್ಪೃಶ್ಯತೆಯನ್ನು ತೊಲಗಿಸಬೇಕೆಂದೂ, ಸೆ. 20 ನೇ ತಾರೀಖಿನ ದಿವಸ ಪ್ರತಿಯೊಂದು ಊರಿನಲ್ಲಿಯೂ ಸತ್ಯನಾರಾಯಣವ್ರತವನ್ನು ಆಚರಿಸಬೇಕೆಂದೂ ಪ್ರಾರ್ಥಿಸಿದ್ದಾರೆ.

ನೈಜಾಂ ಸರಕಾರದವರು ಪೂಣೆಯ ಭಂಡಾರಕರ್ ಸಂಸ್ಥೆಗೆ 25000 ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿರುತ್ತಾರೆ. ಹಾಗೂ ಸದರಿ ಸಂಸ್ಥೆಯವರು ಮಹಾಭಾರತದ ವಿಷಯವಾಗಿ ನಡೆಯಿಸುತ್ತಿರುವ ಶೋಧದ ಬಗ್ಗೆ ವರ್ಷ 1 ಕ್ಕೆ 1000 ರೂಪಾಯಿಗಳಂತೆ ಹತ್ತು ವರ್ಷಗಳವರೆಗೆ ಸಹಾಯ ಮಾಡುವುದಾಗಿ ನಿರ್ಧರಿಸಿರುತ್ತಾರೆ.

ಇದೇ ಸೆಪ್ಟೆಂಬರ್ 14 ನೆಯ ತಾರೀಖಿನ ದಿವಸ ಲಂಡನ್ನಿನ 'ಭಾರತಮಿತ್ರರ ಸಭೆ' ಯವರು ಮಹಾತ್ಮರ ಜನ್ಮದಿನವಾದ ಅಕ್ಟೋಬರ್ 2 ನೇ ತಾರೀಖಿನ ದಿವಸ ಇಡೀ ಪ್ರಪಂಚದಲ್ಲಿರುವ ಭಾರತಮಿತ್ರರೆಲ್ಲರೂ ಉಪವಾಸವ್ರತವನ್ನಾಚರಿಸಬೇಕೆಂದೂ, ಆ ದಿವಸದ ಆಹಾರಕ್ಕೆ ಖರ್ಚಾಗುವ ಹಣವನ್ನೆಲ್ಲಾ ಒಂದು ನಿಧಿಯನ್ನಾಗಿ ಸೇರಿಸಿ ಮಹಾತ್ಮರ ಇಷ್ಟಾನುಸಾರವಾಗಿ ಅದನ್ನು ಉಪಯೋಗಿಸಬೇಕೆಂದೂ ಪ್ರಕಟಿಸಿರುತ್ತಾರೆ.

ರತ್ನಗಿರಿಯ ಕಾರಾಗೃಹದಲ್ಲಿ ಶಿಕ್ಷೆಯನ್ನನುಭವಿಸುತ್ತಿರುವ ಸೇನಾಪತಿಬಾಪಟರವರು, "ತಿಲಕ" ಪತ್ರಿಕೆಯ ಮಾಜಿ ಸಂಪಾದಕರಾದ ಮಿ|| ಆರ್. ಪಿ. ಅಗ್ನಿಹೋತ್ರಿಯವರು, ಹಾಗೂ ಲಂಡನ್ನಿನ ವಿಶ್ವವಿದ್ಯಾನಿಲಯದ ಶ್ರೀ ಮುಖರ್ಜಿ ಎಂಬ ವಿದ್ಯಾರ್ಥಿ ಈ ಮೂರು ಜನರು ಮಹಾತ್ಮರಂತೆ ಸೆಪ್ಟೆಂಬರ್ 20 ನೇ ತಾರೀಖಿನ ದಿವಸದಿಂದ ಸಾಯುವವರೆಗೂ ಅಥವಾ ಬ್ರಿಟಿಷ್ ಸರ್ಕಾರದವರು ತಮ್ಮ ತತ್ವವನ್ನು ಬದಲಾಯಿಸುವವರೆಗೂ ಉಪವಾಸವ್ರತವನ್ನಾಚರಿಸುವೆವೆಂದು ತೀರ್ಮಾನಿಸಿರುತ್ತಾರೆ.

ಮಹಾತ್ಮರ ಉಪವಾಸವ್ರತದ ವರ್ತಮಾನವನ್ನು ಕೇಳಿದ ಕೂಡಲೇ ಮ್ಯಾಂಚೆಸ್ಟರಿನಲ್ಲಿದ್ದ ಮಿ|| ಸಿ. ಎಫ್. ಆಂಡ್ರೂಸ್‌ರವರು ತಕ್ಷಣವೇ ಲಂಡನ್ನಿಗೆ ಬಂದು ಪ್ರಮುಖ ಅಧಿಕಾರಿಗಳೊಡನೆ ಮಾತುಕಥೆಗಳನ್ನಾಡುತ್ತಿರುವರು. ಮತ್ತು ಅವರು ಇಷ್ಟರಲ್ಲಿಯೇ ಇಂಡಿಯಾದೇಶಕ್ಕೆ ಹೊರಟು ಬರುವವರಾಗಿರುವರು. ಈ ಸಂಬಂಧವಾಗಿ ಮಿ|| ಆಂಡ್ರೂಸರವರು ಮಹಾತ್ಮರಿಗೆ ಬರೆದಪತ್ರಕ್ಕೆ ಮಹಾತ್ಮರು ತಾವು ಉಪವಾಸವ್ರತವನ್ನು ಕೈಕೊಂಡಿರುವುದು ದೈವಾಜ್ಞೆಯೆಂದೂ, ಅವರು ಭರತಖಂಡಕ್ಕೆ ಬರುವದು ಅಸ್ವೀಕೃತವೆಂದೂ ಜವಾಬು ಕೊಟ್ಟಿರುತ್ತಾರೆ.

ಈ ಪತ್ರಿಕೆಯು ಬೇರೊಂದೆಡೆಯಲ್ಲಿ ಪ್ರಕಟಿಸಿರುವಂತೆ ಸರಕಾರದವರು ಕೆಲವು ನಿರ್ಬಂಧಗಳನ್ನು ಕಲ್ಪಿಸಿ ಮಹಾತ್ಮರನ್ನು ಬಿಡುಗಡೆಮಾಡಬೇಕೆಂದಿರುವರು. ಆದರೆ ಮಹಾತ್ಮರು ಈ ನಿರ್ಬಂಧದ ಬಿಡುಗಡೆಗೆ ಎಂದಿಗೂ ಒಪ್ಪಲಾರರು. ಸ್ವರಾಜ್ಯವನ್ನು ಸಂಪಾದಿಸುವವರೆಗೆ ಸಾಬರ್ಮತಿ ಆಶ್ರಮವನ್ನು ಪ್ರವೇಶಿಸುವುದಿಲ್ಲವೆಂದು ದಂಡಿಯಾತ್ರೆಗೆ ಹೊರಟಾಗಲೇ ಪ್ರತಿಜ್ಞೆಮಾಡಿರುವುದರಿಂದ ಸರ್ಕಾರದವರು ಅವರನ್ನು ಸಾಬರ್ಮತಿಗೆ ಕಳುಹಿಸುವಂತೆಯೂ ಇಲ್ಲ. ಆದ್ದರಿಂದ ಸರಕಾರದವರು ಈ ಸಂಬಂಧದಲ್ಲಿ ನಿಮ್ಮನ್ನು ಎಲ್ಲಿಗೆ ಕಳುಹಿಸಿದರೆ ಅನುಕೂಲವೆಂದು ಮಹಾತ್ಮರನ್ನೇ ಕೇಳಿರುವರಂತೆ!

ಭರತಖಂಡದ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿರುವ ಇಂಡಿಯಾಲೀಗಿನ ಮೆಂಬರರು ಗಾಂಧಿಯವರೇ ಮೊದಲಾದವರನ್ನೆಲ್ಲಾ ಕೂಡಲೇ ಬಿಡುಗಡೆಮಾಡಬೇಕೆಂದೂ, ಮುಂದಿನ ಕಾರ್ಯಕ್ರಮಗಳ ಬಗ್ಗೆ ವ್ಯವಹಾರವನ್ನು ನಡೆಯಿಸಲು ಅವರಿಗೆ ಸಂಪೂರ್ಣಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಹಿಂದೂಸ್ಥಾನದಲ್ಲಿರುವ ಎಲ್ಲ ಜನಾಂಗದವರೂ ಗಾಂಧಿಯವರನ್ನೇ ತಮ್ಮ ಮುಂದಾಳುಗಳೆಂದು ಭಾವಿಸಿರುವರೆಂದೂ, ಗಾಂಧಿಯವರು ಮೃತರಾದರೆ ಶಾಂತಿಯಮೂರ್ತಿಯು ಮಾಯವಾಗುವದಲ್ಲದೆ, ಬ್ರಿಟಿಷರು ತಮ್ಮ ಮಿತ್ರರನ್ನು ಕಳೆದುಕೊಳ್ಳುವರೆಂದೂ, ಸ್ಟೇಟ್‌ಸೆಕ್ರೆಟರಿಯವರಿಗೂ, ಲಾರ್ಡ್ ಶಾಂಕೆಯವರಿಗೂ ತಂತೀವರ್ತಮಾನಗಳನ್ನು ಕಳುಹಿಸಿರುತ್ತಾರೆ.

ಮಹಾತ್ಮರ ಘೋರ ಉಪವಾಸವ್ರತ.

ಚಿತ್ತೂರಿನ ಮಿ|| ದೊರೆಸಾಮಿ ಅಯ್ಯಂಗಾರ್‍ರ ಹೇಳಿಕೆ.

ಸತ್ಯದ ತತ್ವಗಳಲ್ಲಿ ತಮಗಿದ್ದ ದೃಢವಾದ ನಂಬಿಕೆಯನ್ನು ಉಳಿಸಿಕೊಳ್ಳುವುದಕ್ಕಾಗಿ—ಶಿಲುಬೆಯ ಮೇಲೆ ಚೆಲ್ಲಿದ ಯೇಸುಕ್ರಿಸ್ತನ ರಕ್ತವು. ಪ್ರಹ್ಲಾದ ಮತ್ತು ಹರಿಶ್ಚಂದ್ರಾದಿಗಳು ಅನುಭವಿಸಿದ ಕಷ್ಟಪರಂಪರೆಗಳ ನೆನಪು. ಇವೆಲ್ಲವೂ ನಮ್ಮ ನವೀನ ಜನಾಂಗದ ಸ್ಮೃತಿಪಥದಿಂದ ಅಳಿಸಿ ಹೋಗುತ್ತಿರುವುವೇ? ದೊಡ್ಡದೊಡ್ಡ ಆತ್ಮರು ಈ ಭವಬಂಧನವನ್ನು ಕಿತ್ತೊಗೆಯುವುದರಿಂದ ಸತ್ಯ ಮತ್ತು ನ್ಯಾಯ ಪಕ್ಷಕ್ಕೆ ಜಯವುಂಟಾಗುವುದೆಂಬುದನ್ನು ಸಿದ್ಧಪಡಿಸಬೇಕೆಂದು ಮಹಾತ್ಮರು ನಿಶ್ಚಯಿಸಿರುತ್ತಾರೆ. ಈ ಭೂಮಿಯು ಇನ್ನು ತಮ್ಮ ವಾಸಕ್ಕೆ ಅಯೋಗ್ಯವಾಯಿತೆಂದು ಮಹಾತ್ಮರು ಅರಿತಿದ್ದಾರೆ. ಈ ಅನರ್ಥಕ್ಕೆ ಜವಾಬ್ದಾರರು ಯಾರು? ಅವರ ದೇಶೀಯರಾದ ನಾವೇ ಇದಕ್ಕೆ ಜವಾಬ್ದಾರರು! ಮಹಾತ್ಮರ ದೃಷ್ಟಿಯಿಂದ ಎಲ್ಲ ವಿಷಯಗಳನ್ನೂ ಪರಿಶೀಲಿಸದೆ ಇರತಕ್ಕವರು ನಮ್ಮಲ್ಲಿ ಅನೇಕರಿರುತ್ತಾರೆ. ಭಾರತಮಾತೆಯು ಅಖಿಲ ಪ್ರಪಂಚದ ಉದ್ಧಾರಕ್ಕೋಸ್ಕರ ಅಭಿಮಾನದಿಂದ ಒಪ್ಪಿಸಿರುವ ಈ ಮಹಾಮಹಿಮರನ್ನು ಬಲಿಕೊಟ್ಟು, ಈ ದೇಶದ ಸತ್ವಹೀನವಾದ ನ್ಯಾಯವಿಧಾಯಕ ಸಭೆಯಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನವರ ಕೃಪೆಯಿಂದ ಕೆಲವು ಸ್ಥಾನಗಳನ್ನು ಪಡೆಯುವದೇ ತಮಗೆ ಹೆಚ್ಚು ಲಾಭದಾಯಕವೆಂದು ಭಾವಿಸುವವರನೇಕರಿರುವರು. ಆದರೆ—ಅಯ್ಯೋ? ಅಂಬೇಡ್ಕರರೇ?—ಪವಿತ್ರಾತ್ಮನ ನಾಶದಿಂದ ಪ್ರಜ್ವಲಿತವಾಗುವ ಅಗ್ನಿಜ್ವಾಲೆಯಿಂದ ತಮ್ಮ ಜನಾಂಗದ ಉದ್ಧಾರವಾಗುವುದೆಂದು ಭಾವಿಸುತ್ತಿರುವರಲ್ಲಾ! ಈ ವಿಷಯದಲ್ಲಿ ಬ್ರಿಟಿಷ್ ಜನಾಂಗವು ದೋಷರಹಿತವಾಗಿರುವುದೇ? ನಿಜವಾಗಿಯೂ ಇಲ್ಲ. ಬ್ರಿಟಿಷ್ ಮಂತ್ರಿಶ್ರೇಷ್ಠರು ಯಾರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿರುವೆವೆಂದು ನಟಿಸುತ್ತಿರುವರೋ, ಅಂಥ ಹಿಂದುಳಿದ ಪಂಗಡಗಳ ನಿಜವಾದ ಅಭಿಪ್ರಾಯವೇನೆಂಬುದನ್ನು ಅರಿತುಕೊಂಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮೂಢಭಕ್ತಿಯುಳ್ಳ ಜನರ ಮೇಲೆ ಭೇದೋಪಾಯದ ಆಟವನ್ನಾಡುತ್ತಿರುವೆವೆಂಬುದನ್ನು ಅವರು ಚೆನ್ನಾಗಿ ಬಲ್ಲರು. ಬ್ರಿಟಿಷ್ ಜನಾಂಗವು ಈಗಲಾದರೂ ಮತ್ತಷ್ಟು ಭೂತದಯಾಪಶ್ಚಾತ್ತಾಪಗಳಿಂದ ಕೂಡಿದವರಾಗಿ ಈ ಪವಿತ್ರಾತ್ಮನ ನಾಶವಾಗದಂತೆ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿರುವ ತಮ್ಮ ಪ್ರತಿನಿಧಿಗಳನ್ನು ಒತ್ತಾಯ ಪಡಿಸಬೇಕು. ಬ್ರಿಟಿಷರು ತಮ್ಮ ಹಿಂದಿನ ಸಂಧಾನಗಳನ್ನು ಬಿಡುವುದರಿಂದಲಾಗಲಿ, ಅಥವಾ ಭಾರತೀಯರು ತಮ್ಮ ಕರ್ತವ್ಯವನ್ನು ಅರಿತುಕೊಳ್ಳುವುದರಿಂದಲಾಗಲಿ ಈ ಮಹಾ ಅನರ್ಥವನ್ನು ಈಗಲೂ ತಪ್ಪಿಸಬಹುದಾಗಿದೆ. ಸಕಲ ಜಗದ್ರಕ್ಷಕನು ಎಲ್ಲರಿಗೂ ಸದಸದ್ವಿವೇಕವನ್ನು ಕೊಟ್ಟು ತನ್ನ ಪ್ರತಿಬಿಂಬವು ಈ ಭೂತಲದಲ್ಲಿ ಇನ್ನೂ ಕೆಲವು ಕಾಲ ನೆಲಸಿರುವಂತೆ ಅನುಗ್ರಹಿಸಲಿ!

ಮಹಾತ್ಮರ ಸತ್ವದ ಕಾಲವಿದು!

ಲಕ್ನೋ ಜ್ಯೋತಿಷ್ಯರ ಭವಿಷ್ಯ.

ಲಕ್ನೋವಿನ ಪ್ರಸಿದ್ಧ ಜ್ಯೋತಿಷ್ಯರಾದ ಡಾಕ್ಟರ್ ಲಕ್ಷ್ಮೀಸಹಾಯರವರು ಮಹಾತ್ಮಾ ಗಾಂಧಿಯವರ ವಿಷಯವಾಗಿ ಈ ರೀತಿ ಭವಿಷ್ಯವನ್ನು ಹೇಳಿದ್ದಾರೆ:—

ಮಹಾತ್ಮರ ಸತ್ವದಕಾಲವು ಇದೇ ಸೆಪ್ಟೆಂಬರ್ 8 ನೆಯ ತಾರೀಖಿನ ದಿವಸ ಪ್ರಾರಂಭವಾಗಿರುವುದು. ಈ ತಿಂಗಳ 28 ನೆಯ ತಾರೀಖಿನ ಹೊತ್ತಿಗೆ ಮಹಾತ್ಮರ ಸತ್ವವು ಇತೋಪ್ಯತಿಶಯವಾಗುವದು. ಮತ್ತು ಮುಂದೆ 1 ವಾರದೊಳಗಾಗಿ ಅದರ ಪರಿಣಾಮವು ಹಿಂದೂದೇಶದಲ್ಲಿ ಮಾತ್ರವೇ ಅಲ್ಲದೆ, ಇಡೀಪ್ರಪಂಚವನ್ನೇ ಆವರಿಸುವುದು. ಇದುವರೆಗೆ ಅವರಿಗೆ ವಿರುದ್ಧವಾಗಿ ಸಂಧಾನಮಾಡುತ್ತಿರುವ ಶಕ್ತಿಗಳೆಲ್ಲವೂ ಅತ್ಯಂತ ಶೀಘ್ರವಾಗಿ ರೂಪಾಂತರವನ್ನು ಹೊಂದಿ, ಈ ದೇಶದಲ್ಲಿ ಪ್ರಾಪ್ತವಾಗಿರುವ ಸಮರವು ಗೌರವಯುಕ್ತವಾಗಿ ಮುಕ್ತಾಯವಾಗುವುದು. ಸದ್ಯಃ ಮಹಾತ್ಮರ ಜಾತಕದಲ್ಲಿ ಹನ್ನೊಂದನೆಯ ಮನೆಯಲ್ಲಿರುವ ಶುಕ್ರನು ಉಚ್ಚಸ್ಥಾನಕ್ಕೆ ಬರುವುದೇ ಈ ಎಲ್ಲ ಅನಿರೀಕ್ಷಿತವಾದ ಬದಲಾವಣೆಗಳಿಗೆ ಕಾರಣವಾಗಿದೆ. ಇದಲ್ಲದೆ ಶನಿಯ ಪ್ರಾಬಲ್ಯವೂ ಬಹುಮಟ್ಟಿಗೆ ಕಡಿಮೆಯಾಗುವುದು.

"ವೀರಭಾರತ" ಪತ್ರಿಕೆಯ ಎಚ್ಚರಿಕೆ.

"ಭರತಖಂಡದ ಪ್ರಾಣವು ಇಂದು ಎರವಾಡಾ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದೆ! ಮಹಾತ್ಮರಿಗೆ ಏನಾದರೂ ಅಪಾಯ ಸಂಭವಿಸಿದರೆ ಅದರಿಂದ ಎಂಥ ಪ್ರಚಂಡ ಬಿರುಗಾಳಿಯು ಹುಟ್ಟಬಹುದೆಂಬುದನ್ನು ಸರ್ಕಾರದವರು ಈಗಲೇ ಅರಿತುಕೊಳ್ಳಬೇಕು."

ಆಚಾರ್ಯ ಪಿ. ಸಿ. ರಾಯರು.

"ಗಾಂಧಿಜಿಯವರು ಟೆರೆನ್ಸ್ ಮ್ಯಾಕ್‌ಸ್ವಿನಿ ಮತ್ತು ಜತೀನ್‌ದಾಸರವರಂತೆ ಸಂತೋಷದಿಂದಲೂ ದೃಢನಿಶ್ಚಯದಿಂದಲೂ ಮೃತ್ಯುವನ್ನು ಎದುರಿಸುವರು. ಏಕೆಂದರೆ ಅವರೆಂದೂ ಬೆದರಿಕೆ ತೋರುವ ಆಟಗಾರರಲ್ಲ.

ಇದನ್ನು 'ಶಿಲುಬೆಗೆ ಎರಡನೆಯ ಬಲಿ' ಯೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಅದೂ ಏಷ್ಯಾಖಂಡದಲ್ಲಿಯೇ ನಡೆಯುವುದಾಗಿದೆ.

ಹಿಂದೂ ಸಮಾಜವು ಛಿನ್ನಭಿನ್ನವಾಗುವುದನ್ನು ತಡೆಯುವದಕ್ಕಾಗಿ ಅವರು ಕೈಕೊಂಡಿರುವ ಈ ಭೀಷಣತ್ಯಾಗದಿಂದ ಭರತಖಂಡವೊಂದೇ ಅಲ್ಲ, ಇಡೀ ಪ್ರಪಂಚವೇ ನಡುಗಿಹೋಗುವುದು.

ಮುಖಂಡರ ಹೇಳಿಕೆ.

ಮಿ|| ಎಚ್. ಜಿ. ಹೇಲ್ಸ್‌ರವರು.

(ಪಾರ್ಲಿಮೆಂಟಿನ ಕನ್ಸರ್ವೇಟಿವ್ ಮೆಂಬರರು.)

ಮಹಾತ್ಮರ ನಿರಶನ ವ್ರತದ ಪ್ರತಿಜ್ಞೆಯು ಭರತಖಂಡದಲ್ಲಿ ಸಾವಕಾಶವಾಗಿ ಸಮೀಪಿಸುತ್ತಿದ್ದ ವಿಷಮ ಸನ್ನಿವೇಶವನ್ನು ಶೀಘ್ರವಾಗಿ ಮುಂದಕ್ಕೆ ತಂದು ಒಡ್ಡಿರುವುದು. ಇನ್ನು ಕೆಲವು ದಿವಸಗಳಲ್ಲಿ ಭರತಖಂಡವು ಸಿವಿಲ್ ಯುದ್ಧದ ಸ್ಥಿತಿಗೆ ಬರಬಹುದು ಅಥವಾ ಇಂಡಿಯಾ ಸರಕಾರಕ್ಕೂ ಹಾಗೂ ಹಿಂದೂದೇಶದ ಜನರಿಗೂ ಬಗೆಹರಿಸಲಸಾಧ್ಯವಾದ ಸನ್ನಿವೇಶವು ಪ್ರಾಪ್ತವಾಗಬಹುದು. ಇಷ್ಟು ವಿಷಮವಾದ ಸನ್ನಿವೇಶವು ಈ ದೇಶದಲ್ಲಿ ಈ ಮೊದಲು ಎಂದೂ ಪ್ರಾಪ್ತವಾಗಿರಲಿಲ್ಲನೆಂದೇ ನನ್ನ ಭಾವನೆ. ಈ ದೇಶದ ನಾಶ ಅಥವಾ ಉದ್ಧಾರವು ಇದರ ಪರಿಣಾಮವನ್ನೇ ಅವಲಂಬಿಸಿರುವುದು. ಈ ವಿಷಯದಲ್ಲಿ ಅತ್ಯಂತ ಶೀಘ್ರವಾಗಿ ಕೆಲಸ ಮಾಡಬೇಕಾದುದು ಭಾರತೀಯ ಮುಖಂಡರ ಮೇಲೆ ಬಿದ್ದ ಭಾರವಾಗಿದೆ.

ಹಿಂದೂದೇಶವನ್ನು ಇಂಥ ಘೋರವಿಪತ್ತಿನಿಂದ ರಕ್ಷಿಸುವ ಭಾರವು ರವೀಂದ್ರನಾಥ ಟಾಗೋರ್, ಮದನಮೋಹನಮಾಳವೀಯ, ಎಂ. ಆರ್. ಜಯಕರ್, ಷೌಕತ್‌ಅಲಿ, ಸರ್ ತೇಜಬಹದ್ದೂರ್ ಸಪ್ರೂ, ಜೋಶಿ, ಎಂ. ಸಿ. ರಾಜಾ, ಬಿ. ಎಸ್. ಮೂಂಜೆ ಮೊದಲಾದ ಮುಖಂಡರಮೇಲೆ ಬಿದ್ದಿರುವುದರಿಂದ ಈ ವಿಷಯದಲ್ಲಿ ಕೂಡಲೇ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಅವರೆಲ್ಲರಿಗೂ ಆಹ್ವಾನವನ್ನು ಕಳುಹಿಸುತ್ತೇನೆ. ಇಂಥ ವಿಷಮಸ್ಥಿತಿಯಲ್ಲಿ ಕೈಕಟ್ಟಿ ನಿಂತುಕೊಂಡು, ತಮ್ಮ ಮುಖಂಡನು ಸಮಾಧಿಗ್ರಸ್ತನಾಗುವುದನ್ನು ನೋಡುವುದೆಂದರೆ ನಂಬುವುದಕ್ಕೂ ಅರ್ಹವಲ್ಲದ ಸಂಗತಿಯೇ ಸರಿ! ಆದರೂ, ಒಂದುಕಡೆ ಸರ್ಕಾರದವರು ತಮ್ಮ ತೀರ್ಮಾನವನ್ನು ಬದಲಾಯಿಸಲಾಗುವುದಿಲ್ಲವೆಂದು ಹೇಳಿರುವರು. ಇತ್ತ ಗಾಂಧಿಯವರಾದರೂ ತಮ್ಮ ಆತ್ಮತ್ಯಾಗದ ವಿಷಯದಲ್ಲಿ ಸ್ಥಿರಪ್ರತಿಜ್ಞೆಯುಳ್ಳವರಾಗಿರುವರು. ಈ ಬಿಕ್ಕಟ್ಟಿನ ಪರಿಸ್ಥಿತಿಯ ಪರಿಹಾರಕ್ಕೆ ಒಂದೇಒಂದು ಮಾರ್ಗವಿರುವುದು. ಇತರ ಮಾರ್ಗಗಳೆಲ್ಲವೂ ಮುಚ್ಚಿಹೋಗಿರುವುವು.

ನಾನು ಕಳೆದವಾರ ಪತ್ರಿಕೆಗಳಲ್ಲಿ ಬರೆದಿರುವಂತೆ ಭರತಖಂಡದ ಬೇರೆಬೇರೆ ಕೋಮುಗಳ ಪ್ರತಿನಿಧಿಗಳು ದೆಹಲಿಯಲ್ಲಿ ಸಭೆಸೇರಿ ಭರತಖಂಡದ ಮುಂದಿನ ಅಭ್ಯುದಯಕ್ಕೆ ತಳಹದಿಯಂತಿರುವ ಈ ಸಮಸ್ಯೆಯನ್ನು ಸರ್ವಸಮ್ಮತವಾಗಿರುವಂತೆ ತೀರ್ಮಾನಿಸುವುದಕ್ಕೆ ಕಾಲವು ಈಗ ಪ್ರಾಪ್ತವಾಗಿರುವುದು. ವಿಷಮಸ್ಥಿತಿಯಲ್ಲಿನ ದೇಶವನ್ನು ಉದ್ಧರಿಸುವ ಮಾನವನು ಮುಂದೆ ಬಂದೇಬರುವನು. ಈಗ ದೇಶಕ್ಕೆ ಪ್ರಾಪ್ತವಾಗಿರುವ ಘೋರವಿಪತ್ತನ್ನು ಆತನೇ ತಪ್ಪಿಸಿ ಕಾಪಾಡಬೇಕಾಗಿದೆ. ಕಾಲವು ಮೀರುತ್ತಿರುವುದು. ಇನ್ನು ಕೆಲವು ದಿವಸಗಳೊಳಗಾಗಿ ಈ ಸನ್ನಿವೇಶವು ಮಾಯವಾಗುವುದು. ಇಂಥ ಸುಸಮಯವು ಪುನಃ ಎಂದೂ ದೊರೆಯಲಾರದು. ಆದರೆ ಭಾರತಮಾತೆಗೆ ಪ್ರಾಪ್ತವಾದ ಭಯಂಕರ ವಿಪತ್ಸಮಯದಲ್ಲಿ ಆಕೆಯ ಪುತ್ರರು ಕರ್ತವ್ಯಪರಾಙ್ಮುಖರಾಗಿ ಮಾತೃಭೂಮಿಯನ್ನು ರಕ್ಷಿಸಲಿಲ್ಲವೆಂಬ ಅಪಕೀರ್ತಿಗೆ ಮಾತ್ರ ಗುರಿಯಾಗದಿರಲಿ!

ವೈಸರಾಯರ ಭಾಷಣ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಇನ್ನು ರಾಜಕೀಯ ಸುಧಾರಣೆಗಳಿಗೆ ಸಂಬಂಧಪಟ್ಟ ವಿಷಯಗಳ ವಿಮರ್ಶೆಯನ್ನು ಮಾಡುತ್ತೇನೆ. ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ ಚುನಾವಣೆ, ಫೆಡರಲ್ ಹಣಕಾಸಿನ ವಿಚಾರ ಮತ್ತು ಸಂಸ್ಥಾನಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರತ್ಯೇಕವಾಗಿ ವಿಮರ್ಶಿಸಬೇಕೆಂದು ತೀರ್ಮಾನಿಸಲ್ಪಟ್ಟಿತು. ಸಾರ್ವಭೌಮಸರಕಾರದವರು ಇದಕ್ಕಾಗಿ 3 ಕಮಿಟಿಗಳನ್ನು ನೇಮಿಸಿದರು. ಈ ಮೂರು ಕಮಿಟಿಯವರೂ ಬಹಳ ಉತ್ಸಾಹದಿಂದ ಕೆಲಸಮಾಡಿ ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಫೆಡರಲ್ ಹಣಕಾಸಿನ ಕಮಿಟಿಯ ವರದಿಯು ಮೇ ತಿಂಗಳಲ್ಲಿಯೂ, ಚುನಾವಣೆ ಕಮಿಟಿಯ ವರದಿಯು ಜೂನ್ ತಿಂಗಳಲ್ಲಿಯೂ, ಸಂಸ್ಥಾನಗಳ ಕಮಿಟಿಯವರ ವರದಿಯು ಜುಲೈ ತಿಂಗಳಲ್ಲಿಯೂ ಪ್ರಕಟಿಸಲ್ಪಟ್ಟವು.

ಈ ವರದಿಗಳ ವಿಷಯವೆಲ್ಲವೂ ನಿಮಗೆ ಗೊತ್ತೇ ಇರುವದರಿಂದ ಆ ವಿಷಯವಾಗಿ ಹೊಸದಾಗಿ ನಾನೇನೂ ಹೇಳಬೇಕಾಗಿಲ್ಲ. ಆದರೆ ಸದರಿ ವರದಿಗಳಲ್ಲಿ ಚರ್ಚಿಸಲ್ಪಟ್ಟಿರುವ ವಿಷಯಗಳು ಅತ್ಯಂತ ಮಹತ್ವವುಳ್ಳವುಗಳಾಗಿದ್ದು ನಾವೆಲ್ಲರೂ ಅಪೇಕ್ಷಿಸುತ್ತಿರುವ ಅಖಿಲಭಾರತ ಫೆಡರಲ್ ರಾಜ್ಯಸಂಸ್ಥಾಪನೆಯ ಕಾರ್ಯದಲ್ಲಿ ಬಹಳ ಸಹಕಾರಿಗಳಾಗಿರುತ್ತವೆ.

ಈ ಮಧ್ಯೆ, ನಾವು ವಾಯುವ್ಯಪ್ರಾಂತವನ್ನು ಗವರ್ನರ ಆಡಳಿತಕ್ಕೆ ಒಳಪಡಿಸುವ ಕಾರ್ಯದಲ್ಲಿ ತೊಡಗಿದ್ದೆವು. ಕಳೆದ ಏಪ್ರಿಲ್ ತಿಂಗಳಲ್ಲಿ ಅಲ್ಲಿಯ ಹೊಸ ನ್ಯಾಯವಿಧಾಯಕ ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕೂ ಚಕ್ರವರ್ತಿಸಾರ್ವಭೌಮರ ಸಂದೇಶವನ್ನು ಕೊಡುವುದಕ್ಕೂ ಪೆಷಾವರಿಗೆ ನಾನೇ ಖುದ್ದಾಗಿ ಹೋಗಿದ್ದೆನು. ಇತರ ಪ್ರಾಂತಗಳಂತೆಯೇ ತಮ್ಮ ಪ್ರಾಂತವೂ ಗವರ್ನರ ಆಡಳಿತಕ್ಕೆ ಒಳಪಡಬೇಕೆಂಬ ವಾಯುವ್ಯಪ್ರಾಂತದ ಜನರ ಅಭಿಲಾಷೆಯು ಪೂರ್ಣವಾಗುವಂತೆ ಮಾಡಿದಾಗ ನನಗುಂಟಾದ ಆನಂದವು ಅಪೂರ್ವವೇ ಆಗಿದ್ದಿತು. ಅಸಮಾಧಾನವಿದ್ದೆಡೆಯಲ್ಲಿ ಈಗ ತೃಪ್ತಿಯುಂಟಾಗಿರುವುದು. ಮತ್ತು ಮುಂದಿನ ಅಭಿವೃದ್ಧಿಗೆ ಮಾರ್ಗವು ಸುಗಮವಾಗಿರುವುದು. ಘನತೆಯಿಂದಲೂ ಸುವ್ಯವಸ್ಥೆಯಿಂದಲೂ ಕೂಡಿದ್ದ ಮೊದಲನೇ ನ್ಯಾಯವಿಧಾಯಕ ಸಭೆಯ ಮೊದಲನೆಯ ಅಧಿವೇಶನವನ್ನು ನಾವು ಬಹು ಸಂತೋಷದಿಂದ ನೋಡಿದೆವು. ವಾಯುವ್ಯಪ್ರಾಂತದ ಜನರು ಶೀಘ್ರದಲ್ಲಿಯೇ ಬರಲಿರುವ ಹೊಸ ಸುಧಾರಣೆಗಳ ವಿಷಯದಲ್ಲಿಯೂ ಹಿಂದುಳಿಯುವುದಿಲ್ಲವೆಂದೂ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಲು ಅವರು ಸಿದ್ಧರಾಗಿರುವರೆಂದೂ, ನಾನು ಅವರಿಗೆ ಭರವಸೆಯನ್ನು ಕೊಡಬಲ್ಲೆನು.

ಇನ್ನು ನನ್ನ ಅಧ್ಯಕ್ಷತೆಯ ಕೆಳಗೆ ಸೇರಿದ್ದ ಕನ್ಸಲ್ಟೇಟಿವ್ ಕಮಿಟಿಯೂ ವಿಶೇಷ ಕಾರ್ಯವನ್ನು ಮಾಡುವುದರಲ್ಲಿತ್ತು. ಆದರೆ ಅದರ ಕಾರ್ಯಕ್ರಮಗಳಿಗೆ ಕೋಮುವಾರು ಸಮಸ್ಯೆಯು ಬಹಳ ವಿಘ್ನವನ್ನುಂಟುಮಾಡಿತು. ಇದಕ್ಕಾಗಿ ನಾವು ಬಹಳ ವ್ಯಸನಪಡಬೇಕಾಗಿದೆ. ಕಳೆದತಿಂಗಳು ಸಾರ್ವಭೌಮಸರಕಾರದವರು ಈ ವಿಷಯದಲ್ಲಿ ತಮ್ಮ ತೀರ್ಮಾನವನ್ನು ಪ್ರಕಟಿಸಿದ್ದಾರೆ. ಬೇರೆಬೇರೆ ಕೋಮುಗಳವರು ತಮ್ಮತಮ್ಮಲ್ಲೇ ಒಪ್ಪಿದಹೊರತು ಯಾವ ತೀರ್ಮಾನವೂ ಸದರಿ ಕೋಮುಗಳಿಂದ ಅಂಗೀಕರಿಸಲ್ಪಡುವದಿಲ್ಲವೆಂದು ಬ್ರಿಟಿಷ ಸರ್ಕಾರದವರಿಗೆ ತಿಳಿದಿದ್ದರೂ, ಕೋಮುಗಳು ತಮ್ಮತಮ್ಮಲ್ಲೇ ತೀರ್ಮಾನಕ್ಕೆ ಬರದೇ ಇದ್ದುದರಿಂದಲೂ, ಅದರಿಂದ ಮುಖ್ಯವಾದ ನೂತನ ರಾಜ್ಯಾಡಳಿತರಚನೆಗೆ ದೊಡ್ಡ ವಿಘ್ನವು ಪ್ರಾಪ್ತವಾದುದರಿಂದಲೂ, ಸರ್ಕಾರದವರೇ ತಕ್ಕಡಿಯು ಸರಿತೂಗುವಂತೆ ತೀರ್ಮಾನವನ್ನು ಹೇಳಬೇಕಾಯಿತು. ಈ ಸಂದರ್ಭದಲ್ಲಿ ಜನರಿಗೆ ಅನುಸರಿಸಲು 3 ಮಾರ್ಗಗಳಿರುವುವು. 1. ತೀರ್ಮಾನವನ್ನು ಒಪ್ಪಿಕೊಳ್ಳುವುದು. 2. ತಮ್ಮ ತಮ್ಮಲ್ಲೇ ಸರಿಯಾದ ತೀರ್ಮಾನಕ್ಕೆ ಬರುವುದು. 3. ಎಲ್ಲ ರಾಜಕೀಯ ಸುಧಾರಣೆಗಳ ಆಶೆಯನ್ನು ತೊರೆಯುವುದು. 3 ನೇ ಮಾರ್ಗವು ಜನರ ಬಹುಕಾಲದ ಆಶೆಗೆ ವಿರೋಧವಾಗಿರುವುದರಿಂದ 1-2 ನೇ ಮಾರ್ಗಗಳಲ್ಲಿ ಯಾವುದನ್ನಾದರೂ ಅನುಸರಿಸಲೇಬೇಕು.

ನಮ್ಮ ಬಹು ದಿನದ ಆಶೆಗಳು ಪೂರ್ಣವಾಗಬೇಕಾದರೆ ಪರಸ್ಪರ ನಂಬಿಕೆಯಿಂದ ಇನ್ನುಮುಂದೆ ಕೆಲಸಮಾಡಬೇಕಾಗಿದೆ. ಈಗ ನಾವು ಕೊನೆಯತೀರ್ಮಾನಗಳನ್ನು ಮಾಡಬೇಕಾಗಿದೆ. ಇದಕ್ಕೆ ನಮ್ಮಲ್ಲಿ ಸಹಾನುಭೂತಿಯುಳ್ಳವರ ಸಹಾಯವು ಅವಶ್ಯಕವಾಗಿದೆ.

ಎರಡನೇ ಪರಿಷತ್ತಿನಲ್ಲಿ ಪ್ರಥಮದಲ್ಲಿ ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡಬೇಕೆಂಬ ಸೂಚನೆಗೆ ಅನೇಕರು ವಿರೋಧಪಡಿಸಿದುದೂ ಮತ್ತೆ ಅನೇಕರು ಫೆಡರೇಷನ್ನನ್ನು ಸ್ಥಾಪಿಸಲು ತಡವಾಗುವುದರಿಂದ ಪ್ರಾಂತಿಕ ಸ್ವಾತಂತ್ರ್ಯದಿಂದಲೇ ಪ್ರಾರಂಭಿಸಬೇಕೆಂದು ಹೇಳಿದುದು ನಿಮ್ಮೆಲ್ಲರಿಗೂ ತಿಳಿದೇ ಇದೆ. ಆದ್ದರಿಂದ ಸ್ಟೇಟ್ ಸೆಕ್ರೆಟರಿಯವರು ನನ್ನ ಸರ್ಕಾರದೊಡನೆ ಚೆನ್ನಾಗಿ ಚರ್ಚಿಸಿ, ಪ್ರಾಂತಿಕ ಸ್ವಾತಂತ್ರ್ಯ ಮತ್ತು ಫೆಡರೇಷನ್, ಈ ಎರಡು ವಿಷಯಗಳನ್ನೂ ಒಡಗೊಂಡ ಒಂದೇಒಂದು ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ಇಡುವುದಾಗಿ ಜೂನ್ 27 ನೇ ತಾರೀಖಿನ ದಿವಸ ಮಾಡಿದ ಭಾಷಣದಲ್ಲಿ ಹೇಳಿದರು. ಈ ತತ್ವಕ್ಕೆ ಪ್ರಜಾಭಿಪ್ರಾಯವು ವಿಶೇಷ ಮನ್ನಣೆಯನ್ನು ಕೊಟ್ಟಿರುವುದು.

ಇದೇ ಭಾಷಣದಲ್ಲಿ ಸೆಕ್ರೆಟರಿಯವರು ತಮ್ಮ ತೀರ್ಮಾನಗಳನ್ನು ಪಾರ್ಲಿಮೆಂಟ್ ಮೆಂಬರರಿಂದ ಕೂಡಿದ ಒಂದು ಸೆಲೆಕ್ಟ್ ಕಮಿಟಿಯ ಮುಂದೆ ಇಡುವವೆಂದೂ, ಅದರ ಮೆಂಬರುಗಳು ಕೆಲವು ಭಾರತೀಯ ಮೆಂಬರರೊಡನೆ ಅವುಗಳನ್ನು ಪರ್ಯಾಲೋಚಿಸುವರೆಂದೂ ಹೇಳಿದರು. ಆದರೆ ಕನ್ಸಲ್ಟೇಟಿವ್ ಕಮಿಟಿಯಿಂದ ಯಾವ ಮಹತ್ವದ ಕಾರ್ಯವೂ ಆಗುವುದಕ್ಕೆ ಅವಕಾಶವು ದೊರೆಯದೆ ಹೋದುದರಿಂದ, ಸರ್ಕಾರದವರು ಬಿಲ್ಲನ್ನು ತಯಾರಿಸಲು ಅವಶ್ಯಕವಾದ ಸಲಹೆಗಳನ್ನು ಹೊಂದುವದಕ್ಕೋಸ್ಕರ ಲಂಡನ್ನಿನಲ್ಲಿ ಮತ್ತೊಂದು ಪರಿಷತ್ತನ್ನು ಕೂಡಿಸಬೇಕೆಂದು ತೀರ್ಮಾನಿಸಿದ್ದಾರೆ. ಈ ಪರಿಷತ್ತಿನಲ್ಲಿ ಮೆಂಬರರು ಎರಡನೆಯ ಪರಿಷತ್ತಿನಂತೆಯೇ ಬ್ರಿಟಿಷ್ ಪ್ರತಿನಿಧಿಗಳೊಡನೆ ಸರಿಸಮಾನಸ್ಕಂಧರಂತೆ ಕುಳಿತು ಚರ್ಚಿಸಲು ಅವಕಾಶವಿರುವದು. ಆದರೆ ಈಗ ಕೆಲವು ಗೊತ್ತಾದ ವಿಷಯಗಳಮೇಲೆ ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕಾಗಿರುವುದರಿಂದ ಪರಿಷತ್ತು ಬಹಿರಂಗವಾಗಿ ನಡೆಯದೆ ಗುಪ್ತವಾಗಿ ನಡೆಸುವುದು. ಇದರಲ್ಲಿ ಒಪ್ಪಿಗೆಗೆ ಬರುವ ವಿಷಯಗಳ ಮೇಲೆ ಸರ್ಕಾರದವರು ತಮ್ಮ ತೀರ್ಮಾನದವರು ಪಾರ್ಲಿಮೆಂಟಿನ ಕಮಿಟಿಯ ಮುಂದಿಡುವರು.

ಅದೃಷ್ಟ ಅಥವಾ ದೇವರು ನಮ್ಮ ಎರಡು ಜನಾಂಗದವರಿಗೂ ಅನೇಕ ವರ್ಷಗಳವರೆಗೆ ಅವಿಭಾಜ್ಯವಾದ ಸಂಕಲ್ಪವನ್ನು ಕಲ್ಪಿಸಿರುತ್ತಾನೆ. ನಮ್ಮ ನಮ್ಮಲ್ಲಿ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಮಯದಲ್ಲಿ ಅನೇಕ ಪ್ರಮಾದಗಳೇ ಉಂಟಾಗಿದ್ದರೂ, ನಮ್ಮ ಸಹವಾಸದಿಂದ ಇಲ್ಲಿ ಶಾಂತಿಯು ನೆಲಸಿ, ದೇಶದ ಹಾಗೂ ಜನಗಳ ಸ್ಥಿತಿಗತಿಗಳು ಅನೇಕ ವಿಧಗಳಲ್ಲಿ ಅಭಿವೃದ್ಧಿ ಹೊಂದಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಇನ್ನೂ ಮಾಡಬೇಕಾದ ಕಾರ್ಯವು ಬಹಳವಾಗಿರುವುದು. ಈಗ ನಾವು ರಾಜ್ಯಾಡಳಿತದ ಹೆಚ್ಚಿನ ಜವಾಬ್ದಾರಿಯನ್ನು ಭಾರತೀಯರಿಗೆ ವಹಿಸಲಿರುವದರಿಂದ ಭರತಖಂಡದ ಚರಿತ್ರೆಯಲ್ಲಿ ಅತ್ಯಂತ ವಿಷಮಸ್ಥಿತಿಯು ಪ್ರಾಪ್ತವಾಗಿದೆ. ಈಗ್ಗೆ 20 ವರ್ಷಗಳ ಹಿಂದೆ ನಾನು ಮೊದಲು ಮುಂಬಯಿಯಲ್ಲಿ ಹಡಗಿನಿಂದ ಇಳಿದಾಗ ಮಾಡಿದ ವಿಜ್ಞಾಪನೆಯನ್ನೇ ಈಗಲೂ ಮಾಡುತ್ತೇನೆ. ನನ್ನ ಕಾರ್ಯದಲ್ಲಿ ಎಲ್ಲರೂ ಸಂಪೂರ್ಣ ಸಹಾಯವನ್ನು ಮಾಡಬೇಕೆಂಬುದೇ ನನ್ನ ಕೋರಿಕೆಯಾಗಿರುವುದು. ಏಕೆಂದರೆ ರಾಜಕೀಯ ಸುಧಾರಣೆಗಳ ಕಾರ್ಯವನ್ನು ನಮ್ಮ ಅಥವಾ ಸಾರ್ವಭೌಮ ಸರ್ಕಾರದವರಿಂದಲೇ ಮುಂದುವರಿಸಲು ಸಾಧ್ಯವಿಲ್ಲ. ಅದಕ್ಕೆ ದೇಶೀಯರಾಜರು ಮತ್ತು ಭಾರತೀಯರೆಲ್ಲರ ಸಹಾನುಭೂತಿಯು ಅತ್ಯವಶ್ಯಕವಾಗಿರುವುದು.

ಆದುದರಿಂದ ನಾವೆಲ್ಲರೂ ಪರಸ್ಪರ ಸಂಶಯ ಮತ್ತು ಅಪನಂಬಿಕೆಗಳನ್ನು ದೂರಮಾಡಿ ಕೋಮುವಾರದ್ವೇಷದ ಬೀಜಗಳನ್ನು ಕಿತ್ತೊಗೆದು ಭರತಖಂಡದಲ್ಲಿ ಸರ್ವತ್ರ ರಾಷ್ಟ್ರೀಯ ಭಾವನೆಯುಂಟಾಗುವಂತೆ ಮಾಡೋಣ! ಏಕೆಂದರೆ ಹಾಗೆ ಮಾಡದಹೊರತು ಭರತಖಂಡವು ಪ್ರಪಂಚದಲ್ಲಿ ಇತರ ರಾಷ್ಟ್ರಗಳೊಡನೆ ಸರಿಸಮಾನವಾದ ಸ್ಥಾನವನ್ನು ಪಡೆಯಲಾರದು.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯುದೆಸೆಟ್ಟು ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡ್‌ಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ಕಲೆತಿರುಗುವದು, ಪಿತ್ತ ಸುಡುವದು, ಪಿತ್ತ ಕಾರುವದು, ಮುಖ ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬತ್ತಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟೆ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟಿದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗೆಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾದವುಗಳ ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ—ರಕ್ತಶುದ್ಧಿ ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬದ್ಧಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ಸಿಟ್ಟಾಗಿ ಕಂದ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಪೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕವಾಗುವನು. 8 ಔನ್ಸಿಗೆ ರೂ. 3-8.

☞ ಚಿಲ್ಲರೆ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[6] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅದಿವಸ ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಮರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮಾರ್, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ದೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತಂತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚುಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ತುತ್ತುವವ್ರೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. ೮ ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

44 ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಶರೀರಕ್ಕೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂಡಲೇ ಹೊರಡಬೇಕಾದವರಿಗೂ, ಧೀಃಪಾತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[12] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಪರಂಪರಾಗತವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ ಒಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮಾರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[13] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಸತತಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ ನೇ ಸೆಪ್ಟಂಬರ್ ೧೯೩೨ [ಸಂಚಿಕೆ ೨೦

RAYANKERE PALACE DAIRY FARM, MYSORE.

Bull calves, a good half-bred bull and some bullocks for sale

Apply to—

[3] **McIsaac, Manager**

ದೊಡ್ಡಮಾಲೂರು.

ಧರ್ಮೋದ್ಧಾರಕ್ಕಾಗಿ ದೇಶಪರ್ಯಟನಂಗೈಯುತ್ತಿರುವ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ದೊಡ್ಡಮಾಲೂರು ಭಕ್ತರ ಪ್ರಾರ್ಥನಾನುಸಾರವಾಗಿ ಅಂಗೀರಸ ಸಂವತ್ಸರ ಭಾದ್ರಪದ ಶುದ್ಧ ೧೪ ಸೋಮವಾರ ಸಾಯಂಕಾಲಕ್ಕೆ ತಮ್ಮ ಪರಿವಾರದೊಡನೆ ದಯಮಾಡಿಸಿದರು. ಸ್ಥಾನಿಕ ಸರ್ವಮತದ ಮಹಾಶಯರೆಲ್ಲರೂ ಭಿನ್ನಭಾವಗಳಿಲ್ಲದೆ ಏಕಮತ್ಯದಿಂದ ಶ್ರೀ ಜಗದ್ಗುರುಗಳವರನ್ನು ಎದುರ್ಗೊಂಡು ಬಿಜಮಾಡಿಸಿಕೊಂಡು ಬಂದರು. ದರ್ಶನಾಶೀರ್ವಾದ ಕಾಂಕ್ಷಿಗಳಾಗಿ ಬಂದಿದ್ದ ಜನಗಳ ಸಮುದಾಯವು ಮೂರುಸಾವಿರವರೆಗಿದ್ದಿತು. ಉತ್ಸವದಲ್ಲಿ ಶ್ರೀಯುತ ಶೇಕದಾರ್ ಭದ್ರಶೆಟ್ಟರೂ ಉತ್ಸುಕತೆಯಿಂದ ಗುರುಸೇವೆಯಲ್ಲಿ ತತ್ಪರರಾಗಿ ಸಹಾಯರಾಗಿದ್ದರು. ಪೋಲೀಸ್ ಉಸ್ತುವಾರಿಯು ಬಲವಾಗಿದ್ದಿತು. ಪುರಪ್ರವೇಶೋತ್ಸವವು ಸಕಲ ಬಿರುದಾವಳಿಗಳಿಂದ ದರ್ಶನೀಯವಾಗಿತ್ತು. ಶ್ರೀ ಮಹಾಚಾರ್ಯ ಪುಂಗವರು ಸ್ಕೂಲ್‌ಮುಂದೆ ವಿರಚಿತವಾದ ಮಂಟಪದಲ್ಲಿ ಅಲಂಕೃತಸಿಂಹಾಸನವನ್ನಾರೋಹಿಸಿದ ಕೂಡಲೆ ಜಯಜಯಕಾರದೊಡನೆ ಕರತಾಡನಗಳಾಗಿ ಸಭಿಕರು ಅನುಜ್ಞೆಯನ್ನು ಪಡೆದು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ತಮ್ಮ ಖಾಸ ಶಾಸ್ತ್ರಿಗಳಾದ ಪುರಾಣರತ್ನ ಬಸವಲಿಂಗಶಾಸ್ತ್ರಿಗಳು ಸುಣಕಲ್ಲಬಿದರೆ ಇವರು ಸಮಯೋಚಿತಯುಕ್ತವಾಗಿ ಭಾಷಣವನ್ನು ಮಾಡಿದನಂತರ ಹಳೇಮಠದಯ್ಯನವರೂ ಮತ್ತು ನಂಜುಂಡಯ್ಯನವರೂ ಶ್ರೀ ಜಗದ್ಗುರುಗಳವರು ತಮ್ಮಲ್ಲಿಗೆ ಬಿಜಯಮಾಡಿದ್ದರಿಂದುಂಟಾದ ಆನಂದವನ್ನು ವ್ಯಕ್ತಮಾಡಿದರು. ಬಳಿಕ ಶ್ರೀ ಪೂಜ್ಯ ಭಗವತ್ಪಾದರು ಅಮೃತವಾಣಿಯಿಂದ ಧರ್ಮೋಪದೇಶವನ್ನು ಮಾಡಿ ಸಭಾವಿಸರ್ಜನಕ್ಕೆ ಅಪ್ಪಣೆಕೊಟ್ಟನಂತರ ಶ್ರೀಮದಾಚಾರ್ಯ ಪುಂಗವರ ಮತ್ತು ಧರ್ಮೋನ್ನತಿಗೆ ಅವಕಾಶವನ್ನು ಕೊಟ್ಟು ದೇಶವನ್ನು ರಕ್ಷಿಸುತ್ತಿರುವ ಶ್ರೀಮನ್ಮಹಾರಾಜರವರ ಜಯಘೋಷವಾಗಿ ಸಭೆಯು ವಿಸರ್ಜಿತವಾಯಿತು. ಹಳೇಮಠದಯ್ಯನವರು ಸಕಲ ಮಹಾಶಯರೊಡನೆ ಮಹಾಚಾರ್ಯರವರ ಸೇವಾ ಸತ್ಕಾರಗಳನ್ನು ಮಾಡಿ ಕೃತಾರ್ಥರಾದರು. ಶ್ರೀಮಹಾಗುರುಗಳವರು ಹಾಗೇ ಚಿಟ್ಟನಹಳ್ಳಿ ಭಕ್ತರ ಭಕ್ತಿಯನ್ನು ಸ್ವೀಕರಿಸಲು ಅವರ ಪ್ರಾರ್ಥನೆಯ ಮೇರೆಗೆ ಮಹೋತ್ಸವದಿಂದ ದಯಮಾಡಿಸಿ ಅವರ ಸೇವೆಯನ್ನೂ ಕೈಕೊಂಡು ಸರ್ವರನ್ನೂ ಕೃತಾರ್ಥರನ್ನಾಗಿ ಮಾಡಿದರು. ಆ ಭಾಗದ ಕಪ್ಪಕಾಣಿಕೆಯನ್ನು ಸ್ವೀಕರಿಸಿ ತಾರೀಖು 15-9-32 ಶುಕ್ರವಾರ ಸಾಯಂಕಾಲಕ್ಕೆ ಪುನಃ ಮಧುಗಿರಿಗೆ ದಯಮಾಡಿಸಿತು. ತಾರೀಖು 16-9-32 ಶನಿವಾರ ತಮ್ಮ ಶಾಖಾಮಠವಾದ ಕುಪ್ಪೂರು ಗದ್ದುಗೆಯ ಮಠದ ವ್ಯವಸ್ಥೆಗೋಸ್ಕರ ಅಲ್ಲಿಗೆ ದಯಮಾಡಿಸುವರು. 2-3 ದಿವಸಗಳಲ್ಲಿಯೇ ಇದ್ದು ಪುನಃ ಮಧುಗಿರಿಗೆ ದಯಮಾಡಿಸಿ ಶುಕ್ರವಾರ ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿಗೆ ಸಕಲ ಬಿರುದಾವಳೀ ಸಮೇತ ದಯಮಾಡಿಸತಕ್ಕವರಿರುವರು. ಈ ವರ್ಷದ ದಸರಾಮಹೋತ್ಸವವೂ ಅಲ್ಲಿಯೇ ನೆರವೇರಿಸಬೇಕೆಂದು ಅಲ್ಲಿಯ ಭಕ್ತರು ಉತ್ಸಾಹದಿಂದ ಆಶೆಮಾಡಿಕೊಂಡಿರುತ್ತಾರೆ. ಹೊಳವನಹಳ್ಳಿಯು ಕೊರಟಗೆರೆಗೆ ಐದು ಮೈಲು ಅಂತರದಲ್ಲಿರುವುದು. ತುಮಕೂರಿಂದ ಕೊರಟಗೆರೆಮಾರ್ಗವಾಗಿ ಅಲ್ಲಿಗೆ ಹೋಗಬೇಕು. ಶ್ರೀ ಜಗದಾಚಾರ್ಯರ ಸಂಚಾರದಿಂದ ಸರ್ವತ್ರ ಧರ್ಮೋಪದೇಶವಾಗಿ ಪೂರ್ವರೂಪವನ್ನು ಧರಿಸಲೆಂದು ಹಾರೈಸುತ್ತೇನೆ.

ಗುರುಪದಕಿಂಕರ.

ಉಪವಾಸಾರಂಭದ ಅನುಪಮ ದೃಶ್ಯಗಳು.

ಭಗವಂತನೊಡನೆ ಕಾದಾಡುವರಂತೆ.

ಗಾಂಧಿಜೀಯವರ ವಾಕ್ಯರತ್ನಗಳು.

ಪೂನಾ ೨೦.

ಗಾಂಧಿಯವರು ವಾಸಿಸುವ ಬಂಗ್ಲೆಯ ಕೆಳಗಿನ ಕೊಠಡಿಯಲ್ಲಿ ಭೇಟಿಯಾಯಿತು. ಈ ಕೊಠಡಿಯ ದೃಶ್ಯವು ಅನುಪಮವಾಗಿತ್ತು. ಕಿಟಕಿಯಿಂದ ಸೂರ್ಯದೇವನ ಕಿರಣಗಳು ಸೂಸುತ್ತಿದ್ದುವು. ಗಾಂಧಿಯವರ ಬಿಳೀ ಶಾಲಿನ ಮೇಲೆ ಕಿರಣಗಳು ನಲಿದಾಡುತ್ತಿದ್ದುವು. ಗಾಂಧಿಯವರು ಧರಿಸಿದ್ದ ಭಂಗಾರದ ಕಟ್ಟುಹಾಕಿದ ಕನ್ನಡಕದ ಮೇಲೂ ಬೆಳ್ಳಿಯ ಗಡಿಯಾರದ ಮೇಲೂ ಕಿರಣಗಳು ತಮ್ಮ ಪ್ರತಿಭೆಯನ್ನು ತೋರಿಸುತ್ತಾ ವಿಚಿತ್ರ ಸೌಂದರ್ಯವನ್ನುಂಟುಮಾಡಿದ್ದುವು. ಇದಕ್ಕೆ ಸಹಾಯಕವಾಗಿ ಗಾಂಧಿಯವರ ನೂಲಿನಿಂದ ತಯಾರಾದ ಖಾದಿ ಧೋತ್ರವು ಮತ್ತಷ್ಟು ಪ್ರತಿಭೆಯನ್ನು ಕಲ್ಪಿಸಿತು.

ಗಾಂಧಿಯವರು ತಮ್ಮ ಯಥಾವಿಧಿಯ, ಗಂಭೀರ ಮತ್ತು ತೇಜೋಮಯವಾದ ವಾಣಿಯಿಂದ ಮಾತಾಡಲು ಆರಂಭಿಸಿದರು. ಇವರ ಮಾತುಕತೆಗಳ ಹಿಂದೆ ತಾವು ಕೈಕೊಂಡಿರುವ ಮಹತ್ತರವಾದ ಪ್ರತಿಜ್ಞೆಯು ತೇಜಃಪುಂಜವು ಒಡೆದುಕಾಣಬರುತ್ತಿತ್ತು. ಜೈಲಿನ ರೊಟ್ಟಿ ಇಲಾಖೆಯ ಸೂಪರಿಂಟೆಂಡೆಂಟರಾಗಿ ನಿಯಮಿಸಲಾಗಿದೆ. ಎಂದು ಬಹಳ ಹಾಸ್ಯರೀತಿಯಿಂದ ಹೇಳುತ್ತಾ ತಮ್ಮ ಸರಳತೆಯನ್ನು ವ್ಯಕ್ತಪಡಿಸುತ್ತಿದ್ದರು. ಮಾತುಕತೆಗಳಾಗುವ ಪರ್ಯಂತರ ಜೈಲಿನ ಸೂ|| ರವರಾದ ಮೇಜರ್ ಭಂಡಾರಿಯವರು ಹಾಜರಿದ್ದರು. ತಾವು ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ತಮ್ಮ ಉಪವಾಸವನ್ನು ಆರಂಭಿಸುವುದಾಗಿ ಗಾಂಧಿಯವರು ತಿಳಿಸಿದರು. ಉಪವಾಸವನ್ನು ಅಬ್ಬಾಸ್ ತಯ್ಯಾಬ್ಜಿಯವರ ಪುತ್ರಿ, ಮಿಸ್ ರೇಹಾನ ತಯ್ಯಾಬ್ಜಿಯವರಿಂದ ರಚಿಸಲ್ಪಟ್ಟ ಒಂದು ಹಿಂದೀ ಪ್ರಾರ್ಥನಾಶ್ಲೋಕದೊಡನೆ ಆರಂಭಿಸುವುದಾಗಿ ತಿಳಿಸಿದರು. ಆ ಶ್ಲೋಕದ ಸಾರಾಂಶವು ಈ ಪ್ರಕಾರವಿದೆ.

"ಓ ಪ್ರಯಾಣಿಕನೇ! ಎದ್ದೇಳು. ಹಾಸಿಗೆಯನ್ನು ಬಿಡು. ಏಕೆಂದರೆ ಪ್ರಾತಃಕಾಲವಾಯಿತು." ಈ ಶ್ಲೋಕವೇ ತಮ್ಮ ಬಹುದೂರದ ಪ್ರಯಾಣದ ತಮ್ಮ ಆಹಾರವೆಂದು ನುಡಿದರು.

ಉಪವಾಸವು ಪ್ರಾರಂಭವಾಗುವ ಸಮಯದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರೂ ಮತ್ತು ಮಿ|| ಮಹದೇವ ದೇಸಾಯಿಯವರೂ ಹಾಜರಿದ್ದರು. ಇವರುಗಳು ಇನ್ನೂ ಎರಡು ದಿವಸದವರೆಗೆ ಉಪವಾಸವನ್ನು ಮಾಡುವರು.

ಗಾಂಧಿಯವರ ಆಖೈರು ಊಟವು 11-30 ಘಂಟೆಗೆ ಆಯಿತು. ಆ ಆಹಾರದ ವಸ್ತುಗಳೇನೆಂದರೆ:—ಬಿಸಿನೀರು, ಸೋಡಾ ಜೇನು ತುಪ್ಪ ಮತ್ತು ಎರಡು ನಿಂಬೆಹಣ್ಣು ಮತ್ತು ಮೂರು ಬೇರೆ ಹಣ್ಣುಗಳು.

ಗಾಂಧಿಯವರು ಆರೋಗ್ಯದಿಂದಿದ್ದಾರೆ. ಅವರ ತೂಕ 103 ಪೌಂಡುಗಳು. ಕಳೆದವಾರದಲ್ಲಿ ಒಂದು ಪೌಂಡು ತೂಕವು ಜಾಸ್ತಿಯಾಯಿತು.

ಸಂಭಾಷಣೆಗಳಲ್ಲಿ ಗಾಂಧಿಯವರು ಉಪವಾಸವ್ರತದ ಪಾರಮಾರ್ಥಿಕ ತತ್ವವನ್ನು ವಿವರಿಸಿದರು. ಕ್ರಿಸ್ತ, ಮಹಮದ್ ಇವರುಗಳ ಉದಾಹರಣೆಯನ್ನು ಅನುಸರಿಸುತ್ತಿದ್ದಾಗಿ ತಿಳಿಸಿದರು. ತಾವು ಬಹಳ ನಮ್ರತೆಯ ದಾರಿಯನ್ನು ಅನುಸರಿಸುತ್ತಿರುವುದಾಗಿಯೂ ಭಗವಂತನೊಡನೆ ಕಾದಾಡಲು ಹೋಗುವುದಾಗಿಯೂ ಹೇಳಿದರು.

ಟಾಗೂರರಿಗೆ ಮಹಾತ್ಮರ ತಂತಿ.

ಕಲ್ಕತ್ತಾ, ಸೆ. ೨೧

ಡಾ|| ರವೀಂದ್ರನಾಥ ಟಾಗೂರ್‌ರವರಿಗೆ, ಗಾಂಧಿಯವರು ಈ ಕೆಳಗೆ ಕಂಡ ತಂತಿಯನ್ನು ಕಳುಹಿಸಿದ್ದಾರೆ.

"ಗುರುದೇವ, ನಾನು ಯಾವಾಗಲೂ, ಭಗವಂತನ ದಯೆಯನ್ನು ಅನುಭವಿಸಿದ್ದೇನೆ. ಈ ದಿವಸದ ಉಷಃಕಾಲದಲ್ಲಿ ನಾನು ತಮಗೆ ಒಂದು ಪತ್ರವನ್ನು ಬರೆದು, ಈಗ ಕೈಕೊಂಡಿರುವ ವರ್ತನಕ್ಕೆ ತಮ್ಮ ಆಶೀರ್ವಾದವನ್ನು ಬೇಡಿದ್ದೆನು. ತಾವು ಕಳುಹಿಸಿರುವ ತಂತಿಯಲ್ಲಿ ತಮ್ಮ ಆಶೀರ್ವಾದವು ವಿಪುಲವಾಗಿದೆ ಎಂದು ತಿಳಿದು ಅದಕ್ಕಾಗಿ ವಂದಿಸುವೆನು."

ಮಹಾತ್ಮರ ಬಿಡುಗಡೆ ಯಾವಾಗ?

ಪಂ|| ಶಂಕರಶಾಸ್ತ್ರಿಗಳು [illegible], ಇವರು ಭೃಗುಸಂಹಿತೆಯ ಆಧಾರದ ಮೇಲೆ ಮಹಾತ್ಮರ ವಿಷಯವಾಗಿ ಈ ಕೆಳಗೆ ಕಂಡ ಭವಿಷ್ಯವನ್ನು ಹೇಳಿರುತ್ತಾರೆ:

'ಮಹಾತ್ಮರು 21 ದಿವಸಗಳಿಗಿಂತಲೂ ಹೆಚ್ಚಾಗಿ ಉಪವಾಸಮಾಡುವುದಿಲ್ಲ. ಈ ಅವಧಿಯೊಳಗಾಗಿ ಅಂತ್ಯಜರ ಸಮಸ್ಯೆಯು ಸಮರ್ಪಕವಾದ ರೀತಿಯಲ್ಲಿ ನಿರ್ಣಯಿಸಲ್ಪಡುವುದು. ಅಕ್ಟೋಬರ್ 3 ನೆಯ ತಾರೀಖಿನೊಳಗಾಗಿ ಮಹಾತ್ಮರ ಬಿಡುಗಡೆಯಾಗುವುದು. ಇದಕ್ಕೆ ಲಾರ್ಡ್ ಇರ್ವಿನ್ನರೇ ಕಾರಣೀಭೂತರಾಗುವರೆಂದು ಹೇಳಬಹುದು. ಕಾಂಗ್ರೆಸ್ಸಿನ ಕಾರ್ಯಕಾರಿಮಂಡಲಿಯ ಸದಸ್ಯರೆಲ್ಲರೂ ಡಿಸೆಂಬರ್ 22 ನೆಯ ತಾರೀಖಿನೊಳಗಾಗಿ ಬಿಡುಗಡೆ ಹೊಂದುವರು. ಮತ್ತು ಮಹಾತ್ಮರು 3 ನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವರು.'

ಸ್ವೀಕಾರ

ಗದಗ ವಕ್ಕಲಗೇರಿ ನಿವಾಸಿಗಳಾದ ಮ|| ರಾ|| ಚಿಕ್ಕೇನಕೊಪ್ಪದ ತೋಟಪ್ಪನವರ ಪುತ್ರಿ ಚಿ|| ಸೌ|| ಕರಬಸವ್ವನನ್ನು ಮ|| ರಾ|| ಕಾಶಪ್ಪಾ ಟೆಂಗಿನಕಾಯಿ ಇವರ ಪುತ್ರ ಚಿ|| ಕೊಟ್ರಪ್ಪನಿಗೆ ಕೊಟ್ಟು ಜರುಗಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧುವಿನ ಕಡೆಯಿಂದ ತೆಗೆಯಿಸಿದ 1 ರೂ. ಯು ವೇ|| ಶಿವಲಿಂಗಾರ್ಯ ಗುರುಸ್ವಾಮಿಮಠ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಮುಖಂಡರ ಸಮ್ಮೇಳನ.

ಪಂ|| ಮಾಳವೀಯರ ಪ್ರಾರ್ಥನೆ.

ಬೊಂಬಾಯಿ ಸೆ. ೧೯

ಮಹಾತ್ಮಾ ಗಾಂಧಿಯವರ ಉಪವಾಸ ವ್ರತಸಂಕಲ್ಪದ ದೆಸೆಯಿಂದ ಉಂಟಾಗಿರುವ ಕಠಿಣ ಪರಿಸ್ಥಿತಿಯನ್ನು ನಿವಾರಿಸಲೋಸುಗ ಸೇರಿಸಲಾಗಿರುವ ಅಖಿಲ ಭಾರತ ಹಿಂದೂ ಮುಖಂಡರ ಸಮ್ಮೇಳನವು ಇಂಡಿಯನ್ ಮರ್ಚೆಂಟ್ಸ್ ಛೇಂಬರಿನ ಬೋರ್ಡಿನ ಕೊಠಡಿಯಲ್ಲಿ ಗುಟ್ಟಾಗಿ ಸೇರಿತು. ಪಂಡಿತ ಮದನ ಮೋಹನ ಮಾಳವೀಯರು ಅಧ್ಯಕ್ಷರಾಗಿದ್ದರು. ಪತ್ರಿಕಾ ಪ್ರತಿನಿಧಿಗಳಿಗೆ ಅವಕಾಶವಿರಲಿಲ್ಲ. ಮಾಳವೀಯರು ಪ್ರಾರಂಭದಲ್ಲಿ ಒಂದು ಹೃದಯ ಪೂರಿತವಾದ ಭಾಷಣವನ್ನು ಮಾಡಿ, ಬೇರೆ ಬೇರೆ ಮಾರ್ಗಗಳಲ್ಲಿ ಸಾಗಕೂಡದೆಂದೂ, ಇಡೀ ಪ್ರಪಂಚವನ್ನೇ ಆಕರ್ಷಿಸಿರುವ ಮಹಾತ್ಮರ ಉಪವಾಸ ವ್ರತವನ್ನು ನಿಲ್ಲಿಸುವಂತೆ ಮಾಡಿ, ಅವರ ಜೀವನವನ್ನು ಉಳಿಸಬೇಕಾದುದೇ ಮುಂದಿರುವ ಅತಿ ಮಹತ್ವ ಪ್ರಶ್ನೆಯೆಂದೂ ಮುಂತಾಗಿ ಸಭಿಕರಲ್ಲಿ ಪ್ರಾರ್ಥಿಸಿದರು.

ಡಾ|| ಅಂಬೇಡ್ಕರ್.

ತರುವಾಯ ಡಾ|| ಅಂಬೇಡ್ಕರರು ಮಾತನಾಡಿದರು. ಕೋಮುವಾರು ಸಮಸ್ಯೆಯ ತೀರ್ಮಾನದಿಂದ ಪ್ರತ್ಯೇಕ ಚುನಾವಣೆಯ ವಿಷಯವು ನಿಂತುಹೋಗಿದ್ದರೂ, ಗಾಂಧಿಯವರ ಸಲಹೆಗಳನ್ನು ಪರ್ಯಾಲೋಚಿಸಲು ತಾವು ತಯಾರಾಗಿರುವರೆಂದೂ, ಹೊಸ ರಾಜ್ಯಶಾಸನದಲ್ಲಿ ಶಾಸನೋಕ್ತ ಅಂತ್ಯಜರಿಗೆ ಪ್ರಾತಿನಿಧ್ಯತೆಯನ್ನು ತಾವು ಬೇಡಿದಾಗ ಮಹಾತ್ಮರು ಅದನ್ನು ವಿರೋಧಿಸಿದರೆಂದೂ, ಅಂತ್ಯಜರಿಗೆ ಏನು ಕೊಡಲು ತಯಾರಾಗಿರುವರೆಂಬುದನ್ನು ಈಗ ಗಾಂಧಿಯವರು ತಿಳಿಸಬೇಕಾಗಿರುವುದೆಂದೂ, ಗಾಂಧಿಯವರ ಸಲಹೆಗಳಿಲ್ಲದೆ, ಚರ್ಚಿಸಿದರೆ ಫಲಪ್ರಾಪ್ತಿಯಾಗುವುದಿಲ್ಲವೆಂದೂ, ಡಾ|| ಅಂಬೇಡ್ಕರರು ಹೇಳಿದರು.

ಮಿ|| ಕೆ. ನಟರಾಜನ್‌ರವರು ಮಧ್ಯೆ ಎದ್ದು, ಗಾಂಧಿಯವರು ಹೋರರಿಗೆ ಬರೆದಿರುವ ಪತ್ರದಲ್ಲಿ ಅಂತ್ಯಜರಿಗೆ ಪ್ರಾತಿನಿಧ್ಯತೆಯನ್ನು ಕೊಡಲು ತಯಾರಾಗಿರುವುದಾಗಿ ತಿಳಿಸಿದ್ದರೆಂದೂ ನುಡಿದರು.

ಡಾ|| ಅಂಬೇಡ್ಕರರು ಜವಾಬು ಕೊಡುತ್ತಾ, ಸಂಶಯಾಸ್ಪದವಾದ ಅಂಶಗಳಿಂದ ಪ್ರಯೋಜನವಿಲ್ಲವೆಂದೂ, ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಬೇಕಾಗಿರುವುದೆಂದೂ, ವಾಸ್ತವಾಂಶಗಳನ್ನು ಗಮನಿಸಬೇಕಾಗಿರುವುದೆಂದೂ ಕರಾರುವಾಕ್ಕಾದ ಷರತ್ತುಗಳು ಮುಂದೆ ಬರಬೇಕೆಂದೂ ಹೇಳಿದರು.

ಮದರಾಸಿನ ಅಂತ್ಯಜ ಮುಖಂಡರು.

ಮದರಾಸಿನ ಅಂತ್ಯಜ ಸಂಗಡದ ಮುಖಂಡರಾದ ಮಿ|| ಶಿವರಾಜ್‌ರವರು ಮಾತನಾಡುತ್ತಾ, ಹೇಳಿದ್ದೇನೆಂದರೆ, ಮಹಾತ್ಮರ ಸಲಹೆಯು ನಮ್ಮ ಮುಂದಿರದಿದ್ದರೂ ಚಿಂತೆಯಿಲ್ಲ. ಸಮ್ಮೇಳನದಲ್ಲಿ ಚರ್ಚೆ ನಡೆಸುತ್ತಲೇ ಇರಬೇಕು. ಏಕೆಂದರೆ ನಾಳೆಯೇ ಗಾಂಧಿಯವರು ತಮ್ಮ ಉಪವಾಸವನ್ನು ಆರಂಭಿಸುವರು.

ಮಿ|| ರಾಜಾ.

ಆಮೇಲೆ ರಾವ್ ಬಹದ್ದೂರ್ ಮಿ|| ಎಂ. ಸಿ. ರಾಜಾರವರು ಮಾತನಾಡುತ್ತಾ, ಗಾಂಧಿಯವರ ಜೀವವನ್ನು ಉಳಿಸುವುದು ಅತಿ ಮುಖ್ಯವಾದ ಕರ್ತವ್ಯವೆಂದೂ, ಗಾಂಧಿಯವರನ್ನು ಭೇಟಿಮಾಡಲು ಹೋಗಿರುವ ಹಿಂದೂ ಮುಖಂಡರು ವಾಪಸು ಬರುವವರೆಗೆ ಸಭೆಯನ್ನು ಮುಂದುವರಿಸಲೇಬೇಕೆಂದೂ, ತಿಳಿಸಿದರು.

ಡಾ|| ಮುಂಜೆ.

ಪ್ರತ್ಯೇಕ ಚುನಾವಣೆಯನ್ನು ಬಿಟ್ಟು ಬಿಡುವುದಾಗಿ ಡಾ|| ಅಂಬೇಡ್ಕರ್‌ರವರು ವಚನ ಕೊಟ್ಟರೆ, ಅವರು ಬೇಡುವ ಇನ್ನು ಯಾವುದೇ ಬೇಡಿಕೆಗಳನ್ನು ಸಲ್ಲಿಸಲು ತಾವು ತಯಾರಾಗಿರುವುದಾಗಿ ಡಾ|| ಮುಂಜೆಯವರು ತಿಳಿಸಿದರು.

ಅಂತ್ಯಜ ಮುಖಂಡರಾಗಲೀ, ಅವರ ಹಿಂದೆ ಗಾಂಧಿಯವರ ಸಲಹೆಯು ಬೆಂಬಲವಿಲ್ಲದಿರುವಾಗ ಅವರ ಭರವಸೆಗಳು ತಮಗೆ ಬೇಕಿಲ್ಲವೆಂದೂ, ಈಗಿನ ಕಠಿಣ ಪರಿಸ್ಥಿತಿಯನ್ನೆಬ್ಬಿಸಿದವರು ಗಾಂಧಿಯವರೇ ಎಂದೂ, ಆ ಪರಿಸ್ಥಿತಿಯನ್ನು ನಿವಾರಿಸಲು ಗಾಂಧಿಯವರೊಡನೆ ಮಾತ್ರ ವ್ಯವಹಾರ ನಡಿಸಬೇಕಾಗಿರುವುದೆಂದೂ, ಡಾ|| ಅಂಬೇಡ್ಕರ್‌ರವರು ನುಡಿದರು.

ಎರಡು ಘಂಟೆಗಳ ಕಾಲ ಚರ್ಚೆಯಾದ ಮೇಲೆ ಸಮ್ಮೇಳನವು, ಪೂನಾದಿಂದ ಸುದ್ದಿಯು ಬರುವವರೆಗೆ ಮುಂದೆ ಹಾಕಲ್ಪಟ್ಟಿತು.

ಮೊದಲಿನಿಂದ ಕೊನೆಯವರೆಗೂ ಚರ್ಚೆಗಳು ಮೈತ್ರೀಭಾವದಿಂದಲೂ, ಸೌಜನ್ಯತೆಯಿಂದಲೂ ನಡೆದವೆಂದು ಗೊತ್ತಾಗಿದೆ.

ಗಾಂಧಿಯವರೊಡನೆ ಸಂಭಾಷಣೆ.

ಬೊಂಬಾಯಿ ಸೆ ೧೯

ಈ ದಿನ ಹಿಂದೂ ದೆಪ್ಯುಟೇಷನ್ನವರು ಗಾಂಧಿಯವರೊಡನೆ ಎರವಾಡಾ ಜೈಲಿನಲ್ಲಿ ಮೂರು ಘಂಟೆಗಳ ಕಾಲ ಸಂಭಾಷಿಸಿದರು. ಜೈಲಿನಿಂದ ಹೊರಗೆ ಬಂದ ಮೇಲೆ, ಅವರು ಒಂದು ಹೇಳಿಕೆಯನ್ನು ಕೊಟ್ಟರು. ಅದರಲ್ಲಿ ತಿಳಿಸಲಾಗಿರುವುದೇನೆಂದರೆ.

" ನಾವು ಗಾಂಧಿಯವರೊಡನೆ ದೀರ್ಘಕಾಲ ಮಾತುಕತೆಗಳನ್ನಾಡಿದೆವು. ಅವು ಹೃದಯಪೂರಿತವಾದ ಮಾತುಕತೆಗಳಾಗಿದ್ದವು. ಪ್ರತ್ಯೇಕ ಚುನಾವಣೆಯು ಯಾವ ರೂಪದಲ್ಲೇ ಇರಲಿ, ಯಾವ ವಿಧಾನದಲ್ಲೇ ಇರಲಿ, ಅದನ್ನು ವಿರೋಧಿಸುವ ಸಲುವಾಗಿ ತಾವು ಉಪವಾಸವ್ರತವನ್ನು ಕೈಕೊಳ್ಳುತ್ತಿರುವುದಾಗಿಯೆಂದು ಸ್ಪಷ್ಟಪಡಿಸಿದರು. ಪ್ರತ್ಯೇಕಚುನಾವಣೆಯು ರದ್ದು ಮಾಡಲ್ಪಟ್ಟರೆ, ಆಗ್ಗೆ ತಮ್ಮ ಉಪವಾಸವು ಮುಕ್ತಾಯವಾಗುವುದೆಂದು ಗಾಂಧಿಯವರು ಹೇಳಿದರು. ನಾವು ಅನೇಕ ಸಲಹೆಗಳನ್ನು ಅವರೊಡನೆ ಚರ್ಚಿಸಿದೆವು. ನಾವು ಈ ಅಂಶಗಳನ್ನು ನಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಲು ಇಚ್ಛಿಸುವೆವು. ಉಪವಾಸದ ನಿಜವಾದ ಉದ್ದೇಶಗಳನ್ನು ಕೇಳಿ ನಾವು ಸಮಾಧಾನಪಟ್ಟೆವು. ತಮ್ಮ ಉಪವಾಸ ವ್ರತದ ನೆರವಿನಿಂದ ಯಾರನ್ನೇ ಆಗಲಿ, ತಮ್ಮ ಮನಸ್ಸಿಗೆ ವಿರುದ್ಧವಾಗಿ ವರ್ತಿಸಿ, ಅಭಿಪ್ರಾಯವನ್ನು ಬದಲಾಯಿಸುವಂತೆ ಬಲಾತ್ಕರಿಸಕೂಡದೆಂದು, ಗಾಂಧಿಯವರು ಒತ್ತಿ ಒತ್ತಿ ನಮಗೆ ಆಜ್ಞಾಪಿಸಿದ್ದಾರೆ. ತಮ್ಮ ಅಭಿಪ್ರಾಯಗಳನ್ನೊಳಗೊಂಡ ಒಂದುಹೇಳಿಕೆಯನ್ನು ಪ್ರಕಟಣೆಗಾಗಿ ಬೊಂಬಾಯಿಸರ್ಕಾರದಲ್ಲಿ ನಾಲ್ಕು ದಿವಸಗಳ ಹಿಂದೆಯೇ ಗಾಂಧಿಯವರು ಕಳುಹಿಸಿರುವುದಾಗಿ ನಮ್ಮೊಡನೆ ಅವರು ತಿಳಿಸಿದರು.

ಮಿ|| ರಾಜಭೋಜರವರು ಏನಾದರೂ ಪತ್ರವ್ಯವಹಾರ ನಡಿಸಿರುವರೇ ಎಂದು ನಾವು ಗಾಂಧಿಯವರನ್ನು ಕೇಳಲಾಗಿ ಇಲ್ಲ ಎಂದು ಜವಾಬು ಬಂದಿತು. ಆದರೆ ನಾವು ಮಾತನಾಡುತ್ತಿರುವಾಗ್ಗೆ, ಮಿ|| ರಾಜಭೋಜರ ಪತ್ರವು ಅವರಿಗೆ ಮುಟ್ಟಿತು. ಅದಕ್ಕೆ ಶೀಘ್ರದಲ್ಲೇ ಜವಾಬು ಕೊಡುವುದಾಗಿ ಗಾಂಧಿಯವರು ತಿಳಿಸಿದರು.

ದೆಪ್ಯುಟೇಷನ್ನವರು ನಾಲ್ಕು ಗಂಟೆಗೆ ಬೊಂಬಾಯಿಗೆ ಪ್ರಯಾಣ ಮಾಡಿದರು.

ಪ್ರಯಾಣಮಾಡುವುದಕ್ಕೆ ಮುಂಚೆ ಮಾತನಾಡಿದ್ದರಲ್ಲಿ, ಗಾಂಧಿಯವರೊಡನೆ ನಡೆಸಿದ ಸಂಭಾಷಣೆಯ ಬಗ್ಗೆ ತಮಗೆ ಸಂಪೂರ್ಣ ಸಮಾಧಾನವಾಗಿರುವುದಾಗಿಯೂ, ಗಾಂಧಿಯವರ ವರ್ತನವು ಸರಿಯಾದುದೆಂದೂ ದೆಪ್ಯುಟೇಷನ್ನವರು ತಿಳಿಸಿ, ಗಾಂಧಿಯವರ ಸಲಹೆಗಳು ತೀರ ಸೌಜನ್ಯತೆಯಿಂದ ಕೂಡಿದೆ ಎಂದೂ ಹೇಳಿದರು. ಪ್ರತ್ಯೇಕ ಚುನಾವಣೆಯಪದ್ಧತಿಯ ಹೊರತು ಇನ್ನು ಯಾವ ಬೇರೆ ಏರ್ಪಾಟನ್ನಾದರೂ ಪರ್ಯಾಲೋಚಿಸಲು ಗಾಂಧಿಯವರು ತಯಾರಾಗಿರುವರೆಂದು ನುಡಿದರು. ಬೊಂಬಾಯಿ ಸಮ್ಮೇಳನದಲ್ಲಿ ಒಪ್ಪಿಗೆಯಾಗಿ ಅದನ್ನು ಗಾಂಧಿಯವರಿಗೆ ತಿಳಿಸಿದರೆ ಆಗ್ಗೆ ಗಾಂಧಿಯವರು ಉಪವಾಸವನ್ನು ನಿಲ್ಲಿಸಿದರೂ ನಿಲ್ಲಿಸಬಹುದು.

ಗಾಂಧಿಯವರು ಸರ್ಕಾರಕ್ಕೆ ಕಳುಹಿಸಿಕೊಟ್ಟಿರುವ ಹೇಳಿಕೆಯಲ್ಲಿ ತಮ್ಮ ಉಪವಾಸಕ್ಕೆ ಕಾರಣಗಳನ್ನು ನಮೂದಿಸಿರುವರೆಂದೂ, ಅದು ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವುದೆಂದೂ ದೆಪ್ಯುಟೇಷನ್ನವರು ಹೇಳಿದರು.

ಈ ದಿನ ಗಾಂಧಿಯವರಿಗೂ ದೆಪ್ಯುಟೇಷನ್ನವರಿಗೂ ಮಾತುಕತೆಗಳು ನಡೆಯುತ್ತಿದ್ದಾಗ ಸುಮಾರು ಒಂದು ಗಂಟೆಯ ಹೊತ್ತು ಜೈಲುಗಳ ಮುಖ್ಯಾಧಿಕಾರಿಯಾದ ಕರ್ನಲ್ ಡಾಯಲ್‌ರವರು ಅಲ್ಲಿಯೇ ಹಾಜರಿದ್ದರು.

ಡಾ|| ಅಂಬೇಡ್ಕರರ ಸಲಹೆ.

ಮುಂಬಯಿ ಸೆ. ೨೧

ಮುಂಬಯಿಯಲ್ಲಿ ನಡೆಯುತ್ತಿರುವ ಮುಖಂಡರ ಸಮ್ಮೇಳನಕ್ಕೆ ಡಾ|| ಅಂಬೇಡ್ಕರವರು ಈ ಕೆಳಗಿನ ಸಲಹೆಗಳನ್ನು ಕಳುಹಿಸಿದ್ದಾರೆ. ಮೊದಲನೆಯ ಭಾಗ (೧) ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಲ್ಲಿ ನಿಮ್ನವರ್ಗದವರಿಗೆ ಈ ಕೆಳಗಿನ ಸಂಖ್ಯೆಯಷ್ಟು ಪ್ರತಿನಿಧಿಗಳಿರತಕ್ಕದ್ದು :—

ಮದರಾಸ್	ಒಟ್ಟು ೨೧೫ ಕ್ಕೆ	೩೩
ಮುಂಬಯಿ	.. ೨೦೦ ..	೧೬
ಬಂಗಾಲಾ	.. ೨೫೦ ..	೫೦
ಪಂಜಾಬ್	.. ೧೭೫ ..	೧೦
ಸಂಯುಕ್ತ ಪ್ರಾಂತಗಳು	.. ೨೨೮ ..	೪೦
ಬೀಹಾರ್ ಮತ್ತು ಒರಿಸ್ಸಾ	.. ೧೭೫ ..	೨೦
ಬೀರಾರ್	.. ೧೧೨ ..	೨೦
ಅಸ್ಸಾಮ್	.. ೧೦೮ ..	೧೧

ಈ ಸ್ಥಾನಗಳಿಗೆ ಚುನಾವಣೆ ಕ್ರಮವು ಸಂಯುಕ್ತ ಕ್ರಮವನ್ನನುಸರಿಸತಕ್ಕದ್ದು. ಸ್ಥಾನಗಳು ಈ ಕೆಳಗಿನ ರೀತಿ ೧೦ ವರ್ಷಗಳವರೆಗೆ ಕಾದಿಡಲ್ಪಡತಕ್ಕದ್ದು. ಮದ್ರಾಸಿನಲ್ಲಿ ೧೮ ಏಕ ಚುನಾವಣೆಯ ಕ್ಷೇತ್ರಗಳಿಗೆ ಮುಂಬಯಿಯಲ್ಲಿ ೧೦. ಸಿ. ಪಿ. ನಲ್ಲಿ ೧೦ ಬಂಗಾಲಾದಲ್ಲಿ ೧೮, ಅಸ್ಸಾಮಿನಲ್ಲಿ ೪. ಪಂಜಾಬಿನಲ್ಲಿ ೫. ಯು. ಪಿ. ನಲ್ಲಿ ೧೨

ಸಾಮಾನ್ಯ ಚುನಾವಣೆಗೆ ಮುಂಚೆ ಒಂದೊಂದು ಚುನಾವಣೆಯ ಕ್ಷೇತ್ರದಲ್ಲಿಯೂ ಇಬ್ಬರು ಉಮೇದುವಾರರನ್ನು ಆರಿಸಲು ಒಂದು ಪ್ರಾಥಮಿಕಚುನಾವಣೆಯು ನಡೆಯತಕ್ಕದ್ದು. ಈ ಉಮೇದುವಾರರುಗಳು ಸಂಯುಕ್ತ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವರು. ಹತ್ತುವರ್ಷಗಳನಂತರ ಪ್ರಾಥಮಿಕ ಚುನಾವಣೆಯು ನಿಲ್ಲಿಸಲ್ಪಡುವುದು ಎಲ್ಲಾ ಸ್ಥಾನಗಳೂ ನೇರವಾದ ಚುನಾವಣೆಯಿಂದ ಸಂಯುಕ್ತಚುನಾವಣೆಯ ಪದ್ಧತಿಯಿಂದ ತುಂಬಲ್ಪಡುವುವು. ಕಾದಿಡಲ್ಪಟ್ಟ ಜಾಗಗಳಿಂದ ಸಂಯುಕ್ತಚುನಾವಣೆಯ ಕ್ರಮವು ಇನ್ನು ಮುಂದೆ ೧೫ ವರ್ಷಗಳವರೆಗೆ ಜಾರಿಯಲ್ಲಿರುವುದು. ಇದನಂತರ ಈ ತರಹದ ಚುನಾವಣೆಯು ಇರಬೇಕೇ ಇಲ್ಲವೇ ಎಂಬುದನ್ನು ನಿಮ್ನವರ್ಗದವರ ಸಕಲ ಜನಾಭಿಪ್ರಾಯದಿಂದ ನಿರ್ಧರಿಸತಕ್ಕದ್ದು. ಕೇಂದ್ರನ್ಯಾಯವಿಧಾಯಕ ಸಭೆಗಳಿಗೆ ಎಂಟು ನಿಮ್ನವರ್ಗದ ಸದಸ್ಯರು ಮೇಲಿನ ಕ್ರಮಗಳನ್ನೇ ಅನುಸರಿಸಿ ಚುನಾಯಿಸಲ್ಪಡತಕ್ಕದ್ದು. ಅಸ್ಪೃಶ್ಯವರ್ಗದವರಿಗಾದರೂ ಪ್ರಾಪ್ತವಯಸ್ಕ ವೋಟಿನ ಕ್ರಮವು ಜಾರಿಯಲ್ಲಿರತಕ್ಕದ್ದು. ಈ ಕ್ರಮವು ಕೇಂದ್ರ ನ್ಯಾಯವಿಧಾಯಕ ಸಭೆಗಳಲ್ಲಿಯೂ ಪ್ರಾಂತಿಕ ಸಭೆಗಳಲ್ಲಿಯೂ ಇರತಕ್ಕದ್ದು.

ಎರಡನೆಯಭಾಗ—1. ಅಂತ್ಯಜ ಜನಾಂಗದವರಿಗೆ ಪ್ರಾಂತಿಕ ಧಾರಾ ಸಭೆಗಳಿಗೂ ಲೋಕಲ್ ಬೋರ್ಡುಗಳಿಗೂ, ಡಿ|| ಮತ್ತು ತಾಲ್ಲೂಕು ಬೋರ್ಡುಗಳಿಗೂ ವಿಲೇಜು ಪಂಚಾಯಿತಿಗಳಿಗೂ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೂ (ಈಗ ಇರುವ ಮುಂದೆ ಸ್ಥಾಪಿಸಬಹುದಾದ) ಅವರ ಪ್ರಜಾ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯತೆಯನ್ನು ಕಲ್ಪಿಸಬೇಕು. 2. ಕೇಂದ್ರ ಮತ್ತು ಸ್ಥಳೀಯ ಹುದ್ದೆಗಳನ್ನು ಅಂತ್ಯಜರಿಗೆ ಅವರ ಪ್ರಜಾಸಂಖ್ಯೆಯ ದಾಮಾಷಾ ಪ್ರಕಾರ ಕೊಡಬೇಕು. ಶಿಕ್ಷಣ ಮುಂತಾದ ಶೀಲತೆಯನ್ನು ಇಳಿಸಬೇಕು. 3 ಪ್ರತಿಯೊಂದು ಪ್ರಾಂತದಲ್ಲಿಯೂ ವಿದ್ಯಾಭ್ಯಾಸಕ್ಕಾಗಿ ಕೊಡಲಾಗುವ ಗ್ರಾಂಟಿನಲ್ಲಿ ಅಂತ್ಯಜಜನಾಂಗದ ಪ್ರಜಾಸಂಖ್ಯೆಗನುಗುಣವಾಗಿ ಅವರಿಗೆ ಸಲ್ಲುವ ಭಾಗವನ್ನು ತೆಗೆದಿಡಬೇಕು. 4. ವಿದ್ಯಾಭ್ಯಾಸ, ಸರ್ಕಾರೀ ಹುದ್ದೆಗಳು, ನೈರ್ಮಲ್ಯದ ಏರ್ಪಾಟು ಇವುಗಳ ಬಗ್ಗೆ ಅಂತ್ಯಜ ಜನಾಂಗದವರಿಗೆ ಸರಿಯಾದ ವರ್ತನವು ತೋರಿಸಲ್ಪಡದೇ ಇದ್ದರೆ ಆಗ್ಗೆ ಗವರ್ನರಿಗೆ ಇಲ್ಲವೇ ವೈಸರಾಯರಿಗೆ ಅಪೀಲು ಮಾಡಿಕೊಳ್ಳುವ ಹಕ್ಕನ್ನು ಹೊಂದಿರಬೇಕು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಅಪರಾಧಗಳು.

ಧರ್ಮಶಾಸ್ತ್ರಗಳಲ್ಲಿಯೂ, ಪೀನಲ್‌ಕೋಡಿನಲ್ಲಿಯೂ ಸತ್ಯಕ್ಕೂ ಧರ್ಮಕ್ಕೂ ವಿರೋಧವಾದ ಅಪರಾಧಗಳು ನಿರೂಪಿಸಲ್ಪಟ್ಟಿವೆ. ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಪ್ರಜಾರಂಜನೆಯನ್ನು ಮಾಡುತ್ತಾ ಬಂದರೆ ಪ್ರಜೆಗಳು ರಾಜಭಕ್ತಿ ವಿಶ್ವಾಸಗಳನ್ನು ತೋರಿಸುವರಲ್ಲದೆ ಪ್ರಭುಗಳೂ ಸರ್ಕಾರದವರೂ ದೇವರ ಪ್ರತಿನಿಧಿಗಳಾಗಿದ್ದರೆ ಹೇಗೋ ಹಾಗೆ ಅವರನ್ನು ಪೂಜಿಸುವರು. ಪ್ರಭುಗಳು ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಸಂರಕ್ಷಿಸಿದರೆ ಪ್ರಜೆಗಳು ಪ್ರಭುಗಳನ್ನು ತಾಯಿತಂದೆಗಳಂತೆ ಕಾಣುವರಲ್ಲದೆ ದೇವರನ್ನು ಹೇಗೋ ಹಾಗೆ ಪೂಜಿಸುವರು. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಪೋಲೀಸಿನವರು ಇರುತ್ತಾರೆ. ಜೈಲುಗಳು ಇರುತ್ತವೆ. ಮ್ಯಾಜಿಸ್ಟ್ರೇಟರು ಇರುತ್ತಾರೆ. ಜಡ್ಜಿಗಳು ಇರುತ್ತಾರೆ. ಹೈಕೋರ್ಟುಗಳು ಇರುತ್ತವೆ. ಜ್ಯುಡಿಷಿಯಲ್ ಕಮಿಟಿಯು ಇರುತ್ತದೆ. ದುಷ್ಟನಿಗ್ರಹವೇ ಇವರಿಗೆ ಮುಖ್ಯವಾದ ಧ್ಯೇಯ. ಈ ಧ್ಯೇಯವು ಸರಿಯಾಗಿ ನೆರವೇರಿಸಲ್ಪಟ್ಟರೆ ಪ್ರಭುಗಳೂ, ಪೋಲೀಸರೂ, ಮ್ಯಾಜಿಸ್ಟ್ರೇಟರೂ ಜಡ್ಜಿಗಳೂ ಇವರೇ ಮೊದಲಾದ ಸರ್ವರೂ ದೇವರಂತೆ ಕಾಣಲ್ಪಡುವರಲ್ಲದೆ ಇವರ ಸಂಖ್ಯೆಯನ್ನು ಬಹುಮಟ್ಟಿಗೆ ಕಡಿಮೆಮಾಡಬಹುದು ಈಗ ಆಗತಕ್ಕ ಖರ್ಚಿನಲ್ಲಿ ಮೂರರಲ್ಲಿ ಒಂದುಭಾಗ ಖರ್ಚು ಕೂಡಾ ಅವಶ್ಯಕವಾಗುವುದಿಲ್ಲ. ಅಪರಾಧಿಗಳು ಅಪೂರ್ವವಾಗುತ್ತಾರೆ. ದ್ರೋಹಚಿಂತೆಯು ಅಪೂರ್ವವಾಗುವುದು. ಪ್ರಭುಗಳೂ, ಅಧಿಕಾರಿಗಳೂ, ಅವರವರ ಕೆಲಸಗಳನ್ನು ಸರಿಯಾಗಿಮಾಡದೇ ಇರುವುದರಿಂದ ಪೋಲೀಸಿನವರಿಗೂ ಅಧಿಕಾರಿಗಳಿಗೂ ನ್ಯಾಯದವರಿಗೂ ಎಲ್ಲರಿಗೂ ಕೆಲಸಗಳು ಹೆಚ್ಚುತ್ತಲಿವೆ. "ರಾಜಾ ಕಾಲಸ್ಯ ಕಾರಣಂ" ಎಂಬುವುದು ಸ್ಪಷ್ಟವಾಗುತ್ತಲಿರುವುದು. ಪ್ರಭುಗಳು ನಿರ್ದಾಕ್ಷಿಣ್ಯವಾಗಿ ನಡೆದರೆ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ನಡೆಯಬೇಕಾಗುತ್ತದೆ. ಪ್ರಭುಗಳೂ ಅಧಿಕಾರಿಗಳೂ ನಿರ್ದಾಕ್ಷಿಣ್ಯದಿಂದ ನಡೆದರೆ ಅವರ ಮೇಲ್ಪಂಕ್ತಿಯನ್ನು ಪ್ರಜೆಗಳು ಅನುಸರಿಸುವರು.

ಪ್ರಭುಗಳು ತಮ್ಮ ಉದ್ಯೋಗಗಳಲ್ಲಿ ನಿಷ್ಪೃಹ ಚಕ್ರವರ್ತಿಗಳಾಗಿದ್ದರೆ ಪ್ರಜೆಗಳೂ ಹಾಗೆಯೇ ಇರಬೇಕಾಗುವುದು. ತಾವು ಅಸತ್ಯಕ್ಕೂ ಅಧರ್ಮಕ್ಕೂ ಬಿದ್ದು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡದಿದ್ದರೆ ಪ್ರಜೆಗಳೂ ರಾಜಭಕ್ತಿ ವಿಶ್ವಾಸಗಳನ್ನು ಬಿಟ್ಟು ಏಕಮತ್ಯದಿಂದ ತಮ್ಮನ್ನು ಶಿಕ್ಷಿಸುವರೆಂಬ ಭಯವು ಸರಕಾರದವರಿಗಿರಬೇಕು. ತಾವು ನಿರಂಕುಶವಾಗಿ ನಡೆದರೆ ಸರಕಾರದವರು ಶಿಕ್ಷಿಸುವರೆಂಬ ಭಯವು ಪ್ರಜೆಗಳಿಗಿರಬೇಕು. ಪ್ರಜಾರಂಜನೆಯೇ ಸರಕಾರದ ಮುಖ್ಯಕರ್ತವ್ಯ. ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳೇ ಪ್ರಜೆಗಳ ಮುಖ್ಯಕರ್ತವ್ಯ. ನ್ಯಾಯವಾದ ಕಂದಾಯವನ್ನು ಹೊಂದಿ ಸಪರಿಕಂದಾಯವನ್ನು ಪ್ರಜೆಗಳ ಕ್ಷೇಮಕ್ಕೋಸ್ಕರ ವಿನಿಯೋಗಿಸುವುದೇ ಸರ್ಕಾರದವರ ಕರ್ತವ್ಯ. ಸರಕಾರದವರು ಹಾಗೆ ಮಾಡುವುದೇ ಪ್ರಜೆಗಳ ಹಕ್ಕುಬಾಧ್ಯತೆ. ಸರ್ಕಾರದವರೂ ಪ್ರಜೆಗಳೂ ತಮ್ಮ ಕರ್ತವ್ಯವನ್ನು ಮಾಡಿ ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಸರ್ಕಾರದವರ ಭಯವು ಪ್ರಜೆಗಳಿಗಿರಬೇಕು ಪ್ರಜೆಗಳ ಭಯವು ಸರ್ಕಾರಕ್ಕೆ ಇರಬೇಕು. ಇವೆರಡೂ ಎಲ್ಲಿರುವುವೋ ಅಲ್ಲಿ ಧರ್ಮವು ರೂಢಮೂಲವಾಗುವುದು. ಪ್ರಾಯಶಃವಾಗಿ ಪ್ರಜೆಗಳು ತಮ್ಮ ಕರ್ತವ್ಯವನ್ನು ಮಾಡಿ ಕೃತಾರ್ಥರಾಗುತ್ತಲಿದ್ದಾರೆ. ಸರ್ಕಾರದವರು ಅವರ ಕರ್ತವ್ಯವನ್ನು ಸರಿಯಾಗಿ ಮಾಡುತ್ತಲಿಲ್ಲ. ಐಶ್ವರ್ಯಮದ, ಅಧಿಕಾರಮದ ಮೊದಲಾದುವುಗಳಿಂದ ಪ್ರತಿನಿಧಿಸ್ಥರಾಗಿ ಅಧಿಕಾರಿಗಳು ನಿರಂಕುಶವಾಗಿ ನಡೆಯುವುದರಿಂದ ಪ್ರಜೆಗಳು ಅನ್ನವಸ್ತ್ರಗಳಿಲ್ಲದೆ ಅನೇಕ ಅಪರಾಧಗಳನ್ನು ಮಾಡುತ್ತಲಿದ್ದಾರೆ. ಈ ಅಪರಾಧಗಳಿಗೆಲ್ಲಾ ಪ್ರಭುಗಳೂ ಸರ್ಕಾರದವರೂ ಸಾಕ್ಷಾತ್ತಾದ ಕಾರಣಭೂತರು. ಪ್ರಜೆಗಳಲ್ಲಿ ಅನೇಕರು ಪರೋಕ್ಷವಾಗಿ ಕಾರಣಭೂತರು. ಅಪರಾಧಿಗಳಿಗೆ ಮನುಷ್ಯನ ಶಿಕ್ಷೆಯು ತಪ್ಪಿದರೆ ದೇವರ ಶಿಕ್ಷೆಯು ತಪ್ಪುವುದಿಲ್ಲ. ಇದನ್ನು ಪ್ರಭುಗಳೇ ಮೊದಲಾದ ಸರಕಾರದ ಅಧಿಕಾರಿಗಳು ಪರ್ಯಾಲೋಚಿಸಿ ಕೃತಾರ್ಥರಾಗುವುದು ಉತ್ತಮ.

ಯುವ.

ಮಹಾತ್ಮಾಜಿಯವರು ಸತ್ತರೆ, ಅದಕ್ಕೆ ಜವಾಬ್ದಾರರು ಯಾರು ?

ಈ ವಿಷಯದಲ್ಲಿ ಉತ್ತರದೇಶದ ಒಂದು ಪತ್ರಿಕೆಯಲ್ಲಿ ಕ್ರಿಸ್ತಮತಕ್ಕೆ ಸೇರಿದ ನಿಷ್ಪೃಹಳಾದ ಒಬ್ಬ ನಾರೀಮಣಿಯು ಬರೆದಿರುವುದೇನೆಂದರೆ :—ಮಹಾತ್ಮರು ಬಹಳ ಧರ್ಮಿಷ್ಠರು. ನಿಷ್ಪೃಹ ಚಕ್ರವರ್ತಿಗಳು. ಎಲ್ಲರೂ ಅವರವರ ಗುಣಕರ್ಮಗಳಿಗೆ ಅನುಸಾರವಾಗಿ ಅವರ ಕರ್ಮದ ಫಲಗಳನ್ನು ಅನುಭವಿಸಲಿ. ಭೇದಭಾವಗಳಿಂದ ಯಾರೂ ಯಾರಿಗೂ ತೊಂದರೆಯನ್ನು ಮಾಡದೆ ಇರುವಂತೆ ಮಾಡಲ್ಪಡಬೇಕು. ಎಂಬ ಮನೋಭಾವವು ಈ ಮಹಾತ್ಮರಿಗಿರುವುದು. ಪರಪೀಡೆಯನ್ನು ಮಾಡದೆ ಎಲ್ಲರೂ ಪರೋಪಕಾರನಿರತರಾಗಿರಬೇಕೆಂಬ ಭಾವನೆಯು ಇವರಿಗೆ ಪರಿಪೂರ್ಣವಾಗಿರುವುದು. ಏಸುಕ್ರಿಸ್ತನಂತೆ ಅಪಕಾರಮಾಡಿದವರಿಗೂ ಇವರು ಉಪಕಾರವನ್ನು ಮಾಡುವ ಮನೋಭಾವವುಳ್ಳವರು. ಇವರ ಜೀವಮಾನದ ಚರಿತ್ರೆಯೇ ಇದಕ್ಕೆ ಸಾಕ್ಷಿ. ಬ್ರಿಟಿಷ್ ಗವರ್ನಮೆಂಟಿನವರು ಇವರನ್ನು ಜೈಲಿಗೆ ಹಾಕಿದ್ದಾಗ್ಯೂ, ಈ ಮಹಾತ್ಮಾ ಗಾಂಧಿಯವರಿಗೆ ನಿರಂಕುಶಪ್ರವರ್ತಕರಾದ ಬ್ರಿಟಿಷ್ ಅಧಿಕಾರಿಗಳ ಮೇಲೆ ಕೋಪವಿಲ್ಲ. ಇವರಿಗೆ ಸತ್ಯದಮೇಲೂ, ಧರ್ಮದಮೇಲೂ, ಶಾಂತಪ್ರವರ್ತನದಮೇಲೂ ಸರಿಯಾದ ಪ್ರೀತಿಯೂ ಮತ್ತು ಅಭಿಮಾನವೂ ಇರುವುವು. ಸರಕಾರದವರು ಪ್ರಜೆಗಳು ಎಲ್ಲರೂ ಸುಖವಾಗಿರಲಿ ಎಂಬ ಮನೋಭಾವವು ಇವರಿಗೆ ಪರಿಪೂರ್ಣವಾಗಿರುವುದು. ಆದುದರಿಂದಲೇ ಇವರಿಗೆ ಮಹಾತ್ಮರೆಂಬ ಬಿರುದನ್ನು ಜಗದೀಶ್ವರನ ಪ್ರೇರಣೆಯಿಂದ ಸಕಲ ಜನಗಳೂ ಕೊಟ್ಟಿರುವರು. ಬ್ರಿಟಿಷ್‌ಧರ್ಮಗಳು ದಿಗ್ವಿಜಯವನ್ನು ಹೊಂದಲಿ ಎಂಬ ಮನೋಭಾವವು ಇವರಿಗೆ ಪರಿಪೂರ್ಣವಾಗಿರುವುದು. ಜಾತಿಭೇದ ಮತಭೇದ ಮೊದಲಾದುವುಗಳಿಂದ ಒಬ್ಬರನ್ನೊಬ್ಬರು ಹಿಂಸೆಮಾಡುವುದು ಮಹಾಪಾಪವೆಂದು ಇವರು ಭಾವಿಸಿರುವರು. ಈ ಗುಣಾತಿಶಯಗಳನ್ನೆಲ್ಲಾ ನೋಡಿದರೆ ಪ್ರಪಂಚದ ಸೃಷ್ಟಿಯಲ್ಲಿ ಇವರು ಕೇವಲ ಸದ್ಗುಣಸಂಪನ್ನರೆಂದು ಗೊತ್ತಾಗುತ್ತದೆ. ಇಂತಹ ಮಹನೀಯರು ಉಪವಾಸವ್ರತವನ್ನು ಆಚರಿಸಿ ಪ್ರಾಣವನ್ನು ಬಿಟ್ಟರೆ ಇದಕ್ಕೆ ಯಾರು ಉತ್ತರವಾದಿಗಳು ? ಇವರು ಏಕೆ ಪ್ರಾಣವನ್ನು ಬಿಡುವುದಾಗಿ ನಿಶ್ಚಯಮಾಡಿರುವರು ? ಗವರ್ನಮೆಂಟು ಅಧಿಕಾರಿಗಳಲ್ಲಿ ಸತ್ಯವನ್ನೂ, ಧರ್ಮವನ್ನೂ ಬಿಟ್ಟು ಭೇದಭಾವಗಳನ್ನು ಹೆಚ್ಚಿಸತಕ್ಕವರು ಹಾಗೆ ಪಾಪಕರ್ಮಗಳನ್ನು ಮಾಡಬಾರದು. ಪ್ರಜೆಗಳು ನಿರಂಕುಶಪ್ರವರ್ತಕರಾದ ದುರಾತ್ಮರನ್ನು ಕೇಳಿ ತಮ್ಮ ಮಿತ್ರರನ್ನು ಶತ್ರುಗಳೆಂದು ತಿಳಿದುಕೊಳ್ಳಬಾರದು. ಉಪಕಾರಗಳನ್ನು ಅಪಕಾರಗಳೆಂದು ತಿಳಿದುಕೊಳ್ಳಬಾರದು. ಧರ್ಮಿಷ್ಠರನ್ನು ಪಾಪಿಷ್ಠರೆಂದು ತಿಳಿದುಕೊಳ್ಳಬಾರದು. ಸರ್ವರೂ ಸುಖವಾಗಿರಲಿ ಎಂಬ ಭಾವನೆಯುಳ್ಳವರಾಗಿರಬೇಕು. ಸರಕಾರದವರೂ ಪ್ರಜೆಗಳೂ ಈ ಧರ್ಮವನ್ನುಲ್ಲಂಘಿಸಿದರೆ ಇಂಥ ಪಾಪಮಯವಾದ ಪ್ರಪಂಚದಲ್ಲಿರುವುದಕ್ಕಿಂತ ನಾನು ಪ್ರಾಣವನ್ನು ಬಿಡುತ್ತೇನೆಂದು ಮಹಾತ್ಮರು ನಿಶ್ಚಯಮಾಡಿರುತ್ತಾರೆ. ಇವರು ಹೀಗೆ ಧರ್ಮಕ್ಕೋಸ್ಕರ ಪ್ರಾಣವನ್ನು ಬಿಟ್ಟರೆ ಇದಕ್ಕೆ ಉತ್ತರವಾದಿಗಳು ಯಾರು ? ಸರ್ಕಾರದ ಡೈಹಾರ್ಡುಗಳೇ ? ಇದಕ್ಕೆ ಧರ್ಮಿಷ್ಠರಾದ ಜನಗಳು ಉತ್ತರವಾದಿಗಳಲ್ಲವೇ ? ಎಂಬುದಾಗಿ ಈ ಮಹಾತ್ಮಳು ಕೇಳುತ್ತಾಳೆ. ಇದಕ್ಕೆ ಬ್ರಿಟಿಷ್ ಡೈಹಾರ್ಡುಗಳು ಉತ್ತರವಾದಿಗಳು. ಇವರ ಭೇದಭಾವದ ಮಾತುಗಳನ್ನು ಕೇಳಿ ಪರಸ್ಪರ ದ್ವೇಷಮಾಡತಕ್ಕ ಜನಗಳೆಲ್ಲಾ ಉತ್ತರವಾದಿಗಳು. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿದ್ದಾಗ್ಯೂ ಇಂಥ ಪಾಪಗಳ ಪ್ರಚಾರವನ್ನು ತಪ್ಪಿಸುವುದಕ್ಕೆ ಪ್ರಯತ್ನಪಡದೇ ಇರತಕ್ಕವರು ಉತ್ತರವಾದಿಗಳು. ಮಾಡಬಾರದ ಕೆಲಸಗಳನ್ನು ಯಾರು ಮಾಡಿದಾಗ್ಯೂ ಸಕಲ ಸಜ್ಜನರ ಸೇರಿ ಅಂಥ ಪಾಪಕರ್ಮಗಳ ಪ್ರವಾಹವನ್ನು ನಿಲ್ಲಿಸಬೇಕು. ಹಾಗೆ ಮಾಡದಿದ್ದರೆ ಅವರೂ ಕೂಡ ಈ ಮಹಾಪಾಪಕ್ಕೆ ಉತ್ತರವಾದಿಗಳು.—

ಮಹಾತ್ಮಾ ಗಾಂಧಿಯವರು ಈ ಪ್ರಪಂಚದಲ್ಲಿ ಅವತರಿಸಿದ ಮಹಾತ್ಮರಲ್ಲಿ ಅಗ್ರಗಣ್ಯರು. ಇವರು ಉಪವಾಸಮಾಡಿ ಸಾಯುವುದಕ್ಕೆ ಯಾರು ಕಾರಣಭೂತರಾಗುವರೋ ಅವರಿಗೆ ದುರ್ಗತಿಯು ತಪ್ಪುವುದಿಲ್ಲ. ಅಸತ್ಯವನ್ನೂ ಅಧರ್ಮವನ್ನೂ ಮೂಲೋತ್ಪಾಟನ ಮಾಡುವುದಕ್ಕೆ ಮಹಾತ್ಮರು ಪ್ರಾಣವನ್ನು ಒಪ್ಪಿಸುವುದಕ್ಕೆ ಸಿದ್ಧರಾಗಿರುತ್ತಾರೆ. ಲೋಕದಲ್ಲಿ ಎಲ್ಲರೂ ಧರ್ಮಿಷ್ಠರಾಗಿದ್ದರೆ, ಇವರು ಈಶ್ವರ ಸೇವೆಯನ್ನೂ ಮಾಡುತ್ತಾ ಇನ್ನೂ ಕೆಲವು ವರ್ಷಗಳವರೆಗೆ ಪ್ರಾಣಧಾರಣೆಯನ್ನು ಮಾಡಿಕೊಂಡಿರುವರು. ಹಾಗಿಲ್ಲದಿದ್ದರೆ ನಿರಶನವ್ರತವನ್ನು ಅವಲಂಬಿಸಿ ಪ್ರಾಣವನ್ನು ಬಿಡುವರು. ಈ ವಿಷಯವನ್ನು ಪರ್ಯಾಲೋಚಿಸಿ ಲೋಕಸೇವೆಯೇ ಈಶ್ವರನ ಸೇವೆಯೆಂದು ಭಾವಿಸಿ ಮಹಾತ್ಮಾ ಗಾಂಧಿಯವರು ಜೀವಂತರಾಗಿರುವ ಹಾಗೆ ಸರ್ವರೂ ನಡೆದುಕೊಳ್ಳುವುದು ಕರ್ತವ್ಯ. ಈ ರೀತಿಯಲ್ಲಿ ಈ ಮಹಾತ್ಮಳು ಬರೆದಿರುವಳು. ಇವಳು ಹೇಳಿರುವುದೆಲ್ಲಾ ಕೇವಲ ಸಾಧುವಾಗಿರುತ್ತದೆ. ಸಜ್ಜನರೆಲ್ಲರೂ ಇದನ್ನು ಪರ್ಯಾಲೋಚಿಸಿ ಅವರ ಕರ್ತವ್ಯವನ್ನು ಮಾಡುವರೆಂದು ನಾನು ಕೋರುತ್ತೇನೆ.

ಭೀಷ್ಮ.

ಶ್ರೀ ಜಗದ್ಗುರು ಪರ್ವತಸಂಸ್ಥಾನದ ಸರ್ಕೀಟಿನ ಆಗಮನವು, ಅಂದೋಲಿಕೋತ್ಸವವು ತಿಪ್ಪನಹಳ್ಳಿ ಮುಲಕಲೇಡು.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ 108 ಷಟ್ಸ್ಥಲಬ್ರಹ್ಮ ನಾಗಲೋಟಿ ಭಿಕ್ಷಾವರ್ತಿ ರಾಜದೇಶೀಕೇಂದ್ರ ಮಹಾಸ್ವಾಮಿಗಳವರ ಸರ್ಕೀಟಿನ ಗುರುಸ್ಥಾಧಿಕಾರಿಗಳಾದ ಕೌಂಡಿನ್ಯಪುರಿ ಶಿಲಾಮಠಾಧ್ಯಕ್ಷ ಶಿವಶಂಕರ ಶಿವಾಚಾರ್ಯ ಪಟ್ಟದಸ್ವಾಮಿಗಳು (ವೇದಾಂತ ಭೂಷಣ) ಇವರು ಮಹಾಸಂಸ್ಥಾನದ ಕಾರಭಾರಿಗಳಾದ ಟಿ. ಎಸ್. ಸಿಂಗಯ್ಯನವರು, ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಎರಡುಕೇರಿ ಮುಕ್ಕಾಂನಿಂದ ತಾ|| 1-9-32 ಗುರುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಆನೆ ಕುದುರೆ ಸಕಲ ಸಿಬ್ಬಂದಿ ಸಮೇತವಾಗಿ ತಿಪ್ಪನಹಳ್ಳಿ ಮುಕ್ಕಾಂಗೆ ದಯಮಾಡಿಸಿದರು. ಪುರಪ್ರಮುಖರಾದ ಮಠದ ವೇ|| ರುದ್ರಪ್ಪನವರು ದಾಸಯ್ಯನವರು ಗ್ರಾಮದ ಮ್ಯಾಜಿಸ್ಟ್ರೇಟು, ಪಾಟೀಲು ಭದ್ರಪ್ಪನವರು ಓ. ಹೂಲಿಕುಂಟೆಪ್ಪನವರು ಶಾನಭೋಗರು ಮುಲಕಲೇಡು ಡಾಕ್ಟರ್ ಎಸ್. ಎ. ಶ್ರೀರಾಮುಲುಶೆಟ್ಟಿ, ದೊಡ್ಡವೀರಪ್ಪನವರು ಇನ್ನೂ ಮುಂತಾದ ಸಮಸ್ತ ಭಕ್ತಮಹೇಶ್ವರರು ಎದುರ್ಗೊಂಡು ಸನ್ನಿಧಿಯನ್ನು ಪಾಲಕಿಯಲ್ಲಿ ಮೂರ್ತಗೊಳಿಸಿ ಉತ್ಸವ ಪೂರ್ವಕವಾಗಿ ರಾಜಬೀದಿಗಳಲ್ಲಿ ಹೊರಟು ಈಶ್ವರದೇವಸ್ಥಾನದಲ್ಲಿ ಅಲಂಕರಿಸಲ್ಪಟ್ಟ ಭವ್ಯತರ ಪೀಠದಮೇಲೆ ಆರೋಹಣಮಾಡಿಸಿದನಂತರ ಶ್ರೀಗಳವರು ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಜಗದ್ಗುರು ಪಂಚಾಚಾರ್ಯರು ಜಗದೈಕವಂದ್ಯನಾದ ಶಂಕರನ ಅಷ್ಟ[illegible] ಭೂಮಂಡಲದಲ್ಲಿ ರಾರಾಜಿಸುತ್ತಿರುವ ಮಹಾಲಿಂಗಗಳಿಂದಾವಿರ್ಭವಿಸಿ ದಿವ್ಯದೇಹಧಾರಿಗಳಾಗಿ ಋಷಿಪುಂಗವನಾದ ಅಗಸ್ತ್ಯ ಮುಂತಾದವರ ಪ್ರಾರ್ಥನಾನುಸಾರವಾಗಿ ಶಿವತತ್ತ್ವೋಪದೇಶವಂಗೈದು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು (ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ) ಎಂಬ ಉಕ್ತಿಯಂತೆ ಪರಮಪವಿತ್ರವಾದ ವೀರಶೈವ ಮತವನ್ನು ಜಗತ್ತಿನಲ್ಲಿ ಸ್ಥಾಪನೆಮಾಡಿದ ವಿಷಯದಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟು ಸಭಿಕರಿಗೆ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಸ್ಫೂರ್ತಿದಾಯಕವಾದ ಭಾಷಣಮಾಡಿ ಸಭಿಕರಿಗೆ ಸಂತೋಷವನ್ನುಂಟುಮಾಡಿದರು. ಅನಂತರ ಶ್ರೀಗಳವರ ಶಿವಯೋಗಾನುಷ್ಠಾನಕ್ಕೆ ಸಮಯವಾದ ಕಾರಣ ಶ್ರೀ ಜಗದ್ಗುರು ಪಂಚಾಚಾರ್ಯಮಹಾರಾಜಕೀಜೈ, ಶ್ರೀ ಜಗದ್ಗುರು ನಾಗಲೋಟಿ ಭಿಕ್ಷಾವರ್ತಿ ಮಹಾರಾಜಕೀಜೈ ಎಂಬುವ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಭಕ್ತರು
ಪಾಟೀಲು ಭದ್ರಪ್ಪನವರು, ಹೂಲಿಕುಂಟೆ ಮಲ್ಲಪ್ಪನವರು.

ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದ ೮ ನೇ ವಾರ್ಷಿಕೋತ್ಸವವು.

ಗುಳೇದಗುಡ್ಡ.

ವಿಜಾಪುರ ಜಿ|| ಗುಳೇದಗುಡ್ಡ ಗ್ರಾಮದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘವೆಂಬ ಸಂಘವು ಸ್ಥಾಪಿತವಾಗಿ ಅಜಮಾಸು ೮ ವರ್ಷಗಳಾದವು. ಈ ಸಂಘವು ಪ್ರತಿವರ್ಷದಂತೆ ಈ ವರ್ಷವಾದರೂ ತನ್ನ ವಾರ್ಷಿಕೋತ್ಸವವನ್ನು ಅತಿವಿಜೃಂಭಣೆಯಿಂದ ನೆರವೇರಿಸಿತು. ಬಾಲ್ಯಾವಸ್ಥೆಯಲ್ಲಿದ್ದ ಈ ಸಂಘವನ್ನು ಉದ್ಧರಿಸುವುದಕ್ಕಾಗಿ ದಯಾಘನನಾದ ಪರಮಾತ್ಮನು ಒಬ್ಬ ಮಹಾಪುರುಷರನ್ನು ಕಳುಹಿಸಿರುವನೋ ಏನೋ ಅನ್ನುವಂತೆ ಹೋದ ಮಾಘಮಾಸದಲ್ಲಿ ವೇ|| ಶ್ರೀ ಪಂಚಾಕ್ಷರಶಾಸ್ತ್ರಿಗಳು ಶಿರೋಳ, ಇವರು ಈ ಸಂಘಕ್ಕೆ ದಯಮಾಡಿಸಿ, ತಮ್ಮ ಅಮೃತತುಲ್ಯವಾದ ಭಾಷಣದಿಂದ ಜನಮನವನ್ನು ಆಚಾರದ ಕಡೆಗೆ ತಿರುಗಿಸಿ ೫೦ ಜನ ಮೆಂಬರನ್ನಾಗಿಮಾಡಿ ಪ್ರೌಢಾವಸ್ಥೆಗೆ ತಂದ ಶ್ರೇಯಸ್ಸು ಈ ಮಹನೀಯರಿಗಲ್ಲದೆ ಇತರರಿಗೆ ಸಲ್ಲದು. ಭಕ್ತರ ಹಿತಚಿಂತನೆಯನ್ನು ಹಗಲಿರುಳೂ ಮಾಡುತ್ತಿರುವ ವೇ|| ಮುದಗಲ್ಲ ದೇಶಿಕರ ಅಧ್ಯಕ್ಷತೆಯಲ್ಲಿ ಈ ಸಂಘವು ಹೋದವರ್ಷ ತನ್ನ ಕರ್ತವ್ಯವನ್ನು ಸರಿಯಾಗಿ ಜರುಗಿಸಿತು. ಈ ವರ್ಷವಾದರೂ ಭಾದ್ರಪದ ಶು|| ೨ ಅಂದರೆ ಶುಕ್ರವಾರ (ತಾ|| ೨-೯-೩೨) ದಿವಸ ವೇ|| ಮುದಗಲ್ಲ ಶ್ರೀಗಳವರ ಸನ್ನಿಧಿಯಲ್ಲಿ ೮ ನೆಯ ವಾರ್ಷಿಕೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಮಧ್ಯಾಹ್ನ ಶ್ರೀಪಾದಪೂಜೆಯೂ ಗಣಾರಾಧನೆಯೂ ನಡೆದು ಸಾಯಂಕಾಲ ೬ ಘಂಟೆಗೆ ಎಲ್ಲ ಮಠೀಯರಿಂದೊಡಗೂಡಿದ ಮಹಾಸಭೆಯು ಶ್ರೀಗಳವರ ಸನ್ನಿಧಿಯಲ್ಲಿ ಕೂಡಿತು. ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರಿ ಶಾಸ್ತ್ರಿಗಳವರು ಪರಮಶಿವನ ಲೀಲೆ ಶ್ರೀ ಶಿವಪ್ಪಯ್ಯನವರು ಹೀಲಗುಂದ ಇವರ ದಿವ್ಯಚರಿತ್ರವನ್ನು ಜನರಮೇಲೆ ಪರಿಣಾಮವಾಗುವಂತೆ ಹೇಳಿ ಎಲ್ಲರನ್ನೂ ಸಂತೋಷಪಡಿಸಿದರು. ಇದರಂತೆಯೇ ಭಾದ್ರಪದ ಶು|| ೩ ಮತ್ತು ೪ ನೇ ದಿವಸ ಸಭೆಯು ಕೂಡಿತು. ಇಲ್ಲಿಯ ಬೆಂಚ ಮ್ಯಾಜಿಸ್ಟ್ರೇಟರು, ಮುನಿಸಿಪಲ್ ಕೌನ್ಸಿಲರು ಡಾಕ್ಟರರು, ಮಹಾಜನಗಳು, ಮತ್ತು ಅನೇಕ ಭಕ್ತರು ಆಗಮಿಸಿದ್ದರು. ವೇ|| ಶಾಸ್ತ್ರಿಗಳ ಮುಖದಿಂದ ಪುನಃ ಶಿವಪ್ಪಯ್ಯನವರ ಚರಿತ್ರವನ್ನು ಕೇಳಿ ಸಭಿಕರು ಆನಂದಪಟ್ಟರು. ಈ ಸಂಘದ ಸೆಕ್ರೆಟರಿಗಳು ಹಾಗೂ ಇಲ್ಲಿಯ ಇಂಗ್ಲೀಷ ಶಾಲಾ ಮಾಸ್ತರರು ಆದ ಗುರುಸಿದ್ಧಪ್ಪ ದೊಡ್ಡಮನಿ ಇವರು ಈಗೀಗ ಹೊರಟಿರುವ ಜಾತಿಸಾಂಕರ್ಯಸಂಘಗಳಿಗೆ ಸಕ್ತರಾಗಿ ನರಕ ಯಾತನೆಯನ್ನು ಅನುಭವಿಸಬೇಡಿರೆಂದೂ, ಇಂಥ ಸಂಘಗಳು ಕೇವಲ ರಾಕ್ಷಸಿಸಂಘಗಳಾಗಿರುವವೆಂದೂ ಸಪ್ರಮಾಣವಾಗಿ ಭಾಷಣಮಾಡಿ ತಮ್ಮ ಸಂಘದ ವಾರ್ಷಿಕವರದಿಯನ್ನು ಓದಿ ಹೇಳಿದರು. ಈ ಸಂಘದ ಸತ್ಕಾರ್ಯದ ಕರ್ತವ್ಯಗಳನ್ನು ನೋಡಿ ೮ ಜನ ಮಹಾಶಯರು ಸಂತೋಷದಿಂದ ಈ ಸಂಘದಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲು ತಮ್ಮ ಹೆಸರನ್ನು ತಿಳಿಸಿದರು. ಜಗದಾಚಾರ್ಯರ ಮಂಗಳಸ್ತೋತ್ರವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ಮೈಸೂರು ನವರಾತ್ರಿಹಬ್ಬ.

ಹಬ್ಬಗಳಲ್ಲಿ ನವರಾತ್ರಿಯು ಬಹುದಿವಸನಡೆಯುವ ಹಬ್ಬ.

ಇದು ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿಯವರೆಗೂ ನಡೆಯುವುದು. ಈ ಹತ್ತುದಿವಸಗಳು, ಮನೆಗಳಲ್ಲಿಯೂ, ಗುಡಿಗಳಲ್ಲಿಯೂ, ದೇವರಿಗೆ ಅಭಿಷೇಕ ಮುಂತಾದುವನ್ನು ಮಾಡುವರು. ರಾಮಾಯಣವನ್ನೂ ಸಪ್ತಶತಿಯನ್ನೂ ಪಾರಾಯಣಮಾಡುವರು. ಈ ಹಬ್ಬದಲ್ಲಿ ಶ್ರೀಮನ್ಮಹಾರಾಜರವರು ಸಿಂಹಾಸನದ ಮೇಲೆ ಕುಳಿತುಕೊಳ್ಳುವರು. ಆ ಕಾಲದಲ್ಲಿ ಅನೇಕ ವಿನೋದಗಳು ನಡೆಯುವುವು. ಇದಕ್ಕಾಗಿಯೇ ಈ ಹತ್ತು ದಿವಸವೂ ಪಾಠಶಾಲೆಗಳಿಗೆ ಪೂರ್ಣವಾಗಿ ರಜಾ ಕೊಡಲ್ಪಡುತ್ತಿದ್ದಿತು. ಇದರಿಂದ ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ದೇವರ ಪೂಜೆ ಪಾರಾಯಣ ನವರಾತ್ರಿಯ ಉತ್ಸವವನ್ನು ನೋಡಲು ಹೋಗುವುದು ಮೊದಲಾದ ಸತ್ಕಾಲಕ್ಷೇಪವು ಸುಲಲಿತವಾಗಿ ನಡೆಯುತ್ತಿದ್ದಿತು. ಸರ್ಕಾರದವರು ಈ ಹತ್ತು ದಿವಸ ಸಾಲದೆಂದು ಎರಡು ದಿವಸ ಹೆಚ್ಚಿಗೆ ಎಂದರೆ ಹನ್ನೆರಡು ದಿವಸಗಳ ರಜಾ ದಯಪಾಲಿಸಿದ್ದರು. ಇದು ಮತ್ತಷ್ಟು ಅನುಕೂಲವಾಗಿದ್ದಿತು. ಆದರೆ ಸರಕಾರದವರು ಈ ವರ್ಷದಿಂದ ಸದರಿ ರಜಾದಿನಗಳನ್ನು ವಜಾಮಾಡಿರುವದರಿಂದ ನವರಾತ್ರಿಯ ಹಬ್ಬಕ್ಕೆ ಕುಂದಕ ಬಂದಿತು. ಶ್ರೀಮನ್ಮಹಾರಾಜರವರು ಸಿಂಹಾಸನಾರೂಢರಾಗಿದ್ದಾಗ ನಡೆಯುವ ನಿತ್ಯವಿನೋದಗಳನ್ನು ನೋಡುವುದು ದೇವರ ಪೂಜೆ ಮಾಡುವುದು ಮೊದಲಾದ ಕೆಲಸಗಳಿಗೆ ವಿಘ್ನವೊದಗಿತು. ಈ ಸುದಿವಸಗಳ ಕಾಲದಲ್ಲಿ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಬಂಧನಕ್ಕೊಳಗಾಗಿದ್ದಾರೆ. ಇದನ್ನೆಲ್ಲಾ ಶ್ರೀಮನ್ಮಹಾರಾಜ ಸರ್ಕಾರದವರು ಪರ್ಯಾಲೋಚಿಸಿ ಈ ಬಂಧನವನ್ನು ತಪ್ಪಿಸಿ ಹಿಂದಿನಂತೆ ನವರಾತ್ರಿಯ ಹಬ್ಬಕ್ಕೆ ಹನ್ನೆರಡು ದಿವಸಗಳ ರಜಾ ದಯಪಾಲಿಸಿ ಸತ್ಕಾಲಕ್ಷೇಪಗಳಲ್ಲಿ ನೆರವಾಗುವಂತೆ ಮಾಡುತ್ತಾರೆಂದು ಕೋರುತ್ತೇನೆ.

ಸಿ. ಎಸ್. ಹಾಲಪ್ಪ,
ಚಿರಡೋಣಿ.

ಪಂಚಾಚಾರ್ಯ ಪ್ರಭಾ.

೧೯೩೨ನೇ ಸೆಪ್ಟಂಬರ್ ತಾ|| ೨೬ನೇ ಸೋಮವಾರ.

ಮಹಾತ್ಮರ ನಿರಶನವ್ರತ.

ಈ ಕಲಿಯುಗದಲ್ಲಿ ಎಲ್ಲಿ ನೋಡಿದರೂ ನಾವು ಸಾಧುಗಳು ತಾವು ಸಾಧುಗಳು ಎಂದು ವಿಜೃಂಭಿಸುತ್ತ ಕೇವಲ ಸ್ವೋದರಂಭರಿಗಳಾಗಿ ಲೇಶಮಾತ್ರವೂ ಪರೋಪಕಾರವಿಲ್ಲದೆ ವಿದ್ಯಾವಿಹೀನರಾದ ಸಾಧುವೇಷಧಾರಿಗಳ ಸಂಖ್ಯೆಯು ಜಗತ್ತಿನಲ್ಲಿ ಬಹಳವಾಗಿ ಕಾಣಿಸಿಕೊಳ್ಳುತ್ತಲಿದೆ. ಇಂಥವರಿಂದ ಪ್ರಪಂಚೋದ್ಧಾರವಾಗಲಿ, ಆತ್ಮೋದ್ಧಾರವಾಗಲಿ ಯಾವುದೊಂದೂ ನಡೆಯಲಾರದು. ಆದರೆ

ಶೈಲೇಶೈಲೇ ನ ಮಾಣಿಕ್ಯಂ ಮೌಕ್ತಿಕಂ ನ ಗಜೇಗಜೇ |
ಸಾಧವೋ ನಹಿ ಸರ್ವತ್ರ ಚಂದನಂ ನ ವನೇವನೇ ||

ಎಂಬ ನೀತಿಯಂತೆ ಬೆಟ್ಟಬೆಟ್ಟಗಳಲ್ಲೆಲ್ಲಾ ರತ್ನಗಳು ಹೇಗೆ ದೊರೆಯುವುದಿಲ್ಲವೋ ಕಂಡಕಂಡ ಆನೆಗಳ ಕುಂಭಸ್ಥಳಗಳಲ್ಲೆಲ್ಲಾ ಮುತ್ತುಗಳು ಹೇಗೆ ಸಿಗುವುದಿಲ್ಲವೋ ಕಂಡಕಂಡ ಕಾಡುಗಳಲ್ಲೆಲ್ಲಾ ಶ್ರೀಗಂಧದ ಮರಗಳು ಹೇಗೆ ಬೆಳೆಯುವುದಿಲ್ಲವೋ ಹಾಗೆ ಕಾಯವಾಙ್ಮನಸ್ಸುಗಳಲ್ಲಿಯೂ ಏಕಾಕೃತಿಯುಳ್ಳ ನಿಜವಾದ ಸಾಧುಗಳು ಎಲ್ಲೆಲ್ಲಿಯೂ ದೊರೆಯಲಾರರು. ಪ್ರಕೃತದಲ್ಲಿ ಆತ್ಮೀಯದೃಷ್ಟಿಯಿಂದಲೂ ಬಹಿರ್ದೃಷ್ಟಿಯಿಂದಲೂ ಗಾಂಧಿಯವರೊಬ್ಬರೇ ನಿಜವಾದ ಸಾಧುಗಳಾಗಿದ್ದಾರೆ. ಇವರು ಪ್ರಪಂಚಕಲ್ಯಾಣಕ್ಕಾಗಿ ಸಂತೋಷದಿಂದ ಆತ್ಮಾರ್ಪಣಮಾಡಲು ಸಿದ್ಧರಿರುವರೆಂಬುವ ವಿಷಯವು ಎಲ್ಲರಿಗೂ ಮನಗಂಡಿದೆ. ಮಾನವನನ್ನು ಕೀಳುದಶೆಗೆಳೆಯುವ ಸ್ವಾರ್ಥವೆಂಬ ಪಿಶಾಚಿಯಂತೂ ಇವರನ್ನು ಬಿಟ್ಟು ಬಹುದೂರವಾಗಿ ಓಡಿಹೋಗಿದೆ. ತಮ್ಮಲ್ಲಿರುವ ಅಸಾಧಾರಣವಾದ ವಿದ್ಯಾಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ಪ್ರಪಂಚಹಿತಕ್ಕಾಗಿ ಉಪಯೋಗಿಸುತ್ತಿರುವರು. ಸ್ವರಾಜ್ಯಸಿದ್ಧಿಗಾಗಿ ಬಹುಕಾಲದಿಂದ ಆಲಸ್ಯನಿದ್ರೆಯಲ್ಲಿರುವ ಭಾರತೀಯರನ್ನೆಲ್ಲಾ ಸಂದಿಗೊಂದಿ ಬಿಡದಂತೆ ಸರ್ವತೋಮುಖವಾಗಿ ಅಮೃತಸ್ರಾವಿಯಾದ ತಮ್ಮ ಶಾಂತಿವಾಕ್ಯದಿಂದೆಚ್ಚರಿಸಿ ಪರಾಕ್ರಾಂತವಾದ ಭಾರತೀಯರ ನಿಜಧನವನ್ನು ಸುಲಭರೀತಿಯಲ್ಲಿ ಪಡೆಯಲು ದಾರಿಯನ್ನು ತೋರಿಸಿದರು. ಸ್ವರಾಜ್ಯಲಾಭೇಚ್ಛೆಯು ಬಾಲಾದಿವೃದ್ಧಪರ್ಯಂತವಾಗಿ ತುಂಬಿ ತುಳುಕುತ್ತಲಿದೆ. ಇನ್ನು ಅಲ್ಪಸ್ವಲ್ಪ ಹಠವಾದಿಗಳು ಮಾತ್ರ ಈ ಪಂಥಕ್ಕೆ ವಿರೋಧಿಗಳಾಗಿರುತ್ತಾರೆ. ಈ ಹಠವುಸಹ ಮಹಾತ್ಮರು ಪ್ರಾರಂಭಿಸಿರುವ ನಿರಶನವ್ರತದ ಫಲವಾಗಿ ಇಷ್ಟರಲ್ಲಿಯೇ ನಿರ್ನಾಮವಾಗದಿರಲಾರದು. ಭಾರತೀಯ ಮಹಾಪುರುಷನ ವೀರವ್ರತವನ್ನುನೋಡಿ ಎಂಥ ಕಲ್ಲೆದೆಯು ಸಹ ಕರಗದಿರಲಾರದು. ಈ ಸಮಯದಲ್ಲೂ ಯಾವನ ಹೃದಯವು ಇನ್ನೂ ಕರ್ಕಶವಾಗಿಯೇ ಇರುವುದೋ ಅವನನ್ನು ಒಂದು ದೊಡ್ಡ ಬಂಡೆಗಲ್ಲಿಗೆ ಹೋಲಿಸಬೇಕಾಗಿದೆ. ಮಹಾತ್ಮರು ಭಾರತಮಾತೆಯ ಪುತ್ರರಾದ ಅಲ್ಪಸ್ವಲ್ಪ ಕೋಮಿನ ವಿಭಜನೆಯನ್ನು ಸಹ ಸಹಿಸದೆ ಪ್ರಾಣವಾಯುವು ಹೋಗುವವರಿವಿಗೂ ನಿರಶನವ್ರತವನ್ನು ಕೈಕೊಂಡರೆಂದಮೇಲೆ ಇವರ ಹೃದಯಭೂಮಿಯಲ್ಲಿ ಭಾರತೀಯರ ಏಕೀಕರಣಾಂಕುರವು ಎಷ್ಟರಮಟ್ಟಿಗೆ ನಾಟಿರುವುದೆಂಬುದು ಇದರಿಂದಲೇ ಸ್ಪಷ್ಟವಾಗುತ್ತಲಿದೆ. ತಮ್ಮದೇಶಾಭಿಮಾನವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅಸ್ಪಶ್ಯ ಜನಗಳು ಏಕಮುಖದಿಂದ ಮಹಾತ್ಮರನ್ನು ಹಿಂಬಾಲಿಸಿರುತ್ತಾರೆ. ಇದರಲ್ಲಿ

ಘಟಂಭಿಂದ್ಯಾತ್ ಪಟಂಛಿಂದ್ಯಾತ್ ಕುರ್ಯಾದ್ರಾಸಭರೋಹಣಂ |
ಯೇನಕೇನಪ್ರಕಾರೇಣ ಪ್ರಸಿದ್ಧಃಪುರುಷೋ ಭವೇತ್ ||

ಎಂಬಂತೆ ಅಸ್ಪೃಶ್ಯವರ್ಗದ ಮುಂದಾಳುಗಳೆಂದು ಹೇಳುತ್ತಿರುವ ಒಂದೆರಡು ಜನಗಳು ಮಾತ್ರ ಮಹಾತ್ಮರಿಚ್ಛೆಗೆ ಪ್ರತಿಭಟಿಸಿ ನಿಂತಿದ್ದರಿಂದ ಇಂತಹ ದುರ್ದೆಶೆಯು ಪ್ರಾಪ್ತವಾಯಿತು. ಉಪಾಯವಿಲ್ಲ

ಅಪತ್ಸ್ವೇವಹಿ ಮಹತಾಂ ಶಕ್ತಿರಭಿವ್ಯಜ್ಯತೇ ನ ಸಂಪತ್ಸು |
ಅಗುರೋಸ್ತಥಾ ನಗಂಧಃ ಪ್ರಾಗಸ್ತಿಯಥಾಗ್ನಿಪತಿತಸ್ಯ ||

ಅಗಿಲು ಎಂಬ ಧೂಪವನ್ನು ಬೆಂಕಿಗೆ ಹಾಕದ ಮುನ್ನ ಸುಗಂಧವು ಹೇಗೆ ಹೊರಡುವುದಿಲ್ಲವೋ ಹಾಗೆ ಮಹಾತ್ಮರ ಶಕ್ತಿಯು ಎಂಥದೆಂಬುದು ವಿಪತ್ತೊದಗಿದ ಕಾಲದಲ್ಲಿಯೇ ತೋರಬೇಕಲ್ಲದೆ ಸಂತೋಷಕಾಲದಲ್ಲಿ ತೋರುವುದಿಲ್ಲ ಎಂಬುಕ್ತಿಯಂತೆ ಇದೊಂದು ಮಹಾತ್ಮರ ಸತ್ವಪರೀಕ್ಷಾಕಾಲವಾಗಿದೆ.

ಮಹಾತ್ಮಾ ಗಾಂಧಿಯವರು ಉಪವಾಸವ್ರತವನ್ನಾರಂಭಿಸಿ ಇಲ್ಲಿಗೆ ಒಂದು ವಾರವಾಯಿತು. ಪಂಡಿತ ಮಾಳವೀಯ ಮುಂತಾದ ಮುಖಂಡರು ಇದನ್ನು ತಡೆಯಬೇಕೆಂದು ಅಲ್ಲಲ್ಲಿ ಪ್ರಚಂಡಸಭೆಗಳನ್ನು ಮಾಡುತ್ತ ವಿರೋಧಭಾವವನ್ನು ತಪ್ಪಿಸಲು ಸಾಹಸಮಾಡಿದರೂ ಯಾವ ನಿರ್ಧಾರಕ್ಕೂ ಬರದೇ ಇದ್ದುದರಿಂದ ಮಹಾತ್ಮರು ನಿರಶನವ್ರತವನ್ನು ಕೈಕೊಳ್ಳಲೇಬೇಕಾಯಿತು. ಮಹಾತ್ಮರ ಧರ್ಮಪತ್ನಿಯವರು ಸಹ ಪ್ರಭುತ್ವದವರಿಂದ ಮಹಾತ್ಮರಿದ್ದೆಡೆಗೆ ಸಾಗಿಸಲ್ಪಟ್ಟರು. ಮಹಾತ್ಮರ ಅನುಚರರೆಲ್ಲರೂ ತಮ್ಮ ತಮ್ಮ ಶಕ್ತಿಪಾತ್ರಕ್ಕನುಸಾರವಾಗಿ ಇವರನ್ನು ಹಿಂಬಾಲಿಸಿ ಉಪವಾಸವ್ರತಕ್ಕಾರಂಭಿಸಬೇಕಾಯಿತು. ಹೆಂಗಸರೂ ಉಪವಾಸ, ಗಂಡಸರೂ ಉಪವಾಸ, ಮಕ್ಕಳೂ ಉಪವಾಸ ಹೀಗೆ ಉಪವಾಸವೆಂಬುವದು ವಿಶ್ವರೂಪವನ್ನು ಧರಿಸಿತು. ಈ ಅನಿಷ್ಟಪರಂಪರೆಗಳನ್ನೆಲ್ಲಾ ನೋಡಿದರೆ ಯಾರಯಾರ ಪ್ರಾಣಗಳು ಏನಾಗುವುವೋ ಯಾರ ಪ್ರಾಣಗಳು ಭಗವಂತನ ಸಾನ್ನಿಧ್ಯವನ್ನು ಹೊಂದುವುವೋ ಎಂಬ ಸಂಶಯ ತರಂಗಗಳುದಯಿಸಹತ್ತಿದವು. ಈಗ ಸಾವಿರಾರು ವರ್ಷಗಳಿಂದಲೂ ಗಾಂಧಿಯವರಂಥ ಸಾಧುಗಳು ಭಾರತಮಾತೆಯ ಗರ್ಭದಲ್ಲಿ ಉದಯಿಸದಿರುವುದರಿಂದ ಪರದಾಸ್ಯದಿಂದ ಬಳಲುತ್ತಿರುವ ಈಕೆಯ ಪುಣ್ಯೋದರದಲ್ಲಿ ಕಿಂಚಿದ್ದೈವಯೋಗದಿಂದ ಮಹಾತ್ಮರವತರಿಸಿ ತಾಯಿಗೆ ಸುಖಸಂತೋಷವನ್ನುಂಟುಮಾಡಬೇಕೆಂದಿರುವಲ್ಲಿ “ಮೂಲೇ ಕುಠಾರಃ” ಎಂಬುವಂತೆ ಇದೊಂದು ಅಪರಿಹಾರ್ಯವಾದ ವಿಪತ್ತು ಬಂದೊದಗಿದೆ. ಈ ವಿಪತ್ತನ್ನು ಪರಿಹಾರಮಾಡುವ ಶಕ್ತಿಯನ್ನು ದಯಾನಿಧಿಯಾದ ಭಗವಂತನೊಬ್ಬನು ಪಡೆದಿರುವನಲ್ಲದೆ ಇನ್ನಾರೂ ಪಡೆದಿರುವುದಿಲ್ಲ. ಬೀಸುವ ದೊಣ್ಣೆಯನ್ನು ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂಬ ಗಾದೆಯಂತೆ ಈಗೊದಗಿದ ವಿಪತ್ತೊಂದು ಪರಿಹಾರವಾದರೆ ಭಾರತೀಯರಿಗೆ ಇನ್ನು ಸರ್ವತೋಮುಖವಾದ ಜಯವೆಂಬುದರಲ್ಲಿ ಸಂಶಯವಿಲ್ಲ. ಮೊನ್ನೆ ೨೪ ನೇ ತಾರೀಕಿನ ದಿವಸ ಮಧ್ಯಾಹ್ನ ಮುಖಂಡರೆಲ್ಲರೂ ಈ ವಿಷಯದಲ್ಲಿ ತಮ್ಮತಮ್ಮೊಳಗೆ ಸರ್ವಸಮ್ಮತವಾದ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆಂದು ತಿಳಿದುಬಂದಿರುತ್ತದೆ. ಆದರೆ ಈ ಒಪ್ಪಂದವನ್ನು ಬ್ರಿಟಿಷ್ ಮಂತ್ರಿಮಂಡಲದವರಂಗೀಕಾರಮಾಡಿ ಹಿಂದಿನ ತಮ್ಮ ತೀರ್ಮಾನವನ್ನು ಬದಲಾಯಿಸುವ ವರಿಗೂ ಮಹಾತ್ಮರು ಉಪವಾಸವ್ರತವನ್ನು ನಿಲ್ಲಿಸುವಂತಿಲ್ಲವು. ಮಹಾತ್ಮರಿಗೊದಗಿದ ಘೋರ ವಿಪತ್ತನ್ನು ತಪ್ಪಿಸುವುದಕ್ಕಾಗಿ ಭಾರತೀಯ ಪ್ರಮುಖರು ಒಮ್ಮನಸ್ಸಿನಿಂದ ಮಾಡಿರುವ ಒಪ್ಪಂದದಂತೆ ತಕ್ಷಣವೇ ಪ್ರಭುತ್ವದವರು ತಮ್ಮ ಹೃದಯ ಪರಿವರ್ತನ ಮಾಡಿ ಮಹಾತ್ಮರ ಉಪವಾಸ ವ್ರತವನ್ನು ಉಪಸಂಹಾರ ಮಾಡಿಸುವಂತೆ ಪರಮೇಶ್ವರನು ಪ್ರೇರಿಸಲಿ.

ಒಳದೇಶದ ವೃತ್ತಾಂತಗಳು

ಪೂನಾಪಟ್ಟಣಕ್ಕೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಪರಿವಾರ ಸಮೇತರಾಗಿ ಕಳೆದ ಸೋಮವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಆಕ್ಟೋಬರು 10 ನೆಯ ತಾರೀಖಿನ ದಿವಸ ಮಧ್ಯಾಹ್ನ 12 ಗಂಟೆಗೆ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದು.

ರಾಜಕೀಯ ಚಳವಳಿಯ ಸಂಬಂಧದಲ್ಲಿ ಅಂಕೋಲಾದಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದ ಶ್ರೀ|| ವಿ. ಎಸ್. ನಾರಾಯಣರಾಯರು ಮತ್ತು ಎಸ್. ರಾಮಸ್ವಾಮಿಯವರು ಆರಾರು ತಿಂಗಳ ಕಠಿಣಸಜೆಗೆ ಗುರಿಯಾದರು.

ಮೈಸೂರು ಮಹಾರಾಜಾಕಾಲೇಜಿನ ಸೀನಿಯರ್ ಬಿ ಎ ತರಗತಿಯ ವಿದ್ಯಾರ್ಥಿಯಾದ ಶ್ರೀ|| ಎಫ್. ಬಿ. ಕುಲಕರ್ಣಿ ಎಂಬುವರು ಮಹಾತ್ಮರ ಉಪವಾಸವ್ರತದ ಸಂಬಂಧವಾಗಿ 5 ದಿನಗಳವರೆಗೆ ಉಪವಾಸ ಮಾಡಿದರೆಂದು ತಿಳಿದುಬಂದಿದೆ.

ಅರಸೀಕೆರೆ ತಾಲೂಕು ದಿಬ್ಬೂರು ಸ್ಕೂಲ್ ಹೆಡ್ಮಾಸ್ಟರಾದ ಶ್ರೀ ಎ. ಚನ್ನಪ್ಪನವರು ನವರಾತ್ರಿಯ ರಜಾಕಾಲದಲ್ಲಿ ‘ಪ್ರಭಾ’ ಪತ್ರಿಕೆ ಮತ್ತು ಇತರ ವೀರಶೈವ ಮತಗ್ರಂಥಗಳ ಪ್ರಚಾರಕಾರ್ಯಕ್ಕಾಗಿ ಹೊರಡತಕ್ಕವರಾಗಿರುತ್ತಾರೆ. ಅಸಾಧಾರಣ ಗುರುಭಕ್ತರೂ, ಸಮಾಜದ ಅಭಿಮಾನಿಗಳೂ ಆದ ಇವರು ಕೈಕೊಂಡಿರುವ ಕಾರ್ಯವು ಯಶಸ್ವಿಯಾಗುವಂತೆ ಶ್ರೀಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲಿ !

ದೀಪಾವಳಿ ಮೊದಲಾದ ಹಬ್ಬಗಳ ಸಮಯದಲ್ಲಿ ಪೊಟಾಷ್, ಮಣಿಶಿಲೆ, ಹರಿದಾಳ, ಗಂಧಕ ಮೊದಲಾದ ಅಪಾಯಕರಗಳಾದ ಪದಾರ್ಥಗಳನ್ನು ಮಿಶ್ರಮಾಡಿ ಸಿಡಿಮದ್ದನ್ನು ತಯಾರಿಸುವಾಗ್ಗೆ ಅನೇಕರಿಗೆ ಅಪಾಯಗಳು ಸಂಭವಿಸುತ್ತಿರುವುದರಿಂದ ಇನ್ನುಮುಂದೆ ಇಂಥ ಅಪಾಯಕರಗಳಾದ ಪದಾರ್ಥಗಳನ್ನು ತಯಾರಿಸಕೂಡದೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ. ಈ ನಿಬಂಧನೆಯನ್ನು ಮೀರಿ ನಡೆಯತಕ್ಕವರು ಶಿಕ್ಷೆಗೆ ಗುರಿಯಾಗುವರು.

ರಾಜಧಾನಿಯ ಶ್ರೀ ಚಾಮುಂಡೇಶ್ವರೀ ಕರ್ನಾಟಕ ನಾಟಕ ಸಭೆಯವರು ಕಳೆದ ಭಾನುವಾರ (ತಾ|| 18-9-22) ದಿವಸ ಸಾಯಂಕಾಲ ಶ್ರೀ ಗಣಪತಿಯ ಮಂಗಳಾರತಿಯನ್ನು ತಮ್ಮ ನಾಟಕಮಂದಿರದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ವಿದ್ಯುದ್ದೀಪಮಾಲೆಗಳಿಂದ ಶೃಂಗರಿಸಲ್ಪಟ್ಟಿದ್ದ ಮನೋಹರವಾದ ಪೂಜಾಮಂಟಪವೂ, ಕಂಪೆನಿಯ ಮೆಂಬರರ ಭಕ್ತಿಶ್ರದ್ಧಾದಿಗಳೂ, ಆಸ್ಥಾನವಿದ್ವಾನ್ ಸಂಗೀತಶಾಸ್ತ್ರರತ್ನ ವೇ|| ವಾಸುದೇವಾಚಾರ್ಯರ ಅಭೂತಪೂರ್ವವಾದ ಹಾಡುಗಾರಿಕೆಯೂ ಸಭಿಕರನ್ನು ಆತ್ಮಾನಂದಗೊಳಿಸಿದುವು.

ಸತ್ಯಾಗ್ರಹಸಮರವಾರ್ತೆ.

ಇದೇ ಸೆಪ್ಟಂಬರ್ 20 ನೆಯ ತಾರೀಖಿನ ದಿವಸ ಮುಂಬಯಿಯ 5 ನೆಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು, ಪೆರೋಲಿನ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ರಾಮಚಂದ್ರ ಕೃಷ್ಣಾಜಿ ರುಂಡೆ ಮತ್ತು ರಾಮೇಶ್ವರದಾಸ ಶಿವಚಂದ್ರರಾಯ್ ಜೊಗೋಡ ಎಂಬ ಇಬ್ಬರು ಕಾಂಗ್ರೆಸ್ ಕೆಲಸಗಾರರಿಗೆ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಮೊಹಲ್ಲಾರಾವಲ್ ಮತ್ತು ಭಾಸ್ಕರಭಿಕಾಜಿ ಎಂಬ ಇಬ್ಬರು ಕಾಂಗ್ರೆಸ್ ಕೆಲಸಗಾರರು ಮುಂಬಯಿ ಪೋಲೀಸ್ ಕಮಿಷನರ ಪೆರೋಲ್ ಆರ್ಡರನ್ನು ಉಲ್ಲಂಘಿಸಿದರೆಂಬ ಕಾರಣದಮೇಲೆ ಒಂದೊಂದು ವರ್ಷ ಕಠಿಣ ಸಜೆಗೆ ಗುರಿಯಾದರು. 19 ನೇ ತಾರೀಖಿನ ದಿವಸ ಕಾಲ್ಬಾದೇವಿ ರಸ್ತೆಯಲ್ಲಿ ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ ಇಬ್ಬರು ಕಾಂಗ್ರೆಸ್ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಇದೇ ಸೆಪ್ಟಂಬರ್ 19 ನೇ ತಾರೀಖಿನ ದಿವಸ ಸಾಯಂಕಾಲ ಡೋಂಗ್ರಿ (ಮುಂಬಯಿ) ಪೋಲೀಸರು, ಕಾಂಗ್ರೆಸ್ ಎಮರ್ಜನ್ಸಿ ಕೌನ್ಸಿಲ್ಲಿನ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದ ಜೇಕಬ್ ಜಾರ್ಜ ಎಂಬ ಕ್ರಿಶ್ಚಿಯನ್ ಸ್ವಯಂಸೇವಕನನ್ನು ದಸ್ತಗಿರಿ ಮಾಡಿದರು.

ಮುಂಬಯಿಯ ಚಂದ್ರಪ್ರಕಾಶ ಎಂಬ ಹಿಂದೂ ತರುಣನು ಕಾಲ್ಬಾದೇವಿ ರಸ್ತೆಯಲ್ಲಿ ಕಾಂಗ್ರೆಸ್ ಸ್ವಯಂಸೇವಕರಿಗೆ ದುಡ್ಡು ಕೊಡುತ್ತಿದ್ದನೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟನು.

ಸೂರತ್ತಿನ ಪ್ಲೀಡರಾದ ಶ್ರೀ|| ರಣಧೀರ ಪಿ. ದೇಸಾಯರೂ, ಸೂರತ್ತಿನ ಮೊದಲನೇ ಸರ್ವಾಧಿಕಾರಿಗಳಾಗಿದ್ದ ಶ್ರೀ|| ಪ್ರಮೋದ ಕೆ. ದೇಸಾಯರೂ ಪೆರೋಲಿನ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಕಾರಣದ ಮೇಲೆ ಎರಡೆರಡು ವರ್ಷಗಳ ಕಠಿಣಸಜೆಗೆ ಗುರಿಯಾದರು.

ಇದೇ ಸೆಪ್ಟೆಂಬರು 18 ನೇ ತಾರೀಖಿನ ದಿವಸ ಅಲಹಾಬಾದಿನ ಪೋಲೀಸರು ಹೆವೆಟ್ ರೋಡಿನ ಒಂದು ಮನೆಯಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಮೀಟಿಂಗನ್ನು ಸೇರಿಸಿದ್ದ 15 ಜನ ಕಾಂಗ್ರೆಸ್ ಜನರನ್ನು ದಸ್ತಗಿರಿಮಾಡಿದರು. ಅಲ್ಲಿ ದೊರೆತ ನಗದು 150 ರೂ.ಗಳೂ ಕೆಲವು ಪುಸ್ತಕಗಳೂ ಮತ್ತು ರಿಜಿಸ್ಟರುಗಳು ಪೋಲೀಸರ ವಶವಾದುವು.

ಪರದೇಶೀ ವಸ್ತ್ರಗಳನ್ನು ಸುಡಲು ಪ್ರಯತ್ನಿಸಿದರೆಂಬ ಕಾರಣದಮೇಲೆ ಮುಂಬಯಿ ಪೋಲೀಸರು ಕಾಲ್ಬಾದೇವಿ ರಸ್ತೆಯಲ್ಲಿ 17 ಜನ ಸ್ವಯಂಸೇವಕರನ್ನೂ, ಪ್ರಿನ್ಸೆಸ್ ಸ್ಟ್ರೀಟಿನಲ್ಲಿ 7 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಕಾಂಗ್ರೆಸ್ ಕೆಲಸಗಾರನೆಂಬ ಕಾರಣದಮೇಲೆ ಕಳೆದ ಮಾರ್ಚಿ 15 ನೇ ತಾರೀಖಿನ ದಿವಸ ಉದಯಪುರಕ್ಕೆ ಗಡೀಪಾರುಮಾಡಲ್ಪಟ್ಟಿದ್ದ ಮೋಹನಲಾಲ ಕಣಿಲಾಲ ಎಂಬಾತನನ್ನು ಮುಂಬಯಿ ಪೋಲೀಸರು ಇದೇ ಸೆಪ್ಟಂಬರ್ 8 ನೆಯ ತಾರೀಖಿನ ದಿವಸ ಪುನಃ ದಸ್ತಗಿರಿಮಾಡಿದರು. ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ, ಅಪರಾಧಿಗೆ ಒಂದು ವರ್ಷ ಕಠಿಣಸಜೆಯನ್ನು ವಿಧಿಸಿದರು.

ವರ್ತಮಾನಸಂಗ್ರಹ

ಮಾರ್ಕ್ವಿಸ್ ಆಫ್ ಕ್ಲೈಡ್ಸ್‌ಡೇಲ್‌ರವರು ಹಿಮಾಲಯಾಪರ್ವತದ ಮೇಲೆ ವಿಮಾನದಲ್ಲಿ ಹಾರಾಡಬೇಕೆಂದು ನಿಶ್ಚಯಿಸಿರುತ್ತಾರೆ.

ಶ್ರೀ|| ವಿಠಲಬಾಯಿ ಪಟೇಲರವರು ಇದೇ ಸೆಪ್ಟೆಂಬರ್ 19 ನೇ ತಾರೀಖಿನ ದಿವಸ ಇಂಗ್ಲೆಂಡಿನಿಂದ ಅಮೇರಿಕೆಗೆ ಪ್ರಯಾಣಬೆಳೆಸಿದರು.

ಮುಂಬಯಿಯ ಭೇಂಡಿಬಜಾರಿನಲ್ಲಿ ವಾಸವಾಗಿದ್ದ ಹುಂಡಿಬಾಯಿ ಎಂಬ 22 ವರ್ಷದ ಯುವತಿಯು ಸರ್ವಾಲಂಕಾರಭೂಷಿತಳಾಗಿ ಆತ್ಮಹತ್ಯವನ್ನು ಮಾಡಿಕೊಂಡಳು. ಕಾರಣವು ಗೊತ್ತಿಲ್ಲ.

ಮೇಯರ್ ಫ್ರೀಡ್‌ಮನ್ ಎಂಬೊಬ್ಬ 26 ವರ್ಷದ ತರುಣನು ಪರರಿಗಾಗಿ 88 ಸಾರಿ ತನ್ನ ರಕ್ತವನ್ನು ಕೊಟ್ಟಿರುವನು. ಹೀಗೆ ಕೊಟ್ಟ ರಕ್ತವು ಒಟ್ಟು 11 ಗ್ಯಾಲನ್‌ಗಳಾಗಿರುವುದಂತೆ!

ಮಹಾತ್ಮಾ ಗಾಂಧಿಯವರು, ಸಾಬರ್ಮತಿ ಆಶ್ರಮದ ನಿವಾಸಿಗಳಿಗೆ ತಮ್ಮ ಉಪವಾಸವ್ರತದಬಗ್ಗೆ ಯಾರೂ ಕಳವಳಪಡಬೇಕಾಗಿಲ್ಲವೆಂದೂ ತಮ್ಮ ಪ್ರಾಯೋಪವೇಶದೀಕ್ಷೆಯ ದಿವಸವನ್ನು ಹಬ್ಬದದಿವಸದಂತೆ ಭಾವಿಸಬೇಕೆಂದೂ ಒಂದು ಪತ್ರವನ್ನು ಬರೆದಿರುತ್ತಾರೆ.

ಮಹಾತ್ಮರ ಪುತ್ರರಾದ ಶ್ರೀ|| ಎಂ. ಎಂ. ಗಾಂಧಿಯವರು ಇದೇ ಸೆಪ್ಟಂಬರ್ 19 ನೇ ತಾರೀಖಿನ ದಿವಸ ಆಫ್ರಿಕೆಯಿಂದ ಇಂಡಿಯಾಕ್ಕೆ ಪ್ರಯಾಣ ಮಾಡಿದರು. ಮಹಾತ್ಮರ ಉಪವಾಸ ವ್ರತಾಚರಣೆಯ ಕಾಲದಲ್ಲಿ ಅವರ ಸಮೀಪದಲ್ಲಿರಬೇಕೆಂಬುದೇ ಅವರ ಅಭಿಲಾಷೆಯಾಗಿರುವುದು.

ಅಮೇರಿಕೆಯ ನ್ಯೂಯಾರ್ಕ್‌ನಗರದ ಡಾಕ್ಟರ್ ಫ್ರೆಡರಿಕ್ ಟರ್ನೆಸ್ ಎಂಬುವರು ನೀರಿಗಿಂತಲೂ ಕಡಿಮೆ ಭಾರವುಳ್ಳ ಒಂದು ತರಹ ಇಟ್ಟಿಗೆಗಳನ್ನು ತಯಾರಿಸುವರು. ಈ ಇಟ್ಟಿಗೆಗಳಿಂದ ಮನೆಗಳನ್ನು ಕಟ್ಟಿದರೆ ಹೊರಗಡೆಯ ಶಬ್ದವು ಮನೆಯೊಳಕ್ಕೆ ಪ್ರವೇಶಿಸುವುದೇ ಇಲ್ಲವಂತೆ!

ಸದ್ಯಃ ಹಿಂದೂಸ್ಥಾನದಲ್ಲಿ ಸಂಚರಿಸುತ್ತಿರುವ ಇಂಡಿಯಾಲೀಗ್ ಡೆಪ್ಯುಟೇಷನ್ನಿನ ಮೆಂಬರರು ಮಹಾತ್ಮರ ಉಪವಾಸವ್ರತದಿಂದ ಉಂಟಾಗುವ ಪರಿಸ್ಥಿತಿಯ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿ, ಕೋಮುವಾರು ತೀರ್ಮಾನವನ್ನು ಹಂಗಾಮಿಯಾಗಿಯಾದರೂ ನಿಲ್ಲಿಸಬೇಕೆಂದು ಲಂಡನ್ನಿಗೆ ತಂತಿಕಳುಹಿಸಿರುತ್ತಾರೆ.

ಕಂದಾಯನಿರಾಕರಣಚಳವಳಿಯ ಸಂಬಂಧದಲ್ಲಿ ಎರಡನೆಯ ಸಾರಿ ಕಾರಾಗೃಹವಾಸಿಗಳಾಗಿರುವ ಮಹಾತ್ಮರ ಧರ್ಮಪತ್ನಿಯಾದ ಶ್ರೀಮತಿ ಕಸ್ತೂರಿಬಾಯಿಗಾಂಧಿಯವರು ಎರವಾಡಾ ಜೈಲಿಗೆ ಸಾಗಿಸಲ್ಪಟ್ಟಿರುವರು. ಅವರು ಹಗಲೆಲ್ಲಾ ಮಹಾತ್ಮರೊಡನೆ ಇರುತ್ತಾ ರಾತ್ರಿಯಕಾಲದಲ್ಲಿ ಮಾತ್ರ ಬೇರೆಕಡೆ ಮಲಗುವರು.

ಮಹಾತ್ಮಾ ಗಾಂಧಿಯವರು ತಮ್ಮ ವಚನದ ಪ್ರಕಾರವಾಗಿ ಇದೇ ಸೆಪ್ಟಂಬರ್ 20 ನೇ ತಾರೀಖಿನ ದಿವಸ 12 ಗಂಟೆಗೆ ಸರಿಯಾಗಿ ಉಪವಾಸವ್ರತವನ್ನು ಪ್ರಾರಂಭಿಸಿದರು. ಸರಕಾರದವರು ಮಹಾತ್ಮರನ್ನು ಹೊರಗಡೆ ಸಂಚರಿಸಕೂಡದೆಂಬ ನಿರ್ಬಂಧದಮೇಲೆ ಬಿಡುಗಡೆ ಮಾಡಬೇಕೆಂದು ಮಾಡಿದ ತೀರ್ಮಾನಕ್ಕೆ ಮಹಾತ್ಮರು ಒಪ್ಪದೇ ಹೋದುದರಿಂದ ಅವರು ಎರವಾಡಾ ಜೈಲಿನಲ್ಲಿಯೇ ಒಂದು ಬಂಗಲೆಯಲ್ಲಿ ಇಡಲ್ಪಟ್ಟಿರುವರು. ಸರಕಾರದವರು ಕೋಮುವಾರುಸಮಸ್ಯೆಯ ವಿಷಯವಾಗಿ ಅವಶ್ಯಕವಾದ ವ್ಯವಹಾರಗಳನ್ನು ನಡೆಯಿಸುವುದಕ್ಕಾಗಿ ಒಂದೊಂದುಸಾರೆ ಆರಾರು ಜನರಂತೆ ಮಹಾತ್ಮರನ್ನು ಬಂದುಕಾಣಲು ಮುಖಂಡರುಗಳಿಗೆ ಅವಕಾಶವನ್ನು ಕಲ್ಪಿಸಿರುತ್ತಾರೆ.

ಮಹಾತ್ಮಾ ಗಾಂಧಿಯವರು ತಮ್ಮ ನಿರಶನವ್ರತವನ್ನು ನಿಲ್ಲಿಸುವಂತೆ ಮಾಡುವುದಕ್ಕೋಸ್ಕರ ಕೋಮುವಾರು ಸಮಸ್ಯೆಯ ತೀರ್ಮಾನದಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ಮಾಡುವುದಕ್ಕಾಗಿ ಮುಂಬಯಿಯಲ್ಲಿ ನಡೆಯುತ್ತಿರುವ ಹಿಂದೂ ಮತ್ತು ಅಸ್ಪೃಶ್ಯರ ಮುಖಂಡರ ಸಮ್ಮೇಳನದಲ್ಲಿ ಇನ್ನೂ ಯಾವ ಸಮರ್ಪಕವಾದ ತೀರ್ಮಾನವೂ ಆಗಿಲ್ಲ. ಆದರೂ ಪರಿಸ್ಥಿತಿಯು ಆಶಾಜನಕವಾಗಿರುವುದು. ದೇಶದ ನಾನಾ ಕಡೆಗಳಲ್ಲಿಯೂ ಅಸ್ಪೃಶ್ಯರು ಸಭೆಸೇರಿ ಸಂಯುಕ್ತ ಚುನಾವಣೆಯನ್ನೇ ಅನುಮೋದಿಸಿ ಠರಾವುಗಳನ್ನು ಪಾಸುಮಾಡುತ್ತಿರುವರು. ಶುಕ್ರವಾರ ಮಧ್ಯಾಹ್ನದವರೆಗೆ ಬಂದಿರುವ ವರ್ತಮಾನದಲ್ಲಿ ಮುಖಂಡರು ಪರಸ್ಪರ ಒಪ್ಪಿಗೆಯಿಂದ ಒಂದು ತೀರ್ಮಾನಕ್ಕೆ ಬಂದಿರುವರೆಂದೂ, ಮಹಾತ್ಮರು ಅದರಲ್ಲಿ ಅನೇಕ ಅಂಶಗಳಿಗೆ ತಮ್ಮ ಒಪ್ಪಿಗೆಯನ್ನಿತ್ತಿರುವರೆಂದೂ, ಶನಿವಾರದ ದಿವಸ ಆಖೈರು ತೀರ್ಮಾನಕ್ಕೆ ಬರುವರೆಂದೂ ತಿಳಿದುಬಂದಿದೆ.

ಮಹಾತ್ಮರ ಉಪವಾಸವ್ರತದ ಸಂಬಂಧವಾಗಿ ಸೆ. 20 ನೇ ತಾರೀಖಿನ ದಿವಸ ಭರತಖಂಡದ ಎಲ್ಲ ಕಡೆಗಳಲ್ಲಿಯೂ ಹರತಾಳವೂ, ಉಪವಾಸವ್ರತವೂ, ಬಹಿರಂಗ ಸಭೆಗಳೂ ನೆರವೇರಿದವು. ಕೆಲವರು ಮಹಾತ್ಮರೊಡನೆ ನಿರಶನವ್ರತವನ್ನು ಕೈಕೊಂಡಿರುವರು. ಈ ಸಂಬಂಧವಾಗಿ ಮಹಾತ್ಮರು ಈ ಕೆಳಗೆಕಂಡ ಹೇಳಿಕೆಯನ್ನು ಹೊರಡಿಸಿರುತ್ತಾರೆ. ‘ನನ್ನ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಅನೇಕರು ಉಪವಾಸವ್ರತವನ್ನು ಕೈಕೊಂಡಿರುವುದಾಗಿ ಮೇಲಿಂದಮೇಲೆ ತಂತಿಗಳೂ, ಕಾಗದಗಳೂ ಬರುತ್ತಿರುವುವು. ಈ ವರ್ತನವನ್ನು ನಾನು ಖಂಡಿತವಾಗಿ ವಿರೋಧಿಸುವೆನು. ನನ್ನ ಮೇಲಿನ ವಿಶ್ವಾಸದಿಂದಾಗಲಿ, ಸಹಾನುಭೂತಿಯಿಂದಾಗಲಿ ಯಾರೂ ಉಪವಾಸವ್ರತವನ್ನು ಮಾಡಕೂಡದು. ಮಾಡುತ್ತಿದ್ದರೂ ಅದನ್ನು ಕೂಡಲೇ ನಿಲ್ಲಿಸಬೇಕು. ನನ್ನ ಬಗ್ಗೆ ಸಹಾನುಭೂತಿಯನ್ನು ತೋರಿಸುವುದಕ್ಕೆ ಅದು ಸರಿಯಾದಮಾರ್ಗವಲ್ಲ. ಅಂಥವರು ನನ್ನ ಉಪವಾಸದ ತತ್ವವನ್ನರಿತು, ಅಸ್ಪೃಶ್ಯರ ಸೇವೆಯನ್ನು ಕೈಕೊಳ್ಳಬೇಕು.’

ದಸರಾ ಮಹೋತ್ಸವ—ಪ್ರೋಗ್ರಾಂ.

(ಅಂಗಿರಸನಾಮಸಂವತ್ಸರದ ಆಶ್ವಯುಜ ಶುದ್ಧ)
ಅಕ್ಟೋಬರ್ 1932.

1 ನೇ ಶನಿವಾರ—ಪ್ರಾತಃಕಾಲ 8½ ಘಂಟೆಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಬೆಳೆಸುತ್ತಾರೆ. ದಿವಾನರಿಂದಲೂ, ಖಾಸಾ ಭಾವಮೈದಂದರಿಂದಲೂ, ಕೌನ್ಸಿಲರುಗಳಿಂದಲೂ. ಸರದಾರರುಗಳಿಂದಲೂ ಮತ್ತು ಮುಖ್ಯವಾದ ಅರಸುಗಳಿಂದಲೂ ನಜರ್. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕರೆಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಸಿವಿಲ್ ಆಫೀಸರುಗಳಿಂದಲೂ ಮತ್ತು ಅರಸುಗಳು ವಗ್ಗೈರೆ ದರ್ಬಾರಿಗಳಿಂದಲೂ ನಜರ್.

2 ನೇ ಭಾನುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೋಲೀಸ್ ಆಫೀಸರುಗಳಿಂದಲೂ ನಜರ್.

3 ನೇ ಸೋಮವಾರದಿಂದ 7 ನೇ ಶುಕ್ರವಾರದ ತನಕ ಪ್ರತಿದಿನ ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್.

8 ನೇ ಶನಿವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಪಟ್ಟದ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬೆಳೆದು ಅರಮನೆಗೆ 9 ಘಂಟೆಗೆ ಹಿಂದಕ್ಕೆ ಬಿಜಮಾಡುವುದು. ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ ಸಾಯಂಕಾಲ 7 ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

9 ನೇ ಭಾನುವಾರ—ಪ್ರಾತಃಕಾಲ 6½ ಘಂಟೆಗೆ ಆಯುಧ, ಗಜಾಶ್ವ ಬನ್ನೀಮಂಟಪಕ್ಕೆ ಬಿಜಮಾಡುವುದು. ಅನಂತರ ಜಟ್ಟೀಕಾಳಗ, ಸಾಯಂಕಾಲ 4 ಘಂಟೆಗೆ ಜಂಬೂಸವಾರಿ.

10 ನೇ ಸೋಮವಾರ—ಸಾಯಂಕಾಲ 7½ ಘಂಟೆಗೆ ದರ್ಬಾರ್. ಸಜ್ಜೆ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗಳಿಂದಲೂ ನಜರ್.

11 ನೇ ಮಂಗಳವಾರ—ಸಾಯಂಕಾಲ 7½ ಘಂಟೆಗೆ ದರ್ಬಾರ್.

“ ನಾನು ನಿರಾಶೆಯವನಲ್ಲ ”

ಮಹಾತ್ಮರ ಮಾತುಗಳು

ಮಹಾತ್ಮರು ಉಪವಾಸವನ್ನು ಪ್ರಾರಂಭಿಸಿದ ದಿವಸ ಪತ್ರಿಕಾ ಪತ್ರಿನಿಧಿಗಳೊಡನೆ ಮಾತುಕತೆಗಳನ್ನಾಡಿದರಷ್ಟೆ. ಆಗ್ಗೆ ‘ಟೈಮ್ಸ್ ಆಫ್ ಇಂಡಿಯಾ’ ಪತ್ರಿಕೆಯ ಬಾತ್ಮೀದಾರರ ಪ್ರಶ್ನೆಗೆ ಜವಾಬು ಕೊಡುತ್ತಾ ಗಾಂಧಿಯವರು ಈರೀತಿ ನುಡಿದರು :

“ ನಾನು ಯಾವಾಗಲೂ ಆಶಾವಾದಿಯಾಗಿದ್ದೇನೆ. ಭಗವಂತನು ನನ್ನ ಕೈ ಬಿಡದಿದ್ದರೆ, ನನ್ನ ಉಪವಾಸವ್ರತವು ಜೀವ ಹೋಗುವತನಕ ನಡೆಯಲಾರದೆಂದು ಆಶಿಸುವೆನು ”

ಯಾವುದೋ ಒಂದು ಫೋಟೋವನ್ನು ಗಾಂಧಿಯವರಿಗೆ ತೋರಿಸಿದಾಗ ಅವರು ದಹನಕ್ರಿಯೆಯ ವಿಷಯವಾಗಿ ಹಾಸ್ಯ ರೀತಿಯಲ್ಲಿ ಮಾತನಾಡಿದರು. ಆಗ್ಗೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಬಾತ್ಮೀದಾರರು, “ ಒಂದು ವೇಳೆ ಅಂಥಾಸನ್ನಿವೇಶವು ಪ್ರಾಪ್ತವಾದರೆ ದಹನ ಕ್ರಿಯೆಗಳ ಸಲುವಾಗಿ ನಿಮ್ಮ ಪುತ್ರ ದೇವದಾಸರಿಗೆ ಏನಾದರೂ ಸಲಹೆ ಕೊಟ್ಟಿರುವಿರೋ ? ಎಂದು ಕೇಳಿದರು. ಅದಕ್ಕೆ ಗಾಂಧಿಯವರು ಬಹಳ ವಿಚಿತ್ರ ರೀತಿಯಲ್ಲಿ ಈ ಕೆಳಗೆ ಕಂಡಂತೆ ಜವಾಬಿತ್ತರು.

“ ಅಂತ್ಯಜ ಜನಾಂಗದವರಿಗೆ ಅನ್ಯಾಯಮಾಡುವುದರ ಬದಲು ತನ್ನ ತಂದೆಯನ್ನು ಬಲಿಕೊಡಲು ತಯಾರಾಗಿರುವುದಾಗಿ ಹೇಳುವಂತೆ ದೇವದಾಸನಿಗೆ ತಿಳಿಸಿರುವೆನು. ”

ಉಪವಾಸದ ಪ್ರಶ್ನೆ ಬಂತು. ಪರಿಣಾಮದ ಬಗ್ಗೆ ಮಾತುಕತೆಗಳಾದವು. ಆಗ್ಗೆ ಗಾಂಧಿಯವರು ಈ ಪ್ರಕಾರ ತಿಳಿಸಿದರು.

“ ಜೀವಿಸಬೇಕೆಂದು ಎಲ್ಲರಂತೆ ನನಗೂ ಆಶೆಯಿದೆ. ಜೀವವನ್ನು ಬಹುಕಾಲ ಇಟ್ಟಿರುವುದಕ್ಕೆ ನೀರಿಗೆ ಅಪಾರವಾದ ಶಕ್ತಿಯಿದೆ. ನನಗೆ ಬೇಕೆಂದು ತೋರಿದಾಗ ನೀರನ್ನು ಕುಡಿಯುವೆನು. ಹಿಂದೂ ಸಮಾಜವು ಜಾಗ್ರತಗೊಳ್ಳುವವರೆಗೆ, ನಾನು ಜೀವವನ್ನಿಟ್ಟುಕೊಂಡಿರಲು ಮನುಷ್ಯಪ್ರಯತ್ನಕ್ಕೆ ಸಾಧ್ಯವಾದುದೆಲ್ಲವನ್ನೂ — ಮನುಷ್ಯಪ್ರಯತ್ನಕ್ಕೆ ಮೀರಿದುದನ್ನೂ ಮಾಡುವೆನು. ಹೆಚ್ಚೇಕೆ—ಬ್ರಿಟಿಷ್‌ಸರ್ಕಾರದ ಮನಸ್ಸು ಪರಿಪಕ್ವವಾಗುವವರೆಗೂ ಜೀವದಿಂದಿರಲು ಪ್ರಯತ್ನಿಸುವೆನು. ನನ್ನ ಕೂಗು ಭಗವಂತನ ಸಿಂಹಾಸನವನ್ನು ಮುಟ್ಟುವಂತೆ ಮಾಡುವೆನು.”

ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡು ಅಧ್ಯಕ್ಷತೆ.

ಹೊಸ ಪ್ರಕಟನೆಯ ಮೇರೆಗೆ ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರ ಚುನಾವಣೆಯು ಮುಂದೆ ಬರುವ ನವಂಬರು 1 ನೇ ತಾರೀಖಿನಲ್ಲಿ ಜರುಗಬಹುದಾಗಿದೆ.

ಈ ಸ್ಥಾನವು ಕಳೆದ ಹತ್ತುವರ್ಷಗಳಲಾಗಾಯಿತು ಒಂದೇ ವ್ಯಕ್ತಿಯ ಅಧೀನದಲ್ಲಿ ಇರುತ್ತದೆ. ಇತರ ಬಹು ಸಂಖ್ಯಾಕ ಜನರಿಗೆ ಅಸಾಧ್ಯಪ್ರಕರಣವೆನಿಸಿರುತ್ತದೆ. ಅದೇ ವ್ಯಕ್ತಿಯು ಆ ಸ್ಥಾನವನ್ನು ಪುನಃ ತಮ್ಮ ಪೂರ್ಣಸ್ವಾತಂತ್ರ್ಯ ಮಾಡಿಕೊಳ್ಳುವುದಕ್ಕೆ ಹಲವು ಪ್ರಯತ್ನ ಮಾಡಬಹುದು. ಬಹುಸಂಖ್ಯಾಕ ಜಾತಿವರ್ಗದವರ ಗತಿಹೀಗಾದಮೇಲೆ ಅಲ್ಪಸಂಖ್ಯಾಕಜನಾಂಗದವರ ಹಕ್ಕು ಬಾಧ್ಯತೆಗಳ ಪಾಡೇನು! ಆದುದರಿಂದ ಸರ್ವ ಜಾತಿವರ್ಗದವರಿಗೆ ನ್ಯಾಯ ಮತ್ತು ಸಮಾನತೆಯ ಬಗ್ಗೆ ಮತ್ತು ವ್ಯಕ್ತಿಸ್ವಾತಂತ್ರತೆ ಆಗದಂತೆ ಬಧ್ರಪಡಿಸುವ ಬಗ್ಗೆ ಸ್ಥಾನಪರಿಪಾಲನಸಂಸ್ಥೆಗಳಲ್ಲೊಂದು ಅಗ್ರಗಣ್ಯ ಸಂಸ್ಥೆಯೆನಿಸಿಕೊಂಡಿರುವ "ಮದ್ರಾಸು ಪುರಪಾಲನ ಸಂಸ್ಥೆಯವರು" ನಿಯೋಜಿಸಿದ ಏರ್ಪಾಡನ್ನು ಅನುಕರಣೆಯಲ್ಲಿ ತರುವುದಾಗಿ ಇದರ ಮೂಲಕ ಸೂಚಿಸುವುದಾಗಿದೆ. ಅಲ್ಲಿ ಹಿಂದುಳಿದವರ್ಗದವರು ಯಾವಾಗ್ಯೂ ಬಹು ಸಂಖ್ಯಾಕರಾಗಿದ್ದಾಗ್ಯೂ ಅಧ್ಯಕ್ಷರ ಸ್ಥಾನಕ್ಕೆ ಪ್ರತಿ ಚುನಾವಣೆಯಲ್ಲಿ ತಮ್ಮ ಹಿಂದುಳಿದವರ್ಗದವರನ್ನೇ ತರಬಹುದಾಗಿದ್ದಾಗ್ಯೂ ಮತ್ತು ಸರದಿಯಪ್ರಕಾರ ಒಂದು ಜಾತಿಯ ವರ್ಗದವರು ಒಂದೊಂದು ಸಲ ಅಧ್ಯಕ್ಷ ಸ್ಥಾನವನ್ನು ವಹಿಸುವಂತೆಯೂ ಅದರಲ್ಲೂ ಬಹು ಸಂಖ್ಯಾಕ ವರ್ಗದವರಿಗೆ ಮೊದಲನೆಸಲವೆಂತಲೂ ಹಿಂದಿನಿಂದ ಅಲ್ಪ ಸಂಖ್ಯಾವರ್ಗದವರು ಹೀಗೆಂದು ಅವರವರ ಹಕ್ಕುಸ್ಥಾಪನೆ ಮಾಡಿರುವರು. ಇದರ ಅನುಕರಣೆಯಿಂದ ಅಲ್ಪಸಂಖ್ಯಾಕರಾದ ಬ್ರಾಹ್ಮಣರು, ಮುಸಲ್ಮಾನರು, ಕ್ರಿಶ್ಚಿಯನರು, ಮುಂತಾದ ವರ್ಗದವರು ಕೂಡ ಸರದಿಯಪ್ರಕಾರ ಅಧ್ಯಕ್ಷಸ್ಥಾನಕ್ಕೆ ಭಾಗಿಗಳಾಗಿರುತ್ತಾರೆ. ಇಂಥಾಕ್ರಮನಿಯೋಜನೆಯಿಂದ ವ್ಯಕ್ತಿಸ್ವತಂತ್ರಾಧಿಕಾರವನ್ನು ಬಾಧಿಸಿದಂತಾಗುವುದಲ್ಲದೆ ಅಲ್ಪ ಸಂಖ್ಯಾಕ ವರ್ಗದವರಿಗೆ ಅಧಿಕಾರ ಒದಗಿಸಿದಂತಾಗುವುದು. ಇದರ ಅವಲಂಬನೆಯಿಂದ ನೀವೆಲ್ಲರೂ ಇತರ ಸ್ಥಾನಪರಿಪಾಲನ ಸಂಸ್ಥೆಗಳಿಗೆ ಮಾರ್ಗದರ್ಶಕರಾಗುವಿರಿ.

ಆದುದರಿಂದ ಈ ಸಾರಿ ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಾಗಿರುವ ನೀವುಗಳು ಒಬ್ಬರಿಗೊಬ್ಬರು ಸಹಾನುಭೂತಿಯನ್ನು ತೋರಿಸುತ್ತಾ, ಮೇಲೆ ನಿಯೋಜಿಸಿದ ಮೇರೆಗೆ ಬಹು ಸಂಖ್ಯಾಕರಿಗೂ ಅಲ್ಪ ಸಂಖ್ಯಾಕರಿಗೂ ಸರದಿಯಪ್ರಕಾರ ಸರ್ವಜಾತಿಯವರಿಗೂ ಪದವಿಯನ್ನು ಒದಗಿಸಿ ಕೊಡುವ ಕ್ರಮವನ್ನು ಏರ್ಪಡಿಸಿಕೊಳ್ಳುವುದಾಗಿ ನನ್ನ ಮನಃಪೂರ್ವಕವಾದ ವಿನಂತಿ. ಮೆಂಬರುಗಳೆಲ್ಲರೂ ಈಗಿನ ಪರಿಸ್ಥಿತಿಯ ಮಹತ್ವವನ್ನರಿತು ಸಕಾಲದಲ್ಲಿ ತಮ್ಮ ತಮ್ಮ ಕಾರ್ಯಗಳ ಜವಾಬ್ದಾರಿಗಳನ್ನು ಈ ಕಾರ್ಯಸಾಫಲ್ಯಕ್ಕಾಗಿ ವಿನಿಯೋಗಿಸುವರೆಂದು ಆಶಿಸುತ್ತೇನೆ.

ತೊಗರಿ ವೀರಮಲ್ಲಪ್ಪ,
ಹಾ|| ಮೋ|| ಬಳ್ಳಾರಿ.

ಶ್ರೀ ವಿಘ್ನೇಶ್ವರನ ಮಂಗಳಾರತಿ ಮಹೋತ್ಸವಗಳು.

ಸತ್ತಿಹಳ್ಳಿ, ಚಿಕ್ಕಮಗಳೂರು ತಾಲ್ಲೂಕು.

ಇದೇ ಮಾಹೆ 7 ನೇ ತಾರೀಖು ಬುಧವಾರ ಶ್ರೀವಿಘ್ನೇಶ್ವರನ ಮಂಗಳಾರತಿಯು ಮೇಲ್ಕಂಡ ಪಾಠಶಾಲೆಯ ಬಾಲಕರಿಂದ ನಡೆಯಿಸಲ್ಪಟ್ಟಿತು. ಅಲ್ಲಿದ್ದರು ಡಾ|| ಮ|| ಚಂದ್ರಶೆಟ್ಟರು ಕಾಫಿ ಪ್ಲಾಂಟರುಗಳಾದ ಬಾಸೀನ್‌ಶಾವ್ ಮಂಜೇಗೌಡರು ಕರೀಂಸಾಹೇಬರು ಅಲಿಅಕ್ಬರ್ ಸಾಹೇಬರು ಮೊದಲಾದ ದೊಡ್ಡ ಮನುಷ್ಯರುಗಳು ನೂರಾರು ಜನಕ್ಕೆ ಮೇಲ್ಪಟ್ಟು ಸೇರಿದ್ದರು. ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಅಲ್ಲಿದ್ದರು ಮ|| ಬಿ. ಪಿ. ಬಸಪ್ಪಶೆಟ್ಟರನ್ನು ಬಹುಮತದಿಂದ ಅಧ್ಯಕ್ಷರನ್ನಾಗಿ ಚುನಾಯಿಸಿದನಂತರ ದೇವರ ಪ್ರಾರ್ಥನೆಯು ಪಾಠಶಾಲೆಯ ಬಾಲಕರಿಂದ ಮಾಡಲ್ಪಟ್ಟಿತು. ತರುವಾಯ ಈ ಪಾಠಶಾಲೆಯ ಹೆಡ್ಮಾಸ್ಟರು ಮ|| ಸುಬ್ಬರಾಯರು ಮತ್ತು ಅಲ್ಲಿದ್ದರು ಪ್ರಾಥಮಿಕ ಪಾಠಶಾಲೆಯ ಹೆಡ್ಮಾಸ್ಟರು ಮ|| ಗೋವಿಂದಪ್ಪನವರು ಪ್ರಾಥಮಿಕ ವಿದ್ಯಾಭ್ಯಾಸದ ಹೆಚ್ಚು ಅವಶ್ಯಕತೆ ಮತ್ತು ಅದರ ಪ್ರಾಮುಖ್ಯತೆಯ ಮೇಲೆ ಸ್ವಾರಸ್ಯವಾಗಿ ಭಾಷಣಮಾಡಿದರು. ಆ ಮೇಲೆ ಡಾ|| ಚಂದ್ರಶೆಟ್ಟರು ಆರೋಗ್ಯನೈರ್ಮಲ್ಯ ಆಸ್ಪತ್ರೆಗಳಿಂದಾಗತಕ್ಕ ಪ್ರಯೋಜನಗಳ ಮೇಲೆ ಮಾತಾಡುತ್ತಾ, ವಿದ್ಯಾವಂತರಿಗೂ ಅವಿದ್ಯಾವಂತರಿಗೂ ಇರತಕ್ಕ ವ್ಯತ್ಯಾಸವನ್ನು ತೋರಿಸಿ ವಿದ್ಯಾವಂತನಾದವನು ಹೇಗೆ ತನ್ನ ಆರೋಗ್ಯ, ನೈರ್ಮಲ್ಯವನ್ನು ಕಾಪಾಡಿಕೊಂಡು, ಆಸ್ಪತ್ರೆಗಳ ಪ್ರಯೋಜನವನ್ನು ಹೊಂದುವನೆಂಬುದನ್ನೂ ಅವಿದ್ಯಾವಂತನಾದವನು ತಿಳುವಳಿಕೆಯಿಲ್ಲದೆ ರೋಗಪ್ರಾಪ್ತವಾದರೆ ಹೇಗೆ ಅದು ದೇವ, ಪೀಡೆಗಳಿಂದ ಉಂಟಾಯಿತೆಂಬ ಭಾವನೆಯನ್ನು ಹೊಂದುವನೆಂಬುದನ್ನೂ ಅದುದರಿಂದ ಸದ್ಯಕ್ಕೆ ವಿದ್ಯೆಯ ಆವಶ್ಯಕತೆ ಎಷ್ಟರಮಟ್ಟಿಗೆ ಇದೆ ಎಂಬುದನ್ನೂ ನೆರೆದಿದ್ದ ಎಲ್ಲಾ ಸಭಿಕರಿಗೂ ಚನ್ನಾಗಿ ಮನದಟ್ಟಾಗುವಂತೆ ಹೇಳಿದರು.

ತರುವಾಯ ಮ|| ಬಸಪ್ಪಶೆಟ್ಟರು ತಮ್ಮ ಉಪಸಂಹಾರ ಭಾಷಣದಲ್ಲಿ ನಮ್ಮ ದೇಶವು ಏಳಿಗೆಗೆ ಬರಬೇಕಾದರೆ ಹಳ್ಳಿಗಳು ಸುಧಾರಣೆಯನ್ನು ಹೊಂದಬೇಕೆಂದೂ, ಹಳ್ಳಿಗಾಡಿನ ರೈತರ ಮಕ್ಕಳು ಮೊದಲು ವಿದ್ಯಾವಂತರಾಗಬೇಕೆಂದೂ ಕೃಷಿ, ವಾಣಿಜ್ಯ, ಕೈಗಾರಿಕೆ ಪ್ರತಿಯೊಂದಕ್ಕೂ ವಿದ್ಯೆಯು ಬೇಕೆಂದೂ ಒತ್ತಿಹೇಳಿ ನಮ್ಮ ರೈತರುಗಳು ಬಹಳ ಚಿಕ್ಕ ವಯಸ್ಸಿನ ಬಾಲಕಬಾಲಕಿಯರನ್ನು ದನಕಾಯುವುದಕ್ಕೂ, ಹೊಲಗಳ ಕೆಲಸಕ್ಕೂ ಕಳುಹಿಸುತ್ತಿರುವುದು ತುಂಬಾ ವಿಷಾದಕರವಾದ ಸಂಗತಿ ಎಂದೂ ಆ ಸಣ್ಣ ಮಕ್ಕಳಿಗೆ ಹದಿನೈದು ವರ್ಷವಯಸ್ಸಾಗುವವರೆಗೂ ತಮಗೆ ಮಕ್ಕಳೇ ಇಲ್ಲವೆಂಬ ಭಾವನೆಯಿಂದ ಆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದೂ ಒತ್ತಿಹೇಳಿ ಈ ಪ್ರಾಂತದಲ್ಲಿ ಹಿಂದೂಗಳಿಗೂ ಮತ್ತು ಮುಸಲ್ಮಾನರಿಗೂ ಇರತಕ್ಕ ಒಗ್ಗಟ್ಟಿನ ವಿಷಯವನ್ನು ಪ್ರಸ್ತಾಪಿಸುತ್ತ ಈ ದಿವಸ ಯಾವ ಭೇದಭಾವನೆಯೂ ಇಲ್ಲದೆ ಹಿಂದೂಗಳೂ ಮಹಮ್ಮದೀಯರೂ ಸೇರಿರುವುದು ತುಂಬಾ ಸಂತೋಷಪ್ರದವಾಗಿದೆಯೆಂದೂ ಇದೇ ರೀತಿಯ ಮೈತ್ರಿಯು ಮತ್ತು ಒಗ್ಗಟ್ಟು ಯಾವಾಗಲೂ ಸ್ಥಿರವಾಗಿರಲೆಂದೂ ಹಾರೈಸಿ ತಮ್ಮ ಭಾಷಣವನ್ನು ಮುಗಿಸಿದರು. ಬಂದಿದ್ದ ಅತಿಥಿಗಳಿಗೆ ಫಲಪುಷ್ಪಗಳನ್ನು ಹಂಚಿಸಲಾಯಿತು. ಸಭೆಯು ಶ್ರೀಮನ್‌ಮಹಾರಾಜರವರ ಶ್ರೇಯಃಪ್ರಾರ್ಥನೆಯೊಂದಿಗೆ ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಕೆಂಗೇರಿ.

ಬೆಂಗಳೂರು ತಾಲ್ಲೂಕು ಕೆಂಗೇರಿ ಗ್ರಾಮದ ಮ|| ರಾ|| ಶ್ರೀ ರಂಗಪ್ಪ ಎಂಬುವರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿರತಕ್ಕ ಭಜನಾಮಂದಿರದಲ್ಲಿ ಭಕ್ತಾದಿಗಳೆಲ್ಲರೂ ಈಗ್ಗೆ ಎರಡು ವರ್ಷಗಳಿಂದಲೂ ವಿಘ್ನೇಶ್ವರನ ಪೂಜೆ ಉತ್ಸವಾದಿಗಳನ್ನು ಬಹಳ ವಿಜೃಂಭಣೆಯಿಂದ ನಡೆಸುತ್ತಾ ಇರುತ್ತಾರೆ.

ಈ ವರ್ಷವೂ ಮ|| ರಾ|| ನಂಜುಂಡಯ್ಯನವರು ಕಳೆದ ವರ್ಷಕ್ಕಿಂತಲೂ ಹೆಚ್ಚು ಶ್ರಮವಹಿಸಿ 6-9-32 ನೆಯ ದಿವಸ ಶ್ರೀ ಗಣಪತಿಯ ಮಂಗಳಾರತಿಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ಈ ಸಮಾರಂಭದಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರಾದ ವೆಂಕಟಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಬಾಲಕರಿಂದ ದೇವರ ಪ್ರಾರ್ಥನೆಯು ನಡೆದ ತರುವಾಯ ಬ್ರಹ್ಮಚರ್ಯಾಶ್ರಮದ ಬಾಲಕರಿಂದ ಭಗವದ್ಗೀತಾಧ್ಯಯನವಾದನಂತರ ಮ|| ರಾ|| ಸುಬ್ಬನರಸಿಂಹಶಾಸ್ತ್ರಿಗಳವರಿಂದ ಹಿಂದೂಮತಧರ್ಮ ವಿಷಯವಾಗಿ ಶಕ್ತ ಪ್ರಮಾಣಗಳಿಂದ ಉಪನ್ಯಾಸ ಮಾಡಲ್ಪಟ್ಟಿತು. ತರುವಾಯ ಅಗ್ರಾಸನಾಧಿಪತಿಗಳಿಂದ ಹಿಂದುಗಳ ಧರ್ಮಾಚರಣೆ ಜಾತ್ರೆಗಳ ಕಾಲದಲ್ಲಿ ನಡೆಯತಕ್ಕ ಮೂಕಪ್ರಾಣಿಗಳವಧೆ ಮುಂತಾದವುಗಳ ವಿಷಯದಲ್ಲಿ ಸ್ವಾರಸ್ಯವಾದ ಉಪನ್ಯಾಸವಾಡಲ್ಪಟ್ಟಿತು. ಪುಷ್ಪ ತಾಂಬೂಲಗಳ ವಿನಿಯೋಗಾನಂತರ ಸಭೆಯು ಬರಖಾಸ್ತಾಯಿತು. ಮತ್ತು 7-9-32 ನೆಯ ಬುಧವಾರ ಎಲ್ಲಾ ಭಕ್ತಜನಗಳೂ ಸೇರಿ ಗಣಪತಿಯ ಉತ್ಸವವನ್ನು ಬ್ರಹ್ಮಚರ್ಯಾಶ್ರಮದವರ ವೇದಘೋಷದಿಂದಲೂ ಮಂಗಳವಾದ್ಯಗಳಿಂದಲೂ ಅತಿ ವಿಜೃಂಭಣೆಯಿಂದ ನೆರವೇರಿಸಿದರು.

ಕೆ. ಎಮ್. ರೇವಣಾರಾಧ್ಯ, ಸಿಂಗಿಂಗ್ ಮಾಸ್ತರ್,
ಗರ್ಲ್ಸ್‌ಸ್ಕೂಲ್.

ಅಣಜಿಗ್ರಾಮ.

ಈ ಗ್ರಾಮದಲ್ಲಿ ತಾ|| 8-9-32 ನೇ ಗುರುವಾರ ಸ್ಕೂಲಿನಲ್ಲಿ ಶ್ರೀವರಸಿದ್ಧಿವಿನಾಯಕನ ಮಂಗಳಾರತಿಯು ನಡೆಯಿತು. ಈ ಊರಿನ ಮತ್ತು ಆಜುಬಾಜು ಗ್ರಾಮಗಳ ಅನೇಕ ಮಹನೀಯರುಗಳು ದಯಮಾಡಿಸಿದ್ದರು. ರಾ|| ರಾ|| ಹೊರಕೆರೆ, ಇನಾಂದಾರ್ ಪಿ ಸುಬ್ರಾಯಾಚಾರ್ ಇವರ ಸಂಗೀತ, ಫೋನೋಗ್ರಾಫ್ ಇವುಗಳು ಕರ್ಣಾನಂದವನ್ನುಂಟುಮಾಡಿದುವು. ನಂತರ ಸ್ಕೂಲ್ ಮೇನೇಜರ್ ಹೆ|| ಮಾ|| ರಾದ ಸಿ. ಬಾಳಾಚಾರ್ಯರವರೂ, ಅ|| ಮಾ|| ರಾದ ಪಿ. ಹೊನ್ನೂರ್ ಸಾಹೇಬರವರೂ, ಬಂದಮಹನೀಯರುಗಳನ್ನೆಲ್ಲಾ ಕೊಂಡಾಡಿ, ಧನ್ಯವಾದಗಳನ್ನರ್ಪಿಸಿದನಂತರ ಗಂಧಪುಷ್ಪತಾಂಬೂಲಗಳ ವಿನಿಯೋಗ ನಡೆದು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಗಿ ರಾತ್ರಿ ಪಲ್ಲಕ್ಕಿಯಲ್ಲಿ ವಿನಾಯಕನನ್ನು ಅಲಂಕರಿಸಿ ವಾದ್ಯವೈಭವದೊಡನೆ ಉತ್ಸವವು ಕೆರೆಗೆ ಸಾಗಿತು. ಉತ್ಸವಭಾಗಿಗಳಾದ ಸರ್ವಪ್ರಜೆಗಳಿಗೂ ರೀಡಿಂಗ್ ರೂಮಿನಲ್ಲಿ ಈ ಊರಿನ ಪಟೇಲ್ ಚನ್ನಬಸಪ್ಪನವರು ಪ್ರಸಾದ ವಿನಿಯೋಗಮಾಡಿದರು. ಈ ಉತ್ಸವದಲ್ಲಿ ಭಾಗಿಗಳಾದ ಮಹನೀಯರುಗಳಿಗೆಲ್ಲಾ ದೇವರು ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಮೊಳ್ಳೆಕಟ್ಟೆಗ್ರಾಮ.

ಈ ಊರು ಸ್ಕೂಲ್ ಹಾಲಿನಲ್ಲಿ ಶ್ರೀ ಗಣಪತಿಯ ಮಂಗಳಾರತಿ ಉತ್ಸವವು ದಾವಣಗೆರೆ ರೇಂಜ್ ಸ್ಕೂಲ್ ಬೋರ್ಡು ಅಸಿಸ್ಟೆಂಟ್‌ರವರಾದ ರಾ|| ರಾ|| ಬಿ. ರಂಗರಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ತಾ|| 12-9-32 ನೇ ಸೋಮವಾರ ವಿಜೃಂಭಣೆಯಿಂದ ನಡೆಯಿತು. ಅನೇಕ ಪರಸ್ಥಳದ ಮಹನೀಯರು ಸೇರಿದ್ದರು. ಮ|| ರಾ|| ಸ್ಕೂಲ್‌ಮಾಸ್ಟರ್ ಹೆಡ್ಮಾಸ್ಟರಾದ ಕೆ ಹನುಮಂತರಾಯರವರು ಶ್ರೀ ಗಣಪತಿಯ ವಿಚಾರದಲ್ಲಿ ಭಾಷಣವನ್ನು ಮಾಡಿದರು. ಮತ್ತು ಸದರಿ ಹೆಡ್ಮಾಸ್ತರವರು ತಮ್ಮ ಸ್ವಂತ ಖರ್ಚಿನಿಂದ ಬಂದ ಪರಸ್ಥಳದ ಮಹನೀಯರಿಗೆ ಊಟ, ತಿಂಡಿ ವಗೈರೆ ಉಪಚಾರಗಳನ್ನು ನಡೆಯಿಸಿದರು. ಮಂಗಳಾರತಿಯು ಆದನಂತರ ಗಂಧಪುಷ್ಪ ತಾಂಬೂಲ ಹಂಚಲ್ಪಟ್ಟು ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಮಾಪ್ತಿಗೊಂಡಿತು. ರಾ|| ರಾ|| ಕುಂಬಾರೆ ಸ್ಕೂ|| ಮೇ|| ನಾರಣಪ್ಪನವರ ಭಾರತದ ಓದುಗಾರಿಕೆಯೂ ಸ್ಕೂ|| ಅಣಜಿ ಸಿ. ಎಚ್. ರಾಮಚಂದ್ರರಾಯರವರ ಹೇಳುವಿಕೆಯೂ, ಅಲ್ಲಿ ನೆರೆದಿದ್ದ ಮಹನೀಯರುಗಳ ಮನಸ್ಸನ್ನು ಆನಂದಗೊಳಿಸಿದುವು. ಮೇಲ್ಕಂಡ ಎಲ್ಲಾ ಕಾರ್ಯಗಳಲ್ಲಿ ಮೆಂಬರುಗಳಾದ ಮ|| ರಾ|| ಆಲೂರು ಬಸಪ್ಪನವರೂ, ಮ|| ರಾ|| ಕಾಳಪ್ಪರ ರೇವಣ್ಣನವರೂ, ಮ|| ರಾ|| ಪಟೇಲ್ ಹನುಮಪ್ಪನವರೂ, ಇನ್ನೂ ಮುಂತಾದ ಮಹನೀಯರುಗಳೆಲ್ಲಾ ಮುತುವರ್ಜಿವಹಿಸಿದ್ದರು.

ಪ್ರತ್ಯಕ್ಷದರ್ಶಿ.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೆಜ್ವರ, ಚಳಿ, ಛಳಿಜ್ವರ, ವಾಯುದೆಸಟ್ಟೆ ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್ ಕಾಡ್‌ಕಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ಪಲಿಕರುಗುವದು, ಪಿತ್ತ ಸುಡುವದು, ಪಿತ್ತ ಕಾರುವದು, ಮುಖ ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0

ಕಂಪೌಂಡ್ ಸಿರಪ್ ಬ್ಲಿಟ—ಉಬ್ಬಸ ಕೇವನ ದಂ ರೋಗಕ್ಕೆ ವಿಶೇಷವಟ್ಟಿದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-3-0.

ಕಂಪೌಂಡ್ ಸಿರಪ್ ಸರ್ಸಆಪೋಗೆ—ರಕ್ತಶುದ್ಧಿ ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕರೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿಶ್ಯಕ್ತಿ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಫೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇತ್ಯು ಮದ್ದುಗಳೂ ಹೋಮಿಯೊಪತಿ ಔಷಧಿಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿ ಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಪ್ರೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[7] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು. ದ. ಕ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು. [ಅದಿವಿಸು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗಸುಂದರಸಾಕ [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ತಾಯ್ತು ಕೊಳ್ಳುವಿರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗ ನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸೆ ಇದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿನಶೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಟ್ಟುಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟುಚಿಟ್ಟು ಆಗೋಣ, ಮುಟ್ಟುಚಿಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಆದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
45 ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶ್ರೀಪುರುಷರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುವಾಡಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[13] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशिनाथशास्त्री यांचें भाषण (मराठी)	८ आणे.
Speeches by Pandit Shri Kashinatba Shastri (*English*)	**12 As.**
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿವೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಶಿಲಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[14] ಪೋ. ಬಾ. ೫೧೦, ಮದರಾಸ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 226 6

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಅಕ್ಟೋಬರ್ ೧೯೩೨ [ಸಂಚಿಕೆ ೨೧

ಬಂಜೆತನ, ಮುಟ್ಟಿಶೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಸ್ಪಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ದಸರಾ ಮಹೋತ್ಸವಾಹ್ವಾನಪತ್ರಿಕಾ.

ಕರ್ನಾಟಕ ಮಹಾರಾಷ್ಟ್ರ ತೈಲಂಗ ನೈಜಾಮ ಮೊದಲಾದ ದೇಶಗಳಲ್ಲಿರತಕ್ಕ ಅಖಿಲವೀರಶೈವ ಮಂಡಲಿಗೂ ಏತನ್ಮತಾನುಯಾಯಿಗಳಿಗೂ ತುಮಕೂರು ಡಿಸ್ಟ್ರಿಕ್ಟು ಹೊಳವನಹಳ್ಳಿ ಪೇಟೆಮನೆ ವಾಸಿಗಳಾದ ಮಠಾಧಿಕಾರಿಗಳು, ಶೆಟ್ಟರು, ಯಜಮಾನರು, ಗೌಡರು, ಬುದ್ಧಿವಂತರು, ಮೊದಲಾದ ವೀರಶೈವಮಂಡಲಿಯವರು ವಿಜ್ಞಾಪಿಸಿಕೊಳ್ಳುವದೇನಂದರೆ:—

ಶ್ರೀಮನ್ನೃಪ ಶಾಲಿವಾಹನಶಕೆ ೧೮೫೪ ನೆಯ ಅಂಗಿರಸನಾಮ ಸಂವತ್ಸರದ ದಸರಾಮಹೋತ್ಸವವು ಹೊಳವನಹಳ್ಳಿಯಲ್ಲಿ ನೆರವೇರಿಸಬೇಕೆಂಬ ನಮ್ಮಗಳ ಪ್ರಾರ್ಥನೆಯನ್ನು ಶ್ರೀ ಮಹಾ|| || ಸನ್ನಿಧಿಯವರು ಅಂಗೀಕರಿಸಿ ಅಪ್ಪಣೆಯನ್ನು ದಯಪಾಲಿಸಿದ್ದರಿಂದ ಪ್ರತಿವರ್ಷದ ಪದ್ಧತಿಯಂತೆ ಅಶ್ವಯುಜ ೧ ರಿಂದ ನವಮೀ ತಿಥಿಯ ವರೆಗೂ ನಿತ್ಯೋತ್ಸವಗಳು ನಡೆಯುತ್ತಿದ್ದು ವಿಜಯದಶಮೀ ಭಾನುವಾರ (ತಾ|| ೯-೧೦-೩೨) ಚತುರಂಗಬಲ ಸಮೇತ ಸಕಲ ಬಿರುದಾವಳಿಗಳೊಡನೆ ಅತಿ ವೈಭವದಿಂದ ಶ್ರೀ ಮಹಾ|| || ಸನ್ನಿಧಿಯವರ ಸುವರ್ಣ ರಜತಾಂದೋಲಿಕೋತ್ಸವವು ನೆರವೇರುವುದು. ೧೧ ಸೋಮವಾರ ವಿದ್ವತ್ಸಭೆಯು ಜರುಗುವದು. ಆದ್ದರಿಂದ ಈ ಸುಸಮಯವನ್ನು ಕಳೆದುಕೊಳ್ಳದೆ ಸರ್ವರೂ ಆಗಮಿಸಿ ಶ್ರೀ ಮಹಾ|| || ಸನ್ನಿಧಿಗೆ ಕಪ್ಪಕಾಣಿಕೆಗಳನ್ನರ್ಪಿಸಿ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವದಲ್ಲದೆ ನಮ್ಮ ಚಿತ್ತೋಲ್ಲಾಸವನ್ನುಂಟು ಮಾಡುವಿರೆಂದು ಕೋರುವ,

ಹೊಳವನಹಳ್ಳಿ,
ತಾ|| ಕೊರಟಗೆರೆ, ವೀರಶೈವಮಂಡಲಿಯವರು.
ತಾ|| ೨೮-೯-೩೨.

ಸೂಚನೆ—ಹುಬ್ಬಳ್ಳಿ ಬೆಂಗಳೂರು ಮಾರ್ಗವಾಗಿ ಬರತಕ್ಕವರು ತುಮಕೂರಿಗೆ ಇಳಿದು ಕೊರಟಗೆರೆ ಮಾರ್ಗವಾಗಿ ಹೊಳವನಹಳ್ಳಿಗೆ ಬರತಕ್ಕದ್ದು. ಕೊರಟಗೆರೆಯಿಂದ ಹೊಳವನಹಳ್ಳಿಯು ೪ ಮೈಲು ಇರುತ್ತದೆ. ತುಮಕೂರಿಂದ ಹೊಳವನಹಳ್ಳಿಗೆ ಮೋಟಾರ್ ಬಸ್ಸುಗಳು ದೊರೆಯುತ್ತವೆ.

ಬಳ್ಳಾರಿ ಜಿಲ್ಲೆಯ ಬೋರ್ಡು ವೀರಶೈವಾಭಿಮಾನಿಗಳಿಗೆ ವಿಜ್ಞಪ್ತಿ.

ಈ ಸಾರೆ ಬಳ್ಳಾರಿ ಜಿಲ್ಲೆಯ ಬೋರ್ಡು ಪ್ರೆಸಿಡೆಂಟರ ಚುನಾವಣೆಯು ಮುಂದೆ ಬರುವ ನವಂಬರು 1ನೇ ತೇದಿಗೆ ಬಂದೊದಗಿರುವುದು. ಈಗ 3-4 ವರ್ಷದ ಕೆಳಗೆ ಮದ್ರಾಸು ಶಾಸನಸಭಾ ಸಭೆ ಮತ್ತು ಜಿಲ್ಲೆಯ ಮುಖ್ಯಚುನಾವಣೆಗಳ ವಿಷಯದಲ್ಲಿ ಈ ಸಭೆಯು ಭಾಗವಹಿಸಬೇಕೆಂಬುವ ಉದ್ದೇಶದಿಂದ ನಮ್ಮ ಯಾವತ್ತು ಮುಖಂಡರು ಹೊಸಪೇಟೆಯಲ್ಲಿ ಸೇರಿ 'ಮಹಾಜನಸಂಘ' ವೆಂಬುದೊಂದು ಸಂಘವನ್ನು ಏರ್ಪಡಿಸಿದರು. ಆ ಪ್ರಕಾರ ಈ ಬಹುಳೇಮ "ಕಾಲಕ್ಕೆ" ಈ ಸಂಘವು ಬಳ್ಳಾರಿ ಜಿಲ್ಲೆಯಲ್ಲಿ ಕಲಿತು ಏಕಾಭಿಪ್ರಾಯದಿಂದ ಒಬ್ಬರನ್ನು (ವಿದ್ಯಾ ಮತ್ತು ಯೋಗ್ಯತೆಯುಳ್ಳವರನ್ನು) ನಿಲ್ಲಿಸಿ ಯಾವತ್ತು ಸಮಾಜದ ಸಹಾಯ ತೆಗೆದುಕೊಂಡರು. ಆದರೆ ದೈವಾಜ್ಞೆಯಿಂದ ಅದು ಸಫಲವಾಗಲಿಲ್ಲ. ಆದರೂ ಅದೇ ರೀತಿ ಈಗಲಾದರೂ ಈ ಸಾರೆ ಬಂದೊದಗಿರುವ ಬಳ್ಳಾರಿಜಿಲ್ಲೆಯ ಬೋರ್ಡುಪ್ರೆಸಿಡೆಂಟರ ಚುನಾವಣೆಯಲ್ಲಿ ಸದರಿ ಮಹಾಜನಸಂಘವು ಭಾಗವನ್ನು ವಹಿಸಿ ಈ ಸಾರೆ ಇರುವ 48 ಜನ ಮೆಂಬರರ ಪೈಕಿ 17 ಜನರು ವೀರಶೈವರಿದ್ದು ಮತ್ತು ಸದರಿ ವೀರಶೈವರಿಗೆ ಸಹಾಯ ಮಾಡತಕ್ಕ ಇತರ ಸಮಾಜದ ಮೆಂಬರುಗಳು 13 ಜನರಿದ್ದು ಇಂಥಾ ಸುಸಮಯವು ಸುಲಭವಾಗಿ ಬಂದೊದಗಿರುವದರಿಂದ ಈ ಸಮಯವನ್ನು ವ್ಯರ್ಥಮಾಡದೆ ತಮ್ಮ ಏಕಾಭಿಪ್ರಾಯದಿಂದ ವಿದ್ಯಾ ಮತ್ತು ಯೋಗ್ಯತೆಯುಳ್ಳ ಒಬ್ಬರನ್ನು ಆರಿಸಿ ಈ ಸಾರೆ ಬಂದಿರುವ ಜಿಲ್ಲೆಯ ಬೋರ್ಡುಮೆಂಬರರ ಮತಗಳನ್ನು ತೆಗೆದುಕೊಂಡು ಜಯಶೀಲರಾಗಬೇಕೆಂದು ನಮ್ಮ ಆಶೆಯು. ಈ ಸಾರೆ ಆರಿಸಿಬಂದ ಜಿಲ್ಲೆಯ ಬೋರ್ಡುಮೆಂಬರರಾದರೂ ಸಮಾಜದ ಪಕ್ಷದಿಂದ ಆರಿಸಿದ ವ್ಯಕ್ತಿಗೆ ಮಾತ್ರ ತಮ್ಮ ಮತಗಳನ್ನು ಕೊಡುವದಲ್ಲದೆ ಇತರ ಸಹಾಯಗಳನ್ನು ಸಹ ಒದಗಿಸಿಕೊಟ್ಟು ಸಮಾಜಕ್ಕೆ ಒದಗುವ ಕೀರ್ತಿಗೆ ಭಾಗಿಗಳಾಗಬೇಕೆಂದು ಅನನ್ಯಭಾವದಿಂದ ಜಗದೀಶ್ವರನನ್ನು ಕುರಿತು ನಿರಂತರ ಪ್ರಾರ್ಥಿಸುವೆನು.

ಶೀಲವಂತರ ರೇವಪ್ಪ, ಹೊಸಪೇಟೆ.

ಮಹಾತ್ಮರಿಗೆ ಆರ್ಡರು

ಇತಃಪರ ಸಾಮಾನ್ಯ ಖೈದಿಗಳಂತಿರಬೇಕು.

ಪೂನಾ ಸೆ. ೨೯.

ಈ ಮಧ್ಯಾಹ್ನ ೧೨-೩೦ ಗಂಟೆಗೆ ಗಾಂಧೀಜಿಯವರಿಗೆ ಅವರನ್ನು ಇತಃಪರ ಸಾಮಾನ್ಯ ಖೈದಿಯಂತೆ ಕಾಣಲಾಗುವುದೆಂದೂ, ಭೇಟಿಗಳ ವಿಷಯದಲ್ಲೂ, ಪತ್ರವ್ಯವಹಾರದ ವಿಷಯದಲ್ಲೂ ಸಾಮಾನ್ಯ ಖೈದಿಯ ನಿಯಮವು ಅನುಸರಿಸಲ್ಪಡುವುದೆಂದೂ ಸಮಕ್ಷಮ ತಿಳಿಸಲ್ಪಟ್ಟಿತು. ಮುಖಂಡರಿಗೂ ಮತ್ತು ಇತರರಿಗೂ ಈ ಅಪ್ಪಣೆಯು ಆಶ್ಚರ್ಯವನ್ನುಂಟುಮಾಡಿದೆ.

ನಿಲ್ಲಿಸಲ್ಪಟ್ಟವು

ಪೂನಾ ಸೆ. ೨೯.

ಗಾಂಧೀಜಿಯವರೊಡನೆ ನಡೆಯುತ್ತಿದ್ದ ಭೇಟಿಗಳನ್ನು ಈ ಮಧ್ಯಾಹ್ನದಿಂದ ಸರ್ಕಾರದವರು ನಿಲ್ಲಿಸಿದರು. ಪಂಡಿತ ಮಾಳವೀಯ, ಶ್ರೀ ಜಯಕರ್ ಮುಂತಾದವರು ಗಾಂಧೀಜಿಯವರೊಡನೆ ಮಾತನಾಡಲು ಈ ಮಧ್ಯಾಹ್ನ ಯರವಾಡಾಕ್ಕೆ ಹೋಗುವುದರಲ್ಲಿದ್ದರು. ಅಷ್ಟರಲ್ಲಿ ಗಾಂಧೀಜಿಯವರ ಕಾರ್ಯದರ್ಶಿಗಳಾದ ಶ್ರೀ ಪ್ಯಾರೇಲಾಲರು ಈ ತರಹದ ಭೇಟಿಗಳು ನಿಲ್ಲಿಸಲ್ಪಟ್ಟವೆಂದು ಮುಖಂಡರಿಗೆ ತಿಳುಹಿಸಿದರು. ಇದರ ಮೇಲೆ ಮುಖಂಡರು ಪಂ|| ಮಾಳವೀಯರ ಬಿಡಾರಕ್ಕೆ ಹಿಂತಿರುಗಿ ಬಂದರು. ಇಲ್ಲಿ ಇವರುಗಳು ಮುಂದಿನ ಕರ್ತವ್ಯವನ್ನು ಕುರಿತು ಆಲೋಚಿಸುವರು. ಭೇಟಿಗಳನ್ನು ನಿಲ್ಲಿಸಿದ ಬಗ್ಗೆ ಮಹಾತ್ಮರು ಒಂದು ಹೇಳಿಕೆಯನ್ನು ಕೊಡುವರೆಂದು ತಿಳಿಸಲ್ಪಟ್ಟಿದೆ.

ಸ್ವೀಕಾರ

ಅನಂತಪುರ ಡಿ|| ಎಮ್ಮೆಹಟ್ಟಿ ಮ|| ರಾ|| ಪಾಟೀಲ ಬಸವನಗೌಡರು ಶ್ರೀ ಜಗದ್ಗುರು ಪರ್ವತ ಸಂಸ್ಥಾನದ ಶಾಖಾಧಿಕಾರಿಗಳಾದ ಚಿಕ್ಕಮಣ್ಣೂರು ಶ್ರೀಗಳವರಿಗೆ ಬಿನ್ನಹಮಾಡಿದ ಸಮಯದಲ್ಲಿ **2** ರೂ.ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪ್ರೀಮಿಯರ್‌ರವರಿಗೆ ಮುಖಂಡರ ತಂತಿಗಳು. ಮಹಾತ್ಮರ ಉಪವಾಸವ್ರತ.

ಸಂಪೂರ್ಣ ಒಪ್ಪಂದವಾಯಿತು.

ಪೂನಾ, ಸೆ. ೨೪.
ಮಧ್ಯಾಹ್ನ ೨-೫೫ ಘಂಟೆ.

ಹಿಂದೂ ಮತ್ತು ಅಂತ್ಯಜ ಮುಖಂಡರುಗಳಲ್ಲಿ ಸಂಪೂರ್ಣ ಒಪ್ಪಂದವಾಯಿತು. ಮುಖಂಡರುಗಳು ಒಪ್ಪಂದದ ವಿವರವನ್ನು ಬರೆಯುತ್ತಿರುವರು. ಗಾಂಧಿಯವರ ಸಮ್ಮುಖದಲ್ಲಿಯೇ ಅದಕ್ಕೆ ಸಹಿಮಾಡಲು ಎರವಾಡಾಜೈಲಿಗೆ ಹೋಗುವರು.

ಪೂನಾ, ಸೆ. ೨೪.
ಸಾಯಂಕಾಲ ೬-೧೦ ಘಂಟೆ.

ಮುಖಂಡರು ಪ್ರೀಮಿಯರ್‌ರವರಾದ ಮಿ|| ಮ್ಯಾಕ್‌ಡೋನಾಲ್ಡರಿಗೆ ಈ ಕೆಳಗೆ ಕಂಡ ತಂತಿಯನ್ನು ಕಳುಹಿಸಿಕೊಟ್ಟರು.

“ನ್ಯಾಯವಿಧಾಯಕ ಸಭೆಗಳಲ್ಲಿ ಅಂತ್ಯಜ ಜನಾಂಗದ ಪ್ರಾತಿನಿಧ್ಯತೆಯ ವಿಷಯದಲ್ಲಿ ನಾವುಗಳು ಪರಸ್ಪರ ಒಪ್ಪಿಗೆಯ ಒಪ್ಪಂದಕ್ಕೆ ಬಂದಿದ್ದೇವೆ. ಅದರ ಪ್ರತಿಯನ್ನು ಬೊಂಬಾಯಿ ಸರ್ಕಾರಕ್ಕೆ ಕಳುಹಿಸಿ, ಆ ಮೂಲಕ ಇಂಡಿಯಾ ಸರ್ಕಾರಕ್ಕೂ ಮತ್ತು ತಮಗೂ ಮುಟ್ಟುವಂತೆ ಮಾಡಿರುವೆವು.

“ಕಳೆದ ನಾಲ್ಕು ದಿವಸಗಳಿಂದ ಮಹಾತ್ಮಾ ಗಾಂಧಿಯವರ [illegible]

[illegible]	೨ [illegible]
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

[illegible]

ಶ್ರೀ ಪ

ಶಿಷ್ಯರ ವ

ಭರತಖಂಡದಲ್ಲಿ ಬುವ
ಕಿರುತ್ತಿದ್ದು, ಆ ಮಠಾಧಿಕಾ
ಶಿಷ್ಯರಿಂದ ಕಾಣಿಕೆಯನ್ನು ತೆ
ಕ್ಕನುಸರಿಸಿ ಶಿಷ್ಯರ ಯಾವತ್ತು
ಕೊಂಡು ಹೋಗಿಬಿಡುವರು.
ಗಳೇ ಗೊತ್ತಿಲ್ಲದೆ ಹೋಗಿವೆ.
ಹೊಸದಾಗಿ ಮುದ್ರಣಗೊಳಿಸಿ
ಸಲ್ಪಟ್ಟಿವೆ. ಆದುದರಿಂದ ಸಭ
ಕೊಂಡು ಅದರಲ್ಲಿದ್ದಂತೆ ವಿವ
ಕಾಪಾಡಿಕೊಳ್ಳಬೇಕು. ಇ
ಸುಂದರವಾದ ಮತ್ತು ಭದ್ರ
ಶ್ರೀ

ಮನೋಹರವಾದ ಪೋಟೋಗಳು.

[illegible] ಸ್ಥಾನಗಳನ್ನು ಕಾದಿಡಲಾಗುವುದು. ಕಾದಿಡಲಾಗುವ ಈ ಸ್ಥಾನಗಳಿಗೆಲ್ಲಾ, ಸಂಯುಕ್ತ ಚುನಾವಣೆಯ ತತ್ವದ ಮೇಲೆ ಚುನಾವಣೆಯಾಗಬೇಕು. ಜನರಲ್ ಚುನಾವಣೆ ರಿಜಿಸ್ಟರಿನಲ್ಲಿ ಅಂತ್ಯಜರೆಲ್ಲರೂ ಸೇರಿಸಲ್ಪಡತಕ್ಕದ್ದು. ಇದೇ ಚುನಾವಣೆ ಕ್ಷೇತ್ರವಾಗತಕ್ಕದು. ಪ್ರತಿಯೊಂದು ಕಾದಿಡಲ್ಪಟ್ಟ ಸ್ಥಾನಕ್ಕೂ, ಚುನಾವಣೆ ಕ್ಷೇತ್ರವು ಒಂದು ಪಂಚಾಯಿತಿಯನ್ನು (ಪೇನಲ್) ಚುನಾಯಿಸತಕ್ಕದ್ದು. ಇದಕ್ಕೆ ಒಬ್ಬೊಬ್ಬರಿಗೆ ಒಂದೊಂದು ಓಟಿನ ಅಧಿಕಾರವಿರಬೇಕು. ಪ್ರಾಥಮಿಕ ಚುನಾವಣೆಯಲ್ಲಿ ಬಹು ಸಂಖ್ಯೆಯ ಓಟುಗಳು ಬಂದ ನಾಲ್ವರು ಜನರಲ್ ಚುನಾವಣೆ ಕ್ಷೇತ್ರದಲ್ಲಿ ಉಮೇದುವಾರರಾಗಿ ನಿಲ್ಲುವಂತಿರಬೇಕು. ಈ ಒಪ್ಪಂದದಲ್ಲಿ ಬಾಧ್ಯರಾಗುವ ಉಭಯ ಜನಾಂಗದವರ ಪರಸ್ಪರ ಒಪ್ಪಿಗೆಯಿಂದ ನಿರ್ಧರಿಸಲ್ಪಡುವವರೆಗೆ ಸ್ಥಾನಗಳನ್ನು ಕಾದಿಡುವ ಪದ್ಧತಿಯು ಮುಂದೆ ಸಾಗುತ್ತಿರಬೇಕು. ಹತ್ತು ವರ್ಷಗಳನಂತರ ಇಲ್ಲವೇ ಇನ್ನೂ ಮುಂಚಿತವಾಗಿಯೇ ಪ್ರಾಥಮಿಕ ಚುನಾವಣೆಯ ವಿಶೇಷ ಪದ್ಧತಿಯು ತಾನಾಗಿಯೇ ನಿಂತು ಹೋಗಬೇಕು. ಸ್ಥಾನಗಳನ್ನು ಕಾದಿಡುವ ಪದ್ಧತಿಯು ಸಹಾ ೧೦ ವರ್ಷಗಳನಂತರ ಇಲ್ಲವೇ ಮುಂಚಿತವಾಗಿಯೇ ನಿಂತು ಹೋಗುವಂತಿರಬೇಕು. ಸ್ಥಳೀಯ ಸಂಸ್ಥೆಗಳಿಗೂ ಮತ್ತು ಸರಕಾರಿ ಹುದ್ದೆಗಳಿಗೂ, ಅಂತ್ಯಜ ಜನಾಂಗದವರಿಗೆ ಯಾವ ವಿಧವಾದ ಕುಂದುಕೊರತೆಗಳೂ ಇರಬಾರದು. ವಿದ್ಯಾಶಿಕ್ಷಣದ ಅನುಸಾರವಾಗಿ ಅವರ ಯೋಗ್ಯ ಪ್ರಾತಿನಿಧ್ಯವನ್ನು ಗಳಿಸಲು ಪ್ರಯತ್ನಿಸಲಾಗುವದು. ಪ್ರತಿಯೊಂದು ಪ್ರಾಂತದಲ್ಲಿಯೂ, ವಿದ್ಯಾಭ್ಯಾಸಕ್ಕಾಗಿ ತೆಗೆದಿಡಲಾಗುವ ಹಣದಲ್ಲಿ ಅಂತ್ಯಜರ ವಿದ್ಯಾಭ್ಯಾಸದ ಸಲುವಾಗಿ ಯೋಗ್ಯವಾದ ಭಾಗವನ್ನು ತೆಗೆದಿಡಬೇಕು.

“ಈ ನಮ್ಮ ತಂತಿಯ ಮೇಲೆ ತಾವು ಕೂಡಲೇ ಕ್ರಮಗಳನ್ನು ಜರುಗಿಸುವಂತೆ ಹಿಂದೂಸ್ಥಾನವು ಎದುರು ನೋಡುತ್ತದೆ.”

ಸಪ್ರು—ಜಯಕರರ ತಂತಿ.

ಪೂನಾ ಸೆ. ೨೪ ಸಾ|| ೭-೫೫ ಗಂಟೆ

ಪ್ರೈಮ್ ಮಿನಿಸ್ಟರಿಗೂ, ಸ್ಟೇಟ್ ಸೆಕ್ರೆಟರಿಯವರಾದ ಸರ್ ಹೋರರಿಗೂ ಲಾರ್ಡ್ ಇರ್ವಿನ್ನರಿಗೂ ಸರ್ ಸಪ್ರು ಮತ್ತು ಮಿ|| ಜಯಕರ್‌ರವರು ಖಾಸಗೀ ರೀತಿಯಲ್ಲಿ ಈ ಕೆಳಗೆ ಕಂಡ ತಂತಿಯನ್ನು ಕಳುಹಿಸಿದ್ದಾರೆ.

“ಪಂಡಿತ ಮದನಮೋಹನ ಮಾಳವೀಯರ ನೇತೃತ್ವದಲ್ಲಿ ಉತ್ತಮ ವರ್ಗದವರೆನಿಸಿಕೊಂಡ ಹಿಂದೂಗಳೂ, ಡಾ|| ಅಂಬೇಡ್ಕರ್, ಮಿ|| ಶ್ರೀನಿವಾಸನ್ (ರಾ. ಟೀ. ಸ|| ಸದಸ್ಯರು) ಮಿ|| ಎಂ. ಸಿ. ರಾಜಾ ಮತ್ತು ಇನ್ನೂ ಅನೇಕ ಸ್ಥಳಗಳ ಮುಖಂಡರು ಅಂತ್ಯಜ ಜನಾಂಗದವರ ಪ್ರಾತಿನಿಧ್ಯ, ಮತ್ತು ಅವರ ಹಕ್ಕು ಬಾಧ್ಯತೆಗಳ ರಕ್ಷಣೆ ಇವುಗಳ ಬಗ್ಗೆ ಒಪ್ಪಿಗೆಗೆ ಬಂದಿದ್ದಾರೆ. ಈ ಒಪ್ಪಂದಕ್ಕೆ ಗಾಂಧಿಯವರು ಸಮ್ಮತಿಸಿದ್ದಾರೆ. ಬೊಂಬಾಯಿ ಸರ್ಕಾರಕ್ಕೂ, ಇಂಡಿಯಾ ಸರ್ಕಾರಕ್ಕೂ ಪೂರ್ತಿ ಒಪ್ಪಂದದ ಪ್ರತಿಯು ರವಾನಿಸಲಾಗಿದೆ. ಸಾರಾಂಶವು ಇಂದು ತಮಗೆ ಕಳುಹಿಸಲಾಗಿದೆ. ಗಾಂಧಿಯವರ ಚೈತನ್ಯವು ಕುಗ್ಗುತ್ತಿದೆ. ದೇಶದ ಕ್ಲೇಶ ಕಳವಳವು ಜೋರಾಗಿದೆ. ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಚಳುವಳಿಯು ಭರದಿಂದ ಸಾಗುತ್ತಿದೆ. ಈ ಒಪ್ಪಂದವನ್ನು ಅಂಗೀಕರಿಸಬೇಕೆಂದೂ ನಿಮ್ಮ ತೀರ್ಮಾನದಲ್ಲಿ ಕಂಡುಬರುವ ೮ ನೇ ಪರಿಚ್ಛೇದವನ್ನು ಅಂದರೆ ಅಂತ್ಯಜ ಜನಾಂಗದವರಿಗೆ ಅನ್ವಯಿಸುವ ಭಾಗವನ್ನು ಕೂಡಲೇ ರದ್ದುಪಡಿಸಬೇಕೆಂದೂ ನಾವು ದೈನ್ಯತೆಯಿಂದ ಬೇಡುವೆವು. ನೀವು ಶೀಘ್ರವಾಗಿ ಕ್ರಮಗಳನ್ನು ಜರುಗಿಸಬೇಕೆಂದು ದೇಶವು ಎದುರು ನೋಡುತ್ತಿದೆ. ಗಾಂಧಿಯವರು ಉಪವಾಸವನ್ನು ನಿಲ್ಲಿಸುವಂತೆ ನೀವು ಮಾಡುವಿರೆಂದು ನಿರೀಕ್ಷಿಸುತ್ತಿದೆ. ಹಾಗೆ ಮಾಡಿದರೆ ದೇಶವು ನಿಮಗೆ ಋಣಿಯಾಗದೇ ಇರದು. ಈಗಿನ ಪರಿಸ್ಥಿತಿಯ ಮೇಲೆ ಬಹಳ ಉತ್ತಮಕಾರಿಯಾದ ಪರಿಣಾಮವನ್ನುಂಟುಮಾಡುವುದೆಂದು ನಮ್ಮ ದೃಢವಾದ ಭಾವನೆ”

ಕವಿಸಾರ್ವಭೌಮರ ಆಗಮನ.

ಆನಂದಪ್ರಕಟಣೆ.

[illegible] ಯರ್‌ರವರ ಹೇಳಿಕೆಯ ಮೇಲೆ ಅವರ ಅಭಿಪ್ರಾಯಗಳನ್ನು ಕೇಳಿದರು. ಅದು ಸಮಾಧಾನಕರವಾಗಿದೆ ಎಂದು ಎಲ್ಲರೂ ಹೇಳಿದರು ಮತ್ತು ಉಪವಾಸವನ್ನು ಇನ್ನು ಮುಂದುವರಿಸಲು ಕಾರಣವಿಲ್ಲವೆಂದರು. ಗಾಂಧಿಯವರು ಇದಕ್ಕೆಲ್ಲಾ ಈಗ ಉಪವಾಸವನ್ನು ಮುಕ್ತಾಯಮಾಡುವ ಸಲುವಾಗಿ ಎಲ್ಲವೂ ಸಿದ್ಧವಾಗಲಿ ಎಂದರು. ಕವಿಸಾರ್ವಭೌಮರಾದ ರವೀಂದ್ರನಾಥ ಟಾಗೂರ್‌ರವರು ತಮ್ಮ ಗೀತಾಂಜಲಿಯಿಂದ ಭಕ್ತಿಪರವಾಗಿ ಮಧುರಕಂಠದಿಂದ ಒಂದೆರಡು ಶ್ಲೋಕಗಳನ್ನು ಹಾಡಿದರು. ಸರ್ವರೂ ಶಾಂತಚಿತ್ತತೆಯಿಂದ ಆಲಿಸಿದರು. ಆ ಸಮಯದಲ್ಲಿ ಹಾಜರಿದ್ದ ‘ಸಿ’ ತರಗತಿಯ ಖೈದಿಯೊಬ್ಬನು ಸಹಾ ಹಾಡಿದನು. ತರುವಾಯ ಅಲ್ಲಿ ಹಾಜರಿದ್ದವರೆಲ್ಲರೂ ಮಹಾತ್ಮರ ಪ್ರಿಯ ಕೀರ್ತನೆಯಾದ “ವೈಷ್ಣವ ಜನತೋ ತೇನೆ ಕಹೀಯೇ” ಎಂಬ ಹಾಡನ್ನು ಒಟ್ಟಿಗೆ ಹಾಡಿದರು. ತರುವಾಯ ಅಲ್ಲಿದ್ದ ಮಕ್ಕಳಿಗೆ ಹಣ್ಣುಗಳು ಹಂಚಲ್ಪಟ್ಟವು. ಆ ಮೇಲೆ ಮಿಸೆಸ್ ಮೋತೀಲಾಲ ನೆಹರೂರವರು (ಸ್ವರೂಪರಾಣಿ ನೆಹರೂರವರು) ತಮ್ಮ ಕೈಯಿಂದ ಎರಡು ಸಿಹಿ ನಿಂಬೇಹಣ್ಣನ್ನು ಹಿಸುಕಿ ಒಂದು ಲೋಟಾಕ್ಕೆ ರಸವನ್ನು ಹಿಂಡಿದರು. ಆ ಲೋಟಾವನ್ನು ಶ್ರೀಮತಿ ಕಸ್ತೂರಿಬಾಯಿಯವರು ಗಾಂಧಿಯವರ ಕೈಗೆ ಒಪ್ಪಿಸಿದರು. ಶ್ರೀಮತಿ ಬಾಯಿಯವರ ಕೈ ನಡುಗುತ್ತಿದ್ದಿತು. ಗಾಂಧಿಯವರು ನಿಧಾನವಾಗಿ ಸ್ವಲ್ಪಸ್ವಲ್ಪವಾಗಿ ಕುಡಿದರು. ಮಂಚದಮೇಲೆಯೇ ಕುಳಿತಿದ್ದರು. ಎಡಬಲಗಳಲ್ಲಿ ವಲ್ಲಭಭಾಯಿಯವರೂ ಮಹದೇವದೇಸಾಯಿಯವರೂ ಕುಳಿತು ಹಿಡಿದಿದ್ದರು. ಮಹಾತ್ಮರ ಉಪವಾಸವು ಅವರ ಅತ್ಯಂತ ಆಪ್ತರಾದ ಇಬ್ಬರ ಸಮ್ಮುಖದಲ್ಲಿ ಆರಂಭಿಸಿದ್ದುದು ಈ ದಿನ ಅವರ ನೂರಾರು ಮಂದಿ ಬಂಧುಬಾಂಧವರ ಮತ್ತು ಮಿತ್ರರು ಸಮ್ಮುಖದಲ್ಲಿ ಮುಕ್ತಾಯಗೊಳಿಸಲ್ಪಟ್ಟಿತು.

ಯರವಾಡಾ ಒಪ್ಪಂದ.

ಬ್ರಿಟಿಷ್ ಸರಕಾರದ ಹೇಳಿಕೆ.

ಯರವಾಡಾ ಒಪ್ಪಂದದ ಬಗ್ಗೆ ಬ್ರಿಟಿಷ್ ಸರಕಾರದವರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿ ಪ್ರಾಂತ್ಯಗಳಲ್ಲಿ ಅಂತ್ಯಜ ವರ್ಗದವರಿಗೆ ಈ ಒಪ್ಪಂದವು ಕಾದಿರುವ ಸ್ಥಾನಗಳನ್ನು ಒಪ್ಪಿರುತ್ತಾರೆ. ಉತ್ತಮ ವರ್ಗದವರು ಅಂತ್ಯಜ ವರ್ಗದವರಿಗೆ ಸಾರ್ವಜನಿಕ ದೇವಸ್ಥಾನ ರಸ್ತೆ ಮುಂತಾದವುಗಳ ಬಗ್ಗೆ ತೋರಿಸಿರುವ ಸುಧಾರಣೆಯ ಕ್ರಮವನ್ನು ಸರಕಾರದವರು ಕ್ರಮವಾಗಿ ಪರಿಶೀಲಿಸುವರು. ಪ್ರಾಂತ್ಯಕ್ ಅಥವಾ ಓಟಿನ ಅಧಿಕಾರದ ಬಗ್ಗೆ ಇತರ ಹಿಂದೂಗಳಿಗೆ ಮಾತ್ರ ಈ ರೀತಿಯಾದ ಕ್ರಮವು ಅನುಸರಿಸಲ್ಪಡಬೇಕೆಂಬುದನ್ನು ಆಲೋಚಿಸುವಾಗ ಸರಕಾರದವರು ಇದನ್ನೂ ಆಲೋಚಿಸುವರು. ಮಧ್ಯನ್ಯಾಯವಿಧಾಯಕ ಸಭೆಗಳಿಗೆ ಚುನಾವಣೆಯು ಹೇಗೆ ನಡೆಯಬೇಕೆಂಬ ಬಗ್ಗೆ ಸರಕಾರದವರು ಮುಂದೆ ಆಲೋಚನೆ ನಡೆಸುವರು. ಆದರೆ ಈ ಅಂಶಗಳಲ್ಲಿ ಯರವಾಡಾ ಒಪ್ಪಂದವನ್ನು ಸಮಗ್ರವಾಗಿ ಸರಕಾರದವರು ಪರಿಶೀಲಿಸುವರು. ಎಂದರೆ ಒಪ್ಪಿನ ಮೇಲೆ ಅಸ್ಪೃಶ್ಯ ವರ್ಗದವರಿಗೆ ಪ್ರಾಂತ್ಯಗಳಿಗೂ ಮತ್ತು ಕೇಂದ್ರ ಸರಕಾರಕ್ಕೂ ಪ್ರತ್ಯೇಕ ಚುನಾವಣೆಯ ಕ್ರಮವು ತೊಲಗಿ ಸ್ಥಾನಗಳು ಕಾದಿಡಲ್ಪಟ್ಟ ಸಂಯುಕ್ತ ಚುನಾವಣೆಯ ಕ್ರಮವು ಅನುಸರಿಸಲ್ಪಡುವುದು. ಇದೇ ಗಾಂಧೀಜಿಯವರು ಕೇಳಿದ್ದು.

ಡಾ|| ಅಂಬೇಡ್ಕರರ ಹೇಳಿಕೆ.

“ನಾನು ಕೆಲವು ದಿವಸಗಳ ಹಿಂದೆ ಬಹಳ ಇಕ್ಕಟ್ಟಿನ ಸ್ಥಿತಿಯಲ್ಲಿದ್ದೆನು. ಎರಡು ಬಿಕ್ಕಟ್ಟುಗಳ ನಡುವೆ ಸಿಕ್ಕಿಕೊಂಡಿದ್ದೆನು. ಇಂಡಿಯಾದ ಅತ್ಯಂತ ಶ್ರೇಷ್ಠ ಮಾನವರಾದ ಮಹಾತ್ಮರ ಪ್ರಾಣವನ್ನು ಉಳಿಸುವುದು ಒಂದು ಕಡೆ. ನನ್ನ ಕೋಮಿನ ಹಕ್ಕುಬಾಧ್ಯತೆಗಳನ್ನು ಸಂರಕ್ಷಣೆ ಮಾಡುವುದು ಮತ್ತೊಂದು ಕಡೆ. ಆದರೆ ಈಗ ಎರಡು ಉದ್ದೇಶಗಳೂ ಸಾಧನೆಯಾಗಿ ನಾನು ಬಿಕ್ಕಟ್ಟಿನಿಂದ ಪಾರಾದುದು ಆನಂದದ ಸಂಗತಿಯಾಗಿದೆ. ಈ ವ್ಯವಹಾರಗಳ ಸಫಲತೆಗೆ ಮುಖ್ಯಕಾರಣರಾದವರು ಮಹಾತ್ಮರು. ಅವರ ಮನೋಭಾವವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇತರರಿಗಿಂತಲೂ ಅವರೇ ನನಗೆ ಅತ್ಯಂತ ಹತ್ತಿರದ ಅಭಿಪ್ರಾಯವನ್ನು ಹೊಂದಿದ್ದರು. ರೌಂ. ಟೇ. ಸ. ದಲ್ಲಿಯೇ ಮಹಾತ್ಮರು ತಮ್ಮ ಮನೋಭಾವವನ್ನು ಚೆನ್ನಾಗಿ ವ್ಯಕ್ತಗೊಳಿಸಿದ್ದರೆ, ಅವರಿಗೆ ಈಗಿನ ತೊಂದರೆಯು ತಪ್ಪುತ್ತಿತ್ತು. ಅವೆಲ್ಲಾ ಹಿಂದಿನ ಮಾತುಗಳು. ಈಗ ನಾವೆಲ್ಲರೂ ಒಗ್ಗಟ್ಟಾಗಿ ಒಂದು ತೀರ್ಮಾನಕ್ಕೆ ಬಂದುದು ಅತ್ಯಂತ ಸಂತೋಷದ ಸಂಗತಿ.”

ಜೈಲಿನಲ್ಲಿ ಮಹಾತ್ಮರ ವರ್ಧಂತಿ ಆಚರಣೆ.

ಪೂನಾ ಸೆ. ೨೮

ಈ ದಿವಸ ಎರವಾಡಾ ಜೈಲಿನಲ್ಲಿ ಗಾಂಧಿಯವರು ತಮ್ಮ ೬೪ ನೇ ವರ್ಷ ವರ್ಧಂತಿಯನ್ನು ಆಚರಿಸಿದರು. ವಿಶೇಷವಾದ ಕಾರ್ಯಕ್ರಮಗಳಾವುವೂ ಇರಲಿಲ್ಲ. ಅವರ ಬಂಧುಮಿತ್ರರು ಈ ಸಮಯದಲ್ಲಿ ಹಾಜರಿದ್ದರು. ಮೊದಲು ಗಾಂಧಿಯವರಿಗೆ ಅವರ ರಾಜಕಾರಣದ ಮತ್ತು ಘನತರದ ಸ್ನೇಹಿತರಾದ ಕವಿಸಾರ್ವಭೌಮರು ಮತ್ತು ಪಂಡಿತ ಮಾಳವೀಯರು ಧನ್ಯವಾದಗಳನ್ನು ಅರ್ಪಿಸಿದರು. ನಿನ್ನೆ ರಾತ್ರಿ ಸುಖವಾಗಿ ಕಳೆದಿದ್ದುದರಿಂದ ಗಾಂಧಿಯವರ ಮುಖವು ಪ್ರಫುಲ್ಲಿತವಾಗಿದ್ದಿತು. ನಿಶ್ಶಕ್ತಿಯಿದ್ದರೂ ಅದು ಒಡೆದು ಕಾಣಿಸುತ್ತಿರಲಿಲ್ಲ. ಸ್ವಲ್ಪ ಕಾಲಾನಂತರ ಅನೇಕರು ಮಹಾತ್ಮರಲ್ಲಿ ತಮ್ಮ ಭಕ್ತಿ ಕಾಣಿಕೆಯನ್ನು ಒಪ್ಪಿಸಲು ಹಣ್ಣುಗಳನ್ನೂ ಪುಷ್ಪಗಳನ್ನೂ ತೆಗೆದುಕೊಂಡು ಬಂದರು. ಆ ಸಮಯದಲ್ಲಿ ಗಾಂಧಿಯವರಲ್ಲಿ ಸ್ವಲ್ಪ ಆಯಾಸದ ಚಿನ್ಹೆಗಳು ತೋರಿಬರುತ್ತಿದ್ದವು. ಇನ್ನೂ ಅಪಾಯದ ಪರಿಸ್ಥಿತಿಯು ದೂರವಾಗಿಲ್ಲವೆಂದು ಡಾ|| ಗಳು ಅಭಿಪ್ರಾಯಪಡುವರು. ಅವರು ಕೂಡಲೇ ಜನರು ಬರುವುದನ್ನು ತಡೆಗಟ್ಟಿದರು. ಈ ಪ್ರಾತಃಕಾಲ ಗಾಂಧಿಯವರು ಹಣ್ಣಿನ ರಸವನ್ನು ಕುಡಿದರು.

ಟಾಗೂರರ ಸಂದೇಶ.

ಕವಿಸಾರ್ವಭೌಮರಾದ ರವೀಂದ್ರನಾಥ ಟಾಗೂರ್‌ರವರು ಈ ಕೆಳಗೆ ಕಂಡ ಸಂದೇಶವನ್ನು ಕೊಟ್ಟಿದ್ದಾರೆ.

“ಹಿಂದೂಸ್ಥಾನದ ಅಂತ್ಯಜ ಜನಾಂಗದ ಸೌಹಾರ್ದವನ್ನು ಬೆಳೆಸಿ ಆನಂದಪಡುತ್ತಿರುವ ಈ ದಿವಸದಲ್ಲಿ ಒಂದು ನಿರಾಶಾಜನಕವಾದ ಪರಿಸ್ಥಿತಿಯಿಂದ ನಾವು ವ್ಯಾಕುಲಪಡಬೇಕಾಗಿದೆ. ಅದೇನೆಂದರೆ, ನಮ್ಮ ಮುಸಲ್ಮಾನ ಬಾಂಧವರ ನಂಬಿಕೆ ವಿಶ್ವಾಸವನ್ನು ಇನ್ನೂ ಗಳಿಸದೇ ಇರುವುದು. ನಮ್ಮ ರಾಷ್ಟ್ರೀಯತೆಯು ಯಶಸ್ವಿಯಾಗಬೇಕಾದರೆ ಮುಸಲ್ಮಾನರ ವಿಶ್ವಾಸವನ್ನು ಗಳಿಸುವುದು ಅತ್ಯಗತ್ಯವಾದ ಕಾರ್ಯ. ಅಸ್ಪೃಶ್ಯತೆಯನ್ನು ನಿರ್ಮೂಲನಮಾಡಬೇಕೆಂದು ಕೈಕೊಂಡಿರುವ ಈ ಕಾಲದಲ್ಲಿ, ಇನ್ನೂ ಅಗಾಧವಾದ ಆತ್ಮಶುದ್ಧಿಯ ಕಾರ್ಯಗಳನ್ನು ನಡೆಯಿಸಬೇಕಾಗಿದೆ ಎಂಬ ಅಂಶವನ್ನು ಮರೆತಿಲ್ಲವೆಂದು ನಾನು ಭರವಸೆಕೊಡುತ್ತೇನೆ. ಅದೇನೆಂದರೆ, ನಮ್ಮ ಹಿಂದೂ ಮುಸಲ್ಮಾನ್ ಬಾಂಧವರನ್ನು ಐಕ್ಯರನ್ನಾಗಿ ಮಾಡುವುದು ಅವರಲ್ಲಿ ಪರಸ್ಪರ ಪ್ರೀತಿ ವಿಶ್ವಾಸವನ್ನುಂಟುಮಾಡುವುದು. ಮತ್ತು ಸಹಕಾರಗಳನ್ನು ಕಲ್ಪಿಸುವುದು. ಎರಡು ಜನಾಂಗದವರೂ ಐಕ್ಯವಾಗಿ ವರ್ತಿಸುವುದೂ ಅತ್ಯಾವಶ್ಯಕ. ಹಿಂ

ಶಾಸ್ತ್ರೋಕ್ತ ದಿವ್ಯಾಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೀತಿಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು.** [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶಿ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯ
ಕ್ಕಾಗಿ ಕ್ಷೀಣ
ರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಧಿಕ್ಕರಿಸಿದರೆ
ಕ್ಷೀಣತೆ
ಕಾಯ್ದು
ಕೊಳ್ಳುವಿರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ದೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ತರತರೇತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಪ್ಪಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
46 ಮು. ಪೋ. **ಮಿರಜ,** ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯುಳ್ಳದಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿಣತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯೂ ವೃದ್ಧಿಯೂ ಆಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ತಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಚಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ [illegible] ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ನಡಸಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಣೀಯವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[14] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಮುಖಂಡರ ಹೇಳಿಕೆ.

ಪೂನಾ ಸೆ. ೨೯

ಪಂಡಿತ ಮದನಮೋಹನ ಮಾಳವೀಯ, ಜಯಕರ್, ಪಂಡಿತ ಕುಂಜ್ರು, ಎ. ರಂಗಸ್ವಾಮಿ ಅಯ್ಯಂಗಾರ್ ಮುಂತಾದವರು ಈ ಕೆಳಗಿನ ಹೇಳಿಕೆಯನ್ನು ಪ್ರಕಟಿಸಿದ್ದಾರೆ. "ಈ ಬೆಳಗ್ಗೆ ನಾವುಗಳು ಮಹಾತ್ಮಾಗಾಂಧಿಯವರನ್ನು ಕಂಡು ಅವರ ಉಪವಾಸದ ಬಗ್ಗೆ ಉದ್ಭವಿಸಿರುವ ಅನೇಕ ಪ್ರಶ್ನೆಗಳನ್ನು ಅವರೊಡನೆ ಚರ್ಚಿಸಿದೆವು. ಇದಕ್ಕಿಂತಲೂ ಮುಂಚೆಯೇ ನಮ್ಮಲ್ಲಿ ಕೆಲವರು ಅವರೊಡನೆ ಈ ವಿಷಯವನ್ನು ಚರ್ಚಿಸಿದ್ದರು. ಈ ಮಧ್ಯಾಹ್ನ ಅದೇ ವಿಷಯದ ಮೇಲೆ ಚರ್ಚೆಯನ್ನು ಮುಂದುವರಿಸಬೇಕೆಂದು ನಿಶ್ಚಯವಾಗಿತ್ತು. ಆದರೆ ಈ ಮಧ್ಯಾಹ್ನ ಅವರನ್ನು ನೋಡಲು ನಾವು ಎರವಾಡಾ ಜೈಲಿನ ಕಡೆಗೆ ಹೊರಟಾಗ ಅವರನ್ನು ನೋಡಲು ಪ್ರತಿಬಂಧಕವುಂಟೆಂದೂ, ಕಳೆದ ೧೦ ದಿವಸಗಳಿಂದಲೂ ಅವರಿಗೆ ಕೊಡಲ್ಪಟ್ಟಿದ್ದ ಸೌಲಭ್ಯಗಳು ಹಠಾತ್ತಾಗಿ ನಿಲ್ಲಿಸಲ್ಪಟ್ಟವೆಂದೂ ನಮಗೆ ತಿಳಿಯಿತು. ಈ ಸಮಯದಲ್ಲಿ ಸರ್ಕಾರದವರು ಈ ಕ್ರಮವನ್ನು ಕೈಕೊಂಡಿದ್ದಕ್ಕಾಗಿ ನಾವು ಬಹಳ ವಿಷಾದಪಡುತ್ತೇವೆ. ಈ ಪ್ರತಿಬಂಧಕವು ಅವರು ಶೀಘ್ರದಲ್ಲಿಯೇ ಆರೋಗ್ಯಸ್ಥಿತಿಯನ್ನು ಮುಟ್ಟಲು ಅಡಚಣೆಯನ್ನು ತಂದೊಡ್ಡುವುದಲ್ಲದೆ, ಅವರ ಹೃದಯಕ್ಕೆ ಅತ್ಯಂತ ಹತ್ತಿರವಾದ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ಬೇಗನೆ ಬಗೆಹರಿಯಲು ಅಡಚಣೆಯನ್ನು ತಂದೊಡ್ಡುತ್ತದೆ. ಆ ಪ್ರಶ್ನೆಯ ಬಗ್ಗೆ ದೇಶದ ಎಲ್ಲಾ ಕಡೆಗಳಿಂದಲೂ ಅವರ ಸಲಹೆಯು ಕೇಳಲ್ಪಡುತ್ತಲಿದೆ. ಅವರು ಕಳೆದ ಮೂರು ದಿವಸಗಳಲ್ಲಿ ಸ್ವಲ್ಪ ಚೇತರಿಸಿಕೊಂಡಿದ್ದರೂ ಅವರಸ್ಥಿತಿಯು ಇನ್ನೂ ಸೂಕ್ಷ್ಮವಾಗಿದೆ. ಮತ್ತು ಅವರಿಗೆ ಚಿಕಿತ್ಸೆಯೂ, ಪೋಷಣೆಯೂ ಅತ್ಯಂತ ಅವಶ್ಯಕ. ಅವರ ಶುಶ್ರೂಷೆಯನ್ನು ಮಾಡುತ್ತಿದ್ದವರನ್ನು ಅವರಿಂದ ಬೇರೆ ಮಾಡಲಾಗಿದೆಯೆಂದು ಕೇಳಿ ನಮ್ಮ ಮನಸ್ಸಿಗೆ ಬಹಳ ವಿಷಾದವಾಗುತ್ತದೆ. ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರೂ ಕೂಡ ಬೇರೆ ಮಾಡಲ್ಪಟ್ಟಿರುವರೆಂದು ಕೇಳಿ ನಾವು ಬಹಳ ವಿಷಾದಪಡುತ್ತೇವೆ.

ಯಾಂತ್ರಿಕಮಾನವ.

ಇಂಗ್ಲೆಂಡಿನ 'ಹ್ಯಾರಿಮೇ' ಎಂಬ ಒಬ್ಬ ತರುಣ ವೈಜ್ಞಾನಿಕ ಶಾಸ್ತ್ರಜ್ಞನು 14 ವರ್ಷಗಳಕಾಲ ಶ್ರಮಪಟ್ಟು ಒಂದು ವಿಚಿತ್ರ ಯಂತ್ರವನ್ನು ತಯಾರಿಸಿರುವನೆಂದೂ, ಅದು ಮನುಷ್ಯರಂತೆ ಮಾತನಾಡುವದು ಓದುವದು ಇವೇ ಮೊದಲಾದ ಕಾರ್ಯಗಳನ್ನು ಮಾಡುವುದೆಂದೂ ತಿಳಿಸಿದ್ದೆವಷ್ಟೇ! ಅದನ್ನು ತಯಾರಿಸಲು 90,000 ರೂಪಾಯಿಗಳು ವೆಚ್ಚವಾಗಿರುವವಂತೆ! ಮತ್ತು ಒಂದೇ ಒಂದು ಶಬ್ದವನ್ನು ಉಚ್ಚರಿಸಿದಮಾತ್ರಕ್ಕೆ ಆ ವಿಚಿತ್ರಯಂತ್ರವು ಸಂಪೂರ್ಣವಾಗಿ ನಾಶವಾಗಿ ಹೋಗುವದಂತೆ! ಹಾಗೂ 'ಹ್ಯಾರಿಮೇ' ಯವರು ಸಾಯುವದರೊಳಗಾಗಿ ಅದನ್ನು ತಾವೇ ನಾಶಮಾಡುವರಂತೆ!

ಈ ಯಂತ್ರಕ್ಕಾಗಿ ಯಾರೋ ಇಬ್ಬರು 1,50,000 ರೂ. ಗಳನ್ನು ಕೊಡುವದಾಗಿ ಹೇಳಿದರು. ಆದರೆ ಅದರಿಂದ ಜನಸಾಮಾನ್ಯಕ್ಕೆ ಏನಾದರೂ ಅಪಾಯಸಂಭವಿಸೀತೆಂದು ಮಿ|| ಮೇರವರು ಯಂತ್ರವನ್ನು ಮಾರಲು ಒಪ್ಪಲಿಲ್ಲ. ಅದರ ವಿಷಯವಾಗಿ ಮಿ|| ಮೇರವರು ಈ ರೀತಿ ಹೇಳಿರುವರು.

"ಆ ಯಂತ್ರವನ್ನು 'ಆರ್ಮರ್ಡ್ ಕಾರ್' (Armoured Car) ಎಂಬ ಉಕ್ಕಿನ ಮೋಟಾರಿನಲ್ಲಿ ಇಟ್ಟು ಕೈಯ್ಯಲ್ಲಿ ಒಂದು ಬಂದೂಕವನ್ನು ಕೊಟ್ಟರೆ ಒಂದು ದೊಡ್ಡ ಸೈನ್ಯವನ್ನು ನಾಶಮಾಡಬಲ್ಲದು. ಇಂತಹ ಅನೇಕ 'ರೋಬಟ್' (ಯಂತ್ರದ ಹೆಸರು) ಗಳನ್ನು ನಾವು ನಿರ್ಮಾಣ ಮಾಡಿದ್ದಾದರೆ ಅವರಿಂದ ಆಗುವ ಘೋರ ಪರಿಣಾಮವನ್ನು ಊಹಿಸುವದಕ್ಕೂ ಸಾಧ್ಯವಿಲ್ಲ. ಅಂಥ ಅನರ್ಥವು ಸಂಭವಿಸಬಾರದೆಂಬುದೇ ನನ್ನ ಅಭಿಲಾಷೆಯಾಗಿರುವುದು. ಇದನ್ನು ನಿರ್ಮಿಸುವ ಕಾಲದಲ್ಲಿ ನಾನೂ 'ರೋಬಟ' ದಂತೆಯೇ ಆಗಿಬಿಟ್ಟಿದ್ದೆನು. ನಾನು ಸರ್ವದಾ ಆ ಯಂತ್ರದ ವಿಷಯವಾಗಿಯೇ ಯೋಚಿಸುತ್ತಿದ್ದೆನು. ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಅದರಂತೆ ನನ್ನ ಸ್ವಭಾವವೂ ಅಮಾನುಷವಾಗಿದ್ದಿತು. ನಮ್ಮಿಬ್ಬರಲ್ಲಿಯೂ ಒಂದು ವಿಧವಾದ ಬಾಂಧವ್ಯವುಂಟಾಗಿದ್ದಿತು. ಒಂದೊಂದು ಸಾರೆ ಅದು ನನ್ನನ್ನು ಅಣಕಿಸುತ್ತಿರುವಂತೆ ಭಾಸವಾಗುತ್ತಿತ್ತು.

ನಿದ್ರಾಹಾರಾದಿಗಳು ನನ್ನನ್ನು ಬಿಟ್ಟು ದೂರವಾಗಿದ್ದುವು. ಒಂದೊಂದು ದಿನ ಮಧ್ಯರಾತ್ರಿಯಲ್ಲಿ ಇದ್ದಕ್ಕಿದ್ದ ಹಾಗೆ ಎದ್ದು ನನ್ನ ಯಂತ್ರಕ್ಕೆ ಅವಶ್ಯಕವೆಂದು ತೋರಿದ ಹೊಸದೊಂದು ಭಾಗವನ್ನು ಜೋಡಿಸುವದಕ್ಕೆ ಪ್ರಾರಂಭಿಸುತ್ತಿದ್ದೆನು. ಅದನ್ನು ಅಷ್ಟಕ್ಕೇ ನಿಲ್ಲಿಸಿ ಬೇರೆ ಕೆಲಸಕ್ಕೆ ಗಮನಕೊಡಬೇಕೆಂದು ನಾನೆಷ್ಟು ಪ್ರಯತ್ನಿಸುತ್ತಿದ್ದರೂ ಸಾಧ್ಯವಾಗುತ್ತಿರಲಿಲ್ಲ. ಒಂದು ವಿಧವಾದ ಅದ್ಭುತಶಕ್ತಿಯು ನನ್ನ ಮನಸ್ಸನ್ನು ಯಂತ್ರದ ಕಡೆಗೇ ಎಳೆಯುತ್ತಿತ್ತು. ನನಗೆ ವಿಶ್ರಾಂತಿಯೇ ಇರಲಿಲ್ಲ. ನಾನು ಅದರ ಯಜಮಾನನು. ಆದರೆ ನಿಜವಾಗಿಯೂ ನಾನು ಅದರ ಗುಲಾಮನಾಗಿದ್ದೆನು.

ಯಂತ್ರವು ಸಂಪೂರ್ಣವಾಯಿತೆನ್ನುವಷ್ಟರಲ್ಲಿ ಏನಾದರೊಂದು ಲೋಪವು ಕಂಡುಬಂದು, 'ಫ್ರಾಂಕನ್‌ಸ್ಟೀನ್'ನ ಭೂತದಂತೆ ತನ್ನ ಯಜಮಾನನಿಗೇ ತಿರುಗಿ ಬೀಳುತ್ತಿತ್ತು. ಮೊನ್ನೆಮೊನ್ನೆ ಒಂದು ತಂತಿಯು ಕಿತ್ತಿತು. ಕೂಡಲೇ ಆ ನನ್ನ 3½ ಟನ್ ತೂಕದ 'ರೋಬಟ್ಟ'ನ ಉಕ್ಕಿನ ತೋಳು ನನ್ನ ತಲೆಯನ್ನು ಒಡೆದುಬಿಟ್ಟಿತು. ಇದರಿಂದ ನಾನು 3 ವಾರಗಳ ವರೆಗೆ ಆಸ್ಪತ್ರೆಯಲ್ಲಿರಬೇಕಾಯಿತು. ಹೀಗೆ ಅದು ಎಷ್ಟೋ ಸಾರಿ ತಿರುಗಿಬಿದ್ದಿರುವುದು. ಅದು ಯಾವಾಗ ಏನು ಮಾಡುವುದೋ ಎಂದು ನಾನು ಸರ್ವದಾ ಯೋಚಿಸುತ್ತಲೇ ಇರುವೆನು. ಅದರ ವಿಷಯವಾಗಿ ಯಾವಾಗಲೂ ಎಚ್ಚರಿಕೆಯಿಂದಲೇ ಇರಬೇಕು. ಏಕೆಂದರೆ ಅದು ಆತ್ಮರಹಿತವಾದ ಯಂತ್ರವಾಗಿರುವದು."

ಸಾ|| ಬನುಮಯ್ಯನವರ ನಿಧನ.

ರಾಜಧಾನಿಯ ವರ್ತಕಾಗ್ರಣಿಗಳಾದ ಮ|| ರಾ|| ಬನುಮಯ್ಯನವರು ಆಕಸ್ಮಿಕವಾಗಿ ಪ್ಲೇಗುರೋಗದಿಂದ ಗ್ರಸ್ತರಾಗಿದ್ದು ಹೋದ ಸೋಮವಾರರಾತ್ರಿ ವಿಧಿವಶರಾದರೆಂಬ ವಿಷಯವು ವಿಷಾದವನ್ನುಂಟುಮಾಡಿರುತ್ತದೆ. ಇವರು ಬಾಲ್ಯಾರಭ್ಯ ಬಹಳ ಬಡವರಾಗಿದ್ದುದಲ್ಲದೆ ವಿಶೇಷ ಓದಿದವರೂ ಸಹ ಅಲ್ಲ. ಹಾಗಿದ್ದರೂ ಸ್ವಭಾವಸಿದ್ಧವಾದ ತಮ್ಮ ಬುದ್ಧಿಶಕ್ತಿಯಿಂದ ವ್ಯಾಪಾರದಲ್ಲಿ ತೊಡಗಿ ಬರಬರುತ್ತ ರಾಜಧಾನಿಯ ವರ್ತಕಮಣಿಮಾಲಿಕೆಯಲ್ಲಿ ಶಿಖಾಮಣಿಯಂತೊಪ್ಪುತ್ತಿದ್ದರು. ಇವರು ಸತ್ಯಸಂಧತೆಯಿಂದ ಬಹು ಕಷ್ಟಪಟ್ಟು ಆರ್ಜಿಸಿದ ಧನವನ್ನು ಸಾರ್ವಜನಿಕವಾದ ಧರ್ಮಕಾರ್ಯಗಳಿಗೆ ನೀರಿನಂತೆ ಉಪಯೋಗಿಸುವ ಸ್ವಭಾವವುಳ್ಳವರಾಗಿದ್ದರು. ಮತ್ತು ಹಗಲಿರುಳೂ ತಮ್ಮ ಪಂಗಡದ ಏಳ್ಗೆಯನ್ನು ಬಯಸುತ್ತ ಅಪಾರದ್ರವ್ಯವನ್ನು ವಿನಿಯೋಗಮಾಡುತ್ತಿದ್ದರು. ರಾಜಧಾನಿಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಪ್ರೌಢವಿದ್ಯಾಲಯವನ್ನು ಕಟ್ಟಿಸಿ ಅವ್ಯಾಹತವಾಗಿ ನಡೆಯಲು ದ್ರವ್ಯಸಂಚಯವನ್ನು ಮಾಡಿರುವುದಲ್ಲದೆ ಖಾದಿಭಂಡಾರ ಮುಂತಾದ ಸಂಸ್ಥೆಗಳಿಗೆ ಅಪಾರವಾದ ಧನನಿಧಿಯನ್ನು ಒದಗಿಸಿಕೊಟ್ಟಿರುತ್ತಾರೆ. ಆಸ್ತಿಕಶಿಖಾಮಣಿಗಳಾದ ನಮ್ಮ ಮಹಾಪ್ರಭುಗಳು ಇವರ ನೈಜವಾದ ಧರ್ಮಪ್ರವೃತ್ತಿಯನ್ನು ನೋಡಿ ಸಂತುಷ್ಟರಾಗಿ ಧರ್ಮಪ್ರಕಾಶ ಎಂಬ ಬಿರುದನ್ನೂ, ಬ್ರಿಟಿಷ್ ಸಾರ್ವಭೌಮರು ಇವರ ಧಾರ್ಮಿಕ ಪ್ರಖ್ಯಾತಿಯನ್ನು ಕೇಳಿ ರಾವ್ ಬಹದ್ದೂರ್ ಎಂಬ ಪ್ರಶಸ್ತಿಯನ್ನೂ ದಯಪಾಲಿಸಿರುತ್ತಾರೆ. ಎಲ್ಲಾದರೂ ಧರ್ಮಕಾರ್ಯಗಳು ನಡೆಯಬೇಕಾದರೆ ಈ ಮಹೋದಯರ ಆಶ್ರಯವಿಲ್ಲದೆ ನಡೆಯುವಂತಿರಲಿಲ್ಲ. ವಯಸ್ಸಿನಲ್ಲಿ ವೃದ್ಧರಾಗಿದ್ದರೂ ಧಾರ್ಮಿಕವಾದ ಇವರ ಮನೋಭಾವವು ಮಾತ್ರ ಉತ್ತಮವಾದ ತಾರುಣ್ಯಾವಸ್ಥೆಯನ್ನು ಪಡೆದಿದ್ದಿತು. ಧಾರ್ಮಿಕರೂ, ಧೈರ್ಯಶಾಲಿಗಳೂ, ಪರಹಿತೇಚ್ಛುಗಳೂ ಆದ ಇಂಥ ಮುಖಂಡರ ವಿಯೋಗದಿಂದ ರಾಜಧಾನಿಗೆ ದೊಡ್ಡ ಅನರ್ಥವೇ ಆಯಿತು. ಮೃತರ ಆತ್ಮಕ್ಕೆ ಶ್ರೀ ಜಗದೀಶ್ವರನು ಶಾಂತಿಯನ್ನೀಯಲೆಂದು ಕೋರುತ್ತೇವೆ.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[15] ಪೋ. ಬಾ. ೫೧೦, ಮದರಾಸ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಅಕ್ಟೋಬರ್ ೧೯೩೨ [ಸಂಚಿಕೆ ೨೩

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಪರ್ವತಸಂಸ್ಥಾನದ ಸರ್ಕೀಟ್.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ ಶಾಖಾಧಿಕಾರಿಗಳಾದ ಶ್ರೀ. ಷ. ಬ್ರ. ಪಂ. ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಸ್ವಾಮಿಗಳು ಬ್ರಹ್ಮನ ಚಿಕ್ಕಮಂಗಳೂರು ಇವರು ಯಮ್ಮೆಹಟ್ಟಿಗ್ರಾಮದ ಕಾಣಿಕೆಯಂ ಪೂರೈಸಿಕೊಂಡು ಬೆಸ್ತರಹಳ್ಳಿ ಗ್ರಾಮಕ್ಕೆ ಮುಕ್ಕಾಂ ಮಾಡಿ ಭಕ್ತರಿಗೆ ಬೋಧಮಾಡಿದರು. ಅಮಾನದಾರರೂ, ಶ್ರೀಮಂತರೂ ಗುರುಭಕ್ತಿಯುಳ್ಳವರೂ ಆದ ಪಿ. ರುದ್ರಮ್ಮನವರು ತಮ್ಮ ಮನೆಗೆ ೨೨-೯-೩೨ ನೇ ತೇದಿ ಗುರುವಾರ ದಿವಸ ಸನ್ನಿಧಿಯನ್ನು ಸಿಬ್ಬಂದಿಸಹಿತ ಬಿಜಮಾಡಿಸಿಕೊಂಡು ಬಂದರು. ಈ ಆಮಂತ್ರಣಕ್ಕೆ ತಮ್ಮ ಕುಂಟಿ, ಕರಿಗಾನಹಳ್ಳಿ, ಕೊಂಡುಪಿರ್, ಅವಲೇನಹಳ್ಳಿ, ರಂಗಸಮುದ್ರ ಮುಂತಾದ ಗ್ರಾಮಗಳಿಂದ ಮಾಹೇಶ್ವರರು ಬಂದಿದ್ದರು. ರುದ್ರಮ್ಮನವರು ವಿಧ್ಯುಕ್ತವಾಗಿ ಗುರುಪೂಜೆಯನ್ನು ಮಾಡಿಸಿ ಬಂದ ಯಾವತ್ತು ಮಹೇಶ್ವರರಿಗೂ, ಭಕ್ತರಿಗೂ ಅನ್ನಸಂತರ್ಪಣೆನಡೆಸಿದರು. ಸಾಯಂಕಾಲಕ್ಕೆ ಸಭೆಯು ನಡೆಯಿತು. ಸಭೆಗೆ ಕೂಡಿರುವ ಯಾವತ್ತು ವೀರಶೈವರು ಸದಾಚಾರದಿಂದಲೂ ಗುರುಭಕ್ತಿ, ಮಾತೃಪಿತೃಭಕ್ತಿಯಿಂದ ವರ್ತಿಸಬೇಕು. ಶ್ರೀಗುರುಮೂರ್ತಿಯು ಕೊಟ್ಟ ಇಷ್ಟಲಿಂಗವನ್ನು ಪ್ರತಿಯೊಬ್ಬರೂ ಪ್ರಾಣಾಂತ್ಯದವರೆಗೆ ದೇಹದಲ್ಲಿ ಧರಿಸಿ ಸ್ನಾನಪೂಜಾದಿಗಳನ್ನು ಮಾಡುತ್ತ ಇರಬೇಕು. ಕೆಲಕೆಲ ಸ್ತ್ರೀ ಪುರುಷರು ಆಧ್ಯಾತ್ಮವನ್ನು ಕೊಡುವ ಲಿಂಗಮೂರ್ತಿಯನ್ನು ಪೂಜಿಸದೆ ಅನ್ನವನ್ನು ಭುಂಜಿಸುತ್ತಾರೆ. ಲಿಂಗಧರರೇ ಇರುವದಿಲ್ಲ. ಅಜ್ಞಾನದಿಂದ ಅಂಟಿಕೊಂಡಿರುವ ಈ ಪದ್ಧತಿಯನ್ನು ಹೋಗಲಾಡಿಸಬೇಕೆಂದು ಅಲ್ಲಲ್ಲಿಗೆ ಬೋಧಕರು ಧರ್ಮಬೋಧಮಾಡುತ್ತಲೇ ಇರುವರು. ಲಿಂಗಮೂರ್ತಿಯನ್ನು ಸದಾ ದೇಹದಲ್ಲಿ ಧರಿಸಿ ಪೂಜಾನಿಷ್ಠರಾಗಿ ಕೃತಾರ್ಥರಾಗಬೇಕೆಂದು ಸನ್ನಿಧಿಯವರು ಬೋಧಮಾಡಿದರು. ಆ ಮೇಲೆ ರುದ್ರಮ್ಮನವರು ಮಹಾಸನ್ನಿಧಿಗೆ ಶಿವಾರ್ಚನ ಸಾಮಗ್ರಿಗಳನ್ನು ಮಾಡಿಸಬೇಕೆಂದು ೪೦ ತೊಲಿ ಬೆಳ್ಳಿಯನ್ನು ಸಮರ್ಪಿಸಿ ದರ್ಬಾರಕಾಣಿಕೆಯನ್ನು ಪ್ರತ್ಯೇಕವಾಗಿ ಅರ್ಪಿಸಿದರು. ಲೋಕಮಾನ್ಯವಾದ ಪ್ರಭಾಪತ್ರಿಕೆಗೆ ಎರಡು ರೂಪಾಯಿಗಳನ್ನು ಸಮರ್ಪಿಸಿದರು. ಸಮಾಜಬಂಧುಗಳೇ! ರುದ್ರಮ್ಮನವರು ಧನಿಕರೂ, ವಿದ್ಯಾವತಿಯರೂ ಆಗಿರುವುದರಿಂದ ತಮ್ಮ ದ್ರವ್ಯವನ್ನು ಸದ್ವಿನಿಯೋಗಮಾಡುತ್ತ ಇರುತ್ತಾರೆ. ನಮ್ಮ ವೀರಶೈವಸಮಾಜದ ಸ್ತ್ರೀಯರು ರುದ್ರಮ್ಮನವರಂತೆ ಗುರುಭಕ್ತಿಯುಳ್ಳವರಾಗಿ ಅನ್ನಸಂತರ್ಪಣಾದಿ ಧರ್ಮಕಾರ್ಯಗಳಿಗೆ ಭಾಗಿಗಳಾಗಬೇಕಾಗಿದೆ. ಆ ಮೇಲೆ ಸಂಸ್ಥಾನ ಸರ್ವಾಧಿಕಾರಿಗಳಾದ ಕೆ. ಎಂ. ಸಿ. ಮಲ್ಲಯ್ಯನವರು ಕಾಣಿಕೆ, ಇವರು ಫಲಾಕ್ಷತೆಗಳನ್ನು ಸನ್ನಿಧಿಯವರ ಹಸ್ತಸ್ಪರ್ಶಪೂರ್ವಕವಾಗಿ ವೇದಮಂತ್ರಗಳನ್ನು ಪಠಿಸುತ್ತ ಜಯಾಶೀರ್ವಾದವನ್ನು ಮಾಡಿದರು

ಪ್ರತ್ಯಕ್ಷದರ್ಶಿ.

ಉಪಾಧ್ಯಾಯಸಂಘ ಸಮ್ಮೇಲನ.

ದಾವಣಗೆರೆ ತಾಲ್ಲೂಕು ಕೊಡಗನೂರು ಸೆಂಟ್ರಲ್ ಪ್ರೈಮರಿ ಸ್ಕೂಲಿನಲ್ಲಿ ಈ ಸೆಂಟರಿನ ಉಪಾಧ್ಯಾಯರ ಸಂಘದ ಮೊದಲನೆಯ ಸಮ್ಮೇಳನವು ತಾ. 24-9-32 ರಲ್ಲಿ ದಾವಣಗೆರೆ ರೇಂಜ್ ಸ್ಕೂಲ್ ಬೋರ್ಡ್ ಅಸಿಸ್ಟೆಂಟ್. ಬಿ. ರಂಗರಾವ್ ಬಿ.ಎ., ಎಲ್.ಟಿ., ಇವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಈ ಸಂಘಕ್ಕೆ ಸುತ್ತಮುತ್ತಲಿನ ಗ್ರಾಮಗಳಿಂದ ಸುಮಾರು 25 ಜನ ಉಪಾಧ್ಯಾಯರುಗಳೂ ಈ ಗ್ರಾಮದ ಪಂಚಾಯ್ತಿ ಛೇರ್ಮನ್ ಮತ್ತು ಮೆಂಬರುಗಳೂ ಮತ್ತು ಇನ್ನೂ ಅನೇಕ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ಸ್ಕೂಲ್‌ಕಟ್ಟಡವು ನಾನಾವಿಧವಾದ ಚಿತ್ರಗಳಿಂದಲೂ, ಕದಂಬಾದಿ ವೃಕ್ಷಗಳ ದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟು ಸಭಾಸದರ ಮತ್ತು ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುವಂತಿತ್ತು.

ಈ ಸಂಘವು ಮಧ್ಯಾಹ್ನ 2 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೂ ನಡೆಯಿತು. ಅಧ್ಯಕ್ಷರು ಈ ಸಂಘಗಳ ಉದ್ದೇಶಗಳನ್ನೂ ಇವುಗಳಿಂದ ಉಂಟಾಗಬಹುದಾದ ಪ್ರಯೋಜನಗಳನ್ನೂ ಈ ಸಂಘಕ್ಕೆ ಗ್ರಾಮಸ್ಥರು ಮುಖ್ಯರನ್ನೂ ಬಲಮಾಡಿಕೊಳ್ಳುವುದರಿಂದ ಗ್ರಾಮಸ್ಥರಿಗೂ, ಉಪಾಧ್ಯಾಯರಿಗೂ ಉಂಟಾಗಬಹುದಾದ ಪ್ರಯೋಜನಗಳನ್ನೂ ಬಹು ಸ್ವಾರಸ್ಯವಾಗಿ ಪಂಡಿತಪಾಮರರಿಗೂ ತಿಳಿಯುವಂತೆ ಭಾಷಣಮಾಡಿದರು. ಇಂಥಾ ಆಫೀಸರು ದೊರೆತಿರುವುದು ನಮ್ಮ ರೇಂಜಿನ ಎಲ್ಲಾ ಗ್ರಾಮಗಳ ಪುಣ್ಯೋದಯವೆಂದೇ ಭಾವಿಸಬೇಕಾಗಿದೆ. ಇವರೇ ಈ ರೇಂಜಿನಲ್ಲಿ ಬಹುಕಾಲ ನೆಲಸಿರುವಂತೆಯೂ ಹೆಡ್ಮಾಸ್ಟರೂ. ಅ| ಮಾಸ್ಟರುಗಳಂ ವಿಶ್ವಾಸದಿಂದಲೂ ಶ್ರದ್ಧೆಯಿಂದಲೂ ಹಾಲಿ ಕೆಲಸಮಾಡುತ್ತಿರುವಂತೆ ಮುಂದೆಯೂ ಅದೇರೀತಿ ಕೆಲಸಗಳನ್ನು ಮಾಡಿಕೊಂಡು ಹೋಗುವಂತೆಯೂ ಇದಕ್ಕೆಲ್ಲಾ ಕಾರಣಕರ್ತರಾಗಿ ಹೊಸದಾಗಿ ವರ್ಗಪಟ್ಟು ಇಲ್ಲಿಗೆ ಬಂದಿರುವ ಹೆಡ್ಮಾಸ್ಟರ್ ವಿ. ವಿರುಪಾಕ್ಷಯ್ಯನವರಿಗೂ ಭಗವಂತನು ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಉತ್ಸವಭಾಗಿ,
ಬಿ. ಎಂ. ಮಹಾದೇವಶಾಸ್ತ್ರಿ, ಕೊಡಗನೂರು.

ಶ್ರೀ

ಶ್ರೀಮತ್ಕರ್ನಾಟಸಿಂಹಾಸನಾಧೀಶ್ವರ ಶ್ರೀಮನ್ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರ

ನವರಾತ್ರೋತ್ಸವದ ನಾಲ್ಕುಮಾತು.

ಶಾರದಾನವರಾತ್ರದೊಸಗೆಸುದಿಯುದು ಜೀಯ |
ಭೂರಿವೈಭವದೊಡನೆ ವಿಜಯಮುಂ ಸೀಂ ನಡೆಯೆ |
ಚಾರುಗುಣಗಣನಿಲಯ ಚಾಮೇಂದ್ರತನಯ ನಾಲ್ವಡಿಯ
ಕೃಷ್ಣೇಂದ್ರ ನಡೆಯ ||

ಪೌರರುಂ ನಂಟರುಂ ಪಂಡಿತರುಮಾಶ್ರಿತರು |
ಮೋರಂತೆ ಭವದೀಯ ಸಂದರ್ಶನೋತ್ಸುಕರು |
ಸೇರಿರ್ದರಾಸ್ಥಾನಮಂಟಪಕೆ ವಿಜಯಸ್ಥ ರಾಜೇಂದ್ರ ಬಹು
ಪರಾಕು ||

ಕರಿತುರಗರಥಪತ್ತಿಯೋಲೈಸೆ ಬಂದಿಹುದು |
ಪರಿಪರಿಯ ವಾದ್ಯಂಗಳಿಂಚರವು ಮೊಳಗುವುದು |
ಹರಿಹರರು ವಂದಿಗಳು ಮಾಗಧರು ಪೊಗಳುವರು ಭವದೀಯ
ಭವ್ಯಯಶವ ||

ನೆರೆದಿಹರು ಕವಿಜನರು ಪಾಡುವರು ಗಾಯಕರು |
ಗುರುಜನರು ಹರಕೆಗೆ ಬಂದು ನಿಂದಿಹರೊಡೆಯ |
ಪರಿಕದಿಂ ಚಿತ್ತವಿಸು ಸಿಂಹಾಸನವನೇರೆ ರಾಜೇಂದ್ರ ಬಹು
ಪರಾಕು ||

ಅನೇಕಹಿಮಶೈಲಯಾತ್ರೆಗೈದೈತಂದೆ |
ಭಾಸಿಸುವ ಪುಣ್ಯತೀರ್ಥಗಳ ಸೇವಿಸಿ ಬಂದೆ |
ಬಿಂಸಲೀಯದೆ ಮರೆವ ಸತ್ಯಧರ್ಮಂಗಳ್ಗೆ ನಿಚ್ಚಯಿಸೆ ನೀನೆ ತಂದೆ ||
ಮೈಸೂರಮಂದಿ ಕಡುನಲಿವಿಂದೆ ಧರ್ಮಸಿಂ |
ಹಾಸನದೆ ರಾಜಿಸುವ ರಾಜರ್ಷಿ ನಿನ್ನಮುಖ |
ಯಾಶಾಸರೋಜವನು ಕಾಣಲಿಕೆ ಕಾದಿಹರು ರಾಜೇಂದ್ರ
ಬಹುಪರಾಕು ||

ಚಾಮುಂಡಿಕಾಂಬಾಪದಾಂಬುರುಹರೋಲಂಬ |
ಚಾಮೇಂದ್ರ ಸುಕೃತಫಲಬಿಂಬ ಸುಗುಣಾಲಂಬ |
ಸಾಮದಾದಿಚತುರುಪಾಯಕದಂಬ ಮಹೀತಿಮಿರಾಳಿದಳನ ತಂಬ ||
ಸೀಮಾಂತವಿಶ್ರಾಂತ ವಿಶದಕೀರ್ತಿಯ ತಾಳು |
ಭೂಮಿಪೇಂದ್ರರೊಳಗಾವ್ಯನೆಸುಕಲಿ ನೀಂ ಬಾಳು |
ಸೋಮಾರ್ಧಶೇಖರನ ರಾಣಿಯೊಲವಿಂದಾಳು ರಾಜೇಂದ್ರ
ಬಹುಪರಾಕು ||

ಅಂಗಿರಸವತ್ಸರ. ಸಮುಖದ ವಿದ್ವಾಂಸ,
ನಂಜನಗೂಡು ಶ್ರೀಕಂಠಶಾಸ್ತ್ರಿ.

ಕಳೆದ ಭಾನುವಾರ ಮುಂಬಯಿಯ ಹೇನೆಸ್‌ರೋಡಿನಲ್ಲಿ ಕಾಯಿದೆಗೆ ವಿರುದ್ಧವಾಗಿ ಉಪ್ಪನ್ನು ತಯಾರಿಸಿದರೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟ 4 ಜನ ಸ್ವಯಂಸೇವಕರಿಗೆ ಎರಡನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ನಾಲ್ಕುನಾಲ್ಕು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಅಕ್ಟೋಬರ್ 13 ನೇ ತಾರೀಖಿನ ದಿವಸ ಪ್ರಾತಃಕಾಲ ಮುಂಬಯಿ ಪೋಲೀಸರು ಕಾಂಗ್ರೆಸ್ಸಿನ ಚಳವಳಿಗೆ ಗುಪ್ತರೀತಿಯಲ್ಲಿ ಸಹಾಯ ಮಾಡುತ್ತಿರುವರೆಂಬ ಅನುಮಾನದ ಮೇಲೆ 4 ಜನ ಪ್ರಸಿದ್ಧ ಹತ್ತಿ ವರ್ತಕರನ್ನು ದಸ್ತಗಿರಿಮಾಡಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಈ ಸಭೆಯು ಈ ತಿಂಗಳು 10 ನೇ ತಾರೀಖು 12 ಘಂಟೆಗೆ ಸರಿಯಾಗಿ ಜಗನ್ಮೋಹನಮಹಲಿನ ವಿವಾಹಮಂಟಪದಲ್ಲಿ ನಡೆಯಿತು. ಪ್ರತಿನಿಧಿಗಳೆಲ್ಲರೂ ದಯಮಾಡಿಸಿದ್ದರು. ಅನೇಕ ಅಧಿಕಾರಿಗಳೂ, ಇತರ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ದಿವಾನ್ ಸಾಹೇಬರವರು 12 ಘಂಟೆಗೆ ಸರಿಯಾಗಿ ಇಂಗ್ಲಿಷ್ ಅಡ್ರೆಸ್ಸನ್ನು ಓದಿದರು. ಈ ಅಡ್ರೆಸ್ಸಿನಲ್ಲಿ ಈ ಸಭೆಯ ಮೆಂಬರುಗಳಾಗಿದ್ದ ದಿವಂಗತರಾದ ಧರ್ಮಪ್ರಕಾಶ ರಾವ್ ಬಹದ್ದೂರ್ ಬಸಮಯ್ಯನವರ ಅನೇಕ ಮುಖ್ಯವಾದ ಧರ್ಮಗಳು ಪ್ರಶಂಸೆ ಮಾಡಲ್ಪಟ್ಟು, ಇಂಥಾ ಮಹನೀಯರ ಮರಣದಿಂದ ಈ ದೇಶಕ್ಕೂ ಈ ಪಟ್ಟಣಕ್ಕೂ, ಈ ಸಭೆಗೂ, ಧರ್ಮದ ಚಳುವಳಿಗಳಿಗೂ ಆಗಿದ ನಷ್ಟವನ್ನು ಕುರಿತು ಸರಕಾರದ ಅನುತಾಪವನ್ನು ತೋರಿಸಿದರು. ಎಲ್ಲರೂ ಇದನ್ನು ಅನುಮೋದಿಸಿದರು. ಎಲ್ಲಾ ಮೆಂಬರುಗಳೂ ಮೌನದಿಂದ ಒಂದು ನಿಮಿಷದವರೆಗೂ ನಿಂತುಕೊಂಡು ಮ|| ಬಸಮಯ್ಯನವರ ಆತ್ಮಕ್ಕೆ ಮಂಗಳವಾಗಲೆಂದು ಕೋರಿದರು. ಈ ಅನುತಾಪಸೂಚಕವಾದ ಲೇಖನವನ್ನು ಮ|| ಬಸಮಯ್ಯನವರ ಸಹೋದರರಿಗೂ ಅವರ ಪುತ್ರರಿಗೂ ಕಳುಹಿಸಬೇಕೆಂದು ಠರಾವು ಆಯಿತು. ಅನಂತರ ದಸರಾ ಅಡ್ರೆಸ್ಸಿನಲ್ಲಿ ಪೂಗದಿ ಮೊದಲಾದ ವಿಷಯಗಳಲ್ಲಿ ಡೇವಿಡ್‌ಸನ್ ಕಮಿಟಿಯ ರಿಪೋರ್ಟಿನ ಮೇಲೆ ನಡೆದಿರತಕ್ಕ ವಿದ್ಯಮಾನಗಳು ತಪ್ಸೀಲುವಾರಾಗಿ ನಮೂದಿಸಲ್ಪಟ್ಟವು. ಅನೇಕ ಸಂಸ್ಥಾನಗಳು ಪೂಗದಿಯನ್ನು ಕೊಡುತ್ತಲಿಲ್ಲವೆಂಬುದಾಗಿಯೂ, ಈ ಕಮಿಟಿಯ ರಿಪೋರ್ಟಿನ ಪ್ರಕಾರ ರಿಯಾಯಿತಿ ನಡೆದ ಮೇಲೆ ಒಟ್ಟು 30 ಲಕ್ಷ ರೂಪಾಯಿ ಮಾತ್ರ ಪೂಗದಿ ಕೊಡುತ್ತಲಿರುವ ಸಂಸ್ಥಾನಗಳು ಪೂಗದಿ ಕೊಡಬೇಕಾಗುತ್ತದೆಂಬುದಾಗಿಯೂ, ಈ ಪೂಗದಿಯನ್ನು ಕೊಡುವುದರಿಂದ ನಮ್ಮ ಸಂಸ್ಥಾನದ ಸಂಪದಭಿವೃದ್ಧಿಯ ಕೆಲಸಗಳಿಗೆ ಬಹಳ ನಷ್ಟವಾಗಿರುವುದೆಂಬುದಾಗಿಯೂ, Federal Government ಬಂದಕೂಡಲೆ ಈ ಮೊಬಲಗಿಗೋಸ್ಕರ ಕೆಲವು ಸಂಸ್ಥಾನಗಳು ಮಾತ್ರ ಕಷ್ಟನಷ್ಟಗಳಿಗೆ ಗುರಿಯಾಗದಂತೆ ಏರ್ಪಾಡುಗಳು ಆಗಬೇಕಾಗುತ್ತದೆಂಬುದಾಗಿಯೂ, ನಮ್ಮ ಅಂಚೆ ಇಲಾಖೆಯನ್ನು ಸರಕಾರದವರು ಸೇರಿಸಿಕೊಂಡು ನಮ್ಮ ಸರಕಾರದ ಹಕ್ಕುಗಳನ್ನು ಇಂಪೀರಿಯಲ್ ಪೋಸ್ಟಿನಲ್ಲಿ ನಮಗೆ ಭಾರವಿಲ್ಲದೆ ನಡೆಸುವ ಏರ್ಪಾಡುಗಳಿರುವುವೆಂಬುದಾಗಿಯೂ, ಈ ಬಾಬಿನ ಉತ್ಪತ್ತಿಯು ಸಂಪೂರ್ಣವಾಗಿ ನಮಗೆ ಸಲ್ಲಬೇಕೆಂಬುದಾಗಿಯೂ, ಹಾಗಿಲ್ಲದ ಪಕ್ಷದಲ್ಲಿ ನಮ್ಮ ಅಂಚೆಯನ್ನು ನಮಗೆ ಕೊಡಬೇಕೆಂಬುದಾಗಿಯೂ ಅಭಿಪ್ರಾಯ ಬರುವಂತೆ ಅಪ್ಪಣೆಕೊಡಿಸಿದರು. ಕಂಟೋನ್ಮೆಂಟು ರೆವಿನ್ಯೂ, ಉಪ್ಪಿನ ತೆರಿಗೆ, ಸುಂಕಗಳು, Transport ಕೋರುಗಳು ಮೊದಲಾದುವುಗಳಿಂದ ಎಷ್ಟು ಮೊಬಲಗು ಬ್ರಿಟಿಷ್ ಸರಕಾರಕ್ಕೆ ಸಲ್ಲುತ್ತಲಿದೆಯೋ ಅವುಗಳನ್ನೆಲ್ಲಾ ಗೊತ್ತುಮಾಡಿ ನಮಗೆ ನ್ಯಾಯವಾಗಿ ಬರಬೇಕಾದ ಮೊಬಲಗನ್ನು ಠರಾವು ಮಾಡಿದಾಗ್ಯೂ, ವರ್ಷಕ್ಕೆ 1½ ಕೋಟಿ ರೂ. ಬರಬೇಕಾಗುತ್ತದೆ. ಕನಿಷ್ಠ ಪಕ್ಷ ಒಂದು ಕೋಟಿ ರೂಪಾಯಿ ಬಂದಾಗ್ಯೂ, ನಮ್ಮ ದೇಶದ ಸಂಪದಭಿವೃದ್ಧಿಯ ಕೆಲಸಗಳಿಗೆ ವಿಶೇಷ ಉತ್ತೇಜನವನ್ನು ಕೊಟ್ಟು ನಮ್ಮ ರೈತರು ಹೊಟ್ಟೆತುಂಬ ಹಿಟ್ಟನ್ನೂ ಮೈತುಂಬ ಬಟ್ಟೆಯನ್ನೂ, ವಾಸಮಾಡುವುದಕ್ಕೆ ಆರೋಗ್ಯವಾದ ಗುಡಿಸಿಲುಗಳನ್ನಾದರೂ ಹೊಂದಿ ಸಾಲಗಾರರಾಗದೆ ಅನಿವಾರಣೀಯವಾದ ರೋಗಗಳಿಗೂ ಅಕಾಲಮರಣಕ್ಕೂ ತುತ್ತಾಗದೆ ಇರಬಹುದು. ಈ ವಿಷಯವನ್ನು ಸರ್. ಮಿರ್ಜಾರವರು ಇಷ್ಟುಮಟ್ಟಿಗೆ ಅಡ್ರೆಸ್ಸಿನಲ್ಲಿ ಹೇಳಿರುವುದು. ಈ ಸಂಸ್ಥಾನದ ಪ್ರಜೆಗಳೆಲ್ಲಾ ಈ ಪೂಗದಿಯಿಂದ ಇದುವರೆಗೂ ಸುಮಾರು 40 ಕೋಟಿ ರೂಪಾಯಿಗಳವರೆಗೂ ಕೊಟ್ಟಿರುತ್ತಾರೆ. ಇದಲ್ಲದೆ ಚಿನ್ನದಗಣಿ Mantation ಗಳ ರಿಯಾಯಿತಿ, Trans port ಕೋರು, ಸುಂಕ, ಅಂಚೆ, ಟೆಲಿಗ್ರಾಫ್ ಮೊದಲಾದುವುಗಳಿಂದ ಇದುವರೆಗೂ ಬ್ರಿಟಿಷ್ ಗೌರ್ನಮೆಂಟಿಗೆ ಸೇರತಕ್ಕ ಮೊಬಲಗು ಲೆಖ್ಖಾಚಾರವಾದರೆ ಕನಿಷ್ಠ ಪಕ್ಷ 40 ಕೋಟಿ ರೂಪಾಯಿಗಳಾಗಬಹುದು. ಇವುಗಳ ಲೆಖ್ಖಾಚಾರವನ್ನೆಲ್ಲಾ ಬ್ರಿಟಿಷ್ ಗೌರ್ನಮೆಂಟಿನವರು ಠರಾವು ಮಾಡಿ ಮುಂದೆ ಈ ಬಾಬುಗಳಲ್ಲಿ ನಮಗೆ ನಷ್ಟವಿಲ್ಲದಂತೆ ಮಾಡುವುದಕ್ಕೆ ಸರ್. ಮಿರ್ಜಾಸಾಹೇಬರವರು ಪ್ರಯತ್ನ ಮಾಡಬೇಕು. ಈ ಪ್ರಯತ್ನಕ್ಕೆ ಈ ಸಂಸ್ಥಾನದ ಪ್ರಜೆಗಳೆಲ್ಲಾ ಸಹಾಯಮಾಡಬೇಕು. ನಮ್ಮ ಸರ್ಕಾರದವರು 1799 ನೇ ಇಸವಿಯಿಂದ ಇದುವರೆಗೂ ಇಂಡಿಯಾಗೌರ್ನಮೆಂಟಿಗೆ ನಮ್ಮ ಸಂಸ್ಥಾನದ ಹುಟ್ಟುವಳಿಯಿಂದ ಪೂಗದಿ, Trans port ಕೋರ್ ಮೊದಲಾದವುಗಳಿಂದ ಸಾಕಷ್ಟಾಗಿ ಎಷ್ಟು ಮೊಬಲಗು ಸೇರಿದೆಯೋ, ಉಪ್ಪು, ಸುಂಕ, ಪೋಸ್ಟ್, ಟೆಲಿಗ್ರಾಫ್, ಕಂಟೋನ್ಮೆಂಟು ಮೊದಲಾದುವುಗಳ ಹುಟ್ಟುವಳಿಯಿಂದ ಎಷ್ಟು ಮೊಬಲಗು ಕೊಡಲ್ಪಟ್ಟಿದೆಯೋ, ಈ ಮೊಬಲಗಿನಲ್ಲಿ ನ್ಯಾಯವಾಗಿ ಡಿಫೆನ್ಸುವಗೈರೆಗಳಿಗೋಸ್ಕರ ಬ್ರಿಟಿಷ್ ಗೌರ್ನಮೆಂಟಿಗೆ ಎಷ್ಟು ಸಲ್ಲಬೇಕೋ ಹೆಚ್ಚಾಗಿ ನಾವು ಎಷ್ಟನ್ನು ಕೊಟ್ಟಿರುವೆವೋ ಅದನ್ನೆಲ್ಲಾ ಠರಾವುಮಾಡಿ ಬ್ರಿಟಿಷ್ ಸರ್ಕಾರಕ್ಕೆ ವಿಜ್ಞಾಪಿಸಿ ಮುಂದೆಯಾದರೂ ಈ ಭಾರಗಳು ನಮ್ಮ ರೈತರ ತಲೆಯಮೇಲೆ ಬೀಳದಂತೆ ಮಾಡಿದರೆ ನಾವು ಸರ್. ಮಿರ್ಜಾರವರಿಗೂ ನಮ್ಮ ಗೌರ್ನಮೆಂಟಿನವರಿಗೂ ತುಂಬಾ ಕೃತಜ್ಞರಾಗುತ್ತೇವೆ. ಈ ರಿಯಾಯಿತಿಗಳೆಲ್ಲಾ ಆಗಬೇಕಾದರೆ Federal ಗೌರ್ನಮೆಂಟು ಬರಬೇಕು. ಈ ವಿಷಯದಲ್ಲಿ ಸರ್. ಮಿರ್ಜಾರವರು ಅಪ್ಪಣೆಕೊಡಿಸಿರುವ ಮಾತು ಬಹಳ ಯುಕ್ತಿಯುಕ್ತವಾಗಿದೆ. ಮೂರನೇ R. T. E. ಮುಂದಿನ ನವೆಂಬರು ತಿಂಗಳಲ್ಲಿ ನಡೆಯಬಹುದು. ಸರ್. ಮಿರ್ಜಾಸಾಹೇಬರು ಧೈರ್ಯಶಾಲಿಗಳು. ನಿರ್ದಾಕ್ಷಿಣ್ಯವಾಗಿ ಶ್ರೀಮನ್ಮಹಾರಾಜರವರ ಸೇವೆಯನ್ನು ಮಾಡಿ ಕೃತಾರ್ಥರಾಗಬೇಕೆಂಬ ಮನೋಭಾವವು ಸರ್ ಮಿರ್ಜಾರವರಿಗೆ ಸಂಪೂರ್ಣವಾಗಿರುವುದು. ಇವರಿಗೆ ಜಾತಿಭೇದ ಮತಭೇದ ಕೋಮಿನ ಭೇದ ಮೊದಲಾದುವುಗಳು ಯಾವುದೂ ಇರುವುದಿಲ್ಲ. ಈ ಸಂಸ್ಥಾನದ ಸಕಲ ಪ್ರಜೆಗಳೂ ಅವರವರ ಮೆಹನತ್ತಿನ ಫಲವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡಬೇಕೆಂಬ ಮನೋಭಾವವು ಇವರಿಗೆ ಸಂಪೂರ್ಣವಾಗಿರುವುದು. ಇದಲ್ಲದೆ ಇವರು ಕೇವಲ ನಿಸ್ಪೃಹರೆಂಬ ನಂಬಿಕೆಯು ಶ್ರೀಮನ್ಮಹಾರಾಜರವರಿಗೂ ಇರುವುದು. ಈ ನಂಬಿಕೆಯಿಂದ ಶ್ರೀಮನ್ಮಹಾರಾಜರವರ ಬೆಂಬಲವು ಇವರಿಗೆ ಸಂಪೂರ್ಣವಾಗಿರುವುದು. ಇದುವರೆಗೂ ದಿವಾನ್‌ಗಿರಿಗೆ ಬಂದ ಯಾವ ದಿವಾನರೂ ಶ್ರೀಮನ್ಮಹಾರಾಜರವರ ಸಹಪಾಠಿಗಳಾಗಿರಲಿಲ್ಲ. ಅವರ ಸ್ನೇಹಿತರಾಗಿಯೂ ಇರಲಿಲ್ಲ. ಇಷ್ಟುಮಟ್ಟಿಗೆ ಅವರ ಅಕೃತ್ರಿಮವಾದ ಪ್ರೀತಿಗೆ ಸರ್. ಮಿರ್ಜಾರವರು ಪಾತ್ರರಾಗಿರುವುದರಿಂದ ನಮ್ಮ ಸಂಸ್ಥಾನದ ರಾಜ್ಯಭಾರವು ಬಹಳ ಬಿಗಿಯಾಗಿರುವುದಕ್ಕೆ ಅವಕಾಶವಾಗಿರುವುದು. ಸರ್. ಮಿರ್ಜಾರವರು ಬ್ರಿಟಿಷ್ ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸಿಕೊಂಡಿರುವರು. ಇದಲ್ಲದೆ ಈ ದೇಶದ ಏಳಿಗೆಯೇ ಇವರಿಗೆ ಮುಖ್ಯಧ್ಯೇಯವಾಗಿರುವುದು. ಇವುಗಳನ್ನೆಲ್ಲಾ ನೋಡಿದರೆ ನಮ್ಮ ಸಂಸ್ಥಾನಕ್ಕೆ ಇವರ ದಿವಾನ್‌ಗಿರಿಯಲ್ಲಿ ವಿಶೇಷ ಪ್ರಯೋಜನವಾಗುವುದೆಂದು ಅನೇಕರು ಹೇಳುತ್ತಾರೆ. ಎಲ್ಲರೂ ಇವರಿಗೆ ಸಹಾಯಮಾಡಿದರೆ ನಮ್ಮ ಸಂಸ್ಥಾನಕ್ಕೆ ಇವರು ಅಸಾಧಾರಣವಾದ ಮಂಗಳವನ್ನು ಮಾಡುವರೆಂದು ನನಗೆ ತೋರುತ್ತದೆ.

ಈ ವರ್ಷದ ಸರ್ ಮಿರ್ಜಾರವರ ಅಡ್ರೆಸ್ಸಿನಲ್ಲಿ ಈ ವಿಷಯಗಳು ಮುಖ್ಯವಾದವುಗಳು:—ಕುರುಕು ಧರ್ಮಗಳು, ಪಬ್ಲಿಕ್ ವರ್ಕ್ಸ್, ನೀರಾವರಿ ಕೆಲಸಗಳು, ಕೃಷ್ಣರಾಜ ಕಟ್ಟೆ ಕೆಲಸಗಳು, ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಳು, ಮೈಸೂರು ಯೂನಿವರ್ಸಿಟಿ ಕಬ್ಬಿಣದ ಕಾರ್ಖಾನೆ, ಕೃಷ್ಣರಾಜಮಿಲ್ಲುಗಳು, ಗ್ರಾಮಪಂಚಾಯತಿಗಳು, ಇವೇ ಮೊದಲಾದುವುಗಳ ವಿಷಯದಲ್ಲಿ ಕೆಲಸಗಳು ಹೇಗೆ ನಡೆದಿರುವುವೋ ಅವುಗಳನ್ನೆಲ್ಲಾ ತಪ್ಸೀಲುವಾರಾಗಿ ತಿಳಿಸಿರುವರು. All India Federation ವಿಚಾರದಲ್ಲಿ ಸರ್ ಮಿರ್ಜಾರವರು ಅಪ್ಪಣೆಕೊಡಿಸಿರುವುದನ್ನು ನೋಡಿದರೆ ಈ ಭರತಖಂಡಕ್ಕೆಲ್ಲಾ ಮಂಗಳವಾದರೆ ಮೈಸೂರಿಗೂ ಮಂಗಳವಾಗುವುದೆಂಬ ಮನೋಭಾವವನ್ನು ಇವರು ಹೇಗೆ ತೋರಿಸುತ್ತಲಿರುವರೋ ಅದು ಗೊತ್ತಾಗುತ್ತದೆ. "ಸರ್ವರೂ ಸುಖವಾಗಿರಲಿ. ಯಾರಿಗೂ ತೊಂದರೆಯಿಲ್ಲದಂತೆ ಎಲ್ಲರ ಕ್ಷೇಮಕ್ಕೂ ಕೆಲಸಮಾಡಿ ಕೃತಾರ್ಥರಾಗಬೇಕು" ಎಂಬ ಮನೋಭಾವವು ಸರ್ ಮಿರ್ಜಾ ಸಾಹೇಬರಲ್ಲಿ ದೃಢಮೂಲವಾಗಿರುವುದಕ್ಕೋಸ್ಕರ ವಿಚಾರವನ್ನು ತಿಳಿದುಕೊಂಡಿರತಕ್ಕ ಬಹುಜನಗಳು ಸಂತೋಷಪಡುತ್ತಾರೆ. ಈ ಸಲದ ಅಡ್ರೆಸ್ಸಿನ ಎರಡನೇ ಭಾಗದಲ್ಲಿ ಕಾನೂನುಗಳು, ಮಸೂದೆಗಳು, ಡಿ|| ಬೋರ್ಡುಗಳು, ಮ್ಯುನಿಸಿಪಾಲಿಟಿಗಳು, ಗ್ರಾಮ ಪಂಚಾಯತಿಗಳು, ಆಯವ್ಯಯಗಳು, ರಿಜಿಸ್ಟ್ರೇಷನ್ನು, ಕೋರ್ಟುಗಳು, ಪೋಲೀಸು, ಆರೋಗ್ಯದ ಇಲಾಖೆ, ಪೋಸ್ಟುಗಳು, ಟೆಲಿಗ್ರಾಫ್‌ಗಳು, ಜಾಯಿಂಟ್ ಸ್ಟಾಕು ಕಂಪೆನಿಗಳು, ಕೋ ಆಪರೇಟಿವ್ ಸಂಘಗಳು, ಗಣಿಗಳು, Central recruitment Board, ಸೆನ್ಸಸ್ ಮೊದಲಾದುವುಗಳ ತಪ್ಸೀಲುಗಳು ತಿಳಿಸಲ್ಪಟ್ಟಿರುವುವು. 1931-32 ನೇ ಇಸವಿಯ ಆಯವ್ಯಯದ ಪಟ್ಟಿಯು ಕೊಡಲ್ಪಟ್ಟಿರುವುದು. ಇದರಿಂದ ಬಡ್ಜೆಟ್ ಎಸ್ಟಿಮೇಟು 3,78,76,000 ಆಗಿಯೂ, ರಿವೈಸ್ಡ್ ಎಸ್ಟಿಮೇಟು 3,48,83,000 ಆಗಿರುವುದಾಗಿಯೂ, 1931-32ನೇ ಇಸವಿಯ ಲೆಖ್ಖಾಚಾರದ ಪ್ರಕಾರ ಒಟ್ಟು ಆಯತಿಯು 3,38,19,000 ಆಗಿರುವುದಾಗಿಯೂ ತಿಳಿಯಬರುತ್ತದೆ. ಒಟ್ಟು ಖರ್ಚು ಕೂಡಾ ಇದೇ ರೀತಿಯಲ್ಲಿರುವುದು. ಸಂಪದಭಿವೃದ್ಧಿಯ ಕೆಲಸಗಳಿಗೆ ಪ್ರತ್ಯೇಕವಾಗಿ ಬಡ್ಜೆಟ್ ಎಸ್ಟಿಮೇಟು 70,14,000 ಪ್ರಿಲಿಮಿನರಿ ಅಕೌಂಟುಗಳು 65,46,000 ಈ ಮೊಬಲಗು ರೈಲುಗಳು, ಟ್ರಾಂವೆಗಳು, ಕೃಷ್ಣರಾಜಸಾಗರದ ಕೆಲಸಗಳು ಕೈಗಾರಿಕೆ ಕಬ್ಬಿಣದ ಕೆಲಸಗಳು ಇವೇ ಮೊದಲಾದುವುಗಳಿಗೆ ವಿನಿಯೋಗಿಸಲ್ಪಟ್ಟಿರುವುವು. ಇವುಗಳೆಲ್ಲಾ ರೆವಿನ್ಯೂಬಾಬಿಗೆಖರ್ಚುಮಾಡಲ್ಪಟ್ಟಿರುವುದಿಲ್ಲ. ವಿದ್ಯಾಭ್ಯಾಸಕ್ಕೋಸ್ಕರವೂ ಆ ದೇಶದ ಸಂಪದಭಿವೃದ್ಧಿಗೆ ಬೇಕಾದ ಕೈಗಾರಿಕೆ ಕೆಲಸಗಳಿಗೋಸ್ಕರವೂ ಆಗತಕ್ಕ ಖರ್ಚಿಗೆ ದ್ರವ್ಯರೂಪವಾದ ಪ್ರತಿಫಲವನ್ನು ನೋಡಬಾರದು. ಜನಗಳು ವಿದ್ಯೆಗಳನ್ನೂ ಕಲೆಗಳನ್ನೂ ವಿನಯಾದಿ ಸದ್ಗುಣಗಳನ್ನೂ ಭುಜಬಲದಿಂದಲೂ ಬುದ್ಧಿಬಲದಿಂದಲೂ ಬದುಕುವಯೋಗ್ಯತೆಯನ್ನು ಸಂಪಾದಿಸಿಕೊಂಡರೆ ಸರ್ಕಾರದವರು ಮಾಡುವ ಖರ್ಚಿಗೆ ಪ್ರತಿಫಲವುಂಟಾಯಿತೆಂದು ಭಾವಿಸಬೇಕು. ಆದ್ದರಿಂದ ನಮ್ಮ ಸರ್ಕಾರಕ್ಕೆ ಆಯವ್ಯಯದ ತೊಂದರೆಗಳಿದ್ದಾಗ್ಯೂ ಇಷ್ಟುಮಟ್ಟಿಗೆ ಮೊಬಲಗನ್ನು ಖರ್ಚುಮಾಡಿ ನಮ್ಮ ದೇಶದ ಸಂಪದಭಿವೃದ್ಧಿಯ ಕೆಲಸಗಳು ವೃದ್ಧಿಗೆ ಬರುವುದಕ್ಕೆ ಏರ್ಪಾಡುಗಳಾಗಿರುವುದರಿಂದ ನಾನು ತುಂಬಾ ಸಂತೋಷಿಸುತ್ತೇನೆ.

ಎಂ. ವೆಂಕಟಕೃಷ್ಣಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುಭಕ್ತಿಪ್ರಭಾ.

ನಾನು ಎಲ್ಲಿ ಹೋದರೂ ಆಯಾ ಸ್ಥಳದಲ್ಲಿಯ ದೇವಾಲಯ ಗುರುಸ್ಥಾನ, ಶಿಲಾಲಿಪಿ ಮೊದಲಾದವುಗಳಲ್ಲಿಯ ಆಧಾರಗಳಿಂದ ಪೂರ್ವದ ಇತಿಹಾಸವನ್ನು ವಿಚಾರಿಸುವದು ನನ್ನ ಸ್ವಭಾವ. ಇದಕ್ಕೆ ಭಗವಂತನ ಪ್ರೇರಣೆಯೇ ಕಾರಣವು. ಅಂತೆಯೇ ನಾನು ಕೊಪ್ಪಳಜಿಲ್ಲೆಗೆ ಸೇರಿದ ಬನ್ನೀಕೊಪ್ಪ (ಶಮಿಪುರ) ಕ್ಕೆ ಹೋದಾಗ ಪ್ರತ್ಯಕ್ಷ ಪ್ರಮಾಣ ವಿಚಾರಣೆ ಮುಂತಾದವುಗಳಿಂದ ವಿದಿತವಾದ "ಗುರುಭಕ್ತಿಪ್ರಭೆ"ಯ ಸಂಕ್ಷಿಪ್ತ ಸಾರವನ್ನು ವಾಚಕಮಹಾಶಯರ ಅವಗಾಹನೆಗೋಸ್ಕರ ಪ್ರಸಿದ್ಧಗೊಳಿಸಲಾಗಿದೆ.

ಸದ್ಯಃ ಬನ್ನಿಕೊಪ್ಪದಲ್ಲಿ ವಿರಾಜಿಸುವ ಪರಮಾಲರಡ್ಡಿ (ಪರಮಾಲರಡ್ಡಿ)ಯ ಕಡಾರಿ ಬೆಡಗಿನ ಸುಪ್ರಸಿದ್ಧ ಮನೆತನಗಳ ಪೂರ್ವಜರೊಳು ಬಹುಕಾಲದ ಮುಂಚೆ ಇಟಗಿ ಗ್ರಾಮದಲ್ಲಿ ವಿರೂಪಾಕ್ಷಗೌಡರೆಂಬವರು ಇದ್ದರು. ಇವರ ಗುರುಗಳು ಶ್ರೀ ಸಾವಳಗೀಶ್ವರ ಶಿವಾಚಾರ್ಯರ ವಂಶಜರಾದ ಅಮರಗಣನಾಥರು. ಇವರು ತಪೋನಿಧಿಗಳೂ ಜ್ಞಾನಿಗಳೂ ಆಗಿದ್ದರು. ಈ ಗುರುವಂಶದ ಹಿರೇಮಠ (ಬೃಹನ್ಮಠ) ವು ಬನ್ನಿಕೊಪ್ಪದಲ್ಲಿ ಈಗಲೂ ಇರುವದು. ಗುರುಶಿಷ್ಯ ಮನೆತನಗಳು ಇಟಗಿಯಿಂದ ಹೇಗೆ ಬನ್ನಿಕೊಪ್ಪಕ್ಕೆ ಬಂದವೆಂಬ ವಿಷಯವು ಈ ಕಥಾಸಾರದಿಂದ ತಿಳಿದು ಬರುವದು. ಇಟಗಿಯಲ್ಲಿ ಅಮರಗಣನಾಥರ ಗುರುಕುಲವಾಸ (ಗುರುಮಠ) ದೊಳು ಭಕ್ತವೃಂದವು ಪ್ರತಿದಿವಸವಿರುತ್ತಿತ್ತು. ಪಾಟೀಲರೂ, ಜವಾನದಾರರೂ, ರಾಜಕಾರಣಪಟುಗಳೂ ಇದ್ದು ಗುರುಸನ್ನಿಧಿಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ಗುರುಗಳು ಶಿವಸಿದ್ಧಾಂತವಿಷಯಾದಿಗಳನ್ನು ಭಕ್ತಮಂಡಳಿಗೆ ದಿನಂಪ್ರತಿ ಬೋಧಿಸುತ್ತಿದ್ದರು. ಇಟಗಿಯ ದಕ್ಷಿಣ ದಿಕ್ಕಿನೊಳು ಸುಮಾರು ೪ ಮೈಲುಗಳ ಮೇಲೆ ಗೌಡರ ಉತ್ತಮೋತ್ತಮ ಎರೆ ಜಮೀನುಗಳಿದ್ದವು. ಅಲ್ಲಿ ಮನೋಹರವಾದ ಒಂದು ವನವಿತ್ತು. ಇದರಲ್ಲಿ ಮನೋಹರವಾದ ತೃಣಾದಿಗಳು ವಿಶೇಷ ಬೆಳೆಯುತ್ತಿದ್ದು ಶಮಿವೃಕ್ಷಗಳೇ ತುಂಬಿದ್ದವು. ಅಂತೆಯೇ ಗೌಡರ ದನಕರುಗಳು ಮೇಯಲಿಕ್ಕೆ ಬರುತ್ತಿದ್ದವು. ಒಂದಾನೊಂದು ದಿನ ಅವುಗಳಲ್ಲಿಯ ಸುಜಾತೀಯ ಗೋವು ಮೇದು ಮನೆಗೆ ಹೋಗುವ ಕಾಲದಲ್ಲಿ ಹುತ್ತದಲ್ಲಿದ್ದ ಪ್ರಮುಖ ಶಮಿವೃಕ್ಷಕ್ಕೆ ಹಾಲನ್ನು ಕರೆಯಿತು. ಇದರಂತೆ ಪ್ರತಿದಿವಸ ಆಚರಿಸಿತು. ವಾಚಕರೇ, ಭೂತ ಸೇವೆಯು ಅಗಾಧವಾದುದು. ಇದರ ಮೇಲಿಂದ ಅನಾದಿಃ ಶ್ರುತಿಶಾಸ್ತ್ರ ಪುರಾಣಾದಿಗಳಲ್ಲಿ ದೇವಾಂಶವು ಇರುವದೆಂದು ಹೇಳುವದು ಸಿದ್ಧವೆಂಬುದು ಗೊತ್ತಾಗುತ್ತದೆ. ಗೋವು ಮನೆದೇವಿಗೆ ಹಾಲು ಕರೆಯುತ್ತಿದ್ದರಿಂದ ರಾತ್ರಿಯಲ್ಲಿ ಮಾತ್ರ ಹಿಂಡದ ಹಾಗಾಯಿತು. ೪-೫ ದಿನದ ಮೇಲೆ ಗೌಡರು ತಮ್ಮ ಮನೆತನಗಳಲ್ಲಿ ಬಹುದಿವಸದಿಂದ ಬಂದ ಕಳೆಯು ಹಿಂಡುವದರಲ್ಲಿ ಮೋಸವಾದದ್ದು ಎಂಬ ಚಿಂತಾಗ್ನಿಯಿಂದಲೇ ಗುರುಗಳನ್ನು ವಿಚಾರಿಸಿದರು. ಗುರುಗಳು ಜ್ಞಾನದೃಷ್ಟಿಯವರಿದ್ದುದರಿಂದ ಆ ಗೋವು ಅಸಾಧಾರಣವಾದುದು, ನಾಳಿನ ದಿವಸ ಪ್ರತ್ಯಕ್ಷ ತೋರಿಸುವೆನು ಎಂದು ಪ್ರಸಾದವಾಣಿಯಿಂದ ಅಪ್ಪಣೆಯನ್ನು ಮಾಡಿದರು. ಮರುದಿವಸ ನಿಶ್ಚಿತವಾದಂತೆ ಗುರುಶಿಷ್ಯರು ಮುಂತಾದವರು ವನಾಂತರಕ್ಕೆ ತೆರಳಿ ಒಂದು ಶಮಿವೃಕ್ಷಚ್ಛಾಯೆಯಲ್ಲಿ ಕುಳಿತರು. ಯಾವಾಗ ಅಭೂತ ವೈಚಿತ್ರ್ಯಾದಿಗಳನ್ನು ಕಾಣುವೆವೋ ಎಂದು ಹಾತೊರೆಯುತ್ತಿದ್ದರು. ದನಕರುಗಳು ತಿರುಗಿ ಮನೆಗೆ ಹೋಗುವ ವೇಳೆಯು ಸಮೀಪಿಸಿತು. ಅಷ್ಟರೊಳು ಆ ಹಸುವು ಪ್ರತಿದಿನದಂತೆ ಬನ್ನಿ ಮಹಾಕಾಳಿಗೆ ಕ್ಷೀರಾಭಿಷೇಕವನ್ನು ಮಾಡಹತ್ತಿತು. ಜ್ಞಾನವಂತರಾದ ಗುರುಗಳಿಗೆ ಈ ಕ್ರಿಯೆಯು ಪ್ರತ್ಯಕ್ಷವಾಯಿತಲ್ಲದೆ ಇತರರಿಗೆ ತೋರಲಿಲ್ಲ. ಅಂದಮೇಲೆ ದನಕಾಯುವವನು ಈ ಮಹಾಕೃತ್ಯವನ್ನು ಕಾಣಬಹುದೇ! ದೇವರ ಅಗಾಧಕೃತಿಗಳನ್ನು ಕಾಣಲು ಪೂರ್ವಾರ್ಜಿತ ಸುಕೃತಗುರುಕೃಪಾದಿಗಳು ಅವಶ್ಯವಾಗಿಬೇಕು. ಭಕ್ತರಿಗೆ ತೋರದ ವಿಷಯವು ಶಿವಾಚಾರ್ಯರಿಗೆ ತಿಳಿದುಬಂದುದರಿಂದ ಕೂಡಲೆ ಅವರು ಗೌಡರೇ, ಗುರುಕುಲಪುತ್ರರೇ, ಗುರುಪುತ್ರರಾದ ತಮಗೆ ಕಾಣದಿರುವದು ಆಶ್ಚರ್ಯ! ಆದರೆ ಗುರುಧ್ಯಾನಯುತರಾಗಿ ಏಕಮನಸ್ಸಿನಿಂದ ನಿರೀಕ್ಷಿಸಿರಿ. ತಪ್ಪದೆ ವ್ಯಕ್ತವಾಗುವದು ಎಂದು ನುಡಿದರು. ಗುರ್ವಾಜ್ಞೆಯಾಗುವದೊಂದೇ ತಡ, ಸಮಸ್ತರಿಗೂ ಗುರುವಾಕ್ಯವು ಪ್ರತ್ಯಕ್ಷವಾಗಹತ್ತಿತು. ಕೂಡಲೆ ಶಮಿವೃಕ್ಷದ ಬಳಿಗೆ ತೆರಳಿ ಈ ಕೃತಿಯನ್ನು ನಿರೀಕ್ಷಿಸಿ ಗುರುಭಕ್ತರು ಧನ್ಯರಾದರು. ಆ ಸಮಯದೊಳು ಗುರುಗಳು ಅಮ್ಮಾ! ಇಂದಿನಿಂದ ರಾತ್ರಿಯಲ್ಲಿಯೂ ಕೂಡ ಕ್ಷೀರಾಮೃತವನ್ನು ನೀಡಿ ಸಂತೃಪ್ತಿಪಡಿಸು ಎಂದು ಗೋಮಾತೆಗೆ ಅಪ್ಪಣೆಮಾಡಿದರು. ತನ್ನ ಸತ್ಕ್ರಿಯೆಯನ್ನು ಪೂರ್ತಿಗೊಳಿಸಿದ ಆ ಗೋವು ಒಳ್ಳೇ ಹುರುಪಿನಿಂದ ತೆರಳಿತು. ಗೌಡರು ಮುಂತಾದ ಸದ್ಭಕ್ತರು ಸದ್ಗುರುವಿಗಭಿವಂದಿಸಿ ಗುರುವಾಕ್ಯಸುಧೆಯನ್ನು ಪಡೆಯಹತ್ತಿದರು. "ಪಾಟೀಲರೇ, ಧರ್ಮಾತ್ಮರಾದ ವೀರಾಧಿವೀರರು ತಮ್ಮ ಶಸ್ತ್ರಾಸ್ತ್ರಗಳನ್ನು ಮಹಾಕಾಳಿಕಾಭವಾನಿಗೊಪ್ಪಿಸಿ ಕಾರ್ಯಕ್ರಮಗಳು ಜನಗಳಿಗೆ ಗೊತ್ತಾಗದಂತೆ ಆಚರಿಸಿ ಗುಪ್ತವಾಗಿಯೇ ಪೌರುಷವನ್ನು ಭುಜಬಲದಿಂದ ನೆರೆಗೊಳಿಸಿ ಪುನಃ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡು ಕಳೆದುಕೊಂಡ ಜನ್ಮಸಿದ್ಧ ಹಕ್ಕನ್ನು ಸಂಪಾದಿಸಿ ಚಿರಸ್ಥಾಯಿಯಾದರು. ಇದಕ್ಕೆ ಜಗದಂಬೆಯ ಕೃಪೆಯೇ ಕಾರಣವು. ಇತ್ಯಾದಿ ಮಹಾವಿಷಯಗಳನ್ನು ಪುರಾಣಾದಿಗಳಲ್ಲಿ ಕಾಣಬಹುದು. ಪುಣ್ಯಾತ್ಮರ ಪಾದಧೂಳಿಯಿಂದ ಪವಿತ್ರವಾದ ಪುಣ್ಯಭೂಮಿ. ಅದರೊಳು ಬನ್ನಿಮಹಾಕಾಳಿಕಾದೇವಿಯ ವಾಸಸ್ಥಳ ಅರ್ಥಾತ್ ಈ ಕ್ಷೇತ್ರದೊಳು ಒದಗಿದ ಸದ್ಯದ ಶುಭಚಿಹ್ನದ ಫಲವು ಗೌಡಮನೆತನದ ನಿಮಗೆ ಫಲಿಸುವದು. ಇಲ್ಲಿ ಒಂದು ಗ್ರಾಮವು ಸ್ಥಾಪಿಸಲ್ಪಡುವದು. ಈ ಗ್ರಾಮದ ಮುಖ್ಯಾಧಿಕಾರವು ನಿಮ್ಮದಾಗುವದು. ಆದರೆ ದನಕರುಗಳಿಗೆ ಮತ್ತು ಹಾದಿಕಾರರಿಗೆ ನೀರು ಬೇಕಾಗುವದರಿಂದ ಇದೋ ಪ್ರಾಚೀನದಿಂದ ಇದ್ದು ಮುಚ್ಚಿಹೋದ ಈ ಜಲಕುಂಡವನ್ನು ವಿಶಾಲವಾಗಿ ತೆಗೆಯಿಸಿ ಜೀರ್ಣೋದ್ಧಾರವನ್ನು ಮಾಡಿ ಕೀರ್ತಿಶಾಲಿಯಾಗು ;"

ಇತ್ಯಾದಿ ಗುರುಮುಖಕಮಲದಿಂದುದಯಿಸಿದ ಮಂಗಲ ವಿಷಯಗಳನ್ನು ಶಿರಸಾವಹಿಸಿ ಗುರುದೇವನ ಅಪ್ಪಣೆಯಂತೆ ಆಚರಿಸಲು ಒಪ್ಪಿ ರಾಯರು ಆನಂದ ತುಂದಿಲಹೃದಯರಾದರು. ಅನಂತರ ಸರ್ವರೂ ಗುರು-ಶಮೀದೇವತಾದಿಗಳಿಗೆ ವಂದಿಸಿ ಸದ್ವಿಚಾರ ವಿನಿಮಯ ಮಾಡುತ್ತ ಸ್ವಗ್ರಾಮಕ್ಕೆ ತೆರಳಿದರು. ಕೆಲವುದಿನಗಳಲ್ಲಿ ಗುರುವಿನ ಅಪ್ಪಣೆಯಂತೆ ಮಹಾಕಾರ್ಯಗಳು ಪೂರೈಸಿದವು. ಆ ಕಾಲದೊಳು ಸ್ಥಾಪಿಸಲ್ಪಟ್ಟ ಶಮೀಪುರ ಗ್ರಾಮವು ಇಂದಿನವರೆಗೂ ಆ ಬನ್ನಿ ಮಹಾಕಾಳಿಯ ನಾಮದಿಂದಲೇ ಬನ್ನಿಕೊಪ್ಪವೆಂಬುದಾಗಿ ಪ್ರಸಿದ್ಧವಿದೆ. ಜಗನ್ಮಾತೆಯ ಕೃಪಾಬಲದಿಂದ ಗ್ರಾಮವು ಧನಧಾನ್ಯಾದಿ ಸಂಪತ್ತುಗಳಿಂದ ತುಂಬಿತುಳುಕುತ್ತಿತ್ತು. ಅಂತೆಯೇ ಕರ್ನಾಟಕಸ್ಥರು "ಬಂಗಾರಕೊಪ್ಪ" ಮುಂತಾದ ಸಪ್ರೇಮವಾಚಕಾಭಿಧಾನಗಳಿಂದ ಪ್ರೇಮಾತಿಶಯಗಳನ್ನು ತೋರಿಸುತ್ತ ಬಂದಿದ್ದಾರೆ. ಇಲ್ಲಿ ಗೌಡರ ಮನೆತನದವರು "ಕಡಾರಿ ಕೌಲೂರು ಇಟಗಿ ವಗೈರೆ ಪಾಟೀಲ" ಇತ್ಯಾದಿ ಬಿರುದುಗಳನ್ನು ಒಳ್ಳೇ ಅಭಿಮಾನದಿಂದ ಉಲ್ಲೇಖಿಸುತ್ತ ಬಂದಿರುವರು. ಗ್ರಾಮಸ್ಥಾಪನಕಾಲದ ಹಿರೇಮಠವು (ಬೃಹನ್ಮಠವು) ಶ್ರೀಮದ್ರಂಭಾಪುರೀವೀರಸಿಂಹಾಸನದ ಶಾಖಾಮಠವಾಗಿದೆ. ಈ ಗುರುಮನೆತನದವರಲ್ಲಿ "ಸಾವಳಗಾರ್ಯರ ಜಂಗಮ" ಎಂಬ ಅಭಿಧಾನ ಪದ್ಧತಿಯು ಪ್ರಚಲಿತವಿರುವದರಿಂದ ಪರಾಧಿಕಾರಿಗಳು ಇದ್ದರೆಂದು ವ್ಯಕ್ತವಾಗುವದನ್ನು ಬೇರೆ ಹೇಳುವಕಾರಣವಿಲ್ಲ. ಈ ಮಠದಲ್ಲಿ ೪-೫ ಮನೆತನಗಳಾಗಿವೆ. ಈ ಗುರುವರ್ಗದ ಮನೆತನದವರಲ್ಲಿ ಅನೇಕರು ವಿದ್ವಾಂಸರಾಗಿದ್ದಾರೆ. ಇವರೊಳು ಶಿವಾರ್ಯರೆಂಬುವರು ೫೦-೬೦ ವರ್ಷಗಳ ಹಿಂದೆ ಶಿವೈಕ್ಯರಾಗಿದ್ದಾರೆ. ಆ ಮಹನೀಯರು ಸಿದ್ಧಸಾಧ್ಯರಿಂದೊಡಗೂಡಿದ ಭೂಕೈಲಾಸವೆನಿಸಿರುವ [illegible] ಮಹಾಕ್ಷೇತ್ರ [illegible] ಮಠದ ಮಹಾಸ್ವಾಮಿಗಳಾಗಿದ್ದರು. ಇವರಿಗಿಂತಲೂ ಹಿರಿಯರಾದ ಶಿವಲಿಂಗಾರ್ಯರು ಪುರಾಣಪ್ರವಚನಕಾರರು. ಬನ್ನಿಕೊಪ್ಪ ಬೃಹನ್ಮಠದೊಳು ಪಂಡಿತರು ಈಗ ಇಲ್ಲವೆಂದು ಹೇಳುವಂತೆಯಿಲ್ಲ. ವಿದ್ವಾನ್ ವೇ|| ಅಮರನಾಥಶಾಸ್ತ್ರಿಗಳು ಶ್ರೀ ಜಗದ್ಗುರು ರೇಣುಕಾಚಾರ್ಯಾದಿ ಪಂಚಾಚಾರ್ಯ ಚರಿತೆಗಳನ್ನು [illegible] ವಿಜಯ ಪುರಾಣಾದಿಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯ ಚರಿತೆಯಂತೂ ಜಗದ್ಧೃದಯದಲ್ಲಿ ಬೆಳಗುತ್ತಿರುವದು. ಇಂಥ ಪಂಡಿತರ ಮನೆತನದ ಶಿಷ್ಯರ ಪೂರ್ವಜರಾದ ಈ ಕಥಾನಾಯಕರ ವಂಶಜರು ತಮ್ಮ ಕ್ಷಾತ್ರಬಲದಿಂದ ಸುಪ್ರಸಿದ್ಧರಾಗಿದ್ದಾರೆ. ಪ್ರಸ್ತುತಕ್ಕಾದರೂ ಮಿ|| ಎಲ್ಲಪ್ಪಗೌಡ (ಜಗದೇಕವೀರ ಎಂಬ ಪಹಿಲವಾನ) ಪಾಟೀಲ, ಮಿ|| ಟಿ. ವಿ. ಪಾಟೀಲ, ಮಿ|| ಶಿವನಗೌಡ ಪಾಟೀಲ ಈ ಮಹೋದಯರು ಸಮಾಜಾಭಿಮಾನಿಗಳೂ ವಿದ್ಯಾಸಕ್ತರೂ ಆಗಿದ್ದು ಪ್ರಸಿದ್ಧವಡೆದಿದ್ದಾರೆ. ಯಾರು ಗುರುಮೂರ್ತಿಗಳ ಅಪ್ಪಣೆಯನ್ನು ಶ್ರದ್ಧಾಪೂರ್ವಕ ಮನ್ನಿಸಿ ಅದರಂತೆ ನಡೆಸುವರೋ ಅಂಥವರು ಧನಧಾನ್ಯಾದಿ ಸಂಪತ್ತನ್ನು ಪಡೆಯುವರೆಂದು ಈ ಕಥಾಮೃತದಿಂದ ಪೂರ್ಣವಾಗಿ ಅರಿತುಕೊಳ್ಳಬಹುದು. ಧರ್ಮಶಾಸ್ತ್ರವಂತೂ ಹರಗುರುಚರಮೂರ್ತಿಗಳ ಅರ್ಚನಾದಿಗಳನ್ನು ಮಾಡಿದಲ್ಲಿ ಇಹಪರಗಳ ಫಲಪ್ರಾಪ್ತಿಯಾಗುವದೆಂದು ಗರ್ಜನೆ ಮಾಡುತ್ತಿರುವದು. ಆದ್ದರಿಂದ ಪ್ರತಿಯೊಬ್ಬ ಭಕ್ತರು ತಮ್ಮ ತಮ್ಮ ಗುರುಗಳಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟು ಸುಖಶಾಂತಿಗಳನ್ನು ಪಡೆಯಲೆಂದು ಆಶಿಸಿ ಈ ಲೇಖಕ್ಕೆ ವಿರಾಮವನ್ನು ಕೋರುತ್ತೇನೆ.

ಪಿ. ಎಮ್. ಗುರುಪಾದಯ್ಯ.

ಪುರುಷಾರ್ಥಪ್ರಾಪ್ತಿಗೆ ಸಾಧಕವಾದಜ್ಞಾನ.

ಜ್ಞಾನವಿಲ್ಲದವರಿಗೆ ಮೋಕ್ಷವಿಲ್ಲ. ಅರ್ಥಶಾಸ್ತ್ರಜ್ಞಾನವು ಮೋಕ್ಷಕ್ಕೆ ಮುಖ್ಯಸಾಧನ. ಜ್ಞಾನಿಗಳು ಈ ಶಾಸ್ತ್ರದ ನೇಮದಂತೆ ನಡೆದರೆ ಇಹಪರ ಸೌಖ್ಯಗಳನ್ನು ಹೊಂದುವರು. ಸರ್ಕಾರದವರು ಈ ಶಾಸ್ತ್ರನೇಮದಂತೆ ನಡೆದರೆ ಸಕಲಪ್ರಜೆಗಳೂ ಅಧಿಕಾರಿಗಳೂ ಸುಖವಾಗಿರಬಹುದು. ಪ್ರಭುಗಳು ಈ ಶಾಸ್ತ್ರದ ನೇಮದಂತೆ ನಡೆದರೆ, ಅವರು ಜಗದೀಶ್ವರನ ಪ್ರತಿನಿಧಿಗಳೆಂದು ಪೂಜಿಸಲ್ಪಡುವರು. ಈ ಲೋಕದಲ್ಲಿಯೂ, ಲೋಕಾಂತರದಲ್ಲಿಯೂ ಅವರಿಗೆ ಸುಖದೊರೆಯುವದು. ಈ ಶಾಸ್ತ್ರದ ವಿಧಿನಿಷೇಧಗಳಲ್ಲಿ ಪರಿಜ್ಞಾನವಿಲ್ಲದವರೇ ಅಪೂರ್ಣ. ತಿನ್ನುವುದಕ್ಕೆ ಅನ್ನ, ಕುಡಿಯುವುದಕ್ಕೆ ನೀರು, ಹೊದಿಯುವುದಕ್ಕೆ ಬಟ್ಟೆ, ವಾಸಕ್ಕೆ ನೆರಳು ಇವಿಷ್ಟು ಸರ್ವರಿಗೂ ಅವಶ್ಯಕವಾದವುಗಳು. ತೋಟಿಗರು ಜಾಡುಮಾಲಿಗಳು ಕೂಡ ತಮ್ಮ ದೇಹಶಕ್ತಿ, ಬುದ್ಧಿಶಕ್ತಿಗಳಿಂದ ಮನಸ್ಸಿಟ್ಟು ಶ್ರದ್ಧೆಯಿಂದ ಕೆಲಸಮಾಡಿದರೆ ತಾವು ಸಂಪಾದಿಸುವ ಕೂಲಿಯಲ್ಲಿ ತಾವು ತಮ್ಮ ಕುಟುಂಬಕ್ಕೆ ಸೇರಿದ ಜನಗಳೂ ಎಲ್ಲರೂ ಸುಖವಾಗಿರಬಹುದು. ಆದರೆ ಅರ್ಥಶಾಸ್ತ್ರ ವಿಧಿನಿಷೇಧಗಳಂತೆ ನಡೆಯತಕ್ಕವರೇ ಅಪೂರ್ವ. ಕಾಲದೇಶವರ್ತಮಾನಗಳೂ ಕೂಡ ಬದಲಾಯಿಸುತ್ತವೆ. ಲಾಭನಷ್ಟಗಳೂ ಕೂಡ ಒಂದೇ ರೀತಿಯಲ್ಲಿರುವುದಿಲ್ಲ. ಶುಭಾಶುಭಗಳ ಪ್ರಾಪ್ತಿಯೂ ಕೂಡ ನಮ್ಮ ನಿರೀಕ್ಷಣೆಗೆ ಅನುಸಾರವಾಗಿರುವುದಿಲ್ಲ. ನಾವು ಒಂದುವಿಧವಾಗಿ ಯೋಚಿಸಿದರೆ ದೇವರು ಇನ್ನೊಂದು ವಿಧವಾಗಿ ವ್ಯವಸ್ಥೆಮಾಡುವುದುಂಟು. ಇದಕ್ಕೆ ಆ ನಾವೇ ಕಾರಣಭೂತರಾಗಿದ್ದಾಗ್ಯೂ ಸದರಿ ಕಾರಣಗಳು ನಮ ತಿಳಿಯದೇ ಇರುವುದುಂಟು. ಅದನ್ನೇ ನಾವು ಅದೃಷ್ಟವೆಂ ತಿಳಿದುಕೊಳ್ಳುವುದುಂಟು. ದೃಷ್ಟವೆಂದರೆ ಕಣ್ಣಿಗೆ ಕಾಣತಕ್ಕದ್ದು ಪಂಚೇಂದ್ರಿಯಗಳಿಗೆ ಗೊತ್ತಾಗತಕ್ಕದ್ದು. ಪಂಚೇಂದ್ರಿಯಗಳಿ ಗೊತ್ತಾಗದೆ ಇರತಕ್ಕದ್ದೂ ಕೂಡ ವಿಚಾರಪರರಿಗೆ ಗೊತ್ತಾದವುದು. ಸಾಮಾನ್ಯಜನಗಳಿಗೆ ಅಂಥ ವಿಷಯಗಳು ಗೊತ್ತಾ ಇರುವುದರಿಂದ ಅಂಥಾ ವಿಷಯಗಳನ್ನು ಅದೃಷ್ಟವೆಂದು ವಿ ಹೀಗರು ತಿಳಿದುಕೊಳ್ಳುವರು. ಅದು ಅದೃಷ್ಟವ ದೃಷ್ಟದಲ್ಲೇ ಸೇರಿದ್ದು. ಒಬ್ಬ ಕಾಡುಕುರುಬನು ಒಬ್ಬನ ರಿಗೆ ದಾರಿತೋರಿಸಿಕೊಡುವುದಕ್ಕೋಸ್ಕರ ಹೊರಟನು. ಮೃಗಗಳು ಎಲ್ಲಿರುವುವೋ ಅವನ್ನು ಸದರಿ ಶಿಕಾರಿಗೆ ತೋ ಬೇಕಾಗಿತ್ತು. ಆಕಾಶವನ್ನು ನೋಡಿ 'ಅಗೋ ನೋಡು ಹುಲಿಯು ಇರುತ್ತದೆಂದು ಹೇಳಿದನು. ಸದರಿ ಶಿಕಾರಿಗೆ ಆ ದಲ್ಲಿ ಹುಲಿ ಇರುವುದು ಅಸಂಭವವೆಂದು ತೋರಿದ್ದರಿಂದ ಕುರುಬನಿಗೆ ಬುದ್ಧಿವಿಕಲ್ಪವಾಗಿರಬಹುದೆಂದು ಭಾವಿಸಿ ಹುಲಿಯು ಆಕಾಶದಲ್ಲಿರುವುದುಂಟೇ ಎಂದು ಶಿಕಾರಿಯು ದನು. ನೀನು ಬುದ್ಧಿಶಾಲಿ ಎಂದು ನಾನು ತಿಳಿದುಕೊಂಡಿದ್ದೆ ಯಥಾರ್ಥವಾಗಿ ಮಾತನಾಡುತ್ತೀಯೋ. ಆಕಾಶದಲ್ಲಿ ರಣ ಗಳೇ ಮೊದಲಾದ ದುಷ್ಟಪಕ್ಷಿಗಳು ಒಂದೇ ಕಡೆಯಲ್ಲಿ ಕಾರವಾಗಿ ಸುತ್ತುತ್ತಲಿವೆ. ಕೆಳಗೆ ಯಾವದೋ ಒಂದು ಯನ್ನು ಕೊಂದು ಅಲ್ಲಿ ಹುಲಿಯು ಸದರಿ ಪ್ರಾಣಿಯ ರಕ್ತ ಹೀರುತ್ತಲಿರಬೇಕು. ಅದಕ್ಕೆ ಹೊಟ್ಟೆ ತುಂಬಿದ ಮೇಲೆ ವಿಶ್ರಮಿಸಿಕೊಳ್ಳುವುದಕ್ಕೆ ಹೊರಡುವುದು. ಕೂಡಲೆ ಇವುಗ ಉಳಿದ ಮಾಂಸವನ್ನು ಭಕ್ಷಿಸುವುದಕ್ಕೆ ಸಿದ್ಧವಾ ವುವು. ಅದರಿಂದಲೇ ಮುಂದೆ ಅದೇಸ್ಥಳದಲ್ಲಿ ಚಕ್ರಾಕಾ ಸುತ್ತುತ್ತಲಿವೆ. ಎಂದು ಹೇಳಿದನು. ಆಕಾಶವನ್ನು ಹುಲಿ ಇರುವುದೆಂದು ಹೇಳಿದ್ದಕ್ಕೆ ಸರಿಯಾದ ಅರ್ಥವಾಯಿತು ಕಾರ್ಯದಿಂದ ಕಾರಣವನ್ನು ಗೊತ್ತುಮಾಡುವುದೂ ಅ ಕಾರಣದಿಂದ ಕಾರ್ಯವನ್ನು ಗೊತ್ತುಮಾಡುವುದೂ ಅ ಹೊಗೆಯನ್ನು ನೋಡಿ ಬೆಂಕಿ ಇರುವುದೆಂದು ಗೊತ್ತುಮಾ ದುಂಟು. ಬೆಂಕಿಯಿಂದ ಹೊಗೆಯನ್ನು ಉಂಟುಮಾಡುವುದು ಬೀಜಗಳಿಂದ ವೃಕ್ಷಗಳಾಗುವುದುಂಟು. ವೃಕ್ಷದಿಂದ ಬೀ ಹುಟ್ಟುವುದುಂಟು. ಹೀಗೆಯೇ ಸಕಲ ಚರಾಚರವಸ್ತುಗ ಕಾರ್ಯರೂಪವಾಗಿಯೂ ಕಾರಣರೂಪವಾಗಿಯೂ ಇರುವುದು ಈ ಅಖಂಡಬ್ರಹ್ಮಾಂಡವನ್ನು ನೋಡಿದರೆ ಇದಕ್ಕೆ ಕಾರಣ ನಾದ ಪರಮೇಶ್ವರನಿರುವುದುಂಟು. ಸದರಿ ಪರಮೇಶ್ವರನ ಮೆಯಿಂದ ದೃಶ್ಯಮಾನವಾದ ಸೃಷ್ಟಿಸ್ಥಿತಿ ಪ್ರಳಯರೂ ವ್ಯಾಪಾರಗಳು ದೃಷ್ಟಿಪಥಕ್ಕೆ ಬೀಳುವುದುಂಟು. ಈ ವ್ಯ ಳನ್ನು ನೋಡಿ ಸಾರಾಸಾರವಿಚಾರಶೀಲರದಲ್ಲಿರತಕ್ಕ ವೇ ಗಳು 'ಬ್ರಹ್ಮನು ಸತ್ಯ ಜಗತ್ತು ಮಿಥ್ಯೆ' ಎಂಬುದಾಗಿ ವುದುಂಟು. ಅಜ್ಞಾನಿಗಳಾದವರು ಈ ಚರಾಚರಾತ್ಮಕ ಪ್ರಪಂಚಕ್ಕೆ ಒಡೆಯನಾದ ದೇವರು ಇರುವನೋ ಇಲ್ಲ ಮನೋವಾಕ್ಕರ್ಮಗಳ ಪಾರಿಶುದ್ಧ್ಯತೆಗೆ ಅನುರೂಪವಾದ ಉಂಟೋ ಇಲ್ಲವೋ. ಅಪಾರಿಶುದ್ಧ್ಯತೆಗೆ ಶಿಕ್ಷೆಯುಂಟೋ ವೋ. ಇದು ಒಂದೂ ನಮಗೆ ಗೊತ್ತಾಗುವುದಿಲ್ಲ. ಲೋ ದ್ರೋಹಮಾಡಿ ಅನೇಕ ಸ್ವಾರ್ಥಪರರು ಬದುಕುತಾ ನಾವೂ ಹಾಗೆ ಏಕೆ ಬದುಕಬಾರದೆಂದು ಪರಲೋಕ ಅನೇಕರು ಹೀನಲೌಕಿಕದಲ್ಲಿ ಉತ್ತಮಾಗಿಂತಕ್ಕ ಅಪ ಳನ್ನು ಮಾಡಿ ಕೆಲವರು ಬದುಕುತ್ತಾರೆ. ಮತ್ತು ಕೆಲವರು ಯನ್ನು ಹೊಂದುತ್ತಾರೆ. ಸಾಧ್ಯವಾದರೆ [illegible] ಅ ವಾದರೆ ಸರ್ಕಾರದವರ ಅತಿಥಿಗಳಾಗಿ ಜೈಲುವಾಸವನ್ನು [illegible] ಎಂಬ ಮನೋಭಾವದಿಂದ ಅನೇಕರು ಅಪಕೃತ್ಯ ಮಾರ್ಗಕ್ಕೆ ಬೀಳುವರು. ಇದಕ್ಕೆ ಅಜ್ಞಾನವೇ ಮುಖ್ಯ ಯಾವ ವಿದ್ಯಾಭ್ಯಾಸದಿಂದ ಅಜ್ಞಾನವು ಹೋಗುವುದೋ ಜ್ಞಾನ ಉಂಟಾಗುವುದೋ ಅರ್ಥಶಾಸ್ತ್ರಗಳ ನೇಮಗಳು ಅನುಭ ಬರುವುವೋ ದುಂದುಗಾರಿಕೆಯಲ್ಲಿ ಆ ಶಕ್ತಿಯು ಹೋಗುವು ಇಂಥಾ ಜ್ಞಾನವನ್ನು ಸಂಪಾದಿಸಿಕೊಂಡವರಿಗೆ ಸಕಲ ಇಷ್ಟ ಸಿದ್ಧಿಗಳೂ ದೊರೆಯುವುವು. ಹಾಗಾಗುವಂತೆ ಜಗದೀಶ್ವರನು ಗ್ರಹಿಸಲಿ.

ಎಂ. ವೆಂಕಟಕೃಷ್ಣಯ್ಯ.

ಗೋವುಗಳ ಗೋಳು.

ಅಣ್ಣಗಳಿರಾ! ನೀವು ಯಾರಿಂದ ಬದುಕಿರುವಿರಿ? ನಿಮ ಸಂಪತ್ತುಗಳನ್ನು ಕೊಟ್ಟವರಾರು? ನಿಮಗೆ ಗೊತ್ತಿದೆಯೇ? ಇಲ್ಲ ಇಲ್ಲ ಗೊತ್ತಿದ್ದರೆ ಗೋವುಗಳನ್ನು ಈ ಗೋಳಿಗೆ ಈಡುಮಾಡುತ್ತಿರಲಿಲ್ಲ. ಗೋವು ಎತ್ತುಗಳ ತಾಯಿ, ಗೋವುಗಳಿಲ್ಲದ ಒಕ್ಕಲುತನವಿಲ್ಲ. ಅದಿಲ್ಲದಿದ್ದರೆ ನಾವೆಲ್ಲಿ? ಅದಕಾರಣ ಗಳಿರಾ! ನಾವು ಯಾರಿಂದ ಬದುಕುತ್ತಿದ್ದೇವೆ. ಈ ಸುಖಸಂ ಗಳಿಗೆ ಕಾರಣರಾರು? ಗೋವುಗಳು ಕಂಡಿರಾ! ಈ ಭೂಮಿಯಾದ ಭರತಖಂಡದಲ್ಲಿ ಎಲ್ಲಿಯವರೆವಿಗೂ ಗೋ ಜೆಯು ತೃಪ್ತಿಕರವಾಗಿ ಜರುಗುತ್ತಿದ್ದಿತೋ ಗೋಮಾತೆ ಎಂತಹ ಪಾಪಿಯು ಕೂಡ ಎಲ್ಲಿಯವರೆಗೂ ಕೊಲ್ಲುತ್ತಿರಲಿಲ್ಲ ಗೋವುಗಳು ಸ್ವಾತಂತ್ರ್ಯವಿಲ್ಲದೆ ಕಳಲಿಂದಲೂ ಸುಖಿ

ಮೆಯು ನೆರವೇರಿತು. ಪಟ್ಟಣದ ಮಧ್ಯದಲ್ಲಿರುವ ಒಂದು ಕೊಳ್ಳದಲ್ಲಿ ಒಂದು ಭಯಂಕರ ಸರ್ಪವು ಹೊರಬಿದ್ದಿತು. ಅದನ್ನುಕೊಲ್ಲುವುದಕ್ಕೋಸ್ಕರ ಎಲ್ಲಿಂದಲೋ ಮೂರು ಮುಂಗಲಿಗಳು ಬಂದು ಸಿದ್ಧವಾದವು. ಸರ್ಪಕ್ಕೂ ಮುಂಗಲಿಗಳಿಗೂ ಯುದ್ಧವು ೧೫ ಮಿನಿಟುಗಳ ವರೆಗೆ ನಡೆಯಿತು. ಇದನ್ನು ನೋಡುವುದಕ್ಕೋಸ್ಕರ ಸಾವಿರಾರು ಜನರು ಅಲ್ಲಿಗೆ ಬಂದು ಸೇರಿದರು. ಅಷ್ಟರಲ್ಲಿ ಜಗದ್ಗುರುಗಳ ಸವಾರಿಯು ಮ|| ರಾ|| ಅಣ್ಣಾಸಾಹೇಬರ ಬಂಗಲೆಯಿಂದ ಪ್ರವಚನಕ್ಕಾಗಿ ದಯಮಾಡಿಸಿತು. ಅಣ್ಣಾಸಾಹೇಬರೇ ಮೊದಲಾದವರು ಈ ಎರಡು ಪ್ರಾಣಿಗಳಿಗೂ ಜಗಳವನ್ನು ತಪ್ಪಿಸುವುದಕ್ಕೋಸ್ಕರ ಬೇಕಾದಷ್ಟು ಪ್ರಯತ್ನವನ್ನು ಮಾಡಿದರೂ ಜಗಳವು ತಪ್ಪಲಿಲ್ಲ. ಸರ್ಪವು ಬಹು ದುಃಖಾವಸ್ಥೆಯಲ್ಲಿತ್ತು. ಆಗ್ಗೆ ಶ್ರೀಗಳವರು ಆ ಪ್ರಾಣಿಗಳನ್ನು ಕುರಿತು—"ನೀವು ಪರಸ್ಪರವಾಗಿ ಜಗಳವಾಡದೆ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿರಿ" ಎಂದು ಆಜ್ಞೆ ಮಾಡಿದರು. ಕೂಡಲೆ ಆ ಮೂರು ಮುಂಗಲಿಗಳು ಹೊರಟುಹೋದವು. ಸರ್ಪವು ಒಂದು ಬಿಲದಲ್ಲಿ ಸೇರಿತು. ಜಗದ್ಗುರುಗಳ ಆಜ್ಞೆಯಾದ ಕೂಡಲೆ ಜನ್ಮಸಿದ್ಧ ವೈರವುಳ್ಳ ಈ ಪ್ರಾಣಿಗಳು ತಮ್ಮ ವೈರಭಾವವನ್ನು ಬಿಟ್ಟು ಹೋದುದನ್ನು ಕಂಡು ಅಲ್ಲಿ ನೆರೆದಿದ್ದ ಎಲ್ಲಾ ಮತೀಯರೂ ಶ್ರೀಗಳವರ ಅದ್ಭುತ ಮಹಿಮೆಯನ್ನು ಕೊಂಡಾಡುತ್ತ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಯೋಗಿಗಳ ಸನ್ನಿಧಿಯಲ್ಲಿ ಪರಸ್ಪರ ವಿರೋಧಭಾವವುಳ್ಳ ಪ್ರಾಣಿಗಳು ತಮ್ಮ ತಮ್ಮ ವಿರೋಧ ಭಾವವನ್ನು ಬಿಟ್ಟು ಶಾಂತರೀತಿಯಿಂದ ವರ್ತಿಸುತ್ತವೆಂದು ಸಾರುತ್ತಿರುವ "ತತ್ಸನ್ನಿಧೌವೈರತ್ಯಾಗಃ" ಎಂಬ ಯೋಗಸೂತ್ರಾಭಿಪ್ರಾಯವು ಪ್ರತ್ಯಕ್ಷಸಿದ್ಧವಾಯಿತು. ಇಂಥ ಶಿವಯೋಗಿಗಳ ಪಾದವಿನ್ಯಾಸದಿಂದ ಪುನೀತವಾಗುತ್ತಿರುವ ಬಾರ್ಸಿಪಟ್ಟಣವೇ ಧನ್ಯ!

ಪ್ರತ್ಯಕ್ಷದರ್ಶಿ.

ಸ್ವೀಕಾರ

ಅನಂತಪುರ ಡಿ|| ಕಲ್ಯಾಣದುರ್ಗ ತಾಲೂಕು ಬೆಸ್ತರಹಳ್ಳಿಗ್ರಾಮ ನಿವಾಸಿಗಳಾದ ಶ್ರೀಮತಿ ಜಿ. ರುದ್ರಮ್ಮನವರು ಶ್ರೀ ಪರ್ವತ ಸಂಸ್ಥಾನದ ಶಾಖಾ ಸರ್ಕೀಟಿನ ಸ್ವಾಮಿಗಳವರಿಗೆ ಬಿನ್ನಹಮಾಡಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಪಟ್ಟಣದ ಒಕ್ಕಲಗೇರಿ ಓಣಿಯಲ್ಲಿರುವ ಸದ್ಭಕ್ತರು ಶ್ರಾವಣ ಶುದ್ಧ ಪ್ರತಿಪದದಿಂದ ಭಾದ್ರಪದ ಶುದ್ಧ ಅಷ್ಟಮಿಯವರೆಗೆ ಶ್ರೀ ಶರಣಬಸವೇಶ್ವರ ಪುರಾಣವನ್ನು ಪ್ರವಚನಮಾಡಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ|| ಹುಚ್ಚಯ್ಯನಮಠದ ಚನ್ನವೀರಯ್ಯನವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಡಿ|| ದೊಡ್ಡಬಳ್ಳಾಪುರ ಮಹಂತಿನ ಮಠದ ವೇ|| ಬಸವಾರಾಧ್ಯರ ಸೋದರಳಿಯಂದಿರಾದ ಡಿ. ಎಸ್. ಮಲ್ಲಿಕಾರ್ಜುನಯ್ಯನವರು ಕಟ್ಟಿಸಿದ ನೂತನ ಗೃಹಪ್ರವೇಶ ಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂ ಯು ಡಿ. ದಕ್ಷಿಣಾಮೂರ್ತಿಯವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳಜಿಲ್ಲಾ ಆಳವುಂಡಿ ಗ್ರಾಮನಿವಾಸಿಗಳಾದ ಬನ್ನಿಕೊಪ್ಪದ ಹಿರೇಮಠದ ವೇ|| ಶಿವಯ್ಯನವರು ವಿಜಯದಶಮಿಯ ಶುಭಸಮಯದಲ್ಲಿ ಶಮಿಪತ್ರವನ್ನು ಸಮರ್ಪಿಸಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಈ ಸಭೆಯು ಈ ತಿಂಗಳು 10 ನೇ ತಾರೀಖು 12 ಘಂಟೆಗೆ ಸರಿಯಾಗಿ ಜಗನ್ಮೋಹನಬಂಗಲೆ ವಿವಾಹಮಂಟಪದಲ್ಲಿ ನಡೆಯಿತು. ಪ್ರತಿನಿಧಿಗಳೆಲ್ಲರೂ ದಯಮಾಡಿದ್ದರು. ಅನೇಕ ಅಧಿಕಾರಿಗಳೂ, ಇತರ ದೊಡ್ಡಮನುಷ್ಯರೂ ದಯಮಾಡಿಸಿದ್ದರು. ದಿವಾನ್ ಸಾಹೇಬರವರು 12 ಘಂಟೆಗೆ ಸರಿಯಾಗಿ ಇಂಗ್ಲಿಷ್ ಅಡ್ರೆಸ್ಸನ್ನು ಓದಿದರು. ಈ ಅಡ್ರೆಸ್ಸಿನಲ್ಲಿ ಈ ಸಭೆಯ ಮೆಂಬರುಗಳಾಗಿದ್ದ ದಿವಂಗತರಾದ ಧರ್ಮಪ್ರಕಾಶ ರಾವ್ ಬಹದ್ದೂರ್ ಬಸಮಯ್ಯನವರ ಅನೇಕ ಮುಖ್ಯವಾದ ಧರ್ಮಗಳು ಪ್ರಶಂಸೆ ಮಾಡಲ್ಪಟ್ಟು ಇಂಥಾ ಮಹನೀಯರ ಮರಣದಿಂದ ಈ ದೇಶಕ್ಕೂ ಈ ಪಟ್ಟಣಕ್ಕೂ, ಈ ಸಭೆಗೂ, ಧರ್ಮದ ಚಳುವಳಿಗಳಿಗೂ ಆಗಿರತಕ್ಕ ನಷ್ಟವನ್ನು ಕುರಿತು ಸರಕಾರದ ಅನುತಾಪವನ್ನು ತೋರಿಸಿದರು. ಎಲ್ಲರೂ ಇದನ್ನು ಅನುಮೋದಿಸಿದರು. ಎಲ್ಲಾ ಮೆಂಬರುಗಳೂ ಮೌನದಿಂದ ಒಂದು ನಿಮಿಷದವರೆಗೂ ನಿಂತುಕೊಂಡು ಮ|| ಬಸಮಯ್ಯನವರ ಆತ್ಮಕ್ಕೆ ಮಂಗಳವಾಗಲೆಂದು ಕೋರಿದರು. ಈ ಅನುತಾಪಸೂಚಕವಾದ ಲೇಖನವನ್ನು ಮ|| ಬಸಮಯ್ಯನವರ ಸಹೋದರರಿಗೂ ಅವರ ಪುತ್ರರಿಗೂ ಕಳುಹಿಸಬೇಕೆಂದು ಠರಾವು ಆಯಿತು. ಅನಂತರ ದಸರಾ ಅಡ್ರೆಸ್ಸಿನಲ್ಲಿ ಪೂಗದಿ ಮೊದಲಾದ ವಿಷಯಗಳಲ್ಲಿ ಡೇವಿಡ್‌ಸನ್ ಕಮಿಟಿಯ ರಿಪೋರ್ಟಿನ ಮೇಲೆ ನಡೆಯತಕ್ಕ ವಿದ್ಯಮಾನಗಳು ತಪ್ಸೀಲುವಾರಾಗಿ ನಿರೂಪಿಸಲ್ಪಟ್ಟವು. ಅನೇಕ ಸಂಸ್ಥಾನಗಳು ಪೂಗದಿಯನ್ನು ಕೊಡುತ್ತಲಿಲ್ಲವೆಂಬುದಾಗಿಯೂ, ಈ ಕಮಿಟಿಯ ರಿಪೋರ್ಟಿನ ಪ್ರಕಾರ ರಿಯಾಯಿತಿ ನಡೆದ ಮೇಲೆ ಒಟ್ಟು 30 ಲಕ್ಷ ರೂಪಾಯಿ ಮಾತ್ರ ಪೂಗದಿ ಕೊಡುತ್ತಲಿರುವ ಸಂಸ್ಥಾನಗಳು ಪೂಗದಿ ಕೊಡಬೇಕಾಗುತ್ತದೆಂಬುದಾಗಿಯೂ, ಈ ಪೂಗದಿಯನ್ನು ಕೊಡುವುದರಿಂದ ನಮ್ಮ ಸಂಸ್ಥಾನದ ಸಂಪದಭಿವೃದ್ಧಿಯ ಕೆಲಸಗಳಿಗೆ ಬಹಳ ನಷ್ಟವಾಗಿರುವುದೆಂಬುದಾಗಿಯೂ, Federal Government ಬಂದಕೂಡಲೆ ಈ ವೊಬಲಗಿಗೋಸ್ಕರ ಕೆಲವು ಸಂಸ್ಥಾನಗಳು ಮಾತ್ರ ಕಷ್ಟನಷ್ಟಗಳಿಗೆ ಗುರಿಯಾಗದಂತೆ ಏರ್ಪಾಡುಗಳು ಆಗಬೇಕಾಗುತ್ತದೆಂಬುದಾಗಿಯೂ, ನಮ್ಮ ಅಂಚೆ ಇಲಾಖೆಯನ್ನು ಸರಕಾರದವರು ಸೇರಿಸಿಕೊಂಡು ನಮ್ಮ ಸರಕಾರದ ಪತ್ರಗಳನ್ನು ಇಂಪೀರಿಯಲ್ ಪೋಸ್ಟಿನಲ್ಲಿ ನಮಗೆ ಭಾರವಿಲ್ಲದೆ ನಡೆಸುವ ಏರ್ಪಾಡುಗಳಾಗುವುವೆಂಬುದಾಗಿಯೂ, ಈ ಬಾಬಿನ ಉತ್ಪತ್ತಿಯು ಸಂಪೂರ್ಣವಾಗಿ ನಮಗೆ ಸಲ್ಲಬೇಕೆಂಬುದಾಗಿಯೂ, ಹಾಗಿಲ್ಲದ ಪಕ್ಷದಲ್ಲಿ ನಮ್ಮ ಅಂಚೆಯನ್ನು ನಮಗೆ ಕೊಡಬೇಕೆಂಬುದಾಗಿಯೂ ಅಭಿಪ್ರಾಯ ಬರುವಂತೆ ಅಪ್ಪಣೆಕೊಡಿಸಿದರು. ಕಂಟೋನ್ಮೆಂಟು ರೆವಿನ್ಯೂ, ಉಪ್ಪಿನ ತೆರಿಗೆ, ಸುಂಕಗಳು, Transport ಕೋರುಗಳು ಮೊದಲಾದುವುಗಳಿಂದ ಎಷ್ಟು ವೊಬಲಗು ಬ್ರಿಟಿಷ್ ಸರಕಾರಕ್ಕೆ ಸಲ್ಲುತ್ತಲಿದೆಯೋ ಅವುಗಳನ್ನೆಲ್ಲಾ ಗೊತ್ತುಮಾಡಿ ನಮಗೆ ನ್ಯಾಯವಾಗಿ ಬರಬೇಕಾದ ವೊಬಲಗನ್ನು ಠರಾವು ಮಾಡಿದಾಗ್ಯೂ, ವರ್ಷಕ್ಕೆ 1½ ಕೋಟಿ ರೂ. ಬರಬೇಕಾಗುತ್ತದೆ. ಕನಿಷ್ಠಪಕ್ಷ ಒಂದು ಕೋಟಿ ರೂಪಾಯಿ ಬಂದಾಗ್ಯೂ, ನಮ್ಮ ದೇಶದ ಸಂಪದಭಿವೃದ್ಧಿಯ ಕೆಲಸಗಳಿಗೆ ವಿಶೇಷ ಉತ್ತೇಜನವನ್ನು ಕೊಟ್ಟು ನಮ್ಮ ರೈತರು ಹೊಟ್ಟೆತುಂಬ ಹಿಟ್ಟನ್ನೂ ಮೈತುಂಬ ಬಟ್ಟೆಯನ್ನೂ, ವಾಸಮಾಡುವುದಕ್ಕೆ ಆರೋಗ್ಯವಾದ ಗುಡಿಸಿಲುಗಳನ್ನಾದರೂ ಹೊಂದಿ ಸಾಲಗಾರರಾಗದೆ ಅನಿವಾರ್ಯವಾದ ರೋಗಗಳಿಗೂ ಅಕಾಲಮರಣಕ್ಕೂ ತುತ್ತಾಗದೆ ಇರಬಹುದು. ಈ ವಿಷಯವನ್ನು ಸರ್. ಮಿರ್ಜಾರವರು ಇಷ್ಟುಮಟ್ಟಿಗೆ ಅಡ್ರೆಸ್ಸಿನಲ್ಲಿ ಹೇಳಿರುವುದು. ಈ ಸಂಸ್ಥಾನದ ಪ್ರಜೆಗಳೆಲ್ಲಾ ಈ ಪೂಗದಿಯಿಂದ ಇದುವರೆಗೂ ಸುಮಾರು 40 ಕೋಟಿ ರೂಪಾಯಿಗಳವರೆಗೂ ಕೊಟ್ಟಿರುತ್ತಾರೆ. ಇದಲ್ಲದೆ ಚಿನ್ನದಗಣಿ Mantationಗಳ ರಿಯಾಯಿತಿ, Trans port ಕೋರು, ಸುಂಕ, ಅಂಚೆ, ಟೆಲಿಗ್ರಾಫ್ ಮೊದಲಾದುವುಗಳಿಂದ ಇದುವರೆಗೂ ಬ್ರಿಟಿಷ್ ಗೌರ್ನಮೆಂಟಿಗೆ ಸೇರತಕ್ಕ ವೊಬಲಗು ಲೆಖ್ಖಾಚಾರವಾದರೆ ಕನಿಷ್ಠಪಕ್ಷ 40 ಕೋಟಿ ರೂಪಾಯಿಗಳಾಗಬಹುದು. ಇವುಗಳ ಲೆಖ್ಖಾಚಾರವನ್ನೆಲ್ಲಾ ಬ್ರಿಟಿಷ್ ಗೌರ್ನಮೆಂಟಿನವರು ಠರಾವು ಮಾಡಿ ಮುಂದೆ ಈ ಬಾಬುಗಳಲ್ಲಿ ನಮಗೆ ನಷ್ಟವಿಲ್ಲದಂತೆ ಮಾಡುವುದಕ್ಕೆ ಸರ್. ಮಿರ್ಜಾಸಾಹೇಬರವರು ಪ್ರಯತ್ನಮಾಡಬೇಕು. ಈ ಪ್ರಯತ್ನಕ್ಕೆ ಈ ಸಂಸ್ಥಾನದ ಪ್ರಜೆಗಳೆಲ್ಲಾ ಸಹಾಯಮಾಡಬೇಕು. ನಮ್ಮ ಸರಕಾರದವರು 1799 ನೇ ಇಸವಿಯಿಂದ ಇದುವರೆಗೂ ಇಂಡಿಯಾಗೌರ್ನಮೆಂಟಿಗೆ ನಮ್ಮ ಸಂಸ್ಥಾನದ ಹುಟ್ಟುವಳಿಯಿಂದ ಪೂಗದಿ, Trans port ಕೋರ್ ಮೊದಲಾದವುಗಳಿಂದ ಸಾಕಷ್ಟಾಗಿ ಎಷ್ಟು ವೊಬಲಗು ಸೇರಿದೆಯೋ, ಉಪ್ಪು, ಸುಂಕ, ಪೋಸ್ಟ್, ಟೆಲಿಗ್ರಾಫ್, ಕಂಟೋನ್ಮೆಂಟು ಮೊದಲಾದುವುಗಳ ಹುಟ್ಟುವಳಿಯಿಂದ ಎಷ್ಟು ವೊಬಲಗು ಕೊಡಲ್ಪಟ್ಟಿದೆಯೋ, ಈ ವೊಬಲಗಿನಲ್ಲಿ ನ್ಯಾಯವಾಗಿ ಡಿಫೆನ್ಸುವಗೈರೆಗಳಿಗೋಸ್ಕರ ಬ್ರಿಟಿಷ್ ಗೌರ್ನಮೆಂಟಿಗೆ ಎಷ್ಟು ಸಲ್ಲಬೇಕೋ ಹೆಚ್ಚಾಗಿ ನಾವು ಎಷ್ಟನ್ನು ಕೊಟ್ಟಿರುವೆವೋ ಅದನ್ನೆಲ್ಲಾ ಠರಾವುಮಾಡಿ ಬ್ರಿಟಿಷ್ ಸರ್ಕಾರಕ್ಕೆ ವಿಜ್ಞಾಪಿಸಿ ಮುಂದೆಯಾದರೂ ಈ ಭಾರಗಳು ನಮ್ಮ ರೈತರ ತಲೆಯಮೇಲೆ

ಒಳದೇಶದ ವೃತ್ತಾಂತಗಳು.

ಈ ವರ್ಷದ ದಸರಾ ಅಧಿವೇಶನದ ಪ್ರಜಾಪ್ರತಿನಿಧಿ ಸಭೆಯು ಜಗನ್ಮೋಹನ ಪ್ರಾಸಾದದಲ್ಲಿ ಈ ತಿಂಗಳು ನೆಯ ತಾರೀಖುಲಾಗಾಯಿತು ಸರ್ ಮಿರ್ಜಾ ಎಂ. ಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ ನೇಕ ವಿಷಯಗಳು ಚರ್ಚಿಸಲ್ಪಟ್ಟವು.

ರಾಜಧಾನಿಯಲ್ಲಿ ಇದೇ ಅಕ್ಟೋಬರ್ ೧೯ನೆಯ ರೀಖು ಬುಧವಾರ ಪ್ರಾತಃಕಾಲ ಮೈಸೂರು ವಿಶ್ವ ದ್ಯಾನಿಲಯದ ಪದವೀಪ್ರದಾನಮಹೋತ್ಸವವು ನಡೆವದು. ಆ ಸಮಯದಲ್ಲಿ ದಿವಾನ್ ಬಹದ್ದೂರ್ ಸಿ.ವಿ. ಮಾರಸ್ವಾಮಿಶಾಸ್ತ್ರಿಗಳು ನೂತನ ಪಟ್ಟಾಂಕಿತರಿಗೆ ಪದೇಶವನ್ನು ಮಾಡುವರು.

ರಾಜಧಾನಿಯಲ್ಲಿ ಕಳೆದ ದಶಮಿ ಭಾನುವಾರ ರಾ ಮಹಾಪ್ರಭುಗಳ ಜಂಬುಸವಾರಿಯ ಸಮಯದಲ್ಲಿ ವಿಷಮಪರಿವರ್ತನೆಯಲ್ಲಿ ಭಾಗವಹಿಸಿದವರೆಂಬ ಪದಮೇಲೆ ಪೋಲೀಸಿನವರು ಬೆಂಗಳೂರು ಮಂದಿರದ ಮ|| ಎ. ಎನ್. ಸೂರ್ಯನಾರಾಯಣ ರನ್ನು ದಸ್ತಗಿರಿ ಮಾಡಿದ್ದು ಜಾಮೀನ್ ಮೇಲೆ ಬಿಡುಗಡೆಮಾಡಿರುತ್ತಾರೆ.

ರಾಜಧಾನಿಯಲ್ಲಿರುವ ಸುಪ್ರಸಿದ್ಧ ಕರ್ನಾಟಕ ಕವಿ ದ ವೇ|| ಆಸ್ಥಾನವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು 'ನವರಾತ್ರೋತ್ಸವದ ನಾಲ್ಕು ರತ್ನ' ಎಂಬ ಬಹು ಮನೋಹರವಾದ ಕನ್ನಡ ಮಾಲಿಕೆಯೊಂದನ್ನು ಶ್ರೀಮನ್ಮಹಾರಾಜರಿಗೆ ಒಪ್ಪಿ ಮಹಾಪ್ರಭುಗಳು ಅದನ್ನು ಪರಾಮರ್ಶಿಸಿ ಪ್ರಚಿತ್ತರಾಗಿ ಶಾಸ್ತ್ರಿಗಳವರಿಗೆ ೫೦ ರೂ. ಗಳ ಮಾನವನ್ನು ದಯಪಾಲಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ಆ ಪದ್ಯಗಳು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತವೆ. ವಾಚಕರು ಅವುಗಳನ್ನು ಓದಿ ರುವತಬೇಕೆಂದಾಶಿಸುತ್ತೇವೆ.

ವರ್ಷ ನಡೆದ ನವರಾತ್ರೋತ್ಸವ ಪ್ರಯುಕ್ತ ಶ್ರೀಮನ್ಮಹಾರಾಜರವರು ಹೋದ ಸೋಮವಾರ ದರ್ಬಾರಿನಲ್ಲಿ ಶ್ರೀಮಾನ್ ಟಿ. ಎನ್. ಮಿರಾರ್ ಮುದ್ದೀನ್ ಅಲಿಖಾನ್‌ರವರಿಗೆ "ಜವಾಹಿರ್-ಇ-ಖಾಸ್" ಎಂಬ ಪ್ರಶಸ್ತಿಯನ್ನೂ, ರಾವ್ ಬಹದ್ದೂರ್ ಡಾ|| ಶಾಕೋಟೆರ್‌ಸ್ವಾಮಿ ಅಯ್ಯಂಗಾರ್ ಸ್ವಾಮಿ ಅಯ್ಯಂಗಾರ್ಯರಿಗೆ 'ರಾಜಸೇವಾಸಕ್ತ' ಪ್ರಶಸ್ತಿಯನ್ನೂ, ಶ್ರೀಮಾನ್ ಕಂಜೀವರಂ ಹಯ ರಾಯರಿಗೆ "ರಾಜಚರಿತವಿಶಾರದ" ಎಂಬ ಸ್ತಿಯನ್ನೂ, ಶ್ರೀ ಮಹಾವಿದ್ವಾನ್ ಬೆಂಗಳೂರು ಸೂಚಾರ್ಯರಿಗೆ "ವಿದ್ಯಾನಿಧಿ" ಎಂಬ ಪ್ರಶಸ್ತಿನ್ನು, ಶ್ರೀ ಧರ್ಮಾಧಿಕಾರಿ ಕಾಶಿ ವೆಂಕಟಾಚಲ ಗಳಿಗೆ "ಪಂಡಿತರತ್ನಂ" ಎಂಬ ಪ್ರಶಸ್ತಿಯನ್ನೂ ಪಾಲಿಸಿದರು.

ಸರ್ಕಾರದವರು ರೋಡ್ ಸೆಸ್ಸನ್ನು ಇಮ್ಮಡಿಯಾಗಿ ದ್ದರಿಂದ ಎಲ್ಲ ಕಡೆಗೂ ಬಸ್ಸುಗಳನ್ನು ಬಾಡಿಗೆಗೆ ವುದಿಲ್ಲವೆಂದು ಬಸ್ಸಿನ ಯಜಮಾನರು ಈ ತಿಂಗ ದಿಯಿಂದ ಸಂಪೂರ್ಣವಾಗಿ ನಿರೋಧಮಾಡಿದ್ದ ಬರುಹೋಗುವ ಪ್ರಜೆಗಳಿಗೆ ಬಹಳವಾಗಿ ತೊಂದರೆಯಾಗಿದ್ದಿತು. ಸರ್ಕಾರದವರು ಇವರ ಪ್ರಾರ್ಥನೆಯನ್ನು ಲಾಲಿಸಿ ನಿರ್ಣಯಗೊಳಿಸುವುದಕ್ಕಾಗಿ ಸರ್ ಚಾರ್ಲ್ಸ್ ಟಾಡ್ಹಂಟರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿ ಕಮಿಟಿಯವರ ವರದಿಯು ಪ್ರಕಟವಾಗುವವರೆಗೆ (ಒಂದು ತಿಂಗಳ ವರೆಗೆ) ಸ್ಸಿನ ಯಜಮಾನರು ರೋಡ್ ಸೆಸ್ಸನ್ನು ಕಟ್ಟದೆ ಗಳನ್ನು ನಡೆಸಬಹುದೆಂದೂ ಆ ಕಂತಿನ ಹಣಕ್ಕೆ ಜಾಮೀನ್ ಕೊಡತಕ್ಕದ್ದೆಂದೂ ವ್ಯವಸ್ಥೆಗೊಳಿಸಿರುವುದರಿಂದ 7 ನೇ ತಾರೀಖಿನಿಂದ ಬಸ್ಸುಗಳು ಯಥಾಪ್ರಕಾರ ನಡೆಯಿಸಲ್ಪಡುತ್ತಲಿವೆ.

ಂಬೂಸವಾರಿ ಮೆರವಣಿಗೆಯ ದಿವಸ ನಡೆದ ಗಲ ಸಂಬಂಧವಾಗಿ ರಾಜಧಾನಿಯ ಕ್ರೈಂಬ್ರಾಂಚ್ ಸಿನವರು ಈ ಕೆಳಗೆ ಕಂಡ ೩೦ ಜನರ ಮೇಲೆ || ಕೋ|| ೧೪೪, ೧೪೭, ೧೪೮, ೩೩೨ ೩೫೩ ನೇ ಸೆಕ್ಷನ್ನುಗಳ ಪ್ರಕಾರ ಮೊಕದ್ದಮೆ ಹೂಡಿರುತ್ತಾರೆ. ೧. ಎ. ಎನ್. ಸೂರ್ಯನಾರಾಯಣರಾವ್ ೨. ಸೀತಾರಾಮಯ್ಯರ್, ೩. ಲಕ್ಷ್ಮಣನಾಯಕ, ೪. ರಾಮಸ್ವಾಮಿ, ೫. ಗೋಪಾಲಶೆಟ್ಟಿ, ೬. ಕೃಷ್ಣ, ೭. ವಿಷಕಂಠಯ್ಯ, ೮. ಮಂಡಿಮೊಹಲ್ಲಾದ ಕರಿಯ, ೯. ವಿ. ಆರ್. ಸರ್ವಿಸ್ಸಿನ ಕಂಡಕ್ಟರ್ ನಂಜ, ೧೦. ವಿ. ಆರ್. ಸರ್ವಿಸ್ಸಿನ ಕಂಡಕ್ಟರ್ ಶೀನ, ೧೧. ಸಿ. ಪಿ. ಸಿ. ಸರ್ವಿಸ್ಸಿನ ಡ್ರೈವರ್ ದೇವರಾಜ, ೧೨. ವಿ. ಆರ್. ಸರ್ವಿಸ್ಸಿನ ಡ್ರೈವರ್ ಸುಬ್ಬಣ್ಣ, ೧೩. ತಗಲಯ್ಯ, ೧೪. ಶೀನಾಚಾರ್, ೧೫. ಕುಳ್ಳ, ೧೬. ಶಿವ, ೧೭. ನಾಗು, ೧೮. ತಿಬ್ಬ, ೧೯. ಶ್ರೀಕಂಠಯ್ಯ, ೨೦. ಮಲ್ಲಯ್ಯ, ೨೧. ಹುಚ್ಚಯ್ಯ, ೨೨. ಬಚ್ಚ, ೨೩. ಕೃಷ್ಣಸಿಂಗ್, ೨೪. ವಾಸುದೇವಮೂರ್ತಿ, ೨೫. ಉಮ್ಮರ್ ಬೇಗ್ ಮಗ ಅಮೀರ್, ೨೬. ಕೃಷ್ಣೋಜಿಯ ಮಗ ಪುಟ್ಟಸ್ವಾಮಿ, ೨೯. ಹನುಮಂತಯ್ಯನ ಮಗ ಪೆರುಮಾಳು, ೩೦. ನರಸಿಂಹ ಅಯ್ಯಂಗಾರ್.

ಸತ್ಯಾಗ್ರಹಸಮರವಾರ್ತೆ.

ಕಳೆದ ಶನಿವಾರ ಮುಂಬಯಿ ಪೋಲೀಸರು ಕಾಟನ್ ಮಾರ್ಕೆಟ್ಟಿನ ಮುಂದೆ ಪಿಕೆಟಿಂಗ್ ಮಾಡಿದ 6 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಮುಂಬಯಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು, ಕಳೆದ ಶುಕ್ರವಾರ ಶೇಕ್‌ಮೆಮನ್ ರಸ್ತೆಯಲ್ಲಿ ಪಿಕೆಟಿಂಗ್ ಮಾಡಿದ 12 ಜನ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಜಬ್ಬಲ್‌ಪುರದ ದಯಾಳಚಂದ್ ಜೈನ್ ಮತ್ತು ಮುಲಯಂಚಂದ್ ಜೈನ್ ಎಂಬ ಇಬ್ಬರು ಸ್ವಯಂಸೇವಕರು ರೈಲ್ವೇ ಪ್ಯಾಸೆಂಜರು ಗಾಡಿಗಳನ್ನು ನಿಲ್ಲಿಸಿದರೆಂಬ ಕಾರಣದಮೇಲೆ ಆರಾರು ತಿಂಗಳ ಕಠಿಣಸಜೆಗೆ ಗುರಿಯಾದರು.

ಅಕ್ಟೋಬರ್ 11 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಸರ್ ಪುರುಷೋತ್ತಮದಾಸ ಠಾಕೂರದಾಸರ ಮನೆಯ ಮುಂದೆ ಪಿಕೆಟಿಂಗ್ ಮಾಡಿದ 4 ಜನ ಸ್ವಯಂಸೇವಕರನ್ನೂ ಪರದೇಶೀ ಸೈಕಲ್ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ 8 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಹೈದರಾಬಾದಿ (ಸಿಂದ್) ನಲ್ಲಿ ಪರದೇಶೀ ಮದ್ದುಗುಂಡುಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ 13 ಜನ ಸ್ವಯಂಸೇವಕರಿಗೆ 4 ತಿಂಗಳಿಂದ 6 ತಿಂಗಳವರೆಗೆ ವಿಧವಿಧವಾದ ಶಿಕ್ಷೆಯು ವಿಧಿಸಲ್ಪಟ್ಟಿತು.

ಅಕ್ಟೋಬರ್ 13 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಬೇರೆ ಬೇರೆ ಕಾಂಗ್ರೆಸ್ ಚಳವಳಿಗಳಲ್ಲಿ ಭಾಗವಹಿಸಿದ 10 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವರೆಲ್ಲರಿಗೂ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ನೆಲ್ಲೂರು ರಾಜಕೀಯ ಪರಿಷತ್ತಿಗೆ ಸಂಬಂಧಪಟ್ಟ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟ 7 ಜನ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಅಕ್ಟೋಬರ್ 13 ನೇ ತಾರೀಖಿನ ದಿವಸ ಮುಂಬಯಿಯ ದಾವಾಬಜಾರಿನಲ್ಲಿ ಪಿಕೆಟಿಂಗ್‌ಮಾಡಿದ 4 ಜನ ಸ್ವಯಂಸೇವಕರಿಗೆ ಆರಾರುತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಮದರಾಸಿನ ಜಾರ್ಜ್‌ಟವನ್ನಿನಲ್ಲಿ ಪರದೇಶೀವಸ್ತ್ರದ ಅಂಗಡಿಗಳಮುಂದೆ ಪಿಕೆಟಿಂಗ್ ಮಾಡಿದರೆಂಬ ಕಾರಣದಮೇಲೆ ಇದೇ ಅಕ್ಟೋಬರ್ 12 ನೇ ತಾರೀಖಿನ ದಿವಸ 15 ಜನ ಸ್ವಯಂಸೇವಕರೂ 13 ನೇ ತಾರೀಖಿನ ದಿವಸ 21 ಜನ ಸ್ವಯಂಸೇವಕರೂ ದಸ್ತಗಿರಿ ಮಾಡಲ್ಪಟ್ಟರು.

ಧೋಲೋರಾದಲ್ಲಿ ಸತ್ಯಾಗ್ರಹಪತ್ರಿಕೆಗಳನ್ನು ಹಂಚಿ, ಪರದೇಶೀವಸ್ತ್ರದ ಅಂಗಡಿಗಳಮುಂದೆ ಪಿಕೆಟಿಂಗ್ ಮಾಡಿದರೆಂಬ ಕಾರಣದಮೇಲೆ 6 ಜನ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರು ಇವರೆಲ್ಲರಿಗೂ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಅಕ್ಟೋಬರ್ 10 ನೆಯ ತಾರೀಖಿನದಿವಸ ಕಲ್ಕತ್ತೆಯ ಕ್ಲೈವ್ ರಸ್ತೆಯಲ್ಲಿ ಬಹಿರಂಗಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದಮೇಲೆ 12 ಜನ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು.

ವರ್ತಮಾನಸಂಗ್ರಹ

ಮಿ|| ಸಿ. ಎಫ್. ಆಂಡ್ರೂಸರು ಸ್ಕಾಟ್‌ಲೆಂಡಿನಲ್ಲಿ ಹಿಂದೂಸ್ಥಾನದ ವಿಷಯವಾಗಿ ಉಪನ್ಯಾಸಮಾಡುತ್ತಿರುವರು.

ಇಂಗ್ಲೆಂಡಿನಲ್ಲಿ ಒಟ್ಟು 10,000,000 ಮೈಲುಗಳ ಉದ್ದ ಟೆಲಿಗ್ರಾಫ್ ತಂತಿಯು ಹಾಕಲ್ಪಟ್ಟಿರುವದು. ಅದರಲ್ಲಿ 8,750,000 ಮೈಲುಗಳ ತಂತಿಯು ಭೂಮಿಯ ಕೆಳಗೆ ಹಾಕಲ್ಪಟ್ಟಿರುವುದು.

ಹಿಂದೂಸ್ಥಾನದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವವರ ಸಲುವಾಗಿ ಕೆಲವು ಜನ ಡಚ್ ದೇಶಸ್ಥರು ಈ ದೇಶಕ್ಕೆ ಬಂದು ಕಾರ್ಖಾನೆಯನ್ನು ಎಲ್ಲಿ ಸ್ಥಾಪಿಸಬೇಕೆಂಬ ಬಗ್ಗೆ ಶೋಧವನ್ನು ನಡೆಸಿರುವರಂತೆ!

ಹಂಗೇರಿದೇಶದ ಬಿಕ್‌ಪರ್ವತದಲ್ಲಿ ಒಂದು ವಿಚಿತ್ರವಾದ ಮೂಳೆಯು ದೊರಕಿರುವುದು. ಅದ ಈಗ್ಗೆ ಸುಮಾರು 1,20,000, ವರ್ಷಗಳ ಹಿಂದೆ ಜೀವಿಸಿದ್ದವರ ಮೂಳೆಯೆಂದು ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಇದೇ ಅಕ್ಟೋಬರ್ 12 ನೆಯ ತಾರೀಖಿನ ದಿವಸ ಮಧುರೆಯ ಮಾನಿಮಂಗಲಂ ಚೌಕದಲ್ಲಿ ಒಬ್ಬ ವ್ಯಾಪಾರಿಯು ತನ್ನ ನಾಲ್ಕು ಮಕ್ಕಳ ಜೊತೆಯಲ್ಲಿ ಅಂಗಡಿಯಲ್ಲಿ ಕುಳಿತಿದ್ದಾಗ ಸಿಡಿಲುಬಡಿದು ಎಲ್ಲರೂ ಮೃತಪಟ್ಟರು.

ಮುಂಬಯಿ ನ್ಯಾಯವಿಧಾಯಕ ಸಭೆಯಲ್ಲಿ ಭರತಖಂಡಕ್ಕೆ ಪ್ರಾಂತಿಕ ಸ್ವಾತಂತ್ರ್ಯವನ್ನೂ, ಕೇಂದ್ರದಲ್ಲಿ ಜವಾಬ್ದಾರಿಯನ್ನೂ ಏಕಕಾಲದಲ್ಲಿ ಕೊಡಬೇಕೆಂಬ ಬಗ್ಗೆ ಮಿ|| ಜೆ. ಬಿ. ಪೆಟಿಟ್‌ರವರು ತಂದಿದ್ದ ಠರಾವು ಸರ್ವಾನುಮತದಿಂದ ಪಾಸಾಯಿತು.

ದಕ್ಷಿಣ ಆಫ್ರಿಕಾದಲ್ಲಿದ್ದ, (ಮಹಾತ್ಮರ ಮಿತ್ರರಲ್ಲೊಬ್ಬರಾದ) ಅಡ್ವೋಕೇಟ್ ಮಿ|| ಆರ್. ಕೆ. ಖಾನ್ ರವರು ಮಾರಿಟ್ಸ್‌ಬರ್ಗ್‌ನಲ್ಲಿ ಮೃತಪಟ್ಟರು. ಭಾರತೀಯರಿಗಾಗಿ ಉಚಿತವಾದ ಆಸ್ಪತ್ರೆಗಳನ್ನು ಕಟ್ಟಲು ಇವರು 40,000 ಪೌಂಡುಗಳನ್ನು ದಾನಮಾಡಿರುತ್ತಾರೆ.

ಇದೇ ಅಕ್ಟೋಬರ್ 11 ನೆಯ ತಾರೀಖಿನ ದಿವಸ ಪಂಜಾಬಿನ ಹಿಸ್ಸಾರ್ ಡಿಸ್ಟ್ರಿಕ್ಟಿನಲ್ಲಿ ಕಳುವಾಗಿದ್ದ ಕೆಲವು ದನಗಳ ಸಂಬಂಧದಲ್ಲಿ ಸಿಖ್ಖರಿಗೂ, ಮುಸಲ್ಮಾನರಿಗೂ ಹೊಡೆದಾಟವಾಯಿತು. 14 ಜನ ಮುಸಲ್ಮಾನರು ಮೃತಪಟ್ಟರು. 11 ಜನರಿಗೆ ವಿಶೇಷ ಗಾಯಗಳಾಗಿರುವುವು.

ಅಮೇರಿಕೆಯ ಒಬ್ಬ ಶಾಸ್ತ್ರಜ್ಞನು ಒಂದು ಹೊಸ ನಮೂನೆಯ ಹಾಸಿಗೆಯನ್ನು ಕಂಡುಹಿಡಿದಿರುವನು. ಹಾಸಿಯ ಮೇಲೆ ಮಲಗುವವನು ಎಷ್ಟು ಹೊತ್ತಿಗೆ ಹೇಳಬೇಕೆಂದು ಅಪೇಕ್ಷಿಸುವನೋ ಅಷ್ಟುಹೊತ್ತಿಗೆ ಸರಿಯಾಗಿ ಹಾಸಿಗೆಯು ಮಲಗಿದ್ದವನನ್ನು ನೆಲಕ್ಕೆ ಉರುಳಿಸಿ ತಾನಾಗಿಯೇ ಸುತ್ತಿಕೊಳ್ಳುವುದಂತೆ!

ಮುಂಬಯಿಯ ಕೆಲವು ಸಂಸ್ಕೃತದ ಅಭಿಮಾನಿಗಳು ಸಂಸ್ಕೃತವನ್ನು ಇತರ ಭಾಷೆಗಳಂತೆಯೇ ಎಲ್ಲರೂ ಮಾತನಾಡುವ ಭಾಷೆಯನ್ನಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿರುವರು. ಈ ಬಗ್ಗೆ ಅವರು ಕೆಲವು ಬಹಿರಂಗ ಸಭೆಗಳನ್ನು ಏರ್ಪಡಿಸಿರುವರು. ಈ ಸಭೆಗಳ ಕಾರ್ಯಕ್ರಮಗಳೆಲ್ಲವೂ ಸಂಸ್ಕೃತದಲ್ಲಿಯೇ ನಡೆಯುವುದು.

ಬೆನಾರಸ್ಸಿನಿಂದ ಕಾನ್ಪುರಕ್ಕೆ ಮಾರ್ಚಿ 29 ನೆಯ ತಾರೀಖಿನ ದಿವಸ ರವಾನೆಮಾಡಿದ 200 ರೂಪಾಯಿಗಳ ಒಂದು ರಿಜಿಸ್ಟರ್ ಇನ್ಷೂರ್ ಕವರು ಈ ಮಾಹೆ 6 ನೆಯ ತಾರೀಖು ಮುಟ್ಟಿತೆಂದು ಸಮಾಚಾರ ಬಂದಿದೆ. ಇಷ್ಟು ಸಾವಕಾಶವಾಗಲು ಕಾರಣ ತಿಳಿದಿಲ್ಲ. ಪೋಸ್ಟಾಫೀಸು ಅಧಿಕಾರಿಗಳು ತನಿಖೆ ಕ್ರಮಗಳನ್ನು ಜರುಗಿಸುತ್ತಿದ್ದಾರೆ.

ಪರ್ಷಿಯನ್ ಕೊಲ್ಲಿಯಲ್ಲಿ ಈ ವರ್ಷ ಒಂದು ಅಸಾಧಾರಣವಾದ ಮುತ್ತು ದೊರೆತಿರುವುದು. ಅದು 18 ಕ್ಯಾರೆಟ್ಟುಗಳ ತೂಕವಿರುವುದು. ಇಷ್ಟು ದೊಡ್ಡದಾದ ಮುತ್ತು 20 ವರ್ಷಗಳಿಂದೀಚೆಗೆ ದೊರಕಿಯೇ ಇರಲಿಲ್ಲವಂತೆ! ಬೇಹರೀನಿನ ಅಲೂಸಾಯಬಿ ಫರ್ಮಿನವರು ಅದನ್ನು ಕೊಂಡುಕೊಂಡಿರುವರು. ಅದರ ಕ್ರಯವು ಅನೇಕ ಲಕ್ಷ ರೂಪಾಯಿಗಳಾಗುವದು.

ಸರ್ಕಾರಿ ಸುದ್ದಿಗಳು.

ಕೋಲಾರ ಡಿ|| ಪೋ|| ಸೂ|| ರವರಾಗಿರುವ ಮಿ|| ಕೆ. ಸಿದ್ದರಾಮಪ್ಪನವರಿಗೆ ಆ ೭ ನೇ ತಾರೀಖಿನದಿನದಿಂದ ೧೯೩೩ ನೇ ಇಸವಿ ಏಪ್ರಲ್ ೭ ನೇ ತಾರೀಖಿನವರೆಗೆ ಫರ್ಲೋ ರಜಾ ಕೊಡಲಾಗಿದೆ.

ಕೋಲಾರ ಡಿ|| ಟ್ರಿಜರಿ ಚಾರ್ಜಿನಲ್ಲಿರುವ ಮಿ|| ಅಬ್ದುಲ್ ರಜಾಕ್‌ರವರು ಡಿ|| ಪೋ|| ಸೂ|| ರವರಾಗಿ ನೇಮಕಮಾಡಲ್ಪಟ್ಟಿರುವರು.

ಕೋಲಾರ ತಾಲ್ಲೂಕು ಅಮಲ್ದಾರರಾಗಿರುವ ಮಿ|| ಆರ್. ವಿ. ಸೂರಪ್ಪನವರು ಕೋಲಾರ ಡಿ|| ಟ್ರಿಜರಿ ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ಈ ಕೆಳಗೆ ಕಂಡ ಮುನ್‌ಸೀಫರುಗಳು ವರ್ಗಾಯಿಸಲ್ಪಟ್ಟಿರುವರು.—

ಮಿ|| ಸಿ. ಬಿ. ನಾಗಭೂಷಣರಾಯರು ಚಿತ್ರದುರ್ಗದಿಂದ ತುಮಕೂರಿನ ಎರಡನೇ ಮುನ್‌ಸೀಫಕೋರ್ಟಿಗೆ, ಮಿ|| ಅಬ್ದುಲ್ ರಹಮಾನ್‌ರವರು ತುಮಕೂರಿನ ಎರ ಮುನ್‌ಸೀಫ್ ಕೋರ್ಟಿನಿಂದ ಮೈಸೂರಿನ ಮೊದಲನೇ ಡನೇ ಮುನ್‌ಸೀಫ್ ಕೋರ್ಟಿಗೆ, ಮಿ|| ಬಿ. ರಾಮಣ್ಣನವರು ಮೈಸೂರಿನ ಮೊದಲನೇ ಮುನ್‌ಸೀಫ್ ಕೋರ್ಟಿನಿಂದ ಕ್ಲೋಸ್‌ಪೇಟೆ ಮೊದಲನೇ ಮ್ಯಾ|| ರವರಕೋರ್ಟಿಗೆ, ಮಿ|| ಡಿ. ರಾಘವೇಂದ್ರರಾಯರು ಕ್ಲೋಸ್‌ಪೇಟೆಯಿಂದ ನಂಜನಗೂಡ್ ಮುನ್‌ಸೀಫ್‌ಕೋರ್ಟಿಗೆ, ಮಿ|| ಯು. ಡಿ. ನಾರಾಯಣಮೂರ್ತಿಯವರು ನಂಜನಗೂಡಿನಿಂದ ಶಿವಮೊಗ್ಗಾಕ್ಕೆ ಮುನ್‌ಸೀಫಕೋರ್ಟಿಗೆ, ಮಿ|| ಎಸ್. ಶ್ರೀನಿವಾಸ್‌ರು ಶಿವಮೊಗ್ಗಾದಿಂದ ಚಿತ್ರದುರ್ಗಕ್ಕೆ ಮುನ್‌ಸೀಫಕೋರ್ಟಿಗೆ, ಮಿ|| ಕೆ. ಸಿ. ಲಿಂಗಯ್ಯಗೌಡರು ಸಾಗರದಿಂದ ತಿಪಟೂರು ಎರಡನೇ ತರಗತಿಯ ಮ್ಯಾ|| ಕೋರ್ಟಿಗೆ, ಮಿ|| ಎಚ್. ವಿ. ಚಂದ್ರಶೇಖರಯ್ಯನವರು ತಿಪಟೂರಿನಿಂದ ಸಾಗರಕ್ಕೆ ಮುನ್‌ಸೀಫಕೋರ್ಟಿಗೆ ವರ್ಗಾಯಿಸಲ್ಪಟ್ಟಿರುವರು.

ಮೆಡಿಕಲ್ ಆಫೀಸರುಗಳ ಬಡತಿ.

ಈ ಕೆಳಗೆ ಕಾಣಿಸಿದ ಮೆಡಿಕಲ್ ಆಫೀಸರುಗಳ ಬಡತಿಯಾಗಿದೆ. ಮಿ|| ಎಫ್. ನರೋನ್ಹ, ಮೂರನೇ ತರಗತಿಯ ಸರ್ಜನ್‌ಗಿರಿಯಿಂದ ಎರಡನೇ ತರಗತಿಗೆ, ಮಿ|| ಎಸ್. ನಾರಾಯಣರಾಯರು, ನಾಲ್ಕನೇ ತರಗತಿಯ ಸರ್ಜನ್‌ಗಿರಿಯಿಂದ ಮೂರನೇ ತರಗತಿಗೆ, ಮಿ|| ಕೆ. ಶ್ರೀನಿವಾಸಾಚಾರ್ ಐದನೇ ತರಗತಿಯ ಸರ್ಜನ್‌ಗಿರಿಯಿಂದ ನಾಲ್ಕನೇ ತರಗತಿಗೆ, ಮಿ|| ಎಸ್. ವರದಯ್ಯಂಗಾರ್ ಆರನೇ ತರಗತಿಯ ಸರ್ಜನ್‌ಗಿರಿಯಿಂದ ಐದನೇ ತರಗತಿಗೆ, ಮಿ|| ಸಿ. ನಾರಾಯಣರಾಯರು ಮೊದಲನೇ ತರಗತಿಯ ಅಸಿಸ್ಟೆಂಟ್ ಸರ್ಜನ್‌ಗಿರಿಯಿಂದ ಆರನೇ ತರಗತಿಯ ಸರ್ಜನ್‌ಗಿರಿಗೆ.

ಅದ್ಭುತಮಹಿಮೆ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಮಹಾರಾಷ್ಟ್ರ ದೇಶದ ವೀರಶೈವರನ್ನುದ್ಧರಿಸುವದಕ್ಕೋಸ್ಕರ ಆ ದೇಶಕ್ಕೆ ಬಿಜಯಂಗೈಸಿ ಸದ್ಯಃ ಬಾರ್ಶಿ ಪಟ್ಟಣದಲ್ಲಿರುತ್ತಿರುವುದು ಸಕಲರಿಗೂ ವೇದ್ಯವಿರುವುದಷ್ಟೆ! ಪ್ರತಿದಿವಸವೂ ಓಂಧಕರ ಮಠದಲ್ಲಿ ಜಗದ್ಗುರುಗಳವರು ಶಿಷ್ಯವರ್ಗಕ್ಕೆಲ್ಲಾ ಮತತತ್ವವನ್ನು ಬೋಧಿಸುತ್ತಿರುವರು. ಈ ತಿಂಗಳು ೮ ನೆಯ ತಾರೀಖಿನ ದಿವಸ ಒಂದು ವಿಚಿತ್ರ ಮಹಿಮೆಯು ನೆರವೇರಿತು. ಪಟ್ಟಣದ ಮಧ್ಯದಲ್ಲಿರುವ ಒಂದು ಕೊಳ್ಳದಲ್ಲಿ ಒಂದು ಭಯಂಕರ ಸರ್ಪವು ಹೊರಬಿದ್ದಿತು. ಅದನ್ನುಕೊಲ್ಲುವುದಕ್ಕೋಸ್ಕರ ಎಲ್ಲಿಂದಲೋ ಮೂರು ಮುಂಗಲಿಗಳು ಬಂದು ಸಿದ್ಧವಾದವು. ಸರ್ಪಕ್ಕೂ ಮುಂಗಲಿಗಳಿಗೂ ಯುದ್ಧವು ೧೫ ಮಿನಿಟುಗಳ ವರೆಗೆ ನಡೆಯಿತು. ಇದನ್ನು ನೋಡುವುದಕ್ಕೋಸ್ಕರ ಸಾವಿರಾರು ಜನರು ಅಲ್ಲಿಗೆ ಬಂದು ಸೇರಿದರು. ಅಷ್ಟರಲ್ಲಿ ಜಗದ್ಗುರುಗಳ ಸವಾರಿಯು ಮ|| ರಾ|| ಅಣ್ಣಾಸಾಹೇಬರ ಬಂಗಲೆಯಿಂದ ಪ್ರವಚನಕ್ಕಾಗಿ ದಯಮಾಡಿಸಿತು. ಅಣ್ಣಾಸಾಹೇಬರೇ ಮೊದಲಾದವರು ಈ ಎರಡು ಪ್ರಾಣಿಗಳಿಗೂ ಜಗಳವನ್ನು ತಪ್ಪಿಸುವುದಕ್ಕೋಸ್ಕರ ಬೇಕಾದಷ್ಟು ಪ್ರಯತ್ನವನ್ನು ಮಾಡಿದರೂ ಜಗಳವು ತಪ್ಪಲಿಲ್ಲ. ಸರ್ಪವು ಬಹು ದುಃಖಾವಸ್ಥೆಯಲ್ಲಿತ್ತು. ಆಗ್ಗೆ ಶ್ರೀಗಳವರು ಆ ಪ್ರಾಣಿಗಳನ್ನು ಕುರಿತು—"ನೀವು ಪರಸ್ಪರವಾಗಿ ಜಗಳವಾಡದೆ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿರಿ" ಎಂದು ಆಜ್ಞೆ ಮಾಡಿದರು. ಕೂಡಲೆ ಆ ಮೂರು ಮುಂಗಲಿಗಳು ಹೊರಟುಹೋದವು. ಸರ್ಪವು ಒಂದು ಬಿಲದಲ್ಲಿ ಸೇರಿತು. ಜಗದ್ಗುರುಗಳ ಆಜ್ಞೆಯಾದ ಕೂಡಲೆ ಜನ್ಮಸಿದ್ಧ ವೈರವುಳ್ಳ ಈ ಪ್ರಾಣಿಗಳು ತಮ್ಮ ವೈರಭಾವವನ್ನು ಬಿಟ್ಟು ಹೋದುದನ್ನು ಕಂಡು ಅಲ್ಲಿ ನೆರೆದಿದ್ದ ಎಲ್ಲಾ ಮತೀಯರೂ ಶ್ರೀಗಳವರ ಅದ್ಭುತ ಮಹಿಮೆಯನ್ನು ಕೊಂಡಾಡುತ್ತ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಯೋಗಿಗಳ ಸನ್ನಿಧಿಯಲ್ಲಿ ಪರಸ್ಪರ ವಿರೋಧಭಾವವುಳ್ಳ ಪ್ರಾಣಿಗಳು ತಮ್ಮ ತಮ್ಮ ವಿರೋಧ ಭಾವವನ್ನು ಬಿಟ್ಟು ಶಾಂತರೀತಿಯಿಂದ ವರ್ತಿಸುತ್ತವೆಂದು ಸಾರುತ್ತಿರುವ "ತತ್ಸನ್ನಿಧೌವೈರತ್ಯಾಗಃ" ಎಂಬ ಯೋಗಸೂತ್ರಾಭಿಪ್ರಾಯವು ಪ್ರತ್ಯಕ್ಷಸಿದ್ಧವಾಯಿತು. ಇಂಥ ಶಿವಯೋಗಿಗಳ ಪಾದವಿನ್ಯಾಸದಿಂದ ಪುನೀತವಾಗುತ್ತಿರುವ ಬಾರ್ಶಿಪಟ್ಟಣವೇ ಧನ್ಯ!

ಪ್ರತ್ಯಕ್ಷದರ್ಶಿ.

ಸ್ವೀಕಾರ

ಅನಂತಪುರ ಡಿ|| ಕಲ್ಯಾಣದುರ್ಗ ತಾಲೂಕು ಬೆತ್ತರಹಳ್ಳಿಗ್ರಾಮ ನಿವಾಸಿಗಳಾದ ಶ್ರೀಮತಿ ಜಿ. ರುದ್ರಮ್ಮನವರು ಶ್ರೀ ಪರ್ವತ ಸಂಸ್ಥಾನದ ಶಾಖಾ ಸಕಲೇಟಿನ ಸ್ವಾಮಿಗಳವರಿಗೆ ಬಿನ್ನಹಮಾಡಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಪಟ್ಟಣದ ಒಕ್ಕಲಗೇರಿ ಓಣಿಯಲ್ಲಿರುವ ಸದ್ಭಕ್ತರು ಶ್ರಾವಣ ಶುದ್ಧ ಪ್ರತಿಪದದಿಂದ ಭಾದ್ರಪದ ಶುದ್ಧ ಅಷ್ಟಮಿಯವರೆಗೆ ಶ್ರೀ ಶರಣ ಬಸವೇಶ್ವರ ಪುರಾಣವನ್ನು ಪ್ರವಚನಮಾಡಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ|| ಜುಚ್ಚಯ್ಯನ ಮಠದ ಚನ್ನವೀರಯ್ಯನವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಡಿ|| ದೊಡ್ಡಬಳ್ಳಾಪುರ ಮಹಂತಿನ ಮಠದ ವೇ|| ಬಸವಾರಾಧ್ಯರ ಸೋದರಳಿಯಂದಿರಾದ ಡಿ. ಎಸ್. ಮಲ್ಲಿಕಾರ್ಜುನಯ್ಯನವರು ಕಟ್ಟಿಸಿದ ನೂತನ ಗೃಹಪ್ರವೇಶ ಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂ ಯು ಡಿ. ದಕ್ಷಿಣಾಮೂರ್ತಿಯವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳಜಿಲ್ಲಾ ಅಳವುಂಡಿ ಗ್ರಾಮನಿವಾಸಿಗಳಾದ ಬನ್ನಿಕೊಪ್ಪದ ಹಿರೇಮಠದ ವೇ|| ಶಿವಯ್ಯನವರು ವಿಜಯದಶಮಿಯ ಶುಭಸಮಯದಲ್ಲಿ ಶಮೀಪತ್ರವನ್ನು ಸಮರ್ಪಿಸಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ದುಃಖಪ್ರದರ್ಶನ ಸಭೆ.

ತಾ|| ೨-೧೦-೧೯೩೨ ನೆಯ ದಿವಸ ಯಾದಗಿರಿ ಶಂಕರಕಾಲೇಜಿನಲ್ಲಿ, ಮಲೆಬೆನ್ನೂರ್ ಶ್ರೀಸೋಮಶೇಖರಸ್ವಾಮಿಗಳು ಪಟ್ಟಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯು ನೆರೆದಿದ್ದು ಅದರಲ್ಲಿ ಕಾಲೇಜಿನ ಪ್ರಿನ್ಸಿಪಾಲರಿಂದ ತರಲ್ಪಟ್ಟ ನಾಲ್ಕು ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು.

೧. ಶ್ರೀಮತಿ ಧರ್ಮವೀರ ಶಂಕರಣ್ಣನವರ ಪತ್ನಿಯವರಾದ ಮಾತೃಶ್ರೀ ಗಂಗಮ್ಮನವರ ವಿಯೋಗದ ಬಗ್ಗೆ ಕಾಲೇಜಿನ ಪ್ರಧಾನಾಧ್ಯಾಪಕರು ಇತರ ಅಧ್ಯಾಪಕರು ಮೆಂಬರರು ವಿದ್ಯಾರ್ಥಿಗಳು ಯಾವತ್ತೂ ಸಭಾಸದರೂ ದುಃಖಪ್ರದರ್ಶನವನ್ನು ಮಾಡುತ್ತಾರೆ.

೨. ಸಾಧ್ವೀಮಣಿಯವರಿಗೆ ಅಕಾಲದಲ್ಲಿಯೇ ಕೈಲಾಸವಾಸವು ಪ್ರಾಪ್ತವಾದುದರಿಂದಲೂ, ಕಾಲೇಜಿನ ವಿಶ್ವಸ್ತರೊಳಗೆ ಶ್ರೀಮತಿಯವರು ಪರಂಧಾಮವನ್ನು ಹೊಂದಿದುದರಿಂದಲೂ ಅವರ ವಿಶ್ವಸ್ತ ಪರಂಪರೆಗಳು ಹೆಚ್ಚಾಗಿ ಗಲಿಬಿಲಿಯಾದುದರಿಂದ ಅವರ ಪುತ್ರಿ ಶ್ರೀಮತಿ ಕಸ್ತೂರಮ್ಮನವರಿಗೂ, ಅವರ ಸಹೋದರ ವರ್ಗದವರಿಗೂ ಬಂಧುಬಾಂಧವರಿಗೂ, ಉಂಟಾದ ದುಃಖದಲ್ಲಿ ಮೇಲೆ ಕಾಣಿಸಿದ ನಾವೆಲ್ಲರೂ ಪಾಲುಗಾರರಾಗಿರುತ್ತೇವೆ.

೩. ಶ್ರೀಮತಿಯವರು ವೀರಶೈವ ಸಮಾಜದಲ್ಲಿ ವಿದ್ಯಾಭಿವೃದ್ಧಿಗಾಗಿ ಐವತ್ತುಸಾವಿರ ರೂಪಾಯಿಗಳನ್ನು ಕೊಟ್ಟು, ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದ್ದಕ್ಕಾಗಿ ನಾವೆಲ್ಲರೂ ಅವರ ಆತ್ಮಕ್ಕೆ ಶಾಂತಿಯನ್ನೂ ಯಾವತ್ತೂ ಬಂಧುವರ್ಗದವರಿಗೆ ಸುಖವನ್ನೂ ಶ್ರೀಪರಮಾತ್ಮನು ದಯಪಾಲಿಸಲೆಂದು ಅನನ್ಯಭಾವನೆಯಿಂದ ಪ್ರಾರ್ಥಿಸುತ್ತೇವೆ.

೪. ಶ್ರೀಮತಿಯವರು ಇದುವರೆಗೂ ಕಾಲೇಜಿನ ಮೇಲೆ ಯಾವವಿಧವಾದ ಮಮತೆಯುಳ್ಳವರಾಗಿದ್ದರೋ ಅದೇ ಪ್ರಕಾರ ಅವರ ಪುತ್ರಿಯರಾದ ಶ್ರೀಮತಿ ಕಸ್ತೂರಮ್ಮನವರು, ಕಾಲೇಜಿನ ಅಧ್ಯಾಪಕರ ವಿಷಯದಲ್ಲಿ ಸಹೋದರಭಾವವನ್ನೂ, ವಿದ್ಯಾರ್ಥಿಗಳ ವಿಷಯದಲ್ಲಿ ಪುತ್ರವಾತ್ಸಲ್ಯವನ್ನೂ ಸದಾ ಇಡುವವರಾಗಬೇಕೆಂದು ಕೋರುತ್ತೇವೆ.

ಶಿತಿಕಂಠಶರ್ಮಾ, ಭೈರಾಪುರ ಹಿರೇಮಠ,
ಶಂಕರ ಸಂಸ್ಕೃತ ಕಾಲೇಜ ಯಾದಗಿರಿ.

ಗಂಗಾಂಬಿಕೆಯು ಶಂಕರನನ್ನು ಹೊಂದಿದಳು.

ಈ ಸಾಧ್ವೀಮಣಿಯು ತಾ|| ೫-೧೦-೧೯೩೨ ನೆಯ ದಿವಸ ೮|| ಘಂಟೆಗೆ ಯಾದಗಿರಿಯಲ್ಲಿ ಕೈಲಾಸವಾಸಿಯಾದುದಕ್ಕೆ ನಾವು ಅತ್ಯಂತ ದುಃಖಪಡುತ್ತೇವೆ. ಧರ್ಮವೀರ ಶಂಕರಣ್ಣ ಸಜ್ಜನಶೆಟ್ಟಿ ಇವರ ಧರ್ಮಪತ್ನಿಯರಾದ ಶ್ರೀಮತಿ ಗಂಗಮ್ಮನವರ ಹೆಸರನ್ನು ಅರಿಯದವರು ಕರ್ನಾಟಕದಲ್ಲಿ ಯಾರೂ ಇರಲಿಕ್ಕಿಲ್ಲ. ಇವರು ತಮ್ಮ ಜೀವಮಾನದಲ್ಲಿ ಅನೇಕ ಮಹತ್ವದ ಕಾರ್ಯಗಳನ್ನು ಮಾಡಿ ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿರುವರು. ಧರ್ಮವೀರ ಶಂಕರಣ್ಣನವರು ಶ್ರೀಮಂತ ಮನೆತನದಲ್ಲಿ ಜನಿಸಿದ್ದರೂ, ತಮ್ಮ ಪೂರ್ವಸ್ಥಾನವಾದ ಎಲೇರಿಗ್ರಾಮವನ್ನು ಬಿಟ್ಟು ಯಾದಗಿರಿಯಲ್ಲಿ ಸ್ವಂತವಾಗಿ ಕಾರ್ಯಮಾಡುವದಕ್ಕೆ ಹತ್ತಿದುದರಿಂದ ಈ ದಂಪತಿಗಳು ಆರಂಭದಲ್ಲಿ ಬಹು ಕಷ್ಟಪಟ್ಟು ದುಡಿದರು. ಈ ದಂಪತಿಗಳ ಕಾರ್ಯದಕ್ಷತೆಯಿಂದಲೂ, ಮತ್ತು ಚಟುವಟಿಕೆಯಿಂದಲೂ, ಇವರ ಸಂಪತ್ತು ದಿನೇದಿನೇ ಹೆಚ್ಚುತ್ತ ನಡೆಯಿತು. ಇತ್ತೀಚೆಗೆ ಭರತಖಂಡದಲ್ಲಿ ಕುಲಗೋತ್ರ ಜಾತಿ ಮೊದಲಾದುವನ್ನು ಸಮೂಲವಾಗಿ ನಾಶಮಾಡಬೇಕೆಂಬ [illegible], ಈಶ್ವರನೇ ಇಲ್ಲವೆಂಬ ನಾಸ್ತಿಕರು, ಪರಮಾತ್ಮನ ಧ್ಯಾನ ಒಂದೇ ಅವಶ್ಯಕವಲ್ಲದೆ ಮೂರ್ತಿಪೂಜೆಯು ಅನಾವಶ್ಯಕ ಎಂಬ ಆರ್ಯಸಮಾಜಿಗಳೂ, ಇನ್ನೂ ನಾನಾತರದ ಜನರು ತಲೆ ಎತ್ತಿದುದರಿಂದ, ಸನಾತನ ಧರ್ಮವು ಅತ್ಯಂತ ಗ್ಲಾನಿಯನ್ನು ಹೊಂದುತ್ತಿದ್ದು ಅದರಲ್ಲಿಯೂ ವೀರಶೈವರಲ್ಲಿ ವರ್ಣನಾತೀತವಾದ ಹೀನಾವಸ್ಥೆಯಾಗಿದ್ದ ಕಾಲದಲ್ಲಿ ಸನಾತನ ಧರ್ಮ ಪ್ರತಿಪಾದಕವಾದ ಸಂಸ್ಕೃತವಿದ್ಯೆಯನ್ನು ಮುಂದಕ್ಕೆ ತರುವದಕ್ಕಾಗಿ ಶ್ರೀಮತಿಯವರು ತಮ್ಮ ಪತಿಗಳ ತರುವಾಯ ೫೦,೦೦೦ ಸಾವಿರ ರೂಪಾಯಿಗಳ ಆಸ್ತಿಯನ್ನು ಸಂಸ್ಕೃತ ಕಾಲೇಜಿಗೆ ಕೊಟ್ಟು, ಧರ್ಮ ಸುಧಾರಕರಲ್ಲಿ ಅಗ್ರಗಣ್ಯರೆನಿಸಿಕೊಂಡರು. ಆ ಬಗ್ಗೆ ಇವರ ಪ್ರಯತ್ನವು ಅಸಾಧಾರಣವಾಗಿದೆ. ಇಂಥ ಲೋಕೋಪಕಾರ್ಯಕಾರಿಣಿಯರಾದ ಸಾಧ್ವಿಯರ ನಿಧನದಿಂದ ಸನಾತನ ಧರ್ಮಾವಲಂಬಿಗಳಾದ ಸಕಲರು ಹಳಹಳಿಸದೆ ಇರಲಾರರು. ಕಾಲೇಜಿನ ಮೇಲೆ ಶ್ರೀಮತಿಯವರ ಪ್ರೇಮವು ಅನುಪಮವಾಗಿತ್ತು. ಕಾಲೇಜು ಸರ್ವಾಂಗಸುಂದರವಾಗಿಯೂ ಆದರ್ಶಭೂತವಾಗಿಯೂ ಐದು ಆರು ಜನ ಶಾಸ್ತ್ರಿಗಳಿಂದಲೂ ನೂರಾರು ವಿದ್ಯಾರ್ಥಿಗಳಿಂದಲೂ ಪೂರ್ಣವಾದುದಾಗಿ ಅವ್ಯಾಹತವಾಗಿ ನಡೆಯಬೇಕೆಂದು ಶ್ರೀಮತಿಯವರು ಹಗಲಿರುಳು ಪ್ರಯತ್ನಿಸುತ್ತಿದ್ದರು. ಕೊನೆತನಕ ಕಾಲೇಜಿನ ವಿಚಾರವೇ ವಿಚಾರವಾಗಿತ್ತು. ಕೆಲವು ದಿನಗಳಿಂದಲೂ ಕಾಲೇಜಿನವ್ಯವಸ್ಥಾಪಕರಾದ ಹನ್ನೆರಡು ಜನ ಮೆಂಬರರಲ್ಲಿ ಪರಸ್ಪರ ಉಂಟಾದ ಕಲಹಾಗ್ನಿಯಿಂದ ಕಾಲೇಜು ಮಧ್ಯವಾದದ್ದನ್ನು ಕಂಡು ಚಿಂತಾಕ್ರಾಂತರಾಗಿ ಹಿಂದೆ ಆಗಸ್ಟ್ ತಿಂಗಳಲ್ಲಿ, ವೀರಶೈವ ಮಹಾಜನರಲ್ಲಿ ಮೆಂಬರರ ಕಲಹಾಗ್ನಿಯ ಸಮಾಧಾನ ಮಾಡುವ ಬಗ್ಗೆ ವಿಜ್ಞಾಪಿಸಿಕೊಂಡಿದ್ದರು. ಅದರ ಬಗ್ಗೆ ಎರಡು ತಿಂಗಳಾದರೂ ವೀರಶೈವ ಮುಖಂಡರಿಂದ ಯಾವ ವಿಧವಾದ ಸುಧಾರಣೆಯ ಪ್ರಯತ್ನವು ಮಾಡಲ್ಪಡದಿದ್ದುದರಿಂದ ನಿರಾಶೆಪಟ್ಟು ಶ್ರೀಮನ್ನಿಜಾಮಸಾಹೇಬರವರ ಉಮರ್ ಮಹಜರಿಕೋರ್ಟಿಗೆ ವಿಜ್ಞಾಪಿಸಿಕೊಂಡರು. ಆ ಕೂಡಲೇ ಸದರಿ ಕೋರ್ಟಿನವರು ಖಾಸ ಒಬ್ಬ ದೊಡ್ಡ ಅಧಿಕಾರಿಯನ್ನು ಕಳುಹಿ ಕೊಟ್ಟರು. ತಾ. ೯-೯-೩೨ ಕ್ಕೆ ಸಾಧ್ವೀಮಣಿಗಳ ಮನೆಗೆ ಬಂದು ಶ್ರೀಮತಿ ಗಂಗಮ್ಮನವರ ಪುತ್ರಿ ಶ್ರೀಮತಿ ಕಸ್ತೂರಮ್ಮನವರ ಜವಾಬು ತೆಗೆದುಕೊಂಡು ಕಾಲೇಜಿನ ಯಾವತ್ತು ವಿಷಯಗಳನ್ನು ವಿಚಾರಿಸಿಕೊಂಡು ಹೋದರು. ಎರಡು ಮೂರು ತಿಂಗಳಲ್ಲಿಯೇ ಇದರ ಯಾವತ್ತೂ ವಿಚಾರ ನಡೆದು ಸುವ್ಯವಸ್ಥೆಯಾಗುವದಿದೆ. ಕಾಲೇಜಿಗೆ ಸದ್ಯಃ ಪ್ರಾಪ್ತವಾಗಿರುವ ಯಾವತ್ತು ವಿಘ್ನಗಳು ಕೋರ್ಟಿನವರಿಂದ ನಿವಾರಣೆ ಮಾಡಲ್ಪಟ್ಟ ಸಂಗತಿಯು ತಿಳಿಯುವವರೆಗೂ ಶ್ರೀಮತಿಯವರು ಜೀವಂತರಾಗಿದ್ದರೆ ಕಾಲೇಜಿಗೆ ಇನ್ನೂ ಸಹಾಯ ದೊರೆಯಬಹುದಾಗಿತ್ತು. ಮೊದಲೇ ಅನೈಕ್ಯವೆಂಬ ಮಹಾರೋಗದಿಂದ ನರಳುತ್ತಿರುವ ಕಾಲೇಜಿಗೆ ಜನನೀವಿಯೋಗವಾದುದರಿಂದ ಗಾಯದ ಮೇಲೆ ಪೆಟ್ಟುಬಿದ್ದಂತಾಗಿದೆ. ಸತ್ಪಾತ್ರದಾನಮಹಿಮೆಯಿಂದ ನಾಲ್ಕೆಂಟು ವರ್ಷಗಳಲ್ಲಿ, ಶ್ರೀಮತಿಯವರಿಗೆ ಪೂರ್ವದಷ್ಟು ಸಂಪತ್ತು ಪ್ರಾಪ್ತವಾಗಿದ್ದು ಚಿಕ್ಕವಯಸ್ಸಿನ ಪುತ್ರಿ ಇದ್ದರೂ ತನ್ನ ಮನೆತನದ ಬಗ್ಗೆ ಕಡೆಯ ವರೆಗೂ ಸ್ವಲ್ಪವೂ ವ್ಯಸನಮಾಡಲಿಲ್ಲ. ಕಾಲೇಜಿನ ವ್ಯಸನವೇ ವ್ಯಸನವಾಗಿತ್ತು. ಪ್ರಾಣೋತ್ಕ್ರಮಣವಾಗುವದಕ್ಕಿಂತ ಎರಡು ಘಂಟೆ ಮುಂಚಿತವಾಗಿ ಶ್ರೀಮತಿಯವರು ಯಾರನ್ನೋ ಉದ್ದೇಶಿಸಿ, "ನೀನು ಇನ್ನು ಕಾಲೇಜಿಗೆ ಎಷ್ಟು ಕಾಡುವಿಯೋ ಕಾಡು, ನನ್ನ ಪ್ರಾಣವಿರುವ ವರೆಗೂ, ಭೂಮಿಯಮೇಲೆ ನನ್ನ ಎಲುಬುಗಳಿರುವವರೆಗೂ, ನಿನ್ನ ಶಕ್ತಿಯನ್ನು ನೋಡುವೆನು. ಜಯಶಂಕರ! ಜಯಶಂಕರ!" ಎಂದು ಸ್ಪಷ್ಟವಾಗಿ ಅಂದರು. ಮುಂದೆ ಮಾತೇ ಇಲ್ಲ. ಇದರ ಮೇಲಿಂದ ಇವರಿಗೆ ಕಾಲೇಜಿನ ಮೇಲೆ ಎಷ್ಟು ಪ್ರೇಮವಿತ್ತೆಂಬುದು ತಾನೇ ಗೊತ್ತಾಗುತ್ತದೆ. ಪರಂಧಾಮವನ್ನು ಹೊಂದಿದ ವಾರ್ತೆಯು ಶಹರದಲ್ಲಿ ಪ್ರಸಾರವಾದ ಕೂಡಲೇ ನಾನಾಮತದ ನಾನಾಜಾತಿಯ ಸ್ತ್ರೀಪುರುಷರೂ ಬಾಲವೃದ್ಧರೂ ನಾನಾವಿಧವಾಗಿ ಮರುಗಿದರು. ತಂಡೋಪತಂಡವಾಗಿ ಜನಗಳು ಬಂದು ಶ್ರೀಮತಿಯವರ ಅಂತಿಮ ದರ್ಶನವನ್ನು ಮಾಡಿಕೊಂಡು ಹೋಗುತ್ತಿದ್ದರು. ದಯಾಪೂರ್ಣರೂ ಪವಿತ್ರಾತ್ಮರೂ ಆದ ಶ್ರೀಮತಿ ಗಂಗಮ್ಮನವರ ಅತ್ಯಂತಿಕ ವಿಯೋಗದಿಂದ ಇವರಿಂದ ಆಗಬಹುದಾದ ಇತರ ಮಹತ್ಕಾರ್ಯಗಳೆಲ್ಲವೂ ನಷ್ಟವಾದುದಕ್ಕಾಗಿ ಶಂಕರ ಕಾಲೇಜಿಗೆ ಏಕೆ ಇಡೀ ವೀರಶೈವಸಮಾಜಕ್ಕೇ ಅಪಾರವಾದ ಹಾನಿಯಾಗಿದೆ. ಇವರ ಬಗ್ಗೆ ಎಷ್ಟು ದುಃಖಿಸಿದರೂ ತೀರುವಂತಿಲ್ಲ. ಶ್ರೀಮತಿಯವರ ಆತ್ಮಕ್ಕೆ ಶಾಂತಿಯನ್ನೂ ಅವರ ಪುತ್ರಿಯರ ಮತ್ತು ಸಹೋದರರ ಆತ್ಮಕ್ಕೆ ಸುಖವನ್ನೂ ದಯಪಾಲಿಸಬೇಕೆಂದು ಆ ದಯಾಘನನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಪ್ರಿನ್ಸಿಪಾಲ್, ಶಂಕರ ಸಂಸ್ಕೃತ ಕಾಲೇಜ.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಸರ್ಕೀಟಿನಲ್ಲಿ ನಿತ್ಯ ನಡೆಯುವ ಪದ್ಧತಿಗಳು.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಕಾರ್ಯಾಧಿಕಾರಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಅನಂತಪುರ ಜಿಲ್ಲಾ ಕಲ್ಯಾಣದುರ್ಗದ ತಾಲ್ಲೂಕು ಯೆಮ್ಮೆಹಟ್ಟಿಗ್ರಾಮಕ್ಕೆ ದಯಮಾಡಿಸಿರುತ್ತಾರೆ. ಈ ಸ್ವಾಮಿಗಳವರು ನಿತ್ಯದಲ್ಲಿ ತಮ್ಮ ಅಮೃತವಾಣಿಯಿಂದ ಸಭೆಯಲ್ಲಿ ಬೋಧಿಸುವ ವಿಷಯಗಳು ಯಾವುವೆಂದರೆ— ಗುರುಸ್ಥಲ ಮಠಾಧಿಕಾರಿಗಳೂ ಭಕ್ತರೂ ವಿದ್ಯಾವಂತರಾಗಬೇಕೆಂದೂ, ವಿದ್ಯಾವಂತರಾದವರು ಯಾವ ದೇಶಗಳಿಗೆ ಹೋದಾಗ್ಯೂ, ಮರ್ಯಾದೆಯನ್ನು ಪಡೆಯುತ್ತಾರೆಂದೂ ಇಹಪರಕ್ಕೆ ಬೇಕಾದ ಸಹಾಯವು ವಿದ್ಯಾಬಲದಿಂದ ಉಂಟಾಗುತ್ತದೆಯೆಂದೂ, ಶ್ರೀ ಜಗದ್ಗುರು ಪಂಚಪೀಠದವರು ಅಲ್ಲಲ್ಲಿ ಸ್ಥಾಪಿಸಿರುವ ಧರ್ಮಾರ್ಥಪಾಠಶಾಲೆಗಳಲ್ಲಿ ಅಭ್ಯಾಸಮಾಡಬೇಕೆಂದೂ ಬೋಧಿಸುತ್ತಾರೆ. ಗ್ರಾಮದಿಂದ ಗ್ರಾಮಕ್ಕೆ ದರ್ಶನಕ್ಕೆ ಬರುವ ಶಿಷ್ಯಮಂಡಲಿಯವರಿಗೂ ಮತ್ತು ಪರಮತೀಯರಿಗೂ "ಅಹಿಂಸಾ ಪರಮೋಧರ್ಮಃ" ಎಂಬ ತತ್ವವನ್ನು ಮಾದರಿಯಾಗಿಟ್ಟುಕೊಂಡು ಪ್ರತಿಪ್ರಾಣಿಯಲ್ಲಿ ಪರಮಾತ್ಮನು ಇರುವನೆಂತಲೂ ಅಂಥ ಪರಮಾತ್ಮನ ಸ್ವರೂಪವಾದ ಪ್ರಾಣಿಯನ್ನು ಹಿಂಸಿಸಿದರೆ ಮಹತ್ತರವಾದ ಪಾಪವು ಸಂಘಟಿಸುವುದೆಂತಲೂ ಶ್ರೀಗಳವರು ಸಭೆಯಲ್ಲಿ ಹೇಳುತ್ತಾರೆ. ಇದರ ಜೊತೆಗೆ ಶ್ರೀಗಳವರು ಹಿಂದೆ ಪ್ರಾಣಿಹಿಂಸೆಯನ್ನು ಮಾಡಿ ಅನೇಕ ತೊಂದರೆಗಳನ್ನು ಅನುಭವಿಸಿರುವವರನ್ನು ಮಾದರಿಯಾಗಿ ತೋರಿಸಿ ಪುರಾಣ, ಇತಿಹಾಸಗಳಲ್ಲಿರುವ ಸಂಸ್ಕೃತಶ್ಲೋಕಗಳನ್ನು ಹೇಳುತ್ತಾ ಶಿಷ್ಯರ ಮನಸ್ಸನ್ನು ಕರಗುವ ಹಾಗೆ ಬೋಧಿಸುತ್ತಾರೆ. ಈ ಮೇಲ್ಕಂಡ ಅನೇಕ ವಿಚಾರಗಳನ್ನು ಯೋಚಿಸಿದರೆ ಶ್ರೀಗಳವರ ಅಷ್ಟಪ್ರಾಣಗಳಲ್ಲಿ ನೆಲೆಗೊಂಡಿದೆಯೆಂದು ಗೊತ್ತಾಗುತ್ತದೆ. ಇವರ ಉಪದೇಶಗಳಿಂದ ಇವರಲ್ಲಿ ದೇಶಾಭಿಮಾನ, ಧರ್ಮಾಭಿಮಾನವು ಮನೆಮಾಡಿಕೊಂಡಿದೆಯೆಂದು ಗೊತ್ತಾಗುತ್ತದೆ. ವೇ|| ಶಂ|| ಶ್ರೀ ಕಾಶೀನಾಥಶಾಸ್ತ್ರಿಗಳು ಶ್ರೀಜಗದ್ಗುರು ಪಂಚಪೀಠಗಳ ಮೇಲಿದ್ದ ಭಕ್ತಿಯನ್ನು ಹೊಗಳಾಡಿಸಿ ಸರ್ವಭಕ್ತರಿಗೂ ನಿಜಗುರುಗಳ ಮಹಿಮೆಯನ್ನು ಬೋಧಿಸುತ್ತಾ ಮೈಸೂರಿನಲ್ಲಿ "ಪಂಚಾಚಾರ್ಯ ಪ್ರಭಾ" ಎಂಬ ಆಫೀಸನ್ನು ಸ್ಥಾಪಿಸಿ ಅನೇಕ ಭಕ್ತರಿಗೆ ಹಿತೋಪದೇಶಗಳನ್ನು ಮಾಡುತ್ತಲಿರುವುದರಿಂದ ಸದಾ ಪಂಡಿತರ ಜಯಘೋಷ ಮಾಡಬೇಕೆಂದು ಬೋಧಿಸುತ್ತಾರೆ. ಶ್ರೀಗಳವರು ವೀರಶೈವರಿಗೂ ಅನ್ಯಮತೀಯರಿಗೂ ಅನೇಕ ಧರ್ಮತತ್ವಗಳನ್ನು ಬೋಧಿಸುತ್ತಾ ಎಲ್ಲರೂ ಕೂಡಿ ಪ್ರಾಣಿಹಿಂಸೆಯನ್ನು ಮಾಡಕೂಡದೆಂದು ಹೇಳುವುದಲ್ಲದೆ ಅನ್ಯಾಯಕ್ರಿಯೆ ಮಾಡಕೂಡದೆಂದು ಉಪದೇಶಮಾಡುತ್ತಾರೆ. ಇವರಲ್ಲಿ ವ್ಯಾಖ್ಯಾನಶಕ್ತಿಯು ಅದ್ಭುತವಾಗಿರುವುದನ್ನು ನೋಡಿ ಪರಮಸಂತೋಷಪಡಬೇಕಾಗುತ್ತದೆ. ಈ ಸರ್ಕೀಟು ಗಜಾಶ್ವಗಳಿಂದಲೂ, ಅನೇಕ ಬಿರುದಾವಳಿಗಳಿಂದಲೂ, ನಲವತ್ತು ಜನ ಸಿಬ್ಬಂದಿಯಿಂದಲೂ ಕೂಡಿರುತ್ತದೆ.

ಸರ್ಕೀಟಿನ ಸರ್ವಾಧಿಕಾರಿಗಳಾದ ವೇ|| ಕೆ. ಯಂ. ಸಿ. ಮಲ್ಲಯ್ಯನವರು ತಾಡಪತ್ರಿ ಇವರು ಸಂಸ್ಥಾನದ ಕಾರ್ಯವನ್ನು ಬಹಳ ಶ್ರದ್ಧೆಯಿಂದ ನಡೆಯಿಸಿಕೊಂಡು ಭಕ್ತಾದಿಗಳಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡುತ್ತ ಯಾವಾಗಲೂ ಸಂತೋಷಪಡಿಸುತ್ತಾರೆ. ಇಂಥ ಕಾರ್ಯಪದ್ಧತಿಗಳನ್ನಿಟ್ಟುಕೊಂಡಿರುವ ಸರ್ಕೀಟು ದೇಶಮಧ್ಯದಲ್ಲಿ ಸಂಚಾರಮಾಡುವುದರಿಂದ ವೀರಶೈವರ ಸುದೈವವೆಂದು ನಂಬಿ ತಿಳಿಸುವ,

ಯಂ. ಶಿವದೇವಯ್ಯ,
ಯಲ್ಲಪ್ಪನಾಯ್ಕನ ಹೊಸಕೋಟೆ
ಮಹಂತಿನಮಠ.

ತಾ| 12-9-32.

ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘ ಗುಳೇದಗುಡ್ಡ.

ವಿಜಾಪುರ ಜಿ|| ಗುಳೇದಗುಡ್ಡದಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಸಂಘದ ವರದಿಯನ್ನು ಸದರಿ ಸಂಘದ ಸೆಕ್ರೆಟರಿಗಳು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ವರದಿಯನ್ನು ಆಮೂಲಾಗ್ರವಾಗಿ ನೋಡಿದೆವು. ತೃಪ್ತಿಕರವಾಗಿದೆ. ಅನೇಕ ಜನ ಧರ್ಮಾತ್ಮರು ಸದರಿ ಸಂಘಕ್ಕೆ ಪ್ರತಿ ತಿಂಗಳು ಚಂದಾರೂಪವಾಗಿ ಸಹಾಯಮಾಡುತ್ತಿರುವುದು ಅತ್ಯಂತ ಸಂತೋಷಾರ್ಹವಾಗಿದೆ. ಜಗದಾಚಾರ್ಯರ ಹೆಸರಿನಿಂದ ಸ್ಥಾಪಿತವಾಗಿರುವ ಈ ಸಂಘವು ಬಾಲಚಂದ್ರನಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿ ಜಗದ್ವಿಖ್ಯಾತವಾಗಲೆಂದೂ, ಈ ಸಂಘಕ್ಕೆ ಸಹಾಯಮಾಡುತ್ತಿರುವ ಧರ್ಮಾತ್ಮರಿಗೆ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ತುಗಳನ್ನೀಯಲೆಂದೂ ಹಾರೈಸುತ್ತೇವೆ.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯಾನ—ಈ ಮದ್ದು ಮಲೇರಿಯ, ಚಳಿ, ಛಳಿಜ್ವರ, ವಾಯುದೇಳಲ್ಪಟ್ಟು ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್ ಕಾಡ್‌ಕಸ್—ಕಫಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ಪಿತ್ತ ಸುಡುವದು, ಪಿತ್ತ ಕಾರುವದು, ಮುಖ ಕಣ್ಣುಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟ—ಉಬ್ಬಸ ಸೇವನದ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿ ಯಾವತ್ತು ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸ್‌ಅಮೋಗ—ರಕ್ತಶುದ್ಧಿ. ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣ ಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿಶ್ಶಕ್ತಿ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಶ್ಚಿಂತರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಟೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇತ್ಯ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿ ಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಟಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[10] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮುಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೯—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನಿ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸದಿರಿ ಕ್ಷೀಣತೆ ಕಾಯ್ದು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಸ್ರವಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂತ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇಶದ ರೋಗದಿಂದ ಎದ್ದುಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೇತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೮ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟುಶೂಲಿ ಮತ್ತು, ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆ ಹುಟ್ಟುವವೋ, ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

48 **ಮು. ಪೋ. ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಸಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಶರೀರಕ್ಕೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಾದವರಲ್ಲದೆ ಕೂಡಲೇ ಕೂಡಿಡಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಕುಷ್ಠವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಸಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[16] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವತತ್ವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ವಂಶ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
[illegible] ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಬೆಳ್ಳಿಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[17] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಯಾಮುದ್ರಾಪಕ ವೇ॥ ಬ್ರ॥ ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರೇ ಪ್ರಸೀದಂತು ॥ REGISTERED No. M. 226 6

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಅಕ್ಟೋಬರ್ ೧೯೩೨ [ಸಂಚಿಕೆ ೨೪

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಿಂದೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮಹಾಜನಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರಕ್ಷಾಸ್ತ್ರರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ಕೊಂಡುಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಒಳದೇಶದ ವೃತ್ತಾಂತಗಳು.

ಜಂಜೀರಾಸಂಸ್ಥಾನದ ನವಾಬರು ರಾಜ್ಯಾಡಳಿತ ಪದ್ಧತಿಯನ್ನು ಅರಿತುಕೊಳ್ಳುವುದಕ್ಕೋಸ್ಕರ ಪರಿವಾರಸಮೇತರಾಗಿ ಕಳೆದವಾರ ಬೆಂಗಳೂರಿಗೆ ಬಂದಿರುತ್ತಾರೆ.

ರಷ್ಯಾದೇಶದ ಪೆಟ್ರೋಲಿನ ಏಜಂಟರಾದ ವೆಸ್ಟರ್ನ್ ಇಂಡಿಯಾ ಪೆಟ್ರೋಲ್ ಕಂಪೆನಿಯವರು ಶೀಘ್ರದಲ್ಲಿಯೇ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ತಮ್ಮ ಶಾಖೆಗಳನ್ನು ಏರ್ಪಡಿಸುವರೆಂದು ತಿಳಿದುಬಂದಿದೆ.

ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು 3 ನೇ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವುದಕ್ಕಾಗಿ ಬರುವ ನವಂಬರು 5 ನೇ ತಾರೀಖಿನ ದಿವಸ ಬೆಂಗಳೂರಿನಿಂದ ಹೊರಟು ಬೊಂಬಾಯಿಯಲ್ಲಿ 7 ನೇ ತಾರೀಖಿನ ದಿವಸ ಜಹಜುಹತ್ತಿ ಲಂಡನ್ನಿಗೆ ಪ್ರಯಾಣಮಾಡುವವರಾಗಿರುತ್ತಾರೆ. ಅವರೊಡನೆ ಚೀಫ್ ಸೆಕ್ರೆಟರಿಗಳಾದ ಮಿ॥ ಎ. ಮಾಧವರಾಯರೂ, ಪ್ರೈವೇಟ್ ಸೆಕ್ರೆಟರಿಗಳಾದ ಮಿ॥ ಟಿ. ಸಿಂಗಾರವೇಲು ಮೊದಲಿಯಾರವರೂ ಪ್ರಯಾಣಮಾಡುವರು.

ರಾಜಧಾನಿಯ ಪರುಶುರಾಮಸೇಟ್ ಎಂಬ ಮಲ್ತಾನಿ ಸಾಹುಕಾರನು 100 ರೂಪಾಯಿಯ ಅರ್ಧನೋಟನ್ನು ಮದರಾಸು ಕರೆನ್ಸಿ ಆಫೀಸಿಗೆ ಕಳುಹಿಸಿ ಮೋಸದಿಂದ ಹಣವನ್ನು ಪಡೆಯಬೇಕೆಂದು ಪ್ರಯತ್ನಪಟ್ಟನೆಂಬ ಕಾರಣದಮೇಲೆ ಸಿಟಿಮ್ಯಾಜಿಸ್ಟ್ರೇಟರು 6 ತಿಂಗಳ ಕಠಿಣಸಜೆಯನ್ನೂ 2000 ಜುಲ್ಮಾನೆಯನ್ನೂ ವಿಧಿಸಿದ್ದರು. ಆದರೆ ಆತನು ಸೆಷನ್ಸ್ ಜಡ್ಜರಲ್ಲಿ ಅಪ್ಪೀಲ್‌ಮಾಡಿಕೊಂಡಿರಲು ಸೆಷನ್ಸ್ ಜಡ್ಜರವರು ಕೆಳಕೋರ್ಟಿನ ಶಿಕ್ಷೆಯನ್ನು ಖಾಯಂಮಾಡಿ, ಶಿಕ್ಷೆಯನ್ನು ಮಾತ್ರ ಮೂರು ತಿಂಗಳಿಗೆ ಕಡಿಮೆಮಾಡಿದರು.

ವಿಜಯದಶಮಿಯ ದಿವಸ ರಾಜಧಾನಿಯ ಕ್ಲಾಕ್‌ಟವರಿನ ಮುಂಭಾಗದಲ್ಲಿ ನಡೆದ ಗಲಾಟೆಗಳ ವಿಷಯವನ್ನು ಕೂಲಂಕಷವಾಗಿ ತನಿಖೆಮಾಡಿ ವರದಿಯನ್ನೊಪ್ಪಿಸುವುದಕ್ಕಾಗಿ ಸರ್ಕಾರದವರು ರೆವಿನ್ಯೂ ಕಮಿಷನರಾದ ಮಿ॥ ಎಸ್. ಪಿ. ರಾಜಗೋಪಾಲಾಚಾರಿಯವರನ್ನು ನೇಮಿಸಿರುತ್ತಾರೆ. ಇವರು ಮರಿಮಲ್ಲಪ್ಪನವರ ಹೈಸ್ಕೂಲಿನ ಹಿಂಭಾಗದಲ್ಲಿರುವ 'ಶೇಷಾದ್ರಿ ಹೌಸ್' ನಲ್ಲಿ ಸರ್ಕಾರಿ ನೌಕರರನ್ನೂ, ಬಾಹಿರ ಜನರನ್ನೂ ಒಬ್ಬೊಬ್ಬರನ್ನಾಗಿ ಕರೆಯಿಸಿಕೊಂಡು ಅವರ ಹೇಳಿಕೆಗಳನ್ನು ತೆಗೆದುಕೊಳ್ಳುತ್ತಿರುವರು.

ಈ ಸಾರಿಯ ನವರಾತ್ರೋತ್ಸವದಲ್ಲಿ ನಡೆದ ದರ್ಬಾರಿನಲ್ಲಿ ರಾಜಧಾನಿಯಲ್ಲಿ ಸುಪ್ರಸಿದ್ಧರಾದ ಜಿನಚಂದ್ರ ಪಂಡಿತರವರಿಗೆ ಶ್ರೀಮನ್ಮಹಾರಾಜರವರು ಖಾಸಾ ಹಾರ ಪಲ್ಲಿತ್ತುಗಳೊಡನೆ ಸುವರ್ಣಪದಕವನ್ನು ದಯಪಾಲಿಸಿದರೆಂಬ ವಿಷಯವು ಸಂತೋಷವನ್ನುಂಟುಮಾಡಿರುತ್ತದೆ. ಇವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ದಯಾದಾಕ್ಷಿಣ್ಯಾದಿಗಳಲ್ಲಿ ಹಿರಿಯರನ್ನು ಅನುಕರಿಸುತ್ತಿರುವರು. ರಾಜಧಾನಿಯಲ್ಲಿ ಹೇರಳವಾದ ದ್ರವ್ಯವಿನಿಯೋಗಮಾಡಿ ಜೈನವಿದ್ಯಾರ್ಥಿನಿಲಯವೊಂದನ್ನು ಸ್ಥಾಪಿಸಿ ಯಾವಾಗಲೂ ಅದರ ಪುರೋಭಿವೃದ್ಧಿಕಾರ್ಯದಲ್ಲಿಯೇ ಆಸಕ್ತರಾಗಿದ್ದಾರೆ. ಈಶ್ವರನು ಈ ಮಹಾಶಯರಿಗೆ ದೀರ್ಘಾಯುವನ್ನೂ ಇತೋಪ್ಯತಿಶಯವಾದ ಯಶಸ್ಸನ್ನೂ ಉಂಟುಮಾಡಲೆಂದು ಕೋರುತ್ತೇವೆ.

ಮೈಸೂರು ಮಹಾರಾಜಾಕಾಲೇಜಿನ ವಿದ್ಯಾರ್ಥಿಗಳು ಇದೇ ಅಕ್ಟೋಬರು 18 ನೇ ತಾರೀಖಿನ ದಿವಸ ಅಣ್ಣಾಮಲೆ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಶ್ರೀ॥ ಎಸ್. ಇ. ರಂಗನಾಥರವರ ಅಧ್ಯಕ್ಷತೆಯಲ್ಲಿ 'ಕಾಲೇಜ್ ಡೇ' ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಇದೇ ಸಂಬಂಧದಲ್ಲಿ ಮೈಸೂರು ಯೂನಿವರ್ಸಿಟಿ ಯೂನಿಯನ್ನಿನ ಮೆಂಬರರು ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರದ (Psychology) ಅಧ್ಯಾಪಕರಾದ ಶ್ರೀಮಾನ್ ಎಸ್. ನಾರಾಯಣಶಾಸ್ತ್ರಿಗಳು ಎಂ. ಎ., ಇವರಿಂದ ರಚಿತವಾದ 'ಪಂಚರಾತ್ರ' ವೆಂಬ ನಾಟಕವನ್ನು ಅತ್ಯಂತ ಮನೋಹರವಾಗಿ ಅಭಿನಯಿಸಿದರು. ಈ 'ಪಂಚರಾತ್ರ'ವು ಭಾಸಮಹಾಕವಿಯಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟಿದ್ದು ಶ್ರೀಮಾನ್ ಶಾಸ್ತ್ರಿಗಳವರು ಅದನ್ನೇ ಕನ್ನಡಕ್ಕೆ ಪರಿವರ್ತನಗೊಳಿಸಿರುತ್ತಾರೆ. ನಾಟ್ಯಕಲಾಕುಶಲರಾದ ಶ್ರೀಮಾನ್ ಶಾಸ್ತ್ರಿಗಳವರು ರಚಿಸಿರುವ ನಾಟಕದ ಭಾಷಾಶೈಲಿಯು ಅತ್ಯಂತ ಗಂಭೀರವೂ ಆನಂದದಾಯಕವೂ ಆಗಿರುತ್ತದೆ. ಅಭಿನಯಚತುರರಾದ ಯೂನಿಯನ್ನಿನ ಮೆಂಬರರ ಅಭಿನಯವು ಪ್ರೇಕ್ಷಕರನ್ನು ಆನಂದಾಬ್ಧಿಯಲ್ಲಿ ಮುಳುಗಿಸಿ ಎಲ್ಲರೂ ಸಂತೋಷದಿಂದ ಮೈಮರೆಯುವಂತೆ ಮಾಡಿತು. ಶ್ರೀಮಾನ್ ಶಾಸ್ತ್ರಿಗಳವರು ಇಂತಹ ಇನ್ನೂ ಅನೇಕ ನಾಟಕಗಳನ್ನು ರಚಿಸಲೆಂದೂ ಶಾಸ್ತ್ರಿಗಳ ಕೀರ್ತಿಲತೆಯು ಇತೋಪ್ಯತಿಶಯವಾಗಿ ಪ್ರಸರಿಸಲೆಂದೂ ಹಾರೈಸುತ್ತೇವೆ.

ಬೆಂಗಳೂರು ಅಧ್ಯಾತ್ಮಪ್ರಕಾಶ ಕಾರ್ಯಾಲಯದವರು ಉಪದೇಶಸಾಹಸ್ರಿ 1-0-0, ತತ್ವಸಮಾಸ 0-4-0, ಗಣೇಶಾಷ್ಟಕ 0-3-0, ಶಂಕರಸಪ್ತಾಹದ ವೃತ್ತಾಂತ ಎಂಬ ನಾಲ್ಕುಗ್ರಂಥಗಳನ್ನು ವಿಮರ್ಶೆಗಾಗಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಈ ಗ್ರಂಥಗಳಲ್ಲಿ ಉಪದೇಶಸಾಹಸ್ರಿಯೆಂಬ ಗ್ರಂಥವು ವಿಸ್ತೃತವಾಗಿದ್ದು ಆತ್ಮಾನಾತ್ಮವಿಚಾರ, ಆಚಾರ್ಯಲಕ್ಷಣ, ಪರಮಾತ್ಮಲಕ್ಷಣ, ಶಿಷ್ಯಲಕ್ಷಣ, ದೇಹಾತ್ಮವಾದನಿರಾಸ, ಅವಿದ್ಯಾಸ್ವರೂಪ ಮುಂತಾದ ಅನೇಕ ಉಪಯುಕ್ತ ವಿಚಾರಗಳಿಂದೊಡಗೂಡಿದೆ. ಸಂಸ್ಕೃತ ಭಾಷಾಮಯವಾಗಿದ್ದ ಈ ಗ್ರಂಥವನ್ನು ವೈ. ಸುಬ್ಬರಾಯರು ಕನ್ನಡದಲ್ಲಿ ಸುಲಭ ಸರಣಿಯಿಂದ ಅನುವಾದವನ್ನು ಮಾಡಿ ಮುಮುಕ್ಷುಗಳಾದ ಕನ್ನಡ ಜನಗಳಿಗೆ ಮಹೋಪಕಾರವನ್ನು ಮಾಡಿದ್ದಾರೆ. ಮತ್ತು ಇವರೇ ತತ್ವಸಮಾಸವೆಂಬ ಗ್ರಂಥಕ್ಕೂ, ಗಣೇಶಾಷ್ಟಕಕ್ಕೂ ವಿವರಣೆಯನ್ನು ಬರೆದಿರುತ್ತಾರೆ. ಈ ಗ್ರಂಥಗಳು ಆಕಾರದಲ್ಲಿ ಚಿಕ್ಕವುಗಳಾದರೂ ಅನಂತ ಗೂಢಾಭಿಪ್ರಾಯಗಳಿಂದ ಗರ್ಭಿತಗಳಾಗಿವೆ. ತತ್ವಸಮಾಸವು ಸಾಂಖ್ಯ ವೇದಾಂತಗಳಿಗಿರುವ ತಾರತಮ್ಯವನ್ನು ಚೆನ್ನಾಗಿ ಬೋಧಿಸುತ್ತದೆ. ಗಣೇಶಾಷ್ಟಕದ ವಿವರಣೆಯು ಬಹು ಸೊಗಸಾಗಿ ಭಕ್ತಿಪ್ರದವಾಗಿದೆ. ಶಂಕರಸಪ್ತಾಹದ ವೃತ್ತಾಂತದಲ್ಲಿ ಶುದ್ಧಾದ್ವೈತ ಸಂಬಂಧಗಳಾದ ಉಪನ್ಯಾಸಗಳು ಇರುತ್ತವೆ. ಶ್ರೀ ಶಂಕರಾಚಾರ್ಯಕೃತ ಅದ್ವೈತ ಸಿದ್ಧಾಂತರಹಸ್ಯವನ್ನು ತಿಳಿಯಬಿಚ್ಛಿಸುವವರು ಈ ಗ್ರಂಥಗಳನ್ನು ತರಿಸಿ ವಿವರಣಕರ್ತರ ಪರಿಶ್ರಮವನ್ನು ಸಫಲಗೊಳಿಸುವರೆಂದು ಆಶಿಸುತ್ತೇವೆ.

ಮೈಸೂರು ದಸರಾ ಅಧಿವೇಶನದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರ ಭಾಷಣ.

ಪ್ರಪಂಚದ ಸ್ಥಿತಿಗತಿಗಳು.

ಈ ಅಧಿವೇಶನದಲ್ಲಿ ನಾವು ಈಗ ಸಭೆ ಸೇರಿರುವ ಸಮಯವಾದರೂ ಎಂತಹದೆಂಬುದನ್ನು ನೋಡಿ ಪ್ರಪಂಚದ ಇತಿಹಾಸದಲ್ಲೇ ಅತಿ ಮುಖ್ಯವಾದ ಅವಧಿಗಳಲ್ಲೊಂದೆಂಬುದಾಗಿ ಪರಿಗಣಿಸಲ್ಪಟ್ಟು ಮುಂದೆ ಎಂದೆಂದಿಗೂ ನೆನಪಿನಲ್ಲಿ ನಿಲ್ಲುವಂತಹುದಾದ ಅವಧಿಗೆ ಸೇರಿದುದಾಗಿರುವ ಸಮಯದಲ್ಲಿ ಈ ಅಧಿವೇಶನವು ನಡೆಯುತ್ತಿದೆ. ಕಳೆದ ವರುಷದಲ್ಲಿ ನಾವು ಪ್ರಪಂಚವೇ ಘೋರವಾದುದೊಂದು ಆರ್ಥಿಕ ವಿಪತ್ತಿಗೆ ಗ್ರಾಸವಾಗುವುದೋ ಎಂದು ತೋರುತ್ತಿದ್ದ ದುರವಸ್ಥೆಯ ಪರಿಸ್ಥಿತಿಯಲ್ಲಿದ್ದೆವು. ಜೀವನಕ್ಕೆ ಬೇಕಾದ ಪ್ರತಿಯೊಂದು ಮುಖ್ಯ ವಸ್ತುವೂ ಅದಕ್ಕೆ ಗಿರಾಕಿಯಿದ್ದುದಕ್ಕಿಂತಲೂ ತೀರ ಹೆಚ್ಚಿನ ಪ್ರಮಾಣದಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದಿತು. ಆದರೆ ಎಲ್ಲ ವಸ್ತುಗಳೂ ಸಮೃದ್ಧವಾಗಿದ್ದರೂ ಪ್ರಪಂಚದಲ್ಲೆಲ್ಲ ಅನೇಕಕೋಟಿ ಜನರು ಹೊಟ್ಟೆಗಿಲ್ಲದೆ ಬಾಧೆಪಡುವ ವಿಚಿತ್ರವಾದ ಪರಿಸ್ಥಿತಿಯೊದಗಿದ್ದಿತು. ಎಲ್ಲಿ ನೋಡಿದರೂ ಹಣಕಾಸಿನ ಮುಗ್ಗಟ್ಟೇ. ವ್ಯಾಪಾರ ಸಂಘಗಳಲ್ಲಿ ಡಿವಿಡೆಂಡುಗಳೆಂಬ ಲಾಭದ ಮೊಬಲಗಿನ ಹಂಚಿಕೆಗಳು ಪಡೆಯುವುದು ನಿಂತುಹೋಗಿದ್ದಿತು. ಅನೇಕರು ತಾವು ಕೊಡಬೇಕಾದ ಸಾಲಗಳೇ ಮುಂತಾದ ಮೊಬಲಗುಗಳನ್ನು ತೀರಿಸಲು ಅಸಮರ್ಥರಾದರು. ವ್ಯಕ್ತಿಗಳ ಮಾತು ಹಾಗಿರಲಿ. ಕೆಲವು ಸರ್ಕಾರಗಳಿಗೂ ಇದೇ ಸ್ಥಿತಿಯೊದಗಿತು. ಕೆಲವು ಸರ್ಕಾರಗಳವರು ತಾವು ಇತರ ಸರ್ಕಾರಗಳಿಗೆ ಕೊಡಬೇಕಾದ ಹಣವನ್ನು ಕೊಡದೆ ನಿರಾಕರಿಸುವವರಾಗಿದ್ದಾರೆಂಬ ವದಂತಿಯೂ ಕೂಡ ಎಲ್ಲೆಲ್ಲಿಯೂ ಹರಡಿತು.

ಕಳೆದ ಕೆಲವು ತಿಂಗಳುಗಳಿಂದ ಉಂಟಾಗಿರುವ ಪರಿಸ್ಥಿತಿಯನ್ನು ನೋಡಿದರೆ ವಿದ್ಯಮಾನಗಳು ಸರ್ವೇಸಾಧಾರಣವಾದ ಸ್ಥಿರವಾದ ಸ್ಥಿತಿಗೆ ಬರುವುದರ ಸೂಚನೆಯು ತಲೆದೋರುತ್ತಿದೆಯೆಂದು ಹೇಳಬಹುದಾಗಿದೆ. ಬ್ರಿಟಿಷ್ ಸರ್ಕಾರದವರೂ ಮತ್ತು ಫ್ರೆಂಚ್ ಸರ್ಕಾರದವರೂ ಭಾರಿ ಪರಿವರ್ತನದ ಏರ್ಪಾಡುಗಳ ಮೂಲಕ ಬಡ್ಡಿಯಲ್ಲಿ ಅನೇಕಕೋಟಿ ರೂಪಾಯಿಗಳು ತಮಗೆ ಮಿಗುವಂತೆ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರು ಬಹಳ ಕಡಿಮೆ ಬಡ್ಡಿಯ ದರದಲ್ಲಿ ಹೊಸ ಸಾಲವೊಂದನ್ನು ಏರ್ಪಡಿಸಿದ್ದಾರೆ. ಹಣವನ್ನು ಠೇವಣಿ ಇಡತಕ್ಕ ಜನರಿಗೆ ತಮ್ಮ ಹಣಕ್ಕೆ ಲೋಪ ಬರುವುದಿಲ್ಲವೆಂಬುದಾಗಿ ಮತ್ತೆ ಪೂರ್ವದಂತೆಯೇ ನಂಬಿಕೆಯುಂಟಾಗುತ್ತಿದೆ. ಧಾರಣೆಗಳು ಏರುವ ಸೂಚನೆಯೂ ಕಂಡುಬರುತ್ತಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಜನಾಂಗಗಳೆಲ್ಲವೂ ಒಟ್ಟಾಗಿ ಸೇರಿರುತ್ತವೆ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ನಾನಾ ಭಾಗಗಳ ಪ್ರತಿನಿಧಿಗಳೂ ಅಟ್ಟಾವಾ ನಗರದ ಮಹಾ ಸಮ್ಮೇಳನವನ್ನು ನಡೆಯಿಸಿದುದನ್ನೂ ಅದರ ಫಲಿತಾಂಶಗಳನ್ನೂ ಇದಕ್ಕೆ ನಿದರ್ಶನವಾಗಿ ಹೇಳಬಹುದಾಗಿದೆ. ಜಿನೀವಾ ಪಟ್ಟಣದಲ್ಲಿ ಇತರ ಜನಾಂಗಗಳೊಡನೆ ನಡೆಯುವುದಾಗಿರುವ ಇದೇ ಬಗೆಯ ಸಮ್ಮೇಳನದಿಂದ ಅನೇಕ ಮಹತ್ತರವಾದ ಪ್ರಯೋಜನಗಳು ಲಭಿಸಬಹುದೆಂದು ನಾವು ನಿರೀಕ್ಷಿಸಿದ್ದೇವೆ.

ಪೊಗದಿ.

ಡೇವಿಡ್‌ಸನ್ ಸಮಿತಿಯವರು ಒಪ್ಪಿಸಿರುವ ವರದಿಯ ಕೆಲವು ಭಾಗಗಳನ್ನು ಓದಿದರೆ ನಾನಾ ಸಂಸ್ಥಾನಗಳವರು ಕೊಡುತ್ತಿರುವ ಪೊಗದಿಯನ್ನು ತೆಗೆದು ಹಾಕಬೇಕೆಂಬ ವಿಚಾರವನ್ನು ಅವರು ಅತ್ಯಂತ ಸಮಂಜಸವಾಗಿಯೂ ಸ್ಪಷ್ಟವಾಗಿಯೂ ವಿಶದೀಕರಿಸಿ ವಿವರಿಸಿರುವುದು ವ್ಯಕ್ತವಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಕೆಲವು ಸಂಗತಿಗಳೆಲ್ಲವನ್ನೂ ಸಮಿತಿಯವರು ಒಪ್ಪಿಕೊಂಡು ನ್ಯಾಯವೆಂದು ಅಂಗೀಕರಿಸಿದ್ದಾರೆ. ಪೊಗದಿಯನ್ನು ಗೊತ್ತುಮಾಡುವುದರಲ್ಲಿ ಒಂದು ಕ್ಲುಪ್ತವಾದ ನಿಯಮವಿಲ್ಲದೆ ಮನಸ್ಸಿಗೆ ಬಂದಂತೆ ಪೊಗದಿಯು ವಿಧಾಯಕವಾಗಿದೆಯೆಂದೂ, ಕೆಲವು ಸಂಸ್ಥಾನಗಳಿಂದ ವಸೂಲಾಗುವ ಪೊಗದಿಯೇನೂ ಬರುತ್ತಿಲ್ಲವೆಂದೂ ಸಮಿತಿಯವರು ಸೂಚಿಸಿದ್ದಾರೆ. ಅಲ್ಲದೆ ಕೆಲವು ಸಂಸ್ಥಾನಗಳು ಮಾತ್ರವೇ ಪೊಗದಿಯನ್ನು ಕೊಡುತ್ತಿರುವುದನ್ನೂ, ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳಲ್ಲಿ ಕೂಡ ಪೊಗದಿಯ ಮೊಬಲಗಿನ ವಿಚಾರದಲ್ಲಿ ಅವುಗಳಿಗೆ ಪರಸ್ಪರ ವ್ಯತ್ಯಾಸವಿರುವುದನ್ನೂ ನೋಡಿದರೆ ಏನೋ ಒಂದು ವಿಧದಲ್ಲಿ ಆಕಸ್ಮಿಕವಾಗಿ ಒದಗಿದ ಐತಿಹಾಸಿಕ ಘಟನೆಗಳ ಸನ್ನಿವೇಶ ಪರಂಪರೆಗಳನ್ನು ಉಪಯೋಗಿಸಿಕೊಂಡುದರಿಂದಲೇ ಮುಖ್ಯವಾಗಿ ಈ ರೀತಿ ಹೆಚ್ಚು ಕಡಿಮೆಗಳನ್ನು ಮಾಡುವುದಕ್ಕೆ ಕಾರಣವಾಯಿತೆಂದೂ ಸಮಿತಿಯವರು ಮನಗಂಡಿದ್ದಾರೆ. ಸಂಯುಕ್ತ ರಾಜ್ಯಾಂಗವ್ಯವಸ್ಥೆಗೆ ಸಂಸ್ಥಾನಗಳು ಸೇರಿದಮೇಲೆ ಅವುಗಳು ಅದೇ ವ್ಯವಸ್ಥೆಗೆ ಸೇರಿರುವ ಇತರ ಪ್ರಾಂತಗಳು ಮುಂತಾದುವುಗಳ ಪ್ರಯೋಜನಕ್ಕಾಗಿ ಈ ರೀತಿ ಪೊಗದಿಯನ್ನು ಕೊಡುತ್ತಲೇ ಬರಬೇಕೆಂದು ಸಂಯುಕ್ತ ರಾಜ್ಯಾಂಗವ್ಯವಸ್ಥಾಕ್ರಮಕ್ಕೇ ಸಮಂಜಸವಾದುದಲ್ಲವೆಂದೂ, ಆದಕಾರಣ ಈಗ ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳವರು ಸಂಯುಕ್ತ ರಾಜ್ಯಕ್ಕೆ ಅಂಗವಾಗಿ ಸೇರಿದಮೇಲೆ ತಾವು ಪರೋಕ್ಷವಾದ ತೆರಿಗೆಯರೂಪದಲ್ಲಿ ಇತರರು ಕೊಡುವಂತೆಯೇ ತಮ್ಮ ತಮ್ಮ ಭಾಗದ ಮೊಬಲಗುಗಳನ್ನು ಸಲ್ಲಿಸುತ್ತಿರುವುದಲ್ಲದೆ ಅದರಜೊತೆಗೆ ಈ ವಿಲಕ್ಷಣವಾದ ಪೊಗದಿಯ ಮೊಬಲಗನ್ನೂ ಕೂಡ ಕೊಡುವುದಕ್ಕೆ ಕಾರಣವಿಲ್ಲವೆಂಬುದಾಗಿ ಆ ಸಂಸ್ಥಾನಗಳವರು ಹೇಳುವುದು ನ್ಯಾಯವೆಂದು ಅವರು ಹಾಗೆ ಹೇಳಿಯೂ ಹೇಳುತ್ತಾರೆಂದೂ ಸಹ ಡೇವಿಡ್‌ಸನ್ ಸಮಿತಿಯವರು ತಿಳಿಸಿದ್ದಾರೆ.

ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿನಲ್ಲಿ ಪೊಗದಿಗಳಿಗೆ ಅವಕಾಶವಿಲ್ಲವೆಂದೂ ಮತ್ತು ಸಂಯುಕ್ತರಾಜ್ಯಾಂಗವ್ಯವಸ್ಥೆಯು ಏರ್ಪಟ್ಟಕೂಡಲೆ ಪೊಗದಿಯು ಕೊನೆಗಾಣಬೇಕೆಂದೂ ಸಮಿತಿಯವರು ಯುಕ್ತವಾದ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಪೊಗದಿಗಳನ್ನು ವಜಾಮಾಡುವ ವಿಚಾರದಲ್ಲಿ ಇಷ್ಟನ್ನೆಲ್ಲಾ ಹೇಳಿದ್ದಾಗ್ಯೂ, ಪೊಗದಿಯು ಯಾವಾಗ ಮತ್ತು ಹೇಗೆ ಹೋಗಬೇಕೆಂಬ ವಿಚಾರದಲ್ಲಿ ಮಾತ್ರ ಸಮಿತಿಯವರು ಸವಿವೇಚನವಲ್ಲದ ಸಲಹೆಗಳನ್ನು ಮಾಡಿರುವುದು ಆಶ್ಚರ್ಯಕರವಾಗಿದೆ. ಒಂದು ಸಂಸ್ಥಾನದವರು ಕೊಡುತ್ತಿರುವ ಪೊಗದಿಯ ಹಣದಲ್ಲಿ ಆ ಸಂಸ್ಥಾನದ ವಾರ್ಷಿಕ ಹುಟ್ಟುವಳಿಯ ಶೇಕಡಾ ಐದರಷ್ಟು ಮೊಬಲಗಿಗೆ ಮೀರಿರುವ ಭಾಗವನ್ನು ಮಾತ್ರ ಕೂಡಲೇ ವಜಾಮಾಡಬೇಕೆಂದೂ ಈ ಸಮಿತಿಯವರು ಸಲಹೆಮಾಡಿದ್ದಾರೆ. ಇದೂ ಅಲ್ಲದೆ ಕೆಲವು ಸಂಸ್ಥಾನಗಳವರು ಪೊಗದಿಯನ್ನೇ ಕೊಡಬೇಕಾದುದಿಲ್ಲದೆ ಅನುಭವಿಸುತ್ತಿರುವ ವಿನಾಯಿತಿಗಳೂ ಮತ್ತು ಹಣದ ರೂಪದ ಮೌಲ್ಯವನ್ನು ಕಟ್ಟಬಹುದಾದ ಹಕ್ಕುಗಳೂ ಎಂದಿನಂತೆಯೇ ನಡೆದುಕೊಂಡು ಬರಬೇಕೆಂದೂ ಈ ಸಮಿತಿಯವರು ಸಲಹೆ ಮಾಡಿರುತ್ತಾರೆ. ಆದರೆ ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳ ಅದೇ ಬಗೆಯ ಹಕ್ಕುಗಳ ಮೌಲ್ಯದ ಮೊಬಲಗು ಮಾತ್ರ ಪೊಗದಿಯಲ್ಲಿ ಕೂಡಲೆ ಕಡಮೆಮಾಡಬೇಕಾದ ಮೊತ್ತದಲ್ಲಿ ಉತ್ತಾರವಾಗಬೇಕೆಂದೂ ಅಥವಾ ಅದು ಆ ಮೊತ್ತಕ್ಕೇ ಸಮವಾಗಿದ್ದರೆ ಕೂಡಲೆ ಪೊಗದಿಯಲ್ಲೇನನ್ನೂ ಕಡಿಮೆ ಮಾಡಬೇಕಾಗಿಲ್ಲವೆಂದೂ ಸಮಿತಿಯವರು ಸಲಹೆಮಾಡಿದ್ದಾರೆ.

ಸಂಸ್ಥಾನಗಳ ಪೈಕಿ ಬಹುಸಂಖ್ಯೆಯ ಸಂಸ್ಥಾನಗಳವರು ಪೊಗದಿಯೇನನ್ನೂ ಕೊಡುತ್ತಿಲ್ಲ; ಅಥವಾ ಕೊಟ್ಟರೂ ಹೆಸರಿಗೆ ಮಾತ್ರ ಸ್ವಲ್ಪ ಪೊಗದಿಯನ್ನು ಕೊಡುತ್ತಿದ್ದಾರೆ. ಸಮಿತಿಯವರು ಮಾಡಿರುವ ಈ ಸಲಹೆಗಳಿಂದ ಅವರಿಗೆ ಯಾವುದೊಂದು ಬಾಧಕವೂ ಉಂಟಾಗುವಂತಿಲ್ಲ. ಗಣನೀಯವಾದ ರೀತಿಯಲ್ಲಿ ಭಾರಿ ಪೊಗದಿ ಮೊಬಲಗುಗಳನ್ನು ಕೊಡುತ್ತಿದ್ದಾಗ್ಯೂ, ಈ ಮೊಬಲಗಿಗೆ ಪ್ರತ್ಯಾಮ್ನಾಯವೆನಿಸುವುದಕ್ಕಿಂತ ಬಹಳ ಹೆಚ್ಚಿನ ಹಕ್ಕುಗಳನ್ನು ಅನುಭವಿಸುತ್ತಿರುವ ಸಂಸ್ಥಾನಗಳವರೂ ಸಹ ಈ ಸಲಹೆಗಳಿಂದ ಯಾವುದೊಂದು ತೊಂದರೆಯೆಂದೂ ಹೇಳುವುದಕ್ಕೆ ಕಾರಣವಿಲ್ಲ. ಆದರೆ ವಿಶೇಷ ಭಾರಿಯಾಗಿ ಪೊಗದಿ ಹಣಗಳನ್ನು ಕೊಡುತ್ತಿದ್ದು ಅವುಗಳಿಗೆ ತಕ್ಕಂತೆ ವಿಶೇಷ ಹಣದ ಅನುಕೂಲತೆಗಳೇನನ್ನೂ ಪಡೆಯದೆ ಇರುವ ಕೆಲವು ಸಂಸ್ಥಾನಗಳ ವಿಚಾರದಲ್ಲಿ ಮಾತ್ರ ಸಮಿತಿಯವರ ಸಲಹೆಗಳಿಂದ ಬಾಧಕವುಂಟಾಗುತ್ತದೆ. ಇಂಥ ಸಂಸ್ಥಾನಗಳ ಪೈಕಿ ಮೊದಲು ಗಮನಕ್ಕೆ ಬರುವಂತಹದಾಗಿರುವ ಸಂಸ್ಥಾನವು ನಮ್ಮದು. ಎಲ್ಲಾ ಸಂಸ್ಥಾನಗಳಿಗಿಂತಲೂ ಅತ್ಯಂತ ಹೆಚ್ಚು ದರದಲ್ಲಿ ಪೊಗದಿಯು ಮೈಸೂರು ಸಂಸ್ಥಾನದಿಂದ ಅನ್ಯಾಯವಾಗಿ ಸಂದಾಯವಾಗುತ್ತದೆ. ಅಲ್ಲದೆ ಅದಕ್ಕೆ ಪ್ರತಿಯಾಗಿ ಗಣನೀಯವಾದ ಹಕ್ಕುಗಳಾಗಲಿ ಅಥವಾ ರಿಯಾಯಿತಿಗಳಾಗಲಿ ದೊರೆಯದೆ ಹೋಗಿರುವ ಸಂಸ್ಥಾನವೆಂದರೆ ಅದು ಮೈಸೂರು ಸಂಸ್ಥಾನವೇ. ಸಂಸ್ಥಾನದಲ್ಲಿ ಕಂಡುಬರುವ ಕೈಗಾರಿಕೆಯ ಅಭಿವೃದ್ಧಿಯನ್ನೂ ಸಾಮಾನ್ಯವಾದ ಇತರ ವಿಚಾರಗಳ ಸಂಬಂಧದ ಅಭಿವೃದ್ಧಿಯನ್ನೂ ನೋಡಿದರೆ ಯಾವ ಬಗೆಯ ಸಂಯುಕ್ತ ರಾಜ್ಯಭಾರದ ತೆರಿಗೆಯ ಏರ್ಪಾಡೇ ಆಚರಣೆಗೆ ಬಂದರೂ ಕೂಡ ಮುಂದೆ ಸಂಸ್ಥಾನವು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಅದಕ್ಕನುಸಾರವಾಗಿ ಹೆಚ್ಚಿನ ತೆರಿಗೆಗಳನ್ನು ಸಲ್ಲಿಸಬೇಕಾಗಿ ಬರುವುದಂತೂ ಸ್ವತಃಸಿದ್ಧವಾಗಿಯೇ ಇದೆ.

ಈಗಿನ ಪರಿಸ್ಥಿತಿಯಲ್ಲಿ ಕಂಡುಬರತಕ್ಕ ಅನನ್ವಯ ವಿದ್ಯಮಾನಗಳು ಪೂರ್ವದಿಂದಲೂ ನಡೆದುಕೊಂಡು ಬಂದಿರತಕ್ಕವುಗಳೆಂಬುದೇನೋ ವಾಸ್ತವವಾಗಿದೆ. ಈ ಅಂಶವನ್ನು ಉಪೇಕ್ಷೆಮಾಡುವುದಕ್ಕಾಗುವುದಿಲ್ಲ. ಯಾವ ಸಂಸ್ಥಾನಗಳಲ್ಲಿ ಪೊಗದಿ ಮೊದಲಾದವುಗಳನ್ನು ವಸೂಲುಮಾಡದ ರಿಯಾಯಿತಿಗಳನ್ನು ತೋರಿಸಲಾಗಿದೆಯೋ ಆ ಸಂಸ್ಥಾನಗಳಿಗೆ ಕೊಟ್ಟಿರುವ ರಿಯಾಯಿತಿಗಳನ್ನು ತಪ್ಪಿಸುವುದಕ್ಕಾಗುವುದೂ ಇಲ್ಲ. ಅವುಗಳನ್ನು ತಪ್ಪಿಸಬೇಕೆಂದು ಯಾರೂ ಸಲಹೆ ಮಾಡುವುದೂ ಇಲ್ಲ. ಆದರೆ ಈ ರಿಯಾಯಿತಿಗಳು ತೋರಿಸಲ್ಪಡದಿರುವ ಇತರ ಸಂಸ್ಥಾನಗಳ ವಿಚಾರದಲ್ಲಿ ಅನನ್ವಯವಾದ ಈ ಪೊಗದಿಯ ಹಣವನ್ನು ಸಂಯುಕ್ತ ಸರ್ಕಾರದವರೂ ಅವರಿಂದ ಬರಮಾಡಿಕೊಳ್ಳಬೇಕೆಂಬುದಕ್ಕೆ ಸರ್ವಥಾ ಸರಿಯಾದ ಕಾರಣವೇನೂ ಇಲ್ಲ. ಇಷ್ಟಕ್ಕೂ ಸಮಿತಿಯವರ ಸಲಹೆಯ ಮೇರೆಗೆ ವಿನಾಯಿತಿ ಬಿಡಲು ಅರ್ಹವಾಗಿರತಕ್ಕ ಪೊಗದಿಯ ನಿವ್ವಳ ಮೊಬಲಗು 30 ಲಕ್ಷ ರೂಪಾಯಿಗಳಿಗೆ ಮೀರುವುದಿಲ್ಲ. ಇಷ್ಟು ಸ್ವಲ್ಪವಾಗಿರುವ ಮತ್ತು ಕ್ರಮೇಣ ಕಡಮೆಯಾಗುತ್ತ ಬರಬೇಕಾಗಿರುವ ಅಲ್ಪ ಮೊಬಲಗಿಗಾಗಿ ಕೆಲವು ಸಂಸ್ಥಾನಗಳವರನ್ನು ತೊಂದರೆಗೆ ಗುರಿಪಡಿಸುವುದು ಸಂಯುಕ್ತ ಸರ್ಕಾರಕ್ಕೆ ಸರ್ವಥಾ ಉಚಿತವಲ್ಲವೆಂದು ಹೇಳಬಹುದಾಗಿದೆ.

ಪೊಗದಿಯನ್ನು ಕೊಡುವುದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ನಿಯಮಕ್ಕೆ ಅನನ್ವಯವೆಂಬ ಕಾರಣದ ಮೇಲೆ ಪೊಗದಿಯನ್ನು ತೆಗೆದುಹಾಕಬೇಕೆನ್ನುವುದಕ್ಕಿಂತಲೂ ಹೆಚ್ಚಾಗಿ ರಾಜಕೀಯವಾಗಿ ನ್ಯಾಯವನ್ನು ದೊರೆಯಿಸಬೇಕೆಂಬ ಕಾರಣಕ್ಕಾಗಿ ಪೊಗದಿಯನ್ನು ತೆಗೆದುಹಾಕುವುದು ಅವಶ್ಯಕ. ಅನೇಕ ಸಂಸ್ಥಾನಗಳ ವಿಷಯದಲ್ಲಿ ಈ ಪೊಗದಿಗಳು ಅಧಿರಾಜನಿಗೆ ಸಲುವಳಿಯಾಗುವ (ಫ್ಯೂಡಲ್) ಸ್ವಭಾವದವುಗಳಲ್ಲವೆಂಬುದನ್ನು ಸಮಿತಿಯವರು ಬಹು ಚೆನ್ನಾಗಿ ತೋರ್ಪಡಿಸಿದ್ದಾರೆ. ಸಮಿತಿಯವರು ಮತ್ತೊಂದು ಅಂಶವನ್ನೂ ಸ್ಪಷ್ಟವಾಗಿ ತಿಳಿಸಿದ್ದರೆ ಚೆನ್ನಾಗಿದ್ದಿತು. ಕೆಲವು ಸಂಸ್ಥಾನಗಳ ವಿಚಾರದಲ್ಲಿ ಈ ಪೊಗದಿಗಳೆಂಬ ಮೊಬಲಗುಗಳು (ಅವುಗಳಿಗೆ ಈಚೆಗೆ ಈ ಪೊಗದಿಯೆಂಬ ಹೆಸರು ಬಂದಿದ್ದರೂ) ಜಯಿಸಿದ ಜನರ ಮೇಲೆ ಮೊದಲಲ್ಲಿ ಕೇವಲ ಪರಿಹಾರದ್ರವ್ಯದ ರೂಪದಲ್ಲಿ ಹೇರಿದ ಹಣವೇ ಹೊರತು ಮತ್ತೇನೂ ಅಲ್ಲ; ಈಚೆಗೆ ಈ ಹಣವನ್ನು ಯಾವ ಹೆಸರಿನಿಂದಲೇ ಕರೆದರೂ ವಾಸ್ತವಸ್ಥಿತಿಯೇನೋ ಇಷ್ಟೆ! ವಾಸ್ತವವಾಗಿ ನೋಡುವುದಾದರೆ ಈ ಮೊಬಲಗುಗಳೆಂದಿಗೂ ಅಧಿರಾಜರುಗಳಿಗೆ ಸಲುವಳಿಯಾಗುವ (ಫ್ಯೂಡಲ್) ಸ್ವಭಾವದವುಗಳಲ್ಲವೆಂಬುದೇನೋ ಹೌದು. ಆದರೂ ಕೂಡ ಇವುಗಳು ಯಾವ ಸಂಸ್ಥಾನದ ಜನರಿಂದ ಪಾವತಿಯಾಗಬೇಕೋ ಆ ಜನರು ಇವುಗಳನ್ನು ಪಾವತಿಮಾಡುವುದು ಅವರ ಮನಸ್ಸಿಗೆ ಹೀನಾಯವಾಗತಕ್ಕ ಅಂಶವೇ ಸರಿ.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಅನಂತರವೂ ಮತ್ತು ಅದಕ್ಕಿಂತ ಮುಂಚಿತವಾಗಿಯೂ ಪೊಗದಿಗಳನ್ನು ಪಡೆಯುವವರು ಸಾರ್ವಭೌಮರೆಂದು ವಾದಿಸಲ್ಪಟ್ಟಿದೆ. "ಪೊಗದಿ" ಎಂಬ ಹೆಸರನ್ನು "ಇಂಡಿಯಾ ದೇಶದ ಸಂಸ್ಥಾನಗಳಿಂದ ಪಾವತಿಯಾಗಬೇಕಾದ ಹಣಗಳು" ಎಂಬುದಾಗಿ ಬದಲಾಯಿಸಿದುದರಿಂದ ಯಾವ ರೀತಿಯಲ್ಲಿ ಸಮಾಧಾನವುಂಟಾಗಲಿಲ್ಲವೋ ಅದೇರೀತಿಯಾಗಿ ಈ ಅಂಶದಿಂದಲೂ ಸಮಾಧಾನವೇನೂ ಆಗುವುದಿಲ್ಲ. ಪೊಗದಿಯನ್ನು ಸಂಯುಕ್ತ ಸರ್ಕಾರದ ಅನುಕೂಲಗಳಿಗಾಗಿ ವಸೂಲು ಮಾಡುವುದಾಗಿಲ್ಲದ ಪಕ್ಷದಲ್ಲಿ ಅದು ಕೂಡಲೆ ನಿಂತುಹೋಗಬೇಕಾಗಿದೆ. ಆದರೆ ಇದು ಸಂಯುಕ್ತ ಸರ್ಕಾರದ ಅನುಕೂಲಗಳಿಗಾಗಿಯೇ ವಸೂಲು ಮಾಡಲ್ಪಡುತ್ತದೆ. ಮತ್ತು ಇದು ನ್ಯಾಯವಾದ ದಾಮಾಷಾ ಪ್ರಮಾಣದಲ್ಲೂ ಸಹ ವಸೂಲಾಗುವುದಿಲ್ಲ. ಆದುದರಿಂದ ಇದು ಹೊರಲಾರದಷ್ಟು ಭಾರವಾದ ಹೊರೆಯಾಗಿದೆ. ಇದಕ್ಕೆ ಯಾವ ಬಣ್ಣವನ್ನೇ ಕೊಟ್ಟು ಯಾವ ಯಾವ ರೀತಿಯಲ್ಲಿ ಎಷ್ಟೇ ಸಮಜಾಯಿಷಿ ಹೇಳಿದಾಗ್ಯೂ ಅದನ್ನು ಯಾರು ಕೊಡಬೇಕಾಗಿದೆಯೋ ಅವರು ಅದನ್ನು ಸಲ್ಲಿಸಲು ಅವರಿಗೆ ಯಾವ ಸಮಾಧಾನವೂ ಆಗುವಂತಿಲ್ಲ; ಅವರ ಮನಸ್ಸಿಗೆ ಹೀನಾಯವಾಗುವುದೂ ತಪ್ಪುವಂತಿಲ್ಲ.

ಅಂಚೆಯ ಏರ್ಪಾಡುಗಳು.

ಮತ್ತೊಂದು ವಿಷಯದಲ್ಲಿಯೂ ಸಹ ಡೇವಿಡ್‌ಸನ್ ಸಮಿತಿಯವರ ಸಲಹೆಗಳು ಸಂಸ್ಥಾನದ ಹಣಕಾಸಿನ ವಿಚಾರಕ್ಕೆ ಅನುಕೂಲವಾಗಿಲ್ಲ. ಒಂದು ಸಂಸ್ಥಾನದವರು ಪ್ರತ್ಯೇಕವಾದ ಅಂಚೆಯ ಏರ್ಪಾಡನ್ನು ಆಚರಣೆಗೆ ತಂದು ಕೊಂಡಿದ್ದ ಮಾತ್ರವೇ ಅದು ನಗದು ಮೌಲ್ಯವೇನನ್ನೂ ಕಟ್ಟಿಕೊಡಬೇಕಾದ ಹಕ್ಕಲ್ಲವೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಮೈಸೂರು ಸಂಸ್ಥಾನದಲ್ಲಿ ನಡೆದಿರುವಂತೆ ಸಂಸ್ಥಾನದ ಅಂಚೆಯ ಏರ್ಪಾಡಿಗೆ ಬದಲಾಗಿ ಬ್ರಿಟಿಷ್ ಇಂಡಿಯಾದ ಅಂಚೆಯ ಶಿಸ್ತು ಆಚರಣೆಯಲ್ಲಿರುವ ಸಂದರ್ಭಗಳಲ್ಲಿ ಸಮಿತಿಯವರು ಸೂಚಿಸಿರುವ ಅಂಶವೇ ಬೇರೆ. ಸಂಸ್ಥಾನದ ಸರ್ಕಾರಿ ಕಾಗದಪತ್ರಗಳನ್ನು ಅಂಚೆಯ ಹಾಸಿಲ್ಲದೆ ಉಚಿತವಾಗಿ ಸಾಗಿಸುವ ಅಲ್ಪವಾದ ಹಕ್ಕನ್ನುಳಿಸಿಕೊಂಡು ಅದಕ್ಕೆ ಪ್ರತಿಯಾಗಿ ಬ್ರಿಟಿಷ್ ಇಂಡಿಯಾದ ಅಂಚೆಯ ಏರ್ಪಾಡು ಇಲ್ಲಿಯೂ ಆಚರಣೆಯಲ್ಲಿರಲು ಹಿಂದೆ ಸಮ್ಮತಿಸಲಾಯಿತು. ಈಗ ಸಮಿತಿಯವರು ಈ ಹಕ್ಕಿಗೂ ಹಣದರೂಪದ ಮೌಲ್ಯವುಂಟೆಂದೂ, ಅಂಚೆಯ ಇಲಾಖೆಯವರು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಸಂಸ್ಥಾನದ ಸರ್ಕಾರಿ ಕಾಗದಪತ್ರಗಳ ಬಾಬತು ಹಾಸಿಲು ಮೊಬಲಗನ್ನು ಪೊಗದಿಯಲ್ಲಿ ಬಿಟ್ಟುಕೊಡಬೇಕಾದ ಮೊಬಲಗಿನಲ್ಲಿ ಉತಾರಹಾಕಬೇಕೆಂದೂ ಸೂಚನೆಮಾಡಿದ್ದಾರೆ. ಈ ಅಂಚೆಯ ಸಂಬಂಧವಾಗಿ ಸರ್ಕಾರಿ ಕಾಗದಪತ್ರಗಳನ್ನು ಸಾಗಿಸುವ ಹಾಸಿಲು ಮೊಬಲಗು 5,57,700 ರೂಪಾಯಿಗಳಂತೆ! ಅದು ಇಷ್ಟು ಭಾರೀ ಮೊತ್ತವಾಗುವುದೆಂಬುದನ್ನು ನಂಬುವುದೇ ಕಷ್ಟವಾಗಿದೆ. ಈ ಮೊಬಲಗು ಉತ್ತಾರವಾಗಬೇಕಂತೆ. ಈಗ್ಗೆ ಸುಮಾರು 40 ವರುಷಗಳಿಗೆ ಹಿಂದಿನವರೆಗೂ ಸಂಸ್ಥಾನದಲ್ಲಿ ಅಂಚೆ ಎಂಬ ಹೆಸರಿನ ಸ್ವಂತ ಏರ್ಪಾಡು ಜಾರಿಯಲ್ಲಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಏರ್ಪಾಡಿನಲ್ಲಿ ಕೆಲಸವು ಬಹಳ ದಕ್ಷತೆಯಿಂದ ಜರುಗುತ್ತಿದ್ದಿತು. ಆದರೆ ಇಂಡಿಯಾ ಸರ್ಕಾರದವರು ಈ ಏರ್ಪಾಡನ್ನು ತಮಗೆ ವಹಿಸಿಕೊಡಬೇಕೆಂದು ಪದೇಪದೇ ಒತ್ತಾಯಮಾಡಿ ಕೇಳಿದರು. ಸಂಸ್ಥಾನದ ಸರ್ಕಾರಿ ಕಾಗದಪತ್ರಗಳನ್ನು ಯಾವ ವೆಚ್ಚವೂ ಇಲ್ಲದೆ ತಾವು ಸಾಗಿಸುವುದಾಗಿ ಭರವಸೆಯನ್ನೂ ಕೊಟ್ಟರು. ಈ ಅಂಶಗಳ ಪರ್ಯಾಲೋಚನೆಗಳಿಂದ ಸಂಸ್ಥಾನದವರು ಮನಸ್ಸಿಲ್ಲದಿದ್ದರೂ ತಮ್ಮ ಅಂಚೆಕ್ರಮವನ್ನು ಬಿಟ್ಟುಕೊಟ್ಟರು. ಯಾವ ನಿರ್ದಿಷ್ಟವಾದ ಷರತ್ತಿನಮೇಲೆ ಅಂಚೆಯನ್ನು ಬಿಟ್ಟುಕೊಡಲಾಯಿತೋ ಆ ಷರತ್ತೇ ಸಂಸ್ಥಾನದವರಿಗಿರತಕ್ಕ ಪ್ರತಿಫಲರೂಪದ ಹಕ್ಕು. ಆದರೆ ಈ ಷರತ್ತನ್ನು ನೆರವೇರಿಸುವುದಕ್ಕೆ ಮಾತ್ರ ಹಣದರೂಪದ ಮೌಲ್ಯವುಂಟೆಂದೂ, ಆದರೆ ಅಂಚೆಯ ಇಲಾಖೆಯನ್ನು ನಡೆಯಿಸುವ ಹಕ್ಕಿಗೆ ಮಾತ್ರ ಯಾವ ನಗದು ಮೌಲ್ಯವೂ ಇಲ್ಲವೆಂದೂ ಸಮಿತಿಯವರು ಅಭಿಪ್ರಾಯಪಟ್ಟಿರುವುದರಲ್ಲಿ ಯಾವ ನ್ಯಾಯವೂ ಕಂಡುಬರುವುದಿಲ್ಲ. ಸಮಿತಿಯವರ ಸಲಹೆಗಳ ಮೇರೆಗೆ ಹಿಂದಿನ ಒಡಂಬಡಿಕೆಗಳನ್ನು ನಿರಾಕರಿಸಿ ಒತ್ತರಿಸಿದಲ್ಲಿ ಅಂಚೆಯ ಶಿಸ್ತಿನ ಏಕೀಕರಣಕ್ಕಾಗಿ ಸಂಸ್ಥಾನದವರು ಸ್ವಪ್ರಯೋಜನವನ್ನೂ ತೊರೆದು ತ್ಯಾಗಬುದ್ಧಿಯನ್ನು ತೋರ್ಪಡಿಸಿದುದರ ಪರಿಣಾಮವು ಹೀಗಾದಮೇಲೆ ಹಿಂದಿದ್ದಂತೆ ಸಂಸ್ಥಾನದವರು ಅಂಚೆಯನ್ನು ನಡೆಯಿಸಿಕೊಳ್ಳುವ ಹಕ್ಕನ್ನೇ ತಮಗೆ ಹಿಂದಕ್ಕೆ ಕೊಡಬೇಕೆಂದು ಕೇಳಬೇಕಾಗುವುದು. ಇದರಿಂದ ನಮಗೆ ಅನುಕೂಲವುಂಟಾಗುವುದರಲ್ಲಿ ಸಂದೇಹವಿಲ್ಲ. ಈಗಿನಕಾಲದಲ್ಲಿ ಕಾಗದಪತ್ರಗಳ ಓಡಾಟಕ್ಕಾಗಿ ಜನಗಳಿಂದ ಬರತಕ್ಕ ಹಾಸಲಿನ ರೂಪದ ವರಮಾನವು ಸರ್ಕಾರಿ ಕಾಗದಪತ್ರಗಳನ್ನೂ ಮತ್ತು ಸಾರ್ವಜನಿಕ ಪತ್ರವ್ಯವಹಾರಗಳನ್ನೂ ಎರಡನ್ನೂ ಸಾಗಿಸುವುದಕ್ಕೆ ತಗಲುವ ವೆಚ್ಚಕ್ಕೆ ಸಾಕಾಗುವುದು. ಈ ವಿಷಯದಲ್ಲಿ ಸಂಶಯವೇ ಇಲ್ಲ. (ಸಶೇಷ)

ರದವರು ಇವರ ಜಮೀನಾಸುಗಳನ್ನು ಈ ಮೊದಲೇ ಜಪ್ತುಮಾಡಿ ಹರಾಜುಮಾಡಿರುವರು.

ಜಬ್ಬಲ್‌ಪುರದ 61 ನೇ ಸರ್ವಾಧಿಕಾರಿಗಳಾದ ಠಾಕೂರ ದಾದುರಾಮಸಿಂಗ್ ಚೌಹಾರವರು ಮತ್ತು ಶಂಕರರಾವ್ ಭೋನ್ಸ್ಲೆ ಎಂಬ ಸ್ವಯಂಸೇವಕರು ಬಿ. ಎನ್. ರೈಲ್ವೆಯ ಪ್ಯಾಸೆಂಜರು ಗಾಡಿಯನ್ನು ಜಬ್ಬಲ್‌ಪುರದ ಸಮೀಪದಲ್ಲಿ ನಿಲ್ಲಿಸಿದರೆಂಬ ಕಾರಣದ ಮೇಲೆ ಆರಾರು ತಿಂಗಳ ಕಠಿಣಸಜೆಗೆ ಗುರಿಯಾದರು.

ವರ್ತಮಾನಸಂಗ್ರಹ

ಇದೇ ಅಕ್ಟೋಬರ್ 15 ನೇ ತಾರೀಖಿನಿಂದ ಮುಂಬಯಿಯ ತಾತಾ ಕಂಪೆನಿಯವರು ಕರಾಚಿಯಿಂದ ಅಹಮದಾಬಾದ್, ಮುಂಬಯಿ ಮತ್ತು ಬಳ್ಳಾರಿಯ ಮಾರ್ಗವಾಗಿ ಏರೋಪ್ಲೇನಿನ ಮುಖಾಂತರ ಟಪ್ಪಾಲನ್ನು ಸಾಗಿಸುವುದಕ್ಕೆ ಪ್ರಾರಂಭಿಸಿರುತ್ತಾರೆ.

ಮೌಲಾನಾ ಷೌಕತ್ತಲಿಯವರು 'ಫ್ರೀಪ್ರೆಸ್ ಜರ್ನಲ್ಲಿ' ನ ಸಂಪಾದಕರಾದ ಮಿ|| ಎಸ್. ಸದಾನಂದರ ಮೇಲೆ ಮಾಡಿರುವ ಮಾನನಷ್ಟದ ಮೊಕದ್ದಮೆಯು, ಷೌಕತ್ತಲಿಯವರ ಅಮೇರಿಕಾ ಪ್ರಯಾಣದ ಸಲುವಾಗಿ 1933 ನೆಯ ಇಸವಿ ಜನವರಿ 27 ನೆಯ ತಾರೀಖಿಗೆ ಮುಂದುವರಿಸಲ್ಪಟ್ಟಿರುತ್ತದೆ.

ಅಕ್ಟೋಬರ್ 15 ನೇ ತಾರೀಖಿನ ದಿವಸ ಸಾಯಂಕಾಲ ಮುಂಬಯಿಯ ಇಂಡಿಯಾ ಬ್ಯಾಂಕಿನಲ್ಲಿ ಯಾರೋ ಒಬ್ಬರು 15 ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳನ್ನು ಕೈಯಲ್ಲಿ ಹಿಡಿದುಕೊಂಡಿದ್ದಾಗ ಕೆಲವು ಜನ ದುರಾತ್ಮರು ಆ ನೋಟುಗಳನ್ನೆಲ್ಲಾ ಕಿತ್ತುಕೊಂಡು ಪರಾರಿಯಾಗಿರುತ್ತಾರೆ. ಪೋಲೀಸರು ಅಪರಾಧಿಗಳನ್ನು ಹುಡುಕುತ್ತಿರುವರು.

ಇದೇ ಅಕ್ಟೋಬರ್ 17 ನೇ ತಾರೀಖಿನ ದಿವಸ ಮುಜಫರ್‌ಪುರ ಪ್ರಾಂತಕ್ಕೆ ಸೇರಿದ ಕಾಂತಿ ಎಂಬ ಊರಿನಿಂದ ಸಿವೈಪಟ್ಟಿ ಎಂಬಲ್ಲಿಗೆ ಟಪಾಲನ್ನು ಒಯ್ಯುತ್ತಿದ್ದ ಪೋಸ್ಟ್ ಜವಾನನನ್ನು ಯಾರೋ ದುರಾತ್ಮರು ಕೊಲೆಮಾಡಿ, ಟಪಾಲ್ ಚೀಲದಲ್ಲಿದ್ದ 300 ರೂಪಾಯಿಗಳ ಇನ್‌ಷ್ಯೂರ್ ಕವರುಗಳನ್ನು ಅಪಹರಿಸಿರುತ್ತಾರೆ. ಪೋಲೀಸರು ಪತ್ತೆತರದೂದು ನಡೆಸುತ್ತಿರುವರು.

ಪೆಷಾವರ್ ಡಿಸ್ಟ್ರಿಕ್ಟಿಗೆ ಸೇರಿದ ಕೋಹತ್ ನಗರದಿಂದ ಅಸೆಮಾಸಿಗೆ ಕಳ್ಳತನದಿಂದ ಎರಡು ಒಂಟೆಗಳ ಮೇಲೆ ಮದ್ದು, ಗುಂಡುಗಳನ್ನು ಒಯ್ಯುತ್ತಿದ್ದ ಇಬ್ಬರನ್ನು ಮಾರ್ಧಾನ್ ಪೋಲೀಸರು ದಸ್ತಗಿರಿ ಮಾಡಿ, ಅವರ ಬಳಿಯಲ್ಲಿ ದೊರೆತ 27 ಬಂದೂಕಗಳನ್ನೂ, 4000 ಗುಂಡುಗಳನ್ನೂ ಹಾಗೂ ಇತರ ಅಪಾಯಕರಗಳಾದ ಸಾಮಾನುಗಳನ್ನೂ ವಶಪಡಿಸಿಕೊಂಡರು. ಹಜಾರೀ ಸರಹದ್ದಿನ ಸಮೀಪದ ಕ್ರಾಂತಿಕಾರರಿಗಾಗಿ ಈ ವಸ್ತುಗಳು ಒಯ್ಯಲ್ಪಡುತ್ತಿದ್ದವಂತೆ!

ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕಾಕರ್ತರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿದ್ದ ಒಂದಾನೊಂದು ಪ್ರಕಟನೆಯನ್ನು ಸೆಪ್ಟೆಂಬರ್ 20 ನೇ ತಾರೀಖಿನ ದಿವಸದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರೆಂಬ ಕಾರಣದ ಮೇಲೆ ಸರ್ಕಾರದವರು ಸದರಿ ಪತ್ರಿಕಾಕರ್ತರಿಂದ ಎರಡನೇ ಸಾರಿ ಇಡಲ್ಪಟ್ಟಿದ್ದ 10,000 ರೂ. ಗಳ ಠೇವಣಾತಿ ಹಣವನ್ನು ಜಪ್ತುಮಾಡಿಕೊಂಡಿರುತ್ತಾರೆ. ಫ್ರೀ ಪ್ರೆಸ್ ಪತ್ರಿಕೆಯ ಠೇವಣಾತಿ ಹಣವು ಜಪ್ತಾದದ್ದು ಇದು ಎರಡನೇ ಸಾರೆಯಾಗಿರುತ್ತದೆ.

ಇಂಡಿಯಾ ಲೀಗಿನ ಪರವಾಗಿ ಮಿ|| ಬರ್ಟ್ರಾಂಡ್ ರಸ್ಸೆಲ್ ಮತ್ತು ಮಿ|| ಹೆರಾಲ್ಡ್ ಲಾಸ್ಕಿಯವರು ಸರ್ ತೇಜಬಹದ್ದೂರ್ ಸಪ್ರೂ ಮತ್ತು ಮಿ|| ಜಯಕರರಿಗೆ ಒಂದು ತಂತಿಯನ್ನು ಕಳುಹಿಸಿ ಶಾಂತಿಸ್ಥಾಪನೆಗಾಗಿ ಮಹಾತ್ಮಾ ಗಾಂಧಿಯವರೊಡನೆ ಚರ್ಚೆಗಳನ್ನು ನಡೆಯಿಸಲು ಅವಕಾಶಗಳನ್ನು ಕಲ್ಪಿಸಿಕೊಡುವಂತೆ ಮಂತ್ರಿಶ್ರೇಷ್ಠರಿಗೆ ತಂತಿಯನ್ನು ಕಳುಹಿಸಿದರೆಂದೂ ಮಂತ್ರಿಶ್ರೇಷ್ಠರು ಆ ನಿಮ್ಮ ಕೋರಿಕೆಗಳನ್ನು ನಡೆಯಿಸದೆ ಇದ್ದರೆ ಲಂಡನ್ ಪರಿಷತ್ತಿಗೆ ಬಂದಿರುವ ಆಹ್ವಾನವನ್ನು ತಿರಸ್ಕರಿಸಿರೆಂದೂ ಒತ್ತಾಯಪಡಿಸಿರುತ್ತಾರೆ.

ಅಮೇರಿಕಾದೇಶದಲ್ಲಿ ಭರತಖಂಡದ ರಾಷ್ಟ್ರೀಯ ಚಳವಳಿಯ ಸಂಬಂಧವಾಗಿ ಭಾಷಣಗಳನ್ನು ಮಾಡುತ್ತಿರುವ ಮಿ|| ವಿ. ಜೆ. ಪಟೇಲರಿಗೆ ಲಂಡನ್ನಿನಲ್ಲಿರುವ ಮಿ|| ಸಕಲಾತ್‌ವಾಲಾರವರು, ಕಾಂಗ್ರೆಸ್ಸಿನವರು ಕೈಕೊಂಡಿರುವ ಬಹಿಷ್ಕಾರ ಚಳವಳಿಯು ಕೇವಲ ಕೃತ್ರಿಮವಾದುದೆಂದೂ, ಇದರಿಂದ ಪ್ರಜೆಗಳ ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಗಳಿಗೆ ವಿಶೇಷ ಅಡಚಣೆಯುಂಟಾಗುವುದೆಂದೂ ಒಂದು ಪತ್ರವನ್ನು ಬರೆದಿರುವರು.

ಮುಂಬಯಿನಗರದಲ್ಲಿ ಈಚೆಗೆ ಜೂಜುಕೋರರು ಬಹಳವಾಗಿ ಹೆಚ್ಚುತ್ತಿರುವರಂತೆ! ಕಳೆದ ಗುರುವಾರ ರಾತ್ರಿ ಪೋಲೀಸರು ಗವರ್ನರವರ ಭವನದ ಹತ್ತಿರ ವಾಕೇಶ್ವರ್ ರಸ್ತೆಯಲ್ಲಿರುವ ಒಂದು ಮನೆಯನ್ನು ಹೊಕ್ಕು ಅಲ್ಲಿ ಜೂಜಾಡುತ್ತಿದ್ದ 6 ಜನರನ್ನು ದಸ್ತಗಿರಿ ಮಾಡಿದ್ದಲ್ಲದೆ ಅಲ್ಲಿ ದೊರೆತ 1400 ರೂಪಾಯಿಗಳ ಜೂಜಿನ ಹಣವನ್ನು ತನ್ನ ವಶಪಡಿಸಿಕೊಂಡರು. ದಸ್ತಗಿರಿ ಮಾಡಲ್ಪಟ್ಟ 6 ಜನರೂ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಈ ಜೂಜಿನ ಗೃಹವನ್ನು ಒಬ್ಬ ಗುಜರಾಥಿ ಸ್ತ್ರೀಯು ನಡೆಯಿಸುತ್ತಿದ್ದಳೆಂದು ತಿಳಿದುಬಂದಿದೆ.

ಜುಗೋಸ್ಲೇವಿಯಾದ ಒಬ್ಬ ಇಂಜನಿಯರು ಒಂದು ಹೊಸ ತರಹ ಪೆಟ್ರೋಲನ್ನು ಕಂಡುಹಿಡಿದಿರುವರು. ಇವರು ಪ್ರಕಟಿಸಿರುವ ಒಂದು ಪತ್ರದಲ್ಲಿ ಮರಗಳಲ್ಲಿ ಒಂದು ವಿಧವಾದ ಎಣ್ಣೆಯಿರುವುದೆಂದೂ, ತಕ್ಕ ಯಂತ್ರಗಳಿಂದ ಆ ಎಣ್ಣೆಯನ್ನು ಶುದ್ಧಿಮಾಡಿದಲ್ಲಿ ಅದು ಪೆಟ್ರೋಲಿಗಿಂತಲೂ ಕಡಿಮೆ ದರದಲ್ಲಿ ದೊರೆಯುವುದೆಂದೂ ತಿಳಿಸಿರುವರು. ಇಂಗ್ಲೆಂಡಿನ ಅನೇಕ ಪ್ರಸಿದ್ಧರಾದ ಇಂಜನಿಯರುಗಳು ಇದನ್ನು ಪರೀಕ್ಷಿಸಿನೋಡಿ ಆಶ್ಚರ್ಯಭರಿತರಾಗಿರುವರು. ಶೀಘ್ರದಲ್ಲಿಯೇ ಇದರ ತಯಾರಿಯ ಬಗ್ಗೆ ಒಂದು ಹೊಸ ಕಾರ್ಖಾನೆಯು ಏರ್ಪಾಡಾಗಲಿರುವುದು.

ಮುಂಬಯಿ ಪಟ್ಟಣದ ಕೆಲವುಜನ ಹತ್ತಿದಳ್ಳಾಳಿಗಳು ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸುವರೆಂಬ ಕಾರಣದ ಮೇಲೆ ಸರ್ಕಾರದವರು 4 ಜನ ವರ್ತಕರನ್ನು ದಸ್ತಗಿರಿ ಮಾಡಿದ್ದರು. ಇದರಿಂದ ಕಾಂಗ್ರೆಸ್ ಸ್ವಯಂಸೇವಕರು ಇತರ ಅಂಗಡಿಗಳಮುಂದೆ ಪಿಕೆಟಿಂಗ್ ಮಾಡಲಾರಂಭಿಸಿದರು. ಪೋಲೀಸರು ಅನೇಕರನ್ನು ದಸ್ತಗಿರಿ ಮಾಡಿದರು. ಇದರಿಂದ ಹತ್ತಿ ವ್ಯಾಪಾರವು ಸಂಪೂರ್ಣವಾಗಿ ನಿಂತುಹೋಗಿತ್ತು. ಈಚೆಗೆ ದೇಶೀಯ ಮತ್ತು ವಿದೇಶೀಯ ವರ್ತಕರೆಲ್ಲರೂ ಒಗ್ಗಟ್ಟಾಗಿ ಸರಕಾರದವರಲ್ಲಿ ವಿನಂತಿಮಾಡಿಕೊಳ್ಳಲು ಸರ್ಕಾರದವರು ದಸ್ತಗಿರಿ ಮಾಡಿದ್ದ ವರ್ತಕರನ್ನೆಲ್ಲಾ ಬಿಡುಗಡೆಮಾಡಿದರು. ಪಿಕೆಟಿಂಗ್ ನಿಂತಿತು, ವ್ಯಾಪಾರವು ಮೊದಲಿನಂತೆ ಪುನಃ ನಡೆಯುತ್ತಿದೆ.

ಹಿಂದೂಸಾಗರದಲ್ಲಿರುವ ಮಡಗಾಸ್ಕರ ದ್ವೀಪದಲ್ಲಿ ಮನುಷ್ಯರನ್ನು ಭಕ್ಷಿಸುವ ಒಂದು ವಿಚಿತ್ರಮರವಿರುವದಂತೆ! ಅದು 7 ಅಡಿ ಎತ್ತರ ಮತ್ತು 18 ಅಡಿಗಳ ಸುತ್ತಳತೆಯುಳ್ಳದಾಗಿದ್ದು, 7 ಅಂಗುಲ ದಪ್ಪವುಳ್ಳ ಮತ್ತು ಮುಳ್ಳುಗಳಿಂದ ಕೂಡಿದ ಅಗಲವಾದ ಎಲೆಗಳು ಮತ್ತು ನಾರಿನಂತೆ ಉದ್ದವಾದ ಬಳ್ಳಿಗಳು ನೆಲದವರೆಗೂ ಜೋತುಬಿದ್ದಿರುವುವೆಂದೂ, ಯಾರಾದರೂ ಮನುಷ್ಯರು ಅದನ್ನು ಸ್ಪರ್ಶಿಸಿದಕೂಡಲೇ ಬಳ್ಳಿಗಳು ಅವನ ಸುತ್ತಲೂ ಹಗ್ಗದಂತೆ ಬಿಗಿದುಕೊಂಡು, ಎಲೆಗಳು ಆ ಮನುಷ್ಯನ ಸುತ್ತಲೂ ಮುಚ್ಚಿಕೊಳ್ಳುವುವೆಂದೂ, ಇದಾದ ಕೆಲವು ನಿಮಿಷಗಳೊಳಗಾಗಿ ಮನುಷ್ಯನ ರಕ್ತದಂತೆ ಮರವೆಲ್ಲವೂ ಕೆಂಪಾಗುವುದೆಂದೂ, ಒಂದು ವಾರದನಂತರ ಮುದುರಿಕೊಂಡಿದ್ದ ಎಲೆಗಳು ಮೊದಲಿನಂತೆ ಬಿಚ್ಚಿಕೊಂಡು ಮೂಳೆಗಳನ್ನು ಹೊರಕ್ಕೆ ಬಿಸಾಡುವುವೆಂದೂ ಇಂಗ್ಲೆಂಡಿನ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿರುತ್ತದೆ. ಕ್ಯಾಪ್ಟನ್ ಹರ್ಸ್ಟ್ ಎಂಬವರು ಈ ವಿಚಿತ್ರ ಕಥೆಯನ್ನು ಎಲ್ಲೆಲ್ಲೂ ಪ್ರಕಟಮಾಡಿ, ಸದರಿ ಮರವನ್ನು ಕಣ್ಣಾರೆ ನೋಡಿಕೊಂಡು ಬರುವುದಕ್ಕೋಸ್ಕರ ಜನರನ್ನೂ ಹಣವನ್ನೂ ಕೂಡಿಸುತ್ತಿರುವರು. ಅದನ್ನು ನೋಡುವದಕ್ಕೆ ಹೋಗತಕ್ಕ ಜನರು ತಲಾ 8,000 ರೂ. ಗಳನ್ನು ಕೊಡಬೇಕಂತೆ!

ಹಿಂದೂ ಮುಸಲ್ಮಾನರಲ್ಲಿ ಐಕ್ಯವನ್ನುಂಟುಮಾಡುವುದಕ್ಕಾಗಿ ಹಾಗೂ ಕೋಮುವಾರು ಸಮಸ್ಯೆಯನ್ನು ಸರ್ವಸಮರ್ಪಕವಾಗುವ ರೀತಿಯಲ್ಲಿ ತಮ್ಮ ತಮ್ಮಲ್ಲೇ ತೀರ್ಮಾನಮಾಡಿಕೊಳ್ಳುವುದಕ್ಕಾಗಿ ಪಂಡಿತ ಮದನಮೋಹನಮಾಳವೀಯರು ಮತ್ತು ಮುಸಲ್ಮಾನರ ಪರವಾಗಿ ಮೌಲಾನಾಷೌಕತ್ತಲಿಯವರೇ ಮೊದಲಾದವರು ವಿಶೇಷ ಪ್ರಯತ್ನಗಳನ್ನು ಕೈಕೊಂಡಿರುವರು. ಈ ಸಂಬಂಧವಾಗಿ ಕಳೆದವಾರ ಮೌಲಾನಾ ಷೌಕತ್ತಲಿಯವರು ಲಕ್ನೋದಲ್ಲಿ ಒಂದು ಪ್ರಚಂಡ ಸಮ್ಮೇಳನವನ್ನು ಸೇರಿಸಿದ್ದರು. ಈ ಸಮ್ಮೇಳನಕ್ಕೆ ದೇಶದ ಮುಸಲ್ಮಾನ ಮುಖಂಡರೆಲ್ಲರೂ ಆಹ್ವಾನಿಸಲ್ಪಟ್ಟಿದ್ದರು. ಈ ಅಖಿಲಭಾರತೀಯ ಮುಸಲ್ಮಾನರ ಪರಿಷತ್ತಿನಲ್ಲಿ ಎಲ್ಲರೂ ಏಕವಾಕ್ಯದಿಂದ ಹಿಂದೂ ಮುಸಲ್ಮಾನರ ಐಕ್ಯವನ್ನೇ ಅಪೇಕ್ಷಿಸಿ ಅದರ ಬಗ್ಗೆ ಹಿಂದೂ ಮುಖಂಡರೊಡನೆ ಮುಂದಿನ ವ್ಯವಹಾರಗಳನ್ನು ನಡೆಯಿಸಲು ಪ್ರಮುಖ ಮುಖಂಡರಿಂದೊಡಗೂಡಿದ ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ. ಇತ್ತ ಪಂ|| ಮದನಮೋಹನಮಾಳವೀಯರು ಹಿಂದೂ, ಮುಸಲ್ಮಾನ್ ಮತ್ತು ಸಿಕ್ಕರ ಐಕ್ಯಕ್ಕಾಗಿ ಪಂಜಾಬ್ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಸಿಕ್ ಮುಖಂಡರೊಡನೆ ಮಾತುಕಥೆಗಳನ್ನಾಡಿದರು. ಈ ಕಾರ್ಯಗಳೆಲ್ಲವೂ ನಿರ್ವಿಘ್ನವಾಗಿ ನೆರವೇರುತ್ತಿರುವುದನ್ನು ನೋಡಿದರೆ ಕ್ಷಿಪ್ರದಲ್ಲಿಯೇ ಹಿಂದೂಮುಸಲ್ಮಾನ್ ಸಿಕ್ಕರಲ್ಲಿ ಸಂಪೂರ್ಣ ಐಕ್ಯವುಂಟಾಗುವುದೆಂದು ಧಾರಾಳವಾಗಿ ಹೇಳಬಹುದಾಗಿದೆ. ಪಂಡಿತ ಮದನಮೋಹನಮಾಳವೀಯರವರು ಪಂಜಾಬಿನಿಂದ ದೆಹಲಿಗೆ ಬಂದು ಅಲ್ಲಿ ಈಗ ಮೌಲಾನಾ ಷೌಕತ್ತಲಿಯವರೊಡನೆ ಮಾತುಕಥೆಗಳನ್ನಾಡುತ್ತಿರುವರು. ಈ ಮಧ್ಯೆ ದೇಶದ ಮುಖಂಡರೆಲ್ಲರೂ ಈ ಪ್ರಯತ್ನಗಳು ಸಂಪೂರ್ಣ ಫಲಪ್ರದವಾಗಬೇಕಾದರೆ ಮಹಾತ್ಮಾಗಾಂಧಿಯವರ ಸಲಹೆಯೂ ಅವಶ್ಯಕವೆಂದೂ, ಅವರನ್ನು ಕೂಡಲೇ ಬಿಡುಗಡೆಮಾಡಬೇಕೆಂದೂ, ಆರ್ಡಿನೆನ್ಸ್‌ಗಳನ್ನು ರದ್ದುಪಡಿಸಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಿ ತಮ್ಮ ಕಾರ್ಯಕ್ರಮಗಳು ಸಫಲವಾಗುವಂತೆ ಮಾಡಬೇಕೆಂದೂ ವೈಸರಾಯರಿಗೆ ತಂತಿಗಳನ್ನು ಕಳುಹಿಸುತ್ತಿರುವರು. ಮೌಲಾನಾ ಷೌಕತಾಲಿಯವರೂ ಸಹ ಇದೇ ರೀತಿ ವೈಸರಾಯರಿಗೆ ತಂತಿಮೂಲಕ ವಿಜ್ಞಾಪಿಸಿಕೊಂಡುದಲ್ಲದೆ ಕೆಲವು ದಿವಸಗಳ ಹಿಂದೆ ದೆಹಲಿಯಲ್ಲಿ ವೈಸರಾಯರನ್ನು ಪ್ರತ್ಯಕ್ಷವಾಗಿ ಕಂಡು ಮಹಾತ್ಮರನ್ನು ಕೂಡಲೇ ಬಿಡುಗಡೆಮಾಡುವುದು ಅತ್ಯಂತ ಅವಶ್ಯಕವೆಂಬುದನ್ನು ಅವರಿಗೆ ಚೆನ್ನಾಗಿ ಮನದಟ್ಟಾಗುವಂತೆ ವಾದಿಸಿದರೆಂದು ತಿಳಿದುಬಂದಿದೆ.

ಸ್ವೀಕಾರ

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದ ಆಸ್ಥಾನವಿದ್ವಾಂಸರೂ ಜ್ಞಾನವಯೋವೃದ್ಧರೂ ಆದ ಪಂಡಿತ ಶ್ರೀ ಭಾಲಾಕ್ಷಶಾಸ್ತ್ರಿಗಳವರು ತಮ್ಮ ನೂರಾರು ರೂಪಾಯಿಗಳ ಬೆಲೆಯುಳ್ಳ ಅನೇಕ ಸಂಸ್ಕೃತ ಗ್ರಂಥಗಳನ್ನು ಶ್ರೀ ವಿಶ್ವಾರಾಧ್ಯ ಗುರುಕುಲದ ವಿದ್ಯಾರ್ಥಿಗಳಿಗೆ ಶಿವಾರ್ಪಣಬುದ್ಧಿಯಿಂದ ಪ್ರದಾನಮಾಡಿದ ಸಮಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಪೂಜ್ಯಪಾದರ ಪವಿತ್ರನಾಮಸ್ಮರಣಪೂರ್ವಕವಾಗಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹಿರಿಹಾಳುಗ್ರಾಮ ನಿವಾಸಿಗಳಾದ ಮ|| ರಾ|| ಶೆಟ್ಟರ ಮರುಳಪ್ಪನವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಿಜಾಪುರ ಶಹರ ನಿವಾಸಿಗಳಾದ ಮ|| ರಾ|| ಶಾಬಾದಿ ರಾಚಪ್ಪನವರು ತಮ್ಮ ಚಿ|| ರಾಜಶೇಖರನು ಜನಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಾದಪೂಜಾಸಮಾರಂಭ.

ಧಾರವಾಡ ಡಿ|| ನರಗುಂದಪೇಟಾ ಪೈಕಿ ಚಿಕ್ಕನರಗುಂದ ಗ್ರಾಮದಲ್ಲಿರುವ ಮ||ರಾ|| ಬಸಪ್ಪನವರು ಸಪ್ಪಲ ಇವರ ಮನೆಯಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರೀ ಕೊಟ್ಟೂರು ಬೃಹನ್ಮಠಾಧ್ಯಕ್ಷ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳವರ ಪಾದಪೂಜಾಸಮಾರಂಭವು ಇದೇ ಅಶ್ವಯುಜ ಶು|| ೬ ಬುಧವಾರ ದಿವಸ ಪ್ರಾರಂಭವಾಗಿ ಅಶ್ವಯುಜ ಶು|| ವಿಜಯದಶಮಿ ರವಿವಾರ ದಿವಸ ಸಮಾಪ್ತಿಗೊಂಡಿತು. ಸಮಾಪ್ತಿ ದಿವಸ ಮಹಾರುದ್ರಾಭಿಷೇಕವೂ ಗಣಾರಾಧನೆಯೂ ಅತ್ಯಂತ ವಿಜೃಂಭಣೆಯಿಂದ ನೆರವೇರಿದವು. ಶ್ರೀ ಜಗದಾಚಾರ್ಯರು ಸದರಿ ಸದ್ಭಕ್ತರಿಗೆ ಸದಾ ಇಂಥ ಸದ್ಬುದ್ಧಿಯನ್ನುಂಟುಮಾಡಲೆಂದೂ ಇವರಿಗೂ ಇವರ ಯಾವತ್ತು ಮುಂದಿನವರಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನು ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇವೆ.

ವೀರಪ್ಪ, ಫಕೀರಪ್ಪ, ಹೊಂಗಲ,
ಮು. ಚಿಕ್ಕನರಗುಂದ.

ಉಪಕಾರ ಸ್ಮರಣೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನದ ಆಸ್ಥಾನ ವಿದ್ವಾಂಸರಾದ ಪಂಡಿತ ಶ್ರೀ ಫಾಲಾಕ್ಷಶಾಸ್ತ್ರಿಗಳು 10-10-32 ನೇ ದಿವಸ ನೂರಾರು ರೂಪಾಯಿ ಬೆಲೆ ಬಾಳುವ ತಮ್ಮ ಗ್ರಂಥರತ್ನಗಳನ್ನು ಸಮಸ್ತ ವಿದ್ಯಾರ್ಥಿಗಳಿಗೆ ಶಿವಾರ್ಪಣಬುದ್ಧಿಯಿಂದ ಸಮರ್ಪಿಸಿದ ಸಮಾರಂಭದಲ್ಲಿ ನನ್ನ ಅಪೇಕ್ಷೆಯಂತೆ ಸುಮಾರು 30 ರೂ. ಬೆಲೆಯುಳ್ಳ ಅತ್ಯುತ್ತಮಗಳಾದ ಮಹಾಗ್ರಂಥಗಳನ್ನು 'ಶೈವಭಾರತೀಭವನ'ಕ್ಕೆ ಅನುಗ್ರಹಿಸಿ ಮಹೋಪಕಾರ ಮಾಡಿರುತ್ತಾರೆ. ಇವುಗಳಲ್ಲಿ ಕೆಲವು ಅಲಭ್ಯಗ್ರಂಥಗಳೂ ಇರುವವು. ಶ್ರೀ ಶಾಸ್ತ್ರಿಗಳವರು ನಿರಪೇಕ್ಷಾಬುದ್ಧಿಯಿಂದ ಪ್ರದಾನಮಾಡಿದ್ದರೂ ಅವರ ಉದಾತ್ತವಿಚಾರಗಳಿಂದ ನಮಗಾಗಿರುವ ಉಪಕಾರವನ್ನೀಮೂಲಕ ಸಮಾಜಕ್ಕೆ ನಿವೇದಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ.

ಚಿ. ಮ. ವೀರಭದ್ರಶರ್ಮಾ ಕಾರ್ಯದರ್ಶಿ,
ಶೈವಭಾರತೀಭವನ ಕಾಶಿ.

ಶ್ರೀ ಜಗದ್ಗುರು ವಿಶ್ವಾರಾಧ್ಯೋ ವಿಜಯತೇತರಾಂ

ಪ್ರಸಿದ್ಧ ಪತ್ರಿಕೆ.

ಕುಂದಗೋಳ ಪಂಚಗೃಹ ಬೃಹನ್ಮಠದಲ್ಲಿ
ತರ್ಕತೀರ್ಥ ವೇದಾಂತವಿಶಾರದ ಸಾಂಖ್ಯಾಲಂಕಾರ
ನ್ಯಾಯವಾಚಸ್ಪತಿ ಶಿವಾದ್ವೈತಸಿದ್ಧಾಂತ ಪಯಃಪಾರಾವಾರ
ರಾಕಾಸುಧಾಕರೇತ್ಯಾದಿಬಿರುದಾಂಕಿತರಾದ
ಶ್ರೀ ನೀಲಕಂಠಶಿವಾಚಾರ್ಯಮಹಾಸ್ವಾಮಿಗಳು
ಬೃಹನ್ಮಠ ಹೂಲಿ ಇವರು
ತಾ|| ೧೭-೧೦-೩೨ ನೇ ಸೋಮವಾರದಿಂದ
ಪ್ರತಿನಿತ್ಯ ರಾತ್ರಿ ೮ ಘಂಟೆಯಿಂದ ೯ ಘಂಟೆಯವರೆಗೆ

ವೇದಾಗಮಪುರಾಣೇತಿಹಾಸಸಮ್ಮತವಾಗಿ ಆಧ್ಯಾತ್ಮಿಕಶಾಸ್ತ್ರವನ್ನು ಮುಮುಕ್ಷುಗಳ ಹಿತಾರ್ಥವಾಗಿ ಉಪದೇಶಮಾಡುತ್ತಿರುವರು. ಪ್ರಾಪಂಚಿಕಬಂಧನದಲ್ಲಿ ಸಿಲ್ಕಿ ದುಃಖಪಡುತ್ತಿರುವ ಜನರು ಶ್ರೀ ಸದ್ಗುರೂಪದೇಶವನ್ನು ಕೇಳಿ ಕೃತಾರ್ಥರಾಗಲಿಕ್ಕೆ ಇದೊಂದು ಸುಸಂಧಿಯೊದಗಿದೆ. ಮುಮುಕ್ಷುಗಳು ಈ ಸಂಧಿಯಲ್ಲಿ ಆತ್ಮಜ್ಞಾನಲಾಭವನ್ನು ಮಾಡಿಕೊಂಡು ಧನ್ಯರಾಗಬೇಕು. ಶಾಸ್ತ್ರಶ್ರವಣಕ್ಕೆ ಎಲ್ಲ ಜಾತಿಯವರೂ ಬರಬಹುದು.

ಶ್ರೀಮಂತ ಭದ್ರಪ್ಪ ಗುರುಸಿದ್ಧಪ್ಪ
ದೇಶಪಾಂಡೆ ಪಂಗಣಿ. ಕುಂದಗೋಳ.

ಶ್ರೀಮಜ್ಜಗದ್ಗುರುಪಂಚಾಚಾರ್ಯೇಭ್ಯೋನಮಃ.

ಶ್ರೀ ಸರಸ್ವತೀಮಹೋತ್ಸವ,

ಶ್ರೀಮದ್ವೀರಶೈವವಾರದ ಸಂಸ್ಕೃತ ಪಾಠಶಾಲಾ,
ಸೊಲ್ಲಾಪುರ.

ಸಮಸ್ತ ಶಾಸ್ತ್ರಶೇವಧಿಂ ಮಹೀಪಪುಂಗವಾರ್ಚಿತಾಂ |
ಮನೋಜ್ಞ ಕೇಕಿವಾಹನಾಂ ನಮಸ್ಕರೋಮಿ ಶಾರದಾಂ ||

'ವಿದ್ಯಯಾಽಮೃತಮಶ್ನುತೇ' ಎಂಬ ವಾಕ್ಯದಂತೆ ವಿದ್ಯೆಯಿಂದ ಮನುಷ್ಯನು ಇಹಪರಲೋಕಗಳಲ್ಲಿ ಅಕ್ಷಯವಾದ ಸುಖವನ್ನು ಹೊಂದುವನು. ವಿದ್ಯೆಯಿಂದಲೇ ದೇಶಧರ್ಮಗಳು ವೃದ್ಧಿಹೊಂದುತ್ತವೆ. ಆದರೆ ನಮ್ಮ ಭಾರತದೇಶವು ಅರ್ಧಶತಮಾನಕ್ಕಿಂತಲೂ ಪೂರ್ವದಲ್ಲಿ ವಿದ್ಯಾಶೂನ್ಯತೆಯಿಂದ ಬಹಳ ಹೀನಸ್ಥಿತಿಯಲ್ಲಿದ್ದಿತು. ಇತ್ತೀಚೆಗೆ ನಮ್ಮ ಭಾರತೀಯರು ವಿದ್ಯಾವಂತರಾಗಿ ಹೀನಾವಸ್ಥೆಯಲ್ಲಿದ್ದ ಭಾರತದೇಶವನ್ನು ವೃದ್ಧಿಗೊಳಿಸುತ್ತಿರುವರು. ಇನ್ನು ಕೆಲವು ದಿವಸಗಳಲ್ಲಿ ನಮ್ಮ ಭಾರತದೇಶವು ಸರ್ವೋತ್ಕೃಷ್ಟತ್ವವನ್ನು ಹೊಂದುವದು. ಇದರಂತೆ ನಮ್ಮ ವೀರಶೈವ ಧರ್ಮವಾದರೂ ಪೂರ್ವದಲ್ಲಿ ಬಹಳ ಹೀನಾವಸ್ಥೆಯಲ್ಲಿದ್ದಿತು. ಆದರೆ ಇತ್ತೀಚೆಗೆ ಅನೇಕ ವೀರಮಾಹೇಶ್ವರರು ವಿದ್ಯಾವಂತರಾಗಿ ವೀರಶೈವಧರ್ಮವನ್ನು ವೃದ್ಧಿಗೊಳಿಸುತ್ತಿರುವರು. ಈ ದೇಶಧರ್ಮಗಳ ವೃದ್ಧಿಗೆ ವಿದ್ಯೆಯೇ ಮುಖ್ಯಕಾರಣವಾಗಿರುವದು. ತಸ್ಮಾತ್ ಸಮಸ್ತರೂ ವಿದ್ಯೆಯನ್ನು ಕಲಿಯಬೇಕು. ವಿದ್ಯಾವಂತರಾಗಬೇಕಾದರೆ ವಿದ್ಯಾಧಿದೇವತೆಯಾದ ಶ್ರೀ ಸರಸ್ವತೀದೇವಿಯ ಅನುಗ್ರಹವು ಬೇಕಾಗುತ್ತದೆ. ಆದುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ನವರಾತ್ರಿಪುಣ್ಯಕಾಲದಲ್ಲಿ ನಿತ್ಯನೈಮಿತ್ತಿಕ ಶಿವಪೂಜಾನುಷ್ಠಾನದ ತರುವಾಯ ಆಚರಣೀಯವಾದ ಶ್ರೀ ಸರಸ್ವತೀದೇವಿಯ ವ್ರತವನ್ನು ಶಾಸ್ತ್ರೋಕ್ತ ಪ್ರಕಾರವಾಗಿ ಆಚರಿಸಿ ಶ್ರೀ ಸರಸ್ವತೀದೇವಿಯ ಅನುಗ್ರಹವನ್ನು ಹೊಂದಬೇಕು. ವ್ರತಾಚರಣೆಯಿಂದ ಸಂತುಷ್ಟಳಾದ ಶ್ರೀ ಸರಸ್ವತೀದೇವಿಯು ವ್ರತಿಗಳಾದ ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡುವಳು. ತದ್ದ್ವಾರಾ ವಿದ್ಯಾರ್ಥಿಗಳು ಶಿವಭಕ್ತಿ-ಗುರುಭಕ್ತಿ-ದೇಶಭಕ್ತಿ-ಸಂಘಶಕ್ತಿ ಇವುಗಳಿಂದ ಯುಕ್ತರಾಗಿ ದೇಶಧರ್ಮಗಳನ್ನುದ್ಧರಿಸಲಿಕ್ಕೆ ಸಮರ್ಥರಾಗುವರು. ತಸ್ಮಾತ್ ಪ್ರತಿವರ್ಷದ ಪದ್ಧತಿಯಂತೆ ಈ ವರುಷದಲ್ಲಿಯಾದರೂ ಅಶ್ವಯುಜ ಶು|| ೩ ಗುರುವಾರ ಮೊದಲು ಶು|| ೧೦ ರವಿವಾರದವರೆಗೂ ಸೊಲ್ಲಾಪುರ ಶ್ರೀಮದ್ವೀರಶೈವ ವಾರದಸಂಸ್ಕೃತಪಾಠಶಾಲೆಯಲ್ಲಿ ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅನೇಕ ಚಿತ್ರಪಟಗಳಿಂದಲೂ ಅಲಂಕೃತವಾದ ಮಂಟಪದಲ್ಲಿ ಶ್ರೀ ಸರಸ್ವತೀದೇವಿಯ ಮೂರ್ತಿಯನ್ನು ಸ್ಥಾಪಿಸಿ, ವೇದಾಧ್ಯಯನಪುರಸ್ಸರವಾಗಿ ಧ್ಯಾನಾವಾಹನಾದಿ ಷೋಡಶೋಪಚಾರಗಳಿಂದಲೂ ಸಂಗೀತಧ್ವನಿಗಳಾದ ಮಂಗಲಸ್ತೋತ್ರಪದಗಳಿಂದಲೂ ಶ್ರೀ ಸರಸ್ವತೀದೇವಿಯಪೂಜೆಯು ಪ್ರಾತಃಸಾಯಂಕಾಲಗಳಲ್ಲಿ ವಿದ್ಯಾರ್ಥಿಗಳಿಂದ ಆಚರಿಸಲ್ಪಟ್ಟಿತು. ಶು|| ೧೦ ರವಿವಾರ ಪ್ರಾತಃಕಾಲ ೮ ಘಂಟೆಗೆ ಪೂಜೆಯಾದ ತರುವಾಯ ಶ್ರೀ ಸರಸ್ವತೀದೇವಿಗೆ ವಿಜಯದಶಮಿ ಶಮೀಪತ್ರವನ್ನು ಸಮರ್ಪಿಸಿ ಸಮಸ್ತರನ್ನೂ ವಿದ್ಯಾವಂತರನ್ನಾಗಿ ಮಾಡಲೆಂದು ಶ್ರೀ ಸರಸ್ವತೀದೇವಿಯನ್ನು ಪ್ರಾರ್ಥಿಸಿ, ಜಯಜಯಕಾರಗಳೊಡನೆ ಶ್ರೀ ಸರಸ್ವತೀದೇವಿಯ ಉದ್ಯಾಪನೆಯು ಮಾಡಲ್ಪಟ್ಟಿತು.

ಉತ್ಸವಭಾಗಿ,
ಓರ್ವ ವಿದ್ಯಾರ್ಥಿ.

ಆರೋಗ್ಯರಕ್ಷಣೆಯ ನಿಯಮಗಳು.

ಯಾವ ಒಂದು ದೇಶದ ಜನಾಂಗವು ಕಾಯಕಷ್ಟಮಾಡುವದಕ್ಕೂ ಬುದ್ಧಿಶಕ್ತಿಯನ್ನು ಉಪಯೋಗಿಸುವುದಕ್ಕೂ ಸ್ತ್ರೀಪುರುಷರ ದೇಹಾರೋಗ್ಯವೂ ಶರೀರಪುಷ್ಟಿಯೂ ಉತ್ತಮಸ್ಥಿತಿಯಲ್ಲಿರಬೇಕು.

ಕ್ರಮತಪ್ಪಿದ ನಡವಳಿ, ಕಾಲನಿಯಮವನ್ನು ಮೀರಿದ ಆಚರಣೆ ಅತ್ಯಾಚಾರ ಇತ್ಯಾದಿಗಳಿಂದ ಆರೋಗ್ಯಹಾನಿಯು ಲಭಿಸುವುದು ಇವುಗಳನ್ನು ಬಹಳ ಎಚ್ಚರದಿಂದ ದೂರವಾಗಿಟ್ಟಿರಬೇಕು.

ಆರೋಗ್ಯವನ್ನೂ ಶಕ್ತಿಯನ್ನೂ ಕಾಪಾಡಿಕೊಳ್ಳಬೇಕಾದರೆ ಯುಕ್ತರೀತಿಯಲ್ಲಿ ಸಾಕಾದಷ್ಟು ದೇಹಪೋಷಣೆ ಮಾಡಿಕೊಳ್ಳಬೇಕು.

1. ನಾವು ವಾಸಿಸುವಕಡೆ ಮತ್ತು ಕೆಲಸಮಾಡುವಕಡೆ ಪರಿಶುದ್ಧವಾದ ಗಾಳಿಯು ವಿಶೇಷವಾಗಿರಬೇಕು.

2. ಪ್ರತಿದಿನವೂ ಬೆಳಗಿನಜಾವಕ್ಕೆ ಎದ್ದು ಹೊರಗಿನ ಶುದ್ಧವಾದ ಗಾಳಿಯಲ್ಲಿ ಸಂಚರಿಸಬೇಕು.

3. ಪ್ರತಿದಿನವೂ ಸ್ನಾನಮಾಡಿ ಶುಭ್ರವಾದ ಉಡುಪುಗಳನ್ನು ಧರಿಸಬೇಕು.

4. ಹಲ್ಲುಗಳನ್ನು ದಿನಕ್ಕೆ ಒಂದುಸಾರಿಯಾದರೂ ಉಜ್ಜಿ ಶುಚಿಯಾಗಿಟ್ಟುಕೊಳ್ಳಬೇಕು.

20. ಜನಾಂಗದಲ್ಲಿ ನೀಚವೆನಿಸಲ್ಪಟ್ಟ ನಡವಳಿಕೆಗಳನ್ನು ಆಚರಿಸಬಾರದು.

21. ಚಿಂತೆ, ಕಳವಳ, ಭಯ, ಮನೋವ್ಯಾಕುಲ ಮುಂತಾದವುಗಳಿಗೆ ಅವಕಾಶಕೊಡದೆ ಶರೀರಕ್ಕೂ ಬುದ್ಧಿಗೂ ಉತ್ಸಾಹಕರವಾದ ಕೆಲಸಗಳನ್ನೇ ಆಚರಿಸಬೇಕು.

22. ನಮಗೆ ಯಾವುದಾದರೂ ಸಂಕಟವೊದಗಿದರೆ ಅದನ್ನೇ ಮನಸ್ಸಿನಲ್ಲಿಟ್ಟು ಕೊರಗದೆ ಪರಿಹಾರೋಪಾಯವನ್ನು ಹುಡುಕಿ ಸಮಾಧಾನವಾಗಿರತಕ್ಕದ್ದು.

23. ನಮ್ಮ ಮನಸ್ಸನ್ನು ಸರ್ವದಾ ಸಮಾಧಾನ ಸ್ಥಿತಿಯಲ್ಲಿಟ್ಟು ಯಾವಾಗಲೂ ಹರ್ಷಚಿತ್ತರಾಗಿರಬೇಕು.

24. ಹರ್ಷಚಿತ್ತದಿಂದಿದ್ದರೆ ಮನಃಶಕ್ತಿಯೂ, ಶರೀರಶಕ್ತಿಯೂ ಕುಗ್ಗದಂತೆ ಸರಿಯಾದ ಸ್ಥಿತಿಯಲ್ಲಿರುವುವು.

5. ಚೆನ್ನಾಗಿ ಹಸಿವಿರುವಾಗ ಪ್ರಮಾಣವನ್ನರಿತು ಮಿತವಾಗಿ ಊಟಮಾಡಬೇಕು.

6. ನಾವು ಕುಡಿಯುವ ನೀರು ಶುಭ್ರವಾಗಿರಬೇಕು.

7. ಪ್ರತಿದಿನವೂ ನಮ್ಮ ಆಹಾರದ ಜೊತೆಗೆ ಕಾಯಿಪಲ್ಯಗಳನ್ನು ಭುಂಜಿಸಬೇಕು.

8. ಬಗೆಬಗೆಯ ಆಹಾರಗಳನ್ನೂ, ಪಕ್ವವಾದ ಹಣ್ಣುಗಳನ್ನೂ ತಿನ್ನಬೇಕು.

9. ನಮ್ಮ ಆಹಾರವು ನಮ್ಮ ದೇಹಪೋಷಣೆಗೆ ಬೇಕಾದಷ್ಟು ಇರಬೇಕಲ್ಲದೆ ಶುಚಿಯಾಗಿಯೂ ಸುಲಭವಾಗಿ ಜೀರ್ಣವಾಗುವಂತೆಯೂ ಮತ್ತೆ ಪುಷ್ಟಿಗೊಳಿಸುವಂತೆಯೂ ಇರಬೇಕು.

10. ಮಿತಿಮೀರಿ ಊಟಮಾಡಬಾರದು.

11. ಕಷ್ಟಪಟ್ಟು ಕೆಲಸ ಮಾಡಬೇಕು. ಅದರ ಜೊತೆಗೆ ಆಟವೂ ವಿಶ್ರಾಂತಿಯೂ ಇರಬೇಕು.

12. ಹೆಚ್ಚು ಕಾಲವನ್ನು ಬಯಲಿನಲ್ಲಿ ಕಳೆಯಬೇಕು.

13. ನಿಂತಿರುವಾಗಲೂ, ಕುಳಿತಿರುವಾಗಲೂ, ನಡೆಯುವಾಗಲೂ ನೆಟ್ಟಗಿರಬೇಕು.

14. ಪ್ರತಿದಿನವೂ ಮೈಬೆವರುವಂತೆ ವ್ಯಾಯಾಮವನ್ನು ತೆಗೆದುಕೊಳ್ಳಬೇಕು.

15. ಶರೀರಕ್ಕೂ, ಬುದ್ಧಿಗೂ ಬೇಸರ ಹುಟ್ಟುವಂತಹ ಒಂದೇ ವಿಧವಾದ ಕೆಲಸವನ್ನು ಹೆಚ್ಚು ಕಾಲ ಮಾಡುತ್ತಿರಕೂಡದು.

16. ಮಾದಕ ಪದಾರ್ಥಗಳನ್ನು ಹೊಗೆಸೊಪ್ಪು ಮುಂತಾದುವುಗಳನ್ನು ಯಾವ ವಿಧದಲ್ಲಿಯೂ ಸೇವಿಸಬಾರದು.

17. ಉತ್ತಮರಾದ ವೈದ್ಯರಿಂದ ಅಥವಾ ತಿಳಿದ ಹಿರಿಯರಿಂದ ಸಲಹೆಯನ್ನು ತೆಗೆದುಕೊಳ್ಳದೆ ಯಾವ ಔಷಧಗಳನ್ನೂ ಉಪಯೋಗಿಸಬಾರದು.

18. ಮಲಮೂತ್ರಗಳನ್ನು ತಡೆಯಬಾರದು, ಪ್ರತಿದಿನವೂ ಕಾಲಪ್ರವೃತ್ತಿಯು ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕು.

19. ಪ್ರತಿದಿನವೂ ಆರುಗಂಟೆಗೆ ಕಡಿಮೆಯಿಲ್ಲದೆ ನಿದ್ರಿಸಬೇಕು.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯೂನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯಿದೆಬಿಟ್ಟು ಬರುವ ಸಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡ್‌ಗಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನು, ತಲೆತಿರುಗುವದು, ನೆತ್ತಿಸುಡುವದು, ಪಿತ್ತ ಕಾರುವದು, ಮುಖ ಕಣ್ಣುಜ್ವಾಲೆ, ಹೊಟ್ಟೆಯಲ್ಲಿ ಬೇನೆ, ಎದೆ ಉರಿ, ಕೈಕಾಲು ಬಚ್ಚಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಟಿ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟಿದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿಯಾವತ್ತುರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅಮೋಗ—ರಕ್ತಶುದ್ಧಿ, ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ತುಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ನೆಸಿಫೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕವಾಗುವದು. 8 ಔನ್ಸಿಗೆ ರೂ. 3-8.

☞ ಇನ್ನು ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[11] **ಮಲೇರಿಯೂನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨-೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨-೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] ವಜ್ರಾಂಗಸುಂದರಪಾಕ [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂತ, ನಡ ಬೆನ್ನುನೋವು, ನಿದ್ದೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೇತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸೆ ಅದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಶೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಸ್ಪಟ್ಟಿಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತೆ ತುತ್ತುವವೋ. ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿನಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
49 ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[17] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೮ ಆಣೆ
पंडित श्रीकाशिनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೨—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಬಹುಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[18] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪಟುಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಶೋ ಲೋಕಮ್ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರದೇಶದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಅಕ್ಟೋಬರ್ ೧೯೩೨ [ಸಂಚಿಕೆ ೨೫

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಧೀಮತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರಕ್ಷಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಜ್ಜೆಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	**೧೨ ಆಣೆ.**
ಮರಾಠಿ ಭಾಷಣ	**೮ ಆಣೆ.**
ತೆಲುಗು ಭಾಷಣ	**೮ ಆಣೆ.**
ಇಂಗ್ಲಿಷ್ ಭಾಷಣ	**೧೨ ಆಣೆ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಂದೋಲಿಕೋತ್ಸವ, ತಡೋಳಗಿ.

ಪಾಯಗಾ ಇಲಾಖಾ ರಾಜೇಶ್ವರ ತಾಲೂಕ ತಡೋಳಗಿ ಸಿದ್ಧರಾಮಯ್ಯನವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಭಾದ್ರಪದ ಶು|| ೧೩ ಸೋಮವಾರ ದಿವಸ 12 ರಿಂದ 8 ರ ವರೆಗೆ ಗಣಾರಾಧನೆಯು ನಡೆಯಿತು. ಅನಂತರ ಸಾಯಂಕಾಲ 12 ರ ವರೆಗೆ ಆಚಾರ್ಯರ ಫೋಟೋವನ್ನು ಅಂದೋಲಿಕೆಯಲ್ಲಿರಿಸಿ ಪುರದ ಮುಖ್ಯ ಬೀದಿಗಳಲ್ಲಿ ಸಮಸ್ತಬಿರುದಾವಳಿಗಳಿಂದಲೂ, ನಾನಾ ವಾದ್ಯಗಳಿಂದಲೂ ಉತ್ಸವವು ಹೊರಟಿತು. ಪ್ರತಿಯೊಂದು ಬೀದಿಯೂ ತಳಿರುತೋರಣಗಳಿಂದಲಂಕರಿಸಲ್ಪಟ್ಟಿದ್ದಿತು. ಈ ಗ್ರಾಮದ ಭಜನಾಸಂಘದವರು ಮತ್ತು ಬಿರುಗಿ ಗುರುಲಿಂಗಪ್ಪ, ಮುಲ್ಲಗೇ ಶಿವಪ್ಪ, ಮೊದಲಾದ ಮುಖಂಡರು ತಮ್ಮ ಗ್ರಾಮದ ಭಜನಾಸಂಘದವರೊಡನೆ ಮಹೋತ್ಸವಕ್ಕೆ ಬಂದಿದ್ದರು. ಉತ್ಸವವು ಪೂರೈಸಿ ಭಜನಾಮಂದಿರವನ್ನು ತಲ್ಪಿತು. ಆಚಾರ್ಯಮೂರ್ತಿಯನ್ನು ಪೀಠದ ಮೇಲೆ ಅಲಂಕರಿಸಿದ ಬಳಿಕ ಸದರಿ ಮಠದ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ರಾ|| ಮಾರುತಪ್ಪ ನಂದಿ, ಇವರು ಗುರುಭಕ್ತಿಯಮೇಲೂ ಮ|| ಶಿವಣಸಿದ್ದಪ್ಪ ಬಿರೇದಾರ ಇವರು ವೀರಶೈವಮತದ ಉತ್ಕೃಷ್ಟತೆಯಮೇಲೂ, ರಾ|| ಶಿವಪ್ಪ ಕುರುಬರ ಇವರು ಭಜನಾಸಂಘದ ಪರವಾಗಿಯೂ ಭಾಷಣಮಾಡಿದರು. ಗ್ರಾಮದ ಮುಖಂಡರಾದ ಬಂಡಪ್ಪ, ಮಾಲಿಗೌಡರು, ಗುರಪ್ಪಾ ಬಿರೇದಾರ, ಮದೇಪ್ಪಾ ಬಿರೇದಾರ, ಗಿರಮಲ್ಲಪ್ಪಾ ಬಿರೇದಾರ, ನಾಗಪ್ಪಾ ನಂದಿ, ವೀರಪ್ಪಾ ಹುಲಸೂರ, ವೀರಭದ್ರಪ್ಪಾ ಬುರೇ, ಮಹಾದೇವಪ್ಪಾ ಮಾಳಿ, ಫಕೀರಪ್ಪಾ ಪಟೇಳ, ಅಪ್ಪಣ್ಣಪ್ಪಾ ಮುಳೆದಾಸಿ ಇವರುಗಳು ಈ ಗುರುಮಹೋತ್ಸವಕ್ಕೆ ವಿಶೇಷ ಧನಸಹಾಯಮಾಡಿದ್ದಲ್ಲದೆ ದೇಹಶ್ರಮವಹಿಸಿ ಗುರುಸೇವೆಯಲ್ಲಿ ಭಾಗಿಗಳಾಗಿದ್ದುದರಿಂದ ಉತ್ಸವಕಾರ್ಯವು ಸಾಂಗವಾಗಿ ನಡೆಯಿತು. ಜಯಘೋಷದೊಡನೆ ಗುರುಗಳಿಗೆ ಮಂಗಲಮಾಡಲ್ಪಟ್ಟು ಪ್ರಸಾದವು ಹಂಚಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು. ಇದೇ ಪ್ರಕಾರ ವೀರಶೈವರು ಗುರುಭಕ್ತಿಯಿಂದ ಸೇವೆಮಾಡುತ್ತ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ,

ಮಾರುತಿ ಮಹಾದೇವಪ್ಪ, ಬಿರೇದಾರ,

ಸ್ವದೇಶೀಯ ಮಹತ್ತ್ವ.

ಶ್ರೀ|| ಸಿ. ರಾಜಗೋಪಾಲಾಚಾರ್ಯರ ಲೇಖನ.

"'ಸ್ವದೇಶಿ'ಯೆಂಬ ಶಬ್ದಕ್ಕೆ ಇತರ ದೇಶಗಳನ್ನು ದ್ವೇಷಿಸಬೇಕೆಂದು ಅರ್ಥವಲ್ಲ. ಯಾವ ಮನುಷ್ಯನಾಗಲೀ ಸದಾ ಕಾಲದಲ್ಲಿಯೂ ಸಾಲಮಾಡುತ್ತಿರುವುದು ಅಥವಾ ಇತರರ ಪದಾರ್ಥಗಳನ್ನೇ ಉಪಯೋಗಿಸುತ್ತಿರುವುದು ಹೇಗೆ ನ್ಯಾಯವಲ್ಲವೋ ಹಾಗೆಯೇ ಒಂದು ದೇಶವು ತನಗೆ ಬೇಕಾದ ಮತ್ತು ತಾನೇ ತಯಾರಿಸಬಹುದಾದ ಪದಾರ್ಥಗಳಿಗಾಗಿ ಇತರ ದೇಶಗಳ ಕೈಗಾರಿಕೆಗಳ ಮೇಲೆ ಅವಲಂಬಿಸಿಕೊಂಡಿರುವುದು ನ್ಯಾಯವಲ್ಲ. ನಮ್ಮ ದೇಶದಲ್ಲಿ ಬೇಕಾದಷ್ಟು ಬೆಲ್ಲವು ಉತ್ಪತ್ತಿಯಾಗುತ್ತಿದ್ದು ನಾವು ಅದನ್ನು ಸಕ್ಕರೆಯನ್ನಾಗಿ ಮಾಡಿ ಉಪಯೋಗಿಸಬಹುದಾದರೂ ನಾವು ಪ್ರತಿವರ್ಷವೂ ಪರದೇಶಗಳಿಂದ 15 ಕೋಟಿ ರೂಪಾಯಿಗಳ ಬೆಲೆಬಾಳುವ ಸಕ್ಕರೆಯನ್ನು ತರಿಸುತ್ತೇವೆ.

ನಮ್ಮ ಹಿಂದೂಸ್ಥಾನದಲ್ಲಿ ದೊರೆಯುವ ಆಹಾರ ಪದಾರ್ಥಗಳಿಂದಲೂ ನಮ್ಮ ಹಸುಗಳ ಹಾಲಿನಿಂದಲೂ, ಹಾಗೂ ನಮ್ಮ ಮನೆಗಳಲ್ಲಿಯೂ ಮತ್ತು ಹೊಟೇಲುಗಳಲ್ಲಿಯೂ ತಯಾರಾಗುವ ಊಟದ ಪದಾರ್ಥಗಳಿಂದಲೂ ನಾವು ತೃಪ್ತರಾಗದೆ, ಪರದೇಶಗಳಿಂದ ಗೋಧಿಯ ಹಿಟ್ಟನ್ನೂ, ಬಿಸ್ಕತ್ತುಗಳನ್ನೂ ಇಂಗಿಸಿದ ಹಾಲನ್ನೂ, ಬೆಣ್ಣೆಯನ್ನೂ, ಮಕ್ಕಳಿಗೆ ಬೇಕಾದ ಹಾಲಿನ ಸಾಮಗ್ರಿಗಳನ್ನೂ, ಚಾಕೊಲೆಟ್‌ಗಳನ್ನೂ, ಹಣ್ಣುಗಳೇ ಮೊದಲಾದ ಇನ್ನೂ ಅನೇಕ ಪದಾರ್ಥಗಳನ್ನೂ ಪರದೇಶಗಳಿಂದ ತರಿಸುತ್ತೇವೆ. 1931 ನೇ ಇಸವಿಯಲ್ಲಿ ಈ ಪದಾರ್ಥಗಳಿಗಾಗಿ 9 ಕೋಟಿ ರೂ. ಗಳನ್ನು ಕೊಟ್ಟೆವು. ಆದರೆ ಅದೇ 1928 ನೇ ಇಸವಿಯಲ್ಲಿ 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು.

ನಮ್ಮಲ್ಲಿ ಉತ್ತಮತರಹ ಅನೇಕನಮೂನೆ ಸಾಬೂನುಗಳು ತಯಾರಾಗುತ್ತಿದ್ದರೂ, ಇನ್ನೂ ನಾವು ಅವುಗಳಿಗಾಗಿ ಪರದೇಶದವರಿಗೆ ವರ್ಷ 1 ಕ್ಕೆ 1½ ಕೋಟಿ ರೂಪಾಯಿಗಳನ್ನು ಕೊಡುತ್ತಿರುವೆವು. 1931 ನೆಯ ಇಸವಿಯಲ್ಲಿ ಇವುಗಳಿಗೆ 50 ಲಕ್ಷ ರೂಪಾಯಿಗಳನ್ನು ಕಡಿಮೆಯಾಗಿ ಕೊಟ್ಟೆವು. ಆದರೆ ಇನ್ನೂ ನಾವು ಒಂದು ಕೋಟಿಗೆ ಮೇಲ್ಪಟ್ಟು ಕೊಡುತ್ತಿರುವೆವು. ನಾವು ಉಪ್ಪನ್ನು ಪರದೇಶಗಳಿಂದ ತರಿಸುವೆವೆಂಬದನ್ನೂ, ಅದಕ್ಕಾಗಿ ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಕೊಡುವೆವೆಂಬುದನ್ನೂ ಅನೇಕರು ಅರಿಯರು. ಸಿಗರೇಟು ಮೊದಲಾದ ಪದಾರ್ಥಗಳಿಗೆ ಪೂರ್ವದಲ್ಲಿ ವರ್ಷಕ್ಕೆ 3 ಕೋಟಿ ರೂಪಾಯಿಗಳ ವರೆಗೂ ಕೊಡುತ್ತಿದ್ದೆವು. 1931 ರಲ್ಲಿ 1½ ಕೋಟಿ ರೂ. ಗಳನ್ನು ಮಾತ್ರಕೊಟ್ಟೆವು. ಆದರೆ ಇದೂ ಬಹಳ ಜಾಸ್ತಿಯಾಗಿರುವುದು. ಕತ್ತರಿ, ಚಾಕು ಮೊದಲಾದ ಪದಾರ್ಥಗಳಿಗೆ ನಾವು ಇನ್ನೂ 26 ಲಕ್ಷ ರೂಪಾಯಿಗಳನ್ನು ಕೊಡುತ್ತಿರುವೆವು. ಪೋರ್ಸಿಲೇನ್ ಬಟ್ಟಲು ಮತ್ತು ತಟ್ಟೆಗಳಿಗೆ ಪೂರ್ವದಲ್ಲಿ 80 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೆವು. ಮತ್ತು 1931 ರಲ್ಲಿ 48 ಲಕ್ಷ ರೂಪಾಯಿಗಳನ್ನು ಕೊಟ್ಟೆವು. ಗಾಜಿನ ಸಾಮಾನುಗಳಿಗೆ ಸುಮಾರು 2 ಕೋಟಿ ರೂಪಾಯಿಗಳನ್ನು ಕೊಡುವೆವು. ಪೂರ್ವದಲ್ಲಿ ಉಣ್ಣೆಯ ಬಟ್ಟೆಗಳಿಗೆ 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿಕೊಡುತ್ತಿದ್ದೆವು. ಆದರೆ 1931 ರಲ್ಲಿ ಇದು 2½ ಕೋಟಿ ರೂಪಾಯಿಗಳಿಗೆ ತಗ್ಗಿತು.

1927 ರಲ್ಲಿ 65 ಕೋಟಿ ರೂಪಾಯಿಗಳ ಬೆಲೆಯುಳ್ಳ ಹತ್ತಿಯ ನೂಲನ್ನೂ ಬಟ್ಟೆಗಳನ್ನೂ ಪರದೇಶಗಳಿಂದ ತರಿಸಿಕೊಂಡೆವು. ಆದರೆ ರಾಷ್ಟ್ರೀಯ ಚಳವಳಿಯ ಪ್ರಭಾವದಿಂದಲೂ, ಹಿಂದೂಸ್ಥಾನದ ಗಿರಣಿಗಳ ಮತ್ತು ಕೈಮಗ್ಗಗಳ ಪ್ರಯತ್ನ ವಿಶೇಷದಿಂದಲೂ, 1931 ರಲ್ಲಿ ಈ ಪ್ರವಾಹವು 25 ಕೋಟಿಗಳಿಗೆ ಇಳಿಸಲ್ಪಟ್ಟಿತು." "ಸಂಡೇ ಟೈಂಸ್"

ಸ್ವೀಕಾರ

ಅರಸೀಕೆರೆ ತಾ|| ಮಾಡಾಳುಗ್ರಾಮದ ಮ|| ರಾ|| ಸಿದ್ದಪ್ಪಶೆಟ್ಟರ ಮಕ್ಕಳು ಮರುಳಶೆಟ್ಟರು ಅರಸೀಕೆರೆಯಲ್ಲಿ ಕೊಬ್ಬರಿಕಾಯಿ ಮಂಡಿಯನ್ನು ಪ್ರಾರಂಭಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಕೊಪ್ಪಳಜಿಲ್ಲಾ ಉಪ್ಪಿನ ಬೆಟಗೇರಿಗ್ರಾಮನಿವಾಸಿಗಳಾದ ಮ||ರಾ|| ಬಳ್ಳೊಳ್ಳಿ ಮುದುಕಪ್ಪನವರು ತಮ್ಮ ಗ್ರಾಮದಲ್ಲಿರುವ ಶ್ರೀ ವಿರೂಪಾಕ್ಷೇಶ್ವರನಿಗೆ ರುದ್ರಾಭಿಷೇಕವನ್ನೂ ಸಹಸ್ರಬಿಲ್ವಾರ್ಚನಾದಿಗಳನ್ನೂ ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಬನ್ನಿಕೊಪ್ಪ ಹಿರೇಮಠದ ಅಮರನಾಥಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಪಾಯಗಾ ಇಲಾಖಾ ರಾಜೇಸೂರುಗ್ರಾಮದಲ್ಲಿ ನೆರವೇರಿದ ಪುರಾಣಸಮಾಪ್ತಿ ಸಮಾರಂಭ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಸಿದ್ಧರಾಮಯ್ಯನವರು ಭಂಗಿ ಹುಮನಾಬಾದ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಬಂಧಸ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬಿಳಿ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬಿಳಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬಿಳಿ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬಿಳಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬಿಳಿ ೧ಕ್ಕೆ	೦—೦—೬
ಸಮ್ಮೇಳನ ಕಾಲೋಚಿತಮಾಡಿದಂತಹ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬಿಳಿ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬಿಳಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಬೆಳ್ಳಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಇತರ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[18] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾ ಪಾಲಿಪ್ಸ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಅಕ್ಟೋಬರ್ ೧೯೩೨ [ಸಂಚಿಕೆ ೨೫

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರುಕೂಡ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಆಂದೋಲಿಕೋತ್ಸವ, ತಡೋಳಗಿ.

ಪಾಯಗಾ ಇಲಾಖಾ ರಾಜೇಶ್ವರ ತಾಲೂಕ ತಡೋಳಗಿ ಸಿದ್ಧರಾಮಯ್ಯನವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಭಾದ್ರಪದ ಶು|| ೧೩ ಸೋಮವಾರ ದಿವಸ 12 ರಿಂದ 8 ರ ವರೆಗೆ ಗಣಾರಾಧನೆಯು ನಡೆಯಿತು. ಅನಂತರ ಸಾಯಂಕಾಲ 12 ರ ವರೆಗೆ ಆಚಾರ್ಯರ ಫೋಟೋವನ್ನು ಆಂದೋಲಿಕೆಯಲ್ಲಿರಿಸಿ ಪುರದಮುಖ್ಯ ಬೀದಿಗಳಲ್ಲಿ ಸಮಸ್ತಬಿರುದಾವಳಿಗಳಿಂದಲೂ, ನಾನಾ ವಾದ್ಯಗಳಿಂದಲೂ ಉತ್ಸವವು ಹೊರಟಿತು. ಪ್ರತಿಯೊಂದು ಬೀದಿಯೂ ತಳಿರುತೋರಣಗಳಿಂದಲಂಕರಿಸಲ್ಪಟ್ಟಿದ್ದಿತು. ಈ ಗ್ರಾಮದ ಭಜನಾಸಂಘದವರು ಮತ್ತು ಬಿರಗುಡಿ ಗುರುಲಿಂಗಪ್ಪ, ಮುಲ್ಲಗೀ ಶಿವಪ್ಪ, ಮೊದಲಾದ ಮುಖಂಡರು ತಮ್ಮ ಗ್ರಾಮದ ಭಜನಾಸಂಘದವರೊಡನೆ ಮಹೋತ್ಸವಕ್ಕೆ ಬಂದಿದ್ದರು. ಉತ್ಸವವು ಪೂರೈಸಿ ಭಜನಾಮಂದಿರವನ್ನು ತಲ್ಪಿತು. ಆಚಾರ್ಯಮೂರ್ತಿಯನ್ನು ಪೀಠದ ಮೇಲೆ ಅಲಂಕರಿಸಿದ ಬಳಿಕ ಸದರಿ ಮಠದ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ರಾ|| ಮಾರುತಪ್ಪ ನಂದಿ, ಇವರು ಗುರುಭಕ್ತಿಯಮೇಲೂ ಮ|| ರೇವಣಸಿದ್ಧಪ್ಪ ಬಿರೇದಾರ ಇವರು ವೀರಶೈವಮತದ ಉತ್ಕೃಷ್ಟತೆಯಮೇಲೂ, ರಾ|| ಶಿವಪ್ಪ ಕುರುಬರ ಇವರು ಭಜನಾಸಂಘದ ಪರವಾಗಿಯೂ ಭಾಷಣಮಾಡಿದರು. ಗ್ರಾಮದ ಮುಖಂಡರಾದ ಬಂಡಪ್ಪ, ಮಾಲಿಗೌಡರು, ಗುರಪ್ಪಾ ಬಿರೇದಾರ, ಮದೇಪ್ಪಾ ಬಿರೇದಾರ, ಗಿರಮಲ್ಲಪ್ಪಾ ಬಿರೇದಾರ, ನಾಗಪ್ಪಾ ನಂದಿ, ವೀರಪ್ಪಾ ಹುಲಸೂರ, ವೀರಭದ್ರಪ್ಪಾ ಬುರೀ, ಮಹಾದೇವಪ್ಪಾ ಮಾಳಿ, ಫಕೀರಪ್ಪಾ ಪಟೀಲ, ಅಪ್ಪಣ್ಣಪ್ಪಾ ಮುಳೆದಾಸಿ ಇವರುಗಳು ಈ ಗುರುಮಹೋತ್ಸವಕ್ಕೆ ವಿಶೇಷ ಧನಸಹಾಯಮಾಡಿದ್ದುದಲ್ಲದೆ ದೇಹತ್ರಮವಹಿಸಿ ಗುರುಸೇವೆಯಲ್ಲಿ ಭಾಗಿಗಳಾಗಿದ್ದುದರಿಂದ ಉತ್ಸವಕಾರ್ಯವು ಸಾಂಗವಾಗಿ ನಡೆಯಿತು. ಜಯಘೋಷದೊಡನೆ ಗುರುಗಳಿಗೆ ಮಂಗಲಮಾಡಲ್ಪಟ್ಟು, ಪ್ರಸಾದವು ಹಂಚಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು. ಇದೇ ಪ್ರಕಾರ ವೀರಶೈವರು ಗುರುಭಕ್ತಿಯಿಂದ ಸೇವೆಮಾಡುತ್ತ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ,

ಮಾರುತಿ ಮಹಾದೇವಪ್ಪ, ಬಿರೇದಾರ.

ಸ್ವದೇಶೀಯ ಮಹತ್ವ.

ಶ್ರೀ|| ಸಿ. ರಾಜಗೋಪಾಲಾಚಾರ್ಯರ ಲೇಖನ.

"'ಸ್ವದೇಶಿ'ಯೆಂಬ ಶಬ್ದಕ್ಕೆ ಇತರ ದೇಶಗಳನ್ನು ದ್ವೇಷಿಸಬೇಕೆಂದು ಅರ್ಥವಲ್ಲ. ಯಾವ ಮನುಷ್ಯನಾಗಲೀ ಸದಾ ಕಾಲದಲ್ಲಿಯೂ ಸಾಲಮಾಡುತ್ತಿರುವುದು ಅಥವಾ ಇತರರ ಪದಾರ್ಥಗಳನ್ನೇ ಉಪಯೋಗಿಸುತ್ತಿರುವುದು ಹೇಗೆ ನ್ಯಾಯವಲ್ಲವೋ ಹಾಗೆಯೇ ಒಂದು ದೇಶವು ತನಗೆ ಬೇಕಾದ ಮತ್ತು ತಾನೇ ತಯಾರಿಸಬಹುದಾದ ಪದಾರ್ಥಗಳಿಗಾಗಿ ಇತರ ದೇಶಗಳ ಕೈಗಾರಿಕೆಗಳ ಮೇಲೆ ಅವಲಂಬಿಸಿಕೊಂಡಿರುವುದು ನ್ಯಾಯವಲ್ಲ. ನಮ್ಮ ದೇಶದಲ್ಲಿ ಬೇಕಾದಷ್ಟು ಬೆಲ್ಲವು ಉತ್ಪತ್ತಿಯಾಗುತ್ತಿದ್ದು ನಾವು ಅದನ್ನು ಸಕ್ಕರೆಯನ್ನಾಗಿ ಮಾಡಿ ಉಪಯೋಗಿಸಬಹುದಾದರೂ ನಾವು ಪ್ರತಿವರ್ಷವೂ ಪರದೇಶಗಳಿಂದ 15 ಕೋಟಿ ರೂಪಾಯಿಗಳ ಬೆಲೆಬಾಳುವ ಸಕ್ಕರೆಯನ್ನು ತರಿಸುತ್ತೇವೆ.

ನಮ್ಮ ಹಿಂದೂಸ್ಥಾನದಲ್ಲಿ ದೊರೆಯುವ ಆಹಾರ ಪದಾರ್ಥಗಳಿಂದಲೂ ನಮ್ಮ ಹಸುಗಳ ಹಾಲಿನಿಂದಲೂ, ಹಾಗೂ ನಮ್ಮ ಮನೆಗಳಲ್ಲಿಯೂ ಮತ್ತು ಹೊಟೇಲುಗಳಲ್ಲಿಯೂ ತಯಾರಾಗುವ ಊಟದ ಪದಾರ್ಥಗಳಿಂದಲೂ ನಾವು ತೃಪ್ತರಾಗದೆ, ಪರದೇಶಗಳಿಂದ ಗೋಧಿಯ ಹಿಟ್ಟನ್ನೂ, ಬಿಸ್ಕತ್ತುಗಳನ್ನೂ ಇಂಗಿಸಿದ ಹಾಲನ್ನೂ, ಬೆಣ್ಣೆಯನ್ನೂ, ಮಕ್ಕಳಿಗೆ ಬೇಕಾದ ಹಾಲಿನ ಸಾಮುಗ್ರಿಗಳನ್ನೂ, ಚಾಕೋಲೆಟ್‌ಗಳನ್ನೂ, ಹಣ್ಣುಗಳೇ ಮೊದಲಾದ ಇನ್ನೂ ಅನೇಕ ಪದಾರ್ಥಗಳನ್ನೂ ಪರದೇಶಗಳಿಂದ ತರಿಸುತ್ತೇವೆ. 1931 ನೇ ಇಸವಿಯಲ್ಲಿ ಈ ಪದಾರ್ಥಗಳಿಗಾಗಿ 9 ಕೋಟಿ ರೂ. ಗಳನ್ನು ಕೊಟ್ಟೆವು. ಆದರೆ ಅದೇ 1928 ನೇ ಇಸವಿಯಲ್ಲಿ 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು.

ನಮ್ಮಲ್ಲಿ ಉತ್ತಮತರಹ ಅನೇಕನಮೂನೆ ಸಾಬೂನುಗಳು ತಯಾರಾಗುತ್ತಿದ್ದರೂ, ಇನ್ನೂ ನಾವು ಅವುಗಳಿಗಾಗಿ ಪರದೇಶದವರಿಗೆ ವರ್ಷ 1 ಕ್ಕೆ 1½ ಕೋಟಿ ರೂಪಾಯಿಗಳನ್ನು ಕೊಡುತ್ತಿರುವೆವು. 1931 ನೆಯ ಇಸವಿಯಲ್ಲಿ ಇವುಗಳಿಗೆ 50 ಲಕ್ಷ ರೂಪಾಯಿಗಳನ್ನು ಕಡಿಮೆಯಾಗಿ ಕೊಟ್ಟೆವು. ಆದರೆ ಇನ್ನೂ ನಾವು ಒಂದು ಕೋಟಿಗೆ ಮೇಲ್ಪಟ್ಟು ಕೊಡುತ್ತಿರುವೆವು. ನಾವು ಉಪ್ಪನ್ನು ಪರದೇಶಗಳಿಂದ ತರಿಸುವೆವೆಂಬದನ್ನೂ, ಅದಕ್ಕಾಗಿ ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಕೊಡುವೆವೆಂಬುದನ್ನೂ ಅನೇಕರು ಅರಿಯರು. ಸಿಗರೇಟು ಮೊದಲಾದ ಪದಾರ್ಥಗಳಿಗೆ ಪೂರ್ವದಲ್ಲಿ ವರ್ಷಕ್ಕೆ 3 ಕೋಟಿ ರೂಪಾಯಿಗಳವರೆಗೂ ಕೊಡುತ್ತಿದ್ದೆವು. 1931 ರಲ್ಲಿ 1½ ಕೋಟಿ ರೂ. ಗಳನ್ನು ಮಾತ್ರಕೊಟ್ಟೆವು. ಆದರೆ ಇದೂ ಬಹಳ ಜಾಸ್ತಿಯಾಗಿರುವುದು. ಕತ್ತರಿ, ಚಾಕು ಮೊದಲಾದ ಪದಾರ್ಥಗಳಿಗೆ ನಾವು ಇನ್ನೂ 26 ಲಕ್ಷ ರೂಪಾಯಿಗಳನ್ನು ಕೊಡುತ್ತಿರುವೆವು. ಪೋರ್ಸಿಲೇನ್ ಬಟ್ಟಲು ಮತ್ತು ತಟ್ಟೆಗಳಿಗೆ ಪೂರ್ವದಲ್ಲಿ 80 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೆವು. ಮತ್ತು 1931 ರಲ್ಲಿ 48 ಲಕ್ಷ ರೂಪಾಯಿಗಳನ್ನು ಕೊಟ್ಟೆವು. ಗಾಜಿನ ಸಾಮಾನುಗಳಿಗೆ ಸುಮಾರು ೫ ಕೋಟಿ ರೂಪಾಯಿಗಳನ್ನು ಕೊಡುವೆವು. ಪೂರ್ವದಲ್ಲಿ ಉಣ್ಣೆಯ ಬಟ್ಟೆಗಳಿಗೆ 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿಕೊಡುತ್ತಿದ್ದೆವು. ಆದರೆ 1931 ರಲ್ಲಿ ಇದು 2½ ಕೋಟಿ ರೂಪಾಯಿಗಳಿಗೆ ತಗ್ಗಿತು.

1927 ರಲ್ಲಿ 65 ಕೋಟಿ ರೂಪಾಯಿಗಳ ಬೆಲೆಯುಳ್ಳ ಹತ್ತಿಯ ನೂಲನ್ನೂ ಬಟ್ಟೆಗಳನ್ನೂ ಪರದೇಶಗಳಿಂದ ತರಿಸಿಕೊಂಡೆವು. ಆದರೆ ರಾಷ್ಟ್ರೀಯ ಚಳವಳಿಯ ಪ್ರಭಾವದಿಂದಲೂ, ಹಿಂದೂಸ್ಥಾನದ ಗಿರಣಿಗಳ ಮತ್ತು ಕೈಮಗ್ಗಗಳ ಪ್ರಯತ್ನ ವಿಶೇಷದಿಂದಲೂ, 1931 ರಲ್ಲಿ ಈ ಪ್ರವಾಹವು 25 ಕೋಟಿಗಳಿಗೆ ಇಳಿಸಲ್ಪಟ್ಟಿತು."

"ಸಂಡೇ ಟೈಂಸ್"

ಸ್ವೀಕಾರ

ಅರಸೀಕೆರಿ ತಾ|| ಮಾಡಾಳುಗ್ರಾಮದ ಮ|| ರಾ|| ಸಿದ್ಧಪ್ಪಶೆಟ್ಟರ ಮಕ್ಕಳು ಮರುಳಶೆಟ್ಟರು ಅರಸೀಕೆರಿಯಲ್ಲಿ ಕೊಬ್ಬರಿಕಾಯಿ ಮಂಡಿಯನ್ನು ಪ್ರಾರಂಭಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **5** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಕೊಪ್ಪಳಜಿಲ್ಲಾ ಉಪ್ಪಿನ ಬೆಟಗೇರಿಗ್ರಾಮನಿವಾಸಿಗಳಾದ ಮ||ರಾ|| ಬಳ್ಳೊಳ್ಳಿ ಮುದುಕಪ್ಪನವರು ತಮ್ಮ ಗ್ರಾಮದಲ್ಲಿರುವ ಶ್ರೀ ವಿರೂಪಾಕ್ಷೇಶ್ವರನಿಗೆ ರುದ್ರಾಭಿಷೇಕವನ್ನೂ ಸಹಸ್ರಬಿಲ್ವಾರ್ಚನಾದಿಗಳನ್ನೂ ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ವೇ|| ಬನ್ನಿಕೊಪ್ಪ ಹಿರೇಮಠದ ಅಮರನಾಥಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಪಾಯಗಾ ಇಲಾಖಾ ರಾಜೇಸೂರುಗ್ರಾಮದಲ್ಲಿ ನೆರವೇರಿದ ಪುರಾಣಸಮಾಪ್ತಿ ಸಮಾರಂಭ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ವೇ|| ಸಿದ್ಧರಾಮಯ್ಯನವರು ಭಂಗಿ ಹುಮನಾಬಾದ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ದಸರಾ ಅಧಿವೇಶನದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರ ಭಾಷಣ.

[ಕಳೆದ ವಾರದ ಶೇಷ]

ಬೆಂಗಳೂರು ದಂಡಿನ ವಿಚಾರ.

ಬೆಂಗಳೂರು ದಂಡಿನ ಪ್ರದೇಶವೆಂಬ ಹೆಸರಿಂದಲೇ ವ್ಯಕ್ತವಾಗುವಂತೆ ಈ ಪ್ರದೇಶದ ಆಡಳಿತವು ಸಂಸ್ಥಾನಕ್ಕೆ ಸೇರದಿರುವುದು ಅನ್ಯಾಯವೆಂಬುದನ್ನು ಸಮಿತಿಯವರು ಅಪೇಕ್ಷಿಸಿಲ್ಲ. ಆದಾಗ್ಯೂ ಸಮಿತಿಯವರು ಬೆಂಗಳೂರು ದಂಡಿನ ಪ್ರದೇಶದ ವಿಷಯದಲ್ಲಿ ಯಾವ ನಿರ್ದಿಷ್ಟವಾದ ಸಲಹೆಗಳನ್ನೂ ಕೊಟ್ಟಿಲ್ಲ. ಈ ಪ್ರದೇಶದ ಒಂದು ಭಾಗವನ್ನಾದರೂ ಸಂಸ್ಥಾನಕ್ಕೇ ಹಿಂದಕ್ಕೆ ಪಡೆಯುವುದು ನ್ಯಾಯವಲ್ಲವೇ ಎಂಬ ವಿಚಾರದಲ್ಲಿ ಸಮಿತಿಯವರು ಏನೊಂದನ್ನೂ ನಿರ್ಧಾರವಾಗಿ ಅಭಿಪ್ರಾಯಪಡಿಸಿ ಹೇಳದೆ ಹಾಗೆಯೇ ಸೂಚಿಸಿ ಸುಮ್ಮನಾಗಿದ್ದಾರೆ. ಈ ವಿಚಾರದಲ್ಲಿ ಯಾವುದೇ ತೀರ್ಮಾನವಾಗುವುದಾದರೂ (ಮಿಲಿಟರಿ ಪ್ರದೇಶಗಳೂ ಸೇರಿ) ಬೆಂಗಳೂರು ದಂಡಿನ ಒಟ್ಟು ಪ್ರದೇಶದ ವಿಚಾರದಲ್ಲಿಯೂ ನಮ್ಮ ಸಂಸ್ಥಾನದವರು ಆಯವ್ಯಯಗಳ ಆಡಳಿತದ ಅಧಿಕಾರವನ್ನು ಚಲಾಯಿಸುವುದರಲ್ಲಿ ವಸ್ತುಶಃ ಯಾವ ಅಭ್ಯಂತರವೂ ಇಲ್ಲದೆ ಆ ರೀತಿ ನಡೆಯಬೇಕೆಂಬುದು ಸಮಿತಿಯವರ ಅಭಿಪ್ರಾಯವಾಗಿದೆ. ಆದರೆ ಮ್ಯುನಿಸಿಪಲ್ ಹುಟ್ಟುವಳಿಗಳಿಗೆ ತಕ್ಕಂತೆ "ಗ್ರ್ಯಾಂಟ್-ಇನ್-ಏಯ್ಡ್" ಸಹಾಯ ದ್ರವ್ಯವನ್ನು ಸೇರಿಸಿಕೊಡಬೇಕೆಂಬ ಷರತ್ತಿಗೆ ಒಳಪಡಿಸಿ ಸಮಿತಿಯವರು ಈ ಸಲಹೆಯನ್ನು ಮಾಡಿದ್ದಾರೆ. ಆಯವ್ಯಯಗಳ ಆಡಳಿತದ ಅಧಿಕಾರವೆಂದರೆ ಅದರ ಜೊತೆಯಲ್ಲಿ ಸ್ವಲ್ಪಮಟ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯು ಇದ್ದೇ ತೀರಬೇಕು. ಆದರೆ ಈ ರೀತಿ ಅವಶ್ಯಕವಾಗುವ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಸಂಸ್ಥಾನದವರು ಹೇಗೆ ಚಲಾಯಿಸಬೇಕೆಂಬುದನ್ನು ಮಾತ್ರ ಸಮಿತಿಯವರು ಸೂಚಿಸಿಲ್ಲ.

ಈ ವಿಚಾರವನ್ನು ಒಂದು ಸುಲಭವಾದ ಮತ್ತು ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದಾಗಿದೆ. ಬೆಂಗಳೂರು ದಂಡಿನ ಪ್ರದೇಶದಲ್ಲಿ ಮಿಲಿಟರಿ ಉದ್ದೇಶಗಳಿಗೇ ಅವಶ್ಯವಾಗಿ ಬೇಕಾಗಿರುವ ಭಾಗವನ್ನೇ ಬೇರೆಮಾಡಿ ಆ ಭಾಗವನ್ನು "ಕಂಟೋನ್ಮೆಂಟ್" ಎಂಬ ಮಿಲಿಟರಿ ಪ್ರದೇಶವನ್ನಾಗಿ ಏರ್ಪಡಿಸಬಹುದು; ಬ್ರಿಟಿಷ್ ಇಂಡಿಯಾದ ಕಂಟೋನ್ಮೆಂಟ್ ಪ್ರದೇಶದ ಆಡಳಿತವನ್ನು ನಡೆಯಿಸುವ ರೀತಿಯಲ್ಲಿಯೇ ಈ ಪ್ರದೇಶದ ಆಡಳಿತವನ್ನೂ ನಡೆಯಿಸಬಹುದು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿನ ಮತ್ತು ಕಾನೂನುಗಳ ಏರ್ಪಾಡು ಬ್ರಿಟಿಷ್ ಇಂಡಿಯಾ ಪ್ರಾಂತಗಳಿಗೆ ಅನ್ವಯಿಸುವ ರೀತಿಯಲ್ಲೇ ನಮ್ಮ ಸಂಸ್ಥಾನಕ್ಕೂ ಸಹ ಸಂಯುಕ್ತ ವ್ಯವಸ್ಥೆಗೆ ಸಂಬಂಧಪಡುವ ಮಟ್ಟಿಗೆ ಸ್ವತಃ ಅನ್ವಯಿಸುತ್ತದೆ. ಈ ಏರ್ಪಾಡಿನಿಂದ ಚಕ್ರವರ್ತಿ ಸಾರ್ವಭೌಮರಿಗೆ ಇರಬೇಕಾದ ಅಧಿಕಾರಗಳು ಚಕ್ರವರ್ತಿ ಸಾರ್ವಭೌಮರಿಗೂ, ಸಂಯುಕ್ತ ಸರ್ಕಾರದವರಿಗೆ ಇರಬೇಕಾದ ಅಧಿಕಾರಗಳು ಸಂಯುಕ್ತ ಸರ್ಕಾರದವರಿಗೂ ಇದ್ದೇ ಇರುವಂತಾಗುತ್ತದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿಗೆ ಸೇರಿಲ್ಲದ ವಿಚಾರಗಳಲ್ಲಿ ಮಾತ್ರ ಅವರಿಗೆ ಪ್ರತ್ಯಕ್ಷವಾಗಿ ಯಾವ ನಿಕಟವಾದ ಸಂಬಂಧವೂ ಇಲ್ಲದೆ ಇಂತಹ ವಿಚಾರಗಳಲ್ಲಿ ಸಂಸ್ಥಾನದ ಅಧಿಕಾರವೇ ಅಪ್ಯರಾದ ಅಧಿಕಾರವಾಗಿರುತ್ತದೆ. ಮೇಲೆ ಹೇಳಿದಂತೆ ಬೆಂಗಳೂರು ದಂಡಿನ ಪ್ರದೇಶದಲ್ಲಿ ಏರ್ಪಡುವ ಕಂಟೋನ್ಮೆಂಟ್ ಭಾಗದ ಆಡಳಿತವನ್ನು ಈ ರೀತಿಯಲ್ಲಿ ನಿರ್ವಹಿಸಬಹುದಾಗಿದೆ. ಹೀಗೆ ಮಾಡುವಲ್ಲಿ ಸಂಯುಕ್ತ ಸರ್ಕಾರದವರೂ ಸಂಯುಕ್ತ ಸರ್ಕಾರಕ್ಕೆ ಸೇರಿದ ಇತರ ಸರ್ಕಾರಗಳವರೂ ಯಾವ ರೀತಿಯಲ್ಲಿ ಕರ್ತವ್ಯಗಳನ್ನು ವಿಭಾಗ ಮಾಡಿಕೊಂಡು ನಿರ್ವಹಿಸಬಹುದೆಂಬ ವಿಚಾರದಲ್ಲಿ ಅಂಗೀಕೃತವಾದ ನಿಯಮಗಳಿಗನುಸಾರವಾಗಿಯೇ ಆಗ್ಗೆ ಕಂಟೋನ್ಮೆಂಟ್ ಪ್ರದೇಶದ ಆಡಳಿತವು ನಡೆಯುತ್ತದೆ. ಹೀಗೆ ಆಡಳಿತವು ನಡೆಯುವ ಏರ್ಪಾಡನ್ನು ಬಿಟ್ಟು ಯಾವ ಏರ್ಪಾಡನ್ನು ಮಾಡಿದರೂ ಏನೋ ಒಂದು ಬಗೆಯ ತೇಪೆಹಾಕಿ ಸರಿಪಡಿಸಿದಂತೆ ಅದು ನಡೆಯುವುದೇ ಹೊರತು ಅದೆಂದಿಗೂ ನ್ಯೂನತೆಗಳಿಲ್ಲದೆ ತೃಪ್ತಿಕರವಾಗಿರುವುದಿಲ್ಲ.

ಆಯವ್ಯಯಗಳ ವಿಚಾರ.

1931-32 ನೆಯ ಸಾಲಿನ ಲೆಕ್ಕಗಳು ಈಗ ಸ್ವಲ್ಪ ಹೆಚ್ಚು ಕಡಿಮೆ ಪೂರ್ತಿಯಾಗಿವೆ. ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬಂದಿರುವಂತೆಯೂ, ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಡೆಯುವುದಾಗಿ ತೋರಿದ್ದುದಕ್ಕಿಂತಲೂ ಕಡಿಮೆ ವೆಚ್ಚವು ನಡೆದಿರುವಂತೆಯೂ ಕಂಡು ಬಂದಿದೆ. ಗಂಧದ ಎಣ್ಣೆಯ ಬಾಬಿನ ಹೊರತು ಉಳಿದ ಎಲ್ಲ ಬಾಬುಗಳಲ್ಲಿಯೂ ಹುಟ್ಟುವಳಿಯು ಹೆಚ್ಚಿದೆ. ವಿಶೇಷ ಗಣನೀಯವಾಗಿ ವರಮಾನವು ಹೆಚ್ಚಿರುವಂತೆ ಕಂಡುಬಂದಿರುವ ಹುಟ್ಟುವಳಿಯ ಬಾಬುಗಳಾವುವೆಂದರೆ—ಭೂಕಂದಾಯ, ರೈಲ್ವೆಗಳು, ಎಕ್ಸೈಜು ಸ್ಟ್ಯಾಂಪುಗಳು ಮತ್ತು ವರಮಾನದ ತೆರಿಗೆ ಇವುಗಳೇ. ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು ಮತ್ತು ವಿದ್ಯಾಭ್ಯಾಸದ ಇಲಾಖೆಯ ಕಟ್ಟಡಗಳು—ಇವೆರಡೂ ವೆಚ್ಚವು ಕಡಿಮೆಯಾಗಿರುವ ಮುಖ್ಯ ಬಾಬುಗಳು.

ಈ ರೀತಿ ಹುಟ್ಟುವಳಿಯು ಹೆಚ್ಚಾಗಿ ವೆಚ್ಚವು ಕಡಿಮೆಯಾದುದರಿಂದ ದೊರೆತ ಮೊಬಲಗನ್ನು ಡಿಪ್ರಿಸಿಯೇಷನ್ ಫಂಡುಗಳೆಂಬ ನಾನಾ ಸವಕಳು ತಿಮ್ಮತ್ತು ಭರ್ತಿಯ ನಿಧಿಗಳಿಗೆ ಸಲ್ಲಿಸಬೇಕಾಗಿದ್ದ ಕಂಟ್ರಿಬ್ಯೂಷನ್ ಮೊಬಲಗುಗಳನ್ನು ಸಲ್ಲಿಸಿ ಆ ನಿಧಿಗಳಲ್ಲಿ ಉಂಟಾಗಿದ್ದ ಕೊರತೆಯನ್ನು ಪರಿಹಾರ ಮಾಡುವುದಕ್ಕಾಗಿ ವಿನಿಯೋಗಿಸಲಾಯಿತು. ಈ ನಿಧಿಗಳಿಗೆ ಒಟ್ಟು 8,93 ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಕೊಡಬೇಕಾಗಿದ್ದಿತು. 1930-31 ನೆಯ ಸಾಲಿನ ವರೆಗೂ ಈ ನಿಧಿಗಳಿಗೆ ಹಣವನ್ನು ಸಲ್ಲಿಸುತ್ತಾ ಬರಲಾಗಿದ್ದಿತು. ಆದರೆ 1931-32 ನೆಯ ಸಾಲಿನಲ್ಲಿ ಬಜೆಟ್ ಅಂದಾಜಿನಲ್ಲಿಯೂ ಮತ್ತು ತಿದ್ದುಪಾಟಾದ ಅಂದಾಜಿನಲ್ಲಿಯೂ ಸಹ ಹುಟ್ಟುವಳಿಯು ಬಹಳ ಮಟ್ಟಿಗೆ ಇಳಿದು ಹೋಗುವುದಾಗಿ ತೋರಿಬಂದಿದ್ದ ಕಾರಣ ಈ ನಿಧಿಗಳಿಗೆ ಹಣವನ್ನು ಒದಗಿಸಿರಲಿಲ್ಲ. ಹುಟ್ಟುವಳಿಯ ಬಾಬಿನಲ್ಲಿ ಅವಶ್ಯವಾಗಿ ಹೆಚ್ಚು ಹಣವು ಕಾಣುವುದನ್ನು ತಪ್ಪಿಸುವ ಉದ್ದೇಶದಿಂದ 1931-32 ನೆಯ ಸಾಲಿನ ಅಖೈರು ಲೆಕ್ಕಗಳಲ್ಲಿ ಬಾಬುಗಳನ್ನು ವಿಂಗಡಿಸುವುದರಲ್ಲಿ ಕೂಡ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. IX ಬಿ, XIII ವಿವಿಧ ಬಾಬುಗಳು XIXA ಸಂಚಾರ ಮಾರ್ಗಗಳು ಮತ್ತು 11 ಅರಮನೆಯ ಇಲಾಖೆ—ಈ ಬಾಬುಗಳಲ್ಲಿ ಭಾರಿ ವ್ಯತ್ಯಾಸಗಳು ಕಂಡು ಬಂದಿರುವುದಕ್ಕೆ ಇದೇ ಕಾರಣ.

ಈ ಕಾರಣಗಳಿಂದ ಈ ವರುಷದ ಆಯವ್ಯಯದ ಫಲಿತಾಂಶಗಳಲ್ಲಿ ಒಟ್ಟು ಹುಟ್ಟುವಳಿಯು 338.19 ಲಕ್ಷ ರೂಪಾಯಿಗಳೂ, ಒಟ್ಟು ವೆಚ್ಚವು 356.40 ಲಕ್ಷ ರೂಪಾಯಿಗಳೂ ಆಗಿರುವುದಾಗಿ ಕಂಡುಬಂದಿದೆ. ಬಜೆಟ್ಟಿನ ಮೇರೆಗೆ 378.76 ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನೂ 376.84 ಲಕ್ಷ ರೂಪಾಯಿಗಳ ವೆಚ್ಚವನ್ನೂ ನಿರೀಕ್ಷಿಸಲಾಗಿದ್ದಿತು.

ಬಂಡವಾಳದ ಬಾಬಿನಲ್ಲಿ ವಾಸ್ತವವಾಗಿ ನಡೆದಿರುವ ವೆಚ್ಚವು ತಿದ್ದುಪಾಟಾದ ಅಂದಾಜಿಗಿಂತಲೂ 5,20 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ. ವಿದ್ಯುಚ್ಛಕ್ತಿಯ ಇಲಾಖೆಯ ಗ್ರ್ಯಾಂಟುಗಳಲ್ಲಿ 2.71 ಲಕ್ಷ ರೂಪಾಯಿಗಳಷ್ಟು ಮೊಬಲಗೂ ಮತ್ತು ಬೆಂಗಳೂರು ನೀರು ಸರಬರಾಯಿ ಹೊಸ ಕಾಮಗಾರಿಗಳ ಗ್ರ್ಯಾಂಟುಗಳಲ್ಲಿ 3 ಲಕ್ಷ ರೂಪಾಯಿಗಳ ಮೊಬಲಗೂ ವೆಚ್ಚವಾಗದೆ ಸರ್ಕಾರಕ್ಕೆ ವಾಪಸಾದುದೇ ಇದಕ್ಕೆ ಮುಖ್ಯಕಾರಣ.

ಚಾಲ್ತಿಸಾಲಿನ ಬಜೆಟ್ಟನ್ನು ಸಿದ್ಧಪಡಿಸುವಾಗ್ಗೆ ಹುಟ್ಟುವಳಿಯ ಬಾಬಿನಲ್ಲಿ 1931-32 ನೆಯ ತಿದ್ದುಪಾಟಾದ ಅಂದಾಜಿನ ಲೆಕ್ಕಗಳ ಆಧಾರದಮೇಲೆ ಹುಟ್ಟುವಳಿ ಮೊಬಲಗನ್ನು ಕಾಣಿಸಿ ಬಜೆಟ್ಟನ್ನು ತಯಾರಿಸಲಾಯಿತು. ಆದರೆ ಗಂಧದ ಎಣ್ಣೆ ಮತ್ತು ರೈಲ್ವೆಗಳ ಬಾಬುಗಳಲ್ಲಿ ಸ್ವಲ್ಪ ಹೆಚ್ಚಿಗೆ ಹುಟ್ಟುವಳಿಯನ್ನು ನಿರೀಕ್ಷಿಸಿ ವೆಚ್ಚವನ್ನು ಅನಿವಾರ್ಯವಾದ ಕೇವಲ ಕನಿಷ್ಠ ಪರಿಮಿತಿಗೆ ಇಳಿಸಲಾಯಿತು. ಇದರಿಂದ ಒಟ್ಟು ಹುಟ್ಟುವಳಿಯು 352.72 ಲಕ್ಷ ರೂಪಾಯಿಗಳೂ, ಒಟ್ಟು ವೆಚ್ಚವು 362.60 ಲಕ್ಷ ರೂಪಾಯಿಗಳೂ, ಹುಟ್ಟುವಳಿಗಿಂತ ವೆಚ್ಚವು ಹೆಚ್ಚಿ ಹಣವು ಸಾಲದೆಹೋಗುವ ಕೊರತೆಯು 9.88 ಲಕ್ಷ ರೂಪಾಯಿಗಳು ಆಗಬಹುದೆಂದು ಬಜೆಟ್ಟಿನ ಪ್ರಕಾರ ಅಂದಾಜು ಮಾಡಲಾಯಿತು. ಇದುವರೆಗೆ ಬಂದಿರತಕ್ಕ ಹುಟ್ಟುವಳಿಯನ್ನೂ ಮತ್ತು ಇದುವರೆಗೆ ನಡೆದಿರುವ ವೆಚ್ಚವನ್ನೂ ನೋಡಿದರೆ ಈ ವರುಷದ ಹುಟ್ಟುವಳಿಯೂ ವೆಚ್ಚವೂ ಬಜೆಟ್ ಅಂದಾಜುಗಳ ಪ್ರಕಾರವೇ ಇರಬಹುದೇ ಅಥವಾ ಹಾಗಿಲ್ಲದೆ ಬದಲಾವಣೆಯಾಗಬಹುದೇ—ಎಂಬುದನ್ನು ಇಷ್ಟು ಜಾಗ್ರತೆಯಾಗಿ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದಾಗ್ಯೂ, ಬಜೆಟ್ಟಿನಲ್ಲಿ ನಿರೀಕ್ಷಿಸಿರುವುದಕ್ಕಿಂತಲೂ ಉತ್ತಮವಾದ ಪರಿಣಾಮವುಂಟಾಗುತ್ತದೆಂಬುದಕ್ಕೆ ತಕ್ಕ ಸೂಚನೆಗಳೇನೂ ಇಲ್ಲದೆ ಹೋಗಿಲ್ಲ. 1931-32 ನೆಯ ಸಾಲಿನಲ್ಲಿ ವರಮಾನಕ್ಕಿಂತಲೂ ವೆಚ್ಚವು ಹೆಚ್ಚಾದುದಕ್ಕೆ ರೈಲ್ವೆಗಳು, ಗಂಧದ ಎಣ್ಣೆ ಮತ್ತು ಎಕ್ಸೈಜು—ಈ ಬಾಬುಗಳಲ್ಲಿ ಹುಟ್ಟುವಳಿಯು ಕಡಿಮೆಯಾದುದೇ ಕಾರಣ. ಈ ಮೂರು ಬಾಬುಗಳ ಪೈಕಿ ರೈಲ್ವೆಗಳ ಬಾಬಿನಲ್ಲಿ ಚಾಲ್ತಿ ಸಾಲಿನಲ್ಲಿ ಹುಟ್ಟುವಳಿಯು ಹೆಚ್ಚಾಗಿ ಬರುವ ಸೂಚನೆಗಳು ಸ್ವಲ್ಪ ಮಟ್ಟಿಗೆ ಕಂಡುಬರುತ್ತಿವೆ. ಹೆಚ್ಚು ಟ್ರೈನುಗಳನ್ನು ಬಿಡುವುದೂ, ಸಂಚಾರವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಕೈಕೊಂಡಿರುವುದೂ ಇದಕ್ಕೆ ಕಾರಣಗಳಾಗಿವೆ. ಎಕ್ಸೈಜು ಬಾಬಿನಿಂದ ಬರತಕ್ಕ ಹುಟ್ಟುವಳಿಯೂ ಕೂಡ ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕಿಂತ ಕಡಿಮೆಯಾಗಲಾರದೆಂದು ತೋರುತ್ತಿದೆ. ಜರ್ಮನಿಯಿಂದ ಯುದ್ಧದ ವೆಚ್ಚದ ಸಲುವಾಗಿ ಕೊಡಲ್ಪಡಬೇಕಾಗಿದ್ದ ಮೊಬಲಗುಗಳ ಬಾಬತು ಸಂಸ್ಥಾನದ ಪಾಲಿಗೆ ಇಂಡಿಯಾ ಸರ್ಕಾರದವರಿಂದ 98.945 ರೂಪಾಯಿಗಳು ಪ್ರಸಕ್ತ ಸಾಲಿನಲ್ಲಿ ಸಂದಾಯವಾದುವು. ಗಂಧದ ಎಣ್ಣೆಯ ಮಾರಾಟವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ನಡಿಸಿದಾಗ್ಯೂ, ಸಹ ಗಂಧದ ಎಣ್ಣೆಯ ಬಾಬಿನಲ್ಲಿ ಹುಟ್ಟುವಳಿಯು ತೃಪ್ತಿಕರವಾಗಿ ಪರಿಣಮಿಸುವಂತಿಲ್ಲ.

ಬಂಡವಾಳದ ವೆಚ್ಚಕ್ಕಾಗಿ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗನ್ನು ಬಹಳಮಟ್ಟಿಗೆ ಹೆಚ್ಚಿಸಬೇಕಾಗುತ್ತದೆಂದು ಈಗ ಕಂಡುಬಂದಿದೆ. ಏಕೆಂದರೆ ಕೆಲವು ಜರೂರಾದ ಮತ್ತು ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಈಗ ನಡೆಯಿಸಬೇಕಾಗಿದೆ. ಇವುಗಳನ್ನು ಮುಂದಕ್ಕೆ ಹಾಕುವ ಹಾಗಿಲ್ಲ. ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳಿಗೆ ಇನ್ನೂ 8,20 ಲಕ್ಷ ರೂಪಾಯಿಗಳ ಹೆಚ್ಚಿಗೆ ಗ್ರ್ಯಾಂಟು ಅವಶ್ಯಕವಾಗಿರುವುದಾಗಿ ಕಂಡುಬಂದಿದೆ. ಆ ಪೈಕಿ 3 ಲಕ್ಷ ರೂಪಾಯಿಗಳು ಹೋದವರ್ಷ ವೆಚ್ಚವಾಗದೆ ವಾಪಸಾಗಿ ಈ ವರ್ಷ ಪುನಃ ಒದಗಿಸಬೇಕಾಗಿರುವ ಮೊಬಲಗಾಗಿದೆ. ಉಳಿದ 5 ಲಕ್ಷ ರೂಪಾಯಿಗಳು ಜಲಾಶಯದ ಅಖೈರು ಮಟ್ಟಕ್ಕೆ ಉದ್ದೇಶಿಸಿರತಕ್ಕ ಪೂರ್ತಿ ಅಗಲದ ವರೆಗೆ ಕಟ್ಟೆಯನ್ನು ಅಗಲಮಾಡುವುದಕ್ಕಾಗಿ ಬೇಕಾಗುತ್ತವೆ. ಇಂಜಿನಿಯರುಗಳು ಏಕಾಭಿಪ್ರಾಯದಿಂದ ಮಾಡಿರತಕ್ಕ ಸಲಹೆಯ ಮೇರೆ ಈ ಏರ್ಪಾಡನ್ನು ಕೈಕೊಳ್ಳಬೇಕಾಗಿ ಬಂದಿತು. ಈ ಕೆಲಸದ ಜೊತೆಗೆ ಬೆಂಗಳೂರು ನಗರದಲ್ಲಿ ನೀರನ್ನು ಸರಬರಾಯಿ ಮಾಡುವುದಕ್ಕಾಗಿ ಹಳೆಯ ಕೊಳಾಯಿಗಳಿಗೆ ಬದಲು ಹೊಸ ಕೊಳಾಯಿಗಳನ್ನು ಹಾಕಿ ಕೊಳಾಯಿಗಳ ಕ್ರಮವನ್ನು ಉತ್ತಮಪಡಿಸುವ ಕೆಲಸವೂ ನಡೆಯಬೇಕಾಗಿದೆ. ಇದಕ್ಕಾಗಿ ಸುಮಾರು 3 ಲಕ್ಷ ರೂ.ಗಳನ್ನು ಚಾಲ್ತಿ ಸಾಲಿನಲ್ಲಿ ವೆಚ್ಚಮಾಡುವುದಕ್ಕಾಗಿ ಮ್ಯುನಿಸಿಪಾಲಿಟಿಯವರಿಗೆ ಕೊಡಬೇಕಾಗಬಹುದು.

ವಿದ್ಯುಚ್ಛಕ್ತಿಯ ಇಲಾಖೆಯವರು ಕೋಲಾರಕ್ಕೆ ವಿದ್ಯುಚ್ಛಕ್ತಿಯು ಪ್ರವಹಿಸತಕ್ಕ (ಟ್ರ್ಯಾನ್ಸ್ಮಿಷನ್) ಲೈನಿನ ಕೆಲವು ಭಾಗಗಳನ್ನೂ ಮತ್ತು ಶಿವನಸಮುದ್ರದಲ್ಲಿ ಕೆಲವು ಟ್ಯೂಬುಗಳನ್ನೂ ತೆಗೆದು ಬೇರೆ ಹಾಕುವುದಕ್ಕೆ ಮಂಜೂರಾತಿಯನ್ನು ಕೇಳಲಾಗಿದೆ. ಇದಕ್ಕಾಗಿ 4.40 ಲಕ್ಷ ರೂಪಾಯಿಗಳ ಮೊಬಲಗನ್ನು ಒದಗಿಸಬೇಕಾಗಿದೆ.

ಇತ್ತೀಚೆಗೆ ಅರ್ವಿನ್ ನಾಲಾ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಕಬ್ಬಿನ ಬೆಳೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಆ ಕಬ್ಬನ್ನೂ ಈಗಾಗಲೇ ಸರ್ಕಾರಿ ಕ್ಷೇತ್ರದಲ್ಲಿ ಬೆಳೆಯಲ್ಪಟ್ಟಿರುವ ಕಬ್ಬನ್ನೂ ಅರೆಯುವುದಕ್ಕೋಸ್ಕರ ಅರ್ವಿನ್ ನಾಲಾ ಪ್ರದೇಶದಲ್ಲಿ ಒಂದು ಕಬ್ಬಿನಗಾಣದ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಡನ್ನು ಸ್ವಲ್ಪವೂ ತಾಮಸಮಾಡದೆ ಕೈಕೊಳ್ಳಬೇಕಾಗಿದೆ. ಇದಕ್ಕಾಗಿ 5 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವೆಚ್ಚವಾಗುವುದಾಗಿ ಅಂದಾಜುಮಾಡಲ್ಪಟ್ಟಿದೆ.

ಈ ವೆಚ್ಚಗಳಿಗಾಗಿಯೂ ಮತ್ತು ಜರೂರಾದ ಇತರ ವೆಚ್ಚಗಳಿಗಾಗಿಯೂ ಹಣವನ್ನೊದಗಿಸುವುದಕ್ಕೋಸ್ಕರ ಈ ಸಮಯದಲ್ಲಿ ಸಾಲವನ್ನು ಎತ್ತುವ ಏರ್ಪಾಡನ್ನು ಕೈಕೊಳ್ಳುವುದು ಯುಕ್ತವಾದುದಲ್ಲವೆಂದು ಭಾವಿಸಲಾಗಿದೆ. ಆದಕಾರಣ ಸರ್ಕಾರದ ಹುಟ್ಟುವಳಿಯ ಸಾಧನಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಿ ಇವಕ್ಕೆಲ್ಲಾ ಹಣವನ್ನು ಒದಗಿಸುವುದು ಅವಶ್ಯಕ.

ಕಾಲಸ್ಥಿತಿಗಳು.

ಈ ಸಂಸ್ಥಾನದಲ್ಲಿ 1930-31 ನೆಯ ಸಾಲಿನಲ್ಲಿ ಬಿದ್ದ ಮಳೆಗಿಂತ 1931-32 ನೆಯ ಸಾಲಿನಲ್ಲಿ ಬಿದ್ದ ಮಳೆಯು ಒಟ್ಟಿನಲ್ಲಿ ಸರಾಸರಿ ಸ್ವಲ್ಪ ಹೆಚ್ಚಾಗಿದ್ದಿತು. ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಹೊರತು ಉಳಿದ ಭಾಗಗಳಲ್ಲೆಲ್ಲಾ ಮಳೆಯು ಯಥೇಚ್ಛವಾಗಿ ಸಕಾಲದಲ್ಲಿ ಸಮರ್ಪಕವಾಗಿ ಬಿದ್ದಿತು.

ಆದರೆ ಪಾವಗಡ, ಸೀರ, ಮತ್ತು ಮಧುಗಿರಿ ತಾಲೂಕುಗಳಲ್ಲಿ ಸ್ವಲ್ಪಮಟ್ಟಿಗೆ ಆತಂಕವುಂಟಾಗಿದ್ದಿತು. ಏಕೆಂದರೆ ಆ ತಾಲೂಕುಗಳಲ್ಲಿ ಅನೇಕ ಕೆರೆಗಳಿಗೆ ಸಾಕಾದಷ್ಟು ನೀರು ಬರಲಿಲ್ಲ. ಆದಕಾರಣ ಅಲ್ಲಿ ತರೀಬೆಳೆಯನ್ನಿಡಲು ಅವಕಾಶವಾಗಲಿಲ್ಲ. ಖುಷ್ಕೀ ಬೆಳೆಯೂ ಕೂಡ ಆಗಲಿಲ್ಲ; ಮತ್ತು ಕುಡಿಯುವ ನೀರಿಗಾಗಿಯೂ ದನಕರುಗಳ ಮೇವಿಗಾಗಿಯೂ ತೊಂದರೆಯುಂಟಾಯಿತು. ಕಷ್ಟನಿವಾರಣೆಯ ಕಾಮಗಾರಿಗಳಿಗಾಗಿ 20,000 ರೂಪಾಯಿಗಳ ವಿಶೇಷ ರೀತಿಯ ಒಂದು ಮೊತ್ತವನ್ನು ಕೊಡಲಾಯಿತು. ಅಲ್ಲದೆ ಈ ಮೂರು ತಾಲೂಕುಗಳಲ್ಲಿ ಜಮೀನು ಅಬಾದಿಗಾಗಿಯೂ ತಕಾವಿ ಸಾಲಗಳಿಗಾಗಿಯೂ 18,000 ರೂಪಾಯಿಗಳಷ್ಟು ಗ್ರ್ಯಾಂಟನ್ನು ಕೊಡಲಾಯಿತು. ದನಗಳ ಮೇವಿನ ತೊಂದರೆಯನ್ನು ಪರಿಹರಿಸುವುದಕ್ಕಾಗಿ ಮೇವು ದೊರೆಯುವುದು ಕಷ್ಟವಾಗಿದ್ದ ಪ್ರದೇಶಗಳಲ್ಲಿ ದನಗಳನ್ನು ಮುಫತ್ತಾಗಿ ಮೇಯಿಸಲು ಮನ್ನಾ ಜಂಗಲುಗಳನ್ನು ಬಿಟ್ಟುಕೊಡಲಾಯಿತು. ಮತ್ತು ಫಾರೆಸ್ಟು ಇಲಾಖೆಯ ಮೂಲಕ ಅಸಲು ಬೆಲೆಗೆ ಒಣಹುಲ್ಲನ್ನು ಸರಬರಾಯಿ ಮಾಡಲಾಯಿತು. ತಕಾವಿ ಮತ್ತು ಜಮೀನು ಅಬಾದಿನ ಸಾಲಗಳ ಚಾಲ್ತಿ ಕಂತುಗಳ ವಸೂಲಿಯನ್ನು ಸ್ವಲ್ಪ ಕಾಲ ನಿಲ್ಲಿಸಿ ಮುಂದಕ್ಕೆ ಇಡಲಾಯಿತು.

ಸಾಕಾದಷ್ಟು ನೀರು ಬರದೆ ಇದ್ದ ಕೆರೆಗಳ ಕೆಳಗೆ ಇರುವ, ಅದರಲ್ಲಿಯೂ ಮುಖ್ಯವಾಗಿ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆರೆಗಳ ಕೆಳಗಿರುವ ಜಮೀನುಗಳ ವಿಷಯದಲ್ಲಿ ತರೀಕಂದಾಯದಲ್ಲಿ ಅರ್ಧವನ್ನು ಮಾಫೀ ಬಿಡಲಾಯಿತು. ಹೀಗೆ ಮಾಫೀಬಿಟ್ಟ ಮೊಬಲಗು 38 455 ರೂಪಾಯಿಗಳು.

ಪ್ರಸಕ್ತ ವರ್ಷದಲ್ಲಿ ಕಾಲಸ್ಥಿತಿಗಳು ಅನುಕೂಲವಾಗಿದ್ದುವೆಂಬುದು ಜಮೀನು ಕಂದಾಯವು ಹೆಚ್ಚಾಗಿ ವಸೂಲಾದುದರ ಮೂಲಕ ಕಂಡುಬಂದಿದೆ. ಈ ವಸೂಲಿಯು (ಬಾಕಿಗಳೂ ಸೇರಿ) 134 ಲಕ್ಷ ರೂಪಾಯಿಗಳಾಯಿತು. ಆದರೆ 1930-31 ನೆಯ ಸಾಲಿನಲ್ಲಿ 116 ಲಕ್ಷ ರೂಪಾಯಿಗಳ ಮೊಬಲಗು ಮಾತ್ರವೇ ವಸೂಲಾಗಿದ್ದಿತು.

ಚಾಲ್ತಿ ಸಾಲಿನಲ್ಲಿ ಮಲೆನಾಡು ಮತ್ತು ಮೈದಾನಪ್ರದೇಶಗಳೆರಡರಲ್ಲಿಯೂ ಮಳೆಯು ಸಾಮಾನ್ಯವಾಗಿ ಸಮರ್ಪಕವಾಗಿದೆ; ಮತ್ತು ಬೆಳೆಮಾಡಿರುವ ಫಸಲು ಉತ್ತಮಸ್ಥಿತಿಯಲ್ಲಿರುವಂತೆ ವರದಿಯಾಗಿದೆ.

ರೆವೆನ್ಯೂ.

ವೆಚ್ಚವನ್ನು ತಗ್ಗಿಸುವ ಏರ್ಪಾಡಿನ ಸಂಬಂಧದಲ್ಲಿ ರೆವೆನ್ಯೂ ಸರ್ವೆಯ ಸೂಪರಿಂಟೆಂಡೆಂಟರವರ ಪ್ರತ್ಯೇಕವಾದ ಹುದ್ದೆಯನ್ನು ವಜಾಮಾಡಿ ಸೂಪರಿಂಟೆಂಡೆಂಟರವರ ಹುದ್ದೆಯ ಛಾರ್ಜಿನಲ್ಲಿ ರೆವೆನ್ಯೂ ಕಮಿಷನರವರನ್ನು ಇಡಲಾಯಿತು. ಈ ಏರ್ಪಾಡಿನಿಂದ ವಾಸ್ತವಿಕವಾಗಿ ಎಷ್ಟುಮಟ್ಟಿಗೆ ಸಮರ್ಪಕವಾಗಿರುವಂತೆ ಕೆಲಸ ನಡೆಯುವುದೆಂಬುದನ್ನು ನೋಡಬೇಕಾಗಿದೆ. ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸರ್ವೆ ಆಫೀಸುಗಳನ್ನು ಒಟ್ಟುಗೂಡಿಸಿ ಒಬ್ಬ ಆಫೀಸರ ಛಾರ್ಜಿನಲ್ಲಿ ಇಡಲಾಗಿದೆ. ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟರ ಹುದ್ದೆಗೆ ಬದಲಾಗಿ ಸರ್ವೆ ಇಲಾಖೆಯಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟರ ಹುದ್ದೆಯನ್ನು ಮಂಜೂರ್ಮಾಡಲಾಯಿತು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯಸ್ಥಾನಗಳ ಹಂಚಿಕೆ.

ಕಳೆದ ಜೂನ್ ತಿಂಗಳಿನಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ ಪ್ರಜಾಪ್ರತಿನಿಧಿಸಭೆಯಲ್ಲಿ ಈಗಿರುವ ಸದಸ್ಯಸ್ಥಾನಗ ಹಂಚಿಕೆಯನ್ನು ವಿಮರ್ಶಿಸುವಂತೆಯೂ, ಆ ಸಮಿತಿಯವರ ಅ ಪ್ರಾಯಕ್ಕಾಗಿ ಒಪ್ಪಿಸಿದ್ದ ಕೆಲವು ಇತರ ವಿಷಯಗಳನ್ನು ಪರಿಶೀ ಸುವಂತೆಯೂ ಗೊತ್ತುಮಾಡಲಾಗಿದ್ದಿತಷ್ಟೆ! ಆ ಸಮಿತಿಯವ ಈಚೆಗೆ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಒಂದು ತಾಲೂಕಿ ಅಥವಾ ಸಬ್-ತಾಲೂಕಿಗೆ ಕೊಡತಕ್ಕ ಸ್ಥಾನಗಳ ಸಂಖ್ಯೆಯ ಅದರದರ ಜನಸಂಖ್ಯೆಗೆ ಅನುಗುಣವಾಗಿರಬೇಕೆಂದೂ, ಅ ಮಲೆನಾಡು ತಾಲೂಕುಗಳಿಗೆ ಮಾತ್ರ ಈ ನಿಯಮವನ್ನು ಕಟ್ಟು ನಿಟ್ಟಾಗಿ ಅನ್ವಯಿಸದೆ ಅಲ್ಲಿ ಜನಸಂಖ್ಯೆಯ ದಾಮಾಷಾ ಮೇರೆಗೆ ಅವಕಾಶವಿರುವ ಸದಸ್ಯರ ಜೊತೆಗೆ ಫಲಾನಾ ಸಂಖ್ಯೆ ಸದಸ್ಯರು ಚುನಾವಣೆಯಾಗಲು ಅವಕಾಶವಿರಬೇಕೆಂದೂ ಆ ತಿಯವರು ಸಲಹೆಮಾಡಿದ್ದಾರೆ. ಮೊಳಕಾಲ್ಮುರು ತಾಲೂಕು ಸಂಸ್ಥಾನದ ಕಟ್ಟಕಡೆಯಲ್ಲಿರುವ ಪ್ರಯುಕ್ತ ಅದಕ್ಕೂ ಸ ರಿಯಾಯಿತಿಯನ್ನು ತೋರಿಸಬೇಕೆಂದೂ ಆ ಸಮಿತಿಯವರು ಸ ಮಾಡಿದ್ದಾರೆ. ವಿಶೇಷೋದ್ದೇಶ ಪಂಗಡಗಳಿಗಾಗಿ ಹಂಚಿಕೆ ರುವ ಸ್ಥಾನಗಳ ಸಂಖ್ಯೆಯಲ್ಲಿ ಸ್ವಲ್ಪಮಟ್ಟಿಗೆ ಪುನರ್ವ್ಯವಸ್ಥೆಯ ಮಾಡಿ ಸರಿಪಡಿಸಬೇಕೆಂದೂ, ಮಹಿಳೆಯರಿಗಾಗಿ ಏರ್ಪಡಿ ಸ್ಥಾನಗಳನ್ನು 2 ರಿಂದ 4 ಕ್ಕೆ ಹೆಚ್ಚಿಸಬೇಕೆಂದೂ ಸಹ ಆ ಸ ಯವರು ಸಲಹೆಮಾಡಿದ್ದಾರೆ. ಇನ್ನು ಅಲ್ಪಸಂಖ್ಯಾತ ಪಂಗ ವಿಷಯ—ಮುಸಲ್ಮಾನರಿಗಾಗಿ ಏರ್ಪಡಿಸಿರುವ ಸ್ಥಾನಗ 15ರಿಂದ 18ಕ್ಕೆ ಹೆಚ್ಚಿಸಬೇಕೆಂದು ಸಮಿತಿಯವರು ಸಲಹೆಮಾ ದ್ದಾರೆ. ನಿಮ್ನ ವರ್ಗಗಳವರ ಸ್ಥಾನಗಳನ್ನು 6 ರಿಂದ 10 ಹೆಚ್ಚಿಸಿ ನಾಮಿನೇಷನ್ ಮೂಲಕ ನೇಮಕಮಾಡುವುದಕ್ಕೆ ಜನರು ದೊರೆಯುವುದಾದರೆ ಹಾಗೆ ಹೆಚ್ಚು ಮಂದಿಗಳು ನೇ ವಾಗುವಂತೆ ಏರ್ಪಡಿಸಬೇಕೆಂದೂ ಸಮಿತಿಯವರು ಸಲಹೆಮಾ ದ್ದಾರೆ. ಇತರ ಸಲಹೆಗಳೊಡನೆ ಸಮಿತಿಯವರು ದಾಮಾ ಪ್ರಾತಿನಿಧ್ಯವಿಚಾರವನ್ನೂ ಸಲಹೆಮಾಡಿದ್ದಾರೆ. ಎಂದರೆ ವೋ ಗಳು ಉಮೇದುವಾರರಿಗೆ ವೋಟು ಕೊಡುವಲ್ಲಿ ಅವರು ಮಂದಿಗೆ ಓಟು ಕೊಡುವರೋ ಅವರಲ್ಲಿ ಮೊಟ್ಟಮೊದಲ ವರಾಗಿ, ಎರಡನೆಯವರಾಗಿ, ಇತ್ಯಾದಿಯಾಗಿ ಆಯಾ ಓಟರು ಇಚ್ಛಿಸುವ ಪ್ರಾಶಸ್ತ್ಯದ ಅನುಕ್ರಮದಲ್ಲಿ ಯಾವ ಉಮೇದುವಾರರೇ ಸದಸ್ಯರಾಗುವುದು ಅವರಿಗೆ ಸಮ್ಮತವ ವನ್ನು ಓಟುಕಾಗದದಲ್ಲಿ ಅವರು ಸೂಚಿಸಿರಬೇಕೆಂದು ಗೊ ಮಾಡಬೇಕೆಂದೂ, ಈ ರೀತಿ ಓಟುಗಳಲ್ಲಿ ಬಹುಭಾಗದವರ ಮತದಂತೆ ಮೊಟ್ಟಮೊದಲನೆಯವರಾಗಿ, ಎರಡನೆಯವ ಮುಂತಾಗಿ ಚುನಾಯಿಸಲ್ಪಡುವವರು ಸದಸ್ಯರಾಗಲು ನಿಯಮಗಳ ರೀತ್ಯಾ ಅವಶ್ಯಕವಾದ ಓಟುಗಳಿಗಿಂತ ಹೆ ಬಂದಿರುವ ಓಟುಗಳನ್ನು ಈ ಪ್ರಾಶಸ್ತ್ಯದ ಅನುಕ್ರಮಕ್ಕೆ ದವರಾಗಿದ್ದರೂ ಸದಸ್ಯರಾಗಲು ಅವಶ್ಯಕವಾದಷ್ಟು ಸಂ ಓಟುಗಳು ಬಂದಿಲ್ಲದ ಇತರ ಉಮೇದುವಾರರಿಗೆ ಆ ಪ್ರ ಗಳ ಪ್ರಕಾರ ವರ್ಗಾಯಿಸಿ ಭರ್ತಿಮಾಡಿ ಅವರುಗಳೂ ಹೊಂದುವಂತೆಯೇ ಭಾವಿಸಿ ಅನುಕೂಲ ಮಾಡಿಕೊಡಬೇಕೆಂ ಸಮಿತಿಯವರು ಸಲಹೆಮಾಡಿದ್ದಾರೆ. ಅಲ್ಲದೆ ಈ ಬಗೆಯ ಪಡೆಯ ಕ್ರಮವನ್ನು ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರ ಸಭೆಯಿಂದ ಸದಸ್ಯರನ್ನು ಚುನಾಯಿಸುವುದರಲ್ಲಿಯೂ, ಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ವಡೆ ಸ್ಥಾನಗಳಿಂದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನು ಯಿಸುವುದರಲ್ಲಿಯೂ ಆಚರಣೆಗೆ ತರಬೇಕೆಂದೂ ಸಹ ಸ ಯವರು ಇತರ ವಿಷಯಗಳ ಜೊತೆಯಲ್ಲಿ ಸಲಹೆಮಾಡಿದ ಈ ಸಲಹೆಗಳನ್ನು ಸರ್ಕಾರದವರು ಅಂಗೀಕರಿಸಿದ್ದಾರೆ.

ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು.

ಎಲ್ಲಾ ಬಾಬುಗಳೂ ಸೇರಿ ಪಬ್ಲಿಕ್ ವರ್ಕ್ಸ್ ಕಾಮಗಾ ಒಟ್ಟು ವೆಚ್ಚವು 56,13,723 ರೂಪಾಯಿಗಳು. ಪ್ರಸಕ್ತಸಾಲಿ ಒಂಬತ್ತು ಭಾರಿ ನೀರಾವರಿಯ ಕಾಮಗಾರಿಗಳು ನಡೆದ ವು. 111 ಮೈನರ್ ಕೆರೆಗಳು ಜೀರ್ಣೋದ್ಧಾರಮಾ ಟ್ಟುವು. ಕಟ್ಟಡಗಳ ಬಾಬಿನಲ್ಲಿ ಪ್ರಸಕ್ತಸಾಲಿನಲ್ಲಿ ಬೆಂಗ ಳೂರಿನಲ್ಲಿರುವ ಕರ್ಣಾಟಕಸಾಹಿತ್ಯ ಪರಿಷತ್ತಿನ ಕಟ್ಟಡವೂ, ಮೈ ಸೂರಿನಲ್ಲಿರುವ ಆಯುರ್ವೇದೀಯ ಕಾಲೇಜು ಕಟ್ಟಡವೂ, ಚಿಕ್ಕ ಮಗಳೂರಿನಲ್ಲಿರುವ ಜನರಲ್ ಆಸ್ಪತ್ರೆಯ ಮತ್ತು ಜೂಬಿಲಿ ಮೆ ಹಾಲ್ ಕಟ್ಟಡಗಳೂ ಪೂರೈಸಲ್ಪಟ್ಟುವು. ತಿರುಮಕೂಡಲು ನ ಪುರದ ಹತ್ತಿರ ಕಾವೇರೀ ನದಿಗೆ ಕಟ್ಟುತ್ತಿದ್ದ ಸೇತುವೆಯ ಗಾರಿಯು ಪೂರೈಸಿತು. ಈ ಸೇತುವೆಯ ಮೇಲೆ ಸಂಚಾರ ರಂಭ ಮಹೋತ್ಸವವನ್ನು ಈಚೆಗೆ ಶ್ರೀಮನ್ಮಹಾರಾಜರವರು ಯಿಟ್ಟು ನೆರವೇರಿಸಿದರು. 1932 ನೆಯ ಇಸವಿಯ ಜೂನ್ ರಿನ ವರೆಗೆ ಈ ಕಾಮಗಾರಿಗಾಗಿ ತಗುಲಿದ ಒಟ್ಟು ವೆ 5,21,032 ರೂಪಾಯಿಗಳು. ಅಕ್ಕಿಹೆಬ್ಬಾಳಿನ ಸಮೀ ಹೇಮಾವತಿ ನದಿಗೆ ಕಟ್ಟುತ್ತಿರುವ ಸೇತುವೆಯ ಕಾಮಗ ಕೆಲಸವು ಬಹಳ ಮುಂದುವರಿಯುತ್ತಿದೆ.

ಬೆಂಗಳೂರಿಗೆ ನೀರು ಸರಬರಾಯಿ ಮಾಡುವುದಕ್ಕಾಗಿ ಕೈ ದಿರುವ ಹೊಸ ಏರ್ಪಾಡಿನ ಸಂಬಂಧದಲ್ಲಿ ಪ್ರಸಕ್ತ ವರು 19.64 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿದೆ. 1932 ಇಸವಿಯ ಜೂನ್ ಅಖೈರಿನವರೆಗೆ ಈ ಕಾಮಗಾ 38,30,610 ರೂಪಾಯಿಗಳ ಒಟ್ಟು ವೆಚ್ಚವು ತಗುಲಿದೆ. ಪಾತ್ರದಲ್ಲಿ ಅಣೆಗೆ ಅಸ್ತಿಭಾರವನ್ನು ಹಾಕುವುದರಲ್ಲಿ ತೊಂದರೆಗಳಿದ್ದುವು. ಆ ತೊಂದರೆಗಳನ್ನೆಲ್ಲಾ ನಿವಾರಿಸಿ

ವರ್ತಮಾನಸಂಗ್ರಹ

ಮಿ|| ಜೆ. ಎಂ. ಸೇನಗುಪ್ತರನ್ನು ಹಿಂದುಸ್ಥಾನ ಸರಕಾರದ ಹುಕುಮಿನ ಪ್ರಕಾರವಾಗಿ ಜಲಪೈಗುರಿ ಕಾರಾಗೃಹದಿಂದ ಅಲಿಪುರ ಸೆಂಟ್ರಲ್ ಜೈಲಿಗೆ ಒಯ್ದಿರುತ್ತಾರೆ. ಅಲ್ಲಿ ಎಕ್ಸ್-ರೇಕಿರಣಗಳಿಂದ ಇವರ ಪ್ರಕೃತಿಯನ್ನು ಪರೀಕ್ಷಿಸುವರಂತೆ!

ಇಂಡಿಯಾಸರಕಾರದ ಪ್ರತಿನಿಧಿಗಳು ಒಟ್ಟಾವಾ ಸಮ್ಮೇಳನದಲ್ಲಿ ಇತರ ಸಾಮ್ರಾಜ್ಯಗಳೊಡನೆ ವ್ಯಾಪಾರಸಂಬಂಧವಾಗಿ ಮಾಡಿಕೊಂಡಿರುವ ಒಪ್ಪಂದವನ್ನು ಜಾರಿಗೆ ತರಬೇಕೆಂದು ಸರ್ ಜೋಸೆಫ್‌ಭೋರ್‌ರವರು ದೆಹಲಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ಚರ್ಚೆಗೆ ತರುವರು.

ಇದೇ ಅಕ್ಟೋಬರ್ ೨೨ ಕ್ಕೆ ಅಖೈರಾದ ವಾರದಲ್ಲಿ ಮುಂಬಯಿಯಿಂದ ಪರದೇಶಗಳಿಗೆ 1,00,39,391 ರೂಪಾಯಿಗಳ ಬೆಲೆಯುಳ್ಳ ಬಂಗಾರವು ಪರದೇಶಗಳಿಗೆ ರವಾನಿಸಲ್ಪಟ್ಟಿತು. ಬ್ರಿಟಿಷರು ಬಂಗಾರದ ಬೆಲೆಯನ್ನು ತಗ್ಗಿಸಿದಂದಿನಿಂದ ಇದುವರೆಗೆ ಒಟ್ಟು 89,13,03,003 ರುಪಾಯಿಗಳ ಬಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿರುವುದು.

ಬಾಬು ಸುಭಾಷಚಂದ್ರಬೋಸ್‌ರವರು 11ನೆಯ ತಾರೀಖಿನ ದಿವಸ ಭವಾಲಿ ಎಂಬ ಆರೋಗ್ಯಸ್ಥಲಕ್ಕೆ ಸಾಗಿಸಲ್ಪಟ್ಟರು. ಡಿಶಂಬರ್ 15 ನೆಯ ತಾರೀಖಿನ ವರೆಗೆ ಅಂದರೆ ಅಲ್ಲಿಯ ಸಾನಿಟೋರಿಯಂ ಮುಚ್ಚಲ್ಪಡುವವರೆಗೆ ಅವರು ಅಲ್ಲಿಯೇ ಇರುವರು. ಮುಂದೆ ಎಲ್ಲಿಗೆ ಕಳುಹಿಸಲ್ಪಡುವರೆಂಬುದು ಅವರ ಪ್ರಕೃತಿಯ ಮೇಲೆ ನಿಶ್ಚಯಿಸಲ್ಪಡುವದು.

ಇದೇ ಅಕ್ಟೋಬರ್ ೨೬ ನೆಯ ತಾರೀಖಿನ ದಿವಸ ಮುಂಬಯಿ ಕರೆನ್ಸಿ ಆಫೀಸಿನಲ್ಲಿ ಕಪೂರ್‌ಚಂದ್ ಲಕ್ಷ್ಮಿಜಿ ಎಂಬ ಒಬ್ಬ ಮಾರ್ವಾಡಿ ವರ್ತಕರು 5710 ರೂಪಾಯಿಗಳ ಬೆಲೆಯುಳ್ಳ 5 ಮತು 10 ರೂಪಾಯಿಗಳ ಕಂತೆಯನ್ನು ಬದಲಾಯಿಸುವದಕ್ಕಾಗಿ ಕೌಂಟರಿನಮೇಲಿಟ್ಟು ಮತ್ತೊಬ್ಬ ಮಿತ್ರರೊಡನೆ ಮಾತನಾಡುತ್ತಿರುವಲ್ಲಿ ಯಾರೋ ದುಷ್ಟರು ಬಹು ಚತುರತೆಯಿಂದ ಆ ನೋಟುಗಳ ಕಂತೆಯನ್ನು ಅಪಹರಿಸಿ ಪರಾರಿಯಾಗಿರುತ್ತಾರೆ. ಪೋಲೀಸರು ತನಿಖೆ ಕ್ರಮಗಳನ್ನು ಜರುಗಿಸಿರುವರು.

ಚಿತ್ತಗಾಂಗ್ ಗಲಭೆಗೆ ಸಂಬಂಧಪಟ್ಟ ಅಪರಾಧಿಗಳನ್ನು ಸದರಿ ಪಟ್ಟಣದ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಹಿಂದೂಜನರು ಬಚ್ಚಿಟ್ಟಿರುವರೆಂಬ ಅನುಮಾನದ ಮೇಲೆ ಕಲ್ಕತ್ತಾ ಸರಕಾರದವರು ಚಿತ್ತಗಾಂಗ್ ಪಟ್ಟಣದ ಹಾಗೂ 7 ಹಳ್ಳಿಗಳ ಮೇಲೆ 80 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿರುತ್ತಾರೆ ಸದರಿ ಪ್ರಾಂತಗಳ ನಿವಾಸಿಗಳು ಡಿಸೆಂಬರು ಮೊದಲನೇ ತಾರೀಖಿನೊಳಗಾಗಿ ಸರ್ಕಾರದವರಿಗೆ ಬೇಕಾಗಿರುವ ಅಂಶಗಳನ್ನು ತಿಳಿಸದಿದ್ದಲ್ಲಿ ದಂಡವನ್ನು ಅವರಿಂದ ವಸೂಲ್ಮಾಡುವುದಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಸ್ಪೆಷಲ್‌ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ಬಂಗಾಳಾ ಗವರ್ನರವರು ಮೇಲ್ಕಂಡ ಆರ್ಡರನ್ನು ಹೊರಡಿಸಿರುತ್ತಾರೆ.

ಹಿಂದೂ, ಮುಸಲ್ಮಾನ ಮತ್ತು ಸಿಕ್ಕರ ಐಕಮತ್ಯಕ್ಕಾಗಿ ಪಂ|| ಮದನಮೋಹನ ಮಾಳವೀಯರು ಮತ್ತು ಮೌಲಾನಾ ಷೌಕತ್ತಾಲಿಯವರು ಕೈಕೊಂಡಿರುವ ಪ್ರಯತ್ನಕ್ಕೆ ಸಫಲವಾಗುವ ಚಿಹ್ನೆಗಳು ತೋರಿಬರುತ್ತಿರುವುವು. ಅಖಿಲಭಾರತ ಸರ್ವಪಕ್ಷೀಯ ಸಮ್ಮೇಳನವು ನವೆಂಬರು 3 ನೇ ತಾರೀಖಿನ ದಿವಸ ಅಲಹಾಬಾದಿನಲ್ಲಿ ಸೇರಬೇಕೆಂದು ನಿರ್ಧರಿಸಲ್ಪಟ್ಟಿರುವುದು. ಈ ಮಧ್ಯೆ ಮೌಲಾನಾ ಷೌಕತ್ತಾಲಿಯವರು ಗಾಂಧಿಯವರನ್ನು ಕೂಡಲೇ ಬಿಡುಗಡೆಮಾಡಿ ಅಲಹಾಬಾದಿನ ಸಮ್ಮೇಳನದಲ್ಲಿ ಅವರು ಭಾಗವಹಿಸಲು ಅವಕಾಶವನ್ನು ಕಲ್ಪಿಸಬೇಕೆಂದೂ, ಹಿಂದೂಮುಸಲ್ಮಾನ ಮತ್ತು ಸಿಕ್ಕರಲ್ಲಿ ಐಕಮತ್ಯವುಂಟಾಗಬೇಕಾದರೆ ಗಾಂಧಿಯವರ ಸಹಕಾರವು ಅತ್ಯವಶ್ಯಕವೆಂದೂ. ಅರನ್ನು ಬಿಡುಗಡೆ ಮಾಡಿದರೆ ತಾವು ಅವರೊಡನೆ ಚರ್ಚೆಗಳನ್ನು ನಡೆಯಿಸಿ ಕಾನೂನುಭಂಗದ ಚಳವಳಿಯನ್ನು ನಿಲ್ಲಿಸುವಂತೆ ಅವರನ್ನೂ ಅವರ ಅನುಯಾಯಿಗಳನ್ನೂ ಒಪ್ಪಿಸುವೆವೆಂದೂ,' ಒಂದುವೇಳೆ ಅವರನ್ನು ಬಿಡುಗಡೆ ಮಾಡದಿರುವುದಾದರೆ ಅವರನ್ನು ಭೇಟಿಮಾಡಿ ಕಾರಾಗೃಹದಲ್ಲಿಯೇ ಅವರೊಡನೆ ಚರ್ಚೆಗಳನ್ನು ನಡೆಯಿಸಲು ತಕ್ಕ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದೂ ವೈಸರಾಯರಿಗೆ ಒಂದು ದೀರ್ಘವಾದ ಪತ್ರವನ್ನು ಬರೆದಿರುತ್ತಾರೆ.

ಮೂರನೇ ರೌ. ಟೇ. ಸಮ್ಮೇಳನದ ಪ್ರತಿನಿಧಿಗಳು.

ಮಂತ್ರಿಶ್ರೇಷ್ಠರ ಆಹ್ವಾನದ ಪ್ರಕಾರ, ಈ ಕೆಳಗೆ ನಮೂದಿಸಲಾಗಿರುವ ಸಂಸ್ಥಾನಿಕ ಪ್ರತಿನಿಧಿಗಳೂ, ಬ್ರಿಟಿಷ್ ಹಿಂದೂಸ್ಥಾನದ ಪ್ರತಿನಿಧಿಗಳೂ, ಮೂರನೇ ರೌಂ. ಟೇ. ಸಮ್ಮೇಳನದಲ್ಲಿ ಭಾಗವಹಿಸಿ, ಮುಂದಿನ ರಾಜ್ಯಶಾಸನ ವಿಚಾರವನ್ನು ಚರ್ಚಿಸುವರು. ಸದರಿ ಸಮ್ಮೇಳನವು ಲಂಡನ್ನಿನಲ್ಲಿ ನವಂಬರು ೧೫ ನೇ ತಾರೀಖಿನ ವೇಳೆಗೆ ಪ್ರಾರಂಭವಾಗುವುದು. ಕೆಳಗೆ ಕಾಣಿಸಿರುವ ಸಂಸ್ಥಾನಗಳ ರಾಜರುಗಳಿಗೆ ಆಹ್ವಾನವನ್ನು ಕಳುಹಿಸಿ, ಸ್ವತಃ ಹಾಜರಿರಬೇಕೆಂದೂ ಇಲ್ಲವೇ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ ಕೇಳಲಾಗಿತ್ತು. ಬರೋಡಾ ಸಂಸ್ಥಾನದ ಪರವಾಗಿ ರಾವ್‌ಬಹದ್ದೂರ್ ವಿ. ಟಿ. ಕೃಷ್ಣಮಾಚಾರ್ಯರೂ, ಭೋಪಾಲ್ ಸಂಸ್ಥಾನದ ಪರವಾಗಿ ರಾಯ್‌ಬಹದ್ದೂರ್ ರಾಜಾ ಔಧ್ ನಾರಾಯಣ ಬಿಸರಿಜಾರವರೂ, ಬಿಕಾನೀರ್ ಸಂಸ್ಥಾನದ ಪರವಾಗಿ ಸರ್. ಮನುಭಾಯಿ ಮೆಹತಾರವರೂ, ಹೈದರಾಬಾದ್ ಪರವಾಗಿ ಸರ್ ಅಕ್ಬರ್ ಹೈದರಿಯವರೂ, ಕಾಶ್ಮೀರದ ಪರವಾಗಿ ಮಿ|| ವಜಾಹತ್ ಹುಸೇನರವರೂ, ಕೊಲ್ಲಾಪುರದ ಪರವಾಗಿ ರಾವ್‌ಬಹದ್ದೂರ್ ಡಿ. ಎ. ಸುರ್ವೆಯವರೂ, ಮೈಸೂರಿನ ಪರವಾಗಿ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರೂ, ನವಾನಗರದ ಪರವಾಗಿ ಮಿ|| ರಷ್‌ಬ್ರೂಕ್ ವಿಲಿಯಂಸ್‌ರವರೂ, ಪಾಟಿಯಾಲಾಪರವಾಗಿ ನವಾಬ್ ಲಿಯಾಖತ್‌ಹುಸೇನರೂ, ಜಯಪುರ, ಜೋಧ್‌ಪುರ ಮತ್ತು ಉದಯಪುರ ಸಂಸ್ಥಾನಗಳ ಪರವಾಗಿ ಸರ್ ಸುಖದೇವಪ್ರಸಾದರವರೂ, ಚಿಕ್ಕಪುಟ್ಟ ಸಂಸ್ಥಾನಗಳ ಪರವಾಗಿ ಸರಿಲಾ ರಾಜರೂ ಸಮ್ಮೇಳನದಲ್ಲಿ ಹಾಜರಾಗುವರು.

ಬ್ರಿಟಿಷ್ ಹಿಂದೂಸ್ಥಾನದ ಪರವಾಗಿ ಈ ಕೆಳಗೆ ಕಂಡ ಪ್ರತಿನಿಧಿಗಳು ಆಹ್ವಾನಿಸಲ್ಪಟ್ಟಿರುವರು.—

ಆಗಾಖಾನರು, ಡಾ|| ಅಂಬೇಡ್ಕರ್, ಬೊಬ್ಬಿಲಿ ರಾಜರು, ಸರ್ ಹ್ಯೂಬರ್ಟ್‌ಕಾರ್‌ರವರು, ಮಿ|| ಎ. ಎಚ್. ಘಜ್ನಾವಿ, ಸರ್ ಹೆನ್ರಿ ಗಿಡ್ನಿ, ಸರ್ ಮಹಮದ್ ಇಕ್ಬಾಲ್, ಮಿ|| ಎಂ. ಆರ್. ಜಯಕರ್, ಸರ್ ಕವಾಸ್ಜಿ ಜಹಾಂಗೀರ್ [ಜೂನಿಯರ್], ಮಿ|| ಎನ್. ಸಿ. ಕೇಲ್ಕರ್, ದಿವಾನ್‌ಬಹದ್ದೂರ್ ಎ. ರಾಮಸ್ವಾಮಿ ಮೊದಲಿಯಾರ್, ಪಂಡಿತ ನಾನಕ್‌ಚಂದ್, ರಾವ್‌ಬಹದ್ದೂರ್ ಸರ್ ಪತ್ರೋ, ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್, ಸರ್ ತೇಜ್‌ಬಹದ್ದೂರ್ ಸಪ್ರು, ಡಾ|| ಷಾಫತ್ ಅಹಮದ್‌ಖಾನ್, ಸರ್ದಾರ್ ತಾರಾಸಿಂಗ್, ಚೌಧರಿ ಜಫರುಲ್ಲಾಖಾನ್.

ಮೇಲ್ಕಂಡವರಲ್ಲಿ ಕೆಲವರು ೨೨ ನೇ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಮಾಡಿದರು.

ಏಜಂಟರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪ್ಲೀಡರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ—ಹೋಳವನಹಳ್ಳಿ, ಡಿ|| ತುಮಕೂರು.

ಮೈಸೂರು ದಸರಾ ಅಧಿವೇಶನದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರ ಭಾಷಣ.

[ಕಳೆದ ವಾರದ ಶೇಷ]

ಬೆಂಗಳೂರು ದಂಡಿನ ವಿಚಾರ.

ಬೆಂಗಳೂರು ದಂಡಿನ ಪ್ರದೇಶವೆಂಬ ಹೆಸರಿಂದಲೇ ವ್ಯಕ್ತಪಡುವಂತೆ ಈ ಪ್ರದೇಶದ ಆಡಳಿತವು ಸಂಸ್ಥಾನಕ್ಕೆ ಸೇರದಿರುವುದು ಅನನ್ವಯವೆಂಬುದನ್ನು ಸಮಿತಿಯವರು ಉಪೇಕ್ಷಿಸಿಲ್ಲ. ಅದಾಗ್ಯೂ ಸಮಿತಿಯವರು ಬೆಂಗಳೂರು ದಂಡಿನ ಪ್ರದೇಶದ ವಿಷಯದಲ್ಲಿ ಯಾವ ನಿರ್ದಿಷ್ಟವಾದ ಸಲಹೆಗಳನ್ನೂ ಕೊಟ್ಟಿಲ್ಲ. ಈ ಪ್ರದೇಶದ ಒಂದು ಭಾಗವನ್ನಾದರೂ ಸಂಸ್ಥಾನಕ್ಕೇ ಹಿಂದಕ್ಕೆ ವಹಿಸುವುದು ನ್ಯಾಯವಲ್ಲವೇ ಎಂಬ ವಿಚಾರದಲ್ಲಿ ಸಮಿತಿಯವರು ಏನೊಂದನ್ನೂ ನಿರ್ಧರವಾಗಿ ಇತ್ಯರ್ಥಪಡಿಸಿ ಹೇಳದೆ ಹಾಗೆಯೇ ಸೂಚಿಸಿ ಸುಮ್ಮನಾಗಿದ್ದಾರೆ. ಈ ವಿಚಾರದಲ್ಲಿ ಯಾವುದೇ ತೀರ್ಮಾನವಾಗುವುದಾದರೂ (ಮಿಲಿಟರಿ ಪ್ರದೇಶಗಳೂ ಸೇರಿ) ಬೆಂಗಳೂರು ದಂಡಿನ ಒಟ್ಟು ಪ್ರದೇಶದ ವಿಚಾರದಲ್ಲಿಯೂ ನಮ್ಮ ಸಂಸ್ಥಾನದವರು ಆಯವ್ಯಯಗಳ ಆಡಳಿತದ ಅಧಿಕಾರವನ್ನು ಚಲಾಯಿಸುವುದರಲ್ಲಿ ವಸ್ತುತಃ ಯಾವ ಅಭ್ಯಂತರವೂ ಇಲ್ಲದೆ ಆ ರೀತಿ ನಡೆಯಬೇಕೆಂಬುದು ಸಮಿತಿಯವರ ಅಭಿಪ್ರಾಯವಾಗಿದೆ. ಆದರೆ ಮ್ಯುನಿಸಿಪಲ್ ಹುಟ್ಟುವಳಿಗೆ ತಕ್ಕಂತೆ "ಗ್ರ್ಯಾಂಟ್-ಇನ್-ಏಯ್ಡ್" ಸಹಾಯ ದ್ರವ್ಯವನ್ನು ಸೇರಿಸಿಕೊಡಬೇಕೆಂಬ ಷರತ್ತಿಗೆ ಒಳಪಡಿಸಿ ಸಮಿತಿಯವರು ಈ ಸಲಹೆಯನ್ನು ಮಾಡಿದ್ದಾರೆ. ಆಯವ್ಯಯಗಳ ಆಡಳಿತದ ಅಧಿಕಾರವೆಂದರೆ ಅದರ ಜೊತೆಯಲ್ಲಿ ಸ್ವಲ್ಪಮಟ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯು ಇದ್ದೇ ತೀರಬೇಕು. ಆದರೆ ಈ ರೀತಿ ಅವಶ್ಯಕವಾಗುವ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಸಂಸ್ಥಾನದವರು ಹೇಗೆ ಚಲಾಯಿಸಬೇಕೆಂಬುದನ್ನು ಮಾತ್ರ ಸಮಿತಿಯವರು ಸೂಚಿಸಿಲ್ಲ.

ಈ ವಿಚಾರವನ್ನು ಒಂದು ಸುಲಭವಾದ ಮತ್ತು ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದಾಗಿದೆ. ಬೆಂಗಳೂರು ದಂಡಿನ ಪ್ರದೇಶದಲ್ಲಿ ಮಿಲಿಟರಿ ಉದ್ದೇಶಗಳಿಗೇ ಅವಶ್ಯವಾಗಿ ಬೇಕಾಗಿರುವ ಭಾಗವನ್ನೇ ಬೇರೆಮಾಡಿ ಆ ಭಾಗವನ್ನು "ಕಂಟೋನ್ಮೆಂಟ್" ಎಂಬ ಪ್ರತ್ಯೇಕ ಮಿಲಿಟರಿ ಪ್ರದೇಶವನ್ನಾಗಿ ಏರ್ಪಡಿಸಬಹುದು; ಬ್ರಿಟಿಷ್ ಇಂಡಿಯಾದ ಕಂಟೋನ್ಮೆಂಟ್ ಪ್ರದೇಶದ ಆಡಳಿತವನ್ನು ನಡೆಯಿಸುವ ರೀತಿಯಲ್ಲಿಯೇ ಈ ಪ್ರದೇಶದ ಆಡಳಿತವನ್ನೂ ನಡೆಯಿಸಬಹುದು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿನ ಮತ್ತು ಕಾನೂನುಗಳ ಏರ್ಪಾಡು ಬ್ರಿಟಿಷ್ ಇಂಡಿಯಾ ಪ್ರಾಂತಗಳಿಗೆ ಅನ್ವಯಿಸುವ ರೀತಿಯಲ್ಲೇ ನಮ್ಮ ಸಂಸ್ಥಾನಕ್ಕೂ ಸಹ ಸಂಯುಕ್ತ ವ್ಯವಸ್ಥೆಗೆ ಸಂಬಂಧಪಡುವ ಮಟ್ಟಿಗೆ ಸ್ವತಃ ಅನ್ವಯಿಸುತ್ತದೆ. ಈ ಏರ್ಪಾಡಿನಿಂದ ಚಕ್ರವರ್ತಿ ಸಾರ್ವಭೌಮರಿಗೆ ಇರಬೇಕಾದ ಅಧಿಕಾರಗಳು ಚಕ್ರವರ್ತಿ ಸಾರ್ವಭೌಮರಿಗೂ, ಸಂಯುಕ್ತ ಸರ್ಕಾರದವರಿಗೆ ಇರಬೇಕಾದ ಅಧಿಕಾರಗಳು ಸಂಯುಕ್ತ ಸರ್ಕಾರದವರಿಗೂ ಇದ್ದೇ ಇರುವಂತಾಗುತ್ತದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿಗೆ ಸೇರಿಲ್ಲದ ವಿಚಾರಗಳಲ್ಲಿ ಮಾತ್ರ ಅವರಿಗೆ ಪ್ರತ್ಯಕ್ಷವಾಗಿ ಯಾವ ನಿಕಟವಾದ ಸಂಬಂಧವೂ ಇಲ್ಲದೆ ಇಂತಹ ವಿಚಾರಗಳಲ್ಲಿ ಸಂಸ್ಥಾನದ ಅಧಿಕಾರವೇ ಅಪ್ಪಟವಾದ ಅಧಿಕಾರವಾಗಿರುತ್ತದೆ. ಮೇಲೆ ಹೇಳಿದಂತೆ ಬೆಂಗಳೂರು ದಂಡಿನ ಪ್ರದೇಶದಲ್ಲಿ ಏರ್ಪಡುವ ಕಂಟೋನ್ಮೆಂಟ್ ಭಾಗದ ಆಡಳಿತವನ್ನು ಈ ರೀತಿಯಲ್ಲಿ ನಿರ್ವಹಿಸಬಹುದಾಗಿದೆ. ಹೀಗೆ ಮಾಡುವಲ್ಲಿ ಸಂಯುಕ್ತ ಸರ್ಕಾರದವರೂ ಸಂಯುಕ್ತ ಸರ್ಕಾರಕ್ಕೆ ಸೇರಿದ ಇತರ ಸರ್ಕಾರಗಳವರೂ ಯಾವ ರೀತಿಯಲ್ಲಿ ಕರ್ತವ್ಯಗಳನ್ನು ವಿಭಾಗ ಮಾಡಿಕೊಂಡು ನಿರ್ವಹಿಸಬಹುದೆಂಬ ವಿಚಾರದಲ್ಲಿ ಅಂಗೀಕೃತವಾದ ನಿಯಮಗಳಿಗನುಸಾರವಾಗಿಯೇ ಅಲ್ಲಿ ಕಂಟೋನ್ಮೆಂಟ್ ಪ್ರದೇಶದ ಆಡಳಿತವು ನಡೆಯುತ್ತದೆ. ಹೀಗೆ ಆಡಳಿತವು ನಡೆಯುವ ಏರ್ಪಾಡನ್ನು ಬಿಟ್ಟು ಯಾವ ಏರ್ಪಾಡನ್ನು ಮಾಡಿದರೂ ಏನೋ ಒಂದು ಬಗೆಯ ತೇಪೆಹಾಕಿ ನಿಲ್ಲಿಸಿದಂತೆ ಅದು ನಡೆಯುವುದೇ ಹೊರತು ಅದೆಂದಿಗೂ ನ್ಯೂನತೆಗಳಿಲ್ಲದೆ ತೃಪ್ತಿಕರವಾಗಿರುವುದಿಲ್ಲ.

• ಆಯವ್ಯಯಗಳ ವಿಚಾರ.

1931-32 ನೆಯ ಸಾಲಿನ ಲೆಕ್ಕಗಳು ಈಗ ಸ್ವಲ್ಪ ಹೆಚ್ಚು ಕಡಿಮೆ ಪೂರೈಯಾಗಿವೆ. ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬಂದಿರುವಂತೆಯೂ, ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಡೆಯುವುದಾಗಿ ತೋರಿದ್ದುದಕ್ಕಿಂತಲೂ ಕಡಿಮೆ ವೆಚ್ಚವು ನಡೆದಿರುವಂತೆಯೂ ಕಂಡು ಬಂದಿದೆ. ಗಂಧದ ಎಣ್ಣೆಯ ಬಾಬಿನ ಹೊರತು ಉಳಿದ ಎಲ್ಲ ಬಾಬುಗಳಲ್ಲಿಯೂ ಹುಟ್ಟುವಳಿಯು ಹೆಚ್ಚಿದೆ. ವಿಶೇಷ ಗಣನೀಯವಾಗಿ ವರಮಾನವು ಹೆಚ್ಚಿರುವಂತೆ ಕಂಡುಬಂದಿರುವ ಹುಟ್ಟುವಳಿಯ ಬಾಬುಗಳಾವುವೆಂದರೆ—ಭೂಕಂದಾಯ, ರೈಲ್ವೆಗಳು, ಎಕ್ಸೈಜು ಸ್ಟಾಂಪುಗಳು ಮತ್ತು ವರಮಾನದ ತೆರಿಗೆ ಇವುಗಳೇ. ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು ಮತ್ತು ವಿದ್ಯಾಭ್ಯಾಸದ ಇಲಾಖೆಯ ಕಟ್ಟಡಗಳು—ಇವೆರಡೂ ವೆಚ್ಚವು ಕಡಿಮೆಯಾಗಿರುವ ಮುಖ್ಯ ಬಾಬುಗಳು.

ಈ ರೀತಿ ಹುಟ್ಟುವಳಿಯು ಹೆಚ್ಚಾಗಿ ವೆಚ್ಚವು ಕಡಿಮೆಯಾದುದರಿಂದ ದೊರೆತ ಮೊಬಲಗನ್ನು ಡಿಪ್ರಿಸಿಯೇಷನ್ ಫಂಡುಗಳೆಂಬ ನಾನಾ ಸವಕಲು ಕಿಮ್ಮತ್ತು ಭರ್ತಿಯ ನಿಧಿಗಳಿಗೆ ಸಲ್ಲಿಸಬೇಕಾಗಿದ್ದ ಕಂಟ್ರಿಬ್ಯೂಷನ್ ಮೊಬಲಗುಗಳನ್ನು ಸಲ್ಲಿಸಿ ಆ ನಿಧಿಗಳಲ್ಲಿ ಉಂಟಾಗಿದ್ದ ಕೊರತೆಯನ್ನು ಪರಿಹಾರ ಮಾಡುವುದಕ್ಕಾಗಿ ವಿನಿಯೋಗಿಸಲಾಯಿತು. ಈ ನಿಧಿಗಳಿಗೆ ಒಟ್ಟು 8,93 ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಕೊಡಿಸಬೇಕಾಗಿದ್ದಿತು. 1930-31 ನೆಯ ಸಾಲಿನ ವರೆಗೂ ಈ ನಿಧಿಗಳಿಗೆ ಹಣವನ್ನು ಸಲಿಸುತ್ತಾ ಬರಲಾಗಿದ್ದಿತು. ಆದರೆ 1931-32 ನೆಯ ಸಾಲಿನಲ್ಲಿ ಬಜೆಟ್ ಅಂದಾಜಿನಲ್ಲಿಯೂ ಮತ್ತು ತಿದ್ದುಪಾಟಾದ ಅಂದಾಜಿನಲ್ಲಿಯೂ ಸಹ ಹುಟ್ಟುವಳಿಯು ಬಹಳ ಮಟ್ಟಿಗೆ ಇಳಿದು ಹೋಗುವುದಾಗಿ ತೋರಿಬಂದಿದ್ದ ಕಾರಣ ಈ ನಿಧಿಗಳಿಗೆ ಹಣವನ್ನು ಒದಗಿಸಿರಲಿಲ್ಲ. ಹುಟ್ಟುವಳಿಯ ಬಾಬಿನಲ್ಲಿ ಅವಶ್ಯವಾಗಿ ಹೆಚ್ಚು ಹಣವು ಕಾಣುವುದನ್ನು ತಪ್ಪಿಸುವ ಉದ್ದೇಶದಿಂದ 1931-32 ನೆಯ ಸಾಲಿನ ಆಖೈರು ಲೆಕ್ಕಗಳಲ್ಲಿ ಬಾಬುಗಳನ್ನು ವಿಂಗಡಿಸುವುದರಲ್ಲಿ ಕೂಡ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. IX ಬಡ್ಡಿ XIII ವಿವಿಧ ಬಾಬುಗಳು XIXA ಸಂಚಾರ ಮಾರ್ಗಗಳು ಮತ್ತು 11 ಅರಮನೆಯ ಇಲಾಖೆ—ಈ ಬಾಬುಗಳಲ್ಲಿ ಭಾರಿ ವ್ಯತ್ಯಾಸಗಳು ಕಂಡು ಬಂದಿರುವುದಕ್ಕೆ ಇದೇ ಕಾರಣ.

ಈ ಕಾರಣಗಳಿಂದ ಈ ವರುಷದ ಆಯವ್ಯಯದ ಫಲಿತಾಂಶಗಳಲ್ಲಿ ಒಟ್ಟು ಹುಟ್ಟುವಳಿಯು 338.19 ಲಕ್ಷ ರೂಪಾಯಿಗಳೂ, ಒಟ್ಟು ವೆಚ್ಚವು 356.40 ಲಕ್ಷ ರೂಪಾಯಿಗಳೂ ಆಗಿರುವುದಾಗಿ ಕಂಡುಬಂದಿದೆ. ಬಜೆಟ್ಟಿನ ಮೇರೆಗೆ 378.76 ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನೂ 376.84 ಲಕ್ಷ ರೂಪಾಯಿಗಳ ವೆಚ್ಚವನ್ನೂ ನಿರೀಕ್ಷಿಸಲಾಗಿದ್ದಿತು.

ಬಂಡವಾಳದ ಬಾಬಿನಲ್ಲಿ ವಾಸ್ತವವಾಗಿ ನಡೆದಿರುವ ವೆಚ್ಚವು ತಿದ್ದುಪಾಟಾದ ಅಂದಾಜಿಗಿಂತಲೂ 5.20 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ. ವಿದ್ಯುಚ್ಛಕ್ತಿಯ ಇಲಾಖೆಯ ಗ್ರಾಂಟುಗಳಲ್ಲಿ 2.71 ಲಕ್ಷ ರೂಪಾಯಿಗಳಷ್ಟು ಮೊಬಲಗೂ ಮತ್ತು ಬೆಂಗಳೂರು ನೀರು ಸರಬರಾಯಿ ಹೊಸ ಕಾಮಗಾರಿಗಳ ಗ್ರಾಂಟುಗಳಲ್ಲಿ 3 ಲಕ್ಷ ರೂಪಾಯಿಗಳ ಮೊಬಲಗೂ ವೆಚ್ಚವಾಗದೆ ಸರ್ಕಾರಕ್ಕೆ ವಾಪಸಾದುದೇ ಇದಕ್ಕೆ ಮುಖ್ಯಕಾರಣ.

ಚಾಲ್ತಿಸಾಲಿನ ಬಜೆಟ್ಟನ್ನು ಸಿದ್ಧಪಡಿಸುವಾಗ್ಗೆ ಹುಟ್ಟುವಳಿಯ ಬಾಬಿನಲ್ಲಿ 1931-32 ನೆಯ ತಿದ್ದುಪಾಟಾದ ಅಂದಾಜಿನ ಲೆಕ್ಕಗಳ ಆಧಾರದಮೇಲೆ ಹುಟ್ಟುವಳಿ ಮೊಬಲಗನ್ನು ಕಾಣಿಸಿ ಬಜೆಟ್ಟನ್ನು ತಯಾರಿಸಲಾಯಿತು. ಆದರೆ ಗಂಧದ ಎಣ್ಣೆ ಮತ್ತು ರೈಲ್ವೆಗಳ ಬಾಬುಗಳಲ್ಲಿ ಸ್ವಲ್ಪ ಹೆಚ್ಚಿಗೆ ಹುಟ್ಟುವಳಿಯನ್ನು ನಿರೀಕ್ಷಿಸಿ ವೆಚ್ಚವನ್ನು ಅನಿವಾರ್ಯವಾದ ಕೇವಲ ಕನಿಷ್ಠ ಪರಿಮಿತಿಗೆ ಇಳಿಸಲಾಯಿತು. ಇದರಿಂದ ಒಟ್ಟು ಹುಟ್ಟುವಳಿಯು 352.72 ಲಕ್ಷ ರೂಪಾಯಿಗಳೂ, ಒಟ್ಟು ವೆಚ್ಚವು 362.60 ಲಕ್ಷ ರೂಪಾಯಿಗಳೂ, ಹುಟ್ಟುವಳಿಗಿಂತ ವೆಚ್ಚವು ಹೆಚ್ಚಿ ಹಣವು ಸಾಲದೆಹೋಗುವ ಕೊರತೆಯು 9.88 ಲಕ್ಷ ರೂಪಾಯಿಗಳು ಆಗಬಹುದೆಂದು ಬಜೆಟ್ಟಿನ ಪ್ರಕಾರ ಅಂದಾಜು ಮಾಡಲಾಯಿತು. ಇದುವರೆಗೆ ಬಂದಿರತಕ್ಕ ಹುಟ್ಟುವಳಿಯನ್ನೂ ಮತ್ತು ಇದುವರೆಗೆ ನಡೆದಿರುವ ವೆಚ್ಚವನ್ನೂ ನೋಡಿದರೆ ಈ ವರುಷದ ಹುಟ್ಟುವಳಿಯೂ ವೆಚ್ಚವೂ ಬಜೆಟ್‌ಅಂದಾಜುಗಳ ಪ್ರಕಾರವೇ ಇರಬಹುದೇ ಅಥವಾ ಹಾಗಿಲ್ಲದೆ ಬದಲಾವಣೆಯಾಗಬಹುದೇ—ಎಂಬುದನ್ನು ಇಷ್ಟು ಜಾಗ್ರತೆಯಾಗಿ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಅದಾಗ್ಯೂ, ಬಜೆಟ್ಟಿನಲ್ಲಿ ನಿರೀಕ್ಷಿಸಿರುವುದಕ್ಕಿಂತಲೂ ಉತ್ತಮವಾದ ಪರಿಣಾಮವುಂಟಾಗುತ್ತದೆಂಬುದಕ್ಕೆ ತಕ್ಕ ಸೂಚನೆಗಳೇನೂ ಇಲ್ಲದೆ ಹೋಗಿಲ್ಲ. 1931-32 ನೆಯ ಸಾಲಿನಲ್ಲಿ ವರಮಾನಕ್ಕಿಂತಲೂ ವೆಚ್ಚವು ಹೆಚ್ಚಾದುದಕ್ಕೆ ರೈಲ್ವೆಗಳು, ಗಂಧದ ಎಣ್ಣೆ ಮತ್ತು ಎಕ್ಸೈಜು—ಈ ಬಾಬುಗಳಲ್ಲಿ ಹುಟ್ಟುವಳಿಯು ಕಡಿಮೆಯಾದುದೇ ಕಾರಣ. ಈ ಮೂರು ಬಾಬುಗಳ ಪೈಕಿ ರೈಲ್ವೆಗಳ ಬಾಬಿನಲ್ಲಿ ಚಾಲ್ತಿ ಸಾಲಿನಲ್ಲಿ ಹುಟ್ಟುವಳಿಯು ಹೆಚ್ಚಾಗಿ ಬರುವ ಸೂಚನೆಗಳು ಸ್ವಲ್ಪ ಮಟ್ಟಿಗೆ ಕಂಡುಬರುತ್ತಿವೆ. ಹೆಚ್ಚು ಟ್ರೈನುಗಳನ್ನು ಬಿಡುವುದೂ, ಸಂಚಾರವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಕೈಕೊಂಡಿರುವುದೂ ಇದಕ್ಕೆ ಕಾರಣಗಳಾಗಿವೆ. ಎಕ್ಸೈಜು ಬಾಬಿನಿಂದ ಬರತಕ್ಕ ಹುಟ್ಟುವಳಿಯೂ ಕೂಡ ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕೆ ಕಡಿಮೆಯಾಗಲಾರದೆಂದು ತೋರುತ್ತಿದೆ. ಜರ್ಮನಿಯಿಂದ ಯುದ್ಧದ ವೆಚ್ಚದ ಸಲುವಾಗಿ ಕೊಡಲ್ಪಡಬೇಕಾಗಿದ್ದ ಮೊಬಲಗುಗಳ ಬಾಬತು ಸಂಸ್ಥಾನದ ಪಾಲಿಗೆ ಇಂಡಿಯಾ ಸರ್ಕಾರದವರಿಂದ 98.945 ರೂಪಾಯಿಗಳು ಪ್ರಸಕ್ತ ಸಾಲಿನಲ್ಲಿ ಸಂದಾಯವಾದುವು. ಗಂಧದ ಎಣ್ಣೆಯ ಮಾರಾಟವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ನಡಿಸಿದಾಗ್ಯೂ, ಸಹ ಗಂಧದ ಎಣ್ಣೆಯ ಬಾಬಿನಲ್ಲಿ ಹುಟ್ಟುವಳಿಯು ತೃಪ್ತಿಕರವಾಗಿ ಪರಿಣಮಿಸುವಂತಿಲ್ಲ.

ಬಂಡವಾಳದ ವೆಚ್ಚಕ್ಕಾಗಿ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗನ್ನು ಬಹಳಮಟ್ಟಿಗೆ ಹೆಚ್ಚಿಸಬೇಕಾಗುತ್ತದೆಂದು ಈಗ ಕಂಡುಬಂದಿದೆ. ಏಕೆಂದರೆ ಕೆಲವು ಜರೂರಾದ ಮತ್ತು ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಈಗ ನಡೆಯಿಸಬೇಕಾಗಿದೆ. ಇವುಗಳನ್ನು ಮುಂದಕ್ಕೆ ಹಾಕುವ ಹಾಗಿಲ್ಲ. ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳಿಗೆ ಇನ್ನೂ 8,20 ಲಕ್ಷ ರೂಪಾಯಿಗಳ ಹೆಚ್ಚಿಗೆ ಗ್ರಾಂಟು ಅವಶ್ಯಕವಾಗಿರುವುದಾಗಿ ಕಂಡುಬಂದಿದೆ. ಆ ಪೈಕಿ 3 ಲಕ್ಷ ರೂಪಾಯಿಗಳು ಹೋದವರ್ಷ ವೆಚ್ಚವಾಗದೆ ವಾಪಸಾಗಿ ಈ ವರ್ಷ ಪುನಃ ಒದಗಿಸಬೇಕಾಗಿರುವ ಮೊಬಲಗಾಗಿದೆ. ಉಳಿದ 5 ಲಕ್ಷ ರೂಪಾಯಿಗಳು ಜಲಾಶಯದ ಆಖೈರು ಮಟ್ಟಕ್ಕೆ ಉದ್ದೇಶಿಸಿರತಕ್ಕ ಪೂರ್ತಿ ಅಗಲದ ವರೆಗೆ ಕಟ್ಟೆಯನ್ನು ಅಗಲಮಾಡುವುದಕ್ಕಾಗಿ ಬೇಕಾಗುತ್ತವೆ. ಇಂಜಿನಿಯರುಗಳು ಏಕಾಭಿಪ್ರಾಯದಿಂದ ಮಾಡಿರತಕ್ಕ ಸಲಹೆಯ ಮೇಲೆ ಈ ಏರ್ಪಾಡನ್ನು ಕೈಕೊಳ್ಳಲೇಬೇಕಾಗಿ ಬಂದಿತು. ಈ ಕೆಲಸದ

ಒಳದೇಶದ ವೃತ್ತಾಂತಗಳು.

ಮದರಾಸ್ ಗವರ್ನಮೆಂಟಿನ ಸಚಿವರಾಗಿದ್ದ ಮ|| ರಾ|| ಪಿ. ಸುಬ್ಬಾರ್ಯಾರವರು ಕಳೆದವಾರ ಬೆಂಗಳೂರಿನ ಸ್ವದೇಶೀವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿ, ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ವಿಜಯದಶಮಿಯ ದಿವಸ ನಡೆದ ಗಲಭೆಯ ಸಂಬಂಧವಾಗಿ ಇದೇ ಅಕ್ಟೋಬರ್ 23 ನೇ ತಾರೀಖಿನ ದಿವಸ ಬೆಳಗ್ಗೆ 9½ ಗಂಟೆಯಿಂದ ಮಧ್ಯಾಹ್ನ 1½ ಗಂಟೆವರೆಗೂ ಟವುನ್‌ಹಾಲ್ ಮೈದಾನದಲ್ಲಿ ಪೋಲೀಸ್ ಸೂಪ್ರೆಂಟ್ ಸೂಪರಿಂಟೆಂಡೆಂಟರೇ ಮೊದಲಾದ ಪೋಲೀಸ ಅಧಿಕಾರಿಗಳ ಸಮ್ಮುಖದಲ್ಲಿ ಒಂದು ಐಡೆಂಟಿಫಿಕೇಷನ್ (ಗುರುತುಹಿಡಿಯುವುದು) ಪರೇಡ್ ನಡೆಯಿತು.

ರಾಜಧಾನಿಯಲ್ಲಿ ವಿಜಯದಶಮಿಯ ದಿವಸ ನಡೆದ ಟಿಯ ಮೂಲಕಾರಣವನ್ನು ತನಿಖೆಮಾಡಿ ವರದಿ ಒಪ್ಪಿಸಲು ನಿಯಮಿಸಲ್ಪಟ್ಟಿದ್ದ ರೆವಿನ್ಯೂ ಕಮಿಷನರ್ ಮಿ|| ಎಸ್. ಪಿ. ರಾಜಗೋಪಾಲಾಚಾರ್ಯರವರು ಒಂದು ವಾರದವರೆಗೆ ವಿಚಾರಣೆಯನ್ನು ನಡೆಯಿಸಿ, ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿರುವುದಾಗಿ ತಿಳಿದುಬಂದಿದೆ. ಈ ವರದಿಯಮೇಲೆ ಸರಕಾರದವರು ಅಪ್ಪಣೆಯನ್ನು ಮಾಡುವರೋ ಎಂದು ಪ್ರಜೆಗಳೆಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಈ ಸಾರಿ ತುಮಕೂರು ಡಿ|| ಹೊಳವನಹಳ್ಳಿಯಲ್ಲಿ ಸೇರಿದ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಮಹೋತ್ಸವ ಸಮಯದಲ್ಲಿ ಬೆಳ್ಳಾವಿ ರುದ್ರಮುನಿ ಪೀಠಾಭಿಮಾನಿ ಮಲ್ಲಿಕಾರ್ಜುನಶಾಸ್ತ್ರಿಗಳಿಗೆ 'ಜ್ಯೋತಿಷಭೂಷಣ' ಎಂಬ ಪದವಿಯೂ, ಕಂಬಾಳಿ ಅಮರನಾಥಶರ್ಮರಿಗೆ 'ಭಿಷಗ್ಭೂಷಣ' ಪದವಿಯೂ, ರಾಯಚೂರು ಗವಯಿ ಬಾಜಪ್ಪನವರಿಗೆ 'ಸಂಗೀತ ವಿದ್ವಾನ್' ಎಂಬ ಪದವಿಯೂ ಬಹುಮಾನಗಳೊಡನೆ ಕೊಡಲ್ಪಟ್ಟವೆಂದು ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದ ಸ್ತ್ರೀಯರ ಸಮ್ಮೇಳನದ ಅಧ್ಯಕ್ಷರಾದ ಲೇಡಿ ಮಿರ್ಜಾ ಎಂ. ಇಸ್ಮಾಯಿಲ್‌ರವರು ಇತರ ಸದಸ್ಯರೊಡನೆ ಇದೇ ಅಕ್ಟೋಬರು ೨೬ ನೇ ತಾರೀಖಿನ ಪ್ರಾತಃಕಾಲ 10 ಗಂಟೆಗೆ ಬೆಂಗಳೂರು ಗೌರ್ನಮೆಂಟ್ ಸಾಬೂನಿನ ಕಾರ್ಖಾನೆಗೆ ಭೇಟಿಮಾಡಿ ಅಲ್ಲಿಯ ಕಾರ್ಯಕ್ರಮಗಳನ್ನೂ, ಅಲ್ಲಿ ತಯಾರಾಗುವ ಸುಗಂಧದ್ರವ್ಯಗಳನ್ನೂ ನೋಡಿ ಸಂತೋಷಪಟ್ಟರು. ಸೋಪ್‌ಫ್ಯಾಕ್ಟರಿಯ ಡೈರೆಕ್ಟರಾದ ಮಿ|| ಎಸ್. ಜಿ. ಶಾಸ್ತ್ರಿಗಳವರ ಪತ್ನಿಯವರು ಲೇಡಿ ಮಿರ್ಜಾರವರಿಗೆ ಸ್ವಾಗತವನ್ನು ಬಯಸಿ, ಫಲಪುಷ್ಪಗಳನ್ನು ಅರ್ಪಿಸಿದರು.

ಶ್ರೀರಂಗಪಟ್ಟಣದ ಮುನಿಸಿಪಾಲಿಟಿಯವರು ಸಂಗಮ, ಪಶ್ಚಿಮವಾಹಿನಿ ಮೊದಲಾದ ನದೀತೀರ ಪ್ರದೇಶಗಳಲ್ಲಿ ಪರಸ್ಥಳದಿಂದ ಬಂದು ಮದುವೆಮಾಡುವವರಿಗೆ 2 ರೂ. ನಿಂದ 5 ರೂ. ವರೆಗೆ ತೆರಿಗೆಯನ್ನು ಹಾಕಬೇಕೆಂದು ತೀರ್ಮಾನವಮಾಡಿರುತ್ತಾರೆ. ಈ ತೆರಿಗೆಯನ್ನು ವಿಧಿಸಬಾರದೆಂದು ಪ್ರಜಾಪ್ರತಿನಿಧಿಸಭೆಯಲ್ಲಿಯೂ ಸ್ವಲ್ಪ ಚರ್ಚೆಯು ನಡೆಯಿತು. ಕಳೆದ ವಾರ ಮೈಸೂರಿನ ಜನರೆಲ್ಲರೂ ಟವುನ್‌ಹಾಲಿನಲ್ಲಿ ಎ. ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯನ್ನು ಮಾಡಿ, ಮೇಲ್ಕಂಡ ತೆರಿಗೆಯು ಅನ್ಯಾಯವಾದುದೆಂದೂ, ಅದನ್ನು ವಜಾಮಾಡಬೇಕೆಂದೂ ಠರಾವುಗಳನ್ನು ಪಾಸುಮಾಡಿರುತ್ತಾರೆ.

ಕಾಂಗ್ರೆಸ್ಸಿನ ಕೋಶಾಧ್ಯಕ್ಷರೂ ಕಾಶಿಯ ಪ್ರಮುಖರೂ ಆದ ಬಾಬು ಶಿವಪ್ರಸಾದಗುಪ್ತರವರು ಕಾಯಿದೆ ಭಂಗದ ನಿಮಿತ್ತದಿಂದ ಲಕ್ನೋ ಕಾರಾಗೃಹದಲ್ಲಿ ಇಡಲ್ಪಟ್ಟಿದ್ದುದು ಸರಿಯಷ್ಟೆ! ಅವರಿಗೆ ಪಾರ್ಶ್ವವಾಯುರೋಗವು ಪ್ರಾಪ್ತವಾದುದರಿಂದ ಇವರ ಸ್ಥಿತಿಯು ಶೋಚನೀಯವಾಗಿ ತಾ|| ೨೩ ಕ್ಕೆ ಇವರು ಬಿಡುಗಡೆ ಮಾಡಲ್ಪಟ್ಟರು. ಸದ್ಯಃ ಇವರು ಲಕ್ನೋ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು.

ಸತ್ಯಾಗ್ರಹಸಮರವಾರ್ತೆ.

ಇದೇ ಅಕ್ಟೋಬರ್ ೨೩ ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಪ್ರಿನ್ಸೆಸ್ ಸ್ಟ್ರೀಟಿನಲ್ಲಿ ಔಷಧಿ ಮತ್ತು ಸೈಕಲ್ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದ 12 ಜನ ಕಾಂಗ್ರೆಸ್ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ಅಕ್ಟೋಬರ್ ೨೨ ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಪೆರೋಲಿನ ಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದ ಹಿಂದೂಸ್ಥಾನೀ ಸೇವಾದಳದ ಪ್ರಮುಖಕಾರ್ಯಕರ್ತರಾಗಿದ್ದ ಮಿಸ್ ಕಿರ್ಶ ಧುಮತ್‌ಕರ್‌ರವರು ಪೆರೋಲಿನ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಕಾರಣದ ಮೇಲೆ ೨೩ ನೇ ತಾರೀಖಿನ ದಿವಸ ಪುನಃ ದಸ್ತಗಿರಿ ಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಒಂದು ವರ್ಷ ಕಠಿಣ ಸಜೆಯನ್ನೂ 300 ರೂ. ಜುಲ್ಮಾನೆಯನ್ನೂ ವಿಧಿಸಿದರು.

ಅಕ್ಟೋಬರು ೨೪ ನೇ ತಾರೀಖಿನ ದಿವಸ ಬೆಳಗ್ಗೆ ಮುಂಬಯಿ ಪೋಲೀಸರು ಪೈಧೋಣಿ ಬಳಿಯಲ್ಲಿರುವ ಒಂದು ಮನೆಯನ್ನು ಜಪ್ತುಮಾಡಿ ಅಲ್ಲಿ ದೊರೆತ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನೂ ಕಾಗದಪತ್ರಗಳನ್ನೂ ವಶಪಡಿಸಿಕೊಂಡದ್ದಲ್ಲದೆ ಅಲ್ಲಿ ಮಲಗಿದ್ದ 10 ಜನ ಕಾಂಗ್ರೆಸ್ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಅಕ್ಟೋಬರು ೨೪ ನೇ ತಾರೀಖಿನ ದಿವಸ ಮುಂಬಯಿಯ ಮೂರನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ಪರದೇಶೀ ಸಾಮಾನುಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ ಕಾಲದಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದ 15 ಜನ ಕಾಂಗ್ರೆಸ್ ಸ್ವಯಂಸೇವಕರಿಗೆ ಆರಾರು ತಿಂಗಳು ಕಠಿಣಸಜೆಯನ್ನು ವಿಧಿಸಿದರು. ಇದೇ ದಿವಸ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚಿದರೆಂಬ ಕಾರಣದ ಮೇಲೆ 4 ಜನ ಸ್ವಯಂಸೇವಕರೂ, ಕೋರ್ಟಿನಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರೆಂಬ ಕಾರಣದ ಮೇಲೆ ಒಬ್ಬ ಸ್ವಯಂಸೇವಕನೂ ದಸ್ತಗಿರಿ ಮಾಡಲ್ಪಟ್ಟರು.

ಸೂರತ್ ಡಿಸ್ಟ್ರಿಕ್ಟಿನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಚಳವಳಿಗೆ ಬರೋಡಾಸಂಸ್ಥಾನದ ನವಸಾರಿಯು ಮುಖ್ಯಕೇಂದ್ರವಾಗಿರುವುದೆಂಬ ಅನುಮಾನದಮೇಲೆ ಸೂರತ್ತಿನ ಪೋಲೀಸರು ಇದೇ ಅಕ್ಟೋಬರ್ 21 ನೆಯ ತಾರೀಖಿನ ದಿವಸ ನವಸಾರಿಯಲ್ಲಿ 4 ಮನೆಗಳನ್ನು ಜಪ್ತುಮಾಡಿದರು. ಅನೇಕ ಕಾಗದಪತ್ರಗಳೂ, ನೂರಾರು ಕಾಂಗ್ರೆಸ್ ಹಸ್ತಪತ್ರಿಕೆಗಳೂ, ಒಂದು ಗುಜರಾತಿ ಟೈಪ್‌ರೈಟರೂ ಪೋಲೀಸರ ವಶವಾದವು. 5 ಜನ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು. ಅವರಲ್ಲಿ ಒಬ್ಬ ಪ್ರಮುಖ ಕಾಂಗ್ರೆಸ್‌ಕಾರ್ಯಕರ್ತರೂ ಸೇರಿರುವರು.

ಲಾಹೋರಿನ "ನ್ಯೂ ಎರಾ" ಎಂಬ ಪತ್ರಿಕೆಯ ಸಂಪಾದಕರಾದ ಸರದಾರ ಪ್ರತಾಪಸಿಂಗರವರು ಅಮೃತಸರ ರಾಜಕೀಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದರೆಂಬ ಕಾರಣದ ಮೇಲೆ ವಿಚಾರಣೆ ಮಾಡಲ್ಪಟ್ಟು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನ ಪ್ರಕಾರ ಇವರಿಗೆ ಐದು ವರ್ಷ ಕಠಿಣ ಶಿಕ್ಷೆಯೂ 200 ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಇದರ ಮೇಲೆ ಇವರು ಪಂಜಾಬು ಹೈಕೋರ್ಟಿಗೆ ಅಪೀಲು ಮಾಡಲು ನ್ಯಾ|| ಮು|| ಜಯಲಾಲರವರು ಕೆಳಕೋರ್ಟಿನ ಶಿಕ್ಷೆಯನ್ನು ರದ್ದುಮಾಡಿದರು. ಕಾಂಗ್ರೆಸ್ಸು ಕಾಯಿದೆಗೆ ವಿರುದ್ಧವಾದ ಸಂಸ್ಥೆಯಾಗಿರುವದಿಲ್ಲವಾದಕಾರಣ ಲಾಹೋರ್ ಕಾಂಗ್ರೆಸ್ಸಿನ ನಿರ್ಧರಪ್ರಕಾರ ಪರದೇಶೀವಸ್ತುಗಳ ಬಹಿಷ್ಕಾರ ಮತ್ತು ಸಂಪೂರ್ಣ ಸ್ವಾತಂತ್ರ್ಯದ ಠರಾವಿನ ಪ್ರಸಾರ ಮಾಡುವದು ಕಾಯಿದೆಗೆ ವಿರುದ್ಧವಾದದ್ದಲ್ಲವೆಂದು ಇವರು ತಮ್ಮ ನಿರ್ಣಯದಲ್ಲಿ ತಿಳುಹಿಸಿರುತ್ತಾರೆ.

ಆರ್ಡಿನೆನ್ಸ್ ಮಸೂದೆಯ ನಿಬಂಧನೆಗಳನ್ನು ಚರ್ಚಿಸಿ ವರದಿಯನ್ನೊಪ್ಪಿಸಲು ನೇಮಕವಾಗಿರುವ ಸೆಲೆಕ್ಟ್‌ಕಮಿಟಿಯವರು ಸದರಿ ಮಸೂದೆಯು 3 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರತಕ್ಕದೆಂದು ಅಭಿಪ್ರಾಯಪಟ್ಟಿರುವರು.

ವರ್ತಮಾನಸಂಗ್ರಹ

ಮಿ|| ಜೆ. ಎಂ. ಸೇನಗುಪ್ತರನ್ನು ಹಿಂದುಸ್ಥಾನ ಸರಕಾರದ ಹುಕುಮಿನ ಪ್ರಕಾರವಾಗಿ ಜಲಪೈಗುರಿ ಕಾರಾಗೃಹದಿಂದ ಅಲಿಪುರ ಸೆಂಟ್ರಲ್ ಜೈಲಿಗೆ ಒಯ್ದಿರುತ್ತಾರೆ. ಅಲ್ಲಿ ಎಕ್ಸ್-ರೇಕಿರಣಗಳಿಂದ ಇವರ ಪ್ರಕೃತಿಯನ್ನು ಪರೀಕ್ಷಿಸುವರಂತೆ!

ಇಂಡಿಯಾಸರಕಾರದ ಪ್ರತಿನಿಧಿಗಳು ಒಟ್ಟಾವಾ ಸಮ್ಮೇಳನದಲ್ಲಿ ಇತರ ಸಾಮ್ರಾಜ್ಯಗಳೊಡನೆ ವ್ಯಾಪಾರಸಂಬಂಧವಾಗಿ ಮಾಡಿಕೊಂಡಿರುವ ಒಪ್ಪಂದವನ್ನು ಜಾರಿಗೆ ತರಬೇಕೆಂದು ಸರ್ ಜೋಸೆಫ್‌ಭೋರ್‌ರವರು ದೆಹಲಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ಚರ್ಚೆಗೆ ತರುವರು.

ಇದೇ ಅಕ್ಟೋಬರ್ ೨೨ ಕ್ಕೆ ಆಖೈರಾದ ವಾರದಲ್ಲಿ ಮುಂಬಯಿಯಿಂದ ಪರದೇಶಗಳಿಗೆ 1,06,39,391 ರೂಪಾಯಿಗಳ ಬೆಲೆಯುಳ್ಳ ಬಂಗಾರವು ಪರದೇಶಗಳಿಗೆ ರವಾನಿಸಲ್ಪಟ್ಟಿತು. ಬ್ರಿಟಿಷರು ಬಂಗಾರದ ಬೆಲೆಯನ್ನು ತಗ್ಗಿಸಿದಂದಿನಿಂದ ಇದುವರೆಗೆ ಒಟ್ಟು 89,13,03,003 ರುಪಾಯಿಗಳ ಬಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿರುವುದು.

ಬಾಬು ಸುಭಾಷಚಂದ್ರಬೋಸ್‌ರವರು 11ನೆಯ ತಾರೀಖಿನ ದಿವಸ ಭವಾಲಿ ಎಂಬ ಆರೋಗ್ಯಸ್ಥಲಕ್ಕೆ ಸಾಗಿಸಲ್ಪಟ್ಟರು. ಡಿಸಂಬರ್ 15 ನೆಯ ತಾರೀಖಿನ ವರೆಗೆ ಅಂದರೆ ಅಲ್ಲಿಯ ಸಾನಿಟೋರಿಯಂ ಮುಚ್ಚಲ್ಪಡುವವರೆಗೆ ಅವರು ಅಲ್ಲಿಯೇ ಇರುವರು. ಮುಂದೆ ಎಲ್ಲಿಗೆ ಕಳುಹಿಸಲ್ಪಡುವರೆಂಬುದು ಅವರ ಪ್ರಕೃತಿಯ ಮೇಲೆ ನಿಶ್ಚಯಿಸಲ್ಪಡುವದು.

ಇದೇ ಅಕ್ಟೋಬರ್ ೨೬ ನೆಯ ತಾರೀಖಿನ ದಿವಸ ಮುಂಬಯಿ ಕರೆನ್ಸಿ ಆಫೀಸಿನಲ್ಲಿ ಕಪೂರ್‌ಚಂದ್ ಲಕ್ಷ್ಮಿಜಿ ಎಂಬ ಒಬ್ಬ ಮಾರ್ವಾಡಿ ವರ್ತಕರು 5740 ರೂಪಾಯಿಗಳ ಬೆಲೆಯುಳ್ಳ 5 ಮತು 10 ರೂಪಾಯಿಗಳ ಕಂತೆಯನ್ನು ಬದಲಾಯಿಸುವದಕ್ಕಾಗಿ ಕೌಂಟರಿನಮೇಲಿಟ್ಟು ಮತ್ತೊಬ್ಬ ಮಿತ್ರರೊಡನೆ ಮಾತನಾಡುತ್ತಿರುವಲ್ಲಿ ಯಾರೋ ದುಷ್ಟರು ಬಹು ಚತುರತೆಯಿಂದ ಆ ನೋಟುಗಳ ಕಂತೆಯನ್ನು ಅಪಹರಿಸಿ ಪರಾರಿಯಾಗಿರುತ್ತಾರೆ. ಪೋಲೀಸರು ತನಿಖೆ ಕ್ರಮಗಳನ್ನು ಜರುಗಿಸಿರುವರು.

ಚಿತ್ತಗಾಂಗ್ ಗಲಭೆಗೆ ಸಂಬಂಧಪಟ್ಟ ಅಪರಾಧಿಗಳನ್ನು ಸದರಿ ಪಟ್ಟಣದ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಹಿಂದೂಜನರು ಬಚ್ಚಿಟ್ಟಿರುವರೆಂಬ ಅನುಮಾನದ ಮೇಲೆ ಕಲ್ಕತ್ತಾ ಸರಕಾರದವರು ಚಿತ್ತಗಾಂಗ್ ಪಟ್ಟಣದ ಹಾಗೂ 7 ಹಳ್ಳಿಗಳ ಮೇಲೆ 80 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿರುತ್ತಾರೆ ಸದರಿ ಪ್ರಾಂತಗಳ ನಿವಾಸಿಗಳು ಡಿಸೆಂಬರು ಮೊದಲನೇ ತಾರೀಖಿನೊಳಗಾಗಿ ಸರ್ಕಾರದವರಿಗೆ ಬೇಕಾಗಿರುವ ಅಂಶಗಳನ್ನು ತಿಳಿಸದಿದ್ದಲ್ಲಿ ದಂಡವನ್ನು ಅವರಿಂದ ವಸೂಲ್ಮಾಡುವುದಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಸ್ಪೆಷಲ್‌ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ಬಂಗಾಳಾ ಗವರ್ನರವರು ಮೇಲ್ಕಂಡ ಆರ್ಡರನ್ನು ಹೊರಡಿಸಿರುತ್ತಾರೆ.

ಹಿಂದೂ, ಮುಸಲ್ಮಾನ ಮತ್ತು ಸಿಕ್ಕರ ಐಕಮತ್ಯಕ್ಕಾಗಿ ಪಂ|| ಮದನಮೋಹನ ಮಾಳವೀಯರು ಮತ್ತು ಮೌಲಾನಾ ಷೌಕತ್ತಾಲಿಯವರು ಕೈಕೊಂಡಿರುವ ಪ್ರಯತ್ನಕ್ಕೆ ಸಫಲವಾಗುವ ಚಿಹ್ನೆಗಳು ತೋರಿಬರುತ್ತಿರುವುವು. ಅಖಿಲಭಾರತ ಸರ್ವಪಕ್ಷೀಯ ಸಮ್ಮೇಳನವು ನವೆಂಬರು 3 ನೇ ತಾರೀಖಿನ ದಿವಸ ಅಲಹಾಬಾದಿನಲ್ಲಿ ಸೇರಬೇಕೆಂದು ನಿರ್ಧರಿಸಲ್ಪಟ್ಟಿರುವುದು. ಈ ಮಧ್ಯೆ ಮೌಲಾನಾ ಷೌಕತ್ತಾಲಿಯವರು ಗಾಂಧಿಯವರನ್ನು ಕೂಡಲೇ ಬಿಡುಗಡೆಮಾಡಿ ಅಲಹಾಬಾದಿನ ಸಮ್ಮೇಳನದಲ್ಲಿ ಅವರು ಭಾಗವಹಿಸಲು ಅವಕಾಶವನ್ನು ಕಲ್ಪಿಸಬೇಕೆಂದೂ, ಹಿಂದೂಮುಸಲ್ಮಾನ ಮತ್ತು ಸಿಕ್ಕರಲ್ಲಿ ಐಕಮತ್ಯವುಂಟಾಗಬೇಕಾದರೆ ಗಾಂಧಿಯವರ ಸಹಕಾರವು ಅತ್ಯವಶ್ಯಕವೆಂದೂ, ಅವರನ್ನು ಬಿಡುಗಡೆ ಮಾಡಿದರೆ ತಾವು ಅವರೊಡನೆ ಚರ್ಚೆಗಳನ್ನು ನಡೆಯಿಸಿ ಕಾನೂನುಭಂಗದ ಚಳವಳಿಯನ್ನು ನಿಲ್ಲಿಸುವಂತೆ ಅವರನ್ನೂ ಅವರ ಅನುಯಾಯಿಗಳನ್ನೂ ಒಪ್ಪಿಸುವೆವೆಂದೂ,' ಒಂದುವೇಳೆ ಅವರನ್ನು ಬಿಡುಗಡೆ ಮಾಡದಿರುವುದಾದರೆ ಅವರನ್ನು ಭೇಟಿಮಾಡಿ ಕಾರಾಗೃಹದಲ್ಲಿಯೇ ಅವರೊಡನೆ ಚರ್ಚೆಗಳನ್ನು ನಡೆಯಿಸಲು ತಕ್ಕ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದೂ ವೈಸರಾಯರಿಗೆ ಒಂದು ದೀರ್ಘವಾದ ಪತ್ರವನ್ನು ಬರೆದಿರುತ್ತಾರೆ.

ಮೂರನೇ ರೌಂ. ಟೇ. ಸಮ್ಮೇಳನದ ಪ್ರತಿನಿಧಿಗಳು.

ಮಂತ್ರಿಶ್ರೇಷ್ಠರ ಆಹ್ವಾನದ ಪ್ರಕಾರ, ಈ ಕೆಳಗೆ ನಮೂದಿಸಲಾಗಿರುವ ಸಂಸ್ಥಾನಿಕ ಪ್ರತಿನಿಧಿಗಳೂ, ಬ್ರಿಟಿಷ್ ಹಿಂದೂಸ್ಥಾನದ ಪ್ರತಿನಿಧಿಗಳೂ, ಮೂರನೇ ರೌಂ. ಟೇ. ಸಮ್ಮೇಳನದಲ್ಲಿ ಭಾಗವಹಿಸಿ, ಮುಂದಿನ ರಾಜ್ಯಶಾಸನ ವಿಚಾರವನ್ನು ಚರ್ಚಿಸುವರು. ಸದರಿ ಸಮ್ಮೇಳನವು ಲಂಡನ್ನಿನಲ್ಲಿ ನವಂಬರು ೧೭ ನೇ ತಾರೀಖಿನ ವೇಳೆಗೆ ಪ್ರಾರಂಭವಾಗುವುದು. ಕೆಳಗೆ ಕಾಣಿಸಿರುವ ಸಂಸ್ಥಾನಗಳ ರಾಜರುಗಳಿಗೆ ಆಹ್ವಾನವನ್ನು ಕಳುಹಿಸಿ, ಸ್ವತಃ ಹಾಜರಿರಬೇಕೆಂದೂ ಇಲ್ಲವೇ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ ಕೇಳಲಾಗಿತ್ತು. ಬರೋಡಾ ಸಂಸ್ಥಾನದ ಪರವಾಗಿ ರಾವ್‌ಬಹದ್ದೂರ್ ವಿ. ಟಿ. ಕೃಷ್ಣಮಾಚಾರ್ಯರೂ, ಭೋಪಾಲ್ ಸಂಸ್ಥಾನದ ಪರವಾಗಿ ರಾಯ್‌ಬಹದ್ದೂರ್ ರಾಜಾ ಔಧ್ ನಾರಾಯಣ ಬಿಸರಿಜಾರವರೂ, ಬಿಕಾನೀರ್ ಸಂಸ್ಥಾನದ ಪರವಾಗಿ ಸರ್. ಮನುಭಾಯಿ ಮೆಹತಾರವರೂ, ಹೈದರಾಬಾದ್ ಪರವಾಗಿ ಸರ್ ಅಕ್ಬರ್ ಹೈದರಿಯವರೂ, ಕಾಶ್ಮೀರದ ಪರವಾಗಿ ಮಿ|| ವಜಾಹತ್ ಹುಸೇನ್‌ರವರೂ, ಕೊಲ್ಲಾಪುರದ ಪರವಾಗಿ ರಾವ್‌ಬಹದ್ದೂರ್ ಡಿ. ಎ. ಸುರ್ವೆಯವರೂ, ಮೈಸೂರಿನ ಪರವಾಗಿ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರೂ, ನವಾನಗರದ ಪರವಾಗಿ ಮಿ|| ರಷ್‌ಬ್ರೂಕ್ ವಿಲಿಯಂಸ್‌ರವರೂ, ಪಾಟಿಯಾಲಾಪರವಾಗಿ ನವಾಬ್ ಲಿಯಾಖತ್‌ಹುಸೇನರೂ, ಜಯಪುರ, ಜೋಧ್‌ಪುರ ಮತ್ತು ಉದಯಪುರ ಸಂಸ್ಥಾನಗಳ ಪರವಾಗಿ ಸರ್ ಸುಖದೇವಪ್ರಸಾದರವರೂ, ಚಿಕ್ಕಪುಟ್ಟ ಸಂಸ್ಥಾನಗಳ ಪರವಾಗಿ ಸರಿಲಾ ರಾಜರೂ ಸಮ್ಮೇಳನದಲ್ಲಿ ಹಾಜರಾಗುವರು.

ಬ್ರಿಟಿಷ್ ಹಿಂದೂಸ್ಥಾನದ ಪರವಾಗಿ ಈ ಕೆಳಗೆ ಕಂಡ ಪ್ರತಿನಿಧಿಗಳು ಆಹ್ವಾನಿಸಲ್ಪಟ್ಟಿರುವರು.—

ಆಗಾಖಾನರು, ಡಾ|| ಅಂಬೇಡ್ಕರ್, ಬೊಬ್ಬಿಲಿ ರಾಜರು, ಸರ್ ಹ್ಯೂಬರ್ಟ್‌ಕಾರ್‌ರವರು, ಮಿ|| ಎ. ಎಚ್. ಘಜ್ನಾವಿ, ಸರ್ ಹೆನ್ರಿ ಗಿಡ್ನಿ, ಸರ್ ಮಹಮದ್ ಇಕ್ಬಾಲ್, ಮಿ|| ಎಂ. ಆರ್. ಜಯಕರ್, ಸರ್ ಕವಾಸ್ಜಿ ಜಹಾಂಗೀರ್ [ಜೂನಿಯರ್], ಮಿ|| ಎನ್. ಸಿ. ಕೇಲ್ಕರ್, ದಿವಾನ್‌ಬಹದ್ದೂರ್ ಎ. ರಾಮಸ್ವಾಮಿ ಮೊದಲಿಯಾರ್, ಪಂಡಿತ ನಾನಕ್‌ಚಂದ್, ರಾವ್‌ಬಹದ್ದೂರ್ ಸರ್ ಪತ್ರೋ, ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್, ಸರ್ ತೇಜ್‌ಬಹದ್ದೂರ್ ಸಪ್ರು, ಡಾ|| ಷಾಫತ್ ಅಹಮದ್‌ಖಾನ್, ಸರ್ದಾರ್ ತಾರಾಸಿಂಗ್, ಚೌಧರಿ ಜಫರುಲ್ಲಾಖಾನ್.

ಮೇಲ್ಕಂಡವರಲ್ಲಿ ಕೆಲವರು ೨೯ ನೇ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಮಾಡಿದರು.

ಏಜಂಟರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೆನ್ಷನ್‌ದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ—ಹೊಳವನಹಳ್ಳಿ, ಡಿ|| ತುಮಕೂರು.

[3 ನೆಯ ಪುಟದಿಂದ ಮುಂದುವರಿದುದು.]

ಪಯೋಗದಲ್ಲಿದೆ. ಇದನ್ನು ಎತ್ತುವದಕ್ಕಾಗಿ 78 ಕಂಬಗಳನ್ನು ಹೊಸದಾಗಿ ಸ್ಥಾಪಿಸಿ ಅವಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಲಾಯಿತು. ಗ್ರಾಮಗಳಿಗೂ ಚಿಕ್ಕ ಚಿಕ್ಕ ಊರುಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ಒಂದು ಏರ್ಪಾಡನ್ನು ಆರುವರುಷಗಳ ಹಿಂದೆ ಕೈಕೊಳ್ಳಲಾಯಿತಷ್ಟೆ. ಆಗಿನಿಂದೀಚೆಗೆ ಸುಮಾರು 40 ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಲಾಗಿದೆ.

ಈ ಕೆಲಸಗಳಿಗಾಗಿ ವೆಚ್ಚಮಾಡಿದ ಒಟ್ಟು ಬಂಡವಾಳವು 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಸುಮಾರು 15½ ಲಕ್ಷ ರೂಪಾಯಿಗಳವರೆಗೆ ಆಗಿದೆ. ಈ ಬಂಡವಾಳದ ಹಣದ ಮೇಲೆ ಬಂದಿರುವ ನಿವ್ವಳ ಉತ್ಪತ್ತಿಯು ಪ್ರಾಯಶಃ ಎಲ್ಲಾ ಮುನಿಸಿಪಾಲಿಟಿಗಳ ವಿಷಯದಲ್ಲಿಯೂ ಹಾನಿಕರಿಯಾಗಿದ್ದ ಶೇಕಡಾವಾರಿಗಿಂತಲೂ ಕಡಮೆಯಾಗಿದ್ದರೂ ವಿದ್ಯುಚ್ಛಕ್ತಿಗೆ ಗಿರಾಕಿಯು ಹೆಚ್ಚಾಗುತ್ತಾ ಬಂದ ಹಾಗೆಲ್ಲಾ ಈ ಸ್ಥಾಪನೆಗಳಿಂದ ಇನ್ನು ಕೆಲವು ವರುಷಗಳೊಳಗಾಗಿಯೇ ಸಾಕಾದಷ್ಟು ವರಮಾನವು ಬರಬಹುದೆಂದು ನಿರೀಕ್ಷಿಸಲು ಕಾರಣವಿದೆ.

ಪ್ರಸಕ್ತವರುಷದಲ್ಲಿ ಕೆಲವು ಟ್ರಾನ್ಸ್‌ಫಾರ್ಮರುಗಳನ್ನು ಆಜಮಾಯಿಷಿಗಾಗಿ ಮಾಡಿಸಲಾಯಿತು. ಅವು ಸರಿಯಾಗಿಯೂ ಮಜಬೂತಾಗಿಯೂ ಇವೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ನೋಡಲಾಗಿ ಅವು ಚೆನ್ನಾಗಿರುವಂತೆ ಕಂಡುಬಂದಿದೆ. ಇದೊಂದು ತೃಪ್ತಿಕರವಾದ ವಿಷಯ. ಈ ಟ್ರಾನ್ಸ್‌ಫಾರ್ಮರುಗಳನ್ನು ಇಲಾಖೆಯವರು ಉಪಯೋಗಿಸುತ್ತಿದ್ದಾರೆ.

ರೈಲ್ವೆಗಳು.

ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆ ಕಂಪನಿಯವರಿಂದ ಕೆಲಸ ನಡೆಸಲ್ಪಡುತ್ತಿರುವ 271.48 ಮೈಲಿಗಳ ಲೈನುಗಳೂ ಸೇರಿ ಎಲ್ಲಾ ಒಟ್ಟು ಎಂದಿನಂತೆಯೇ 722.39 ಮೈಲಿಗಳ ರೈಲ್ವೆಯೇ ಪ್ರಸಕ್ತ ವರ್ಷದಲ್ಲಿಯೂ ಇದ್ದಿತು.

ರೈಲ್ವೆ ಇಲಾಖೆಯ ಒಟ್ಟು ಸಂಪಾದನೆಯು ಪ್ರಸಕ್ತ ವರ್ಷ 74.29 ಲಕ್ಷ ರೂಪಾಯಿಗಳ ವರೆಗೆ ಬಂದಿತು. ಕೆಲಸ ನಡಿಸಿದ ವೆಚ್ಚವು ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆ ಕಂಪನಿಯವರಿಗೂ ಡಿಸ್ಟ್ರಿಕ್ಟ್ ಬೋರ್ಡುಗಳವರಿಗೂ ಪಾವತಿ ಮಾಡಿದ ಸರ್ಪ್ಲಸ್ ಸಫೆಗಳೂ ಸೇರಿ 44.87 ಲಕ್ಷ ರೂಪಾಯಿಗಳವರೆಗೆ ಆಯಿತು. ಸವೆಕಲು ತಿಮ್ಮಸ್ತು ಫರ್ ನಿಧಿಗೆ ಕೊಡಬೇಕಾದ ಮೊಬಲಗಿಗಾಗಿ 3.29 ಲಕ್ಷ ರೂಪಾಯಿಗಳನ್ನು ತೆಗೆದ ನಂತರ ರೈಲ್ವೆ ಬಾಬಿನ ನಿವ್ವಳ ಹುಟ್ಟುವಳಿಯು 26.13 ಲಕ್ಷ ರೂಪಾಯಿಗಳು ಬಂದಹಾಗಾಯಿತು. ರೈಲ್ವೆಗಳನ್ನು ಹಾಕಿಸುವುದಕ್ಕಾಗಿ 5.88 ಕೋಟಿ ರೂಪಾಯಿಗಳ ಬಂಡವಾಳವನ್ನು ಮುಟ್ಟಿಸುವುದು ಸರಿಯಷ್ಟೆ. ಈ ಬಂಡವಾಳದ ಹಣದ ಮೇಲೆ ಶೇಕಡ 4.44 ರಂತೆ ಲಾಭವು ಬಂದಂತಾಯಿತು.

ಚಾಮರಾಜನಗರದಿಂದ ಕೊಳ್ಳೇಗಾಲಕ್ಕೆ 22.14 ಮೈಲಿಗಳ ದೂರ ಮೈಸೂರು ಸಂಸ್ಥಾನದವರು ರೈಲ್ವೆಯನ್ನು ಹಾಕಿಸಬಹುದೆಂದು ಇಂಡಿಯಾ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ. ಈ ಲೈನಿಗೆ 15.73 ಲಕ್ಷ ರೂಪಾಯಿಗಳು ವೆಚ್ಚವಾಗಬಹುದೆಂದು ಅಂದಾಜಾಗಿದೆ. ಈ ಲೈನಿಗೆ ವೆಚ್ಚವಾಗುವ ಬಂಡವಾಳದ ಪೈಕಿ ಮೂರನೇ ಒಂದು ಭಾಗದ ಮೊಬಲಗಿನ ಮೇಲೆ ಬಡ್ಡಿಯನ್ನು ಕೊಡುವುದಾಗಿ ಕೊಯಮುತ್ತೂರು ಜಿಲ್ಲಾ ಬೋರ್ಡಿನವರು ಖಾತರಿ ಕೊಟ್ಟಿದ್ದಾರೆ.

ಜುಡಿಷಿಯಲ್ ಇಲಾಖೆ.

ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಕೆಲಸವು ಗಣನೀಯವಾದ ರೀತಿಯಲ್ಲಿ ಹೆಚ್ಚಾಗಿದೆ. ಸಿವಿಲ್ ಕೋರ್ಟುಗಳಲ್ಲಿ ದಾಖಲಾದ ದಾವೆಗಳ ಸಂಖ್ಯೆಯು ಶೇಕಡ 9.6 ರಂತೆ ಹೆಚ್ಚಾಗಿದೆ. ಕ್ರಿಮಿನಲ್ ಕೋರ್ಟುಗಳಲ್ಲಿ ವಿಚಾರಣೆಗಾಗಿ ದಾಖಲಾದ ಕೇಸುಗಳ ಸಂಖ್ಯೆಯು ಶೇಕಡ 8.9 ರಂತೆ ಹೆಚ್ಚಾಗಿದೆ. ಬೆಂಗಳೂರಿನಲ್ಲಿರುವ ಅಡಿಷನಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟು ಇರತಕ್ಕ ಅವಧಿಯನ್ನು 1933 ನೆಯ ಇಸವಿಯಲ್ಲಿ ಸಿವಿಲ್ ಕೋರ್ಟುಗಳ ಬೇಸಿಗೆ ರಜಾದಿನಗಳು ಪ್ರಾರಂಭವಾಗುವ ವರೆಗೂ ಹೆಚ್ಚಿಸಲಾಗಿದೆ. ವೆಚ್ಚವನ್ನು ಕಡಿಮೆಮಾಡುವ ಏರ್ಪಾಡಿಗಾಗಿ ತರೀಕೆರೆಯಲ್ಲಿದ್ದ ಎರಡನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ವಜಾಮಾಡಲಾಯಿತು, ಮತ್ತು ಹುಣಸೂರಿನಲ್ಲಿರುವ ಎರಡನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಹಂಗಾಮಿಯಾಗಿ ಆ ಸ್ಥಳದಲ್ಲಿರುವ ಮುನ್ಸೀಫರ ಛಾರ್ಜಿನಲ್ಲಿ ಇಡಲಾಗಿದೆ. ಮೊಕದ್ದಮೆಗಳನ್ನು ವಿಚಾರಣೆ ಮಾಡುವುದಕ್ಕಾಗಿ ಮ್ಯಾಜಿಸ್ಟ್ರೇಟರುಗಳು ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡುವುದನ್ನು ಕಡಿಮೆಮಾಡಬೇಕಾಯಿತು. ಕೆಲವು ಸಿವಿಲ್ ಕೋರ್ಟುಗಳಲ್ಲಿ ಮೇಲಿಂದ ಮೇಲೆ ಬಾಕಿ ಉಳಿಯುತ್ತಿರುವ ಕೆಲಸವನ್ನು ಕಡಿಮೆಮಾಡುವ ಉದ್ದೇಶದಿಂದ ಸಬಾರ್ಡಿನೇಟ್ ಜಡ್ಜಿಗಳು ಮತ್ತು ಮುನ್ಸೀಫರುಗಳ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಿಗೆ ಅವರವರ ದರ್ಜೆಗೆ ತಕ್ಕಂತೆ ಸಿವಿಲ್ ಬಾಬಿನ ಕೆಲಸಗಳನ್ನು ಕೊಡಲಾಗಿದೆ. ಕೆಲವು ಬೆಂಚ್ ಕೋರ್ಟುಗಳಲ್ಲಿ ತೃಪ್ತಿಕರವಾಗಿ ಕೆಲಸವು ನಡೆಯುತ್ತಿರಲಿಲ್ಲವಾದ ಕಾರಣ ಅವುಗಳನ್ನು ತೆಗೆದುಹಾಕಲಾಯಿತು. ಇದರಿಂದ ಸರ್ಕಾರಿ ಸಂಬಳವನ್ನು ಪಡೆಯುತ್ತಿರುವ ಮ್ಯಾಜಿಸ್ಟ್ರೇಟರುಗಳಿಗೆ ಕೆಲಸವು ಹೆಚ್ಚಾಗಿರುವುದೇನೋ ನಿಜ. ಆದರೂ ಆ ಬೆಂಚು ಕೋರ್ಟುಗಳನ್ನು ತೆಗೆದುಹಾಕಲಾಯಿತು.

ಪೋಲೀಸು ಇಲಾಖೆ.

ಸಂಸ್ಥಾನದಲ್ಲಿರುವ ಪೋಲೀಸು ಸಿಬ್ಬಂದಿಯನ್ನೂ ಮತ್ತು ಪೋಲೀಸು ಸಿಬ್ಬಂದಿಯ ಸ್ಥಳ ಮೊಕರೂರಾತಿಗಳನ್ನೂ ಈಗಿನ ಅವಶ್ಯಕತೆಗಳನ್ನನುಸರಿಸಿ ಪುನಃ ವಿಮರ್ಶಿಸಿ ನೋಡಲಾಯಿತು. ಪೋಲೀಸು ಇಲಾಖೆಯ ಪುನರ್ವ್ಯವಸ್ಥೆಗಾಗಿ ಒಂದು ಏರ್ಪಾಡನ್ನು 1931 ನೆಯ ಇಸವಿ ಸೆಪ್ಟಂಬರ್ ತಿಂಗಳಿನ ಲಾಗಾಯಿತು ಮಂಜೂರುಮಾಡಲಾಯಿತು. ಈ ಏರ್ಪಾಡಿನ ಫಲಿತಾಂಶವಾಗಿ 63,000 ರೂಪಾಯಿಗಳ ನಿವ್ವಳ ಮೊಬಲಗು ಮಿಗುತಾಯವಾಗಿದೆ. ಈ ಏರ್ಪಾಡನ್ನನುಸರಿಸಿ ಪೋಲೀಸು ಔಟ್‌ಪೋಸ್ಟುಗಳ ಮತ್ತು ಸ್ಟೇಷನುಗಳ ಸಂಖ್ಯೆಯನ್ನು ತೀರ ಅವಶ್ಯವಾದ ಕನಿಷ್ಠ ಪರಿಮಿತಿಗೆ ತಗ್ಗಿಸಲಾಯಿತು. ಪ್ರಾಂತಿಕ ರಿಜರ್ವ್ ಪೋಲೀಸು ಸಿಬ್ಬಂದಿಯನ್ನು ಹೆಚ್ಚುಮಾಡಿ ಪುನರ್ವ್ಯವಸ್ಥೆಗೊಳಿಸಲಾಯಿತು. ಮಂಜೂರಾಗಿರುವ ಔಟ್‌ಪೋಸ್ಟುಗಳಿಗೂ ಮತ್ತು ಪೋಲೀಸು ಠಾಣಾಗಳಿಗೂ ಹಂಗಾಮಿಯಾಗಿ ಜನಗಳನ್ನು ಸೇರಿಸಿಕೊಳ್ಳುವ ಕ್ರಮಯುವು ಬದಲಂತೆಯೇ ಅವುಗಳ ಆಡಳಿತವು ನಡೆಯುವ ಹಾಗೆ ಮಾಡುವ ಉದ್ದೇಶದಿಂದ ಎಲ್ಲಿ ಕೆಲಸವು ಖಾಲಿಯಾದರೆ ಅಲ್ಲಿಗೆ ಹೋಗಿ ಕೆಲಸಮಾಡತಕ್ಕ ರಿಜರ್ವ್ ಸಿಬ್ಬಂದಿಯೊಂದನ್ನು ಏರ್ಪಡಿಸಲಾಯಿತು. ಸಂಸ್ಥಾನದ ಸರ್ಕಾರಿ ಖಜಾನೆಗಳಲ್ಲಿ ಕಾವಲಿರುವ ಕರ್ತವ್ಯವು ಇದುವರೆಗೆ ಪದಾತಿ ಸೈನ್ಯದ ಸಿಪಾಯಿಗಳಿಗೆ ಸೇರಿದ್ದಿತಷ್ಟೆ! ಈ ಕರ್ತವ್ಯವನ್ನು 1932 ನೆಯ ಇಸವಿ ಜನವರಿ ತಿಂಗಳಿನ ಲಾಗಾಯಿತು ಪೋಲೀಸು ಇಲಾಖೆಗೆ ವರ್ಗಾಯಿಸಲಾಯಿತು. ಈ ಉದ್ದೇಶಕ್ಕಾಗಿ ಪೋಲೀಸು ಸಿಬ್ಬಂದಿಯನ್ನು ತಕ್ಕ ರೀತಿಯಲ್ಲಿ ಹೆಚ್ಚುಮಾಡಲಾಗಿದೆ.

ಸೈನ್ಯದ ಇಲಾಖೆ.

ಸೈನ್ಯದಲ್ಲಿ ಸಂಸ್ಥಾನದ ಅಶ್ವಾರೋಹಿಗಳ ಒಂದು ರಿಜಿಮೆಂಟ್ ದಳವೂ, 'ಮೈಸೂರು ಹಾರ್ಸ್' ಎಂಬ ಅಶ್ವಸೇನೆಯ ಸ್ಕ್ವಾಡ್ರನ್ ದಳವೂ, ಪದಾತಿ ಸೈನ್ಯದ (ಇನ್‌ಫೆಂಟ್ರಿ) ಮೂರು ಪಟಾಲಮುಗಳೂ, 'ಒಂದು ಮೆಕ್ಯಾನಿಕಲ್ ಟ್ರಾನ್ಸ್‌ಪೋರ್ಟ್ ಕೋರ್' ಎಂಬ ಸಾಮಾನು ಸಾಗಿಸುವ ಮೋಟಾರುಲಾರಿ ಮುಂತಾದ ಸಾಧನಗಳಿಗೆ ಸಂಬಂಧಪಟ್ಟ ಸಿಬ್ಬಂದಿಯೂ ಇವೆ. ಅಶ್ವಾರೋಹಿಗಳ ಎರಡು ರಿಜಿಮೆಂಟುಗಳೂ 'ಎ' ತರಗತಿಗೆ ಸೇರಿದವುಗಳಾಗಿವೆ. ಇವುಗಳಿಗೆ ನವೀನಕಾಲದ ಆಯುಧಗಳನ್ನು ಒದಗಿಸಲಾಗಿದೆ. ಇವರು ಯುದ್ಧೋದ್ಯೋಗಕ್ಕೆ ಸಿದ್ಧರಾಗಿರುವಂತೆ ಶಿಕ್ಷಣವನ್ನು ಕೊಡಲಾಗಿದೆ. ಪ್ರಸಕ್ತವರುಷದಲ್ಲಿ ಪದಾತಿಸೈನ್ಯದ ಪಟಾಲಮುಗಳನ್ನು (ಇನ್‌ಫೆಂಟ್ರಿ ಬ್ಯಟಾಲಿಗಳನ್ನು) ಪುನರ್ವ್ಯವಸ್ಥೆಮಾಡಲಾಯಿತು. ಖಜಾನೆಗಳ ಕಾವಲು ಕೆಲಸವೇ ಮುಂತಾದ ಸಿವಿಲ್ ಕರ್ತವ್ಯಗಳನ್ನು ಅವರಿಂದ ತಪ್ಪಿಸಲಾಯಿತು. ಅವರಿಗೆ ಸರಿಯಾದ ಶಿಕ್ಷಣವು ದೊರೆತು ಜರೂರಾದ ಸಂದರ್ಭಗಳಲ್ಲಿ ಈ ಸೇನೆಯವರೂ ಒದಗಲೆಂಬ ಉದ್ದೇಶದಿಂದ ಈ ಸೈನ್ಯದವರು ಕೆಲಕೆಲವು ಸ್ಥಳಗಳಲ್ಲಿರುವಂತೆ ನೇಮಕಮಾಡಲಾಗಿದೆ. ಅವರಿಗಿದ್ದ ಸೈನ್ಯ ಸಂಬಂಧವಲ್ಲದ ಕರ್ತವ್ಯಗಳನ್ನು ಪೋಲೀಸಿನವರಿಗೆ ವರ್ಗಾಯಿಸಲಾಯಿತು. ಪುನರ್ವ್ಯವಸ್ಥೆಗೊಳಿಸಲ್ಪಟ್ಟ ಸೈನ್ಯದಲ್ಲಿ ಯುದ್ಧೋದ್ಯೋಗಕ್ಕೆ ಸಿದ್ಧವಾಗಿರುವ ಒಂದು ಪಟಾಲಂ ಮತ್ತು ಒಂದು ಗ್ಯಾರಿಸನ್ ಪಟಾಲಂ ಎಂಬುದಾಗಿ ಮೂರು ಪಟಾಲಮುಗಳಿವೆ. ಒಂದನೆಯ ಮತ್ತು ಎರಡನೆಯ ಪಟಾಲಮುಗಳು ಬೆಂಗಳೂರಿನಲ್ಲಿವೆ. ಮೂರನೆಯ ಪಟಾಲಮಿನ ಕಸಬೆಯು ಮೈಸೂರೆಂದು ಗೊತ್ತುಮಾಡಿದೆ.

ಮೈಸೂರು ವಿಶ್ವವಿದ್ಯಾನಿಲಯ.

ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತಸಾಲಿನಲ್ಲಿ ಒಟ್ಟು 2,833 ಮಂದಿ ವಿದ್ಯಾರ್ಥಿಗಳಿದ್ದರು. 1930-31 ನೆಯ ಸಾಲಿನಲ್ಲಿ 2,808 ಮಂದಿ ವಿದ್ಯಾರ್ಥಿಗಳಿದ್ದರು. ಇಂಟರ್‌ಮೀಡಿಯೆಟ್ ಪರೀಕ್ಷೆಯು ಹೊರತು ಉಳಿದ ಎಲ್ಲಾ ಪರೀಕ್ಷೆಗಳ ಫಲಿತಾಂಶಗಳೂ ಸಮರ್ಪಕವಾಗಿದ್ದುವು. ನಾನಾ ಪರೀಕ್ಷೆಗಳಲ್ಲಿಯೂ ಸೇರಿ ಐವತ್ತೊಂಬತ್ತು ಮಂದಿ ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದರು. ಆ ಪೈಕಿ ಒಬ್ಬರು ಎಂ. ಬಿ. ಬಿ. ಎಸ್. ಡಿಗ್ರಿಯನ್ನು ಪಡೆದಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ 8000 ರೂಪಾಯಿಗಳಷ್ಟು ಮೊಬಲಗಿನ ಧರ್ಮಾರ್ಥವಾದ ದ್ರವ್ಯಗಳು (ಎಂಡೋಮೆಂಟುಗಳು) ಹೊಸದಾಗಿ ಅಂಗೀಕರಿಸಲ್ಪಟ್ಟುವು. ಅಲ್ಲಿಗೆ ಎಂಡೋಮೆಂಟುಗಳ ಒಟ್ಟು ಹಣವು 3,65,120 ರೂಪಾಯಿಗಳಾದ ಹಾಗಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಡಿಗ್ರಿಯನ್ನು ಮದರಾಸು ಸರ್ಕಾರದವರು ಮ್ಯುನಿಸಿಪಲ್ ಸಭೆಗಳಿಗೆ ನೇಮಕಮಾಡಿಕೊಳ್ಳುವ ಎಲೆಕ್ಟ್ರಿಕಲ್ ಇಂಜಿನಿಯರುಗಳಿರಬೇಕಾದ ಅರ್ಹತೆಯನ್ನಾಗಿ ಅಂಗೀಕರಿಸಿದ್ದಾರೆ. ಎಂ. ಬಿ. ಬಿ. ಎಸ್. ಡಿಗ್ರಿಯೂ ಮತ್ತು ಎಲ್. ಎಂ. ಪಿ. ಡಿಪ್ಲೊಮಾವೂ (ಪದಸ್ತಿಯೂ) ಬೊಂಬಾಯಿಯಲ್ಲಿಯೂ ಮತ್ತು ಬಂಗಾಳಾದಲ್ಲಿಯೂ ಮೆಡಿಕಲ್ ಪ್ರಾಕ್ಟಿಷನರುಗಳನ್ನು ರಿಜಿಸ್ಟರ್‌ಮಾಡಿಕೊಳ್ಳುವ ಉದ್ದೇಶಗಳಿಗಾಗಿ ಅಂಗೀಕೃತವಾಗಿವೆ. ಎಲ್. ಎಂ. ಪಿ. ಡಿಪ್ಲೊಮಾವು ಮದರಾಸಿನಲ್ಲಿಯೂ ಕೂಡ ಅಂಗೀಕರಿಸಲ್ಪಟ್ಟಿದೆ. ಇಂಡಿಯಾದೇಶದ 'ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್' ಎಂಬ ಸಂಸ್ಥೆಯವರಿಂದ ಬಿ. ಇ. ಡಿಗ್ರಿಯು ಅಂಗೀಕೃತವಾಗುವಂತೆ ಮಾಡುವ ವಿಷಯದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ.

(ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಸತ್ಕಾರ್ಯಪ್ರಶಂಸೆ.

ಹಿಂದಕ್ಕೆ ಉಪ್ಪಿನಬಟಗೇರಿಯು ಪಾಳನಾಳರಡ್ಡಿ ವೀರಶೈವ ವಂಶದವರ ರಾಜಧಾನಿಯೆನಿಸಿ ಇದರ ಕೈಕೆಳಗೆ ಸುಮಾರು ೫೫-೬೦ ಗ್ರಾಮಗಳಿದ್ದುವು. ಶ್ರೀಮಂತ ರಾಜಾಬಸವಂತರಾಯರ ಕಾಲದಲ್ಲಿ ಈ ವಂಶವು ಲೋಪವಾಯಿತೆಂದು ಗುರುಹಿರಿಯರು ಹೇಳುತ್ತಿದ್ದಾರೆ. ಇದು ಈಗ ನಮ್ಮ ಪ್ರಭುಗಳಾದ ನವಾಬಸಾಲಾರಜಂಗ ಬಹದ್ದೂರರವರ ವಶದಲ್ಲಿರುವದು. ಇಂಥ ಗ್ರಾಮದಲ್ಲಿ ಗುರುಭಕ್ತರು ಅಶ್ವಯುಜ ಶು|| ಪಾ|| ದಿಂದ ಪೌ|| ವರೆಗೆ ಶ್ರೀ ಆದಿಶಕ್ತಿಯ ಪುರಾಣವನ್ನು ಗ್ರಾಮದೇವತೆಯರಾದ ದ್ಯಾಮವ್ವ ಮತ್ತು ಲಕ್ಷ್ಮಾದೇವಿಯರ ಮೂರ್ತಿಗಳಿಂದ ಶೋಭಿಸ ದೇವಾಲಯದಲ್ಲಿ ಹೇಳಿಸಿದರು. ವೇ|| ಅಂದಾನಯ್ಯ ಸಾಲಿಮಠ ಇವರು ಸಂಗೀತದೊಡನೆ ಓದಿದರು. ''ವೇದಿಕಾಗ್ರಹಾಧಿಕಾರ'' ಪದವೀವಿಭೂಷಿತ ಮನೆಸನದ ವೇ|| ಅಮರನಾಥಶಾಸ್ತ್ರಿ ಹಿರೇಮಠ ಬನ್ನಿಕೊಪ್ಪ ಇವರು ಹಾಸ್ಯರಸಭರಿತವಾಗಿ ಭಕ್ತಿಯೂರುವಂತೆ ಬೋಧಿಸಿದರು. ಮೃದಂಗ ವಾದ್ಯಾದಿಗಳಿಂದ ಶಿವಭಜನಾದಿಗಳಿಂದ ಸುಗಮವಾಗಿ ಜರುಗಿ ಪೌರ್ಣಿಮೆಯ ದಿವಸ ಸಮಾರಾಧನಾದಿಗಳು ನಡೆದು ಪುರಾಣಕಾರ್ಯವು ಸಮಾಪ್ತವಾಯಿತು. ಮರುದಿನ ಶ್ರೀ ವಿರೂಪಾಕ್ಷೇಶ್ವರನಿಗೆ ಮ|| ಮುದಕಪ್ಪ ಬಳ್ಳಿಳ್ಳಿ ಇವರು ಶ್ರೀ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಾದಿಗಳನ್ನು ನಡಿಸಿ ಶಾಸ್ತ್ರಿಗಳು ವೇ|| ಶ್ರೀ ಕೊಟ್ರಯ್ಯನವರು ಸಾಲಿಮಠ ಮುಖಾಂತರದಿಂದ ವಿಧ್ಯುಕ್ತವಾಗಿ ನೆರವೇರಿಸಿ 'ಶ್ರೀ ಪಂಚಾಚಾರ್ಯ ಪ್ರಭಾ'' ಪತ್ರಿಕೆಯ ಪೋಷಣಾರ್ಥವಾಗಿ ೧ ರೂ. ಯನ್ನು ಶಾಸ್ತ್ರಿಗಳ ಅಪ್ಪಣೆಯಂತೆ ಒಪ್ಪಿಸಿದರು. ಭಗವದ್ಭಕ್ತರಿಗೆ ಜಯವಾಗಲೆಂದು ಹಾರೈಸುತ್ತೇನೆ.

ಬಿ. ಎಸ್. ವೀರಭದ್ರಪ್ಪ.

ಪೀಡಿಸಿ ನರಳಿಸುವ ದುಷ್ಟರೋಗಗಳು. ಆದರಿಸಿ ಸಂತೈಸುವ ಇಷ್ಟ ಮದ್ದುಗಳು.

ಮಲೇರಿಯೂನ—ಈ ಮದ್ದು ಮಲೆಜ್ವರ, ಕಂಪ, ಛಳಿಜ್ವರ, ವಾಯುದೆಸೆಟ್ಟು ಬರುವ ನಮೂನೆವಾರು ಜ್ವರಗಳನ್ನು ಗುಣಪಡಿಸಿ, ಬೆಳೆದಿದ್ದ ಗೆಡ್ಡೆಯನ್ನು ಸಂಪೂರ್ಣ ಕರಗಿಸಿಬಿಟ್ಟು ದೇಹಕ್ಕೆ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ 1-8-0. ½ ಡಜನ್ 8-8-0

ಕಂಪೌಂಡು ಸಿರಪ್‌ಕಾರ್ಡಸ್—ಕಲಿಜ ಮತ್ತು ಪಿತ್ತ, ಗುಲ್ಮದ ವಿವಿಧರೋಗಗಳನ್ನೂ, ತಲೆತಿರುಗುವದು, ನೆತ್ತಿಸುಡುವದು, ಪಿತ್ತ ಕಾರುವದು, ಮೂಗು ಕಣ್ಣು ಜ್ವಾಲೆ, ಹೊಟ್ಟೆಯಲ್ಲಿ ಬೆಂಕಿ, ಎದೆ ಉರಿ, ಕೈಕಾಲು ಬಿಸ್ತಲು ಇತ್ಯಾದಿ ರೋಗಗಳನ್ನು ಅನುಮಾನವಿಲ್ಲದೆ ಗುಣಪಡಿಸಿ, ದೇಹದ ಆರೋಗ್ಯವನ್ನು ಕಾಪಾಡುವದು. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಬ್ಲಿಟಿ—ಉಬ್ಬಸ ಸೇವನ ದಂ ರೋಗಕ್ಕೆ ವಿಶೇಷಪಟ್ಟದ್ದು. ಕೆಮ್ಮು, ಕಫ, ಎದೆ ನೋವು, ಪಕ್ಕೆಗೆಳ ಎಳೆದಾಟ, ಶ್ವಾಸಕ್ಕೆ ಕಷ್ಟ ಇತ್ಯಾದಿ ಯಾವತ್ತು ರೋಗಗಳನ್ನು ಗುಣಪಡಿಸಿ ಆರೋಗ್ಯಕೊಡುತ್ತದೆ. ಕ್ರಯ 8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪ್ ಸರ್ಸಅನೋಗ—ರಕ್ತಶುದ್ಧಿ, ಮೇಲ್ಪಟ್ಟ ಮದ್ದಾಗಿ ಶರೀರದಲ್ಲಿ ಬಿದ್ದಿರುವ ಬೊಕ್ಕೆ, ಖಜ್ಜಿ, ನಾನಾಬಗೆಯ ಚರ್ಮರೋಗಗಳನ್ನೂ, ಸೋರುವ ಹುಣ್ಣು ವ್ರಣಕಲೆಗಳನ್ನು ಗುಣಪಡಿಸಿ ದೇಹದ ರೂಪವನ್ನು ಭಂಗಾರದ ವರ್ಣಕ್ಕೆ ಮಾರ್ಪಡಿಸುವದು. ಕ್ರಯ 8 ಔನ್ಸಿಗೆ ರೂ. 3-8-0.

ಬೇಬಿಟೋನ್—ಮಕ್ಕಳ ಜೀರ್ಣಶಕ್ತಿ ಕುಂದಿ ದೇಹವು ಪುಷ್ಟಿಯಾಗದೆ, ನರ ನಾಡಿಗಳಲ್ಲಿ ನಿತ್ರಾಣ ಕಂಡ ಒಡನೆ ಹೆತ್ತವರು ಈ ಅಮೃತವನ್ನು ಮಕ್ಕಳಿಗೆ ಕ್ರಮವಾಗಿ ಕುಡಿಸಿದರೆ ಹೆತ್ತವರು ನಿಧಿಸಂಪನ್ನರಾಗುವರು. ಕ್ರಯ 4 ಔನ್ಸಿಗೆ ರೂ. 1 4.

ಕಂಪೌಂಡ್ ಸಿರಪ್ ವೆಸಿಥೂಜ—20 ತರದ ಪ್ರಮೇಹದ ಅಂಟುರೋಗಕ್ಕೆ ವಿಮುಕ್ತನು. ದ್ವಾರದೊಳಗೆ ನೋವು, ಉರಿ, ಸೋರುವ ಕೀವು, ನಾರುವ ವ್ರಣ, ಬೊಕ್ಕೆಗಳನ್ನು ಅತಿ ತ್ವರ್ಯದಲ್ಲಿ ಗುಣಪಡಿಸಿ ರೋಗಕ್ಕೆ ಪ್ರತಿಬಂಧಕನಾಗುವನು. 8 ಔನ್ಸಿಗೆ ರೂ. 3-8.

☞ ಇತ್ಯ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ ''**ಆರೋಗ್ಯಭಾಗ್ಯದ ನೀತಿಸೂತ್ರ**'' ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದುಕಳುಹಿಸುವೆವು.

[12] **ಮಲೇರಿಯೂನ ಕಂಪೆನಿ, ನಂಬ್ರ 21 (ಹಂಪನಕಟ್ಟೆ). ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೆ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣ ರೋಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಳ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಬನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲೆಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಟ್ಟಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟಿಚೆಟ್ಟು ಆಗೋಣ, ಮುಟ್ಟಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಪ್ಪಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷಧ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ. ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

50

ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SHEE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನವಾದ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಲೇಶಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[18] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಆಧ್ಯಾತ್ಮಿಕಶಾಸ್ತ್ರಪ್ರವಚನ ಸಮಾಪ್ತಿ.

ಕುಂದಗೋಳ.

ಸಮಸ್ತ ವೀರಶೈವ ಗುರುವರ್ಗಗಳಿಗೆ ಕೇಂದ್ರಸ್ಥಾನವಾದ ಕುಂದಗೋಳ ಪಂಚಗ್ರಹ ಬೃಹನ್ಮಠದಲ್ಲಿ ಹಿರಿ ಬೃಹನ್ಮಠ ಚರಪಟ್ಟಾಧ್ಯಕ್ಷರಾದ ತರ್ಕತೀರ್ಥ, ವೇದಾಂತವಿಶಾರದ, ಸಾಂಖ್ಯಾಲಂಕಾರ, ನ್ಯಾಯವಾಚಸ್ಪತಿ, ಶಿವಾದ್ವೈತ ಸಿದ್ಧಾಂತಪಯಃಪಾರಾವಾರರಾಕಾಸುಧಾಕರ ಇತ್ಯಾದಿ ಬಿರುದಾಂಕಿತರಾದ ಶ್ರೀ ನೀಲಕಂಠಶಿವಾಚಾರ್ಯಮಹಾಸ್ವಾಮಿಗಳವರು ಎರಡು ತಿಂಗಳ ಲಾಗಾಯಿತು ಆಧ್ಯಾತ್ಮಿಕಶಾಸ್ತ್ರಪ್ರವಚನವನ್ನು ನಡೆಯಿಸಿದ್ದು, ಮೊನ್ನೆ ಪರಿಸಮಾಪ್ತಿಯಾಯಿತು. ಮುಮುಕ್ಷುಗಳಿಗೆ ಜ್ಞಾನಾಮೃತವನ್ನು ಪಾನಮಾಡಿಸಿ, ಅವರಿಗೆ ಮೋಕ್ಷಮಾರ್ಗವನ್ನು ತೋರಿಸಿದ್ದು ಸಮಸ್ತ ಜನರೂ ಚಿರಕಾಲಸ್ಮರಿಸತಕ್ಕದ್ದಾಗಿದೆ. ಸ್ವಾಮಿಗಳವರ ಉಪದೇಶದಲ್ಲಿ ಅತ್ಯಂತೋತ್ಸಾಹವನ್ನು ವಹಿಸಿ ಸಮಸ್ತ ಮತದವರು ಪ್ರತಿನಿತ್ಯದಲ್ಲಿ ಶಾಸ್ತ್ರಶ್ರವಣಕ್ಕೆ ಬರುತ್ತಿದ್ದರು. ಪರಸ್ಥಳದ ಜನರಾದರೋ ತಂಡೋಪತಂಡವಾಗಿ ಬಂದು, ಸ್ವಾಮಿಗಳವರ ಉಪದೇಶವನ್ನು ಕೇಳುತ್ತಿದ್ದರು. ಸ್ಥಳ ಪರಸ್ಥಳ ಮುಮುಕ್ಷುಗಳು ಮನೆಗಾರ್ಯಗಳನ್ನು ಲಕ್ಷಿಸದೆ, ಯೋಗ್ಯಸಮಯಕ್ಕೆ ಬಂದು ಶಾಸ್ತ್ರಶ್ರವಣವನ್ನು ಮಾಡುವದೆಂದರೆ ಅವರಿಗೆ ಒಂದು ಚಟದಂತೆ ಪರಿಣಮಿಸಿತ್ತು. ಹೀಗೆ ಮುಮುಕ್ಷುಗಳಿಗೆ ಜ್ಞಾನಾಮೃತದ ಚಟವನ್ನು ಹಚ್ಚುವ ವಿಲಕ್ಷಣಶಕ್ತಿಯು ಹಿರಿ ಶ್ರೀಗಳಲ್ಲಿ ಸ್ವಭಾವಸಿದ್ಧವಾಗಿರುವದು. ಒಂದು ಸಾರೆ ಶ್ರೀಗಳ ಪ್ರವಚನವನ್ನು ಕೇಳಿದ ಮುಮುಕ್ಷುಗಳಿಗೆ ಮತ್ತೊಂದು ಸಾರೆ ಬಿಡುವಂತೆ ಆಗುವದಿಲ್ಲ. ಪ್ರವಚನದಲ್ಲಿ ದ್ವೈತ-ಅದ್ವೈತ, ವಿಶಿಷ್ಟಾದ್ವೈತ-ಶಕ್ತಿವಿಶಿಷ್ಟಾದ್ವೈತ-ದ್ವೈತಾದ್ವೈತ ಮೊದಲಾದ ಪ್ರಕ್ರಿಯೆಗಳನ್ನು ಅನುಸರಿಸಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ, ವೇದಾಂತಶಾಸ್ತ್ರಗಳ ಮುಖ್ಯಮುಖ್ಯ ತತ್ವಗಳನ್ನು ಗರ್ಭೀಕರಿಸಿ ಆಧ್ಯಾತ್ಮಿಕಜ್ಞಾನದ ಮರ್ಮವು ಪ್ರಾಪಂಚಿಕ ಪಾರಮಾರ್ಥತತ್ವಗಳಿಂದ ಕೂಡಿದ ಭಕ್ತಿ-ಜ್ಞಾನ-ವೈರಾಗ್ಯಗಳ ದ್ವಾರಾ ಶಾಶ್ವತಮೋಕ್ಷವನ್ನು ಪಡೆಯುವ ಕ್ರಮಪದ್ಧತಿಯು ಪಂಡಿತಪಾಮರರಿಗೆ ಅತ್ಯಂತಸರಳವಾಗಿ ಬೋಧಿಸಲ್ಪಡುತ್ತಿತ್ತು. ಈ ಪೂರ್ವದಲ್ಲಿ ಇಲ್ಲಿ ಒಬ್ಬ ಸಾಧುವೇಷಧಾರಿಯಾದ ದುರುಳ ವೇದಾಂತಿಯು ಜನರನ್ನು ಮರುಳುಮಾಡುತ್ತ ಧರ್ಮಶಾಸ್ತ್ರದ ಹುರುಳಿಲ್ಲದ ದುರುಪದೇಶವನ್ನು ಮಾಡಿ ಕೆಲವು ಜನರನ್ನು ಅತ್ತಹಾದಿಗೆ ಹಚ್ಚಿದ್ದರಿಂದಂತ ಯೋಗ್ಯಸಮಯವನ್ನರಿತು ಇಲ್ಲಿಯ ಪಂಚಗ್ರಹಬೃಹನ್ಮಠದ ಶ್ರೀ ಪೂಜ್ಯಪಾದ ಚರಮೂರ್ತಿಮಹಾಸ್ವಾಮಿಗಳವರು ಇಲ್ಲಿಯ ಸಮಸ್ತಸದ್ಭಕ್ತರ ಕೋರಿಕೆಯ ಪ್ರಕಾರ ಹಿರಿ ಮಹಾಸ್ವಾಮಿಗಳನ್ನು ಬರಮಾಡಿಕೊಂಡು ಮುಮುಕ್ಷುಗಳಿಗೆ ಅವರ ಜ್ಞಾನಾಮೃತದಿಂದ ತೃಪ್ತಿಪಡಿಸಿದ್ದು ಅತ್ಯಂತಸ್ಮರಣೀಯವಾದ ವಿಷಯವಾಗಿದೆ. ಇದೇ ಸಮಯದಲ್ಲಿ ಮುದೇನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ವಾಗೀಶಶಿವಾಚಾರ್ಯರು, ಹಿರೇಹರಕುಣಿ ಸಿದ್ಧಲಿಂಗಸ್ವಾಮಿಗಳು, ಹಂಚಿನಾಳ ಶಿತಿಕಂಠಶಾಸ್ತ್ರಿಗಳವರು ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಮುಮುಕ್ಷುಗಳಿಗೆ ಉಪದೇಶಿಸಿ ಧನ್ಯರನ್ನಾಗಿ ಮಾಡಿದರು. ಹುಬ್ಬಳ್ಳಿ ಹನ್ನೆರಡುಮಠದ ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರೂ ಸುತ್ತಲಿನ ಗ್ರಾಮದ ಅಜುಬಾಜು ಗುರುಸ್ಥಲ ಮಠಾಧಿಕಾರಿಗಳೂ ಆಗಮಿಸಿ ಮುಮುಕ್ಷುಗಳಿಗೆ ದರ್ಶನಾಶೀರ್ವಾದಗಳನ್ನು ಕೊಟ್ಟು ಪುನೀತರನ್ನಾಗಿ ಮಾಡಿದರು. ಜಗದುದ್ಧರಣಶೀಲರಾದ ಶ್ರೀ ಜಗದಾಚಾರ್ಯರು ಮುಮುಕ್ಷುಗಳಿಗೆ ಇತೋಪ್ಯತಿಶಯವಾದ ಜ್ಞಾನಾಮೃತದಲ್ಲಿ ಆಶೆಯನ್ನು ಹೆಚ್ಚಿಸಲೆಂದೂ ಸಮಸ್ತ ಗುರುವರ್ಗದವರು ಧರ್ಮಜ್ಞಾನೋಪದೇಶದಿಂದ ತಮ್ಮ ಶಿಷ್ಯರನ್ನು ಉದ್ಧರಿಸುವಂತೆ ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇನೆ.

ಕುಂದಗೋಳ. ಓರ್ವ ಮುಮುಕ್ಷು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಾತಿಗಳ ಬಗ್ಗೆ ವಾದವಿವಾದವೇಕೆ?

ವೀರಶೈವಜಾತಿನಿರ್ಣಯದ ಏರ್ಪಾಟು ಎಂಬ ಲೇಖದಿಂದ ಹಗರಿಬಿಷ್ಣ ಚಂದ್ರಶೇಖರಶಾಸ್ತ್ರಿಗಳು ಹಾಗೂ ಮಂಜಪ್ಪನು ಜಾತಿಗಳ ವಿಷಯದಲ್ಲಿ ವಾದ ವಿವಾದವನ್ನು ನಡೆಯಿಸುವದಕ್ಕೆ ಒಂದು ನಿರ್ಣಯವನ್ನು ಮಾಡಿಕೊಂಡಿದ್ದಾರೆಂಬುದು ಪತ್ರಿಕೆಯಿಂದ ತಿಳಿದುಬರುತ್ತದೆ. ವೀರಶೈವರಲ್ಲಿ ಜಾತಿಭೇದಗಳಿಲ್ಲವೆಂಬುದೇ ಮಂಜಪ್ಪನ ಪಕ್ಷವಂತೆ! ಜಾತಿಭೇದಗಳುಂಟೆಂಬುದೇ ಶಾಸ್ತ್ರಿಗಳ ಪಕ್ಷವಂತೆ! ಈ ತಮ್ಮ ತಮ್ಮ ಪಕ್ಷಗಳನ್ನು ವೇದ, ಆಗಮ, ಶಿಷ್ಟಾಚಾರ, ವಚನ, ಅಷ್ಟಾವರಣ ತತ್ವವಿಚಾರ ಇವುಗಳಿಂದ ಸಾಧಿಸುವರಂತೆ! ಈ ಇವರ ವಾದ ವಿವಾದಗಳ ಯುಕ್ತಾಯುಕ್ತತೆಯನ್ನು ಕಂಡುಹಿಡಿದು ಯುಕ್ತವಾದ ಪಕ್ಷವನ್ನೇ ಸಿದ್ಧಾಂತಪಡಿಸಿ ಪ್ರಚಾರಗೊಳಿಸಲು ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳುವದಕ್ಕೆ ಉಭಯರೂ ಒಪ್ಪಿರುವರಂತೆ! ಇದಕ್ಕೆ ಪಾವಟೆ (ಆವರಿಕಾಲು) ಸಿದ್ಧರಾಮಪ್ಪ, ಮುಸ್ಕಿ ಬಸವಪ್ಪಶಾಸ್ತ್ರಿಗಳು ಮೊದಲಾದ 11 ಜನಗಳು ಸಾಕ್ಷಿಗಳಂತೆ! ಇವರ ಈ ತರಹದ ಏರ್ಪಾಟು ಹಾಸ್ಯಾಸ್ಪದವಾಗಿದೆ. ಯಾಕೆಂದರೆ—ಕರತಲಾಮಲಕದಂತೆ ಪ್ರತ್ಯಕ್ಷಸಿದ್ಧವಾಗಿಯೂ, ಶಾಸ್ತ್ರಪ್ರಸಿದ್ಧವಾಗಿಯೂ ಇರುವ ವೀರಶೈವ ಜಾತಿಭೇದಗಳ ವಿಷಯವಾಗಿ ವಾದ ವಿವಾದವೇಕೆ? ಲೋಕದಲ್ಲಿರುವ ಲಿಂಗಧಾರಿಗಳಲ್ಲಿ ನೀನು ಯಾವ ಜಾತಿಯವನೆಂದು ಕೇಳಿದರೆ ತಾನು ಲಿಂಗಧಾರಿ ಶಿಂಪಿಗನಿದ್ದರೆ ನಾನು ಶಿಂಪಿಗನೆಂದೂ, ತಾನು ಲಿಂಗಧಾರಿ ಜಾಡನಿದ್ದರೆ ನಾನು ಜಾಡನೆಂದೂ, ತಾನು ಕ್ಷೌರಿಕನಿದ್ದರೆ ನಾನು ಕ್ಷೌರಿಕನೆಂದೂ, ತಾನು ಚಲವಾದಿಯಿದ್ದರೆ ನಾನು ಚಲವಾದಿಯೆಂದೂ, ತಾನು ವೇಶ್ಯಾಜಾತಿಯವನಾಗಿದ್ದರೆ ನಾನು ಸೂಳೆಯ ಮಗನೆಂದೂ ಮೊದಲಾಗಿ ಹೇಳುವ ಪದ್ಧತಿಯುಂಟು. ಇದರಿಂದ ವೀರಶೈವರಲ್ಲಿ ಜಾತಿಭೇದಗಳು ಪ್ರತ್ಯಕ್ಷಸಿದ್ಧಗಳೇ ಆಗಿರುವವೆಂಬುದು ಬಾಲಕನಿಗೂ ಸಹ ಒಡೆದು ತಿಳಿಯುವಂತಿದ್ದರೂ ಈ ವಾದಿ ಪ್ರತಿವಾದಿಗಳಿಗೆ ತಿಳಿಯದಿರುವದು ಆಶ್ಚರ್ಯಕರವಾಗಿದೆ.

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ |
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ||
ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾವ್ರತೀ |
ದದ್ಯಾತ್ತೇಭ್ಯಃ ಸಮಾದದ್ಯಾತ್ಕನ್ಯಾಂ ಕುಲಸಮುದ್ಭವಾಂ ||

ಇವೇ ಮೊದಲಾದ ಶಾಸ್ತ್ರಾಧಾರಗಳಿಂದ ವೀರಶೈವರಲ್ಲಿ ಜಾತಿಭೇದಗಳು ಸಿದ್ಧಗಳೇ ಆಗಿರುವವು. ಸಿದ್ಧಗಳಾದ ಜಾತಿಭೇದಗಳನ್ನೇ ಪುನಃ ಸಾಧಿಸಲು ಹವಣಿಸುವವರ ಪಕ್ಷವು ಸಿದ್ಧಸಾಧನದೋಷಗ್ರಸ್ತವಾಗುವದಲ್ಲವೇ? ಹಾಗೂ ಈ ಜಾತಿಭೇದಗಳಿಲ್ಲವೆನ್ನುವ ಮಂಜಪ್ಪನ ಪಕ್ಷವೂ ಕೂಡ ಪ್ರತ್ಯಕ್ಷಸಿದ್ಧವಾಗಿರುವ ತನ್ನ ಮುಖದ ಮೂಗೇ ಇಲ್ಲವೆನ್ನುವ ಹುಚ್ಚನಪಕ್ಷದಂತಾಗುವದಿಲ್ಲವೇ? ಆದ್ದರಿಂದ ಈ ಏರ್ಪಾಟು ಹೇಯವಾಗಿದೆ.

ಮಂಜಪ್ಪನು ತಾನು ಯಾವ ಜಾತಿಯವನು? ತನ್ನ ಗ್ರಾಮ ಯಾವುದು? ತನ್ನ ತಾಯಿಯ ಹೆಸರೇನು? ತಂದೆಯ ಹೆಸರೇನು? ಇವರ ಜಾತಿಯು ಯಾವದು? ಎಂಬುದನ್ನು ಮುಚ್ಚುಮರೆಯಿಲ್ಲದೆ ಪ್ರಸಿದ್ಧಪಡಿಸಿದರೆ ಉತ್ತಮವಾಗುವದು. ಈಗಿನ ಕಾಲದಲ್ಲಿ ಅನೇಕ ಜನ ಕಡಿಮೆ ಕುಲದವರು ತಮ್ಮ ಜಾತಿಯ ಹೆಸರನ್ನು ಹೇಳಿದರೆ ಅಸಹ್ಯವಾಗುತ್ತದೆಂದು ಭಾವಿಸಿ, ತಮ್ಮ ಮತದಲ್ಲಿ ಜಾತಿಗಳೇ ಇಲ್ಲವೆಂದು ಜನರನ್ನು ವಂಚಿಸ ಹತ್ತಿರುತ್ತಾರೆ. ಇವರು ತಮಗಿಂತಲೂ ಕೀಳುಜಾತಿಯವರೊಡನೆ ಈ ರೀತಿ ಬೋಧಿಸಲಿಕ್ಕೆ ಹೋಗುವದಿಲ್ಲ. ಹೆಚ್ಚಿನ ಜಾತಿಯವರೊಡನೆ ವಾದಿಸಲಿಕ್ಕೆ ಹೋಗಿ ತಮ್ಮ ಸ್ವರೂಪವನ್ನೆಲ್ಲಾ ಬೈಲಿಗೆ ಹಾಕಿಕೊಳ್ಳುತ್ತಾರೆ. ಸನಾತನಧರ್ಮಿಯರಾರೂ ಜಾತಿಸಂಕರದ ಸಹವಾಸಕ್ಕೆ ಬೀಳದೆ ಅವರನ್ನು ದೂರದಲ್ಲಿಯೇ ಇಟ್ಟು ತಮ್ಮ ಧರ್ಮದಂತೆ ನಡೆಯಬೇಕು.

ಶಿವೋಕ್ತಾಂ ಜಾತಿಮರ್ಯಾದಾಂ ಯೋತಿಕ್ರಮ್ಯ ಭುವಿವರ್ತತೇ |
ಸ ಚಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ||

ಎಂಬ ಶಿವಾಗಮ ವಾಕ್ಯವನ್ನು ಸರ್ವರೂ ನೋಡಿ ಜಾತಿ ತಾರತಮ್ಯವನ್ನು ಮೀರಿ ನಡೆಯದೆ ತಮ್ಮ ತಮ್ಮ ಜಾತಿಗಳನುಸಾರವಾಗಿ ನಡೆದು ಸುಖಿಗಳಾಗಬೇಕು. ಲೋಕದಲ್ಲಿ ತಂದೆಯು ಕುರೂಪಿಯಾಗಿದ್ದರೂ ಅವನಿಗೆ ತಂದೆಯಲ್ಲವೆಂದು ಹೇಳಲಿಕ್ಕೆ ಹೇಗೆ ಬರುವದಿಲ್ಲವೋ. ಅದರಂತೆಯೇ ಸೂಳೆಯಮಗನಾದರೇನು? ಮತ್ತೊಬ್ಬನ ಮಗನಾದರೇನು? ತಮ್ಮ ತಮ್ಮ ಜಾತಿಗಳನ್ನು ಬಚ್ಚಿಡದೆ ಒಡೆದು ಹೇಳುವದೇ ಭೂಷಣ! ಮುಚ್ಚುಮರೆಯಿಲ್ಲದೆ ತಮ್ಮ ಜಾತಿಯನ್ನು ಹೇಳತಕ್ಕವರ ಮೇಲೆ ಜಗದೀಶ್ವರನು ಪ್ರೀತಿಸುವನೆಂಬುದೂ, ತಮ್ಮ ಜಾತಿಯನ್ನು ಹೇಳದೆ ಮೋಸಮಾಡುವವರನ್ನು ಶಿಕ್ಷಿಸುವನೆಂಬುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದುದರಿಂದ ಸನಾತನ ಧರ್ಮಾನುಯಾಯಿಗಳೆಲ್ಲರೂ ತಮ್ಮ ತಮ್ಮ ಜಾತಿಧರ್ಮದಂತೆ ನಡೆದು ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಮಹಾಲಿಂಗಾರ್ಯ.

ಶ್ರೀ ಗುರುಭ್ಯೋನಮಃ.

ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಆಂದೋಳಿಕೋತ್ಸವ.

ರಾಜೇಸೂರು.

ಪಾಯಗಾ ಇಲಾಖಾ ರಾಜೇಸೂರು ಗ್ರಾಮದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಹಿರೇಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಗುರುಪಾದ ಸ್ವಾಮಿಗಳು ಮತ್ತು ಗ್ರಾಮದ ಗುರುಭಕ್ತರೆಲ್ಲರೂ ಕೂಡಿ ಶ್ರಾವಣ ಮಾಸದ ಆದಿಯಿಂದ ಭಾದ್ರಪದ ಮಾಸದವರೆಗೂ ಹೋಮಿನಾಬಾದಿನ ವೇ॥ ಸಿದ್ಧರಾಮಯ್ಯನವರು ಭಂಗಿ ಇವರ ಓದುಗಾರಿಕೆಯಿಂದಲೂ ವೇ॥ ಶಿವಯ್ಯನವರು ಮಠಪತಿ ಇವರ ವ್ಯಾಖ್ಯಾನದಿಂದಲೂ ಪುರಾಣಶ್ರವಣವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಪುರಾಣ ಸಮಾಪ್ತಿಯಾದನಂತರ ಶ್ರೀ ಪಟ್ಟಾಧ್ಯಕ್ಷ ಗುರುಪಾದಸ್ವಾಮಿಗಳ ಪಾದಪೂಜೆಯೂ, ಮಾಹೇಶ್ವರಾರಾಧನೆಯೂ ನೆರವೇರಿಸಲ್ಪಟ್ಟವು. ಅನಂತರ ಜಗದ್ಗುರುಗಳ ಭಾವಪಟವು ಪಲ್ಲಕ್ಕಿಯಲ್ಲಿ ಸಿಂಗರಿಸಲ್ಪಟ್ಟು ಊರಲ್ಲೆಲ್ಲಾ ಉತ್ಸವವು ನಡೆಯಿಸಲ್ಪಟ್ಟಿತು. ಈ ಉತ್ಸವ ಸಮಾರಂಭಕ್ಕೆ 5 ಗ್ರಾಮಗಳ ಭಜನಾಸಂಘದವರು ತಮ್ಮ ತಮ್ಮ ಬಿರುದಾವಳಿಗಳ ಸಮೇತರಾಗಿ ಆಗಮಿಸಿದ್ದು ಅವರ ಭಕ್ತಿಪೂರಿತವಾದ ಕೀರ್ತನದಿಂದಲೂ, ಜಯಘೋಷದಿಂದಲೂ ಉತ್ಸವಕ್ಕೆ ಅಪೂರ್ವಶೋಭೆಯುಂಟಾಗಿತ್ತು. ದಾರಿಯುದ್ದಕ್ಕೂ ಗುರುಭಕ್ತರು ಫಲಪುಷ್ಪ ಸಮರ್ಪಣೆಯಿಂದ ಗುರುಗಳನ್ನು ಸೇವಿಸಿ ಧನ್ಯರಾಗುತ್ತಿದ್ದರು. ಉತ್ಸವವು ಗ್ರಾಮದ ಬೀದಿಗಳಲ್ಲೆಲ್ಲಾ ಸುತ್ತಿಕೊಂಡು ರಾತ್ರಿ 1 ಗಂಟೆಯ ಸಮಯಕ್ಕೆ ಸ್ವಸ್ಥಾನವನ್ನು ಸೇರಿತು. ಅನಂತರ ಶ್ರೀ ಸಿದ್ಧವೀರಸ್ವಾಮಿಗಳು ಬೃಹನ್ಮಠ ಬನ್ನಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ, ಅದರಲ್ಲಿ ಮ॥ ಸಿದ್ಧರಾಮಯ್ಯನವರು ಭಂಗಿ,, ರಾ॥ ರಾಮಚಂದ್ರರಾವ್ ಆರ್ಯವೃತ್ತ, ಜೆನಾಬ್ ಪಾಷಾ ಹುಸೇನ ಸಾಬ ರಾಜೇಸೂರಕರರು ಮೊದಲಾದವರ ಉಪನ್ಯಾಸಗಳಾದುವು. ಅನಂತರ ಅಧ್ಯಕ್ಷರು ಧಾರ್ಮಿಕವಿಷಯದ ಮೇಲೆ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಆಚಾರ್ಯರ ತ್ರಿವಾರಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಮಹತ್ಕಾರ್ಯದಲ್ಲಿ ವೇ॥ ಗುರುಬಸಪ್ಪನವರು ಮುಲ್ಕೀಪಾಟೀಲ, ಮ॥ ರಾ॥ ವೀರಶೆಟ್ಟೆಪ್ಪನವರು ಪಾಟೀಲ, ಮ॥ ರಾ॥ ಸಂಗನಬಸಪ್ಪಾ ಲಕ್ಕಶೆಟ್ಟಿ, ಮ॥ ರಾ॥ ನಾಗಪ್ಪಶೀಗಿ, ಮ॥ ರಾ॥ ನಾಗಪ್ಪಾಗೋರಾ, ಶಿವರಾಯಪ್ಪಾಶೀಗಿ, ಮ॥ ರಾ॥ ಬಂಡೆಪ್ಪಾ ಲಕ್ಕಶೆಟ್ಟಿ, ಮ॥ ತೇಜಪ್ಪಾರಘೋಜಿ, ಜಿನಾಬಮಾಹಿತಾಬು ಸಾಬ್ ಪೋಲೀಸ ಪಾಟೀಲ, ಮೊದಲಾದ ಸದ್ಭಕ್ತರು ಅತ್ಯಂತಶ್ರಮವಹಿಸಿ ಕಾರ್ಯವನ್ನು ನೆರವೇರಿಸಿರುತ್ತಾದ್ದರಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ಇವರೆಲ್ಲರಿಗೂ ಮಂಗಲವನ್ನುಂಟುಮಾಡಲೆಂದು ಪ್ರಾರ್ಥಿಸುವ,

ಪಂಚಾಚಾರ್ಯ ಭಜನಾಸಂಘ, ರಾಜೇಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೬-೦
ಡಜ್ಜ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[19] ಪೋ. ಬಾ. ೫೧೦, ಮದರಾಸು

(Registered Trade Mark)

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 226 6

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ನವಂಬರ್ ೧೯೩೨ [ಸಂಚಿಕೆ ೨೬

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

ವೀರಶೈವರತ್ನ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ಎರಡು ಸಾರೆ ಮಾಡಿದ ಅಮೂಲ್ಯಭಾಷಣಗಳು ಈಗ ಹೊಸದಾಗಿ ಮುದ್ರಿಸಲ್ಪಟ್ಟಿವೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿರುವರು. ಈ ಯಾವತ್ತು ಭಾಷೆಗಳಲ್ಲಿ ಪ್ರಿಂಟಾದ ಭಾಷಣಗಳು ನಮ್ಮಲ್ಲಿಯೇ ಮಾರಾಟಕ್ಕೆ ಸಿದ್ಧವಾಗಿರುವವು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಇಂಗ್ಲೀಷ, ಮರಾಠಿ ಮತ್ತು ತೆಲುಗು (ಆಂಧ್ರ) ಈ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಬುಕ್ಕುಗಳಲ್ಲಿ ಪಂಡಿತರ ಸಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಟ್ಟಿದೆ.

ಕನ್ನಡ ಭಾಷಣ	೧೨ ಆಣೆ.
ಮರಾಠಿ ಭಾಷಣ	೮ ಆಣೆ.
ತೆಲಗು ಭಾಷಣ	೮ ಆಣೆ.
ಇಂಗ್ಲಿಷ್ ಭಾಷಣ	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಏಜಂಟರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೆನ್ಷನ್‌ದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ—ಹೊಳವನಹಳ್ಳಿ, ಡಿ॥ ತುಮಕೂರು.

ಮುಂದಿನ ವರುಷ ವಿವಾಹಾದಿ ಶುಭಕರ್ಮಗಳಿಗೆ ವರ್ಜ್ಯಕಾಲವು.

ಪರಮಆಸ್ತಿಕ ಮಹಾಶಯರೇ! ಮುಂದಿನ ಶ್ರೀಮುಖನಾಮ ಸಂವತ್ಸರದ ಚೈತ್ರ, ವೈಶಾಖ ಮಾಸಗಳಲ್ಲಿ ಶುಕ್ರನು ಅಸ್ತನಾಗಿ ಜೇಷ್ಠ ಶುದ್ಧದಲ್ಲಿ ಉದಯನಾಗುವನು. ಆದ್ದರಿಂದ ಇವೆರಡೂ ಮಾಸಗಳು ಉಪನಯನ, ದೀಕ್ಷೆ, ವಿವಾಹ, ದತ್ತವಿಧಾನ, ಜವಳಗೆಸುವದು, ಹೊಸಮನೆ ಪ್ರಾರಂಭ-ಪ್ರವೇಶ ಇತ್ಯಾದಿ ಶುಭಕರ್ಮಗಳಿಗೆ ಪ್ರಶಸ್ತವಿರುವದಿಲ್ಲವಾದುದರಿಂದ ಇವೆರಡೂ ಮಾಸಗಳನ್ನು ಬಿಟ್ಟು ಉಳಿದ ಯೋಗ್ಯಮಾಸಗಳಲ್ಲಿ ಶುಭಕರ್ಮವಾಡಬಹುದೆಂದು ಸೂಚಿಸುವ,

ಜ್ಯೋತಿಷಾಲಂಕಾರ ವೇ॥ ಬ್ರ॥ ಶ್ರೀ॥ ಸಿದ್ಧಾಂತಿಗಳು
ಪಂಚವಣ್ಣಿಗೆ ಬೃಹನ್ಮಠ, ಜ್ಯೋತಿಷ-ವೈದಿಕ ಪಾಠಶಾಲೆ,
ಪೋ॥ ಹೂಲಿ, ಡಿ॥ ಬೆಳಗಾವ.

ವೀರಶೈವಸಮಾಜ ಸುಧಾರಣೆ.

ವೀರಶೈವ ಬಾಂಧವರೇ, ಸಮಸ್ತ ಭರತಖಂಡದಲ್ಲಿ ಎಷ್ಟೋ ಮತಗಳಿರುವವು. ಅವುಗಳಲ್ಲಿ ನಮ್ಮ ವೀರಶೈವ ಮತವು ಶ್ರೇಷ್ಠವಾದುದೂ ಪುರಾತನವಾದುದೂ ಎಂಬುದಾಗಿ ಹೊಗಳಿಸಿಕೊಂಡು ಶ್ರೀಮತ್ಪರಶಿವನ ಪಂಚಮುಖದಿಂದ ಉದ್ಭವಿಸಿದ ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟದ್ದಾಗಿದೆ. ನಮ್ಮ ವೀರಶೈವ ಮತದಲ್ಲಿ ಎಷ್ಟೋ ಜನ ಶಿವಯೋಗಿಗಳೂ ತತ್ವಾಭಿಮಾನಿಗಳೂ ತಲೆದೋರಿ ಪಾಮರರನ್ನು ಪುನೀತಗೊಳಿಸಿದರು. ಪೂರ್ವಕಾಲದಲ್ಲಿ ಅತಿಕೀರ್ತಿಯನ್ನು ಪಡೆದು ಮೆರೆದ ನಮ್ಮ ಪ್ರಸಿದ್ಧಮತವು ಸದ್ಯಃ ಅತ್ಯಂತಹೀನಾವಸ್ಥೆಗೆ ಬಂದಿರುವುದನ್ನು ನೋಡಿದರೆ ಬಹಳ ವ್ಯಸನವೆನಿಸುತ್ತದೆ. ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಜಗತ್ತಿನಲ್ಲಿ ನಿಜವಾದ ತತ್ವೋಪದೇಶವನ್ನು ಮಾಡುತ್ತಾ ತಮ್ಮ ತಪಃಪ್ರಭಾವದಿಂದ ವೀರಶೈವ ಮತವನ್ನು ಉದ್ಧರಿಸಿ ಎಷ್ಟೋ ಧರ್ಮಗ್ರಂಥಗಳನ್ನು ಶೋಧಿಸಿ ಧರ್ಮಪ್ರಸಾರವನ್ನು [illegible]. ಆದ್ದರಿಂದ ಬಾಂಧವರೇ, ಏಳಿರಿ, ಸಮಾಜದ ಹಿತಕ್ಕಾಗಿ ಹಗಲಿರುಳು ಪ್ರಯತ್ನಿಸುವೆವೆಂಬ ಪ್ರತಿಜ್ಞೆಯನ್ನು ಮಾಡಿ ಸಮಾಜಕಾರ್ಯದಲ್ಲಿ ಬದ್ಧಕಂಕಣರಾಗಿರಿ. ಈಗ ನಮ್ಮ ಸಮಾಜದಲ್ಲಿ ಎದ್ದಿರುವ ಅನಾಯಕತ್ವವನ್ನು ದೂರೀಕರಿಸಿರಿ. ನಿಮ್ಮ ನಿಮ್ಮಲ್ಲಿ ಎದ್ದಿರುವ ವೈಮನಸ್ಸನ್ನು ದೂರೀಕರಿಸಿ ಪರರುನೋಡಿ ನಗುವಂತೆ ಮಾಡಿಕೊಂಡಿರುವ ನಮ್ಮ ವೀರಶೈವ ಮತದ ಹೀನತ್ವವನ್ನು ಹೋಗಲಾಡಿಸಿ ಸಮಾಜಸೇವೆಯನ್ನು ಕೈಗೊಳ್ಳಿರಿ; ಜಗದಾಚಾರ್ಯರು ನಿಮಗೆ ಸಕಲೈಶ್ವರ್ಯಸಂಪತ್ತುಗಳನ್ನು ಕೊಡುವರು.

ಮುಂಡರಗಿ ವೀರಪ್ಪ, [illegible]

ಅಕ್ಟೋಬರು 29 ನೇ ತಾರೀಖಿಗೆ ಅಖೈರಾದ ವಾರದಲ್ಲಿ ಮುಂಬಯಿಯಿಂದ ಪರದೇಶಗಳಿಗೆ ಒಟ್ಟು 1,29,65,713 ರೂಪಾಯಿಗಳ ಭಂಗಾರವು ರಫ್ತುಮಾಡಲ್ಪಟ್ಟಿತು.

ಸ್ವೀಕಾರ

ಕಡೂರು ಡಿ॥ ನರಸಿಂಹರಾಜಪುರ ನಿವಾಸಿಗಳಾದ ಮ॥ ರಾ॥ ಯಜಮಾನ ಶಾಂತಪ್ಪಶೆಟ್ಟರವರ ೮೦ನೆಯ ವರ್ಷದ ವರ್ಧಂತಿಮಹೋತ್ಸವವು ಬೀರೂರು ಟೌನಿನಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 10 ರೂಪಾಯಿಗಳು ಮ॥ ರಾ॥ ಯಂ-ಸಿ-ಶ್ರೀಕಂಠಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಸೊರಬ ತಾಲೂಕು ಗೌರೀಕೆರೆ ಮಠದಲ್ಲಿ ನೆರವೇರಿದ ಛಲವಾದಿಗಳ ಸಭೆಯಲ್ಲಿ ತೆಗೆಯಿಸಿದ 2 ರೂ. ಮಾವಲಿಯಲ್ಲಿ ನೆರವೇರಿದ ಮಡಿವಾಳರ ಸಭೆಯಲ್ಲಿ ತೆಗೆಯಿಸಿದ 1 ರೂ. ಒಟ್ಟು 3 ರೂ. ಗಳು ಶ್ರೀ ಕ್ಯಾಸನೂರು ಬೃಹನ್ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಗದಗಶಹರ ನಿವಾಸಿಗಳಾದ ವೇ॥ ಗುರುಸ್ವಾಮಿಮಠದ ಶಿವಲಿಂಗಾರ್ಯರು ತಮಗೆ ದ್ವಿತೀಯ ಪುತ್ರನು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿದ್ದಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮಹಾತ್ಮಾ ಗಾಂಧಿಯವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ, ಅಥವಾ ಅವರೊಡನೆ ಮಾತುಕಥೆಗಳನ್ನಾಡುವುದಕ್ಕಾದರೂ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದೂ ಮೌಲಾನಾ ಷೌಕತ್ಆಲಿಯವರು ವೈಸರಾಯರಿಗೆ ಕಳುಹಿಸಿದ್ದ ತಂತಿಗೆ, ವೈಸರಾಯರು ಕಾಂಗ್ರೆಸ್ಸಿನವರು ಕಾಯಿದೆಭಂಗದ ಚಳವಳಿಯನ್ನು ನಿಲ್ಲಿಸುವವರೆಗೆ ಗಾಂಧಿಯವರನ್ನು ಬಿಡುಗಡೆ ಮಾಡುವುದಾಗಲಿ ಅವರೊಡನೆ ಮಾತುಕಥೆಗಳನ್ನಾಡುವುದಕ್ಕೆ ಅವಕಾಶವನ್ನು ಕೊಡುವುದಾಗಲಿ ಸಾಧ್ಯವಿಲ್ಲವೆಂದು ಜವಾಬನ್ನು ಕೊಟ್ಟಿರುತ್ತಾರೆ.

ಮಹಾತ್ಮಾ ಗಾಂಧಿಯವರ ವರ್ಷವರ್ಧಂತ್ಯುತ್ಸವವು ಈಸಾರೆ ಜಿನೀವಾ ನಗರದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಶ್ರೀಮತಿ ಕೆ. ಬೋಸ್‌ರವರು ಮತ್ತು ಮಿ॥ ಈಶ್ವರಶರಣರವರು ಮುಖ್ಯ ಕಾರಣಕರ್ತರಾಗಿ ನಿಂತಿದ್ದರು. ಸಮಾರಂಭವು 'ಅಮೇರಿಕನ್ ಚರ್ಚ್'ನ 'ಪ್ಯಾರಿಷ್ ಹೌಸ್' ನಲ್ಲಿ ನೆರವೇರಿಸಲ್ಪಟ್ಟಿತು. ಪ್ರೇಕ್ಷಕರು ಕಿಕ್ಕಿರಿಯುವಂತೆ ತುಂಬಿದ್ದರು. ಶ್ರೀಮತಿ ಸೇನರವರು ಭಾರತಮಾತೆಯ ಪ್ರಾರ್ಥನೆಯನ್ನು ಹಾಡಿದನಂತರ ಮಹಾತ್ಮರ ಜೀವನಸಂಬಂಧವಾದ ಉಪನ್ಯಾಸಗಳಾದುವು. ಆಹ್ವಾನಿಸಲ್ಪಟ್ಟಿದ್ದವರೆಲ್ಲರಿಗೂ ಭರತಖಂಡದ ಮಿಠಾಯಿಗಳೂ, ಮತ್ತು ಟೀ ಕೊಡಲ್ಪಟ್ಟವು. ಕಡೆಯಲ್ಲಿ ಎಲ್ಲರೂ ನಿಂತಿರಲು 'ವಂದೇಮಾತರಂ' ಪದ್ಯವು ಹಾಡಲ್ಪಟ್ಟು ಸಮಾರಂಭವು ಮುಕ್ತಾಯಗೊಳಿಸಲ್ಪಟ್ಟಿತು.

ದಿವಾನ್‌ಸಾಹೇಬರ ಭಾಷಣ.

(ಹಿಂದಿನಿಂದ ಮುಂದುವರಿದುದು.)

ಕೃಷ್ಣರಾಜೇಂದ್ರ ಗಿರಣೀ ಕಾರ್ಖಾನೆ.

ಕಳೆದ ಜುಲೈ ತಿಂಗಳಿನಲ್ಲಿ ಈ ಗಿರಣೀ ಕಾರ್ಖಾನೆಯನ್ನು ಸರ್ಕಾರದವರ ಅಧೀನಕ್ಕೆ ವಹಿಸಿಕೊಳ್ಳಲಾಯಿತು. ಆ ರಾಗಾಯಿತು ಗಿರಣಿಯ ಕೆಲಸವು ಬಹಳ ಉತ್ತಮಸ್ಥಿತಿಗೆ ಬಂದಿರುತ್ತದೆ. ವಸ್ತುಗಳನ್ನು ತಯಾರಿಸುವುದಕ್ಕೆ ತಗಲುವ ವೆಚ್ಚವನ್ನು ಕಡಿಮೆ ಮಾಡಲಾಗಿದೆ. ತಯಾರಾಗುವ ವಸ್ತುಗಳ ಪರಿಮಾಣವು ಮೊದಲಿಗಿಂತಲೂ ಸ್ವಲ್ಪ ಹೆಚ್ಚು ಕಡಿಮೆ ಎರಡರಷ್ಟು ಅಧಿಕವಾಗಿದೆ. ಹೆಚ್ಚಿಗೆಯಿಂದ ತಯಾರಾದ ಬಟ್ಟೆಗಳು ಬಹುಕಾಲದಿಂದ ಶೇಖರವಾಗಿದ್ದುವು. ಈ ದಾಸ್ತಾನು ಖಾಲಿಮಾಡಲ್ಪಟ್ಟಿತು. ನೂಲುಗಳಿಗೆ ಒಳ್ಳೇ ಗಿರಾಕಿಯು ದೊರೆಯುವಂತೆ ಈಗ ಏರ್ಪಾಡು ಮಾಡಲಾಗಿದೆ. ಈ ಗಿರಣಿ ಕಾರ್ಖಾನೆಯಲ್ಲಿ ನಷ್ಟವುಂಟಾಗುವುದು ಈಗ ನಿಂತುಹೋಗಿದೆ. ಅಲ್ಲದೆ ವರುಷವೊಂದಕ್ಕೆ ಒಂದೂಕಾಲು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಕೊಡಬೇಕಾಗುವ ಬಡ್ಡಿಯ ಮೊಬಲಗುಗಳನ್ನು ಕೊಡುವುದಕ್ಕೂ ಮತ್ತು 'ಡಿಪ್ರೀಸಿಯೇಷನ್ ಫಂಡ್'' ಎಂಬ ಸವಕಲು ತಿಮ್ಮಕಟ್ಟು ಭರ್ತಿಯ ನಿಧಿಗಾಗಿ ತಕ್ಕ ಮಟ್ಟಿಗೆ ಹಣವೊದಗಿಸುವುದಕ್ಕೂ ಸಾಧ್ಯವಾಗಿದೆ. ನೆಯ್ಗೆ ಕೈಗಾರಿಕೆಯು ವಿಶೇಷ ಮುಗ್ಗಟ್ಟಿಗೆ ಬಂದಿದ್ದಾಗ್ಗ್ಯೂ ಸಹ ಇಷ್ಟುಮಟ್ಟಿನ ಫಲಿತಾಂಶಗಳು ಲಭಿಸಿರುವುದು ತೃಪ್ತಿಕರವಾದ ವಿಷಯವಾಗಿದೆ.

ಗಂಧದ ಎಣ್ಣೆಯ ಕಾರ್ಖಾನೆ.

ಪ್ರಬಲವಾದ ಆರ್ಥಿಕ ಮುಗ್ಗಟ್ಟೊದಗಿರುವ ವರ್ಷದಲ್ಲಿ ಗಂಧ ಮುಂತಾದ ಸೊಗಸಿನ ಅಲಂಕಾರ ವಸ್ತುಗಳನ್ನು ಜನಗಳು ಕೊಂಡುಕೊಳ್ಳುವುದಿಲ್ಲವೆಂಬುದು ಸ್ವತಸ್ಸಿದ್ಧವಾಗಿಯೇ ಇದೆ. ಆದಕಾರಣ ಸಾಮಾನ್ಯವಾಗಿ ಇಂತಹ ಪದಾರ್ಥಗಳಿಗೆಲ್ಲಾ ಈಗ ಗಿರಾಕಿಯು ಕಡಿಮೆಯಾಗಿದೆ. ಗಂಧದ ಎಣ್ಣೆಯೂ ಇವುಗಳಲ್ಲಿ ಒಂದಾಗಿದೆಯೇ ಹೊರತು ಬೇರೆಯಲ್ಲ. ಪ್ರಸಕ್ತ ಸಾಲಿನಲ್ಲಿ 116,854 ಪೌಂಡುಗಳಷ್ಟು ಎಣ್ಣೆಯು ಮಾರಾಟವಾಯಿತು. 1930-31 ನೆಯ ಸಾಲಿನಲ್ಲಿ 155,527 ಪೌಂಡುಗಳಷ್ಟು ಎಣ್ಣೆಯು ಖರ್ಚಾಗಿದ್ದಿತು. ಗಂಧದ ಎಣ್ಣೆಯ ಕಾರ್ಖಾನೆಯ ನಿವ್ವಳ ಹುಟ್ಟುವಳಿಯು ಪ್ರಸಕ್ತವರ್ಷದಲ್ಲಿ ಅದರ ಹಿಂದಿನವರುಷದಲ್ಲಿದ್ದುದಕ್ಕಿಂತ 6 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿರುವುದಾಗಿ ಕಂಡುಬಂದಿದೆ.

ಮೆಡಿಕಲ್ ಇಲಾಖೆ.

ಸಾಲಾಖೈರಿನಲ್ಲಿ ಒಟ್ಟು 272 ವೈದ್ಯಸಂಸ್ಥೆಗಳಿದ್ದುವು.

ಚಿಕ್ಕಮಗಳೂರಿನಲ್ಲಿ ಮಲ್ಲೇಗೌಡರ ನಾಮಾಂಕಿತದ ಜನರಲ್ ಆಸ್ಪತ್ರೆಯ ಕಟ್ಟಡವೂ ಮತ್ತು ಸಿದ್ಧಲಿಂಗಸೆಟ್ಟಿಯವರ ನಾಮಾಂಕಿತ ಹೆಣ್ಣಾಸ್ಪತ್ರೆಯ ಕಟ್ಟಡವೂ ಪೂರೈಸಿದುವು. ಈ ಆಸ್ಪತ್ರೆಗಳು ಹೊಸ ಕಟ್ಟಡಗಳಲ್ಲಿ ಪ್ರಾರಂಭಿಸಲ್ಪಟ್ಟುವು. ಈ ಕಟ್ಟಡಗಳ ಪ್ರವೇಶ ಮಹೋತ್ಸವವನ್ನು ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರವರು ನೆರವೇರಿಸಿದರು. ಬೆಂಗಳೂರಿನಲ್ಲಿ ಕಟ್ಟುತ್ತಿರುವ ಹೆರಿಗೆ ಆಸ್ಪತ್ರೆಯ ಹೊಸ ಕಟ್ಟಡದ ಕೆಲಸವು ನಡೆಯುತ್ತಿದೆ. ಶಿವಮೊಗ್ಗೆಯಲ್ಲಿ ಕರ್ನಲ್ ಮ್ಯಾಗ್ಗ್ರಾರವರ ನಾಮಾಂಕಿತದ ಮೇಲೆ ಕಟ್ಟುತ್ತಿರುವ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರವರು ಕೃಪೆಮಾಡಿ ನೆರವೇರಿಸಿದರು.

ಮೆಡಿಕಲ್ ಪ್ರಾಕ್ಟಿಷನರುಗಳ ರಿಜಿಸ್ಟ್ರೇಷನ್ ರೆಗ್ಯುಲೇಷನ್ನಿನ ಮೇರೆಗೆ "ಮೈಸೂರು ಮೆಡಿಕಲ್ ಕೌನ್ಸಿಲ್'' ಎಂಬ ಸಂಸ್ಥೆಯು ಏರ್ಪಡಿಸಲ್ಪಟ್ಟಿದೆ. ಈ ಸಂಸ್ಥೆಯವರು ರಚಿಸತಕ್ಕ ಉಪನಿಬಂಧನೆಗಳನ್ನು (ಬೈಲಾಗಳನ್ನು) ಸರ್ಕಾರದವರು ಅನುಮೋದಿಸಿದ್ದಾರೆ. ಇಲಾಖೆಗೆ ಔಷಧಗಳನ್ನೂ ಮತ್ತು ಮೂಲಿಕೆಗಳನ್ನೂ ಕೊಂಡುಕೊಳ್ಳುವುದರಲ್ಲಿ ವೆಚ್ಚವನ್ನು ಕಡಿಮೆಮಾಡಬೇಕೆಂಬ ವಿಷಯವು ಈಚೆಗೆ ವಿಶೇಷವಾಗಿ ಪರ್ಯಾಲೋಚನೆಯಲ್ಲಿದೆ. ಸಂಸ್ಥಾನದಲ್ಲಿರುವ ಆಸ್ಪತ್ರೆಗಳಿಗೂ ಬೇಕಾಗುವ ಔಷಧಗಳನ್ನೂ ಮತ್ತು ಟಿಂಚರುಗಳನ್ನೂ ಸ್ಥಳದಲ್ಲೇ ತಯಾರಿಸುವ ಪ್ರಯತ್ನವನ್ನು ಪ್ರಾರಂಭಿಸಲಾಗಿದೆ.

ಜನಾರೋಗ್ಯ ರಕ್ಷಣೆಯ ಇಲಾಖೆ.

ನಾನಾ ಮಾರ್ಗಗಳಲ್ಲಿಯೂ ಹಿಂದಿನ ವರುಷಗಳಲ್ಲಿ ನಡೆಯುತ್ತಿದ್ದ ಅಭಿವೃದ್ಧಿಕಾರ್ಯಗಳೇ ಪ್ರಸಕ್ತವರ್ಷದಲ್ಲಿಯೂ ನಡೆದುಬಂದುವು. ಆದರೆ ಹಣದ ಮುಗ್ಗಟ್ಟಿನಿಂದ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವುದಕ್ಕಿಲ್ಲದೆ ಹೋಯಿತು. ಈ ಇಲಾಖೆಯವರು ರಾಕ್‌ಫೆಲರ್ ಸಂಸ್ಥೆಯ ಕನ್ಸಲ್ಟೆಂಟರವರ ಸಹಾಯವನ್ನೂ ಮತ್ತು ಸಲಹೆಗಳನ್ನೂ ಎಂದಿನಂತೆಯೇ ಪ್ರಸಕ್ತ ವರುಷದಲ್ಲಿಯೂ ಪಡೆದರು. ಆರೋಗ್ಯ ರಕ್ಷಣೆಗೆ ಸಾಧಕವಾದ ವಿಚಾರಗಳನ್ನು ಜನರಿಗೆ ಬೋಧಿಸುವ ಬ್ಯೂರೋವಿಗೆ ಸೇರತಕ್ಕ ಪ್ರಸಕ್ತವರ್ಷದಲ್ಲಿ ಪ್ರಕಟನ ಶಾಖೆಯೊಂದನ್ನು ಏರ್ಪಡಿಸಲಾಯಿತು. ಈ ಬ್ಯೂರೋವಿನ ಕಾರ್ಯಕ್ರಮವನ್ನು ಮುಂದುವರಿಸಲು "ರಾಕ್‌ಫೆಲರ್ ಸಂಸ್ಥೆ'' ಯವರು ಎರಡು ವರುಷಗಳ ಕಾಲ ಸಹಾಯದ್ರವ್ಯವನ್ನು ಕೊಡಲು ಒಪ್ಪಿದ್ದಾರೆ.

ಬೆಂಗಳೂರು ಸಿಟಿ ನೀರು ಸರಬರಾಯಿ ಕಾಮಗಾರಿಗಳನ್ನು ನಡೆಯಿಸುವ ಮತ್ತು ಕಾಪಾಡಿಕೊಂಡು ಬರುವ ಅಧಿಕಾರವನ್ನು ಸ್ಯಾನಿಟರಿ ಇಂಜನಿಯರಿಂಗ್ ಬ್ಯೂರೋವಿನವರಿಗೆ ವರ್ಗಾಯಿಸಿಕೊಟ್ಟು ಸ್ಯಾನಿಟರಿ ಇಂಜನಿಯರಿಂಗ್ ಬ್ಯೂರೋವಿನ ಕಾರ್ಯಕಲಾಪಗಳನ್ನು ಹೆಚ್ಚಿಸಲಾಯಿತು. ಅದುವರಿಂದ ಈ ಬ್ಯೂರೋವಿನವರೇ ಈಗ ನೀರು ಸರಬರಾಯಿ ಮೊದಲುಗೊಂಡು ಜನಾರೋಗ್ಯರಕ್ಷಣೆಗೆ ಬೇಕಾದ ಸಮಸ್ತ ಇಂಜನಿಯರಿಂಗ್ ಕೆಲಸಗಳನ್ನೂ ಚರಂಡಿಗಳ ಮತ್ತು ನಗರ ರಚನೆಯ ಕೆಲಸಗಳನ್ನೂ ಕೈಕೊಂಡು ನಡೆಯಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನ ಆರೋಗ್ಯರಕ್ಷಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಮಂಡ್ಯದಲ್ಲಿ ಏರ್ಪಡಿಸಿದ್ದ "ರೂರಲ್‌ಹೆಲ್ತ್ ಯೂನಿಟ್'' ಸಿಬ್ಬಂದಿಯವರು ನಡೆಯಿಸಿರುವ ಕಾರ್ಯಗಳು ತೃಪ್ತಿಕರವಾಗಿ ನೆರವೇರಿ ಉತ್ಸಾಹಕರವಾಗಿವೆ. ಆದುದರಿಂದ ಸಂಸ್ಥಾನದ ಇತರ ಕಡೆಗಳಲ್ಲಿಯೂ ಇದೇ ಬಗೆಯ ಸಿಬ್ಬಂದಿಯನ್ನು ನೇಮಕಮಾಡುವ ವಿಚಾರವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಮಲೇರಿಯಾ ಜ್ವರದ ಹಾವಳಿಯನ್ನಡಗಿಸುವುದಕ್ಕಾಗಿ ಮೂಡಿಗೆರೆ, ನಾಗೇನಹಳ್ಳಿ ಮತ್ತು ಹಿರಿಯೂರು ಈ ಸ್ಥಳಗಳಲ್ಲಿ ಸ್ಥಾಪಿಸಿರುವ ಮೂರು ಮಲೇರಿಯಾ ಸ್ಟೇಷನ್ನುಗಳಲ್ಲಿಯೂ ಮತ್ತು ಬೆಂಗಳೂರು, ಮೈಸೂರು ನಗರಗಳಲ್ಲಿ ಇದೇ ಉದ್ದೇಶದಿಂದ ಕಲ್ಪಿಸಿರುವ ಏರ್ಪಾಡುಗಳ ಮೇರೆಗೂ ಹಿಂದಿನಂತೆಯೇ ಪ್ರಸಕ್ತವರ್ಷದಲ್ಲಿಯೂ ಕೆಲಸ ನಡೆಯಿತು. ಈ ಸ್ಟೇಷನ್ನುಗಳಲ್ಲಿ ನಡೆದ ಕಾರ್ಯಕಲಾಪಗಳ ಫಲವಾಗಿ ಅವುಗಳಲ್ಲೆಲ್ಲ ಮಲೇರಿಯಾ ಜ್ವರದ ಹಾವಳಿಯು ಕಡಿಮೆಯಾಗಿರುವುದಾಗಿ ವರದಿಯಾಗಿದೆ. ಕೋಲಾರದ ಚಿನ್ನದಗಣಿ ಪ್ರದೇಶ, ನರಸಿಂಹರಾಜಪುರ, ಕೊಪ್ಪ ಮತ್ತು ತುಮಕೂರು ಈ ಸ್ಥಳಗಳಲ್ಲಿ ಮಲೇರಿಯಾ ಜ್ವರದ ಸಂಬಂಧದಲ್ಲಿ "ಸರ್ವೇ'' ಪರಿಶೀಲನೆಗಳು ನಡೆದುವು. ರಾಕ್‌ಫೆಲರ್ ಫೌಂಡೇಷನ್ನಿನವರು ಒಂದು ಫೆಲೋಷಿಪ್ ಏರ್ಪಾಡನ್ನೂ, ಸರ್ಕಾರದವರು ಎರಡು ಫೆಲೋಷಿಪ್ ಏರ್ಪಾಡುಗಳನ್ನೂ ಮಾಡಿದರು.

ಗ್ರಾಮಪಂಚಾಯತಿಗಳು.

ಈ ಭಾಷಣದ ಎರಡನೆಯ ಭಾಗದಲ್ಲಿ ಕೊಟ್ಟಿರುವ ಲೆಕ್ಕಗಳನ್ನು ನೋಡಿದರೆ ಗ್ರಾಮಪಂಚಾಯತಿಗಳವರು ನಡೆಯಿಸಿರುವ ತೆರಿಗೆ ವಸೂಲಿಯ ಕೆಲಸವು ವಿಶೇಷ ಅಸಮರ್ಪಕವಾಗಿದೆಯೆಂದು ಕಂಡುಬರುತ್ತದೆ. ಆದರೆ ಇತರ ವಿಚಾರಗಳಲ್ಲಿ ಗ್ರಾಮಪಂಚಾಯತಿಗಳ ಕಾರ್ಯಕಲಾಪಗಳು ಚೆನ್ನಾಗಿ ನಡೆಯುತ್ತಿವೆ. ಇದಕ್ಕಾಗಿ ನಾನು ಸಂತೋಷಿಸುತ್ತೇನೆ. ಕೆಲವು ಗ್ರಾಮಪಂಚಾಯತಿಗಳವರು ಕುಡಿಯುವ ನೀರಿನ ಸೌಕರ್ಯವನ್ನೊದಗಿಸುವುದಕ್ಕಾಗಿಯೂ ಮತ್ತು ತಮ್ಮ ಅಧಿಕಾರಕ್ಕೊಳಪಟ್ಟಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಸ್ಥಳನೈರ್ಮಲ್ಯವನ್ನು ಉತ್ತಮಪಡಿಸಿ ಊರುಗಳನ್ನು ಚೊಕ್ಕಟವಾಗಿಟ್ಟುಕೊಂಡಿರುವುದಕ್ಕಾಗಿಯೂ ವಿಶೇಷರೀತಿಯ ಏರ್ಪಾಡುಗಳನ್ನು ಕೈಕೊಂಡಿದ್ದಾರೆ. ಗ್ರಾಮಸ್ಥರು ಗ್ರಾಮಾಭಿವೃದ್ಧಿಯ ಕೆಲಸಗಳಲ್ಲಿ ಕಾಮಗಾರಿಯನ್ನು ನಡೆಸುವ ವಿಷಯದಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಗ್ರಾಮನಿವೇಶನಗಳನ್ನು ಚೊಕ್ಕಟವಾಗಿಸುವುದು, ರಸ್ತೆಗಳನ್ನು ಮೇಲ್ಪಡಿಸುವುದು ಮುಂತಾದ ಕೆಲಸಗಳಲ್ಲಿ ಮನಃಪೂರ್ವಕವಾಗಿ ಸಹಾಯಮಾಡಿ ಕಾಮಗಾರಿಗಳನ್ನು ನಡೆಯಿಸುತ್ತಿದ್ದಾರೆ. ಅನೇಕ ಗ್ರಾಮಪಂಚಾಯತಿಗಳವರು ಬೀದಿಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಿರುತ್ತಾರೆ. ಪ್ರಸಕ್ತವರ್ಷದಲ್ಲಿ ಕೆಲವು ಪಂಚಾಯತಿಗಳಿಗೆ ಸ್ಕೂಲುಗಳ, ಮುಜರಾಯಿ ಸಂಸ್ಥೆಗಳ, ಕೆರೆಗಳ ಮತ್ತು ಗ್ರಾಮ ಜಂಗಲುಗಳ ಅಧಿಕಾರವನ್ನು ವಹಿಸಲಾಯಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಗ್ರಾಮಪಂಚಾಯತಿಗಳವರು "ಗ್ರಾಂಟ್-ಇನ್-ಏಡ್'' ಸಹಾಯದ್ರವ್ಯವು ಸಲ್ಲುವ ನಿಯಮಗಳಿಗನುಸಾರವಾಗಿ ಇಪ್ಪತ್ತೈದು ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿದರು. ಉತ್ತಮ ವಿಧದ ನೇಗಿಲುಗಳನ್ನೂ, ಶಾಸ್ತ್ರೀಯವಾದ ಗೊಬ್ಬರಗಳನ್ನೂ ಮತ್ತು ಬೀಜದ ಧಾನ್ಯಗಳನ್ನೂ ಜನರಿಗೆ ವಿಕ್ರಯಿಸುವುದರಲ್ಲಿ ಗ್ರಾಮಪಂಚಾಯತಿಗಳಿಂದ ಬಹಳವಾಗಿ ಸಹಾಯವು ದೊರೆಯುತ್ತಿದೆ. ಕೆಲವು ಗ್ರಾಮಪಂಚಾಯತಿಗಳವರು ತಮ್ಮಲ್ಲಿ ಶೇಖರವಾಗಿದ್ದ ಹಣವನ್ನು ಶಾಶ್ವತವಾಗಿರುವ ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಿದ್ದಾರೆ. ಹೊಸ ಗ್ರಾಮನಿವೇಶನಗಳನ್ನೂ, ಗ್ರಾಮಬಡಾವಣೆಗಳನ್ನೂ ಏರ್ಪಡಿಸುವುದು ಮತ್ತು ಗ್ರಾಮದಲ್ಲಿ ಸಭಾಮಂದಿರಗಳನ್ನೂ, ಸ್ಕೂಲು ಕಟ್ಟಡಗಳನ್ನೂ ಮತ್ತು ಡಿಸ್ಪೆನ್ಸರಿ ಕಟ್ಟಡಗಳನ್ನೂ ಕಟ್ಟಿಸುವುದು ಇವೇ ಮುಂತಾದುವುಗಳಿಗಾಗಿ ಅವರು ಆ ರೀತಿ ಹಣವನ್ನು ವೆಚ್ಚಮಾಡಿದ್ದಾರೆ. ಈ ಬಗೆಯ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನೊದಗಿಸುವುದಕ್ಕಾಗಿ ಅವಶ್ಯವಾದಲ್ಲಿ ಗ್ರಾಮಪಂಚಾಯತಿಗಳವರು ಸಾಲಗಳನ್ನು ತೆಗೆಯುವುದಕ್ಕೆ ಸಾಧ್ಯವಾಗುವಂತೆ ಮಾಡುವುದಕ್ಕೋಸ್ಕರ ಗ್ರಾಮಪಂಚಾಯತಿ ರೆಗ್ಯುಲೇಷನನ್ನು ಈಚೆಗೆ ತಿದ್ದುಪಾಟು ಮಾಡಲಾಗಿದೆ.

ಪರಿಸಮಾಪ್ತಿ.

ಪ್ರಪಂಚದ ಸ್ಥಿತಿಯಲ್ಲೀ ಭಾರಿ ಮಾರ್ಪುಗಳು ನಡೆದು ಹಿಂದೆ ಅರ್ಥಶಾಸ್ತ್ರ ನಿಯಮಗಳ ಒಂದು ಭಾಗವೆಂದೇ ಅಂಗೀಕೃತವಾಗಿದ್ದ ಅನೇಕ ಅಂಶಗಳು ಈಗ ತ್ಯಾಜ್ಯವಾಗಿ ಪರಿಣಮಿಸಿವೆ. ಮತ್ತೊಮ್ಮೆ ಅವಕ್ಕೆ ಬೆಲೆಕೊಡುವ ಪ್ರವೃತ್ತಿಗೇ ಅವಕಾಶವಿಲ್ಲದಂತೆ ಜನರು ಅವುಗಳ ಸ್ಥಾನದಲ್ಲಿ ಅನ್ಯೋನ್ಯಭಾವದಿಂದ ಒಬ್ಬರಮನಸ್ಸನ್ನು ಮತ್ತೊಬ್ಬರು ಅರಿತುಕೊಳ್ಳುವುದು, ಅದರಿಂದ ಪರರಲ್ಲಿ ಸಹಿಷ್ಣುತೆಯನ್ನು ತೋರಿಸುವುದು, ಪರಸ್ಪರವಾಗಿ ಸಹಕರಿಸಿ ವರ್ತಿಸಲು ಸಿದ್ಧವಾಗಿರುವ ಮನೋವೃತ್ತಿಯನ್ನು ತೋರಿಸುವುದು, ಹೊಸಹೊಸ ವಿಧಾನಗಳನ್ನು ಪರಿಶೀಲಿಸಿ ಅವುಗಳನ್ನು ಆಚರಣೆಗೆ ತಂದು ಪರೀಕ್ಷಿಸಿ ನೋಡುವುದು ಇವೇ ಮೊದಲಾದ ಗುಣಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಪ್ರಾರಂಭವಾಗಿದೆ. ಇವುಗಳೇ ಜಗತ್ತಿನ ಉದ್ಧಾರಕ್ಕೆ ಸಾಧಕವಾಗಬೇಕೆಂಬ ಭಾವನೆಯು ಬಲವಾಗುತ್ತಿದೆ. ನಮ್ಮ ದೇಶದಲ್ಲಿಯೂ ಸಹ ಈಚೆಗೆ ಇದೇ ಬಗೆಯ ಭಾವನೆಯು ನೆಲಗೊಂಡು ಈ ಗುಣಗಳನ್ನು ವೃದ್ಧಿಪಡಿಸಿಕೊಳ್ಳುತ್ತಿರುವುದರ ನಿದರ್ಶನಗಳು ಯಥೇಷ್ಟವಾಗಿ ಕಂಡುಬಂದಿವೆ.

ಒಟ್ಟು ಇಂಡಿಯಾದೇಶಕ್ಕೆ ಸಂಯುಕ್ತ ವ್ಯವಸ್ಥೆಯೊಂದು ಏರ್ಪಟ್ಟೇ ತೀರಬೇಕೆಂಬುದನ್ನೂ, ಇಂಡಿಯಾದೇಶವು ಅಭಿವೃದ್ಧಿಸ್ಥಿತಿಗೆ ಬಂದು ಅಭ್ಯುದಯ ಹೊಂದಬೇಕಾದರೆ ಸಂಯುಕ್ತರಾಜ್ಯಾಂಗ ವ್ಯವಸ್ಥೆಯು ಏರ್ಪಡಬೇಕಾದುದು ತೀರ ಅವಶ್ಯಕವೆಂಬುದನ್ನೂ, ಸಂಯುಕ್ತವ್ಯವಸ್ಥೆಯ ಮುಖ್ಯ ಲಕ್ಷಣಗಳೆನಿಸಿರುವ ಅಂಶಗಳು ಅನೇಕವಾಗಿ ನಮ್ಮ ದೇಶದಲ್ಲಿ ನೆಲಗೊಂಡೇ ಇವೆಯೆಂಬುದನ್ನೂ ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ಧಾರಾಳವಾಗಿ ಹೇಳಲೇಬಹುದಾಗಿದೆ. ಏನಿದ್ದರೂ ಈಗ ಬಹುಮಟ್ಟಿಗೆ ನೆಲಗೊಂಡಿರುವ ಸಂಯುಕ್ತವ್ಯವಸ್ಥೆಯನ್ನು ಮತ್ತಷ್ಟು ಸ್ಫುಟಪಡಿಸಿ ಪೂರ್ಣಗೊಳಿಸುವ ಕೆಲಸವು ಮಾತ್ರ ಮುಂದೆ ಅಗತ್ಯವಾಗಿ ಸಾಗತಕ್ಕದ್ದಾಗಿದೆ. ಇದಕ್ಕೆ ಪ್ರಥಮಪ್ರಯತ್ನವಾಗಿ ಸಂಸ್ಥಾನಗಳ ಅಧೀನತೆಯನ್ನು ತಪ್ಪಿಸಬೇಕು. ಈಗ ಆಚರಣೆಯಲ್ಲಿರುವ ಏರ್ಪಾಡುಗಳ ದೆಸೆಯಿಂದ ಅವುಗಳು ವಸ್ತುತಃ ಬ್ರಿಟಿಷ್ ಇಂಡಿಯಾಕ್ಕೆ ಅಧೀನವಾಗಿವೆ. ಈ ಪರಿಸ್ಥಿತಿಯು ತಪ್ಪುವಂತೆ ಮಾಡುವುದೇ ಸಂಯುಕ್ತರಾಷ್ಟ್ರವನ್ನು ಏರ್ಪಡಿಸುವುದರಲ್ಲಿ ಮೊದಲು ನೆರವೇರಬೇಕಾದ ಮುಖ್ಯ ಕಾರ್ಯವೆಂಬುದನ್ನೂ, ಅದೊಂದು ಮಾತ್ರ ನೆರವೇರಿದರೆ ಆ ಬಳಿಕ ಉಳಿದಿರತಕ್ಕವುಗಳೆಲ್ಲಾ ಲೋಕಾನುಭವವೂ, ಸೌಹಾರ್ದವೂ ಉಳ್ಳವರು ಸಮರ್ಪಕವಾಗಿ ನೆರವೇರಿಸುವುದು ಸಾಧ್ಯವಿರುವ ಕೆಲಸಗಳೆಂಬುದನ್ನೂ ಸಹ ಈಗ ಸಾಮಾನ್ಯವಾಗಿ ಎಲ್ಲರೂ ಒಪ್ಪುವರೆಂದು ಧಾರಾಳವಾಗಿ ಹೇಳಬಹುದಾಗಿದೆ.

ಒಟ್ಟು ಇಂಡಿಯಾದೇಶಕ್ಕೂ ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಶೀಘ್ರದಲ್ಲೇ ಏರ್ಪಡದೆ ಹೋಗುವುದಕ್ಕೆ ಯಾವುದೊಂದು ಕಾರಣವೂ ಇರುವುದಾಗಿ ನನ್ನ ಮನಸ್ಸಿಗೇನೋ ತೋರುವುದಿಲ್ಲ. ಆದುದರಿಂದ ಶೀಘ್ರದಲ್ಲೇ ಅದು ಏರ್ಪಟ್ಟರೆ ಅದನ್ನು ಸ್ಥಾಪಿಸಿದ ಕೀರ್ತಿಯ ಬಹುಭಾಗವು ಸ್ವದೇಶಾಭಿಮಾನದಿಂದಲೂ, ರಾಜನೀತಿ ಕುಶಲತೆಯಿಂದಲೂ, ದೂರಾಲೋಚನೆಯಿಂದಲೂ ವರ್ತಿಸಿದ ಸಂಸ್ಥಾನಗಳಿಗೆ ಸಲ್ಲಬೇಕಾಗುತ್ತದೆ. ಭರತಖಂಡದಲ್ಲಿ ಸಂಯುಕ್ತವ್ಯವಸ್ಥೆಯು ಏರ್ಪಡುವುದು ತಮಗೆ ಸಮ್ಮತವೆಂಬುದಾಗಿ ತಿಳಿಸಿ ಅವರುಗಳು ಮೊದಲನೆಯ "ರೌಂಡ್‌ಟೇಬಲ್ ಕಾನ್ಫರೆನ್ಸ್'' ಸಮ್ಮೇಳನದಲ್ಲಿ ಯಾವ ಬಗೆಯ ಮನೋಭಾವವನ್ನು ವ್ಯಕ್ತಗೊಳಿಸಿದರೋ ಈಗಲೂ ಅವರಲ್ಲಿ ಅದೇ ಬಗೆಯ ಮನೋಭಾವವೇ ಅಚಲವಾಗಿ ನೆಲೆಗೊಂಡಿದೆ. ಸಂಯುಕ್ತವ್ಯವಸ್ಥೆಯು ಏರ್ಪಡಬೇಕೆಂಬ ಇಷ್ಟಾರ್ಥವು ಸಫಲವಾಗಿ ಈಡೇರುವುದಕ್ಕೆ ಅವಶ್ಯವೆನಿಸುವ ತ್ಯಾಗಬುದ್ಧಿಯನ್ನು ಪ್ರದರ್ಶಿಸಿ ಅದಕ್ಕನುಸಾರವಾಗಿ ವರ್ತಿಸಲು ಅವರುಗಳು ಸಿದ್ಧರಾಗಿದ್ದಾರೆ. ಮೊನ್ನೆ ತಾನೆ ಸಿಮ್ಲಾ ನಗರದಲ್ಲಿ ಜರುಗಿದ ಪ್ರಭುಗಳ ಸಮ್ಮೇಳನದಲ್ಲಿ ನಡೆದ ಚರ್ಚೆಗಳಿಂದ ಈ ಅಂಶಗಳು ಸ್ಪಷ್ಟವಾಗಿ ಗೊತ್ತಾದವು. ಆದರೆ ಅವರು ತ್ಯಾಗಬುದ್ಧಿಯನ್ನು ತೋರಿಸಬೇಕೆಂದು ನಿರೀಕ್ಷಿಸುವುದರಲ್ಲಿಯೂ ವಿಚಕ್ಷಣೆಯನ್ನು ತೋರಿಸಿ ಯುಕ್ತವಾದೊಂದು ಪರಿಮಿತಿಯನ್ನಿಟ್ಟುಕೊಂಡು ಆ ರೀತಿ ನಿರೀಕ್ಷಿಸಬೇಕು. ವಾಸ್ತವವಾದ ವ್ಯವಹಾರ ಪ್ರಪಂಚಕ್ಕೆ ದೂರವಾಗಿ ಕೇವಲ ಪುಸ್ತಕ ಪಾಠಗಳಂತಿರುವ ನಿಯಮಗಳನ್ನು ಅನ್ವಯಿಸುತ್ತ ಸರ್ವೋತ್ಕೃಷ್ಟವಾದ ರಾಜ್ಯಾಡಳಿತದ ಶಿಸ್ತನ್ನು ಅಳವಡಿಸಬೇಕೆಂಬ ಉತ್ಸಾಹದಲ್ಲಿ ಅವರ ಪ್ರಭುಪದವಿಯನ್ನೂ ಅದಕ್ಕಿರುವ ಅಸಾಧಾರಣ ಸ್ವಭಾವದ ಘನತೆ ಗೌರವಗಳನ್ನೂ ಉಪೇಕ್ಷಿಸಿ ಅವರ ಸ್ಥಾನ, ಮಾನಗಳ ದೃಷ್ಟಿಯಿಂದ ಅವರಿಗೆ ಹೀನಾಯವಾಗಿ ತೋರುವಷ್ಟು ತ್ಯಾಗವನ್ನು ಅವರಿಂದ ನಿರೀಕ್ಷಿಸುವುದೆಂದಿಗೂ ತರವಲ್ಲ. ಅವರುಗಳೆಲ್ಲರೂ ಪ್ರಾಚೀನಕಾಲದ ಘನತರವಾದ ರಾಜಮನೆತನಗಳಿಗೆ ಸೇರಿದವರು. ಭರತಖಂಡದ ಪ್ರಯೋಜನಾರ್ಥವಾಗಿ ಅವರುಗಳು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರಲ್ಲಿಯೂ ಮುಖ್ಯವಾಗಿ ಭರತಖಂಡದ ವೈಶಿಷ್ಟ್ಯಗಳಂತಿರುವ ಧ್ಯೇಯಗಳು ಅಚ್ಚಳಿಯದಂತೆ ಅವುಗಳನ್ನುಳಿಸಿ ಸಂರಕ್ಷಿಸಿ ಭರತಖಂಡದಲ್ಲಿ ಅನೂಚಾನವಾಗಿ ನಡೆದುಬಂದ ರಾಜ್ಯಭಾರ ವಿಧಾನಗಳನ್ನು ಕಾಪಾಡಿಕೊಂಡು ಬರುವುದರಲ್ಲಿ ಅವರುಗಳು ಬಹಳ ಶ್ರಮವನ್ನು ವಹಿಸಿ ಕೆಲಸಮಾಡಿದ್ದಾರೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಪ್ರಜಾಸತ್ತಾತ್ಮಕವಾದ ರಾಜ್ಯಾಡಳಿತಕ್ರಮವು ಏರ್ಪಡಬೇಕೆಂಬುದರ ಸಂಬಂಧದಲ್ಲಿ ಪಾಶ್ಚಾತ್ಯ ರಾಜ್ಯಶಾಸ್ತ್ರನಿಯಮಗಳಿಗೆ ಬದ್ಧರಾಗಿ ನಡೆಯುವುದಕ್ಕೆ ಅವರು ಎಷ್ಟೇ ಮಟ್ಟಿಗೆ ಸಮ್ಮತಿಸಿದರೂ ಕೂಡ ಅವರುಗಳ ಪ್ರಭುಪದವಿಯ ಅಂತಸ್ತು ಬ್ರಿಟಿಷ್ ಇಂಡಿಯಾದ ಪ್ರಾಂತಗಳ ಗವರ್ನರುಗಳ ಪದವಿಯ ಅಂತಸ್ತಿನಂತಲ್ಲವೆಂಬುದನ್ನೂ, ಅದೇ ಬೇರೆಯೆಂಬುದನ್ನೂ ಅಂಗೀಕರಿಸಿ ವರ್ತಿಸಬೇಕು. ಅಲ್ಲದೆ ಅವರುಗಳ ವಿಶೇಷರೀತಿಯ ಸ್ಥಾನ, ಮಾನಗಳಿಗೆ ತಕ್ಕಂತೆ ಅವರಿಗೆ ಗೌರವವಿರುವ ಪರಿಸ್ಥಿತಿಯನ್ನು ಕಲ್ಪಿಸಿ ಅದಕ್ಕೆ ಲೇಶಮಾತ್ರವೂ ಚ್ಯುತಿಯುಂಟಾಗದಂತೆ ನೋಡಿಕೊಳ್ಳಬೇಕಾದುದು ಅವಶ್ಯಕವೆಂಬುದನ್ನೂ ಸಹ ಆದರತೆಯೇ ಅಂಗೀಕರಿಸಿ ವರ್ತಿಸಬೇಕು.

ಪ್ರಸಕ್ತವರುಷದಲ್ಲಿ ನಡೆದ ಕಾರ್ಯಕಲಾಪಗಳನ್ನು ಕುರಿತು ಸಂಕ್ಷೇಪವಾಗಿ ತಮಗೆ ಪ್ರಕಟಪಡಿಸಿರುವ ಈ ಸಾರಾಂಶದಲ್ಲಿ ಹಣದ ಅನುಕೂಲತೆಯಿಲ್ಲದ ಕಾರಣದಿಂದ ಕೆಲವು ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುವುದಕ್ಕಿಲ್ಲದೆ ಸ್ವಲ್ಪಮಟ್ಟಿಗೆ ಮಟ್ಟುಬಿದ್ದ ಸಂಗತಿಯನ್ನು ಸೂಚಿಸಿದ್ದೇನೆ. ಅವುಗಳು ಹಾಗೆ ಮಟ್ಟುಬಿದ್ದುದೇನೋ ನಿಜ. ಆದರೂ ಒಟ್ಟಿನಮೇಲೆ ಪರಿಗಣಿಸಿ ನೋಡಿದರೆ ಈ ಬಗೆಯ ಆರ್ಥಿಕದುರವಸ್ಥೆಯ ಅವಧಿಯಲ್ಲಿ ಕೂಡ ಇತರ ಅನೇಕ ದೇಶಗಳವರಷ್ಟುಮಟ್ಟಿಗೆ ಕಷ್ಟನಷ್ಟಗಳಿಗೆ ಒಳಗಾಗದೆ ಮೈಸೂರು ಸಂಸ್ಥಾನದಲ್ಲಿ ನಾವುಗಳು ಈಗಿನಂತೆ ಪಾರಾದುದಕ್ಕಾಗಿ ಸಂತೋಷಿಸಬೇಕಾಗಿದೆ. ಸ್ವಲ್ಪಮಟ್ಟಿಗೆ ಕ್ಲೇಶಕರವಾಗುವಂತೆ ವೆಚ್ಚವನ್ನು ತಗ್ಗಿಸುವ ಏರ್ಪಾಡುಗಳನ್ನು ನಾವು ಕೈಕೊಳ್ಳಬೇಕಾಗಿ ಬಂದುದೇನೋ ನಿಜ. ಆದರೆ ಮೈಸೂರು ಸಂಸ್ಥಾನದಲ್ಲಿ ಹೊಸ ತೆರಿಗೆ ಯಾವುದನ್ನೂ ವಿಧಿಸಬೇಕಾದ

ಮೈಸೂರು ವಿಶ್ವವಿದ್ಯಾನಿಲಯದ ಪ್ರೊಫೆಸರಾದ ಮಿ|| ಎ. ಆರ್. ವಾಡಿಯಾರವರು ಕಳೆದ ಸೋಮವಾರ ರಾಜಧಾನಿಯ ಸಿಲ್ವರ್ ಜೂಬಿಲಿ ಕ್ಲಾಕ್ ಟವರಿನ ಮುಂಭಾಗದಲ್ಲಿರುವ 'ಶ್ರೀ ಲಕ್ಷ್ಮೀ ಸಿನಿಮಾ' ದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಮಿ|| ವಾಡಿಯಾರವರು, ಮೈಸೂರಿನಲ್ಲಿ ಈಗ ಮಾತನಾಡುವ ಚಲನಚಿತ್ರಗಳು ಮಾತ್ರವೇ ಇರುವುದರಿಂದ, ಸೈಲೆಂಟ್ ಚಲನಚಿತ್ರಗಳನ್ನು ಪ್ರದರ್ಶಿಸಲು ಈ ಹೊಸ ಸಿನಿಮಾವನ್ನು ಪ್ರಾರಂಭಿಸಿದುದಕ್ಕಾಗಿ ಸಿನಿಮಾ ಮ್ಯಾನೇಜರಾದ ಮಿ|| ಆರ್. ವಿ. ಶ್ರೀನಿವಾಸರಾವ್ ಬಿ.ಎ., ಇವರನ್ನು ಪ್ರಶಂಸಿಸಿ, ಸದರಿ ಸಿನಿಮಾ ಮೈಸೂರು ಜನರೆಲ್ಲರ ಮೆಚ್ಚುಗೆಗೆ ಪಾತ್ರವಾಗಿ ಚಿರಕಾಲ ಬಾಳಲೆಂದು ಹಾರೈಸಿದರು.

ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು 3 ನೇ ದುಂಡುಮೇಜಿನ ಪರಿಷತ್ತಿಗೆ ಪ್ರಯಾಣಮಾಡಿರುವದರಿಂದ ಈ ಅವಧಿಯಲ್ಲಿ ರಾಜಕಾರ್ಯಪ್ರಸಕ್ತ, ದಿವಾನ್‌ಬಹದ್ದೂರ್ ಮಿ|| ಎಂ. ಎನ್. ಕೃಷ್ಣರಾಯರು ದಿವಾನರಾಗಿಯೂ, ರಾಜಮಂತ್ರಪ್ರವೀಣ ಮಿ|| ಕೆ. ಮ್ಯಾಥ್ಯೂರವರು ಮೊದಲನೇ ಕೌನ್ಸಿಲರಾಗಿಯೂ, ಮಿ|| ಎಸ್. ಪಿ. ರಾಜಗೋಪಾಲಾಚಾರ್ಯರು ಎರಡನೇ ಕೌನ್ಸಿಲರಾಗಿಯೂ ಇರಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆಮಾಡಿರುತ್ತಾರೆ. ಇದೇ ಸಂದರ್ಭದಲ್ಲಿ ಮಿ|| ಆರ್. ರಂಗರಾಯರು ಚೀಫ್ ಸೆಕ್ರೆಟರಿಗಳಾಗಿಯೂ, ಮೈಸೂರು ಡಿ|| ಡೆಪ್ಯುಟಿ ಕಮಿಷನರಾಗಿದ್ದ ಮಿ|| ಎಸ್. ಅಬ್ದುಲ್‌ವಾಜಿದ್‌ರವರು ಡೆವಲಪ್‌ಮೆಂಟ್ ಸೆಕ್ರೆಟರಿಗಳಾಗಿಯೂ, ಮಿ|| ಸಿ. ಎಸ್. ಕುಪ್ಪಸ್ವಾಮಿ ಅಯ್ಯಂಗಾರ್ರವರು ಮೈಸೂರು ಡಿ|| ಡೆಪ್ಯುಟಿ ಕಮಿಷನರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ. ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಮಿ|| ರಾಮಚಂದ್ರರಾವ್ ಬೊಂಭೋರೆಯವರು ರೆವಿನ್ಯೂ ಇಲಾಖೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಇವರ ಸ್ಥಳಕ್ಕೆ ಮಿ|| ಮರಿಯಪ್ಪನವರು ಮೈಸೂರು ಡಿ|| ಪೋ|| ಸೂ|| ರಾಗಿ ವರ್ಗಾಯಿಸಲ್ಪಟ್ಟಿರುವರು.

ಸತ್ಯಾಗ್ರಹಸಮರವಾರ್ತೆ.

ಅಕ್ಟೋಬರು 30 ನೇ ತಾರೀಖಿನ ದಿವಸ ಅಹಮದಾಬಾದಿನಲ್ಲಿ ರಾಷ್ಟ್ರಧ್ವಜವಂದನೆಯ ಸಲುವಾಗಿ 3 ಜನ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಅಕ್ಟೋಬರು 31 ನೇ ತಾರೀಖಿನ ದಿವಸ ಮುಂಬಯಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು 15 ಜನ ಕಾಂಗ್ರೆಸ್ ಕೆಲಸಗಾರರಿಗೆ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಅಕ್ಟೋಬರ್ 30 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ರಾಷ್ಟ್ರಧ್ವಜವಂದನೆಯನ್ನು ಮಾಡಲು ಪ್ರಯತ್ನಿಸಿದರೆಂಬ ಕಾರಣದಮೇಲೆ 44 ನೆಯ ಎಮರ್ಜನ್ಸಿ ವಾರ್ ಕೌನ್ಸಿಲ್ಲಿಗೆ ಸಂಬಂಧಪಟ್ಟ 3 ಜನ ಮಹಿಳೆಯರೂ, 8 ಜನ ಸ್ವಯಂಸೇವಕರೂ ದಸ್ತಗಿರಿಮಾಡಲ್ಪಟ್ಟರು. ಅಬ್ದುಲ್‌ರಹಿಮಾನ್ ಸ್ಟ್ರೀಟಿನಲ್ಲಿ ಪೋಲೀಸರು ಒಂದು ಕೊಠಡಿಯನ್ನು ಶೋಧಮಾಡಿ, ಅಲ್ಲಿದ್ದ 17 ಜನ ಸ್ವಯಂಸೇವಕರನ್ನೂ ಹಾಗೂ ದಾದಾಬಜಾರಿನಲ್ಲಿ ಪಿಕೆಟಿಂಗ್‌ಮಾಡುತ್ತಿದ್ದ 4 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ನವಂಬರ್ 2 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ಭೂಲೇಶ್ವರದಲ್ಲಿ ಒಂದು ಕಟ್ಟಡವನ್ನು ಒಂದು ಗಂಟೆಯವರೆಗೆ ಜಪ್ತುಮಾಡಿ ಅಲ್ಲಿ ದೊರೆತ 1000 ಕಾಂಗ್ರೆಸ್ ಬಾವುಟಗಳನ್ನೂ, 100 ಬಣ್ಣದ ಬಾದೀಪಟ್ಟಿಗಳನ್ನೂ, 100 ನೀಲಿಚಡ್ಡಿಗಳನ್ನೂ, 100 ಜೋಡಿ ಎಕ್ಕಡಗಳನ್ನೂ, ಒಂದು ದೊಡ್ಡ ಕಂತೆ ಬುಲೆಟಿನ್ನುಗಳನ್ನೂ ತಮ್ಮ ವಶಪಡಿಸಿಕೊಂಡುದುದಲ್ಲದೆ ಅಲ್ಲಿದ್ದ 4 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ನವೆಂಬರು 1 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ಪರದೇಶೀ ಮಾಲುಗಳ ಅಂಗಡಿಗಳ ಮುಂದೆ ಪಿಕೆಟಿಂಗ್‌ಮಾಡುತ್ತಿದ್ದ 5 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು. ಮ್ಯಾಜಿಸ್ಟ್ರೇಟರು ಅವರೆಲ್ಲರಿಗೂ ಆರಾರುತಿಂಗಳ ಕಠಿಣಸಜೆಯನ್ನು ವಿಧಿಸಿದರು.

ನವೆಂಬರು 2 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ಪರದೇಶೀ ಮಾಲುಗಳ ಅಂಗಡಿಗಳ ಮುಂದೆ ಪಿಕೆಟಿಂಗ್‌ಮಾಡಿದ 4 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು. ಮ್ಯಾಜಿಸ್ಟ್ರೇಟರು ಎಲ್ಲರಿಗೂ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಅಹಮದಾಬಾದ್ ಪೋಲೀಸರು ನವೆಂಬರು 2 ನೇ ತಾರೀಖಿನ ದಿವಸ, ಗುಜರಾಥ ಕಾಂಗ್ರೆಸ್ ಕಮಿಟಿಯ 30 ನೇ ಸರ್ವಾಧಿಕಾರಿಗಳಾದ ಶ್ರೀಮತಿ ಗಂಗಾಬೆನ್ ವೈದ್ಯರನ್ನೂ, 8 ಜನ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿದರು. ಮ್ಯಾಜಿಸ್ಟ್ರೇಟರು ಇವರೆಲ್ಲರಿಗೂ ವಿಧವಿಧವಾದ ಶಿಕ್ಷೆಯನ್ನು ವಿಧಿಸಿದರು.

ಮದರಾಸ್ ಅಧಿಪತ್ಯದಲ್ಲಿ ಆಗಸ್ಟ್ 1 ನೇ ತಾರೀಖಿನ ವರೆಗೆ 1774 ಜನ ರಾಜಕೀಯ ಖೈದಿಗಳಿದ್ದರೆಂದೂ, ಅವರಲ್ಲಿ 164 ಜನ ಸ್ತ್ರೀಯರಿದ್ದರೆಂದೂ ತಿಳಿದುಬಂದಿದೆ.

ಅಹಮದಾಬಾದಿನಲ್ಲಿರುವ ಮಹಾತ್ಮರ ಆಶ್ರಮವಾಸಿಗಳಾದ ಶ್ರೀ|| ಚಾಗನಲಾಲಜೋಶಿಯವರು ಪೋಲೀಸರ ಅಪ್ಪಣೆಯಪ್ರಕಾರವಾಗಿ ಅಹಮದಾಬಾದ್ ಜಿಲ್ಲೆಯನ್ನು ಬಿಟ್ಟುಹೋಗಲಿಲ್ಲವೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಶ್ರೀ|| ಜೋಶಿಯವರಿಗೆ 15 ತಿಂಗಳ ಕಠಿಣಸಜೆಯನ್ನೂ, 200 ರೂಪಾಯಿಗಳ ಜುಲ್ಮಾನೆಯನ್ನೂ, ಜುಲ್ಮಾನೆಯನ್ನು ಕೊಡದಿದ್ದರೆ ಮತ್ತೆ 4 ತಿಂಗಳ ಕಠಿಣಸಜೆಯನ್ನೂ ವಿಧಿಸಿದರು.

ಬನಾರಸ್ಸಿನಲ್ಲಿ ಹೊರಡುವ 'ಆಜ್' ಎಂಬ ದಿನಪತ್ರಿಕೆಯ ಆಫೀಸಿನಲ್ಲಿ ಕಾಂಗ್ರೆಸ್ ಚಳವಳಿಗೆ ಸಂಬಂಧಪಟ್ಟ ಹಸ್ತಪತ್ರಿಕೆಗಳು ಪ್ರಿಂಟಾಗಿ ಶೇಖರಿಸಲ್ಪಟ್ಟಿರುವವೆಂಬ ಅನುಮಾನದ ಮೇಲೆ ಪೋಲೀಸರು ಸದರಿ ಆಫೀಸನ್ನು ಒಂದು ಗಂಟೆಯವರೆಗೆ ಜಪ್ತುಮಾಡಿದರು. ಆದರೆ ಚಳವಳಿಗೆ ಸಂಬಂಧಪಟ್ಟ ಯಾವ ಕಾಗದಪತ್ರಗಳೂ ಪೋಲೀಸರಿಗೆ ದೊರೆಯಲಿಲ್ಲ.

ವರ್ತಮಾನಸಂಗ್ರಹ

ಸಂಯುಕ್ತ ಪ್ರಾಂತದ ಮವಾಳ ಪಕ್ಷದ ಮುಖಂಡರು ಮಹಾತ್ಮರನ್ನು ಕೂಡಲೇ ಬಿಡಬೇಕೆಂದು ಸರಕಾರದಲ್ಲಿ ವಿನಂತಿಮಾಡಿಕೊಂಡಿರುತ್ತಾರೆ.

ಹಿಂದೂಮಹಮ್ಮದೀಯರ ಐಕಮತ್ಯದ ಸಲುವಾಗಿ ಅಲ್ವಾರ್ ಮಹಾರಾಜರು ದೀಪಾವಳೀ ಹಬ್ಬದ ಸಮಯದಲ್ಲಿ ತಜಿಯಾ ಗಲಾಟೆಗಳ ಸಂಬಂಧವಾಗಿ ಶಿಕ್ಷಿಸಲ್ಪಟ್ಟಿದ್ದ ಮಿಯಾಮುಸ್ಲಿಮರನ್ನೆಲ್ಲಾ ಬಿಡುಗಡೆ ಮಾಡಿದರು.

ಮೂರನೇ ದುಂಡುಮೇಜಿನ ಪರಿಷತ್ತಿನ ಸಲುವಾಗಿ ಇಂಡಿಯಾಸರಕಾರಕ್ಕೆ 2 ಲಕ್ಷ ರೂ. ಗಳು ವೆಚ್ಚವಾಗುವುದಂತೆ! ಒಟ್ಟಾವಾಪರಿಷತ್ತಿಗೆ ಭರತಖಂಡದಿಂದ ಪ್ರತಿನಿಧಿಗಳನ್ನು ಕಳುಹಿಸಿದುದಕ್ಕೂ ಇಷ್ಟೇ ವೆಚ್ಚವಾಗಿರುವುದು.

ತಿರುವಾಂಕೂರು ಸರಕಾರದವರು ಒಬ್ಬ ಸ್ತ್ರೀ ಲಾಯರನ್ನು ಎರಡನೆಯ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ನೇಮಕಮಾಡಿರುತ್ತಾರೆ. ಆ ಸಂಸ್ಥಾನದಲ್ಲಿ ಸ್ತ್ರೀಯರನ್ನು ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿರುವುದು ಇದೇ ಮೊದಲನೆಯ ಸಾರೆಯಾಗಿರುತ್ತದೆ.

ಸಾತಾರಾಜಿಲ್ಲೆಯಲ್ಲಿ ಪ್ಲೇಗಿನ ಹಾವಳಿಯು ವಿಪರೀತವಾಗಿರುವುದು. ಅಕ್ಟೋಬರ್ ತಿಂಗಳಲ್ಲಿ 1140 ಜನರಿಗೆ ಪ್ಲೇಗು ತಗಲಿ 704 ಜನರು ಮೃತಪಟ್ಟರೆಂದೂ ಅದರ ಹಿಂದಿನ ತಿಂಗಳಲ್ಲಿ 583 ಜನರಿಗೆ ತಗಲಿ 316 ಜನರು ಮೃತಪಟ್ಟರೆಂದೂ ತಿಳಿದುಬಂದಿದೆ.

ಹೌರಾದ ಪುರಜನರು ಒಂದು ಬಹಿರಂಗಸಭೆಯನ್ನು ಮಾಡಿ ಸ್ತ್ರೀಖೈದಿಗಳನ್ನು ಅಂಡಮಾನಿಗೆ ಕಳುಹಿಸಕೂಡದೆಂದೂ, ಕಾರಾಗೃಹದಲ್ಲಿ ರೋಗಗ್ರಸ್ತರಾಗಿ ನರಳುತ್ತಿರುವ ಶ್ರೀ|| ಸುಭಾಷಚಂದ್ರಬೋಸ್ ಮತ್ತು ಸೇನಗುಪ್ತ ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಠರಾವುಗಳನ್ನು ಪಾಸುಮಾಡಿದರು.

ಮುಂಬಯಿ 'ಫ್ರೀಪ್ರೆಸ್‌ಜರ್ನಲ್ಲಿ' ನವರು ಎರಡನೆಯ ಸಾರೆ ಠೇವಣಾತಿ ಇಟ್ಟಿದ್ದ 10,000 ರೂ. ಗಳನ್ನು ಸರಕಾರದವರು ಜಪ್ತುಮಾಡಿದ್ದುದು ಸರಿಯಷ್ಟೇ! ಪತ್ರಿಕಾಸಂಪಾದಕರು ಪತ್ರಿಕೆಯನ್ನು ಪುನಃ ಹೊರಡಿಸುವುದಕ್ಕೆ ಅಪ್ಪಣೆಯನ್ನು ಕೇಳಿದಾಗ 20,000 ರೂ. ಗಳ ಠೇವಣಾತಿಯನ್ನಿಡಬೇಕೆಂದು ಮ್ಯಾಜಿಸ್ಟ್ರೇಟರು ಅಪ್ಪಣೆಮಾಡಿದರು.

ದೀಪಾವಳಿ ಹಬ್ಬದಕಾಲದಲ್ಲಿ ಜೂಜಾಡುತ್ತಿದ್ದರೆಂಬ ಕಾರಣದಮೇಲೆ ಕಲ್ಕತ್ತೆಯ ಪೋಲೀಸರು 458 ಜನರನ್ನು ದಸ್ತಗಿರಿ ಮಾಡಿದರು. ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ವಿಚಾರಣೆಯನ್ನು ನಡೆಯಿಸಿ 200 ಜನರಿಗೆ ತಲಾ 25 ರೂಪಾಯಿಗಳಂತೆಯೂ, ಇತರರಿಗೆ 5 ರೂಪಾಯಿಯಂತೆಯೂ ಜುಲ್ಮಾನೆಯನ್ನು ವಿಧಿಸಿದರು.

ವ್ಯಾಪಾರ ಸಂಬಂಧವಾಗಿ ಒಟ್ಟಾವಾ ಸಮ್ಮೇಳನದಲ್ಲಿ ಇಂಡಿಯಾ ಸರ್ಕಾರದ ಪ್ರತಿನಿಧಿಗಳು ಮಾಡಿಕೊಂಡು ಬಂದಿರುವ ಒಪ್ಪಂದವು ನ್ಯಾಯವಿಧಾಯಕ ಸಮ್ಮೇಳನದಲ್ಲಿ ಅಂಗೀಕರಿಸಲ್ಪಟ್ಟ ಕೂಡಲೇ ಪ್ರತಿನಿಧಿಗಳಾಗಿಹೋಗಿದ್ದ ಮಿ|| ಆರ್. ಕೆ. ಷಣ್ಮುಖಂಶೆಟ್ಟಿ ಮತ್ತು ಮಿ|| ಅಬ್ದುಲ್ಲಾ ಹರೂನ್ ಇವರಿಬ್ಬರಿಗೂ 'ನೈಟ್‌ಹುಡ್' ಗಳು ಅನುಗ್ರಹಿಸಲ್ಪಡುವುವಂತೆ!

ದೆಹಲಿಯ ಮಾಜಿ ಚೀಫ್‌ಕಮಿಷನರಾಗಿದ್ದ ಸರ್ ಜಾನ್ ಥಾಂಸನ್ನರು ಲಂಡನ್ನಿನಲ್ಲಿ ಭರತಖಂಡದ ರಾಜಕೀಯಚಳವಳಿಯಸಂಬಂಧವಾಗಿ ಭಾಷಣಮಾಡುತ್ತಾ, ಈಗಿನ ಸರಕಾರದ ಪದ್ಧತಿಯು ಪುರಾತನಕಾಲದ್ದೆಂದೂ, ಅದನ್ನು ಅತ್ಯವಶ್ಯಕವಾಗಿ ಬದಲಾಯಿಸಬೇಕೆಂದೂ, ಬ್ರಿಟಿಷರು ಆಗಿಂದಾಗ್ಗೆ ಭಾರತೀಯರಿಗೆ ಕೊಡುತ್ತಿರುವ ವಚನಗಳನ್ನು ಪಾಲಿಸಬೇಕೆಂದೂ ಹೇಳಿದರು.

ವೆಲಿಂಗ್‌ಟನ್ (ನೀಲಗಿರಿ) ನಗರದಲ್ಲಿ ಕೆಲವು ದಿವಸಗಳ ಹಿಂದೆ ಮಿ|| ಚಾರಲ್ಸ್‌ಪೆರ್ರಿ ಎಂಬ ಒಬ್ಬ ಪ್ರಸಿದ್ಧಪುರುಷರು ಗಾಂಧಿಯವರಂತೆ ಲಂಡ ಪಂಚೆಯನ್ನುಟ್ಟು ಬೀದಿಯಲ್ಲಿ ತಿರುಗಾಡುತ್ತಿದ್ದರು. ಇದನ್ನು ನೋಡಲು ಜನರು ತಂಡೋಪತಂಡವಾಗಿ ಕೂಡಿದರು. ಆಗ ಪೋಲೀಸಿನವನೊಬ್ಬನು ಗಲಾಟೆಯನ್ನು ತಪ್ಪಿಸುವುದಕ್ಕೆ ಬೇರೆ ಯಾವಮಾರ್ಗವನ್ನೂ ಕಾಣದೆ ಮಿ|| ಪೆರ್ರಿಯವರನ್ನು ದಸ್ತಗಿರಿ ಮಾಡಿದನು. ಆದರೆ ಮಿ|| ಪೆರ್ರಿಯವರು ತಮ್ಮ ವರ್ತನವು ನ್ಯಾಯವೆಂಬ ಬಗ್ಗೆ ಕೋರ್ಟಿನಲ್ಲಿ ಸಕಾರಣವಾಗಿ ವಾದಿಸಿ ಬಿಡುಗಡೆಯನ್ನು ಹೊಂದಿದರು.

ಕಳೆದ ಅಕ್ಟೋಬರ್ 27 ನೇ ತಾರೀಖಿನ ದಿವಸ ಲಂಡನ್ ನಗರದ ಪಶ್ಚಿಮಭಾಗದಲ್ಲಿ ಹೊಟ್ಟೆಗಿಲ್ಲದ ಸುಮಾರು 2000 ಜನ ನಿರುದ್ಯೋಗಿಗಳು ಗಲಭೆಮಾಡಿದರು. ಪೋಲೀಸರು ದೊಂಬೆಗಾರರಲ್ಲಿ ಒಬ್ಬನನ್ನು ದಸ್ತಗಿರಿಮಾಡಿದರು. ಈ ಸಂಬಂಧದಲ್ಲಿ ಪೋಲೀಸರಿಗೂ ದೊಂಬೆಗಾರರಿಗೂ ಜಗಳವಾಗಿ ಕಡೆಗೆ ಒಬ್ಬರಿಗೊಬ್ಬರಿಗೆ ಕೈಕೈಹತ್ತಿ ಅನೇಕರಿಗೆ ಗಾಯಗಳಾದವು. ರಸ್ತೆಯಲ್ಲಿ ಗಾಡಿಗಳ ತಿರುಗಾಟಕ್ಕೇ ಅಡಚಣೆಯುಂಟಾಯಿತು. ಹನ್ನೆರಡು ಜನ ಪೋಲೀಸರು ಭರ್ಜಿಗಳಿಂದ ಜನರನ್ನು ಚದರಿಸಿದರು. ದೊಂಬೆಗಾರರು ಕಂಬರ್ಲೆಂಡ್ ಪೋಸ್ಟು ಆಫೀಸಿನ ಬಾಗಿಲನ್ನು ಕಲ್ಲುಗಳಿಂದ ಒಡೆದು ಚೂರುಮಾಡಿದರು. ಆಕ್ಸ್‌ಫರ್ಡ್ ರಸ್ತೆಯಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಅನೇಕ ಸ್ತ್ರೀಯರು ದೊಂಬೆಗಾರರ ನಡುವೆ ಸಿಕ್ಕಿ ತೊಂದರೆಗೊಳಗಾದರು. ಇಂತಹ ಸಮಯವನ್ನೇ ನಿರೀಕ್ಷಿಸುತ್ತಿದ್ದ ಅನೇಕ ಜನ ಕಳ್ಳರು ಅಂಗಡಿಗಳ ಮುಂಭಾಗದಲ್ಲಿದ್ದ ಗಾಜುಗಳನ್ನು ಒಡೆದು ಹಾಕಿ ಕೈಗೆ ಸಿಕ್ಕಿದ ಪದಾರ್ಥಗಳನ್ನು ದೋಚಿಕೊಂಡು ಹೋದರು. ಇದೇ ರೀತಿ ಆ ದಿವಸ ನಗರದ ನಾನಾ ಕಡೆಗಳಲ್ಲಿ ಗಲಭೆಯುಂಟಾಯಿತು. ಆಕ್ಸ್‌ಫರ್ಡ್ ರಸ್ತೆಯಲ್ಲಿ ಆದ ಗಲಾಟೆಯಲ್ಲಿ 15 ಜನರಿಗೆ ಗಾಯಗಳಾದುವು. ಅವರಲ್ಲಿ ಎಂಟು ಜನರು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಇದೇ ಸಂಬಂಧವಾಗಿ ಹೈಡ್ ಪಾರ್ಕಿನಲ್ಲಿ 20,000 ಜನರಿಂದ ಕೂಡಿದ ಒಂದು ಬಹಿರಂಗಸಭೆಯು ನಡೆಯಿತು. ಅದರಲ್ಲಿ ಮಿ|| ಸಕಲಾತ್‌ವಾಲಾ, ಮಿ|| ಟೆಂಪರ್ಲ್ಯಾನ್ ಮೊದಲಾದವರು ಸರಕಾರದವರ ರೀತಿನೀತಿಗಳನ್ನು ಖಂಡಿಸಿ ಭಾಷಣಮಾಡಿದರು. ಪರಿಸ್ಥಿತಿಯು ಸದ್ಯಃ ಶಾಂತವಾಗಿದೆ.

ಛಲವಾದಿಮಠದ ದ್ವಿತೀಯ ಪ್ರಾಂತಿಕಸಭಾ.

ಈ ಸಭೆಯು ಸೊರಬದ ತಾ|| ಗೌರೀಕೆರೆ ಮಠದಲ್ಲಿ ಇದೇ ಅಕ್ಟೋಬರ್ ತಾರೀಖು ೧೭-೧೮-೧೯-೨೦ ನೆಯ ದಿವಸಗಳಲ್ಲಿ ನಡೆಯಿತು. ಇಲ್ಲಿಗೆ ಕೆಳದಿ, ಶ್ಯಾನಸೂರು, ಇಂಬೂರು, ಅಂದ್ಗಿ, ಅಕ್ಕೂರು, ಚೌಟಿ, ಜಡೆ, ಅನವಟ್ಟಿ, ದ್ಯಾಬೇರ್ಯ, ತವನಂದಿ, ಹಳೇಸೊರಬ, ಚಂದ್ರಗುತ್ತಿ ಮುಂತಾದ ಶಿಮೊಯಕಟ್ಟ, ಕಕ್ವಿ, ಗೌಡರು, ಬುದ್ಧಿವಂತರು ಅಧಿಯಾಗಿ ಸುಮಾರು ೨೦೦-೩೫೦ ರ ಮೇಲ್ಪಟ್ಟು ಛಲವಾದಿಬಳಗದವರು ಬಂದಿದ್ದರು. ಸರ್ವಾನುಮತದಿಂದ ಶ್ರೀ ಶ್ಯಾನಸೂರು ಮಠದ ಪಂಡಿತ ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನೂ, ಗೌರೀಕೆರೆ ಮಠದ ವೀರರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರು ಉಪಾಧ್ಯಕ್ಷಸ್ಥಾನವನ್ನೂ ಅಲಂಕರಿಸಿದರು. ಆ ಮೇಲೆ ಕೆಳದಿ ಸ್ಕೂಲ್ ಮಾಸ್ತರ್ ಮಹಾಲಿಂಗಪ್ಪ ಹಳ್ಳಿಕೊಪ್ಪದ ವೀರಪ್ಪ ಇವರು ಮಂಗಳಗೀತವನ್ನು ಹಾಡಿದರು. ಅಧ್ಯಕ್ಷ ಭಾಷ್ಯಪಾದರು ಛಲವಂಶದ ಉತ್ಪತ್ತಿ, ಛಲವಾದಿಮಠದವರು ನಡೆಯತಕ್ಕ ಆಚಾರ ವಿಚಾರಗಳನ್ನೂ ಮತ್ತು ಗುರುವರ್ಗದ ಜಂಗಮರಿಂದ ಇವರು ಹೊಂದಬೇಕಾದ ಉನ್ನತಿಯ ವಿಷಯವನ್ನೂ ಗ್ರಂಥಪ್ರಮಾಣದೊಡನೆ ಸರ್ವರ ಹೃದಯದಲ್ಲಿ ಪ್ರತಿಬಿಂಬಿಸುವಂತೆ ಬೋಧಿಸಿದರು. ಮರುದಿವಸ ಸಭೆಯು ಪ್ರಾರಂಭವಾಗಲು ಉಪಾಧ್ಯಕ್ಷರು ಭಸ್ಮಧಾರಣ, ಗುರುಭಕ್ತಿ ಮೊದಲಾದ ಮಠಸುಧಾರಣೆಗಳ ವಿಷಯದಲ್ಲಿಯೂ ಮುದ್ರೆಯಾದ ಹುಟ್ಟುಸರಪಳಿ, ಘಂಟೆ ಮೊದಲಾದವುಗಳ ಉತ್ಪತ್ತಿವಿಷಯದಲ್ಲಿಯೂ ಬಹು ಸ್ವಾರಸ್ಯವಾಗಿ ಉಪದೇಶಿಸಿದರು. ಅನಂತರ ಗೌರೀಕೆರೆಮಠದ ವೇ|| ಚನ್ನಬಸವಯ್ಯನವರು ಸುಧಾರಣೆಯ ವಿಚಾರವಾಗಿ ಎಲ್ಲರೂ ಆನಂದಿಸುವಂತೆ ಮಾತನಾಡಿದರು. ಆ ಮೇಲೆ ಛಲವಾದಿಗಳಲ್ಲಿ ಕೆಲವರು ತಮ್ಮ ಸುಧಾರಣೆಯ ಬಗ್ಗೆ ಮಾತನಾಡಿ ತಮ್ಮ ಜನಾಂಗದವರು ಅಪೇಯಪಾನ ಅಭಕ್ಷ್ಯಭಕ್ಷಣ ಮೊದಲಾದವುಗಳನ್ನು ಮಾಡಬಾರದೆಂದೂ, ಸೂಳೆಯರನ್ನು ಬಿಡಬಾರದೆಂದೂ ಇತ್ಯಾದಿ ಠರಾವುಗಳನ್ನು ಪಾಸು ಮಾಡಿಸಿದರು. ಆ ಮೇಲೆ ದೇವತಾ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಇಂಡಿಯಾದೇಶದ ಕೈಗಾರಿಕೆಗಳು.

ಜಪಾನ್‌ದೇಶದವರು ಕಳೆದ ಅರ್ಧಶತಮಾನದಿಂದ ಹತ್ತಿಬಟ್ಟೆಗಳು, ಪಾರಿಸುಬಟ್ಟೆಗಳು, ರೇಷ್ಮೆಬಟ್ಟೆಗಳು ಇವುಗಳನ್ನು ಯಂತ್ರಗಳ ಸಹಾಯದಿಂದ ತಯಾರುಮಾಡಿ ಬಹಳ ಸುಲಭಕ್ಕೆಯಲ್ಲಿ ಮಾರುವರು. ನಮ್ಮ ದೇಶದಲ್ಲಿ ರೇಷ್ಮೆಹುಳುಗಳನ್ನು ಸಾಕುವ ಶಿಕ್ಷೆಯು ಮಾತಲ್ಪಡುವುದು. ಜಪಾನ್‌ದೇಶೀಯರು ರಸಾಯನಶಾಸ್ತ್ರದ ಸಹಾಯದಿಂದ ರೇಷ್ಮೆನಾರುಗಳಲ್ಲಿ ಯಾವಯಾವ ಪದಾರ್ಥಗಳು ಸೇರಿರುವುವೋ ಅವುಗಳನ್ನು ಸೇರಿಸಿ ನೂಲನ್ನು ತೆಗೆದು ಅದರಿಂದ ಬಟ್ಟೆಗಳನ್ನು ತಯಾರುಮಾಡಿ ಮಾರುವರು. ಹುಳುಗಳನ್ನು ಸಾಕಿಕೊಂಡು ತಯಾರುಮಾಡುವ ರೇಷ್ಮೆ ಖರೀದಿಯು ಎಷ್ಟಾಗುವುದೋ ಅದರಲ್ಲಿ ಹದಿನಾಲ್ಕು ಭಾಗದಲ್ಲಿ ಒಂದುಭಾಗದಷ್ಟು ಜಪಾನವರು ತಯಾರುಮಾಡತಕ್ಕ ಕೃತಕರೇಷ್ಮೆಗೆ ಖರ್ಚಾಗುವುದು. ಈ ಬಟ್ಟೆಗಳು ಇಂಡಿಯಾದೇಶಕ್ಕೆ ರಫ್ತಾಗುವುದರಿಂದ ನಮ್ಮ ಹತ್ತಿ ಮತ್ತು ಇತರ ಬಟ್ಟೆಗಳಿಗೆ ಗಿರಾಕಿಯು ತಪ್ಪುವುದು. ನಮ್ಮ ಕೈಗಾರಿಕೆಗಳು ಹೀನಸ್ಥಿತಿಗೆ ಬರುವುವು. ಕೈಪಾ, ಜಪಾನ್ ಮೊದಲಾದ ಪರದೇಶಗಳಿಂದ ಬರತಕ್ಕ ಬಟ್ಟೆಗಳಿಗೆ ಈಗ ಇರತಕ್ಕ ಸೇಕಡಾ 25 ರಷ್ಟು ಸುಂಕಕ್ಕೆ ಬದಲಾಗಿ ನೂರರಷ್ಟು ಸುಂಕವನ್ನು ಹಾಕಬೇಕೆಂದು ಪರ್‍ಯಾಲೋಚಿಸುತ್ತಿದ್ದಾರೆ. ಬ್ರಿಟಿಷ್‌ಬಟ್ಟೆಗಳಿಗೆ ಈ ಹೆಚ್ಚು ಸುಂಕವನ್ನು ಮಾಫೀಮಾಡಬೇಕೆಂದು ಪರ್‍ಯಾಲೋಚಿಸುತ್ತಿದ್ದಾರೆ. ಅದಕ್ಕೆ ಜಪಾನಿನವರು ಪ್ರತೀಕಾರವನ್ನು ಮಾಡುವುದಾಗಿ ಹೆದರಿಸುತ್ತಿದ್ದಾರೆ. ಇದಕ್ಕೆ ಸಂಬಾಯಿ ಕೋರ್ಟಿನ ಬ್ಯಾರಿ ಅವರ ವ್ಯವಸ್ಥೆಗೂ, ಲೀಗ್ ಆಫ್ ನೇಷನ್ಸಿನವರ ವ್ಯವಸ್ಥೆಗೂ ಬಿಡತಕ್ಕದ್ದು ಉತ್ತಮವೆಂದು ತೋರುತ್ತದೆ.

ಎಂ. ವೆಂಕಟಕೃಷ್ಣಯ್ಯ.

ಕೊಟ್ಟೂರು ಸಮಾಚಾರ.

ಬಳ್ಳಾರಿ ಡಿ|| ಕೊಟ್ಟೂರು ಪಟ್ಟಣದ ಶ್ರೀ ಕೊಟ್ಟೂರೇಶನ ಕಾರ್ತಿಕ ಮಹೋತ್ಸವವು ತಾ|| 12-12-32 ಮಾರ್ಗಶೀರ್ಷ ಶುದ್ಧ ೧೫ ಸೋಮವಾರ ದಿವಸ ಪದ್ಧತಿಪ್ರಕಾರ ಬಹು ವಿಜೃಂಭಣೆಯಿಂದ ನೆರವೇರುವದರಿಂದ ಭಕ್ತಜನರು ಸಕಾಲಕ್ಕೆ ಬಂದು ಪುನೀತರಾಗುವರೆಂದು ಆಶಿಸುತ್ತೇನೆ.

ಬಳ್ಳಾರಿ ಡಿ|| ಕೊಟ್ಟೂರಲ್ಲಿ ತಾ|| 27-10-32 ರ ಬುಧವಾರ ಮಧ್ಯರಾತ್ರಿಯಲ್ಲಿ ಭಯಂಕರ ಮಳೆ ಘಾಳಿ ಬಂದು ಏಕಕಾಲಕ್ಕೆ ಒಂದು ಮನೆ ಮುಚ್ಚಿಕೊಂಡು ೪ ಜನರು ಮೃತಪಟ್ಟರು.

ಪ್ರತಿತಿಂಗಳು ಈ ಊರಲ್ಲಿ 30 ಗ್ರಾಮಗಳ ಉಪಾಧ್ಯಾಯರ ಸೆಂಟ್ರಲ್ ವಿಸಿಟಿಂಗು ಪದ್ಧತಿಪ್ರಕಾರ ತಾ|| 15-10-32 ರಲ್ಲಿ ಪಿ. ಎಂ. ಮರುಳಸಿದ್ಧಯ್ಯನವರ ಶಾಲೆಯಲ್ಲಿ ನೆರವೇರಿತು. ಎಲ್ಲಾ ಉಪಾಧ್ಯಾಯರೂ ಹಾಜರಿದ್ದರು. ವಿದ್ಯಾವಿಷಯದಲ್ಲಿ ಚರ್ಚೆಮಾಡುತ್ತ ಬಾಲಕರಿಗೆ ಸುಲಭೋಪಾಯದಿಂದ ಬೋಧನಪದ್ಧತಿಯನ್ನು ತಿಳಿಯಪಡಿಸಿದರು. ವಿಸಿಟಿಂಗು ಪೂರೈಸಿದನಂತರ ಬಂದ ಉಪಾಧ್ಯಾಯರಿಗೆಲ್ಲಾ ಭೋಜನಸಂತರ್ಪಣೆ ನಡೆಯಿತು. ಮುಂದಿನ ವಿಸಿಟಿಂಗು ತಾ|| 12-11-32 ರಲ್ಲಿ ಬಿ. ಎಂ. ಚನ್ನವೀರಯ್ಯನವರ ಶಾಲೆಯಲ್ಲಿ ನೆರವೇರುವದು.

ಗ್ರಾಮನಿವಾಸಿ.

ಅಜೀರ್ಣವು ಎಲ್ಲಾ ರೋಗಕ್ಕೂ ಮೂಲಕಾರಣವು.

5-5-69

ಅನಾತ್ಮವಂತಃ ಪಶುವದ್ಭುಂಜತೇ ಯೇಽಪ್ರಮಾಣತಃ |
ರೋಗಾನೀಕಸ್ಯ ತೇ ಮೂಲಮಜೀರ್ಣಂ ಪ್ರಾಪ್ನುವಂತಿ ||

ಅಜೀರ್ಣವು ಸರ್ವರೋಗಗಳಿಗೂ ಮೂಲವೆಂದು ಮೇಲಿನ ಶ್ಲೋಕದ ಭಾವವು. ತಾನು ಎಷ್ಟು ಮಾತ್ರ ತಿಂದರೆ ಜೀರ್ಣಿಸುವುದೋ ಅದನ್ನು ತಿಳಿದು ಊಟಮಾಡುವುದನ್ನು ಅಭ್ಯಾಸಮಾಡುವುದು ಕ್ರಮವಾದ ಶಿಕ್ಷಣವು. ಒಳ್ಳೇ ವಸ್ತುಗಳೇ ಆದರೂ ಕಂಠಮಟ್ಟ ಮಿತಿಮೀರಿ ತಿನ್ನುವುದು ಪಶುಗಳ ಧರ್ಮವೆನ್ನುವರು. ಒಮ್ಮೊಮ್ಮೆ ಪಶುಗಳೂ ಕೂಡ ಈ ವಿಧವಾಗಿ ಮಿತಿಮೀರಿ ತಿಂದು ಅಜೀರ್ಣವನ್ನು ತಂದುಕೊಳ್ಳುವುದು ನಿಜವಲ್ಲವೆಂದು ನಮ್ಮ ಅನುಭವವಾಗಿದೆ. ಪುಷ್ಟಿಕರವಾಗಿ ಶ್ರಮದಿಂದಲ್ಲದೆ ಜೀರ್ಣಿಸದ ಮಾಂದ್ಯಕರ ಪದಾರ್ಥಗಳನ್ನು ಎಷ್ಟು ತಿನ್ನಬೇಕೋ, ಲಘುವಾದ ಆಹಾರವನ್ನು ಎಷ್ಟು ಸೇವಿಸಬೇಕೋ ಅವುಗಳ ಪರಿಮಿತಿಯನ್ನು ತಿಳಿದು ಊಟಮಾಡುವುದು ಉತ್ತಮ ಪದ್ಧತಿಯಾಗಿದೆ. ಸ್ವೇಚ್ಛಾಹಾರ ಮಾಡತಕ್ಕವರಿಗೆ ಎಂದಿಗೂ ಆರೋಗ್ಯವು ಇರುವುದಿಲ್ಲವು. ಅಜೀರ್ಣವಾಗುವಂತೆ ಊಟಮಾಡುವವರಿಗೆ ಕರುಳಿನಲ್ಲಿ ಹುಣ್ಣಾಗುವುದು, ಅಮ್ಲಪಿತ್ತ ಉಂಟಾಗುವುದು, ರಕ್ತಹೀನತೆ ಉಂಟಾಗುವುದು, ಕ್ಷಯಕ್ಕೂ ಕಾರಣವಾಗುವುದು.

ಈಗ ಜನಗಳಲ್ಲಿ ಉಂಟಾಗುವ ವ್ಯಾಧಿಗಳಿಗೆಲ್ಲಾ ಮೂಲವು ಬಹಳ ಮಟ್ಟಿಗೆ ಅಜೀರ್ಣವ್ಯಾಧಿಯೇ ಆಗಿದೆ. ಅಜೀರ್ಣವೇ ಪ್ರತಿರೋಗಗಳಲ್ಲಿಯೂ ಅನುಬಂಧವಾಗಿರುವುದು. ಜ್ವರವು ಬಂದಾಗ ಜೀರ್ಣಾಶಯವು ಕೆಡುವುದು. ಆ ಮೇಲೆ ಅಪಥ್ಯವು ನಡೆಯುವುದು. ಒಂದು ವೇಳೆ ಜ್ವರವು ಹೋಗಿದ್ದರೂ ಅಜೀರ್ಣವು ನಿಂತೇ ಇರುವುದು. ಆಗ ಜಿಹ್ವಾಚಾಪಲ್ಯವು ಹೆಚ್ಚುವುದು. ಈ ದಿನ ತಿಂದ ಆಹಾರವು ನಾಳೆಗೆ ಅಸಹ್ಯತೆಯನ್ನುಂಟುಮಾಡುವುದು. ಹೀಗೆ ರುಚಿಗಳು ದಿನೇದಿನೇ ಬದಲಾಯಿಸುವುವು. ಹೀಗೆ ಜಿಹ್ವಾಗಿ ಪದಾರ್ಥಸೇವನೆಯಿಂದಲೇ ಅನಿಯಂತ್ರಿತರುವ ಮನುಷ್ಯನು ರೋಗದಂತಾಗುವನು. ಮನುಷ್ಯನ ಶರೀರಪೋಷಣ ವಿಷಯದಲ್ಲಿ ಆಹಾರ, ಶಯನ ಮತ್ತು ಬ್ರಹ್ಮಚರ್ಯ ಈ ಮೂರನ್ನು ಹೆಚ್ಚುಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಹೀಗಿದ್ದರೆ ಮನೆಗೆ ಸ್ತಂಭಗಳಂತೆ ಶರೀರವು ಪೋಷಿತವಾಗಿರುವುದು.

ಆಹಾರ ಶಯನ ಬ್ರಹ್ಮಚರ್ಯೈರ್ಯುಕ್ತ್ಯಾ ಪ್ರಯೋಜಿತೈಃ |
ಶರೀರಂ ಧಾರ್ಯತೇ ನಿತ್ಯಂ ಆಗಾರಮಿವ ಧಾರಣೈಃ ||

ಈ ಆಹಾರ, ಶಯನ, ಬ್ರಹ್ಮಚರ್ಯ, ಇವುಗಳ ವಿಷಯವಾಗಿ ಬರೆದ ದೊಡ್ಡ ದೊಡ್ಡ ಗ್ರಂಥಗಳಿವೆ. ಅವುಗಳಲ್ಲಿ ಆಹಾರ ವಿಷಯವನ್ನು ಗಮನಿಸುವುದು ಅತಿಮುಖ್ಯವು. ಅಜೀರ್ಣವು ಸಂಭವಿಸದಿರಲು 'ವಾಗ್ಭಟ'ದಲ್ಲಿ ಹೇಳುವ ವಿಷಯವನ್ನು ಗಮನಿಸಬೇಕು. ಜೀರ್ಣಾಶಯದಲ್ಲಿ ಎರಡು ಭಾಗವನ್ನು ಅನ್ನದಿಂದಲೂ, ಒಂದು ಭಾಗವನ್ನು ನೀರಿನಿಂದಲೂ ತುಂಬಬೇಕು. ಮತ್ತೊಂದು ಭಾಗವು ಗಾಳಿ ಸಂಚರಿಸುವಂತಿರಬೇಕು. ಪುಷ್ಟಿಕರವಾದ ಪದಾರ್ಥಗಳನ್ನು ತನ್ನ ಜೀರ್ಣಶಕ್ತಿಯನ್ನು ನೋಡಿ ತಿನ್ನಬೇಕು. ಊಟಮಾಡುವಾಗ ಮನಸ್ಸನ್ನು ಅನ್ಯಥಾ ಇಡಬಾರದು. ಮೌನವಾಗಿರುವುದು ಒಳ್ಳೆಯದು. ಊಟಕ್ಕೆ ಕೆಲವು ಹೊತ್ತು ವ್ಯವಧಾನವನ್ನಿಟ್ಟುಕೊಂಡು ಪದಾರ್ಥಗಳನ್ನು ಶುಚಿಯಾಗಿಯೂ, ರುಚಿಯಾಗಿಯೂ, ಸುಪಕ್ವವಾಗಿಯೂ, ಸ್ವಲ್ಪ ಬಿಸಿಯಾಗಿಯೂ ಇರುವಂತೆ ನೋಡಿಕೊಂಡು ಎಷ್ಟು ಪ್ರಮಾಣವು ಸುಖವಾಗಿ ಜೀರ್ಣಿಸುವುದೋ ಅಷ್ಟನ್ನೇ ಉಣ್ಣುವುದು ಒಳ್ಳೆಯದು. ಒಂದು ಸಾರೆ ಊಟಮಾಡಿದ ಆಹಾರವು ಜೀರ್ಣವಾಗುವವರೆಗೂ ಊಟಮಾಡಬಾರದು. ಹಾಗೆ ಊಟಮಾಡಿದರೆ 'ಅಧ್ಯಶನ'ವೆನ್ನುವರು. ಇದು ಅಜೀರ್ಣಕ್ಕೆ ಕಾರಣವು. ಈಗ ಎಲ್ಲೆಲ್ಲಿಯೂ ಯಾವಾಗಲೂ ಉಪಹಾರಶಾಲೆಗಳಿವೆ. ಆ ಕ್ಲಬ್ಬುಗಳು ಮನುಷ್ಯನನ್ನು ಆಕರ್ಷಿಸುತ್ತಾ ಭೋಜನಕ್ಕಿರುವ ಕಾಲವ್ಯವಧಾನವನ್ನೂ, ಕ್ರಮವನ್ನೂ ತಪ್ಪಿಸುವುದಕ್ಕೆ ಕಾರಣವಾಗಿವೆ. ಮಾಂಸಾಹಾರವು ಹಿಂಸಾತ್ಮಕವಾಗಿರುವುದಲ್ಲದೆ ಜೀರ್ಣಶಕ್ತಿಯನ್ನು ತಗ್ಗಿಸುವುದಕ್ಕೂ ಕಾರಣವಾಗಿರುವುದರಿಂದ ನಿಷೇಧಿಸಲ್ಪಡತಕ್ಕದ್ದಾಗಿದೆ. ರೋಗಗಳಿಗೆಲ್ಲಾ ಮೂಲವಾದ ಸೋಮಾರಿತನಕ್ಕೆ ಅಗ್ರಸ್ಥಾನವಾದ ಮೃತ್ಯುದೇವತೆಗೆ ಸೆಳೆಯಾದ ಅಜೀರ್ಣರೋಗವನ್ನು ನಿರ್ಮೂಲವಮಾಡುವುದು ನಿರೋಗಿಗಳ ಲಕ್ಷಣವು. ಎಲ್ಲಾ ಮನುಷ್ಯರೂ ಹಸಿವಾದಾಗಲೂ, ಒಳ್ಳೇ ತೇಗು ಬರುವಾಗಲೂ, ಭೇದಿಯು ಚೆನ್ನಾಗಿ ಆಗಿರುವಾಗಲೂ, ನಿನ್ನಿನ ಆಹಾರವು ಜೀರ್ಣಿಸಿದೆ ಎಂದು ತಿಳಿದು ಹುಷಾರಾಗಿರುವಾಗಲೂ ಮಾತ್ರ ಊಟಮಾಡಬೇಕು. ಹೀಗಿಲ್ಲದಿರುವಾಗ ಊಟಮಾಡುವ ಅಭ್ಯಾಸವನ್ನು ತಪ್ಪಿಸಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಅರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಉಪಯುಕ್ತ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೆರೆತಿರುವ ಕಫ, ಎದೆನೋವು, ವಾತ್ಸನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಿಬೆಲಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ಕಲಿಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಫ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕರಾಳಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಉಳುಕು, ಗಂಟುಗಳ ಬಾತುಬಿಳಿಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕ್ಕ ಮಕ್ಕಳ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರೀರದಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[13] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ). ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದಿ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶಿ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯ
ಕ್ಕಾಗಿ ಕ್ಷೀಣ
ರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ
ಕ್ಷೀಣತೆ
ಕಾಯ್ದು
ಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೇತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನು ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣಿ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೮ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಪಿಕ್ಚರ್ಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣಿಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಟ್ಟುಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಟ್ಟುಚಿಟ್ಟು ಆಗೋಣ, ಮುಟ್ಟುಚಿಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡುವಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟಿ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸತಾಪ್ತ ಅದೆ. ಪೂರ್ಣವಿಚಾರವನಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟಿ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿನಸ ೧ ಪುಡಿ ಕಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
51 **ಮು. ಪೋ. ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಶ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಕಣ್ಣುಗಳ ನೋವು, ನರಗಳಲ್ಲಿಯೂ ಸಂಧುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಹಕ್ಕೆ ಎಳಸ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ನಡಿಸುವವರಾಳಿ ವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೀರಹಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[19] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[20] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೪ನೇ ನವಂಬರ್ ೧೯೩೨ [ಸಂಚಿಕೆ ೨೭

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಕಾರ್ತಿಕೋತ್ಸವವೂ ಚೌಲೋಪನಯನವೂ.
ಮಾಸೂರು.

ಶ್ರೀಮಚ್ಛಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ ಏಕೋರಾಮಾರಾಧ್ಯ ಶಾಖೀಯ ಮಾಸೂರು ಬೃಹನ್ಮಠದ ವೇ|| ಚನ್ನವೀರಾರಾಧ್ಯರು ಅಂಗಿರಸ ಸಂವತ್ಸರದ ಕಾರ್ತಿಕ ಶು|| ೧೦ ಸೋಮವಾರ ದಿವಸ ತಮ್ಮ ಜ್ಯೇಷ್ಠ ಪುತ್ರ ಚಿ|| ಹಾಲಾರಾಧ್ಯನಿಗೆ ಶಿವಾಧಾರಣವನ್ನೂ, ದ್ವಿತೀಯ ಪುತ್ರ ಚಿ|| ರೇವಣಾರಾಧ್ಯನಿಗೆ ಚೌಲಕರ್ಮವನ್ನೂ, ಶುಭಲಗ್ನದಲ್ಲಿ ನಡೆಯಿಸಿ ಬಂದ ಮಾಹೇಶ್ವರರಿಗೆ ಆರಾಧನೆಯನ್ನು ಮಾಡಿಸಿ ಸಾಯಂಕಾಲಕ್ಕೆ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗೂ ವೀರಭದ್ರದೇವರಿಗೂ ಪೂಜೆಯನ್ನು ನೆರವೇರಿಸಿ ಕಾರ್ತಿಕೋತ್ಸವವನ್ನು ಬಹು ವೈಭವದಿಂದ ನಡೆಯಿಸಿ ಬಂದವರಿಗೆ ಫಲಾಹಾರಗಳನ್ನು ಹಂಚಿದರು. "ಕಾರ್ತಿಕ್ಯಾಂದೀಪಾನ್ನದಾನಂ" ಎಂಬ ವಾಕ್ಯಾನುಸಾರವಾಗಿ ಕಾರ್ತಿಕಮಾಸದಲ್ಲಿ ಅನ್ನದಾನ, ದೀಪದಾನ ಪುರಾಣ ಕೀರ್ತನ ಶ್ರವಣಗಳನ್ನೂ ಗುರುದೇವತಾಸೇವೆಯನ್ನೂ ದಾನಾದಿಗಳನ್ನೂ ಮಾಡುವದು ಆಸ್ತಿಕರ ಕರ್ತವ್ಯವು. ಈ ಪ್ರಕಾರ ನಡೆಯದೆ ಮನಸ್ಸಿಗೆ ಬಂದಂತೆ ನಡೆಯುವದೂ ನುಡಿಯುವದೂ ಆಸ್ತಿಕಮಾರ್ಗವಲ್ಲವೆಂದು ಹೇಳಬಹುದಾಗಿದೆ. ಜಗದಾಚಾರ್ಯರು ಈ ತರಹದ ಜನರಿಗೆ ಸದ್ಬುದ್ಧಿಯನ್ನೀಯಲೆಂದೂ ಕಾರ್ಯಕರ್ತೃಗಳ ಪತ್ನೀಪುತ್ರಾದಿಗಳಿಗೆ ಆಯುರಾರೋಗ್ಯವನ್ನನುಗ್ರಹಿಸಲೆಂದೂ ಪ್ರಾರ್ಥಿಸುವ,

ಗುರುಕಿಂಕರ,
ವೈದಿಕಜ್ಯೋತಿಷಜ್ಞಾನಮಂದಿರ,
ಮಾಸೂರು.

ಏಜಂಟರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೆನ್ಷನ್‌ದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ—ಹೊಳವನಹಳ್ಳಿ, ಡಿ|| ತುಮಕೂರು.

ನವಂಬರ್ 4 ನೇ ತಾರೀಖಿನ ದಿವಸ ಲಕ್ನೋದ ದೀಪದಕಡ್ಡಿ ಕಾರ್ಖಾನೆಗೆ ಅಕಸ್ಮಾತ್ ಬೆಂಕಿಬಿದ್ದು ಕಾರ್ಖಾನೆಯೆಲ್ಲವೂ ಸುಟ್ಟು ಭಸ್ಮವಾಯಿತು. ಒಟ್ಟು 3 ಲಕ್ಷ ರೂಪಾಯಿಗಳ ಲುಕ್ಸಾನಾಗಿರಬಹುದೆಂದು ಊಹಿಸಲ್ಪಟ್ಟಿರುತ್ತದೆ.

ಸ್ವೀಕಾರ

ಬಳ್ಳಾರಿ ಟೌನ್ ನಿವಾಸಿಗಳಾದ ಮ|| ರಾ|| ಶ್ರೀಮಂತ ಏಚರೆಡ್ಡಿ ಮಹಾಬಲೇಶ್ವರಪ್ಪನವರು ಬಳ್ಳಾರಿ ಡಿ|| ಬೋರ್ಡಿನ ಪ್ರೆಸಿಡೆಂಟ್ ಚುನಾವಣೆಯಲ್ಲಿ ಜಯಶೀಲರಾದ ಸಂತೋಷಕ್ಕಾಗಿ ಮ|| ರಾ|| ಹೊಳಲಗುಂದಿ ಶ್ರೀಮಂತ ಗೌಡರ ಬಸನಗೌಡರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಬಳ್ಳಾರಿ ನಿವಾಸಿಗಳಾದ ಮ|| ರಾ|| ಆದವಾನಿ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹುವ್ವಿನಹಡಗಲಿ ತಾಲೂಕು ಹೊಳಲಗುಂದಿ ಗ್ರಾಮದಲ್ಲಿರುವ ಮ|| ರಾ|| ಶಾನುಭೋಗರ ಭದ್ರಪ್ಪನವರ ಗುಡ್ಡದ ಸಿದ್ಧಪ್ಪನವರು ನೂತನವಾಗಿ ಮೇಲುಮಹಡಿ ಮತ್ತು ಮಳಿಗೆಗಳನ್ನು ಕಟ್ಟಿಸಿ ಅಲ್ಲಿ ಸರಸ್ವತಿ ಮತ್ತು ಮಹಾಲಕ್ಷ್ಮೀ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಯಜಮಾನ ಮುಂದಲಮನಿ ಶಾನುಭೋಗರ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಕೋ,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ವಾಯುವ್ಯ ಪ್ರಾಂತದ ಗಾಂಧಿಯವರೆಂದು ಪ್ರಸಿದ್ಧರಾಗಿರುವ ಖಾನ್ ಅಬ್ದುಲ್‌ಗಫೂರ್ ಖಾನರ ಸಹೋದರರಾದ ಡಾ|| ಖಾನ್ ಸಾಹೇಬರ ಪತ್ನಿಯವರಿಗೆ ಅಕ್ಟೋಬರ್ 21 ನೇ ತಾರೀಖಿನಿಂದ ಹುಚ್ಚು ಹಿಡಿದಿರುವದೆಂದೂ, ಕಾಯಿಲೆಯು ಪ್ರಾಪ್ತವಾದ ಕೂಡಲೇ ಸರಕಾರದವರು ಅವರನ್ನು ಲೇಡಿರೀಡಿಂಗ್ ಆಸ್ಪತ್ರೆಗೆ ಸಾಗಿಸಿದರೆಂದೂ, ಸರಹದ್ದಿನ ಗವರ್ನರವರು ಇಂಡಿಯಾ ಸರಕಾರದ ಸಲಹೆಯಂತೆ ಸಮರ್ಥರಾದ ನರ್ಸ್‌ಗಳನ್ನೂ ಡಾಕ್ಟರುಗಳನ್ನೂ ರಾಂಚಿಗೆ ಕಳುಹಿಸುವ ಏರ್ಪಾಡು ಮಾಡುತ್ತಿರುವರೆಂದೂ, ಸ್ವಲ್ಪ ಕಾಲದೊಳಗಾಗಿ ಅವರನ್ನು ಲಂಡನ್ನಿಗೆ ಕಳುಹಿಸಬೇಕೆಂದಿರುವರೆಂದೂ ತಿಳಿದು ಬಂದಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಬಳ್ಳಾರಿಡಿಸ್ಟ್ರಿಕ್ಟ್‌ಬೋರ್ಡಿನ ಅಧ್ಯಕ್ಷರ ಚುನಾವಣೆ.

ದಿವಾನ್‌ಬಹದ್ದೂರ್ ಎಸ್. ಗೋಪಾಲಸ್ವಾಮಿ ಮೊದಲಿಯಾರ ಬಿ. ಎ. ಬಿ. ಎಲ್. ಎಂ. ಎಲ್. ಸಿ. ಇವರಿಗೆ ಅಪಜಯ— ತಾ॥ ೧-೧೧-೩೩ ರಲ್ಲಿ ನಡೆದ ಬಳ್ಳಾರಿ ಡಿ॥ ಬೋರ್ಡಿನ ಅಧ್ಯಕ್ಷರ ಚುನಾವಣೆಯಲ್ಲಿ ೨೬ ವರ್ಷದ ವಯಸ್ಸಿನ ವೀರಶೈವ ನವಯುವಕರಾದ ಶ್ರೀಮಂತ ವೈ. ಮಹಾಬಲೇಶ್ವರಪ್ಪನವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದಿರುವರು. ೧೦ ವರ್ಷಗಳಿಂದಲೂ, ಬೋರ್ಡಿನ ಪ್ರೆಸಿಡೆಂಟರಾಗಿದ್ದ ಮೊದಲಿಯಾರ್ರವರು ಸೋತುಹೋದರು. ಬಳ್ಳಾರಿ ಮಂಡಲದ ಸರ್ವಕನ್ನಡಿಗರಿಗೂ ಬಳ್ಳಾರಿ ಜಿಲ್ಲೆಯ ವರ್ತಕಮಂಡಲಿಗೂ ತುಂಬಾ ಪ್ರೀತ್ಯಾಸ್ಪದರಾದ ಈ ತರುಣರಿಗೆ ಈ ತರುಣಯುಗದಲ್ಲಿ ಸ್ಥಾನಿಕರಾಜ್ಯಭಾರದೊಳಗೆ ಮುಖ್ಯವಾದ ಜಿಲ್ಲಾ ಬೋರ್ಡಿನ ಪ್ರಭುತ್ವವು ಕೈಸೇರಿದುದು ಬಳ್ಳಾರಿ ಮಂಡಲಕ್ಕೆ ಒಂದು ನವಚೇತನವು ಬಂದಂತಾಗಿರುವುದು.

ಓರ್ವ ಬಳ್ಳಾರಿ ನಿವಾಸಿ.

ಶ್ರೀಗುರುವರ ಪ್ರಸಾದ

ಸ್ಮಾರಕವು.

ಶ್ರೀ॥ ಧರ್ಮವೀರಶಂಕರಣ್ಣನವರು ಸಜ್ಜನಶೆಟ್ಟಿಯವರಿ ಇವರ ಪುಣ್ಯತಿಥಿಯು ಇದೇ ಕಾರ್ತಿಕ ಶು॥ ೪ ಬುಧವಾರ ತಾ॥ ೨-೧೧-೧೯೩೩ ಈ ದಿವಸ ಕಾಲೇಜಿನ ವತಿಯಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲದಲ್ಲಿ ಶ್ರೀ ಹಿಮವತ್ಕೇದಾರವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ೧೦೮ ಚನ್ನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಹಸ್ತದಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಶಂಕರಲಿಂಗಮೂರ್ತಿಗೆ ಕಾಲೇಜಿನ ವೈದಿಕರಿಂದ ಸಶಾಸ್ತ್ರೀಯವಾಗಿ ರುದ್ರಾಭಿಷೇಕವು ಮಾಡಲ್ಪಟ್ಟಿತು. ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾದ ಶ್ರೀ ಶಂಕರಲಿಂಗ ದೇವಸ್ಥಾನದಲ್ಲಿ ನಾಲ್ಕು ಘಂಟೆಯಿಂದ ಕಾಲೇಜದ ಪ್ರಿನ್ಸಿಪಾಲರಿಂದಲೂ ನಾಲ್ಕಾರು ವಿದ್ಯಾರ್ಥಿಗಳಿಂದಲೂ ಸ್ಮಾರಕಪರ ಭಾಷಣಗಳಾದವು. ಅನಂತರ ಶ್ರೀ ಶಂಕರಲಿಂಗಮೂರ್ತಿಗೆ ಮಂಗಲಮಾಡಿ ಶ್ರೀ॥ ಧರ್ಮವೀರ ಶಂಕರಣ್ಣನವರ ಭಾವಚಿತ್ರವನ್ನು ಉತ್ಸವದೊಡನೆ ಅವರ ಗೃಹಕ್ಕೆ ತಂದು ಜಯಘೋಷದೊಡನೆ ಇರಿಸಿದರು. ಬಳಿಕ ಸಾಯಂಕಾಲ ೬॥ ಯಿಂದ ೮॥ ವರೆಗೆ ಶಂಕರ ಕಾಲೇಜಿನಲ್ಲಿ ಆನಂಪಲ್ಲಿ ಶಾಂತಮೂರ್ತಪ್ಪನವರಿಂದ ಶಿವಕೀರ್ತನವು ಮಾಡಲ್ಪಟ್ಟಿತು. ಅನಂತರ ಧರ್ಮವೀರ ಶಂಕರಣ್ಣ ಮಹಾರಾಜಕೀ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಕುಲಚಂದ್ರ [illegible]

ಶಾಸ್ತ್ರಿ [illegible] ಸಾನಂದಮಭಿನಂದನಂ.

ಗ್ರಾಂ

[illegible]ವಾಶಾಧ್ಯಕ್ಷಾ ವೇದಶಾಸ್ತ್ರಪರಾಯಣಾಃ |
[illegible] ಷಟ್ಸ್ಥಲಬ್ರಹ್ಮಪಾರಗಾಃ ||೧||
ಶಿವಾದ್ವೈತಪರಂ ವೇದಶಿದ್ಧಾಂತಶಿಖಾಮಣಿಂ |
ಪ್ರತ್ಯಾಗವಾನ್ ಸಮಾಲೋಕ್ಯ ಪ್ರಸ್ಥಾನತ್ರಯಮೇವಚ ||೨||
ಪಂಡಿತಾಃ ಸುಜ್ಞವಕ್ತಾರೋ ಜ್ಞಾನವಿಜ್ಞಾನತತ್ಪರಾಃ |
ನಿಗಮಾರ್ಥೋಪದೇಶೇನ ಶಿವಸೇವಾಂ ನಯುರ್ಜನಾನ್ ||೩||

ಸಾಹಿತ್ಯಸಂಗೀತಕಲಾಧುರೀಣಾಃ |
ಕಾಣಾಟಕೇ ಗೀಷ್ಪತಯಸ್ತಥಾಪಿ ||
ಗೀರ್ವಾಣಹಿಂದ್ಯಾದಿಮರಾಠಿಮುಖ್ಯ |
ಭಾಷಾಸು ತೇಷಾಂ ವರದಂ ಪ್ರಭುತ್ವಂ ||೪||
ಏವಂವಿಧೈರ್ಬಹುಗುಣೈಸ್ಸಮಲಂಕೃತಾಸ್ತೇ |
ಶೈವಲ್ಯವೈಭವಧಿಯಾ ಪರಿವೇಷ್ಟಿತಾಂಗಾಃ ||
ಬ್ರಹ್ಮಾನುಚಿಂತನಪರಾ ವಿರಜಾಃ ಸುಶೀಲಾಃ |
ಸನ್ನ್ಯಸ್ತಿ ತಾ ಗುರುಕೃಪಾಕೃತಬುದ್ಧಯಸ್ತೇ ||೫||
ವೇದಾಗಮೋಪನಿಷದಾದಿತತ್ತ್ವಬೋಧಂ |
ಶೈವಾನುಸಾರಮಥ ಲೇಖನಸಿದ್ಧಗೀತಂ ||
ಪ್ರಾಮಾಣ್ಯಭೂತಮಧುನಾ ಪ್ರಕಟಯ್ಯ ಹೃದ್ಯಂ |
ಸಂಜೀವನಂ ಜನಪದಂ ಪ್ರದದುಃ ಸುಧೀರಾಃ ||೬||

ತತ್ಪ್ರಜ್ಞಾನಾಂ ಮನೋಜ್ಞಂ ಯದ್ವೈರಾಗ್ಯಮಭಿನಂದನಂ |
ಸಂತೋಷಯುತ ಸ್ವಾನಂದಂ ಸಜ್ಜನೈಃ ಕೀರ್ತಿತಂ ಮುದಾ ||೭||

~~A. V. Khasnis B.A., LL.B.,~~

ಪಂ॥ ಬಸವಲಿಂಗಶಾಸ್ತ್ರಿ ಆರಾಧ್ಯರು

ಭೋ ಆಚಾರ್ಯ !

ಅಸ್ಮಾಭಿಸ್ತೇ ಶಿಷ್ಯಭೂತೈರ್ವಿನಮ್ರೈಃ |
ರಾಚಾಚಾರ್ಯಸ್ಯಾಂ ಸಂವಸದ್ಭಿರ್ಜಯಂತ್ಯಾಂ ||
ಧನ್ಯೈರ್ಜಾತೈಃ ಶ್ರಾವಿತೈರ್ಜ್ಞಾನಸಾರಂ |
ವಿಜ್ಞಪ್ತಿರ್ಭೋಃ ಸಾದರಂ ಪ್ರೋಚ್ಯತೇಚ ||೧||

ವಿದ್ಯಾಸು ಪೂರ್ವಮಾಘಜೇಗ್ರಾಮಕೇ ಚ |
ಬೆಂಗ್ಳೂರರಾಷ್ಟ್ರೇ ಶ್ರೀಯುತೇ ಪತ್ತನೇ ನಃ ||
ಆಚಾರ್ಯೋಽಧ್ಯಾಪ್ಯಾತವಾನ್ ಮೈಸುರೇಽಪಿ |
ಭೋಃ ಅಸ್ಮಾನ್ ಪ್ರಾಜ್ಞತಾಪೂರ್ಣಸೂಕ್ತೈಃ ||೨||

ಧನ್ಯೇಯಂ ನಗರೀ ಕೃತಾ ಗುರುವರಾಗತ್ಯೇಹ ತರ್ಹಂ ಸ್ವಯಂ |
ವ್ಯಾಖ್ಯಾನೈಃ ಸರಸೈಃ ಸುಬೋಧಗುರುಭಿರ್ವೇದಾಂತಸಾರಂ ನಯಂ ||
ಧರ್ಮಂ ಕರ್ಮಚ ಲೌಕಿಕಂ ಸಮಮಪಿ ಪ್ರಾವೇದಯದ್ಭಿರ್ಭೃಶ |
ಮಜ್ಞಾನಾಪಗಮಂ ಪ್ರಕೃಷ್ಟಮತಯಃ ಪ್ರಾಪ್ತಾಃ ಪ್ರಕಾಮಂ ಶಿವ ||೩||

ಮಂದಿರಂ ಮಲ್ಲಿಕೇಶಸ್ಯ ಶೈವಧರ್ಮಾನುಯಾಯಿಭಿಃ |
ಶ್ರೀಮದ್ವಿಜಯಸಿಂಹಸ್ಯ ಭೂಪತೇಃ ಸಂಶ್ರಯಾತ್ಕೃತಂ ||೪||

ಏತಸ್ಮಿನ್ ಶಿವಮಂದಿರೇ ಗುರುತರಂ ಜ್ಞಾನಸ್ಯ ಸತ್ರಂ ನಧಃ |
ಪ್ರಾರಂಭೇ ಯದರಂಭಿ ಭಾವಗಮಿತಂ ನಿರ್ವಿಘ್ನಮಂತಂ ಯಥಾ ||
ಸರ್ವೈಸ್ತದ್ಗಣಿತಂ ವಿಶೇಷಗುಣಿತಂ ಕಾರ್ಯಂ ಜನೈರ್ಲಿಂಗಿಭಿ |
ಸ್ತ್ವೇಷಾಂಚ ಪ್ರಣಿಧಿರ್ಭವಚ್ಚರಣಯೋಃ ಸಾವಾರಂಗಿತೇ
ಚಾಸ್ತು ವಃ ||೫||

ಮತಂ ಹಿ ವೀರಶೈವಾನಾಂ ನಿಗೂಢಂ ವೇದಮಸ್ತಕಾತ್ |
ನೂನಂ ಪ್ರಣೀತಂ ವೇದೇಷು ಚೇತಿ ಸೋ ಬೋಧನಾತ್ಕೃತಾ ||೬||
ಏವಂಹಿ ವೀರಶೈವಾನಾಂ ಮತಂ ಸಂಘಟಯನ್ ಭವಾನ್ |
ಕುರುತೇ ಸುಮಹತ್ಕಾರ್ಯಂ ಧರ್ಮ್ಯೈರಕ್ಯೈಃ ಪ್ರವರ್ತಕೈಃ ||೭||

ಏವಂ ಗುರೋಃ ಪ್ರಭವತೋಽಪಕೃತಾ ವಯಂ ತೇ |
ಭಕ್ತ್ಯಾ ಪ್ರಸನ್ನವದನಂ ಪ್ರಸಮೀಕ್ಷ್ಯ ನೂನಂ ||
ಹಿತ್ವಾ ಪ್ರಮೋದಜನನಂ ತವ ಅಸಮಂತಾ |
ದಾನಂದಸಾಗರಜಲೇ ಬಹುಲಂ ನಿಮಗ್ನಾಃ ||೮||

ಶಿವೋಽನಂತಃ ಸಾಕ್ಷಾದ್ಗುರುರಪಿ ಭವಾನ್ ಜ್ಞಾನಕಥನಾತ್ |
ಕವಿಃ ಪ್ರಜ್ಞಾಬೋಧಾತ್ಕುಜನಗಣಾನಾಂ ಭವಹರಃ ||
ಅತಃ ಸರ್ವೇ ಭೂಯೋ ಲಲಿತಪದಯೋರ್ವಂದನಪರಾಃ |
ಪ್ರಸೀದಾನಂತೇನ ಗುರುವರ ಕೃತಂ ಶ್ಲೋಕನವಕಂ ||೯||

ತಾ॥ ೪-೯-೧೯೩೩.

A. K. Despande,
ಹೈಸ್ಕೂಲ್ ಟೀಚರ್, ಜತ್‌ಸಂಸ್ಥಾನ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಹಾಲಸ್ವಾಮಿಗಳವರ ಆಗಮನ.

ಬಳ್ಳಾರಿ ಡಿ॥ ಹುವ್ವಿನಹಡಗಲಿ ತಾ॥ ಹಿರೇಹಡಗಲಿ ಗ್ರಾಮಕ್ಕೆ ಶಿವಮೊಗ್ಗಾ ಡಿ॥ ರಾಂಪುರದ ಬೃಹನ್ಮಠಾಧ್ಯಕ್ಷರಾದ ಶ್ರೀಮತ್ಪೂಜ್ಯಪಾದ ಶ್ರೀ ಹಾಲಸ್ವಾಮಿಗಳವರ ಸವಾರಿಯು ದಯಮಾಡಿಸಿ ೧೫ ದಿವಸಗಳಾದವು. ಪ್ರತಿದಿವಸ ಭಕ್ತರ ಬಿನ್ನಹಗಳಂ ಕೈಕೊಂಡು ಫಲಾಶೀರ್ವಾದಗಳನ್ನು ದಯಪಾಲಿಸುತ್ತಲೂ, ತಮ್ಮ ಅಪ್ರತಿಮವಾದ ವೀಣಾವಾದನಾಮೃತವನ್ನು ಪಾನಮಾಡಿಸುತ್ತಲೂ ಇದ್ದು ಈ ಕಾರ್ತಿಕ ಶು॥ ೭ ದಿವಸ ಗ್ರಾಮದ ಪ್ರಮುಖರಾದಿಯಾಗಿ ಭಕ್ತಮಾಹೇಶ್ವರ ಮಂಡಳಿಯು ಸನ್ನಿಧಿಯಲ್ಲಿ ಸೇರಿತು. ಬಳಿಕ ಇದೇ ಗ್ರಾಮದ ಪುರಾಣಿಕಮಠದ ವೇ॥ ವಿರೂಪಾಕ್ಷಶಾಸ್ತ್ರಿಗಳು ದೇವನಂದನಮಹಾರಾಜನ ಸಚ್ಚರಿತ್ರವೆಂಬ ಕೀರ್ತನವನ್ನು ಸಂಗೀತಸಾಹಿತ್ಯಗಳಿಂದಲೂ, ಲೌಕಿಕ-ಪಾರಮಾರ್ಥಿಕೋದಾಹರಣೆಗಳಿಂದಲೂ ನಡೆಯಿಸಿ ಸರ್ವರನ್ನೂ ಆನಂದಗೊಳಿಸಿದರು. ಬಳಿಕ ಶ್ರೀಗಳವರು ಪ್ರತಿಯೊಬ್ಬ ಶಾಸ್ತ್ರಿಗಳೂ, ಪಂಡಿತರೂ, ಪಟ್ಟದರಾಧಿಕಾರಿ ಸ್ವಾಮಿಗಳೂ ಗ್ರಾಮಾನುಗ್ರಾಮಗಳಲ್ಲಿ ಸಂಚರಿಸಿ ಭಾಷಣಮೂಲಕವೂ ಹಾಗೂ ಪುರಾಣ, ಕೀರ್ತನ ಮೂಲಕವೂ ಜನರಿಗೆ ಭಕ್ತಿ-ಜ್ಞಾನ-ನೀತಿ, ಧರ್ಮಬೋಧೆಯನ್ನು ಮಾಡಿದರೆ ವೀರಶೈವಸಮಾಜ ಸುಧಾರಣೆಯಾಗಲು ತುಂಬಾ ಅನುಕೂಲವೆಂತಲೂ ಈ ಬಗೆ ಶ್ರೀ ಜಗದ್ಗುರು ಪಂಚಪೀಠಾಧೀಶರು ಏರ್ಪಾಟಮಾಡುವದು ಅತ್ಯಂತ ಭೂಷಣವೆಂತಲೂ ಬೋಧಿಸಿ, ವೇ॥ ವಿರೂಪಾಕ್ಷಶಾಸ್ತ್ರಿಗಳವರಿಗೆ ಸಂಭಾವನೆಯನ್ನೂ ಉಳಿದವರಿಗೆ ಫಲಾಶೀರ್ವಾದಗಳನ್ನೂ ದಯಪಾಲಿಸಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ನೀತಿಬೋಧಾಮೃತ

ಮಾನವನ ಧರ್ಮಾಧರ್ಮಕಾರ್ಯಗಳೇ ಅವನ ಸುಖದುಃಖಗಳಿಗೆ ಕಾರಣಗಳು.

(ಅನ್ನದಳವಿ ಮ॥ ರಾ॥ ಅನವಟ್ಟಿ ರಾಮರಾಯರಿಂದ)

ಈ ಪ್ರಪಂಚದಲ್ಲಿ ಮಾನವನು ಮೊದಲುಗೊಂಡು ಕ್ರಿಮಿಕೀಟಗಳ ಪರ್ಯಂತವಾಗಿಯೂ ಸೌಖ್ಯವನ್ನು ಹೊಂದಬೇಕೆಂತಲೂ ಕಷ್ಟವನ್ನು ದೂರಮಾಡಬೇಕೆಂತಲೂ ಈ ಎರಡು ಪ್ರಯತ್ನಗಳೇ ಮುಖ್ಯವಾಗಿ ಕಾಣಬರುತ್ತಿರುವವು. ಈ ಅಮೋಘವಾದ ಬಯಕೆಗಳನ್ನು ಸಲ್ಲಿಸಿಕೊಳ್ಳಬೇಕೆಂಬ ಆಶೋತ್ತರಗಳಿಂದಲೇ ಚಕ್ರವರ್ತಿಗಳು ಮೊದಲುಗೊಂಡು ದಿವಾಳಿಗಳವರೆಗೂ ಅವರವರ ಅಧಿಕಾರಕ್ಕೆ ತಕ್ಕಂತೆ ಸ್ವಾರ್ಥತೆಯಿಂದ ನಡೆಯುತ್ತಿರುವ ಕಾರ್ಯಗಳಾದರೋ ಅಗಣಿತವಾಗಿರುವವು. ಅಧರ್ಮಕಾರ್ಯಕ್ಕೆ ಬಿತ್ತ ಹೊರತು ಹಣವು ಯಾರಿಗೂ ಲಭಿಸುವುದಿಲ್ಲ. ಧರ್ಮದಲ್ಲಿರುವುದಾದರೆ ಮಾನವನಿಗೆ ಅಹನ್ಯಹನಿ ಕಾಲಕ್ಷೇಪವುಂಟಾಗುವುದು. ಇದರಿಂದ ಮಾನವನು ತನ್ನ ಮನೋಭಿಲಾಷೆಗಳನ್ನೀಡೇರಿಸಿಕೊಳ್ಳಲು ತನ್ನ ಯೋಗ್ಯತಾನುಸಾರವಾಗಿ ಇತರರನ್ನು ಬದುಕಿಸುವನೋ ಏನೋ ಎಂಬುವ ಭ್ರಾಮಕವನ್ನುಂಟುಮಾಡುವ ಕಾರ್ಯಗಳನ್ನೀಮಾಡಿ ತೋರಿಸುತ್ತಾ ಸ್ವಾರ್ಥತೆ ಎಂಬ ಬೀಜವನ್ನು ಮನಸ್ಸೆಂಬ ಆರಾಮದಲ್ಲಿ ಬಿತ್ತಿ ಪ್ರವರ್ಧಮಾನಕ್ಕೆ ತರುತ್ತಿರುವನು. ಕೊನೆಗೆ ತಾನೂ ವಿಫಲನಾಗಿ ಅನ್ಯರನ್ನೂ ದುಃಖಕ್ಕೆ ಗುರಿಪಡಿಸುವನು. ಸ್ವಾರ್ಥತೆಯನ್ನು ದೂರಮಾಡಿ ನೆರವೇರಿಸುವ ಪರೋಪಕಾರಗಳೇ ಪರಹಿತವನ್ನುಂಟುಮಾಡುವವು. ಇದರಿಂದ ಅವನ ಯೋಗ್ಯತೆಯು ಹೆಚ್ಚುತ್ತಾ ಜನವಂದನೆಗೆ ತಕ್ಕವನಾಗಿ ಕೊನೆಗೆ ಭಗವಂತನ ಮೆಚ್ಚಿಕೆಗೂ ಪಾತ್ರನಾಗಿ ಸುಖಜೀವಮಾನದಿಂದ ಕೂಡಿರುವನು ಎಂದು ಹೇಳುವುದಕ್ಕೆ ಅನೇಕಮಹನೀಯರ ಚರಿತ್ರೆಗಳೇ ದೃಷ್ಟಾಂತವಾಗಿರುವವು.

ಎಲೈ ಮಾನವನೇ ! ಮೇಲೆ ಹೇಳಿದ ಮಾನವನ ಕಾರ್ಯಗಳ ಫಲಿತಾಂಶವಾದ ಸುಖದುಃಖಗಳ ಪರಿಣಾಮಗಳೇನೆಂಬುದಾಗಿ ಚೆನ್ನಾಗಿಯೋಚಿಸಿ ನಿನ್ನ ಚಿತ್ತಕ್ಕೆ ಭ್ರಮೆಯನ್ನುಂಟುಮಾಡಿಕೊಳ್ಳುವಂತಹ ಸಂತೋಷಕ್ಕೆ ಮನಸ್ಸನ್ನು ಕೊಡದಂತೆ ವರ್ತಿಸುತ್ತಿರಬೇಕು. ಹಾಗಲ್ಲದೆ ನಿನ್ನ ಹೃದಯವನ್ನು ಕುಗ್ಗಿಸಿಕೊಳ್ಳುವಂತಹ ರೀತಿಯಲ್ಲಿ ಅತಿಶಯವಾದ ದುಃಖಕ್ಕೆ ಎಡೆಗೊಡದಂತೆ ನಡೆಯುತ್ತಾ ಬರುವುದಾದರೆ ನೀನು ಕ್ರಮೇಣ ವೃದ್ಧಿಗೆ ಹೊಂದಿತವಾಗಿಯೂ ಬರುವುದೇನೋ ನಿಜ. ನೀನು ಪ್ರಥಮದಲ್ಲಿಯೇ ಅಮೇಯ ಆಶೋತ್ತರಗಳನ್ನಿಟ್ಟುಕೊಂಡು ಸ್ವಾರ್ಥಾಭಿಲಾಷೆಯಿಂದ ವರ್ತಿಸುವುದಾದರೆ ಸ್ವಲ್ಪಕಾಲಮಾತ್ರವೇ ಫಲಾಪೇಕ್ಷೆಯನ್ನನುಭವಿಸಿ ಅಂತ್ಯದಲ್ಲಿ ಪುನಃ ಏಳ್ಗೆಗೆ ಬರದಂತೆ ಅಲ್ಲಿಯೇ ನಾಶವಾಗಿ ಹೋಗುವೆ ಎಂದು ಹೇಳುವ ಮಾತುಗಳು ಲೋಕದಲ್ಲಿ ಜನರು ವರ್ತಿಸುವ ಕಾರ್ಯಗಳೇ ಒಂದು ದೃಷ್ಟಾಂತವಾಗಿ ಇದರಲ್ಲಿಯೇ ಕಾಣಬರುತ್ತಿರುವವು.

ಇದಕ್ಕೆ ದೃಷ್ಟಾಂತವಾಗಿ ಒಂದು ಮನೆಯಲ್ಲಿ ವಾಸಿಸುತ್ತಿರುವ ಜನರು ಯೋಗ್ಯರಾಗಿ ಸದ್ವರ್ತನದಲ್ಲಿ ವರ್ತಿಸುತ್ತಿರುವರೆಂದು ಭಾವಿಸೋಣ. ನಾವು ಅಕಸ್ಮಾತ್ತಾಗಿ ಆ ಬೀದಿಯಲ್ಲಿ ಸಂಚರಿಸಿಕೊಂಡು ಹೋಗುತ್ತಿರುವಾಗ್ಗೆ ಆ ಮೇಲೆ ಹೇಳಿದ ಮನೆಯ ರೀತಿಯನ್ನೇ ನೋಡುವ ಸಂಭವವು ಉಂಟಾದಾಗ್ಗೆ "ಅಹಾ ! ಇದು ಎಂತಹ ಆನಂದಕರವಾದ ಭವನವು ! ನೇತ್ರಗಳಿಗೆ ಕೌತುಕವನ್ನುಂಟುಮಾಡುತ್ತಿರುವುದಲ್ಲ ! ಇಲ್ಲಿ ವಾಸಿಸುತ್ತಿರುವ ಜನರ ಪರಿವರ್ತನೆಗಳೋ, ಇಣಿಕಿನೋಡಿದಾಗ್ಗೆ, ಜನರು ಸಂತೋಷಜನಕವಾದ ಸುಸ್ವರಗಳಿಂದ ಕೂಡಿ ಹಾಡುತ್ತಿರುವುದನ್ನೂ, ಆ ಸುಸ್ವರಗಳನ್ನಾಲಿಸಿದ ಪಥಿಕರ ಕಿವಿಗಳಿಗೆ ಬಿದ್ದು ಮನಸ್ಸಾಂಚಲ್ಯವುಂಟಾಗಿ ಇದೇನು ಇಲ್ಲಿ ದೇವಲೋಕ ಗಾನವು ಕೇಳಿಬರುವುದಲ್ಲ ! ಎನ್ನುವ ಭ್ರಮೆಯನ್ನುಂಟುಮಾಡಿದ ಪಥಿಕರ ಮನಸ್ಸನ್ನು ಕೂಡಲೇ ಸೆಳೆಯುವುದಲ್ಲವೆ ? ಇಲ್ಲಿ ವಾಸಿಸುತ್ತಿರುವ ಜನರ ಮನಸ್ಸಿನಲ್ಲಿರುವ ಕುಂದುಕೊರತೆಗಳೇನೆಂಬುದನ್ನು ಕುರಿತು ಯೋಚಿಸುತ್ತಾ ಅವುಗಳ ನಿವಾರಣೋಪಾಯಗಳನ್ನು ಹುಡುಕುತ್ತಾ ಪ್ರಯತ್ನಿಸುತ್ತಾ ಒಂದಲ್ಲಿ ಅನೇಕ ಸತ್ಕಾರ್ಯಗಳನ್ನು ಮಾಡುತ್ತಲಿರುವುದು ಕಾಣಬರುವುದು.

ಇಂತಹ ವೃತ್ತಿಯನ್ನವಲಂಬಿಸಿರುವ ಆ ಮನೆಯ ಜನರನ್ನು ನಾವು ನೋಡಿದಮೇಲೆ ಅವರಿಗೆ ಸುಖದಾಯಕಳಾದ ಸೌಖ್ಯವೆಂಬ ಸ್ತ್ರೀಯು ದಾರಿಯಲ್ಲಿ ಕಾಣಬರುವ ದುರ್ಮಾರ್ಗಗಳನ್ನು ನೋಡಿ ಎಲೈ ಮಾನವರೇ ! ಹೀನವೃತ್ತಿಗೆ ಬಿದ್ದಿರುವಿರಲ್ಲ ! ನಿಮ್ಮ ಮುಂದಿನ ಫಲವೇನು ? ಎಂದು ಕೇಳುವವಳೋ ಎನ್ನುವಂತಹ ಸ್ಥಿತಿಯಲ್ಲಿ ದಾರಿಗರನ್ನು ನೋಡುತ್ತಿರುವಳು. ಇಂತಹ ಉತ್ತಮ ಮನೆಯು ಯಜಮಾನಿಯು ದಾರಿಯಲ್ಲಿ ಹೋಗಿಬರುತ್ತಿರುವ ಪಥಿಕರನ್ನು ನೋಡುತ್ತಾ ಕೈಬೀಸಿ ಕರೆಯುತ್ತಾ, ನಿಮಗೆ ಸಂತೋಷವನ್ನುಂಟುಮಾಡುವೆನೆಂಬ ಭಾವದಿಂದ ಕೂಡಿದ ಸ್ವರವನ್ನೆತ್ತಿ ಕೂಗುತ್ತಾ, ಗಟ್ಟಿಯಾಗಿ ಎಲ್ಲರೂ ಕೇಳುವಂತೆ ಗಹಗಹಿಸಿ ನಗುತ್ತಾ, ಮನೋಭಾವಕ್ಕನುಗುಣವಾದ ಹಾವಭಾವವಿಲಾಸಗಳಿಂದಕೂಡಿ ಮೆರೆಯುತ್ತಿರುವಳು. ಇಷ್ಟು ಅಲ್ಲದೆ ಎಲೈಮಾನವರಿರಾ ! ನೀವು ನನ್ನ ಸೌಖ್ಯಗೃಹಕ್ಕೆ ದಯಮಾಡಿಸಿದರೆ ನಿಮಗೆ ಮನ್ನಣೆ ದೊರೆಯುವುದು, ಸಂತೋಷವುಂಟಾಗುವುದು, ಮಾನವನ ಜೀವಿತದ ಬೆಲೆ ಏನೆಂಬುದನ್ನು ನಿಮಗೆ ತಿಳಿಸಿಕೊಡುವೆನು, ನನ್ನ ಮನೆಯನ್ನು ಬಿಟ್ಟುಹೋದರೆ ನೀವೇ ಸೌಖ್ಯಹೀನರಾಗುವಿರಿ, ಕೆಡವೇಡಿರೆಂಬುದಾಗಿ ಮೃದುಮಧುರವಚನಾಮೃತವಂ ಸುರಿಸುತ್ತಿರುವಳು. ಮತ್ತು ಆ ಸ್ತ್ರೀಯು ಜನರನ್ನು ಕೂಗಿ ಎಲೈ ಅದೃಷ್ಟಹೀನರಾದ ಮಾನವರಿರಾ ! ಸುಖಕ್ಕೆ ವಾಸಸ್ಥಾನವಾದ ನನ್ನ ಭವನವನ್ನು ದೂರಮಾಡಿ ಹೋದುದಾದರೆ ಸ್ವರ್ಗವೆಂಬುದು ದೊರೆಯದೆ ಸೌಖ್ಯವೆನ್ನುವುದು ಸ್ವಪ್ನಪ್ರಾಯವು ಕೇವಲ ಭ್ರಾಂತಿಯಿಂದ ಕಾಲಕಳೆಯಬೇಕಾಗಿ ಬರುವುದು. ಇಲ್ಲಿಗೆ ಬಂದುದಾದರೆ ಆಡುವ ಮಾತುಗಳಲ್ಲಿ ಮೊದಲು ಸರಸತ್ತಿಗಳನ್ನು ಕಲಿಸಿ, ನೀತಿಬಾಹ್ಯರರಾಗದಂತೆ ಮಾಡಿ ಸೌಖ್ಯಹೀನ್ನಾಗಿಸದಂತೆ ಮಾಡುವೆನು. ನನ್ನ ಮಾತುಗಳಿಗೆ ಬೆಲೆಯುಂಕೊಡದೆ ಹೋದುದಾದರೆ, ಎಲೈ ಅದೃಷ್ಟಹೀನರಿರಾ ! ದುಷ್ಕೃತ್ಯಗಳನ್ನು ಮಾಡುತ್ತಾ ಕೇಡಿಗೆ ಗುರಿಯಾಗುತ್ತಾ ಜಾಗ್ರತೆಯಲ್ಲಿ ನಾಶಪಡಿಸುವ ಭಯವನ್ನು ಹೊಂದುತ್ತಾ ನೀವು ನಡೆಯುತ್ತಿ ಪಾದಗಳ ಕೆಳಭಾಗದಲ್ಲಿರುವ ಅಗಾಧವಾದ ಹಳ್ಳದಲ್ಲಿ ಬೀ ನೆಂಬ ಭಯವನ್ನು ಯೋಚಿಸದೆ ನಾಶವನ್ನು ಇದಿರುನೋಡು ಬಹುದೆ ?" ಎಂದು ನಾನಾವಿಧವಾಗಿ ಸಾರಿಹೇಳುವಳೆಂದು ಯಬೇಕು.

ಮುಖ್ಯವಾಗಿ ದುರಾಶಾಶಕ್ತಿಯನ್ನು ದೂರಮಾಡಿರುವ ಪರಹಿತಾಕಾಂಕ್ಷೆಯಿಂದ ಕೂಡಿದವರಾಗಿ ಜನರನ್ನು ಸನಾ ವೃತ್ತಿಯಲ್ಲಿರುವಂತೆ ಮಾಡುವ ವಿಷಯದಲ್ಲಿ ಬದ್ಧಕಂಕಣರುವರೆಂದು ತಿಳಿಯಬೇಕು. ಇದುವರೆಗೂ ಜನಗಳಿಗೆ ಸಂತೋಷಪಡಿಸಬೇಕೆಂಬ ಅಭಿಪ್ರಾಯದಿಂದಿರುವ ಸೌಖ್ಯವೆಂಬ ಸ್ತ್ರೀಯ ಹೇಳಿದ ವಿಷಯಗಳನ್ನು ವಾಚಕರು ತಿಳಿದುಕೊಂಡಿದ್ದಾರೆ. ಇನ್ನು ವ್ಯಸನವೆಂಬ ಸ್ತ್ರೀಯು ಹೇಳುವುದೇನೆಂಬುದನ್ನು ಯೋಚಿಸೋಣ.

ಮಾನವರ ದೃಷ್ಟಿಗೆ ಗೋಚರಬಾರದಂತೆ ಅತ್ಯಂತ ದೂರವ ಮರಗಳ ಗುಂಪಿನಲ್ಲಿ ಇರುವ ವ್ಯಸನವೆಂಬ ಸ್ತ್ರೀಯು ತನ್ನ ತಾನೇ ಜುಟ್ಟು ಸಿರುಬಿಟ್ಟುಕೊಳ್ಳುತ್ತಾ ಅಡಿಗಡಿಗೂ [illegible]ಗುತ್ತಿರುವ ವಿಶೇಷದುಃಖದಲ್ಲಿ ವ್ಯಥೆಯನ್ನು ಹೊಂದಿ ಮರ್ಮಾಂತಿಕಕಷ್ಟಗಳನ್ನು ನೋಡಿ ಎಲೈ ಮಾನವರಿರಾ ! ಜಗತ್ತಿನಲ್ಲಿ ಜೀವಕೋಟಿಗಳು ಹೊಂದುತ್ತಿರುವ ಕಷ್ಟಗಳಿಂದ ಬಿಡಿ ವಾಗಿ ಅನುಭವಿಸುತ್ತಿರುವ ತೊಂದರೆಗಳಾದರೋ ಗಣನೆ ವಾಗಿವೆ. ಚಿತ್ತದಲ್ಲಿ ಅಮೇಯವಾದ ಪಾಪಕಲ್ಪನೆಗಳಿಂ ಬರುವುದಲ್ಲ ಎಂಬುದಾಗಿ ಚಿಂತಿಸುತ್ತಾ ಇರುವ ನನ್ನ ಮ ದರೋ ಶೋಕಮಯವಾಗಿ ಹೋಗಿರುವುದು ಎಂದು ಹೇ ರುವಳು. ಎಲೈ ಮಾನವರಿರಾ ! ಇಂತಹ ಸ್ತ್ರೀಯು ವಾಸಿ ರುವ ಸ್ಥಳಕ್ಕೆ ನೀವು ಹೋಗದಂತೆ ಆಕೆಯು ಬಿಡುವ ಜಾಲ ನಿಮ್ಮ ಮೈಗೆ ಸೋಂಕಿದುದಾದರೆ ಅದು ಅಂಟುರೋಗ ಪರಿಣಮಿಸುವುದು. ಮಾನವನ ಜೀವಮಾನವೆಂಬ ತೋಟದ ಲಾಷೆಗಳೆಂಬ ಫಲಗಳು ಬಿಡದೆ ನಶಿಸಿಹೋಗುತ್ತಿರುವವು. ತೋಟವನ್ನು ಬಿಟ್ಟುಹೋಗುವಾಗ್ಗೆ ನೀವು ಹಿಂದಕ್ಕೆ ನೋಡದೆ ದುಃಖವೆಂಬ ಗೃಹವನ್ನು ಕುರಿತು ಚಿಂತಿಸದೆ ಮೋಹಿಯನ್ನೇ ಬಿಟ್ಟು ದೂರಹೋಗಿ ಮಧ್ಯಮಾರ್ಗವನ್ನು ತಿ ಸಾಹಸದಿಂದ ಮುಂದೆ ನಡೆದು ಹೋಗುತ್ತಾ ಎಲ್ಲಿ ಎಂಬ ಸ್ತ್ರೀಯು ವಾಸಿಸುತ್ತಿರುವಳೋ ಅಂತಹ ಲತಾ ಹೋಗಿ ಸೇರುವುದು. ಅಂದರೆ ಮಾನವನಿಗೆ ಅಪಾರವಾದ ವುಂಟಾದಾಗ್ಗೆ ಶಾಂತತೆಯನ್ನು ತಾಳಿ ಜಾಣತನದಿಂದ ಮಾರ್ಗವನ್ನು ಹುಡುಕಿ ನಡೆಯುವುದೇ ಮಾನವನು ಸು ರಲು ಮಾರ್ಗವು ಎಂದು ತಿಳಿಯಬೇಕು. ಯಾವಾಗ ವಶ್ಯ ಶಾಂತತೆಯನ್ನು ತಾಳುವನೋ ಆಗ್ಗೆ ಶಾಂತಿಯೆಂಬ ಮನೆಯಲ್ಲಿ ಸುಖವು ಕಲೆದೋರುವುದು. ಅವಳ ಸಹಿ ಯಿಂದ ಮನಸ್ಸಿಗೆ ತೃಪ್ತಿಯುಂಟಾಗುವುದು. ಮಾನವ ಮಾನದಲ್ಲಿ ಪ್ರತ್ಯದಲ್ಲಿಯೂ ಉಂಟುಮಾಡುತ್ತಿರುವ ಸ ದುಃಖಗಳನ್ನು ಸಮದೃಷ್ಟಿಯಿಂದ ಲೆಕ್ಕಹಾಕದೆ ದ ಯಾಗಿ ನೋಡುತ್ತಾ, ಜನಗಳನ್ನು ಕುರಿತು ಎಲೈ ಮಾನವ ನಿಮ್ಮ ಜೀವಮಾನದಕಷ್ಟವನ್ನು ಅಂತುಕೊಳ್ಳದೆ ಗರ್ವಿಷ್ಠರಾ ಕೃತ್ಯಗಳಿಂದ ಸುಖವುಂಟಾಗುವುದೆಂದು ಭಾವಿಸಿ ಕಾರ್ಯ ಮಾಡುತ್ತಾ ಬರುತ್ತಿದ್ದುದಾದರೆ ನಾನಾವಿಧವಾದ ಕಷ್ಟ ಸಿಲುಕಿ ವಿಧವಿಧವಾಗಿ ಅನುಭವಿಸಿ ಸೌಖ್ಯದ ರೀತಿಯನ್ನೇ ಕೆಟ್ಟಮಾರ್ಗಗಳಲ್ಲಿ ಸಂಚರಿಸುತ್ತಿರುವುದು ಮಾನವನಿಗೆ ವಾಗಿರುವುದಿಲ್ಲ ಎಂದು ಹೇಳುತ್ತಿರುವಳು ಎಂದು ತಿಳಿಯ

ಮೈಸೂರು ಪ್ರಜಾಪ್ರತಿನಿಧಿ ಸಭೆ

ಮೆಂಬರುಗಳ ಅರಿಕೆಗಳೂ ಸರ್ಕಾರದವರು ಪೆ
ಸಮಾಧಾನಗಳೂ.

ಮಿ॥ ಬಾಗಮನೆ ದೇವಗೌಡರು, ಚಿಕ್ಕಮಗ ತಾಲ್ಲೂಕು.—ಬಾಳೇಹೊನ್ನೂರಿನಲ್ಲಿರತಕ್ಕ ಕಾ ರೀಕಲ್ಚರ್ ಕ್ಷೇತ್ರದ ಅಡ್ವೈಜರಿ ಬೋರ್ಡಿಗೆ "ನಮ್ಮ ಮೈಸೂರು ಇಂಡಿಯನ್ ಪ್ಲಾಂಟರು" ಗಳಿಂದ ಒಬ್ಬ ಸದಸ್ಯರನ್ನು ಚುನಾಯಿಸಬೇ ಪ್ರಾರ್ಥನೆ.

ಸಮಾಧಾನ.—ಮುಂದೆ ಬೋರ್ಡಿನಲ್ಲಿ ಸದಸ್ಯಸ್ಥಾನವು ಖಾಲಿ ಆದಾಗ ಯೋಚಿಸಲಾಗುವುದು.

ಮಿ॥ ಟಿ. ಮರಿಯಪ್ಪನವರು, ಅಲ್ಪಸಂಖ್ಯಾತದವರು ಗಡ.—(1) ಪಶುಪಾಲನ (2) ಪಶುವೈದ್ಯ ಫಂಡ್ (3) ಸೇಯ್ಗೆ—ಈ ವಿಷಯಗಳಲ್ಲಿ ವಿದೇಶಗಳಲ್ಲಿ

ವರ್ತಮಾನಸಂಗ್ರಹ

ನಾಗಪುರದ ಹಂಸಾಪುರಿಯಲ್ಲಿ ಒಂದು ಮೇಕೆಯ ಗರ್ಭದಲ್ಲಿ ಮನುಷ್ಯಾಕಾರದ ಒಂದು ಶಿಶುವು ಜನಿಸಿರುವುದಂತೆ !

ಮೌಲಾನಾಷೌಕತ್‌ಅಲಿಯವರು ಇದೇ ನವೆಂಬರು 7 ನೇ ತಾರೀಖಿನ ದಿವಸ 'ವಿಕ್ಟೋರಿಯಾ' ಎಂಬ ಜಹಜಿನಲ್ಲಿ ಅಮೇರಿಕೆಗೆ ಪ್ರಯಾಣಮಾಡಿದರು.

ದುಂಡುಮೇಜಿನ ಪರಿಷತ್ತುಗಳ ಸಲುವಾಗಿ ಇದುವರೆಗೆ 19.50,000 ಪೌಂಡುಗಳು ವೆಚ್ಚವಾಗಿರುವುವು. ಇದರ ಪೈಕಿ 71,000 ಪೌಂಡುಗಳು ಬ್ರಿಟಿಷ್ ಸರ್ಕಾರಕ್ಕೂ, ಉಳಿದ ಹಣವು ಹಿಂದೂದೇಶದ ಮೇಲೂ ಬಿದ್ದಿರುವುದು.

ಮುಂಬಯಿ ಪೌರಸಭೆಗೆ 1933-34 ನೇ ವರ್ಷದ ಆಯವ್ಯಯದಲ್ಲಿ 13 ಲಕ್ಷ ರೂಪಾಯಿಗಳು ನಷ್ಟವುಂಟಾಗುವುವಂತೆ ! ಈ ನಷ್ಟವನ್ನು ಪರಿಹರಿಸಿಕೊಳ್ಳಲು ಪೌರಸಭೆಯವರು ನೀರಿನ ತೆರಿಗೆಯನ್ನು ಹೆಚ್ಚಿಸಬೇಕೆಂದು ಆಲೋಚಿಸುತ್ತಿರುವರು.

ಲಾಹೋರಿನ ರಾಜದ್ರೋಹಕರವಾದ ಮೊಕದ್ದಮೆಯಲ್ಲಿ ಸರ್ಕಾರದ ಪಕ್ಷವನ್ನು ವಹಿಸಿ ಸಾಕ್ಷಿಯನ್ನು ಹೇಳಿದ ಶ್ರೀಯುತ ಫಣೀಂದ್ರಘೋಷ್‌ರವರನ್ನು ಭಟಿಯಾ ಡಿಸ್ಟ್ರಿಕ್ಟಿನಲ್ಲಿ ಯಾರೋ ಕತ್ತಿಯಿಂದ ತಿವಿದರೆಂದು ತಿಳಿದುಬಂದಿದೆ.

ಇದೇ ನವೆಂಬರ್ 9 ನೇ ತಾರೀಖಿನಿಂದ ವೈಸರಾಯರಿಗೆ ಮಲೇರಿಯಾ ಜ್ವರವು ಪ್ರಾಪ್ತವಾಗಿರುವುದರಿಂದ ಸದ್ಯಃ ಅವರು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವರು. ಒಂದು ವಾರವು ಕಳೆಯುವವರೆಗೂ ಅವರು ಯಾವ ಕಾರ್ಯದಲ್ಲಿಯೂ ಭಾಗವಹಿಸುವುದಿಲ್ಲ.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ರೂಸ್‌ವೆಲ್ಟರವರು ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಹಿಂದಿನ ಪ್ರೆಸಿಡೆಂಟರಾಗಿದ್ದ ಹೂವರ್‌ರವರು ಸಂತೋಷದಿಂದ ತಮ್ಮ ಪರಾಜಯವನ್ನು ಒಪ್ಪಿಕೊಂಡು ರೂಸ್‌ವೆಲ್ಟರವರಿಗೆ ಶುಭಸಂದೇಶವನ್ನು ಕಳುಹಿಸಿರುತ್ತಾರೆ.

ಅಮೇರಿಕೆಗೆ ಸೇರಿದ ಕ್ಯೂಬಾನಗರದಲ್ಲಿ ಗಂಟೆಗೆ 200 ಮೈಲುಗಳ ವೇಗದಲ್ಲಿ ಬಿರುಗಾಳಿಯೂ, ಅಪಾರ ಮಳೆಯೂ ಬಂದುದರಿಂದ ಅನೇಕ ಕಟ್ಟಡಗಳು ನೆಲಸಮವಾದುವು. 25 ಜನರು ಮೃತಪಟ್ಟರು. ಇದೇ ಮರಣದವೇಳೆ ಕಾಮಗ್ವೆನಗರದಲ್ಲಿ 300 ಜನರು ಘಾತಪಟ್ಟಿರುವರಂತೆ !

ಇದೇ ನವೆಂಬರ್ 5 ನೆಯ ತಾರೀಖಿನ ದಿವಸ ಜಪಾನ್‌ದೇಶದ 60 ಜನ ದರೋಡೆಕೋರರು ದಕ್ಷಿಣ ಮಂಚೂರಿಯಾ ರೈಲ್ವೇಕಂಪನಿಯ ಸುಪಿಂಗಾವೈ ಎಂಬ ಸ್ಟೇಷನ್ನನ್ನು ಮುತ್ತಿ, ಅಲ್ಲಿದ್ದ 3 ಜನ ರೈಲ್ವೇ ಅಧಿಕಾರಿಗಳನ್ನು ಕೊಂದು ನಿಲ್ದಾಣದಲ್ಲಿದ್ದ ಜನರನ್ನು ಜೀವಸಹಿತ ಸುಟ್ಟುದಲ್ಲದೆ ಸ್ಟೇಷನ್ನಿನ ಕಟ್ಟಡಕ್ಕೂ ಬೆಂಕಿಯನ್ನು ಹಚ್ಚಿ ಪರಾರಿಯಾದರು.

ಮುಂಬಯಿಯ ಸರ್ ಪುರುಷೋತ್ತಮದಾಸ್ ಠಾಕೂರದಾಸರವರು ದುಂಡುಮೇಜಿನ ಪರಿಷತ್ತಿಗೆ ಹೋದರೆಂಬ ಕಾರಣದಮೇಲೆ ಇಂಡಿಯನ್‌ಮರ್ಚಂಟ್ಸ್ ಛೇಂಬರಿನವರು ಅವರ ಬಗ್ಗೆ ಅವಿಶ್ವಾಸದ ಠರಾವನ್ನು ಪಾಸುಮಾಡಿದರು. ಇದರಿಂದ ಅಸಮಾಧಾನಹೊಂದಿದ ಸರ್ ಪುರುಷೋತ್ತಮದಾಸರು ಹಾಗೂ ಇನ್ನೂ 15 ಜನ ಪ್ರಮುಖ ಸದಸ್ಯರು ಸದರಿ ಛೇಂಬರಿನ ಕಾರ್ಯಕಾರಿಮಂಡಲತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಇದೇ ನವೆಂಬರ್ 7 ನೆಯ ತಾರೀಖಿನ ದಿವಸ ಅಹಮದಾಬಾದಿನ ಪೋಲೀಸ್ ಸಾರ್ಜಂಟ್ ಹೂಸ್ಟನ್ ಎಂಬಾತನು ರೆಸಿಡೆನ್ಷಿಯಲ್ ಕ್ವಾರ್ಟರ್ಸಿನಲ್ಲಿದ್ದ ಇನ್ಸ್‌ಪೆಕ್ಟರ್ ಗ್ರೀನ್ ಎಂಬುವರನ್ನು ಗುಂಡಿನಿಂದ ಹೊಡೆದು ಕೊಂದನೆಂದೂ, ಅನಂತರ ಕಾಂಪೌಂಡಿಗೆ ಬಂದು ಅಲ್ಲಿಯೂ ಮನಸ್ಸೋ ಗುಂಡುಗಳನ್ನು ಹಾರಿಸಿ 3 ಜನರಿಗೆ ಗಾಯಪಡಿಸಿದನೆಂದೂ ತಿಳಿದುಬಂದಿದೆ. ಪೋಲೀಸರು ಹೂಸ್ಟನ್ನನ್ನು ದಸ್ತಗಿರಿ ಮಾಡಿ ವಿಚಾರಣೆ ನಡೆಯಿಸುತ್ತಿರುವರು.

ಬಳ್ಳಾರಿ ಟೌನ್ ನಿವಾಸಿಗಳಾದ ಮ॥ ರಾ॥ ಎಡರಿಡ್ಡಿ ಮಹಾಬಲೇಶ್ವರಪ್ಪನವರು ಬಳ್ಳಾರಿ ಡಿ॥ ಬೋರ್ಡ್ ಪ್ರೆಸಿಡೆಂಟರಾಗಿಯೂ, ಹೊಸಪೇಟೆ ಟೌನ್ ನಿವಾಸಿಗಳಾದ ಮ॥ ರಾ॥ ವಕೀಲ್ ಪಿ. ಉದ್ದಾನಪ್ಪನವರು ವೈಸ್‌ಪ್ರೆಸಿಡೆಂಟರಾಗಿಯೂ, ಹಡಗಲಿ ತಾಲೂಕು ಬೋರ್ಡಿಗೆ ಮೋರಿಗೇರಿ ಮ॥ ರಾ॥ ಭಾವಿಲಿಂಗಪ್ಪನವರು ಪ್ರೆಸಿಡೆಂಟರಾಗಿಯೂ, ಮ॥ ರಾ॥ ಕತ್ತಿಮರಡಿ ಮಲ್ಲನಗೌಡರು ವೈಸ್ ಪ್ರೆಸಿಡೆಂಟರಾಗಿಯೂ, ಹರಪನಹಳ್ಳಿ ತಾಲೂಕು ಬೋರ್ಡಿಗೆ ಕಂಚಿಕೇರಿ ಮ॥ ರಾ॥ ಕೆಂಚನಗೌಡರು ಪ್ರೆಸಿಡೆಂಟರಾಗಿಯೂ, ಮ॥ ರಾ॥ ಕುರುವತ್ತಿ ಚಿಕ್ಕಚನ್ನಪ್ಪನವರು ವೈಸ್ ಪ್ರೆಸಿಡೆಂಟರಾಗಿಯೂ, ಚುನಾಯಿಸಲ್ಪಟ್ಟಿದ್ದಾರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

ಶ್ರೀಮತಿ ಕಮಲಾನೆಹರೂರವರಿಗೆ ಕೆಲವು ದಿವಸಗಳಿಂದಲೂ ಕಾಯಿಲೆಯು ಹೆಚ್ಚಾಗಿರುತ್ತದೆ. ಕಲ್ಕತ್ತೆಯ ವಿ॥ ಬಿಧನಚಂದ್ರರಾಯ್ ಮತ್ತು ಲಕ್ನೋದ ಡಾ॥ ಅತಲ್‌ರವರು ಶ್ರೀಮತಿಯವರನ್ನು ಪರೀಕ್ಷಿಸಿ ಅವರಿಗೆ ಕೆಲವು ವಾರಗಳಿಂದಲೂ ಇದೇ ರೀತಿ ಹೃದಯ ಸಂಬಂಧವಾದ ಕಾಯಿಲೆಯು ಪ್ರಾಪ್ತವಾಗಿರುವದೆಂದೂ, ಈ ಸಂಬಂಧವಾಗಿ ಅವಶ್ಯಕವಾದ ಪರೀಕ್ಷೆಗಳನ್ನು ನಡೆಸುವದಕ್ಕಾಗಿ ದೇಹಸ್ಥಿತಿಯು ಸ್ವಲ್ಪ ಉತ್ತಮವಾದ ಕೂಡಲೇ ಅವರನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಬೇಕಾಗಿರುವದೆಂದೂ, ವಿಶೇಷ ಕಳವಳಕ್ಕೆ ಕಾರಣವಿಲ್ಲವೆಂದೂ ಪ್ರಕಟಿಸಿರುತ್ತಾರೆ. ಇದೇ ಕಾರಣಕ್ಕಾಗಿ ಸರಕಾರದವರು ಪಂಡಿತ ಜವಾಹರಲಾಲನೆಹರೂರವರನ್ನು ಕಾರಾಗೃಹದಿಂದ ಬಿಡುಗಡೆ ಮಾಡಬಹುದೆಂದು ಅನೇಕರು ನಿರೀಕ್ಷಿಸುತ್ತಿರುವರು.

ಶ್ರೀ॥ ಸುಭಾಷಚಂದ್ರಬೋಸರವರು ಇದೇ ನವಂಬರ್ 5 ನೇ ತಾರೀಖಿನ ದಿವಸ 'ಧವಾಲಿ ಸ್ಯಾನಿಟೋರಿಯಂ' ನಿಂದ ಹೈದರಾಬಾದಿನಲ್ಲಿರುವ ತಮ್ಮ ಮಿತ್ರರೊಬ್ಬರಿಗೆ ಈ ಕೆಳಗೆ ಕಂಡಪತ್ರವನ್ನು ಬರೆದಿರುವರು. ಇಲ್ಲಿಯ ಹವೆಯು ಚೆನ್ನಾಗಿರುವುದು. ಆದರೂ ನನ್ನ ದೇಹಸ್ಥಿತಿಯು ಉತ್ತಮವಾದಂತೆ ಕಾಣುವುದಿಲ್ಲ. ನನ್ನ ಸ್ಥಿತಿಯು ಇಲ್ಲಿಗೆ ಬಂದಾಗ ಹೇಗಿತ್ತೋ, ಈಗಲೂ ಹಾಗೆಯೇ ಇದೆ. ಜ್ವರದಬಾಧೆಯು ಕಡಿಮೆಯಾಗಿಲ್ಲ. ತೂಕವೂ ಹೆಚ್ಚಿಲ್ಲ. ಶ್ವಾಸಕೋಶಗಳಿಗಿಂತಲೂ ಗುಲ್ಮದ ಬಾಧೆಯು ಹೆಚ್ಚಾಗಿರುವುದೆಂದು ಡಾಕ್ಟರುಗಳು ಅಭಿಪ್ರಾಯಪಡುತ್ತಾರೆ. ಅವರ ಕಡೆಯ ಅಭಿಪ್ರಾಯವನ್ನು ನಾನು ಕಳವಳದಿಂದ ನಿರೀಕ್ಷಿಸುತ್ತಿರುವೆನು. ಸಾಧುವಾಸ್ವಾನಿಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ, ಅವರು ಅಮೇರಿಕೆಗೆ ಯಾವಾಗ ಹೊರಡುತ್ತಾರೆ ? ಅಮೇರಿಕೆಯವರಿಗೆ ಹಿಂದೂಧರ್ಮದ ರಹಸ್ಯಗಳನ್ನು ಬೋಧಿಸುವುದು ಅತ್ಯಂತ ಪ್ರಶಂಸನೀಯವಾದ ಕಾರ್ಯವಾಗಿರುವುದು.

ಭರತಖಂಡದ ಸ್ಥಿತಿಗತಿಗಳನ್ನು ಖುದ್ದಾಗಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿದ್ದ ಇಂಡಿಯಾ ಲೀಗ್ ಡೆಲಿಗೇಷನ್ನಿನವರು ನವೆಂಬರ್ 17 ನೇ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಬೆಳೆಯಿಸಿದರು. ಅವರು ಮುಂಬಯಿಯಲ್ಲಿ ಹಡಗ ಹತ್ತುವುದಕ್ಕಿಂತ ಮುಂಚಿತವಾಗಿ ಈ ಕೆಳಗೆಕಂಡ ಹೇಳಿಕೆಯನ್ನು ಕೊಟ್ಟಿರುತ್ತಾರೆ. 'ಈ ದೇಶದಲ್ಲಿ ಸಂಚರಿಸುವಾಗ ನಾವು ಹೆಚ್ಚಿನಕಾಲವನ್ನು ಹಳ್ಳಿಗಳಲ್ಲಿ ಕಳೆದೆವು. ನಗರಗಳಲ್ಲಿ ಎಲ್ಲ ಪಂಗಡಗಳ ಪ್ರತಿನಿಧಿಗಳನ್ನೂ, ಮುಖಂಡರನ್ನೂ ಹಾಗೂ ಸರಕಾರೀ ಅಧಿಕಾರಿಗಳನ್ನೂ ಕಂಡು ಸಂಭಾಷಿಸಿದೆವು. ಸ್ವರಾಜ್ಯದಲ್ಲಿ ಯಾರುಯಾರು ಎಷ್ಟೆಷ್ಟು ಅಧಿಕಾರಗಳನ್ನು ಹೊಂದಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಾದರೂ ಆರ್ಡಿನೆನ್ಸಿನ ರಾಜ್ಯಭಾರವನ್ನು ಸರ್ವರೂ ಏಕವಾಕ್ಯದಿಂದ ಖಂಡಿಸುವರು. ಸ್ವರಾಜ್ಯವನ್ನು ಬಹುಜನ ಮುಸಲ್ಮಾನರು ವಿರೋಧಿಸುವರೆಂಬುದು ತಪ್ಪು. ಕಾಂಗ್ರೆಸ್ಸಿನ ಸಲಹೆ ಮತ್ತು ಸಹಕಾರಗಳಿಲ್ಲದೆ ಭರತಖಂಡದ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನವು ನಿಷ್ಫಲವಾಗುವುದು. ಮೂರನೇ ಪರಿಷತ್ತು ಯಶಸ್ವಿಯಾಗಿ ನಡೆಯುವುದೆಂದು ನಾವು ಎಂದೂ ಒಪ್ಪುವುದಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಬಳ್ಳಾರಿಡಿಸ್ಟ್ರಿಕ್ಟ್‌ಬೋರ್ಡಿನ ಅಧ್ಯಕ್ಷರ ಚುನಾವಣೆ.

ದಿವಾನ್‌ಬಹದ್ದೂರ್ ಎಸ್. ಗೋಪಾಲಸ್ವಾಮಿ ಮೊದಲಿಯಾರ ಬಿ. ಎ. ಬಿ. ಎಲ್. ಎಂ. ಎಲ್. ಸಿ. ಇವರಿಗೆ ಅಪಜಯ—

ತಾ|| ೧-೧೧-೩೨ ರಲ್ಲಿ ನಡೆದ ಬಳ್ಳಾರಿ ಡಿ|| ಬೋರ್ಡಿನ ಅಧ್ಯಕ್ಷರ ಚುನಾವಣೆಯಲ್ಲಿ ೩೬ ವರ್ಷದ ವಯಸ್ಸಿನ ವೀರಶೈವ ನವಯುವಕರಾದ ಶ್ರೀಮಂತ ವೈ. ಮಹಾಬಲೇಶ್ವರಪ್ಪನವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದಿರುವರು. ೧೦ ವರ್ಷಗಳಿಂದಲೂ, ಬೋರ್ಡಿನ ಪ್ರೆಸಿಡೆಂಟರಾಗಿದ್ದ ಮೊದಲಿಯಾರ್‌ರವರು ಸೋತುಹೋದರು. ಬಳ್ಳಾರಿ ಮಂಡಲದ ಸರ್ವರಿಗೂ ಬಳ್ಳಾರಿ ಜಿಲ್ಲೆಯ ವರ್ತಕಮಂಡಲಿಗೂ ತುಂಬಾ ಪ್ರೀತ್ಯಾಸ್ಪದರಾದ ಈ ತರುಣರಿಗೆ ಈ ತರುಣಯುಗದಲ್ಲಿ ಸ್ಥಾನಿಕರಾಜ್ಯಭಾರದೊಳಗೆ ಮುಖ್ಯವಾದ ಜಿಲ್ಲಾ ಬೋರ್ಡಿನ ಪ್ರಭುತ್ವವು ಕೈಸೇರಿದುದು ಬಳ್ಳಾರಿ ಮಂಡಲಕ್ಕೇ ಒಂದು ನವಚೇತನವು ಉಂಟಾಗಿರುವುದು.

ಓರ್ವ ಬಳ್ಳಾರಿ ನಿವಾಸಿ.

ಶ್ರೀಗುರುವರ ಪ್ರಸೀದ

ಸ್ಮಾರಕವು.

ಶ್ರೀ|| ಧರ್ಮವೀರಶಂಕರಣ್ಣನವರು ಸಜ್ಜನಶೆಟ್ಟಿಯವರಿಂ ಇವರ ಪುಣ್ಯತಿಥಿಯು ಇದೇ ಕಾರ್ತಿಕ ಶು|| ೪ ಬುಧವಾರ ತಾ|| ೨-೧೧-೧೯೩೨ ಈ ದಿವಸ ಕಾಲೇಜಿನ ವತಿಯಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲದಲ್ಲಿ ಶ್ರೀ ಹಿಮವತ್ಕೇದಾರ್ಯೈಶೋರಾಮದ್ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ೧೦೮ ಚನ್ನಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಹಸ್ತದಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಶಂಕರಲಿಂಗಮೂರ್ತಿಗೆ ಕಾಲೇಜಿನ ವೈದಿಕರಿಂದ ಸಶಾಸ್ತ್ರೀಯವಾಗಿ ರುದ್ರಾಭಿಷೇಕವು ಮಾಡಲ್ಪಟ್ಟಿತು. ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾದ ಶ್ರೀ ಶಂಕರಲಿಂಗ ದೇವಸ್ಥಾನದಲ್ಲಿ ನಾಲ್ಕು ಘಂಟೆಯಿಂದ ಕಾಲೇಜಿನ ಪ್ರಿನ್ಸಿಪಾಲರಿಂದಲೂ ನಾಲ್ವರು ವಿದ್ಯಾರ್ಥಿಗಳಿಂದಲೂ ಸ್ಮಾರಕಪರ ಭಾಷಣಗಳಾದವು. ಅನಂತರ ಶ್ರೀ ಶಂಕರಲಿಂಗಮೂರ್ತಿಗೆ ಮಂಗಲ ಮಾಡಿ ಶ್ರೀ|| ಧರ್ಮವೀರ ಶಂಕರಣ್ಣನವರ ಭಾವಚಿತ್ರವನ್ನು ಉತ್ಸವದೊಡನೆ ಅವರ ಗೃಹಕ್ಕೆ ತಂದು ಜಯಘೋಷದೊಡನೆ ಇರಿಸಿದರು. ಬಳಿಕ ಸಾಯಂಕಾಲ ೬|| ಯಿಂದ ೮|| ವರೆಗೆ ಶಂಕರ ಕಾಲೇಜಿನಲ್ಲಿ ಅನಂತಪಲ್ಲಿ ಶಾಂತಮೂರ್ತಪ್ಪನವರಿಂದ ಶಿವಕೀರ್ತನವು ಮಾಡಲ್ಪಟ್ಟಿತು. ಅನಂತರ ಧರ್ಮವೀರ ಶಂಕರಣ್ಣ ಮಹಾರಾಜಕೀ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

~~[illegible] ಶಂಕರಕಾಲೇಜು, [illegible]~~

ಗುರುಕುಲಚಂದ್ರ ~~[illegible]~~ ಶಾಸ್ತ್ರಿ

~~[illegible]~~

ಶಾಸ್ತ್ರಿವರ್ಯಾಣಾಂ ಸಾನಂದಮಭಿನಂದನಂ.

ಗ್ರಾಂ

ಆಗಮ ~~[illegible]~~ ಮತಾಧ್ಯಕ್ಷಾ ವೇದಶಾಸ್ತ್ರಪರಾಯಣಾಃ |
~~[illegible]~~ ಷಟ್ಸ್ಥಲಬ್ರಹ್ಮಪಾರಗಾಃ ||೧||
ಶಿವಾದ್ವೈತಪರಂ ವೇದಸಿದ್ಧಾಂತಶಿಖಾಮಣಿಂ |
ಶ್ರುತ್ವಾಗಮಾನ್ ಸಮಾಲೋಕ್ಯ ಪ್ರಸ್ಥಾನತ್ರಯಮೇವಚ ||೨||
ಪಂಡಿತಾಃ ಸುಜ್ಞವಕ್ತಾರೋ ಜ್ಞಾನವಿಜ್ಞಾನತತ್ಪರಾಃ |
ನಿಗಮಾರ್ಥೋಪದೇಶೇನ ಶಿವಸೇವಾಂ ಸಮುಜ್ಜನಾನ್ ||೩||
ಸಾಹಿತ್ಯಸಂಗೀತಕಲಾಧುರೀಣಾಃ |
ಕರ್ಣಾಟಕೇ ಗೀಷ್ಪತಯಸ್ತಥಾಪಿ ||
ಗೀರ್ವಾಣಹಿಂದ್ಯಾದಿಮರಾಠಿಮುಖ್ಯ |
ಭಾಷಾಸು ತೇಷಾಂ ಪರಮಂ ಪ್ರಭುತ್ವಂ ||೪||
ಏವಂವಿಧೈರ್ಬಹುಗುಣೈಃ ಸಮಲಂಕೃತಾಸ್ತೇ |
ಶೈವಲ್ಯವೈಭವಧಿಯಾ ಪರಿವೇಷ್ಟಿತಾಂಗಾಃ ||
ಬ್ರಹ್ಮಾನುಚಿಂತನಪರಾ ವಿರಜಾಃ ಸುಶೀಲಾಃ |
ಸನ್ನೈಷ್ಠಿಕಾ ಗುರುಕೃಪಾಕೃತಬುದ್ಧಯಸ್ತೇ ||೫||
ವೇದಾಗಮೋಪನಿಷದಾದಿತತ್ತ್ವಬೋಧಂ |
ಶೈವಾನುಸಾರಮಥ ರೇವಣಸಿದ್ಧಗೀತಂ ||
ಜ್ಞಾನಾಮೃತಂ ಸಮಧುನಾ ಪ್ರಕಟಯ್ಯ ಹೃದ್ಯಂ |
ಸಂಜೀವನಂ ಜನಪದಂ ಪ್ರದದುಃ ಸುಧೀರಾಃ ||೬||
ತತ್ಸ್ವಜ್ಞಾನಾಂ ಮನೋಜ್ಞಂ ಯದ್ಗೈರ್ವಾಣಮಭಿನಂದನಂ |
ಸಂತೋಷಯತು ಸ್ವಾನಂದಂ ಸಜ್ಜನೈಃ ಕೀರ್ತಿತಂ ಮುದಾ ||೭||

~~ಜತ್‌ಸ್ಟೇಟ್.~~ } ~~A. V. Khasnis B.A., LL.B.,~~
~~ತಾ|| ೪-೯-೧೯೩೨.~~ } ~~ಸೆಷನ್‌ಜಡ್ಜ್, ಜತ್‌ಸಂಸ್ಥಾನ.~~

ಪಂ|| ಬಸವಲಿಂಗಶಾಸ್ತ್ರಿ ಆರಾಧ್ಯರು

೫ ನವಂಬರ್ 1932

ಭೋ ಆಚಾರ್ಯ!

ಅಸ್ಮಾಭಿಸ್ತೇ ಶಿಷ್ಯಭೂತೈರ್ವಿನಮ್ರೈಃ |
ರಾಜಾಚಾರ್ಯಸ್ಯಾಂ ಸಂಪದದ್ಭಿರ್ಜಯಂತ್ಯಾಂ ||
ಧನ್ಯೈರ್ಜಾತೈಃ ಶಾಸ್ತ್ರವಿಜ್ಞಾನಸಾರಂ |
ವಿಜ್ಞಪ್ತಿರ್ಭೋಃ ಸಾದರಂ ಪ್ರೋಚ್ಯತೇಚ ||೧||
ವಿದ್ಯಾಸ್ಪದೇ ಯೋಗಮಾರ್ಗೇ ಗ್ರಾಮೇ ಚ |
ಬೆಂಗ್ಳೂರಾಖ್ಯೇ ಶ್ರೀಯುತೇ ಪತ್ತನೇ ವಾ ||
ಆಚಾರ್ಯೋಂದ್ರಾಖ್ಯಾತವಾನ್ ಮೈಸುರೇಽಪಿ |
ಭೋ ಅಸ್ಮಾನಂ ಪ್ರಾಜ್ಞತಾಪೂರ್ಣಸೂಕ್ತೈಃ ||೨||
ಧನ್ಯೇಯಂ ನಗರೀ ಕೃತಾ ಗುರುವರಾಗತ್ಯೇಹ ತತ್ರಾರ್ಣಂ ಸ್ವಯಂ |
ವ್ಯಾಖ್ಯಾನೈಃ ಸರಸೈಃ ಸುಬೋಧಗುರುಭಿರ್ವೇದಾಂತಸಾರಂ
ನಯಂ ||
ಧರ್ಮಂ ಕರ್ಮಚ ಲೌಕಿಕಂ ಸಮಮಪಿ ಪ್ರಾವೇದಯದ್ಭಿರ್ಭೃಶ |
ಮಜ್ಞಾನಾಖ್ಯತಮಂ ಪ್ರಕೃಷ್ಟಮತಯಃ ಪ್ರಾಪ್ತಾಃ ಪ್ರಕಾಮಂ
ಶಿವ ||೩||
ಮಂದಿರಂ ಮಲ್ಲಿಕೇಶಸ್ಯ ಶೈವಧರ್ಮಾನುಯಾಯಿಭಿಃ |
ಶ್ರೀಮದ್ವಿಜಯಸಿಂಹಸ್ಯ ಭೂಪತೇಃ ಸಂಪ್ರಯುಕ್ತಕಂ ||೪||
ತಸ್ಮಿನ್ ಶಿವಮಂದಿರೇ ಗುರುತರಂ ಜ್ಞಾನಸ್ಯ ಸತ್ರಂ ನಭಃ |
ಪ್ರಾರಂಭೇ ಯದರಂಭಿ ಭಾವಗಭಿತಂ ನಿರ್ಗಾನಮಂತ್ರಂ ಯಥಾ ||
ಸರ್ವೈರಸ್ತ್ವಗತಂ ವಿಶೇಷಗುಣಿತಂ ಕಾರ್ಯಂ ಜನ್ಯೈರ್ಗಂಭ |
ಸ್ತ್ರೀಷಾಂಚ ಪ್ರತಿಭಿರ್ವಚ್ಚರಣಯೋಃ ಸಾಷ್ಟಾಂಗಿಕೇ
ಚಾಸ್ತು ವಃ ||೫||
ಮತಂ ಹಿ ವೀರಶೈವಾನಾಂ ನಿರ್ಗತಂ ವೇದಮಸ್ತಕಾತ್ |
ನೂನಂ ಪ್ರಣೀತಂ ವೇದೇಷು ಚೇತಿ ನೋ ಬೋಧನಾತ್ಮಕಾ ||೬||
ಏವಂ ಹಿ ವೀರಶೈವಾನಾಂ ಮತಂ ಸಂಘಟಯನ್ ಭವಾನ್ |
ಕುರುತೇ ಸುಮಹತ್ಕಾರ್ಯಂ ಧರ್ಮ್ಯೈರಕ್ಷ್ಯೈಃ ಪ್ರವರ್ತಕೈಃ ||೭||
ಏವಂ ಗುರೋ ಪ್ರಭವತೋಽಪಕೃತಾ ವಯಂ ತೇ |
ಭಕ್ತಾಃ ಪ್ರಸನ್ನವದನಂ ಪ್ರಸಮೀಕ್ಷ್ಯ ನೂನಂ ||
ಹಿತ್ವಾ ಪ್ರಮೋದಜನನಂ ತವ ಆಸಮಂತಾ |
ದಾನಂದಸಾಗರಜಲೇ ಬಹುಲಂ ನಿಮಗ್ನಾಃ ||೮||
ಶಿವೋಽಸಿ ನಃ ಸಾಕ್ಷಾದ್ಗುರುರಪಿ ಭವಾನ್ ಜ್ಞಾನಕಥನಾತ್ |
ಕವಿಃ ಪ್ರಜ್ಞಾಬೋಧಾದ್ಬುಧಜನಗಣಾನಾಂ ಭವಹರಃ ||
ಅತಃ ಸರ್ವೇ ಭೂಯೋ ಲಲಿತಪದಮೋರ್ವಂದನಪರಾಃ |
ಪ್ರಸೀದಾನಂತೇನ ಗುರುವರ ಕೃತಂ ಸ್ತೋತ್ರನವಕಂ ||೯||

ತಾ|| ೪-೯-೧೯೩೨.
A. K. Despande,
ಹೈಸ್ಕೂಲ್ ಟೀಚರ್, ಜತ್‌ಸಂಸ್ಥಾನ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಹಾಲಸ್ವಾಮಿಗಳವರ ಆಗಮನ.

ಬಳ್ಳಾರಿ ಡಿ|| ಹುವ್ವಿನಹಡಗಲಿ ತಾ|| ಹಿರೇಹಡಗಲಿ ಗ್ರಾಮಕ್ಕೆ ಶಿವಮೊಗ್ಗಾ ಡಿ|| ರಾಂಪುರದ ಬೃಹನ್ಮಠಾಧ್ಯಕ್ಷರಾದ ಶ್ರೀಮತ್ಪೂಜ್ಯಪಾದ ಶ್ರೀ ಹಾಲಸ್ವಾಮಿಗಳವರ ಸವಾರಿಯು ದಯಮಾಡಿಸಿ ೧೫ ದಿವಸಗಳಾದವು. ಪ್ರತಿದಿವಸ ಭಕ್ತರ ಬಿನ್ನಹಗಳಂ ಕೈಕೊಂಡು ಫಲಾಶೀರ್ವಾದಗಳನ್ನು ದಯಪಾಲಿಸುತ್ತಲೂ, ತಮ್ಮ ಅಪ್ರತಿಮವಾದ ವೀಣಾವಾದನಾಮೃತವನ್ನು ಪಾನ ಮಾಡಿಸುತ್ತಲೂ ಇದ್ದು ಈ ಕಾರ್ತಿಕ ಶು|| ೭ ದಿವಸ ಗ್ರಾಮದ ಪ್ರಮುಖರಾದಿಯಾಗಿ ಭಕ್ತಮಾಹೇಶ್ವರ ಮಂಡಳಿಯು ಸನ್ನಿಧಿಯಲ್ಲಿ ಸೇರಿತು. ಬಳಿಕ ಇದೇ ಗ್ರಾಮದ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳು ದೇವನಂದನಮಹಾರಾಜನ ಸಚ್ಚರಿತ್ರವೆಂಬ ಕೀರ್ತನವನ್ನು ಸಂಗೀತಸಾಹಿತ್ಯಗಳಿಂದಲೂ, ಲೌಕಿಕ-ಪಾರಮಾರ್ಥಿಕೋದಾಹರಣೆಗಳಿಂದಲೂ ನಡೆಯಿಸಿ ಸರ್ವರನ್ನೂ ಆನಂದಗೊಳಿಸಿದರು. ಬಳಿಕ ಶ್ರೀಗಳವರು ಪ್ರತಿಯೊಬ್ಬ ಶಾಸ್ತ್ರಿಗಳೂ, ಪಂಡಿತರೂ, ಪಟ್ಟಚರಾಧಿಕಾರಿ ಸ್ವಾಮಿಗಳೂ ಗ್ರಾಮಾನುಗ್ರಾಮಗಳಲ್ಲಿ ಸಂಚರಿಸಿ ಭಾಷಣಮೂಲಕವೂ ಹಾಗೂ ಪುರಾಣ, ಕೀರ್ತನ ಮೂಲಕವೂ ಜನರಿಗೆ ಭಕ್ತಿ-ಜ್ಞಾನ-ನೀತಿ, ಧರ್ಮಬೋಧೆಯನ್ನು ಮಾಡಿದರೆ ವೀರಶೈವಸಮಾಜ ಸುಧಾರಣೆಯಾಗಲು ತುಂಬಾ ಅನುಕೂಲವೆಂತಲೂ ಈ ಬಗೆ ಶ್ರೀ ಜಗದ್ಗುರು ಪಂಚಪೀಠಾಧೀಶರು ಏರ್ಪಾಟುಮಾಡುವದು ಅತ್ಯಂತ ಭೂಷಣವೆಂತಲೂ ಬೋಧಿಸಿ, ವೇ|| ವಿರೂಪಾಕ್ಷಶಾಸ್ತ್ರಿಗಳವರಿಗೆ ಸಂಭಾವನೆಯನ್ನೂ ಉಳಿದವರಿಗೆ ಫಲಾಶೀರ್ವಾದಗಳನ್ನೂ ದಯಪಾಲಿಸಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಒಳದೇಶದ ವೃತ್ತಾಂತಗಳು.

ಮೈಸೂರು ದೇಶದ ಹೈಕೋರ್ಟಿನ ಚೀಫ್‌ಜಡ್ಜರಾದ ಶ್ರೀಯುತ ಸಿ. ಎಸ್. ದೊರೆಸ್ವಾಮಿ ಅಯ್ಯರವರು ಮೊನ್ನೆ ಶನಿವಾರ ದಿವಸ ಆಕಸ್ಮಿಕವಾಗಿ ಮೃತಪಟ್ಟರೆಂದು ತಿಳುಹಿಸಲು ವಿಷಾದಿಸುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮ|| ರಾ|| ಶ್ರೀನಿವಾಸರಾಘವಾಚಾರ್ಯರ ಜ್ಯೇಷ್ಠಪುತ್ರರಾದ ಗೋಪಾಲ್ ಎಂಬವರು ಮದರಾಸಿನಲ್ಲಿ ವ್ಯಾಸಂಗ ಮಾಡುತ್ತಿದ್ದು ತಾವು ಬಿ. ಎಸ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಿಲ್ಲವೆಂದು ತಿಳಿದು ಆತ್ಮಹತ್ಯ ಮಾಡಿಕೊಂಡಿರುತ್ತಾರೆ.

ಮೈಸೂರು ಸರ್ಕಾರದವರು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಎಳುವರ್ಷಗಳ ಅವಧಿಗೆ ಹಣವನ್ನು ಡಿಪಾಸಿಟ್ ಇಡುವವರಿಗೆ ಶೇಕಡಾ 5½ ಯಂತೆ ಬಡ್ಡಿಯನ್ನು ಕೊಡುವುದಾಗಿ ಪ್ರಕಟಿಸಿದ್ದರು. ಆದರೆ 1933 ನೇ ಇಸವಿ ಮಾರ್ಚಿ 15 ನೇ ತಾರೀಖಿನಿಂದ ಮುಂದಕ್ಕೆ ಅಂತಹ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಪ್ರಕಟಿಸಿರುತ್ತಾರೆ.

ಬೆಂಗಳೂರಿನ ಮ|| ಎ. ಎಸ್. ಸಂಜೀವರಾಯರು ಜೂನಿಯರ್ ಲೇಟ್ ಮಿ|| ವೆಂಕಟಸುಬ್ಬರಾಯರನ್ನು ಮಾನಭಂಗಪಡಿಸಿದರೆಂಬ ಮೊಕದ್ದಮೆಯಲ್ಲಿ ಕಳೆದ ವಾರ ಹೈಕೋರ್ಟು ಜಡ್ಜರು ಅಪಾದಿತರಿಗೆ 300 ರೂ ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಸಜೆಯನ್ನು ವಿಧಿಸಿದರು. ಮ|| ಸಂಜೀವರಾಯರು ಇದರ ಮೇಲೆ ಅಪೀಲ್ ಮಾಡುವರೆಂದು ತಿಳಿದು ಬಂದಿದೆ.

ರಾಜಧಾನಿಯ ದೊಡ್ಡಪೇಟೆ ಚೌಕದಲ್ಲಿದ್ದ ಎಸ್. ನುಲಯ್ಯಂಗಾರ್ ಎಂಬ ಮಂತ್ರವಾದಿಯು ಪ್ರಾಬ್ಲಾಫೀಸರಾದ ಮ|| ರಾ|| ರಾಮಚಂದ್ರರಾಯರ ಮಗಳ ಕಾಯಿಲೆಯನ್ನು ವಾಸಿಮಾಡುವುದಾಗಿ ಹೇಳಿ ಆಕೆಯಿಂದ ಚಿನ್ನದಬಳೆ ಮತ್ತು ಅಡ್ಡಿಕೆ ಸುದುಕ್ಕು ತೆಗೆದುಕೊಂಡು ಹೋಗಿ, ಅವುಗಳನ್ನು ಹಿಂತಿರುಗಿ ಕೊಡದೆ ಉದಯಚಂದ್ ಎಂಬ ಮುಲ್ತಾನಿಯ ಹತ್ತಿರ ಗಿರವಿ ಇಟ್ಟು ಮೋಸಮಾಡಿದನೆಂಬ ಅಪಾದನೆಯ ಮೇಲೆ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯಾಗಿ, ವಿಚಾರಣೆಯಾಗುತ್ತಿದೆ.

ಸರ್ಕಾರದ ಪ್ರಕಟಣೆ.—ಮೈಸೂರು ಸಂಸ್ಥಾನದ ಜನರಲ್ಲಿ ಬಂದೂಕ ಮತ್ತು ರಿವಾಲ್ವರು ಮುಂತಾದವುಗಳು ಎಷ್ಟಿವೆಯೆಂಬುದನ್ನು ತಿಳಿಯುವುದಕ್ಕಾಗಿ "ಆಯುಧ ಖಾನೇಷುಮಾರಿ ಲೆಕ್ಕವನ್ನು 31-12-1932 ಕ್ಕೆ ಸರಿಯಾಗಿ ಸಂಗ್ರಹಿಸಬೇಕೆಂದು ಗೊತ್ತಾಗಿದೆ. ಇರುವ ಆಯುಧಗಳ ಸರಿಯಾದ ಲೆಕ್ಕಗಳು ಬೇಕಾಗಿವೆ. ಈಗ ಲೈಸನ್ಸು ಪಡೆಯದಿರುವವರು ಕೂಡ ಯಾವ ಬಗೆಯ ಅನುಮಾನವೂ ಇಲ್ಲದೆ ಧಾರಾಳವಾಗಿ ತಮ್ಮ ಬಂದೂಕ ಮುಂತಾದವುಗಳ ವಿಚಾರವನ್ನು ತಿಳಿಸುವಂತೆ ಮಾಡುವುದಕ್ಕಾಗಿ ಸರ್ಕಾರದವರು ಕೆಲವು ರಿಯಾಯತಿಗಳನ್ನು ತೋರಿಸುವಂತೆ ಅಪ್ಪಣೆಮಾಡಿದ್ದಾರೆ. ಯಾರು ಈಗ ಲೈಸನ್ಸು ಪಡೆಯದೆ ಇರತಕ್ಕವರು 30-11-32 ಅಥವಾ ಅದಕ್ಕೆ ಮುಂಚೆ ಬಂದು ಪೋಲೀಸ್ ಸ್ಟೇಷನ್ನಿಗೆ ತಮ್ಮಲ್ಲಿರುವ ಬಂದೂಕ ಮುಂತಾದುವನ್ನು ಒಪ್ಪಿಸಿ ಅಥವಾ ಅವುಗಳ ವಿಚಾರವನ್ನು ಬೆಂಗಳೂರಿನ ಪೋಲೀಸ್ ಇನ್ಸ್‌ಪೆಕ್ಟರ್-ಜನರಲ್‌ರವರಿಗಾಗಲಿ ತಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗಾಗಲಿ ತಿಳಿಸಿದರೆ ಅಂಥವರನ್ನು ಪ್ರಾಸಿಕ್ಯೂಷನ್ ಮಾಡುವುದಿಲ್ಲ. 2. ಅಂಥವರು ತಮಗೆ ಲೈಸೆನ್ಸ್ ಬೇಕೆಂದು 30-11-32 ಅಥವಾ ಆ ಮುಂಚೆ ಕೇಳಿದರೆ ಆಯಾ ಸಂದರ್ಭವನ್ನು ಪರಿಶೀಲಿಸಿ ಲೈಸೆನ್ಸ್ ಕೊಡಲಾಗುವುದು. ಲೈಸೆನ್ಸ್ ಕೊಟ್ಟಲ್ಲಿ ಹಿಂದಣ ಲೈಸೆನ್ಸ್ ಫೀಯನ್ನೂ ಕೇಳದೆ ಚಾಲ್ತೀ ಸಾಲಿನ ಹಣವನ್ನು ಮಾತ್ರ ಕೇಳಲಾಗುವುದು. (3) ಲೈಸೆನ್ಸ್ ಕೇಳಲು ಇಷ್ಟಪಡದೆ ಇರುವಜನರ ಅಥವಾ ಲೈಸೆನ್ಸ್ ಕೊಡಲಾಗದಿರುವ ಜನರ ಬಂದೂಕ ಮುಂತಾದವುಗಳನ್ನು ಮೊದಲೇ ಅತ್ಯಂತ ಸಮೀಪವಾದ ಪೋಲೀಸ್ ಸ್ಟೇಷನಿಗೆ ಒಪ್ಪಿಸಿಲ್ಲದಿದ್ದಲ್ಲಿ ಆ ರೀತಿ ಮಾಡಬೇಕೆಂದು ಕೇಳಲಾಗುವುದು. 30-11-1932 ಅಥವಾ ಆ ಮುಂಚೆ ಒಪ್ಪಿಸಿದವುಗಳ ವಿಚಾರದಲ್ಲಿ ಲೈಸೆನ್ಸ್ ಕೊಡದೆ ಹೋದವುಗಳನ್ನು ಮಾರಿ ಬಂದ ಹಣವನ್ನು ಆಯಾ ಜನರಿಗೆ ಕೊಡಲಾಗುವುದು. ನವಂಬರು ತಾ|| 30 ಕಳೆದ ತರುವಾಯ ಯಾವ ಮನುಷ್ಯನೇ ಆಗಲಿ ತಾನು ಲೈಸೆನ್ಸ್ ಪಡೆಯಬೇಕಾದುದು ನಿಬಂಧನೆಗಳ ಪ್ರಕಾರ ಅವಶ್ಯಕವಾಗಿರುವಂಥ ಬಂದೂಕ ಮುಂತಾದವುಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವುದಾಗಿ ಕಂಡುಬಂದರೆ ಆತನು ಪ್ರಾಸಿಕ್ಯೂಷನ್ ವ್ಯವಹರಣೆಗೆ ಗುರಿಯಾಗಬೇಕಾಗುವುದು. ಆದರೆ ಮೈಸೂರು ಸಂಸ್ಥಾನದಲ್ಲಿಲ್ಲದೆ ಇದ್ದ ಕಾರಣದಿಂದ ಅಥವಾ ಮತ್ತಾವುದಾದರೂ ಸಮರ್ಪಕವಾದ ಕಾರಣದಿಂದ ಈಗಿನ ಹುಕುಂ ಪ್ರಕಾರ ನಡೆಯಲು ತಪ್ಪಿದ ಮನುಷ್ಯನ ವಿಷಯದಲ್ಲಿ ಈ ವಾಯಿದೆಯನ್ನು ಹೆಚ್ಚಿಸಿಕೊಡಲಾಗುವುದು.

ಸತ್ಯಾಗ್ರಹಸಮರವಾರ್ತೆ.

ನವೆಂಬರ್ 6 ನೇ ತಾರೀಖಿನ ದಿವಸ ಪಾಟ್ನಾ ಪೋಲೀಸರು 9 ಮನೆಗಳನ್ನು ಜಪ್ತುಮಾಡಿ ಅಲ್ಲಿ ದೊರೆತ ಅನೇಕ ಕಾಗದಪತ್ರಗಳನ್ನು ತಮ್ಮ ವಶಪಡಿಸಿಕೊಂಡರು. ಕೆಲವು ಬಂಗಾಲೀ ಯುವಕರು ದಸ್ತಗಿರಿ ಮಾಡಲ್ಪಟ್ಟರು.

ಜಮೆಯತ್-ಉಲ್-ಉಲೇಮಾ ಸಂಘದ ಮತ್ತು ಪ್ರಾವಿನ್ಷಿಯಲ್ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಮೌಲಾನಾ ಮಹಮುದ್ ಮಿಯಾರ್‌ರವರು ಸಂಯುಕ್ತ ಅಧಿಸತ್ಯಕ್ಕೆ ಸೇರಿದ ಮುರಾದಾಬಾದಿನಲ್ಲಿ ಜುಮ್ಮಾ ಮಶೀತಿಯ ಹತ್ತಿರ ಭಾಷಣಮಾಡಿ ಬಹಿರಂಗ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದ ಮೇಲೆ ಕೆಲವು ಜನ ಸ್ವಯಂಸೇವಕರ ಸಮೇತರಾಗಿ ದಸ್ತಗಿರಿ ಮಾಡಲ್ಪಟ್ಟರು.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾದ ಶ್ರೀ ಲಾಲ್‌ಜಿ ಮೆಹರೋತ್ರಾರವರು ಇದೇ ನವಂಬರು 5 ನೇ ತಾರೀಖಿನ ದಿವಸ ಅಲಹಾಬಾದಿನಲ್ಲಿ ದಸ್ತಗಿರಿಮಾಡಲ್ಪಟ್ಟರು. ಇವರ ದಸ್ತಗಿರಿಗಾಗಿ ಮುಂಬಯಿಯಿಂದ ವಾರೆಂಟು ಬಂದಿತ್ತು. ಪೋಲೀಸ್ ಸೂಪರಿಂಟೆಂಡೆಂಟರಾದ ಖಾನ್ ಬಹದ್ದೂರ್ ಅಕಾಂಕುರ್ಷೀರವರು ಶ್ರೀ ಲಾಲಜಿಯವರ ಮನೆಗೆ ಬಂದು ಅವರನ್ನು ಹೊರಕ್ಕೆ ಕರೆದು ದಸ್ತಗಿರಿ ಮಾಡಿದರು.

ಕಳೆದ ಜುಲೈ ತಿಂಗಳಲ್ಲಿ ಸೋಲಾಪುರದಲ್ಲಿ ಸೇರಿದ್ದ ಮಹಾರಾಷ್ಟ್ರ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರೆಂಬ ಕಾರಣದಮೇಲೆ 47 ಜನರು ಕಾರಾಗೃಹವಾಸಿಗಳಾಗಿದ್ದರು. ಇವರನ್ನೆಲ್ಲಾ ಬಿಡುಗಡೆಮಾಡಬೇಕೆಂದು ಠಾಣೆಯ ಸೆಷನ್ಸ್‌ಜಡ್ಜರವರು ಮಾಡಿದ್ದ ಶಿಫಾರಸನ್ನು ಹೈಕೋರ್ಟ ಜಡ್ಜರು ಒಪ್ಪಿಕೊಂಡದ್ದರಿಂದ ಸದರಿ 47 ಜನರೂ ನವಂಬರ್ 7 ನೇ ತಾರೀಖಿನ ದಿವಸ ಬಿಡುಗಡೆಮಾಡಲ್ಪಟ್ಟರು.

ಇದೇ ನವೆಂಬರ್ 9 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಉಪ್ಪಿನ ಸತ್ಯಾಗ್ರಹವನ್ನಾಚರಿಸಿದುದಕ್ಕಾಗಿ ಇಬ್ಬರು ಸ್ವಯಂಸೇವಕರೂ, ಔಷದ ಅಂಗಡಿಗಳನ್ನು ಪಿಕೆಟಿಂಗ್ ಮಾಡಿದುದಕ್ಕಾಗಿ 7 ಜನ ಸ್ವಯಂಸೇವಕರೂ, ಸೈಕಲ್ ಅಂಗಡಿಯನ್ನು ಪಿಕೆಟಿಂಗ್ ಮಾಡಿದುದಕ್ಕಾಗಿ ಒಬ್ಬನೂ, ಕೋಟೆಪ್ರದೇಶದಲ್ಲಿ ದಿನಸಿ ಅಂಗಡಿಯನ್ನು ಪಿಕೆಟಿಂಗ್ ಮಾಡಿದುದಕ್ಕಾಗಿ ಮತ್ತೊಬ್ಬನೂ ದಸ್ತಗಿರಿ ಮಾಡಲ್ಪಟ್ಟರು.

ಜಮೆಯತ್-ಉಲ್-ಉಲೇಮಾಸಂಘದವರು ನವಂಬರ್ 4 ನೇ ತಾರೀಖಿನ ದಿವಸ ಬಹಿರಂಗಮೆರವಣಿಗೆಯನ್ನು ಹೊರಡಿಸಿದಾಗ ಪೋಲೀಸರು ಗುಂಪನ್ನು ಲಾಠಿಗಳಿಂದ ಚದರಿಸಿ ಅವರಲ್ಲಿ 12 ಜನರನ್ನು ದಸ್ತಗಿರಿ ಮಾಡಿದರು.

ನವೆಂಬರ್ 4 ನೇ ತಾರೀಖಿನ ದಿವಸ ಪೇಷಾವರಿಗೆ ಸೇರಿದ ಸರ್ದಾರ್ ಪೋಲೀಸ್ ಸ್ಟೇಷನ್ನಿನಲ್ಲಿ ಠೋಲಿಯು ಕಸವನ್ನು ಗುಡಿಸುತ್ತಿರುವಾಗ್ಯೆ ಕೆಲವು ಸಿಡಿಮದ್ದಿನ ಗುಂಡುಗಳು ಸಿಡಿದು ಅವನಿಗೂ ಒಬ್ಬ ಪೋಲೀಸ್ ಜವಾನನಿಗೂ ಗಾಯಗಳಾದವು. ಸರಕಾರದವರು ಠಾಣೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ತನಿಖೆಕ್ರಮಗಳನ್ನು ಜರುಗಿಸಿರುವರು.

ವರ್ತಮಾನಸಂಗ್ರಹ

ನಾಗಪುರದ ಹಂಸಾಪುರಿಯಲ್ಲಿ ಒಂದು ಮೇಕೆಯ ಗರ್ಭದಲ್ಲಿ ಮನುಷ್ಯಾಕಾರದ ಒಂದು ಶಿಶುವು ಜನಿಸಿರುವುದಂತೆ!

ಮೌಲಾನಾಷೌಕತ್‌ಅಲಿಯವರು ಇದೇ ನವೆಂಬರು 7 ನೇ ತಾರೀಖಿನ ದಿವಸ 'ವಿಕ್ಟೋರಿಯಾ' ಎಂಬ ಜಹಜಿನಲ್ಲಿ ಅಮೇರಿಕೆಗೆ ಪ್ರಯಾಣಮಾಡಿದರು.

ದುಂಡುಮೇಜಿನ ಪರಿಷತ್ತುಗಳ ಸಲುವಾಗಿ ಇದುವರೆಗೆ 19,50,000 ಪೌಂಡುಗಳು ವೆಚ್ಚವಾಗಿರುವುವು. ಇದರ ಪೈಕಿ 71,000 ಪೌಂಡುಗಳು ಬ್ರಿಟಿಷ್ ಸರ್ಕಾರಕ್ಕೂ, ಉಳಿದ ಹಣವು ಹಿಂದೂದೇಶದ ಮೇಲೂ ಬಿದ್ದಿರುವುದು.

ಮುಂಬಯಿ ಪೌರಸಭೆಗೆ 1933-34 ನೇ ವರ್ಷದ ಆಯವ್ಯಯದಲ್ಲಿ 13 ಲಕ್ಷ ರೂಪಾಯಿಗಳು ನಷ್ಟವುಂಟಾಗುವುವಂತೆ! ಈ ನಷ್ಟವನ್ನು ಪರಿಹರಿಸಿಕೊಳ್ಳಲು ಪೌರಸಭೆಯವರು ನೀರಿನ ತೆರಿಗೆಯನ್ನು ಹೆಚ್ಚಿಸಬೇಕೆಂದು ಆಲೋಚಿಸುತ್ತಿರುವರು.

ಲಾಹೋರಿನ ರಾಜದ್ರೋಹಕರವಾದ ಮೊಕದ್ದಮೆಯಲ್ಲಿ ಸರ್ಕಾರದ ಪಕ್ಷವನ್ನು ವಹಿಸಿ ಸಾಕ್ಷಿಯನ್ನು ಹೇಳಿದ ಶ್ರೀಯುತ ಫಣೀಂದ್ರಘೋಷ್‌ರವರನ್ನು ಭಟಿಯಾ ಡಿಸ್ಟ್ರಿಕ್ಟಿನಲ್ಲಿ ಯಾರೋ ಕತ್ತಿಯಿಂದ ತಿವಿದರೆಂದು ತಿಳಿದುಬಂದಿದೆ.

ಇದೇ ನವೆಂಬರ್ 9 ನೇ ತಾರೀಖಿನಿಂದ ವೈಸರಾಯರಿಗೆ ಮಲೇರಿಯಾ ಜ್ವರವು ಪ್ರಾಪ್ತವಾಗಿರುವುದರಿಂದ ಸದ್ಯಃ ಅವರು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವರು. ಒಂದು ವಾರವು ಕಳೆಯುವವರೆಗೂ ಅವರು ಯಾವ ಕಾರ್ಯದಲ್ಲಿಯೂ ಭಾಗವಹಿಸುವುದಿಲ್ಲ.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ರೂಸ್‌ವೆಲ್ಟರವರು ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಹಿಂದಿನ ಪ್ರೆಸಿಡೆಂಟರಾಗಿದ್ದ ಹೂವರ್‌ರವರು ಸಂತೋಷದಿಂದ ತಮ್ಮ ಪರಾಜಯವನ್ನು ಒಪ್ಪಿಕೊಂಡು ರೂಸ್‌ವೆಲ್ಟರವರಿಗೆ ಶುಭಸಂದೇಶವನ್ನು ಕಳುಹಿಸಿರುತ್ತಾರೆ.

ಅಮೇರಿಕೆಗೆ ಸೇರಿದ ಕ್ಯೂಬಾನಗರದಲ್ಲಿ ಗಂಟೆಗೆ 200 ಮೈಲುಗಳ ವೇಗದಲ್ಲಿ ಬಿರುಗಾಳಿಯೂ, ಅಪಾರ ಮಳೆಯೂ ಬಂದುದರಿಂದ ಅನೇಕ ಕಟ್ಟಡಗಳು ನೆಲಸಮವಾದುವು. 25 ಜನರು ಮೃತಪಟ್ಟರು. ಇದೇ ಮರಣದಮೇಲೆ ಕಾಮಗ್ವೇನಗರದಲ್ಲಿ 300 ಜನರು ಘಾತಪಟ್ಟಿರುವರಂತೆ!

ಇದೇ ನವೆಂಬರ್ 5 ನೆಯ ತಾರೀಖಿನ ದಿವಸ ಜಪಾನ್‌ದೇಶದ 60 ಜನ ದರೋಡೆಕೋರರು ದಕ್ಷಿಣ ಮಂಚೂರಿಯಾ ರೈಲ್ವೇಕಂಪನಿಯ ಹುಪಿಂಗ್‌ವೈ ಎಂಬ ಸ್ಟೇಷನ್ನನ್ನು ಮುತ್ತಿ ಅಲ್ಲಿದ್ದ 3 ಜನ ರೈಲ್ವೇ ಅಧಿಕಾರಿಗಳನ್ನು ಕೊಂದು ನಿಲ್ದಾಣದಲ್ಲಿದ್ದ ಜನರನ್ನು ಬೇವಸಹಿತ ಸುಟ್ಟುದಲ್ಲದೆ ಸ್ಟೇಷನ್ನಿನ ಕಟ್ಟಡಕ್ಕೂ ಬೆಂಕಿಯನ್ನು ಹಚ್ಚಿ ಪರಾರಿಯಾದರು.

ಮುಂಬಯಿಯ ಸರ್ ಪುರುಷೋತ್ತಮದಾಸ್ ಠಾಕೂರದಾಸರವರು ದುಂಡುಮೇಜಿನ ಪರಿಷತ್ತಿಗೆ ಹೋದರೆಂಬ ಕಾರಣದಮೇಲೆ ಇಂಡಿಯನ್‌ಮರ್ಚಂಟ್ಸ್ ಛೇಂಬರಿನವರು ಅವರ ಬಗ್ಗೆ ಅವಿಶ್ವಾಸದ ಠರಾವನ್ನು ಪಾಸುಮಾಡಿದರು. ಇದರಿಂದ ಅಸಮಾಧಾನಹೊಂದಿದ ಸರ್ ಪುರುಷೋತ್ತಮದಾಸರು ಹಾಗೂ ಇನ್ನೂ 15 ಜನ ಪ್ರಮುಖ ಸದಸ್ಯರು ಸದರಿ ಛೇಂಬರಿನ ಕಾರ್ಯಕಾರಿಮಂಡಲತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಇದೇ ನವೆಂಬರ್ 7 ನೆಯ ತಾರೀಖಿನ ದಿವಸ ಅಹಮದಾಬಾದಿನ ಪೋಲೀಸ್ ಸಾರ್ಜಂಟ್ ಹೂಸ್ಟನ್ ಎಂಬಾತನು ರೆಸಿಡೆನ್ಷಿಯಲ್ ಕ್ವಾರ್ಟರ್ಸಿನಲ್ಲಿದ್ದ ಇನ್ಸ್‌ಪೆಕ್ಟರ್ ಗ್ರೀನ್ ಎಂಬುವವನನ್ನು ಗುಂಡಿನಿಂದ ಹೊಡೆದು ಕೊಂದನೆಂದೂ, ಅನಂತರ ಕಾಂಪೌಂಡಿಗೆ ಬಂದು ಅಲ್ಲಿಯೂ ಮನಸ್ಸಿಗೆ ಗುಂಡುಗಳನ್ನು ಹಾರಿಸಿ 3 ಜನರಿಗೆ ಗಾಯಪಡಿಸಿದನೆಂದೂ ತಿಳಿದುಬಂದಿದೆ. ಪೋಲೀಸರು ಹೂಸ್ಟನ್ನನ್ನು ದಸ್ತಗಿರಿ ಮಾಡಿ ವಿಚಾರಣೆ ನಡೆಯಿಸುತ್ತಿರುವರು.

ಬಳ್ಳಾರಿ ಟೌನ್ ನಿವಾಸಿಗಳಾದ ಮ|| ರಾ|| ಎಚ. ರೆಡ್ಡಿ ಮಹಾಬಲೇಶ್ವರಪ್ಪನವರು ಬಳ್ಳಾರಿ ಡಿ|| ಬೋರ್ಡ್ ಪ್ರೆಸಿಡೆಂಟರಾಗಿಯೂ, ಹೊಸಪೇಟೆ ಟೌನ್ ನಿವಾಸಿಗಳಾದ ಮ|| ರಾ|| ವಕೀಲ್ ಪಿ. ಉದ್ದಾನಯ್ಯನವರು ವೈಸ್‌ಪ್ರೆಸಿಡೆಂಟರಾಗಿಯೂ, ಹಡಗಲಿ ತಾಲೂಕು ಬೋರ್ಡಿಗೆ ಮೋರಿಗೇರಿ ಮ|| ರಾ|| ಭಾವಿಲಿಂಗಪ್ಪನವರು ಪ್ರೆಸಿಡೆಂಟರಾಗಿಯೂ, ಮ|| ರಾ|| ಕತ್ತಿನರಡಿ ಮಲ್ಲನಗೌಡರು ವೈಸ್ ಪ್ರೆಸಿಡೆಂಟರಾಗಿಯೂ, ಹರಪನಹಳ್ಳಿ ತಾಲೂಕು ಬೋರ್ಡಿಗೆ ಕಂಚಿಕೇರಿ ಮ|| ರಾ|| ಕೆಂಚನಗೌಡರು ಪ್ರೆಸಿಡೆಂಟರಾಗಿಯೂ, ಮ|| ರಾ|| ಕುರುವತ್ತಿ ಚಿಕ್ಕಚನ್ನಪ್ಪನವರು ವೈಸ್ ಪ್ರೆಸಿಡೆಂಟರಾಗಿಯೂ, ಚುನಾಯಿಸಲ್ಪಟ್ಟಿದ್ದಾರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

ಶ್ರೀಮತಿ ಕಮಲಾನೆಹರೂರವರಿಗೆ ಕೆಲವು ದಿವಸಗಳಿಂದಲೂ ಕಾಯಿಲೆಯು ಹೆಚ್ಚಾಗಿರುತ್ತದೆ. ಕಲ್ಕತ್ತೆಯ ಮಿ|| ಬಿದನಚಂದ್ರರಾಯ್ ಮತ್ತು ಲಕ್ನೋದ ಡಾ|| ಅತಲ್‌ರವರು ಶ್ರೀಮತಿಯವರನ್ನು ಪರೀಕ್ಷಿಸಿ ಅವರಿಗೆ ಕೆಲವು ವಾರಗಳಿಂದಲೂ ಇದೇ ರೀತಿ ಹೃದಯ ಸಂಬಂಧವಾದ ಕಾಯಿಲೆಯು ಪ್ರಾಪ್ತವಾಗಿರುವದೆಂದೂ, ಈ ಸಂಬಂಧವಾಗಿ ಅವಶ್ಯಕವಾದ ಪರೀಕ್ಷೆಗಳನ್ನು ನಡೆಸುವದಕ್ಕಾಗಿ ದೇಹಸ್ಥಿತಿಯು ಸ್ವಲ್ಪ ಉತ್ತಮವಾದ ಕೂಡಲೇ ಅವರನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಬೇಕಾಗಿರುವದೆಂದೂ, ವಿಶೇಷ ಕಳವಳಕ್ಕೆ ಕಾರಣವಿಲ್ಲವೆಂದೂ ಪ್ರಕಟಿಸಿರುತ್ತಾರೆ. ಇದೇ ಕಾರಣಕ್ಕಾಗಿ ಸರಕಾರದವರು ಪಂಡಿತ ಜವಾಹರಲಾಲನೆಹರೂರವರನ್ನು ಕಾರಾಗೃಹದಿಂದ ಬಿಡುಗಡೆ ಮಾಡಬಹುದೆಂದು ಅನೇಕರು ನಿರೀಕ್ಷಿಸುತ್ತಿರುವರು.

ಶ್ರೀ|| ಸುಭಾಷಚಂದ್ರಬೋಸರವರು ಇದೇ ನವಂಬರ್ 5 ನೇ ತಾರೀಖಿನ ದಿವಸ 'ಭವಾಲಿ ಸ್ಯಾನಿಟೋರಿಯಂ' ನಿಂದ ಹೈದರಾಬಾದಿನಲ್ಲಿರುವ ತಮ್ಮ ಮಿತ್ರರೊಬ್ಬರಿಗೆ ಈ ಕೆಳಗೆ ಕಂಡಪತ್ರವನ್ನು ಬರೆದಿರುವರು. ಇಲ್ಲಿಯ ಹವೆಯು ಚೆನ್ನಾಗಿರುವುದು. ಆದರೂ ನನ್ನ ದೇಹಸ್ಥಿತಿಯು ಉತ್ತಮವಾದಂತೆ ಕಾಣುವುದಿಲ್ಲ. ನನ್ನ ಸ್ಥಿತಿಯು ಇಲ್ಲಿಗೆ ಬಂದಾಗ ಹೇಗಿತ್ತೋ, ಈಗಲೂ ಹಾಗೆಯೇ ಇದೆ. ಜ್ವರದಬಾಧೆಯು ಕಡಿಮೆಯಾಗಿಲ್ಲ. ತೂಕವೂ ಹೆಚ್ಚಿಲ್ಲ. ಶ್ವಾಸಕೋಶಗಳಿಗಿಂತಲೂ ಗುಲ್ಮದ ಬಾಧೆಯು ಹೆಚ್ಚಾಗಿರುವುದೆಂದು ಡಾಕ್ಟರುಗಳು ಅಭಿಪ್ರಾಯಪಡುತ್ತಾರೆ. ಅವರ ಕಡೆಯ ಅಭಿಪ್ರಾಯವನ್ನು ನಾನು ಕಳವಳದಿಂದ ನಿರೀಕ್ಷಿಸುತ್ತಿರುವೆನು. ಸಾಧುವಾಸ್ವಾನಿಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ಅವರು ಅಮೇರಿಕೆಗೆ ಯಾವಾಗ ಹೊರಡುತ್ತಾರೆ? ಅಮೇರಿಕೆಯವರಿಗೆ ಹಿಂದೂಧರ್ಮದ ರಹಸ್ಯಗಳನ್ನು ಬೋಧಿಸುವುದು ಅತ್ಯಂತ ಪ್ರಶಂಸನೀಯವಾದ ಕಾರ್ಯವಾಗಿರುವುದು.

ಭರತಖಂಡದ ಸ್ಥಿತಿಗತಿಗಳನ್ನು ಖುದ್ದಾಗಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿದ್ದ ಇಂಡಿಯಾ ಲೀಗ್ ಡೆಲಿಗೇಷನ್ನಿನವರು ನವೆಂಬರ್ 17 ನೇ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಬೆಳೆಯಿಸಿದರು. ಅವರು ಮುಂಬಯಿಯಲ್ಲಿ ಹಡಗ ಹತ್ತುವುದಕ್ಕಿಂತ ಮುಂಚಿತವಾಗಿ ಈ ಕೆಳಗೆಕಂಡ ಹೇಳಿಕೆಯನ್ನು ಕೊಟ್ಟಿರುತ್ತಾರೆ. 'ಈ ದೇಶದಲ್ಲಿ ಸಂಚರಿಸುವಾಗ ನಾವು ಹೆಚ್ಚಿನಕಾಲವನ್ನು ಹಳ್ಳಿಗಳಲ್ಲಿ ಕಳೆದೆವು. ನಗರಗಳಲ್ಲಿ ಎಲ್ಲ ಪಂಗಡಗಳ ಪ್ರತಿನಿಧಿಗಳನ್ನೂ, ಮುಖಂಡರನ್ನೂ ಹಾಗೂ ಸರಕಾರೀ ಅಧಿಕಾರಿಗಳನ್ನೂ ಕಂಡು ಸಂಭಾಷಿಸಿದೆವು. ಸ್ವರಾಜ್ಯದಲ್ಲಿ ಯಾರುಯಾರು ಎಷ್ಟೆಷ್ಟು ಅಧಿಕಾರಗಳನ್ನು ಹೊಂದಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಾದರೂ ಆರ್ಡಿನೆನ್ಸಿನ ರಾಜ್ಯಭಾರವನ್ನು ಸರ್ವರೂ ಏಕವಾಕ್ಯದಿಂದ ಖಂಡಿಸುವರು. ಸ್ವರಾಜ್ಯವನ್ನು ಬಹುಜನ ಮುಸಲ್ಮಾನರು ವಿರೋಧಿಸುವರೆಂಬುದು ತಪ್ಪು. ಕಾಂಗ್ರೆಸ್ಸಿನ ಸಲಹೆ ಮತ್ತು ಸಹಕಾರಗಳಿಲ್ಲದೆ ಭರತಖಂಡದ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನವು ವಿಫಲವಾಗುವುದು. ಮೂರನೇ ಪರಿಷತ್ತು ಯಶಸ್ವಿಯಾಗಿ ನಡೆಯುವುದೆಂದು ನಾವು ಎಂದೂ ಒಪ್ಪುವದಿಲ್ಲ.

[3 ನೆಯ ಪುಟದಿಂದ ಮುಂದುವರಿದುದು.]

ವಂತೆ ಅದನ್ನು ಗೊತ್ತುಮಾಡತಕ್ಕದ್ದು. ಎರಡನೆಯದು, ಯಾವ ಪ್ರಾಂತ್ಯಗಳಲ್ಲಿ ಮುಸ್ಲಿಮರು ಮೈನಾರಟಿಯಲ್ಲಿರುವರೋ ಅಲ್ಲೆಲ್ಲಾ ಅದೇ ತರಹದ ಸೇಫ್‌ಗಾರ್ಡುಗಳನ್ನು ಬೇಡುವಂತೆ ಮುಸ್ಲಿಮರಿಗೆ ಹಕ್ಕುಬಾಧ್ಯತೆ ಇರತಕ್ಕದ್ದು. ಮುಸ್ಲಿಮರು ಮುಂದಿಟ್ಟ ಎರಡನೇ ಷರತ್ತಿಗೆ ಹಿಂದೂ ಮಹಾಸಭೆಯವರು ಅತ್ಯಂತ ವಿರೋಧಿಗಳಾಗಿದ್ದಾರೆ. ಸಿಖ್ ಜನಾಂಗದವರಿಗೆ ಯಾವುದೇ ಸೇಫ್‌ಗಾರ್ಡುಗಳನ್ನು ಕೊಡಲು ಹಿಂದೂ ಮಹಾಸಭೆಯವರು ವಿರೋಧಿಸುವುದಿಲ್ಲ. ಪಂಜಾಬಿನಲ್ಲಿ ಸಿಖ್ಖರ ಸಮಸ್ಯೆಯು ವಿಚಿತ್ರತರವಾಗಿರುವುದೆಂದೂ ಇತರ ಪ್ರಾಂತ್ಯಗಳಲ್ಲಿರುವ ಮೈನಾರಟಿಸಂಗಡದವರಿಗೆ ಸೇಫ್‌ಗಾರ್ಡುಗಳನ್ನು ಕೊಡುವುದು ಅಕ್ರಮವಾಗುವುದೆಂದೂ ಮಹಾಸಭೆಯವರು ಹೇಳಿದರು. ವಿಧವಿಧದ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಯೋಗ್ಯವಾದ ಒಂದು ಏರ್ಪಾಟನ್ನು ರಚಿಸಲು ಪ್ರಯತ್ನಗಳು ನಡೆಸಲ್ಪಡುತ್ತಿವೆ.

ಸಿಂಧ್ ಹಿಂದೂಗಳು ಮುಂದಿಟ್ಟ ಸೇಫ್‌ಗಾರ್ಡುಗಳ ಬೇಡಿಕೆಗಳನ್ನು ಸಿಂಧ್ ಮುಸ್ಲಿಮರು ಪರ್ಯಾಲೋಚಿಸುವುದಾಗಿಯೂ ಆದರೆ ಸಿಂಧ್ ಪ್ರತ್ಯೇಕದ ಅಂಶವನ್ನು ಯಾವ ಷರತ್ತೂ ಇಲ್ಲದೆ ಹಿಂದೂಗಳು ಒಪ್ಪಬೇಕೆಂದೂ ಅವರು ವಚನಕೊಟ್ಟಿದ್ದರು. ಹಿಂದೂಗಳು ಪ್ರತ್ಯೇಕಿಸುವ ತತ್ತ್ವಕ್ಕೆ ಒಪ್ಪಿ, ಎರಡು ಷರತ್ತುಗಳನ್ನು ಮುಂದಿಟ್ಟರು. ಮೊದಲನೆಯದು ಕೇಂದ್ರದಲ್ಲಿ ಜವಾಬ್ದಾರಿಯನ್ನು ಸ್ಥಾಪಿಸುವ ಸಮಯದಲ್ಲಿಯೇ ಏಕಕಾಲದಲ್ಲಿ ಸಿಂಧ್ ಪ್ರತ್ಯೇಕವಾಗತಕ್ಕದ್ದು. ಸಿಂಧ್‌ಪ್ರಾಂತ್ಯವು ತನ್ನ ಕಾಲಮೇಲೆ ನಿಲ್ಲುವಂತೆ ಮಾರ್ಗಗಳನ್ನು ಸೂಚಿಸಲು ಒಂದು ಕಮಿಟಿಯನ್ನು ನಿಯಮಿಸತಕ್ಕದ್ದು ಮತ್ತು ಏರ್ಪಾಟನ್ನೆಲ್ಲಾ ಸಿಂಧ್ ಚುನಾವಣೆದಾರರ ಮುಂದೆ ಅಂಗೀಕಾರಕ್ಕಾಗಲೀ ಅಥವಾ ತಿರಸ್ಕಾರಕ್ಕಾಗಲೀ ಇಡತಕ್ಕದ್ದು.

ಸಿಂಧ್-ಮುಸ್ಲಿಮರ ಮುಖಂಡರಾದ ಮಿ|| ಅಬ್ದುಲ್‌ಮಜೀದ್‌ರವರು ಈ ದಿನದ ಚರ್ಚೆಯ ಮಧ್ಯೆ ಹಿಂದೂಗಳು ಬೇಡಿದ ಸೇಫ್‌ಗಾರ್ಡುಗಳ ಬಗ್ಗೆ ತಾವು ಹಂಗಾಮಿಯಾಗಿ ಇತ್ತ ಅನುಮತಿಯನ್ನು ವಾಪಸು ತೆಗೆದುಕೊಳ್ಳುವುದಾಗಿಯೂ, ಆದ್ದರಿಂದ ಸಿಂಧ್ ಪ್ರಶ್ನೆಯನ್ನು ಪುನಃ ವಿವರವಾಗಿ ಚರ್ಚಿಸಬೇಕಾಗಿರುವುದೆಂದೂ ಹೇಳಿದುದಾಗಿ ಗೊತ್ತಾಗಿದೆ. ಇದಾದನಂತರ ಸಿಂಧ್ ಪ್ರತ್ಯೇಕವಾಗಲೇಕೂಡದೆಂದೂ, ಸಿಂಧ್ ಹಿಂದೂಗಳು ಹೇಳಿದರೆಂದು ತಿಳಿದುಬಂದಿದೆ. ಮಿ|| ಅಬ್ದುಲ್‌ಮಜೀದ್‌ರವರು ತಮ್ಮ ವರ್ತನದ ಬಗ್ಗೆ ಸಮಾಧಾನಹೇಳಿ, ತಾವು ಲಕ್ನೋ ಸಮ್ಮೇಳನದ ಅನುಸಾರವಾಗಿ ಈ ಸಮ್ಮೇಳನದಲ್ಲಿ ಭಾಗಿಯಾಗುತ್ತಿರುವುದಾಗಿಯೂ, ಲಕ್ನೋ ಠರಾವಿನಲ್ಲಿ ಕಂಡುಬರುವ ಅಂಶಗಳ ಬಗ್ಗೆ ಒಪ್ಪಿಗೆಯಾಗದೇ ಇರುವ ಪರ್ಯಂತರ ಚುನಾವಣೆ ಅಂಶವನ್ನು ಅವರು ಚರ್ಚಿಸಲು ಅನರ್ಹರೆಂದೂ ತಿಳಿಸಿದರು.

ಬಂಗಾಲದ ಸಮಸ್ಯೆಯು ಪೂರ್ತಿ ತೀರ್ಮಾನವಾಗಿದೆ. ಆದರೆ ಇದರ ಬಗ್ಗೆಯೂ ಒಂದು ಅಡಚಣೆಯು ಪ್ರಾಪ್ತವಾಗಿದೆ. ಬಂಗಾಲದ ಆಂಗ್ಲೇಯರಿಗೆ ಕೊಟ್ಟಿರುವ ೧೧ ಸ್ಥಾನಗಳ ಪೈಕಿ ನಾಲ್ಕನ್ನು ಬಿಟ್ಟುಕೊಡಬೇಕೆಂದು ಹಿಂದೂಗಳು ಮತ್ತು ಮುಸ್ಲಿಮರು ಅವರನ್ನು ಒಪ್ಪಿಸುವುದಾಗಿ ಹೇಳಿದುದು ಯಶಸ್ವಿಯಾಗುವುದೋ ಇಲ್ಲವೋ ಎಂಬ ಸಂಶಯವುಂಟಾಗಿದೆ.

ಮಧ್ಯಾಹ್ನ ಪುನಃ ಕಮಿಟಿಯು ೫ ಘಂಟೆಗಳ ಕಾಲ ಸೇರಿ ಪಂಜಾಬು ಪ್ರಶ್ನೆಯ ಬಗ್ಗೆ ಚರ್ಚಿಸಿತು.

ಮುಂಬಯಿ ಪೋಲೀಸ್ ಕಮಿಷನರವರು ಪುನಃ ತಾವು ಮತ್ತೊಂದು ಆರ್ಡರ್ ಮಾಡುವವರೆಗೂ ಪಂಡಿತ ಗೋವಿಂದಕಾಂತ ಮಾಳವೀಯರವರು ಮುಂಬಯಿಗೆ ಬರಕೂಡದೆಂದೂ ಅಪ್ಪಣೆಯನ್ನು ಮಾಡಿರುತ್ತಾರೆ. ಪಂ|| ಗೋವಿಂದಕಾಂತರವರು ಅಲಹಾಬಾದಿನ ಸರ್ವಪಕ್ಷೀಯ ಸಮ್ಮೇಳನದಲ್ಲಿ ಭಾಗಿಗಳಾಗಿದ್ದಾಗ ಸ್ಥಳೀಯ ಪೋಲೀಸರು ಮುಂಬಯಿ ಪೋಲೀಸ್ ಕಮಿಷನರ ಆರ್ಡರನ್ನು ಪಂಡಿತರ ಮೇಲೆ ಜಾರಿ ಮಾಡಿದರು.

ಅಖೈರಾದ ಯಾವ ತೀರ್ಮಾನವೂ ಆಗಿಲ್ಲ. ಸಮ್ಮೇಳನದ ಕಾರ್ಯದರ್ಶಿಯಾದ ಪಂಡಿತ ಗೋವಿಂದಕಾಂತ ಮಾಳವೀಯರು ಈ ಕೆಳಗೆ ಕಂಡ ಹೇಳಿಕೆಯನ್ನು ಕೊಟ್ಟರು.

“ಸಮ್ಮೇಳನವು ನೇಮಕ ಮಾಡಿದ ಉಪಸಮಿತಿಯ ಅನೇಕ ಸದಸ್ಯರು ಅಲಹಾಬಾದನ್ನು ತಮ್ಮ ಸ್ವಂತ ಕಾರ್ಯದ ಸಲುವಾಗಿ ಬಿಟ್ಟಿದ್ದಾರೆ. ಆದರೆ ಒಪ್ಪಿಗೆಗೆ ಬಾರದಿದ್ದುದರ ಸಲುವಾಗಿ ಅಲ್ಲ. ಒಂದು ಸಣ್ಣ ಕಮಿಟಿಯು ಕೆಲಸವನ್ನು ನಡೆಸುತ್ತಿದೆ.”

ಡಾ|| ಮಹಮದುಲ್ಲಾ ಮತ್ತು ಪಂಡಿತ ಗೋವಿಂದಕಾಂತ ಮಾಳವೀಯರು ಮತ್ತೊಂದು ಹೇಳಿಕೆಯನ್ನು ಹೊರಡಿಸಿದ್ದಾರೆ. ಅದೇನೆಂದರೆ:—

“ಕೆಲವು ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಕೆಲವು ಸಮಾಚಾರಗಳು ಸರಿಯಾದವಲ್ಲ. ಅಧಿಕಾರಯುತವಾದದ್ದಲ್ಲ. ಗೌರವಯುತವಾದ ಒಪ್ಪಂದವುಂಟಾಗುವುದಕ್ಕೆ ಆ ಸಮಾಚಾರಗಳು ಅಪಾಯವನ್ನು ತಂದೊಡ್ಡುವವು. ಅಲ್ಲದೆ ಪ್ರತಿನಿಧಿಗಳಿಗೆ ಅವು ಅನ್ಯಾಯವನ್ನುಂಟುಮಾಡುವಂಥವಾಗಿವೆ. ಈಗ ನಡೆಯುತ್ತಿರುವ ಕಾರ್ಯಕ್ರಮಗಳು ಮತ್ತು ಅವುಗಳ ವಿಧಾನದ ದೆಸೆಯಿಂದ ಗಂಟೆಗಂಟೆಗೆ ಚರ್ಚೆಗಳು ಬೇರೆ ರೂಪವನ್ನು ಹೊಂದುತ್ತಿವೆ. ಆದಪ್ರಯುಕ್ತ ಅನವಶ್ಯಕವಾದ ಅಕ್ರಮವಾದ ಈ ತರಹ ಸುದ್ದಿಗಳನ್ನು ಪ್ರಕಟಿಸಲಾಗದು. ಈ ಪ್ರಕಾರ ಸುದ್ದಿಗಳಿಗೆ ಮಹಾಜನರು ಎಳ್ಳಷ್ಟೂ ಮಹತ್ತ್ವ ಕೊಡಕೂಡದೆಂದು ನಾವು ನಮ್ರತೆಯಿಂದ ಬೇಡುವೆವು.”

ಪಂಜಾಬಿನ ಸಮಸ್ಯೆಯು ಮುಸಲ್ಮಾನರಿಗೆ ೫೧ ಉಳಿದವರಿಗೆ ೪೯ ಸ್ಥಾನಗಳಮೇಲೆ ತೀರ್ಮಾನವಾಯಿತೆಂದು ಇತ್ತೀಚೆಗೆ ತಿಳಿದುಬಂದಿದೆ.

ಆರೋಗ್ಯ ಸೂತ್ರಗಳು.

1. ಸಾಧ್ಯವಾದಮಟ್ಟಿಗೆ ಬಯಲಿನಲ್ಲಿಯೇ ಕೆಲಸಮಾಡಿರಿ! ಬಯಲಿನಲ್ಲಿಯೇ ಆಟವಾಡಿರಿ! ಬಯಲಲ್ಲಿಯೇ ಮಲಗಿರಿ! ನೀವಿರುವ ಮನೆಗಳಲ್ಲಿ ಗಾಳಿಯು ಧಾರಾಳವಾಗಿ ಬೀಸುವುದಕ್ಕೆ ಅವಕಾಶವನ್ನು ಕಲ್ಪಿಸಿರಿ!

2. ನೀವು ಆರೋಗದೃಢಕಾಯರಾಗಿ ಬಾಳುವುದಕ್ಕೆ ಮಾತ್ರ ಭುಜಿಸಿರಿ! ಹಣ್ಣು, ಕಾಯಿ, ಸೊಪ್ಪಿನ ಜಾತಿಗಳು ಮುಂತಾಗಿ ಪ್ರಕೃತಿಸಿದ್ಧವಾದ ಆಹಾರ ಪದಾರ್ಥಗಳನ್ನು ವಿಶೇಷವಾಗಿಯೂ, ಬೇರೆಯವುಗಳನ್ನು ಮಿತವಾಗಿಯೂ ಸೇವಿಸಿರಿ! ಹಾಲನ್ನು ಮಿತಪ್ರಮಾಣದಲ್ಲಿ ಕುಡಿಯಿರಿ.

3. ಕನಿಷ್ಠಪಕ್ಷ ದಿನಕ್ಕೆ ಮೂರಾವರ್ತಿಯಾದರೂ ಜಲಮಲಗಳನ್ನು ವಿಸರ್ಜಿಸಿರಿ.

4. ದೇಹದಿಂದ ಚೆನ್ನಾಗಿ ಬೆವರು ಹೊರಡುವಂತೆ ಶರೀರವು ದಣಿಯುವವರೆಗೂ, ಪ್ರತಿದಿನವೂ ಅಂಗಸಾಧನೆ ಮಾಡಿರಿ! ಕುಳಿತುಕೊಳ್ಳುವಾಗಲೂ, ನಿಲ್ಲುವಾಗಲೂ, ಸಂಚರಿಸುವಾಗಲೂ, ಕೆಲಸಮಾಡುವಾಗಲೂ, ದೇಹವನ್ನು ನೆಟ್ಟಗೆ ನಿಲ್ಲಿಸಿ, ಎದೆಯನ್ನು ಸ್ವಲ್ಪ ಮುಂದಕ್ಕೆ ಚಾಚಿರಿ!

5. ನಿಮ್ಮನಿಮ್ಮ ಕೆಲಸಗಳನ್ನು ಅಡಿಗಡಿಗೆ ಬದಲಾಯಿಸಿಕೊಳ್ಳುತ್ತ, ಬೇರೆಬೇರೆವಿಧಗಳಾದ ಆಟಪಾಟಗಳಿಗೆ ಅನುಕೂಲಗಳನ್ನು ಏರ್ಪಡಿಸಿಕೊಳ್ಳುತ್ತ, ದೇಹಕ್ಕೆ ತಕ್ಕ ಪ್ರಮಾಣದಲ್ಲಿ ವಿಶ್ರಾಂತಿಯು ದೊರಕುವಂತೆಯೂ ಮಾಡಿಕೊಳ್ಳಿರಿ. ಮತ್ತು ಪ್ರತಿದಿನವೂ ಕೊನೆಯಪಕ್ಷ ಎಂಟು ಘಂಟೆಗಳ ಕಾಲವಾದರೂ ಸುಖವಾಗಿ ನಿದ್ರೆಮಾಡಿರಿ.

6. ನಿಮ್ಮ ದೇಹದ ಚರ್ಮವನ್ನು ಶುಚಿಯಾಗಿಟ್ಟುಕೊಳ್ಳಿರಿ! ಮತ್ತು ಅದನ್ನು ಬಿಸಿಲುಗಾಳಿಗಳಿಗೆ ಒಡ್ಡುವುದರ ಮೂಲಕವೂ, ಪ್ರತಿದಿನವೂ ತಣ್ಣೀರಿನಲ್ಲಿ ಸ್ನಾನಮಾಡುವುದರಮೂಲಕವೂ ಗಟ್ಟಿಯಾಗುವಂತೆ ಮಾಡಿರಿ.

7. ಸಾರಾಯಿ, ಹೊಗೇಸೊಪ್ಪು, ಮುಂತಾದ ಮಾದಕಪದಾರ್ಥಗಳನ್ನೂ, ಟೀ, ಕಾಫಿ, ಮುಂತಾದ ಸರ್ವಸಾಮಾನ್ಯವಾಗಿ ರೂಢಿಗೆ ಬಂದಿರುವ ಪಾನೀಯಗಳನ್ನೂ ಸೇವನೆಮಾಡಬೇಡಿರಿ!

8. ರೋಗಗಳ ಸೋಂಕು ತಗುಲದಂತೆ ಜಾಗರೂಕರಾಗಿರಿ.

9. ಅನುಕೂಲವಾದ ರೀತಿಯಲ್ಲಿ ಕಾಲಾನುಗುಣವಾಗಿ ಉಡುಪನ್ನು ಧರಿಸಿರಿ.

10. ಶಾಂತಿ, ತೃಪ್ತಿ, ಇಂದ್ರಿಯನಿಗ್ರಹ ಇವೇ ಮುಂತಾದ ಒಳ್ಳೆಯ ಗುಣಗಳನ್ನು ಆಚರಣೆಗೆ ತಂದು, ವ್ಯಸನ, ಆಯಾಸ, ಚಿಂತೆ ಮುಂತಾದ ದೇಹದ ಶಕ್ತಿಯನ್ನು ತಗ್ಗಿಸಿ ಕೃಶಪಡಿಸುವ ಮನೋಭಾವಗಳಿಗೆ ಆಸ್ಪದಕೊಡಬೇಡಿರಿ.

ಅನ್ನಪಾನಗಳಲ್ಲಿಯೂ, ಆಹಾರಗಳಲ್ಲಿಯೂ, ಬುದ್ಧಿ ಕಾರ್ಯದಲ್ಲಿಯೂ ಮಿತವಾಗಿರಬೇಕು. ಕ್ಲ್ಪಪ್ತವಾದ ಶಕ್ತಿಸಾಮರ್ಥ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದರಿಂದ, ಚೆನ್ನಾಗಿ ಕೆಲಸಮಾಡುವ ಶಕ್ತಿಯುಳ್ಳ ಸೂಕ್ಷ್ಮಯಂತ್ರವೇ ದೇಹವೆಂದು ಭಾವಿಸಿರಿ.

ಪ್ರಕೃತಿನಿಯಮಾನುಸಾರವಾಗಿ ಸಾಮಾನ್ಯರೀತಿಯಲ್ಲಿ ಜೀವನವನ್ನು ನಡೆಸುತ್ತ, ಸದಾಚಾರ ಸಂಪನ್ನರಾಗಿ ಬಾಳಿರಿ.

[illegible]”

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಾಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 50, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಪ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೆರಸಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೈಮುರಿಬಿಸಿ, ಕಣ್ಣಿಹಿಡಿತ, ಪಿತ್ತಲಾರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮುದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಪ ಕೆಮ್ಮು. ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಹ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇವುಗಳ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ “ಆರೋಗ್ಯಭಾಗ್ಯದ ನೀತಿಸೂತ್ರ” ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಿಪೂರಿನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.

[14]

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
” ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಜೋಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಶೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣಿ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ಅಳ ತೊಲಿಯ ೧ ಡಬ್ಬಿಗೆ ೫ ರೂಪಾಯಿ;! ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ. ಓದಿಕೊಳ್ಳಿರಿ.

ಬಂಜೆತನ, ಮುಟ್ಟುಕೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣಿಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಡಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಸ್ಪಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ನೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ. ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

52

ಮು. ಪೋ. **ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತದೆ. [illegible] ನೀರು ಮತ್ತು ಗಾಳಿಯ ವ್ಯತ್ಯಾಸದಿಂದ [illegible] ಆಹಾರವನ್ನಾದರೂ ಜೀರ್ಣಿಸಿ ರಕ್ತ ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಂದ [illegible] ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗದ ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಸನ್ನಿ, ಕೆಮ್ಮು, ಜ್ವರ, ಚೇಳ್ವಾತ, ಇಸ್ಪೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ [illegible] ಎದೆ ಕಟ್ಟುವಿಕೆ, ಉಬ್ಬಸ, [illegible] ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಫ ಕಟ್ಟಿಕೊಳ್ಳುವಿಕೆ [illegible] ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುತ್ತವೆ. [illegible] ತ್ವರಿತವಾಗಿ ಕ್ರಮವಾಗಿ ಕೊಡಬೇಕು. [illegible] ಈ ಮಾತ್ರೆಗಳು ಸರ್ವೋತ್ತಮವಾದುವು. ಅಮೂಲ್ಯವಾದ ಮತ್ತು ಅತ್ಯುತ್ಕೃಷ್ಟವಾದ ಮೂಲ ವಸ್ತುಗಳಿಂದ ಈ ಮಾತ್ರೆಗಳು [illegible] ರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ರೋಗಾವಾಸ್ಥೆಯನ್ನು [illegible] ಸೀಸೆಯು ನಮ್ಮಲ್ಲಿರುವ [illegible] ದಿವಸ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರ.

ಪ್ರತಿದಿವಸ ನಕಲಿ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನು ರಿಜಿಸ್ಟರಾದ ಟ್ರ್ಯಾಡ್ ಮಾರ್ಕ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[20]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
पंडित श्रीकाशीनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯ: ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[21] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ನವಂಬರ್ ೧೯೩೨ [ಸಂಚಿಕೆ ೨೮

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “ **ವೀರಶೈವರತ್ನ** ” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇನೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

೧೦ ನೆಯ ಉಪಾಧ್ಯಾಯರ ಸಮ್ಮೇಳನ, ಅರಸೀಕೆರೆ ತಾ|| ದಿಬ್ಬೂರು.

ಮೇಲ್ಕಂಡ ಸಮ್ಮೇಳನವು ತಾ|| 12-11-32 ನೇ ಶನಿವಾರ ಮಧ್ಯಾಹ್ನ 2 ಘಂಟೆಯಿಂದ ಸಾಯಂಕಾಲ 6 ಘಂಟೆಯವರೆಗೆ ದಿಬ್ಬೂರು ಗ್ರಾಮದ ಶ್ರೀರಾಮೇಶ್ವರ ದೇವಾಲಯದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಈ ಸಮ್ಮೇಳನಕ್ಕೆ ನಾನಾ ಕಡೆಗಳಿಂದ ಅನೇಕ ಜನ ಉಪಾಧ್ಯಾಯರು ದಯಮಾಡಿಸಿದ್ದರಲ್ಲದೆ ಕಣಕಟ್ಟೆ ಗ್ರಾಮದ ವೇ|| ರಾಮಶಾಸ್ತ್ರಿಗಳು ಮ|| ರಾ|| ಹರಿಕಥೆ ಕೃಷ್ಣದಾಸರು, ನೀಲಕಂಠಶಾಸ್ತ್ರಿಗಳು, ನೇಟಿವ್ ಪಂಡಿತ ಕಾಳಪ್ಪನವರು, ಕಸಬಾ ಶಾನುಭೋಗ್ ರಾಮಣ್ಣನವರು, ಬಿಟ್ಟೇನಹಳ್ಳಿ ಶಾ|| ಶ್ರೀಕಂಠಯ್ಯನವರು, ಶಾಮಣ್ಣಯ್ಯನವರು, ಶಾ|| ನಂಜಪ್ಪನವರೇ ಮೊದಲಾದ ದೊಡ್ಡಮನುಷ್ಯರು ಸಹ ಆಹ್ವಾನಿಸಲ್ಪಟ್ಟಿದ್ದರು. ಮತ್ತು ಗ್ರಾಮದ ಪಟೇಲ್ ದಾಸೇಗೌಡರು, ಮಾಡಾಳ್ ಚಿಕ್ಕಣ್ಣನವರು, ವೀರಬಸಪ್ಪನವರು, ಸಾ|| ಚನ್ನಬಸೆಟ್ಟರು, ವ್ಯಾಪಾರಿ ಚನ್ನಬಸವೇಗೌಡರು, ದೊಡ್ಡ ಯಜಮಾನ್ ಚೌಡಯ್ಯನವರು, ಯ|| ರಂಗೇಗೌಡರು, ಚೌಡಯ್ಯನ ಮರಿಯಪ್ಪನವರು, ಡಿ. ಸಿದ್ದಪ್ಪನವರು, ಎ. ಗವೀರಂಗೇಗೌಡರು, ಹು|| ತಿಮ್ಮಯ್ಯನವರು, ಬಿ. ತುಳಜಾರಾಯರು, ವಗೈರೆ ಗ್ರಾಮಪ್ರಮುಖರು ಸಹ ಆಗಮಿಸಿದ್ದರು. ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಸಭೆಯು ಪ್ರಾರಂಭವಾಯಿತು. ಸಭಾಪ್ರಾರಂಭದಲ್ಲಿ ಸ್ಕೂಲ್ ಬಾಲಕರಿಂದ ದೇವರ ಪ್ರಾರ್ಥನೆಯು ನಡೆದ ಮೇಲೆ ಮಾಸ್ಟರ್ ಎ. ಚನ್ನಪ್ಪನವರು ಈ ದಿನದ ಸಮ್ಮೇಳನಕ್ಕೆ ಕಣಕಟ್ಟೆ ವೇ|| ರಾಮಶಾಸ್ತ್ರಿಗಳು ಅಧ್ಯಕ್ಷರಾಗಬೇಕೆಂತಲೂ, ಶಾ|| ರಾಮಣ್ಣನವರು ಉಪಾಧ್ಯಕ್ಷರಾಗಬೇಕೆಂತಲೂ ಸಭಿಕರ ಪರವಾಗಿ ಪ್ರಾರ್ಥಿಸಿಕೊಂಡಿದ್ದರ ಮೇರೆ ಸದರಿ ಶಾಸ್ತ್ರಿಗಳು ಮತ್ತು ರಾಮಣ್ಣನವರು ಅಧ್ಯಕ್ಷಪದವಿಯನ್ನು ಅಲಂಕರಿಸಿದರು. ಕೂಡಲೆ ಸಭೆಯಲ್ಲಿ ಸಂತೋಷಸೂಚಕವಾದ ಕರತಾಡನಗಳು ಮಾಡಲ್ಪಟ್ಟವು. ಸಂಘದ ರಿಪೋರ್ಟನ್ನು ಸೆಕ್ರೆಟರಿಯವರು ಓದಿಹೇಳಿದರು. ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ನಡೆಯುವ ಸ್ಟೇಟ್ ಕಾನ್ಫರೆನ್ಸಿಗೆ ಈ ಸಮ್ಮೇಳನದಿಂದ ಡೆಲಿಗೇಟ್ಸುಗಳನ್ನು ಆರಿಸುವ ವಿಚಾರ ಉಪಾಧ್ಯಾಯರಲ್ಲಿ ಹೆಚ್ಚುಕಾಲ ಕರೆಸ್ಪಾಂಡೆನ್ಸ್ ನಡೆದು ಎಲೆಕ್ಷನ್ ಮೂಲಕ ಕಣಕಟ್ಟೆ ಸ್ಕೂಲ್ ಹೆ|| ಮಾಸ್ಟರ್ ಮ|| ರಾ|| ಶ್ರೀಕಂಠಯ್ಯನವರು ಮತ್ತು ಪಂಚನಹಳ್ಳಿ ಸ್ಕೂಲ್ ಹೆ|| ಮಾಸ್ಟರ್ ಮಲ್ಲಪ್ಪನವರು ಇವರುಗಳು ಚುನಾವಣೆಮಾಡಲ್ಪಟ್ಟನಂತರ ಕಲ್ಲುಗುಂಡಿ ಸ್ಕೂಲ್ ಮಾಸ್ಟರ್ ಹನುಮೇಗೌಡರು 3 ನೇ ವರುಷದ ತರಗತಿಯ ವಿದ್ಯಾರ್ಥಿಗಳಿಗೆ ಉದ್ಯೋಗದ ಮಹತ್ವವನ್ನು ಪದ್ಯರೂಪವಾಗಿ ಬೋಧಿಸಿದ್ದು ಕೇವಲ ಆನಂದವಾಗಿತ್ತು. ಹಿಂದಿನ ಸಮ್ಮೇಳನಗಳಲ್ಲಿ ತೀರ್ಮಾನಿಸಿದ್ದ ಕೆಲವು ಠರಾವುಗಳನ್ನು ಬದಲಾವಣೆಮಾಡಬೇಕೆಂದು ಪಂಚನಹಳ್ಳಿ ಸ್ಕೂಲ್‌ಮಾಸ್ಟರ್ ಮಲ್ಲಪ್ಪನವರು ಕೆಲವು ಉಪಾಧ್ಯಾಯರ ಪರವಾಗಿ ಸಮಂಜಸವಿಲ್ಲದ ಸಬೂಬುಗಳನ್ನು ಸಭೆಯಲ್ಲಿ ಚರ್ಚೆಮಾಡಿದ ವಿಚಾರದಲ್ಲಿ ಕಣಕಟ್ಟೆ ಸ್ಕೂಲ್ ಹೆ|| ಮಾಸ್ಟರ್ ಶ್ರೀಕಂಠಯ್ಯನವರು ದಿಬ್ಬೂರು ಸ್ಕೂಲ್‌ಮಾಸ್ಟರ್ ಎ. ಚನ್ನಪ್ಪನವರು, ಸಾತುಂಗೆರೆ ಹಿಂದೂಸ್ಥಾನಿ (ಉರ್ದು) ಸ್ಕೂಲ್ ಹೆ|| ಮಾಸ್ಟರು ಸಹ ಉಪಾಧ್ಯಾಯ ಸಹೋದರರೆಲ್ಲರೂ ನಿಷ್ಪಕ್ಷಪಾತದಿಂದ ಮೆಜಾರಿಟಿಯಲ್ಲಿ ತೀರ್ಮಾನಿಸಿರುವ ನಿರ್ಧಾರಗಳನ್ನು ಪುನಃ ಬದಲಾವಣೆ ಮಾಡುವುದು ಅಷ್ಟೇನೂ ತೃಪ್ತಿಕರವಾಗಿಲ್ಲವೆಂದೂ, ಸಾರ್ವಜನಿಕವಾಗಿ ಮಾಡಿರುವ ಠರಾವುಗಳನ್ನು ಪದೇಪದೇ ನಾವುಗಳೇ ಬದಲಾಯಿಸುತ್ತ ಹೋದರೆ ನಮ್ಮ ಉಪಾಧ್ಯಾಯ ಸಮಾಜದಲ್ಲಿ ಪರಸ್ಪರ ವಿರೋಧವುಂಟಾಗಿ ಕಾಲಕ್ರಮೇಣ ಸಂಘದ ಅಭ್ಯುದಯಕ್ಕೆ ಉತ್ತೇಜನವಿಲ್ಲದಂತಾಗುವುದರಿಂದ ಎಲ್ಲಾ ಉಪಾಧ್ಯಾಯರು ಏಕಮತ್ಯದಿಂದ ವರ್ತಿಸುತ್ತ ಈ ಸಮ್ಮೇಳನವು ಬಹು ದೀರ್ಘಕಾಲ ನಡೆಯುವಂತೆ ಪ್ರೋತ್ಸಾಹಿಸುವುದೇ ಪ್ರತಿಯೊಬ್ಬ ಉಪಾಧ್ಯಾಯರ ಆವಶ್ಯಕರ್ತವ್ಯವಾಗಿರುವದೆಂದೂ, ಇದನ್ನು ಸರ್ವರೂ ಆದರದಿಂದ ಅಂಗೀಕರಿಸಿ ಮುಂದೆ ನಡೆಯಬೇಕಾದ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸಬೇಕೆಂದೂ ಕೇವಲ ನಮ್ರಭಾವದಿಂದ ಪ್ರಸ್ತಾಪಿಸಿದ್ದನ್ನು ಅಧ್ಯಕ್ಷರು ಮತ್ತು ಸಭೆಯವರು ಸಹ ಅನುಮೋದಿಸಿದರು. ಅನಂತರ ನಮ್ಮನ್ನಾಳುವ ಮಹಾಪ್ರಭುಗಳವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಅಧ್ಯಕ್ಷರಿಗೆ ಪುಷ್ಪಹಾರಗಳು ಅರ್ಪಿಸಲ್ಪಟ್ಟು ಸಭೆಯವರಿಗೆಲ್ಲ ಫಲತಾಂಬೂಲಗಳು ನಡೆದಮೇಲೆ ಹರಿಕಥೆ ಕೃಷ್ಣದಾಸರು ಧ್ರುವಚರಿತ್ರೆಯನ್ನು ಕೀರ್ತಿಸಿ ಸರ್ವರನ್ನೂ ಸಂತೋಷಪಡಿಸಿದರು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಕೆ. ಲಕ್ಷ್ಮಯ್ಯಶೆಟ್ಟಿ.

ಸ್ವೀಕಾರ

ಶಿವಮೊಗ್ಗಾ ಡಿ|| ಹಾರ್ನಹಳ್ಳಿಯಲ್ಲಿರುವ ಶ್ರೀ ಶಿವಾನಂದ ರೈಸ್‌ಮಿಲ್ಲಿನಲ್ಲಿ ಶ್ರೀ ಧನಲಕ್ಷ್ಮೀಪೂಜಾ ಮತ್ತು ಗುರುಕೀರ್ತನ ಈ ಉಭಯಕಾರ್ಯಗಳು ನೆರವೇರಿದ ಸಮಯದಲ್ಲಿ ಕಾರ್ಯದರ್ಶಿಗಳಾದ ಮ|| ರಾ|| ಎನ್. ಎಚ್. ವಿರುಪಣ್ಣನವರು ಮತ್ತು ಮುದ್ದಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂ. ಹಾಗೂ ಸದರಿ ಹಾರ್ನಹಳ್ಳಿಯಲ್ಲಿರುವ ಮ|| ರಾ|| ನಾಡಗೌಡರ ಮಡಿವಾಳಪ್ಪನವರ ಪುತ್ರಿಯನ್ನು ಶಿವಮೊಗ್ಗಾ ಟೌನ್ ನಿವಾಸಿಗಳಾದ ಮ|| ರಾ|| ದುಮ್ಮಿ ಪಂಚಾಕ್ಷರಪ್ಪನವರ ಪುತ್ರನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಮ|| ರಾ|| ದುಮ್ಮಿ ಪಂಚಾಕ್ಷರಪ್ಪನವರು ಸಮರ್ಪಿಸಿದ **2** ರೂ. ಒಟ್ಟು **7** ರೂ. ಗಳು ಗುಬ್ಬಿ ಶಿವಕಥಾಪಂಡಿತ, ಗುರುಕೀರ್ತನಕೇಸರಿ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ನರಸಿಂಹರಾಜಪುರದ ಶಾಂತಪ್ಪಶೆಟ್ಟರವರ ೬೦ ನೆಯ ವರ್ಷದ ಶಾಂತಿಕ್ರಮ.

ಬೀರೂರು.

ಸದಾ ಗುರುಲಿಂಗಜಂಗಮ ಸೇವಾಧುರಂಧರರಾಗಿಯೂ ಪರೋಪಕಾರನಿರತರಾಗಿಯೂ, ದೊಡ್ಡ ಆಡಳಿತಕ್ಕೊಳಪಟ್ಟವರಾಗಿಯೂ, ತಮ್ಮ ಲೇವಾದೇವಿ ಮೊದಲಾದ ಗೃಹಕೃತ್ಯಗಳನ್ನು ನಡೆಸುವುದರಲ್ಲಿ ಕುಶಲಮತಿಗಳಾಗಿಯೂ ಬಹುಜನರಿಗೆ ಪ್ರೇಮಪಾತ್ರರಾಗಿಯೂ, ಇರುವ ನರಸಿಂಹರಾಜಪುರದ (ಯಡೇಹಳ್ಳಿ) ಮ|| ರಾ|| ಸಾ|| ಯಜಮಾನ ಶಾಂತಪ್ಪ ಶೆಟ್ಟರವರು ಮನೋವಾಕ್ಕಾಯಂಗಳೊಳ್ ಸತ್ಕ್ರಿಯಾಜ್ಞಾನಶೀಲರಾಗಿರುವರಷ್ಟೆ! ಇವರು ಇದೇ ಅಂಗಿರಸನಾಮಸಂವತ್ಸರದ ಆಶ್ವಯುಜ ಬ|| ೧೧ ವಿಂಗೆ ತಮ್ಮ ೬೦ ನೆಯ ವರ್ಷದ ಶಾಂತಿಕ್ರಮಗಳನ್ನು ಶ್ರೀ ರುದ್ರಾಭಿಷೇಕ ಗುರುಪಾದಾರ್ಚನ ಮುಂತಾದವುಗಳೊಡನೆ ವಿಧ್ಯುಕ್ತಪ್ರಕಾರವಾಗಿ ನಡೆಯಿಸಿ ಶ್ರೀ ಗಣಾರಾಧನ ಸಮಯದಲ್ಲಿ ಶ್ರೀ ಪಟ್ಟಚರಾಧಿಕಾರಿಗಳಿಗೂ ಸ್ಥಳಪರಸ್ಥಳದಿಂದ ಬಂದಿದ್ದ ಅನೇಕಜನ ಭಕ್ತಮಾಹೇಶ್ವರರಿಗೂ ವಿವಿಧಭಕ್ಷ್ಯಭೋಜ್ಯಾದಿಗಳಿಂದಲೂ, ಭೂರಿದಕ್ಷಿಣೆಗಳಿಂದಲೂ ತೃಪ್ತಿಗೊಳಿಸಿ, ಗೋದಾನ, ಭೂದಾನ, ಹಿರಣ್ಯದಾನ, ವಸ್ತ್ರದಾನ, ಪಾತ್ರೆ, ಛತ್ರಿ, ಪಾದುಕಾ ಮೊದಲಾದ ದಾನಗಳನ್ನು ತಮ್ಮ ಧನಶಕ್ತಿಗೂ, ತಮ್ಮಲ್ಲಿರುವ ಉದಾರಮನೋಭಾವಕ್ಕೂ ಅನುಗುಣವಾಗಿ ನಡೆಸಿದರು. ಇವರು ಈ ಹಿಂದೆ ಕೈ|| ತಮ್ಮ ತೀರ್ಥರೂಪಿಗಳಾದ ನಿರ್ವಾಹಪಟ್ಟವರ ಅಪ್ಪಣೆಪ್ರಕಾರ ಬೀರೂರಿನಲ್ಲಿ ಒಂದು ಧರ್ಮಛತ್ರವನ್ನು ಕಟ್ಟಿಸಿ, ಕೈ|| ಮೈಸೂರು ಸಂಸ್ಥಾನದ ದಿವಾನ್ ಕಾಂತರಾಜಅರಸರವರಿಂದ ಪ್ರವೇಶೋತ್ಸವವನ್ನು ನೆರವೇರಿಸಿ ಶ್ರೀಮದ್ರಂಭಾಪುರೀ ಸಂಸ್ಥಾನದ ಈಗಿನ ಶ್ರೀ ಜಗದ್ಗುರುಗಳವರು ಬೀರೂರಿಗೆ ಆಗಮನಮಾಡಿದಕಾಲಕ್ಕೆ ಸದರಿ ಧರ್ಮಛತ್ರದಲ್ಲಿ ಶ್ರೀ ಮಹಾಸನ್ನಿಧಿಯವರ ಪಾದಪೂಜಾಮಹೋತ್ಸವಗಳನ್ನು ಜರಗಿಸಿ, ಆ ಸಮಯದಲ್ಲಿ ಮೇಲ್ಕಂಡ ಛತ್ರಕ್ಕೆ ಜಗದ್ಗುರುಗಳವರ ಹೆಸರಿನ ಮೇಲೆ ಶಿವಾನಂದಛತ್ರವೆಂಬ ಅಂಕಿತವನ್ನಿಟ್ಟು ಸರ್ವರೂ ಜಯಘೋಷಮಾಡಲು ಯಜಮಾನ ಶೆಟ್ಟರವರು ತಮ್ಮ ತೀರ್ಥರೂಪಿಗಳವರ ಸತ್ಸಂಕಲ್ಪವನ್ನು ಮಹಾಸನ್ನಿಧಿಯಲ್ಲಿ ಅರಿಕೆಮಾಡಿಕೊಂಡು ಆ ಕೂಡಲೆ ಶ್ರೀ ಸನ್ನಿಧಿಯ ಸಮಕ್ಷಮದಲ್ಲಿ ಒಂದು ಸಂಸ್ಕೃತಪಾಠಶಾಲೆಯನ್ನು ಏರ್ಪಡಿಸುತ್ತೇವೆಂದು ವಾಗ್ದಾನಮಾಡಲು ಶ್ರೀ ಜಗದ್ಗುರುಗಳವರು ಆನಂದದೊಡನೆ ಮ|| ರಾ|| ಶಾಂತಪ್ಪಶೆಟ್ಟರವರ ಪಿತೃಭಕ್ತಿಯನ್ನು ನೋಡಿ ಆಶ್ಚರ್ಯಯುತರಾಗಿ ಶ್ರೀ ಜಗದ್ಗುರು ರೇಣುಕಪೀಠಾಧಿಕಾರವಿಷಯದಲ್ಲಿ ತಮ್ಮ ತನುಮನಧನಗಳನ್ನು ಒಪ್ಪಿಸಿ, ಸೇವೆಮಾಡಿದ ಇವರಿಗೂ ಇವರ ವಂಶೀಯರಿಗೂ ಶ್ರೀ ರೇಣುಕನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಅಪ್ಪಣೆಕೊಡಿಸಿ ಮ|| ರಾ|| ಯಜಮಾನರ ಪಾಠಶಾಲೆಗೆ ಶಾಂತೇಶಪಾಠಶಾಲೆ ಎಂದು ಕರೆಯುವುದಾಗಿ ಅನುಗ್ರಹವಿತ್ತು, ಬಿರೂರಿನಲ್ಲಿ ನಡೆದ ದಸರಾಮಹೋತ್ಸವದ ದರ್ಬಾರಿನಲ್ಲಿ ಇವರಿಗೆ (ಆಚಾರ್ಯಸೇವಾದರ್ಶ) ಎಂಬ ಪ್ರಶಸ್ತಿಯನ್ನು ಸುವರ್ಣಪದಕದೊಂದಿಗೆ ಶಾಲುಜೋಡಿ ಸಮೇತ ಆಶೀರ್ವದಿಸಿರುವರು. ಮೇಲ್ಕಂಡ ಪಾಠಶಾಲೆಯು ಈಗ ಬೀರೂರಿನಲ್ಲಿ ಮ|| ರಾ|| ಶೆಟ್ಟರವರು ಕೈ|| ತಮ್ಮ ತೀರ್ಥರೂಪಿಗಳವರ ಇಷ್ಟದಂತೆ ಒಂದು ಧರ್ಮಛತ್ರವನ್ನು ಕಟ್ಟಿಸಿ, ಸ್ಥಾಪಿಸಿರುವರು. ಈ ಪಾಠಶಾಲೆಗೆ ದೊಡ್ಡಗುಣೇಮಠದ ಶ್ರೀ ಪಟ್ಟಾಧ್ಯಕ್ಷರವರು ಅಧ್ಯಾಪಕರಾಗಿದ್ದು ವಿದ್ಯಾರ್ಥಿಗಳು ಸಂಸ್ಕೃತ, ವೇದ, ಜ್ಯೋತಿಷ್ಯ ಮೊದಲಾದವುಗಳನ್ನು ಅಧ್ಯಯನಮಾಡುತ್ತಲಿರುವರು. ಈ ಪಾಠಶಾಲೆಗೆ ಮೂಲಧನ ೧೦,೦೦೦ ರೂಪಾಯಿಗಳು ಗವರ್ನ್ಮೆಂಟ್ ಬ್ಯಾಂಕಿನಲ್ಲಿಟ್ಟು ಅದರಬಡ್ಡಿಯಿಂದ ಪಾಠಶಾಲೆಯು ಆಚಂದ್ರಾರ್ಕವಾಗಿ ನಡೆಯುವುದಾಗಿ ಸತ್ಸಂಕಲ್ಪಮಾಡಿ ೩೦೦೦ ರೂಪಾಯಿಗಳನ್ನು ಡಿಪಾಜಿಟ್ಟು ಇಟ್ಟಿರುವರು. ಇದಲ್ಲದೆ ನರಸಿಂಹರಾಜಪುರದಲ್ಲಿ ಶ್ರೀ ಸೂಗೂರಪ್ಪನವರ ಮಠಕ್ಕೆ ನಿತ್ಯ ದಾಸೋಹ, ದೀಪಾರಾಧನೆ ವಿನಿಯೋಗಕ್ಕೋಸ್ಕರ ೫-೬ ಎಕರೆ ತರೀಜಮೀನನ್ನು ಕೊಟ್ಟು ದಾನಶಾಸನವನ್ನು ಬರೆದು ಕೆಲವು ಮೊಬಲಗುಸಮೇತ ಧಾರಾಪೂರ್ವಕವಾಗಿ ಕೊಟ್ಟಿರುವುದಲ್ಲದೆ, ಒಂದು ರೀಡಿಂಗ್‌ರೂಮನ್ನೂ, ಪಂಚಮಸ್ಕೂಲನ್ನೂ, [illegible] ಕಟ್ಟಿಸಿ, ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ಮಲೆನಾಡಪ್ರಾಂತ್ಯ ಸಂಚರಿಸಿ ಈ ಗ್ರಾಮಕ್ಕೆ ದಯಮಾಡಿಸಿದ ಕಾಲದಲ್ಲಿ ಅವರ ಅಮೃತಹಸ್ತದಿಂದ ಮ|| ರಾ|| ಯ|| ಶಾಂತಪ್ಪಶೆಟ್ಟರವರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿರುವ ರೀಡಿಂಗ್‌ರೂಮು ಓಪನ್‌ಮಾಡಿಸಿ, ಯಡೇಹಳ್ಳಿಗ್ರಾಮಕ್ಕೆ ನರಸಿಂಹರಾಜಪುರ ಎಂಬದಾಗಿ ನಾಮಕರಣಮಾಡಿ ಪ್ರಭುಗಳ ಮತ್ತು ಅವರ ಪ್ರಜೆಗಳ ಮೆಚ್ಚುಗೆಗೆ ಪಾತ್ರರಾಗಿರುವರು. ಈ ರೀತಿ ವಿಶೇಷ ಜನೋಪಕಾರವಾದ ಕಾರ್ಯಗಳನ್ನು ನಡೆಯಿಸುತ್ತಿರುವ ಸಂಗತಿಯು ಘನವೆತ್ತಿದ ನಮ್ಮ ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ವೇದ್ಯವಾಗಿ ಶ್ರೀ ಸನ್ನಿಧಾನದವರು ಶಾಂತಪ್ಪಶೆಟ್ಟರವರಿಗೆ ಸನ್ಮಾನಪತ್ರಿಕೆಯನ್ನು ಶಾಲುಜೋಡಿ ಸಮೇತ ಅರಮನೆಯಿಂದ ಅನುಗ್ರಹಿಸಿರುವರು. ಯಜಮಾನರಲ್ಲಿ ತೋರಿಬಂದ ಸತ್ಪಾತ್ರದಾನರೂಪವಾದ ಸದ್ಗುಣವೆ ಅವರ ವಿಷಯದಲ್ಲಿ ಅಪಾರರೂಪವಾಗಿ ಪ್ರವಹಿಸಿದ ಭಗವದನುಗ್ರಹದ ಸೂಚನೆಯಾಗಿರುವುದು. ಇದಲ್ಲದೆ, ಹಾಲಿ ಬೀರೂರಿನಲ್ಲಿ ನಡೆಯಿಸಿದ ತಮ್ಮ ೬೦ ನೆಯ ವರ್ಷದ ವರ್ಧಂತ್ಯುತ್ಸವದಲ್ಲಿ ಹಿಮವತ್ಕೇದಾರ, ಶ್ರೀಕ್ಷೇತ್ರಕಾಶಿ, ಶ್ರೀಮದುಜ್ಜಯನಿ, ಶ್ರೀಮದ್ರಂಭಾಪುರಿ, ಶ್ರೀಶೈಲ ಮುಂತಾದ ಶ್ರೀ ಜಗದ್ಗುರು ಸ್ವಾಮಿಗಳವರಿಗೂ, ತಮ್ಮ ಮನೆದೇವರಾದ ನಿರ್ವಾಣ ಸ್ವಾಮಿಗೂ ತಮ್ಮ ಯಥೋಚಿತಕಾಣಿಕೆಯನ್ನು ಮನಿಯಾರ್ಡರ್ ಮೂಲಕ ಒಪ್ಪಿಸಿರುವರು. ಅಲ್ಲದೆ ಬೆಂಗಳೂರು ವೀರಶೈವವಿದ್ಯಾವರ್ಧಕ ಫಂಡಿಗೆ ಕಳುಹಿಸಿರುವರು. ಇವರ ೬೦ ನೆಯ ವರ್ಷದ ಶಾಂತಿಕ್ರಮಕ್ಕೆ ಸರಿಯಾಗಿ ತಮ್ಮ ಧರ್ಮಪತ್ನಿ ಕೈ|| ಚನ್ನವೀರಮ್ಮನವರ ವರ್ಷಾಂತದ ಕಾರ್ಯಬಂದಿದ್ದರಿಂದ ಆ ಕಾಲಕ್ಕೆ ತಮ್ಮ ಗುರುಗಳವರ ಹಾಂಸಭಾವಿ ಮಠದ ವೇ|| ಗುರುಬಸವಾರ್ಯರನ್ನು ಕುಟುಂಬಸಮೇತ ಬರಮಾಡಿಕೊಂಡು ತಮ್ಮ ಧರ್ಮಪತ್ನಿ ಕೈ|| ಚನ್ನವೀರಮ್ಮನವರ ಹೆಸರಿನಮೇಲೆ ದಂಪತಿಪೂಜಾ ನಡೆಯಿಸಿ, ಗುರುಗಳಿಗೆ ಕಾಣಿಕೆ, ವಸ್ತ್ರ ಮೊದಲಾದವುಗಳನ್ನು ದಾನಮಾಡಿ ಸತ್ಕರಿಸಿದರು. ಆ ದಿವಸ ಶ್ರೀ ಪೂಜ್ಯಪಾದರವರ ಸನ್ನಿಧಿಯಲ್ಲಿ ಸಭೆಯನ್ನೇರ್ಪಡಿಸಿ ಪ್ರಸಿದ್ಧ ಶಿವಕೀರ್ತನಕಾರರಿಂದ ಸತ್ಕಾಲಕ್ಷೇಪವನ್ನು ನಡೆಯಿಸಿ, ಶ್ರೀ ಜಗದಾಚಾರ್ಯರ ಮಂಗಲಪೂರ್ವಕ ಶಾಂತಿಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು. ಮಹಾಶಯರೆ? ಗುರುಭಕ್ತಿಶೀಲರಾಗಿ ಲೌಕಿಕವಿಷಯಗಳಲ್ಲಿ ವ್ಯಾಮೋಹರಾಗದೆ, ಮೇಲ್ಕಂಡ ಧರ್ಮಕಾರ್ಯಗಳನ್ನು ತಮ್ಮ ಜೀವಮಾನದಲ್ಲಿಯೇ ನಡೆಯಿಸಿ, ಅದರ ಫಲವನ್ನು ಪ್ರತ್ಯಕ್ಷ ಅನುಭವಿಸುತ್ತಲಿರುವ ಈ ಶಾಂತಪ್ಪಶೆಟ್ಟರೇ ನಿಜವಾದ ವೀರಶೈವಸತ್ಪುರುಷರು. ಲೋಕದಲ್ಲಿ ಸತ್ಪುರುಷರು ತಮ್ಮ ಜೀವಿತಕಾಲದಲ್ಲಿಯೇ ಬಹುಜನರಿಗೆ ಉಪಕೃತಿಯನ್ನೆಸಗಿ ದೇಹಾಂತದಲ್ಲಿಯೂ ಲೋಕೋಪಕಾರವನ್ನೇ ಬಯಸುತ್ತಿರುವುದರಿಂದ ಸರ್ವರಿಂದಲೂ ಮಾನ್ಯರೆನಿಸಿಕೊಂಡಿರುವರು. ಅವರಂತೆ ಮಾರ್ಗದರ್ಶಕರಾಗಿರುವ ಮ|| ರಾ|| ಶಾಂತಪ್ಪಶೆಟ್ಟರವರಿಗೆ ಜಗದೀಶನು ಶುಭಪರಂಪರೆಯನ್ನೀಯಲೆಂದು ಅನನ್ಯಭಾವದಿಂದಪ್ರಾರ್ಥಿಸುವ,

ಶಿವಕಥಾಪಂಡಿತ, ಜಿ. ನಂಜುಂಡಾರಾಧ್ಯ,
ಬೀರೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ದೀಪಾವಳಿ ಧನಲಕ್ಷ್ಮೀಪೂಜಾಮಹೋತ್ಸವವೂ. ಗುರುಸಂಕೀರ್ತನಸಮಾರಂಭವೂ.

ಶಿವಮೊಗ್ಗ ಡಿ|| ಹಾರನಹಳ್ಳಿಯಲ್ಲಿರುವ ಶ್ರೀ ಶಿವಾನಂದ ರೈಸ್‌ಮಿಲ್ಲಿನ ಆವರಣದಲ್ಲಿ ಇದೇ ಅಂಗಿರಸನಾಮ ಸಂ|| ಆಶ್ವಯುಜ ಬ|| ೩೦ (ತಾ|| 29-10-32) ಶನಿವಾರ ಸಾಯಂಕಾಲ 5 ಘಂಟೆಗೆ ಸರಿಯಾಗಿ ಪದ್ಧತಿಪ್ರಕಾರ ಶ್ರೀ ಧನಲಕ್ಷ್ಮೀಪೂಜೆಯೂ, ತತ್ಸಂಬಂಧವಾಗಿ ಈ ದಿನದ ಲಾಗಾಯತು ಮೂರು ದಿನಗಳವರೆಗೆ ಪ್ರತಿದಿವಸವೂ ರಾತ್ರಿ 9 ಘಂಟೆಯಿಂದ 12 ಘಂಟೆವರೆಗೆ ವೇ|| ಕೀರ್ತನಕೇಸರಿ ಗುಬ್ಬಿ ಶಿವರುದ್ರಶಾಸ್ತ್ರಿಗಳು ತುಮಕೂರು ಗಂಟೇದೇವರಮಠ ಇವರಿಂದ "ಶ್ರೀ ಜಗದ್ಗುರು ರೇಣುಕವಿಜಯ" ಎಂಬ ಕೀರ್ತನೆಯೂ ಸಹ ಅತ್ಯಂತ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಪ್ರತಿಯೊಂದು ಕೀರ್ತನೆಗೂ ಸಾವಿರಾರು ಜನ ಸ್ತ್ರೀಪುರುಷರಾದಿಯಾಗಿ ಸಮಸ್ತ ಮತೀಯರೂ ಆಗಮಿಸಿ ಗುರುಕೀರ್ತನ ಶ್ರವಣಾನಂದಸಂದೀಪ್ತಹೃದಯರಾಗಿ ಶಾಸ್ತ್ರಿಗಳವರ ಗುಣಕಥನವನ್ನು ಮಾಡಿದರೆಂಬುದಕ್ಕೆ ಶ್ರೋತೃಜನಾಕರ್ಷಣೀಯವಾದ ಅವರ ಶಾರೀರಸಂಪತ್ತೂ, ನವರಸಭರಿತವಾದ ವಾಕ್ಸ್ಫೂರ್ತಿಯನ್ನು ತೋರಿಸುವ ವಾಣಿಯೂ, ಕೀರ್ತನಸಂವಿಧಾನವೂ, ಸಮಯೋಚಿತ ಉಪಕಥೆಗಳ ಜೋಡಣೆಯ ಚಾತುರ್ಯವೂ, ಗುರುಭಕ್ತಿ, ಧರ್ಮನೀತಿಗಳು ಜನರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಮಾಡುವ ಸಾಮರ್ಥ್ಯವೂ ಕಾರಣಭೂತಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂತಹ ಸಮಾರಂಭವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದಲೂ, ಉದಾರಭಾವದಿಂದಲೂ, ಹರ್ಷೋದ್ರೇಕದಿಂದಲೂ ನೆರವೇರಿಸಿದ ಗುರುಭಕ್ತಾಗ್ರೇಸರರಾದ ನ್ಯಾಯಮತಿ ಹುಂಡೀಕರಲಿ ಸಣ್ಣವೀರಪ್ಪನವರು ಮತ್ತು ಮುದ್ದಪ್ಪನವರು ಈ ಉಭಯಕಾರ್ಯದರ್ಶಿಗಳಿಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರು ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂದು ಹಾರೈಸುವ,

ಆಚಾರ್ಯಪಾದಸೇವಕ,
ಡಿ. ಶಿವಪ್ಪಶ್ರೇಷ್ಠಿ, ಹಾರನಹಳ್ಳಿ.

ಪಲ್ಲಕ್ಕಿಮಹೋತ್ಸವ ಅಮರಾಪುರ.

ಅನಂತಪುರ ಡಿ|| ಅಮರಾಪುರ ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತಸಂಸ್ಥಾನದವತಿಯಿಂದ ಗುರುತ್ವಾಧಿಕಾರಿಗಳಾದ ಶ್ರೀರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಗಜಾಶ್ವ ಮೊದಲಾದ ಸಕಲಬಿರುದಿನೊಡನೆ ವಿಜಯದಶಮಿಗೆ ಆಗಮಿಸಿದರು. ಪುರಪ್ರಮುಖರಾದ ಪಾಟೀಲ ಲಿಂಗಪ್ಪಗೌಡರು, ಗೊಂಚಿಕಾರ ಸಿದ್ಧಲಿಂಗಪ್ಪನವರು, ಇನ್ನುಳಿದ ಕೆಲಕೆಲ ಪ್ರಮುಖರು ಕೂಡಿ ವಿಜಯದಶಮಿ ದಿವಸ ಸಕಲ ಬಿರುದಾವಳಿಸಮೇತವಾಗಿ ಅಂಬಾರಿ ಉತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿ ಕೃತಾರ್ಥರಾದರು. ಶ್ರೀಗಳವರು ಈ ಗ್ರಾಮದ ಭಕ್ತಮಂಡಳಿಯವರ ಗುರುಭಕ್ತಿಯನ್ನು ನೋಡಿ ಪ್ರತಿನಿತ್ಯದಲ್ಲಿ ಧರ್ಮಬೋಧೆಮಾಡುತ್ತ ಸಂತೋಷಪಡಿಸುತ್ತಿದ್ದರು. ಸೀಶಿಮೋತ್ತಾನ ಹಿರೇಮಠದ ವೈದಿಕಶಿರೋಮಣಿ ವೇ|| ಚಲವುಲಯ್ಯನವರು 2-11-32 ಶನಿವಾರ ಮಹಾಸಂಸ್ಥಾನಕ್ಕೆ ಆಮಂತ್ರಣಮಾಡಿ ಉತ್ಸವದೊಡನೆ ಸವಾರಿ ದಯಮಾಡಿಸಿಕೊಂಡು ಹೋದರು. ಅನುಷ್ಠಾನ ಪೂರೈಸಿದ ಬಳಿಕ ಅನ್ನಸಂತರ್ಪಣೆ ನಡೆದು ಸರ್ವರಿಗೆ ಆಶೀರ್ವದಿಸಿದರು. ಇದೇ ದಿನವೇ ಪಂಚಾಚಾರ್ಯ ಭಜನಾಸಂಘದವರು ಪಾಲಕಿಯಲ್ಲಿ ಶ್ರೀಸ್ವಾಮಿಗಳವರನ್ನು ಮೂರ್ತಮಾಡಿಸಿ ಬಹು ವೈಭವದಿಂದ ಉತ್ಸವಮಾಡಿಸಿದರು. ಗ್ರಾಮದ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಹಾಗೂ ಪೋಲೀಸರು ಒಳ್ಳೆ ಮುತುವರ್ಜಿಯಿಂದ ವ್ಯವಸ್ಥೆಮಾಡಿದರು. ಮಹಮ್ಮದೀಯ ಮುಖಂಡರೂ, ಶ್ರೀಮಂತರೂ ಆದ ಬಕ್ಷಿ ಜಾಬೂಮಿಯಾಸಾಹೇಬರ ಪುತ್ರರಾದ ಕರೀಮುಸಾಹೇಬರು ವಗೈರೆ ಮಹಮ್ಮದೀ ಧರ್ಮದವರು ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವವು ಭಜನಾಮಂದಿರಕ್ಕೆ ಆಗಮಿಸಿ ಭವ್ಯವಾದ ಸಿಂಹಾಸನದಮೇಲೆ ಸನ್ನಿಧಿಯವರು ಮೂರ್ತಮಾಡಿದಕೂಡಲೆ ಸರ್ವರೂ ಜಯಜಯಕಾರಗಳನ್ನು ಮಾಡಿದರು. ವೇ|| ಎಂ. ವೀರಭದ್ರಶಾಸ್ತ್ರಿಗಳು ಅಮರಾಪುರ ಇವರು ಪೀಠಾಚಾರ್ಯರ ಮಹತ್ತ್ವಗಳನ್ನು ಸರ್ವರಿಗೆ ತಿಳಿಯುಂತೆ ವ್ಯಾಖ್ಯಾನಮಾಡಿದರು. ಸ್ವಾಮಿಗಳವರು ಸಮಸ್ತ ಪ್ರಾಣಿಗಳಿಗೆ ಆಹಾರ ನಿದ್ರಾದಿಗಳು ಸಮಾನವಾದವೆಂದೂ ಜ್ಞಾನವೇ ಮನುಷ್ಯನಿಗೆ ಮುಖ್ಯಸಾಧನವೆಂದೂ ಕೆಲ ಹೊತ್ತು ಬೋಧಮಾಡಿ ಸರ್ವರನ್ನು ಸಂತೋಷಗೊಳಿಸಿದರು. ಭಜನಾಸಂಘಕ್ಕೆ ಶ್ರೀಗಳವರು ಸಂಸ್ಥಾನದ ವತಿಯಿಂದ ಆಶೀರ್ವಾದಪತ್ರಿಕೆಯನ್ನು ದಯಪಾಲಿಸಿದರು. ಸಂಸ್ಥಾನದ ಸರ್ವಾಧಿಕಾರಿಗಳಾಗಿರುವ ಕೆ. ಎಂ. ಪಿ. ಮಲ್ಲಯ್ಯನವರು ತಾಡಪತ್ರಿ ಇವರು ಭಜನಾಸಂಘಕ್ಕೆ ಸಂಸ್ಥಾನದ ವತಿಯಿಂದ ಪೆಟ್ರೋಲ್‌ಮ್ಯಾಕ್ಸ್‌ಲೈಟುಕೊಟ್ಟು ಆನಂದಗೊಳಿಸಿದಕೂಡಲೆ ಸರ್ವರೂ ಶ್ರೀ ಜಗದ್ಗುರು ನಾಗಲೂಟಿ ಭಕ್ತಾವರ್ತಿ ಶಿವಾಚಾರ್ಯ ಮಹಾರಾಜಕೀ ಜಯ ಎಂದು ಜಯಘೋಷಮಾಡಿದರು. ಆ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಸಿದ್ಧರಾಮಣ್ಣನವರ ತಿಪ್ಪಣ್ಣ, ಅಮರಾಪುರ.

ಭಾರತಮಾತೆಯ ಮರುಕ.

ಮಾತೆಕಂಬನಿಸುರಿಸುತಿರುವಳು ಮಾತೆಯೆಮ್ಮನು ಕರೆವಳು |
ಪ್ರೀತಿಪುತ್ರರೆಸಹಿಸೆನ್ನುತ ಕಾತರದಿಕಂಗೆಡುವಳು ||೧||
ಎನ್ನ ಭಾಗ್ಯದನಿಧಿಯುಬತ್ತಿತು ಎನ್ನ ಮನೆಬರಿದಾಯಿತು |
ಉನ್ನತಿಯವೈಭವಪಶಿಖರಕೆ ವಜ್ರಘಾತವುತಾಗಿತು ||೨||
ಚಿನ್ನದಾಗಣಿಯಾದಭಾರತ ಪುಣ್ಯಭೂಮಿಯು ಇಂದಿಗೆ |
ಅನ್ಯರ ದಬ್ಬಾಳಿಕೆಯೊಳು ಬನ್ನಬಡತನವಾಂತುದೇ ||೩||
ಹಿಂದಿನಾಸಾಹಿತ್ಯಕಲೆಮೇಣ್ ಬಂಧುರದಕೈಗಾರಿಕೆ |
ಅಂದವಾಶಿಲ್ಪಿಗಳುಸರ್ವವು ಇಂದುಮೂಲೆಗೆ ಬಿದ್ದುವೇ ||೪||
ಅತುಳಶಿಲ್ಪಿಗಳಲ್ಲಿ ಕೌಶಲದತಿಶಯವತೋರಿಲ್ಲವೇ |
ಮತಿಯುತರು ಬಹುಮಂದಿ ಕವಿಗಳು ಪ್ರತಿಭೆಯನು ಬೀರಿಲ್ಲವೇ||
ದೇಶಸೇವೆಗೆಸಲುವಪುತ್ರರು ದೇಶದೇಳಿಗೆಬಯಸರೇ |
ಮೋಸವೆಂದರಿಯದಲೆಪರರಿಗೆ ದಾಸರಾದರೆ ಅಕಟ ಹಾ! ||೬||
ಧೀರವೀರಪ್ರತಾಪಸಿಂಹನು ಭಾರತಕೆ ಜನುಮವಿಸನೇ |
ಶೂರನಾದಶಿವಾಜಿಧೈರ್ಯೌದಾರ್ಯಶೌರ್ಯವತೋರನೇ ||೭||
ನಾರಿಮಣಿಯರನೇಕಮಂದಿಯು ತೋರಿತಮ್ಮಯಸತ್ವವಾ |
ವೀರರಮಣಿಯರಿಂಬಕೀರ್ತಿಯು ಬೀರಲಿಲ್ಲವೆ ಲೋಕದಿ ||೮||
ಹಿಂದಣಾರಮಣಿಯರಸತ್ವವು ಇಂದುಮೂಡದೆ ನಿನ್ನೊಳು |
ಅಂದಿನಾನಿಜದೇಶಭಕ್ತಿಯು ಕುಂದಿದೇತಕೆನಿನ್ನೊಳು ||೯||
ದೇಶಿಯಾಕಲೆಗಳನುಮರೆತಿರಿ ನಾಶಗೈದಿರಿಪರರಿಗೆ |
ಮೋಸಹೋಗುತನಿತ್ಯಹೊಸ್ತಿನ ದಾಸಿಯವರಿಗೆಬಂದಿರಿ ||೧೦||
ದೇಶವಿದ್ಯೆಯನೊತ್ತಿಗಿಟ್ಟಿರಿ ದೇಶಭಾಷೆಯಮರೆತಿರಿ |
ಲೇಸೆನುತಇಂಗ್ಲೀಷನೇ ಅಭ್ಯಾಸಿಸುತಮೈಮರೆತಿರಿ ||೧೧||
ಕಲಿತುದುಡಿಯುವೆನೆನುತಸಾಧಿಸಿ ಹೊಲಮನೆಯನೆರವಿಟ್ಟಿರಿ |
ಕೆಲಸದೊರೆಯದೆಬಳಿಕ ಬೀದಿಯೊಳಲೆದಲೆದುತಂಗೆಟ್ಟಿರಿ ||೧೨||
ಕಾಲವಾದುದುನೋಲುಬಡಗಿತು ಕೂಲಿನಾಯಿತುಮನಸಿಗೆ |
ವೇಳೆಗಳೆವುದಕಾಧ್ಯವಾಯಿತು ಬಾಳುವೆಯೆಬೇಡೆನಿಸಿತು ||೧೩||
ಕೋಶವಾಣಿಜ್ಯದುಮೋಣುಲಾ ಸದಾನೆಲೆಬೀಡದು |
ಗಾಸಿಯಾದುದುಪರರಪೂಜನ ದಾಸ್ಯದಬಲೆಯಾದುದು ||೧೪||
ಮತಿಯುತರೆಲ್ಲರದಾಸ್ಯವೆಂಬುವ ಶೃಂಖಲೆಯ ಹರಿದೊಗೆಯಿರಿ |
ಗತಯುಗದವೈಭವವಮರಳಿ ಭರತಭೂಮಿಗೆತನ್ನಿರಿ ||೧೫||

ಮುಂಡರಗಿ ವೀರಪ್ಪ, ದಾವಣಗೆರೆ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೆನ್ಷನ್‌ದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಆವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ—ಹೊಳವನಹಳ್ಳಿ, ಡಿ|| ತುಮಕೂರು.

ಒಳದೇಶದ ವೃತ್ತಾಂತಗಳು.

ಕೋಲಾರದ ಚಿನ್ನದಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ಸ್ ಎಂಬ ಗಣಿಯಲ್ಲಿ ಕಳೆದವಾರ 7000 ಅಡಿಗಳ ಕೆಳಭಾಗದಲ್ಲಿ ಸಿಡಿಮದ್ದು ಹಾರಿ 3 ಜನರು ಕೂಡಲೇ ಮೃತಪಟ್ಟರು.

ಮೈಸೂರು ನ್ಯಾಯವಿಧಾಯಕಸಭೆಯು ಬೆಂಗಳೂರು ಅಠಾರಾಕಚೇರಿಯ ನೂತನಸಭಾಮಂದಿರದಲ್ಲಿ ಡಿಸೆಂಬರು 14 ನೇ ತಾರೀಖು ಬುಧವಾರ ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಪ್ರಾರಂಭವಾಗುವದು.

ನ್ಯೂಯಾರ್ಕ್ ನಗರದ ಮಾಜಿ ಮುನಿಸಿಪಲ್ ಪ್ರೆಸಿಡೆಂಟರಾಗಿದ್ದ ಮಿ|| ವಾಕರ್‌ರವರು ರಾಜಧಾನಿಗೆ ಶ್ರೀಮದ್ಯುವರಾಜರವರ ಅತಿಥಿಗಳಾಗಿ ಬಂದು ನಮ್ಮ ಸಂಸ್ಥಾನದಲ್ಲಿ ಕೆಲವು ಕಾಲ ಸಂಚರಿಸುತ್ತಾರೆಂದು ತಿಳಿದುಬಂದಿದೆ.

ಇಂಗ್ಲೆಂಡ್ ಮತ್ತು ಅಮೇರಿಕಾದೇಶಗಳಿಗೆ ಸಂಚಾರಾರ್ಥವಾಗಿ ಹೋಗಿದ್ದ ಶ್ರೀಮದ್ಯುವರಾಜರವರು ಇದೇ ನವೆಂಬರ್ 10 ನೇ ತಾರೀಖಿನ ದಿವಸ ಮುಂಬಯಿಗೆ ಹಿಂತಿರುಗಿಬಂದರು. ಅವರು ಇಷ್ಟರಲ್ಲಿಯೇ ರಾಜಧಾನಿಗೆ ಆಗಮಿಸುವರು.

ಬೆಂಗಳೂರು ಟ್ರಾನ್ಸ್‌ಪೋರ್ಟ್‌ಲೈನ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ ಮಿರ್ ಖಾದರಲ್ಲಿ ಎಂಬವನು ಖೋಟಾ ನಿಕ್ಕಲ್‌ನಾಣ್ಯಗಳನ್ನು ತಯಾರಿಸಿ ಚಲಾವಣೆಮಾಡುತ್ತಿದ್ದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ, ಅವನಿಗೆ ಒಂದುವರ್ಷ ಕಠಿಣಸಜಾ, 100 ರೂ. ಜುಲ್ಮಾನೆಯನ್ನು ವಿಧಿಸಿದರು.

ಗತಿಸಿದ ಹೈಕೋರ್ಟ್ ಜಡ್ಜ್ ಶ್ರೀ|| ಸಿ. ಎಸ್. ದೊರಸಾಮಿ ಅಯ್ಯರವರ ಸ್ಥಾನಕ್ಕೆ ಶ್ರೀಮಾನ್ ಪಿ. ಮಹಾದೇವಯ್ಯನವರು ಚೀಫ್‌ಜಡ್ಜರಾಗಿಯೂ, ಮ|| ರಾ|| ಎಂ. ರಾಮಚಂದ್ರರಾಯರು ಮತ್ತು ಮ|| ಕೆ. ಶಂಕರನಾರಾಯಣರಾಯರು 2 ಮತ್ತು 3 ನೇ ಜಡ್ಜರಾಗಿಯೂ ಹಂಗಾಮಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಇದೇ ನವೆಂಬರು 16 ನೆಯ ತಾರೀಖು ಸಾಯಂಕಾಲ, ರಾಜಧಾನಿಯ ಗಣ್ಯಪ್ರಜೆಗಳಲ್ಲೊಬ್ಬರಾದ ಲೋಕಸೇವಾನಿರತ ಅಂಬಳೆ ಅಣ್ಣಯ್ಯಪಂಡಿತರು ತಮ್ಮ 92 ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಇವರು ವೈದ್ಯಶಾಸ್ತ್ರದಲ್ಲಿ ಮಹಾಪಂಡಿತರಾಗಿದ್ದು ಪ್ರಭುಗಳಾದಿಯಾಗಿ ಸರ್ವರ ಪ್ರೀತಿಗೆ ಪಾತ್ರರಾಗಿದ್ದರು. ತಮ್ಮ ಜೀವಮಾನದಲ್ಲಿ ಅನೇಕ ತರಹದ ಲೋಕೋಪಕಾರ ಕಾರ್ಯಗಳನ್ನು ಮಾಡಿ ಶ್ರೀಮನ್ಮಹಾರಾಜರವರಿಂದ "ಲೋಕಸೇವಾನಿರತ" ಎಂಬ ಪದವಿಯನ್ನು ಪಡೆದುಕೊಂಡಿದ್ದರು. ಅಲ್ಲದೆ ಇವರು ಅನೇಕವಿಧವಾದ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ. ಮೃತರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲೆಂದು ಕೋರುತ್ತೇವೆ.

ಕಡೂರು ತಾಲ್ಲೂಕು ನಂಜನಹಳ್ಳಿಯ ಓಲಗದ ಹನುಮನೆಂಬ ಧಕಾಯಿತನು ಅನೇಕಸಾರೆ ಜೈಲುಗಳಿಂದ ತಪ್ಪಿಸಿಕೊಂಡು ಪೋಲೀಸರ ಕೈಗೆ ಸಿಕ್ಕದೆ ತಿರುಗುತ್ತಿದ್ದನು. ಈಗ್ಗೆ ಸುಮಾರು ಒಂದು ವರ್ಷದಹಿಂದೆ ಸಾಗರದ ಜೈಲಿನಿಂದ ತಪ್ಪಿಸಿಕೊಂಡಿದ್ದನು. ಈ ತಿಂಗಳ ಆದಿಯಲ್ಲಿ ಕಡೂರು ತಾಲ್ಲೂಕು ಮತ್ತಿಘಟ್ಟದ ಹತ್ತಿರ ಒಬ್ಬ ದಫೇದಾರನು ಹನುಮನನ್ನು ನೋಡಿ ದಸ್ತಗಿರಿ ಮಾಡುವಷ್ಟರಲ್ಲಿ ಹನುಮನು ಅವನ ಕೈಗೆ ಸಿಕ್ಕದೆ ಓಡಲಾರಂಭಿಸಿದನು. ದಫೇದಾರನು ಹನುಮನ ಸೊಂಟದಿಂದ ಕೆಳಕ್ಕೆ ಗುಂಡಿನಿಂದ ಹೊಡೆದರೂ ಅವನು ಅದನ್ನು ಲಕ್ಷಿಸದೆ ಓಡಿಹೋದನು. ಆದರೆ ಕಳೆದ ಗುರುವಾರ ಅರಸೀಕೆರೆಯ ಪೋಲೀಸರು ಅವನನ್ನು ಸ್ಟೇಷನ್ನಿನಲ್ಲಿ ದಸ್ತಗಿರಿಮಾಡಿ, ಚಿಕಿತ್ಸೆಗೋಸ್ಕರ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಿರುತ್ತಾರೆ.

ಸ್ಪಾನಿಷ್ ಗಿನಿಯಾ ಗವರ್ನರಾದ ಜನರಲ್ ಸಾಸ್‌ಟೋರವರು ಪಶ್ಚಿಮ ಆಫ್ರಿಕಾದ್ವೀಪಗಳ ಸಮೀಪದಲ್ಲಿ ಸಂಚರಿಸುತ್ತಿದ್ದಾಗ ಕಲನಿಯಲ್ ಗಾರ್ಡಿನ ಶಿಪಾಯಿಯೊಬ್ಬನು ಅವರನ್ನು ಖೂನಿಮಾಡಿದನೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ

ಸಾಂಟಾ-ಕ್ರುಜ್ ಎಂಬಲ್ಲಿ ಬಿರುಗಾಳಿಯಿಂದಲೂ ಸಮುದ್ರದ ಅಲೆಗಳ ಹೊಡೆತಗಳಿಂದಲೂ 2000 ಜನರು ಮೃತಪಟ್ಟರು.

ಫ್ರಾನ್ಸ್‌ದೇಶಕ್ಕೆ ಸೇರಿದ ಸೇಂಟ್‌ಡೆನಿಸ್ ನಗರದ ವಿಮಾನಗಳ ಕಾರ್ಖಾನೆಯೊಂದಕ್ಕೆ ಬೆಂಕಿಯು ಬಿದ್ದು ಸುಮಾರು 8 ಲಕ್ಷ ರೂ. ಬೆಲೆಬಾಳುವ ಸಾಮಾನುಗಳು ಸುಟ್ಟುಹೋದುವು.

ಭರತಖಂಡದ ವೈದಿಕಜನರ ಪರವಾಗಿ ದುಂಡುಮೇಜಿನ ಪರಿಷತ್ತಿಗೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸಬೇಕೆಂದು ರಾಜಾಬಹದ್ದೂರ್ ಕೃಷ್ಣಮಾಚಾರ್ಯರು ವೈಸರಾಯರನ್ನು ಪ್ರಾರ್ಥಿಸಿರುತ್ತಾರೆ.

'ಸ್ಟೇಟ್ಸ್‌ಮನ್' ಪತ್ರಿಕಾ ಸಂಪಾದಕರಾಗಿದ್ದ ಸರ್ ಆಲ್‌ಫ್ರೆಡ್ ವಾಟ್ಸನ್ನರನ್ನು ಕೊಲ್ಲಲು ಪ್ರಯತ್ನಿಸಿದ ಅಮಿಲ್ ಚಟರ್ಜಿಗೆ ಆಮರಣಾಂತ ದ್ವೀಪಾಂತರವಾಸವೂ, ಮತ್ತೊಬ್ಬನಿಗೆ ಹತ್ತು ವರ್ಷಗಳ ಕಠಿಣ ಸಜೆಯೂ ವಿಧಿಸಲ್ಪಟ್ಟಿತು. 3 ಜನರು ಬಿಡುಗಡೆ ಹೊಂದಿದರು.

ಇದೇ ನವೆಂಬರ್ 14 ನೇ ತಾರೀಖಿನ ದಿವಸ ಡಚ್ ಇಂಡೀಸ್ ದ್ವೀಪಗಳಿಂದ ಆಂಸ್ಟರ್ಡಾಂ ಬಂದರಿಗೆ ಹೋಗಿ ನಿಂತಿದ್ದ 15,000 ಟನ್ನುಗಳ ತೂಕವುಳ್ಳ "ಪ್ರೈಟರ್ ಕಾರ್‌ನಿಲ" ಎಂಬ ಡಚ್ ಮೇಲ್ ಹಡಗಿಗೆ ಆಕಸ್ಮಾತ್ ಬೆಂಕಿಯು ತಗಲಿ ಹಡಗು ಸುಟ್ಟು ಬೂದಿಯಾಯಿತು.

ಕಳೆದ ಆಗಸ್ಟ್ 28 ನೆಯ ತಾರೀಖಿನ ದಿವಸ ಢಕ್ಕಾ ಪೋಲೀಸ್ ಸೂಪರಿಂಟೆಂಡೆಂಟರನ್ನು ಕೊಲೆಮಾಡಲು ಪ್ರಯತ್ನಿಸಿದ ವಿನಯಭೂಷಣರಾಯ ಎಂಬಾತನ ಮೇಲೆ ಸ್ಪೆಷಲ್‌ಕೋರ್ಟಿನಲ್ಲಿ ಐ.ಪಿ.ಸಿ. 307 ಮತ್ತು ಆರಮ್ಸ್ ಆಕ್ಟ್ 19 ನೆಯ ನಿಬಂಧನೆಗಳ ಪ್ರಕಾರ ಅಪಾದನೆಯು ಹೊರಿಸಲ್ಪಟ್ಟಿದೆ.

ಇದೇ ನವೆಂಬರ್ 14 ನೆಯ ತಾರೀಖಿನ ದಿವಸ ಪ್ರಸಿದ್ಧ ಬ್ರಿಟಿಷ್ ವೈಮಾನಿಕಳಾದ ಮಿಸೆಸ್ ಎಮಿ ಜಾನ್ಸನ್ ಎಂಬಾಕೆಯು ತನ್ನ 'ಪುಸ್‌ಮಾತ್' ವಿಮಾನದಲ್ಲಿ ಪಶ್ಚಿಮ ಆಫ್ರಿಕಾದಲ್ಲಿರುವ 2000 ಮೈಲು ವಿಸ್ತೀರ್ಣವುಳ್ಳ ಮರುಭೂಮಿಯನ್ನು ಪ್ರದಕ್ಷಿಣೆ ಮಾಡಿ ಗುಡ್‌ಹೋಪ್ ಶಿಖರವನ್ನು ತಲುಪಬೇಕೆಂದು ಲಂಡನ್ನಿನಿಂದ ಹೊರಟಿರುವಳು.

ಅಲಹಾಬಾದ್ ಸಮ್ಮೇಳನವು ಎಲ್ಲರಿಗೂ ಸಮರ್ಪಕವಾದ ಒಪ್ಪಂದಗಳಿಂದ ಮುಕ್ತಾಯವಾಯಿತು. ಶ್ರೀ|| ಸಿ. ರಾಜಗೋಪಾಲಾಚಾರಿಯವರು ಇದರ ಸಂಬಂಧವಾಗಿ ಕೊಟ್ಟಿರುವ ಹೇಳಿಕೆಯಲ್ಲಿ ಕಾಂಗ್ರೆಸ್ ಠರಾವಿನ ನಾಲ್ಕು ಮೂಲೆಗಳಲ್ಲಿಯೇ ಒಪ್ಪಂದವು ಅಡಗಿಕೊಂಡಿರುವದೆಂದೂ, ಸರಿಯಾದ ಕಾಲವು ಪ್ರಾಪ್ತವಾದ ಕೂಡಲೇ ಕಾಂಗ್ರೆಸ್ಸು ಈ ಒಪ್ಪಂದವನ್ನು ಅಂಗೀಕರಿಸುವದೆಂದೂ ತಿಳಿಸಿರುತ್ತಾರೆ.

ಮಲೇರಿಯಾಜ್ವರದಿಂದ ನರಳುತ್ತಿದ್ದ ವೈಸರಾಯರು ಈಗ ಸ್ವಸ್ಥರಾಗಿ ಪುನಃ ತಮ್ಮ ಕೆಲಸದಲ್ಲಿ ಪ್ರವೃತ್ತರಾಗಿರುವರು. ಇವರು ಡಿಸೆಂಬರ್ ಆದಿಭಾಗದಲ್ಲಿ ಪತ್ನೀಸಮೇತರಾಗಿ ಉದಯಪುರ, ಜಯಪುರ, ಬರೋಡಾ, ಇಂದೋರ್, ಮುಂಬಯಿ, ನಾಗಪುರ, ಕಲ್ಕತ್ತಾ, ಮುಂತಾದ ಸ್ಥಳಗಳಲ್ಲಿ ದೀರ್ಘಕಾಲ ಸಂಚರಿಸಬೇಕೆಂದು ನಿಶ್ಚಯಿಸಿರುವರು. ಕ್ರಿಸ್‌ಮಸ್ ರಜಾ ದಿನಗಳನ್ನು ಕಲ್ಕತ್ತೆಯಲ್ಲಿ ಕಳೆಯುವರು.

ವ್ಯಾಖ್ಯಾನ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಮೊಕ್ಕಾಂ ಸದ್ಯಃ ಬಾರ್ಶಿಪಟ್ಟಣದಲ್ಲಿರುವದಷ್ಟೆ! ಶ್ರೀಗಳವರ ಅಧ್ಯಕ್ಷತೆಯಲ್ಲಿ ಅಲ್ಲಿಯ ಸುಪ್ರಸಿದ್ಧವಕೀಲರಾದ ಶ್ರೀಯುತ ಭಗವಂತರಾವ ವೈದ್ಯರವರು "ಗೋರಕ್ಷಣೆ" ಯ ವಿಷಯದಲ್ಲಿ ಸುಶ್ರಾವ್ಯವಾದ ವ್ಯಾಖ್ಯಾನಮಾಡಿದರೆಂದೂ, ಅನಂತರ ಜಗದ್ಗುರುಗಳವರು ಅದೇ ವಿಷಯದಮೇಲೆ ವೇದೋಪನಿಷದಾಗಮಾದಿಪ್ರಮಾಣಗಳಿಂದ ಸರ್ವಜನರ ಮನಸ್ಸಿನಮೇಲೆ ಪರಿಣಾಮದಾಯಕವಾದ ಸದ್ಬೋಧೆಯನ್ನು ಮಾಡಿದರೆಂದೂ ತಿಳಿದುಬರುತ್ತದೆ.

ಪೆಸಿಫಿಕ್‌ಸಾಗರದಲ್ಲಿ ಭಯಂಕರವಾದ ಬಿರುಗಾಳಿಯು ಹುಟ್ಟಿ ಜಪಾನಿನ ತೀರಪ್ರದೇಶದಲ್ಲಿ ವಿಶೇಷ ಕಷ್ಟನಷ್ಟಗಳುಂಟಾಗಿರುತ್ತವೆ ಗಾಳಿಯ ರಭಸದಿಂದಲೇ ನೂರಾರು ಜನರು ಮೃತಿಯನ್ನೈದಿದರು. 40,000 ಮನೆಗಳು ನಾಶವಾಗಿ ಪ್ರಜೆಗಳು ಬಹಳ ಕಷ್ಟಕ್ಕೆ ಗುರಿಯಾಗಿರುವರು. 'ಅರ್ಕೈಮಾರು' ಎಂಬ 2000 ಟನ್ನುಗಳ ತೂಕವುಳ್ಳ ಒಂದು ಹಡಗಿನಲ್ಲಿ 11 ಜನ ನಾವಿಕರು ಮೃತಪಟ್ಟರು. ಇತ್ತ ಯಾಕೋಹಾಮಾದಲ್ಲಿಯೂ ಸಹ ವಿಶೇಷ ಕಷ್ಟನಷ್ಟಗಳು ಸಂಭವಿಸಿರುವುದಾಗಿ ತಿಳಿದುಬಂದಿರುತ್ತದೆ.

ಅಫ್ಘಾನಿಸ್ಥಾನದ ಮಾಜಿಚಕ್ರವರ್ತಿಗಳಾದ ಅಮಾನುಲ್ಲಾ ರವರ ಪರಮ ಮಿತ್ರರಾಗಿದ್ದ ಜನರಲ್ ಗುಲಾಂ ನಬೀಖಾನ್‌ರವರು ಕೆಲವು ವರ್ಷಗಳಿಂದಲೂ ಜರ್ಮನಿ, ರಷ್ಯಾ ಮೊದಲಾದ ದೇಶಗಳಲ್ಲಿ ವಾಸಮಾಡಿಕೊಂಡಿದ್ದು ಈಚೆಗೆ ಆಫ್ಘನ್‌ಸರ್ಕಾರದ ಅಪ್ಪಣೆಯನ್ನು ಪಡೆದು ಕಾಬೂಲಿಗೆ ಹೋದರು. ಆಮೇಲೆ ಅವರು ಅಮಾನುಲ್ಲಾ ರವರಿಗೆ ಹಿಂತಿರುಗಿ ರಾಜ್ಯಭಾರವನ್ನು ದೊರಕಿಸಿಕೊಡಬೇಕೆಂದು ಪಿತೂರಿಮಾಡಿ ದಂಗೆಯೆಬ್ಬಿಸಲು ಪ್ರಯತ್ನಪಟ್ಟರೆಂಬ ಅಪಾದನೆಯಮೇಲೆ ಸ್ಪೆಷಲ್‌ಕೋರ್ಟಿನಲ್ಲಿ ವಿಚಾರಣೆಯಾಗಿ ನಬೀಖಾನರಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ಇದರ ಸಂಬಂಧದಲ್ಲಿ ಕಾಬೂಲಿನಲ್ಲಿ ಸ್ವಲ್ಪ ಗಲಾಟೆಯಾಯಿತೆಂದೂ, ಪೋಲೀಸರು ಕೆಲವರನ್ನು ದಸ್ತಗಿರಿಮಾಡಿರುವರೆಂದೂ ತಿಳಿದುಬಂದಿದೆ.

ಇದೇ ನವೆಂಬರು 17 ನೇ ತಾರೀಖಿನ ದಿವಸ ಲಂಡನ್ನಿನಲ್ಲಿ ಲಾರ್ಡ್ಸ್ ಕಮಿಟಿಯ ಸಭಾಭವನದಲ್ಲಿ ಮಂತ್ರಿಶ್ರೇಷ್ಠರಾದ ರಾಂಸೆಮ್ಯಾಕ್ಡೊನಾಲ್ಡ್‌ರವರ ನೇತೃತ್ವದಲ್ಲಿ 3 ನೇ ದುಂಡುಮೇಜಿನ ಪರಿಷತ್ತು ಪ್ರಾರಂಭವಾಯಿತು ಸಮ್ಮೇಳನದ ಕಾರ್ಯಕ್ರಮಗಳು ಗುಟ್ಟಾಗಿ ನಡೆಯುತ್ತಿರುವವು. ಮಂತ್ರಿಶ್ರೇಷ್ಠರು ಪ್ರತಿನಿಧಿಗಳಿಗೆ ಹಂಚಿರುವ ಪಟ್ಟಿಯಲ್ಲಿ, ಚುನಾವಣೆಯ ವಿಧಾನ, ಫೆಡರಲ್ ಕೇಂದ್ರಸಭೆಯ ಪ್ರಮಾಣ, ಗೌರ್ನರ್ ಜನರಲ್ ಮತ್ತು ಗೌರ್ನರುಗಳಿಗಿರುವ ಅಧಿಕಾರಗಳು, ಹಣಕಾಸು ಮತ್ತು ಸೈನ್ಯಕ್ಕೆ ಸಂಬಂಧಪಟ್ಟ ವಿಷಯಗಳು, ಪರ್ಸಿ ಮತ್ತು ಡೇವಿಡ್‌ಸನ್ ಕಮಿಟಿಯ ವರದಿಗಳು, ನ್ಯಾಯವಿಧಾಯಕ ಸಭೆಗಳ ರಚನೆ ಮತ್ತು ಅವುಗಳ ಅಧಿಕಾರ ಇವೇ ಮೊದಲಾದ ವಿಷಯಗಳು ಚರ್ಚಿಸಲ್ಪಡುವವೆಂದು ತಿಳಿಸಲ್ಪಟ್ಟಿದೆ. ಈ ಮಧ್ಯೆ 'ಹಿಂದೂ' ಪತ್ರಿಕೆಯ ಬಾತ್ಮೀದಾರರು 3 ನೆಯ ಸಮ್ಮೇಳನದಿಂದ ವಿಶೇಷ ಪ್ರಯೋಜನವಿಲ್ಲವೆಂದು ಭಾವಿಸಿರುವುದಾಗಿ ತಿಳಿಸಿರುತ್ತಾರೆ. ಪರಿಷತ್ತು ಡಿಸೆಂಬರ್ 20 ನೇ ತಾರೀಖಿನ ಹೊತ್ತಿಗೆ ಮುಕ್ತಾಯವಾಗಬಹುದೆಂದು ಭಾವಿಸಲ್ಪಟ್ಟಿದೆ.

ನವೆಂಬರು 11 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಔಷಧ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ 3 ಜನ ಸ್ವಯಂಸೇವಕರನ್ನೂ, ನಗರದ ಇತರ ಭಾಗಗಳಲ್ಲಿ ಪಿಕೆಟಿಂಗ್ ಮಾಡಿದ ಇಬ್ಬರು ಸ್ವಯಂಸೇವಕರನ್ನೂ ಪೋಲೀಸರು ದಸ್ತಗಿರಿ ಮಾಡಿದರು.

ಇದೇ ನವಂಬರ್ 17 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಲಾಲಾಲಜಪತರಾಯರ ದಿನಾಚರಣೆಯ ಸಂದರ್ಭದಲ್ಲಿ ಬಹಿರಂಗಮೆರವಣಿಗೆಯನ್ನು ಹೊರಡಿಸಿದ 7 ಜನರನ್ನು ಪೋಲೀಸರು ದಸ್ತಗಿರಿಮಾಡಿದರು.

ನವೆಂಬರ್ 17 ನೇ ತಾರೀಖಿನ ದಿವಸ ಮುಂಬಯಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು 3 ಜನ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣಸಜೆ, 50 ರೂಪಾಯಿ ಜುಲ್ಮಾನೆ, ಜುಲ್ಮಾನೆಯನ್ನು ಕೊಡದಿದ್ದರೆ ಮತ್ತೆ 6 ವಾರಗಳ ಕಠಿಣಸಜೆಯನ್ನು ವಿಧಿಸಿದರು.

ಅಲಹಾಬಾದಿನ ಏಕಮತ್ಯ ಸಮ್ಮೇಳನಕ್ಕಾಗಿ ಬಂದಿದ್ದ ಡಾ|| ಜೋಯಿತ್‌ರಾಂ ಗಿದ್ವಾನಿ ಮತ್ತು ಬಾಬು ಪುರುಷೋತ್ತಮದಾಸ ಟಾಂಡನ್‌ರವರು ಇದೇ ನವೆಂಬರ್ 17 ನೇ ತಾರೀಖಿನ ದಿವಸ ಸ್ಪೆಷಲ್ ಪವರ್ಸ್ ಆರ್ಡಿನೆನ್ಸಿನ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟರು.

[3 ನೆಯ ಪುಟದಿಂದ ಮುಂದುವರಿದುದು]

ಅರ್ಥವು—ಗಾವಃ-ಗೋವುಗಳು, ಆ-ಅಗ್ಮನ್-ನಮ್ಮ ಮನೆಗೆ ಬರಲಿ; ಉತ-ಹಾಗೂ, ಭದ್ರಂ-ಶುಭವನ್ನು, ಅಕ್ರನ್-ಮಾಡುವವುಗಳಾಗಲಿ; ಗೋಷ್ಠೆ-ನಮ್ಮ ಕೊಟ್ಟಿಗೆಯಲ್ಲಿ, ಸೀದನ್ತು-ಕುಳಿತುಕೊಳ್ಳಲಿ; (ಮೆಲುಕು ಹಾಕುತ್ತ ಸುಖವಾಗಿ ಮಲಗಲಿ); ಅಸ್ಮೆ-ನಮ್ಮಗಳೊಡನೆ, ರಣ್ಯಂತು-ಆನಂದದಿಂದ ವಿಹರಿಸಲಿ; (ಮತ್ತು) ಇಹ-ಈ ಹಳ್ಳಿಯಲ್ಲಿ, ಪುರುರೂಪಾಃ-ಬಗೆಬಗೆಯ ಬಣ್ಣಗಳುಳ್ಳ ಗೋವುಗಳು, ಪ್ರಜಾವತೀಃ-ಸಂತತಿಗಳಿಂದ ಕೂಡಿದವುಗಳು, ಸ್ಯುಃ-ಆಗಲಿ; ಇಂದ್ರಾಯ-ಇಂದ್ರನಿಗೋಸ್ಕರ, ಪುರ್ವೀಃ-ಬಹಳವಾದ, ಉಷಸಃ-ದಿವಸಗಳನ್ನು, (ಎಲ್ಲ ದಿವಸಗಳಲ್ಲಿ) ದುಹಾನಾಃ-ಹಾಲುಕರೆಯತಕ್ಕವುಗಳು, (ಭವೇಯುಃ-ಆಗಲಿ)

ಇದು ಮೊದಲನೆಯ ಋಕ್ಕು. ಇದರಿಂದ ಏನು ಸಿದ್ಧಿಸುವುದೆಂಬುದನ್ನು ಸ್ವಲ್ಪ ವಿಚಾರಿಸುವಾ! 'ಗೋವುಗಳು ನಮ್ಮ ಮನೆಗೆ ಬರಲಿ' ಎಂಬ ಪ್ರಾಚೀನರ ಈ ಕೋರಿಕೆಯು ವೇದದ ಗೋರಕ್ಷಣಾಭಿಪ್ರಾಯವನ್ನು ಸೂಚಿಸುವುದು. 'ಮಂಗಳವನ್ನುಂಟುಮಾಡಲಿ' ಎಂಬ ವಾಕ್ಯವು ಹಸುಗಳಲ್ಲಿ ಶುಭವನ್ನು ಉಂಟುಮಾಡುವ ಶಕ್ತಿಯು ಇರುವುದೆಂಬ ಭಾವವನ್ನು ತೋರಿಸುತ್ತದೆ. ಇದರಿಂದಲೇ ಎಲ್ಲಿ ಹಸುಗಳಿರುವುವೋ ಅಲ್ಲಿ ಮಂಗಳವಿದೆಯೆಂದು ಊಹಿಸಲ್ಪಡುವುದು. ಅದುಕಾರಣವೇ ಅತ್ರಿಯು—

ಯಸ್ಯೈಕಾಪಿ ಗೃಹೇ ನಾಸ್ತಿ ಧೇನುರ್ವತ್ಸಾನುಚಾರಿಣೀ |
ಮಂಗಲಾನಿ ಕುತಸ್ತಸ್ಯ ಕುತಸ್ತಸ್ಯ ತಮಃಕ್ಷಯಃ ||

'ಯಾವನ ಮನೆಯಲ್ಲಿ ಕರುವಿನಿಂದ ಕೂಡಿದ ಆವು ಇರುವುದಿಲ್ಲವೋ ಅವನಿಗೆ ಮಂಗಲಗಳು ಲಭಿಸವು; ಹಾಗೂ ತಮೋನಾಶವೂ ಆಗುವುದಿಲ್ಲ' ಎಂದು ಹೇಳಿದ್ದಾನೆ. ಭರತಾಚಾರ್ಯನು ತನ್ನಿಂದ ರಚಿಸಲ್ಪಟ್ಟ ನಾಟ್ಯಶಾಸ್ತ್ರದ ಮಂಟಪನಿರ್ಮಾಣಾಧ್ಯಾಯದಲ್ಲಿ—

ನಿರ್ಮಿತೇ ಮಣ್ಟಪೇ ತತ್ರ ಕಿಯತ್ಕಾಲಂ ಗಾವೋಽವಸ್ಥಾಪಯೇಯುಃ|

ಮಂಟಪವು ನಿರ್ಮಿಸಲ್ಪಟ್ಟ ಬಳಿಕ ಅದರೊಳಗೆ ಗೋವುಗಳನ್ನು ಹೊಗಿಸಿ ಕೆಲವು ವೇಳೆಯ ತನಕ ತರುಬಬೇಕು. ಎಂದು ಆಜ್ಞಾಪಿಸಿದ್ದಾನೆ.

ಈ ರೀತಿಯಾಗಿ ಗೋವುಗಳಿಂದ ಮಂಗಲವು ಉಂಟಾಗುವದೆಂದೂ, ಮಂಗಲವನ್ನುಂಟುಮಾಡುವ ಸಾಮರ್ಥ್ಯವು ಗೋವುಗಳಲ್ಲಿರುವುದೆಂದೂ ವೇದವು ಯಾವ ಗೋವುಗಳನ್ನು ಕೊಂಡಾಡುವುದೋ ಅಂತಹ ಗೋವುಗಳ ಹನನವು ವೇದಕ್ಕೆ ಅಭಿಮತವಾಗಿರುವುದೆಂದು ಹೇಗೆತಾನೆ ಹೇಳಲಾದೀತು? ಇನ್ನು ಗೋವುಗಳ ತಳಿಯು ಹಬ್ಬಲೆಂಬ ಪ್ರಾಚೀನರ ಹಾರೈಕೆಯು ಮಾಂಸದ ಸಲುವಾಗಿದ್ದಿತೆಂದು ತಿಳಿಯಲಾಗದು; ಮತ್ತೇನೆಂದರೆ ಹಾಲು ಮುಂತಾದ ಗವ್ಯಗಳು ಯಾಗೀಯ ದ್ರವ್ಯಗಳು, ಅವುಗಳ ಸಲುವಾಗಿಯೂ, 'ಭೂತ್ಯೈ ನಪ್ರಮದಿತವ್ಯಮ್' ಎಂಬ ಶಾಸನಕ್ಕೊಳಪಟ್ಟವರಾದ ಆ ಪ್ರಾಚೀನ ಮುನಿಗಳು ವಿಹಿತಕರ್ಮಾನುಷ್ಠಾನಾಧಿಕಾರಿಗಳಿದ್ದುದರಿಂದ ಅವರಿಗೆ ಅತ್ಯವಶ್ಯವಾದ ವಿಭೂತಿಯು ಗೋವುಗಳಿಂದಲೇ ಲಭಿಸುವದಾದಕಾರಣ, ಅದರ ಸಲುವಾಗಿಯೂ ಅವರು ಧಾರ್ಮಿಕಬುದ್ಧಿಯಿಂದಲೇ ಗೋವುಗಳನ್ನು ಸಲಹುತ್ತಿದ್ದರು. ಇದೇ ಅಭಿಪ್ರಾಯವು 'ಇನ್ದ್ರಾಯ ಪುರ್ವೀರುಷಸೋ ದುಹಾನಾಃ' ಎಂಬ ಹೇತುಗರ್ಭವಿಶೇಷಣ ವಿಶಿಷ್ಟವಾಕ್ಯದಿಂದ ವ್ಯಕ್ತವಾಗುತ್ತದೆ. ಗೋವುಗಳು ಚೆನ್ನಾಗಿ ಹಾಲು ಕರೆದರೆ ಆ ಹಾಲು ಮುಂತಾದುದರಿಂದ ಇಂದ್ರನು ಆರಾಧಿಸಲ್ಪಡುವನು; ಎಂಬ ಉದ್ದೇಶದಿಂದಲೇ ಪ್ರಾಚೀನರು 'ಹಸುಗಳು ಬಹುವಾಗಿ ಹಾಲು ಕರೆಯಲಿ, ಅವುಗಳ ತಳಿಯು ಹಬ್ಬಲಿ' ಎಂದು ಪ್ರಾರ್ಥಿಸಿದ್ದಾರೆ. 'ಕೊಟ್ಟಿಗೆಗಳಲ್ಲಿ ಮೆಲುಕುಹಾಕುತ್ತ ಸುಖದಿಂದ ಮಲಗಿರಲಿ' ಎಂಬ ನುಡಿಯಾದರೂ ಯಾವ ಅಭಿಪ್ರಾಯ ಸೂಚಕವಾಗಿದೆ ಎಂಬುದನ್ನು ಬಲ್ಲವರೇ ಅರಿತುಕೊಳ್ಳಲಿ. ಇದರಿಂದ ಪ್ರಾಚೀನ ಮುನಿಗಳು ಗೋವುಗಳನ್ನು ಕಾಪಾಡುತ್ತಿದ್ದರಲ್ಲದೆ, ಅವುಗಳ ಸಲುವಾಗಿ ಕೊಟ್ಟಿಗೆ (ಹಕ್ಕೆ, ಹಟ್ಟಿ) ಗಳನ್ನು ಸಹ ಮಾಡುತ್ತಿದ್ದರೆಂದು ಸ್ಪಷ್ಟವಾಗುವದು. 'ಅಸ್ಮೆ ರಣ್ಯನ್ತು' ಎಂಬ ಪ್ರಾರ್ಥನೆಯಿಂದ ಹಸುಗಳು ಅತಿ ಪ್ರೀತ್ಯಾಸ್ಪದಗಳೂ ಅಭಿಲಷಣೀಯಗಳೂ ಆಗಿದ್ದವೆಂದೂ, 'ಪ್ರಜಾವತೀಃ' ಎಂಬ ವಾಕ್ಯದಿಂದ ಪ್ರಾಚೀನರಿಗೆ ಗೋಹತ್ಯೆಯಲ್ಲಿ ಅನಾದರವೇ ಇದ್ದಿತೆಂದೂ ತಿಳಿಯಬರುವುದು. ವೇದವು ಗೋಹಿಂಸೆಯನ್ನು ಸಮ್ಮತಿಸುವುದೆನ್ನುವದಾದರೆ, ಅದಕ್ಕೆ ವಿರುದ್ಧವಾದ ಗೋಸಂತತಿಯ ಬೆಳವಣಿಗೆಯು ಅಪೇಕ್ಷಿಸಲ್ಪಡುತ್ತಿದ್ದಿಲ್ಲವಷ್ಟೆ! ಅದುಕಾರಣವೇ ವೇದಕ್ಕೆ ಗೋರಕ್ಷಣೆಯೇ ಸಮ್ಮತವಾದದ್ದೆಂದು ನಾವು ಹೇಳುತ್ತೇವೆ.

ಇದೊಂದೇ ಋಕ್ಕಿನಿಂದಾದರೂ ಗೋರಕ್ಷಣೆಯು ವೇದಸಮ್ಮತವೆಂದು ಸಿದ್ಧವಾಗುವದು; ಆದರೂ ಈ ವಿಷಯಕವಾದ ಹೆಚ್ಚು ತಿಳುವಳಿಕೆಗೋಸ್ಕರ ಇನ್ನೂ ಕೆಲವು ಋಕ್ಕುಗಳನ್ನು ಉದಾಹರಿಸುವೆವು.

ನ ತಾ ನಶನ್ತಿ ನ ದಭಾತಿ ತಸ್ಕರೋ ನಾಸಾಮಾಮಿತ್ರೋ ವ್ಯಥಿರಾದಧರ್ಷತಿ | ದೇವಾಂಶ್ಚ ಯಾಭಿರ್ಯಜತೇ ದದಾತಿ ಚ ಜ್ಯೋಗಿತ್ತಾಭಿಃ ಸಚತೇ ಗೋಪತಿಃ ಸಹ ||

ಅರ್ಥವು—ತಾಃ-ಆ ಗೋವುಗಳು, ನನಶನ್ತಿ-ನಮ್ಮ ಬಳಿಯಲ್ಲಿ ಯಾವ ಬಗೆಯ ಕೇಡನ್ನೂ ಹೊಂದದೆ ಸುಖವಾಗಿರಲಿ; (ಮತ್ತು) ತಸ್ಕರಃ-ಕಳ್ಳನು, ನದಭಾತಿ-ನಮ್ಮ ಗೋವುಗಳನ್ನು ಕೊಲ್ಲದಿರಲಿ; ಅಮಿತ್ರಃ-ಹಗೆಗಳ ಮೂಲಕವಾದ, ವ್ಯಥಿ-ಶಸ್ತ್ರಗಳಿಂದ ಸಂಭವಿಸುವ ಶಸ್ತ್ರಬಾಧೆಯು, ಆಸಾಂ-ಈ ಗೋವುಗಳನ್ನು, ನಾದಧರ್ಷತಿ-ಆಕ್ರಮಿಸದಿರಲಿ; ಗೋಪತಿಃ-ಇಂತಹ ಗೋವುಗಳ ಯಜಮಾನನು, ಯಾಭಿಃ-ಯಾವುಗಳಿಂದ (ಯಾಗದ್ರವ್ಯಕ್ಕೆ ಹೇತುಭೂತಗಳಾದ ಗೋವುಗಳಿಂದ) ದೇವಾನ್—ಇಂದ್ರಾದಿದೇವತೆಗಳನ್ನುದ್ದೇಶಿಸಿ, ಯಜತೇ-ಯಜಿಸುವನೋ, ಚ-ಮತ್ತು, ದದಾತಿ-ಅರ್ಪಿಸುವನೋ, ತಾಭಿಃ ಸಹ-ಆ ಗೋವುಗಳೊಡನೆ, ಸಚತೆ-ಬಹುಕಾಲದವರೆಗೂ ಕೂಡಿರುವವನಾಗಲಿ.

ಈ ವಚನವಾದರೂ ಗೋರಕ್ಷಣೆಯ ಶ್ರುತಿಸಮ್ಮತತ್ವವನ್ನು ವಿಶದೀಕರಿಸುತ್ತದೆ. ಇಲ್ಲಿ ಗೋವುಗಳ ತಿರೋಧಾನವಾದರೂ ಸಹನವಾಗುವುದಿಲ್ಲವೆಂಬ ತಾತ್ಪರ್ಯವಿರುತ್ತಿರಲು, ಅವುಗಳ ವಧೆಯು ಇಷ್ಟವಲ್ಲವೆಂಬುದನ್ನು ಬೇರೆ ಹೇಳಬೇಕೇ? [illegible]ರಾದ ಕಳ್ಳರು ಕೂಡ ಹಸುಗಳನ್ನು ಕೊಲ್ಲಲಾಗದೆಂದು ಪ್ರಾರ್ಥಿಸಲ್ಪಡುವುದರಿಂದ, ಪ್ರಾಚೀನರಲ್ಲಿ ಗೋವುಗಳ ಬಗ್ಗೆ ದಯಾತಿಶಯವಿದ್ದಿತೆಂದು ಊಹಿಸಲ್ಪಡುವುದು. ಈ ರೀತಿಯಾಗಿ ಅನ್ಯರಿಂದಾದರೂ ಸಂಭವಿಸಬಹುದಾದ ಗೋಹಿಂಸೆಯನ್ನು ಸಹಿಸದಿರುವವರು ತಾವೇ ಕೈಮುಟ್ಟಿ ಗೋವುಗಳನ್ನು ಕೊಲ್ಲುತ್ತಿದ್ದರೆಂದು ಹೇಳಲು ಆಸ್ಪದವೆಲ್ಲಿದೆ? ಆದ್ದರಿಂದ ಪ್ರಾಚೀನರು ಗೋವುಗಳನ್ನು ಕೊಲ್ಲುತ್ತಿದ್ದರೆಂದು ಹೇಳುವವರ ಮಾತು ಪ್ರಾಚೀನರಿಗೆ ಗೋಹನನವೇ ಅಭಿಮತವಾಗಿದ್ದಲ್ಲಿ ಗೋವುಗಳು ಪ್ರತಿದಿನವೂ ಕೊಲ್ಲಲ್ಪಟ್ಟವುಗಳಾಗಿ ಅವುಗಳ ಸಂತತಿಯೇ ಕ್ಷೀಣದಶೆಯನ್ನು ಪಡೆಯಬಹುದಾಗಿದ್ದಿತು. ಇದರಿಂದ ಯಜಮಾನನು ಹಾಲು ಮೊದಲಾದ ಯಾಗೀಯ ದ್ರವ್ಯಗಳಿಂದ ಇಂದ್ರಾದಿದೇವತೆಗಳನ್ನು ಆರಾಧಿಸುವಿಕೆಯೇ ಸಂಭವಿಸದು. ಈ ಮೇಲೆ ಹೇಳಿದ ಋಕ್ಕಿನಲ್ಲಿರುವ 'ದದಾತಿ' ಎಂಬ ಶಬ್ದಕ್ಕೆ ಗೋಮಾಂಸದಿಂದಲೇ ಯಾಗಸಿದ್ಧಿಯೆಂಬ ತಾತ್ಪರ್ಯವನ್ನು ಹೇಳಬಾರದು. ಏಕೆಂದರೆ—ಶ್ರುತಿಯ ಅಭಿಪ್ರಾಯವು ಹಾಗಿರುವುದಿಲ್ಲ. ಇದನ್ನು ಈ ಮುಂದಣ ಋಕ್ಕುಗಳಿಂದ ಅರಿತುಕೊಳ್ಳಬಹುದು.

ನ ತಾ ಅರ್ವಾ ರೇಣುಕಕಾಟೋ ಅಶ್ನುತೇ ನ ಸಂಸ್ಕೃತತ್ರಮುಪಯನ್ತಿ ತಾ ಅಭಿ | ಉರುಗಾಯಮಭಯಂ ತಸ್ಯ ತಾ ಅನು ಗಾವೋ ಮರ್ತ್ಯಸ್ಯ ವಿಚರನ್ತಿ ಯಜ್ವನಃ ||

'ಖುರಗಳ ಹೊಡೆತದಿಂದ ನೆಲದ ಧೂಳಿಯನ್ನೆಬ್ಬಿಸತಕ್ಕ ಕೊಳಗುಳದ ಕುದುರೆಯು ಆ ನಮ್ಮ ಹಸುಗಳ ಬಳಿಗೆ ಬಾರದಿರಲಿ. ಆ ಗೋವುಗಳು ವಿಶಸನಾದಿ (ಕೊಲ್ಲುವಿಕೆ ಮೊದಲಾದ) ಸಂಸ್ಕಾರವನ್ನು ಪಡೆಯದಿರಲಿ. ಹಾಗೂ ಆ ಆಕಳುಗಳು ವಿಶಾಲವೂ ಯಾವ ಭಯವಿಲ್ಲದುದೂ ಆದ ಭೂಮಿಯಲ್ಲಿ ಏನೊಂದೂ ಉದ್ವೇಗವಿಲ್ಲದೆ ಸ್ವಚ್ಛಂದವಾಗಿ ವಿಹರಿಸಲಿ.

ಇಲ್ಲಿ, ಕುದುರೆಯು ಹಸುಗಳನ್ನು ಹಿಂಸಿಸುವ ಪ್ರಾಣಿಯಲ್ಲವಾದರೂ, ಕುದುರೆಯಿಂದ ಗೋವುಗಳಿಗೆ ಭೀತಿಯುಸಹ ಉಂಟಾಗಬಾರದೆಂಬ ಆಶಯವಿದೆ. 'ನ ಸಂಸ್ಕೃತತ್ರಂ ನಾಭಿಯನ್ತಿ' ಎಂಬ ಪ್ರಾರ್ಥನೆಯು ಯಾಗದಲ್ಲಿ ಅವುಗಳ ವಿಶಸನಾದಿಸಂಸ್ಕಾರವನ್ನೂ ಕೂಡ ನಿರಾಕರಿಸುತ್ತದೆ. ಮತ್ತು ಭೀತಿಯಿಲ್ಲದ ಸ್ಥಾನದಲ್ಲಿ ಅವುಗಳ ಸಂಚಾರವು ಹೇಳಲ್ಪಡುವದರಿಂದ, ಪ್ರಾಚೀನರು ಸುರಕ್ಷಿತವಾದ ವಿಸ್ತೀರ್ಣಸ್ಥಳದಲ್ಲಿಯೇ ಹಸುಗಳನ್ನು ತಿರುಗಾಡಿಸುತ್ತಿದ್ದರೆಂದು ತಿಳಿಯಬರುತ್ತದೆ. ಇದರಿಂದ ಗೋವುಗಳು ಸಂಚರಿಸಲು ಯೋಗ್ಯವಾದ ಸ್ಥಳವು ಎಂತಹದಿರಬೇಕೆಂಬ ಸಂಗತಿಯನ್ನು ಗೋರಕ್ಷಕರು ಅರಿತುಕೊಳ್ಳಬಹುದಾಗಿದೆ.

ಗಾವೋ ಭಗೋ ಗಾವ ಇನ್ದ್ರೋ ಮೇ ಅಚ್ಛಾನ್ ಗಾವಃ ಸೋಮಸ್ಯ ಪ್ರಥಮಸ್ಯ ಭಕ್ಷಃ | ಇಮಾ ಯಾ ಗಾವಃ ಸಜನಾಸ ಇನ್ದ್ರ ಇಚ್ಛಾಮಿದ್ಧೃದಾ ಮನಸಾ ಚಿದಿನ್ದ್ರಮ್ ||೫||

ಹಸುಗಳೇ ನನ್ನ ಐಸಿರಿಯಾಗಿರಲಿ. ಇಂದ್ರನು ನನಗೆ ಗೋವುಗಳನ್ನೇ ಕೊಡುವವನಾಗಲಿ. ಅವುಗಳು ಶ್ರೇಷ್ಠನಾದ ಸೋಮನಿಗೆ ಹಾಲು ಮೊದಲಾದವುಗಳನ್ನು ಕೊಡತಕ್ಕವುಗಳಾದ್ದರಿಂದ ಭಕ್ಷಸಾಧನಗಳಾಗಲಿ. ಎಲೈ ಜನರೇ, ಈ ವಿಧಗಳಾದ ಆಕಳುಗಳೇ ಹಾಲು ತುಪ್ಪ ಮುಂತಾದವುಗಳಿಂದ ಪೋಷಿಸುವ ಮೂಲಕ ಇಂದ್ರರೂಪವೇ ಆಗಿವೆ. (ಹಸುಗಳು ಹಾಲು ಮೊದಲಾದುದನ್ನು ಕೊಡದಿದ್ದರೆ ಯಾಗಾದಿ ಕರ್ಮಗಳು ನೆರವೇರಲಾರವು. ಯಾಗಾದಿಗಳು ಜರುಗಲ್ಪಡದಿದ್ದರೆ ಅದರಿಂದ ಇಂದ್ರನು ಅತೀವಕೃಶನಾಗಿ ಇಂದ್ರತ್ವಕ್ಕೆ ಅನರ್ಹನಾಗುವನು. ಆದ್ದರಿಂದ, ಇಂದ್ರನ ಇಂದ್ರತ್ವವು ಯಾವುಗಳಿಂದುಂಟಾಗುವುದೋ (ಅಂತಹ ಹಸುಗಳೇ ಇಂದ್ರನೆಂದು ಹೇಳಲ್ಪಡುವವು) ಈ ತೆರನಾದ ಇಂದ್ರನನ್ನು (ಗೋರೂಪನಾದ ಇಂದ್ರನನ್ನು) ಮನಃ ಪೂರ್ವಕವಾಗಿ ಬಯಸುವೆನು.

ಇಲ್ಲಿಯಾದರೂ ಪ್ರಥಮ ಪಾದದಿಂದ ಹಸುಗಳ ಮಹತ್ತ್ವಾತಿಶಯವೂ ಗೋರಕ್ಷಣೆಯ ಅಂಗೀಕಾರವೂ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. ಯಜಮಾನನು ಧನವನ್ನು ಅಪೇಕ್ಷಿಸದೆ ಗೋವುಗಳನ್ನೇ ಬಯಸುವದರಿಂದ ಧನಕ್ಕಿಂತ ಗೋವುಗಳೇ ಹೆಚ್ಚಿನವೆಂದು ಪ್ರಾಚೀನರ ಒಪ್ಪಿಗೆ ಇದ್ದಿತೆಂದು ಕಂಡುಬರುವುದು. ಗೋಹನನದಿಂದ ಸ್ವಲ್ಪವಾದರೂ ಸುಖ ಸಮೃದ್ಧಿಯುಂಟಾಗದೆ ವಿಶೇಷವಾದ ಹಾನಿಯೇ ಆಗುವದು ಒಂದು ಆಕಳನ್ನು ಸಲಹುವುದರಿಂದ ಅದರ ತಳಿಯು ಮುಂದೆ ತನಗೆ ವಿಶೇಷವಾದ ಸಂಪತ್ತನ್ನು ಒದಗಿಸಿಕೊಡುವುದೆಂಬ ವಿಚಾರವಿಲ್ಲದೆ ಅದರ ಮೇಲೆ ಶಸ್ತ್ರಯನ್ನೆತ್ತುವ ಪಾಪಿಯು ತನ್ನನ್ನೂ ಇಡೀ ರಾಷ್ಟ್ರದ ಸಿರಿಯನ್ನೂ ಅಧೋಗತಿಗೆ ಗುರಿಮಾಡುವನು. ಪ್ರಾಚೀನರು ಇಂದ್ರನನ್ನು ಕುರಿತು ಧನವನ್ನು ಬೇಡದೆ ಗೋವುಗಳನ್ನೇ ಬಯಸಿ ಪ್ರಾರ್ಥಿಸಿದುದನ್ನು ಪರಿಭಾವಿಸಿದರೆ, ಆ ಮಹಾತ್ಮರು ಧನವನ್ನು ಧನವೆಂದು ತಿಳಿಯದೆ ಗೋವುಗಳನ್ನೇ ಅಸಾಧಾರಣ ದ್ರವ್ಯವೆಂದು ದೃಢವಾಗಿ ನಂಬಿದ್ದರೆಂದು 'ಗಾವೋ ಭಗಃ' ಎಂಬವಾಕ್ಯದಿಂದ ತಿಳಿದುಬರುತ್ತದೆ. ಮತ್ತು, ಗೋವುಗಳು ಹಾಲು ತುಪ್ಪ ಮೊದಲಾದ ಯಾಗೀಯ ದ್ರವ್ಯಗಳಿಂದ ಇಂದ್ರನನ್ನು ಪೋಷಿಸದಿದ್ದರೆ ಅವನ ಇಂದ್ರತ್ವನಾದರೂ ಇಲ್ಲವಾಗುವದು. ಆದ್ದರಿಂದ ಮಹೇಂದ್ರನ ಮಹೇಂದ್ರತ್ವವಾದರೂ ಗೋವುಗಳ ಅಧೀನವೇ ಆಗಿರುವದೆಂಬ ಅಭಿಪ್ರಾಯದಿಂದೇ ಮೂರನೆಯ ಚರಣದಲ್ಲಿ 'ಗಾವ ಇಂದ್ರಃ' ಎಂಬ ವಾಕ್ಯವಿದೆ. ಇಲ್ಲಿ ಹಸುಗಳೇ ಇಲ್ಲದಂತಾಗಲು ಇಂದ್ರನಿಗಾದರೂ ನಿರ್ಗತಿಕತ್ವವು ಸಂಭವಿಸುವಲ್ಲಿ ಮನುಷ್ಯರ ವಿಷಯವಾಗಿ ಹೇಳುವದೇನಿದೆ? ಎಂಬ ಧ್ವನಿಯು ಗೋವುಗಳ ಮಹತ್ತ್ವಾತಿಶಯವನ್ನು ವ್ಯಕ್ತಗೊಳಿಸುವುದಾಗಿ ಅವುಗಳನ್ನು ಅವಶ್ಯಕವಾಗಿ ರಕ್ಷಿಸಬೇಕೆಂದು ತಿಳಿಸುವುದು.

ಯೂಯಂ ಗಾವೋ ಮೇ ದಯಥಾ ಕೃಶಂಚಿದಶ್ರೀರಂ ಚಿತ್ಕೃಣುಥಾ ಸುಪ್ರತೀಕಮ್ | ಭದ್ರಂ ಗೃಹಂ ಕೃಣುಥ ಭದ್ರವಾಚೋ ಬೃಹದ್ವೋ ವಯ ಉಚ್ಯತೇ ಸಭಾಸು ||೬||

'ಎಲೌ ಗೋವುಗಳೇ, ನೀವು ನನ್ನನ್ನು ಕರುಣಿಸಿರಿ. ಮತ್ತು ಕೃಶನೂ ಅಮಂಗಲನೂ ಆದ ನನ್ನನ್ನು ಶೋಭನಾಂಗನನ್ನಾಗಿ ಮಾಡಿರಿ. ಮಂಗಲಮಯಧ್ವನಿಯುಳ್ಳ ಎಲೌ ತಾಯಿಗಳಿರಾ, ನನ್ನ ಮನೆಯನ್ನು ಮಂಗಲರೂಪವಾದುದನ್ನಾಗಿ ಮಾಡಿರಿ. (ಎಂದರೆ ನಿಮ್ಮ ತಳಿಯನ್ನು ಬೆಳಸಿ ನನ್ನ ಮನೆಯನ್ನು ಶೋಭಾಯಮಾನವಾದುದನ್ನಾಗಿ ಮಾಡಿರಿ; ಎಂದು ಪ್ರಾರ್ಥನೆಯು). ನಿಮ್ಮಗಳಿಗೆ ಮಿಗಿಲಾದ ಮೇವು ಕೊಡಿಸಲ್ಪಡುವುದು.'

ಇಲ್ಲಿ ಹಸುಗಳ ಹಾಲು ಮೊದಲಾದುದರ ಸೇವನೆಯಿಂದ ಸರ್ವರ ಶರೀರವೂ ಪುಷ್ಟಿಯಾಗುವದರಿಂದ, ಗೋರಕ್ಷಣೆಯು ಕೇವಲ ಧರ್ಮರಕ್ಷಣೆಗೋಸ್ಕರವೇ ಅವಶ್ಯಕವಾದುದಲ್ಲವೆಂಬುದು ಧ್ವನಿತವಾಗುವದು. ನಾಲ್ಕನೆಯ ಚರಣದಿಂದ ಗೋವುಗಳ ಮೇವು ಹೇಗೆ ಸಂಪಾದಿಸಲ್ಪಡುತ್ತಿದ್ದಿತೆಂಬುದು ಸೂಚಿಸಲ್ಪಟ್ಟಿದೆ. ಎಂದರೆ ಪೂರ್ವಕಾಲದಲ್ಲಿ ಎಲ್ಲರೂ ಭಿನ್ನಭಾವವಿಲ್ಲದೆ ಹಸುಗಳಿಗೆ ಮೇವನ್ನು ಕೊಡುತ್ತಿದ್ದರೆಂದು ತೋರುವದು. (ಸಶೇಷ)

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬಿರಿತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷವಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತಜ್ವರ, ಮೈಲಿಗೆ, ಕೆಂಚ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣುಹಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕಾಯಿಲೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರೂ. 1-0-0.

ರ್ಹ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರೂ. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರೂ. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[15] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೆ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನು ನೋವು, ನಿದ್ದೆ ಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತನ್ನು ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಪಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಆದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಟ್ಟುಚೆಟ್ಟು ಆಗುವದು, ಅನಿಯಮಿತತನ, ಹೆಚ್ಚುಕಡಿಮೆ, ಗಂಟುಗಂಟು ಮುಟ್ಟುಚೆಟ್ಟು ಆಗೋಣ, ಮುಟ್ಟುಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮೂತಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ನೈಕಟ್ಟು ನಾಜೂಕ ಆದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಆದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಆದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಆದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾನ್ಹಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
1 ಮು. ಪೋ. **ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳತ, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುಪಕಾರವಿಲ್ಲದೆ ಕೂತಲ್ಲೇ ಕೂಡಬೇಕಾದವರಿಗೂ, ಪ್ರೋಷಿತಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆತುಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[21] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[22] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ

ERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ನವಂಬರ್ ೧೯೩೨ [ಸಂಚಿಕೆ ೨೯

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “ವೀರಶೈವರತ್ನ” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸತ್ಯಾಗ್ರಹಸಮರವಾರ್ತೆ.

ನವೆಂಬರ್ 20 ನೇ ತಾರೀಖಿನ ದಿವಸ ರಾತ್ರಿ ಮುಂಬಯಿ ಪೋಲೀಸರು ಕಾಂಗ್ರೆಸ್ ಸ್ವಯಂಸೇವಕರ ಜನರಲ್ ಆಫೀಸರಾದ ಮಿ|| ಎಸ್. ಎಂ. ಸೊಸಾರೆಯವರನ್ನು ದಸ್ತಗಿರಿ ಮಾಡಿದರು.

ನವೆಂಬರ್ 19 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು 7 ಜನ ಕಾಂಗ್ರೆಸ್ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ನಾಗಪುರದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಮಿ|| ಅಭ್ಯಂಕರವರ ಮೋಟಾರನ್ನು ಸರಕಾರದವರು ಜುಲ್ಮಾನೆಯ ಹಣಕ್ಕಾಗಿ ಜಪ್ತಮಾಡಿ ಹರಾಜು ಹಾಕಿದ್ದರು. ಅದನ್ನು ಹರಾಜಿನಲ್ಲಿ ಕೊಂಡುಕೊಂಡವರು ನೋಟಾರನ್ನು ಮಿ|| ಅಭ್ಯಂಕರವರ ಪತ್ನಿಗೆ ಹಿಂತಿರುಗಿ ಕೊಟ್ಟಿರುತ್ತಾರೆ.

ಕಲ್ಕತ್ತೆಯ ‘ನವಾಬಾಲಿ’ ಎಂಬ ದೇಶಭಾಷಾಪತ್ರಿಕೆಯ ಸಂಪಾದಕರಾದ ಶ್ರೀ ಕ್ಷಿತೀಶರಾಮಚೌಧರಿಯವರು ರಾಜದ್ರೋಹದ ಅಪಾದನೆಯ ಮೇಲೆ ಒಂದು ವರ್ಷ ಕಾರಾಗೃಹವಾಸವನ್ನನುಭವಿಸುತ್ತಿದ್ದು ನವೆಂಬರ್ 24 ನೇ ತಾರೀಖಿನ ದಿವಸ ಅಲೀಪುರ ಜೈಲಿನಿಂದ ಬಿಡುಗಡೆ ಹೊಂದಿದರು. ಆದರೆ ಆರ್ಡಿನೆನ್ಸಿನ ಪ್ರಕಾರ ಪೋಲೀಸರು ಅವರನ್ನು ಪುನಃ ದಸ್ತಗಿರಿ ಮಾಡಿದರು.

ಉತ್ತರಕನ್ನಡ ಜಿಲ್ಲೆಯ ಕುಮಟಾದಲ್ಲಿ ಪ್ರಕಟವಾಗುವ ‘ಕೆನರಾನ್ಯೂಸ್’ ಎಂಬ ವಾರಪತ್ರಿಕೆಯ ಸಂಪಾದಕರೂ, ಪ್ರಿಂಟರೂ ಆದ ಶ್ರೀ ಪಾಂಡುರಂಗ ಕೃಷ್ಣಶಾನುಭೋಗರವರು ತಮ್ಮ ಪತ್ರಿಕೆಯಲ್ಲಿ ಪಂಡಿತ ಮೋತೀಲಾಲರ ವಾರ್ಷಿಕೋತ್ಸವದ ವಾರ್ತೆಯನ್ನು ಪ್ರಕಟಿಸಿ ಕಾನೂನು ಭಂಗದ ಚಳವಳಿಗೆ ಪ್ರೋತ್ಸಾಹ ಕೊಟ್ಟರೆಂಬ ಅಪಾದನೆಯ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಸದರಿ ಪತ್ರಿಕಾ ಸಂಪಾದಕರಿಗೆ ವಿಧಿಸಿದ್ದ 200 ರೂಪಾಯಿಗಳ ಜುಲ್ಮಾನೆಯು ಅಪೀಲಿನಲ್ಲಿ ಮುಂಬಯಿ ಹೈಕೋರ್ಟ್ ಜಡ್ಜರಿಂದ ವಜಾಮಾಡಲ್ಪಟ್ಟಿತು.

ಇದೇ ನವಂಬರ್ 22 ನೆಯ ತಾರೀಖು ದಿವಸ ಸಿದ್ದಾಪುರ ತಾಲೂಕು ಮಹಿಳಾಪರಿಷತ್ತಿನ ವಿಶೇಷ ಅಧಿವೇಶನವು ಹುಲಿಮನೆಯಲ್ಲಿ ನಡೆಯಿತು. ರಾಷ್ಟ್ರೀಯ ಧ್ವಜಾರೋಹಣವೂ, ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀಮತಿ ತಾರಾಬಾಯಿಯವರ ಭಾಷಣವೂ ಆದನಂತರ ಠರಾವುಗಳು ಚರ್ಚಿಸಲ್ಪಟ್ಟು ಅಂಗೀಕರಿಸಲ್ಪಟ್ಟವು. ಅನಂತರ ಎಲ್ಲರೂ ಸೇರಿ ಬಹಿರಂಗಮೆರವಣಿಗೆಯನ್ನು ಹೊರಡಿಸಿದರು. ಪೋಲೀಸರು ಮೆರವಣಿಗೆಯನ್ನು ತಡೆದದ್ದರಿಂದ ಆದ ಗಲಭೆಯಲ್ಲಿ ಅನೇಕರಿಗೆ ಗಾಯಗಳಾದವು.

ದೇಹಾಲಸ್ಯದ ನಿಮಿತ್ತವಾಗಿ ಡಾ|| ಆಲಂರವರು ಯಾವ ನಿರ್ಬಂಧವೂ ಇಲ್ಲದೆ ಬಿಡುಗಡೆಮಾಡಲ್ಪಟ್ಟಿರುತ್ತಾರೆ.

ಶಾಸನಭಂಗ ಚಳವಳಿಯ ಶಿಕ್ಷಾವಿವರ.

ಇಂಡಿಯಾ ಸರಕಾರದ ಪ್ರಕಟಣ ಶಾಖಾಧಿಕಾರಿಗಳು ಪ್ರಕಟಿಸಿದ ವರದಿಯಿಂದ ಪ್ರಾಂತವಾರಾಗಿ ಈ ಕೆಳಗಿನಂತೆ ಖೈದಿಗಳು ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವರೆಂದು ತಿಳಿದುಬಂದಿದೆ:—

ಸೆಪ್ಟಂಬರ್

ಪ್ರಾಂತ್ಯ	ಗಂಡಸರು	ಹೆಂಗಸರು	ಜುಮ್ಲಾ
ಮದರಾಸು	೧೫೧೪	೧೪೯	೧೬೬೩
ಬೊಂಬಾಯಿ	೫೩೪೭	೨೬೨	೫೬೦೯
ಬಂಗಾಳ	೨೫೨೩	೧೭೧	೨೬೯೪
ಸಂಯುಕ್ತ ಪ್ರಾಂತ್ಯ	೪೧೩೪	೧೦೩	೪೨೩೭
ಪಂಜಾಬ	೭೧೮	೨೯	೭೪೭
ಬಿಹಾರ್ ಮತ್ತು ಒರಿಸ್ಸಾ	೨೪೫೭	೭೦	೨೫೨೭
ಮಧ್ಯಪ್ರಾಂತ್ಯ	೮೪೭	೧೧	೮೫೮
ಅಸ್ಸಾಮ್	೬೦೦	೨೬	೬೨೬
ಗಡಿಪ್ರಾಂತ್ಯ	೧೯೨೧	೧	೧೯೨೨
ಡಿಲ್ಲಿ	೩೬೫	೧೮	೩೮೩
ಕೊಡಗು	೫೪	೦	೫೪
ಅಜಮೀರ—ಮೇವಾಡ	೮೯	೩	೯೨
ಜುಮ್ಲಾ	೨೦೫೭೯	೮೪೩	೨೧೪೨೨

ಆಕ್ಟೋಬರ್

ಪ್ರಾಂತ್ಯ	ಗಂಡಸರು	ಹೆಂಗಸರು	ಜುಮ್ಲಾ
ಮದರಾಸು	೧೪೬೫	೧೩೮	೧೬೦೩
ಬೊಂಬಾಯಿ	೪೮೬೬	೨೩೮	೫೧೦೪
ಬಂಗಾಳ	೨೪೨೩	೧೮೧	೨೬೦೪
ಸಂಯುಕ್ತ ಪ್ರಾಂತ್ಯ	೩೭೮೫	೧೦೨	೩೮೮೭
ಪಂಜಾಬ	೬೦೯	೨೬	೬೩೫
ಬಿಹಾರ್ ಮತ್ತು ಒರಿಸ್ಸಾ	೨೩೮೪	೬೮	೨೪೫೨
ಮಧ್ಯ ಪ್ರಾಂತ್ಯ	೭೦೮	೭	೭೧೫
ಅಸ್ಸಾಮ್	೫೧೮	೧೫	೫೩೩
ಗಡಿಪ್ರಾಂತ್ಯ	೧೯೧೧	೧	೧೯೧೨
ಡಿಲ್ಲಿ	೨೬೩	೧೯	೨೮೨
ಕೊಡಗು	೫೫	೦	೫೫
ಅಜಮೀರ—ಮೇವಾಡ	೭೩	೩	೭೬
ಜುಮ್ಲಾ	೧೯೦೬೦	೭೯೮	೧೯೮೫೮

ಸೆಪ್ಟಂಬರ್ ತಿಂಗಳಾಂತ್ಯದವರೆಗೆ ಕ್ಷಮೆಬೇಡಿ ಬಿಡುಗಡೆಹೊಂದಿದವರು.

ಪ್ರಾಂತ್ಯ	ಗಂಡಸರು	ಹೆಂಗಸರು	ಜುಮ್ಲಾ
ಮದರಾಸು	೫೩	೦	೫೩
ಬೊಂಬಾಯಿ	೬೬	೬	೭೨
ಬಂಗಾಳ	೭೧೩	೧೩	೭೨೬
ಸಂಯುಕ್ತ ಪ್ರಾಂತ್ಯ	೨೮೭೫	೭೫	೨೯೫೦
ಪಂಜಾಬ	೧	೦	೧
ಬಿಹಾರ್ ಮತ್ತು ಒರಿಸ್ಸಾ	೨೩೪	೩	೨೩೭
ಮಧ್ಯಪ್ರಾಂತ್ಯ	೫೯	೫	೬೪
ಅಸ್ಸಾಮ್	೧೯೮	೧೧	೨೦೯
ಗಡಿಪ್ರಾಂತ್ಯ	೨೭೦೯	೦	೨೭೦೯
ಡಿಲ್ಲಿ	೪೩	೨	೪೫
ಕೊಡಗು	೧೫	೦	೧೫
ಅಜಮೀರ—ಮೇವಾಡ	೧೪	೦	೧೪
ಜುಮ್ಲಾ	೬೯೮೦	೧೧೫	೭೦೯೫

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯೋದ್ಘಾಟನ ಸಮಾರಂಭ.

ಕಿರಸೂರು

ಬಾಗಲಕೋಟೆ ತಾ|| ಕಿರಸೂರಗ್ರಾಮದ ಬ್ರಾಹ್ಮಣಾದಿ ಸಮಸ್ತ ಸಮಾಜದ ಪ್ರಮುಖಜನರು ತಾ|| ೧೦-೧೧-೩೨ ನೆಯ ಗುರುವಾರ ಸಂಜೆಯ ೮ ಘಂಟೆಗೆ ಇಲ್ಲಿಯ ಬೃಹನ್ಮಠದಲ್ಲಿ ಪ್ರಚಂಡಸಭೆಯನ್ನು ನೆರೆಯಿಸಿದ್ದರು. ಸದರಿ ಸಭೆಗೆ ಇಲ್ಲಿಯ ಬೃಹನ್ಮಠಾಧ್ಯಕ್ಷ ತಪೋಧನ ಶ್ರೀ|| ಷ|| ಬ್ರ|| ಸಿದ್ಧಮಲ್ಲಿಕಾರ್ಜುನಶಿವಾಚಾರ್ಯರು ಅಧ್ಯಕ್ಷರಾಗಬೇಕೆಂದು ಶ್ರೀಮಂತ ನಾರಾಯಣ ಭೀಮರಾವಜೋಶಿ ಇವರು ಸೂಚಿಸಿದಪ್ರಕಾರ ಶ್ರೀಯುತ ಮಲ್ಲಪ್ಪ ಸುನಗದ ಇವರು ಸರ್ವಾನುಮತದಿಂದ ಅನುಮೋದಿಸಿದಮೇಲೆ ಶ್ರೀಗಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಕೂಡಲೇ 'ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜಯ' ಎಂಬ ಜಯಘೋಷವು ದಶದಿಕ್ಕುಗಳನ್ನು ವ್ಯಾಪಿಸಿತು. 'ಜಾತಿಗೆ ಭೇದವಿದ್ದರೂ ನೀತಿಗೆ ಭೇದವಿಲ್ಲ' ಎಂಬ ನಾಣ್ಣುಡಿಯನ್ನನುಸರಿಸಿ ವೀರಶೈವ, ಸ್ಮಾರ್ತ, ವೈಷ್ಣವ, ಮಹಮ್ಮದೀಯ ಮೊದಲಾದ ಎಲ್ಲಾ ಮತದವರು ತಮ್ಮ ತಮ್ಮ ಮತಭೇದಭಾವವನ್ನು ಮನಸ್ಸಿನಲ್ಲಿಡದೆ ಎಲ್ಲರೂ ಒಗಟ್ಟಾಗಿ ಸಮುತ್ಕರ ಸುಖಶಾಂತಿಗೆಗೂ, ಪುರೋಭಿವೃದ್ಧಿಗೂ ಕಾರಣೀಭೂತಗಳಾದ 'ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯ ಮತ್ತು ಭಜನಾಸಂಘ' ಎಂಬೆರಡು ಅತಿಪವಿತ್ರಕಾರ್ಯಗಳನ್ನು ಮಾಡಬೇಕೆಂದೂ ಇವುಗಳು ನಿರಂತರವಾಗಿ ಸಾಗಬೇಕಾದರೆ ಪುಣ್ಯಪುರುಷರೇ ಬೇಕಾದುದರಿಂದ ಇಲ್ಲಿಯ ತಪೋಧನರೇ ಯಾವಾಗಲೂ ಅಧ್ಯಕ್ಷರಾಗಿರಬೇಕೆಂದೂ ಈ ಪವಿತ್ರಕಾರ್ಯಗಳ ಸ್ಥಾಪನಸಮಾರಂಭವಾದರೂ ಇವರ ಪವಿತ್ರಹಸ್ತದಿಂದಲೇ ಜರುಗಬೇಕೆಂದೂ ಸಮಸ್ತ ಪ್ರಮುಖ ಸ್ತ್ರೀ-ಪುರುಷರು ಪ್ರಾರ್ಥನೆಯನ್ನು ಮಾಡಿದರು. ಅದರಂತೆ ಅಧ್ಯಕ್ಷರು ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಪವಿತ್ರಮಂದಿರದ ಮಹಾದ್ವಾರವನ್ನು ತೆರೆದಮೇಲೆ ಈ ಮೊದಲೇ ರಂಭಾಸ್ತಂಭಗಳಿಂದಲೂ, ತಳಿರುತೋರಣಗಳಿಂದಲೂ, ಛತ್ರಚಾಮರಾದಿಗಳಿಂದಲೂ ಅಲಂಕರಿಸಲ್ಪಟ್ಟ ದಿವ್ಯಸಿಂಹಾಸನದಲ್ಲಿ ಸ್ಥಾಪಿಸಿದ ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರರ ಭಾವಚಿತ್ರಕ್ಕೆ ಶ್ರೀಮಂತ ಬಾಪೂರಾವ ಕುಲಕರ್ಣಿ ಇವರು ಸ್ವಹಸ್ತಗಳಿಂದ ಷೋಡಶೋಪಚಾರಗಳಿಂದ ಪೂಜೆಯುಂಗೈದರು. ಆ ಮೇಲೆ ಶ್ರೀಮಂತ ಮಲ್ಲಪ್ಪ ಸುನಗದ ಇವರು ವಾಚನಾಲಯದ ಅವಶ್ಯಕತೆಯನ್ನು ಕುರಿತು ಸುಶ್ರಾವ್ಯವಾಗಿ ತಿಳಿಸಿ ಹೇಳಿದ್ದಲ್ಲದೆ ಭಾರೀ ಕಿಮ್ಮತ್ತಿನ ೪ ಪುಸ್ತಕಗಳನ್ನು ಸಮರ್ಪಿಸಿದರು. ಅದಲ್ಲದೆ ಈ ವಾಚನಾಲಯಕ್ಕೆ ನಾನು ನಿರಂತರ ಒಂದು ವೃತ್ತಪತ್ರಿಕೆಯನ್ನು ತರಿಸಿಕೊಡುತ್ತೇನೆಂದು ವಾಗ್ದಾನಮಾಡಿದರು. ಶ್ರೀಯುತ ನಾರಾಯಣಭೀಮರಾವ ಇವರು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಸ್ತ್ರೀ ಶಿಕ್ಷಣದಬಗ್ಗೆ ಮನೋಹರವಾಗಿ ಭಾಷಣಮಾಡಿ ಈ ವಾಚನಾಲಯಕ್ಕೆ ನಾನೂ ಒಂದು ವೃತ್ತಪತ್ರವನ್ನು ಸರ್ವದಾ ತರಿಸಿಕೊಡುತ್ತೇನೆಂದು ದೇಣಿಗೆಯನ್ನಿತ್ತರು. ಅನಂತರ ಈ ವಾಚನಾಲಯಕ್ಕೆ ೧೩ ಜನ ಪ್ರಮುಖರು ಪತ್ರಿಕೆಗಳನ್ನು ತರಿಸಿಕೊಡುತ್ತೇವೆಂದು ಹೇಳಿದರು. ಅಷ್ಟರಲ್ಲಿಯೇ ಸ್ತ್ರೀಯರು ಪ್ರತಿನಿತ್ಯ ಮುಷ್ಟಿಫಂಡನ್ನು ವೃದ್ಧಿಗೊಳಿಸಿ ಪ್ರತಿ ರವಿವಾರ ತಮ್ಮ ಈ ವಾಚನಾಲಯಕ್ಕೆ ಮುಟ್ಟಿಸುವದನ್ನು ನಿರಂತರವಾಗಿ ನಡೆಯಿಸುತ್ತೇವೆಂದು ತಮ್ಮ ಉದಾರಾಂತಃಕರಣದಿಂದ ವಾಗ್ದಾನಮಾಡಿದರು. ಆ ಮೇಲೆ ಶ್ರೀ ಮ|| ರಾ|| ಅನಂತರಾವ ಕುಲಕರ್ಣಿ ಇವರು ಅಧ್ಯಕ್ಷರಿಗೆ ಪುಷ್ಪಮಾಲಿಕೆಯನ್ನು ಅರ್ಪಿಸಿದರು. ಅಧ್ಯಕ್ಷಮಹಾಶಯರು ವಾಚನಾಲಯ ಮತ್ತು ಸಮಾಜಸುಧಾರಣೆ ಬಗ್ಗೆ ಸಮಸ್ತರಿಗೂ ಪರಿಣಾಮವಾಗುವಂತೆ ತಮ್ಮ ಅಮೃತವಾಣಿಯಿಂದ ೨ ಘಂಟೆಗಳವರೆಗೂ ಭಾಷಣಮಾಡಿದರು. ಅಧ್ಯಕ್ಷರು ಈ ವಾಚನಾಲಯಕ್ಕೂ ಮತ್ತು ಭಜನಾಸಂಘಕ್ಕೂ ತಮ್ಮ ಮಠದಲ್ಲಿ ಒಂದು ಭವ್ಯವಾದ ಮಂದಿರವನ್ನು ದಾನಮಾಡಿದ್ದಲ್ಲದೆ ತಾವೂ ಒಂದು ವೃತ್ತಪತ್ರಿಕೆಯನ್ನು ತರಿಸಿಕೊಡುತ್ತೇವೆಂದು ಅಭಯವಚನವಿತ್ತರು. ಆಮೇಲೆ ವಾಚನಾಲಯದ ಬಗ್ಗೆ ಕೆಳಗೆ ಕಾಣಿಸಿದವರು ಸರ್ವಾನುಮತದಿಂದ ಆರಿಸಲ್ಪಟ್ಟರು.

ಅಧ್ಯಕ್ಷರು—ಶ್ರೀ|| ಷ|| ಬ್ರ|| ಸಿದ್ಧಮಲ್ಲಿಕಾರ್ಜುನಶಿವಾಚಾರ್ಯರು ಬೃಹನ್ಮಠ. ಉಪಾಧ್ಯಕ್ಷರು—ಶ್ರೀ ಹನುಮಂತಗೌಡ ಪಾಟೀಲ. ಸೆಕ್ರೆಟರಿ—ಮಿ|| ಎನ್. ಬಿ. ಜೋಶಿ. ಮ್ಯಾನೇಜಿಂಗ್‌ಕಮಿಟಿಯ ಮೆಂಬರರು—1 ಶ್ರೀ ಪರ್ವತಗೌಡ ಪಾಟೀಲ, 2 ದ್ಯಾವಪ್ಪ ನಿಂಬುಗುಂಡಿ. 3 ಶ್ರೀ ಸಕರಪ್ಪ ಶಿವಯೋಗಿ, 4 ಶ್ರೀ ವೆಂಕಟೇಶಬಂಡೋ ಕುಲಕರ್ಣಿ. ಆಡಿಟರ—ಶ್ರೀ ಬಾಪುರಾವ್ ಕುಲಕರ್ಣಿ. ಶ್ರೀ ಲಿಂಗನಗೌಡ ಪಾಟೀಲ. ಕೋಶಾಧ್ಯಕ್ಷ—ಶ್ರೀ ಮುದಿಗೌಡ ಪಾಟೀಲ. ಕಾರ್ಯದರ್ಶಿಗಳು—1 ಬಸವಯ್ಯಮಠ, 2 ದ್ಯಾವಪ್ಪ ಡುಗ್ಗಿ, 3 ಭೀಮಪ್ಪ ಮಲ್ಲಾಪುರ, 4 ಬಸವಯ್ಯ ಇದ್ದಲಗಿ, 5 ಮಲ್ಲಪ್ಪ ಹದ್ಲಿ, 6 ಅಮೀನಸಾಹೇಬ ದೇಗನಾಳ, 7 ರಾಮಚಂದ್ರ ಜಂಗಾಡೆ. ಇವೆಲ್ಲಾ ಮುಗಿದಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜಯ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಆರ್. ಬಿ. ಹವಾಲದಾರ, ಕಿರಸೂರ.

ದಿವಂಗತರಾದ ಲೋಕಸೇವಾನಿರತರು.

ಈ ತಿಂಗಳು 19 ನೇ ತಾರೀಖು ಸಾಯಂಕಾಲ 6½ ಘಂಟೆಗೆ ಸರಿಯಾಗಿ ಮೈಸೂರು ಅನಾಥಾಲಯದಲ್ಲಿ ವಿದ್ಯಾರ್ಥಿಗಳ ಮಿಟಿಂಗು ನಡೆಯಿತು. ಮ|| ಎಂ. ವೆಂಕಟಕೃಷ್ಣಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಕಳೆದ 40 ವರ್ಷಗಳಿಂದಲೂ ಮ|| ಅಣ್ಣಯ್ಯಪಂಡಿತರು ಅನಾಥರ ಯೋಗಕ್ಷೇಮವನ್ನು ಶ್ರದ್ಧೆಯಿಂದ ನೋಡಿಕೊಂಡು ಅನೇಕಸಾವಿರ ಅನಾಥರನ್ನು ಹೇಗೆ ಸನಾಥರನ್ನಾಗಿ ಮಾಡುತ್ತಿದ್ದರೋ. ಕೊನೆಗೆ ಶಾರದಾವಿಲಾಸ ಹೈಸ್ಕೂಲಿನ ಸಂಬಂಧದಲ್ಲಿ ಕಟ್ಟಲ್ಪಡುತ್ತಲಿರುವ ವರ್ಕ್‌ಷಾಪಿನಲ್ಲಿ ಒಂದು ಬ್ಲಾಕನ್ನು ಕಟ್ಟಿಸುವುದಕ್ಕೆ ಹೇಗೆ 3000 ರೂ ಗಳನ್ನು ಕೊಡುವುದಕ್ಕೆ ಏರ್ಪಾಡುಮಾಡಿದರೋ, ಈ ಧರ್ಮವನ್ನು ಊರ್ಜಿತಪಡಿಸಬೇಕೆಂದು ತಮ್ಮ ಪುತ್ರರಾದ ಮ|| ಎ. ಸುಬ್ರಹ್ಮಣ್ಯಯ್ಯರವರಿಗೆ ಹೇಗೆ ಆಜ್ಞೆಯನ್ನು ಮಾಡಿದರೋ, ಸದರಿ ಆಜ್ಞೆಯನ್ನು ಶಿರಸಾವಹಿಸಿ ಉದ್ಯೋಗವಿಲ್ಲದೇ ಕಷ್ಟಪಡತಕ್ಕ ಅನಾಥರನ್ನು ರಕ್ಷಿಸುವ ದೀಕ್ಷೆಯನ್ನು ವಹಿಸಿ ಯಥಾಶಕ್ತಿ ಕೆಲಸ ಮಾಡುವುದು ತಮ್ಮ ಕರ್ತವ್ಯವೆಂದು ಮ|| ಸುಬ್ರಹ್ಮಣ್ಯಯ್ಯರವರು ತಿಳಿದುಕೊಂಡು ಈ ಸಂಕಲ್ಪವನ್ನು ಜಾರಿಗೆ ತರುವುದಕ್ಕೆ ಹೇಗೆ ಸಿದ್ಧರಾಗಿರುವರೋ, ಪಂಡಿತರವರು ಕಳೆದ 2 ವರುಷಗಳಿಂದಲೂ ಆಯುರ್ವೇದಶಾಲೆಯು, ಆಯುರ್ವೇದದ ಆಸ್ಪತ್ರೆ, ಬಾಲಿಕಾಪಾಠಶಾಲೆ, ಪಂಡಿತರ ಆಸ್ಪತ್ರೆ, ಪಂಡಿತರ ಅಗ್ರಹಾರ, ಪಂಡಿತರ ಪಾರ್ಕು, ಪಂಡಿತರ ಧರ್ಮಶಾಲೆ, ಮೈಸೂರು ಅನಾಥಾಲಯ, ಶಾರದಾವಿಲಾಸ ಹೈಸ್ಕೂಲು, ನಂಜನಗೂಡು ಶಿವಕೂಟ, ತಿರುಮಕೂಡ್ಲುನಲ್ಲಿ ಸಂಕರ್ಷಣೆಗಳು, ಜಾತಿಭೇದ ಮತಭೇದ ಕೋಮುವಾರುಭೇದಗಳಿಂದ ಉಂಟಾಗುತ್ತಲಿರುವ ಅನರ್ಥಗಳ ನಿವಾರಣೆ, ಇವೇ ಮೊದಲಾದ ಅನೇಕ ಧರ್ಮಗಳಿಗೆ ವರುಷಕ್ಕೆ 3000 ರೂ ಗೆ ಕಡಿಮೆ ಇಲ್ಲದೆ ಹೇಗೆ ಕೊಡುತ್ತಿದ್ದರೋ, ತಮ್ಮ ಕುಟುಂಬಕ್ಕೆ ಸೇರಿದ ಬಂಧುಗಳ ಪೈಕಿ ಸುಮಾರು 200-300 ಜನ ಬಡವರಿಗೆ ಏಕಾಂತವಾಗಿ ಹೇಗೆ ಸಹಾಯಮಾಡುತ್ತಿದ್ದರೋ ಇದನ್ನೆಲ್ಲಾ ತಮಗೆ ತಿಳಿದಮಟ್ಟಿಗೂ ಸಂಕ್ಷೇಪವಾಗಿ ನಿರೂಪಿಸಿ ವಾಗ್ಮಿಗಳಲ್ಲಿ ಪಂಡಿತರು ಹೇಗೆ ದಿವಾನ್ಸೀಸನಿಗೆ ಸಮಾನರಾಗಿದ್ದರೋ ಅದನ್ನೂ ನಿರೂಪಿಸಿ ಸಕಲ ವಿದ್ಯೆಗಳಲ್ಲಿಯೂ ಧರ್ಮಕ್ಕೆ ಗ್ಲಾನಿಬರದಂತೆ ಪ್ರಭುಗಳು ಮೊದಲುಗೊಂಡು ಝಾಡಮಾಲಿಗಳವರೆಗೂ ಎಲ್ಲಾ ಜನಗಳಿಗೂ ಹಿತೋಪದೇಶ ಮಾಡಿ ಅವರು ಸನ್ಮಾರ್ಗಪ್ರವರ್ತಕರಾಗಬೇಕಾದರೆ ಹೇಗೆ ಸಕಲಶಾಸ್ತ್ರವಿಶಾರದರಾಗಿರಬೇಕೋ, ಇಂಥ ಸರ್ವತೋಮುಖವಾದ ಪ್ರಜ್ಞೆಯಿಂದ ಪಂಡಿತರು ಬೇರೋಜುಗಾರರಾಗಿದ್ದಾಗ್ಯೂ ಶಾರ್ಯತಃ ಸಕಲ ಅಧಿಕಾರಿಗಳನ್ನೂ ತಮ್ಮ ಅಮಾನುಷವಾದ ಬುದ್ಧಿಶಕ್ತಿಯಿಂದ ಹೇಗೆ ಹಸ್ತೋಟಿಗೆ ತಂದುಕೊಂಡು ಅವರಿಂದ ಪರೋಪಕಾರವನ್ನು ಮಾಡಿಸಿ ಪರಪೀಡೆಯನ್ನು ನಿವಾರಣೆ ಮಾಡಿ ತಾವೂ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ಅದನ್ನು ಪರೋಪಕಾರಕ್ಕೋಸ್ಕರ ವಿನಿಯೋಗಿಸಿ ಹೇಗೆ ಕೃತಾರ್ಥರಾದರೋ ಅದನ್ನೂ ಅನಾಥವಿದ್ಯಾರ್ಥಿಗಳಿಗೆ ಶ್ರುತಪಡಿಸಿ ಎಲ್ಲಾ ವಿದ್ಯಾರ್ಥಿಗಳೂ ಪ್ರಯತ್ನಮಾಡಿದರೆ ಪಂಡಿತರಂತೆ ಆತ್ಮಾವಲಂಬಿಗಳಾಗಿ ಲೋಕಸೇವಾನಿರತರಾಗುವುದು ಹೇಗೆ ಅಸಾಧ್ಯವಲ್ಲವೋ ಅದನ್ನು ತೋರಿಸಿ ಅವರು ಮಾಡಿರುವ ಪುಣ್ಯಗಳ ದೆಸೆಯಿಂದ ಅವರ ಆತ್ಮಕ್ಕೆ ಸದ್ಗತಿಯನ್ನು ಕೊಡುವುದಲ್ಲದೆ ಅವರ ಪುತ್ರರತ್ನವು ಅವರಿಗಿಂತಲೂ ಹೆಚ್ಚಾದ ಯಶಸ್ವಿಯಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಕೋರಿದರು.

ಇದನ್ನು ವಿದ್ಯಾರ್ಥಿಗಳೆಲ್ಲರೂ ಅನುಮೋದಿಸಿದರು. ಆರೀತಿಯಲ್ಲಿ ಒಂದನೇ ಠರಾವು ಮೌನದಿಂದ ಪಾಸುಮಾಡಲ್ಪಟ್ಟಿತು. ಈ ಠರಾವನ್ನು ಮ|| ಎ. ಸುಬ್ರಹ್ಮಣ್ಯಯ್ಯನವರಿಗೆ ಕಳುಹಿಸಬೇಕೆಂದು ಒಬ್ಬ ವಿದ್ಯಾರ್ಥಿಯು ಸೂಚಿಸಿದನು. ಅದಕ್ಕೆ ಎಲ್ಲರೂ ಒಪ್ಪಿದರು. ಇದೇ ಎರಡನೇ ಠರಾವಾಗಿ ಪ್ಯಾಸ್‌ಮಾಡಲ್ಪಟ್ಟಿತು.

ಕಾಲದೇಶ ವರ್ತಮಾನಗಳು ವಿಲಕ್ಷಣವಾಗಿ ಪರಿಣಮಿಸಿರುವದರಿಂದ ಫಿಫ್ತು, ಸಿಕ್ಸ್ತು, ಮತ್ತು ಏಯ್ತು ತರಗತಿಗಳಿಗೆ ಸೇರಿದ ಅನಾಥರು, ಪಂಡಿತರು ಏರ್ಪಡಿಸಿರತಕ್ಕ ವರ್ಕ್‌ಷಾಪುಗಳಲ್ಲಿಯೂ ಶ್ರೀಮನ್ಮಹಾರಾಜರವರು ಏರ್ಪಡಿಸಿರತಕ್ಕ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿಯೂ, ಮಿಲ್ಲುಗಳೇ ಮೊದಲಾದವುಗಳಲ್ಲಿಯೂ, ಮುಂದೆ ಏರ್ಪಾಡಾಗುವ ಟೆಕ್ನಾಲಜಿಕಲ್‌ಕಾಲೇಜು ಮೊದಲಾದವುಗಳಲ್ಲಿಯೂ ಇಂಜನಿಯರಿಂಗು ಮೆಡಿಕಲ್ ಮೊದಲಾದ ಕಾಲೇಜುಗಳಲ್ಲಿಯೂ ಎಲ್ಲಿ ಯಾರಿಗೆ ಅವಕಾಶವು ದೊರೆಯುವುದೋ ಅಲ್ಲಿ ಶಿಕ್ಷಣವನ್ನು ಹೊಂದಿ ಆತ್ಮಾವಲಂಬಿಗಳಾಗಬೇಕೆಂಬುದಾಗಿಯೂ ಅವುಗಳಲ್ಲಿಯೂ ಅವಕಾಶಹೊಂದದೇ ಇರತಕ್ಕವರು ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮೊದಲಾದವುಗಳಲ್ಲಿರತಕ್ಕ ಲಕ್ಷೋಪಲಕ್ಷ ಶಾಖೋಪಶಾಖೆಗಳಲ್ಲಿ ಯಾವ ಯಾವದರಲ್ಲಿ ತಮಗೆ ಬುದ್ಧಿಯು ಓಡುವುದೋ ಅದರಲ್ಲಿ ಕೃಷಿಮಾಡಿ ಸ್ವಶಕ್ತಿಯಿಂದ ಬದುಕುವ ಏರ್ಪಾಡನ್ನು ಮಾಡಿಕೊಳ್ಳಬೇಕೆಂಬುದಾಗಿಯೂ ಯಾವದರಲ್ಲಿಯೂ ಅನುಕೂಲ್ಯಗಳು ದೊರೆಯದಿದ್ದರೆ ಪಾಕಶಾಸ್ತ್ರದಲ್ಲಿಯೂ, ಪರಿಚಾರಿಕೆಯಲ್ಲಿಯೂ, ಕೂಲಿಕೆಲಸದಲ್ಲಿಯೂ, ಸುಖವಾಗಿ ಅನ್ನವಸ್ತ್ರಗಳನ್ನು ಸಂಪಾದಿಸಿಕೊಳ್ಳುವುದು ಸಾಧ್ಯವಾದದ್ದರಿಂದ ಸರ್ವರೂ ಉದ್ಯೋಗಿಗಳಾಗುವ ಪ್ರಯತ್ನವನ್ನು ಶ್ರದ್ಧೆಯಿಂದ ಮಾಡಬೇಕೆಂಬುದಾಗಿಯೂ ಮಹಾತ್ಮನಾದ ಆಲ್‌ಫ್ರೆಡ್ ದಿ ಗ್ರೇಟನಂತೆ ಎಲ್ಲರೂ 8 ಘಂಟೆಗಳನ್ನು ಸರ್ವತೋಮುಖವಾದ ಪ್ರಜ್ಞೆಯನ್ನು ಹೊಂದುವುದಕ್ಕೆ ಸಾಧಕವಾದ ವಿದ್ಯಾಭ್ಯಾಸಕ್ಕೂ ಕಲಾಭ್ಯಾಸಕ್ಕೂ ವಿನಿಯೋಗಿಸಬೇಕೆಂಬುದಾಗಿಯೂ, ಎರಡನೇ ಎಂಟು ಘಂಟೆಗಳನ್ನು ಅನ್ನವಸ್ತ್ರಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಸಾಧಕವಾದ ಕೆಲಸಗಳಿಗೆ ವಿನಿಯೋಗಿಸಬೇಕೆಂಬುದಾಗಿಯೂ 3 ನೇ ಎಂಟು ಘಂಟೆಗಳನ್ನು ನಿದ್ರೆಯೇ ಮೊದಲಾದ ದೇಹರಕ್ಷಣೆಗೆ ಸಾಧಕವಾದ ವಿಶ್ರಾಂತಿ ಮೊದಲಾದವುಗಳಿಗೆ ವಿನಿಯೋಗಿಸಿಕೊಳ್ಳಬೇಕೆಂಬುದಾಗಿಯೂ ಹೀಗೆ ಮಾಡುವುದರಲ್ಲಿ ಮನೋವಾಕ್ಕಾಯಗಳಲ್ಲಿ ಪರಿಶುದ್ಧರಾಗಿ ಅವರು ಮಾಡತಕ್ಕ ಕೆಲಸಗಳೆಲ್ಲಾ ದೇವತಾರಾಧನೆಯಾಗಿ ಪರಿಣಮಿಸುವುದೆಂಬುದಾಗಿಯೂ, ಅಧ್ಯಕ್ಷರು ಮಾಡಿದ ಹಿತೋಪದೇಶವನ್ನು ಮನಸ್ಸಿಟ್ಟು ಜಾರಿಗೆ ತರಬೇಕೆಂದು ಕೆಲವು ವಿದ್ಯಾರ್ಥಿಗಳು ಸೂಚಿಸಿದರು. ಅದಕ್ಕೆ ಸರ್ವರೂ ಒಪ್ಪಿದರು. ಈ ಮೂರನೇ ಠರಾವು ಪ್ಯಾಸಾಯಿತು. ಇದರಂತೆ ಕೆಲಸ ಮಾಡಿದರೆ ಹಾ ಮಾಡತಕ್ಕ ಸ್ತ್ರೀಪುರುಷರೆಲ್ಲಾ ಸಕಲ ಇಷ್ಟಾರ್ಥಗಳನ್ನು ಹೊಂದುವರು. ಹಾಗೆ ಹೊಂದಲೆಂದು ನಾನು ಕೋರುತ್ತೇನೆ.

ಎಂ. ವೆಂಕಟಕೃಷ್ಣಯ್ಯ

ಮೈಸೂರಿನವರೊಬ್ಬರ ಲಂಡನ್ ಅನುಭವ.

ಲೇಖಕರು: ದೊಡ್ಡಬಳ್ಳಾಪುರದ ಸಿದ್ಧಲಿಂಗಯ್ಯ, ಬಿ.ಎ.,ಬಿ.ಎಲ್.

(ಪ್ರಜಾಮತಪತ್ರಿಕೆಯಿಂದ)

ನಾನು ಮತ್ತು ಕಾಂಪುರದ ರಾಮಚಂದ್ರಯ್ಯನವರು ಏಪ್ರಿಲ್ 14ನೇ ತಾ|| ದಿವಸ ಬೆಂಗಳೂರನ್ನು ಬಿಟ್ಟೆವು. ಸಿಲೋನ್, ಚೈನಾ, ಜಪಾನ್ ಮತ್ತು ಅಮೇರಿಕಾ ದೇಶಗಳನ್ನು ಸುತ್ತಿ, ಆಗಸ್ಟು 16 ಕ್ಕೆ ಲಂಡನ್ನಿನಲ್ಲಿ ಇಳಿದೆವು. ನಮ್ಮ ಸ್ನೇಹಿತರು ಲಂಡನ್ನಿಗೆ ಬಂದ 3 ದಿವಸದಲ್ಲೇ, ಬೇಜಾರುಪಟ್ಟು ನ್ಯೂಯಾರ್ಕ್‌ಪಟ್ಟಣ ನೋಡಿದ ಮೇಲೆ ಹಾಳು ಪುರಾತನ ಲಂಡನ್ನನ್ನು ನೋಡಲು ಮನಸ್ಸಿಲ್ಲದೆ, ಆಕಾಶ ವಿಮಾನವನ್ನು ಹತ್ತಿ 6 ದಿನಗಳಲ್ಲೇ ಬೊಂಬಾಯಿ ಸೇರಿದರು. ನಮ್ಮ ಮೈಸೂರುದೇಶಕ್ಕೆಲ್ಲಾ ಆಕಾಶ ವಿಮಾನದಲ್ಲಿ ದೂರಪ್ರಯಾಣ ಮಾಡಿದವರು ಅವರೇ. ಛಾರ್ಜು ಇಲ್ಲಿಂದ ಕರಾಚಿಗೆ 95 ಪೌಂಡು.

ಇಂಡಿಯಾದಿಂದ ಲಂಡನ್ನಿಗೆ 6000 ಮೈಲಿ ಹೋಗಬರಲು 60 ಪೌಂಡು ಅಂದರೆ 800 ರೂ. ಒಳಗೆ ಛಾರ್ಜು. ಮೇಲೆ ೨೫೦ ರೂಪಾಯಿ ಇಟ್ಟುಕೊಂಡರೆ ಒಂದು ತಿಂಗಳೊಳಗಾಗಿ ಇಂಗ್ಲೆಂಡನ್ನೆಲ್ಲಾ ನೋಡಿಹೋಗಬಹುದು. ನಮ್ಮ ದೇಶದಲ್ಲಿ ಹಣವಂತರು ಎಲ್ಲರೂ ಬಂದು ಹೋಗಬಹುದು. ಅದರಲ್ಲಿ ಪ್ರಯೋಜನವಿದೆ ಮತ್ತು ಹೆಚ್ಚು ವ್ಯಯವೂ ಅಲ್ಲ.

ಲಂಡನ್ ಪಟ್ಟಣವು ಪೂರ್ವಪಶ್ಚಿಮ ೩೦ ಮೈಲು, ಉತ್ತರದಕ್ಷಿಣ ೩೦ ಮೈಲು ಇದೆ. ಇದರೊಳಗೆ ಟ್ರಾಫಾಲ್ಗರ್ ಚೌಕ ಎಂಬುದೇ ಕೇಂದ್ರ. ಪೂರ್ವದಲ್ಲಿ, ಅದರ ಸುತ್ತಲೂ ೧ ಮೈಲಿಯವರೆಗೂ ಪಟ್ಟಣ ಇತ್ತಂತೆ! ಈಗ ಇನ್ನೂ ಅಭಿವೃದ್ಧಿಯಾಗುತ್ತಲೇ ಇದೆ. ಲಂಡನ್ನಿನ ಬೀದಿಗಳನ್ನೆಲ್ಲಾ ಅಳೆದರೆ ೭,೦೦೦ ಮೈಲು ಆಗುತ್ತದಂತೆ! ಜನಸಂಖ್ಯೆ ನಮ್ಮ ಮೈಸೂರು ಸಂಸ್ಥಾನವೆಲ್ಲಾ ಎಷ್ಟಿದೆಯೋ ಅದಕ್ಕೆ ಒಂದೂಕಾಲರಷ್ಟು ಅಂದರೆ ೭೫ ಲಕ್ಷ ಆಗುತ್ತದೆ. ವರಮಾನ ಅಂದರೆ ಮುನಿಸಿಪಲ್ ವರಮಾನ ಮಾತ್ರ ನಮ್ಮ ಸಂಸ್ಥಾನದ ಸರ್ಕಾರದ ಪೂರಾ ಉತ್ಪತ್ತಿಯ ೩೦ ರಷ್ಟು ರೂಪಾಯಿಗಳು ಅಂದರೆ ೧ ಅಬ್ಜ ೧೦ ಕೋಟಿ ರೂಪಾಯಿಗಳು.

ಪಟ್ಟಣವೆಲ್ಲಾ ಜನಸಂದಣಿಯಿಂದ ಕಿಕ್ಕಿರಿದಿರುತ್ತದೆ. ಇಲ್ಲಿ ರಾತ್ರಿ ಹಗಲೂ ಏಕರೀತಿಯಾಗಿರುತ್ತದೆ. ಮೋಟಾರುಗಳು, ಬಸ್ಸುಗಳು, ಟ್ರ್ಯಾಂಕಾರುಗಳೂ ಯಾವಾಗಲೂ ಓಡಾಡುತ್ತಾ ಇರುತ್ತದೆ. ಇದೆಲ್ಲಕ್ಕಿಂತಲೂ ಇನ್ನೂ ಅದ್ಭುತವಾದ ಪ್ರಯಾಣ ಸೌಕರ್ಯವೇನೆಂದರೆ ಭೂತಳದಲ್ಲಿ ಓಡಾಡುವ ರೈಲುಗಳು. ಇದಕ್ಕೆ ಟ್ಯೂಬ್ (Tube) ರೈಲ್ವೇ ಎಂದು ಹೆಸರು. ಭೂಮಿಯಿಂದ ಕೆಳಕ್ಕೆ ಸುಮಾರು ೬೦ ಗಜದಲ್ಲಿ ಭೂಮಿಯನ್ನು ಕೊರೆದು, ಮೇಲೆ ಓಡಾಡುವರಸ್ತೆಗಳಂತೆಯೇ, ರೈಲುದಾರಿಗಳನ್ನು ಮಾಡಿರುತ್ತಾರೆ. ಅದರೊಳಗೆ ಹಗಲು ರಾತ್ರಿಗಳ ವ್ಯತ್ಯಾಸ ಗೊತ್ತಾಗುವುದೇ ಇಲ್ಲ. ಮೇಲೆ ಟಿಕೆಟ್ ತೆಗೆದುಕೊಂಡು ಒಂದು ಲಿಫ್ಟ್—ಅಂದರೆ ಗಣೆಗಳೊಳಗೆ ಜನಗಳನ್ನು ಇಳಿಸುವಂತೆ ತೊಟ್ಟಿಯಲ್ಲಿ ನೂರಾರು ಜನರು ನಿಂತುಕೊಂಡರೆ ೫ ಸೆಕೆಂಡಿನಲ್ಲಿ ಕೆಳಕ್ಕೆ ತೆಗೆದುಕೊಂಡು ಹೋಗಿಬಿಡುವುದು. ಕೆಳಕ್ಕೆ ಇಳಿದಮೇಲೆ ನಾನಾಕಡೆ ದಾರಿಗಳು. ಏಕೆಂದರೆ ಜಂಕ್ಷನ್ ಪ್ಲಾಟ್‌ಫಾರಂಗಳು ಇರುತ್ತವೆ. ಹೋಗುವ ರೈಲು ಬೇರೆ, ಬರುವ ರೈಲು ಬೇರೆ, ಪ್ಲಾಟ್‌ಫಾರಂ ಬೇರೆ, ಇಳಿದಕೂಡಲೆ ಯಾರನ್ನೂ ದಾರಿ ಕೇಳಬೇಕಾಗಿಲ್ಲ. ಬಿಳಿಯ ಮತ್ತು ಕೆಂಪುದೀಪಗಳು ಇರುತ್ತವೆ. ಕನ್ನಡಿಮೇಲೆ ಮತ್ತು ಗೋಡೆಯಮೇಲೆ ಇಂತಹ ಸ್ಥಳಕ್ಕೆ ಹೋಗಬೇಕಾದರೆ ಇಂತಹ ಬಣ್ಣದ ದೀಪದ ದಾರಿಯಲ್ಲಿ ಹೋಗಬೇಕು. ಮುಂತಾಗಿ ವಿವರಣೆಗಳನ್ನು ಬರೆದಿರುತ್ತದೆ. ಪ್ಲಾಟ್‌ಫಾರಂಗೆ ಹೋದಮೇಲೆ ರೈಲು ಒಂದು ದೊಡ್ಡ ಕೊಳವಿನಿಂದ ಬರುವುದು ಕಾಣುತ್ತದೆ. ಪ್ಲಾಟ್‌ಫಾರಂ ಬಿಟ್ಟು ಮುಂದಕ್ಕೆ ಇನ್ನೊಂದು ದೊಡ್ಡ ಕೊಳವಿನೊಳಗೆ ತೂರಿ ಮುಂದಿನ ಸ್ಟೇಷನ್ನಿಗೆ ಹೋಗುತ್ತದೆ.

ಹೀಗೆ ನಿಮಿಷಕ್ಕೆ 3-4.5 ರಂತೆ ರೈಲುಗಳು ಬರುತ್ತಲೇ ಇರುತ್ತವೆ. ಕೆಳಕ್ಕೆ ಗಾಳಿಯನ್ನು ಪಂಪುಗಳಮೂಲಕ ಬಿಡುತ್ತಾರೆ. ರೈಲು ಗಂಟೆಗೆ 50 ಮೈಲು ಪ್ರಕಾರ ಓಡಾಡುತ್ತದೆ. ಈ ರೈಲುಗಳಿಗೆ ಟಿಕೆಟ್ ತೆಗೆದುಕೊಳ್ಳುವುದು ಕೂಡ ಯಂತ್ರ ಸಹಾಯದಿಂದ. ಟಿಕೆಟ್ ಮಾರುವ ಯಂತ್ರದ ಪೆಟ್ಟಿಗೆಯೊಳಗೆ ಹಣ ಹಾಕಿದರೆ ಟಿಕೆಟ್ ತಾನಾಗಿಯೇ ಬರುತ್ತದೆ. ಕೆಲವು ಕ್ಷ

ಮೂರು ವರ್ಷಗಳವರೆಗೆ ಪೋಲೀಸರಿಗೆ ತನ್ನ ವಾಸಸ್ಥಾನವನ್ನು ತಿಳುಹಿಸುತ್ತಿರಬೇಕೆಂದು ಅಪ್ಪಣೆಮಾಡಿದರು. ಅಪರಾಧಿಯು ಕಾಳಯ್ಯ, ಕಾಳ, ತಿಪ್ಪೇಗೌಡ, ಕೆಂಪಣ್ಣ ಎಂಬುದಾಗಿ ಅನೇಕ ಹೆಸರುಗಳನ್ನಿಟ್ಟುಕೊಂಡು ಅನೇಕಕಡೆಗಳಲ್ಲಿ ಕಳುವುಮಾಡಿ 11 ಸಾರೆ ಕಾರಾಗೃಹವಾಸವನ್ನನುಭವಿಸಿ ಬಂದಿರುತ್ತಾನೆ.

ಮದರಾಸಿನ 'ಸ್ವರಾಜ್ಯ' ಪತ್ರಿಕೆಯ ಸಂಪಾದಕರಾದ ಶ್ರೀಯುತ ಟಿ. ಪ್ರಕಾಶಂರವರ ಧರ್ಮಪತ್ನಿ ಶ್ರೀಮತಿ ಹನುಮಾಯಮ್ಮನವರು ಇದೇ ನವೆಂಬರ್ 21 ನೆಯ ತಾರೀಖಿನ ದಿವಸ ಮಧ್ಯಾಹ್ನ ಬೆಂಗಳೂರು ಮಾಡರ್ನ್ ಹಿಂದೂ ಹೋಟೆಲ್ಲಿನಲ್ಲಿ ಮೃತಿಹೊಂದಿದರು. ಇವರ ಪುತ್ರರಾದ ಶ್ರೀ|| ಹನುಮಂತರಾಯರು ಅದೇದಿನ ರಾತ್ರಿ ಸ್ವಂತ ಮೋಟಾರಿನಲ್ಲಿ ಶವವನ್ನು ಅಂತ್ಯಕ್ರಿಯೆಗಾಗಿ ಮದರಾಸಿಗೆ ಸಾಗಿಸಿದರು. ಶ್ರೀ|| ಪ್ರಕಾಶಂರವರು ಮುಂಬಯಿಯಲ್ಲಿದ್ದವರು ಈ ವರ್ತಮಾನವನ್ನು ತಂತಿಮೂಲಕ ಅರಿತು ಕೂಡಲೇ ಮದರಾಸಿಗೆ ಪ್ರಯಾಣಬೆಳೆಸಿದರು. ಶ್ರೀಮತಿ ಹನುಮಾಯಮ್ಮನವರು 2-3 ದಿನಗಳು ಮಾತ್ರ ಅಸ್ವಸ್ಥರಾಗಿದ್ದು ಇದ್ದಕ್ಕಿದ್ದಹಾಗೆ ಮೃತಪಟ್ಟರು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುತ್ತೇವೆ.

ವರ್ತಮಾನಸಂಗ್ರಹ

ತಿರುವಾಂಕೂರು ಸಂಸ್ಥಾನದಲ್ಲಿ ಒಂದು ಬಿಳಿಯ ಆನೆಯು ಸಿಕ್ಕಿರುವದಂತೆ!

ಚಕ್ರವರ್ತಿ ಸಾರ್ವಭೌಮರವರು ರೌಂಡ್‌ಟೇಬಲ್ ಸಮ್ಮೇಳನದ ಪ್ರತಿನಿಧಿಗಳನ್ನು ಬಕಿಂಘಾಮ್ ಅರಮನೆಗೆ ಆಹ್ವಾನಿಸಿ ಸತ್ಕರಿಸಿದರು.

ದೇಹಲಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಲೇಡಿ ಇರ್ವಿನ್ ಕಾಲೇಜಿಗೆ ಹೈದರಾಬಾದ್ ನಿಜಾಮರವರು 2 ಲಕ್ಷ ರೂಪಾಯಿಗಳನ್ನು ದಾನಮಾಡಿರುತ್ತಾರೆ.

ಲಂಡನ್ನಿನ ಕಾಂಗ್ರೆಸ್ ಸದಸ್ಯರು ಸಭೆ ಸೇರಿ ಆರ್ಡಿನೆನ್ಸ್ ಮಸೂದೆಯನ್ನು ಖಂಡಿಸಿದರು. ಇದರಲ್ಲಿ ಬಂಗಾಲಿ ವಿದ್ಯಾರ್ಥಿಗಳು ಪ್ರಮುಖ ಭಾಗವನ್ನು ವಹಿಸಿದ್ದರು.

ಇದೇ ನವೆಂಬರ್ 19 ನೆಯ ತಾರೀಖಿನ ದಿವಸ ಮದರಾಸ್ ಕರೆನ್ಸಿ ಆಫೀಸಿನ ಗುಮಾಸ್ತೆಯೊಬ್ಬನು 30,000 ರೂಪಾಯಿಗಳ ಕರೆನ್ಸಿನೋಟುಗಳ ಸಮೇತವಾಗಿ ಪರಾರಿಯಾದನು.

ನವೆಂಬರು 21 ನೇ ತಾರೀಖಿನ ದಿವಸ ಮುಂಬಯಿಯ 'ಸಿಂಪ್ಲೆಕ್ಸ್' ಎಂಬ ಗಿರಣಿಗೆ ಅಕಸ್ಮಾತ್ ಬೆಂಕಿಯು ಬಿದ್ದು ಸುಮಾರು 2 ಲಕ್ಷ ರೂಪಾಯಿಗಳಷ್ಟು ನಷ್ಟವು ಸಂಭವಿಸಿತು.

ಉತ್ತರ ಮಂಚೂರಿಯಾದಲ್ಲಿ ಚೀಣರಿಗೂ ಜಪಾನ್ ಸೈನಿಕರಿಗೂ ಇನ್ನೂ ಕಾದಾಟವು ನಡೆಯುತ್ತಲೇ ಇರುವದು. ಪೈಹುವಾನ್ ಎಂಬ ಪ್ರದೇಶವು ಜಪಾನರ ವಶವಾಗಿರುವಂತೆ ತಿಳಿದುಬಂದಿದೆ.

ದಿವಂಗತ ಲಾಲಾಲಜಪತರಾಯರ ಧರ್ಮಪತ್ನಿಯವರಾದ ಶ್ರೀಮತಿ ರಾಧಾದೇವಿಯವರು ಬಹು ದಿವಸಗಳಿಂದಲೂ ಉಬ್ಬಸ ರೋಗದಿಂದ ನರಳುತ್ತಿದ್ದು ತಮ್ಮ ಪತಿಯ 4 ನೇ ಶ್ರಾದ್ಧದ ದಿವಸ ಮೃತಿಹೊಂದಿದರು.

ಡಕ್ಕಾ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಗ್ರಾಸಿಯವರನ್ನು ಕೊಲೆಮಾಡಲು ಪ್ರಯತ್ನಿಸಿದ ಬಿನಯಭೂಷಣ ಎಂಬವನಿಗೆ ಸ್ಪೆಷಲ್ ಟ್ರಿಬ್ಯೂನಲ್‌ರವರು ಮರಣಾಂತ ಗಡೀಪಾರುಶಿಕ್ಷೆಯನ್ನು ವಿಧಿಸಿರುತ್ತಾರೆ.

ಬರೋಡಾಸಂಸ್ಥಾನದ ಮಹಾರಾಜರವರು 1935 ನೆಯ ವರ್ಷದಿಂದ ತಮ್ಮ ಸಂಸ್ಥಾನದಲ್ಲಿ ಹಿಂದಿಯೇ ರಾಜಭಾಷೆಯಾಗಿರಬೇಕೆಂದು ಅಪ್ಪಣೆಮಾಡಿರುತ್ತಾರೆ. ಸರ್ಕಾರೀ ನೌಕರರೆಲ್ಲರೂ ಹಿಂದಿಯನ್ನು ಕಲಿಯಲೇಬೇಕೆಂದು ನಿರ್ಬಂಧಮಾಡಿರುತ್ತಾರೆ.

ಭರತಖಂಡದ ವಿದ್ಯಮಾನಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಇಂಗ್ಲೆಂಡಿಗೆ ಹಿಂತಿರುಗಿಹೋದ 'ಇಂಡಿಯಾಲೀಗ' ನ ಸದಸ್ಯರು, ಕಾಂಗ್ರೆಸ್‌ಚಳವಳಿಯು ಇಂಡಿಯಾದಲ್ಲಿ ಪ್ರತಿಯೊಂದು ಹಳ್ಳಿಗೂ ವ್ಯಾಪಿಸಿರುವದೆಂದು ಹೌಸ್ ಆಫ್ ಕಾಮನ್ಸ್ ಸಭೆಯ ಅನೇಕ ಸದಸ್ಯರಿಗೆ ತಿಳುಹಿಸಿರುತ್ತಾರೆ.

ಅಸ್ಪೃಶ್ಯರಿಗೆ ಗುರುವಯೂರ್ ದೇವಸ್ಥಾನವನ್ನು ಪ್ರವೇಶಿಸಲು ಅವಕಾಶದೊರೆಯುವಂತೆ ಮಾಡಲು ಗಾಂಧಿಯವರು ಮತ್ತು ಕೇಲಪ್ಪನ್‌ರವರು ಕೈಕೊಂಡಿರುವ ಪ್ರಯತ್ನವಿಶೇಷಗಳನ್ನು ಪ್ರತಿಭಟಿಸಲು 300 ಜನ ಸನಾತನಿ ಸತ್ಯಾಗ್ರಹಿಗಳನ್ನು ಕಳುಹಿಸಬೇಕೆಂದು ಶ್ರೀರಂಗದ ಸನಾತನಿಗಳ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು.

ಡಬ್ಲಿನ್ನಿನ 'ಇಂಡಿಯನ್ ಐರಿಷ್ ಇಂಡಿಪೆಂಡೆನ್ಸ್ ಲೀಗ' ನವರು ಜಿನೀವಾ ನಗರಕ್ಕೆ 'ಅಂತರರಾಷ್ಟ್ರೀಯ ಸಂಘ' (ಲೀಗ್ ಆಫ್ ನೇಷನ್ಸ್) ದ ಅಧ್ಯಕ್ಷರಾಗಿ ಹೋಗಿರುವ ಮಿ|| ಡಿ. ವೇಲರಾರವರಿಗೆ ಒಂದು ತಂತಿಯನ್ನು ಕಳುಹಿಸಿ, ಭರತಖಂಡದ ವಿದ್ಯಮಾನಗಳ ಕಡೆಗೆ ಅಂತರರಾಷ್ಟ್ರೀಯ ದೃಷ್ಟಿಯು ತಿರುಗುವಂತೆ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

ದೇವದಾಸ್ ಗಾಂಧಿಯವರು ಕಳೆದ ಮಂಗಳವಾರದ ದಿವಸ ಜೈಲಿನಲ್ಲಿ ತಮ್ಮ ತಂದೆಯವರನ್ನು ನೋಡಿಕೊಂಡು ಬಂದರು. ಗಾಂಧಿಯವರಿಗೆ ಮೊಳಕೈಯಲ್ಲಿ ಸ್ವಲ್ಪ ನೋವುಂಟಾಗಿದೆಯೆಂದೂ, ಆ ಬಗ್ಗೆ ಮೇಜರ್ ಭಂಡಾರಿಯವರು ಮತ್ತು ಡಾಕ್ಟರ್ ಮೆಹತಾರವರೂ ಚಿಕಿತ್ಸೆ ನಡೆಯಿಸುತ್ತಿರುವರೆಂದೂ, ಅವರ ತೂಕವು ಈಗ 103½ ಪೌಂಡುಗಳಿರುವದೆಂದೂ ತಿಳುಹಿಸಿರುತ್ತಾರೆ.

ಶ್ರೀಯುತ ಸುಭಾಷ್ ಚಂದ್ರಬೋಸರಿಗೆ ಭವಾಲಿಯ ಕ್ಷಯರೋಗ ಚಿಕಿತ್ಸಾಮಂದಿರದಲ್ಲಿ ಆರುವಾರಗಳವರೆಗೆ ಚಿಕಿತ್ಸೆಮಾಡಿಸಿದಾಗ್ಯೂ, ಅವರ ದೇಹಸ್ಥಿತಿಯು ಉತ್ತಮಗೊಳ್ಳದೆ ಇರುವುದರಿಂದ ಇಂಡಿಯಾ ಸರ್ಕಾರದವರು ಶ್ರೀ|| ಬೋಸರನ್ನು ಪರೀಕ್ಷಿಸುವುದಕ್ಕಾಗಿ ಭವಾಲಿಸ್ಯಾನಿಟೋರಿಯಮ್ಮಿನ ಸೂಪರಿಂಟೆಂಡೆಂಟ್, ನೈನಿಟಾಲ್ ಸಿವಿಲ್ ಸರ್ಜನರ್, ಸರ್ ನೀಲರತನ್ ಸರ್ಕಾರ್, ಡಾ|| ಸುನೀಲ್ ಸಿ. ಬೋಸ್ ಇವರುಗಳಿಂದ ಕೂಡಿದ ಒಂದು ಮೆಡಿಕಲ್ ಬೋರ್ಡನ್ನು ಗೊತ್ತುಮಾಡಿರುತ್ತಾರೆ. ಪರೀಕ್ಷೆಯ ತಾರೀಖನ್ನು ಇನ್ನೂ ಪ್ರಕಟಿಸಿಲ್ಲ.

ಟೋಕಿಯೋ ನಗರದ ಕೆಲವು ಪ್ರಸಿದ್ಧ ಇಂಜನಿಯರುಗಳು ನ್ಯೂಯಾರ್ಕ್ ನಗರದಿಂದ ಇಸ್ತಾಂಬೂಲಿಗೂ, ಗ್ರೇಟ್‌ಬ್ರಿಟನ್ ದ್ವೀಪಗಳಿಗೂ ಬೆಹರಿಂಗ್ ಜಲಸಂಧಿಯ ಮುಖಾಂತರವಾಗಿ ರೈಲು ಹಾಕಬೇಕೆಂದು ಆಲೋಚಿಸುತ್ತಿರುತ್ತಾರೆ. ಇವರ ಏರ್ಪಾಡಿನ ಪ್ರಕಾರವಾಗಿ ರೈಲುಗಳು ಅಮೇರಿಕಾ ಖಂಡವನ್ನು ದಾಟಿ ಸ್ಯಾನ್‌ಫ್ರಾನ್ಸಿಸ್ಕೋವಿಗೂ, ಅಲ್ಲಿಂದ ಕೆನಡಾ ದೇಶದ ಅಂಚಿನ ಮಾರ್ಗವಾಗಿ 'ನೋಂ' ಪಟ್ಟಣಕ್ಕೂ ಹೋಗುವುವು. ಅಲ್ಲಿಂದ ಮುಂದೆ ರೈಲು ಬೆಹರಿಂಗ್ ಜಲಸಂಧಿಯ ಕೆಳಗೆ ಸುರಂಗವನ್ನು ಹಾಯ್ದು ಕಡೆಗೆ ಹಾಬರೋವಸ್ಕ್ (ರಷ್ಯಾ) ದಲ್ಲಿರುವ ಟ್ರಾನ್ಸ್ ಸೈಬೀರಿಯನ್ ರೈಲಿನೊಡನೆ ಬಂದು ಸೇರಿಕೊಳ್ಳುವದು. ಬೆಹರಿಂಗ್ ಜಲಸಂಧಿಯ ಕೆಳಗಿನ ಸುರಂಗವು ಕಡೆಯ ಪಕ್ಷ 54 ಮೈಲುಗಳ ಉದ್ದವಾಗಿರುವದೆಂದು ಭಾವಿಸಲ್ಪಟ್ಟಿದೆ.

ಕಾನೂನುಭಂಗದ ಚಳವಳಿಯು ಪ್ರಾರಂಭವಾದಂದಿನಿಂದಲೂ ಕರಾಚಿಯ 'ರಾಂಬಾಗ' ತೋಟದಲ್ಲಿ ಹಾರಾಡುತ್ತಿದ್ದ ರಾಷ್ಟ್ರೀಯ ಧ್ವಜವನ್ನು ನವೆಂಬರ್ 24 ನೇ ತಾರೀಖಿನ ರಾತ್ರಿ ಯಾರೋ ಅಪಹರಿಸಿರುತ್ತಾರೆ.

ಚತ್ರಾಕುಡಿ, ರಾಮನಾಡು ಸ್ಟೇಷನ್‌ಗಳ ಮಧ್ಯದಲ್ಲಿ ಸರಪಣಿಯನ್ನು ಎಳೆದು ರೈಲು ನಿಂತಕೂಡಲೇ ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚಿದನೆಂಬ ಕಾರಣದ ಮೇಲೆ ಪೋಲೀಸರು ಒಬ್ಬ ಸ್ವಯಂಸೇವಕನನ್ನು ದಸ್ತಗಿರಿ ಮಾಡಿರುತ್ತಾರೆ.

ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಇಂಗ್ಲೆಂಡಿನಿಂದ ಹಿಂತಿರುಗಿ ಬಂದ ಕಾಶಿಯ ಬ್ಯಾರಿಸ್ಟರಾದ ಮಿ|| ಎನ್. ಆರ್. ಪಿ. ಸಿಂಗರವರು ಈ ಮೊದಲು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದರೆಂಬ ಕಾರಣದಮೇಲೆ ನವೆಂಬರ್ 23 ನೇ ತಾರೀಖಿನ ದಿವಸ ರಾತ್ರಿ ದಸ್ತಗಿರಿಮಾಡಲ್ಪಟ್ಟರು.

ಮುಂಬಯಿಯ ಸ್ಪೆಷಲ್ ಸಿ. ಐ. ಡಿ. ಪೋಲೀಸರು ಅತ್ಯಂತ ಸಾಹಸದಿಂದಲೂ ಚತುರತೆಯಿಂದಲೂ ಕ್ರಾಂತಿಕಾರರ ಪಂಗಡಕ್ಕೆ ಸೇರಿದ 6 ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಇವರಲ್ಲಿ ಮುಖ್ಯ ಅಪರಾಧಿಯಾದ ಗೋಪಾಲ್ ಎಂಬವನು ಕಳೆದ ಅಕ್ಟೋಬರ್ 30 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಹಡಗದಿಂದ ಇಳಿದನು. ಸುಂಕದ ಅಧಿಕಾರಿಗಳು ಅವನ ಸಾಮಾನುಗಳನ್ನು ಶೋಧಿಸುವಾಗ್ಗೆ ಅಪರಾಧಿಯು ಬಾಳೇಹಣ್ಣಿನ ಚೀಲದಲ್ಲಿ ಏನನ್ನೋ ಬಚ್ಚಿಡಲು ಪ್ರಯತ್ನಿಸುವುದನ್ನು ಕಂಡು ಸಂಶಯದಿಂದ ಅವನ ಹಾಸಿಗೆಯನ್ನು ಬಿಚ್ಚಿ ನೋಡಲು ಅಲ್ಲಿ 4 ರಿವಾಲ್ವರುಗಳೂ 30 ಗುಂಡಗಳೂ ದೊರೆತವು. ಗೋಪಾಲನು ಕೂಡಲೇ ದಸ್ತಗಿರಿಮಾಡಲ್ಪಟ್ಟನು. ಪೋಲೀಸರು ಅವನ ಬಳಿಯಲ್ಲಿ ದೊರೆತ ಕಾಗದಗಳನ್ನು ಶೋಧಿಸಿದಾಗ ಅವನು ಕ್ರಾಂತಿಕಾರರ ಸದಸ್ಯನೆಂದು ತಿಳಿದುಬಂದಿತಲ್ಲದೆ ಅವನು ತನ್ನ ಅನುಯಾಯಿಗಳೊಡನೆ ನಡೆಸಿದ ಪತ್ರವ್ಯವಹಾರವೂ, ಅವರುಗಳ ವಿಳಾಸವೂ ಪತ್ತೆಯಾದವು. ಇದರ ಮೇಲೆ ಪೋಲೀಸರು ತನಿಖೆಮಾಡಿ, ಗ್ವಾಲಿಯರಿನಲ್ಲಿ ಇಬ್ಬರನ್ನೂ, ದೇಹಲಿಯಲ್ಲಿ ಇಬ್ಬರನ್ನೂ, ಅಲಹಾಬಾದಿನಲ್ಲಿ ಒಬ್ಬನನ್ನೂ, ಹೀಗೆ ಒಟ್ಟು 6 ಜನರನ್ನು ದಸ್ತಗಿರಿಮಾಡಿದರು.

ಇಂಡಿಯಾ ಲೀಗ್ ಡೆಲಿಗೇಷನ್ನಿನ ಸದಸ್ಯರು ನವೆಂಬರ್ 20 ನೇ ತಾರೀಖಿನ ದಿವಸ ಲಂಡನ್ನನ್ನು ತಲುಪಿದರು. ಮಿ|| ಬಟ್ರೆಂಡ್‌ರಸೆಲ್ ಮತ್ತು ಲೀಗಿನ ಇತರ ಮೆಂಬರರು ಸ್ಟೇಷನ್ನಿನಲ್ಲಿ ಕಾದಿದ್ದು ಡೆಲಿಗೇಷನ್ನಿನ ಮೆಂಬರರಿಗೆ ಸ್ವಾಗತವನ್ನು ಬಯಸಿದರು. ಅನಂತರ ಲೀಗಿನವರು ಭರತಖಂಡದ ವಿದ್ಯಮಾನಗಳನ್ನು ಕುರಿತು ಈ ಕೆಳಗೆ ಕಂಡ ಹೇಳಿಕೆಯನ್ನು ಪ್ರಕಟಿಸಿರುತ್ತಾರೆ. 'ಭರತಖಂಡದ ಆರ್ಥಿಕಸ್ಥಿತಿಯು ಅತ್ಯಂತ ಶೋಚನೀಯವಾಗಿರುವದು. ಎಲ್ಲೆಲ್ಲಿಯೂ ಕ್ಷಾಮವೇ ಕಂಡುಬರುತ್ತಿರುವದು. ಬ್ರಿಟಿಷ್ ಸರಕಾರದವರು ಹಿಂದೂಸ್ಥಾನದೊಡನೆ ಈಗ ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ ಐರ್ಲೆಂಡಿನ ಸ್ಥಿತಿಯೇ ಅಲ್ಲಿಯೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಮದರಾಸಿನ ಯೂರೋಪಿಯನ್ ವ್ಯಾಪಾರಿಗಳು ಈ ವಿಷಮ ಪರಿಸ್ಥಿತಿಯಲ್ಲಿ ತಮ್ಮ ಉದ್ಯೋಗಗಳನ್ನು ಮುಂದುವರಿಸುವುದು ಅಸಾಧ್ಯವೆಂದು ಹೇಳಿರುತ್ತಾರೆ. ಇಂಡಿಯಾದಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ್ಸಿನ ಮನೋಭಾವವೇ ವ್ಯಾಪಿಸಿರುವುದು. ಅಲ್ಲಿರುವ ಆಂಗ್ಲೇಯರ ಪ್ರಾಣರಕ್ಷಣೆಯು ಗಾಂಧಿಯವರ ಕೈಯ್ಯಲ್ಲಿರುವದು. ಯಾರೋ ಹೇಳಿರುವಂತೆ ಬ್ರಿಟಿಷರಿಗೆ ಗಾಂಧಿಗಿಂತಲೂ ಉತ್ತಮಪೋಲಿಸರಾರೂ ದೊರೆಯಲಾರರು. ದಬ್ಬಾಳಿಕೆಯ ಉದಾಹರಣೆಗಳು ಅನೇಕವಾಗಿರುವುವು. ಮಿಸ್ ವೈಟ್ಲಿ ರವರು "ಗಾಂಧಿಯವರ ದೇಹಸ್ಥಿತಿ ಹೇಗಿದೆ?" ಎಂದು ಒಬ್ಬ ಪೋಲೀಸಿನವನನ್ನು ಕೇಳಿದುದಕ್ಕೆ ಅವನು ಅವರನ್ನು ದಸ್ತಗಿರಿ ಮಾಡುವುದಾಗಿ ಹೆದರಿಸಿದನು. ಒಂದುಕಡೆ ನಮ್ಮ ಮೋಟಾರಕಾರನ್ನೇ ಮುಂದಕ್ಕೆ ಬಿಡಲಿಲ್ಲ. ಸಿ. ಐ. ಡಿ. ಗಳು ಯಾವಾಗಲೂ ನೆರಳಿನಂತೆ ನಮ್ಮ ಹಿಂದೆಯೇ ತಿರುಗುತ್ತಿದ್ದರು. ಭರತಖಂಡವು ಈಗ್ಗೆ 8 ತಿಂಗಳ ಹಿಂದೆ ಇದ್ದುದಕ್ಕಿಂತಲೂ ಈಗ ನೂರರಷ್ಟುನಾಲು ಸೌಖ್ಯವಾಗಿರುವದೆಂದು ವೈಸರಾಯರು ನನ್ನೊಡನೆ ಹೇಳಿದರು. ಈ ಅಭಿಪ್ರಾಯವನ್ನು ಭಾರತೀಯರಾರೂ ಅನುಮೋದಿಸುವುದಿಲ್ಲ. ಈಗ ನಡೆಯುವ ರೌಂಡ್‌ಟೇಬಲ್ ಸಮ್ಮೇಳನದಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಅದರಲ್ಲಿ ಭಾರತೀಯ ಪ್ರತಿನಿಧಿಗಳಾರೂ ಇಲ್ಲ."

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

[3ನೆಯ ಪುಟದಿಂದ ಮುಂದುವರಿದುದು.]

ಮಾಂಸಭಕ್ಷಕರಲ್ಲಿರುವಷ್ಟು ದೇಹಶಕ್ತಿಯು ಧಾನ್ಯಾಹಾರಿಗಳಲ್ಲಿರುವದಿಲ್ಲವೆನ್ನುವದೂ ಹುಚ್ಚುತನವೇ ಸರಿ. ಮಾಂಸಾಹಾರಿಗಳ ಎದೆಯಮೇಲೆ ನಿಂತು ಸದ್ದುಹೊಡೆಯುತಕ್ಕ ಗಟ್ಟಿಮುಟ್ಟಾದ ಟೊಣಪರು ಧಾನ್ಯಾಹಾರಿಗಳಲ್ಲಿ ಕಡಿಮೆಯಿದ್ದಾರೇನು? ಮಾಂಸವು ಶಕ್ತಿವರ್ಧಕವೆಂಬ ಮಾತನ್ನು 'ತುಷ್ಯತು ದುರ್ಜನಃ' ಎಂಬ ನ್ಯಾಯಾನುಸಾರವಾಗಿ ನಾವು ಒಂದು ವೇಳೆ ಒಪ್ಪಿದರೂ ಮಾಂಸಕ್ಕಿಂತಲೂ ಹೈನವೇ ಹೆಚ್ಚಾದಶಕ್ತಿಯನ್ನುಂಟುಮಾಡುವದೆಂಬ ಸಂಗತಿಯನ್ನಾದರೂ ಯಾರೂ ಅಲ್ಲಗಳೆಯಲಾರರೆಂದು ನಮಗೆ ಬಲವಾದ ನಂಬಿಕೆಯಿದೆ.

ಆಕಳು, ಎಮ್ಮೆ, ಆಡು, ಕುರಿ ಮುಂತಾದ ಪಶುಗಳ ದೇಹಪ್ರಕೃತಿಗುಣಗಳಿಗೆ ತಕ್ಕಂತೆ ಅವುಗಳ ಹೈನದಲ್ಲಿಯೂ. ತಾರತಮ್ಯವಿದೆ. ಬೇರೆ ಎಲ್ಲಾ ಪಶುಗಳಿಗಿಂತಲೂ, ಹಸುವಿನ ಹೈನವು ಬಲು ಹಸನಾದದ್ದು. ಅಲ್ಪಾಹಾರವು, ಚುರುಕುಬುದ್ಧಿಯು, ವಾತ್ಸಲ್ಯವೃತ್ತಿಯು ಎಂಬೀ ಗುಣಗಳು ಸಾಧುಪ್ರಾಣಿಯಾದ ಗೋವಿನಲ್ಲಿ ಸ್ವಾಭಾವಿಕವಾಗಿರುವವು. ಆದ್ದರಿಂದ ಶಾರೀರಕ ಹಾಗೂ ಬೌದ್ಧಿಕದೃಷ್ಟಿಯಿಂದ ಪರಿಭಾವಿಸಿದರೆ, ಹಸುವಿನ ಹೈನವೇ ಎಲ್ಲಕ್ಕೂ ಹೆಚ್ಚಿನದೆಂದು ಅನುಭವಸಿದ್ಧವಾಗಿದೆ. ಧಾರ್ಮಿಕ ಕಾರ್ಯಗಳಲ್ಲಿಯೂ, ಆರೋಗ್ಯವಿಷಯದಲ್ಲಿಯೂ, ಹಸುವಿನ ಹೈನವೇ ಪುರಸ್ಕರಿಸಲ್ಪಡುವುದು. ಇದರಿಂದ ಉಳಿದ ಪಶುಗಳ ಬಗ್ಗೆ ನಮಗೆ ಅನಾದರಣೆಯುಂಟೆಂದು ಯಾರೂ ಭಾವಿಸಲಾಗದು. ಪ್ರಕೃತ ವಿಷಯ ವಿವೇಚನೆಯು ಗೋವನ್ನು ಉದ್ದೇಶಿಸಿರುವುದಷ್ಟೆ? ಆದ್ದರಿಂದ ಈಗ ನಾವು ಗೋವಿನ ಹಾಲು ಮುಂತಾದುದರ ಗುಣಾತಿಶಯ ವಿಷಯವಾಗಿ ಹೇಳುತ್ತೇವೆ. ಯೋಗರತ್ನಾಕರವೆಂಬ ವೈದ್ಯಗ್ರಂಥದಲ್ಲಿ :—

ಹಾಲು.

ಧಾರೋಷ್ಣಂ ಪವನಶ್ರಮೋಪಶಮನಂ ದುಗ್ಧಂ ಗವಾಂ ಪುಷ್ಟಿಕೃತ್ | ಪಾಣ್ಡುಂ ಕಾಮಲಕಾಂ ನಿಹನ್ತಿ ತರಸಾ ಕ್ಷೀಣೋರ್ಜಕೃಚ್ಛ್ರೀಕರಂ || ದಾಹಂ ದೇಹಗತಂ ಕರಾಂಘ್ರಿನಯನಜ್ವಾಲಾಂ ಚ ಪಿತ್ತೋನ್ನತಿಂ | ದುಷ್ಟಾಸ್ರಂ ಕೃಶತಾಂ ಕೃಶಾನುಜನಿತಾಂ ಕೃಚ್ಛ್ರಾಂಶ್ಚ ರೋಗಾನ್ ಜಯೇತ್ ||

ಗೋವಿನ ಧಾರೋಷ್ಣವಾದ ಹಾಲು, ಪ್ರಕುಪಿತವಾದ ವಾತವನ್ನು ಶಾಂತಗೊಳಿಸುವುದು ; ದೇಹಕ್ಕೆ ಪುಷ್ಟಿಯನ್ನುಂಟುಮಾಡುವುದು ; ಪಾಂಡುಕಾಮಾಲೆಯೆಂಬ ರೋಗಗಳನ್ನು ಹೋಗಲಾಡಿಸುವುದು ; ಕ್ಷೀಣನಾದವನಿಗೆ ಶಕ್ತಿಯನ್ನೂ, ಕಾಂತಿಯನ್ನೂ ಹೆಚ್ಚಿಸುವುದು ; ಹಾಗೂ ಶರೀರದ ದಾಹ, ಕೈಕಾಲುಗಳುರಿಯೋಣ, ಪಿತ್ತದ ಪ್ರಕೋಪ, ರಕ್ತದೋಷ, ಕೃಶತ್ವ ಎಂಬಿವುಗಳನ್ನು ಕಳೆಯುವುದಲ್ಲದೆ ಜಠರಾಗ್ನಿಸಂಬಂಧವಾದ ಎಲ್ಲಾ ರೋಗಗಳನ್ನೂ ದೂರಮಾಡುವುದು.

ಶರ್ಕರಾಸಹಿತಂ ಕ್ಷೀರಂ ಕಫಕೃತ್ಪವನಾಪಹಮ್ | ಸಿತಾಸಿತೋಪಲಾಯುಕ್ತಂ ಶುಕ್ರಲಂ ದೋಷನಾಶನಮ್ ||

ಸಕ್ಕರೆಯನ್ನು ಬೆರಿಸಿದ ಹಾಲು ಕಫಕಾರಕವೂ, ವಾತನಾಶಕವೂ, ಆಗಿದೆ. ಕಲ್ಲುಸಕ್ಕರೆಯನ್ನು ಬೆರೆಸಿದ ಹಾಲು ಧಾತು (ವೀರ್ಯ) ವರ್ಧಕವೂ ದೋಷನಾಶಕವೂ ಆಗಿದೆ.

ಮೊಸರು.

ಗವ್ಯಂ ದಧ್ಯುತ್ತಮಂ ಬಲ್ಯಂ ಪಾಕೇ ಸ್ವಾದು ರುಚಿಪ್ರದಂ | ಪವಿತ್ರಂ ದೀಪನಂ ಸ್ನಿಗ್ಧಂ ಪುಷ್ಟಿಕೃತ್ಪವನಾಪಹಂ ||

ಗೋವಿನ ಮೊಸರು ಮಿಗಿಲಾದದ್ದು, ಬಲಕಾರಕವೂ, ರುಚಿಕರವೂ, ವಿಪಾಕಕಾಲದಲ್ಲಿ ಮಧುರವೂ, ಪವಿತ್ರವೂ, ದೀಪನವೂ, ಸ್ನಿಗ್ಧವೂ, ಪುಷ್ಟಿಕಾರಕವೂ, ವಾತನಾಶಕವೂ ಆಗಿದೆ.

ಮಜ್ಜಿಗೆ.

ಗವ್ಯಂ ತು ದೀಪನಂ ತಕ್ರಂ ಮೇಧ್ಯಮರ್ಶಸ್ತ್ರಿದೋಷನುತ್ | ಹಿತಂ ಗುಲ್ಮಾತಿಸಾರೇಷು ಪ್ಲೀಹಾರ್ಶೋಗ್ರಹಣೀಗದೇ ||

ಆಕಳ ಮಜ್ಜಿಗೆಯು ದೀಪನವೂ, (ಅಗ್ನಿದೀಪಕವೂ) ಬುದ್ಧಿವರ್ಧಕವೂ ಆಗಿದ್ದು, ಮೂಲವ್ಯಾಧಿಯನ್ನೂ ತ್ರಿದೋಷವನ್ನೂ ಹೋಗಲಾಡಿಸುವುದಲ್ಲದೆ ಗುಲ್ಮ, ಅತಿಸಾರ, ಪಾಂಥರೀ, ಸಂಗ್ರಹಣೀ ಎಂಬ ಬೇನೆಗಳಿಗೆ ಹಿತಕಾರಕವೂ ಆಗಿದೆ.

ಕೈಲಾಸೇ ಯದಿ ತಕ್ರಮಸ್ತಿ ಗಿರಿಶಃ ಕಿಂ ನೀಲಕಂಠೋ ಭವೇತ್ | ವೈಕುಂಠೇ ಯದಿ ಕೃಷ್ಣತಾಮನುಭವೇದದ್ಯಾಪಿ ಕಿಂ ಕೇಶವಃ || ಇಂದ್ರೋ ದುರ್ಭಗತಾಂ ಕ್ಷಯಂ ದ್ವಿಜಪತಿರ್ಲಂಬೋದರತ್ವಂ ಗಣಃ | ಕುಷ್ಠಿತ್ವಂ ಚ ಕುಬೇರಕೋ ದಹನತಾಮಗ್ನಿಶ್ಚ ಕಿಂ ವಿನ್ದತಿ ||

ಕೈಲಾಸದಲ್ಲಿ ಮಜ್ಜಿಗೆಯು ದೊರಕುತ್ತಿದ್ದರೆ ಶಂಕರನು ನೀಲಕಂಠನಾಗುತ್ತಿದ್ದನೇ? ವೈಕುಂಠದಲ್ಲಿ ಮಜ್ಜಿಗೆಯು ಇದ್ದರೆ ವಿಷ್ಣುವಿನ ಶರೀರವು ಇದುವರೆಗೆ ಕಪ್ಪುಬಣ್ಣವುಳ್ಳದ್ದಾಗಿರುತ್ತಿದ್ದಿತೇ? ಹಾಗೆಯೇ, ಸ್ವರ್ಗದಲ್ಲಿಯೂ ಮಜ್ಜಿಗೆಯು ದೊರಕುವ ಹಾಗಿದ್ದ ಪಕ್ಷದಲ್ಲಿ ಇಂದ್ರನ ಅಂಗದ ಮೇಲಿನ ಭಗಗಳೂ, ಚಂದ್ರನಕ್ಷಯವೂ, ಗಣಪತಿಯ ದೊಳ್ಳುಹೊಟ್ಟೆಯೂ, ಕುಬೇರನ ತೊನ್ನೂ, ಅಗ್ನಿಯ ಉಷ್ಣತೆಯೂ ಉಳಿಯುತ್ತಿದ್ದಿಲ್ಲ.

ತುಪ್ಪ.

ಧೀಕಾನ್ತಿಸ್ಮೃತಿಕಾರಕಂ ಬಲಕರಂ ಮೇಧಾಕರಂ ಪುಷ್ಟಿಕೃತ್ | ವಾತಘ್ನಂ ಶ್ರಮನಾಶನಂ ಸ್ವರಕರಂ ಪಿತ್ತಾಪಹಂ ಪುಷ್ಟಿದಮ್ || ವಹ್ನೇರ್ವೃದ್ಧಿಕರಂ ವಿಪಾಕಮಧುರಂ ವೃಷ್ಯಂ ವಪುಃಸ್ಥೈರ್ಯದಂ | ಸೇವ್ಯಂ ಗವ್ಯಘೃತೋತ್ತಮಂ ಬಹುಗುಣಂ ಸದ್ಯಃ ಸಮಾವರ್ತಕಮ್ ||

ಹಸುವಿನ ತುಪ್ಪವು ಬುದ್ಧಿಯನ್ನೂ, ಕಾಂತಿಯನ್ನೂ, ಸ್ಮೃತಿಯನ್ನೂ, ಬಲವನ್ನೂ, ಧಾರಣ ಶಕ್ತಿಯನ್ನೂ ಹೆಚ್ಚಿಗೊಳಿಸುವುದು. ಶೋಧನಕಾರಿಯೂ, ವಾತನಾಶಕವೂ, ಶ್ರಮನಾಶಕವೂ, ಸ್ವರಕಾರಕವೂ, ಪಿತ್ತನಾಶಕವೂ, ಪುಷ್ಟಿಕರವೂ, ಅಗ್ನಿವರ್ಧಕವೂ, ಮಧುರವಿಪಾಕಿಯೂ, ವೃಷ್ಯ (ವೀರ್ಯವರ್ಧಕ) ವೂ, ಶರೀರವನ್ನು ಸ್ಥಿರಗೊಳಿಸುವುದೂ (ಆಯುಷ್ಯಕಾರಕವೂ) ಶ್ರೇಷ್ಠವೂ ಬಹುಗುಣಯೂ ಆಗಿದೆ; ಆಗತಾನೆ ಬೆಣ್ಣೆ ಕಾಸಿದ ಹೊಸ ತುಪ್ಪವು ಬಲು ಹಿತಕರವಾದುದರಿಂದ ಅಂತಹದನ್ನೇ ಸೇವಿಸುವುದು ಉತ್ತಮವು.

ಈ ರೀತಿಯಾಗಿ, ಮಾಂಸ ಮುಂತಾದ ಇತರ ಭಕ್ಷ್ಯಪದಾರ್ಥಗಳಿಗಿಂತಲೂ ಆಕಳ ಹೈನದಲ್ಲಿ ಅಧಿಕಗುಣವಿರುವುದೆಂದು ಆಯುರ್ವೇದಗ್ರಂಥಗಳಲ್ಲಿ ಬಹುವಾಗಿ ಪ್ರತಿಪಾದಿಸಲ್ಪಟ್ಟಿದೆ. ಆಕಳ ಹೈನದ ಮಾತು ಹಾಗಿರಲಿ, ಅದರ ಮೂತ್ರದಲ್ಲಿಯಾದರೂ ಬಹು ಗುಣವಿರುವುದು ; ಹೇಗೆಂದರೆ—

ಗೋಮೂತ್ರಂ ಕಟು ತೀಕ್ಷ್ಣೋಷ್ಣಂ ಸಕ್ಷಾರಂ ಲೇಖನಂ ಸರಮ್ | ಲಘ್ವಗ್ನಿದೀಪನಂ ಮೇಧ್ಯಂ ಪಿತ್ತಲಂ ಕಫವಾತಜಿತ್ || ಶೂಲಗುಲ್ಮೋದರಾನಾಹವಿರೇಕಾಸ್ಥಾಪನಾದಿಷು | ಮೂತ್ರಪ್ರಯೋಗಸಾಧ್ಯೇಷು ಗವ್ಯಂ ಮೂತ್ರಂ ಪ್ರಯೋಜಯೇತ್ ||

ಗೋಮೂತ್ರವು ಖಾರವಾಗಿಯೂ, ಒಗರಾಗಿಯೂ, ಉಷ್ಣವಾಗಿಯೂ, ಕ್ಷಾರವಾಗಿಯೂ ಇರುವುದು. ಮತ್ತು ಅದರಲ್ಲಿ ಲೇಖನ (ದೋಷಗಳನ್ನು ಒಣಗಿಸಿ ತೆಳ್ಳಗೆ ಮಾಡೋಣ) ಸಾರಕ ಹಗುರುತನ, ಅಗ್ನಿದೀಪಕ, ಬುದ್ಧಿವರ್ಧಕ, ಪಿತ್ತಕಾರಕ, ಕಫವಾತನಾಶಕ ಎಂಬೀ ಗುಣಗಳೂ ಇರುತ್ತವೆ. ಹಾಗೂ ಶೂಲ, ಗುಲ್ಮ, ಉದರ, ಆನಾಹ (ಹೊಟ್ಟೆಯುಬ್ಬುವಣ) ಈ ವಿಕಾರಗಳಲ್ಲಿಯೂ ಆಸ್ಥಾಪನಾದಿಬಸ್ತಿಕರ್ಮಗಳಲ್ಲಿಯೂ ಒಟ್ಟಿನ ಮೇಲೆ ಯಾವ ಯಾವ ಪ್ರಯೋಗಗಳಲ್ಲಿ ಮೂತ್ರದ ಯೋಜನವಿರುವುದೋ ಅಯಾ ಪ್ರಯೋಗಗಳಲ್ಲಿ ಗೋಮೂತ್ರವನ್ನೇ ಯೋಜಿಸತಕ್ಕದ್ದು.

ವಾಚಕ ಮಹಾಶಯರೇ, ಗೋವಿನ ಮೂತ್ರದಲ್ಲಿ ಇಂತಹ ಉತ್ತಮ ಗುಣಗಳಿರುತ್ತಿರುವಲ್ಲಿ, ಅದರ ಹೈನದಲ್ಲಿ ಎಷ್ಟು ಮಹತ್ವವಿದೆಯೆಂಬುದನ್ನು ಮತ್ತೆ ಬೇರೆ ಹೇಳತಕ್ಕದ್ದೇನು? ಆಕಳ ಸಗಣಿಯಾದರೂ ಗುಂಜಿ ಪ್ರಮಾಣದಷ್ಟು ಮನುಷ್ಯನ ಹೊಟ್ಟೆಯೊಳಗೆ ಹೋದರಾಯಿತು, ಅದರಿಂದ ಮಲಾಶಯ ಶುದ್ಧಿಯೂ, ಕ್ರಿಮಿಗಳ ನಾಶವೂ ಆಗುವುದಲ್ಲದೆ ಕರುಳಿನಲ್ಲಿಯ ದೋಷವೂ ಮಾಯುವುದು. ಈ ಸಗಣಿಯೇ ಒಣಗಿ ಬೆರಣೆಯೆನಿಸಿ ಸುಟ್ಟು ಬೂದಿಯಾದ ಬಳಿಕ ಅದು ಲೌಕಿಕ ಧಾರ್ಮಿಕ ಬಳಕೆಯಲ್ಲಿ ಎಷ್ಟು ಉಪಯೋಗವಿದೆಯೆಂಬ ಸಂಗತಿಯನ್ನು ಎಲ್ಲರೂ ಬಲ್ಲರು. ಒಂದು ಶಿವುಡು ಕಣಿಕೆ ಬಂದಿಗೆ ನೀರು ಹಾಕಿದ ಮಾತ್ರದಿಂದಲೇ ಹಾಲು, ಮೊಸರು ಬೆಣ್ಣೆ, ತುಪ್ಪವೆಂಬ ಹೈನವನ್ನು ಕೊಟ್ಟು ಕೂಸು ಮೊದಲಾಗಿ ಮುದುಕರೇ ಕಡೆಯಾದ ಎಲ್ಲರನ್ನೂ ಪೋಷಿಸತಕ್ಕ ಗೋವೆಂಬ ಈಶ್ವರ ನಿರ್ಮಿತವಾದ ಸಜೀವ ಯಂತ್ರವನ್ನು ಮಾಂಸದ ಆಶೆಗಾಗಿ ಒಮ್ಮೆಗೇಲೆ ನಾಶಪಡಿಸಲುದ್ಯುಕ್ತರಾಗುವವರು, ಮನುಷ್ಯಕೋಟಿಯಲ್ಲಿ ಪರಿಗಣಿಸಲ್ಪಡಲು ಯೋಗ್ಯರೇ ಎಂಬುದನ್ನು ಸಾರಾಸಾರ ವಿಚಾರಧುರೀಣರು ಪರಿಶೀಲಿಸತಕ್ಕದ್ದು.

ಸದ್ಯಃ ಗೋಸಂತತಿಯೇ ಹ್ರಾಸವಾಗತೊಡಗಿರುವುದರಿಂದ, ಗೋವಿನ ಹಾಲು ಮುಂತಾದ ಹೈನವು ದೊರೆವುದು ಹಾಗಿರಲಿ, ಅದರ ಮೂತ್ರವಾದರೂ ಸಿಕ್ಕುವುದೂ ಕಷ್ಟವಾಗಿದೆ. ಹುಟ್ಟಿದ ಹುಳವೆಲ್ಲಾ ಚಹಾ ಚಹಾ ಎಂದು ಕನವರಿಸುತ್ತಿರುವ ಈ ಅಪೇಯಪಾನದ ಹಾವಳಿಯಲ್ಲಿ ಕತ್ತೆಯ ಹಾಲು ಸಹ ತುಟ್ಟಿಯಾಗಿರುವುದೆಂದು ಕೇಳಲ್ಪಡುತ್ತಿರುವಾಗ, ಪವಿತ್ರವೂ ಪೋಷಕವೂ ಆದ ಗೋಕ್ಷೀರವು ಸರ್ವಸುಲಭವಾಗಿ ದೊರಕುವದುಂಟೆ? ದಿನಾಲೂ ಗಂಟೆಗೊಮ್ಮೆಯೋ ಹಲವು ಸಾರಿಯೋ ಬಿಡುವಿಲ್ಲದೆ ಚಹಾದ ಕಾಢೆಯನ್ನು ಕುಡಿದು ಜೀವಿಸುವ ಈ ಪುಢಿಯಾಳುಗಳು ವ್ಯಾಯಾಮವನ್ನು ಮಾಡುವರಂತೆ! ಅಹಹ! ಮೈಮೇಲೆ ಆನೆ ನುಗ್ಗಿದರೂ ನೆಗ್ಗದ ಗಟ್ಟಿಮುಟ್ಟಾದ ಕಬ್ಬಿಣದ ಪೆಟ್ಟಿಗೆಯಂತಹ ಕಟ್ಟೆದೆಯುಳ್ಳವರಾದ ಹಾಲು ಕುಡಿಯುವ ಗರಡೀ ಸಾಧಕರೆತ್ತ? ಜಂಗುಹತ್ತಿ ಒಡೆದಿರುವ ಹಳೆಯ ಚಿಮಿಣೇಡಬ್ಬಿಯಂತಹ ಪಕ್ಕೆಯುಳ್ಳವರಾದ ಚಹಾಕುಡಿದು ಅತ್ತಿತ್ತ ಬಳುಕುತ್ತ ಬಾಗುತ್ತ ತಿರುಗಾಡುವವರೆತ್ತ? ಹಿಂದೂಸ್ಥಾನದ ಮುದಿಕೋಣಗಳು ಚಹಾ ಕುಡಿದು ಕುಡಿದು ತಾವು ಹಾಳಾಗುವುದಲ್ಲದೆ ತಮ್ಮ ದೇಶದ ಸಾಂಪತ್ತಿಕಸ್ಥಿತಿಯನ್ನೂ, ತಮ್ಮ ಪೀಳಿಗೆಯನ್ನೂ ಕ್ಷೀಣದಶೆಗೀಡುಮಾಡುತ್ತಿರುವುದು ಬಹು ಶೋಚನೀಯವಲ್ಲವೆ? ಇನ್ನಾದರೂ ಭಾರತೀಯರು ಎಚ್ಚರಾಗಿ ಈಗ ನಡೆದಿರುವ ಗೋಸಂತತಿಯ ಹ್ರಾಸವನ್ನು ತೊಲಗಿಸುವದಕ್ಕೆ ತಕ್ಕ ಉಪಾಯವನ್ನು ಮಾಡಿ ಅದರ ಪೋಷಣೆ ಬೆಳವಣಿಗೆಯ ಬಗ್ಗೆ ವ್ಯವಸ್ಥೆಯನ್ನು ಏರ್ಪಡಿಸಿ ಹೈನದಿಂದಲೇ ತಮ್ಮ ಮೇಧಾಶಕ್ತಿಯನ್ನೂ ಮೈಕಟ್ಟನ್ನೂ ಬೆಳೆಸಲು ಯತ್ನಿಸಬಾರದೇ?

ಭರತಖಂಡದಲ್ಲಿ ಕೃಷಿಕರ್ಮವೇ ಮುಖ್ಯವಾದ ಜೀವನೋಪಾಯವಾಗಿದೆ. ಒಕ್ಕಲತನದ ಕೆಲಸದಲ್ಲಿಯಾದರೂ ಎತ್ತುಗಳ ಅವಶ್ಯಕತೆಯು ಎಷ್ಟಿದೆ ಎಂಬುದನ್ನು ಎಲ್ಲರೂ ಬಲ್ಲರು. ಹೀಗಿದ್ದರೂ ಒಕ್ಕಲಿಗರು ಅವುಗಳ ವಿಷಯದಲ್ಲಿ ಎಷ್ಟು ಆದರಣೆಯುಳ್ಳವರಾಗಿದ್ದಾರೆಂಬುದನ್ನು ದೇವರೇ ಬಲ್ಲನೆನ್ನುವಹಾಗಿಲ್ಲ. ಎಲ್ಲರೂ ಬಲ್ಲರು. ಒಂದು ಎತ್ತು ಬಿಟ್ಟ ಒಕ್ಕಲಿಗನಲ್ಲಿ ಒಂದು ವರ್ಷದವರೆಗಾದರೂ ಕಾಲೂರಿ ನಿಂತಿದ್ದನ್ನು ನಾವು ಕಾಣೆವು. ಏಕೆಂದರೆ—ಬಿತ್ತುಗೆಯ ಹಂಗಾಮದಲ್ಲಿ ಕೊಂಡುತಂದ ಎತ್ತುಗಳನ್ನು ಕಡೆಗಣದ ಮರುದಿನವೇ ಮಾರುವ ಒಕ್ಕಲಿಗರು ವಿಶೇಷವಾಗಿದ್ದಾರೆ. ಈಗ ಬಹುತರವಾಗಿ ಒಕ್ಕಲಿಗರೆಲ್ಲಾ 'ಹಾಳುಮಾಡಿ ಹತ್ತೀ ಬಿತ್ತಿದ' ಎಂಬ ಗಾದೆಯನ್ನನುಸರಿಸಿ ಚಹಾ ಸಿಗ್ರೇಟ್ ಮುಂತಾದ ಚೈನಿಯ ಚಟಗಳಿಗಾಗಿ ಮನೆಯೊಳಗಿದ್ದುದನ್ನೆಲ್ಲಾ ಹಾಳುಮಾಡಿ ಹತ್ತೀ ಬಿತ್ತಲಿಕ್ಕೆ ತೊಡಗಿದ್ದಾರೆ. ಮನೆಯ ಅಂಗಳದಲ್ಲಿ ಧಾನ್ಯಗಳನ್ನು ತುಂಬಿದ ಹಗೆಗಳೂ, ಕೊಟ್ಟಿಗೆಯಲ್ಲಿ ಆನೆಯಂತಹ ಎತ್ತುಗಳೂ, ಹಿತ್ತಲಿನಲ್ಲಿ ಗುಡ್ಡದಂತಹ ಮೇವಿನ ಬಣವೆಗಳೂ ಉಳ್ಳ ಸುಖಜೀವಿಗಳಾದ ಒಕ್ಕಲಿಗರು ಈಗ ಎಷ್ಟು ಜನರು ದೊರಕಬಹುದು? ಕಣದಲ್ಲಿಯೇ ಧಾನ್ಯದ ರಾಶಿಯನ್ನು ತುಂಬಿದ ಮೂಟೆಗಳನ್ನೂ, ಹುಲ್ಲು ಸೊಪ್ಪು ಮೇವುಗಳನ್ನೂ ಬಂಡಿಗಳ ಮೇಲೆ ಹೇರಿ ಹೊರಹೊರಗೆ ಪೇಟೆಗೊಯ್ದು ಮಾರುವ ಒಕ್ಕಲಿಗರ ಮನೆಗಳಲ್ಲಿ ದನಗಳು ಏನನ್ನು ತಿಂದು ಜೀವಿಸಬೇಕು? ಈಗಲಾದರೂ ಸುಗ್ಗಿಯು ಮುಗಿಯಿತು, ಇನ್ನು ಎತ್ತುಗಳ ಕೆಲಸವಾದರೂ ಏನಿದೆ? ಮುಂದೆ ಮಳೆಗಾಲಕ್ಕೆ ಮತ್ತೆ ಕೊಂಡು ತರುವಾ ಎಂಬ ಯೋಚನೆಯಿಂದ ಒಕ್ಕಲಿಗರು ಮನೆಯಲ್ಲಿ ಮೇವಿಲ್ಲದುದರಿಂದ ಎತ್ತುಗಳನ್ನೂ ಆಕಳುಗಳನ್ನೂ ಪೇಟೆಗೆ ಹೊಡೆದು ತಂದು ಬಂದಷ್ಟು ಹಣಕ್ಕೆ ಮಾರಿಬಿಡುವರು. ಮೇವಿಗೆ ನೆಲೆಯಾದ ಒಕ್ಕಲಿಗರೇ ದನಗಳನ್ನು ಮಾರುವವರಾದ ಬಳಿಕ, ಉಳಿದ ಉದ್ಯೋಗಿಗಳು ಎಷ್ಟು ದನಗಳನ್ನು ಸಲಹಬಹುದು? ಮುಕ್ಕಾಲುಪಾಲು ದನಗಳನ್ನು ಕಟುಕರೇ ಕೊಂಡೊಯ್ಯುವರು! ತನ್ನ ಕುಟುಂಬ ಸಂರಕ್ಷಣೆಗೆ ಮುಖ್ಯ ಸಾಧನಗಳಾದ ಎತ್ತು ಆಕಳುಗಳನ್ನು ಕನಿಕರವಿಲ್ಲದೆ ಕಟುಕರ ಬಾಯಿಗಿತ್ತು ಮಾಡುವ ಕೃತಘ್ನರಾದ ಒಕ್ಕಲಿಗರಿಗೆ ದಾರಿದ್ರ್ಯವೂ, ದುಃಖವೂ, ಗೋಹತ್ಯಾಪಾತಕವೂ ಸಂಭವಿಸದಿರುವದೆ? ಅದುಕಾರಣವೇ ಒಕ್ಕಲತನವೇ ಮುಖ್ಯ ಉದ್ಯೋಗವಾಗಿ ಉಳ್ಳ ಹಿಂದುಸ್ಥಾನವು ಸದ್ಯಃ ಬಹು ಕಷ್ಟನಷ್ಟಗಳಿಗೀಡಾಗಿರುವುದು. ಬಹಳ ಹೇಳುವದೇನು, ಈಗ ಭಾರತ ವರ್ಷೀಯ ಜನಾಂಗವು ಬುದ್ಧಿಯಿಂದಲೂ ಶರೀರ ಶಕ್ತಿಯಿಂದಲೂ, ಸಾಂಪತ್ತಿಕಸ್ಥಿತಿಯಿಂದಲೂ ಅವನತಿಯನ್ನು ಹೊಂದುತ್ತಿರುವುದಕ್ಕೆ ಗೋರಕ್ಷಣೆಯ ಅಭಾವವೇ ಪ್ರಧಾನತಮವಾದ ಕಾರಣವಾಗಿದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ಈಗ ಗೋಸಂತತಿಯು ಹ್ರಾಸವಾಗುತ್ತಿರುವುದನ್ನು ಕಣ್ಣಾರೆ ನೋಡುತ್ತ ಸುಮ್ಮನೆ ಕುಳಿತುಕೊಳ್ಳದೆ, ಗೋರಕ್ಷಣೆಯ ಬಗ್ಗೆ ತನುಮನಧನಗಳಿಂದ ಯತ್ನಮಾಡುವುದೇ ವಿಹಿತವು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂ ಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಫ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮಿನರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಹ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0. ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇನ್ನು ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[15] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೀತಿಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದಿ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೮ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಆದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿನಶೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷದ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಆದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಆದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಹತ್ತುವವೋ, ಇಂಥ ಬೇರೇ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಆದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಆದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
2 ಮು. ಪೋ. **ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[22] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೀ. ಬಿ. ಯವರ
ಸುಗಂಧ ನಸ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೬-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[23] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಡಿಶಂಬರ್ ೧೯೩೨ [ಸಂಚಿಕೆ ೩೦

ಗಾಂಧಿಯವರ ವಿಚಿತ್ರಪ್ರತಿಜ್ಞೆ.

ಭರತಖಂಡದಲ್ಲಿ ಅನಾದಿಕಾಲದಿಂದ ಬಂದಿರುವ ಅಸ್ಪೃಶ್ಯತೆಯನ್ನು ಸಮೂಲವಾಗಿ ಕಿತ್ತುಹಾಕುತ್ತೇನೆಂದು ಗಾಂಧಿಯವರು ವಿಚಿತ್ರಪ್ರತಿಜ್ಞೆಯನ್ನು ಮಾಡಿರುವುದು ಜಗತ್ತಿಗೆಲ್ಲಾ ವೇದ್ಯವಾದುದಾಗಿದೆ. ಹಿಮವತ್ಪರ್ವತವನ್ನು ಅಂಗೈಯಲ್ಲಿಟ್ಟುಕೊಂಡು ಅದನ್ನು ಎತ್ತಬೇಕತ್ತ ತಿರುಗಿಸಬಲ್ಲೆನೆಂಬವನ ಪ್ರತಿಜ್ಞೆಯೂ, ಗಾಂಧಿಯವರ ಪ್ರತಿಜ್ಞೆಯೂ ಒಂದೇ ಮಾಲಿಕೆಯೊಳಗಿನ ಮಣಿಗಳಾಗಿರುತ್ತವೆ. ಅಸ್ತು! ಈ ಕಾರ್ಯವು ಗಾಂಧಿಯವರಿಂದ ನೆರವೇರಬಹುದೇ ಎಂಬ ವಿಷಯವನ್ನು ಸದ್ಯಃ ಪರ್ಯಾಲೋಚಿಸಬೇಕಾಗಿದೆ. ಅನಾದಿಕಾಲದಿಂದ ಬಂದಿರತಕ್ಕ ಮತಧರ್ಮಗಳನ್ನು ಒಮ್ಮೆಲೆ ನಾಶಮಾಡುವುದು ಯಾರಿಗೂ ಸಾಧ್ಯವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಪೂರ್ವದಲ್ಲಿ ಮಹಾಮಹಾ ಚಕ್ರವರ್ತಿಗಳು ತಮ್ಮ ತಮ್ಮ ಮತಾಭಿಮಾನದಿಂದ ಮಾಡಬಾರದ ಕೃತಿಗಳನ್ನು ಮಾಡಿದರು. ಕೆಲವರು ಈ ಭರತಭೂಮಿಯನ್ನು ಬೌದ್ಧಮಯವನ್ನಾಗಿ ಮಾಡುತ್ತೇವೆಂದು ಪ್ರತಿಜ್ಞೆಮಾಡಿದರು. ಕೆಲ ಜನ ಮುಸಲ್ಮಾನ ಚಕ್ರವರ್ತಿಗಳು ಮುಸಲ್ಮಾನಮಯವನ್ನಾಗಿ ಮಾಡಿಬಿಡುತ್ತೇವೆಂದು ಪ್ರತಿಜ್ಞೆಮಾಡಿದರು. ಆದರೂ ಅವರ ಪ್ರತಿಜ್ಞೆಗಳು ನೆರವೇರಲಿಲ್ಲವೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಗಾಂಧಿಯವರ ಪ್ರತಿಜ್ಞೆಯ ಪರಿಣಾಮವಾದರೂ ಅದೇ ಸ್ವರೂಪವನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಸದ್ಯಃ ಗಾಂಧಿಯವರು ಕೈಕೊಂಡಿರುವ ಈ ವಕ್ರಮಾರ್ಗವನ್ನು ಕಂಡು ಲಕ್ಷೋಪಲಕ್ಷ ಜನ ಸನಾತನಧರ್ಮದವರು ಅವರಿಗೆ ವಿರುದ್ಧವಾಗಿ ಚಳವಳಿಯನ್ನು ಹೂಡಿರುವರು. ಇದೇ ರೀತಿಯಾಗಿದ್ದರೆ ಹಿಂದೂಗಳಲ್ಲಿಯೇ ಎರಡು ಭಾಗವಾಗಿ ಗಾಂಧಿಯವರ ಉದ್ದೇಶಕ್ಕೆ ಮಹಾಹಾನಿಯುಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಇಲ್ಲಿಯವರೆಗೆ ನಡೆದ ಚಳವಳಿಯ ಸ್ವರೂಪವು ಒಂದು ವಿಧವಾಗಿತ್ತು. ಆದರೆ ಗಾಂಧಿಯವರು ಈಗ ನಡೆಯಿಸಿರುವ ಚಳವಳಿಯ ಸ್ವರೂಪವು ಒಂದು ವಿಧವಾಗಿದೆ. ಹಿಂದು ಹಿಂದುಗಳಲ್ಲಿಯೇ ಒಡೆದಾಟವನ್ನು ಹಚ್ಚಲು ಪ್ರಾರಂಭಿಸಿರುವ ಈ ಚಳವಳಿಯಿಂದ ಇವರಿಗೆ ಯಾವ ಪ್ರಯೋಜನವದೆಯೋ ತಿಳಿಯದಾಗಿದೆ. ಇದರಿಂದ ಬೇರೊಬ್ಬರಿಗೆ ಸರಿಯಾದ ಸಂಧಿಯು ದೊರೆತಂತಾಯಿತು. ಪವಿತ್ರವಾದ ದೇವಾಲಯಗಳ ಮಹಾದ್ವಾರದ ಬಳಿಗೂ ಸಹ ಬರಲು ಭಯಪಡುತ್ತಲಿದ್ದ ಅಸ್ಪೃಶ್ಯರನ್ನು ಗರ್ಭಗೃಹದಲ್ಲಿ ಪ್ರವೇಶಮಾಡಿಸುತ್ತೇನೆಂದುಹೇಳುವಗಾಂಧಿಯವರ ಮನೋಭಾವವು "ವಿನಾಶಕಾಲೇ ವಿಪರೀತಬುದ್ಧಿಃ" ಎಂಬ ನ್ಯಾಯಕ್ಕೆ ಅನುಕೂಲವಾದಂತಾಗಿದೆ. ಅಸ್ಪೃಶ್ಯಜಾತಿಯ ಒಬ್ಬ ಅಂಬೇಡಕರನ ಪ್ರೇಮವನ್ನು ಸಂಪಾದಿಸುವುದಕ್ಕಾಗಿ ಇವರು ಈ ತರಹದ ಧರ್ಮಶಾಸ್ತ್ರವಿರುದ್ಧವೂ ಲೋಕವಿರುದ್ಧವೂ ಆದ ಕಾರ್ಯದಲ್ಲಿ ಕೈಹಾಕಿರುವುದು ಹಾಸ್ಯಾಸ್ಪದವಾಗಿರುವುದಲ್ಲದೆ ಅತ್ಯಂತ ಹೇಯವಾಗಿದೆ. ಅಸ್ಪೃಶ್ಯರನ್ನು ದೇವಾಲಯದೊಳಗೆ ಬಿಡದಿದ್ದರೆ ನಾನು ಉಪವಾಸಮಾಡಿ ಪ್ರಾಣಬಿಡುತ್ತೇನೆಂದು ಹೆದರಿಸಿ, ಇವರು ಜನರನ್ನು ಈ ಕಾರ್ಯದಲ್ಲಿ ತೊಡಗುವಂತೆ ಪ್ರೇರಿಸುತ್ತಿರುವರು. ಈ ರೀತಿಯಾಗಿ ಜನರನ್ನು ಧರ್ಮಶಾಸ್ತ್ರವಿರುದ್ಧವಾದ ಕಾರ್ಯದಲ್ಲಿತೊಡಗಿಸುತ್ತಿರುವುದು ಗಾಂಧಿಯವರಿಗೆ ಎಷ್ಟೂ ಭೂಷಣವಲ್ಲ. ಈಗ ಈ ರೀತಿ ನುಡಿದ ಗಾಂಧಿಯವರು ನಾಳೆ ಅಸ್ಪೃಶ್ಯರ ಸಂಗಡ ಪ್ರತಿಯೊಬ್ಬರೂ ಭೋಜನಮಾಡದಿದ್ದರೆ ಉಪವಾಸಮಾಡಿ ಪ್ರಾಣಬಿಡುವೆನೆಂದೂ, ಮತ್ತೊಮ್ಮೆ ಅವರ ಸಂಗಡ ಶರೀರಸಂಬಂಧವನ್ನು ಮಾಡದಿದ್ದರೆ ಉಪವಾಸಮಾಡಿ ಪ್ರಾಣಬಿಡುವೆನೆಂದೂ ನುಡಿಯುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳಬಹುದಾಗಿದೆ. ಎಲ್ಲರೂ ಇವರ ಮಾತಿನಂತೆ ನಡೆಯುತ್ತ ಹೋದರೆ "ಅತೋಭ್ರಷ್ಟಸ್ತತೋಭ್ರಷ್ಟಃ" ಎಂಬ ಗಾದೆಯಂತೆ ಆಗುವುದರಲ್ಲಿ ಸಂದೇಹವಿಲ್ಲ. ಸದ್ಯಃ ಇವರು ಕೈಕೊಂಡಿರುವ ಲೋಕವಿರುದ್ಧವಾದ ಕಾರ್ಯದಿಂದ ಸಮೀಪವಾಗಿದ್ದ ಸ್ವರಾಜ್ಯವು ದೂರ ಸರಿಯಲಿಕ್ಕೆ ಹತ್ತಿರುತ್ತದೆ. ಯಾಕಂದರೆ—ಲಕ್ಷಾಂತರಜನ ಸನಾತನ ಧರ್ಮಾನುಯಾಯಿಗಳು ಈಗಾಗಲೇ ಮುಖ್ಯಮಂತ್ರಿಗಳಿಗೂ ವೈಸ್‌ರಾಯರಿಗೂ ಗಾಂಧಿಯವರ ತತ್ವಕ್ಕೆ ವಿರೋಧವಾಗಿ ಠರಾವುಗಳನ್ನು ಪಾಸುಮಾಡಿ ಕಳುಹಿಸತೊಡಗಿದ್ದಾರೆ. ನಮ್ಮ ನಮ್ಮಲ್ಲಿಯೇ ಹೀಗೆ ಭಿನ್ನಾಭಿಪ್ರಾಯಗಳು ಉಂಟಾದ ಮೇಲೆ ಬ್ರಿಟಿಷರು ಭಾರತೀಯರಿಗೆ ಸ್ವರಾಜ್ಯವನ್ನು ಕೊಡುವುದಂತೂ ದೂರೇ ಉಳಿಯಿತು. ಈ ರಹಸ್ಯವನ್ನೆಲ್ಲಾ ಬಲ್ಲ ಬ್ರಿಟಿಷರು ಈಗಾಗಲೇ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಯಾವರೀತಿ ಮಾರ್ಗವನ್ನು ಹಿಡಿದಿದ್ದಾರೆನ್ನುವದು ಕುಶಲಮತಿಗಳಿಗೆಲ್ಲಾ ವೇದ್ಯವಾಗಿಯೇ ಇದೆ. ಸ್ವರಾಜ್ಯ ಬಂದರೆ ಸಾಕು, ಅದು ಹೇಗಾದರೂ ಇರಲೆಂದು ಇವರು ಹಿಂದೂ ಸಮಾಜಕ್ಕೆ ಕೊರತೆಯನ್ನುಂಟುಮಾಡಿ, ಅಸ್ಪೃಶ್ಯರಿಗೂ ಮುಸಲ್ಮಾನರಿಗೂ ವಿಶೇಷವಾಗಿ ಸೋತುಹೋಗಿದ್ದಾರೆ. ಇದರಿಂದ ಮುಂದೆ ಹಿಂದುಗಳ ಕೈಯಲ್ಲಿ ಕುಂಬಳಕಾಯಿ ಸೊರಟೆಯೇ ಹೊರತು ಬೇರೊಂದಿಲ್ಲನೆಂದು ಹೇಳಬಹುದಾಗಿದೆ. ಹೀಗೆ ಮಾಡದಿದ್ದರೆ ನಾನು ಉಪವಾಸಮಾಡಿ ಸಾಯುತ್ತೇನೆ, ಹಾಗೆ ಮಾಡದಿದ್ದರೆ ನಾನು ಉಪವಾಸಮಾಡಿ ಸಾಯುತ್ತೇನೆಂದು ದಯಾಳುಗಳಾದ ಹಿಂದುಗಳ ಮೇಲೆ ಭಾರವನ್ನು ಹಾಕುವುದು ಗಾಂಧಿಯವರಿಗೆ ಎಷ್ಟೂ ಶೋಭಿಸತಕ್ಕದ್ದಲ್ಲ. ಸಾಯುವವರು ಎಂದಾದರೂ ಸತ್ತೇಸಾಯುವರು; ತಮ್ಮ ಆಯುಸ್ಸು ಪೂರ್ತಿಯಾದ ಹೊರತು ಯಾರೂ ಸಾಯುವುದಿಲ್ಲ. ಆಯುಸ್ಸು ಹೆಚ್ಚಾಗಿದ್ದರೆ ಗುಡ್ಡದಮೇಲಿಂದ ಉರುಳಿಸಿದರೂ, ವಿಮಾನದಿಂದ ಚೆಲ್ಲಿದರೂ ಸಹ ಸಾಯುವುದಿಲ್ಲ; ಆಯುಸ್ಸು ಕಡಿಮೆಯಾಗಿದ್ದರೆ ಕುಳಿತಲ್ಲಿಯೇ ಪ್ರಾಣವನ್ನು ಬಿಡುತ್ತಾರೆ. ಇಂಥ ಉದಾಹರಣೆಗಳು ಲೋಕದಲ್ಲಿ ಅಸಂಖ್ಯಾತವಾಗಿರುತ್ತವೆ. ಆದುದರಿಂದ ಗಾಂಧಿಯವರೇ ಆಗಲಿ, ಅವರ ಅನುಯಾಯಿಗಳೇ ಆಗಲಿ ಯಾರೂ ಈ ತರಹ ಬಲಾತ್ಕಾರದ ಕಾರ್ಯದಲ್ಲಿ ತೊಡಗಿ ಲೋಕಾಪವಾದವನ್ನೂ, ಧರ್ಮಶಾಸ್ತ್ರದ್ರೋಹವನ್ನೂ ಕಟ್ಟಿಕೊಳ್ಳಬಾರದೆಂದು ಅತ್ಯಂತ ವಿನಯದಿಂದ ಹೇಳಿಕೊಳ್ಳಬೇಕಾಗಿದೆ. ಮೊದಲೇ ಜಾತಿಕುಲಗಳು ಬೇಕಿಲ್ಲದ ಕೆಲಜನ ಹಂಡಬಂಡರು, ಸ್ವತಃ ಗಾಂಧಿಯವರೇ ಹೀಗೆ ಹೇಳಿದ್ದಾರೆ, ಅಂದಮೇಲೆ ನಾವು ಈ ಕಾರ್ಯವನ್ನು ಮಾಡಿಯೇ ತೀರುವೆವೆಂದು ಹಾರಾಡಲಿಕ್ಕೆ ಹತ್ತಿದ್ದಾರೆ. "ಸಿದ್ದೆ ಬಂದವನಿಗೆ ಹಾಸಿಕೊಟ್ಟಂತೆ" ಎಂಬ ಗಾದೆಗನುಸಾರವಾಗಿ ಈ ತರಹದ ಜನರಿಗೆ ಈಗ ವಿಶೇಷ ಅನುಕೂಲವಾಗಿರುತ್ತದೆ. ಆದುದರಿಂದ ಸನಾತನಧರ್ಮದವರ ಮನಸ್ಸಿಗೆ ವಿಶೇಷ ನೋವನ್ನುಂಟುಮಾಡತಕ್ಕ ದೇವಾಲಯಪ್ರವೇಶ ಮೊದಲಾದ ಕಾರ್ಯಗಳಲ್ಲಿ ಯಾರೂ ಕೈಹಾಕಬಾರದೆಂದೂ, ಗಾಂಧಿಯವರಾದರೂ ಧರ್ಮಶಾಸ್ತ್ರವಿರುದ್ಧವಾದ ತಮ್ಮ ವಿಚಿತ್ರಪ್ರತಿಜ್ಞೆಯನ್ನು ಮುಕ್ತಾಯಗೊಳಿಸಬೇಕೆಂದೂ ಕೋರಿಕೆಯು. ಗುರುದೇವತೆಗಳಲ್ಲಿ ನಿಸ್ಸೀಮವಾದ ಭಕ್ತಿಯನ್ನಿಟ್ಟುಕೊಂಡಿರುವ ಸನಾತನಧರ್ಮಾನುಯಾಯಿಗಳು ಈಗಿನ ವಿಷಮವಾತಾವರಣದಲ್ಲಿ ಬಹು ಜಾಗರೂಕರಾಗಿ ವರ್ತಿಸಬೇಕೆಂದೂ, ಯಾರು ಹೇಳಿದರೂ ಧರ್ಮಶಾಸ್ತ್ರವಿರುದ್ಧವಾದ ಕಾರ್ಯದಲ್ಲಿ ಕೈಹಾಕಬಾರದೆಂದೂ, ಬಹುಕಾಲದಿಂದ ಇಹಪರಗಳೆರಡಕ್ಕೂ ಸರಿಯಾಗಿ ನಡೆಯುತ್ತ ಬಂದಂತೆ ಇನ್ನುಮುಂದಾದರೂ ನಡೆದು ಜಗನ್ನಿಯಾಮಕನ ಪ್ರೀತಿಗೆ ಪಾತ್ರರಾಗಬೇಕೆಂದೂ, ಜಗದೀಶ್ವರನು ಭರತಖಂಡದಲ್ಲಿರುವ ಸಮಸ್ತಜನಗಳಿಗೂ ಈ ತರಹದ ಸದ್ಬುದ್ಧಿಯನ್ನನುಗ್ರಹಿಸಲೆಂದೂ, ಆ ಜಗನ್ನಿಯಾಮಕನನ್ನು ಸನಾತನಧರ್ಮಾನುಯಾಯಿಗಳು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತಾರೆ.

ಸನಾತನಧರ್ಮಾಭಿಮಾನಿ.

ಮೂರ್ತಿಸ್ಥಾಪನೆ, ಹೋಟಗಿ.

ತಾ|| ೨೬-೧೧-೩೨ನೆಯ ದಿವಸ ಈ ಗ್ರಾಮದ ಮಠಪತಿ ಚಂದ್ರಯ್ಯ ಮತ್ತು ಮಲ್ಲಯ್ಯ ಇವರು ಈ ಗ್ರಾಮದಲ್ಲಿಯ ಮಲ್ಲಿಕಾರ್ಜುನ ದೇವರಿಗೆ ಪಿತ್ತಾಳಿಯ ಮೂರ್ತಿಯನ್ನು ಮಾಡಿಸಿ ಬೃಹನ್ಮಠಾಧ್ಯಕ್ಷರ ಗುರುತ್ವದಲ್ಲಿಯೂ ಮಲ್ಲಯ್ಯ, ಬಸಯ್ಯ ಬೃಹನ್ಮಠ ಕಿಂಕರ ಹೋಟಗಿ, ಗುರುಪಾದಯ್ಯ ಸಾವಂತವಾಡೀಕರ, ಮಲ್ಲಿಕಾರ್ಜುನಯ್ಯ ಬಿಜಾಪೂರ ಇವರ ವೈದಿಕತ್ವದಲ್ಲಿ ಸ್ಥಾಪನೆಮಾಡಿಸಿದರು. ಆ ಸಮಯಕ್ಕೆ ಇಲ್ಲಿಯ ಬೃಹನ್ಮಠಾಧ್ಯಕ್ಷರ ಅಪ್ಪಣೆಯ ಮೇರೆಗೆ ಪಂಚಾಚಾರ್ಯಪ್ರಭೆಗೆ ೨ ರೂಪಾಯಿಗಳು ಅರ್ಪಿಸಲ್ಪಟ್ಟವು. ಇದೇ ಸದ್ಬುದ್ಧಿಯು ಸರ್ವರಲ್ಲಿಯೂ ಉಂಟಾಗಲಿ.

ರುದ್ರಾರಾಧ್ಯಶಾಸ್ತ್ರೀ, ಸೇಗಾಂವ.

ಲಾಹೋರಿನ ಒಬ್ಬ ಚಿಕ್ಕವಯಸ್ಸಿನ ಸ್ತ್ರೀಯು ತನ್ನ ಗಂಡನನ್ನು ಕೊಂದಳೆಂಬ ಕಾರಣದ ಮೇಲೆ ಮರಣದಂಡನೆಗೆ ಗುರಿಯಾದಳು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ನಾಗಾರ್ಜುನಸ್ವಾಮಿ ರಜತಮೂರ್ತಿಯ ಪ್ರಾಣಪ್ರತಿಷ್ಠೆಯೂ ಕೃತ್ತಿಕೋತ್ಸವ ಸಮಾರಂಭವೂ. ಮಳಲೀಮಠ.

ತೀರ್ಥಹಳ್ಳಿ ತಾಲೂಕು ಪೈಕಿ ಶ್ರೀ ಮಳಲೀಮಠದಲ್ಲಿ ಇದೇ ಅಂಗಿರಸನಾಮಸಂವತ್ಸರದ ಕಾರ್ತಿಕಶುದ್ಧ ೧೩ ಗುರುವಾರ ೧೪ ಶುಕ್ರವಾರ ಈ ಎರಡು ದಿವಸಗಳಲ್ಲಿ ಮ|| ರಾ|| ಭಾಂಡ್ಯದ ಶ್ರೀ|| ಶ್ರೀಮಂತ ರುದ್ರಪ್ಪಗೌಡರ ಜ್ಞಾಪಕಾರ್ಥವಾಗಿ ಇವರ ಚಿ|| ಕಲ್ಯಾಣಪ್ಪಗೌಡರು ಮತ್ತು ಚಿ|| ಪುಟ್ಟಸ್ವಾಮಪ್ಪಗೌಡರು ಧರ್ಮಾರ್ಥವಾಗಿ ರಜತದಿಂದ ಮಾಡಿಸಿ ಒಪ್ಪಿಸಿದ ಶ್ರೀ ನಾಗಾರ್ಜುನಸ್ವಾಮಿಯ ರಜತೋತ್ಸವಮೂರ್ತಿಯ ಪ್ರಾಣಪ್ರತಿಷ್ಠೆಯೂ, ಧರ್ಮಾರ್ಥ ಶಿವದೀಕ್ಷಾ ಸಂಸ್ಕಾರವೂ, ಪಾಣಿಗ್ರಹಣ ಮಹೋತ್ಸವವೂ, ಶ್ರೀ ಮಠದಲ್ಲಿ ವಿದ್ಯುಚ್ಛಕ್ತಿ ಪ್ರಕಾರವಾಗಿ ಜರುಗಿಸಲ್ಪಟ್ಟ ೧೪ ಸಾಯಂಕಾಲ ಕೃತ್ತಿಕೋತ್ಸವವೂ ಶ್ರೀ ಸ್ವಾಮಿಯ ನೂತನ ರಜತಮೂರ್ತಿಯ ಆಂದೋಳಿಕೋತ್ಸವವೂ ಅತ್ಯಂತ ವಿಜೃಂಭಣೆಯಿಂದ ನಡೆದುವು. ಆ ಕಾಲಕ್ಕೆ ದೊಡ್ಡಗುಣಿಮಠದ ಶ್ರೀಗಳವರು, ದುಮ್ಮಳ್ಳೀಮಠದ ಶ್ರೀಗಳವರು ಶ್ರೀಗುರುನಾಗಾರ್ಜುನ ಸ್ವಾಮಿಗಳವರ ಶಿಷ್ಯಮಂಡಲಿಯವರು ಹಾಗೂ ಪರಸ್ಥಳದಿಂದ ಭಕ್ತಮಾಹೇಶ್ವರರು ಕುಟುಂಬಪರಿವಾರದೊಡನೆ ಆಗಮಿಸಿದ್ದರು. ಭಾಂಡ್ಯದ ಸಾಹುಕಾರ್ ಪುಟ್ಟಸ್ವಾಮಪ್ಪಗೌಡರು ನಾಲ್ಕುನೂರು ರೂಪಾಯಿಗಳು ಬೆಲೆಬಾಳುವ ರಜತದಿಂದ ಶ್ರೀನಾಗಾರ್ಜುನ ಸ್ವಾಮಿಯ ಉತ್ಸವ ಮೂರ್ತಿಯನ್ನು ಮಾಡಿಸಿ ತಮ್ಮ ಗುರುಸನ್ನಿಧಿಗೆ ಒಪ್ಪಿಸಿ ತತ್ಸಂಬಂಧ ಕಾರ್ಯವನ್ನು ಜರುಗಿಸಲು ತಮ್ಮ ಪತ್ನೀಪುತ್ರಾದಿಗಳೊಂದಿಗೆ ಒಂದು ದಿವಸ ಮುಂಚಿತವಾಗಿ ಬಂದು ಸ್ವಂತ ಖರ್ಚಿನಿಂದ ಮಠದ ಗರ್ಭಾಂಗಣದಲ್ಲಿ ಶ್ರೀಮೂರ್ತಿಯ ಪ್ರಾಣಪ್ರತಿಷ್ಠಾ ಕಾರ್ಯವನ್ನು ಶ್ರೀ ಗುರುಮೂರ್ತಿಗಳ ಅಧ್ಯಕ್ಷತೆಯಲ್ಲಿ ವೇ|| ಕಲ್ಲಿನಾಥಶಾಸ್ತ್ರಿಗಳ ಮತ್ತು ವೇ|| ಕೊಟ್ರಪ್ಪಯ್ಯಶಾಸ್ತ್ರಿಗಳ ವೈದಿಕತ್ವದಲ್ಲಿ ನಡೆಯಿಸಿದನಂತರ ಗುರುಪಾದಪೂಜಾ ಶ್ರೀರುದ್ರಾಭಿಷೇಕ ಗಣಾರಾಧನೆಗಳನ್ನು ನೆರವೇರಿಸಿದರು. ಪುಟ್ಟಸ್ವಾಮಪ್ಪಗೌಡರವರು ಶ್ರೀ|| ರುದ್ರಪ್ಪಗೌಡರ ಸದ್ಗತಿಪ್ರಾಪ್ತಿಗೋಸ್ಕರ ಈ ಮಹತ್ಕಾರ್ಯವನ್ನು ಕೈಕೊಂಡು ತಮ್ಮಲ್ಲಿರುವ ಪಿತೃಭಕ್ತಿಯನ್ನೂ ಗುರುಭಕ್ತಿಯನ್ನೂ ವ್ಯಕ್ತಗೊಳಿಸಿ (ಪಿತನ ನಿಜಗುಣದ ತೋಷಿಪ ಸುತನೆಸುತಂ) ಎಂಬ ವಾಕ್ಯವನ್ನು ಸಾರ್ಥಕಮಾಡಿದರು. ಇದರಿಂದ ನಡೆಯಲ್ಪಟ್ಟ ಮಹತ್ಕಾರ್ಯವು ಗುರುವಾರವೇ ಸಮಾಪ್ತಿಗೊಳಿಸಲ್ಪಟ್ಟಿತು. ಪುನಃ ಶುಕ್ರವಾರ ಸೂರ್ಯೋದಯಾದಿ ಘಟಿಕಾ ೭ ಪಲಾಗಾಯು ೧೫ ರ ವರೆಗೆ ಸಲ್ಲುವ ಧನುರ್ಲಗ್ನದಲ್ಲಿ ವೇ|| ಪಟ್ಟಣಗೆರೆ ಮಠದ ಮರುಳಯ್ಯನವರ ಪುತ್ರ ಚಿ|| ಶ್ರೀಕಂಠಯ್ಯನೆಂಬ ವರನಿಗೂ ವೇ|| ಚಿಕ್ಕಾತೂರು ಮಠದ ರಾಚಯ್ಯನವರ ಪುತ್ರಿ ಚಿ|| ಸ|| ಕುಂ|| ವೀರಮ್ಮನೆಂಬ ವಧುವಿಗೂ ಪಾಣಿಗ್ರಹಣಮಹೋತ್ಸವವು ಶ್ರೀಗುರು ನಾಗಾರ್ಜುನ ಸ್ವಾಮಿಗಳವರ ಉದಾರವಾದ ಆಶೀರ್ವಾದ ಕೃಪೆಯಿಂದ ಕಾಲಕ್ಕೆ ಅನುಗುಣವಾಗಿಯೂ ಮಿತವಾಗಿಯೂ ಮಲನಾಡಿನ ವೀರಶೈವಜನಗಳು ಎಚ್ಚೆತ್ತುಕೊಳ್ಳುವಂತೆಯೂ ವಿವಾಹವನ್ನು ನಡೆಯಿಸುವಂತೆ ಮಠದ ಏಜಂಟರು ಶ್ರೀಗಳ ಅನುಜ್ಞೆಯಿಂತೆ ಏರ್ಪಡಿಸಿದ್ದುದು ಸ್ತುತ್ಯವಾದ ಸಂಗತಿಯೇ ಸರಿ. ಇದಲ್ಲದೆ ಮೊದಲೇ ರಂಭಾಸ್ತಂಭಾದಿಗಳಿಂದ ಅಲಂಕರಿಸಿದ ಮಠದ ಗದ್ದೀವರೆಗೂ ಇರುವ ರಾಜಬೀದಿಯಲ್ಲಿ ನೂತನವಾಗಿ ರಚಿತವಾಗಿದ್ದ ರಜತ ನಾಗಾರ್ಜುನಸ್ವಾಮಿಯ ಆಂದೋಳಿಕೋತ್ಸವವು ಸಾಯಂಕಾಲ ಸಕಲ ಬಿರುದಾವಳಿಗಳೊಂದಿಗೆ ವೇದಘೋಷ ಶಿವಭಜನೆಯೊಡನೆ ಹೊರಟು ಯಥಾಸ್ಥಾನಕ್ಕೆ ಬಿಜಯಮಾಡಲು ರಾತ್ರಿ ೮ ಘಂಟೆಯಾಯಿತು. ಭೋಜನಾನಂತರ ಶ್ರೀ ಪೂಜ್ಯಪಾದರವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಬೀರೂರಿನಿಂದ ಆಗಮಿಸಿದ್ದ ಕೀರ್ತನಾಲಂಕಾರ ವೇ|| ಜಿ. ನಂಜುಂಡಾರಾಧ್ಯರವರಿಂದ ಶಿವಕುಮಾರನ ಚರಿತ್ರೆಯು ಶ್ರೋತೃಜನಗಳಲ್ಲಿ ಗುರುಭಕ್ತಿಯೂ ರಾಷ್ಟ್ರಭಕ್ತಿಯೂ ಮನನವಾಗುವಂತೆ ಅನುವಾದಮಾಡಲ್ಪಟ್ಟಿತು. ತರುವಾಯ ವೇ|| ಆರಾಧ್ಯರವರು ಹೇಳಿದ್ದೇನಂದರೆ—ಶ್ರೀಮಠದಲ್ಲಿ ೨-೩ ದಿವಸಗಳಿಂದಲೂ ನಡೆಯುತ್ತಲಿರುವ ಈ ಮಹಾಕಾರ್ಯದಲ್ಲಿ ಭಾಗಿಗಳಾಗಿರುವ ಮ|| ರಾ|| ಭಾಂಡ್ಯದ ಸಾಹುಕಾರ್ ಆರ್. ಪುಟ್ಟಸ್ವಾಮೇಗೌಡರವರು ಚಿಕ್ಕವರಾದಾಗ್ಯೂ, ಲೌಕಿಕ ಪಾರಮಾರ್ಥಿಕ ವಿಷಯಗಳಲ್ಲಿ ವಿವೇಕವುಳ್ಳವರಾಗಿ ಖಾದಿ, ಅಹಿಂಸಾತತ್ವ ಮೊದಲಾದವುಗಳಿಂದ ದೇಶಭಕ್ತರಾಗಿರುವರು. ಇವರು ಅನನ್ಯವಾದ ಗುರುಭಕ್ತಿಯಿಂದ ಶ್ರೀ ನಾಗಾರ್ಜುನಸ್ವಾಮಿಯ ಉತ್ಸವಮೂರ್ತಿಯನ್ನು ಹುಂಚದ ಚಿನಿವಾಲ ಹುಚ್ಚರಾಯರವರಿಂದ ಮಾಡಿಸಿ ನಿನ್ನೆಯ ದಿವಸ ಗುರುಸನ್ನಿಧಿಗೆ ಒಪ್ಪಿಸಿ ತಮ್ಮ ಇಷ್ಟಮಿತ್ರಬಂಧುಬಾಂಧವರೊಡನೆ ಮಾಹೇಶ್ವರಾರಾಧನೆಯನ್ನು ನಡೆಯಿಸಿ ಪೂಜ್ಯಪಾದರವರಿಗೂ, ಪುರೋಹಿತರಿಗೂ, ಶಿವಕಥಾಪಂಡಿತರಿಗೂ ಉಳಿದ ಭಕ್ತಮಾಹೇಶ್ವರರಿಗೂ ಯಥೋಚಿತ ಸಹಾಯಮಾಡಿ ಪ್ರಭಾಪೋಷಣಗಾಗಿ ೫ ರೂ. ಗಳನ್ನು ಕಳುಹಿಸಿ ನಿಜಭಕ್ತಿಯನ್ನು ಸಮರ್ಪಣೆ ಮಾಡಿದ ಇವರಿಗೂ ಇವರ ಕುಟುಂಬದವರಿಗೂ ಇಹೋತ್ಕೃಷ್ಟತಮವಾದ ಶ್ರೇಯಸ್ಸನ್ನುಂಟುಮಾಡಲೆಂದು ಶ್ರೀ ಜಗದಾಚಾರ್ಯರನ್ನು ಸರ್ವರೊಡನೆ ಪ್ರಾರ್ಥಿಸಿದರು. ಮೇಲ್ಕಂಡ ಮಹತ್ಕಾರ್ಯದಲ್ಲಿ ಕಾರ್ಯದರ್ಶಿಗಳಾಗಿ ಮುಂದೆನಿಂತು, ಬಂದಿದ್ದ ಮಹಾಜನಗಳ ಆದರಾತಿಥ್ಯಗಳನ್ನು ಮಾಡಿದ ಏಜಂಟರು ತ್ಯಾರಂದೂರು ಮ|| ರಾ|| ಅಯ್ಯಪ್ಪಗೌಡರು ವೈ. ಕೆ. ಎಂ. ಸಿದ್ಧಯ್ಯಶಾಸ್ತ್ರಿ, ವೇ|| ಹುದ್ದೇದೇವರ ಮಠದ ಶಿವಲಿಂಗಯ್ಯನವರು ಗುರುಸೇವೆಯಿಂದ ಸರ್ವರ ಶ್ಲಾಘನೆಗೆ ಪಾತ್ರರಾದರು.

ಮಹಾಶಯರೇ, ಶ್ರೀಗುರು ನಾಗಾರ್ಜುನಸ್ವಾಮಿಗಳವರು ಧರ್ಮಸುಧಾರಕರಾಗಿದ್ದು ತಮ್ಮ ಮಠದಲ್ಲಿ ವಾರ್ಷಿಕೋತ್ಸವವನ್ನು ಪ್ರತಿ ವರ್ಷಕ್ಕಿಂತಲೂ ಇಮ್ಮಡಿಯಾಗಿ ನಡೆಯಿಸಿ ಭಕ್ತವೃಂದವನ್ನು ಆನಂದಪಡಿಸುತ್ತಾ ಈ ಪ್ರಾಂತದ ವೀರಶೈವರಲ್ಲಿ ವಿದ್ಯಾ, ಆಚಾರ ನೀತಿ ಮುಂತಾದವುಗಳುಂಟಾಗುವಂತೆಯೂ ಶ್ರೀ ಜಗದ್ಗುರುಪೀಠದ ಶಾಖಾನುವರ್ತಿಗಳಾಗಿ ಮಹಾತ್ಮರೆಂದೆನಿಸಿಕೊಂಡು ಹೋಗಿರುವ ಹಿಂದಿನ ಗುರುಗಳಂತೆ ಇವರ ನಿಜವರ್ತನವು ಶಿಷ್ಯರಲ್ಲಿ ಪರಿಣಾಮವಾಗುತ್ತಿರುವುದನ್ನು ನೋಡಿದರೆ ಯಾರುತಾನೆ ಧನ್ಯವಾದಗಳನ್ನು ಸಮರ್ಪಿಸಲಿಕ್ಕಿಲ್ಲ? ಇವರ ಮಾರ್ಗವನ್ನು ಉಳಿದ ಗುರುವರ್ಗದವರೂ ಈ ಪ್ರಾಂತದ ಮಹಾಸ್ವಾಮಿಗಳವರೂ ಅನುಸರಿಸುವವರಾಗಲೆಂದು ಪ್ರಾರ್ಥಿಸುವ,

ಗುರುಪಾದಸೇವಕ,
ರುದ್ರಪ್ಪಶೆಟ್ಟಿ, ಗಾಜನೂರು.

ದುಶ್ಚಟಗಳ ದೂರೀಕರಣ.

ಮಾನವನ ದೇಹನಾಶಕ್ಕಾಗಿ ಅಂಟಿಕೊಂಡಿರುವ ದುಶ್ಚಟಗಳು ದೇಶವನ್ನೇ ಹಾಳುಮಾಡುತ್ತಲಿರುವವು. ಈ ದುಶ್ಚಟಗಳಲ್ಲಿ ಮುಖ್ಯವಾಗಿ ಗಣಿಸಲ್ಪಡುವ ಚಹಾ-ಕಾಫಿ-ಬೀಡಿ-ಸಿಗರೇಟ ಇವುಗಳೇ ಮುಖ್ಯವಾಗಿರುವವು. ಇವು ಇಡೀ ಪ್ರಪಂಚವನ್ನೇ ಏಕಚ್ಛತ್ರಾಧಿಪತ್ಯದಿಂದ ಆಳುತ್ತಲಿರುವವು. ಪವಿತ್ರಭೂಮಿಯಾದ ನಮ್ಮ ಭಾರತದೇಶದಲ್ಲಿ ನೂರು ವರ್ಷಗಳ ಹಿಂದೆ ಯಾರಿಗೂ ಇವುಗಳ ಹೆಸರೂ ಸಹ ಗೊತ್ತಿದ್ದಿಲ್ಲ. ಈಗ ಈ ಪಿಶಾಚಿಗಳ ನಾಮಪಾರಾಯಣಮಾಡದವರು ಸಿಗುವದೇ ದುರ್ಲಭವಾಗಿದೆ. ಇವುಗಳಿಂದಾಗುತ್ತಿರುವ ಹಾನಿಯನ್ನು ಜಗತ್ತೇ ವರ್ಣಿಸುತ್ತಿದ್ದರೂ ಅವರ ನಿವಾರಣೆಯಾಗಲೊಲ್ಲದು. ಅಂದಮೇಲೆ ನನ್ನೀ ಚಿಕ್ಕ ಲೇಖದ ಕೂಗನ್ನು ಕೇಳುವವರಾರು? ಆದರೂ ಅಲ್ಪಜ್ಞನಾದ ನನಗೆ ತಿಳಿದಮಟ್ಟಿಗೆ ಬಂದ ವಿಚಾರವನ್ನು ವಾಚಕರ ಮುಂದಿಡುವೆನು. ಮಾನವಪ್ರಾಣಿಯು ಶ್ರೇಷ್ಠತೆಯು ಬುದ್ಧಿಯೆಂಬ ರಾಜನಿಂದಲೂ ಮನವೆಂಬ ಮಂತ್ರಿಯಿಂದಲೂ ಅಭಿವೃದ್ಧಿಹೊಂದುವದು. ರಾಜನೂ ಮಂತ್ರಿಯೂ ವಿವೇಕಿಗಳಾಗಿ ಇಂದ್ರಿಯಗಳೆಂಬ ಪ್ರಜೆಗಳನ್ನು ಮಕ್ಕಳಂತೆ ಜೋಪಾನಮಾಡಬೇಕಾಗುತ್ತದೆ. ಇಂದ್ರಿಯಗಳು ಸ್ವತಂತ್ರವಾದವುಗಳಾದರೂ ಚಾಲಕನಾದ ಮನವೆಂಬ ಮಂತ್ರಿಯಿರದಿದ್ದರೆ ಅವುಗಳ ಆಟವೇ ಸಾಗುವದಿಲ್ಲ. ಮಂತ್ರಿಯು ಚನ್ನಾಗಿರಬೇಕಾದರೆ ಅವನಿಗೆ ಯಾವಾಗಲೂ ನಿರ್ಮಲತೆಯು ಬೇಕು. ಆಕಾರರಹಿತವಾಗಿರುವ ಮನಸ್ಸು ತನ್ನ ಮುಂದಿದ್ದ ವಸ್ತುವಿನಂತೆ ಆಕಾರಹೊಂದುವದು. ತದಾಕಾರದಂತೆ ಯಾವತ್ತೂ ಇಂದ್ರಿಯಗಳ ಮೇಲೆ ಪರಿಣಾಮವಾಗುವದು. ಪಿಶಾಚಗ್ರಸ್ತಳಾದ ಸ್ತ್ರೀಯಳು ತಾನು ಪಿಶಾಚಿಯೆಂದು ಭಾವಿಸುವಂತೆ ಮನಸ್ಸು ನಿಕಟವಾಗಿ ಯಾವುದನ್ನು ಹಿಡಿಯುವದೋ ಅದರಂತೆಯೇ ಮಾನವನು ತದಾಕಾರವೃತ್ತಿಯನ್ನು ಹೊಂದುವನು. ಚಹಾದಿ ಭಕ್ತರು ಮಾತಾಡುವ ಮಾತುಗಳಲ್ಲಿ ಇದರ ಸತ್ಯಾಂಶವು ಕಂಡು ಬರುವದು. ನನಗೆ ಮೊದಲು ಲಿಪ್ಟನ್ ಚಹಾ ಕುಡಿಯುವದೇ ಅಭ್ಯಾಸವಿದ್ದದರಿಂದ ಜಾಕೋಜೀಯು ಮನಸ್ಸಿಗೆ ಸೇರುವದಿಲ್ಲ. ಒಮ್ಮೆ ನಾವು ಚಹಾದಮಯವಾಗಿ ಹೋದದ್ದರಿಂದ ಈಗ ಬಿಡಲಿಕ್ಕಾಗುವದಿಲ್ಲ; ನಮ್ಮ ಮನಸ್ಸಿಗೆ ಹೇಯಬುದ್ಧಿ ಹುಟ್ಟಿದರೆ ಮಾತ್ರ ಬಿಡುತ್ತೇವೆ; ನೀವೆಷ್ಟು ಬೋಧನಮಾಡಿದರೂ ಸಹ ಆ ಸ್ವರೂಪವನ್ನು ತಾಳಿದ ನಮ್ಮ ಮನಸ್ಸು ಅದನ್ನು ಗ್ರಹಿಸಲಾರದು; ಎಂಬ ಮಾತಿನ ಮಳೆಯು ಸುರುವಾಗುವದು. ಅಂದ ಮೇಲೆ ಎಲ್ಲಕ್ಕೂ ಮನೋರೂಪಿ ಮಹಾತ್ಮನ ಮೇಲೆ ಎಲ್ಲವೂ ಅವಲಂಬಿಸಿದೆ. ಮನಶ್ಶುದ್ಧಿಯು ಯಾವಾಗಲೂ ಇರಬೇಕೆಂದು ಆರ್ಯರು ಮತಧರ್ಮಾಚರಣೆಗಳ ಗುಟ್ಟನ್ನು ಗೊತ್ತುಮಾಡಿದರು. ಸದಾಚರಣೆಯಿಂದ ಆರೋಗ್ಯವೂ, ಆರೋಗ್ಯದಿಂದ ದೇಹದೃಢತೆಯೂ, ದೇಹದೃಢತೆಯಿಂದ ಸತ್ಕರ್ಮಾಸಕ್ತಿಯೂ, ಸತ್ಕರ್ಮಗಳಿಂದ ಮನಶ್ಶುದ್ಧಿಯೂ, ಮನಶ್ಶುದ್ಧಿಯಿಂದ ವಾಸನಾಕ್ಷಯವೂ, ವಾಸನಾಕ್ಷಯದಿಂದ ಬ್ರಹ್ಮಾನುಸಂಧಾನವೂ, ಬ್ರಹ್ಮಾನುಸಂಧಾನದಿಂದ ಅವನೇ ಬ್ರಹ್ಮರೂಪಿಯಾಗುವನು. ಇವೆಲ್ಲವುಗಳ ತಳಹದಿಯೇ ಈಗ ಸಡಿಲಾಗಿಹೋಗಿರುವದರಿಂದ ಅಧರ್ಮರೂಪಿ ರಾಕ್ಷಸನ ಹಾವಳಿಯೇ ಹೆಚ್ಚಾಗಿ ದೇಶವು ನಾನಾವಿಧವಾಗಿ ನಾಶವಾಗತೊಡಗಿದೆ. ತಳಗಲ್ಲಿನೋಪಾದಿಯಲ್ಲಿದ್ದ ಧರ್ಮಾಚರಣೆಗಳ ಲೋಪವೇ ದುಶ್ಚಟಗಳ ಪ್ರಚಾರಕ್ಕೆ ಕಾರಣವು. ಧರ್ಮಾಚರಣೆಯ ಅವನತಿಗೆ ನಮ್ಮ ಧರ್ಮಾಧಿಕಾರಿಗಳ ಅಲಕ್ಷ್ಯವೇ ಕಾರಣವು. ಸನಾತನಧರ್ಮಾವಲಂಬನದಿಂದ ಜಗತ್ಪ್ರಸಿದ್ಧವಾಗಿ ಮೆರೆದ ಭಾರತರಾಷ್ಟ್ರವು ಆ ಧರ್ಮತೇಜಸ್ಸನ್ನು ತಿರುಗಿ ತಂದುಕೊಳ್ಳಬೇಕಾಗಿದೆ. ಸದ್ಧರ್ಮಾಭಿಮಾನಿಗಳಾದ ಧರ್ಮಪೀಠಾಧಿಕಾರಿಗಳು ಮತಧರ್ಮಾಚರಣೆಯ ಪ್ರಚಾರಕ್ಕಾಗಿ ಧರ್ಮೋಪದೇಶಕರನ್ನು ನಿಯಮಿಸಿ ಎಲ್ಲಾ ದೇಶಗಳಲ್ಲಿಯೂ ಧರ್ಮಪ್ರಚಾರದ ಕಾರ್ಯವನ್ನು ಕೈಕೊಂಡರೆ ಈ ದುಶ್ಚಟಗಳ ಹಾವಳಿಯು ತನ್ನಿಂದತಾನೇ ನಾಶವಾಗುವದು. ದುಶ್ಚಟಗಳ ನಾಶದಿಂದ ಮಾನವನು ನಿರ್ಮಲನಾಗುವನು. ನಿರ್ಮಲತೆಯಿಂದ ಆರೋಗ್ಯವಂತನಾಗುವನು. ಆರೋಗ್ಯದಿಂದಿದ್ದು ಸತ್ಕರ್ಮವನ್ನು ಮಾಡಿದರೆ ಸದ್ಗತಿಯನ್ನು ಹೊಂದುವನು.

[illegible]
ಶರಭಣ್ಣ ಅಂಗಡಿ, [illegible].

ಮೈಸೂರಿನವರೊಬ್ಬರ ಲಂಡನ್ ಅನುಭವ.

ಲೇಖಕರು—ದೊಡ್ಡಬಳ್ಳಾಪುರದ ಸಿದ್ಧಲಿಂಗಯ್ಯ, ಬಿ.ಎ.,ಬಿ.ಎಲ್.

ಲಂಡನ್ ಪೋಲಿಸರ ವಿಚಾರ ನಮ್ಮ ದೇಶಕ್ಕೆ ಬಹಳ ಸ್ವಾರಸ್ಯವಾದದ್ದು. ಪ್ರಪಂಚದಲ್ಲೆಲ್ಲಾ ಲಂಡನ್ ಪೋಲೀಸರು ಬಹಳ ಶ್ರೇಷ್ಠರೆಂದು ಹೇಳುತ್ತಾರೆ. ಪೋಲೀಸರೆಲ್ಲರೂ ಸಾಧಾರಣವಾಗಿ ೬|| ಅಡಿ ಎತ್ತರ, ಅದಕ್ಕೆ ತಕ್ಕಂತೆ ದಪ್ಪವಾದ ಮನುಷ್ಯರು. ದಾರಿ ಉದ್ದಕ್ಕೂ ನಿಮಗೆ ಎಲ್ಲಿ ಸ್ವಲ್ಪ ಸಂಶಯ ತೋರುತ್ತದೆಯೋ ಅಲ್ಲಿ ಒಬ್ಬ ಪೋಲೀಸಿನವನು ನಿಂತಿರುತ್ತಾನೆ. ನಮಗೆ ಯಾವ ತೊಂದರೆ ಇದ್ದರೂ ಪರಿಹಾರಮಾಡುತ್ತಾನೆ. ಅವನೊಂದಿಗೆ ಮಾತನಾಡಬೇಕೆಂದರೆ ಬಹು ಸಂತೋಷವಾಗುತ್ತದೆ. ೭೫ ಲಕ್ಷ ಜನರಿರುವ ಪಟ್ಟಣದಲ್ಲಿ ಎಷ್ಟು ರಸ್ತೆಗಳಿರಬಹುದು. ಏನು ಬೇಕಾದರೂ ಪೋಲೀಸನನ್ನು ಕೇಳಿದ ಕೂಡಲೆ ಜವಾಬು ಹೇಳಿಬಿಡುತ್ತಾನೆ. ಎಷ್ಟು ಗಲಭೆ ಇದ್ದರೂ ಸಂತೋಷವಾಗಿ ಒಂದೊಂದು ಮಾತಿನಲ್ಲಿ ಜವಾಬನ್ನು ಸಂಶಯ ನಿವೃತ್ತಿಯಾಗುವಂತೆ ಹೇಳುತ್ತಾನೆ. ಮುಖವು ಹರ್ಷವಾಗಿ, ಲಕ್ಷಣವಾಗಿ ಕ್ಷೌರಮಾಡಿಕೊಂಡು, ಕಣ್ಣುಗಳನ್ನು ಎಲ್ಲಾ ಕಡೆಯೂ ಬಿಟ್ಟುಕೊಂಡು, ಯಾರಿಗೆ ಏನು ಸಹಾಯಬೇಕು ಎಂಬುದನ್ನು ತಿಳಿದ ಕೂಡಲೇ 'ನಿಮಗೆ ಏನುಬೇಕು?' ಎಂದು ಕೇಳುತ್ತಾ ತುಂಬಿದ ಕೊಡದಂತೆ ಗಂಭೀರವಾಗಿ ನಿಂತಿರುತ್ತಾನೆ. ಪುಂಡರಿಗೆಲ್ಲಾ ಭಯೋತ್ಪಾತವಾಗುತ್ತದೆ. ಇತರರಿಗೆಲ್ಲಾ ಎಂಥ ಕಷ್ಟವಿದ್ದರೂ ಧೈರ್ಯವಾಗುತ್ತದೆ.

ಅವರ ತಿಳಿವಳಿಕೆ.

ಅವನು ಮಾಡುವ ಕೆಲವು ಕೆಲಸಗಳನ್ನು ಉದಾಹರಿಸುತ್ತೇನೆ. "ಬ್ಯಾಂಕಿಗೆ ಹೋಗಬೇಕೋ? ಬಸ್ ನಂಬರ್ ೧೮, ೨೫, ೫೬ ನೇ ನಂಬರ್, ಸರ್" "ಲಂಡನ್ ಟವರಿಗೆ, ಬಲಗಡೆ ೨ನೇ ಬೀದಿ, ಅನಂತರ ಎಡಗಡೆ ೩ನೇ ಬೀದಿ, ಎದುರಾಗಿ ಕಾಣುತ್ತದೆ ಸರ್" "ಮ್ಯೂಸಿಯಂಗೆ ಹೋಗಬೇಕೊ? ಈ ದಿನ ಮುಚ್ಚಿರುತ್ತದೆ ರಜಾ. ನಾಳೆ ತೆಗೆದಿರುತ್ತದೆ. ಸರ್" "ಬಕಿಂಗ್‌ಹಾಂ ಅರಮನೆಗೆ ಸ್ಪೆಷಲ್ ಅಪ್ಪಣೆ ತೆಗೆದುಕೊಂಡು ಹೋಗಬೇಕು ಸರ್" ಮುಂತಾಗಿ ಯಾವ ವಿಚಾರಕ್ಕೂ ಒಂದೊಂದು ಮಾತಿನಲ್ಲಿ ಮನಸ್ಸಿಗೆ ಹತ್ತುವಂತೆ ಜವಾಬನ್ನು ಹೇಳಿಬಿಡುತ್ತಾನೆ.

ಇನ್ನು ಕೆಲವು ಪೋಲೀಸರ ಕಾರ್ಯಗಳನ್ನು ನೋಡಿದರೆ ಎಷ್ಟೋ ಸಂತೋಷವಾಗುತ್ತದೆ. ಯಾರಾದರೂ ಹೆಂಗಸರು, ಮುದುಕರು, ಮಕ್ಕಳು, ದಾರಿದಾಟುವುದಕ್ಕೆ ಸ್ವಲ್ಪ ಸಂಶಯದಿಂದ ನಿಂತುಕೊಂಡು ಆ ಕಡೆ ಈ ಕಡೆ ನೋಡುತ್ತಿದ್ದರೆ, ತಾನು ತಕ್ಷಣ ಬಂದು, ಅವರ ಕೈಲಿ ಮಕ್ಕಳು ಅಥವಾ ಮೂಟೆ ಇದ್ದರೆ ಅದನ್ನು ತನ್ನ ಕೈಲಿ ಹಿಡಿದುಕೊಂಡು ಅವರ ಮೇಲೆ ಕೈಹಾಕಿಕೊಂಡು, ಒಂದು ಕಡೆಯಿಂದ ಇನ್ನೊಂದು ಕಡೆಗೆ ಕರೆದುಕೊಂಡು ಹೋಗಿ ಬಿಡುತ್ತಾನೆ. ಮಕ್ಕಳ ಗಾಡಿ ಇದ್ದರೆ ಅದನ್ನು ತಾನು ನೂಕಿಕೊಂಡು ಹೋಗಿ, ಇನ್ನೊಂದು ಕಡೆಯಲ್ಲಿ ಜೋಪಾನವಾಗಿ ಬಿಡುತ್ತಾನೆ. ಎಷ್ಟೋ ಸಂತೋಷವಾಗಿ ಹೃದಯಪೂರ್ವಕವಾಗಿ ಕೆಲಸಮಾಡುತ್ತಾನೆ. ಅವನ ಘನತೆಯನ್ನು ನೋಡಿದವರೆಲ್ಲರೂ ಅವನನ್ನು ಗೌರವಿಸದೆ ಇರುವುದಿಲ್ಲ. ಪೋಲಿಸನು ಎನ್ನುವ ಅಭಿಪ್ರಾಯವೇ ಮನಸ್ಸಿಗೆ ಜ್ಞಾಪಕಬರುವುದಿಲ್ಲ. ಕಷ್ಟಪಡುವ ಜನರ ಸೇವೆ ಮಾಡಲು ಕಂಕಣಕಟ್ಟಿಕೊಂಡು ನಿಂತಿರುವ ದೇವರೋ ಎಂಬಂತೆ ಕಾಣುತ್ತಾನೆ.

ಅನ್ಯಾಯವಾಗಿ ಯಾರನ್ನೂ ಮಾತನಾಡಿಸುವುದೇ ಇಲ್ಲ. ಎಲ್ಲಿ ಸ್ವಲ್ಪ ಸಂದು, ಅಥವಾ ಮರೆಯಾಗಿರುವ ಸ್ಥಳ ಇರುತ್ತದೆಯೋ ಅಲ್ಲಿ ಯಾರಿಗೆ ಏನು ತೊಂದರೆ, ಅಪಾಯವಿದೆ ಎಂಬ ಸಂಶಯಕ್ಕೆ ಅವಕಾಶಕೊಡದೆ, ಏನೋ ಏತಕ್ಕೋ ಬಂದ ಹಾಗೆ ಅಲ್ಲಿ ಓಡಾಡುತ್ತಾನೆ. ಯಾವ ಹೊಸ ಸ್ಥಳಕ್ಕೆ ಹೋದರೂ, ಅಲ್ಲಿ ಪೋಲಿಸರು ಇಲ್ಲವೇ ಎಂದು ಮನಸ್ಸಿನಲ್ಲಿ ನಾವು ಅಂದುಕೊಳ್ಳುವುದರೊಳಗಾಗಿ ಒಬ್ಬನು ಕಾಣಿಸಿಕೊಳ್ಳುತ್ತಾನೆ.

ಪೋಲಿಸನವನನ್ನು ಯಾರೂ ತಪ್ಪಿಸಿ ಮೋಸಮಾಡುವಹಾಗಿಲ್ಲ. ಈ ಪಟ್ಟಣದಲ್ಲಿ ಎಲ್ಲಾ ಅಂಗಡಿಗಳಿಗೂ ಗಾಜಿನಗೋಡೆಗಳ ಹೊರತು ಕಲ್ಲು ಇಟ್ಟಿಗೆ ಕಬ್ಬಿಣದ ಗೋಡೆಗಳೇ ಇಲ್ಲ. ಗಾಜಿಗೆ ಒಂದು ಕಲ್ಲು ಹೊಡೆದರೆ ಆಯಿತು. ಕಳ್ಳನಿಗೆ ಏನೂ ಕಷ್ಟವಿಲ್ಲ. ಆದರೂ ಒಬ್ಬನೂ ಕಳ್ಳತನ ಮಾಡಲು ಸಾಧ್ಯವಿಲ್ಲ.

ಜನರಿಗೆ ಸಾಧಾರಣವಾಗಿ ಪೋಲೀಸನು ಇದ್ದಾನೆ ಎಂಬ ಸ್ಮರಣೆಯೇ ಇರುವುದಿಲ್ಲ. ಅವನಿಲ್ಲದೆ ಹೋದರೆ ಏನಾಗಬಹುದು ಎಂಬುದನ್ನು ಊಹೆಮಾಡಲು ಭಯವಾಗುತ್ತದೆ.

ನಮ್ಮ ದೇಶಕ್ಕೆ ಹೋಲಿಕೆ.

ಬೆನ್ನನ್ನು ನೆಟ್ಟಗೆ ಇಟ್ಟುಕೊಂಡು, ತೂಕದ ಹೆಜ್ಜೆಗಳನ್ನು ಹಾಕುತ್ತ, ಯಾವಾಗಲೂ ನಡುವಿನ ಪಟ್ಟಿಯನ್ನು ಹಾಕಿಕೊಂಡು, ಯಾವ ಒಂದು ಕಷ್ಟಕ್ಕೂ ಸಿದ್ಧವಾಗಿ ಎಲ್ಲರ ಕಣ್ಣಿಗೂ ಕಾಣಿಸುವಂತೆ, ಎಲ್ಲರಿಗೂ ಒಂದು ಅಡಿ ಎತ್ತರವಾಗಿ ನೆಟ್ಟಗೆ ಹೋಗುತ್ತ ಇರುತ್ತಾನೆ. ನಮ್ಮ ಕಡೆಯ ಪೋಲೀಸರಂತೆ ಕಾಕಿ ಬಣ್ಣದ ಬಟ್ಟೆಗಳಲ್ಲ. ನಮ್ಮ ಪೋಲೀಸರ ಮುಖವನ್ನು ನೋಡಿದರೆ ನಮ್ಮ ಜನರ ಮನಸ್ಸಿಗೆ ಬರುವಂತಹ ಆಲೋಚನೆಗಳೇನೂ ಇಲ್ಲಿ ನಮಗೆ ಬರುವುದಿಲ್ಲ. ಸಾಧಾರಣವಾಗಿ ನಮ್ಮ ಕಡೆ ಪೋಲೀಸರು (ಸರ್ವಿಸ್) ಚಾಕರಿ ಪೂರೈಸುವುದರೊಳಗಾಗಿ ಮನುಷ್ಯನ ಸ್ವಭಾವವನ್ನೇ ಬದಲಾಯಿಸಿಕೊಂಡು, ಪಾಪಭೀತಿಯನ್ನೇ ಬಿಟ್ಟುಬಿಡುತ್ತಾರೆ. ಸಂಶಯ ಮತ್ತು ವಂಚನೆ ಇವೇ ಮುಂತಾದ ಗುಣಗಳೇ ಸ್ವಭಾವಕ್ಕೆ ಸೇರಿಹೋಗಿರುತ್ತವೆ. ಮತ್ತು ಆತ್ಮನನ್ನೇ ಕಳೆದುಕೊಂಡಂತೆ ಇರುತ್ತಾರೆ.

ಪಾಪ! ಇದು ನಮ್ಮ ಪೋಲೀಸರ ತಪ್ಪಲ್ಲ. ಅವರ ಮೇಲ್ಗಡೆ ಎರಡು ಸರ್ಕಾರವಿದೆ. ಆ ಸರ್ಕಾರಗಳಿಗೆ ತೃಪ್ತಿಯಾಗುವಂತೆ ಅವರು ವಿಧೇಯರಾಗಿರಬೇಕು. ಜನಗಳ ಕ್ಷೇಮ ಕಷ್ಟಗಳು ಮತ್ತು ಜನಗಳ ಸ್ವಾತಂತ್ರ್ಯ ಅಥವಾ ಜನಗಳ ಸರ್ಕಾರ ಎಂಬುದು ಅವರ ಮನಸ್ಸಿಗೆ ಹತ್ತುವುದಿಲ್ಲ. ಸರ್ಕಾರ ಅನ್ನುವುದು ಒಂದು ಮಹಾಶಕ್ತಿದೇವತೆ. ಅದಕ್ಕೆ ಪ್ರಜೆಗಳೆಲ್ಲಾ ಗುಲಾಮರಾಗಿ ವಿಧೇಯರಾಗಿ ಇರಬೇಕು. ಕ್ಷಾಮ ಬಂದರೂ ಅನುಭವಿಸಿಕೊಂಡು ಜನರು ತೆರಿಗೆಗಳನ್ನು ಸಲೀಸಾಗಿ ಕೊಡುತ್ತಾ ಶಬ್ದವಿಲ್ಲದೆ ಅದಬ್ ಆಗಿ ಇರಬೇಕು. ಹಾಗೆ ಇರುವಂತೆ ಮಾಡುವುದು ಪೋಲೀಸರ ಕೆಲಸ ಎಂಬುದಾಗಿ ಅವರು ತಿಳಿದುಕೊಂಡಿದ್ದಾರೆ.

ಸ್ವತಂತ್ರವೇ ಕಾರಣ.

ಇಲ್ಲಿಯಾದರೋ ಜನಗಳ ಸರ್ಕಾರ, ಸರ್ಕಾರವೆಂಬುದು ಜನರ ಸೇವಕ. ಸರಿಯಾದ ಸೇವೆ ಮಾಡುವಂತೆ ಜನರು ಸರ್ಕಾರವನ್ನು ದಂಡಿಸಬಹುದು. ಯಾವ ಸರ್ಕಾರವು ಸರಿಯಾದ ಸೇವೆ ಮಾಡುವುದಿಲ್ಲವೋ ಆ ಸರ್ಕಾರವನ್ನು ಮೂಲೆಗೆ ಕುಳ್ಳಿರಿಸಿ, ಬೇರೆ ಸರ್ಕಾರವನ್ನು ಸ್ಥಾಪಿಸುತ್ತಾರೆ. ಅಂದರೆ ಜನಗಳ ಕೈಯಲ್ಲಿ ಅಷ್ಟು ಅಧಿಕಾರವಿದೆ.

ಇದೇ ಸ್ವತಂತ್ರ ಶಕ್ತಿಯೇ ಪೋಲೀಸರ ಮುಖದಲ್ಲಿ ಹೊಳೆಯುತ್ತಾ ಇರುತ್ತದೆ. ಅವರು ಜನರ ಕ್ಷೇಮನೋಡುತ್ತಾರೆ. ಅವರು "ಅಧಿಕಾರಿ" ಗಳಲ್ಲ. ಇತರ ಜನರಂತೆ ತಾನೂ ಒಬ್ಬನು, ಜನರ ಕ್ಷೇಮಚಿಂತಕನು, ಎಂದು ತಿಳಿದಿರುತ್ತಾನೆ.

ರಸ್ತೆಗಳಲ್ಲಿ ಜನರೂ ಸಹ ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾರೆ. ಪೋಲೀಸರು ಸುಳ್ಳು ಕೇಸುಗಳನ್ನು ಹಾಕುವುದಿಲ್ಲ. ಅವರು ಹಾಕುವ ಫಿರ್ಯಾದಿಗೆ ಸಾಧಾರಣವಾಗಿ ಅಪರಾಧಿಯು ಕೋರ್ಟಿನಮುಂದೆ ಒಪ್ಪಿಕೊಂಡು ಜುಲ್ಮಾನೆಕೊಟ್ಟು ತನ್ನದಾರಿ ಹಿಡಿದುಹೋಗುತ್ತಾನೆ. ಕೋರ್ಟಿನಲ್ಲಿಯೂ ಪೋಲೀಸರು ನಂಬಿಕೆಯನ್ನು ಉಳಿಸಿಕೊಂಡು ಗೌರವವನ್ನು ಹೊಂದುತ್ತಾರೆ. ಅಪರಾಧಿಗೂ, ಪೋಲೀಸರಿಗೂ, ನ್ಯಾಯಾಧಿಪತಿಗೂ ಯಾರಿಗೂ ತೊಂದರೆಇಲ್ಲ. ಕೇಸುಗಳು ಸುಲಭವಾಗಿ ತೀರ್ಮಾನವಾಗುತ್ತವೆ. ಸಣ್ಣ ಸಣ್ಣ ಕೇಸುಗಳಲ್ಲೂ ನಮ್ಮ ದೇಶದಲ್ಲಿಯ ಕಿತಾಪಟಿ, ಸುಳ್ಳು ಸಾಕ್ಷಿ, ಕಾಲವ್ಯರ್ಥ, ಹಣವ್ಯಯ ಇವುಗಳನ್ನು ನೋಡಿದರೆ ಸಂಕಟವುಂಟಾಗುತ್ತದೆ. ನಮ್ಮ ಕಡೆ ತಿಳಿಯದೆ ಸಣ್ಣ ತಪ್ಪು ಮಾಡಿದವನೂ ಸಹಾ ಮನೆಮಠಗಳನ್ನು ಮಾರಿಯಾದರೂ ಆ ವ್ಯಾಜ್ಯ ನಡೆಸಿ ಮಾನವೆಂಬ ಮಾಯಕ್ಕಾಗಿ ಪಾಪರ್ ಆಗುತ್ತಾನೆ. ಇಲ್ಲಿ ಧೈರ್ಯವಾಗಿ ರಾಜಾರೋಷವಾಗಿ ಒಪ್ಪಿಕೊಂಡು, ಜುಲ್ಮಾನೆಯನ್ನು ಬಿಸಾಟುಬಿಡುತ್ತಾರೆ. ಯಾರೂ ಇದನ್ನು ಅವಮಾನವೆಂದು ತಿಳಿಯರು. ಕೋಟ್ಯಧೀಶ್ವರರು, ದೊಡ್ಡ ಸರ್ಕಾರಿ ಅಧಿಕಾರಿಗಳು ಸಹಾ ಹೀಗೆಯೇ ಒಪ್ಪಿ ಜುಲ್ಮಾನೆ ಕೊಟ್ಟು ಹೋಗುತ್ತಾರೆ. ಇದೇನೂ ಅವಮಾನವಲ್ಲ. ಸತ್ಯ, ಧರ್ಮವರ್ತನೆಯಲ್ಲಿ ಅವಮಾನ ಪಡಕೂಡದೆಂಬ ಪಾಠವನ್ನು ನಾವು ಕಲಿಯಬೇಕಾಗಿದೆ. ಅದಕ್ಕೆ ಜನಗಳ ಮತ್ತು ಪೋಲೀಸರ ಪರಸ್ಪರ ಹೊಂದಾವಣಿಬೇಕು.

ಸ್ಕಾಟ್‌ಲೆಂಡ್ ಯಾರ್ಡ್.

ಪೋಲೀಸರೆಲ್ಲಾ ಲಂಡನ್‌ನಲ್ಲಿರುವ ಸ್ಕಾಟ್‌ಲೆಂಡ್‌ಯಾರ್ಡ್‌ನಲ್ಲಿ ತರಬೇತಾದವರು. ಅವರಿಗೆ ಸಂಬಳ ಜಾಸ್ತಿ, ವಾರಕ್ಕೆ ೭ ರಿಂದ ೧೪ ಪೌಂಡುಗಳ ಸಂಬಳ, ಅಂದರೆ ವಾರಕ್ಕೆ ೧೦೦ ರಿಂದ ೨೦೦ ರೂಪಾಯಿಗಳ ಸಂಬಳ. ಆದ್ದರಿಂದ ಲಂಚ ವಗೈರೆ ಮಾಮೂಲುಗಳಿಗೆ ಅವಕಾಶವೂ ಇಲ್ಲ, ಆಸೆಯೂ ಇಲ್ಲ. ನಮ್ಮ ದೇಶದಲ್ಲಿ ಹಣವನ್ನೆಲ್ಲಾ ಸೈನ್ಯಕ್ಕೂ ದೊಡ್ಡ ಅಧಿಕಾರಿಗಳಿಗೂ ವೆಚ್ಚಮಾಡುವುದರಿಂದ ಪೋಲೀಸ್ ಕೆಲಸದಲ್ಲಿ ಅತೃಪ್ತಿಯೂ, ಬಡತನವೂ ತುಂಬಿತುಳುಕಾಡುತ್ತವೆ. ಪೋಲೀಸರಿಗೆ ಒರಟುತನವೊಂದರಲ್ಲಿ ಮಾತ್ರ ಚನ್ನಾಗಿ ತರಬೇತುಕೊಡುತ್ತಾರೆ. ಬೇರೆ ಯಾವ ವಿದ್ಯೆಗೂ ಅವಕಾಶ ಕೊಡುವುದಿಲ್ಲ. ಮೊದಲು ಪೋಲೀಸರಿಗೆ ಸ್ವಜನ, ಸ್ವದೇಶ ಎಂಬ ಆಸೆಗಳನ್ನು ಹುಟ್ಟಿಸುವ ಪಾಠಗಳನ್ನು ಇಲ್ಲಿ ಕಲಿಸುತ್ತಾರೆ.

ಇನ್ನೂ ಹುಟ್ಟದಿರುವ ಗರ್ಭಶಿಶುಗಳ ಮತ್ತು ಹುಟ್ಟಿದ ಶಿಶುಗಳ ಪೋಷಣೆ.

(ಡಾಕ್ಟರ್ ಮಿಸ್ಸೆಸ್. ಅನಾ. ಥಾಮಸ್ ಇವರಿಂದ.)

ಪ್ರಖ್ಯಾತ ಆಂಗ್ಲೇಯ ಕವಿಗಳಲ್ಲಿ ಒಬ್ಬನು 'ಮಗುವೇ ಮನುಷ್ಯನಿಗೆ ತಂದೆ' ಯೆಂದೂ, "ಈಗಿನ ಶಿಶುಗಳೇ ನಾಳಿನ ನಾಗರಿಕರು" ಎಂದೂ, 'ಪ್ರಸವಗೃಹದಲ್ಲಿಯೇ ದೇಶಚರಿತ್ರವು ಆರಂಭವಾಗುವು' ದೆಂದೂ ಹೇಳಿರುವನು. ಆದುದರಿಂದ ಒಂದು ಜನಾಂಗದ ಮೇಲ್ಮೆಯೂ, ಹೀನತೆಯೂ ಗರ್ಭಶಿಶುಗಳ ಮತ್ತು ಪ್ರಸವವಾದ ಶಿಶುಗಳ ವಿಚಾರವು ತಂದೆತಾಯಿಗಳು ಗಮನಿಸುವುದರಮೇಲೆ ಹೊಂದಿದೆ. "ನಮ್ಮ ರಾಜ್ಯದ ಅಸ್ತಿಭಾರವು ಮಕ್ಕಳ ಪೋಷಣಕ್ರಮದಲ್ಲಿದೆ" ಯೆಂದು ಬಹುಕಾಲಕ್ಕೆ ಹಿಂದೆಯೇ ಸಿಸಿರೋ ಎಂಬವನು ಹೇಳಿರುವನು.

ಆದುದರಿಂದ, ಇಂತಹ ಅಸ್ತಿಭಾರವು ಕ್ರಮವಾಗಿ ಮತ್ತು ದೃಢವಾಗಿದೆಯೋ ಎಂಬುದನ್ನು ಗಮನಿಸಿ, ಅದಕ್ಕೆ ಬೇಕಾದ ಸೌಕರ್ಯಗಳನ್ನೆಲ್ಲ ಕಲ್ಪಿಸಿಕೊಡುವುದು ಆಯಾ ರಾಜ್ಯಾಂಗದ ಮತ್ತು ಅಲ್ಲಲ್ಲಿಯ ರಾಜ್ಯತಂತ್ರನಿರ್ವಾಹಕರ ಮತ್ತು ಸ್ವದೇಶಾಭಿಮಾನಿಗಳ ಅವಶ್ಯಕರ್ತವ್ಯಗಳಲ್ಲಿ ಒಂದಾಗಿದೆ.

ಹುಟ್ಟಿದ ಮಕ್ಕಳ ವಿಚಾರ.

ನಾವು ಮೊದಲು ಇಲ್ಲಿ ಹುಟ್ಟಿದ ಮಕ್ಕಳ ಪೋಷಣೆಯನ್ನು ಕುರಿತು ವಿಚಾರ ಮಾಡುವೆವು. ಜನನ ಮರಣ ಸಂಖ್ಯೆಗಳನ್ನು ನೋಡುವಲ್ಲಿ, ಇಂಡಿಯಾದೇಶದಲ್ಲಿ ಶಿಶುಮರಣಸಂಖ್ಯೆಯು ಬೇರೆ ಎಲ್ಲಾ ದೇಶಗಳಿಗಿಂತಲೂ ಅಧಿಕವಾಗಿದೆ. ಇಂಡಿಯಾದೇಶದಲ್ಲಿ ಸುಮಾರು ವರ್ಷವೊಂದಕ್ಕೆ ಒಂದು ಕೋಟಿ ಮಕ್ಕಳು ಹುಟ್ಟುವುವು. ಈ ಪೈಕಿ, ಹುಟ್ಟಿದ ವರ್ಷದಲ್ಲಿಯೇ 25 ಲಕ್ಷ ಶಿಶುಗಳು ಸಾಯುವುವು. ಅಂದರೆ, ದಿನವೊಂದಕ್ಕೆ 6000 ಮಕ್ಕಳು ಒಂದು ವರ್ಷ ತುಂಬುವುದರೊಳಗಾಗಿ ಸಾಯುತ್ತಿರುವುವು. ಪ್ರಪಂಚದ ಜನನ ಮರಣಸಂಖ್ಯೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದವರು, ಪ್ರಪಂಚದ ಬೇರೆ ಯಾವ ಕಡೆಯಲ್ಲಿಯೂ ಇಂತಹ ಶೋಚನೀಯವಾದ ಸ್ಥಿತಿಯಿಲ್ಲವೆಂದು ನಿರ್ಧರಿಸಿ, "ಶಿಶುಮರಣ ವಿಚಾರವನ್ನು ಯೋಚಿಸಿದರೆ, ಇಂಡಿಯಾದೇಶವು ಮಹಾಪಾಪಿಷ್ಠಭೂಮಿ" ಯೆಂದು ಹೇಳಿರುವರು. ಮಹಾಭಯಂಕರವಾದ ಇಂತಹ ಶಿಶುಮರಣಸಂಖ್ಯೆಯಿಂದ ಏರ್ಪಡುವುದೇನು? ನಮ್ಮ ಜನಾಂಗವೇ ಕಾಲಕ್ರಮದಿಂದ ಸಂಪೂರ್ಣವಾಗಿ ನಾಶವಾಗುವುದಕ್ಕೆ ಬೇಕಾದ ಕಾರಣಗಳು ಇಲ್ಲಿ ಪೂರ್ಣವಾಗಿವೆಯೆಂಬುದೇ ಇದರ ಅರ್ಥವಲ್ಲದೆ ಬೇರೆಯಲ್ಲ. 'ಒಂದು ದೇಶದ ಬಲಾಬಲವು ಅದರ ಶಿಶುಗಳಲ್ಲಿದೆ' ಯೆಂದು ಪ್ಲೇಟೋ ಎಂಬವನು ಹೇಳಿರುವನು. ಶಿಶುಮರಣವು ತಗ್ಗುವುದೆಂದರೆ, ಆ ದೇಶದ ತರುಣರೂ, ತರುಣಿಯರೂ ದೃಢಾಂಗರಾಗಿದ್ದು, ಅಲ್ಲಿಯ ಜನರು ದೀರ್ಘಾಯುಷ್ಯವುಳ್ಳವರಾಗಿರುವರೆಂದೇ ಅರ್ಥವು. ಇಂಡಿಯಾದೇಶದಲ್ಲಿ ಮೇಲೆ ಹೇಳಿದಂತೆ ಶಿಶುಮರಣಗಳು ಹೆಚ್ಚುತ್ತಿರುವುದು ಈ ದೇಶದ ಸಾಂಪತ್ತಿಕ ಸ್ಥಿತಿಗೂ ಬಹಳ ಹಾನಿಕರವು: ಅಂದರೆ, ದೇಶದ ಆದಾಯವೂ ಇದರಿಂದ ಕಡಿಮೆಯಾಗುವುದು.

ದೇಶದ ಆದಾಯದ ವಿಚಾರ.

ಅಮೇರಿಕೆಯಲ್ಲಿ ಹುಟ್ಟಿದ ಒಂದು ಶಿಶುವು ಮೃತವಾದರೆ, ಅದರಿಂದ ರಾಜ್ಯಕ್ಕೆ 1700 ಡಾಲರುಗಳು ನಷ್ಟವೆಂದು ಅಲ್ಲಿಯ ಪ್ರಖ್ಯಾತರಾದ ಪ್ರೊಫೆಸರ್ ಇರ್ವಿನ್ ಫಿಶರ್ ಎಂಬವರು ಲೆಕ್ಕಹಾಕಿರುವರಲ್ಲದೆ, ಆ ದೇಶದಲ್ಲಿ ನಡೆಯುವ ಶಿಶುಮರಣಗಳ ಪೈಕಿ 100 ಕ್ಕೆ 42 ಮರಣಗಳು, ಸುಲಭನಿವಾರಣೀಯಗಳಾದ ವ್ಯಾಧಿಗಳಿಂದ ಸಂಭವಿಸುವುವೆಂದು ನಿರೂಪಿಸಿರುವರು. ಈ ಲೆಕ್ಕದಮೇಲೆ ನಮ್ಮ ಇಂಡಿಯಾದೇಶಕ್ಕೆ ವರ್ಷವೊಂದಕ್ಕೆ ಸಂಭವಿಸುವ ದ್ರವ್ಯನಷ್ಟವು ಎಷ್ಟಾಯಿತೆಂದು ನೋಡಿರಿ! ಅನಿವಾರ್ಯವಾದ ಕಾರಣಗಳಿಂದ ಸಾಯುವ ಶಿಶುಗಳನ್ನು ಬಿಟ್ಟು, ಸುಲಭವಾಗಿ ನಿವಾರಿಸಬಹುದಾದ ವ್ಯಾಧಿಗಳಿಂದ ಸಾಯುವ ಶಿಶುಗಳ ಸಂಖ್ಯೆಯು, ಶೇಕಡಾ 42ರಂತೆ ಆದರೂ, ವರ್ಷವೊಂದಕ್ಕೆ ಈ ದೇಶದಲ್ಲಿ ಸಾಯುವ ಒಟ್ಟು 25 ಲಕ್ಷ ಶಿಶುಗಳ ಪೈಕಿ 100 ಕ್ಕೆ 42 ರ ಮೇರೆಗೆ ತೆಗೆದುಕೊಂಡು, ಅದನ್ನೇ 1700 ರಿಂದ ಗುಣಿಸಿದರೆ, 1785000000 ಡಾಲರುಗಳು ನಷ್ಟವಾದಂತಾಗುವುವು. ಆದರೆ ಅಮೇರಿಕೆಯಲ್ಲಿ ತಲೆಯೊಂದಕ್ಕೆ ಬರುವ ವರಮಾನದಲ್ಲಿ ಇಂಡಿಯಾದೇಶದ ಜನರಲ್ಲಿ ತಲೆಯೊಂದಕ್ಕೆ ಬರುವ ವರಮಾನವು ಐದರಲ್ಲಿ ಒಂದುಪಾಲು ಮಾತ್ರವಾಗಿದೆ. ಹಾಗೆ ನೋಡಿದರೂ, ಇಂಡಿಯಾದೇಶದಲ್ಲಿ ಶಿಶುಮರಣಗಳಿಂದ ಉಂಟಾಗುವ ದ್ರವ್ಯನಷ್ಟವು ವರ್ಷವೊಂದಕ್ಕೆ ಸರಾಸರಿ 35,70,00000 ಕ್ಕೆ ಬರುವುದು. ಇಷ್ಟು ನಷ್ಟವೂ ನಾವು ನಿವಾರಿಸಬಹುದಾದ ಕಾರಣಗಳಿಂದಲೇ ಉಂಟಾಗುತ್ತಿವೆಯೆಂಬುದನ್ನು ನಾವು ಮರೆಯಬಾರದು.

ಈ ಕೊಡಕನ್ನು ಬಿಡಿಸುವುದು ಹೇಗೆ?

"ವ್ಯಾಧಿಗಳನ್ನು ಚಿಕಿತ್ಸೆ ಮಾಡಿ ಗುಣಪಡಿಸುವುದಕ್ಕಿಂತ ಬಾರದಂತೆ ತಡೆಯುವುದು ಮೇಲು" ಎಂಬ ನಾಣ್ಣುಡಿಯು ಶಾಲೆಯ ಮಕ್ಕಳಿಗೆ ಮೊದಲುಗೊಂಡು ಎಲ್ಲರಿಗೂ ತಿಳಿದುದೇ ಆಗಿದೆ. ಚಿಕಿತ್ಸೆಗಿಂತಲೂ ನಿವಾರಣಮಾರ್ಗವು ಬಹಳ ಸುಲಭವು. ಅದಕ್ಕೆ ಸ್ವಲ್ಪ ಜಾಣತನವಿದ್ದರೂ ಸಾಕು. ಆದರೆ, ಚೆನ್ನಾಗಿ ಓದಿದವರು ಕೂಡ, ಈ ವಿಚಾರದಲ್ಲಿ ಅಲಕ್ಷ್ಯವಾಗಿರುವುದು ಕೇವಲ ಶೋಚನೀಯವು. ಈಚೀಚೆಗೆ ಅಲ್ಲಲ್ಲಿ ಶಿಶುರಕ್ಷಣಸಂಘಗಳು ಏರ್ಪಾಡಾಗಿ, ಆ ಸಮಾಜದವರ ಪ್ರಯತ್ನದಿಂದ ದೇಶದಲ್ಲಿ ಜನಸಾಮಾನ್ಯಕ್ಕೆ ಸ್ವಲ್ಪ ಮಟ್ಟಿಗೆ ಎಚ್ಚರಿಕೆಯುಂಟಾದಂತೆ ಕಾಣುತ್ತದೆ. ಇದೇನೋ ಸಂತೋಷಕರವಾದ ವಿಷಯವೇ ಸರಿ. ಪಾಶ್ಚಾತ್ಯದೇಶಗಳಲ್ಲಿಯಾದರೋ, ಈಗ್ಗೆ 25 ವರ್ಷಗಳಿಗೆ ಹಿಂದಿನಿಂದಲೇ ಈ ಪ್ರಯತ್ನವು ಆರಂಭವಾದುದರಿಂದ, ಈಗ ಅಲ್ಲಿಯ ಶಿಶುಮರಣಸಂಖ್ಯೆಯು ಮೊದಲಿದ್ದುದಕ್ಕಿಂತ ಮುಕ್ಕಾಲು ಕಡಿಮೆಯಾಗಿದೆ. ಇದಕ್ಕೆ ಒಂದು ಒಳ್ಳೇ ನಿದರ್ಶನವೇನೆಂದರೆ, ಫ್ರಾನ್ಸ್‌ದೇಶಕ್ಕೆ ಸೇರಿದ ವಿಲಿಯರ್ಸ್-ಡಿ-ಡ್ಯೂಕ್ ಎಂಬ [illegible] ಮ್ಯುನಿಸಿಪಲ್ ಟೌನಿನಲ್ಲಿ, ಮೇಲ್ಕಂಡ ಪ್ರಯತ್ನವು ಆರಂಭಿಸಿದಮೇಲೆ, ಈಚೆಗೆ ಶಿಶುಮರಣ ಸಂಖ್ಯೆಯು ವರ್ಷವರ್ಷಕ್ಕೆ ಕಡಿಮೆಯಾಗುತ್ತಬಂದು, ಈಚೆಗೆ 10 ವರ್ಷಗಳಿಂದ ಅಲ್ಲಿ ಮಕ್ಕಳ ಮರಣ ಸಂಖ್ಯೆಗೆ ಸೊನ್ನೆಯ ಲೆಕ್ಕವೇ ಬೀಳುತ್ತಿದೆ.

ಈ ವಿಚಾರವನ್ನು ಕ್ರಮಕ್ಕೆ ತರಬೇಕಾದರೆ, ನಮ್ಮ ದೇಶದಲ್ಲಿಯೂ, ಜನರು ತಾಯಿಯ ಗರ್ಭದೆಸೆಯಿಂದಲೇ ಮಕ್ಕಳ ಪೋಷಣೆಯನ್ನು ಎಚ್ಚರದಿಂದ ಗಮನಿಸಬೇಕು. ಇದು ಅನುಭವಸಿದ್ಧವಾಗಿ ತಿಳಿದ ವಿಷಯವು. "ಬೀಜಕ್ಕೆ ಅನುಕೂಲವಾಗಿ ಕ್ಷೇತ್ರವನ್ನು ಸಿದ್ಧಪಡಿಸಬೇಕು" ಎಂಬ ಶಾಸ್ತ್ರವಿಧಿಯನ್ನನುಸರಿಸಿ, ಗರ್ಭಿಣಿಯರ ವಿಚಾರವನ್ನೇ ಮೊದಲು ಬಹಳ ಎಚ್ಚರದಿಂದ ಗಮನಿಸಬೇಕು.

ಇಂಡಿಯಾದೇಶವೆಂಬುದು ಹೆಚ್ಚಾಗಿ ಗ್ರಾಮಗಳಿಂದ ನಿಬಿಡವಾದ ದೊಡ್ಡ ದೇಶವಾಗಿದೆ. ಇದರ ಒಟ್ಟು ಜನಸಂಖ್ಯೆ 33 ಕೋಟಿ. ಈ ಪೈಕಿ 27 ಕೋಟಿ ಜನರು ಗ್ರಾಮವಾಸಿಗಳಾಗಿರುವರು. ಗ್ರಾಮವಾಸಿಗಳಿಗೆ ವ್ಯಾಧಿಬಂದಾಗಾಗಲಿ, ಪ್ರಸವಕಾಲದಲ್ಲಿಯಾಗಲಿ ಒಳ್ಳೇ ವೈದ್ಯರ ಸಹಾಯವೂ, ಚಿಕಿತ್ಸಾಸೌಕರ್ಯವೂ ದೊರೆಯುವುದು ಕಷ್ಟವು. ಆದುದರಿಂದ ಗ್ರಾಮಗಳಲ್ಲಿರತಕ್ಕ ಹೆಂಗಸರು, ಗರ್ಭದೆಸೆಯಿಂದ ಹಿಡಿದು ಪ್ರಸವವಾಗುವವರೆಗೆ, ಮತ್ತು ಪ್ರಸವವಾದಮೇಲೆ ಬಾಣಂತಿದೆಸೆಯಲ್ಲಿ ಕೂಡ, ಕೇವಲ ಮೂಢವಿಶ್ವಾಸವುಳ್ಳ ಮುದುಕಿಯರ ಅಧೀನದಲ್ಲಿಯಾಗಲಿ, ಅಶಿಕ್ಷಿತರೂ, ಅಶುಚಿಗಳೂ, ಅಜ್ಞರೂ ಆದ ಸೂಲಗಿತ್ತಿಯರ ವಶದಲ್ಲಿಯಾಗಲಿ, ಸಿಕ್ಕಿಕೊಂಡು ಕಷ್ಟಪಡಬೇಕಾಗಿದೆ.

ಸೂಲಗಿತ್ತಿಯರ ವಿಚಾರ.

ಗ್ರಾಮಗಳಲ್ಲಿರುವ ಹೆಂಗಸರಿಗೆ, ಪ್ರಸವವಿಚಾರದಲ್ಲಿ ಮಂತ್ರ, ತಂತ್ರ, ಚಿಕಿತ್ಸಾದಿಕಾರ್ಯಗಳಿಗೆಲ್ಲ ಸೂಲಗಿತ್ತಿತನಕ್ಕೆ ಬರುವ ಆಗಸಗಿತ್ತಿಯರೇ ಪ್ರಧಾನ ಸಹಾಯಕರಾಗಿರುವರು. ದಕ್ಷಿಣದೇಶದಲ್ಲಿಯೂ, ಉತ್ತರದೇಶಗಳಲ್ಲಿಯೂ ವೈದ್ಯಚಿಕಿತ್ಸೆಯಲ್ಲಿ ನನಗಿರುವ 15 ವರ್ಷಗಳ ಅನುಭವದಿಂದ ತಿಳಿದುದೇನೆಂದರೆ, ಪ್ರಾಯಿಕವಾಗಿ ನಮ್ಮ ಜನರಿಗೆ, ನಗರವಾಸಿಗಳಲ್ಲಿ ಅನೇಕ ಜನರಿಗೆ ಕೂಡ, ಮನೆಯ ಸೂಲಗಿತ್ತಿಯವರಲ್ಲಿಯೇ ಹೆಚ್ಚಾದ ನಂಬಿಕೆ. ಆ ಸೂಲಗಿತ್ತಿಯರು ಹೇಳುವುದೇ ಅವರಿಗೆ ಪ್ರಮಾಣವು. ಆ ಸೂಲಗಿತ್ತಿಯರು ತಮ್ಮ ಅಜ್ಞತೆಯಿಂದ ಎಷ್ಟೋ ಅಸಂಬದ್ಧವಾದ ಮತ್ತು ಅಪಾಯಕರಗಳಾದ ಕಾರ್ಯಗಳನ್ನು ನಡೆಸುವರು. ಕೈಯನ್ನು ಶುದ್ಧಮಾಡಿಕೊಳ್ಳದೆ ಕೊಳಕು ಕೈಗಳಿಂದಲೇ ಗರ್ಭವತಿಯರ ಮರ್ಮಸ್ಥಾನಗಳನ್ನು ಪರಿಶೋಧಿಸುವರು. ಸೂಲಗಿತ್ತಿಯರು ತಮ್ಮ ಅಜ್ಞತೆಯಿಂದ ಮಾಡುವ ಇಂತಹ ವ್ಯಾಪಾರಗಳೇ ಬಾಣಂತಿಯರಿಗೆ ಸಂಭವಿಸುವ ಅನೇಕ ರೋಗಗಳಿಗೂ, ಶಿಶುಗಳಿಗೆ ಉಂಟಾಗುವ ಅಪತ್ತುಗಳಿಗೂ ಕಾರಣವೆನಿಸಿವೆ. ಈ ಮರ್ಮವು ನಮ್ಮ ಜನರಿಗೆ ತಿಳಿಯದೆ, ಇಲ್ಲದ ಕಷ್ಟಕ್ಕೆ ಗುರಿಯಾಗುವರು. ಒಳ್ಳೇ ಸುಶಿಕ್ಷಿತರಾಗಿ, ತಿಳಿವಳಿಕೆಯುಳ್ಳ ಸೂಲಗಿತ್ತಿಯರನ್ನು ಕರೆಯಿಸಿ, ಗರ್ಭದೆಸೆಯಿಂದಲೇ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಂಡರೆ ಈ ಅನರ್ಥಗಳನ್ನು ಬಹಳ ಮಟ್ಟಿಗೆ ತಪ್ಪಿಸಬಹುದೆಂಬುದು ನಮ್ಮವರಿಗೆ ತಿಳಿಯದು. ಅಜ್ಞರಾದ ನಮ್ಮ ಜನರು, ಅಜ್ಞರಾದ ಸೂಲಗಿತ್ತಿಯವರನ್ನು ನಂಬಿ ಕಷ್ಟಕ್ಕೊಳಗಾಗುವರು. ಈ ಅಜ್ಞತೆಯಿಂದ ಶಿಶುವಾಗಲಿ, ತಾಯಾಗಲಿ ಅಪಾಯಕ್ಕೊಳಗಾದರೆ, ಅಥವಾ ಮೃತರಾದರೆ, ನೆರೆಹೊರೆಯವರೂ, ಬಂಧುಗಳೂ, ದೈವದಮೇಲೆ ತಪ್ಪನ್ನು ಹೊರಿಸಿ, ವೈರಾಗ್ಯವನ್ನು ಬೋಧಿಸುವರು. ಮೂಢನಂಬಿಕೆಯುಳ್ಳ ಮನೆಯ ಮುದುಕಿಯರೂ ಕೂಡ, ಆಗಸಗಿತ್ತಿಯರ ಮೇಲೆ ತಪ್ಪುಹಾಕಿದರೆ, ಸಹಿಸಲಾರದೆ "ಅಯ್ಯೋ! ಪಾಪ! ಅವಳೇನು ಮಾಡಿಯಾಳು! ಇದೆಲ್ಲ ದೈವೇಚ್ಛೆ! ನಮ್ಮ ಸೂಲಗಿತ್ತಿಯು ವರ್ಷಕ್ಕೆ ಇದೇ ಊರಿನಲ್ಲಿ ನೂರಾರು ಹೆರಿಗೆಗಳನ್ನು ಮಾಡಿರುವಳು. ಎಲ್ಲಾ ಸುಖಪ್ರಸವವಾಗಿವೆ" ಎಂದು ಹೇಳುವರು. ಒಂದು ವೇಳೆ ಸ್ವಲ್ಪ ಹಣವಿದ್ದವರು ಕೆಲವರು, ವ್ಯಾಧಿಯು ಬಹಳ ಪ್ರಬಲವಾಗಿ ಬೇರೆ ವಿಧಿಯಿಲ್ಲವೆಂದು ತೋರಿದಾಗ ಮಾತ್ರ ಡಾಕ್ಟರುಗಳನ್ನು ಕರೆಸುವುದುಂಟು. ಮರಣೋನ್ಮುಖವಾದ ಅಂತಹ ಸ್ಥಿತಿಯಲ್ಲಿ ಡಾಕ್ಟರಿಂದ ತಾನೇ ಏನುಮಾಡುವುದಕ್ಕಾದೀತು? ಕಾಲಾತೀತವಾದುದರಿಂದ ಡಾಕ್ಟರಿಗೂ ಸಾಧ್ಯವಿಲ್ಲದೆ, ತಾಯಿಯೋ, ಶಿಶುವೋ ಮರಣಹೊಂದಿದ ಪಕ್ಷದಲ್ಲಿ, ಮೊದಲು ಚಿಕಿತ್ಸೆಗೆ ಕೈಹಾಕಿ, ಆ ಅನರ್ಥಕ್ಕೆ ಕಾರಣಳಾದ ಸೂಲಗಿತ್ತಿಯೇ ಸಂಭ್ರಮದಿಂದ ಬಂದು, "ನೋಡಿದಿರಮ್ಮ! ಡಾಕ್ಟರೇನು ಮಾಡಿಬಿಟ್ಟರು? ಆಯಸ್ಸು ತೀರಿದಮೇಲೆ ಯಾರು ತಾನೇ ಬದುಕಿಸಬಲ್ಲರು? ಸೂಲಗಿತ್ತಿಯೇನು ಮಾಡುವುದಕ್ಕಾದೀತು?" ಎಂದು ಹಂಗಿಸುವಳು. ಅದನ್ನು ಕೇಳಿ ಮನೆಯವರೆಲ್ಲರೂ ಆಶ್ವಾಸನ ಹೊಂದಿ ಸುಮ್ಮನಾಗುವರು. ವಿದ್ಯಾವಂತರಲ್ಲಿ ಕೂಡ, ಅನೇಕರು ಮುಖ್ಯವಾಗಿ, ವೈದಿಕಶ್ರದ್ಧೆಯುಳ್ಳವರು, ಪ್ರಸವವಿಚಾರದಲ್ಲಿ ಗಂಡಸರಾದ ನಮಗೇನೂ ಅಧಿಕಾರವಿಲ್ಲವೆಂದೂ, ಮನೆಯೊಳಗಿರುವ ಮುದುಕಿಯರೇ ಅದನ್ನು ನೋಡಿಕೊಳ್ಳುವರೆಂದೂ ಅವರ ಮಾತಿನಂತೆಯೇ ನಡೆಯಬೇಕೆಂದೂ, ಅಲಕ್ಷ್ಯವಾಗಿರುವುದನ್ನು ನಾನು ಅನೇಕ ಕುಟುಂಬಗಳಲ್ಲಿ ನೋಡಿರುವೆನು. ಆ ಮುದುಕಿಯರಾದರೋ, ತಾವು ಹಿಡಿದ ಹಟವೊಂದು ಹೊರತು, ಬೇರೆ ಯಾರೇನು ಹೇಳಿದರೂ ಕೇಳುವಹಾಗಿಲ್ಲ. ತಮ್ಮ ನಂಬಿಕೆಯನ್ನು ಬಿಡುವ ಹಾಗಿಲ್ಲ. ಪ್ರಸವಿಸಿದ ಹೆಂಗಸರಿಗೆ ಕಾಫಿಯನ್ನು ಕೊಡುವ ವಿಚಾರದಲ್ಲಿ ಮಾತ್ರ, ಅದಕ್ಕೆ ವ್ಯತಿರಿಕ್ತವಾಗಿ ಹೇಳಿದರೆ ಈ ಕಾಲದಲ್ಲಿ ತಮ್ಮ ಮಾತು ಸಾಗುವುದಿಲ್ಲವೆಂದು ತಿಳಿದು, "ಹೋದರೆ ಹೋಗಲಿ! ಸ್ವಲ್ಪ ಕಾಫಿಯನ್ನು ಬೇಕಾದರೆ ಕೊಡಿರಿ! ಮಿಕ್ಕುದನ್ನೆಲ್ಲ ನಾನು ನೋಡಿಕೊಳ್ಳುವೆನು" ಎಂದು ಹೇಳುವರು. ಅಲ್ಲದೆ, ಈ ಮುದುಕಿಯರು "ನಾನು ಹತ್ತಾರು ಮಕ್ಕಳನ್ನು ಹೆತ್ತವಳು. ಮಕ್ಕಳನ್ನೂ ಮೊಮ್ಮಕ್ಕಳನ್ನೂ, ಮರಿಮಕ್ಕಳನ್ನೂ ನೋಡಿದುದಾಯಿತು. ಎಷ್ಟೋ ಪ್ರಸವಗಳನ್ನು ನೋಡಿರುವೆನು. ಇವಕ್ಕೆಲ್ಲ ಸೂಲಗಿತ್ತಿಯರಲ್ಲದೆ ಬೇರೆ ಯಾರು ಮಾಡಿದವರು" ಎಂದು ತಮ್ಮ ಹೆಮ್ಮೆಯನ್ನು ಹೇಳಿ ಬೆದರಿಸಿ

[6ನೆಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೩ನೇ ನವಂಬರ್ ತಾ|| ೫ನೇ ಸೋಮವಾರ.

ಮಠಾಧಿಕಾರಿಗಳು.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವಮತಪರಿಪಾಲನಕ್ಕಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಮಠಗಳನ್ನು ಸ್ಥಾಪಿಸಿರುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ. ಪೂರ್ವಕಾಲದಲ್ಲಿ ಮಠಾಧಿಕಾರಿಗಳು ದಿಗ್ವಿಜಯ ಪಂಡಿತರಾಗಿ ಶಿವಯೋಗರಹಸ್ಯವನ್ನು ತಿಳಿದುಕೊಂಡು ಸದಾಚರಣೆಯಿಂದ ನಡೆಯುತ್ತ ಶಿಷ್ಯಕೋಟಿಯನ್ನುದ್ಧರಿಸುತ್ತಿದ್ದರು. ಈ ವಿಷಯದಲ್ಲಿ ಪೂರ್ವದ ಮಹಾನುಭಾವರು ಬರೆದಿಟ್ಟಿರುವ ಗ್ರಂಥಗಳೇ ಸಾಕ್ಷಿಗಳಾಗಿವೆ. ಆ ಮಹನೀಯರು ತಮ್ಮ ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಅತ್ಯದ್ಭುತ ವಿಷಯಗಳನ್ನು ಪರಿಶೀಲಿಸಿದರೆ ಅವರಲ್ಲಿ ಧರ್ಮಶ್ರದ್ಧೆಯೂ, ಸಿದ್ಧಾಂತನೈಪುಣ್ಯವೂ, ಗುರುದೈವಭಕ್ತಿಯೂ ಅನ್ಯಾದೃಶವಾಗಿದ್ದವೆಂದು ಕಂಡುಬರುತ್ತದೆ. ಈ ರೀತಿಯಾಗಿ ಲೋಕವಿಖ್ಯಾತರಾಗಿ ಹೋದ ಆ ಮಹನೀಯರ ವಂಶದಲ್ಲಿ ಈಗ ಅನಾಮಧೇಯರು ಜನಿಸಿ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳದೆ ಹಾಗೂ ಮತಧರ್ಮಗಳನ್ನು ತಿಳಿಯದೆ ತಮ್ಮ ವಂಶದ ಕೀರ್ತಿಗೆ ಕಳಂಕವನ್ನು ತರಹತ್ತಿರುವದನ್ನು ನೋಡಿದರೆ ಪರಮ ವ್ಯಸನವೆನಿಸುತ್ತದೆ. ಎಷ್ಟೋ ಗ್ರಾಮಗಳ ಮಠಾಧಿಕಾರಿಗಳಿಗೆ ತಮ್ಮ ಮತಸಿದ್ಧಾಂತಜ್ಞಾನವೊತ್ತಟ್ಟಿಗಿರಲಿ, ಸರಿಯಾಗಿ ಓದುಬರೆಯಲು ಸಹ ಬರುವದಿಲ್ಲ. ಈ ತರಹದ ಜನರು ಹುಂಬರಿಗಿಂತಲೂ ಹುಂಬರಾಗಿ ತಿರುಗುತ್ತಿರುವುದರಿಂದ ಶಿಷ್ಯರಲ್ಲಿದ್ದ ಭಕ್ತಿಯು ದಿನೇ ದಿನೇ ಹ್ರಾಸವಾಗುತ್ತ ನಡೆದಿರುವುದು. ಈ ದುಃಸ್ಥಿತಿಗೆ ಮಠಾಧಿಕಾರಿಗಳೇ ಕಾರಣರಲ್ಲದೆ ಮತ್ತಾರೂ ಕಾರಣರಲ್ಲವೆಂದು ಹೇಳಬೇಕಾಗಿದೆ. ~~ಈ ತರಹದ ಗುರುಗಳನ್ನು ಪ್ರತ್ಯಕ್ಷವಾಗಿ ಕಂಡು ಒಬ್ಬ ಕವಿಯು ಈ ರೀತಿ~~ಯಾಗಿ ನುಡಿದಿದ್ದಾನೆ.

ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।
ದುರ್ಲಭೋಽಯಂ ಗುರುರ್ಲೋಕೇ ಶಿಷ್ಯಚಿತ್ತಾಪಹಾರಕಃ ||

ಈ ಶ್ಲೋಕದ ಅಭಿಪ್ರಾಯವೇನೆಂದರೆ— ಲೋಕದಲ್ಲಿ ಶಿಷ್ಯರ ದ್ರವ್ಯವನ್ನು ಹರಣಮಾಡುವ ಗುರುಗಳೇ ಹೆಚ್ಚಾಗಿದ್ದಾರೆ. ಆದರೆ ಶಿಷ್ಯರ ಅಜ್ಞಾನಾಂಧಕಾರವನ್ನು ನಾಶಗೊಳಿಸುವ ಗುರುವು ಒಬ್ಬನಾದರೂ ದೊರೆಯುವುದೇ ದುರ್ಲಭವಾಗಿದೆ.

~~ಈ ವಿಷಯವನ್ನೇ ಮುಂದುವರಿಸಿ~~ ಸದ್ಯಃ ಅನೇಕರು ಗುರುಗಳಲ್ಲಿ ಭಕ್ತಿಶೂನ್ಯರಾಗಿದ್ದಾರೆ. ಕಾಲಮಹಿಮೆಯಿಂದಂತೂ ಬರಬರುತ್ತ ಜನಗಳಿಗೆ ಗುರುಗಳ ವಿಷಯದಲ್ಲಿ ಭಕ್ತಿಯು ಕಡಿಮೆಯಾಗಹತ್ತಿರುವುದು. ಇಂಥ ವಿಷಮಸಮಯದಲ್ಲಿ ಗುರುವರ್ಗದ ಮಠಾಧಿಕಾರಿಗಳು ಸಿದ್ಧಾಂತಶಾಸ್ತ್ರಾಭ್ಯಾಸದಿಂದಲೂ, ಶಿವಯೋಗಾಭ್ಯಾಸದಿಂದಲೂ, ಸದಾಚರಣೆಯಿಂದಲೂ ವರ್ತಿಸಿ ಧರ್ಮವಿಮುಖರಾಗುತ್ತಿದ್ದ ಶಿಷ್ಯರನ್ನು ಸನ್ಮಾರ್ಗಾವಲಂಬಿಗಳನ್ನಾಗಿ ಮಾಡುತ್ತ ವೀರಶೈವಮತದ ಗೌರವವನ್ನು ಕಾಪಾಡಬೇಕೆಂಬುವುದೇ ನಮ್ಮ ಕೋರಿಕೆಯಾಗಿದೆ. ಪೂರ್ವದ ಭಕ್ತರು, ಗುರುಗಳು ಹೇಗಿದ್ದರೂ ಅವರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರು. ಈಗಿನ ಭಕ್ತರು ಹಾಗಲ್ಲ, ಗುರುಗಳ ಸ್ವಭಾವವನ್ನೂ, ಅವರ ಸದಾಚಾರಶೀಲತೆಯನ್ನೂ, ಅವರ ವಿದ್ವತ್ತೆಯನ್ನೂ ಕೂಲಂಕಷವಾಗಿ ಶೋಧಿಸುತ್ತಾರೆ. ಇದು ಯೋಗ್ಯವೆಂದೇ ಹೇಳಬೇಕಾಗುತ್ತದೆ. ಆದುದರಿಂದ ಗುರುವರ್ಗದವರು ಜಾಗರೂಕರಾಗಿ ತಮ್ಮ ಮಕ್ಕಳುಗಳಿಗೆ ಸಂಸ್ಕೃತಾಭ್ಯಾಸವನ್ನು ಮಾಡಿಸಿ ಅವರನ್ನು ಸದಾಚಾರಶೀಲರಾಗುವಂತೆ ಮಾಡುವ ಕಾರ್ಯದಲ್ಲಿ ತೊಡಗಬೇಕೆಂದು ಕೋರುತ್ತೇನೆ. ಇಲ್ಲದಿದ್ದರೆ ಜಾತಿಕುಲಹೀನರಾದ ಸಂಕರಜಾತಿಯವರ ಬೋಧೆಯಿಂದ ತಮ್ಮ ಗೌರವವನ್ನು ಇನ್ನೂ ಹೆಚ್ಚಾಗಿ ಕಳೆದುಕೊಳ್ಳುವ ಪ್ರಸಂಗವು ಬರಬಹುದು. ಮಾಹೇಶ್ವರಪಟುಗಳ ಸುಧಾರಣೆಗಾಗಿ ಅಲ್ಲಲ್ಲಿ ಅನೇಕ ಸಂಸ್ಕೃತವಿದ್ಯಾಲಯಗಳು ಧರ್ಮಾತ್ಮರಿಂದ ಸ್ಥಾಪಿಸಲ್ಪಟ್ಟವೆ. ಭಕ್ತಾದಿಗಳು ಇವರ ಸುಧಾರಣೆಗಾಗಿ ಇಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದರೂ ಇವರು ಇನ್ನೂ ಎಚ್ಚತ್ತರಾಗದಿರುವುದು ಇವರ ದುರದೃಷ್ಟವೆಂದೇ ಹೇಳಬೇಕಾಗಿದೆ. ಆದುದರಿಂದ ಗುರುವರ್ಗದ ಮಠಾಧಿಕಾರಿಗಳು ಇನ್ನುಮೇಲಾದರೂ ಎಚ್ಚತ್ತು ವಿದ್ವಾಂಸರಾಗಿ ತಮ್ಮ ಕರ್ತವ್ಯವನ್ನು ಸಾಂಗವಾಗಿ ನೆರವೇರಿಸುತ್ತ ವೀರಶೈವ ಮತೋದ್ಧಾರಕಾರ್ಯದಲ್ಲಿ ನಿರತರಾಗಬೇಕೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

1931-32 ನೇ ವರ್ಷದಲ್ಲಿ ಕೋಲಾರದ ಚಿನ್ನದಗಣಿಗಳಿಂದ 12,53,542 ರೂಪಾಯಿಗಳ ರಾಜಾದಾಯವು ಮೈಸೂರು ಸರಕಾರಕ್ಕೆ ಬಂದಿರುತ್ತದೆ.

ಮೈಸೂರು ಸರ್ಕಾರದವರು 1933 ನೇ ಇಸವಿಯ ಅಲಗಾಯಿತು ಮಿಡಲ್ ಸ್ಕೂಲ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಚಿತ್ರದುರ್ಗ ಡಿ|| ಹೊಸದುರ್ಗವನ್ನು ಒಂದು ಹೊಸ ಸೆಂಟರನ್ನಾಗಿ ಮಾಡಿರುತ್ತಾರೆ.

ಬೆಂಗಳೂರು ಡಿ|| ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ರಣಜೋಧ್‌ಸಿಂಗ್‌ರವರ ಕಾರ್ಯದಕ್ಷತೆಯನ್ನು ಮೆಚ್ಚಿ ವೈಸರಾಯರು ಅವರಿಗೆ ‘ಪೋಲೀಸ್ ಮೆಡಲ್’ ಎಂಬ ಬಂಗಾರದ ಪದಕವನ್ನು ದಯಪಾಲಿಸಿರುತ್ತಾರೆ.

ಹೊಸಕೋಟೆಯಲ್ಲಿ ಕಳ್ಳತನದಿಂದ ಸಾರಾಯಿಯನ್ನು ತಯಾರಿಸುತ್ತಿದ್ದ ರಹೀಂಬೇಗ್ ಎಂಬವನಿಗೆ ಬೆಂಗಳೂರು ಎರಡನೆಯ ತರಗತಿಯ ಮ್ಯಾಜಿಸ್ಟ್ರೇಟರು ಎರಡು ತಿಂಗಳ ಕಠಿಣಸಜೆ ಮತ್ತು 75 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು.

ಮಾನನಷ್ಟದ ಮೊಕದ್ದಮೆಯಲ್ಲಿ ಕೊಡಬೇಕಾಗಿದ್ದ 300 ರೂ. ಗಳ ಜುಲ್ಮಾನೆಯನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಮ|| ರಾ|| ವಿ. ಎಸ್. ಸಂಜೀವರಾಯರು ನವೆಂಬರ್ 28 ನೆಯ ತಾರೀಖಿನ ಮಧ್ಯಾಹ್ನ ಬೆಂಗಳೂರು ಸಿಟಿ ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟರು.

ಮೈಸೂರು ಸರ್ಕಾರದವರು ಈ ಕೆಳಗೆ ಕಂಡ ದೊಡ್ಡ ಮನುಷ್ಯರನ್ನು ಮೈಸೂರು ನ್ಯಾಯವಿಧಾಯಕ ಸಭೆಯ ಅಧಿಕಾರ ಸದಸ್ಯರನ್ನಾಗಿ ನೇಮಕಮಾಡಿರುತ್ತಾರೆ. 1. ಮಿ|| ಎಸ್. ಅಬ್ದುಲ್ ವಾಜಿದ್. 2. ಮಿ|| ಎಚ್. ವಿ. ರಾಮಸ್ವಾಮಿ. 3. ಡಾ|| ಎಲ್. ಸಿ. ಕೋಲ್ಮನ್ ಮತ್ತು ಮಿ|| ಎ. ವಿ. ರಾಮನಾಥನ್.

ಕಳೆದ ನವೆಂಬರ್ 30 ನೇ ತಾರೀಖಿನ ದಿವಸ ಬೆಳಿಗ್ಗೆ 3 ಜನ ಪಠಾಣರು ಲಕ್ಷ್ಮೀಪುರದಲ್ಲಿ ಕಂಟ್ರಾಕ್ಟರ್ ಮ|| ರಾ|| ಮುನಿವೆಂಕಟಪ್ಪನವರ ಬಂಗಲೆಯ ಎದುರುಮನೆಯಲ್ಲಿ ವಾಸವಾಗಿರುವ ಚನ್ನಮ್ಮನೆಂಬವಳನ್ನು ಹೊಡೆದು ದರದರನೆ ಎಳೆದುಕೊಂಡು ಹೋಗುತ್ತಿದ್ದರೆಂದೂ, ಈ ವರ್ತಮಾನವನ್ನು ತಿಳಿದು ಪೋಲೀಸರು ಸಕಾಲದಲ್ಲಿ ಅಲ್ಲಿಗೆ ಬಂದು ಆ ಹೆಂಗಸನ್ನು ಬಿಡಿಸಿ ವಿಚಾರಣೆ ನಡೆಸುತ್ತಿರುವರೆಂದೂ ತಿಳಿದುಬಂದಿದೆ.

ಕಳೆದ ನವೆಂಬರ್ 29 ನೇ ತಾರೀಖಿನ ಬೆಳಿಗ್ಗೆ ಬೆಂಗಳೂರು ಹೊಸತರಗುಪೇಟೆಯಲ್ಲಿರುವ ಕಂಬಿ ರೇವಪ್ಪ ಶಿವಪ್ಪನವರ ಛತ್ರದ ಕಾರ್ಖಾನೆಯಲ್ಲಿ ಮ|| ರಾ|| ಕಂಬಿ ರೇವಪ್ಪನವರ ಎರಡನೆಯ ಕುಮಾರರಾದ ಮಿ|| ಕೆ. ಆರ್. ಸಿದ್ಧರಾಮಪ್ಪನವರು ಕೆಲಸಗಾರರು ಇಲ್ಲದ ಸಮಯದಲ್ಲಿ ಯಂತ್ರವನ್ನು ನೋಡುತ್ತಾ ನಿಂತಿರಲು ಅವರು ಉಟ್ಟಿದ್ದ ಪಂಚೆಯು ಎಲೆಕ್ಟ್ರಿಕ್ ಡೈನಮೋವಿನ ಬೆಲ್ಟಿಗೆ ಸಿಕ್ಕಿ ಷಾಫ್ಟಿನಿಂದ ಬಲವಾದ ಪೆಟ್ಟುಬಿದ್ದು ತತ್‌ಕ್ಷಣವೇ ಮೃತಪಟ್ಟರೆಂದು ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ 68/88 ನೇ ಫೀಲ್ಡ್ ಬ್ಯಾಟರಿ ಸೈನ್ಯದ ಭೂಲ್‌ಸಿಂಗ್ ಎಂಬ ಸಿಖ್ ಶಿಪಾಯಿಯು, ಮೇಲಿನ ಅಧಿಕಾರಿಗಳಿಗೆ ತನ್ನ ವಿಷಯದಲ್ಲಿ ಚಾಡಿಹೇಳಿದನೆಂಬ ಅನುಮಾನದಮೇಲೆ ಮಘರ್‌ಸಿಂಗ್ ಎಂಬ ಮತ್ತೊಬ್ಬ ಸಿಖ್ ಶಿಪಾಯಿಯನ್ನು ಹೊಡೆದುಕೊಂದನು. ಮಘರ್‌ಸಿಂಗನನ್ನು ರಕ್ಷಿಸಲು ಹೋದ ದರ್ಶನ್‌ಸಿಂಗ್ ಎಂಬ ಮತ್ತೊಬ್ಬ ಶಿಪಾಯಿಗೂ ಬಲವಾದ ಪೆಟ್ಟುಬಿದ್ದು ಆಸ್ಪತ್ರೆಯಲ್ಲಿ ಅವನೂ ಮೃತಪಟ್ಟನು. ಮಿಲಿಟರಿ ಅಧಿಕಾರಿಗಳು ಭೂಲ್‌ಸಿಂಗನನ್ನು ದಸ್ತಗಿರಿಮಾಡಿ ಸಿವಿಲ್ ವಿಚಾರಣೆಗೆ ಒಪ್ಪಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಸತ್ಯಾಗ್ರಹಸಮರವಾರ್ತೆ.

ನವೆಂಬರ್ 27 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು, ಜಾಕಬ್ ಸರ್ಕಲ್ಲಿನಲ್ಲಿ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಲು ಪ್ರಯತ್ನಿಸಿದ 30 ಜನ ಸ್ವಯಂಸೇವಕರನ್ನೂ, ಗುಟ್ಟಾಗಿ ಕಾಂಗ್ರೆಸ್ ಕೆಲಸಗಳನ್ನು ನಡೆಯಿಸುತ್ತಿರುವರೆಂಬ ಕಾರಣದ ಮೇಲೆ ಇಬ್ಬರು ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಅಲಹಾಬಾದ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು, ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರೂ ಬಾಬು ಪುರುಷೋತ್ತಮದಾಸರವರ ಕಾರ್ಯದರ್ಶಿಗಳೂ ಆದ ಶ್ರೀ|| ಗೋಪೀನಾಥಸಿಂಗರಿಗೆ 6 ಗಂಟೆಗಳೊಳಗಾಗಿ ಅಲಹಾಬಾದನ್ನು ಬಿಟ್ಟು ಹೊರಡಬೇಕೆಂದೂ, ಒಂದುತಿಂಗಳವರೆಗೆ ಪುನಃ ಅಲಹಾಬಾದನ್ನು ಪ್ರವೇಶಿಸಕೂಡದೆಂದೂ ಆಜ್ಞೆಮಾಡಿರುತ್ತಾರೆ.

ಲಾಲಾಲಜಪತರಾಯರ ದಿನಾಚರಣೆಯ ದಿವಸ ದಸ್ತಗಿರಿಮಾಡಲ್ಪಟ್ಟ ಶ್ರೀ|| ಪುರುಷೋತ್ತಮದಾಸ್ ಟಾಂಡನ್‌ರವರಮೇಲೆ ಅಲಹಾಬಾದ್ ಪೋಲೀಸರು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ ಮತ್ತು ಪೋಲೀಸ್ ಆಕ್ಟಿನ ಪ್ರಕಾರ ಮೊಕದ್ದಮೆಯನ್ನು ಹೂಡಿರುತ್ತಾರೆ.

ಅಲಹಾಬಾದಿನ ಅಖಿಲಭಾರತ ಚರಕಾಸಂಘದ ಖಾದೀಭಂಡಾರದಲ್ಲಿ ಕಾನೂನು ಭಂಗದ ಚಳವಳಿಗೆ ಸಂಬಂಧಪಟ್ಟ ಹಸ್ತಪತ್ರಿಕೆಗಳಿರುವವೆಂಬ ಸಂಶಯದ ಮೇಲೆ ಸ್ಥಳೀಯ ಪೋಲೀಸರು ನವೆಂಬರ್ 27 ನೇ ತಾರೀಖಿನ ದಿವಸ ಭಂಡಾರವನ್ನು ಬಹಳ ಹೊತ್ತಿನವರೆಗೆ ಶೋಧಿಸಿದರು. ಆದರೆ ಚಳವಳಿಗೆ ಸಂಬಂಧಪಟ್ಟ ಕಾಗದಪತ್ರಗಳಾವುವೂ ದೊರೆಯಲಿಲ್ಲ. ಮಾರಾಟಕ್ಕಾಗಿ ಇರಿಸಿದ್ದ 132 ರಾಷ್ಟ್ರೀಯ ಧ್ವಜಗಳನ್ನು ಮಾತ್ರ ಪೋಲೀಸರು ತೆಗೆದುಕೊಂಡು ಹೋದರು.

ಗಾಂಧೀ ಆಶ್ರಮದ ಪೂರ್ವನಿವಾಸಿಗಳಾಗಿದ್ದ ಶ್ರೀ ಶಿವಲಾಲ ಮೋಹನಲಾಲರವರು ಅಹಮದಾಬಾದಿನಲ್ಲಿ ಮೋಟಾರ್ ಬಸ್ಸಿನಿಂದ ಇಳಿದ ಕೂಡಲೇ ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟರು. ಅವರಲ್ಲಿದ್ದ ಒಂದು ಚೀಲದಲ್ಲಿ ಸರ್ಕಾರದ ಆಜ್ಞೆಗೆ ವಿರುದ್ಧವಾಗಿ ಪ್ರಕಟಿಸಲ್ಪಟ್ಟಿದ್ದ ಗಾಂಧಿಯವರ ನವಜೀವನದ 2000 ಪ್ರತಿಗಳಿದ್ದವು.

ಜನೆಯತ್ ಷಹಬಾಜ್ ನವಜವಾನ್ ಇಸ್ಲಾಂ ಪಂಜಾಬ್ ಸಭೆಯ ಮಾಜೀ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕರೀಂರವರು ಕೆಂಪು ಷರಟಿನವರ ಚಳವಳಿಯ ಸಂಬಂಧವಾಗಿ ಲಾಹೋರಿನಲ್ಲಿ ದಸ್ತಗಿರಿಮಾಡಲ್ಪಟ್ಟರು.

ಕಳೆದ ಜುಲೈ ತಿಂಗಳಲ್ಲಿ ನಡೆದ ಮಹಾರಾಷ್ಟ್ರ ಪ್ರಾಂತಿಕ ಸಮ್ಮೇಳನದ ಸಂಬಂಧದಲ್ಲಿ ಶಿಕ್ಷೆಗ ಗುರಿಯಾಗಿದ್ದ 47 ಜನರನ್ನು ಬಿಡುಗಡೆ ಮಾಡಬೇಕೆಂಬುದಾಗಿ ಠಾಣೆಯ ಸೆಷನ್ಸ್ ಜಡ್ಜರವರು ಹೈಕೋರ್ಟಿಗೆ ಮಾಡಿದ್ದ ಶಿಫಾರಸು ತಿರಸ್ಕರಿಸಲ್ಪಟ್ಟು ಅಪರಾಧಿಗಳಿಗೆ ವಿಧಿಸಲ್ಪಟ್ಟಿದ್ದ ಆರಾರು ತಿಂಗಳ ಕಠಿಣ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು.

ಹಿಂದೂಸ್ಥಾನೀ ಸೇವಾದಳದ ಪ್ರಮುಖ ಕಾರ್ಯಕರ್ತರಾದ ಮಿಸೆಸ್ ಮುಣೀಕಾಬೆನ್ ಮೆಹತಾರವರು ಡಿಸೆಂಬರ್ 1 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಸದ್ಯಃ ಲಂಡನ್ನಿನಲ್ಲಿರುವ ಪಂಡಿತ ಕೃಷ್ಣಸ್ವಾಮಿಯೆಂಬ ಮದ್ರಾಸಿನ ತರುಣಜ್ಯೋತಿಷ್ಕರೊಬ್ಬರು ಈ ಕೆಳಗೆ ಕಂಡ ಕೆಲವು ಭವಿಷ್ಯಗಳನ್ನು ನುಡಿದಿದ್ದಾರೆ. 1. ಗಾಂಧಿಯವರು ಇನ್ನು ಒಂದು ವರ್ಷಕ್ಕಿಂತಲೂ ಹೆಚ್ಚಾಗಿ ಜೀವಿಸುವುದಿಲ್ಲ. 2. ಇಂಗ್ಲೆಂಡಿನ ರಾಷ್ಟ್ರೀಯ ಸರಕಾರವು 6 ತಿಂಗಳೊಳಗಾಗಿ ಮುರಿದುಬೀಳುವದು. 3. ಜಪಾನಿನವರು ಮೂರು ತಿಂಗಳೊಳಗಾಗಿ ‘ಜನಾಂಗಸಂಯೋಜನಕೂಟ’ದ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವರು.

ವರ್ತಮಾನಸಂಗ್ರಹ

3 ನೆಯ ದುಂಡುಮೇಜಿನಪರಿಷತ್ತು ಸೇಫ್‌ಗಾರ್ಡ್‌ಗಳ ವಿಷಯದಲ್ಲಿ ಮುರಿದುಬೀಳುವದೆಂದು ಫ್ರೀಪ್ರೆಸ್ ಸ್ಪೆಷಲ್ ಬಾತ್ಮೀದಾರರು ಸೂಚಿಸಿದ್ದಾರೆ.

ಅಲಹಾಬಾದ್ ಒಪ್ಪಂದವನ್ನು ಚರ್ಚಿಸಿ ಅಂಗೀಕರಿಸುವುದಕ್ಕಾಗಿ ಮುಸ್ಲಿಂ ಸರ್ವಪಕ್ಷಗಳ ಸಮ್ಮೇಳನವು ಇದೇ ಡಿಸೆಂಬರು 10 ಮತ್ತು 11 ನೇ ತಾರೀಖುಗಳಲ್ಲಿ ಲಕ್ನೋದಲ್ಲಿ ಸೇರುವುದು.

ಡಿಸೆಂಬರ್ 1 ನೆಯ ತಾರೀಖಿನ ದಿವಸ ಎಂಪೈರ್ ಪಾರ್ಲಿಮೆಂಟರಿ ಅಸೋಸಿಯೇಷನ್ನಿನವರು ಲಾರ್ಡ್ ಸಾಂಕೆಯವರ ಅಧ್ಯಕ್ಷತೆಯಲ್ಲಿ ದುಂಡುಮೇಜಿನ ಪರಿಷತ್ತಿನ ಸದಸ್ಯರನ್ನು ಸತ್ಕರಿಸಿದರು.

ಹೈದರಾಬಾದಿ (ಸಿಂಧ್) ನಲ್ಲಿ ಸಿ. ಐ. ಡಿ. ಇನ್‌ಸ್ಪೆಕ್ಟರಂತೆ ವೇಷಧರಿಸಿ ಲೈಸೆನ್ಸಿಲ್ಲದೆ ಪಿಸ್ತೂಲನ್ನು ಹೊಂದಿದ್ದ ಒಬ್ಬ ಆಂಗ್ಲೋಇಂಡಿಯನ್ ಯುವಕನನ್ನು ಪೋಲೀಸರು ದಸ್ತಗಿರಿಮಾಡಿರುತ್ತಾರೆ.

1933 ನೇ ಇಸವಿಯ ಆದಿಭಾಗದಲ್ಲಿ ಇಂಗ್ಲೆಂಡಿಗೂ ಇಂಡಿಯಾಕ್ಕೂ ಟೆಲಿಫೋನ್ ಪ್ರಾರಂಭಿಸಲ್ಪಡುವುದೆಂದೂ, ಆಗಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡಲಾಗುತ್ತಿದೆಯೆಂದೂ ಸರ್ ಹೋರರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಹೋಗಿರುವ ಪ್ರತಿನಿಧಿಗಳಲ್ಲಿ ಅನೇಕರು ಡಿಸೆಂಬರ್ 29 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಇಂಡಿಯಾಕ್ಕೆ ಹೊರಡಲು ಹಡಗಿನಲ್ಲಿ ತಮ್ಮ ಜಾಗಗಳನ್ನು ರಿಜರ್ವಮಾಡಿಸಿರುತ್ತಾರೆ.

‘ಅಮೃತ ಬಜಾರ್’ ಪತ್ರಿಕೆಯ ಸಂಪಾದಕರಾದ ಶ್ರೀ|| ತುಷಾರಕಾಂತಿ ಘೋಷ್ ಮತ್ತು ಪ್ರಿಂಟರಾದ ಶ್ರೀ|| ಶರೀತಿಕಾಂತಿ ಬಿಸ್ವಾಸ್ ಎಂಬವರು ಕೋರ್ಟನ್ನು ಅಲಕ್ಷ್ಯವಾಗಿ ಕಂಡರೆಂಬ ಅಪಾದನೆಯಮೇಲೆ 500 ರೂ ಗಳ ಜುಲ್ಮಾನೆಗೆ ಗುರಿಯಾದರು.

ಆರ್ಯಸಮಾಜದ ವಾರ್ಷಿಕೋತ್ಸವಕ್ಕಾಗಿ ಲಾಹೋರಿಗೆ ಬಂದಿದ್ದ ಹೋಸಿಯಾರ್‌ಪುರದ ರಾಯ್ ಬಹದ್ದೂರ್ ಹರಪ್ರಸಾದ್‌ರವರ ರಿವಾಲ್ವರನ್ನು ಯಾರೋ ಬಹುವಿಚಿತ್ರ ರೀತಿಯಲ್ಲಿ ಅಪಹರಿಸಿರುವದರಿಂದ ಪೋಲೀಸರು ತನಿಖೆಮಾಡುತ್ತಿರುವರು.

ಐರ್ಲೆಂಡಿನ ರೈಲ್ವೆಬೋರ್ಡಿನವರು ಡಿಸೆಂಬರು 31 ನೇ ತಾರೀಖಿನಿಂದ ರೈಲ್ವೆ ಕೆಲಸಗಾರರ ಸಂಬಳದಲ್ಲಿ ಶೇಕಡಾ 10ರಷ್ಟನ್ನು ಕಡಿಮೆಮಾಡಬೇಕೆಂದು ತೀರ್ಮಾನಿಸಿರುತ್ತಾರೆ. ಇದರಿಂದ ಕೆಲಸಗಾರರು ಕ್ರಿಸ್ಮಸ್ ಕಾಲದಲ್ಲಿ ಮುಷ್ಕರ ಹಿಡಿಯುವರೆಂದು ತಿಳಿದುಬಂದಿದೆ.

ಕ್ರಾಂತಿಕಾರರಿಗೆ ಆಶ್ರಯವನ್ನು ಕೊಟ್ಟಿದ್ದರೆಂಬ ಅಪಾದನೆಯ ಮೇಲೆ ಮಿಡ್ನಾಪುರ ಜಿಲ್ಲೆಗೆ ಸೇರಿದ ನಂದೀಗ್ರಾಮದ ಪೋಲೀಸ್ ಸ್ಟೇಷನ್ನಿನ ಸುತ್ತಮುತ್ತಲಿರುವ 9 ಹಳ್ಳಿಗಳ ಮೇಲೆ ಬಂಗಾಳಾ ಸರ್ಕಾರದವರು 2000 ರೂಪಾಯಿಗಳ ದಂಡವನ್ನು ಹಾಕಿರುತ್ತಾರೆ.

ಮೊನ್ನೆ ಮೊನ್ನೆ ಮುಂಬಯಿಯಲ್ಲಿ ನಡೆದ ಭಯಂಕರ ಹಿಂದೂ ಮುಸಲ್ಮಾನರ ದೊಂಬಿಯಲ್ಲಿ ಕೊಲೆಯ ಅಪಾದನೆಯಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ಗಫೀದ್ ಮಹಾಬ್‌ಬೇಗ ಎಂಬ ಮುಸಲ್ಮಾನನಿಗೆ ಈ ತಿಂಗಳು 1 ನೆಯ ತಾರೀಖಿನ ದಿವಸ ಮರಣದಂಡನೆಯು ವಿಧಿಸಲ್ಪಟ್ಟಿತು.

ಶ್ರೀ ಜಗದ್ಗುರುಗಳವರ ಆಗಮನ,
ಚಿಕ್ಕಬಳ್ಳಾಪುರ.

ಶ್ರೀ ರಂಭಾಪುರೀ ಪೀಠಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಇದೇ ತಿಂಗಳು 10 ನೆಯ ತಾರೀಖಿನ ದಿವಸ ಕೋಲಾರ ಡಿ|| ಚಿಕ್ಕಬಳ್ಳಾಪುರಕ್ಕೆ ದಯಮಾಡಿಸುವುದರಿಂದ ಭಕ್ತಾದಿಗಳು ಆ ಸಮಯಕ್ಕೆ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮಿ|| ಛೇಂಬರ್ಲೇನರವರು ಮಿ|| ಜಾರ್ಜ್ ಲ್ಯಾನ್ಸ್‌ಬರಿಯವರ ಪ್ರಶ್ನೆಗೆ ಉತ್ತರವಾಗಿ ಇಂಗ್ಲೆಂಡ್ ಸರ್ಕಾರವು ಅಮೇರಿಕಾ ಸರ್ಕಾರಕ್ಕೆ ಕೊಡಬೇಕಾದ ಸಾಲದಬಗ್ಗೆ ಅಮೇರಿಕೆಗೆ ಬಂಗಾರವು ರವಾನಾಗುತ್ತಿರುವದೆಂಬ ವರ್ತಮಾನವು ಸುಳ್ಳೆಂದು ಹೇಳಿದರು.

ನವೆಂಬರು 26 ನೇ ತಾರೀಖಿನ ದಿವಸ ಮಧ್ಯಾಹ್ನ ಲಕ್ನೋದಲ್ಲಿ ಗವರ್ನರ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿದ್ದ ವಿಶ್ವವಿದ್ಯಾನಿಲಯದ ಕಾನ್ವೊಕೇಷನ್ನಿಗಾಗಿ ಹಾಕಿದ್ದ ಚಪ್ಪರಕ್ಕೆ 25 ನೇ ತಾರೀಖಿನ ರಾತ್ರಿ ಅಕಸ್ಮಾತ್ ಬೆಂಕಿಬಿದ್ದು ಕುರ್ಚಿ ಬೆಂಚುಗಳ ಸಮೇತವಾಗಿ ಚಪ್ಪರವೆಲ್ಲವೂ ಸುಟ್ಟುಹೋಯಿತು.

ಕಳೆದ ಸೆಪ್ಟೆಂಬರು 7 ನೇ ತಾರೀಖಿನ ದಿವಸ ಢಕ್ಕಾ ರೈಲ್ವೇ ಸ್ಟೇಷನ್ನಿನ ಬಳಿ ಒಬ್ಬ ವರ್ತಕನಿಗೆ ಪಿಸ್ತೂಲನ್ನು ತೋರಿಸಿ ಅವನಿಂದ ಹಣವನ್ನು ವಸೂಲುಮಾಡಲು ಪ್ರಯತ್ನಪಟ್ಟರೆಂಬ ಅಪಾದನೆಯಮೇಲೆ ಭೂತೇಶ ಬ್ಯಾನರ್ಜಿ ಎಂಬ ವಿದ್ಯಾರ್ಥಿಗೆ 10 ವರ್ಷಗಳ ಕಠಿಣ ಶಿಕ್ಷೆಯೂ, ಅವನ ಜೊತೆಯಲ್ಲಿದ್ದ ಇನ್ನಿಬ್ಬರಿಗೆ 7 ವರ್ಷಗಳ ಕಠಿಣಶಿಕ್ಷೆಯೂ ವಿಧಿಸಲ್ಪಟ್ಟಿತು.

ಸರ್ದಾರ್ ಭಗತ್‌ಸಿಂಗರ ಮೊಕದ್ದಮೆಯಲ್ಲಿ ಅಪರಾಧಿಯಾಗಿದ್ದು ನಿರ್ದೋಷಿಯೆಂದು ಬಿಡುಗಡೆ ಹೊಂದಿದ್ದ ದೇಶರಾಜಭಾರತಿ ಎಂಬ ಲಾ ಕಾಲೇಜಿನ ವಿದ್ಯಾರ್ಥಿಯ ಬಳಿಯಲ್ಲಿ ಕ್ರಾಂತಿಕಾರಕ ಪತ್ರಿಕೆಗಳು ದೊರೆತವೆಂಬ ಕಾರಣದಮೇಲೆ ಲಾಹೋರ್ ಮ್ಯಾಜಿಸ್ಟ್ರೇಟರವರು ವಿಚಾರಣೆಮಾಡಿ ಅಪರಾಧಿಗೆ 200 ರೂಪಾಯಿ ಜುಲ್ಮಾನೆ, ತಪ್ಪಿದರೆ 2 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ದುಂಡುಮೇಜಿನ ಪರಿಷತ್ತು.

ಕಳೆದವಾರ ಈ ಪರಿಷತ್ತಿನಲ್ಲಿ ಅನೇಕ ಮಹತ್ವದ ವಿಷಯಗಳು ಚರ್ಚಿಸಲ್ಪಟ್ಟವು. 28 ನೇ ತಾರೀಖಿನ ದಿವಸ ಫೆಡರಲ್ ಸರ್ಕಾರಕ್ಕೆ ಕೊಡಬಹುದಾದ ಅಧಿಕಾರಗಳ ಸಂಬಂಧವಾಗಿ ಚರ್ಚೆಗಳು ನಡೆದವು. ಕಾನೂನು ಮತ್ತು ಶಿಸ್ತಿನ ಆಡಳಿತವನ್ನು ಗವರ್ನರುಗಳೂ, ಗವರ್ನರ್‌ಜನರಲ್‌ಗಳೂ ನಿರ್ವಹಿಸತಕ್ಕದ್ದೆಂದು ಎಲ್ಲರೂ ಒಪ್ಪಿಕೊಂಡರು. ಕೆಲವು ಸದಸ್ಯರು ಗವರ್ನರ್ ಜನರಲ್‌ರವರ ಅಧಿಕಾರಗಳನ್ನು ಹೆಚ್ಚಿಸಬೇಕೆಂದು ಸಲಹೆಯನ್ನಿತ್ತರು. ಮತ್ತು ಗವರ್ನರುಗಳು ಯಾವ ಸಂದರ್ಭಗಳಲ್ಲಿ ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಬಹುದೆಂಬ ಬಗ್ಗೆ ಚರ್ಚೆಗಳು ನಡೆದವು.

29 ನೇ ತಾರೀಖಿನ ದಿವಸ ಗವರ್ನರ್ ಜನರಲ್‌ರವರಿಗೆ ಇರಬೇಕಾದ ಅಧಿಕಾರಗಳ ಬಗ್ಗೆ ಚರ್ಚೆಯು ನಡೆಯಿತು. ಗವರ್ನರ್ ಜನರಲ್‌ರವರಿಗೆ ರಕ್ಷಣೆ ಮತ್ತು ಹೊರಆಡಳಿತದ ಜವಾಬ್ದಾರಿಯ ಜೊತೆಗೆ ಈ ಕೆಳಗೆ ಕಂಡ ಏಳು ವಿಷಯಗಳ ಮೇಲೂ ವಿಶೇಷಾಧಿಕಾರವಿರಬೇಕೆಂಬುದು ಬ್ರಿಟಿಷ್ ಪ್ರತಿನಿಧಿಗಳ ಮತವಾಗಿರುವದು. 1. ಶಾಂತಿ ಮತ್ತು ನೆಮ್ಮದಿಯಭಂಗ ರಕ್ಷಣೆ. 2. ಅಲ್ಪಸಂಖ್ಯಾಕ ಪಂಗಡದವರ ರಕ್ಷಣೆ. 3. ನೌಕರಿಗಳು. 4. ಗವರ್ನರ್ ಜನರಲ್‌ರವರ ಆಡಳಿತಕ್ಕೆ ಒಳಪಟ್ಟ ವಿಷಯಗಳು. 5. ಸಂಸ್ಥಾನಗಳ ಹಕ್ಕುಬಾಧ್ಯತೆಗಳ ರಕ್ಷಣೆ. 6. ವ್ಯಾಪಾರ ಸಂಬಂಧವಾದ ವಿಷಯಗಳು. 7. ಚಕ್ರಾಧಿಪತ್ಯದ ಇತರ ಭಾಗಗಳೊಡನೆ ವ್ಯವಹಾರ. ಇದಲ್ಲದೆ ನ್ಯಾಯವಿಧಾಯಕ ಸಭೆಯನ್ನು ನಿಲ್ಲಿಸುವುದಕ್ಕೂ, ಕಾನೂನು ನಿರ್ಮಾಣಕ್ಕೆ ಒಪ್ಪಿಗೆಯನ್ನು ಕೊಡುವುದಕ್ಕೂ ಗವರ್ನರ್ ಜನರಲ್‌ರವರಿಗೆ ಸಾಕಾದಷ್ಟು ಅಧಿಕಾರವಿರಬೇಕು. ಶಾಸನವು ಮುರಿದುಬೀಳುವ ಸಂಭವವು ಪ್ರಾಪ್ತವಾದರೆ ಅದನ್ನು ನಿವಾರಿಸುವ ಅಧಿಕಾರವೂ ಅವರಲ್ಲಿಯೇ ಇರಬೇಕು.

ಸಂಸ್ಥಾನಗಳ ಅಧಿಕಾರಗಳಿಗೆ ಫೆಡರಲ್ ಸರ್ಕಾರದಿಂದ ಚ್ಯುತಿಬಾರದಂತೆ ಅವಶ್ಯಕವಾದ ನಿಬಂಧನೆಗಳನ್ನು ನಿರ್ಮಾಣಮಾಡಬೇಕೆಂದು ಸಂಸ್ಥಾನಿಕ ಪ್ರತಿನಿಧಿಗಳು ವಾದಿಸಿದರು.

ಫೆಡರಲ್ ಸರ್ಕಾರದಲ್ಲಿ ಕೇಂದ್ರದಲ್ಲಿರಬೇಕಾದ ಜವಾಬ್ದಾರಿ ಮತ್ತು ಬ್ರಿಟಿಷರು ಅಪೇಕ್ಷಿಸುವ ಸೇಫ್‌ಗಾರ್ಡುಗಳ ಬಗ್ಗೆಯೂ ಸ್ವಲ್ಪ ಚರ್ಚೆಯು ನಡೆಯಿತು. ಪ್ರಜೆಗಳ ಪರವಾಗಿ ಬೇರೆ ಬೇರೆ ಖಾತೆಗಳಿಗೆ ನೇಮಿಸಲ್ಪಡುವ ಮಂತ್ರಿಗಳ ಅಭಿಪ್ರಾಯವನ್ನು ಮೀರಿ ವೈಸರಾಯರು ವರ್ತಿಸಕೂಡದೆಂದು ಕೆಲವರು ವಾದಿಸಿದರು. ಆದರೂ ಕಡೆಯ ತೀರ್ಮಾನದ ಜವಾಬ್ದಾರಿಯನ್ನು ವೈಸರಾಯರಿಗೇ ವಹಿಸತಕ್ಕದ್ದೆಂದು ಎಲ್ಲರೂ ಒಪ್ಪಿಕೊಂಡರು.

30 ನೇ ತಾರೀಖಿನ ದಿವಸವೂ ಗವರ್ನರುಗಳ ಅಧಿಕಾರದ ವಿಷಯವಾಗಿ ಚರ್ಚೆಯು ನಡೆಯಿತು. ಗವರ್ನರ್ ಜನರಲ್‌ರವರಿಗೆ ಮಂತ್ರಿಗಳ ಸಲಹೆಯನ್ನು ಪಡೆದು ಅಥವಾ ಮಂತ್ರಿಗಳ ಅಭಿಪ್ರಾಯವನ್ನೇ ಪಡೆಯದೆ ಆರ್ಡಿನೆನ್ಸುಗಳನ್ನು ಚಲಾಯಿಸುವ ಅಧಿಕಾರವಿರಬೇಕೆಂದೂ ಹಣಕಾಸಿನ ವಿಷಯದ ಮೇಲೂ ಗವರ್ನರ ಅಧಿಕಾರವಿರಬೇಕೆಂದೂ ಲಾರ್ಡ್ ರೀಡಿಂಗ್‌ರವರು ಹೇಳಿದರು.

ಸರ್ ಪತ್ರೋರವರು ಈಗಿನ ನ್ಯಾಯವಿಧಾಯಕ ಸಭೆಗಳ ರೀತಿನೀತಿಯನ್ನು ಖಂಡಿಸಿ ಫೆಡರಲ್ ಸರ್ಕಾರದ ನ್ಯಾಯವಿಧಾಯಕಸಭೆಯ ಸಾಮಾನ್ಯ ಅಧಿಕಾರಗಳ ಬಗ್ಗೆ ಗವರ್ನರುಗಳು ಪ್ರವೇಶಿಸಕೂಡದೆಂದೂ, ಬ್ರಿಟಿಷರು ಅಪೇಕ್ಷಿಸುವ ಸೇಫ್‌ಗಾರ್ಡುಗಳು ಕೇಂದ್ರ ಜವಾಬ್ದಾರಿಗೆ ಚ್ಯುತಿಯನ್ನುಂಟುಮಾಡದಿದ್ದರೆ ಮಾತ್ರವೇ ತಾವು ಅದಕ್ಕೆ ಒಪ್ಪುವೆವೆಂದೂ ಹೇಳಿದರು.

ಡಿಸೆಂಬರ್ 1 ನೇ ತಾರೀಖಿನ ದಿವಸವೂ ಗವರ್ನರ್ ಜನರಲ್‌ರವರ ವಿಶೇಷ ಅಧಿಕಾರಗಳ ಸಂಬಂಧವಾಗಿಯೇ ಚರ್ಚೆಯು ನಡೆಯಿತು. ಮುಸ್ಲಿಂ ಪ್ರತಿನಿಧಿಗಳು ಎಲ್ಲ ವಿಶೇಷ ಅಧಿಕಾರಗಳ ಬಗ್ಗೆಯೂ ತಮ್ಮ ಒಪ್ಪಿಗೆಯನ್ನಿತ್ತರು. ಹಾಗೂ ಪ್ರಾಂತಗಳಿಗೆ ಗವರ್ನರನ್ನು ನೇಮಿಸುವದರಲ್ಲಿ ಭೇದಭಾವವನ್ನು ತೋರಿಸಕೂಡದೆಂದೂ, ಚೆನ್ನಾಗಿ ಅನುಭವಹೊಂದಿದವರನ್ನು ಚುನಾಯಿಸಬೇಕೆಂದೂ, ಸಿವಿಲ್ ಸರ್ವಿಸ್ಸಿನವರನ್ನು ನೇಮಿಸಕೂಡದೆಂದೂ ಪ್ರತಿಪಾದಿಸಿದರು. ಇದಕ್ಕೆ ಎಲ್ಲ ಪ್ರತಿನಿಧಿಗಳೂ ಒಪ್ಪಿದರು. ಶಾಸನವು ಮುರಿದುಬೀಳುವವರೆಗೆ ಗವರ್ನರ್ ಜನರಲ್‌ರವರು ಶಾಸನದ ಪ್ರಕಾರವೇ ವರ್ತಿಸಬೇಕೆಂದೂ, ಶಾಸನವು ಮುರಿದುಬಿದ್ದನಂತರ ಅವರಿಗೆ ಸಂಪೂರ್ಣ ಅಧಿಕಾರವಿರಬೇಕೆಂದೂ ಬ್ರಿಟಿಷ್ ಹಿಂದೂಸ್ಥಾನದ ಪ್ರತಿನಿಧಿಗಳು ಹೇಳಿದರು.

ದಿನಂಪ್ರತಿಯ ಆಡಳಿತಗಳಲ್ಲಿ ವೈಸರಾಯರು ವಿಶೇಷ ಅಧಿಕಾರಗಳನ್ನು ಉಪಯೋಗಿಸಕೂಡದೆಂದು ಲಿಬರಲ್‌ಗಳು ಎಚ್ಚರಿಸಿದರು.

ಕೇಂದ್ರದಲ್ಲಿ ಸಂಪೂರ್ಣ ಜವಾಬ್ದಾರಿಯಿಲ್ಲದೆ ತಾವು ಫೆಡರೇಷನ್ನಿಗೆ ಸೇರುವದಿಲ್ಲವೆಂದು ನರೇಂದ್ರಮಂಡಲದ ಪ್ರತಿನಿಧಿಗಳು ತಿಳುಹಿಸಿದರು. ಸುಧಾರಣೆಗಳನ್ನು ಜಾರಿಗೆ ತಂದನಂತರ ವೈಸರಾಯರಿಗೆ ಸಲಹೆಗಾರರ ಕೂಟವು ಬೇಕಿಲ್ಲವೆಂದು ಮಿ|| ಜಯಕರ್‌ರವರು ವಾದಿಸಿದರು.

ಸ್ವೀಕಾರ

ತೀರ್ಥಹಳ್ಳಿ ತಾಲೂಕು ಮಳಲಿಮಠದಲ್ಲಿ ಕೈ|| ಭಾಂಡ್ಯದ ರುದ್ರಪ್ಪಗೌಡರ ಮಕ್ಕಳು ಮ|| ರಾ|| ಪುಟ್ಟಸ್ವಾಮೀಗೌಡರು ಶ್ರೀ|| ಗುರುನಾಗಾರ್ಜುನಸ್ವಾಮಿಯಮೂರ್ತಿಯನ್ನು ಬೆಳ್ಳಿಯಿಂದ ಮನೋಹರವಾಗಿ ನಿರ್ಮಾಣಮಾಡಿಸಿ ಆ ಮೂರ್ತಿಯನ್ನು ಶ್ರೀ|| ಮಳಲಿಮಠಕ್ಕೆ ಸಮರ್ಪಿಸಿ ತತ್‌ಸಂಬಂಧವಾದ ಪ್ರಾಣಪ್ರತಿಷ್ಠಾ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ|| ಮಳಲಿಮಠದ ಪಟ್ಟಾಧ್ಯಕ್ಷ ಗುರುನಾಗಾರ್ಜುನಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ ಗಳು ವೇ|| ಬೀರೂರು ಜಿ. ನಂಜುಂಡಾರಾಧ್ಯರವರ ದ್ವಾರಾ ತಲ್ಪಿರುತ್ತವೆ.

ಸೊರಬ ತಾ|| ಕ್ಯಾಸನೂರುಮಠದಲ್ಲಿ ನೆರವೇರಿದ ಕೃತ್ತಿಕಾಮಹೋತ್ಸವ ಸಮಾರಂಭದಲ್ಲಿ ನಡೆದ ಸಭೆಯಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ|| ಪಟ್ಟಾಧ್ಯಕ್ಷ ಗುರುಬಸವಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯ ಪ್ರಭಾ.

೧೯೩೨ನೇ ನವಂಬರ್ ತಾ॥ ೫ ನೇ ಸೋಮವಾರ.

ಮಠಾಧಿಕಾರಿಗಳು.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವಮತಪರಿಪಾಲನಕ್ಕಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಮಠಗಳನ್ನು ಸ್ಥಾಪಿಸಿರುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ. ಪೂರ್ವಕಾಲದಲ್ಲಿ ಮಠಾಧಿಕಾರಿಗಳು ದಿಗ್ವಿಜಯ ಪಂಡಿತರಾಗಿ ಶಿವಯೋಗರಹಸ್ಯವನ್ನು ತಿಳಿದುಕೊಂಡು ಸದಾಚರಣೆಯಿಂದ ನಡೆಯುತ್ತ ಶಿಷ್ಯಕೋಟಿಯನ್ನುದ್ಧರಿಸುತ್ತಿದ್ದರು. ಈ ವಿಷಯದಲ್ಲಿ ಪೂರ್ವದ ಮಹಾನುಭಾವರು ಬರೆದಿಟ್ಟಿರುವ ಗ್ರಂಥಗಳೇ ಸಾಕ್ಷಿಗಳಾಗಿವೆ. ಆ ಮಹನೀಯರು ತಮ್ಮ ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಅತ್ಯದ್ಭುತ ವಿಷಯಗಳನ್ನು ಪರಿಶೀಲಿಸಿದರೆ ಅವರಲ್ಲಿ ಧರ್ಮಶ್ರದ್ಧೆಯೂ, ಸಿದ್ಧಾಂತನೈಪುಣ್ಯವೂ, ಗುರುದೈವಭಕ್ತಿಯೂ ಅನ್ಯಾದೃಶವಾಗಿದ್ದವೆಂದು ಕಂಡುಬರುತ್ತದೆ. ಈ ರೀತಿಯಾಗಿ ಲೋಕವಿಖ್ಯಾತರಾಗಿ ಹೋದ ಆ ಮಹನೀಯರ ವಂಶದಲ್ಲಿ ಈಗ ಅನಾಮಧೇಯರು ಜನಿಸಿ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳದೆ ಹಾಗೂ ಮತಧರ್ಮಗಳನ್ನು ತಿಳಿಯದೆ ತಮ್ಮ ವಂಶದ ಕೀರ್ತಿಗೆ ಕಳಂಕವನ್ನು ತರಹತ್ತಿರುವದನ್ನು ನೋಡಿದರೆ ಪರಮ ವ್ಯಸನವೆನಿಸುತ್ತದೆ. ಎಷ್ಟೋ ಗ್ರಾಮಗಳ ಮಠಾಧಿಕಾರಿಗಳಿಗೆ ತಮ್ಮ ಮತಸಿದ್ಧಾಂತಜ್ಞಾನವೊತ್ತಟ್ಟಿಗಿರಲಿ, ಸರಿಯಾಗಿ ಓದುಬರೆಯಲು ಸಹ ಬರುವದಿಲ್ಲ. ಈ ತರಹದ ಜನರು ಹುಂಬರಿಗಿಂತಲೂ ಹುಂಬರಾಗಿ ತಿರುಗುತ್ತಿರುವುದರಿಂದ ಶಿಷ್ಯರಲ್ಲಿದ್ದ ಭಕ್ತಿಯು ದಿನೇದಿನೇ ಹ್ರಾಸವಾಗುತ್ತ ನಡೆದಿರುವುದು. ಈ ದುಃಸ್ಥಿತಿಗೆ ಮಠಾಧಿಕಾರಿಗಳೇ ಕಾರಣರಲ್ಲದೆ ಮತ್ತಾರೂ ಕಾರಣರಲ್ಲವೆಂದು ಹೇಳಬೇಕಾಗಿದೆ. ~~ಈ ತರಹದ ಗುರುಗಳನ್ನು ಪ್ರತ್ಯಕ್ಷವಾಗಿ ಕಂಡು ಒಬ್ಬ ಕವಿಯು ಈ ರೀತಿಯಾಗಿ ನುಡಿದಿದ್ದಾನೆ.~~

~~ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।~~
~~ದುರ್ಲಭೋಽಯಂ ಗುರುರ್ಲೋಕೇ ಶಿಷ್ಯಚಿತ್ತಾಪಹಾರಕಃ ॥~~

~~ಈ ಶ್ಲೋಕದ ಅಭಿಪ್ರಾಯವೇನೆಂದರೆ— ಲೋಕದಲ್ಲಿ ಶಿಷ್ಯರ ದ್ರವ್ಯವನ್ನು ಹರಣಮಾಡುವ ಗುರುಗಳೇ ಹೆಚ್ಚಾಗಿದ್ದಾರೆ. ಆದರೆ ಶಿಷ್ಯರ ಅಜ್ಞಾನಾಂಧಕಾರವನ್ನು ನಾಶಗೊಳಿಸುವ ಗುರುವು ಒಬ್ಬನಾದರೂ ದೊರೆಯುವುದೇ ದುರ್ಲಭವಾಗಿದೆ.~~

~~ಈ ವಿಷಯವನ್ನೇ ಮುಂದುವರಿಸಿ~~ ಸದ್ಯಃ ಅನೇಕರು ಗುರುಗಳಲ್ಲಿ ಭಕ್ತಿಶೂನ್ಯರಾಗಿದ್ದಾರೆ. ಕಾಲಮಹಿಮೆಯಿಂದಂತೂ ಬರಬರುತ್ತ ಜನಗಳಿಗೆ ಗುರುಗಳ ವಿಷಯದಲ್ಲಿ ಭಕ್ತಿಯು ಕಡಿಮೆಯಾಗಹತ್ತಿರುವುದು. ಇಂಥ ವಿಷಮಸಮಯದಲ್ಲಿ ಗುರುವರ್ಗದ ಮಠಾಧಿಕಾರಿಗಳು ಸಿದ್ಧಾಂತಶಾಸ್ತ್ರಾಭ್ಯಾಸದಿಂದಲೂ, ಶಿವಯೋಗಾಭ್ಯಾಸದಿಂದಲೂ, ಸದಾಚರಣೆಯಿಂದಲೂ ವರ್ತಿಸಿ ಧರ್ಮವಿಮುಖರಾಗುತ್ತಿದ್ದ ಶಿಷ್ಯರನ್ನು ಸನ್ಮಾರ್ಗಾವಲಂಬಿಗಳನ್ನಾಗಿ ಮಾಡುತ್ತ ವೀರಶೈವಮತದ ಗೌರವವನ್ನು ಕಾಪಾಡಬೇಕೆಂಬುವುದೇ ನಮ್ಮ ಕೋರಿಕೆಯಾಗಿದೆ. ಪೂರ್ವದ ಭಕ್ತರು, ಗುರುಗಳು ಹೇಗಿದ್ದರೂ ಅವರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರು. ಈಗಿನ ಭಕ್ತರು ಹಾಗಲ್ಲ, ಗುರುಗಳ ಸ್ವಭಾವವನ್ನೂ, ಅವರ ಸದಾಚಾರಶೀಲತೆಯನ್ನೂ, ಅವರ ವಿದ್ವತ್ತೆಯನ್ನೂ ಕೂಲಂಕಷವಾಗಿ ಶೋಧಿಸುತ್ತಾರೆ. ಇದು ಯೋಗ್ಯವೆಂದೇ ಹೇಳಬೇಕಾಗುತ್ತದೆ. ಆದುದರಿಂದ ಗುರುವರ್ಗದವರು ಜಾಗರೂಕರಾಗಿ ತಮ್ಮ ಮಕ್ಕಳುಗಳಿಗೆ ಸಂಸ್ಕೃತಾಭ್ಯಾಸವನ್ನು ಮಾಡಿಸಿ ಅವರನ್ನು ಸದಾಚಾರಶೀಲರಾಗುವಂತೆ ಮಾಡುವ ಕಾರ್ಯದಲ್ಲಿ ತೊಡಗಬೇಕೆಂದು ಕೋರುತ್ತೇವೆ. ಇಲ್ಲದಿದ್ದರೆ ಜಾತಿಕುಲಹೀನರಾದ ಸಂಕರಜಾತಿಯವರ ಬೋಧೆಯಿಂದ ತಮ್ಮ ಗೌರವವನ್ನು ಇನ್ನೂ ಹೆಚ್ಚಾಗಿ ಕಳೆದುಕೊಳ್ಳುವ ಪ್ರಸಂಗವು ಬರಬಹುದು. ಮಾಹೇಶ್ವರವಟುಗಳ ಸುಧಾರಣೆಗಾಗಿ ಅಲ್ಲಲ್ಲಿ ಅನೇಕ ಸಂಸ್ಕೃತವಿದ್ಯಾಲಯಗಳು ಧರ್ಮಾತ್ಮರಿಂದ ಸ್ಥಾಪಿಸಲ್ಪಟ್ಟಿವೆ. ಭಕ್ತಾದಿಗಳು ಇವರ ಸುಧಾರಣೆಗಾಗಿ ಇಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದರೂ ಇವರು ಇನ್ನೂ ಎಚ್ಚರಾಗದಿರುವುದು ಇವರ ದುರದೃಷ್ಟವೆಂದೇ ಹೇಳಬೇಕಾಗಿದೆ. ಆದುದರಿಂದ ಗುರುವರ್ಗದ ಮಠಾಧಿಕಾರಿಗಳು ಇನ್ನುಮೇಲಾದರೂ ಎಚ್ಚತ್ತು ವಿದ್ವಾಂಸರಾಗಿ ತಮ್ಮ ಕರ್ತವ್ಯವನ್ನು ಸಾಂಗವಾಗಿ ನೆರವೇರಿಸುತ್ತ ವೀರಶೈವ ಮತೋದ್ಧಾರಕಾರ್ಯದಲ್ಲಿ ನಿರತರಾಗಬೇಕೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

1931-32 ನೇ ವರ್ಷದಲ್ಲಿ ಕೋಲಾರದ ಚಿನ್ನದಗಣಿಗಳಿಂದ 12,53,542 ರೂಪಾಯಿಗಳ ರಾಜಾದಾಯವು ಮೈಸೂರು ಸರಕಾರಕ್ಕೆ ಬಂದಿರುತ್ತದೆ.

ಮೈಸೂರು ಸರ್ಕಾರದವರು 1933 ನೇ ಇಸವಿಯ ಆಗಾಯಿತು ಮಿಡಲ್ ಸ್ಕೂಲ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಚಿತ್ರದುರ್ಗ ಡಿ॥ ಹೊಸದುರ್ಗವನ್ನು ಒಂದು ಹೊಸ ಸೆಂಟರನ್ನಾಗಿ ಮಾಡಿರುತ್ತಾರೆ.

ಬೆಂಗಳೂರು ಡಿ॥ ಪೋಲೀಸ್ ಸೂಪರಿಂಟೆಂಡೆಂಟರಾದ ಮ॥ ರಣಜೋಧ್‌ಸಿಂಗ್‌ರವರ ಕಾರ್ಯದಕ್ಷತೆಯನ್ನು ಮೆಚ್ಚಿ ವೈಸರಾಯರು ಅವರಿಗೆ 'ಪೋಲೀಸ್ ಮೆಡಲ್' ಎಂಬ ಬಂಗಾರದ ಪದಕವನ್ನು ದಯಪಾಲಿಸಿರುತ್ತಾರೆ.

ಹೊಸಕೋಟೆಯಲ್ಲಿ ಕಳ್ಳತನದಿಂದ ಸಾರಾಯಿಯನ್ನು ತಯಾರಿಸುತ್ತಿದ್ದ ರಹೀಂಬೇಗ್ ಎಂಬವನಿಗೆ ಬೆಂಗಳೂರು ಎರಡನೆಯ ತರಗತಿಯ ಮ್ಯಾಜಿಸ್ಟ್ರೇಟರು ಎರಡು ತಿಂಗಳ ಕಠಿಣಸಜೆ ಮತ್ತು 75 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು.

ಮಾನನಷ್ಟದ ಮೊಕದ್ದಮೆಯಲ್ಲಿ ಕೊಡಬೇಕಾಗಿದ್ದ 300 ರೂ. ಗಳ ಜುಲ್ಮಾನೆಯನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಮ॥ ರಾ॥ ವಿ. ಎಸ್. ಸಂಜೀವರಾಯರು ನವೆಂಬರ್ 28 ನೆಯ ತಾರೀಖಿನ ಮಧ್ಯಾಹ್ನ ಬೆಂಗಳೂರು ಸಿಟಿ ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟರು.

ಮೈಸೂರು ಸರ್ಕಾರದವರು ಈ ಕೆಳಗೆ ಕಂಡ ದೊಡ್ಡ ಮನುಷ್ಯರನ್ನು ಮೈಸೂರು ನ್ಯಾಯವಿಧಾಯಕ ಸಭೆಯ ಅಧಿಕಾರ ಸದಸ್ಯರನ್ನಾಗಿ ನೇಮಕಮಾಡಿರುತ್ತಾರೆ. 1. ಮಿ॥ ಎಸ್. ಅಬ್ದುಲ್ ವಾಜಿದ್. 2. ಮಿ॥ ಎಚ್. ವಿ. ರಾಮಸ್ವಾಮಿ. 3. ಡಾ॥ ಎಲ್. ಸಿ. ಕೋಲ್ಮನ್ ಮತ್ತು ಮಿ॥ ಎ. ವಿ. ರಾಮನಾಥನ್.

ಕಳೆದ ನವೆಂಬರ್ 30 ನೇ ತಾರೀಖಿನ ದಿವಸ ಬೆಳಗಿ 3 ಜನ ಪಠಾಣರು ಲಕ್ಷ್ಮೀಪುರದಲ್ಲಿ ಕಂಟ್ರಾಕ್ಟರ್ ಮ॥ ರಾ॥ ಮುನಿವೆಂಕಟಪ್ಪನವರ ಬಂಗಲೆಯ ಎದುರುಮನೆಯಲ್ಲಿ ವಾಸವಾಗಿರುವ ಚನ್ನಮ್ಮನೆಂಬವಳನ್ನು ಹೊಡೆದು ದರದರನೆ ಎಳೆದುಕೊಂಡು ಹೋಗುತ್ತಿದ್ದರೆಂದೂ, ಈ ವರ್ತಮಾನವನ್ನು ತಿಳಿದು ಪೋಲೀಸರು ಸಕಾಲದಲ್ಲಿ ಅಲ್ಲಿಗೆ ಬಂದು ಆ ಹೆಂಗಸನ್ನು ಬಿಡಿಸಿ ವಿಚಾರಣೆ ನಡೆಸುತ್ತಿರುವರೆಂದೂ ತಿಳಿದುಬಂದಿದೆ.

ಕಳೆದ ನವೆಂಬರ್ 29 ನೇ ತಾರೀಖಿನ ಬೆಳಗ್ಗೆ ಬೆಂಗಳೂರು ಹೊಸತರಗುಪೇಟೆಯಲ್ಲಿರುವ ಕಂಬಿ ರೇವಪ್ಪ ಶಿವಪ್ಪನವರ ಛತ್ರದ ಕಾರ್ಖಾನೆಯಲ್ಲಿ ಮ॥ ರಾ॥ ಕಂಬಿ ರೇವಪ್ಪನವರ ಎರಡನೆಯ ಕುಮಾರರಾದ ಮಿ॥ ಕೆ. ಆರ್. ಸಿದ್ಧರಾಮಪ್ಪನವರು ಕೆಲಸಗಾರರು ಇಲ್ಲದ ಸಮಯದಲ್ಲಿ ಯಂತ್ರವನ್ನು ನೋಡುತ್ತಾ ನಿಂತಿರಲು ಅವರು ಉಟ್ಟಿದ್ದ ಪಂಚೆಯು ಎಲೆಕ್ಟ್ರಿಕ್ ಡೈನಮೋವಿನ ಬೆಲ್ಟಿಗೆ ಸಿಕ್ಕಿ ಪಾಪ್ಪಿನಿಂದ ಬಲವಾದ ಪೆಟ್ಟು ಬಿದ್ದು ತತ್‌ಕ್ಷಣವೇ ಮೃತಪಟ್ಟರೆಂದು ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ 68/88 ನೇ ಫೀಲ್ಡ್ ಬ್ಯಾಟರಿ ಸೈನ್ಯದ ಭೂಲ್‌ಸಿಂಗ್ ಎಂಬ ಸಿಪಾಯಿಯು, ಮೇಲಿನ ಅಧಿಕಾರಿಗಳಿಗೆ ತನ್ನ ವಿಷಯದಲ್ಲಿ ಚಾಡಿಹೇಳಿದನೆಂಬ ಅನುಮಾನದಮೇಲೆ ಮರ್ದಾನ್‌ಸಿಂಗ್ ಎಂಬ ಮತ್ತೊಬ್ಬ ಸಿಪಾಯಿಯನ್ನು ಹೊಡೆದುಕೊಂದನು. ಮರ್ದಾನ್‌ಸಿಂಗನನ್ನು ರಕ್ಷಿಸಲು ಹೋದ ಡರ್ಶ್ಯಾನ್‌ಸಿಂಗ್ ಎಂಬ ಮತ್ತೊಬ್ಬ ಸಿಪಾಯಿಗೂ ಬಲವಾದ ಪೆಟ್ಟುಬಿದ್ದು ಆಸ್ಪತ್ರೆಯಲ್ಲಿ ಅವನೂ ಮೃತಪಟ್ಟನು. ಮಿಲಿಟರಿ ಅಧಿಕಾರಿಗಳು ಭೂಲ್‌ಸಿಂಗನನ್ನು ದಸ್ತಗಿರಿಮಾಡಿ ಸಿವಿಲ್ ವಿಚಾರಣೆಗೆ ಒಪ್ಪಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಸತ್ಯಾಗ್ರಹಸಮರವಾರ್ತೆ.

ನವೆಂಬರ್ 27 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು, ಜಾಕಬ್ ಸರ್ಕಲ್ಲಿನಲ್ಲಿ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಲು ಪ್ರಯತ್ನಿಸಿದ 30 ಜನ ಸ್ವಯಂಸೇವಕರನ್ನೂ, ಗುಟ್ಟಾಗಿ ಕಾಂಗ್ರೆಸ್ ಕೆಲಸಗಳನ್ನು ನಡೆಯಿಸುತ್ತಿರುವರೆಂಬ ಕಾರಣದ ಮೇಲೆ ಇಬ್ಬರು ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಅಲಹಾಬಾದ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು, ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರೂ ಬಾಬು ಪುರುಷೋತ್ತಮದಾಸರವರ ಕಾರ್ಯದರ್ಶಿಗಳೂ ಆದ ಶ್ರೀ॥ ಗೋಪೀನಾಥಸಿಂಗರಿಗೆ 6 ಗಂಟೆಗಳೊಳಗಾಗಿ ಅಲಹಾಬಾದನ್ನು ಬಿಟ್ಟು ಹೊರಡಬೇಕೆಂದೂ, ಒಂದುತಿಂಗಳವರೆಗೆ ಪುನಃ ಅಲಹಾಬಾದನ್ನು ಪ್ರವೇಶಿಸಕೂಡದೆಂದೂ ಅಪ್ಪಣೆಮಾಡಿರುತ್ತಾರೆ.

ಲಾಲಾಲಜಪತರಾಯರ ದಿನಾಚರಣೆಯ ದಿವಸ ದಸ್ತಗಿರಿಮಾಡಲ್ಪಟ್ಟ ಶ್ರೀ॥ ಪುರುಷೋತ್ತಮದಾಸ್ ಟಾಂಡನ್‌ರವರಮೇಲೆ ಅಲಹಾಬಾದ್ ಪೋಲೀಸರು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ ಮತ್ತು ಪೋಲೀಸ್ ಆಕ್ಟಿನ ಪ್ರಕಾರ ಮೊಕದ್ದಮೆಯನ್ನು ಹೂಡಿರುತ್ತಾರೆ.

ಅಲಹಾಬಾದಿನ ಅಖಿಲಭಾರತ ಚರಕಾಸಂಘದ ಖಾದೀಭಂಡಾರದಲ್ಲಿ ಕಾನೂನು ಭಂಗದ ಚಳವಳಿಗೆ ಸಂಬಂಧಪಟ್ಟ ಹಸ್ತಪತ್ರಿಕೆಗಳಿರುವವೆಂಬ ಸಂಶಯದ ಮೇಲೆ ಸ್ಥಳೀಯ ಪೋಲೀಸರು ನವೆಂಬರ್ 27 ನೇ ತಾರೀಖಿನ ದಿವಸ ಭಂಡಾರವನ್ನು ಬಹಳ ಹೊತ್ತಿನವರೆಗೆ ಶೋಧಿಸಿದರು. ಆದರೆ ಚಳವಳಿಗೆ ಸಂಬಂಧಪಟ್ಟ ಕಾಗದಪತ್ರಗಳಾವುವೂ ದೊರೆಯಲಿಲ್ಲ. ಮಾರಾಟಕ್ಕಾಗಿ ಇರಿಸಿದ್ದ 132 ರಾಷ್ಟ್ರೀಯ ಧ್ವಜಗಳನ್ನು ಮಾತ್ರ ಪೋಲೀಸರು ತೆಗೆದುಕೊಂಡು ಹೋದರು.

ಗಾಂಧೀ ಆಶ್ರಮದ ಪೂರ್ವನಿವಾಸಿಗಳಾಗಿದ್ದ ಶ್ರೀ ಶಿವಲಾಲ ಮೋಹನಲಾಲರವರು ಅಹಮದಾಬಾದಿನಲ್ಲಿ ಮೋಟಾರ್ ಬಸ್ಸಿನಿಂದ ಇಳಿದ ಕೂಡಲೇ ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟರು. ಅವರಲ್ಲಿದ್ದ ಒಂದು ಚೀಲದಲ್ಲಿ ಸರ್ಕಾರದ ಆಜ್ಞೆಗೆ ವಿರುದ್ಧವಾಗಿ ಪ್ರಕಟಿಸಲ್ಪಟ್ಟಿದ್ದ ಗಾಂಧಿಯವರ ನವಜೀವನದ 2000 ಪ್ರತಿಗಳಿದ್ದವು.

ಜಮೆಯತ್ ಷಹಬಾಜ್ ನವಜವಾನ್ ಇಸ್ಲಾಂ ಪಂಜಾಬ್ ಸಭೆಯ ಮಾಜೀ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕರೀಂರವರು ಕೆಂಪು ಪಠಾಣರ ಚಳವಳಿಯ ಸಂಬಂಧವಾಗಿ ಲಾಹೋರಿನಲ್ಲಿ ದಸ್ತಗಿರಿಮಾಡಲ್ಪಟ್ಟರು.

ಕಳೆದ ಜುಲೈ ತಿಂಗಳಲ್ಲಿ ನಡೆದ ಮಹಾರಾಷ್ಟ್ರ ಪ್ರಾಂತಿಕ ಸಮ್ಮೇಳನದ ಸಂಬಂಧದಲ್ಲಿ ಶಿಕ್ಷೆಗ ಗುರಿಯಾಗಿದ್ದ 47 ಜನರನ್ನು ಬಿಡುಗಡೆ ಮಾಡಬೇಕೆಂಬುದಾಗಿ ಠಾಣೆಯ ಸೆಷನ್ಸ್ ಜಡ್ಜರವರು ಹೈಕೋರ್ಟಿಗೆ ಮಾಡಿದ್ದ ಶಿಫಾರಸು ತಿರಸ್ಕರಿಸಲ್ಪಟ್ಟು ಅಪರಾಧಿಗಳಿಗೆ ವಿಧಿಸಲ್ಪಟ್ಟಿದ್ದ ಆರಾರು ತಿಂಗಳ ಕಠಿಣ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು.

ಹಿಂದೂಸ್ಥಾನೀ ಸೇವಾದಳದ ಪ್ರಮುಖ ಕಾರ್ಯಕರ್ತರಾದ ಮಿಸೆಸ್ ಮಣೀಕ್‌ಬೆನ್ ಮೆಹತಾರವರು ಡಿಸೆಂಬರ್ 1 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಸದ್ಯಃ ಲಂಡನ್ನಿನಲ್ಲಿರುವ ಪಂಡಿತ ಕೃಷ್ಣಸ್ವಾಮಿಯೆಂಬ ಮದ್ರಾಸಿನ ತರುಣಜ್ಯೋತಿಷ್ಕರೊಬ್ಬರು ಈ ಕೆಳಗೆ ಕಂಡ ಕೆಲವು ಭವಿಷ್ಯಗಳನ್ನು ನುಡಿದಿದ್ದಾರೆ. 1. ಗಾಂಧಿಯವರು ಇನ್ನು ಒಂದು ವರ್ಷಕ್ಕಿಂತಲೂ ಹೆಚ್ಚಾಗಿ ಜೀವಿಸುವುದಿಲ್ಲ. 2. ಇಂಗ್ಲೆಂಡಿನ ರಾಷ್ಟ್ರೀಯ ಸರಕಾರವು 6 ತಿಂಗಳೊಳಗಾಗಿ ಮುರಿದುಬೀಳುವದು. 3. ಜಪಾನಿನವರು ಮೂರು ತಿಂಗಳೊಳಗಾಗಿ 'ಜನಾಂಗಸಂಯೋಜನಕೂಟ'ದ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವರು.

ವರ್ತಮಾನಸಂಗ್ರಹ

3 ನೆಯ ದುಂಡುಮೇಜಿನಪರಿಷತ್ತು ಸೇಫ್‌ಗಾರ್ಡ್‌ಗಳ ವಿಷಯದಲ್ಲಿ ಮುರಿದುಬೀಳುವದೆಂದು ಫ್ರೀಪ್ರೆಸ್ ಸ್ಪೆಷಲ್ ಬಾತ್ಮೀದಾರರು ಸೂಚಿಸಿದ್ದಾರೆ.

ಅಲಹಾಬಾದ್ ಒಪ್ಪಂದವನ್ನು ಚರ್ಚಿಸಿ ಅಂಗೀಕರಿಸುವದಕ್ಕಾಗಿ ಮುಸ್ಲಿಂ ಸರ್ವಪಕ್ಷಗಳ ಸಮ್ಮೇಳನವು ಇದೇ ಡಿಸೆಂಬರು 10 ಮತ್ತು 11 ನೇ ತಾರೀಖುಗಳಲ್ಲಿ ಲಕ್ನೋದಲ್ಲಿ ಸೇರುವುದು.

ಡಿಸೆಂಬರ್ 1 ನೆಯ ತಾರೀಖಿನ ದಿವಸ ಎಂಪೈರ್ ಪಾರ್ಲಿಮೆಂಟರಿ ಅಸೋಸಿಯೇಷನ್ನಿನವರು ಲಾರ್ಡ್ ಸಾಂಕೆಯವರ ಅಧ್ಯಕ್ಷತೆಯಲ್ಲಿ ದುಂಡುಮೇಜಿನ ಪರಿಷತ್ತಿನ ಸದಸ್ಯರನ್ನು ಸತ್ಕರಿಸಿದರು.

ಹೈದರಾಬಾದಿ (ಸಿಂಧ್) ನಲ್ಲಿ ಸಿ. ಐ. ಡಿ. ಇನ್ಸ್‌ಪೆಕ್ಟರಂತೆ ವೇಷಧರಿಸಿ ಲೈಸೆನ್ಸಿಲ್ಲದೆ ಪಿಸ್ತೂಲನ್ನು ಹೊಂದಿದ್ದ ಒಬ್ಬ ಆಂಗ್ಲೋಇಂಡಿಯನ್ ಯುವಕನನ್ನು ಪೋಲೀಸರು ದಸ್ತಗಿರಿಮಾಡಿರುತ್ತಾರೆ.

1933 ನೇ ಇಸವಿಯ ಆದಿಭಾಗದಲ್ಲಿ ಇಂಗ್ಲೆಂಡಿಗೂ ಇಂಡಿಯಾಕ್ಕೂ ಟೆಲಿಫೋನ್ ಪ್ರಾರಂಭಿಸಲ್ಪಡುವುದೆಂದೂ, ಆಗಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡಲಾಗುತ್ತಿದೆಯೆಂದೂ ಸರ್ ಹೋರರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಹೋಗಿರುವ ಪ್ರತಿನಿಧಿಗಳಲ್ಲಿ ಅನೇಕರು ಡಿಸೆಂಬರ್ 29 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಇಂಡಿಯಾಕ್ಕೆ ಹೊರಡಲು ಹಡಗಿನಲ್ಲಿ ತಮ್ಮ ಜಾಗಗಳನ್ನು ರಿಜರ್ವ್‌ಮಾಡಿಸಿರುತ್ತಾರೆ.

'ಅಮೃತ ಬಜಾರ್' ಪತ್ರಿಕೆಯ ಸಂಪಾದಕರಾದ ಶ್ರೀ॥ ತುಷಾರಕಾಂತಿ ಘೋಷ್ ಮತ್ತು ಪ್ರಿಂಟರಾದ ಶ್ರೀ॥ ತರೀತಿಕಾಂತಿ ಬಿಸ್ವಾಸ್ ಎಂಬವರು ಕೋರ್ಟನ್ನು ಅಲಕ್ಷ್ಯವಾಗಿ ಕಂಡರೆಂಬ ಅಪಾದನೆಯಮೇಲೆ 500 ರೂ ಗಳ ಜುಲ್ಮಾನೆಗೆ ಗುರಿಯಾದರು.

ಆರ್ಯಸಮಾಜದ ವಾರ್ಷಿಕೋತ್ಸವಕ್ಕಾಗಿ ಲಾಹೋರಿಗೆ ಬಂದಿದ್ದ ಹೊಸಿಯಾರ್‌ಪುರದ ರಾಯ್ ಬಹದ್ದೂರ್ ಹರಪ್ರಸಾದ್‌ರವರ ರಿವಾಲ್ವರನ್ನು ಯಾರೋ ಬಹುವಿಚಿತ್ರ ರೀತಿಯಲ್ಲಿ ಅಪಹರಿಸಿರುವದರಿಂದ ಪೋಲೀಸರು ತನಿಖೆಮಾಡುತ್ತಿರುವರು.

ಬರ್ಲಿಂಟಿನ ರೈಲ್ವೆಬೋರ್ಡಿನವರು ಡಿಸೆಂಬರು 31 ನೇ ತಾರೀಖಿನಿಂದ ರೈಲ್ವೆ ಕೆಲಸಗಾರರ ಸಂಬಳದಲ್ಲಿ ಶೇಕಡಾ 10 ರಷ್ಟನ್ನು ಕಡಿಮೆಮಾಡಬೇಕೆಂದು ತೀರ್ಮಾನಿಸಿರುತ್ತಾರೆ. ಇದರಿಂದ ಕೆಲಸಗಾರರು ಕ್ರಿಸ್‌ಮಸ್ ಕಾಲದಲ್ಲಿ ಮುಷ್ಕರ ಹಿಡಿಯುವರೆಂದು ತಿಳಿದುಬಂದಿದೆ.

ಕ್ರಾಂತಿಕಾರರಿಗೆ ಆಶ್ರಯವನ್ನು ಕೊಟ್ಟಿದ್ದರೆಂಬ ಅಪಾದನೆಯ ಮೇಲೆ ಮಿಡ್ನಾಪುರ ಜಿಲ್ಲೆಗೆ ಸೇರಿದ ನಂದೀಗ್ರಾಮದ ಪೋಲೀಸ್ ಸ್ಟೇಷನ್ನಿನ ಸುತ್ತಮುತ್ತಲಿರುವ 9 ಹಳ್ಳಿಗಳ ಮೇಲೆ ಬಂಗಾಳಾ ಸರ್ಕಾರದವರು 2000 ರೂಪಾಯಿಗಳ ದಂಡವನ್ನು ಹಾಕಿರುತ್ತಾರೆ.

ಮೊನ್ನೆ ಮೊನ್ನೆ ಮುಂಬಯಿಯಲ್ಲಿ ನಡೆದ ಭಯಂಕರ ಹಿಂದೂ ಮುಸಲ್ಮಾನರ ದೊಂಬಿಯಲ್ಲಿ ಕೊಲೆಯ ಅಪಾದನೆಯಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ಗಫೂರ್ ನವಾಬ್‌ಬೇಗ ಎಂಬ ಮುಸಲ್ಮಾನನಿಗೆ ಈ ತಿಂಗಳು 1 ನೆಯ ತಾರೀಖಿನ ದಿವಸ ಮರಣದಂಡನೆಯು ವಿಧಿಸಲ್ಪಟ್ಟಿತು.

ಶ್ರೀ ಜಗದ್ಗುರುಗಳವರ ಆಗಮನ,

ಚಿಕ್ಕಬಳ್ಳಾಪುರ.

ಶ್ರೀ ರಂಭಾಪುರೀ ಪೀಠಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸವಾರಿಯು ಇದೇ ತಿಂಗಳು 10 ನೆಯ ತಾರೀಖಿನ ದಿವಸ ಕೋಲಾರ ಡಿ॥ ಚಿಕ್ಕಬಳ್ಳಾಪುರಕ್ಕೆ ದಯಮಾಡಿಸುವುದರಿಂದ ಭಕ್ತಾದಿಗಳು ಆ ಸಮಯಕ್ಕೆ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮಿ॥ ಛೇಂಬರ್‌ಲೀನರು ಮಿ॥ ಜಾರ್ಜ್ ಲ್ಯಾನ್ಸ್‌ಬರಿಯವರ ಪ್ರಶ್ನೆಗೆ ಉತ್ತರವಾಗಿ ಇಂಗ್ಲೆಂಡ್ ಸರ್ಕಾರವು ಅಮೇರಿಕಾ ಸರ್ಕಾರಕ್ಕೆ ಕೊಡಬೇಕಾದ ಸಾಲದಬಗ್ಗೆ ಅಮೇರಿಕೆಗೆ ಭಂಗಾರವು ರಫ್ತಾಗುತ್ತಿರುವದೆಂಬ ವರ್ತಮಾನವು ಸುಳ್ಳೆಂದು ಹೇಳಿದರು.

ನವೆಂಬರು 26 ನೇ ತಾರೀಖಿನ ದಿವಸ ಮಧ್ಯಾಹ್ನ ಲಕ್ನೋದಲ್ಲಿ ಗವರ್ನರರ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿದ್ದ ವಿಶ್ವವಿದ್ಯಾನಿಲಯದ ಕಾನ್ವೊಕೇಷನ್ನಿಗಾಗಿ ಹಾಕಿದ್ದ ಚಪ್ಪರಕ್ಕೆ 25 ನೇ ತಾರೀಖಿನ ರಾತ್ರಿ ಅಕಸ್ಮಾತ್ ಬೆಂಕಿಬಿದ್ದು ಕುರ್ಚಿ ಬೆಂಚುಗಳ ಸಮೇತವಾಗಿ ಚಪ್ಪರವೆಲ್ಲವೂ ಸುಟ್ಟುಹೋಯಿತು.

ಕಳೆದ ಸೆಪ್ಟೆಂಬರು 7 ನೇ ತಾರೀಖಿನ ದಿವಸ ಢಕ್ಕಾ ರೈಲ್ವೇ ಸ್ಟೇಷನ್ನಿನ ಬಳಿ ಒಬ್ಬ ವರ್ತಕನಿಗೆ ಪಿಸ್ತೂಲನ್ನು ತೋರಿಸಿ ಅವನಿಂದ ಹಣವನ್ನು ವಸೂಲುಮಾಡಲು ಪ್ರಯತ್ನಪಟ್ಟರೆಂಬ ಅಪಾದನೆಯಮೇಲೆ ಭೂಪೇಶ ಬ್ಯಾನರ್ಜಿ ಎಂಬ ವಿದ್ಯಾರ್ಥಿಗೆ 10 ವರ್ಷಗಳ ಕಠಿಣ ಶಿಕ್ಷೆಯೂ, ಅವನ ಜೊತೆಯಲ್ಲಿದ್ದ ಇನ್ನಿಬ್ಬರಿಗೆ 7 ವರ್ಷಗಳ ಕಠಿಣಶಿಕ್ಷೆಯೂ ವಿಧಿಸಲ್ಪಟ್ಟಿತು.

ಸರ್ದಾರ್ ಭಗತ್‌ಸಿಂಗರ ಮೊಕದ್ದಮೆಯಲ್ಲಿ ಅಪರಾಧಿಯಾಗಿದ್ದು ನಿರ್ದೋಷಿಯೆಂದು ಬಿಡುಗಡೆ ಹೊಂದಿದ್ದ ದೇಶರಾಜಭಾರತಿ ಎಂಬ ಲಾ ಕಾಲೇಜಿನ ವಿದ್ಯಾರ್ಥಿಯ ಬಳಿಯಲ್ಲಿ ಕ್ರಾಂತಿಕಾರಕ ಪತ್ರಿಕೆಗಳು ದೊರೆತವೆಂಬ ಕಾರಣದಮೇಲೆ ಲಾಹೋರ್ ಮ್ಯಾಜಿಸ್ಟ್ರೇಟರವರು ವಿಚಾರಣೆಮಾಡಿ ಅಪರಾಧಿಗೆ 200 ರೂಪಾಯಿ ಜುಲ್ಮಾನೆ, ತಪ್ಪಿದರೆ 2 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ದುಂಡುಮೇಜಿನ ಪರಿಷತ್ತು.

ಕಳೆದವಾರ ಈ ಪರಿಷತ್ತಿನಲ್ಲಿ ಅನೇಕ ಮಹತ್ವದ ವಿಷಯಗಳು ಚರ್ಚಿಸಲ್ಪಟ್ಟವು. 28 ನೇ ತಾರೀಖಿನ ದಿವಸ ಫೆಡರಲ್ ಸರ್ಕಾರಕ್ಕೆ ಕೊಡಬಹುದಾದ ಅಧಿಕಾರಗಳ ಸಂಬಂಧವಾಗಿ ಚರ್ಚೆಗಳು ನಡೆದವು. ಕಾನೂನು ಮತ್ತು ಸಿಸ್ತಿನ ಆಡಳಿತವನ್ನು ಗವರ್ನರುಗಳೂ, ಗವರ್ನರ್ ಜನರಲ್‌ಗಳೂ ನಿರ್ವಹಿಸತಕ್ಕದ್ದೆಂದು ಎಲ್ಲರೂ ಒಪ್ಪಿಕೊಂಡರು. ಕೆಲವು ಸದಸ್ಯರು ಗವರ್ನರ್ ಜನರಲ್‌ರವರ ಅಧಿಕಾರಗಳನ್ನು ಹೆಚ್ಚಿಸಬೇಕೆಂದು ಸಲಹೆಯನ್ನಿತ್ತರು. ಮತ್ತು ಗವರ್ನರುಗಳು ಯಾವ ಸಂದರ್ಭಗಳಲ್ಲಿ ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಬಹುದೆಂಬ ಬಗ್ಗೆ ಚರ್ಚೆಗಳು ನಡೆದವು.

29 ನೇ ತಾರೀಖಿನ ದಿವಸ ಗವರ್ನರ್ ಜನರಲ್‌ರವರಿಗೆ ಇರಬೇಕಾದ ಅಧಿಕಾರಗಳ ಬಗ್ಗೆ ಚರ್ಚೆಯು ನಡೆಯಿತು. ಗವರ್ನರ್ ಜನರಲ್‌ರವರಿಗೆ ರಕ್ಷಣೆ ಮತ್ತು ಹೊರಆಡಳಿತದ ಜವಾಬ್ದಾರಿಯ ಜೊತೆಗೆ ಈ ಕೆಳಗೆ ಕಂಡ ಏಳು ವಿಷಯಗಳ ಮೇಲೂ ವಿಶೇಷಾಧಿಕಾರವಿರಬೇಕೆಂಬುದು ಬ್ರಿಟಿಷ್ ಪ್ರತಿನಿಧಿಗಳ ಮತವಾಗಿರುವದು. 1. ಶಾಂತಿ ಮತ್ತು ನೆಮ್ಮದಿಯುಭಂಗ ರಕ್ಷಣೆ. 2. ಅಲ್ಪಸಂಖ್ಯಾಕ ಪಂಗಡದವರ ರಕ್ಷಣೆ. 3. ನೌಕರಿಗಳು. 4. ಗವರ್ನರ್ ಜನರಲ್‌ರವರ ಆಡಳಿತಕ್ಕೆ ಒಳಪಟ್ಟ ವಿಷಯಗಳು. 5. ಸಂಸ್ಥಾನಗಳ ಹಕ್ಕುಬಾಧ್ಯತೆಗಳ ರಕ್ಷಣೆ. 6. ವ್ಯಾಪಾರ ಸಂಬಂಧವಾದ ವಿಷಯಗಳು. 7. ಚಕ್ರಾಧಿಪತ್ಯದ ಇತರ ಭಾಗಗಳೊಡನೆ ವ್ಯವಹಾರ. ಇದಲ್ಲದೆ ನ್ಯಾಯವಿಧಾಯಕ ಸಭೆಯನ್ನು ನಿಲ್ಲಿಸುವುದಕ್ಕೂ, ಕಾನೂನು ನಿರ್ಮಾಣಕ್ಕೆ ಒಪ್ಪಿಗೆಯನ್ನು ಕೊಡುವುದಕ್ಕೂ ಗವರ್ನರ್ ಜನರಲ್‌ರವರಿಗೆ ಸಾಕಾದಷ್ಟು ಅಧಿಕಾರವಿರಬೇಕು. ಶಾಸನವು ಮುರಿದುಬೀಳುವ ಸಂಭವವು ಪ್ರಾಪ್ತವಾದರೆ ಅದನ್ನು ನಿವಾರಿಸುವ ಅಧಿಕಾರವೂ ಅವರಲ್ಲಿಯೇ ಇರಬೇಕು.

ಸಂಸ್ಥಾನಗಳ ಅಧಿಕಾರಗಳಿಗೆ ಫೆಡರಲ್ ಸರ್ಕಾರದಿಂದ ಚ್ಯುತಿಬಾರದಂತೆ ಅವಶ್ಯಕವಾದ ನಿಬಂಧನೆಗಳನ್ನು ನಿರ್ಮಾಣಮಾಡಬೇಕೆಂದು ಸಂಸ್ಥಾನಿಕ ಪ್ರತಿನಿಧಿಗಳು ವಾದಿಸಿದರು.

ಫೆಡರಲ್ ಸರ್ಕಾರದಲ್ಲಿ ಕೇಂದ್ರದಲ್ಲಿರಬೇಕಾದ ಜವಾಬ್ದಾರಿ ಮತ್ತು ಬ್ರಿಟಿಷರು ಅಪೇಕ್ಷಿಸುವ ಸೇಫ್ ಗಾರ್ಡುಗಳ ಬಗ್ಗೆಯೂ ಸ್ವಲ್ಪ ಚರ್ಚೆಯು ನಡೆಯಿತು. ಪ್ರಜೆಗಳ ಪರವಾಗಿ ಬೇರೆ ಬೇರೆ ಖಾತೆಗಳಿಗೆ ನೇಮಿಸಲ್ಪಡುವ ಮಂತ್ರಿಗಳ ಅಭಿಪ್ರಾಯವನ್ನು ಮೀರಿ ವೈಸರಾಯರು ವರ್ತಿಸಕೂಡದೆಂದು ಕೆಲವರು ವಾದಿಸಿದರು. ಆದರೂ ಕಡೆಯ ತೀರ್ಮಾನದ ಜವಾಬ್ದಾರಿಯನ್ನು ವೈಸರಾಯರಿಗೇ ವಹಿಸತಕ್ಕದ್ದೆಂದು ಎಲ್ಲರೂ ಒಪ್ಪಿಕೊಂಡರು.

30 ನೇ ತಾರೀಖಿನ ದಿವಸವೂ ಗವರ್ನರುಗಳ ಅಧಿಕಾರದ ವಿಷಯವಾಗಿ ಚರ್ಚೆಯು ನಡೆಯಿತು. ಗವರ್ನರ್ ಜನರಲ್‌ರವರಿಗೆ ಮಂತ್ರಿಗಳ ಸಲಹೆಯನ್ನು ಪಡೆದು ಅಥವಾ ಮಂತ್ರಿಗಳ ಅಭಿಪ್ರಾಯವನ್ನೇ ಪಡೆಯದೆ ಆರ್ಡಿನೆನ್ಸುಗಳನ್ನು ಜಾರಾಯಿಸುವ ಅಧಿಕಾರವಿರಬೇಕೆಂದೂ ಹಣಕಾಸಿನ ವಿಷಯದ ಮೇಲೂ ಗವರ್ನರರ ಅಧಿಕಾರವಿರಬೇಕೆಂದೂ ಲಾರ್ಡ್ ರೀಡಿಂಗ್‌ರವರು ಹೇಳಿದರು.

ಸರ್ ಪಟ್ರೋರವರು ಈಗಿನ ನ್ಯಾಯವಿಧಾಯಕ ಸಭೆಗಳ ರೀತಿನೀತಿಯನ್ನು ಖಂಡಿಸಿ ಫೆಡರಲ್ ಸರ್ಕಾರದ ನ್ಯಾಯವಿಧಾಯಕಸಭೆಯ ಸಾಮಾನ್ಯ ಅಧಿಕಾರಗಳ ಬಗ್ಗೆ ಗವರ್ನರುಗಳು ಪ್ರವೇಶಿಸಕೂಡದೆಂದೂ, ಬ್ರಿಟಿಷರು ಅಪೇಕ್ಷಿಸುವ ಸೇಫ್‌ಗಾರ್ಡುಗಳು ಕೇಂದ್ರಜವಾಬ್ದಾರಿಗೆ ಚ್ಯುತಿಯನ್ನುಂಟುಮಾಡದಿದ್ದರೆ ಮಾತ್ರವೇ ತಾವು ಅದಕ್ಕೆ ಒಪ್ಪುವನೆಂದೂ ಹೇಳಿದರು.

ಡಿಸೆಂಬರ್ 1 ನೇ ತಾರೀಖಿನ ದಿವಸವೂ ಗವರ್ನರ್ ಜನರಲ್‌ರವರ ವಿಶೇಷ ಅಧಿಕಾರಗಳ ಸಂಬಂಧವಾಗಿಯೇ ಚರ್ಚೆಯು ನಡೆಯಿತು. ಮುಸ್ಲಿಂ ಪ್ರತಿನಿಧಿಗಳು ಎಲ್ಲ ವಿಶೇಷ ಅಧಿಕಾರಗಳ ಬಗ್ಗೆಯೂ ತಮ್ಮ ಒಪ್ಪಿಗೆಯನ್ನಿತ್ತರು. ಹಾಗೂ ಪ್ರಾಂತಗಳಿಗೆ ಗವರ್ನರನ್ನು ನೇಮಿಸುವದರಲ್ಲಿ ಭೇದಭಾವವನ್ನು ತೋರಿಸಕೂಡದೆಂದೂ, ಚೆನ್ನಾಗಿ ಅನುಭವಹೊಂದಿದವರನ್ನು ಚುನಾಯಿಸಬೇಕೆಂದೂ, ಸಿವಿಲ್ ಸರ್ವಿಸ್ಸಿನವರನ್ನು ನೇಮಿಸಕೂಡದೆಂದೂ ಪ್ರತಿಪಾದಿಸಿದರು. ಇದಕ್ಕೆ ಎಲ್ಲ ಪ್ರತಿನಿಧಿಗಳೂ ಒಪ್ಪಿದರು. ಶಾಸನವು ಮುರಿದುಬೀಳುವವರೆಗೆ ಗವರ್ನರ್ ಜನರಲ್‌ರವರು ಶಾಸನದ ಪ್ರಕಾರವೇ ವರ್ತಿಸಬೇಕೆಂದೂ, ಶಾಸನವು ಮುರಿದುಬಿದ್ದನಂತರ ಅವರಿಗೆ ಸಂಪೂರ್ಣ ಅಧಿಕಾರವಿರಬೇಕೆಂದೂ ಬ್ರಿಟಿಷ್ ಹಿಂದೂಸ್ಥಾನದ ಪ್ರತಿನಿಧಿಗಳು ಹೇಳಿದರು.

ದಿನಂಪ್ರತಿಯ ಆಡಳಿತಗಳಲ್ಲಿ ವೈಸರಾಯರು ವಿಶೇಷ ಅಧಿಕಾರಗಳನ್ನು ಉಪಯೋಗಿಸಕೂಡದೆಂದು ಲಿಬರಲ್‌ಗಳು ಎಚ್ಚರಿಸಿದರು.

ಕೇಂದ್ರದಲ್ಲಿ ಸಂಪೂರ್ಣ ಜವಾಬ್ದಾರಿಯಿಲ್ಲದೆ ತಾವು ಫೆಡರೇಷನ್ನಿಗೆ ಸೇರುವದಿಲ್ಲವೆಂದು ನರೇಂದ್ರಮಂಡಲದ ಪ್ರತಿನಿಧಿಗಳು ತಿಳುಹಿಸಿದರು. ಸುಧಾರಣೆಗಳನ್ನು ಜಾರಿಗೆ ತಂದನಂತರ ವೈಸರಾಯರಿಗೆ ಸಲಹೆಗಾರರ ಕೂಟವು ಬೇಕಿಲ್ಲವೆಂದು ಮಿ॥ ಜಯಕರ್‌ರವರು ವಾದಿಸಿದರು.

ಸ್ವೀಕಾರ

ತೀರ್ಥಹಳ್ಳಿ ತಾಲೂಕು ಮಳಲಿಮಠದಲ್ಲಿ ಶೈ॥ ಭಾಂಡ್ಯದ ರುದ್ರಪ್ಪಗೌಡರ ಮಕ್ಕಳು ಮ॥ ರಾ॥ ಪುಟ್ಟಸ್ವಾಮೀಗೌಡರು ಶ್ರೀ॥ ಗುರುನಾಗಾರ್ಜುನಸ್ವಾಮಿಯಮೂರ್ತಿಯನ್ನು ಬೆಳ್ಳಿಯಿಂದ ಮನೋಹರವಾಗಿ ನಿರ್ಮಾಣಮಾಡಿಸಿ ಆ ಮೂರ್ತಿಯನ್ನು ಶ್ರೀ॥ ಮಳಲಿಮಠಕ್ಕೆ ಸಮರ್ಪಿಸಿ ತತ್ಸಂಬಂಧವಾದ ಪ್ರಾಣಪ್ರತಿಷ್ಠಾ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ॥ ಮಳಲಿಮಠದ ಪಟ್ಟಾಧ್ಯಕ್ಷ ಗುರುನಾಗಾರ್ಜುನಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂ ಗಳು ವೇ॥ ಬೀರೂರು ಜಿ. ನಂಜುಂಡಾರಾಧ್ಯರವರ ದ್ವಾರಾ ತಲ್ಪಿರುತ್ತವೆ.

ಸೊರಬ ತಾ॥ ಕ್ಯಾಸನೂರುಮಠದಲ್ಲಿ ನೆರವೇರಿದ ಕೃತ್ತಿಕಾಮಹೋತ್ಸವ ಸಮಾರಂಭದಲ್ಲಿ ನಡೆದ ಸಭೆಯಲ್ಲಿ ಸಮರ್ಪಿಸಿದ **1** ರೂ. ಯು ಶ್ರೀ॥ ಪಟ್ಟಾಧ್ಯಕ್ಷ ಗುರುಬಸವಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೆಯ ಪುಟದಿಂದ ಮುಂದುವರಿದುದು.]

ಟ್ಟರೆ, ಒಳ್ಳೇ ವಿದ್ಯಾವಂತರಾದ ಅವರ ಮಕ್ಕಳುಕೂಡ ಬಾಯಿ ಮುಚ್ಚಿಕೊಂಡು ಸುಮ್ಮನಿರುವರು.

ಇದೆಲ್ಲ ಹಳೆಯ ಕಾಲದ ಸಂಗತಿ! ಈಗಿನ ಜನಾರೋಗ್ಯಸ್ಥಿತಿಯೂ, ಸುಶಿಕ್ಷಿತರ ಸನ್ನಿವೇಶಗಳೂ ಬಹಳವಾಗಿ ಬದಲಾಯಿಸಿವೆ. ಕಾಲಕ್ಕೆ ತಕ್ಕಂತೆ ನಡೆದುಕೊಳ್ಳಬೇಕೆಂದರೆ ಅವರು ಕೇಳುವ ಹಾಗಿಲ್ಲ. ಆಪತ್ತು ಬಂದುಬಿಟ್ಟರೆ, ಎಲ್ಲಾ ದೈವಾಧೀನವೆಂದು ವೈರಾಗ್ಯವನ್ನು ಹೇಳುವರು. ಇಂಡಿಯಾ ಸರಕಾರದ ಪಬ್ಲಿಕ್ ಹೆಲ್ತ್ ಕಮಿಶನರವರು ಒಂದು ವಾರ್ಷಿಕ ವರದಿಯಲ್ಲಿ ಸೂಲಗಿತ್ತಿಯರ ವಿಚಾರವಾಗಿ ಬರೆದಿರುವುದೇನೆಂದರೆ, "ಪ್ರಾಯಿಕವಾಗಿ ಇಂಡಿಯಾದೇಶದಲ್ಲಿ ಪ್ರಸವಕ್ಕಾಗಿ ಸೂಲಗಿತ್ತಿಯರೇ ಬರುವರು. ಅವರು ಪ್ರಸವಕಾಲದಲ್ಲಿ ಮಾಡುವ ಕಾರ್ಯಗಳೆಲ್ಲ ಪೂರ್ವಪದ್ಧತಿಯನ್ನು ಅನುಸರಿಸುವುಗಳೇ ಹೊರತು, ಶಾಸ್ತ್ರೀಯವಾದ ತಿಳುವಳಿಕೆಯಿಂದಲ್ಲ. ಇವರೆಲ್ಲರೂ ಅಶಿಕ್ಷಿತರು. ಕೀಳುಜಾತಿಯವರು, ಅಶುಚಿಸ್ವಭಾವದವರು, ಕೊಳೆಬಟ್ಟೆಗಳನ್ನೇ ಉಡುವವರು. ಕೈತುಂಬ ಮಣ್ಣುಬಳೆಗಳನ್ನೂ, ಬೆರಳುಗಳಿಗೆಲ್ಲ ಉಪಯೋಗವಿಲ್ಲದ ಉಂಗುರಗಳನ್ನೂ ಇಟ್ಟಿರುವರು. ಅವುಗಳೊಡನೆಯೇ ಪ್ರಸವಕಾರ್ಯಕ್ಕೆ ಕೈಯಿಕ್ಕುವರು. ಅವರ ಆಯುಧಗಳೆಲ್ಲ, (1) ಹುಕ್ಕಾಕೊಳವಿಯಂತಿರುವ ಒಂದು ಸಣ್ಣ ಕೊಳವೆ, (2) ತುಕ್ಕು ಹಿಡಿದ ಒಂದು ಚಾಕು, (3) ಒಂದು ಹರಳೆಣ್ಣೆಯ ದೀಪ ಇವಿಷ್ಟೇ. ಆ ದೀಪವೇ ಬೆಳಕಿಗೂ, ಮತ್ತು ಅದರೊಳಗಣ ಎಣ್ಣೆಯೇ ಮರ್ಮಸ್ಥಾನಗಳಿಗೆ ಸವರುವುದಕ್ಕೂ ಉಪಯೋಗಿಸಲ್ಪಡುವುದು. ಚಿಂದಿಬಟ್ಟೆ, ಹಾಸಿಗೆಯಲ್ಲಿ ಹಾಸಿದ್ದ ಕೊಳಕು ಬಟ್ಟೆಗಳು, ಹಳೇ ಕಂಬಳಿಯ ತುಂಡುಗಳು, ಒಂದಿಷ್ಟು ಹಗ್ಗ, ಇವೇ ಅವರಿಗೆ ಬೇಕಾದ ಎಲ್ಲಾ ಸಾಮುಗ್ರಿಗಳು. ಇಂಡಿಯಾದ ಉತ್ತರ ಪ್ರಾಂತಗಳಲ್ಲಿ ಸೂಲಗಿತ್ತಿಯ ಕೆಲಸಮಾಡುವವರೆಲ್ಲರೂ ಪ್ರಾಯಿಕವಾಗಿ ಇದೇ ರೀತಿಯಿರುವರು. ದಕ್ಷಿಣ ಇಂಡಿಯಾದಲ್ಲಿ ಸೂಲಗಿತ್ತಿಯ ಕೆಲಸಮಾಡುವ ಹಳ್ಳಿಯ ಹೆಂಗಸರ ವೇಷದಲ್ಲಿಯೂ, ಅವರ ಸಾಮುಗ್ರಿಗಳಲ್ಲಿಯೂ ಸ್ವಲ್ಪ ವ್ಯತ್ಯಾಸವಿದ್ದರೂ ಇರಬಹುದು. ಅಜ್ಞತೆಯಲ್ಲಿಯೂ ಒರಟುಮಾರ್ಗದಲ್ಲಿಯೂ ಇವರಿಬ್ಬರಿಗೂ ವ್ಯತ್ಯಾಸವೇನೂ ಇಲ್ಲ.

ಮದ್ರಾಸ್ ಪ್ರಾಂತದಲ್ಲಿ ಸರ್ಜನ್ ಜನರಲಾಗಿದ್ದ ಕರ್ನಲ್ ಗಿಫರ್ಡ್ ಎಂಬುವರು ಹೇಳಿರುವುದೇನೆಂದರೆ "ಇಂಡಿಯಾದೇಶದಲ್ಲಿ ಸೂಲಗಿತ್ತಿತನವು ಇನ್ನೂ ಬಹಳ ಭಯಂಕರಸ್ಥಿತಿಯಲ್ಲಿಯೇ ಇದೆ. ಬಹಳ ಕೊಳಕು ಸ್ವಭಾವವುಳ್ಳ, ಕೀಳುಜಾತಿಯವರೂ, ಅಶಿಕ್ಷಿತರೂ, ಮೂಢರೂ, ಮೂಢಭಕ್ತಿಯುಳ್ಳವರೂ ಆದ ಸೂಲಗಿತ್ತಿಯರನ್ನೇ ಪ್ರಸವಕಾರ್ಯಕ್ಕಾಗಿ ಕರೆಯುವುದು ಇಲ್ಲಿನ ಪದ್ಧತಿಯಾಗಿದೆ. ಇದರಿಂದ ಅನೇಕ ಕಷ್ಟಗಳೂ, ಅಕಾಲಮರಣಗಳೂ ಸಂಭವಿಸುವುವು. ಗ್ರೈಡಿಮಾರ್ಷನ್ಟ್ ಎಂಬ ಫ್ರೆಂಚ್ ಗ್ರಂಥಕಾರನು 'ಒಬ್ಬ ಹೆಂಗಸಿನ ಜೀವನಚರಿತ್ರೆ' ಎಂಬ ಹೆಸರಿಟ್ಟು ಬರೆದ ಒಂದು ನಾವೆಲಿನಲ್ಲಿ ಒಂದು ಗ್ರಾಮದ ದಾದಿಯರ, ಮತ್ತು ಸೂಲಗಿತ್ತಿಯರ ವಿಚಾರವನ್ನು ಬಹಳ ಚೆನ್ನಾಗಿ ವರ್ಣಿಸಿರುವನು. ಆ ಗ್ರಂಥಕಾರನು ಹೇಳಿರುವುದೇನೆಂದರೆ "ಅಲ್ಲಿನ ವಿಡೋಡೆಂಟು" ಒಂದು ಕರೆಯಲ್ಪಡುವವಳು ಇಂಡಿಯಾದೇಶದ ಗ್ರಾಮಗಳಲ್ಲಿ ಸೂಲಗಿತ್ತಿತನಕ್ಕಾಗಿ ಬರುವ ಆಗಸಗಿತ್ತಿಯರನ್ನೇ ಎಲ್ಲಾ ವಿಷಯದಲ್ಲಿಯೂ ಹೋಲುವಳು. ದಾದಿಯೂ, ನರ್ಸೂ ಅವಳೆ! ಹೆಣವನ್ನು ಕಾವಲುಕಾಯುವವಳೂ ಅವಳೇ. ಪ್ರಸವಕಾರ್ಯವನ್ನು ನೋಡುವುದು, ಶಿಶುವು ಮೊದಲುಮೊದಲು ಅಳುವ ಶಬ್ದವನ್ನು ಗಮನಿಸಿ, ಅದಕ್ಕೆ ಮೊದಲು ಮೈತೊಳೆದು ಸ್ನಾನಮಾಡಿಸುವುದು, ಆ ಮಗುವಿಗೆ ಮೈಮೇಲೆ ಬಟ್ಟೆಯನ್ನು ಹೊದ್ದಿಸುವುದು, ಆ ಮಗುವು ಮರಣಾವಸ್ಥೆಗೆ ಬಂದಾಗ ಅದರ ಕಂಠಧ್ವನಿಯನ್ನು ಕೇಳುವುದು. ಅದರ ಮರಣಾವಸ್ಥೆಯಲ್ಲಿ ಮರಣಸಂಕಟವನ್ನು ನೋಡುವುದು, ಶವ ಮೇಲೆ ಶವಕ್ಕೆ ಬಟ್ಟೆಯನ್ನು ಹೊದ್ದಿಸುವುದು, ಅದನ್ನು ಶ್ಮಶಾನಕ್ಕೆ ಸಾಗಿಸುವುದು, ಇವೆಲ್ಲ ಅವಳ ಕೆಲಸಗಳೇ. ಇದೇ ಕೆಲಸಮಾಡಿರುವ ಅವಳಿಗೆ, ಜನನಮರಣಗಳೆಂಬ ವ್ಯತ್ಯಾಸಗಳನ್ನು ಕುರಿತು ಸ್ವಲ್ಪವಾದರೂ ವ್ಯಾಕುಲವೆಂಬುದೇ ಇಲ್ಲ."

ಸೂಲಗಿತ್ತಿಯರು ಮಾಡುವ ಕೆಲಸಗಳ ವಿಷಯದಲ್ಲಿ ನನಗೆ ಚೆನ್ನಾಗಿ ಅನುಭವವುಂಟು. ಅವುಗಳಲ್ಲಿ ಕೆಲವು ಇಲ್ಲಿ ಹೇಳತೀರದಷ್ಟು ಭಯಂಕರವಾಗಿವೆ. ಆದುದರಿಂದ, ಶಿಶುಕ್ಷೇಮಾಭಿವೃದ್ಧಿ ಸಂಘದವರು, ಈಗ ಸೂಲಗಿತ್ತಿಯರಿಗೆ ಒಳ್ಳೇ ಶಾಸ್ತ್ರೀಯ ಶಿಕ್ಷಣವನ್ನು ಕೊಡುವುದಕ್ಕಾಗಿ ಮಾಡಿರುವ ಏರ್ಪಾಡುಗಳು ಬಹಳ ಪ್ರಶಂಸನೀಯಗಳಾಗಿವೆ. ಈಗ್ಗೆ ಎರಡು ವರ್ಷಗಳಿಗೆ ಹಿಂದೆ ಮಧುರೆಯಲ್ಲಿ ಸೂಲಗಿತ್ತಿ ಕೆಲಸ ಮಾಡುತ್ತಿದ್ದ 90 ಮಂದಿ ಹೆಂಗಸರಿಗೆ ಒಳ್ಳೇ ಶಿಕ್ಷಣವನ್ನು ಕೊಡುವ ಏರ್ಪಾಡನ್ನು ಮಾಡಿದೆನು. ಆರುತಿಂಗಳ ಕಾಲ ಶಿಕ್ಷಣವನ್ನು ಕೊಟ್ಟಮೇಲೆ, ಅವರಿಗೆ ಅದರಲ್ಲಿರುವ ಗುಣಭಾಗವು ಚೆನ್ನಾಗಿ ಕಂಡುಬಂದು, ಅವರೇ ಈ ಪ್ರಯತ್ನವನ್ನು ಪ್ರಶಂಸೆಮಾಡುತ್ತಿದ್ದರು. ಸರಕಾರದವರೂ, ಲೋಕಲ್ ಬೋರ್ಡಿನವರೂ ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಬೇಕು. ಅಲ್ಲಲ್ಲಿ ಶಿಶುಪೋಷಣಾಸಂಸ್ಥೆಗಳೂ, ಅಲ್ಲಲ್ಲಿ ಒಳ್ಳೇ ಹಾಲನ್ನು ಮಾರುವ ದೊಡ್ಡಿಗಳೂ ಏರ್ಪಡಬೇಕು.

ಆದರೆ ಇವೆಲ್ಲವೂ ಕೇವಲ ತಾತ್ಕಾಲಿಕವಾದ ಉಪಶಮನಗಳೇ ಹೊರತು, ಇದರಿಂದ ವ್ಯಾಧಿಗಳನ್ನು ಬೇರೊಂದಿಗೆ ನಿರ್ಮೂಲಮಾಡಿದಂತಾಗುವುದಿಲ್ಲ. ದೇಶದೊಳಗೆಲ್ಲ ಸುಶಿಕ್ಷಿತೆಯರಾದ ಸೂಲಗಿತ್ತಿಯರೇ ಪ್ರಸವಕಾರ್ಯಕ್ಕೆ ಬರುವಂತಾಗಬೇಕು. ಮಗು ಬಾಣಂತಿಯರಲ್ಲಿ ವ್ಯಾಧಿಗಳೇನೂ ಸಮೀಪಿಸದಂತೆ ಮಾಡುವುದಕ್ಕೆ ಇದೇ ಸರಿಯಾದ ಮಾರ್ಗವು. ಸ್ತ್ರೀಯರಿಗೆ ಪ್ರಸವಕಾಲದಲ್ಲಿ ಒಳ್ಳೇ ತಿಳುವಳಿಕೆಯುಳ್ಳ ಸೂಲಗಿತ್ತಿಯರು ದೊರೆಯುವುದಕ್ಕೆ ಅನುಕೂಲವನ್ನು ಕಲ್ಪಿಸಿಕೊಡಬೇಕು. ಗರ್ಭಿಣಿಯರಿಗಾಗಿ ಪ್ರತ್ಯೇಕ ಆಸ್ಪತ್ರೆಗಳನ್ನೂ, ಪ್ರಸವವೈದ್ಯಶಾಲೆಗಳನ್ನೂ, ಶಿಶುಪಾಲನಸ್ಥಳಗಳನ್ನೂ ಏರ್ಪಡಿಸುವುದೇ ಸರ್ವೋತ್ತಮವಾದ ಮಾರ್ಗವೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಇವಕ್ಕೆಲ್ಲ ಹೇರಳವಾದ ಹಣವು ಬೇಕಾದುದರಿಂದ, ದೊಡ್ಡದೊಡ್ಡ ಮ್ಯುನಿಸಿಪಾಲಿಟಿಗಳಲ್ಲಿ ಹೊರತು ಸಾಮಾನ್ಯಸ್ಥಳಗಳಲ್ಲಿ ಸಾಧ್ಯವಿಲ್ಲ. ಅದು ಕಾಲಕ್ರಮದಿಂದ ಸಾಧ್ಯವಾಗಬೇಕು. ಆದುದರಿಂದ ತಕ್ಷಣಕ್ಕೆ ಮಾಡಲಬಹುದಾದ ಕಾರ್ಯವೇನೆಂದರೆ, ಸರಕಾರದವರೂ, ಲೋಕಲ್ ಬೋರ್ಡಿನವರೂ, ಅಲ್ಲಲ್ಲಿ ಸುಶಿಕ್ಷಿತರಾದ ಸೂಲಗಿತ್ತಿಯರನ್ನು ಹೆಚ್ಚಿಸಲು ಯತ್ನಿಸುವುದೊಳ್ಳೆಯದು. ಒಂದೊಂದು ಗ್ರಾಮದಲ್ಲಿಯೂ ಸೂಲಗಿತ್ತಿಯರು ದೊರೆಯುವಂತಾದರೆ, ಶಿಶುಗಳ ವಿಷಯವಾದ ಒಂದು ದೊಡ್ಡ ದೇಶೀಯ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಥಮ ಸೋಪಾನವನ್ನು ಕಟ್ಟಿದಂತಾಗುವುದು.

ಜನಗಳ ಬಡತನ, ಗ್ರಾಮಗಳ ಅನಾರೋಗ್ಯಸ್ಥಿತಿ, ಇವೆರಡೂ ದೇಶೋನ್ನತಿಗೆ ಕಂಟಕಗಳು. ರಾಜ್ಯತಂತ್ರಧುರೀಣರೂ, ಅರ್ಥಶಾಸ್ತ್ರಜ್ಞರೂ ಈ ತೊಡಕನ್ನು ಬಿಡಿಸುವುದಕ್ಕೆ ಯತ್ನಿಸಬೇಕು.

ಮಕ್ಕಳ ವಿಚಾರದಲ್ಲಿ ತಂದೆಗಳ ಕರ್ತವ್ಯ.

ಪ್ರತಿ ಗೃಹಸ್ಥನೂ ತನ್ನ ಕಟುಂಬದ ಶಿಶುಗಳ ಕ್ಷೇಮಾಭಿವೃದ್ಧಿಯನ್ನು ಗಮನಿಸುವುದನ್ನು ತನ್ನ ಸಾಮಾಜಿಕ ಕರ್ತವ್ಯಗಳಲ್ಲಿ ಒಂದನ್ನಾಗಿ ಭಾವಿಸಬೇಕು. ಒಬ್ಬೊಬ್ಬ ತಂದೆಗೂ ತನ್ನ ಸ್ವಂತ ಮಕ್ಕಳ ವಿಷಯದಲ್ಲಿ ಪ್ರಬಲವಾದ ಜವಾಬ್ದಾರಿಯುಂಟು. ಇದನ್ನು ತಿಳಿಯದೆ ಗಂಡಸರು, ಮಕ್ಕಳ ಪೋಷಣೆಯ ಭಾರವನ್ನು ಸಂಪೂರ್ಣವಾಗಿ ಹೆಂಗಸರ ಭಾಗಕ್ಕೆ ಬಿಟ್ಟುಬಿಡುವರು. ಅಲ್ಲದೆ ತಂದೆಗಳು, ತಮ್ಮ ದನಕರುಗಳು, ಹೊಲ, ಗದ್ದೆ, ತೋಟ, ಆಫೀಸು ಕೆಲಸ ಮುಂತಾದುವುಗಳ ವಿಷಯದಲ್ಲಿ ತಾವು ತೋರಿಸುವ ಆಸಕ್ತಿಯಲ್ಲಿ ಅರ್ಧಭಾಗವನ್ನಾದರೂ ತಮ್ಮ ಮಕ್ಕಳ ವಿಷಯದಲ್ಲಿ ತೋರಿಸುವುದಿಲ್ಲ. ದ್ರವ್ಯಾರ್ಜನೆಯೊಂದನ್ನೇ ಪ್ರಧಾನವಾಗಿಟ್ಟುಕೊಂಡು ತಮ್ಮ ಮಂದೆಗಳನ್ನೂ, ಹೊಲಗದ್ದೆಗಳನ್ನೂ ಚೆನ್ನಾಗಿ ಕಾಪಾಡುವುದಕ್ಕೆ ಬೇಕಾದ ಸಲಹೆಗಳನ್ನು ಯಾರು ಹೇಳಿದರೂ, ಪ್ರೀತಿಯಿಂದ ಗಮನಿಸುವರೇ ಹೊರತು, ತಮ್ಮ ರಕ್ತವನ್ನು ಭಾಗವಾಗಿ ಕೊಂಡು ಹುಟ್ಟಿದ ಸ್ವಂತಮಕ್ಕಳನ್ನು ಗಮನಿಸುವುದಿಲ್ಲ. ಅವುಗಳ ಕ್ಷೇಮಲಾಭವನ್ನು ಅಜ್ಞರಾದ ಹೆಂಗಸರ ಭಾಗಕ್ಕೆ ಬಿಟ್ಟುಬಿಡುವರು. ತಮ್ಮ ಮಕ್ಕಳಿಗೆ ಹಣವನ್ನು ಸೇರಿಸಿಡಬೇಕೆಂದು ಯೋಚಿಸುವರೇ ಹೊರತು, ಆ ಮಕ್ಕಳು ಚಿರಾಯುಗಳಾಗಿ, ಒಳ್ಳೇ ನಡತೆಯುಳ್ಳವರಾಗಿರಬೇಕೆಂಬ ವಿಷಯವನ್ನು ಅವರು ಯೋಚಿಸುವ ಹಾಗೆ ತೋರಲಿಲ್ಲ. ಮಕ್ಕಳಿಗೆ ಹಣವನ್ನು ಸಂಪಾದಿಸಿಡುವುದಕ್ಕಿಂತಲೂ ಉತ್ತಮವಾದ ಮತ್ತು ಪ್ರಧಾನವಾದ ಕಾರ್ಯವು ಆ ಮಕ್ಕಳನ್ನು ಆರೋಗ್ಯದೃಢಕಾಯರನ್ನಾಗಿಯೂ, ವಿವೇಕಿಗಳನ್ನಾಗಿಯೂ ಮಾಡುವುದೇ! ಎಷ್ಟೋ ಮಂದಿ ಮಕ್ಕಳು ತಮ್ಮ ತಂದೆಯು ಸಂಪಾದಿಸಿಟ್ಟ ಆಸ್ತಿಯನ್ನೆಲ್ಲಾ ಹಾಳುಮಾಡಿ, ದೇಹಾರೋಗ್ಯವನ್ನೂ ಕೆಡಿಸಿಕೊಂಡು, ಅಕಾಲಮರಣಕ್ಕೆ ಗುರಿಯಾಗುವರು!

ಇನ್ನೂ ಹುಟ್ಟದಿರುವ ಗರ್ಭಶಿಶುಗಳ ಬಾಧ್ಯತೆ.

ಒಂದೊಂದು ಶಿಶುವೂ ಸರಿಯಾದ ಸ್ಥಿತಿಯಲ್ಲಿ ಹುಟ್ಟಬೇಕಾದುದು ನ್ಯಾಯವು. ಆ ಭಾಗದಲ್ಲಿ ಅದಕ್ಕೆ ದೈವಕಲ್ಪಿತವಾದ ಬಾಧ್ಯತೆಯು ಏರ್ಪಟ್ಟಿರುವುದು. ತಮ್ಮ ಸಂತಾನವು ಆರೋಗ್ಯದಿಂದ ಬೆಳೆಯುವಂತೆ ಗಮನಿಸಬೇಕಾದುದು ತಂದೆಯ ಕರ್ತವ್ಯವು. ವೈದಿಕರಾದವರು ಸಂತಾನನಿರೋಧಪ್ರಯತ್ನಕ್ಕಾಗಿ ಈಗ ನಡೆಯುತ್ತಿರುವ ಚಳವಳಕ್ಕಾಗಿ ಎಷ್ಟೋ ಆಕ್ಷೇಪಣೆಗಳನ್ನು ಮಾಡುವರು, ಆದರೆ ಹುಟ್ಟುವ ಶಿಶುವು ಒಳ್ಳೇ ಆರೋಗ್ಯದಿಂದ ಹುಟ್ಟಬೇಕೆಂಬ ವಿಚಾರದಲ್ಲಿ ಅವರಾದರೂ ವಿರೋಧಿಸಲಾರರು. ಈಗ ಹುಟ್ಟುತ್ತಿರುವ ಶಿಶುಗಳಲ್ಲಿ ಯಾವುದೂ ಸರಿಯಾದ ಆರೋಗ್ಯದಲ್ಲಿಲ್ಲವೆಂದೇ ಹೇಳಬಹುದು. ಎಷ್ಟೋ ಮಕ್ಕಳ ಸ್ಥಿತಿಯು ಅತ್ಯಂತ ಶೋಚನೀಯವೂ ಆಗಿದೆ. ಉದಾಹರಣೆಕ್ಕಾಗಿ, ಮೇಹಜಾಡ್ಯಸಂಬಂಧವುಳ್ಳ ಒಬ್ಬ ತಂದೆಗೂ, ಕ್ಷಯರೋಗಸಂಬಂಧವುಳ್ಳ ತಾಯಿಗೂ ಹುಟ್ಟಿದ ಮಗುವಿನ ದೇಹಾರೋಗ್ಯವು ಹೇಗಿರಬಹುದೆಂಬುದನ್ನು ಊಹಿಸಿನೋಡಿರಿ! ಅದು ಅಲ್ಪಾಯುಸ್ಸಿನಲ್ಲಿಯೇ ಸಾಯುವುದು ನಿಶ್ಚಯವೇ!

ಒಂದುವೇಳೆ ಬದುಕಿದ್ದರೂ, ಮುಂದಿನ ಸಮಾಜಕ್ಕೇ ಅದರಿಂದ ದೊಡ್ಡ ಹಾನಿಯುಂಟು. ಏಕೆಂದರೆ, ಅದು ತನ್ನಂತೆಯೇ ರೋಗಿಯಾದ ಮತ್ತೊಂದು ಪ್ರಜೆಯನ್ನು ಹುಟ್ಟಿಸುವುದರಿಂದ, ಸಮಾಜಕ್ಕೂ ಅದು ಹಾನಿಕರವೇ. ಕ್ರಿಮಿಶಾಸ್ತ್ರಜ್ಞರು ರೋಗಕ್ರಿಮಿಗಳಮೇಲೆ ಅಪವಾದವನ್ನು ಹೊರಿಸಬಹುದು. ಆದರೆ ಮಾನವವರ್ಗಕ್ಕೆ ಕ್ಷೇಮಚಿಂತಕನು, ರಾಜ್ಯಾಂಗದಮೇಲೆಯೂ, ಸಮಾಜದಮೇಲೆಯೂ ದೋಷವನ್ನು ಹೇಳದೆ ಬಿಡನು. ನಿರಪರಾಧಿಗಳಾದ ಅನೇಕ ಶಿಶುಗಳನ್ನೋ ಹೀಗೆ ಅನಾರೋಗ್ಯಸ್ಥಿತಿಯಲ್ಲಿ ಪ್ರತಿದಿನವೂ ಹುಟ್ಟಿ ವೃಥಾ ಕಷ್ಟಪಡುತ್ತಿರುವುವು. ದರ್ಪ ಲಕ್ಷದಿಂದ ಇಂತಹ ಮಕ್ಕಳನ್ನು ಹುಟ್ಟಿಸುವುದು ತಮಗೆ ಮಹಾಪಾಪವಲ್ಲವೇ ಎಂಬುದನ್ನು ತಂದೆಯಾದವನು ಗಮನಿಸುವುದೂ ಇಲ್ಲ. ನಮ್ಮ ಆಚಾರವ್ಯವಹಾರಗಳಿಗೆಲ್ಲ ಮನುಧರ್ಮಶಾಸ್ತ್ರವನ್ನು ನಾವು ಪ್ರಮಾಣವಾಗಿ ತೆಗೆದುಕೊಳ್ಳುವೆವು. ಆದರೆ, ಮನುಧರ್ಮಶಾಸ್ತ್ರವು ಈ ಸಂತಾನವಿಚಾರದಲ್ಲಿ ಹೇಳುವುದೇನು? "ಮೊಟ್ಟಮೊದಲು ಹುಟ್ಟಿದ ಪುತ್ರನೊಬ್ಬನೇ ಧರ್ಮದಿಂದ ಹುಟ್ಟಿದವನು. ಅವನಿಂದಾಚೆಗೆ ಹುಟ್ಟುವವರೆಲ್ಲರೂ ಕಾಮದಿಂದ ಜನಿಸಿದವರು" ಎಂಬುದು ಶಾಸ್ತ್ರವಚನವು. ಅನೇಕ ದಂಪತಿಗಳು ತಮ್ಮ ಕಾಮತೃಷ್ಣೆಯಿಂದ, ಹಲವು ಮಕ್ಕಳನ್ನು ಹುಟ್ಟಿಸಿ, ದೇಶದ ಅವನತಿಗೆ ಕಾರಣಭೂತರಾಗುವರು.

ಜನಗಳನ್ನು ವಿದ್ಯಾವಂತರನ್ನಾಗಿ ಮಾಡಿ, ಅವರಲ್ಲಿ ತಿಳಿವಳಿಕೆಯನ್ನು ಹುಟ್ಟಿಸಬೇಕಾದ ಆವಶ್ಯಕತೆ.

ಜನಾರೋಗ್ಯ ವಿಚಾರವನ್ನು ನೋಡಿದರೆ, ಈಗಿನ ವಿದ್ಯಾಭ್ಯಾಸಕ್ರಮವು ತೃಪ್ತಿಕರವಾಗಿಯೇ ಇಲ್ಲ. ಈಗಿನ ವಿದ್ಯಾಭ್ಯಾಸದಲ್ಲಿ ಕುಟುಂಬ ಧರ್ಮಬೋಧನೆಯನ್ನೂ ಸೇರಿಸಬೇಕಾದುದು ಅತ್ಯವಶ್ಯವು. ಶಾರೀರಕವಾದ ಪುರೋಭಿವೃದ್ಧಿಯನ್ನು ಕುರಿತ ಬೋಧನೆಯು ವಿದ್ಯಾಭ್ಯಾಸದ ಅಂಗವಾಗಿರಬೇಕು. ಈ ಶರೀರಾರೋಗ್ಯಬೋಧನೆಯು ತಮ್ಮ ಶರೀರಪುಷ್ಟಿಗೂ, ತಮ್ಮ ದೇಹಸೌಖ್ಯಕ್ಕೂ ಸಾಧಕವೆಂದು ಮಾತ್ರ ತಿಳಿಯಬಾರದು. ನಮ್ಮ ಜನಾಂಗದ ಉತ್ತರೋತ್ತರಾಭ್ಯುದಯಕ್ಕೇ ಇದು ಸಾಧಕವೆಂದು ತಿಳಿಯಬೇಕು. ತಂದೆತಾಯಿಗಳು ಮನುವಾಕ್ಯವನ್ನನುಸರಿಸಿ, ತಮಗೆ ಹುಟ್ಟುವ ಸಂತಾನವೆಲ್ಲ ಧರ್ಮಸಂತಾನವಾಗಿರಬೇಕಲ್ಲದೆ, ಕಾಮಸಂತಾನವಾಗಬಾರದೆಂದು ಮನಸ್ಸಿಗೆ ತಂದುಕೊಂಡ ಪಕ್ಷದಲ್ಲಿ, ಮಕ್ಕಳು ಆರೋಗ್ಯಸ್ಥಿತಿಯಲ್ಲಿದ್ದು, ಮುಂದೆ ಜನಾಂಗಕ್ಕೂ ಯಶಸ್ಕರವಾಗುವುದು. ಸೋಂಕುರೋಗದ ಸಂಬಂಧವುಳ್ಳ ತಂದೆತಾಯಿಗಳೂ, ತಮ್ಮ ಸಂತಾನವಿಷಯದಲ್ಲಿ ಅನುಸರಿಸಬೇಕಾದ ಒಂದು ಕರ್ತವ್ಯವುಂಟು. ಅದಾವುದು? ಹುಟ್ಟಿದಮೇಲೆ ಮಕ್ಕಳಿಗೆ ಸರಿಯಾದ ಆರೋಗ್ಯವನ್ನೂ, ದೇಹಬಲವನ್ನೂ ಉಂಟುಮಾಡುವುದಕ್ಕೆ ತಕ್ಕಷ್ಟು ಶಕ್ತಿಯಗಳನ್ನು ತಾವು ಕಲ್ಪಿಸಿಕೊಂಡ ಹೊರತು, ಆ ಮಕ್ಕಳನ್ನು ತಾವು ಪಡೆಯಲು ಆಸೆಪಡಲೇಬಾರದು. ಈ ವಿಚಾರದಲ್ಲಿ ಅಭಿಪ್ರಾಯಭೇದವಿರಬಹುದು. ಹೇಗಿದ್ದರೂ ಲಕ್ಷೋಪಲಕ್ಷ ಸಂಖ್ಯೆಯಿಂದ ಇಂತಹ ದುರ್ದಶೆಯಲ್ಲಿ ಹುಟ್ಟಿಬೆಳೆಯುವ ಮಕ್ಕಳ ವಿಷಯದಲ್ಲಿ ನನಗಿರುವ ಅನುತಾಪದಿಂದ ನಾನು ಹೀಗೆ ಪ್ರಾರ್ಥಿಸಿಕೊಳ್ಳಬೇಕಾಯಿತು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರು, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣು ಹಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-1-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕ, ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.

[16]

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೬೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟ್ಯಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಚ್. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೆ ಏನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ರಜಿ] **ವಜ್ರಾಂಗಸುಂದರಪಾಕ** [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೇತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗ ನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು, ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಶೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣಬಾಟ್ಲಿ.

ಎಲ್ಲಾ ಬಣ್ಣದ ಶೆರಗು, ಮುಟಚೆಟ್ಟು ಆಗುವದು ಅನಿಯಮಿತತನ, ಹೆಚ್ಚುಕಡಿಮೆ, ಗಂಟುಗಂಟು ಮುಟಚೆಟ್ಟು ಆಗೋಣ, ಮುಟಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷಧ ಅವಶ್ಯಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ನೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಹಾಸ್ತ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. ೮ ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,

3 **ಮು. ಪೋ. ಮಿರಜ, ಎಂ. ಎಸ್. ಎಂ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಜೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಮನಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಹೊಟ್ಟೆರಿ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ಪಾದಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವುದಾಗಿಯೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[23] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವತತ್ವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಜಿನವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಬಿಸಪಥವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[24] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಡಿಶಂಬರ್ ೧೯೩೨ [ಸಂಚಿಕೆ ೩೧

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “ **ವೀರಶೈವರತ್ನ** ” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯುಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯುಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸಾದರ ಮೇಲೆ ಡಿಕ್ರಿ.

ಬಳ್ಳಾರಿ ಜಿಲ್ಲಾ ಉತ್ತಂಗಿ ಗ್ರಾಮದಲ್ಲಿರುವ ಪಂಚಾಚಾರದವರ ಮೇಲೆ ಸಾದರು 25 ಸಾವಿರ ರೂಪಾಯಿಗಳಿಗೆ ಕೆಲವು ವರ್ಷಗಳ ಕೆಳಗೆ ಬಳ್ಳಾರಿ ಕೋರ್ಟಿನಲ್ಲಿ ಡ್ಯಾಮೇಜುಸೂಟ್ ತಂದಿದ್ದರು. ಬಳ್ಳಾರಿ ಕೋರ್ಟಿನ ಜಡ್ಜರು 25 ಸಾವಿರ ರೂಪಾಯಿಗಳಿಗೆ 2½ ಸಾವಿರ ರೂಪಾಯಿಗಳನ್ನು ಪಂಚಾಚಾರದವರು ಸಾದರಿಗೆ ಕೊಡಬೇಕೆಂದು ತೀರ್ಪುಹೇಳಿದ್ದರು. ಆದರಂತೆ ಪಂಚಾಚಾರದವರು ಕೋರ್ಟಿಗೆ 2½ ಸಾವಿರ ರೂಪಾಯಿಗಳನ್ನು ಕಟ್ಟಿ ಮದ್ರಾಸ್ ಹೈಕೋರ್ಟಿಗೆ ಅಪೀಲು ಮಾಡಿದ್ದರು. ಪಂಚಾಚಾರದವರ ಪರವಾಗಿ ಸುಪ್ರಸಿದ್ಧವಕೀಲರಾದ ಪಿ. ಎಸ್. ನರಸಿಂಹಾಚಾರ್ಯರೂ, ಸಾದರಪರವಾಗಿ ಮ॥ ಎಲ್. ಎ. ಗೋವಿಂದ ರಾಘವಯ್ಯರವರೂ ನಿಯಾಮಕರಾಗಿದ್ದರು. ಕಳೆದ ತಿಂಗಳು ಹೈಕೋರ್ಟಿನಲ್ಲಿ ಉಭಯ ಪಕ್ಷದ ವಕೀಲರ ಆರ್ಗ್ಯುಮೆಂಟ ನಡೆಯಿತು. ಪಂಚಾಚಾರದವರ ಪಕ್ಷದ ವಕೀಲರ ಆರ್ಗ್ಯುಮೆಂಟ ಬಹು ಸಮಂಜಸವಾಗಿದ್ದುದರಿಂದ ಹೈಕೋರ್ಟ ಜಡ್ಜರವರು ಕಳೆದ ತಿಂಗಳು 12 ನೆಯ ತಾರೀಖಿನ ದಿವಸ ಸಾದರ ದಾವೆಯನ್ನು ರದ್ದುಮಾಡಿ ಈ ಮೊದಲು ಪಂಚಾಚಾರದವರು ಕೋರ್ಟಿಗೆ ಕಟ್ಟಿದ್ದ 2½ ಸಾವಿರ ರೂಪಾಯಿಗಳನ್ನೂ, ಇಲ್ಲಿಯವರೆಗೆ ಆದ ಕಕ್ಕದ ಬಡ್ಡಿಯನ್ನೂ, ಎಲ್ಲಾ ಕೋರ್ಟು ಖರ್ಚನ್ನೂ ಸಾದರು ಕೊಡಬೇಕೆಂದು ತೀರ್ಪುಹೇಳಿದರು. ಎಲ್ಲಾ ಕೂಡಿದರೆ ಅಜಮಾಸು 6 ಸಾವಿರ ರೂಪಾಯಿಗಳಾಗಬಹುದು. ಇಷ್ಟು ಹಣವನ್ನು ಸಾದರು ಕೊಡಬೇಕಾಗಿರುವದು. ಸತ್ಯಮೇವ ಜಯತೇ!

ಓರ್ವ ಗುರುಭಕ್ತ

ಉತ್ತಂಗಿ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,

ರಬ್ಬರ್ ಸ್ಟ್ಯಾಂಪ್ ಮತ್ತು ಫೋಟೋ

ಬ್ಲಾಕುಗಳನ್ನು ತಯಾರಿಸುವವರು,

[4] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೋಷ್ಯದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,

ಮೊಕ್ಕಾಂ-ಚಿಕ್ಕಬಳ್ಳಾಪುರ, ಕೋಲಾರ ಡಿ॥

ಸ್ವೀಕಾರ

ಸೊಲ್ಲಾಪುರ ಡಿ॥ ಹೋಟಗಿ ಗ್ರಾಮದಲ್ಲಿರುವ ಮ॥ ರಾ॥ ಮಠಪತಿ ಚಂದ್ರಯ್ಯ ಮತ್ತು ಮಲ್ಲಯ್ಯ ಇವರು ತಮ್ಮ ಗ್ರಾಮದ ಮಲ್ಲಿಕಾರ್ಜುನದೇವರಿಗೆ ಹಿತ್ತಾಳಿಯ ಮೂರ್ತಿಯನ್ನು ಮಾಡಿಸಿ ಸ್ಥಾಪಿಸಿದ ಸಮಯದಲ್ಲಿ ಅಲ್ಲಿಯ ಬೃಹನ್ಮಠಾಧ್ಯಕ್ಷ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಅಮೇರಿಕೆಗೆ ಸೇರಿದ 'ಅರ್ಕಾನಸಾಸ್' ಪಟ್ಟಣದ ಮುನಿಸಿಪಲ್ ಚುನಾವಣೆಯಲ್ಲಿ ಅಪಜಯಹೊಂದಿದ ಒಬ್ಬಾನೊಬ್ಬ ಉಮೇದುವಾರನು ತನಗೆ ಆದ ನಷ್ಟವನ್ನು ಈರೀತಿ ವರ್ಣಿಸುತ್ತಾನೆ! " 1360 ಗಂಟೆಗಳಕಾಲ ನಿದ್ರೆಯನ್ನು ಬಿಟ್ಟೆನು. ಅಲಕ್ಷ್ಯದಿಂದ 40 ಎಕರೆಗಳಲ್ಲಿ ಬೆಳೆದಿದ್ದ ಧಾನ್ಯವನ್ನೂ ಆಲೂಗೆಡ್ಡೆಯನ್ನೂ ಕಳೆದುಕೊಂಡೆನು; ಪ್ರತಿಕಕ್ಷಿಯೊಡನೆ ಕೈಕೈ ಹತ್ತಿದ ಸಂದರ್ಭದಲ್ಲಿ ಎರಡು ಹಲ್ಲುಗಳನ್ನು ಮುರಿದುಕೊಂಡೆನು; ಓಟುದಾರರ ಔತಣಕ್ಕಾಗಿ ಒಂದು ಎತ್ತನ್ನೂ, 4 ಕುರಿಗಳನ್ನೂ ಮತ್ತು 5 ಹಂದಿಗಳನ್ನೂ ಕೊಟ್ಟೆನು; 5 ಕ್ಯಾಲಿಕೋ ಉಡುಪುಗಳನ್ನೂ, 5 ಗೊಂಬೆಗಳನ್ನೂ 13 ಆಟದ ಸಾಮಾನುಗಳನ್ನೂ ದಾನಮಾಡಿದೆನು; 126 ಮಕ್ಕಳನ್ನು ಮುದ್ದಾಡಿದೆನು; 26 ಅಡಿಗೆಯಮನೆಗಳಲ್ಲಿ ಬೆಂಕಿಯನ್ನು ಹೊತ್ತಿಸಿದೆನು; 175 ಸೌದೆಯ ತುಂಡುಗಳನ್ನು ಸೀಳಿದೆನು: 4,049 ಮೈಲುಗಳ ದೂರ ನಡೆದೆನು; 9008 ಸಾರೆ ಹಸ್ತಲಾಘವವನ್ನಿತ್ತೆನು; 10,001 ಸುಳ್ಳುಗಳನ್ನು ಹೇಳಿದೆನು; 26 ಬಹಿರಂಗಸಭೆಗಳಲ್ಲಿ ಹಾಜರಿದ್ದೆನು; 6 ಸಾರೆ ಪಾದ್ರಿಯಿಂದ ಪ್ರಾಯಶ್ಚಿತ್ತವನ್ನು ಹೊಂದಿದೆನು; ಧರ್ಮಸಂಸ್ಥೆಗಳಿಗೆ 50 ಡಾಲರುಗಳನ್ನು ದಾನಮಾಡಿದೆನು; 19 ಸಾರೆ ನಾಯಿಗಳಿಂದ ಕಚ್ಚಿಸಿಕೊಂಡೆನು; ಅಂತ್ಯದಲ್ಲಿ ಈ ಹಾಳು ಚುನಾವಣೆಯಲ್ಲಿ ಅಪಜಯಹೊಂದಿದೆನು."

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವ ಬಂಧುಗಳಲ್ಲಿ ವಿನಂತಿ.

ವೀರಶೈವ ಮಹಾಶಯರೇ! ನನ್ನ ಪ್ರೇಮಭರಿತವಾದ ವಿನಂತಿಯನ್ನು ಚಿತ್ತವಿಟ್ಟು ಲಾಲಿಸಿರಿ. ವೀರಶೈವರಲ್ಲಿ ಜಾತಿಗಳಿಲ್ಲವೆಂದು ತಿಳಿಯಬೇಡಿರಿ. ಈಶ್ವರನ ಅಪ್ಪಣೆಯಂತೆ ಆಚಾರ್ಯಭಗವತ್ಪಾದರು ಲಿಂಗದಿಂದ ಅವತರಿಸಿ ಜಗತ್ತಿನಲ್ಲಿ ವರ್ಣಾಶ್ರಮಧರ್ಮಗಳನ್ನು ಸ್ಥಾಪಿಸಿ ಜಾತಿತಾರತಮ್ಯವನ್ನು ಸ್ಥಿರಪಡಿಸಿರುವರು. ಇದರಂತೆ ಅನಾದಿಕಾಲದಿಂದಲೂ ನಡೆಯುತ್ತಬಂದಿರತಕ್ಕ ಜಾತಿಧರ್ಮಗಳನ್ನು ಇದೀಗ ಮೂಲೋತ್ಪಾಟನಮಾಡುವದಕ್ಕಾಗಿ ಸೂಳೆಯ ಮಗನೇ ಮೊದಲಾದ ಕೆಲವರು ಎಲ್ಲ ವೀರಶೈವರನ್ನು ಏಕೀಕರಣಮಾಡುತ್ತೇವೆಂದು ಹೊರಟಿರುವುದು ನಿಮಗೆ ತಿಳಿದಿರಬಹುದು. "ಆಡುವದು ಸುಲಭವಾದರೂ ಮಾಡುವದು ಮಾತ್ರ ಬಹು ಕಷ್ಟ." "ತಾನು ಕೆಡುವ ಕೋತಿಯು ವನವನ್ನೆಲ್ಲ ಹಾಳುಮಾಡಿತೆನ್ನುವಂತೆ" ಎನ್ನಂತೆ ಇಡೀ ಸಮಾಜವನ್ನೇ ಕೆಡಿಸಿ ಹುಸಿಗೆಡಿಸುವದಕ್ಕೆ ಯಾರೊಬ್ಬರೂ ಒಪ್ಪಲಾರರು. ಈ ಸೂಳೆಯಮಗನು ಈಗಿರತಕ್ಕ ವೀರಶೈವರಲ್ಲಿ ಅನಾದಿಕಾಲದಿಂದ ಬಂದ ಜಾತಿಯ ತಾರತಮ್ಯವನ್ನು ತಪ್ಪಿಸಿ ಪಂಚಮಸಾಲಿ, ಬಣಜಿಗ- ಜಾಡ, ನೊಣಬ, ಸಾದ, ಕುರುಬ, ಚಿಂಪಿಗ, ಬಡಗಾರ, ಮೊದಲಾದವರ ಏಕೀಕರಣ ಮಾಡುವುದಕ್ಕೆ ಪ್ರಯತ್ನಿಸುವದು, ಪುರುಷನ ಮೊಲೆಹಾಲಿನಿಂದ ಬಂಜೆಯಮಗನನ್ನು ಸಂತೋಷಪಡಿಸುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದಂತೆ ಇರುತ್ತದೆ. ಇಂಥ ಸಾವಿರಾರು ಜನರು ಸಾವಿರಾರು ಶತಮಾನಗಳಲ್ಲಿ ಪ್ರಯತ್ನಿಸಿದರೂ ಈ ಜಾತಿಯ ತಾರತಮ್ಯವು ಎಂದೂ ಅಳಿಯಲಾರದು. ಇದಕ್ಕಾಗಿಯೇ ಏಳುನೂರು ವರ್ಷಗಳ ಹಿಂದೆ ಕಲ್ಯಾಣದಲ್ಲಿ ಬಿಜ್ಜಳನಿಗೆ ಮಂತ್ರಿಯಾದ ಬಸವನು ತಾನು ಉಚ್ಚ ಜಾತಿಯೆನಿಸಿದ ಆರಾಧ್ಯವಂಶದಲ್ಲಿ ಹುಟ್ಟಿದ್ದರೂ ಆ ಸದ್ವಂಶದ ಗೌರವ ಪ್ರತಿಷ್ಠೆಗಳನ್ನು ಪರಿಗಣಿಸದೆ ಜಾತಿಗಳ ಏಕೀಕರಣ ಮಾಡುವದಕ್ಕಾಗಿ ಭೀಷ್ಮಪ್ರತಿಜ್ಞೆಯನ್ನು ಮಾಡಿ ಪ್ರಯತ್ನಿಸಿ ಹಲಕೆಲವು ಕೃತಿಗಳನ್ನು ಮಾಡಿ ಕೆಲವು ದಿವಸಗಳ ಮೇಲೆ ಬೊಬ್ಬಾಟವೆದ್ದು ಕೊನೆಗೆ ಅಪಮಾನಹೊಂದಿ ರಾಜದ್ರೋಹಕ್ಕೆ ಪಾತ್ರನಾಗಿ ದುರ್ಮರಣಕ್ಕೀಡಾದ ಸಮಾಚಾರವು ಐತಿಹಾಸಿಕ ದೃಷ್ಟಿಯಿಂದ ಸರ್ವರಿಗೂ ತಿಳಿದ ವಿಷಯವಾಗಿರುತ್ತದೆ. ಮಂತ್ರಿಯಾಗಿದ್ದ ಬಸವನ ಅವಸ್ಥೆಯೇ ಹೀಗಾಗಿರುವಾಗ ಇನ್ನುಳಿದವರ ಪಾಡೇನು? ಜಾತಿನಿರ್ಣಯಕಾರ್ಯದಲ್ಲಿ ವೃಥಾಪ್ರಲಾಪಿಸುವವರ ಜಂಬದ ಮಾತುಗಳು ಏಕಪಕ್ಷವಾಗಿವೆಯೆಂದು ಸರ್ವರೂ ತಿಳಿದುಕೊಂಡಿರುವರು. ಈ ಜಂಬದಮಾತುಗಳಿಗೆ ಶುದ್ಧಸಾಂಪ್ರದಾಯಕರ ನಾಲಿಗೆಯು ಎಂದೂ ನೀರೊಡೆಯಲಾರದು. ಈಗ ತಾನೇ ಚಹಾ-ಕಾಫೀ ಹೋಟೆಲುಗಳಲ್ಲಿ ಪ್ರವೇಶಮಾಡಿ ಈಗಾಗಲೇ ಅರ್ಧಮರ್ಧ ಜಾತಿಯನ್ನು ಕೆಡಿಸಿಕೊಂಡು ಭ್ರಷ್ಟರಾದ ಕ್ಲಾಪಿನ ಗೆಣೆಯರು ಮಾತ್ರ ಹೂಂ ಎನ್ನಬಹುದು. ವಿಸ್ತೃತವಾದ ವೀರಶೈವ ಮತದಲ್ಲಿ ಎಲ್ಲ ಪ್ರಮುಖಜನಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಈ ಕಾರ್ಯವನ್ನು ಮಾಡಿ ಕೊನೆಗಾಣಿಸುವದು ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಮಹಾಸಭೆಯಲ್ಲಿ ಎಲ್ಲ ಜಾತಿಯವರು ಬಂದಿರುತ್ತಾರಷ್ಟೆ! ಆಗ ಈ ವಿಷಯದ ಬಗ್ಗೆ ಚರ್ಚಿಸಿ ನಿರ್ಣಯಮಾಡಬೇಕಾದರೂ ಎಷ್ಟೋ ಕುರಿಕೋಣಗಳು ಬಿದ್ದುಹೋಗಬಹುದು. ಮೊನ್ನೆ ಮೊನ್ನೆ ಮುಗಿದ ವಿರಕ್ತಮಠದಲ್ಲಿ ಅಸ್ಪೃಶ್ಯರಿಗೆ ಪ್ರವೇಶಕ್ಕೆ ಅವಕಾಶವು ದೊರೆಯಿತೆಂದು ಪತ್ರಿಕಾಕರ್ತರು ತಮ್ಮ ಪತ್ರಿಕೆಗಳಲ್ಲಿ ಅಟ್ಟಹಾಸದಿಂದ ಹೊಗಳಿದರು. ಅದು ಪವಿತ್ರಾಚರಣೆಯುಳ್ಳ ಕೆಲವು ವೀರಶೈವರಿಗೆ ಬೀಭತ್ಸವಾಗಿ ಈ ಕೃತಿಯನ್ನು ಖಂಡಿಸಲುದ್ಯುಕ್ತರಾಗಲು ಆಗಲೇ ಕುಶಲಮತಿಗಳಾದ ಆ ಮಠದವರು ಅದನ್ನು ಪುನರ್ವರಣಮಾಡಿ ಸಾಮಾನ್ಯರೀತಿಯಾಗಿ ಪ್ರಸಿದ್ಧಮಾಡಿದರು. ಈಗ ಅದೇ ಅಸ್ಪೃಶ್ಯರೆನ್ನುವರು, ಎರಡನೇ ಸಾರೆ ಪ್ರಸಿದ್ಧಿಸಿರುವ ಲೇಖವನ್ನು ನೋಡಿ ಮನಸ್ಸಿಗೆ ಖಿನ್ನಮಾಡಿಕೊಂಡಿದ್ದಾರೆಂದು ಕೇಳುತ್ತೇವೆ. ಇದರಂತೆ ಜಾತಿನಿರ್ಣಯದ ವಿಷಯದಲ್ಲಿ ಅಪಹಾಸ್ಯಕ್ಕೀಡಾಗಬಾರದು. ವಾದಿಗಳು ಕೆಲಸಕ್ಕೆ ಬಾರದ ಟೊಳ್ಳುವಚನಗಳನ್ನು ಹೇಳಿಕೊಂಡು ಅವುಗಳನ್ನೇ ಪ್ರಮಾಣವಾಗಿ ಅಂಗೀಕರಿಸಿ ಅವುಗಳ ಆಧಾರದಿಂದಲೇ ವಾದಿಸತಕ್ಕವರಿರುತ್ತಾರೆ. ಮತ್ತು ಪ್ರಮಾಣಗ್ರಂಥಗಳ ಕೆಲವು ಸಾಮಾನ್ಯ ಶ್ಲೋಕಗಳನ್ನು ಆಧಾರವಾಗಿಟ್ಟುಕೊಂಡು ವಾದಿಸುವದು ಅವರ ಮೊದಲನೆಯ ಗುಟ್ಟು. ಮೂಲಗ್ರಂಥಗಳನ್ನೂ ಮೂಲಾಚಾರ್ಯರ ತತ್ವಗಳನ್ನೂ ಹುಸಿಗೊಳಿಸುವ ಇವರ ಕೃತಿಗೆ ಯಾರುತಾನೇ ಮಾನ್ಯಮಾಡುವರು? ಇದೀಗ ವಾದಿಗಳು ಪ್ರತಿಷ್ಠಿತರ ಮುಖೀನ ಪಕ್ಷಪಾತಿಗಳೆಂದು ನಿರ್ಧರಿಸಿದಂತೆ ಮುಂದೆ ಖಂಡಿತವಾಗಿ ಹೇಳಬಲ್ಲರು. ಸೂಳೆಯಮಗನು ಜಾತಿಸಾಂಕರ್ಯವನ್ನು ಪ್ರಚಾರಮಾಡುವದಕ್ಕಾಗಿ ಬಸವಪಂಥಿಗಳ ಡುಬ್ಬವನ್ನು ಚಪ್ಪರಿಸಿದಮಾತ್ರಕ್ಕೆ ಈ ಅನಿಷ್ಟಕಾರ್ಯವು ಸಿದ್ಧಿಸಬಹುದೇ? ಇದು ಎಂದೂ ಆಗದಮಾತು. ಇವರ ಗತ್ತಿಗೆ ತಕ್ಕಂತೆ ಕುಣಿಯುತ್ತಾ ಹೋದರೆ ಧರ್ಮದ ಮೂಲೋತ್ಪಾಟನವು ಇಂದೇ ಆಯಿತೆಂದು ಹೇಳಬೇಕಾಗುತ್ತದೆ. ವರ್ಣಾಶ್ರಮಗಳನ್ನು ಕಳೆಕೊಂಡು ಸ್ವರಾಜ್ಯವನ್ನು ಗಳಿಸುವದಕ್ಕಿಂತ ಅವುಗಳನ್ನು ಉಳಿಸಿಕೊಂಡು ಸ್ವರಾಜ್ಯವನ್ನು ಗಳಿಸುವದು ಶ್ರೇಯಸ್ಕರವು. ಅದರಂತೆ ಜಾತಿಯನ್ನು ಕಳೆದುಕೊಂಡು ಏಕ್ಯರಾಗುವುದಕ್ಕಿಂತ ಜಾತಿಯನ್ನು ಉಳಿಸಿಕೊಂಡು ಐಕ್ಯರಾಗುವದು ಪರಮೇಶ್ವರನಿಗೆ ಪ್ರೀತಿಕರವಾಗಿದೆ. ಅನಾದಿಕಾಲದಿಂದ ನಡೆದು ಬಂದಿರುವ ಜಾತಿಗಳನ್ನು ಸ್ವಾರ್ಥಚಿಂತನೆಗಾಗಿ ಅವುಗಳ ತಾರತಮ್ಯವನ್ನು ಕೆಡಿಸುವದಾದರೆ ಈ ದುರುದ್ದೇಶವು ಎಂದೂ ಕೊನೆಗಾಣುವದಿಲ್ಲವೆಂದು ಶಪಥಮಾಡಿ ಹೇಳಬಹುದು. ಸ್ವರಾಜ್ಯಸ್ಥಾಪಕರಾದ ಎಷ್ಟುಜನ ರಂಜರು ಧರ್ಮವನ್ನು ಉಳಿಸಿಕೊಂಡು ಬಂದಿರುವದಿಲ್ಲ? ಅದ್ದರಿಂದಲೇ ಧರ್ಮವು ಅಚ್ಚಳಿಯದೆ ಈ ಹೊತ್ತಿನವರೆಗೂ ಜಗತ್ತಿನಲ್ಲಿ ಉಳಿದಿರುತ್ತದೆ. ಸೂಳೆಯಮಗನು ಜಾತಿನಿರ್ಣಯಕ್ಕೆ ಕೈಹಾಕಿರುವದನ್ನು ನೋಡಿದರೆ ಉಸುಕಿನಲ್ಲಿ ಎಣ್ಣೆಯನ್ನು ತೆಗೆಯಲಿಕ್ಕೆ ಪ್ರಯತ್ನಿಸಿದಂತಾಗಿರುತ್ತದೆ. "ಶಿವೋಕ್ತಾಂಜಾತಿಮರ್ಯಾದಾಂ ಯೋತಿಕ್ರಮ್ಯವಿವರ್ತತೆ | ಸಚಂಡಾಲಸ್ತತಿಜ್ಞೇಯಃ ಸರ್ವಕರ್ಮಬಹಿಷ್ಕೃತಃ ||" ಎಂಬ ಶಿವಾಗಮವಾಕ್ಯಗಳನ್ನು ಸ್ಮರಿಸಿ ನಿಮ್ಮ ನಿಮ್ಮ ಜಾತಿಧರ್ಮವನ್ನು ಕಾಯ್ದುಕೊಳ್ಳಿರಿ. ಅಶ್ವತ್ಥಾಮನು ಕರ್ಣನೊಡನೆವಾದಿಸಿ ತಾನು ಜಾತಿಯಿಂದ ಬ್ರಾಹ್ಮಣನಾಗಿದ್ದರೂ ದುರಭಿಮಾನದ ಕೆಳಗೆ ಬಿದ್ದು ಬ್ರಾಹ್ಮಣ್ಯವನ್ನು ಕಳೆದುಕೊಂಡು ಪಶ್ಚಾತ್ತಾಪ ಪಟ್ಟನಷ್ಟೇ! ಅದರೂ ಅವನಿಗೆ ಬ್ರಾಹ್ಮಣ್ಯವೂ ದೊರೆಯಲಿಲ್ಲ. ಮುಂದೆ ದುರ್ಯೋಧನನಿಂದ ಸೇನಾಪತಿತ್ವವೂ ಪ್ರಾಪ್ತವಾಗಲಿಲ್ಲ. ಉಭಯಭ್ರಷ್ಟನಾಗಿ ಹೋದನು. ಅದರಂತೆ ದುರಭಿಮಾನದ ಕೆಳಗೆ ಬಿದ್ದು ಈಗ ಜಾತಿಯನ್ನು ಕೆಡಿಸಿಕೊಂಡರೆ ನಿಮಗೆ ಅಶ್ವತ್ಥಾಮನಂತೆ ತ್ರಿಶಂಕುಸ್ವರ್ಗವು ಪ್ರಾಪ್ತವಾಗುವದರಲ್ಲಿ ಸಂಶಯವಿಲ್ಲ. ಅದ್ದರಿಂದ ಜಾತಿ ಸಂಕರಕಾರಕರ ವಿಷಯದಲ್ಲಿ ಜಾಗರೂಕರಾಗಿರಬೇಕೆಂದು ಕೋರಿಕೆ.

ಧರ್ಮಾಭಿಮಾನಿ.

ಶೂನ್ಯ (೦) ಪೀಠದ ಸನ್ಯಾಸಿಗಳ ಸಮಾಚಾರ

ಲೇಖಕ:—ದೈವಜ್ಞ ವಿನೋದ.

೧೨ನೆಯ ಶತಮಾನದಲ್ಲಿ ಜಾತಿಸಂಕರರ ಸಮುದಾಯವು ತಮಗೊಂದು ಶೂನ್ಯ (ಇಲ್ಲದ್ದು) ಪೀಠವನ್ನು ಸ್ಥಾಪಿಸಿಕೊಂಡದ್ದು ಸರಿಯಷ್ಟೆ! ಮೊಟ್ಟಮೊದಲು ಆ ಪೀಠಾರೋಹಕ್ಕೆ ಧರ್ಮಾಂತರಹೊಂದಿದ ಅಲ್ಲಮನೆಂಬವನು ಬಂದುದರಿಂದ ವಂಶೀಯ ವೀರಶೈವ ಮಾಹೇಶ್ವರರು ಅತಿಕುಪಿತರಾಗಿ ಕಲ್ಯಾಣವನ್ನು ಬಿಟ್ಟುಹೋದರೆಂದೂ, ಅಲ್ಲಮನ ತರುವಾಯ ನಾಗವ್ವನ ಮಗನಾದ ಚೆನ್ನಬಸವನು ಬಂದುದರಿಂದಂತೂ ವಂಶೀಯ ಮಾಹೇಶ್ವರರು ಬಸವನ ನೆರಳಿಗೆ ಸಹ ನಿಲ್ಲದೆ ಹೋದರೆಂದೂ, ಅದೇ ಸಮಯದಲ್ಲಿ ನಡೆದ ರಾಜ್ಯಕ್ರಾಂತಿಯಲ್ಲಿ ಈ ಸಂಕರರು ಪ್ರವೇಶಿಸಿದ್ದರಿಂದ ಆ ಶೂನ್ಯಪೀಠವು ಕಡೆಗೆ ಶೂನ್ಯವಾಯಿತೆಂದೂ ಸರ್ವತ್ರ ಪ್ರಸಿದ್ಧವಿದೆ. (ಈ ವಿಚಾರಗಳು ನನ್ನ ಕೈಗಂಟಿನವಲ್ಲ: ೧೯೦೪ರ ನೆಯ ಇಸ್ವಿಯಲ್ಲಿ ಬಾಗಲಕೋಟೆಯಲ್ಲಿ ನೆರವೇರಿದ ೪ ನೇ ವೀರಶೈವಮಹಾಸಭೆಯಲ್ಲಿ ಮ|| ರಾ|| ಮಲ್ಲಿಕಾರ್ಜುನಪ್ಪನವರು ಕಲ್ಯಾಣಶೆಟ್ಟಿ ಬಿ. ಎ. ಎಂಬವರು ಮಾಡಿದ ಭಾಷಣದ ಸಾರಾಂಶವು) ಅಲ್ಲಿಂದೀಚೆಗೆ ಅಲ್ಲಲ್ಲಿ ಕೆಲವು ಸನ್ಯಾಸಿಗಳು, ನಾಯಕರು-ದೇಸಾಯರೇ ಮೊದಲಾದವರ ಆಶ್ರಯವನ್ನು ಹೊಂದಿ ಮಠಮಾನ್ಯಗಳನ್ನು ಕಟ್ಟಿಸಿಕೊಂಡು ತಮ್ಮ ಪರಂಪರೆಯನ್ನು ಕಲ್ಯಾಣದ ಅಲ್ಲಮನಾದಿಯಾಗಿ ಹೇಳುತ್ತಲಿರುವರು. ಈ ಬಿಡಿಗಾಸಿನ ಸನ್ಯಾಸಿವರ್ಗವೆಲ್ಲಾ ಜಗದ್ಗುರುವೆಂಬ ಪದವಿಯನ್ನು ಬರೆದುಕೊಳ್ಳಕೊಡಗಿ, ನರಿಯು ಹುಲಿದೊಗಲನ್ನು ಧರಿಸಿದಂತಾಯಿತು. ೧೯೧೫ನೇ ಇಸ್ವಿಯಲ್ಲಿ ಗುರುವರ್ಗದ ಜಾಗ್ರತಪುರುಷಸಿಂಹವು ವಾರಾಣಸಿಯಲ್ಲಿ ಗರ್ಜಿಸಲು ಈ ನರಿಗಳ ಹೃದಯವು ಕಂಪಿಸತೊಡಗಿತು. ಅಖಿಲಗುರುವರ್ಗದ ಜಾಗ್ರತೆಯಿಂದ ವೀರಶೈವ ಧರ್ಮೋದ್ಧಾರದ ಕಾರ್ಯಗಳು ಭರದಿಂದ ಸಾಗತೊಡಗಿದವು. ಸನ್ಯಾಸಾಕ್ತರಿಗಳಾದ ಅನೇಕರು ತಮ್ಮ ಆಶ್ರಮಧರ್ಮನಿರತರಾಗಿ ಮಠಸ್ಥಾಪನಾಚಾರ್ಯರಲ್ಲಿ ನಿಸ್ಸೀಮವಾದ ಭಕ್ತಿಯನ್ನಿಟ್ಟು ಕೃತಾರ್ಥರಾಗತೊಡಗಿದರು. "ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲ" ಎಂಬಂತೆ ವೇಷಧಾರಿ ಸನ್ಯಾಸಿಗಳಲ್ಲಿ 'ನಾಜಗದ್ಗುರು' 'ನಾ ಶೂನ್ಯಸಿಂಹಾಸನಾಧೀಶ' ಎಂಬ ಕೋಲಾಹಲವೆದ್ದಿರುವಾಗ ಕೆಲವರು ಕೂಡಿ ಶೂನ್ಯದ ಮೇಲೆ ಓರ್ವನಿರಕ್ಷರಕುಕ್ಷಿಯನ್ನು ಪಟ್ಟಗಟ್ಟಿದರು. ಮೂಲಮಠಕ್ಕೆ ಎಲ್ಲಾ ಸನ್ಯಾಸಿಗಳು ಅಧೀನರಾಗಿ ಹೊಡೆದಾಟದ ಸಮಯಭೇದಗಳನ್ನು ಮುರಿದುಕೊಂಡು ಗುರುವರ್ಗದ ಸುಧಾರಣಾಕಾರ್ಯಗಳಿಗೆ ವಿಘ್ನಕಾರಿಗಳಾಗಬೇಕೆಂಬ ಅವರ ಸಂಕಲ್ಪವು ಮರಳಿಸಿ ಹೋಯಿತು. ಆ ಶೂನ್ಯದ ಮೇಲೆ ಕುಳಿತ ಈಗಿನ ಸನ್ಯಾಸಿಗಳು ಮಲಪ್ರಭಾನದಿಯ ದಂಡೆಯ ಮೇಲಿನಹಳ್ಳಿಗಳಲ್ಲಿ ದುಡ್ಡನ್ನೆಳೆಯುವ ವೇಷಹಾಕಿಕೊಂಡು ಬಂದಿದ್ದಾರೆ. ಈ ದುಡ್ಡು ಆರಾಧನೆಗಂತೆ! ಭರತಖಂಡದ ಈಗಿನ ಪರಿಸ್ಥಿತಿಯು ಅತ್ಯಂತ ಭಯಾನಕವಿದ್ದು, ಒಂದು ಹೊತ್ತು ಪೂರಾ ಅನ್ನವಿಲ್ಲದೆ ಅಲೆದಾಡುವಕೋಟಿಗಟ್ಟಲೆ ಜನರು ತಿರುಗುತ್ತಿರುವಾಗ, ಈ ಸನ್ಯಾಸಿಗಳು ಮಂಟಪಪೂಜಾ-ರುದ್ರಪೂಜಾ-ಆರಾಧನೆ ಎಂಬ ಕಾರ್ಯಗಳಿಗಾಗಿಭಕ್ತಾದಿಗಳಿಂದ ಸಾವಿರಗಟ್ಟಲೆ ಹಣವನ್ನು ಒಗ್ಗಿ ಒಂದೆರಡು ತಾಸುಗಳಲ್ಲಿ ಹಾಳುಮಾಡುತ್ತಿರುವದು ಪರಮ ಅನ್ಯಾಯವಾದುದಾಗಿದೆ. ಈ ಅನ್ನದಾನದ ಫಲವು ಸುಖವಾಗಿ ಶಿವಪೂಜೆಮಾಡಿಕೊಂಡು ಧಷ್ಟವಿಷ್ಟಪಹಾರಿಗಳಾದವರಿಗೂ ಆ ದುಡ್ಡನ್ನುಕೊಟ್ಟ ಶ್ರೀಮಂತ ಜನರಿಗೂ ಸಲ್ಲದು. ಆದುದರಿಂದ ದೇಶ, ಕಾಲ, ವಸ್ತು, ಪರಿಸ್ಥಿತಿಯನ್ನು ಅವಲೋಕಿಸಿ ಸರ್ವರೂ ಎಚ್ಚರಾಗಿ ಇಂಥ ಅನ್ಯಾಯದ ಕಾರ್ಯಗಳ ಕಡೆಗೆ ಗಮನಕೊಡಬಾರದೆಂದು ವಿನೋದನ ಅಭಿಲಾಷೆಯು.

ಶ್ರೀ ಕ್ಯಾಸನೂರು ಸಂಸ್ಥಾನದಲ್ಲಿ ನಡೆದ ಕಾರ್ತಿಕೋತ್ಸವ.

ನವಂಬರ ೨೭ ನೇ ತಾರೀಖಿನ ದಿವಸ ಷಟ್ಸ್ಥಲ ಗುರುಬಸವಸ್ವಾಮಿಗಳವರ ಯೋಗಸಮಾಧಿಸ್ಥಳದಲ್ಲಿ ಕರ್ತೃಗದ್ದುಗೆಗೆ ಶ್ರೀರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ ನಡೆದನಂತರ ನಾಲ್ಕು ಘಂಟೆಯವರೆಗೆ ಅನ್ನಸಂತರ್ಪಣೆ ನಡೆಯಿತು. ಅಸ್ತಮಯಕಾಲಕ್ಕೆ ಸರಿಯಾಗಿ ಶ್ರೀಗಳವರ ಗರ್ಭಮಂಟಪದಿಂದ ಮಠದವರೆಗೂ ಎಡಬಲಭಾಗಗಳಲ್ಲಿ ದೀವಿಗೆಗಳ ಸಾಲುಗಳು ದೇದೀಪ್ಯಮಾನಗಳಾದವು. ಅಲ್ಲಲ್ಲಿಗೆ ರಂಭಾಸ್ತಂಭಗಳೂ, ತಳಿರು ತೋರಣಗಳೂ, ಕಮಾನುಗಳೂ ಕಟ್ಟಲ್ಪಟ್ಟಿದ್ದವು. ಆಶ್ರಮದ ಮುಂಭಾಗದಲ್ಲಿ ಚಿತ್ರವಿಚಿತ್ರ ತೋರಣಫಲಾವಳಿಗಳಿಂದ ಸಭಾಮಂಟಪವು ಇಂದ್ರನಸಭೆಯಂತೆ ತೋರುತ್ತಿತ್ತು. ಆಶ್ರಮದ ಎಡಭಾಗದಲ್ಲಿ ಬಿಲ್ವವೇದಿಕೆಯು ಪುಷ್ಪಮಂಟಪಗಳಿಂದ ಅಲಂಕೃತವಾಗಿತ್ತು. ಜಾಹೀರಪ್ರಕಾರ ಎಲ್ಲಾ ಪ್ರಾಂತಗಳಿಂದಲೂ ಮಡಿವಾಳರು ದೀವನಾಯಕರು, ಒಕ್ಕಲಿಗರು, ಹಸಲರು, ಮತ್ತು ಛಲವಾದಿಗಳು ಮೊದಲಾದ ಶಿಷ್ಯ ಸಮುದಾಯವು ಸಂದೋಷಕಂಡವಾಗಿ ಸುಮಾರು ೫೦೦ ಜನರವರೆಗೆ ಸೇರಿದರು. ಶ್ರೀಮತ್ಪಂಚಾಚಾರ್ಯರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯೂ ಗದ್ದುಗೆಗೆ ಮಹಾಮಂಗಳಾರತಿಯೂ ವಿಧ್ಯುಕ್ತವಾಗಿ ನೆರವೇರಲು ಮಠಾಧಿಪತಿಗಳಾದ ಪಂಡಿತ ಶ್ರೀಗುರುಬಸವ ಶಿವಾಚಾರ್ಯಸ್ವಾಮಿಗಳವರು ಗೌರೀಕೆರೆ ಮಠದ ವೇ|| ಚನ್ನಬಸವಯ್ಯನವರು ಮತ್ತು ಚುಮನೂರ ಪಾಟೀಲ ಹೆಗ್ಗೋಡು ಶಿವಪ್ಪಗೌಡರೇ ಮೊದಲಾದ ಪ್ರಮುಖರೊಡನೆ ಮಠದಿಂದ ಉತ್ಸವದೊಡನೆ ಬಂದು ಸರ್ವರ ಜಯಘೋಷದೊಡನೆ ಸಭಾ ಮಂಟಪವನ್ನು ಅಲಂಕರಿಸಲು ಮದಗಮಾಸೂರುಸುತ್ತಕೋಟೆ ವೀರಪ್ಪನವರು ಮಂಗಲಗೀತವನ್ನು ಹಾಡಿದರು. ಆಮೇಲೆ ಪ್ರೋಗ್ರಾಂ ಪ್ರಕಾರ ಅಸ್ಪೃಶ್ಯರ ಸಭೆಯು ಆರಂಭವಾಯಿತು. ಅಧ್ಯಕ್ಷರು ಅವರ ಸುಧಾರಣೆಯ ಬಗ್ಗೆ ಬೋಧಿಸಿದ್ದಲ್ಲದೆ ಪೂರ್ವಪದ್ಧತಿಯಂತೆ ವೀರಶೈವ ಮಠಗಳಿಗೆ ಶಿಷ್ಯರಾಗಿ ಪುನೀತರಾಗುತ್ತಿರುವುದು ಲೋಕಪ್ರಸಿದ್ಧವಾಗಿರುತ್ತದೆ. ಹೀಗಿದ್ದು ಈಗಿನ ಕೆಲಜನರು ಕಾಂಗ್ರೆಸ್ಸಿನ ನೆಪದಿಂದ ತಮ್ಮ ಮನಸ್ಸಿನ ದುರುದ್ದೇಶವನ್ನು ತೀರಿಸಿಕೊಳ್ಳುವದಕ್ಕೋಸ್ಕರ ನಿಮ್ಮನ್ನು ಗುಡಿಗಳೊಳಗೆ ಪ್ರವೇಶಮಾಡಿಸುತ್ತೇವೆ; ಗುದ್ದವನ್ನು ಹತ್ತಿಸುತ್ತೇವೆ; ಕೂಡಿ ಉಣ್ಣಿಸುತ್ತೇವೆ; ಕುಲದೊಳಗೆ ಕೂಡಿಸುತ್ತೇವೆಂದು ಸುಳ್ಳುಜೊಳ್ಳಿನ ಬಣ್ಣದ ಮಾತುಗಳನ್ನಾಡುತ್ತ ಕೆಲವು ವಾರಗಳಿಂದೀಚೆಗೆ ನಿಮಗೆ ಹರಿಜನರೆಂದು ವೃತ್ತಪತ್ರಿಕೆಗಳಲ್ಲಿ ಬರೆಯುತ್ತಿದ್ದರಿಂದ ನಿಮಗೆ ಕಳವಳವುಂಟಾಗಿದ್ದನೋ ನ್ಯಾಯವಾದದ್ದೇಸರಿ! ಈಗ ಮುಂಬರಿದವರು ಹಿಂದುಳಿದವರನ್ನು ಮೇಲಕ್ಕೆತ್ತುವರೆಂಬುದಕ್ಕೆ ಒಡೆಯರಮೇಲೆ ತಂದಿರುವ ಅಶಾಸ್ತ್ರೀಯವಾದ ಶಬ್ದಪ್ರಯೋಗವು ಈ ಸಭೆಯ ಮೂಲಕ ನಿಷೇಧಿಸತಕ್ಕದ್ದು ಯುಕ್ತವಾಗಿದೆ. ಬನವಾಸೀಗುಡಿಯ ಅಭಿಯೋಗವೇ ಸಾಕ್ಷಿಯಾಗಿರುವುದು. ಹಡೆದತಾಯಿಗೆ ಇಲ್ಲದಮರುಕವು ಮಲತಾಯಿಗೆ ಬರುವದೇ? ಎಂದು ಬೋಧಿಸಿದರು. ಹೊರಬೈಲಸ್ಥಳವಾಸ್ತವ್ಯರ ಛಲವಾದಿ ನಿಂಗಪ್ಪನು ಮೊದಲಿನಿಂದಲೂ ಶೈವರಾದ ನಾವು ಹರಿಜನರೆಂಬುವದಕ್ಕೆ ಸುಮ್ಮನಿದ್ದರೆ ನಾಳೆ ಜಂಗಮಯ್ಯನವರ ಮತ್ತು ದಾಸಯ್ಯಗಳ ಎಳೆದಾಟಕ್ಕೆ ಸಿಲುಕಿ ತ್ರಿಶಂಕುಸ್ವರ್ಗವನ್ನು ಹೊಂದಬೇಕಾದೀತು ಈಗಲೇ ಇದನ್ನು ಪರಿಹರಿಸಿಕೊಳ್ಳತಕ್ಕದ್ದು ಯುಕ್ತವೆಂದು ಹಾಸ್ಯರಸದೊಡನೆ ಮಾತನಾಡಿದನು. ಅನಂತರ ಕೆಲವರು ಅವರ ಸುಧಾರಣೆಯ ಬಗ್ಗೆ ಮಾತನಾಡಿದರು. ಆಮೇಲೆ ಗುರುಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಶೈವಸಮಾಜ, ಮುಂಬಯಿ.
ಅಭಿನಂದನಸಭೆ.

ಶ್ರೀ|| ಪಿ. ಮಹಾದೇವಯ್ಯನವರು ಬೆಂಗಳೂರಿನ ಹೈಕೋರ್ಟಿನ ಮುಖ್ಯನ್ಯಾಯಾಧೀಶರಾಗಿ ಚುನಾಯಿಸಲ್ಪಟ್ಟ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ಮುಂಬಯಿಯ ವೀರಶೈವ ಪ್ರಮುಖರು ಕಳೆದ ನವೆಂಬರು 29 ನೇ ತಾರೀಖಿನ ದಿವಸ "ವೀರಶೈವ ಸಮಾಜ" ದ ನೇತೃತ್ವದಲ್ಲಿ ಪ್ರಿನ್ಸೆಸ್ ಸ್ಟ್ರೀಟಿನಲ್ಲಿರುವ ದೇವಕರಣ ಮ್ಯಾನ್ಷನ್ನಿನಲ್ಲಿ ಒಂದು ಬಹಿರಂಗ ಸಭೆಯನ್ನು ಸೇರಿಸಿದ್ದರು.

ಸಭಾಭವನವು ಕಾಲೇಜ್ ವಿದ್ಯಾರ್ಥಿಗಳಿಂದಲೂ ಅಡ್ವೋಕೇಟರುಗಳಿಂದಲೂ, ವರ್ತಕರುಗಳಿಂದಲೂ ತುಂಬಿದ್ದಿತು. ಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟ ರಾವ್‌ಬಹದ್ದೂರ್ ಕೆ. ರಾಮಸ್ವಾಮಿ ಜೆ. ಪಿ. ರವರು ಅರ್ಧಗಂಟೆಯವರೆಗೆ ಶ್ರೀ|| ಮಹಾದೇವಯ್ಯನವರ ಗುಣಕಥನವನ್ನು ಮಾಡಿ, ಮೈಸೂರಿನ ನ್ಯಾಯಾಧೀಶರ ಪದವಿಯನ್ನು ಪಡೆದವರಲ್ಲಿ ಇವರೇ ಮೊದಲನೆಯ ವೀರಶೈವರೆಂದೂ ಇವರು ತಮ್ಮ ಬುದ್ಧಿಸಾಮರ್ಥ್ಯದಿಂದಲೂ ಕಷ್ಟಪಟ್ಟು ಕೆಲಸಮಾಡಿದುದರಿಂದಲೂ ಮುನ್ಸೀಫ್ ಸ್ಥಾನದಿಂದ ನ್ಯಾಯಾಸ್ಥಾನದ ಅತ್ಯುನ್ನತಪದವಿಗೆ ಏರಿದರೆಂದೂ, ಈ ಬಗ್ಗೆ ಪ್ರತಿಯೊಬ್ಬ ಕರ್ನಾಟಕಸ್ಥನೂ ಅದರಲ್ಲಿಯೂ ಪ್ರತಿಯೊಬ್ಬ ವೀರಶೈವನೂ ಹೆಮ್ಮೆ ಪಡಬೇಕೆಂದೂ ಹೇಳಿದರು. ಮುಂಬಯಿಯ ಅಡ್ವೋಕೇಟರಾದ ಮಿ|| ಮೊಕಾಶಿಯವರು, ಬೆಳಗಾಂವ ಅಡ್ವೋಕೇಟರಾದ ಮಿ|| ಹಿರೇಮಠರವರು, ಸೋಲಾಪುರದ

ಕಳೆದ ವರ್ಷ ಅನೇಕ ಜನ ರೈತರು ಕಂದಾಯವನ್ನು ಪಾವತಿಮಾಡಲಿಲ್ಲನೆಂಬ ಕಾರಣದ ಮೇಲೆ ಸರಕಾರದವರು ಸದರೀ ರೈತರ ಜಮೀನುಗಳನ್ನು ಹರಾಜು ಮಾಡಿ ತಮ್ಮ ಬೀಟಿಗೆ ನಿಲ್ಲಿಸಿಕೊಂಡಿರುತ್ತಾರೆ. ಹೀಗೆ ಜಮೀನುಗಳನ್ನು ಕಳೆದುಕೊಂಡಿರುವ ರೈತರು ನಿಂತಿರುವ ಬಾಕಿಯನ್ನು ಈ ಸಾರಿಯಾದರೂ ಪೂರ್ತಿಯಾಗಿ ಪಾವತಿಮಾಡಿದಲ್ಲಿ ಜಮೀನುಗಳನ್ನು ಅವರಿಗೆ ಹಿಂತಿರುಗಿ ಕೊಡಬಹುದೆಂದೂ, ಅವರಿಂದ ಬಡ್ಡಿ, ನೋಟೀಸ್ ಫೀ ಮುಂತಾಗಿ ಏನನ್ನೂ ಹೆಚ್ಚಾಗಿ ವಸೂಲುಮಾಡಬೇಕಾಗಿಲ್ಲವೆಂದೂ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ತಿರಮಕೂಡಲು ನರಸೀಪುರದ ತಾಲೂಕು ರಂಗಸಮುದ್ರ ಗ್ರಾಮದ ಒಂದು ಜಮೀನಿನ ವಿಚಾರವಾಗಿ ಹಿಂದೂ ರೈತರಿಗೂ ಮುಸಲ್ಮಾನರಿಗೂ ವ್ಯಾಜ್ಯ ನಡೆದು ಮೊಕದ್ದಮೆಯು ಹಿಂದೂ ರೈತರ ಪರವಾಗಿ ತೀರ್ಮಾನವಾಯಿತು. ಆ ಮೇಲೆ ಹಿಂದೂ ರೈತರು ಜಮೀನನ್ನು ಸಾಗುವಳಿಮಾಡಿ ಫಸಲನ್ನು ಕೊಯ್ಯುತ್ತಿದ್ದಾಗ ಮುಸಲ್ಮಾನರು ಬಂದು ಅಟಂಕಪಡಿಸಿದುದರಿಂದ ಉಭಯ ಪಂಗಡದವರಿಗೂ ಹೊಡೆದಾಟವಾಗಿ 4 ಜನ ಹಿಂದೂಗಳಿಗೂ 8 ಜನ ಮುಸಲ್ಮಾನರಿಗೂ ವಿಶೇಷ ಗಾಯಗಳಾದವು. ಪೆಟ್ಟುತಿಂದವರು ಸದ್ಯಃ ರಾಜಧಾನಿಯ ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರು. ಈ ಮಧ್ಯೆ ಸಿಟಿ ಮ್ಯಾಜಿಸ್ಟ್ರೇಟರವರು ಆಸ್ಪತ್ರೆಗೆ ಹೋಗಿ ಗಾಯಹೊಂದಿದವರ ಪೈಕಿ ಕೆಲವರಿಂದ ಕೈಫಿಯತ್ತನ್ನು ತೆಗೆದುಕೊಂಡಿರುವರೆಂದು ತಿಳಿದುಬಂದಿದೆ.

ಬೇಲೂರು ತಾಲೂಕು ಬಿಕ್ಕೋಡು ಹೋಬಳಿ ಕೆರಲೂರಿನ ಪಟೇಲ್ ರಾಮೇಗೌಡನು, ತಮ್ಮನಾದ ಚಿಕ್ಕರಾಮೇಗೌಡನ ಜೊತೆಯಲ್ಲಿ ಕಳೆದ ನವೆಂಬರು 29ನೇ ತಾರೀಖಿನ ದಿವಸ ಒಂದು ಮೊಕದ್ದಮೆಯ ನಿಮಿತ್ತವಾಗಿ ಸಕಲೇಶಪುರಕ್ಕೆ ಹೋಗಿದ್ದು ಹಿಂತಿರುಗಿ ಬರುವಾಗ ಆಚಂಗಿರಿಗ್ರಾಮದ ರಸ್ತೆಯ ಪಕ್ಕದಲ್ಲಿ ಯಾರೋ ದ್ವೇಷಿಗಳು ಅವರೀರ್ವರನ್ನೂ ಕಡಿದುಹಾಕಿದರೆಂದೂ, ಈ ಕ್ರೂರಕೃತ್ಯವನ್ನು ಅಕಸ್ಮಾತ್ ದೂರದಿಂದ ನೋಡಿದ ಅವರ ಅತ್ತಿಗೆ ಚಿಕ್ಕಮಲ್ಲಮ್ಮನು ಗಾಬರಿಯಿಂದ ಓಡಿಹೋಗಿ ಸಕಲೇಶಪುರದ ಪೋಲೀಸ್ ಸ್ಟೇಷನ್ನಿಗೆ ವರ್ತಮಾನ ಕೊಟ್ಟಳೆಂದೂ, ಇನ್ಸ್ಪೆಕ್ಟರ್ ಲಿಂಗಪ್ಪನವರು ಕೂಡಲೇ ಆ ಸ್ಥಳಕ್ಕೆ ಹೋಗಿ ನೋಡುವಷ್ಟುಹೊತ್ತಿಗೆ, ರಾಮೇಗೌಡನು ಮೃತಪಟ್ಟಿದ್ದನೆಂದೂ, ಚಿಕ್ಕರಾಮೇಗೌಡನ ಮೈಮೇಲೆಲ್ಲಾ ಗಾಯಗಳಾಗಿದ್ದು ಕುತ್ತಿಗೆಯಹಿಂಭಾಗದಲ್ಲಿ ಅರ್ಧಭಾಗವು ಕತ್ತರಿಸಲ್ಪಟ್ಟಿದ್ದಿತೆಂದೂ, ಅನಂತರ ಸಬ್‌ಡಿವಿಜನ್ ಆಫೀಸರು ಅಮಲ್ದಾರ್ರವರ ಸಮೇತರಾಗಿ ಅನಾಹುತದ ಸ್ಥಳಕ್ಕೆ ಹೋಗಿ ಇನ್ನೂ ಕುಟುಕುಜೀವದಿಂದಿದ್ದ ಚಿಕ್ಕರಾಮೇಗೌಡನ ಹೇಳಿಕೆಯನ್ನು ಬರೆದುಕೊಂಡು ಅವನನ್ನು ಸಕಲೇಶಪುರದ ಆಸ್ಪತ್ರೆಗೆ ಸಾಗಿಸಿದರೆಂದೂ, ಪೋಲೀಸರು ಆಗಲೇ ಕೆಲವರನ್ನು ದಸ್ತಗಿರಿಮಾಡಿ ತನಿಖೆ ನಡೆಯಿಸುತ್ತಿರುವರೆಂದೂ ತಿಳಿದುಬಂದಿದೆ.

ಸತ್ಯಾಗ್ರಹಸಮರವಾರ್ತೆ.

ಇದೇ ಡಿಸೆಂಬರ್ 4 ನೇ ತಾರೀಖಿನ ದಿವಸ ಅಹಮದಾಬಾದ್ ಪೋಲೀಸರು ಗುಜರಾತ್ ಪ್ರಾಂತಿಕ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸುವದಕ್ಕಾಗಿ ಪರಸ್ಥಳಗಳಿಂದ ಬಂದ ಸುಮಾರು 100 ಜನ ಪ್ರತಿನಿಧಿಗಳನ್ನು ದಸ್ತಗಿರಿ ಮಾಡಿದರು. ಅವರ ಪೈಕಿ ಒಬ್ಬನಲ್ಲಿ ಕಾಂಗ್ರೆಸ್ ಕಾರ್ಯಕ್ರಮದ 650 ಹಸ್ತ ಪತ್ರಿಕೆಗಳು ದೊರೆತವು. ಮುಂಬಯಿ ಗವರ್ನರವರು ಅಹಮದಾಬಾದಿಗೆ ಬಂದಾಗ ಕಾಂಗ್ರೆಸ್ಸಿನವರು ಅನುಸರಿಸಬೇಕೆಂದಿದ್ದ ನಡವಳಿಕೆಗಳು ಸದರಿ ಹಸ್ತಪತ್ರಿಕೆಗಳಲ್ಲಿ ನಮೂದಿಸಲ್ಪಟ್ಟಿದ್ದವು.

ಡಿಸೆಂಬರ್ 4 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಗಾಂಧೀ ದಿನಾಚರಣೆಯನ್ನು ಮಾಡಲು ಪ್ರಯತ್ನಪಟ್ಟರೆಂಬ ಕಾರಣದ ಮೇಲೆ 19 ಜನ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಇದೇ ಡಿಸೆಂಬರ್ 6 ನೇ ತಾರೀಖಿನ ದಿವಸ ಅಮೃತಸರದ ವಾರ್ ಕೌನ್ಸಿಲ್ಲಿನ ಸದಸ್ಯರಾದ ಮಿ|| ಹಜಾರ್‌ಸಿಂಗ್‌ರವರು ವಿದೇಶೀ ವಸ್ತ್ರಬಹಿಷ್ಕಾರ ಮತ್ತು ಪಿಕೆಟಿಂಗ್ ಚಳವಳಿಯಲ್ಲಿ ಭಾಗವಹಿಸಿದರೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟರು.

ಕ್ರಿಸ್‌ಮಸ್ ಹಬ್ಬದ ವೇಳೆಗೆ ವಾಯುವ್ಯ ಪ್ರಾಂತದಲ್ಲಿರುವ ರಾಜಕೀಯ ಖೈದಿಗಳೆಲ್ಲರೂ ಬಿಡುಗಡೆಮಾಡಲ್ಪಡುವರೆಂದು 'ಅಮೃತಬಜಾರ್' ಪತ್ರಿಕೆಯು ತಿಳಿಸುತ್ತದೆ. ಈ ವಿಷಯವು ನಿರಾಧಾರವಾದುದೆಂದು ಇತ್ತೀಚೆಗೆ ತಿಳಿದುಬಂದಿದೆ.

ಡಿಸೆಂಬರ್ 2 ನೇ ತಾರೀಖಿನ ದಿವಸ 'ಕಾಂಗ್ರೆಸ್ ಪೋಸ್ಟಲ್ ಸರ್ವಿಸ್' ನ್ನು ಏರ್ಪಾಡುಮಾಡಿ ಬಹಿರಂಗವಾಗಿ ಕಾಂಗ್ರೆಸ್ ಪೋಸ್ಟ್‌ಕಾರ್ಡುಗಳನ್ನು ಮಾರಿದರೆಂಬ ಕಾರಣದಮೇಲೆ ಬಾಗೇರ್ಹಾತಿನ ಪೋಲೀಸರು 3 ಜನ ತರುಣರನ್ನು ದಸ್ತಗಿರಿ ಮಾಡಿದರು. ಇದೇ ಕಾರಣದ ಮೇಲೆ ಈ ಮೊದಲು ದಸ್ತಗಿರಿ ಮಾಡಲ್ಪಟ್ಟಿದ್ದ 15 ಜನರು ಖಿಲ್ಲಾದಲ್ಲಿ ವಿಚಾರಣೆಗೆ ಗುರಿಯಾಗಿರುವರು.

ಲಾಲಾಲಜಪತರಾಯರ ದಿನಾಚರಣೆಯ ದಿವಸ ಬಹಿರಂಗಸಭೆಯಲ್ಲಿ ಭಾಷಣಮಾಡಿದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ಶ್ರೀ|| ಪುರುಷೋತ್ತಮದಾಸ್ ತಾಂಡನ್‌ರವರಿಗೆ ಅಲಹಾಬಾದಿನ ಮ್ಯಾಜಿಸ್ಟ್ರೇಟರು 6 ತಿಂಗಳ ಕಠಿನಸಜೆ, 200 ರೂಪಾಯಿಗಳ ಜುಲ್ಮಾನೆ, ತಪ್ಪಿದರೆ ಮತ್ತೆ 6 ವಾರಗಳ ಸಾದಾ ಸಜೆಯನ್ನು ವಿಧಿಸಿದರು.

ವರ್ತಮಾನಸಂಗ್ರಹ

ಬರೋಡಾ ಮಹಾರಾಜರವರು ತಮ್ಮ ಸ್ವಂತಕ್ಕಾಗಿ 3 ಲಕ್ಷ ರೂಪಾಯಿಗಳ ಬೆಲೆಬಾಳುವ ಸುಂದರವಾದ ಸುವರ್ಣದ ರಥವೊಂದನ್ನು ತಯಾರಿಸಿರುತ್ತಾರೆ.

ಇದೇ ಡಿಸೆಂಬರು 3 ನೇ ತಾರೀಖಿನ ದಿವಸ ಅಹಮದಾಬಾದಿನ ಪೋಲೀಸರು ಕಳ್ಳತನದಿಂದ 3¼ ಮಣ ಬೆಳ್ಳಿಯನ್ನು ಸಾಗಿಸುತ್ತಿದ್ದ 3 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಮ್ಯಾಂಚೆಸ್ಟರಿನ ಕುದುರೆ ಜೂಜಿನ ಲಾಟರಿಯಲ್ಲಿ ಸೇಲಂ ಪಟ್ಟಣದ 15 ವರ್ಷದ ಒಬ್ಬ ವಿದ್ಯಾರ್ಥಿಗೆ 2,000 ಪೌಂಡುಗಳ ಬಹುಮಾನವು ದೊರಕಿರುವದು. ಈತನ ತಂದೆಯು ತೆಂಗಿನಕಾಯಿಯ ವ್ಯಾಪಾರಿಯಾಗಿರುತ್ತಾನೆ.

ಆರ್ಡಿನೆನ್ಸ್ ಮಸೂದೆಯು ದೆಹಲಿ ನ್ಯಾಯವಿಧಾಯಕ ಸಭೆಯಲ್ಲಿ ಮೂರು ವಾರಗಳವರೆಗೆ ಚರ್ಚಿಸಲ್ಪಟ್ಟನಂತರ ಕಾಯಿದೆಯಾಗಿ ಅಂಗೀಕರಿಸಲ್ಪಟಿತು. ಮಸೂದೆಗೆ ಅನುಕೂಲವಾಗಿ 56 ಓಟುಗಳೂ, ಪ್ರತಿಕೂಲವಾಗಿ 31 ಓಟುಗಳೂ ಬಂದವು.

ಡಿಸೆಂಬರ್ 3 ನೇ ತಾರೀಖಿಗೆ ಆಖೈರಾದ ವಾರದಲ್ಲಿ ಮುಂಬಯಿಯಿಂದ ಪರದೇಶಗಳಿಗೆ 3,10,77,936 ರೂ. ಗಳ ಭಂಗಾರವು ಸಾಗಿಸಲ್ಪಟ್ಟಿತು. ಇದುವರೆಗೆ ಮುಂಬಯಿಯಿಂದ ಸಾಗಿಸಲ್ಪಟ್ಟ ಭಂಗಾರದ ಬೆಲೆಯು 99,17,37,845 ರೂ. ಗಳಾಗಿರುವದು!

ಜಿನಿವಾನಗರದಲ್ಲಿ ಕಟ್ಟಿರುವ 'ಜನಾಂಗಸಂಯೋಜನಕೂಟ' ದ ನೂತನಗೃಹದ ಮುಂಭಾಗವು ಮೂರನೇ ಒಂದು ಮೈಲು ಉದ್ದವಾಗಿರುವುದು! ಸಭಾಭವನದಲ್ಲಿ 2000 ಜನ ಪ್ರತಿನಿಧಿಗಳೂ 'ಪ್ರೆಸ್‌ಗ್ಯಾಲರಿ' ಯಲ್ಲಿ 600 ಜನ ಪತ್ರಿಕಾಪ್ರತಿನಿಧಿಗಳೂ ಕುಳಿತುಕೊಳ್ಳಬಹುದು!

ಸರ್ ಅಲನ್ ಕೊಭ್ಯಾಂ ಎಂಬುವರ ಲೋಕಪ್ರಸಿದ್ಧವಾದ ಆಕಾಶವಿಮಾನಗಳ ಸರ್ಕಸ್ ಕಂಪೆನಿಯು ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಸಂಚಾರ ಹೊರಟಿರುವದು. ಈ ಸರ್ಕಸ್ಸಿನಲ್ಲಿರುವ ಏರೋಪ್ಲೇನುಗಳು ಸಂಗೀತದ ತಾಳಕ್ಕೆ ಸರಿಯಾಗಿ ಅಂತರಿಕ್ಷದಲ್ಲಿ ಕುಣಿಯುವುವಂತೆ!

ಇಂಗ್ಲೆಂಡಿನಲ್ಲಿ ಆಯುಧ ಸಾಮುಗ್ರಿಗಳನ್ನು ತಯಾರಿಸುವವರು ಕಳೆದ ಆಗಸ್ಟ್ ತಿಂಗಳಲ್ಲಿ ಚೀನಾಕ್ಕೆ 10,00,000 ಪಿಸ್ತೂಲಿನ ಕೋಟಾಗಳನ್ನೂ, ಜಪಾನಿಗೆ 12,00,000 ಮಿಷಿನ್‌ಗನ್ನುಗಳ ಕೋಟಾಗಳನ್ನೂ, ಸೆಪ್ಟಂಬರ್ ತಿಂಗಳಲ್ಲಿ ಜಪಾನಿಗೆ 200 ಮಿಷಿನ್‌ಗನ್ನುಗಳನ್ನೂ ರವಾನಿಸಿದರು.

ಸೋಲಾಪುರದಲ್ಲಿ ಒಂದು ಹೊಸಕಟ್ಟಡಕ್ಕೆ ಹಾಕುತ್ತಿದ್ದ ಕಬ್ಬಿಣದ ತೊಲೆಯು ಕಳಚಿಬಿದ್ದು ಏಳುಜನ ಕೆಲಸಗಾರರು ಕೂಡಲೇ ಮೃತಿಹೊಂದಿದರು. 4 ಜನರಿಗೆ ಪೂರಾ ಗಾಯಗಳಾಗಿರುವುವು. ಹಾಗೂ ಕಟ್ಟಡದ ಗೋಡೆಯ ಕೆಳಗೆ 6 ಜನರು ಸಿಕ್ಕಿಕೊಂಡಿರುವರೆಂದು ತಿಳಿದುಬಂದಿದೆ.

ಕಳೆದ ಘೋರಯುದ್ಧದ ದೆಸೆಯಿಂದ ಒಂದುಕೋಟಿಜನರು ಮನೆಮಠಗಳನ್ನೂ, 90 ಲಕ್ಷ ಜನರು ತಮ್ಮ ತಂದೆಯರನ್ನೂ, 50 ಲಕ್ಷ ಸ್ತ್ರೀಯರು ತಮ್ಮ ಪತಿಗಳನ್ನೂ ಕಳೆದುಕೊಂಡರು. 30 ಲಕ್ಷ ಶಿಪಾಯಿಗಳು ಕೈಸೆರೆ ಸಿಕ್ಕಿದರು. ಹಾಗೂ ಒಂದುಕೋಟಿ ಜನರು ರಣದೇವತೆಗೆ ಬಲಿಯಾದರು!

ಇಷ್ಟರಲ್ಲಿಯೇ ಕಾನ್ಪುರದಲ್ಲಿ ನಡೆಯಲಿರುವ ಪೌರಸಭೆಯ ಸದಸ್ಯರ ಚುನಾವಣೆಯ ಕಾಲದಲ್ಲಿ ಗಲಭೆಯಾಗಬಹುದೆಂಬ ಅನುಮಾನದ ಮೇಲೆ ಪೋಲೀಸರು ಅನೇಕ ಉಮೇದುವಾರರಿಂದ ಜಾಮೀನು ಮುಚ್ಚಳಿಕೆಯನ್ನು ತೆಗೆದುಕೊಂಡಿರುತ್ತಾರೆ. ಕಾಂಗ್ರೆಸ್ ಕರ್ತರಾದ ಶ್ರೀಮತಿ ಸರಳಾದೇವಿಯವರು ಜಾಮೀನನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಕಾರಾಗೃಹಕ್ಕೆ ಕಳುಹಿಸಲ್ಪಟ್ಟರು.

ಕಳೆದ ನವೆಂಬರ್ 26 ಮತ್ತು 27 ನೇ ತಾರೀಖುಗಳಲ್ಲಿ ಇಂಗ್ಲೆಂಡಿನಲ್ಲಿ ಅಪಾರವಾದ ಮಳೆಯು ಸುರಿದುದರಿಂದ ಥೇಮ್ಸ್‌ನದಿಯ ಪ್ರವಾಹವು ಮೇರೆತಪ್ಪಿ ಲಂಡನ್ ನಗರದಲ್ಲಿ ಏನು ಅನಾಹುತವು ಸಂಭವಿಸುವುದೋ ಎಂದು ಎಲ್ಲರೂ ಭಯಭ್ರಾಂತರಾಗಿದ್ದರು. ಆದರೆ ದೈವವಶಾತ್ ಪ್ರವಾಹವು ಜಾಗ್ರತೆಯಾಗಿ ಕಡಿಮೆಯಾಯಿತು. ಪ್ರವಾಹವು ಇನ್ನು 3 ಅಂಗುಲದಷ್ಟು ಮಾತ್ರ ಹೆಚ್ಚಾಗಿದ್ದರೆ ವಿಶೇಷ ಅನಾಹುತವಾಗುತ್ತಿದ್ದಿತಂತೆ!

ಪ್ಯಾಲೆಸ್ಟೈನಿನಲ್ಲಿ ಕೇವಲ ಮಕ್ಕಳಿಂದಲೇ ನಿರ್ವಹಿಸಲ್ಪಡುವ ಒಂದು ಗ್ರಾಮವಿರುವುದು! 3 ವರ್ಷಗಳ ಹಿಂದೆ ಜರ್ಮನಿಯ 'ಸೀಗ್‌ಫ್ರೈಡ್ ಲೇಮನ್' ಎಂಬ ಪ್ರಸಿದ್ಧ ಡಾಕ್ಟರರು ಅನಾಥರಾದ 'ಜ್ಯೂ' ಮತದ ಮಕ್ಕಳಿಗೋಸ್ಕರ 'ಬೆನ್ ಶೆಮೆನ್' ಎಂಬ ಒಂದು ಗ್ರಾಮವನ್ನು ಸ್ಥಾಪಿಸಿದರು. ಈಗ ಅಲ್ಲಿ ಅನೇಕ ಎಕರೆಗಳ ಫಲವೃಕ್ಷಗಳ ತೋಟಗಳು ನಿರ್ಮಿಸಲ್ಪಟ್ಟು, ಆಡಳಿತವೆಲ್ಲವೂ ಕೇವಲ ಚಿಕ್ಕ ಚಿಕ್ಕ ವಯಸ್ಸಿನ ಬಾಲಕರ ವಶದಲ್ಲಿರುವದು!

ಸ್ಯಾಲಿಸ್‌ಬರಿಯ ಸಮೀಪದಲ್ಲಿರುವ ಪೋರ್ಟನ್ ಎಂಬ ಸ್ಥಳದಲ್ಲಿ ಬ್ರಿಟಿಷ್ ಸರಕಾರದವರು 'ಕೆಮಿಕಲ್ ವಾರ್‌ಫೇರ್ ಎಕ್ಸಪೆರಿಮೆಂಟಲ್ ಸ್ಟೇಷನ್' ಎಂಬ ಒಂದು ಕಾರ್ಖಾನೆಯನ್ನು ಇಟ್ಟಿರುವರು. ಫ್ರಾನ್ಸ್ ದೇಶದ ಪ್ರಸಿದ್ಧ ಚಕ್ರವರ್ತಿಯಾದ ನೆಪೋಲಿಯನ್ನನನ್ನು ಸೆರೆಯಿಟ್ಟಿದ್ದ 'ಸೆಂಟ್ ಹೆಲೆನಾ' ಎಂಬ ದ್ವೀಪದಲ್ಲಿ ತಯಾರಾಗುವ ವಿಷದ ಗಾಳಿಯನ್ನು ಮೇಲ್ಕಂಡ ಕಾರ್ಖಾನೆಯಲ್ಲಿ ಕುದುರೆ, ಬೆಕ್ಕು, ಮೊಲ, ಹಂದಿ, ಇಲಿ ಮೊದಲಾದ ಪ್ರಾಣಿಗಳ ಮೇಲೆ ಪ್ರಯೋಗಿಸಿ ಪರೀಕ್ಷಿಸುವರು. ಇದಕ್ಕಾಗಿ ಬ್ರಿಟಿಷ್ ಸರ್ಕಾರದವರು ಇದುವರೆಗೆ 15 ಲಕ್ಷ ಪೌಂಡ್‌ಗಳಿಗಿಂತಲೂ ಹೆಚ್ಚಾಗಿ ವೆಚ್ಚಮಾಡಿರುವರು.

ಪ್ಯಾರಿಸ್ಸಿನಲ್ಲಿ ಗಂಡಹೆಂಡರಿಬ್ಬರು ಬಹು ವಿಚಿತ್ರರೀತಿಯಲ್ಲಿ ಆತ್ಮಹತ್ಯ ಮಾಡಿಕೊಂಡರು. ಪ್ರಪಂಚದಲ್ಲಿ ಜೀವಿಸಿರುವದೇ ಬೇಡವೇ ಎಂಬುದೇ ಅವರಿಗೆ ಒಂದು ದೊಡ್ಡ ಸಮಸ್ಯೆಯಾಗಿದ್ದಿತು. ಕಡೆಗೆ ಅದರ ಪರೀಕ್ಷೆಗಾಗಿ ಒಂದು ನಾಣ್ಯವನ್ನು ಮೇಲಕ್ಕೆ ಎಸೆದು ಅದು ನೆಲಕ್ಕೆ ಬಿದ್ದಮೇಲೆ ತಲೆಯಿರುವ ಭಾಗವು ಮೇಲಾದರೆ ಬದುಕಬೇಕೆಂದೂ, ಅಕ್ಷರವಿದ್ದಭಾಗವು ಮೇಲಾದರೆ ಪ್ರಾಣತ್ಯಾಗ ಮಾಡಬೇಕೆಂದೂ ನಿರ್ಧರಿಸಿಕೊಂಡರು. ಅದರಂತೆ ನಾಣ್ಯವನ್ನು ಎಸೆದು ಪರೀಕ್ಷಿಸಿದಾಗ ಮೃತ್ಯುವೇ ಜಯಹೊಂದಿತು. ತಮ್ಮ ಕಥೆಯನ್ನು ಒಂದು ಕಾಗದದಲ್ಲಿ ಬರೆದಿಟ್ಟು ಇಬ್ಬರೂ ಗುಂಡಿನಿಂದ ಆತ್ಮಹತ್ಯಮಾಡಿಕೊಂಡರು.

ಶ್ರೀಮದ್ಯುವರಾಜರವರು.

ಶ್ರೀಮದ್ಯುವರಾಜರವರು ಪಾಶ್ಚಾತ್ಯದೇಶವನ್ನು ಸಂಚಾರಮಾಡಿಕೊಂಡು ಕಳೆದ ತಿಂಗಳು ೨೫ ರಲ್ಲಿ ರಾಜಧಾನಿಗೆ ದಯಮಾಡಿಸಿದರು. ಪೌರಸ್ತ್ಯ ಮತ್ತು ಪಾಶ್ಚಾತ್ಯದೇಶಗಳಲ್ಲಿ ನಾಗರಕತೆಗೆ ಮಾತೃಸ್ಥಾನವಾದ ಅನೇಕ ದೇಶಗಳನ್ನು ನೋಡಿ ಅಲ್ಲಿಯ ರಾಜ್ಯಭಾರಕ್ರಮಗಳು, ಕೃಷಿ, ಕೈಗಾರಿಕೆ, ವ್ಯಾಪಾರ ಮೊದಲಾದವುಗಳು, ಆರ್ಥಿಕಸ್ಥಿತಿ, ಉದ್ಯೋಗಸ್ಥಿತಿ, ಧಾರ್ಮಿಕಸ್ಥಿತಿ ಇವೇ ಮೊದಲಾದವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ತಿಳಿದುಕೊಂಡು ಬಂದಿರುವರು. ಶ್ರೀ ಜಯಚಾಮರಾಜಒಡೆಯರವರಿಗೆ ಇವರ ದೇಶಾಟನೆಯಿಂದಲೂ ಪಂಡಿತ ಭಾಷಣದಿಂದಲೂ ಉಂಟಾದ ಪರಿಜ್ಞಾನವು ದೇವರ ದಯೆಯಿಂದ ಲಭ್ಯವಾದದ್ದಕ್ಕೋಸ್ಕರ ಈ ಸಂಸ್ಥಾನದ ಪ್ರಜೆಗಳೆಲ್ಲರೂ, ಸಂತೋಷಪಡಬೇಕಾಗಿದೆ. ದೇಶಾಟನದಿಂದಲೂ ಪಂಡಿತ ಭಾಷಣದಿಂದಲೂ ವಿಚಾರಪರರಿಗೆ ಸಹವಾಸದೋಷದಿಂದ ಆ ಜನ್ಮಸಿದ್ಧವಾಗಿ ಬರುವ ದುರಭಿಮಾನಗಳು ಪರಿಹಾರವಾಗುವವು. Compound ಮತ್ತು Complex Ignorance ಎಂಬ ಮೌಢ್ಯವು ತೊಲಗುವುದು. ಡಾ|| ಬೆಸೆಂಟರವರು ವಿದ್ಯಾರ್ಥಿದಶೆಯಲ್ಲಿ ಹೇಗೆ ನಾಸ್ತಿಕರಾದರೋ, ಇಂಡಿಯಾದೇಶಕ್ಕೆ ಬಂದು ವೇದಶಾಸ್ತ್ರಪುರಾಣೇತಿಹಾಸಗಳನ್ನು ಪರಿಶೀಲಿಸಿ Isis unveiled Secret doctrine ಮೊದಲಾದ ಗ್ರಂಥಗಳನ್ನು ರಚ್ಛ್ಯಾಮಾಡುವ ಸಂಭವವು ಬಂದ ಮೇಲೆ ಹೇಗೆ ವೇದಾಂತವಿಶಾರದೆಯರಾದರೋ, ಹಾಗೆ ನಮ್ಮ ಶ್ರೀಮದ್ಯುವರಾಜರವರು ಪೌರಸ್ತ್ಯ ಪಾಶ್ಚಾತ್ಯದೇಶಗಳಲ್ಲೆಲ್ಲಾ ಸಂಚಾರಮಾಡಿ ಸಕಲ ಶಾಸ್ತ್ರಗಳನ್ನು ಪರಿಶೀಲಿಸಿ ನಮ್ಮ ಬ್ರಹ್ಮವಿದ್ಯೆಯೇ ಸಕಲ ಪುರುಷಾರ್ಥಸಿದ್ಧಿಗೂ ಸಾಧಕವಾದದ್ದೆಂಬ ಪರಿಜ್ಞಾನವನ್ನು ಹೊಂದಿ ಅಮೆರಿಕಾಖಂಡವೇ ಮೊದಲಾದ ಸ್ಥಳಗಳಲ್ಲಿ ವಿವೇಕಾನಂದರೇ ಮೊದಲಾದವರು ಹೇಗೆ ಭಾರತೀಯರ ತತ್ವಜ್ಞಾನವನ್ನು ಪಾಶ್ಚಾತ್ಯರಿಗೂ ಕೂಡ ಲಭ್ಯವಾಗುವಂತೆ ಮಾಡಿದರೋ ಹಾಗೆ ಶ್ರೀಮದ್ಯುವರಾಜರವರು ಚಿಕಾಗೋ ಮೊದಲಾದ ಅಮೆರಿಕಾಖಂಡದ ಪಟ್ಟಣಗಳಲ್ಲಿ ಹಿಂದೂ ಧರ್ಮಗಳು ಇತರ ಎಲ್ಲಾ ಮತಧರ್ಮಗಳಿಗಿಂತಲೂ ಇಹಪರ ಸೌಖ್ಯಗಳ ಪ್ರಾಪ್ತಿಗೆ ಕೇವಲ ಸಾಧಕಗಳೆಂದು ಬೋಧಿಸಿ ಬಹುಜನಗಳ ಮೆಚ್ಚಿಗೆಗೆ ಪಾತ್ರರಾಗಿರುವರೆಂಬುದಾಗಿಯೂ ಅನೇಕ ಮತಸ್ಥರು ತಮ್ಮ ಮತದವರಿಗೆ ಮಾತ್ರ ಇಹಪರ ಸೌಖ್ಯಗಳು ಉಂಟಾಗುವುವೆಂದು ತಿಳಿದುಕೊಂಡು ಅಜ್ಞಾನರೂಪವಾದ ಅಂಧಕಾರದಲ್ಲಿರುವಾಗ್ಗೆ ಮನೋವಾಕ್ಕರ್ಮಗಳಲ್ಲಿ ಅಪರಿಶುದ್ಧರಾದವರು ಯಾವ ಮತಕ್ಕೆ ಸೇರಿದ್ದಾಗ್ಯೂ ಸದ್ಗತಿಯನ್ನು ಹೊಂದುವದಿಲ್ಲವೆಂದು ನಮ್ಮ ವೇದಾಂತಗಳು ಹೇಳುವದನ್ನು ಅನುಷ್ಠಾನಕ್ಕೆ ತಂದುಕೊಂಡಿರುವುದಲ್ಲದೆ ತಮಗೆ ಬೇಕಾದವರಿಗೆಲ್ಲಾ ಈ ಧರ್ಮೋಪದೇಶವನ್ನು ಮಾಡುತ್ತಲಿರುವರು ಎಂಬದಾಗಿ ಮ|| ಎಂ. ವೆಂಕಟಕೃಷ್ಣಯ್ಯನವರು ಒಬ್ಬ ಪತ್ರಿಕಾಕರ್ತರಿಗೆ ಹೇಳಿದರು.

ಶ್ರೀ ಜಯಚಾಮರಾಜಒಡೆಯರವರು ನಮ್ಮ ಮುಂದಿನ ಪ್ರಭುಗಳಾಗಿರುವುದರಿಂದ ಅವರಿಗೆ ಈ ಮನೋಭಾವವು ಬರುವಂತೆ ಶ್ರೀಮದ್ಯುವರಾಜರವರು ಮಾಡಿದರೆ ಈ ಸಂಸ್ಥಾನದ ಪ್ರಜೆಗಳೆಲ್ಲರೂ ಅವರಿಗೆ ತುಂಬಾ ಕೃತಜ್ಞರಾಗಿರುವರೆಂಬದಾಗಿ ಸದರಿ ಪತ್ರಿಕಾಕರ್ತರು ಅಪ್ಪಣೆ ಕೊಡಿಸಿದರು. ಶ್ರೀಮದ್ಯುವರಾಜರವರು ಈ ವಿಷಯವನ್ನು ಪರ್ಯಾಲೋಚಿಸಿ ಮೈಸೂರು ಸಂಸ್ಥಾನಕ್ಕೆ ಕಾರ್ಯತಃ ಯದುಕುಲತಿಲಕರಾಗಿ ಪರಿಣಮಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಸಕಲ ಸಜ್ಜನರೂ ಕೋರುತ್ತಾರೆ. ಭೀಷ್ಮ.

ದೇವಾಲಯ ಪ್ರವೇಶಮುಷ್ಕರ.

ದೇವಾಲಯಗಳು ಸರ್ಕಾರದ ದ್ರವ್ಯದಿಂದ ಅಂದರೆ ಎಲ್ಲಜನರೂ ಕೊಡುವ ಕಂದಾಯದ ಹಣದಿಂದ ಪೋಷಿತವಾಗಿವೆ. ಆದುದರಿಂದ ಎಲ್ಲಜನರಿಗೂ ದೇವಾಲಯ ಪ್ರವೇಶಕ್ಕೆ ಹಕ್ಕು ಇರಬೇಕು. ಸರ್ಕಾರದ ಹಣದಿಂದ ಮಾಡಲ್ಪಟ್ಟು ಕಾಪಾಡಲ್ಪಡುತ್ತಿರುವ ರಸ್ತೆಗಳು ಕೆರೆಕಟ್ಟೆ ಭಾವಿಗಳಲ್ಲಿ ಹೇಗೆ ಎಲ್ಲರಿಗೂ ಹಕ್ಕುಂಟೋ ದೇವಾಲಯಗಳಲ್ಲಿಯೂ ಹಾಗೆಯೇ ಇರಬೇಕು. ಹಾಗಲ್ಲದೆ ಕೆಲವು ಪಂಗಡದವರಿಗೆ ದೇವಾಲಯ ಪ್ರವೇಶವನ್ನು ನಿರೋಧಿಸುವುದು ಅನ್ಯಾಯವೆಂದು ಕೆಲವರು ವಾದಿಸುತ್ತಾರೆ. ಅವರು ಈ ಕೆಳಗಿನ ವಿಷಯಗಳಿಗೆ ಗಮನಕೊಟ್ಟು ಅನಂತರ ಮುಷ್ಕರ ಹಿಡಿಯುವುದು ಒಳ್ಳೆಯದು.

(1) ಸರಕಾರದ ರಸ್ತೆಗಳಲ್ಲಿಯೂ ಕೂಡ ಅಡ್ಡಿಗಳುಂಟು. ಕೆಲವು ರಸ್ತೆಗಳಲ್ಲಿ ಎತ್ತಿನ ಗಾಡಿಗಳು ಜಟಕಾಗಾಡಿಗಳು ಹೋಗಕೂಡದೆಂದೂ, ಮತ್ತೆ ಕೆಲವು ರಸ್ತೆಗಳಲ್ಲಿ ಮೋಟಾರುಗಳು ಮಾತ್ರವೇ ಹೋಗಬಹುದು. ಗಾಡಿಗಳು ಬಸ್ಸುಗಳು ಹೋಗಕೂಡದೆಂದೂ ನಿಬಂಧನೆಯಿದೆ. ಮುಷ್ಕರಮಾಡುವವರು ಇದನ್ನು ಏಕೆ ಒಪ್ಪಿಕೊಂಡಿದ್ದಾರೆ?

(2) ದೇವಾಲಯಗಳು, ತತ್ರಾಪಿ ಪುರಾತನ ದೇವಾಲಯಗಳು ಸರ್ಕಾರದ ಹಣದಿಂದಲೇ ಕಟ್ಟಲ್ಪಡಲಿಲ್ಲ. ಈಗಲೂ ಸರಕಾರದ ದ್ರವ್ಯದಿಂದಲೇ ಅವುಗಳು ನಡೆಯುತ್ತಲೂ ಇಲ್ಲ. ಅನೇಕ ಭಕ್ತಾದಿಗಳು ಕಟ್ಟಡಗಳನ್ನು ಕಟ್ಟಿಸಿ ನಗನಾಣ್ಯ ಜಮೀನುಗಳನ್ನು ಕೊಟ್ಟಿರುತ್ತಾರೆ. ದೇವಾಲಯಗಳು ಪೂರ್ವದ ಶಾಸ್ತ್ರಾನುಸಾರ ನಡೆಸಲ್ಪಡಬೇಕು ಎಂಬ ಉದ್ದೇಶದಿಂದಲೂ, ಹಾಗೆಯೇ ನಡೆಸಲ್ಪಡುವುವೆಂಬ ಭರವಸೆಯಿಂದಲೂ ಕೊಟ್ಟಿರುತ್ತಾರೆ. ಈಗತಾನೇ ಒಬ್ಬರು ನಂಜನಗೂಡು ದೇವಸ್ಥಾನಕ್ಕೆ ಶಿವಕೂಟದಲ್ಲಿ ಬ್ರಾಹ್ಮಣರ ಅನ್ನದಾನಕ್ಕಾಗಿ ಸಾಕಾದಷ್ಟು ಜಮೀನನ್ನು ಕೊಟ್ಟಿರುತ್ತಾರೆ. ಇವರುಗಳ ಉದ್ದೇಶಕ್ಕೆ ಅನುಸಾರವಾಗಿ ಧರ್ಮವನ್ನು ನಡೆಯಿಸತಕ್ಕದ್ದು ಧರ್ಮರಕ್ಷಕರಾದ ಸರಕಾರದವರ ಕರ್ತವ್ಯ. ಎಲ್ಲ ಸಜ್ಜನರೂ ಇದಕ್ಕೆ ಸಹಕಾರಮಾಡಬೇಕು. ಇದನ್ನು ಮುರಿಯಲು ಮುಷ್ಕರ ಹಿಡಿಯುವುದು ಯಾವ ನ್ಯಾಯ?

(3) ಶಾಸ್ತ್ರಗಳ ಯಾವ ಬಗೆಯ ಬಾಧೆಯೂ ಇಲ್ಲದಿರುವ ಅಮೇರಿಕಾ ದೇಶದಲ್ಲಿಯೂ ಕೂಡ ನಿಗ್ರೋಜನರಿಗೆ (ಅವರೂ ಸಹ ಬಿಳಿಜನಗಳಂತೆಯೇ ಕ್ರೈಸ್ತರು) ಪ್ರತ್ಯೇಕ ದೇವಾಲಯ. ಬಿಳಿಜನಗಳ ದೇವಾಲಯದಲ್ಲಿ ಅವರಿಗೆ ಪ್ರವೇಶವಿಲ್ಲ. ಈ ಜನಗಳು ಬಿಳಿಜನಗಳಷ್ಟೇ ನಾಗರಿಕರು, ವಿದ್ಯಾವಂತರು, ಆಚಾರಸಂಪನ್ನರು. ಆದಾಗ್ಯೂ ಇವರಿಗೆ ಹೋಟೇಲುಗಳು ಸ್ಕೂಲುಗಳು ಟ್ರಾಂಗಾಡಿಗಳು ಸಹ ಪ್ರತ್ಯೇಕವಾಗಿವೆ. ಮುಷ್ಕರ ಹಿಡಿಯುವವರು ಇದಕ್ಕೆ ಏನು ಹೇಳುತ್ತಾರೆ?

ನಮ್ಮ ದೇಶದಲ್ಲಿಯೂ ಸರಕಾರದಿಂದ ಗ್ರಾಂಟುಗಳನ್ನು ಪಡೆಯುವ ಯೂರೋಪಿಯನ್ನರ ಸ್ಕೂಲು ದೇವಾಲಯಗಳು ಇವೆ. ಇವಕ್ಕೆ ಕರಿಯಜನರಿಗೆ ಅವಕಾಶವಿಲ್ಲ. ಈ ವಿಷಯಗಳನ್ನೆಲ್ಲಾ ಅರಿತುಕೊಳ್ಳಬೇಕಲ್ಲವೇ?

ಸತ್ಯವಾದಿ.

ಸನಾತನಧರ್ಮಪ್ರೇಮದ ಜನರಿಗೆ ಅಪೂರ್ವಸಂಧಿ.

ಈಗಿನ ಕಾಲಕ್ಕೆ ಸನಾತನ ಧರ್ಮದ ವಿಷಯದಲ್ಲಿ ಅನೇಕ ವಾದವಿವಾದಾತ್ಮಕ ಪತ್ರಗಳು ಹೊರಟಿದ್ದರಿಂದ ಸನಾತನ ಧರ್ಮದ ತತ್ವಗಳನ್ನು ಪ್ರಸಾರಮಾಡುವದಕ್ಕೂ ಮತ್ತು ಸನಾತನ ಧರ್ಮದ ವಿಷಯದಲ್ಲಿ ಶಂಕೆ ಮತ್ತು ತಪ್ಪುತಿಳುವಳಿಕೆಗಳು ಅನೇಕ ಜನರಿಗೆ ಇದ್ದದ್ದನ್ನು ನಿವಾರಣ ಮಾಡುವ ಉದ್ದೇಶದಿಂದ ಸನಾತನ ಧರ್ಮದ ಪೀಠಸ್ಥರೂ, ಪಂಡಿತರೂ ವ ಧರ್ಮಾಭಿಮಾನಿಗಳೂ ಕೂಡಿ ದಕ್ಷಿಣ ಹಿಂದೂಸ್ಥಾನದಲ್ಲಿ ದಿಗ್ವಿಜಯ ಯಾತ್ರೆಗೆ ಇದೇ ಡಿಸೆಂಬರ ೫ ನೇ ತಾರೀಖಿಗೆ ಮುಂಬಯಿಯಿಂದ ಹೊರಟು ಮೋಟಾರದಿಂದ ಪೂನಾ ವ ಬೆಳಗಾಂವಕ್ಕೆ ೮ ನೇ ತಾರೀಖಿನ ಸುಮಾರಕ್ಕೆ ಬಂದು ಅಲ್ಲಿ ೨-೩ ದಿವಸ ಇದ್ದು ಧಾರವಾಡಕ್ಕೆ ತಾ|| ೧೨ ರ ಸುಮಾರಕ್ಕೆ ಬರುವವರು ಇದ್ದಾರೆ. ಇಲ್ಲಿ ೩ ದಿವಸ ಇರುವರು. ಧರ್ಮ ವಿಷಯವಾಗಿ ಪ್ರವಚನ (ಲೆಕ್ಚರ) ವಗೈರೆ ಆಗುವವು. ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು. ಸನಾತನ ಧರ್ಮಿಗಳು ತಮಗಿದ್ದ ಧಾರ್ಮಿಕ ಸಂಶಯಗಳನ್ನು ಅವರನ್ನು ಕೇಳಿ ನಿವಾರಣೆ ಮಾಡಿಕೊಳ್ಳಬೇಕೆಂದು ವಿನಂತಿ ಅದೆ. ಮುಂದೆ ಅವರು ಮೈಸೂರ ಕಡೆಗೆ ಪ್ರಯಾಣ ಮಾಡತಕ್ಕವರು ಇರುವರು. ಮುಂದಿನ ಕಾರ್ಯಕ್ರಮವನ್ನು ಆಗಾಗ್ಗೆ ತಿಳಿಸುತ್ತದೆ. ಅಗ್ಗೆ ಅಲ್ಲಲ್ಲಿಯ ಸನಾತನ ಧರ್ಮದವರು ಅವರನ್ನು ತಮ್ಮಲ್ಲಿಗೆಬರಮಾಡಿಕೊಂಡು ಈ ದಿಗ್ವಿಜಯದ ಫಲವನ್ನು ಉಪಯೋಗಿಸಬೇಕೆಂದು ವಿನಂತಿ ಅದೆ.

ದಿಗ್ವಿಜಯ ಯಾತ್ರೆಗೆ ಬರುವ ಮಹನೀಯರು.

೧. ಶ್ರೀ ೧೦೮ ಗೋಕುಲನಾಥಜಿ ಮಹಾರಾಜ (ವಲ್ಲಭಪೀಠಾಧೀಶ) ಮುಂಬಯಿ, ೨. ಪಂಡಿತ ಶ್ರೀ ರಾಜರಾಜೇಶ್ವರಶಾಸ್ತ್ರಿ ದ್ರವಿಡ, ಕಾಶಿ. ೩. ಜೀವನ್ಯಾಯತೀರ್ಥ. ೪. ದೇವಕೃಷ್ಣ ಪಂಡಿತ. ೫ ದೇವನಾಯಕಆಚಾರ್ಯ. ೬. ಮಹೇಶಚಂದ್ರ ಚಟ್ಟೋಪಾಧ್ಯಾಯ ಅಡ್ವೋಕೇಟ. ೭. ಹಿರಾಲಾಲ ದಾಯಾಭಾಯಿ ನಾನವಟಿ, ಎಲ್.ಎಲ್.ಬಿ., ಸಾಲಿಸಿಟರ, ಹಾಯಕೋರ್ಟ, ಮುಂಬಯಿ. ೮. ಜಯೇಂದ್ರರಾವ ದುರಕಲ್. ಪ್ರೊಫೆಸರ ಮತ್ತು ಶ್ರೀ ಜಗದ್ಗುರು ಶಂಕರಾಚಾರ್ಯ ಸಂಕೇಶ್ವರ ಮತ್ತು ಯದುಗಿರಿ ರಾಮಾನುಜಾಚಾರ್ಯ ಇವರು ಸಹ ಈ ಕಾರ್ಯಕ್ಕಾಗಿ ಬರುವವರು ಇರುವರು.

ತಮ್ಮ ವಿಧೇಯರು,
ಪಂಡಿತ ವಿದ್ವತ್ಮಣಿ ನಾಗೇಶಶಾಸ್ತ್ರಿ ಉಪ್ಪಿನಬೆಟಗೇರಿ,
ವೇ|| ಶಾ. ಸುಬ್ಬಾಚಾರ್ಯ, ಕಿತ್ತೂರ,
ಶ್ರೀ ಪದಕಿ ಶ್ರೀನಿವಾಸರಾವ, ರಿ. ೧ ನೇ ಸಬ್-ಜಡ್ಜ್,
ಶ್ರೀ ಕೊಪ್ಪೀರ ಅಣ್ಣಾರಾವ ದೇಶಪಾಂಡೆ,
ಶೇಷಗಿರ ನಾರಾಯಣ ಕರಗುದರಿ.

ಸೂಚನೆ—ಈ ಸಂಬಂಧದಲ್ಲಿ ವಿಶೇಷ ಮಾಹಿತಿ ಬೇಕಾದಲ್ಲಿ ಶೇಷಗಿರ ನಾರಾಯಣ ಕರಗುದರಿ ಇವರಿಗೆ ಬರೆಯಬೇಕು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲಿಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಟ್ಟ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಪ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬಿರಿತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬಲಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನಿತ್ರಾಣಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳಿನ ರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವವು. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಪ್ಪೆ ಕೆಮ್ಮು, ಒಣ ಕೆಮ್ಮು, ಶ್ವಾಸ ಕಟ್ಟುವ ಕಠಿಣ ಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ತುರಿ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆನಾಲು ಪರೀಕ್ಷಿಸಿಕೊಡುವ ವೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಟಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[17] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಜಿ|| ಬಿಜಾಪುರ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ
ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗಸುಂದರಪಾಕ [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ ಬೆನ್ನುನೋವು, ನಿದ್ರೆಕಡಿಮೆ ಬರೋಣ, ಯಾವದೇತರದ ರೋಗದಿಂದ ಎದ್ದಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫವಾಗಿ, ಹಸಿವೆ, ಸ್ಮರಣಶಕ್ತಿ, ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ. ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಬಾಟ್ಲಿಯನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ೧ ಡಬ್ಬಿಗೆ ೫ ರೂಪಾಯಿ; ಟಪಾಲ ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು. ೫೨ ವನಸ್ಪತಿಗಳ ಹೆಸರು. ಮತ್ತು ಬಕ್ಷೀಸು, ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸ ಅದೆ, ಓದಿಕೊಳ್ಳಿರಿ.

ಬಂಜೆತನ, ಮುಟ್ಟಿಕೂಲಿ ಮತ್ತು ಎಲ್ಲ ಬಣ್ಣದ ಸೆರಗು ಇವುಗಳ ಮೇಲೆ

ಸ್ತ್ರೀರೋಗನಿವಾರಣೆಬಾಟ್ಲಿ.

ಎಲ್ಲಾ ಬಣ್ಣದ ಸೆರಗು, ಮುಡಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ, ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ ಕಿಬ್ಬೊಟ್ಟೆಯಲ್ಲಿ, ನಡಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವುದಿಲ್ಲೆಂದು ಎರಡನೇ ಲಗ್ನವಾಗುವುದಕ್ಕಿಂತ ಮುಂಚೆ ಇದ್ದ ಗೃಹದೇವತೆಗೇ ಇದೇ ಔಷಧ ಅವಶ್ಯ ಕೊಡಿರಿ. 40 ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. 21 ದಿವಸ ಸಾಲುವಷ್ಟು, ಪೂರ್ಣಗುಣವುಳ್ಳ ಒಂದು ಬಾಟ್ಲಿಗೆ 7 ರೂ. ಟ. ಖ. 8 ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಾಶಯಧಾರಣಮಾಡುವ ಶಕ್ತಿ ಅತಿ ತೀವ್ರ ಅದೆ, ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ. ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಹತ್ತುವವೋ, ಇಂಥ ಬೇರೆ ಕಾರಣದಿಂದ ಸಂತತಿಇಚ್ಛಾ ಯಾರಿಗೆ ತೀರಿರುತ್ತದೋ ಅವರಿಗೆ ಈ ಉಪಾಯವು ಬಹಳೇ ಹಿತಕರ ಅದೆ. ಶರೀರದಲ್ಲಿಯೂ ಸಂಸಾರಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆವೇಳೆಗೆ ಕಡಿಗಾಗುವದು ಸುರು ಇದ್ದು, ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನು ಮಾಡಿದರೂ ಸುರು ಆಗುವದಿಲ್ಲ. ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ. ಒಂದು ಡಬ್ಬಿಗೆ 7 ರೂ. ಟ. ಖ. 8 ಆಣೆ. ಇದರ ಅನುಪಾನ—ಕಡೆಗಾದ ೪ ನೇ ದಿವಸ ೧ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಮಧ್ಯಾಹ್ನಕ್ಕೆ ೧, ರಾತ್ರೀ ಊಟವಾದನಂತರ ೧, ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ.

ಪತ್ತಾ, ಮಾಲಕ:—ವೈದ್ಯ ವಿರುಪಾಕ್ಷಪ್ಪ ಸಿದ್ದಪ್ಪ ಕಾಪಸೆ,
4 ಮು. ಪೋ. ಮಿರಜ, ಎಂ. ಎಸ್. ಎಂ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAMA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತದೆ. [illegible] ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ [illegible] ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, [illegible] ಕೆಮ್ಮು, ಜ್ವರ, [illegible] ರಿಂದ ಸಂ[illegible] 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರ. [illegible] (ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುವುವು).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[24] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೬ ಆಣೆ**
पंडित श्रीकाशिनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪ್ರಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿ ತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[25] ಪೋ. ಬಾ. ೫೧೦, ಮದರಾಸ

(Registered Trade Mark)

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಡಿಶಂಬರ್ ೧೯೩೨ [ಸಂಚಿಕೆ ೩೩

ಡಾ|| ಎಂ. ಅಣ್ಣಾಜಪ್ಪನವರು.

ರಾಜಧಾನಿಯ ಡಾಕ್ಟರುಗಳಲ್ಲೆಲ್ಲಾ ಅತ್ಯಂತವಾಗಿ ಹೆಸರುಪಡೆದಿರುವ ಮೇಲ್ಕಂಡ ಮಹಾಶಯರು ಕಳೆದ ೧೨ ನೆಯ ತಾರೀಖಿನ ದಿವಸ ತಮ್ಮ "ಮಾಡರನ್ ಫಾರ್ಮೆಸಿ" ಯ ದ್ವಿತೀಯವಾರ್ಷಿಕೋತ್ಸವ ನಿಮಿತ್ತವಾಗಿ ಇಂಡಿಯನ್ ಗೆಸ್ಟ್‌ಕ್ವಾರ್ಟರ್ಸಿನಲ್ಲಿ ದಿವ್ಯವಾದ ಔತಣವನ್ನು ಏರ್ಪಡಿಸಿ ಸರ್ವರಿಗೂ ಪರಮಸಂತೋಷವನ್ನುಂಟುಮಾಡಿದರು. ಈ ಸಮಾರಂಭವು ಮುಗಿದ ಮೇಲೆ "ಕೊಲಂಬಿಯನ್‌ಸ್ಟಾರ್" ಎಂಬ ಪದವಿಯಿಂದ ಪ್ರಸಿದ್ಧರಾಗಿರುವ ಮ|| ರಾ|| ವಿದ್ವಾನ್ ಪಿ. ಚೌಡಯ್ಯನವರ ಮತ್ತು ಅವರ ಸಹೋದರರ ಆಶ್ಚರ್ಯಕರವಾದ ಪಿಟೀಲ್‌ವಾದನವು ಸಮಾರಂಭಕ್ಕಾಗಿ ಆಗಮಿಸಿದ ಅತಿಥಿಗಳನ್ನು ಸಂತೋಷಸಾಗರದಲ್ಲಿ ಲೋಲಾಡಿಸಿತು. ಇದಾದಮೇಲೆ ಅನೇಕರು ಡಾಕ್ಟರವರ ಗುಣಾತಿಶಯವನ್ನು ಭಾಷಣಮೂಲಕವಾಗಿ ಕೊಂಡಾಡಿ ತಮ್ಮ ಆನಂದೋದ್ಗಾರವನ್ನು ವ್ಯಕ್ತಪಡಿಸಿದರು. ಡಾಕ್ಟರರು ಕೇವಲ ಚಿಕ್ಕವಯಸ್ಸಿನವರಾದಾಗ್ಯೂ ಅತ್ಯಲ್ಪಕಾಲದಲ್ಲಿಯೇ ಸರ್ವತ್ರ ಘನತರವಾದ ಕೀರ್ತಿಯನ್ನು ಪಡೆದುಕೊಂಡಿರುವುದು ಪೂರ್ವಜನ್ಮಕೃತ ಪುಣ್ಯರಾಶಿಯ ಫಲವೆಂದೇ ಹೇಳಬೇಕಾಗಿದೆ. ಡಾಕ್ಟರವರ ಹಸ್ತಗುಣವಂತೂ ಚಿಂತಾಮಣಿಗೆ ಸಮಾನವಾಗಿದೆ. ಇವರ ಹೃದಯವಂತೂ ಸದಾ ಶಾಂತಿರಸದಿಂದ ತುಂಬಿ ತುಳುಕುತ್ತಿರುವುದು. ರೋಗಿಗಳಂತೂ ಮಂದಹಾಸಯುತವಾದ ಇವರ ಮಧುಮಧುರ ನುಡಿಗಳನ್ನು ಕೇಳಿದೊಡನೆಯೇ ಅರ್ಧರೋಗದಿಂದ ದೂರರಾಗುವರು. ಇವರಿಗಿರುವ ರೋಗಪರೀಕ್ಷಾಶಕ್ತಿಯು ಅತ್ಯದ್ಭುತವಾದುದು. ಇವೇ ಮೊದಲಾದ ಕಾರಣಗಳಿಂದ ದೂರದೂರ ದೇಶದ ರೋಗಿಗಳು ಇವರಲ್ಲಿಗೆ ಬಂದು ಆರೋಗ್ಯಭಾಗ್ಯಶಾಲಿಗಳಾಗಿ ಹೋಗುತ್ತಿರುವರು. ಇವೇ ಮೊದಲಾದ ವಿಷಯಗಳನ್ನು ಪರಿಶೀಲಿಸಿದರೆ, ಇಂಗ್ಲೆಂಡ್‌ದೇಶದಲ್ಲಿ ಜನ್ಮವೆತ್ತಿ ವೈದ್ಯವಿದ್ಯೆಯಲ್ಲಿ ಜಗದ್ವಿಖ್ಯಾತನಾಗಿಹೋಗಿರುವ "ಅಸ್ಲರ್" ಮಹೋದಯನ ಪ್ರತಿಕೃತಿಯೇ ಈ ಡಾಕ್ಟರರಾಗಿರುವರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಅಸಾಧಾರಣ ಸದ್ಗುಣಗಣಮಂಡಿತರೂ ಸಕಲಜನಪ್ರೇಮಪಾತ್ರರೂ ಆದ ಈ ಡಾಕ್ಟರ್‌ಮಹಾಶಯರಿಗೆ ಶ್ರೀ ಜಗದೀಶ್ವರನು ಆಯುರಾರೋಗ್ಯಭಾಗ್ಯಾದಿಸಕಲಸಂಪತ್ಸಮೃದ್ಧಿಯನ್ನನುಗ್ರಹಿಸಿ ರಕ್ಷಿಸಲೆಂದು ಹಾರೈಸುತ್ತೇವೆ.

೧೧ನೇ ಉಪಾಧ್ಯಾಯರ ಸಂಘ.

ಅರಶೀಕೆರೆ ತಾಲೂಕು ಸಾತುಂಗೆರೆಗ್ರಾಮದ ಉರ್ದು (ಹಿಂದೂಸ್ಥಾನಿ) ಸ್ಕೂಲ್ ಮುಂಭಾಗದಲ್ಲಿ ತಳಿರುತೋರಣಕದಲೀಸ್ತಂಭಗಳಿಂದ ಚಿತ್ರಮಯವಾಗಿ ರಚಿಸಿದ್ದ ಹಂದರದಲ್ಲಿ ಮೇಲ್ಕಂಡ ಸಂಘದ ಕಾರ್ಯವು ಅತಿವೈಭವದೊಡನೆ ನೆರವೇರಿಸಲ್ಪಟ್ಟಿತು. ಈ ಸಂಘಕ್ಕೆ ಸುಮಾರು 20 ಜನರ ಮೇಲ್ಪಟ್ಟು ಉಪಾಧ್ಯಾಯರು ದಯಮಾಡಿಸಿದ್ದಲ್ಲದೆ ಕಣಕಟ್ಟೆ ವಗ್ಯೆರೆ ಗ್ರಾಮಾಂತರಗಳಿಂದ ಅನೇಕಜನ ದೊಡ್ಡಮನುಷ್ಯರು ಸಹ ಆಹ್ವಾನಿಸಲ್ಪಟ್ಟಿದ್ದರು. ಗ್ರಾಮ ಪ್ರಮುಖರಾದ ಪ|| ಮಲ್ಲೇಗೌಡರು, ಮರುಳಪ್ಪನವರು, ಎ. ಶೇಕ್‌ಬುಡನ್‌ಸಾಹೇಬರು ಅಬ್ದುಲ್‌ವಹಾಬ್‌ಸಾಹೇಬರು ಹುಸೇನ್‌ಸಾಹೇಬರೇ ಮೊದಲಾದ ಮಹಾಜನರು ಸಹ ಆಗಮಿಸಿದ್ದರು. ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಸಭೆಯು ಪ್ರಾರಂಭವಾಯಿತು. ಮ|| ರಾ|| ಹುಸೇನ್‌ಸಾಹೇಬರ ಪ್ರಾರ್ಥನೆಯಂತೆ ಕಣಕಟ್ಟೆ ಬಿಂದೇರಾಯರು, ಮತ್ತು ಶೇಕ್‌ಬುಡನ್‌ಸಾಹೇಬರು ಅಗ್ರಾಸನವನ್ನು ವಹಿಸಿದರು. ಸಭಾಪ್ರಾರಂಭದಲ್ಲಿ ಪದ್ಧತಿಮೇರೆಗೆ ಬಾಲಕರಿಂದ ದೇವತಾಪ್ರಾರ್ಥನೆಗಳು ನಡೆದಮೇಲೆ ಸಿಡುವಳ್ಳಿ ಸ್ಕೂಲ್ ಮಾಸ್ಟರ್ ಮ|| ಮರುಳಸಿದ್ದಯ್ಯನವರು ಪೋಷಕರ ಮತ್ತು ವಿದ್ಯಾರ್ಥಿಗಳ ಕರ್ತವ್ಯ ಎಂಬ ವಿಚಾರದಲ್ಲಿ ಪಾಶ್ಚಾತ್ಯದೇಶಗಳ ಇತಿಹಾಸಗಳಿಂದಲೂ ಅನೇಕ ಗ್ರಂಥಾಧಾರಗಳಿಂದಲೂ ಒಳ್ಳೆಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಅನಂತರ ಕಣಕಟ್ಟೆ ಸ್ಕೂಲ್ ಹೆ|| ಮಾ|| ಶ್ರೀಕಂಠಯ್ಯನವರು ಉಪಾಧ್ಯಾಯರ ವರ್ತನೆಗಳು ಉಪಾಧ್ಯಾಯರಿಗೆ ಗ್ರಾಮಸ್ಥರು ಮತ್ತು ಪೋಷಕರು ಮಾಡುವ ಸಹಾಯಗಳು ಬಾಲಕರ ನಡೆನುಡಿಗಳು ಉಪಾಧ್ಯಾಯರಿಗೂ ಗ್ರಾಮಸ್ಥರಿಗೂ ಪರಸ್ಪರ ಪ್ರೀತಿವುಂಟಾಗತಕ್ಕ ಕಾರಣಗಳು ಇವುಗಳನ್ನು ಕುರಿತು ಸರ್ವರ ಮನಸ್ಸಾನಂದವಾಗುವಂತೆ ಬಹುಗಂಭೀರವಾದ ಭಾಷಣವನ್ನು ಮಾಡಿದರು. ಈ ದಿನದ ಸಮ್ಮೇಳನವನ್ನು ಈ ಗ್ರಾಮದಲ್ಲಿ ಒಳ್ಳೆಉತ್ಸಾಹದಿಂದಲೂ ಮುತವರ್ಜಿಯಿಂದಲೂ ನಡೆಸಲು ಕಟಿಬದ್ಧರಾಗಿದ್ದ (ಉರ್ದು) ಹಿಂದುಸ್ಥಾನಿ ಸ್ಕೂಲ್ ಹೆ|| ಮಾಸ್ಟರ್ ಮಹಮದ್ ಜಾಫರ್‌ಸಾಹೇಬರು ಪ|| ಮಲ್ಲೇಗೌಡರು ಹುಸೇನ್‌ಸಾಹೇಬರು ಮೊದಲಾದವರಿಗೆ ಸಭಾಪರವಾದ ವಂದನೆಗಳು ಅರ್ಪಿಸಲ್ಪಟ್ಟು ಸಭೆಯವರಿಗೆಲ್ಲ ಫಲ-ತಾಂಬೂಲ ವಿನಿಯೋಗವಾದ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಭರಖಾಸ್ತುಮಾಡಲ್ಪಟ್ಟಿತು. ಸಂಘಕ್ಕೆ ದಯಮಾಡಿಸಿದ್ದ ಉಪಾಧ್ಯಾಯರೇ ಮೊದಲಾದವರಿಗೆಲ್ಲಾ ಊಟಉಪಚಾರಾದಿ ಸತ್ಕಾರಗಳು ನಡೆಸಲ್ಪಟ್ಟವು.

ಪ್ರತ್ಯಕ್ಷದರ್ಶಿ.

ಸ್ವೀಕಾರ

ಶಿಕಾರಿಪುರ ತಾ|| ಮಾಳಗೊಂಡನಕೊಪ್ಪದ ಮ|| ರಾ|| ಪಾಟೀಲ ಬಸವಲಿಂಗಪ್ಪನವರ ಗೃಹದಲ್ಲಿ ನೆರವೇರಿದ ದೀಕ್ಷಾಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ. ಯು ಶ್ರೀ|| ಷ|| ಬ್ರ|| ಕ್ಯಾಸನೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಅಲಹಾಬಾದಿನ ಒಬ್ಬ ಪೋಲೀಸ್ ಸಬ್ ಇನ್ಸ್ಪೆಕ್ಟರು ಕಳೆದ ಹದಿನೆಂಟು ವರ್ಷಗಳಿಂದಲೂ ಒಂದು ಕಳ್ಳರ ಗುಂಪಿಗೆ ಮುಖಂಡನಾಗಿದ್ದುಕೊಂಡು 125 ಅತ್ಯಾಚಾರಗಳನ್ನು ನಡೆಯಿಸಿ, ಒಟ್ಟು 3½ ಲಕ್ಷ ರೂಪಾಯಿ ಬೆಲೆಬಾಳುವ ನಗನಾಣ್ಯಗಳನ್ನು ಅಪಹರಿಸಿರುವನೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾನೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

~~ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು.~~

ನನ್ನ ಪ್ರವಾಸದಲ್ಲಿ ವಿರಕ್ತರ ಬಗ್ಗೆ ನಡೆದ ಪ್ರಶ್ನೋತ್ತರಗಳು.

ಒಬ್ಬ ಸ್ವಾಮಿಗಳು ಬಂದು ರೈಲಿನಲ್ಲಿ ಕುಳಿತರು. ಮೊದಲೇ ಕುಳಿತಿದ್ದ ಓರ್ವ ಭಕ್ತನು ಭಕ್ತಿಯಿಂದ ಸ್ವಾಮಿಗಳಿಗೆ ನಮಸ್ಕಾರ ಮಾಡಿದನು. ಪರಸ್ಪರ ಕುಶಲಪ್ರಶ್ನೆಗಳು ಜರುಗಿದಮೇಲೆ ಪ್ರಸ್ತಾಪಕ್ಕೇನ ಭಕ್ತನು "ಬುದ್ಧೀ! ನಮ್ಮ ವೀರಶೈವಮತದಲ್ಲಿ ಗುರುಸ್ಥಲ, ವಿರಕ್ತ ಎಂಬುದಾಗಿ ಬಹಳ ಗೊಂದಲವೆದ್ದಿದೆ. ಈ ಚಳವಳಿಯಿಂದ ನಮ್ಮ ಮತಕ್ಕೆ ಹಾನಿಯಲ್ಲವೇ?" ಎಂದನು.

ಸ್ವಾಮಿಗಳು—ನಸುನಕ್ಕು ಭಕ್ತನೇ ಕೇಳು: ಘರ್ಷಣದಿಂದ ಗಂಧ ಹೊರಡುವದೆನ್ನುವಂತೆ ಈ ಚಳವಳಿಯು ಕೇವಲ ಹಿತಕ್ಕಾಗಿ ಆಗಿರುವದೇ ಹೊರತು ಕೇಡಿಗಲ್ಲ. ಮೂಢಭಕ್ತಿಯಿಂದ ಜನರಲ್ಲಿ ಒಂದುಪ್ರಕಾರ ತಪ್ಪುತಿಳುವಳಿಕೆಯು ಹುಟ್ಟಿ ಅದರ ಪರಿಣಾಮದಿಂದ ಧರ್ಮಶಾಸ್ತ್ರಮಾರ್ಗವು ತಪ್ಪಿಹೋಗಿತ್ತು. ಅದು ಈಗ ಸುಧಾರಿಸುವ ಕಾಲವು ಪ್ರಾಪ್ತವಾದುದರಿಂದ ತಿಳುವಳಿಕೆಯಿಲ್ಲದ ಜನರು ಚಳವಳಿ ಮತ್ತು ಮತಕ್ಕೆ ಹಾನಿಯೆಂದು ಹೇಳುವರು. ಇದು ಸುಧಾರಣೆಯ ಕಾಲವೆಂದು ತಿಳಿಯಬೇಕು.

ಭಕ್ತ—ಇದು ಎಂದಿಗೆ ಶಾಂತವಾಗಬೇಕು?

ಸ್ವಾಮಿಗಳು—ಭಕ್ತನೇ! ಇದು ೭೦೦-೮೦೦ ವರ್ಷಗಳಿಂದಲೂ ಸಾಧಿಸಿಕೊಂಡು ಬಂದಿರುವದರಿಂದ ಈಗಲೇ ಶಾಂತವಾಗುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಎಂದು ~~ಧೈರ್ಯಗುರುಸ್ಥಲದ ಮಠಾಧಿಕಾರಿಗಳು ತಮ್ಮ ಮಕ್ಕಳನ್ನು ಗೋತ್ರ-ಸೂತ್ರ ಸಂಸ್ಕಾರವಾದ ವಿರಕ್ತರ ಮಠಗಳಿಗೆ ಕೊಡುವವರೆಗೂ [illegible] ಈ ಚಳವಳಿಯು ಶಾಂತವಾಗುತ್ತದೆಂದು ತಿಳಿಯಬೇಕು.~~ ಗುರುವರ್ಗದವರಲ್ಲಿ ಪರಸ್ಪರ ಐಕ್ಯವಿಲ್ಲದ್ದರಿಂದ ಈ ದುರವಸ್ಥೆಯೊದಗಿರುವದು.

ಭಕ್ತ—ಬುದ್ಧೀ! ಇದೇನು ಹೇಳುವಿರಿ? ವಿರಕ್ತಮಠಗಳಿಗೆ ಗುರುವರ್ಗದವರು ತಮ್ಮ ಮಕ್ಕಳನ್ನು ಕೊಡಬಾರದೇನು?

ಸ್ವಾಮಿಗಳು—ಅಯ್ಯಾ! ಮಠದವರು ಮಕ್ಕಳನ್ನು ವಿರಕ್ತಮಠಗಳಿಗೆ ದಾನಮಾಡಿದರೆ ಸನ್ಯಾಸಶಾಸ್ತ್ರದೀಕ್ಷಾಸಂಪನ್ನರಾದ ಆ ಮಕ್ಕಳು ಆ ಮಠಗಳಿಗೆ ಸ್ವಾಮಿಗಳಾಗಿ ಮಾಡುವದಾದರೂ ಏನು? ವೀರಶೈವರ ಜನನಾರಭ್ಯ ಅಂತ್ಯೇಷ್ಟಿಪರ್ಯಂತ ಯಾವತ್ತು ಶುಭಾಶುಭಕರ್ಮಗಳನ್ನು ಶ್ರೀ ಜಗದ್ಗುರು ಪಂಚಪೀಠಾಧಿಪತಿಗಳ ಶಾಸನಪ್ರಕಾರ ಗುರುವರ್ಗದ ಮಠಾಧಿಕಾರಿಗಳು ಮಾಡುವಂತೆ ಈ ವಿರಕ್ತಮಠಗಳ ಸ್ವಾಮಿಗಳಿಗೆ ಧರ್ಮಸಂಬಂಧವಾದ ಯಾವದಾದರೊಂದು ವಿಷಯದಲ್ಲಿಯೂ ಅಧಿಕಾರವಿರುವದಿಲ್ಲ. ಯಾವ ವೀರಶೈವನೂ ಅವರಿಂದ ಯಾವಕರ್ಮಗಳನ್ನೂ ಮಾಡಿಸುವದಿಲ್ಲ. ಅವರಿಗೆ ಪತ್ರಿಕವಾಕ್ಯಾದಿಗಳ ಅಧಿಕಾರವೇ ಇಲ್ಲ. ವಿರಕ್ತ ಎಂಬ ಶಬ್ದದ ವಿಚಾರವನ್ನು ಮಾಡಿದರೆ ಈ ದುಷ್ಟಪದ್ಧತಿಯು ಗೊತ್ತಾಗುವದು.

ಭಕ್ತ—ಸ್ವಾಮಿ! ನಮಗೆ ಹೇಗೆ ತಿಳಿಯಬೇಕು? ಇದರ ಮರ್ಮವೇನು? ತಿಳಿಸಿರಿ.

ಸ್ವಾಮಿಗಳು—ಭಕ್ತನೇ! ವಿಗತಾ ರಕ್ತಾ ಯಸ್ಯಸಃ ವಿರಕ್ತಃ ಎಂದು ವ್ಯುತ್ಪತ್ತಿಯಾಗುವುದರಿಂದ ವಿರಕ್ತನೆಂದರೆ ಆಶಾರಹಿತನೆಂದು ಅರ್ಥವಾಗುತ್ತದೆ. ಇವನ ನಡೆತೆಯು ಧರ್ಮಗ್ರಂಥಗಳಲ್ಲಿ ಬಹಳ ಪ್ರಕಾರವಾಗಿ ಹೇಳಲ್ಪಟ್ಟಿರುವದು. ಒಟ್ಟಿಗೆ ಮಠಮಾನ್ಯಗಳನ್ನು ಬಿಟ್ಟು ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಎನ್ನುವಂತೆ ಕರತಲಭಿಕ್ಷಾ ತರುತಲವಾಸಿಯಾಗಿ ತಾನು ಕೈಕೊಂಡ ಸನ್ಯಾಸಾಶ್ರಮವನ್ನು ಸಾಧಿಸಿಕೊಳ್ಳುವದಕ್ಕೆ ದೀಕ್ಷಾಕಾಲದಲ್ಲಿ ಶ್ರೀಗುರುವು ದಯಪಾಲಿಸಿದ ಇಷ್ಟಲಿಂಗವನ್ನು ತ್ರಿಕಾಲದಲ್ಲಿಯೂ ಪೂಜಿಸಿ ಗುರುಧ್ಯಾನವನ್ನು ಮಾಡುತ್ತ ಲೌಕಿಕವ್ಯವಹಾರಗಳನ್ನು ಬಿಟ್ಟು ಶಿವಜ್ಞಾನಸಂಪನ್ನನಾಗಿ ಸಂಚರಿಸುವವನೇ ವಿರಕ್ತನು. ಅವನೇ ನಿರಾಭಾರಿಯು. ಅವನೇ ಸನ್ಯಾಸಿಯು.

ಭಕ್ತ—ಹಾಗಾದರೆ ಸ್ವಾಮಿ! ವಿರಕ್ತಮಠಗಳಿಗೆ ಮರಿಗಳನ್ನು ಮಾಡುವದು ಅನ್ಯಾಯವೇನು?

ಸ್ವಾಮಿ—ಅನ್ಯಾಯವಲ್ಲವೇ? ಏನೂ ತಿಳಿಯದ ಮರಿಗಳನ್ನು ವಿರಕ್ತಮಠಕ್ಕೆ ಮಾಡಿದರೆ ಅವರಿಗೆ ಆಶ್ರಮಧರ್ಮವು ಹೇಗೆ ತಿಳಿಯುವದು? ವಿರಕ್ತಮಠಗಳಿಗೆ ವಿಶೇಷವಾಗಿ ಆಸ್ತಿಯಿರುವದರಿಂದ ಅಲ್ಲಿಗೆ ಮರಿಗಳಾದವರು ಶ್ರೀಮಂತಿಕೆಯ ಸವಿಗೆಬಿದ್ದು ಆಶ್ರಮಧರ್ಮಕ್ಕೆ ವಿರೋಧವಾಗಿ ವರ್ತಿಸಿ ದುರ್ಮಾರ್ಗಿಗಳಾಗುವರು. ಇಂಥ ಉದಾಹರಣೆಗಳನ್ನು ಎಷ್ಟೋ ನೋಡಿರಬಹುದು. ಮೇಲಾಗಿ ಸಂಸಾರಿಗಳಲ್ಲಿ ಸೇರಿ ಮಾಡಿದರೆ ಅವನು ಬುದ್ಧಿವಂತನಿರಲಿ ದಡ್ಡನಿರಲಿ ಎಂದೂ ವಿರಕ್ತನಾಗುವದಿಲ್ಲ. ಸಣ್ಣರನ್ನೇ ಮಾಡಬೇಕೆಂದು ಯಾವ ಗ್ರಂಥಗಳಲ್ಲಿಯೂ ಹೇಳಿಲ್ಲ. ಹಾಗೆ ಮಾಡುವದು ಆಶ್ರಮದ ಪದ್ಧತಿಯೇ ಅಲ್ಲ.

ಭಕ್ತ—ಓಹೋ! ಹೇಗೆಮಾಡಿದರೆ ವಿರಕ್ತರಾಗುವರು? ಪೂರ್ವದಲ್ಲಿ ವಿರಕ್ತರು ಇರಲಿಲ್ಲವೋ?

ಸ್ವಾಮಿ—ಭಕ್ತನೇ! ಬೆದರಬೇಡ. ನೀನು ಒಳ್ಳೇದಾರಿ ಹಿಡಿದಿರುವಿ: ನಮಗೆ ಬಹಳಸಂತೋಷವಾಗುತ್ತದೆ. ಸಮಾಧಾನದಿಂದ ಕೇಳು: ಭಕ್ತನಾಗಲಿ, ಮಾಹೇಶ್ವರನಾಗಲಿ, ನಿವೃತ್ತಿಮಾರ್ಗದಿಂದ ವಿರತಿಭಾವವುಂಟಾಗಿ ಅಂದರೆ (ಸಂಸಾರಿಯಾಗಿದ್ದರೂ ಅಥವಾ ಬ್ರಹ್ಮಚಾರಿಯಾಗಿದ್ದರೂ ತನ್ನ ದೀಕ್ಷಾಗುರುವಿನ ಬೋಧದ ಜ್ಞಾನಾಧಿಕ್ಯದಿಂದ ಹೊನ್ನು ಹೆಣ್ಣು ಮಣ್ಣಿನಲ್ಲಿ ವಿರತಿಯುಂಟಾಗಿ) ಸಂಸಾರಹೇಯಸ್ಥಲವನ್ನು ಸರ್ವರಿಗೂ ಬೋಧಿಸುತ್ತ ಸದ್ಗತಿಯನ್ನು ಸಂಪಾದಿಸುವವರೇ ವಿರಕ್ತರಾಗುವರು. ಈ ತರದ ಆಚರಣೆಯುಳ್ಳ ವಿರಕ್ತರು ಪೂರ್ವದಲ್ಲಿ ಬಹುಜನರು ಆಗಿಹೋಗಿರುವರು. ನಿಜಗುಣಶಿವಯೋಗಿಗಳು, ಸರ್ಪಭೂಷಣಶಿವಯೋಗಿಗಳು, ಘನಮಠದಪ್ಪನವರು, ಮೊನ್ನೆ ಮೊನ್ನೆ ಆಗಿಹೋದ ಬಾಗಲಕೋಟೆಮಲ್ಲಯ್ಯನವರು ಮುಂತಾದವರಿಗೆ ನಿಜವಾದ ವಿರಕ್ತರೆನ್ನಬೇಕು. ಮಠಮಾನ್ಯಗಳನ್ನು ಮಾಡಿಕೊಂಡು ಲೌಕಿಕವ್ಯವಹಾರಗಳಲ್ಲಿ ತೊಡಗಿ ಜ್ಞಾನಾರ್ಜನೆಗೆ ಬದಲು ಕಲಹಾರ್ಜನೆಮಾಡುತ್ತ ಶಾಸ್ತ್ರೀಯ ಪದ್ಧತಿಶೂನ್ಯರಾದ ಈಗಿನತಕ್ಕ ವಿರಕ್ತರಿಗೆ ನಾಮಧಾರಿವಿರಕ್ತರೆಂದು ಹೇಳಬಹುದು.

ಭಕ್ತ—ಬುದ್ಧೀ! ಭಕ್ತರೂ ವಿರಕ್ತರಾಗಲಿಕ್ಕೆ ಬರುತ್ತದೋ?

ಸ್ವಾಮಿಗಳು—ಅಪ್ಪಾ! ಈಗೀಗ ಭಕ್ತರೆಲ್ಲ ಸೇರಿ ವಿರಕ್ತಮಠಕ್ಕೆ ಮರಿಮಾಡುವ ಸಾಂಪ್ರದಾಯವು ಬಳಕೆಯಲ್ಲಿ ಬಂದಿರುವದರಿಂದ ಶಾಸ್ತ್ರದಪದ್ಧತಿಯೇ ತಪ್ಪಿಹೋಗಿರುತ್ತದೆ. ನ್ಯಾಯವಾಗಿ ತಿಳಿದವರು ಎಂದೂ ಈ ಪದ್ಧತಿಗೆ ಒಪ್ಪುವದಿಲ್ಲ. ಆದರೆ ಭಕ್ತನಾಗಲೀ, ಮಾಹೇಶ್ವರನಾಗಲಿ, ಪೂರ್ವಕರ್ಮವಾಸನಾಬಲದಿಂದ ವೈರಾಗ್ಯವುಂಟಾದರೆ ಅವನು ವಿರಕ್ತನಾಗಬಲ್ಲನು. ನೀನೇ ವಿಚಾರಮಾಡು. ನಿನಗೆ ಸಂಸ್ಕಾರವಾಗಿ ಗುರೂಪದೇಶದಿಂದ ಸಂಸಾರದಲ್ಲಿ ಹೇಯವು ಉತ್ಪನ್ನವಾದರೆ ನೀನು ವಿರಕ್ತನಾಗುವದಿಲ್ಲವೇ?

ಭಕ್ತ—ಸ್ವಾಮಿ! ನಿಜವಾದ ವೈರಾಗ್ಯದಿಂದ ಲೋಕೋತ್ತರವಾದ ಕೀರ್ತಿಯನ್ನು ಪಡೆದು ಆಶ್ರಮಧರ್ಮಕ್ಕೆ ಸರಿಯಾಗಿ ವರ್ತಿಸತಕ್ಕ ವಿರಕ್ತರ ಬಗ್ಗೆ ತಮ್ಮ ಅಭಿಪ್ರಾಯವೇನು?

ಸ್ವಾಮಿ—ಈ ಬಗ್ಗೆ ನಮ್ಮ ದುರಭಿಪ್ರಾಯವೇನೂ ಇಲ್ಲ. ಪರಂತು.........!

ಭಕ್ತ—ಸ್ವಾಮಿ! ಅದೇನು? ಮಧ್ಯದಲ್ಲಿಯೇ ಪರಂತು ಎಂದು ಸುಮ್ಮನಾದಿರಿ. ಇದ್ದ ವಿಷಯವನ್ನು ಅಪ್ಪಣೆಕೊಡಿರಿ.

ಸ್ವಾಮಿ—ಭಕ್ತನೇ! ಏನ್ಮಾಡಿದರೂ ನೀನು ಭಕ್ತವರ್ಗದಲ್ಲಿ ಸೇರಿದವನಾಗಿರುವದರಿಂದ ಆ ವರ್ಗದ ಅಭಿಮಾನವು ಇದ್ದೇ ತೀರಬೇಕಾಗುತ್ತದೆ.

ಭಕ್ತ—ಅದರೇನು ಗುರುವೇ! ಗುರುವನ್ನು ಬಿಡಲಿಕ್ಕಾದೀತೆ? ಅವರವರ ಅಭಿಮಾನವು ಅವರವರಿಗಿದ್ದರೂ ಧರ್ಮಶಾಸ್ತ್ರದಂತೆ ನಡೆಯಲಿಕ್ಕೆ ಯಾರದ್ದು ಅಂಜಿಕೆ?

ಸ್ವಾಮಿ—ಹಾಗಾದರೆ ಕೇಳು! ಗುರುಸ್ಥಲದಮಕ್ಕಳನ್ನು ವಿರಕ್ತಮಠಕ್ಕೆ ಮಾಡುವದು ಅನ್ಯಾಯವೆನ್ನುವದು ನಿನಗೆ ತಿಳಿದ ಸಂಗತಿಯೇ ಆಗಿದೆ. ಆದರೆ ಈಚೆಗೆ ಭಕ್ತರು ತಮ್ಮ ಮಕ್ಕಳು ಮೂಲಾ ಮೊದಲಾದ ದುಷ್ಟನಕ್ಷತ್ರಗಳಲ್ಲಿ ಹುಟ್ಟಿರುವರೆಂದು ತಿಳಿದು ವಿರಕ್ತಮಠಕ್ಕೆ ಕೊಡುವ ಪದ್ಧತಿಯು ನಿನಗೆ ಗೊತ್ತೇ ಇದೆ. ಅಂಥ ಮಕ್ಕಳಿಗೆ ಜಂಗಮದೀಕ್ಷೆಯನ್ನು ಮಾಡಿ ಆ ಮಠದ ವಿರಕ್ತರು ತಮ್ಮ ಉತ್ತರಾಧಿಕಾರವನ್ನು ಆ ಭಕ್ತರ ಮಕ್ಕಳಿಗೆ ಕೊಡುತ್ತ ಬಂದರು. ಇಂದಿಗೂ ಹಲಕೆಲವು ಮಠಗಳಲ್ಲಿ ಭಕ್ತರೇ ವಿರಕ್ತರಾಗುವ ಪದ್ಧತಿಯು ಬಹುದಿವಸದಿಂದ ಇರುತ್ತದೆ. ಹಿಂದಕ್ಕೆ ಆದವರು ಭಕ್ತರು. ಈಗ ಇದ್ದವರೂ ಭಕ್ತರು. ಮುಂದೆ ಆಗುವವರೂ ಭಕ್ತರು. ಹೀಗೆ ಭಕ್ತರೇ ವಿರಕ್ತರಾಗಿರುವದರಿಂದ ಶುದ್ಧಸಾಂಪ್ರದಾಯಿಕರಾದ ಮಾಹೇಶ್ವರರು ಅಂಥವರೊಡನೆ ವ್ಯವಹರಿಸಲು ಹೇಸಿಕೊಳ್ಳುತ್ತಾರೆ.

ಭಕ್ತ—ಶುದ್ಧಸಾಂಪ್ರದಾಯಿಕರಾದ ಗುರುಸ್ಥಲದ ಮಕ್ಕಳು ವಿರಕ್ತರಾದಲ್ಲಿ ಅವರೊಡನೆ ಆಚರಿಸಲು ತಪ್ಪೇನು?

ಸ್ವಾಮಿಗಳು—ಸಾಮಾನ್ಯವಾಗಿ ವಿರಕ್ತರೆಂಬವರು ಅಶಾಸ್ತ್ರೀಯವಾಗಿ ವರ್ತಿಸುತ್ತಿರುವದರಿಂದ ಅವರೊಡನೆ ಆಚರಿಸುವದು ಶುದ್ಧಾಂಗ ತಪ್ಪು ಇರುತ್ತದೆ. ಹಿಂದೆ ಆಗಿಹೋದವರಲ್ಲಿ ಹಲಕೆಲವರು ಕ್ರಿಯಾಸಿದ್ಧಿಯುಳ್ಳವರಾಗಿ ಆಶ್ರಮಧರ್ಮವನ್ನು ಕಾಪಾಡಿಕೊಂಡಿದ್ದರು. ಈಗಿನವರು ರಾಗದ್ವೇಷಾದಿಗಳಿಗೊಳಗಾಗಿರುವರು. ಅಕ್ರಮವಾಗಿ ಆಶ್ರಮವನ್ನು ಅಂಗೀಕಾರಮಾಡಿರುವರು. ಲೌಕಿಕವ್ಯವಹಾರದಲ್ಲಿ ತೊಡಗಿ ಅಧಿಕವಾದ ದ್ರವ್ಯದಿಂದ ಮತ್ತರಾಗಿರುವರು. ತಮ್ಮ ತಮ್ಮ ದೀಕ್ಷಾಗುರುಗಳ ಹಾಗೂ ಮಠಸ್ಥರ ಪರಿಜ್ಞಾನವಿಲ್ಲದೆ ತಾವೇ ಗುರುಗಳೆಂದು ಹೇಳಿಕೊಳ್ಳುತ್ತಿರುವರು. ಗುರುಸ್ಥಲದವರು ಮಾಡುವ ಮಂತ್ರೋಪದೇಶ ಮೊದಲಾದ ಕಾರ್ಯಗಳನ್ನು ತಾವೇ ಮಾಡಿ ಆಯಾಯ ಶಾಖಾಮಂತ್ರಗಳೂ ಇಲ್ಲದೆ ಸಕಲರಿಗೂ ತಾವೇ ಅನುಗ್ರಹವೆಂದು ಕೊಡುತ್ತ ತಮ್ಮ ಪ್ರತಿಷ್ಠೆಯನ್ನು ಬೆಳಸಿಕೊಂಡಿರುವರು.

ಭಕ್ತ—ಗುರುಗಳೇ! ವಿರಕ್ತರು ಜನರಿಗೆ ಮಂತ್ರೋಪದೇಶವನ್ನು ಮಾಡಬಾರದೇನು?

ಸ್ವಾಮಿಗಳು—ಅಯ್ಯಾ ಭಕ್ತನೇ! ಸರ್ವಸಂಗಪರಿತ್ಯಾಗವನ್ನು ಮಾಡಿದವಿರಕ್ತರು ಗೋತ್ರಸೂತ್ರಗಳನ್ನು ಬಿಟ್ಟು ವಿರಕ್ತರಾಗಿರುವರಲ್ಲವೇ! ಅಂದಮೇಲೆ ಇಂಥವರಿಗೆ ಗುರುತ್ವದ ಸಂಬಂಧವೇ ಇಲ್ಲದಿರುವಾಗ ಗುರುವರ್ಯರು ಮಾಡುವಕಾರ್ಯವನ್ನು ಇವರಿಗೆ ಮಾಡಲಿಕ್ಕೆ ಅಧಿಕಾರವೆಲ್ಲಿದೆ? ಮಂತ್ರೋಪದೇಶವೆಂದರೆ ಸಾಮಾನ್ಯವಲ್ಲ, ಸರ್ವರಿಗೂ ಉಪದೇಶಮಾಡಲಿಕ್ಕೆ ಬರತಕ್ಕದ್ದಲ್ಲ. ಪಟ್ಟಚರಾಧಿಕಾರಿಗಳು ತಮ್ಮ ತಮ್ಮ ಗೋತ್ರದ ಶಿಷ್ಯರಿಗೆ ಆಯಾಯ ಶಾಖಾಮಂತ್ರಗಳೆಂದು ಶಾಸ್ತ್ರದಲ್ಲಿ ಹೇಳಿದಂತೆ ಸರ್ವರಿಗೂ ಉಪದೇಶಮಾಡುವರು. ಮಠದ ಸಂಬಂಧವಾದ ಎಲ್ಲ ಅಧಿಕಾರವನ್ನು ಮಾಡುತ್ತಿರುವದರಿಂದ ಅವರಲ್ಲಿಯೇ ಗುರುತ್ವವಿರುವದು. ಧರ್ಮಾಧಿಕಾರಿಗಳಾದ ಗುರುಸ್ಥಲದವರನ್ನು ಬಿಟ್ಟು ಇತರರು ಈ ಕಾರ್ಯವನ್ನು ಮಾಡುವದು ಮಹಾಪಾಪವೆನಿಸುತ್ತದೆ. ದೀಕ್ಷಾಕಾಲದಲ್ಲಿ ಸಂಸ್ಕಾರಹೊಂದಿದ ಶಿಷ್ಯನು ತನ್ನನ್ನು ಪವಿತ್ರಗೊಳಿಸಿದ ದೀಕ್ಷಾಗುರುಗಳಿಂದಲೇ ಅನುಗ್ರಹವನ್ನು ಪಡೆಯಬೇಕಲ್ಲದೆ ಇತರರಿಂದ (ಗೋತ್ರಸೂತ್ರಗಳಿಲ್ಲದವರಿಂದ) ಎಂದೂ ಪಡೆಯಬಾರದು. ವಿವಾಹದಲ್ಲಿ ಗಂಡನಿಂದ ಮಂಗಲಸೂತ್ರವನ್ನು ಕಟ್ಟಿಸಿಕೊಂಡು ಪತಿಸೇವೆಯನ್ನು ಮಾಡಿ ಪತಿವ್ರತೆಯೆನಿಸಿಕೊಂಡು ಸಂಸಾರಸುಖವನ್ನು ಹೊಂದುತ್ತ ಅವನಲ್ಲಿ ಸಂತಾನವನ್ನು ಪಡೆಯಬೇಕಲ್ಲದೆ, ಹೆಸರಿಗೆ ಗಂಡನೆಂದು ಮಾಡಿಕೊಂಡು ಮತ್ತೊಬ್ಬನಲ್ಲಿ ಸಂತಾನವನ್ನು ಹೊಂದಿದರೆ ಪಾತಿವ್ರತ್ಯಧರ್ಮಕ್ಕೆ ಲೋಪವು ಬರುವದಲ್ಲವೇ? ಅದರಂತೆ ಇಲ್ಲಿಯೂ ಶಿಷ್ಯಧರ್ಮಕ್ಕೆ ತುಂಬಾ ಲೋಪ ಬರುತ್ತದೆ.

ಭಕ್ತ—ಬುದ್ಧೀ! ಶಾಖಾನುಸಾರವಾದ ಮಂತ್ರಗಳೆಂದು ಹೇಳಿದಿರಲ್ಲ? ಅವು ಯಾವವು?

ಸ್ವಾಮಿಗಳು—ಭಕ್ತನೇ! ಅವುಗಳನ್ನೆಲ್ಲ ಇಲ್ಲಿ ವಿಸ್ತರಿಸಿ ಹೇಳಲಿಕ್ಕೆ ಆಗುವುದಿಲ್ಲ. ಪ್ರಸಾದ-ಮಾಯಾ-ಸೂಕ್ಷ್ಮ-ಸ್ಥೂಲ-ಮೂಲವೆಂದು ಐದು ಮಂತ್ರಗಳಿರುತ್ತವೆ. ಇವುಗಳನ್ನೇ ಆಯಾಯ ಸಿಂಹಾಸನದ ಶಾಖಾಗುರುಗಳು ತಮ್ಮ ತಮ್ಮ ಶಿಷ್ಯರಿಗೆ ಉಪದೇಶ ಮಾಡುವರು.

ಭಕ್ತ—ಸ್ವಾಮಿ! ಈಗ ವಿರಕ್ತರೆನ್ನುವರು ಯಾವ ಉಪದೇಶ ಮಾಡುವರು?

ಸ್ವಾಮಿಗಳು—ಅಯ್ಯಾ! ಇವರು ಮಾಡುವ ಉಪದೇಶವು ವಿಚಿತ್ರವಾಗಿರುತ್ತದೆ. ಹೇಳಬೇಕೆಂದರೆ ನಮಗೆ ನಾಚಿಕೆಯೇ ಬರುವದು. ಮೂಲಪಂಚಾಕ್ಷರೀ ಮಂತ್ರದಲ್ಲಿ ಬ ಸ ವ ಎಂಬ ಮೂರು ಅಕ್ಷರಗಳನ್ನು ಸೇರಿಸಿ ಹೆಣ್ಣುಮಕ್ಕಳಿಗೂ ಗಂಡುಮಕ್ಕಳಿಗೂ ವಿಧವೆಯರಿಗೂ ಬ್ರಹ್ಮಚಾರಿಗಳಿಗೂ ಗೃಹಸ್ಥರಿಗೂ ತೃತೀಯಪ್ರಕೃತಿಗಳಿಗೂ ಉಪದೇಶಮಾಡುತ್ತಾರೆಂದು ಕೇಳುತ್ತೇವೆ.

ಭಕ್ತ—ಸ್ವಾಮಿ! ಇದರಂತೆ ಸಭ್ಯರೂ ಉಪದೇಶಹೊಂದುವರಲ್ಲದೆ ನಿಮ್ಮಂಥ ಸ್ವಾಮಿಗಳೆಂಬುವರೂ ಉಪದೇಶಹೊಂದುತ್ತಿರುವರು. ಇದಕ್ಕೇನು ಮಾಡುವಿರಿ?

ಸ್ವಾಮಿಗಳು—ಭಕ್ತನೆ! ನೀನು ಹೇಳುವಮಾತು ನಿಜವು. ಎಷ್ಟೋ ಜನರು ತಿಳುವಳಿಕೆಯಿಲ್ಲದೆ ಅನಾಚಾರ ಮಾಡುತ್ತಿರುವರು. ಈಗೀಗ ನೂರಕ್ಕೆ ತೊಂಬತ್ತರಂತೆ ಹೋಟಲುಗಳಿಗೆ ಹೋಗಿ ಚಹಾ ಕುಡಿದು ತಮ್ಮ ಉನ್ನತಜಾತಿಯ ಮಹತ್ವವನ್ನು ಕೆಡಿಸಿಕೊಳ್ಳುತ್ತಿರುವರು. ಅಂಥವರಿಗೆ ಯಾರಾದರೂ ಬುದ್ಧಿಯನ್ನು ಹೇಳಿದರೆ ತಾವು ಮಾಡುವುದೇ ಉತ್ತಮವೆಂದು ತಿಳಿದಿರುವಾಗ ಹಿತವಾದ ಮಾತು ಅವರಿಗೆ ಹೇಗೆ ಸೇರಬೇಕು? ಹೇಳುವವರಿಗೆ ಏನಾದರೂ ಒಂದು ಹೆಸರಿಟ್ಟು ಅಪಹಾಸ್ಯಮಾಡುವರು. ಅದರಂತೆ ವಿವೇಕಿಗಳಾದವರು ವಿರಕ್ತರಲ್ಲಿ ಉಪದೇಶಹೊಂದಬಾರದೆಂದು ಹೇಳಿದರೆ ಅವರಿಗೆ ಮಾನ್ಯವಾಗುವದಿಲ್ಲ. ಆದದ್ದು ಆಗಿಹೋಯಿತು. ಮುಂದಾದರೂ ಇಂಥ ಅಕ್ರಮಮಾರ್ಗದಲ್ಲಿ ಕಾಲಿಡದಂತೆ ಎಚ್ಚರಾಗಿರಬೇಕು. ಗುರುಗಳಾದ ಪಟ್ಟಚರಾಧಿಕಾರಿಗಳು ತಾವು ವಿರಕ್ತರಿಗೆ ಉಪದೇಶಮಾಡಿ ಅವರನ್ನು ಪುನೀತರನ್ನಾಗಿ ಮಾಡುವದರ ಬದಲು ಅವರಲ್ಲಿಯೇ ಶಿಷ್ಯತ್ವದಿಂದ ಉಪದೇಶಹೊಂದುವದು ಶುದ್ಧ ಅನ್ಯಾಯವು. ಹುದ್ದೆದ ಆಸೆಗಾಗಿ ವಿರಕ್ತರಲ್ಲಿ ಬಟ್ಟಲವನ್ನು ಎತ್ತಿ ಹಿಡಿಯುವ ಪಟ್ಟಚರಾಧಿಕಾರಿಗಳಿಂದ ಮಠದ ಮೂಲವು ನಾದಿಯೇ ಶಿಥಿಲವಾಗಿರುತ್ತದೆ. ಇಂಥವರ ಸಂಖ್ಯೆಯು ಇನ್ನೂ ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಇರುವದು. ರಿಂದ ಇಂದಿಗೂ ಸುಧಾರಣೆಯಾಗುವಂತಿಲ್ಲ. ಇಂಥವರಿಂದಲೇ ಮತ್ತಿಷ್ಟು ಚಳವಳಿಯು ಬೆಳೆಯುತ್ತಹೋಗಿರುತ್ತದೆ.

ಭಕ್ತ—ಗುರುವೇ! ಈಗ ಮಠದವರಾಗಲೀ, ಪಟ್ಟಚರಾಧಿಪತಿಗಳಾಗಲೀ ಭಕ್ತರಾಗಲೀ ವಿರಕ್ತರಲ್ಲಿ ಉಪದೇಶಹೊಂದಿದ್ದು ತಪ್ಪೆಂದು ನಿಮ್ಮ ಅಭಿಪ್ರಾಯವಲ್ಲವೇ!

ಸ್ವಾಮಿಗಳು—ಭಕ್ತನೇ! ನಮ್ಮ ಅಭಿಪ್ರಾಯವಲ್ಲ. ಧರ್ಮಶಾಸ್ತ್ರಗಳ ಅಭಿಪ್ರಾಯವು.

ಭಕ್ತ—ಹಾಗಾದರೆ ಈ ಉಪದೇಶವನ್ನು ಬಿಟ್ಟು ಆಚಾರ್ಯಸಾಂಪ್ರದಾಯಕ್ಕನುಸರಿಸಿ ಆಯಾಯ ಮಂತ್ರಗಳನ್ನು ಆಯಾಯ ಶಾಖಾಗುರುಗಳಿಂದ ಉಪದೇಶಹೊಂದಲಿಕ್ಕೆ ಬರುತ್ತದೆಯೋ?

ಸ್ವಾಮಿ—ಭಕ್ತನೇ! ಏಕೆ ಬರುವದಿಲ್ಲ? ದಾರಿಯು ತಪ್ಪಿದ್ದರೆ ಗೊತ್ತಿದ್ದವರನ್ನು ಕೇಳಿಕೊಂಡು ಹೋಗಲಿಕ್ಕೆ ಬರುವಂತೆ ಆಚಾರ್ಯಪದ್ಧತಿಯು ಶಿಥಿಲವಾಗಿರುವದರಿಂದ ಆಚಾರ್ಯರಿಂದಲೇ ಅದನ್ನು ತಿದ್ದಿಕೊಳ್ಳಲಿಕ್ಕೆ ಬರುತ್ತದೆ. ಇದು ತಪ್ಪಾಗುವದಿಲ್ಲ. ಇದರಂತೆ ಎಷ್ಟೋ ಜನರು ತಿದ್ದಿಕೊಂಡಿರುವರು. ಅವರೇ ಮುಕ್ತರೆಂದು ನಾವು ಹೇಳುವೆವು.

ಭಕ್ತ—ಸ್ವಾಮಿ! ವಿರಕ್ತರಾದವರಿಗೆ ಮೊದಲು ಮಠದಯ್ಯನವರ ಮಕ್ಕಳಿದ್ದಾಗ ಸಂಸ್ಕಾರವನ್ನು ಪಟ್ಟಚರಾಧಿಕಾರಿಗಳು ಮಾಡುತ್ತಾರಷ್ಟೇ!

ಸ್ವಾಮಿಗಳು—ಅಹುದು; ಗುರುಮೂರ್ತಿಗಳಾದ ಪಟ್ಟಚರಾಧಿಕಾರಿಗಳು ಮೊದಲು ಸಂಸ್ಕಾರವನ್ನು ಮಾಡದಿದ್ದರೆ ಪೂಜ್ಯತೆಯೇ ಬರುವದಿಲ್ಲ. ಹೀಗೆ ಪೂಜ್ಯತ್ವವನ್ನುಂಟುಮಾಡಿದ ಪಟ್ಟಚರಾಧಿಕಾರಿಗಳನ್ನು ಸಾಮಾನ್ಯ ಮನುಷ್ಯರಂತೆ ತಿಳಿದು ಆಚರಿಸುತ್ತಿರುವ ಈಗಿನ ವಿರಕ್ತರು ಗುರುದ್ರೋಹಿಗಳು. ಇಂಥ ಗುರುದ್ರೋಹಿಗಳಲ್ಲಿ ತಮ್ಮ ಗುರುತ್ವದ ದರ್ಪವನ್ನು ಕಳೆದುಕೊಂಡು ಅವರಲ್ಲಿ ಉಪದೇಶಹೊಂದಿ ಶಿಷ್ಯವೃತ್ತಿಯಿಂದ ಆಚರಿಸುವ ಪಟ್ಟಚರಾಧಿಕಾರಿಗಳೆನ್ನುವರು ಗುರುದ್ರೋಹಿಗಳೇಸರಿ! ಇಂಥವರಿಂದ ಸಮಾಜಕ್ಕೆ ತುಂಬಾ ಅವಮಾನವೆಂದು ಹೇಳಬಹುದು. ಅದ್ದರಿಂದ ಲೋಕ

ದಲ್ಲಿ "ಪಾವಲಿಗೆ ಪಟ್ಟವೆಂತಲೂ ೬. ಪತ್ರಿಕೆಯೆಂತಲೂ" ಜನರು ಹೇಳುತ್ತ ಹಾಸ್ಯಮಾಡುವರು. ಹಲಕೆಲವು ವಿರಕ್ತರಲ್ಲಿ ಬಾಲವನ್ನು ಗುಂಡಾಡಿಸುತ್ತಾ ಅವರ ಅನುಯಾಯಿಗಳಾಗಿರುವಾಗ ಹಾಸ್ಯಾಸ್ಪದವಾದ ಲೋಕಾಪವಾದವು ಎಲ್ಲರಿಗೂ ಅಂಟಿಕೊಂಡು ಮಠಕ್ಕೆ ಕಳಹದಿಯುಂತಿರುವ ಗುರುಪಟ್ಟಾಧಿಕಾರಿಗಳಾದ ಶ್ರೀ ಪಟ್ಟಚರಾಧಿಕಾರಿಗಳಿಗೆ ಮಾನ್ಯತೆಯೇ ಇಲ್ಲದಾಗಿದೆ. ಇನ್ನಾದರೂ ತಮ್ಮ ಅಧಿಕಾರಗೌರವವನ್ನು ಕಾಪಾಡಿಕೊಳ್ಳಲಿಯೆಂದು ನಮ್ಮ ಅಭಿಪ್ರಾಯವು.

ಭಕ್ತ—ಗುರುಗಳೇ! ಕಾಶಿಯಲ್ಲಿ ಓದಿ ದೊಡ್ಡದೊಡ್ಡ ಪರೀಕ್ಷೆ ಕೊಟ್ಟು ದೊಡ್ಡದೊಡ್ಡ ವಿರಕ್ತಮಠಗಳಿಗೆ ಸ್ವಾಮಿಗಳಾಗಿರುವರು, ದೊಡ್ಡದೊಡ್ಡ ಶಾಲೆಗಳಿಗೆ ಅಧ್ಯಾಪಕರಾಗಿರುವರು. ಅವರೆಲ್ಲಾ ತಪ್ಪುದಾರಿಯನ್ನು ಹಿಡಿದಿರುವರೇನು?

ಸ್ವಾಮಿಗಳು—ಶಿಷ್ಯನೇ! ಅವರು ಆಶ್ರಯಿಸಿದ ಸ್ಥಾನವೇ ತಪ್ಪಾಗಿರುವದರಿಂದ ಅವರು ಹಿಡಿದ ದಾರಿಯೂ ತಪ್ಪು ಇರುತ್ತದೆ. ಶಾಸ್ತ್ರಿಗಳಾದವರು ನಿಸ್ಪೃಹರಾಗಿ ಧರ್ಮಸುಧಾರಣೆಯನ್ನು ಮಾಡಿ ತಮ್ಮ ಶಾಸ್ತ್ರದ ಸಾರ್ಥಕತೆಯನ್ನು ಮಾಡಿಕೊಳ್ಳುವದರಬದಲು ಪ್ರಾಪಂಚಿಕವಾದ ತೊಂದರೆಯ ನಿವಾರಣೆಗಾಗಿ ಅಶಾಸ್ತ್ರೀಯಮಾರ್ಗಾವಲಂಬಿಗಳಾದ ವಿರಕ್ತರನ್ನು ಅನುಸರಿಸಿ ಲೋಕಾಪವಾದಕ್ಕೆ ಗುರಿಯಾಗಿರುವರು. ವಿರಕ್ತರಿಗೆ ಇಂಥ ಶಾಸ್ತ್ರಜ್ಞರು ದೊರೆತದ್ದರಿಂದ ಬಂಗೀಸಪ್ಪಿನಲ್ಲಿ ದತ್ತೂರಿ (ಹಿರೇಮದುಗುಣಿಕೆ ಬೀಜವು) ಸೇರಿದಂತಾಗಿ ತಾವು ಹೇಳಿದ್ದೇ ವೇದ, ಕಟ್ಟಿದ್ದೇ ಪಟ್ಟವೆನ್ನುವಂತೆ ಜಗತ್ತನ್ನೇ ಭ್ರಮಗೊಳಿಸಿರುವರು. ಇವರ ಭ್ರಮೆಯು ಈಗೀಗ ಇಳಿಯುತ್ತಬಂದಿರುತ್ತದೆ. ಅತ್ಯಲ್ಪಕಾಲದಲ್ಲಿಯೇ ನಿಶ್ಶೇಷವಾಗಬಹುದು.

ಭಕ್ತ—ಸ್ವಾಮಿ? ವಿಷಯವೇನೋ ತಿಳಿದಂತಾಯಿತು. ಒಟ್ಟಿಗೆ ಕೆಲಜನ—ಪಟ್ಟಚರಮೂರ್ತಿಗಳೂ ಶಾಸ್ತ್ರಿಗಳೊ ಧರ್ಮಶಾಸ್ತ್ರದ ಕಟ್ಟಳೆಯನ್ನು ಮುರಿದು ಮನಸ್ವಿಯಾಗಿ ವಿರಕ್ತಮಠಗಳ ಅನ್ನವನ್ನುಂಡು ಆಲಿದಾಡುತ್ತಿರುವದರಿಂದ ಅವರೇ ಈ ಚಳವಳಿಗೆ ಪುಷ್ಟಿಯನ್ನು ಕೊಡುತ್ತಾರೆಂದು ಸರ್ವರಿಗೂ ತಿಳಿದ ಮಾತೇ ಇದೆ.

ಸ್ವಾಮಿಗಳು—ಭಕ್ತನೇ! ಏನುಹೇಳುವದು? ವೇಷಧಾರಿಗಳಾದ ಈ ವಿರಕ್ತರು ಗುರುವರ್ಗದವರನ್ನೂ ಶಾಸ್ತ್ರಿಗಳನ್ನೂ ತಮ್ಮ ಬಲೆಯೊಳಗೆ ಹಾಕಿಕೊಳ್ಳದ್ದಿದ್ದರೆ ಇಷ್ಟರಲ್ಲಿಯೇ ಇವರು ಪತ್ತೆಯಿಲ್ಲದೆ ಪಲಾಯನವಾಗುತ್ತಿದ್ದರು. ಮತ್ತು ಕೆಲವು ಶ್ರೀಮಂತರಾದ ಭಕ್ತರು ವಿರಕ್ತರ ಅನುಸರಣವನ್ನು ಮಾಡಿದ್ದರಿಂದ ಅವರ ಬೇಳೆಯು ಚನ್ನಾಗಿ ಬೇಯುತ್ತಿದೆ. ಕಾಲಕ್ಕನುಸರಿಸಿ ವಿವಾದವು ಹುಟ್ಟಿರುವದು. ಅದಕ್ಕೆ ಕೆಲವು ಮಂದಮತಿಗಳು ಚಳವಳಿಯೆಂದು ಹೇಳಿಕೊಳ್ಳುತ್ತಾರೆ. ಈ ವಿವಾದವು ಹುಟ್ಟದೆ ಹೋಗಿದ್ದರೆ ಇಷ್ಟರಲ್ಲಿಯೇ ಪೂಜ್ಯಗುರುವರ್ಗವು ವಿರಕ್ತಪ್ಪನವರ ಮಠದಲ್ಲಿ ಕಸವನ್ನು ಗುಡಿಸುವ ಮುಸುರೆಯನ್ನು ತೊಳೆಯುವ ತೊತ್ತಾಗುತ್ತಿತ್ತು. ದೈವಯೋಗದಿಂದ ನಿಜಸ್ಥಿತಿಯು ಹೊರಬಿದ್ದುದರಿಂದ ಗುರುವರ್ಗವು ತನ್ನ ಗೌರವವನ್ನು ಉಳಿಸಿಕೊಂಡಿತು.

ಭಕ್ತ—ಸ್ವಾಮಿ! ಇನ್ನೊಂದು ವಿಷಯವಾಗಿ ತಮ್ಮನ್ನು ಕೇಳುತ್ತೇನೆ ಸಿಟ್ಟಾಗಬಾರದು. ಕಾಶೀನಾಥಶಾಸ್ತ್ರಿಗಳ ಹೆಸರನ್ನು ಕೇಳಿದ ಕೂಡಲೇ ಹಲಕೆಲವರು ರೇಗುತ್ತಾರೆ. ಕಾರಣವೇನು?

ಸ್ವಾಮಿಗಳು—ಅಯ್ಯಾ! ಮೂಕನ ಎದುರಿಗೆ ಮೂಗು ಹುರಿಸಿಕೊಂಡರೆ ಸಿಟ್ಟಿಗೆ ಬರುವಂತೆ ಗುರುವರ್ಗದ ಉದ್ಧಾರಕ್ಕಾಗಿ ಅಹೋರಾತ್ರಿ ಶ್ರಮಪಡುತ್ತಿರುವ ಲೋಕಮಾನ್ಯರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳ ಹೆಸರನ್ನು ಕೇಳಿ ವಿರಕ್ತರೂ ಅವರ ಅನುಯಾಯಿಗಳೂ ಸಹ ರೇಗಬಹುದು. "ಕಂಗಮ್ಮ ತಿವಿದರೆ ಕೆಂಡದಂಥ ಸಿಟ್ಟು" ಎಂಬಂತೆ ಆ ಮಹನೀಯರು ಧರ್ಮಶಾಸ್ತ್ರಪ್ರಕಾರ ಸಕಲಾಶ್ರಮದವರೂ ನಡೆಯಬೇಕೆಂದು ಬೋಧಿಸಲು ವಿರಕ್ತರು ತಮಗೆ ಅಳಿಗಾಲವು ಬಂದಿತೆಂದು ಅವರ ಮೇಲೆ ವೃಥಾದ್ವೇಷವನ್ನು ಸಾಧಿಸುವರು. ಆ ಪುಣ್ಯಾತ್ಮನ ಅವತಾರವಾಗದಿದ್ದರೆ ಇಷ್ಟರಲ್ಲಿ ಗುರುವರ್ಗವು ನಾಮಾವಶೇಷವಾಗುತ್ತಿತ್ತೆಂದು ಹೇಳುವಲ್ಲಿ ಯಾವ ಅಭ್ಯಂತರವೂ ಇಲ್ಲ. ಆ ಮಹನೀಯನು ವಯಸ್ಸಿನಿಂದ ಚಿಕ್ಕವನಾಗಿದ್ದರೂ ಆಚಾರ್ಯರ ಕೃಪೆಯಿಂದ ಅಘಟಿತಘಟನ ಶಕ್ತ್ಯಸ್ತ್ರಧಾರಿಯಾಗಿ ದುರ್ವಿರಕ್ತರ ಉಪಟಳವನ್ನು ಅತ್ಯಲ್ಪಕಾಲದಲ್ಲಿಯೇ ಬಗ್ಗುಬಡಿದನು. ಗುರುವರ್ಗದ ಉದ್ಧಾರಕ್ಕಾಗಿ ಸದುಪದೇಶ ಮಾಡುವ ಪ್ರಭಾಪತ್ರಿಕೆಯನ್ನು ಜಗತ್ತಿನಲ್ಲಿ ಪ್ರಕಾಶಗೊಳಿಸಿದನು. ಭೀಷ್ಮಬ್ರಹ್ಮಚಾರಿಯಾದ ಆ ಪಂಡಿತನ ನಾಮಸ್ಮರಣೆಯನ್ನು ಮಾಡುವದರ ಬದಲು ನಿಂದಿಸಿದರೆ, ಸೂರ್ಯನ ಮೇಲೆ ಮಣ್ಣುತೂರಿ ತಮ್ಮ ಕಣ್ಣಿನಲ್ಲಿ ಹಾಕಿಕೊಂಡಂತೆಯೇ ಸರಿ! ಆ ಮಹಾತ್ಮನಿಂದಲೇ ನಾವುಗಳು ಒಳ್ಳೆ ದಿವಸಗಳನ್ನು ಕಂಡೆವು.

ಭಕ್ತ—ಸ್ವಾಮಿ? ತಮಗೆ ನಾನು ಬಹಳ ಶ್ರಮಕೊಟ್ಟಂತಾಯಿತು ಕ್ಷಮಿಸಬೇಕು. ಆಗದವರು ನಿಂದಿಸುವದು ಅವರ ಧರ್ಮವೇ ಸರಿ! "ಸ್ತುತಿನಿಂದೆಗಳಿಗೆ ಹಿಗ್ಗದೆ ತಗ್ಗದಿರುವನೇ ಜ್ಞಾನದೇವ" ಎನ್ನುವಂತೆ ತನ್ನ ಕರ್ತವ್ಯವನ್ನು ತಾನು ತಪ್ಪದಂತೆ ಮಾಡಿದರಾಯಿತು. ಅದಿರಲಿ, ಮತ್ತೊಂದು ವಿಷಯ—ತಾವು ಪಂಚಾಚಾರ್ಯರು ಮಠಸ್ಥಾಪಕರು, ಜಗದ್ಗುರುಗಳು ಎಂದು ಹೇಳಲಿಲ್ಲವೇ? ಪಂಚಾಚಾರ್ಯರು ಮಠಸ್ಥಾಪಕರೇನೋ ನಿಜ. ಆದರೆ ಜಗದ್ಗುರುಗಳೆಂದು ಹೇಳಿದರೆ ವಿರಕ್ತರು ಜಗದ್ಗುರುಗಳೆಂದು ಬರೆದುಕೊಳ್ಳುವರು. ತಿಳುವಳಿಕೆ ಇಲ್ಲದ ನಾವು ಯಾರನ್ನು ಜಗದ್ಗುರುಗಳೆಂದನ್ನಬೇಕು!

ಸ್ವಾಮಿಗಳು—ಭಕ್ತನೆ ಒಳ್ಳೆಪ್ರಶ್ನೆ ಮಾಡಿದೆ. ಬಹಳ ಸಂತೋಷ! ಪಂಚಾಚಾರ್ಯರು ಜಗದ್ಗುರುಗಳು ಅಹುದೋ ಅಲ್ಲವೋ? ಎಂದು ನಾವು ಸಾಧಿಸಬೇಕಾಗಿಲ್ಲ. ಅವರಿಗೆ ಆ ಹೆಸರು ಯಾವಾಗಲೂ ಸಿದ್ಧವೇ ಇರುತ್ತದೆ. ಸ್ಥಾಪಕತ್ವದ ಜೊತೆಗೆ ಜಗದ್ಗುರುತ್ವವು ಪ್ರತ್ಯೇಕವೆಂದು ಹೇಳಬೇಕಾಗಿಲ್ಲ. ಅರ್ಥಾತ್ ಪಂಚಾಚಾರ್ಯರು ಮಠಸ್ಥಾಪಕರಾದ್ದರಿಂದ ಅವರೇ ಜಗದ್ಗುರುಗಳೆಂದು ಸಿದ್ಧಾಂತವು. ಇದರಂತೆಯೇ ಇತರ ವೈದಿಕಮತಗಳಲ್ಲಿಯೂ ಜಗದ್ಗುರುಗಳಿರುತ್ತಾರೆ. ಆದರೆ ವಿರಕ್ತರು ದುಡ್ಡಿನ ಮದದಿಂದ ಜಗದ್ಗುರುಗಳಾಗಿರುತ್ತಾರೆ.

ಭಕ್ತ—ಅದರೆ ಜಗದ್ಗುರುಗಳೆಂದು ಬರೆದುಕೊಳ್ಳುತ್ತಾರಲ್ಲ?

ಸ್ವಾಮಿ—ಭಕ್ತನೇ ಅವರು ಬರೆದುಕೊಳ್ಳುವದು ಹಾಗಿರಲಿ. ಜನರುಸಹ ಬರೆಯುತ್ತಿರುವರು; ದುಡ್ಡಿನಮಹಿಮೆಯಿಂದ ಏನಾದರೂ ಆಗುತ್ತದೆ. ನೀನು ಈಗಿನಪಂಚಾಂಗಗಳನ್ನು ನೋಡಿಲ್ಲವೋ? ಪೋಷಕರ ಲಿಸ್ಟನ್ನು ನೋಡಿದರೆ ನಿನಗೇ ಗೊತ್ತಾಗುತ್ತದೆ. ಮೊದಮೊದಲು ವಿರಕ್ತರಲ್ಲಿ ಒಬ್ಬಿಬ್ಬರು ಮಾತ್ರ ಜಗದ್ಗುರುಗಳಾಗಿದ್ದರು. ಈಗ ತಮ್ಮ ಪಂಚಾಂಗಕ್ಕೆ ೮ ಆಣೆ ಸಹಾಯಮಾಡಿದ ವಿರಕ್ತರೆಲ್ಲಾ ಜಗದ್ಗುರುಗಳಾಗಿದ್ದಾರೆ. ಹೊಸವರ್ಷಗಳು ಬಂದಂತೆ ಹೊಸಜಗದ್ಗುರುಗಳೇ ಆಗುತ್ತಿರುವರು. ಹೀಗೆ ಮಾಡುವವರಿಗೆ [illegible] ಹೀಗೆ ಮನಸ್ಸಿಗೆಬಂದಂತೆ ಬರೆದುಕೊಳ್ಳುತ್ತಿರುವುದರಿಂದ ಪರಮತದವರು ಕೈಬಡಿದು ನಗುತ್ತಿರುವರು.

ಭಕ್ತ—ಅಂತು ವಿರಕ್ತರ ಬಲೆಗೆ ಪಂಚಾಂಗದವರೂ ಬಿದ್ದಿರುವರೇನು?

ಸ್ವಾಮಿಗಳು—ಒಬ್ಬ ಪಂಚಾಂಗದವರೇಕೆ? ಕೀರ್ತನದವರೂ, ಪುರಾಣಿಕರೂ, ವರ್ತಮಾನಪತ್ರಿಕೆಯವರೂ ಆ ವಿರಕ್ತರ ದುಡ್ಡಿನ ಆಸೆಗೆ ಜೊಲ್ಲು ಸುರಿಸುತ್ತಿರುವರು.

ಭಕ್ತ—ಭಕ್ತರೂ ಅವರಂತೆಯೇ ಏನು?

ಸ್ವಾಮಿ—ಎಲ್ಲರೂ ಇಲ್ಲ. ಹಲಕೆಲವು ಭಕ್ತರುಮಾತ್ರ ಅವರಂತೆ ಇರುತ್ತಾರೆ. ಅದ್ದರಿಂದ ಅವರ ಚೆಲ್ಲಾಟವಿದೆ. ಇಲ್ಲದಿದ್ದರೆ ಇಷ್ಟುಹೊತ್ತಿಗೆ ಅವರ ಪೀಕಲಾಟವಾಗುತ್ತಿತ್ತು.

ಭಕ್ತ—ಸ್ವಾಮಿ! ಭಕ್ತರಿಗೆ ಗುರುವರ್ಗದವರು ಬೇಡವೇ?

ಸ್ವಾಮಿ—ಎಲ್ಲರೂ ಜನನಾರಭ್ಯ ಅಂತ್ಯೇಷ್ಟಿಪರ್ಯಂತರವಾಗಿ ಶುಭಾಶುಭಕರ್ಮಗಳನ್ನು ಗುರುವರ್ಗದವರಿಂದಲೇ ಮಾಡಿಸಿಕೊಳ್ಳುವರು. ಅದ್ದರಿಂದ ಗುರುವರ್ಗದವರ ಸಂಬಂಧವು ಪ್ರತಿಯೊಬ್ಬ ವೀರಶೈವನ ರಕ್ತ-ಮಜ್ಜ-ಮಾಂಸ ಮೊದಲಾದವುಗಳಲ್ಲಿ ವ್ಯಾಪಿಸಿರುವಾಗ ಅದು ಹೇಗೆ ಬಿಡಲಿಕ್ಕಾದೀತು? ಬಿಟ್ಟರೆಅವನು ವೀರಶೈವನಾಗಬಲ್ಲನೇ?

ಭಕ್ತ—ಗುರುಗಳ ಅಭಿಮಾನವಿಲ್ಲದ ಭಕ್ತರು ವಿರಕ್ತರ ಕಡೆಗೇಕೆ ಹೋಗುವರು?

ಸ್ವಾಮಿಗಳು—ಭಕ್ತನೇ! ವಿರಕ್ತರು ಶ್ರೀಮಂತರಾಗಿರುವದರಿಂದ ಭಕ್ತರು ತಮ್ಮ ವ್ಯವಹಾರಕ್ಕಾಗಿ ಬಡ್ಡಿಯಿಲ್ಲದೆ ಸಾಲವು ಸಿಗುವದೆಂದು ದುಡ್ಡಿನ ಆಸೆಗಾಗಿ ಹೋಗುವರು. ಅದು ಅಲ್ಲವರ್ಜ್ಯವಾದರೆ ವಿರಕ್ತರು ಆ ಊರಿನಲ್ಲಿ ಇರುವದು ಕಷ್ಟ! ತಿಳಿಯಿತೇ?

ಭಕ್ತ—ಸ್ವಾಮಿ! ತಿಳಿದವಿಷಯವೇ ಇದೆ. ಊರಿಗೆ ಹತ್ತೆಂಟು ವಿರಕ್ತಮಠಗಳಾಗಲಿಕ್ಕೆ ಈ ಭಕ್ತರ ಪಾರ್ಟಿಯೇ ಕಾರಣವೆಂದು ಹೇಳಬಹುದಲ್ಲವೇ?

ಸ್ವಾಮಿ—ಭಕ್ತನೇ! ನೀನು ವಿವೇಕಶಾಲಿಯಾಗಿರುವದರಿಂದ ಹೆಚ್ಚಿಗೆ ಹೇಳಬೇಕಾಗಿಲ್ಲ. ನೀನನ್ನುವ ಮಾತು ನಿಜವಿದೆ. ಭಕ್ತರ ಅಭಿಮಾನದಿಂದ ಬೆಳೆದ ವಿರಕ್ತಮಠಗಳು ಅನಾಯಕಗಳಾದಲ್ಲಿ ಆ ಮಠಗಳ ಆಸ್ತಿಯು ಭಕ್ತರ ಸ್ವಾಧೀನವಾಗುವದು. ಅದ್ದರಿಂದಲೇ ಆ ಮಠಗಳ ಮೇಲೆ ಅವರಿಗೆ ಹೆಚ್ಚು ಅಭಿಮಾನವು.

ಭಕ್ತ—ಹಾಗಾದರೆ ವಿರಕ್ತರು ಇಷ್ಟು ಪ್ರಬಲಸ್ಥಿತಿಗೆ ಬರಲು ಕಾರಣವೇನು?

ಸ್ವಾಮಿಗಳು—ಭಕ್ತನೇ. ವಿರಕ್ತಮಠಗಳಿಗೆ ವಿಚಾರವಿಲ್ಲದೆ ಗುರುವರ್ಗದವರು ತಮ್ಮ ಮಕ್ಕಳನ್ನು ಮರಿಮಾಡಿದ್ದರಿಂದಲೂ, ಭಕ್ತರು ಅವರಿಗೆ ಉದಾರಾಶ್ರಯವನ್ನು ಕೊಟ್ಟದ್ದರಿಂದಲೂ ಕಾಲಕ್ಕೆ ಸರಿಯಾಗಿ ಪೀಠಾಚಾರ್ಯರು ಸಂಚಾರಮಾಡದೆ ಇರೋದರಿಂದಲೂ ಹೀಗೆಯೇ ಕಾರಣಾಂತರಗಳಿಂದ ವಿರಕ್ತರು ಪ್ರಬಲ [illegible]

ಭಕ್ತ—ಸ್ವಾಮಿ, ವಿರಕ್ತರು ಸಮಾಜಸುಧಾರಣೆಯ ಕಾರ್ಯದಲ್ಲಿ ತೊಡಗಿದವರಲ್ಲವೇ?

ಸ್ವಾಮಿ—ತಪ್ಪೆಂದು ಯಾರೂ ಹೇಳುವುದಿಲ್ಲ. ಪ್ರತಿಯೊಬ್ಬ ಮನುಷ್ಯನೂ ತಾನು ಹುಟ್ಟಿದ್ದಕ್ಕೆ ತನ್ನ ಕರ್ತವ್ಯವನ್ನು [illegible]

ಭಕ್ತ—ಬುದ್ಧೀ! ಭಕ್ತರು ತಮ್ಮ ತಮ್ಮ ಗೋತ್ರದ ಗುರುಗಳಲ್ಲಿ ಅಭಿಮಾನವಿಲ್ಲದೆ ವಿರಕ್ತರಲ್ಲಿ [illegible]

ಸ್ವಾಮಿಗಳು—ಭಕ್ತನೇ! ಅದಕ್ಕೂ ಒಂದುಕಾಲವು ಬೇಕು. [illegible] ರಾಜ್ಯವನ್ನು ಪಾಲಿಸುತ್ತಿರುವದರಿಂದ ಅಂಥ ಅವ್ಯವಸ್ಥೆಯು ಆಗಲಿಕ್ಕೆ ಆಸ್ಪದವೇ ಇಲ್ಲ. [illegible]

ರುತ್ತದೆ. ಧರ್ಮದಮ್ಮವನ್ನೆಲ್ಲಾ ಈ ವಿರಕ್ತರು ಉಪಟಳದಿಂದ ತಪ್ಪಿಹೋಗಿರುತ್ತದೆ. [illegible]

ಭಕ್ತ—ಸ್ವಾಮಿ! [illegible]

ಸ್ವಾಮಿಗಳು—ಭಕ್ತನೇ! [illegible]

ಭಕ್ತ—ಸ್ವಾಮಿಗಳೇ, ನಾನು ಧನ್ಯನಾದೆನು. [illegible] ಮುಂದಿನ ಸ್ಟೇಷನ್ನಿಗೆ ಇಳಿಯುವೆನು. ಆದರೆ ಇನ್ನೊಂದು ಮಾತು ಕೇಳುವೆನು. [illegible] ಉಪಕಾರವನ್ನು ನಾನು ಬಹಳವಾಗಿ ನೆನೆಸುತ್ತೇನೆ.

ಸ್ವಾಮಿಗಳು—ಭಕ್ತನೇ! ಅದೇನು ಅಂಥ ವಿಷಯವು? ನಮಗೆ ತಿಳಿದಷ್ಟು ಹೇಳುವದರಲ್ಲಿ ನಮಗೇನೂ ತೊಂದರೆಯಾಗಲಾರದು. ಅವಶ್ಯವಾಗಿ ಕೇಳಬಹುದು.

ಭಕ್ತ—ಸ್ವಾಮಿಗಳೇ, ಹಿಂದೆ ತಾವು ಪಂಚಾಕ್ಷರೀ ಮಂತ್ರದ ಮಧ್ಯದಲ್ಲಿ ಬಸವ ಎಂಬ ಮೂರು ಅಕ್ಷರಗಳನ್ನು ಸೇರಿಸುತ್ತಾರೆ, ಅಂತ ಹೇಳಿದಿರಿ; ಅದರ ಸಮಾಚಾರವೇನು?

ಸ್ವಾಮಿಗಳು—ಭಕ್ತನೇ, ಬಸವನ ವಿಷಯವನ್ನು ಎತ್ತಿಕೊಂಡರೆ ರಾಮಾಯಣ ಮಹಾಭಾರತವೇ ಆಗುವದು. [illegible]

ಭಕ್ತ—ಆಗಲಿ ಗುರುವೇ, [illegible] (ನಮಸ್ಕಾರ ಮಾಡಿ ಹೋಗುವನು.)

ವಾಚಕರೇ! ಮೇಲಿನ ಪ್ರಶ್ನೋತ್ತರಗಳನ್ನು ವಿಚಾರಿಸಿದರೆ [illegible]

[೮ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೨ ನೇ ಡಿಸೆಂಬರ್ ತಾ|| ೨೬ ನೇ ಸೋಮವಾರ.

ಧರ್ಮಪಾಲನ.

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಕ್ಷಿತೌ |
ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ||

ಮನುಷ್ಯನು ಜೀವಂತನಾಗಿರುವವರೆಗೂ ಎಲ್ಲರೂ ಅವನನ್ನು ಅನುಸರಿಸುವರು; ಎಂದು ಮೃತಿಯನ್ನು ಹೊಂದುವನೋ ಅಂದೇ ಆ ಶರೀರವನ್ನು ಕಟ್ಟಿಗೆಯಂತೆಯೂ ಮಣ್ಣಿನಂತೆಯೂ ಅಲಕ್ಷ್ಯವಾಗಿ ಕಾಣುತ್ತ ಊರ ಹೊರಗಿರುವ ಶ್ಮಶಾನಕ್ಕೆಳೆದು ಬಂಧುಬಾಂಧವರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುವರು. ಅವನು ಆರ್ಜಿಸಿದ ಮನೆಮಠಗಳನ್ನು ಮಾತ್ರ ಅವರಿಸುತ್ತಾರೆ. ಮೃತನಾದ ಪುರುಷನ ಸಂಗಡ ಹೋಗಿ ನರಕದಿಂದ ತಪ್ಪಿಸಿ ಪುಣ್ಯಲೋಕವನ್ನು ಹೊಂದಿಸುವವರಾರೂ ಇಲ್ಲ. ಅಂಥ ಕಷ್ಟಕಾಲದಲ್ಲಿ ಧರ್ಮವೆಂಬುದು ಮಾತ್ರ ಅವನ ಸಂಗಡವೇ ಇದ್ದು ಮೃತಪುರುಷನನ್ನು ನರಕದಿಂದ ಮೇಲೆಕ್ಕೆಳೆದು ಉನ್ನತಪದವಿಯನ್ನು ಕೊಡುವುದರಿಂದ ಯಾವುದನ್ನು ಬಿಟ್ಟರೂ ಧರ್ಮವನ್ನು ಬಿಡದಿರುವುದೇ ಮಾನವಜನ್ಮದ ಮುಖ್ಯ ಉದ್ದೇಶವಾಗಿರುವುದೆಂದು ಮಹಾಭಾರತದಲ್ಲಿ ಹೇಳಿರುವುದರಿಂದ ಆಸ್ತಿಕರಾದ ಮಾನವರು ಎಂಥ ವಿಪತ್ತುಗಳಿಗೊಳಗಾದರೂ ಆತ್ಮನನ್ನು ಉತ್ತಮಸ್ಥಿತಿಗೊಯ್ಯುವ ಸ್ವಭಾವವುಳ್ಳ ಧರ್ಮಮಾರ್ಗವನ್ನು ಬಿಟ್ಟು ಅಧರ್ಮಮಾರ್ಗದಲ್ಲಿ ಕಾಲಿಡಬಾರದು. ಅಧರ್ಮಮಾರ್ಗದಲ್ಲಿ ಯಾರು ಪ್ರವೇಶಿಸುವರೋ ಅವರು ಎಂಥ ಬುದ್ಧಿಶಾ ಗಳಾಗಲಿ, ಎಂಥ ವಿದ್ವಾಂಸರೇ ಆಗಲಿ, ಎಂಥ ಸ್ವಾ ತ್ಯಾಗಿಗಳೇ ಆಗಲಿ ದುಃಖಭಾಗಿಗಳಾಗಬೇಕಾಗುವ ಯಾರಿಗೆ ಪರಲೋಕದ ಅಪೇಕ್ಷೆಯಿಲ್ಲವೋ ಯಾ ಇಹಲೋಕದ ಸೌಖ್ಯವೊಂದನ್ನೇ ಮುಖ್ಯಗುರಿಯ ಟ್ಟುಕೊಂಡಿರುತ್ತಾರೆಯೋ, ಅಂಥವರಿಗೆ ಧರ್ಮ ಅಭಿರುಚಿಸುವುದಿಲ್ಲ. ಯಾರು ಪರಲೋಕದಲ್ಲಿ ಯುಳ್ಳವರಾಗಿರುವರೋ, ಇಹಲೋಕದ ಭೋಗ್ಯ ಗಳೆಲ್ಲವನ್ನು ಕ್ಷಣಿಕವೆಂದು ತಿಳಿದಿರುವರೋ ಅಂಥವರು ಈ ಧರ್ಮವನ್ನು ತಮ್ಮ ಪ್ರಾಣದಂತೆ ರಕ್ಷಿಸಿಕೊಳ್ಳುತ್ತಾರೆ. ಪ್ರಪಂಚದಲ್ಲಿ ಯಾವುದರಿಂದ ತಮಗೆ ಸುಖವು ದೊರೆಯುತ್ತದೆಯೋ ಅದನ್ನೇ ಅನೇಕರು ಧರ್ಮವನ್ನಾಗಿಯೂ, ಯಾವದರಿಂದ ದುಃಖವುಂಟಾಗುತ್ತದೆಯೋ ಅದನ್ನೇ ಅಧರ್ಮವನ್ನಾಗಿಯೂ ತಿಳಿಯುವುದುಂಟು. ಆದರೆ ತಮಗನುಕೂಲವಾದುದೆಲ್ಲಾ ಧರ್ಮವಾಗಿಯೂ, ಪ್ರತಿಕೂಲವಾದುದೆಲ್ಲಾ ಅಧರ್ಮವಾಗಿಯೂ ಆಗಲಾರದು. ಯಾವುದು ಈಶ್ವರಪ್ರೋಕ್ತಗಳಾದ ಶ್ರುತಿಗಳಲ್ಲಿಯೂ, ಆ ಶ್ರುತ್ಯನುಸಾರಿಗಳಾದ ಗ್ರಂಥಗಳಲ್ಲಿಯೂ ಮಾಡಬಾರದೆಂದು ನಿಷೇಧಿಸಲ್ಪಟ್ಟಿರುತ್ತದೆಯೋ ಅದು ಅಧರ್ಮವೆಂಬುದಾಗಿಯೂ, ಯಾವುದು ಮಾಡಬೇಕೆಂದು ವಿಧಿಸಲ್ಪಟ್ಟಿರುತ್ತದೆಯೋ ಅದು ಧರ್ಮವೆಂಬುದಾಗಿಯೂ ಒಂದು ನಿಯಮವು ಅನಾದಿಕಾಲದಿಂದ ರೂಢವಾಗಿ ಬಂದಿರುತ್ತದೆ. ಹೀಗಿದ್ದರೂ ನಮ್ಮ ಭರತಖಂಡವಾಸಿಗಳಾದ ಕೆಲವರು ವಿದೇಶೀಯರ ಸಂಸರ್ಗದಿಂದ ಕೇವಲ ಐಹಿಕಸೌಖ್ಯವೆಂಬ ಅಂಟುರೋಗದಿಂದ ಹಿಡಿಯಲ್ಪಟ್ಟವರಾಗಿ ತಮ್ಮ ಸ್ವೇಚ್ಛಾವಿಹಾರಕ್ಕೆ ಯಾವುವು ತಡೆಯನ್ನುಂಟುಮಾಡುವುವೋ ಅಂಥ ಧರ್ಮಗಳನ್ನೆಲ್ಲಾ ಕಾಲಾನುಸಾರವಾಗಿ ಬದಲಾಯಿಸಬೇಕೆಂದೂ, ಅವು ಕಲ್ಪಿತಗಳೆಂದೂ, ಯಾವ ಧರ್ಮಗಳು ತಮ್ಮ ವಿಹಾರಕ್ಕೆ ಅನುಕೂಲವಾಗಿವೆಯೋ ಅವುಗಳನ್ನು ಸರಿಯಾದುವೆಂದು ವಾದಿಸುತ್ತ ಯುಗಯುಗಾಂತರದಿಂದಾಗತವಾದ ಧರ್ಮಶಾಸ್ತ್ರವನ್ನು ತಲೆಕೆಳಗುಮಾಡಲೆತ್ನಿಸುತ್ತಿರುವುದೊಂದು ವಿಷಾದಾಸ್ಪದವಾದ ಸಂಗತಿಯೇ ಸರಿ! ಯಾವುದು ಪರಲೋಕಸೌಖ್ಯಸಾಧನವಾಗಿದೆಯೋ ಅದು ಯಾವಾಗಲೂ ಬದಲಾವಣೆಯನ್ನು ಹೊಂದುವುದಿಲ್ಲ. ಯಾವುದು ಇಹಲೋಕಸೌಖ್ಯಸಾಧನವಾದುದೋ ಅದುಮಾತ್ರ ಕಾಲಾನುಸಾರವಾಗಿಯೂ ತಮ್ಮ ತಮ್ಮ ಬುದ್ಧಿಕೌಶಲಾನುಸಾರವಾಗಿಯೂ ಬದಲಾವಣೆಯನ್ನು ಹೊಂದಬಹುದು.

ಧರ್ಮವೆಂಬುದು ಆತ್ಮನನ್ನು ಉತ್ತಮಸ್ಥಿತಿಗೊಯ ಪಾರಮಾರ್ಥಿಕ ಉಪಾಯವಾದುದರಿಂದ ಕಾ ಎಷ್ಟು ಬದಲಾವಣೆಯಾಗುತ್ತಿದ್ದರೂ, ಬುದ್ಧಿಶಕ್ತಿ ಚಮತ್ಕಾರವೂ ಹೆಚ್ಚುತ್ತಿದ್ದರೂ ಯಾವಾಗಲೂ ಲಾವಣೆಯನ್ನು ಹೊಂದಲಾರದು.

ಧರ್ಮಂ ಶನೈಸ್ಸಂಚಿನುಯಾದ್ವಲ್ಮೀಕಮಿವ ಪುತ್ತಿಕಾಃ |
ಪರಲೋಕಸಹಾಯಾರ್ಥಂ ಸರ್ವಭೂತಾನ್ಯಪೀಡಯನ್ |

ವರ್ತಿಹುಳಗಳು ನೆಲ್ಲಮೆಲ್ಲನೆ ಪ್ರಯತ್ನಮಾಡ ದೊಡ್ಡ ಹುತ್ತವನ್ನು ಹೇಗೆ ಸಂಗ್ರಹಮಾಡಿಕೊ ವುವೋ, ಹಾಗೆ ಯಾವ ಪ್ರಾಣಿಗೂ ತೊಂದ ನ್ನುಂಟುಮಾಡದೆ ಪರಲೋಕಸಹಾಯಕ್ಕಾಗಿ ಸ ಸ್ವಲ್ಪವಾಗಿ ಧರ್ಮವನ್ನು ಸಂಗ್ರಹಿಸುತ್ತ ಹೋ ಕೆಂದು ಧರ್ಮಶಾಸ್ತ್ರ ದು ಧರ್ಮವು ತಮ್ಮ ಇಹ ವಾದಿಯಾದುದೆಂದು ಕದ ಅಪೇಕ್ಷೆಯಿಲ್ಲದ ಅಂಥವರೊಬ್ಬರು ಮಾ ಧರ್ಮದಿಂದ ಚ್ಯುತರಾಗಬಹುದೇ ಹೊರತು ಮು ವನ್ನೇ ಕಿತ್ತೊಗೆದು ಎಲ್ಲರನ್ನೂ ತಮ್ಮಂತೆ ಮಾಡಿಕೊಳ್ಳಲು ಪ್ರಯತ್ನಿಸಬಾರದು. ತಾವು ಕಷ್ಟತರವಾದ ಧರ್ಮವನ್ನಾಶ್ರಯಿಸಿ ಪರಲೋಕಸುಖವನ್ನು ಪಡೆಯಲಿಚ್ಛಿಸದಿದ್ದರೂ, ಲೋಕದಲ್ಲಿರುವ ಅನಂತ ಆಸ್ತಿಕ ಮಹಾಶಯರಾದರೂ ಸೌಖ್ಯವನ್ನು ಪಡೆಯಲೆಂಬ ಉದಾರಬುದ್ಧಿಯಿಂದಲಾದರೂ ತಟಸ್ಥರಾಗಿದ್ದರೆ ಅಂ ವರು ಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದಂ ಯೇ ಭಾವಿಸಬೇಕಾಗಿದೆ. ಒಳ್ಳೆಯದನ್ನು ಮಾಡು ದಕ್ಕೆ ಬದಲು ಅವರಿಂದ ಕೆಡಕಾಗದಿದ್ದರೆ ಸಾಕಾಗಿ ಹಾಗಿಲ್ಲದೆ ತಮ್ಮ ಐಹಿಕವಸ್ತುಭೋಗಕ್ಕಾಗಿ ಆಸ್ತಿ ರೆಂಬ ಪಕ್ಷಿಗಳಿಗೆ ಮೋಕ್ಷವೆಂಬ ಮಹಾಫಲವನ್ನ ಕಲು ಕೈನೀಡಿರುವ ಭರತಭೂಮಿಯಲ್ಲಿ ಬೆಳೆ ತಿರುವ ಅವಿನಾಶಿಯಾದ ಧರ್ಮವೃಕ್ಷದ ಶಾ ನ್ನು ನಮ್ಮ ಭಾರತೀಯರೇ ಕತ್ತರಿಸಿ ಬೀಸಾಡು ದರೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವ ನೇ ವಿಷಪ್ರಯೋಗಮಾಡಿ ಕೊಲ್ಲಲು ಇಚ್ಛಿಸ ರುಳಸ್ವಭಾವದ ತಾಯಿಯಂತಾಗುವರೆಂದು ಬೆ ಳಬೇಕಾಗಿಲ್ಲ. ಆದ್ದರಿಂದ ನಮ್ಮ ಭಾರತಾಂಬೆ ರ್ಭಸಂಜಾತರಾದ ಭಾರತೀಯರಾರೂ ನಮ್ಮ ವೇ ಶಾಸ್ತ್ರ ಪುರಾಣೇತಿಹಾಸಗಳಲ್ಲಿ ಹೇಳಿದ ಮುಕ್ತಿಸಾ ವಾದ ಧರ್ಮದ ಮೇಲೆ ದಾಳಿಯನ್ನಿಡದಂತೆ ಧ ಸೂತ್ರಚಾಲಕನಾದ ಪರಮೇಶ್ವರನು ಅವರಿಗೆ ಸದು ಯನ್ನೀಯಲಿ.

ಒಳದೇಶದ ವೃತ್ತಾಂತಗಳು

ಪದ್ಧತಿಯಮೇರೆಗೆ ಎರಡು ಬಣ್ಣಗಳಲ್ಲಿ ಅಂದ ಮುದ್ರಿಸಿದ ಹೊಸವರ್ಷದ (1933) ಕ್ಯಾಲೆಂಡರುಗ ಈ ನಮ್ಮ ಚಂದಾದಾರರೆಲ್ಲರಿಗೂ ಪತ್ರಿಕೆಯುಸಂ ಕಳುಹಿಸಿರುತ್ತೇವೆ.

ಶ್ರೀಮದ್ಯುವರಾಜರವರು ಕಳೆದವಾರ ಮ ಯಿಯಿಂದ ರಾಜಧಾನಿಗೆ ದಯಮಾಡಿಸಿದರು.

ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ಚಿಕ್ಕ ಳೂರಿನಲ್ಲಿ ಅಖಿಲಭಾರತ ಸ್ವದೇಶೀ ವಸ್ತುಪ್ರ ನವೊಂದನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿರುತಾ

ಇದೇ ಡಿಸೆಂಬರು 22 ನೆಯ ತಾರೀಖು ಸಾಂ ಕಾಲ ಶ್ರೀಮದ್ಯುವರಾಜರವರು ಮೈಸೂರು ಕಿ ಮೂಗರ ಪಾಠಶಾಲೆಯ ಬಹುಮಾನವಿನಿಯೋಗಸ ರಂಭವನ್ನು ನೆರವೇರಿಸಿದರು.

ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಟಿ. ವಿ. ಎ. ಈಶ್ವರನ್ ಮೊದಲಿಯಾರ್ರ ಬಂಗಲೆಗೆ ಯಾರೋ ಕಳ್ಳರು ನುಗ್ಗಿ ಕೆಲವು ಪದಾರ್ಥಗಳನ್ನು ಅಪಹ ಕೊಂಡು ಹೋಗಿರುತ್ತಾರೆ.

ಕಳೆದ ಎರಡು ವಾರಗಳಿಂದಲೂ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದ ಪೋರ್‌ಬಂದರ್ ಮಹಾರಾಜರವರು ಕಳೆದ ವಾರ ಬೆಂಗಳೂರಿಗೆ ಪ್ರಯಾಣಬೆಳೆಸಿದರು. ಆಗ್ಗೆ ಗೌರವಾರ್ಥವಾಗಿ 13 ತೋಪುಗಳು ಹಾರಿಸಲ್ಪಟ್ಟವು.

ರ್ 21 ನೇ ಸಿಂಗ್ ಕಾರಿಗಳ ಲೂರು ಶ್ರೀನಿವಾ ನ್ಯಾಯವಿಧಾಯಕ ತಿಗೆ ಸಂಬಂಧಪಟ್ಟ ದೇ ವೇಶಕ್ಕೆ ಅವಕಾಶವನ್ನು ನ್ನು ಚರ್ಚೆಗೆ ತಂದಿದ್ದರು ರಾಜಗೋಪಾಲಾಚಾರ್ಲ ಬಲವಿಲ್ಲದೆ ಮತಸಂಬಂಧವ ಪ್ರವೇಶಿಸುವದಿಲ್ಲವೆಂದು ಹೇ ರಲ್ ಫೈನಾನ್ಸ್ ಕಮಿಟಿಯವ ನಗಳು ತಮಗೆ ಬಹಳ ನಿರುತ್ಸಾ ದಿರುವವೆಂದೂ, ಮೈಸೂರು ಸಂಸ್ಥಾ ತ್ಯಾಗಮಾಡಲು ಸಿದ್ಧವಾಗಿಲ್ಲವೆಂದೂ, ಮೈಸೂರು ರೆ. ಷಯದಲ್ಲಿ ಬ್ರಿಟಿಷ್ ಹಿಂದೂಸ್ಥಾನದ ಮುಖಮುತ್ಸ ರಾಕಾನವನ್ನು ಸಹಾನುಭೂತಿಯಿಂದ ವರ್ತಿಸಲುವನ್ನು ೂ, ದುಂಡುಮೇಜಿನ ಪರಿಷತ್ತು ಅರ್ಧದಷ್ಟು ಯಶಸ್ವಿಯಾಗಿದೆಯೆಂದೂ, ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಹಿಂದೂಪತ್ರಿಕೆಯ ಬಾತ್ಮೀದಾರರಿಗೆ ತಿಳಿಸಿರುವರು.

ಕಲ್ಪಲ್ಪಟ್ಟ ಪುರುಷನಂತೆ ಚೀರಾ ಸಾಧಿಸುವದು. ಉಸುಕಿನಲ್ಲಿ ತ್ರಿಸಿದಂತೆ ಇರುತ್ತದೆ. ಜಾತಿಗೆ ಜಾತಿಜಾತಿಗಳಲ್ಲಿಯೂ ಜಂಗಮ ಜಂಗಮರಾಗಿರುತ್ತಾರೆಂಬಲ್ಲಿ ಜಾತಿಸಾಂಕರ್ಯವನ್ನು ಹೊಂದಿದ ಬಸವನ ಹಾಗೂ ಮನ ಪ್ರಯತ್ನವಿಶೇಷದಿಂದ ಮಾತ್ರ ಜಾತಿಕೆಟ್ಟು ಜಂಗ ಆದರೆ ಆಚಾರ್ಯಸಂಪ್ರದಾ ರಾದ ಗುರುಸ್ಥಲದವರು ಗತಾ ಮಾಹೇಶ್ವರಾ ಧರಿಸಿಕೊಂಡು ರವಾಡುವವ

ವಿಜಯದಶಮಿ ಗಲಭೆಗಳ ಮೊಕದ್ದಮೆಯಲ್ಲಿ ಅಪಾದಿತರಲ್ಲೊಬ್ಬರಾದ ವಿಷಕಂಠಯ್ಯ ಎಂಬುವರು ಪೋಲೀ ಮ್ಮ ಮೇಲೆ ಮೊಕದ್ದಮೆಯನ್ನು ಹೂಡುವದಕ್ಕೆ ತವಾಗಿಯೇ, 'ವಿಶ್ವಕರ್ಣಾಟಕ' ಪತ್ರಿಕಾ ಕರು ಸದರಿ ವಿಷಯವನ್ನು ತಮ್ಮ ಪತ್ರಿಕೆ ಪ್ರಕಟಗೊಳಿಸಿ ತಮಗೆ ಅವಮಾನಪಡಿಸಿದ ಇದಕ್ಕಾಗಿ ತಮಗೆ 'ವಿಶ್ವಕರ್ಣಾಟಕ' ಪತ್ರಿ ಾದಕರಿಂದ ಪರಿಹಾರವನ್ನು ಕೊಡಿಸಬೇ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಲ್ಲಿ ಒಂದು ಯನ್ನು ಹಾಕಿದ್ದರು. ಮ್ಯಾಜಿಸ್ಟ್ರೇಟರು ಅರ್ಜಿ ಪರಿಶೀಲಿಸಿ 'ವಿಶ್ವಕರ್ಣಾಟಕ' ದಲ್ಲಿ ಸದರಿ ವನ್ನು ಪ್ರಕಟಿಸುವುದಕ್ಕೆ ಮುಂಚಿತವಾಗಿಯೇ ೀಸರು ಕೋರ್ಟಿನಲ್ಲಿ ಒಂದು ಎಫ್. ಓ. ಆರ್. ಕ್ಕಾ ದಿದ್ದರೆಂದು ಹೇಳಿ ಅರ್ಜಿಯನ್ನು ವಜಾಮಾ

ವರ್ತಮಾನಸಂಗ್ರಹ

ಾಸಿಕದ ಮ್ಯಾಜಿಸ್ಟ್ರೇಟರು ಅಸ್ಪೃಶ್ಯರಿಗೆ ದೇವಾ ಪ್ರವೇಶಕ್ಕೆ ಅಪ್ಪಣೆಯನ್ನು ಕೊಡಲು ಸಾಧ್ಯವಿ ಂದು ತಿಳಿಸಿರುತ್ತಾರೆ.

ವಾರ್ಸಾನಗರದ ಒಬ್ಬ ಜೂಜುಕೋರನು 4½ ಷಿ ಂಗಿಗೆ (ಅಂದರೆ ಸುಮಾರು 3 ರೂ. 8 ಆಣೆಗೆ) ತನ್ನ ಂಡತಿಯನ್ನು ಜೂಜಿನಲ್ಲಿ ಸೋತನು!

ಮದರಾಸ್ ಅಧಿಪತ್ಯದ ಆದಿದ್ರಾವಿಡರಲ್ಲಿ ಬಹುಜ ು ಕ್ರೈಸ್ತಭಕ್ತರಾಗಿರುವದರಿಂದ ತಮ್ಮನ್ನು ಹರಿಜನ ದು ಕರೆಯಕೂಡದೆಂದು ತಿಳಿಸಿರುತ್ತಾರೆ.

ಬಂಗಾಳಾಸರಕಾರದವರು ಮಿಡ್ನಾಪುರಜಿಲ್ಲೆಗೆ ಿದ ದಂಡಿಪುರ ಎಂಬ ಗ್ರಾಮದ ನಿವಾಸಿಗಳ ೇಲೆ 300 ರೂ. ದಂಡವನ್ನು ವಿಧಿಸಿರುತ್ತಾರೆ.

ರೋಂಪಟ್ಟಣದ ಎದುರಿನಲ್ಲಿ ಮದ್ದು-ಗುಂಡುಗಳನ್ನು ಹರಿಸಿದ್ದ ಅಪ್ಪಿಯೋ ಎಂಬ ಕೋಟೆಯಲ್ಲಿ ಆಕ ತ್ ಸಿಡಿಮದ್ದು ಹಾರಿ 3 ಜನರು ಮೃತಪಟ್ಟರು.

ಫಿಲಿಪೈನ್ ದ್ವೀಪಗಳಿಗೆ 12 ವರ್ಷಗಳನಂತರ ಂತ್ರಾಧಿಕಾರವನ್ನು ವಹಿಸತಕ್ಕದ್ದೆಂದು ಅಮೇರಿ ಪಾರ್ಲಿಮೆಂಟಿನಲ್ಲಿ ಸರ್ವಾನುಮತದಿಂದ ತೀರ್ಮಾ ಪಟ್ಟಿತು.

18ನೇ ಅಖಿಲಕರ್ಣಾಟಕಸಾಹಿತ್ಯ ಪರಿಷತ್ತು ಇದೇ ಬರ್ 28 ನೇ ತಾರೀಖಿನ ದಿವಸ ಮಡಕೇರಿಯಲ್ಲಿ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗುವದು.

ಡಿಸೆಂಬರು 21 ನೇ ತಾರೀಖಿನ ದಿವಸ ಪೋಲೀಸರು ಕಲ್ಕತ್ತೆಯ ಉತ್ತರಭಾಗದಲ್ಲಿ 7 ಮನೆಗಳನ್ನು ಜಫ್ತಿ ಮಾಡಿ, ಇಬ್ಬರು ವಿದ್ಯಾರ್ಥಿನಿಯರನ್ನೂ 4 ಜನ ತರುಣರನ್ನೂ ದಸ್ತಗಿರಿಮಾಡಿದರು.

ಶಾಸ್ತ್ರೋಕ್ತ ದಿಟ್ಟದ

ಶ್ರೀ ಜಗದ್ಗುರು ಕೇದಾ ಶಾಲೆಯಲ್ಲಿ ತಯಾರಾಗತಕ್ಕ ಅತಿ ಸುಲಭಕ್ರಯದಲ್ಲಿ ದೊ ಔಷಧಿ ಹೆಸರು ಸ್ವರ್ಣಮಕರಧ್ವಜ ಸ್ವರ್ಣಚಂದ್ರೋದಯ " ೨ ನೇ ನಂ ರಸಸಿಂಧೂರ ಮಲ್ಲಸಿಂಧೂರ

'ದಾರ್' ಪತ್ರಿಕೆಯವರು 2000 ರೂಪಾಯಿ ಪ್ರಕಟವಾಗಿದ್ದ ಒಂದು ಾರದವರಿಂದ ಜಫ್ತಿಮಾಡ ವೆಯವರು ತಮ್ಮ ನೂತನ ಕ ಡಿಯಾರವನ್ನೇ ಹಾಕಬೇಕೆಂಬ ಾಂಕೂರು ಸ್ವದೇಶಿ ಗಡಿಯಾರ ವ್ಯಹಾರವನ್ನು ನಡೆಯಿಸುತ್ತಿ ಲ್ಲಿ ಒಬ್ಬ ಧನಪಿಶಾಚಗ್ರಸ್ತ ದುರಾತ್ಮನು ಶಾಲಸಿಂಧೂತಿಯನ್ನು ಅತ್ತಿಗೆಯೆಂದು ಹೇಳಿ ಮತ್ತೊ ಬ್ಬನಿಗೆ 20 ರೂಪಾಯಿಗಳಿಗೆ ಮಾರಿದನು. ಪೋಲೀಸ್ನವರ ಸಂಬಂಧವಾಗಿ 3 ಜನರನ್ನು ದಸ್ತಗಿರಿಮಾಡಿರುತ್ತಾರೆ.

ಅಪಾಯಕರಗಳಾದ ಶಸ್ತ್ರಾಸ್ತ್ರಗಳನ್ನು ತಮ್ಮ ಬಳಿ ಯಲ್ಲಿ ಇಟ್ಟುಕೊಂಡು 7 ಜನರನ್ನು ಕೊಲೆಮಾಡಿದ ರೆಂಬ ಕಾರಣದಮೇಲೆ ಲಾಹೋರು ಸೆಷನ್ಸ್ ಜಡ್ಜರವರು 8 ಜನ ಜಮೀನ್ದಾರರಿಗೆ ಮರಣದಂಡನೆಯನ್ನು ವಿಧಿಸಿದರು.

ಇದೇ ಡಿಸೆಂಬರ್ 16 ನೇ ತಾರೀಖಿನ ದಿವಸ ಲಾಹೋರಿನ ಸಬ್ ಇನ್ಸ್‌ಪೆಕ್ಟರ್ ಸಾದಿಕ್‌ಅಲಿಯವರು, ಇಬ್ಬರು ಕಾನ್‌ಸ್ಟೇಬಲರೊಡನೆ ಕೆಲವು ಜನ ಕಳ್ಳರನ್ನು ಹಿಡಿಯಲು ಹೋದಾಗ ಕಳ್ಳರು ಪೋಲೀಸರಮೇಲೆ ಬಾಂಬನ್ನು ಎಸೆದುದರಿಂದ ಸಬ್ ಇನ್ಸ್‌ಪೆಕ್ಟರರು ಕೂಡಲೇ ಮೃತಪಟ್ಟರು. ಪೋಲೀಸರಿಗೂ ತುಂಬಾ ಗಾಯಗಳಾಗಿರುವುವು.

ಸುಪ್ರಸಿದ್ಧ ಸಿನಿಮಾ ವಿದೂಷಕನಾದ ಚಾರ್ಲಿಚಾಪ್ಲಿನ್ನನು ದೇಶವಿದೇಶಗಳಲ್ಲಿ ಸಂಚಾರಮಾಡಿದಾಗ್ಗೆ ಪಡೆದ ಅನುಭವವನ್ನು 50,000 ಶಬ್ದಗಳುಳ್ಳ ಒಂದು ಕಥೆಯರೂಪವಾಗಿ ಬರೆಯುವುದರಲ್ಲಿ ತೊಡಗಿರುವನು. ಅಮೇರಿಕೆಯ ಗ್ರಂಥಪ್ರಚಾರಕರೊಬ್ಬರು ಸದರಿ ಗ್ರಂಥದ ಪ್ರತಿಯೊಂದು ಶಬ್ದಕ್ಕೂ 5 ಷಿಲಿಂಗುಗಳಂತೆ ಕೊಡಲು ಒಪ್ಪಿಕೊಂಡಿರುವರಂತೆ!

ಮದರಾಸಿನ ಶ್ರೀ|| ಟಿ. ಆರ್. ರಾಮಚಂದ್ರಯ್ಯರ್ ಎಂಬ ಸುಪ್ರಸಿದ್ಧ ಅಡ್ವೋಕೇಟರು ಸನಾತನ ಧರ್ಮಾಭಿಮಾನಿಗಳ ಪರವಾಗಿ ಇದೇ ಡಿಸೆಂಬರ್ 20 ನೇ ತಾರೀಖಿನ ದಿವಸ ಮದರಾಸ್ ಗವರ್ನರನ್ನು ಕಂಡು ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶವನ್ನು ಕೊಡುವ ಮಸೂದೆಗೆ ವಿರೋಧವಾಗಿ ವಿಜ್ಞಾಪನಾಪತ್ರಿಕೆಯೊಂದನ್ನು ಸಮರ್ಪಿಸಿದರು.

ಫಿಜಿ ಮತ್ತು ಆಸ್ಟ್ರೇಲಿಯಾಕ್ಕೆ ಮಧ್ಯದಲ್ಲಿರುವ 'ಬಿಗ್ ನಂಬಾಸ್' ದ್ವೀಪದ ದೊರೆಯಾದ ರಂಗಪಟಾರನರು ಚಕ್ರವರ್ತಿಯವರಿಗೆ ವಿಷಭರಿತವಾದ ಒಂದು ಭರ್ಜಿಯನ್ನೂ ಕೆಲವು ಹವಳಗಳನ್ನೂ ಬಹುಮಾನರೂಪವಾಗಿ ಕಳುಹಿಸಿ, ಬಿಳಿಯಜನರು ಎಲ್ಲಿಯವರೆಗೆ ತಮ್ಮ ಪ್ರಜೆಗಳಿಗೆ ಒಳ್ಳೆಯವರಾಗಿರುವರೋ ಅಲ್ಲಿಯವರೆಗೆ ತಾವೂ ಬಿಳಿಯಜನರಿಗೆ ಸ್ನೇಹವಾಗಿರುವದಾಗಿ ಹೇಳಿಕಳುಹಿಸಿರುವರು.

ವಿಶಾಖಪಟ್ಟಣದ ಬಂದರಿನಲ್ಲಿ ಹಡಗುಗಳು ಬರುವ ಮಾರ್ಗದಲ್ಲಿ ಒಂದು ನೀರಿನ ಸುಳಿಯಿದ್ದು ಅದರಿಂದ ದೋಣಿಗಳಿಗೆ ಬಹಳ ಅಪಾಯವಿರುವುದರಿಂದ, ನಮ್ಮ ಸಂಸ್ಥಾನದ ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆಯ ಮೇರೆಗೆ ಹಳೆಯ ಹಡಗುಗಳಲ್ಲಿ ಸಿಮೆಂಟು ಮರಳು ಮೊದಲಾದ ಪದಾರ್ಥಗಳನ್ನು ತುಂಬಿ ನೀರಿನಲ್ಲಿ ಮುಳುಗಿಸಿ ಒಂದು ಕೃತಕಗೋಡೆಯನ್ನು ನಿರ್ಮಿಸಿರುವರು.

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಆಲಪ್ಪೆ ಲಾಕಪ್ಪಿನಲ್ಲಿದ್ದ ಕೆಲವು ಜನ ಸತ್ಯಾಗ್ರಹ ಖೈದಿಗಳನ್ನು ಹೊಡೆದರೆಂಬ ಕಾರಣದ ಮೇಲೆ ಅಲ್ಲಿಯ ಸರಕಾರದವರು ಒಬ್ಬ ಪೋಲೀಸ್ ಕಾನ್‌ಸ್ಟೇಬಲನನ್ನೂ ಕೆಲಸದಿಂದ ವಜಾಮಾಡಿದರು. ಒಬ್ಬ ಹೆಡ್ ಕಾನ್‌ಸ್ಟೇಬಲನ್ನು ಕಡಮೆ ದರ್ಜೆಯ ಕೆಲಸಕ್ಕೆ ವರ್ಗಮಾಡಲ್ಪಟ್ಟನು. ಹಾಗೂ ಒಬ್ಬ ಕಾರಕೂನನು ಮತ್ತು ಒಬ್ಬ ಜವಾನನು 3 ತಿಂಗಳ ವರೆಗೆ ಸಸ್ಪೆಂಡ್ ಮಾಡಲ್ಪಟ್ಟರು.

ಡಿಸೆಂಬರ್ 21 ನೆಯ ತಾರೀಖಿನ ದಿವಸ ರಾತ್ರಿ ಮುಂಬಯಿ ಪೋಲೀಸರು ಸುಭಾರಿಬಂಗ್ ಎಂಬ ಸ್ಥಳದಲ್ಲಿ ಒಂದು ಜೂಜಿನ ಮನೆಗೆ ನುಗ್ಗಿ ಶೋಧ ಮಾಡುವಾಗ್ಗೆ ಅಲ್ಲಿದ್ದ 50 ಜನ ಜೂಜುಕೋರರು ಪೋಲೀಸರಮೇಲೆ ಬಿದ್ದು ಗಲಭೆಮಾಡಿದರು. ಒಬ್ಬ ಪೋಲೀಸ್ ಅಧಿಕಾರಿಗೂ 8 ಜನ ಪೋಲೀಸರಿಗೂ ಗಾಯಗಳಾದುವು. ಕಡೆಗೆ ಪೋಲೀಸರು ಗಲಭೆಯನ್ನು ನಿಲ್ಲಿಸಲು ಗುಂಡುಹಾರಿಸಿ, 32 ಜನರನ್ನು ದಸ್ತಗಿರಿ ಮಾಡಿದರು. 600 ರೂಪಾಯಿಗಳು ಪೋಲೀಸರ ವಶವಾದವು.

ಮುರ್ಷಿದಾಬಾದ್ ನಗರದ ನವಾಬರ ಜ್ಯೇಷ್ಠಕುಮಾರರು ಕಳೆದ ಮಾರ್ಚಿ ತಿಂಗಳಲ್ಲಿ ತಮ್ಮ ಪತ್ನಿಯನ್ನು ಪರಿತ್ಯಾಗಮಾಡಿದರು. ಇದರಮೇಲೆ ಅವರ ಪತ್ನಿಯು ವಿವಾಹಕಾಲದಲ್ಲಿ ತನ್ನ ಪತಿಯು ವಾಗ್ದಾನಮಾಡಿದ್ದ ಒಂದು ಲಕ್ಷ ರೂಪಾಯಿ ಸ್ತ್ರೀಧನವನ್ನೂ ತಿಂಗಳೊಂದಕ್ಕೆ 4000 ರೂ. ಜೀವನಾಂಶವನ್ನೂ ಕೊಡಿಸಬೇಕೆಂದು ಕೋರ್ಟಿನಲ್ಲಿ ದಾವಾಮಾಡಿದ್ದರು. ನವಾಬರ ಕುಮಾರರು ಇದಕ್ಕೆ ಯಾವ ತಕರಾರನ್ನೂ ಹಾಕಲಿಲ್ಲವಾದ್ದರಿಂದ ಜಡ್ಜರು ಮೊಕದ್ದಮೆಯನ್ನು ವಾದಿಯಪರವಾಗಿ ತೀರ್ಮಾನಮಾಡಿರುತ್ತಾರೆ.

ಕೆಲವು ದಿವಸಗಳ ಹಿಂದೆ ಮುಂಬಯಿಯಲ್ಲಿ ನಡೆದ ಹಿಂದೂಮುಸಲ್ಮಾನರ ಗಲಭೆಯಲ್ಲಿ ಮುಂಬಯಿ ಪೌರಸಭೆಯ ಮಾಜಿ ಸದಸ್ಯರಾದ ಮಿ|| ಎಸ್. ಕೆ. ಪ್ರಧಾನರವರು ಅವರ ಕಡೆಯ ನಾಲ್ಕು ಜನ ತುಂಟರಿಂದ ಒಬ್ಬ ಮುಸಲ್ಮಾನನನ್ನು ಕೊಲೆಮಾಡಿಸಿದರೆಂದು ಮುಂಬಯಿ ಪೋಲೀಸರು ಮೇಲ್ಕಂಡ 5 ಜನರ ಮೇಲೆ ಮೊಕದ್ದಮೆಯನ್ನು ಹೂಡಿದ್ದರು. ಹೈಕೋರ್ಟಿನ ಚೀಫ್ ಜಡ್ಜರಾದ ಮಿ|| ಬ್ಯೂಮಾಂಟ್‌ರವರು ಪಂಚಾಯಿತರ ಅಭಿಪ್ರಾಯಕ್ಕನುಸಾರವಾಗಿ ಸರಿಯಾದ ರುಜುವಾತು ದೊರೆಯಲಿಲ್ಲವಾಗಿ ಎಲ್ಲರನ್ನೂ ಬಿಡುಗಡೆಮಾಡಿದರು.

ಇಂಗ್ಲೆಂಡಿನ ರಸಾಯನಶಾಸ್ತ್ರದ ಉತ್ತೇಜನಕ್ಕಾಗಿ ಏರ್ಪಟ್ಟಿರುವ ಸಂಘದಲ್ಲಿ ಕ್ಯಾಪ್ಟನ್ ಲಾಂಗ್‌ಫೀಲ್ಡ್‌ರವರು ಭಾಷಣಮಾಡುತ್ತಾ, ಇಂಗ್ಲೆಂಡ್‌ದೇಶವು ಕ್ರಮೇಣ ಸಮುದ್ರದಲ್ಲಿ ಮುಳುಗಿ ಹೋಗಬಹುದೆಂಬ ಭೀತಿಯು ತಮಗುಂಟಾಗಿರುವದೆಂದೂ, ಸೆಂಟ್ ಪಾಲ್ಸ್ ಕಟ್ಟಡವು ಕ್ರಮೇಣ ಒಂದು ಪಕ್ಕಕ್ಕೆ ಸರಿಯುತ್ತಿರುವದೆಂದೂ, ವೆಸ್ಟ್‌ಮಿನಿಸ್ಟರಿನ 'ಕಂಟ್ರಿಹಾಲ್' ಕಟ್ಟಡವು ಸಮುದ್ರದ ಉಬ್ಬರವಿಳಿತಗಳಂತೆ ಮೇಲಕ್ಕೂ ಕೆಳಕ್ಕೂ ಚಲಿಸುವದೆಂದೂ, ಅಲೆಗಳು ಸಮುದ್ರದಲ್ಲಿ ವಿಶೇಷ ಎತ್ತರಕ್ಕೆಬಂದಾಗ ಸುರಂಗದಮಾರ್ಗಗಳು ಆಕಾರದಲ್ಲಿ ವ್ಯತ್ಯಾಸಹೊಂದುವವೆಂದೂ, ಬ್ಯಾಂಕ್ ಆಫ್ ಇಂಗ್ಲೆಂಡಿನ ಕಟ್ಟಡದಸ್ಥಿತಿಯು ಬಹಳ ಚಿಂತೆಗೆ ಕಾರಣವಾಗಿರುವದೆಂದೂ ತಿಳಿಸಿದರು.

ಸೈಲೇಷಿಯಾದೇಶದ 80 ವರ್ಷದ ಮುದುಕನು ತನ್ನ ಜೀವನಚರಿತ್ರೆಯನ್ನು ಈ ರೀತಿಯಾಗಿ ಬರೆದಿಟ್ಟು ಮೃತಿಹೊಂದಿರುತ್ತಾನೆ. "ನಾನು 8 ವರ್ಷಗಳ ಕಾಲ ಅಥವಾ 29,220 ದಿವಸ ಅಥವಾ 7,01,280 ಗಂಟೆ, ಅಥವಾ 4,20,76,800 ನಿಮಿಷ ಅಥವಾ 2,52,47,08,000 ಕ್ಷಣಗಳ ಕಾಲ ಜೀವಿಸಿದ್ದೆನು. ಸದರಿ ಕಾಲವನ್ನು ಈ ಕೆಳಗೆ ಕಂಡಂತೆ ಕಳೆದೆನು.

	ವರ್ಷ	ದಿನ	ಗಂಟೆ	ನಿಮಿಷ
ನಿದ್ರೆ	26	312	18	22
ಕೆಲಸ	21	95	14	40
ಊಟ	5	346	5	12
ಕಾಯುವದು	5	392	8	27

ಮನುಷ್ಯನು ತನ್ನ ಜೀವಮಾನದಲ್ಲಿ ಸ್ವಸೌಖ್ಯಕ್ಕಾಗಿ ಎಷ್ಟು ಅಲ್ಪಕಾಲವನ್ನು ಕಳೆಯುವನೆಂಬುದನ್ನು ತೋರಿಸಲು ಈ ಪಟ್ಟಿಯನ್ನು ತಯಾರಿಸಿರುವನಂತೆ!

ಸತ್ಯಾಗ್ರಹಸಮರವಾರ್ತೆ.

ವೈಸರಾಯರು ನಾಗಪುರಕ್ಕೆ ಬಂದ ಕಾಲದಲ್ಲಿ ಅವರಿಗಾಗಿ ಏರ್ಪಡಿಸಿರುವ ಸತ್ಕಾರ ಕೂಟಗಳನ್ನು ಬಹಿಷ್ಕರಿಸಬೇಕೆಂದು ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದ 3 ಜನ ಕಾಂಗ್ರೆಸ್ ಸ್ವಯಂಸೇವಕರನ್ನೂ ಶ್ರೀ ರಾಮಚಾರ್ಕಶಾಸ್ತ್ರಿ ಎಂಬ ಪ್ರಮುಖ ಕಾಂಗ್ರೆಸ್ ಮುಖಂಡರನ್ನೂ ಪೋಲೀಸರು ದಸ್ತಗಿರಿಮಾಡಿದರು.

ಡಿಸೆಂಬರ್ 22 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಮದ್ರಾಸಿನ ಪ್ರಮುಖ ಕಾಂಗ್ರೆಸ್ ಮುಖಂಡರಾದ ಶ್ರೀ ಪಾದಶಂಕರು ಎಂಬುವರನ್ನು ದಸ್ತಗಿರಿಮಾಡಿ ಸ್ವಲ್ಪ ಕಾಲಾನಂತರ ಬಿಡುಗಡೆ ಮಾಡಿದ್ದಲ್ಲದೆ 24 ಘಂಟೆಗಳೊಳಗಾಗಿ ಮುಂಬಯಿಯನ್ನು ಬಿಟ್ಟು ಹೊರಡಬೇಕೆಂದು ಅಪ್ಪಣೆ ಮಾಡಿದರು.

ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದರೆಂಬ ಕಾರಣದ ಮೇಲೆ ಲಕ್ನೋ ಸಿಟಿ ಮ್ಯಾಜಿಸ್ಟ್ರೇಟರವರು ಶ್ರೀ|| ಮೋಹನಲಾಲ ಸಾಕ್ಸೇನಾರವರಿಗೆ 6 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು. ವಿಚಾರಣೆಯು ಜೈಲಿನಲ್ಲಿಯೇ ನಡೆಯಿತು.

ಸೇಲಮ್ಮಿನ 3 ಜನ ಸ್ವಯಂಸೇವಕರು ಸ್ಥಳೀಯ ಕಾಂಗ್ರೆಸ್ ಕಮಿಟಿಯ ಚಳವಳಿಗೆ ಸಹಾಯಮಾಡಿದರೆಂಬ ಅಪಾದನೆಯಮೇಲೆ ಆರಾರು ತಿಂಗಳ ಕಠಿಣಸಜೆಗೆ ಗುರಿಯಾದರು.

ತಿನ್ನವೆಲ್ಲಿ ಡಿ|| ಕೊಕ್ಕರಾಕು ಲಮ್ಮಿ ಸುಬ್ಬಯ್ಯಪಿಳ್ಳೆ ಎಂಬವರು ಸತ್ಯಾಗ್ರಹಚಳವಳಿಯಲ್ಲಿ 18 ತಿಂಗಳ ಕಠಿಣಸಜೆಯನ್ನು ಅನುಭವಿಸುತ್ತಿದ್ದು 4 ತಿಂಗಳುಗಳನಂತರ ಕ್ಷಮಾಪಣೆಯನ್ನು ಬೇಡಿದ್ದರಿಂದ ಬಿಡುಗಡೆಯನ್ನು ಹೊಂದಿದ್ದರು. ಆದರೆ ಅವರು ಪುನಃ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಸರಕಾರದವರು ಮೊದಲು ನಿಂತಿದ್ದ 14 ತಿಂಗಳ ಸಜೆಯನ್ನು ಪೂರ್ತಿಯಾಗಿ ಅನುಭವಿಸಬೇಕೆಂದು ಅಪ್ಪಣೆಮಾಡಿರುತ್ತಾರೆ.

ನಾಭಾಸಂಸ್ಥಾನದ ಸರದಾರ್ ಹೀರಾಸಿಂಗರವರು ತಮ್ಮ ಪತ್ನಿ ಮತ್ತು ಒಬ್ಬ ಸೇವಕನೊಡನೆ ಡಿಸೆಂಬರ್ 15 ನೇ ತಾರೀಖಿನ ದಿವಸ ಲಾಹೋರಿನಲ್ಲಿ ಕಾಂಗ್ರೆಸ್ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣದಮೇಲೆ ಲಾಹೋರ್ ಮ್ಯಾಜಿಸ್ಟ್ರೇಟರು ಹೀರಾಸಿಂಗರಿಗೆ ಆರ ತಿಂಗಳ ಕಠಿಣಸಜೆ 50 ರೂ. ಜುಲ್ಮಾನೆ ತಪ್ಪಿದರೆ ಮತ್ತ ಮೂರು ತಿಂಗಳ ಕಠಿಣಸಜೆಯನ್ನೂ, ಅವರ ಪತ್ನಿ ಮತ್ತು ಜವಾನನಿಗೆ ನಾಲ್ಕು ನಾಲ್ಕು ತಿಂಗಳ ಸಜೆ ಮತ್ತು 25 ರೂ. ಜುಲ್ಮಾನೆಯನ್ನೂ ವಿಧಿಸಿದರು. ಹೀರಾಸಿಂಗರ ಪತ್ನಿಯ ಜೊತೆಯಲ್ಲಿ ನಾಲ್ಕು ವರ್ಷದ ಮಗುವೊಂದಿರುವದು. ಸರದಾರರು ಕಳೆದ ಘೋರಯುದ್ಧದಲ್ಲಿ ಭಾಗವಹಿಸಿ ಪ್ರಸಿದ್ಧರಾಗಿದ್ದರು. ಚಳವಳಿಯ ಸಂಬಂಧದಲ್ಲಿ ಅವರ ಆಸ್ತಿಯೆಲ್ಲವೂ ಸರಕಾರದವರಿಂದ ಜಫ್ತಿಮಾಡಲ್ಪಟ್ಟಿರುವದು.

ಜಗದ್ಗುರುಗಳವರ ಆಗಮನ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಇದೇ ತಿಂಗಳು 30ನೆಯ ತಾರೀಖು ಶುಕ್ರವಾರ ದಿವಸ ತುಮಕೂರು ಟವನ್ನಿಗೆ ಬಿಜಮಾಡುವುದರಿಂದ ಸರ್ವರೂ ಆಗಮಿಸಿ ಉತ್ಸವದಲ್ಲಿ ಭಾಗಿಗಳಾಗಿ ಗುರುದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುತ್ತಾರೆ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಸಂಸಾರವಾದರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ-ಕೊರಟಗೆರೆ ತುಮಕೂರು ಡಿ||

[3ನೇ ಪುಟದಿಂದ ಮುಂದುವರಿದುದು]

ವಾಚಕಮಹಾಶಯರೇ! ಇದರಿಂದ ಸನ್ಯಾಸಾಶ್ರಮವು ಲೋಪವಾಯಿತೆಂದು ತಿಳಿಯಲಾಗದು "ಯದಹರೇವ ವಿರಜೇತ್ತದಹರೇವ ಪ್ರವ್ರಜೇತ" ಎಂಬಂತೆ ಯಾವನಿಗೆ (ಭಕ್ತನಿಗಾಗಲೀ ಮಾಹೇಶನಿಗಾಗಲೀ) ನಿವೃತ್ತಿಮಾರ್ಗದಿಂದ ವೈರಾಗ್ಯವು ಉತ್ಪನ್ನವಾಗುವದೋ ಅವನೇ ವಿರಕ್ತನಾಗುವನು. ಇಂಥವರು ಹಿಂದಕ್ಕೆ ಬಹುಜನರಾಗಿ ಹೋಗಿರುವರು. ಕಲಿಧರ್ಮದಿಂದ ಕಾಮವಾಸನೆಯು ಹೆಚ್ಚಿದ್ದರಿಂದ ಈಗಿಲ್ಲದಿದ್ದರೂ ಮುಂದಾದರೂ ಆಗಬಹುದು. ಅಥವಾ ಇಂಥ ಮಹನೀಯರು ಈಗಲೂ ಎಲ್ಲಿಯಾದರೂ ಇರಬಹುದಾಗಿ ನಿರ್ಧರಿಸಬಹುದು. ಅಂತು ಈಗಿನ ವಿರಕ್ತರು ತಮ್ಮ ಇತಿಹಾಸವನ್ನು ಇಲ್ಲಿಗೆ ಮುಗಿಸಿಬಿಡುವದು ಯುಕ್ತವೆಂದು ಮತ್ತೊಮ್ಮೆ ನಮ್ಮ ಅಭಿಪ್ರಾಯವನ್ನು ತಿಳಿಸಿ ಇಲ್ಲಿಗೆ ವಿರಮಿಸುತ್ತೇವೆ.

ಎಚ್. ಎಸ್. ಆರಾಧ್ಯಮಠ, ಬೇವಿನಹಳ್ಳಿ.

ವೀರಶೈವದೀಕ್ಷಾಸಂಸ್ಕಾರವೂ ಧಾರ್ಮಿಕ ಸಭೆಯೂ.

ತಾರೀಖು 7-12-32 ನೇ ದಿವಸ ಶಿವಮೊಗ್ಗಾ ಡಿ|| ಶಿಕಾರಿಪುರ ತಾ|| ಮಾಳಗೊಂಡನಕೊಪ್ಪದ ಪ್ರಮುಖರ ಪ್ರಾರ್ಥನೆಯ ಮೇರೆಗೆ ಶ್ರೀ ಕ್ಯಾಸನೂರ ಸಂಸ್ಥಾನದ ಪಂಡಿತ ಗುರುಬಸವ ಶಿವಾಚಾರ್ಯ ಸ್ವಾಮಿಗಳವರು ಆಗಮಿಸಿ, ಭಕ್ತರ ಅಪೇಕ್ಷೆಯ ಮೇರೆಗೆ ಸಾಧು ವೀರಶೈವ ಕ್ಷತ್ರಿಯರಾದ ಮ|| ರಾ|| ಪ್ಯಾಟಿ ಬಸಲಿಂಗಪ್ಪನವರ ಮನೆಯಲ್ಲಿ ಶ್ರೀ ಮೃತ್ಯುಂಜಯ ಜಪವನ್ನು ಮೂರು ದಿವಸ ನೆರವೇರಿಸಿ ತಾರೀಖು 12-12-32 ನೇ ಸೋಮವಾರ ಇದೇ ಗ್ರಾಮದ ಮ|| ರಾ|| ಪಾಟೀಲ ಬಸಲಿಂಗಪ್ಪನವರ ಕೋರಿಕೆಯಂತೆ ಮಾಹೇಶ್ವರವಟುಗಳಿಗೂ ಭಕ್ತರಿಗೂ ಮತ್ತು ಅವರಿಗೂ ಸಹಾ ದೀಕ್ಷಾಸಂಸ್ಕಾರವನ್ನು ವೇ|| ಬೆಳಗಾವಿ ಆರಾಧ್ಯಮಠದ ರುದ್ರಾರಾಧ್ಯರ ಪೌರೋಹಿತ್ಯದೊಡನೆ ನೆರವೇರಿಸಿದರು. ಅನಂತರ 3 ಘಂಟೆಯಿಂದ ಧಾರ್ಮಿಕಸಭೆಯು ಮೇಲ್ಕಂಡ ಶ್ರೀಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಳಗಾವಿ ವೇ|| ರುದ್ರಾರಾಧ್ಯರು ಮಠಸ್ಥರ ಹಕ್ಕುಬಾಧ್ಯತೆಯ ವಿಷಯದಲ್ಲಿಯೂ, ಗರ್ಭಾದಾನಾದಿಸಂಸ್ಕಾರಗಳ ವಿಚಾರದಲ್ಲಿಯೂ ಸ್ವಾರಸ್ಯವಾಗಿ ಭಾಷಣಮಾಡಿದರು. ಸುತ್ತಕೋಟೆ ಸಾಧುವೀರಶೈವಕ್ಷತ್ರಿಯ ಸಂಘ ಪ್ರಚಾರಕರಾದ ಮ|| ರಾ|| ಬಸವಂತಪ್ಪ ಬಡಿಗೇರ ಇವರು ವೀರಶೈವರಿಗೆ ಅವಶ್ಯಕವಾದ ಆಚಾರಗಳ ವಿಷಯದಲ್ಲೂ ಧರ್ಮಶಾಸ್ತ್ರವಚನಗಳ ಉದಾಹರಣೆಗಳೊಡನೆ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಸರಳವಾಗಿ ಭಾಷಣಮಾಡಿದರು. ಇದೇ ಗ್ರಾಮದ ಮ|| ರಾ|| ಜಾವಳ್ಳಿ ಶಿವಪ್ಪನವರು ಅಧ್ಯಕ್ಷರು ಪ್ರಥಮದಲ್ಲಿ ಅಂತ್ಯಾಶ್ರಮಧರ್ಮವಿಚಾರವೆಂಬ ಗ್ರಂಥವನ್ನು ನಿರ್ಮಿಸಿದರೆಂತಲೂ, ಹೈದರಾಬಾದಿನಲ್ಲಿ ಉಮರ್‌ಮಹಜ್ಜಿ ಕೋರ್ಟಿನಲ್ಲಿ ನಡೆದ ಪರೀಕ್ಷಾಕರಣದಲ್ಲಿ ಒಡೆಯರಿಗೆ ಸಹಾಯಕರಾಗಿ ಅನೇಕ ಧರ್ಮಗ್ರಂಥಗಳನ್ನು ಸಂಗ್ರಹಿಸಿ, ಎರಡು ಮೂರು ತಿಂಗಳವರೆಗೂ ಕೋರ್ಟಿನಲ್ಲಿ ಪ್ರತಿಪಾದಿಸಿ ಧರ್ಮಗ್ರಂಥಗಳನ್ನು ಹಾಜರ್‌ಮಾಡಿ ಯಶಸ್ವಿಗಳಾದರೆಂತಲೂ, ಇತ್ತೀಚೆಗೆ ಬೆಂಗಳೂರಿಗೆ ದಯಮಾಡಿಸಿ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದ ವೀರಶೈವ ಪ್ರಮುಖರ ಸೂಚನೆಯ ಮೇರೆಗೆ ಶ್ರೀ ಕರಭಾಷ್ಯದ ಸಾರವನ್ನೆಲ್ಲಾ ಕ್ರೋಡೀಕರಿಸಿ ಸ್ವಮತಪರಮತ ಪಂಡಿತಮಂಡಲೀಮಂಡಿತವಾದ ದೊಡ್ಡ ಸಭೆಯಲ್ಲಿ ಸರ್ವರ ಹೃದಯದಲ್ಲಿ ಪ್ರತಿಬಿಂಬಿಸುವಂತೆ ಅತಿ ಪ್ರೌಢವಾದ ವ್ಯಾಖ್ಯಾನವನ್ನು ಮಾಡಿ ಅಲ್ಲಿಯ ಪ್ರಮುಖರಿಂದ ಬಹುಮಾನಕರಗಳಾದ ಬಿಲ್ಲತ್ತುಗಳನ್ನು ಪಡೆದು ಕೀರ್ತಿಯನ್ನು ಹೊಂದಿದರೆಂತಲೂ, ಬನವಾಸಿಯ ಪ್ರಕರಣದಲ್ಲಿ ಈ ಹಿಂದೆ ಸಾಗರದ ಮುನಸೀಫ್ ಕೋರ್ಟಿನ ಕಮಿಷನ್ ವಿಚಾರಣೆಯಲ್ಲಿ ಶ್ರೀಗಳು ಎಂಟು ದಿವಸಗಳ ವರೆಗೂ ಸಾಕ್ಷಿರೂಪವಾಗಿ ಧರ್ಮಗ್ರಂಥಗಳನ್ನು ಪ್ರತಿಪಾದಿಸಿ ಹಾಜರ್‌ಮಾಡಿದರೆಂತಲೂ ಇಂಥ ಪಂಡಿತರು ನಮ್ಮ ಪ್ರಾರ್ಥನೆಯ ಮೇರೆಗೆ ನಮ್ಮ ಗ್ರಾಮಕ್ಕೆ ದಯಮಾಡಿಸಿದ್ದು ನಮ್ಮ ಸುದೈವವಾಗಿರುವದೆಂತಲೂ ಹಳ್ಳಿಗರಾದ ನಮಗೆ ದೀಕ್ಷಾವಿಚಾರವನ್ನು ಬೋಧಿಸುವದು ಅವಶ್ಯಕವಾಗಿರುವದೆಂತಲೂ ಪ್ರಾರ್ಥಿಸಿದರು. ಅನಂತರ ಅಧ್ಯಕ್ಷರು ಈ ಸ್ಥಲವು "ನೈಮಿಷೇ ನಿಮಿಷಕ್ಷೇತ್ರೇ" ಎಂದು ವ್ಯಾಸೋಕ್ತಪುರಾಣದಲ್ಲಿ ಪ್ರತಿಪಾದಿಸಿದ ಶ್ಲೋಕಗಳಂತೆ ಸೂತಪುರಾಣಿಕರು ಶೌನಕಾದಿ ಋಷಿಗಳಿಗೆ ಧರ್ಮಶ್ರವಣವನ್ನು ಮಾಡಿದ ನೈಮಿಷಾರಣ್ಯಾಂತರ್ಗತವಾದ ಅನುಮಿಷಕ್ಷೇತ್ರವಾಗಿದೆ. ಇಲ್ಲಿ ಪೂರ್ವಕಾಲದಲ್ಲಿ ನಂದೀಶ್ವರನು ಅನಿಮಿಷನೆಂಬ ಶಿವಯೋಗಿಗೆ ಇಷ್ಟಲಿಂಗವನ್ನು ಕೊಟ್ಟಿರುವನು. ಇಲ್ಲಿ ಅನಿಮಿಷಯೋಗಿಯ ಯೋಗಸಮಾಧಿಯಿರುವದು. ಇಲ್ಲಿಗೆ ಈಗಲೂ ಕೂಡ ಅನೇಕ ಮಹಾತ್ಮರು ಬಂದು ಈ ಆಶ್ರಮದ ಬಿಲ್ವವನದಲ್ಲಿ ಕೆಲಕಾಲ ವಾಸಿಸಿ ತಪೋನುಷ್ಠಾನಗಳನ್ನು ಮಾಡುತ್ತಿರುವರು. ಇದಕ್ಕೆ ಅರ್ಧಮೈಲಿನಲ್ಲಿ ಬೆಳಗಾವಿಯೆಂಬ ದಕ್ಷಿಣಕೇದಾರಕ್ಷೇತ್ರವಿದ್ದು ಅಲ್ಲಿಯಾದರೂ ಪಂಚಲಿಂಗ ಕೇದಾರೇಶ್ವರ ತ್ರಿಪುರಾಂತಕ ಸೋಮೇಶ್ವರ ಮಹಾಕಾಳ ಮೊದಲಾದ ಭವ್ಯತರಗಳಾದ ಅನೇಕ ಶಿಲಾಮಯಗಳಾದ ದೇವಾಲಯಗಳಿರುವದು ನಿಮ್ಮಗಳಿಗೆಲ್ಲಾ ತಿಳಿದೇ ಇದೆ. ಇವುಗಳನ್ನು ನೋಡೋಣದರಿಂದ ಭಾರತೀಯರ ಕಲಾಕೌಶಲ್ಯವು ವ್ಯಕ್ತವಾಗುತ್ತಿರುವದು. ನಿರಹಂಕಾರ ರಾಜನಕಾಲದಲ್ಲಿ ಇವೆರಡೂ ಕ್ಷೇತ್ರಗಳು ಒಂದೇ ಪಟ್ಟಣವಾಗಿದ್ದವೆಂದು ಸ್ಥಳಪುರಾಣಗಳಿಂದ ಗೊತ್ತಾಗುತ್ತದೆ. ಅದರ ಒಂದು ಭಾಗವಾದ ಇಲ್ಲಿ ಮಾಳಗೊಂಡನೆಂಬ ಒಬ್ಬ ಶರಣನಿದ್ದುದರಿಂದ ಇದಕ್ಕೆ ಮಾಳಗೊಂಡನಕೊಪ್ಪವೆಂದು ಹೆಸರಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ಈ ದಿವಸ ಸೇರಿದ ನಿಮ್ಮಗಳಿಗೆಲ್ಲಾ ಧರ್ಮಬೋಧೆಯನ್ನು ಮಾಡುವ ಸುಯೋಗ ಉಂಟಾದ್ದರಿಂದ ಇದೇ ಶುಭದಿವಸವೆಂದು ಭಾವಿಸುವೆವು. ಈಗ ದೀಕ್ಷಾವಿಷಯವನ್ನು ಬೋಧಿಸುವದು ಅವಸರವಾಗಿದೆ. ವೀರಶೈವ ಮತದ ತ್ರೈವರ್ಣದವರಿಗೂ ದ್ವಿಜತ್ವವು ಇರುವದರಿಂದ ಇವರಿಗೆಲ್ಲಾ ದೀಕ್ಷಾಕರ್ಮವು ಮುಖ್ಯ ಸಂಸ್ಕಾರವಾಗಿದೆ. "ಇದಕ್ಕೆ ಶ್ರೋತ್ರಿಯನಾಗಿಯೂ ಬ್ರಹ್ಮನಿಷ್ಠನಾಗಿಯೂ ಇರುವ ಸದ್ವಂಶೀಯಗುರುಗಳ ಕೃಪಾಕಟಾಕ್ಷವೇ ಕಾರಣವಾಗಿರುವದು. ಈ ಬಗ್ಗೆ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಬ್ರಹ್ಮಸೂತ್ರಕ್ಕೆ "ಸದ್ಗುರು ಕರುಣಾಕಟಾಕ್ಷಲಬ್ಧಶಕ್ತಿಪಾತಾದ್ಯವಚ್ಛಿನ್ನ ಪರಶಿವೇಷ್ಟಲಿಂಗಧಾರಣಾತ್ಮಕ ಪಾಶುಪತದೀಕ್ಷಾನಂತರ್ಯಂ" ಎಂದು ಭಾಷ್ಯಕಾರರು ಅರ್ಥವನ್ನು ಬರೆದಿರುವುದರಿಂದ, ಗುರುಕಟಾಕ್ಷವನ್ನು ಪಡೆಯದವನು ಮೋಕ್ಷವನ್ನು ಹೊಂದಲಾರನು. ಆದುದರಿಂದ ಸದ್ಗುರುವನ್ನಾಶ್ರಯಿಸಿ ಸಂಸ್ಕಾರವನ್ನು ಹೊಂದುವದು ಉತ್ತಮ ವರ್ಣೀಯರ ಕರ್ತವ್ಯವಾಗಿದೆ. ಹೀಗಿದ್ದು ಕೆಲವರು ಈ ದೀಕ್ಷೆಯಿಂದಲೇ ಮಾಹೇಶ್ವರರಾಗುವರೆಂದು ಜಗಿವಾಡುತ್ತಾರೆ. ಅದು ಅಸಂಬದ್ಧ ಪ್ರಲಾಪವೇ ಸರಿ. ಶ್ಲೋ|| ವೀರಶೈವಾಭಿಧಾ ದೀಕ್ಷಾ ವೀರಮಾಹೇಶ್ವರಾಭಿಧಾ ಏವಂ ಹಿಭಿದ್ಯತೇ ದೀಕ್ಷಾ ಭಕ್ತಮಾಹೇಶ್ವರೇ ಸುಧ || ಈ ಪ್ರಕಾರ ಭಕ್ತರಿಗೆ ವೀರಶೈವದೀಕ್ಷೆಯಂತಲೂ ಗುರುವರ್ಗದವರಿಗೆ ವೀರಮಾಹೇಶ್ವರದೀಕ್ಷೆಯಂತಲೂ ರಾವ್‌ಬಹದ್ದೂರ್ ಅಪ್ಪಾಸಾಹೇಬವಾರದ ಇವರಿಂದ ಮುದ್ರಿತವಾದ ವೀರಶೈವ ಸದಾಚಾರ ಸಂಗ್ರಹವೆಂಬ ಗ್ರಂಥದಲ್ಲಿ ಉಕ್ತವಾಗಿರುವದು. ಮಾಹೇಶ್ವರದೀಕ್ಷಾವಿಧಿಯಲ್ಲಿ ಪಟ್ಟಾಧಿಕಾರವುಳ್ಳ ಗುರುವರ್ಗದವರಿಗೆ ಪಂಚಮುದ್ರೆಗಳನ್ನೂ ಗುರುಗದ್ದಿಗೆಯನ್ನೂ ಕೊಡುವದೂ ಹೋಮಹವನಾದಿಗಳನ್ನು ಮಾಡುವದೂ ವಿಧಿಸಲ್ಪಟ್ಟಿರುವದು. ವೀರಶೈವದೀಕ್ಷಾವಿಧಿಯಲ್ಲಾದರೂ ಇವುಗಳ ಹೊರತು ಉಳಿದ ಎಲ್ಲಾ ಸಂಸ್ಕಾರಗಳು ಹೇಳಲ್ಪಟ್ಟಿರುವವು. ಇಂಥ ಸಂಸ್ಕಾರ ರಹಿತನು ಉತ್ತಮವರ್ಣದವನೆನಿಸಲಾರನು. ಶ್ಲೋ|| ಅದೀಕ್ಷಿತೈರನಾಚಾರೈರಮಂತ್ರೈಶ್ಚ ಅವೈದಿಕೈಃ| ದೂಷಕೈಸ್ಸಮಯಭ್ರಷ್ಟೈರ್ನಕಾರ್ಯಂ ಶಿವಪೂಜನಂ|| ದೀಕ್ಷಾಹೀನರು ಆಚಾರರಹಿತರು, ಮಂತ್ರೋಪದೇಶಯಿಲ್ಲದವರು ವೇದಬಾಹ್ಯರು ನಿಂದಕರು, ಮತಭ್ರಷ್ಟರು, ಶಿವಪೂಜೆಗೆ ಅನಧಿಕಾರಿಗಳು. ಶ್ಲೋ|| ಯಥಾಮೃಗಪತಿಂದೃಷ್ಟ್ವಾ ವನೇಭೀತೋ ಮಹಾಗಜಃ | ಅದೀಕ್ಷಿತಾರ್ಚನಾದೇವ ತಥಾಭೀತೋ ಮಹೇಶ್ವರಃ || ಅರಣ್ಯದಲ್ಲಿ ಸಿಂಹವನ್ನು ಕಂಡು ಬೆದರುವ ಆನೆಯಂತೆ ದೀಕ್ಷಾವಿಹೀನನು ಮಾಡುವ ಪೂಜೆಗೆ ಶಿವನು ಅಂಜುವನೆಂದು ಆಗಮವು ಸಾರುವದರಿಂದ ಅಷ್ಟಾವರಣ ಸಂಪನ್ನರಾದ ವೀರಶೈವರು ಶಿವಲಿಂಗಭಸ್ಮಮಾತ್ರ ಧಾರಿಗಳಾದ ಶೂದ್ರ ಅಂತ್ಯಜ ಪತಿತಸಂಕರಜಾತಿಯವರಂತೆ ಸಂಸ್ಕಾರ ವಿಹೀನರಾಗಿರುವದು ಲಾಂಛನಾಸ್ಪದವಾಗಿದೆ. ಆದುದರಿಂದ ಮುಂದಾದರೂ ಧರ್ಮಶಾಸ್ತ್ರದ ಕಡೆಗೆ ಲಕ್ಷ್ಯವಿಟ್ಟು ನಿಮ್ಮ ಅಧಿಕಾರಕ್ಕೆ ಯೋಗ್ಯವಾದ ದೀಕ್ಷೆಯನ್ನು ಹೊಂದಿ ಧನ್ಯರಾಗುವಿರೆಂದು ನಂಬಿ ಈ ಭಾಷಣವನ್ನು ವಿರಮಿಸುತ್ತೇನೆಂದು ಬೋಧಿಸಿದ ಬಳಿಕ ಗಂಧ-ಪುಷ್ಪ ತಾಂಬೂಲವಿನಿಯೋಗವಾಗಿ ಶ್ರೀಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಯಾಯಿತು. ಅಧ್ಯಕ್ಷರ ಸೂಚನೆಯ ಮೇರೆಗೆ ಪ್ರಭಾಪತ್ರಿಕೆಯ ಪೋಷಣೆಗೋಸ್ಕರ 1 ರೂಪಾಯಿ ತೆಗೆಯಿಸಲ್ಪಟ್ಟಿತು.

ಬಸಪ್ಪಯ್ಯ ಮಠದ ಮಾಳಗೊಂಡನಕೊಪ್ಪ.

ಹುರುಳಿಲ್ಲದ ಹರಟೆ.

ವಾಚಕರೇ! ಶ್ರೀ ಪಂಚಾಚಾರ್ಯ ಪ್ರಭಾಪತ್ರಿಕೆಯಲ್ಲಿ "ವೀರಶೈವಬಂಧುಗಳಲ್ಲಿ ವಿನಂತಿಯೊಂದು" ಲೇಖವನ್ನು ಪ್ರಕಟಿಸಿದ್ದಕ್ಕಾಗಿ ಯಾವನೋ ಒಬ್ಬನು ಯಾವದೋ ಒಂದು ಪತ್ರಿಕೆಯಲ್ಲಿ "ಪೃಷ್ಠತಾಡನೇ ದಂತಭಂಗಃ" ಎಂಬ ಗಾದಿಯ ಮಾತಿನಂತೆ ಅಸಂಬದ್ಧಪ್ರಲಾಪವನ್ನು ಮಾಡಿ ಹುರುಳಿಲ್ಲದ ಹರಟೆಯನ್ನು ಕೊಚ್ಚಿರುತ್ತಾನೆ. ಈತನು ಬರೆದಿರುವ ಲೇಖವು ವಿಚಾರಶೀಲರು ಬರೆದಿರುವ ಲೇಖಕ್ಕೆ ಪ್ರತ್ಯುತ್ತರವಲ್ಲವೆಂದು ಸಣ್ಣ ಹುಡುಗರೂ ಕೂಡ ಹೇಳಬಹುದು. ಫಾಲ್ಗುಣಮಾಸದ ಬಾಲಕರಂತೆ ಸದಾ ಲೇಖದಲ್ಲಿ ಚೀರಾಡಿರುವದನ್ನು ನೋಡಿದರೆ ಈ ಲೇಖಕನು ಶುದ್ಧ ತಲೆತಿರುಕನಿರಬಹುದೆಂದು ಊಹಿಸಲವಕಾಶವಾಗುತ್ತದೆ. ಅತ್ಯಂತ ರೋಗಪೀಡಿತನಾದ ಮನುಷ್ಯನು ತಾನು ಉಳಿಯುವ ಭರವಸವಿಲ್ಲದೆ ಸಾಯಲಾರದ ಸಂಕಟಕ್ಕಾಗಿ ಮನಸ್ಸಿಗೆ ಬಂದಂತೆ ಬಡಬಡಿಸುವಂತೆ ಈ ಲೇಖಕನಾದರೋ ಜಾತಿರೋಗದಿಂದ ಪೀಡಿಸಲ್ಪಟ್ಟವನಾಗಿ ತಾನು ಅದರಿಂದ ಪಾರಾಗುವ ಭರವಸವು ಕಿಲಾಂಶವೂ ಇಲ್ಲದ್ದರಿಂದ ಏನೇನೋ ಹರಟೆಯನ್ನು ಕೊಚ್ಚಿರುವನು. ಈತನು ಪವಿತ್ರಮನಸ್ಸಿಟ್ಟು ಬರೆದ ಲೇಖನಕ್ಕೆ ಯಾರೊಬ್ಬರೂ ಒಪ್ಪುವದಿಲ್ಲ. ವೃಥಾ ಈ ಬಗ್ಗೆ ಉತ್ತಮವಾದ ಸಮಯವನ್ನು ಕಳೆಕೊಂಡದ್ದಕ್ಕಾಗಿ ವಿಷಾದ ಪಡಬೇಕಾಗಿದೆ. ಅಸ್ತು! ಲೇಖಕನಿಗೆ ಸರಿಯಾದ ಉತ್ತರವನ್ನು ಕೊಡಬೇಕೆಂದರೆ ಲೇಖಕನು ಸರಳಮಾರ್ಗವನ್ನು ಹಿಡಿಯದೆ ಅಡ್ಡದಾರಿಯನ್ನು ಹಿಡಿದು ಅಸಂಬದ್ಧಪ್ರಲಾಪಮಾಡಿದ್ದಾನೆ. ಇಂಥವರ ಲೇಖಕ್ಕೆ ಉತ್ತರವನ್ನು ಕೊಡುವದು. ಕೊಳೆತುನಾರುವ ನೀರಿನಮೇಲೆ ಕಲ್ಲುಚೆಲ್ಲಿ ಮೈಗೆ ಸಿಡಿಸಿಕೊಂಡಂತೆಯೇ ಆಗುತ್ತದೆ. ವಾಚಕರೇ! ಸೂರ್ಯನು ಪೂರ್ವದಿಕ್ಕಿಗೆ ಉದಯಿಸುತ್ತಾನೆಂಬ ಮಾತು ಎಷ್ಟು ಸತ್ಯವೋ ವೀರಶೈವರಲ್ಲಿ ಜಾತಿಗಳಿರುವವೆಂಬ ಮಾತು ಅಷ್ಟೇ ಸತ್ಯವಿರುತ್ತದೆ. ಹರಟೆಯ ಲೇಖಕನಾಗಲಿ ಅಥವಾ ಇವನ ಅನುಯಾಯಿಗಳಾಗಲಿ ಎಷ್ಟೇ ಸಾಧಿಸಿದಾಗ್ಯೂ ಬಡಬಡಿಸಿದಾಗ್ಯೂ ಸಹಸ್ರ ಲೇಖಗಳಿಂದ ಕಚ್ಚಲ್ಪಟ್ಟ ಧ್ರುವನಂತೆ ಚೀರಾಡಿದಾಗ್ಯೂ ಜಾತಿಗಳಿಲ್ಲವೆಂದು ಸಾಧಿಸುವದು. ಉಸುಕಿನಲ್ಲಿ ಎಣ್ಣೆಯನ್ನು ತೆಗೆಯಲಿಕ್ಕೆ ಪ್ರಯತ್ನಿಸಿದಂತೆ ಇರುತ್ತದೆ. ಜಾತಿಗಳಿಲ್ಲವೆಂದು ಸಾಧಿಸಲಿಕ್ಕೆ ಹೋಗಿ ಜಾತಿಜಾತಿಗಳಲ್ಲಿಯೂ ಜಂಗಮರಿರುತ್ತಾರೆಂತಲು ಜಾತಿಕೆಟ್ಟು ಜಂಗಮರಾಗಿರುತ್ತಾರೆಂತಲೂ ಹೇಳುವದು ಹೊಟ್ಟೆಹೊರಕನವೇ ಸರಿ. ಜಾತಿಸಾಂಕರ್ಯವನ್ನು ಮಾಡುವದಕ್ಕಾಗಿ ಧರ್ಮಾಂತರವನ್ನು ಹೊಂದಿದ ಬಸವನ ಹಾಗೂ ಬಸವನಂತೆ ಧರ್ಮಾಂತರನಾದ ಅಲ್ಲಮನ ಪ್ರಯತ್ನವಿಶೇಷದಿಂದ 12 ನೆಯ ಶತಮಾನದಲ್ಲಿ ಕನ್ನಟರಿಗೆ ಮಾತ್ರ ಜಾತಿಕೆಟ್ಟು ಜಂಗಮರು ಆಗಿದ್ದರೂ ಆಗಿರಬಹುದು. ಆದರೆ ಆಚಾರ್ಯಸಂಪ್ರದಾಯಕರಾದ ಪುತ್ರಗುರುವಂಶೋತ್ಪನ್ನರಾದ ಗುರುಸ್ಥಲದವರು ಜಾತಿಕೆಟ್ಟ ಜಂಗಮರಲ್ಲ. ಮಹೇಶಾದಾಗತಾಃ ಮಾಹೇಶ್ವರಾಃ ಎಂಬಂತೆ ಸಾಕ್ಷಾತ್ ಪರಮೇಶ್ವರನ ಕಲೆಯನ್ನೇ ಧರಿಸಿಕೊಂಡು ಅಖಿಲ ವೀರಶೈವ ಆಬಾಲವೃದ್ಧರನ್ನು ಉದ್ಧಾರಮಾಡುವದಕ್ಕಾಗಿ ಅವತಾರ ಮಾಡಿರುವ ವೀರಮಾಹೇಶ್ವರರಾಗಿರುತ್ತಾರೆ. ಲೇಖಕನು ಮತ್ತು ಅವನ ತಂದೆಯು-ತಾತನು-ಅಜ್ಜನು-ಮುತ್ತಾತನು-ಗಿತ್ತಾತನು ಸಹ ವೀರಮಾಹೇಶ್ವರರಿಂದಲೇ ಉದ್ಧಾರವನ್ನು ಹೊಂದಿ ಈಗ ಮಾತ್ರ ಮನಬಲ್ಲಂತೆ ದೂಷಿಸುವದು ಕೃತಘ್ನತೆಯನ್ನು ವ್ಯಕ್ತಗೊಳಿಸಿದಂತಾಯಿತು. ಅಯ್ಯಾ ಲೇಖಕನೇ! ನೀನು ಪೂರ್ವಾಪರವಿಚಾರವಿಲ್ಲದೆ ಅಸಂಬದ್ಧಪ್ರಲಾಪಮಾಡುತ್ತ ಹುರುಳಿಲ್ಲದ ಹರಟೆಯ ಲೇಖಗಳನ್ನು ಬರೆದಿರುತ್ತೀ. ನಿನ್ನ ಸ್ವಭಾವವನ್ನನುಸರಿಸಿ ಮುಂದಾದರೂ ಬರೆಯಬಹುದು. ಆದರೆ ಅರ್ಥಗರ್ಭಿತವಾದ ಲೇಖವನ್ನು ಬರೆದರೆ ಜನರು ಓದಿ ಆನಂದಪಡುವರು. ಅರ್ಥವಿಲ್ಲದೆ ಅಸಂಬದ್ಧಪ್ರಲಾಪಮಾಡಿ ಹರಟೆಯಮಾತಿನ ಮಾಲೆಗಳನ್ನು ಪೋಣಿಸಿ ಲೇಖವನ್ನು ಬರೆದರೆ ಹುಚ್ಚನೆನ್ನುವರು, ತಲೆತಿರುಕನೆನ್ನುವರು. ಅಸಂಬದ್ಧಪ್ರಲಾಪಿಯೆನ್ನುವರು. ನೀನು ಮಾತ್ರ ಅರ್ಥವಿಲ್ಲದ ಲೇಖವನ್ನು ಬರೆದು ಹುಚ್ಚನಾಗಬೇಡ. ತಲೆತಿರುಕನಾಗಬೇಡ ತಂಡ್ಯಾ! ಲೇಖವನ್ನು ಬರೆಯುವದರಲ್ಲಿ ನಾನೇ ಕುಶಲಮತಿಯೆಂದು ತಿಳಿಯಬೇಡ. ನಿನಗಿಂತಲೂ ಸಾವಿರಪಟ್ಟು ಹೆಚ್ಚು ಕುಶಲಮತಿಗಳಿರುತ್ತಾರೆಂದು ಚೆನ್ನಾಗಿ ತಿಳಿದುಕೋ! ಹುಚ್ಚಪ್ಪಾ! ನೀನು ಒಮ್ಮೆ ಚಂದ್ರಮೌಳೀಶ್ವರಲಿಂಗವನ್ನು ಶಂಕರಾಚಾರ್ಯರಿಗೆ ರೇಣುಕರು ಕೊಟ್ಟಿಲ್ಲವೆಂದು ಹೇಳಿರುವಿಯಷ್ಟೇ! ನೀನಾರು? ನಿನ್ನ ಯೋಗ್ಯತೆಯೇನು! ಚರಂಡಿಯೊಳಗೆ ಬಿದ್ದ ಹಲಕೆಲವು ವಚನಗಳನ್ನು ದವಡೆಯಲ್ಲಿ ಅದುಮಿಕೊಂಡು ಚರ್ವಿತಚರ್ವಣ ಮಾಡುತ್ತ ಜಾತಿಸಾಂಕರ್ಯ ಸಹೋದರರಲ್ಲಿ ಪ್ರತಿಷ್ಠೆಯನ್ನು ಪಡೆಯುತ್ತಿರಬಹುದು. ಇತ್ತ ಗುರುವಂಶಕಾವ್ಯವನ್ನು ನೋಡು! ಅದನ್ನು ಶೃಂಗೇರಿ ಆಸ್ಥಾನವಿದ್ವಾನ್ ಲಕ್ಷ್ಮಣಶಾಸ್ತ್ರಿಗಳೆನ್ನುವರು—"ಪ್ರಾಚಾಮುಸಂಮತಂನ್ವೈವಲಿಖ್ಯತೇತ್ರನಚಾಧಿಕಂ" ಎಂದು ಆದಿಯಲ್ಲಿ ಪ್ರತಿಜ್ಞೆಯನ್ನು ಮಾಡಿ ಬರೆದಿರುತ್ತಾರೆ. ಸಂಸ್ಕೃತವು ನಿನಗೆ ತಿಳಿಯದಿದ್ದರೆ ಕನ್ನಡದಿಂದ ಪ್ರಸಿದ್ಧವಾದ ರೇಣುಕ ವಿಜಯವನ್ನು ತರಿಸಿಕೊಂಡು ಅದರ ಪೀಠಿಕೆಯನ್ನು ಓದಿಕೊಂಡು ನಿಜವಾದ ವಿಷಯವನ್ನು ತಿಳಿದುಕೋ! ಅಂದರೆ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ದಯಪಾಲಿಸಿರುವರೋ ಇಲ್ಲವೋ ಎಂಬ ವಿಷಯ ನಿನಗೆ ತಿಳಿಯಬರುತ್ತದೆ. ಇನ್ನು ರೇಣುಕರಿಗೆ ಲಗ್ನವಾಗಿತ್ತೆಂದೂ, ರುದ್ರಮುನೀಶ್ವರನೆಂಬ ಮಗನಿದ್ದನೆಂದೂ ಬರೆದಿರುವಿಯಲ್ಲ. ನಿನ್ನ ದಡ್ಡತನಕ್ಕೆ ನಗೆಯುಬರುತ್ತದೆ. ಈ ವಿಷಯದಲ್ಲಿ ಸೋದರಪ್ರಶ್ನಪರೀಕ್ಷಣವೆಂಬ ಪುಸ್ತಕವನ್ನು ತರಿಸಿ ಓದಿಕೋ! ಅಂದರೆ ನಿನಗೆ ಎಲ್ಲಾ ವಿಷಯವು ತಿಳಿಯುವದು. ತನಗೂ ತಿಳಿಯುವದಿಲ್ಲ. ಮತ್ತೊಬ್ಬರ ಮಾತೂ ಕೇಳುವದಿಲ್ಲ. ತಾನು ಮಾಡುವದನ್ನು ಬಿಡುವದಿಲ್ಲವೆಂಬ ಅವೀಚಪಂಡಿತರಂತೆ ಅವುಟುಪಂಡಿತರಂತೆ ಅಡ್ಡದಾರಿಯನ್ನು ಹಿಡಿದು ದಡ್ಡನಾಗಬೇಡ. ಹುರುಳಿಲ್ಲದ ಹರಟೆಯ ಲೇಖಗಳನ್ನು ಬರೆಯುವದನ್ನು ಸಾಕು ಮಾಡು.

ಓರ್ವ ಮತಾಭಿಮಾನಿ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[5] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳ ಆದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಕಾಲದಲ್ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಪ್ಯ್ರಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರು, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕೆನ್ನೆಹಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ನಾಯಿ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕರುಳಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಹುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕ್ಕ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[19] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು, ದ. ಕ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಉಂಟಾಗಿ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[26] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೊ ಹತ್ತುವರ್ಷಕ್ಕೊ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ೧೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[27] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಜನವರಿ ೧೯೩೩ [ಸಂಚಿಕೆ ೩೪

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[6] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೆನ್ಷನ್‌ದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ— ತುಮಕೂರು.

ಸನಾತನಧರ್ಮಜ್ಯೋತಿಗೆರಗಿದ ಪತಂಗ.

ಲೇಖಕ—ದೈವಜ್ಞ ವಿನೋದ.

ಅತ್ಯುಜ್ವಲವಾದ ಸನಾತನಧರ್ಮ ಪ್ರಭಾವವನ್ನೂ ಅದರ ರಕ್ಷಣೋಪಾಯಗಳನ್ನೂ ಕುರಿತು ಸನಾತನಧರ್ಮಾಭಿಮಾನಿಯು ಬರೆಯುತ್ತಿರುವ ಲೇಖಗಳನ್ನು ನೋಡಿ ಅನೇಕರು ಸಂತೋಷಪಡುತ್ತಿರುವಾಗ, ವೀರಶೈವಮತದಲ್ಲಿ ಜಾತಿಸಾಂಕರ್ಯದ ವಿಷಬೀಜವನ್ನೂ ಬಿತ್ತತೊಡಗಿದ ವೇಶ್ಯಾಪುತ್ರನಿಗೆ ಸಹಿಸವಾಗದೆ ತನ್ನ ಸಾಂಕರ್ಯದ ಪ್ರಭಾವವನ್ನು ಸನಾತನಧರ್ಮಜ್ಯೋತಿಯಮೇಲೆ ಪ್ರಯೋಗಿಸತೊಡಗಿದ್ದಾನೆ. "ಯಥಾಬೀಜಸ್ತಥಾಂಕುರಃ" ಎಂಬಂತೆ ತಾನು ಯಾವ ಕುಲದಲ್ಲಿ ಜನಿಸಿರುವನೋ ಅದರಂತೆ ಆಚರಿಸುವದು ಇವನ ಸ್ವಭಾವವಾಗಿದೆ. ಸನಾತನಧರ್ಮದ ತೇಜಸ್ಸಿನಿಂದಲೇ ಭರತಖಂಡವು ಪೂರ್ವಕಾಲದಲ್ಲಿ ಪ್ರಸಿದ್ಧವಾಗಿತ್ತು. ಆ ಪವಿತ್ರಧರ್ಮಪಾಲನೆಯಿಂದಲೇ ಭಾರತೀಯರಿಗೆ ಸ್ವಾತಂತ್ರ್ಯಾನಂದವು ದೊರೆಯುವದು. ನಮ್ಮ ದೇಶದಲ್ಲಿ ಆಗಿಹೋದ ಮಹಾತ್ಮರೆಲ್ಲರೂ ಸನಾತನಧರ್ಮಾವಲಂಬನೆಯಿಂದಲೇ ಜಗತ್ತನ್ನುದ್ಧರಿಸಿದರು. ಈಗಿನ ಗಾಂಧಿಯವರಾದರೂ ಸನಾತನಧರ್ಮದವರಾಗಿದ್ದಾರೆ. ಕಳೆದ ವರುಷದ ಸತ್ಯಾಗ್ರಹ ಸಮರದಲ್ಲಿ ಸನಾತನಧರ್ಮಾಭಿಮಾನಿಗಳು ಗಾಂಧಿಯವರ ಉಪದೇಶಕ್ಕೆ ಮರುಳಾಗಿದ್ದರು. ಧರ್ಮರಕ್ಷಣೆಯೇ ದೇಶರಕ್ಷಣೆಯು, ಸನಾತನಧರ್ಮವನ್ನು ಕಾಪಾಡಿದರೆ ಸಾಕು, ಸ್ವರಾಜ್ಯವು ತನ್ನಿಂದ ತಾನೇ ಲಭಿಸುವದು, ಸತ್ಯಕ್ಕಾಗಿ ಒಡೆದಾಡುವದೇ ಸ್ವರಾಜ್ಯಸಂಪಾದನೆಯ ಮಾರ್ಗವು ಎಂದು ಉದ್ಘೋಷಿಸಿದ ಗಾಂಧಿಯವರು ಈಗ ಸನಾತನಧರ್ಮದ ಭವ್ಯಮಂದಿರಕ್ಕೆ ಬಾಧಕವಾದ ಅಸ್ಪೃಶ್ಯತಾನಿವಾರಣೆಯೆಂಬ ಪಿಶಾಚಿಯನ್ನು ಹೊರಗೆಡವಿದರು. ಇದಾದರೂ ರಾಜಕೀಯರಂಗಭೂಮಿಯಲ್ಲಿದ್ದರೆ ಯಾರಿಗೂ ಅಷ್ಟು ಬಾಧಕವೆನಿಸುತ್ತಿರಲಿಲ್ಲ; ಅದು ಧಾರ್ಮಿಕಭೂಮಿಯಲ್ಲಿ ಪ್ರವೇಶಿಸಿ ದೇವಾಲಯ ಪ್ರವೇಶ, ಭಾವಿ, ಕೆರೆಗಳಪ್ರವೇಶ ಮುಂತಾದ ಧರ್ಮವಿಘಾತಕಕಾರ್ಯಗಳನ್ನು ನಡೆಯಿಸಿದ್ದರಿಂದ ಲಕ್ಷೋಪಲಕ್ಷ ಜನ ಸನಾತನಧರ್ಮಾಭಿಮಾನಿಗಳು ಗಾಂಧಿಯವರ ಈಗಿನ ಮಾರ್ಗಕ್ಕೆ ಅಡ್ಡಬರತೊಡಗಿದ್ದಾರೆ. ಯಾವುದರಿಂದ ದೇಶಕಲ್ಯಾಣವಾಗುತ್ತಿತ್ತೋ ಅದನ್ನು ಮರೆತು ನಮ್ಮನಮ್ಮೊಳಗೆ ಕಲಹಗಳನ್ನು ಹೆಚ್ಚಿಸುತ್ತಿರುವ ಈ ಅಸ್ಪೃಶ್ಯತಾನಿವಾರಣೆಯು ಗದ್ದಲವು ಸಮೀಪವಾಗಿದ್ದ ಸ್ವರಾಜ್ಯಲಕ್ಷ್ಮಿಯನ್ನು ದೂರಸರಿಸ ತೊಡಗಿತು. ಅತ್ಯಂತ ಪ್ರಾಚೀನಕಾಲದಿಂದ ನಡೆದುಬಂದ ಅಸ್ಪೃಶ್ಯತಾಭಾವನೆಯು ಲೋಪವಾಗುವದು ಎಂದಿಗೂ ಶಕ್ಯವಿಲ್ಲ. ಈ ಬಲಿತ ಭಾವನೆಯನ್ನು ಬಯಲುಮಾಡಿಬಿಡುವೆನೆಂಬ ಇವರ ಹಠವು ಹಳಸಿಹೋಗುವದು ಸಹಜವದೆ. ಹಠವಾದಿಗಳಾದ ಗಾಂಧಿಯವರು ಇದನ್ನಾದರೂ ಸಾಧಿಸಿಯೇ ತೀರುವರೆಂದು ಬಹುಜನರ ಬಯಕೆ ಇರುವದು. ಈ ಬಯಕೆಯು ಸೂರ್ಯನು ಪಶ್ಚಿಮಾದ್ರಿಯಲ್ಲಿ ಉದಯಿಸಿದಾಗ ಮಾತ್ರ ನೆರವೇರಬಹುದು. ಸನಾತನಧರ್ಮದ ತತ್ವವನ್ನರಿಯದ ಕೆಲವರು ಈ ಅಸ್ಪೃಶ್ಯತಾನಿವಾರಣೆಯ ಡೋಳ್ಳಿನ ನಾದಿಗೆ ಮನಬಂದಂತೆ ಕುಣಿಯತೊಡಗಿದ್ದಾರೆ. ಆಂಗ್ಲಭಾಷಾದೇವಿಯ ಪ್ರಭಾವದಿಂದ ಹೀಗಾಗಬೇಕೆಂದು ಕೆಲವರು ಶಂಕಿಸುತ್ತಾರೆ. ಆದರೆ ಇದು ಭಾಷಾನುಸತ್ವವಲ್ಲ; ಸ್ವಧರ್ಮನಿಷ್ಠೆಗೆ ತಿಲಾಂಜಲಿಯನಿತ್ತುದೇ ಮುಖ್ಯಕಾರಣವಾಗಿದೆ. ಆರ್ಯಧರ್ಮವೆಂದರೆ ಮೂಗುಮುರಿಯುತ್ತ ಪಾಶ್ಚಿಮಾತ್ಯ ಮ್ಲೇಂಛಧರ್ಮದ ಬೆಡಗಿಗೆ ಮರುಳಾಗಿ ಕುಣಿಯತೊಡಗಿದ ಮರುಳರಿಗೆ ಸನಾತನಧರ್ಮದ ಬೆಲೆಯು ತಿಳಿಯದಾಗಿದೆ. ಸದ್ಯಃ ವಿಚಾರಾರ್ಹವಾದ ವಿಷಯದ ಬಗ್ಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿಪ್ರಾಯವನ್ನು ಖಂಡಿತವಾಗಿ ಮಂಡಿಸುತ್ತಿರುವರು. ಅವರ ಅಭಿಪ್ರಾಯವನ್ನು ವಿಮರ್ಶಕಬುದ್ಧಿಯಿಂದ ನೋಡುವ ಶಕ್ತಿಯಿಲ್ಲದೆ ದುರುಕ್ತಿಗಳಿಂದ ಬೊಗಳುತ್ತಿರುವ ವೇಶ್ಯಾಪುತ್ರನು ತನ್ನ ಕುಟಿಲಕಾಮುಕವನ್ನು ಬಿಟ್ಟು ಸನ್ಮಾರ್ಗಗಾಮಿಯಾಗಲೆಂದು ವಿನೋದನು ಎಚ್ಚರಿಸುವನು.

ಸ್ವೀಕಾರ

ಧಾರವಾಡ ಡಿ|| ರೋಣತಾಲೂಕು ಮಾಳವಾಡದಲ್ಲಿರುವ ಮ|| ರಾ|| ಗಿರಿಯಪ್ಪಗೌಡರ ಪೌತ್ರ ಸಂಗನಗೌಡರ ಪುತ್ರ ಚಿ|| ಚನ್ನಪ್ಪಗೌಡನೆಂಬ ವರನಿಗೆ ಗದಗ-ಬೆಟಗೇರಿ ನಿವಾಸಿಗಳಾದ ಮ|| ರಾ|| ಹಿರೇಮನಿ ಪಾಟೀಲ ನೀಲಪ್ಪಗೌಡರ ಜ್ಯೇಷ್ಠಪುತ್ರಿ ಸೌ|| ಗಿರಿಜಾಬಾಯಿಯನ್ನೂ, ಹೊಸಪೇಟೆ ತಾಲೂಕು ರಾಮಸಾಗರದಲ್ಲಿರುವ ಮ|| ರಾ|| ಹಳೇಗೌಡರ ಪಂಪನಗೌಡರ ಪೌತ್ರ ಭೀಮನಗೌಡರ ಪುತ್ರ ಚಿ|| ಗಂಗನಗೌಡನೆಂಬ ವರನಿಗೆ ಮೇಲ್ಕಂಡ ಮ|| ರಾ|| ನೀಲಪ್ಪಗೌಡರ ದ್ವಿತೀಯ ಪುತ್ರಿ ಸೌ|| ಸುಶೀಲಾಬಾಯಿಯನ್ನೂ ಕೊಟ್ಟು ನಿಶ್ಚಯಕಾರಣವನ್ನು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಉಭಯ ವರರ ಕಡೆಯಿಂದ ಸಮರ್ಪಿಸಲ್ಪಟ್ಟ **4** ರೂ. ವಧುವಿನವರಿಂದ ಸಮರ್ಪಿಸಲ್ಪಟ್ಟ **2** ರೂ. ಒಟ್ಟು **6** ರೂ. ಗಳು ಮ|| ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಗದಗಶಹರ ನಿವಾಸಿಗಳಾದ ಮ|| ರಾ|| ತೆಂಗಿನಕಾಯಿ ಚನ್ನವೀರಪ್ಪನವರು ಕಳೆದ ತಿಂಗಳು 19ನೇ ತಾರೀಖು ಸೋಮವಾರದ ದಿವಸ ಸ್ವರ್ಗಸ್ಥರಾದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ಮ|| ರಾ|| ಗುಗ್ರಿ ನಾಗಪ್ಪನವರ ದ್ವಾರಾ ತಲ್ಪಿರುತ್ತದೆ.

ಸೊರಬ ತಾಲೂಕು ಯಲವಳ್ಳಿ, ಮಾವಲಿ, ತಾವರಿಗೊಪ್ಪ ಈ ಗ್ರಾಮಗಳ ಮಧ್ಯದಲ್ಲಿರುವ ಕೆರೆಯ ಬಿಲ್ವವೃಕ್ಷದ ಬಳಿಯಲ್ಲಿ ನೆರವೇರಿದ ಶ್ರೀಮಹೇಶ್ವರಸ್ವಾಮಿಯ ಪೂಜಾಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ **1** ರೂ. ಯು ಶ್ರೀ|| ಷ|| ಬ್ರ|| ಕ್ಯಾಸನೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬ್ರಿಟಿಷ್ ದೇಶದಲ್ಲಿ ಯುದ್ಧಸಾಮಗ್ರಿಗಳನ್ನು ತಯಾರಿಸುವ ಕಂಪೆನಿಯವರು ಜುಲೈ ತಿಂಗಳಲ್ಲಿ ಚೀಣಾದೇಶಕ್ಕೆ 6 ಮಿಷನ್‌ಗನ್‌ಗಳನ್ನೂ, 3 ಸಿಡಿಮದ್ದನ್ನುಹಾಕುವ ಯಂತ್ರಗಳನ್ನೂ, ಜಪಾನಿಗೆ 50 ಮಿಷನ್‌ಗನ್‌ಗಳನ್ನೂ, 6 ಆಕಾಶವಿಮಾನದ ಫಿರಂಗಿಗಳನ್ನೂ, ಆಗಸ್ಟ್ ತಿಂಗಳಲ್ಲಿ ಚೀಣಾದೇಶಕ್ಕೆ 500 ಸೆಟ್ ಅಭ್ಯಾಸಮಾಡುವ ಸಿಡಿಮದ್ದಿನ ಯಂತ್ರಗಳನ್ನೂ, 3 ಮಿಷನ್‌ಗಳನ್ನೂ, 15,00,000 ಬಂದೂಕದ ತೋಟಾಗಳನ್ನೂ, ಜಪಾನಿಗೆ 10 ಮಿಷನ್‌ಗನ್‌ಗಳನ್ನೂ, 12,00,000 ಬಂದೂಕಿದ ತೋಟಾಗಳನ್ನೂ ಎರಡು ಆಕಾಶವಿಮಾನದ ಫಿರಂಗಿಗಳನ್ನೂ, ಸೆಪ್ಟೆಂಬರ್ ತಿಂಗಳಲ್ಲಿ ಜಪಾನಿಗೆ 200 ಮಿಷನ್‌ಗನ್‌ಗಳನ್ನೂ, 24 ಆಕಾಶವಿಮಾನದ ಫಿರಂಗಿಗಳನ್ನೂ, 10,00,000 ಬಂದೂಕದ ತೋಟಾಗಳನ್ನೂ ರವಾನಿಸಿದರು.

~~ಶ್ರೀ|| ಷ|| ಬ್ರ|| ಹುಟಗಿ ಬೃಹನ್ಮಠದ ಪಟ್ಟಾಧ್ಯಕ್ಷರು.~~

ಗುರುಗಳಲ್ಲಿ ಆತ್ಮಶಕ್ತಿಯ ಬೆಳಕು ಅವಶ್ಯವಾ~~ಗುವದು~~ಗಿದೆ.

ದೀವಿಗೆಯಲ್ಲಿ (ಗ್ಯಾಸಿನಲ್ಲಿ) ಎಣ್ಣೆಬತ್ತಿಗಳ ಸಾಹಿತ್ಯವಿದ್ದರೆ ಅದಕ್ಕೆ ಪ್ರಕಾಶವನ್ನುಂಟುಮಾಡುವ ಸಾಮರ್ಥ್ಯವು ಬರುವದು. ಅಂಬಿಗನು ತನ್ನ ಸ್ವಂತ ಶರೀರವನ್ನು ನೀರಿನಲ್ಲಿ ತೆಗೆದುಕೊಂಡು ಈಸಿಹೋಗುವ ಶಕ್ತಿಯನ್ನು ಪಡೆದಿರುವನಲ್ಲದೆ ಬೇರೆ ಭಾರವನ್ನು ಸಹ ತೆಗೆದುಕೊಂಡು ಹೋಗುವ ಸಾಮರ್ಥ್ಯವಿದ್ದರೆ, ಮಾತ್ರ ಅವನು ತನ್ನ ಅವಲಂಬಿಗಳನ್ನು ನಿರಾಯಾಸದಿಂದ ನದಿಯನ್ನು ದಾಟಿಸಲು ಸಮರ್ಥನಾಗುತ್ತಾನೆ. ಅದೇ ಪ್ರಕಾರ ಪ್ರಪಂಚವೆಂಬ ಸಾಗರದಲ್ಲಿ ಬಿದ್ದಿರುವ ಅನಂತ ಶಿಷ್ಯಸಮೂಹವನ್ನು ಪಾರುಮಾಡಲಿಕ್ಕೆ ಸದ್ಗುರುಗಳಲ್ಲಿ ಸಾಧಾರಣವಾದ ಮಾನವಶಕ್ತಿಗಿಂತಲೂ ಅಸಾಧಾರಣವಾದ ಆತ್ಮಶಕ್ತಿಯೂ ಕೂಡ ಅವಶ್ಯವಾಗಿ ಇರಲೇಬೇಕಾಗುತ್ತದೆ. ಇಲ್ಲದಿದ್ದರೆ ಶಿಷ್ಯಸಮೂಹವನ್ನು ಕೊರಳಿಗೆ ಹಾಕಿಕೊಂಡು ತಾನೂ ನಡುನೀರಲ್ಲಿ ರಸಾತಳಕ್ಕೆ ಇಳಿಯಬೇಕಾಗುವ ಪ್ರಸಂಗವು ಗುರುಗಳಿಗೆ ಬರಬಹುದು. ಅದ್ದರಿಂದ ಈಗಿನ ಗುರು ಮಠಾ ~~ಪೀಠದವರ ಅಂತರಂಗದ ಪಟ್ಟಾ~~ಧಿಕಾರಿಗಳು ತಮ್ಮ ಆತ್ಮಮುಖ್ಯನು ಗುಣವಾಗಿ ಆತ್ಮಬಲವನ್ನು ಹೆಚ್ಚಿಸುವದು ಅತ್ಯಂತ ಅವಶ್ಯವಿರುತ್ತದೆ. ಆತ್ಮಬಲವಿಲ್ಲದೆ ಅಧಿಕಾರಿಗಳು ಹೇಳಿದ ಆಚಾರವಿಚಾರಗಳು ಹಾಗೂ ಬುದ್ಧಿಯ ಮಾತುಗಳು ತಾಮಸ ಭಕ್ತರಮೇಲೆ ಸರಿಯಾದ ಪರಿಣಾಮವನ್ನುಂಟುಮಾಡಲಾರವು. ಅಧಿಕಾರಿಗಳಲ್ಲಿರುವ ಅಂತಸ್ಸಾಮರ್ಥ್ಯವು ಶಿಷ್ಯಸಮೂಹದ ಮನಸ್ಸನ್ನು ನಿರಾಯಾಸದಿಂದ ಜಯಿಸಿ ಅವರಲ್ಲಿ ಸರಿಯಾದ ಪರಿಣಾಮವನ್ನುಂಟುಮಾಡುವದು. ಅಂದಮೇಲೆ ~~ಪಟ್ಟಾ~~ಧಿಕಾರಿಗಳು ಆಚಾರವಿಚಾರಸಂಪನ್ನರಾಗಿದ್ದು ಸರ್ವದಾ ಈಶ್ವರನ ಸನ್ನಿಧಿಯಲ್ಲಿಯೇ ತಮ್ಮ ಮನವನ್ನು ನಿಲ್ಲಿಸಿ ಅಂತಸ್ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವದು ಅತಿ ಮಹತ್ವದ ಸಂಗತಿಯಾಗಿದೆ. ಈಗ ~~ಪಟ್ಟಾ~~ಧಿಕಾರಿಗಳ ಅವಶ್ಯಕತೆಯೇ ಹೆಚ್ಚಾಗಿರುವದು. ~~ಈ ಪ್ರಕಾರದ ವಿಚಾರವನ್ನೇ ಮನದಲ್ಲಿ ಹಿಡಿದು, ಆಚಾರವಿಚಾರಸಂಪನ್ನರೂ, ಸರ್ವದಾ ಭಕ್ತಿ~~ ಧ್ಯಾನಶಾಸ್ತ್ರೋಪಾಸಕರೂ ಆದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಹುಟಗಿ ಇವರು ಕಳೆದ ಆಶ್ವಯುಜ ಕಾರ್ತಿಕ ಮಾಸಗಳಲ್ಲಿ ತಮ್ಮ ಅಂತಃಸಾಮರ್ಥ್ಯದ ಹೆಚ್ಚುವಿಕೆಗಾಗಿ ಪಾಸಿ ತಾಲೂಕಿಗೆ ಸೇರಿದ 'ವಡಸಿ' ಎಂಬ ರಮ್ಯವೂ ನಿರ್ಜನವೂ ಆದ ಪರ್ವತದಲ್ಲಿ ಅನುಷ್ಠಾನವನ್ನು ಏಕಪ್ರಾರಂಭಿಸಿದ್ದು, ಕಳೆದ ಕಾರ್ತಿಕ ಬಹುಳ ಚತುರ್ಥಿಗೆ ತಮ್ಮ ಅನುಷ್ಠಾನವನ್ನು ಸಮಾಪ್ತಿಗೊಳಿಸಿದರೆಂದು ಹೇಳಲಿಕ್ಕೆ ತುಂಬಾ ಆನಂದವಾಗುತ್ತದೆ. ಸ್ವಾಮಿಗಳು ಸ್ವಭಾವತಃ ಸದಾಚಾರಸಂಪನ್ನರೂ, ಶಿವಯೋಗಪರಾಯಣರೂ ಆಗಿದ್ದರೂ, ಈಶ್ವರದರ್ಶನದಲ್ಲಿಯೇ ತಾವೂ ಅಡಗಿಹೋಗುವ ಅತ್ಯಂತ ಉಗ್ರವಾದ ಅನುಷ್ಠಾನವನ್ನು ಮಾಡಿ ತಮ್ಮ ಆತ್ಮಬಲವನ್ನು ಹೆಚ್ಚಿಸಿಕೊಂಡದ್ದಲ್ಲದೆ ಜನರ ಪೂಜ್ಯತೆಗೂ ಪಾತ್ರರಾದರು. ಮಳೆ, ಚಳಿ, ಗಾಳಿಗಳನ್ನು ಲೆಕ್ಕಿಸದೆ ದಿವಾರಾತ್ರಿಯೂ ಏಕಾಂಗಿಯಾಗಿ ಈಶ್ವರಧ್ಯಾನದಲ್ಲಿ ಮಗ್ನರಾಗಿ, ಮೌನವ್ರತದಿಂದಿದ್ದು, ಕೇವಲ ೧-೨ ಗುಟುಕು ಗೋಕ್ಷೀರದಲ್ಲಿ ೧-೨ ತೊಲೆ ಜೇನುತುಪ್ಪವನ್ನು ಬೆರಸಿ, ಅದೇ ಆಹಾರವನ್ನು ಗ್ರಹಿಸುತ್ತ ಅನುಷ್ಠಾನವನ್ನು ಪೂರ್ತಿಗೊಳಿಸಿದರು. ಈಗಿನ ಕಾಲದಲ್ಲಿ ಹೀಗೆ ಈಶ್ವರಚಿಂತನೆಯತ್ತ ಮನಸ್ಸು ಹಾಕುವ ಅಧಿಕಾರಿವರ್ಗದವರನ್ನು ಕಾಣುವದು ಅಪರೂಪ. ಇದಲ್ಲವೇ ಗುರುಪೀಠವನ್ನಲಂಕರಿಸಿದ್ದಕ್ಕೆ ಭೂಷಣವು ?

ಈ ಮಹನೀಯರ ಸಂಕ್ಷಿಪ್ತವಾದ ಚರಿತ್ರೆಯನ್ನು ಇಲ್ಲಿ ವಾಚಕಮಹಾಶಯರಿಗೆ ವಿದಿತಪಡಿಸಲು ಆತುರಪಡುತ್ತೇನೆ.

ಬಾಲತಪಸ್ವಿಗಳ ಸಂಕ್ಷಿಪ್ತಚರಿತ್ರೆ.

ಮೊಗಲಾಯಿ ಇಲಾಖೆಯಲ್ಲಿ ಸುರುಪುರಜಿಲ್ಲೆಗೆ ಸೇರಿದ ಸರವಾರಕೇರಿ ಎಂಬುದು ಶ್ರೀಗಳವರ ಜನ್ಮಸ್ಥಳವು. ಇವರ ತಂದೆತಾಯಿಗಳು ಇವರನ್ನು ಚಿಕ್ಕಂದಿನಲ್ಲಿ ತಮ್ಮ ಪರಿಸ್ಥಿತಿಗನುಗುಣವಾಗಿ ಎಮ್ಮೆ ಕಾಯಲಿಕ್ಕೆ ಹಚ್ಚಿದ್ದರು. ಶ್ರೀಗಳವರಿಗೆ ಅದು ಮನಸ್ಸಿಗೆಬರಲಿಲ್ಲ. ತಮ್ಮ ಸಂಗಡಿಗರೊಡನೆ ಶಾಲೆಗೆ ಹೋಗಬೇಕೆಂಬುದೇ ಶ್ರೀಗಳವರ ಬಲವಾದ ಇಚ್ಛೆ. ಮಾಡುವದೇನು? ಪಾಲಕರ ಆಜ್ಞೆಗೆ ವಿರುದ್ಧವಾಗಿ ಬಾಲಕನು ಹೇಗೆ ವರ್ತಿಸಲು ತಾನೆ ಸಮರ್ಥನು ? ಅಂತೂ ಇದೇರೀತಿ ಕೆಲದಿವಸಗಳು ಕಳೆದವು. ಅವರ ಮನಸ್ಸು ಶಾಲೆಗೆ ಹೋಗಲಿಕ್ಕೆ ಆತುರಪಡುತ್ತಿತ್ತು. ಒಮ್ಮೆ ಅವರ ಮನಸ್ಸಿನ ಬಲವು ತಿರುಗಿ, ಎಮ್ಮೆಗಳನ್ನು ಮೇಯಿಸಲಿಕ್ಕೆ ಹೋಗುವ ಆ ಗುಡ್ಡದಲ್ಲಿಯೇ ೫-೬ ದಿನಗಳವರೆಗೆ ನಿಂತರು. ಮನೆಗೆ ಬರಲೇ ಇಲ್ಲ. ಇತ್ತ ತಂದೆತಾಯಿಗಳು ಎಲ್ಲ ಕಡೆಯಲ್ಲಿಯೂ ಹುಡುಕಿ ಬೇಸತ್ತರು. ಕಡೆಗೆ ದನಕಾಯುವವರ ಹೇಳಿಕೆಯ ಮೇರೆಗೆ ಗುಡ್ಡದಲ್ಲಿರುವ ದೇವಾಲಯಕ್ಕೆ ಹೋಗಿ ಇವರನ್ನು ಕರೆತಂದು ಅವರ ಇಚ್ಛೆಯ ಮೇರೆಗೆ ಶಾಲೆಗೆ ಕಳಿಸಲಾರಂಭಿಸಿದರು. ಅಂದಿನಿಂದ ಸ್ವಾಮಿಗಳಿಗೆ ಆನಂದವಾಯಿತು. ಅದೇ ಊರಲ್ಲಿ ಸ್ವಾಮಿಗಳ ಅಭ್ಯಾಸವು ನಾಲ್ಕನೇ ಇಯತ್ತೆಯವರೆಗೆ ಜರುಗಿತು. ಈ ಅವಧಿಯಲ್ಲಿ ಸ್ವಾಮಿಗಳನ್ನು ಅವರ ಪಾಲಕರು ರಂಗಣಪೇಠ ಎಂಬ ಗ್ರಾಮದ ವಿರಕ್ತಮಠಕ್ಕೆ ಮರಿಯನ್ನಾಗಿ ಕೊಟ್ಟಿದ್ದರು. ಮುಂದೆ ನಾಲ್ಕನೇ ಇಯತ್ತೆಯನ್ನು ಕಲಿಯಲಿಕ್ಕೆ ಅವರ ಪಾಲಕರು ಅದೇ ಸ್ಥಳಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಅವರು ಉತ್ಸಾಹದಿಂದ ವಿದ್ಯೆಯನ್ನು ಕಲಿಯಹತ್ತಿದರು. ಸಹಪಾಠಿಗಳಿಗೆಲ್ಲ ಬಿಲ್ಲದ ಹೇರಾದರು. ಗುರುಗಳ ಪ್ರೀತಿಗೆ ಪಾತ್ರರಾದರು. ಆದರೆ ಆ ವಿರಕ್ತಸ್ವಾಮಿಗಳಿಗೆ ಒಂದು ಸ್ತ್ರೀವ್ಯಕ್ತಿಯು ಗಂಟುಬಿದ್ದಿತ್ತು. ಆ ವ್ಯಕ್ತಿಗೆ ಮಾತ್ರ ಇವರು ಬೇಡವಾದರು. ಅವಳು ಇಲ್ಲದೊಂದು ಸುಳ್ಳು ಸಂಗತಿಯನ್ನು ಈ ಹುಡುಗನ ಮೇಲೆ ಆರೋಪಿಸಿ ಅವರಿಂದ ಹೊಡೆಯಲಿಕ್ಕೂ ತ್ರಾಸ ಕೊಡಲಿಕ್ಕೂ ಹಚ್ಚಿಸಿದಳು. ಹೀಗೆ ಕೆಲದಿನಗಳು ಕಳೆಯಲು ಸ್ವಾಮಿಗಳಿಗೆ ಇವರ ಕಾಟವನ್ನು ಸಹಿಸುವದು ಅಸಾಧ್ಯವಾಯಿತು.

ಮುಂದೆ ಅವರಿಗೆ ಈ ಹೇಯ ಕಾರ್ಯವು ಸಹನವಾಗದೆ, ಮನೆಗೆ (ಮಠಕ್ಕೆ) ಹೋಗುವದನ್ನೇ ಬಿಟ್ಟುಬಿಟ್ಟರು. ಅದೇ ಊರಲ್ಲಿರುವ ಒಂದು ಶಿವಾಲಯದಲ್ಲಿ ತಮ್ಮ ಶಿವಾರ್ಚನೆಯನ್ನು ತೀರಿಸಿಕೊಂಡು ಶಾಲೆಗೆ ಹೋಗುತ್ತಿದ್ದರು. ಹೀಗೆ ೨೦-೨೫ ದಿನಗಳು ಕಳೆದವು. ಈ ಅವಧಿಯಲ್ಲಿ ವಿರಕ್ತಸ್ವಾಮಿಗಳು ಹುಡುಕಾಡಿ ಅವರ ತಾಯಿತಂದೆಗಳಿಗೆ ಹೇಳಿಕಳುಹಿಸಿದರು. ಅವರು ಗಾಬರಿಗೊಂಡು ಬಂದರು. ಕಡೆಗೆ ಶಾಲೆಯ ಶಿಕ್ಷಕರನ್ನು ಕೇಳಲು, ಅವರು ಅವನು ಪ್ರತಿದಿವಸವೂ ತಪ್ಪದೆ ಶಾಲೆಗೆ ಬರುವನೆಂದೂ, ಉತ್ತಮತರಗತಿಯಲ್ಲಿ ಅವನ ಅಭ್ಯಾಸವು ನಡೆದಿರುವದೆಂದೂ, ಅಭಿಪ್ರಾಯಪಟ್ಟರು. ಕಡೆಗೆ ಸ್ವಾಮಿಗಳನ್ನು ಗೊತ್ತುಹಚ್ಚಿ ಅವರ ಪಾಲಕರು ಅವರನ್ನು ತಮ್ಮ ಊರಿಗೆ ತಿರುಗಿ ಕರೆದುಕೊಂಡು ಹೋದರು.

ಮುಂದೆ ಸ್ವಾಮಿಗಳ ಅಭಿಪ್ರಾಯದ ಮೇರೆಗೆ ಅವರ ತಾಯಿತಂದೆಗಳು ಅವರನ್ನು "ಸೊಲ್ಲಾಪುರದ ಶ್ರೀ ಸಂಸ್ಕೃತ ಪಾಠದ ಪಾಠಶಾಲೆಗೆ" ಸಂಸ್ಕೃತ ಅಭ್ಯಾಸವನ್ನು ಮಾಡಲಿಕ್ಕೆ ಕಳುಹಿಸಿಕೊಟ್ಟರು. ಇವರು ಇಲ್ಲಿಗೆ ಬಂದ ಕೆಲವು ಕಾಲದಲ್ಲಿಯೇ ಸರಿಯಾಗಿ ಸಂಸ್ಕೃತಾಭ್ಯಾಸವನ್ನು ಮುಗಿಸಿದರು. ಈ ಅವಧಿಯಲ್ಲಿ ಈ ಸೊಲ್ಲಾಪುರಕ್ಕೆ ಸಮೀಪವಾಗಿರುವ ಹುಟಗಿಯ ಮಠಾಧಿಪತ್ಯಕ್ಕೆ ಒಬ್ಬ ಯೋಗ್ಯ ಅಧಿಕಾರಿಗಳು ಬೇಕಾಗಿದ್ದರು. ಅಲ್ಲಿಯ ಪ್ರಮುಖ ಮನುಷ್ಯರು ಪಾಠಶಾಲೆಗೆ ಹೋಗಿ, ಎಲ್ಲ ವಟುಗಳಲ್ಲಿಯೂ ಸಲ್ಲಕ್ಷಣಾದಿಗಳಿಂದೊಪ್ಪುವ ಈ ನಮ್ಮ ಮಹಾಸ್ವಾಮಿಗಳನ್ನೇ ತಮ್ಮ ಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಬೇಕೆಂದು, ನಿರ್ಧರಿಸಿದರು. ಅದೇ ಮೇರೆಗೆ ಸ್ವಾಮಿಗಳವರ ಪಟ್ಟಾಧಿಕಾರವು ಈ ಹುಟಗಿ ಗ್ರಾಮದ ಬೃಹನ್ಮಠಕ್ಕೆ ಆಯಿತು. ತರುವಾಯ ಶ್ರೀಗಳು ಪಾಠಶಾಲೆಯಲ್ಲಿಯ ಅಭ್ಯಾಸವನ್ನು ಮುಗಿಸಿ, ಕಾಶಿಗೆ ಹೋಗುವ ವಿಚಾರದಲ್ಲಿದ್ದರು. ಆದರೆ ಅವರಿಗೆ ಧನಸಹಾಯವು ಸರಿಯಾಗಿ ಆಗಲಿಲ್ಲ. ಅದ್ದರಿಂದ ನಿರ್ವಾಹವಿಲ್ಲದೆ ಅದರ ಹವ್ಯಾಸವನ್ನು ಬಿಡಬೇಕಾಯಿತು. ಮುಂದೆ ಶ್ರೀಗಳು ತಮ್ಮ ಅಧಿಕಾರಸ್ಥಾನವಾದ ಹುಟಗಿ ಗ್ರಾಮಕ್ಕೆ ಬಂದು, ನವಯುಗದ ಬಿರುಗಾಳಿಯ ಎಳೆತಕ್ಕೆ ಸಿಲುಕಿ ಧರ್ಮವನ್ನು ರಸಾತಳಕ್ಕೆ ತುಳಿಯುತ್ತಿರುವ ಅನೇಕ ಮೂಢ ಜನರನ್ನು ತಮ್ಮ ಬೋಧಪ್ರಬೋಧಗಳಿಂದ ಹಾದಿಗೆ ಹಚ್ಚಿದರು. ಎಲ್ಲಿ ಶಿವಭಜನೆ ಶಿವಕೀರ್ತನೆಗಳ ಸುಳಿವು ಸಹ ಇದ್ದಿಲ್ಲವೋ, ಅಂಥ ಹುಟಗಿ ಗ್ರಾಮದಲ್ಲಿ ಶ್ರೀಗಳವರು ಪ್ರತಿದಿನವೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ದಿವ್ಯವಾದ ಭಜನಾಮೃತವನ್ನು ಪಾನಮಾಡಿಸುತ್ತ ಭಕ್ತರನ್ನು ಧರ್ಮಪರಾಯಣರನ್ನಾಗಿ ಮಾಡುತ್ತ ಬಂದರು. ಪಟ್ಟಾಧಿಕಾರವನ್ನು ವಹಿಸಿ ಸುಮಾರು ೭-೮ ವರ್ಷಗಳಾಗಿರಬಹುದು. ಈ ಅವಧಿಯಲ್ಲಿ ಈ ದಕ್ಷಿಣ ಮಹಾರಾಷ್ಟ್ರ ಭಾಗದ ಜನತಕ್ಕೆ ಸ್ವಮತ ಪರಮತೀಯ ಜನರಿಗೆ ಇವರು ದೇವರಾಗಿ ತೋರಹತ್ತಿರುವರು. ಇವರಲ್ಲಿ ಧನದಾಶೆಯು ಲೇಶಮಾತ್ರವೂ ಇಲ್ಲ. ಅಹಂಕಾರವೆಂಬುದು ಇವರನ್ನು ಸೋಂಕಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇಂಥ ಮಹಾನುಭಾವರುಗಳಾದ ಪಟ್ಟಾಧಿಕಾರಿಗಳು ದೊರೆಯುವದು ದುರ್ಲಭವು. ಈ ಸ್ವಾಮಿಗಳಿಗೆ ಜಗದೀಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಿ ಇವರಿಂದ ಇದಕ್ಕಿಂತಲೂ ಹೆಚ್ಚಾಗಿ ಸಮಾಜೋದ್ಧಾರ ಕಾರ್ಯಗಳು ಜರುಗಲೆಂದು ಆ ದಯಾಘನನನ್ನು ಅನನ್ಯಭಾವನೆಯಿಂದ ಪ್ರಾರ್ಥಿಸುತ್ತೇನೆ.

ಪ. ಬ. ದೇಸಾಯಿ, ಹೆಡ್‌ಮಾಸ್ತರ,
ಸೆಟ್ಲಮೆಂಟ ಸ್ಕೂಲ, ಹುಟಗಿ.

ಮಹೇಶ್ವರನ ಯಾತ್ರೆಯೂ ಧಾರ್ಮಿಕ ಸಭೆಯೂ

ಮಾವಲಿ.

ತಾ|| 26-12-32 ನೇ ಸೋಮವಾರ ಸೊರಬ ತಾಲೂಕು ಯಲವಳ್ಳಿ ಮಾವಲಿ ತಾವರಿಗೊಪ್ಪ ಈ ಗ್ರಾಮಗಳ ಮಧ್ಯದಲ್ಲಿರುವ ಕೆರೆಯ ಬಿಲ್ವವೃಕ್ಷದ ಬಳಿಯಲ್ಲಿ ಪದ್ಧತಿಯ ಮೇರೆಗೆ ಶ್ರೀ ಮಹೇಶ್ವರಸ್ವಾಮಿಯ ಪೂಜಾಸಮಾರಂಭವೂ ವಿಧ್ಯುಕ್ತವಾಗಿ ಗುರುಪಾದಪೂಜೆಯೂ ವಿಜೃಂಭಣೆಯಿಂದ ನೆರವೇರಿದ ಮೇಲೆ ಭಕ್ತಮಾಹೇಶ್ವರರಿಗೆ ಸಾತ್ವಿಕ ಆಹಾರ ಭೋಜನವು ಬೆಳಗ್ಗೆ 8 ಘಂಟೆಯಿಂದ ಮಧ್ಯಾಹ್ನ 1 ಘಂಟೆ ವರೆಗೆ ನಡೆಯಿತು. 2 ಘಂಟೆಯಿಂದ 5 ಘಂಟೆ ವರೆಗೆ ಶ್ರೀ ಕಾಶೀಸನೂರ ಸಂಸ್ಥಾನದ ಪಂಡಿತ ಗುರುಬಸವಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಯು ಸೇರಿತು. ಈ ಸಭೆಗೆ ಬಳಗಾವಿ ತೊಗರಸಿ ಮಠದ ಶ್ರೀಗಳು ಆಗಮಿಸಿದ್ದರು. ಪ್ರೋಗ್ರಾಂ ಪ್ರಕಾರ ಅಧ್ಯಕ್ಷ ಶ್ರೀಗಳು ಷಟ್‌ಸ್ಥಲ ಸಿದ್ಧಾಂತ ವಿಷಯದಲ್ಲೂ, ಭಕ್ತಮಾಹೇಶ್ವರ ಷಟ್ಪ್ರಭೇದ ವಿವರಣ ವಿಷಯದಲ್ಲೂ ವೇದಾಗಮ ಶ್ರುತಿ ಪ್ರಮಾಣಗಳೊಡನೆ ಸಭಿಕರ ಮನಃಕಲ್ಮಷವೆಂಬ ಕತ್ತಲೆಯು ಹರಿದು ಸುಜ್ಞಾನವೆಂಬ ಸೂರ್ಯನ ಪ್ರಭೆಯು ಹೊರಸೂಸಿತೆಂದು ಸಭಿಕರ ಮನೋಭಾವನೆಯಿಂದ ಒಡೆದು ಕಾಣಿಸುತ್ತಿತ್ತು. ಇವರ ಭಾಷಣವೆಂಬ ರತ್ನಕ್ಕೆ ಕುಂದಣ ಹಾಕಿದಂತೆ ವರ್ಣಾಶ್ರಮಗಳ ವಿಷಯದಲ್ಲಿ ಬಳಗಾವಿ ವೇ|| ಇಂದುಧರಶಾಸ್ತ್ರಿಗಳು ಸಭಿಕರ ಮನಃಕಮಲವು ಅರಳುವಂತೆ ತಮ್ಮ ವಿದ್ವತ್ ಪ್ರಭಾವದಿಂದ ತರ್ಕ ಪ್ರಮಾಣಗಳೊಡನೆ ಭಾಷಣಮಾಡಿದರು. ಗೌರೀಕೆರೆ ಮಠದ ವೇ|| ಚನ್ನಬಸವಯ್ಯನವರು ಶಿಕ್ಷಣ ವಿಷಯದಲ್ಲೂ ಗೇರಕೊಪ್ಪದ ರಾ|| ಪಾಟೀಲ ಹೊನ್ನವೀರಪ್ಪಗೌಡರು ಒಕ್ಕಟ್ಟಿನ ವಿಷಯದಲ್ಲೂ ಭಾಷಣಮಾಡಿದರು. ಮರುದಿವಸ ತಾರೀಖು 27-12-32ನೇ ಮಂಗಳವಾರ ಮಧ್ಯಾಹ್ನ 1 ಘಂಟೆಯಿಂದ 5 ಘಂಟೆಯುವರೆಗೆ ಪುನಃ ಸಭೆ ಕೂಡಿತು. ಮಾವಲಿ ಪ್ರೈಮರಿ ಸ್ಕೂಲ್ಮಾಸ್ಟರ್ ಪುಟ್ಟಪ್ಪನವರು ಇಂದ್ರಿಯ ನಿಗ್ರಹ ಬಗ್ಗೂ, ತಲಿಗ ವೇ|| ಗ್ರ್ಯಾಂಟ್ ಸ್ಕೂಲ್ಮಾಸ್ಟರ್ ಸಿದ್ಧಲಿಂಗಯ್ಯನವರು ಹೆಗ್ಗೋಡು ಇವರು ಧಾರ್ಮಿಕ ವಿಷಯದ ಬಗ್ಗೂ, ಧಾರವಾಡ ಜಿಲ್ಲಾ ಕೋಡ ತಾಲೂಕು ಸುತ್ತಕೋಟಿ ಸಾಧುವೀರಶೈವ ಕ್ಷತ್ರಿಯ ಸಂಘ ಪ್ರಚಾರಕರಾದ ಬಸವಂತಪ್ಪ ಬಣಗಾರ ಇವರು ಜಾತಿಗಳು ಇತ್ತೀಚೆಗೆ ಕಲ್ಪಿಸಿದವುಗಳಲ್ಲ ; ಪ್ರಾಚೀನಗಳು ಎಂಬುವ ವಿಷಯದಲ್ಲಿ ಸಭಿಕರ ಮನಸ್ಸಿನಲ್ಲಿ ಆನಂದರಸ ಉತ್ಪನ್ನವಾಗುವಂತೆ ಉದಾಹರಣೆಗಳಿಂದ ಗಾಂಭೀರ್ಯವಾಗಿ ಭಾಷಣಮಾಡಿದರು. ಈ ಸಭೆಗೆ ದಾವಣಗೇರಿ ವೇ|| ಕಾಲಿಮಠದ ಕೋಟಿಪ್ಪಯ್ಯನವರು ಮಾವಲಿ. ರಾ|| ಗೌಡನವರ ಮಲ್ಲಪ್ಪಗೌಡರು ರಾ|| ಕುಂದಗಸ್ತಿ ಮಲ್ಲಪ್ಪಗೌಡರು ರಾ|| ತಾವರೆಕೊಪ್ಪದ ಸೋಮಪ್ಪಗೌಡರು. ರಾ|| ಯಲವಳ್ಳಿ ತೊರಕೋಡ ಚನ್ನಬಸಪ್ಪಗೌಡರು ಮ|| ಜೆರಲೆಕೊಪ್ಪದ ವೀರಪ್ಪಗೌಡರು, ರಾ|| ಹೆಗ್ಗೋಡು ಶಿವಪ್ಪಗೌಡರು, ರಾ|| ತಡಗಣಿ ಸ್ವಾದಪ್ಪಶೆಟ್ಟರು, ರಾ|| ಚಿಕ್ಕಸ್ತಿ ಪುಟ್ಟವೀರಪ್ಪಗೌಡರು ಇವರುಗಳು ಎಲ್ಲಾ ಕಾರ್ಯಗಳಲ್ಲಿಯೂ ಮುಂದಾಳುಗಳಾಗಿದ್ದರು. ಸಭೆಗೆ 500ರ ವರೆಗೆ ಜನರು ಸೇರಿದ್ದರು. ಸಭೆಯ ಕಾರ್ಯಗಳೆಲ್ಲಾ ಸಾಂಗವಾಗಿ ನಡೆದು ಸರ್ವರಿಗೂ ಗಂಧ ತಾಂಬೂಲಗಳು ಹಂಚಲ್ಪಟ್ಟು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಶ್ರೀ ಪಂಚಾಚಾರ್ಯ ಪ್ರಭಾ ಪೋಷಕರನ್ನಾಗಿ ಒಂದುರೂಪಾಯಿ ತೆಗೆಸಲ್ಪಟ್ಟಮೇಲೆ ಶ್ರೀಮತ್ಪಂಚಾಚಾರ್ಯರ, ಶ್ರೀಮ

ವರ್ತಮಾನಸಂಗ್ರಹ

ಎರವಾಡಾ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ನಾರಾಯಣಪಾಂಡು ಎಂಬ ಸ್ವಯಂಸೇವಕನ ತಲೆಯಮೇಲೆ ದೊಡ್ಡ ಬಂಡೆಯು ಬಿದ್ದು ಕೂಡಲೇ ಮೃತಪಟ್ಟನು.

ಕಲ್ಕತ್ತೆಯ ಪೋಲೀಸ[illegible]ಂದು ಮನೆಯನ್ನು ಶೋಧಿಸಿ ಸರ್ಕಾರದವರಿಂದ ನಿ[illegible]ಲ್ಪಟ್ಟಿದ್ದ ಒಂದು ಪುಸ್ತಕದ ಪ್ರತಿಗಳನ್ನು ಎರಡು [illegible]ಗಳ ತುಂಬ ಹೇರಿಸಿಕೊಂಡು ಹೋದರು.

ಮುಲ್ಲಜಮದೀನ್ ಎಂಬ ಅಫ್ಘಾನನು ದೇವರನ್ನೂ, ಪ್ರಾಫೆಟ್ಟನ್ನೂ, ಕೊರಾನನ್ನೂ ಬೈದನೆಂಬ ಕಾರಣದ ಮೇಲೆ ಕಾಬೂಲಿನ ನ್ಯಾಯಾಧೀಶರು ಅವನಿಗೆ ಮರಣದಂಡನೆಯನ್ನು ವಿಧಿಸಿದರು.

ಡಿಸೆಂಬರು 26 ನೇ ತಾರೀಖಿನ ದಿವಸ ಸಶಸ್ತ್ರರಾದ ಕೆಲವು ಜನ ಢಕಾಯಿತರು ಲಕ್ನೋ ನಗರದ 3 ಮನೆಗಳನ್ನು ಲೂಟಿಮಾಡಿ ಸುಮಾರು 3 ಸಾವಿರ ರುಪಾಯಿಗಳವರೆಗೆ ಅಪಹರಿಸಿಕೊಂಡು ಹೋದರು.

ಡಿಸೆಂಬರ್ 24 ನೇ ತಾರೀಖಿಗೆ ಅಖೈರಾದ ವಾರದಲ್ಲಿ 64,9457 ರೂ. ಗಳ ಭಂಗಾರವು ಮುಂಬಯಿಯಿಂದ ವರ ಚಳವಳಿಯ [illegible] ಇದುವರೆಗೆ ಸಾಗಿ[illegible] ಬಹುದಾಗಿದೆ. ಆದಾಗ್ಯೂ ಭಾರತೀಯರು ಇವರನ್ನೇ ನಂಬಿದ್ದರು. ಆದರೆ ಈಗ ಗಾಂಧಿಯವರ ವರ್ತನವೇ ಬೇರೆ ಆಗಲಿಕ್ಕೆ ಹತ್ತಿರುವುದನ್ನು ನೋಡಿ ಸರ್ವರೂ ಇವರನ್ನು ಪ್ರೇಮಭಾವದಿಂದ ಕಾಣುತ್ತಿಲ್ಲ. ಸ್ವರಾಜ್ಯವು ಇನ್ನೂ ದೊರೆಯುವುದಿಲ್ಲವೆಂದು ಭಾವಿಸಿ ಇವರು ತಮ್ಮ ಚಳವಳಿಯ ಧ್ಯೇಯವನ್ನು ಬಿಟ್ಟು ಪವಿತ್ರವಾದ ಸನಾತನ ಧರ್ಮವನ್ನು ಹಾಳುಮಾಡಿ ಬಹು ಪುಣ್ಯವನ್ನು ಗಳಿಸುವದಕ್ಕಾಗಿ ಪವಿತ್ರ ದೇವಾಲಯಗಳಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸುವ ಭಾರಿ ಕೆಲಸದಲ್ಲಿ ಕೈಹಾಕಿದ್ದಾರೆ. ಈ ಕಾರ್ಯಕ್ಕೆ ಆತಂಕ ಬಂದರೆ ಉಪವಾಸ ಮಾಡಿ ಪ್ರಾಣಬಿಡುತ್ತೇನೆಂದು ನುಡಿಯುತ್ತಿರುವರು. ನೋಡಿದಿರಾ ಇವರ ರೀತಿಯನ್ನು ? ಹಿಂದಕ್ಕೆ ಲೋಕಮಾನ್ಯ ತಿಲಕರು ಅನೇಕ ವಿಧವಾಗಿ ಚಳವಳಿ ಮಾಡಿ ಮಾರ್ಗವನ್ನು ಹಾಕಿದರು. ಧರ್ಮದ ವಿಷಯದಲ್ಲಿ ಅವರು ಇವರಂತೆ ಕೈಹಾಕಲಿಲ್ಲ. ಆದುದರಿಂದಲೇ ಅವರು ಸರ್ವರ ಪ್ರೀತಿಗೆ ಪಾತ್ರರಾಗಿ ಕೀರ್ತಿಶಾಲಿಗಳಾಗಿ ಹೋದರು. ಗಾಂಧಿಯವರು ಈಗ ತಮ್ಮ ಧ್ಯೇಯವನ್ನು ಬಿಟ್ಟು ಧರ್ಮದ ವಿಷಯದಲ್ಲಿ ಕೈಹಾಕಿದರೆಂದು ತಿಳಿದು ಎಷ್ಟೋ ಜನ ಸ್ತ್ರೀಪುರುಷರು ಕ್ಷಮಾಪಣೆ ಬೇಡಿಕೊಂಡು ಜೈಲಿನಿಂದ ಹೊರಬೀಳುತ್ತಿರುವರು.

ತಮಗೆ ಎಂದೂ ಜಯವು ದೊರೆಯದ ಧರ್ಮದ ಬಗ್ಗೆ ಕೈಹಾಕಿ ಸುಮ್ಮನೆ ಕೊಳ್ಳುಮಾತುಗಳನ್ನಾಡುತ್ತ, ನನ್ನ ಮಾತು ನಡೆಯದಿದ್ದರೆ ಉಪವಾಸ ಮಾಡಿ ಪ್ರಾಣಬಿಡುತ್ತೇನೆಂದು ನುಡಿಯುವುದು ಕೇವಲ ಹೇಡಿತನದ ಮಾತಾಗಿದೆಯೇ ಹೊರತು, ಶೂರತನದ ಮಾತಲ್ಲ. ಅನ್ನವಿಲ್ಲದೆ ಪ್ರಾಣಬಿಟ್ಟರೆ ಪ್ರಾಣಹತ್ಯಾದೋಷವು ಬರುವುದಿಲ್ಲವೇ ? "ಅಹಿಂಸಾ ಪರಮೋಧರ್ಮಃ" ಎಂಬ ವಾಕ್ಯಕ್ಕೆ ಭಂಗಬರುವದಿಲ್ಲವೇ ? ಉಪವಾಸಮಾಡುತ್ತೇನೆಂದು ಹೇಳುವುದು ಅವರಿಗೆ ಚೆಂದವಾಗಿರಬಹುದು. ಆದರೆ ಅದು ಉಳಿದವರಿಗೆ ಅಪಹಾಸ್ಯಕ್ಕೆ ಕಾರಣವಾಗಿರುವುದು. ಯಾರಿಗಾದರೂ ತಮ್ಮ ತಮ್ಮ ಸ್ಥಿತಿಯು ತಿಳಿಯುವುದಿಲ್ಲ. ದೀವಿಗೆಯು ಎಲ್ಲಾ ಕಡೆಗೆ ಪ್ರಕಾಶವನ್ನು ಕೊಟ್ಟಾಗ್ಯೂ ತನ್ನ ಬುಡದಲ್ಲಿ ಅಂಧಕಾರದಿಂದಲೇ ಕೂಡಿರುವಂತೆ ಗಾಂಧಿಯವರ ಮತ್ತು ಇವರ ಅನುಯಾಯಿಗಳ ಸ್ಥಿತಿಯಾಗಿರುವುದು. ಇವರು ಇನ್ನುಮೇಲಾದರೂ ನಿಜಸ್ಥಿತಿಯನ್ನು ತಿಳಿದು ಉತ್ತಮ ಮಾರ್ಗದಲ್ಲಿ ಹೋಗುವುದು ಲೇಸು! ಧರ್ಮದ ವಿಷಯದಲ್ಲಿ ಕೈಹಾಕಿದರೆ ಅದರ ಫಲವು ಇವರಿಗೆ ಜನ್ಮಜನ್ಮದಲ್ಲಿಯೂ ಸಿಕ್ಕುವುದಿಲ್ಲವೆಂದು ಹೇಳಬಹುದಾಗಿದೆ. ಇದನ್ನೇ ತಿಳಿದು ಇವರು ಈಗ ಉಪವಾಸವನ್ನು ಮುಂದೆ ತಳ್ಳಿದ್ದಾರೆ. ಇದರಿಂದ ಇವರ ತತ್ವವು ಹಳಸಿತೆಂದೇ ಹೇಳಬೇಕಾಗಿದೆ. ಜಗದೀಶ್ವರನು ಇವರಿಗೆ ಸದ್ಬುದ್ಧಿಯನ್ನೀಯಲಿ.

ಶಂ|| ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು,
ಚಿಕ್ಕಮಣ್ಣೂರು.

ನೀತಿಬೋಧಾಮೃತ

15. ಮಾನವನಲ್ಲಿರುವ ಸ್ಪರ್ಧೆಯೇ ವಿಖ್ಯಾತನನ್ನಾಗಿಸಿ ಧನ್ಯನನ್ನಾಗಿಸುವುದು.

(ಕನ್ನಡಕವಿ ಮ|| ರಾ|| ಅನವಟ್ಟಿ ರಾಮರಾಯರಿಂದ)

ಸಕಲ ಜೀವರಾಶಿಗಳಲ್ಲೆಲ್ಲಾ ಮಾನವನೇ ಸರ್ವೋತ್ತಮನಾದ ಜೀವಿಯು. ಇಂಥವನು ಪ್ರಯೋಜನಾರ್ಥವಾಗಿಯೇ ತಾನಿರುವೆನೆಂದು ತಿಳಿದು, ಸ್ವಾರ್ಥತೆಯನ್ನು ಕಳೆದು ಪರಹಿತವನ್ನೇ ಬಯಸಿ, ತನ್ನ ಯೋಚನೆಗಳನ್ನು ಕಾರ್ಯಮುಖೇನ ಹೊರಪಡಿಸಿ ತೋರಿಸುತ್ತಾ, ಇತರರಿಗೆ ಒಂದು ಮೇಲ್ಪಂಕ್ತಿ

ಲುಗಳನ್ನು 26,000 ಪೌಂಡುಗಳಿಗೆ ಇನ್ಶೂರು ಮಾಡಿಸಿರುವನು. ಎಡಗೈಯಿನ 3 ಬೆರಳು (ತರ್ಜನಿ, ಮಧ್ಯಮ ಮತ್ತು ಅನಾಮಿಕ)ಗಳು 7,200 ಪೌಂಡುಗಳಿಗೂ, ಕಿರುಬೆರಳು 2,200 ಪೌಂಡುಗಳಿಗೂ, ಹೆಬ್ಬೆರಳು 7,600 ಪೌಂಡುಗಳಿಗೂ, ಬಲಗೈಯಿನ 3 ಬೆರಳುಗಳು 6,900 ಪೌಂಡುಗಳಿಗೂ, ಕಿರುಬೆರಳು 470 ಪೌಂಡುಗಳಿಗೂ, ಹೆಬ್ಬೆರಳು 900 ಪೌಂಡುಗಳಿಗೂ ಇನ್ಶೂರ್ ಮಾಡಲ್ಪಟ್ಟಿರುವವು.

ಕೆಲವು ಕಾಲದ ಹಿಂದೆ ಅಮೇರಿಕೆಯ ಒಂದಾನೊಂದು ನಗರದಲ್ಲಿ ಕೆಲವು ಬ್ಯಾಂಕುಗಳು ಮುಚ್ಚಲ್ಪಟ್ಟು ಹಣದ ಅಭಾವವುಂಟಾದುದರಿಂದ ಮುನಿಸಿಪಲ್ ಅಧಿಕಾರಿಗಳು ಮರದಲ್ಲಿ ನಾಣ್ಯಗಳನ್ನು ಮಾಡಿ ಚಲಾವಣೆಗೆ ತಂದರು. ಈಚೆಗೆ ಅವರು ಸದರೀ ಮರದ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸಿದಾಗ ಕಾಲುಭಾಗ ನಾಣ್ಯಗಳು ಸಹ ದೊರೆಯದೆ ಹೋದವು. ಸದರಿ ನಾಣ್ಯಗಳನ್ನು ಪರಸ್ಥಳದ ಜನರು ಅಪರೂಪದ ವಸ್ತುವೆಂದು ಹೆಚ್ಚು ಬೆಲೆಯನ್ನು ಕೊಟ್ಟು ಕೊಂಡುಕೊಂಡು ಹೋಗಿದ್ದರು.

ಮುಂಬಯಿ ನ್ಯಾಯವಿಧಾಯಕಸಭೆಯಲ್ಲಿ ಪಾಸಾದ ವಿಶೇಷಾಧಿಕಾರದ ಮಸೂದೆಯನ್ನನುಸರಿಸಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಮುಂಬಯಿ ಪೋಲೀಸ್ ಕಮಿಷನರೂ, ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರುಗಳೂ, ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟರುಗಳೂ ಹಾಗೂ ಸಿಂಧ್ ಸಿ. ಐ. ಡಿ. ಪೋಲೀಸ್ ಸೂಪರಿಂಟೆಂಡೆಂಟರುಗಳೂ ಯಾರಿಂದಲಾದರೂ ಶಾಂತಿ ಭಂಗವುಂಟಾಗುವದೆಂದು ಅನುಮಾನ ಕಂಡಕೂಡಲೇ ಅವರನ್ನು ವಾರಂಟಿಲ್ಲದೆ ದಸ್ತಗಿರಿಮಾಡಬಹುದೆಂದು ಮುಂಬಯಿ ಸರಕಾರದವರು ಪ್ರಕಟಿಸಿರುತ್ತಾರೆ.

ಅಮೇರಿಕೆಯ ಕೆಲವು ಸುಪ್ರಸಿದ್ಧ ಶಾಸ್ತ್ರಜ್ಞರು ಆಶ್ಚರ್ಯಕರವಾದ ನೂತನ ಯಂತ್ರವೊಂದನ್ನು ನಿರ್ಮಿಸಿರುವರು. ಸದ್ಯಃ ಈ ಯಂತ್ರವು ಒಂದಾನೊಂದು ಪಾಠಶಾಲೆಯಲ್ಲಿ ಮಾದರಿಗಾಗಿ ಇಡಲ್ಪಟ್ಟಿರುವದು. ಈ ಯಂತ್ರವಿರುವ ಕಟ್ಟಡಕ್ಕೆ ಬೆಂಕಿ ಬಿದ್ದರೆ ಯಂತ್ರವು ಕೂಡಲೇ ಕಟ್ಟಡದಲ್ಲಿರುವವರೆಲ್ಲರಿಗೂ ತಿಳಿಯುವಂತೆ ದೊಡ್ಡದೊಂದು ಗಂಟೆಯನ್ನು ಬಾರಿಸುವದು. ಅನಂತರ ಯಂತ್ರವು ನಿಧಾನವಾಗಿ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾದ ವಾಕ್ಯಗಳಿಂದ ಈ ರೀತಿಯಾಗಿ ಹೇಳಲಾರಂಭಿಸುವದು. "ಕಟ್ಟಡಕ್ಕೆ ಬೆಂಕಿಬಿದ್ದಿದೆ. ಆದರೂ ನೀವಾರೂ ಭಯಪಡಬೇಕಾಗಿಲ್ಲ. ಈಗ ಏನು ಮಾಡಬೇಕೆಂಬುದನ್ನು ನೀವು ಬಲ್ಲಿರಿ. ನಿಮ್ಮ ಕೋಟು ಮತ್ತು ಟೋಪಿಗಳನ್ನು ತೆಗೆದಿಟ್ಟು ಸಾಲಾಗಿ ನಿಂತುಕೊಳ್ಳಿ. ನುಗ್ಗಬೇಡಿ. ಹಸುರುಬಾಣಗಳನ್ನೇ ಹಿಂಬಾಲಿಸಿ ಹೋಗಿರಿ."

ಸತ್ಯಾಗ್ರಹಸಮರವಾರ್ತೆ.

ಬಾಗಲಕೋಟೆಯ ವ್ಯಾಯಾಮಶಿಕ್ಷಣ ಪೀಠವನ್ನು ಮುತ್ತಿದರೆಂಬ ಕಾರಣದಮೇಲೆ ಪೋಲೀಸರು 3 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿ ಮೂರುದಿನಗಳವರೆಗೆ ಬಂಧನದಲ್ಲಿಟ್ಟಿದ್ದು ಅನಂತರ ಬಿಡುಗಡೆಮಾಡಿದರು. ಇದೇ ಕಾರಣದಮೇಲೆ ಗೋವಿಂದಪ್ಪಾಲ್ ಎಂಬ ಮತ್ತೊಬ್ಬ ಸ್ವಯಂಸೇವಕನಿಗೆ 1½ ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಅಹಮದಾಬಾದ್ ಪೋಲೀಸರು ಗುಜರಾಥ ರಾಜಕೀಯ ಸಮ್ಮೇಳನವನ್ನು ಸೇರಿಸಲು ಪ್ರಯತ್ನಿಸಿದ 7 ಜನ ಸ್ತ್ರೀಯರನ್ನೂ, ಸಮ್ಮೇಳನದ ಅಧ್ಯಕ್ಷರಾಗಿದ್ದ ಮಾರುತಿಸಿಂಗ್ ಎಂಬವರನ್ನೂ ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ 2 ತಿಂಗಳಿಂದ 6 ತಿಂಗಳವರೆಗೆ ವಿಧವಿಧವಾದ ಶಿಕ್ಷೆಯನ್ನು ವಿಧಿಸಿದರು.

ಮಧುರಾ ನಗರದಲ್ಲಿ 11 ಜನ ಸ್ವಯಂಸೇವಕರು ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದಾಗ ಪೋಲೀಸರು ಮುಖ್ಯಾಧಿಕಾರಿಯನ್ನು ದಸ್ತಗಿರಿಮಾಡಿ ಉಳಿದವರನ್ನು ಬಲಾತ್ಕಾರವಾಗಿ ಚದರಿಸಿದರು.

ಆರ್ಡಿನೆನ್ಸ್ ಬಿಲ್ಲಿಗೆ ವಿರುದ್ಧವಾಗಿ ಚಳವಳಿಯನ್ನು ನಡೆಸಿದರೆಂಬ ಕಾರಣದಮೇಲೆ ಮದರಾಸಿನ 3 ಜನ ಸ್ವಯಂಸೇವಕರಿಗೆ ತಲಾ 3 ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಕಲ್ಕತ್ತಾ ಪೋಲೀಸರು ಬಂಗಾಳಾ ಪ್ರೊವಿನ್ಷಿಯಲ್ ಕಾಂಗ್ರೆಸ್‌ಕಮಿಟಿಯ ಆಫೀಸಿಗೆ ನುಗ್ಗಿ 5 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಪೂನಾ ಸಿಟಿ ಕಾಂಗ್ರೆಸ್ ಕಮಿಟಿಯ ಮೆಂಬರರಲ್ಲೊಬ್ಬರಾದ ಮಿ|| ಜಿ. ಎಚ್. ಕಾನಿಟ್ಕಾರ್ರವರು ಒಂದಾನೊಂದು ಬಹಿರಂಗ ಸಭೆಯಲ್ಲಿ ಪರದೇಶೀವಸ್ತ್ರ ಬಹಿಷ್ಕಾರವನ್ನು ಬೋಧಿಸಿದರೆಂಬ ಕಾರಣದಮೇಲೆ ಕಂಟೋನ್ಮೆಂಟ್ ಮ್ಯಾಜಿಸ್ಟ್ರೇಟರವರಿಂದ ಒಂದು ವರ್ಷ ಕಠಿಣಸಜೆಗೆ ಗುರಿಯಾದರು.

ಪಂಜಾಬ್ ವಿದ್ಯಾರ್ಥಿಗಳ ಸಂಘದ ಮಾಜಿ ಪ್ರೆಸಿಡೆಂಟರೂ, ಎಂ.ಎ. ತರಗತಿಯ ವಿದ್ಯಾರ್ಥಿಯೂ ಆದ ಮಿ|| ಆತ್ಮಪ್ರಕಾಶರವರು ರಾಜದ್ರೋಹಕರವಾದ ಭಾಷಣಗಳನ್ನು ಮಾಡಿದರೆಂಬ ಕಾರಣದಮೇಲೆ ಲಾಹೋರಿನ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 5,000 ರೂ. ಗಳ ಜಾಮೀನ್ ಕೊಡಬೇಕೆಂದೂ, ಇಲ್ಲವಾದರೆ ಒಂದು ವರ್ಷ ಸಾದಾ ಸಜೆಯನ್ನು ಅನುಭವಿಸಬೇಕೆಂದೂ, ಅಪ್ಪಣೆಮಾಡಿದರು. ಮಿ|| ಆತ್ಮಪ್ರಕಾಶರವರು ಜಾಮೀನ್ ಕೊಡಲೊಪ್ಪದೆ ಕಾರಾಗೃಹಕ್ಕೆ ತೆರಳಿದರು.

ಲಕ್ನೋ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಮಿ|| ಮೋಹನಲಾಲ ಸಕ್ಸೇನಾರವರು ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದರೆಂಬ ಕಾರಣದಮೇಲೆ 6 ತಿಂಗಳ ಕಠಿಣಸಜೆಗೆ ಗುರಿಯಾದರು.

ಡಿಸೆಂಬರು 30 ನೆಯ ತಾರೀಖಿನ ದಿವಸ ದೆಹಲಿಯ ಜಮೀಯತ್ ಉಲ್-ಉಲೇಮಾ ಸಂಘದ ಆಶ್ರಯದಲ್ಲಿ ಜುಮ್ಮಾಮಶೀದಿಯಿಂದ ಒಂದು ಬಹಿರಂಗ ಮೆರವಣಿಗೆಯು ಹೊರಡಿಸಲ್ಪಟ್ಟಿತು. ಮೆರವಣಿಗೆಯು ದರೀಬಾ ಪ್ರದೇಶವನ್ನು ಪ್ರವೇಶಿಸಿದಕೂಡಲೇ ಪೋಲೀಸರು ಸರ್ವಾಧಿಕಾರಿಗಳಾದ ಬಟಾಲಾ ಮೌಲಾನಾ ಅಬ್ದುಲ್ಲಾರವರನ್ನೂ, ಇಬ್ಬರು ಸ್ವಯಂಸೇವಕರನ್ನೂ ದಸ್ತಗಿರಿಮಾಡಿ, ಉಳಿದವರನ್ನೆಲ್ಲಾ ಬಲಾತ್ಕಾರವಾಗಿ ಚದರಿಸಿದರು.

ದೆಹಲಿಯಲ್ಲಿ ಅಖಿಲಭಾರತರಾಷ್ಟ್ರೀಯಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ 9 ತಿಂಗಳ ಕಠಿಣಶಿಕ್ಷೆಗೆ ಗುರಿಯಾಗಿದ್ದ ಮಿಲ್ ಏಜೆಂಟ್ ಶ್ರೀ|| ಸೇಟ್ ರಂಛೋದಲಾಲರವರು ಡಿಸೆಂಬರು 30 ನೇ ತಾರೀಖಿನ ದಿವಸ ನಾಸಿಕ ಜೈಲಿನಿಂದ ಬಿಡುಗಡೆಮಾಡಲ್ಪಟ್ಟರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

~~ಶ್ರೀ|| ಷ|| ಬ್ರ|| ಹುಟಗಿ ಬೃಹನ್ಮಠದ ಪಟ್ಟಾಧ್ಯಕ್ಷರು.~~

ಗುರುಗಳಲ್ಲಿ ಆತ್ಮಶಕ್ತಿಯ ಬೆಳಕು ಅವಶ್ಯವಾ[illegible]ಗಿದೆ.

ದೀವಿಗೆಯಲ್ಲಿ (ಗ್ಲಾಸಿನಲ್ಲಿ) ಎಣ್ಣೆಬತ್ತಿಗಳ ಸಾಹಿತ್ಯವಿದ್ದರೆ ಅದಕ್ಕೆ ಪ್ರಕಾಶವನ್ನುಂಟುಮಾಡುವ ಸಾಮರ್ಥ್ಯವು ಬರುವದು. ಅಂಬಿಗನು ತನ್ನ ಸ್ವಂತ ಶರೀರವನ್ನು ನೀರಿನಲ್ಲಿ ತೆಗೆದುಕೊಂಡು ಈಸಿಹೋಗುವ ಶಕ್ತಿಯನ್ನು ಪಡೆದಿರುವನಲ್ಲದೆ ಬೇರೆ ಭಾರವನ್ನು ಸಹ ತೆಗೆದುಕೊಂಡು ಹೋಗುವ ಸಾಮರ್ಥ್ಯವಿದ್ದರೆ, ಮಾತ್ರ ಅವನು ತನ್ನ ಅವಲಂಬಿಗಳನ್ನು ನಿರಾಯಾಸದಿಂದ ನದಿಯನ್ನು ದಾಟಿಸಲು ಸಮರ್ಥನಾಗುತ್ತಾನೆ. ಅದೇ ಪ್ರಕಾರ ಪ್ರಪಂಚವೆಂಬ ಸಾಗರದಲ್ಲಿ ಬಿದ್ದಿರುವ ಅನಂತ ಶಿಷ್ಯಸಮೂಹವನ್ನು ಪಾರುಮಾಡಲಿಕ್ಕೆ ಸದ್ಗುರುಗಳಲ್ಲಿ ಸಾಧಾರಣವಾದ ಮಾನವಶಕ್ತಿಗಿಂತಲೂ ಅಸಾಧಾರಣವಾದ ಆತ್ಮಶಕ್ತಿಯೂ ಕೂಡ ಅವಶ್ಯವಾಗಿ ಇರಲೇಬೇಕಾಗುತ್ತದೆ. ಇಲ್ಲದಿದ್ದರೆ ಶಿಷ್ಯಸಮೂಹವನ್ನು ಕೊರಳಿಗೆ ಹಾಕಿಕೊಂಡು ತಾನೂ ನಡುನೀರಲ್ಲಿ ರಸಾತಳಕ್ಕೆ ಇಳಿಯಬೇಕಾಗುವ ಪ್ರಸಂಗವು ಗುರುಗಳಿಗೆ ಬರಬಹುದು. ಆದ್ದರಿಂದ ಈಗಿನ ಗುರು~~ಪೀಠವನ್ನಲಂಕರಿಸಿದ ಮಠಾ~~ಧಿಕಾರಿಗಳು ತಮ್ಮ ಆತ್ಮಮಹತ್ವನುಗುಣವಾಗಿ ಆತ್ಮಬಲವನ್ನು ಹೆಚ್ಚಿಸುವದು ಅತ್ಯಂತ ಅವಶ್ಯವಿರುತ್ತದೆ. ಆತ್ಮಬಲವಿಲ್ಲದೆ ಅಧಿಕಾರಿಗಳು ಹೇಳಿದ, ಆಚಾರ ವಿಚಾರಗಳು ಹಾಗೂ ಬುದ್ಧಿಯ ಮಾತುಗಳು ತಾಮಸ ಭಕ್ತರಮೇಲೆ ಸರಿಯಾದ ಪರಿಣಾಮವನ್ನುಂಟುಮಾಡಲಾರವು. ಅಧಿಕಾರಿಗಳಲ್ಲಿರುವ ಅಂತಸ್ಸಾಮರ್ಥ್ಯವು ಶಿಷ್ಯಸಮೂಹದ ಮನಸ್ಸನ್ನು ನಿರಾಯಾಸದಿಂದ ಜಯಿಸಿ ಅವರಲ್ಲಿ ಸರಿಯಾದ ಪರಿಣಾಮವನ್ನುಂಟುಮಾಡುವದು. ಅಂದಮೇಲೆ ~~ಮಠಾ~~ಧಿಕಾರಿಗಳು ಆಚಾರವಿಚಾರಸಂಪನ್ನರಾಗಿದ್ದು ಸರ್ವದಾ ಈಶ್ವರನ ಸನ್ನಿಧಿಯಲ್ಲಿಯೇ ತಮ್ಮ ಮನವನ್ನು ನಿಲ್ಲಿಸಿ ಅಂತಸ್ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವದು ಅತಿ ಮಹತ್ವದ ಸಂಗತಿಯಾಗಿದೆ. ಈಗ ~~ಮಠಾ~~ಧಿಕಾರಿಗಳ ಅವಶ್ಯಕತೆಯೇ ಹೆಚ್ಚಾಗಿರುವದು. ~~ಈ ಪ್ರಕಾರದ ವಿಚಾರವನ್ನೇ ಮುನದಲ್ಲಿ ಹಿಡಿದು, ಆಚಾರವಿಚಾರಸಂಪನ್ನರೂ, ಸರ್ವದಾ ಭಕ್ತೋ~~ದ್ಧಾರಕಾರ್ಯಾಸಕ್ತರೂ ಆದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಹುಟಗಿ ಇವರು ಕಳೆದ ಅಶ್ವಯುಜ ಕಾರ್ತಿಕ ಮಾಸಗಳಲ್ಲಿ ತಮ್ಮ ಅಂತಸ್ಸಾಮರ್ಥ್ಯದ ಹೆಚ್ಚುವಿಕೆಗಾಗಿ ವಾಸಿರ ತಾಲೂಕಿಗೆ ಸೇರಿದ 'ಎಡಸಿ' ಎಂಬ ರಮ್ಯವೂ ನಿರ್ಜನವೂ ಆದ ಪರ್ವತದಲ್ಲಿ ಅನುಷ್ಠಾನವನ್ನು ಪಕ್ಷ ಮಾಡಿದ್ದು, ಕಳೆದ ಕಾರ್ತಿಕ ಬಹುಳ ಚತುರ್ಥಿಗೆ ತಮ್ಮ ಅನುಷ್ಠಾನವನ್ನು ಸಮಾಪ್ತಿಗೊಳಿಸಿದರೆಂದು ಹೇಳಲಿಕ್ಕೆ ತುಂಬಾ ಆನಂದವಾಗುತ್ತದೆ. ಸ್ವಾಮಿಗಳು ಸ್ವಭಾವತಃ ಸದಾಚಾರಸಂಪನ್ನರೂ, ಶಿವ[illegible]ಪರಾಯಣರೂ ಆಗಿದ್ದರೂ, ಈಶ್ವರಧ್ಯಾನದಲ್ಲಿಯೇ ತಾವೂ ಅಡಗಿಹೋಗುವ ಅತ್ಯಂತ ಉಗ್ರವಾದ ಅನುಷ್ಠಾನವನ್ನು ಮಾಡಿ ತಮ್ಮ ಆತ್ಮಬಲವನ್ನು ಹೆಚ್ಚಿಸಿಕೊಂಡದ್ದಲ್ಲದೆ ಜನರ ಪೂಜ್ಯತೆಗೂ ಪಾತ್ರರಾದರು. ಮಳೆ, ಚಳಿ, ಗಾಳಿಗಳನ್ನು ಲೆಕ್ಕಿಸದೆ ದಿವಾರಾತ್ರಿಯೂ ಏಕಾಂಗಿಯಾಗಿ ಈಶ್ವರಧ್ಯಾನದಲ್ಲಿ ಮಗ್ನರಾಗಿ, ಮೌನವ್ರತದಿಂದಿದ್ದು, ಕೇವಲ ೧೨ ಗುಟುಕು ಗೋಕ್ಷೀರದಲ್ಲಿ ೧-೨ ತೊಲ ಜೇನುತುಪ್ಪವನ್ನು ಬೆರಸಿ, ಅದನ್ನೇ ಆಹಾರವನ್ನಾಗಿ ಸೇವಿಸುತ್ತ ಅನುಷ್ಠಾನವನ್ನು ಪೂರ್ತಿಗೊಳಿಸಿದರು. ಈಗಿನ ಕಾಲದಲ್ಲಿ ಹೀಗೆ ಈಶ್ವರಚಿಂತೆಯಕಡೆಗೆ ಮನಸ್ಸು ಹಾಕುವ ಅಧಿಕಾರಿವರ್ಗದವರನ್ನು ಕಾಣುವದು ಅಪರೂಪ. ಇವಲ್ಲವೇ ಗುರುಪೀಠವನ್ನಲಂಕರಿಸಿದ್ದಕ್ಕೆ ಭೂಷಣವು?

ಈ ಮಹನೀಯರ ಸಂಕ್ಷಿಪ್ತವಾದ ಚರಿತ್ರೆಯನ್ನು ಇಲ್ಲಿ ವಾಚಕಮಹಾಶಯರಿಗೆ ವಿದಿತಪಡಿಸಲು ಆತುರಪಡುತ್ತೇನೆ.

[illegible]

ಬಾಲತಪಸ್ವಿಗಳ ಸಂಕ್ಷಿಪ್ತಚರಿತ್ರೆ.

ಮೊಗಲಾಯಿ ಇಲಾಖೆಯಲ್ಲಿ ಗುಲಬುರಗಜಿಲ್ಲೆಗೆ ಸೇರಿದ ತರವಾರಹೇರಿ ಎಂಬುದು ಶ್ರೀಗಳವರ ಜನ್ಮಸ್ಥಳವು. ಇವರ ತಂದೆ ತಾಯಿಗಳು ಇವರನ್ನು ಚಿಕ್ಕಂದಿನಲ್ಲಿ ತಮ್ಮ ಪರಿಸ್ಥಿತಿಗನುಗುಣವಾಗಿ ಎಮ್ಮೆ ಕಾಯಲಿಕ್ಕೆ ಹಚ್ಚಿದ್ದರು. ಶ್ರೀಗಳವರಿಗೆ ಅದು ಮನಸ್ಸಿಗೆಬರಲಿಲ್ಲ. ತಮ್ಮ ಸಂಗಡಿಗರೊಡನೆ ಶಾಲೆಗೆ ಹೋಗಬೇಕೆಂಬುದೇ ಶ್ರೀಗಳವರ ಬಲವಾದ ಇಚ್ಛೆ. ಮಾಡುವದೇನು? ಪಾಲಕರ ಅಜ್ಞೆಗೆ ವಿರುದ್ಧವಾಗಿ ಬಾಲಕನು ಹೇಗೆ ವರ್ತಿಸಲು ತಾನೆ ಸಮರ್ಥನು? ಅಂತೂ ಇದೇರೀತಿ ಕೆಲದಿನಗಳು ಕಳೆದವು. ಅವರ ಮನಸ್ಸು ಶಾಲೆಗೆ ಹೋಗಲಿಕ್ಕೆ ಆತುರಪಡುತ್ತಿತ್ತು. ಒಮ್ಮೆ ಅವರ ಮನಸ್ಸಿನ ಬಲವು ತಿರುಗಿ, ಎಮ್ಮೆಗಳನ್ನು ಮೇಯಿಸಲಿಕ್ಕೆ ಹೋಗುವ ಆ ಗುಡ್ಡದಲ್ಲಿಯೇ ೫-೬ ದಿನಗಳವರೆಗೆ ನಿಂತರು. ಮನೆಗೆ ಬರಲೇ ಇಲ್ಲ. ಇತ್ತ ತಂದೆತಾಯಿಗಳು ಎಲ್ಲ ಕಡೆಯಲ್ಲಿಯೂ ಹುಡುಕಿ ಬೇಸತ್ತರು. ಕಡೆಗೆ ದನಕಾಯುವವರ ಹೇಳುವಿಕೆಯ ಮೇರೆಗೆ ಗುಡ್ಡದಲ್ಲಿರುವ ದೇವಾಲಯಕ್ಕೆ ಹೋಗಿ ಇವರನ್ನು ಕರೆತಂದು ಅವರ ಇಚ್ಛೆಯ ಮೇರೆಗೆ ಶಾಲೆಗೆ ಕಳಿಸಲಾರಂಭಿಸಿದರು. ಅಂದಿನಿಂದ ಸ್ವಾಮಿಗಳಿಗೆ ಆನಂದವಾಯಿತು. ಅದೇ ಊರಲ್ಲಿ ಸ್ವಾಮಿಗಳ ಅಭ್ಯಾಸವು ನಾಲ್ಕನೇ ಇಯತ್ತೆಯವರೆಗೆ ಜರುಗಿತು. ಈ ಅವಧಿಯಲ್ಲಿ ಸ್ವಾಮಿಗಳನ್ನು ಅವರ ಪಾಲಕರು ರಂಗಣಪೇಟೆ ಎಂಬ ಗ್ರಾಮದ ವಿರಕ್ತಮಠಕ್ಕೆ ಮರಿಯನ್ನಾಗಿ ಕೊಟ್ಟಿದ್ದರು. ಮುಂದೆ ನಾಲ್ಕನೇ ಇಯತ್ತೆಯನ್ನು ಕಲಿಯಲಿಕ್ಕೆ ಅವರ ಪಾಲಕರು ಅದೇ ಸ್ಥಳಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಅವರು ಉತ್ಸಾಹದಿಂದ ವಿದ್ಯೆಯನ್ನು ಕಲಿಯಹತ್ತಿದರು. ಸಹಪಾಠಿಗಳಿಗೆಲ್ಲ ಬಲ್ಲಿದ ಹೀರಾದರು. ಗುರುಗಳ ಪ್ರೀತಿಗೆ ಪಾತ್ರರಾದರು. ಆದರೆ ಆ ವಿರಕ್ತಸ್ವಾಮಿಗಳಿಗೆ ಒಂದು ಸ್ತ್ರೀವ್ಯಕ್ತಿಯು ಗಂಟುಬಿದ್ದಿತ್ತು. ಆ ವ್ಯಕ್ತಿಗೆ ಮಾತ್ರ ಇವರು ಬೇಡವಾದರು. ಅವಳು ಇಲ್ಲದ್ದೊಂದು ಸುಳ್ಳು ಸಂಗತಿಯನ್ನು ಈ ಹುಡುಗನ ಮೇಲೆ ಆರೋಪಿಸಿ ಅವರಿಂದ ಹೊಡೆಯಲಿಕ್ಕೂ, ತ್ರಾಸಕೊಡಲಿಕ್ಕೂ ಹಚ್ಚಿಸಿದಳು. ಹೀಗೆ ಕೆಲದಿನಗಳು ಕಳೆಯಲು ಸ್ವಾಮಿಗಳಿಗೆ ಇವರ ಕಾಟವನ್ನು ಸಹಿಸುವದು ಅಸಾಧ್ಯವಾಯಿತು.

ಮುಂದೆ ಅವರಿಗೆ ಈ ಹೇಯ ಕಾರ್ಯವು ಸಹನವಾಗದೆ, ಮಠಕ್ಕೆ (ಮಠಕ್ಕೆ) ಹೋಗುವದನ್ನೇ ಬಿಟ್ಟುಬಿಟ್ಟರು. ಅದೇ ಊರಲ್ಲಿರುವ ಒಂದು ಶಿವಾಲಯದಲ್ಲಿ ತಮ್ಮ ಶಿವಾರ್ಚನೆಯನ್ನು ತೀರಿಸಿಕೊಂಡು ಶಾಲೆಗೆ ಹೋಗುತ್ತಿದ್ದರು. ಹೀಗೆ ೨೦-೨೫ ದಿನಗಳು ಕಳೆದವು. ಈ ಅವಧಿಯಲ್ಲಿ ವಿರಕ್ತಸ್ವಾಮಿಗಳು ಹುಡುಕಾಡಿ ಅವರ ತಾಯಿತಂದೆಗಳಿಗೆ ಹೇಳಕಳುಹಿಸಿದರು. ಅವರು ಗಾಬರಿಗೊಂಡು ಬಂದರು. ಕಡೆಗೆ ಶಾಲೆಯ ಶಿಕ್ಷಕರನ್ನು ಕೇಳಲು, ಅವರು ಅವನು ಪ್ರತಿದಿವಸವೂ ತಪ್ಪದೆ ಶಾಲೆಗೆ ಬರುವನೆಂದೂ, ಉತ್ತಮತರಗತಿಯಲ್ಲಿ ಅವನ ಅಭ್ಯಾಸವು ನಡೆದಿರುವದೆಂದೂ, ಅಭಿಪ್ರಾಯಪಟ್ಟರು. ಕಡೆಗೆ ಸ್ವಾಮಿಗಳನ್ನು ಗೊತ್ತುಹಚ್ಚಿ ಅವರ ಪಾಲಕರು ಅವರನ್ನು ತಮ್ಮ ಊರಿಗೆ ತಿರುಗಿ ಕರೆದುಕೊಂಡು ಹೋದರು.

ಮುಂದೆ ಸ್ವಾಮಿಗಳ ಅಭಿಪ್ರಾಯದ ಮೇರೆಗೆ ಅವರ ತಾಯಿತಂದೆಗಳು ಅವರನ್ನು "ಸೊಲಾಪುರದ ಶ್ರೀ ಸಂಸ್ಕೃತ ಪಾಠದ ಪಾಠಶಾಲೆಗೆ" ಸಂಸ್ಕೃತ ಅಭ್ಯಾಸವನ್ನು ಮಾಡಲಿಕ್ಕೆ ಕಳುಹಿಸಿಕೊಟ್ಟರು. ಇವರು ಇಲ್ಲಿಗೆ ಬಂದ ಕೆಲವು ಕಾಲದಲ್ಲಿಯೇ ಸರಿಯಾಗಿ ಸಂಸ್ಕೃತಾಭ್ಯಾಸವನ್ನು ಮುಗಿಸಿದರು. ಈ ಅವಧಿಯಲ್ಲಿ ಈ ಸೊಲಾಪುರಕ್ಕೆ ಸಮೀಪವಾಗಿರುವ ಹುಟಗಿಯ ಮಠಾಧಿಕಾರಕ್ಕೆ ಒಬ್ಬ ಯೋಗ್ಯ ಅಧಿಕಾರಿಗಳು ಬೇಕಾಗಿದ್ದರು. ಅಲ್ಲಿಯ ಪ್ರಮುಖ ಮನುಷ್ಯರು ಪಾಠಶಾಲೆಗೆ ಹೋಗಿ, ಎಲ್ಲ ವಟುಗಳಲ್ಲಿಯೂ ಸಲ್ಲಕ್ಷಣಾದಿಗಳಿಂದೊಪ್ಪುವ ಈ ನಮ್ಮ ಮಹಾಸ್ವಾಮಿಗಳನ್ನೇ ತಮ್ಮ ಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಬೇಕೆಂದು, ನಿರ್ಧರಿಸಿದರು. ಅದೇ ಮೇರೆಗೆ ಸ್ವಾಮಿಗಳವರ ಪಟ್ಟಾಧಿಕಾರವು, ಈ ಹುಟಗಿ ಗ್ರಾಮದ ಬೃಹನ್ಮಠಕ್ಕೆ ಆಯಿತು. ತರುವಾಯ ಶ್ರೀಗಳು ಪಾಠಶಾಲೆಯಲ್ಲಿಯ ಅಭ್ಯಾಸವನ್ನು ಮುಗಿಸಿ, ಕಾಶಿಗೆ ಹೋಗುವ ವಿಚಾರದಲ್ಲಿದ್ದರು. ಆದರೆ ಅವರಿಗೆ ಧನಸಹಾಯವು ಸರಿಯಾಗಿ ಆಗಲಿಲ್ಲ. ಆದ್ದರಿಂದ ನಿರ್ವಾಹವಿಲ್ಲದೆ ಅದರ ಹವ್ಯಾಸವನ್ನು ಬಿಡಬೇಕಾಯಿತು. ಮುಂದೆ ಶ್ರೀಗಳು ತಮ್ಮ ಅಧಿಕಾರಸ್ಥಾನವಾದ ಹುಟಗಿ ಗ್ರಾಮಕ್ಕೆ ಬಂದು, ನವಯುಗದ ಬಿರುಗಾಳಿಯ ಎಳೆತಕ್ಕೆ ಸಿಲುಕಿ ಧರ್ಮವನ್ನು ರಸಾತಳಕ್ಕೆ ತುಳಿಯುತ್ತಿರುವ ಅನೇಕ ಮೂಢ ಜನರನ್ನು ತಮ್ಮ ಬೋಧಪ್ರಬೋಧಗಳಿಂದ ಹಾದಿಗೆ ಹಚ್ಚಿದರು. ಎಲ್ಲಿ ಶಿವಭಜನೆ ಶಿವಕೀರ್ತನೆಗಳ ಸುಳಿವು ಸಹ ಇದ್ದಿಲ್ಲವೋ, ಅಂಥ ಹುಟಗಿ ಗ್ರಾಮದಲ್ಲಿ ಶ್ರೀಗಳವರು ಪ್ರತಿದಿನವೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ದಿವ್ಯವಾದ ಭಜನಾಮೃತವನ್ನು ಪಾನಮಾಡಿಸುತ್ತ ಭಕ್ತರನ್ನು ಧರ್ಮಪರಾಯಣರನ್ನಾಗಿ ಮಾಡುತ್ತ ಬಂದರು. ಪಟ್ಟಾಧಿಕಾರವನ್ನು ವಹಿಸಿ ಸುಮಾರು ೭-೮ ವರ್ಷಗಳಾಗಿರಬಹುದು. ಈ ಅವಧಿಯಲ್ಲಿ ಈ ದಕ್ಷಿಣ ಮಹಾರಾಷ್ಟ್ರ ಭಾಗದ ಸೂಕ್ಷ್ಮವಿಚಾರ ಸ್ವಮತ ಪರಮತೀಯ ಜನರಿಗೆ ಇವರು ದೇವರಾಗಿ ತೋರಹತ್ತಿರುವರು. ಇವರಲ್ಲಿ ಧನದಾಸೆಯು ಲೇಶಮಾತ್ರವೂ ಇಲ್ಲ. ಅಹಂಕಾರವೆಂಬದು ಇವರನ್ನು ಸೋಂಕಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇಂಥ ಮಹಾನುಭಾವರುಗಳಾದ ಪಟ್ಟಾಧಿಕಾರಿಗಳು ದೊರೆಯುವದು, ದುರ್ಲಭವು. ಈ ಸ್ವಾಮಿಗಳಿಗೆ ಜಗದೀಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಿ ಇವರಿಂದ ಇದಕ್ಕಿಂತಲೂ ಹೆಚ್ಚಾಗಿ ಸಮಾಜೋದ್ಧಾರ ಕಾರ್ಯಗಳು ಜರುಗಲೆಂದು ಆ ದಯಾಘನನನು [illegible]

ರಾಜಕುಮಾರ ದೇಸರಾಜೇ ಅರಸರವರು ಕಳೆದ ವಾರ ಕೋಲಾರದ ಚಿನ್ನದಗಣಿಯಿಂದ ಬೆಂಗಳೂರಿಗೆ ಬರುವಾಗ ಅವರು ಕುಳಿತಿದ್ದ ಮೋಟಾರು ಅಕಸ್ಮಾತ್ತಾಗಿ ಗಿಡಕ್ಕೆ ಬಡಿದು ಸ್ವಲ್ಪ ಪೆಟ್ಟು ಬಿದ್ದಿತೆಂದೂ, ಚಿನ್ನದಗಣಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿ ಈಗ ಗುಣಮುಖವಾಗಿರುತ್ತಾರೆಂದೂ ತಿಳಿದುಬಂದಿದೆ.

ಬೆಂಗಳೂರು ನಗರದಲ್ಲಿ ತುಪ್ಪದವ್ಯಾಪಾರಮಾಡುವ ರಾಮಕೃಷ್ಣಶೆಟ್ಟಿ ಎಂಬುವರು ಮಿಶ್ರಮಾಡಿದ ತುಪ್ಪವನ್ನು ಬಿಕರಿಗೆ ಇಟ್ಟಿದ್ದರೆಂಬ ಅಪಾದನೆಯ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರು ವಿಚಾರಣೆ ನಡೆಯಿಸಿ ಸದರಿಶೆಟ್ಟರಿಗೆ 20 ರೂ. ಜುಲ್ಮಾನೆಯನ್ನು ವಿಧಿಸಿದ್ದಲ್ಲದೆ ಮಿಶ್ರವಾದ ತುಪ್ಪವನ್ನು ನಾಶಪಡಿಸುವಂತೆ ಅಪ್ಪಣೆಮಾಡಿದರು.

ಕೀಳುಜಾತಿಯ ಹುಡುಗಿಯರನ್ನು ಬೆಂಗಳೂರಿನಿಂದ ಹೈದರಾಬಾದಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ಉತ್ತಮಜಾತಿಯವರಿಗೆ ಮದುವೆಮಾಡಿಕೊಟ್ಟು ಅವರಿಂದ ಸಾವಿರಾರು ರೂಪಾಯಿಗಳನ್ನು ಪಡೆದು ಮೋಸಪಡಿಸುತ್ತಿರುವರೆಂಬ ಕಾರಣದ ಮೇಲೆ ಹೈದರಾಬಾದ್ ಪೋಲೀಸರು ಬೆಂಗಳೂರಿನಲ್ಲಿ ಅವಶ್ಯಕವಾದ ತನಿಖೆಕ್ರಮಗಳನ್ನು ನಡೆಯಿಸಿ ನೀಲಮ್ಮನೆಂಬ ಹೆಂಗಸನ್ನು ದಸ್ತಗಿರಿ ಮಾಡಿರುತ್ತಾರೆ.

ಬೆಂಗಳೂರು ಸಿಟಿ ಪೋಲೀಸರು ನಾರಾಯಣಶೆಟ್ಟಿ ಪೇಟೆಯಲ್ಲಿ ಗುಟ್ಟಾಗಿ ಜೂಜಾಡುತ್ತಿದ್ದ ಎಂಟು ಜನರನ್ನು ಹಿಡಿದು ಅವರ ಮೇಲೆ ಮೊಕದ್ದಮೆಮಾಡಿದ್ದರು. ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 5 ಜನರಿಗೆ 25 ರೂ. ನಂತೆಯೂ, 3 ಜನರಿಗೆ 50 ರೂ. ನಂತೆಯೂ ಜುಲ್ಮಾನೆ ವಿಧಿಸಿ, ಜುಲ್ಮಾನೆ ಹಣದಲ್ಲಿ, ಪೋಲೀಸರಿಗೆ 75 ರೂ. ಬಹುಮಾನ ಕೊಡಬೇಕೆಂದು ಅಪ್ಪಣೆಮಾಡಿದರು.

ಮೈಸೂರು, ಹಾರ್ಮೋನಿಯಂ ಮತ್ತು ಚಾಬೀನೆ ವ್ಯಾಪಾರಿಗಳಾದ ಮೆ|| ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು, ಆಯುರ್ವೇದಿಕ್ ಫಾರ್ಮಸಿಯ ಪ್ರೊಪ್ರೈಟರಾದ ಮೆ|| ಎಸ್.ಎ. ಪಂಡಿತ್ ಅಂಡ್ ಸನ್ಸ್‌ರವರು, ಪುಸ್ತಕವ್ಯಾಪಾರಿಗಳಾದ ಮೆ|| ಎ. ಸಿ. ಕೋದಂಡರಾಮಶೆಟ್ಟಿ ಅಂಡ್ ಕಂಪೆನಿಯವರು, ಹಾಗೂ ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿಯ ಪ್ರೊಪ್ರೈಟರಾದ ಮ|| ರಾ|| ಎಂ. ವಿ. ನಾರಾಯಣರಾಯರು ಕಳುಹಿಸಿರುವ ಅಂದವಾದ ಹೊಸವರ್ಷದ ಕ್ಯಾಲೆಂಡರುಗಳನ್ನು ಆತ್ಯಾನಂದದಿಂದ ಸ್ವೀಕರಿಸಿರುತ್ತೇವೆ.

ಇಂಗ್ಲೆಂಡಿನಲ್ಲಿ ಬಹಳ ಪ್ರಖ್ಯಾತಿ ಹೊಂದಿದ್ದ ಒಬ್ಬಾನೊಬ್ಬ ಪತ್ತೇದಾರೀ ಪೋಲೀಸ್ ಇನ್ಸ್‌ಪೆಕ್ಟರನ್ನು ಕಳೆದ ಡಿಸೆಂಬರ್ 28 ನೇ ತಾರೀಖಿನ ದಿವಸ ಬರ್ಮಿಂಘ್ಯಾಂ ಪೋಲೀಸ್ ಸ್ಟೇಷನ್ನಿನಲ್ಲಿ ಯಾರೋ ಗುಂಡಿನಿಂದ ಹೊಡೆದು ಕೊಂದರು.

ವರ್ತಮಾನಸಂಗ್ರಹ

ಎರವಾಡಾ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ನಾರಾಯಣಪಾಂಡು ಎಂಬ ಸ್ವಯಂಸೇವಕನ ತಲೆಯಮೇಲೆ ದೊಡ್ಡ ಬಂಡೆಯು ಬಿದ್ದು ಕೂಡಲೇ ಮೃತಪಟ್ಟನು.

ಕಲ್ಕತ್ತೆಯ ಪೋಲೀಸ[illegible]ಂದು ಮನೆಯನ್ನು ಶೋಧಿಸಿ ಸರ್ಕಾರದವರಿಂದ ನಿ[illegible]ಪಲ್ಪಟ್ಟಿದ್ದ ಒಂದು ಪುಸ್ತಕದ ಪ್ರತಿಗಳನ್ನು ಎರಡು [illegible]ಗಳ ತುಂಬ ಹೇರಿಸಿಕೊಂಡು ಹೋದರು.

ಮುಲ್ಲಜಮದೀನ್ ಎಂಬ ಅಫ್ಘಾನನು ದೇವರನ್ನೂ, ಪ್ರಾಫೆಟ್ಟನ್ನೂ, ಕೊರಾನನ್ನೂ ಬೈದನೆಂಬ ಕಾರಣದ ಮೇಲೆ ಕಾಬೂಲಿನ ನ್ಯಾಯಾಧೀಶರು ಅವನಿಗೆ ಮರಣ ದಂಡನೆಯನ್ನು ವಿಧಿಸಿದರು.

ಡಿಸೆಂಬರು 26 ನೇ ತಾರೀಖಿನ ದಿವಸ ಸಶಸ್ತ್ರರಾದ ಕೆಲವು ಜನ ಢಕಾಯಿತರು ಲಕ್ನೋ ನಗರದ 3 ಮನೆಗಳನ್ನು ಲೂಟಿಮಾಡಿ ಸುಮಾರು 3 ಸಾವಿರ ರುಪಾಯಿಗಳವರೆಗೆ ಅಪಹರಿಸಿಕೊಂಡು ಹೋದರು.

ಡಿಸೆಂಬರ್ 24 ನೇ ತಾರೀಖಿಗೆ ಆಖೈರಾದ ವಾರದಲ್ಲಿ 1,64,9457 ರೂ. ಗಳ ಭಂಗಾರವು ಮುಂಬಯಿಯಿಂದ ಪರದೇಶಗಳಿಗೆ ಸಾಗಿಸಲ್ಪಟ್ಟಿತು. ಇದುವರೆಗೆ ಸಾಗಿಸಿದ ಭಂಗಾರದ ಕ್ರಯ ರೂ. 10,33,15,058.

ಕೆನಡಾ ದೇಶದಲ್ಲಿ ಆರ್ಥಿಕಮುಗ್ಗಟ್ಟಿನ ದೆಸೆಯಿಂದ ಗರಗಸದ ಹೊಟ್ಟಿಗಿಂತಲೂ ಗೋಧಿಯ ಕ್ರಯವು ಕಡಿಮೆಯಾಗಿರುವದಂತೆ! ಗೋಧಿಯ ಕ್ರಯ ಟನ್ 1 ಕ್ಕೆ 9 ಡಾಲರುಗಳು! ಅದೇ 1 ಟನ್ ಗರಗಸದ ಹೊಟ್ಟಿನ ಕ್ರಯ 10 ಡಾಲರುಗಳು!

ಡಿಸೆಂಬರು 26 ನೇ ತಾರೀಖಿನ ದಿವಸ ಗುಂತಕಲ್ಲು ಬೆಜವಾಡಾ ರಸ್ತೆಯಲ್ಲಿ ಹೋಗುತ್ತಿದ್ದ ಗುಡ್ಸ್ ರೈಲು ದಿಗುವನೆಟ್ಟಿ ಮತ್ತು ಗಿಡ್ಡಲೂರುಗಳ ಮಧ್ಯೆ ಕಂಬಿ ಕಿತ್ತು 23 ಗಾಡಿಗಳು ಉರುಳಿಕೊಂಡವು. ದೈವವಶಾತ್ ಯಾರಿಗೂ ಅಪಾಯವು ಸಂಭವಿಸಲಿಲ್ಲ.

ನ್ಯೂಜಿಲೆಂಡ್ ದೇಶದಲ್ಲಿ ಕೀ ಎಂಬ ವಿಚಿತ್ರಜಾತಿಯ ಗಿಳಿಗಳಿರುವವು. ಇವುಗಳ ಮುಖ್ಯ ಆಹಾರವು ಮಾಂಸವಾಗಿದ್ದು, ಇವುಗಳು ಗುಂಪುಗುಂಪಾಗಿ ಕುರಿಗಳ ಮೇಲೆ ಬಿದ್ದು ಅವುಗಳನ್ನು ಕೊಲ್ಲುವವಂತೆ! ಈ ಪಕ್ಷಿಗಳನ್ನು ಕೊಂದವರಿಗೆ ಸರ್ಕಾರದವರು ಬಹುಮಾನ ಕೊಡುವರು.

ದೆಹಲಿಯ ಒಬ್ಬ ಶ್ರೀಮಂತ ಮಾರ್ವಾಡಿಯು ಕೆಲವು ಆಭರಣಗಳನ್ನೂ ನಗದು 2,000 ರೂಪಾಯಿಗಳನ್ನೂ ತೆಗೆದುಕೊಂಡು ರಸ್ತೆಯಲ್ಲಿ ಹೋಗುತ್ತಿದ್ದಾಗ ಯಾವನೋ ಒಬ್ಬ ಕಳ್ಳನು ಅವನಮೇಲೆ ಒಂದು ಬಾಂಬನ್ನು ಎಸೆದು ಮೂರ್ಛೆಗೊಳಿಸಿ ಹಣಸಹಿತವಾಗಿ ಪರಾರಿಯಾಗನು.

ಇಂಗ್ಲೆಂಡ್ ದೇಶದ ಒಬ್ಬ ಪ್ರಸಿದ್ಧ ಇಂಜನಿಯರು 3000 ರೂ. ಗಿಂತಲೂ ಕಡಿಮೆಕ್ರಯದಲ್ಲಿ ದೊರೆಯುವ ಮತ್ತು ಗಂಟೆಗೆ 65 ಮೈಲಿಗಿಂತಲೂ ಕಡಿಮೆ ವೇಗದಲ್ಲಿ ಹೋಗುವ ಹೊಸ ವಿಮಾನಯಂತ್ರವನ್ನು ನಿರ್ಮಿಸಿರುವರು. ಇದಕ್ಕಿಂತಲೂ ಕಡಿಮೆಕ್ರಯದ ವಿಮಾನಯಂತ್ರಗಳನ್ನು ತಯಾರಿಸುವದು ಸಾಧ್ಯವೇ ಇಲ್ಲವಂತೆ!

ಚೀಣಾದೇಶದ ಸ್ವಯಂಸೇವಕರಿಗೆ ಆಶ್ರಯ ಕೊಡುತ್ತಿರುವರೆಂಬ ಅಪಾದನೆಯ ಮೇಲೆ ಮಾಂಚೂರಿಯಾದಲ್ಲಿ, 2700 ಜನ ರೈತರು (ಹೆಂಗಸರು ಮಕ್ಕಳ ಸಮೇತವಾಗಿ) ಜಪಾನ್ ಸೈನಿಕರಿಂದ ಮಿಷನ್‌ಗನ್ನುಗಳಿಂದ ಸುಡಲ್ಪಟ್ಟರು. ಇವರಲ್ಲಿ 130 ಜನರು ಮಾತ್ರ ದೈವವಶಾತ್ ತಪ್ಪಿಸಿಕೊಂಡು ಓಡಿಹೋದರು.

ಅಮೇರಿಕಾ ದೇಶದ ಜನರು ನಾಯಿ, ಬೆಕ್ಕು, ಪಕ್ಷಿ ಮೊದಲಾದುವುಗಳ ಉಪಚಾರಕ್ಕಾಗಿ ವರ್ಷವೊಂದಕ್ಕೆ ಸುಮಾರು 120,00,000 ರೂ. ಗಳನ್ನು ವೆಚ್ಚಮಾಡುವರಂತೆ! ಲಾಸ್ ಅಂಗಲ್ಸಿನ 'ಪ್ರಾಣಿದಯಾ ಪ್ರಚಾರಕ ಸಂಘ' ದವರು ಅಮೇರಿಕಾ ದೇಶದಲ್ಲಿ ಇಂಥ ಪ್ರಾಣಿಗಳು ಒಟ್ಟು 1,92,00,000 ಇರುವವೆಂದು ಲೆಕ್ಕಮಾಡಿರುತ್ತಾರೆ.

ಪಿಟೀಲನ್ನು ಬಾರಿಸುವದರಲ್ಲಿ ಜಗದ್ವಿಖ್ಯಾತಿಯನ್ನು ಹೊಂದಿರುವ ಕ್ರ್ಯಾಬೆಲಿಕ್ ಎಂಬಾತನು ತನ್ನ ಬೆರಳುಗಳನ್ನು 26,000 ಪೌಂಡುಗಳಿಗೆ ಇನ್ಷೂರು ಮಾಡಿಸಿರುವನು. ಎಡಗೈಯಿನ 3 ಬೆರಳು (ತರ್ಜನಿ, ಮಧ್ಯಮ ಮತ್ತು ಅನಾಮಿಕ)ಗಳು 7,200 ಪೌಂಡುಗಳಿಗೂ, ಕಿರುಬೆರಳು 2,200 ಪೌಂಡುಗಳಿಗೂ, ಹೆಬ್ಬೆರಳು 7,500 ಪೌಂಡುಗಳಿಗೂ, ಬಲಗೈಯಿನ 3 ಬೆರಳುಗಳು 6,900 ಪೌಂಡುಗಳಿಗೂ, ಕಿರುಬೆರಳು 470 ಪೌಂಡುಗಳಿಗೂ, ಹೆಬ್ಬೆರಳು 900 ಪೌಂಡುಗಳಿಗೂ ಇನ್ಷೂರ್ ಮಾಡಲ್ಪಟ್ಟಿರುವವು.

ಕೆಲವು ಕಾಲದ ಹಿಂದೆ ಅಮೇರಿಕೆಯ ಒಂದಾನೊಂದು ನಗರದಲ್ಲಿ ಕೆಲವು ಬ್ಯಾಂಕುಗಳು ಮುಚ್ಚಲ್ಪಟ್ಟು ಹಣದ ಅಭಾವವುಂಟಾದುದರಿಂದ ಮುನಿಸಿಪಲ್ ಅಧಿಕಾರಿಗಳು ಮರದಲ್ಲಿ ನಾಣ್ಯಗಳನ್ನು ಮಾಡಿ ಚಲಾವಣೆಗೆ ತಂದರು. ಈಚೆಗೆ ಅವರು ಸದರೀ ಮರದ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸಿದಾಗ ಕಾಲುಭಾಗ ನಾಣ್ಯಗಳು ಸಹ ದೊರೆಯದೆ ಹೋದವು. ಸದರಿ ನಾಣ್ಯಗಳನ್ನು ಪರಸ್ಥಳದ ಜನರು ಅಪರೂಪದ ವಸ್ತುವೆಂದು ಹೆಚ್ಚು ಬೆಲೆಯನ್ನು ಕೊಟ್ಟು ಕೊಂಡುಕೊಂಡು ಹೋಗಿದ್ದರು.

ಮುಂಬಯಿ ನ್ಯಾಯವಿಧಾಯಕಸಭೆಯಲ್ಲಿ ಪಾಸಾದ ವಿಶೇಷಾಧಿಕಾರದ ಮಸೂದೆಯನ್ನನುಸರಿಸಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಮುಂಬಯಿ ಪೋಲೀಸ್ ಕಮಿಷನರೂ, ಡಿಸ್ಟ್ರಿಕ್ಟ್‌ಪೋಲೀಸ್ ಸೂಪರಿಂಟೆಂಡೆಂಟರುಗಳೂ, ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟರುಗಳೂ ಹಾಗೂ ಸಿಂಧ್ ಸಿ. ಐ. ಡಿ. ಪೋಲೀಸ್ ಸೂಪರಿಂಟೆಂಡೆಂಟರುಗಳೂ ಯಾರಿಂದಲಾದರೂ ಶಾಂತಿಭಂಗವುಂಟಾಗುವದೆಂದು ಅನುಮಾನ ಕಂಡಕೂಡಲೇ ಅವರನ್ನು ವಾರಂಟಿಲ್ಲದೆ ದಸ್ತಗಿರಿಮಾಡಬಹುದೆಂದು ಮುಂಬಯಿ ಸರಕಾರದವರು ಪ್ರಕಟಿಸಿರುತ್ತಾರೆ.

ಅಮೇರಿಕೆಯ ಕೆಲವು ಸುಪ್ರಸಿದ್ಧ ಶಾಸ್ತ್ರಜ್ಞರು ಆಶ್ಚರ್ಯಕರವಾದ ನೂತನ ಯಂತ್ರವೊಂದನ್ನು ನಿರ್ಮಿಸಿರುವರು. ಸದ್ಯಃ ಈ ಯಂತ್ರವು ಒಂದಾನೊಂದು ಪಾಠಶಾಲೆಯಲ್ಲಿ ಮಾದರಿಗಾಗಿ ಇಡಲ್ಪಟ್ಟಿರುವದು. ಈ ಯಂತ್ರವಿರುವ ಕಟ್ಟಡಕ್ಕೆ ಬೆಂಕಿ ಬಿದ್ದರೆ ಯಂತ್ರವು ಕೂಡಲೇ ಕಟ್ಟಡದಲ್ಲಿರುವವರೆಲ್ಲರಿಗೂ ತಿಳಿಯುವಂತೆ ದೊಡ್ಡದೊಂದು ಗಂಟೆಯನ್ನು ಬಾರಿಸುವದು. ಅನಂತರ ಯಂತ್ರವು ನಿಧಾನವಾಗಿ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾದ ವಾಕ್ಯಗಳಿಂದ ಈ ರೀತಿಯಾಗಿ ಹೇಳಲಾರಂಭಿಸುವದು. "ಕಟ್ಟಡಕ್ಕೆ ಬೆಂಕಿಬಿದ್ದಿದೆ. ಆದರೂ ನೀವಾರೂ ಭಯಪಡಬೇಕಾಗಿಲ್ಲ. ಈಗ ಏನು ಮಾಡಬೇಕೆಂಬುದನ್ನು ನೀವು ಬಲ್ಲಿರಿ. ನಿಮ್ಮ ಕೋಟು ಮತ್ತು ಟೋಪಿಗಳನ್ನು ತೆಗೆದಿಟ್ಟು ಸಾಲಾಗಿ ನಿಂತುಕೊಳ್ಳಿ. ನುಗ್ಗಬೇಡಿ. ಹಸುರುಬಾಣಗಳನ್ನೇ ಹಿಂಬಾಲಿಸಿ ಹೋಗಿರಿ."

ಸತ್ಯಾಗ್ರಹಸಮರವಾರ್ತೆ.

ಬಾಗಲಕೋಟೆಯ ವ್ಯಾಯಾಮಶಿಕ್ಷಣ ಪೀಠವನ್ನು ಮುತ್ತಿದರೆಂಬ ಕಾರಣದಮೇಲೆ ಪೋಲೀಸರು 3 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿ ಮೂರುದಿನಗಳವರೆಗೆ ಬಂಧನದಲ್ಲಿಟ್ಟಿದ್ದು ಅನಂತರ ಬಿಡುಗಡೆಮಾಡಿದರು. ಇದೇ ಕಾರಣದಮೇಲೆ ಗೋವಿಂದಪ್ಪಾಳ್ ಎಂಬ ಮತ್ತೊಬ್ಬ ಸ್ವಯಂಸೇವಕನಿಗೆ 1½ ತಿಂಗಳ ಕಠಿಣಸಜೆಯು ವಿಧಿಸಲ್ಪಟ್ಟಿತು.

ಅಹಮದಾಬಾದ್ ಪೋಲೀಸರು ಗುಜರಾಥ ರಾಜಕೀಯ ಸಮ್ಮೇಳನವನ್ನು ಸೇರಿಸಲು ಪ್ರಯತ್ನಿಸಿದ 7 ಜನ ಸ್ತ್ರೀಯರನ್ನೂ, ಸಮ್ಮೇಳನದ ಅಧ್ಯಕ್ಷರಾಗಿದ್ದ ಮಾರುತಿಸಿಂಗ್ ಎಂಬವರನ್ನೂ ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ 2 ತಿಂಗಳಿಂದ 6 ತಿಂಗಳವರೆಗೆ ವಿಧವಿಧವಾದ ಶಿಕ್ಷೆಯನ್ನು ವಿಧಿಸಿದರು.

ಮಧುರಾ ನಗರದಲ್ಲಿ 11 ಜನ ಸ್ವಯಂಸೇವಕರು ಪರದೇಶೀವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದಾಗ ಪೋಲೀಸರು ಮುಖ್ಯಾಧಿಕಾರಿಯನ್ನು ದಸ್ತಗಿರಿಮಾಡಿ ಉಳಿದವರನ್ನು ಬಲಾತ್ಕಾರವಾಗಿ ಚದರಿಸಿದರು.

ಆರ್ಡಿನೆನ್ಸ್ ಬಿಲ್ಲಿಗೆ ವಿರುದ್ಧವಾಗಿ ಚಳವಳಿಯನ್ನು ನಡೆಸಿದರೆಂಬ ಕಾರಣದಮೇಲೆ ಮದರಾಸಿನ 3 ಜನ ಸ್ವಯಂಸೇವಕರಿಗೆ ತಲಾ 3 ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಕಲ್ಕತ್ತಾ ಪೋಲೀಸರು ಬಂಗಾಳಾ ಪ್ರೊವಿನ್ಶಿಯಲ್ ಕಾಂಗ್ರೆಸ್‌ಕಮಿಟಿಯ ಆಫೀಸಿಗೆ ನುಗ್ಗಿ 5 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಪೂನಾ ಸಿಟಿ ಕಾಂಗ್ರೆಸ್ ಕಮಿಟಿಯ ಮೆಂಬರರಲ್ಲೊಬ್ಬರಾದ ಮಿ|| ಜಿ. ಎ. ಕಾನಿಟ್ಕರ್ರವರು ಒಂದಾನೊಂದು ಬಹಿರಂಗ ಸಭೆಯಲ್ಲಿ ಪರದೇಶೀವಸ್ತ್ರ ಬಹಿಷ್ಕಾರವನ್ನು ಬೋಧಿಸಿದರೆಂಬ ಕಾರಣದಮೇಲೆ ಕಂಟೋನ್ಮೆಂಟ್ ಮ್ಯಾಜಿಸ್ಟ್ರೇಟರವರಿಂದ ಒಂದು ವರ್ಷ ಕಠಿಣಸಜೆಗೆ ಗುರಿಯಾದರು.

ಪಂಜಾಬ್ ವಿದ್ಯಾರ್ಥಿಗಳ ಸಂಘದ ಮಾಜಿ ಪ್ರೆಸಿಡೆಂಟರೂ, ಎಂ.ಎ. ತರಗತಿಯ ವಿದ್ಯಾರ್ಥಿಯೂ ಆದ ಮಿ|| ಆತ್ಮಪ್ರಕಾಶರವರು ರಾಜದ್ರೋಹಕರವಾದ ಭಾಷಣಗಳನ್ನು ಮಾಡಿದರೆಂಬ ಕಾರಣದಮೇಲೆ ಲಾಹೋರಿನ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 5,000 ರೂ. ಗಳ ಜಾಮಿನ್ ಕೊಡಬೇಕೆಂದೂ, ಇಲ್ಲವಾದರೆ ಒಂದು ವರ್ಷ ಸಾದಾ ಸಜೆಯನ್ನು ಅನುಭವಿಸಬೇಕೆಂದೂ, ಅಪ್ಪಣೆಮಾಡಿದರು. ಮಿ|| ಆತ್ಮಪ್ರಕಾಶರವರು ಜಾಮಿನ್ ಕೊಡಲೊಪ್ಪದೆ ಕಾರಾಗೃಹಕ್ಕೆ ತೆರಳಿದರು.

ಲಕ್ನೋ ಪ್ರೊವಿನ್ಶಿಯಲ್ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಮಿ|| ಮೋಹನಲಾಲ ಸಕ್ಸೇನಾರವರು ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದರೆಂಬ ಕಾರಣದಮೇಲೆ 6 ತಿಂಗಳ ಕಠಿಣಸಜೆಗೆ ಗುರಿಯಾದರು.

ಡಿಸೆಂಬರು 30 ನೆಯ ತಾರೀಖಿನ ದಿವಸ ದೆಹಲಿಯ ಜಮೇಯತ್ ಉಲ್-ಉಲೇಮಾ ಸಂಘದ ಆಶ್ರಯದಲ್ಲಿ ಜುಮ್ಮಾಮಸೀದಿಯಿಂದ ಒಂದು ಬಹಿರಂಗ ಮೆರವಣಿಗೆಯು ಹೊರಡಿಸಲ್ಪಟ್ಟಿತು. ಮೆರವಣಿಗೆಯು ದರೀಬಾ ಪ್ರದೇಶವನ್ನು ಪ್ರವೇಶಿಸಿದಕೂಡಲೇ ಪೋಲೀಸರು ಸರ್ವಾಧಿಕಾರಿಗಳಾದ ಬಟಾಲಾ ಮೌಲಾನಾ ಅಬ್ದುಲ್ಲಾರವರನ್ನೂ, ಇಬ್ಬರು ಸ್ವಯಂಸೇವಕರನ್ನೂ ದಸ್ತಗಿರಿಮಾಡಿ, ಉಳಿದವರನ್ನೆಲ್ಲಾ ಬಲಾತ್ಕಾರವಾಗಿ ಚದರಿಸಿದರು.

ದೆಹಲಿಯಲ್ಲಿ ಅಖಿಲಭಾರತರಾಷ್ಟ್ರೀಯಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ 9 ತಿಂಗಳ ಕಠಿಣಶಿಕ್ಷೆಗೆ ಗುರಿಯಾಗಿದ್ದ ಮಿಲ್ ಏಜೆಂಟ್ ಶ್ರೀ|| ಸೇಟ್ ರಂಛೋದಲಾಲರವರು ಡಿಸೆಂಬರು 30 ನೇ ತಾರೀಖಿನ ದಿವಸ ನಾಸಿಕ ಜೈಲಿನಿಂದ ಬಿಡುಗಡೆಮಾಡಲ್ಪಟ್ಟರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

[೩ನೆಯ ಪುಟದಿಂದ ಮುಂದುವರಿದುದು.]

ಇಲ್ಲಿ ನಡೆಯುವ ವ್ಯಾಸಂಗದಲ್ಲಿ ವಿಶೇಷವಾಗಿ ಆದರವುಳ್ಳವನಾಗಿಯೂ, ಕೇವಲ ಮಹಾಜನರಲೊಬ್ಬನಾಗಿಯೂ ನಾನು ಹೇಳತಕ್ಕ ಸಲಹೆಯೊಂದುಂಟು. ವೇದಗಳಿಂದ ಉದ್ಧರಿಸಿದ ಜೀವತತ್ವಗಳಿಂತಿರುವ ಅಂಶಗಳನ್ನು ಅಡಕಮಾಡಿ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ, ಆ ಮೂಲಕ ವೇದಗಳಲ್ಲಿ ಜನರಿಗೆ ಹೆಚ್ಚಿನ ಶ್ರದ್ಧೆಯೂ, ಆಸಕ್ತಿಯೂ ಉಂಟಾಗುವಂತೆ ಮಾಡಬೇಕಾದುದು ಅವಶ್ಯಕ. ಈ ಕೆಲಸವು ನಿಮ್ಮ ಪಾಠಶಾಲೆಯಂಥ ಸಂಸ್ಥೆಗಳಿಂದ ನಡೆಯಬೇಕು. ಈ ಬಗೆಯ ಚಿಕ್ಕ ಚಿಕ್ಕ ಪುಸ್ತಕಗಳನ್ನು ಅಂದವಾಗಿ ಮುದ್ರಣಮಾಡಿಸಬೇಕು. ಅವುಗಳ ಬೆಲೆಯನ್ನು ಕಡಿಮೆಯಾಗಿಟ್ಟು ಎಲ್ಲರೂ ಅವುಗಳನ್ನು ಸುಲಭವಾಗಿ ಕೊಳ್ಳಲನುಕೂಲಿಸುವಂತೆ ಮಾಡಬೇಕು. ಹೀಗೆ ಮಾಡಿದಲ್ಲಿ ಯಾವುದೊಂದು ಪಂಗಡದಲ್ಲೇ ಆಗಲಿ ಅತ್ಯಂತ ಬಡವರಾಗಿರುವವರು ಕೂಡ ವೇದಗಳಲ್ಲಿ ಹೇಳಿರತಕ್ಕ ಅಮೂಲ್ಯ ವಿಚಾರಗಳನ್ನು ಅವಗಾಹನೆಗೆ ತಂದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಗ್ರಂಥಗಳನ್ನು ಪ್ರಕಟಿಸಿದರೆ ಪ್ರಾಸಂಗಿಕವಾಗಿ ಮತ್ತೊಂದು ಪ್ರಯೋಜನವೂ ಉಂಟು. ಈ ಮಹಾಪಾಠಶಾಲೆಯಲ್ಲಿ ನಡೆಯುತ್ತಿರುವ ಕೆಲಸವು ಜನರಿಗೆ ಇನ್ನೂ ಚೆನ್ನಾಗಿ ತಿಳಿದು, ಅವರು ಇನ್ನೂ ಹೆಚ್ಚಾಗಿ ಸಂತೋಷಿಸುವುದಕ್ಕೆ ಇದರಿಂದ ಅವಕಾಶವುಂಟಾಗುತ್ತದೆ. ಈ ಚಿಕ್ಕ ಚಿಕ್ಕ ಪುಸ್ತಕಗಳನ್ನು ಕನ್ನಡದ ಅಕ್ಷರಗಳಲ್ಲಿ ಅಚ್ಚುಹಾಕಿಸಿದಲ್ಲಿ, ವೆಚ್ಚವು ಕಡಿಮೆಯಾಗಿ ಬೆಲೆಯು ಅಗ್ಗವಾಗಿರಲು ಅನುಕೂಲವಾಗುತ್ತದೆ.

ಈ ಮಹಾಪಾಠಶಾಲೆಯ ವಿದ್ಯಾರ್ಥಿಗಳಿಗೋಸ್ಕರವೇ ಕೆಲವು ಮಾತುಗಳನ್ನು ಹೇಳಲಿಚ್ಛಿಸುವೆನು. ವಿದ್ಯಾರ್ಥಿಗಳೇ! ವೈದಿಕ ವಿದ್ಯೆಯ ಅಭ್ಯಾಸವೇ ನಿಮ್ಮ ಗುರಿಯೆನ್ನಲು ಅಡ್ಡಿಯಿಲ್ಲ. ಈಗಿನ ಸನ್ನಿವೇಶಗಳಲ್ಲಿ ನಿಮ್ಮಿಂದ ದೊಡ್ಡದೊಂದು ಕೆಲಸವು ನಡೆಯಬೇಕಾಗಿದೆ. ನೀವು ಕಲಿತಿರುವುದನ್ನು ಇತರರಿಗೂ ಕಲಿಸಿಕೊಡಬೇಕು. ವೇದಗಳನ್ನು ಮತ್ತಷ್ಟು ಹೆಚ್ಚು ಹೆಚ್ಚಾಗಿ ಅಭ್ಯಾಸಮಾಡುವ ಲವಲವಿಕೆಯು ಅವರ ಹೃದಯದಲ್ಲಿ ಹುಟ್ಟುವಂತೆ ಮಾಡಬೇಕು. ಅಲ್ಲದೆ, ನೀವುಗಳು ಇಲ್ಲಿ ನಿಮಗೆ ದೊರೆತಿರುವ ವಿದ್ಯಾಭಂಡಾರವನ್ನು ಮತ್ತಷ್ಟು ವೃದ್ಧಿಪಡಿಸಿಕೊಳ್ಳಲು ಪ್ರಯತ್ನಿಸಬೇಕು. ನಿಮ್ಮಲ್ಲಿ ಅನೇಕರು ಉಪಾಧ್ಯಾಯರಾಗಿಯೋ, ಪುರೋಹಿತರಾಗಿಯೋ, ಅಥವಾ ಊರಿಂದೂರಿಗೆ ಹೋಗಿ ವೇದಘೋಷ ಪ್ರದರ್ಶನ ಮಾಡುವುದರಿಂದಲೋ ಜೀವನಕ್ಕೆ ಸಂಪಾದಿಸಿಕೊಳ್ಳಬೇಕಾಗಬಹುದು. ನೀವುಗಳು ಯಾವ ವೃತ್ತಿಯನ್ನೇ ಅವಲಂಬಿಸಿದರೂ ಕೂಡ, ವೈದಿಕ ವಿದ್ಯೆಯ ಗೌರವಕ್ಕೆ ಕಡಿಮೆಯಾಗುವ ರೀತಿಯಲ್ಲಿ ಮಾತ್ರ ನೀವು ವರ್ತಿಸಕೂಡದು. ಅದರ ಗೌರವಕ್ಕೆ ಕುಂದಿಲ್ಲದಂತೆ ನೋಡಿಕೊಂಡೇ ಅದರ ಘನತೆಯನ್ನು ಕಾಪಾಡಿಕೊಂಡೇ ನೀವು ಜೀವನಕ್ಕೆ ಸಂಪಾದಿಸಿಕೊಳ್ಳಬೇಕು. ನೀವುಗಳು ಯಾರೊಡನೆ ವ್ಯವಹರಿಸಬೇಕಾಗುವುದೋ ಅವರುಗಳು ನಿಮ್ಮ ವಿದ್ಯೆಗೆ ಹೆಚ್ಚು ಹೆಚ್ಚಾಗಿ ಗೌರವಕೊಡುವಂತೆ ನೀವು ವರ್ತಿಸಬೇಕು. ಪಾಶ್ಚಿಮಾತ್ಯ ವಿದ್ಯಾಭ್ಯಾಸಮಾಡಿದ ಯುವಕರು ಜೀವನಕ್ಕೆ ಸಂಪಾದಿಸಿಕೊಳ್ಳುವುದು ಕೂಡ ಈಗ ಕಷ್ಟವಾಗಿ ಪರಿಣಮಿಸುತ್ತಿದೆ. ನಿಮ್ಮ ವಿಷಯದಲ್ಲಿ ಬಹುಶಃ ಅದು ಇನ್ನೂ ಕಷ್ಟವಾಗುತ್ತದೆ. ಆದರೂ ಈಗಿನ ಈ ಸ್ಥಿತಿಯೇ ಮುಂದೆ ಇರುವುದಿಲ್ಲವೆಂದೂ, ಸ್ಥಿತಿಗತಿಗಳು ಸರಿಯಾಗಿ ಪರಿಣಾಮಹೊಂದುವುವೆಂದೂ ತೋರುತ್ತದೆ. ಆ ರೀತಿ ನಡೆದಾಗ್ಗೆ, ನಿಮಗೂ ತಕ್ಕ ಸ್ಥಾನವು ದೊರೆಯುವುದರಲ್ಲಿ ಸಂಶಯವಿಲ್ಲ.

ನಿಮ್ಮಲ್ಲಿ ಈ ದಿನ ಪಾರಿತೋಷಿಕಗಳನ್ನು ಪಡೆದಿರತಕ್ಕವರನ್ನು ಅಭಿನಂದಿಸುವೆನು. ಹೀಗೆ ಪಾರಿತೋಷಿಕಗಳನ್ನು ಪಡೆದಿರುವುದೊಂದೇ ಸಾಲದು. ಅವುಗಳನ್ನು ಪಡೆದಿರುವ ನೀವೆಲ್ಲರೂ ವಿದ್ಯಾಪ್ರಾಪ್ತಿಯನ್ನು ವೃದ್ಧಿಪಡಿಸಿಕೊಂಡು, ಈ ಮಹಾಪಾಠಶಾಲೆಯ ವಿದ್ಯಾಭ್ಯಾಸದ ಅಂತಸ್ತನ್ನು ಹೆಚ್ಚಿಸಬೇಕು. ಆ ಅಂತಸ್ತು ಬಹಳ ದೊಡ್ಡದೆಂಬ ಭಾವನೆಯು ಮತ್ತಷ್ಟು ಖಚಿತವಾಗುವಂತೆ ಮಾಡಬೇಕು.

3 ನೇ ರೌಂ. ಟೇ. ಸಮ್ಮೇಳನದ ಕಡೆಯದಿವಸ ಪ್ರತಿನಿಧಿಗಳು ಮಾಡಿದ ಭಾಷಣಗಳ

ಸಾರಾಂಶ.

ಸರ್ ಸಪ್ರು.

ಸರ್ ಸಪ್ರುರವರು ಹೇಳಿದ್ದೇನೆಂದರೆ—

"ವೈಟ್ ಪೇಪರು ಹೊರಟನಂತರವೇ ಈ ಸಮ್ಮೇಳನದ ಪರಿಣಾಮವೇನೆಂಬುದು ನಮಗೆ ವೇದ್ಯವಾಗುವುದು. ಕೆಲವು ವಿಶಾಲ ಪ್ರಶ್ನೆಗಳ ಬಗ್ಗೆ ಸಹಮತವು ದೊರೆತ ಹಾಗಾಯಿತು. ಆದರೆ ಎಲ್ಲದರ ಮೇಲೂ ದೊರೆಯಿತೆಂದು ಹೇಳುವ ಹಾಗಿಲ್ಲ. ಎಲ್ಲಕ್ಕಿಂತಲೂ ಮುಖ್ಯವಾದುದು ಫೆಡರೇಷನ್ನಿನ ಸಮಸ್ಯೆ. ಕೇಂದ್ರ ಜವಾಬ್ದಾರಿಯಿಲ್ಲದ ಕೇವಲ ಪ್ರಾಂತಿಕ ಸ್ವಾತಂತ್ರ್ಯಕ್ಕಾಗಿ ನಾವು ಇಷ್ಟು ದೂರ ಬರುತ್ತಿರಲಿಲ್ಲ. ಡೊಮಿನಿಯನ್ನುಗಳಿಗೆ ನಿರ್ಧರಿಸಿರುವಂತೆ ಇಂಡಿಯಾದೇಶವು ಫೆಡರೇಷನ್ನನ್ನು ಪಡೆಯುವ ತಾರೀಖನ್ನು ಬ್ರಿಟಿಷ್ ಸರಕಾರದವರು ಗೊತ್ತುಪಡಿಸಬೇಕು. ಆ ತಾರೀಖಿನ ಒಳಗೆ ಸಂಸ್ಥಾನಗಳೂ ಆ ಫೆಡರೇಷನ್ನನ್ನು ಸೇರಲು ತಮ್ಮ ಒಪ್ಪಿಗೆಯನ್ನು ಸೂಚಿಸಬೇಕು. ರಿಸರ್ವ್ ಬ್ಯಾಂಕನ್ನು ಸ್ಥಾಪಿಸುವ ಬಗ್ಗೆ ಅಂತಹ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ರಿಸರ್ವ್ ಬ್ಯಾಂಕಿಲ್ಲದೆ ಕೇಂದ್ರ ಜವಾಬ್ದಾರಿಯಿಲ್ಲವೆಂದರೆ ನಾವು ಒಪ್ಪಲಾರೆವು. ಕೇಂದ್ರ ಜವಾಬ್ದಾರಿಯಿಂದ ಕೂಡಿದ ಫೆಡರೇಷನ್ನನ್ನು ಸ್ಥಾಪಿಸುವುದು ನಿಮಗೆ ಅಸಾಧ್ಯವಾದರೆ ಪ್ರಾಂತಿಕ ಜವಾಬ್ದಾರಿಗೇ ಆಗಲಿ, ಕೇಂದ್ರದ ಇನ್ನು ಯಾವ ಸುಧಾರಣೆಗೇ ಆಗಲಿ ನಾವು ಒಪ್ಪುತ್ತೇವೆಂದು ನೀವು ಭಾವಿಸಬಾರದು. ಕೇಂದ್ರ ಜವಾಬ್ದಾರಿಯ ಸಾಧನೆಗಾಗಿ ನಾವು ಸೂಕ್ತ ಕಂಡುಬರುವ ಕಾರ್ಯಭಾಗವನ್ನು ನಡೆಸುತ್ತೇವೆ. ಹಣಕಾಸುಗಳ ಸೇಫ್‌ಗಾರ್ಡುಗಳ ಬಗ್ಗೆ, ನಾನು ಹೇಳುವುದಿಷ್ಟೆ! ಇಂಡಿಯಾಕ್ಕೂ ಇಂಗ್ಲೆಂಡಿಗೂ ಮನಸ್ತಾಪಗಳು ತೊಲಗಿ ಸ್ನೇಹಬಾಂಧವ್ಯಗಳೇರ್ಪಡಲಿ. ಆಗ ತನಗೆ ತಾನೇ ಇಂಡಿಯಾದ ಹಣಕಾಸಿನ ಸುವ್ಯವಸ್ಥೆಯು ಬಲವಾಗುವುದು. ಫೈನಾನ್ಷಿಯಲ್ ಅಡ್ವೈಸರನ್ನು ಭಾರತೀಯ ಮಂತ್ರಿಗಳ ಸಲಹೆಯಂತೆ ನೇಮಿಸಬೇಕು. ಅವನು ಯಾವ ಪಂಗಡಕ್ಕೂ ಸೇರಿದವನಾಗಿರಬಾರದು. ಸೈನ್ಯದ ಖರ್ಚನ್ನು ತಗ್ಗಿಸಬೇಕು. ಸೈನ್ಯ ಶಿಕ್ಷಣದ ಆಡಳಿತವು ಭಾರತ ಶಾಸನ ಸಭೆಯ ಆಡಳಿತಕ್ಕೆ ಒಳಪಟ್ಟಿರಬೇಕು. ರಾಜ್ಯಾಂಗ ಪದ್ಧತಿಯು ಎಷ್ಟೇ ಚೆನ್ನಾಗಿರಲಿ, ಅದನ್ನು ಭಾರತ ಜನಸಮುದಾಯವು ಸ್ವೀಕರಿಸುವ ಪರಿಸ್ಥಿತಿಯನ್ನುಂಟುಮಾಡಬೇಕು. ಕಾಂಗ್ರೆಸ್ಸಿನವರೂ, ಪ್ರಜಾಸಮುದಾಯವೂ ಅದನ್ನು ಒಪ್ಪದಿದ್ದರೆ ಏನೂ ಪ್ರಯೋಜನವಿಲ್ಲ. ನಮಗೆ ಅವರನ್ನು ಒಪ್ಪಿಸಲು ಅವಕಾಶವು ಬೇಕು. ನನಗೂ ಕಾಂಗ್ರೆಸ್ಸಿನವರಿಗೂ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ಗಾಂಧಿಯವರ ವಿಷಯದಲ್ಲಿ ನನಗೆ ಅಸದೃಶವಾದ ಪೂಜ್ಯಭಾವನೆಯಿದೆ. ಅವರು ಇಂಡಿಯಾದ ಅತ್ಯುನ್ನತ ದೇಶಾಭಿಮಾನದ ಮತ್ತು ಆತ್ಮಾಭಿಮಾನದ ಮೂರ್ತಿಸ್ವರೂಪರು. ನಾವು ನಮ್ಮ ದೇಶೀಯರ ಅನುರಾಗವನ್ನು ಕಳೆದುಕೊಂಡು ಇಲ್ಲಿ ಇಷ್ಟು ಪ್ರಯಾಸಪಡುತ್ತೇವೆ. ಇದೇ ಪರಿಸ್ಥಿತಿಯಲ್ಲಿ ನಾವು ಇಂಡಿಯಾದಲ್ಲಿ ಏನು ಕೆಲಸವನ್ನು ಮಾಡುವುದೂ ಸಾಧ್ಯವಿಲ್ಲ. ಕಾಂಗ್ರೆಸ್ಸಿನವರನ್ನು ಕಾನೂನು ಬಾಹಿರರನ್ನಾಗಿ ಕಾಣುವುದು ನಮಗೆ ಒಪ್ಪಿಗೆಯಿಲ್ಲ. ಅವರು ಆ ಸ್ಥಿತಿಯಲ್ಲಿರುವಾಗ ರಾಜ್ಯಾಂಗರಚನೆಯನ್ನು ನಾವು ಯಾರೊಡನೆ ಚರ್ಚಿಸಬೇಕು? ಗಾಂಧಿಯವರಂತೂ ಜೈಲಿನೊಳಗೆ ಯಾವ ರಾಜಕೀಯ ಸಮಸ್ಯೆಯನ್ನು ಚರ್ಚಿಸಲೂ ಒಡಂಬಡುವುದಿಲ್ಲ. ೧೫-೧೬ ಸಾವಿರ ಜನ ದೇಶಾಭಿಮಾನಿಗಳು ಜೈಲಿನಲ್ಲಿರುವಾಗ, ಈ ರಾಜ್ಯಾಂಗ ರಚನೆಯನ್ನು ಭಾರತೀಯರು ಸ್ವೀಕರಿಸುವರೆಂದು ಸರಕಾರದವರು ಆಶಿಸುವರೇ? ನಾನು ೩೦ ವರ್ಷಗಳಿಂದಲೂ ನಮ್ಮ ದೇಶದ ಸ್ಥಿತಿಯನ್ನು ನೋಡುತ್ತಿದ್ದೇನೆ. ಆದರೆ ಈಗ ಇರುವಷ್ಟು ವಿಷಮ ಭಾವನೆಯು ಯಾವಾಗಲೂ ಇರಲಿಲ್ಲ."

ಲಾರ್ಡ್ ಪೀಲ್.

"ರಿಸರ್ವೇಷನ್ನುಗಳನ್ನು ಸರ್ವಾತೀಕರಿಸುವ ಹಾಗೆ ಕಾಣುತ್ತದೆ. ಈಗ ಇಂಡಿಯಾಕ್ಕೆ ಎಷ್ಟು ದೊಡ್ಡ ದೊಡ್ಡ ಅಧಿಕಾರಗಳು ಕೊಡಲ್ಪಡುತ್ತವೆ ಎಂಬುದನ್ನು ಗಮನಿಸಬೇಕು. ಪ್ರಪಂಚದ ಆರ್ಥಿಕ ಸ್ಥಿತಿಯ ಕಾರಣದಿಂದ ಹಣಕಾಸಿನ ಕೆಲವು ಹತೋಟಿಗಳನ್ನು ಬ್ರಿಟಿಷ್ ಸರಕಾರದವರೇ ಉಳಿಸಿಕೊಂಡಿದ್ದಾರೆ."

ಲಾರ್ಡ್ ರೀಡಿಂಗ್.

"ನಮ್ಮ ಮುಂದೆ ಅನೇಕ ತೊಡಕುಗಳಿದ್ದುವು. ಅವುಗಳನ್ನೆಲ್ಲಾ ದಾಟಿ ನಾವು ಅನೇಕ ಅಂಶಗಳಲ್ಲಿ ಏಕಮತ್ಯವನ್ನು ಹೊಂದಿದ್ದೇವೆ. ನಾವು ಹಳೆಯ ರೀತಿ ಆಲೋಚಿಸುವುದನ್ನು ಬಿಟ್ಟು ಹೊಸರೀತಿ ಆಲೋಚಿಸಿದರೆ ಎಲ್ಲಾ ಸರಿಹೋಗುವುದು. ಹಣಕಾಸುಗಳ ಬಗ್ಗೆ ಹತೋಟಿಗಳು ಈಗಿನ ಕಾಲಕ್ಕೋಸ್ಕರವಾಗಿ ಮಾತ್ರವಲ್ಲದೆ ಮುಂದಿನ ಕಾಲಗಳಿಗಾಗಿಯೂ ಬೇಕಾಗುವುದು."

ಅಕ್ಬರ್ ಹೈದರಿ.

"ಫೆಡರೇಷನ್ನನ್ನು ಸೇರಲು ದೇಶೀಯ ಸಂಸ್ಥಾನಗಳೂ ಸಿದ್ಧವಾಗಿವೆ. ತಮಗೆ ಬೀಳುವ ಕಂದಾಯದ ಹೊರೆಯನ್ನು ಧರಿಸಲೂ ಸಿದ್ಧವಾಗಿವೆ. ಮುಂದಿನ ರಾಜ್ಯಾಂಗ ರಚನೆಯನ್ನು ಸರಿಯಾದ ಭಾವನೆಯಿಂದ ಜಾರಿಯಲ್ಲಿ ತಂದರೆ ಹಣಕಾಸಿನ ಹತೋಟಿಗಳ ಬಗ್ಗೆ ಭೀತಿಪಡಬೇಕಾದ ಕಾರಣವಿಲ್ಲ."

ತಾರಾಸಿಂಗ್.

"ಅಲಹಾಬಾದ್ ಒಪ್ಪಂದವನ್ನು ಅಂಗೀಕರಿಸಿದರೆ ಅಲ್ಪಸಂಖ್ಯಾಕರ ಬಗ್ಗೆ ಇರುವ ಬಿಕ್ಕಟ್ಟುಗಳು ಮಾಯವಾಗುವವು. ಸೈನ್ಯದಲ್ಲಿ ಸಿಕ್ಖರ ಸಂಖ್ಯೆಯನ್ನು ಕಡಿಮೆ ಮಾಡಕೂಡದು."

ಲಿಯಾಖತ್ ಹುಸೇನ್.

ನವಾಬ್ ಲಿಯಾಖತ್ ಹುಸೇನ್‌ರವರು ಸರ್ ಹೋರರ ಬಗ್ಗೆ ಬಹಳವಾಗಿ ಪ್ರಶಂಸಿಸಿ ಫೆಡರೇಷನ್ ಅವರ ಕಾಲದಲ್ಲಿಯೇ ಮೂರ್ತಿಮತ್ತಾದರೆ ಅವರ ಹೆಸರು ಶಾಶ್ವತವಾಗಿ ನೆಲೆಗೊಳ್ಳುವುದೆಂದು ಹೇಳಿದರು. ಬ್ರಿಟಿಷ್ ಹಿಂದೂಸ್ಥಾನದಷ್ಟೇ ಸಂಸ್ಥಾನಗಳೂ ಫೆಡರೇಷನ್ನಿಗೆ ಸೇರಲು ಕಾತುರವಾಗಿವೆಯೆಂದು ತಿಳಿಸಿದರು.

ಸರ್ ಥಾಕೂರ್‌ದಾಸ್.

ತರುವಾಯ ಸರ್ ಪುರುಷೋತ್ತಮದಾಸ್ ಥಾಕೂರ್‌ದಾಸರು ಯಾವ ಮುಖ್ಯ ಮುಖ್ಯ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳು ತಲೆದೋರಿರುವುವೋ ಆ ವಿಷಯಗಳಲ್ಲಿ ಸ್ವಲ್ಪಮಟ್ಟಿಗಾದರೂ ಒಪ್ಪಿಗೆಯುಂಟಾಗಿದೆ ಎಂದು ಹೇಳಲಾಗದೆಂದೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ (ಡೋಮಿನಿಯನ್ ಸ್ಟೇಟಸ್) ವು ಬರುವವರೆಗೆ ಯಾರಿಗೂ ಸಮಾಧಾನವಾಗುವಂತಿಲ್ಲವೆಂದೂ ಕೂಡಲೇ ಗಾಂಧಿಯವರ ಖುಲಾಸೆಯಾಗುವದೆಂದು ಭಾರತೀಯರು ನಿರೀಕ್ಷಿಸುತ್ತಿರುವರೆಂದೂ ಅವರ ಖುಲಾಸೆಯಿಂದ ಬ್ರಿಟಿಷರ ವಚನದ ವಿಷಯವಾಗಿ ನಂಬಿಕೆಯುಂಟಾಗುವುದೆಂದೂ ರಾಜ್ಯಶಾಸನ ರಚನೆಯು ಏನೇ ಇರಲಿ ಗಾಂಧಿಯವರು ಜೈಲಿನಲ್ಲಿರುವ ಪರ್ಯಂತ ಶಾಸನ ರಚನೆಯ ಕಡೆಗೆ ಭಾರತೀಯರು ಲಕ್ಷ್ಯಕೊಡುವುದೇ ಇಲ್ಲವೆಂದೂ ಹೇಳಿದರು.

ಲಾರ್ಡ್ ವಿಂಟರ್‌ಟನ್‌ರವರು.

ಸಮ್ಮೇಳನದ ಪರಿಸ್ಥಿತಿಯು ಬಹಳ ಶೋಚನೀಯವಾಗಿದೆಯೆಂದೂ ಇಂಡಿಯಾದಿಂದ ಎಡಗಡೆಗೂ ಇಂಗ್ಲೆಂಡಿನಿಂದ ಬಲಗಡೆಗೂ ಒದೆತಗಳು ಬೀಳುತ್ತಿವೆಯೆಂದೂ ಕನ್‌ಸರ್ವೇಟಿವ್ ಗುಂಪಿನವರು ಫೆಡರೇಷನ್ ಪ್ರಶ್ನೆಯನ್ನು ಪರಿಹರಿಸಲು ತಯಾರಾಗಿದ್ದಾರೆಂದೂ ಭರವಸೆಯಿತ್ತರು.

ಸರ್ ಮನೂಭಾಯಿ ಮೆಹತಾ.

ದೇಶದ ಸುಖಸಂಪತ್ತಿನ ಪರಿಸ್ಥಿತಿಯ ತಳಹದಿಯನ್ನು ಸೌಹಾರ್ದಭಾವನೆಯ ಮೇಲೆ ಕಟ್ಟಬೇಕು. ಇದಕ್ಕಾಗಿ ದೇಶವನ್ನು ಸಿದ್ಧಗೊಳಿಸಿರಿ. ಸದ್ಯದಲ್ಲಿ ಜನರಲ್ಲಿ ಮನಃಕಷಾಯವು ತುಂಬಿ ತುಳುಕುತ್ತಿದೆ. ದೇಶದಲ್ಲಿ ಸ್ಥಿತಿಯು ಉತ್ತಮವಾಗಿದೆ ಎಂದು ಹೇಳಬಹುದು. ಆದರೆ ದೇ[illegible] ಎಲ್ಲವೂ ಸರಿಯಾಗಿಲ್ಲವೆಂದು ಮಾತ್ರ ಹೇಳುತ್ತೇನೆ. ಗಂಭೀರತೆ ಮತ್ತು ಉದಾರತೆಯಿಂದ ಎರಡೂ ಹಸ್ತಗಳನ್ನೂ ನೀಡಿ ಸ್ವಾತಂತ್ರ್ಯವನ್ನು ಕೊಡಿ ಇದೇ ನನ್ನ ಪ್ರಾರ್ಥನೆ. ದೇಶೀಯ ಸಂಸ್ಥಾನಗಳ ಪರವಾಗಿ ಮಾತನಾಡುತ್ತಿದ್ದರೂ, ಬ್ರಿಟಿಷ್ ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳ ಗಡಿಯಲ್ಲಿ ಬಹಳ ಅಂತರವಿಲ್ಲ, ಎಂದು ಹೇಳಬೇಕಾಗಿದೆ. ಬ್ರಿಟಿಷ್ ಹಿಂದೂಸ್ಥಾನದ ಜನರ ಸ್ಫೂರ್ತಿಯು ಸಂಸ್ಥಾನಗಳೊಳಗೆ ಹಾಯದೆ ಇರದು. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಈ ಬಗ್ಗೆಯ ಮನಃಕಷಾಯಗಳು ನೆಲೆಸಿದ್ದು ಅದಕ್ಕೆ ತಕ್ಕ ಉಪಾಯಗಳನ್ನು ಕಂಡುಹಿಡಿಯದೆ ಇರುವದು ಅತ್ಯಂತ ಅಪಾಯದ ಸಂಗತಿಯೆಂದು ಭಾವಿಸಬೇಕು. ಸಾವಕಾಶಮಾಡಲಾಗದು. ಇದರಿಂದ ಮನಃಕಷಾಯವು ಇಮ್ಮಡಿಯಾಗುವದು. ಜನರನ್ನು ಸಮಾಧಾನಗೊಳಿಸಬೇಕೆಂದು ಪ್ರಾರ್ಥಿಸುವೆನು."

ರಾಜಭಕ್ತಿ ಪ್ರದರ್ಶನ.

ಪ್ರೀಮಿಯರ್, ಸರ್ ಹೋರ್ ಮುಂತಾದವರನ್ನು ಆಗಾಖಾನರು ಶ್ಲಾಘಿಸಿ, ಪ್ರಪಂಚದ ಶಸ್ತ್ರ ವಿನ್ಯಾಸ ಸಮ್ಮೇಳನದ ದೆಸೆಯಿಂದ ಇಂಡಿಯಾದಲ್ಲಿಯೂ ಸುಖಶಾಂತಿಗಳು ನೆಲಸಲೆಂದು ಹಾರೈಸಿದರು. ತರುವಾಯ ಚಕ್ರವರ್ತಿ ಸಾರ್ವಭೌಮರಿಗೆ ಭಕ್ತಿಯನ್ನು ವ್ಯಕ್ತಪಡಿಸುವ ಒಂದು ಠರಾವನ್ನು ಸೂಚಿಸಿದರು.

ಈ ಠರಾವನ್ನು ಸರ್ ಸಪ್ರುರವರು ಅನುಮೋದಿಸಿದರು.

ಈ ಠರಾವನ್ನು ಎಲ್ಲರೂ ಎದ್ದುನಿಂತು ಭಕ್ತಿಯಿಂದ ಪಾಸುಮಾಡಿದರು.

ಶ್ರೀ ಹೊಳೆಲಿಂಗೇಶ್ವರ ಪ್ರಸೀದ.

ಶ್ರೀ ಹೊಳೆಲಿಂಗೇಶ್ವರಸ್ವಾಮಿಯ ರಥೋತ್ಸವಾಹ್ವಾನಪತ್ರಿಕೆ.

ಶಿವಮೊಗ್ಗಾ ಡಿ|| ಸೊರಬ ತಾ|| ಜಡೇಹೋಬಳಿ ಬಂಕಸಾಣ ಗ್ರಾಮಸ್ಥರು ವಿನಯಪೂರ್ವಕ ಪ್ರಕಟಪಡಿಸುವುದೇನೆಂದರೆ.

ನಮ್ಮ ಗ್ರಾಮದ ಸಮೀಪದಲ್ಲಿ ವರದಾ ಮತ್ತು ದಂಡಾವತಿ ನದಿಗಳ ಸಂಗಮವಾಗಿ ಹೊಳೆಯಲ್ಲಿ ಲಿಂಗವು ಉದ್ಭವಿಸಿ ಅತ್ಯಂತ ಪುಣ್ಯಸ್ಥಳವೆನಿಸಿಕೊಂಡಿದ್ದು, ಈಗ ಅನೇಕ ವರ್ಷಗಳಿಂದ ಮಕರ ಸಂಕ್ರಮಣದಲ್ಲಿ ನಡೆಯುವ ರಥೋತ್ಸವವನ್ನು ಆಜೂಬಾಜೂ ಗ್ರಾಮಗಳ ಪ್ರಮುಖರು ಅತ್ಯಂತ ಪ್ರೋತ್ಸಾಹದಿಂದ ನಡೆಯಿಸುತ್ತಾ ಇದ್ದಾರೆ. ಪ್ರಸ್ತುತಪ್ರಕಾರ ಶಕೆ 1854 ನೆಯ ಆಂಗಿರಸ ನಾಮಸಂವತ್ಸರದ ಪುಷ್ಯ ಬ|| ೨ ಶುಕ್ರವಾರ ಮಕರಸಂಕ್ರಮಣ ಹಬ್ಬ (ತಾ|| 14-1-33) ಬೆಳಗಿನಿಂದ ಸಾಯಂಕಾಲದವರೆಗೆ ಲಿಂಗಪೂಜಾ, ರಾತ್ರಿ ೭ ಘಂಟೆಯಿಂದ ದೇವರ ಅಲಂಕಾರ ದೀಪಾರಾಧನೆ, ಮತಸಂಬಂಧಿ ಆಚರಣೆ, ಸಭೆ, ಕೀರ್ತನ, ಭಜನೆ, ಇವುಗಳು ನಡೆದ ತರುವಾಯ ಬೆಳಗಿನ ೫ ಘಂಟೆಗೆ ಶ್ರೀ ಹೊಳೆಲಿಂಗೇಶ್ವರನ ರಥಾರೋಹಣಮಹೋತ್ಸವವು ನಡೆಯುತ್ತದೆ. ಮರುದಿನ (ತಾ|| 15-1-33) ನದಿಯಲ್ಲಿ ತೆಪ್ಪೋತ್ಸವ. (ತಾ|| 16-1-33) ನೆಯ ದಿವಸ ದನಗಳ ಪ್ರದರ್ಶನ ಮತ್ತು ಹೋರಿ ಮೆಯ್ಯಿಸಿದವರಿಗೆ ಬಹುಮಾನವು ಕೊಡಲ್ಪಡುತ್ತದೆ. ಮತ್ತು ತಾ|| 17 ರಿಂದ ತಾ|| 24-1-33 ರ ವರೆಗೆ ಕುಸ್ತಿ ನಡೆಸಿ ಬಹುಮಾನವು ಕೊಡಲ್ಪಡುತ್ತದೆ. ಪ್ರತಿವರ್ಷವೂ ದನಕರುಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತಾ ಇದೆ. ಹೊಸದಾಗಿ ಬರತಕ್ಕ ನಾಟಕದವರೂ, ಅಂಗಡಿಕಾರರೂ ತಮ್ಮ ಅನುಕೂಲತೆಯ ಬಗ್ಗೆ ಮ|| ರಾ|| ಶ್ರೀ ಜಡೇಹೋಬಳಿ ಶ್ಯಾನವಳ್ಳಿ ಮಾಳಗಿ ದೊಡ್ಡ ವೀರಪ್ಪಗೌಡರಿಗೂ ಮ|| ರಾ|| ಶ್ರೀ ಬಂಕಸಾಣದ ಪಟೇಲ ಪುಟ್ಟಪ್ಪಗೌಡರಿಗೂ ಮೊದಲೇ ತಿಳುಹಿಸತಕ್ಕದ್ದು.

ಈ ಸಂಗಮಕ್ಷೇತ್ರವು ಆನವಟ್ಟಿಗೆ ೩ ಮೈಲು, ಆಲೂರಿಗೆ ೧೦ ಮೈಲು, ಬನವಾಸಿಗೆ ೪ ಮೈಲು ದೂರದಲ್ಲಿದೆ.

ಸದ್ಭಕ್ತರುಗಳು ಎಂದಿನಂತೆ ಬಂದು ಮಕರಸಂಕ್ರಮಣ ಸ್ನಾನಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ತಾ|| 30-12-1932, ಜ|| ಗೊ|| ಚೆನ್ನವೀರಯ್ಯನವರು.
ಬಂಕಸಾಣಗ್ರಾಮ. ಸೆ|| ಮ|| ಬಸವಣ್ಣಪ್ಪನವರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಎಷ್ಟು ದಿನವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಕಾಲದಲ್ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೇಸುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬೆಲಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳುಬಿಸಿ, ಕಣ್ಣಿಹಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳು[illegible] ಜನರನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ [illegible]ಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರಿಮೆಡಿ—ಕಫಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಿಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ, ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇನ್ನು ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[20] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು. ದ. ಕ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[1] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೬ ಆಣೆ**
पंडित श्रीकाशीनाथशास्त्री यांचें भाषण (मराठी)	**८ आणे.**
Speeches by Pandit Shri Kashinatha Shastri (*English*)	**12 As.**

ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ಇರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿ ಕೊಂಡು ಅದರಲ್ಲಿನ್ನಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪೀನಸಿ, ಒಂ ತಲೆನೋವು, ತಲೆಯ ಳ್ಳಿನ ರೋಗಗಳು ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[1] ಪೋ. ಬಾ. ೫೧೧, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಜನವರಿ ೧೯೩೩ [ಸಂಚಿಕೆ ೩೫

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[7] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೋಷಣದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ— ತುಮಕೂರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿನಾಂ,

ಸ್ತುತಿನವರತ್ನಮಾಲಿಕಾ.

ಶ್ರೀಮದ್ಧರ್ಮಮೃಗೇಂದ್ರಪೀಠಪಟಿವಿಭಾಸೋಪಮಂ ನಿರ್ಮಲಂ
ಧೀಮದ್ವೃಂದವಿವರ್ಣ್ಯಮಾನಚರಿತಂ ದೀನಾಲಿಕಲ್ಪದ್ರುಮಂ ||
ಸೀಮಾತೀತಮಹತ್ತ್ವರಾಶಿಲಸಿತಂ ಭೀಮಾಘವಿಧ್ವಂಸಕಂ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ಶ್ರೀಸಿದ್ಧಲಿಂಗೇಶ್ವರಂ ||೧||

ಕಾರುಣ್ಯಾಮೃತಸಿಂಧುಪೂರ್ಣಶಶಿನಂ ಭೂರಿಪ್ರಭಾಭಾಸುರಂ |
ಧೀರಂ ಘೋರತರಾಮಿತಾರಿವಿದಧತ್ಸಂಸಾರಸಂತಾರಕಂ ||
ಮಾರಾಂಭೋದಮಹಾಸಮೀರಣಮುರುಜ್ಞಾನಪ್ರಕಾಶೋಜ್ಜ್ವಲಂ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ಶ್ರೀಸಿದ್ಧಲಿಂಗೇಶ್ವರಂ ||೨||

ಬುಕ್ಕಾಂಭೋನಿಧಿನಾಮುಪತ್ತ್ಯಗತಾಂ ಭೀಮಾಂ ಗುಹಾಂ
ಸಂವಿಶನ್ |
ತ್ಯಕ್ತ್ವಾಹಾರಮಮಂದದಿವ್ಯನಿಯಮೈಸ್ತಪ್ತ್ವಾ ತಪೋ ಭೀಕರಂ ||
ಸಿಕ್ತೋ ಯೇನ ವಟುರ್ವಿಶಾಲಮಹಿನಾ ಶ್ರೀವೀರಸಿಂಹಾಸನೇ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ತಂ ಸಿದ್ಧಲಿಂಗೇಶ್ವರಂ ||೩||

ಯತ್ಪಾದಾಗ್ರರಜಾಂಸಿ ಭಕ್ತಜನತಾಭಾಗ್ಯಪ್ರದಾನಿ ಧ್ರುವಂ |
ಹೃತ್ಪಂಕೇರುಹರಾಜಮಾನಶಿವಪೀಠೈಕ್ಯಪ್ರಸಂಗಸ್ಥ ಯಃ ||
ಮುಕ್ತಾಘೋಸಿಧಿಪಾರಗಂ ಶುಭಕರಂ ಪಾಂಡಿತ್ಯಪಟ್ಟಾಂಕಿತಂ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ತಂ ಸಿದ್ಧಲಿಂಗೇಶ್ವರಂ ||೪||

ಆಚಾರ್ಯಪ್ರವರಾಃ ಶಿವಾಸ್ಯಜನಿತಾ ಲಿಂಗೋತ್ಥಿತಾ ಭೂತಲೇ |
ಸ್ವಾಚಾರಪ್ರಚುರಂ ಶುಭಂ ಶಿವಮತಂ ಸಂಸ್ಥಾಪ್ಯ ಯದ್ವಿಶ್ರುತಾಃ ||
ಶೈಥಿಲ್ಯಾದಿಗುಣಾನ್ವಿತಂ ರರಕ್ಷ ಯತಿರಾಟ್ ಯಸ್ತನ್ಮತಂ ಶಾಂಭವಂ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ತಂ ಸಿದ್ಧಲಿಂಗೇಶ್ವರಂ ||೫||

ಶ್ರೀಸ್ವಾಸ್ಥ್ಯಾವರಣಪ್ರಚಾರಚಣಕಂ ದುಷ್ಪ್ರಾಲಿದಂಭಾಪಹಂ |
ಸ್ವೈಕ್ಯಂ ಯತ್ರ ವಿರಾಗಿತಾ ಸುರುಚಿರಾ ಶಾಂತಿಂ ಗತಾ ಮೋದತೇ ||
ಘುಷ್ಟಂ ಯಸ್ಯ ವಚೋಽಮೃತಂ ಜನಮನೋಽಜ್ಞಾನಾಂಧಕಾ
ರಾಯಮಾ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ತಂ ಸಿದ್ಧಲಿಂಗೇಶ್ವರಂ ||೬||

ಭಕ್ತಾನುಗ್ರಹಕಾರಣಾತ್ ಪರಶಿವಃ ಸರ್ವತ್ರಚಾರೀ ಸ್ವಯಂ |
ಮುಕ್ತ್ವಾ ನಿಷ್ಕಲರೂಪತಾಂ ಗುರುತನುಂ ಧೃತ್ವಾ ಚರತ್ಯನ್ವಹಂ ||
ಇತ್ಯೇತದ್ವಚನಂ ಹಿ ಯತ್ರ ಸಫಲಂ ಸತ್ಯಂ ಸಮಾವರ್ತತೇ |
ಶ್ರೀಮದ್ವಿಶ್ವಗುರುಂ ನಮಾಮಿ ಸತತಂ ತಂ ಸಿದ್ಧಲಿಂಗೇಶ್ವರಂ ||೭||

ಯಃ ಸರ್ವಂ ಸಚರಾಚರಂ ಜಗದಿದಂ ನಾನಾಪದಾರ್ಥಾತ್ಮಕಂ |
ಪಶ್ಯತ್ಯೇವ ಶಿವಾತ್ಮಕಂ ಸುರುಚಿರಂ ಮಾಯಾಮಯಂ ಮೋಹಕಂ ||
ತಸ್ಯ ಶ್ರೀಗುರುಸಿದ್ಧಲಿಂಗಯಮಿನಶ್ಚಿತ್ರಂ ಚರಿತ್ರಂ ಪರಂ |
ಕಃ ಸ್ತೋತುಂ ಪ್ರಭವಃ ಕ್ಷಿತೌ ದಿವಿ ಪರಂ ಸೀಮಾತಿಗಾಯಾ
ಗುರುಃ ||೮||

ಆಚಾರ್ಯಸ್ಯ ಕೃಪಾವಲೋಕನಸುಧಾಪಾನಂ ವಿನಾ ದೇಹಿನಾಂ |
ಪೀಠಾಕ್ಷಿಂಸ್ತ ಶಿವತ್ವಕೇತೋ ನಹಿ ಗತಿರ್ಮೋಕ್ಷಾತ್ತು ಭಕ್ತ್ಯಾದೃತಂ ||
ಶೋಚಂತೋ ಬಹುಧಾ ವಿಮೂಢಮನಸೋ ಪಾಶೈಃ ಪುರಾಣಂ ಪರಂ
ಕಾಚಾರ್ಯೋಽಪಮುಸಂಸ್ಕೃತಾ ಭಜತ ಭೋ ಶ್ರೀಸಿದ್ಧಲಿಂಗೇಶ್ವರಂ ||

ಶ್ರೀಗುರುಪಟ್ಟಾಧ್ಯಕ್ಷ, ಗಂಗಾಧರಶಿವಾಚಾರ್ಯಾಃ,
ಬೃಹನ್ಮಠ, ಪಾಲೀಕೊಪ್ಪ.
ಪುಣ್ಯಾಶ್ರಮ ಶ್ರೀರೇಣುಕಬಾಗ.

ಸತ್ಯಾಗ್ರಹಸಮರವಾರ್ತೆ.

ಹೊಸವರ್ಷದ ಮಧ್ಯರಾತ್ರಿಯಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಎಲ್ಲೆಲ್ಲೂ ಸ್ವಾತಂತ್ರ್ಯದ ಠರಾವನ್ನು ಸಾರಿದರು. ಪೋಲೀಸರು 10 ಜನರನ್ನು ದಸ್ತಗಿರಿ ಮಾಡಿದರು.

ಜನವರಿ 4 ನೇ ತಾರೀಖಿನ ದಿವಸ ಮೀರತ್ತಿನ ಪೋಲೀಸರು ಪ್ರೆಸ್ ಆಕ್ಟಿನ ಪ್ರಕಾರವಾಗಿ ಸಂಯುಕ್ತ ಪ್ರಾಂತದ ನ್ಯಾಯವಿಧಾಯಕ ಸಭೆಯ ನಿವೃತ್ತ ಲೈಬ್ರರಿಯನ್ನರಾದ ಶ್ರೀ|| ಅಲ್‌ಗೂರಿಶಾಸ್ತ್ರಿ ರಘುಮಲ್ ತಿಲಕರವರನ್ನೂ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನಪ್ರಕಾರವಾಗಿ 4 ಜನ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿದರು.

ಜನವರಿ 4 ನೇ ತಾರೀಖಿನ ದಿವಸ ಮುಂಬಯಿ ಪೋಲೀಸರು ಗಾಂಧಿ ದಿನಚರಣೆಯ ನಿಮಿತ್ತವಾಗಿ ಚೌಪಾತಿಯಲ್ಲಿ ಬಹಿರಂಗಸಭೆಯನ್ನು ಸೇರಿಸಲು ಪ್ರಯತ್ನಿದ 16 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು. ಇದನ್ನು ನೋಡಲು ನೂರಾರು ಜನರು ನೆರೆದಿದ್ದು ಪೋಲೀಸರನ್ನು ಮನಸ್ವೀ ಹಾಸ್ಯಮಾಡುತ್ತಿದ್ದುದರಿಂದ ಪೋಲೀಸರು ಕುಪಿತರಾಗಿ ಜನರಮೇಲೆ ಲಾಠಿಪ್ರಹಾರಮಾಡಿ ಚದರಿಸಿದರು. 7 ಜನರಿಗೆ ಗಾಯಗಳಾದವು. ಒಬ್ಬನು ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಪಾಟ್ನಾ ಪೋಲೀಸರು, ಕಾಂಗ್ರೆಸ್ ಚಳವಳಿಗೆ ಸಹಾಯಮಾಡುವರೆಂಬ ಕಾರಣದಮೇಲೆ ಆರಾ ಕಾಂಗ್ರೆಸ್ ಕಮಿಟಿಯ ಡಿಕ್ಟೇಟರರಾದ ಸರದಾರ್ ಹುಕುಮಸಿಂಗರನ್ನೂ, ಒಬ್ಬ ಲಾಯರನ್ನೂ ಮತ್ತು ಒಬ್ಬ ಸ್ವಯಂಸೇವಕನನ್ನೂ ದಸ್ತಗಿರಿಮಾಡಿದರು.

ಅಲಹಾಬಾದ್ ಪೋಲೀಸರು ಸಿವಿಲ್ ಲೈನ್ಸಿನಬಳಿ ಬಹಿರಂಗಮೆರವಣಿಗೆಯನ್ನು ಮಾಡಿಕೊಂಡು ಹೋಗುತ್ತಿದ್ದ 11 ಜನ ಸ್ವಯಂಸೇವಕರನ್ನೂ ಕೆಲ ಜನ ಮಹಿಳೆಯರನ್ನೂ ದಸ್ತಗಿರಿ ಮಾಡಿದರು.

ಸೇಲಮ್ಮಿನಲ್ಲಿ ಗಾಂಧೀ ದಿನಾಚರಣೆಯ ದಿವಸ ಸ್ವಯಂಸೇವಕರು ಪ್ರತಿಯೊಂದು ಎಲೆಕ್ಟ್ರಿಕ್ ಕಂಬದಮೇಲೂ ಬಹಿಷ್ಕಾರಪತ್ರಗಳನ್ನು ಅಂಟಿಸಿದ್ದರು. ಪೋಲೀಸರು ಬಹಿರಂಗ ಮೆರವಣಿಗೆಯನ್ನು ಮಾಡಿಕೊಂಡು ಹೋಗುತ್ತಿದ್ದ 5 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ದೇವಸ್ಥಾನಪ್ರವೇಶನುಸೂದೆಗೆ ವಿರೋಧ.

ಕಲಕತ್ತಾ, ಮುಂಬಯಿ, ಅಹಮದಾಬಾದ, ಬನಾರಸ್ ಮೊದಲಾದ ಅನೇಕ ದೊಡ್ಡದೊಡ್ಡ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸನಾತನ ಧರ್ಮಸಭೆಯ ಪ್ರಮುಖರು ದೇವಸ್ಥಾನಗಳಲ್ಲಿ ಅಸ್ಪೃಶ್ಯರ ಪ್ರವೇಶದ ಮಸೂದೆಯ ಬಗ್ಗೆ ಅನುಮತಿಯನ್ನು ಕೊಡಕೂಡದೆಂದು ವೈಸ್‌ರಾಯರಿಗೆ ತಂತೀ ಮೂಲಕ ತಿಳುಹಿಸಿದ್ದಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ವಿಜಯಯಾತ್ರೆ, ತುಮಕೂರು.

ಶ್ರೀಜಗದ್ಗುರುಗಳವರು ಕೊರಟಗೆರೆ ಚಿಕ್ಕಬಳ್ಳಾಪುರ ತಾಲೂಕುಗಳ ಸರ್ಕೀಟ ಸಂಚಾರದಲ್ಲಿ ಸಮಸ್ತಭಕ್ತರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಸರ್ವರನ್ನುದ್ಧರಿಸಿ ತುಮಕೂರು ಟವನ್ನಿಗೆ ಅಲ್ಲಿಯಭಕ್ತರ ಪ್ರಾರ್ಥನೆಯ ಮೇರೆಗೆ ಸಕಲಬಿರುದಾವಳಿಗಳೊಡನೆ ಚತುರಂಗಬಲಸಮೇತರಾಗಿ ತಾ|| 30-12-1932 ಶುಕ್ರವಾರ ದಯಮಾಡಿಸಿದರು. ಪುರವು ವಿವಿಧ ಚಿತ್ರ ತಳಿರುತೋರಣಗಳಿಂದಲಂಕೃತವಾಗಿತ್ತು. ಸಕಲಮತೀಯರು ಅತ್ಯುತ್ಸಾಹದಿಂದ ಮಹಾಗುರುಗಳವರನ್ನು ದಯಮಾಡಿಸಿಕೊಂಡು ಬರಲು ಪೂರ್ಣ ಸಹಾನುಭೂತಿಯುಳ್ಳವರಾಗಿದ್ದರು. ಕೋಟೆ ಮತ್ತು ಪೇಟೆಯ ಸರ್ವಮತಾಧಿಕಾರಿಗಳು ಶೆಟ್ಟರು ಯಜಮಾನರು ಪಟೇಲರು ಸಾಹುಕಾರ ಮುಂತಾದ ಮಹಾಶಯರು ಇಸ್ತಕಬಾಲ ಸಮೇತ ಸಿಲ್ಪಾಡದಲ್ಲಿದ್ದ ಶ್ರೀಮಹಾಗುರುಗಳವರು ಆಗಮಿಸಿದಕೂಡಲೆ ಪ್ರಮುಖಾಭಿವಂದನಗಳ ಪರಿಚೆಯುವನ್ನು ಮಾಡಿ ಉತ್ಸವಕ್ಕೆ ಪ್ರಾರ್ಥನೆಯನ್ನು ಮಾಡಿಕೊಂಡರು. ಕೂಡಲೆ ಶ್ರೀಪೂಜ್ಯಭಗವತ್ಪಾದರು ಸುವರ್ಣರಜತಾಂದೋಲಿಕವನ್ನಾರೋಹಿಸಿ ಅಪ್ಪಣೆಯನ್ನು ಮಾಡಿದಕೂಡಲೆ ಉತ್ಸವವು ಪ್ರಾರಂಭವಾಯಿತು. ಬೆಂಗಳೂರು, ಹಾಸನ, ಕೋಲಾರ, ಕಡೂರು, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಭಾಗಗಳಿಂದಲೂ ಬ್ರಿಟಿಷ್ ಅಧಿಕಾರದ ಕೆಲಕೆಲವು ಭಾಗಗಳಿಂದಲೂ ಶ್ರೀಮಹಾಗುರುಗಳವರ ದರ್ಶನಾಶಿರ್ವಾದದ ಕಾಂಕ್ಷೆಯಿಂದ ಉತ್ಸವಭಾಗಿಗಳಾಗಲು ಬಂದ ಪ್ರೇಕ್ಷಕರ ಸಮುದಾಯವು ಪ್ರಾಯಶಃ ಹತ್ತುಸಾವಿರಕ್ಕೆ ಕಡಿಮೆ ಇರಲಿಲ್ಲ. ಗಲಭೆಗೆ ಅವಕಾಶವಿಲ್ಲದಂತೆ ಡಿಸ್ಟ್ರಿಕ್ಟ್ ಪ್ರಭುಗಳೂ ಪೋಲೀಸ್ ಸೂಪರಿಂಟೆಂಡೆಂಟ ಸಾಹೇಬರೂ ಬಲವಾದ ವ್ಯವಸ್ಥೆಯನ್ನಿಟ್ಟಿದ್ದರು. ಪಲ್ಲಕ್ಕಿಯ ಸುತ್ತಲೂ ಜನಸಮುದಾಯದಲ್ಲಿಯೂ ಪೋಲೀಸರ ಉಸ್ತುವಾರಿಯಿದ್ದಿತು. ಪಟ್ಟಣರಾಧಿಕಾರಿಗಳಿಂದಲೂ, ಲೌಕಿಕ-ವೈದಿಕ-ಪಂಡಿತರಿಂದಲೂ, ಕವಿಗಳಿಂದಲೂ ಉತ್ಸವವು ಕ್ಷಣಕ್ಷಣ ಕಳೆಯನ್ನೇ ಬೀರುತ್ತಿತ್ತು. ಶ್ರೀಯುತ ಸೆಷನ್ ಜಡ್ಜರಾದ ಹೆಚ್. ಕೆ. ವೀರಬಸವಯ್ಯನವರು ಆಗಮಿಸಿದ್ದುದರಿಂದ ತುಮಕೂರು ಪ್ರಜೆಗಳಿಗೆ ಉಂಟಾದ ಆನಂದಕ್ಕೆ ಪಾರವೇ ಇಲ್ಲದಾಗಿತ್ತು. ಉತ್ಸವದಲ್ಲಿ ವೇದಘೋಷವೂ ಪರಾಕುಗಳೂ ಆಚಾರ್ಯ ಜಯಘೋಷವೂ ಮನಃಕಾಲುಷ್ಯವನ್ನು ಕಳೆದು ಗುರುಭಕ್ತಿಯನ್ನು ಹೆಚ್ಚಿಸುತ್ತಿದ್ದವು. ಉತ್ಸವವು ಎಲ್ಲ ಬೀದಿಗಳಲ್ಲಿಯೂ ಪ್ರಚಲಿತವಾಗುತ್ತಿದ್ದುದರಿಂದ ಗುರುಕೃಪಾಕಾಂಕ್ಷಿಗಳಾದ ಸುವಾಸಿನಿಯರು ಆರತಿಯನ್ನೆತ್ತಿ ಫಲಾಶೀರ್ವಾದಗಳನ್ನು ಪಡೆಯುವದು ವರ್ಣನೀಯವಾಗಿತ್ತು. ಎಲ್ಲ ಮತೀಯರೂ ತಾವು ತಾವು ರಚಿಸಿದ್ದ ಮಂಟಪಗಳಲ್ಲಿ ಅತ್ಯಸ್ತೊಪ್ಪಿಸಿ ಧರ್ಮಾಭಿಮಾನವನ್ನು ವ್ಯಕ್ತಗೊಳಿಸಿದರು. ಉತ್ಸವವು ದೀರ್ಘತೆಯಿಂದಲೂ, ಶಾಂತತೆಯಿಂದಲೂ, ವೈಭವದಿಂದಲೂ, ಭಕ್ತ್ಯುದ್ರೇಕೋತ್ಸಾಹತೆಯಿಂದಲೂ ಈ ಹಿಂದೆ ನಡೆದ ಅನೇಕ ಟವನ್ನುಗಳ ಉತ್ಸವಗಳಿಗೆ ಮಾದರಿಯಾಗಿ ಪರಿಣಮಿಸಿ ಈ ಗ್ರಾಮದಲ್ಲಿ ಈ ಹಿಂದೆ ಎಷ್ಟೋ ಉತ್ಸವಗಳು ಜರಗಿದ್ದವು. ಇಂತಹ ಉತ್ಸವವು ಶ್ರೋತೃಕ್ಕೂ ನೇತ್ರಕ್ಕೂ ಗೋಚರವಾಗಿದ್ದಿಲ್ಲವೆಂದು ವೃದ್ಧರನೇಕರು ಕೊಂಡಾಡುತ್ತಿದ್ದರು. ಪ್ರೇಕ್ಷಕರಿಗೆ ಇನ್ನೂ ಮನಸ್ತೃಪ್ತಿಯಾಗದೆ ಉತ್ಸವವು ಬಹಳ ಸುಂದರವಾಗಿ ರಚಿಸಲ್ಪಟ್ಟಿದ್ದ ದರ್ಬಾರ ಮಂಟಪಕ್ಕೆ ಬಂದಿತು. ಶ್ರೀಜಗತ್ಪೂಜ್ಯರು ಅಂದೋಲಿಕೆಯಿಂದವತರಿಸಿ ಸಾಲಂಕೃತ ಸುವರ್ಣರಜತಸಿಂಹಾಸನವನ್ನಾರೋಹಿಸಿದ ಕೂಡಲೆ ಕರತಾಡನದೊಡನೆ ಜಯಧ್ವನಿಯಾಗಿ ಸರ್ವರೂ ಸ್ವಸ್ಥಾನಗಳಲ್ಲಿ ಕುಳಿತರು. ಬಳಿಕ ಶ್ರೀಮಹಾಸನ್ನಿಧಾನದ ಅಪ್ಪಣೆಯನ್ನು ಪಡೆದು ಮಹಾಸಂಸ್ಥಾನದ ಆಸ್ಥಾನ ವಿದ್ವಾನ್ ಪುರಾಣರತ್ನ ಸುಣಕಲ್ಲ ಬಿದರಿ ಬಸವಲಿಂಗಶಾಸ್ತ್ರಿಗಳು ಮನುಷ್ಯನ ಧನ್ಯತೆಗೆ ಗುರುಕೃಪೆಯನ್ನು ಮೊದಲು ಪಡೆಯಬೇಕಾದುದು ಅವಶ್ಯಕವೆಂದು ಗುರುಸೇವಾಪ್ರಭಾವವನ್ನು ವರ್ಣಿಸಿ ತುಮಕೂರು ಮಹಾಜನಗಳಿಗೆ ಈ ಸೌಭಾಗ್ಯವು ದೊರೆತಿದ್ದುದು ಪುಣ್ಯೋದಯವೆಂದು ಅರುಹಿದರು. ಶ್ರೀ ಜಗದ್ಗುರುಗಳವರು ಭಗವತ್ಸಂಕಲ್ಪಾನುಸಾರವಾದ ಮತೋದ್ಧಾರಕ್ಕೆ ಶ್ರೀಮದಾಚಾರ್ಯಭಗವತ್ಪಾದರ ಕೃಪಾವಲಂಬನವು ಅವಶ್ಯವಿದ್ದುದನ್ನು ಸತ್ಪ್ರಮಾಣವಾಗಿ ಬೋಧಿಸಿ ಅಂತಹ ಪದ್ಧತಿಯು ಪ್ರಚಲಿತವಾಗುತ್ತಿರುವದಕ್ಕುಂಟಾದ ತಮ್ಮ ಆನಂದವನ್ನು ವ್ಯಕ್ತಗೊಳಿಸಿ ಧರ್ಮವ್ಯವಹಾರಕ್ಕೆ ಅವಕಾಶವನ್ನು ಕೊಟ್ಟು ದೇಶವನ್ನು ರಕ್ಷಿಸುತ್ತಿರುವ ಶ್ರೀಮನ್ಮಹೀಶೂರ ಮಹಾಪ್ರಭುಗಳು ತಮ್ಮ ಕುಟುಂಬವರ್ಗದೊಡನೆ ಸುಖಿಗಳಾಗಿರಲೆಂದು ಅವರ ಶ್ರೇಯೋಭಿವೃದ್ಧಿಯನ್ನು ಹರಸಿ ಅನುಷ್ಠಾನವೇಳೆಯಾದ್ದರಿಂದ ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ಕೊಟ್ಟರು. ಶ್ರೀ ಜಗದ್ಗುರು ಪಂಚಾಚಾರ್ಯ ಜಯಘೋಷದಿಂದ ಸಭೆಯು ವಿಸರ್ಜಿತವಾಯಿತು. ಬಳಿಕ ಸಾಯಂಕಾಲ ಆರು ಘಂಟೆಗೆ ದರ್ಬಾರಿನಲ್ಲಿ ಶ್ರೀ ಮಹಾಸನ್ನಿಧಾನದಲ್ಲಿ ಸಭೆಯು ಸೇರಿತು. ಪ್ರೇಕ್ಷಕರು ಮೊದಲಿನಂತೆಯೇ ಉತ್ಸುಕತೆಯುಳ್ಳವರಾಗಿದ್ದುದರಿಂದ ವಿಶಾಲವಾದ ಸಭಾಮಂಟಪವು ಸಭಿಕರಿಂದ ಅತ್ಯಾನಂದಕರವಾಗಿ ಕಾಣುತ್ತಿತ್ತು. ಪುರಾಣರತ್ನ ಬಸವಲಿಂಗಶಾಸ್ತ್ರಿಗಳು ಧರ್ಮಾನುಷ್ಠಾನದಿಂದಲೇ ಐಹಿಕಾಮುಷ್ಮಿಕಫಲಸಿದ್ಧಿಯಾಗುವದೆಂಬುದನ್ನು ಸರಳತೆಯಿಂದರುಹಿದರು. ಶ್ರೀಮಹಾಜಗದ್ಗುರುಗಳವರು ತಮ್ಮ ಅಮೃತಮಯವಾದ ದಿವ್ಯವಾಣಿಯಿಂದ ಸಭಿಕರ ಅಂತಃಕರಣಕ್ಕೆ ನೈರ್ಮಲ್ಯವುಂಟಾಗುವಂತೆ ಸರ್ವಮತೀಯರಿಗೂ ಮುಕ್ತಿಸ್ಥಾನವು ಒಂದೇಯಾಗಿದ್ದರೂ ಆಯಾಯ ಮತಾಚಾರ್ಯರು ಸಿದ್ಧಾಂತಗೊಳಿಸಿದ ಮಾರ್ಗಗಳು ಬೇರೆಬೇರೆಯಾಗಿರುವದರಿಂದ ಸರ್ವರೂ ತಮ್ಮ ತಮ್ಮ ಧರ್ಮಪದ್ಧತಿಗಳನ್ನು ಬಿಡದೆ ಆಚರಿಸಿ ಧನ್ಯರಾಗಬೇಕೆಂದು ಅಪ್ಪಣೆಕೊಡಿಸಿದರು. ಅನೇಕ ಕವಿಗಳು ಶ್ರೀಮದಾಚಾರ್ಯ ಭಕ್ತಿಪ್ರಭಾವ ಸೂಚಕಗಳಾದ ತಮ್ಮ ತಮ್ಮ ಕವಿತೆಗಳನ್ನು ಪಠಿಸಿ ಸಭಿಕರನ್ನು ಆನಂದಗೊಳಿಸಿದರು. ತುಮಕೂರು ಮಹಾಶಯರು ನೈಜಭಕ್ತಿಯಿಂದಲೂ ಒಮ್ಮನಸ್ಸಿನಿಂದಲೂ ದಕ್ಷತೆಯಿಂದಲೂ ಪ್ರಾಚೀನ ಮತ್ತು ಅರ್ವಾಚೀನ ಪದ್ಧತಿಯನ್ನು ಅಂಗೀಕರಿಸಿ ಸರ್ವರಿಗೂ ಆನಂದಕ್ಕೆ ಹೇತುವಾಗುವಂತೆ ಜಗದ್ಗುರುಗಳವರನ್ನು ಬಿಜಯಮಾಡಿಸಿಕೊಂಡು ಬಂದು ಉತ್ಸವಭಾಗಿಗಳಾದರು. ಅಖಿಲಗುರುಭಕ್ತಸಮುದಾಯಕ್ಕೆ ಅನ್ನಸಂತರ್ಪಣೆಯನ್ನು ಬಹುಮುತವರ್ಜಿಯಿಂದ ಮಾಡಿ ಯಶಸ್ವಿಗಳಾದುದಲ್ಲದೆ ಮಹಾಗುರು ಮಹಾದೇವಕೃಪೆಗೆ ಪಾತ್ರರಾಗಿ ಮಾರ್ಗದರ್ಶಕರಾದುದು ವರ್ಣನೀಯವಾಗಿರುವದು. ಈ ಸುಶಿಕ್ಷಿತಧರ್ಮನಿಷ್ಠ ಮಹಾಶಯರಿಗೆ ಜಗದ್ಗುರು ಪಂಚಾಚಾರ್ಯರು ಸಕಲಭೋಗಭಾಗ್ಯಗಳನ್ನು ಕರುಣಿಸಲೆಂದು ಬೇಡುತ್ತೇನೆ. ದರ್ಬಾರ ಮಂಟಪದಲ್ಲಿ ಪ್ರತಿನಿತ್ಯವೂ ಶ್ರೀಮಹಾಸನ್ನಿಧಾನದಲ್ಲಿ ಸಿದ್ಧಾನುಷ್ಠಾನರೂಪವಾದ ಶಿವಮಹಾಪುರಾಣಶ್ರವಣವು ಪುರಾಣರತ್ನ ಬಸವಲಿಂಗಶಾಸ್ತ್ರಿಗಳ ಬೋಧದಿಂದ ಜರಗುತ್ತಿರುವದು. ಪುರಾಣಶ್ರವಣದಿಂದಲೂ ಮಹಾಗುರು ದರ್ಶನದಿಂದಲೂ ಹೆಣ್ಣುಮಕ್ಕಳೂ ಪುರುಷರೂ ಕೃತಾರ್ಥರಾಗುತ್ತಿರುವದು ಪುಣ್ಯೋದಯವೆಂದೇ ಭಾವಿಸುತ್ತೇನೆ. ಸುತ್ತುಮುತ್ತಗ್ರಾಮದವರು ಮಹಾಸವಾರಿಯನ್ನು ದಯಮಾಡಿಸಿಕೊಂಡು ಹೋಗಿ ಪೂಜಿಸಿ ಕೃತಾರ್ಥರಾಗಲು ಮುಂದುವರಿಯುತ್ತಿರುವದು ಸ್ತುತ್ಯವಾಗಿದೆ. ಕಾಣಿಕಾವಸೂಲಿಯೂ ನಡೆದಿರುವದು ಮುಖ್ಯವಾಗಿ ತುಮಕೂರು ಧನ್ಯವೆಂದು ಹೇಳಲು ಅಭ್ಯಂತರವಿಲ್ಲ. ಇದರಂತೆ ಸರ್ವಗ್ರಾಮದವರು ಮಹಾಗುರುಗಳ ಸೇವೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರುತ್ತೇನೆ.

C. K. Mallappa Setty,
Chickmagalur.

ಶ್ರೀ ವೀರಭದ್ರೇಶ್ವರ ಪ್ರಸೀದತು.

ಶ್ರೀ ಗೊಡಚಿಕ್ಷೇತ್ರದಲ್ಲಿ
ಶ್ರೀವೀರಭದ್ರೇಶ್ವರ ಸೇವಾಸಂಘಸ್ಥಾಪನೆ.

ಕೊಲ್ಹಾಪುರ ಸ್ಟೇಟಿನಲ್ಲಿರುವ ಶ್ರೀ ಗೊಡಚಿಕ್ಷೇತ್ರವು ಅತ್ಯಂತ ಸುಪ್ರಸಿದ್ಧವದೆ. ಇಲ್ಲಿ ಶ್ರೀವೀರಭದ್ರೇಶ್ವರ ರಥೋತ್ಸವವು ಪ್ರತಿವರುಷ ಮಾರ್ಗಶೀರ್ಷ ಶುದ್ಧ ಪೌರ್ಣಿಮಾದಿವಸ ಜರುಗುತ್ತದೆ. ಈ ಜಾತ್ರೆಗೆ 20 ಸಾವಿರ ಮೇಲ್ಪಟ್ಟು ಜನರುಕೂಡುತ್ತಾರೆ. ಇಲ್ಲಿ ಯಾತ್ರಿಕರಿಗೆ ಇರತಕ್ಕ ಸ್ಥಳವು ಅತ್ಯಂತ ಕಷ್ಟದಾಯಕವಾಗಿರುವದು. ಕ್ಷೇತ್ರದ ವಿಸ್ತಾರವು ವಿಶಾಲವಾಗಿದ್ದರೂ ಅದನ್ನು ನಾಟಕ, ಸಿನೇಮಾ, ಚಹಾದಂಗಡಿ ಗುಳಗುಳಿ ಜೂಜಾಟದವರು ಸಂಪೂರ್ಣ ಆಕ್ರಮಿಸುತ್ತಾರೆ. ಬಹುದೂರದಿಂದ ಬಂದ ಭಕ್ತರು ಭಯಂಕರವಾದ ನಡುಗುವ ಚಳಿಯಾಟವನ್ನು ತಾಳುತ್ತ ಹಳ್ಳದಲ್ಲಿಳಿದುಕೊಂಡು ಚಳಿಯಿಂದ ಹಾಹಾಕಾರವಿಡುವರು. ಮೇಲ್ಭಾಗದಲ್ಲಿಳಿದ ಭಕ್ತರಕಷ್ಟವಂತೂ ಬರೆಯಲಶಕ್ಯವದೆ. ಕಾಲಿಟ್ಟಲ್ಲಿ ಸೆಗ್ಗಣಿಮುಳ್ಳುಗಳಕಾಟ! ಸಾವಿರಾರು ಎತ್ತುಗಳು ಹಳ್ಳದಲ್ಲಿಯೇ ಇರುತ್ತವೆ. ಅವುಗಳ ಮಲಮೂತ್ರಗಳು ಕುಡಿಯುವ ನೀರಿನೊಡನೆ ಬೆರೆಕೆ. ಆ ಮಲಿನವಾದ ನೀರನ್ನೇ ಎಲ್ಲರೂ ಉಪಯೋಗಿಸುತ್ತಾರೆ. (ಬೇರೆ ನೀರೇ ಸಿಗುವುದಿಲ್ಲ.) ಇವೆಲ್ಲ ಕಷ್ಟಕ್ಕಿಂತ ಯಾತ್ರಿಕರ ಪ್ರಾತರ್ವಿಧಿ (ಮಲ.ಮೂತ್ರ ವಿಸರ್ಜನೆ) ಯ ಮಾತಂತೂ ಎತ್ತಿ ಬರೆಯುವಂತಿಲ್ಲ. ಸ್ಥಲಾದರೂ ದೊರಕೋಗಬೇಕೆಂದರೆ ಮುಳ್ಳುಗಳ್ಳಿ! ಸಾಲದ್ದಕ್ಕೆ ಬಿಡುವಿಲ್ಲದೆ ಬೆಳೆದ ಸೆಗ್ಗಣಿಯಮುಳ್ಳು ಇವುಗಳಿಗೆ ಬೆದರಿ ಜನಗಳು ಸ್ತ್ರೀ-ಪುರುಷ ಮಾನಮರ್ಯಾದೆಯನ್ನು ಬಿಟ್ಟುಬಿಡುತ್ತಲಿದ್ದ ಈ ದುರ್ಘಟನೆಯನ್ನು ಸಾತ್ವಿಕರು ನೋಡಿ ಮಿಡುಕುವಂತಿದೆ. ಈ ತೊಂದರೆಗಳನ್ನೆಲ್ಲಾ ಸಂಘದಮೂಲಕ ನಿವಾರಣೆಮಾಡಬೇಕೆಂಬ ಉದ್ದೇಶದಿಂದಲೂ, ಜಾತ್ರೆಯಕಾಲದಲ್ಲಿ ಜನಜಾಗ್ರತೆಯ ಕಾರ್ಯಗಳಾದ ಶಿವಕೀರ್ತನ-ಧರ್ಮಶಾಸ್ತ್ರಪ್ರವಚನ-ವಕ್ತೃತ್ವಶಾಲಿಗಳ ಭಾಷಣ ಮುಂತಾದವುಗಳನ್ನು ಕೈಕೊಳ್ಳಬೇಕೆಂದೂ ಈ ವರುಷ ಕೆಲವರು ಪ್ರಯತ್ನಿಸಿ ಸತ್ತಿಗೇರಿ ಬೃಹನ್ಮಠಾಧ್ಯಕ್ಷರಾದ ಶ್ರೀ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕೂಡಿಸಿದರು. ಇದಕ್ಕೆ ಕೊರಗಲ್ಲ ಮಠದ ಕಾರಭಾರಿಗಳು ಸಹಾಯಮಾಡಿದರು. ವೇ|| ಶಿರೋಳ ಪಂಚಾಕ್ಷರಶಾಸ್ತ್ರಿಗಳೂ, ಗದಗಿನ ಅಂಗಡಿಮಾಸ್ತರರೂ, ಸತ್ತಿಗೇರಿ ಶಾಲಾ ಹೆ|| ಮಾಸ್ತರರೂ, ಸಾಂಶಿ ಚಂದ್ರಪ್ಪನವರೂ, ಧಾರವಾಡ ಸೂರಮುರಿ ವೀರಪ್ಪನವರೂ ಮೊದಲಾದವರು ಸಂಘದ ಅವಶ್ಯಕತೆಯಬಗ್ಗೆ ಅತ್ಯಂತ ಮಹತ್ವದ ಭಾಷಣಮಾಡಿದರು. ಸಕಲರೂ ಆನಂದೋದ್ರೇಕದಿಂದ ಅನುಮೋದನವಿತ್ತರು. ಶಿವಭಕ್ತಿಶೂನ್ಯವಾಗಿ ಆರಂಭಿಸಿದ ದಕ್ಷನಯಜ್ಞಭಂಗಮಾಡಿದ ಪ್ರತ್ಯಕ್ಷ ಶ್ರೀವೀರಭದ್ರೇಶಸ್ವಾಮಿಯ ದಿವ್ಯನಾಮಾಂಕಿತವಾದ 'ಶ್ರೀಕ್ಷೇತ್ರ ಗೊಡಚಿ ವೀರಭದ್ರೇಶ್ವರ ಸೇವಾಸಂಘ' ವೆಂಬ ನಾಮದಿಂದ ಸಂಘವು ಸ್ಥಾಪಿಸಲ್ಪಟ್ಟಿತು. ಈ ಸಂಘವು ಚಿರಸ್ಥಾಯಿಯಾಗುವದಕ್ಕೆ ೧೫ ಜನರ ವ್ಯವಸ್ಥಾಪಕ ಸಮಿತಿಯನ್ನು ಗೊತ್ತುಮಾಡಿದೆ. ಇದೇ ಸಭೆಯುಮತಿಯಿಂದ ಜಾತ್ರೆಯಲ್ಲಿ ಆಗುತ್ತಿರುವ ತೊಂದರೆಗಳ ನಿವಾರಣೆಗಾಗಿ ಸಂಸ್ಥಾನಿಕ ಸರಕಾರದವರ ಕಡೆಗೆ ಕರಾರನ್ನು ಪಾಸುಮಾಡಿ ಅಧ್ಯಕ್ಷರ ಮೂಲಕ ಕಳುಹಿಸಿದೆ. ಈ ಸಂಘವು ವೃದ್ಧಿಹೊಂದುವದಕ್ಕೂ, ಇದರ ಪವಿತ್ರಕಾರ್ಯಸಾಧನೆಗೂ ಉದಾರದಾತೃಗಳಾದ ಹುಬ್ಬಳ್ಳಿಶಹರ ನಿವಾಸಿಗಳಾದ ಮ|| ರಾ|| ಮೂರಸಾವಿರಪ್ಪನವರು ಹರ್ಶ ಇವರು ೧೦೧ ರೂಪಾಯಿಗಳನ್ನು ವಾಗ್ದಾನಮಾಡಿರುವರು. ೧೫೦ ಜನರು ವಾರ್ಷಿಕವರ್ಗಣಿಯನ್ನು ತಮ್ಮ ಶಕ್ತ್ಯನುಸಾರ ವಾಗ್ದಾನಮಾಡಿರುವರಲ್ಲದೆ ೭೧ ರೂಪಾಯಿಗಳು ರೋಖು ವಸೂಲಾಗಿರುತ್ತವೆ. ಪರಮಪವಿತ್ರವಾದ ಈ ಕ್ಷೇತ್ರದಲ್ಲಿ ಈ ಸೇವಾಸಂಘವೆಂಬ ಬೀಜವು ಅಂಕುರಿಸಿ ಬೆಳೆದು ಅನಂತಫಲವನ್ನು ಕೊಡಲೆಂದು ಆ ವೀರಭದ್ರೇಶನನ್ನು ಪ್ರಾರ್ಥಿಸುತ್ತೇನೆ. ಈ ಸಂಘಕ್ಕೆ ಸರ್ವರೂ ಸಹಾಯಮಾಡಿ ಪುಣ್ಯಭಾಗಿಗಳಾಗಬೇಕೆಂದು ಬಲವಾಗಿ ಇಚ್ಛಿಸುತ್ತೇನೆ.

ಈ ವರುಷ ಸಂಘದಲ್ಲಿ ಗೊತ್ತುಮಾಡಿದ ಸದಸ್ಯರು—

೧. ಶ್ರೀ|| ಪಟ್ಟದಸ್ವಾಮಿಗಳು ಸತ್ತಿಗೇರಿ, ೨. ಪಟ್ಟದಸ್ವಾಮಿಗಳು ಕಟಕೋಳ, ೩. ಚರಮೂರ್ತಿಸ್ವಾಮಿಗಳು ಗೊಡಚಿ, ೪. ವೇ|| ಪಂಚಾಕ್ಷರಶಾಸ್ತ್ರಿಗಳು ಶಿರೋಳ, ೫. ವಿ. ಜಿ. ವಸ್ತ್ರದ ಶಿರೋಳ, ೬. ಶ್ರೀ|| ವೀರಪ್ಪನವರು ಉಪ್ಪಿನ ಬೆಳಗಾಂವ, ೭. ಶ್ರೀ|| ವೀರಪ್ಪನವರು ಮುದ್ದೂರ-ಆಲೂರ, ೮. ಶಿವರಪ್ಪನವರು ಬಟಕುರ್ಕಿ, ಮುದಕವಿ, ೯. ಸಂಗನಬಸಪ್ಪನವರು ಮಾಳವಾಡ, ಗೋವನಕೊಪ್ಪ, ೧೦. ಪಂಚಾಕ್ಷರಪ್ಪನವರು, ಹೊಸಕೇರಿ, ನರಗುಂದ, ೧೧. ಚನ್ನಪ್ಪಾ ಹುರಕಡ್ಲಿ, ಗದಗ, ೧೨. ಕೆ. ಬಿ. ಅಂಗಡಿಮಾಸ್ತರ, ಗದಗ, ೧೩. ಶ್ರೀ ವೀರಭದ್ರಪ್ಪನವರು ಅರಕೇರಿ, ಬಾಗಲಕೋಟೆ, ೧೪. ಶಿವಪ್ಪ ಯಾದವಾಡ, ಮುರಗೋಡ, ೧೫. ರಾಮದುರ್ಗದವರಿಗಾಗಿ ಇಂದಿಟ್ಟಿದೆ. ಈ ಪ್ರಕಾರ ಆಯಾಯ ಮಹಾಜನಗಳು ಸದಸ್ಯರಾಗಿದ್ದಾರೆ.

ಸಂಘದೊಡೆಯರು ಸತ್ತಿಗೇರಿ ಶ್ರೀಗಳು. ಸಂಘದ ಚಾಲಕರು ಕೆ. ಬಿ. ಅಂಗಡಿಮಾಸ್ತರರು, ಗದಗ, ಸಂಘದ ಕಾರ್ಯನಿರ್ವಾಹಕರು ಸಂ. ಸಂ. ಮಾಳವಾಡ ಗೋವನಕೊಪ್ಪ, ಹಣದ ರಕ್ಷಕರು (ಬ್ಯಾಂಕರ್) ವೀರಪ್ಪನವರು ಮುದ್ದೂರ, ಆಲೂರ.

ಸೂಚನೆ—ಸಭೆಯಲ್ಲಿ ವಾಗ್ದಾನ ಮಾಡಿದ ಸರ್ವರೂ ಕೋಶಾಧಿಕಾರಿಗಳಾದ ಮ|| ರಾ|| ವೀರಪ್ಪನವರು ಮುದ್ದೂರ, ಜನರಲ್ ಮರ್ಚಂಟ್, ಆಲೂರ, ಪೋ|| ಆಲೂರ-ರೋಣ, ಡಿ|| ಧಾರವಾಡ ಇವರ ಅಡ್ರೆಸ್ಸಿಗೆ ಕಳುಹಿಸಬೇಕೆಂದು ಗೊತ್ತುಮಾಡಿದಂತೆ ಅಲ್ಲಿಗೆ ಕಳುಹಿಸಿ ಪುಣ್ಯಭಾಗಿಗಳಾಗುವಿರೆಂದು ಹಾರೈಸುತ್ತೇನೆ.

ಸಂ. ಸಂ. ಮಾಳವಾಡ, ಗೋವನಕೊಪ್ಪ,
ಸಂಘದ ಸೆಕ್ರೆಟರಿ.

ತೆನಾಲಿ ಪಟ್ಟಣದ ಶ್ರೀ ರಾಮವಿಲಾಸ ನಾಟಕಸಭೆ.

ಈ ಸಭೆಯವರು ರಾಜಧಾನಿಯಲ್ಲಿ 7-8 ನಾಟಕಗಳನ್ನು ಅಭಿನಯಿಸಿದರು. ಮೈಸೂರು ಅರಮನೆಯಲ್ಲಿಯೂ ಒಂದು ನಾಟಕವು ಅಭಿನಯಿಸಲ್ಪಟ್ಟು ಈ ತಿಂಗಳು 1 ನೇ ತಾರೀಖಿನಲ್ಲಿ ರತ್ನಾವಳೀ ಥಿಯೇಟರಿನಲ್ಲಿ ಶ್ರೀಕೃಷ್ಣ ತುಲಾಭಾರವೆಂಬ ನಾಟಕವು ಅಭಿನಯಿಸಲ್ಪಟ್ಟಿತು. ನಾಟಕಾವತಂಸ ಸ್ಥಾನಂ ನರಸಿಂಹರಾಯರವರು ಸತ್ಯಭಾಮೆಯ ಪಾರ್ಟನ್ನು ಅಭಿನಯಿಸಿದರು. ಗಾನಕಲಾ ಸ್ತತಿ. ಶ್ರೀ ಎಸ್. ಆರ್. ಅಂಜನೇಯುಲುರವರು ಶ್ರೀಕೃಷ್ಣನ ಪಾರ್ಟನ್ನು ಅಭಿನಯಿಸಿದರು. ಟಿಕೇಟುಗಳಿಗೆ 5 ರೂ, 3 ರೂ, 2 ರೂ, 1-8, 1 ರೂ, 12 ಆ, 6 ಆ. ಈ ಪ್ರಕಾರ ಹಾಕಿದ್ದರೂ ನಾಟಕವು ತೆಲುಗು ಭಾಷೆಯಲ್ಲಿ ಅಭಿನಯಿಸಲ್ಪಟ್ಟಿದ್ದರೂ ಸಾವಿರಾರು ಜನಗಳು ಈ ನಾಟಕಕ್ಕೆ ಸಂತೋಷಪಟ್ಟು ಕಂಪನಿಯವರಿಗೆ ಪ್ರಯೋಜನವಾಗುವಂತೆಯೂ, ಉತ್ತೇಜನವಾಗುವಂತೆಯೂ, ಮಾಡಿದರು. ಆ ದಿವಸ ಇಬ್ಬರು ಮಹನೀಯರಿಗೂ ಮೈಸೂರು ನಿವಾಸಿಗಳಲ್ಲಿ ಕೆಲವರು ಚಿನ್ನದ ಬಿರುದು ಬಿಲ್ಲೆಗಳನ್ನು ಮುನಿಸಿಪಲ್ ಪ್ರೆಸಿಡೆಂಟರಾದ ಮ|| ರಾ|| ಕೇಶವಯ್ಯಂಗಾರ್‌ರವರಿಂದ ಕೊಡಿಸಿದರು. ಮ|| ರಾ|| ಕೇಶವಯ್ಯಂಗಾರ್‌ರವರು ಈ ಕಂಪನಿಯವರ ಅಸಾಧಾರಣವಾದ ಸಾಮರ್ಥ್ಯವನ್ನು ಶ್ಲಾಘಿಸಿ ಬಿರುದು ಬಿಲ್ಲೆಗಳನ್ನು ಕೊಟ್ಟರು. ಮ|| ರಾ|| ನರಸಿಂಹರಾಯರವರು ಅಧ್ಯಕ್ಷರನ್ನೂ ಮೈಸೂರು ಮಹಾಜನಗಳನ್ನೂ ಶ್ರೀಮನ್ಮಹಾರಾಜರವರನ್ನೂ ಮತ್ತು ಈ ನಾಟಕದ ಆರ್ಗನೈಜರ್‌ಗಳಾದ ಮ|| ರಾ|| ಕೆ. ಟಿ. ಭಾಷ್ಯಂರವರನ್ನೂ, ಮ|| ರಾ|| ಅಗರದ ರಂಗಯ್ಯನವರನ್ನೂ ವಂದಿಸಿ ನಾಟಕಶಿರೋಮಣಿಗಳಾದ ವರದಾಚಾರ್ಯರವರ ಗುಣಕಥನವನ್ನು ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು. ಈ ತಿಂಗಳು 2 ನೇ ತಾರೀಖಿನಲ್ಲಿ ಮ|| ರಾ|| ರಂಗಯ್ಯನವರು, ಮ|| ರಾ|| ಸಾಹುಕಾರ್ ಸಂಗಪ್ಪನವರು, ಮೊದಲಾದ ಮೈಸೂರು ಪ್ರಜೆಗಳ ಪ್ರತಿನಿಧಿಗಳು ಮಾಡರ್ನ್ ಹೋಟಲಿನಲ್ಲಿ ಈ ಕಂಪನಿಯವರಿಗೆ ಒಂದು ಎಂಟರ್‌ಟೇನ್ಮೆಂಟನ್ನು ಕೊಟ್ಟರು. ವೈಣಿಕಶಿಖಾಮಣಿ ಮ|| ರಾ|| ಕೇಶವಮೂರ್ತಿಯವರು ಸಭೆಯವರಿಗೆ ಅತ್ಯಂತ ಆನಂದ ಉಂಟಾಗುವಂತೆ ವೀಣೆಯನ್ನು ನುಡಿಸಿದರು. ಮ|| ರಾ|| ಎಂ. ವೆಂಕಟಕೃಷ್ಣಯ್ಯನವರು, ನಾಟಕವನ್ನು ಅಭಿನಯಿಸುವುದರಲ್ಲಿ ಈ ಕಂಪನಿಯವರ ಅದ್ಭುತವಾದ ಶಕ್ತಿಯನ್ನು ಕುರಿತು ಗುಣಕಥನಪೂರ್ವಕ ಆಶೀರ್ವಾದವನ್ನು ಮಾಡಿ, ಅವರು ಮಾಡತಕ್ಕ ಧರ್ಮಗಳನ್ನು ಶ್ಲಾಘಿಸಿ ಧರ್ಮಿಷ್ಠರು ಯಾವ ಕೆಲಸ ಮಾಡಿದಾಗ್ಯೂ ಆ ಕೆಲಸವು ಹೇಗೆ ಪ್ರಯೋಜನಕಾರಿಯಾಗುವುದೋ ಅದನ್ನು ವಿವರಿಸಿದರು. ಮ|| ರಾ|| ಬಿ. ಟಿ. ಕೇಶವಯ್ಯಂಗಾರ್‌ರವರು ಈ ರಾಜಧಾನಿಯಲ್ಲಿ ಪ್ರಜಾಹಿತ ಕಾರ್ಯಗಳಿಗೆ ಹೇಗೆ ಉತ್ತೇಜಕರಾಗಿರುವರೋ ಅದನ್ನು ಸಾಹುಕಾರ್ ಸಂಗಪ್ಪನವರು ನಿರೂಪಿಸಿ ಅವರ ಮೆಹನತ್ತನ್ನು ಪ್ರಶಂಸಿಸಿದರು. ಮ|| ರಾ|| ಕೇಶವಯ್ಯಂಗಾರ್‌ರವರು ತಾವು ರೇಟ್‌ಪೇಯರ್‌ಗಳ ಸೇವಕರಾಗಿ ಮಾಡಬೇಕಾದ ಕೆಲಸಗಳನ್ನು ಯಥಾಶಕ್ತಿ ಮಾಡಿರುವುದಾಗಿ ತಿಳಿಸಿದರು. ಮ|| ರಾ|| ಅಗರಂ ರಂಗಯ್ಯನವರು ಈ ರಾಜಧಾನಿಯಲ್ಲಿ ನಡೆಯತಕ್ಕ ಮಹಾಜನಗಳ ಕ್ಷೇಮಾಭಿವೃದ್ಧಿ ಕೆಲಸಗಳಲ್ಲಿ ಹೇಗೆ ಉತ್ಸಾಹದಿಂದ ಕೆಲಸ ಮಾಡುತ್ತಲಿರುವರೋ, ಇಂಥಾ ಕೆಲಸಗಳನ್ನು ಮಾಡುವುದರಲ್ಲಿ ಕಿರೀಟವಿಲ್ಲದ ದೊರೆಗಳಂತೆ ಹೇಗೆ ಪ್ರಜೆಗಳ ಸೇವೆಯಲ್ಲಿ ಸದಾ ನಿರತರಾಗಿರುವರೋ ಅದು ಪ್ರಶಂಸ ಮಾಡಲ್ಪಟ್ಟು ಅವರಿಗೆ ವಂದನೆಗಳು ಸಮರ್ಪಿಸಲ್ಪಟ್ಟವು. ಕಂಪನಿಯ ಪಕ್ಷವಾಗಿ ಮ|| ರಾ|| ನರಸಿಂಹರಾಯರವರು ಈ ಸಭೆಯ ಆರ್ಗನೈಜರ್‌ಗಳನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಿ. ವಿ. ವೈದ್ಯೇಶ್ವರಯ್ಯರ್.

ಲಖ್ನೋ ಪಟ್ಟಣದ ಆಲ್ ಇಂಡಿಯಾ ಮೆಡಿಕಲ್ ಕಾನ್ಫರೆನ್ಸು.

ಈ ಕಾನ್ಫರೆನ್ಸಿನಲ್ಲಿ ಡಾ|| ಎಂ. ಜಿ. ನಾಯುಡುರವರು ಅಗ್ರಾಸನವನ್ನು ವಹಿಸಿದ್ದರು. ಈಗ ಇಂಡಿಯಾದೇಶದಲ್ಲಿ ನಿವಾರಣೀಯವಾದ ರೋಗಗಳಿಂದ ಹೇಗೆ ಕೋಟ್ಯಂತರ ಜನಗಳು ಸಾಯುತ್ತಲಿರುವರೋ, ಡಾಕ್ಟರುಗಳು, ವೈದ್ಯರು, ಹಕೀಮರು ಶ್ರದ್ಧೆಯಿಂದ ತಮ್ಮ ಕಸುಬಿಗೆ ಸೇರಿದ ಕೆಲಸಗಳನ್ನು ಮಾಡಿದರೆ ಹೇಗೆ ಅಕಾಲಮರಣವನ್ನು ಹೊಂದತಕ್ಕ ಕೋಟ್ಯಂತರ ಜನಗಳನ್ನು ಬದುಕಿಸಲಬಹುದೋ ತಮ್ಮ ಮೆಹನತ್ತಿಗೆ ಅನುರೂಪವಾದ ಫಲವನ್ನು ಹೇಗೆ ಹೊಂದಬಹುದೋ ಈ ಕೆಲಸಕ್ಕೆ ಸರಕಾರದವರು ಹೇಗೆ ಉದಾರವಾಗಿ ಸಹಾಯಮಾಡಬೇಕೋ ದೊಡ್ಡ ಪಟ್ಟಣಗಳಲ್ಲಿ ಚಿಕಿತ್ಸೆಗೆ ಇರತಕ್ಕ ಸೌಲಭ್ಯಗಳು ಗ್ರಾಮಾಂತರಗಳಲ್ಲಿ ಹೇಗೆ ಇರುವುದಿಲ್ಲವೋ ಸ್ಯಾನಿಟರಿ ಏರ್ಪಾಡುಗಳು ದೊಡ್ಡ ಪಟ್ಟಣಗಳಲ್ಲಿಯೂ ಕೂಡ ಹೇಗೆ ಸಮರ್ಪಕವಾಗಿರುವದಿಲ್ಲವೋ ನಿರ್ಮಲವಾದ ವಾಯುವು, ನಿರ್ಮಲವಾದ ನೀರು, ನಿರ್ಮಲವಾದ ಆಹಾರಪದಾರ್ಥಗಳು, ತಾಪತ್ರಯಗಳಿಲ್ಲದೆ ಬದುಕುವುದಕ್ಕೆ ಸಾಧಕವಾದ ಸೌಲಭ್ಯಗಳು ಇವುಗಳನ್ನು ಕಲ್ಪಿಸುವುದು ಸರಕಾರಕ್ಕೆ ಹೇಗೆ ಕರ್ತವ್ಯವೋ ಈ ಕರ್ತವ್ಯಗಳು ಹೇಗೆ ಮಾಡಲ್ಪಡುತ್ತಲಿಲ್ಲವೋ ಈ ಏರ್ಪಾಡುಗಳನ್ನು ಸರಿಯಾಗಿ ಮಾಡಿದರೆ, ಜನಗಳು ಹೇಗೆ ಆರೋಗ್ಯವಂತರಾಗುವರೋ ದೇಶದಲ್ಲಿ ಭೋಗ್ಯವಸ್ತುಗಳು ಹೇಗೆ ವಿಶೇಷವಾಗಿ ಕಲ್ಪಿಸಲ್ಪಡುವವೋ ಅವುಗಳ ಪ್ರಯೋಜನವನ್ನು ಬ್ರಿಟಿಷ್ ಜನಗಳೂ, ಭಾರತೀಯರೂ ಇಬ್ಬರೂ ಹೇಗೆ ಹೊಂದಬಹುದೋ ಬ್ರಿಟಿಷ್ ಜನಗಳು ಭಾರತೀಯರು ಹಾಕತಕ್ಕ ಮೇಲ್ಪಂಕ್ತಿಯು ಪ್ರಪಂಚದ ಎಲ್ಲರಿಗೂ ಹೇಗೆ ಆದರ್ಶಪ್ರಾಯವಾಗುವುದೋ ಹೀಗಾಗುವಂತೆ ಮಾಡುವುದಕ್ಕೆ ಪ್ರಚಾರಕರನ್ನು ಏರ್ಪಡಿಸಿ, ಮಿಷನರಿ ಏರ್ಪಾಡುಗಳನ್ನು ಮಾಡುವುದು ಹೇಗೆ ಅವಶ್ಯಕವೋ ಈ ವಿಷಯಗಳನ್ನೆಲ್ಲಾ ಗರ್ಭೀಕರಿಸಿ ಲಖ್ನೋ ಮೆಡಿಕಲ್ ಕಾನ್ಫರೆನ್ಸಿನಲ್ಲಿ ಎಂ. ಜಿ. ನಾಯುಡುರವರು ಬಹಳ ಯುಕ್ತಿಯುಕ್ತವಾದ ಉಪನ್ಯಾಸವನ್ನು ಮಾಡಿದರು. ಸರಕಾರದವರು ಮತ್ತು ಮೆಡಿಕಲ್ ಇಲಾಖೆಯವರು ಸರಿಯಾಗಿ ಕೆಲಸಮಾಡಿದರೆ ಬ್ರಿಟಿಷ್ ಚಕ್ರಾಧಿಪತ್ಯ ಮಾತ್ರವೇ ಅಲ್ಲದೆ ಪ್ರಪಂಚವೇ ಒಳ್ಳೆಯ ಸ್ಥಿತಿಗೆ ಬರುವುದಕ್ಕೆ ಅವಕಾಶವಾಗುತ್ತದೆ. ಬ್ರಿಟಿಷ್ ಮತ್ತು ಇಂಡಿಯಾ ಗೌರ್ನಮೆಂಟಿನವರು ಈ ವಿಷಯವನ್ನು ಪರ್ಯಾಲೋಚಿಸಿ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಕೋರುತ್ತೇನೆ.

ಸಿ. ವಿ. ವೈದ್ಯೇಶ್ವರಯ್ಯರ್.

ಕಾನಾಮಡುವು ದಾಸೋಹಮಠಕ್ಕೆ ಶ್ರೀ ಜಗದ್ಗುರು ಪರ್ವತಸಂಸ್ಥಾನ ಸರ್ಕೀಟಿನ ಆಗಮನ.

ಶ್ರೀ ಜಗದ್ಗುರು ಪರ್ವತಸಂಸ್ಥಾನದ ಸರ್ಕೀಟಿನ ಗುರುಸ್ವಾಧಿಕಾರಿಗಳಾದ ಶ್ರೀರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಚಿಕ್ಕಮಣ್ಣೂರು ಇವರು ಸಕಲಸಿಬ್ಬಂದಿಯೊಡನೆ ತಾ|| 28-12-32 ನೇ ದಿವಸ ಆಗಮಿಸಿದರು. ದಾಸೋಹಮಠದ ಅಧ್ಯಕ್ಷರಾದ ಶ್ರೀ ಚನ್ನಬಸವಶರಣರೂ ಸಮಸ್ತವೈವದವರೂ ವಿಶೇಷವೈಭವದೊಡನೆ ಎದುರ್ಗೊಂಡರು. ಉತ್ಸವವು ಬಜಾರಕ್ಕೆ ಬಂದಕೂಡಲೆ ಗಜಲಕ್ಷ್ಮಿಯು ಚೌರಿಯನ್ನು ಹಾಕುತ್ತ ತನ್ನಲ್ಲಿರುವ ವಿದ್ಯೆಯಿಂದ ಉತ್ಸವ ದರ್ಶಿಗಳಿಗೆ ಆನಂದವನ್ನುಂಟುಮಾಡಿತು. ಸರ್ಕೀಟಿನಲ್ಲಿ ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳು ವೇದವನ್ನು ಹೇಳುತ್ತಿದ್ದರು. ಉತ್ಸವವು ಗದ್ದುಗೆ ಶಿಲಾಮಂಟಪಕ್ಕೆ ಬಂದು ಸ್ವಾಮಿಗಳು ಮೂರ್ತಿಮಾಡಿದಕೂಡಲೆ ಸರ್ವರೂ ಕರತಾಡನ ಮೂಲಕ ಜಯಜಯಕಾರವನ್ನು ಮಾಡಿ ತಮ್ಮಲ್ಲಿರುವ ಗುರುಭಕ್ತಿಯನ್ನು ವ್ಯಕ್ತಗೊಳಿಸಿದರು. ಸಂಸ್ಥಾನದ ಸರ್ವಾಧಿಕಾರಿಗಳಾದ ಶ್ರೀ. ಯಂ. ಸಿ. ಮಲ್ಲಯ್ಯನವರು ಪ್ರಾಸ್ತಾವಿಕಭಾಷಣ ಮಾಡಿದರು. ಸ್ವಾಮಿಗಳವರು "ಅನ್ನೇನ ಸದೃಶಂ ದಾನಂ ನಭೂತಂ ನಭವಿಷ್ಯತಿ" ಈ ಶ್ಲೋಕವನ್ನೇ ಮಾದರಿಯಾಗಿಟ್ಟುಕೊಂಡು ಅನ್ನದಾನದಮಹತ್ವವನ್ನು ಬೋಧಮಾಡಿದರು. ಸರ್ವರೂ ಇವರ ಬೋಧಾಮೃತವನ್ನು ಪಾನಮಾಡಿ ಸಂತೋಷಪಟ್ಟರು. ಅಲ್ಲಿಗೆ 10 ಘಂಟೆರಾತ್ರಿ ಆದುದರಿಂದ ಸಭೆಯು ಸಮಾಪ್ತವಾಯಿತು. ಪುನಃ ತಾ|| 29-12-1932 ನೇ ದಿವಸ ದಾಸೋಹಮಠದಲ್ಲಿರುವ ಇಂಗ್ಲೀಷಸ್ಕೂಲ ಹೆಡ್‌ಮಾಸ್ತರ ಅಸಿಸ್ಟೆಂಟಮಾಸ್ತರ ಇವರು ಸ್ಕೂಲಿನಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಬೋಧಮಾಡಬೇಕೆಂದು ಮಧ್ಯಾಹ್ನ ಮೂರುಘಂಟೆಗೆ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಕೂಡಿಸಿದರು. ಸಭೆಗೆ ಹರಪನಹಳ್ಳಿ ವಕೀಲ ಪಂಚಾಕ್ಷರಯ್ಯನವರು ಹೊಸಪೇಟೆ ಮೈಲಿ ಇನ್‌ಸ್ಪೆಕ್ಟರರು ಕೂಡ್ಲಿಗಿ ತಾಲೂಕಿನ ಮೈಲಿ ಇನ್‌ಸ್ಪೆಕ್ಟರರು ಮೊದಲಾದವರು ಬಂದಿದ್ದರು. ಇಂಗ್ಲೀಷ ವಿದ್ಯಾರ್ಥಿಗಳು ಪ್ರಥಮದಲ್ಲಿ ಶ್ರೀ ಜಗದ್ಗುರು ನಾಗಲಾಟಿ ಶಿವಾಚಾರ್ಯ ಮಹಾಸ್ವಾಮಿಗಳವರ ಮೇಲೆ ಸ್ತೋತ್ರವನ್ನು ಹಾಡಿದರು. ಅಸಿಸ್ಟೆಂಟ್‌ಮಾಸ್ತರರು ಪ್ರಾಸ್ತಾವಿಕಭಾಷಣ ಮಾಡಿದನಂತರ ವಕೀಲ ಪಂಚಾಕ್ಷರಯ್ಯನವರು ವಿದ್ಯಾರ್ಥಿಗಳ ಕರ್ತವ್ಯವಿಷಯದಲ್ಲಿ ಇಂಗ್ಲೀಷ ನೀತಿವಾಕ್ಯಗಳನ್ನು ಹೇಳುತ್ತ ಬಹುಸ್ವಾರಸ್ಯವಾಗಿ ವ್ಯಾಖ್ಯಾನಮಾಡಿದರು. ಆ ಮೇಲೆ ಅಧ್ಯಕ್ಷರಾದ ಚಿಕ್ಕಮಣ್ಣೂರ ಸ್ವಾಮಿಗಳು "ಜಂತೂನಾಂ ನರಜನ್ಮದುರ್ಲಭಂ" ಮನುಷ್ಯಜನ್ಮವು ಬರಬೇಕಾದರೆ ಬಹುದುರ್ಲಭ, ಇಂಥ ಮಹತ್ತರವಾದ ಜನ್ಮವನ್ನು ಪಡೆದು ಪವಿತ್ರವಾದ ವೀರಶೈವಮತದಲ್ಲಿ ಪ್ರಾದುರ್ಭವಿಸಿದ ಬಳಿಕ ಸರ್ವರೂ ವಿದ್ಯೆಯನ್ನು ಸಂಪಾದಿಸಬೇಕು. ಮನುಷ್ಯನು ಜಗತ್ತಿನಲ್ಲಿ ಹೆಸರುವಾಸಿಯಾಗಬೇಕಾದರೆ ವಿದ್ಯೆಯೇ ಕಾರಣವು. ವಿದ್ಯಾಹೀನನು ಎಂದಿಗೂ ಸಮಾಜದಲ್ಲಿ ಮುಂದಕ್ಕೆ ಬರಲಾರನು. ಅಗಸ್ತ್ಯವ್ಯಾಸ ಮೊದಲಾದ ಮಹರ್ಷಿಗಳು ಮಹಾಮಹಾಗ್ರಂಥಗಳನ್ನು ಬರೆದಿರುವುದರಿಂದ ಆ ಮಹನೀಯರ ಕೀರ್ತಿಯು ಇಡೀಪ್ರಪಂಚವನ್ನೇ ವ್ಯಾಪಿಸಿಕೊಂಡಿರುವದು. ಆದುದರಿಂದ ಪ್ರತಿಯೊಬ್ಬರೂ ವಿದ್ಯಾಗುರುಗಳಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ವಿದ್ಯೆಯನ್ನು ಕಲಿಯಬೇಕೆಂದು ಬೋಧಮಾಡಿದ್ದಲ್ಲದೆ ಸನಾತನಧರ್ಮದಲ್ಲಿ ನಿಷ್ಠೆಯುಳ್ಳವರಾಗಬೇಕು. ಆಚಾರ್ಯರು ದಯಪಾಲಿಸಿರುವ ಇಷ್ಟಲಿಂಗದಲ್ಲಿ ವಿಶ್ವಾಸವನ್ನಿಟ್ಟು ಸದಾ ದೇಹದಲ್ಲಿ ಧರಿಸಿ ಪೂಜೆಯನ್ನು ಮಾಡುತ್ತ ಭಕ್ತಿಯಿಂದಿರಬೇಕೆಂದು ಬೋಧಮಾಡಿದರು. ಚಿಕ್ಕಮಣ್ಣೂರು ಸ್ವಾಮಿಗಳು ಕೂಡ್ಲಿಗಿ ತಾಲೂಕಿಗೆ ಆಗಮಿಸಿ ಭಕ್ತರಿಗೆ ಧರ್ಮಬೋಧೆಯನ್ನು ಮಾಡುತ್ತ ಸರ್ಕೀಟಿನ ಕಾರ್ಯವು ಸುರಕ್ಷಿತ ನಡೆಯುವಂತೆ ಮಾಡುವದು ಸ್ತುತ್ಯವೇಸರಿ! ಮುಂದೆ ಇವರ ಸರ್ಕೀಟು ಹೊಸಪೇಟೆ ತಾಲೂಕಿಗೆ ದಯಮಾಡಿಸುವದಾಗಿ ತಿಳಿದುಬರುತ್ತದೆ. ಸಭೆಯಾದ ಮರುದಿವಸ ಶ್ರೀಚನ್ನಬಸವಶರಣಪ್ಪನವರು ಸಂಸ್ಥಾನಕ್ಕೆ ಗುರುಕಾಣಿಕೆಯನ್ನು ಸಮರ್ಪಿಸಿದರು.

ಮಠದ ಏಜಂಟ, ರುದ್ರಪ್ಪ ಕಾನಾಮಡುವು

ಸಪ್ತಾಹಭಜನೆ.

ಧಾರವಾಡ ಡಿ|| ನರಗುಂದಪೇಟಾ ಪೈಕಿ ಚಿಕ್ಕನರಗುಂದ ಗ್ರಾಮದ ಸಮಸ್ತವೈವದವರು ಪ್ರತಿವರ್ಷದ ಪದ್ಧತಿಯಂತೆ ವೃಷಭೇಶ್ವರನ ಮಂದಿರದಲ್ಲಿ ಮಾರ್ಗಶೀರ್ಷ ಶು|| ೧೪ ಶನಿವಾರ ಸೂರ್ಯೋದಯದಲ್ಲಿ ಸಪ್ತಾಹಭಜನೆಯನ್ನು ಪ್ರಾರಂಭಮಾಡಿದರು. ಇದಕ್ಕೆ ಶ್ರೀ ಕೊಣ್ಣೂರು ಬೃಹನ್ಮಠಾಧ್ಯಕ್ಷ ಮುರಘೇಂದ್ರ ಶಿವಾಚಾರ್ಯಸ್ವಾಮಿಗಳವರು ಆಗಮಿಸಿದ್ದರು. ೫ ದಿವಸಗಳವರೆಗೆ ವೃಷಭೇಶ್ವರನಿಗೆ ಮಹಾರುದ್ರಾಭಿಷೇಕವು ಮಾಡಲ್ಪಟ್ಟಿತು. ಸಿದ್ದಪ್ಪ ಶಾಸ್ತ್ರಿ ಪತ್ತಾರ ಹುಲಕೂರು ಇವರ ಕೀರ್ತನವು ಮಾರುತಿಗುಡಿಯಲ್ಲಿ 3 ದಿವಸಗಳವರೆಗೆ ನಡೆಯಿತು. ಸದರಿಯವರ ಕೀರ್ತನವು ಜನರಿಗೆ ಆನಂದವನ್ನುಂಟುಮಾಡುತ್ತಿತ್ತು. ಗ್ರಾಮವು ತಳಿರು ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕೃತವಾಗಿತ್ತು. ವೇ|| ಪತ್ರಯ್ಯನವರು ಹಿರೇಮಠ, ಬಸಪ್ಪನವರು ಕುಲಕರ್ಣಿ, ಬಸನಗೌಡರು ಮುಳ್ಳೂರಪಾಟೀಲ, ಬಸನಗೌಡರು ಪೋಲೀಸಪಾಟೀಲ, ಹೊಳೆ ಬಸನಗೌಡಾ ಚನ್ನಪ್ಪಗೌಡರ ರುದ್ರಗೌಡಾ ಸರ್ವಮಾನ್ಯದ, ಸಂಗನಗೌಡ ಚನ್ನಪ್ಪಗೌಡರ, ಮಲ್ಲಪ್ಪಾ ಕೊರಗಲ್ಲ, ಶಿವನಪ್ಪ ಯರಗಟ್ಟಿ, ರಾಯಪ್ಪ ರಾಯರಡ್ಡಿ, ಬಸಪ್ಪನವರು ಸಪ್ಪದ, ಅಡಿವೆಪ್ಪ ನವಲಗುಂದ ಇವರೇ ಮೊದಲಾದ ಪ್ರಮುಖಜನರು ಕಾರ್ಯದಲ್ಲಿ ಭಾಗವಹಿಸಿ ದಕ್ಷತೆಯಿಂದ ಕೆಲಸಮಾಡಿದರು. ಸದರಿ ಭಜನೆಯು ಮಾರ್ಗಶೀರ್ಷವದ್ಯ ೪ ಶನಿವಾರ ಸೂರ್ಯೋದಯಕ್ಕೆ ಸಮಾಪ್ತಿಮಾಡಲ್ಪಟ್ಟಿತು. ಅದೇ ದಿವಸ ರಾತ್ರಿ ಸದರಿ ಶ್ರೀಮುರಘೇಂದ್ರಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸದರಿ ಉತ್ಸವವು ಬಸವನಗುಡಿಗೆ ಬಂದನಂತರ ಸಕಲರಿಗೂ ಫಲಾಶೀರ್ವಾದಕೊಟ್ಟು ಸಮಾಪ್ತಿಗೊಳಿಸಲ್ಪಟ್ಟಿತು. ಸದರಿ ಗ್ರಾಮದ ಯಾವತ್ತು ಜನರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಆ ದಯಾನಿಧಿಯಾದ ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಬಸೆಟ್ಟೆಪ್ಪ ಉಪ್ಪಿನ ಮು|| ಚಿಕ್ಕನರಗುಂದ.

ನೀಲಗುಂದ ಶ್ರೀ ಶಿವಪ್ಪಯ್ಯನವರ ಚರಿತ್ರೆಯು ಶೀಘ್ರವೇ ಮುದ್ರಣವಾಗುವದು.

ಕರ್ನಾಟಕದಲ್ಲಿ ಪ್ರಸಿದ್ಧರಾಗಿ ವೀರಶೈವ ಮತೋದ್ಧಾರಮಾಡಿದ ನೀಲಗುಂದ ಶ್ರೀ ಶಿವಪ್ಪಯ್ಯನವರ ಚರಿತ್ರೆಯನ್ನು ಬರೆದಿರುತ್ತೇವೆ. ಇದು ಅಚ್ಚಕನ್ನಡದಲ್ಲಿ ಅತ್ಯಂತ ಸುಲಭ ಶೈಲಿಯಿಂದ ಗದ್ಯರೂಪವಾಗಿ ಬರೆಯಲ್ಪಟ್ಟಿದೆ. ಈ ಮಹಾನುಭಾವರ ಚರಿತ್ರೆಯು ಅತಿ ಮಹತ್ವಪೂರ್ಣವಾದ್ದಾಗಿದೆ. ಈ ಗ್ರಂಥವು ಇಷ್ಟರಲ್ಲಿ ಮುದ್ರಣವಾಗಿ ಪ್ರಸಿದ್ಧವಾಗಬಹುದಾಗಿತ್ತು; ಆದರೆ ಈ ಮಹಾತ್ಮರು ಅಲ್ಲಲ್ಲಿ ಸ್ಥಾಪಿಸಿದ ಮಠಗಳೂ, ಅವುಗಳಲ್ಲಿರುವ ಆಧಾರಗಳೂ, ಐತಿಹಾಸಿಕ ವಿಷಯಗಳೂ ಬೇಕಾಗಿವೆ. ಇದನ್ನು ನಮಗೆ ಶಕ್ಯವಾದಷ್ಟು ಸಂಗ್ರಹಿಸಿ ಶೀಘ್ರವೇ ಪ್ರಸಿದ್ಧ ಮಾಡುವೆವು. ಈ ಅಮೋಘವಾದ ಗ್ರಂಥಮುದ್ರಣಾದಿ ಕಾರ್ಯಗಳಿಗೆ ೫೦೦ ರೂಪಾಯಿಗಳ ಮೇಲ್ಪಟ್ಟು ಹಣವು ಬೇಕಾಗುತ್ತದೆ. ಈ ಮಹಾನುಭಾವರ ಭಕ್ತರೂ ಅಭಿಮಾನಿಗಳೂ, ಧನಸಹಾಯ ಮಾಡಬೇಕಾಗಿ ಕೋರಿಕೆ. ಈ ಪವಿತ್ರ ಕಾರ್ಯಕ್ಕೆ ೫ ರೂಪಾಯಿಯಿಂದ ಮೇಲ್ಪಟ್ಟು ಸಹಾಯ ಮಾಡಿದ ಮಹನೀಯರ ಹೆಸರುಗಳನ್ನು ಗ್ರಂಥದಲ್ಲಿ ಆಶ್ರಯದಾತೃಗಳ ಮಾಲೆಯಲ್ಲಿ ಪ್ರಸಿದ್ಧ ಪಡಿಸುತ್ತೇವೆ. ಸಮಸ್ತರೂ ತಮ್ಮ ಶಕ್ತ್ಯನುಸಾರವಾಗಿ ಸಹಾಯಮಾಡಿ ಪುಣ್ಯ ಭಾಗಿಗಳಾಗಬೇಕೆಂದು ಹಾರೈಸುತ್ತೇವೆ.

ಚರಿತ್ರೆಗೆ ಧನಸಹಾಯಮಾಡಿದ ಮಹಾಶಯರು.

೫ ರೂಪಾಯಿ, ಶ್ರೀಯುತ ಶಿವಲಿಂಗಪ್ಪನವರು ದೇಸಾಯಿ, ಕುರಹಟ್ಟಿ.
೫ ರೂಪಾಯಿ, ಶ್ರೀಯುತ ಚನ್ನಪ್ಪನವರು ಹಿರೇಸಿಂಗಪ್ಪನವರ, ನೀಲಗುಂದ.
೫ ರೂಪಾಯಿ, ಶ್ರೀಯುತ ಗೂಳಪ್ಪನವರು ಕಲಗಣಿ, ಬಳ್ಳಾರಿ.
೫ ರೂಪಾಯಿ, ಶ್ರೀಯುತ ಶಿವಪ್ಪ ಚೆನ್ನಪ್ಪ, ಭಾವಿಕಟ್ಟಿ ಗುಳೇದಗುಡ್ಡ.

ವೇ|| ಪಂಚಾಕ್ಷರ ಶಾಸ್ತ್ರಿಗಳು, ಹಿರೇಮಠ, ಶಿರೋಳ.
ಪೋ|| ಶಿರೋಳ, ನರಗುಂದ, ಡಿ|| ಧಾರವಾಡ.

ಕಡೂರು ತಾ|| ಕುಂಕಾನಾಡು.

ಈ ಗ್ರಾಮಕ್ಕೆ ಧರ್ಮಸರ್ಕಾರದವರು ದಯಪಾಲಿಸಿರುವ ಪ್ರೈಮರಿ ಸ್ಕೂಲಿನ ಹೆ|| ಮಾ|| ಕೆ. ಮೇಲುಗಿರಿಯಪ್ಪನವರು ನಮ್ಮ ಸ್ಕೂಲಿಗೆ ದಯಮಾಡಿಸಿ ಸುಮಾರು 5 ವರುಷಗಳ ಮೇಲಾಗುತ್ತಾ ಬಂತು. ಅಂದಿನಿಂದಲೂ ಸದರಿ ಮೇಲುಗಿರಿಯಪ್ಪನವರು ಕೋಮುವಾರು ಜನಗಳ ಪ್ರೀತಿವಿಶ್ವಾಸಕ್ಕೂ, ವಿದ್ಯಾರ್ಥಿಗಳ ಚಿರಕೃತಜ್ಞತೆಗೂ, ಇಲಾಖಾ ಅಧಿಕಾರಿಗಳ ಮೆಚ್ಚಿಗೆಗೂ ಪಾತ್ರರಾಗಿ ಶ್ರದ್ಧೆಯಿಂದ ಕೆಲಸ ಮಾಡುತ್ತ ಲೇಟ್ ಮಾಸ್ಟರ್ ಎ. ಚನ್ನಪ್ಪನವರ ಹಾಗೆ ಯಾವಾಗಲೂ ತಮ್ಮ ಎಲ್ಲಾ ಕಾಲವನ್ನು ವಿದ್ಯಾವಿಚಾರದಲ್ಲಿಯೇ ವಿನಿಯೋಗ ಮಾಡುತ್ತಿರುವುದು ಕೇವಲ ಆನಂದದಾಯಕವೇ ಆಗಿರುತ್ತದೆ. ಇಂಥ ಪರೋಪಕಾರನಿರತರಾದ ಮ|| ಮೇಲುಗಿರಿಯಪ್ಪನವರ ಧರ್ಮಪತ್ನಿಯವರಾದ ಶ್ರೀಮತಿ ರಂಗಮ್ಮನವರು ತಮಗೆ ಸಂಭವಿಸಿದ ಬಾಣಂತಿಸನ್ನಿ ಎಂಬ ದುಷ್ಟರೋಗದಿಂದ ವೈಕುಂಠವಾಸಿಗಳಾದ ಪ್ರಯುಕ್ತ, ಪತ್ನೀವಿಯೋಗ ದುಃಖದಿಂದ ಪರಿತಪಿಸುತ್ತಿರುವ ಮೇಲುಗಿರಿಯಪ್ಪನವರಿಗೆ ಧರ್ಮಾರ್ಥವಾಗಿ ವಿವಾಹಮಾಡಬೇಕೆಂದು ಗ್ರಾಮ ಮುಖಂಡರಾದ ಮ|| ರಾ|| ಪುಟ್ಟಚಿಕ್ಕೇಗೌಡರು ಸಂಕಲ್ಪಿಸಿರುವ ವಿಷಯವನ್ನು ತಿಳಿಸಲು ಸಂತೋಷವಾಗುತ್ತದೆ. ಇಂಥ ಧರ್ಮಜ್ಞರು ಗ್ರಾಮಾಂತರಗಳಲ್ಲಿ ಉದಯಿಸುವುದೇ ಅಪೂರ್ವವಾಗಿರುತ್ತದೆ. ಈ ಮಹನೀಯರ ಧರ್ಮಸಂಕಲ್ಪವನ್ನು ಶ್ರೀಪರಮೇಶ್ವರನು ಶೀಘ್ರವಾಗಿ ನೆರವೇರಿಸಲೆಂದು ಹಾರೈಸುವ,

ಧರ್ಮಾಭಿಮಾನಿ,

ಸನಾತನಧರ್ಮಾವಲಂಬಿಗಳಲ್ಲಿ ಸವಿನಯ ಪ್ರಾರ್ಥನೆ.

ಅಯ್ಯಾ! ಸನಾತನಧರ್ಮಾವಲಂಬಿಗಳಾದ ನನ್ನ ಪ್ರಿಯ ಸಹೋದರರೇ? ಸ್ವರಾಜ್ಯವಾದಿಗಳು ಈಗತಾನೇ ಭರಭರಾಟಿಯಿಂದ ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶಮಾಡಿಸಲು ಕಟಿಬದ್ಧರಾಗಿ ತಮ್ಮ ಕಾರ್ಯವನ್ನು ನಡೆಸಿರುವರಷ್ಟೇ! ಅಸ್ಪೃಶ್ಯರನ್ನು ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಿಸುವುದು, ವೈದಿಕಧರ್ಮಕ್ಕೆ ತುಂಬಾ ಕುಂದಕವೆಂದು ಹೇಳಲಭ್ಯಂತರವಿಲ್ಲ. ಸ್ವಕಾರ್ಯಧುರೀಣರಾದ ಸ್ವರಾಜ್ಯವಾದಿಗಳು ದೇವಾಲಯಗಳಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸಿ ಧರ್ಮದ ಮೂಲೋತ್ಪಾಟನ ಮಾಡಲು ಇದೀಗತಾನೆ ಸಿದ್ಧರಾಗಿದ್ದಾರೆ. ನಾಮಮಾತ್ರದಿಂದ ಧರ್ಮವನ್ನು ಅವಲಂಬಿಸಿದ ಹಲಕೆಲವರಿಗೆ ಸ್ವರಾಜ್ಯವಾದಿಗಳ ತತ್ವವು (ಅಸ್ಪೃಶ್ಯತಾನಿವಾರಣೆಯು) ಬಹು ಸಮಂಜಸವಾಗಿ ಕಂಡು ಅವನ್ನೇ ಈಗ ಸ್ವರಾಜ್ಯವಾದಿಗಳೊಡನೆ ನಾದಕೂಡಿಸ ಹತ್ತಿರುವರು. ಅನಾಮಧೇಯರಾದ ಹಲಕೆಲವು ಸ್ವಾಮಿಗಳು ಅಸ್ಪೃಶ್ಯರನ್ನು ಉದ್ಧಾರಮಾಡುತ್ತೇವೆಂದು ವರ್ತಮಾನಪತ್ರಗಳ

[೬ ನೆಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೩ ನೇ ಜನವರಿ ತಾ|| ೯ ನೇ ಸೋಮವಾರ.

ಆಸ್ತಿಕಧರ್ಮ.

ನಮ್ಮ ಭರತಖಂಡದಲ್ಲಿ ಪೂರ್ವಾಚಾರ್ಯರಿಂದ ಅನಂತ ಮತಗಳು ಸ್ಥಾಪಿಸಲ್ಪಟ್ಟಿರುತ್ತವೆ. ಈ ಮತಗಳೆಲ್ಲವೂ ಸೃಷ್ಟಿ ಸ್ಥಿತಿ ಸಂಹಾರಕರ್ತನಾದ ಪರಮಾತ್ಮನನ್ನು ಲಕ್ಷೀಕರಿಸುತ್ತವೆಯಲ್ಲದೆ ಇನ್ನಾರನ್ನೂ ಲಕ್ಷೀಕರಿಸುವುದಿಲ್ಲ. ಪರಮಾತ್ಮನ ಸ್ವರೂಪವಾಗಲಿ, ಅವನ ಉಪಾಸನೆಯಾಗಲಿ ಎಲ್ಲವೂ ವೇದಾಗಮಗಳಲ್ಲಿ ವಿಸ್ತರಿಸಲ್ಪಟ್ಟಿರುತ್ತದೆ. "ಯದಾ ಚರ್ಮವದಾಕಾಶಂ ಪರಿವೇಷ್ಟಯಿಷ್ಯಂತಿ ಮಾನವಾಃ | ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ" ಮಾನವರು ಯಾವಾಗ ಆಕಾಶವನ್ನು ತೆಗೆದುಕೊಂಡು ಚರ್ಮದಂತೆ ತಮ್ಮ ಶರೀರಕ್ಕೆ ಸುತ್ತಿಕೊಳ್ಳುತ್ತಾರೆಯೋ ಆಗ ಶಿವನನ್ನು ತಿಳಿಯದಿದ್ದರೂ ಈ ಜನನಮರಣರೂಪ ದುಃಖದಿಂದ ನಿವೃತ್ತರಾಗಬಲ್ಲರು ಎಂದು ಶ್ರುತಿಯು ಸಾರುತ್ತದೆ. ಅಂದರೆ ಪರಮಾತ್ಮನ ಸ್ವರೂಪವನ್ನೂ ಪರಮಾತ್ಮನುಪಾಸನೆಯನ್ನೂ ಮಾಡದವರು ಎಂದೂ ದುಃಖದಿಂದ ಬಿಡುಗಡೆಯಾಗುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಭವದುಃಖವನ್ನು ದೂರೀಕರಿಸಿ ಸುಖವನ್ನನುಭವಿಸಬೇಕೆಂಬುವುದೇ ಜೀವರ ಮುಖ್ಯಧರ್ಮವಾಗಿದೆ. ಸುಖದಲ್ಲಿ ಐಹಿಕಸುಖವೆಂತಲೂ, ಆಮುಷ್ಮಿಕಸುಖವೆಂತಲೂ, ಪಾರಮಾರ್ಥಿಕಸುಖವೆಂತಲೂ ಮೂರುವಿಧವಾಗಿರುತ್ತದೆ. ಸ್ರಕ್ಚಂದನವನಿತಾದಿ ಪ್ರಪಂಚ ವಿಷಯಾನುಭವದಿಂದುಂಟಾಗುವ ಸೌಖ್ಯವೇ ಐಹಿಕಸುಖವೆನಿಸುವದು. ಯಜ್ಞಾದಿ ಕರ್ಮಾನುಷ್ಠಾನದಿಂದ ಶರೀರಾನಂತರದಲ್ಲಿ ಉಂಟಾಗುವ ಸ್ವರ್ಗಾದಿ ಭೋಗವೇ ಆಮುಷ್ಮಿಕಸುಖವೆನಿಸುವದು. ಕೇವಲ ಭಕ್ತಿಜ್ಞಾನವೈರಾಗ್ಯಗಳನ್ನವಲಂಬಿಸಿ ಪರಮಾತ್ಮೋಪಾಸನೆಯಿಂದಾಗುವ ನಿತ್ಯಾನಂದರೂಪವಾದ ಮುಕ್ತಿಯೇ ಪಾರಮಾರ್ಥಿಕಸುಖವೆನಿಸುವದು. ಈ ಮೂರುವಿಧವಾದ ಸುಖಗಳನ್ನು ಅನುಭವಿಸುವ ಯೋಗ್ಯತೆಯು ವಿವೇಕಭೂಯಿಷ್ಠರಾದ ಮನುಷ್ಯರಿಗಿರುವುದಲ್ಲದೆ ಮನುಷ್ಯೇತರ ಪ್ರಾಣಿಗಳಿಗಿರುವುದಿಲ್ಲ. ಇತರ ಪ್ರಾಣಿಗಳಿಗಾದರೂ ವಿಷಯಾನುಭವದಿಂದಾಗುವ ಸೌಖ್ಯವನ್ನನುಭವಿಸುವ ಯೋಗ್ಯತೆಯು ಮಾತ್ರ ಇರುತ್ತದೆ. ಆದುದರಿಂದ ವಿವೇಕಿಯಾದ ಮಾನವನು ಪಶ್ವಾದಿಗಳಂತೆ ಕೇವಲ ವಿಷಯಲೋಲನಾಗಿರದೆ ಮುಂದಿನ ಆಮುಷ್ಮಿಕ ಪಾರಮಾರ್ಥಿಕ ಸೌಖ್ಯವನ್ನು ಅನುಭವಿಸುವ ಶಕ್ತಿಯನ್ನು ಪಡೆದವನಾಗಿರಬೇಕು. ಹಾಗಿಲ್ಲದೆ ಐಹಿಕ ಸೌಖ್ಯದಲ್ಲಿ ಮಾತ್ರ ಮಗ್ನನಾಗಿ ಉಳಿದ ಸೌಖ್ಯಕ್ಕೆ ತಿಲಾಂಜಲಿಯನ್ನು ಕೊಡುತ್ತ ತತ್ಸಾಧಕಗಳಾದ ವೇದಾಗಮಗಳಿಗೂ ಅವುಗಳ ಸ್ವರೂಪವನ್ನು ವಿವರಿಸುವ ಗುರುದೇವರಿಗೂ ಶರಣುಹೊಡೆದು "ಋಣಂ ಕೃತ್ವಾ ಘೃತಂ ಪಿಬೇತ್" ಎಂದೆನ್ನುವ ಚಾರ್ವಾಕಮತೀಯರಂತೆ ಯಾರು ಬಿದ್ದರೇನು? ಯಾರು ಎದ್ದರೇನು? ತಾನೂ ತನ್ನ ಪರಿವಾರವೂ ಮಾತ್ರ ಸೌಖ್ಯವಾಗಿದ್ದರೆ ಸಾಕೆಂದು ತಿಳಿದುಕೊಂಡಿರುವವರು ಅತಿಮೂಢರೆಂದೇ ಭಾವಿಸಲ್ಪಡತಕ್ಕವರಾಗಿದ್ದಾರೆ. "ವಿವೇಕಹೀನಃ ಪಶುಭಿಸ್ಸಮಾನಃ" ಎಂಬ ಉಕ್ತಿಯಂತೆ ಇಂಥ ವಿವೇಕಶೂನ್ಯರಾದ ಸ್ವಾರ್ಥಿಗಳು ಪಶುಸಮಾನರೇ ಸರಿ! ತತ್ಕ್ಷಣದಲ್ಲಿ ಸುಖವಾಗಿ ತೋರಿಬರುವ ಐಹಿಕಸುಖಕ್ಕಿಂತಲೂ ಆಮುಷ್ಮಿಕಸುಖವು ಸ್ವಲ್ಪ ದೊಡ್ಡದು. ಇವೆರಡಕ್ಕಿಂತಲೂ ಪಾರಮಾರ್ಥಿಕಸುಖವು ದೊಡ್ಡದು. ಆದರೆ ಐಹಿಕಸುಖವನ್ನು ಈ ದೇಹವಿರುವಾಗಲೂ ಆಮುಷ್ಮಿಕಸುಖವನ್ನು ದೇಹಾಂತ್ಯದಲ್ಲಿಯೂ ಅನುಭವಿಸಬೇಕಾಗುವದು. ಪಾರಮಾರ್ಥಿಕಸೌಖ್ಯವನ್ನು ದೇಹವಿರುವಾಗಾಗಲಿ ದೇಹವನ್ನು ಬಿಟ್ಟಮೇಲಾಗಲಿ ಹೊಂದಬಹುದಾಗಿದೆ. ಉಭಯಸುಖಸಾಧಕಗಳಾದ ವೇದಾಗಮಗಳನ್ನೂ ಗುರುದೇವತಾದಿಗಳನ್ನೂ ಬಿಟ್ಟು ಕೇವಲ ಐಹಿಕಸುಖವೊಂದರಲ್ಲಿ ಮಗ್ನರಾಗುವುದರಿಂದ ಜನನಮರಣಪ್ರವಾಹವು ತಪ್ಪುವುದೇ ಇಲ್ಲವು. ಆಮುಷ್ಮಿಕಫಲದಿಂದಾದರೂ ಬಂದಾಸೊಂದು ಕಾಲದಲ್ಲಿ ಮರಳಿ ಜನ್ಮವನ್ನು ಧರಿಸಬೇಕಾಗುವುದು. ಪಾರಮಾರ್ಥಿಕಸುಖವು ನಿತ್ಯವಾದುದರಿಂದ ಇದನ್ನು ಪಡೆದವರು ಪುನಃ ಈ ಭವಚಕ್ರದಲ್ಲಿ ಸಿಕ್ಕುವುದಿಲ್ಲ. ಈ ವಿಷಯದಲ್ಲಿ "ನ ಸ ಪುನರಾವರ್ತತೇ" ಎಂಬ ಶ್ರುತಿಯೇ ಬಲವಾದ ಸಾಕ್ಷಿಯಾಗಿರುತ್ತದೆ. ಆದುದರಿಂದ ಹಿಂದೆ ಪ್ರತಿಯೊಬ್ಬ ಪೂರ್ವಾಚಾರ್ಯರು ಮಾನವೋದ್ಧಾರಕ್ಕಾಗಿ ಈಶ್ವರಪ್ರೇರಿತರಾಗಿ ಭೂಲೋಕದಲ್ಲಿ ಅವತರಿಸಿ ವೇದಾಗಮಗಳಲ್ಲಿ ಪ್ರತಿಪಾದಿತವಾದ ಪರಮಾತ್ಮನ ನಿತ್ಯಸೌಂದರ್ಯಾದಿಗುಣವಿಭೂತಿಯನ್ನು ಹೊಗಳುತ್ತ, ದೀಪಕ್ಕೆರಗಿದ ಪತಂಗದಂತೆ ಕೇವಲ ವಿಷಯಲೋಲರಾಗಿ ನಾಶವಾಗುತ್ತಿರುವ ಮಾನವರನ್ನು ಪರಿಶುದ್ಧಗೊಳಿಸುತ್ತ, ನಿತ್ಯಸುಖಸಾಧನವಾದ ಪಾರಮಾರ್ಥಿಕಮಾರ್ಗದಲ್ಲಿ ಕಾಲಿಡುವಂತೆ ಮಾಡುತ್ತ ಜಗತ್ತನ್ನೆಲ್ಲಾ ಆಸ್ತಿಕಮಯವನ್ನಾಗಿ ಮಾಡಿದ್ದರು. ಇಂಥ ಲೋಕಕಲ್ಯಾಣಕಾರಿಯಾದ ಕಾರ್ಯವನ್ನು ಮಾಡಿದ್ದರಿಂದಲೇ ಆ ಮಹಾನುಭಾವರ ಕೀರ್ತಿಯು ಅಂದಿನಿಂದಲೂ ಪ್ರಪಂಚವಿರುವವರೆಗೂ ಅಚ್ಚಳಿಯದಂತೆ ಉಳಿದುಕೊಂಡೇ ಬರುವದು. ಇತ್ತೀಚೆಗೆ ನಮ್ಮ ಭಾರತೀಯರಲ್ಲಿ ಅನೇಕರು ಕಲಿದೋಷದಿಂದ ಭವಸಮುದ್ರವನ್ನು ದಾಟಿಸುವುದರಲ್ಲಿ ಹಡಗಿನಂತಿರುವ ಭಗವತ್ಸ್ವರೂಪಸಾಕ್ಷಾತ್ಕಾರವೆಂಬ ಪಾರಮಾರ್ಥಿಕ ಸುಖಕ್ಕೂ ಸ್ವರ್ಗಾದಿಸಿದ್ಧಿಯೆಂಬ ಆಮುಷ್ಮಿಕಸುಖಕ್ಕೂ ಮನಸ್ಸುಕೊಡದೆ ಐಹಿಕಸೌಖ್ಯದಲ್ಲಿಯೇ ನಿರತರಾಗಿ ಸುಖವೇ ಸ್ವರ್ಗ, ದುಃಖವೇ ನರಕ ಎಂಬ ಚಾರ್ವಾಕರ ಪ್ರತ್ಯಕ್ಷವಾದವನ್ನು ಪುಷ್ಟೀಕರಿಸುತ್ತಿರುತ್ತಾರೆ. ಇದರಿಂದ ಭಾರತಭೂಮಿಯಮೇಲೆ ಸೃಷ್ಟ್ಯಾರಂಭದಿಂದ ವಿಹರಿಸುತ್ತಿರುವ ಶ್ರುತಿದೇವಿಯು ತನ್ನನ್ನವಲಂಬಿಸಿರುವ ಭಾರತಪುತ್ರರ ನಾಸ್ತಿಕತೆಯನ್ನು ನೋಡಿ ಕುಪಿತಳಾಗದಿರಲಾರಳು. ಇನ್ನು ವೇದಮಾತೆಯು ಕುಪಿತಳಾದಮೇಲೆ ಅಂಥ ವೇದಮಾತೃವಿನ ಗರ್ಭಸಾಗರದಲ್ಲಿ ಪ್ರಜ್ವಲಿಸುತ್ತಿರುವ ಪರಮಾತ್ಮನೆಂಬ ಚಿಂತಾಮಣಿಯ ಸಾಕ್ಷಾತ್ಕಾರವು ದೂರವೇ ಉಳಿಯಿತು. ಯಾರಿಗೆ ಜನ್ಮನಿವೃತ್ತಿಯೆಂಬ ಪಾರಮಾರ್ಥಿಕ ಸುಖದಲ್ಲಿ ಅಭಿಲಾಷೆಯಿರುವುದೋ ಅವರು ವೇದದಲ್ಲಿಯೂ, ವೇದೋಕ್ತವಾದ ಈಶ್ವರನಲ್ಲಿಯೂ, ಆ ಈಶ್ವರಪ್ರೀತಿಸಾಧಕವಾದ ಧ್ಯಾನ, ಜ್ಞಾನ, ಭಜನ, ಅರ್ಚನ, ಜಪಾದಿಗಳಲ್ಲಿಯೂ ಆಸಕ್ತರಾಗಿದ್ದು ತಮ್ಮ ಭಾರತಧರ್ಮವನ್ನು ಕಾಪಾಡುತ್ತ ಬರಬೇಕು. ಆದರೆ ತಮ್ಮ ತಮ್ಮ ಮತಾಚಾರ್ಯರು ಜನ್ಮನಿವೃತ್ತಿಗಾಗಿ ಯಾವ ಯಾವ ಧರ್ಮಗಳನ್ನು ನಿಬಂಧನೆಮಾಡಿರುವರೋ ಅಂಥ ಧರ್ಮಗಳನ್ನು ಅನುಸರಿಸಿ ಐಹಿಕಸೌಖ್ಯವನ್ನು ಅಭಿಲಷಿಸಬೇಕಲ್ಲದೆ ಆತ್ಮೋದ್ಧಾರ ಸಾಧಕಗಳಾದ ಆಮುಷ್ಮಿಕಪಾರಮಾರ್ಥಿಕ ಮಾರ್ಗಗಳಿಗೆ ವಿರೋಧವನ್ನುಂಟುಮಾಡುವ ಐಹಿಕಸೌಖ್ಯವನ್ನು ಅಭಿಲಷಿಸಬಾರದು. ಇದೇ ಭಾರತಭೂಮಿಯಲ್ಲಿ ವೇದಾಗಮಗಳ ಮೂಲಕ ಸ್ಥಾಪಿತಗಳಾದ ವೈದಿಕಮತಗಳ ರೀತಿಯಾಗಿದೆ. ಪ್ರಪಂಚದಲ್ಲಿ ಆಸ್ತಿಕಜನಗಳಿಗೆ ಯಾವ ರಾಜ್ಯಲಾಭವೇ ಆಗಲಿ, ಯಾವ ಅಪಾರವಾದ ಸಂಪತ್ತೇ ಆಗಲಿ ದೊರೆಯಲಿ, ಅಥವಾ ದೊರೆಯದೆ ಹೋಗಲಿ ತಮ್ಮ ತಮ್ಮ ಮತಾಚಾರ್ಯರು ಭಾರತಭೂಮಿಯಲ್ಲಿ ನಟ್ಟಿರುವ ಧರ್ಮಸ್ತಂಭದ ಆಧಾರವನ್ನು ಮಾತ್ರ ಬಿಡಲಾಗದು. ಏಕೆಂದರೆ—"ಆತ್ಮಾರ್ಥಂ ಪೃಥಿವೀಂ ತ್ಯಜೇತ್" ಆತ್ಮೋದ್ಧಾರಕ್ಕೆ ಪ್ರತಿಬಂಧವಾಗುವ ಪಕ್ಷದಲ್ಲಿ ಆಗ ಅಂಥ ಪೃಥಿವಿಯನ್ನಾದರೂ ಬಿಟ್ಟುಬಿಟ್ಟರೂ ಚಿಂತೆಯಿಲ್ಲ ಎಂದು ನೀತಿಯಿರುವುದರಿಂದ ಕೇವಲ ರಕ್ತ ಮಾಂಸ ಅಸ್ಥಿ ಚರ್ಮಮಯವಾದ ಅಸ್ಥಿರದೇಹದ ಸೊಬಗಿಗಾಗಿ ಪರಮಾತ್ಮನ ಅಂಶಭೂತವಾದ ಪವಿತ್ರಾತ್ಮನನ್ನು ಯಥಾಪ್ರಕಾರ ಪರಮಾತ್ಮನಲ್ಲಿಯೇ ಸೇರಿಸುವ ಯೋಜನೆಯನ್ನು ಬಿಟ್ಟು, ಆಪಾತತಃ ರಮಣೀಯವಾಗಿ ತೋರಿಬರುತ್ತಿರುವ ಅಧರ್ಮದಲ್ಲಿ ಪ್ರವೇಶಿಸುವಂತೆ ಮಾಡಿ ಆತ್ಮನನ್ನು ನರಕಕ್ಕೆಳೆಯುವುದೆಂದರೆ ಆತ್ಮನನ್ನು ವಂಚಿಸಿದಂತೆ ಆಗುವುದು. ಈ ದೇಹವು ಆತ್ಮರಕ್ಷಣೆಗೆ ಸಾಧನವಾಗಿರುವುದಲ್ಲದೆ ಕೇವಲ ವನಿತಾದಿಸೌಖ್ಯವನ್ನು ಅನುಭವಿಸಲು ಸಾಧನವಲ್ಲವು. ಇಂಥ ಅಮೂಲ್ಯ ದೇಹವನ್ನು ದುರ್ವಿನಿಯೋಗ ಮಾಡಿ ಪರಮಾತ್ಮ ಸಂಕಲ್ಪವನ್ನು ಭಂಗಪಡಿಸುತ್ತ ಬಂದರೆ ಅಂಥವರಿಗೆ ಹಿಂದೆ ಅನೇಕ ಪುಣ್ಯಪರಿಪಾಕದಿಂದ ಬಂದ ಈ ಬುದ್ಧಿಜ್ಞಾನಗಳಿಂದೊಡಗೂಡಿದ ದೇಹವೇ ವ್ಯರ್ಥವಾಗುವದು. ದೇಹದೊಳಗೆ ಆತ್ಮನು ಇರುವುದರಿಂದಲೇ ಈ ದೇಹಕ್ಕೆ ಒಂದು ವಿಧವಾದ ಗಾಂಭೀರ್ಯಸೌಷ್ಠವಾದಿಗಳು ಪ್ರಾಪ್ತವಾಗಿವೆ. ಎಂದು ಆತ್ಮನು ಈದೇಹವನ್ನು ಬಿಡುವನೋ ಅಂದೇ ಈ ದೇಹವನ್ನು ಕೇಳುವರಾರು? ಆದ್ದರಿಂದ ದೇಹಸಹಿತವಾದ ಮನಸ್ಸು ಅಧರ್ಮಕಾರ್ಯಗಳಲ್ಲಿ ಪ್ರವರ್ತಿಸಿ ಈ ಉತ್ತಮವಾದ ಶರೀರಕ್ಕೆ ಬದಲಾಗಿ ನಾಯಿ ನರಿ ಹಂದಿ ಮೊದಲಾದ ಕೀಳುಶರೀರಗಳನ್ನು ಧರಿಸುವಂತೆ ಮಾಡಿ ಪರಮಾತ್ಮಾಂಶೀಭೂತರಾದ ಆತ್ಮರ ಉತ್ತಮ ಸ್ಥಿತಿಯನ್ನು ಹಾಳುಮಾಡಿಕೊಂಡರೆ ತನ್ನ ತಲೆಯ ಮೇಲೆ ತಾನೇ ಬಂಡೆಗಲ್ಲನ್ನೆತ್ತಿ ಹಾಕಿಕೊಂಡ ಮಹಾಮೂರ್ಖನಂತಾಗದಿರಲಾರದು. ಈ ದೇಹವು ಅಧರ್ಮವೆಂಬ ದುಷ್ಕಾರ್ಯದಲ್ಲಿ ಹೋಗಗೊಡದಂತೆ ಧರ್ಮವೆಂಬ ಹಗ್ಗದಿಂದ ಮಾನವರ ಮನಸ್ಸನ್ನು ತನ್ನ ಕಡೆಗೆಳೆಯುವುದಕ್ಕಾಗಿ ಪರಮಾತ್ಮನು ವೇದಶಾಸ್ತ್ರಪುರಾಣಗಳನ್ನು ಅನುಗ್ರಹಿಸಿ ಆಚಾರ್ಯಭಗವತ್ಪಾದರನ್ನೂ ಮಹರ್ಷಿಗಳನ್ನೂ ಭೂಲೋಕಕ್ಕೆ ಕಳುಹಿಸಿದನು. ಅವರುಗಳೆಲ್ಲರೂ ಒಂದೊಂದು ಪವಿತ್ರಮಾರ್ಗಗಳನ್ನು ಆತ್ಮರಿಗೆ ತೋರಿಸಿಕೊಟ್ಟಿರುತ್ತಾರೆ. ಅನೂಚಾನವಾಗಿ ಬಂದ ಆತ್ಮೋದ್ಧಾರಸಾಧಕಗಳಾದ ಅಂಥ ಮಾರ್ಗಗಳಿಗೆಲ್ಲಾ ಈಗಿನ ನವನಾಗರಕರು ಸ್ವೇಚ್ಛಾಚಾರಗಳೆಂಬ ವಿಷದ ಮುಳ್ಳನ್ನು ತುಂಬುತ್ತಿರುವದು ಕೇವಲ ಶೋಚನೀಯವಾದ ವಿಷಯವಾಗಿದೆ. ಇವರು ಇನ್ನಾದರೂ ತಮ್ಮ ಪೂರ್ವಾಚಾರ್ಯರು ಹಾಕಿರುವ ತಮ್ಮ ಪವಿತ್ರ ಭಾರತಧರ್ಮವನ್ನು ಸ್ಮರಿಸಿಕೊಂಡು ಯಥಾಸ್ಥಿತಿಯನ್ನು ಹೊಂದುವಂತೆ ಪರಮಾತ್ಮನು ಅನುಗ್ರಹಿಸಲಿ.

ಒಳದೇಶದ ವೃತ್ತಾಂತಗಳು.

ಬೆರಕೆ ತುಪ್ಪವನ್ನು ಮಾರಿದರೆಂಬ ಕಾರಣದಮೇಲೆ ಬೆಂಗಳೂರು ಬೆಂಚ್‌ಮ್ಯಾಜಿಸ್ಟ್ರೇಟರು ಬಿ. ರಾಮರಾವ್ ಎಂಬವರಿಗೆ 25 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು.

ಅರಮನೆಯ ಗಾಯಕಿಯಾಗಿದ್ದು ಮೃತಪಟ್ಟ ಗೋಹರ್‌ಜಾನಳ ಚರಆಸ್ತಿಯು ಈ ದಿವಸ ಸಿಟಿಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವುದು.

ಜನವರಿ 4ನೇ ತಾರೀಖಿನ ದಿವಸ ಬೆಂಗಳೂರಿನಿಂದ ದೇವನಹಳ್ಳಿಗೆ ಹೋಗುತ್ತಿದ್ದ ಬಾಲಕೃಷ್ಣ ಮೋಟಾರ್ ಸರ್ವಿಸ್ಸಿನಬಸ್ಸು ಒಬ್ಬ ಮುದುಕನಮೇಲೆ ಹರಿದು, ಮುದುಕನು ಆಸ್ಪತ್ರೆಯಲ್ಲಿ ಮೃತಪಟ್ಟನು.

"ಮೈಸೂರು ಬ್ಲೂಬಕ್ ಜರ್ನಲ್" ಎಂಬ ಸರಕಾರಿ ಮಾಸಪತ್ರಿಕೆಯ ಸಂಪಾದಕರಾಗಿದ್ದು ಕಳೆದ ದಸರಾವಲ್ಲಿ ಶ್ರೀಮನ್ಮಹಾರಾಜರವರಿಂದ "ರಾಜಚರಿತ್ರವಿಶಾರದ" ಎಂಬ ಬಿರುದನ್ನು ಪಡೆದ ಶ್ರೀ|| ಹಯವದನರಾಯರಿಗೆ ಇಂಡಿಯಾ ಗವರ್ನಮೆಂಟಿನವರು "ರಾವ್‌ಸಾಹೇಬ್" ಎಂಬ ಬಿರುದನ್ನು ದಯಪಾಲಿಸಿರುತ್ತಾರೆ.

ರಾಜಧಾನಿಯ ಸಂತೇಪೇಟೆಯ ವರ್ತಕಮಂಡಳಿಯವರು ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿಗಾಗಿ ಪ್ರತಿವರ್ಷ ವರ್ಧಂತಿಮಹೋತ್ಸವ ಸಮಯದಲ್ಲಿ ಬಡಬಗ್ಗರಿಗೆ ನಡೆಯಿಸುತ್ತಿದ್ದ ಅನ್ನಸಂತರ್ಪಣೆಯನ್ನು ಇದೇ 1933 ನೇ ಇಸವಿ ಜನವರಿ 1 ನೇ ತಾರೀಖು ಭಾನುವಾರ ದಿವಸ ಸಂತೇಪೇಟೆಯಲ್ಲಿ ಅತ್ಯಂತ ವಿತರಣೆಯಿಂದ ನೆರವೇರಿಸಿದರು.

ಕಳೆದ ಡಿಸೆಂಬರು 21 ನೇ ತಾರೀಖಿನ ದಿವಸ ಬೆಳಗ್ಗೆ ರಾಜಧಾನಿಯ ಪೂರ್ವಭಾಗದಲ್ಲಿರುವ ಶ್ರೀಮದ್ಯುವರಾಜರವರ ಬಂಗಲೆಯ ಮೈದಾನದಲ್ಲಿ ಒಂದು ಚಿರತೆಯು ಸೇರಿಕೊಂಡು ಬಂಗಲೆಯಲ್ಲಿದ್ದವರಿಗೆಲ್ಲಾ ಬಹಳಗಾಬರಿಯನ್ನುಂಟುಮಾಡಿತ್ತು. ಕೂಡಲೇ ಶಿಕಾರಿಮಾಡುವವರಿಗೆ ಹೇಳಿಕಳುಹಿಸುವಲ್ಲಿ ಮಿ|| ಡಬ್ಲ್ಯು. ಎಚ್. ಥಿಯೋಬಾಲ್ಡ್‌ರವರು ತತ್ಕ್ಷಣವೇ ಬಂದು ಚಿರತೆಯು ಅವಿತುಕೊಂಡಿದ್ದ ಸ್ಥಳವನ್ನು ಪತ್ತೆಮಾಡಿ ಒಂದೇಒಂದು ಗುಂಡಿನಿಂದ ಅದನ್ನು ಕೊಂದರು.

ಕಳೆದ ಮಂಗಳವಾರ ಬೆಳಗ್ಗೆ ಮಾಡರ್ನ್ ಮೋಟಾರ್ ಸರ್ವಿಸ್ಸಿನ ಬಸ್ಸು ರಾಜಧಾನಿಯಿಂದ ಹುಣಸೂರಿಗೆ ಹೋಗುತ್ತಿದ್ದಾಗ ಎದುರಾಗಿ ಒಂದು ಎತ್ತಿನಬಂಡಿಯು ಬಂದಿತೆಂದೂ, ಅದಕ್ಕೆ ಬಡಿಯದಂತೆ ಡ್ರೈವರು ಬಸ್ಸನ್ನು ತಿರುಗಿಸುವಲ್ಲಿ ಅದು ಹತೋಟಿ ತಪ್ಪಿ ಪಕ್ಕದಲ್ಲಿದ್ದ ಸಾಲುಮರಗಳಿಗೆ ಬಡಿದು ಮೊಗಚಿಕೊಂಡಿತೆಂದೂ ತಿಳಿದುಬಂದಿದೆ. ಈ ಅನಾಹುತದಲ್ಲಿ ಹತ್ತು ಜನ ಪ್ರಯಾಣಿಕರಿಗೆ ಗಾಯಗಳಾಗಿ ಸದ್ಯಃ ಅವರೆಲ್ಲರೂ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ವರ್ತಮಾನಸಂಗ್ರಹ

ಎರಡುತಲೆಯ ಆಮೆಯೊಂದು ಅಮೇರಿಕಾದೇಶದ ಸ್ಕೈನೆಕ್ಟಡಿ ಸರೋವರದಲ್ಲಿ ದೊರೆತಿರುವದು.

ಮುಂಬಯಿಯಲ್ಲಿ ಒಂದು ಹತ್ತಿಯುಗಡಂಗಿಗೆ ಬೆಂಕಿಬಿದ್ದು 2 ಲಕ್ಷರೂಪಾಯಿಗಳ ಬೆಲೆಬಾಳುವ ಹತ್ತಿಯು ಸುಟ್ಟು ಭಸ್ಮವಾಯಿತು.

ಜಮಖಂಡಿ ಸಂಸ್ಥಾನ ಪ್ರಜೆಗಳ ಪರಿಷತ್ತು ಇದೇ ಜನವರಿ 21 ಮತ್ತು 22 ನೇ ತಾರೀಖುಗಳಲ್ಲಿ ಕುಂದಗೋಳದಲ್ಲಿ ನಡೆಯುವದೆಂದು ತಿಳಿದುಬಂದಿದೆ.

ಜರ್ಮನ್ ಸರಕಾರದವರು ಬಣ್ಣದ ತಯಾರಿಗೋಸ್ಕರ 2,00,000 ಬಿಳೇ ಚಿಟ್ಟೆಹುಳುಗಳು ಬೇಕಾಗಿವೆಯೆಂದು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಚಿಕಾಗೋ ನಗರದ ಒಬ್ಬ ತರುಣಿಯು ಈಗ್ಗೆ 10 ತಿಂಗಳುಗಳ ಹಿಂದೆ ಮಲಗಿದವಳು ಇನ್ನೂ ಎದ್ದೇ ಇಲ್ಲವಂತೆ! ಡಾಕ್ಟರುಗಳು ಇದನ್ನು 'ನಿದ್ರೆಯರೋಗ' ನೆಂದು ಕರೆಯುತ್ತಿರುವರು.

ಆಳ್ವಾರ್ ಮಹಾರಾಜರು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಸನಾತನಧರ್ಮದ ಸೇವೆಯನ್ನು ಮಾಡುವದಕ್ಕೋಸ್ಕರ ತಮ್ಮ ರಾಜ್ಯಾಡಳಿತವನ್ನು ಬಿಟ್ಟುಕೊಡುವರೆಂದು ತಿಳಿದುಬಂದಿದೆ.

ಮಧ್ಯರಾಜಪುತಾಣ ಮತ್ತು ಮಧ್ಯಹಿಂದೂಸ್ಥಾನದ ಪ್ರಾಂತಗಳಲ್ಲಿ ಆರ್ಥಿಕದುರವಸ್ಥೆಯು ಅತ್ಯುಗ್ರವಾಗಿದ್ದು ರೈತರು ತಮ್ಮ ತಮ್ಮ ಮಕ್ಕಳನ್ನು 15 ಅಥವಾ 20 ರೂಪಾಯಿಗಳಿಗೆ ಮಾರುತ್ತಿರುವರು.

ಅಮೇರಿಕೆಗೆ ಸೇರಿದ ನ್ಯೂಜರ್ಸಿ ನಗರದ ಒಬ್ಬ ರೈತನಲ್ಲಿ 4 ರೆಕ್ಕೆಗಳುಳ್ಳ ವಿಚಿತ್ರ ಕೋಳಿಯೊಂದಿರುವದು. ರೆಕ್ಕೆಗಳನ್ನು ತೆರೆದುಕೊಂಡು ಹಾರುವಾಗ ಈ ಪಕ್ಷಿಯು ಏರೋಪ್ಲೇನಿನಂತೆ ಕಾಣುವದಂತೆ!

ಇದೇ ಜನವರಿ 6 ನೆಯ ತಾರೀಖಿನ ದಿವಸ ಮೀರತ್ ರಾಜದ್ರೋಹದ ಮೊಕದ್ದಮೆಯಲ್ಲಿ ಅಪರಾಧಿಯಾಗಿರುವ ಮಿ|| ಜೋಗಲೇಕರ್‌ರವರಿಗೂ. ಮಿಸ್ ಫ್ಲೋರ್ ಎಂಬಾಕೆಗೂ ಡಿ|| ಮ್ಯಾಜಿಸ್ಟ್ರೇಟರ ಕಚೇರಿಯಲ್ಲಿ ವಿವಾಹವು ನಡೆಯಿತು. ಚಿವಿತ್ರ ವಿವಾಹ!

ನಿಜಾಮು ಸರಕಾರದವರು ಹೊಸಪೇಟೆಯ ಸಮೀಪದಲ್ಲಿ ತುಂಗಭದ್ರಾ ಕಾಲುವೆಗೆ ಒಂದು ಕಟ್ಟೆಯನ್ನು ಕಟ್ಟಬೇಕೆಂದು ನಿರ್ಧರಿಸಿರುವರು. ನಲಗೊಂಡಾ ಜಿಲ್ಲೆಗೆ ಸೇರಿದ ಚಿಂತನಪಾಲಂ ಎಂಬಲ್ಲಿಯೂ ಒಂದು ಕಟ್ಟೆಯನ್ನು ಕಟ್ಟುವರೆಂದು ತಿಳಿದುಬಂದಿದೆ.

ಲಕ್ನೋಪ್ರಾಂತದ ಸ್ತ್ರೀಯೊಬ್ಬಳು ಕೆಲವು ಬೆಳ್ಳಿಯ ಆಭರಣಗಳಿಗೋಸ್ಕರವಾಗಿ 8-9 ವರ್ಷ ವಯಸ್ಸಿನ ಒಬ್ಬ ಹುಡುಗಿಯ ತೋಳುಗಳೆರಡನ್ನೂ ಕತ್ತರಿಸಿದಳೆಂಬ ಕಾರಣದಮೇಲೆ ಸೆಷನ್ಸ್‌ಜಡ್ಜರವರು ವಿಚಾರಣೆ ನಡೆಯಿಸಿ ಸದರಿ ಸ್ತ್ರೀಗೆ 7 ವರ್ಷಗಳ ಕಠಿಣಸಜೆಯನ್ನು ವಿಧಿಸಿದರು.

ಕಳೆದ ಡಿಸೆಂಬರು 24 ನೆಯ ತಾರೀಖಿನ ದಿವಸ ಕೆಲವು ಜನ ಕಳ್ಳರು ಮುಜಫರ್‌ಪುರದ ಒಬ್ಬ ಜಮೀನ್ದಾರನ ಮನೆಗೆ ನುಗ್ಗಿ ಸುಮಾರು 42,000 ರೂಪಾಯಿಗಳು ಬೆಲೆಯುಳ್ಳ ಆಭರಣಾದಿಗಳನ್ನು ಅಪಹರಿಸಿಕೊಂಡು ಹೋದರು. ಕಳ್ಳರು 3 ಮೋಟಾರುಗಳಲ್ಲಿ ಬಂದಿದ್ದರಂತೆ!

ಜಗನ್ಮಲ್ಲನೆಂದು ಪ್ರಸಿದ್ಧಿಯನ್ನು ಪಡೆದಿರುವ ಗಾಮಾನು ಕಲ್ಕತ್ತೆಗೆ ಹೋಗಿ, ತನ್ನ ಸಹೋದರನಾದ ಇಮಾಂಬಕ್ಷನ ಮೇಲೆ ಕುಸ್ತಿಮಾಡಿ ಗೆದ್ದವರಿಗೆ 12,000 ರೂಪಾಯಿಗಳನ್ನೂ, ತನ್ನ ತಮ್ಮನಾದ ಭೋಟಾಗಾಮನ ಮೇಲೆ ಕುಸ್ತಿಮಾಡಿ ಗೆದ್ದವರಿಗೆ 7,000 ರೂಪಾಯಿಗಳನ್ನೂ ಕೊಡುವದಾಗಿ ಪ್ರಕಟಿಸಿರುತ್ತಾನೆ.

ನಾಭಾ ಸಂಸ್ಥಾನದ ದೊಡ್ಡಮನೆತನದ ಒಬ್ಬ ಬ್ರಾಹ್ಮಣನು ಸುಕ್ಕೂರಿನ ಸಮೀಪದಲ್ಲಿರುವ ಸಿಂಧೂನದೀ ತೀರದಲ್ಲಿ ಕಳೆದ 15-20 ದಿವಸಗಳಿಂದಲೂ ಉಪವಾಸ ಮಾಡುತ್ತಿರುವನು. ಮತ್ತು ದೇವರು ತನ್ನ ಇಷ್ಟಾರ್ಥವನ್ನು ನೆರವೇರಿಸುವವರೆಗೆ ಉಪವಾಸವನ್ನು ನಿಲ್ಲಿಸುವದಿಲ್ಲವೆಂದು ಹೇಳುತ್ತಿರುವನು. ಉಪವಾಸದ ಕಾರಣವೇನೆಂಬುದು ತಿಳಿದುಬಂದಿಲ್ಲ.

ಡಿಸೆಂಬರ್ 31ನೇ ತಾರೀಖಿಗೆ ಆಖೈರಾದ ವಾರದಲ್ಲಿ 1,93,45,132 ರೂಪಾಯಿಗಳ ಭಂಗಾರವು ಮುಂಬಯಿಯಿಂದ ಪರದೇಶಗಳಿಗೆ ಸಾಗಿಸಲ್ಪಟ್ಟಿತು. ಇದರ ಪೈಕಿ 17,603 ರೂ. ಗಳ ಭಂಗಾರವು ನ್ಯೂಯಾರ್ಕಿಗೂ, 1,91,113 ರೂ. ಗಳ ಭಂಗಾರವು ಅಂಸ್ಟರ್ಡಾಮಿಗೂ, ಉಳಿದದ್ದು ಲಂಡನ್ನಿಗೂ ಸಾಗಿಸಲ್ಪಟ್ಟಿತು. ಇದುವರೆಗೆ ಸಾಗಿಸಲ್ಪಟ್ಟ ಭಂಗಾರದ ಒಟ್ಟು ಬೆಲೆಯು 105,27,60,190 ರೂ.

ರಸಾಯನಶಾಸ್ತ್ರಜ್ಞರು ಅಲ್ಯೂಮಿನಿಯಮ್ಮಿಗಿಂತಲೂ ಹಗುರವಾದ ಮತ್ತು ಉಕ್ಕಿಗಿಂತಲೂ ಬಲವಾದ ಬೆರಿಲಿಯಂ ಎಂಬ ನೂತನ ಲೋಹವೊಂದನ್ನು ಕಂಡುಹಿಡಿದಿರುವರು. ಆದರೂ ಈ ಲೋಹವು ಗಾಜಿನಂತೆ ಸುಲಭವಾಗಿ ಒಡೆದುಹೋಗುವದರಿಂದ ಶಾಸ್ತ್ರಜ್ಞರು ಸದರಿ ಲೋಹದ ಜೊತೆಗೆ ಬೇರೆ ಯಾವುದಾದರೂ ಲೋಹವನ್ನು ಕೂಡಿಸಿ ಮೃದುವಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿರುವರು.

ಹೈದರಾಬಾದ್ ಸಂಸ್ಥಾನದ ನೈಜಾಮರವರು ತಮ್ಮ ಸಂಸ್ಥಾನದಲ್ಲಿ ಕುಡಿತವನ್ನು ಕಡಿಮೆಮಾಡುವದಕ್ಕೋಸ್ಕರ ಒಂದು ಹೊಸ ಏರ್ಪಾಡನ್ನು ಮಾಡಿರುವರು. ಪ್ರತಿಯೊಂದು ಹೆಂಡದ ಅಂಗಡಿಯ ಹತ್ತರದಲ್ಲೂ ಅಂದವಾಗಿ ಅಲಂಕರಿಸಲ್ಪಟ್ಟ ಒಂದೊಂದು 'ಚಹಾ' ಅಂಗಡಿಯನ್ನಿರಿಸಿ ಅಲ್ಲಿ ಹೋದವರಿಗೆಲ್ಲಾ ದುಡ್ಡಿಲ್ಲದೆ ಚಹಾ ಕೊಡಿಸುವರಂತೆ! ಇದಕ್ಕಾಗಿ ನೈಜಾಮರವರು ಪ್ರತಿವರ್ಷವೂ 7 ಲಕ್ಷರೂಪಾಯಿಗಳನ್ನು ವೆಚ್ಚಮಾಡುವರಂತೆ! ಸ್ತುತ್ಯ!

ಬರ್ಮಾಂಡಸಿ ದೇಶದಲ್ಲಿ ಎರಡು ಕೈಗಳಲ್ಲೂ ಬೆರಳುಗಳೇ ಇಲ್ಲದ (ಮೊಂಡಗೈಯಿನ) 12 ವರ್ಷದ ಹುಡುಗಿಯೊಬ್ಬಳಿರುವಳು. ಈ ಹುಡುಗಿಯು ತನ್ನ ಎರಡು ಮೊಂಡುಗೈಗಳಿಂದಲೇ ಬರೆಯುವದು, ಹಾರ್ಮೋನಿಯಂ ಬಾರಿಸುವದು, ಹೊಲಿಯುವುದು ಮೊದಲಾದ ಕಾರ್ಯಗಳನ್ನು ಬೆರಳುಗಳಿದ್ದವರಿಗಿಂತಲೂ ಜಾಗ್ರತೆಯಾಗಿ ಮಾಡುವಳು. ಲಂಡನ್ ಕೌಂಟಿ ಕೌನ್ಸಿಲ್ಲಿನವರು ಈ ಹುಡುಗಿಯ ಚಾತುರ್ಯವನ್ನು ನೋಡಿ ಅವಳಿಗೆ ಆರ್ಟ್ ಸ್ಕಾಲರ್‌ಷಿಪ್ಪನ್ನು ಕೊಟ್ಟಿರುವರು.

ರಸಾಯನ ಶಾಸ್ತ್ರಜ್ಞರು 'ಇನ್‌ಫ್ರಾರೆಡ್' ಕ್ಯಾಮರಾ ಎಂಬ ಫೋಟೋತೆಗೆಯುವ ನೂತನ ಯಂತ್ರವೊಂದನ್ನು ನಿರ್ಮಿಸಿರುವರು. ಇದರ ಸಹಾಯದಿಂದ ಎಂತಹ ಮಂಜಿನಲ್ಲಾಗಲಿ ಮಳೆಯಲ್ಲಾಗಲಿ 200-300 ಮೈಲುಗಳ ದೂರದಲ್ಲಿರುವ ಪದಾರ್ಥಗಳನ್ನು ಸಹ ಸ್ಪಷ್ಟವಾಗಿ ಫೋಟೋ ತೆಗೆಯಬಹುದು. ಶಾಸ್ತ್ರಜ್ಞರು ಇದರ ಸಂಬಂಧವಾಗಿ ಇನ್ನೂ ಹೆಚ್ಚಿನ ಶೋಧನೆಗಳನ್ನು ನಡೆಸುತ್ತಿರುವರು. ಅವರ ಪ್ರಯತ್ನವು ಸಫಲವಾದರೆ, ಮನುಷ್ಯರ ಕಣ್ಣಿಗೆ ಕಾಣಿಸದ ಭೂತಪ್ರೇತಗಳನ್ನು ಸಹ ನೋಡಲವಕಾಶವಾಗುವದಂತೆ!

ಬರ್ಲಿನ್‌ನಗರದ ಹೆರ್‌ನೆಬೆಲ್ ಎಂಬ ಪ್ರಸಿದ್ಧ ಇಂಜನಿಯರು ರಾಕೆಟ್ ಎಂಬ ಕೊಳವೆಯಲ್ಲಿ ಕುಳಿತು ಭೂಮಿಯಿಂದ ಮೇಲಕ್ಕೆ 3,000 ಅಡಿಗಳ ದೂರ ಹೋಗಿ ಅಲ್ಲಿಂದ ಪ್ಯಾರಷೂಟ್ (ಆಕಾಶವಿಮಾನಗಳಲ್ಲಿ ಪ್ರಯಾಣಮಾಡುವವರು ವಿಮಾನಕ್ಕೆ ಏನಾದರೂ ಅಪಾಯ ಸಂಭವಿಸಿದಾಗ ಭೂಮಿಗೆ ಇಳಿಯಲು ಉಪಯೋಗಿಸುವ ದೊಡ್ಡ ಛತ್ರಿಯಂತಿರುವ ಸಾಧನ)ನಿಂದ ಭೂಮಿಗೆ ಇಳಿಯಬೇಕೆಂದು ನಿರ್ಧರಿಸಿರುವರು. ಇದರಲ್ಲಿ ಅವರು ಜಯಪ್ರದರಾದರೆ ಅನಂತರ ಅವರು ಬೇರೆ ಯಂತ್ರಗಳ ಸಹಾಯದಿಂದ 12 ಮೈಲುಗಳವರೆಗೆ ಹೋಗಿ ಬರಬೇಕೆಂದು ನಿರ್ಧರಿಸಿರುತ್ತಾರೆ.

ಅಮೇರಿಕಾದೇಶದಲ್ಲಿ 2441 ದೈನಿಕಪತ್ರಿಕೆಗಳೂ 13,660 ವಾರಪತ್ರಿಕೆಗಳೂ, 3517 ಮಾಸಪತ್ರಿಕೆಗಳೂ, ಪ್ರಕಟವಾಗುವವು. 'ನ್ಯೂಸ್ ಆಫ್ ದಿ ವರ್ಲ್ಡ್' ಎಂಬ ಪತ್ರಿಕೆಗೆ 30 ಲಕ್ಷ ಚಂದಾದಾರರಿರುವರು! ಮತ್ತು ಈ ಪತ್ರಿಕೆಯ ಪ್ರತಿಯೊಂದು ಸಂಚಿಕೆಗೂ 50 ಟನ್ ಕಾಗದವು ಬೇಕು! 'ನ್ಯೂಯಾರ್ಕ್‌ಟೈಮ್ಸ್' ಎಂಬ ದೈನಿಕ ಪತ್ರಿಕೆಯ ಆಫೀಸಿನಲ್ಲಿ 3,019 ಜನ ಕೆಲಸಗಾರರಿರುವರು. ದಿನ 1 ಕ್ಕೆ 4 ಲಕ್ಷ ಪ್ರತಿಗಳು ಮುದ್ರಿಸಲ್ಪಡುವುವು; ಇದಕ್ಕೆ ಬೇಕಾದ ಕಾಗದದ ಬೆಲೆ ಒಂದು ವರ್ಷಕ್ಕೆ 12 ಲಕ್ಷ ಪೌಂಡುಗಳು ಅಥವಾ ಸುಮಾರು 1½ ಕೋಟಿ ರೂಪಾಯಿಗಳಾಗುವುವು! 'ಅಮೇರಿಕನ್' ಎಂಬ ಮಾಸಪತ್ರಿಕೆಗೆ 22 ಲಕ್ಷ ಜನ ಚಂದಾದಾರರಿರುವರು. ಈ ಪತ್ರಿಕೆಗೆ ಉತ್ತಮವಾದ ಲೇಖನಗಳನ್ನು ಬರೆದು ಕಳುಹಿಸಿದವರಿಗೆ 2,400 ರೂ. ಗಳ ಲಾಗಾಯಿತು 7,500 ರೂ. ಗಳ ವರೆಗೆ ಪ್ರತಿಫಲವು ಕೊಡಲ್ಪಡುವದು.

ಬ್ಯೂಡಪೆಸ್ಟು ನಗರದಲ್ಲಿ ಫ್ರಾನ್ಸಿನ ಲೋಕಪ್ರಸಿದ್ಧ ಚಕ್ರವರ್ತಿಯಾದ ನೆಪೋಲಿಯನ್‌ಕಾಲದ ಆನೆಯೊಂದಿರುವದು. ಇದು ಸಯ್ಯಾಂ ದೇಶದಲ್ಲಿ ಹುಟ್ಟಿ ನೆಪೋಲಿಯನ್ನನು ಈಜಿಪ್ಟಿನಮೇಲೆ ದಂಡೆತ್ತಿಬಂದಿದ್ದಾಗ ಅವನಿಗೆ ಬಹುಮಾನವಾಗಿ ಕೊಡಲ್ಪಟ್ಟಿತ್ತು. ಹಿಂತಿರುಗಿ ಹೋಗುವಾಗ ನೆಪೋಲಿಯನ್ನನು ಅದನ್ನು ತನ್ನೊಡನೆ ಪ್ಯಾರಿಸ್ ನಗರಕ್ಕೆ ಕರೆದುಕೊಂಡುಹೋದನು. ಆದರೆ ಆ ಆನೆಯ ತುಂಟತನವು ನೆಪೋಲಿಯನ್ನಿಗೆ ಬೇಸರಹುಟ್ಟಿಸಿದುದರಿಂದ ಅವನು ಅದನ್ನು ತನ್ನ ಮಾವನಾದ ಆಸ್ಟ್ರಿಯಾದೇಶದ ಚಕ್ರವರ್ತಿಗೆ ಬಹುಮಾನರೂಪವಾಗಿ ಕೊಟ್ಟನು. ಅನಂತರ ಅದು ವಿಯನ್ನಾನಗರದ ಮೃಗಾಲಯದಲ್ಲಿಡಲ್ಪಟ್ಟಿತು. ಅಲ್ಲಿಯೂ ಅದರ ತುಂಟತನವು ಹೆಚ್ಚಾಗಿ ಬ್ಯುಡಾಪೆಸ್ಟ್‌ನಗರಕ್ಕೆ ಸಾಗಿಸಲ್ಪಟ್ಟಿತು. ಅಂದಿನಿಂದಲೂ ಅದು ಅಲ್ಲಿಯೇ ಇರುವದು. ಸದ್ಯಃ ಅದಕ್ಕೆ 150 ವರ್ಷಗಳಾಗಿರುವವೆಂದು ನಿರ್ಧರಿಸಲ್ಪಟ್ಟಿರುವದು.

ಕಳೆದವಾರ ಪ್ರಪಂಚದ ನಾನಾಭಾಗಗಳಲ್ಲಿ ನಡೆದ ಕೆಲವು ವಿಷಯಗಳು ಶಾಸ್ತ್ರಜ್ಞರಿಗೆ ಆತ್ಯಾಶ್ಚರ್ಯವನ್ನುಂಟುಮಾಡುತ್ತಿರುವವು. (1) ಲಂಡನ್ ನಗರದ ಸಮೀಪದಲ್ಲಿ ಏಕಕಾಲದಲ್ಲಿ 3 ಸೂರ್ಯರು ಕಾಣಿಸಿದರು. (2) ಜಿನೋವಾದಲ್ಲಿ ಆಕಾಶದಿಂದ ಮಣ್ಣಿನ ಹೆಂಟೆಗಳು ಉದುರಿದುವು. (3) ಬರ್ಕ್ಸ್‌ಪ್ರಾಂತಕ್ಕೆ ಸೇರಿದ 'ಸಿಲ್‌ಚೆಸ್ಟರ್' ಎಂಬ ಸ್ಥಳದಲ್ಲಿ ಬೂದುಬಣ್ಣದ ನೀರಿನ ಮಳೆಯು ಅಪಾರವಾಗಿ ಸುರಿಯಿತು. (4) ಸೋಮರ್‌ಸೆಟ್ ಪ್ರಾಂತಕ್ಕೆ ಸೇರಿದ 'ಸ್ಟ್ರೀಟ್' ಎಂಬ ಸ್ಥಳದಲ್ಲಿ ಒಂದೇ ದಿವಸ ಗಂಟೆಗೆ ಒಂದರಂತೆ 7 ಕಾಮನಬಿಲ್ಲುಗಳು ಕಾಣಿಸಿಕೊಂಡವು. (5) ಪಾರ್ಟ್ಸ್‌ಮತ್ ನಗರದಲ್ಲಿ ಒಂದು ಆಕಾಶವಿಮಾನವು 4000 ಅಡಿಗಳ ಎತ್ತರದಲ್ಲಿ ಹಾರಿಹೋಗುತ್ತಿದ್ದಾಗ ಒಂದು ದೊಡ್ಡ ಪರ್ವತವೇ ಅದರ ಕಡೆಗೆ ನುಗ್ಗಿಬರುತ್ತಿರುವಂತೆ ಭಾಸವಾಯಿತು. ಪರೀಕ್ಷಿಸಿ ನೋಡಿದಾಗ ಅಪಾರವಾದ ಧೂಳು ಗಂಟೆ 1 ಕ್ಕೆ 35 ಮೈಲುಗಳ ವೇಗದಲ್ಲಿ ಬರುತ್ತಿರುವದೆಂದು ತಿಳಿಯ ಬಂದಿತು.

ಟರ್ಕಿ ದೇಶದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಒಂದು ಕೃತಕಬುಗ್ಗೆ (Fountain)ಯಿರುವದು. ಇದರ ತಳಭಾಗವು ಭೂಮಿಯಿಂದ ಮೇಲೆ 7 ಅಡಿ ಎತ್ತರದಲ್ಲಿದ್ದು, ಒಂದು ಕಲ್ಲಿನ ಕಂಭದೊಳಗೆ ಅಡಗಿರುವ ಕೊಳವೆಯಿಂದ ನೀರು ಬುಗ್ಗೆಯೊಳಕ್ಕೆ ಬರುವದು. ಈ ಬುಗ್ಗೆಯ 7 ಮುಖಗಳಿಂದ ನೀರು ಸರ್ವದಾ ಹೊರಕ್ಕೆ ಉಕ್ಕುತ್ತಲೇ ಇರುವುದು. ಇವುಗಳಲ್ಲಿ ಯಾವುದಾದರೊಂದು ಮುಖದಲ್ಲಿ ನೀರು ಉಕ್ಕದೆ ನಿಂತುಹೋಗುವದನ್ನು ಮೊದಲು ನೋಡಿದವರು ಪುರುಷರಾಗಿದ್ದರೆ, ಕೂಡಲೆ ಸ್ತ್ರೀಯಾಗುವರೆಂದೂ. ಸ್ತ್ರೀಯಾಗಿದ್ದರೆ ಕೂಡಲೇ ಪುರುಷರಾಗುವರೆಂದೂ ಒಂದು ದಂತಕಥೆಯು ಬಹುಕಾಲದಿಂದಲೂ ಜನರಲ್ಲಿ ಪ್ರಚಾರವಿರುವದು. ಅಮೇರಿಕಾದೇಶದ ಕೆಲವು ಕೋಟ್ಯಧೀಶ್ವರರು ಈ ಬುಗ್ಗೆಯನ್ನು ಎಷ್ಟು ದ್ರವ್ಯವನ್ನಾದರೂ ಕೊಟ್ಟು ಕೊಂಡುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವರು. ಆದರೆ ಅಧಿಕಾರಿಗಳಿಗೆ ಅದನ್ನು ಮಾರುವದಕ್ಕೆ ಇಷ್ಟವಿಲ್ಲವಂತೆ!

[೩ನೆಯ ಪುಟದಿಂದ ಮುಂದುವರಿದುದು.]

ದ್ವಾರಾ ಪ್ರಸಿದ್ಧಿಗೆ ಬರಹತ್ತಿದ್ದಾರೆ. ಇಂಥವರನ್ನೇ ಅರಸಿ ಹುಡುಕಿ ಪತ್ರಿಕೆಗಳಲ್ಲಿ ಕೆಲವರು ಹೊಗಳಹತ್ತಿದ್ದಾರೆ. ವೈದಿಕ ಮತಸ್ಥಾಪನಾಚಾರ್ಯರು ಈ ತತ್ವಕ್ಕೆ ಎಂದೂ ಒಳಪಡಲಾರರು. ಪ್ರಸಿದ್ಧಿಗೆ ಬರಬೇಕೆನ್ನುವ ಒಂದೆರಡು ಮಠದವರು ಈ ತತ್ವಕ್ಕೆ ಒಳಪಡಬಹುದು. ಇದರಿಂದ ಅವರವರ ಯೋಗ್ಯತೆಯು ಸ್ಪಷ್ಟವಾಗಿ ಕಂಡುಬರುತ್ತದೆ. ಹೊತ್ತುಬಂದಂತೆ ಕೊಡೆಯನ್ನು ಹಿಡಿಯುತ್ತ ಕಾಲಕ್ಕೆ ಸರಿಯಾಗಿ ಜನಗಳ ಬೆಂಬಲವನ್ನು ಹಿಡಿದು ಅವರವರಂತೆ ನಡೆಯತಕ್ಕವರು ಸ್ವಾಮಿಗಳಲ್ಲ. ನಿಜವಾದ ಸ್ವಾಮಿಗಳು ಎಂದೂ ಈ ತೆರನಾದ ಮಾರ್ಗವನ್ನು ಹಿಡಿದು ವೈದಿಕಮತಕ್ಕೆ ಕಳಂಕ ತರಲಾರರು. ಇಂಥ ಪ್ರಸಂಗಗಳು ಒನ್ಮೊಮ್ಮೆ ಬರುತ್ತಿರುವದರಿಂದ ಧರ್ಮದಲ್ಲಿ ಮತ್ತಿಷ್ಟು ದೃಢತರವಾದ ವಿಶ್ವಾಸವು ಬೆಳೆಯಲನುವಾಗುತ್ತದೆ. ಹಿಂದಕ್ಕೆ ಕಲ್ಯಾಣದಲ್ಲಿ ಬಸವನು ವರ್ಣಸಂಕರವಿವಾಹಮಾಡಿ ಕುಲ ಹದಿನೆಂಟು ಜಾತಿಯವರನ್ನು ಸಮಾವೇಶಮಾಡಿಸಿ (ಅಸ್ಪೃಶ್ಯತೆಯನ್ನು ನಿವಾರಿಸಿ) ವರ್ಣಾಶ್ರಮ ಧರ್ಮಗಳನ್ನು ಹಸಗೆಡಿಸಿ ಹಾಳುಮಾಡಿಬಿಟ್ಟನು. ಆಗ ಭಯಂಕರವಾದ ಕೋಲಾಹಲವೆದ್ದು ರಾಜಶಾಸನಕ್ಕೊಳಗಾಗಲು ಅವನಿಗೆ ಕಲ್ಯಾಣದಿಂದ ಪಲಾಯನಮಾಡುವ ಪ್ರಸಂಗವು ಪ್ರಾಪ್ತವಾಯಿತು. ಕೊನೆಗೆ ತನ್ನ ಉದ್ದೇಶವು ಸಫಲವಾಗದ್ದರಿಂದ ರಾಜನನ್ನು ಕೊಲ್ಲಲಿಕ್ಕೆ ಹೇಳಿ ಶತ್ರುಸೈನ್ಯದಿಂದ ಓಡಿಸಲ್ಪಟ್ಟವನಾಗಿ ಕೊನೆಗೆ ಕೃಷ್ಣಾನದಿಯಲ್ಲಿ ಮಡಿದನೆಂಬ ವಿಷಯವು ಇತಿಹಾಸಪ್ರಸಿದ್ಧವಷ್ಟೆ! ಬಸವನ ಮರಣಾನಂತರದಲ್ಲಿ ಮತ್ತೆ ಶಾಂತತೆಯುಂಟಾಗಿ ಸನಾತನವೈದಿಕಧರ್ಮವು ಚೇತರಿಸಿಕೊಂಡು ವೃದ್ಧಿಹೊಂದಿತು. ಮೊದಲಿನಂತೆ ವರ್ಣಾಶ್ರಮತತ್ವಗಳು ಸ್ವತಂತ್ರಪ್ರಕಾಶಿತಗಳಾದವು. ಎಲ್ಲ ಸನಾತನಮತಾವಲಂಬಿಗಳು ಹರ್ಷಚಿತ್ತರಾಗಿ ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಿದರು. ೧೨ನೆಯ ಶತಮಾನದಂತೆ ಈಗಲೂ ಅದೇ ಗಾಳಿಯು ಬೀಸಹತ್ತಿದ್ದರಿಂದ ಸನಾತನಮತಾವಲಂಬಿಗಳಿಗೆ ಪ್ರಾಣಸಂಕಟವು ಪ್ರಾಪ್ತವಾದಂತಾಗಿದೆ. ಈ ಸಂಕಟದಿಂದ ಪಾರುಮಾಡಲು ಪರಮೇಶ್ವರನೇ ಸಮರ್ಥನು. ಸ್ವರಾಜ್ಯವಾದಿಗಳು ಎಷ್ಟೇ ಪ್ರಯತ್ನಿಸಿದರೂ ವರ್ಣಾಶ್ರಮಗಳ ಹಾನಿಯಿಂದ ಅವರಿಗೆ ಎಂದೂ ಕಾರ್ಯವು ಫಲಿಸಲಾರದು. ಅಸ್ಪೃಶ್ಯರು ತಮಗೆ ದೇವಾಲಯಗಳಲ್ಲಿ ಪ್ರವೇಶಕ್ಕೆ ಅವಕಾಶವು ದೊರೆಯದಿದ್ದರೆ ನಾವು ಮತ್ತೊಂದು ದಾರಿಯನ್ನು ಹುಡುಕುತ್ತೇವೆಂದು ಮೇಲಿಂದಮೇಲೆ ಹೇಳುತ್ತಿರುವರು. ಬಿಟ್ಟರೆ ಕೈಬಿಟ್ಟು ಹೋಗುವರು. ಹಿಡಿದರೆ ಸನಾತನಮತದವರು ಕಳಂಕಿತರಾಗುವರು. ಅತ್ತಬಿದ್ದರೆ, ಭಾವಿ ಇತ್ತಬಿದ್ದರೆ ಕೆರೆ ಎನ್ನುವಂತೆ ಸ್ವರಾಜ್ಯವಾದಿಗಳ ಸ್ಥಿತಿಯಾಗಿರುವದು. ಅವರವರ ನಡೆನುಡಿಗಳಿಂದಲೂ ಸದಾಚಾರ ಸತ್ಪ್ರವೃತ್ತಿಯಿಂದಲೂ ಮನುಷ್ಯರು ಯೋಗ್ಯರೆನಿಸಿಕೊಳ್ಳುತ್ತಾರೆ. ಅಸ್ಪೃಶ್ಯರು ತಾವು ದೇವಾಲಯಗಳನ್ನು ಪ್ರವೇಶಮಾಡುತ್ತೇವೆಂದು ಹೇಳುವವರಾಗಲೀ ಅದಕ್ಕೆ ಸ್ವರಾಜ್ಯವಾದಿಗಳು ಪ್ರೋತ್ಸಾಹಕೊಡುವದಾಗಲೀ ಇವೊಂದೂ ಸಮಂಜಸವಾಗಲಾರದು. ಸ್ಪೃಶ್ಯರು ಅಸ್ಪೃಶ್ಯರ ಜೊತೆಯಲ್ಲಿ ಕೂತು ಅವರ ಕಾರ್ಯಕ್ಕೆ ಸಹಕಾರಿಗಳಾಗುವದರಿಂದಾಗಲೀ, ಅಸ್ಪೃಶ್ಯರನ್ನು ದೇವಾಲಯಪ್ರವೇಶಮಾಡಿಸುವದರಿಂದಾಗಲಿ, ಅಸ್ಪೃಶ್ಯರೊಡನೆ ಸೇರಿ ಉತ್ಸವಾದಿಗಳನ್ನು ಮಾಡುವದರಿಂದಾಗಲಿ ಸ್ವರಾಜ್ಯವು ಸಿಗಲಾರದು. ಮೇಲ್ಕಂಡಂತೆ ಎಲ್ಲ ಕಾರ್ಯಗಳನ್ನು ಮಾಡಿದಾಗ್ಯೂ ಸ್ಪೃಶ್ಯ ಅಸ್ಪೃಶ್ಯರೆಂಬ ಭೇದವು ಎಂದೂ ಅಳಿಯಲಾರದು. ಈಗ ಈ ಪಕ್ಷದವರು ಹೇಳುವಮಾತು ದಿವಾಳಿತನವೇ ಸರಿ! ಇಂದು ಹೀಗೆ ಹೇಳುವ ಇವರು ನಾಳೆ ಅಸ್ಪೃಶ್ಯರನ್ನು ನಿಮ್ಮ ನಿಮ್ಮ ಮನೆಗಳಲ್ಲಿ ಕರೆದುಕೊಂಡು ಬಂದು ಭೇದವಿಲ್ಲದೆ ಪಂಕ್ತಿಭೋಜನಮಾಡಿರೆಂದು ಹೇಳುವರು. ಮತ್ತೆ ಅಸ್ಪೃಶ್ಯರು ಬಡವರು, ಪಾಪ! ಅವರಿಗೆ ಅನ್ನೋದಕಕ್ಕೆ ತುಂಬಾ ಕೊರತೆಯಿದೆ, ಅದ್ದರಿಂದ ನಿಮ್ಮ ಆಸ್ತಿಯಲ್ಲಿ ಹಲಕೆಲವು ಭಾಗಕೊಡಬೇಕೆಂದು ಹೇಳುವರು. ಮೂಗಹರಕನು ತನ್ನಂತೆ ಎಲ್ಲರನ್ನೂ ಮಾಡುವದಕ್ಕಾಗಿ ವೇಷಗೊಳಿಸಿ ಎಲ್ಲರ ಮೂಗನ್ನು ಕೊಯ್ದಂತೆ ಇವರು ಜಾತಿಸಾಂಕರ್ಯದೂಷಿತರಾಗಿ ಸರ್ವರನ್ನೂ ತಮ್ಮಂತೆ ಮಾಡಿಕೊಳ್ಳಬೇಕೆಂದು ಹವಣಿಸುತ್ತಿರುವರು. ಸನಾತನಧರ್ಮಾವಲಂಬಿಗಳೇ! ಇವರ ಉಪದೇಶಕ್ಕೆ ಮರುಳಾಗಿ ಪವಿತ್ರ ಸನಾತನವೈದಿಕ ಮತವನ್ನು ಹಾಳುಮಾಡಬೇಡಿರಿ. ಸ್ವರಾಜ್ಯವಾದಿಗಳು ಸ್ವಕಾರ್ಯಕ್ಕಾಗಿ ಎಷ್ಟು ಪ್ರಯತ್ನಿಸುವರೋ ಅದಕ್ಕೂ ಹೆಚ್ಚಾಗಿ ನೀವು ಪ್ರಯತ್ನಮಾಡಿ ನಿಮ್ಮ ವೈದಿಕಧರ್ಮವನ್ನು ಕಾಪಾಡಿಕೊಳ್ಳಿರಿ; ಮೈಮರೆತು ಕೂತುಕೊಳ್ಳಬೇಡಿರಿ; ಸ್ವರಾಜ್ಯಸಾಧನೆಗಾಗಿ ಸರ್ವರೂ ಧರ್ಮವನ್ನು ಕೀಳ್ಮಾತಿಗೆ ತರಹತ್ತಿರುವರೆಂದು ಭಯಪಡುವಕಾರಣವಿಲ್ಲ. ಹಿಂದೆ ಬೌದ್ಧರ ಮತ್ತು ಮುಸಲ್ಮಾನರ ಆಳಿಕೆಯಲ್ಲಿ ಧರ್ಮವು ಜೀವದಿಂದ ಉಳಿದಿರುತ್ತದೆ. ಯಾವಕಾಲದಲ್ಲಿಯೂ ಇದಕ್ಕೆ ಚ್ಯುತಿಯಿಲ್ಲ. "ಯತೋಧರ್ಮಸ್ತತೋಜಯಃ" ಎನ್ನುವಂತೆ ಧರ್ಮಕ್ಕೆ ಸದಾ ಜಯವು ಇದ್ದೇ ಇದೆ. ಕಠಿಣಹೃದಯರ ಆಳಿಕೆಯಲ್ಲಿಯೇ ಧರ್ಮವು ಉಳಿದಿರುವಾಗ ಈಗ ಉಳಿಯುವದಿಲ್ಲವೆಂದು ಹೇಳುವದು ಸರಿಯಲ್ಲ. ಸ್ವರಾಜ್ಯವನ್ನು ಗಳಿಸುವಾಗಲೇ ಈ ಸ್ವರಾಜ್ಯವಾದಿಗಳಿಗೆ ಧರ್ಮದಲ್ಲಿ ಅಪ್ರೀತಿಯೂ ಅಶ್ರದ್ಧೆಯೂ ಉಂಟಾಗಿರುವಲ್ಲಿ ಸ್ವರಾಜ್ಯವು ದೈವವಶಾತ್ ದೊರೆತರೆ ಮುಂದೆ ಇವರು ಧರ್ಮವನ್ನು ಹೇಗೆ ಕಾಪಾಡುವರೋ ತಿಳಿಯದಾಗಿದೆ. ಆಂಗ್ಲಸಾರ್ವಭೌಮರು ಪ್ರತಿಯೊಂದು ಮತೀಯರಿಗೂ ಧರ್ಮೋನ್ನತಿಗಾಗಿ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವದರಿಂದ ಇಂಥ ಶುಭದಿವಸಗಳನ್ನು ಯಾವಾಗಲೂ ನೋಡಿ ಸಂತೋಷಹೊಂದುವದಕ್ಕಾಗಿ ದಯಾಘನನಾದ ಪರಮೇಶ್ವರನನ್ನು ಪ್ರಾರ್ಥಿಸಿ ಈ ಲೇಖವನ್ನು ಮುಗಿಸುವೆನು.

ಧರ್ಮಾ ಧರ್ಮಾಃ.

ಸಂಕ್ರಾಂತಿಗೂ, ಜನಾರೋಗ್ಯಕ್ಕೂ ಸಂಬಂಧವುಂಟೆ ?

ಸಂಕ್ರಾಂತಿಯನ್ನು ನಾವು ಒಂದು ವಿಶೇಷ ದಿನವನ್ನಾಗಿ ಕೊಂಡಾಡುವೆವು. ಮುಖ್ಯವಾಗಿ ದಕ್ಷಿಣದೇಶದಲ್ಲಿ ಈ ಸಂಕ್ರಾಂತಿಹಬ್ಬವನ್ನು ಸಕಲ ವರ್ಣದವರೂ ತಮ್ಮ ತಮ್ಮ ಶಕ್ತ್ಯನುಸಾರವಾದ ಸಂಭ್ರಮಗಳಿಂದ ನೆರವೇರಿಸುತ್ತಿರುವರು. ಇದರಲ್ಲಿ ಅಷ್ಟು ವಿಶೇಷವೇನು ? ಸಂಕ್ರಾಂತಿಯೆಂಬ ಪದಕ್ಕೆ ಸಾಮಾನ್ಯವಾಗಿ "ದಾಟುವುದು" ಅಥವಾ ಅತಿಕ್ರಮಿಸುವುದೆಂದರ್ಥವು. ಈ ದಿನದಲ್ಲಿ ಸೂರ್ಯನು ಧನೂರಾಶಿಯನ್ನು ದಾಟಿ, ಮಕರರಾಶಿಯನ್ನು ಆಕ್ರಮಿಸುವುದರಿಂದ, ಇದಕ್ಕೆ "ಮಕರಸಂಕ್ರಾಂತಿ" ಎಂಬ ಹೆಸರು ಬಂದಿದೆ. ಆದುದರಿಂದ ಇದು ಪರ್ವದಿನವೆಂದು ಜನರಿಂದ ಕೊಂಡಾಡಲ್ಪಡುವುದು. ಇದು ಹಾಗಿರಲಿ ! ಆರೋಗ್ಯದೃಷ್ಟಿಯಿಂದ ವಿಚಾರಮಾಡಿದರೂ, ಈ ದಿನಕ್ಕೆ "ಸಂಕ್ರಾಂತಿ" ಎಂಬ ಹೆಸರು ಬಹಳ ಉಚಿತವಾಗಿಯೇ ತೋರುವುದು. ಜನಗಳು ಅಪಾಯಕಾಲವನ್ನು ದಾಟಿ, ಅನುಕೂಲವಾದ ಕಾಲಕ್ಕೆ ಬರುವ ಸಂಭವವು ಈ ಶಬ್ದಾರ್ಥದಿಂದ ಚೆನ್ನಾಗಿ ವ್ಯಕ್ತವಾಗುವುದು. ಮಾರ್ಗಶೀರ್ಷಮಾಸದಲ್ಲಿ (ಮಾಗಿಯ ಕಾಲದಲ್ಲಿ) ಬೇರೆ ಕಾಲಕ್ಕಿಂತ ಜನನಮರಣಸಂಖ್ಯೆಯು ಹೆಚ್ಚೆಂಬುದು ಎಲ್ಲರಿಗೂ ತಿಳಿದ ವಿಷಯವೇ ! ಈ ತಿಂಗಳಲ್ಲಿ ಜನರಿಗೆ ದೇಹದಲ್ಲಿ ಲವಲವಿಕೆಯೂ ಕಡಿಮೆ. ಸೂರ್ಯೋದಯವಾದಮೇಲೆಯೂ ಹಾಸಿಗೆಯನ್ನು ಬಿಟ್ಟು ಏಳುವುದಕ್ಕೆ ಮನಸ್ಸು ಬರುವುದಿಲ್ಲ. ಕಫಜ್ವರ, ವಿಷಮಜ್ವರ, ಕೆಮ್ಮಲು, ನೆಗಡಿ ಮುಂತಾದ ರೋಗಗಳು ಈ ಕಾಲದಲ್ಲಿ ಜನರಿಗೆ ತಲೆದೋರುವುದು ಹೆಚ್ಚು. ಬುದ್ಧಿಸ್ವಾಧೀನವಿಲ್ಲದವರು, ಇತರ ಕಾಲಗಳಲ್ಲಿ ಸಾಧಾರಣಸ್ಥಿತಿಯಲ್ಲಿದ್ದರೂ, ಈ ಮಾಗಿಯ ಕಾಲವು ತಲೆದೋರಿದೊಡನೆ ಅವರಲ್ಲಿ ಚಿತ್ತವಿಕಾರಗಳು ಪ್ರಬಲವಾಗಿ ಕಾಣಿಸುವುವು. ಮನುಷ್ಯರಿಗೆ ಮಾತ್ರವೇ ಅಲ್ಲ, ಈ ಕಾಲದಲ್ಲಿ ದನಕರುಗಳೂ ರೋಗದಿಂದ ಸಾಯುವುದು ಹೆಚ್ಚು. ಸಸ್ಯವರ್ಗಗಳು ಕೂಡ ಈ ಕಾಲದಲ್ಲಿ ದುರ್ಬಲವಾಗಿ, ಅನೇಕ ವೃಕ್ಷಜಾತಿಗಳಲ್ಲಿ ಎಲೆಗಳೆಲ್ಲ ಉದುರಿಹೋಗಿ ಅವು ಬರೀ ಕಡ್ಡಿಗಳಂತೆ ನಿಂತಿರುವುದನ್ನು ನೋಡಬಹುದು. ಇದಕ್ಕೆಲ್ಲ ಕಾರಣವೇನು ? ಸೂರ್ಯರಶ್ಮಿಯ ಉಷ್ಣಾಂಶವೂ, ಪ್ರಕಾಶವೂ ಈ ಕಾಲದಲ್ಲಿ ತಗ್ಗುವುದೇ ಇದಕ್ಕೆ ಮುಖ್ಯಕಾರಣವು. ಸೂರ್ಯನೇ ಪ್ರಾಣಾಧಾರನು ! ಪ್ರಾಣಧಾರಕನು ! ಮತ್ತು ಕ್ರೂರವಾದ ವಿಷಗಳನ್ನೆಲ್ಲ ನೀಗಿಸತಕ್ಕವನು. ಇಂತಹ ಅಪಾರಶಕ್ತಿಯುಳ್ಳ ಸೂರ್ಯನೇ ಇತರ ಕಾಲಗಳಲ್ಲಿರುವಂತಿಲ್ಲದೆ, ಈ ಕಾಲದಲ್ಲಿ ಮಂದ ತೇಜಸ್ಸುಳ್ಳವನಾಗುವುದರಿಂದ, ಸ್ವಾಭಾವಿಕವಾಗಿಯೇ ಪ್ರಾಣಿಗಳ ದೇಹದಲ್ಲಿಯೂ ಚೈತನ್ಯವೂ, ಉತ್ಸಾಹವೂ ಕಡಿಮೆಯಾಗಿರುವುದೇನೂ ಆಶ್ಚರ್ಯವಲ್ಲ. ಇದರ ಮೇಲೆ ರಾತ್ರಿಯಲ್ಲಿ ಹಿಮದ ಬಾಧೆಯಿಂದ ಜನರು ಗಾಳಿಗೆ ಅವಕಾಶಕೊಡದೆ ಕಿಟಕಿಗಳನ್ನೆಲ್ಲ ಮುಚ್ಚಿ ಮಲಗುವುದೊಂದು, ಶಾಖವಾದ ಕಂಬಳಿಗಳನ್ನು ಮುಸುಕು ಹಾಕಿಕೊಂಡು ಮಲಗಿ ವಿಷಮಿಶ್ರವಾದ ತಮ್ಮ ಉಸಿರಿನ ಗಾಳಿಯನ್ನೇ ಶ್ವಾಸಿಸುವುದೊಂದು, ಚಳಿಯ ಭಯಕ್ಕಾಗಿ ಚೆನ್ನಾಗಿ ಮೈತೊಳೆಯುವುದಕ್ಕೂ, ಬಟ್ಟೆಯನ್ನೊಗೆಯುವುದಕ್ಕೂ, ಹಿಂಜರಿದು ಅಶುಚಿತ್ವಕ್ಕೆ ಅವಕಾಶಕೊಡುವುದೊಂದು, ಇವೆಲ್ಲ ಸೇರಿ, ರೋಗಕಾರಣಗಳಾಗಿ ಪರಿಣಮಿಸುವುವು. ಈ ರೋಗಗಳಲ್ಲಿ ಮುಖ್ಯವಾದುವು ವಿಶೇಷವಾಗಿ ಶ್ವಾಸಕೋಶಕ್ಕೂ, ಗಂಟಲಿಗೂ ಸಂಬಂಧಪಟ್ಟವುಗಳಾಗಿವೆ. ಸಮುದ್ರ ಮಟ್ಟಕ್ಕಿರುವ ಉಷ್ಣದೇಶಗಳಲ್ಲಿದ್ದವರು, ಬೆಟ್ಟದ ಪ್ರದೇಶಗಳಲ್ಲಿರುವ ತಂಪಾದ ವಾಯುಗುಣಕ್ಕೆ ಹೋದಾಗ, ಥಟ್ಟನೆ ಶೀತೋಷ್ಣಗುಣಗಳ ಬದಲಾವಣೆಯಿಂದ ಉಂಟಾಗುವ ಹಾನಿಯೇ ಇದರಲ್ಲಿಯೂ ಕಾಣುತ್ತಿದೆ. ಆದರೆ ಇಂತಹ ಬದಲಾವಣೆಯ ಕಾಲದಲ್ಲಿ, ಮಿತಾಹಾರನಿಯಮಗಳಿಂದ ಅಪಾಯಗಳನ್ನು ಬಹಳ ಮಟ್ಟಿಗೆ ತಪ್ಪಿಸಿಕೊಳ್ಳಬಹುದು. ಆದುದರಿಂದ ಸಂಕ್ರಾಂತಿಗೆ ಹಿಂದಿನ ಒಂದೆರಡು ತಿಂಗಳ ಕಾಲವೂ ಜನರಿಗೆ ಆರೋಗ್ಯವಿಚಾರದಲ್ಲಿ ಬಹಳ ಎಚ್ಚರಕೊಡತಕ್ಕ ಕಾಲವಾಗಿದೆ. ಆಷಾಢಮಾಸ ಮೊದಲುಗೊಂಡು ಕಾಲಕಾಲಕ್ಕೆ ಸರಿಯಾಗಿ ಮಳೆ ಬೀಳುತ್ತ ಬಂದರೆ, ಮಾತ್ರ, ಮಾರ್ಗಶೀರ್ಷದೊಳಗಾಗಿ ವ್ಯವಸಾಯದ ಕೆಲಸವೆಲ್ಲವೂ ತೃಪ್ತಿಕರವಾಗಿ ಮುಗಿದು, ರೈತರಿಗೂ, ದನಗಳಿಗೂ ಇದು ಒಳ್ಳೇ ವಿಶ್ರಾಂತಿಗೆ ಅನುಕೂಲವಾದ ಕಾಲವಾಗಿದೆ. ಹಾಗಿಲ್ಲದೆ ಅಕಾಲದಲ್ಲಿ ಮಳೆ ಆರಂಭಿಸಿ, ಬಹಳ ದಿನಗಳಮೇಲೆ ವ್ಯವಸಾಯದ ಕಾರ್ಯಕ್ಕೆ ಕೈಯಿಕ್ಕಬೇಕಾಗಿ ಬಂದರೆ, ಆಗ ರೈತರು ಮಾತ್ರವಲ್ಲದೆ, ದನಕರುಗಳಿಗೂ, ಮತ್ತು ಜನಸಾಮಾನ್ಯಕ್ಕೂ ಕಷ್ಟವು ಹೆಚ್ಚು. ಹಿಮಬಾಧೆಯಿಂದುಂಟಾಗತಕ್ಕ ರೋಗಬಾಧೆಗಳೂ ಆಗ ಜನಗಳಲ್ಲಿ ಹೆಚ್ಚಾಗುವುದು.

ಆದರೆ, ಇದೇ ಹಿಮಗಾಲದಲ್ಲಿ ಆಸ್ತಿಕರಾದ ಕೆಲವರು ನಮ್ಮ ವೈದಿಕಧರ್ಮವನ್ನನುಸರಿಸಿ, ಅಲ್ಲಲ್ಲಿ ನಡೆಸುತ್ತಿರುವ ಆಚಾರಗಳನ್ನು ನೋಡಿದರೆ, ನಮಗೆ ಆಶ್ಚರ್ಯವಾಗುವುದು. ಉಷಃಕಾಲಕ್ಕೆ ಮುಂಚೆಯೇ ಬೀದಿಗಳಲ್ಲಿ ಗುಂಪುಗುಂಪಾಗಿ ಭಜನೆಮಾಡತಕ್ಕವರೂ, ಬೆಳಗ್ಗೆ ನಾಲ್ಕು ಘಂಟೆಗೆ ಮೊದಲೇ ಎದ್ದು ಕೆರೆಕೊಳಗಳಿಗಾಗಲಿ, ಪುಣ್ಯನದಿಗಳಿಗಾಗಲಿ ಹೋಗಿ ತಣ್ಣೀರಿನಲ್ಲಿ ಸ್ನಾನಮಾಡುವವರೂ, ಬಟ್ಟೆಗಳನ್ನೊಗೆಯುವವರೂ, ಬೆಳಗಾಗುವ ಮುಂಚೆಯೇ ಮಡಿಯುಟ್ಟು ದೇವಸ್ಥಾನಗಳಿಗೆ ಹೋಗಿಬರತಕ್ಕವರೂ, ಬೆಳಗಾಗಲೇ ಸ್ತೋತ್ರಪಾರಾಯಣಗಳನ್ನು ಮಾಡುತ್ತ ಹಿಮದಲ್ಲಿ ತಿರುಗಾಡತಕ್ಕವರೂ ಎಷ್ಟೋಮಂದಿಯುಂಟು. ನಾವು ಚಳಿಗೆ ಹೆದರಿ, ನಾಲ್ಕಾರು ಪದರುಗಳ ಕಂಬಳಿಯನ್ನು ಹೊದ್ದುಕೊಂಡು ಹಾಸಿಗೆಯನ್ನು ಬಿಟ್ಟೇಳಲಾರದೆ ಮಲಗಿದ್ದರೂ, ಈ ಹೊರಗಿನ ಸಂಭ್ರಮಗಳಲ್ಲಿ ನಮಗೆ ಸಾಧಾರಣದಿನಗಳಿಗಿಂತ ಮೊದಲೇ ನಿದ್ರಾಭಂಗವಾಗುವುದು. ಅದಿರಲಿ ! ಹೀಗೆ ಹನಿಗಾಲದಲ್ಲಿ ಬೆಳಗಾಗುವ ಮುಂಚೆಯೇ ಎದ್ದು ಬಹಳ ಚಟುವಟಿಕೆಯಿಂದ ಸ್ನಾನ, ಸಂಧ್ಯಾ, ಜಪಾದಿಗಳನ್ನು ನಡೆಸುವವರಿಗಿಂತಲೂ, ಕಂಬಳಿಗಳನ್ನು ಮುಸುಕುಹಾಕಿಕೊಂಡು ಮಲಗಿರತಕ್ಕವರು ಒಳ್ಳೇ ಆರೋಗ್ಯವಂತರಾಗಿರುವರೆಂದು ಮಾತ್ರ ಎಂದಿಗೂ ಎಣಿಸಬಾರದು.

ಬೆಳಗಾದೊಡನೆ ಎದ್ದು ದೇಹದೊಳಗಿನ ಉಷ್ಣವು ಉದ್ರೇಕಗೊಳ್ಳುವಂತೆ ಚಟುವಟಿಕೆಯಿಂದ ಸಂಚಾರ ಮಾಡುವುದೂ ಬಟ್ಟೆಯನ್ನೊಗೆಯುವುದೂ, ಈ ಮುಂತಾದ ಕೆಲಸಗಳನ್ನು ಮಾಡಿದ ಮೇಲೆ ತಣ್ಣೀರಿನಲ್ಲಿ ಮುಳುಗುವುದರಿಂದ, ಅವರ ದೇಹದೊಳಗಿನ ಶೀತೋಷ್ಣ ಪರಿಮಾಣಗಳು ಸಮಸ್ಥಿತಿಯನ್ನು ಹೊಂದಿ ಆರೋಗ್ಯಕ್ಕೆ ಸಹಕರಿಸುವುವು. ಚೆನ್ನಾಗಿ ವ್ಯಾಯಾಮ ಮಾಡಿದಮೇಲೆ, ಮೈಬೆವರಿನ ಕೊಳೆಯೆಲ್ಲ ಹೋಗುವ ಹಾಗೆ ಸ್ನಾನಮಾಡಿದ ಗುಣವೇ ಇದರಲ್ಲಿರುವುದು. ಇದು ದೇಹವನ್ನು ಶೀತೋಷ್ಣದ ಪರಿಮಾಣದ ಕಟ್ಟುಪಾಡಿಗೆ ಒಳಪಡಿಸುವುದರೊಡನೆ, ಶೀತೋಷ್ಣಗಳು ಥಟ್ಟನೆ ಬದಲಾಯಿಸಿದರೂ, ಅದನ್ನು ತಡೆದುಕೊಳ್ಳತಕ್ಕ ಶಕ್ತಿಯನ್ನೂ ಕೊಡುವುದು. ಸಿಕ್ಕರಲ್ಲಿ, ಹಿಮಗಾಲದಲ್ಲಿ ಉಷಃಕಾಲದ ಸ್ನಾನಪದ್ಧತಿಯು ಬಹುಕಾಲದಿಂದಲೇ ಆಚರಣೆಯಲ್ಲಿದೆ. ಈ ಹಿಮಗಾಲದಲ್ಲಿ ಎಲ್ಲಾ ದೇವಸ್ಥಾನಗಳಲ್ಲಿಯೂ ಬೆಳಗಿನ ಜಾವದಲ್ಲಿಯೇ ಧನುರ್ಮಾಸಪ್ರಯುಕ್ತವಾದ ನೈವೇದ್ಯ ಪೂಜಾದಿಗಳು ನಡೆಯುವುವು. ಇದಕ್ಕೂ ವೈದ್ಯಶಾಸ್ತ್ರೀಯವಾದ ಅಭಿಪ್ರಾಯಗಳಿಲ್ಲದೆ ಇಲ್ಲ. ಬೆಳಗ್ಗೆ ಎದ್ದೊಡನೆ ಆರೂವರೆ ಅಥವಾ ಏಳುಗಂಟೆಯೊಳಗಾಗಿ ಯಾವುದಾದರೂ ಉಷ್ಣವಾದ ಆಹಾರವನ್ನು ಮಿತವಾಗಿ ಸೇವಿಸುವುದು ಬಹಳ ಆರೋಗ್ಯಕರವೆಂದು ಹೇಳಲ್ಪಟ್ಟಿದೆ. ಮೈಗೆ ಬಹು ಸುಲಭವಾಗಿ ರೋಗವನ್ನಂಟಿಸತಕ್ಕ ಈ ಹಿಮಗಾಲದಲ್ಲಿ, ಹಿರಿಯರು ಮೇಲ್ಕಂಡ ಸಂಪ್ರದಾಯಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದೂ ಆರೋಗ್ಯದೃಷ್ಟಿಯಿಂದಲೇ ಎಂದು ಊಹಿಸಬಹುದಾಗಿದೆ. ಅವರು ದೇವರ ನೈವೇದ್ಯಕ್ಕೂ, ದೇವಭಕ್ತರ ಬೆಳಗಿನ ಊಟಕ್ಕೂ, ನಿಯಮಿಸಿರುವ ಆಹಾರವಾವುದು ? ಪೊಂಗಲು ! ಈ ಪೊಂಗಲಿಗೆ ಅಕ್ಕಿ ಅಥವಾ ಗೋದುವೆ ಹೆಸರುಬೇಳೆ, ಉಪ್ಪು, ತುಪ್ಪ, ಮೆಣಸು, ಜೀರಿಗೆ, ಹಸಿಶುಂಠಿ, ಅರಿಶಿನ, ಇವೆಲ್ಲ ಬೇಕಾದ ಸಾಮಗ್ರಿಗಳು. ಮಿತವಾಗಿ ಸೇವಿಸಿದರೆ ಇವುಗಳೊಳಗೆಲ್ಲ ಒಳ್ಳೇ ಔಷಧಗುಣವುಂಟು. ಅಲ್ಲದೆ ಮೇಲ್ಕಂಡ ಆಹಾರದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟೀನ್, ಕೊಬ್ಬು ಇವೆಲ್ಲ ತಕ್ಕ ಪ್ರಮಾಣದಲ್ಲಿ ಕಲೆತಿರುವುದರಿಂದ, ಆ ಕಾಲಕ್ಕೆ ಅದು ಒಳ್ಳೇ ಉಚಿತಾಹಾರವಾಗಿದೆ. ಆ ಹಿಮಗಾಲದಲ್ಲಿ ಬಹಳ ಹೊತ್ತು ಉಪವಾಸವಿರುವುದಾಗಲಿ, ಸಿಕ್ಕಿದ ಪದಾರ್ಥಗಳನ್ನು ಭುಂಜಿಸುವುದಾಗಲಿ ಜೀರ್ಣಶಕ್ತಿಯನ್ನು ತಗ್ಗಿಸಿಬಿಡುವುದರಿಂದ, ನಮ್ಮ ಪುರಾತನಾರ್ಯರು, ಲಘುವಾದ ಈ ಆಹಾರಕ್ರಮವನ್ನು ದೇವಪ್ರಸಾದ ರೂಪವಾಗಿ ತೆಗೆದುಕೊಳ್ಳಬೇಕೆಂದು ವಿಧಿಸಿರುವರು. ಈಗಲಾದರೋ ಆ ಸ್ಥಾನದಲ್ಲಿ ಕಾಫೀ, ಟೀ, ಕೋಕೋ ಮುಂತಾದುವು ನಿತ್ಯವೂ ಸಾರ್ವಜನಿಕವಾಗಿ ಆಚರಣೆಯಲ್ಲಿವೆ.

ಹೀಗೆ ಮಾರ್ಗಶಿರಮಾಸದಲ್ಲಿ, ತಣ್ಣೀರಿನ ಸ್ನಾನ, ಆಹಾರನಿಯಮ, ಮಿತವ್ಯಾಯಾಮ, ವೈಕುಂಠ ಏಕಾದಶಿಯ ದಿನದಲ್ಲಿ ನಿರ್ಬಂಧಪೂರ್ವಕವಾದ ಉಪವಾಸ, ಇವೆಲ್ಲ ಶಾರೀರಕವಾದ ಆರೋಗ್ಯಾನುಷ್ಠಾನಗಳು.

ಭೋಗೀಹಬ್ಬವೆಂಬುದು ಮಳೆಗೆ ಅಧಿದೇವತೆಯಾದ ಇಂದ್ರನ ಪ್ರೀತ್ಯರ್ಥವಾಗಿ ಮಾಡುವ ಹಬ್ಬವೆನಿಸಿದೆ. ಆ ರಾತ್ರಿ ಹಳೇ ಕಸಕಡ್ಡಿ, ಕುಳ್ಳು ಮೊರಗಳನ್ನೆಲ್ಲ ಸುಡುವುದರೊಡನೆ ಮರುದಿನ ಸಂಕ್ರಾಂತಿಯ ದಿನದಲ್ಲಿ, ಎಲ್ಲಾ ಪಾತ್ರೆಗಳನ್ನೂ, ಬಟ್ಟೆಗಳನ್ನೂ ಶುದ್ಧಮಾಡುವ ಸಂಪ್ರದಾಯವಿದೆ. ಈ ಸಂಕ್ರಾಂತಿಯ ದಿನದ ವ್ರತಗಳೆಲ್ಲ ಸೂರ್ಯದೇವನನ್ನುದ್ದೇಶಿಸಿದುವುಗಳಾಗಿವೆ. ಅದಕ್ಕೆ ಮಾರನೆಯ ದಿನದಲ್ಲಿ ಮಾಡುವ ಕೆಲಸಗಳೆಲ್ಲ ಕೃಷಿ ಮತ್ತು ಗೋರಕ್ಷಣಕಾರ್ಯಗಳಿಗೆ ಸಂಬಂಧಪಟ್ಟ ಅಂಗಗಳಾಗಿವೆ. ಈ ಮೂರನೆಯ ದಿನದಲ್ಲಿ ದನಗಳನ್ನೂ, ವ್ಯವಸಾಯಕ್ಕೆ ಬೇಕಾದ ನೇಗಿಲು ಮುಂತಾದ ಸಾಮಗ್ರಿಗಳನ್ನೂ ಅಲಂಕರಿಸಿ ಪೂಜಿಸುವರು. ನಾಲ್ಕನೆಯ ದಿನದ ಕೊಂಡಾಟಗಳೆಲ್ಲ ಹೊಲಗದ್ದೆಗಳ ಮೈದಾನಗಳಲ್ಲಿಯೂ, ತೋಟಗಳಲ್ಲಿಯೂ, ಕೆರೆ, ಬಾವಿ ಅಥವಾ ನದಿಗಳ ತೀರದಲ್ಲಿಯೂ ನಡೆಯುವುವು. ಮುಖ್ಯವಾಗಿ ಈ ಸಂಕ್ರಾಂತಿದಿನಕ್ಕೆ ಸೇರಿದಂತೆ ನಡೆಸಲ್ಪಡುವ ಮೇಲ್ಕಂಡ ನಾಲ್ಕು ದಿನಗಳ ಕೊಂಡಾಟಗಳೂ, ಜನಗಳ ಮತ್ತು ದನಕರುಗಳ ಆರೋಗ್ಯಾಭಿವೃದ್ಧಿಯನ್ನೂ, ಮಳೆ ಬೆಳೆಗಳ ಸಮೃದ್ಧಿಯನ್ನೂ ಉದ್ದೇಶಿಸಿ ನಡೆಸತಕ್ಕ ಉತ್ಸವಗಳೇ, ಎಂಬುದು ಈ ಮೇಲಿನ ವಿವರಗಳಿಂದ ಸ್ಪಷ್ಟವಾಗುವುದು. ಒಂದೇ ಮಾತಿನಲ್ಲಿ ಮುಗಿಸುವುದಾದರೆ, ನಮ್ಮ ಹಿಂದೂಮತದಲ್ಲಿ ನಿರ್ದೇಶಗಳಾದ ಪೂರ್ವಾಚಾರ ಸಂಪ್ರದಾಯಗಳೆಲ್ಲವೂ ಪ್ರಾಯಶವಾಗಿ ಜನಾರೋಗ್ಯದೃಷ್ಟಿಯಿಂದಲೂ, ಲೋಕಕ್ಷೇಮದ ದೃಷ್ಟಿಯಿಂದಲೂ, ಏರ್ಪಟ್ಟವೆಯೆಂಬುದನ್ನು ಇದರಿಂದ ನಾವು ಸ್ಪಷ್ಟವಾಗಿ ಕಾಣಬಹುದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಋತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಚಿರತರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮತ್ತರ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬರೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣುಹಿಡಿತ, ನೆತ್ತಿಉರಿ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0.8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ನವೆಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕ್ಕ ಮದ್ದುಗಳೂ ಹೋಮಿಯೋಪಥಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[21] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ), **ಮಂಗಳೂರು. ದ. ಕ**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಖರ್ಚೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[2] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಬೆಳ್ಳಿಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಸಿ, ಒಂ ತಲೆನೋವು, ತಲೆಯ ಲ್ಲಿನ ರೋಗಗಳ ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[2] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಜನವರಿ ೧೯೩೩ [ಸಂಚಿಕೆ ೩೬

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ತುಮಕೂರು ಸಮಾಚಾರ.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ೧೦೮ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ದರ್ಬಾರಮಂಟಪದಲ್ಲಿ ನಿತ್ಯವೂ ನಡೆಯುತ್ತಿರುವ ವಿಷಯವು ಸರ್ವತ್ರ ವಿದಿತವೇ ಇದೆ. ಊರಿನ ದೊಡ್ಡಮನುಷ್ಯರು ಮಹಾಸ್ವಾಮಿಗಳವರ ಉಪದೇಶವಾಕ್ಯವನ್ನು ಕೇಳಬೇಕೆಂದು ಅಪೇಕ್ಷಿಸಿರುವ ಅಂಶವನ್ನು ದೇಶದ ಶೆಟ್ಟರು ದೇಶದ ಯಜಮಾನರು ಸನ್ನಿಧಾನಕ್ಕೆ ಅರಿಕೆಮಾಡಿಕೊಂಡಿದ್ದರಿಂದ ಇವರ ಪ್ರಾರ್ಥನೆಯನ್ನು ಅಂಗೀಕರಿಸಿ ಅಪ್ಪಣೆಕೊಟ್ಟಪ್ರಕಾರ ತಾ|| ೧೧-೧-೩೩ ರ ಬುಧವಾರ ಸಾಯಂಕಾಲ ೭ ಗಂಟೆಯಿಂದ 'ಬಂಧಮೋಕ್ಷ' ಎಂಬುದರ ವಿಷಯವಾಗಿ ಅಪ್ಪಣೆಕೊಡಿಸುವ ಸಂಗತಿಯನ್ನು ಪ್ರಕಟನಾಪತ್ರಿಕಾದ್ವಾರಾ ಸರ್ವತ್ರ ಪ್ರಕಟಿಸುವದಾಯಿತು ಆಮಂತ್ರಣಪತ್ರಿಕೆಯಂತೆ ಸಕಾಲಕ್ಕೆ ಹುಜರತ್ ಡೆಪ್ಯುಟಿಕಮಿಷನ್ ಸಾಹೇಬರವರು ಮುನಿಸೀಪರೂ ಅಮಲ್‌ದಾರರವರು ಇಂಜನೀಯರ್ ಸಾಹೇಬರವರು ವಕೀಲರೂ ವೈದಿಕಪಂಡಿತರು ಪ್ರಾಣಿದಯಾಪ್ರಚಾರಕಸಂಘದವರೂ ಸ್ಕೌಟಿನವರು ಶ್ರೀಮಂತರು ಮುಂತಾದ ಮಹಾಶಯರು ಪ್ರಾಯಶಃ ಐದಾರುಸಾವಿ ನವರಿಗೆ ಆಗಮಿಸಿದ್ದರು. ಶ್ರೀ ಮಹಾಗುರುಗಳವರು ಹಾಸನವನ್ನಾರೋಹಿಸಿದ ಕೂಡಲೇ ವೇದಘೋಷವಾಯಿತು. ಪ್ರಾಣಿದಯಾಪ್ರಚಾರಕ ಸಂಘದವರೂ ಅಡ್ರೆಸ್ಸನ್ನೊಪ್ಪಿಸಿದರು. ಬಳಿಕ ಶ್ರೀ ಜಗದ್ಗುರುಗಳವರು ಮನುಷ್ಯನು ಸ್ವಸ್ವರೂಪಜ್ಞಾನವಿಲ್ಲದೆ ಸಾಮಾನ್ಯಪ್ರಾಣಿಯಂತೆ ಕೇವಲ ವಿಷಯಲೋಲುಪ್ತನಾಗಿ ತಜ್ಜನ್ಯಸುಖವೇ ನಿತ್ಯವೆಂದೂ ತದಾಸಕ್ತಿಯಿಂದ ಜನನಮರಣಪ್ರವಾಹರೂಪವಾದ ಸಂಸೃತಿಪಾಶಬಂಧದಿಂದ ಕಟ್ಟಿಹಾಕಲ್ಪಟ್ಟ ರಥದ ಚಕ್ರದಂತೆ ಇಹಪರಗಳಿಗೆ ಎಡೆಯಾಡುತ್ತ ಅನಂತ ಕಷ್ಟಗಳನ್ನು ಅನುಭವಿಸುತ್ತಿರುವನು. ಈ ಬಂಧನದಿಂದ ಬಿಡುಗಡೆಮಾಡಿಕೊಳ್ಳುವದೇ ಮೋಕ್ಷವೆನಿಸುವದು. ಈ ಬಂಧನದಿಂದ ಪಾರಾಗಬೇಕಾದರೆ ವಿಷಯವೈರಾಗ್ಯದಿಂದ 'ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ' ಎಂಬ ಉಪನಿಷದ್ವಾಕ್ಯವನ್ನು ಅನುಸರಿಸಿ ಗುರುಸನ್ನಿಧಾನವನ್ನು ಹೊಂದಿ ಸೇವಿಸಿ ನಿತ್ಯಾನಿತ್ಯ ವಸ್ತುವಿಚಾರದಿಂದ ಸ್ವರೂಪಜ್ಞಾನವನ್ನು ಪಡೆಯತಕ್ಕದ್ದು. ಅಂದರೆ ಭವಪಾಶಬಂಧವು ಉರ್ವಾರುಕಫಲವು ತೊಟ್ಟಿನಿಂದ ತಾನಾಗಿಯೇ ಕಳಚಿದಂತೆ ಕಳಚಿಕೊಳ್ಳಲು ಅಭ್ಯಂತರವಿಲ್ಲ. ಆವಾಗ ಸುಖರೂಪ. ಭಗವತ್ಸಾಕ್ಷಾತ್ಕಾರದಿಂದ ನಿತ್ಯಮುಕ್ತನೆನಿಸುತ್ತಾನೆ. ರಾಜಧಾನಿಗೆ ಹೋಗುವದಕ್ಕೆ ಮಾರ್ಗಗಳು ಅನಂತವಾಗಿರುವಂತೆ ಭಗವತ್ಸನ್ನಿಧಾನವನ್ನು ಕುರಿತು ಹೋಗಲು ಆಯಾಯ ಮತಸ್ಥಾಪಕರು ಬೇರೆಬೇರೆ ಮಾರ್ಗಗಳನ್ನು ತೋರಿಸಿರುವರು. ಆದರೂ ಅವುಗಳ ಲಕ್ಷ್ಯವು ಒಂದೆಯಾಗಿರುವದು ಭಗವಂತನು ಒಬ್ಬನೇ ಇದ್ದರೂ ಉಪಾಸಕರ ಇಚ್ಛೆಯಿಂದ ಒಂದೊಂದು ನಾಮದಿಂದ ಕರೆಯಲ್ಪಟ್ಟು ಭಿನ್ನರೂಪನಾಗಿ ಕಾಣುತ್ತಿರುವನು. ಇದು ಮತಸ್ಥಾಪಕರ ತಾತ್ವಿಕ ದೃಷ್ಟಿಯೇ ಸರಿ. ಅಕ್ಕಿಯು ಹಲವು ಭಾಷೆಯಿಂದ ಕರೆಯಲ್ಪಡುತ್ತಿದ್ದರೂ ಒಂದೆಯಾಗಿರುವಂತೆಯೂ ಜಲವು ಒಂದೆಯಾಗಿದ್ದರೂ ಪಾತ್ರೆಗಳ ಭಿನ್ನತ್ವದಿಂದ ಭಿನ್ನ ಭಿನ್ನವಾಗಿ ಕರೆಯಲ್ಪಡುವಂತೆಯೂ ಇರುವದು. ಆದರೂ ಮತಸ್ಥಾಪಕರ ಸಂಕೇತದಿಂದ ನಿರ್ಧರಿಸಲ್ಪಟ್ಟ ಆತ್ಮಸಾಕ್ಷಾತ್ಕಾರ ಮಾರ್ಗಗಳನ್ನು ತತ್ತನ್ಮತಾನುಯಾಯಿಗಳು ಬಿಡದೆ ಅವುಗಳಂತೆಯೇ ನಡೆದು ಬಂಧನದಿಂದ ಪಾರಾಗಬೇಕೆಂದು ಸಂಸ್ಕೃತದಿಂದಲೂ ಹಿಂದಿ ಭಾಷೆಯಿಂದಲೂ ಕರ್ಣಾಟಕ ಭಾಷೆಯಿಂದಲೂ ಅಪ್ಪಣೆಯನ್ನು ಕೊಡಿಸಿ ಸರ್ವರೂ ತಮ್ಮ ತಮ್ಮ ಧರ್ಮಾಚರಣೆಯಿಂದಿದ್ದು ಸುಖಿಗಳಾಗಬೇಕೆಂದು ಆಶೀರ್ವದಿಸಿದರು. ಅನಂತರ ಯಜಮಾನ ಸಿದ್ದಪ್ಪನವರು ಸದುಪದೇಶದಿಂದ ಭಕ್ತಕೋಟಿಯನ್ನು ಆನಂದಗೊಳಿಸಿದ್ದಕ್ಕೆ ಶ್ರೀ ಜಗದ್ಗುರುಗಳವರ ಸನ್ನಿಧಾನಕ್ಕೆ ತಮ್ಮೆಲ್ಲರ ಪರವಾಗಿ ಸಹಸ್ರವಂದನೆಗಳನ್ನರ್ಪಿಸಿ ಅಖಿಲ ಮಹಾಶಯರು ಆಮಂತ್ರಣವನ್ನು ಗೌರವಿಸಿ ಸಭೆಗೆ ಬಂದುದಕ್ಕಾಗಿ ಸರ್ವರಿಗೂ ವಂದನೆಗಳನ್ನರ್ಪಿಸಿದರು ಜಯಘೋಷದಿಂದ ಸಭೆಯು ವಿಸರ್ಜಿತವಾಯಿತು.

ದೇಶದ ಯಜಮಾನ್ ಶಿದ್ದಪ್ಪ.

[illegible] ಹಳ್ಳಿಯಲ್ಲಿ ದಸ್ತಗಿರಿ ಮಾಡಲ್ಪಟ್ಟನು. ಇವನನ್ನು ಪತ್ತೆಮಾಡಿಕೊಟ್ಟವರಿಗೆ 250 ರೂ. ಗಳ ಬಹುಮಾನ ಕೊಡುವದಾಗಿ ಸರಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದರು.

ಅಮೆರಿಕೆಯ ಸಂಯುಕ್ತ ಸಂಸ್ಥಾನದ ವ್ಯವಸಾಯದ ಇಲಾಖೆಯವರು ರಸಹಿಂಡಿದ ಕಬ್ಬಿನ ಸಿಪ್ಪೆಯಿಂದ ರೇಷ್ಮೆಯ ಕಾಲುಚೀಲಗಳನ್ನು ಮಾಡಿ ಮಾರಬೇಕೆಂದು ಪ್ರಯತ್ನಿಸುತ್ತಿರುವರು. ರಸಾಯನಶಾಸ್ತ್ರಜ್ಞರು ಕಬ್ಬಿನ ಸಿಪ್ಪೆಗೆ 'ಸೈಟ್ರಿಕ್ ಆಸಿಡ್' ಮೊದಲಾದ ದ್ರಾವಕಗಳನ್ನು ಹಾಕಿ ಉತ್ತಮ ತರಹದ ಕೃತಕ ರೇಷ್ಮೆಯನ್ನು ತಯಾರು ಮಾಡುವ ವಿಧಾನವನ್ನು ಕಂಡುಹಿಡಿದಿರುವರು. ಇದು ನಿಶ್ಚಯವೇ ಆದಲ್ಲಿ ಅಮೇರಿಕಾ ದೇಶದಲ್ಲಿ ಪ್ರತಿವರ್ಷವೂ ಕಸರೂಪದಲ್ಲಿ ಬಿಸಾಡಲ್ಪಡುತ್ತಿರುವ 5 ಲಕ್ಷ ಟನ್ ಕಬ್ಬಿನ ಸಿಪ್ಪೆಯಿಂದ ಅಪಾರ ಹಣವು ದೊರೆಯುವದರಲ್ಲಿ ಸಂಶಯವಿಲ್ಲ.

ಫ್ರಾನ್ಸ್‌ದೇಶದ "ಅಟ್ಲಾಂಟಿಕ್" ಎಂಬ 50,000 ಟನ್ ತೂಕವುಳ್ಳ ಜಹಜು ಕಳೆದ ಜನವರಿ 4 ನೇ ತಾರೀಖಿನ ದಿವಸ ಇಂಗ್ಲಿಷ್ ಕಡಲ್ಕಾಲುವೆಯಲ್ಲಿ ಅಕಸ್ಮಾತ್ ಬೆಂಕಿ ಹತ್ತಿ ಸುಟ್ಟು ಭಸ್ಮವಾಯಿತು. ಜಹಜಿಗೆ ಬೆಂಕಿಬಿದ್ದ ವರ್ತಮಾನವು ತಿಳಿದ ಕೂಡಲೇ 'ರೂರ್' ಎಂಬ ಜರ್ಮನ್ ಹಡಗು ಮತ್ತು 'ಫೋರ್ಡ್‌ಕ್ಯಾಸಲ್' ಎಂಬ ಬ್ರಿಟಿಷ್ ಹಡಗು ಹೋಗಿ 'ಅಟ್ಲಾಂಟಿಕ್' ಜಹಜಿನಲ್ಲಿದ್ದ 260 ಜನ ಕೆಲಸಗಾರರಲ್ಲಿ 19 ಜನರ ವಿನಾ ಉಳಿದ 241 ಜನರನ್ನು ರಕ್ಷಿಸಿದರು. ಜಹಜಿನ ಕ್ರಯವು 2,50,00,000 ರೂಪಾಯಿಗಳೆಂದೂ, ಈ ಅನಾಹುತದಿಂದ ಜರ್ಮನ್ ಮತ್ತು ಬ್ರಿಟಿಷ್ ಇನ್‌ಷೂರೆನ್ಸ್ ಕಂಪೆನಿಗಳಿಗೆ ಅಪಾರ ನಷ್ಟವು ಸಂಭವಿಸಿರುತ್ತದೆಂದೂ, ಫ್ರಾನ್ಸಿನ ಜಹಜುಗಳಲ್ಲಿ ಇಂಥ ಅನಾಹುತವು ಪದೇ ಪದೇ ಆಗುತ್ತಲೇ ಇರುವದರಿಂದ, ಅನಾಹುತದ ಕಾರಣಗಳನ್ನು ಕೂಲಂಕಷವಾಗಿ ವಿಚಾರಿಸಬೇಕೆಂದೂ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟ್ಯಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[8] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕರ್ನಾಟಕಸಂಘ ಪುಣೆ, ವಾರ್ಷಿಕ ಸಮ್ಮೇಳನ.

ಈ ವರ್ಷದ (೧೯೩೨-೩೩) ವಾರ್ಷಿಕ ಸಮ್ಮೇಳನವು ಕಳೆದ ತಿಂಗಳೇ ಜರಗತಕ್ಕದ್ದಾಗಿದ್ದರೂ ಕೆಲವು ಕಾರಣಗಳ ಮೂಲಕ ಅದನ್ನು ಈ ತಿಂಗಳ ೭ ನೇ ತಾರೀಖಿನ ದಿವಸ ಜರುಗಿಸಬೇಕಾಯಿತು. ಕೆಲಸಗಳೆಲ್ಲವೂ ಅತಿ ಸಡಗರದಿಂದ ಜರುಗಿ ಕೈಕೊಂಡ ಕೆಲಸವು ನಿರ್ವಿಘ್ನವಾಗಿ ಕೊನೆಗಾಣಿಕೆಂದು ಅರುಹಲು ಮಹಾದಾನಂದವೆನಿಸುತ್ತದೆ.

ಈಸಲ ಬಳ್ಳಾರಿಯ ಶ್ರೀ ತಾಡಪತ್ರಿ ರಾಘವಾಚಾರ್ಯರು ನಮ್ಮ ಅತಿಥಿಗಳು. ಮುಂಜಾನೆ ಅತಿಥಿಗಳ ಮತ್ತು ಕರ್ನಾಟಕ ವಿದ್ಯಾರ್ಥಿಗಳ ಛಾಯಾಚಿತ್ರವನ್ನು ತೆಗೆಯುವದಾದಮೇಲೆ ಚಿಕ್ಕಪುಟ್ಟ ಆಟಗಳ ಕಸರತ್ತುಗಳಾದುವು. ವಿದ್ಯಾರ್ಥಿನಿಯರು ಸಹ ಉತ್ಸಾಹದಿಂದ ಭಾಗತೆಗೆದುಕೊಂಡರು. ಮಧ್ಯಾಹ್ನ ೪ ಘಂಟೆಗೆ ಸರಿಯಾಗಿ ಉಪನ್ಯಾಸದ ಕಾರ್ಯಕ್ರಮವು ಪ್ರಾರಂಭವಾಯಿತು. ಮೊದಲು ಅಧ್ಯಕ್ಷರಾದ ಪ್ರೊ. ಎಲ್. ಬಿ. ಕುಲಕರ್ಣಿಯವರು

ಶಿವಸ್ತವಶಿರೋಮಣಿ ....
ವೀರಶೈವಾಚಾರವಿಧಿ (೩ನೆಯ ಆವೃತ್ತಿ) ....
ವಿವಾಹವಿಧಿ (೩ನೆಯ ಆವೃತ್ತಿ) ....
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ (೩ನೆಯ
ವೀರಶೈವರತ್ನ ....
ವೈದಿಕವಾಙ್ಮಯರಹಸ್ಯ ....
ಶ್ರುತಿಸಾರಭಾಷ್ಯ ....
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ) ....
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ) ....
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣ
पंडित श्रीकाशिनाथशास्त्री यांचें भाषण (म
Speeches by Pandit Shri Kashinatha Shastr

ಮನೋಹರವಾ

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂ
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ
ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ
ಸಪ್ತ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒ
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾ
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷ
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿ
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗೆಳ
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿ
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ವಿ
ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿ
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರ
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸು
ಹಿಮಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯ
ಮಂದಿರದ ಅತ್ಯಂತ ಮನೋಹರವಾದ ಫೋಟೋ

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆದ
ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧

ಮ್ಯಾನೇಜರ್—ಶ್ರೀ ಪ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾ

ಯಾಗಲಾರವು. ಯಾವ ಭಗವದ್ಗೀತೆಯಲ್ಲಿ ಅರ್ಜುನನು ಗುರುಜನಗಳನ್ನೂ ಸಹೋದರ ಬಾಂಧವರನ್ನೂ ನೋಡಿ ಕ್ಷುಲ್ಲಕವಾದ ರಾಜ್ಯಾಕಾಂಕ್ಷೆಯಿಂದ ಹಿಮ್ಮುಖನಾದಾಗ ಶ್ರೀಕೃಷ್ಣನು ಕ್ಷಾತ್ರಧರ್ಮದ ಬೀಜವನ್ನು ಅವನ ಹೃದಯಭೂಮಿಯಲ್ಲಿ ಚೆನ್ನಾಗಿ ಊರಿ ಧರ್ಮಕ್ಕಾಗಿ ಯುದ್ಧಮಾಡು; ರಾಜ್ಯಕ್ಕಾಗಿ ಅಲ್ಲ; ಎಂದು ಬೋಧಿಸಿರುವನು. ಅದೇ ಗೀತಾಪಾರಾಯಣನಿರತರಾದ ಗಾಂಧಿಯವರು ಭಾರತೀಯರನ್ನು ಕುರಿತು ರಾಜ್ಯಕ್ಕಾಗಿ ಧರ್ಮವನ್ನು ಮೂಲೆಗೊತ್ತಿರೆಂದು ಬೋಧಿಸುತ್ತಿರುವರೆಂಬ ನಾದವು ಯರೋಡೆಯಿಂದ ಹೊರಬಿದ್ದಿರುವದೆಂದು ಅನೇಕರು ಅಭಿಪ್ರಾಯಪಡುತ್ತಲಿದ್ದಾರೆ. ರಾಜನೀತಿಯ ಭವ್ಯಮಂದಿರವು ಧರ್ಮನೀತಿಯ ಕಳಹದಿಯ ಮೇಲೆ ನಿಂತಿರುವದೆಂದು ಸ್ಮೃತ್ಯಾದಿ ಉದ್ಗ್ರಂಥಗಳೂ ಗಾಂಧಿಯವರಿಗೆ ಅತ್ಯಂತ ಪ್ರಿಯವಾದ ಭಗವದ್ಗೀತೆಯೂ ಮುಕ್ತಕಂಠದಿಂದ ಬೋಧಿಸುತ್ತಲಿವೆ. ಭಾರತೀಯರ ಜೀವಾತುವಾದ ಸನಾತನಧರ್ಮಕ್ಕೆ ಚ್ಯುತಿಯುಂಟಾಗದಂತೆ ರಾಷ್ಟ್ರೀಯಚಳುವಳಿಯನ್ನು ಮುಂದರಿಸಬೇಕೆಂದು ಅನೇಕ ಸನಾತನಾಭಿಮಾನಿಗಳು ಗಾಂಧಿಯವರನ್ನು ಕೋರುತ್ತಲಿದ್ದಾರೆ. ಅಸ್ಪೃಶ್ಯತಾಧರ್ಮವೊಂದು ಬೇರಿಲ್ಲ; ಅದೊಂದು ಸನಾತನಧರ್ಮಾಂತರ್ಗತವಾಗಿರುವದು. ಮುಟ್ಟು-ಮುಟ್ಟದಿರು-ನೋಡು-ನೋಡದಿರು-ಎಂಬ ಅಂತರಾರ್ಥಗರ್ಭಿತವಾದ ಧಾರ್ಮಿಕಭಾವನೆಯು ಅನಾದಿಕಾಲದಿಂದ ಬಂದಿದೆ. ಧರ್ಮವೈಶಿಷ್ಟ್ಯಕ್ಕಾಗಿ ಸ್ಪೃಶ್ಯಾಸ್ಪೃಶ್ಯಗಳು ಇರುವವಲ್ಲದೆ ಬೇರೊಂದು ಸಂಕುಚಿತಭಾವನೆಯಿಲ್ಲ. ಸ್ಪೃಶ್ಯವರ್ಗದಲ್ಲಿ ಗಣಿಸಲ್ಪಡುವ ಸನಾತನಧರ್ಮಾಭಿಮಾನಿಗಳು ಅಸ್ಪೃಶ್ಯರನ್ನು ಹೇಯಬುದ್ಧಿಯಿಂದ ಯಾವಾಗಲೂ ನೋಡುತ್ತಿರುವದಿಲ್ಲ. ಹಾಗೆ ನೋಡುತ್ತಲಿದ್ದರೆ ಈಗಿನಂಥ ಭೀಕರವಾದ ಅಸ್ಪೃಶ್ಯತಾನಿವಾರಣೆಯ ಚಳವಳಿಯು ಐತಿಹಾಸಿಕಕಾಲದಿಂದಲೂ ಆರಂಭವಾಗುತ್ತಿತ್ತು. ವೇದಕಾಲ, ಪುರಾಣಕಾಲ, ಐತಿಹಾಸಿಕಕಾಲಗಳಲ್ಲಿಲ್ಲದ ಅಸ್ಪೃಶ್ಯತಾನಿವಾರಣೆಯ ಭೂತವು ಆಧುನಿಕಕಾಲದಲ್ಲಿ ಕಲಿಯುತ್ತಿರುವದು. ತ್ರಿಕಾಲಜ್ಞಾನಿಗಳಾದ ಮಹರ್ಷಿಗಳ ಕಾಲಜ್ಞಾನವೆಂಬ ಶಾಸ್ತ್ರಾಧಾರದಿಂದ ಕಲಿಯುಗದಲ್ಲಿ ಧರ್ಮಾಧರ್ಮಗಳೂ, ಪಾಪಪುಣ್ಯಗಳೂ, ಹಿರಿಯ ಕಿರಿಯಭಾವನೆಯೂ, ನೀತಿ ಸದಾಚಾರಗಳ ಸದ್ದಡಗಿ ಅಧರ್ಮ ಅನೀತಿಗಳು ತಾಂಡವಮಾಡುವ ದೃಶ್ಯವನ್ನು ಆರ್ಯಾವರ್ತವು ನೋಡುವದೆಂದು ಹೇಳಿದ ಭವಿಷ್ಯವು ಈಗಲೇ ಕೋರತೊಡಗಿದೆ ಎಂದು ಅನೇಕ ಧರ್ಮಾಭಿಮಾನಿಗಳ ಹೃದಯವು ಕಂಪಿಸತೊಡಗಿದೆ. ಇನ್ನೂ ಕಲಿಯುಗದ ಪ್ರಥಮಚರಣವು ದಾಟಿಲ್ಲ; ಈಗಲೇ ಸನಾತನಧರ್ಮನಾಶಕ್ಕೆ ಸಂಚುಗಾರವು ಬಂದಂತಾಗಿದೆ. ಅಸ್ತು! ಉಂಡುಟ್ಟು ಸುಖದಿಂದ ಭಾರತೀಯರಿದ್ದರೆ ಈ ಸನಾತನಧರ್ಮಕ್ಕಾಗಿ ಸೊಗಸಾಗಿ ಬಡಿದಾಡುತ್ತಿದ್ದರು. ಅನ್ನಬಟ್ಟೆಗಳ ಚಿಂತೆಯಿಂದ ಕೋಟಿಗಟ್ಟಲೆ ಜನರು ನರಳುತ್ತಿರುವಾಗ ಧರ್ಮವು ಹಾಳಾಗಿಹೋದರೂ ಚಿಂತೆಯಿಲ್ಲ; ಹೊಟ್ಟೆ ಬಟ್ಟೆಯ ಚಿಂತಾಪಹಾರಿಯಾದ ಸ್ವರಾಜ್ಯಸಂಪಾದನೆಯನ್ನು ಮಾಡಿಕೊಳ್ಳಿ! ಎಂದು ರಾಷ್ಟ್ರೀಯ ಪಕ್ಷದವರು ಸಿಂಹನಾದ ಮಾಡುತ್ತಲಿರುವರು. ಇವರ ಸಿಂಹಗರ್ಜನೆಯ ಮುಂದೆ ಸನಾತನಧರ್ಮಾಭಿಮಾನಿಗಳ ಸಣ್ಣದಾದ ಧ್ವನಿಯು ಜಗತ್ತನ್ನು ಬೆರಗುಗೊಳಿಸಲಾರದೆಂದು ಹಲವರು ಬಡಬಡಿಸುತ್ತಲಿರುವರು. ಸನಾತನಧರ್ಮದ ಧ್ವನಿಯು ಸಾಮಾನ್ಯವಾದುದಲ್ಲ; ಇದು ಈ ಜಗತ್ತನ್ನೇಕೆ? ತ್ರಿಲೋಕವನ್ನೇ ದಂಗುಬಡಿಸುವ ಶಕ್ತಿಯು ಇದರಲ್ಲಿದೆ. ಧರ್ಮಯುಕ್ತವಾಗಿ ಸಂಪಾದಿಸಿದ ರಾಜ್ಯವೇ ಸ್ವರ್ಗವಾಗಿ ಪರಿಣಮಿಸುವುದು. ಅಧರ್ಮದಿಂದ ಗಳಿಸಿದ್ದು ಅರಣ್ಯಸದೃಶವಾಗುವದು. ಗಾಂಧಿಯವರು ತುರಂಗದಿಂದ ಹೊರಗಿದ್ದರೆ ಸನಾತನಧರ್ಮಾಭಿಮಾನಿಗಳ ಅಂತರಂಗವನ್ನು ತಿಳಿಯುತ್ತಿದ್ದರು. ಅವರಿದ್ದಲ್ಲಿಯೇ ಧರ್ಮಪಂಡಿತರು ಹೋಗಿ ಸನಾತನ ಧರ್ಮದ ತತ್ವದ ತಿರುಳನ್ನು ತೋರಿಸುತ್ತಲಿದ್ದಾರೆ. ಆದರೆ ವಿಶೇಷವಾಗಿ ಧರ್ಮಾಭಿಮಾನ ಶೂನ್ಯರೇ ಅವರ ಸ್ನೇಹವನ್ನು ತೆಗೆದುಕೊಂಡು ಅಸ್ಪೃಶ್ಯತಾನಿವಾರಣೆಯಾಗಲೇಬೇಕೆಂದು ಬಹುಮತವಿದೆಯೆಂದು ಕಂಠಶೋಷಣ ಮಾಡಿಕೊಳ್ಳುತ್ತಲಿದ್ದಾರೆ. ಗಾಂಧಿಯವರು ಯಾವುದನ್ನೇ ಜಯಿಸಿಕೊಳ್ಳಲಿ; ಕೊಳ್ಳದಿರಲಿ; ಸನಾತನಧರ್ಮವು ಮಾತ್ರ ಎಂದೂ ನಾಶವಾಗಲಾರದು. ಅದು ನಾಶವಾದರೆ ಜಗತ್ಪ್ರಳಯವೇ ಆಗುವದು. ಜಗತ್ತಿಗೂ ಧರ್ಮಕ್ಕೂ ಅತ್ಯಂತ ನಿಕಟಸಂಬಂಧವದೆ. ಜಗದಾಧಾರವಾದ ಧರ್ಮರಕ್ಷಣೆಗೆ ಸಕಲ ಸನಾತನಧರ್ಮಾಭಿಮಾನಿಗಳು ಜಾಗ್ರತರಾಗಲೆಂದು ಹಾರೈಸುತ್ತೇನೆ.

ನೀತಿಬೋಧಾಮೃತ.

16. ಮರ್ಯಾದೆಯೇ ಮಾನವನನ್ನು ಮನ್ನಣೆಗೆ ತರುವುದು.

ಲೇಖಕ—ಕನ್ನಡಕವಿ ಅನವಟ್ಟಿ ರಾಮರಾಯರು.

ಮರ್ಯಾದೆ ಎಂದರೆ ಒಂದು ವಸ್ತುವಿನಲ್ಲಿರುವ ಸುಗುಣಕ್ಕೆ ಮೆಚ್ಚಿ ಯೋಗ್ಯರಾದವರು ತೋರಿಸುವ ವಿಶ್ವಾಸಪೂರ್ವಕವಾದ ಚಿಹ್ನೆಗಳಾಗಿವೆ. ಈಗ ನಾವು ದೇವಸ್ಥಾನಕ್ಕೆ ಹೋದರೆ, ಭಗವಂತನಿಗೆ ನಮಸ್ಕಾರಗಳನ್ನು ಮಾಡುವೆವು. ಏಕೆಂದರೆ, ಆ ಭಗವಂತನು ನಮ್ಮನ್ನು ಸೃಷ್ಟಿಸಿ, ಸ್ವಾರ್ಥಾಪೇಕ್ಷೆಯಿಲ್ಲದೆ ನಮ್ಮನ್ನು ಕಾಪಾಡಿಕೊಂಡು ಬೇಕಾ ಬೇಕಾದ ಸಹಾಯಗಳನ್ನು ದಯಪಾಲಿಸುತ್ತಿರುವನು. ಸ್ವಾಮಿಗಳನ್ನು ಕಂಡರೆ ನಮಸ್ಕಾರಗಳನ್ನು ಮಾಡುವೆವು. ಏಕೆಂದರೆ ಆ ಮಹಿಮರಲ್ಲಿ ಭಗವಂತನ ಭಕ್ತಿ, ಶಾಂತತೆ, ಲೋಕೋಪಕಾರವಾದ ಅಪಾರ ಸದ್ಗುಣಗಳಿರುವುವು. ವಿದ್ಯಾವಂತನನ್ನು ನೋಡಿದರೆ ಎಲ್ಲರೂ ನಮಸ್ಕರಿಸುವರು. ಏಕೆಂದರೆ ಅತನಲ್ಲಿ ಜ್ಞಾನವೂ ಪ್ರಾಣಿದಯಾಪರತೆಯೂ, ಶಿಷ್ಯರಿಗೆ ಜ್ಞಾನೋದಯವನ್ನುಂಟುಮಾಡುವ ಸ್ವಭಾವಗುಣವೂ ಇರುವುವು. ಸ್ನೇಹಿತನನ್ನು ಕಂಡರೆ ನಮಸ್ಕಾರಮಾಡುವೆವು. ಏಕೆಂದರೆ ಅತನು ತನ್ನ ಮಿತ್ರರಿಗೂ ಸಹೋದರರಿಗೂ, ಸಹಾಯಮಾಡುತ್ತಾ, ಸುಖದುಃಖಗಳ ಸ್ಥಿತಿಯಲ್ಲಿ ಒಂದೇ ರೀತಿಯಲ್ಲಿರುವನು. ಈ ರೀತಿಯಾಗಿ ಮರ್ಯಾದೆಯೆಂಬುದು ನಾವು ಜನರಲ್ಲಿ ಕಾಣಬರುವ ಸದ್ಗುಣಗಳಿಗೆ ಮೆಚ್ಚಿ ತೋರಿಸುವ ಚಿಹ್ನೆಯಾಗಿರುವುದೆಂದು ತಿಳಿಯಬೇಕು.

ಇಂತಹ ಸದ್ಗುಣಸಮುದಾಯವನ್ನು ಹೊಂದಬೇಕೆಂದಾಶಿಸುವುದೇ ಮಾನವನ ಪ್ರಥಮಕರ್ತವ್ಯವು. ನಗರಗಳಲ್ಲಿ ವಾಸಿಸುವ ನಾಗರಿಕರಿಗೂ ಅರಣ್ಯದಲ್ಲಿ ವಾಸಮಾಡುವ ಕಾಡುಜನರಿಗೂ, ಇರುವ ಗುಣಭೇದಗಳಿಂದಲೂ ಅವರು ಆಚರಿಸುತ್ತಿರುವ ನಡೆನುಡಿಗಳಿಂದಲೂ ಜನರು ಎಷ್ಟು ಪುರಸ್ಕಾರವನ್ನು ಹೊಂದುತ್ತಿರುವರೆಂಬುದನ್ನು ಚರಿತ್ರೆಗಳಿಂದ ತಿಳಿಯಬಹುದು.

ನಾನು ಯಾರು, ಎಲ್ಲಿಂದ ಬಂದಿರುವೆನು, ಏತಕ್ಕಾಗಿ ಭಗವಂತನು ನನ್ನನ್ನು ಸೃಷ್ಟಿಸಿರುವನು ಎಂಬುದನ್ನು ತಿಳಿದುಕೊಂಡರೆ, ಅಲ್ಲಿಂದ ಅವನು ಮಾನವನು ಎಂದೆನಿಸಿಕೊಂಡು ಮರ್ಯಾದೆಗೆ ಅರ್ಹನಾಗುವನು. ಭಗವಂತನು ನಮಗೆ ಮಿಕ್ಕ ಎಲ್ಲಾ ಜೀವಿಗಳಿಗಿಂತಲೂ ಯೋಗ್ಯವಾದ ಶರೀರವನ್ನೂ ಇದಕ್ಕೆ ಅನುಗುಣವಾದ ಇಂದ್ರಿಯಗಳನ್ನೂ ವಿವೇಕ ಮುಂತಾದ ಗುಣಗಳನ್ನೂ ದಯಪಾಲಿಸಿರುವನು. ಇಂತಹ ಮಾನವನು ಇವುಗಳನ್ನು ತನಗಾಗಿಯೂ, ಅನ್ಯರಿಗೂ ಉಪಯೋಗಿಸಿಕೊಳ್ಳಬೇಕೆಂಬುದೇ ಭಗವಂತನ ಸಂಕಲ್ಪವಾಗಿರುವುದನ್ನು ದೂರಮಾಡಿಕೊಂಡು ಸ್ವಾರ್ಥತೆಯೇ ಮುಖ್ಯವಾಗಿಟ್ಟುಕೊಂಡರೆ ತನ್ನಿಂದ ತಾನೇ ನಾಶವಾಗಿ ಹೋಗುವುದು ಮಾನವರಾದ ನಮಗೆ ಯೋಗ್ಯವಲ್ಲವು. ಹೀಗಿರುವುದರಿಂದ ಎಲೈ ಮಾನವನೇ! ನೀನು ಯಾರು? ನಿನ್ನಲ್ಲಿ ತೋರಿಬರುವ ತಿಳುವಳಿಕೆಯಿಂದ ಗರ್ವವನ್ನು ಪಡುತ್ತಿರುವುದೇಕೆ? ಭಗವಂತನು ನಿನಗೆ ಎಲ್ಲಾ ವಿಧವಾದ ಸಹಾಯ ಸಂಪತ್ತುಗಳನ್ನು ದಯಪಾಲಿಸಿರುವನೆಂಬುದನ್ನು ಯೋಚಿಸಿ ಇದಕ್ಕಾಗಿ ಗರ್ವ, ಡಂಭವನ್ನು ಜನಗಳಲ್ಲಿ ತೋರಿಸುವುದು ನಿನಗೆ ತರವಲ್ಲ. ನನ್ನನ್ನು ಬಿಟ್ಟರೆ ನನಗೆ ಸಾಟಿಯಾದವರು ಮತ್ತಾರಿರುವರು ಎಂದು ಹೊಗಳಿಕೊಳ್ಳುವುದು ನಿನಗೆ ಯೋಗ್ಯವಲ್ಲವು. ಮಾನವನು ತಾನು ಎಷ್ಟು ತಿಳಿದುಕೊಂಡಾಗ್ಯೂ ತನಗೆ ಏನೂ ತಿಳಿಯದೆಂದು ಹೇಳಿಕೊಂಡು ವರ್ತಿಸುತ್ತಿರುವುದೇ ಅವನಲ್ಲಿರುವ ಜ್ಞಾನಕ್ಕೆ ಸಾಕ್ಷಿಯಾಗಿರುವುದು. ಮಾನವನೆ! ನಿನ್ನಲ್ಲಿರುವ ಸದ್ಗುಣಗಳಿಗೆ ಮೆಚ್ಚಿ, ವಿದ್ಯಾವಂತರು ನಿನ್ನನ್ನು ಹೊಗಳಿದ ಮಾತ್ರಕ್ಕೆ ಅದನ್ನು ಮರೆತು ಬಿಡದೆ, ಇನ್ನು ನನಗೆ ಜ್ಞಾನದಲ್ಲಿ ಸಾಟಿಯಾದವರು ಯಾರಿರುವರು ಎಂಬ ಹೆಮ್ಮೆಗೆ ಮನಸ್ಸನ್ನು ಅಧೀನಪಡಿಸಿಕೊಳ್ಳದೆ ಮನಸ್ಸಿಗೆ ಬುದ್ಧಿಯನ್ನು ಹೇಳುತ್ತಿರು. ಮಾನವನು ವಿದ್ಯಾವಂತನಾದ ಮಾತ್ರಕ್ಕೆ ಡಂಭವನ್ನು ತೋರ್ಪಡಿಸಬೇಕಾಗಿರುವುದಿಲ್ಲ. ಹೆಂಗಸಾದವಳು ತನ್ನಲ್ಲಿರುವ ಸದ್ಗುಣಗಳಿಂದಲೇ ಹೇಗೆ ಮಾನ್ಯಳಾಗಿರುವಳೋ ಹಾಗೆಯೇ ನೀನು ಸುಗುಣಸಂಪದದಿಂದ ಧನ್ಯನಾಗಿ ವರ್ತಿಸುತ್ತ ದೊಡ್ಡವರಿಗೆ ಸಂತೋಷದಿಂದ ಸಭ್ಯರೀತಿಯಲ್ಲಿ ವರ್ತಿಸುತ್ತಿರುವ ಮಾರ್ಗವನ್ನು ಕೈಕೊಳ್ಳುವಗುಣವನ್ನು ಹೊಂದಿ ಯೋಗ್ಯರಿಂದ ಹೊಗಳಿಕೆಗೆ ಪಾತ್ರನಾಗಿ ಸದ್ಗುಣವೆಂಬ ಕವಚವನ್ನು ತೊಟ್ಟು ಅಸದೃಶವಾದ ಸೌಖ್ಯವನ್ನು ಹೊಂದುವುದೇ ಶ್ರೇಷ್ಠವು.

ಯಾವನು ಗುಣಾಢ್ಯನಾಗಿರುವನೋ ಅವನು ಹೇಳುವ ಪ್ರತಿಯೊಂದು ಮಾತೂ ಸಕ್ಕರೆ ಕಾಂತಿಯನ್ನು ಕೊಟ್ಟಂತಿರುವುದೆಂದು ಭಾವಿಸು. ಅಲ್ಲದೆ ಆಗ ತಾನು ಹೇಳುವ ಮಾತುಗಳಲ್ಲಿಯೂ ಅನುಕೂಲವಾಗುವರೀತಿಯು ಏರ್ಪಡುವುದೆಂದು ತಿಳಿಯಬೇಕು. ಒಂದುವೇಳೆ ಅವನಲ್ಲಿ ಲೋಪಗಳೇನಾದರೂ ಕಂಡುಬಂದರೆ ಅವನು ವರ್ತಿಸುವ ಮಾರ್ಗದಿಂದಲೇ ಅವೆಲ್ಲಾ ಮುಚ್ಚಿಹೋಗುತ್ತವೆ. ಇಂತಹ ಮರ್ಯಾದೆಯನ್ನು ಹೊಂದುವ ಮಾನವನು ತನ್ನಲ್ಲಿರುವ ತಿಳುವಳಿಕೆಯು ಎಷ್ಟರಮಟ್ಟಿನದೆಂದು ಎಂದು ಹೇಳುವ ಬುದ್ಧಿವಾದಗಳಲ್ಲಿ ನಂಬಿಕೆಯನ್ನು ಇಟ್ಟು ವಿಶೇಷ ಕಷ್ಟಕ್ಕೆ ಎಡೆಯಾದ ಕಾಲಗಳಲ್ಲಿ ಮಹರ್ಷಿಯರು ಹೇಳಿದ ಬೋಧೆಗಳ ಬೆಲೆಯನ್ನು ಮನಸ್ಸಿಗೆ ತಂದುಕೊಂಡು ಹಾಗೆ ನಡೆದು ಬರುತ್ತ ತೃಪ್ತಿಯನ್ನು ಹೊಂದುವುದೇ ಪ್ರತಿಯೊಬ್ಬನಿಗೂ ಲೇಸು.

ಪ್ರಪಂಚದಲ್ಲಿ ತನ್ನನ್ನು ಇತರರು ಹೊಗಳಿದರೆ ಹಿಗ್ಗುವರು ಕೆಲವರಿರುವರು. ಅವರಿಗೆ ಅಂತಹ ಹೊಗಳಿಕೆಯೇ ಹಿತಕರವಾಗಿ ಮನಸ್ಸಿಗೆ ತೋರುವುದುಂಟು. ಅಂತಹ ಹೊಗಳಿಕೆಗೆ ಮನಸ್ಸನ್ನು ಕೊಟ್ಟರೆ, ನಿನ್ನಲ್ಲಿರುವ ಗುಣಗಳನ್ನು ಮರೆತು ನೀಚತನಕ್ಕೆ ನಿನ್ನನ್ನು ಸೆಳೆದುಕೊಂಡು ಹೋಗಿಬಿಡುವುದು. ಆದುದರಿಂದ ಪರರ ಸಂತುಷ್ಟಿಗೆ ಕಿವಿಗೊಡದಂತಿದ್ದು ಅಂತಹ ಜನಗಳ ಮಾತುಗಳನ್ನು ನಂಬದೆಯೇ ನನ್ನಲ್ಲಿ ಅಂತಹಗುಣಗಳಿಲ್ಲವೆಂದು ಹೇಳಿಕೊಳ್ಳುತ್ತಾ ನಿಧಿಯಂತಿರುವ ಸದ್ಗುಣಸಮುದಾಯವನ್ನು ತೋರಿಸುತ್ತಾ ಲೋಕದಲ್ಲಿ ವರ್ತಿಸಿ ಸುಖಪಡುತ್ತಿರುವವನಾವನೋ ಅವನೇ ಧನ್ಯನೂ ಮಾನ್ಯನೂ ಆಗಿರುವನು.

ಹಾಗಲ್ಲದೆ ಗರ್ವ ದಂಭಗಳನ್ನು ಹೊಂದಿರುವ ಮಾನವನನ್ನು ನೋಡಿದ್ದಾದರೆ, ಜನಗಳ ದೃಷ್ಟಿಗೆ ಬೀಳಲೆಂಬ ಹೆಮ್ಮೆಯಿಂದ ಬೆಲೆಯಾದ ವಸನಂಗಳನ್ನು ಧರಿಸಿಕೊಂಡು ದಾರಿಯಲ್ಲಿ ಹೋಗುತ್ತಿರುವಾಗ್ಗೆ, ತಾನು ಪ್ರತಿಷ್ಠೆಗೂ ಹಿಂತಿರುಗಿ ನೋಡುತ್ತಾ, ನೋಡುತ್ತಾ, ತನ್ನ ಸ್ಥಿತಿಯನ್ನು ನೋಡಿದಜನರು ಮೆಚ್ಚಿ ಹತ್ತಿರಕ್ಕೆ ಬಂದು ಮಾತನಾಡಿಸುವರೆಂಬ ಯೋಚನೆಗಳಿಂದ ವರ್ತಿಸುತ್ತಿ ವಾಗ್ಗೆ ಕಂಡವರೊಡನೆ ಸವಿಮಾತುಗಳನ್ನಾಡುತ್ತಿರುವನು. ರನು ಆಡುವ ಮಾತುಗಳಿಗೆ ತನ್ನ ತಲೆಯನ್ನು ಬಗ್ಗಿಸಿಕೊ ವ, ಅಭ್ಯಾಡಿಸುತ್ತಾ, ಬಡವರನ್ನು ಕಂಡರೆ ತಿರಸ್ಕಾರದಿಂದ ಕ ರಾ ತಾ ತನಗಿಂತಲೂ ಕೀಳಾದವರನ್ನು ನೋಡಿದಾಗ್ಗೆ ಅ ಸ

ಳನ್ನು ತನ್ನ ಬಳಿಯಲ್ಲಿಟ್ಟುಕೊಂಡಿದ್ದನಂತೆ! ಪೋಲೀಸರು ತನಿಖೆಕ್ರಮಗಳನ್ನು ಜರುಗಿಸುತ್ತಿರುವರು.

ಬೆಂಗಳೂರು ಸಿಟಿ ಕಂಟೋನ್ಮೆಂಟ್ ಸರ್ವಿಸ್ ಬಸ್ಸಿನ ಡ್ರೈವರುಗಳಾದ ನಾರಾಯಣರಾವ್ ಮತ್ತು ನರಸರೆಡ್ಡಿ ಎಂಬುವರು ಕಳೆದ ಸೋಮವಾರದ ದಿವಸ ತಮ್ಮ ಬಸ್ಸುಗಳಲ್ಲಿ ನಿಯಮಿತ ಸಂಖ್ಯೆಗಿಂತ ಹೆಚ್ಚು ಜನ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದರೆಂಬ ಅಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಸದರಿ ಡ್ರೈವರುಗಳಿಬ್ಬರಿಗೂ ಐದೈದು ರುಪಾಯಿ ಜುಲ್ಮಾನೆಯನ್ನು ವಿಧಿಸಿದರು.

ಮಂಡ್ಯದ ತಾಲ್ಲೂಕು ಪೈಕಿ ಹೊಳಲುಗ್ರಾಮದಲ್ಲಿ ಇರುವ ಸಾವುಕಾರ ಲಿಂಗಪ್ಪಶೆಟ್ರು ಕಳೆದ ಸೋಮವಾರ ಬೆಳಗ್ಗೆ ವಿಷಮಜ್ವರ ಪೀಡಿತರಾಗಿದ್ದು ಮೃತಿಯನ್ನು ಹೊಂದಿದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಇವರು ಆ ಗ್ರಾಮದಲ್ಲಿರುವ ಪ್ರೈಮರಿ ಸ್ಕೂಲಿನ ಅಭಿವೃದ್ಧಿಯ ವಿಚಾರದಲ್ಲಿ ಬಹಳ ಉತ್ಸುಕತೆಯಿಂದ ಕೆಲಸಮಾಡುತ್ತಿದ್ದರು. ಮತ್ತು, ತಾಂಡವೇಶ್ವರನ ದೇವಸ್ಥಾನವನ್ನು ಕಟ್ಟಿಸುತ್ತ, ಅರ್ಧಕಟ್ಟಿದವಾಗಿತ್ತು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ರಸಾಯನ ಶಾಸ್ತ್ರಜ್ಞರು ಲಂಟಾನಾಗಿಡದ ಎಲೆಗಳಿಂದ ವಿದ್ಯುಚ್ಛಕ್ತಿಯನ್ನು ತೆಗೆಯುವ ಒಂದು ನೂತನ ವಿಧಾನವನ್ನು ಕಂಡುಹಿಡಿದಿರುವರು. ಲಂಟಾನಾಗಿಡವು ನಮ್ಮ ಮೈಸೂರು ಸೀಮೆಯಲ್ಲಿ ಎಲ್ಲೆಲ್ಲೂ ವಿಶೇಷವಾಗಿರುವದರಿಂದ, ಮೈಸೂರು ಸರಕಾರದವರು ಈ ಹೊಸ ಮಾರ್ಗದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸಬೇಕೆಂದು ನಿರ್ಧರಿಸಿ ಸೀಮೆನ್ಸ್ ಕಂಪೆನಿಯವರೊಡನೆ ಅವಶ್ಯಕವಾದ ವ್ಯವಹಾರಗಳನ್ನು ನಡೆಯಿಸುತ್ತಿರುವರು. ಈ ಹೊಸಮಾರ್ಗದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸಲು ಯೂನಿಟ್ಟಿಗೆ ಒಂದಾಣೆ ವೆಚ್ಚವಾಗುವದಂತೆ!

ರಾಜಧಾನಿಯ ಶ್ರೀ ರಾಜಲಕ್ಷ್ಮೀ ಟೇಲರಿಂಗ್ ಹಾಲ್ ಮತ್ತು ಸೈಂಟಿಫಿಕ್ ಸ್ಕೂಲಿನ ಪ್ರೊಪ್ರೈಟರಾದ ಮಿ|| ಕೆ. ಎಂ. ಉಧರ್‌ಕರ್ ಡಿ. ಎಸ್. ಟಿ. ಸಿ. ಯವರೂ, ಶ್ರೀರಾಜರಾಜೇಶ್ವರೀಹಾಲಿನ ಪ್ರೊಪ್ರೈಟರಾದ ಮೆ|| ಲಿಂಗೋಜಿರಾವ್ ಅಂಡ್ ಸನ್ಸ್‌ರವರೂ, ಮೆ|| ಬಿ. ರುದ್ರಪ್ಪ ಅಂಡ್ ಸನ್ಸ್‌ರವರೂ ಹಾಗೂ ಬೆಂಗಳೂರಿನ 'ದಿ ಮೈಸೂರು ಊದಬತ್ತಿಫ್ಯಾಕ್ಟರಿ'ಯ ಪ್ರೊಪ್ರೈಟರಾದ ಮೆ|| ಯಜಮಾನ್ ಕೆಂಚಪ್ಪ ಅಂಡ್ ಬ್ರದರ್ಸ್‌ರವರೂ ಕಳುಹಿಸಿರುವ ಅಂದವಾದ ಹೊಸವರ್ಷದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಸಕ್ಕರೆಯ ಕಾರ್ಖಾನೆಯನ್ನು ಪ್ರಾರಂಭಿಸಲು ಅವಶ್ಯಕವಾದ ಏರ್ಪಾಡುಗಳನ್ನು ಸರಕಾರದವರು ಪೂರೈಸಿರುವರು. ಇಷ್ಟರಲ್ಲಿಯೇ ಅದರ ಸಂಬಂಧವಾದ ಇತರ ವಿವರಗಳು ಹೊರಬೀಳುವವೆಂದು ನಿರೀಕ್ಷಿಸಲ್ಪಟ್ಟಿದೆ. ಕಾರ್ಖಾನೆಯ ಮೇಲ್ವಿಚಾರಣೆಗಾಗಿ ಈ ಕೆಳಗೆ ಕಂಡವರು ಡೈರೆಕ್ಟರಾಗಿ ನಿಯಮಿಸಲ್ಪಟ್ಟಿರುವರು. ಡಾ|| ಎಲ್. ಸಿ. ಕೋಲ್‌ಮನ್‌ರವರು (ಅಧ್ಯಕ್ಷರು) ಕೈಗಾರಿಕೆ ಮತ್ತು ವಾಣಿಜ್ಯಶಾಖಾಧಿಕಾರಿಗಳು ಸಂಸ್ಥಾನದ ಕಂಟ್ರೋಲರವರು, ನಿವೃತ್ತ ಫೈನಾನ್ಶಿಯಲ್ ಸೆಕ್ರೆಟರಿಗಳಾದ ಮಿ|| ಬಿ. ಶ್ರೀನಿವಾಸಯ್ಯಂಗಾರ್ಯರು ಮಿ|| ಬಿ. ಕೆ. ಗರುಡಾಚಾರ್ಯರು, ಹಾಜಿ ಸರ್ ಇಸ್ಮಾಯಿಲ್‌ಸೇಟರವರು ಮತ್ತು ಧರ್ಮಪ್ರವರ್ತ ಎಂ. ಎಲ್. ನಾಗಪ್ಪನವರು.

ಮಂಡ್ಯ ತಾಲೂಕು ಗುಡಿಗೇನಹಳ್ಳಿಯಲ್ಲಿರುವ ದೇವಯ್ಯನೆಂಬವನು ತನ್ನ ಹೆಂಡತಿ ಲಿಂಗಮ್ಮ ಎಂಬವಳನ್ನು ಅದೇ ಗ್ರಾಮದ ಚಿಕ್ಕದೇವಯ್ಯನೆಂಬವನು ಇಟ್ಟುಕೊಂಡಿದ್ದನೆಂಬ ಸಂಶಯದಿಂದ ಸದರಿಯವನನ್ನು ಖೂನಿಮಾಡಿದನೆಂಬ ಆರೋಪದಮೇಲೆ ಸೆಷನ್ ಜಡ್ಜಿಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿದ್ದನು. ಸರ್ಕಾರದ ಪರವಾಗಿ ಕೆ. ರಾಮಸ್ವಾಮಿಯವರೂ ಅಪರಾಧಿ ಪರವಾಗಿ ಎಂ. ಪಿ. ಭೋಗಯ್ಯನವರೂ ವಕಾಲತ್ತುವಹಿಸಿ ಕೆಲಸ ನಡೆಯಿಸಿದರು. ವಿಚಾರಣೆಯು ದಿವಸಗಳವರೆಗೆ ನಡೆಯಿತು. ವಿಚಾರಾಂತ್ಯದಲ್ಲಿ ಸಂಶಯವು ಬಂದುದರಿಂದ ಅಪರಾಧಿಯು ಇದೇ ತಿಂಗಳು 12 ನೆಯ ತಾರೀಖಿನ ದಿವಸ ಬಿಡುಗಡೆ ಮಾಡಲ್ಪಟ್ಟನು.

ವರ್ತಮಾನಸಂಗ್ರಹ

ಬ್ರಿಟಿಷರು ವರ್ಷ 1 ಕ್ಕೆ 75,00,00,000 ರೂಪಾಯಿಗಳ ಮಿಠಾಯಿಗಳನ್ನು ತಿನ್ನುವರಂತೆ!

ಮುಂಬಯಿಯಲ್ಲಿ ಡಿಸೆಂಬರ್ ತಿಂಗಳಿನಲ್ಲಿ 300 ಜನರಿಗೆ ಸಿಡುಬು ತಗಲಿ 183 ಜನರು ಮೃತಪಟ್ಟರು.

ಪ್ಯಾರಿಸ್‌ನಗರದ ತರುಣಿಯರು ಕಣ್ಣುರೆಪ್ಪೆಯ ಕೂದಲುಗಳಿಗೆ ಬಿಳಿಯ ಬಣ್ಣವನ್ನು ಹಚ್ಚುವುದಕ್ಕೆ ಪ್ರಾರಂಭಿಸಿರುವರು! ಇದೊಂದು ಸೌಂದರ್ಯಸಾಧನವಂತೆ!

ಮಿಸೆಸ್ ಕಟ್ಸುಮಿಯಾಸೊ ಎಂಬ 41 ವರ್ಷದ ಜಪಾನ್ ಸ್ತ್ರೀಯಳು 25 ವರ್ಷಗಳಲ್ಲಿ 22 ಮಕ್ಕಳನ್ನು ಹೆತ್ತಿರುವಳಂತೆ! ಈ ಪೈಕಿ 6 ಜೊತೆ ಅವಳಿಮಕ್ಕಳುಗಳು ಇರುವವಂತೆ!

ಅಮೇರಿಕೆಯ ಮಾಜೀ ಪ್ರೆಸಿಡೆಂಟರಾದ ಮಿ|| ಕ್ಯಾಲ್ವಿನ್ ಕೂಲಿಡ್ಜರವರು ಕಳೆದ ಜನವರಿ 5 ನೇ ತಾರೀಖಿನ ದಿವಸ ಹೃದಯವೇದನೆಯಿಂದ ಇದ್ದಕ್ಕಿದ್ದ ಹಾಗೆ ಮೃತಪಟ್ಟರು.

ಜರ್ಮನ್ ದೇಶದ ಬ್ಯೂಡಪೆಸ್ಟ್ ನಗರದಲ್ಲಿ ಅನೇಕ ಜನರು ಹೊಟ್ಟೆಗೆ ತಿನ್ನಲು ಮಾರ್ಗವಿಲ್ಲದೆ ತಮ್ಮ ಶರೀರದ ರಕ್ತವನ್ನು ಔಷಧೋಪಚಾರಕೆಲಸಗಳಿಗೆ ಒಂದು ಲಿಟರ್ (ಫ್ರೆಂಚ್‌ದೇಶದ ಅಳತೆ) ಗೆ 15 ರೂ. ಗಳಂತೆ ಮಾರುತ್ತಿರುವರು!

ಪರ್ಷಿಯಾದೇಶದ ಪಾರರವರು ತಮ್ಮ ದೇಶದಲ್ಲಿ ಅಂಗಡಿಗಳ ಮುಂದೆ ಆಂಗ್ಲಭಾಷೆಯ ಬೋರ್ಡುಗಳನ್ನು ಹಾಕಿರುವ ವರ್ತಕರೆಲ್ಲರೂ ಸದರಿ ಬೋರ್ಡುಗಳನ್ನು ತೆಗೆದು ಪರ್ಷಿಯನ್‌ಭಾಷೆಯ ಬೋರ್ಡುಗಳನ್ನೇ ಹಾಕಬೇಕೆಂದು ಅಪ್ಪಣೆಮಾಡಿರುತ್ತಾರೆ.

ಲಾಹೋರಿನ ಅಡ್ವೋಕೇಟ್ ಮಿ|| ಪ್ರೇಮಚಂದ್ರ ಬಲಿ, ಬಿ.ಎ., ಎಲ್‌ಎಲ್.ಬಿ., ಯವರು 4 ಗಂಟೆ 13 ನಿಮಿಷಗಳಲ್ಲಿ ಸ್ವಲ್ಪವೂ ಬಿಡುವಿಲ್ಲದೆ 5,131 ದಂಡೆಗಳನ್ನು ಒತ್ತಿರುವರು. ಈ ಸಾಧನೆಯಲ್ಲಿ ಇವರನ್ನು ಪ್ರಪಂಚದಲ್ಲಿ ಮತ್ತಾರೂ ಮೀರಿಸಿರುವದಿಲ್ಲ!

ಜೂಗೊಸ್ಲೇವಿಯಾ ದೇಶಕ್ಕೆ ಸೇರಿದ ಮಾರಿಬಾರ್ ಎಂಬ ಊರಿನ ತೋಟದಲ್ಲಿ ಅಗಿಯುವಾಗ್ಗೆ ದ್ರಾಕ್ಷಿಯ ಹಣ್ಣುಗಳಿಂದ ತುಂಬಿದ್ದ ಕೆಲವು ಮಡಕೆಗಳು ದೊರೆತಿದ್ದು ಇವು ಸುಮಾರು 2300 ವರ್ಷಗಳ ಹಿಂದೆ ಇಡಲ್ಪಟ್ಟವೆಂದು ಊಹಿಸಲ್ಪಟ್ಟಿರುವದು. ಆದರೂ ಹಣ್ಣುಗಳು ಕೆಟ್ಟಿರಲಿಲ್ಲವಂತೆ!

ತಿರುಚನಾಪಳ್ಳಿಯ ಹೆಬ್ಬ್ಯಾರ್ ಕಾಲೇಜಿನ ಪ್ರಿನ್ಸಿಪಾಲರಾದ ರೆವರೆಂಡ್ ಫಿರ್‌ಬ್ರ್ಯಾಂಕ್‌ರವರು ಮತ್ತು ಜೇಮ್ಸ್ ಎಂಬ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಯೂ ಇದೇ ಜನವರಿ 13 ನೇ ತಾರೀಖಿನ ದಿವಸ ಟ್ರ್ಯಾಂಕೈಬಾರು ಸಮುದ್ರತೀರದಲ್ಲಿ ಸ್ನಾನಕ್ಕೆ ಹೋಗಿದ್ದು ನೀರಿನಲ್ಲಿ ಮುಳುಗಿಸತ್ತರು.

ಡೊಗ್ಲಾಸ್‌ರವರ ಕೊಲೆಯ ಸಂಬಂಧದಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಪ್ರದ್ಯೋತ ಭಟ್ಟಾಚಾರ್ಯನು ಇದೇ ಜನವರಿ 2 ನೇ ತಾರೀಖಿನ ದಿವಸ ಮಿಡ್ನಾಪುರದ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟನು. ಕಳೇಬರದ ಅಂತ್ಯಕ್ರಿಯೆಗಳು ಜೈಲಿನ ಆವರಣದಲ್ಲಿ ಬಂಧುವರ್ಗದವರ ಸಮ್ಮುಖದಲ್ಲಿ ನಡೆಯಿಸಲ್ಪಟ್ಟವು.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರದ ಪ್ರೊಫೆಸರಾಗಿರುವ ಡಾಕ್ಟರ್ ಬೆಲ್ಲಾಮಿಯವರು ಮೊಲಗಳ ಮೈಮೇಲಿರುವ ಕೂದಲುಗಳನ್ನು ಎಣಿಸುತ್ತಿರುವರು. ಅವರ ಹೇಳಿಕೆಯ ಪ್ರಕಾರ ಆರೋಗ್ಯವಾದ ಮೊಲಗಳ ಮೈಮೇಲೆ ಒಂದು ಚದುರಂಗಲದಲ್ಲಿ 24,800 ರಿಂದ 46,400 ಕೂದಲುಗಳ ವರೆಗೆ ಇರುವವಂತೆ!

ಕಳೆದವಾರ ತಿರುಚನಾಪಳ್ಳಿಯ ಮುನಿಸಿಪಲ್ ಟವರ್ ಹಾಲಿನಲ್ಲಿ ಗುಬ್ಬಿ ನಾಟಕಮಂಡಳಿಯವರು ನಾಟಕವಾಡುತ್ತಿದ್ದಾಗ ಸಭಾಂಗಣದಲ್ಲಿದ್ದ ಒಂದಾಸೊಂದು ಎಲೆಕ್ಟ್ರಿಕ್ ತಂತಿಗೆ ಅಕಸ್ಮಾತ್ ಬೆಂಕಿತಗಲಿದುದರಿಂದ ಜನರು ಸಿಕ್ಕಾಪಟ್ಟೆಯಾಗಿ ನುಗ್ಗಲಾರಂಭಿಸಿದರೆಂದೂ, ಗಲಾಟೆಯಲ್ಲಿ ಒಬ್ಬ ಹುಡುಗನು ಮೃತಪಟ್ಟನೆಂದೂ ತಿಳಿದುಬಂದಿದೆ.

ತಿರುಚನಾಪಳ್ಳಿಯ ಒಬ್ಬ ಪ್ರಸಿದ್ಧ ವಕೀಲರ ಪತ್ನಿಯಾದ ಕಮಲಮ್ಮ ಪಂಜಾಕ್ಷಿಯು ಇದೇ ಜನವರಿ 8 ನೇ ತಾರೀಖಿನ ದಿವಸ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಭಾವಿಗೆ ತಳ್ಳಿ ತಾನೂ ಬಚ್ಚಲಮನೆಯಲ್ಲಿ ನೇಣುಹಾಕಿಕೊಂಡಳು. ಈಕೆಯು ಒಬ್ಬ ಚೀಫ್ ಇಂಜನಿಯರವರ ಪುತ್ರಿಯೆಂದೂ, ಜುಗುಪ್ಸೆಯಿಂದ ಈ ಕಾರ್ಯವನ್ನು ಮಾಡಿದಳೆಂದೂ ತಿಳಿದುಬಂದಿದೆ.

ಅಮೇರಿಕೆಯಲ್ಲಿರುವ 'ರಾಕ್‌ಫೆಲರ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ರಿಸರ್ಚ್' ಎಂಬ ವೈದ್ಯ ಸಂಬಂಧವಾದ ಶೋಧನಾಲಯದಲ್ಲಿ ಒಂದು ಕೋಳಿಯ ಮಾಂಸದ ತುಂಡನ್ನು ಒಂದು ಗಾಜಿನ ಕೊಳವೆಯಲ್ಲಿ ಇಟ್ಟಿರುವರು. ಈ ಮಾಂಸದ ತುಂಡಿನಿಂದ ಪದೇಪದೇ ಸಣ್ಣ ಸಣ್ಣ ಚೂರುಗಳನ್ನು ಕೊಯ್ಯುತ್ತಲೇ ಇದ್ದರೂ ಅದು ದಿನದಿನಕ್ಕೆ ಬೆಳೆಯುತ್ತಲೇ ಇರುವದಂತೆ!

1930 ನೇ ವರ್ಷದಲ್ಲಿ ನಡೆದ ಆಯುಧಗಳ ದರೋಡೆಯ ಸಂಬಂಧದಲ್ಲಿ ಅಪರಾಧಿಕನಾಗಿದ್ದು ಇದುವರೆಗೂ ತಲೆತಪ್ಪಿಸಿಕೊಂಡಿದ್ದ ವಿಲೀಪ್ ಚೌದರಿ ಎಂಬುವನು ಕಳೆದ ಜನವರಿ 9 ನೇ ತಾರೀಖಿನ ದಿವಸ ಚಿತಗಾಂಗಿಗೆ ಎಂಟು ಮೈಲಿದೂರದಲ್ಲಿರುವ ಒಂದಾನೊಂದು ಹಳ್ಳಿಯಲ್ಲಿ ದಸ್ತಗಿರಿ ಮಾಡಲ್ಪಟ್ಟನು. ಇವನನ್ನು ಪತ್ತೆಮಾಡಿಕೊಟ್ಟವರಿಗೆ 250 ರೂ. ಗಳ ಬಹುಮಾನ ಕೊಡುವದಾಗಿ ಸರಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದರು.

ಅಮೆರಿಕೆಯ ಸಂಯುಕ್ತ ಸಂಸ್ಥಾನದ ವ್ಯವಸಾಯದ ಇಲಾಖೆಯವರು ರಸಹಿಂಡಿದ ಕಬ್ಬಿನ ಸಿಪ್ಪೆಯಿಂದ ರೇಷ್ಮೆಯ ಕಾಲುಚೀಲಗಳನ್ನು ಮಾಡಿ ಮಾರಬೇಕೆಂದು ಪ್ರಯತ್ನಿಸುತ್ತಿರುವರು. ರಸಾಯನಶಾಸ್ತ್ರಜ್ಞರು ಕಬ್ಬಿನ ಸಿಪ್ಪೆಗೆ 'ನೈಟ್ರಿಕ್ ಆಸಿಡ್' ಮೊದಲಾದ ದ್ರಾವಕಗಳನ್ನು ಹಾಕಿ ಉತ್ತಮ ತರಹದ ಕೃತಕ ರೇಷ್ಮೆಯನ್ನು ತಯಾರು ಮಾಡುವ ವಿಧಾನವನ್ನು ಕಂಡುಹಿಡಿದಿರುವರು. ಇದು ನಿಶ್ಚಯವೇ ಆದಲ್ಲಿ ಅಮೇರಿಕಾ ದೇಶದಲ್ಲಿ ಪ್ರತಿವರ್ಷವೂ ಕಸರೂಪದಲ್ಲಿ ಬಿಸಾಡಲ್ಪಡುತ್ತಿರುವ 5 ಲಕ್ಷ ಟನ್ ಕಬ್ಬಿನ ಸಿಪ್ಪೆಯಿಂದ ಅಪಾರ ಹಣವು ದೊರೆಯುವದರಲ್ಲಿ ಸಂಶಯವಿಲ್ಲ.

ಫ್ರಾನ್ಸ್‌ದೇಶದ "ಅಟ್ಲಾಂಟಿಕ್" ಎಂಬ 50,000 ಟನ್ ತೂಕವುಳ್ಳ ಜಹಜು ಕಳೆದ ಜನವರಿ 4 ನೇ ತಾರೀಖಿನ ದಿವಸ ಇಂಗ್ಲಿಷ್ ಕಡಲ್ಕಾಲುವೆಯಲ್ಲಿ ಅಕಸ್ಮಾತ್ ಬೆಂಕಿ ಹತ್ತಿ ಸುಟ್ಟು ಭಸ್ಮವಾಯಿತು. ಜಹಜಿಗೆ ಬೆಂಕಿಬಿದ್ದ ವರ್ತಮಾನವು ತಿಳಿದ ಕೂಡಲೇ 'ರೂರ್' ಎಂಬ ಜರ್ಮನ್ ಹಡಗು ಮತ್ತು 'ಫೋರ್ಡ್‌ಕ್ಯಾಸಲ್' ಎಂಬ ಬ್ರಿಟಿಷ್ ಹಡಗು ಹೋಗಿ 'ಅಟ್ಲಾಂಟಿಕ್' ಜಹಜಿನಲ್ಲಿದ್ದ 260 ಜನ ಕೆಲಸಗಾರರಲ್ಲಿ 19 ಜನರ ವಿನಾ ಉಳಿದ 241 ಜನರನ್ನು ರಕ್ಷಿಸಿದರು. ಜಹಜಿನ ಕ್ರಯವು 2,50,00,000 ರೂಪಾಯಿಗಳೆಂದೂ, ಈ ಅನಾಹುತದಿಂದ ಜರ್ಮನ್ ಮತ್ತು ಬ್ರಿಟಿಷ್ ಇನ್‌ಷ್ಯೂರೆನ್ಸ್ ಕಂಪೆನಿಗಳಿಗೆ ಅಪಾರ ನಷ್ಟವು ಸಂಭವಿಸಿರುತ್ತದೆಂದೂ, ಫ್ರಾನ್ಸಿನ ಜಹಜುಗಳಲ್ಲಿ ಇಂಥ ಅನಾಹುತವು ಪದೇ ಪದೇ ಆಗುತ್ತಲೇ ಇರುವದರಿಂದ, ಅನಾಹುತದ ಕಾರಣಗಳನ್ನು ಕೂಲಂಕಷವಾಗಿ ವಿಚಾರಿಸಬೇಕೆಂದೂ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[8] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮುಂಬಯಿಯಲ್ಲಿ ಪುನಃ ಹಿಂದೂ ಮುಸ್ಲಿಂ ಹೊಡೆದಾಟ.

ಇಬ್ಬರು ಮುಸ್ಲಿಮರ ಮರಣ.

ಬೊಂಬಾಯಿ ಜ ೮

ನಲ್ ಬಜಾರಿನ ಬಳಿ (ಹೋದಬಾರಿ ಗಲಭೆನಡೆದ ಸ್ಥಳ) ಹಿಂದೂ ಮುಸ್ಲಿಮರಿಗೆ ಹೊಡೆದಾಟವುಂಟಾಗಿ ಇಬ್ಬರು ಮುಸ್ಲಿಮರು ಸತ್ತರು. ಐದು ಜನ ಮುಸ್ಲಿಮರಿಗೂ 9 ಹಿಂದೂಗಳಿಗೂ ಗಾಯಗಳಾಗಿವೆ. ಕಾರಣವು ಈ ಪ್ರಕಾರವಿದೆಯೆಂದು ಗೊತ್ತಾಗಿದೆ.

ಒಬ್ಬ ಹಿಂದೂ ಹುಡುಗನು ಕ್ರಿಕೆಟ್ ಆಟವಾಡುತ್ತಿದ್ದನು. ಚೆಂಡು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಪಠಾನನಿಗೆ ತಗುಲಿತು. ಆ ಪಠಾನನು ಆ ಹಿಂದೂ ಹುಡುಗನ ಕೆನ್ನೆಯ ಮೇಲೆ ಹೊಡೆದನು. ಹುಡುಗನ ಪರವಾಗಿ ಒಬ್ಬ ಭಯ್ಯಾನು ಮಧ್ಯೆ ಪ್ರವೇಶಿಸಿದನು. ಇದರ ಪರಿಣಾಮವಾಗಿ ಉಭಯಪಕ್ಷದವರೂ ಸೇರಿದರು. ಹೊಡೆದಾಟವಾಯಿತು. ಪೋಲೀಸರು ಕೂಡಲೇ ಆ ಸ್ಥಳಕ್ಕೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಸದ್ಯದಲ್ಲಿ ಅಲ್ಲಲ್ಲೇ ಜನರ ಗುಂಪು ಸೇರುತ್ತಿದೆ. ಪರಿಸ್ಥಿತಿಯು ಕಠಿಣವಾಗುವ ಸಂಭವವುಂಟು.

ನಾರ್ತ್‌ಬ್ರೂಕ್ ಗಾರ್ಡನ್ನಿನಲ್ಲಿ ಗಲಭೆ.

ಬೊಂಬಾಯಿ ಜ ೯

ನಿನ್ನೆ ಸಾಯಂಕಾಲ ನಾರ್ತ್ ಬ್ರೂಕ್ ಗಾರ್ಡನ್ನಿನಲ್ಲಿ ಕೋಮುವಾರು ಹೊಡೆದಾಟವಾಗಿ ಇಬ್ಬರು ಮುಸ್ಲಿಮರೂ, ಒಬ್ಬ ಹಿಂದುವೂ ಸತ್ತರು. 33 ಜನರಿಗೆ ಒಬ್ಬ ಪಾರ್ಶಿ ಸಹಿತ ಗಾಯಗಳಾಗಿವೆ. ಈಗ ಆರು ತಿಂಗಳ ಹಿಂದೆ ಇದೇ ಸ್ಥಳದಲ್ಲಿ ಬಲವಾದ ಹೊಡೆದಾಟವಾಗಿತ್ತು.

ವಿವರಗಳು.

ನಾರ್ತ್‌ಬ್ರೂಕ್ ಗಾರ್ಡನ್ನಿನಲ್ಲಿ ಹಿಂದೂ ಬಾಲಕರು ಕ್ರಿಕೆಟ್ ಆಟವನ್ನು ಆಡುತ್ತಿದ್ದರು. ಇದು ರಂಜಾನ್ ತಿಂಗಳಾದ್ದರಿಂದ ಈ ಗಾರ್ಡನ್ನಿನಲ್ಲಿ ಮುಸ್ಲಿಮರು ಪ್ರಾರ್ಥನೆಗಾಗಿ ಸೇರುವುದುಂಟು. ಒಂದು ಕ್ರಿಕೆಟ್ ಚೆಂಡು ಪ್ರಾರ್ಥನೆ ಮಾಡುತ್ತಿದ್ದ ಒಬ್ಬ ಕಾಬೂಲಿ ಸಾಹುಕಾರನಿಗೆ ತಗುಲಿತೆಂದೂ ಪಠಾಣನು ಹುಡುಗನನ್ನು ಹೊಡೆದನೆಂದೂ, ಇದನ್ನು ನೋಡಿ ಒಬ್ಬ ಭಯ್ಯಾನು ಪ್ರತಿಭಟಿಸಿದನೆಂದೂ, ವಾಗ್ಯುದ್ಧವಾಗಿ ಕೊನೆಗೆ ಮಲ್ಲಯುದ್ಧವಾಯಿತೆಂದೂ, ಎರಡು ಕೋಮಿನ ಜನರೂ ಸೇರಿ ಹೊಡೆದಾಡಿದರೆಂದೂ, ಕಲ್ಲುಗಳು, ಬೆತ್ತಗಳು, ಚಾಕು ಚೂರಿಗಳು ಇವನ್ನು ನಿರಾತಂಕವಾಗಿ ಉಪಯೋಗಿಸಿದರೆಂದೂ ಇದರ ಪರಿಣಾಮವಾಗಿ ಆ ಪ್ರಾಂತ್ಯದಲ್ಲೆಲ್ಲಾ ವಿಶೇಷ ಭೀತಿಯುಂಟಾಯಿತೆಂದೂ ಲಾಠಿಗಳ ಸಮೇತ ಪೋಲೀಸರು ಆ ಸ್ಥಳಕ್ಕೆ ನುಗ್ಗಿದರೆಂದೂ ಗೊತ್ತಾಗಿದೆ.

ಗಲಭೆಯು ಇತರ ಸ್ಥಳಗಳಿಗೆ ಹಬ್ಬಿತು.

ನಾರ್ತ್ ಬ್ರೂಕ್ ಗಾರ್ಡನ್ನಿನಲ್ಲಿ ಪೋಲೀಸರು ಗಲಭೆಗಾರರನ್ನು ಚದುರಿಸಿದ ಮೇಲೆ ಗಲಭೆಯು ಅಕ್ಕಪಕ್ಕದ ಪ್ರದೇಶಗಳಿಗೆ ಹಬ್ಬಿತು. ಬಹುವಾಗಿ ಹಿಂದೂಗಳು ವಾಸಿಸುವ ಎರಡು ಕೇರಿಯ ಪ್ರದೇಶದಲ್ಲಿಯೂ ಬಹುವಾಗಿ ಮುಸ್ಲಿಮರು ವಾಸಿಸುವ ಡಾಕ್ಟರ್ ಸ್ಟ್ರೀಟಿನಲ್ಲಿಯೂ ಗಲಭೆ ಜೋರಾಯಿತು. ಈ ಸ್ಥಳದ ಮುಖ್ಯ ಮಾರ್ಗಗಳಲ್ಲಿ ಪೋಲೀಸರು ಕಾವಲಿಡಲ್ಪಟ್ಟರು. ಸ್ವಲ್ಪ ಕಾಲದವರೆಗೆ ಅಲ್ಲಲ್ಲಿ ಹೊಡೆದಾಟವಾಗುತ್ತಿತ್ತು. ಜಾಕೋಬ್ ಸರ್ಕಲಿನಲ್ಲಿ ಅಂದರೆ ಗಲಭೆಯ ಪ್ರದೇಶದ ಎರಡು ಮೈಲಿ ದೂರವಿರುವ ಸ್ಥಳದಲ್ಲಿ ಟ್ರಾಂಗಾಡಿಯನ್ನು ನಿಲ್ಲಿಸಿ ಅದರಲ್ಲಿದ್ದ ಪ್ರಯಾಣಿಕರನ್ನು ಹೊಡೆಯುವ ಪ್ರಯತ್ನ ನಡೆಸಲಾಯಿತು. ಒಬ್ಬ ಪಾರ್ಶಿ ಪ್ರಯಾಣಿಕನನ್ನು ಜನರ ಗುಂಪು ಸದೆಬಡಿಯಿತು. ಗಲಭೆಯ ಪ್ರದೇಶಗಳಲ್ಲಿ ಟ್ರಾಂಗಾಡಿಗಳು ನಿಲ್ಲಿಸಲ್ಪಟ್ಟವು. ಪ್ರಯಾಣೀಕರಿಗೆ ಹೊಡೆತಗಳು ಬಿದ್ದವು. ಡಾಕ್ಟರ್ ಸ್ಟ್ರೀಟಿನಲ್ಲಿ ಹಿಂದೂ ವೇಷದಲ್ಲಿದ್ದ ಇಬ್ಬರು ಮುಸ್ಲಿಮರನ್ನು ಮುಸ್ಲಿಮರೇ ತಿವಿದುಕೊಂದರು. ಗಲಭೆಯಲ್ಲಿ ಒಬ್ಬ ಹಿಂದುವು ತಿವಿಯಲ್ಪಟ್ಟನು. ಆದರೆ ಪೋಲೀಸಿನವರು ಜನರ ಗುಂಪನ್ನು ಅಟ್ಟಿಸುತ್ತಿದ್ದರು. ಬಂದೂಕ ಮತ್ತು ಲಾಠಿ ಸಹಿತರಾದ ಪೋಲೀಸರು ಶೀಘ್ರದಲ್ಲಿಯೇ ಗಲಭೆಯನ್ನು ನಿಲ್ಲಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಗಲಭೆಯು ಅರ್ಧಗಂಟೆಯ ತನಕಮಾತ್ರವಿತ್ತು.

ಗಾಯಪಟ್ಟವರ ಸಂಖ್ಯೆ.

ಈ ಗಲಭೆಗಳಲ್ಲಿ ಗಾಯಪಟ್ಟವರ ಸಂಖ್ಯೆ 18 ಹಿಂದೂಗಳೂ 7 ಜನ ಮುಸ್ಲಿಮರೂ ಮತ್ತು ಒಬ್ಬ ಪಾರ್ಶಿಯೂ ಇದ್ದಾರೆ. ಇವರ ಪೈಕಿ 10 ಜನರು ಆಸ್ಪತ್ರೆಯಲ್ಲಿಡಲ್ಪಟ್ಟಿದ್ದಾರೆ. ಸಿಟಿಯಲ್ಲಿ ಈಗ ಶಾಂತತೆ ಇದೆ. ಮುಖ್ಯ ಮುಖ್ಯ ಸ್ಥಳಗಳಲ್ಲಿ ಪೋಲೀಸರ ಬಂದೋಬಸ್ತು ಇಡಲಾಗಿದೆ.

ಹಳ್ಳೀಕೇರಿಯ ಸಿದ್ಧಲಿಂಗಪ್ಪನವರ ಅತಿ ಶೋಚನೀಯ ಮೃತ್ಯುವು.

ಈಶಸೇವೆಯ | ದಾಸನಾಗಿ ತಾ | ಬೇಸರಿಲ್ಲದೆ ಮಾಡುತಲಿ ||
ಆಶೆಕೊಂದು ಭವ | ಪಾಶಹರಿದು ಕೈ | ಲಾಸವಾಸನೊಳು ಬೆರದಿಹನು ||

ಸಿದ್ಧಲಿಂಗಪ್ಪನವರು ಸಜ್ಜನರು. ಈ ಮಹಾಶಯರು ಹಳ್ಳೀಕೇರಿ ಗ್ರಾಮದ ಹುಗ್ಗಿಹೊಪ್ಪ ದೊಡ್ಡಭರಣಿಯ ಸದ್ಗೃಹಸ್ಥರೂ ಈಶನೊಳು ಬಹು ಭಕ್ತಿಯುಳ್ಳವರೂ ಆಗಿದ್ದರು. ಇವರು ಸ್ಕೂಲ ಕಮಿಟಿ ಮೆಂಬರರಾಗಿದ್ದರಲ್ಲದೆ ಪಂಚಾಯತಿಗಳಲ್ಲಿ ಪಂಡಿತರಾಗಿದ್ದರು. ಸರ್ಕಾರದಲ್ಲಿಯಂತೂ ಬಹು ಮನ್ನಣೆಯುಳ್ಳವರು. ಇವರು ಮಾರ್ಗಶಿರ ಬ|| ೮ ದಿವಸ ಅಂದರೆ ತನ್ನ ಚಿ|| ಗುರುಪಾದಪ್ಪನ ವಿವಾಹಕಾಲದಲ್ಲಿ ಹಂದ್ರಲೀಪನದಸಮಯಕ್ಕೆ ಸುಮ್ಮನೆ ಕುಳಿತಾಗ ತಮ್ಮ ಮರಣದ ವಾರ್ತೆಯನ್ನು ಮುಂಚಿತವಾಗಿ ತಿಳಿಸಿ ಕೈಲಾಸಕ್ಕೆ ತೆರಳಿದರು. ಅವರ ಅಸುವು ಹೋದಮೇಲೆ ಶ್ವಾನಗಳು ಒದರುವಂತೆ ಒಬ್ಬೊಬ್ಬ ನಿಂದಕರು ನಿಂದಿಸಿದರೂ ಅಂಥ ನೀಚರ ನಿಂದೆಯು ಇವರಿಗೆ ಕುಂದನ್ನುಂಟುಮಾಡಲಾರದು. ಮೃತಿಹೊಂದಿದ ಈ ಮಹನೀಯರಿಗೆ ದೇವರುಸದ್ಗತಿಯನ್ನುಂಟು ಮಾಡಲಿ.

ಓರ್ವ ಸುದ್ದಿಗಾರ.

ಸಣ್ಣಮಕ್ಕಳಿಗೆ ಮೈತೊಳೆಯುವುದು ಮತ್ತು ಅವುಗಳ ಉಡಿಗೆ.

ಶುಚಿಯಾಗಿರುವ ಮಕ್ಕಳಿಗೂ, ಬಹಳ ಕೊಳಕು ಮಕ್ಕಳಿಗೂ ಇರುವ ವ್ಯತ್ಯಾಸವೇನೆಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವೇ! ಶುಚಿಯಾದ ಮಕ್ಕಳನ್ನು ನೋಡುವಾಗಲೇ ಆನಂದವಾಗುವುದು. ಅವು ನಮ್ಮ ಕಣ್ಣನ್ನೂ, ಮನಸ್ಸನ್ನೂ ಆಕರ್ಷಿಸುವುವು. ನೋಡಿದೊಡನೆ ಅವುಗಳನ್ನು ಕೈಗೆತ್ತಿ ಮುದ್ದಾಡಬೇಕೆಂಬ ಆಸೆಯು ಹುಟ್ಟುವುದು. ಅದಕ್ಕೆ ವಿರುದ್ಧವಾಗಿ ಕೊಳಕು ಮಕ್ಕಳನ್ನು ಕಂಡರೆ ಮುಟ್ಟುವುದಕ್ಕಾಗಲಿ, ಮಾತಾಡಿಸುವುದಕ್ಕಾಗಲಿ, ಮನಸ್ಸು ಬಾರದು. ಅವುಗಳನ್ನು ಎತ್ತಿ ಮುದ್ದಾಡುವ ಮಾತು ಹಾಗಿರಲಿ! ಅವು ಪ್ರೀತಿಯಿಂದ ತಾವಾಗಿ ಬಂದು ಪಕ್ಕದಲ್ಲಿ ಕುಳಿತರೆ, ಸ್ವಲ್ಪ ಹಿಂದಕ್ಕೆ ಸರಿಯುವಂತೆಯೂ ಆಗುವುದು. "ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ಗಾದೆಯಂತೆ, ಹೆತ್ತ ತಾಯಿಯು ಮಾತ್ರ ವಿಧಿಯಿಲ್ಲದೆ ಅಂತಹ ಮಕ್ಕಳನ್ನೂ ಎತ್ತಿ ಉಪಚರಿಸಬೇಕಾಗುವುದು. ಅಸಹ್ಯಪಡದೆ ಅದರ ಕಣ್ಣುಮೂಗಿನ ಕಶ್ಮಲಗಳನ್ನೆಲ್ಲಾ ತೊಳೆದು ಶುದ್ಧಮಾಡಿ, ಒಳ್ಳೇ ಉಡಿಗೆಗಳನ್ನುಡಿಸಿ, ಲಕ್ಷಣವಾಗಿರಿಸಲು ಆಸೆಪಡುವಳು. ಆದರೆ ಕೆಲವು ತಾಯಿಯರು ಹೆತ್ತ ಕರುಳಿಗಾಗಿ ಮಾತ್ರ ಮಕ್ಕಳ ಲಾಲನೆ ಪಾಲನೆಗಳನ್ನು ಮಾಡುತ್ತ, ಅವುಗಳ ಆಟಪಾಟಗಳನ್ನು ನೋಡಿ ಹಿಗ್ಗುವರೇ ಹೊರತು, ಆ ಮಕ್ಕಳನ್ನು ಶುಚಿಯಾಗಿಡುವ ಯೋಚನೆಯೇ ಅವರಿಗಿರುವುದಿಲ್ಲ. ಆ ಮಗುವಿನ ಮೈಮೇಲಿನ ಕೊಳೆಯೆಲ್ಲಾ ಹೆಪ್ಪುಗಟ್ಟಿ, ಅವುಗಳ ಕೈ ಮೈಗಳೆಲ್ಲಾ ಅಸಹ್ಯವಾಗಿ, ಅವುಗಳ ಕಣ್ಣುಮೂಗುಗಳಲ್ಲೆಲ್ಲಾ ಅವಿಚ್ಛಿನ್ನವಾಗಿ ಕಶ್ಮಲವು ಸುರಿಯುತ್ತಾ, ಅಲ್ಲಿನ ಚರ್ಮಗಳೆಲ್ಲಾ ಕೆಂಪೇರಿ ಹುಣ್ಣಾಗಿರುವುದನ್ನೂ ನೋಡದೆ ಅಲಕ್ಷ್ಯವಾಗಿರುವವರು ಕೆಲವರುಂಟು. ಇಂತಹ ತಾಯಿಯರು ಆ ಮಕ್ಕಳಿಗೆ ಶತ್ರುಗಳೇ ಹೊರತು ತಾಯಿಯರಲ್ಲ.

ಕೊಳೆಯೆಂಬುದೇ ಶಿಶುಗಳಿಗೆ ಪರಮಶತ್ರು. ಅಂತಹ ಶತ್ರುವಿನಿಂದ ಮಕ್ಕಳನ್ನು ಕಾಪಾಡುವುದು ಹೆತ್ತ ತಾಯಿಯರ ಮೊದಲನೆಯ ಕರ್ತವ್ಯವು. ಕೊಳೆಯಲ್ಲಿ ಸಾವಿರಾರು ತರದ ವಿಷಕ್ರಿಮಿಗಳು ಸೇರಿರುವುವು. ಕಣಜ, ಚೇಳು, ಮುಂತಾದ ವಿಷಕೀಟಗಳು ಬಂದು ನಮ್ಮ ಮಕ್ಕಳ ಮೈಯನ್ನು ಕಚ್ಚುವ ಸಂದರ್ಭದಲ್ಲಿ, ನಾವು ಎಷ್ಟು ಆತುರದಿಂದ ಆ ವಿಷಜಂತುಗಳನ್ನು ಓಡಿಸಲು ಯತ್ನಿಸುವೆವೋ ಅದರಂತೆಯೇ ಮಗುವಿನ ಬಟ್ಟೆ, ಆಹಾರ, ಅದರ ಆಹಾರಪಾತ್ರೆಗಳು, ಅವುಗಳ ಮೈಮೇಲಿನ ಚರ್ಮ, ಈ ಎಲ್ಲಾ ಕಡೆಗಳಲ್ಲಿರುವ ಅಲ್ಪಸ್ವಲ್ಪ ಕೊಳೆಯನ್ನು ಕೂಡ ನಿವಾರಿಸಬೇಕು.

ಮಕ್ಕಳನ್ನು ಬಹಳ ಶುಚಿಯಾಗಿಡಬೇಕೆಂದರೂ ಸಾಧ್ಯವಿಲ್ಲ. ಮೊಳಕಾಲಿನಮೇಲೆ ಮಕ್ಕಳನ್ನು ಮಲಗಿಸಿ, ದಿನಕ್ಕೊಮ್ಮೆ ಬಿಸಿನೀರಿನ ಸ್ನಾನದಿಂದಲೋ ಇಲ್ಲವೇ ಬಿಸಿನೀರಿನಲ್ಲಿ ನೆನೆಸಿದ ಫ್ಲಾನಲ್ ಬಟ್ಟೆಯಿಂದ ಮೈಯ್ಯೊರಸಿಯೋ ಶುಚಿಮಾಡುತ್ತಿರಬೇಕು. ನೀರಿನಲ್ಲಿ ಮೈತೊಳೆಯುವುದಾದರೆ, ಶುದ್ಧವಾದ ಸೋಪನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸುವುದು ಉತ್ತಮವು. ಮಕ್ಕಳಿಗೆ ಸ್ನಾನ ಮಾಡಿಸಿ ಮೈಯ್ಯೊರೆಸುವಾಗ, ಮೃದುವಾದ ಟೌಲದಿಂದ ಬಹಳ ಎಚ್ಚರಿಕೆಯಿಂದ ಚೆನ್ನಾಗಿ ಒರೆಸಿದಮೇಲೆ, ಬೆನ್ನು, ಪೃಷ್ಠ, ತೊಡೆ ಈ ಮೊದಲಾಗಿ ಚರ್ಮವು ಮಡಿಸಿಕೊಳ್ಳುವ ಸ್ಥಳಗಳಲ್ಲಿ ಪೌಡರನ್ನು ಸವರಬೇಕು. "ಫುಲ್ಲರ್ಸ್ ಅರ್ತ್ ಪೌಡರ್" ಎಂಬ ಹಿಟ್ಟು ಇದಕ್ಕೆ ಒಳ್ಳೆಯದು. ಮಕ್ಕಳ ತಲೆಯನ್ನು ಚೆನ್ನಾಗಿ ತೊಳೆಯಬೇಕು. ಆದರೆ ನಡುತಲೆಯನ್ನು ಬಹಳ ಒತ್ತಿ ತಿಕ್ಕಬಾರದು. ತಲೆಯಲ್ಲಿ ದದ್ದುಗಳಿದ್ದರೆ ಎಣ್ಣೆ ಹಾಕಿ ಮೆಲ್ಲಗೆ ಸವರಬೇಕು. ಮಕ್ಕಳ ಬಾಯೊಳಗೆ ಕೈಹಾಕಿ ಶುದ್ಧ ಮಾಡಬೇಕೆಂಬ ಪ್ರಯತ್ನವನ್ನು ಮಾಡಬಾರದು.

ಕಣ್ಣುಗಳಲ್ಲಿ ಕಶ್ಮಲವಿದ್ದರೆ, ಸ್ವಲ್ಪ ಬೋರಾಕ್ಸ್ ಪುಡಿಯನ್ನು ಉಷ್ಣಜಲದಲ್ಲಿ ಕದಡಿ ಕಣ್ಣಿಗೆ ಬಿಟ್ಟು ತೊಳೆದರೆ ಕಣ್ಣಿಗೆ ಯಾವ ಉಪದ್ರವವೂ ಇರುವುದಿಲ್ಲ.

ಮಕ್ಕಳ ಸ್ನಾನಕ್ಕೆ ನೀರನ್ನು ಹದಮಾಡಿಕೊಳ್ಳುವುದರಲ್ಲಿಯೂ ಕೆಲವು ವಿಧಿಗಳುಂಟು. ಮೊದಲು ತೊಟ್ಟಿಯಲ್ಲಿ ತಣ್ಣೀರನ್ನು ಬಿಡುವುದಕ್ಕೆ ಮೊದಲು ಮಕ್ಕಳ ಮೈಮೇಲೆ ಬಿಸಿನೀರನ್ನು ಸುರಿದುದರಿಂದ ಎಷ್ಟೋ ಮಕ್ಕಳಿಗೆ ಮೈಚರ್ಮವು ಬೆಂದುಹೋದುದುಂಟು. ಮಗುವು ಜಲಮಲವಿಸರ್ಜನೆ ಮಾಡಿದಮೇಲೆ ಆ ದ್ವಾರಗಳನ್ನು ಚೆನ್ನಾಗಿ ಒರೆಸಿ ಶುದ್ಧಮಾಡಿದೊಡನೆ, ಆ ಸ್ಥಳದಲ್ಲಿ ಪೌಡರನ್ನು ಚೆಲ್ಲುವುದು ಒಳ್ಳೆಯದು. ಒಂದು ತಿಂಗಳಾದ ಮೇಲೆ ಮಕ್ಕಳ ಜಲಮಲ ವಿಸರ್ಜನ ವಿಷಯದಲ್ಲಿ ಸ್ವಲ್ಪ ಎಚ್ಚರ ತೆಗೆದುಕೊಂಡು, ಕಾಲಕ್ರಮವಾಗಿ ಅವುಗಳನ್ನು ಕಾಲಮೇಲೆ ಕುಳ್ಳಿರಿಸಿಕೊಂಡು ಅಭ್ಯಾಸಮಾಡಿಸಿದರೆ, ಆ ಅಭ್ಯಾಸವು ಹಾಗೆಯೇ ಬಳಕೆಗೆ ಬಂದುಬಿಡುವುದು. ಪ್ರತಿದಿನವೂ ಅದೇ ಕ್ಲ ಕಾಲಕ್ಕೆ ವಿಸರ್ಜನ ಕಾರ್ಯವು ನಡೆಯುವುದರಿಂದ ಬಟ್ಟೆಗಳ ಕೆಡುವುದಕ್ಕೂ ಅವಕಾಶವಿರದು. ಮಕ್ಕಳಿಗೆ ಹಾಸುವ ಬಟ್ಟೆಯು ಮೃದುವಾಗಿರಬೇಕು. ಮಕ್ಕಳ ಬಟ್ಟೆಗಳನ್ನು ಸೋಡಾಹಾಕಿ ಶುದ್ಧಮಾಡಬಾರದು. ಜಲಮಲಗಳಿಂದ ಕೆಟ್ಟುಹೋದ ಬಟ್ಟೆಯನ್ನು ಹಾಗೆಯೇ ಒರಸಿ, ಬಿಸಿಲಿನಲ್ಲಿ ಒಣಗಿಸಿ ತಂದು ಪುನ ಉಪಯೋಗಿಸಬಾರದು.

ಮಕ್ಕಳನ್ನು ಹೊರಗೆ ಎತ್ತಿಕೊಂಡು ಹೋಗುವಾಗ, ಫ್ಲಾನಲ್ ಬಟ್ಟೆಯನ್ನು ಮೇಲೆ ಹೊದಿಸಿಕೊಂಡು ಹೋಗಬೇಕು.

ಮಕ್ಕಳಿಗೆ ಉಡುಪನ್ನು ಹಾಕುವಾಗ ಕತ್ತಿಗಾಗಲಿ, ತೋಳಿಗಾಗಲಿ ಬಿಗಿಯುವಂತೆ ಕಟ್ಟುಗಳಿರಬಾರದು. ಮೃದುವಾದ ಬಟ್ಟೆಗಳನ್ನು ಸಡಿಲವಾಗಿ ಉಡಿಸಬೇಕು. ಮಕ್ಕಳ ಕೈಕಾಲುಗಳ ಶೀತವೇರಿ ತಣ್ಣಗಾಗದಂತೆ ಹೊದ್ದಿಸಿಡಬೇಕು. ಮಕ್ಕಳಿಗೆ ಬೆಂ ರುಗಳನ್ನು ಪ್ರಯೋಗಿಸುವ ವಾಡಿಕೆಯುಳ್ಳವರು, ಡಾಕ್ಟರು ಹೇಳು ವ ಕಾಲದವರೆಗೆ ಮಾತ್ರವೇ ಅದನ್ನು ಪ್ರಯೋಗಿಸಬೇಕು. ಅವು ಎ ಯನ್ನು ಬಿಗಿಹಿಡಿಯುವಹಾಗಿರಬಾರದು. ಮಕ್ಕಳಿಗೆ ಮೈಕಾ ವನ್ನು ಕಾಪಾಡುವುದಕ್ಕೆ ಅನುಕೂಲವಾಗಿಯೂ ಮೃದುವಾಗಿಯೂ ಸಡಿಲವಾಗಿಯೂ ಇರುವ ಉಡುಪುಗಳನ್ನೇ ಹಾಕಬೇಕು. ಒಳಗೆ ಷರ್ಟನ್ನು ಹಾಕಿ ಮೇಲೆ ಗೌನನ್ನು ಹಾಕಬಹುದು. ಮ ಗಾಲದಲ್ಲಿ ಆ ಗೌನು ಉಣ್ಣೆಯ ವಸ್ತ್ರವಾಗಿರಬೇಕು. ಎದೆ ಮೇಲಿನ ಉಡುಪನ್ನು ಆಗಾಗ ಬದಲಾಯಿಸುತ್ತಿರಬೇಕು. ಬೆವರು, ಜೊಲ್ಲು ಮುಂತಾದವುಗಳಿಂದ ಒದ್ದೆಯಾದ ಬಟ್ಟೆಯನ್ನು ಹಾಗೆಯೇ ಬಿಟ್ಟಿದ್ದರೆ, ಮಕ್ಕಳಿಗೆ ಎದೆಛಳಿಗೆ ಕಾರಣವಾ ಬಹುದು. ಆದುದರಿಂದ ಆ ಉಡುಪುಗಳನ್ನು ಆಗಾಗ ಬದಲಾಯಿಸುತ್ತಿರಬೇಕು.

ಮಕ್ಕಳಿಗೆ ಮೂರು ತಿಂಗಳಾದಮೇಲೆಯಾಗಲಿ, ಬಿಸಿಲುಕಾ ವಾಗಿದ್ದರೆ ಇನ್ನೂ ಬೇಗನೆಯಾಗಲಿ ಅವುಗಳ ಉಡಿಗೆಯು ಉದ್ದದಲ್ಲಿ ತಗ್ಗಿಸಬಹುದು. ಫ್ಲಾನಲೆಟ್ಟುಗಳನ್ನು ಮಾತ್ರ ಉ ಯೋಗಿಸಲೇಬಾರದು. ಏಕೆಂದರೆ, ಅಂತಹ ಬಟ್ಟೆಗಳು ಮೈಕಾ ವನ್ನು ಕಾಪಾಡಲಾರವು. ಅದುಮಾತ್ರವಲ್ಲ. ಅದಕ್ಕೆ ಬೇಗ ಬೆಂಕಿ ಹಿಡಿಯುವುದರಿಂದ ಎಷ್ಟೋಮಕ್ಕಳು ಮರಣಕ್ಕೀಡಾಗಿ ಮಕ್ಕಳನ್ನು ಹೊರಗೆ ಎತ್ತಿಕೊಂಡು ಹೋಗಬೇಕಾದರೆ ಸೊಂ ಕ್ಕಿಂತ ಕೆಳಗೆ ಬರುವಂತೆ ಉಡುಪುಗಳಿರಬೇಕು. ಬಹಳ ಭಾ ವಾದ ಉಡುಪುಗಳನ್ನು ಮಾತ್ರ ಉಡಿಸಬಾರದು. ಕಾಲುಚೀ ಗಳು ಉದ್ದವಾಗಿಯೂ, ಧಾರಾಳವಾಗಿಯೂ ಇರಬೇಕು. ಬ ಟ್ಟುಗಳು ಬಹಳ ಬಿಗಿಯಾಗಿರಬಾರದು.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋ ಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದ ತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಪೋರ್ಷಾದಾರರಿದ್ದರೂ ಚಿಂತೆಯಿಲ್ಲ. ಅಪೇ ಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿ ಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ— ತುಮಕೂರ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಅವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆ ದ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿ ವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಯಬೇಕೆಂದು ಕೋರುತ್ತೇವೆ.

ಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರು, ಕೋಬರಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಸ್ಸಿಗೆ ಆಣೆ 0-9-0, 1 ಡಿಸ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆಹಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಫ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ ರು. 1-0-0.

ರ್ಹ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇಷ್ಟು ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[21] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ). **ಮಂಗಳೂರು. ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶ್ರೋತ್ರಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಹತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[2] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶೃತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.



ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜ್ಜು ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[3] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ೨೩ ಸೋಮವಾರ ತಾ॥ ನೇ ಜನವರಿ ೧೯೩೩ [ಸಂಚಿಕೆ ೩೭

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[9] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮ್ಯಾನೇಜರು ಬೇಕಾಗಿದೆ.

ಮಹಾಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಯೋಗ್ಯರೂ ಅನುಭವಶಾಲಿಗಳೂ ನಿಷ್ಪಕ್ಷಪಾತಿಗಳೂ ದಕ್ಷತೆಯುಳ್ಳವರೂ ಪೀಠಾಭಿಮಾನಿಗಳೂ ಆದ ಏಜಂಟರು ಬೇಕಾಗಿದೆ. ಸಂಸಾರದಾರರಿದ್ದರೂ ಚಿಂತೆಯಿಲ್ಲ. ಅಪೇಕ್ಷೆಯುಳ್ಳವರು ಮಹಾಸಂಸ್ಥಾನಕ್ಕೆ ಕೂಡಲೇ ಅರ್ಜಿಯನ್ನು ಗುಜರಾಯಿಸಿಕೊಳ್ಳತಕ್ಕದ್ದು. ವ್ಯವಹಾರಕ್ಕೆ ಇಂಗ್ಲೀಷ್ ಭಾಷಾಸಹಾಯವೂ ಅವಶ್ಯಕವಾದದ್ದು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ,
ಮೊಕ್ಕಾಂ— ತುಮಕೂರು.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಹೋತ್ಸವ.

ಶ್ರೀ॥ ಷ॥ ಬ್ರ॥ ಗಳಾದ ಶ್ರೀ ಸೋಮಶೇಖರ ಸ್ವಾಮಿ ಪಟ್ಟಾಧಿಕಾರಿಗಳು ಹಿರೇಮಠ ಬೇಗಾಂವ ಇವರ ಮಠದಲ್ಲಿ ಪದ್ಧತಿಪ್ರಕಾರ ಈ ವರ್ಷವೂ (ತಾ॥ ೯-೧-೩೩) ಸೋಮವಾರದಿವಸ ಗಣಾರಾಧನೆ, ಮಂಗಳವಾರ ಶ್ರೀವರಗೂಳಿಉತ್ಸವವು ಮತ್ತು ಅಂಬಲಿ ಬಂಡಿಯು, ಬುಧವಾರ ಪೂರ್ಣಿಮೆಯದಿವಸ ಶ್ರೀವರ ಗೂಳಿಸಿದ್ಧರಾಮೇಶ್ವರ ರಥೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಗುರುವಾರದಿವಸ ವೇ॥ ಸದಾಶಿವಶಾಸ್ತ್ರಿಗಳು ಹುಕ್ಕೇರಿ ಇವರು ಸರ್ವರಿಗೂ ಬೋಧವಾಗುವಂತೆ ಮನೋಹರವಾಗಿ ಶಿವಕೀರ್ತನವನ್ನು ಮಾಡಿದರು. ಈ ಉತ್ಸವಕ್ಕೆ ಶ್ರೀ॥ ಷ॥ ಬ್ರ॥ ಸತ್ತಿಗೇರಿ ಪಟ್ಟಾಧ್ಯಕ್ಷರು ದಯಮಾಡಿಸಿದ್ದುದರಿಂದ ವಿಶೇಷ ಶೋಭೆಯುಂಟಾಗಿತ್ತು. ಈ ಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೨ ರೂ. ಗಳು ತೆಗೆಯಿಸಲ್ಪಟ್ಟವು.

ವ್ಯವಸ್ಥಾಪಕ
ಶಂಕರಯ್ಯಸ್ವಾಮಿ, ಹಿರೇಮಠ ಬೇಗಾಂವ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಚಾರ.

ಶ್ರೀ ಜಗದ್ಗುರುಗಳವರು ತುಮಕೂರಿನಲ್ಲಿ ಭಕ್ತರ ಭಕ್ತಿಯನ್ನು ಕೈಕೊಳ್ಳುತ್ತಿರುವಲ್ಲಿ ಅದರ ಅಕ್ಕಪಕ್ಕದ ಗ್ರಾಮಗಳ ಭಕ್ತಮಂಡಲಿಯು ಪ್ರಾರ್ಥಿಸಿಕೊಂಡಿದ್ದರಿಂದ ಅವರ ಭಕ್ತಿಯನ್ನು ಕೈಕೊಳ್ಳಲು ಚಿಕ್ಕತೊಟ್ಲಕೆರೆ ಕೆಸ್ತೂರು ದಾಸರ್‌ಕುಂಟೆ ಗ್ರಾಮಗಳಿಗೆ ಅಜಬಾಬು ಸಮೇತ ದಯಮಾಡಿಸಿ ವಿಶೇಷೋತ್ಸವದಿಂದ ಆ ಭಾಗದ ಭಕ್ತಮಂಡಲಿಗೆ ಆನಂದವನ್ನುಂಟುಮಾಡಿ ಧರ್ಮಬೋಧೆಯಿಂದ ಸರ್ವರನ್ನುದ್ಧರಿಸಿ ಜನವರಿ ತಾರೀಖು 21ಕ್ಕೆ ನಮ್ಮ ಗ್ರಾಮವಾದ ಮಣುವಿನ ಕುರಿಕೆಗೆ ದಯಮಾಡಿಸಿದರು. ಗ್ರಾಮವು ಸಣ್ಣದಿದ್ದರೂ ಭಕ್ತಿಭರದಿಂದ ಸಕಲ ಮತೀಯರೂ ಪುರಾಲಂಕಾರದೊಂದಿಗೆ ಮಹಾಸ್ವಾಮಿಗಳವರನ್ನು ದಯಮಾಡಿಸಿಕೊಂಡು ಒಂದು ಸದ್ಧರ್ಮಬೋಧೆಯಿಂದ ಕೃತಕೃತ್ಯರಾದರು. ಮಹಾಚಾರ್ಯಪುಂಗವರು ಈ ಪ್ರಕಾರ ಸರ್ವತ್ರಸಂಚರಿಸಿದಲ್ಲಿ ಎಲ್ಲರಲ್ಲಿಯೂ ಮಹಾಚಾರ್ಯಭಕ್ತಿಯು ದೃಢವಾಗದೆ ಇರದೆಂದು ತಮ್ಮ ತಮ್ಮ ಆನಂದೋದ್ಗಾರವನ್ನು ವ್ಯಕ್ತಗೊಳಿಸಿದರು. ಮಹಮ್ಮದೀಯರೂ ಆನಂದದಿಂದ ಅಡ್ರೆಸ್ಸನ್ನೊಪ್ಪಿಸಿ ತಮ್ಮ ಸ್ವಜಾತಿ ವಿಶ್ವಾಸವನ್ನು ವ್ಯಕ್ತಗೊಳಿಸಿದರು. ಪುಣ್ಯವಂತರ ಧರ್ಮನಿಷ್ಠೆಯಿಂದುಂಟಾದ ಭಾಗ್ಯದ ಬೆಳೆಸಿನ ಸುಗ್ಗಿಯನ್ನು ವರ್ಣಿಸಲು ಅಸದಳವೇ ಸರಿ. ಮಹಾಸ್ವಾಮಿಗಳವರು ಈ ತಿಂಗಳ ತಾರೀಖು ೨೪ ಮಂಗಳವಾರ ಸಾಯಂಕಾಲಕ್ಕೆ ತುಮಕೂರಿಗೆ ವಾಪಸು ದಯಮಾಡಿಸತಕ್ಕವರಿರುವರು. ಅಷ್ಟರೊಳಗಾಗಿ ಕೋವಿನಕೆರೆಯವರೂ ದಯಮಾಡಿಸಿಕೊಂಡು ಹೋಗುವದರಾಗಿ ವ್ಯವಸ್ಥೆಯು ನಡೆದಿದೆ. ಜಗದಾಚಾರ್ಯರ ಸೇವೆಯು ದೊರೆಯದವನೇ ಭಾಗ್ಯಹೀನನು.

ವೇ॥ ಶಿವರುದ್ರಯ್ಯ, ಮಣುವಿನಕುರಿಕೆ.

ಸ್ವೀಕಾರ

ಬೇಗಾಂವ ಶಹರದಲ್ಲಿರುವ ಹಿರೇಮಠದ ಕರ್ತೃಗದ್ದಿಗೆಯಮಹೋತ್ಸವಸಮಯದಲ್ಲಿ ಸದರಿ ಅಧ್ಯಕ್ಷರು ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ತೆಗೆಯಿಸಿಕಳುಹಿಸಿರುತ್ತಾರೆ.

ನರಗುಂದಪೇಠಾ ಚಿಕ್ಕನರಗುಂದ ಗ್ರಾಮದಲ್ಲಿರುವ ಮ॥ ರಾ॥ ಬಸಪ್ಪನವರು ಸಪ್ಪಡ್ಲ ಇವರು ತಮ್ಮ ಮನೋರಥವು ಜಗದಾಚಾರ್ಯರ ಆಶೀರ್ವಾದಬಲದಿಂದ ಸಫಲವಾದ ಸಂತೋಷಕ್ಕಾಗಿ ಸಮರ್ಪಿಸಿದ **1** ರೂ. **8** ಆ. ಯು ಶ್ರೀ॥ ಷ॥ ಬ್ರ॥ ಕೊಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪ್ರಸಿದ್ಧ ಸಿನಿಮಾ ಹಾಸ್ಯಗಾರನಾದ ಚಾರ್ಲಿ ಚಾಪ್ಲಿನ್ನನು 20 ವರ್ಷಗಳ ಹಿಂದೆ ತಾನೇ ಬರೆದಿದ್ದ ಒಂದಾನೊಂದು ನಾಟಕದ ಪ್ರತಿಯನ್ನು 5 ಪೌಂಡುಗಳಿಗೆ ಮಾರಿದ್ದನು! ಈಗ ಅದೇ ಪ್ರತಿಯನ್ನು ಚಾರ್ಲಿ ಚಾಪ್ಲಿನ್ನನೇ 5000 ಪೌಂಡುಗಳಿಗೆ ಹಿಂತಿರುಗಿ ಕ್ರಯಕ್ಕೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವನು. ಆದರೆ ಆ ಪ್ರತಿಯನ್ನು ಕೊಂಡಿರುವವನು ಅದನ್ನು 10,000 ಪೌಂಡುಗಳಿಗಿಂತಲೂ ಕಡಿಮೆ ಬೆಲೆಗೆ ಕೊಡುವದಿಲ್ಲವೆಂದು ಹೇಳುತ್ತಿರುವನಂತೆ!

ಮೀರತ್ತಿನ ರಾಜದ್ರೋಹದ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ 31 ಜನರ ಪೈಕಿ ಒಬ್ಬನು ಮೃತಪಟ್ಟಿರುವನು. ಮೂವರು ಬಿಡುಗಡೆಹೊಂದಿದರು. ಇಬ್ಬರಿಗೆ ಆಮರಣ ದ್ವೀಪಾಂತರವಾಸವೂ, 5 ಜನರಿಗೆ 12 ವರ್ಷಗಳ ದ್ವೀಪಾಂತರವಾಸವೂ, 3 ಜನರಿಗೆ 10 ವರ್ಷಗಳ ದ್ವೀಪಾಂತರವಾಸವೂ, 3 ಜನರಿಗೆ 7 ವರ್ಷಗಳ ದ್ವೀಪಾಂತರವಾಸವೂ, 4 ಜನರಿಗೆ 5 ವರ್ಷಗಳ ದ್ವೀಪಾಂತರವಾಸವೂ, 6 ಜನರಿಗೆ 4 ವರ್ಷಗಳ ಕಠಿಣಸಜೆಯೂ ವಿಧಿಸಲ್ಪಟ್ಟವು. ಈ ಮೊಕದ್ದಮೆಯು ನಾಲ್ಕು ವರ್ಷಗಳ ಕಾಲ ನಡೆಯಿತು. ಸರಕಾರಕ್ಕೆ ವೆಚ್ಚ 16 ಲಕ್ಷ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಬೆಟ್ಟಬೆನಕನ ಎರಡು ಕಾಲು ಹೋದರೆ ಅದು ಕುಂಟುಬೀಳಲಾರದು.

ಪೂರ್ವದ ಹಲಕೆಲವು ಜನಗಳು ವಿದ್ಯಾವಂತರಾಗದೆ ಇದ್ದರೂ ಭಕ್ತಿಸಂಪನ್ನರಾಗಿ ಗುರುಹಿರಿಯರಲ್ಲಿಯೂ, ದೇವರುಗಳಲ್ಲಿಯೂ, ರಾಜರಲ್ಲಿಯೂ, ಪೂರ್ಣವಿಶ್ವಾಸವುಳ್ಳವರಾಗಿದ್ದರು. ಅಂಥವರ ಚರಿತ್ರೆಗಳು ಇಂದಿಗೂ ಮಾನ್ಯಗಳಾಗಿರುತ್ತವೆ. ಆದರೆ ಇತ್ತೀಚೆಗೆ ಬರಬರುತ್ತಾ ಜನರಲ್ಲಿ ಒಂದು ತರಹದ ಅಮಂಗಲ ನಾಗರಕತೆಯು ತಲೆದೋರಹತ್ತಿ ಅದರ ಪ್ರಭಾವದಿಂದ ಜನರು ಗುರುಹಿರಿಯರಲ್ಲಿಯೂ, ದೇವರಲ್ಲಿಯೂ, ರಾಜರಲ್ಲಿಯೂ ಭಕ್ತಿಶೂನ್ಯರಾಗಿ ಧರ್ಮಶಾಸ್ತ್ರಬಂಧನವೆಂಬ ಹಗ್ಗದ ಗಂಟನ್ನು ಬಿಚ್ಚಿಕೊಂಡು ಉನ್ಮತ್ತಗಜದಂತೆ ವರ್ತಿಸುತ್ತಿರುವವನ್ನು ನೋಡಿದರೆ ಮನಸ್ಸಿಗೆ ತುಂಬಾ ವಿಷಾದವಾಗುತ್ತದೆ. ಸನಾತನವೈದಿಕಧರ್ಮಕ್ಕೆ ತವರುಮನೆಯಾದ ಭರತಖಂಡದಲ್ಲಿ ಪ್ರತಿಯೊಂದು ಮತದವರು ತಮ್ಮ ತಮ್ಮ ಮತಸ್ಥಾಪಕರ ಶಾಸನದಂತೆ ನಿತ್ಯನೈಮಿತ್ತಿಕಾದಿ ಸಕಲ ಕಾರ್ಯಗಳನ್ನು ಪ್ರಾಚೀನಪದ್ಧತಿಗನುಸರಿಸಿ ಇಂದಿನವರೆಗೂ ಆಚರಿಸುತ್ತಿರುವದರಿಂದ ಸರ್ವರೂ ಪುಣ್ಯಶಾಲಿಗಳಾಗಿರುವರು. "ತೇ ತಂಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬುಕ್ತಿಯಂತೆ ಮನುಷ್ಯರು ಸತ್ಕರ್ಮಾದಿಗಳನ್ನು ಆಚರಿಸಿ ಪುಣ್ಯಶಾಲಿಗಳಾದುದರಿಂದ ಭೂಲೋಕದಲ್ಲಿ ಸರ್ವರೂ ಪುಣ್ಯವನ್ನು ಸಂಪಾದಿಸಿಕೊಂಡು ಆ ಪುಣ್ಯದ ಫಲವನ್ನೇ ಸರ್ವರೂ ಸ್ವರ್ಗಲೋಕದಲ್ಲಿ ಅನುಭವಿಸಿ, ಅದು ತೀರುತ್ತಲೇ ಪುಣ್ಯಸಂಗ್ರಹಕ್ಕಾಗಿ ಪುನಃ ಭೂಲೋಕಕ್ಕೆ ಬರುತ್ತಾರಷ್ಟೇ. ಅದ್ದರಿಂದಲೇ ದೇವತೆಗಳು ಈ ಲೋಕಕ್ಕೆ ಪುಣ್ಯಭೂಮಿಯೆಂದು ಹೇಳುತ್ತ ಇದರ ಆಧಿಕ್ಯವನ್ನು ಸರ್ವರಿಗೂ ತೋರ್ಪಡಿಸುವದಕ್ಕಾಗಿ ಒಮ್ಮೆಯಾದರೂ ಈ ಪವಿತ್ರಭೂಲೋಕದಲ್ಲಿ ಜನ್ಮವನ್ನು ತಾಳಿ ಸತ್ಕರ್ಮಾದಿಗಳನ್ನಾಚರಿಸಿ ತದ್ದ್ವಾರಾ ಪುಣ್ಯವನ್ನು ಸಂಪಾದಿಸಿ ಅದರ ಫಲವನ್ನು ಸ್ವರ್ಗಲೋಕದಲ್ಲಿ ಅನುಭವಿಸಬೇಕೆಂದು ಅಪೇಕ್ಷಿಸುವರೆಂಬ ಸಂಗತಿಯು ಅಕ್ಷರಶಃ ನಿಜವಿರುತ್ತದೆ. ಪುಣ್ಯಭೂಮಿಯೆನಿಸಿದ ನಮ್ಮೀ ಖಂಡವು ಒಂದುಕಾಲದಲ್ಲಿ ಸತ್ಯನಿಷ್ಠರಾದ ನಳ, ಹರಿಶ್ಚಂದ್ರ, ರಾಮ ಮೊದಲಾದ ಮಹಾರಾಜರಿಂದಲೂ, ಪತಿಯೇ ಪರದೈವವೆಂದು ತಿಳಿದು ಆಚರಿಸಿ ಕೀರ್ತಿಶಾಲಿಯರಾದ ಸೀತಾ ದ್ರೌಪದಿ, ಅಹಲ್ಯಾ, ಮೊದಲಾದ ಪತಿವ್ರತಾಶಿರೋಮಣಿಯರಿಂದಲೂ ಜಗದ್ವಿಖ್ಯಾತಪಂಡಿತರಾದ ಕಾಳಿದಾಸ, ಭಾರವಿ ಮೊದಲಾದ ಕವಿಸಾರ್ವಭೌಮರಿಂದಲೂ ತಪೋನಿಷ್ಠರಾದ ವ್ಯಾಸ, ವಸಿಷ್ಠ, ಅಗಸ್ತ್ಯ ಮೊದಲಾದ ಮಹರ್ಷಿಗಳಿಂದಲೂ ಅಲಂಕರಿಸಲ್ಪಟ್ಟು ಈಗತಾನೇ ಸ್ವಾತಂತ್ರ್ಯದ ಕೆರವಿಗೆ ಸಿಲುಕಿ ಸತ್ಯ, ಪಾತಿವ್ರತ್ಯ, ಪಾಂಡಿತ್ಯ, ಧರ್ಮ ಮೊದಲಾದವುಗಳೆಲ್ಲ ಅಡಗುತ್ತ ತದ್ದ್ವಾರಾ ಪುಣ್ಯಭೂಮಿಯು ಪಾಪಭೂಮಿಯಾಗಹತ್ತಿರುವದು. ಸ್ತ್ರೀಯರು ಪತಿಭಕ್ತಿಹೀನರಾಗಹತ್ತಿರುವರು. ಪುರುಷರಿಗೆ ಗುರುಭಕ್ತಿಯು ನಷ್ಟವಾಗಿ ಧರ್ಮಶ್ರದ್ಧೆಯೂ ನಿರ್ನಾಮವಾಗಹತ್ತಿರುವದು. ಸ್ತ್ರೀಪುರುಷರು ಸಮಾವೇಶರಾಗಿ ತಮ್ಮ ತಮ್ಮ ಧರ್ಮದ ಮತ್ತು ಧರ್ಮಸ್ಥಾಪಕರ ಭೀತಿಯಿಲ್ಲದೆ ಸ್ವಾತಂತ್ರ್ಯಸುಧಾರಣೆಯ ಸೋಗುಹಾಕಿ ಭರತಭೂಮಿಯ ರಂಗಸ್ಥಳದಲ್ಲಿ ಪಾರ್ಟುಮಾಡಹತ್ತಿರುವರು. ಈ ಪಾರ್ಟುದಾರರುಗಳಿಗೆ ಜಾತಿಬೇಕಾಗಿಲ್ಲ. ಧರ್ಮವು ಬೇಕಿಲ್ಲ. ಮಹಾಚಾರ್ಯರೂ ಬೇಕಿಲ್ಲ. ಮತಾಚಾರಬೋಧಕಗಳಾದ ನೀತಿ ಪದ್ಧತಿಗಳೊಂದೂ ಬೇಕಿಲ್ಲ. ಮದುವೆಯಿಲ್ಲ ಮುಂಜಿಯಿಲ್ಲ ನನ್ನ ಮಗ ಸೋಮನಾಥನೆಂಬಂತೆ ಏನೂ ಇಲ್ಲದೆ ಈಗಲೇ ಅಸ್ಪೃಶ್ಯತಾನಿವಾರಣೆಯ ಕೋಲಾಹಲವನ್ನೆಬ್ಬಿಸಿರುವರು. "ಮೂಲೇಕುಠಾರಃ" ಎನ್ನುವಂತೆ ಸನಾತನಧರ್ಮವನ್ನೇ ಬುಡಮೇಲು ಮಾಡಲಿಕ್ಕೆ ಹವಣಿಸುವವರು ಮುಂದೇನುಮಾಡುವರೋ ದೇವರೇಬಲ್ಲ. ಸ್ವಾತಂತ್ರ್ಯದ ಕೆರವಿಗೆ ಬಿದ್ದ ಸ್ವರಾಜ್ಯವಾದಿಗಳು ಬಡಕೊಳ್ಳುವ ಡೋಲ್ಲಿನ ಗತ್ತಿಗೆ ಸರಿಯಾಗಿ ಹಲಕೆಲವರು ತಾಳತಾಕುತ್ತ ಕುಣಿಯುತ್ತಿರುವರು. ಮುಂದಿನ ತಮ್ಮ ತಮ್ಮ ಪರಿಣಾಮವೇನೆನ್ನುವದನ್ನು ಮನಸ್ಸಿನಲ್ಲಿ ತರದೆ ಕಾಲಕ್ಕನುಸರಿಸಿ ಯಾವ ಪಂಗಡದವರು ಮುಂದುವರಿದು ಹೋಗುವರೋ ಅವರೊಡನೆ ಸೇರಿಕೊಂಡು ಅವರಂತೆ ನಡೆಯಹತ್ತಿರುವರು. ತಾವಾರು? ತಮ್ಮ ಮತವಾವುದು? ತಮ್ಮ ಆಚಾರವೇನು? ತಮ್ಮ ಪದ್ಧತಿಗಳೇನು? ಒಂದನ್ನೂ ಯೋಚಿಸುವಂತಿಲ್ಲ. ಅಯ್ಯಾ, ಸ್ವಾತಂತ್ರ್ಯಪ್ರಿಯರಾದ ಸ್ವರಾಜ್ಯವಾದಿಗಳ ಪುಚ್ಛಾವಲಂಬಿಗಳೇ? ಸ್ವಾತಂತ್ರ್ಯದ ಕೆರವಿಗೆ ಬಿದ್ದು ಸ್ವಧರ್ಮದ ಗೌರವ ಪ್ರತಿಷ್ಠೆಯನ್ನು ಹಾಳುಮಾಡಿಕೊಳ್ಳಬೇಡಿರಿ. 'ಸ್ವಧರ್ಮೇ ನಿಧನಂ ಶ್ರೇಯಃ' ಎನ್ನುವಂತೆ ನಿಮ್ಮ ನಿಮ್ಮ ಧರ್ಮದಲ್ಲಿ ಶ್ರದ್ಧೆಯುಳ್ಳವರಾಗಿರಿ. ಪೂರ್ವದಲ್ಲಿ ಎಷ್ಟೋ ರಾಜಾಧಿರಾಜರು ಸನಾತನವೈದಿಕಧರ್ಮವನ್ನು ಕಾಪಾಡಿಕೊಂಡು ಬಂದಿರುವರು. ಈಗಲೂ ದಯಾಳು ಆಂಗ್ಲಸಾರ್ವಭೌಮರು ಕಾಪಾಡುತ್ತಿರುವದನ್ನು ಕಣ್ತೆರದು ನೋಡಿರಿ! ಸಾಸಿವೆಕಾಳಿನಷ್ಟು ಸುಖಕ್ಕಾಗಿ ಸಾಗರದಷ್ಟು ದುಃಖವನ್ನು ಅನುಭವಿಸುವಂತೆ ಈ ಸ್ವರಾಜ್ಯದ ಸುಖಕ್ಕಾಗಿ ಪವಿತ್ರವಾದ ಸನಾತನವೈದಿಕಧರ್ಮವನ್ನು ಹಾಳುಮಾಡಿ ಅಪಾರವಾದ ದುಃಖಿಗಳಾಗಬೇಡಿರಿ. ನಿಮ್ಮ ಕೃತಿಯಿಂದ ಪರಮಾತ್ಮನು ಎಂದೂ ಮೆಚ್ಚಿ ನಿಮ್ಮ ಕಾರ್ಯಕ್ಕೆ ಯಶಸ್ಸನ್ನುಂಟುಮಾಡಲಾರನು. ಸನಾತನವೈದಿಕಧರ್ಮವು ಜಗತ್ತಿಗೆ ಕಳಶಪ್ರಾಯದಂತಿರುವದು. ಇದರ ವಿನಾಶದಿಂದ ಸನಾತನ ವೈದಿಕಧರ್ಮದ ಮೂಲೋತ್ಪಾಟನವಾದಂತಾಗಿ ಆ ದೋಷಕ್ಕೆ ಜೀವಗಳೆಲ್ಲರೂ ಭಾಗಿಗಳಾಗುವಿರೆಂಬ ವಿಷಯವನ್ನು ಪದೇ ಪದೇ ಮನಸ್ಸಿನಲ್ಲಿ ತಂದುಕೊಳ್ಳಿರಿ. ಸನಾತನಿ ಸನಾತನಿಗಳೆಂದು ತಿರಸ್ಕರಿಸಿ ನುಡಿಯುವದಕ್ಕೆ ಇದೀಗ ನಿಮ್ಮ ನಾಲಿಗೆಯು ಉದ್ದುದ್ದ ಚಾಚಹತ್ತಿರುವದು. ಮತ್ತೊಂದು ಕಾಲದಲ್ಲಿ ಇದರ ಪರಿಣಾಮವೇನಾಗುತ್ತದೆನ್ನುವದನ್ನು ಸ್ವಲ್ಪ ಯೋಚಿಸಿರಿ. ಬಲಾಢ್ಯಚಕ್ರವರ್ತಿಯನ್ನುವಂತೆ ಬಹು ಭಾಗದಿಂದ ನಿಮ್ಮ ಬಲವು ಹೆಚ್ಚಾಗಿ ಪವಿತ್ರ ಸನಾತನಧರ್ಮದವರ ಬಲವು ಕಡಿಮೆಯಾದರೂ ಬಲಿಷ್ಠವಾದ ಧರ್ಮದೇವತೆಯು ಸನಾತನ ಮಠೀಯರ ಪಕ್ಷದಿಂದ ಮುಂದೊರೆಸುಬಂದು ನಿಂತಿರುವದು. ಸನಾತನಧರ್ಮದವರು ಸ್ವಾತಂತ್ರ್ಯದ ಸೋಗುಹಾಕಿ ಅಸ್ಪೃಶ್ಯತಾ ನಿವಾರಣೆಮಾಡುವ ಸ್ವರಾಜ್ಯವಾದಿಗಳಿಗೆ ಸೊಪ್ಪುಹಾಕುವದಿಲ್ಲ. ಪವಿತ್ರ ವರ್ಣಾಶ್ರಮಬದ್ಧವಾದ ಸನಾತನ ವೈದಿಕಧರ್ಮವನ್ನು ನಿರ್ಮೂಲವಾಗುವಂತೆ ಮಾಡುವದಕ್ಕೆ ಉಪವಾಸದ ಸೋಗನ್ನು ಹಾಕಿ ಕುಣಿಯಹೋದರೆ ಧರ್ಮದೇವತೆಯು ಒಪ್ಪುವದಿಲ್ಲ. ಈ ನಡತೆಯು ಧರ್ಮದೇವತೆಗೆ ಸಮ್ಮತವಿಲ್ಲ. ಅದ್ದರಿಂದಲೇ ಆ ಉಪವಾಸವು ಈವರೆಗೂ ನೆರವೇರಲಿಲ್ಲ. ಬೆಟ್ಟಬೆನಕನ ಮದುವೆಯಂತೆ ಇಂದು ನಾಳೆಯೆಂದು ಮುಂದುವರಿಯುತ್ತಲಿರುವದಷ್ಟೇ! ಮನುಷ್ಯನ ಪ್ರಯತ್ನವು ಸದುದ್ದೇಶವಾಗಿದ್ದಲ್ಲಿ ಕಾರ್ಯವು ನಿರ್ವಿಘ್ನವಾಗಿ ನಡೆಯುತ್ತದೆ. ಅದರಲ್ಲಿ ಏನಾದರೂ ದೋಷವು ಕಂಡಲ್ಲಿ ಅದು ಎಂದೂ ಕೊನೆಗಾಣಲಾರದು. ಸ್ವರಾಜ್ಯಸಾಧನೆಗಾಗಿ ಅಸ್ಪೃಶ್ಯರನ್ನು ಪವಿತ್ರ ದೇವಾಲಯಗಳಲ್ಲಿ ಪ್ರವೇಶ ಮಾಡಿಸುವದು ದುರುದ್ದೇಶವೆಂತಲೂ ಇದರಿಂದ ನಿಮ್ಮ ಕಾರ್ಯಕ್ಕೆ ಜಯವು ದೊರೆಯಲಾರದೆಂತಲೂ ಧರ್ಮದೇವತೆಯ ಅಭಿಪ್ರಾಯವು. ಅಯ್ಯಾ ಸ್ವರಾಜ್ಯವಾದಿಗಳೇ ಧರ್ಮದೇವತೆಯನ್ನು ದೂರಮಾಡಿಕೊಂಡು ಧರ್ಮದ್ರೋಹಿಗಳಾಗಬೇಡಿರಿ! ಧರ್ಮದೇವತೆಯು ನಿಮ್ಮ ನಿಮ್ಮ ಪೂರ್ವಜರನ್ನು ಸರ್ವರೀತಿಯಿಂದಲೂ ಕಾಪಾಡಿಕೊಂಡು ಬಂದಂತೆ ನಿಮ್ಮನ್ನು ಕಾಪಾಡಿರುವದು. ಮುಂದಾದರೂ ಕಾಪಾಡುತ್ತಿರುವದು. ಧರ್ಮದೇವತೆಯು ಯಾವಾಗಲೂ ನಮ್ಮನ್ನು ಕಾಪಾಡಲಿಯೆಂದು ಶರಣುಹೋಗಿರಿ. ವರ್ಣಾಶ್ರಮಧರ್ಮವನ್ನು ಕಾಪಾಡಿಕೊಂಡು ಸ್ವರಾಜ್ಯವನ್ನು ಸಂಪಾದಿಸುವದಕ್ಕೆ ಧರ್ಮದೇವತೆಯ ಶುಭಾಶೀರ್ವಾದವನ್ನು ಹೊಂದಿರಿ. ಅಂದರೆ ನಿಮ್ಮ ಕಾರ್ಯಕ್ಕೆ ಯಶಸ್ಸು ದೊರೆತೀತು? ವಾಚಕಮಹಾಶಯರೇ, ಹಲಕೆಲವು ವೇಷಧಾರಿಗಳು ಜಿಹ್ವಾಚಾಪಲ್ಯಕ್ಕಾಗಿ ಅರ್ಥಾತ್ ನಾಲಿಗೆಯ ರುಚಿಗಾಗಿ "ಸುರಾಪಾನಂ ಸೋಮಪಾನೇನ ಪೂಜಯಧ್ವಮತಂದ್ರಿತಾಃ" ಎನ್ನುವ ಸರಳಾರ್ಥದ ವಾಕ್ಯಕ್ಕೆ ಸುರಾ, ಮಾಂಸ, ಉಪಹಾರ ಮೊದಲಾದ ಅಪಾರ್ಥವನ್ನು ಕಲ್ಪಿಸಿ ಜನಗಳನ್ನು ಮೋಸಪಡಿಸುತ್ತಿರುವಂತೆ ಈಗತಾನೇ ಸ್ವರಾಜ್ಯವಾದಿಗಳಾದರೋ ವೇದಗಳ, ಉಪನಿಷತ್ತುಗಳ ಸ್ಮೃತಿಗಳ ವಾಕ್ಯಗಳಿಗೆ ಅಪಾರ್ಥವನ್ನು ಕಲ್ಪಿಸಿ ಅಸ್ಪೃಶ್ಯರನ್ನು ದೇವಾಲಯಗಳಲ್ಲಿ ಪ್ರವೇಶಮಾಡಿಸಲು ವೇದದಲ್ಲಿ ಉಪನಿಷತ್ತಿನಲ್ಲಿ ಸ್ಮೃತಿಗಳಲ್ಲಿ ಹೇಳಿದೆಯೆಂದು ಜನರಿಗೆ ಉಪದೇಶಿಸಿ ಪವಿತ್ರ ದೇವಸ್ಥಾನಗಳನ್ನು ಭ್ರಷ್ಟಗೊಳಿಸಹತ್ತಿದ್ದಾರೆ. ಮೊದಲೇ ಧರ್ಮ ಜಾತಿ ನೀತಿ ಬೇಡಾಗಿದ್ದ ಹಲಕೆಲವು ಅಪಕ್ವಮತಿಗಳು ಸ್ವರಾಜ್ಯವಾದಿಗಳ ಗುಂಪಿಗೆ ಸೇರಿ ಅವರ ಕೃತಿಗೆ ಅಸ್ತು ಎಂದು ಒಪ್ಪಿಗೆಕೊಡಹತ್ತಿರುವರು. ಇದೇ ಸ್ವರಾಜ್ಯವಾದಿಗಳು ಮೊದಮೊದಲು ಧರ್ಮಶಾಸ್ತ್ರವನ್ನು ವಿರೋಧಿಸಿ ಸನಾತನ ವೈದಿಕಮತಕ್ಕೆ ಕಳಂಕತರುವದಕ್ಕಾಗಿ ಶಾರದಾಬಿಲ್ಲನ್ನು ಅಂಗೀಕರಿಸಿದರು. ಮುಂದೆ ವಿಧವಾವಿವಾಹವನ್ನು ಅನುಮೋದಿಸಬಹುದು. ಇದೀಗ ಅಸ್ಪೃಶ್ಯರನ್ನು ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಿಸಲಿಕ್ಕೆ ಪಣತೊಟ್ಟುಕೊಂಡು ನಿಂತಿರುವರು. ಇನ್ನೂ ಮುಂದೆ ಮುಂದೆ ಯಾವ ಯಾವ ಅನಾಹುತಗಳು ಜರಗುತ್ತವೆಯೋ ಏನೋ, ಬಂದದ್ದೆಲ್ಲ ಬರಲಿ, ಧರ್ಮದೇವತೆಯ ದಯವೊಂದಿರಲಿ. ಸ್ವರಾಜ್ಯವಾದಿಗಳೂ ಅವರ ಪುಚ್ಛಾವಲಂಬಿಗಳೂ ವರ್ಣಾಶ್ರಮ ಧರ್ಮ ವಿರೋಧಿಗಳಾಗಿ ಅಸ್ಪೃಶ್ಯತಾನಿವಾರಣೆಯಿಂದ ಪವಿತ್ರದೇವಾಲಯಗಳನ್ನು ಭ್ರಷ್ಟಗೊಳಿಸಲಿ. ಹೋಗಲಿ, ಎಲ್ಲರೂ ಹೋಗಲಿ, ಬೆಟ್ಟಬೆನಕನ ಎರಡು ಕಾಲು ಹೋದರೆ ಅದು ಕುಂಟುಬೀಳಲಾರದು. ಸನಾತನವೈದಿಕಧರ್ಮಸಂರಕ್ಷಣೆಗಾಗಿ ಧರ್ಮದೇವತೆಯನ್ನು ಭಕ್ತಿಪೂರ್ವಕವಾಗಿ ನಾವುಗಳೆಲ್ಲಾ ಸ್ಮರಿಸೋಣ. "ಸತ್ಯಮೇವ ಜಯತೇ ಯತೋಧರ್ಮ ಸ್ತತೋಜಯಃ! ಸತ್ಯಂವದ ಧರ್ಮಂಚರ!!

ಓರ್ವ ಧರ್ಮಾಭಿಮಾನಿ.

ವೀರಶೈವಸ್ಕೂಲ್, ಬಳ್ಳಾರಿ.

ಮಹಾಶಯರೆ!

ಶ್ರೀ ಕೇದಾರನಾಥ ಸ್ಮಾರಕದ ಐದನೆಯ ವರ್ಷದ ವಿನೋದಾಟಗಳು ಈ ಜನವರಿ ೨೮ ನೆಯ ತೇದಿ ಶನಿವಾರ ಪ್ರಾತಃಕಾಲ ೮ ಘಂಟೆಯಿಂದ ೧೧ ಘಂಟೆಯ ವರೆಗೂ, ಸಾಯಂಕಾಲ ೩ ಘಂಟೆಯಿಂದ ೬ ಘಂಟೆಯ ವರೆಗೂ ಗಾಂಧಿನಗರದಲ್ಲಿರುವ ವೀರಶೈವವಿದ್ಯಾರ್ಥಿನಿಲಯದ ಆವರಣದಲ್ಲಿ ಜರುಗುತ್ತವೆ.

ಹಾಗು ಸ್ಕೂಲಿನ ಐದನೆಯ ವಾರ್ಷಿಕವರ್ಧಂತಿಯೂ ಈ ತಿಂಗಳು ೨೯ ನೆಯ ತೇದಿ ಆದಿವಾರ ಸಾಯಂಕಾಲ ೫ ಘಂಟೆಗೆ ಶ್ರೀಗಣೇಶ ದೇವಾಲಯದ ಬೀದಿಯಲ್ಲಿರುವ ಶೇಠ್ ಕೇಶವರಾವ ಹೀರದ ಸೊಗಮ್ಮನವರ ಚೌಕಿಯಲ್ಲಿ ಜರುಗುತ್ತದೆ.

ಮ|| ರಾ|| ಎಫ್. ಡಬ್ಲ್ಯು. ಸ್ಟುವರ್ಟ್, ಸಿ. ಐ. ಯಿ. ಐ. ಸಿ. ಯಸ್. ಜಿಲ್ಲಾ ಕಲೆಕ್ಟರವರು, ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸುವದಕ್ಕೆ ಆದರಪೂರ್ವಕವಾಗಿ ಒಪ್ಪಿರುತ್ತಾರೆ.

ಮ|| ರಾ|| ವೈ. ಮಹಾಬಲೇಶ್ವರಪ್ಪನವರು, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಬಳ್ಳಾರಿ, ಇವರು ಬಹುಮಾನಗಳನ್ನು ಹಂಚುವದಕ್ಕೆ ಒಪ್ಪಿರುತ್ತಾರೆ.

ಆದುದರಿಂದ ತಾವು ಈ ಸಮಾರಂಭಕ್ಕೆ ಆಗಮಿಸಬೇಕಾಗಿ ಪ್ರಾರ್ಥನೆ.

ತಮ್ಮ ಶ್ರೇಯೋಭಿಲಾಷಿ,
ಬಳ್ಳಾರಿ, ಯಂ. ರಾಚಯ್ಯ,
18—1—1933. ಮುಖ್ಯೋಪಾಧ್ಯಾಯ.

ದಾವಣಗೆರೆಯಲ್ಲಿ ಸೇಂಗತೊಗಲು ನೆರವೇರಲಿರುವ ಚಿಂತಾಲುತೂಕವು ಮತ್ತು ಆದರಿಂದ ಆಗುವ ಅನಾಹುತವು.

ದಾವಣಗೆರೆಯಲ್ಲಿ ಬಹು ಕಾಲದಿಂದ ನಡೆದುಬಂದಿರುವ ಕೈತೂಕವನ್ನು ತೆಗೆದುಹಾಕಿ ಚಿಂತಾಲುತೂಕವನ್ನು ಮಾಡಲು ಪ್ರಯತ್ನಿಸುತ್ತಿರುವ ಖರೀದಿ ಅಂಗಡಿಯ ಮಹನೀಯರುಗಳಿರಾ? ದಿಲ್ಲಿಯಾದ ದಾವಣಗೆರೆಯನ್ನು ಹಳ್ಳಿಯನ್ನಾಗಿ ಮಾಡಬೇಡಿರಿ. ಇದುವರೆಗೂ ನಡೆದುಬಂದಿರುವ ಕೈತೂಕದಿಂದ ನಿಮಗಾಗಿರುವ ಬಾಧಕವೇನು. ಚಿಂತಾಲುತೂಕವೆಂಬ ಶಬ್ದದಿಂದಲೇ ಸಹಸ್ರಾರು ಗಾಡಿಗಳು ಹರಪನಹಳ್ಳಿ, ಕೊಟ್ಟೂರು, ಉಜ್ಜಯಿ, ಹರಿಹರ ಮೊದಲಾದ ಊರುಗಳಿಗೆ ಚದರಿಹೋಗುತ್ತಿರುವುದನ್ನು ನೋಡಿರಿ. ಚಿಂತಾಲುತೂಕವು ಆದಪಕ್ಷದಲ್ಲಿ ದಾವಣಗೆರೆಯು ಹರಪನಹಳ್ಳಿಯ ನಾಮಾಂಕಿತವನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ದಾವಣಗೆರೆಯಲ್ಲಿರುವ 5-6 ನೂರು ದಲಾಲಿ ಅಂಗಡಿಯ ಮಾಲೀಕರುಗಳಿರಾ? ಇಂಥ ವಿಚಾರಗಳನ್ನು ಖಂಡಿಸಿ ಮೊದಲಿನಂತೆ ಸಾಂಗಗೊಳಿಸಬೇಕಾಗಿ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ.

ಓರ್ವ ರೈತ, ದಾವಣಗೆರೆ.

ಮೈಸೂರು ಗಣಿಗಳ ಚೀಫ್-ಇನ್ಸ್ಪೆಕ್ಟರವರ ರಿಪೋರ್ಟು.

1931-32 ನೆಯ ಇಸ್ವಿಯ ಗಣಿಗಳ ರಿಪೋರ್ಟನ್ನು ಕೃತಜ್ಞತೆಯಿಂದ ಪರಿಗ್ರಹಿಸಿರುವೆನು. 1931-32 ನೆಯ ಇಸ್ವಿಯಲ್ಲಿ ಮ|| ರಾ|| ಸಿ. ಇ. ಸೂರ್ಯನಾರಾಯಣರಾಯರವರು ಚೀಫ್ ಇನ್ಸ್ಪೆಕ್ಟರವರ ಕೆಲಸವನ್ನು ಮಾಡಿರುವರು. 30-31 ನೆಯ ಇಸ್ವಿಯಲ್ಲಿ ಮೈನಿಂಗ್‌ಲೀಸ್‌ಗಳು 42, 31-32 ರಲ್ಲಿ 40 ಪ್ರಾಸ್‌ಪೆಕ್ಟಿಂಗ್ ಲೈಸೆನ್ಸ್‌ಗಳು 2 ವರ್ಷಗಳಲ್ಲಿಯೂ 9. ಕಲೆಕ್ಟಿಂಗ್ ಲೈಸೆನ್ಸ್‌ಗಳು 30-31 ರಲ್ಲಿ 3. 31-32 ರಲ್ಲಿ 6. ಒಪ್ಪಿತದ ಸರ್ಟಿಫಿಕೇಟುಗಳು 30-31 ರಲ್ಲಿ 13. 31-32 ರಲ್ಲಿ 14 ಒಟ್ಟು 30-31 ರಲ್ಲಿ 67. 31-32 ರಲ್ಲಿ 69. ಈ ಪ್ರಕಾರ ಕೊಡಲ್ಪಟ್ಟವು. ಗಣಿಗಳ ಪ್ರದೇಶ. 26,311 ಎಕರೆಗಳಾಗಿರುವುವು. ಇದಕ್ಕೆ ರೆಂಟ್‌ಗಳು ಮತ್ತು ಸೆಸ್ಸುಗಳ ಮೂಲಕ ವಸೂಲಾದ ಮೊಬಲಗು 16,864 ರೂಪಾಯಿಗಳು. ಚಿನ್ನದಗಣಿಗಳಿಂದ ಆದಉತ್ಪತ್ತಿ 330,434,.024 ಔನ್ಸ್‌ಗಳು (ಔನ್ಸು=2½ ರೂ. ಗಳ ತೂಕ) ಬೆಳ್ಳಿ ಗಣಿಗಳಿಂದ ಆದ ಉತ್ಪತ್ತಿ. 22,604.850 ಔನ್ಸ್‌ಗಳು. ಇವುಗಳು 1831 ನೇ ಇಸ್ವಿಯ ಉತ್ಪತ್ತಿ. 30-31 ನೆಯ ಇಸ್ವಿಯಲ್ಲಿ ಇದೇ ಉತ್ಪತ್ತಿಯು ಚಿನ್ನದ ಗಣಿಗಳಲ್ಲಿ 329,133,876 ಔನ್ಸ್‌ಗಳು ಬೆಳ್ಳಿ ಉತ್ಪತ್ತಿ 17,843.988 ಔನ್ಸ್‌ಗಳು. ಚಿನ್ನದ ಉತ್ಪತ್ತಿಯಿಂದ ಆದಮೊಬಲಗು 31-32 ನೆಯ ಇಸ್ವಿಯಲ್ಲಿ 1,560,739 ಪೌಂಡ್‌ಗಳು 10 ಶಿಲಿಂಗ್‌ಗಳು 4 ಪೆನ್ಸ್‌ಗಳು. ಹಿಂದಿನ ವರ್ಷದ ಚಿನ್ನದಉತ್ಪತ್ತಿ 1,306,145-14 ಶಿ-4 ಪೆನ್ಸ್. ಕಂಪನಿಯವರಿಗೆ ಕೊಡಲ್ಪಟ್ಟ ಡಿವಿಡೆಂಡ್‌ಗಳು 31-32 ರಲ್ಲಿ 219,010-16ಶಿಲಿಂಗ್‌ಗಳು. ಹಿಂದಿನ ವರ್ಷ ಪೌಂ. 179 000-0-0. ಮೈಸೂರು ಗೌರ್ನಮೆಂಟಿಗೆ ರಾಜಪಾಲು ಬಂದದ್ದು 83,094 ಪೌಂಡ್‌ಗಳು 0 ಶಿ. 4 ಪೆನ್ಸ್‌ಗಳು. ಒಟ್ಟು 31-32 ನೆಯ ಇಸ್ವಿಯಲ್ಲಿ ಬಂದ ಮೊಬಲಗು ಹಿಂದಿನ ವರ್ಷದ ಸಿಲ್ಕನ್ನು ಸೇರಿಸಿಕೊಂಡರೆ ರೂ. 14,44081-3-0 ಪೈಗಳು ಈ ಮೊಬಲಗಿನಲ್ಲಿ ವಸೂಲಾಗಿರತಕ್ಕದ್ದು 11,06,720 ರೂ ಗಳು. ಬಾಕಿ ಬರಬೇಕಾಗಿರತಕ್ಕದ್ದು ರೂ. 3,37,361-3-0 ಪೈ ಗಳು. ಇದನ್ನು ನೋಡಿದರೆ ಕಂಪನಿಯವರು ಶ್ರದ್ಧೆಯಿಂದ ಕೆಲಸಮಾಡಿ ಷೇರ್‌ದಾರರಿಗೆ ಎಷ್ಟು ಡಿವಿಡೆಂಡ್‌ಕೊಟ್ಟಿರುತ್ತಾರೋ, ನಮ್ಮ ಮಹಾಪ್ರಭುಗಳಿಗೆ ಎಷ್ಟು ರಾಜಪಾಲುಕೊಟ್ಟಿರುವರೋ ಅದು ಗೊತ್ತಾಗುತ್ತದೆ. ಈ ಚಿನ್ನ ಬೆಳ್ಳಿ ಮೊದಲಾದ ಲೋಹಗಳನ್ನು ನಮ್ಮ ಗೌರ್ನಮೆಂಟಿನವರು ರೂಢಿಸಿದ್ದರೆ ಅನೇಕ ಕೋಟಿ ರೂಪಾಯಿಗಳು ನಮ್ಮ ಸಂಸ್ಥಾನಕ್ಕೆ ಉಳಿಯುತ್ತಿದ್ದವು. ಜರ್ಮನ್‌ದೇಶದವರು ಇಂಥಾ ಕೆಲಸಗಳನ್ನು ಪಾಶ್ಚಾತ್ಯರಲ್ಲಿ ಸಮರ್ಥರಾದವರು ಹೇಗೆ ಮಾಡುತ್ತಾರೋ ಅದನ್ನು ನೋಡಿಕೊಂಡು ಬಂದು, ನಮ್ಮ ಜನಗಳಿಂದಲೇ ಕೆಲಸಮಾಡಿಸಿ ಸಂಸ್ಥಾನದ ಮೂಲಾಧಾರಗಳನ್ನು ಹೆಚ್ಚಿಸಿ ಅದರ ಪ್ರಯೋಜನವನ್ನು ತಾವೇ ಹೊಂದಿ ಈಗ ಸಕಲ ಬಾಬುಗಳಲ್ಲಿಯೂ, ಪಾಶ್ಚಾತ್ಯರಿಗಿಂತಲೂ ಮುಂದಾಳುಗಳಾಗಿ ಇದ್ದಾರೆ. ಅವರ ಮೇಲುಪಂಗ್ತಿಯನ್ನು ನಮ್ಮ ಜಪಾನದವರು ಮತ್ತು ಇಂಡಿಯಾದೇಶದ ಪ್ರಭುಗಳು ಅನುಸರಿಸಿದರೆ ನಮ್ಮ ದೇಶದ ದಾರಿದ್ರ್ಯವು ಹತವಾಗುವುದು. ನಮ್ಮ ದೇಶದ ಕೈಗಾರಿಕೆಗಳು ವೃದ್ಧಿಗೆ ಬರುವುವು. ನಮ್ಮ ದೇಶದಲ್ಲಿ ಸರ್ವರೂ

ಈ ಅವಧಿಯಲ್ಲಿ ರಾಜಕಾರ್ಯಪ್ರಸಕ್ತ, ಶ್ರೀ|| ಎಂ. ಎನ್. ಕೃಷ್ಣರಾಯರೇ ದಿವಾನಗಿರಿಯ ಚಾರ್ಜನ್ನು ವಹಿಸಿರುವರೆಂದೂ ತಿಳಿದುಬಂದಿದೆ.

ರಾಜಧಾನಿಯು ದಿನ ದಿನಕ್ಕೆ ದೊಡ್ಡದಾಗಿ ಬೆಳೆಯುತ್ತಿರುವದರಿಂದ ಸರಕಾರದವರು ಮುನಿಸಿಪಲ್ ಕೌನ್ಸಿಲರ ಸಲಹೆಯ ಮೇರೆಗೆ ಹಿನಕಲ್ಲು, ಪಡುವಾರಹಳ್ಳಿ, ಮಾರಗೌಡನಹಳ್ಳಿ, ಬೆಲ್ವತ್ತ, ಈರಸಗೆರೆ, ದೇವನೂರು, ಕ್ಯಾತಮಾರನಹಳ್ಳಿ, ಕುರುಬಾರಹಳ್ಳಿ, ಕನ್ನೇಗೌಡನ ಕೊಪ್ಪಲು, ಕುಕ್ಕರಹಳ್ಳಿ ಗ್ರಾಮಗಳನ್ನೂ, ಬೋಗಾದಿ, ವಿಜಯ, ಶ್ರೀಪುರ ಗ್ರಾಮಗಳ ಪೈಕಿ ಕೆಲವು ಭಾಗಗಳನ್ನೂ, ಪಶ್ಚಿಮದಲ್ಲಿರುವ ಜಯಲಕ್ಷ್ಮೀಮ್ಯಾನ್ಷನ್ ಮತ್ತು ಅದಕ್ಕೆ ಸೇರಿದ ಮನೆಗಳನ್ನೂ, ಉತ್ತರದಲ್ಲಿರುವ ಕ್ಷಯರೋಗದ ಆಸ್ಪತ್ರೆಯನ್ನೂ, ದಕ್ಷಿಣದಲ್ಲಿರುವ ಸ್ವೀವೇಜ್ ಫಾರಮ್ಮನ್ನೂ ಮೈಸೂರು ನಗರದ ಎಲ್ಲೆಗೆ ಸೇರಿಸಿಕೊಳ್ಳಬಹುದೆಂದು ಅಪ್ಪಣೆ ಮಾಡಿರುತ್ತಾರೆ.

ಸತ್ಯಾಗ್ರಹಸಮರವಾರ್ತೆ.

'ಕೊಡಗು' ಪತ್ರಿಕಾಸಂಪಾದಕರಾದ ಶ್ರೀ|| ಪಿ. ಐ. ಬೆಳ್ಳಪ್ಪನವರು ಮತ್ತು ಇನ್ನಿಬ್ಬರು ಜನವರಿ 11 ನೇ ತಾರೀಖಿನ ದಿವಸ ವೀರರಾಜಪೇಟೆಯಲ್ಲಿ ಬಹಿರಂಗ ಭಾಷಣಮಾಡಿದರೆಂಬ ಕಾರಣದಮೇಲೆ 3 ತಿಂಗಳ ಕಠಿಣಶಿಕ್ಷೆಗೆ ಗುರಿಯಾದರು.

ಜನವರಿ 13 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ಅಕ್ರಮಕೂಟದ ಕಾರ್ಯಕ್ರಮಗಳನ್ನು ನಡೆಸಿದರೆಂಬ ಕಾರಣದ ಮೇಲೆ ಇಬ್ಬರು ಸ್ವಯಂಸೇವಕರು ಎರಡೆರಡು ತಿಂಗಳ ಕಠಿಣಶಿಕ್ಷೆಗೆ ಗುರಿಯಾದರು.

ಲಕ್ನೋನಗರದ ಡಾ|| ಮುರಾರಿಲಾಲ್‌ರವರು ಅಮೀನುದ್ದೌಲಾಪಾರ್ಕಿನ ಎದುರಿನಲ್ಲಿರುವ ಒಂದು ಮನೆಯಮೇಲೆ ರಾಷ್ಟ್ರೀಯಧ್ವಜವನ್ನು ಏರಿಸಿ ಬಹಿರಂಗ ಭಾಷಣವನ್ನು ಮಾಡಲು ಪ್ರಯತ್ನಿಸಿದಾಗ ಪೋಲೀಸರು ಮನೆಯೊಳಕ್ಕೆ ನುಗ್ಗಿ ಡಾ|| ಮುರಾರಿಲಾಲರನ್ನೂ, 38 ಜನ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿದರು.

ಜನವರಿ 18 ನೇ ತಾರೀಖಿನ ಮುಂಬಯಿ ಪೋಲೀಸರು ಬೋಮಂಜೀಮಾಸ್ತರ ಗಲ್ಲಿಯಲ್ಲಿ ಪರದೇಶೀ ವಸ್ತ್ರದ ಅಂಗಡಿಗಳಮುಂದೆ ಪಿಕೆಟಿಂಗ್ ಮಾಡಿದ 14 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ಅಖಿಲಭಾರತರಾಷ್ಟ್ರೀಯಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ|| ಬಾಬುರಾಜೇಂದ್ರಪ್ರಸಾದರವರಿಗೆ ಪಾಟ್ನಾ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರು 15 ತಿಂಗಳ ಕಠಿಣಸಜೆಯನ್ನು ವಿಧಿಸಿದರು. ಇವರು 'ಎ' ತರಗತಿಯ ಖೈದಿಗಳಾಗಿ ಪರಿಗಣಿಸಲ್ಪಟ್ಟಿರುತ್ತಾರೆ.

ಮೇ ದಿನಾಚರಣೆಯ ಸಂಬಂಧವಾಗಿ ಮುಂಬಯಿಯಲ್ಲಿ ಬಹಿರಂಗಭಾಷಣಮಾಡಿದರೆಂಬ ಕಾರಣದಮೇಲೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ಮಿ|| ಜಲಾಲು ದ್ದೀನಬುಖಾರಿ ಎಂಬವರಿಗೆ 2 ವರ್ಷಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಜನವರಿ 19 ನೆಯ ತಾರೀಖಿನ ದಿವಸ ಮುಂಬಯಿ ಪೋಲೀಸರು ರೇಷ್ಮೆ ವಸ್ತ್ರಗಳ ಅಂಗಡಿಯ ಮುಂದೆ ಪಿಕೆಟಿಂಗ್‌ಮಾಡಿದ ಒಬ್ಬ ಸ್ತ್ರೀಯನ್ನು ದಸ್ತಗಿರಿಮಾಡಿದರು. ಇದೇ ದಿವಸ ಪ್ರಾತಃಕಾಲ ತಾರ್‌ದೇವ್ ಯಲ್ಲಿ ಕಾಂಗ್ರೆಸ್ ಸ್ವಯಂಸೇವಕರ ಉಡುಪುಗಳನ್ನೂ ರಾಷ್ಟ್ರೀಯ ಧ್ವಜಗಳನ್ನೂ ತೆಗೆದುಕೊಂಡು ಹೋಗುತ್ತಿದ್ದ ಒಂದು ಮೋಟಾರನ್ನು ತಡೆದು ಒಳ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು. ಹಾಗೂ ಅದೇರಸ್ತೆಯಲ್ಲಿದ್ದ 'ಕಲ್ಯಾಣ' ಎಂಬ ಕಟ್ಟಡವನ್ನು ಜಪ್ತುಮಾಡಿ ಎರಡು ಮೂಟೆಗಳತುಂಬಾ ಕಾಂಗ್ರೆಸ್ ಉಡುಪುಗಳನ್ನು ತೆಗೆದುಕೊಂಡು ಹೋದರು. ಇಲ್ಲಿಯೂ ಇಬ್ಬರು ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ವರ್ತಮಾನಸಂಗ್ರಹ

ಇಂಡಿಯಾ ದೇಶದ ರೈಲುಗಳಲ್ಲಿ ಪ್ರತಿವರ್ಷವೂ 62,30,00,000 ಜನರು ಪ್ರಯಾಣಮಾಡುವರು!

ಮನುಷ್ಯನ ಹೃದಯವು ಮಲಗಿದ್ದಾಗ 66 ಸಾರೆ, ಕುಳಿತಿದ್ದಾಗ 71 ಸಾರೆ, ಮತ್ತು ನಿಂತಿದ್ದಾಗ 81 ಸಾರೆ ಬಡಿಯುವುದು.

ಇಂಡಿಯಾಕ್ಕೂ ಇಂಗ್ಲೆಂಡಿಗೂ ನಡುವೆ ಸಮುದ್ರದಲ್ಲಿ 1,20,00,00,000 ರೂಪಾಯಿಗಳು ಬೆಲೆಬಾಳುವ ಚಿನ್ನ ಬೆಳ್ಳಿಯ ಆಭರಣಗಳು ಇರುವವಂತೆ!

ಸೈಬೀರಿಯಾ ದೇಶದ ಪೂರ್ವ ಭಾಗದಲ್ಲಿರುವ ಸಮುದ್ರದಲ್ಲಿ ರಷ್ಯಾದೇಶದ ಒಂದು ಹಡಗು ಮುಳುಗಿ ಅದರಲ್ಲಿದ್ದ 254 ಜನರು ನೀರಿನ ಪಾಲಾದರು.

ಜನವರಿ 14 ನೇ ತಾರೀಖಿಗೆ ಆಖೈರಾದ ವಾರದಲ್ಲಿ ಮುಂಬಯಿಯಿಂದ 1,98,34,040 ರೂಪಾಯಿಗಳ ಭಂಗಾರವು ಪರದೇಶಗಳಿಗೆ ರವಾನಿಸಲ್ಪಟ್ಟಿತು.

ಮಲೇರಿಯಾ ಜ್ವರದಿಂದ ಸಾಯುವಷ್ಟು ಜನರು ಮತ್ತಾವಕಾರಣದಿಂದಲೂ ಸಾಯುವದಿಲ್ಲವೆಂದೂ, ಈ ರೋಗದಿಂದ ಪ್ರತಿವರ್ಷವು 20,00,000 ಸಾಯುವರೆಂದೂ ಪ್ರಕಟವಾಗಿದೆ.

ಜಮೀನು ಕಂದಾಯದ ಹಣಕ್ಕೆ ಬದಲಾಗಿ ಕೈಸೂಲನ್ನು ಕೊಡಬಹುದೆಂದು ಟೊಂಥ್ ಸಂಸ್ಥಾನಾಧೀಶರು ಅಪ್ಪಣೆ ಮಾಡಿರುವರೆಂದು 'ಮುಂಬಯಿ ಕ್ರಾನಿಕಲ್' ಪತ್ರಿಕೆಯು ತಿಳಿಸುತ್ತದೆ.

ಜೇಲಂ ಬಳಿ ನೂರಾರು ಜನ ಮುಸ್ಲಿಮರು ಒಂದು ಮದುವೆಯ ಸಂಬಂಧವಾಗಿ ಕೊಡಲಿ, ದೊಣ್ಣೆ ಮೊದಲಾದವುಗಳಿಂದ ಹೊಡೆದಾಡಿದರು. 3 ಜನರು ಸತ್ತರು. ಅನೇಕರಿಗೆ ಅಪಾಯಕರಗಳಾದ ಗಾಯಗಳಾಗಿರುವುವು.

ಮುಂಬಯಿಯ ಸಿ. ಐ. ಡಿ. ಪೋಲೀಸರು ಅಬ್ದುಲ್ ರಹಿಮಾನ್ ಎಂಬುವನು ಖೋಟಾನಾಣ್ಯಗಳನ್ನು ತಯಾರಿಸುತ್ತಿದ್ದನೆಂಬ ಕಾರಣದಮೇಲೆ ದಸ್ತಗಿರಿಮಾಡಿ ಮೂರನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಇಟಲಿ ಸರಕಾರದವರು ತಮ್ಮ ರಾಜ್ಯದ ಪ್ರಜೆಗಳೆಲ್ಲರಿಗೂ ವಿಷದ ಗಾಳಿಯನ್ನು ತಡೆಯುವ ಮುಖವಾಡಗಳನ್ನು ಹಂಚಬೇಕೆಂದು ನಿರ್ಧರಿಸಿರುವರು! ಶತ್ರುಪಕ್ಷದವರು ಏರೋಪ್ಲೇನುಗಳಲ್ಲಿ ಬಂದು ವಿಷದಗಾಳಿಯಿಂದ ಜನರನ್ನು ಕೊಲ್ಲಲು ಪ್ರಯತ್ನಿಸಬಹುದೆಂಬ ಅನುಮಾನವೇ ಇದಕ್ಕೆ ಕಾರಣವಂತೆ!

ಕಾಯಿದೆಭಂಗದ ಚಳವಳಿಯ ಸಂಬಂಧದಲ್ಲಿ ಕಾರಾಗೃಹವಾಸಿಗಳಾಗಿರುವ ಶ್ರೀ|| ಸುಭಾಷ್‌ಚಂದ್ರಬೋಸ್‌ರವರಿಗೆ ದೇಹಾರೋಗ್ಯನಿಮಿತ್ತವಾಗಿ ಅವಶ್ಯವಾದ ಚಿಕಿತ್ಸೆಯನ್ನು ಪಡೆಯಲು ಯೂರೋಪಿಗೆ ಪ್ರಯಾಣ ಮಾಡಬಹುದೆಂದು ಇಂಡಿಯಾ ಸರಕಾರದವರು ಅನುಮತಿಯನ್ನಿತ್ತಿರುವರೆಂದು ತಿಳಿದುಬಂದಿದೆ.

ತಾಂಗನೀಕ ದೇಶದ ಒಂದು ಗ್ರಾಮವು ಇಲಿಗಳಿಂದ ಸಂಪೂರ್ಣವಾಗಿ ನಾಶಮಾಡಲ್ಪಟ್ಟಿತು! ಇಲಿಗಳು ಮೊದಲು ಆ ಗ್ರಾಮದ ಸುತ್ತಲೂ ಇದ್ದ ಹತ್ತಿಯ ಬೆಳೆಯನ್ನೆಲ್ಲಾ ನಾಶಮಾಡಿ ಅನಂತರ ಊರಿಗೆ ನುಗ್ಗಿದವಂತೆ! ಜನರು ಅಸಂಖ್ಯಾತಗಳಾಗಿ ನುಗ್ಗಿಬಂದ ಆ ಇಲಿಗಳ ಕಾಟವನ್ನು ತಡೆಯಲಾರದೆ ಊರನ್ನೇ ಬಿಟ್ಟು ಓಡಿದರು.

ಬೆಳಗಾಂವ ಜಿಲ್ಲೆಯ ಒಂದು ಹಳ್ಳಿಯ ಜಮೀನ್ದಾರನನ್ನು ಕೊಂದರೆಂಬ ಆಪಾದನೆಯಮೇಲೆ ಸೆಷನ್ಸ್ ಜಡ್ಜರವರು ಇಬ್ಬರು ಅಪರಾಧಿಗಳಿಗೆ ಮರಣದಂಡನೆಯನ್ನೂ, 14 ಜನರಿಗೆ ಆಮರಣ ದ್ವೀಪಾಂತರವಾಸದ ಶಿಕ್ಷೆಯನ್ನೂ ವಿಧಿಸಿದ್ದರು. ಈ ಮೊಕದ್ದಮೆಯು ಹೈಕೋರ್ಟಿನಲ್ಲಿ ಅಪೀಲಾಗಿದ್ದು ಅಲ್ಲಿಯೂ ಮೇಲ್ಕಂಡ ಶಿಕ್ಷೆಯೇ ದೃಢವಾಯಿತು.

ಕೆಲವುಕಾಲದ ಹಿಂದೆ ಮುಂಬಯಿಯಲ್ಲಿ ನಡೆದ ಹಿಂದೂಮುಸಲ್ಮಾನರ ಹೊಡೆದಾಟದಲ್ಲಿ ನಷ್ಟಹೊಂದಿದ 860 ಜನರು ತಮಗೆ ಒಟ್ಟು 54 ಲಕ್ಷ ರೂಪಾಯಿಗಳ ಪರಿಹಾರದ್ರವ್ಯವು ಬರಬೇಕೆಂದು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ಅರ್ಜಿಹಾಕಿರುತ್ತಾರೆ. ಈ ಅರ್ಜಿಗಳನ್ನೆಲ್ಲಾ ವಿಚಾರಿಸಿ ತೀರ್ಮಾನಿಸಲು ಎರಡು ತಿಂಗಳ ಕಾಲ ಬೇಕಾಗುವದೆಂದು ತಿಳಿದುಬಂದಿದೆ.

ಸಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಹೀಲ್ ಎಂಬ ಒಬ್ಬ ಕೆಲಸಗಾರನು 40,000 ಗ್ಯಾಲನ್ ಪೆಟ್ರೋಲಿನ ಒಂದು ದೊಡ್ಡ ತೊಟ್ಟಿಯಮೇಲೆ ಕೆಲಸ ಮಾಡುತ್ತಾ ಕುಳಿತಿದ್ದಾಗ ಆ ತೊಟ್ಟಿಗೆ ಆಕಸ್ಮಾತ್ ಶಾಖವು ತಗಲಿ ಮಹಾ ರಭಸದಿಂದ ಸಿಡಿಯಿತು! ಪುನಃ ನೋಡುವಲ್ಲಿ ಆ ಕೆಲಸಗಾರನು 100 ಅಡಿಗಳ ದೂರದಲ್ಲಿದ್ದ ಒಂದು ಮರಳು ದಿಣ್ಣೆಯಮೇಲೆ ತನ್ನ ಮೈಮೇಲಾಗಿದ್ದ ಗಾಯಗಳ ರಕ್ತವನ್ನು ಒರೆಸುತ್ತಾ ಕುಳಿತಿದ್ದನು!

ಕಳೆದ ಸೆಪ್ಟಂಬರ್ ತಿಂಗಳಲ್ಲಿ ಕಲ್ಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕಾಸಂಪಾದಕರಾದ ವಾಟ್ಸನ್‌ರವರನ್ನು ಕೊಲೆಮಾಡಲು ಯತ್ನಿಸಿದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ಮಿಸ್ ಇಂದುಸುಧಾ ಘೋಷಳೂ, ಶ್ರೀ ಸುರೇಂದ್ರನಾಥದತ್ತನೂ ಇದೇ ಜನವರಿ 17 ನೇ ತಾರೀಖಿನ ದಿವಸ ಬಿಡುಗಡೆಹೊಂದಿದರು. ಆದರೆ ಪೋಲೀಸರು ಮಿಸ್ ಘೋಷಳನ್ನು ಬಂಗಾಲಾ ಆರ್ಡಿನೆನ್ಸಿನ ಪ್ರಕಾರ ಪುನಃ ದಸ್ತಗಿರಿಮಾಡಿದರು.

ವಿಚಿತ್ರಪ್ರಪಂಚ

ಪ್ರತಿಯೊಬ್ಬ ಮನುಷ್ಯನ ದೇಹದಲ್ಲಿಯೂ 26,00,00,00,00,00,000 ಸಣ್ಣ ರಂಧ್ರಗಳಿರುವವಂತೆ!

ಚಂದ್ರನು ಸೂರ್ಯನಿಗೆ 2,39,000 ಮೈಲುಗಳ ದೂರದಲ್ಲಿರುವನು. ಅದರ ಅಕ್ಷವು 2,160 ಮೈಲುಗಳು ಮಾತ್ರ ಇರುವದು!

ಟೋಕಿಯೋ (ಜಪಾನ್) ನಗರದ ಒಬ್ಬ ತರುಣ ಶಾಸ್ತ್ರಜ್ಞನು ಅಕ್ಕಿಯು ಕುದಿಯುವದನ್ನು ನೋಡಿ ಮುಂದೆ ಒದಗುವ ಭೂಕಂಪವನ್ನು ತಿಳಿಸುವನಂತೆ!

ಈ ಭೂಮಂಡಲವು ಒಟ್ಟು 19,65,50,000 ಚದರ ಮೈಲುಗಳ ಅಳತೆಯುಳ್ಳದ್ದಾಗಿರುವದು. ಇದರಲ್ಲಿ 5,55,00,000 ಚದರಮೈಲುಗಳ ನೆಲವೂ, 14,10,50,000 ಚದರಮೈಲುಗಳ ನೀರೂ ಇರುವುದಂತೆ!

ಬೆಳಕು ಒಂದು ಕ್ಷಣದಲ್ಲಿ 1,86,000 ಮೈಲುಗಳ ದೂರ ಪ್ರಯಾಣಮಾಡಬಲ್ಲದು. ಈ ವೇಗದಲ್ಲಿ ಸೂರ್ಯನ ಕಿರಣಗಳು ನಮ್ಮ ಭೂಮಿಯನ್ನು 8 ನಿಮಿಷ ಮತ್ತು 17 ಸೆಕೆಂಡುಗಳಲ್ಲಿ ತಲಪುವುವು.

ಒಬ್ಬ ಮನುಷ್ಯನು ಪ್ರತಿನಿತ್ಯವೂ ಉಸಿರಾಡುವ ಗಾಳಿಯು 34 ಪೌಂಡುಗಳ ತೂಕವಿರುವದು. ಇದು ಅವನು ಕುಡಿಯುವ ನೀರು ಮತ್ತು ಅವನ ಆಹಾರಕ್ಕಿಂತಲೂ 6 ರಷ್ಟು ಹೆಚ್ಚು ತೂಕವಾಗಿರುವದು!

ಜರ್ಮನಿಯ ಕೆಲವು ಪ್ರಸಿದ್ಧ ರಸಾಯನ ಶಾಸ್ತ್ರಜ್ಞರು ಕಲ್ಲಿದ್ದಲಿನಿಂದ ಒಂದು ಹೊಸತರಹದ ಗೊಬ್ಬರವನ್ನು ತಯಾರುಮಾಡಿರುವರು! ಈ ಗೊಬ್ಬರವು ಹಣ್ಣಿನ ತೋಟಗಳಿಗೆ ಸರ್ವೋತ್ತಮವಾಗಿರುವದಂತೆ!

ಅಲಾಸ್ಕಾ (ಉತ್ತರಧ್ರುವದ ಸಮೀಪ) ದೇಶದಲ್ಲಿ ಅನೇಕ ಸಾವಿರ ವರ್ಷಗಳ ಹಿಂದಿನ ಒಂದು ಸಮಾಧಿಯೂ, ಅದರಲ್ಲಿ ಸೂರ್ಯನ ತಾಪವನ್ನು ಕಡಿಮೆಮಾಡಲು ಉಪಯೋಗಿಸುವ ದಂತದ ಕನ್ನಡಕಗಳೂ ದೊರೆತಿರುವವಂತೆ!

ಈ ಭೂಮಂಡಲದಲ್ಲಿ ಒಟ್ಟು 150 ಕೋಟಿ ಜನರಿರುವರು! ಇವರಲ್ಲಿ 50 ಕೋಟಿ ಜನರು ಮೈತುಂಬ ಬಟ್ಟೆಯನ್ನು ಧರಿಸುವರು. 75 ಕೋಟಿ ಜನರು ಅರ್ಧಮೈಯಲ್ಲಿ ಮಾತ್ರ ಬಟ್ಟೆಯನ್ನು ಧರಿಸುವರು. ಆದರೆ ಇನ್ನುಳಿದ 25 ಕೋಟಿ ಜನರು ಸಂಪೂರ್ಣ ನಗ್ನರಾಗಿಯೇ ಇರುವರಂತೆ!

ಅಮೇರಿಕಾ ದೇಶದ ಯೋಸೆಮೈಟ್ ನ್ಯಾಷನಲ್ ಪಾರ್ಕಿನಲ್ಲಿ 34 ಅಡಿ ದಪ್ಪವುಳ್ಳ ಒಂದು ದೊಡ್ಡ ಮರವಿರುವದು. ಈ ಮರವು ಹುಟ್ಟಿ ಸುಮಾರು 3,800 ವರ್ಷಗಳಾಗಿರಬಹುದೆಂದು ಊಹಿಸಲ್ಪಟ್ಟಿದೆ. ಇದಕ್ಕಿಂತಲೂ ಹಳೆಯದಾದ ಮರವು ಪ್ರಪಂಚದಲ್ಲಿಯೇ ಇಲ್ಲವಂತೆ!

[3ನೆಯ ಪುಟದಿಂದ ಮುಂದುವರಿದುದು.]

ಗಳಲ್ಲಿ ದೇವರಮೇಲೆ ಜವಾಬ್ದಾರಿ ಹಾಕುವುದಿಲ್ಲ. ಅವರು 'ಹುಟ್ಟಿಸಿದ ದೇವರು ಹುಲ್ಲುಹಾಕುತ್ತಾನೆ.' ಎನ್ನುವುದಿಲ್ಲ. ಗಂಡನು ಮತ್ತು ಹೆಂಡತಿಯು ಸ್ವತಂತ್ರರು ತಮ್ಮ ಬುದ್ಧಿಯನ್ನು ದೇವರಿಗೆ ನೈವೇದ್ಯಮಾಡಿಬಿಟ್ಟು, ತಾವು ಸ್ವೇಚ್ಛಾಚಾರಕ್ಕೆ ಪ್ರವೇಶಿಸುವುದಿಲ್ಲ. ತಮ್ಮ ಮಕ್ಕಳನ್ನು ತಾವೇ ಹೆರುವವರು, ತಾವೇ ಅದಕ್ಕೆ ಜವಾಬುದಾರರು, ಎಂದು ದೃಢವಾಗಿ ತಿಳಿದುಕೊಂಡಿರುತ್ತಾರೆ. ದೇವರನ್ನು ದೂಷಣೆಮಾಡುವುದಿಲ್ಲ.

ಪಾಶ್ಚಾತ್ಯದೇಶಗಳಲ್ಲಿ 'ನಾನು ದೊಡ್ಡ ಸಂಸಾರಿ, ನನ್ನದು ಭಾರಿ ಸಂಸಾರ, ಸಂಸಾರವು ಬಲು ಕಷ್ಟ' ಎಂದು ನಮ್ಮ ದೇಶದಲ್ಲಿ ಹೇಳುವಂತೆ, ಹೇಳಲು ನಾಚಿಕೆಪಡುತ್ತಾರೆ. ಆದ್ದರಿಂದಲೇ ಅವರು ಹಾಸಿಗೆ ಇದ್ದಷ್ಟು ಕಾಲು ಚಾಚುತ್ತಾರೆ. ನಮ್ಮ ದೇಶದಲ್ಲಿ ಹಾಸಿಗೆಯೇ ಇಲ್ಲದೆ ಇದ್ದರೂ ಕಾಲನ್ನು ಮಾತ್ರ ಮಡಿಸುವುದಿಲ್ಲ. ಮತ್ತು ಬಡವನಾದಷ್ಟೂ ಮಕ್ಕಳು ಜಾಸ್ತಿ.

ಹೆಂಡತಿಯೂ ಗಂಡನೂ ಪರಸ್ಪರ ಸಹಕಾರದಿಂದ ತಮ್ಮ ಗೃಹಕೃತ್ಯಕ್ಕೆ ಯಾವ ಮಿತಿಮೀರಿದ ಭಾರವೂ ಇಲ್ಲದಂತೆ ನೋಡಿಕೊಳ್ಳುವುದರಿಂದ, ಅವರು ತಾವೂ ಹೊಟ್ಟೆತುಂಬಾ ತಿನ್ನುತ್ತಾರೆ, ಚೆನ್ನಾಗಿ ಬಟ್ಟೆ ಹೊದೆಯುತ್ತಾರೆ, ಮತ್ತು ಮಕ್ಕಳನ್ನು ದೃಢಕಾಯರಾಗುವಂತೆ ಸಾಕುತ್ತಾರೆ. ಆದ್ದರಿಂದಲೇ ಇಂಗ್ಲೆಂಡಿನಲ್ಲಿ ಸರಾಸರಿ ಒಬ್ಬ ಮನುಷ್ಯನು ೩೦ ವರ್ಷ ಬದುಕುತ್ತಾನೆ ಮತ್ತು ನಮ್ಮ ದೇಶದಲ್ಲಿ ೨೩ ವರ್ಷ ಮಾತ್ರ ಬದುಕುತ್ತಾನೆ.

ನಾಮದಾರ ದಿವಾನಬಹದ್ದೂರ,
ಎಸ್. ಟಿ. ಕಂಬಳಿ, ಬಿ. ಎ. ಎಲ್. ಎಲ್.
ಬಿ. ಎಮ್. ಎಲ್. ಸಿ. ಜೆ. ಪಿ.
ಶಿಕ್ಷಣ ಸಹಕಾರ, ಒಕ್ಕಲತನ, ಇತ್ಯಾದಿ ಖಾತೆಗಳ
ಮಂತ್ರಿವರ್ಯರ ಸನ್ನಿಧಿಯಲ್ಲಿ
ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ
ಪಂಚಕಮಿಟಿಯವರು ಒಪ್ಪಿಸುವ ವಿಜ್ಞಾಪನಾ
ಪತ್ರಿಕಾಭಿಪ್ರಾಯವೇನೆಂದರೆ,

ಮಹಾಶಯರೇ!

ತಾವು ನಮ್ಮ ಈ ಮುಂಡರಗಿ ಪೇಟಾಕ್ಕೆ ತಮ್ಮ ಅಮೋಘವಾದ ವೇಳೆಯನ್ನೂ, ಮಾರ್ಗಾಯಾಸವನ್ನೂ, ಲೆಕ್ಕಿಸದೆ ಆಗಮಿಸಿದ್ದಕ್ಕಾಗಿ ನಮ್ಮ ದೇವಸ್ಥಾನದ ಪತಿಯಿಂದ ಅತ್ಯಾನಂದಪೂರ್ವಕ ತಮ್ಮ ಸ್ವಾಗತವನ್ನೀಯುತ್ತೇವೆ. ತಮ್ಮಲ್ಲಿ ಇರತಕ್ಕ ವಿದ್ಯಾಪ್ರೌಢಿಮೆಯಿಂದಲೂ, ಬುದ್ಧಿ ಕೌಶಲದಿಂದಲೂ, ಮತ್ತು ಅಚಲವಾದ ಶಾಂತಿದಾಂತಿ ಸದ್ಗುಣಗಳಿಂದಲೂ ಗವರ್ನಮೆಂಟ ಹಾಗೂ ಲೋಕಲ್ ಗವರ್ನಮೆಂಟುಗಳ ಮುಖ್ಯಮುಖ್ಯ ಸ್ಥಾನಗಳಲ್ಲಿ ಅನಂತ ಮಹತ್ತರವಾದ ಕಾರ್ಯಗಳನ್ನು ಮಾಡಿ, ಸರಕಾರಕ್ಕೂ, ಲೋಕಾದರಕ್ಕೂ ಪಾತ್ರರಾಗಿರುವಿರಿ. ಮಂತ್ರಿವರ್ಯರೇ ಈಗಂತೂ ನಮ್ಮ ಕರ್ನಾಟಕ ಪ್ರಾಂತಕ್ಕೂ, ಅಲ್ಲದೆ ವೀರಶೈವ ಸಮಾಜಕ್ಕೂ, ಎಂದೂ ಲಭಿಸದೇ ಇದ್ದ ಮುಂಬೈ ಸರಕಾರದ ಮಹೋನ್ನತ ಮಂತ್ರಿವರ್ಯರ ಪದವಿಯನ್ನು ಅಲಂಕರಿಸಿರುವದು ಪ್ರತಿಯೊಬ್ಬ ಕರ್ನಾಟಕಾಭಿಮಾನಿಯು ಆನಂದಪಡತಕ್ಕದ್ದಾಗಿದೆ.

ತಮ್ಮಲ್ಲಿ ರಾಜಕಾರಣ ಧುರೀಣತ್ವವು ಹೇಗೆ ಲೋಕಪ್ರಿಯವಾಗುವಂತೆ ನೆಲೆಗೊಳಿಸಿರುವದೋ, ತದ್ವತ್ ಸಮಾಜ ಕಳಕಳಿಯು, ಧರ್ಮಾಭಿಮಾನವು, ಸ್ವಭಾವತಃ ಇರುವದೆಂಬುವದಕ್ಕೆ ಅನಂತ ತೊಡಕುಗಳಲ್ಲಿ ಶಿಕ್ಕು ತಟಸ್ಥವಾಗಿದ್ದ ಬೆಂಗಳೂರ ನಗರದಲ್ಲಿ ನೆರವೇರಿದ ೧೦ ನೇ ವೀರಶೈವ ಮಹಾಸಭೆಯನ್ನು ಸಭಾಪತಿಗಳಾಗಿ ನಿರ್ವಿಘ್ನದಿಂದ ನೆರವೇರಿಸಿದುದೂ, ೧೯೩೧ ನೇ ಇಸ್ವಿಯ ನವಂಬರ ತಿಂಗಳ ೩೦ ನೇ ತಾರೀಖಿನ ದಿವಸ ಶ್ರೀಮದ್ರಂಭಾಪುರಿ ಜಗದ್ಗುರು ಪೀಠದ ದರ್ಶನಾರ್ಥವಾಗಿ ಮೈಸೂರು ಶ್ರೀಮನ್ಮಹಾರಾಜರವರು ಆಗಮಿಸಿದ ಕಾಲಕ್ಕೆ ತಮ್ಮ ಆನಂದೋದ್ಗಾರಗಳನ್ನು ತಂತೀಮೂಲಕ ಮಹಾಪೀಠಕ್ಕೆ ನಿವೇದಿಸಿದುದೂ ಬಲವಾದ ಸಾಕ್ಷಿಗಳಾಗಿವೆ.

ಮಹಾನುಭಾವರೇ-ಈ ತರದ ಸದ್ಭಾವನೆಗಳು ತಮ್ಮಲ್ಲಿ ನೆಲೆಗೊಳಿಸಿರುವುದನ್ನು ನೋಡಿ, ಅನೇಕ ಜನರು ತಮಗೆ ದೊರೆತಿರುವ ಪ್ರಾಥಮಿಕ ಶಿಕ್ಷಣ ಪ್ರಭಾವವೇ ಅಂಥಾದ್ದಿರಬಹುದೆಂದು ತರ್ಕಿಸುತ್ತಿರುವರು. ಅಂದಮೇಲೆ ಮುಂಬಯಿಪ್ರಾಂತದ ವಿದ್ಯಾಖಾತೆಯ ಮುಖ್ಯ ಮಂತ್ರಿವರ್ಯರ ಪದವಿಯು, ತಮ್ಮ ಹಸ್ತಗತವಾಗಿರುವದರಿಂದ ಪ್ರತಿ ಒಬ್ಬರಲ್ಲಿ ರಾಜಭಕ್ತಿಯೂ, ದೇಶಾಭಿಮಾನವೂ, ಸ್ವಾಭಿಮಾನವಿಲ್ಲದ ಸಾರ್ವಜನಿಕ ಸೇವೆಯಲ್ಲಿ ಚಟುವಟಿಕೆಯೂ, ಸಮಾಜ ಕಳಕಳಿಯೂ, ಧರ್ಮಾಭಿಮಾನವೂ, ನೈತಿಕಾಚಾರವೂ, ನೆಲೆಗೊಳ್ಳುವದಕ್ಕೋಸ್ಕರ ಪ್ರಥಮ ಸೋಪಾನವಾದ ಪ್ರಾಥಮಿಕ ಶಾಲೆಗಳ ಶಿಕ್ಷಣ ಕ್ರಮವನ್ನು ಕಾಲಾನುಗುಣವಾಗಿ ತಿದ್ದುಪಡಿ ಮಾಡಲು ಸಂಪೂರ್ಣ ಧರವಸೆಯನ್ನೀಯಬೇಕು.

ಈ ನಮ್ಮ ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿಯ ದೇವಸ್ಥಾನವು ಮುಂಡರಗಿಪೇಟಾದ ಅಂತಿಮ ಪ್ರದೇಶದಲ್ಲಿ ಕಪೋತಗುಡ್ಡದ ದಕ್ಷಿಣಾಂತ್ಯಭಾಗದಲ್ಲಿ ತುಂಗಭದ್ರಾ ತಟಾಕದೊಳ್ ಉತ್ತಮವಾದ ಹವೆಯಿಂದಲೂ, ಇಂಪಾದ ನೆರಳಿನಿಂದಲೂ ಬಿಲ್ವವೃಕ್ಷಗಳ ಸಮೂಹದಿಂದಲೂ, ರಾರಾಜಿಸುತ್ತಿರುವದು. ನಮ್ಮ ದೇವಸ್ಥಾನದ ಅರ್ಚಕರಿಗೆ ಮಾತ್ರ ಅಲ್ಪಸ್ವಲ್ಪ ಭೂಮಿ ಇರುವದಲ್ಲದೆ, ನಮ್ಮ ಕಮಿಟಿಗೆ ಏನೊಂದು ಉತ್ಪತ್ತಿ ಇರುವದಿಲ್ಲ. ಈ ದೇವಸ್ಥಾನದ ರಥೋತ್ಸವವು ಪ್ರತಿವರುಷ ಚೈತ್ರ ಶುಕ್ಲ ಪಕ್ಷ ೫ ಮಿತಿಗೆ ನಡೆಯುತ್ತದೆ. ಮುಂಬಯಿ, ಮದ್ರಾಸ, ನೈಜಾಮ ಮೊದಲಾದ ಪ್ರಾಂತಗಳಿಂದ ಹತ್ತುಸಾವಿರ ಮೇಲ್ಪಟ್ಟು ಜನರು ಕೂಡುವರು. ಆ ಕಾಲಕ್ಕೆ ಆರೋಗ್ಯರಕ್ಷಣೆಯ ವ್ಯವಸ್ಥೆಗಾಗಿ ಕಮಿಟಿಯ ಶಕ್ತ್ಯನುಸಾರ ಕಾರ್ಯಕ್ರಮವನ್ನು ಇಡುತ್ತಿರುವೆವು. ಆದಾಗ್ಯೂ ದ್ರವ್ಯದ ಅಭಾವದಿಂದ ಅಷ್ಟೊಂದು ತೃಪ್ತಿಕರವಾಗಿ ನಡೆಯುವದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಮತ್ತು ವಸತಿಗೃಹಗಳ ತೊಂದರೆಯಂತೂ ಹೇಳಲಸದಳವಾಗಿದೆ. ಈಗಿನಕಾಲದಲ್ಲಿ ಮೋಟಾರಿನ ಪ್ರವಾಸವು ಸರ್ವತ್ರ ವ್ಯಾಪಕವಾಗಿರುವದರಿಂದ ಕೊರ್ಲಹಳ್ಳಿಯಿಂದ ಇಲ್ಲಿಯವರೆಗೆ ಸರಿಯಾದ ರಸ್ತೆ ಇಲ್ಲದಿರುವದರಿಂದ ಪ್ರವಾಸಿಕರಿಗೆ ಬಹಳ ತೊಂದರೆಯಾಗುತ್ತದೆ.

ನಮ್ಮ ಪ್ರಾಂತವು ಡಿಸ್ಟ್ರಿಕ್ಟಿಗೂ, ತಾಲೂಕಿಗೂ ಪೇಟಾಕ್ಕೂ ಅಂತ್ಯಪ್ರದೇಶವಾದುದರಿಂದ ಡಿ. ಲೋ. ಬೋರ್ಡಿನವರಾಗಲಿ ತಾ. ಲೋ. ಬೋರ್ಡಿನವರಾಗಲಿ ಇತ್ತಕಡೆಗೆ ಹೆಚ್ಚು ಗಮನಕೊಡುತ್ತಿರುವದಿಲ್ಲವೆಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಕಾರಣ ಡಿ. ಲೋ. ಬೋರ್ಡಿನವರಿಂದ ನಮ್ಮ ದೇವಸ್ಥಾನದಲ್ಲಿ ಒಂದು ಧರ್ಮಶಾಲೆಯೂ ಮತ್ತು ಜಾತ್ರೆಯ ಶ್ಯಾನಿಟೇಶನ್ ವ್ಯವಸ್ಥೆಯಬಗ್ಗೆ ದರ ವರುಷ ಯೋಗ್ಯಗ್ರಾಂಟು ದೊರೆಯಬೇಕಲ್ಲದೆ ತಾ. ಲೋ. ಬೋರ್ಡಿನವರಿಂದ ಕೊರ್ಲಹಳ್ಳಿಯಿಂದಾ ದೇವಸ್ಥಾನದವರೆಗೆ ೬ ಮೈಲು ಸರಿಯಾದ ರಸ್ತೆಯಾಗುವಂತೆ ಏರ್ಪಡಿಸಿ ನಮ್ಮ ಆಶಾ ಪೂರ್ತಿಗೊಳಿಸಬೇಕು. ಮತ್ತು ನಮ್ಮ ದೇವಸ್ಥಾನದಿರತಕ್ಕ ಗುಡ್ಡಪ್ರದೇಶವು ಸರಕಾರದ್ದಿದ್ದು ನಾವು ದೇವಸ್ಥಾನಕ್ಕೆ ಉಪಯುಕ್ತವಾದ ಏನೊಂದು ಹೊಸಹೊಸ ಯೋಜನೆಯನ್ನು ಮಾಡಲು ಬಾರದಾಗಿದೆ. ಕಾರಣ ಸದರಿ ಗುಡ್ಡದಲ್ಲಿ ಕೆಲವು ಭಾಗವನ್ನು (ಸರ್ವೆನಂಬರ ೧೩೪ ಬಿ.) ನಮ್ಮ ದೇವಸ್ಥಾನಕ್ಕೆ ಸರ್ಕಾರದಿಂದ ಉಚಿತವಾಗಿ ಕೊಟ್ಟಲ್ಲಿ ನಮ್ಮ ದೇವಸ್ಥಾನವು ಸರ್ವತೋಮುಖವಾಗಿ ರಾರಾಜಿಸುವಂತೆ ಆಗುವದರಲ್ಲಿ ಸಂದೇಹವಿಲ್ಲ.

ಮಹೋದಯರೇ! ನಮ್ಮ ಸಂಸ್ಥೆಯವರ ವಿಜ್ಞಾಪನಾ ಪತ್ರಿಕೆಯನ್ನು ತಾವು ಆನಂದದಿಂದ ಸ್ವೀಕರಿಸಿದುದಕ್ಕಾಗಿ ತಮ್ಮ ಆಭಾರವನ್ನು ಮನ್ನಿಸುವೆವಲ್ಲದೆ ನಮ್ಮ ಕೋರಿಕೆಗಳನ್ನು ಸಾಧ್ಯವಾದ ಮಟ್ಟಿಗೆ ನೆರವೇರಿಸಬೇಕೆಂತಲೂ ಶ್ರೀ ವೀರೇಶನು ತಮಗೆ ಉನ್ನತೋನ್ನತ ಪದವಿಗಳನ್ನೂ, ಆಯುರಾರೋಗ್ಯ, ಭಾಗ್ಯಾದಿಗಳನ್ನೂ, ಕೊಟ್ಟು ರಕ್ಷಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ತಮ್ಮ ಶ್ರೇಯೋಭಿಲಾಷಿ,
ಶ್ರೀ ದೇವಸ್ಥಾನದ ಪಂಚಕಮಿಟಿ ಪ್ರೆಸಿಡೆಂಟ.
ಗುರುಭಕ್ತೇಶರ. ಕಾಂತಪ್ಪ ವೀರಭದ್ರಪ್ಪ ಕುಬಸದ.

ಶ್ರೀ ದೇವಸ್ಥಾನ ಶಿಂಗಟಾಲೂರ
ತಾರೀಖು ೧೬-೧-೧೯೩೩ ನೇ ಇಸ್ವಿ.
ಮುಕ್ಕಾಂ. ಮುಂಡರಗಿ, ಜಿಲ್ಲಾ ಧಾರವಾಡ.

ನೀತಿಬೋಧಾಮೃತ.

ಆತ್ಮಬೋಧಾಮೃತ.

ಲೇಖಕ—ಕನ್ನಡಕವಿ ಅನವಟ್ಟಿ ರಾಮರಾಯರು.

1. ಯಾರು ತಮ್ಮ ಕ್ಷಮಾಗುಣದಿಂದ ಪಾಪಗಳನ್ನು ನೀಗಿಕೊಂಡಿರುವರೋ, ಯಾರು ತಮ್ಮ ಮನಸ್ಸನ್ನು ಸದಾ ಸಮಾಧಾನಸ್ಥಿತಿಯಲ್ಲಿಟ್ಟುಕೊಂಡಿರುವರೋ, ಯಾರು ತಮ್ಮ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡಿರುವರೋ, ಯಾರು ಮೋಕ್ಷಾಕಾಂಕ್ಷಿಗಳಾಗಿರುವರೋ ಅಂತವರಿಗೆ ಈ ಆತ್ಮಬೋಧೆಯು ವಿಹಿತವಾಗಿರುವುದು.

2. ಬೆಂಕಿಯ ಸಹಾಯವಿಲ್ಲದೆ ಹೇಗೆ ಪಾಕವು ನೆರವೇರಲ್ಪಡುವುದಿಲ್ಲವೋ, ಹಾಗೆಯೇ ಶಾಸ್ತ್ರಜ್ಞಾನಗಳ ಸಹಾಯವಿಲ್ಲದೆ ಮೋಕ್ಷವು ಲಭಿಸುವುದಿಲ್ಲ. ಮುಖ್ಯವಾಗಿ ಜ್ಞಾನವೇ ಮೋಕ್ಷಕ್ಕೆ ಸಾಧನವೆಂದಭಿಪ್ರಾಯವು.

3. ಆವರಿಸಿರುವ ಅಜ್ಞಾನವು ಬರಿ ಕರ್ಮದಿಂದ ನಿವಾರಣೆಯಾಗಲಾರದು. ಬೆಳಕಿನಿಂದ ಅಂಧಕಾರವು ಹೇಗೆ ನಿರ್ನಾಮವಾಗುವುದೋ ಹಾಗೆಯೇ ಶಾಸ್ತ್ರಜನ್ಯಜ್ಞಾನದಿಂದ ಮಾನವನ ಅಜ್ಞಾನವು ನಾಶಹೊಂದುವುದೆಂದು ತಿಳಿಯಬೇಕು.

4. ಅಜ್ಞಾನವೆಂಬುದು ಜೀವಾತ್ಮನಿಗೆ ಒಂದು ಮುಸುಕು. ಈ ಮುಸುಕಿನಿಂದ ಜೀವಾತ್ಮನ ಶಕ್ತಿಯು ಕುಗ್ಗಿಹೋಗಿರುವುದು. ಯಾವಾಗ ಅಜ್ಞಾನವೆಂಬ ಮುಸುಕು ನಿವರ್ತಿಯಾಗುವುದೋ ಆಗ ಜೀವಾತ್ಮನ ಶಕ್ತಿಯು, ಮೇಘದಿಂದ ವಿಮುಕ್ತನಾದ ಸೂರ್ಯನಂತೆ ತನ್ನಷ್ಟಕ್ಕೆ ತಾನೇ ನೈಜಕಾಂತಿಯಿಂದ ಪ್ರಕಾಶಿಸುವುದು.

5. ಬೀಜವು ನಿರ್ಮಲವಾದ ಜಲದ ಸಹಾಯದಿಂದ ಮೊಳೆತು, ಸಸಿಯಾಗಿ ಬೆಳೆದ ಮೇಲೆ ಅದು ಆ ಬೀಜವನ್ನು ಹೇಗೆ ಬಿಟ್ಟುಬಿಡುವುದೋ, ಹಾಗೆಯೇ ಅಜ್ಞಾನದಿಂದ ಆವೃತನಾದ ಜೀವಾತ್ಮನು ಶಾಸ್ತ್ರಜನ್ಯಜ್ಞಾನದಿಂದ ಆ ಅಜ್ಞಾನವು ತೊಲಗಿಹೋಗಿ ಕೊನೆಗೆ ವಿರಾಜಿಸುವನು.

6. ಈ ಪ್ರಪಂಚದಲ್ಲಿ ಪ್ರೀತಿ, ದ್ವೇಷ ಮೊದಲಾದ ದುರ್ಗುಣಗಳು, ಸ್ವಪ್ನದಲ್ಲಿ ಕಾಣಬರುವಂತೆಯೇ, ಬಹುಬಾಧೆಗಳಿಗಾಕರವಾಗಿದೆ. ಕನಸಿನಲ್ಲಿ ಕಾಣಬರುವ ಸುಖದುಃಖಾದಿಗಳು ನಿಜವೆಂದೇ ಮನಸ್ಸಿಗೆ ಭ್ರಮಕವನ್ನುಂಟುಮಾಡಿ ಎಚ್ಚರವಾದನಂತರ ಎಲ್ಲವೂ ಬಯಲಾಗಿಹೋಗುವಂತೆಯೇ ಎಲ್ಲವೂ ಕ್ಷಣಿಕವೆಂದು ತಿಳಿಯಬೇಕು.

7. ಕಪ್ಪೆಚಿಪ್ಪಿನಲ್ಲಿ ಕಾಣಬರುವ ಬಿಳುಪು ಬೆಳ್ಳಿಯೆಂದೇ ಹೇಗೆ ನೇತ್ರಕ್ಕೆ ಗೋಚರವಾಗುವುದೋ ಹಾಗೆಯೇ ಈ ಪ್ರಪಂಚವು ನಿಜವೆಂದೇ ನಮಗೆ ತೋರಿಬರುವುದು. ಲೋಕಕ್ಕೆ ಒಡೆಯನಾಗಿಯೂ, ಪ್ರತ್ಯೇಕಿಸಲ್ಪಡುವುದಕ್ಕೆ ಅಸಾಧ್ಯವಾಗಿಯೂ ಇರುವ ಆ ಪರಬ್ರಹ್ಮನ ಸಾಕ್ಷಾತ್ಕಾರವಾಗದೆ ಇರುವವರೆಗೂ ಈ ಪ್ರಪಂಚವು ಶಾಶ್ವತವೆಂದೇ ಮಾನವನು ಭಾವಿಸುತ್ತಿರುವನು.

8. ಮಣಿಸರದಲ್ಲಿನ ದಾರವು ಎಲ್ಲಾ ಮಣಿಗಳಲ್ಲಿಯೂ ತೋರಿ ಕಾಣಿಸಿಕೊಳ್ಳುತ್ತಿರುವಂತೆ, ಭಗವಂತನು ಪ್ರಪಂಚದಲ್ಲಿ ಕಾಣಬರುವ ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಕನಾಗಿದ್ದುಕೊಂಡು, ಆಯಾ ವಸ್ತುಗಳ ಗುಣಾವಗುಣಗಳ ತಾರತಮ್ಯವನ್ನು ಲೋಕಕ್ಕೆ ಪ್ರಕಾಶಪಡಿಸುತ್ತಿರುವನು.

9. ಪರಮಾತ್ಮನು ವಿವಿಧಜೀವಿಗಳಲ್ಲಿ ವಿವಿಧವಾದ ಹೆಸರುಗಳಿಂದ ಕರೆಯಿಸಿಕೊಂಡಾಗ್ಯೂ, ಅವತರಿಸಿದ ಬಾಹ್ಯರೂಪವು ನಶಿಸಿಹೋದಮೇಲೆ, ಕೊನೆಯಲ್ಲಿ ಆ ಪರಮಾತ್ಮನು ಒಬ್ಬನೇ ಎಂದು ಕರೆಯಿಸಿಕೊಳ್ಳುವನು.

10. ನೀರು ಒಂದೇ ಇದಕ್ಕೆ ವಿವಿಧಬಣ್ಣಗಳನ್ನು ಸೇರಿಸಿದ ಮೇಲೆ, ಇದು ಕೆಂಪುನೀರು, ಇದು ಕಪ್ಪುನೀರು ಎಂದು ಹೇಗೆ ಕರೆಯಿಸಿಕೊಳ್ಳುವುದೋ, ಹಾಗೆಯೇ ಭಗವಂತನು ಈ ಭೂಮಿಯಲ್ಲಿ ನಾನಾವಿಧವಾದ ಅವತಾರಗಳನ್ನು ತಾಳಿ ವಿವಿಧ ಹೆಸರುಗಳಿಂದ ಕರೆಯಿಸಿಕೊಂಡರೂ, ಆಯಾ ಅವತಾರಗಳು ಮುಗಿದನಂತರ, ಕೊನೆಗೆ ಭಗವಂತನೊಬ್ಬನೆಂದೇ ಹೇಳಿಸಿಕೊಳ್ಳುವನು.

11. ಪಂಚಭೂತಗಳಿಂದ ಕೂಡಿ ಮೆರೆಯುತ್ತಿರುವ ಈ ಶರೀರವು ಸುಖದುಃಖಗಳನ್ನು ಅನುಭವಿಸುವುದಕ್ಕೆ ಸಾಧನಭೂತವಾಗಿರುವುದು.

12. ಪಂಚಭೂತಾತ್ಮಕವಾದ ಈ ಸ್ಥೂಲಶರೀರವು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಪಂಚಕೋಶಗಳಿಂದಲೂ, ಮನಸ್ಸೂ, ದಶೇಂದ್ರಿಯಗಳಿಂದಲೂ ಕೂಡಿರುವುದು. ಇಂತಹ ವಿಚಿತ್ರಕರವಾದ ಶರೀರವು ವ್ಯಾಮೋಹಕ್ಕೆಡೆಯಾಗಿ ಒಂದು ಯಂತ್ರದಂತೆ ವರ್ತಿಸುತ್ತಿರುವುದು.

13. ಮೇಲೆ ವರ್ಣಿಸಿದ ಈ ಶರೀರದಲ್ಲಿ ಒಂದು ಶಕ್ತಿವಿಶೇಷಹೊಂದಿದ ಜೀವಾತ್ಮನೆಂಬುವನು ಇದಾನೆ. ಈ ಜೀವಾತ್ಮನಿಗೆ ಅನಾದಿಸಿದ್ಧವಾದ ಅಜ್ಞಾನವೆಂಬುದು ಪ್ರಾಪ್ತವಾಗಿದೆ. ಇಂತಹ ಜೀವಾತ್ಮನು ಸತ್ವ, ರಜ ಮತ್ತು ತಮೋಗುಣಗಳಿಂದ ವ್ಯಾಪ್ತನಾಗಿ, ಆಯಾ ಗುಣಗಳನ್ನು ಹೊರಪಡಿಸಿ ತೋರಿಸುತ್ತಾ ವರ್ತಿಸುತ್ತಿರುವನು.

14. ಸ್ಫಟಿಕದಂತೆ ಹೊಳೆಯುತ್ತಿರುವ ಕಲ್ಲುಗಳ ಮುಂಭಾಗದಲ್ಲಿ ಹಸರು, ನೀಲಿ ಮುಂತಾದ ವಿವಿಧ ಬಣ್ಣವುಳ್ಳ ವಸ್ತುಗಳು ಬಂದರೆ ಆ ಬಣ್ಣಗಳೇ ಆ ಕಲ್ಲುಗಳಲ್ಲಿ ಪ್ರತಿಫಲಿಸಿ ತೋರುವಂತೆ, ಮೇಲೆ ಹೇಳಿದ ಪಂಚಕೋಶಗಳಿಂದ ಕೂಡಿರುವ ಜೀವಾತ್ಮನು, ಸ್ವಭಾವಸಿದ್ಧವಾದ ಯಾವಾದರೊಂದು ಗುಣಗಳಿಂದ ತೋರಿ ಪ್ರಕಾಶಿಸುವನು. (ಸಶೇಷ)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರಿತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಕಾಲದಲ್ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಪ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬರಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಹಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0.8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ತುರಿ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕು ಮದ್ದುಗಳೂ ಹೋಮಿಯೊಪಥಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[22] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಬಲ್ಲವರಾಗವಿಲ್ಲದೆ ಕುಳಿತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತರಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಅಪೂರ್ವತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[3] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ...	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶೃತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशिनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾ ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾ ಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆ ಇರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ ಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದು ಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮ ಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋ ಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿ ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಪ್ತ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ ರೆ:—ಪಿನಸಿ, ಒಂಟಿ ತಲೆನೋವು, ತಲೆಯ ಳ್ಳಿನ ರೋಗಗಳು ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ನೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೯-೦

ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[4] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಜನವರಿ ೧೯೩೩ [ಸಂಚಿಕೆ ೩೮

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮೈಸೂರು ಆಯುರ್ವೇದ ವೈದ್ಯಸಂಘ.

ಬಿಕಾನೇರ್ ರಾಜಧಾನಿಯಲ್ಲಿ ನಡೆದ 23ನೆಯ ನಿಖಿಲಭಾರತ ಆಯುರ್ವೇದ ಮಹಾಸಮ್ಮೇಳನಕ್ಕೆ ದಯಮಾಡಿಸಿ ಮೈಸೂರು ಸೀಮೆಗೆ ಕೀರ್ತಿಯನ್ನು ಸಂಪಾದಿಸಿಕೊಂಡುಬಂದ ಮೈಸೂರು ಗೌ|| ಆಯುರ್ವೇದಿಕ್ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಮತ್ತು ಆಯುರ್ವೇದಿಕ್ ಯುನಾನಿ ಕಾಲೇಜು ಪ್ರೊಫೆಸರ್ ಭಿಷಕ್ಶಿರೋಮಣಿ ಆಯುರ್ವೇದವಿದ್ವಾನ್ ಡಾ|| ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳವರಿಗೂ ಮತ್ತು ಆ|| ವಿ|| ಎನ್. ಎಲ್. ಭಟ್ಟಾಚಾರ್ಯರವರಿಗೂ ವೈದ್ಯಸಂಘದ ಮೆಂಬರುಗಳೆಲ್ಲರೂ ಸೇರಿ ಭಿಷಗ್ರತ್ನ ಆ|| ವಿದ್ವಾನ್ ಬಿ. ವಿ. ಪಂಡಿತರವರ ಅಧ್ಯಕ್ಷತೆಯಲ್ಲಿ ತಾ|| 22-1-33 ನೇ ದಿವಸ ಮಧ್ಯಾಹ್ನ 4 ಗಂಟೆಗೆ ಸರಿಯಾಗಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಡಾ|| ವೈ. ಎಲ್. ಶಾಸ್ತ್ರಿಗಳು ಮಹಾಸಮ್ಮೇಳನದಲ್ಲಿ ನಡೆದ ವಿಚಾರಗಳನ್ನೂ, ಇತರ ದೇಶಗಳಲ್ಲಿರತಕ್ಕ ಆಯುರ್ವೇದದ ಪ್ರಾಶಸ್ತ್ಯವಿಚಾರಗಳನ್ನೂ ಕುರಿತು ಸ್ಫುಟತರವಾಗಿ ಉಪನ್ಯಾಸಮಾಡಿದರು. ಮ|| ಎನ್. ಎಲ್. ಭಟ್ಟಾಚಾರ್ಯರು ಸಮ್ಮೇಳನದಲ್ಲಿದ್ದ ಕೆಲವು ಮೂಲಿಕೆಗಳ ಗುಣಪರಿಚಯಗಳನ್ನು ತಿಳಿಯಪಡಿಸಿದರು. ಅನಂತರ ಗೌ|| ಆ|| ಆಸ್ಪತ್ರೆಯ ಆಯುರ್ವೇದವಿದ್ವಾನ್ ಬಿ. ವಿ. ವೆಂಕಟೇಶಶಾಸ್ತ್ರಿಗಳು ವ್ಯಾಧಿಗಳ ಚಿಕಿತ್ಸೆಯ ವಿಷಯದಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಆಮೇಲೆ ಅಧ್ಯಕ್ಷ ಮಹಾಶಯರು ಸಮಯೋಚಿತವಾದ ಭಾಷಣವನ್ನು ಮಾಡಿ ಅಲ್ಲಿ ಸೇರಿದ್ದ ಪಂಡಿತಮಹಾಶಯರುಗಳಿಗೂ ವಿದ್ಯಾರ್ಥಿಗಳಿಗೂ ಬಹು ಸಂತೋಷವನ್ನುಂಟುಮಾಡಿದರು. ಆ|| ವಿದ್ವಾನ್ ಬಿ. ವಿ. ವೆಂಕಟೇಶಶಾಸ್ತ್ರಿಗಳು ಅಧ್ಯಕ್ಷ ಮಹಾಶಯರಿಗೂ ಡಾ|| ವೈ. ಎಲ್. ಶಾಸ್ತ್ರಿಗಳಿಗೂ ಮ|| ಎನ್. ಎಲ್. ಭಟ್ಟಾಚಾರ್ಯರಿಗೂ ಹಾರತುರಾಯಿಗಳನ್ನು ಒಪ್ಪಿಸಿ ಸಭಿಕರಿಗೆಲ್ಲಾ ಪುಷ್ಪ ತಾಂಬೂಲಗಳನ್ನು ವಿನಿಯೋಗಿಸಿದನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಒಳದೇಶದ ವೃತ್ತಾಂತಗಳು.

ಚಿತ್ರದುರ್ಗದ ಜೈನರದೇವಾಲಯಕ್ಕೆ ಕಳ್ಳರು ನುಗ್ಗಿ 1,100 ರೂ. ಗಳ ವಸ್ತ್ರಾಭರಣಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ.

ಶ್ರೀಮನ್ಮಹಾರಾಜರವರು ಕಲ್ಕತ್ತೆಯಲ್ಲಿ ಕಟ್ಟಲ್ಪಡುತ್ತಿರುವ ಇಂಜನಿಯರುಗಳ ಸಂಘದ ಕಟ್ಟಡಕ್ಕೆ 2000 ರೂಪಾಯಿಗಳನ್ನು ದಯಪಾಲಿಸಿರುತ್ತಾರೆ.

ಮೈಸೂರು ಸಂಸ್ಥಾನದ ಲಾಯರುಗಳ ಸಮ್ಮೇಳನವು ಏಪ್ರಿಲ್ 8 ನೇ ತಾರೀಖಿನ ದಿವಸ ಮಧುಗಿರಿಯಲ್ಲಿ ಪ್ರಾರಂಭವಾಗಿ 3 ದಿವಸಗಳವರೆಗೆ ನಡೆಯುವದು.

ಮೇಲುಕೋಟೆ ನರಸಿಂಹಮೂರ್ತಿ ಎಂಬ ಮಾಧ್ವಬ್ರಾಹ್ಮಣನು ತುಮುಕೂರಿನಲ್ಲಿ ರೋಮನ್ ಕ್ಯಾಥೋಲಿಕ್ ಪಾದ್ರಿಯ ಸ್ನೇಹಮಾಡಿ, ಕ್ರೈಸ್ತಮತವನ್ನವಲಂಬಿಸಿದನಂತೆ!

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ನಡೆಯುವ ಕುದುರೆ ಜೂಜುಗಳಲ್ಲಿ 'ಟೋಟ್' ಎಂಬ ಜೂಜಿನಿಂದ ವಸೂಲಾಗುವ ಹಣದ ಮೇಲೆ ಸರಕಾರದವರು ಶೇಕಡಾ ಎರಡುವರೆಯಂತೆ ಕಂದಾಯವನ್ನು ವಿಧಿಸಿರುತ್ತಾರೆ

ಕಳೆದ ಜನವರಿ 21 ನೇ ತಾರೀಖು ಶನಿವಾರ ಮಧ್ಯಾಹ್ನ ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಮ|| ರಾ|| ಬಿ. ಕುಪ್ಪುಸ್ವಾಮಿಯವರ ಮನೆಗೆ ಯಾರೋ ಕಳ್ಳರು ನುಗ್ಗಿ ಸುಮಾರು 800 ರೂಪಾಯಿಗಳ ಆಭರಣಾದಿಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಪೋಲೀಸರು ತನಿಖೆಮಾಡುತ್ತಿರುವರು.

ಕಳೆದ ಜನವರಿ ೨೦ ನೇ ತಾರೀಖಿನ ದಿವಸ ರಾತ್ರಿ ಬೆಂಗಳೂರು ದಂಡಿನಲ್ಲಿರುವ ಸ್ಟ್ಯಾಫೋರ್ಡ್‌ಷೈರ್ ರೆಜಿಮೆಂಟಿಗೆ ಸೇರಿದ 5 ಜನ ಇಂಗ್ಲೀಷ್ ಶಿಪಾಯಿಗಳು ದಂಡಿನ ಕೆಲವು ಕಡೆಗಳಲ್ಲಿ ಕಳ್ಳತನವನ್ನು ಮಾಡಿದ್ದಲ್ಲದೆ, ರಿವಾಲ್ವರುಗಳಿಂದ ಕೆಲವು ಜನರನ್ನು ಬೆದರಿಸಿದರೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾರೆ.

ಇದೇ ಜನವರಿ 11 ನೇ ತಾರೀಖಿನ ದಿವಸ ಎಡತೊರೆ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿರುವ ಆದಿಕರ್ನಾಟಕರ ಬೀದಿಗೆ ಅಕಸ್ಮಾತ್ ಬೆಂಕಿಬಿದ್ದು 7-8 ಮನೆಗಳು ಸುಟ್ಟು ಬೂದಿಯಾದವು. ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಈ ಅನಾಹುತದಿಂದ 500-600 ರೂಪಾಯಿಗಳು ನಷ್ಟವಾಗಿರುವದೆಂದೂ, ಮನೆಮಠಗಳನ್ನು ಕಳೆದುಕೊಂಡು ಶ್ರಮಪಡುತ್ತಿರುವ ಜನರ ಸಹಾಯಕ್ಕಾಗಿ ಗ್ರಾಮಪಂಚಾಯಿತಿ ಚೇರ್ಮನ್ನರಾದ ಮಿ|| ಬಿ. ಸುಬ್ಬರಾಯರು ವಿಶೇಷ ಶ್ರಮವಹಿಸಿ ಸ್ಥಳ ಪರಸ್ಥಳದ ಜನಗಳಿಂದ ಚಂದಾ ವಸೂಲ್ಮಾಡುತ್ತಿರುವರೆಂದೂ ತಿಳಿದುಬಂದಿದೆ.

ಇದೇ ಜನವರಿ 20 ನೇ ತಾರೀಖು ಶುಕ್ರವಾರ ರಾತ್ರಿ ತುಮುಕೂರಿನ ಪ್ರಮುಖ ವರ್ತಕರೂ, ಪ್ರಾಣಿದಯಾ ಪ್ರಚಾರಕಸಂಘದ ಮತ್ತು ವರ್ತಕಸಂಘದ ಅಧ್ಯಕ್ಷರೂ ಆದ ಡಿ. ಶಾಮರಾಜಪ್ಪನವರ 'ಶ್ರೀ ವರ್ಧಮಾನ' ಕಡಲೇಕಾಯಿ ಮತ್ತು ಭತ್ತದ ಮಿಲ್ಲಿಗೆ ಅಕಸ್ಮಾತ್ತಾಗಿ ಬೆಂಕಿಬಿದ್ದು, ಅಲ್ಲಿದ್ದ 20-22 ಸಾವಿರ ರೂಪಾಯಿಗಳ ಕಡಲೇ ಕಾಯಿಯೂ, ಸಾವಿರಾರು ಮೂಟೆ ಭತ್ತ ಮತ್ತು ಶೀಗೇಕಾಯಿಯೂ, 60-70 ಸಾವಿರ ರೂಪಾಯಿ ಬೆಲೆಬಾಳುವ ಯಂತ್ರಗಳೂ ಮತ್ತು ಕಟ್ಟಡವೂ ಸಹ ಸಂಪೂರ್ಣವಾಗಿ ಸುಟ್ಟುಹಾಳಾದವು. ಅತ್ಯಂತ ದೈವಭಕ್ತರೆಂದೂ, ದಯಾಳುಗಳೆಂದೂ ಸ್ವಾರ್ಥತ್ಯಾಗಿಗಳೆಂದೂ ಪ್ರಸಿದ್ಧಿ ಹೊಂದಿದ್ದ ಇವರಿಗೆ ವೃದ್ಧಾಪ್ಯದಲ್ಲಿ ಇಂತಹ ವಿಷಾದಕರವಾದ ಅನಾಹುತವು ಸಂಭವಿಸಿದುದಕ್ಕಾಗಿ ತುಮಕೂರಿನ ಪ್ರಜೆಗಳೆಲ್ಲರೂ ಚಿಂತಾಕ್ರಾಂತರಾಗಿರುವರು.

ಬಿಳಿಗಿರಿರಂಗನಬೆಟ್ಟದ ಕಡೆಯಿಂದ ತಪ್ಪಿಸಿಕೊಂಡು ಬಂದಿರುವ ಒಂದಾನೊಂದು ಚಿರತೆಯು ಚಾಮುಂಡೀಬೆಟ್ಟದಲ್ಲಿ ಸೇರಿಕೊಂಡು ರಾತ್ರಿಯ ವೇಳೆಯಲ್ಲಿ ಬೆಟ್ಟದಲ್ಲಿಯೂ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿಯೂ ಒಂಟಿಯಾಗಿ ಸಿಕ್ಕುವ ದನ, ಕರು, ನಾಯಿ ಮೊದಲಾದ ಪ್ರಾಣಿಗಳನ್ನು ಕೊಂದು ರಾಜಧಾನಿಯ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಬೆಟ್ಟದ ಸಮೀಪದಲ್ಲಿ ವಾಸಮಾಡುವ ಜನರಿಗೆ ತುಂಬಾಗಾಬರಿಯನ್ನುಂಟುಮಾಡಿರುವದು. ಕೆಲವುದಿವಸಗಳಹಿಂದೆ ಲಕ್ಷ್ಮೀಪುರದಲ್ಲಿರುವ ಒಂದಾನೊಂದು ಬಂಗಲೆಗೆ ನುಗ್ಗಿ ಅಲ್ಲಿದ್ದ ಒಂದು ನಾಯಿಯನ್ನೂ, ಮತ್ತೊಂದು ದಿವಸ ಚಾಮುಂಡಿ ಎಕ್ಸ್‌ಟೆನ್ಷನ್ನಿನಲ್ಲಿ ಒಂದು ಕುದುರೆಯನ್ನೂ ಕೊಂದುಹಾಕಿತೆಂದೂ, ಈ ಚಿರತೆಯನ್ನು ಕೊಲ್ಲುವದಕ್ಕಾಗಿ ಶ್ರೀಮನ್ಮಹಾರಾಜರವರು 4 ಜನ ಶಿಪಾಯಿಗಳನ್ನು ನೇಮಿಸಿರುವರೆಂದೂ ತಿಳಿದುಬಂದಿದೆ.

ಬೆಂಗಳೂರು ನಗರದಲ್ಲಿ 80,000 ರೂಪಾಯಿಗಳ ವೆಚ್ಚದಿಂದ ಒಂದು ಪಶುವೈದ್ಯಶಾಲೆಯನ್ನು ಕಟ್ಟಿಸಬೇಕೆಂದು ದಿವಾನ್ ಬಹದೂರ್ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರವರೇ ಮೊದಲಾದ ಪ್ರಜಾಪ್ರಮುಖರು ಪ್ರಯತ್ನಿಸುತ್ತಿರುವರು. ಇದಕ್ಕಾಗಿ ದಿವಾನರವರು ರಾಜಾಸಿಂಗ್ ಪೇಟೆಯ ಸಮೀಪದಲ್ಲಿ 30,000 ರೂಪಾಯಿ ಬೆಲೆಯಾಗುವ ದೊಡ್ಡ ನಿವೇಶನವನ್ನು ಕೊಡಿಸಿರುವರು. ಮ|| ರಾ|| ಕೃಷ್ಣರಾವ್ ಸಿಂಧೆಯವರು ತಮ್ಮ ತಂದೆಯವರಾದ ಮ|| ರಾ|| ಮುತ್ತೋಜಿರಾವ್ ಸಿಂಧೆಯವರ ಹೆಸರಿನಲ್ಲಿ 10,000 ರೂಪಾಯಿಗಳನ್ನು ಕೊಡುವದಾಗಿಯೂ, ಪ್ರಾಣಿದಯಾಪರರಾದ ಅನೇಕ ಜನ ಶ್ರೀಮಂತರು 30,000 ರೂಪಾಯಿಗಳ ವೆಚ್ಚದಿಂದ ಕಟ್ಟಡದ ಕೆಲವು ಭಾಗಗಳನ್ನು ಕಟ್ಟಿಸಿಕೊಡುವುದಾಗಿಯೂ ವಾಗ್ದಾನ ಮಾಡಿರುತ್ತಾರೆ. ಮುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರೂ ಸಹ ಸ್ವಲ್ಪಮಟ್ಟಿಗೆ ಸಹಾಯಮಾಡುವರು. ಕಮಿಟಿಯವರು ಇದಕ್ಕಾಗಿ ಒಂದು ಫಂಡನ್ನು ಕೂಡಿಸಲು ಪ್ರಾರಂಭಿಸಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪತಿವ್ರತಾಧರ್ಮ.

10-2-69

~~(ಲೇಖಕಿ—ಮುಂಡರಗಿ [illegible] ದಾವಣಗೆರೆ)~~

ಸ್ತ್ರೀಯರೇ! ಈ ಸಂಸಾರದಲ್ಲಿ ಮನುಷ್ಯರು ಚಿರಕಾಲವಿರುವಂತಿಲ್ಲ. ಹಾ! ಹಾ! ಅನ್ನುವದರೊಳಗಾಗಿ ಅವರ ದಿವಸಗಳು ಒತ್ತರದಿಂದ ಹೊರಟುಹೋಗುತ್ತವೆ. ಕೆಲವು ಕಾಲದ ಹಿಂದೆ ನೀವು ಬಾಲ್ಯಾವಸ್ಥೆಯಲ್ಲಿದ್ದಿರಿ; ಈಗ ನಿಮಗೆ ತಾರುಣ್ಯವು ಪ್ರಾಪ್ತವಾಗಿದೆ. ಮುಂದೆ ಕೆಲಕಾಲದನಂತರ ಮುಪ್ಪು ಬರುವದು. ಅಲ್ಲಿಯವರೆಗಾದರೂ ನೀವು ಇರುವಿರೋ ಅಥವಾ ಇಲ್ಲವೋ ಹೇಳಲಿಕ್ಕೆ ಬರುವಂತಿಲ್ಲ. ಇದರಂತೆಯೇ ಈ ಸಂಸಾರದ ಸುಖದುಃಖಗಳ ಸ್ಥಿತಿಯಿರುವುದು. ನಿನ್ನೆ ಅನುಭೋಗಿಸಿದ ಸುಖವು ಇಂದು ಇರುವಂತಿಲ್ಲ. ಅದರಂತೆಯೇ ಇಂದು ಅನುಭವಿಸುವ ಸುಖವು ನಾಳಿನವರೆಗೆ ಇರಲಾರದು. ಆದರೆ ಧರ್ಮವು ಮಾತ್ರ ಸರ್ವದಾ ನಿಮ್ಮ ಬಳಿಯಲ್ಲಿಯೇ ಸ್ಥಿರವಾಗಿ ಉಳಿಯುವುದು. ಅದು ನಿಮ್ಮನ್ನು ಬಿಟ್ಟು ಎಲ್ಲಿಯೂ ಎಂದೂ ಹೋಗುವುದಿಲ್ಲ. ಇಂದಿನವರೆಗೆ ನೀವು ಮಾಡಿದ ಧರ್ಮಕಾರ್ಯಗಳ ಫಲವೇ ಈಗ ನಿಮ್ಮಲ್ಲಿ ಉಳಿದಿರುವುದು. ಮತ್ತು ಮುಂದೆ ಮಾಡುವವರ ಫಲವಾದರೂ ನಿಮ್ಮ ಅಂತದಲ್ಲಿ ಏಕತ್ರವಾಗುವದು. ನೀವು ಸತ್ತಮೇಲೆ ಧರ್ಮವೊಂದೇ ನಿಮ್ಮ ಸಂಗಡ ಬರುವದು ಮತ್ತು ಅದೇ ಪರಲೋಕದಲ್ಲಿ ನಿಮಗೆ ಅಕ್ಷಯಸುಖವನ್ನು ಕೊಡುವದು. ಇಂಥ ಸುಖವನ್ನು ಪಡೆಯುವದೇ ಮನುಷ್ಯಜನ್ಮದ ಮುಖ್ಯ ಕರ್ತವ್ಯವು. ಇದಕ್ಕಾಗಿಯೇ ಅನೇಕ ಸಾಧುಸತ್ಪುರುಷರು ತೀರ್ಥಯಾತ್ರೆಗಳಲ್ಲಿಯೂ, ವ್ರತೋಪವಾಸಗಳಲ್ಲಿಯೂ, ಕಠಿಣವಾದ ತಪಶ್ಚರ್ಯದಲ್ಲಿಯೂ, ತಮ್ಮ ಇಡೀ ಆಯುಷ್ಯವನ್ನೇ ಕಳೆಯುವರು. ಸುದೈವಿಗಳಾದ ಸ್ತ್ರೀಯರೇ! ನಿಮಗೆ ಮಾತ್ರ ಅವರಂತೆ ಕ್ಷೇತ್ರಯಾತ್ರೆಗಳಿಗೆ ಹೋಗುವಕಾರಣವಿಲ್ಲ. ಮತ್ತು ಅರಣ್ಯವನ್ನು ಸೇರಿ ತಪಶ್ಚರ್ಯವನ್ನೂ ಮಾಡಬೇಕಾಗಿಲ್ಲ. ಈ ಸಂಸಾರವೇ ನಿಮ್ಮ ತಪಸ್ಸಿನ ಸ್ಥಾನವು, ಇದೇ ನಿಮ್ಮ ಪುಣ್ಯಕ್ಷೇತ್ರವು. ಪತಿಸೇವೆಯೇ ನಿಮ್ಮ ಶ್ರೇಷ್ಠ ತಪಶ್ಚರ್ಯವು. ನೀವು ಅಬಲೆಯರಾದುದರಿಂದ ನಿಮ್ಮ ಶ್ರಮವನ್ನು ಉಳಿಸುವದಕ್ಕಾಗಿಯೇ ದೇವರು ಈ ಪ್ರತ್ಯಕ್ಷಪುರುಷನಿಂದವನ್ನು ನಿಮ್ಮ ಸ್ವಾಧೀನಪಡಿಸಿದ್ದಾನೆ. ಅದೇ ನಿಮ್ಮ ದೇವರು. ನೀವು ಆನಂದದಿಂದ ಪತಿಸೇವಾಸಕ್ತರಾದರೆ ನಿಮಗೆ ನಿಮ್ಮ ಪತಿದೇವನು ಒಲಿಯುವನು. ಅದರಿಂದ ನೀವು ಆತನೊಡನೆ ಅನಂತಕಾಲ ಸ್ವರ್ಗಸುಖವನ್ನು ಅನುಭವಿಸುವಿರಿ. ಆದಕಾರಣ ಪತಿಹಿತಕ್ಕಾಗಿ ಪ್ರಸಂಗಬಂದರೆ ಪ್ರಾಣವನ್ನು ಸಹ ಕೊಡುವದೂ ಅಥವಾ ಪತಿಹಿತಸಾಧನದಲ್ಲಿಯೇ ಯಾವಾಗಲೂ ಮಗ್ನರಾಗಿರುವದೂ ನಿಮ್ಮ ಪವಿತ್ರಕರ್ತವ್ಯವೆಂದು ತಿಳಿದು ಸಂಸಾರದಲ್ಲಿ ನೀವು ಆತನ ಕೂಡ ವರ್ತಿಸಬೇಕು. ಈ ಬಗ್ಗೆ ಅವಶ್ಯವಾದ ಕೆಲವು ಮಾತುಗಳನ್ನು ಹೇಳುವೆನು ಕೇಳಿರಿ. ಸ್ತ್ರೀಯರೇ, ಪತಿಸೇವೆಯ ಮಹತ್ವವು ನಿಮಗೆ ಗೊತ್ತಾದರೆ ಅದಕ್ಕಾಗಿ ನೀವು ಬೇಕಾದುದನ್ನು ಮಾಡಬಹುದು. ಪತಿವ್ರತೆಯು ಅದರ ಫಲವನ್ನು ಪೂರ್ಣ ನರಿಗೆಂಡದ್ದರಿಂದ ಪ್ರಸಂಗದಲ್ಲಿ ಪತಿಗಾಗಿ ಪ್ರಾಣವನ್ನು ಸಹ ಕೊಡಲಿಕ್ಕೆ ಅಂಜುವದಿಲ್ಲ. ಮತ್ತು ದುಷ್ಟಜನರು ಅವಳನ್ನು ಬೇಕಾದಷ್ಟು ದೂಷಿಸಿದರೂ ಅವರ ಕಪಟದ ಮಾತಿಗೆ ಮರುಳಾಗಿ ತನ್ನ ನಿಶ್ಚಯವನ್ನು ಬಿಡುವದಿಲ್ಲ. ತನ್ನ ಆಯುಷ್ಯವೆಲ್ಲಾ ಪತಿಸೇವೆಗಾಗಿಯೇ ಇರುವುದೆಂದೂ, ಅದಕ್ಕಾಗಿಯೇ ದೇವರು ತನ್ನನ್ನು ಸ್ತ್ರೀಧರ್ಮಕ್ಕೆ ಹಾಕಿರುವನೆಂದೂ ಅವಳು ತಿಳಿಯುವಳು. ಮತ್ತು ತಪ್ಪದೆ ಅದರಂತೆ ಆಚರಿಸುವಳು. ಪತಿಸೇವೆಯಿಂದ ತನಗೆ ತಿರುಗಿ ಏನಾದರೂ ಫಲವು ಸಿಗಬೇಕೆಂಬ ಅಪೇಕ್ಷೆಯು ಅವಳ ಕನಸುಮನಸಿನಲ್ಲಿ ಸಹ ಬರುವದಿಲ್ಲ. ಆದರೆ ಅವಳ ಆನಂದವೆಲ್ಲ ಪತಿಸೇವೆಯಲ್ಲಿಯೇ ಇರುವದು. ಇಂತಹ ಸಾಧ್ವೀಶಿರೋಮಣಿಗಳ ಪತಿಸೇವೆಯ ಫಲವನ್ನು ವರ್ಣಿಸುವುದು ಅಶಕ್ಯವೇ ಆಗಿರುವದು.

ಪ್ರಾಚೀನಗ್ರಂಥಗಳನ್ನು ನೋಡಿದರೆ ಎಷ್ಟೋ ಸ್ತ್ರೀಯರ ಪಾತಿವ್ರತ್ಯದ ವಿಷಯಕ್ಕೆ ಆಶ್ಚರ್ಯವೆನಿಸುತ್ತದೆ! ಕೆಲವು ಪತಿವ್ರತೆಯರು ಭಯಂಕರವಾದ ವ್ಯಸನದಲ್ಲಿ ಮುಳುಗಿದ ತಮ್ಮ ಪ್ರಾಣಪತಿಗಳನ್ನು ಸಂಕಟದೊಳಗಿಂದ ಮುಕ್ತಮಾಡಿದ್ದಾರೆ. ಇಂಥ ಸಾಧ್ವಿಗಳ ಅಗಾಧವಾದ ದುಃಖಸ್ಥೈರ್ಯವನ್ನೂ, ದೃಢನಿಶ್ಚಯವನ್ನೂ ಕಂಡು ಅನೇಕ ಋಷಿಮುನಿಗಳು ಸಹ ಅವರನ್ನು ಪೂಜ್ಯರೆಂದು ತಿಳಿಯುತ್ತಿದ್ದಾರೆ. ಮತ್ತು ನಾನು ನೀನು ಅನ್ನುವಂತಹ ಬಲಾಢ್ಯರ ಗರ್ವವು ಸಹ ನಿಷ್ಫಲವಾಗಿದೆ. ಅಬಲೆಯರೇ ರಾಮಾಯಣವನ್ನು ತುಸು ನೆನಪುಮಾಡಿಕೊಳ್ಳಿರಿ. ಲಂಕಾಧಿಪತಿಯಾದ ರಾವಣನು ತನ್ನ ಅತುಲಪರಾಕ್ರಮದಿಂದ ತ್ರಿಲೋಕಗಳನ್ನು ಗೆದ್ದು ದೇವತೆಗಳನ್ನು ಸಹ ತನ್ನ ಮನೆಯ ದಾಸಾನುದಾಸರನ್ನಾಗಿ ಮಾಡಿಕೊಂಡನು. ಆದರೆ ಒಬ್ಬ ಸಾಧ್ವೀಮಣಿಯಾದ ಸೀತೆಯನ್ನು ಅವನಿಂದ ಗೆಲ್ಲುವದಾಗಲಿಲ್ಲ ನೋಡಿರಿ? ಸ್ತ್ರೀಯರೇ, ಪತಿಸೇವಾಧರ್ಮಬಲವು ಎಷ್ಟು ದೊಡ್ಡದಿರುವುದು? ದಮಯಂತಿಗೆ ಎಂತಹ ಸಂಕಟಬಂದಿತು? ನಳಭೂಪಾಲನು ಘೋರಾರಣ್ಯದಲ್ಲಿ ಅವಳೊಬ್ಬಳನ್ನೇ ಬಿಟ್ಟು ಹೋದಾಗ್ಯೂ ಅವಳ ಪತಿಪರಾಯಣಭಕ್ತಿಯು ಲೇಶವಾದರೂ ಕಡಿಮೆಯಾಯಿತೇನು? ಅವಳು ಎಷ್ಟೋ ಪ್ರಯತ್ನದಿಂದಲೂ, ಚಾತುರ್ಯದಿಂದಲೂ ಸಂಕಟದಿಂದ ಪಾರಾಗಿ ತಿರುಗಿ ತನ್ನ ಪತಿಸೇವಾತತ್ಪರಳಾದಳು. ಸತಿಸಾವಿತ್ರಿಯು ಪತಿಯು ಮರಣವಾದರೂ ಆತನನ್ನು ತ್ಯಾಗಮಾಡಿದಳೇನು? ಇದರಂತೆ ಅತ್ರಿಋಷಿಯ ಹೆಂಡತಿಯಾದ ಅನಸೂಯೆಯು ತನ್ನ ಪಾತಿವ್ರತ್ಯದ ಪ್ರಭಾವದಿಂದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಬಾಲಕರನ್ನಾಗಿ ಮಾಡಲಿಲ್ಲವೇ? ಈ ಪತಿವ್ರತಾಶಿರೋಮಣಿಗಳು ಈ ಭೂತಳದಲ್ಲಿ ಜನ್ಮವೆತ್ತಿ ತಮ್ಮ ನಿರ್ಮಲವಾದ ಕೀರ್ತಿಯನ್ನು ಅಜರಾಮರವಾಗುವಂತೆ ಮಾಡಿದ್ದಾರೆ. ಇಂಥ ಸತಿಯರ ಸತ್ಯನಿಷ್ಠೆಯ ಮುಂದೆ ದೊಡ್ಡ ದೊಡ್ಡ ಋಷಿಗಳು ಸಹ ಕೈಯೂರಿದ್ದಾರೆ. ಪತಿವ್ರತೆಯರ ಪವಿತ್ರವಾದ ಆಚರಣೆಯಿಂದಲೇ ನಾನು ಪವಿತ್ರಳಾಗುವೆನೆಂದು ಭೂದೇವಿಯು ಹೇಳಿರುವಳು. ಸೂರ್ಯಚಂದ್ರರು ಸಹ ತಮ್ಮ ಕಿರಣಗಳು ಪತಿವ್ರತೆಯರನ್ನು ಸೋಂಕಿದರೆ ತಾವು ಪಾವನರೆಂದು ತಿಳಿಯುವರು.

ಈ ಪ್ರಕಾರ ಸ್ತ್ರೀಯರು ಪತಿಸೇವೆಯಿಂದ ತಮ್ಮ ಧರ್ಮತೇಜದ ಬಲವನ್ನು ಕಲ್ಪನಾತೀತವಾಗುವಷ್ಟು ಬೆಳೆಸಿದ್ದಾರೆ. ಆದುದರಿಂದ ಯಾವಳು ಪತಿವ್ರತೆಯೋ ಅವಳೇ ನಿಜವಾದ ಗೃಹಿಣಿ ಅಂದರೆ ಭಾರ್ಯೆ ಎನಿಸುವಳು. ಸ್ತ್ರೀಯರೇ! ಪತಿವ್ರತೆಯರ ಪತಿಸೇವೆಯ ಪ್ರತಾಪವನ್ನು ಕೇಳಿದ ಮಾತ್ರದಿಂದಲೇ ಕೆಲಸವಾಗಲಿಲ್ಲ; ಅವರ ಸದಾಚರಣೆಯ ಅನುಕರಣವನ್ನು ನೀವು ಮಾಡಲಿಕ್ಕೆ ಬೇಕು. ಗಂಡನಿಗೆ ತಿಳಿಸದೆ ಯಾವ ಕೆಲಸವನ್ನೂ ಮಾಡಬಾರದು. ಇದು ಉತ್ತಮಪತ್ನಿಯರಲ್ಲಿರಬೇಕಾದ ಗುಣಗಳಲ್ಲಿ ಒಂದಾಗಿದೆ. ಯಾವ ಸ್ತ್ರೀಯು ತನ್ನ ಮನೋವಾಞ್ಛೆಗಳನ್ನು ಸ್ವಾಧೀನಪಡಿಸಿಕೊಂಡು ಒಂದು ಸಣ್ಣ ಕೆಲಸವನ್ನು ಸಹ ಪತಿಯ ಅಪ್ಪಣೆಯಿಲ್ಲದೆ ಮಾಡುವುದಿಲ್ಲವೋ ಅವಳೇ ಸಾಧ್ವಿ ಎಂದು ಮನುವು ಹೇಳಿದ್ದಾನೆ. ಅದ್ದರಿಂದ ಪತಿಯ ಆಜ್ಞೆಯನ್ನು ಮೀರುವದೆಂದರೆ ಸಂಕಟವನ್ನು ಸ್ವಾಗತಮಾಡಿದಂತೆಯೇ ಎಂದು ತಿಳಿಯತಕ್ಕದ್ದು.

ಪತಿಯೇ ನಿಮಗೆ ದೇವರು. ಆತನ ಹೊರತು ನಿಮಗೆ ಬೇರೆ ಗತಿಯಿಲ್ಲ. ಆದಕಾರಣ ಆತನ ಮಾತಿನಲ್ಲಿಯೂ ಕೃತಿಯಲ್ಲಿಯೂ ನೀವು ಸಂಪೂರ್ಣವಿಶ್ವಾಸವಿಡಲಿಕ್ಕೆ ಬೇಕು. ಪತಿಪತ್ನಿಯರ ಸಂಬಂಧದಲ್ಲಿ ಪ್ರೇಮವೇ ಮುಖ್ಯವಿದ್ದು ಅದಕ್ಕೆ ವಿಶ್ವಾಸವೇ ಮೂಲಕಾರಣವಾಗಿರುವದು. ಅದ್ದರಿಂದ ನಿಮ್ಮ ಗಂಡಂದಿರಿಗೆ ನಿಮ್ಮ ವಿಷಯದಲ್ಲಿ ತುಸು ಸಂಶಯಬಂದರೆ ಸಾಕು, ಅದರಿಂದ ನಿಮ್ಮ ಜನ್ಮದ ಸುಖವೇ ನಾಶವಾಯಿತೆಂದು ತಿಳಿಯಬೇಕು. ಅಂತೆಯೇ ಉತ್ತಮಸ್ತ್ರೀಯರು ತಮ್ಮ ನಡೆನುಡಿಗಳಲ್ಲಿಯೂ ಮಾಡುವ ಕಾರ್ಯಗಳಲ್ಲಿಯೂ ಎಳ್ಳಷ್ಟು ಸಹ ಸಂಶಯಕ್ಕೆ ಆಸ್ಪದ ಸಿಗದಂತೆ ಶುದ್ಧಾಚರಣೆಯಿಂದ ಆಚರಿಸುವರು. ಸ್ತ್ರೀಯರೇ! ನಿಮ್ಮ ಆಚರಣೆಯಲ್ಲಾದರೂ ನಿಮ್ಮ ಗಂಡಂದಿರಿಗೆ ಸಂಶಯಕ್ಕೆ ಆಸ್ಪದ ಸಿಗದಂತೆ ಜಾಗ್ರತರಾಗಿರಬೇಕು. ಅವರು ಏನಾದರೊಂದು ಗುಪ್ತಸಂಗತಿಯನ್ನು ನಿಮ್ಮ ಮುಂದೆ ಹೇಳಿದರೆ ನೀವು ಅದನ್ನು ಹೊರಪಡಿಸುವಿರೆಂಬ ಭೀತಿಯು ಅವರಲ್ಲುಂಟಾಗದಂತೆ ವರ್ತಿಸಬೇಕು. ನಿಮ್ಮ ಕೈಯಲ್ಲಿ ಹಣವನ್ನು ಕೊಟ್ಟರೆ ನೀವು ಅದನ್ನು ದುರುಪಯೋಗಪಡಿಸಬಹುದೆಂಬ ಭೀತಿಯು ಅವರ ಮನಸ್ಸಿನಲ್ಲಿ ಹುಟ್ಟದಂತೆ ವರ್ತಿಸಬೇಕು. ಗಂಡನಿಗೆ ಎಲ್ಲಾ ರೀತಿಯಿಂದಲೂ ವಿಧೇಯತೆಯಿಂದ ವರ್ತಿಸುವದೇ ಉತ್ತಮಪತ್ನಿಯ ಲಕ್ಷಣವಾಗಿರುವುದು. ಅದ್ದರಿಂದ ನೀವು ನಿಮ್ಮ ಗಂಡಂದಿರಿಗೆ ಹಿತವಾದದ್ದೇ ನಿಮಗೆ ಹಿತಕರವೆಂತಲೂ ಅವರ ಸುಖವೇ ನಿಮ್ಮ ಸುಖವೆಂತಲೂ ತಿಳಿಯತಕ್ಕದ್ದು. ಅವರ ಮನಸ್ಸಿಗೆ ಬಾರದ ಕೆಲಸವನ್ನು ನೀವು ಮನಸ್ಸಿನಲ್ಲಿ ಸಹ ತರಬೇಡಿರಿ. ಅವರಿಗೆ ಸೇರದಿದ್ದ ವಸ್ತ್ರಗಳನ್ನೂ ಅಲಂಕಾರಗಳನ್ನೂ ಹಾಕಿಕೊಳ್ಳಬೇಡಿರಿ. ಹೆಚ್ಚೇನು! ಅವರಿಗೆ ಸೇರದ ತಿಂಬುಂಬುವ ಪದಾರ್ಥಗಳನ್ನು ಸಹ ನೀವು ವರ್ಜ್ಯಮಾಡತಕ್ಕದ್ದು. ಅಗಸ್ತ್ಯಋಷಿಯ ಹೆಂಡತಿಯಾದ 'ಲೋಪಾಮುದ್ರೆಯು' ಒಬ್ಬ ರಾಜನ ಮಗಳು. ಅಗಸ್ತ್ಯಋಷಿಯ ಐಶ್ವರ್ಯವೆಲ್ಲ ಮುತ್ತುಗದದಂಡ, ಕಮಂಡಲು, ನಾರುಬಟ್ಟೆಗಳು, ತರಗಿನ ಗುಡಿಸಲು ಇವು ಹೊರತು ಇನ್ನೇನೂ ಇರಲಿಲ್ಲ. ಲೋಪಾಮುದ್ರೆಯು ಈ ಋಷಿಯನ್ನು ವಿವಾಹವಾದ ಕೂಡಲೇ ತನ್ನ ತಂದೆಯು ಕೊಟ್ಟಿದ್ದ ಅಮೂಲ್ಯವಾದ ವಸ್ತ್ರಾಭರಣಗಳನ್ನು ತ್ಯಜಿಸಿ ತನ್ನ ಪತಿಯಸ್ಥಿತಿಗೆ ಅನುರೂಪವಾದ ನಾರುಬಟ್ಟೆಯನ್ನು ಉಟ್ಟುಕೊಂಡು ಸಕಲ ರಾಜಭೋಗಗಳ ವಿಷಯದಲ್ಲಿ ನಿಸ್ಪೃಹಳಾಗಿ ತನ್ನ ಗಂಡನ ಹಿಂದೆಯೇ ಸಿಂಹ, ಹುಲಿ ಮೊದಲಾದ ದುಷ್ಟಮೃಗಗಳಿಂದ ಭಯಂಕರವಾದ ಅರಣ್ಯದಲ್ಲಿ ವಾಸಮಾಡುವದಕ್ಕೆ ಹೊರಟುಹೋದಳು. ಪ್ರಾಚೀನಗ್ರಂಥಗಳನ್ನು ಓದಿದರೆ ಉದಾಹರಣೆಗಳು ನಿಮಗೆ ಎಷ್ಟೋ ಗೊತ್ತಾಗುವವು.

ಗಂಡನಿಗೆ ಮುಚ್ಚುಮರೆಮಾಡುವುದು ಉತ್ತಮ ಪತ್ನಿಯರ ಲಕ್ಷಣವಲ್ಲ. ಅದ್ದರಿಂದ ನೀವು ನಿಮ್ಮ ಗಂಡಂದಿರಿಗೆ ತಿಳಿಸಲಿಕ್ಕೆ ಬಾರದ ಕೆಲಸಗಳನ್ನು ಎಂದೂ ಮಾಡಬಾರದು. ಮತ್ತು ಅವರಿಗೆ ಹೇಳಬಾರದಂತಹ ವಿಚಾರಗಳನ್ನು ಮನಸ್ಸಿನಲ್ಲಿಯೇ ತರಬಾರದು. ನಿಮ್ಮೊಡನೆ ಗಂಡಂದಿರು ಹೇಳಿದ ಗೋಪ್ಯನುಡಿಗಳನ್ನು ನೀವು ಯಾರಮುಂದೆಯೂ ಆಡಬಾರದು. ಏನಾದರೂ ಕಾರಣದಿಂದ ಗಂಡಂದಿರು ನಿಮ್ಮ ಕೂಡ ಪ್ರೀತಿಯಿಂದ ನಡೆದುಕೊಳ್ಳದಿದ್ದರೆ ಆ ಸಂಬಂಧದಿಂದ ನೆರೆಹೊರೆಯವರೆದುರಿನಲ್ಲಿ ನೀವು ಒಂದು ಚಕಾರಶಬ್ದವನ್ನು ಸಹ ಉಚ್ಚರಿಸಕೂಡದು. ಪತಿಪತ್ನಿಯರಲ್ಲಿಯ ಗುಟ್ಟು ಬೈಲಿಗೆಬಂದರೆ ಸಂಸಾರದಲ್ಲಿಯ ಸುಖವು ದಿನದಿನಕ್ಕೆ ಕಡಿಮೆಯಾಗುವದೆಂಬುದನ್ನು ನೀವು ನೆನಪಿನಲ್ಲಿಡಬೇಕು. ಅದ್ದರಿಂದ ನಿಮಗಾಗುವ ದುಃಖವನ್ನು ಯಾರಿಗೂ ಹೇಳದೆ ಸಮಾಧಾನದಿಂದ ಸಹಿಸಿಕೊಂಡು ಪತಿಯೊಡನೆ ಪ್ರೀತಿಯಿಂದಲೂ ಸಹನಶೀಲತೆಯಿಂದಲೂ ನಡೆದು ಆತನ ಪ್ರೀತಿಗೆ ಪಾತ್ರರಾಗುವುದು ನಿಮ್ಮ ಕರ್ತವ್ಯವಾಗಿದೆ. ಉತ್ತಮಸ್ತ್ರೀಯು ತನ್ನ ಗಂಡನಿಗೆ ಏನಾದರೂ ಕಾರಣದಿಂದ ಸಿಟ್ಟುಬಂದರೆ ಆತನ ಮೇಲೆ ತಿರುಗಿ ಸಿಟ್ಟಿನಿಂದ ಹಾರಿಯದೆ ಆತನನ್ನು ಸಮಾಧಾನಪಡಿಸುವುದಕ್ಕೆ ಮಧುರಾಲಾಪದಿಂದ ಪ್ರಯತ್ನಮಾಡುವಳು. ಹೀಗಾಗಿಯೇ ಪತಿಯ ಮೇಲೆ ಎಂದೂ ಯಾವಕಾರಣದಿಂದಲೂ ಸಿಟ್ಟಾಗಬಾರದು. ಒಂದುವೇಳೆ ಅವರು ಸಿಟ್ಟಿಗೆದ್ದರೂ ಸವಿಮಾತಿನಿಂದಲೂ ಶಾಂತತೆಯಿಂದಲೂ ಆತನ ಸಿಟ್ಟನ್ನು ಶಾಂತಮಾಡಬೇಕು. ಹೀಗೆ ಮಾಡದೆ ತಿರುಗಿ ಸಿಟ್ಟಿಗೆದ್ದು ಬಾಧಿಸಹತ್ತಿದರೆ ಪರಸ್ಪರ ಕಲಹವುಂಟಾಗಿ ಪ್ರೀತಿಯು ಹಾರಿಹೋಗುವ ಸಂಭವವುಂಟು. ಶ್ರೀರಾಮನು ಗರ್ಭಿಣಿಯಾದ ಸೀತಾದೇವಿಯನ್ನು ನಿಷ್ಕಾರಣವಾಗಿ ಅರಣ್ಯದಲ್ಲಿ ಬಿಟ್ಟರೂ ಅವಳು ಆತನ ಮೇಲೆ ಸಿಟ್ಟಾದಳೇನು? ಇಷ್ಟೇ ಅಲ್ಲ ಆತನಲ್ಲಿಟ್ಟ ಆಕೆಯ ಭಕ್ತಿಯು ಕಿಂಚಿತ್ತಾದರೂ ಕಡಿಮೆಯಾಗಲಿಲ್ಲ; ಇದರಂತೆ ನಳನು ವೈರಾಗ್ಯದಿಂದ ದಮಯಂತಿಗೆ ವಿಶ್ವಾಸಘಾತಮಾಡಿ ಭಯಂಕರವಾದ ವನದಲ್ಲಿ ನಿರಾಧಾರಸ್ಥಿತಿಯಲ್ಲಿ ಬಿಟ್ಟಾಗ್ಯೂ ಅವಳಲ್ಲಿಯ ಪತಿಪ್ರೇಮವು ಕಡಿಮೆಯಾಯಿತೇನು? ಇದೆಂಥ ಮನೋನಿಗ್ರಹವು? ನಿಜವಾಗಿ ಇಂಥ ಸಾಧ್ವಿಯರೇ ಧನ್ಯರು! ಉತ್ತಮಸ್ತ್ರೀಯರು ಸ್ವಭಾವಿಕವಾಗಿ ನಗೆಮೋರೆಯವರೂ ಸವಿಮಾತುಗಾರರೂ ಆಗಿರುತ್ತಾರೆ. ತೋಟದಲ್ಲಿ ಅರಳಿದ ಹೂಗಳಿಂದಲೂ ಕೋಗಿಲೆಯ ಇಂಪಾದಸ್ವರದಿಂದಲೂ ಆನಂದವಾಗುವಂತೆ ಮನೆಯಲ್ಲಿ ಹೆಂಡತಿಯ ನಗೆಮುಖದಿಂದಲೂ ಆಕೆಯ ಸವಿಮಾತಿನಿಂದಲೂ ಗಂಡನಿಗೆ ಆನಂದವಾಗುತ್ತದೆ. ಹೀಗಿದ್ದರೆ ಮಾತ್ರ ಮನೆಯು ಅವನಿಗೆ ವಿಶ್ರಾಂತಿಸ್ಥಾನವೆನಿಸುವದು, ಇಲ್ಲದಿದ್ದರೆ ಸ್ಮಶಾನಸಮಾನವೇ ಸರಿ. ಸ್ತ್ರೀಯರೇ! ನಿಮ್ಮ ಗಂಡಂದಿರು ನಿಮ್ಮ ಸಲುವಾಗಿ ಹಸಿವೆ ನೀರಡಿಕೆಗಳನ್ನು ಬಿಟ್ಟು ಚಳಿ ಮಳೆ ಬಿಸಿಲುಗಾಳಿಗಳೆನ್ನದೆ ದೈನ್ಯಮುರಿದು ದುಡಿದುಮನೆಗೆ ಬಂದಿರಲು ಅವರಿಗೆ ನಿಮ್ಮ ಸಕ್ಕರೆಬೆರೆದ ನೀರುಬೇಕಾಗಿಲ್ಲ. ಅಥವಾ ಪಕ್ವಾನ್ನಗಳೂ ಬೇಕಾಗಿಲ್ಲ. ವಿನಯದಿಂದ ನಿಮ್ಮ ನಗುಮುಖ ಹಾಗೂ ಅಮೃತದೋಪಾದಿಯಲ್ಲಿರುವ ಸವಿಮಾತುಗಳನ್ನಷ್ಟು ಮುಂದೆ ಮಾಡಿದರೆ ಸಾಕು. ಅವರದೇಹವು ದಣಿವಿನಿಂದ ಬೆವತು ನೀರಾಗಿರಲಿ. ಬಾಯಾರಿ ಬಳಲಿಕೆಯುಂಟಾಗಿರಲಿ. ಹಸಿವೆಯಿಂದ ಕೈಕಾಲು ಸೋತುತ್ರಾಣಗೆಟ್ಟಿರಲಿ ಸವಿಮಾತಿನ ಸಂತೋಷದಭರದಲ್ಲಿ ಅವೆಲ್ಲ ಮರೆತುಹೋಗುವವು. ಆದರೆ ಅವರು ದಣಿದು ಮನೆಗೆ ಬಂದಾಗ ಚಾಡಿಭದ್ರಗಳನ್ನು ಹೇಳುತ್ತಿದ್ದರೆ, ಸಂಸಾರದ ತೊಂದರೆಗಳನ್ನು ಮುಂದಿಟ್ಟರೆ, ಮುಗುವೋರೆಗಳನ್ನು ತಿರುವಹತ್ತಿದರೆ ಅವರ ಶ್ರಮವು ದ್ವಿಗುಣಿತವಾಗಿ ಹುಣ್ಣಿನ ಮೇಲೆ ಬರೆಕೊಟ್ಟಂತಾಗುವದು. ಬಹುಜನರಿಗೆ ಸಂಸಾರವು ಬೇಸರಾಗಲಿಕ್ಕೆ ಇದೇ ಕಾರಣವು. ಅದ್ದರಿಂದ ಸಂಸಾರದ ಅಡಚಣೆಗಳನ್ನು ಸಮಯನೋಡಿ ತಿಳಿಸಬೇಕು. ಅವರಮನಸ್ಸು ಯಾವಕಾರಣದಿಂದಲಾದರೂ ಖಿನ್ನವಾಗಿದ್ದರೆ ಅವರೊಡನೆ ಒಳ್ಳೇಮಾತನಾಡಿ ಅವರನ್ನು ಸಮಾಧಾನಪಡಿಸಬೇಕು. ಅವರು ಅಕಸ್ಮಾತ್ತಾಗಿ ಬೇನೆಬಿದ್ದರೆ ಸಮಯೋಚಿತ ಉಪಾಯಗಳಿಂದಲೂ ಮಧುರ ಭಾಷಣದಿಂದಲೂ ಅವರ ತಾಪವನ್ನು ನಿವಾರಣೆ ಮಾಡಬೇಕು. ಹಿಡಿದಕೆಲಸವು ಕೈಗೂಡದೆ ಗಂಡಂದಿರು ಉತ್ಸಾಹಹೀನರಾಗಿದ್ದಾಗ ಉತ್ಸಾಹವನ್ನುಂಟುಮಾಡುವಂತೆ ಯುಕ್ತನುಡಿಗಳಿಂದ ಅವರಿಗೆ ಧೈರ್ಯಹೇಳಬೇಕು. ಅಂದರೆ ಮಾತ್ರ ದಣಿದಂತಹ ಅವರ ಅಂಗವು ಚಿಗಿಚಿಗಿಗುಟ್ಟುವದು. ಮತ್ತು ಪುನಃ ಪ್ರಪಂಚದ ಸಾಹಿತ್ಯಗಳನ್ನು ದೊರಕಿಸಲಿಕ್ಕೆ ಹೊರಗೆ ಹೋಗಲು ಅವರಿಗೆ ಹೊಸಹುರುಪು ಹುಟ್ಟುವುದು. ಒಟ್ಟಿನಮೇಲೆ ಹೇಳತಕ್ಕದ್ದೇನೆಂದರೆ—ಉತ್ತಮಸತಿಯು ಪತಿಗೆ ಆಲೋಚನೆ ಹೇಳುವುದರಲ್ಲಿ ಮಂತ್ರಿಯಂತೆಯೂ, ಸೇವೆಯಲ್ಲಿ ದಾಸಿಯಂತೆಯೂ, ಸಂರಕ್ಷಣೆಯಲ್ಲಿ ತಾಯಿಯಂತೆಯೂ, ಶಾಂತವೃತ್ತಿಯಲ್ಲಿ ಭೂದೇವಿಯಂತೆಯೂ ಇರುವಳು. ಇಂಥವರೇ ಪತಿವ್ರತೆಯರೆಂದು ಹೇಳಲ್ಪಟ್ಟಿರುವರು. ಇವರಿಗೆ ಮಾತ್ರ ಭಾರ್ಯಾ, ಗೃಹಿಣಿ, ಸುಪತ್ನಿ, ಸಾಧ್ವಿ ಇತ್ಯಾದಿ ಹೆಸರುಗಳು ಶೋಭಿಸುವವು. ಇಂಥವರನ್ನು ಕೈಹಿಡಿದ ಪುರುಷನ ಪುಣ್ಯಕ್ಕೆ ಬೆಲೆಯೇ ಇಲ್ಲ.

10-3-69

ಸ್ತ್ರೀಯರೇ! ನೀವು ಆಚರಿಸಬೇಕಾದ ಸದಾಚರಣೆಯ ಮಾದರಿಯನ್ನು ಹೇಳಿದೆನಷ್ಟೇ! ~~ಆದರೆ ಎಲ್ಲಾ ಸ್ತ್ರೀಯರೂ ಅಂತಹ ಆಚರಣೆಯವರೇ ಇರುವರೆಂಬ ನಿಯಮವಿಲ್ಲ.~~ ಒಬ್ಬ ಕವಿಯು ಸ್ತ್ರೀಯರಿಗೆ ಬಳ್ಳಿಯ ಉಪಮಾನವನ್ನೂ ಪುರುಷನಿಗೆ ವೃಕ್ಷದ ಉಪಮಾನವನ್ನೂ ಕೊಟ್ಟಿರುವನು. ಕೆಲವು ಬಳ್ಳಿಗಳು ಫಲಪುಷ್ಪಗಳನ್ನು ಹೊಂದಿ ತಾವು ಆಶ್ರಯಿಸಿದ ವೃಕ್ಷಕ್ಕೆ ಅತ್ಯಂತ ಶೋಭೆಯನ್ನುಂಟುಮಾಡುತ್ತವೆ. ಬೇರೆ ಕೆಲವು ಬಳ್ಳಿಗಳು ತಮಗೆ ಆಶ್ರಯವನ್ನು ಕೊಟ್ಟ ವೃಕ್ಷದ ರಸವನ್ನೇ ಹೀರಿಕೊಂಡು ಅದರ ಬೆಳವಣಿಗೆಯನ್ನು ಕಟ್ಟುಮಾಡಿ ಕಡೆಗೆ ಒಣಗಿಸಿ ಬಿಡುತ್ತವೆ. ಕೆಲವು ಸ್ತ್ರೀಯರು ಇಂಥ ಬಳ್ಳಿಗಳಂತೆ ಇರುವರು. ಇಂಥವರ ಆಚರಣೆಯು ಅತಿಅಸಹ್ಯವಾದದ್ದಿರುತ್ತದೆ. ಆದರೂ ಅದು ನಿಮಗೆ ತಿಳಿದಿರಬೇಕೆಂದು ಅದರ ಮಾದರಿಯನ್ನು ಸ್ವಲ್ಪ ಇಲ್ಲಿ ಹೇಳುವೆನು. ಉತ್ತಮವಸ್ತ್ರಾಲಂಕಾರಗಳನ್ನು ಹಾಕಿಕೊಂಡು ನೆರೆಯವರಲ್ಲಿ ಹೋಗಿ ಕುಳಿತು ಮನಬಂದಂತೆ ಪರನಿಂದೆಯನ್ನೂ ಜನರ ಕುಚೇಷ್ಟೆಯನ್ನೂ ಮಾಡುವುದೇ ಈ ದುಷ್ಟಸ್ತ್ರೀಯರ ಆದ್ಯಕರ್ತವ್ಯವಾಗಿರುವದು. ಇವರಿಗೆ ಯಾರಭಯವೂ ಇರುವುದಿಲ್ಲ. ಗಂಡನೇ ಇವರಿಗೆ ಅಂಜಿನಡೆಯಬೇಕಾಗುವುದು. ಇವರಲ್ಲಿ ಪತಿಗಳ ವಿಷಯವಾಗಿ ಕೃತಜ್ಞತೆಯ ಬದಲು ಕೃತಘ್ನತೆಯೂ, ವಿನಯದ ಬದಲು ಉದ್ಧಟತನವೂ, ಪೂಜ್ಯಭಾವದ ಬದಲು ತಿರಸ್ಕಾರಬುದ್ಧಿಯೂ ನೆಲಸಿರುವವು. ಇಂಥವರ ಸಂಗಡ ಬಾಳುವೆಮಾಡುವ ಪುರುಷರ ಗೋಳಾಟವನ್ನು ಹೇಳತೀರದು. ಇಂಥವರ ಸಹವಾಸದಿಂದ ಸಾಂಸಾರಿಕ ತಾಪವು ಹೆಚ್ಚಾಗುವುದು. ಧೈರ್ಯಗುಂದಿ ಕಡೆಗೆ ಸಂಸಾರವೇ ಬೇಸರಾಗಿ ಹೋಗುವದು.

[illegible] ಗಂಡಂದಿರ ಯೋಗ್ಯತೆಯನ್ನು ತಿಳಿಯದೆ ನೆರೆಯವರನ್ನು ನೋಡಿ ಅವರಂತೆ ತಮಗೂ ಸರ್ವವೂ ಆಗಬೇಕೆಂದು ಗಂಡನಿಗೆ ಉಲ್ಟಾಹಾಕುವರು. ಗಂಡಂದಿರು ಇವರ ಅಪೇಕ್ಷೆಯಂತೆ

ಮಾಡದಿದ್ದರೆ ಆಯಿತು! ನಿಮ್ಮನ್ನು ಕೈಹಿಡಿದು ನಾನು ಏನು ಕಂಡೆ? ಒಂದು ವಸ್ತುವಿಲ್ಲ! ಒಂದು ಒಡವೆಯಿಲ್ಲ! ಇಂಥ ಹರಿಯಿಂದ ಲಗ್ನವನ್ನಾದರೂ ಯಾಕೆ ಮಾಡಿಕೊಳ್ಳಬೇಕಾಗಿತ್ತು! ಕಣ್ಣು ಕಾಣಲಿಲ್ಲವೇ ಮೊನ್ನೆ ದೇಶಪಾಂಡೆ ರಾಮಕ್ಕನಿಗೆ 50 ರೂಪಾಯಿಯ ಸೀರೆತಂದದ್ದು? ಇತ್ಯಾದಿ ಕಠೋರ ಮಾತುಗಳನ್ನು ಆಡಿ ಅವರ ಉತ್ಸಾಹವನ್ನು ಕುಗ್ಗಿಸಿ ಬಿಡುವರು. ಪ್ರೀತಿಯಿಂದಾಗಲಿ ಅಥವಾ ಈ ಮಹಾರಾಯಳ ಕಾಟವು ತಪ್ಪಿದರೆ ಸಾಕೆಂದಾಗಲಿ ಕಷ್ಟಪಟ್ಟು ಏನಾದರೂ ಮಾಡಿಸಿದರೂ ಈ ದುಃಶೀಲ ಹೆಂಡರು ಸಂತುಷ್ಟರಾಗುವರೇನು? ಇಲ್ಲದ್ದನ್ನು ಹೀಯಾಳಿಸಿ ಇಲ್ಲದ್ದಕ್ಕಾಗಿ ಗಂಡನ ಕುತ್ತಿಗೆ ಹಿಚುಕುವುದನ್ನು ಬಿಡುವದಿಲ್ಲ. ಆತನು ಹಣೆಕೊಯ್ದು ಮಣಿಮಾಡಿದರೂ ಇವರಿಗೆ ಉಪಕಾರವೆನಿಸುವದಿಲ್ಲ.

ಕಲಿಮಾಸಿಕುಳಿತ ಈ ಹೆಂಗಸರು ಗಂಡಂದಿರನ್ನು ಲಕ್ಷ್ಯಕ್ಕೆ ತಾರದೆ ಮನಬಂದಂತೆ ಬಾಯಿಬಿಡುವದನ್ನು ನೋಡಿದರೆ ನಿಮಗೆ ಆಶ್ಚರ್ಯವಾಗದೆ ಇರದು. ಈ ಹಟಮಾರಿ ಹೆಂಡರ ಉದ್ಧಟತನದ ಮಾತುಗಳಿಂದ ಗಂಡನು ಎಂಥ ಶಾಂತನಾದರೂ ಆತನಿಗೆ ಸಿಟ್ಟು ತಲೆಗೇರದೆ ಇರದು. ಒಮ್ಮೊಮ್ಮೆ ಕಲಹಕ್ಕೆ ಆರಂಭವಾಗಿ ಕೈಗೆ ಕೈಹತ್ತುವ ಪ್ರಸಂಗಸಹ ಬರುವುದು. ಇಂಥ ಉದಾಹರಣೆಗಳನ್ನು ನೀವು ಎಷ್ಟೋ ಕೇಳಿರಬಹುದು. ಇಂತಹ ದುಃಶೀಲರಿಗೆ ಗಂಡನ ಮಾತಿಗೆ ಒಪ್ಪದೆ ತಿರುಗಿ ವಾದಿಸುವದೇ ದೊಡ್ಡಸ್ತನವಾಗಿರುವದು. ಮನೆತನದ ಸಂಬಂಧದಿಂದ "ಇದು ಹೀಗೇಕೆ?" ಎಂದು ಗಂಡನು ಏನಾದರೂ ಕೇಳಿದರೆ ಸಾಕು. ಮನೆಯೊಳಗಿನದು ನಿಮಗೇನುಗೊತ್ತು ಹೊರಗಿಂದಬಂದು 'ಇದು ಹೀಗೇಕೆ' ಅದು ಹಾಗೇಕೆ. ಎಂದು ಕೇಳಲಿಕ್ಕೆ ಎಲ್ಲಿಗೂ ಬರುತ್ತದೆ. ಸ್ವತಃ ಕೈಹಚ್ಚಿಮಾಡಿದರೆ ತಿಳಿದೀತು. ಹೀಗೆ ಮರ್ಯಾದೆ ತೊರೆದು ಮಾತಾಡಹತ್ತಿದ ಕೂಡಲೇ ಗಂಡನು ಮರ್ಯಾದೆಗೆ ಅಂಜಿಕೊಂಡು ಸುಮ್ಮನೆ ಇರಬೇಕಾಗುತ್ತದೆ.

ಮನೆಗೆ ಯಾರಾದರೂ ಗಂಡನ ಸ್ನೇಹಿತರು ಇಲ್ಲವೇ ಆತನ ಆಪ್ತೇಷ್ಟರು ಬಂದರೆ ಅವರಿಗೆ ಉಪಚಾರಮಾಡುವದಂತೂ ಹಾಗಿರಲಿ, ಮೋರೆಯು ದುಮುದುಮು ಉರಿಯಹತ್ತುವದು. ಹುಬ್ಬುಗಂಟಿಕ್ಕಿ ಕಣ್ಣುಕಿಸ್ತರಿಸಿ ಉಸುರುಗರೆಯಹತ್ತುವಳು. ಹುಡುಗರನ್ನು ಸುಮ್ಮಸುಮ್ಮನೆ ಬಡಿದು ಅಳಿಸುವಳು. ತಂಬಿಗೆ ತಪ್ಪೇಲಿಗಳನ್ನು ಅಪ್ಪಳಿಸುವಳು. ಏನು ಹೇಳಿದರೂ ಕಿವಿಯಲ್ಲಿ ಹಾಕಿಕೊಳ್ಳದೆ ಇರುವಳು. ಈ ಪ್ರಕಾರದ ಅಸಹ್ಯ ಆಚರಣೆಗಳು ಕಂಡುಬಂದವರಿಗೆ "ಯಾಕೆ ಬಂದೆವೋ" ಎನಿಸುವುದು. ಗಂಡನ ಜೀವವಂತೂ ತಳಮಳಿಸುವುದು. ಈ ತರದ ಹೆಂಡರಿಂದ ಗಂಡನ ಸ್ವರೂಪ ನಿರ್ಜಯವಾಗಿ ನಾಲ್ಕು ಮಂದಿಯಲ್ಲಿ ಆತನ ನೀರು ಇಳಿದಂತಾಗುತ್ತದೆ.

ಗಂಡಂದಿರಲ್ಲಿ ಇವರಿಗೆ ನಿಜವಾದ ವಿಶ್ವಾಸವಿರುವದಿಲ್ಲ. ಪ್ರಯೋಜನದೃಷ್ಟಿಯಿಂದಲೇ ಇವರು ಗಂಡಂದಿರನ್ನು ಪ್ರೀತಿಸುತ್ತಾರೆ. ಪ್ರಯೋಜನವಿಲ್ಲವು ಆತನ ಜೀವಹಿಂಡಲಿಕ್ಕೆ ಹೇಸುವದಿಲ್ಲ. ಗಂಡನನ್ನು ವಶಮಾಡಿಕೊಳ್ಳುವದಕ್ಕಾಗಿ ಇವರು ಅನೇಕ ಸೋಗುಮಾಡುವರು. ಕೆಲವರು ಗಂಡನಮೇಲೆ ತಮ್ಮ ಪ್ರೀತಿಸಂಪೂರ್ಣ ಉಂಟೆಂದು ತೋರಿಸುವುದಕ್ಕಾಗಿ ಗಂಡನ ಎಂಜಲು ಉಣ್ಣುವುದು ಮತ್ತು ಆತನ ಕಾಲುತೊಳೆದು ನೀರುಕುಡಿಯುವುದು ಇವೇ ಮೊದಲಾದ ನಟನೆಗಳನ್ನು ಮಾಡುವರು. ಬೇರೆ ಕೆಲವರು ಒಳ್ಳೇವಸ್ತ್ರಾಭರಣಗಳಿಂದ ಗಂಡಂದಿರನ್ನು ಮೋಹಗೊಳಿಸಲಿಕ್ಕೆ ಪ್ರಯತ್ನಿಸುವರು ಮತ್ತೆ ಕೆಲವರು ಗಂಡಂದಿರು ದುರಾಚಾರಿಗಳಿದ್ದ ಪಕ್ಷಕ್ಕೆ ಅವರ ದುರಾಚಾರಕ್ಕೆ ಸಹಾಯ ಮಾಡುವರು. ಇನ್ನು ಕೆಲವರು ಭಾವ ಮೈದುನಂದಿರ ಮೇಲೂ ನೆರೆಹೊರೆಯವರ ಮೇಲೂ ಚಾಡಿಭದ್ರಗಳನ್ನು ಹೇಳಿ ಗಂಡನ ಪ್ರೀತಿಸಂಪಾದಿಸಲಿಕ್ಕೆ ನೋಡುವರು. ಮತ್ತೆ ಕೆಲವು ನೀಚಸ್ತ್ರೀಯರು ಮಾಟಮಾಡಿಸಿ ಗಂಡನನ್ನು ಕೈಯಲ್ಲಿ ತೆಗೆದುಕೊಳ್ಳಲಿಕ್ಕೆ ಯತ್ನಿಸುವರು! ಅಬಲೆಯರೇ ಇವರು ಎಂಥ ಕೃತಘ್ನರು? ಮೂರ್ಖರು! ಗುರುವಿನಂತೆ ಸನ್ಮಾರ್ಗ ತೋರಿಸುವವನೂ ತಂದೆಯಂತೆ ಹಿತವನ್ನು ಚಿಂತಿಸುವವನೂ ತಾಯಿಯಂತೆ ಮಮತೆಮಾಡುವವನೂ ದೇವರಂತೆ ಪೂಜ್ಯನೂ ಪ್ರಾಣಕ್ಕಿಂತ ಪ್ರಿಯನೂ ಆಗಿರುವ ಪತಿಯನ್ನೇ ವಂಚಿಸುವ ನೀಚಸ್ತ್ರೀಯರಿಗೆ ಧಿಕ್ಕಾರವಿರಲಿ. ಇವರಿಗೆ ಸ್ತ್ರೀಯರೆನ್ನುವದಕ್ಕಿಂತಲೂ ರಾಕ್ಷಸಿಯರೆಂದು ಕರೆಯುವುದು ಯೋಗ್ಯವು.

17-3-69.

ಶ್ರೀಹಿಮವತ್ಕೇದಾರ ಮಹಾಸಂಸ್ಥಾನ ಶಾಖಾಧಿಕಾರಿಗಳ ಶುಭಾಗಮನಮಹೋತ್ಸವ ಚಿಟ್ಯಾಲಗ್ರಾಮ.

ಶ್ರೀಹಿಮವತ್ಕೇದಾರ ವಿಶೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೦೮ ನೀಲಕಂಠಲಿಂಗ ಶಿವಾಚಾರ್ಯ ದೇಶಿಕೇಂದ್ರ ಮಹಾಸ್ವಾಮಿಗಳವರ ಶಾಖಾಧಿಕಾರಿಗಳಾದ ಕೌಂಡಿನ್ಯಪುರಿ ಶ್ರೀಶಿವಶಂಕರ ಶಿವಾಚಾರ್ಯ ಪಟ್ಟಾಧಿಕಾರಿಗಳು ಶಿಲಾಮಠ (ವೇದಾಂತಭೂಷಣ) ಕೊಂಡಕುಂಡಿಯವರು, ಸಕ್ರೇಟರಿ ಕಾರಭಾರಿ ಜಿ. ಮರಯ್ಯ ಬಳ್ಳಾರಿ, ಬಿ. ಯಂ. ಭೀಮಲಿಂಗಯ್ಯ ಇವರು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾರೀಖು 9-11-32 ಕ್ಕೆ ದೋಣ ತಾಲೂಕು ಚಿಟ್ಯಾಲಗ್ರಾಮಕ್ಕೆ ಸಿಬ್ಬಂದಿ ಸಹಿತ ಆಗಮಿಸಿದರು. ಪುರಪ್ರಮುಖರಾದ ಭದ್ರಯ್ಯನವರು ಶೆಟ್ಟಿ ಸೂಗಪ್ಪ ದಿ. ತಿಪ್ಪಣ್ಣಾ ಪಾಟೀಲು ಬಸರೆಡ್ಡಿ ಕೊಂಡಾರೆಡ್ಡಿ ಕೋಮಟಿಶೆಟ್ಟಿ ಪುಲ್ಲಯ್ಯ ಯಾಡಿಗರ ಗುಂಡಾಲಪ್ಪ ಮುಂತಾದ ಸಮಸ್ತ ದೈವದವರು ಇಸ್ತಕಬಾಲ ಸಹಿತರಾಗಿ ಇದುರುಗೊಂಡರು. ತಳಿರುತೋರಣರಂಭಾಸ್ತಂಭಗಳಿಂದಲಂಕೃತವಾದ ರಾಜಬೀದಿಯಲ್ಲಿ ಉತ್ಸವವು ನಡೆದು ಶ್ರೀಭೋಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಲಂಕರಿಸಲ್ಪಟ್ಟ ವೇದಿಕೆಯ ಮೇಲೆ ಪೂಜ್ಯಪಾದರು ಮಂಡಿಸಿದ ಬಳಿಕ ಶ್ರೀಗಳವರು ಜಗದ್ಗುರು ಪಂಚಾಚಾರ್ಯರು ಭೂಮಂಡಲದಲ್ಲಿ ಅವತರಿಸಿ ವೀರಶೈವ ಮತಸ್ಥಾಪನೆಮಾಡಿದ ವಿಷಯದಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟು ಸಭಿಕರಿಗೆ ಆನಂದವಾಗುವಂತೆ ಅಮೃತತುಲ್ಯವಾದ ವಾಣಿಯಿಂದ ಭಾಷಣಮಾಡಿದರು. ಅಷ್ಟಕ್ಕೆ ಅನುಷ್ಠಾನಕ್ಕೆ ಸಮಯವಾದುದರಿಂದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜೈ ಎಂಬ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು—ಗ್ರಾಮದ ಸಮಸ್ತ ದೈವದವರು ಶ್ರದ್ಧಾಭಕ್ತಿವಿಶ್ವಾಸಪೂರ್ವಕವಾಗಿ ನಾಲ್ಕಾರುದಿವಸಗಳವರೆಗೂ ಗುರುಸೇವೆಯನ್ನು ಮಾಡಿದರು. ಶ್ರೀ ಜಗದ್ಗುರು ಮಹಾಸಂಸ್ಥಾನದ ಚಿರಸ್ಮರಣಾರ್ಥವಾಗಿ ನಮ್ಮ ಗ್ರಾಮದ ಶ್ರೀಭೋಗೇಶ್ವರಸ್ವಾಮಿ ದೇವಸ್ಥಾನಕ್ಕೆ ಭಾಂಡೇಸಾಮಾನುಗಳನ್ನು ಆಶೀರ್ವಾದ ಮಾಡಬೇಕೆಂದು ಭಕ್ತರು ಪ್ರಾರ್ಥಿಸಿಕೊಂಡಿದ್ದರಿಂದ ಶ್ರೀಗಳವರು ಹೊಸ ದೊಡ್ಡಹಿತ್ತಾಳೆ ಹುಂಡೇವುಗಳನ್ನು ಸಂಸ್ಥಾನದ ಹೆಸರನ್ನು ಹಾಕಿಸಿ ಆಶೀರ್ವದಿಸಿರುತ್ತಾರೆ. ಇದರಿಂದ ಮಹಾಸನ್ನಿಧಿಗೂ ಮತ್ತು ಸಂಸ್ಥಾನದ ಕಾರಭಾರಿ ಜಿ. ಮರುಳಯ್ಯನವರಿಗೂ ನಾವುಗಳು ಚಿರ ಋಣಿಗಳಾಗಿರುತ್ತೇವೆ.

ಮಠದ ವೀರಭದ್ರಯ್ಯ ಶೆಟ್ಟಿ ಸೂಗಪ್ಪ.
ಪಾಟೀಲು ಬಸರೆಡ್ಡಿ ಕೋಮಟಿಶೆಟ್ಟಿ ಪುಲ್ಲಯ್ಯ.

ದಾವಣಗೆರೆಯಲ್ಲಿ ಸೇಂಗಾತೂಗಲು ಚಿಂತಾಲಾದ ಪಕ್ಷದಲ್ಲಿ ದಾವಣಗೆರೆಯು ಹಾಳೂರಿನಂತಾಗುವುದು.

ದಾವಣಗೆರೆಯಲ್ಲಿ ಸೇಂಗಾ ಖರೀದಿಮಾಡುವವರೇ? ನಿಮಗೆ ಕೈತೂಕದಿಂದಾಗುವ ಅನಾಹುತವೇನೆಂದು ಕೇಳಿದರೆ ನಮಗೆ ಲುಕ್ಸಾನಾಗುವುದೆಂಬ ಉತ್ತರವನ್ನು ಹೇಳುವಿರಷ್ಟೆ. ಚಿಂತಾಲು ತೂಕವಾಗಬೇಕೆಂದು ಆತುರಪಡುತ್ತಿರುವವರೇ? ನಿಮಗೆ ಲುಕ್ಸಾನಾಗುವ ವಿವರವನ್ನು ವಿವರಿಸಿ ಹೇಳುವೆನು ಕಿವಿಗೊಟ್ಟು ಕೇಳಿರಿ.

ಕಂಪನಿಯಲ್ಲಿ ೮| ರೂಪಾಯಿ ಲಿವಾಟು ಇದ್ದ ಪಕ್ಷದಲ್ಲಿ ನೀವು ಖರೀದಿಮಾಡುವುದು ೯|| ಹೀಗಿದ್ದು ನೀವು ನಿಮ್ಮ ಅವಿಚಾರವನ್ನು ತಿದ್ದಿಕೊಳ್ಳುವುದನ್ನು ಬಿಟ್ಟು ಇತರೇಯವರ ವಿಚಾರಗಳನ್ನು ಕೆಡಿಸುವುದಕ್ಕೆ ಬಂದರೆ ಅದು ಎಷ್ಟರಮಟ್ಟಿಗೆ ನಡೆದೀತೆಂಬುದನ್ನು ನೀವೇ ವಿಚಾರಮಾಡಿರಿ. ಈ ಹಿಂದೆ ಕೈತೂಕದಿಂದ ನಡೆಯುತ್ತಲಿದ್ದ ಹತ್ತಿಯ ಸುಗ್ಗಿಯನ್ನೂ ಈಗ ಚಿಂತಾಲು ತೂಕದಿಂದ ನಡೆಯುತ್ತಲಿರುವ ಹತ್ತಿಯ ಸುಗ್ಗಿಯನ್ನೂ ಕಣ್ಣುತೆರೆದುನೋಡಿರಿ. ಚಿಂತಾಲು ತೂಕದಿಂದ ಆಗುವ ಅನಾಹುತವೇನೆಂದು ಕೇಳುವಿರಷ್ಟೆ! ಮಾಲನ್ನು ವಿಕ್ರಯಿಸಿ ಚಿಂತಾಲು ಮಾಡಲು ಜೀನಿಗೆ ಹೋದರೆ ಒಂದು ಹತ್ತಿಯ ಅಂಡಿಗೆಗೆ ೨ ಧರ್ಮ ಬಿಟ್ಟರೆಸ್ಥೆ, ಒಂದೂವರೆ ಧರ್ಮ ಬಿಟ್ಟರೆಸ್ಥೆ, ಇಲ್ಲದಿದ್ದರೆ ಗಾಡಿಗಳನ್ನು ಮನೆಗೆ ಹೊಡೆದುಕೊಂಡು ಹೋಗಿರೆಂದು ನೀವೇ ಎಷ್ಟೋಸಲ ಹೇಳಿಲ್ಲವೇ? ಹರಿಹರ, ಹರಪನಹಳ್ಳಿ, ಚಿತ್ರದುರ್ಗ, ಉಜ್ಜಯಿನಿ ಮೊದಲಾದ ಕಡೆಯಲ್ಲಿ ಚಿಂತಾಲು ತೂಕವಿದ್ದು ದಾವಣಗೆರೆಯಲ್ಲಿರುವ ಸೇಂಗಾ ಧಾರಣೆಯು ಆ ಊರುಗಳಲ್ಲಿಯೇ ಇದ್ದು ಆ ಊರುಗಳಿಂದ ಸೇಂಗ ಗಾಡಿಗಳು ದಾವಣಗೆರೆಗೆ ಬಂದು ಮಾರಾಟವಾಗಿ ಹೋಗಲು ಕಾರಣವೇನೆಂಬುದನ್ನು ಸ್ವಲ್ಪ ಆಲೋಚಿಸಿ ನೋಡಿರಿ. ದಾವಣಗೆರೆಯಲ್ಲಿ ಚಿಂತಾಲು ತೂಕವಾದ ಪಕ್ಷದಲ್ಲಿ ಜನರು ಬಿಟ್ಟುಹೋದ ಹಾಳೂರಿನಂತೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಅಯ್ಯಾ ನಮ್ಮ ಪ್ರಿಯ ದಲಾಲರೇ ಚಿಂತಾಲು ತೂಕವಾದ ಪಕ್ಷದಲ್ಲಿ ನಾವು ಕೊಟ್ಟಿರುವ ಬಾಕಿಸಾಕಿಗಳು ಬರುವವೇ? ಬರುವದಿಲ್ಲವು. ಆದ ಪ್ರಯುಕ್ತ ಚಿಂತಾಲು, ಚಿಂತಾಲು ಎಂದು ಹಂಬಲಿಸುವ ಇವರಿಗೆ ಸೊಪ್ಪುಹಾಕಬಾರದಾಗಿ ಅತ್ಯಂತ ವಿನಯದಿಂದ ಹೇಳುತ್ತೇವೆ.

ಬಾರಮನಿ ಬಸಲಿಂಗಪ್ಪ ನಗಲ್ಲಿಯ ದಲಾಲರು, ದಾವಣಗೆರೆ.

ಶ್ರೀಶೈಲಯಾತ್ರೆಯನ್ನು ಮಾಡತಕ್ಕವರಿಗೆ ಸೂಚನೆ.

ಮಹಾಶಯರೇ, ಶ್ರೀಶೈಲವು ಪುರಾತನವಾದ ಸುಪ್ರಸಿದ್ಧ ಕ್ಷೇತ್ರವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಯಾತ್ರೆಯನ್ನು ಮಾಡತಕ್ಕ ಸದ್ಭಕ್ತರು ತಾವು ಯಾವ ಊರಿಂದ ಹೊರಟರೂ ರೇಲ್ವೆಮಾರ್ಗವಾಗಿ ಗುಂತಕಲ್ಲು ಜಂಕ್ಷನ್ನಿಗೆ ಇಳಿದು ಅಲ್ಲಿಂದ ಬೆಜವಾಡದ ಕಡೆಗೆ ಹೋಗತಕ್ಕ ರೇಲ್ವೆಗಾಡಿಯಲ್ಲಿ ಕೂತು ನಂದ್ಯಾಲು ಸ್ಟೇಷನ್ನಿಗೆ ಇಳಿಯಬೇಕು. ಎಲ್ಲಾ ವೇಳೆಗೆ ಸರಿಯಾಗಿ ಆ ಸ್ಥಳಕ್ಕೆ ಮೋಟಾರುಗಾಡಿಗಳು ದೊರೆಯುವವು. ಇಲ್ಲಿಂದ ಇತರ ಮಾರ್ಗವಾಗಿ ಪ್ರಯಾಣಮಾಡದೆ ದಾರಿಯಲ್ಲಿ ಮಹಾತೀರ್ಥಗಳಿರುವ ನಾಗಲೋಟಿಗೆ ಬಂದು, ಅಲ್ಲಿರುವ ಪಾವನಾತೀರ್ಥದಲ್ಲಿ ಸ್ನಾನಮಾಡಿ ಶ್ರೀ ವೀರಭದ್ರದೇವರ ದರ್ಶನ ಮಾಡಿಕೊಂಡು ವೀರಭದ್ರಸ್ವಾಮಿಗಳವರು ಭಕ್ತರ ಧನಸಹಾಯದಿಂದ ನಡೆಸಿದ ಅನ್ನಛತ್ರದಲ್ಲಿ ಶ್ರೀ ಮಲ್ಲಿಕಾರ್ಜುನ ಮಹಾಪ್ರಸಾದವನ್ನು ಕೈಕೊಂಡು ಎಣ್ಣೆಹೊಳೆಯ ಮುಂದೆ ಬರತಕ್ಕ ಕಡೆಗೆ (ಗಂಗನಹಳ್ಳಿಗೆ) ಬಂದು ವಸ್ತಿಮಾಡತಕ್ಕದ್ದು. ಅಲ್ಲಿಂದ ಮುಂದೆ ಭೀಮನ ಕೊಳ್ಳವೂ ಕೈಲಾಸಮಹಾದ್ವಾರವೂ ಇರುವವು. ಈ ಮಾರ್ಗದಿಂದಲೇ ಪೂರ್ವಿಕರು ಯಾತ್ರೆಮಾಡುತ್ತ ಬಂದಿರುವರು. ತಾವಾದರೂ ಇದೇ ಮಾರ್ಗದಿಂದ ಯಾತ್ರೆಮಾಡಿ ಮಹಾಫಲವನ್ನು ಹೊಂದಬೇಕೆಂಬುದಾಗಿ ಕೋರಿಕೆ.

ಓರ್ವ ಯಾತ್ರಿಕ.

ಸೂಳೆಯಮಗನಿಗೆ ಸದ್ಬೋಧೆ.

ಲೇಖಕ—ದೈವಜ್ಞ ವಿನೋದ.

ಅತ್ಯುಜ್ವಲವಾದ ವೀರಶೈವಮತದ ತತ್ವಗಳನ್ನೂ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಅಮೋಘವಾದ ಮಹಿಮೆಗಳನ್ನೂ ತಿಳಿಯದೆ ಕೀಳುಜನ ಹಂಡಬಂಡರನ್ನು ಕೂಡಿಕೊಂಡ ವೇಶ್ಯಾಪುತ್ರನು ತನ್ನ ಕುಲದ ಸ್ವಭಾವವನ್ನು ಮನಬಂದಂತೆ ತೋರಿಸತೊಡಗಿದ್ದಾನೆ. ಇವನು ಪಂಚಪೀಠಾಧಿಕಾರಿಗಳ ಮೇಲೂ ಗುರುವರ್ಗದ ಮೇಲೂ ಶುದ್ಧಸಾಂಪ್ರದಾಯದ ಅಖಿಲವೀರಶೈವ ಜನಾಂಗದ ಮೇಲೂ ಭಯಂಕರವಾದ ದ್ವೇಷಬುದ್ಧಿಯಿಂದ ಕೂಡಿ ಬರವಣಿಗೆಯನ್ನು ಬರೆಯತೊಡಗಿದ್ದಾನೆ. ಇವನು ತನ್ನ ಜಾತಿಯನ್ನು ಮರೆಮಾಚಿ ಗೊತ್ತಿಲ್ಲದ ಜನರಿಗೆ ತಾನು ಉತ್ತಮಜಾತಿಯವನೆಂದು ಹೇಳಹತ್ತಿ ವಿಜಾಪುರ, ಸೋಲಾಪುರ, ರಾಯಚೂರು, ಗುಲ್ಬರ್ಗಾ, ಮೊದಲಾದ ಪ್ರಾಂತದಜನಗಳನ್ನು ಮೋಸಪಡಿಸಿ ಎಲ್ಲರೊಡನೆ ಬಳಕೆಮಾಡಹತ್ತಿದ್ದಾನೆ. ಇವನ ಬರವಣಿಗೆಯಲ್ಲಿರುವ ಜಾತಿಸಂಕರದ ಹೊಲೆಗೆಲಸದ ತತ್ವಕ್ಕೆ ಬಹುಜನರು ಛೀಹಾಕಿದರೂ ಇವನಿಗೆ ಇನ್ನೂ ಬುದ್ಧಿಯುಬರಲಿಲ್ಲ. ಜಾತಿಸಂಕರದವಿಷಬೀಜವನ್ನು ಬಿತ್ತುವ ಪಾಪಿಗಳಿಗೆ ಪರಮಾತ್ಮನು ತಕ್ಕಶಾಸನಮಾಡುವನು. ದುರ್ಬೀಜ ಜಾತರನ್ನು ಇಷ್ಟರಲ್ಲಿಯೇ ಅಖಿಲವೀರಶೈವ ಸಮಾಜವು ಶಾಸನಗೊಳಿಸುವುದು ಯೋಗ್ಯವಾಗಿದೆ. ಇವನು ಬಸವಾದಿಗಳ ಬೆನ್ನುಬಿದ್ದು ತನ್ನ ಕುಟೀಲಕಾಯಕವನ್ನು ಜೋರಿನಿಂದ ನಡೆಸತೊಡಗಿದ್ದಾನೆ. ಬಸವಾದಿಗಳ ವಿಚಾರವೇ ಈಗ ಸಮಾಜದಲ್ಲಿ ಕ್ರಾಂತಿಸ್ವರೂಪವನ್ನು ತಾಳಿದೆ. ಇವರ ನಿಜಸಂಶೋಧನೆಗೆ ಕೈಹಾಕಿದರೆ ಗೊಂದಲವಾಗುವುದರಿಂದ ಸದ್ಯಃ ನಿಜತತ್ವಗಳನ್ನು ಪ್ರಚಾರಮಾಡಲು ಹವಣಿಸಬೇಕಾಗಿದೆ. ಆದರೂ ಜಾತಿಸಂಕರಕಾರರು ಉಗ್ರವಾದಕ್ರಾಂತಿಯನ್ನೇ ಇಚ್ಛಿಸುತ್ತಾರೆ. ಹೊಲಸುರಾಡಿಯನ್ನು ಹೊರಪಡಿ ಶುಭ್ರವಾದ ನಿರ್ಮಲೋದಕವನ್ನುಂಟುಮಾಡಲು ಮಹತ್ತರವಾದ ಕ್ರಾಂತಿಯ ಕಡುಗೋಲನ್ನು ಹಿಡಿಯುವ ಪ್ರಸಂಗವು ಬಂದೇಬರುವದು. ಆಚಾರ್ಯದ್ರೋಹಿಗಳು ನಿಜತತ್ವದ ಕಡೆಗೆ ಹೊರಳಿ ಗುರುಪೀಠಗಳಲ್ಲಿರುವ ತಮ್ಮ ಪಾಪಬುದ್ಧಿಯನ್ನು ಖಂಡಿತವಾಗಿ ಬಿಡಬೇಕು. ಆಚಾರ್ಯರಕಾಲವಾವುದು? ಬಸವಾದಿಗಳ ಕಾಲವಾವುದು? ಆಚಾರ್ಯರಿಂದ ಆಗಿರುವ ಕಾರ್ಯಗಳಾವುವು? ಬಸವಾದಿಗಳಿಂದಾಗಿರುವವೇನು? ಇದನ್ನು ಸೂಕ್ಷ್ಮಬುದ್ಧಿಯಿಂದ ಸಂಶೋಧಿಸಬೇಕು. ಅನಾದಿಕಾಲದಿಂದಲೂ ಪ್ರಸಿದ್ಧರಾಗಿದ್ದ ಆಚಾರ್ಯರ ಬಗ್ಗೆ ಅನಾದರ ಬುದ್ಧಿಯನ್ನು ಪ್ರಕಟಪಡಿಸಿ ಪಾಪದ ಕೊಳಚಿಯಲ್ಲಿ ಬಿದ್ದು ಬಸವಾದಿಗಳೇ ಮತಸ್ಥಾಪನಾಚಾರ್ಯರು! ಇವರು ಎಲ್ಲರಿಗೂ ಪೂಜ್ಯರು! ಎಂಬ ಪಾಪೋದ್ರೇಕವಾದ ಬರವಣಿಗೆಯನ್ನು ಬರೆಯುತ್ತಿರುವದು ಎಷ್ಟು ನೀಚತನವು? ಅದುದರಿಂದಲೇ ಸಿದ್ದೀಕನು, ತಾನೇ ಚೆನ್ನಬಸವನೆಂದು ಇವರ ಪಾಪದ ಗತ್ತಿನ ಕುಣಿತಕ್ಕೆ ನೆರವಾಗತೊಡಗಿದ್ದಾನೆ. ಇರಲಿ; ವೇಶ್ಯಾಪುತ್ರನೇ, ಇನ್ನಾದರೂ ನಿನ್ನ ಪಾಪಬುದ್ಧಿಯನ್ನು ಬಿಟ್ಟುಬಿಡು. ಪೂರ್ವದಲ್ಲಿ ಎಷ್ಟೋಪಾಪವನ್ನು ಮಾಡಿ ಯಾವುದೋ ಒಂದು ಬೀಜಕ್ಕೆ ಹುಟ್ಟಿರುವಿ. ಇದನ್ನಾದರೂ ಸ್ಮರಿಸು. ನಿನ್ನ ಜಾತಿಯನ್ನು ಮರೆಮಾಚಿ ಗೊತ್ತಿಲ್ಲದ ಜನರನ್ನು ಮೋಸಪಡಿಸಿ ಅವರನ್ನು ಜಾತಿಗೆಡಿಸಬೇಡ. ವಿಜಾಪುರ, ಸೋಲಾಪುರ, ಮೊಗಲಾಯಿ ಪ್ರಾಂತಗಳನ್ನೆಲ್ಲಾ ಕುಲಗೆಡಿಸಿಬಿಟ್ಟಿ. ಇದರಿಂದ ನಿನಗೆ ಯಮನು ಘೋರವಾದ ಶಿಕ್ಷೆಯನ್ನು ವಿಧಿಸದೆ ಬಿಡನೆಂಬುವದನ್ನು ಚೆನ್ನಾಗಿ ಭಾವಿಸು. ಇವನು ಇನ್ನುಮೇಲೆ ಯಾವ ಕಡೆಗೆ ಹೋಗುವನೋ ಅಲ್ಲಿರುವ ಶುದ್ಧಸಂಪ್ರದಾಯದವರು ಸೂಳೆಯಮಗನಾದ ಇವನಿಗೆ ಚೆನ್ನಾಗಿ ಶಿಕ್ಷಿಸಿ ಪ್ರಾಯಶ್ಚಿತ್ತಮಾಡಿ ಕಳುಹಿಸಬೇಕು. ಇವನಿಗೆ ಎಷ್ಟು ಅಂದು ಬರೆದರೂ ನಾಚಿಕೆಯಿಲ್ಲ. ಇದು ಯಾವ ಜಾತಿಯವನ ಬೀಜದಿಂದ ಜನಿಸಿದ ಪ್ರಭಾವವೋ ತಿಳಿಯದಾಗಿದೆ. ದೇವರು ಈ ವೇಶ್ಯಾಪುತ್ರನಿಗೆ ಇನ್ನಾದರೂ ಸದ್ಬುದ್ಧಿಯನ್ನನುಗ್ರಹಿಸಲಿ.

ಆತ್ಮಬೋಧಾಮೃತ.

ಲೇಖಕ—ಚನ್ನಪಟ್ಟಣ ಅನವಟ್ಟಿ ರಾಮರಾಯರು.

1 ೧೫. ಹೊಟ್ಟು ಅಕ್ಕಿಯ ಕಾಳನ್ನು ಹೇಗೆ ಮುಚ್ಚಿಕೊಂಡಿರುವುದೋ ಹಾಗೆಯೇ, ಜೀವಾತ್ಮನು ಚಿತ್ಸ್ವರೂಪವಾದ ಭಗವಂತನ ವಾಗ್ದಂಡನೆಯಿಂದ ಆದ ಪಂಚಕೋಶಗಳಿಂದ ಮುಚ್ಚಲ್ಪಟ್ಟು, ಯಾವ ಕೆಲಸವನ್ನೂ ಮಾಡದೆ ವರ್ತಿಸುತ್ತಿರುವನು.

2 ೧೬. ಭಗವಂತನಾದರೋ ಸಮಸ್ತ ಚರಾಚರ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿದ್ದರೂ ಕಾಣಿಸಿಕೊಳ್ಳುವುದಿಲ್ಲ. ನಯವಾಗಿ ಹೊಳಪುಳ್ಳ ವಸ್ತುವಿನಲ್ಲಿ ಪದಾರ್ಥವು ಹೇಗೆ ಪ್ರತಿಫಲಿಸುವುದೋ ಹಾಗೆಯೇ ಮಾನವನ ಜ್ಞಾನಶುದ್ಧವಾದ ಚಿತ್ತಕ್ಕೆ ಮಾತ್ರ ಆ ಭಗವಂತನು ಗೋಚರವಾಗುವನು.

3 ೧೭. ರಾಜನಾದವನು ರಾಜ್ಯಭಾರಕ್ರಮದಲ್ಲಿ ಏರ್ಪಡಿಸಿರುವ ಮಂತ್ರಿಗಳು ನಡಿಸುತ್ತಿರುವ ಕಾರ್ಯಗಳನ್ನು ಹೇಗೆ ಉಸ್ತುವಾರಿ ನೋಡಿಕೊಂಡಿರುವನೋ, ಹಾಗೆಯೇ ಪರಮಾತ್ಮನು ಶರೀರದಿಂದಲೂ, ಪಂಚೇಂದ್ರಿಯಗಳಿಂದಲೂ, ಮನಸ್ಸಿನಿಂದಲೂ, ಪಂಚಕೋಶಗಳಲ್ಲಿಯೂ ನಡೆಯುತ್ತಿರುವ ಕಾರ್ಯಗಳಿಗೆ ತಾನು ಭಾಗಿಯಾಗದೆ, ಆಯಾ ಸ್ಥಳಗಳಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಚೆನ್ನಾಗಿ ನೋಡುತ್ತಿರುವನು.

[6ನೆಯ ಪುಟವನ್ನು ನೋಡಿ.[

24-2-69

ಪಂಚಾಚಾರ್ಯ ಪ್ರಭಾ.

೧೯೩೩ನೇ ಜನವರಿ ತಾ|| ೩೦ನೇ ಸೋಮವಾರ.

ಪಟ್ಟಾಧಿಕಾರಿಗಳ ಕರ್ತವ್ಯ.

ವೀರಶೈವಪ್ರಪಂಚದಲ್ಲಿ ಗುರುಪಟ್ಟವನ್ನು ವಹಿಸಿದವರು ಪ್ರತಿಯೊಂದು ಗ್ರಾಮದಲ್ಲಿಯೂ ಇದ್ದಾರೆ. ಪೂರ್ವಾಚಾರ್ಯರು ಪ್ರತಿಯೊಂದು ಗ್ರಾಮನಗರಗಳಲ್ಲಿಯೂ ಅನಾದಿಕಾಲದಿಂದ ಪಟ್ಟಾಧಿಕಾರಿಗಳನ್ನು ನಿಯಮಿಸಲು ಕಾರಣವೇನು? ಇವರು ಮಾಡತಕ್ಕ ಕಾರ್ಯಗಳಾವುವು? ಎಂಬುದನ್ನು ವಿಚಾರಮಾಡುವದು ಮುಖ್ಯವಾಗಿದೆ. ಯಾವಾಗಲೂ ಶಿಷ್ಯರ ಆತ್ಮೀಯ ರಾಜ್ಯದಮೇಲೆ ಕೆಲಸಮಾಡುತ್ತಿರುವುದೇ ಇವರ ಆದ್ಯಕರ್ತವ್ಯವು. ಶಿಷ್ಯರ ಮನೋವೃತ್ತಿಗಳಾದರೂ ಪ್ರತಿಕ್ಷಣದಲ್ಲಿ ಪತ್ನೀಪುತ್ರಾದಿಗಳಲ್ಲಿ ಲೋಲಗಳಾಗಿಯೂ ವಿಷಯಾತುರಗಳಾಗಿಯೂ ಸುಖದುಃಖಮಿಶ್ರಗಳಾಗಿಯೂ ಇದ್ದು ಬಹುವಿಧಗಳಾದ ಕಷ್ಟಗಳಿಗೀಡಾಗಿರುತ್ತವೆ. ಇದಕ್ಕೆಲ್ಲಾ ಆತ್ಮನು ವಿಷಯಪಂಕದಲ್ಲಿ ಬಿದ್ದು ಹೊರಳಾಡುತ್ತಿರುವುದೇ ಕಾರಣವು. ಈ ವಿಷಯಪಂಕದಿಂದೆತ್ತುತ್ತ ಆತ್ಮರನ್ನು ಪರಮಾತ್ಮನ ಕಡೆಗೆ ತಿರುಗಿಸುತ್ತ ಭಕ್ತರ ಶುಭಾಶುಭಕಾರ್ಯಗಳಲ್ಲಿ ಭಾಗಿಗಳಾಗುತ್ತ ಶಿಷ್ಯರಿಗೊದಗುವ ಅಶುಭ ಪರಂಪರೆಯನ್ನೆಲ್ಲಾ ಹೋಗಲಾಡಿಸಿ ಶುಭೋದಯವನ್ನುಂಟುಮಾಡುವುದೇ ಪಟ್ಟಾಧಿಕಾರಿಗಳು ಮಾಡುವ ಕಾರ್ಯಗಳಾಗಿವೆ. ಭಕ್ತರು ತಮ್ಮ ಮನೆಗಳಲ್ಲಿ ಯಾವ ಶುಭಾಶುಭಕರ್ಮಗಳನ್ನು ನಡೆಯಿಸಬೇಕಾಗಿದ್ದರೂ ತಮ್ಮ ಕುಲಗುರುಗಳಾದ ಪಟ್ಟಾಧಿಕಾರಿಗಳ ಅನುಜ್ಞೆಯನ್ನು ಪಡೆದು ಅವರು ನಿಯಮಿಸಿಕೊಟ್ಟ ಶುಭದಿವಸಗಳಲ್ಲಿಯೇ ಅವರ ಆಧಿಪತ್ಯದಲ್ಲಿ ಕರ್ಮಗಳನ್ನೆಲ್ಲಾ ನಡೆಯಿಸುತ್ತ ಬರಬೇಕು. ಈ ಕರ್ಮಗಳಲ್ಲಿ ನಿತ್ಯಕರ್ಮಗಳೆಂದೂ ನೈಮಿತ್ತಿಕಕರ್ಮಗಳೆಂದೂ ಎರಡುವಿಧ. ಗರ್ಭಾದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲೋಪನಯನ, ಚತುರ್ವೇದವ್ರತ, ಸಮಾವರ್ತನ, ವಿವಾಹ ಮುಂತಾದ ಕರ್ಮಗಳೇ ನೈಮಿತ್ತಿಕಕರ್ಮಗಳು. ಲಿಂಗಪೂಜೆಯೇ ನಿತ್ಯಕರ್ಮವು. ಇವುಗಳೆಲ್ಲಾ ಪಟ್ಟಾಧಿಕಾರಿಗಳು ಹೇಳಿದಂತೆ ನಡೆಯಿಸಿಕೊಳ್ಳಬೇಕಾದ ಕರ್ಮಗಳಾಗಿವೆ. ಇವುಗಳೇ ಸಂಸ್ಕಾರಗಳು. ಈ ಸಂಸ್ಕಾರಗಳನ್ನು ಶಿಷ್ಯರಿಗೆ ಆಯಾಯ ಕಾಲಗಳಲ್ಲಿ ವಿಧ್ಯುಕ್ತವಾಗಿ ನೆರವೇರಿಸುವುದರಿಂದ "ಸಂಸ್ಕಾರಕ್ತದ್ಗುರುಃ" ಎಂಬುಕ್ತಿಯಂತೆ ಇವರು ಗುರುಗಳೆನಿಸಿಕೊಂಡಿರುತ್ತಾರೆ.

ಈ ಸಂಸ್ಕಾರಗಳೆಲ್ಲವೂ ಅವರವರ ಆಶ್ರಮಾನುಗುಣವಾಗಿ ತತ್ತತ್ಕಾಲದಲ್ಲಿ ನಡೆಯುತ್ತ ಬರುವುದರಿಂದ ಶಿಷ್ಯರ ಆತ್ಮರುಗಳು ಮೆಲ್ಲಮೆಲ್ಲನೆ ಅಜ್ಞಾನವಾಸನೆಯಿಂದ ಬಿಡಲ್ಪಟ್ಟು ಪರಿಶುದ್ಧರಾಗುತ್ತ ಬರುವರು. ಇವುಗಳಲ್ಲಿ ಲಿಂಗಧಾರಣವೆಂಬ ಸಂಸ್ಕಾರವೇ ವಿಶೇಷವಾದದ್ದು. ಉಳಿದ ಗರ್ಭಾದಾನಾದಿ ಸಂಸ್ಕಾರಗಳು ಸಾಮಾನ್ಯವಾದವುಗಳು. ಈ ಸಾಮಾನ್ಯ ವಿಶೇಷ ಸಂಸ್ಕಾರಗಳು ಯಾರಿಗೆ ನಡೆಯುವುದಿಲ್ಲವೋ ಅಂಥವರು ಲಿಂಗಪೂಜೆಗೂ ಲಿಂಗಧಾರಣೆಗೂ ಅರ್ಹರಾಗುವುದಿಲ್ಲ. ಇಲ್ಲಿ ಲಿಂಗವಿಚಾರವೇ ಸಾಧ್ಯವು. ಸಂಸ್ಕಾರಗಳೇ ಸಾಧನವು. "ಸಾಧನಂವಿನಾ ಸಾಧ್ಯಾನಿಷ್ಪತ್ತೇಃ" ಎಂಬ ಭಾಷ್ಯೋಕ್ತಿಯಂತೆ ಸಾಧನಗಳಿಲ್ಲದೆ ಸಾಧ್ಯವು ಸಿದ್ಧಿಸುವುದಿಲ್ಲ. ಆದುದರಿಂದ ಲಿಂಗಪೂಜಾದಿಗಳಿಗೆ ಅಧಿಕಾರವನ್ನುಂಟುಮಾಡುವ ಈ ಸಂಸ್ಕಾರಗಳನ್ನು ಪ್ರತಿಯೊಬ್ಬರೂ ಆಯಾಯ ಕಾಲದಲ್ಲಿ ಹೊಂದಬೇಕು. ಈ ಸಂಸ್ಕಾರಗಳನ್ನು ಮಾಡಬೇಕಾದರೆ ಗುರುಗಳು ವೇದಾಧ್ಯಯನ ಸಂಪನ್ನರಾಗಿರಬೇಕು. ಸಂಸ್ಕೃತವನ್ನು ಚೆನ್ನಾಗಿ ಓದಿರಬೇಕು. ಪ್ರಯೋಗವನ್ನು ಚೆನ್ನಾಗಿ ತಿಳಿದಿರಬೇಕು. ಪರಿಶುದ್ಧವಾದ ನಡತೆಯುಳ್ಳವರಾಗಿರಬೇಕು. ಶಿಷ್ಯರ ಅಭಿವೃದ್ಧಿಯೇ ತಮ್ಮ ಅಭಿವೃದ್ಧಿಯೆಂದು ತಿಳಿದಿರಬೇಕು. ಹೇಗೆ ತಂದೆಯು ಮಾಡತಕ್ಕ ಕಾರ್ಯಗಳೆಲ್ಲವೂ ಮಗನ ಅಭಿವೃದ್ಧಿಗಾಗಿರುವುವೋ, ಹಾಗೆ ಪಟ್ಟಾಧಿಕಾರಿಗಳು ಮಾಡುವ ಕಾರ್ಯಗಳೆಲ್ಲವೂ ಶಿಷ್ಯರ ಅಭಿವೃದ್ಧಿಗಾಗಿಯೇ ಎಂದು ತ್ರಿಕರಣದಲ್ಲಿ ಭಾವಿಸಿರಬೇಕು. ಹಿಂದೆ ವಸಿಷ್ಠಮಹರ್ಷಿಯು ಕಾಡಿನಲ್ಲಿ ಕಂದಮೂಲಗಳನ್ನು ತಿಂದುಕೊಂಡು ತಪಸ್ಸಿದ್ಧಿಯನ್ನು ಪಡೆದು ಸೂರ್ಯವಂಶೋತ್ಪನ್ನರಾದ ದಶರಥರಾಮಾದಿಗಳಿಗೆ ಕಾಲಾನುಸಾರವಾಗಿ ಸಂಸ್ಕಾರಗಳ ದ್ವಾರಾ ಸದುಪದೇಶವನ್ನು ಮಾಡುತ್ತ ಬಂದಿದ್ದರಿಂದಲೇ ಅವರು ಕ್ರಿಯಾಸಿದ್ಧಿಯುಳ್ಳವರಾಗಿಯೂ ದೈವಭಕ್ತರಾಗಿಯೂ ಪರಮಾಸ್ತಿಕರಾಗಿಯೂ ಆಗಿ ಆಚಂದ್ರಾರ್ಕವಾದ ಯಶಸ್ಸನ್ನು ಪಡೆದರು. ಇಂಥ ಉತ್ತಮಸ್ಥಿತಿಯನ್ನು ಹೊಂದಲು ತಪೋನಿಧಿಗಳಾದ ವಸಿಷ್ಠರ ಅಮೋಘವಾದ ಆಶೀರ್ವಾದವೇ ಕಾರಣವಲ್ಲದೆ ಬೇರೆ ಯಾವುದೂ ಕಾರಣವಲ್ಲ. ಗುರುಗಳು ಕ್ರಿಯಾಸಿದ್ಧಿಯುಳ್ಳವರಾಗಿದ್ದರೆ ಶಿಷ್ಯರು ಸಹ ಕಾಲಕ್ರಮದಿಂದ ಕ್ರಿಯಾಸಿದ್ಧಿಯುಳ್ಳವರಾಗುತ್ತಾರೆ. ಗುರುಗಳು ಕ್ರಿಯಾಹೀನರಾದರೆ ಶಿಷ್ಯರನ್ನು ಕೇಳಬೇಕಾದುದೇ ಇಲ್ಲವು. ತಂದೆಮಕ್ಕಳಿಗೂ, ಸತೀಪತಿಗಳಿಗೂ, ರಾಜಪ್ರಜೆಗಳಿಗೂ, ಗುರುಶಿಷ್ಯರಿಗೂ ಪರಸ್ಪರ ಸಾಮರಸ್ಯವಿದ್ದರೆ ಎಲ್ಲವೂ ಸುವ್ಯವಸ್ಥೆಯಲ್ಲಿರುವದು. ತಂದೆಮಕ್ಕಳ ಸಾಮರಸ್ಯದಿಂದ ಐಶ್ವರ್ಯವು ಹೆಚ್ಚುವದು. ಸತೀಪತಿಗಳ ಸಾಮರಸ್ಯದಿಂದ ಗೃಹವು ಭಾಗ್ಯಲಕ್ಷ್ಮಿಗೆ ವಸತಿಯಾಗುವದು. ರಾಜಪ್ರಜೆಗಳ ಸಾಮರಸ್ಯದಿಂದ ರಾಜ್ಯವು ಸುಖಲಕ್ಷ್ಮಿಗಾಗರವಾಗುವದು. ಗುರುಶಿಷ್ಯರ ಸಾಮರಸ್ಯದಿಂದ ಆತ್ಮನು ಮೋಕ್ಷಲಕ್ಷ್ಮಿಗಾಗರವಾಗುವನು. ಪ್ರಕೃತದಲ್ಲಿ ಗುರುಶಿಷ್ಯಸಾಮರಸ್ಯವು ಬರಬರುತ್ತ ಹೀನಾವಸ್ಥೆಗೆ ಬಂದಿರುತ್ತದೆ. ಪಟ್ಟಾಧಿಕಾರಿಗಳು ವೇದಾಧ್ಯಯನಸಂಪನ್ನರಾಗಿ ಭಕ್ತಿಜ್ಞಾನವೈರಾಗ್ಯಸಂಪತ್ತಿನಿಂದ ಕೂಡಿ ಶಿಷ್ಯರನ್ನು ಸಂಸ್ಕಾರಗಳಿಂದಲೂ ಸದುಪದೇಶಗಳಿಂದಲೂ ತಿದ್ದುತ್ತ ಬಂದಿದ್ದರೆ ಗುರುಶಿಷ್ಯರ ಸಾಮರಸ್ಯಕ್ಕೆ ಎಂದೂ ವಿಘಾತವುಂಟಾಗುತ್ತಿರಲಿಲ್ಲ. ಲೋಕದಲ್ಲಿ ಮಗನು ಸ್ವೇಚ್ಛಾವಿಹಾರಿಯಾಗಲು ಬಾಲ್ಯದಿಂದ ತಂದೆಯು ಶಿಕ್ಷಣವಿಲ್ಲದಿರುವುದೇ ಕಾರಣವಾಗಿರುವಂತೆ, ಶಿಷ್ಯರು ಮನಸ್ವಿಯಾಗಿ ವರ್ತಿಸಲು ಪಟ್ಟಾಧಿಕಾರಿಗಳೇ ಕಾರಣರು. ಇವರು ತಮ್ಮ ಅಧಿಕಾರವನ್ನು ಚೆನ್ನಾಗಿ ಮಾಡುತ್ತ ಬಂದಿದ್ದರೆ ಶಿಷ್ಯರು ಸಂಸ್ಕೃತಾತ್ಮರಾಗುತ್ತಿದ್ದರು. ಎಷ್ಟೋ ಕಡೆಗಳಲ್ಲಿ ಶಿಷ್ಯರಿಗೆ ಷೋಡಶಸಂಸ್ಕಾರಗಳಲ್ಲಿ ಒಂದು ಸಂಸ್ಕಾರವಾದರೂ ಆಗದೆ ಹುಟ್ಟಿದಂದಿನಿಂದಲೂ ವ್ರಾತ್ಯರಾಗಿಯೇ ಇರುತ್ತಾರೆ. ಇಂಥವರ ಮನೆಗಳಿಗೆ ಗುರುಗಳು ಹೋಗಿ ಪೂಜೆಮಾಡಿಸಿಕೊಂಡು ತೀರ್ಥಪ್ರಸಾದಗಳನ್ನು ಕೊಟ್ಟು ದಕ್ಷಿಣೆ ಮಾತ್ರ ತೆಗೆದುಕೊಂಡು ಬರುತ್ತಾರೆ. ಅವರಿಗೆ ಯಾವುದೊಂದು ಸಂಸ್ಕಾರವನ್ನೂ ಮಾಡುವುದಿಲ್ಲ. ಕೆಲವರು ಸಂಸ್ಕಾರಮಾಡಬೇಕೆಂದೆಳಸಿದರೆ ಪಂಜು ಹಚ್ಚಿ ಹುಡುಕಿದರೂ ಇವರ ಹೊಟ್ಟೆಯಲ್ಲಿ ಒಂದು ವೇದಾಕ್ಷರವೂ ಶಿಕ್ಕುವಂತಿಲ್ಲ. ಕರ್ಮಗಳನ್ನು ನಡೆಯಿಸುವ ಪ್ರಯೋಗದ ಗಂಧವಂತೂ ಇವರ ಸಮೀಪದಲ್ಲಿ ಸುಳಿಯುವಂತಿಲ್ಲ. ಇತ್ತೀಚೆಗೆ ಕೆಲವರು ದೀರ್ಘಶ್ರಮ ವಹಿಸಿ ಕೇವಲ ತರ್ಕವ್ಯಾಕರಣಗಳಲ್ಲಿ ಕಾಲವನ್ನು ಕಳೆಯುತ್ತಾರಲ್ಲದೆ, ತಮ್ಮ ಕರ್ತವ್ಯವೆನಿಸಿದ ಪ್ರಯೋಗದಲ್ಲಿ ಲಕ್ಷ್ಯವನ್ನು ಕೊಡುವುದಿಲ್ಲ. ಇಂಥವರು ಶಿಷ್ಯರಿಗೆ ತಾವು ಕಲಿತ ತರ್ಕವ್ಯಾಕರಣವನ್ನು ಹೇಳಿಕೊಡಬೇಕಲ್ಲದೆ, ಇನ್ನೇನೂ ಸುಧಾರಿಸುವಂತಿಲ್ಲ. ಹೀಗೆ ಓದಿದವರಲ್ಲಿ ಒಂದು ವಿಧವಾದ ದೋಷವೂ, ಓದದವರಲ್ಲಿ ಒಂದು ವಿಧವಾದ ದೋಷವೂ ಇರುವುದರಿಂದ ಈ ಮಧ್ಯದಲ್ಲಿ ಶಿಕ್ಕ ಶಿಷ್ಯರಿಗೆ ತ್ರಿಶಂಕುಸ್ವರ್ಗವು ಪ್ರಾಪ್ತಿಯಾದಂತಾಗಿದೆ. ಬಾಯಲ್ಲಿ ಮಾತ್ರ ನಾವು ದಂಡನ ಖಂಡನಾಧಿಕಾರಿಗಳೆಂದು ಹೇಳಿಕೊಂಡರೆ ಶಿಷ್ಯರ ಸುಧಾರಣೆಯಾಗುವುದು ಹೇಗೆ? ನಮ್ಮ ವೀರಶೈವ ಸಮಾಜದ ಮೇಲೆ ಗುರುತ್ವವನ್ನು ಮಾಡುವ ಗುರುಪಟ್ಟಾಧಿಕಾರಿಗಳು ವೈದಿಕವೃತ್ತಿಗೆ ತರ್ಪಣವನ್ನು ಕೊಡುತ್ತ ಬಂದದ್ದರಿಂದ ಗುರುಶಿಷ್ಯ ಸಾಮರಸ್ಯವು ಕಡಿಮೆಯಾಗುತ್ತ ನಡೆದದೆ. ಇನ್ನಾದರೂ ಪಟ್ಟಾಧಿಕಾರಿಗಳು ವೇದವೇದಾಂಗಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಶಮದಮಾದಿಸದ್ಗುಣಗಣಭೂಷಿತರಾಗಿ ಶಿಷ್ಯರನ್ನೆಲ್ಲಾ ಕಾಲವರಿತು ಆಯಾಯ ಸಂಸ್ಕಾರಗಳಿಂದ ಪರಿಶುದ್ಧಗೊಳಿಸುತ್ತ ವೀರಶೈವಮತವನ್ನು ಸರ್ವತೋಮುಖವಾಗಿ ಪ್ರಕಾಶಿಸುವಂತೆ ಮಾಡಲೆಂದು ಕೋರುತ್ತೇವೆ.

ವರ್ತಮಾನಸಂಗ್ರಹ

3ನೇ ದುಂಡುಮೇಜಿನ ಪರಿಷತ್ತಿಗೆ 1,90,000 ರೂಪಾಯಿಗಳು ವೆಚ್ಚವಾದುವಂತೆ!

ವೈಸರಾಯರ ಭವನಕ್ಕೆ ಕೆಲವು ಸಾಮಾನುಗಳನ್ನು ಕೊಂಡುಕೊಳ್ಳಲು 15,000 ರೂಪಾಯಿಗಳು ಮಂಜೂರ್ಮಾಡಲ್ಪಟ್ಟಿವೆ.

ಲಂಡನ್ ನಗರದ ಕಸವನ್ನು ಹೊರಗೆ ಸಾಗಿಸಲಿಕ್ಕೆ ಪ್ರತಿವರ್ಷವೂ 1,50,00,009 ರೂಪಾಯಿಗಳು ವೆಚ್ಚವಾಗುವದಂತೆ!

ಜನವರಿ 21 ನೇ ತಾರೀಖಿನ ದಿವಸ 47,23,253 ರೂ. ಗಳ ಭಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿತು. ಇದುವರೆಗೆ ರವಾನಿಸಿದ ಒಟ್ಟು ಭಂಗಾರದ ಬೆಲೆ 1,08,28,88,461 ರೂ.

ಉಗಂಡಾದೇಶದ ಜನರಿಗೆ ಅವಳಿಮಕ್ಕಳೆಂದರೆ ಬಹಳ ಅಪರೂಪವಂತೆ! ಯಾವಳಾದರೂ ಸ್ತ್ರೀಯಳು ಅವಳಿಮಕ್ಕಳನ್ನು ಪ್ರಸವಿಸಿದರೆ, ಆ ಸಂತೋಷಕ್ಕಾಗಿ ಅವರು ದೊಡ್ಡಹಬ್ಬವನ್ನೇ ಆಚರಿಸುವರು!

ಪಿಳ್ಳಾಪೂರಿನ ಮುನಿಸಿಪಲ್ ಚೇರ್ಮನ್ನರಾದ ರಾವ್‌ಸಾಹೇಬ್ ಗಜ್ಜರರಾಮರವರು ಮಹಾಂತ ಮಾಧುದಾಸ್ ಎಂಬುವರ ಮೇಲೆ ಆರುಕಾಸುಗಳ ಸಲುವಾಗಿ ಒಂದು ಮೊಕದ್ದಮೆಯನ್ನು ಹೂಡಿರುತ್ತಾರೆ.

ಇಟಲಿ ಸರಕಾರದವರು ತಮ್ಮ ದೇಶದ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗಕ್ಕಾಗಿ ಪರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ರೈಲ್ವೆ ಚಾರ್ಜಿನಲ್ಲಿ ಶೇಕಡಾ 50 ರಷ್ಟು ರಿಯಾಯಿತಿಯನ್ನು ತೋರಿಸುವುದಾಗಿ ಪ್ರಕಟಿಸಿರುತ್ತಾರೆ.

ಉಪ್ಪನ್ನು ವಿಶೇಷವಾಗಿ ಉಪಯೋಗಿಸುವದೇ ಇಂದಿನ ಜನಾಂಗದಲ್ಲಿ ಹೆಚ್ಚಿನ ಜನರಿಗೆ ದೃಷ್ಟಿಪಾಟವು ಕಡಿಮೆಯಾಗಿರುವದಕ್ಕೆ ಕಾರಣವೆಂದು ಜರ್ಮನಿಯ ಪ್ರೊಫೆಸರ್ ಲಾಹ್ಮನ್ ಎಂಬ ಪ್ರಸಿದ್ಧ ಶಾಸ್ತ್ರಜ್ಞರು ಶೋಧಮಾಡಿರುವರು.

ಭರತಖಂಡದಲ್ಲಿ ಒಟ್ಟು 675 ಸಿನಿಮಾ ಪ್ರದರ್ಶನ ಶಾಲೆಗಳಿರುವುವು. ಇವುಗಳಿಗಾಗಿ ಒಟ್ಟು 2½ ಕೋಟಿ ರೂಪಾಯಿಗಳ ಬಂಡವಾಳವು ಹಾಕಲ್ಪಟ್ಟಿರುವುದು. ಒಂದುಲಕ್ಷಕ್ಕೆ ಮೇಲ್ಪಟ್ಟು ಜನರು ಇದರಿಂದ ಜೀವನ ಮಾಡುತ್ತಿರುವರು.

ಲಂಡನ್ನಿನ ಟ್ರಾಫಲ್ಗರ್ ಚೌಕದಲ್ಲಿರುವ ನೆಲ್ಸನ್ ಕಂಭವನ್ನು ಮೇಲ್ಭಾಗದಲ್ಲಿರುವ ವಿಗ್ರಹದ ಸಮೇತವಾಗಿ ಒಂದಾವರ್ತಿ ಸ್ವಚ್ಛಮಾಡಿಸಲು 1,500 ರೂ. ಗಳು ವೆಚ್ಚವಾಗುವುವಂತೆ! ಇದನ್ನು ಸ್ವಚ್ಛಮಾಡಿಸಿ ಈಗ್ಗೆ 12 ವರ್ಷಗಳಾಗಿರುತ್ತವೆ.

ಪಾಟ್ನಾ ವಿಶ್ವವಿದ್ಯಾನಿಲಯದವರು ಓರಿಯಾ, ಬಂಗಾಳಿ, ಹಿಂದಿ ಮತ್ತು ಇಂಗ್ಲಿಷ್ ಈ ನಾಲ್ಕು ಭಾಷೆಗಳಿಂದ ಕೂಡಿದ ಒಂದು ಕೋಶವನ್ನು ತಯಾರಿಸುವದಕ್ಕಾಗಿ ಬಾಬು ಗೋಪಾಲಪಹರಾಜರಿಗೆ 5000 ರೂಪಾಯಿಗಳನ್ನು ಕೊಡಬಹುದೆಂದು ಸೆನೆಟ್ ಸಭೆಗೆ ಶಿಫಾರಸ್ ಮಾಡಿರುವರು.

ಕೆಲವು ಶಾಸ್ತ್ರಜ್ಞರು ಪ್ರಯಾಣ ಮಾಡುವ ಕಾಲದಲ್ಲಿ ಎಷ್ಟು ಜಾಗ್ರತೆಯಾಗಿ ಓದಬಹುದೆಂಬುದನ್ನು ಪರೀಕ್ಷಿಸಿ, ಟ್ರಾಂಗಳ ಮೇಲೆ ಕುಳಿತಿದ್ದಾಗ ಓದುವ ವೇಗವು ಶೇಕಡಾ 12 ರಷ್ಟು ಕಡಿಮೆಯಾಗುವುದೆಂದೂ, ಮೋಟಾರು ಬಸ್ಸುಗಳ ಮೇಲೆ ಕುಳಿತು ಓದುವ ವೇಗವು ಶೇಕಡಾ [illegible] ರಷ್ಟು ಕಡಿಮೆಯಾಗುವುದೆಂದೂ ನಿರ್ಧರಿಸಿರುವರು.

ಜಾರ್ಜ್ ಬರ್ನಾರ್ಡ್ ಷಾರವರು ನೇಪಲ್ಸ್ ನಗರಕ್ಕೆ ಹೋಗಿದ್ದ ಕಾಲದಲ್ಲಿ ವೆಸೂವಿಯಸ್‌ಪರ್ವತದ ಮೇಲಕ್ಕೆ ಹೋಗಿದ್ದರು. ಅನಂತರ ಅವರು ಪಾಂಪೆನಗರಕ್ಕೆ ಹೋಗಿದ್ದಾಗ 'ದೇವರು ಈ ನಗರವನ್ನು ಧೂಳು ಮತ್ತು ಬೂದಿಗಳಿಂದ ಮುಚ್ಚಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಮತ್ತೊಮ್ಮೆ ಅವನು ಹಾಗೆಯೇ ಮಾಡಲೆಂದು ಆಶಿಸುತ್ತೇನೆ.' ಎಂದು ಹೇಳಿದರಂತೆ!

1914 ನೇ ವರ್ಷದಲ್ಲಿ ಇಂಗ್ಲೆಂಡ್ ದೇಶವು ಒಟ್ಟು 21,60,000 ಟನ್‌ಗಳ ತೂಕವುಳ್ಳ ಯುದ್ಧದ ಹಡಗುಗಳನ್ನು ಪಡೆದಿತ್ತು; ಆದರೆ ಅವರು ಈ ಸೈನ್ಯವನ್ನು ಕ್ರಮೇಣ ಕಡಿಮೆ ಮಾಡಿಕೊಂಡು ಬರುತ್ತಿರುವುದರಿಂದ 1936 ನೇ ಇಸವಿ ಡಿಸೆಂಬರ್ ತಿಂಗಳ ವೇಳೆಗೆ ಇಂಗ್ಲೆಂಡಿನಲ್ಲಿ ಒಟ್ಟು 11,51,000 ಟನ್‌ಗಳ ತೂಕವುಳ್ಳ ಹಡಗುಗಳು ಮಾತ್ರ ಇರುವವಂತೆ!

ದೆಹಲಿಯಲ್ಲಿ ಒಂದು ಭವ್ಯವಾದ ಅರಮನೆಯಲ್ಲಿ ವಾಸಮಾಡುತ್ತಿದ್ದ 'ಈಸ್ಟ್ ಅಂಡ್ ವೆಸ್ಟ್ ಕಾರ್ಪೋರೇಷನ್' ಸಂಸ್ಥೆಯ ಗವರ್ನರರವರು ಹೈದರಾಬಾದಿನಲ್ಲಿ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ. ಇವರು ಭರತಖಂಡದ ಆದ್ಯಂತದಲ್ಲಿ ಲ್ಯಾಂಕಾಷೈರಿನ ಬಟ್ಟೆಗಳ ವ್ಯಾಪಾರವನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಹತ್ತುಕೋಟಿ ರೂಪಾಯಿಗಳ ಬಂಡವಾಳವುಳ್ಳ ಮೇಲ್ಕಂಡ ಸಂಸ್ಥೆಯನ್ನು ಸ್ಥಾಪಿಸಿದ್ದರಂತೆ!

ಸೈಲೇಷಿಯಾ ದೇಶದ ಪೋಲೀಸರು ಚರ್ಚಿನಲ್ಲಿ ಕಳ್ಳತನ ಮಾಡಿದ ಒಬ್ಬನನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿದಾಗ ಆ ಕಳ್ಳನು ತಾನು ಇದುವರೆಗೆ 217 ಚರ್ಚುಗಳಲ್ಲಿ ಕಳ್ಳತನ ಮಾಡಿರುವೆನೆಂದೂ, ಮತವಿರುದ್ಧವಾದ ಚಳವಳಿಯ ಮುಖ್ಯ ಸಂಚಾಲಕರಾದ ಎಕ್ಸ್-ಜನರಲ್ ಲ್ಯೂಡೆಂಡಾರ್ಫರವರ ಮುಖ್ಯ ಸಹಾಯಾಂಗವೆನಿಸಿದ ಟ್ಯಾನೆನ್‌ಬರ್ಗ್ ಯೂನಿಯನ್ನಿನ ಅಧ್ಯಕ್ಷನೇ ತಾನೆಂದೂ ಒಪ್ಪಿಕೊಂಡನು.

ರಷ್ಯಾ ಸರಕಾರದವರು ಲೆನಿನ್‌ಗ್ರಾಡ್ ನಗರದ ಹೊರಭಾಗದಲ್ಲಿ ರಷ್ಯಾದೇಶದ ಗ್ರಂಥಕರ್ತರಿಗಾಗಿಯೇ ಒಂದು ಪ್ರತ್ಯೇಕ ನಗರವನ್ನು ನಿರ್ಮಿಸಬೇಕೆಂದು ನಿರ್ಧರಿಸಿರುವರು. ಸದರಿ ನಗರದಲ್ಲಿ ಗ್ರಂಥಕರ್ತರಿಗೆ ವಸತಿಗೃಹಗಳೂ, ಒಂದು ವಿಶ್ರಾಂತಿ ಮಂದಿರವೂ, ಒಂದು ನಾಟಕ ಶಾಲೆಯೂ, ಸಿನಿಮಾ ಶಾಲೆಯೂ, ಗ್ರಂಥಪ್ರಕಾಶಕರ ಸಂಸ್ಥೆಯೂ, ಮುದ್ರಣಾಲಯಗಳೂ ಮೊದಲಾಗಿ ಸಮಸ್ತ ಸಲಕರಣಗಳೂ ಸ್ಥಾಪಿಸಲ್ಪಡುವುವು. ಇದಕ್ಕಾಗಿ ಅವರು 4,50,00,000 ರೂಪಾಯಿಗಳನ್ನು ಸ್ಯಾಂಕ್ಷನ್‌ಮಾಡಿರುತ್ತಾರೆ.

ಅಮೇರಿಕೆಯ ಉತ್ತರ ಅರ್ಜೆಂಟಿನಾ ದೇಶದಲ್ಲಿರುವ 'ವಿಮೆಜೊ' ನದಿಯ ತೀರದಲ್ಲಿ 350 ಮೈಲುಗಳ ಉದ್ದವುಳ್ಳ ಪ್ರದೇಶವು ಅಸಂಖ್ಯಾಕಗಳಾದ ಚಿಟ್ಟೆಯ ಹುಳುಗಳಿಂದ ಆಕ್ರಮಿಸಲ್ಪಟ್ಟಿರುವುವು. ಈ ಚಿಟ್ಟೆಯ ಹುಳುಗಳು ಈ ವಿಸ್ತಾರವಾದ ಪ್ರದೇಶದಲ್ಲಿ ಬೆಳೆಯುವ ಹತ್ತಿ, ಗೋಧಿ ಮತ್ತು ಹೊಗೆಸೊಪ್ಪಿನ ಪೈರುಗಳಿಗೆ ಶತ್ರುಗಳಾಗಿರುವುವು. ಅಲ್ಲಿಯ ರೈತರು ಆ ಚಿಟ್ಟೆಯ ಹುಳುಗಳನ್ನು ನಾಶಮಾಡಲು ಯಾವ ಮಾರ್ಗವನ್ನೂ ಕಾಣದೆ, ತಮ್ಮ ಬೆಳೆಗಳು ಹಾಳಾಗುವುದನ್ನು ಕಣ್ಣಾರೆ ನೋಡುತ್ತ ಸುಮ್ಮನಿರಬೇಕಾಗಿರುವುದ

ಎರಡು ವರ್ಷಗಳ ಪೂರ್ವದಲ್ಲಿ ಅಮೇರಿಕೆಯಲ್ಲಿ 513 ಜನ ಕೋಟ್ಯಧೀಶ್ವರರಿದ್ದರು; ಆದರೆ ಆರ್ಥಿಕ ಮುಗ್ಗಟ್ಟಿನಿಂದ ಈಗ 70 ಜನರಿರುವರು. ಆರ್ಥಿಕದುರವಸ್ಥೆಗೆ ಗುರಿಯಾದವರಲ್ಲಿ ಅಮೇರಿಕೆಯ ಪ್ರೆಸಿಡೆಂಟರಾದ ಹರ್ಬರ್ಟ್ ಹೂವರ್‌ರವರೂ ಒಬ್ಬರು! ಇವರ ಒಂದುಕೋಟಿ ರೂಪಾಯಿಗಳ ಐಶ್ವರ್ಯವು ಈಗ 25 ಲಕ್ಷಕ್ಕೆ ಇಳಿದಿರುವದಂತೆ! ಬರುವ ಮಾರ್ಚ್ ತಿಂಗಳಲ್ಲಿ ಇವರು ಅಧ್ಯಕ್ಷ ಪದವಿಯಿಂದ ನಿವೃತ್ತರಾದನಂತರ ಕಳೆದು ಹೋಗಿರುವ ಐಶ್ವರ್ಯವನ್ನು ಪುನಃ ಸಂಪಾದಿಸಲು ಪ್ರಯತ್ನಿಸುವರಂತೆ!

ಅಮೇರಿಕೆಯ ವಾಷಿಂಗ್‌ಟನ್ ನಗರದಲ್ಲಿರುವ ಯುನೈಟೆಡ್ ಸ್ಟೇಟ್ಸ್ ಕಾಂಗ್ರೆಸ್ ಲೈಬ್ರೆರಿಯು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆಂಬ ಪ್ರಸಿದ್ಧಿಯನ್ನು ಪಡೆದಿರುವದು! ಈ ಲೈಬ್ರರಿಯಲ್ಲಿ 44,77,431 ಪುಸ್ತಕಗಳೂ, ಕೋಟಿಗಟ್ಟಲೆ ನಕ್ಷೆಗಳೂ, ಕೈಬರವಣಿಗೆಯ ಪ್ರತಿಗಳೂ, ಸಂಗೀತದ ಪ್ರತಿಗಳೂ ಮತ್ತು ಚಿತ್ರಗಳೂ ಇರುವುವು. ಪ್ರತಿದಿವಸವೂ 505 ಹೊಸಪುಸ್ತಕಗಳು ಲೈಬ್ರರಿಗೆ ಸೇರುವುವಂತೆ! ಈ ಲೈಬ್ರರಿಯಲ್ಲಿ ಸದ್ಯಃ ಇರುವ ಪುಸ್ತಕಗಳ ಬೀರುಗಳನ್ನು ಸಾಲಾಗಿ ನಿಲ್ಲಿಸಿದರೆ 84 ಮೈಲು ಉದ್ದವಾಗುವುದಂತೆ! ಮತ್ತು ಪ್ರತಿವರ್ಷವೂ ಲೈಬ್ರರಿಗೆ ಹೊಸದಾಗಿ ಸೇರುವ ಪುಸ್ತಕಗಳಿಗೆ 3½ ಮೈಲು ಉದ್ದವಾಗುವಷ್ಟು ಹೊಸಬೀರುಗಳು ಬೇಕಂತೆ!

ಕಡೂರಿನಿಂದ ಚಿಕ್ಕಮಗಳೂರಿಗೆ ರೈಲು ಹಾಕುವದಕ್ಕೆ 23 ಲಕ್ಷ ರೂಪಾಯಿಗಳು ಖರ್ಚಾಗುವವೆಂದು ಅಂದಾಜು ಹಾಕಲ್ಪಟ್ಟಿರುವದು. ಇದಕ್ಕಾಗಿ ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ಜನರಿಂದ ರೈಲ್ವೆಸೆಸ್ ಮೂಲಕ 12 ಲಕ್ಷ ರೂಪಾಯಿಗಳನ್ನು ಮಾತ್ರ ವಸೂಲ್ಮಾಡಿರುತ್ತಾರೆ. ಬಾಕಿಯಾಗುವ 11 ಲಕ್ಷ ರೂಪಾಯಿಗಳನ್ನು ಕಲ್ಕತ್ತೆಯ ಒಂದು ಕಂಪೆನಿಯವರು ಕೊಡುವರೆಂದೂ. ಇಷ್ಟರಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸುವರೆಂದೂ ವರ್ತಮಾನವಿದೆ.

ಪ್ರಪಂಚದಲ್ಲಿ ಅತ್ಯಂತ ಅಲ್ಪ ಅವಧಿಯುಳ್ಳ ವಿವಾಹವೊಂದು ಅಮೇರಿಕೆಯಲ್ಲಿ ಜರುಗಿತು. ಎಲಿನರ್ ಫೇರ್ ಎಂಬ ಸಿನಿಮಾ ನಟಿಯೊಬ್ಬಳು ಫ್ರಾಂಕ್‌ಕ್ಲಾರ್ಕ್ ಎಂಬ ವೈಮಾನಿಕನನ್ನು ಮದುವೆಯಾಗಲು ಒಪ್ಪಿಕೊಂಡಿದ್ದಳು. ಒಂದು ದಿನ ಇವರಿಬ್ಬರಿಗೂ ಜಗಳವಾಗಲು, ಅವಳು ತನ್ನ ಭಾವೀಪತಿಗೆ ಬುದ್ಧಿ ಕಲಿಸಬೇಕೆಂದು ಏರೋಪ್ಲೇನಿನಲ್ಲಿ ಆರಿಜೋನಾ ಪ್ರಾಂತಕ್ಕೆ ಸೇರಿದ ಯೂಮಾ ಎಂಬ ಊರಿಗೆ ಹೋಗಿ ಜಾರ್ಜ್ ಡ್ಯಾನಿಯಲ್ ಎಂಬ ದಲ್ಲಾಳಿಯನ್ನು ಮದುವೆಯಾದಳು. ಅಲ್ಲಿಂದ ಕೂಡಲೇ ಅದೇ ವಿಮಾನದಲ್ಲಿಯೇ ಹಿಂತಿರುಗಿ ಬಂದು ವಿವಾಹವಿಚ್ಛೇದನಕ್ಕೆ ಕೋರ್ಟಿನಲ್ಲಿ ಅರ್ಜಿಯನ್ನು ಹಾಕಿದಳು. ಜಾರ್ಜ್ ಡ್ಯಾನಿಯಲ್ಲನು ಇವಳಿಗೆ 3 ಗಂಟೆಗಳಕಾಲ ಮಾತ್ರವೇ ಪತಿಯೆನಿಸಿಕೊಂಡಿದ್ದನಂತೆ!

ಅನೇಕ ಸಹಸ್ರ ವರ್ಷಗಳಹಿಂದೆ ವಾಸವಾಗಿದ್ದ ಒಬ್ಬ ಮನುಷ್ಯನ ತಲೆಬುರುಡೆಯು 1927 ನೇ ಇಸವಿಯಲ್ಲಿ ಸಹರಾ ಮರುಭೂಮಿಯಲ್ಲಿ ಫ್ರೆಂಚ್ ಶಾಸ್ತ್ರಜ್ಞರಿಗೆ ದೊರಕಿತು. ಅವರು ಅದನ್ನು ಪ್ಯಾರಿಸ್ಸಿನಲ್ಲಿರುವ ತಮ್ಮ ಶೋಧನಾಲಯದಲ್ಲಿ ಇಲ್ಲಿಯವರೆಗೂ ಪರೀಕ್ಷಿಸಿ, ಸಹರಾ ಮರುಭೂಮಿಯು ಪೂರ್ವದಲ್ಲಿ ಜಲವೃಕ್ಷಾದಿಗಳಿಂದ ಕೂಡಿ ಫಲವತ್ತಾಗಿದ್ದ ಪ್ರದೇಶವಾಗಿತ್ತೆಂದೂ, ಕಾರಣಾಂತರದಿಂದ ಈಚೆಗೆ ಅದರ ಮೇಲೆ ಮರಳು ಮುಚ್ಚಿಕೊಂಡಿತೆಂದೂ ನಿರ್ಧರಿಸಿರುತ್ತಾರೆ.

'ವಿಟ್ಮನ್ ಫೌಂಡೇಷನ್' ಎಂಬ ಸಂಸ್ಥೆಯ ಡೈರೆಕ್ಟರಾದ ಡಾಕ್ಟರ್ ಆಲ್ಬರ್ಟ್ ಎಸ್. ಹೈಮನ್‌ರವರು ಹೃದಯ ಸಂಬಂಧವಾದ ರೋಗದಿಂದ ಇದ್ದಕ್ಕಿದ್ದ ಹಾಗೆ ಮೃತಿಹೊಂದುವವರನ್ನು ಬದುಕಿಸಬಲ್ಲ ಆಶ್ಚರ್ಯಕರವಾದ ಒಂದು ಹೊಸ ಯಂತ್ರವನ್ನು ನಿರ್ಮಿಸಿರುವರು. ಇದುವರೆಗೆ ಇವರು ಮಾಡಿರುವ ಪ್ರಯೋಗಗಳಿಂದ 100 ರಲ್ಲಿ 59 ರಷ್ಟು ಜನರು ಬದುಕಿರುವರು. ಮೃತಪಟ್ಟ ಹತ್ತು ನಿಮಷಗಳೊಳಗಾಗಿ ಈ ಯಂತ್ರವನ್ನು ಉಪಯೋಗಿಸಬೇಕೇ ಹೊರತು ಸಾವಕಾಶವಾದಲ್ಲಿ ಅದರಿಂದ ಏನೂ ಪ್ರಯೋಜನವಿಲ್ಲವಂತೆ! ಈ ಯಂತ್ರದಲ್ಲಿ ಇಂಜಕ್ಷನ್ ಕೊಡುವಂತಹ ಒಂದು ಉದ್ದವಾದ ಸೂಜಿಯಿರುವದು. ಈ ಸೂಜಿಯನ್ನು ಹೃದಯಕ್ಕೆ ಚುಚ್ಚಿದರೆ, ಅದರಲ್ಲಿ ಪ್ರವಹಿಸುತ್ತಿರುವ ವಿದ್ಯುಚ್ಛಕ್ತಿಯು ಹೃದಯದಲ್ಲಿ ಕೃತ್ರಿಮವಾದ ಚಲನೆಯನ್ನು ಪ್ರಾರಂಭಿಸಿ ತನ್ಮೂಲಕವಾಗಿ ಹೃದಯದಲ್ಲೆಲ್ಲಾ ಚಲನೆಯುಂಟಾಗುವಂತೆ ಮಾಡುವದಂತೆ!

16 ನೆಯ ಶತಮಾನದಲ್ಲಿ ಟರ್ಕಿಯವರು ಕ್ರೋಡ್ ಎಂಬ ಪ್ರದೇಶದ ಹತ್ತಿರದಲ್ಲಿ ಮುಳುಗಿಸಿದ್ದ ವೆನಿಸ್ ದೇಶದ ಯುದ್ಧದ ಹಡಗೊಂದನ್ನು ಮೊನ್ನೆಮೊನ್ನೆ ಇಟಲಿ ಸರಕಾರದವರು ಸಮುದ್ರದ ತಳದಿಂದ ಮೇಲಕ್ಕೆ ಎತ್ತಿಸಿದರು. ಇದರಂತೆಯೇ ಕ್ರಿಸ್ತಪೂರ್ವ 480 ರಲ್ಲಿ ಅಂದರೆ ಈಗ್ಗೆ 2412 ವರ್ಷಗಳ ಪೂರ್ವದಲ್ಲಿ ಸಾಲಮಿಸ್ ಎಂಬ ಸ್ಥಳದಲ್ಲಿ ನಡೆದ 'ಪ್ರಪಂಚದ ಮೊದಲನೇ ನಾವಿಕಯುದ್ಧದಲ್ಲಿ' ಗ್ರೀಕ್ ಸೈನಿಕರಿಂದ ಪರ್ಷಿಯಾದೇಶದ ಕೆಲವು ಯುದ್ಧದ ಹಡಗುಗಳು ಮುಳುಗಿಸಲ್ಪಟ್ಟಿರುವುವಂತೆ! ಇಟಲಿ ಸರಕಾರದವರು ಈಗ ಅವುಗಳನ್ನೆಲ್ಲಾ ಮೇಲಕ್ಕೆ ಎತ್ತಿಸಬೇಕೆಂದು ಪ್ರಯತ್ನಿಸುತ್ತಿರುವರು. ಈ ಹಡಗುಗಳು ಬಹಳ ಶ್ರೇಷ್ಠವಾದ ಟರ್ಕಿ ಮತ್ತು ಪರ್ಷಿಯಾದೇಶಗಳ 'ಓಕ್' ಮರದ ಹಲಗೆಗಳಿಂದ ತಯಾರಿಸಲ್ಪಟ್ಟಿರುವವೆಂದೂ, ಈಗಲೂ ಅವು ಸ್ವಲ್ಪವೂ ಕೆಡದೆ ಉತ್ತಮಸ್ಥಿತಿಯಲ್ಲಿಯೇ ಇರುವುವೆಂದೂ ಇಟಲಿ ಸರಕಾರದವರು ನಂಬಿರುತ್ತಾರೆ.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ ಸದ್ಯಃ 1,30,00,000 ಜನ ನಿರುದ್ಯೋಗಿಗಳಿರುವರು. ಈ ಸಂಖ್ಯೆಯು ದಿನೇದಿನೇ ಹೆಚ್ಚುತ್ತಲೇ ಇರುವದು. ಹೊಸಹೊಸ ಯಂತ್ರಸಾಧನಗಳ ನಿರ್ಮಾಣವೇ ಇದಕ್ಕೆ ಕಾರಣವಾಗಿರುವದು. ಮೊನ್ನೆಮೊನ್ನೆ ಒಂದು ಕಬ್ಬಿಣದ ಕಾರ್ಖಾನೆಯು ಸ್ಥಾಪಿಸಲ್ಪಟ್ಟಿತು. ಅದರಲ್ಲಿ ಸ್ಥಾಪಿಸಿರುವ ಯಂತ್ರಗಳ ಸಹಾಯದಿಂದ ಒಬ್ಬ ಮನುಷ್ಯನು ವರ್ಷ 1 ಕ್ಕೆ 4000 ಟನ್ ರಾಡುಕಬ್ಬಿಣವನ್ನು ತಯಾರಿಸಬಲ್ಲನಂತೆ! ಮತ್ತೊಂದು ಸಿಗರೇಟ್ ಯಂತ್ರದಿಂದ ನಿಮಿಷವೊಂದಕ್ಕೆ 2,500 ಸಿಗರೇಟುಗಳನ್ನು ತಯಾರಿಸಬಹುದಂತೆ! 1919 ನೇ ಇಸವಿಯಲ್ಲಿ ಒಬ್ಬ ಮನುಷ್ಯನು ದಿನ 1 ಕ್ಕೆ 75 ಎಲೆಕ್ಟ್ರಿಕ್ ಬಲ್ಬುಗಳನ್ನು ತಯಾರಿಸುತ್ತಿದ್ದನು. 1920 ನೆಯ ಇಸವಿಯಲ್ಲಿ ಯಂತ್ರದ ಸಹಾಯದಿಂದ ಅದೇ ಮನುಷ್ಯನು ದಿನ 1 ಕ್ಕೆ 73,000 ಬಲ್ಬುಗಳನ್ನು ತಯಾರಿಸುತ್ತಿದ್ದನು. ಆದರೆ ಇಂದಿನ ನೂತನಸಾಧನಗಳಿಂದ ದಿನ 1 ಕ್ಕೆ ಒಬ್ಬ ಮನುಷ್ಯನು 1,50,000 ಬಲ್ಬುಗಳನ್ನು ತಯಾರಿಸಬಲ್ಲನಂತೆ!

ಕೆನ್ಸಿಂಗ್‌ಟನ್ ನಗರದಲ್ಲಿ 'ಸೆಂಟಿನೇರಿಯನ್ ಕ್ಲಬ್' ಎಂಬ ಸಂಸ್ಥೆಯಿರುವದು. ಈ ಸಂಘದಲ್ಲಿ ಒಟ್ಟು 6000 ಮೆಂಬರರಿರುವರು. ಜರ್ಮನಿಯ ಮಾಜಿ ಕೈಸರರ ಕನಿಷ್ಠಪುತ್ರನೂ, ಗಾಂಧಿಯವರೂ ಇದಕ್ಕೆ ಮೆಂಬರರಾಗಿರುವರು. ಮನುಷ್ಯನು ಮುಪ್ಪಾಗಲು ಮೂಲಕಾರಣವೇನೆಂಬುದನ್ನು ಕಂಡುಹಿಡಿಯಬೇಕೆಂದೇ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು. ಈ ಸಂಘದ ಅಧ್ಯಕ್ಷರಾದ ಡಾಕ್ಟರ್ ಮಾರಿಸ್ ಅರ್ನೆಸ್ಟ್ ಎಲ್.ಎಲ್.ಡಿ. ಯವರು ತಮ್ಮ ಶೋಧನಗಳು ಪೂರ್ಣವಾಗಿ ಮುಪ್ಪಿನ ಮೂಲಕಾರಣವು ಬಹಿರಂಗವಾಗಿರುವುದೆಂದೂ, ತಮ್ಮ ಸಲಹೆಯ ಪ್ರಕಾರ ವರ್ತಿಸುವವರೆಲ್ಲರೂ 120 ವರ್ಷಗಳವರೆಗೂ ಜೀವಿಸಬಹುದೆಂದೂ ಹೇಳುತ್ತಿರುವರು. ಇದರ ಸಂಬಂಧವಾಗಿ ಹೆಚ್ಚಿನ ವಿಷಯಗಳಾವುವೂ ಇನ್ನೂ ಬಹಿರಂಗಪಡಿಸಲ್ಪಟ್ಟಿಲ್ಲ. ಇಷ್ಟರಲ್ಲಿಯೇ ಇವರು ತಮ್ಮ ಸಂಘದ ವಿಶೇಷ ಸಭೆಯೊಂದನ್ನು ಸೇರಿಸಲಿರುವರು. ಆ ಸಭೆಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬರುವರು. ಆಗ ಇದರ ನಿಜಾಂಶವು ಬಹಿರಂಗಪಡಿಸಲ್ಪಡುವದು.

ಜನವರಿ 21 ನೆಯ ತಾರೀಖಿನ ದಿವಸ ಮುಂಬಯಿಯ ಕಾಟನ್ ಎಕ್ಸ್‌ಛೇಂಜಿನ ಬಳಿ ಪಿಕೆಟಿಂಗ್ ಮಾಡಿದ್ದಕ್ಕಾಗಿ 10 ಜನ ಸ್ವಯಂಸೇವಕರನ್ನೂ, ರಸ್ತೆಗಳಲ್ಲಿ ಚಳವಳಿಯ ಸಂಬಂಧವಾದ ಕಾರ್ಯಕ್ರಮಗಳನ್ನು ಬರೆದುದಕ್ಕಾಗಿ 3 ಜನ ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು.

ಸ್ವಾತಂತ್ರ್ಯದಿನಾಚರಣೆಯ ದಿವಸ ಕಾಂಗ್ರೆಸ್ ಸ್ವಯಂಸೇವಕರು ಮದ್ರಾಸ್ ನ್ಯಾಯವಿಧಾಯಕಸಭೆಯಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಪಟಾಕಿಯನ್ನು ಹತ್ತಿಸಿ ಸಭಾಭವನದಲ್ಲಿ ಎಸೆದರು. ಮತ್ತೊಬ್ಬನು ಯೂನಿಯನ್‌ಜಾಕ್ ಬಾವುಟಕ್ಕೆ ಬೆಂಕಿಹತ್ತಿಸಿ ಸ್ತ್ರೀಯರ ಗ್ಯಾಲರಿಗೆ ಎಸೆದನು. ಕೆಲವರು 'ಮದ್ರಾಸಿನ ಕಾಂಗ್ರೆಸ್ ಇಂಡಿಪೆಂಡೆನ್ಸ್ ಪಂಗಡ' ದವರ ಹೆಸರಿನಿಂದ ಹೊರಡಿಸಲ್ಪಟ್ಟಿದ್ದ ಹಸ್ತಪತ್ರಿಕೆಗಳನ್ನು ಎಸೆದರು. ಪೋಲೀಸರು ಈ ಸಂಬಂಧವಾಗಿ ಕೆಲ ಜನರನ್ನು ದಸ್ತಗಿರಿಮಾಡಿರುತ್ತಾರೆ.

ರಾಜರ್ಷಿಪದವಿಯು ಬೇಕಂತೆ!

ಆಳ್ವಾರ್ ಮಹಾರಾಜರಿಗೆ ರಾಜರ್ಷಿಪದವಿಯ ಹಂಬಲವು ವಿಶೇಷವಾಗಿರುವುದಾಗಿ ತಿಳಿದುಬರುತ್ತದೆ. ತಾವು ರುಜು (ಸಹಿ) ಮಾಡಬೇಕಾದರೂ ತಮ್ಮ ಹೆಸರಿನ ಹಿಂದೆ ಈ ಶಬ್ದವನ್ನು ಸೇರಿಸುವರಂತೆ! ಇನ್ನು ಮುಂದೆ ಬ್ರಿಟಿಷ್ ಗವರ್ನಮೆಂಟಿನವರು ತಮಗೆ ರಾಜರ್ಷಿಶಬ್ದವನ್ನುಪಯೋಗಿಸಿ ಪತ್ರವ್ಯವಹಾರಮಾಡಬೇಕೆಂದು ಇಂಡಿಯಾ ಸರಕಾರಕ್ಕೆ ಬರೆದುಕೊಂಡಿದ್ದರೆಂದೂ, ಅದಕ್ಕೆ ಅವರು ನಿಮ್ಮ ಇಷ್ಟದಂತೆ ಬರೆಯಲು ಸಾಧ್ಯವಿಲ್ಲವೆಂದು ಉತ್ತರವನ್ನಿತ್ತರೆಂದೂ ವದಂತಿಯಿದೆ. ಲೋಕದ ಜನಾಂಗವು ಪ್ರಯೋಗಿಸದೆ ತಮಗೆ ತಾವೇ ಪ್ರಯೋಗಿಸಿಕೊಳ್ಳುತ್ತಿರುವುದೂ, ಇಂಡಿಯಾ ಸರಕಾರಕ್ಕೆ ಹೀಗೆಯೇ ಬರೆದುಕೊಳ್ಳಬೇಕೆಂದು ಬೇಡಿಕೊಳ್ಳುತ್ತಿರುವುದೂ ಇದೆಂತಹ ರಾಜರ್ಷಿತ್ವವೋ!

[3ನೆಯ ಪುಟದಿಂದ ಮುಂದುವರಿದುದು.]

4 18. ಚಂದ್ರನನ್ನು ಮುಚ್ಚಿಕೊಂಡಿರುವ ಮೇಘವು ಮುಂದು ಮುಂದಕ್ಕೆ ಸಂಚರಿಸಿಕೊಂಡು ಹೋಗುತ್ತಿರುವಾಗ್ಗೆ, ಇದನ್ನು ನೋಡುತ್ತಿರುವ ಅಜ್ಞಾನಿಯು ಚಂದ್ರನೇ ಮುಂದಕ್ಕೆ ಚಲಿಸಿಕೊಂಡು ಹೋಗುತ್ತಿರುವನೆಂದು ತಿಳಿಯುವಂತೆ ಶರೀರದಲ್ಲಿರುವ ಪಂಚೇಂದ್ರಿಯಗಳು ತಮ್ಮ ತಮ್ಮ ಕಾರ್ಯಗಳನ್ನು ಸ್ವಭಾವವಾಗಿ ನಡಿಸಿಕೊಂಡು ಬರುತ್ತಿರುವಾಗ್ಗೆ ಭಗವಂತನೇ ಆ ಕಾರ್ಯಗಳನ್ನು ನಿಂತು ಮಾಡುತ್ತಿರುವನೆಂದು ತಿಳಿದುಕೊಳ್ಳುವುದೇ ಮಾನವನ ಅಜ್ಞಾನವು. ಅಂದರೆ, ಭಗವಂತನು ನಿರ್ಲಿಪ್ತನೆಂದು ತಿಳಿಯಬೇಕು.

5 19. ಸೂರ್ಯನ ಬೆಳಕಿನಲ್ಲಿ ಮಾನವರು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಹೇಗೆ ನೆರವೇರಿಸಿಕೊಳ್ಳುತ್ತಿರುವರೋ ಹಾಗೆಯೇ ಶರೀರ, ಪಂಚೇಂದ್ರಿಯಗಳು, ಮನಸ್ಸು, ಇವುಗಳು ತಮತಮಗೆ ವಿಧಾಯಕವಾದ ಕಾರ್ಯಕ್ರಮಗಳು ಭಗವಂತನ ಆಶ್ರಯದಲ್ಲಿ ನೆರವೇರಲ್ಪಡುತ್ತಿರುವುದೆಂದು ತಿಳಿದುಕೊಳ್ಳಬೇಕು.

6 20. ಅಂತರಿಕ್ಷಕ್ಕೆ ಯಾವ ಬಣ್ಣವೂ ಇರುವುದಿಲ್ಲ! ಅಲ್ಲಿ ಕಾಣುಬರುವ ನೀಲಿ, ಮುಂತಾದ ಗುಣಭಾಗಗಳೆಲ್ಲವೂ ನಿರ್ಮಲ ನಿರಾಕಾರವಾದ ಆಕಾಶದಲ್ಲಿಯೇ ಇರುವುದೆಂದು ಅಜ್ಞಾನಿಯು ಹೇಗೆ ಹೇಳುವನೋ, ಹಾಗೆಯೇ ಶರೀರದಕಾರ್ಯ, ಪಂಚೇಂದ್ರಿಯಗಳೂ, ಮನಸ್ಸೂ ಇವುಗಳು ಮಾಡುತ್ತಿರುವ ಪ್ರತಿಯೊಂದು ಕಾರ್ಯಗಳನ್ನೆಲ್ಲಾ, ನಿರ್ಮಲನಾಗಿಯೂ, ಚತುರನಾಗಿಯೂ, ಅಂತರ್ಯಾಮಿಯಾಗಿಯೂ ಇರುವ ಭಗವಂತನೇ ಮಾಡುತ್ತಿರುವನೆಂದು ಅಜ್ಞಾನಿಗಳು ಹೇಳಿಕೊಳ್ಳುವರು. ಅಂದರೆ ಭಗವಂತನು ಜೀವಾತ್ಮನ ಯೋಗ್ಯತೆಯಂತೆ ಪ್ರೇರಕನಾಗಿನಿಂತು ಜೀವನಿಂದಲೇ ಕಾರ್ಯಗಳು ನೆರವೇರಲ್ಪಡುತ್ತಿರುವುದೆಂದು ತಿಳಿಯಬೇಕು.

21. ಚಂದ್ರನು ನೀರಿನಲ್ಲಿ ಪ್ರತಿಫಲಿಸುವುದುಂಟಷ್ಟೆ. ಆಗ್ಗೆ ನೀರಿನ ಅಲೆಗಳು ತಮ್ಮಷ್ಟಕ್ಕೆ ತಾವೇ ಮೇಲಕ್ಕೆ ಏಳುವುದೆಂದು ಮಾನವನು ತಿಳಿದುಕೊಳ್ಳದೆ ಆ ಅಲೆಗಳನ್ನು ಚಂದ್ರನೇ ಏಳಿಸುವನೆಂದು ಅಜ್ಞಾನಿಯು ತಿಳಿಯುವಂತೆಯೇ, ಮನಸ್ಸಿಗೂ, ಇಂದ್ರಿಯಗಳಿಗೂ ಸಂಬಂಧಪಟ್ಟ ಕಾರ್ಯಗಳೂ, ಅವುಗಳ ಶಕ್ತಿಗಳೂ ಇವುಗಳನ್ನು ಜೀವಾತ್ಮನು ನಡೆಸುತ್ತಿರುವನೆಂದು ತಿಳಿಯುವುದೇ ಸಾಧುವು. ಇವುಗಳನ್ನು ಭಗವಂತನೇ ನಿಂತು ನಡೆಸುವನೆಂದು ಹೇಳುವುದು ಅಜ್ಞಾನವು.

22. ಚಿತ್ತವು ಯಾವ ವಿಷಯದಲ್ಲಿ ನೆಲೆಗೊಳ್ಳುವುದೋ ಅಲ್ಲಿ ಅನುರಾಗ, ಮಮತೆ, ಸಂತೋಷ, ದುಃಖ ಈ ಗುಣಗಳೆಲ್ಲಾ ತಲೆದೋರುವುವು. ಮಾನವನು ಗಾಢನಿದ್ರೆಯಲ್ಲಿರುವಾಗ್ಗೆ, ಇಂದ್ರಿಯ ಕಾರ್ಯಗಳೆಲ್ಲಾ ನಿಂತುಹೋಗಿ ಏನೂ ತೋರಿಬರುವುದಿಲ್ಲ. ವಸ್ತು ಸಂಪರ್ಕದಿಂದ ಚಿತ್ತವು ಚಾಂಚಲ್ಯವನ್ನು ಹೊಂದುವುದೆಂದು ಭಾವವು.

23. ಸೂರ್ಯನಲ್ಲಿ ಬೆಳಕೂ, ನೀರಿನಲ್ಲಿ ನೈರ್ಮಲ್ಯವೂ ಬೆಂಕಿಯಲ್ಲಿ ಕಾವೂ ಇರುವುದು ಹೇಗೆ ಸ್ವಭಾವಗುಣಗಳಾಗಿವೆಯೋ, ಹಾಗೆಯೇ ಜೀವಾತ್ಮನಲ್ಲಿ ಜೀವಿತಶಕ್ತಿಯೂ, ಬುದ್ಧಿವಂತಿಕೆಯೂ ನಿರ್ಮಲತೆಯೂ, ಶಾಶ್ವತವೂ ಸರ್ವಾಂತರ್ಯಾಮಿತ್ವವೂ ಸ್ವಭಾವವಾಗಿರುವುವು.

24. ಈ ಶರೀರದಲ್ಲಿ, ಜೀವಾತ್ಮನೂ, ಬುದ್ಧಿಯೂ ಬೇರೆ ಬೇರೆಯಾಗಿವೆ. ಜೀವಾತ್ಮನಾದರೋ ಜೀವಿತಶಕ್ತಿ (ನಾಶರಹಿತನು) ಯುಕ್ತಿ, ಬುದ್ಧಿವಂತಿಕೆ ಈ ಗುಣಗಳನ್ನು ಹೊಂದಿರುವನು ಬುದ್ಧಿಯು, ತಿಳಿವು, ಚಾತುರ್ಯಗುಣಗಳನು ಹೊಂದಿದೆ. ಜೀವಾತ್ಮನೂ, ಬುದ್ಧಿಯೂ ಇವೆರಡೂ ಸೇರಿ ಕಾರ್ಯಗಳನ್ನು ಇಂದ್ರಿಯಗಳಮೂಲಕ ನಡೆಸುತ್ತಿರುವಾಗ್ಗೆ ಮಾನವನು "ನಾನು ಈ ಕಾರ್ಯವನ್ನು ಮಾಡುತ್ತೇನೆ." ಎಂದು ಹೇಳಿಕೊಳ್ಳುವನಲ್ಲದೆ "ನನಗೆ ಈ ವಿಷಯವು ತಿಳಿಯಿತು" ಎಂದು ಹೇಳಿಕೊಳ್ಳುವನು.

ವೈಸರಾಯರ ತೀರ್ಪಿನ ಮೇಲೆ ಗಾಂಧಿಯವರ ಹೇಳಿಕೆ.

ಪೂನಾ ಜ ೨೪

ವೈಸರಾಯರ ತೀರ್ಪಿನ ವಿಷಯವಾಗಿ ಗಾಂಧಿಯವರು ಈ ಕೆಳಗೆ ಕಂಡ ಹೇಳಿಕೆಯನ್ನು ಹೊರಡಿಸಿರುತ್ತಾರೆ.

"ಈಗ ದೇಶದ ಮುಂದಿರುವ ಅಸ್ಪೃಶ್ಯತಾ ನಿವಾರಣಾ ಮಸೂದೆಗಳೆರಡರ ವಿಷಯದಲ್ಲಿ ವೈಸರಾಯರು ಪ್ರಕಟಿಸಿರುವ ತೀರ್ಪನ್ನು ಪರಿಶೀಲಿಸಿದರೆ, ಸಾಮಾನ್ಯವಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸದೆ ಇರಲಾರೆನು. ಡಾ|| ಸುಬ್ಬರಾಯನ್‌ರವರ ಮಸೂದೆಯು ದೇವಸ್ಥಾನಪ್ರವೇಶ ಪ್ರಶ್ನೆಗೆ ಮಾತ್ರ ಸಂಬಂಧಿಸಿರುತ್ತದೆ. ಅದರಲ್ಲೂ ಮದರಾಸು ಅಧಿಪತ್ಯಕ್ಕೆ ಅನ್ವಯಿಸುತ್ತದೆ. ಪ್ರತಿಯೊಂದು ದೇವಸ್ಥಾನದ ಪ್ರವೇಶವೂ, ಯಾರು ದೇವಸ್ಥಾನ ಪ್ರವೇಶಕ್ಕೆ ಬಾಧ್ಯರಾಗಿರುತ್ತಾರೋ ಅಂಥವರ ಮೆಜಾರಿಟಿ ಅನುಮೋದನೆಯ ಮೇಲೆ ನಿಂತಿದೆ. ಆದ ಪ್ರಯುಕ್ತ ನನ್ನ ರಾಜೀಸಲಹೆಯಂತೆ ಕೇವಲ ಅಲ್ಪಸ್ವಲ್ಪ ಮೈನಾರಿಟಿಯಲ್ಲಿರುವವರ ಮತಸಂಬಂಧದ ಆಚರಣೆಗೆ ಸುಧಾರಕರು ಅಡಚಣೆಯನ್ನು ತಂದೊಡ್ಡದೆ ಗೌರವಿಸಿದರೆ, ಪಂಗಡ ಪಂಗಡಗಳಲ್ಲಿ ದ್ವೇಷಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ. ಸನಾತನಧರ್ಮಿಗಳ ದೃಷ್ಟಿಯಿಂದ ಇದು ಅಸಾಧ್ಯವಾಗಿದೆ. ಎರಡು ಮಸೂದೆಗಳ ಪೈಕಿ ಮದ್ರಾಸು ಮಸೂದೆಯು ಸ್ವಲ್ಪ ಕೆಲಸಕ್ಕೆ ಬಂದೀತೆಂದು ಅವರ ಅಭಿಮತವಾಗಿತ್ತು. ಅದನ್ನು ಸುಧಾರಿಸಲು ಸುಧಾರಕರಿಗೆ ಸುಲಭಸಾಧ್ಯವಾಗುತ್ತಿದ್ದಿತು. ವೈಸರಾಯರ ಅಂಗೀಕಾರಕ್ಕೆ ಹೊಣೆಯಾಗಿದ್ದ ನನ್ನ ಗುರುವಾಯೂರು ಪ್ರಶ್ನೆಯ ಉಪವಾಸವನ್ನು ಯಶಸ್ವಿಯಾಗಿ ಅದು ನಿಲ್ಲಿಸುವಂತೆ ಮಾಡುತ್ತಿದ್ದಿತು. ಆದರೆ ಇಂಡಿಯಾ ಸರ್ಕಾರದ ಇಷ್ಟವೇ ಬೇರೆಯಾಯಿತು. ಭಗವಂತನ ಕೈಯನ್ನು ಹುಡುಕಲು ಸೂಕ್ಷ್ಮ ಸೂಕ್ಷ್ಮವಾಗಿ ನನ್ನನ್ನು ಭಗವಂತನು ಪರೀಕ್ಷಿಸಬೇಕೆಂದು ಇಷ್ಟಪಡುವ ಹಾಗೆ ತೋರುತ್ತದೆ. ಭಗವಂತನು ಆ ಪ್ರಕಾರ ಬಯಸುವುದಾದರೆ, ಆತನ ಪಾದಾರವಿಂದದಲ್ಲಿ ಮುಕ್ತರಾಗುವುದಕ್ಕೆ ಭಕ್ತರಿಗೆ ಶಕ್ತಿ ಸಾಮರ್ಥ್ಯಗಳನ್ನೆಸಗುವಂತೆ ನನಗೂ ಎಸಗಲೆಂದು ಹಾರೈಸುವೆನು"

ಮಿ|| ರಂಗಯ್ಯರ ಮಸೂದೆಯ ವಿಷಯದಲ್ಲಿ ಪ್ರಸ್ತಾಪಿಸಿ ಹೇಳುವುದೇನೆಂದರೆ:—

"ಈ ಮಸೂದೆಗೆ ವೈಸ್ರಾಯರು ಅನುಮತಿಕೊಟ್ಟಿರುವುದನ್ನು ನೋಡಿದರೆ ಹಿಂದೂಗಳಿಗೂ ಮತ್ತು ಸುಧಾರಕರಿಗೂ ಪ್ರಯೋಜನವಿಲ್ಲದೆ ಹಾಕಿದಸವಾಲೆಂದೇ ಹೇಳಬೇಕಾಗುತ್ತದೆ. ಸರ್ಕಾರದ ತೀರ್ಪು ದೇವದತ್ತವಾದ ಅಂಶವೆಂದು ಭಾವಿಸಬೇಕಾಗಿದೆ. ಕಳೆದ ಸೆಪ್ಟಂಬರು ತಿಂಗಳಿನಲ್ಲಿ ಬೊಂಬಾಯಿಯಲ್ಲಿ ಆದ ತೀರ್ಮಾನವನ್ನು ಅಕ್ಷರಶಃ ಪಾಲಿಸಲು ಈಗ ಯೋಗ್ಯಅವಕಾಶವು ಸನ್ನಿಹಿತವಾಗಿದೆ ಎಂದು ತಿಳಿಯಬೇಕು. ಯಾವ ಹಿಂದುವೇ ಆಗಲಿ, ಹಿಂದೂ ಧರ್ಮವನ್ನು ಪಾಲಿಸಲು ಆತುರನಾಗಿರುವನೋ ಮತ್ತು ಹರಿಜನರಿಗೆ ವಿಶ್ವಾಸಪೂರ್ವಕವಾಗಿಕೊಟ್ಟ ವಚನವನ್ನು ಸಲ್ಲಿಸಲು ಹಿಂದೆಗೆಯನೋ ಅಂಥವನು ದೊರೆತ ಈ ಸುಸಂಧಿಯನ್ನು ಕಳೆದುಕೊಳ್ಳಲಾಗದು. ಅಖಿಲಭಾರತದ ಮೇಲ್ಕಂಡ ಮಸೂದೆಯನ್ನು ನಾನು ಓದಿ ಮನನಮಾಡಿಕೊಂಡಿರುವಂತೆ ಸನಾತನಿಗಳೂ ಓದಿ ಅರ್ಥಮಾಡಿಕೊಂಡಿದ್ದೇ ಆದರೆ ಅವರೂ ಸಹ ಅದನ್ನು ಪ್ರತಿಭಟಿಸಲಾರರೆಂಬುದು ನನ್ನ ಅಭಿಪ್ರಾಯ. ಅಸ್ಪೃಶ್ಯರಿಗೆ ಶಾಸನರೀತ್ಯಾ ಕುಂದುಕೊರತೆಗಳನ್ನು ಉಂಟುಮಾಡಲು ಈ ಮಸೂದೆಯು ಅಡ್ಡಕಟ್ಟುತ್ತದೆ.'

ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ ಗಾಂಧಿಯವರು ಈ ಪ್ರಕಾರ ಹೇಳಿದ್ದಾರೆ:—"ಇನ್ನು ಮೇಲೆ ದೇವಸ್ಥಾನ ಪ್ರವೇಶದ ಸಮಸ್ಯೆಯು ತೀರ ದಕ್ಷಿಣಭಾಗದ ಗುರುವಾಯೂರಿನಿಂದ ತೀರ ಉತ್ತರದಲ್ಲಿರುವ ಹರದ್ವಾರದವರೆಗೆ ಹಬ್ಬುವಂತಾಗಿರುವುದು. ಸದ್ಯಃ ನನ್ನ ಉಪವಾಸವು ನಿಲ್ಲಿಸಲ್ಪಟ್ಟಿದ್ದರೂ, ಅದು ಕೇವಲ ಗುರುವಾಯೂರಿನ ಸಲುವಾಗಿ ಮಾತ್ರವಲ್ಲದೆ, ಎಲ್ಲಾ ದೇವಸ್ಥಾನಗಳ ಸಲುವಾಗಿಯೂ ಅನುಕರಿಸಲ್ಪಡಬೇಕಾಗುತ್ತದೆ. ಇನ್ನು ಮುಂದೆ ಗುರುವಾಯೂರು ಪ್ರಶ್ನೆಯೊಂದೇ ಅಲ್ಲ-ಕೇವಲ ಸುಧಾರಕರ ವರ್ತನದ ಮೇಲೆಯೂ ನನ್ನ ಉಪವಾಸವು ನಿಂತಿದೆ. ಗುರುವಾಯೂರುಸಹಿತ ಎಲ್ಲಾ ದೇವಸ್ಥಾನಗಳನ್ನು ಒಳಗೊಂಡ ಅಖಿಲಭಾರತದ ಮಸೂದೆಯ ಜೊತೆಗೆ ನನ್ನ ಉಪವಾಸವು ಅಂಟಿಕೊಂಡಿರುವುದು. ಇದೇ ನನ್ನ ಜೀವಮಾನವೆಲ್ಲಾ ಹೀಗಾಗಿ ನಡೆದಿದೆ. ಒಂದು ಹೆಜ್ಜೆಯು ಇನ್ನೊಂದು ಹೆಜ್ಜೆಯನ್ನು ಇಡುವಂತೆ ಮಾಡಿದೆ. ಅದು ನನ್ನನ್ನು ಟೀಕಿಸುವುದೇ ಇಲ್ಲ. ನಾನು ಮದ್ರಾಸಿನ ಮಸೂದೆಯ ವಿಷಯದಲ್ಲಿ ಮಾತ್ರ ನನ್ನ ಗಮನವನ್ನೆಲ್ಲಾ ಇಟ್ಟಿದ್ದೆನು. ತಪ್ಪಮಯವಾದ ದೊಡ್ಡದಾದ ಸನ್ನಿವೇಶಕ್ಕೆ ನಾನು ಇನ್ನೂ ತಯಾರಿರಲಿಲ್ಲ. ಈಗ ಅದು ನನ್ನ ಮುಂದೆ ಸ್ವತಸ್ಸಿದ್ಧದ ಪ್ರಶ್ನೆಯಾಗಿ ನಿಂತುಬಿಟ್ಟಿದೆ. ನಾನು ಹಿಂದೆಗೆಯಲಾರೆ. ಸರ್ಕಾರದ ಪ್ರಕಟನೆಯನ್ನು ಪರಿಶೀಲಿಸಿದರೆ, ಮಸೂದೆಯು ದೀರ್ಘಕಾಲದವರೆಗೆ ಒದ್ದಾಡಬೇಕಾಗುವುದೆಂದೂ, ದೇಶದಲ್ಲಿ ಅದು ಶಾಸನವಾಗದೆ ಇರಬಹುದೆಂದೂ ಗೊತ್ತಾಗುತ್ತದೆ. ಅತಿಶಯವಾಗಿ ಹುಷಾರಿಯಿಂದ ಸರ್ಕಾರದವರು ವರ್ತಿಸಲು ತಮ್ಮ ದೃಷ್ಟಿಯಲ್ಲಿ ಸರಿಯಿರಬಹುದು. ಇಂದು ಆಚರಣೆಯಲ್ಲಿರುವ ಅಸ್ಪೃಶ್ಯತೆಯ ವಿರುದ್ಧವಾಗಿ ಇಡೀ ಹಿಂದೂಸ್ಥಾನದ ಆತ್ಮವು ಎದ್ದರೆ ಆ ಕ್ಷಣದಲ್ಲಿ ಮಸೂದೆಯು ಶಾಸನವಾಗಬಹುದು. ಮಸೂದೆಯು ಪರವಾಗಿ ಬರುವ ಹಿಂದೂ ಜನಾಂಗದ ಏಕಾಭಿಪ್ರಾಯವನ್ನು ಸರ್ಕಾರವು ಎಂದೂ ತಡೆಯಲು ಸಾಧ್ಯವಿಲ್ಲ. ಸನಾತನಿಗಳು ವಿರೋಧಿಸಿದಾಗ್ಯೂ, ಬಹುಸಂಖ್ಯಾತ ಹಿಂದೂಗಳು ಅಸ್ಪೃಶ್ಯತೆಯನ್ನು ನಾಶಪಡಿಸಬೇಕೆಂದು ಅಭಿಪ್ರಾಯಪಟ್ಟಿರುವುದಾಗಿ ನನಗೆ ದೃಢನಂಬಿಕೆಯಿದೆ. ಈ ನನ್ನ ನಂಬಿಕೆಯೇ ನನ್ನನ್ನು ಶಕ್ತಿವಂತನನ್ನಾಗಿ ಮಾಡುತ್ತಿರುವುದು. ಅನೇಕ ವರ್ಷಗಳಿಂದ ಕೆಲಸಮಾಡುತ್ತಿದ್ದರೂ ಅಸ್ಪೃಶ್ಯತೆಯ ಕೆಡುಕಿನಬಗ್ಗೆ ಹಿಂದೂ ಜನಾಂಗದಲ್ಲಿ ಮನವರಿಕೆಯಾಗದಿದ್ದರೆ, ಇನ್ನು ಬೇರೆ ಪ್ರಚಾರದಿಂದ ಪ್ರಯೋಜನವೇ ಕಂಡುಬರುವುದಿಲ್ಲ. ಆದ್ದರಿಂದ ಮೊದಲಿನಂತೆ ಈಗಲೂ ಸಹಾ ವಿಶೇಷತರವಾದ ಪ್ರಾಯಶ್ಚಿತ್ತರೂಪದ ಚಳವಳಿಯು ಅತ್ಯಗತ್ಯ. ಯಾರು ಯಾರ ಜೀವಿತ ಸಮಸ್ಯೆಯೊಡನೆ ಮಿಳಿತವಾಗಿರುವರೋ ಅಂತಹ ವ್ಯಕ್ತಿಯು ಉಪವಾಸದಿಂದ ಚಳವಳಿಗೆ ಮತ್ತಷ್ಟು ಬಲವನ್ನು ಕೊಡಬೇಕಾದೀತು. ಅದು ನಿಶ್ಚಯವಾದರೆ—ನಡೆದೇನಡೆಯುವುದು. ಜನರು ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕು, ಇಲ್ಲವೆ ತಮ್ಮಿಂದ ನನ್ನನ್ನು ಹೊರದೂಡಬೇಕು. ನನಗೂ ನನ್ನ ಸಹೋದ್ಯೋಗಿಗಳಿಗೂ ಅಸ್ಪೃಶ್ಯತಾ ನಿವಾರಣಕಾರ್ಯವು ಅತಿ ಮುಖ್ಯವಾದುದೆಂದು ನಾನು ಈಗಾಗಲೇ ಸಾರಿಸಾರಿ ತಿಳಿಸುವೆನು. ದೇವಸ್ಥಾನಗಳನ್ನು ಹರಿಜನರಿಗೆ ತೆರೆಯುವುದು ಕೇವಲ ಆಧ್ಯಾತ್ಮಿಕ ಕಾರ್ಯದಂತಿದೆ ಎಂದೂ ಅಸ್ಪೃಶ್ಯತಾ ನಿವಾರಣೆಗೆ ಅದು ಅತ್ಯವಶ್ಯಕವಾದದ್ದೆಂದೂ ಹೇಳುವೆನು. ಈ ಕಾರ್ಯದಿಂದಲೇ ಹರಿಜನರಿಗೆ ನವಚೇತನವೂ ನವಜೀವವೂ ಉಂಟಾಗತಕ್ಕದ್ದಿರುವುದು. ಆರ್ಥಿಕ ಉನ್ನತಿಗಿಂತ ಇದು ಆ ಜನಾಂಗದಲ್ಲಿ ಆಶೆಯನ್ನು ಹೆಚ್ಚಾಗಿ ಉಂಟುಮಾಡಲಿದೆ. ಸೂರ್ಯೋದಯವಾದನಂತರ ಬೆಳಕುಂಟಾಗುವುದು ಹೇಗೆ ಸ್ವತಸ್ಸಿದ್ಧವೋ ಹಾಗೆಯೇ ದೇವಸ್ಥಾನ ಪ್ರವೇಶಪ್ರಶ್ನೆಯು ಪರಿಹಾರವಾಯಿತೆಂದರೆ ಅಸ್ಪೃಶ್ಯರ ಆರ್ಥಿಕ ಉನ್ನತಿಯೇ ಮುಂತಾದ ಇತರ ಸಮಸ್ಯೆಗಳು ತಾವಾಗಿಯೇ ಬಗೆಹರಿಯುವುವು."

ದೇವಸ್ಥಾನ ಪ್ರಶ್ನೆಯು ಮುಖ್ಯವಾದುದಲ್ಲ.

ಎಂ. ಕೆ. ಆಚಾರ್ಯರ ಹೇಳಿಕೆ.

ಬೊಂಬಾಯಿ ಜ ೨೪

ಅಖಿಲಭಾರತದಲ್ಲಿ ಸನಾತನಧರ್ಮ ಚಳವಳಿಯನ್ನು ಹೂಡಲು ಇಲ್ಲಿಗೆ ಬಂದಿರುವ ಮಿ|| ಎಂ. ಕೆ. ಆಚಾರ್ಯರು ಒಂದು ಹೇಳಿಕೆಯನ್ನು ಹೊರಡಿಸಿ ಅಂತ್ಯಜ ವರ್ಗದ ಉದ್ಧಾರ ಕಾರ್ಯಗಳನ್ನು ಸನಾತನಿಗಳು ಪ್ರತಿಭಟಿಸುವುದಿಲ್ಲವೆಂದೂ, ಆದರೆ ಈಗ ಅಖಿಲಭಾರತ ಅಸ್ಪೃಶ್ಯತಾ ನಿವಾರಣಾ ಬೋರ್ಡಿನವರು ಕೈಗೊಂಡಿರುವ ಕಾರ್ಯಕ್ರಮಗಳು ಸನಾತನಿಗಳಿಗೆ ರುಚಿಸವೆಂದೂ, ಅವು ಕೇವಲ ಭಾವನಾಪ್ರಪಂಚದವುಗಳೆಂದೂ, ಅಸ್ಪೃಶ್ಯರ ನಿಜವಾದ ಉದ್ಧಾರಕಾರ್ಯಕ್ಕೆ ಸನಾತನಿಗಳು ವಿರೋಧಿಸುತ್ತಿರುವರೆಂಬ ಭಾವನೆಯ ಮೇಲೆ ಸನಾತನಿಗಳ ಮೇಲೆ ವಿರುದ್ಧ ಚಳವಳಿಯನ್ನು ಹೂಡಲಾಗಿದೆಯೆಂದೂ, ಮೊದಲು ಅಸ್ಪೃಶ್ಯತೆಯ ಮೂಲಕಾರಣಗಳನ್ನು ಕಂಡುಹಿಡಿದು ಅವುಗಳನ್ನು ಪರಿಹರಿಸಬೇಕೆಂದೂ, ಆರ್ಥಿಕಅವನತಿ, ಅವಿದ್ಯೆ ಇವು ಮುಖ್ಯವಾದುವೆಂದೂ, ಇವುಗಳನ್ನು ಪರಿಹರಿಸಲು ಮೊದಲು ಕೈ ಹಾಕಬೇಕೆಂದೂ, ಮತಸಂಬಂಧವಾದ ವಿಷಯಗಳು ಅಮುಖ್ಯವಾದುವೆಂದೂ, ಮುಂತಾಗಿ ಹೇಳಿ, "ನಾವು ಶಕ್ತಿ ಪ್ರತಿಶಕ್ತಿಗಳಾಗಿ ವರ್ತಿಸಬಹುದು. ದೇವಸ್ಥಾನ ಪ್ರಶ್ನೆಯನ್ನು ಕೈಬಿಡಬೇಕೆಂದು ನಾನು ಅವರಿಗೆ ಪ್ರಾರ್ಥಿಸುವೆನು" ಎಂದು ತಿಳಿಸಿದ್ದಾರೆ.

ಸಂಸ್ಥಾನದ ಕ್ರಿಮಿನಲ್ ಜಸ್ಟಿಸ್ ಆಡಳಿತ.

ಸಂಸ್ಥಾನದ ಕ್ರಿಮಿನಲ್ ಆಡಳಿತದ ವಿಷಯದಲ್ಲಿ ಸರ್ಕಾರದವರು ವರದಿಯನ್ನು ಪ್ರಕಟಿಸುತ್ತಾ ನ್ಯಾಯವಿನಿಯೋಗದಲ್ಲಿ ಆಚರಿಸಲ್ಪಟ್ಟ ಕೆಲವು ಹೊಸ ಪದ್ಧತಿಗಳ ವಿಚಾರವಾಗಿ ಅತ್ಯುತ್ತಮವಾದ ಅಂಶಗಳನ್ನು ತಿಳಿಸಿರುವರು. ವರದಿಯಿಂದ ತಿಳಿದುಬರುವುದೇನೆಂದರೆ, "ಸಿವಿಲ್, ಕ್ರಿಮಿನಲ್ ಮತ್ತು ಮ್ಯಾಜಿಸ್ಟ್ರೇಟರವರ ಕೆಲಸಗಳನ್ನು ಒಂದುಗೂಡಿಸಿ ತತ್ಸಂಬಂಧವಾದ ಆಡಳಿತವು ಸಮರ್ಪಕವಾಗಿದೆಯೇ ಎಂಬುದನ್ನು ನಿರ್ಧರಿಸಲು ಹೊಳೆನರಸೀಪುರ, ನರಸಿಂಹರಾಜಪುರ ಮತ್ತು ದೊಡ್ಡಬಳ್ಳಾಪುರದಲ್ಲಿ ಈ ಪದ್ಧತಿಯು ಜಾರಿಯಲ್ಲಿಡಲ್ಪಟ್ಟಿತು. ಕೆಲವು ದಿವಸಗಳ ಹಿಂದೆ ಇಂತಹ ಪದ್ಧತಿಯು ಹುಣಸೂರಿನಲ್ಲಿ ಕೂಡ ಜಾರಿಯಲ್ಲಿಡಲ್ಪಟ್ಟಿತು. ಈ ಪದ್ಧತಿಯು ಉತ್ತಮರೀತಿಯಲ್ಲಿ ಕೆಲಸಮಾಡುತ್ತಿರುವುದೆಂಬುದನ್ನು ತಿಳಿದು ಸರ್ಕಾರದವರು ಸಂತೋಷಿಸುತ್ತಿರುವರು. ಇದಲ್ಲದೆ ಮ್ಯಾಜಿಸ್ಟ್ರೇಟರುಗಳು ಒಂದೂರಿನಿಂದ ಮತ್ತೊಂದು ಊರಿಗೆ ಪ್ರಯಾಣಮಾಡಿ ಅಲ್ಲಿರುವ ಮೊಕದ್ದಮೆಗಳನ್ನು ವಿಚಾರಿಸಲು ಸಕಲ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಯಿತು. ಆರ್ಥಿಕ ಮುಗ್ಗಟ್ಟಿನಿಂದ ಈ ಪದ್ಧತಿಯು ತೃಪ್ತಿಕರವಾಗಿ ನೆರವೇರಲಿಲ್ಲವಾದರೂ ಇದರಿಂದ ನ್ಯಾಯವಿನಿಯೋಗವು ಸಮರ್ಪಕವಾಗುವುದೆಂದು ಊಹಿಸಲ್ಪಟ್ಟಿದೆ.

ಶಾಖೆಯ ಮೇಲ್ವಿಚಾರಣೆಯಲ್ಲಿ ಒಟ್ಟು ೭೭ ಕೋರ್ಟುಗಳು ಚಾಲ್ತಿ ಸಂವತ್ಸರದಲ್ಲಿ ನ್ಯಾಯಕಾರ್ಯವನ್ನು ನೆರವೇರಿಸಿದುವು. ಒಟ್ಟು ೨೩೭೧೬ ಅಪರಾಧಗಳು ಕೋರ್ಟಿನವರ ಗಮನಕ್ಕೆ ಬಂದವು. ಈ ಮೊಕದ್ದಮೆಗಳಲ್ಲಿ ೪೩,೧೯೫ ಜನರು ಭಾಗಿಗಳಾದರು. ಸುಮಾರು ೧೧,೭೭೭ ಜನರು ಮೊಕದ್ದಮೆಗಳಲ್ಲಿ ಶಿಕ್ಷಿಸಲ್ಪಟ್ಟರು. ಇನ್ನೂ ೧೧,೧೨೫ ಮೊಕದ್ದಮೆಗಳು ತೀರ್ಮಾನಿಸಲ್ಪಡುವುದರಲ್ಲಿವೆ.

ಈ ವರ್ಷದಲ್ಲಿ ಒಬ್ಬನಿಗೆ ಮಾತ್ರ ಮರಣದಂಡನೆಯನ್ನು ವಿಧಿಸಲಾಯಿತು. ಈ ಶಿಕ್ಷೆಯನ್ನು ಹೈಕೋರ್ಟಿನವರು ಕಾಯಂ ಮಾಡಿದರು.

ಬೆಂಚ್ ಕೋರ್ಟುಗಳಲ್ಲಿ ಸ್ತ್ರೀ ಮ್ಯಾಜಿಸ್ಟ್ರೇಟರುಗಳನ್ನು ನಿಯಮಿಸುವ ಏರ್ಪಾಟು ಜಾರಿಯಲ್ಲಿಡಲ್ಪಟ್ಟಿತು. ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ಈ ಕಾರ್ಯನಿರ್ವಾಹಕ್ಕೆ ಸ್ತ್ರೀಯರನ್ನು ಗೌರವ ಮ್ಯಾಜಿಸ್ಟ್ರೇಟರುಗಳನ್ನಾಗಿ ನಿಯಮಿಸಲಾಯಿತು. ಒಟ್ಟು ೯೦೫೨ ಕೇಸುಗಳು ಬೆಂಚ್‌ಕೋರ್ಟುಗಳ ಗಮನಕ್ಕೆ ಬಂದವು. ಈ ಸಂಖ್ಯೆಯಲ್ಲಿ ಶೇಕಡಾ ೮೩ರಷ್ಟು ತೀರ್ಮಾನವಾದುವು. ಸಂಸ್ಥಾನದ ಕೋರ್ಟುಗಳಲ್ಲಿ ೫೮,೮೫೭ ಸಾಕ್ಷಿಗಳು ವಿಚಾರಿಸಲ್ಪಟ್ಟರು.

ಮೈಸೂರು ಹೈಕೋರ್ಟಿನಲ್ಲಿ ೭೯ ಕ್ರಿಮಿನಲ್ ಅಪೀಲುಗಳು ವಿಚಾರಿಸಲ್ಪಟ್ಟವು. ಈ ಸಂಖ್ಯೆಯಲ್ಲಿ ೪೫ ಅಪೀಲುಗಳು ತೀರ್ಮಾನಿಸಲ್ಪಟ್ಟವು. ಕೆಳಗಿನ ಕೋರ್ಟಿನವರು ನಿರ್ಧರಿಸಿದ್ದ ೧೩ ಅಪೀಲುಗಳು ಹೈಕೋರ್ಟಿನಲ್ಲಿ ನಿರಾಕರಿಸಲ್ಪಟ್ಟವು.

ಒಟ್ಟಿನಲ್ಲಿ ಶಾಖೆಯ ಆಡಳಿತವು ತೃಪ್ತಿಕರವಾಗಿದೆ.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[10] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೀತಿಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಹಳೆಯವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಜಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ಏಕೀಪಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣುರಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು 1-0-0.

ರ್ಹುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ತುರಿ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕಿತ್ಸಾ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿಕಿತ್ಸಕಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[23] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಯಾಮವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಹೊತ್ತುಹೊತ್ತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[4] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ಪ್ರಶ್ನಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಪ್ತ ಶಿವಾಚಾರ್ಯಮಹಾದಿರತ್ನ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಸ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಸಿ, ಒಂ ತಲೆನೋವು, ತಲೆಯ ಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾ

(Registered Trade Mark)

ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂಗಿಬಿಟ್ಟ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿ ಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[5] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಫೆಬ್ರುವರಿ ೧೯೩೩ [ಸಂಚಿಕೆ ೩೯

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

22-2-1933 ನೆಯ ತಾರೀಖಿನ ದಿವಸ ಶ್ರೀಶೈಲಕ್ಷೇತ್ರದಲ್ಲಿ ಶಿವರಾತ್ರಿ ಉತ್ಸವಕಾಲದಲ್ಲಿ ಭಕ್ತರ ಅನುಕೂಲಕ್ಕಾಗಿ ಮಾಡಿರುವ

ಆರೋಗ್ಯರಕ್ಷಣೆಯ ಏರ್ಪಾಡುಗಳು.

ಶಿವರಾತ್ರಿ ಮಹೋತ್ಸವಕ್ಕೆ ಶ್ರೀಶೈಲಕ್ಕೆ ಬರತಕ್ಕ ಭಕ್ತಾದಿಗಳ ಅನುಕೂಲಕ್ಕಾಗಿ ಈ ಕೆಳಗಿನಂತೆ ಏರ್ಪಾಡುಗಳು ಮಾಡಲ್ಪಡುವುವು. ಈ ಏರ್ಪಾಡುಗಳೆಲ್ಲವೂ ಕರ್ನೂಲಿನ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಮತ್ತು ಅವರ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಮಾಡಲ್ಪಡುವುವು.

ಸ್ಥಲವಸತಿ—ದೇವಾಲಯದ ಪ್ರಾಕಾರದೊಳಗೆ ಜನವಸತಿಯು ಹೆಚ್ಚಾದರೆ ಅಲ್ಲಿ ಹೊಲಸು ಹೆಚ್ಚಾಗಿ, ಅನಾರೋಗ್ಯಕ್ಕೆ ಅವಕಾಶವಾಗುವುದರಿಂದ ದೇವಾಲಯದ ಹೊರಭಾಗದಲ್ಲಿ ಅನೇಕ ಜೋಪಡಿಗಳನ್ನು ಕಟ್ಟಿಸಲಾಗುವದು. ಅಧಿಕಾರಿಗಳಿಗೂ ಮತ್ತು ಇತರ ಪ್ರಮುಖ ಯಾತ್ರಿಕರಿಗೂ ದೇವಾಲಯದ ಪ್ರಾಕಾರದ ಪಶ್ಚಿಮಕ್ಕೆ ಅಂದರೆ ಅಂಬಾದೇವಾಲಯದ ದಕ್ಷಿಣಕ್ಕೆ ವಸತಿಸ್ಥಳಗಳನ್ನು ಏರ್ಪಡಿಸಲಾಗುವದು. ಹಾಟಕೇಶ್ವರ ಮತ್ತು ಶಿಖರೇಶ್ವರ ಈ ಪ್ರದೇಶಗಳಲ್ಲಿ ಭೂಮಿಯಮೇಲೆ ಬೆಳೆದಿರುವ ಹುಲ್ಲನ್ನು ಕತ್ತರಿಸಿ ಸ್ವಚ್ಛಮಾಡಿಸಿ, ಇಲ್ಲಿಯೂ ಮತ್ತು ಪಾತಾಳಗಂಗೆಯಲ್ಲಿಯೂ ಕೆಲವು ಜೋಪಡಿಗಳನ್ನು ಕಟ್ಟಿಸಲಾಗುವದು.

ದೀಪ ಮತ್ತು ನೀರು ಸರಬರಾಜು—ದೇವಾಲಯದಲ್ಲಿ ಸ್ಥಾಪಿಸಿರುವ ಎಲೆಕ್ಟ್ರಿಕ್ ಯಂತ್ರದಿಂದ ದೇವಾಲಯದ ಒಳಗೂ ಮತ್ತು ಹೊರಗೂ ರಾತ್ರಿಯವೇಳೆಯಲ್ಲಿ ಬೆಳಕನ್ನು ಒದಗಿಸಲಾಗುವದು. ನಲ್ಲಿಗಳಿಂದ ನೀರನ್ನು ಹೊಂದಲವಕಾಶವಾಗುವಂತೆ ತೊಟ್ಟಿಗಳಿಗೆ ನೀರನ್ನು ಭರ್ತಿಮಾಡಲು ಒಂದು ನೀರನ್ನು ಎತ್ತುವ ಯಂತ್ರವು ಸರ್ವದಾ ಕೆಲಸಮಾಡುತ್ತಿರುವದು. ದೇವಾಲಯದ ಭಾಗದಲ್ಲಿರುವ ದೊಡ್ಡಕೆರೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಯಂತ್ರವು ಕೆರೆಯಪಕ್ಕದಲ್ಲಿರುವ ಸಿಮೆಂಟುತೊಟ್ಟಿಗಳಿಗೆ ನೀರನ್ನು ತುಂಬುತ್ತಿರುವದು. ಈ ತೊಟ್ಟಿಗಳಿಗೆ ನಲ್ಲಿಗಳನ್ನು ಇಡಿಸಲಾಗಿದೆ. ಏನಾದರೂ ಸಮಯತಪ್ಪಿ ಎಲೆಕ್ಟ್ರಿಕ್ ದೀಪವು ಕೆಟ್ಟೀತೆಂದು ಕೆಲವು ಗ್ಯಾಸ್ ಮತ್ತು ಪೆಟ್ರೋಮಾಕ್ಸ್ ದೀಪಗಳನ್ನು ಸಿದ್ಧವಾಗಿ ಇಡಿಸಲಾಗುವದು. ಬೆಂಕಿಯಿಂದ ಏನಾದರೂ ತೊಂದರೆಯುಂಟಾದರೆ ಅದನ್ನು ಆರಿಸಲು ನೀರಿನ ಪಂಪು ಅನುಕೂಲವಾಗಿರುವದು. ಶಿಖರೇಶ್ವರದಲ್ಲಿ ಎರಡು ಪೆಟ್ರೋಮ್ಯಾಕ್ಸ್ ದೀಪಗಳೂ, ಹಾಟಕೇಶ್ವರದಲ್ಲಿ ಒಂದು ದೀಪವೂ ಇರುವದು.

ಔಷಧೋಪಚಾರ—ಲೋಕಲ್ ಬೋರ್ಡಿನವರ ನೇತೃತ್ವದಲ್ಲಿ ಒಂದು ಆಸ್ಪತ್ರೆಯು ತೆರೆಯಲ್ಪಡುವುದು.

ಮತಸಂಬಂಧವಾದ ನಿಯಮಗಳಿಗೆ ವಿರೋಧವಾಗುವದೆಂಬ ಭಾವನೆಯಿಂದ ದೇವಾಲಯದ ಪ್ರಾಕಾರದೊಳಗೆ ಕಕ್ಕಸುಗಳನ್ನು ಕಟ್ಟಿಸಲಾಗುವದಿಲ್ಲ. ಆದರೆ ದೇವಲಯದ ಹೊರಭಾಗದಲ್ಲಿ ಜನರು ಇಳಿದುಕೊಳ್ಳುವ ಸ್ಥಳಗಳಿಗೆ ಸಮೀಪವಾಗಿ ಕೆಲವು ಕಕ್ಕಸುಗಳನ್ನು ಕಟ್ಟಿಸಲಾಗುವದು. ಈ ಏರ್ಪಾಡುಗಳೆಲ್ಲವೂ ಹೆಲ್ತ್ ಆಫೀಸರವರ ಸಿಬ್ಬಂದಿಯ ಮೇಲ್ವಿಚಾರಣೆಗೊಳಪಟ್ಟಿರುವುವು.

ಪಿ. ರಾಮಯ್ಯ,
ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡಿನ ಅಧ್ಯಕ್ಷರು.

ಉಗ್ರಶಾಂತಿ.

ದಾಸನಗದ್ದೆ.

ತೀರ್ಥಹಳ್ಳಿ ತಾಲೂಕು ದಾಸನಗದ್ದೆ ಶಿವನಂಕಾರ್ ಕೊಟ್ರಯ್ಯನವರು ತಮಗೆ ಅಂಗಿರಸ ಸಂ|| ವೈಶಾಖ ಶು|| ೫ ಗೆ ೬೦ ವರ್ಷಗಳು ಪೂರ್ತಿಯಾದುದಕ್ಕಾಗಿ ವಿಧಿಪ್ರಕಾರ ಉಗ್ರಶಾಂತಿಯನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿದರು. ಈ ಕಾರ್ಯಕ್ಕೆ ಹಾರನಹಳ್ಳಿ, ಮಳಲಿಮಠ, ಕೌಲೇದುರ್ಗ, ದುಮ್ಮಳ್ಳಿ ಮೊದಲಾದ ಸ್ಥಿರ, ಚರ, ಪಟ್ಟಾಧ್ಯಕ್ಷರು, ಮತ್ತು ಬಂಧುವರ್ಗದವರು ಸಹ ಆಗಮಿಸಿದ್ದರು. ಈ ಕಾರ್ಯದಲ್ಲಿ ಇವರ ಮಕ್ಕಳು ಡಿ. ಎಸ್. ರುದ್ರಯ್ಯನವರು, ಒಳ್ಳೇ ಶ್ರದ್ಧೆವಹಿಸಿ ಆದರಾತಿಥ್ಯಗಳನ್ನು ನಡೆಸಿ ಪಿತೃಭಕ್ತಿಗೆ ಪಾತ್ರರಾದರು. ತಾ|| 1-1-33 ನೇ ದಿವಸ ಮಧ್ಯಾಹ್ನ ಸಭೆಸೇರಿಸಿ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಮ್ಮ ಜೀವಮಾನದಲ್ಲಿ ಪ್ರಾಪ್ತವಾದ ಕಷ್ಟಗಳಿಗೆ ಸಹಾಯಮಾಡಿದವರಿಗೆ ಕೃತಜ್ಞತಾಶಕ್ತಿಯನ್ನು ಅರ್ಪಿಸಿದರು.

ಶ್ರೀ|| ಸ್ವಾಮಿಗಳವರು ಪ್ರಕೃತೋಚಿತ ಭಾಷಣಗಳಾದನಂತರ ನಿರೂಪವನ್ನು ದಯಪಾಲಿಸಿದರು. ಅನಂತರ ಗಂಧ, ತಾಂಬೂಲಗಳನ್ನು ಸಮರ್ಪಿಸಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಹನೀಯರುಗಳಿಗೆ ಜಗದಾಚಾರ್ಯರು ಸಮಸ್ತ ಸನ್ಮಂಗಲಗಳನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಈಶ್ವರಯ್ಯ, ಮಲ್ಲಾಪುರ.

ಗ್ರಂಥವಿಮರ್ಶೆ.

ಶಾಕುಂತಲನಾಟಕ.

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನಕವಿಗಳಾಗಿದ್ದ ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿಗಳು ಈ ನಾಟಕವನ್ನು ರಚಿಸಿ ಎಷ್ಟೋ ದಿವಸಗಳಾದವು. ಈ ಗ್ರಂಥವು ಸದ್ಯಃ ೫ನೆಯ ಮುದ್ರಣವನ್ನೊಳಗೊಂಡಿದೆ. ಬಸವಪ್ಪಕವಿಗಳು, ಕವಿಕುಲತಿಲಕನೆಂದು ಜಗದ್ವಿಖ್ಯಾತನಾಗಿ ಹೋಗಿರುವ ಕಾಳಿದಾಸ ಮಹಾಕವಿಯಿಂದ ರಚಿತವಾದ ಸಂಸ್ಕೃತ ಶಾಕುಂತಲನಾಟಕವನ್ನು ಕನ್ನಡಭಾಷೆಯಲ್ಲಿ ಅನುವಾದಮಾಡಿರುವರು. ಕಾಳಿದಾಸ ಮಹಾಕವಿಯು ತನ್ನ ಸಂಸ್ಕೃತ ನಾಟಕದಲ್ಲಿ ಗದ್ಯಪದ್ಯಗಳನ್ನು ಎಷ್ಟು ಮನೋಹರವಾಗಿ ರಚಿಸಿರುವನೋ, ಅಷ್ಟೇ ಮನೋಹರವಾಗಿ ಈ ಕವಿಗಳು ಕನ್ನಡ ಭಾಷೆಯ ಮರ್ಯಾದೆಯನ್ನು ಮೀರದೆ ಅದರ ಪ್ರತಿಕೃತಿಯೆನ್ನುವಂತೆ ರಚಿಸಿರುವದು ತುಂಬಾ ಶ್ಲಾಘನೀಯವಾಗಿದೆ. ಬಸವಪ್ಪಶಾಸ್ತ್ರಿಗಳ ಕರ್ನಾಟಕ ಕವಿತಾಶಕ್ತಿಯ ಪ್ರಭಾವವನ್ನು ಕರ್ನಾಟಕದೇಶದವರೆಲ್ಲರೂ ಮನಗಂಡಿದ್ದಾರೆ. ಅವರ ಕವಿತಾಪ್ರೌಢಿಮೆಯನ್ನು ಬೇರೆಯಾಗಿ ನಾವು ವರ್ಣಿಸಬೇಕಾಗಿಲ್ಲ. ಕರ್ನಾಟಕ ಸಾಹಿತ್ಯದಲ್ಲಿ ಈ ಗ್ರಂಥವು ಮಕುಟರತ್ನದಂತೆ ವಿರಾಜಿಸುತ್ತಿರುವದು. ಅವರ ಪುತ್ರರಾದ ಬಿ. ಮಹಾದೇವಶಾಸ್ತ್ರಿಗಳು ಲೋಕಹಿತಕ್ಕಾಗಿ ಈ ಗ್ರಂಥವನ್ನು ಮುದ್ರಿಸಿರುತ್ತಾರೆ. ನಾಟಕವು ಮನೋಹರವಾದ ಮುದ್ರಣದಿಂದೊಡಗೂಡಿದೆ. ಬೆಲೆ ೧ ರೂ. ೪ ಆ. ಕರ್ನಾಟಕಭಾಷಾಭಿಮಾನಿಗಳು ಗ್ರಂಥಪ್ರಕಾಶಕರಿಗೆ ಪ್ರೋತ್ಸಾಹವನ್ನೀಯಬೇಕೆಂದಾಶಿಸುತ್ತೇವೆ. ಗ್ರಂಥ ದೊರೆಯುವಸ್ಥಳ—ಆಸ್ಥಾನವಿದ್ವಾನ್ ಬಿ. ಮಹಾದೇವಶಾಸ್ತ್ರಿ, ಕೇರಳಾಪುರ, ಅರಕಲಗೂಡು ತಾಲ್ಲೂಕು.

ಅಸ್ಪೃಶ್ಯತೆಯ ತಿರುಳು.

ಈ ಪುಸ್ತಕವನ್ನು ಕರ್ನಾಟಕ ಲೇಖನ ಕಲೆಯಲ್ಲಿ ಸುಪ್ರಸಿದ್ಧರಾಗಿರುವ ಹೊಸಕೆರೆ ಚಿದಂಬರಯ್ಯನವರು ರಚಿಸಿರುವರು. ಇದರಲ್ಲಿ ಈಗ ನಡೆದಿರುವ ಅಸ್ಪೃಶ್ಯತಾನಿವಾರಣೆಯ ಚಳವಳಿಯು ಧರ್ಮಶಾಸ್ತ್ರಾನುಸಾರವಾಗಿಯೂ, ಯುಕ್ತ್ಯಯುಕ್ತವಾಗಿಯೂ ಚೆನ್ನಾಗಿ ಬಿಂಬಿಸಲ್ಪಟ್ಟಿರುವುದು. ಗ್ರಂಥವು ಚಿಕ್ಕದಾಗಿದ್ದರೂ, ಅದರಲ್ಲಿ ಪ್ರತಿಪಾದಿಸಿರತಕ್ಕ ವಿಷಯಗಳು ಅಮೂಲ್ಯಗಳಾಗಿವೆ. ಈ ಗ್ರಂಥವು ಪ್ರತಿಯೊಬ್ಬರಿಂದಲೂ ಅತ್ಯವಶ್ಯವಾಗಿ ಸಂಗ್ರಹಿಸಲ್ಪಡತಕ್ಕದ್ದಾಗಿದೆ. ಬೆಲೆ ೧ ಆಣೆ. ದೊರೆಯುವ ಸ್ಥಳ—ಹೊನ್ನವಳ್ಳಿ ನೃಸಿಂಹಪುರಾಣಿಕ, ತಿಪಟೂರು.

ಸಚಿತ್ರ ಹೊಸಕನ್ನಡ ಬಾಲಬೋಧೆ.

ಇದನ್ನು ತಿಪಟೂರು ನರಸಿಂಹ ಪುರಾಣಿಕರು ರಚಿಸಿದ್ದಾರೆ. ಪುಸ್ತಕವು 80 ಪುಟಗಳುಳ್ಳದಿದ್ದು ಅಂದವಾಗಿ ದಪ್ಪ ಅಕ್ಷರಗಳಿಂದ ಮುದ್ರಿಸಲ್ಪಟ್ಟಿದೆ. ಚಿಕ್ಕಮಕ್ಕಳ ಅಭ್ಯಾಸಕ್ಕೆ ಅನುಕೂಲವಾಗಿದೆ. ಸಂದರ್ಭಾನುಸಾರ ಅನೇಕ ಚಿತ್ರಗಳು ಕೊಡಲ್ಪಟ್ಟಿವೆ. ಬೆಲೆ ೪ ಆ. ದೊರೆಯುವ ಸ್ಥಳ ಮೇಲ್ಕಂಡಂತೆ.

ಸ್ವೀಕಾರ

ತೀರ್ಥಹಳ್ಳಿ ತಾಲೂಕು ದಾಸನಗದ್ದೆ ನಿವಾಸಿಗಳಾದ ಶ್ರೀ|| ಶಿವನಂಕಾರ್ ಕೊಟ್ರಯ್ಯನವರು 60 ವರ್ಷದ ಉಗ್ರಶಾಂತಿಯನ್ನು ಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಮ|| ರಾ|| ಈಶ್ವರಯ್ಯನವರು ಮಲ್ಲಾಪುರ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅಹಿಂಸಾ.

ಲೇಖಕ—ಶ್ರೀಕ್ಷೇತ್ರ ಕಾಶಿವಿಶ್ವಾರಾಧ್ಯಗುರುಕುಲವಾಸಿ
ಸಿದ್ಧಲಿಂಗಶರ್ಮ, ಬಂಕಾಪುರ.

ಕಾಯ-ವಾಕ್-ಮನಸ್ಸುಗಳಲ್ಲಿಯೂ ಪರಪರಾಧಿಗಳಾದಪ್ರಾಣಿಗಳಿಗೆ ಕಷ್ಟವನ್ನು ಕೊಡದಿರುವದೇ ಅಹಿಂಸೆಯು. ಇದಕ್ಕೆ ವಿರುದ್ಧವಾಗಿ ನಡೆಯುವದೇ ಹಿಂಸೆಯು. ಅಹಿಂಸೆಯೆಂಬುದು ನಮ್ಮ ಭಾರತೀಯರಿಗೆ ಒಂದು ಮುಖ್ಯಧರ್ಮವಾಗಿರುತ್ತದೆ. ನವೀನನಾಗರಿಕರಾದ ಕೆಲವರು ಹಿಂಸಾತ್ಮಕವಾದ ಹರಿಯುವದಕ್ಕೆ ದಾರಿಯನ್ನು ತೋರಿಸುತ್ತಲಿದ್ದಾರೆ. ಏಕೆಂದರೆ—ಶ್ಲೋ॥ ಅದ್ರೋಹಃ ಸರ್ವಭೂತೇಷು ಕರ್ಮಣಾಮನಸಾಗಿರಾ । ಅನುಗ್ರಹಶ್ಚ ದಾನಂಚ ಸತಾಂಧರ್ಮಸ್ಸನಾತನಃ ॥ ಅಂದರೆ ಯಾವ ಮನುಷ್ಯನು ತ್ರಿಕರಣದಲ್ಲಿಯೂ ಯಾವ ಪ್ರಾಣಿಗೂ ದ್ರೋಹವನ್ನು ಮಾಡದೆ ಅನುಗ್ರಹವನ್ನು ಮಾಡುತ್ತಾನೆಯೋ ಮತ್ತು ಅತಿಥಿಅಭ್ಯಾಗತರಿಗೆ ಅನ್ನೋದಕವನ್ನು ಕೊಡುತ್ತಾನೆಯೋ ಅವನೇ ಸತ್ಪುರುಷನೆನಿಸಿಕೊಳ್ಳುತ್ತಾನೆ. ಹೇಗೆಂದರೆ—"ಆತ್ಮವತ್‌ಸರ್ವಭೂತೇಷು ಯಃ ಪಶ್ಯತಿ ಸ ಪಂಡಿತಃ" ಯಾವ ಮನುಷ್ಯನು ತನಗುಂಟಾದ ಕುಂದುಕೊರತೆಗಳನ್ನು ಹೋಗಲಾಡಿಸಿಕೊಳ್ಳುವಂತೆ, ಇತರರ ಕುಂದುಕೊರತೆಗಳನ್ನು ಹೋಗಲಾಡಿಸುತ್ತಾನೆಯೋ ಅವನೇ ಜ್ಞಾನಿಯೆಂದು ಹೇಳಿಸಿಕೊಳ್ಳುತ್ತಾನೆ. ತುಲಸೀದಾಸರು ದಯಾ ಧರ್ಮಕಾ ಮೂಲಹೈ ಪಾಪಮೂಲಹೈ ಅಭಿಮಾನ್ । ತುಲಸೀ ದಯಾ ನ ಛೋಡಿಯೇ ಜಬಲಗ್ ಘಟಮೆ ಪ್ರಾಣ್ ॥ ಅಂದರೆ ಈ ಶರೀರದಲ್ಲಿ ಪ್ರಾಣವು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯ ಪರ್ಯಂತವಾಗಿ ದಯಾ-ದಾಕ್ಷಿಣ್ಯಾದಿಗುಣಗಳನ್ನು ಬಿಡಬೇಡಿರೆಂದು ಹೇಳುತ್ತಾರೆ. ದಯಾಕೌನಪರ ಕೀಜೀಯೆ ಕಾ ಪರ್ ನಿರ್ದಯಹೋಯ್ । ಸಾಯಿಕೆ ಸಬ್ ಜೀವಹೈ ಕೀರಿಕುಂಜರ್ ಸೋಯ್ ॥ ಇರುವೆ ಮೊದಲುಮಾಡಿಕೊಂಡು ಆನೆಯವರೆಗೂ ಇರುವ ಎಲ್ಲಾ ಜೀವಗಳೂ ಪರಮಾತ್ಮನ ಅಂಶವಾಗಿರುವದರಿಂದ ಪ್ರಾಣಿಗಳಲ್ಲೆಲ್ಲಾ ನಿಜವಾದ ಪ್ರೇಮವನ್ನು ಇಡಬೇಕು. ಹೊಟ್ಟೆಗೋಸುಗ ಪ್ರಾಣಿಹಿಂಸೆಯನ್ನು ಮಾಡುವದು ಮಹಾಪಾತಕವು. ಪರದೇಶಸಕ್ಕರೆಯನ್ನು ಉಣ್ಣುವದೂ, ಪರದೇಶದ ಬಟ್ಟೆಗಳನ್ನು ಉಪಯೋಗಿಸುವದೂ ಇವುಗಳಿಂದ ಧರ್ಮವು ನಷ್ಟವಾಗುವದಲ್ಲದೆ ಹಿಂಸೆಮಾಡುವದಕ್ಕೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ. ಏಕೆಂದರೆ, ಪರದೇಶದ ಸಕ್ಕರೆಯನ್ನು ಮಾಡಬೇಕಾದರೆ ಎಷ್ಟೋ ಕುರಿ, ಕೋಣ, ಕತ್ತೆ, ಹಂದಿ, ಗೋವು ಮುಂತಾದ ಪ್ರಾಣಿಗಳನ್ನು ಕೊಂದು ಅವುಗಳ ರಕ್ತದಿಂದ ಆ ಎಲುಬುಗಳನ್ನು ತೊಳೆದು ಆ ಎಲುಬುಗಳಿಂದ ಸಕ್ಕರೆಯನ್ನು ಮಾಡುತ್ತಾರೆ. ಇಂಥ ಸಕ್ಕರೆಯನ್ನು ಆಚಾರಶೀಲರೂ ದೇವಭಕ್ತರೂ ಸೇವನೆಗೂ, ದೇವರ ನೈವೇದ್ಯಕ್ಕೂ, ಪ್ರಸಾದಕ್ಕೂ ಉಪಯೋಗಿಸುತ್ತಾರೆ. ಇದಲ್ಲದೆ, ಹಬ್ಬಹುಣ್ಣಿಮೆಯಲ್ಲಿ ಸೀಪದಾರ್ಥವನ್ನು ಮಾಡಿ ಊಟವನ್ನು ಮಾಡುತ್ತಾರೆ. ಇದಲ್ಲದೆ ಜಂಟಲ್‌ಮೆನ್ನರು ಪ್ರಭಾತಕಾಲದ ವ್ರತಕ್ಕಾಗಿ ಅಂದರೆ ಚಹಾ ಕಾಫೀ ಕುಡಿಯುವದರಸಲುವಾಗಿ ಈ ಸಕ್ಕರೆಯನ್ನು ಉಪಯೋಗಿಸಿ, ತಮ್ಮ ಶರೀರವನ್ನು ಹಾಳುಮಾಡಿಕೊಳ್ಳುತ್ತಾರೆ ಮತ್ತು ಪರದೇಶದ ಬಟ್ಟೆಗಳಿಗೆ ಗೋವು ಇತ್ಯಾದಿ ಪ್ರಾಣಿಗಳ ನೆಣವನ್ನು ಹಚ್ಚಿ ಒಳ್ಳೇ ನುಣುಪಾಗಿಯೂ ಕಣ್ಣಿಗೆ ಮನೋಹರವಾಗಿಯೂ ಕಾಣಿಸುವಂತೆಮಾಡಿ ನಮಗೆ ಕಳುಹಿಸುತ್ತಾರೆ. ಇಂಥ ಅಪವಿತ್ರವಾದ ಬಟ್ಟೆಗಳನ್ನು ಆಚಾರವಂತರು ಧರಿಸಬಹುದೆ? ಶ್ಲೋ॥ ಆಚಾರಃ ಪ್ರಥಮೋ ಧರ್ಮಃ ನೃಣಾಂ ಶ್ರೇಯಸ್ಕರೋ ಮಹಾನ್ । ಇಹಲೋಕೇ ಪರಾಕೀರ್ತಿಃ ಪರತ್ರ ಪರಮಂ ಸುಖಂ ॥ ಅಂದರೆ, ಮನುಷ್ಯನಿಗೆ ಶ್ರೇಷ್ಠವಾಗಿರತಕ್ಕ ಇಹ-ಪರಲೋಕಗಳಲ್ಲಿ ಅತ್ಯಂತಸುಖವನ್ನು ಕೊಡತಕ್ಕ ಈ ಆಚಾರವನ್ನು ಹಾಳುಮಾಡಿಕೊಳ್ಳುವದಲ್ಲದೆ ತಾವೇ ಪ್ರಾಣಿಹಿಂಸೆಗೆ ಪ್ರೋತ್ಸಾಹಿಸಿದಂತಾಗುತ್ತದೆ. ನಾವೆಲ್ಲರೂ ಪರದೇಶದ ಸಕ್ಕರೆ ಬಟ್ಟೆಗಳನ್ನು ಉಪಯೋಗಿಸುವದನ್ನು ಬಿಟ್ಟರೆ, ಅಷ್ಟು ಪ್ರಾಣಿಗಳ ಜೀವವನ್ನು ಉಳಿಸಿದಂತಾಗುತ್ತದೆ. ಮೊದಲು ನಮ್ಮ ಭಾರತವರ್ಷದಲ್ಲಿ ೧೮ ಕೋಟಿ ಗೋವುಗಳು ಇರುತ್ತಿದ್ದವು. ಈ ಸಮಯದಲ್ಲಿ ೩ ಕೋಟಿ ಗೋವುಗಳು ಇರುತ್ತವೆ. ಇದು ನಮ್ಮ ಭಾರತದೇಶಕ್ಕೆ ಎಷ್ಟು ಹಾನಿಕಾರವಾಗಿರುತ್ತದೆ. ನೋಡಿರಿ, ಗೋವುಗಳಿಂದಲೇ ಸರ್ವರಾಷ್ಟ್ರವು ವೃದ್ಧಿಯನ್ನು ಹೊಂದುತ್ತಲಿದೆ. ಗೋವುಗಳಿಂದಲೇ ನಮ್ಮ ಕುಟುಂಬಸಂತಾನವೂ ವೃದ್ಧಿಯನ್ನು ಹೊಂದುತ್ತದೆ. ಗೋವಿನ ಹಾಲು, ತುಪ್ಪ, ಮೊಸರು, ಮೂತ್ರ, ಗೋರೋಜನ, ಗೋಮಯ ಇತ್ಯಾದಿಗಳಿಂದ ಯಜ್ಞ, ಹೋಮ ಮತ್ತು ಭೂಷಣಸ್ನಾನಾದಿಕಾರ್ಯಗಳು ಜರಗುತ್ತವೆ. ಇಂಥ ಯಾವ ಪವಿತ್ರವಾದ ಗೋವಿನಿಂದ ಎಷ್ಟೋ ಉಪಕಾರವನ್ನು ಹೊಂದಿದ್ದರೂ ಅದನ್ನೊಂದು ಸ್ಮರಿಸದೆ ಕೆಲ ನೀಚರು ಮುಪ್ಪಿನಕಾಲಕ್ಕೆ ಆ ಗೋವನ್ನು ಕಟುಕರಿಗೆ ೫ ರೂಪಾಯಿನ ಆಶೆಗಾಗಿ ಮಾರಲಿಕ್ಕೆ ಕೊಡುತ್ತಾರೆ. ಕೊಲೆಗಡಕನು ಅದರ ಕುತ್ತಿಗೆಯನ್ನು ಕಡಿಯುವಾಗ ಅಂಬಾ ಎಂದು ಒದರುವ ಅದರ ದುಃಖಧ್ವನಿಯು ನಮ್ಮ ಭಾರತವರ್ಷದಲ್ಲಿ ಪ್ರಸರಿಸಿರುವದರಿಂದಲೇ ಈ ನಮ್ಮ ರಾಷ್ಟ್ರದಲ್ಲಿ ಅವನತಿಯು ಪ್ರಾಪ್ತವಾಗಲಿಕ್ಕೆ ಹತ್ತಿರುತ್ತದೆ. ಮತ್ತು ಇದಲ್ಲದೆ, ಗ್ರಾಮದೇವತೆಯ ಜಾತ್ರೆಯನ್ನು ಮಾಡಿ ಮಾಂಸವನ್ನು ತಿನ್ನುವದರ ಸಲುವಾಗಿ ದೇವಿಯಹೆಸರನ್ನು ಹೇಳಿ ಎಷ್ಟೋ ಕುರಿ, ಕೋಣ, ಕೋಳಿಗಳ ಹಿಂಸೆಯನ್ನು ಮಾಡುತ್ತಾರೆ.

ತಮಗೆ ಏನಾದರೂ ವಿಪತ್ತುಗಳು ಬಂದರೆ ತಾಯಿಯಿಂದಲೇ ಒಂದೆಂದು ಭಾವಿಸಿ, ತಾಯಿ! ನಿನಗೆ ಒಂದು ಕುರಿ ಬೇಟಿಯನ್ನು ಕೊಡುತ್ತೇನೆಂದು ಬೇಡಿಕೊಳ್ಳುತ್ತಾರೆ. ಅಯ್ಯೋ, ಜಗಜ್ಜನನಿಯೆಂದು ಹೇಳಿಸಿಕೊಳ್ಳುವ ಈ ದೇವಿಯು ಎಂದಾದರೂ ತನ್ನ ಮಕ್ಕಳನ್ನೇ ಆಹಾರವಾಗಿ ಬೇಡುವುದುಂಟೇ? ದಯಾನಿಧಿಯಾದ ದೇವಿಯ ನೆವದಿಂದ ಹೊಟ್ಟೆಯನ್ನು ತುಂಬಿಕೊಳ್ಳುವದರಸಲುವಾಗಿ ನಮ್ಮ ರಾಷ್ಟ್ರದಲ್ಲಿ ಪಾಪಮಯವಾದ ಹಿಂಸಾಕಾರ್ಯವನ್ನು ಜೋರಿನಿಂದ ನಡೆಸುತ್ತಲಿದ್ದಾರೆ. ಆದಕಾರಣದಿಂದ ಆಯಾಯ ಗ್ರಾಮದಲ್ಲಿರತಕ್ಕ ವಿದ್ವಾಂಸರೂ, ಬುದ್ಧಿಶಾಲಿಗಳೂ, ವಿಚಾರಶೀಲರೂ, ಗೋರಕ್ಷಣಸಂಘದವರೂ ಈ ಅಹಿಂಸಾತತ್ವವನ್ನು ಪ್ರಚಾರಗೊಳಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುವೆನು.

ಸ್ವರಾಜ್ಯವೋ? ಸ್ವಧರ್ಮದ್ರೋಹವೋ?

ವಾಚಕಮಹಾಶಯರೇ—ಭಾರತೀಯರಲ್ಲಿ ಈಗೀಗ ವರ್ಣಾಶ್ರಮಧರ್ಮವು ಲೋಪವಾಗುತ್ತಿರುವದು. ಪೂರ್ವದಲ್ಲಿ ಈ ಧರ್ಮಕ್ಕೆ ಅತ್ಯಂತ ಕಳೆಯೇರಿ ವೈಭವಶಿಖರವನ್ನು ಹೊಂದಿತ್ತು. ನಾಗರಿಕರ ಬಲೆಯೊಳಗೆ ಬಿದ್ದು ಧರ್ಮದ ಕಟ್ಟುಗಳು ಒಂದೊಂದಾಗಿ ಶಿಥಿಲವಾಗಹತ್ತಿರುತ್ತವೆ. ಒಬ್ಬರು ಒಂದು ರೀತಿಯಾಗಿ ಭಾವಿಸಿದರೆ ಮತ್ತೊಬ್ಬರು ಮತ್ತೊಂದು ರೀತಿಯಾಗಿ ಭಾವಿಸುವರು. ಹೀಗೆ ಅರ್ಥಕ್ಕೆ ಅಪಾರ್ಥವನ್ನು ಕಲ್ಪಿಸಿ ತಮ್ಮ ತಮ್ಮ ಇಚ್ಛೆಯಂತೆ ಯುಕ್ತಿಯಿಂದ ಜನರಂಜನವಾಗುವಂತೆ ಲೇಖಗಳನ್ನು ಬರೆದು ಜನರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಮಾಡಿದ ಮೇಲೆ ಈ ಧರ್ಮದ ಕಟ್ಟು ಹೇಗೆ ಉಳಿಯಬೇಕು? ಸನಾತನ ವೈದಿಕ ಧರ್ಮಾಭಿಮಾನಿಗಳು ವರ್ಣಾಶ್ರಮಧರ್ಮವನ್ನು ಉಳಿಸಿಕೊಂಡು ಸ್ವರಾಜ್ಯವನ್ನು ಸಂಪಾದಿಸಬೇಕೆನ್ನುತ್ತಾರೆ. ಸ್ವರಾಜ್ಯವಾದಿಗಳು ತದ್ವಿರುದ್ಧವಾಗಿ ಸ್ವರಾಜ್ಯವನ್ನು ಸಂಪಾದಿಸಬೇಕೆನ್ನುತ್ತಾರೆ. ಹೀಗೆ ದ್ವಂದ್ವಯುದ್ಧವು ನಡೆದಿರುತ್ತದೆ. ಪೂರ್ವದಲ್ಲಿ ಸನಾತನ ಮತೀಯರು ಪರಮತೀಯರ ಉಪಟಳಕ್ಕೆ ಬೇಸತ್ತು ವರ್ಣಾಶ್ರಮಧರ್ಮವನ್ನು ಉಳಿಸಿಕೊಳ್ಳಬೇಕಾದರೆ ಎಷ್ಟೋ ಅವರಿಗೆ ಶ್ರಮವಾಗಿತ್ತು. ಈಗ ಹಿಂದೂಗಳಲ್ಲಿಯೇ ಪಾರ್ಟಿಯಾದುದರಿಂದ ಸನಾತನಮತೀಯರೇ ಸನಾತನ ಮತೀಯರಿಗೆ ಅಂಜಿ ತಮ್ಮ ಧರ್ಮವನ್ನು ಕಾದುಕೊಳ್ಳುವ ಪ್ರಸಂಗಬಂದಿದೆ. ಪರೇಷು ಮೈತ್ರೀ "ಸ್ವಜನೇಷು ವೈರಂ" ಎಂಬಂತೆ ಕಲಿಯುಗದ ಪ್ರಭಾವವೇ ಸರಿ. ಕಾಲಾಯ ತಸ್ಮೈನಮಃ! ಹೀಗೆ ಗಂಡಹೆಂಡರಲ್ಲಿ ಕೂಸು ಗಾಸಿಯಾಯಿತೆನ್ನುವಂತೆ ಕೊನೆಗೆ ಈ ಧರ್ಮವು ಎಲ್ಲಿ ನಿರ್ನಾಮವಾಗುತ್ತದೆಯೋ ಎಂದು ಹಲಕೆಲವರು ಬಾಯಿಯಲ್ಲಿ ಅಕ್ಕಿಕಾಳುಹಾಕಿಕೊಂಡು ಕುಳಿತಿರುವರು. ಕೆಲವರಂತೂ ತಾವು ಪ್ರಸಿದ್ಧಿಗೆ ಬರುವಕಾಲವಾದ್ದರಿಂದ ಈ ಧರ್ಮದಕಟ್ಟು ನಶಿಸಿಹೋಗಬೇಕೆಂದು ಹರಕೆ ಹೊತ್ತುಕೊಂಡಿರುತ್ತಾರೆ. ನೋಡಬೇಕು, ಧರ್ಮದೇವತೆಯು ಯಾರಕೊರಳಿಗೆ ವಿಜಯಮಾಲಿಕೆಯನ್ನು ಹಾಕುವಳೋ ಏನೋ? ಸ್ವರಾಜ್ಯವಾದಿಗಳು ಅಸ್ಪೃಶ್ಯರನ್ನು ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಿಸಲಿಕ್ಕೆ ಹವಣಿಸಿದು ಅದಕ್ಕೆ ಪ್ರಯತ್ನಮಾಡುವದು ಅನ್ಯಾಯವೂ ಅಧರ್ಮವೂ ಎಂದು ಬಹುಜನರು ಹೇಳುತ್ತಿರುವರು. ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶದಿಂದ ಅಸ್ಪೃಶ್ಯತಾನಿವಾರಣೆಯಾಯಿತೆಂದು ಅಥವಾ ಆಗುವದೆಂದು ಸ್ವರಾಜ್ಯವಾದಿಗಳು ತಿಳಿಯುವದಾಗಲೀ ಈಗ ಅಸ್ಪೃಶ್ಯರೆನ್ನುವರು ಈ ಸಂದರ್ಭದಲ್ಲಿ ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಬೇಕೆಂದು ತವಕಪಡುವದಾಗಲೀ ಹಠಮಾರಿತನವಲ್ಲದೆ ಬೇರೊಂದಿಲ್ಲ. ಸ್ವರಾಜ್ಯದಾಸೆಗಾಗಿ ಕಡಿಮೆ ಇದ್ದ ಹಿಂದೂಜನಸಂಖ್ಯೆಯನ್ನು ಹೆಚ್ಚಿಸಬೇಕೆಂದು ಅಸ್ಪೃಶ್ಯರನ್ನು ದೇವಾಲಯಪ್ರವೇಶದ ನೆವದಿಂದ ಕೈಗಡವಾಗಿ ತೆಗೆದುಕೊಂಡು ಸ್ಪೃಶ್ಯರಲ್ಲಿ ಸಮಾವೇಶಮಾಡಿ ಪವಿತ್ರವೈದಿಕಧರ್ಮವನ್ನು ಹಸಗೆಡಿಸಬೇಕೆನ್ನುವ ಗಾಂಧಿಯವರೇ ಮೊದಲಾದ ಸ್ವರಾಜ್ಯವಾದಿಗಳ ಪ್ರಯತ್ನವು ತೀರಾ ಅಸಮಂಜಸವು. ಮೊದಮೊದಲು ಗಾಂಧಿಯವರ ಪ್ರಯತ್ನಕ್ಕೆ (ಸ್ವರಾಜ್ಯಕ್ಕೆ) ನೆರವಾಗಿ ಸಾಹಸಪಡುತ್ತಿದ್ದ ಸನಾತನ ಮತಾವಲಂಬಿಗಳಾದ ಕೆಲವು ಪುಢಾರಿಗಳು ಅಸ್ಪೃಶ್ಯತಾನಿವಾರಣೆಯ ಚಳವಳಿಯು ಒಮ್ಮಿಂದೊಮ್ಮೆ ತಿಪ್ಪಿಯೊಳಗಿನ ಬೆಂಕಿಯಂತೆ ಹೊರಟಕೂಡಲೆ ಬೆದರಿಬಿದ್ದು ಗಾಂಧಿಯವರ ವಿರುದ್ಧವಾಗಿ ವರ್ಣಾಶ್ರಮಸ್ವರಾಜ್ಯಸಂಘಗಳನ್ನು ಸ್ಥಾಪಿಸಿ ಸನಾತನ ಧರ್ಮೋದ್ಧಾರದ ಬಗ್ಗೆ ಕಾರ್ಯವನ್ನು ಒಳ್ಳೆಸಾಹಸದಿಂದ ನಡೆಸುತ್ತಿರುವರು. ದೇಶದಲ್ಲಿ ಸಂಚಾರವನ್ನು ಮಾಡಿ ಸದುಪದೇಶದಿಂದ ಜನರಲ್ಲಿ ಧರ್ಮಜಾಗೃತೆಯುಂಟಾಗುವಂತೆ ಎಚ್ಚರಗೊಳಿಸುತ್ತಿರುವರು. ಗಾಂಧಿಯವರು ಮಾತ್ರ ಅಸ್ಪೃಶ್ಯತಾನಿವಾರಣೆಗಾಗಿ ಅವರನ್ನು ದೇವಾಲಯಗಳಲ್ಲಿ ಪ್ರವೇಶಮಾಡಿಸಲು ಸಾಹಸಪಡುತ್ತಾರಷ್ಟೇ? ಇದರಿಂದ ಅಸ್ಪೃಶ್ಯರೆನ್ನುವರು ಕೃತಜ್ಞರಾಗಿ ಗಾಂಧಿಯವರ ಕಾರ್ಯಕ್ಕೆ ನೆರವಾಗಲಾರರು. ಏಕೆಂದರೆ, ಅಸ್ಪೃಶ್ಯರ ಪುಢಾರಿಗಳು ಒಂದು ಕಡೆಗೆ ಹೀಗೆ ಹೇಳುವರು. ಏನಂದರೆ ಗಾಂಧಿಯವರು ಅಸ್ಪೃಶ್ಯರನ್ನು ದೇವಾಲಯಗಳಲ್ಲಿ ಪ್ರವೇಶಮಾಡಿಸಿದ ಮಾತ್ರಕ್ಕೆ ತಮ್ಮ ಕಾರ್ಯವಾಯಿತೆಂದು ತಿಳಿಯಲಾಗದು. ಇನ್ನೂ ಮಾಡತಕ್ಕ ಅನೇಕಕಾರ್ಯಗಳಿರುತ್ತವೆಂದು ಈಗಾಗಲೇ ತಮ್ಮ ಹೃದ್ಗತಾಭಿಪ್ರಾಯವನ್ನು ತೋರ್ಪಡಿಸಿರುವರು. ಅಂದಂತೆ ಇನ್ನೂ ಏನೇನು ಕಾರ್ಯಗಳು ಇರುತ್ತವೆಯೋ ಏನೋ? ಎಂದು ಜನರು ಯೋಚಿಸತೊಡಗಿರುವರು. ಒಟ್ಟಿಗೆ ವಿಚಾರಮಾಡಿದ್ದಾದರೆ ಅಸ್ಪೃಶ್ಯರಿಗೆ ದೇವರಗುಡಿಯಲ್ಲಿ ಪ್ರವೇಶವು ಸ್ವರಾಜ್ಯವಾದಿಗಳ ಸಹಾಯದಿಂದ ದೊರೆತನಂತರ ಅವರು ಸ್ಪೃಶ್ಯರಲ್ಲಿ ಗಣನೆಯಾದರಷ್ಟೇ? ಆ ಮೇಲೆ ಸ್ಪೃಶ್ಯರಜೊತೆಗೆ ದೇವರಪೂಜೆಗೆ ಭಾಗಿಗಳಾಗುವದು, ದೇವರ ಪೂಜಾವಿನಿಯೋಗವನ್ನು ತಾವೇ ಧರ್ಮಕರ್ತರುಗಳಾಗಿ ನಡೆಯಿಸುವದು, ದೇವರ ಆಸ್ತಿಯಲ್ಲಿ ತಾವು ಹಕ್ಕುದಾರರಾಗುವದು ತಮ್ಮ ತಮ್ಮ ಮನೆಗಳಲ್ಲಿ ನಡೆಯುವ ಪಿತೃನೈಮಿತ್ತಿಕಾದಿ ಕಾರ್ಯಗಳಲ್ಲಿ ಪಂಕ್ತಿಭೋಜನಕ್ಕೆ ಅಭೇದದಿಂದ ಪರಸ್ಪರ ಬರುಹೋಗುವದು ಇತ್ಯಾದಿಕಾರ್ಯಗಳು ಉಳಿದಿದ್ದರೂ ಉಳಿದಿರಬಹುದು. ಆದರೆ ಗಾಂಧಿಯವರು ಕರ್ಮಧರ್ಮಸಂಯೋಗದಿಂದ ಅಸ್ಪೃಶ್ಯತಾನಿವಾರಣೆಯನ್ನು ಸಾಧಿಸಿದನಂತರ ಮತ್ತೆ ಅಸ್ಪೃಶ್ಯರಿಗೆ ಉಳಿದವುಗಳನ್ನು ನಡೆಯಿಸಿಕೊಡಲು ವಚನಕೊಟ್ಟು ಸಾಹಸಪಡಬಹುದೆಂದು ನಾವುಗಳು ತರ್ಕಿಸಬೇಕಾಗಿದೆ. ವಾಚಕಮಹಾಶಯರೇ ನಮ್ಮೀತರ್ಕವು ಎಂದಿಗೂ ಸುಳ್ಳಾಗಲಾರದು. ಏಕೆಂದರೆ ಹಿಂದಕ್ಕೆ ಇದೇ ಸ್ವರಾಜ್ಯವನ್ನು ಸಂಪಾದಿಸುವುದಕ್ಕಾಗಿ ಸನಾತನ ಮತೀಯರ ವಿರುದ್ಧ ಅಸ್ಪೃಶ್ಯತಾನಿವಾರಣೆಯ ಚಳವಳಿಯನ್ನು ಬಸವನು ಹೂಡಿದನು. ಬಸವನ ವಾಗ್ಮಿತ್ವಕ್ಕೂ ಮಂತ್ರಿಯ ಅಧಿಕಾರದ ದಾಕ್ಷಿಣ್ಯಕ್ಕೂ ಅವನ ಬೆಂಬಲರಾಗಿ ಅವನಂತೆ ನಡೆಯಹತ್ತಿದರು. ಬಸವನು ಬಲಬರುತ್ತ ತನಗೆ ಹೆಚ್ಚು ಬಲವುಂಟಾಗುವದಕ್ಕಾಗಿ (ಯುದ್ಧಮಾಡುವದಕ್ಕಾಗಿ) ಡೋರಕಕ್ಕ, ಮ್ಯಾದಾರ ಚನ್ನ, ಮಾದಿಗರ ಹರಳ ಮೊದಲಾದ ಅಸ್ಪೃಶ್ಯರಿಗೆ ಕಕ್ಕಯ್ಯ ಚನ್ನಯ್ಯ ಹರಳಯ್ಯನೆಂದು ಹೆಸರಿಟ್ಟು ಶಿವಶರಣರೆಂದು ಕರೆಯುತ್ತ ತನಗೆ ವಿರುದ್ಧವಾದ ಸನಾತನ ಧರ್ಮದವರನ್ನು ಹಿಂದುಗಳನ್ನು ಮಾಡಿ ಅಸ್ಪೃಶ್ಯರ ಗುಂಪು ಬೆಳೆಸಿ ಅವರೊಡನೆ ಪಂಕ್ತಿಭೋಜನಾದಿಗಳನ್ನು ನಡೆಯಿಸಿ ಸೌಹಾರ್ದವನ್ನು ಬೆಳೆಯಿಸಿದನು. ಆ ಸಂದರ್ಭದಲ್ಲಿ ಅಸ್ಪೃಶ್ಯರ ಬೇಡಿಕೆಯಂತೆ ಅವರಿಗೆ ಅನೇಕ ಕಾರ್ಯಗಳನ್ನುಂಟುಮಾಡಿದನು. ಇದರಮೇಲಿಂದ ಬಸವನ ತತ್ವವು ಗಾಂಧಿಯವರ ತತ್ವವು ಒಂದೇಯೆಂದು ಭಾವಿಸಿದರೂ ಬಸವನಿಗೂ ಗಾಂಧಿಯವರಿಗೂ ಅಂತರವಿದೆ. ಮಹತ್ವಾಕಾಂಕ್ಷಿಯಾದ ಬಸವನು ಮಂತ್ರಿಯ ಅಧಿಕಾರದ ಸಾಮರ್ಥ್ಯದಿಂದ ಮಾಡಬಾರದ ಕೃತಿಗಳನ್ನು ಮಾಡಿಸಿದನು. ಕೊಲೆಸುಲಿಗೆಗಳಿಗೆ ಪೂರ್ಣ ಆಶ್ರಯವನ್ನು ಕೊಟ್ಟದ್ದರಿಂದ ರಾಜ್ಯದಲ್ಲಿ ಕೋಲಾಹಲವೆದ್ದು ಈ ಕಾರ್ಯಮಾಡತಕ್ಕವರು ಪುಂಡರೆಂತಲೂ ಖಿಂಡರೆಂತಲೂ ಹೆಸರುವಾಸಿಯಾಗಿ ಇವರ ಉಪಟಳವನ್ನು ತಾಳಲಾರದೆ ಜನರು ರಾಜನಿಗೆ ಮೊರೆಯಿಡಲು ರಾಜನು ಕುಪಿತನಾಗಲು ಈ ಕೃತಿಯು ರಾಜನ ಹಾಗೂ ಜನರ ಮನಸ್ಸಿನ ಮೇಲೆ ಪರಿಣಾಮವಾಗಬಾರದೆಂತಲೂ ತನ್ನ ದುರುದ್ದೇಶವು ಹೊರಬೀಳಬಾರದೆಂತಲೂ ಬಗೆದು ಬಸವನು ಪುಂಡಜಂಗಮರೆಂತಲೂ ಖಿಂಡಜಂಗಮರೆಂತಲೂ ಹೇಳಿ ಇವರಿಗೆಲ್ಲ ತಾನು ವಿಧೇಯನಾಗಿ ನಡೆದುಕೊಂಡು ರಾಜಧಾನಿಗೂ ಹಾಗೂ ಜನರಿಗೂ ಹೇಳಿಕೇಳಿ ವಂಚಕನಾದನು. ಇತ್ಯಾದಿ ಅಸಂಗತಕಾರಣಗಳನ್ನು ನಡೆಯಿಸಲು ದೂರದರ್ಶಿಗಳು ಅವನ ಕೃತಿಯನ್ನು ತಿರಸ್ಕರಿಸಿದರು. ಗತ್ಯಂತರವಿಲ್ಲದ ಕೆಲವು ಜನರು ಬಸವನಿಗೆ ಮಹಾತ್ಮನೆಂದು ಹೊಗಳುತ್ತ ಅವನನ್ನು ಹಿಂಬಾಲಿಸಿದರು. ಈಗ ಅದೇ ಸಾಂಪ್ರದಾಯವೆಂದು ಹೇಳುವ ಕೆಲವರು ಬಸವನ ವಚನಗಳನ್ನು ಹೇಳಿಕೊಳ್ಳುತ್ತ ಸನಾತನ ಧರ್ಮದವರನ್ನು ಜರಿಜರಿದು ಹೀಯಾಳಿಸುತ್ತಿರುವರು. ಅಸ್ತು! ಗಾಂಧಿಯವರು ಸ್ವರಾಜ್ಯಾಪೇಕ್ಷೆಗಳಾಗಿ ಅಸ್ಪೃಶ್ಯತಾನಿವಾರಣೆಗೆ ಅಧ್ವರ್ಯುಗಳಾಗಿದ್ದರೂ ಬಸವನು ಮಾಡಿದಂತೆ ಯಾವದುಷ್ಕೃತಿಗಳಿಗೂ ಅವಕಾಶವನ್ನು ಕೊಡಲಿಲ್ಲವೆಂಬ ಮಾತು ನಿಜವು. ಆದರೆ ಗಾಂಧಿಯವರು ಸುಪ್ರಸಿದ್ಧರಾಗಿ ಆರ್ಜವದಿಂದ ಧರ್ಮಮೂಲಕ್ಕೆ ಕುಠಾರವನೆತ್ತಿ ನಿರ್ಮೂಲಮಾಡಲಿಕ್ಕೆ ಪ್ರಯತ್ನಿಸಿದ್ದಕ್ಕಾಗಿ ವಿಷಾದಿಸಬೇಕಾಗಿದೆ. ಆದ್ದರಿಂದಲೇ ಈ ವಿಷಯದಲ್ಲಿ ಅತ್ಯಂತವಾದವು ಹುಟ್ಟಿದ್ದರಿಂದ ಸನಾತನ ಪುಢಾರಿಗಳು ಹಿಂಜರಿದರು. ಒಟ್ಟಿನಮೇಲೆ ಹೇಳುವದೇನೆಂದರೆ ಬಸವನು ಸನಾತನ ಧರ್ಮವಿರುದ್ಧವಾಗಿ ಆಚರಿಸಿ ಯಾವಫಲಭಾಗ್ಯವನ್ನು ಹೊಂದಿದನೋ ಅದನ್ನೇ ಗಾಂಧಿಯವರೇ ಮೊದಲಾದ ಸ್ವರಾಜ್ಯವಾದಿಗಳು ಉಣ್ಣಲು ಸಿದ್ಧರಾಗಿರುವರೆಂದು ಜನರಾಡುವಮಾತು ಅಕ್ಷರಶಃ ನಿಜವೆಂದು ಒಡೆದುಕಾಣುತ್ತದೆ. ಅಯ್ಯಾ, ಸ್ವರಾಜ್ಯವನ್ನು ಗಳಿಸುವದಕ್ಕೆ ನಡುಕಟ್ಟಿಕೊಂಡು ನಿಂತಿರುವ ವೀರರೇ, ಧೀರರೇ, ಶೂರರೇ ರಾ॥ ಹರಿನಾರಾಯಣ ಆಪಟೇ ಇವರು ಬರೆದಿರುವ ಉಷಃಕಾಲವೆಂಬ ಮಹಾರಾಷ್ಟ್ರಕಾದಂಬರಿಯನ್ನಾಗಲೀ ಅಥವಾ ರಾ॥ ಕನ್ನಡಪ್ರಸಿದ್ಧಕಾದಂಬರೀ ಕರ್ತರಾದ ಗಳಗನಾಥರವರಿಂದ ಬರೆಯಲ್ಪಟ್ಟ ಈಶ್ವರೀಸೂತ್ರವೆಂಬ ಕನ್ನಡಕಾದಂಬರಿಯನ್ನಾಗಲೀ ನೋಡಿರಿ. ಶಿವಾಜಿಯಂಥ ಶೂರಸರದಾರನಮಗನು ಯಾವರೀತಿಯಾಗಿ ಸ್ವರಾಜ್ಯವನ್ನು ಸಂಪಾದಿಸಿ ಲೋಕವಿಖ್ಯಾತನಾಗಿರುವನು? ಆತನಲ್ಲಿ ಸ್ವಧರ್ಮಪ್ರೇಮವು ಸ್ವಗುರುಗಳಲ್ಲಿ ಪೂರ್ಣವಿಶ್ವಾಸವು ಎಷ್ಟರಮಟ್ಟಿಗೆ ಇರುತ್ತದೆಂಬುದನ್ನು ಹೇಳಬೇಕಾಗಿಲ್ಲ. ಸ್ವಧರ್ಮದಲ್ಲಿ ಪ್ರೇಮವೂ ಸ್ವಗುರುಗಳಲ್ಲಿ ಭಕ್ತಿಯೂ ಇದ್ದುದರಿಂದಲೇ ಶಿವಾಜಿಯು ಜಯಶೀಲನಾದನು. ಕೈಲಾಗದ ಹೇಡಿಯಂತೆ ಉಪವಾಸಮಾಡಲಿಲ್ಲ. ಮಾಡುತ್ತೇನೆಂದು ಯಾರಿಗೂ ಹೇಳಲಿಲ್ಲ. ವರ್ಣಾಶ್ರಮನಿಬದ್ಧವಾದ ಸನಾತನ ವೈದಿಕಧರ್ಮವನ್ನು ಮನಃಪೂರ್ತಕವಾಗಿ ಕಾಪಾಡಿದನು. ಸ್ವರಾಜ್ಯಸಾಧನೆಗಾಗಿ ಅಸ್ಪೃಶ್ಯರನ್ನು ಕೂಡಿಕೊಂಡು ಧರ್ಮದ ಕಟ್ಟುಗಳನ್ನು ಹಾಳುಮಾಡಲಿಲ್ಲ. ತನಗೆ ಪ್ರತಿಕೂಲರಾದ ಯವನರ ಸತ್ವವನ್ನು ಹಿಂಡಿ ಹಿಪ್ಪಿಮಾಡಿ ಗೋಬ್ರಾಹ್ಮಣರನ್ನು ಸಂರಕ್ಷಿಸಿ ವೈದಿಕಧರ್ಮವನ್ನು ನೆಲೆಗೊಳಿಸಿದನು. ಅಂತೇ ಅವನು ವೀರನಾಗಿ ಧೀರನಾಗಿ ಶೂರನಾಗಿ ಸ್ವರಾಜ್ಯವನ್ನು ಸಂಪಾದಿಸಿ ಕೀರ್ತಿಶಾಲಿಯಾದನು. ಸ್ವರಾಜ್ಯವನ್ನು ಸಂಪಾದಿಸುವ ಅಣ್ಣಗಳಿರಾ! ಧರ್ಮೋರಕ್ಷತಿ ರಕ್ಷಿತಃ ಎಂಬುವಂತೆ ಧರ್ಮವನ್ನು ನೀವು ಕಾಪಾಡಿದರೆ ನಿಮ್ಮನ್ನು ಧರ್ಮವು ಕಾಪಾಡುತ್ತದೆ. ಇನ್ನಾದರೂ ನೀವು ವರ್ಣಾಶ್ರಮಧರ್ಮವನ್ನು ಕಾಪಾಡಿಕೊಂಡು ಸ್ವರಾಜ್ಯವನ್ನು ಸಂಪಾದಿಸಿರಿ; ಇಲ್ಲವಾದರೆ ನಿಮ್ಮ ಎಂದೂ ವಿಜಯವು ದೊರೆಯಲಾರದು. ಒಟ್ಟಿಗೆ ನೀವು ನಿಮ್ಮ ಮತವನ್ನೇ ಸಾಧಿಸುವದಾದರೆ ನೀವು ಸಂಪಾದಿಸುವದು ಸ್ವರಾಜ್ಯ ಸ್ವಧರ್ಮದ್ರೋಹವೆಂದೇ ಹೇಳಬೇಕಾಗುತ್ತದೆ.

ಸನಾತನಧರ್ಮಾಣ ದು
ರ
೦

ಪ್ರಪಂಚದ ಪ್ರಳಯ.

ಈಗಿನ ಪ್ರಪಂಚದ ಸ್ಥಿತಿಯನ್ನು ನೋಡಿದರೆ ಪ್ರಳಯ ದ್ಧ ಗಳು ಪರಾಕಾಷ್ಠಸ್ಥಿತಿಗೆ ಬರುತ್ತಲಿರುವದು ಗೊತ್ತಾ ೦೦೦ ಅನೇಕ ಜನಗಳು ದುರಹಂಕಾರ ಶಿಖರವನ್ನು ಏರ್ಪ ವೃ ತಿಳಿದುಕೊಳ್ಳಬೇಕಾದ ವಿಷಯಗಳು ಅಸಂಖ್ಯಾತವಾಗ ತಾವು ಸರ್ವಜ್ಞರೆಂದು ತಿಳಿದುಕೊಂಡು ಇರುವರು. : ನಿಗೆ ಬೇಕಾದದ್ದು ಎಷ್ಟು ಜೀರ್ಣವಾಗುವುದೋ ಅಷ್ಟು ತ್ಯಾ ಆರೋಗ್ಯಕ್ಕೆ ಸಾಧಕವಾದ ಗುಡಿಸಲುಗಳು, ಶರೀರಕ್ಕಾ ವಸ ಕಾಪಾಡಿಕೊಳ್ಳುವುದಕ್ಕೆ ಸಾಧಕವಾದ ಬಟ್ಟೆಗಳು, ಸಕಲಸಂಬ ಗಳಿಗಿಂತಲೂ ಹೆಚ್ಚಿನ ಸಂಪತ್ತನ್ನು ಕೊಡುವಶಾಂತಿ, ಇವುಲ್ಲಿ ತಲೂ ಹೆಚ್ಚಾಗಿ ಯಾರಿಗೂ ಏನೂ ಬೇಕಾಗುವುದಿಲ್ಲ. ೦ದು ಗ್ಯ ಈ ಪ್ರಪಂಚದಲ್ಲಿರತಕ್ಕ ಸಕಲಸಂಪತ್ತುಗಳು ತಲೂ ತಮಗೆ ಹೆಚ್ಚಾಗಿರಬೇಕೆಂಬ ದುರಾಶೆಯು ಬಹುಜ ಬಾಧಿಸುತ್ತದೆ. ಮಾತುಗಳಲ್ಲಿ ವೈರಾಗ್ಯಚಕ್ರವರ್ತಿಗಳಂ ದ ಭಕ್ತಶ್ರೇಷ್ಠರೂ ಕೂಡ ಈ ದುರಾಶೆಯ ರೂಪವಾದ ಪ್ರೋ ಕ ಅಧೀನರಾಗಿ ತಾವು ಕೆಡುವುದಲ್ಲದೆ ಪ್ರಪಂಚದಲ್ಲಿರತಕ್ಕ ಕ್ರಿ ಜನಗಳನ್ನೂ ಕೆಡಿಸುವರು. ಪರೋಪಕಾರವೇ ಪುಣ್ಯ ಪರ ಸ್ನು ಪಾಪ ಎಂದು ಬಾಯಲ್ಲಿ ಹೇಳುತ್ತಾ ಕಾರ್ಯತಃ ಪರೊ ಲ್ಲಿ ದಲ್ಲಿ ಪರಾಙ್ಮುಖರಾಗಿರತಕ್ಕವರು ಪ್ರಪಂಚದ ಎಲ್ಲಾ ಕಲ್ಲಿಯೂ ನಮ್ಮ ದೃಷ್ಟಿಪಥಕ್ಕೆ ಬೀಳುತ್ತಲಿರುವರು. ಸ್ಥಿತಿಯನ್ನು ಸ್ವಲ್ಪ ಪರೀಕ್ಷಿಸಿ ನೋಡೋಣ! ವಿಮ

ಜಪಾನ್ ದೇಶದವರು ಒಂದಾನೊಂದು ಕಾಲದಲ್ಲಿ ಶ್ರೀಮಂತ ಚಕ್ರವರ್ತಿಗಳಂತಿದ್ದರು. ಬುದ್ಧನೇ ಮೊದಲಾದ ಅವ ಬೆಸ್ತ ಪರ ಹಿತೋಪದೇಶಗಳಿಗೆ ಅನುಸಾರವಾಗಿ ಚಕ ಯಿಲ್ಲದೆ ಮೊದಲ್ಗೊಂಡು ಧ್ಯಾನವಾಲಿಗಳವರೆಗೂ ಬಹುಜನಗಳು ಕೆಂದು ಸಂಪತ್ತು ವೃದ್ಧಿಗೆ ಬರುವುದಕ್ಕೆ ಬಹುಜನಗಳು ಕೆಲ ವರು. ಎಲ್ಲರಿಗೂ ಅನ್ನೋದಕಗಳೇ ಮೊದಲಾದ ಭೋಗ್ಯವನ್ನು ಗಳು ದೊರೆಯುವಂತೆ ಮಾಡುವುದರ ಮೂಲಕ ಪ್ರತಿ ತಮ್ಮ ಇಷ್ಟಾರ್ಥಗಳನ್ನು ಪಡೆಯಬೇಕೆಂದು ಸಿದ್ಧಾ ನಗಂದ ಕೊಂಡು ಅದರಂತೆ ಅನೇಕರು ನಡೆಯುತ್ತಿದ್ದರು. ಇಸವಿ ರಾದ ವರ್ತಕರು ಧನಪಿಶಾಚದಿಂದ ಹಿಡಿಯಲ್ಪಟ್ಟು ಭೌತಿಕಶಾಸ್ತ್ರಗಳ ಮಹಿಮೆಯಿಂದ ಚಿತ್ರವಿಚಿತ್ರವಾದ ನನಾದ ಗಳನ್ನು ಏರ್ಪಡಿಸಿಕೊಂಡು ಸ್ಟೀಮರುಗಳೇ ಮೊದಲಾದವು ಸಹಾಯದಿಂದಲೂ ಪಂಚಭೂತಗಳಶಕ್ತಿಯನ್ನು ಉಪ ಹೊರ ಳ್ಳುವುದರಿಂದಲೂ ವಿದ್ಯುಚ್ಛಕ್ತಿಯೇ ಮೊದಲಾದವು ಹೆಚ್ಚ ಯೋಗದಿಂದಲೂ ಭೂಮಿಯು, ಸಮುದ್ರವು, ವಾಯು ರಂಗಭೂಮಿಯನ್ನಾಗಿ ಮಾಡಿಕೊಂಡು ವಾಯುವೇಗವ ಗಳ ಕಾರ್ಯಗಳಲ್ಲಿ ದಕ್ಷರಾಗಿ ಕೋಟೀಶ್ವರರಾಗಿ ಪತಿ ಯಲ್ಲಿ ಸೇರಿಕೊಂಡು ಹುಲ್ಲು ಮೇಯಲು ಬಂದ ದನಕ್ಕೆ ವಿಲ್ಲದೆ ಸುವ ನಾಯಿಯ ನೀತಿಯನ್ನು ಅನುಸರಿಸಿಕೊಂಡು ಹೇ ಬ್ರಿಟಿ ವನ್ನೇ ರಾಕ್ಷಸಮಯವಾಗುವಂತೆ ಮಾಡಿರುವರೋ ಸನ್ನು ಜಪಾನ್ ದೇಶಗಳಿಗೆ ಹೋಗಿ ಅವರ ಲೌಕಿಕ ವಿದ್ಯೆಗಳ ನರ್ಜ ಕೊಂಡು ಪಾರಮಾರ್ಥಿಕವಾದ ವಿದ್ಯೆಗಳಿಗೆ ಉತ್ತರಕ್ರಿ ಮಾಡಿ ಸಂಪತ್ತುಗಳ ಶಿಖರದಿಂದ ಪಾಶ್ಚಾತ್ಯರನ್ನು ಓಡಿ ದ್ದ ೨೦ ಸದಾ ಶಿಖರದಲ್ಲಿರಬೇಕೆಂದು ಹೇಗೆ ಪ್ರಯತ್ನಪಡುತ್ತಿ ಳೆದು ರುವರೋ ಅದು ಈಗ ದೃಷ್ಟಿಪಥಕ್ಕೆ ಬೀಳುತ್ತಲಿದೆ. ಜ ಶಕ್ಕೆ ಸೇರಿದ ಮಂಚೂರಿಯಾದೇಶವು ಚಿನ್ನಬೆಳ್ಳಿರತ್ನಗ ಗಳಲ್ಲಿ ಲಾದ ಅನೇಕ ವಸ್ತುಗಳಿಗೆ ಪ್ರಸಿದ್ಧವಾದದ್ದು ಅದನ್ನು ಯುವ ಸಿಕೊಂಡು ಕ್ರಮೇಣ ಚೀನಾದೇಶವನ್ನೂ ಏಷ್ಯಾಖಂಡದ ಭೂಮಿಯನ್ನೂ ಅಪಹರಿಸಿ ಲೋಕಗಳಲ್ಲಿರತಕ್ಕ ಎಲ್ಲಾ ರಾಷ್ಟ್ರಗ ಗಳಿಗಿಂತಲೂ ತಾವು ಅಧಿಕರೆಂದು ಪ್ರಖ್ಯಯವನ್ನುಂಟುಮಾಡಬೇಕೆಂದು ಚೀನಾದೇಶದ ಮೇಲೆ ಯುದ್ಧಕ್ಕೆ ಉಪಕ್ರಮಿಸಿ ಅನೇಕಲಕ್ಷ ಜನಗಳು ಸಾಯುವಂತೆ ಮಾಡಿರುವರು. ಪ್ರ ದಲ್ಲಿ ಮಠಗಳು ಎಂಬದಾಗಿಯೂ, ಪಾಶ್ಚಾತ್ಯರಲ್ಲಿ ಬೀ ರ್ರ ರ ಬೋಲ್ಷೆವಿಕರೆಂಬದಾಗಿಯೂ, ಕೆಲವು ವರ್ಷಗಳಿಗೆ ಒಂದು ಪ್ರಶ್ನೆಯು ಇತ್ತು. ರಷ್ಯಾದೇಶಕ್ಕೂ ಜಪಾನ್ ದೇ ಯುದ್ಧವಾದಾಗ ಈ ಪ್ರಶ್ನೆಯು ನಾಮಾವಶೇಷವಾಯಿತೆಂಬ ಈಗ ಜಪಾನ್‌ನವರು ಉಪಕ್ರಮಿಸಿರುವ ಯುದ್ಧದ ಪರಿ ವನ್ನು ನೋಡಿ ಈಗ ಜಪಾನ್ ದೇಶವನ್ನು ನಿಗ್ರಹಿಸ 050 ಪಾಶ್ಚಾತ್ಯ ಪ್ರಪಂಚಕ್ಕೆ ಹಾನಿಯುಂಟಾಗಬಹುದೆಂದು ಒಟ್ಟು ಯೂರೋಪ್, ಮತ್ತು ಅಮೇರಿಕಾಖಂಡದ ಚಕ್ರ 744 ಗಳಲ್ಲಿ 19 ಸಂಸ್ಥಾನಾಧಿಪತಿಗಳು ಒಗ್ಗಟ್ಟಾಗಿ ಯುದ್ಧ ೂ, ನಿಲ್ಲಿಸಬೇಕೆಂಬುದಾಗಿಯೂ, ಜಪಾನ್‌ಗೂ, ಚೀನಾದೇಶಕ್ಕೂ ಇವರಕ್ಕೆ ಮನಸ್ತಾಪಗಳನ್ನು ಜನಾಂಗಸಂಯೋಜನಕೂಟದವರಿಗೆ ಬಿಡಬೇಕೆಂಬುದಾಗಿಯೂ ಹುಕುಮನ್ನು ಕಳುಹಿಸಿರುವರು ಇದನ್ನು ನೋಡಿ ಜಪಾನ್ ದೇಶದ ಮುಖಂಡರು ತಿರಸ್ಕಾರದಿ ವಗುವುದಕ್ಕೆ ಉಪಕ್ರಮಿಸಿರುವರು. ಈ ನುಡಿಗೆ ಅರ್ಥವೇನೆಂ ಕೆಲವರು ಕೇಳಬಹುದು. ಈ ಅರ್ಥವನ್ನು ತಿಳಿದುಕೊಳ್ಳುವದ ಕಷ್ಟವಲ್ಲ. ನೀವೆಲ್ಲರೂ ಸೊಳ್ಳೆಗಳು, ನಿಮ್ಮನ್ನು ಮೂಲೋತ್ಪಾ

ಗಳಿಂದ ರಫ್ತಾಗಿ ಬರುತ್ತಿರುವವು. ಈ ಕೈಗಾರಿಕೆಯನ್ನು ಭರತಖಂಡದಲ್ಲಿ ಪ್ರಾರಂಭಿಸುವದರ ಸಲುವಾಗಿ ಕಲ್ಕತ್ತೆಯಲ್ಲಿ ಒಂದು ಕಂಪನಿಯು ಸ್ಥಾಪಿಸಲ್ಪಟ್ಟಿರುವದು. ಇವರು ಈಗಾಗಲೇ ಪರೀಕ್ಷಾರ್ಥವಾಗಿ ಕೆಲವು ಯಂತ್ರಗಳನ್ನು ತಯಾರಿಸಿರುವರೆಂದೂ, ವಿದೇಶಯಂತ್ರಗಳಿಗೆ ಯಾವ ವಿಧದಲ್ಲಿಯೂ ಕೀಳಾಗಿಲ್ಲವೆಂದೂ ತಿಳಿದುಬಂದಿದೆ.

1932 ನೇ ಇಸವಿಯಲ್ಲಿ ಇಡೀ ಪ್ರಪಂಚದಲ್ಲಿ ಒಟ್ಟು 1738 ತರಹ ಹೊಸಸ್ಟಾಂಪುಗಳು ಹೊರಡಿಸಲ್ಪಟ್ಟವಂತೆ! ಅಮೇರಿಕೆಯ ಸಂಯುಕ್ತ ಸಂಸ್ಥಾನದವರು ವಾಷಿಂಗ್‌ಟನ್‌ರವರ ಜ್ಞಾಪಕಾರ್ಥವಾಗಿಯೂ, ರಷ್ಯಾದೇಶದವರು ಗೋರ್ಕಿಯವರ ಜ್ಞಾಪಕಾರ್ಥವಾಗಿಯೂ, ಇಟಲಿಯ ಗ್ಯಾರಿಬಾಲ್ಡಿ ಮತ್ತು ಅವರ ಪತ್ನಿಯವರ ಜ್ಞಾಪಕಾರ್ಥವಾಗಿಯೂ, ಸ್ಯಾನ್‌ಮಾರಿನೋ ದೇಶದವರು ತಮ್ಮ ಹೊಸ ಪೋಸ್ಟ್‌ಆಫೀಸಿನ ಜ್ಞಾಪಕಾರ್ಥವಾಗಿಯೂ ಸ್ಟಾಂಪುಗಳನ್ನು ಹೊರಡಿಸಿದರು. ಅದರೆ ಅಫ್ಘಾನಿಸ್ಥಾನದವರು ಮೂರ್ಖತನದಿಂದ ತಮ್ಮ ದೇಶವು ಬಿಡುಗಡೆಹೊಂದಿದ ಸಂತೋಷಕ್ಕಾಗಿ ಸ್ಟಾಂಪುಗಳನ್ನು ಹೊರಡಿಸಿದರಂತೆ!

ಲಂಡನ್ನಿನ ಮೃಗಾಲಯದಲ್ಲಿ ಮನುಷ್ಯನ ಆಕಾರವುಳ್ಳ 'ಗೊರಿಲ್ಲಾ' ಎಂಬ ಕಪಿಗಳ ವಾಸಕ್ಕಾಗಿ ಭವ್ಯವಾದ ಅರಮನೆಯೋಪಾದಿಯಲ್ಲಿರುವ ಒಂದು ಕಟ್ಟಡವನ್ನು ಕಟ್ಟಿರುವರು. ಈ ಕಟ್ಟಡವು ಆಕಾರದಲ್ಲಿ ಗುಂಡಾಗಿದ್ದು, ಬೆಳಗಿನಿಂದ ಸಾಯಂಕಾಲದವರೆಗೂ ಸೂರ್ಯನ ಬೆಳಕು ಬೀಳುತ್ತಿರುವಂತೆ ಕಟ್ಟಲ್ಪಟ್ಟಿರುವದು. ಈ ಕಟ್ಟಡದೊಳಗೆ ಸ್ನಾನದಮನೆಯೂ, ನೀರು ಕುಡಿಯುವ ಬುಗ್ಗೆಗಳೂ ಬೇರೆಬೇರೆ ಸ್ಥಾಪಿಸಲ್ಪಟ್ಟಿರುವವು. ಚಳಿ ಮತ್ತು ಮಳೆಗಾಲಗಳಲ್ಲಿ ಈ ಕಪಿಗಳಿಗೆ ಸಾಕಾದಷ್ಟು ಬೆಳಕನ್ನು ಒದಗಿಸುವದಕ್ಕಾಗಿ ಸೂರ್ಯನ ಬೆಳಕಿಗೆ ಸಮಾನವಾದ ಬೆಳಕನ್ನು ಕೊಡಬಲ್ಲ ಎಲೆಕ್ಟ್ರಿಕ್ ದೀಪಗಳು ಇಡಲ್ಪಟ್ಟಿರುವವು.

1918 ನೇ ಇಸವಿಯಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನದ ಸರ್ಕಾರದವರು ಏರೋಪ್ಲೇನುಗಳ ಮೂಲಕವಾಗಿ ಟಪಾಲುಗಳ ಉಪಯೋಗಕ್ಕಾಗಿ ಕೆಲವು ಸ್ಟಾಂಪುಗಳನ್ನು ತಯಾರಿಸಿದ್ದರು. ಈ ಸ್ಟಾಂಪುಗಳು ಸಂಪೂರ್ಣವಾಗಿ ವಿಕರಿಯಾಗುವವರೆಗೂ ಅದರಮೇಲಿನ ಏರೋಪ್ಲೇನಿನ ಚಿತ್ರವು ತಲೆಕೆಳಗಾಗಿ ಪ್ರಿಂಟಾಗಿರುವದೆಂಬುದನ್ನು ಯಾರೂ ನೋಡಿಯೇ ಇರಲಿಲ್ಲ. ಇವುಗಳ ಪೈಕಿ 1 ಸ್ಟಾಂಪುಮಾತ್ರ ಸರಕಾರದವರ ಬಳಿಯಲ್ಲಿ ಉಳಿದುಹೋಗಿತ್ತು. ಈಚೆಗೆ ಅವರು ಅದನ್ನು ಹರಾಜುಹಾಕಿದಾಗ, ಒಬ್ಬ ಶ್ರೀಮಂತನು 8000 ರೂಪಾಯಿಗಳಿಗೆ ಕೊಂಡುಕೊಂಡನಂತೆ!

ವಿಚಿತ್ರಪ್ರಪಂಚ.

"ಸ್ವಿಫ್ಟ್" ಎಂಬ ಪಕ್ಷಿಯು ಪ್ರಪಂಚದಲ್ಲಿರುವ ಇತರ ಎಲ್ಲ ಪಕ್ಷಿಗಳಿಗಿಂತಲೂ ಅತ್ಯಂತ ವೇಗವಾಗಿ ಹಾರಬಲ್ಲದು. ಇದು ನಿಮಿಷವೊಂದಕ್ಕೆ ಸರಾಸರಿ 220 ಮೈಲುಗಳದೂರ ಹಾರುವದಂತೆ!

ಸಾಧಾರಣವಾಗಿ ಒಂದು ಒಂಟೆಯು 400 ಪೌಂಡುಗಳ ಹೊರೆಯನ್ನು ಹೊತ್ತುಕೊಂಡು ಒಂದು ತೊಟ್ಟು ನೀರನ್ನೂ ಕುಡಿಯದೆ 12 ದಿನಗಳವರೆಗೆ ದಿನವೊಂದಕ್ಕೆ 40 ಮೈಲುಗಳ ಮೇರೆಗೆ ಪ್ರಯಾಣಮಾಡಬಲ್ಲದಂತೆ!

ಪ್ರಪಂಚದಲ್ಲಿರುವ ಬೈಬಲ್‌ಗಳಲ್ಲೆಲ್ಲಾ ರೋಂನಗರದಲ್ಲಿರುವ ರೋಮನ್‌ಕ್ಯಾಥೊಲಿಕ್ ಕ್ರೈಸ್ತರ ಗುರುಗಳಾದ ಪೋಪರವರ ಅರಮನೆಯಲ್ಲಿರುವ ಬೈಬಲ್ಲೇ ಅತ್ಯಂತ ದೊಡ್ಡದೂ ಮತ್ತು ಭಾರವುಳ್ಳದ್ದೂ ಆಗಿರುವದು. ಈ ಗ್ರಂಥವು ಸಂಪೂರ್ಣವಾಗಿ ಹೀಬ್ರೂ ಭಾಷೆಯಲ್ಲಿ ಕೈಯ್ಯಿಂದಲೇ ಬರೆಯಲ್ಪಟ್ಟಿರುವದು. ಇದರ ತೂಕವು 320 ಪೌಂಡುಗಳಿಗಿಂತಲೂ ಹೆಚ್ಚಾಗಿರುವದಂತೆ!

ಈ ಭೂಮಂಡಲದಲ್ಲಿ ಪ್ರತಿ 100 ಕ್ಕೆ 3 ಜನರು ಕೇವಲ ಸಮುದ್ರದಲ್ಲಿ ದೊರೆಯುವ ವಸ್ತುಗಳಿಂದಲೇ ತಮ್ಮ ಜೀವಮಾನವನ್ನು ಸಾಗಿಸುವರಂತೆ!

ಪಾರ್ಶೀಜನರು ತಿಂಗಳಲ್ಲಿ ಬರುವ 30ದಿವಸಗಳನ್ನೂ ಬೇರೆ ಬೇರೆ ಹೆಸರಿನಿಂದ ಕರೆಯುವರು.

ಕ್ಯೂಬಾ ದ್ವೀಪವು ಅಗ್ನಿಪರ್ವತಗಳ ನೆಲೆಯೆಂದು ಪ್ರಸಿದ್ಧಿಯಾಗಿರುವದು. ಈ ದ್ವೀಪದಲ್ಲಿ ವಿಚಿತ್ರ ಜಾತಿಯ ಕೆಲವು ಗಿಡಗಳಿರುವುವು. ಭೂಕಂಪವಾಗುವುದಕ್ಕೆ ಕೆಲವು ಘಂಟೆಗಳ ಪೂರ್ವದಲ್ಲಿ ಈ ಗಿಡಗಳ ಸ್ವಾಭಾವಿಕ ಬಣ್ಣವು ಇದ್ದಕ್ಕಿದ್ದಹಾಗೆ ವ್ಯತ್ಯಾಸವಾಗುವದಂತೆ! ಇದನ್ನು ಕಂಡಕೂಡಲೇ ಆ ದ್ವೀಪನಿವಾಸಿಗಳು ಅಪಾಯಪ್ರದೇಶದಿಂದ ದೂರಹೋಗಿ ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವರಂತೆ!

ಈ ಪ್ರಪಂಚದ ಪ್ರಜೆಗಳು ಪ್ರತಿಕ್ಷಣವೂ ಸರಾಸರಿ 30,00,000, ಬೆಂಕಿಯ ಕಡ್ಡಿಗಳನ್ನು ಉಪಯೋಗಿಸುವರಂತೆ!

ಅಬಿಸೀನಿಯಾ ದೇಶದ ಕಾಡುಗಳಲ್ಲಿ ಭಯಂಕರಾಕಾರದ ಜೇಡರ ಹುಳುಗಳು ಈಗಲೂ ತುಂಬಿರುವುವು. ಇವು ಸುತ್ತಳತೆಯಲ್ಲಿ 3 ಅಡಿಗಳಿಗಿಂತಲೂ ಹೆಚ್ಚಾಗಿದ್ದು, ಸಣ್ಣಸಣ್ಣ ಪಕ್ಷಿಗಳೇ ಇವುಗಳ ಆಹಾರವಾಗಿರುವವು!

ಒಂದು ಔನ್ಸ್ (2½ ತೊಲ) ಗುಲಾಬಿಯ ಅತ್ತರನ್ನು ತಯಾರಿಸಲು 500 ಪೌಂಡುಗಳ ತೂಕದಷ್ಟು ಗುಲಾಬಿಯ ಹೂಗಳು ಬೇಕು.

ಮೆಕ್ಸಿಕೋ ದೇಶಕ್ಕೆ ಸೇರಿದ ತೂಲ ಎಂಬ ಸ್ಥಳದಲ್ಲಿ ಪ್ರಪಂಚದಲ್ಲೆಲ್ಲಾ ಅಂತ್ಯಂತ ದೊಡ್ಡದೆನಿಸಿದ ಒಂದು ಮರವಿರುವದು. ರಾಕ್ಷಸಾಕೃತಿಯ ಈ ಮರವು ಬುಡದಲ್ಲಿ 154 ಅಡಿಗಳ ಸುತ್ತಳತೆಯುಳ್ಳದ್ದಾಗಿರುವದು. ಇದಕ್ಕೆ ಸುಮಾರು 1000 ವರ್ಷವಾಗಿರಬಹುದೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು.

ಜಪಾನ್‌ದೇಶದ ಭಾಷೆಯು 'ಹಿಡ್ಡನಕ' ಮತ್ತು 'ಕಿಡ್ಡನಕ' ಎಂದು ಎರಡು ಜಾತಿಯ ಅಕ್ಷರಗಳಿಂದ ಕೂಡಿರುವದು. 'ಹಿಡ್ಡನಕ' ಎಂಬ ಜಾತಿಯ ಅಕ್ಷರಗಳನ್ನು ಉಪಯೋಗಿಸುವ ಅಧಿಕಾರವು ಸ್ತ್ರೀಯರಿಗೂ, 'ಕಿಡ್ಡನಕ' ಎಂಬ ಜಾತಿಯ ಅಕ್ಷರಗಳನ್ನು ಉಪಯೋಗಿಸುವ ಅಧಿಕಾರವು ಪುರುಷರಿಗೂ ಇರುವದಂತೆ!

ಈ ಪ್ರಪಂಚದಲ್ಲಿ ಒಟ್ಟು 1,100 ಬೇರೆಬೇರೆ ಜಾತಿಯ ಮೃಗಗಳೂ, 1,20,000 ತರಹ ಜೇಡರ ಹುಳುಗಳೂ, 50,000 ತರಹ ಚಿಟ್ಟೆಯ ಹುಳುಗಳೂ, 40,000 ತರಹ ನೊಣಗಳೂ ಇರುವವಂತೆ!

ಈ ಪ್ರಪಂಚದಲ್ಲಿ ಒಟ್ಟು 184,95,00,000 ಜನರಿರುವರೆಂದೂ, ಸುಮಾರು 10,00,00,00,000 ದಷ್ಟು ಇಲಿಗಳಿರುವವೆಂದೂ ಒಬ್ಬ ಶಾಸ್ತ್ರಜ್ಞರು ಲೆಕ್ಕ ಹಾಕಿರುವರು. ಅಂದರೆ ಪ್ರತಿಯೊಬ್ಬ ಮನುಷ್ಯನಿಗೆ 5 ಇಲಿಗಳಿರುವವೆಂದ ಹಾಗಾಯಿತು!

ಸೂರ್ಯನಿಗಿಂತಲೂ 52 ಪಾಲು ದೊಡ್ಡದಾಗಿರುವ ಗ್ರಹವೊಂದು ವಾಯುಮಂಡಲದಲ್ಲಿರುವದಂತೆ! ಆದರೆ ಇದು ಸೂರ್ಯನಿಗಿಂತಲೂ ಬಹುದೂರದಲ್ಲಿರುವದರಿಂದ ನಮ್ಮ ಕಣ್ಣಿಗೆ ನಕ್ಷತ್ರದೋಪಾದಿಯಲ್ಲಿ ಕಾಣಿಸುವದಂತೆ!

ಈ ಪ್ರಪಂಚದ ಒಟ್ಟು ಜನಾಂಗದಲ್ಲಿ 100 ಕ್ಕೆ 33 ಜನರು ಮಾತ್ರ ಸರಿಯಾದ ವಸತಿ ಗೃಹಗಳನ್ನು ಹೊಂದಿರುವರಂತೆ! ಉಳಿದ ಜನರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಕಾಡುಗಳಲ್ಲಿಯೂ ಮತ್ತು ಗುಹೆಗಳಲ್ಲಿಯೂ ವಾಸಿಸುವರಂತೆ! ಉಳಿದವರಿಗೆ ಯಾವ ವಿಧವಾದ ವಾಸಸ್ಥಳವೂ ಇಲ್ಲವಂತೆ!

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[11] ಚಿಕ್ಕಪೇಟೆ, ಬೆಂಗಳೂರು ಸಿಟಿ

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅಹಿಂಸಾ.

ಲೇಖಕ—ಶ್ರೀಕ್ಷೇತ್ರ ಕಾಶಿವಿದ್ಯಾರಾಧ್ಯಗುರುಕುಲವಾಸಿ
ಸಿದ್ಧಲಿಂಗಶರ್ಮಾ, ಬಂಕಾಪುರ.

ಕಾಯ-ವಾಕ್-ಮನಸ್ಸುಗಳಲ್ಲಿಯೂ ನಿರಪರಾಧಿಗಳಾದ ಪ್ರಾಣಿಗಳಿಗೆ ಕಷ್ಟವನ್ನು ಕೊಡದಿರುವದೇ ಅಹಿಂಸೆಯು. ಇದಕ್ಕೆ ವಿರುದ್ಧವಾಗಿ ನಡೆಯುವದೇ ಹಿಂಸೆಯು. ಅಹಿಂಸೆಯೆಂಬುದು ನಮ್ಮ ಭಾರತೀಯರಿಗೆ ಒಂದು ಮುಖ್ಯಧರ್ಮವಾಗಿರುತ್ತದೆ. ನವೀನನಾಗರಿಕರಾದ ಕೆಲವರು ಹಿಂಸಾಪ್ರವಾಹವು ಹರಿಯುವದಕ್ಕೆ ದಾರಿಯನ್ನು ತೋರಿಸುತ್ತಲಿದ್ದಾರೆ. ಏಕೆಂದರೆ—ಶ್ಲೋ|| ಅದ್ರೋಹಃ ಸರ್ವಭೂತೇಷು ಕರ್ಮಣಾಮನಸಾಗಿರಾ | ಅನುಗ್ರಹಶ್ಚ ದಾನಂಚ ಸತಾಂಧರ್ಮಸ್ಸನಾತನಃ || ಅಂದರೆ ಯಾವ ಮನುಷ್ಯನು ತ್ರಿಕರಣದಲ್ಲಿಯೂ ಯಾವ ಪ್ರಾಣಿಗೂ ದ್ರೋಹವನ್ನು ಮಾಡದೆ ಅನುಗ್ರಹವನ್ನು ಮಾಡುತ್ತಾನೆಯೋ ಮತ್ತು ಅತಿಥಿಅಭ್ಯಾಗತರಿಗೆ ಅನ್ನೋದಕವನ್ನು ಕೊಡುತ್ತಾನೆಯೋ ಅವನೇ ಸತ್ಪುರುಷನೆನಿಸಿಕೊಳ್ಳುತ್ತಾನೆ. ಹೇಗೆಂದರೆ—"ಆತ್ಮವತ್ ಸರ್ವಭೂತೇಷು ಯಃ ಪಶ್ಯತಿ ಸ ಪಂಡಿತಃ" ಯಾವ ಮನುಷ್ಯನು ತನಗುಂಟಾದ ಕುಂದು ಕೊರತೆಗಳನ್ನು ಹೋಗಲಾಡಿಸಿಕೊಳ್ಳುವಂತೆ, ಇತರರ ಕುಂದುಕೊರತೆಗಳನ್ನು ಹೋಗಲಾಡಿಸುತ್ತಾನೆಯೋ ಅವನೇ ಜ್ಞಾನಿಯೆಂದು ಹೇಳಿಸಿಕೊಳ್ಳುತ್ತಾನೆ. ತುಲಸೀದಾಸರು ದಯಾ ಧರ್ಮಕಾ ಮೂಲಹೈ ಪಾಪಮೂಲಹೈ ಅಭಿಮಾನ್ | ತುಲಸೀದಯಾ ಕಭೀನ ಛೋಡಿಯೇ ಜಬತಕ್ ಘಟಮೆ ಪ್ರಾಣ್ || ಅಂದರೆ ಈ ಶರೀರದಲ್ಲಿ ಪ್ರಾಣವು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯ ಪರ್ಯಂತವಾಗಿ ದಯಾ-ದಾಕ್ಷಿಣ್ಯಾದಿಗುಣಗಳನ್ನು ಬಿಡಬೇಡಿರೆಂದು ಹೇಳುತ್ತಾರೆ. ದಯಾಕೌನಿಪಟ ಕೀಜೀಯೆ ತಾಪರ್ ನಿರ್ದಯಹೋಯ್ | ಸಾಯಿಕೆ ಸಬ್ ಜೀವಹೈ ಕೀರಿಕುಂಜರ್ ಹೋಯ್ || ಇರುವೆ ಮೊದಲುಮಾಡಿಕೊಂಡು ಆನೆಯವರೆಗೂ ಇರುವ ಎಲ್ಲಾ ಜೀವಗಳೂ ಪರಮಾತ್ಮನ ಅಂಶವಾಗಿರುವದರಿಂದ ಪ್ರಾಣಿಗಳಲ್ಲೆಲ್ಲಾ ನಿಜವಾದ ಪ್ರೇಮವನ್ನು ಇಡಬೇಕು. ಹೊಟ್ಟೆಗೋಸುಗ ಪ್ರಾಣಿಹಿಂಸೆಯನ್ನು ಮಾಡುವದು ಮಹಾಪಾಪಕರವು. ಪರದೇಶಸಕ್ಕರೆಯನ್ನು ಉಣ್ಣುವದೂ, ಪರದೇಶದ ಬಟ್ಟೆಗಳನ್ನು ಉಪಯೋಗಿಸುವದೂ ಇವುಗಳಿಂದ ಧರ್ಮವು ನಷ್ಟವಾಗುವದಲ್ಲದೆ ಹಿಂಸೆಮಾಡುವದಕ್ಕೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ. ಏಕೆಂದರೆ, ಪರದೇಶದ ಸಕ್ಕರೆಯನ್ನು ಮಾಡಬೇಕಾದರೆ ಎಷ್ಟೋ ಕುರಿ, ಕೋಣ, ಕತ್ತೆ, ಹಂದಿ, ಗೋವು ಮುಂತಾದ ಪ್ರಾಣಿಗಳನ್ನು ಕೊಂದು ಅವುಗಳ ರಕ್ತದಿಂದ ಆ ಎಲುಬುಗಳನ್ನು ತೊಳೆದು ಆ ಎಲುಬುಗಳಿಂದ ಸಕ್ಕರೆಯನ್ನು ಮಾಡುತ್ತಾರೆ. ಇಂಥ ಸಕ್ಕರೆಯನ್ನು ಆಚಾರಶೀಲರೂ ದೇವಭಕ್ತರೂ ಸೇವನೆಗೂ, ದೇವರ ನೈವೇದ್ಯಕ್ಕೂ ಪ್ರಸಾದಕ್ಕೂ ಉಪಯೋಗಿಸುತ್ತಾರೆ. ಇದಲ್ಲದೆ, ಹಬ್ಬಹುಣ್ಣಿವೆಯಲ್ಲಿ ಸೀಪದಾರ್ಥವನ್ನು ಮಾಡಿ ಊಟವನ್ನು ಮಾಡುತ್ತಾರೆ. ಇದಲ್ಲದೆ ಜಂಟಲ್‌ಮೆನ್ನರು ಪ್ರಭಾತಕಾಲದ ವ್ರತಕ್ಕಾಗಿ ಅಂದರೆ ಚಹಾ ಕಾಫೀ ಕುಡಿಯುವದರಸಲುವಾಗಿ ಈ ಸಕ್ಕರೆಯನ್ನು ಉಪಯೋಗಿಸಿ, ತಮ್ಮ ಶರೀರವನ್ನು ಹಾಳುಮಾಡಿಕೊಳ್ಳುತ್ತಾರೆ ಮತ್ತು ಪರದೇಶದ ಬಟ್ಟೆಗಳಿಗೆ ಗೋವು ಇತ್ಯಾದಿ ಪ್ರಾಣಿಗಳ ನೆಣವನ್ನು ಹಚ್ಚಿ ಒಳ್ಳೇ ನುಣುಪಾಗಿಯೂ ಕಣ್ಣಿಗೆ ಮನೋಹರವಾಗಿಯೂ ಕಾಣಿಸುವಂತೆಮಾಡಿ ನಮಗೆ ಕಳುಹಿಸುತ್ತಾರೆ. ಇಂಥ ಅಪವಿತ್ರವಾದ ಬಟ್ಟೆಗಳನ್ನು ಆಚಾರಸ್ಥರು ಧರಿಸಬಹುದೆ? ಶ್ಲೋ|| ಆಚಾರಃ ಪ್ರಥಮೋ ಧರ್ಮಃ ನೃಣಾಂ ಶ್ರೇಯಸ್ಕರೋಮಹಾನ್ | ಇಹಲೋಕೇ ಪರಾಕೀರ್ತಿಃ ಪರತ್ರ ಪರಮಂ ಸುಖಂ || ಅಂದರೆ, ಮನುಷ್ಯನಿಗೆ ಶ್ರೇಷ್ಠವಾಗಿರತಕ್ಕ ಇಹ-ಪರಲೋಕಗಳಲ್ಲಿ ಅತ್ಯಂತಸುಖವನ್ನು ಕೊಡತಕ್ಕ ಈ ಆಚಾರವನ್ನು ಹಾಳುಮಾಡಿಕೊಳ್ಳುವುದಲ್ಲದೆ ತಾವೇ ಪ್ರಾಣಿಹಿಂಸೆಗೆ ಪ್ರೋತ್ಸಾಹಿಸಿದಂತಾಗುತ್ತದೆ. ನಾವೆಲ್ಲರೂ ಪರದೇಶದ ಸಕ್ಕರೆ ಬಟ್ಟೆಗಳನ್ನು ಉಪಯೋಗಿಸುವದನ್ನು ಬಿಟ್ಟರೆ, ಅಷ್ಟು ಪ್ರಾಣಿಗಳ ಜೀವವನ್ನು ಉಳಿಸಿದಂತಾಗುತ್ತದೆ. ಮೊದಲು ನಮ್ಮ ಭಾರತವರ್ಷದಲ್ಲಿ ೧೮ ಕೋಟಿ ಗೋವುಗಳು ಇರುತ್ತಿದ್ದವು. ಈ ಸಮಯದಲ್ಲಿ ೩ ಕೋಟಿ ಗೋವುಗಳು ಇರುತ್ತವೆ. ಇದು ನಮ್ಮ ಭಾರತದೇಶಕ್ಕೆ ಎಷ್ಟು ಹಾನಿಕರವಾಗಿರುತ್ತದೆ. ನೋಡಿರಿ, ಗೋವುಗಳಿಂದಲೇ ಸರ್ವರಾಷ್ಟ್ರವು ವೃದ್ಧಿಯನ್ನು ಹೊಂದುತ್ತಲಿದೆ. ಗೋವುಗಳಿಂದಲೇ ನಮ್ಮ ಕುಟುಂಬಸಂತಾನವೂ ವೃದ್ಧಿಯನ್ನು ಹೊಂದುತ್ತದೆ. ಗೋವಿನ ಹಾಲು, ತುಪ್ಪ, ಮೊಸರು, ಮೂತ್ರ, ಗೋರೋಜನ, ಗೋಮಯ ಇತ್ಯಾದಿಗಳಿಂದ ಯಜ್ಞ, ಹೋಮ ಮತ್ತು ಭೂಸಮ್ಮಾರ್ಜನಾದಿಕಾರ್ಯಗಳು ಜರಗುತ್ತವೆ. ಇಂಥ ಮಹಾ ಪವಿತ್ರವಾದ ಗೋವಿನಿಂದ ಎಷ್ಟೋ ಉಪಕಾರವನ್ನು ಹೊಂದಿದ್ದರೂ ಅದನ್ನೊಂದು ಸ್ಮರಿಸದೆ ಕೆಲ ನೀಚರು ಮುಪ್ಪಿನಕಾಲಕ್ಕೆ ಆ ಗೋವನ್ನು ಕಟುಕರಿಗೆ ೫ ರೂಪಾಯಿನ ಆಸೆಗಾಗಿ ಮಾರಲಿಕ್ಕೆ ಕೊಡುತ್ತಾರೆ. ಕೊಲೆಗಡಕನು ಅದರ ಕುತ್ತಿಗೆಯನ್ನು ಕಡಿಯುವಾಗ ಅಂಬಾ ಎಂದು ಒದರುವ ಅದರ ದುಃಖಧ್ವನಿಯು ನಮ್ಮ ಭಾರತವರ್ಷದಲ್ಲಿ ಪ್ರಸರಿಸಿರುವದರಿಂದಲೇ ಈ ನಮ್ಮ ರಾಷ್ಟ್ರದಲ್ಲಿ ಅವನತಿಯು ಪ್ರಾಪ್ತವಾಗಲಿಕ್ಕೆ ಹತ್ತಿರುತ್ತದೆ. ಮತ್ತು ಇದಲ್ಲದೆ, ಗ್ರಾಮದೇವತೆಯ ಜಾತ್ರೆಯನ್ನು ಮಾಡಿ ಮಾಂಸವನ್ನು ತಿನ್ನುವದರ ಸಲುವಾಗಿ ದೇವಿಯ ಹೆಸರನ್ನು ಹೇಳಿ ಎಷ್ಟೋ ಕುರಿ, ಕೋಣ, ಕೋಳಿಗಳ ಹಿಂಸೆಯನ್ನು ಮಾಡುತ್ತಾರೆ.

ತಮಗೆ ಏನಾದರೂ ವಿಪತ್ತುಗಳು ಬಂದರೆ ತಾಯಿಯೆಂದರೇ ಒಂದೆಂದು ಭಾವಿಸಿ, ತಾಯಿ! ನಿನಗೆ ಒಂದು ಕುರಿ ಬೇಟೆಯನ್ನು ಕೊಡುತ್ತೇನೆಂದು ಬೇಡಿಕೊಳ್ಳುತ್ತಾರೆ. ಅಯ್ಯೋ, ಜಗಜ್ಜನನಿಯೆಂದು ಹೇಳಿಸಿಕೊಳ್ಳುವ ಈ ದೇವಿಯು ಎಂದಾದರೂ ತನ್ನ ಮಕ್ಕಳನ್ನೇ ಆಹಾರವಾಗಿ ಬೇಡುವುದುಂಟೇ? ದಯಾನಿಧಿಯಾದ ದೇವಿಯ ನೆವದಿಂದ ಹೊಟ್ಟೆಯನ್ನು ತುಂಬಿಕೊಳ್ಳುವದರಸಲುವಾಗಿ ನಮ್ಮ ರಾಷ್ಟ್ರದಲ್ಲಿ ಪಾಪಮಯವಾದ ಹಿಂಸಾಕಾರ್ಯವನ್ನು ಜೋರಿನಿಂದ ನಡೆಸುತ್ತಲಿದ್ದಾರೆ. ಆದಕಾರಣದಿಂದ ಆಯಾಯ ಗ್ರಾಮದಲ್ಲಿರತಕ್ಕ ವಿದ್ವಾಂಸರೂ, ಬುದ್ಧಿಶಾಲಿಗಳೂ, ವಿಚಾರಶೀಲರೂ, ಗೋರಕ್ಷಣಸಂಘದವರೂ ಈ ಅಹಿಂಸಾತತ್ವವನ್ನು ಪ್ರಚಾರಗೊಳಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುವೆನು.

ಸ್ವರಾಜ್ಯವೋ? ಸ್ವಧರ್ಮದ್ರೋಹವೋ?

ಪಾಠಕಮಹಾಶಯರೇ—ಭಾರತೀಯರಲ್ಲಿ ಈಗೀಗ ವರ್ಣಾಶ್ರಮಧರ್ಮವು ಲೋಪವಾಗುತ್ತಿರುವದು. ಪೂರ್ವದಲ್ಲಿ ಈ ಧರ್ಮಕ್ಕೆ ಅತ್ಯಂತ ಕಳೆಯೇರಿ ವೈಭವಶಿಖರವನ್ನು ಹೊಂದಿತ್ತು. ನಾಗರಿಕರ ಬಲೆಯೊಳಗೆ ಬಿದ್ದು ಧರ್ಮದ ಕಟ್ಟುಗಳು ಒಂದೊಂದಾಗಿ ಶಿಥಿಲವಾಗಹತ್ತಿರುತ್ತವೆ. ಒಬ್ಬರು ಒಂದು ರೀತಿಯಾಗಿ ಭಾವಿಸಿದರೆ ಮತ್ತೊಬ್ಬರು ಮತ್ತೊಂದು ರೀತಿಯಾಗಿ ಭಾವಿಸುವರು. ಹೀಗೆ ಅರ್ಥಕ್ಕೆ ಅಪಾರ್ಥವನ್ನು ಕಲ್ಪಿಸಿ ತಮ್ಮ ತಮ್ಮ ಇಚ್ಛೆಯಂತೆ ಯುಕ್ತಿಯಿಂದ ಜನರಂಜನವಾಗುವಂತೆ ಲೇಖಗಳನ್ನು ಬರೆದು ಜನರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಮಾಡಿದ ಮೇಲೆ ಈ ಧರ್ಮದ ಕಟ್ಟು ಹೇಗೆ ಉಳಿಯಬೇಕು? ಸನಾತನ ವೈದಿಕ ಧರ್ಮಾಭಿಮಾನಿಗಳು ವರ್ಣಾಶ್ರಮಧರ್ಮವನ್ನು ಉಳಿಸಿಕೊಂಡು ಸ್ವರಾಜ್ಯವನ್ನು ಸಂಪಾದಿಸಬೇಕೆನ್ನುತ್ತಾರೆ. ಸ್ವರಾಜ್ಯವಾದಿಗಳು ತದ್ವಿರುದ್ಧವಾಗಿ ಸ್ವರಾಜ್ಯವನ್ನು ಸಂಪಾದಿಸಬೇಕೆನ್ನುತ್ತಾರೆ. ಹೀಗೆ ದ್ವಂದ್ವಯುದ್ಧವು ನಡೆದಿರುತ್ತದೆ. ಪೂರ್ವದಲ್ಲಿ ಸನಾತನ ಮತೀಯರು ಪರಮತೀಯರ ಉಪಟಳಕ್ಕೆ ಬೇಸತ್ತು ವರ್ಣಾಶ್ರಮಧರ್ಮವನ್ನು ಉಳಿಸಿಕೊಳ್ಳಬೇಕಾದರೆ ಎಷ್ಟೋ ಅವರಿಗೆ ಶ್ರಮವಾಗಿತ್ತು. ಈಗ ಹಿಂದೂಗಳಲ್ಲಿಯೇ ಪಾರ್ಟಿಯಾದುದರಿಂದ ಸನಾತನಮತೀಯರೇ ಸನಾತನ ಮತೀಯರಿಗೆ ಅಂಜಿ ತಮ್ಮ ಧರ್ಮವನ್ನು ಕಾದುಕೊಳ್ಳುವ ಪ್ರಸಂಗಬಂದಿದೆ. ಪರೇಷು ಮೈತ್ರೀ "ಸ್ವಜನೇಷುವೈರಂ" ಎಂಬಂತೆ ಕಲಿಯುಗದ ಪ್ರಭಾವವೇ ಸರಿ. ಕಾಲಾಯ ತಸ್ಮೈ ನಮಃ! ಹೀಗೆ ಗಂಡಹೆಂಡರಲ್ಲಿ ಕೂಸು ಗಾಸಿಯಾಯಿತೆನ್ನುವಂತೆ ಕೊನೆಗೆ ಈ ಧರ್ಮವು ಎಲ್ಲಿ ನಿಶ್ಶೇಷವಾಗುತ್ತದೆಯೋ ಎಂದು ಹಲಕೆಲವರು ಬಾಯಿಯಲ್ಲಿ ಆಕ್ರೋಶಮಾಡುತ್ತಕೊಂಡು ಕುಳಿತಿರುವರು. ಕೆಲವರಂತೂ ತಾವು ಪ್ರಸಿದ್ಧಿಗೆ ಬರುವಕಾಲವಾದ್ದರಿಂದ ಈ ಧರ್ಮದಕಟ್ಟು ನಶಿಸಿಹೋಗಬೇಕೆಂದು ಹರಕೆ ಹೊತ್ತುಕೊಂಡಿರುತ್ತಾರೆ. ನೋಡಬೇಕು, ಧರ್ಮದೇವತೆಯು ಯಾರಕೊರಳಿಗೆ ವಿಜಯಮಾಲಿಕೆಯನ್ನು ಹಾಕುವಳೋ ಏನೋ? ಸ್ವರಾಜ್ಯವಾದಿಗಳು ಅಸ್ಪೃಶ್ಯರನ್ನು ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಿಸಲಿಕ್ಕೆ ಹವಣಿಸಿದ್ದು ಅದಕ್ಕೆ ಪ್ರಯತ್ನಮಾಡುವದು ಅನ್ಯಾಯವೂ ಅಧರ್ಮವೂ ಎಂದು ಬಹುಜನರು ಹೇಳುತ್ತಿರುವರು. ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶದಿಂದ ಅಸ್ಪೃಶ್ಯತಾನಿವಾರಣೆಯಾಯಿತೆಂದು ಅಥವಾ ಆಗುವದೆಂದು ಸ್ವರಾಜ್ಯವಾದಿಗಳು ತಿಳಿಯುವದಾಗಲೀ ಈಗ ಅಸ್ಪೃಶ್ಯರೆನ್ನುವರು ಈ ಸಂದರ್ಭದಲ್ಲಿ ಪವಿತ್ರದೇವಾಲಯಗಳಲ್ಲಿ ಪ್ರವೇಶಮಾಡಬೇಕೆಂದು ತವಕಪಡುವದಾಗಲೀ ಹಠವಾದಿತನವಲ್ಲದೆ ಬೇರೊಂದಿಲ್ಲ. ಸ್ವರಾಜ್ಯದಾಸೆಗಾಗಿ ಕಡಿಮೆ ಇದ್ದ ಹಿಂದೂಜನಸಂಖ್ಯೆಯನ್ನು ಹೆಚ್ಚಿಸಬೇಕೆಂದು ಅಸ್ಪೃಶ್ಯರನ್ನು ದೇವಾಲಯಪ್ರವೇಶದ ನೆವದಿಂದ ಕೈಗಡವಾಗಿ ತೆಗೆದುಕೊಂಡು ಸ್ಪೃಶ್ಯರಲ್ಲಿ ಸಮಾವೇಶಮಾಡಿ ಪವಿತ್ರವೈದಿಕಧರ್ಮವನ್ನು ಹಸಗೆಡಿಸಬೇಕೆನ್ನುವ ಗಾಂಧಿಯವರೇ ಮೊದಲಾದ ಸ್ವರಾಜ್ಯವಾದಿಗಳ ಪ್ರಯತ್ನವು ತೀರಾ ಅಸಮಂಜಸವು. ಮೊದಮೊದಲು ಗಾಂಧಿಯವರ ಪ್ರಯತ್ನಕ್ಕೆ (ಸ್ವರಾಜ್ಯಕ್ಕೆ) ನೆರವಾಗಿ ಸಾಹಸಪಡುತ್ತಿದ್ದ ಸನಾತನ ಮತಾವಲಂಬಿಗಳಾದ ಕೆಲವು ಪುಢಾರಿಗಳು ಅಸ್ಪೃಶ್ಯತಾನಿವಾರಣೆಯ ಚಳವಳಿಯು ಒಮ್ಮಿಂದೊಮ್ಮೆ ಚಿಪ್ಪಿನೊಳಗಿನ ಚೇಳಿಯಂತೆ ಹೊರಟಕೂಡಲೆ ಬೆದರಿಬಿದ್ದು ಗಾಂಧಿಯವರ ವಿರುದ್ಧವಾಗಿ ವರ್ಣಾಶ್ರಮಸ್ವರಾಜ್ಯಸಂಘಗಳನ್ನು ಸ್ಥಾಪಿಸಿ ಸನಾತನ ಧರ್ಮೋದ್ಧಾರದ ಬಗ್ಗೆ ಕಾರ್ಯವನ್ನು ಒಳ್ಳೆಸಾಹಸದಿಂದ ನಡೆಸುತ್ತಿರುವರು. ದೇಶದಲ್ಲಿ ಸಂಚಾರವನ್ನು ಮಾಡಿ ಸದುಪದೇಶದಿಂದ ಜನರಲ್ಲಿ ಧರ್ಮಜಾಗ್ರತೆಯುಂಟಾಗುವಂತೆ ಎಚ್ಚರಗೊಳಿಸುತ್ತಿರುವರು. ಗಾಂಧಿಯವರು ಮಾತ್ರ ಅಸ್ಪೃಶ್ಯತಾನಿವಾರಣೆಗಾಗಿ ಅವರನ್ನು ದೇವಾಲಯಗಳಲ್ಲಿ ಪ್ರವೇಶಮಾಡಿಸಲು ಸಾಹಸಪಡುತ್ತಾರಷ್ಟೇ? ಇದರಿಂದ ಅಸ್ಪೃಶ್ಯರೆನ್ನುವರು ಕೃತಜ್ಞರಾಗಿ ಗಾಂಧಿಯವರ ಕಾರ್ಯಕ್ಕೆ ನೆರವಾಗಲಾರರು. ಏಕೆಂದರೆ, ಅಸ್ಪೃಶ್ಯರ ಪುಢಾರಿಗಳು ಒಂದು ಕಡೆಗೆ ಹೀಗೆ ಹೇಳುವರು. ಏನಂದರೆ ಗಾಂಧಿಯವರು ಅಸ್ಪೃಶ್ಯರನ್ನು ದೇವಾಲಯಗಳಲ್ಲಿ ಪ್ರವೇಶಮಾಡಿಸಿದ ಮಾತ್ರಕ್ಕೆ ತಮ್ಮ ಕಾರ್ಯವಾಯಿತೆಂದು ತಿಳಿಯಲಾಗದು. ಇನ್ನೂ ಮಾಡತಕ್ಕ ಅನೇಕಕಾರ್ಯಗಳಿರುತ್ತವೆಂದು ಈಗಾಗಲೇ ತಮ್ಮ ಹೃದ್ಗತಾಭಿಪ್ರಾಯವನ್ನು ತೋರ್ಪಡಿಸಿರುವರು. ಅಂದಂತೆ ಇನ್ನೂ ಏನೇನು ಕಾರ್ಯಗಳು ಇರುತ್ತವೆಯೋ ಏನೋ? ಎಂದು ಜನರು ಯೋಚಿಸಹತ್ತಿರುವರು. ಒಟ್ಟಿಗೆ ವಿಚಾ

ಒಳದೇಶದ ವೃತ್ತಾಂತಗಳು.

ಭಾಗಿಲಾಸೆಸದ ಒಬ್ಬ ಒಕ್ಕಲಿಗಸ್ತ್ರೀಯಳೂ, ಮತ್ತೊಬ್ಬ ಸ್ತ್ರೀಯಳೂ ಮೂರುಮೂರು ಮಕ್ಕಳನ್ನು ಸಿರುವರೆಂದೂ ಎಲ್ಲಾ ಶಿಶುಗಳೂ ಸೌಖ್ಯವಾಗಿ ವೆಂದೂ ತಿಳಿದುಬಂದಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಬಜೆಟ್ ಶನವು ಜೂನ್ 6 ನೇ ತಾರೀಖಿನ ದಿವಸವೂ, ವಿಧಾಯಕ ಸಭೆಯು ಜೂನ್ 20 ನೇ ತಾರೀ ವಸವೂ ಪ್ರಾರಂಭವಾಗುವವೆಂದು ಸರ್ಕಾರದ ಪ್ರಕಟಿಸಿರುತ್ತಾರೆ.

ಫೆಬ್ರವರಿ 1 ನೇ ತಾರೀಖು ರಥಸಪ್ತಮಿಯು ನಮ್ಮ ಶ್ರೀಮನ್ಮಹಾರಾಜರವರ ರಾಜ್ಯಾ ಕವಾದ ದಿವಸವಾದ್ದರಿಂದ ಬೆಳಗ್ಗೆ ಗೌರವಾರ್ಥ 38 ಗುಂಡುಗಳು ಹಾರಿಸಲ್ಪಟ್ಟವು. ಹಾಗೂ ನೆ ಇಲಾಖೆಗೆ ಸಂಬಂಧಪಟ್ಟ ದೇವಾಲಯಗಳಲ್ಲಿ ತರಹದ ಅರ್ಚನೆ. ಅಭಿಷೇಕ, ಉತ್ಸವಗಳೂ, ಶೀರ್ವಾದವೂ ನಡೆಸಲ್ಪಟ್ಟವು.

ಮಕೂರು ಪ್ರಾಂತದಲ್ಲಿ ಈಗ್ಗೆ ಸುಮಾರು 2-3 ಳ ಪೂರ್ವದಲ್ಲಿ ಒಂದು ಮನೆಯಲ್ಲಿ ಏಕಕಾಲ ಜನರು ಖೂನಿಮಾಡಲ್ಪಟ್ಟಿದ್ದರು. ಇದು ಗುಂ ಕೊಲೆಪ್ರಕರಣವೆಂದು ಪ್ರಸಿದ್ಧಿಯನ್ನು ದಿತ್ತು. ಅಪರಾಧಿಗಳು ಯಾರೆಂಬುದು ಇದುವರೆ ತ್ರಿಯಾಗಿರಲಿಲ್ಲ. ಈಚೆಗೆ ಪೋಲೀಸರು ಈ ವಾಗಿ 5 ಜನರನ್ನು ದಸ್ತಗಿರಿಮಾಡಿ ಮೊಕ ಹೂಡಿರುವರೆಂದು ತಿಳಿದುಬಂದಿದೆ.

ಜೂನ್ ತಿಂಗಳಲ್ಲಿ ರಾಜಧಾನಿಯ ಸುಪ್ರಸಿದ್ಧ ಟಿಕ ಮೋಟಾರ್ ಸರ್ವಿಸ್ಸಿನ ಡ್ರೈವರಾದ ಶ್ರೀನಿವಾಸಯ್ಯ ಎಂಬವನು ಈರನಗೆರೆಸುಂಕ ಬಳಿ ಬಸ್ಸನ್ನು ಊರಬಾಗಲಿನ ಗಾರೆಕಂಭಕ್ಕೆ ಡೆಸಿದುದರಿಂದ ಇಬ್ಬರು ಪ್ರಯಾಣಿಕರು ಅನೇಕರಿಗೆ ಗಾಯಗಳಾಗಿದ್ದವು. ಈ ವಾಗಿ ಸಿಟಿಮ್ಯಾಜಿಸ್ಟ್ರೇಟರವರು ವಿಚಾರಣೆ ಅಪರಾಧಿಗೆ 6 ತಿಂಗಳ ಕಠಿಣಶಿಕ್ಷೆಯನ್ನು

ದಲೇ ಪ್ರಕಟವಾಗಿದ್ದಂತೆ ಮೈಸೂರು ಸರಕಾರದವರು ಮಂಡ್ಯದ ಸಮೀಪದಲ್ಲಿ ಸ್ಥಾಪಿಸಿರುವ ಕಾರ್ಖಾನೆಯ ಸಂಪೂರ್ಣವಿವರಗಳು ಈಗತಾನೇ ಲ್ಪಟ್ಟಿವೆ. ಈ ಕಾರ್ಖಾನೆಯ ಒಟ್ಟು ಬಂಡ 20 ಲಕ್ಷ ರೂಪಾಯಿಗಳೆಂದೂ, ಇದನ್ನು ಕ್ಕೆ 10 ರೂ. ಯಂತೆ 2 ಲಕ್ಷ ಷೇರುಗಳ ವಿಭಾಗಿಸಿರುವರೆಂದೂ, ಈ ಪೈಕಿ 1,20,000 ನ್ನು ಸರಕಾರದವರು ತೆಗೆದುಕೊಂಡು, ಉಳಿದ ನ್ನು ಪ್ರಜೆಗಳಿಗೆ ಕೊಡುವರೆಂದೂ ಪ್ರಕಟ ಮೈಸೂರು ಸಂಸ್ಥಾನದ ವ್ಯವಸಾ ಡೈರೆಕ್ಟರಾದ ಡಾಕ್ಟರ್ ಎಲ್. ಸಿ. ರವರು ಕಾರ್ಖಾನೆಯ ಡೈರೆಕ್ಟರುಗಳ ಅಧ್ಯಕ್ಷರೂ, ಮ್ಯಾನೇಜಿಂಗ್ ಡೈರೆಕ್ಟರ ಗಿರುತ್ತಾರೆ. ಈ ಕಾರ್ಖಾನೆಯಲ್ಲಿ ವರ್ಷ 1 00 ಟನ್ ಸಕ್ಕರೆಯು ತಯಾರಾಗುವುದೆಂದೂ ಕ್ಕೆ 80 ರೂಪಾಯಿಗಳ ಮೇರೆ 4,80,000 ರೂ. ನಫೆಯು ದೊರೆಯುವದೆಂದೂ ನಿರೀಕ್ಷಿಸಲ್ಪ

ವರ್ತಮಾನಸಂಗ್ರಹ

ಮೇರಿಕಾ ದೇಶದಲ್ಲಿ ನಡೆದ ಒಂದಾನೊಂದು ಬಾಲ್ ಪಂದ್ಯದಲ್ಲಿ 37 ಜನರು ಮೃತಪಟ್ಟರು.

ಕಾಗೊ ನಗರದಲ್ಲಿ ಪ್ರತಿತಿಂಗಳೂ ಎಷ್ಟು ಹೊಸ ಟಾರುಗಳು ವಿಕ್ರಯವಾಗುವುವೋ ಅದಕ್ಕೆ ಮೂರ ಮೋಟಾರುಗಳನ್ನು ಕಳ್ಳರು ಅಪಹರಿಸುವರಂತೆ.

ರ್ಲಿನ್ನಗರದ ಒಬ್ಬ ಇಂಜನಿಯರು 'ವಾಕಿಂಗ್ ' (ಕೈಯ್ಯಲ್ಲಿ ಹಿಡಿದುಕೊಳ್ಳುವ ಬೆತ್ತ) ಆಕಾರ ರುವ ಒಂದು ಹೊಸರೇಡಿಯೋ ಯಂತ್ರವನ್ನು ಯಾರಿಸುವರು.

ಪುಣೆಯ ತಿಲಕ ವಿದ್ಯಾಲಯದ ವಿದ್ಯಾರ್ಥಿಯಾದ ಮಿ|| ಎಸ್. ಎಸ್. ಫಡಮಾಯ್ ಎಂಬವರು ವಿಲಾಸಪುರದ 4 ಜನ ತರುಣರೊಡನೆ ಕಾಲ್ನಡಿಗೆಯಲ್ಲಿ ಭರತಖಂಡವನ್ನು ಸುತ್ತಿಬರಲು ಹೊರಟಿರುವರು.

ಚಿಲಿದೇಶದ ಟಿಮುಕೋ ಎಂಬ ನಗರದಲ್ಲಿ ಕುದುರೆಯ ಕೂದಲಿಗೆ ಅಪಾರಬೆಲೆಯಿರುವದರಿಂದ ಆ ನಗರದಲ್ಲಿ ಕೇವಲ ಕುದುರೆಯ ಬಾಲಗಳನ್ನು ಕತ್ತರಿಸಿಕೊಂಡುಹೋಗುವ ಕಳ್ಳರೇ ವಿಶೇಷವಾಗಿರುವರಂತೆ!

ಇಂಡಿಯಾ ಸರಕಾರದವರು ಕಳೆದ ಘೋರಯುದ್ಧಕ್ಕೆ ಪೂರ್ವದಲ್ಲಿ ಸೈನ್ಯಕ್ಕೆ ಸುಮಾರು 30,00,00,000 ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದರು. ಈ ವೆಚ್ಚವು ಸದ್ಯಃ 61,50,00,000 ರೂಪಾಯಿಗಳಾಗಿರುವದು!

ವಿಠಾರತ್ನಿಸ ಮುರ್ಷಿ ಎಂಬ ಕಾಂಗ್ರೆಸ್ ಸತ್ಯಾಗ್ರಹಿಯು ತನಗೆ ವಿಧಿಸಿದ್ದಶಿಕ್ಷೆಗಿಂತಲೂ 49 ದಿವಸಗಳು ಹೆಚ್ಚಾಗಿ ತನ್ನನ್ನು ಕಾರಾಗೃಹದಲ್ಲಿರಿಸಿದ್ದರೆಂಬ ಅಪವಾದನೆಯಮೇಲೆ ಸೆಕ್ರೆಟರಿ ಆಫ್ ಸ್ಟೇಟರವರಮೇಲೆ 700 ರೂ. ಗಳಿಗೆ ದಾವೆಯನ್ನು ತಂದಿರುವನೆಂದು ಸುದ್ದಿ!

ಮುಂಬಯಿ ಹೈಕೋರ್ಟಿನಲ್ಲಿ ನಡೆಯುತ್ತಿದ್ದ 56,78,600 ರೂಪಾಯಿಗಳ ಒಂದು ದಾವೆಯ ಮೊಕದ್ದಮೆಯು ದರ್ಭಂಗಾಮಹಾರಾಜರ ಪರವಾಗಿ ಡಿಕ್ರಿಯಾಯಿತು. ಇಷ್ಟು ಭಾರಿಮೊಬಲಗಿನ ದಾವೆಯನ್ನು ಭರತಖಂಡದಲ್ಲಿ ಇದುವರೆಗೆ ಯಾರೂ ಹೂಡಿರಲಿಲ್ಲವಂತೆ!

ಹ್ಯಾಪ್ಸ್‌ಬರ್ಗ್ ವಂಶದ ರಾಜರ ಕಾಲದಲ್ಲಿ ವಿಯನ್ನಾ ಮತ್ತು ಬ್ಯುಡಪೆಸ್ಟ್ ನಗರಗಳಲ್ಲಿ ಅತ್ಯಂತ ಶ್ರೀಮಂತಿಕೆಯಲ್ಲಿ ಲೋಲಾಡುತ್ತಿದ್ದ ಕೌಂಟೆಸ್ ಜೆರಾಕೆ ಎಂಬಾಕೆಯು ಈಗ ತಿನ್ನುವದಕ್ಕೆ ಗತಿಯಿಲ್ಲದೆ ಭಿಕ್ಷೆಬೇಡುವದಕ್ಕೆ ತನಗೆ ಅವಕಾಶಕೊಡಬೇಕೆಂದು ಬ್ಯುಡಪೆಸ್ಟ್ ನಗರದ ಪೋಲೀಸರಿಗೆ ಅರ್ಜಿಯನ್ನು ಹಾಕಿರುವಳಂತೆ!

ಇಟಲಿ ದೇಶಕ್ಕೆ ಸೇರಿದ ನೋವಾರೋನಗರದ 'ಫ್ಯಾಸಿಸ್ಟ್ ಫೆಡರೇಷನ್'ದವರು 1933 ನೇ ಇಸವಿಯಲ್ಲಿ ಮದುವೆಯಾಗುವ ಪ್ರತಿಯೊಬ್ಬ ಬಡವನಾದ 'ಫ್ಯಾಸಿಸ್ಟ್' ಸಂಗಡದ ಮನುಷ್ಯನಿಗೂ 200 ರೂಪಾಯಿಗಳನ್ನು ಕೊಡುವೆವೆಂದು ಪ್ರಕಟಣೆಯನ್ನು ಹೊರಡಿಸಿರುವರು. 'ಫ್ಯಾಸಿಸ್ಟ್' ಸಂಗಡದ ಜನರು ಹೆಚ್ಚಬೇಕೆಂದು ಅವರು ಈ ರೀತಿ ಮಾಡಿರುವರಂತೆ!

ಕಳೆದ ಘೋರಯುದ್ಧದ ನಂತರ ತಮ್ಮ ತಮ್ಮ ಪತಿಗಳನ್ನು ಕಳೆದುಕೊಂಡು ಜೀವನಕ್ಕೆ ಮಾರ್ಗವಿಲ್ಲದೆ ತೊಂದರೆಗೊಳಗಾದ 1,69,300 ವಿಧವೆಯರಿಗೆ ಬ್ರಿಟಿಷ್ ಸರ್ಕಾರದವರು ಪ್ರತಿತಿಂಗಳು ಪೆನ್ಷನ್ನನ್ನು ಕೊಡುತ್ತಿದ್ದರು! ಇವರಲ್ಲಿ 33,000 ಜನರು ಪುನರ್ವಿವಾಹವಾದುದರಿಂದಲೋ ಅಥವಾ ಮೃತಪಟ್ಟಿದ್ದರಿಂದಲೋ ತಮಗೆ ಬರುತ್ತಿದ್ದ ಪೆನ್ಷನ್ನನ್ನು ಕಳೆದುಕೊಂಡರಂತೆ!

ಚಿಕಾಗೋನಗರದ ದೊಡ್ಡ ದೊಡ್ಡ ಆಫೀಸುಗಳಲ್ಲಿ ಕೆಲಸಗಾರರ ಮೈಗಳ್ಳತನವನ್ನು ಕಂಡುಹಿಡಿಯುವದಕ್ಕಾಗಿ ಗುಪ್ತವಾಗಿ ಸಿನಿಮಾ ಫೋಟೋಯಂತ್ರಗಳನ್ನು ಇಟ್ಟಿರುವರಂತೆ! ಇವು ಒಂದೇಸಮನೆ ಆಫೀಸಿನಲ್ಲಿರುವ ಎಲ್ಲ ಜನರ ಫೋಟೋಗಳನ್ನೂ ತೆಗೆಯುತ್ತಲೇ ಇರುವವಂತೆ! ಈ ಫಿಲ್ಮುಗಳನ್ನು ಯಂತ್ರದಲ್ಲಿ ಹಾಕಿ ನೋಡಿದರೆ ಮೈಗಳ್ಳತನಮಾಡುವ ಕಾರ್ಮಿಕರ ಗುಟ್ಟು ಬಯಲಿಗೆ ಬರುವದಂತೆ!

ಜನವರಿ 28 ಕ್ಕೆ ಅಖೈರಾದ ವಾರದಲ್ಲಿ ಮುಂಬಯಿಯಿಂದ 1,58,36,566 ರೂಪಾಯಿಗಳ ಭಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿತು. ಇದರಲ್ಲಿ 6,48,050 ರೂಪಾಯಿಗಳ ಭಂಗಾರವು ಪ್ಲಿಮತ್ತಿಗೂ, 98,61,744 ರೂಪಾಯಿಗಳ ಭಂಗಾರವು ನ್ಯೂಯಾರ್ಕಿಗೂ, 53,26,700 ರೂಪಾಯಿಗಳ ಭಂಗಾರವು ಲಂಡನ್ನಿಗೂ ಸಾಗಿಸಲ್ಪಟ್ಟಿರುವುದು. ಇದುವರೆಗೆ ಸಾಗಿಸಲ್ಪಟ್ಟಿರುವ ಭಂಗಾರದ ಬೆಲೆಯು ಸುಮಾರು 110 ಕೋಟಿ ರೂಪಾಯಿಗಳಾಗುವದು.

ಭರತಖಂಡಕ್ಕೆ ಪ್ರತಿವರ್ಷವೂ 85 ಲಕ್ಷ ರೂಪಾಯಿಗಳ ಬೆಲೆಯುಳ್ಳ ಹೊಲಿಯುವ ಯಂತ್ರಗಳು ಪರದೇಶಗಳಿಂದ ರಫ್ತಾಗಿ ಬರುತ್ತಿರುವವು. ಈ ಕೈಗಾರಿಕೆಯನ್ನು ಭರತಖಂಡದಲ್ಲಿ ಪ್ರಾರಂಭಿಸುವದರ ಸಲುವಾಗಿ ಕಲ್ಕತ್ತೆಯಲ್ಲಿ ಒಂದು ಕಂಪನಿಯು ಸ್ಥಾಪಿಸಲ್ಪಟ್ಟಿರುವದು. ಇವರು ಈಗಾಗಲೇ ಪರೀಕ್ಷಾರ್ಥವಾಗಿ ಕೆಲವು ಯಂತ್ರಗಳನ್ನು ತಯಾರಿಸಿರುವರೆಂದೂ, ವಿದೇಶಯಂತ್ರಗಳಿಗೆ ಯಾವ ವಿಧದಲ್ಲಿಯೂ ಕೀಳಾಗಿಲ್ಲವೆಂದೂ ತಿಳಿದುಬಂದಿದೆ.

1932 ನೇ ಇಸವಿಯಲ್ಲಿ ಇಡೀ ಪ್ರಪಂಚದಲ್ಲಿ ಒಟ್ಟು 1738 ತರಹ ಹೊಸಸ್ಟಾಂಪುಗಳು ಹೊರಡಿಸಲ್ಪಟ್ಟವಂತೆ! ಅಮೇರಿಕೆಯ ಸಂಯುಕ್ತ ಸಂಸ್ಥಾನದವರು ವಾಷಿಂಗ್‌ಟನ್‌ರವರ ಜ್ಞಾಪಕಾರ್ಥವಾಗಿಯೂ, ರಷ್ಯಾದೇಶದವರು ಗೊರ್ಕಿಯವರ ಜ್ಞಾಪಕಾರ್ಥವಾಗಿಯೂ, ಇಟಲಿಯು ಗ್ಯಾರಿಬಾಲ್ಡಿ ಮತ್ತು ಅವರ ಪತ್ನಿಯವರ ಜ್ಞಾಪಕಾರ್ಥವಾಗಿಯೂ, ಸಾನ್‌ಮಾರಿನೋ ದೇಶದವರು ತಮ್ಮ ಹೊಸ ಪೋಸ್ಟ್‌ಆಫೀಸಿನ ಜ್ಞಾಪಕಾರ್ಥವಾಗಿಯೂ ಸ್ಟಾಂಪುಗಳನ್ನು ಹೊರಡಿಸಿದರು. ಆದರೆ ಅಫಘಾನಿಸ್ಥಾನದವರು ಮೂರ್ಖತನದಿಂದ ತಮ್ಮ ದೇಶವು ಬಿಡುಗಡೆಹೊಂದಿದ ಸಂತೋಷಕ್ಕಾಗಿ ಸ್ಟಾಂಪುಗಳನ್ನು ಹೊರಡಿಸಿದರಂತೆ!

ಲಂಡನ್ನಿನ ಮೃಗಾಲಯದಲ್ಲಿ ಮನುಷ್ಯನ ಆಕಾರವುಳ್ಳ 'ಗೊರಿಲ್ಲಾ' ಎಂಬ ಕಪಿಗಳ ವಾಸಕ್ಕಾಗಿ ಭವ್ಯವಾದ ಅರಮನೆಯೋಪಾದಿಯಲ್ಲಿರುವ ಒಂದು ಕಟ್ಟಡವನ್ನು ಕಟ್ಟಿರುವರು. ಈ ಕಟ್ಟಡವು ಆಕಾರದಲ್ಲಿ ಗುಂಡಾಗಿದ್ದು, ಬೆಳಗಿನಿಂದ ಸಾಯಂಕಾಲದವರೆಗೂ ಸೂರ್ಯನ ಬೆಳಕು ಬೀಳುತ್ತಿರುವಂತೆ ಕಟ್ಟಲ್ಪಟ್ಟಿರುವದು. ಈ ಕಟ್ಟಡದೊಳಗೆ ಸ್ನಾನದಮನೆಯೂ, ನೀರು ಕುಡಿಯುವ ಬುಗ್ಗೆಗಳೂ ಬೇರೆಬೇರೆ ಸ್ಥಾಪಿಸಲ್ಪಟ್ಟಿರುವವು. ಚಳಿ ಮತ್ತು ಮಳೆಗಾಲಗಳಲ್ಲಿ ಈ ಕಪಿಗಳಿಗೆ ಸಾಕಾದಷ್ಟು ಬೆಳಕನ್ನು ಒದಗಿಸುವದಕ್ಕಾಗಿ ಸೂರ್ಯನ ಬೆಳಕಿಗೆ ಸಮಾನವಾದ ಬೆಳಕನ್ನು ಕೊಡಬಲ್ಲ ಎಲೆಕ್ಟ್ರಿಕ್ ದೀಪಗಳು ಇಡಲ್ಪಟ್ಟಿರುವವು.

1918 ನೇ ಇಸವಿಯಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನದ ಸರ್ಕಾರದವರು ಏರೋಪ್ಲೇನುಗಳ ಮೂಲಕವಾಗಿ ಟಪಾಲುಗಳ ಉಪಯೋಗಕ್ಕಾಗಿ ಕೆಲವು ಸ್ಟಾಂಪುಗಳನ್ನು ತಯಾರಿಸಿದ್ದರು. ಈ ಸ್ಟಾಂಪುಗಳು ಸಂಪೂರ್ಣವಾಗಿ ವಿಕ್ರಯವಾಗುವವರೆಗೂ ಅದರಮೇಲಿನ ಏರೋಪ್ಲೇನಿನ ಚಿತ್ರವು ತಲೆಕೆಳಗಾಗಿ ಪ್ರಿಂಟಾಗಿರುವದೆಂಬುದನ್ನು ಯಾರೂ ನೋಡಿಯೇ ಇರಲಿಲ್ಲ. ಇವುಗಳ ಪೈಕಿ 1 ಸ್ಟಾಂಪುಮಾತ್ರ ಸರಕಾರದವರ ಬಳಿಯಲ್ಲಿ ಉಳಿದುಹೋಗಿತ್ತು. ಈಚೆಗೆ ಅವರು ಅದನ್ನು ಹರಾಜುಹಾಕಿದಾಗ, ಒಬ್ಬ ಶ್ರೀಮಂತನು 8000 ರೂಪಾಯಿಗಳಿಗೆ ಕೊಂಡುಕೊಂಡನಂತೆ!

ವಿಚಿತ್ರಪ್ರಪಂಚ.

"ಸ್ವಿಫ್ಟ್" ಎಂಬ ಪಕ್ಷಿಯು ಪ್ರಪಂಚದಲ್ಲಿರುವ ಇತರ ಎಲ್ಲ ಪಕ್ಷಿಗಳಿಗಿಂತಲೂ ಅತ್ಯಂತ ವೇಗವಾಗಿ ಹಾರಬಲ್ಲದು. ಇದು ನಿಮಿಷವೊಂದಕ್ಕೆ ಸರಾಸರಿ 220 ಮೈಲುಗಳದೂರ ಹಾರುವದಂತೆ!

ಸಾಧಾರಣವಾಗಿ ಒಂದು ಒಂಟೆಯು 400 ಪೌಂಡುಗಳ ಹೊರೆಯನ್ನು ಹೊತ್ತುಕೊಂಡು ಒಂದು ತೊಟ್ಟು ನೀರನ್ನೂ ಕುಡಿಯದೆ 12 ದಿನಗಳವರೆಗೆ ದಿನವೊಂದಕ್ಕೆ 40 ಮೈಲುಗಳ ದೂರಿಗೆ ಪ್ರಯಾಣಮಾಡಬಲ್ಲದಂತೆ!

ಪ್ರಪಂಚದಲ್ಲಿರುವ ಬೈಬಲ್‌ಗಳಲ್ಲೆಲ್ಲಾ ರೋಂನಗರದಲ್ಲಿರುವ ರೋಮನ್‌ಕ್ಯಾಥೊಲಿಕ್ ಕ್ರೈಸ್ತರ ಗುರುಗಳಾದ ಪೋಪರವರ ಅರಮನೆಯಲ್ಲಿರುವ ಬೈಬಲ್ಲೇ ಅತ್ಯಂತ ದೊಡ್ಡದೂ ಮತ್ತು ಭಾರವುಳ್ಳದ್ದೂ ಆಗಿರುವದು. ಈ ಗ್ರಂಥವು ಸಂಪೂರ್ಣವಾಗಿ ಹೀಬ್ರೂ ಭಾಷೆಯಲ್ಲಿ ಕೈಯಿಂದಲೇ ಬರೆಯಲ್ಪಟ್ಟಿರುವದು. ಇದರ ತೂಕವು 320 ಪೌಂಡುಗಳಿಗಿಂತಲೂ ಹೆಚ್ಚಾಗಿರುವದಂತೆ!

ಈ ಭೂಮಂಡಲದಲ್ಲಿ ಪ್ರತಿ 100 ಕ್ಕೆ 3 ಜನರು ಕೇವಲ ಸಮುದ್ರದಲ್ಲಿ ದೊರೆಯುವ ವಸ್ತುಗಳಿಂದಲೇ ತಮ್ಮ ಜೀವಮಾನವನ್ನು ಸಾಗಿಸುವರಂತೆ!

ಪಾರ್ಸೀಜನರು ತಿಂಗಳಲ್ಲಿ ಬರುವ 30ದಿವಸಗಳನ್ನೂ ಬೇರೆ ಬೇರೆ ಹೆಸರಿನಿಂದ ಕರೆಯುವರು.

ಕ್ಯೂಬಾ ದ್ವೀಪವು ಅಗ್ನಿಪರ್ವತಗಳ ನೆಲೆಯೆಂದು ಪ್ರಸಿದ್ಧಿಯಾಗಿರುವದು. ಈ ದ್ವೀಪದಲ್ಲಿ ವಿಚಿತ್ರ ಜಾತಿಯ ಕೆಲವು ಗಿಡಗಳಿರುವುವು. ಭೂಕಂಪವಾಗುವುದಕ್ಕೆ ಕೆಲವು ಘಂಟೆಗಳ ಪೂರ್ವದಲ್ಲಿ ಈ ಗಿಡಗಳ ಸ್ವಾಭಾವಿಕ ಬಣ್ಣವು ಇದ್ದಕ್ಕಿದ್ದಹಾಗೆ ವ್ಯತ್ಯಾಸವಾಗುವದಂತೆ! ಇದನ್ನು ಕಂಡಕೂಡಲೇ ಆ ದ್ವೀಪನಿವಾಸಿಗಳು ಅಪಾಯಪ್ರದೇಶದಿಂದ ದೂರಹೋಗಿ ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವರಂತೆ!

ಈ ಪ್ರಪಂಚದ ಪ್ರಜೆಗಳು ಪ್ರತಿಕ್ಷಣವೂ ಸರಾಸರಿ 30,00,000, ಬೆಂಕಿಯ ಕಡ್ಡಿಗಳನ್ನು ಉಪಯೋಗಿಸುವರಂತೆ!

ಅಮೆಜೋನಿಯಾ ದೇಶದ ಕಾಡುಗಳಲ್ಲಿ ಭಯಂಕರಾಕಾರದ ಜೇಡರ ಹುಳುಗಳು ಈಗಲೂ ತುಂಬಿರುವುವು. ಇವು ಸುತ್ತಳತೆಯಲ್ಲಿ 3 ಅಡಿಗಳಿಗಿಂತಲೂ ಹೆಚ್ಚಾಗಿದ್ದು, ಸಣ್ಣ ಸಣ್ಣ ಪಕ್ಷಿಗಳೇ ಇವುಗಳ ಆಹಾರವಾಗಿರುವವು!

ಒಂದು ಔನ್ಸ್ (2½ ತೊಲ) ಗುಲಾಬಿಯ ಅತ್ತರನ್ನು ತಯಾರಿಸಲು 500 ಪೌಂಡುಗಳ ತೂಕದಷ್ಟು ಗುಲಾಬಿಯ ಹೂಗಳು ಬೇಕು.

ಮೆಕ್ಸಿಕೋ ದೇಶಕ್ಕೆ ಸೇರಿದ ತೂಲ ಎಂಬ ಸ್ಥಳದಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿದ ಒಂದು ಮರವಿರುವದು. ರಾಕ್ಷಸಾಕೃತಿಯ ಈ ಮರವು ಬುಡದಲ್ಲಿ 154 ಅಡಿಗಳ ಸುತ್ತಳತೆಯುಳ್ಳದ್ದಾಗಿರುವದು. ಇದಕ್ಕೆ ಸುಮಾರು 1000 ವರ್ಷವಾಗಿರಬಹುದೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು.

ಜಪಾನ್‌ದೇಶದ ಭಾಷೆಯು 'ಹಿಡ್ಡನಕ' ಮತ್ತು 'ಕಿಡ್ಡನಕ' ಎಂದು ಎರಡು ಜಾತಿಯ ಅಕ್ಷರಗಳಿಂದ ಕೂಡಿರುವದು. 'ಹಿಡ್ಡನಕ' ಎಂಬ ಜಾತಿಯ ಅಕ್ಷರಗಳನ್ನು ಉಪಯೋಗಿಸುವ ಅಧಿಕಾರವು ಸ್ತ್ರೀಯರಿಗೂ, 'ಕಿಡ್ಡನಕ' ಎಂಬ ಜಾತಿಯ ಅಕ್ಷರಗಳನ್ನು ಉಪಯೋಗಿಸುವ ಅಧಿಕಾರವು ಪುರುಷರಿಗೂ ಇರುವದಂತೆ!

ಈ ಪ್ರಪಂಚದಲ್ಲಿ ಒಟ್ಟು 1,100 ಬೇರೆಬೇರೆ ಜಾತಿಯ ಮೃಗಗಳೂ, 1,20,000 ತರಹ ಜೇಡರ ಹುಳುಗಳೂ, 50,000 ತರಹ ಚಿಟ್ಟೆಯ ಹುಳುಗಳೂ, 40,000 ತರಹ ನೊಣಗಳೂ ಇರುವವಂತೆ!

ಈ ಪ್ರಪಂಚದಲ್ಲಿ ಒಟ್ಟು 184,95,00,000 ಜನರಿರುವರೆಂದೂ, ಸುಮಾರು 10,00,00,00,000 ರಷ್ಟು ಇಲಿಗಳಿರುವವೆಂದೂ ಒಬ್ಬ ಶಾಸ್ತ್ರಜ್ಞರು ಲೆಕ್ಕ ಹಾಕಿರುವರು. ಅಂದರೆ ಪ್ರತಿಯೊಬ್ಬ ಮನುಷ್ಯನಿಗೆ 5 ಇಲಿಗಳಿರುವವೆಂದ ಹಾಗಾಯಿತು!

ಸೂರ್ಯನಿಗಿಂತಲೂ 52 ಪಾಲು ದೊಡ್ಡದಾಗಿರುವ ಗ್ರಹವೊಂದು ವಾಯುಮಂಡಲದಲ್ಲಿರುವದಂತೆ! ಆದರೆ ಇದು ಸೂರ್ಯನಿಗಿಂತಲೂ ಬಹುದೂರದಲ್ಲಿರುವದರಿಂದ ನಮ್ಮ ಕಣ್ಣಿಗೆ ನಕ್ಷತ್ರದೋಪಾದಿಯಲ್ಲಿ ಕಾಣಿಸುವದಂತೆ!

ಈ ಪ್ರಪಂಚದ ಒಟ್ಟು ಜನಾಂಗದಲ್ಲಿ 100 ಕ್ಕೆ 33 ಜನರು ಮಾತ್ರ ಸರಿಯಾದ ವಸತಿ ಗೃಹಗಳನ್ನು ಹೊಂದಿರುವರಂತೆ! ಉಳಿದ ಜನರಲ್ಲಿ ಅರ್ಧಕ್ಕಿಂತಲೂ ಹೆಚ್ಚುಜನರು ಕಾಡುಗಳಲ್ಲಿಯೂ ಮತ್ತು ಗುಹೆಗಳಲ್ಲಿಯೂ ವಾಸಿಸುವರಂತೆ! ಉಳಿದವರಿಗೆ ಯಾವ ವಿಧವಾದ ವಾಸಸ್ಥಳವೂ ಇಲ್ಲವಂತೆ!

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಕಂ,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[11] ಚಿಕ್ಕಪೇಟೆ, ಬೆಂಗಳೂರು ಸಿಟಿ

[3ನೆಯ ಪುಟದಿಂದ ಮುಂದುವರಿದುದು.]

36. ಮತ್ತು ಶಾಶ್ವತ, ನಿರ್ಮಲ, ಸ್ವತಂತ್ರ, ಸದಾಸುಖಿ, ಏಕನು, ಜ್ಞಾನಪೂರ್ಣನು, ಅಚ್ಯುತನೂ ಆಗಿರುವನು.

37. ನಾನೇ ಪರಬ್ರಹ್ಮನೆಂಬುವನು. ಸರ್ವಕಾಲದಲ್ಲಿಯೂ ಇರುವೆನು. ಔಷಧವು ರೋಗವನ್ನು ನಿವಾರಣೆಮಾಡುವಂತೆ, ಮಾನವರಿಗೆ ಅಜ್ಞಾನಜಾತವಾದ ಭ್ರಮೆಗಳನ್ನು ನಿರ್ಮೂಲಮಾಡುವವನು ನಾನೇ.

38. ನಿರ್ಮಮಕಾರದಲ್ಲಿದ್ದು, ವ್ಯಾಮೋಹವನ್ನು ಸಂಪೂರ್ಣವಾಗಿ ತ್ಯಜಿಸಿ, ಜಿತೇಂದ್ರಿಯನಾಗಿ, ಸಕಲ ವಿಷಯಚಿಂತಾಪರಿತ್ಯಾಗ ಮಾಡಿರುವವನೇ ನಾನು.

39. ಗೋಚರವಾಗಿರುವ ಈ ಪ್ರಪಂಚವು ಲಯವಾಗಿ ನನ್ನಲ್ಲಿಯೇ ಸೇರುವುದೆಂದು ತಿಳಿಯುತ್ತ, ಜ್ಞಾನಪೂರ್ಣನಾಗಿರುತ್ತ, ಭಗವಂತನಾದ ನನ್ನ ಧ್ಯಾನಾಸಕ್ತನಾದವನೇ ನಾನಾಗಿರುವೆನು.

40 ಭಗವಂತನಾದ ನನ್ನ ಮೂಲವನ್ನು ತಿಳಿದು, ಸಮಸ್ತವನ್ನೂ ಸಂಪೂರ್ಣ ಪರಿತ್ಯಾಗಮಾಡಿ, ಸ್ವಯಂಜಾತನಾದ ಬ್ರಹ್ಮಸ್ವರೂಪನಾದ ನನ್ನ ಯೋಚನೆಯಲ್ಲಿಯೇ ಇರುವವನಾವನೋ ಅವನೇ ನಾನಾಗಿರುವೆನು.

41. ಹೀಗೆ ಯಾವನು ಇರುವನೋ, ಅವನು ಪರಬ್ರಹ್ಮನೂ, ತಾನೂ ಎಂಬ ಭೇದವಿಲ್ಲದೆ ಪರಬ್ರಹ್ಮವಸ್ತುವು ಬೇರೊಂದಿಲ್ಲವೆಂದು ತಿಳಿಯಬೇಕು. ಮೇಲೆಹೇಳಿದ ಗುಣಗಳಿಂದ ಕೂಡಿದವನಾವನೋ, ಅವನು ಬುದ್ಧಿವಂತನಾಗಿಯೂ, ಸದಾಸಂತೋಷಚಿತ್ತನಾಗಿಯೂ, ಸ್ವಯಂಪ್ರಕಾಶವುಳ್ಳವನಾಗಿಯೂ ಇರುತ್ತಾನೆ.

42. ಮಾನವನ ಚಿತ್ತವು ಭಗವಂತನಲ್ಲಿ ಸೇರಿ ಎಂದು ಮಥನವಾಗುವುದೋ, ಆಗ್ಗೆ ಅಲ್ಲಿ ಹುಟ್ಟುವ ಜ್ಞಾನವೆಂಬ ಬೆಂಕಿಯಿಂದ ಅಜ್ಞಾನಜಾತವಾದ ಜೀವಾತ್ಮನ ಸರ್ವವಿಷಯಗಳೂ ಸುಟ್ಟು ಬೂದಿಯಾಗುವುವು.

43. ಜ್ಞಾನವೆಂಬ ಬೆಳಕು ಅಜ್ಞಾನವೆಂಬ ಅಂಧಕಾರವನ್ನು ಓಡಿಸಿದನಂತರ ಜೀವಾತ್ಮನ ನೈಜತೇಜಸ್ಸು ಸೂರ್ಯನಂತೆ ಪ್ರಕಾಶವುಳ್ಳದ್ದಾಗುವುದು.

44. ಜೀವಾತ್ಮನಿಗೆ ಜ್ಞಾನವನ್ನು ಸಂಪಾದಿಸಲು ಯಾವಾಗಲೂ ಸಾಮರ್ಥ್ಯವುಂಟು ಎಂಬುದು ದೃಷ್ಟಾಂತವಾಗಿರುವುದಷ್ಟೆ. ಜೀವಾತ್ಮನು ಅಜ್ಞಾನದಿಂದ ಆವೃತನಾಗಿರುವಾಗ್ಗೆ ಅದನ್ನು ಸಾಧಿಸಲು ಅಸಾಧ್ಯವಾಗಿರುವುದು. ಜೀವಾತ್ಮನನ್ನು ಆವರಿಸಿರುವ ಅಜ್ಞಾನವು ಯಾವಾಗ ನಿವೃತ್ತಿಯಾಗುವುದೋ ಆಗ್ಗೆ ಜೀವಾತ್ಮನು ಸ್ವಯಂಪ್ರಕಾಶನಾಗಿ ರಾರಾಜಿಸುತ್ತಿರುವನು. ಹೇಗೆಂದರೆ—ಮಾನವನು ಪ್ರಜ್ವಲಿಸುತ್ತಿರುವ ವಜ್ರದ ಹಾರವನ್ನು ಕೊರಳಿಗೆ ಹಾಕಿಕೊಂಡಿರುವಾಗ ಹೇಗೆ ಪ್ರಕಾಶಿಸುತ್ತಿರುವನೋ, ಹಾಗೆಯೇ ಅವನು ಅದನ್ನು ಧರಿಸಿರುವನೆಂಬ ಭಾವವನ್ನೇ ಮರೆತುಬಿಟ್ಟಾಗಲೂ, ಆ ಹಾರವು ಹೇಗೆತಾನೇ ಸ್ವಯಂಪ್ರಕಾಶವುಳ್ಳುದಾಗಿರುತ್ತದೆಯೋ ಹಾಗೆ ಜೀವನು ಜ್ಞಾನಸಾಧನೆಯಾದನಂತರ ಸದಾ ಪ್ರಕಾಶಿಸುತ್ತಲೇ ಇರುವನೆಂದು ತಿಳಿಯಬೇಕು.

45. ಸಾಮಾನ್ಯವಾದ ಒಬ್ಬ ಮಾನವನ ಶರೀರದಲ್ಲಿರುವ ಜೀವಾತ್ಮನು ಭಗವಂತನೆಂದು ಹೇಳುವುದು ಶುದ್ಧ ಅವಿವೇಕ. ಏಕೆಂದರೆ—ಜೀವಾತ್ಮನು ಭಗವಂತನಿಗೆ ಮೊದಲು ಅಧೀನನಾಗಿರುವನು. ಯಾವಾಗ ಜೀವಾತ್ಮನು ದೋಷದೂರನಾಗಿ, ನೈಜಕಾಂತಿಯಿಂದ ಪ್ರಕಾಶಿಸುವನೋ ಆಗ್ಗೆ ಜೀವಾತ್ಮನು ಭಗವಂತನಲ್ಲಿ ಐಕ್ಯವಾಗುವನು.

46. ಜೀವಾತ್ಮನಿಗೆ ಸ್ವತಸ್ಸಿದ್ಧವಾಗಿರುವ ಬ್ರಹ್ಮಜ್ಞಾನವು ಯಾವಾಗ ಪ್ರಾಪ್ತವಾಗುತ್ತದೆಯೋ ಆಗ್ಗೆ, ಸೂರ್ಯನ ತೇಜಸ್ಸು ಆಕಾಶದಲ್ಲಿಯೇ ಸೇರಿ ಒಂದಾಗಿರುವಂತೆ, ಜೀವಾತ್ಮನು ಆ ಭಗವಂತನೇ ನಾನು ಎಂದು ಹೇಳಿಸಿಕೊಳ್ಳುವನು.

41. ಜ್ಞಾನಪರಿಪೂರ್ಣನಾದ ಯೋಗಿಯು ತನ್ನ ಸುತ್ತಲಿರುವ ವಸ್ತುಗಳನ್ನೆಲ್ಲಾ ತನ್ನಲ್ಲಿಯೇ ಅಡಕವಾಗಿ, ಒಂದೇಯಾಗಿರುವುದೆಂದು ಹೇಗೆ ತಿಳಿದುಕೊಳ್ಳುತ್ತಾನೆಯೋ, ಹಾಗೆಯೇ ಜ್ಞಾನದೃಷ್ಟಿಯಿಂದ ಕಾಣಿಸುವ ಸಮಸ್ತವಸ್ತುಗಳೆಲ್ಲಾ ಬ್ರಹ್ಮವೆಂದೇ ತಿಳಿದುಕೊಳ್ಳುವನು.

48. ಮೇಲೆಹೇಳಿದ ಜ್ಞಾನಿಯು ಈ ಪ್ರಪಂಚದಲ್ಲಿ ಕಾಣಬರುವ ಚರಾಚರವಸ್ತುಗಳೆಲ್ಲಾ ಬ್ರಹ್ಮವೆಂತಲೂ, ಅದಕ್ಕೆ ಮೇಲ್ಪಟ್ಟವಸ್ತುವು ಮತ್ತಾವುದೂ ಇಲ್ಲವೆಂತಲೂ ಭಾವಿಸುವನು. ಕುಂಬಾರನಿಂದ ಮಾಡಲ್ಪಟ್ಟ ಒಂದು ಮಣ್ಣಿನಿಂದ ನಾನಾವಿಧವಾದ ಪಾತ್ರೆಗಳು ಬೇರೆಬೇರೆ ಆಕಾರವಾಗಿ ಮಾಡಲ್ಪಟ್ಟಿರುವುದು ಕಾಣಬಂದರೂ, ಎಲ್ಲವನ್ನೂ ಒಟ್ಟಿಗೆ ಸೇರಿಸಿದಾಗ್ಗೆ, ಸಮಸ್ತವೂ ಒಂದೇ ಒಂದು ವಸ್ತುವಾಗಿ ಕಾಣಬರುವಂತೆ ಜ್ಞಾನಿಯು ಸಮಸ್ತವೂ ಒಂದೇಬ್ರಹ್ಮವಾಗಿರುವುದೆಂದು ತಿಳಿಯುವನು.

49. ಕಂಬಳಿಹುಳುವು ಕಾಲಕ್ರಮದಲ್ಲಿ ಮೊದಲಿನ ಸ್ವರೂಪವು ಸಂಪೂರ್ಣವಾಗಿ ಹೋಗಿ ಕೊನೆಗೆ ಹೇಗೆ ಚಿಟ್ಟೆಹುಳುವಾಗಿ ಮಾರ್ಪಡುವುದೋ, ಹಾಗೆಯೇ ಜ್ಞಾನಸಂಪಾದನೆಯಾದನಂತರ ಜೀವನು ಮೊದಲು ತನ್ನಲ್ಲಿದ್ದ ಗುಣಗಳನ್ನೆಲ್ಲಾ ಮರೆತುಬಿಟ್ಟು, ಜೀವನ್ಮುಕ್ತನಾಗುವನು. ಈ ವಿಷಯವು ಜ್ಞಾನಿಗೆಮಾತ್ರ ಸಂಬಂಧಿಸುವುದು.

50. ಜೀವನಲ್ಲಿದ್ದ ದುರ್ಗುಣಗಳೆಲ್ಲಾ ಸಂಪೂರ್ಣವಾಗಿ ತೊಡೆದುಹೋಗಿ, ಮಾಯಾಸಮುದ್ರವನ್ನು ದಾಟಿ ಜ್ಞಾನಮಯನಾಗಿರುವ ಯೋಗಿಯು, ಸೌಖ್ಯಸಾಗರದಲ್ಲಿರುತ್ತ ಪೂರ್ಣಜ್ಞಾನಾನಂದಮಯನಾಗಿರುವನು.

ವಿದ್ಯುದ್ದೀಪಗಳಿಂದ ಉಂಟಾಗುವ ಕೆಡಕು.

ಈಚೆಗೆ ಹೊಸದಾಗಿ ಪ್ರಚಾರಕ್ಕೆ ಬರುತ್ತಿರುವ 'ಎಲೆಕ್ಟ್ರಿಕ್ ಲೈಟ್' ಎಂಬ ವಿದ್ಯುದ್ದೀಪಗಳಿಂದ, ಅನೇಕರು ತಮ್ಮ ಕಣ್ಣನ್ನು ಕೆಡಿಸಿಕೊಂಡು ಕುರುಡರಾಗುತ್ತಿರುವರೆಂದೂ, ಎಷ್ಟೋಜನರು ವಿಧವಿಧವಾದ ನೇತ್ರರೋಗಗಳಿಂದ ಬಾಧೆಪಡುವುದಕ್ಕೂ ಅದೇ ಕಾರಣವೆಂದೂ, 'ರಾಯಲ್ ಫೋಟೋಗ್ರಾಫಿಕ್ ಸೊಸೈಟಿ'ಯಲ್ಲಿ ಓದಿದ ಒಂದಾನೊಂದು ಪತ್ರಿಕೆಯಿಂದ ತಿಳಿದುಬರುತ್ತಿದೆ. ಆ ಲೇಖಕರು ಬರೆಯುವದೇನೆಂದರೆ, ಈ ಹೊಸದೀಪಗಳು ಬಂದಮೇಲೆಯೇ ಜನರಿಗೆ ಕಣ್ಣಿನ ಬಾಧೆಗಳು ಜಾಸ್ತಿಯಾಗಿ, ಬಾಲ್ಯದಿಂದಲೇ ವಿದ್ಯಾರ್ಥಿಗಳ ಮೂಗಿನಮೇಲೆ ಸುಲೋಚನಗಳು ಏರುತ್ತಿವೆ. ಈಗಿನಂತೆ ಚಿಮ್ನಿಯ ದೀಪಗಳೂ, ವಿದ್ಯುದ್ದೀಪಗಳೂ ಏರ್ಪಡುವುದಕ್ಕೆ ಮೊದಲು ಹೊಗೆಯುಳ್ಳ ದೀಪಗಳನ್ನು ಉಪಯೋಗಿಸುತ್ತಿದ್ದ ಪೂರ್ವಕಾಲಗಳಲ್ಲಿ ಇಂತಹ ಅನರ್ಥಗಳಿಗೆ ಅವಕಾಶವಿರಲಿಲ್ಲ. ನಾವಾದರೂ ಈಗ ಅದೇ ಪೂರ್ವಿಕರ ದಾರಿಗೆ ತಿರುಗಿಯೇ ದೃಷ್ಟಿನಾಟವನ್ನು ಒಳ್ಳೇಸ್ಥಿತಿಗೆ ತರಬೇಕಾಗಿದೆ. ಆದರೆ ಹೊಗೆಯಾಡುವ ಅಂತಹ ದೀಪಗಳಲ್ಲಿ ಇಷ್ಟು ಸೌಕರ್ಯಗಳಿಲ್ಲವೆಂದು ಕೆಲವರು ಹೇಳಬಹುದು. ಈಗಿನ ಅಪಾಯಗಳನ್ನು ಅನುಭವಿಸುವುದಕ್ಕಿಂತ, ಅಂತಹ ಅಸೌಕರ್ಯಗಳನ್ನಾದರೂ ಸಹಿಸಬಹುದು. ದೃಷ್ಟಿಯು ಮಂದವಾಗುವುದನ್ನೂ ಕಣ್ಣು ಕೆಟ್ಟುಹೋಗುವುದನ್ನೂ ಅನುಭವಿಸುವುದಕ್ಕಿಂತ ಮನುಷ್ಯನಿಗೆ ಅಧಿಕವಾದ ಕಷ್ಟವು ಬೇರೊಂದಿಲ್ಲ. ಈಗೀಗ ಸುಲೋಚನಗಳನ್ನುಪಯೋಗಿಸುವ ಜನಸಂಖ್ಯೆಯೆಷ್ಟೆಂದು ನೋಡುವುದರಲ್ಲಿ, ನಡುತರದ ದರ್ಜೆಯ ಪುರುಷರಲ್ಲಿ 100 ಕ್ಕೆ 50 ಮಂದಿಯಂತೆಯೂ, ಅದೇ ದರ್ಜೆಯ ಸ್ತ್ರೀಯರಲ್ಲಿ 100 ಕ್ಕೆ 20 ಮಂದಿಯಂತೆಯೂ, ಬಾಲ್ಯವಯಸ್ಸಿನವರಲ್ಲಿ ಹಲವರೂ ಸುಲೋಚನಗಳನ್ನುಪಯೋಗಿಸಬೇಕಾದ ಅವಶ್ಯಕತೆಯುಳ್ಳಿರುವರು. ಇದುಹೊರತು ಇನ್ನೂ ಅನೇಕರು ಮನೆಯಿಂದ ಹೊರಗೆಹೊರಡುವಾಗ ಬಣ್ಣದ ಕನ್ನಡಕಗಳನ್ನು ಉಪಯೋಗಿಸುವರು. ಆದರೆ ಕನ್ನಡಕಗಳನ್ನೇ ಉಪಯೋಗಿಸಬಾರದೆಂದು ನಾವು ಹೇಳುವುದಿಲ್ಲ. ನಡೆಮುದುಕರಿಗೆ ಊರುಗೋಲು ಹೇಗೆಯೋ, ಹಾಗೆಯೇ ಕಣ್ಣಿನಲ್ಲಿ ದೋಷವಿದ್ದವರಿಗೆ ಕನ್ನಡಕಗಳು ಸಹಾಯಕವಾಗಿ ಏರ್ಪಟ್ಟಿವೆಯೇ ಹೊರತು, ಅದೊಂದು ಅಂದಕ್ಕಾಗಲಿ, ಅಲಂಕಾರಕ್ಕಾಗಲಿ ಧರಿಸತಕ್ಕದ್ದಲ್ಲ.

ಹೀಗೆ ಎಲೆಕ್ಟ್ರಿಕ್ ದೀಪಗಳಿಂದ ಏರ್ಪಡುವ ನೇತ್ರರೋಗಗಳಿಗೆ ನಾಲ್ಕು ಕಾರಣಗಳುಂಟು. ಅವುಗಳಲ್ಲಿ ಮೊದಲನೆಯದು ವಿದ್ಯುದ್ದೀಪಗಳಿಂದಾಗುವ ಬೆಳಕಿನ ಕಾಂತಿಯು ಕಣ್ಣಿಗೆ ಬಹಳ ಅಪಾಯಕರವು. ಹಿಂದೆ 1880 ನೇ ಇಸವಿಯವರೆಗೆ ಇಂತಹ ದೀಪಗಳ ಸುಳಿವೇ ಇರಲಿಲ್ಲ. ಎಣ್ಣೆಯ ದೀಪಗಳಿಂದಲೇ ಜನರು ಕೆಲಸಗಳನ್ನು ನಡೆಯಿಸುತ್ತಿದ್ದರು. ಅಂತಹ ಸಾಧಾರಣ ದೀಪಗಳು ಎರಡು ಮೇಣದಬತ್ತಿಯನ್ನು ಒಟ್ಟಿಗೆ ಸೇರಿಸಿ ಉರಿಸಿದರೆ ಎಷ್ಟು ಕಾಂತಿಯು ಬರಬಹುದೋ ಅದಕ್ಕಿಂತ ಅಧಿಕ ಶಕ್ತಿಯುಳ್ಳವುಗಳಾಗಿರಲಿಲ್ಲ. ವಿದ್ಯುದ್ದೀಪಗಳಲ್ಲಿ ಎಷ್ಟೇ ಕಡಿಮೆಯೆಂದರೂ ಸಾಧಾರಣ ದೀಪಕ್ಕಿಂತ 80 ಪಾಲಿನಷ್ಟು ಶಕ್ತಿಯು ಹೆಚ್ಚಾಗಿರುವುದು. ಎಂದರೆ, ಬೀದಿಯಲ್ಲಿಯಾಗಲಿ, ಒಂದು ಅಂಗಡಿಯಲ್ಲಿಯಾಗಲಿ ಒಂದು ಸಾಧಾರಣದ ದೀಪವನ್ನು ನೇರವಾಗಿ ನೋಡಿದರೆ, ನಿಮ್ಮ ಕಣ್ಣುಗಳು ಎಷ್ಟುಮಟ್ಟಿಗೆ ಅದರ ಶಕ್ತಿಯನ್ನು ತಡೆದುಕೊಳ್ಳಬಹುದೋ, ಅದಕ್ಕೆ 80 ಅಥವಾ 100 ಪಾಲು ಹೆಚ್ಚುಶಕ್ತಿಯುಳ್ಳ ಪ್ರಕಾಶವು "ಎಲೆಕ್ಟ್ರಿಕ್" ದೀಪಗಳನ್ನು ನೋಡಿದಾಗ ನಿಮ್ಮ ಕಣ್ಣಿಗೆ ತಾಗುವುದು.

ಎರಡನೆಯ ಕಾರಣವೇನೆಂದರೆ:—ಅಸ್ಪಷ್ಟವೂ, ಅಪಾಯಕರವೂ ಆದ "ಅಲ್ಟ್ರಾವಯೊಲೆಟ್ ರೇಸ್" ಎಂಬ ಪ್ರಕಾಶದಿಂದ ಕಣ್ಣುಗಳಿಗೆ ಹಾನಿಯೇರ್ಪಡುವುದು. ಈ ಪ್ರಕಾಶವನ್ನು ಯಾವವಿಧವಾದ ತೆರೆಮರೆಗಳಿಂದಲೂ ಮರೆಸುವುದಕ್ಕೆ ಸಾಧ್ಯವಿಲ್ಲ. ಬಿಳಿಯ ಗೋಡೆಗಳಲ್ಲಿಯೂ, ಬಿಳುಪಾದ ಮೇಲ್ಹಾವಣಿಗಳಲ್ಲಿಯೂ ಈ ಪ್ರಕಾಶವು ಪ್ರತಿಫಲಿಸುವುದು. ಪ್ರಕೃತಿಸಿದ್ಧವಾದ ಬೆಳಕು ಎಂದರೆ ಸೂರ್ಯನ ಬಿಸಿಲಿನಿಂದ ಬರುವ ಪ್ರಕಾಶವು ಮರಗಳಿಂದಲೂ, ಪುಷ್ಪಗಳಿಂದಲೂ ಆಕರ್ಷಿಸಲ್ಪಡುವುದು. ಆ ಪ್ರಕಾಶವು ಆ ಮೂಲಕ ಪ್ರತಿಫಲಿಸುವುದಿಲ್ಲ. ಆದರೆ ಈಗೀಗ ಏರ್ಪಡುತ್ತಿರುವ ಹೊಸಹೊಸಬಗೆಯಾದ ವಿದ್ಯುದ್ದೀಪಗಳ ಅಲಂಕಾರಗಳಿಂದ ಬೀದಿಬೀದಿಗಳೂ, ಸಭಾಮಂಟಪಗಳೂ, ಅಂಗಡಿಗಳೂ ಅಲಂಕರಿಸಲ್ಪಡುವ ನೆವದಿಂದ ನಮ್ಮ ಕಣ್ಣುಗಳಿಗೆ ತೀವ್ರವಾದ ವಿಷವೇ ತುಂಬಲ್ಪಡುತ್ತಿರುವುವೆಂದರೆ ಅದು ಅತಿಶಯೋಕ್ತಿಯಲ್ಲ.

ಕಣ್ಣುಗಳಿಗೆ ಮೂರನೆಯ ಅಪಾಯಕಾರಣವೇನೆಂದರೆ:—ಕತ್ತಲೆಯಲ್ಲಿದ್ದು, ಹೆಚ್ಚಾದ ಪ್ರಕಾಶವಿರುವ ಕಡೆಗೆ ಬಂದಾಗ, ಆಕಸ್ಮಿಕವಾದ ಆ ಪ್ರಕಾಶವು ಕಣ್ಣಿಗೆ ಕೆಡುಕನ್ನುಂಟುಮಾಡುವುದು. ಅದರಂತೆಯೇ ಕತ್ತಲೆಯಲ್ಲಿದ್ದು "ಎಲೆಕ್ಟ್ರಿಕ್" ದೀಪಗಳನ್ನು ಥಟ್ಟನೆ ಹಚ್ಚುವುದರಿಂದಲೂ ಕಣ್ಣಿಗೆ ಅಪಾಯವುಂಟು. ಯಾವಾಗಲೂ ಬೆಳಕೆಂಬುದು ಸ್ವಲ್ಪ ಸ್ವಲ್ಪವಾಗಿ ಪ್ರಕಾಶವನ್ನು ಹೆಚ್ಚಿಸುವಂತಿರಬೇಕು. ದೈವಕಲ್ಪಿತವಾದ ಸೂರ್ಯನ ಪ್ರಕಾಶವು ಆ ವಿಧವಾಗಿಯೇ ಮೊದಮೊದಲು ಸೂಕ್ಷ್ಮವಾಗಿದ್ದು, ಆ ಮೇಲೆ ಕ್ರಮಕ್ರಮವಾಗಿ ಪ್ರಕಾಶವು ಹೆಚ್ಚುವುದು. ಕಣ್ಣಿನಲ್ಲಿ ಸೂಕ್ಷ್ಮವಾಗಿರುವ ಇಂದ್ರಿಯಶಕ್ತಿಯನ್ನು ಸಮಯೋಚಿತವಾಗಿ ಸಂಕೋಚವಿಕಾಸಗಳನ್ನು ಹೊಂದತಕ್ಕ ಪಾಪೆಯು (ಕರಿಯಾಲೆ) ಬಹಳ ಎಚ್ಚರದಿಂದ ರಕ್ಷಿಸುತ್ತಿರುವುದು. ಕಣ್ಣೋರೈಸುವಷ್ಟು ಅಧಿಕ ಪ್ರಕಾಶವು ಕಣ್ಣಿಗೆ ಬಿದ್ದಾಗ ಅದು ತನಗೆತಾನೇ ಮುಚ್ಚಿಕೊಂಡುಬಿಡುವುದು. ಪ್ರಕಾಶವು ಕಡಿಮೆಯಾಗಿದ್ದಷ್ಟೂ ಪಾಪೆಯು ಅಗಲುವುದು. ಹೀಗೆ ಕರಿಯಾಲೆಯಲ್ಲಿ ನಡೆಯತಕ್ಕ ಸಂಕೋಚವಿಕಾಸಗಳು (ಉಡುಗಿಕೊಳ್ಳುವುದು, ಅಗಲವಾಗುವುದು) ಬಹಳ ಮೃದುವಾಗಿಯೇ ನಡೆಯಬೇಕೇಹೊರತು, ಆ ಕೆಲಸವು ಬಹಳ ಬಲಾತ್ಕಾರದಿಂದಲೂ ವೇಗದಿಂದಲೂ ನಡೆಯುವುದಾದರೆ ಕಣ್ಣಿನ ಯಂತ್ರವು ಕೆಟ್ಟುಹೋಗುವುದು. ಏಕೆಂದರೆ—ಕಣ್ಣಿನ ಪಾಪೆಯು ಮುಚ್ಚಿಕೊಳ್ಳುವುದೂ, ತೆರೆಯುವುದೂ ನಿಧಾನವಾದುದರಿಂದ, ಥಟ್ಟನೆ ಹೆಚ್ಚು ಬೆಳಕು ಕಣ್ಣಿಗೆ ಬಿದ್ದರೆ, ಆ ಪಾಪೆಯು ಉಡುಗಿಕೊಳ್ಳುವವರೆಗೆ ಆ ಪ್ರಕಾಶದ ವೇಗವನ್ನು ಕಣ್ಣು ತಡೆದುಕೊಳ್ಳಬೇಕಾಗಿ ಬರುವುದು.

ಸೂರ್ಯಕಾಂತಿ ಮೊದಲಾದ ಪ್ರಕೃತಿಸಿದ್ಧವಾದ ಬೆಳಕಿನಲ್ಲಿ ಈ ಅಪಾಯವಿಲ್ಲ. ರಾತ್ರಿಯ ಕತ್ತಲೆಯಾಗಲಿ, ಹಗಲುಹೊತ್ತಿನ ಬೆಳಕಾಗಲಿ ಕ್ರಮಕ್ರಮವಾಗಿ ಇಳಿಯುವುದು. ಒಳ್ಳೇ ಬೇಸಗೆಯಲ್ಲಿಯೂ ಸೂರ್ಯನ ಬೆಳಕಿನಿಂದ ಕಣ್ಣಿಗೆ ಅಪಾಯವಿಲ್ಲ. ಆಗಲೂ ಸೂರ್ಯನ ಪ್ರಕಾಶವು ಎರಡು ಮೇಣದಬತ್ತಿಯ ಪ್ರಕಾಶಕ್ಕಿಂತಲೂ ಹೆಚ್ಚಿರುವುದಿಲ್ಲ.

ಹೊರಗಿನ ಮೈದಾನಗಳಲ್ಲಿ ಬಿಸಿಲಿನಲ್ಲಿಯೇ ಇದ್ದು ಕೆಲಸಮಾಡತಕ್ಕವರಿಗೂ ಕೂಡ ಕಣ್ಣು ಕೆಡುವ ಸಂಭವವಿಲ್ಲ. ನಗರವಾಸಿಗಳಲ್ಲಿ ವಿಶೇಷವಾಗಿ ವಿದ್ಯುದ್ದೀಪಗಳ ಮುಂದೆ ಕೆಲಸಮಾಡತಕ್ಕವರಲ್ಲಿಯೇ ನೇತ್ರವ್ಯಾಧಿಗಳು ಹೆಚ್ಚು.

ಎಲೆಕ್ಟ್ರಿಕ್ ದೀಪಗಳಲ್ಲಿರುವ ನಾಲ್ಕನೆಯ ಅಪಾಯಕಾರಣವೇನೆಂದರೆ:—ಈ ದೀಪಗಳ ಪ್ರಕಾಶವನ್ನು ಸಮಯಬಂದಹಾಗೆ ಆಗಾಗ ಬದಲಾಯಿಸುತ್ತಿರುವುದೂ, ಅಪಾಯಕ್ಕೆ ಕಾರಣವು. ಇದರಿಂದ ನರಗಳಿಗೆ ಕೆಡುಕು ಉಂಟಾಗಿ, ಅದರ ತ್ರಾಣವನ್ನು ತಗ್ಗಿಸುವುದು.

ಇದಕ್ಕಾಗಿ ನಾವು ಮಾಡಬೇಕಾದುದೇನು ? ಕಡಿದಮಟ್ಟಿಗೆ ಈ ಎಲೆಕ್ಟ್ರಿಕ್ ದೀಪಗಳನ್ನು ತಪ್ಪಿಸಿ, ನಮ್ಮ ಪೂರ್ವಕಾಲದ ದೀಪಗಳಿಗೆ ತಿರುಗಬೇಕಾದುದೇ ಉತ್ತಮಪಕ್ಷವು. ನಮಗೆ ಬೇಕಾದಷ್ಟು ದೀಪಗಳನ್ನು ಹೊತ್ತಿಸಿಟ್ಟುಕೊಂಡರೆ ತಕ್ಕಷ್ಟುಪ್ರಕಾಶವನ್ನು ಪಡೆಯಬಹುದು. ಅದರಿಂದ ಅಪಾಯವೂ ಇಲ್ಲ, ಅತಿಪ್ರಕಾಶವಾದ ಎಲೆಕ್ಟ್ರಿಕ್ ದೀಪದ ಮುಂದೆ ಕೆಲಸಮಾಡುವುದಕ್ಕಿಂತ, ತಂಪಾದ ಎಣ್ಣೆ ಅಥವಾ ಮೇಣದಬತ್ತಿಯ ದೀಪದ ಮುಂದೆ ಕೆಲಸಮಾಡುವುದು ಕಣ್ಣಿಗೆ ಹಿತಕರವೂ ಆಗಿದೆ.

"ಇಂಡಿಯನ್ ಮೆಡಿಕಲ್ ರಿಕಾರ್ಡ್"

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳುದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲಾಫ್ಯಾಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತೆಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಜನಿಗೆ ಆಣೆ 0-9-0, 1 ಡಜನಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳುಬಿಸಿ, ಕಣ್ಣಿನ ಪಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಜನಿಗೆ 0-9-0, 1 ಡಜನಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಫ್ಪ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಮ್ಮುಗಳು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಜನಿಗೆ 0-9-0, 1 ಡಜನಿಗೆ ರು. 1-0-0.

ರ್ಹ್ಯೂಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉಂಬುರುವರು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. **ಅಪೇಕ್ಷಕರು ಬರೆಯಿರಿ.**

☞ ಚಿಕಿತ್ಸ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರವೂಂನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[24] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ), **ಮಂಗಳೂರು. ದ. ಕ.**

ಭಿಷಗ್ರತ್ನ ಹಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಿಗೂ ಕಾಲವಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಭೋಜನಾನಿತ್ಯವುಳ್ಳವರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆವೈದ್ಯನಂತೆ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಹಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[5] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ಕೊಡಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[6] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಫೆಬ್ರವರಿ ೧೯೩೩ [ಸಂಚಿಕೆ ೪೦

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೩ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವತತ್ತ್ವೋಪದೇಶವನ್ನು ಮಾಡುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಶ್ರೀ ಕೊಟ್ಟೂರೇಶನ ರಥೋತ್ಸವವು.

ಕೊಟ್ಟೂರು.

ಬಳ್ಳಾರಿ ಡಿ॥ ಕೊಟ್ಟೂರುಪಟ್ಟಣದಲ್ಲಿ ಅಗಾಧಮಹಿಮಶಾಲಿಯಾದ ಶ್ರೀ ಕೊಟ್ಟೂರೇಶನ ರಥೋತ್ಸವವು ಇದೇ ಮಾಘ ಬ॥ ೧೦ ಭಾನುವಾರ ಮೂಲಾನಕ್ಷತ್ರ ತಾ॥ 19-2.33 ರಲ್ಲಿ ಪ್ರತಿವರ್ಷಕ್ಕಿಂತಲೂ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಈ ಕೊಟ್ಟೂರೇಶನು ಭೂಮಂಡಲದಲ್ಲಿ ಅವತರಿಸಿ ಗುರುಸ್ಥಲಪಟ್ಟಾಧಿಕಾರಿಯಾಗಿ ಮಾನವಜನ್ಮವನ್ನು ಸಾರ್ಥಕಗೊಳಿಸುವ ಸದ್ಬೋಧೆಯನ್ನುಂಟುಮಾಡುತ್ತಾ ಸಕಲ ದೇಶಗಳನ್ನು ಸಂಚರಿಸಿ ಅನೇಕ ಲೀಲೆಗಳನ್ನು ತೋರಿಸುತ್ತ ಬೇಡಿದ ಇಷ್ಟಾರ್ಥವನ್ನು ಕೊಡುತ್ತ ಇದೇ ಗ್ರಾಮದಲ್ಲಿ ನೆಲಸಿರುವುದು ಲೋಕಪ್ರಸಿದ್ಧವೇ ಆದೆ. ಆದ್ದರಿಂದ ಭಕ್ತಜನರು ಸಕಾಲಕ್ಕೆ ಬಂದು ಪುನೀತರಾಗುವರೆಂದು ಆಶಿಸುತ್ತೇನೆ.

ವೀರಶೈವರಿಗೆ ಗಚ್ಚಿನಮಠದ ಭಕ್ತರಲ್ಲಿಯೂ, ವಿಶ್ವಕರ್ಮರಿಗೆ ಊರಮ್ಮನ ದೇವಸ್ಥಾನ ಮತ್ತು ಶ್ರೀ ಕಾಳಿಕಾದೇವಸ್ಥಾನದಲ್ಲಿಯೂ ದಾಸೋಹದ ಏರ್ಪಾಟುಮಾಡಿರುತ್ತಾರೆ. ಇಲ್ಲಿ ನೀರಿನ ಅನುಕೂಲತೆಯು ಚನ್ನಾಗಿದ್ದು ಹವೆಯು ಉತ್ತಮವಾಗಿದೆ.

ಪಿ. ಎಂ. ಮರುಳಸಿದ್ಧಯ್ಯ, ಕೊಟ್ಟೂರು.

ಜಗಲೂರು ತಾಲ್ಲೂಕು ಓಟರ್ಸು ಮಹಾಶಯರಲ್ಲಿ ಸವಿನಯವಿಜ್ಞಾಪನೆಗಳು.

ಮಹಾಶಯರೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ 3 ವರುಷದ ಅವಧಿಯು ಪೂರೈಸಿದ್ದರಿಂದ ಪುನಃ ಈ ವರುಷ ಅಂದರೆ ತಾ॥ 5-4-1933 ನೇ ಬುಧವಾರ ಪ್ರಜೆಗಳು ಹೊಸ ಮೆಂಬರುಗಳನ್ನು ಚುನಾಯಿಸತಕ್ಕದ್ದೆಂದು ನಮ್ಮ ದಯಾಳು ಸರ್ಕಾರದವರು ನಿರ್ಧರಿಸಿರುತ್ತಾರೆ. ಆದ ಪ್ರಯುಕ್ತ ಈ ಚುನಾವಣೆಗೆ ಈ ನಮ್ಮ ಜಗಲೂರು ತಾಲ್ಲೂಕು ಪರವಾಗಿ ಪ್ರಜಾಸೇವೆಯನ್ನು ಮಾಡಲು ತಮ್ಮಗಳ ಭರವಸೆಯಿಂದ ನಾನು ಉಮೇದುವಾರ (Candidate) ವಾಗಿ ನಿಂತಿರುತ್ತೇನೆ. ಅಭಿಮಾನಶಾಲಿಗಳಾದ ತಾವುಗಳೆಲ್ಲರೂ ದಯವಿಟ್ಟು ಹಿಂದಿನಂತೆಯೇ ದೂರಯೋಚನೆಯನ್ನು ಮಾಡಿ ನನಗೆ ತಮ್ಮ ಘನವಾದ ಓಟನ್ನು ಕೊಟ್ಟು ದೇಶಸೇವೆಗೆ ಅವಕಾಶವನ್ನುಂಟುಮಾಡುವಿರೆಂದು ಪೂರ್ಣನಂಬಿ ಪ್ರಾರ್ಥಿಸುತ್ತೇನೆ.

ತಮ್ಮಗಳ ಸೇವಾಭಿಲಾಷಿ,
ಜಿ. ಎಸ್. ಮಹಾಲಿಂಗಪ್ಪ, ಜಗಲೂರು.

ಶ್ರೀಶೈಲಕ್ಷೇತ್ರ.

ವಸತಿಗೃಹಗಳ ಏರ್ಪಾಡು.

ದೇವಸ್ಥಾನದ ಪ್ರಾಕಾರದಲ್ಲಿ ಜನರ ಗುಂಪು ಹೆಚ್ಚಿ ರೋಗಾದಿಉಪದ್ರವಗಳಿಗೆ ಅವಕಾಶ ಉಂಟಾಗದಂತೆಯೂ, ಭಕ್ತಾದಿಗಳಿಗೆ ಹೆಚ್ಚಿನ ಅನುಕೂಲ್ಯಗಳು ದೊರೆಯುವಂತೆಯೂ, ದೇವಾಲಯದ ಹೊರಭಾಗದಲ್ಲಿಯೂ ಅನೇಕ ಜೋಪಡಿಗಳನ್ನು ನಿರ್ಮಿಸಲಾಗಿದೆ. ದೇವಸ್ಥಾನದ ಒಳಗಿರುವ ಜೋಪಡಿಗಳಿಗಿಂತಲೂ ಹೊರಗಿರುವ ಜೋಪಡಿಗಳಿಗೆ ಬಾಡಿಗೆಯನ್ನು ಕಡಿಮೆಮಾಡಲಾಗಿದೆ.

ಪ್ರಾಕಾರದ ಹೊರಗಿರುವ ಜೋಪಡಿಗಳು.

10 ಅಡಿ ಉದ್ದ. 8 ಅಡಿ ಅಗಲವುಳ್ಳ ಜೋಪಡಿ 1 ಕ್ಕೆ 2-0-0.
16 ಅಡಿ ಉದ್ದ. 10 ಅಡಿ .. .. 1 ಕ್ಕೆ 4-0-0.

ಪ್ರಾಕಾರದ ಒಳಗಿರುವ ಜೋಪಡಿಗಳು.

10 ಅಡಿ ಉದ್ದ. 8 ಅಡಿ ಅಗಲವುಳ್ಳ ಜೋಪಡಿ 1 ಕ್ಕೆ 2-4-0.
16 .. 10 .. .. 1 ಕ್ಕೆ 4-8-0.

ಜೋಪಡಿಗಳನ್ನು ಅಪೇಕ್ಷಿಸುವವರು ಮುಂಚಿತವಾಗಿ ಹಣವನ್ನು ಮನಿಯಾರ್ಡರ್ ಮಾಡಿ ಜೋಪಡಿಗಳನ್ನು ರಿಜರ್ವ್ ಮಾಡಿಸಿಕೊಳ್ಳಬೇಕು. ಸಾವಕಾಶವಾದರೆ ಅನಂತರ ಜೋಪಡಿಗಳು ದೊರೆಯಲಾರವು.

ಪಿ. ರಾಮಯ್ಯ,
ಕೋಯಿಲ್‌ಕುಂಟ್ಲ, ಪ್ರೆಸಿಡೆಂಟ್, ಶ್ರೀಶೈಲಂ
3—2—33. ಮ್ಯಾನೇಜ್‌ಮೆಂಟ್ ಬೋರ್ಡ್.

ಸ್ವೀಕಾರ

ಗದಗ ಶಹಪುರಪೇಟೆ ನಿವಾಸಿಗಳಾದ ವೇ॥ ಗುಡ್ಡಿಮಠದ ಕೋಟಯ್ಯನವರು ತಮ್ಮ ಪುತ್ರ ಚಿ॥ ಸಂಗಯ್ಯನಿಗೆ ಲಕ್ಕುಂಡಿಗ್ರಾಮದ ವೇ॥ ನರಗುಂದ ಲೋಕಯ್ಯನವರ ಪುತ್ರಿ ಚಿ॥ ಸೌ॥ ಶಿವಗಂಗವ್ವನನ್ನು ಕೊಟ್ಟು ಮಾಘ ಶು॥೧೦ ದಿವಸ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 5 ರೂ. ಗಳು, ಇದೇ ಸಮಯದಲ್ಲಿ ವೇ॥ನರಗುಂದ ಲೋಕಯ್ಯನವರ ಪುತ್ರ ಚಿ॥ ತಿಪ್ಪಯ್ಯನಿಗೆ ವೇ॥ ಹುಬ್ಬಳ್ಳಿ ಚವಕಿಮಠದ ವೀರಭದ್ರಯ್ಯನವರ ಪುತ್ರಿ ಚಿ॥ ಸೌ॥ ವೀರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನ ಕಡೆಯಿಂದ ತೆಗೆಯಿಸಿದ 5 ರೂ. ಗಳು, ವಧುವಿನ ಕಡೆಯಿಂದ ತೆಗೆಯಿಸಿದ **2-8-0** ರೂ. ಗಳು, ಒಟ್ಟು **12-8-0** ರೂ. ಗಳು ಗದಗ ಸಿಟಿ ಮುನಸಿಪಾಲಟಿ ವೈಸ್‌ಪ್ರೆಸಿಡೆಂಟರಾದ ವೇ॥ ಗುಡ್ಡಿಮಠದ ಸಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾ॥ ಕಣಕಟ್ಟೆಹೋಬಳಿ ನಾಗವೇದಿಗ್ರಾಮದಲ್ಲಿ ಶ್ರೀ ತುಂಬಾಪುರದ ಚನ್ನಬಸವಸ್ವಾಮಿಗಳವರ ಶಿವಾಲಯ ಪ್ರತಿಷ್ಠಾಸಮಯದಲ್ಲಿ ನೆರವೇರಿದ ಶಿವದೀಕ್ಷಾಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **5** ರೂಪಾಯಿಗಳು ವೇ॥ ಜಿ. ಕೆ. ಸಿದ್ಧಲಿಂಗಾರ್ಯರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಶಹರ ನಿವಾಸಿಗಳಾದ ವೇ॥ ವಿರೂಪಾಕ್ಷಯ್ಯನವರು ನಂದಿಕೇಶ್ವರಮಠ ಇವರು ತಮ್ಮಲ್ಲಿ ನೆರವೇರಿಸಿದ ತಮ್ಮ ಚಿ॥ ಗಂಗಾಧರನ ಮಾಹೇಶ್ವರದೀಕ್ಷಾಸಂಸ್ಕಾರ ಮತ್ತು ಚಿ॥ ಚಂದ್ರಶೇಖರಶರ್ಮನಿಗೆ ಶಿಶುವಿನಹಳ್ಳಿ ಹಿರೇಮಠದ ವೇ॥ ಪಂಚಾಕ್ಷರಯ್ಯನವರ ಸುಪುತ್ರಿಯನ್ನು ತಂದು ನೆರವೇರಿಸಿದ ವಿವಾಹಸಮಾರಂಭಗಳಲ್ಲಿ ವಧೂವರರಿಂದ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **4** ರೂಪಾಯಿಗಳು ಹನ್ನೆರಡುಮಠದ ಶ್ರೀ॥ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಶಿಶುವಿನಹಳ್ಳಿ ಹಿರೇಮಠದ ವೇ॥ ಪಂಚಾಕ್ಷರಯ್ಯನವರ ಸುಪುತ್ರಿಯರಾದ ಕುಂ॥ ಸೌ॥ ಗಂಗವ್ವನನ್ನು ಮೇಲ್ಮರಿ ಹಿರೇಮಠದ ವೇ॥ ಕೊಟ್ರಯ್ಯನವರ ಪುತ್ರ ವೀರಯ್ಯನಿಗೂ ಕುಂ॥ ಸೌ॥ ಬಸವಣ್ಣೆವ್ವನನ್ನು ಸವದತ್ತಿ ಕೊಡ್ಲಿಮಠದ ತಿ॥ ಮುರಿಗಯ್ಯನವರ ಪುತ್ರ ಪ್ರಭಯ್ಯನವರಿಗೂ ಕೊಟ್ಟು ಇದೇ ಮಾಘ ಶು॥ ೯ ದಿವಸ ನೆರವೇರಿಸಿದ ವಿವಾಹಮಹೋತ್ಸವದಲ್ಲಿ ವಧೂವರರಿಂದ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂಪಾಯಿಗಳು ವೇ॥ ಲಕ್ಷ್ಮೇಶ್ವರ ಹಿರೇಮಠದ ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಶಹರ ನಿವಾಸಿಗಳಾದ ಶ್ರೀ ಚನ್ನಯ್ಯ ಕಲ್ಯಾಣಿಯವರ ಇವರು ತಮ್ಮ ಪುತ್ರ ಚಿ॥ ಅಡಿವಯ್ಯನ ಮಾಹೇಶ್ವರ ದೀಕ್ಷಾಸಂಸ್ಕಾರವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿಗಳು ವೇ॥ ವಿರೂಪಾಕ್ಷಯ್ಯನವರು ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಶಹರ ನಿವಾಸಿ ಮ॥ ರಾ॥ ವೀರಪ್ಪ ತಂದಿ ಸಿದ್ಧಲಿಂಗಪ್ಪ ಆಯಟ್ಟಿ ಈತನ ಪ್ರಾಯಶ್ಚಿತ್ತಕ್ರಿಯೆಯಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1**ರೂ. ಯು ಶ್ರೀ॥ ಹನ್ನೆರಡುಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಧಾರವಾಡ ಜಿಲ್ಲಾ ಕಲಘಟಗಿಯಲ್ಲಿ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾಗಿದ್ದ ಮ॥ ಲಕ್ಷ್ಮಣರಾವ್ ಹಳ್ಳಿಪ್ಪನವರ ಎಂಬವರು ಚಳವಳಿಯ ಸಂಬಂಧವಾಗಿ ಕಾರಾಗೃಹವಾಸಿಗಳಾಗಿದ್ದು, ಕಳೆದ ಜನವರಿ 31 ನೇ ತಾರೀಖಿನ ದಿವಸ, ಇನ್ನು ಮುಂದೆ ಚಳವಳಿಯಲ್ಲಿ ಭಾಗವಹಿಸುವದಿಲ್ಲವೆಂದು ಕ್ಷಮಾಪಣೆಕೇಳಿಕೊಂಡದ್ದರ ಮೇಲೆ ಜಾಮೀನಿನ ಮೇಲೆ ಬಿಡುಗಡೆಮಾಡಲ್ಪಟ್ಟರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ,
ವಿಜಾಪುರ.

ಪ್ರಥಮೋಲ್ಲಾಸವು.

ಶ್ರೀಮದ್ಭರತಖಂಡದಲ್ಲಿ ಯಾವ ವಿಧವಾದ ಚಳವಳಿವಾದರೂ ಯಶಸ್ವಿಯಾಗಬೇಕಾದರೆ ಅದರ ಕಟ್ಟಡವು ಧರ್ಮದ ತಳಹದಿಯ ಮೇಲೆ ಪ್ರಾರಂಭಿಸಲ್ಪಡುವುದು. ಏಕೆಂದರೆ, ಭಾರತೀಯ ಆರ್ಯಜನರ ಧರ್ಮವು ಅಭ್ಯುದಯಕ್ಕೂ (ರಾಷ್ಟ್ರೋನ್ನತಿಗೂ) ನಿಃಶ್ರೇಯಸ್ಸಿಗೂ (ಮೋಕ್ಷಕ್ಕೂ) ಸಾಧನವಾಗಿರುವುದಷ್ಟೇ! ಅದು ಕಾರಣವೇ ಭಾರತೀಯರ ಅಂತಃಕರಣವೃತ್ತಿಗಳು ತಮ್ಮ ಸನಾತನ ಧರ್ಮದೊಡನೆ ಬೆರೆದುಹೋಗಿರುವುವೆಂಬ ವಿಷಯದಲ್ಲಿ ಅನುಭವಸಿದ್ಧವಾದ ಉದಾಹರಣೆಗಳು ಈಗಿನ ಪರಿಸ್ಥಿತಿಯಲ್ಲಿಯೂ ಬೇಕಾದಷ್ಟು ಸಿಕ್ಕುತ್ತವೆ. ಅತಿಪ್ರಾಚೀನಕಾಲದಿಂದ ಇಂದಿನವರೆಗೂ ಭಾರತೀಯ ಆರ್ಯಜನರ ಧರ್ಮವು ಬಹುಮಟ್ಟಿಗೆ ಇದ್ದಕ್ಕಿದ್ದಂತೆ ನಡೆದುಬಂದುದರಿಂದಲೇ ಅದು ಸನಾತನವಾದುದೆಂದು ಹೇಳಲ್ಪಡುತ್ತದೆ. ಹೀಗೆ ಅದು ಬುನಾದಿಯಿಂದ ಅಚ್ಚಳಿಯದೆ ಬಳಕೆಯಲ್ಲಿರಲು ಅದರ ಅಬಾಧಿತಗಳಾದ ತತ್ತ್ವಗಳೇ ಹೇತುವಾಗಿವೆ. ಯಾವನು ಅದುವೇ ತನಗೆ ಸನ್ಮಾರ್ಗವನ್ನು ತೋರಿಸುವಲ್ಲಿ ಪರಮಹಿತೈಷಿಯಾದ ಮಿತ್ರನೆಂದು ಭಾವಿಸುವನೋ, ಅವನಿಗೆ ಅದರಿಂದ ಶಾಶ್ವತಸುಖವೇ ಲಭಿಸುವುದು. ಹೇಗೆಂದರೆ, ಅದರ ನೆರವನ್ನು ಮನಮುಟ್ಟಿ ಬಯಸುವಾತನ ಅಂತಃಕರಣದಲ್ಲಿ ಸಂಸ್ಕಾರರೂಪದಿಂದಿರುವ ಶ್ರದ್ಧೆಯನ್ನು ಅದು ಉದ್ಬುದ್ಧ (ಅಭಿವ್ಯಕ್ತ) ಗೊಳಿಸುವ ಮೂಲಕ ಉತ್ತಮಶ್ರೇಯದ ದಾರಿಯನ್ನು ಹಿಡಿಸಿ ತನ್ನ ಕಾರ್ಯವನ್ನು ಸರಿಯಾಗಿ ಸಾಧಿಸಬಲ್ಲುದು.

ಶ್ರದ್ಧೆಯೆಂಬ ತತ್ತ್ವಕ್ಷೇತ್ರದಲ್ಲಿ ಇಂದ್ರಿಯಗಳಿಗೆ ಅಗೋಚರವೂ ಅತರ್ಕ್ಯವೂ (ಬುದ್ಧಿಗ್ರಾಹ್ಯವಲ್ಲದುದೂ) ಆದ ಅಲೌಕಿಕ ವಿಷಯವ್ಯಾಪನೇ ಅಧಿಕವಾಗಿ ಸಂಭವಿಸುವ ಮೂಲಕ ಪ್ರತ್ಯಕ್ಷಾನುಮಾನಾದಿಪ್ರಮಾಣಗಳಿಗಿಂತಲೂ ಭಿನ್ನವಾದ ಬೋಧಕಪ್ರಮಾಣವೊಂದನ್ನು ಶ್ರದ್ಧೆಯ ವಿಕಾಸಕ್ಕೋಸ್ಕರ ಅವಲಂಬಿಸಬೇಕಾಗುವುದು. ಹೇಗೆ ಸಾಮಾನ್ಯವಾಗಿ ವ್ಯವಹಾರದಲ್ಲಿ ಇದು ನಿಜವೋ, ಅದು ದಿಟವೋ, ಇದನ್ನು ಮಾಡಬೇಕೋ, ಅದನ್ನು ಮಾಡಬೇಕೋ, ಎಂಬೀ ವಿಧವಾದ ಸಂಶಯಗಳು ಮನಸ್ಸಿನಲ್ಲಿ ಹುಟ್ಟಲು ಆಗ ಗುರು, ತಾಯಿ, ತಂದೆ, ಅಣ್ಣ, ಗೆಳೆಯ ಮೊದಲಾದವರ ನುಡಿಗಳನ್ನು 'ಆಪ್ತವಾಕ್ಯವು ಪ್ರಮಾಣವು' ಎಂಬ ನ್ಯಾಯಾನುಸಾರವಾಗಿ ನಂಬಿ ಕಾರ್ಯಗಳನ್ನು ಮಾಡಲು ತೊಡಗುವೆವೋ, ಹಾಗೇ ಅಲೌಕಿಕ ವಿಷಯಗಳಲ್ಲಿಯೂ ಶಬ್ದಪ್ರಮಾಣ (ಶಾಸ್ತ್ರ)ವನ್ನು ಒಪ್ಪದೆ ನಿರ್ವಾಹವಿಲ್ಲ.

ಈ ಜಗತ್ತಿನಲ್ಲಿ ಬೇರೆಯಾವ ಧರ್ಮದವರಾದರೂ ಅಲೌಕಿಕಾರ್ಥಪ್ರಾಪ್ತಿಗಾಗಿ ಶಬ್ದಪ್ರಮಾಣವನ್ನೇ ಅವಲಂಬಿಸಿದ್ದಾರೆ. ಕ್ರೈಸ್ತಧರ್ಮಾನುಯಾಯಿಗಳು 'ಬಾಯಿಬಲ್'ವೆಂಬುದು ಈಶ್ವರವಾಕ್ಯ ಎಂದು ಹೇಳುತ್ತಾರೆ. ಇಸ್ಲಾಮಿನಧರ್ಮದಲ್ಲಿ 'ಕುರಾಣ'ವೆಂಬುದನ್ನು ಈಶ್ವರನ ಸಂದೇಶವೆಂದು ಹೇಳುವ ವಾಡಿಕೆಯಿದೆ. ನಮ್ಮ ಸನಾತನ ಧರ್ಮದಲ್ಲಿ ಯಾವದೋ ಅಲೌಕಿಕಾರ್ಥಗಳನ್ನೇ ಅಧಿಕವಾಗಿ ಪ್ರತಿಪಾದಿಸುವುದೂ, ಶ್ರದ್ಧೆಯನ್ನು ನಿಯತಿಪೂರ್ವಕವಾಗಿ ವಿಕಾಸಗೊಳಿಸುವುದೂ, ಪರಮೋನ್ನತಿಯ ಲಾಭವನ್ನುಂಟುಮಾಡಿಕೊಡುವುದೂ ಆದ ಶಬ್ದಪ್ರಮಾಣವು 'ವೇದವು' ಎಂಬದಾಗಿ ಪ್ರಸಿದ್ಧವಾಗಿರುವುದು. ಇದುವೇ ಶ್ರುತಿ, ಆಗಮ, ಸಮಾಮ್ನಾಯ, ಶಾಸ್ತ್ರವೆಂಬ ಅಪರಪರ್ಯಾಯನಾಮಗಳಿಂದ ಹೇಳಲ್ಪಡುವುದು.

ವೇದಪ್ರತಿಪಾದ್ಯವು ವೈದಿಕವು. ಅದುವೇ ಶ್ರೌತವು. ಸನಾತನವಾದ ವೈದಿಕಧರ್ಮದಲ್ಲಿ ಇತರ ಧರ್ಮಗಳಿಗಿಂತ ಅದಾವ ವಿಶೇಷವಿದೆ? ಎಂದರೆ, ನಮಗೆ ಮುಖ್ಯ ಪ್ರಮಾಣಭೂತವಾದ ವೇದವು (ಶ್ರುತಿಯು) ಒಬ್ಬನಿಂದ ಇಲ್ಲವೆ ಅನೇಕರಿಂದ ಒಂದು ವಿಶಿಷ್ಟಕಾಲದಲ್ಲಿ ರಚಿಸಲ್ಪಟ್ಟಿದೆಂದು ನಾವು ಸಮ್ಮತಿಸುವುದಿಲ್ಲ. ಅದು ಅಪೌರುಷೇಯವೂ ಅನಾದಿಯೂ ಆದುದೆಂದೇ ನಮ್ಮ ಬಲವಾದ ನಂಬಿಕೆ. ಮತ್ತು ಅದರೊಳಗಿನ ವಾಕ್ಯಗಳಿಂದೇ ವಿಧಿನಿಷೇಧಾಚರಣೆಗಳನ್ನು (ಯಾವುದನ್ನು ಮಾಡಬೇಕು, ಯಾವುದನ್ನು ಮಾಡಕೂಡದು ಎಂಬೀ ತರಹದ ನಡವಳಿಕೆಗಳನ್ನು) ಅರಿತುಕೊಳ್ಳುತ್ತೇವೆ. ಕ್ರಿಸ್ತನು, ಮಹಮ್ಮದನು, ಬುದ್ಧನು, ಮತ್ತು ಬೇರೊಬ್ಬನು ಎಂಬೀ ವಿಧವಾಗಿರತಕ್ಕವರಲ್ಲಿ ಯಾವುದಾದರೊಂದು ವ್ಯಕ್ತಿಯ ಉತ್ಪಾದಕತ್ವಮೂಲಕ ಆ ಧರ್ಮಕ್ಕೆ ಯಾವ ಒಂದು ಬಗೆಯ ಪೌರುಷಾಭಿಮಾನದ ಏಕಾಂಗೀಸ್ವರೂಪವುಂಟಾಗಿರುವುದೋ ಅದು ಮಾತ್ರ ನಮ್ಮ ಧರ್ಮದಲ್ಲಿ ಸಂಭವಿಸಿರುವುದಿಲ್ಲ.

ಈ ಮೇರೆಗೆ, ವೇದವನ್ನು ಪರಮಪ್ರಮಾಣವೆಂದೊಪ್ಪಿದ ಮೇಲೆ ಅದರೊಳಗಿನ ವಾಕ್ಯಗಳಿಂದ ಆಚಾರವಿಚಾರಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ತದನುಕೂಲಗಳಾದ ಅನುಮಾನಾದಿ ಪ್ರಮಾಣಗಳನ್ನು ಪರಿಗ್ರಹಿಸುವಲ್ಲಿ ನಮ್ಮ ಧರ್ಮದೊಳಾವ ಪ್ರತಿಬಂಧಕವೂ ಇರುವುದಿಲ್ಲ. ಸಾರಾಂಶ—ಚಿತ್ತವು ಸಮಾಧಾನವಾಗಿ, ಜೀವಿತಸಾಫಲ್ಯದ ಸದಿಚ್ಛೆಯು ತಲೆದೋರಿ, ಪರಮೇಶ್ವರನ ಅಸ್ತಿತ್ವವನ್ನೊಡಂಬಡುವ ಶ್ರದ್ಧೆಗೆ ಉತ್ತಮಫಲಪ್ರದಗಳಾದ ಕರ್ಮ, ಉಪಾಸನೆ, ಜ್ಞಾನಗಳ ಮಾರ್ಗವನ್ನು ತೋರಿಸುವುದಕ್ಕಾಗಿಯೇ ಶಾಸ್ತ್ರರೂಪವಾದ ಶಬ್ದಪ್ರಮಾಣದ ಆವಶ್ಯಕತೆಯುಂಟೆಂಬುದು ಸ್ಪಷ್ಟವು.

ಯಾವನು ತನ್ನನ್ನು ವೈದಿಕಧರ್ಮಾನುಯಾಯಿಯೆಂದು ಹೇಳುವನೋ ಅವನು ವೇದಪ್ರಾಮಾಣ್ಯವನ್ನಂಗೀಕರಿಸದೆ ಗತ್ಯಂತರವೇ ಇಲ್ಲ. ಏಕೆಂದರೆ—ವೇದಮೂಲಕವಾಗಿಯೇ ಭಾರತೀಯರ ಜ್ಞಾನ, ವಿಚಾರ, ಸದ್ಭಾವನೆಗಳಿಗೆ ನಿಶ್ಚಿತಸ್ವರೂಪವು ಪ್ರಾಪ್ತವಾಗಿರುವುದು. ವೈದಿಕವಾಙ್ಮಯವು ಪ್ರಾಚೀನತಮಸ್ಥಿತಿಬೋಧಕವಾಗಿದೆ. ವಾಙ್ಮಯೇತಿಹಾಸದಲ್ಲಿ ವೇದಕ್ಕೇ ಅಗ್ರಸ್ಥಾನವು ಸಲ್ಲುವುದು. ಎಷ್ಟೋ ಸಾವಿರ ವರ್ಷಗಳಿಂದಲೂ ಕೋಟ್ಯವಧಿ ಭಾರತೀಯರು ವೇದಾಕ್ಷರವನ್ನು ಈಶ್ವರವಾಕ್ಯೆಂದು ಮನ್ನಿಸುತ್ತ ಬಂದಿರುವರಲ್ಲವೇ! ಪ್ರಕೃತದಲ್ಲಿ ಉಪಲಬ್ಧರೂಪವಾದ ಭಾರತೀಯ ವಾಙ್ಮಯಪ್ರಪಂಚಕ್ಕೆ ಮೂಲಾಧಾರಭೂತವಾದ ವೈದಿಕವಾಙ್ಮಯದಲ್ಲಿ ಗತಿಯನ್ನು ಸಂಪಾದಿಸದೆ ಭಾರತೀಯರ ಆಧ್ಯಾತ್ಮಿಕಜೀವನಕ್ರಮವೂ ಸಂಸ್ಕೃತಿಯೂ ಎಂಬಿವುಗಳ ಸಂಬಂಧವಾದ ಜ್ಞಾನವನ್ನು ಪಡೆಯಲು ಅನ್ಯೋಪಾಯಗಳಿರುವುದಿಲ್ಲ. ಆದ್ದರಿಂದ, ನಾವು ವೇದವಿಷಯಕವಾದ ಪೂಜ್ಯಬುದ್ಧಿಯನ್ನು ಅಬಾಧಿತವಾಗಿಟ್ಟುಕೊಳ್ಳುವುದು ವಿಹಿತವಾದುದೆಂದು ಖಂಡಿತವಾಗಿ ಹೇಳುತ್ತೇವೆ.

ಇನ್ನು, ಹಗಲಿರುಳು ಬಿಡುವಿಲ್ಲದೆ ಲೌಕಿಕ ವಿಷಯಗಳಲ್ಲಿಯೇ ತೊಡಗಿರುವವರೂ ಕ್ಷಣಭಂಗುರವಾದ ಮಾನುಷೀಬುದ್ಧಿಯ ತರ್ಕ್ಯವಿಷಯದಲ್ಲಿ ಹುಟ್ಟಿದ ವ್ಯರ್ಥಾಭಿಮಾನ ಮೂಲಕವಾಗಿ ಅಂತಃಕರಣದಲ್ಲಿ ಹುದುಗಿದ ಶ್ರದ್ಧಾಂಕುರವುಳ್ಳವರೂ ಆದ ಕೆಲಂಬರ ದೃಷ್ಟಿಗೆ ಧರ್ಮವೆಂಬುದೇ ಸರಿಯಾಗಿ ಗೋಚರಿಸದಿರುವುದರಿಂದ, ಅವರು ಧರ್ಮವನ್ನು ಶಾಸನಗೊಳಿಸುವ ವೇದವನ್ನು ಪ್ರಮಾಣಭೂತವಾದುದೆಂದು ಭಾವಿಸಿ, ಅದು ವಿಧಿಸಿದಂತೆ ನಡೆಯಬೇಕೆಂಬುದು ಒಂದು ವಿಧವಾದ ದಾಸ್ಯವೆಂದೇ ಬಗೆವರು. ಆದರೆ, ಬುದ್ಧಿಗೆ ಅಗಮ್ಯವಾದ ವಿಷಯಗಳು ಅನೇಕವಾಗಿರುವುವೆಂಬುದು ಆಗಾಗ್ಗೆ ತಿಳಿದುಬರುತ್ತಿದ್ದರೂ, ಮನುಷ್ಯನ ಕರ್ತೃತ್ವವನ್ನು ಕ್ಷಣಮಾತ್ರದಲ್ಲಿ ನಾಶಗೊಳಿಸತಕ್ಕ ಅದೃಷ್ಟಶಕ್ತಿಯ ಅನುಭವವಾಗುತ್ತಿದ್ದರೂ, ಕಾರ್ಯಾಕಾರ್ಯವಿಷಯಗಳಲ್ಲಿ ನಿಶ್ಚಿತವಾದುದನ್ನು ನಿರ್ಣಯಿಸುವ ಬಗ್ಗೆ ಮಾನವೀಬುದ್ಧಿಯ ಅಪಾತ್ರತೆಯು ಗಳಿಗೆಗೊಮ್ಮೆ ಚಿತ್ತವನ್ನು ವಿಕ್ಷೇಪಗೊಳಿಸುತ್ತಿದ್ದರೂ, ಮತ್ತೆ ಮತ್ತೆ ತಮ್ಮ ಮಿದುಳಿನ ಹೊಳವೇ ಎಲ್ಲಕ್ಕೂ ಆಸರವೆಂದೂ ಅದುವೇ ತಮಗೆ ಮಿಗಿಲಾದ ಪವಣವೆಂದೂ ಅರಿವ ಆ ಮಾನಿಸರು ತಾವು ಮನದ ಡಿಂಗರಿಗತನ (ದಾಸ್ಯ) ವನ್ನೊಪ್ಪಿಕೊಳ್ಳುತ್ತಿರುವರಲ್ಲವೇ? ಇದು ಅವರ ಪೂರ್ವಕರ್ಮಾನುರೂಪಸಂಸ್ಕಾರಜನ್ಯಪರಿಣಾಮವೆಂದೇ ನಮ್ಮ ಹೇಳುವಿಕೆಯು. ಅದು ಕಾರಣವೇ, ಆ ಚೆಲುವರು ವೇದವು ಈಶ್ವರೋಪದಿಷ್ಟವಾದುದರಿಂದ, ಅದು ಸರ್ವಶಿಷ್ಟಜನೋಪಾದೇಯವಾಗಿರುವುದೆಂಬ ವಾಕ್ಯವು ಕಿವಿಗೆ ಬಿದ್ದೊಡನೆಯೇ ವಿದೂಷಕರಂತೆ ನಟಿಸುವರು. ವಿಲಕ್ಷಣಸಂಸರ್ಗಜನಿತಸಂಸ್ಕಾರಪ್ರಭಾವಾತಿಶಯದಿಂದ ಸನಾತನ ಧರ್ಮವಿಚಾರ ವಿಷಯಕವಾಗಿ ಅವರು ಆಕ್ಷೇಪಿಸುತ್ತಿರುವ ನುಡಿಗಳನ್ನು ಈ ಕೆಳಗೆ ಬರೆದು ತೋರಿಸಿ ಅವುಗಳಿಗುಚಿತವಾದುತ್ತರವನ್ನೀಯಲುದ್ಯುಕ್ತರಾಗುತ್ತೇವೆ.

ಈಶ್ವರನೆಲ್ಲಿದ್ದಾನೆ? ಅವನಿರುವನೆಂದು ಹೇಳುವ ನೀವು ಅವನನ್ನು ಪ್ರತ್ಯಕ್ಷವಾಗಿ ತೋರಿಸಿಕೊಡಬಲ್ಲಿರಾ? ಎಲ್ಲಿಯವರೆಗೆ ನೀವು ಹಾಗೆ ಮಾಡಲು ಶಕ್ತರಲ್ಲವೋ ಅವರೆಗೆ 'ಈಶ್ವರನಿದ್ದಾನೆ' ಎನ್ನುವ ಕೇವಲ ಪ್ರತಿಜ್ಞಾಮಾತ್ರದಿಂದೇ ನಮ್ಮನ್ನು ಸಮಾಧಾನಪಡಿಸುವ ಹವ್ಯಾಸವುಳ್ಳವರಾಗಿರುವುದು ವ್ಯರ್ಥವೇ ಸರಿ; ಆದ್ದರಿಂದ, ಈಶ್ವರನೇ ಸಿದ್ಧಿಸದಿರಲು ಅವನಿಂದ ನಿರ್ಮಿತವಾದ ವೇದಕ್ಕೆ ಪ್ರಾಮಾಣ್ಯವೆಂತು ಸಮನಿಸುವುದು? ಎಂಬೀ ಆಕ್ಷೇಪವನ್ನು ಸಮಾಧಾನಗೊಳಿಸುವ ಮೊದಲು ನಾವು ವಾದಿಯ ಬಾಯಿಂದೇ ಎರಡು ಮಾತುಗಳನ್ನು ನಿರ್ಣಯಪಡಿಸಬೇಕಾಗಿದೆ. ಅದು ಹೇಗೆಂದರೆ—

(೧) 'ಈಶ್ವರನು ಕಾಣಿಸುವುದಿಲ್ಲವಾದುದರಿಂದ ಅವನು ಇಲ್ಲ' ಎಂಬುದಾಗಿ ಹೇಳುವ ವಾದಿಯು, ಕೇವಲ ಇಂದ್ರಿಯಗೋಚರವಾದುದನ್ನೇ ಇರುವುದು. (ಪ್ರತ್ಯಕ್ಷವೇ ಒಂದು ಪ್ರಮಾಣವು.) ಎಂದು ತಿಳಿದಿರುವುದಾಗಿ ತೋರಬರುವುದು. ಆದ್ದರಿಂದ ಯಾವುದಕ್ಕೆ ಪ್ರಮಾಣವೆಂದು ಹೇಳಬೇಕೆಂಬುದನ್ನು ಮೊದಲು ಗುರುತಿಸಬೇಕು, ಅಂದರೆ ಪ್ರಮಾಣ ಲಕ್ಷ್ಯವನ್ನು ಗೊತ್ತುಪಡಿಸಬೇಕು.

(೨) ಈಶ್ವರನೆಂದರೆ ಯಾವನು? ಈಶ್ವರನ ಲಕ್ಷಣವೇನು? ಎಂಬುದರ ನಿರ್ಣಯವಾದರೂ ಆಗಲೇಬೇಕು.

ಈ ಬಗ್ಗೆ ವಾದಿಯು—ಪ್ರಮಾಣವೆಂದರೆ ಜ್ಞಾನಸಾಧನವು. ಈಶ್ವರನೆಂದರೆ ಪ್ರತಿಕೂಲಜೀವರ ನಿಯಮನವನ್ನೂ ಅನುಕೂಲಜೀವರ ರಕ್ಷಣೆಯನ್ನೂ ಮಾಡುವಾತನು. ಅವನು ಆ ತನ್ನ ಕಾರ್ಯಗಳನ್ನು ನಿಗ್ರಹಾನುಗ್ರಹಗಳ ಮೂಲಕ ಮಾಡುತ್ತಾನೆ. ಆದ್ದರಿಂದ ಲೌಕಿಕ ಈಶ್ವರ (ಸಾರ್ವಭೌಮರಾಜ)ನೇ ಈಶ್ವರನೆಂದು ನಾವು ತಿಳಿದರೆ ಹಾನಿಯೇನು? ಎಂದು ಹೇಳುವನಾದರೆ, ಆ ನುಡಿಗಳನ್ನು ಅಲ್ಲಗಳೆಯುವ ಪರಿಯು ಈಮುಂದೆ ತೋರಿಸಿದಂತಿರುವುದು.

ಪ್ರಮಾಣವೆಂದರೆ ಪ್ರಮೆಯ ಕರಣವು. ಪ್ರಮೆಯು ಅಂದರೆ ಯಥಾರ್ಥಜ್ಞಾನವು; ಇದಕ್ಕೆ ಕರಣವು (ಸಾಧನವು) ಇಂದ್ರಿಯವು. ಆದ್ದರಿಂದ ಇಂದ್ರಿಯವೇ ಪ್ರತ್ಯಕ್ಷಪ್ರಮಾಣವು. ಇಂದ್ರಿಯಗಳಿಗೂ ಪದಾರ್ಥಗಳಿಗೂ ಸಂಬಂಧವಾಗಿ ಅದರಿಂದುಂಟಾಗುವ ಜ್ಞಾನವು ಪ್ರತ್ಯಕ್ಷಜ್ಞಾನವು. ಎದುರಿಗಿರುವ ಕೊಡವನ್ನು ನಾವು ಕಣ್ಣಿನಿಂದ ನೋಡಿ ಇದು ಕೊಡವು ಎಂದರಿತುಕೊಳ್ಳುವುದು ಪ್ರತ್ಯಕ್ಷಜ್ಞಾನವು. ನೆರೆಮನೆಯಂತಿರುವ ಚಾವಡಿಯಲ್ಲಿ ಬಾರಿಸಿದ ಗಂಟೆಯು ಸಪ್ಪಳವನ್ನು ಕಿವಿಯಿಂದ ಕೇಳಿ ಈಗ ಇಷ್ಟು ಗಂಟೆಯಾಯಿತೆಂಬುದನ್ನು ತಿಳಿದುಕೊಳ್ಳುವುದೂ ಪ್ರತ್ಯಕ್ಷಜ್ಞಾನವು. ಇದೇಮೇರೆಗೆ ನಾಸಿಕಾದಿ ಇಂದ್ರಿಯಗಳಿಗೂ ಆ ಆ ಇಂದ್ರಿಯಗಳಿಗೆ ವಿಷಯಗಳಾದ ಪದಾರ್ಥಗಳಿಗೂ ಸಂಬಂಧವಾಗುವುದರಿಂದ ಹುಟ್ಟುವ ಅರಿವು ಪ್ರತ್ಯಕ್ಷಜ್ಞಾನವೆನ್ನಲ್ಪಡುವುದು. ಈ ಬಗೆಯಾದ ಪ್ರತ್ಯಕ್ಷಪ್ರಮಾಣ (ಇಂದ್ರಿಯ)ವೆಂಬುದೊಂದರಿಂದೇ ಸರ್ವ ವ್ಯವಹಾರಗಳ ನಿರ್ವಾಹವಾಗುವುದು; ಏಕೆಂದರೆ—ಪ್ರತ್ಯಕ್ಷಪ್ರಮಾಣವೊಂದರಮೇಲೆ ಕೈಯೂರಿದರೆ ಇಂದ್ರಿಯಕ್ಕೆ ಗೋಚರನಾಗದಿರುವ ವಿಷಯವನ್ನು ನಾವು ಅರಿಯಲಸದಳವು. ಕಳವು, ಸುಲಿಗೆ, ಕೊಲೆ ಮುಂತಾದ ಅಪರಾಧಗಳನ್ನು ಮಾಡಿದವನಿಗೆ ಶಿಕ್ಷೆ ಕೊಡುವಾಗ ನ್ಯಾಯಾಧೀಶನು ಅವರಿಂದ ಮಾಡಲ್ಪಟ್ಟ ಆ ಆ ಅಪರಾಧಗಳನ್ನು ಪ್ರತ್ಯಕ್ಷಪ್ರಮಾಣದಿಂದ ಕಂಡು ನಿರ್ಣಯಿಸುವನೋ? ಆದ್ದರಿಂದ ಪ್ರತ್ಯಕ್ಷವೆಂಬುದೊಂದೇ ಪ್ರಮಾಣವು ವ್ಯವಹಾರಕ್ಕೆ ಸಾಲದು. ಅನುಮಾನ, ಶಬ್ದ ಎಂಬಿವುಗಳ ಸಹಾಯವೂ ಬೇಕಾಗುವದು. ವಾದಿಯಾದರೂ ಅನೇಕವೇಳೆ ಅನುಮಾನದಿಂದಲೂ ವ್ಯವಹರಿಸುವ ಪ್ರಸಂಗವು ಅಡಿಗಡಿಗೊದಗುವುದೆಂಬುದನ್ನು ಹೇಳದಿರಲಾರನು. ಹಾಗೂ ಅನೇಕಸಾರೆ ತಾನು ಎರಡನೆಯವರ ಶಬ್ದದಮೇಲೆ ವಿಶ್ವಾಸವನ್ನಿರಿಸಿ ಕಾರ್ಯದಲ್ಲಿ ಪ್ರವೃತ್ತನಾಗುವುದೂ ತಪ್ಪದು. ಇಷ್ಟಾನಿಷ್ಟಜ್ಞಾನಗಳ ಹೊರತು ಇಷ್ಟದಲ್ಲಿ ಪ್ರವೃತ್ತಿಯೂ ಅನಿಷ್ಟದಲ್ಲಿ ನಿವೃತ್ತಿಯೂ ಸಮನಿಸದು. ತನಗೆ ಯಾವುದಿಷ್ಟವಾದುದೋ ಅದನ್ನುದ್ದೇಶಿಸಿಯೇ ಪ್ರವೃತ್ತನಾಗುವುದೂ ಅನಿಷ್ಟವಾದುದರತ್ತಣಿಂದ ನಿವೃತ್ತನಾಗುವುದೂ ಸರ್ವಜೀವಿಗಳ ಸ್ವಾಭಾವಿಕವ್ಯವಹಾರವು. ಸಾರಾಂಶ, ಇಷ್ಟಪ್ರವೃತ್ತಿಯೂ ಅನಿಷ್ಟನಿವೃತ್ತಿಯೂ ಎಂಬ ಕಾರ್ಯಗಳ ಮೇಲಿಂದ ಆ ವಿಷಯಗಳ ಜ್ಞಾನವಾದರೋ ಅದಕ್ಕೂ ಮೊದಲು(ಪ್ರವೃತ್ತಿನಿವೃತ್ತಿಗಳಿಗಿಂತಮುನ್ನ) ಇರಬೇಕೆಂಬುದನ್ನು ವಾದಿಯು ಒಪ್ಪದಿರಲಾರನು. ಆದರೆ ಇದನ್ನಾದರೂ ವಾದಿಯು ತಾನು ಯಾವ ಪ್ರಮಾಣದಿಂದುಸಿರುವನು? ಪ್ರವೃತ್ತಿನಿವೃತ್ತಿರೂಪವ್ಯವಹಾರಕ್ಕಿಂತ ಮುಂಚೆ ಅವಶ್ಯವಾಗಿರತಕ್ಕ ಜ್ಞಾನವು ಇಂದ್ರಿಯಗಳ ಯೋಗದಿಂದುಂಟಾಗುವುದು ಶಕ್ಯವಿದೆಯೇನು? ಇಲ್ಲ. ಆದರೂ ಆ ಜ್ಞಾನವು ಮಾತ್ರ ಉಂಟು ಎಂಬುದನ್ನಾದರೂ ಒಪ್ಪಲೇಬೇಕು. ಏಕೆಂದರೆ—ಅದಿಲ್ಲದೆ ಪ್ರವೃತ್ತಿನಿವೃತ್ತಿಗಳೆಂಬ ಕಾರ್ಯಗಳೇ ಸಂಭವಿಸವು. ಇನ್ನು ಈ ಜ್ಞಾನದ ಜ್ಞಾನವು ಯಾವ ಸಾಧನದಿಂದುಂಟಾಗುವದು! ಜ್ಞಾನವಾಗುವುದು, ಎಂಬ ಬಗ್ಗೆ ವಾದವೇ ಇಲ್ಲ; ಅದು ಹೇಗಾಗುವುದೆಂಬ ವಿಷಯದಲ್ಲಿಯೇ ವಾದವಿದೆ. ಘಟ (ಕೊಡ)ದ ಜ್ಞಾನವು ಕಣ್ಣಿನಿಂದಾಗುವುದು, ಆದರೆ 'ಘಟವು ತನಗಿಷ್ಟವಾದುದು ತಾನು ಇದನ್ನು ನೆಲವಿಕೊಂಡು ಮನೆಗೊಯ್ಯಬೇಕು' ಎಂಬ ಜ್ಞಾನವು (ಅರಿವು)ಯಾವ ಸಾಧನದಿಂದಾಗುವುದು? ಕಣ್ಣಿನಿಂದಾಗುವುದು ಎನ್ನುವದಾದರೆ, ಅದರಿಂದ ಇತರ ಇಂದ್ರಿಯಗಳಿಗೆ ಗೋಚರಿಸುವ ಶಬ್ದ ಸ್ಪರ್ಶಾದಿ ವಿಷಯಗಳು ಅನುಕೂಲವಾದುವೋ ಪ್ರತಿಕೂಲವಾದುವೋ ಎಂಬುದು ಅರಿಯಲ್ಪಡುವುದಿಲ್ಲ; ಅವು (ಶಬ್ದಾದಿಕವು) ಕಣ್ಣಿಗೆ ಕಾಣಿಸತಕ್ಕವುಗಳಲ್ಲವಷ್ಟೆ! ಅದರಿಂದ ಅವುಗಳ ಇಷ್ಟಾನಿಷ್ಟತೆಯ ನಿರ್ಣಯವು ಸಂಭವಿಸದು. ಹಾಗೂ ಪ್ರತಿಯೊಂದು ಇಂದ್ರಿಯದ ಆವಾವ ವಿಷಯವುಂಟೋ ಆಯಾ ವಸ್ತುವಿನ ಇಷ್ಟಾನಿಷ್ಟರೂಪ ಜ್ಞಾನವು ಪ್ರತಿಯೊಂದು ಪ್ರಾಣಿಗೂ ಉಂಟಾಗುವುದರಿಂದ, ಅದರ ಬಲದಿಂದೇ ಎಲ್ಲ ವ್ಯವಹಾರವೂ ಜರುಗಿಸಲ್ಪಡುವುವೆಂಬುದನ್ನು ಎಲ್ಲರೂ ಬಲ್ಲರು. ಆದ್ದರಿಂದ ಯಾವದಾದರೊಂದು ವಸ್ತುವು ಇಷ್ಟವಾದುದೋ ಅನಿಷ್ಟವಾದುದೋ ಎಂಬ ಜ್ಞಾನವು ಅಂತಃಕರಣಕ್ಕಾಗುವುದು ಅಂದರೆ ಆ ಜ್ಞಾನವು ಬಾಹ್ಯೇಂದ್ರಿಯಗಳಿಗೆ ವಿಷಯ (ಗೋಚರ) ವಾಗದಿದ್ದರೂ ಅಂತರಿಂದ್ರಿಯ (ಅಂತಃಕರಣ)ಕ್ಕೆ ವಿಷಯವಾಗುವುದೆಂದು ತಿಳಿಯತಕ್ಕದ್ದು. ಅಂತರಿಂದ್ರಿಯದಿಂದುಂಟಾಗುವ ಜ್ಞಾನವಾದರೂ ಪ್ರತ್ಯಕ್ಷವಾದುದೆಂದು ಪ್ರತ್ಯಕ್ಷ ಪ್ರಮಾಣವಾದಿಯಾದರೂ ಹೇಳಲಾರನು. ಏಕೆಂದರೆ—ಪ್ರತ್ಯಕ್ಷ ಎಂಬೀ ಶಬ್ದದ ಅರ್ಥವೇ ಪ್ರತಿಯೊಂದು 'ಇಂದ್ರಿಯಕ್ಕಾಗುವ ವಿಶೇಷಜ್ಞಾನವು' ಎಂದಿರುವುದಾದಕಾರಣ ಅಂತಃಕರಣಕ್ಕುಂಟಾಗುವ ಜ್ಞಾನವು ಘಟಾದಿಬಾಹ್ಯವಿಷಯಗಳ ಜ್ಞಾನದಂತೆ ಪ್ರತ್ಯಕ್ಷಜ್ಞಾನವಲ್ಲ. ಅದು ಅಂತರಪ್ರತ್ಯಕ್ಷವೆಂದರಿಯಲ್ಪಟ್ಟರೂ ಯಾವ ಜ್ಞಾನದ ವಿಷಯವು ಪ್ರತ್ಯಕ್ಷವಲ್ಲವೋ ಆ ಜ್ಞಾನವು ಪ್ರತ್ಯಕ್ಷವೆನಿಸದು. ಮತ್ತೇನೆಂದರೆ ಅದು ಅನುಮಾನಜ್ಞಾನವೇ.

ಇನ್ನು, 'ಪ್ರತ್ಯಕ್ಷ' ಎಂಬೀ ಪದದಲ್ಲಿ ಅಕ್ಷ (ಅಂದರೆ ಇಂದ್ರಿಯ) ವೆಂಬ ಶಬ್ದವಿದೆ. ಕೇವಲ ಪ್ರತ್ಯಕ್ಷಪ್ರಮಾಣವಾದಿಗೆ ಇಂದ್ರಿಯಗಳ ಜ್ಞಾನವೆಂತಾಗುವುದು? ಇಂದ್ರಿಯಗಳಿಂದೇ ಇಂದ್ರಿಯಗಳ ಗ್ರಹಣವು ಶಕ್ಯವಿಲ್ಲ; ಎಂದ ಮೇಲೆ 'ಇಂದ್ರಿಯಗಳಿವೆ' ಎಂದು ನುಡಿವ ಅಧಿಕಾರವಾದರೂ ವಾದಿಗಿರುವುದಿಲ್ಲ; ಒಂದು ಪಕ್ಷದಲ್ಲಿ ಅವನು 'ಪ್ರತ್ಯಕ್ಷ ಪ್ರತ್ಯಕ್ಷ' ವೆಂದು ಬಾಯಿಂದುಚ್ಚರಿಸುವನಾದರೂ ಇತರ ಜ್ಞಾನಗಳಿಗೆ ಸಾಧನಗಳಾದ ಅನುಮಾನಾದಿಗಳನ್ನು ಅಂಗೀಕರಿಸದಿದ್ದರೆ ಅವನ ತಲೆಯ ಮೇಲೆ 'ವದತೋವ್ಯಾಘಾತ' ದೋಷವೆಂಬ ಕಾಗೆಯು ಕುಳಿತುಕೊಳ್ಳದೆ ಬಿಡದು. ವ್ಯಾಘಾತವು ಅಂದರೆ ಅಸಂಬದ್ಧವಾದರ್ಥವುಳ್ಳ ವಾಕ್ಯವು. ಹೇಗೆಂದರೆ—ಯಾವಜ್ಜೀವಮಹಂ ಮೌನೀ ಬ್ರಹ್ಮಚಾರೀ ಚ ಮೇ ಪಿತಾ | ಮಾತಾ ತು ಮಮ ವನ್ಧ್ಯೈವ ಪುತ್ರಹೀನಃ ಪಿತಾಮಹಃ || ಅಂದರೆ ನಾನು ಯಾವಜ್ಜೀವವೂ ಮೌನವ್ರತಧಾರಿಯಾಗಿದ್ದೇನೆಂದು ತನ್ನ ಬಾಯಿಂದೇ ನುಡಿಯುವುದು, ನನ್ನ ತಂದೆಯು ಬಾಲಬ್ರಹ್ಮಚಾರಿಯು, ತಾಯಿ ಬಂಜೆಯು, ಅಜ್ಜ (ಮುತ್ತ)ನಾದರೋ ಪುತ್ರಹೀನನಾಗಿದ್ದನೆಂದು ಹೇಳುವುದು, ಅಸಂಬದ್ಧವಾದುದರಿಂದ ವ್ಯಾಘಾತಯುಕ್ತವಾಗಿದೆ.

ಪ್ರತ್ಯಕ್ಷಪ್ರಮಾಣವಾದಿಯು ಬೇರೊಬ್ಬ ವಾದಿಯೊಡನೆ ವಾದಿಸುವ ಪ್ರಸಂಗದಲ್ಲಿ 'ಇವನ ಮತವು ನನ್ನ ಮತಕ್ಕಿಂತ ಬೇರೆಯಾದುದು, ಇವನಿಗೆ ನನ್ನ ಹೇಳಿಕೆಯೇ ತಿಳಿಯಲೊಲ್ಲದು, ಇವನಿಗೆ ಈ ವಿಷಯದಲ್ಲಿ ಸಂಶಯವುಂಟಾಗಿದೆ' ಎಂಬುದೇ ಮೊದಲಾದ ಪ್ರತಿಪಕ್ಷಿಯಲ್ಲಿಯ ದೋಷಗಳು ಅವನಿಗೆ ಯಾವ ಇಂದ್ರಿಯಗಳಿಂದ ಅರಿಯಲ್ಪಡುವುವು? 'ಅವನ ಭಾಷಣದ ಮೇಲಿಂದ ಅವನ ಆಶಯವು ವಾದಿಗೆ ಗೊತ್ತಾಗುವದು' ಎನ್ನುವದಾದರೆ, ಭಾಷಣವನ್ನು ಕೇಳುವಿಕೆ ಎಂಬ ಕಾರ್ಯವನ್ನಷ್ಟೇ ಮಾಡತಕ್ಕ ಶ್ರೋತ್ರೇಂದ್ರಿಯಮೂಲಕವಾಗಿ ಅವನ ಆಶಯದ (ಅಭಿಪ್ರಾಯದ, ಮತದ) ಸ್ವರೂಪವು ಅರಿಯಲ್ಪಡುವದು ಅಶಕ್ಯವೇ ಸರಿ. ಆದ್ದರಿಂದ ಶಬ್ದವೆಂಬ ಲಿಂಗದಿಂದ ಅವನ ಮನದೊಳಗಿನ ಆಶಯದ ಜ್ಞಾನವು ಪ್ರತ್ಯಕ್ಷಪ್ರಮಾಣವಾದಿಗಾದರೂ ಅನುಮಾನಪ್ರಮಾಣದಿಂದೇ ಉಂಟಾಗುವುದೆಂದು ತಿಳಿಯುವದುಚಿತವು. ಅದರ ಹೊರತು 'ವಿವಾದಮಾಡುವಿಕೆ' ಎಂಬ ಅವನ ವ್ಯವಹಾರವು ಉಪಪನ್ನವಾಗದು. ಸಾರಾಂಶ—ಅನುಮಾನವೆಂಬುದಾದರೂ ಜ್ಞಾನಕ್ಕೆ ಸಾಧನವಾಗಿರುವುದರಿಂದ ಅದೂ ಪ್ರಮಾಣವೆನಿಸುವುದು.

ಅನುಮಾನಪ್ರಮಾಣದಂತೆ ಶಬ್ದವೆಂಬುದೂ ಜ್ಞಾನಕ್ಕೆ ಸಾಧನವಾಗಿದೆ. ಶಬ್ದಜನ್ಯಜ್ಞಾನದಿಂದ ಮನುಷ್ಯನ ಪ್ರವೃತ್ತಿಯಾಗುವುದೆಂಬುದು ಎಲ್ಲೆಡೆಯಲ್ಲಿ ಕಂಡುಬರುವುದು. 'ಪ್ರತಿದಿನವೂ ಶಿವಪೂಜೆ ಮಾಡು' ಎಂಬ ನುಡಿಯನ್ನು ಕೇಳಿ ಶ್ರದ್ಧಾಳು ಜನವು ನಿತ್ಯವೂ ಅದನ್ನು ಮಾಡಲು ಪ್ರವೃತ್ತವಾಗುವುದು. 'ಸುಳ್ಳನಾಡಬೇಡ' ಎಂಬ ಶ್ರೀಗುರುವಚನೋಪದೇಶವನಾಲಿಸಿದ ಶಿಷ್ಯನು ತಾನು ಎಂದೂ ಸುಳ್ಳನಾಡಲೇಬಾರದೆಂದು ನಿಶ್ಚಯಿಸುವನು. 'ಚಿಕ್ಕವರಿರುವಾಗ ವಿದ್ಯೆಯೆಂಬ ವೃಕ್ಷವನ್ನು ಹಚ್ಚಿದವರಿಗೆ ಹರೆಯದಲ್ಲಿ ಅದರ ಹಣ್ಣುಗಳು ದೊರಕುವುವು' ಎಂಬ ಆಪ್ತವಚನಶ್ರವಣದಿಂದ ಆರಂಭದಲ್ಲಿ ಕಷ್ಟದಾಯಕವಾದ ವಿದ್ಯೆಯನ್ನು ಸಂಪಾದಿಸಲು ಸಣ್ಣ ಹುಡುಗರು ಸಹ ಉದ್ಯುಕ್ತರಾಗುತ್ತಾರೆ. 'ಪರಮೇಶ್ವರನೇ ಇಲ್ಲ, ದೇಹವೇ ಆತ್ಮನು' ಎಂದು ಹೇಳುವ ಪ್ರತ್ಯಕ್ಷಪ್ರಮಾಣವಾದಿಯ ವಾಕ್ಯದಲ್ಲಿ ವಿಶ್ವಾಸವುಳ್ಳವರಾದ ಅವನ ಅಂತೇವಾಸಿಗಳು (ಶಿಷ್ಯರು) ಅನ್ಯರಿಗೂ ಅಂತೇ ಉಪದೇಶಿಸುತ್ತಾರೆ. ಅಂದರೆ ಪ್ರತ್ಯಕ್ಷಪ್ರಮಾಣವಾದಿಯ ಶಬ್ದಗಳಿಂದೇ ಅವನ ಶಿಷ್ಯರಿಗೆ ದೇಹವೇ ಆತ್ಮನೆಂಬ ಜ್ಞಾನವುಂಟಾಗುವುದು. ಮತ್ತು ಅವರಾದರೂ ಇತರರಿಗೆ ಅದನ್ನೇ ಉಪದೇಶಮಾಡತೊಡಗುವರು; ಇಷ್ಟೆಲ್ಲ ಜರುಗುತ್ತಿದ್ದರೂ ಮತ್ತೆ 'ಪ್ರತ್ಯಕ್ಷಾತಿರಿಕ್ತವಾಗಿ ಬೇರೆ ಪ್ರಮಾಣವಿಲ್ಲವೆಂದು ಗಳಹುವುದಾದರೂ 'ಮುಖಮಸ್ತೀತಿವಕ್ತವ್ಯಮ್' ಎಂಬ ನ್ಯಾಯಾನುಸಾರವಾಗಿ 'ಬಾಯಿಯಿರುವುದರಿಂದ ನುಡಿಯತಕ್ಕದ್ದು' ಎಂದಿಷ್ಟೇ ಅರ್ಥವನ್ನು ತೋರಿಸುವುದು.

ಯಾವನು ಅನುಕೂಲ ಜೀವರ ಪರಿರಕ್ಷಣೆಯನ್ನೂ ಪ್ರತಿಕೂಲ ಜೀವರ ನಿಯಮನವನ್ನೂ ಮಾಡುವನೋ ಅವನೇ ಈಶ್ವರನೆಂದು ತಿಳಿಯುವದಾದರೆ, ಓರ್ವ ಸಾಮಾನ್ಯ ಧನಾಢ್ಯನು ಸಹ ಈಶ್ವರನಾಗಬಹುದು. ಅವನಾದರೂ ತನಗೆ ಸಂಬಂಧಪಟ್ಟವರಾದ ಅನೇಕ ಜೀವರನ್ನು ಸಲಹುವನು; ಮತ್ತು ಆ ತನ್ನ ಸಂಬಂಧಿಗಳೇ ಪ್ರತಿಕೂಲರಾದರೆ ಅವರ ನಿಯಮನ (ಶಾಸನ) ವನ್ನೂ ಮಾಡುವನು. ಈ ಸಂಗತಿಯು ಅತಿವ್ಯಾಪ್ತಿಯೆಂಬ ದೋಷದೂಷಿತವಾಗಿರುವುದಲ್ಲವೆ? (ಅತಿವ್ಯಾಪ್ತಿ-ಅತಿಪ್ರಸಂಗ;) ಅತಿವ್ಯಾಪ್ತಿಯೆಂದರೆ ಅಲಕ್ಷ್ಯವೃತ್ತಿತ್ವವು; ಇದೊಂದು ಲಕ್ಷಣದ ದೋಷವು. 'ಲಿಂಗಧಾರಣವುಳ್ಳವನು ಬ್ರಾಹ್ಮಣನು' ಎಂದಿಷ್ಟೇ ಹೇಳಿದರೆ, ಲಿಂಗವನ್ನು ಧರಿಸಿರೋಣವು ಶೂದ್ರಾದಿಗಳಲ್ಲಿಯೂ ಕಂಡುಬರುವುದರಿಂದ 'ಲಿಂಗಧಾರಣತ್ವ'ವೆಂಬ ಬ್ರಾಹ್ಮಣಲಕ್ಷಣವು ಅತಿವ್ಯಾಪ್ತಿದೋಷದೂಷಿತವಾಗಿದೆ; ಎಂಬುದು ಉದಾಹರಣೆಯು. ಪ್ರತ್ಯಕ್ಷದಲ್ಲಿ ಅನುಕೂಲ ಜೀವರನ್ನು ಕಾಪಾಡುವುದೂ, ಪ್ರತಿಕೂಲ ಜೀವರನ್ನು ನಿಗ್ರಹಿಸುವುದೂ ಎಂದು ಹೇಳಲ್ಪಡುವ ಈಶ್ವರನ ಲಕ್ಷಣವು ಒಬ್ಬಾನೊಬ್ಬ ಸಿರಿವಂತನಲ್ಲಿಯೂ ಕಂಡುಬರುವುದರಿಂದ ಅವನೂ ಈಶ್ವರನೆನಿಸಬಹುದಲ್ಲವೆ? ಎಂಬ ಅತಿವ್ಯಾಪ್ತಿದೋಷಾರೋಪವಿದೆ. ಇದನ್ನು ಹೋಗಲಾಡಿಸಲು ವಾದಿಯು 'ಯಾವನು ಒಂದು ನಾಡಿಗೊಡೆಯನಾಗಿ ಆ ನಾಡಿನಲ್ಲಿರುವ ತನಗನುಕೂಲರೂ ಪ್ರತಿಕೂಲರೂ ಆದ ಜನರನ್ನು ಅನುಕ್ರಮವಾಗಿ ಸಂರಕ್ಷಣೆಯನ್ನೂ ನಿಯಮನವನ್ನೂ ಮಾಡುವನೋ ಅವನೇ ಈಶ್ವರನು, ಎಂದು ಹೇಳುವುದಾದರೂ ಸಮಂಜಸವಾದುದಲ್ಲ. ಒಂದು ದೇಶದ ಈಶ್ವರನು (ಒಡೆಯನು) ಅನಿತ್ಯನೆನಿಸುವನು. ಏಕೆಂದರೆ—ಅವನಿಗಿಂತಲೂ ಬಲಾಢ್ಯನಾದ ಬೇರೊಬ್ಬ ಅರಸನು ಅವನ ಸಮಾಚಾರ ತೆಗೆದುಕೊಳ್ಳುವನು. ಹೀಗೆ ಅನ್ಯಶತ್ರುವಿನ ಭೀತಿಯುಳ್ಳವನಾದ್ದರಿಂದ ಸಭಯನೂ, ತನ್ನ ಒಂದು ದೇಶಕ್ಕೆ ಮಾತ್ರ ರಾಜನಾದುದರಿಂದ ಮರ್ಯಾದಿತನೂ ಅಂದರೆ ಒಂದು ನಾಡಿನ ಧೊರೆಯು ಮತ್ತೊಂದು ನಾಡಿಗೆ ಬಂದರೆ ರೈತನು ಎಂಬ ಗಾದೆಗೆ ಸರಿಯಾಗಿರುವಾತನೂ ಆದ ಲೌಕಿಕ ರಾಜನೋರ್ವನು ಸರ್ವಜೀವನಿಯಾಮಕನಾದ ಈಶ್ವರನೆನಿಸನು. ಈ ಮೇಲಿನ ದೋಷಗಳನ್ನು ಪರಿಹರಿಸಲೋಸುಗ 'ಎಲ್ಲ ಭೂಮಂಡಲವನ್ನೂ ಆಳುವ ಅರಸನಲ್ಲಿ ಈಶ್ವರತ್ವವಿದೆ' ಎಂದು ಹೇಳುವುದಾದರೂ ಯುಕ್ತವಲ್ಲ; ಏಕೆಂದರೆ ಅವನಲ್ಲಿಯೂ ಈಶ್ವರತ್ವವು ವಾಸ್ತವಿಕವಾಗಿರುವುದಿಲ್ಲ; ಹಾಗೂ ಅವನ ಇಡೀ ಭೂಮಂಡಲದ ರಾಜ್ಯಾಧಿಕಾರವನ್ನಾದರೂ ಕಾಲವಶದಿಂದ ಪ್ರಜೆಗಳಲ್ಲಿ ಯಾವನಾದರೊಬ್ಬ ಬಲಾಢ್ಯನಾದ ವೀರ ಪುರುಷನಾಗಲಿ ಅಥವಾ ಈಗಿನ ವಾತಾವರಣಕ್ಕೆ ಸರಿಯಾಗಿ ರಶಿಯಾ ಜರ್ಮನಿ ರಾಷ್ಟ್ರಗಳಂತೆ ಪ್ರಜೆಗಳೇ ಕಸಿದುಕೊಳ್ಳಬಹುದೆಂಬ ಸಂಗತಿಯೂ ಅಸಂಭವನೀಯವಲ್ಲ; ಇದಲ್ಲದೆ ನೆಲಕೆಲ್ಲಕೋರ್ವನೇ ದೊರೆಯೆನಿಸುವ ಈ ಲೌಕಿಕ ಈಶ್ವರನೂ ಒಂದಿಲ್ಲೊಂದು ದಿನ ಮೃತ್ಯುವಿನಬಾಯಿಗೆ ತುತ್ತಾಗುವುದೂ ಪ್ರತ್ಯಕ್ಷ ಕಂಡುಬರುವುದು. ಅದುಕಾರಣ ಅವನಿಂದ ಮಾಡಲ್ಪಡುವ ನಿಗ್ರಹಾನುಗ್ರಹಗಳೆಂಬಿವೆಂದೂ ಮರ್ಯಾದಿತವಾದವುಗಳೆಂಬುದು ಸ್ಪಷ್ಟವೇ.

ಮತ್ತು ಯಾವನು ಅನುಕೂಲಜೀವರನ್ನು ಮಾತ್ರ ಸಲಹುವಾತನಾಗಿ ಪ್ರತಿಕೂಲಜೀವರನ್ನು ನಿಯಮನಗೊಳಿಸುವನೋ ಅವನಾದರೂ ಈಶ್ವರನಲ್ಲ, ವಸ್ತುತಃ ಅವನು ಅನೀಶ್ವರ(ಜೀವ)ನೇ. ಏಕೆಂದರೆ—ಸಾಮಾನ್ಯವಾದ ವ್ಯವಹಾರವುಳ್ಳ ಇತರ ಜೀವರಂತೆ ತಾನೂ ರಾಗದ್ವೇಷಗಳೆಂಬ ಚಿತ್ತದೋಷಗಳಿಗಧೀನನಾದವನು (ಜೀವನು) ಸ್ವತಃ ಪರಾಧೀನನಾಗಿರಲು ಸರ್ವ ನಿಯಾಮಕನಾದ ಈಶ್ವರನೆಂತಾಗುವನು? ಆದ್ದರಿಂದ 'ಕೇವಲ ರಕ್ಷಣೆ ನಿಯಮನಗಳನ್ನು ಮಾಡುವಿಕೆಯು' ಎಂದು ಹೇಳಲ್ಪಡುವ ಲಕ್ಷಣವು ದೋಷಯುಕ್ತವಾದುದು. ರಕ್ಷಣೆ ನಿಯಮನಗಳನ್ನು ಮಾಡುವಾತನೇ ಈಶ್ವರನೆಂದು ಒಂದುವೇಳೆ ತಿಳಿದರೂ ಅವನೊಬ್ಬನೇ ಅನೇಕ ಜೀವರ ಸಂರಕ್ಷಣೆಯನ್ನೂ ನಿಯಮನವನ್ನೂ ಮಾಡಲು ಹೇಗೆ ತಾನೇ ಸಮರ್ಥನಾಗುವನು? ಅನುಗ್ರಹ ಮೂಲಕ ಸಂರಕ್ಷಣೆಯನ್ನೂ ನಿಗ್ರಹಪೂರ್ವಕ ನಿಯಮನವನ್ನೂ ಮಾಡುತ್ತಾನೆಂದು ಹೇಳಬಹುದಾದರೂ ಜನ್ಮ, ಮರಣ, ಜರೆ, ವ್ಯಾಧಿಗಳನ್ನು ಪರಿಹರಿಸಲಾರದ ಇಂತಹ ಲೌಕಿಕ ಈಶ್ವರನ ಅನುಗ್ರಹವೂ ನಿಗ್ರಹವೂ ಎಂಬಿವುಗಳನ್ನು ಅರ್ಥವಿಲ್ಲದ ಶಬ್ದಗಳೆಂದೇ ಹೇಳಬೇಕಾಗುವುದು, ಇಲ್ಲವೆ ಅವುಗಳ ಅರ್ಥವು ಬಹು ಸಂಕುಚಿತವೆಂದಾದರೂ ಒಪ್ಪಬೇಕು. ಯಾವನಿಗೆ ಲೌಕಿಕ ನಿಗ್ರಹಾನುಗ್ರಹಗಳನ್ನಾದರೂ ತನ್ನ ಸಾಮರ್ಥ್ಯದಿಂದ ಮಾಡಲಾರದೆ ಅದಕ್ಕಾಗಿ ಭೃತ್ಯರೇ ಮೊದಲಾದ ಇತರರ ನೆರವನ್ನು ಅಡಿಗಡಿಗೆ ಬಯಸುವ ಹದವಿರುವದೋ ಅವನದೆಂತಹ ಈಶ್ವರನು? ಸಾರಾಂಶ—ಕೇವಲ ಪ್ರತ್ಯಕ್ಷಪ್ರಮಾಣವಾದಿಗೆ ತನ್ನ ಪ್ರಮಾಣದ ಬಗ್ಗೆಯೂ ಈಶ್ವರಸ್ವರೂಪ ವಿಷಯದಲ್ಲಿಯೂ ನಿರ್ದೋಷವಾಗಿ ಏನೂ ಹೇಳಲಿಕ್ಕೆ ಬರುವದಿಲ್ಲವೆಂದು ಸಿದ್ಧವಾಗುವದು.

ಸೃಷ್ಟಪದಾರ್ಥಗಳ ಧರ್ಮಗಳನ್ನನುಲಕ್ಷಿಸಿ ಹಾಗೆ ವರ್ತಿಸಿದರಾಯಿತು, ಈಶ್ವರನ ಅಸ್ತಿತ್ವವನ್ನಂಗೀಕರಿಸದಿರುವದರಿಂದ ಹಾನಿಯೇನು; ನಿಸರ್ಗಕ್ಕಿಂತಲೂ ಬೇರೆ ಈಶ್ವರನಿರುವನೇ? ಎಂಬಾಕ್ಷೇಪದ ಸಮಾಧಾನವು ಹೇಗೆಂದರೆ—ಸೃಷ್ಟಪದಾರ್ಥಗಳ ಧರ್ಮಗಳನ್ನನುಸರಿಯೇ ಪಶು, ಪಕ್ಷಿ, ಕೀಟ, ಪತಂಗ ಮೊದಲಾದ ಭೂಲೋಕದೊಳಗಿರತಕ್ಕ ಮನುಷ್ಯೇತರ ಪ್ರಾಣಿಗಳಾದರೂ ವರ್ತಿಸುತ್ತಿರುವುವು. ಅವುಗಳಿಗೆ ಈಶ್ವರನ ಅಸ್ತಿತ್ವದ ಪ್ರಜ್ಞೆಯೇ ಇರುವದಿಲ್ಲ. ಅದರಿಂದ ಅವುಗಳಿಗೆ ಯಾವಹಾನಿಯುಂಟು? ಆ ಪ್ರಾಣಿಗಳೂ ತಿನ್ನುವವು, ಕುಡಿಯುವವು, ನಿದ್ರೆಮಾಡುವವು, ಸಾಯುವತನಕ ತಮಗಿಂತ ಬಲಿಷ್ಠವಾದ ಪ್ರಾಣಿಗಳಿಗೆ ಭಯಪಡುತ್ತವೆ. ಅವುಗಳಿಗೂ ಚೌಕಲಿಗಿಂತ ಹೆಚ್ಚಾಗಿ ಸಂತತಿಯುರುವದು, ಅವಾದರೂ ಶರೀರ ಸಂಬಂಧಮೂಲಕವಾಗಿ ಪೂರ್ವಕರ್ಮಾನುಸಾರ ಸಂಭವಿಸಿದ ಸುಖದುಃಖಗಳನ್ನು ಭೋಗಿಸುತ್ತವೆ. ಜನ್ಮ, ಬಾಲ್ಯ, ತಾರುಣ್ಯ, ಜರೆ, ಮರಣ, ಜಾಗೃತಿ, ಸ್ವಪ್ನ, ಸುಷುಪ್ತಿ ಮೊದಲಾದ ಭಾವವಿಕಾರಗಳನ್ನೂ ಅವಸ್ಥೆಗಳನ್ನೂ ಅನುಭವಿಸುತ್ತವೆ. ಕರ್ಮದಿಂದೊದಗಿದ ಆಯುಷ್ಯವಿರುವತನಕ ಜೀವಿಸಿ ಕಡೆಗೊಮ್ಮೆ ಸಾಯುವವು. ಅವುಗಳಂತೆ ಮನುಷ್ಯನಾದರೂ ಆ ಸರ್ವ ವ್ಯವಹಾರಗಳನ್ನು ನಿರ್ವಿಘ್ನವಾಗಿ ನೆರವೇರಿಸುವನು. ಯಾವ ಜೀವನಾದರೂ ಜನ್ಮವನ್ನೆತ್ತುವದಕ್ಕಿಂತ ಮುಂಚೆ ಅವನ ಈ ಸರ್ವ ವ್ಯವಹಾರಕ್ಕೆ ಕಾರಣವಾದುದು ನಿಶ್ಚಿತವಾಗಿರುತ್ತದೆ. ಆದ್ದರಿಂದ ವ್ಯವಹಾರದಲ್ಲಿ ಪೂರ್ವ ನಿಶ್ಚಿತದಂತೇ ಸರ್ವವೂ ಘಟಿಸುವದು. ಆದರೆ, ಮನುಷ್ಯನು ಅನ್ಯಪ್ರಾಣಿಗಳಿಗಿಂತ ಪೃಥಕ್ಕಾಗಿರುವನು. ಅವನ ಆತ್ಮನು ಅಧಿಕವಾಗಿ ಆವಿರ್ಭೂತನಾಗಿರುತ್ತಾನೆ. ಈ ವಿಷಯದಲ್ಲಿ ನಮ್ಮ ಪುರಾತನ ಋಷಿಗಳು ಹೀಗೆ ಹೇಳುತ್ತಾರೆ. ಐತರೇಯಾರಣ್ಯಕದಲ್ಲಿ (೩-೩-೧೪) 'ಪುರುಷೇ ತ್ವೇವಾವಿಸ್ತರಾಮಾತ್ಮಾ ಸಹಿ ಪ್ರಜ್ಞಾನೇನ ಸಂಪನ್ನತಮೋ ವಿಜ್ಞಾತಂ ವದತಿ ವಿಜ್ಞಾತಂ ಪಶ್ಯತಿ ವೇದ ಶ್ವಸ್ತನಂ ವೇದ ಲೋಕಾಲೋಕೌ ಮರ್ತ್ಯೇನಾಮೃತಮೀಪ್ಸತ್ಯೇವಂ ಸಂಪನ್ನಃ' ಮನುಷ್ಯ, ಪಶು, ಪಕ್ಷಿ ಮೊದಲಾದವುಗಳೆಲ್ಲವೂ ಪ್ರಾಣಿಗಳೆನಿಸಿಕೊಳ್ಳುತ್ತವೆ; ಆದರೆ ಅವುಗಳಲ್ಲಿ ಮನುಷ್ಯಪ್ರಾಣಿಯಲ್ಲಿಯೇ ಆತ್ಮನ ಆವಿರ್ಭಾವವು ಅತಿಶಯವಾಗಿರುವುದು. ಪಶುಮುಂತಾದ ಪ್ರಾಣಿಗಳಲ್ಲಾದರೋ ಹಾಗೆ ಆತ್ಮಾವಿರ್ಭಾವವಿರುವದಿಲ್ಲ. ಅದೇಕೆ? ಎಂದರೆ, ಮನುಷ್ಯನು ಪ್ರಕೃಷ್ಟಜ್ಞಾನಸಂಪನ್ನನಾಗಿರುವನು. ಅದು ಹೇಗೆ? ಎಂದರೆ, ಕಳೆದುಹೋದ ದಿವಸಗಳಲ್ಲಿ ಅರಿಯಲ್ಪಟ್ಟ ವಸ್ತುವನ್ನು ಈ ದಿವಸ ನೆನಪುಮಾಡಿಕೊಂಡು 'ನನಗೆ ಅದು ಗೊತ್ತಿದೆ' ಎಂದು ಅನ್ಯರಿಗೆ ಹೇಳುತ್ತಾನೆ. ಎಷ್ಟೋ ದಿವಸಗಳ ಹಿಂದೆ ಒಂದೆಡೆಯಲ್ಲಿ ಕಾಣಿಸಿದುದನ್ನು ಈ ದಿವಸ ಸ್ಮರಿಸಿ ಆ ಸ್ಥಳಕ್ಕೆ ಹೋಗಿ ಅದನ್ನು ಮತ್ತೆ ಗುರುತಿಸುವನು. ಪಶ್ವಾದಿಗಳು ಗುರುತಿಸುವದರಲ್ಲಿಯೂ, ಸ್ಮರಿಸುವದರಲ್ಲಿಯೂ ಸಮರ್ಥವಾಗಿರುವವಾದರೂ, ಅವುಗಳಿಗೆ ವಿಶೇಷವಿವೇಕವಿಲ್ಲದ್ದರಿಂದ ಪ್ರತಿಯೊಂದು ವಸ್ತುವಿನ ಪೂರ್ಣವಾದ ಜ್ಞಾನವುಂಟಾಗುವದಿಲ್ಲ. ಮನುಷ್ಯನು ಹಿಂದಿನಕಾಲದಲ್ಲಿ ನಡೆದ ಸಂಗತಿಯನ್ನು ಹೇಳಲು ಶಕ್ತನಾಗಿರುವಂತೆ ತನ್ನ ಮುಂದಿನ ಕರ್ತವ್ಯವನ್ನೂ ತಿಳಿಯಲು ಸಮರ್ಥನಾಗಿರುತ್ತಾನೆ. ಇಷ್ಟೇ ಅಲ್ಲ, ಶಾಸ್ತ್ರಗಳ ಪಠನಶ್ರವಣಮೂಲಕವಾಗಿ ಹೇಯೋಪಾದೇಯವಿಷಯಗಳನ್ನೂ ಅರಿತು ನಿತ್ಯಾನಿತ್ಯವಿವೇಕಬಲದಿಂದ ಅನಿತ್ಯ (ನಶ್ವರ)ವಾದುದನ್ನು ಅಪೇಕ್ಷಿಸದೆ ನಿತ್ಯ (ಶಾಶ್ವತ)ವಾದುದನ್ನೇ ಪಡೆಯಲಿಚ್ಛಿಸುತ್ತಾನೆ.

(ಸಶೇಷ).

ಶ್ರೀಮಜ್ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ದೀಕ್ಷಾಸಮಾರಂಭ.

ಅರಸೀಕೆರೆ ತಾಲೂಕು ಕಣಕಟ್ಟೆ ಹೋಬಳಿ ನಾಗವೇದಿಗ್ರಾಮದಲ್ಲಿ ಶ್ರೀ ನೃಪಶಾಲಿವಾಹನಶಕ 1855 ನೇ ಅಂಗಿರಸನಾಮ ಸಂ|| ಮಾಘ ಶುದ್ಧ ೭ ಬುಧವಾರ ಸೂರ್ಯೋದಯಾದಿ ೯ ಗಂಟೆಗೆ ಸಲ್ಲುವ ಮೀನಲಗ್ನದಲ್ಲಿ ಶ್ರೀ ತುಂಬಾಪುರದ ಚೆನ್ನಬಸವಸ್ವಾಮಿ ಶಿವಾಚಾರ್ಯಸ್ವಾಮಿಗಳವರ ಶಿವಾಲಯ ಪ್ರತಿಷ್ಠಾಪ್ರವೇಶ ಸಮಯದಲ್ಲಿ ಮಾಹೇಶ್ವರ ವಟುಗಳಿಗೂ ಶಿಷ್ಯವರ್ಗದವರಿಗೂ ದೀಕ್ಷಾಸಂಸ್ಕಾರವು ಮತ್ತು ಗುರೂಪದೇಶವೂ ಶಾಸ್ತ್ರೋಕ್ತವಾಗಿ ಪಂಚಕಲಶಸ್ಥಾಪನಪೂರ್ವಕ ಅತಿವೈಭವದಿಂದ ನೆರವೇರಿಸಲ್ಪಟ್ಟಿತು.

ಕಾರ್ಯದರ್ಶಿಗಳಾದ ತುಂಬಾಪುರದ ಶ್ರೀಸಾತಂಗೆರೆ ಚರಪಟ್ಟಾಧ್ಯಕ್ಷ ಮರುಲಸಿದ್ಧಸ್ವಾಮಿಗಳವರು ಮತ್ತು ನಾಗವೇದಿ ವೇ|| ವೀರಸಂಗಯ್ಯನವರು ಸಹ ಕೇವಲ ಆಸ್ತಿಕ್ಯಬುದ್ಧಿಯಿಂದಲೂ ಧರ್ಮಬುದ್ಧಿಯಿಂದಲೂ ಈ ಗ್ರಾಮಸ್ಥರ ಸಹಾಯದಿಂದ ಯಾವ ನ್ಯೂನತೆಯೂ ಇಲ್ಲದಂತೆ ನೆರವೇರಿಸಿದ್ದಕ್ಕಾಗಿ ಇವರನ್ನು ಅಭಿನಂದಿಸುತ್ತೇನೆ.

ಈ ಮಹತ್ಕಾರ್ಯಕ್ಕೆ ಹೊನ್ನವಳ್ಳಿ, ಬಿಳುವನೇರಲು, ಹಲ್ಕೂರು ಮಾದಿಹಳ್ಳಿ, ಈ ಗ್ರಾಮಗಳ ಪಟ್ಟಚರಮೂರ್ತಿಗಳು ಮತ್ತು ಹಲ್ಕೂರು ಗ್ರಾಮದ ಸಾಹುಕಾರ್ ಮ|| ರಾ|| ಪರಮೇಶ್ವರಶೆಟ್ಟರು, ಪಟೇಲ್ ಮ|| ರಾ|| ರಂಗೇಗೌಡರು, ಮ|| ರಾ|| ಸಣ್ಣರಂಗೇಗೌಡರಮಕ್ಕಳು ಕಾರ್ಯದರ್ಶಿ ಮಲ್ಲಪ್ಪಗೌಡರು, ರಾಂಪುರದ ವೇ|| ಜಿ. ಕೆ. ಸಿದ್ಧಲಿಂಗಾರ್ಯರು, ಬರಗೇಹಳ್ಳಿ ವೇ|| ರುದ್ರಪ್ಪಶಾಸ್ತ್ರಿಗಳು, ಸಿದುವಳ್ಳಿಮಠದ ವೇ|| ಬಸವಪ್ಪದೇವರು, ಸಾರ್ಥವಳ್ಳಿ ವೇ|| ಚನ್ನಬಸವಯ್ಯನವರು, ತಿಪ್ಪನಕೆರೆ ಮಠದ ಪಟೇಲ್ ಗಂಗಯ್ಯನವರು, ಸಿದುವಳ್ಳಿ ಮಠದ ವೇ|| ಮರುಳಯ್ಯನವರು, ತುಂಬಾಪುರದ ಮ|| ರಾ|| ಸಿದ್ಧಲಿಂಗಪ್ಪನವರು, ಶೆಟ್ಟಿಕೆರೆ ಯಜಮಾನ್ ಮ|| ರಾ|| ಬಸಪ್ಪಶೆಟ್ಟರು, ಮತ್ತು ಹಲ್ಕೂರು ಸಾಹುಕಾರ್ ಮ|| ರಾ|| ಸಿದ್ಧರಾಮಪ್ಪಶೆಟ್ಟರು, ಇವರೇ ಮೊದಲಾದವರು ಭಾಗಿಗಳಾಗಿದ್ದರು.

ಈ ಮಧ್ಯದಲ್ಲಿ ಹಲ್ಕೂರು ಸಾಹುಕಾರ ಮ|| ರಾ|| ಪರಮೇಶ್ವರಪ್ಪಶೆಟ್ಟರವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಕಾರ್ಯದರ್ಶಿಗಳಾದ ಶ್ರೀ ಸಾತಂಗೆರೆ ಚರಪಟ್ಟಾಧ್ಯಕ್ಷ ಮರುಲಸಿದ್ಧಶಿವಾಚಾರ್ಯಸ್ವಾಮಿಗಳವರು ಪಂಚಾಚಾರ್ಯರ ಉತ್ಪತ್ತಿ, ವೀರಶೈವಮತಸ್ಥಾಪನಾಚಾರ್ಯರು ಅನೇಕ ಋಷಿಗಳನ್ನು ಉದ್ಧರಿಸಿ ಕೃತಾರ್ಥರನ್ನಾಗಿ ಮಾಡಿದ ವಿಚಾರವಾಗಿ ಭಾಷಣಮಾಡಿದರು. ಅನಂತರ ರಾಮಪುರದ ವೇ|| ಜಿ. ಕೆ. ಸಿದ್ಧಲಿಂಗಾರ್ಯರು ಸನ್ಯಾಸಿಗಳ ಕರ್ತವ್ಯ ಮತ್ತು ವಿರಕ್ತಪದದ ಅರ್ಥ ಇವುಗಳ ಮೇಲೆ ಭಾಷಣಮಾಡಿದರು. ಬಳಿಕ ಸಾರ್ಥವಳ್ಳಿ ವೇ|| ಚನ್ನಬಸವಯ್ಯನವರು ಗುರುಮಹಿಮೆಯ ಮೇಲೆ ಭಾಷಣ ಮಾಡಿದರು. ಇದಾದ ಮೇಲೆ ಅಧ್ಯಕ್ಷರು ಪಟೇಲ್ ರಂಗೇಗೌಡರು, ಕಾರ್ಯದರ್ಶಿಮಲ್ಲಪ್ಪಗೌಡರು, ವೇ|| ಜಿ. ಕೆ. ಸಿದ್ಧಲಿಂಗಾರ್ಯರು, ಒಂದು ಧರ್ಮಫಂಡನ್ನು ಸ್ಥಾಪಿಸಬೇಕೆಂದೂ, ಈ ಮಹತ್ಕಾರ್ಯದಲ್ಲಿ ದೇಶದ ಕಾಣಿಕಾ ರೂಪದಲ್ಲಿ ವಸೂಲಾದ ನಲವತ್ತೈದು ರೂಪಾಯಿಗಳಲ್ಲಿ ನಲವತ್ತು ರೂಪಾಯಿಗಳನ್ನು ಸದರಿ ಫಂಡಿಗೆ ಮೂಲಧನವನ್ನಾಗಿ ಕೊಡಬೇಕೆಂತಲೂ ಉಳಿದ ಐದು ರೂಪಾಯಿಗಳನ್ನು ವೀರಶೈವಮತದ ಉದ್ಧಾರಕ್ಕಾಗಿ ಅವತರಿಸಿರುವ ಶ್ರೀ ಪಂಚಾಚಾರ್ಯಪ್ರಭಾಪತ್ರಿಕೆಯ ಪೋಷಣಕ್ಕಾಗಿ ಕಳುಹಿಸಬೇಕೆಂತಲೂ ಸೂಚಿಸಿದರು. ಆ ಪ್ರಕಾರ, ಮೇಲ್ಕಂಡ ನಲವತ್ತು ರೂಪಾಯಿಗಳನ್ನು ಅಧ್ಯಕ್ಷರಾದ ಮ|| ರಾ|| ಸಾಹುಕಾರ ಪರಮೇಶ್ವರಪ್ಪನವರಲ್ಲಿ ಶೇ|| ವರ್ಷ ೧ ಕ್ಕೆ ಆರು ರೂಪಾಯಿ ಬಡ್ಡಿ ನಿಷ್ಕರ್ಷೆಯಿಂದ ಡಿಪಾಜಿಟ್ಟು ಇಡಲ್ಪಟ್ಟಿತು. ಅಲ್ಲದೆ ಉಳಿದ ಐದು ರೂಪಾಯಿಗಳು ಪಂಚಾಚಾರ್ಯಪ್ರಭಾ ಆಫೀಸಿಗೆ ಕಳುಹಿಸಲು ವೇ|| ಜಿ. ಕೆ. ಸಿದ್ಧಲಿಂಗಾರ್ಯರ ವಶಕ್ಕೆ ಕೊಡಲ್ಪಟ್ಟವು. ಇದಲ್ಲದೆ ಮುಂದೆ ಇಂಥ ಕಾರ್ಯಗಳಲ್ಲಿ ಮಹಾಂತ ಕಾಣಿಕೆಗೆಂದು ತೆಗೆಯುವ ಮೊಬಲಗನ್ನು ಈ ಧರ್ಮ ಫಂಡಿಗೆ ಸೇರಿಸಿಕೊಳ್ಳುವುದಾಗಿ ಮೇಲ್ಕಂಡ ಶ್ರೀಚರಪಟ್ಟಾಧಿಕಾರಿಗಳು ತಮ್ಮ ದಿವ್ಯವಾಣಿಯಿಂದ ಅಪ್ಪಣೆಕೊಡಿಸಿರುತ್ತಾರೆ. ಇದರ ಮೇಲ್ಪಂಕ್ತಿಯನ್ನೇ ಸರ್ವರೂ ಅನುವರ್ತಿಸುತ್ತಾರೆಂಬುದಾಗಿ ಆ ರೇಣುಕ ಭಗವತ್ಪಾದರನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ. ಈ ನಾಗವೇದಿ ಗ್ರಾಮದ ಮ|| ರಾ|| ಪಟೇಲ್ ರಂಗೇಗೌಡರು, ಸಿದ್ಧರಾಮೇಗೌಡರ ಮಕ್ಕಳು ಮ|| ರಾ|| ಚನ್ನಬಸವೇಗೌಡರು, ಮೇಗಳಮನೆ ಮ|| ರಾ|| ಬೀರಪ್ಪಗೌಡರು, ದಲ್ಲಾಳಿ ಮರುಳೇಗೌಡರು ಮುದ್ದೇಗೌಡರ ಮಕ್ಕಳು ನಂಜೇಗೌಡರು, ಚನ್ನರಾಯ ಚನ್ನಬಸವೇಗೌಡರು, ಸ್ಕೂಲ್‌ಮಾಸ್ಟರು ಕಲ್ಲಯ್ಯನವರು, ಬಿ. ಕೆ. ನಂಜುಂಡಯ್ಯನವರು ಸಹ ಕೇವಲ ಭಕ್ತಿಯಿಂದಲೂ ಶಾಂತತೆಯಿಂದಲೂ ಈ ಗುರುಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಶ್ರೀ ಜಗದ್ಗುರು ಭಗವತ್ಪಾದರವರು ಇವರುಗಳಿಗೆ ಸಮಸ್ತಸನ್ಮಂಗಲಗಳನ್ನೀಯಲೆಂದು ಹಾರೈಸುತ್ತೇನೆ.

ಆಚಾರ್ಯಸೇವಾಸಕ್ತ,
ಕಾರ್ಯದರ್ಶಿ ಸಂ|| ಮಲ್ಲಪ್ಪಗೌಡ, ಹಲ್ಕೂರು.

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವ

ಮಹಾಶಿವರಾತ್ರಿ

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಒಳದೇಶದ ವೃತ್ತಾಂತಗಳು.

ದೆಹಲಿಗೆ ದಯಮಾಡಿಸಿದ್ದ ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ರಾಜಧಾನಿಗೆ ಆಗಮಿಸಿ ಶ್ರೀಮನ್ಮಹಾರಾಜರವರನ್ನು ಸಂದರ್ಶಿಸಿ ಮಂಗಳವಾರ ಮಧ್ಯಾಹ್ನ ಪುನಃ ಬೆಂಗಳೂರಿಗೆ ಪ್ರಯಾಣಮಾಡಿದರು.

ಮೈಸೂರು ಹೈಕೋರ್ಟಿನ ಮಾಜಿ ಚೀಫ್ ಜಡ್ಜರಾದ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಕೆ. ಎಸ್. ಚಂದ್ರಶೇಖರ ಅಯ್ಯರ್‌ರವರು ಬೆಂಗಳೂರು ಸಿಟಿ ಬಸವನಗುಡಿ ಬಡಾವಣೆಯಲ್ಲಿ ಒಂದು ಉದ್ಯಾನವನವನ್ನು ನಿರ್ಮಿಸುವದಕ್ಕೋಸ್ಕರ 5,000 ರೂಪಾಯಿಗಳನ್ನು ದಯಪಾಲಿಸಿರುತ್ತಾರೆ.

ಇದೇ ಫೆಬ್ರವರಿ 8 ನೇ ತಾರೀಖಿನ ದಿವಸ ಶಿವಮೊಗ್ಗಾ ಇಂಡಸ್ಟ್ರಿಯಲ್ ವರ್ಕಷಾಪಿನ ಕಾಂಪೌಂಡಿನಲ್ಲಿ ಮೈಸೂರಿನ ಪೈಲ್ವಾನ್ ಕೊಪ್ಪಲು ಬಸವಯ್ಯನಿಗೂ, ಪಂಜಾಬಿನ ಪೈಲ್ವಾನ್ ಉಮ್ಮದ್ದೀನನಿಗೂ ಅದ್ಭುತವಾದ ಕುಸ್ತಿಯು ನಡೆದು ಅದರಲ್ಲಿ ಮೈಸೂರಿನ ಬಸವಯ್ಯನೇ ಜಯಶಾಲಿಯಾದನು.

ಶ್ರೀರಂಗಪಟ್ಟಣದ ಗಂಗಾಧರೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಳೆದವಾರ ಸುಮಾರು 800 ರೂಪಾಯಿ ಬೆಲೆಬಾಳುವ ಆಭರಣಾದಿಗಳು ಕಳವುಮಾಡಲ್ಪಟ್ಟಿರುವವು. ಈ ಸಂಬಂಧವಾಗಿ ಅಮಲ್ದಾರ್ರವರು ಅರ್ಚಕರೇ ಮೊದಲಾದ ದೇವಸ್ಥಾನದ ನೌಕರರ ಹೇಳಿಕೆಗಳನ್ನು ತೆಗೆದುಕೊಂಡು ಪತ್ತೆಕರದೂದು ನಡೆಯಿಸುತ್ತಿರುವರು.

ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕೋಸ್ಕರ ಕಟ್ಟಲ್ಪಡುತ್ತಿದ್ದ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳೆಲ್ಲವೂ ಸಂಪೂರ್ಣವಾಗಿರುವವೆಂದೂ, ಈ ಜಲಾಶಯದಿಂದ ನೀರನ್ನು ಬಿಡುವ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಈ ತಿಂಗಳ ಅಂತ್ಯದಲ್ಲಿ ನೆರವೇರಿಸುವರೆಂದೂ ವದಂತಿಯಿದೆ.

ಶ್ರೀ ಮುಡುಕುತೊರೆ ಕ್ಷೇತ್ರದಲ್ಲಿ ಸ್ಥಾಪಿತವಾದ ಶ್ರೀ ವೀರಶೈವಮತಸಂವರ್ಧನೀಸಭೆಯು ಪದ್ಧತಿಪ್ರಕಾರ ಮೂರುದಿವಸಗಳು ನಡೆದು 9 ನೆಯ ತಾರೀಖಿನ ದಿವಸ ಸಾಯಂಕಾಲ ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರಾದ ಶ್ರೀ|| ಬಿ. ಎಸ್. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಬಹುಮಾನಸಭೆಯಲ್ಲಿ ಮತಸಂಬಂಧವಾದ ಉಪನ್ಯಾಸಗಳು ಜರುಗಿ ಬಹುಮಾನವಿನಿಯೋಗವು ನಡೆಸಲ್ಪಟ್ಟಿತು.

ಇದೇ ಫೆಬ್ರವರಿ 8 ನೆಯ ತಾರೀಖಿನ ದಿವಸ ಬೆಂಗಳೂರು ಕೆಂಪಾಂಬುಧಿಕೆರೆಯ ಸಮೀಪದಲ್ಲಿ ಮದ್ದುಗುಂಡುಗಳನ್ನು ತಯಾರಿಸುತ್ತಿದ್ದ ಒಂದು ಗುಡಸಲಿಗೆ ಅಕಸ್ಮಾತ್ ಬೆಂಕಿಬಿದ್ದು ಅಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಕೂಲಿಯವನಿಗೆ ತುಂಬಾಗಾಯಗಳಾಗಿವೆಯೆಂದೂ, ಪೋಲೀಸರು ಕೂಡಲೇ ಅಲ್ಲಿಗೆ ಹೋಗಿ ಗಾಯಹೊಂದಿದವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರೆಂದೂ ತಿಳಿದುಬಂದಿದೆ.

ಬೆಂಗಳೂರುಸಿಟಿ ಮುನಿಸಿಪಾಲಿಟಿಯವರು ನಗರದ ರಸ್ತೆಗಳಿಗೆ ಟಾರು ಹಾಕಿಸುವದು, ನೀರಿನ ಸೌಕರ್ಯವನ್ನು ಹೆಚ್ಚಿಸುವುದು, ನೀರಿನ ಮೀಟರುಗಳನ್ನು ಕೊಂಡುಕೊಳ್ಳುವುದು, ಜಮೀನುಗಳನ್ನು ಕೊಂಡುಕೊಂಡು ಬಡಾವಣೆಗಳನ್ನು ಹೆಚ್ಚಿಸುವದು, ಇವೇ ಮೊದಲಾದ ಕಾರ್ಯಗಳಿಗಾಗಿ ಶೇಕಡಾ 5½ ರೂಪಾಯಿಗಳ ಬಡ್ಡಿಯ ಮೇರೆಗೆ 10 ಲಕ್ಷ ರೂಪಾಯಿಗಳನ್ನು ಸಾಲಮಾಡುವರೆಂದು ತಿಳಿದುಬಂದಿದೆ.

ಕಳೆದ ಫೆಬ್ರವರಿ 4 ನೆಯ ತಾರೀಖಿನ ದಿವಸ ರಾಜಧಾನಿಯ ಡಿ. ಸುಬ್ಬಯ್ಯನವರ ರಸ್ತೆಯಲ್ಲಿ ಬಟ್ಟೆಗಳನ್ನು ಕದ್ದುಕೊಂಡು ಹೋಗುತ್ತಿದ್ದ ಲಿಂಗ ಉರುಫ್ ಚಿನ್ನನೆಂಬ ಹಳೇ ಕಳ್ಳನನ್ನು ಪೋಲೀಸರು ದಸ್ತಗಿರಿಮಾಡಿ ಮೊಕದ್ದಮೆ ಮಾಡಿದರು. ಸಿಟಿ ಮ್ಯಾಜಿಸ್ಟ್ರೇಟರವರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ ಆರು ತಿಂಗಳ ಕಠಿಣಸಜೆಯನ್ನು ವಿಧಿಸಿದರು. ಈ ಮೊದಲು ಇವನು ಆರುಸಾರೆ ಶಿಕ್ಷೆಯನ್ನನುಭವಿಸಿರುವನಂತೆ!

ಈ ತಿಂಗಳು 9 ನೆಯ ತಾರೀಖಿನ ದಿವಸ ರಾಜಧಾನಿಯಲ್ಲಿ ವಾಸವಾಗಿದ್ದ 20 ವರ್ಷ ವಯಸ್ಸಿನ ಕಮಲಮ್ಮನೆಂಬ ವೇಶ್ಯೆಯೂ, 20 ವರ್ಷ ವಯಸ್ಸಿನ ಪುಟ್ಟರುದ್ರಪ್ಪನೆಂಬ ಲಿಂಗಾಯತ ಹುಡುಗನೂ ಚಾಮುಂಡಿಬೆಟ್ಟದ ಪ್ರದೇಶಕ್ಕೆ ಹೋಗಿ ಉಭಯರೂ ಏಕಕಾಲದಲ್ಲಿಯೇ ನೇಣಿನಿಂದ ಮೃತಪಟ್ಟಿರುತ್ತಾರೆ. ಈ ವಿಷಯವನ್ನು ಪೋಲೀಸರು ಕೂಲಂಕಷವಾಗಿ ಶೋಧಿಸುತ್ತಿದ್ದಾರೆಂದು ತಿಳಿದುಬರುತ್ತದೆ. ಈ ವೇಶ್ಯೆಯು ಅರಮನೆಯ ಗಾಯಕಿಯಾಗಿದ್ದಳಂತೆ! ಹುಡುಗನು ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ತರಗತಿಯಲ್ಲಿ ಓದುತ್ತಿದ್ದನಂತೆ!

ಸರಕಾರದವರು ವಿದ್ಯುಚ್ಛಕ್ತಿ ಇಲಾಖೆಯ ಆಡಳಿತದ ವರದಿಯನ್ನು ವಿಮರ್ಶಿಸಿ, ಕಳೆದ ವರ್ಷ ಆ ಇಲಾಖೆಯಿಂದ 50,33,479 ರೂಪಾಯಿಗಳ ವರಮಾನವು ಬಂದಿತೆಂದೂ, ಸರಕಾರೀ ಕಟ್ಟಡಗಳಿಗೆ ಒದಗಿಸಿದ ಕರೆಂಟಿಗಾಗಿ ಇನ್ನೂ 43,045 ರೂಪಾಯಿಗಳು ಬರಬೇಕಾಗಿರುವವೆಂದೂ, ಗೆರಸೊಪ್ಪ ಜಲಪಾತದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುವ ಬಗ್ಗೆ ಸೀತಾಕಟ್ಟೆಯಬಳಿ ಮುಂಬಯಿ ಸರಕಾರದವರ ಸಹಾಯದಿಂದ ಒಂದು ಅಣೆಯನ್ನು ನಿರ್ಮಿಸಿ ನೀರಿನ ವೇಗವನ್ನು ಪರೀಕ್ಷಿಸಲಾಗುತ್ತಿರುವದೆಂದೂ, ಕಳೆದ ವರ್ಷ 6,43,437 ರೂ.ಗಳು ಬೆಲೆಬಾಳುವ ಪರದೇಶೀವಸ್ತುಗಳನ್ನೂ, 3,83,847 ರೂಪಾಯಿಗಳು ಬೆಲೆಬಾಳುವ ಸ್ವದೇಶೀವಸ್ತುಗಳನ್ನೂ ಕೊಂಡುಕೊಳ್ಳಲಾಯಿತೆಂದೂ, ಒಟ್ಟಿನಲ್ಲಿ ಈ ಶಾಖೆಯ ಆಡಳಿತವು ತೃಪ್ತಿಕರವಾಗಿರುವದೆಂದೂ ಪ್ರಕಟಿಸಿರುತ್ತಾರೆ.

ವರ್ತಮಾನಸಂಗ್ರಹ

ಪ್ರೆಂಚ್ ಸರಕಾರದವರು ತಮ್ಮ ದೇಶದ ಎಲ್ಲೆಕಟ್ಟಿನಲ್ಲಿ ಸೈನ್ಯವನ್ನು ಹೆಚ್ಚಿಸುತ್ತಿರುವರು. ಎಲ್ಲೆಲ್ಲಿಯೂ ಮತ್ತೊಂದು ಯುದ್ಧದ ವಾರ್ತೆಯು ಹಬ್ಬುತ್ತಿರುವದೇ ಇದಕ್ಕೆ ಕಾರಣವಂತೆ!

ಲೇಡಿ ವಿಲಿಂಗ್‌ಡನ್‌ರವರ ಪ್ರೋತ್ಸಾಹದಿಂದ ದೇಹಲಿನಗರದಲ್ಲಿ ಒಂದು ಉಚ್ಚತರದ ವಿಹಾರಭವನವು ಕಟ್ಟಲ್ಪಡುತ್ತಿರುವದು. 4 ಅಂತಸ್ತುಗಳುಳ್ಳ ಈ ಭವ್ಯವಾದ ಹೋಟಲು 400 ಜನರ ವಾಸಕ್ಕೆ ಸಾಕಾದಷ್ಟು ದೊಡ್ಡದಾಗಿರುವದಂತೆ!

ಶೇಕ್‌ಪುರದ ಒಬ್ಬ ಮುಸಲ್ಮಾನ್ ಸ್ತ್ರೀಯಳು ತನ್ನ ಗಂಡನಮೇಲಿನ ದ್ವೇಷವನ್ನು ತೀರಿಸಿಕೊಳ್ಳುವದಕ್ಕಾಗಿ ತನ್ನ ಪುಟ್ಟಮಗನನ್ನೇ ಕೊಂದಳಂತೆ! ಪೋಲೀಸರು ಈಗ ಆಕೆಯನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುವರು. ಇವಳಲ್ಲವೇ ನರರಾಕ್ಷಸಿಯು?

ಪಾಟಿಯಾಲಾ ಮಹಾರಾಜರು ಭರತಖಂಡದ ಎಲ್ಲ ಕಡೆಗಳಿಂದಲೂ 4-5 ಕೋಟಿ ರೂಪಾಯಿ ಬೆಲೆಬಾಳುವ ಆಭರಣಾದಿಗಳನ್ನು ತರಿಸಿನೋಡಿ ಅವುಗಳಲ್ಲಿ ತಮ್ಮ ದ್ವಿತೀಯ ಪುತ್ರನ ವಿವಾಹಕ್ಕೋಸ್ಕರವಾಗಿ 4-5 ಲಕ್ಷ ರೂಪಾಯಿಗಳ ಆಭರಣಗಳನ್ನು ಕೊಂಡುಕೊಂಡರಂತೆ!

ಹೈದರಾಬಾದಿನ ಹೈಕೋರ್ಟಿನವರು ಒಂದು ಖೂನಿಮೊಕದ್ದಮೆಯಲ್ಲಿ ವಿಚಿತ್ರವಾದ ತೀರ್ಪನ್ನು ಕೊಟ್ಟಿರುವರು! ಅಪರಾಧಿಯು ಒಂದು ವರ್ಷ ಕಠಿಣಸಜೆಯನ್ನು ಅನುಭವಿಸಬೇಕು. ಮತ್ತು 200 ರೂಪಾಯಿಗಳ ಜುಲ್ಮಾನೆಯನ್ನು ಕೊಡಬೇಕು. ತಪ್ಪಿದರೆ ಮತ್ತೆ 3 ತಿಂಗಳ ಕಾರಾಗೃಹವಾಸವನ್ನು ಅನುಭವಿಸಬೇಕು! ಅನಂತರ ಅವನನ್ನು ಗಲ್ಲಿಗೇರಿಸಬೇಕಂತೆ!

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಪೋಸ್ಟ್‌ಮಾಸ್ಟರ್ ಜನರಲ್‌ರವರ ಉಪಯೋಗಕ್ಕಾಗಿ ಸರಕಾರದವರು ಒಂದು ಮೋಟಾರ್ ಕಾರನ್ನು ಕೊಡಿಸಿರುವರು. ಆದರೆ ಅದರಲ್ಲಿ ಟೋಪಿಯನ್ನು ಹಾಕಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ತಮಗೆ ಬೇರೆ ದೊಡ್ಡದಾದ ಮೋಟಾರನ್ನು ಕೊಡಿಸಬೇಕೆಂದು ಸದರಿ ಪೋಸ್ಟ್‌ಮಾಸ್ಟರು ಜನರಲ್‌ರವರು ಸರಕಾರದವರನ್ನು ಕೇಳಿರುವರಂತೆ!

ಅಮೇರಿಕೆಯ 'ಪ್ಯಾರಮೌಂಟ್ ಸ್ಟುಡಿಯೋ' ಎಂಬ ಸಿನಿಮಾ ಕಂಪನಿಯವರು 'ಐಲೆಂಡ್ ಆಫ್ ಲಾಸ್ಟ್ ಸೋಲ್ಸ್' ಎಂಬ ಚಲನಚಿತ್ರದಲ್ಲಿ ಮುಖ್ಯಪಾತ್ರವನ್ನು ವಹಿಸಲು ತಕ್ಕ ಸ್ತ್ರೀಯಳನ್ನು ಶೋಧಿಸುವದಕ್ಕಾಗಿ ಒಂದು ಪಂಥವನ್ನು ಏರ್ಪಡಿಸಿದ್ದರು. ಈ ಪಂಥಕ್ಕೆ 60,000 ಹುಡುಗಿಯರು ಬಂದಿದ್ದರು. ಸಿನಿಮಾ ಕಂಪೆನಿಯವರು ಅವರಲ್ಲಿ ಕ್ಯಾಥಲೀನ್‌ಬರ್ಕ್ ಎಂಬ ಹುಡುಗಿಯನ್ನು ಆರಿಸಿಕೊಂಡರು.

ಪಂಜಾಬಿನ 'ಸಿಯಾಲ್ಕೋಟ್' ನಗರದಲ್ಲಿ 'ಅಖಿಲಭಾರತ ನಗ್ನೋಪಾಸಕಸಂಘ' ವೆಂಬುದು ಸ್ಥಾಪಿಸಲ್ಪಟ್ಟಿರುವದು. ಇಷ್ಟರಲ್ಲಿಯೇ ಈ ಸಂಘದ ಶಾಖೆಗಳು ಇತರ ಕಡೆಗಳಲ್ಲಿಯೂ ಸ್ಥಾಪಿಸಲ್ಪಡುವವಂತೆ! ಮತ್ತು ಈ ಸಂಘಕ್ಕೆ ಯಾವವಿಧವಾದ ಸಾಮಾಜಿಕ ಮತ್ತು ರಾಜಕೀಯ ಸಂಬಂಧವೂ ಇಲ್ಲದಿರುವದರಿಂದ ಯಾರು ಬೇಕಾದರೂ ಎಷ್ಟುವಯಸ್ಸಿನವರಾದರೂ (ಸ್ತ್ರೀಪುರುಷರೆಲ್ಲರೂ) ಇದಕ್ಕೆ ಮೆಂಬರರಾಗಬಹುದಂತೆ!

ಆರೋಗ್ಯನಿಮಿತ್ತವಾಗಿ ಯೂರೋಪಿಗೆ ಹೋಗಿದ್ದ ಡಾಕ್ಟರ್ ಎಂ. ಎ. ಅನ್ಸಾರಿಯವರು ಇದೇ ಫೆಬ್ರವರಿ 6 ನೇ ತಾರೀಖಿನ ದಿವಸ 'ವಿಕ್ಟೋರಿಯಾ' ಎಂಬ ಜಹಜಿನಲ್ಲಿ ಮುಂಬಯಿಗೆ ಬಂದರು. ಇದೇ ಹಡಗಿನಲ್ಲಿಯೇ ಸ್ಪೇನ್‌ದೇಶದ ಮಾಜಿ ಚಕ್ರವರ್ತಿಗಳಾದ ಅಲ್ಫಾನ್ಸೋರವರೂ ಬಂದರು. ಇವರು 3 ದಿನಗಳವರೆಗೆ ಮುಂಬಯಿಯಲ್ಲಿ ಸರ್ಕಾರದ ಅತಿಥಿಗಳಾಗಿದ್ದು ಅನಂತರ ತಮ್ಮ ಪುತ್ರರನ್ನು ನೋಡಲು ಸಿಲೋನಿಗೆ ಪ್ರಯಾಣಮಾಡಿದರು.

ಚೀಣಾದೇಶದ ರಾಜಧಾನಿಯಾದ ಶಾಂಘೈನಗರದಲ್ಲಿ ಒಂದು ಸಿನಿಮಾದಲ್ಲಿ ಜಪಾನ್ ಸೈನಿಕರಿಗೆ ಸಂಬಂಧಪಟ್ಟ ಚಲನಚಿತ್ರವನ್ನು ತೋರಿಸಿದುದಕ್ಕಾಗಿ ಸಿನಿಮಾ ಮ್ಯಾನೇಜರು ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕಾಗಿ ಬಂದಿತು. ಚಲನಚಿತ್ರದಲ್ಲಿ ಜಪಾನ್ ಸೈನಿಕರನ್ನು ಕಂಡಕೂಡಲೇ ಪ್ರೇಕ್ಷಕರು ಎದ್ದು ಗಲಭೆಮಾಡಿ, ಖುರ್ಚಿ ಬೆಂಚುಗಳನ್ನೆಲ್ಲಾ ಮನಸ್ಸಿಗೆಬಂದಂತೆ ಎಸೆದಾಡಿದುದಲ್ಲದೆ, ಅದೇ ಗಲಭೆಯ ಭರದಲ್ಲಿ ಮಾಡಿಯಮೇಲಕ್ಕೆ ನುಗ್ಗಿ ಮ್ಯಾನೇಜರನ್ನು ಅನಾಮತ್ತು ಎತ್ತಿ ಕಿಟಿಕಿಯಿಂದ ಹೊರಕ್ಕೆ ಬಿಸಾಡಿದರಂತೆ!

ಸೆಂಟ್‌ಹೆಲೆನ್ಸ್ ನಗರದ ಒಂದುಕಾರ್ಖಾನೆಯವರು ಉಕ್ಕಿನಷ್ಟು ಶಕ್ತಿಯುಳ್ಳ ಒಂದು ಹೊಸತರಹದ ಗಾಜಿನಹಲಗೆಯನ್ನು ತಯಾರಿಸಿರುವರು! ಈ ಗಾಜು 40 ಅಂಗುಲ ಉದ್ದ 20 ಅಂಗುಲ ಅಗಲ ಮತ್ತು 1 ಅಂಗುಲ ದಪ್ಪವಿರುವದು. ಇದರ ಬಲವನ್ನು ಪರೀಕ್ಷಿಸುವದಕ್ಕಾಗಿ, ಈ ಗಾಜಿನ ಹಲಗೆಯ ನಾಲ್ಕು ಮೂಲೆಗಳನ್ನು ಒಂದು ಯಂತ್ರದ ನಾಲ್ಕು ಕೊಕ್ಕೆಗಳಿಗೆ ತಗಲಿಸಿ, 3 ಆನೆಗಳನ್ನೂ, 3 ಜನ ಮಾವಟಿಗರನ್ನೂ ಒಂದು ಬೋನಿನಲ್ಲಿ ನಿಲ್ಲಿಸಿ ಆ ಬೋನನ್ನು ಮೇಲ್ಕಂಡ ಗಾಜಿನ ಹಲಗೆಯ ಮಧ್ಯಭಾಗದಲ್ಲಿ ಸರಪಣಿಗಳಿಂದ ತೂಗಹಾಕಿದರೂ ಗಾಜು ಮುರಿಯಲಿಲ್ಲವಂತೆ!

ಚಿಕಾಗೋ ನಗರದಲ್ಲಿ ಬರುವ ಜೂನ್ ತಿಂಗಳಲ್ಲಿ ಇಡೀ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿದ ಒಂದು ಪ್ರದರ್ಶನವು ನಡೆಯುವದು. ಅದೇ ಸಂದರ್ಭದಲ್ಲಿ ಒಂದು ಸೌಂದರ್ಯ ಸ್ಪರ್ಧೆಯು ನಡೆಯುವದಂತೆ! ಈ ಸ್ಪರ್ಧೆಯ ಚಾಲಕರು ಈ ಭೂಮಂಡಲದಲ್ಲಿರುವ ಅತ್ಯಂತ ಸುಂದರಸ್ತ್ರೀಯರ ಫೋಟೋಗಳನ್ನೆಲ್ಲಾ ತರಿಸಿ ಅವರ ಪೈಕಿ 51 ಜನರನ್ನು ಆರಿಸಿ ಪ್ರದರ್ಶನಕಾಲಕ್ಕೆ ಆ 51 ಜನರನ್ನೂ ಚಿಕಾಗೋ ನಗರಕ್ಕೆ ಕರೆಯಿಸಿಕೊಳ್ಳುವರಂತೆ! ಇದಕ್ಕೆ ನಿಬಂಧನೆಗಳೂ ವಿಶೇಷವಾಗಿರುವವು. 1. ಚುನಾಯಿಸಲ್ಪಟ್ಟ 51 ಜನ ಸುಂದರಿಯರಿಗೂ ಹೋಗಿಬರಲು ಮೊದಲನೆಯ ತರಗತಿಯ ಚಾರ್ಜನ್ನು ಕೊಡುವರು. 2. ಎಲ್ಲರಿಗೂ ಪ್ರಸಿದ್ಧಿಹೊಂದಿದ ದರ್ಜಿಯವರಿಂದ ಉಡುಪುಗಳನ್ನು ಮಾಡಿಸಿಕೊಡುವರು. 3. ಎಲ್ಲರಿಗೂ ಚಿಕಾಗೋ ನಗರದ ಸರ್ವೋತ್ಕೃಷ್ಟವಾದ ಭವನಗಳಲ್ಲಿ ವಸತಿಸ್ಥಳವನ್ನೇರ್ಪಡಿಸುವರು. 4. ಎಲ್ಲರಿಗೂ 3,000 ಪೌಂಡುಗಳಿಗಿಂತಲೂ ಹೆಚ್ಚಾದ ಬಹುಮಾನಗಳನ್ನು ಕೊಡುವರು.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
ಬ್ಲಾಕುಗಳನ್ನು ತಯಾರಿಸುವವರು,
[12] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಮೇರಿಕೆಯಲ್ಲಿ ಮಿಸ್ ಹಿಲಾ ಮೇ ಅಟ್ಲೀ ಎಂಬ 26 ವರ್ಷದ ತರುಣಿಯೊಬ್ಬಳಿರುವಳು. ಈಕೆಯ ವಿಚಿತ್ರ ದೃಷ್ಟಿಪಾಟವವನ್ನು ನೋಡಿ ಎಲ್ಲರೂ ಅವಳನ್ನು 'ಎಕ್ಸ್-ರೇ ಹುಡುಗಿ' ಯೆಂದು ಕರೆಯುವರು. ಅಂದರೆ 'ಎಕ್ಸ್-ರೇ' ಎಂಬ ಬೆಳಕಿನಿಂದ ಮನುಷ್ಯರ ಶರೀರದ ಒಳಗಿರುವ ಮೂಳೆಗಳೆಲ್ಲವೂ ಹೇಗೆ ಎದ್ದುಕಾಣುವುವೋ, ಅದರಂತೆ ಈ ತರುಣಿಯ ದೃಷ್ಟಿಗೆ ಪ್ರತಿಯೊಬ್ಬರ ಶರೀರದಲ್ಲಿಯ ಮೂಳೆಗಳೂ ಎದ್ದುಕಾಣುವವಂತೆ! 5 ವರ್ಷಗಳ ಪೂರ್ವದಲ್ಲಿ ಈಕೆಯು ಒಂದು ಮಗುವಿಗೆ ಸ್ನಾನಮಾಡಿಸುತ್ತಿದ್ದಾಗ ತನ್ನ ವಿಚಿತ್ರ ದೃಷ್ಟಿಯ ವಿಚಾರವು ಈಕೆಗೆ ಗೋಚರವಾಯಿತಂತೆ! ನೋಡುತ್ತಿದ್ದಹಾಗೆಯೇ ಮಗುವಿನ ಎಲುಬುಗಳೆಲ್ಲವೂ ಕಾಣಿಸಿದವಂತೆ! ಈಗ ಆಕೆಯು ಎಲ್ಲರೂ ತನ್ನ ಕಣ್ಣಿಗೆ ಹಾಗೆಯೇ ಕಾಣುವರೆಂದೂ, ಇದರಿಂದ ತನ್ನ ಮನಸ್ಸಿಗೆ ಒಂದು ವಿಧವಾದ ಬೇಸರವೂ ಅಸಹ್ಯವೂ ಉಂಟಾಗುವದೆಂದೂ ಹೇಳುವಳಂತೆ! ಇದರ ಮೂಲಕಾರಣವನ್ನು ಕಂಡುಹಿಡಿಯಲು ಡಾಕ್ಟರರು ಎಷ್ಟೋ ಪರೀಕ್ಷೆಗಳನ್ನು ನಡೆಸಿದರೂ, ಅದರಿಂದ ಯಾವುದೂ ಬಹಿರಂಗವಾಗಲಿಲ್ಲ! ಆದರೆ ಇತರ ಮನುಷ್ಯರ ಕಣ್ಣಿಗೆ ಕಾಣಿಸುವಂತೆ ಈಕೆಗೆ ಬಟ್ಟೆ ಮೊದಲಾದ ಸಾಮಾನ್ಯಪದಾರ್ಥಗಳ ಆಚೆಗೆ ಏನೂ ಕಾಣಿಸುವದಿಲ್ಲವಂತೆ!

ವೇದಪರಿಚಯ ಅಥವಾ ಪ್ರಭಾದರ್ಶ.

ಈ ಗ್ರಂಥವನ್ನು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ ಶಂಭುಲಿಂಗಶಿವಾಚಾರ್ಯರವರು ಬರೆದು ಕಳುಹಿಸಿದ್ದಾರೆ. ಇದು ಕೆಲವು ಉಲ್ಲಾಸಗಳಿಂದ ವಿಭಾಗಿಸಲ್ಪಟ್ಟಿದೆ. ಸದ್ಯಃ ಪ್ರಥಮೋಲ್ಲಾಸವು ಮಾತ್ರ ನಮ್ಮ ಹಸ್ತಗತವಾಗಿದೆ. ಗ್ರಂಥಕರ್ತರು ಅಸಾಧಾರಣವಾದ ಶ್ರಮವನ್ನು ವಹಿಸಿ ಈ ಮಹಾಕಾರ್ಯದಲ್ಲಿ ಪ್ರವೃತ್ತರಾಗಿದ್ದಾರೆ. ಇದರಲ್ಲಿ ವೇದಗಳ ವಿಷಯವೂ, ತನ್ಮಯವಾದ ವೀರಶೈವಮತವಿಷಯವೂ ಬಹು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆ. ಇದರಲ್ಲಿರತಕ್ಕ ಅಮೂಲ್ಯವಿಷಯಗಳನ್ನು ಶಿವಭಕ್ತಿಸಂಪನ್ನರೆಲ್ಲರೂ ತಿಳಿದುಕೊಂಡು ಧನ್ಯರಾಗಲೆಂಬುದ್ದೇಶದಿಂದ ಈ ವಾರ ಮೊದಲ್ಗೊಂಡು ಮುಂದೆ ಪ್ರತಿವಾರದಲ್ಲಿಯೂ ಪ್ರಕಟಿಸಬೇಕೆಂಬ ಸಂಕಲ್ಪವುಳ್ಳವರಾಗಿದ್ದೇವೆ. ಪ್ರತಿಯೊಬ್ಬರೂ ಈ ವಿಷಯವನ್ನು ನಿರ್ಮಲಾಂತಃಕರಣದಿಂದ ಓದಿ ತಿಳಿದುಕೊಂಡು ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಬಯಸುತ್ತೇನೆ.

ಸಂ—

ರೇಣುಕವಿಜಯದ ತೀರ್ಪು.

ಈಗ್ಗೆ ೧ ವರ್ಷದಪೂರ್ವದಲ್ಲಿ ರೇಣುಕವಿಜಯದ ಬಗ್ಗೆ ಕೆಲವರ ಪ್ರೇರಣೆಯಿಂದ ದಾವೆಯು ನಡೆದ ವಿಷಯವು ಸರ್ವರಿಗೂ ವೇದ್ಯವಿದೆಯಷ್ಟೆ! ಈ ತಿಂಗಳು ೧೦ ನೆಯ ತಾರೀಖಿನ ದಿವಸ ಜಡ್ಜರವರು ಸದರಿ ದಾವೆಯನ್ನು ಡಿಸ್‌ಮಿಸ್‌ಮಾಡಿ, ಈ ದಾವೆಯನ್ನು ತರಲಿಕ್ಕೆ ವಾದಿಗೆ ಹಕ್ಕು ಇರುವುದಿಲ್ಲವೆಂದೂ, ಈಗ ತಂದಿರುವ ದಾವೆಯು ಕಾಯಿದೆಗೆ ವಿರೋಧವಾಗಿರುವುದೆಂದೂ, ಈ ಗ್ರಂಥದ ವಿಷಯವನ್ನು ೧೯೩೦ ನೆಯ ಇಸ್ವಿಯ ಮೈಸೂರು ಗವರ್ನಮೆಂಟಗ್ಯಾಝೇಟಿನಲ್ಲಿ ಗವರ್ನಮೆಂಟಿನವರು ಪ್ರಸಿದ್ಧಮಾಡಿರುವುದರಿಂದ ವಾದಿಯ ಹೇಳಿಕೆಯು ನಂಬತಕ್ಕದ್ದಾಗಿಲ್ಲವೆಂದೂ, ಇತ್ಯಾದಿಕಾರಣಗಳಿಂದ ಈ ದಾವೆಯನ್ನು ವಜಾಮಾಡಿದ್ದೇವೆಂದು ಜಡ್ಜ್‌ಮೆಂಟ್‌ಬರೆದು, ವಾದಿಯು ಖರ್ಚನ್ನು ಸಹ ಕೊಡಬೇಕೆಂದು ತೀರ್ಮಾನಿಸಿದ್ದಾರೆ.

ಯತೋಧರ್ಮಸ್ತತೋಜಯಃ!

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಹುಬ್ಬಳ್ಳಿ ಶಹರದಲ್ಲಿ ನೆರವೇರಿದ ಅನುಕರಣೀಯೋಪನಯನವಿವಾಹ ಮಹೋತ್ಸವಗಳು.

ಹುಬ್ಬಳ್ಳಿ ಶಹರ ನಿವಾಸಿಗಳಾದ ವೇ|| ವಿರೂಪಾಕ್ಷಯ್ಯನವರು ನಂದಿಕೇಶ್ವರ ಮಠ ಇವರು ಇದೇ ಮಾಘ ಶುಕ್ಲಪಕ್ಷ ಪಂಚಮಿ ಸೋಮವಾರ ಪ್ರಾತಃಕಾಲದಲ್ಲಿ ತಮ್ಮ ಸುಪುತ್ರ ಗಂಗಾಧರನಿಗೆ ಮಾಹೇಶ್ವರ ದೀಕ್ಷೋಪನಯನ ಸಂಸ್ಕಾರವನ್ನು ಅದೇ ದಿವಸ ಸಾಯಂಕಾಲಕ್ಕೆ ಜ್ಯೇಷ್ಠಪುತ್ರನಾದ ಚಿ|| ಚಂದ್ರಶೇಖರಶರ್ಮನಿಗೆ ಶಿಕುವಿನಹಳ್ಳಿ ಹಿರೇಮಠದ ವೇ|| ಪಂಚಾಕ್ಷರಯ್ಯನವರ ಸುಪುತ್ರಿ ಸೌ|| ಕಾಂ|| ದಾಕ್ಷಾಯಣಿಯನ್ನು ತಂದು ವಿವಾಹಕಾರ್ಯವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ಮಂಗಲಕಾರ್ಯಗಳಿಗೆ ಸುಪ್ರಸಿದ್ಧರಾದ ಹೂಲಿ ಬೃಹನ್ಮಠದ ಶ್ರೀ|| ಷ|| ಬ್ರ|| ನೀಲಕಂಠಶಿವಾಚಾರ್ಯಸ್ವಾಮಿಗಳೂ, ಕುಂದಗೋಳ, ಬಂಕಾಪುರ, ಮುಳ್ಗುಂದ, ಗ್ರಾಮಗಳ ಪಟ್ಟಚರಾಧಿಕಾರಿಗಳೂ, ಇಲ್ಲಿಯ ಹನ್ನೆರಡುಮಠದ ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳೂ ದಯಮಾಡಿಸಿದ್ದರು. ಈ ವಿದುಜನ ಶಿವಾಚಾರ್ಯರ ದಿವ್ಯಾಗಮನಯೋಗದ ಶೋಭೆಯು ಪ್ರತಿಭೆಯು ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಚಿಜ್ಜ್ಯೋತಿಗಳ ಪ್ರಕಾಶವನ್ನೇ ಬೀರುತ್ತಲಿತ್ತು. ವೈದಿಕ ಶಿರೋಮಣಿಗಳಾದ ವೇ|| ಪಂ|| ಹರೀಶ್ವರಶಾಸ್ತ್ರಿಗಳೂ, ನಲವಡಿ ಹಿರೇಮಠದ ಶ್ರೀಕಂಠಶಾಸ್ತ್ರಿಗಳೂ ಕೂಡಿ ಜರುಗಿಸಿದ ಉಪನಯನ ವಿವಾಹಸಂಸ್ಕಾರಗಳ ವಿಧಿಗಳ ವಿವರಣೆಯು ವೇದವಾಣಿಯು ವೈಭವವನ್ನು ಬಣ್ಣಿಸಿ ಬರೆಯುವದಾಗದು. ವೇದಾಗಮವಿಧಿಗಳನ್ನು ಮಾನ್ಯಮಾಡುತ್ತಲಿದ್ದ ವೀರಶೈವಮತಸಾಮ್ರಾಜ್ಯವು ಅತ್ಯಂತ ಶ್ರೇಷ್ಠವಾದದ್ದಾಗಿದೆ. ಅಪ್ರಾಕೃತ ಬ್ರಾಹ್ಮಣ್ಯದ ದಿವ್ಯತೇಜಸ್ಸೇ ಇದರ ಸ್ವತ್ತಾಗಿದೆ. ಅಖಿಲವೀರಶೈವರೂ ಶಿವಾಗಮೋಕ್ತವಿಧಿಗಳನ್ನೇ ಪಾಲಿಸುತ್ತಲಿರುವರು. ಧರ್ಮಾಭಿಮಾನಿಗಳೂ, ಗುರುವರ್ಗದ ಅಭಿಮಾನಿಗಳೂ ಶಿವಪೂಜಾನಿಷ್ಠಾಗರಿಷ್ಠರೂ ಆಚಾರ್ಯಸೇವಾಧುರೀಣರೂ ಆದ ವೇ|| ವಿರೂಪಾಕ್ಷಯ್ಯನವರು (ಇವರ ಶಿವಪೂಜಾಪರಾಯಣತೆಗೆ ಜನಗಳು ಶಿವಪೂಜಯ್ಯನವರೆಂಬ ಉಪನಾಮದಿಂದಲೇ ಕರೆಯುತ್ತಲಿರುವರು.) ಈ ತಮ್ಮ ಇಬ್ಬರು ಮಕ್ಕಳ ಉಪನಯನ, ವಿವಾಹಸಂಸ್ಕಾರಗಳನ್ನು ಸಶಾಸ್ತ್ರೀಯವಾಗಿ ನೆರವೇರಿಸಿದರು. ವಿವಾಹಾಂಗಭೂತಕಾರ್ಯಗಳೆಲ್ಲ ಬಹು ರಮಣೀಯವಾಗಿ ಜರಗಿದವು. "ಮೃಷ್ಟಾನ್ನಮಿತರೇಜನಾಃ" ಎಂಬ ಸುಭಾಷಿತಕಾರನ ಅಭಿಪ್ರಾಯದಂತೆ ಅತಿಥಿಗಳಿಗೂ, ಬಡವರಾದಿಯಾಗಿ ಸಕಲರಿಗೂ ಮೃಷ್ಟಾನ್ನಭೋಜನದಿಂದ ತೃಪ್ತಿಗೊಳಿಸಿದರು. ಕುಂದುಕೊರತೆಗಳಿಲ್ಲದೆ ಈ ಕಾರ್ಯವು ಪೂರೈಸಿತು. ಶ್ರೀಮತ್ಪಂಚಾಚಾರ್ಯರ ಚಿತ್ಕಲಾಪ್ರಭಾವಲಯದಂತೆ ಪ್ರಕಾಶಿಸುತ್ತ ಆಗಮಿಸಿದ ಐದು ಜನ ಪಟ್ಟಚರಾಧಿಕಾರಿ ಮಹಾಸ್ವಾಮಿಗಳು ನೂತನ ವಧೂವರರಿಗೆ ಶ್ರೀ ಜಗದ್ಗುರು ಪಂಚಾಚಾರ್ಯಸ್ವತ ಪಂಚಕಲಶಗಳ ಯುಕ್ತವಾಗಿ ಮಂಗಲಾಶೀರ್ವಾದಮಾಡಿದ ದಿವ್ಯನೋಟವು ಬಹುದಿವಸಗಳವರೆಗೆ ಭಾವಪಟವಾಗಿರಬೇಕೆಂದು ವಿವಾಹಮಂಗಲಕಾರ್ಯದ ಫೋಟೋ ತೆಗೆಯಿಸಲ್ಪಟ್ಟಿತು. ಒಟ್ಟಿನ ಮೇಲೆ ವಿವಾಹೋಪನಯನಕಾರ್ಯಗಳು ಸನ್ಮಂಗಲದಾಯಕಗಳಾಗಿ ಸಾಗಿದವು. ವೀರಶೈವಜನಾಂಗವು ವೇದೋಕ್ತವಿಧಿಗಳನ್ನು ಪಾಲಿಸಬೇಕಲ್ಲದೆ ಧರ್ಮಶಾಸ್ತ್ರಾನಭಿಜ್ಞತೆಯಿಂದ ಮಾಡುತ್ತ ಬಂದ ತಪ್ಪು ತೊಡಕುಗಳ ರೂಢಿಯನ್ನು ಬಿಡಬೇಕಾಗಿ ಸವಿನಯಸೂಚನೆಯು. ಧರ್ಮದ ನಿಜತತ್ವಸಿದ್ಧಾಂತವನ್ನು ಸರ್ವತ್ರಪ್ರಚಾರಮಾಡುತ್ತಲಿದ್ದ ಪಂಚಾಚಾರ್ಯಪ್ರಭೆಯ ಪೋಷಣೆಗೆ ಈ ಮಂಗಲಕಾರ್ಯದಲ್ಲಿ ೪ ರೂಪಾಯಿಗಳನ್ನು ತೆಗೆಯಿಸಿತು. ಜಗದಾಚಾರ್ಯರು ನೂತನ ವಧೂವರರಿಗೆ ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ವೇ|| ವಿರೂಪಾಕ್ಷಯ್ಯನವರ ಮಠದಲ್ಲಿಯೇ ನೆರವೇರಿದ ಮತ್ತೊಂದು ವಿವಾಹಮಹೋತ್ಸವ.

ಇವರು ತಮ್ಮ ಸುಪುತ್ರನ ವಿವಾಹಕಾರ್ಯವನ್ನು ಪೂರೈಸಿದ ನಾಲ್ಕನೇ ದಿವಸದಲ್ಲೇ ಮತ್ತೊಂದು ಕಲ್ಯಾಣಮಹೋತ್ಸವವು ಉದಯಿಸಿತು. ಗುರುವರ್ಗದ ಉತ್ಕಟಾಭಿಮಾನಿಗಳಾದ ಲಕ್ಷ್ಮೇಶ್ವರದ ಹಿರೇಮಠದ ವೇ|| ಕಾಶಯ್ಯನವರ ಯಜಮಾನತ್ವದ ಕೆಳಗೆ ಶಿಕುವಿನಹಳ್ಳಿ ಹಿರೇಮಠದ ವೇ|| ಪಂಚಾಕ್ಷರಯ್ಯನವರ ಸುಪುತ್ರಿ ಸೌ|| ಗಂಗವ್ವನನ್ನು ಮೇಲ್ಮರಿಗ್ರಾಮದ ವೀರಯ್ಯನವರಿಗೂ ಇವರ ಮತ್ತೊಬ್ಬ ಸುಪುತ್ರಿ ಸೌ|| ಬಸವಂತವ್ವನನ್ನು ನವಲಿಗ್ರಾಮದ ಕೂಡ್ಲಮಠ ಪ್ರಭಯ್ಯನವರಿಗೂ ಕೊಟ್ಟು ವಿವಾಹಕಾರ್ಯವನ್ನು ಜರಗಿಸಿದರು. ಈ ಮಂಗಲಕಾರ್ಯಗಳ ಸುಗ್ಗಿಯ ಸೊಬಗಿನ ವೈಭವವು ಅತ್ಯಾನಂದದಿಂದ ಜರಗಿದ ವಿಷಯವನ್ನು ಬರೆದು ಪ್ರಕಟಿಸುವದು ಅತಿಶಯೋಕ್ತಿಯೆನಿಸಿದರೂ, ಶಾಸ್ತ್ರೀಯ ವಿಧಿಗಳ ಕಡೆಗೆ ವೀರಶೈವರು ಹೊರಳಿ ಧರ್ಮಶಾಸ್ತ್ರದಲ್ಲಿ ನಿಷ್ಠರಾಗಲೆಂಬ ಉದ್ದೇಶದಿಂದ ಪ್ರಕಟಿಸಬೇಕಾಯಿತು.

ಓರ್ವ ಕಾರ್ಯಭಾಗಿ, ಹುಬ್ಬಳ್ಳಿ.

ಶೋಚನೀಯಮೃತ್ಯು.

ರಾಯಚೂರು ಜಿಲ್ಲಾ ಸಿಂಧನೂರು ತಾಲೂಕು ಪಗಡದಿನ್ನಿ ಶ್ರೀ ರುದ್ರಮುನಿಶಾಸ್ತ್ರಿಗಳವರು ತಾ|| ೨—೧—೧೯೩೩ ಸೋಮವಾರ ಶಿವಾಧೀನರಾದರೆಂದು ತಿಳಿಸಲು ನಮಗೆ ಬಹಳ ವಿಷಾದವಾಗುತ್ತದೆ. ಇವರು ಸಂಸ್ಕೃತಸಾಹಿತ್ಯಜ್ಞರೂ, ಕನ್ನಡದಲ್ಲಿ ಸಂಪೂರ್ಣ ಪಾಂಡಿತ್ಯವುಳ್ಳವರೂ, ವೀರಶೈವಧರ್ಮಾಚರಣೆಯಲ್ಲಿ ಪ್ರಸಿದ್ಧಿಹೊಂದಿದವರೂ ಶಿವಪೂಜಾಧುರಂಧರರೂ ಆಗಿದ್ದರು. ಇವರ ಗಂಭೀರವಾದ ಕಂಠನಾದವು ಒಂದು ಫರ್ಲಾಂಗದವರೆಗೂ ಚನ್ನಾಗಿ ಕೇಳಿಸುತ್ತಿತ್ತು. ವೀರರಸಪ್ರಧಾನವಾದ ಮಹಾಭಾರತಾದಿಪುರಾಣಗಳನ್ನು ಹೇಳಲಿಕ್ಕೆ ಹತ್ತಿದರೆ, ಜನರು ಅತ್ಯಾನಂದದಿಂದ ತಲೆದೂಗುತ್ತಾ ತಮ್ಮ ಲೌಕಿಕೋದ್ಯೋಗಗಳಲ್ಲಿ ಸ್ಮರಣೆಯಿಲ್ಲದೆ ಕುಳಿತುಕೊಳ್ಳುತ್ತಿದ್ದರು. ಇವರಿಗೆ ಅವಸಾನಕಾಲದಲ್ಲಿ ೯೫ವರ್ಷಗಳಾಗಿದ್ದರೂ ಒಂದು ದಿನವಾದರೂ ಸಾಧಾರಣವಾಗಿ ಜ್ವರಾದಿಗಳು ಬಂದುದು ಯಾರಿಗೂ ಗೋಚರವಿಲ್ಲ. ಸರಾಸರಿ ಮೂವತ್ತು ವರ್ಷಗಳಿಂದ ಇವರ ಪುತ್ರರೇ ಗೃಹಕೃತ್ಯಭಾರವನ್ನು ವಹಿಸಿಕೊಂಡು ಹೋಗುತ್ತಿದ್ದುದರಿಂದ ಇವರು ಯಾವಾಗಲೂ ಶಿವಪೂಜಾಲೋಲರಾಗಿದ್ದರು. ತಾವು ಸದಾಚಾರಸಂಪನ್ನರಾಗಿರುವಂತೆ ಜನರಿಗೂ ನಿರ್ಭಿಡೆಯಿಂದ ಆಚಾರವನ್ನು ಬೋಧಿಸುತ್ತಿದ್ದರು. ಶಿವಲಿಂಗವನ್ನು ನಾಭಿಯಕೆಳಗೆ ಧರಿಸಿದ್ದುದನ್ನೂ, ಸ್ತ್ರೀಪುರುಷರ ಉಟ್ಟವಸ್ತ್ರಗಳು ನೆಲಕ್ಕೆ ಹಗಲುತ್ತಿದ್ದುದನ್ನೂ, ಕ್ರಾಪು ಮೊದಲಾದವನ್ನೂ ನೋಡಿದ ಕೂಡಲೇ ಇವರು ಬಹುಸಂತಪ್ತರಾಗುತ್ತಿದ್ದರು. ಇಷ್ಟೇ ಅಲ್ಲ, ಅಂತಹ ಅನಾಚಾರದ ಕಾರ್ಯವನ್ನು ಆಗಿಂದಾಗಲೇ ಸುಧಾರಿಸುವಂತೆ ಬಲವಾಗಿ ಬೋಧಿಸುತ್ತಿದ್ದರು. ಯಾರಾದರೂ ಸುಧಾರಿಸಿಕೊಳ್ಳದಿದ್ದರೆ, ಅವರ ಮನೆಗೆ ಸತ್ಕಾರ್ಯಗಳಿಗೆ ಹೋಗುತ್ತಿರಲಿಲ್ಲ. ಇವರಿಂದ ಪಗಡದಿನ್ನಿಯ ಅಜುಬಾಜುಗ್ರಾಮಗಳ ಭಕ್ತಮಾಹೇಶ್ವರರು ಎಷ್ಟೋ ಆಚಾರಸಂಪನ್ನರಾಗಿರುತ್ತಿದ್ದರು. ಇತ್ತ ನಾಲ್ಕಾರು ವರ್ಷಗಳಿಂದ ಶಾಸ್ತ್ರಿಗಳವರು ಬಾಲಲೀಲೆಯುಳ್ಳವರಾಗಿದ್ದರು. ಎರಡು ಮೂರು ವರ್ಷಗಳ ವಯಸ್ಸಿನ ಬಾಲಕರು ಮಾಡುತ್ತಿದ್ದ ಕೃತಿಗಳನ್ನೆಲ್ಲಾ ಇವರು ಮಾಡುತ್ತಿದ್ದರು. ತಾವು ಊಟಮಾಡಿದ್ದುದು ಮಾಡದೇ ಇದ್ದುದು ಅವರಿಗೆ ಗೊತ್ತಾಗುತ್ತಿರಲಿಲ್ಲವೆಂದಮೇಲೆ ಉಳಿದ ವಿಷಯಗಳ ಸ್ಮರಣೆಯನ್ನೆಲ್ಲಿ? ಬಾಸಾ ತಮ್ಮ ಮಕ್ಕಳುಗಳನ್ನೇ ಒಂದೊಂದುಸಾರೆ ತಮ್ಮ ಅಣ್ಣತಮ್ಮಂದಿರನ್ನಾಗಿ ಹೇಳುತ್ತಿದ್ದರು. ಇಂಥ ಬಾಲಲೀಲೆಯಲ್ಲಿಯೂ ಕೂಡಾ ಶಿವಪೂಜೆಯನ್ನು ಮಾತ್ರ ಯಥಾಕ್ರಮವಾಗಿ ಮಾಡುತ್ತಿದ್ದರು. ಲಿಂಗನಿಷ್ಠೆಯು ಸಂಪೂರ್ಣವಾಗಿ ಒಲಿದಿದ್ದುದರಿಂದಲೇ ಯಾವ ರೋಗಾದಿಗಳಿಲ್ಲದೇ ಪತ್ನೀಪುತ್ರಪೌತ್ರರ ಸಮಕ್ಷಮ ಸೋಮವಾರ ಹತ್ತು ಘಂಟೆಗೆ ಶಿವಪೂಜೆಯನ್ನು ಮಾಡುತ್ತಲೇ ಶಿವಸಾಯುಜ್ಯವನ್ನು ಹೊಂದಿದರು. ಇವರು ಕಡೆಯವರೆಗೂ ತಾವು ಆಚಾರದಿಂದ ನಡೆದು ಅದರಂತೆಯೇ ಜನರಿಗೆ ಬೋಧಮಾಡುತ್ತಿದ್ದುದರಿಂದಲೂ ಇಂತಹ ಉತ್ತಮವಾದ ಅವಸಾನವಾದುದರಿಂದಲೂ ಆ ಗ್ರಾಮದ ಮತ್ತು ಅಜುಬಾಜು ಗ್ರಾಮಗಳ ಭಕ್ತವರ್ಗವು "ಶರಣ ಕುರುಹು ಮರಣದಲ್ಲಿ" ಎಂದು ಹೊಗಳುತ್ತಾ ಕಾಯಿಕರ್ಪೂರಗಳನ್ನು ತಂದು ಅಂತ್ಯಮಂಗಲವನ್ನು ಮಾಡುತ್ತಿದ್ದಿತು. ಆ ದಿವಸ ಮಧ್ಯಾಹ್ನ ಎರಡು ಘಂಟೆಯಿಂದ ಪ್ರಾರಂಭಿಸಿ ಮಾರನೇ ದಿನ ಉದಯ ೯ ಘಂಟೆಗೆ ಸಂಪೂರ್ಣವಾಗಿ ಶಿಲೆಯಿಂದಲೇ ಇವರ ಕ್ರಿಯಾಸಮಾಧಿಯು ತಯಾರಿಸಲ್ಪಟ್ಟಿತು. ಆ ಗ್ರಾಮದ ಮತ್ತು ಅಜೂಬಾಜೂಗ್ರಾಮಗಳ ಭಕ್ತರು ಎಲ್ಲಿ ಉತ್ತಮವಾದ ಕಲ್ಲುಗಳು ಕಾಣುತ್ತಿದ್ದವೋ ಅವನ್ನೆಲ್ಲಾ ತಂದು ಶೇಖರಿಸುತ್ತಿದ್ದರು. ಭಾವಿಗಳ ಮತ್ತು ಕಟ್ಟೆಗಳ ಕಟ್ಟಡದೊಳಗಿದ್ದವುಗಳನ್ನೇ ಕಿತ್ತು ತರುತ್ತಿದ್ದರು. ಸಾಧಾರಣ ಹಳ್ಳಿಯಲ್ಲಿ ಏನೊಂದು ತಯಾರಿ ಇಲ್ಲದೇ ಇಷ್ಟು ಅಲ್ಪವೇಳೆಯಲ್ಲಿ ಶಿಲಾಮಯವಾದ ಕ್ರಿಯಾಸಮಾಧಿಯು ತಯಾರಾಗಬೇಕಾದರೆ, ಶಾಸ್ತ್ರಿಗಳವರ ಶಿವಪೂಜಾಪ್ರಭಾವವೇ ಕಾರಣವೆಂದು ಜನರು ಹೇಳುತ್ತಿರುವರು. ಚಿಕ್ಕಬಾಲಕನಿಂದ ಹಿಡಿದು ವೃದ್ಧರವರೆಗೂ ಆ ದಿವಸ ಭಕ್ತಿರಸವು ಉಕ್ಕುತ್ತಿತ್ತು. ಇಂತಹ ಬಹುಜನಪ್ರಿಯರೂ ಜ್ಞಾನವಯೋವೃದ್ಧರೂ ಆಚಾರಸಂಪನ್ನರೂ ಆಚಾರಬೋಧಕರೂ ಆದ ಶಾಸ್ತ್ರಿಗಳವರು ಲಿಂಗೈಕ್ಯರಾದುದರಿಂದ ಒಬ್ಬ ದೊಡ್ಡ ಧರ್ಮಬೋಧಕರನ್ನು ಕಳೆದುಕೊಂಡಂತಾದುದರಿಂದಾಗಿ ಪ್ರತಿಯೊಬ್ಬ ವೀರಶೈವನೂ ದುಃಖಭಾಗಿಯಾಗಿರುವನು. ಮಾರನೇ ದಿನ ಉದಯ ೯ ಘಂಟೆಗೆ ಭಜನೆ, ಒಡಪು, ಮಂಗಲವಾದ್ಯಗಳಿಂದ ಹೊರಟು ಕ್ರಿಯಾಸಮಾಧಿ ಪೂರೈಸುವದರೊಳಗಾಗಿ ೫ ಘಂಟೆಯಾಯಿತು. ಇವರ ಎಂಟನೇ ಪುತ್ರರಾದ "ಬಸವರಾಜಶಾಸ್ತ್ರಿಗಳು" ಶಂಕರಕಾಲೇಜ ಯಾದಗಿರಿ ಇವರಿಂದಲೂ ಮೂರುನಾಲ್ಕು ಜನ ಶಾಸ್ತ್ರಿಗಳಿಂದಲೂ ಶವಸಂಸ್ಕಾರವು ವಿಧಿಪ್ರಕಾರವಾಗಿ ನಡೆಸಲ್ಪಟ್ಟಿತು. ಕೈಲಾಸವಾಸಿಗಳಾದ ಶಾಸ್ತ್ರಿಗಳವರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬ ಮತ್ತು ಬಂಧುವರ್ಗಕ್ಕೆ ಸುಖಸಮಾಧಾನಗಳನ್ನೂ ಆ ಜಗನ್ನಿಯಾಮಕನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಓರ್ವ ದುಃಖಭಾಗಿ.

ಆತ್ಮಬೋಧಾಮೃತ.

ಲೇಖಕ—ಕನ್ನಡಕವಿ ಆನವಟ್ಟಿ ರಾಮರಾಯರು.

51. ಹೊರಗೆ ಕಾಣಬರುವ ಪ್ರಪಂಚದಲ್ಲಿ ತೋರಬರುವ ಅಹಿತವಾದ ಸೌಖ್ಯಗಳನ್ನೆಲ್ಲಾ ಸಂಪೂರ್ಣವಾಗಿ ತ್ಯಜಿಸಿ ಅದರಿಂದ ನಿರ್ಲೇಪನಾಗುವಂತೆ ಮಾಡಿಕೊಂಡು ಜ್ಞಾನಸಾಧನೆಯಿಂದ ಹೊಂದಿದ ಸೌಖ್ಯದಿಂದ ತೃಪ್ತನಾದ ಮೇಲೆ ಆ ಜೀವನು ತನ್ನೊಳಗೆ ತಾನೇ ಕನ್ನಡಿಯ ಮಧ್ಯದಲ್ಲಿರುವ ದೀಪದಂತೆ ಸ್ವಯಂಪ್ರಕಾಶಮಾನನಾಗಿರುವನು.

52. ತಪೋನಿಷ್ಠನಾದ ಯೋಗಿಯ ಶರೀರವು ಹಿಂದೆ ಎಲ್ಲಾ ವಿಧವಾದ ಬದಲಾವಣೆಗಳಿಗೆ ಒಳಪಟ್ಟಿದ್ದಾಗ್ಯೂ ತನ್ನ ತಪೋಮಹಿಮೆಯಿಂದ ಸ್ವಲ್ಪವೂ ವ್ಯತ್ಯಾಸಹೊಂದದೆ ಯೌವನವಿಧದಿಂದಲೂ ಕೆಡದೆ ಆಕಾಶದಂತೆ ನಿರ್ಮಲವಾಗಿ ವರ್ತಿಸುತ್ತಿರುವುದು. ಇದಕ್ಕೆ ಆತನ ಶರೀರವೆಲ್ಲಾ ಜ್ಞಾನಸಾಧನಮಾರ್ಗದಿಂದ ಜ್ಞಾನಮಯವಾಗಿರುವುದೇ ಕಾರಣ. ಎಲ್ಲವನ್ನು ತಿಳಿದಿರುವ ಈ ಯೋಗಿಯು ಐಹಿಕವಿಷಯಾದಿಗಳಿಂದ ದೂರನಾಗಿರುವಾಗ್ಗೆ ತನ್ನ ಜ್ಞಾನಸಾಧನಮಾರ್ಗದಿಂದ ತನ್ನ ಶರೀರವೇನಾಗುವುದೆಂಬುದನ್ನು ಸ್ವಲ್ಪವೂ ಲಕ್ಷ್ಯಕ್ಕೆ ತಂದುಕೊಳ್ಳದೆ ಗಾಳಿಯು ಚಲಿಸುವಂತೆ, ತನ್ನ ತಪಸ್ಸನ್ನು ಮುಂದಕ್ಕೆ ನಡೆಸಿಕೊಂಡೇ ಹೋಗುತ್ತಿರುವನು. ಇದಕ್ಕೆ ಅನೇಕ ಮಹರ್ಷಿಗಳು ಸಾವಿರಾರು ವರ್ಷಗಳವರೆಗೆ ತಪಸ್ಸು ಮಾಡುತ್ತಿದ್ದುದೇ ದೃಷ್ಟಾಂತವಾಗಿರುವುದು.

53. ಜೀವನಿಗಾವರಿಸಿರುವ ಉಪಾಧಿಗಳು ಯಾವಾಗ ನಾಶವಾಗುವುವೋ ಆಗ್ಗೆ ಯೋಗಿಯು ಸರ್ವಾಂತರ್ಯಾಮಿಯಾಗಿರುವ ವಿಷ್ಣುವಿನಂತೆ ಸಮಸ್ತ ವಸ್ತುಗಳಲ್ಲಿಯೂ ನೀರು ನೀರಿನಲ್ಲಿಯೂ, ಗಾಳಿ ಗಾಳಿಯಲ್ಲಿಯೂ, ಬೆಂಕಿ ಬೆಂಕಿಯಲ್ಲಿಯೂ, ಸೇರಿರುವಂತೆ, ಸೇರಿ ವರ್ತಿಸುತ್ತಿರುವನು.

54. ಯಾರೂ ಹೊಂದಲಸಾಧ್ಯವಾದ ಸ್ಥಾನವನ್ನೂ ಯಾರೂ ಅನುಭವಿಸಲಸದಳವಾದ ಸೌಖ್ಯವನ್ನೂ, ಯಾರ ಅನುಭವಕ್ಕೂ ವೇದ್ಯವಾಗದ ಶಾಸ್ತ್ರಜ್ಞಾನವನ್ನೂ ಹೊಂದಿರುವ ಯೋಗಿಯ ಸ್ಥಿತಿಯೇ ಬ್ರಹ್ಮವೆಂದು ಹೇಳಿಸಿಕೊಳ್ಳಲ್ಪಡುವುದು.

55. ಯಾರೂ ಹೊಂದಲಾಗದ ದಿವ್ಯಜ್ಞಾನದೃಷ್ಟಿಯ ಬಯಕೆಯನ್ನೂ, ಯಾರೂ ಪರಮಾತ್ಮನಲ್ಲಿ ಐಕ್ಯವಾಗದ ಸ್ಥಿತಿಯನ್ನೂ ಯಾರೂ ಹೊಂದಲಸದಳವಾದ ಜ್ಞಾನಪ್ರಭಾವವನ್ನೂ ಹೊಂದಿರುವ ಯೋಗಿಯ ಸ್ಥಿತಿಯೇ ಬ್ರಹ್ಮವೆಂದೆನಿಸಿಕೊಳ್ಳುವುದು.

56. ಸರ್ವೋತ್ಕೃಷ್ಟವಾದುದೆಂತಲೂ, ಕೀಳೆಂತಲೂ ಭಾವಿಸದೆ ಜೀವಿತವಾಗಿಯೂ, ಜ್ಞಾನವಿಶಿಷ್ಟವಾಗಿಯೂ, ಸೌಖ್ಯಮಯವಾಗಿಯೂ, ಏಕವಾಗಿಯೂ, ಅನಂತವಾಗಿಯೂ, ಶಾಶ್ವತವಾಗಿಯೂ ಇರುವ ರಾಜ್ಯವೇ ಬ್ರಹ್ಮವೆಂದೆನಿಸಿಕೊಳ್ಳುವುದು.

57. ಪ್ರಪಂಚದಲ್ಲಿ ಸೃಷ್ಟವಾದ ವಸ್ತುಗಳೆಲ್ಲಾ ಅವುದಕ್ಕೆ ಸಮಾನವಲ್ಲವೆಂದು ಯಾವುದು ಹೇಳಿಸಿಕೊಳ್ಳುವುದೋ, ಆ ವಸ್ತುಗಳೆಲ್ಲಾ ಆ ಪರಬ್ರಹ್ಮನಲ್ಲಿ ಐಕ್ಯವಾಗಿ ಹೋಗುವುವೆಂದು ವೇದಶಾಸ್ತ್ರಗಳಿಂದ ಹೇಳಿಸಿಕೊಳ್ಳುವ, ನಾಶರಹಿತವಾದ ಸದಾಸೌಖ್ಯಮಯವಾದ ಸ್ಥಿತಿಯೇ ಬ್ರಹ್ಮವೆಂದು ಹೇಳಿಸಿಕೊಳ್ಳುವುದು.

58. ಆ ಬ್ರಹ್ಮವೆಂಬುದರಲ್ಲಿರುವ ಸೌಖ್ಯದ ಅಮಿತಭಾಗದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಚತುರ್ಮುಖಬ್ರಹ್ಮನೇ ಮೊದಲಾದ ಇತರ ದೇವತೆಗಳು ಹೊಂದುವರು.

59. ಪ್ರಪಂಚದ ಸಮಸ್ತ ವಸ್ತುಗಳೆಲ್ಲಾ ಆ ಬ್ರಹ್ಮದಲ್ಲಿಯೇ ಲಯವಾಗುವುದು. ಸಮಸ್ತ ಕಾರ್ಯಗಳೂ ಅದರಿಂದಲೇ ಪ್ರಪಂಚದಲ್ಲಿ ನಡೆಸಲ್ಪಡುತ್ತಿರುವುದು. ಸಮಸ್ತವಸ್ತುಗಳಲ್ಲಿಯೂ ಬಿಡದೆ ಸರ್ವವ್ಯಾಪಕವಾಗಿ, ಬೆಣ್ಣೆಯು ಹಾಲಿನಲ್ಲಿರುವಂತೆಯೇ ಪರಬ್ರಹ್ಮವೆಂಬುದು ಪ್ರಪಂಚವ್ಯಾಪಕವಾಗಿರುವುದು.

60. ಗುಣದಲ್ಲಿ ಹೆಚ್ಚು ಅಥವಾ ಕೀಳೆನ್ನದೆಯೂ, ಪ್ರಮಾಣದಲ್ಲಿ ಗಿಡ್ಡ ಅಥವಾ ಉದ್ದವೆನ್ನದೆಯೂ, ಜನನ ಮತ್ತು ಮರಣಗಳಿಗೆ ಅಧೀನವಾಗದೆಯೂ, ನಿರಾಕಾರ, ನಿರ್ಗುಣವಾಗಿಯೂ, ನಾಮವರ್ಣರಹಿತವಾಗಿಯೂ, ಇರುವುದಾವುದೋ ಅದೇ ಬ್ರಹ್ಮವೆಂದೆನಿಸಿಕೊಳ್ಳುವುದು.

61. ಯಾವ ತೇಜಸ್ಸಿನಿಂದ ಸೂರ್ಯನಕ್ಷತ್ರಗಳು ಪ್ರಕಾಶಿಸುತ್ತಿರುವವೋ, ಯಾವುದು ಸ್ವಯಂಪ್ರಕಾಶವುಳ್ಳದಾಗಿರುವುದೋ, ಯಾವದರಿಂದ ಜಗತ್ತಿನಲ್ಲಿರುವ ಸರ್ವವಸ್ತುಗಳೂ ಪ್ರಕಾಶಹೊಂದಿರುವುವೋ ಅದೇ ಪರಬ್ರಹ್ಮವೆಂದೆನಿಸಿಕೊಳ್ಳುವುದು.

62. ಸಮಸ್ತ ಪ್ರದೇಶದ ಒಳಗೂ ಹೊರಗೂ ವ್ಯಾಪ್ತವಾಗಿರುತ್ತಾ, ಲೋಕವನ್ನೆಲ್ಲಾ ಪ್ರಕಾಶಗೊಳಿಸುವಂತೆ ಮಾಡುತ್ತಾ, ಕಾದಕಬ್ಬಿಣದ ಗುಂಡಿನಲ್ಲಿ ಬೆಂಕಿಯಿರುವಂತೆ, ವಸ್ತುಗಳಲ್ಲಿ ವರ್ತಿಸುತ್ತಿರುವುದೇ ಬ್ರಹ್ಮವೆಂದೆನಿಸಿಕೊಳ್ಳುವುದು.

63. ಆ ಬ್ರಹ್ಮಕ್ಕೆ ಸಮಾನವಾದುದು ಯಾವುದೂ ಈ ಪ್ರಪಂಚದಲ್ಲಿಲ್ಲ. ಶಾಶ್ವತವಾದುದು ಬ್ರಹ್ಮಹೊರತಾಗಿ ಮತ್ತೊಂದು ವಸ್ತುವೇ ಇಲ್ಲ. ಅದಕ್ಕಿಂತ ಮೇಲಾದ ವಸ್ತುವಿರುವುದೆಂದು ತೋರಿಸಿದುದಾದರೆ ಅದರ ಇರುವಿಕೆಯು ಬಯಲಿನಲ್ಲಿ ಕಣ್ಣಿಗೆ ಕಾಣಿಸುವ ಬಿಸಲ್ಗುದುರೆಯಂತಿರುವುದೆಂದು ತಿಳಿಯಬೇಕು.

64. ಕೇಳಿ ನೋಡಿದವುಗಳೆಲ್ಲಾ ಬ್ರಹ್ಮವು ವರ್ತಿಸುವ ಬುದ್ಧಿಕೌಶಲ್ಯತೆಯೂ, ವಿಭೇದನವಾಗಲಶಕ್ಯವಾಗಿಯೂ ಆಗಿರುವುದೇ ಬ್ರಹ್ಮವೆಂಬುದರ ಗುಣಗಳು.

65. ಶಾಸ್ತ್ರಕ್ಕೆ ನೇತ್ರಪ್ರಾಯವಾದ ಬ್ರಹ್ಮವೆಂಬುದು ನಾಶರಹಿತವಾಗಿಯೂ, ಬುದ್ಧಿಕೌಶಲವುಳ್ಳದಾಗಿಯೂ, ಸೌಖ್ಯಸ್ವರೂಪವಾಗಿಯೂ, ಇದ್ದು ಸರ್ವವ್ಯಾಪಕವಾಗಿರುವುದು. ಕುರುಡನು ವಿರಾಜಮಾನನಾದ ಸೂರ್ಯನನ್ನು ನೋಡುವುದಕ್ಕೆ ಹೇಗೆ ಅಸಾಧ್ಯವಾಗಿರುವುದೋ ಹಾಗೆಯೇ ಅಜ್ಞಾನಾಂಧಕಾರದಲ್ಲಿರುವವನು ಆ ಬ್ರಹ್ಮವೆಂಬುದನ್ನು ನೋಡಲಾರನು.

66. ಜೀವಾತ್ಮವಾದರೋ, ಶಾಸ್ತ್ರಜನ್ಯಜ್ಞಾನದಿಂದಲೂ ಇತರ ವಿಧವಾದ ಜ್ಞಾನದಿಂದಲೂ, ಜ್ಞಾನಜ್ಯೋತಿಯಿಂದ ಕೂಡಿ ಪ್ರಕಾಶಿಸುತ್ತಾ, ಎಲ್ಲಾ ವಿಧವಾದ ಇತರ ವಸ್ತುಗಳ ಸಂಪರ್ಕವಿಲ್ಲದೆ, ಪುಟಹಾಕಿದ ಚಿನ್ನದಂತೆ ಸದಾ ಪ್ರಕಾಶಮಾನವಾಗಿರುವುದು.

67. ಆತ್ಮಜ್ಞಾನವು ಹೃದಯದಲ್ಲಿ ಉದ್ಭವವಾಗಿ, ಅಜ್ಞಾನವೆಂಬ ಅಹಂಕಾರವನ್ನು ತೊಲಗಿಸುವಂತೆ ಮಾಡಿ, ಸಮಸ್ತ ವಸ್ತುಗಳಲ್ಲಿಯೂ ವ್ಯಾಪಿಸಿ, ಸರ್ವವಸ್ತುವನ್ನು ಜೀವಿಸುವಂತೆಮಾಡಿ ಸರ್ವದಾ ಪ್ರಕಾಶಿಸುತ್ತಿರುವುದು.

68. ಇಷ್ಟು ವಿಚಿತ್ರತರವಾದ ರೀತಿಯಲ್ಲಿ ವರ್ತಿಸುತ್ತಾ ಇರುವ ಜೀವನು ಅಂತರಿಕ್ಷ ದೇಶಗಳೆನ್ನದೆ ಎಂತಹವನೆಂದೂ ಲಕ್ಷಿಸದೆ, ಇದು ಚಳಿ, ಇದು ಬಿಸಲು ಎಂಬುದನ್ನು ಗಮನಿಸದೆ ಸರ್ವದಾ ಶಾಂತಿಸುಖವನ್ನು ತಾಳಿ, ಸರ್ವಜ್ಞನಾಗಿಯೂ, ಸರ್ವವ್ಯಾಪಕನಾಗಿಯೂ, ನಾಶರಹಿತನಾಗಿಯೂ ಇದ್ದು ಪುನರ್ಜನ್ಮವನ್ನು ಹೊಂದದೇ ಇರುವನು. ಸಂಪೂರ್ಣಂ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦–೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರಿತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦–೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ನೋಡಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವನ್ನಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬಿರಿಯುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋಲ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನೆತ್ತಿಉರಿ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಫ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕರಿಜಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉಂಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[25] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಿಗೂ ಇಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[6] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶೃತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಬಂಧಕ್ತ ಅಮೃತಲೇಖೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು. ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೋಷಣದವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[7] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಫೆಬ್ರವರಿ ೧೯೩೩ [ಸಂಚಿಕೆ ೪೧

ಶ್ರೀ ಜಗದ್ಗುರು ಪಂಚಾಚಾರ್ಯ
ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಶೈವೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿ ಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವುವು. ಈ ಗ್ರಂಥವು ೨೦೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,

ರಬ್ಬರ್ ಸ್ಟ್ಯಾಂಪ್ ಮತ್ತು ಫೋಟೋ ಬ್ಲಾಕುಗಳನ್ನು ತಯಾರಿಸುವವರು,

[13]

ಅರಸೀಕೆರೆತಾಲ್ಲೂಕು ಕಣಕಟ್ಟೆ ಉಪಾಧ್ಯಾಯರ ಸಂಘ.

ಈ ಸಂಘದ 13 ನೆಯ ಸಮ್ಮೇಳನವು ತಾ|| 11-2-33 ನೇ ದಿನ ಮಧ್ಯಾಹ್ನ 2 ಗಂಟೆಗೆ ಕಣಕಟ್ಟೆ ಸ್ಕೂಲ್ ಕಟ್ಟಡದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಈ ಸಂಘಕ್ಕೆ ಅರಸೀಕೆರೆ ತಾಲೂಕಿನಿಂದ ಬರಬೇಕಾದ ಎಲ್ಲಾ ಉಪಾಧ್ಯಾಯರುಗಳೂ ಹಾಜರಾಗಿ ಕಡೂರು ತಾಲೂಕಿನಿಂದ ಬರಬೇಕಾಗಿದ್ದ ಉಪಾಧ್ಯಾಯರುಗಳ ಪೈಕಿ ಪಂಚನಹಳ್ಳಿಯ ಒಬ್ಬ ಉಪಾಧ್ಯಾಯರ ಹೊರತು ಉಳಿದ ಗ್ರಾಮಗಳ ಉಪಾಧ್ಯಾಯರುಗಳಾರೂ ಬಂದಿರಲಿಲ್ಲ. ಮಾಮೂಲಿನಂತೆ ಶ್ರೀಯುತ ಪ್ರಾರ್ಥನೆಯು ನಡೆದ ಮೇಲೆ ಕಣಕಟ್ಟೆ ಪಟೇಲ್ ಮ|| ರಾ|| ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭಿಸಲ್ಪಟ್ಟು ಅದರ ಕಾರ್ಯಕಲಾಪಗಳು ನಡೆಯುತ್ತಿದ್ದ ವೇಳೆಗೆ ಸಂಘದ ಪುಣ್ಯೋದಯದಿಂದ ಹಾಸನ ಡಿಸ್ಟ್ರಿಕ್ಟ್ ಉರ್ದು ಅಸಿಸ್ಟೆಂಟ್ ಇನ್ಸ್‌ಪೆಕ್ಟರವರು ಅಕಸ್ಮಾತ್ತಾಗಿ ದಯಮಾಡಿಸಿ ಸಭಾಧ್ಯಕ್ಷರ ಮತ್ತು ಸಭಿಕರ ಪ್ರಾರ್ಥನೆಯಂತೆ ಆಗ್ರಾಸನವನ್ನು ಅಲಂಕರಿಸಿದರು. ಅನಂತರ ಸಂಘದ ಸೆಕ್ರೆಟರಿಗಳವರು ಸಂಘವು ಸ್ಥಾಪಿತವಾದಲಾಗಾಯ್ತು ನಡೆದಿರುವ ಕಾರ್ಯಕಲಾಪಗಳನ್ನೂ ಆಯವ್ಯಯದ ವಿಚಾರವನ್ನೂ ಅರಿಕೆಮಾಡಿ, ಬರುವ ಮಾರ್ಚಿ 25 ನೇ ತಾರೀಖಿನಲ್ಲಿ ನಡೆಯಬೇಕೆಂದಿರುವ ಈ ಸಮ್ಮೇಳನದ ವಾರ್ಷಿಕೋತ್ಸವದ ವಿದ್ಯಮಾನಗಳನ್ನೂ ಅರಿಕೆಮಾಡಿದ್ದಲ್ಲದೆ ಕಡೂರು ತಾಲೂಕಿನಿಂದ ನಿಷ್ಕಾರಣವಾಗಿ ಬರದೆ ಇರುವ ಉಪಾಧ್ಯಾಯರುಗಳನ್ನು ಕ್ರಮವಾಗಿ ಬರುವಂತೆ ಏರ್ಪಾಡುಮಾಡಿಸಿಕೊಡಬೇಕೆಂದು ಕಡೂರು ಸ್ಕೂಲ್ ಬೋರ್ಡ್ ಅಸಿಸ್ಟೆಂಟ್ ಸಾಹೇಬರವರನ್ನು ಕೇಳಿಕೊಳ್ಳಬೇಕೆಂದು ತಿಳಿಸಿದರು. ಅನಂತರ ಅಧ್ಯಕ್ಷರು ಸಂಘದ ಉದ್ದೇಶ, ಉಪಾಧ್ಯಾಯರ ಕರ್ತವ್ಯ ಮತ್ತು ಗ್ರಾಮಸ್ಥರು ಸ್ಕೂಲ್ ವಿಚಾರದಲ್ಲಿ ಮಾಡಬೇಕಾದ ಸಹಾಯ, ಈ ವಿಚಾರಗಳಲ್ಲಿ ಎಲ್ಲರಿಗೂ ಆನಂದವಾಗುವಂತೆ ಭಾಷಣವಿತ್ತರು. ಈ ಭಾಷಣವು ಇಹಪರಲೋಕಗಳ ಸುಖಸಂಪತ್ತಿಗೆ ಸಾಧಕವಾಗಿದ್ದುದಲ್ಲದೆ ಭಾರತೀಯರ ಏಕಮತ್ಯಕ್ಕಂತೂ ಕೇವಲ ಮಾರ್ಗದರ್ಶಕವಾಗಿತ್ತು. ಈ ಪುಣ್ಯಪುರುಷರು ಇಂಥ ಬಿಸಿಲುಕಾಲದಲ್ಲಿ ದೇಹಾಯಾಸವನ್ನು ನೋಡದೆ ಸಂಘಾಭಿವೃದ್ಧಿಯೇ ಮುಖ್ಯವೆಂದು ಭಾವಿಸಿ ಬಂದು ಪ್ರೋತ್ಸಾಹವನ್ನು ದಯಪಾಲಿಸಿದ್ದಕ್ಕಾಗಿ ಸಂಘದ ಪರವಾಗಿ ಪಟೇಲ್ ಮ|| ರಾ|| ಕೃಷ್ಣಮೂರ್ತಿರಾಯರೂ ವೇ|| ಬ್ರ|| ರಾಮಣ್ಣನವರೂ ಅಧ್ಯಕ್ಷರಿಗೆ ಅಭಿವಂದನೆಗಳನ್ನರ್ಪಿಸಿದರು. ಬಳಿಕ ಸಂಘದ ಸೆಕ್ರೆಟರಿಗಳು ಈ ಸಂಘದ ಪುನರುಜ್ಜೀವನಗೊಳಿಸಿದ ಕಡೂರು ರೇಂಜು ಅಸಿಸ್ಟೆಂಟರವರಿಗೂ ಅರಸೀಕೆರೆ ಸ್ಕೂಲ್‌ಬೋರ್ಡ್ ಸಾಹೇಬರವರಿಗೂ ಮತ್ತು ಈ ಸಂಘದ ಪುರೋಭಿವೃದ್ಧಿಕಾಲದಲ್ಲಿ ಕಟ್ಟಬದ್ಧರಾಗಿರುವ ಕಣಕಟ್ಟೆ ಗ್ರಾಮದ ಮಹಾಜನರಿಗೂ ಸಹ ಸಭಾಪರವಾಗಿ ಶ್ರೇಯಸ್ಸನ್ನು ಕೋರಿದನಂತರ ಸರ್ವರೂ ನಮ್ಮನ್ನಾಳುವ ಮಹಾಸ್ವಾಮಿಯವರ ಮತ್ತು ಭಾವಿಪ್ರಭುಗಳಾದ ಶ್ರೀಜಯಚಾಮರಾಜೇಂದ್ರ ಒಡೆಯರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿದನಂತರ ಸಭೆಯು ಮುಗಿಸಲ್ಪಟ್ಟಿತು. ಈ ಸಭೆಗೆ ದಯಮಾಡಿದ್ದ ಎಲ್ಲರನ್ನೂ ಡಿಬ್ಬೂರ್ ಸ್ಕೂಲ್‌ಮಾಸ್ಟರ್ ಮ|| ರಾ|| ಚನ್ನಪ್ಪನವರು ಅಲ್ಪಾಹಾರದಿಂದ ಸಂತೋಷಗೊಳಿಸಿದುದು ಸ್ತೋತ್ರಾರ್ಹವಾಗಿತ್ತು.

ಎಂ. ಚಿಕ್ಕೇಗೌಡ, ಸಂಘಾಭಿಮಾನಿ.

ಕಳೆದ ವರ್ಷದ ಜೂನ್ ತಿಂಗಳಲ್ಲಿ ಮುಗೀಗಂಜಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮಿ|| ಸೇನ್‌ರವರನ್ನು ಕೊಂದ ಕಾಲಿದಾಸಮುಜಿರ್ಜಿಯು ಫೆಬ್ರವರಿ 16 ನೇ ತಾರೀಖಿನ ಬೆಳಿಗ್ಗೆ ಢಕ್ಕಾಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟನು.

ಒಳದೇಶದ ವೃತ್ತಾಂತಗಳು.

ದ್ರವ್ಯಾಭಾವದದೆಸೆಯಿಂದ ಶಿವಮೊಗ್ಗೆಯ ಇಂಟರ್‌ಮೀಡಿಯೆಟ್ ಕಾಲೇಜು ವಜಾಮಾಡಲ್ಪಡುವದೆಂದು ತಿಳಿದುಬಂದಿದೆ.

ಮೈಸೂರು ಸರಕಾರದವರು ಬರುವ ಜುಲೈ 1 ನೇ ತಾರೀಖಿನಿಂದ ಗಾಂಜಾಮೇಲಿನ ಸುಂಕವನ್ನು 80 ತೊಲೆಗಳ ಸೇರು ಒಂದಕ್ಕೆ 25 ರೂ. ಗಳಿಂದ 27-8-0 ರೂ. ಗೆ ಹೆಚ್ಚಿಸಿರುವದಾಗಿ ಪ್ರಕಟಿಸಿರುತ್ತಾರೆ.

ಕೆಲವು ದಿವಸಗಳ ಹಿಂದೆ ಒಬ್ಬ ರೈಲ್ವೇ ಟಿಕೆಟ್ ಕಲೆಕ್ಟರು ಬೆಂಗಳೂರಿನಿಂದ ಮೈಸೂರಿಗೆ ರಾತ್ರಿವೇಳೆಯಲ್ಲಿ ಏಕಾಂಗಿಯಾಗಿ 2 ನೇ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬ ಕ್ರಿಶ್ಚಿಯನ್ ಸ್ತ್ರೀಯಮೇಲೆ ಅತ್ಯಾಚಾರ ನಡೆಸಲು ಪ್ರಯತ್ನಿಸಿದನೆಂದೂ, ಅನಂತರ ಆಕೆಯು ರೈಲ್ವೇ ಪೋಲೀಸರ ಸಹಾಯದಿಂದ 3 ನೇ ತರಗತಿಯಲ್ಲಿ ಪ್ರಯಾಣಮಾಡಿದಳೆಂದೂ, ಬೆಂಗಳೂರಿನಲ್ಲಿದ್ದ ಆಕೆಯ ಪತಿಗೆ ಈ ವರ್ತಮಾನವು ತಿಳಿದು ಆತನು ಫಿರ್ಯಾದುಮಾಡಲು, ರೈಲ್ವೇ ಅಧಿಕಾರಿಗಳು ಟಿಕೆಟ್ ಕಲೆಕ್ಟರನ್ನು ಕೆಲಸದಿಂದ ವಜಾಮಾಡಿ, ಗಾರ್ಡನಿಗೆ 5 ರೂ. ಸಂಬಳ ಕಡಿಮೆಮಾಡಿದರೆಂದೂ ತಿಳಿದುಬಂದಿದೆ.

ಇದೇ ಫೆಬ್ರವರಿ 5 ನೆಯ ತಾರೀಖಿನ ದಿವಸ ಸಾಯಂಕಾಲ ರಾಜಧಾನಿಯ ಲೇಟ್ ಕಬ್ಬಳ್ಳಿ ಚನ್ನಬಸಪ್ಪನವರ ಹಾಸ್ಟೆಲ್ಲಿನಲ್ಲಿ 'ಶ್ರೀಸಾಹಿತ್ಯಸಾಮ್ರಾಜ್ಯ ನಾಟಕಮಂಡಲಿ' ಎಂಬ ನೂತನ ನಾಟಕಸಂಘದ ಪ್ರಾರಂಭೋತ್ಸವವು ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ|| ಸಿ. ನಾರಾಯಣಸ್ವಾಮಿನಾಯಡುರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ದೇವತಾಪ್ರಾರ್ಥನೆಯಾದನಂತರ ಶ್ರೀ|| ಸಿ. ನಾರಾಯಣಸ್ವಾಮಿನಾಯಡುರವರು ಇಂದಿನ ನಾಟಕ ಕಂಪೆನಿಗಳಲ್ಲಿರುವ ಕುಂದುಕೊರತೆಗಳನ್ನು ವಿವರಿಸಿ ನೂತನ ಕಂಪೆನಿಯ ಸಂಚಾಲಕರು ಕೇವಲ ದ್ರವ್ಯಾರ್ಜನೆಯಲ್ಲಿ ಮಾತ್ರ ಮನಸ್ಸಿಡದೆ ನೀತಿಪ್ರದಗಳಾದ ಹೊಸಹೊಸ ನಾಟಕಗಳನ್ನು ಬರೆಯಿಸಿ ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿ ಕಂಪೆನಿಯ ನಾಮವು ಅನ್ವರ್ಥವಾಗುವಂತೆ ಮಾಡಬೇಕೆಂದು ಹೇಳಿದರು. ಈ ಸಮಾರಂಭಕ್ಕೆ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ|| ಸುಬ್ಬರಾಯಪ್ಪನವರೇ ಮೊದಲಾದ ಅನೇಕಜನ ದೊಡ್ಡಮನುಷ್ಯರು ಆಗಮಿಸಿ ನೂತನ ಕಂಪೆನಿಯ ಶ್ರೇಯಸ್ಸನ್ನು ಕೋರಿದರು. ಈ ಕಂಪನಿಗೆ ಶ್ರೀ|| ಎಂ. ವಿ. ಸುಬ್ಬಯ್ಯನಾಯ್ಡುರವರು ಪ್ರ್ಯಾಕ್ಟೀಸ್ ಮ್ಯಾನೇಜರಾಗಿಯೂ, ಶ್ರೀ|| ಎಂ. ವಿ. ಶಿವರ್ನಾರವರು ಮುಖ್ಯ ಮ್ಯಾನೇಜರಾಗಿಯೂ ಇರುತ್ತಾರೆ.

ಇಂಡಿಯಾದಲ್ಲಿ ಮೆಡಿಕಲ್ ಕೌನ್ಸಿಲ್ಲನ್ನು ಸ್ಥಾಪಿಸುವುದಕ್ಕೆ 90 ಲಕ್ಷ ರೂಪಾಯಿಗಳು ವೆಚ್ಚವಾಗುವವಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಮತ್ತು 'ಅಥ ಇತರೇಷಾಂ' ಎಂಬ ಮುಂತಾದ ಮುಂದಿನ ವಾಕ್ಯಗಳಲ್ಲಿ ಪಶ್ವಾದಿಗಳಿಗೆ ಹಸಿವು ನೀರಡಿಕೆ ಮೊದಲಾದ ದೇಹಧರ್ಮಗಳ ಜ್ಞಾನಮಾತ್ರವಿರುವುದು. ಅವು ತಾವು ಅರಿಯಲ್ಪಟ್ಟುದನ್ನು ಹೇಳಲಿಕ್ಕೂ ಮತ್ತೆ ನೋಡಲಿಕ್ಕೂ ಹೇಗೆ ಶಕ್ತಗಳಲ್ಲವೋ, ಹಾಗೇ ಅವುಗಳಿಗೆ ನಾಳಿನ ಕರ್ತವ್ಯವೇನೆಂಬುದೂ ಗೊತ್ತಾಗುವುದಿಲ್ಲ. ಹಾಗೂ, ಇಹಪರಗಳ ಜ್ಞಾನವಾದರೂ ಅವುಗಳಿಗಿರುವುದಿಲ್ಲ. ಅವುಗಳಿಗೆ ತಮ್ಮೆದುರಿಗೆ ಪ್ರತ್ಯಕ್ಷವಾಗಿ ಸಂಭವಿಸುವ ಇಷ್ಟಾನಿಷ್ಟಗಳ ಜ್ಞಾನಮಾತ್ರವಿರುವುದು; ಎಂಬೀ ಮೊದಲಾದ ಸವಿಸ್ತರವರ್ಣನೆಯುಂಟು. ಆದ್ದರಿಂದ, ಮನುಷ್ಯರು ಸೃಷ್ಟಿಪದಾರ್ಥಗಳ ಧರ್ಮಗಳಂತೆ ವರ್ತಿಸುವುದರಿಂದಲೂ ಈಶ್ವರನ ಅಸ್ತಿತ್ವವನ್ನೊಪ್ಪದಿರುವುದರಿಂದಲೂ ಅವರ ಬಾಳುವೆಯಲ್ಲಿ ಯಾವ ಹಾನಿಯೂ ತಪ್ಪದೆ ಅನ್ಯಪ್ರಾಣಿಗಳಂತೆ ನಿಃಶಂಕವಾಗಿ ವ್ಯವಹರಿಸಬಹುದು. ವಸ್ತುತಃ ಸೃಷ್ಟಿಯ ನಿಯಮಾನುಸಾರವಾಗಿ ವರ್ತಿಸುವುದರಲ್ಲಿ ಮನುಷ್ಯರಿಗಿಂತಲೂ ಇತರ ಪ್ರಾಣಿಗಳೇ ವಿಶೇಷದಕ್ಷವಾಗಿರುತ್ತವೆ. ಮನುಷ್ಯರು ಎಷ್ಟೋ ಸಾರೆ ಸೃಷ್ಟಿಯ ನಿಯಮವನ್ನುಲ್ಲಂಘಿಸಿ (ಅತಿಕ್ರಮಿಸಿ) ನಡೆವುದರಿಂದ ಅತೀವ ದುಃಖಿಗಳಾಗುತ್ತಿರುವರು. ಅವರು ಹೀಗೆ ಸೃಷ್ಟಿಯ ನಿಯಮವನ್ನತಿಕ್ರಮಿಸಿ ನಡೆಯುವವರಾಗಿ ಪ್ರಾಣಿಸಾಧಾರಣವಾಗಿರತಕ್ಕ ತಮ್ಮ ಶಕ್ತಿಯಲ್ಲಿ ಬಹುಭಾಗವನ್ನು ದುರ್ವ್ಯಯಮಾಡಿಬಿಡುವರು. ಸೃಷ್ಟಿನಿಯಮನಿರಪೇಕ್ಷವಾದ ಈ ಬಗೆಯ ನಡುವಳಿಕೆಯಿಂದ ಆ ಮಾನವರು ವಿಚಿತ್ರಗಳಾದ ಅನೇಕ ರೋಗಗಳ ಮೂಲಕವಾಗಿ ಪಾಪರಿಯಾದ ಮಾನುಷೀ ದೈವೀ ಆಪತ್ತುಗಳೀಡಾಗಿ ಬಳಲುವರು. ಮನುಷ್ಯೇತರ ಪ್ರಾಣಿಗಳು ಸೃಷ್ಟಿಯ ನಿಯಮಾನುಸಾರ ವರ್ತಿಸುವುವುಗಳಾಗಿ ಸಂತತಿವಿಷಯಕವಾದ ಅಮೋಘವೀರ್ಯವನ್ನು ಕಾಯ್ದುಕೊಂಡಿರುತ್ತವೆ. ನಾವೇ ಜಾಣರೆಂದು ಹೆಮ್ಮೆಪಡುವ ಮಾನವರಾದರೋ—

ಸ್ವೈರಾಚಾರೇಣ ಜೀವಾನಾಂ ನಶುಭಾ ಗತಿರೀಕ್ಷಿತಾ ।
ನಿಗ್ರಹೇಣೇನ್ದ್ರಿಯಾಣಾಂತು ನಿಶ್ಚಿತಾ ಪರಮಾಗತಿಃ ॥

ಎಂಬುದಾಗಿ ಹೇಳಲ್ಪಡುವ ಹಿರಿಯರ ನುಡಿಗಳಿಗೆ ಕಿವಿಗೊಡದೆ ಮನಬಂದಂತೆ ನಡೆದು ಮೋಘವೀರ್ಯರಾಗುತ್ತಿರುವರು. ಇಂತಿರುವವರಾದರೂ ಈ ದುರ್ಬಲಮನುಷ್ಯರು 'ಸೃಷ್ಟಿಪದಾರ್ಥಗಳ ಧರ್ಮದಂತಾಚರಿಸುವುದರಿಂದಲೂ ಈಶ್ವರನೇ ಇಲ್ಲವೆಂದು ತಿಳಿಯುವುದರಿಂದಲೂ ಯಾವ ಹಾನಿಯುಂಟು?' ಎಂಬುದಾಗಿ ಪ್ರಶ್ನೆಮಾಡುತ್ತಿರುವ ರೀತಿಯಾದರೋ ನಮಗೆ ಅಸುವುದಕ್ಕೆ ಬರುವುದಿಲ್ಲ. ಅದಾಗ್ಯೂ, ನಾವು ಆಳವಾದ ಕಡಲಿನಲ್ಲಿ ಹಾರಿದರೇನಾಗುವುದು? ಎನ್ನುವ ಗಾಂಪರನುಡಿಗೆಣೆಯಾಗಿರುವುದು.

ಚೆನ್ನಾಗಿ ವಿಚಾರಮಾಡಿದಲ್ಲಿ ಮಾನವಪ್ರಾಣಿಯು ಪಶುಮೊದಲಾದ ಇತರ ಪ್ರಾಣಿಗಳಂತೆ ಸೃಷ್ಟಿಧರ್ಮವನ್ನನುಸರಿಸಿ ನಡೆವುದೇ ಅವನ ಕರ್ತವ್ಯವಲ್ಲ; ಮತ್ತೇನೆಂದರೆ ಅದನ್ನು ಅತಿಕ್ರಮಿಸಿ ತನ್ನ ಆತ್ಮೋನ್ನತಿಯನ್ನು ಮಾಡಿಕೊಳ್ಳಲೂ ಸಮರ್ಥನಾಗಿದ್ದಾನೆ. ಆದಕ್ಕಾಗಿಯೇ ಈಶ್ವರನು ಈ ಜಗತ್ತಿನಲ್ಲಿ 'ಧರ್ಮ'ವೆಂಬುದೊಂದು ಕಟ್ಟಳೆಯನ್ನು ಕಲ್ಪಿಸಿದ್ದಾನೆ. ಪಶ್ವಾದಿಪ್ರಾಣಿಗಳು ತಿಳುವಳಿಕೆಯುಳ್ಳವುಗಳೆಂದು ಹೇಳಿಸಿಕೊಳ್ಳಲ್ಪಡತಕ್ಕವಾದರೂ ಅವು ಸ್ವಾಭಾವಿಕವಾಗಿ ನಿಸರ್ಗವನ್ನತಿಕ್ರಮಿಸುವುದಿಲ್ಲವಾದ್ದರಿಂದ ಅವುಗಳ ನಿಯಂತ್ರಣಕ್ಕೋಸ್ಕರ ನಿಯಾಮಕವಾದ ಧರ್ಮದ ಆವಶ್ಯಕತೆಯಿರುವುದಿಲ್ಲ. ಮನುಷ್ಯನು ಸೃಷ್ಟಿಯ ನಿಯಮವನ್ನುಲ್ಲಂಘಿಸತಕ್ಕವನಾದುದರಿಂದ ಅವನ ನಡುವಳಿಕೆಯನ್ನು ನಿಯಮನಗೊಳಿಸುವ ಧರ್ಮವು ಇರಲಿಕ್ಕೇ ಬೇಕಾಯಿತು. ಅಂತಹ ಧರ್ಮವನ್ನು ಕೂಡ ಲೆಕ್ಕಿಸದೆ ಮನಬಂದಂತೆ ನಡೆವುದರಿಂದೇನಾಗುವುದೆಂಬ ವಿಷಯದಲ್ಲಿ ಭಗವಂತನು ಹೇಳುವುದೇನೆಂದರೆ:—

ಯೇ ತ್ವೇತದಭ್ಯಸೂಯನ್ತೋ ನಾನು ತಿಷ್ಠನ್ತಿ ಮೇ ಮತಮ್ ।
ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿ ನಷ್ಟಾನಚೇತಸಃ ॥

ಎಲೈ ಪಾರ್ಥನೇ! ಈಶ್ವರಾರ್ಪಿತಬುದ್ಧಿಯಿಂದ ಶಾಸ್ತ್ರವಿಹಿತವಾದ ಕರ್ಮಗಳನ್ನನುಷ್ಠಿಸತಕ್ಕದ್ದು, ಎಂಬ ಈ ನನ್ನ ಮತವನ್ನೊಪ್ಪಿ ಅದರಂತೆ ಶ್ರದ್ಧೆಯಿಂದ ಆಚರಿಸುವವರು ಧರ್ಮಾಧರ್ಮರೂಪವಾದ ಕರ್ಮಬಂಧರಹಿತರಾಗುವರು; ಇನ್ನು ಯಾರು ಈ ನನ್ನ ಮತದಲ್ಲಿ ದೋಷದೃಷ್ಟಿಯುಳ್ಳವರಾಗಿ ಅದರಂತೆ ಅನುಷ್ಠಿಸುವುದಿಲ್ಲವೋ ಅವರು ಸರ್ವಪ್ರಕಾರವಾದ ಜ್ಞಾನವಿಷಯದಲ್ಲಿ ಮೂಢರೂ ಅವಿವೇಕಿಗಳೂ ನಷ್ಟರೂ (ಅಂದರೆ ಪುರುಷಾರ್ಥಕ್ಕೆ ಅನಧಿಕಾರಿಗಳೂ) ಆಗಿರುವರೆಂದು ತಿಳಿ.

ಧರ್ಮವೆಂಬುದು ಮುಖ್ಯವಾಗಿ ಮರಣೋತ್ತರದಲ್ಲಿ ಉತ್ತಮಾವಸ್ಥೆಯನ್ನು ಅಥವಾ ದೇಹವಿರುವಾಗಲೇ ಜೀವನು ತನ್ನ ಮೂಲಸ್ವರೂಪಭೂತವಾದ ಶಿವತ್ವಾಭಿವ್ಯಕ್ತತೆಯನ್ನು ಪಡೆಯುವುದಕ್ಕೆ ಸಾಧನವಾಗಿರುವುದು. ಕೇವಲ ನಾಸ್ತಿಕತೆಯಿಂದ ಹಾಗೆ (ಧರ್ಮವನ್ನನುಸರಿಸಿ) ನಡೆಯದಿದ್ದರೆ ಧರ್ಮಕ್ಕೆ ಯಾವ ಹಾನಿಯೂ ಇಲ್ಲ. ವೇದಾಗಮಶಾಸ್ತ್ರಗಳು ಮಾನವನಿಗೆ ಹಿತೋಪದೇಶವನ್ನು ಮಾಡುವುದಷ್ಟೇ ಅವುಗಳ ಕೆಲಸವು. ಆ ಪ್ರಕಾರವಾಗಿ ಅವು ಆ ಕೆಲಸವನ್ನು ಸರಿಯಾಗಿ ಮಾಡುತ್ತಲೇ ಇರುವುವು. ಯಾವನು ಅವುಗಳ ಹಿತೋಪದೇಶದಲ್ಲಿ ಶ್ರದ್ಧೆಯುಳ್ಳವನಾಗಿ ಧರ್ಮವನ್ನನುಸರಿಸಿ ನಡೆಯುವನೋ ಅವನ ಮನುಷ್ಯತ್ವವೂ ಪಶ್ವಾದಿಭಿನ್ನತ್ವವೂ ಸಿದ್ಧವಾಗುವುದು. ಆ ಹಿತೋಪದೇಶವನ್ನು ಲೆಕ್ಕಿಸದೆ ಯಥೇಷ್ಟಾಚರಣೆಯುಳ್ಳವನಾದರೆ ಅವನ ಮನುಷ್ಯತ್ವ ಸಿದ್ಧಿಸುವುದಿಲ್ಲವೆಂಬುದಿಷ್ಟೇ! ಈ ಕಾಲದಲ್ಲಿ ಯಾರು ಕೆಲಂಬರು ಧರ್ಮದಲ್ಲಿಯೂ ಈಶ್ವರನಲ್ಲಿಯೂ ವಿಶ್ವಾಸವಿಲ್ಲದವರಾಗಿರಬಹುದು, ಇದ್ದುಕೊಂಡಿರಲಿ; ಅದರಿಂದ ನಮಗೆ ಯಾವ ಹಾನಿಯೂ ಇಲ್ಲವೈಸೆ? ಏಕೆಂದರೆ—ನಾವು ನಮ್ಮ ಕರ್ಮದ ಫಲವನ್ನು ಭೋಗಿಸುತ್ತಿರುವಂತೆ ಇತರರು ತಮ್ಮ ತಮ್ಮ ಕರ್ಮದ ಫಲವನ್ನು ಭೋಗಿಸತಕ್ಕವರಾಗಿದ್ದಾರೆಂಬುದು ನಿಶ್ಚಿತವಾದುದು. ಆಯುರ್ವೇದವು ಯಾವದಾದರೊಂದು ರೋಗಕ್ಕೆ ಔಷಧವನ್ನೇ ಹೇಳದಿದ್ದ ಪಕ್ಷದಲ್ಲಿ ಆ ವೇದವು ಅಪರಾಧಿಯೆನಿಸಬಹುದಾಗಿದ್ದಿತು, ಹಾಗೂ ಆಯುರ್ವೇದವನ್ನು ಬಲ್ಲವನು ರೋಗಿಗೆ ಆ ಔಷಧವನ್ನು ಹೇಳದಿದ್ದರೆ ಆ ವೈದ್ಯನು ದೋಷಾರೋಪಣೆಗೆ ಗುರಿಯಾಗುತ್ತಿದ್ದನು; ಆದರೆ ಆಯುರ್ವೇದವು ಯೋಗ್ಯವಾದ ಔಷಧವನ್ನು ಹೇಳಿದ್ದರೂ ವೈದ್ಯನು ರೋಗಿಗೆ ಆ ಔಷಧವನ್ನು ತೆಗೆದುಕೊಳ್ಳುವಂತೆ ಆಗ್ರಹವನ್ನು ಮಾಡಿದರೂ ಕೂಡ ರೋಗಿಯು ಅಶ್ರದ್ಧೆಯಿಂದ ಔಷಧವನ್ನು ಸೇವಿಸದಿದ್ದರೆ ಆಯುರ್ವೇದದ ಮತ್ತು ವೈದ್ಯನ ಹಾನಿಯೇನಿದೆ? ಅಶ್ರದ್ಧೆಯ ಮೂಲಕ ರೋಗಿಯು ಸಾಯುವನು, ಮತ್ತೇನಾಗುವುದು? ಈ ಮಾತಿಗನುಸರಿಸಿ ಅರ್ವಾಚೀನ ಕವಿಯೋರ್ವನು ಹೀಗೆ ನುಡಿಯುತ್ತಾನೆ—

ಶಾಸ್ತ್ರಂ ಭೂರಿ ನಿಜಸ್ವರೂಪಮತಯೇ ಸ್ವಾರಾಧನಾರ್ಥಂ ವಪುಃ
ಸ್ವಧ್ಯಾನಾಯ ಮನಶ್ಚ ಬುದ್ಧಿಮನಘಾಂ ಲಬ್ಧ್ವಾಂಚ ತೀರ್ಥಾದಿಕಮ್ ।
ತತ್ರಾತ್ಮಸ್ವೃಪದೇಷ್ಟೃನುತ್ತಮಗುರೂನ್ ದತ್ವಾನುಗೃಹ್ಣಾತಿ ಯಃ
ಸಂಸಾರೇ ತದಪಿ ಭ್ರಮೇನು ಯದಿ ಕಿಂ ಕುರ್ವೀತ ಸರ್ವೇಶ್ವರಃ ॥

ಪರಮಾತ್ಮನು ತನ್ನ ಅಂಶೀಭೂತರಾದ ಜೀವರು ನಿಜಸ್ವರೂಪವನ್ನರಿಯಲೆಂದು ವೇದಾಗಮಪುರಾಣಶಾಸ್ತ್ರವನ್ನೂ, ತನ್ನನ್ನು ಪೂಜಿಸಲೆಂದು ನಿರ್ಮಲವಾದ ಮಾನವದೇಹವನ್ನೂ, ತನ್ನನ್ನು ಧ್ಯಾನಿಸಲೆಂದು ಮನಸ್ಸನ್ನೂ, ಬುದ್ಧಿಯು ಪಾಪರಹಿತವಾಗಲೆಂದು ತೀರ್ಥಮೊದಲಾದುದನ್ನೂ, ತತ್ವೋಪದೇಶವನ್ನು ಮಾಡಲೋಸುಗ ಉತ್ತಮಗುರುಗಳನ್ನೂ ಅನುಗ್ರಹಪೂರ್ವಕವಾಗಿ ಅನುಕೂಲಮಾಡಿಕೊಟ್ಟಿರುವನಾದರೂ, ನಾವು ಅದೆಲ್ಲವನ್ನೂ ಲೆಕ್ಕಿಸದೆ ಜನನಮರಣಾತ್ಮಕ ಸಂಸೃತಿಯಲ್ಲಿ ಕೊಳಲಿಬಳಲುವವರಾದರೆ ಆ ಸರ್ವೇಶ್ವರನು ಏನು ತಾನೇ ಮಾಡಬೇಕು?

ಈ ಕಾಲದಲ್ಲಿ ಆದಿಭೌತಿಕ ಶಾಸ್ತ್ರವನ್ನು ಕಲಿಯುವುದರಲ್ಲಿಯೇ ಜನರ ಮನದೊಲವು ಹೆಚ್ಚಾಗಿದೆ. ಆ ಶಾಸ್ತ್ರದ ಸಂಸ್ಕಾರಬಲದಿಂದ ಅವರು ಯಾವದೊಂದು ವಿಷಯವನ್ನಾಗಲಿ ಆ ಶಾಸ್ತ್ರಕ್ಕೆ ಬರೆಹಚ್ಚಿ ನೋಡುವ ಸ್ವಭಾವವುಳ್ಳವರಾದುದರಿಂದ ಅಧ್ಯಾತ್ಮವಿಷಯವನ್ನಾದರೂ ಆ ಬಹಿರ್ಮುಖರು ಆದಿಭೌತಿಕ ವಿಷಯಗಳಿಗೆ ಹೋಲಿಸಿನೋಡಲು ಹೆಣಗಾಡುತ್ತಿರುವರು. ವಿಷಯಗಳ ಭಿನ್ನತೆಯ ವಿಚಾರವನ್ನೇ ಮಾಡದಿರುವ ಅವರಿಗೆ ಅಧ್ಯಾತ್ಮಶಾಸ್ತ್ರದ ತಿರುಳು ಗೊತ್ತಾಗದಿರುವುದು ಸಾಹಜಿಕವು. ಆದಿಭೌತಿಕಶಾಸ್ತ್ರಕ್ಕೂ ಅಧ್ಯಾತ್ಮಶಾಸ್ತ್ರಕ್ಕೂ ಮಹದಂತರವಿದೆ. ಆದಿಭೌತಿಕಶಾಸ್ತ್ರದ ವಿಷಯಗಳು ಇಂದ್ರಿಯಗೋಚರವಾಗಿವೆ; ಅಧ್ಯಾತ್ಮಶಾಸ್ತ್ರದ ವಿಷಯಗಳಾದರೋ ಅತೀಂದ್ರಿಯಗಳಾಗಿವೆ. ಇನ್ನು, ಆದಿಭೌತಿಕಶಾಸ್ತ್ರದ ವಿಷಯಗಳಾದರೂ ಎಲ್ಲವೂ ಸರಿಯಾಗಿ ಇಂದ್ರಿಯಗೋಚರವಾದುವೆಂದೇ ಹೇಳಲಿಕ್ಕಾಗದು. ಸದ್ಯಃ ಆ ವಿದ್ಯೆಯಲ್ಲಿ ನಿಷ್ಣಾತರಾಗಿರುವರೆಂದು ಪ್ರಖ್ಯಾತಿಯನ್ನು ಪಡೆದವರುಕೂಡ ಆದಿಭೌತಿಕಶಾಸ್ತ್ರದ ವಿಷಯಗಳಲ್ಲಿ ಎಷ್ಟೋ ಪದಾರ್ಥಗಳು ಇಂದ್ರಿಯಗೋಚರವಾಗದಿರುತ್ತವೆಂದೂ ಅವು ಮುಂದಾದರೂ ಅತೀಂದ್ರಿಯಗಳಾಗಿಯೇ ಉಳಿಯತಕ್ಕವೆಂದೂ ಹೇಳುತ್ತಾರೆ; ಈ ರೀತಿಯಾಗಿ ಕಾರ್ಯರೂಪಗಳೂ ನಶ್ವರಗಳೂ ಆಗಿರತಕ್ಕ ಆದಿಭೌತಿಕ ವಿಷಯಗಳು ಇಂದ್ರಿಯಗಳಿಗೆ ಗೋಚರಿಸದೆ ಉಳಿದಿರಲು ಅವೆಲ್ಲಕ್ಕೂ ಆಚೆಗಿರುವುದೂ ಅವುಗಳಿಗೆ ಮೂಲಭೂತವೂ ಆದ ಸೂಕ್ಷ್ಮವಸ್ತುವು ಅದೇನು ಸಾಮಾನ್ಯವಾಗಿರುವುದೇ? ಈ ಸಂಗತಿಯನ್ನೆಲ್ಲಾ ಅರಿತೋ ಅರಿಯದೆಯೋ ಜಗತ್ತಿನ ಮೂಲಕಾರಣವಾದ ವಸ್ತುವೆಂಬುದು ನಮಗೆ ಬೇಕಾದಾಗ ಕಣ್ಣಿಗೆ ಕಾಣಿಸುವಂತಿದ್ದರೇನೇ ನಾವು ಅದರ ಅಸ್ತಿತ್ವವನ್ನು (ಇರುವಿಕೆಯನ್ನು) ಒಪ್ಪುವೆವೆಂದೂ, ಅದು ಇಂದ್ರಿಯಗೋಚರವೆನಿಸದಪಕ್ಷದಲ್ಲಿ ಅದನ್ನು ಇಲ್ಲವೇ ಇಲ್ಲವೆಂದು ಧಾರಾಳವಾಗಿ ಹೇಳಬಹುದೆಂದೂ ನುಡಿವ ಆ ಪಂಡಿತವ್ಯಕ್ತಿಗಳಿಗೇನೆನ್ನಬೇಕು? ಕೇವಲ ಪ್ರತ್ಯಕ್ಷಪ್ರಮಾಣವೊಂದನ್ನೇ ನಂಬಬೇಕೆಂದೂ, ಅನುಮಾನಾದಿ ಬೇರೆ ಪ್ರಮಾಣಗಳ ಆವಶ್ಯಕತೆಯೇ ಇಲ್ಲವೆಂದೂ ವಾದಿಸುವ ಆಧುನಿಕ ಸುಶಿಕ್ಷಿತನೆನಿಸುವಾತನು ತಾನು ತಮ್ಮಪ್ಪನ ಮಗನೇ ಎಂಬುದನ್ನು ಪ್ರತ್ಯಕ್ಷಪ್ರಮಾಣದಿಂದೇ ಅರಿತುಕೊಳ್ಳಲು ಸಾಧ್ಯವಿದೆಯೋ? ಕಾರ್ಯಾವಲೋಕನೆಯಿಂದ ಕಾರಣದಕಲ್ಪನೆಯುಂಟಾಗುವುದೆಂದವನುಸುರಿದೊಡೆ, 'ಕಾರ್ಯಾತ್ಕಾರಣಮನುಮೇಯಮ್' ಎಂಬುದಾಗಿ ನಮ್ಮ ಹಿರಿಯರು ಹೇಳುವ ನುಡಿಯು ಮೊದಲೇ ಸಿದ್ಧವಾಗಿರುವುದಲ್ಲವೇ? ಇದರಿಂದ ತಾನೂ ಅನುಮಾನಪ್ರಮಾಣದ ಹಂಗಿನವನೆಂದು ಅವನೇ ಒಪ್ಪಿದಹಾಗಾಯಿತು. ಮತ್ತು ಆಪ್ತವಾಕ್ಯದಿಂದಲೂ ತಾನು ಇಂಥವನ ಮಗನೆಂಬುದನ್ನು ಅರಿತುಕೊಳ್ಳುವೆನೆಂದೂ ಅವನು ಹೇಳುವುದಾದರೆ, ತನ್ನ ಸರ್ವಸ್ವವೆನಿಸಿದ ಪ್ರತ್ಯಕ್ಷಪ್ರಮಾಣಕ್ಕೆ ತಿಲಾಂಜಲಿಯನ್ನಿತ್ತು ಶಬ್ದಪ್ರಮಾಣಕ್ಕೆ ಶರಣುಹೊಕ್ಕನೆಂಬುದೇ ಸಿದ್ಧವಾಗುವುದಲ್ಲದೆ ವಿಶ್ವಮಾತೇನು?

ಮತ್ತು ಈ ಜಗತ್ತು ಸ್ವಭಾವಸಿದ್ಧವಾದುದು, ಯಾವನೂ ಇದನ್ನು ಮಾಡಿರುವುದಿಲ್ಲವಾದುದರಿಂದ ಇದಕ್ಕೋರ್ವನು ಕರ್ತನಿದ್ದಾನೆಂದು ಹೇಳಕೂಡದು; ಹೀಗಿರುತ್ತಿರಲು ಅವನ ಅಸ್ತಿತ್ವದ ವಿಚಾರದಲ್ಲಿ ತೊಡಗುವುದಾದರೋ ಕಾಕದಂತಪರೀಕ್ಷೆಯನ್ನು ಹೋಲುವುದು ಎಂದು ನುಡಿವಾತನನ್ನು ಹೀಗೆ ಕೇಳಬೇಕು. ಎಲಯ್ಯಾ? ಈ ಜಗತ್ತು ಸ್ವಭಾವಸಿದ್ಧವಾದುದೆಂಬ ಸಂಗತಿಯನ್ನು ನೀನೇ ಅರಿತು ಹೇಳುತ್ತಿರುವೆಯೋ, ಪರಪ್ರತ್ಯಯನೇಯಬುದ್ಧಿಯಿಂದುಸುರುವಿಯೋ? ನಾನೇ ಅರಿತುಹೇಳುವೆನೆಂದರೆ, ಅದಾವ ಪ್ರಮಾಣದಿಂದರಿದವನಾದೆ? ಪ್ರತ್ಯಕ್ಷಪ್ರಮಾಣದಿಂದೋ? ಅಲ್ಲ; ಅನುಮಾನ ಪ್ರಮಾಣದಿಂದೆನ್ನುವುದಾದರೆ, ಅದಕ್ಕೆ ಗಮಕವಾವುದುಸುರು? ಮತ್ತು ನಿನ್ನ ಆ ಅನುಮಾನವು ತರ್ಕಶುದ್ಧವಾದುದೆಂದೇ ಹೇಗೆ ತಿಳಿಯತಕ್ಕದ್ದು? ನಿನ್ನ ಆ ಊಹೆಯನ್ನು ನಿರಸನಗೊಳಿಸತಕ್ಕ ಬೇರೊಂದು ತರ್ಕವನ್ನೊಡ್ಡಲು ನಮಗೆ ಸಾಧ್ಯವಿಲ್ಲವೇನು? ನಾವಾದರೂ ಅನುಕೂಲವಾದ ಯುಕ್ತಿವಾದವನ್ನಂಗೀಕರಿಸುತ್ತೇವೆ; ಆದರೆ ಶ್ರುತಿಪ್ರಮಾಣವೆಂಬ ಸೋರೆಕಾಯಿಯ ಬೆಂಬಲವಿಲ್ಲದೆ ತರ್ಕಪ್ರವಾಹದಲ್ಲಿ ಈಸಲು ನಾವು ಒಪ್ಪುವುದಿಲ್ಲ; ನಿನ್ನ ಶುಷ್ಕತರ್ಕಕ್ಕೆ ಪರ್ಯವಸಾನವೇ ಇಲ್ಲವಷ್ಟೇ! ಕೇವಲ ಅದೊಂದರ ಮೇಲೆ ಕೈಯೂರಿ ನಿನಗಭಿಮತವಾದ ಸ್ವಭಾವವಾದವನ್ನು ನಿಶ್ಚಿತಗೊಳಿಸುವುದು ನಿನ್ನಿಂದಾಗದ ಕೆಲಸವೇಸರಿ. ಇನ್ನು ಈ ಜಗತ್ತು ಸ್ವಭಾವಸಿದ್ಧವಾದುದೆಂಬುದನ್ನು ನಾನು ಅನ್ಯರ ವಾಕ್ಯದಿಂದರಿತುಹೇಳುವೆನೆಂದು ನೀನಾಡುವಪಕ್ಷದಲ್ಲಿ, ಅನ್ಯರೆಂದರೆ ಅದಾರು? ಅವರು ನಿನ್ನ ಹಿತೈಷಿಗಳೋ ದ್ವೇಷಿಗಳೋ? ಅವರೇ ನಿನ್ನ ಹಿತೈಷಿಗಳಾದ ಪರಮಾಪ್ತರೆಂದು ನೀನವರನ್ನು ಅದು ಹೇಗೆ ನಂಬಿರುವೆ? ಅವರಲ್ಲಿ ಅದಾವವೈಶಿಷ್ಟ್ಯವಿರುವುದು? ಅಯ್ಯೋ ಪಾಪ! ಪರಮ ಆಪ್ತರೆಂದರೆ ಕೃತಕೃತ್ಯರಾದ ಅನಿಮಿತ್ತಬಂಧುಗಳೆಂಬುದನ್ನರಿಯದ ಪಶುಳನು ನೀನಲ್ಲಾ! ಸನಾತನವೈದಿಕಧರ್ಮಬಾಹ್ಯರಲ್ಲಿಯೂ ವಿಬುಧರನೇಕರಿರುವರಾದ್ದರಿಂದ ಅವರೇನು ಜಾಣರಲ್ಲರೇ? ಎಂದು ನೀನು ಹೇಳುವುದಾದರೆ, ಅವರಲ್ಲಿ ಮಹಾಪಂಡಿತರು ಇರಲೇಬಾರದೆಂದು ನಮ್ಮ ಅಭಿಪ್ರಾಯವಿರುವುದಿಲ್ಲ; ಆದರೆ ಅವರ ಇತ್ಥಂತವಾದಕ್ಕೆ ನಾವು ಹೇಸುವೆವು. ಆದ್ದರಿಂದ ಸನಾತನವೈದಿಕಧರ್ಮದ ಸರಣಿಯನ್ನನುಸರಿಸಿ ಪರ್ಯಾಲೋಚಿಸಿದರೆ ಅಸಂಸ್ಕೃತಾತ್ಮರೂ ಪಾಶ್ಚಾತ್ಯಶಿಕ್ಷಕರೂ ಆದ ಛಲವಾದಿವರ್ಗದವರ ವಾರ್ತೆಯೇ ನಮಗೆ ಬೇಡವೆನಿಸುವುದು.

ಈಶ್ವರನನ್ನು ಅಂಗೀಕರಿಸದೆ ಸ್ವಭಾವಮೊದಲಾದುದು ಜಗತ್ತಿಗೆ ಕಾರಣವಾದುದೆಂದು ಹೇಳತಕ್ಕವರು ವೈದಿಕಸಾಹಿತ್ಯ ಪ್ರಸಾರಕಾಲದಲ್ಲಿಯೂ ಇದ್ದುದರಿಂದೇ ಅವರ ವಿಚಾರದಿರವು ವೈದಿಕವಾಙ್ಮಯದಲ್ಲಿ ನಿರ್ದೇಶಿಸಲ್ಪಟ್ಟಿರುವುದು. ಪ್ರಾಚೀನಕಾಲದಲ್ಲಿ ಕೆಲವರು ಸ್ವಭಾವ ಕಾಲ ಮುಂತಾದುವು ಜಗತ್ತಿಗೆ ಕಾರಣಗಳೆಂದು ವಾದಿಸುತ್ತಿದ್ದರೆಂದೂ, ಸಿದ್ಧಾಂತಿಗಳು ಅವುಗಳ ಆಚೆಗೆ ಹೋಗಿ ಈಶ್ವರನು ಜಗತ್ತಿನ ಮೂಲಕಾರಣನೆಂದರಿತುಕೊಂಡಿದ್ದರೆಂದೂ ಶ್ವೇತಾಶ್ವತರೋಪನಿಷತ್ತಿನ ಆರನೆಯ ಅಧ್ಯಾಯದ ಮೊದಲನೆಯ ಮಂತ್ರದಿಂದರಿಯಲು ಬರುವುದು. ಹಾಗೂ, ವೇದಕಾಲದಲ್ಲಿ ಜಗತ್ತಿನ ಮೂಲಕಾರಣವೇನೆಂಬುದನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕೆಂಬುದ್ದೇಶದಿಂದ ಜಿಜ್ಞಾಸಾಬುದ್ಧಿಯುಳ್ಳವರಾದ ಕೆಲವರು ಆ ವಿಷಯದಲ್ಲಿ ಪ್ರಯತ್ನಿಸಿದುದು ನಾಸದೀಯಸೂಕ್ತಾದಿಗಳಿಂದ ಗೊತ್ತಾಗುವುದು. ನಾಸದೀಯಸೂಕ್ತದೊಳಗಿನ ಆರನೆಯ ಮಂತ್ರದಲ್ಲಿ—

ಕೋ ಅದ್ಧಾ ವೇದ ಕ ಇಹ ಪ್ರವೋಚತ್
ಕುತ ಆಜಾತಾ ಕುತ ಇಯಂ ವಿಸೃಷ್ಟಿಃ ।
ಅರ್ವಾಗ್ ದೇವಾ ಅಸ್ಯ ವಿಸರ್ಜನೇನಾಥ
ಕೋ ವೇದ ಯತ ಆಬಭೂವ ॥

ಈ ವಿಸರ್ಗವು ಅಂದರೆ, ಪ್ರಮಾತೃಪ್ರಮಾಣಪ್ರಮೇಯರೂಪವಾದ ಈ ಪ್ರಸಾರವು ಎತ್ತಣಿಂದ ಮತ್ತು ಎಲ್ಲಿಂದ ಬಂದಿತು, ಎಂಬುದನ್ನು (ಇದಮಿತ್ಥಂ) ಪ್ರ-ಅಂದರೆ ವಿಸ್ತರಿಸಿ (ವಿಶದೀಕರಿಸಿ) ಯಾರು ಹೇಳಲು ಶಕ್ತರು? ಇದರ ಯಥಾರ್ಥಸ್ವರೂಪವನ್ನು ಯಾರುತಾನೇ ತಿಳಿಯಬಲ್ಲರು? ದೇವತೆಗಳು ಕೂಡ ಈ ಸೃಷ್ಟಿಯ ಆವಿರ್ಭಾವಾನಂತರದಲ್ಲಿ ಹುಟ್ಟಿದವರು ಅಂದಮೇಲೆ, ಈ ವಿಶ್ವಪ್ರಪಂಚವು ಎಲ್ಲಿಂದ ಹುಟ್ಟಿತೆಂಬುದನ್ನು ಯಾರು ನಿರೂಪಿಸುವರು.

ಚಾಪೆಯ ಕೆಳಗೆ ಮುಚ್ಚಿಟ್ಟಿದ್ದನು. ಇದನ್ನು ತಿಳಿಯದೆ ಅವನ ಹೆಂಡತಿಯು ಚಾಪೆಯನ್ನು ಸುಟ್ಟುಬಿಟ್ಟಳು. ಗಂಡನು ಮಹಾಕುಪಿತನಾಗಿ ಹೆಂಡತಿಯನ್ನೂ ತನ್ನ ಇಬ್ಬರು ಮಕ್ಕಳನ್ನೂ ಕೊಂದು, ಮನೆಗೆ ಬೆಂಕಿಯನ್ನು ಹಚ್ಚಿದುದಲ್ಲದೆ, ತಾನು ಮರಕ್ಕೆ ನೇಣುಹಾಕಿಕೊಂಡು ಸತ್ತನಂತೆ!

ಇಂಗ್ಲೆಂಡ್ ದೇಶದಲ್ಲಿ ವೃತ್ತಪತ್ರಿಕೆಗಳಿಗೋಸ್ಕರ ಪ್ರತಿನಿತ್ಯವೂ 1000 ಟನ್ನುಗಳಷ್ಟು ಕಾಗದವನ್ನು ಉಪಯೋಗಿಸುವರು. ಲಂಡನ್ನಿನ ಒಂದೇ ಒಂದು ಪ್ರಸಿದ್ಧ ಪತ್ರಿಕೆಯು ದಿನವೊಂದಕ್ಕೆ 385 ಟನ್ನುಗಳಷ್ಟು ಕಾಗದವನ್ನು ಉಪಯೋಗಿಸುವದು. ಇಷ್ಟು ಕಾಗದವನ್ನು ತಯಾರಿಸಲು ಬೇಕಾದ ಮರದ ಪುಡಿಯನ್ನು ಒದಗಿಸಬೇಕಾದರೆ 80 ಎಕರೆಯಲ್ಲಿ ಬೆಳದಿರುವಷ್ಟು ಕಾಡುಮರಗಳನ್ನು ಕತ್ತರಿಸಬೇಕಾಗುವದಂತೆ! ಈ ವೃತ್ತಪತ್ರಿಕೆಗಳು ಪ್ರತಿನಿತ್ಯವೂ 25 ಸ್ಪೆಷಲ್ ರೈಲುಗಳಲ್ಲಿ ಹೊರಕ್ಕೆ ಕಳುಹಿಸಲ್ಪಡುವುವು.

ಕ್ಯಾಲಿಫೋರ್ನಿಯಾದೇಶದಲ್ಲಿ ಮರಗಳ ಮೇಲ್ಭಾಗದಲ್ಲಿ ಒಂದು ರೈಲ್ವೇರಸ್ತೆಯು ಹಾಕಲ್ಪಟ್ಟಿರುವದು. ಸಮುದ್ರತೀರಕ್ಕೆ ಸಮೀಪದಲ್ಲಿ ಒಂದು ದೊಡ್ಡ ಕೊರಕಲಿರುವದು. ಆ ಕೊರಕಲಿಗೆ ಸೇತುವೆಯನ್ನು ಕಟ್ಟುವದಕ್ಕೆ ಅಪಾರಹಣವು ಬೇಕಾಗುತ್ತಿತ್ತು. ಆದ್ದರಿಂದ ಇಂಜನಿಯರುಗಳು ಆ ಕೊರಕಲಿನಲ್ಲಿ ಬೆಳೆದಿದ್ದ ಅದ್ಭುತಾಕಾರದ ಮರಗಳ ಮೇಲೆಯೇ ರಸ್ತೆಯನ್ನು ಹಾಕಬೇಕೆಂದು ನಿರ್ಧರಿಸಿದರು. ಅದರಂತೆ ಮರಗಳ ಮೇಲ್ಭಾಗದ ಕೊಂಬೆಗಳನ್ನು ಎರಡು ದಡಗಳಮಟ್ಟಕ್ಕೆ ಕತ್ತರಿಸಿ, ಅವುಗಳ ಮೇಲ್ಭಾಗಕ್ಕೆ ಮರದ ದಿಮ್ಮಿಗಳನ್ನೂ ಕಂಬಿಗಳನ್ನೂ ಹಾಕಿರುವರು. ಈ ವಿಚಿತ್ರ ಸೇತುವೆಯು ನಿಜವಾದ ಸೇತುವೆಗಿಂತಲೂ ಬಂದೋಬಸ್ತಾಗಿರುವದಂತೆ!

ಸಂಬಲಪೂರ ಡಿಸ್ಟ್ರಿಕ್ಟಿಗೆ ಸೇರಿದ ವಿಕ್ರಮಖೋಲ್ ಎಂಬ ಸ್ಥಳದಲ್ಲಿ 34 ಅಡಿ ಉದ್ದವಾಗಿಯೂ 7 ಅಡಿ ಅಗಲವಾಗಿಯೂ ಇರುವ ಒಂದು ಅದ್ಭುತ ಶಿಲಾಶಾಸನವೂ, ಅದಕ್ಕೆ 2 ಮೈಲುಗಳ ದೂರದಲ್ಲಿರುವ ಒಂದು ಪರ್ವತದ ಗುಹೆಯಲ್ಲಿ ಅನೇಕ ವಿಗ್ರಹಗಳೂ, ಅದರ ಸಮೀಪದಲ್ಲಿರುವ ಮತ್ತೊಂದು ಗುಡ್ಡದಲ್ಲಿ ಚಿತ್ರವಿಚಿತ್ರವಾಗಿ ಕೊರೆಯಲ್ಪಟ್ಟಿರುವ ಶಿಲಾಚಿತ್ರಗಳೂ ದೊರಕಿರುವುವು. ಪಾಟ್ನಾ ಮ್ಯೂಜಿಯಮ್ಮಿನ ಅಧಿಕಾರಿಗಳು ಇವುಗಳನ್ನು ಪರಿಶೀಲಿಸಿ, ಮೇಲ್ಕಂಡ ಶಿಲಾಶಾಸನವು ಈಗ್ಗೆ ಸುಮಾರು 4000 ವರ್ಷಗಳ ಹಿಂದಿನದೆಂದು ನಿರ್ಧರಿಸಿರುತ್ತಾರೆ. ಇಲ್ಲಿ ಹುಲಿಗಳ ಕಾಟವು ವಿಶೇಷವಾಗಿರುವದರಿಂದ ಆ ಪ್ರದೇಶವು ಇದುವರೆಗೆ ಯಾರಿಗೂ ಗೋಚರವಾಗಿರಲಿಲ್ಲವಂತೆ!

ಪಾಟ್ನಾನಗರದ ಭಿಕ್ನಾಪಹಾರಿ ಎಂಬಲ್ಲಿ ಒಬ್ಬ ಮುದುಕ ಗವಳಿಗನಿರುವನು. ಈಗ್ಗೆ 14 ವರ್ಷಗಳ ಪೂರ್ವದಲ್ಲಿ ಅವನ 12 ವರ್ಷದ ರಾಮರೂಪಗೋಪಿ ಎಂಬ ಮಗನು ಹಾವಿನಿಂದ ಕಚ್ಚಲ್ಪಟ್ಟನು. ವೃದ್ಧನು ಮಗನು ಮೃತನಾದನೆಂದು ದುಃಖಿಸಿ, ಅವನ ಶರೀರವನ್ನು ಬಾಳೆಯೆಲೆಯಲ್ಲಿ ಸುತ್ತಿ, ನದಿಗೆ ಹಾಕಿದನು. ಬಂಗಾಳಿ ಹಾವಾಡಿಗನೊಬ್ಬನು ನದಿಯಲ್ಲಿ ತೇಲಿಬರುವ ಶರೀರವನ್ನು ಕಂಡು ಅದನ್ನು ದಡಕ್ಕೆತಂದು ಪರೀಕ್ಷಿಸುವಲ್ಲಿ, ಹುಡುಗನಿಗೆ ಪ್ರಾಣಹೋಗಿಲ್ಲವೆಂದು ತಿಳಿಯಬಂದಿತು. ಆಗ ಅವನು ಮಂತ್ರಶಕ್ತಿಯಿಂದ ಹುಡುಗನನ್ನು ಬದುಕಿಸಿ, ತನ್ನ ಬಳಿಯಲ್ಲಿಯೇ ಇಟ್ಟುಕೊಂಡಿದ್ದನು. 14 ವರ್ಷಗಳು ಕಳೆದನಂತರ ಈಗ ಆ ಹುಡುಗನು ಪುನಃ ತನ್ನ ತಂದೆತಾಯಿಗಳ ಬಳಿಗೆ ಹೋಗಿ ವಾಸಿಸುತ್ತಿರುವನು.

ಇದೇ ಫೆಬ್ರವರಿ 16 ನೇ ತಾರೀಖಿನ ದಿವಸ ಅಮೇರಿಕೆಯ ನೂತನ ಅಧ್ಯಕ್ಷರಾದ ಮಿ|| ರೂಸ್‌ವೆಲ್ಟರವರ ಸನ್ಮಾನಾರ್ಥವಾಗಿ ಚಿಕಾಗೋ ಮೇಯರ್‌ರವರು ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಈ ಸಮಯದಲ್ಲಿ ಜಿಂಗರಾ ಎಂಬ ಸಿಸಲಿದೇಶಸ್ಥನು ರೂಸ್‌ವೆಲ್ಟರನ್ನು ಕೊಲ್ಲಬೇಕೆಂದು ಅವರ ಮೇಲೆ 5 ಸಾರೆ ಗುಂಡುಗಳನ್ನು ಹಾರಿಸಿದನು. ಅದೃಷ್ಟವಶಾತ್ ರೂಸ್‌ವೆಲ್ಟರಿಗೆ ಒಂದು ಪೆಟ್ಟೂ ತಗಲಲಿಲ್ಲ. ಗುಂಡಿನೇಟುಗಳು ಸೆರ್‌ಮಾಕ್ ಎಂಬವರಿಗೂ ಇತರ 4 ಜನರಿಗೂ ತಗಲಿರುವವು. ಸೆರ್‌ಮಾಕನು ಬಹಳ ಅಪಾಯಸ್ಥಿತಿಯಲ್ಲಿರುವನು. ಪೋಲೀಸರು ಜಿಂಗರಾನನ್ನೂ ಇತರ 3 ಜನರನ್ನೂ ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿರುತ್ತಾರೆ. ಸೆರ್‌ಮಾಕನು ಮೃತಪಟ್ಟರೆ ಜಿಂಗರಾನಿಗೆ ಮರಣದಂಡನೆಯೂ ಇಲ್ಲವಾದರೆ 20 ವರುಷಗಳ ಕಠಿಣಸಜೆಯೂ ವಿಧಿಸಲ್ಪಡುವದು.

ವಿಚಿತ್ರಪ್ರಪಂಚ.

ವಾಯುಮಂಡಲದಲ್ಲಿ 24 ಸೂರ್ಯರಷ್ಟು ದೊಡ್ಡವಾಗಿ ಜ್ವಲಿಸುತ್ತಿರುವ ಎರಡು ಗ್ರಹಗಳು ಚಕ್ರಾಕಾರವಾಗಿ ಗಂಟೆಗೆ 10,00,000 ಮೈಲುಗಳ ವೇಗದಲ್ಲಿ ತಿರುಗುತ್ತಿರುವವಂತೆ! ಈ ಗ್ರಹಗಳು ಸುತ್ತಾಡುತ್ತಿರುವ ಪ್ರದೇಶವು ಸೂರ್ಯನಿಗೂ ಭೂಮಿಗೂ ಇರುವ ದೂರಕ್ಕಿಂತಲೂ ಎರಡರಷ್ಟು ವಿಶಾಲವಾಗಿರುವದಂತೆ! ಈ ಅದ್ಭುತ ಗ್ರಹಗಳು ಭೂಮಿಗೆ ಬಹಳ ದೂರವಾಗಿದ್ದು, ಮಹಾಶಕ್ತಿಯುಳ್ಳ ದೂರದರ್ಶಕ ಯಂತ್ರದಲ್ಲಿ ನೋಡಿದಾಗ, ಸಣ್ಣ ಚುಕ್ಕಿಯಂತೆ ಕಾಣಿಸಿಕೊಳ್ಳುವವಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿದ ಗಡಿಯಾರವು ಅಮೇರಿಕೆಯ 'ಕಾಲ್ಗೇಟ್ಸ್ ಸೋಪ್ ಇಂಡಸ್ಟ್ರಿಯಲ್ಸ್' ಕಟ್ಟಡದ ಮೇಲೆ ಸ್ಥಾಪಿಸಲ್ಪಟ್ಟಿರುವದು. ಈ ಅದ್ಭುತವಾದ ಗಡಿಯಾರದ ಮುಖವು 50 ಅಡಿಗಳ ಅಗಲವುಳ್ಳದ್ದಾಗಿರುವದು. ಗಂಟೆಯನ್ನು ತೋರಿಸುವ ಮುಳ್ಳು 19½ ಅಡಿಗಳ ಉದ್ದವಾಗಿಯೂ, ನಿಮಿಷವನ್ನು ತೋರಿಸುವ ಮುಳ್ಳು 27¼ ಅಡಿಗಳ ಉದ್ದವಾಗಿಯೂ ಇರುವದು. ಈ ಗಡಿಯಾರದ ಅಂಕಿಗಳು ಸುಮಾರು ಆರಾರು ಅಡಿಗಳ ಉದ್ದವಾಗಿರುವವು. 3 ಮೈಲುಗಳ ದೂರದಲ್ಲಿ ನಿಂತು ಸ್ಪಷ್ಟವಾಗಿ ಕಾಲವನ್ನು ತಿಳಿದುಕೊಳ್ಳಬಹುದಂತೆ!

ಅಮೇರಿಕೆಯ ಒಬ್ಬ ಪ್ರಸಿದ್ಧ ಡಾಕ್ಟರರು, ಮನುಷ್ಯನ ಶರೀರದಲ್ಲಿ ಯಾವ ಯಾವ ವಸ್ತುಗಳು ಎಷ್ಟೆಷ್ಟು ಇರುವವೆಂಬುದನ್ನು ಈ ಕೆಳಗೆ ಕಂಡಂತೆ ವಿವರಿಸಿರುವರು. "140 ಪೌಂಡ್ ತೂಕವುಳ್ಳ ಒಬ್ಬ ಮನುಷ್ಯನ ಶರೀರದಲ್ಲಿ 10 ಗ್ಯಾಲನ್ ನೀರೂ, 7 ತುಂಡು ಸಾಬೂನುಗಳನ್ನು ತಯಾರಿಸುವದಕ್ಕೆ ಸಾಕಾದಷ್ಟು ಕೊಬ್ಬೂ, 9000 ಸೀಸದಕಡ್ಡಿಗಳನ್ನು ತಯಾರಿಸಬಹುದಾದಷ್ಟು ಕಾರ್ಬನ್, 2200 ದೀಪದಕಡ್ಡಿಗಳನ್ನು ತಯಾರಿಸಬಹುದಾದಷ್ಟು ಫಾಸ್ಫರಸ್, ಒಂದು ಡೋಜು ಉಪ್ಪನ್ನು ತಯಾರಿಸಬಹುದಾದಷ್ಟು ಮೆಗ್ನೀಷಿಯಂ, ಒಂದು ಮಧ್ಯಸೈಜಿನ ಮೊಳೆಯನ್ನು ತಯಾರಿಸಬಹುದಾದಷ್ಟು ಕಬ್ಬಿಣವೂ, ಕೋಳಿಯಮರಿಗಳ ಗೂಡಿಗೆ ಬಳಿಯಲು ಸಾಕಾದಷ್ಟು ಸುಣ್ಣವೂ ಮತ್ತು ಒಂದು ನಾಯಿಯ ಮೈಮೇಲಿನ ಚಿಗಟಗಳನ್ನು ನಾಶಮಾಡಲು ಸಾಕಾಗುವಷ್ಟು ಗಂಧಕವೂ ಇರುವವಂತೆ! ಇವೆಲ್ಲ ಪದಾರ್ಥಗಳನ್ನು ಈಗಿನ ಪೇಟೆಯ ಧಾರಣೆಯಂತೆ ಮಾರಿದರೆ 4 ರೂಪಾಯಿಗಳಾಗುವುದಂತೆ!

ಸ್ವೀಕಾರ

ಶಿವಮೊಗ್ಗಾ ಡಿ|| ನೇಮತಿಗ್ರಾಮ ನಿವಾಸಿಗಳಾದ ಮ|| ರಾ|| ಹುರುಕಡಲೆ ಹಂಪಣ್ಣನವರ ಪುತ್ರ ಚಿ|| ಬಸವಲಿಂಗಪ್ಪನಿಗೆ ಇದೇ ಗ್ರಾಮದ ಮ|| ರಾ|| ಕವಿ ಹಾಲಪ್ಪನವರ ಪುತ್ರಿ ಚಿ|| ಸೌ|| ಹಂಪಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಇದೇ ಗ್ರಾಮದ ಮ|| ರಾ|| ಹುರುಕಡಲೆ ಗಂಗಪ್ಪನವರ ಪುತ್ರ ಚಿ|| ಗುರುಲಿಂಗಪ್ಪನಿಗೆ ಇದೇ ಗ್ರಾಮದ ಮ|| ರಾ|| ಜೀನಕೇರಿ ಮುದ್ದಪ್ಪನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ **2** ರೂ. ಮತ್ತು ಇದೇ ಗ್ರಾಮದ ಮ|| ರಾ|| ಹರಪನಹಳ್ಳಿ ವೀರಪ್ಪನವರ ಪುತ್ರ ಚಿ|| ಚಂದ್ರಪ್ಪನಿಗೆ ಮ|| ರಾ|| ಮಲೇಬೆನ್ನೂರು ಹಾಲಪ್ಪನವರ ಪುತ್ರಿ ಚಿ|| ಸೌ|| ಚನ್ನಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ **2** ರೂ. ಒಟ್ಟು **6** ರೂ. ಗಳು ಮ|| ರಾ|| ಹೊಮ್ಮರಡಿ ಸಂಗಪ್ಪನವರ ದ್ವಾರಾ ತಲ್ಪಿಗುತ್ತವೆ.

ಹಿರಿಯೂರು ತಾಲೂಕು ವೇಣುಕಲ್ಲು ಗುಡ್ಡದ ಶ್ರೀ ಬಾಳಪ್ಪಯ್ಯನವರ ಮಠದಲ್ಲಿ ನೆರವೇರಿದ ವೀರಮಾಹೇಶ್ವರ ಧರ್ಮದೀಕ್ಷಾ ಸಂಸ್ಕಾರ ಸಮಯದಲ್ಲಿ ಮಂಗಪೋಟೆಮಠದ ಶ್ರೀಗಳವರ ಅಪ್ಪಣೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ಜಗದಾಚಾರ್ಯರ ಹೆಸರಿನಮೇಲೆ ತೆಗೆಯಿಸಿದ **5** ರೂ. ಗಳು ಕಾರ್ಯದರ್ಶಿಗಳಾದ ಮ|| ರಾ|| ಯಜಮಾನ ಶಾನುಭೋಗ ಚನ್ನಬಸಪ್ಪನವರು ಅಬ್ಬಿನಹೊಳೆ ಇವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾಲೂಕು ಸೊಸಿವಾಳಗ್ರಾಮದ ಮ|| ರಾ|| ನಡುವಲಮನೆ ಸಿದ್ಧಲಿಂಗಣ್ಣನವರ ಪುತ್ರಿ ಚಿ|| ಸೌ|| ಮರುಳಮ್ಮನನ್ನು ರಾಂಪುರದ ಬಾವಿಮನೆ ಮ|| ರಾ|| ಸಣ್ಣರಾಮೇಗೌಡರ ತಮ್ಮ ಚಿ|| ಮರುಳಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಮ|| ರಾ|| ಕಾರ್ಯದರ್ಶಿ ಹಲ್ಲೂರು ಮಲ್ಲೇಗೌಡರ ಅಭಿಪ್ರಾಯದ ಪ್ರಕಾರ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಿದ **2** ರೂ. ವಧುವಿನಕಡೆಯಿಂದ ತೆಗೆಯಿಸಿದ **1** ರೂ. ಮತ್ತು ಹಲ್ಲೂರು ಗ್ರಾಮದ ಮ|| ರಾ|| ಗಂಗಪ್ಪನವರ ಪುತ್ರ ಚಿ|| ಕಲ್ಲಪ್ಪನಿಗೆ ಸೊಸಿವಾಳಗ್ರಾಮದ ಮ|| ರಾ|| ವೀ|| ಶಿವಣ್ಣನವರ ಪುತ್ರಿ ಚಿ|| ಸೌ|| ರುದ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ನಂಜಣ್ಣನವರ ದ್ವಾರಾ ಸಮರ್ಪಿಸಿದ **1** ರೂ. ಒಟ್ಟು **4** ರೂ. ಗಳು ವೇ|| ಜಿ. ಕೆ. ಸಿದ್ಧಲಿಂಗಾರ್ಯರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾವೇರಿಯಲ್ಲಿರುವ ಮ|| ರಾ|| ಸಾತೇನಹಳ್ಳಿ ಬಸವಣ್ಣಪ್ಪನವರ ಪುತ್ರ ಚಿ|| ಶಂಕರಪ್ಪನಿಗೆ ಇದೇ ಗ್ರಾಮದ ಸಿದ್ಧೇದೇವಪುರದಲ್ಲಿರುವ ಮ|| ರಾ|| ಹಂಚಿನಮನಿ ಬಸಪ್ಪನವರ ಪುತ್ರಿ ಚಿ|| ಸೌ|| ಕೊಟ್ರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವರನಕಡೆಯವರು ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ನಾಗೋಂದದಲ್ಲಿರುವ ಮ|| ರಾ|| ಕೈ|| ಚನ್ನಬಸಪ್ಪನವರ ಪುತ್ರ ಚಿ|| ವೀರಬಸಪ್ಪನಿಗೆ ಮ|| ರಾ|| ನೇಮತಿಗ್ರಾಮದ ಹಳ್ಳೂರು ರುದ್ರಪ್ಪನವರ ಪುತ್ರಿ ಚಿ|| ಸೌ|| ಮಾದಮ್ಮನನ್ನು ಕೊಟ್ಟು ನಿಶ್ಚಯಿಸಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ವೇ|| ಎನ್. ಕೆ. ಈಶ್ವರಯ್ಯನವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾಲೂಕು ಯರಗೇನಹಳ್ಳಿ ಗ್ರಾಮದ ಮ|| ರಾ|| ಪಟೇಲ್ ಸಿದ್ಧಬಸವೇಗೌಡರ ಪುತ್ರಿ ಚಿ|| ಸೌ|| ಮರುಳಮ್ಮನನ್ನು ರಾಂಪುರದ ಮ|| ರಾ|| ಬಾವಿಮನೆ ಸಣ್ಣರಾಮೇಗೌಡರ ಸಹೋದರ ಚಿ|| ದೊಡ್ಡರಾಮೇಗೌಡನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನಕಡೆಯಿಂದ ತೆಗೆಯಿಸಿದ **2** ರೂ. ವಧುವಿನ ಕಡೆಯಿಂದ ತೆಗೆಯಿಸಿದ **1** ರೂ. ಒಟ್ಟು **3** ರೂ. ಗಳು ವೇ|| ಜಿ. ಕೆ. ಸಿದ್ಧಲಿಂಗಾರ್ಯರ ದ್ವಾರಾ ತಲ್ಪಿರುತ್ತವೆ.

ಬಾಗಲಕೋಟಿ ತಾಲೂಕು ಭಗವತಿಗ್ರಾಮದ ಮ|| ರಾ|| ಹಳ್ಳೂರು ಶಿವಬಸಪ್ಪನವರ ಮೊಮ್ಮಗ ಗದಿಗಪ್ಪನಿಗೆ ಶಿವನಗುತ್ತಿಗ್ರಾಮದ ಮ|| ರಾ|| ತಿಮ್ಮನಗೌಡರ ಸಹೋದರಿ ಚಿ|| ಸೌ|| ಗಂಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಶ್ರೀ|| ಷ|| ಬ್ರ|| ಕಿರಸೂರು ಬೃಹನ್ಮಠಾಧ್ಯಕ್ಷ ಪಟ್ಟಾಧಿಕಾರಿಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ. ಗಳು ವೇ|| ಕಿರಸೂರು ಬೃಹನ್ಮಠದ ಚಿನ್ನಯ್ಯನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಗಾಂಧಿಯವರಿಗೂ ಮಾಳವೀಯರವರಿಗೂ ಭಿನ್ನಾಭಿಪ್ರಾಯ.

ಅಸ್ಪೃಶ್ಯರ ದೇವಸ್ಥಾನಪ್ರವೇಶವಿಷಯದಲ್ಲಿ ಗಾಂಧಿಯವರಿಗೂ ಪಂಡಿತ ಮದನಮೋಹನ ಮಾಳವೀಯರವರಿಗೂ ಭಿನ್ನಾಭಿಪ್ರಾಯವುಂಟಾಗಿ ಪತ್ರದ್ವಾರಾ ಖಂಡನಮಂಡನಗಳು ನಡೆದಿವೆ. ಸನಾತನ ಧರ್ಮಾಭಿಮಾನಿಗಳಾದ ಮಾಳವೀಯರು ಗಾಂಧಿಯವರ ಈ ತತ್ತ್ವವನ್ನು ಚೆನ್ನಾಗಿ ಖಂಡಿಸಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಅಭಿನಂದನೆ.

ಲೇಖಕ:—ಷ|| ಬ್ರ|| ಶಿವಾನಂದಶಿವಾಚಾರ್ಯ ಕಜಗಿ ವಾರದ ಪಾಠಶಾಲಾ, ಸೋಲಾಪೂರ.

ಸುಪ್ರಸಿದ್ಧರಾದ ರಾ|| ಬ|| ಅಪ್ಪಾಸಾಹೇಬ ವಾರದ ಇವರ ಪಾಠಶಾಲೆಯಲ್ಲಿ ಅಧ್ಯಾಪಕರಾದ ವೇ|| ಪಂ|| ಜಗದೀಶಶಾಸ್ತ್ರಿಗಳವರಲ್ಲಿ ಅಧ್ಯಯನಮಾಡಿ ಕಾವ್ಯತೀರ್ಥ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸದಾಶಿವಶರ್ಮ, ರಾವಲುಡಿಕಿ, ಇವರಿಗೆ ಅಭಿನಂದನೆಯನ್ನು ಮಾಡುವದಕ್ಕಾಗಿ ತಾ|| ೭-೨-೩೩ ಮಂಗಳವಾರ ದಿವಸ ಶ್ರೀ|| ಷ|| ಬ್ರ|| ನೀಲಕಂಠಶಿವಾಚಾರ್ಯ ಚಿಂಚೋಳಿ, ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತ್ತು. ಆಗ್ಗೆ ವೇ|| ಶರಣಬಸವಶರ್ಮ ಅಚಲೇರಿ ಇವರು ವಿದ್ಯೆಯೆಂದರೇನು? ಅದನ್ನು ಯಾಕೆ ಕಲಿಯಬೇಕು? ಅದರಿಂದ ಆಗತಕ್ಕ ಲಾಭಗಳೇನು? ಎಂಬ ವಿಷಯವಾಗಿ, ಜನರಮೇಲೆ ಪರಿಣಾಮವಾಗುವಂತೆ ವ್ಯಾಖ್ಯಾನಮಾಡಿದರು. ಅನಂತರ ವೇ|| ಸಿದ್ಧರಾಮಶರ್ಮ ದೇವಣಗಾಂವ್ ಇವರು ವಿದ್ಯಾವಿಷಯದಲ್ಲಿ ಮನೋಹರವಾಗಿ ಉಪನ್ಯಾಸಮಾಡಿದರು. ವೇ|| ಶರಣಬಸವಶರ್ಮ ಅರಿಕೇರಿ ಇವರು ಇದೇ ವಿಷಯದಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ವೇ|| ಚೆನ್ನವೀರಶರ್ಮ ನರೆಗಲ್ಲ, ಇವರೂ ಸಹ ಇದೇ ವಿಷಯದಲ್ಲಿ ಬಹು ಕಳಕಳಿಯಿಂದ ಭಾಷಣಮಾಡಿದರು. ವೇ|| ರುದ್ರಯ್ಯಶಾಸ್ತ್ರಿಗಳು ವಿದ್ಯಾರ್ಥಿಲಕ್ಷಣ ಈ ವಿಷಯವಾಗಿ ಸರ್ವರಿಗೂ ತಿಳಿಯುವಂತೆ ಭಾಷಣಮಾಡಿದರು. ವೇ|| ಗುರುಬಸವಶರ್ಮ ಹಳದೂರ ಇವರು ವಿದ್ಯಾರ್ಥಿಗಳಲ್ಲಿ ಒಕ್ಕಟ್ಟು ಎಂಬ ಈ ವಿಷಯದಲ್ಲಿ ವ್ಯಾಖ್ಯಾನಮಾಡಿದರು. ಆ ಮೇಲೆ, ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಸದರಿ ವಿಷಯಗಳನ್ನು ಪುಷ್ಟೀಕರಿಸಿ, ಈ ಜಗತ್ತಿನಲ್ಲಿ ಸಮಸ್ತ ವಿದ್ಯೆಗಳಲ್ಲಿ ಸಂಸ್ಕೃತ ವಿದ್ಯೆಯು ಅತೀವ ಮಹತ್ವದ್ದಾಗಿರೋಣದರಿಂದ ಪ್ರತಿಯೊಬ್ಬರೂ ಈ ದೇವಭಾಷೆಯನ್ನು ಕಲಿಯಲೇಬೇಕು. ಅಂದರೇನೇ ನಮ್ಮ ವೀರಶೈವಸಮಾಜವು, ಮುಂದಕ್ಕೆ ಬರುವದೆಂತಲೂ, ಇಹಪರದಲ್ಲಿ ಸುಖಸಿಗುವದೆಂತಲೂ, ಶಾಸ್ತ್ರಾಧಾರಗಳಿಂದಲೂ, ಅನೇಕೋದಾಹರಣೆಗಳಿಂದಲೂ ಹೇಳಿದರು. ಅನಂತರ ವೇ|| ಸದಾಶಿವಶರ್ಮ ರಾವಲುಡಿಕಿ ಇವರು ಅವಿಶ್ರಾಂತಶ್ರಮವನ್ನು ವಹಿಸಿ ಸಾಹಿತ್ಯತೀರ್ಥಪರೀಕ್ಷೆಯಲ್ಲಿ ವಿಜಯವನ್ನು ಹೊಂದಿ ವಿದ್ಯಾಗುರುಗಳಿಗೂ ಶಾಲಾಸಂಸ್ಥಾಪಕರಾದ ಅಪ್ಪಾಸಾಹೇಬರಿಗೂ, ಕೀರ್ತಿಯನ್ನುಂಟುಮಾಡಿದ್ದಕ್ಕೆ, ಇವರ ಅಭಿನಂದನೆಯನ್ನು ಮಾಡಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಭಾರತೀಯರ ಹೀನಸ್ಥಿತಿ.

"ಜ್ಞಾನವಿಲ್ಲದವರಿಗೆ ಮೋಕ್ಷವಿಲ್ಲ" ಎಂಬುದಾಗಿ ಸಕಲ ಶಾಸ್ತ್ರಗಳೂ ಹೇಳುತ್ತವೆ. ಇದು ನಿಜ. ಮನುಷ್ಯೇತರ ಪ್ರಾಣಿಗಳಿಗೆ ಮಾತನಾಡುವಶಕ್ತಿಯೂ, ಬರೆಯುವಶಕ್ತಿಯೂ, ಪರಿಣಾಮಫಲವನ್ನು ಪರ್ಯಾಲೋಚಿಸಿ ಕೆಲಸಮಾಡುವ ಶಕ್ತಿಯೂ ಇರುವುದಿಲ್ಲ. ಈ ಶಕ್ತಿಯು ಮನುಷ್ಯೇತರ ಪ್ರಾಣಿಗಳಂತೆ ಆಹಾರ, ನಿದ್ರಾದಿಗಳಲ್ಲಿ ಆಸಕ್ತರಾದ ಜನಗಳಿಗೂ ಇರುವುದಿಲ್ಲ. ಈ ಪ್ರಪಂಚದಲ್ಲಿರತಕ್ಕ ಸಕಲಪದಾರ್ಥಗಳ ಸೃಷ್ಟಿಸ್ಥಿತಿ ಪ್ರಳಯಗಳನ್ನು ನಾವು ಪ್ರತಿನಿಮಿಷದಲ್ಲಿಯೂ ನೋಡುತ್ತಲಿದ್ದೇವೆ. ನಮ್ಮ ಉತ್ಪತ್ತಿಗೆ ಮೂಲಕಾರಣರು ಯಾರು? ಈ ಲೋಕಯಾತ್ರೆಯನ್ನು ಹೇಗೆ ಮಾಡಿದರೆ ನಮಗೆ ಸದ್ಗತಿಯುಂಟಾಗುವುದು? ಸದ್ಗತಿಯ ಪರಿಣಾಮವು ಎಂಥದು? ನಾವು ದೇಹವನ್ನು ಬಿಟ್ಟ ಮೇಲೆ ನಾವು ದೇಹಧಾರಿಗಳಾಗಿದ್ದಾಗ ಮಾಡಿದ ಪುಣ್ಯಪಾಪಗಳಿಗೆ ಅನುರೂಪವಾದ ಫಲವನ್ನು ನಾವು ಅನುಭವಿಸಬೇಕಾಗುವುದೇ? ಹಾಗೆ ಅನುಭವಿಸುವುದಕ್ಕೆ ಲಿಂಗಶರೀರಗಳು ನಮಗೆ ಇರುವುವೆಂಬುದಾಗಿ ಹೇಳತಕ್ಕ ಮಾತುಗಳು ನಿಜವೇ? ನಿಜವಾದ ಪಕ್ಷದಲ್ಲಿ ಸದ್ಗತಿಯನ್ನು ಹೊಂದುವುದಕ್ಕೆ ನಾವು ಏನುಮಾಡಬೇಕು. ಇವುಗಳನ್ನೆಲ್ಲಾ ಪರ್ಯಾಲೋಚಿಸಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಅತ್ಯಾವಶ್ಯಕ. ಅನೇಕ ಮಹರ್ಷಿಯರು ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿ ಸದ್ಗತಿಗೆ ಸಾಧಕವಾದ ಧರ್ಮಗಳನ್ನು ಬರೆದಿಟ್ಟಿರುತ್ತಾರೆ. ಈ ಧರ್ಮಗಳನ್ನು ತಿಳಿದುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತಂದುಕೊಂಡರೆ ಸದ್ಗತಿಯು ಉಂಟಾಗುವುದು.

ಎಂ. ವೆಂಕಟಕೃಷ್ಣಯ್ಯ.

ಗ್ರಾಮಪಂಚಾಯತಿಗಳು.

ಈ ಸಂಸ್ಥಾನದ ಗ್ರಾಮಗಳಲ್ಲಿ ಸುಮಾರು ಶೇಕಡಾ 80 ಗ್ರಾಮಗಳಲ್ಲಿ ನಿರ್ಮಲವಾದ ವಾಯುವಿಗೂ ನಿರ್ಮಲವಾದ ನೀರಿಗೂ ಏರ್ಪಾಡು ಇರುವುದಿಲ್ಲ. ಕಿಟ್ಟಿಗಳು ನಾರುತ್ತವೆ. ಬಚ್ಚಲು ನೀರು ಹೋಗುವುದಕ್ಕೆ ಸರಿಯಾದ ಏರ್ಪಾಡುಗಳಿರುವುದಿಲ್ಲ. ಮನೆಗಳಲ್ಲಿ ದನಕರುಗಳನ್ನೂ, ಕುರಿ ಮೇಕೆ ಮೊದಲಾದುವುಗಳನ್ನೂ ಇಟ್ಟುಕೊಂಡಿರುತ್ತಾರೆ. ವಿಸರ್ಜಿಸಲ್ಪಟ್ಟ ಮಲಮೂತ್ರಗಳು ಕೊಳೆಯುತ್ತವೆ. ಜನಗಳು ಪ್ರತಿನಿತ್ಯದಲ್ಲಿಯೂ ಸ್ನಾನಮಾಡುವುದಕ್ಕೂ ಒಗೆದ ಬಟ್ಟೆಗಳನ್ನು ಹಾಕಿಕೊಳ್ಳುವುದಕ್ಕೂ ಏರ್ಪಾಡುಗಳನ್ನು ಹೊಂದಿರುವುದಿಲ್ಲ. ಅನೇಕಮನೆಗಳಿಗೆ ಬಿಸಿಲು ಬೀಳುವುದಕ್ಕೂ ವಾಯುಸಂಚಾರಕ್ಕೂ ಏರ್ಪಡಿಸಿರುವುದಿಲ್ಲ. ನಿವಾರಣೀಯವಾದ ರೋಗಗಳ ಹಾವಳಿಯು ಬಹಳ ಬಲವಾಗಿರುವುದು. ಇದನ್ನೆಲ್ಲಾ ತಪ್ಪಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಸಬೇಕೆಂದು ಶ್ರೀಮನ್ಮಹಾರಾಜರವರು ಮತ್ತು ಅವರ ಗೌರ್ನ್ಮೆಂಟಿನವರು ಏರ್ಪಾಡುಮಾಡುತ್ತಲಿದ್ದಾರೆ. ರಾಜಧಾನಿಯಲ್ಲಿ ಆಯುರಾರೋಗ್ಯ ಐಶ್ವರ್ಯಗಳಿಗೆ ಬೇಕಾದ ಸೌಲಭ್ಯಗಳು ಎಷ್ಟು ಮಟ್ಟಿಗೆ ಇರುತ್ತವೋ ಅವುಗಳಂತೆ ಗ್ರಾಮಗಳಲ್ಲಿಯೂ ಕೂಡ ಅವುಗಳ ವಿಸ್ತೀರ್ಣಕ್ಕೂ ಜನಸಂಖ್ಯೆಗೂ ಅನುಸಾರವಾಗಿರುವಂತೆ ಮಾಡಬೇಕೆಂದು ಗೌರ್ನ್ಮೆಂಟಿನವರು ಉದ್ದೇಶವುಳ್ಳವರಾಗಿರುತ್ತಾರೆ. ಈ ವಿಷಯಕ್ಕೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳು ಮತ್ತು ಗ್ರಾಮಪಂಚಾಯತಿಯವರು ತಮ್ಮ ಗಮನವನ್ನು ಕೊಟ್ಟು ಆಯುರಾರೋಗ್ಯಗಳ ಅಭಿವೃದ್ಧಿಗೂ ಆತ್ಮಾವಲಂಬನಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳುವುದು ಆವಶ್ಯಕ. ಈ ವಿಷಯಕ್ಕೆ ಗ್ರಾಮಪಂಚಾಯತಿಯವರ ಗಮನವು ಕೊಡಲ್ಪಡುವುದೆಂದು ನಂಬಿದ್ದೇನೆ.

ಸಿ. ವಿ. ವೈದ್ಯೇಶ್ವರಯ್ಯರ್.

ವಿವಾಹಮಹೋತ್ಸವ.

ಅರಸೀಕೆರೆ ತಾಲ್ಲೂಕು ಸೋಸಿವಾಳಗ್ರಾಮದ ಸದ್ಭಕ್ತಶಿರೋಮಣಿಗಳಾದ ಮ|| ರಾ|| ನಡುವಲಮನೆ ಸಿದ್ಧಲಿಂಗಣ್ಣನವರು ತಮ್ಮ ಪುತ್ರಿ ಚಿ|| ಸೌ|| ಕುಂ|| ಮರುಳಮ್ಮನೆಂಬ ವಧುವನ್ನು ರಾಂಪುರದ ಬಾವಿಮನೆ ಮ|| ರಾ|| ಸಣ್ಣರಾಮೇಗೌಡರ ತಮ್ಮ ಚಿ|| ರಾ|| ಮರುಳಪ್ಪನೆಂಬ ವರನಿಗೆ ಕೊಟ್ಟು ಕನ್ಯಾದಾನಪೂರ್ವಕವಾಗಿ ಪಾಣಿಗ್ರಹಣಮಹೋತ್ಸವವನ್ನು ತಾ|| 13-2-33 ರಲ್ಲಿ ಅತಿವಿಜೃಂಭಣೆಯಿಂದ ನೆರವೇರಿಸಿದರು. ಅನೇಕ ಸ್ಥಳಪರಸ್ಥಳಗಳಿಂದ ಭಕ್ತಮಾಹೇಶ್ವರರೂ, ಬಂಧುಗಳೂ ಆಗಮಿಸಿದ್ದರು. ಗರ್ಲ್ಸ್‌ಸ್ಕೂಲ್ ಸಿಂಗಿಂಗ್‌ಮಾಸ್ಟರ್ ಶಿವರಾಮಯ್ಯನವರು ತಮ್ಮ ಪಿಟೀಲ್‌ವಾದ್ಯದೊಡನೆ ಮನೋಹರವಾಗಿ ಸಂಗೀತಕಛೇರಿಯನ್ನು ನೆರವೇರಿಸಿದರು. ಸಭಾತಾಂಬೂಲ ವಿನಿಯೋಗದಲ್ಲಿ ಶ್ರೀಮಜ್ಜಗದ್ಗುರು ಪಂಚಪೀಠಾಧಿಪತಿಗಳ ಹೆಸರಿನಿಂದ ಅಗ್ರತಾಂಬೂಲವು ಸಮರ್ಪಿಸಲ್ಪಟ್ಟಿತು. ನಮ್ಮ ಸಮಾಜವನ್ನುದ್ಧರಿಸುತ್ತಿರುವ ಶ್ರೀ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ಸಹಾಯದ್ರವ್ಯವನ್ನು ಸಮರ್ಪಿಸಬೇಕೆಂದು ಹಲ್ಕೂರು ಸಣ್ಣರಂಗಯ್ಯನವರ ಮಕ್ಕಳು ಮ|| ರಾ|| ಕಾರ್ಯದರ್ಶಿ ಮಲ್ಲೇಗೌಡರು ಸೂಚಿಸಿದಪ್ರಕಾರ ರಾಂಪುರದ ವೇ|| ಜಿ. ಕೆ. ಸಿದ್ಧಲಿಂಗಾರಾಧ್ಯರವರಿಗೆ ವರನಕಡೆಯಿಂದ ಎರಡು ರೂಪಾಯಿಗಳು, ವಧುವಿನಕಡೆಯಿಂದ ಒಂದು ರೂಪಾಯಿಯು ಒಟ್ಟು ಮೂರು ರೂಪಾಯಿಗಳು ಕೊಡಲ್ಪಟ್ಟವು. ಮುಂದೆಯೂ ಇದೇರೀತಿ ಸಮಾಜದವರು ಮೇಲ್ಕಂಡ ಪ್ರಭಾಪೋಷಣಕ್ಕಾಗಿ ಅಗ್ರತಾಂಬೂಲವನ್ನು ತೆಗೆಯಿಸಿ ನಮ್ಮ ಮಠಸುಧಾರಣೆಗೆ ಅವಕಾಶಕೊಡಬೇಕಾಗಿ ಸರ್ವರೂ ಏಕಕಂಠದಿಂದ ತೀರ್ಮಾನವನ್ನಿತ್ತರು. ಜಗದೀಶ್ವರನು ಮೇಲ್ಕಂಡ ದಂಪತಿಗಳಿಗೆ ಸಕಲ ಸೌಭಾಗ್ಯಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇನೆ.

ಹಲ್ಕೂರುಗ್ರಾಮದ ಗಂಗಪ್ಪನವರ ಮಗ ಕಲ್ಲಪ್ಪನೆಂಬ ವರನಿಗೆ ಸೋಸಿವಾಳದ ವೀ|| ಶಿವಣ್ಣನವರ ಪುತ್ರಿ ಚಿ|| ಸೌ|| ಕುಂ|| ರುದ್ರಮ್ಮನೆಂಬ ಕನ್ಯೆಯನ್ನು ಕೊಟ್ಟು ಸೋಸಿವಾಳಗ್ರಾಮದಲ್ಲಿ ತಾ|| 13-2-33 ರಲ್ಲಿ ನಡೆದ ವಿವಾಹಮಹೋತ್ಸವಕಾಲದಲ್ಲಿ ತೆಗೆಯಿಸಿದ ಒಂದು ರೂಪಾಯಿಯು ವೀ|| ನಂಜಣ್ಣನವರ ದ್ವಾರಾ ಜಿ. ಕೆ. ಸಿದ್ಧಲಿಂಗಾರಾಧ್ಯರ ವಶಕ್ಕೆ ಕೊಡಲ್ಪಟ್ಟಿತು.

ಸಮಾಜಸೇವಕ,
ಪಟೇಲ್ ಈಶ್ವರೇಗೌಡ, ಸೋಸಿವಾಳ.

ಅಂಚೆ ವರ್ತಮಾನ.

ಭರತಖಂಡದಲ್ಲಿ ಎಲ್ಲಾ ಕಡೆಯಲ್ಲಿಯೂ ಈಗ ಅಂಚೆಯ ವ್ಯವಸ್ಥೆಯಿದೆ. ನಾವೊಂದು ಕಾಗದ ಇಲ್ಲಿ ಬರೆದು ಹಾಕಿದರೆ ಯಾವ ಮೂಲೆಗಾದರೂ ಹೋಗುತ್ತದೆ. ಸಾವಿರಾರು ಮೈಲುಗಳ ದೂರವಾದರೂ ಬಹಳ ಸ್ವಲ್ಪ ಕಾಲದಲ್ಲೇ ಸುದ್ದಿಯು ಹೋಗಿಬರುತ್ತದೆ. ಇದರ ಸಂಬಂಧವಾಗಿ ಹಲವು ಅಂಕೆಗಳನ್ನು ನೋಡಿರಿ. ಆಗ ಅದರ ಅಗಾಧ ವ್ಯವಸ್ಥೆಯ ಚಿತ್ರವು ಬರುತ್ತದೆ.

ಒಟ್ಟು ಅಂಚೆ ಉದ್ಯೋಗಿಗಳು	೧,೧೫,೨೦೫
,, ಕಚೇರಿಗಳು	೨೪,೧೭೫
ಅಂಚೆ ಎಷ್ಟು ಮೈಲು ಕೆಲಸ	೧,೬೯,೫೫೩
ರಿಜಿಸ್ಟರ್ಡ್ ಪದಾರ್ಥಗಳು	೫,೪೦,೦೦೦.೦೦
ಒಟ್ಟು ಕಾಗದ, ಕವರು ಇತ್ಯಾದಿ	೧,೩೦,೦೦,೦೦,೦೦೦
ಸ್ಟಾಂಪುಗಳ ಮಾರಾಟ	೬,೩೦,೦೦,೦೦೦
ಓಡಾಡಿದ ಮನಿಯಾರ್ಡರುಗಳು	೩,೯೦,೦೦,೦೦೦
ಮನಿಯಾರ್ಡರು ಒಟ್ಟು ಹಣ	೮,೬೫,೦೦,೦೦೦
ವಿ. ಪಿ. ಗಳಿಂದ ಬಂದ ಹಣ	೨,೪೭,೦೦,೦೦೦
ಇನ್ಷೂರ್ ವಸ್ತುಗಳ ಬೆಲೆ	೧,೩೮,೭೫,೦೦,೦೦೦
ಆಮದುವಸ್ತುಗಳ ಮೇಲಿನ ಸುಂಕ ವಸೂಲಿ	೬೫,೦೦,೦೦೦
ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳು	೨೪,೭೭,೬೧೩
ಇದರ ಸಂಬಂಧ ಠೇವಣಿಯಿದ್ದ ಹಣ	೩೭,೦೦,೦೦೦

(ಈ ಅಂಕೆಗಳೆಲ್ಲಾ ೧೯೩೦-೩೧ ನೇಯ ವರ್ಷದವು)

ಕರಾಚಿಯಿಂದ ಲಂಡನ್ನಿಗೆ ಅಂಚೆಯನ್ನು ಹೊತ್ತು ೫೧ ವಿಮಾನಗಳು ಬಂದವು. ೫೩ ವಿಮಾನಗಳು ಕರಾಚಿಯಿಂದ ಲಂಡನ್ನಿಗೆ ಹೋದವು. ೪೧,೭೧೫ ಪೌಂಡು ತೂಕದ ಅಂಚೆಯನ್ನು ಕರಾಚಿಗೆ ತಂದವು. ಕರಾಚಿಯಿಂದ ೩೯,೩೪೭ ಪೌಂಡು ತೂಕದ ಅಂಚೆಯನ್ನು ಲಂಡನ್ನಿಗೆ ಹೊತ್ತುಕೊಂಡು ಹೋದವು. ಭರತಖಂಡದಿಂದ ವಿಮಾನಗಳ ಮೂಲಕವಾಗಿ ಪರದೇಶಗಳಿಗೆ ೧೦,೦೬,೨೦೦ ಅಂಚೆ ಪದಾರ್ಥಗಳು ಹೋದವು. ದೆಹಲಿಯಿಂದ ಕರಾಚಿಗೆ ೫೩ ವಿಮಾನಗಳು, ೨೩೧೩ ಪೌಂಡು ತೂಕದ ಅಂಚೆಯನ್ನು ಹೊತ್ತು ತಂದವು. ಕರಾಚಿಯಿಂದ ದೆಹಲಿಗೆ ೫೧ ವಿಮಾನಗಳು ೪,೫೦೧ ಪೌಂಡುಗಳ ತೂಕದ ಅಂಚೆಯನ್ನು ಹೊತ್ತವು.

ಜರ್ಮನಿಯ ಚಕ್ರವರ್ತಿ ಕೈಜರವರ ಸ್ಥಿತಿ.

ಕೈಜರವರು ಸದ್ಯಃ ಹಾಲಂಡಿನಲ್ಲಿರುವ ಡೂರ್ನ್ (Doorn) ಎಂಬ ಊರಿನಲ್ಲಿರುವರು. ಈ ಊರಿಗೆ ಕೈಜರರು ಬಂದು ಹದಿನಾಲ್ಕು ವರ್ಷಗಳಾದವು. 'ಬೆಂಕಿ ನವಾಬ' ನಂತಹ ಈ ಮನುಷ್ಯನಿಗೆ ಆ ಊರಿನ ಜನರೆಲ್ಲರೂ ಆಗಿನಿಂದ ಕೆಲಸಕಾರ್ಯ ಮಾಡಿಕೊಟ್ಟಿದ್ದಾರೆ. ಈತನು ಈ ಊರಿಗೆ ಬಂದಾಗಿನಿಂದ ಈ ಊರಿನ ವಾತಾವರಣವೇ ಬದಲಾಯಿಸಿಹೋಗಿದೆ. ಜರ್ಮನಿಯಲ್ಲಿರುವ ಜರ್ಮನ್ ಊರಿಗಿಂತಲೂ ಇದು ಹೆಚ್ಚು ಜರ್ಮನ್‌ಮಯವಾಗಿದೆ. ಸಾರ್ವಭೌಮರಲ್ಲಿ ಅಭಿಮಾನವಿಟ್ಟಿದ್ದ ಅನೇಕ ಜರ್ಮನ್ ಹುದ್ದೇದಾರರು ಸಾರ್ವಭೌಮನನ್ನು ಬಿಟ್ಟಿರಲಾರದೆ ತಮ್ಮ ಸಂಸಾರ ಸಮೇತ ತಾವೂ ಅಲ್ಲಿಗೇ ಹೋಗಿ ನೆಲೆಸಿದ್ದಾರೆ. ಮತ್ತೆ ಹಲವು ಪ್ರಜಾಪ್ರಭುತ್ವವಾದಿಗಳೂ ಆ ಪಟ್ಟಣಕ್ಕೆ ಹೋಗಿ ಮಹಾಪದವಿಯಿಂದ ಚ್ಯುತನಾಗಿರುವ ತಮ್ಮ ಮಾಜಿ ಚಕ್ರವರ್ತಿಯನ್ನು ಕಂಡು ಬರುತ್ತಾರೆ. ಹಾಗೆ ನೋಡಿದರೆ, ಪ್ರವಾಸಿಗಳು ಪ್ರಪಂಚದ ಎಲ್ಲಾ ಭಾಗಗಳಿಂದಲೂ ಇಲ್ಲಿಗೆ ಬರುತ್ತಾರೆ.

ಅವರು ಬಂದು ಸುಮ್ಮನಿರುವುದಿಲ್ಲ. ಯಾವಾಗ ನೋಡಿದರೂ ಕೈಜರಿರುವ ಮನೆಯಬಳಿಗೆ ಹೋಗಿ, ಅಲ್ಲಿ ಬಾಗಿಲನ್ನು ಕಾಯುತ್ತಿರುವ ಇಬ್ಬರು ಡಚ್ ಪತ್ತೆದಾರರನ್ನು 'ಒಳಕ್ಕೆ ಹೋಗಲು ಒಂದುಕ್ಷಣಮಾತ್ರ ಅವಕಾಶಕೊಡಿ' ಎಂಬುದಾಗಿ ಕಾಡಿಸುತ್ತಾರೆ. ಅವರು ಬಿಡರು.

ಮಾಜಿ ಕೈಜರರು ದಿನವೂ ಎರಡು ಘಂಟೆ ಸಮಯದಲ್ಲಿ ಊರಿನ ಹೆದ್ದಾರಿಯಲ್ಲಿ ಹೋಗಿ ಬರುವುದು ಹೆಸರುವಾಸಿಯಾಗಿಹೋಗಿದೆ. ಅದನ್ನಾದರೂ ನೋಡಿ ಹೋಗೋಣವೆಂದು ಕಾದಿರುತ್ತಾರೆ. ಎಷ್ಟೋ ವೇಳೆ, ವ್ಯಥಾ ಕಾಯುವುದೇ ಆಗಿಹೋಗುತ್ತದೆ. ಕೊನೆಗೆ ಅವರು ಆ ಊರಿನ ಅಂಗಡಿಗಳಲ್ಲಿ ಮಾರುವ ವಿಲ್‌ಹೆಲ್ಮರವರ 'ಪಿಕ್ಚರ್ ಪೋಸ್ಟ್ ಕಾರ್ಡ'ಗಳನ್ನು ಕೊಂಡುಕೊಂಡು ಹೊರಟುಹೋಗುತ್ತಾರೆ.

ಈ ಮಾಜಿ ಕೈಜರರಿಗೆ ಏಕಾಂತದಲ್ಲಿರಲು ಬಲು ಆಸೆ. ಸಾಮಾನ್ಯತೆಯಲ್ಲಂತೂ ತೀರ ಆಸೆ. ಡೂರ್ನ್ ಪಟ್ಟಣದಲ್ಲಿ ಯಾವ ಅಮ್ಯುಸಿಟಿಯ ಅರಮನೆಯೂ ಇಲ್ಲ. ಎಷ್ಟೋ ಹಲಬರು ವಿಶ್ವಾಸಿಗಳಾದ ರಾಜಪರಿವಾರದವರು ತಮ್ಮೊಡೆಯನೊಡನೆ ದೇಶನಿರ್ವಾಸನದಲ್ಲೂ ಹಿಂಬಾಲಿಸಿದ್ದಾರೆ. ರಾಜನು ಯಾವಾಗಲೂ ತನ್ನ ಹಿಂದಿನ ಸಾರ್ವಭೌಮ ಬಿರುದಾವಳಿಗಳಿಂದಲೇ ಯಥಾವಿಧಿಯಲ್ಲಿ ತನ್ನನ್ನು ಸಂಬೋಧಿಸಬೇಕೆಂದು ಒತ್ತಾಯಮಾಡುತ್ತಾನೆ.

ಮಾಜಿ ಕೈಜರನ ಪತ್ನಿಯಾದ ರಾಣಿ ಹೆರ್ಮಿನ್ಳಿಗೆ ಇರುವವರು ಇಬ್ಬರೇ ಇಬ್ಬರು ದಾಸಿಯರು; ಮತ್ತು ಹೋಹೆನ್ ಜೊಲ್ಲೆರ್ನ್ ವಂಶದ ಮುಖಂಡನಿಗೆ (ಕೈಸರನಿಗೆ) ಇರುವವನು ಒಬ್ಬನೇ ಒಬ್ಬ ಅಂಗರಕ್ಷಕ. ಅಲ್ಲಿಗೆ ಅವರ ಮನೆಯಲ್ಲಿನ ಎಲ್ಲರೂ ಅದಂತಾಯಿತು. ಈ ಡೂರ್ನ್ ಪಟ್ಟಣದಲ್ಲಿ ಒಂದೇ ಸಮನಾಗಿ, ಸ್ವಲ್ಪವೂ ವ್ಯತ್ಯಾಸವಿಲ್ಲದೆ ಇಷ್ಟೊಂದು ದಿವಸದವರೆಗೆ ಜೀವನ ನಡೆಸಿದಲ್ಲಿ ಯಾರಿಗೆತಾನೆ ಬೇಜಾರಾಗದು? ಆದರೆ ಒಂದು ಕಾಲದಲ್ಲಿ ಮಾಜಿ ಕೈಜರವರು ಮನಸ್ಸಿಗೆ ಕೆಲಸಕೊಟ್ಟಿದ್ದರು.

ಇವರ ಮನೆಯ ಸುತ್ತಲೂ ದೊಡ್ಡ ದೊಡ್ಡ ಗಿಡಗಳಿದ್ದವು ಮನೆಯು ಮುಚ್ಚಿಹೋಗಿತ್ತು. ಮನೆಯ ಸುತ್ತಲಿದ್ದ ಖಾಸಗಿ ಹೂದೋಟದಲ್ಲಿ ಮುಳ್ಳುಗಿಡಗಳೂ ಕುರುಚಲು ಗಿಡಗಳೂ ಬೆಳೆದು ಕಾಡಾಗಿಹೋಗಿತ್ತು. ಈತನು ಅವನ್ನೆಲ್ಲ ಕ್ರಮಪಡಿಸಿ ಸರಿಮಾಡಿದನು.

ಈತನೇ ಸ್ವತಃ ಆ ಗಿಡಗಳನ್ನು ಕತ್ತರಿಸಿ ಉರುಳಿಸಿದನು. ಆ ಸ್ಥಳದಲ್ಲಿ ಈಗೊಂದು ಸೊಗಸಾದ ಉದ್ಯಾನವನವಿದೆ. ಅದರಲ್ಲಿ ಎರಡು ಗುಲಾಬಿ ತೋಟಗಳು. ಒಂದು ಆ ಪಟ್ಟಣದ ಜನರಿಗೆಂದು ಆತನು ಬಿಟ್ಟುಕೊಟ್ಟಿದ್ದಾನೆ.

ಈಗ ಅದೆಲ್ಲಾ ಮುಗಿಯಿತು. ಮಾಜಿ ಕೈಸರರು ಮೊದಲಿನಂತೆ ತೋಟಗಳಲ್ಲಿ ಯಾವ ಮುಖವರ್ಜಿಯನ್ನೂ ವಹಿಸುವುದಿಲ್ಲ. ಯಾಕೆಂದರೆ ಉಬ್ಬಸ ಮತ್ತು ವಾತರೋಗಗಳಿಂದ ಅದು ಸಾಧ್ಯವಿಲ್ಲ. ಅಲ್ಲದೆ ಮನೋವೃತ್ತಿಯು ಆತನಿಗೆ ಮುಪ್ಪು ತಂದಿದೆ. ಮೊದಲು ಸಮುದ್ರವನ್ನು ನೋಡಿದರೆ ಆತನಿಗೆ ಮಹಾನಂದವಾಗುತ್ತಿತ್ತು. ಈಗ ಅದು ಯಾವುದೂ ಇಲ್ಲ. ದುಃಖಪೂರಿತವಾದ ಜೀವನವವನದು.

ಈತನ ದಿನಚರಿಯ ಕ್ರಮವಿದು—

ಪ್ರಾತಃಕಾಲ ಏಳುಘಂಟೆಗೆ ಏಳುವುದು. ಸ್ವಲ್ಪದೂರ ಸುತ್ತಾಡಿಕೊಂಡು ಬರುವುದು. ಅನಂತರ ಮನೆಯಲ್ಲಿ ದೇವತಾಪ್ರಾರ್ಥನೆ.

ಅನಂತರ ಉಪಹಾರದನಂತರ ಪ್ರಾಯಶಃ ಓದುವುದು—ಕೆಲವುವೇಳೆ ಆಂಗ್ಲೇಯ ಗ್ರಂಥಗಳು—ಡಿಕೆನ್ಸ್, ಸ್ಕಾಟ್, ಮ್ಯಾರಿಯಟ್ ಮುಂತಾದವರು ಬರೆದ ಪುಸ್ತಕಗಳೆಲ್ಲವೂ ಲೈಬ್ರರಿಯಲ್ಲಿವೆ. ಆಮೇಲೆ ಕೆಲವು ಕಾಗದಗಳಿಗೆ ಉತ್ತರ ಬರೆಯುವುದು. ಅನಂತರ, ಹವೆಯು ಚೆನ್ನಾಗಿದ್ದರೆ, ವ್ಯಾಯಾಮಕ್ಕೋಸ್ಕರ ನಿಧಾನವಾಗಿ ಕಾಲಾಡಿಕೊಂಡುಬರುವದು.

ಈ ಡೂರ್ನ್ ಪಟ್ಟಣವು ಅತಿವೃಷ್ಟಿ ಅನಾವೃಷ್ಟಿ ಪ್ರದೇಶ. ಆದ್ದರಿಂದ ಹೆಚ್ಚಿಗೆ ಪುಸ್ತಕಗಳನ್ನು ಓದುವುದರಿಂದಲೇ ಕಾಲಸಾಗಬೇಕು. ವಾರ್‌ವಿಕ್ ಡೀಪಿಂಗರ ಪುಸ್ತಕಗಳು, ಹೊಸದಾಗಿ ಪ್ರಕಟವಾದ ಜೀವನಚರಿತ್ರೆಗಳು ಅಥವಾ ಬೈಬಲ್ಲು-ಇವುಗಳನ್ನೋದುವುದು. ಸಾಮಾನ್ಯವಾಗಿ ಬೈಬಲ್ಲನ್ನು ಓದುವುದೇ ಹೆಚ್ಚು.

ದೇವರು ನಮ್ಮನ್ನು ಇಕ್ಕಟ್ಟಿನಲ್ಲಿ ತಂದಿಟ್ಟು, ಉಪದ್ರವಗಳನ್ನು ಕೊಡುವುದು ಪ್ರಾಯಶಃ ತನ್ನ ಒಳ್ಳೆಯ ಕೆಲಸಸಾಧನೆಗಾಗಿಯೇ ಇರಬೇಕು ಎಂಬುದಾಗಿ ನನ್ನ ನಂಬಿಕೆ. ಹಾಗೆಯೇ ನೋಡುತ್ತಾ ಹೋದರೆ, ನಾನು ಮುಂದಿನಲೋಕದಲ್ಲಿ ನನ್ನ ಸೃಷ್ಟಿಕರ್ತನ ಮುಂದೆ ವಿಚಾರಣೆಗೆ ನಿಲ್ಲಬೇಕಾಗುತ್ತದೆ ಎಂದು ನನ್ನ ಊಹೆ. ಎಂಬುದಾಗಿ ಈತನೊಂದುಸಾರಿ ಹೇಳಿದನು.

ಜನರು ಈತನ ಬಗ್ಗೆ ಏನೇನೋ ಭಯಂಕರವಾದ ವಿಚಾರಗಳನ್ನು ಹೇಳುತ್ತಿದ್ದರು. ಆತನನ್ನು ಒಂದು ಭೂತಕ್ಕೆ ಹೋಲಿಸಿ ವ್ಯಂಗ್ಯಚಿತ್ರಗಳನ್ನು ಬರೆಯುತ್ತಿದ್ದರು. ಇದರಿಂದ ಅದನ್ನು ಕೇಳಿ ನೋಡಿದ್ದವರ ಮನಸ್ಸಿನಲ್ಲಿ ಆತನೊಬ್ಬ ಬೃಹದಾಕಾರದ ಭೂತವಂತಿರಬೇಕೆಂದು ಭಾವಿಸಿದ್ದರು. ಆದರೆ ಆತನು ಹಾಗಿಲ್ಲ. ಆಶ್ರಿತವತ್ಸಲನಾದ ಮುದುಕನಾಗಿದ್ದಾನೆ. ಆತನನ್ನು ಯಾರಾದರೂ ಚಿಕ್ಕಪ್ರಾಯದವರು ನೋಡಲು ಹೋದರೆ ತನ್ನನ್ನೆಲ್ಲಿ ವಿಪರೀತವಾಗಿ ಭಾವಿಸುವರೋ ಎಂಬುದಾಗಿ ಬಹಳ ಚಿಂತಾಪರನಾಗಿರುವಂತೆ ತೋರುತ್ತದೆ.

ನನಗೆ ಯಾವ ವ್ಯಸನವೂ ಇಲ್ಲ. ಒಂದುವೇಳೆ ನನಗೆ ಶಕ್ತಿಯಿದ್ದಾಗ್ಯೂ, ಯಾವುಯಾವುದು ಹೇಗೆಹೇಗೆ ನಡೆಯಬೇಕೆಂದಿದೆಯೋ ಅದನ್ನು ಈಷದಪಿ ನಾನು ಬದಲಾಯಿಸಲಾರೆ.

ನಾನು ಇಂಗ್ಲೆಂಡಿನೊಡನೆ ಯುದ್ಧಕ್ಕೆ ಹೋಗಬೇಕೆಂದು ಎಂದೂ ಇದ್ದವನಲ್ಲ. ಅಷ್ಟೇ. ಆ ಕಾಲದಲ್ಲಿ ಜರ್ಮನಿಯ ಏಳಿಗೆಗಾಗಿ ನಾನು ಪದಚ್ಯುತನಾಗಬೇಕಾಗಿದ್ದದ್ದು ಅತ್ಯಗತ್ಯವಾಗಿತ್ತು.

ಕೆಲವರು ನನ್ನ ಸ್ವಪ್ರಯೋಜನಕ್ಕಾಗಿ ಯುದ್ಧಮಾಡಿದೆನೆಂದು ಹೇಳುತ್ತಾರೆ. ಅದು ಮಹಾ ಅಕಟವಿಕಟವಾದ ವಿಚಾರ. ನಾನು ಕೊನೆಯತನಕ, ಆ ಯುದ್ಧವನ್ನು ನಿಲ್ಲಿಸಲು ನನ್ನ ಕೈಲಾಗುವಷ್ಟು ಪ್ರಯತ್ನವೆಲ್ಲವನ್ನೂ ಮಾಡಿದೆ. ವಿಕ್ಟೋರಿಯಾ ಮಹಾರಾಣಿಯವರು ನನಗೆ ಅಜ್ಜಿಯವರಾಗಬೇಕು. ನನಗೆ ಆಂಗ್ಲೇಯ ಸ್ನೇಹಿತರನ್ನು ಕಂಡರೆ ಎಷ್ಟೋ ಅಭಿಮಾನವಿತ್ತು. ಆಂಗ್ಲೇಯಪ್ರಜೆಗಳನ್ನು ಎಷ್ಟೋ ಶ್ಲಾಘಿಸುತ್ತಿದ್ದೆ ಎನ್ನುತ್ತಾರೆ ಈ ಕೈಜರರು.

ಈಗಲೂ ಈ ಮಾಜಿ-ಕೈಜರರು ಜರ್ಮನಿಯನ್ನು ಸೋತ ರಾಜ್ಯವೆಂದು ಭಾವಿಸುವುದಿಲ್ಲ.

ಆ ರಾಜ್ಯವು ಯುದ್ಧದಲ್ಲಿ ಪರಾಭವವನ್ನು ಹೊಂದಲಿಲ್ಲ. ಎಂದಿಗೂ ಇಲ್ಲ. ಹಿಂದೆ ನಿಂತು ಒಳಸಂಚು ನಡೆಸಿದುದರ ಫಲವಾಗಿ ಹಾಳಾಯಿತು. ಅಷ್ಟೇ ಎನ್ನುತ್ತಾರೆ.

ಒಬ್ಬಾನೊಬ್ಬ ವೃತ್ತಪತ್ರಿಕಾ ವ್ಯವಸಾಯಿಯು 'ನೀವು ಪುನಃ ಜರ್ಮನಿಗೆ ಹೋಗುವುದಿಲ್ಲವೆ?' ಎಂದು ಕೇಳಲು ಆತನು ಉತ್ತರವನ್ನು ಕೊಡಲಿಲ್ಲವಂತೆ.

ವಾರ್ಸೇಲ್ಸಿನ ಕರಾರು ಪ್ರಯೋಜನವಿಲ್ಲದ್ದೆಂದೂ, ಆ ಕರಾರಿನ ಪ್ರತಿಯನ್ನು ಹರಿದುಹಾಕಬೇಕೆಂದೂ ಇವರು ಭಾವಿಸುತ್ತಾರೆ.

ಜರ್ಮನಿಯು ಆ ಷರತ್ತುಗಳನ್ನು ಪರಿಪಾಲಿಸಲು ಇನ್ನು ಸಾಧ್ಯವಿಲ್ಲ. ಪ್ರಪಂಚದಲ್ಲಿ ಸುಖಶಾಂತಿಗಳು ನೆಲಸಬೇಕಾದರೆ ಪ್ರಪಂಚಕ್ಕೆ ಗೊತ್ತಾಗಬೇಕಾದ್ದೇನೆಂದರೆ—ಈ ವಾಕ್ಯವನ್ನು ಪೂರೈಸುವುದರೊಳಗಾಗಿ ರಾಣಿಯು ಬಂದದ್ದರಿಂದ ಅದು ಪೂರ್ತಿಯಾಗಲೇ ಇಲ್ಲ.

ಈತನಿಗೆ ತನ್ನ ಪೂರ್ವವಂಶಿಕರ ವಿಚಾರವಾಗಿ ಮಾತನಾಡಲು ತುಂಬಾ ಸಂತೋಷ. ಈ ಮಾತುಗಳಲ್ಲಿ ದುಃಖದ ಸುಳಿವಿಲ್ಲ. ಹಿಂದಿನಂತೆ ಮಹದಾಕಾಂಕ್ಷೆಗಳೂ ಇಲ್ಲ. ಪ್ರಾಯಶಃ ಅವುಗಳಿಗೆ ಆಸೆಪಡುವಕಾಲವು ಕಳೆದುಹೋಗಿರಬಹುದು.

ಇದುವರೆವಿಗೆ ಎಷ್ಟೋ ಜನರು ಈತನಿರುವ ಮನೆಯನ್ನು ಹೊಕ್ಕು ನೋಡಿದ್ದಾರೆ. ಆದರೆ ಯಾರೂ ಸರಿಯಾಗಿ ವರ್ಣಿಸಿಲ್ಲ. ಅಲ್ಲಿನ ಕೊಠಡಿಗಳೆಲ್ಲವೂ ಚಿಕ್ಕಚಿಕ್ಕವು. ಕೆಳಗಡೆಯ ಹಾಲಿನಲ್ಲಿ ಫ್ರೆಡರಿಕ್ ದಿ ಗ್ರೇಟ್ ರವರ ಪಿತ್ತಳೆಯ ಒಂದು ಪ್ರತಿಮೆಯಿದೆ. ಇದು ಸಣ್ಣದು ಆದರೆ ಬರ್ಲಿನ್ ನಗರದ ಚಕ್ರವರ್ತಿಭವನದಲ್ಲಿರುವ ಪ್ರತಿಮೆಗಳೆಂದರೆ ಮನುಷ್ಯ ಪ್ರಮಾಣದವು.

ಈ ಊರಿನಲ್ಲಿ ಹೇಗೆ ದೊಡ್ಡವು ಬಂದಾವು? ಆದಕ್ಕೋಸ್ಕರವೇ ಎಲ್ಲವೂ ಚಿಕ್ಕವು.

ಆದರೆ ಊಟದ ಮನೆಯಲ್ಲಿ ಮಾತ್ರ ಮಾಜಿ—ಕೈಜರರ ತೈಲಚಿತ್ರವು ದೊಡ್ಡದಾಗಿದೆ. ಈ ಮನೆಯಲ್ಲಿ ಎಲ್ಲವೂ ದೊಡ್ಡದೊಡ್ಡದಾಗಿದ್ದರೆ ಈ ಮನೆಯು ಸಾಲುತ್ತಿರಲಿಲ್ಲ. ಮನೆಯ ಮಹಡಿಮೇಲೆ ಮಲಗುವ ಕೊಠಡಿಗಳು. ರಾಣಿಯ ಪ್ರೈವೇಟ್‌ರೂಂಗಳು ಮುಖ್ಯಭಾಗದಲ್ಲಿ ಕೈಜರರ ವಾಚನಶಾಲೆ. ಕೊಠಡಿಯೆಲ್ಲವೂ ಪುಸ್ತಕಗಳಮಯ. ಅಲ್ಲಿ Moitke ರವರ 'ಬಸ್ಟೊಂದಿ' ಅದು ಯಾವಾಗಲೂ ಹೊಳೆಯುತ್ತಿರುತ್ತದೆ.

ಆ ಊರಿನೆಲ್ಲಾ ಭಾರಿ ವ್ಯಾಪಾರಗಾರರೆಂದರೆ ಮಾಜಿ-ಕೈಜರರು. ಅಲ್ಲಿನ ಅಂಗಡಿಗಳಲ್ಲಿ ವ್ಯಾಪಾರಮಾಡುವಾಗ ಎಲ್ಲರಿಗೂ ಹಣವನ್ನೇ ಕೊಡುತ್ತಾರೆ.

ಏನಾದರೇನು? ಆಶಾಭಂಗದ ಹೆಗ್ಗುರುತುಗಳು ಹೋಗಿಲ್ಲ. ಮನೆಯ ಸುತ್ತಲೂ ಗತವೈಭವದ ವಾತಾವರಣವೇನೋ ಇದ್ದೇ ಇದೆ.

ಈ ಕೈಜರರು ಈ ಸ್ಥಳವನ್ನು ಬಿಟ್ಟು ಕದಲರೆಂದು ಆ ಊರಿನ ಜನರು ತಿಳಿದಿದ್ದಾರೆ. ಆದರೆ ಕಾಲಗರ್ಭದ ಕಂಡವರಾರು?

(ಪ್ರ. ಮ.)

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಸ್ಸಿಗೆ ಆಣೆ 0-9-0, 1 ಡಿಸ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಹಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮಿನರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೇಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉಂಬುರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕ್ಕ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[26] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು. ದ. ಕ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕಷ್ಟಲ್ಲೇ ಕಷ್ಟಪಡಬೇಕಾದವರಿಗೂ, ಯೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಹತುಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[7] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೀರಶೈವರತ್ನ	೧೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**

ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[8] ಪೋ. ಬಾ. ೫೧೦, ಮದರಾಸು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಮಾರ್ಚಿ ೧೯೩೩ [ಸಂಚಿಕೆ ೪೨

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಾಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗೃಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗೃಹೀತಗಳಾಗಿರುವವು. ಈ ಗ್ರಂಥವು ೨೨೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವದು.

ಯಜಮಾನ್ ಅಂಡ್ ಸನ್,

ರಬ್ಬರ್ ಸ್ಟಾಂಪ್ ಮತ್ತು ಫೋಟೋ

[13] ಬ್ಲಾಕುಗಳನ್ನು ತಯಾರಿಸುವವರು.

NOTICE.

Notice having been given of the loss of policy numbered 13,776 on the life of Dr. C. SUBBARAMIAH, L.M.P., a duplicate will be issued unless objection is lodged with us within one month from this date.

(*Sd.*) C. G. FOZDOR,
Manager,
The Asian Assurance Company Ltd.,
Bombay.

ಬರ್ಲಿನ್ ದೇಶದ ಒಬ್ಬ ಔಷಧವ್ಯಾಪಾರಿಯು ಹತ್ತು ತಿಂಗಳ ಹಿಂದೆ ಮೃತಪಟ್ಟ ತನ್ನ ಪತ್ನಿಯನ್ನು ಬಿಟ್ಟಿರಲಾರದೆ ಶವವು ಕೆಡದಂತೆ ಸುಗಂಧದ್ರವ್ಯಗಳನ್ನು ಲೇಪಮಾಡಿ ತನ್ನ ಕೊಠಡಿಯಲ್ಲಿ ಹಾಗೆಯೇ ಇಟ್ಟಿದ್ದನಂತೆ! ಈಚೆಗೆ ಅದು ಪೋಲೀಸರಿಗೆ ತಿಳಿದುಬಂದು ಶವಕ್ಕೆ ಸಂಸ್ಕಾರಮಾಡಿ ಗಂಡನಿಗೆ ಬುದ್ಧಿಭ್ರಮಣೆಯಾಗಿರುವದೆಂದು ತಿಳಿದು ಹುಚ್ಚಾಸ್ಪತ್ರೆಗೆ ಕಳುಹಿಸಿರುವರು!

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು. **ಬೆಲೆ ೨ ಆಣೆ.**

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಎಸ್ತೋನಿಯಾ ದೇಶದಲ್ಲಿ ಮರಣದಂಡನೆಗೆ ಗುರಿಯಾದವರನ್ನು ಅವರ ಇಷ್ಟಪ್ರಕಾರವಾಗಿ ಕೊಲ್ಲುವದು ಬಹು ಕಾಲದಿಂದ ಆಚರಣೆಗೆ ಬಂದಿರುವ ಕಾಯಿದೆಯಾಗಿದೆ. ಅದರಂತೆ ಒಬ್ಬ ಮನುಷ್ಯನು ಮತ್ತೊಬ್ಬನನ್ನು ಖೂನಿಮಾಡಿದ ಅಪಾದನೆಯಮೇಲೆ ಮರಣದಂಡನೆಗೆ ಗುರಿಯಾದನು. ಅಧಿಕಾರಿಗಳು ಅಪರಾಧಿಯನ್ನು ಕೇಳಿದಾಗ ಅವನು ವಿಷಪಾನಮಾಡಿ ಸಾಯಲು ಅಪೇಕ್ಷಿಪಟ್ಟನು. ಅದರಂತೆ ಡಾಕ್ಟರುಗಳು ಒಂದು ವಿಷದ ದ್ರಾವಕವನ್ನು ಕೊಟ್ಟರು. ಅಪರಾಧಿಯು ಅದನ್ನು ಕುಡಿದನು. ಆದರೆ ಅವನ ಶರೀರಧರ್ಮದಿಂದಲೋ ಏನೋ ಅವನು ಸಾಯದೆ ಬದುಕಿಕೊಂಡನು. ಅವನನ್ನು ಪುನಃ ಕೊಲ್ಲುವುದಕ್ಕೆ ಪ್ರಯತ್ನಿಸುವುದು ಕಾಯಿದೆಗೆ ವಿರೋಧವಾದುದರಿಂದ ಅಧಿಕಾರಿಗಳು ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವರಂತೆ!

ಸ್ವೀಕಾರ

ಬಿಜಾಪುರ ಶಹರನಿವಾಸಿಗಳಾದ ವೇ॥ ದುಂಡಯ್ಯನವರು ಕರ್ಪೂರ ಮಠ ಇವರು ತಮ್ಮ ಮನಸ್ಸಿನ ಸಂಕಲ್ಪವು ಜಗದಾಚಾರ್ಯರ ಕೃಪಾಬಲದಿಂದ ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **11** ರೂ. ಗಳು, ಮತ್ತು ವೇ॥ ಶಿವಯ್ಯನವರು ಸಿದ್ಧರಾಮಯ್ಯನವರು ಮಠದ ಇವರಿಗೆ ಪುತ್ರನು ಜನಿಸಿ ದಿವಾಕರನೆಂದು ನಾಮಕರಣಮಾಡಿದ ಸಮಯದಲ್ಲಿ ತೆಗೆಯಿಸಿದ **5** ರೂ. ಗಳು, ಹಾಗೂ ಮ॥ ರಾ॥ ಗುರುಲಿಂಗಪ್ಪನವರು ಅಂಬಲಿ ಇವರ ಪುತ್ರಿ ಚಿ॥ ಸೌ॥ ಪಾರ್ವತೀಬಾಯಿಯನ್ನು ನಿಡಗುಂದಿ ಗ್ರಾಮದ ಮ॥ ರಾ॥ ಮುಚ್ಚಂಡಿ ಬಸವಲಿಂಗಪ್ಪನವರ ಪುತ್ರ ಚಿ॥ ವಿರೂಪಾಕ್ಷಪ್ಪನವರಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ **1** ರೂ. ಒಟ್ಟು **17** ರೂ. ಗಳು ಮ॥ ರಾ॥ ಅಂಬಲಿ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ತಾಲೂಕು ಶಿಶುವಿನಹಳ್ಳಿ ಗ್ರಾಮದಲ್ಲಿರುವ ಶ್ರೀಮತಿ ಹಿರೇಮಠದ ಸೋಮವ್ವನವರು ಶಿವದೀಕ್ಷೆಯನ್ನು ತೆಗೆದುಕೊಂಡ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ವೇ॥ ಹುಬ್ಬಳ್ಳಿ ನಂದಿಕೇಶ್ವರ ಮಠದ ವಿರೂಪಾಕ್ಷಯ್ಯನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ॥ ಹಾರ್ನಹಳ್ಳಿಯಲ್ಲಿರುವ ಮ॥ ರಾ॥ ದಂಡೂರು ಬಸಪ್ಪನವರ ಪುತ್ರ ಚಿ॥ ಸಿದ್ಧಲಿಂಗಪ್ಪನಿಗೆ ಮ॥ ರಾ॥ ನ್ಯಾಮತಿ ಮುಂಡರಗಿ ಓಂಕಾರಪ್ಪನವರ ಪುತ್ರಿ ಚಿ॥ ಸೌ॥ ಯಸ್ಸಜ್ಜಾನಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ ರೂ. **1-4-0** ಮ॥ ರಾ॥ ವೈ. ಜಂಬಪ್ಪನವರ ದ್ವಾರಾ ತಲ್ಪಿರುತ್ತದೆ.

ಕಡೂರು ತಾಲೂಕು ಕಡೂರುಹಳ್ಳಿಮಠದ ವೇ॥ ಬಸವಯ್ಯನವರ ಪುತ್ರ ಚಿ॥ ಮರುಳಯ್ಯನಿಗೆ ಇದೇ ಗ್ರಾಮದ ಕಲ್ಲುಂಡಿಮಠದ ವೇ॥ ಚಂದ್ರಯ್ಯನವರ ಪುತ್ರಿ ಚಿ॥ ಸೌ॥ ಗಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವೇ॥ ಚಿಕ್ಕಾತೂರು ಮಠದ ಮರುಲಸಿದ್ಧಯ್ಯನವರು ತೆಗೆಯಿಸಿದ **1** ರೂ. ಬುಕ್ಕಾಂಬುಧಿ ಮಠದ ಪುಟ್ಟಯ್ಯನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ॥ ಹೋಳಿಆಲೂರುಗ್ರಾಮದಲ್ಲಿ ನೆರವೇರಿದ ಜಗದಾಚಾರ್ಯರ ಜಯಂತಿಮಹೋತ್ಸವಸಮಯದಲ್ಲಿ ವೇ॥ ಭಿಕ್ಷಾವೃತ್ತಿ ಹಿರೇಮಠದ ವೀರಣಸಿದ್ಧಯ್ಯನವರು **1** ರೂ. ಯನ್ನು ಕಳುಹಿಸಿರುತ್ತಾರೆ.

ಸೊರಬ ತಾಲ್ಲೂಕು ಕ್ಯಾಸನೂರು ಮಠದಲ್ಲಿ ನೆರವೇರಿದ ಚನ್ನಯ್ಯ ಜಾತಿಯವರ ಸಭೆಯಲ್ಲಿ ಕ್ಯಾಸನೂರು ಮಠದ ಸ್ವಾಮಿಗಳು **1** ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಅಂತಹ ಶಿವನೇ ತನ್ನ ವಿನೋದಕ್ಕಾಗಿ (ಶಿವಾದಿಭೂಮ್ಯಂತಗಳಾದ) ಮೂವತ್ತಾರು ತತ್ತ್ವಾತ್ಮಕನಾಗಿರುವುದರಿಂದ 'ತತ್ತ್ವ' ಶಬ್ದದ ಮುಖ್ಯಾರ್ಥರೂಪನಾಗಿದ್ದಾನೆ. ಅದುಕಾರಣವೇ ಆ ಶಿವನು '**ಪರತತ್ತ್ವಾಯ ತತ್ತ್ವಾನಾಂ ತತ್ತ್ವಭೂತಾಯ ವಸ್ತುತಃ**' ಎಂಬ ವಾಕ್ಯಗಳಿಂದ 'ಪರತತ್ತ್ವ'ನೆಂದು ಹೊಗಳಲ್ಪಡುತ್ತಾನೆ. ಪರತತ್ತ್ವಭೂತನಾದ ಶಿವನೇ ಕಾರ್ಯಕಾರಣಾತ್ಮಕಗಳಾದ ಮೂವತ್ತಾರು ತತ್ತ್ವರೂಪನಾಗಿ ಪರಿಣಮಿಸುವಲ್ಲಿ ಮೊದಲು ಅಂಕುರಿಸಲ್ಪಟ್ಟ ವಿಶ್ವಪ್ರಪಂಚವನ್ನು 'ಅಹಮಿದಮ್' ಎಂಬ ಸ್ವಶಕ್ತಿಸ್ಫುರಣದಿಂದಾಚ್ಛಾದಿತನಾಗಿರುವಿಕೆಯೇ 'ಈಶ್ವರನು' ಎಂದು ಹೇಳಿಸಿಕೊಳ್ಳಲ್ಪಡುವನು. ಈ ಈಶ್ವರತತ್ತ್ವವು ಶಿವಾದಿಭೂಮ್ಯಂತಗಳಾದ ಮೂವತ್ತಾರು ತತ್ತ್ವಗಳಲ್ಲಿ ನಾಲ್ಕನೆಯದೆನಿಸುವುದು.

ಒಟ್ಟಿನಲ್ಲಿ, ಶಿವಾದ್ವೈತಮತದಲ್ಲಿ :—

ಸರ್ವಜ್ಞಃ ಸರ್ವಕರ್ತೃತ್ವಾತ್ಸಾಧನಾಙ್ಗಫಲೈಃ ಸಹ ।
ಯೋ ಯಜ್ಜಾನಾತಿ ಕುರುತೇ ಸ ತದೇವೇತಿ ಸುಸ್ಥಿತಮ್ ||೧೩||

ಎಂಬ ಮೃಗೇಂದ್ರಾಗಮವಚನಾನುಸಾರವಾಗಿ, ಸರ್ವಜ್ಞತ್ವಸರ್ವಕರ್ತೃತ್ವರೂಪ ಶಕ್ತಿದ್ವಯೋಪೇತನಾದವನೇ ಪರಮೇಶ್ವರನೆಂಬಭಿಪ್ರಾಯವಿರುವುದು. ಆ ಪರಮೇಶ್ವರನು ಪ್ರಾಚೀನ ಮಹರ್ಷಿಗಳಿಂದ (ಋ ೧೦—೯೨—೯) ಶಿವನು ಎಂಬ ನಾಮದಿಂದ ಸ್ತುತಿಸಲ್ಪಡುವನಾದ್ದರಿಂದ ಶಿವಾದ್ವೈತಿಗಳಾದರೂ ಅವನನ್ನು ಶಿವನೆಂಬಭಿಧಾನದಿಂದೇ ಹೊಗಳುವರು. ಗುಣಮೂರ್ತಿಗಳೆಂದು ಪ್ರಸಿದ್ಧರಾದ ಬ್ರಹ್ಮ ವಿಷ್ಣು ರುದ್ರರಿಗಿಂತಲೂ ಅಧಿಕನಾದ ಈಶ್ವರ, ಸದಾಶಿವ ತತ್ತ್ವಗಳಿಗೂ ಕೂಡ ಅಧಿಷ್ಠಾನಭೂತನಾದ ಆ ಪರಮಶಿವಚೈತನ್ಯವು ಈ ಮೇಲೆ ನಿರ್ದೇಶಿಸಲ್ಪಟ್ಟ ಮೇರೆಗೆ ಶಕ್ತಿಯುಕ್ತವಾದುದರಿಂದ ಅದನ್ನು 'ಶಕ್ತಿವಿಶಿಷ್ಟಬ್ರಹ್ಮ'ವೆಂದೂ ಭಜಿಸುವರು. ಈ ರೀತಿಯಾಗಿ ಶಿವಾದ್ವೈತಿಗಳಿಗಭಿಮತನಾದ ದೇವರು ಶಕ್ತಿವಿಶಿಷ್ಟನೆಂಬಲ್ಲಿ ವೇದವೇ ಮುಖ್ಯಪ್ರಮಾಣವಾಗಿರುವುದು. ಋಗ್ವೇದಾಂತರ್ಗತವಾದ ಹತ್ತನೆಯ ಮಂಡಲದ ನಾಸದೀಯ (೧೨೯ ನೆಯ) ಸೂಕ್ತದಲ್ಲಿ—

ನ ಮೃತ್ಯುರಾಸೀದಮೃತಂ ನ ತರ್ಹಿ
ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ ।
ಆನೀದವಾತಂ ಸ್ವಧಯಾ ತದೇಕಂ
ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ ||೨||

ಸೃಷ್ಟಿಯ ಮೂಲಾರಂಭದಲ್ಲಿ ಮೃತ್ಯು-ಅಂದರೆ ಮೃತ್ಯುಗ್ರಸ್ತವೂ ನಾಶವಂತವೂ ಆದ ಸೃಷ್ಟಿಯಿದ್ದಿಲ್ಲ ; ಅಮೃತ ಅಂದರೆ ಅವಿನಾಶಿಯಾದ ನಿತ್ಯಪದಾರ್ಥ (ನೈಜಪ್ರಪಂಚ)ವೂ ಇದ್ದಿಲ್ಲ ; ರಾತ್ರಿ ಹಗಲುಗಳ ಭೇದವನ್ನರಿಯುವ ಸಾಧನವೂ ಇದ್ದಿಲ್ಲ ; ಇದ್ದದ್ದೆಲ್ಲ ಒಂದೇ ಒಂದಾಗಿತ್ತು. ಅದು(ಆ ಪರಮಶಿವಚೈತನ್ಯವು)ಸ್ವಧೆಯಿಂದ ಅಂದರೆ ತನ್ನ ಶಕ್ತಿಯಿಂದ ಸ್ಫುರಿಸುತ್ತಿತ್ತು ; ಅದರ ಹೊರತು ಅಥವಾ ಅದರಾಚೆಗೆ ಅನ್ಯದಾವುದೂ ಇದ್ದಿಲ್ಲ.

ಎಂದು ಹೇಳಲ್ಪಟ್ಟಿದೆ. ಶಕ್ತಿವಿಶಿಷ್ಟಬ್ರಹ್ಮವಿಚಾರವಿಷಯಕವಾಗಿ ನಾವು 'ಶಿವಶಕ್ತಿವಿಲಾಸ' ದಲ್ಲಿ ವಿಶದವಾಗಿ ನಿರೂಪಿಸಿದ್ದೇವೆ. ಈಗ ನೆನಪಾಗಿರುವ ಓರ್ವ ಅರ್ವಾಚೀನಪಂಡಿತನ ನುಡಿಯನ್ನು ಓದುಗರ ಮುಂದಿರಿಸಲು ಬಯಸುತ್ತೇವೆ. ಭಟ್ಟಶ್ರೀಕ್ಷೀರಸ್ವಾಮಿಯೆಂಬಾತನು ೧೧ ನೆಯ ಶತಮಾನದಲ್ಲಿದ್ದವನೆಂದು ಪ್ರಾಚ್ಯೇತಿಹಾಸಾಭಿಜ್ಞರ ಸೊಲ್ಲಂಟು. ಇವನು ಶಕ್ತಿವಿಶಿಷ್ಟಾದ್ವೈತಮತಾನುಯಾಯಿಯು. ಅದು ಕಾರಣವೇ ಇವನು ಅಮರಕೋಶದ ಉದ್ಘಾಟನವೆಂಬ ವ್ಯಾಖ್ಯಾನಾರಂಭದಲ್ಲಿ—

ದಿಶ್ಯಾಚ್ಚಿವಾನಿ ಶಿವಯೋಸ್ತಿಲಕಾಯಮಾನ
ಗೋರೋಚನಾರುಚಿಲಲಾಟವಿಲೋಚನಂ ವಃ ।
ಅನ್ಯೋನ್ಯಗಾಢಪರಿರಂಭನಿಪೀಡನೇನ
ಪಿಂಡೀಭವನ್ ಬಹಿರಿವ ಸ್ಫುಟಿತೋಽನುರಾಗಃ ||

ಎಂಬುದಾಗಿ ತನ್ನ ಉಪಾಸ್ಯದೇವತೆಯನ್ನು ಕುರಿತು ಮಂಗಲಾಚರಣವನ್ನು ಸೃಷ್ಟಿಸಿದ್ದಾನೆ. ಈ ಪದ್ಯದಲ್ಲಿ ಶಿವಶಕ್ತಿಗಳ ಅವಿನಾಭಾವ ಸಂಬಂಧಾರ್ಥವು ಸ್ಫುಟವಾಗಿರುತ್ತದೆ. ಇಂತಹ ಶಕ್ತಿವಿಶಿಷ್ಟಬ್ರಹ್ಮವೇ ವೇದದ ಪೂರ್ವಕಾಂಡದಲ್ಲಿ 'ಅಗ್ನಿ,' 'ಇಂದ್ರ,' 'ರುದ್ರ' ಎಂಬ ಮುಂತಾದ ಶಬ್ದಗಳಿಂದ ನಿರ್ದಿಷ್ಟವಾಗಿದೆ. ಈ ಪರವಸ್ತುವೇ ವೇದಾಗಮೋಪನಿಷತ್ತುಗಳಲ್ಲಿ 'ಪತಿ' ಎಂಬಭಿಧಾನದಿಂದಲೂ ಸ್ತುತಿಸಲ್ಪಡುವುದು. ಶಕ್ತಿವಿಶಿಷ್ಟಬ್ರಹ್ಮರೂಪನಾದ ಈ ಪತಿಯ ಸಂಜ್ಞಾನವಿಲ್ಲದ ಪ್ರಾಕೃತಾತ್ಮರು ಬೇರೆಬೇರೆ ಭಾವಿಸಿ ಬಳಲುತ್ತಿರುವರು. ಆ ಪತಿಯ ಯಥಾರ್ಥಸ್ವರೂಪವನ್ನು ಬಲ್ಲವರಾದ ಅಪ್ರಾಕೃತಾತ್ಮರಾದರೋ, ಸರ್ವಾಂತರ್ಯಾಮಿಯಾದ ಪತಿಯೋರ್ವನೇ ದೇವರೆಂದು ಅವನನ್ನು ಅನನ್ಯಭಕ್ತಿಯಿಂದ ಭಜಿಸುವರು. ಈ ಮಾತು ಹೊಸದಲ್ಲ. ಋಗ್ವೇದದ ೧೦ ನೆಯ ಮಂಡಲಾಂತರ್ಗತವಾದ ೧೨೧ ನೆಯ ಸೂಕ್ತದ ಮೊದಲನೆಯ ಮಂತ್ರದಲ್ಲಿ :—

ಹಿರಣ್ಯಗರ್ಭಃ ಸಮವರ್ತತಾಗ್ರೇ
ಭೂತಸ್ಯ ಜಾತಃ ಪತಿರೇಕ ಆಸೀತ್ ।
ಸದಾಧಾರಪೃಥಿವೀಂ ದ್ಯಾಮುತೇಮಾ
ಕಸ್ಮೈ ದೇವಾಯ ಹವಿಷಾ ವಿಧೇಮ ||

ವಿಶ್ವವಿಸ್ತಾರಕರ್ತೃವಾದ ಪತಿಯು ಮೊದಲು ಒಬ್ಬನೇ ಇದ್ದನು. ಅವನೇ ಸಮಸ್ತ ತನುಕರಣಭುವನಗಳಿಗಾಧಾರರೂಪನಾಗಿದ್ದಾನೆ. ಹೀಗೆ ಸರ್ವಾಂತರ್ಯಾಮಿಯಾದ ಒಬ್ಬನೇ ದೇವರಿದ್ದಾನೆಂಬ ಅರಿವು ಉಂಟಾದಬಳಿಕ ನಾವಿನ್ನು ಬೇರೆ ಯಾವ ದೇವತೆಗೋಸುಗ ಹವಿಸ್ಸಿನ ಯೋಗದಿಂದ ಸೇವೆಮಾಡುವಾ! ಎಂಬ ಉದ್ಗಾರಾತ್ಮಕವಾಗಿ ಪ್ರಕಾಶನವಾಗಿರುವುದು. ಇದೇ ಮಾತಿನ ಸ್ಪಷ್ಟೀಕರಣವು ಶ್ವೇತಾಶ್ವತರ ಶಾಖಾಪ್ರವರ್ತಕರಿಂದ ಹೀಗೆ ಹೇಳಲ್ಪಡುವುದು. (ಶ್ವೇ. ಉ. ೬—೭) :—

ತಮೀಶ್ವರಾಣಾಂ ಪರಮಂ ಮಹೇಶ್ವರಂ
ತಂ ದೈವತಾನಾಂ ಪರಮಂ ಚ ದೈವತಮ್ ।
ಪತಿಂ ಪತೀನಾಂ ಪರಮಂ ಪರಸ್ತಾತ್
ವಿದಾಮ ದೇವಂ ಭುವನೇಶಮೀಡ್ಯಮ್ ||

ಈಶ್ವರಶಬ್ದವಾಚ್ಯರುಗಳಿಗೆಲ್ಲಾ ಶ್ರೇಷ್ಠವಾದ ಮಹೇಶ್ವರನೂ, ದೇವತೆಗಳೆಲ್ಲರಿಗೂ ಶ್ರೇಷ್ಠವಾದ ದೇವರೆನಿಸಿಕೊಳ್ಳಲ್ಪಡುವವನೂ, ಪತಿಶಬ್ದದಿಂದ ಕರೆಯಿಸಿಕೊಳ್ಳುವವರಿಗೆ ಪತಿಯಾದವನೂ, ಶ್ರೇಷ್ಠವಾದುವರೊಳಗೆ ಶ್ರೇಷ್ಠವಾಗಿರುವವನೂ, ಪೂಜಾರ್ಹನೂ, ವಿಶ್ವೇಶನೂ ಆದ ಪರಮೇಶ್ವರನನ್ನು ನಾವು ನಮ್ಮ ದೇವರೆಂದು ಅರಿಯುತ್ತೇವೆ.

ಈ ರೀತಿಯಾಗಿ ಸಕಲಚಿದಚಿದಾತ್ಮಕ ಪ್ರಪಂಚಕ್ಕೆ ಮೂಲಭೂತನಾದ ಪರಮೇಶ್ವರನ ಅಸ್ತಿತ್ವವು ತ್ರಿಕಾಲಾಬಾಧಿತವಾಗಿದೆ. ಆ ಪರಮೇಶ್ವರನಿಂದುಪದಿಷ್ಟವಾದುದರಿಂದೇ ಸಮಾಮ್ನಾಯವೆಂದು ಪ್ರಸಿದ್ಧವಾಗಿರುವ ವೇದವು ಸ್ವತಃ ಪ್ರಮಾಣಭೂತವಾಗಿರುವುದು. ಆದ್ದರಿಂದ, ಮನುಷ್ಯರ ಬುದ್ಧಿಯಲ್ಲಿ ವೈಕಲ್ಯವನ್ನುಂಟುಮಾಡದೆ, ಆ ಬುದ್ಧಿಗೆ ಕಾರ್ಯದಕ್ಷತೆಯ ಜೊತೆಯನ್ನೊದಗಿಸಿಕೊಟ್ಟು, ಅಂತಹ ಬುದ್ಧಿಯ ಮತ್ತು ಶ್ರದ್ಧೆಯ ಸಹಾಯದೊಡನೆ ಜೀವಿತಯ ಪರಮಧ್ಯೇಯದೆಡೆಗೆ ಹೋಗತಕ್ಕ ಒಳ್ಳೆಯ ದಾರಿಯನ್ನು ತೋರಿಸುವ ಅನಾದಿಯೂ, ಅಪೌರುಷೇಯವೂ, ಅಮೋಘಶಕ್ತಿಯುತವೂ ಆಗಿರತಕ್ಕ ಆ ವೇದವು ಸನಾತನಧರ್ಮಾನುಯಾಯಿಗಳಾದ ನಮಗೆ ಸದ್ಭಾಗ್ಯದಿಂದ ಲಭಿಸಿರುವುದಾದಕಾರಣ, ಅದರ ಶಾಸನವನ್ನು ಮನ್ನಿಸಿ ಅದರಂತೆ ನಾವು ಕರ್ತವ್ಯತತ್ಪರರಾಗಿರುವುದೇ ಇಹಾಮುತ್ರಸುಖಸಾಧನವು.

ನಾವು ವೇದಾಗಮರೂಪವಾದ ಶಾಸ್ತ್ರಾಧಾರವನ್ನಂಗೀಕರಿಸದೆ, ಯಾವನಾದರೊಬ್ಬ ಅಧಿಕಾರಿಪುರುಷನ ವಚನಗಳನ್ನೇ ಯೋಗ್ಯವಾದುವೆಂದು ನಂಬಿ ನಡೆವುದಾದರೆ, ಅದರಿಂದ ನಾವು ಸನಾತನಧರ್ಮಾನುಯಾಯಿಗಳೆನಿಸುವುದು ಸುಲಭವಾಗಬಹುದೋ? ಆ ತೆರದ ನಡಾವಳಿಕೆಯುಳ್ಳ ನಮ್ಮನ್ನು ನೀವು ಧರ್ಮಬಹಿಷ್ಕೃತರನ್ನಾಗಿ ಮಾಡಬಲ್ಲಿರಾ? ನಿಮ್ಮ ಕೈಯಲ್ಲೇನಿದೆ? ನೀವು ಮಾಡುವುದಾದರೂ ಏನು? ನೀವು ತಲೆಯಮೇಲೆ ಹೊತ್ತುಕೊಂಡು ಕುಣಿಯುವ ವೇದಾಗಮಗಳನ್ನೇ ಎಲ್ಲರೂ ಶಾಸ್ತ್ರಗಳೆಂದು ನಂಬಬೇಕೆಂಬ ಈ ನಿರ್ಬಂಧವೇಕೆ? ನಾವು ಮಹತ್ ಅವುಗಳನ್ನು ಮನ್ನಿಸುವುದೇ ಇಲ್ಲ ; ಎಂಬೀ ಮುಂತಾದ ನುಡಿಗಳಿಂದ ಗುಡುಗುಡಿಸುವವರನ್ನು ಕುರಿತು ನಾವು ಹೇಳುವುದೇನೆಂದರೆ—ಜಗತ್ತಿನಲ್ಲಿ ಯಾವನಾದರೊಬ್ಬ ಗೃಹಸ್ಥನು ತನಗೆ ಏನಾದರೊಂದು ಹೆಸರನ್ನಿಟ್ಟುಕೊಳ್ಳುವುದರಲ್ಲಿಯೂ ವಸ್ತುತಃ ತಾನು ಅದರಂತೆ ವರ್ತಿಸುವುದರಲ್ಲಿಯೂ ಬಹು ವ್ಯತ್ಯಾಸವಿದೆ. ವೇದಾಗಮಶಾಸ್ತ್ರಗಳನ್ನಪೇಕ್ಷಿಸದೆ, 'ಯಾವನಾದರೊಬ್ಬ ಅಧಿಕಾರಿಪುರುಷನ ಹೇಳುವಿಕೆಯು ಯೋಗ್ಯವಾದುದು.' ಎಂಬ ನಂಬಿಕೆಯುಳ್ಳ ನೀವು ನಿಮ್ಮನ್ನು ಸನಾತನಧರ್ಮಾನುಯಾಯಿಗಳೆಂದೂ ಹೇಳಿಕೊಳ್ಳಲಪೇಕ್ಷಿಸುವಿರಾ? ಅಯ್ಯೋ! ಈ ವಚನವು '**ವದತೋ ವ್ಯಾಘಾತ**' ಪಾಂಕ್ತೇಯವಾಗುವುದಿಲ್ಲವೇ? ವೇದಾಗಮಶಾಸ್ತ್ರಾಧಾರವನ್ನು ಮನ್ನಿಸದ ಮಾನವರು ಸನಾತನವೈದಿಕಧರ್ಮಾನುಯಾಯಿಗಳಹರೇ? ವೇದಾಗಮಶಾಸ್ತ್ರಗಳಿಗೆ ದೂರವಾಗಿರತಕ್ಕವರು ತಾವೂ ಸನಾತನ ಹಿಂದುಗಳೆಂದು ಹೇಳಿಸಿಕೊಳ್ಳಬೇಕೆನ್ನುವುದರಲ್ಲೇನರ್ಥವಿದೆ? ಏಕೆಂದರೆ—ಯಾರು ವೇದಾಗಮಶಾಸ್ತ್ರಗಳನ್ನೊಪ್ಪರೋ ಅವರು ಸನಾತನ ಹಿಂದುಗಳೆನಿಸಲಾರರಷ್ಟೇ! ಯಾರು ಸನಾತನ ವೈದಿಕಧರ್ಮಾನುಯಾಯಿಗಳೋ ಅವರು ವೇದಾಗಮಶಾಸ್ತ್ರಗಳನ್ನೊಪ್ಪುವುದಿಲ್ಲವೆಂಬುದಾದರೋ ಅಸಂಭವವೇ ಸರಿ! ಯಾವಳೋ ಒಬ್ಬ ತಾಯಿಯು ತನ್ನ ಚಿಕ್ಕಮಗುವನ್ನು ಅಕ್ಕರತೆಯಿಂದ 'ಬಲುಜಾಣನು, ಬಂಟರೊಡೆಯನು' ಎಂಬ ಮೊದಲಾದ ಮುದ್ದಿನ ನುಡಿಗಳಿಂದ ಕರೆದಮಾತ್ರಕ್ಕೆ ಆ ಪಸುಳನು ಪಂಡಿತನೂ, ಶೂರನೂ ಆಗುತ್ತಿರುವುದಷ್ಟರಲ್ಲೇ ಇದೆ! ಹಾಗೆ ವೇದಾಗಮಶಾಸ್ತ್ರಾಧಾರವನ್ನು ಮನ್ನಿಸದವರು ತಮ್ಮನ್ನು ಸನಾತನವೈದಿಕಧರ್ಮಾನುಯಾಯಿಗಳೆಂದು ಹೆಸರಿಟ್ಟುಕೊಳ್ಳುವುದರಿಂದುಪಯೋಗವೇನು? ಎಂಥವರಿಗೆ ಅಧಿಕಾರಪುರುಷರೆನ್ನಬೇಕೆಂಬ ವಿಚಾರವಾದರೂ ಬೇಡವೇ? ಯೇನಕೇನ ಪ್ರಕಾರೇಣ ಪ್ರಸಿದ್ಧಪುರುಷರೆನಿಸಿಕೊಳ್ಳುವವರೆಲ್ಲರನ್ನೂ ಅಧಿಕಾರಿಗಳೇ ಎಂದು ತಿಳಿವುದುಚಿತವೇ? ತಮ್ಮ ಮನಸ್ಸಿಗೊಪ್ಪಿಗೆಯಾದವನೇ ಅಧಿಕಾರಿಪುರುಷನೆಂದೂ, ಅವನ ವಚನವೇ ಶಾಸ್ತ್ರವೆಂದೂ ಜಲ್ಪಿಸುವವರು ಮತ್ತೆ ತಮ್ಮನ್ನು ಸನಾತನಹಿಂದುಗಳೆಂದು ಹೇಳಿಕೊಳ್ಳುವುದಕ್ಕೆ ಹಿಮ್ಮೆಟ್ಟದಿರುವ ಪರಿಯನ್ನು ನೋಡಿದರೆ, ಇದೊಂದು ಅಪೂರ್ವವಾದ ಗೌಡಬಂಗಾಲವೆಂದೇ ಹೇಳಬಹುದು. ನೀವು ನಮ್ಮನ್ನು ಧರ್ಮದಿಂದ ಹೊರದೂಡುವಿರಾ? ಎಂದು ನಮ್ಮನ್ನು ವಿಚಾರಿಸುವುದರಿಂದೇನೂ ಪ್ರಯೋಜನವಿಲ್ಲ. ಯಾವನಾದರೊಬ್ಬನು ಒಂದಾನೊಂದು ವಿಶಿಷ್ಟಸ್ಥಿತಿಯನ್ನು ತೊರೆದು ತಾನೇ ಹೊರಬಿದ್ದು ಹೋಗಿ ಮತ್ತೆ ಆ ವಿಶಿಷ್ಟಸ್ಥಿತಿಯಲ್ಲಿರತಕ್ಕವರನ್ನು ಕುರಿತು 'ನೀವು ನಮ್ಮನ್ನು ಬಹಿಷ್ಕರಿಸುವಿರಾ?' ಎಂದು ಮೂದಲಿಸಿ ನುಡಿವುದು ಸಮಂಜಸವಾದುದಲ್ಲ. ತನ್ನ ಕೃತಿಯಿಂದೇ ಹೊರಗಾಗಿರುವಾತನನ್ನು ಹೊರದೂಡುವುದೇನಿದೆ? '**ಕೃತಸ್ಯ ಕರಣಂ ನಾಸ್ತಿ, ಮೃತಸ್ಯ ಮರಣಂ ತಥಾ**' ಎಂಬ ಗಾದೆಯು ಜ್ಞಾಪಕವಾಗುತ್ತದೆ. ನೀವು ನಮಗೆ ಏನುತಾನೇ ಮಾಡಬಲ್ಲಿರಿ? ವೇದಾಗಮಶಾಸ್ತ್ರಗಳ ಹಂಗಿಲ್ಲದ ನಮಗೆ ಅವನ್ನು ಪ್ರಮಾಣಗಳೆಂದು ಭಾವಿಸುವ ಅಗತ್ಯವೇನಿದೆ? ಎನ್ನುವವರಿಗೆ ಅವರ ಹೇಳುವಿಕೆಯಲ್ಲಿಯೇ ಉತ್ತರವಿದೆ. ಈ ಬಗ್ಗೆ ಹಿಂದೀಭಾಷೆಯಲ್ಲಿರುವ '**ದಿಗಂಬರಕೊ ಈಶ್ವರಭೀ ಡರತಾಹೈ**' ಎಂಬ ಆಭಾಣಕವು ಎದುರಾಳಿಗಳನ್ನು ಲಕ್ಷೀಕರಿಸುತ್ತದೆ. ಕೇಳಿರೋ! ನಾವು ನಿಮಗೆ ಏನನ್ನೂ ಮಾಡಲಾರೆವು. ನಿಮಗೆ ಯಾವಬಗೆಯ ಕೇಡನ್ನೆಣಿಸದೆ ನಿಮ್ಮೊಡನೆ ವ್ಯವಹರಿಸುವ ಪ್ರಸಂಗವೊದಗಿದಲ್ಲಿ ನಮ್ಮ ವೇದಾಗಮಶಾಸ್ತ್ರಗಳು ವಿಧಿಸುವಂತೆ ನಮ್ಮ ಮನಸ್ಸನ್ನು ಸಂತೈಸಲು ನಾವು ಮೈತ್ರೀ, ಕರುಣಾ, ಮುದಿತಾ, ಉಪೇಕ್ಷಾ ಎಂಬೀ ನಾಲ್ಕು ಸಾಧನಗಳಲ್ಲಿಯ ಅಂತಿಮ ಸಾಧನವನ್ನವಲಂಬಿಸಿ, ವೇದಾಗಮಶಾಸ್ತ್ರಾಧಿಗತಸ್ವಧರ್ಮಶ್ರದ್ಧೆಯಿಂದ ಆತ್ಮೋನ್ನತಿಯನ್ನು ಪಡೆಯಲೋಸುಗ ನಮ್ಮ ಕರ್ತವ್ಯಾಭಿಮುಖರಾಗುತ್ತೇವೆ.

ಆಧುನಿಕ ಸುಶಿಕ್ಷಿತರೆನಿಸಿಕೊಳ್ಳಲ್ಪಡುವವರಲ್ಲಿ ಅನೇಕರು ಯಾವ ವಿಚಾರದಲ್ಲಿಯೂ ನಿಮಗಭಿಮತಗಳಾದ ವೇದಾಗಮಶಾಸ್ತ್ರಗಳನ್ನು ಪುರಸ್ಕರಿಸುವುದಿಲ್ಲವಾದಕಾರಣ, ಆ ವೇದಾಗಮಶಾಸ್ತ್ರಾಧಾರದ ಪರಿಣಾಮವೇನು? ಎಂದರೆ—'ವೇದಾಗಮಶಾಸ್ತ್ರಾಧಾರದ ಪರಿಣಾಮವೇನು?' ಎಂಬ ವಾಕ್ಯದೊಳಗಿನ 'ಪರಿಣಾಮ'ವೆಂಬ ಶಬ್ದದರ್ಥವೇ ನಮಗೆ ಹೊಳೆಯಲೊಲ್ಲದು. ಆದ್ದರಿಂದ ಮೇಲಿನ ನುಡಿಗಳಿಗೆ ಸರಳವಾದ ಉತ್ತರವನ್ನು ಕೊಡುವುದು ಕಠಿಣವು ; ಆದರೂ ಮೀಮಾಂಸೆಯ ನ್ಯಾಯಸರಣಿಯನ್ನನುಸರಿಸಿ ವಿಶೇಷವಾಕ್ಯದ ಮೇಲಿಂದ "ಶಾಸ್ತ್ರಾಧಾರದ ಪರಿಣಾಮವು ಅಂದರೆ ಉಪಯೋಗವೇನು, ಅಥವಾ ಶ್ರೋತೃಜನರ ಮನಸ್ಸಿನಲ್ಲಿ ಆ ಶಾಸ್ತ್ರಾಧಾರದ ಪರಿಣಾಮವೆಂತಹದು? ಏಕೆಂದರೆ, ಈಗಿನ ಸುಧಾರಕರೆಂಬವರು ವಿಚಾರಾವಸರದಲ್ಲಿ ಆ ಶಾಸ್ತ್ರಗಳನ್ನಂಗೀಕರಿಸುವುದಿಲ್ಲ" ಎಂಬರ್ಥವನ್ನು ಕಲ್ಪಿಸಿ ಉತ್ತರವನ್ನು ಹೇಳುತ್ತೇವೆ. ಆ ಸುಧಾರಕರು ವಿಚಾರಾವಸರದಲ್ಲಿ ವೇದಾಗಮಶಾಸ್ತ್ರಗಳನ್ನಂಗೀಕರಿಸದಿದ್ದ ಮಾತ್ರವೇ ಆ ವೇದಾಗಮಶಾಸ್ತ್ರಗಳು ಅಪ್ರಮಾಣಗಳೆನಿಸಲಾರವು. ಶಾಸ್ತ್ರದೃಷ್ಟಿಯುಳ್ಳವರಿಗೆ ಅವುಗಳ ಉಪಯೋಗವಾಗದಿರದು. ಅವರ ಮನಸ್ಸಿನಲ್ಲಿ ಆ ಶಾಸ್ತ್ರಗಳ ಪರಿಣಾಮವಾಗುವುದು. 'ನಹಿ ಪುರುಷಾಪರಾಧೇನ ಪದಾರ್ಥಸ್ತು ದುಷ್ಯತಿ' ಪುರುಷನ ಅಪರಾಧ (ದೋಷ) ದಿಂದ ಸತ್ಯ (ನಿರ್ದೋಷ) ವಸ್ತುವು ದೂಷಿತವಾಗಲಾರದೆಂಬ ನ್ಯಾಯವಿದೆ. ಯಾರು ಸ್ವಧರ್ಮವನ್ನು ತ್ಯಜಿಸಿ ಪರಧರ್ಮಕ್ಕೆ ಮೆಚ್ಚಿರುವರೋ ಅವರಿಗೆ ವೇದಾಗಮಶಾಸ್ತ್ರಗಳ ವಾಕ್ಯಗಳು ಕಿವಿಗೆ ಬಿದ್ದೊಡನೆಯೇ ಶಿರೋವೇದನೆಯುಂಟಾಗುವುದು. ಸ್ವಧರ್ಮದಂತಾಚರಿಸುತ್ತಿರುವವರಿಗಾದರೋ ಆ ಶಾಸ್ತ್ರಗಳ ಉಪಯೋಗವಿಲ್ಲವೆನ್ನುವಂತಿಲ್ಲ. ತಿಮಿರದೃಷ್ಟಿಗೆ ಚಂದ್ರನು ಎರಡಾಗಿ ತೋರಿದರೂ ಎರಡು ಎಂದೂ ಆಗುವುದಿಲ್ಲವಷ್ಟೇ! ಶಾಸ್ತ್ರಾಧಾರವು ಶಾಸ್ತ್ರದೃಷ್ಟಿಯುಳ್ಳವರ ಸಲುವಾಗಿರುವುದೇ ಹೊರತು ಶಾಸ್ತ್ರಗಳನ್ನೊಪ್ಪದಿರುವವರಿಗೋಸ್ಕರವಿರುವುದಿಲ್ಲ. ಭಾರತವರ್ಷದ ಸರ್ವಜನರೂ ಯಾವ ಕಾಲಕ್ಕೆ ಸುಧಾರಕರಾಗುವರೋ ಆಗ ಮಾತ್ರ ಈ ಪ್ರಶ್ನೆಯು ಸಂಭವಿಸಬಹುದು. ಈಗ ತಮ್ಮನ್ನು ಸುಧಾರಕರೆಂದು ಹೇಳಿಕೊಳ್ಳುತ್ತಿರುವವರ ಪೂರ್ವಜರು ವೇದಾಗಮಶಾಸ್ತ್ರಗಳನ್ನೊಪ್ಪುತ್ತಿದ್ದರು. ಒಂದುವೇಳೆ ಈ ಚಂಚಲ (ಅಸ್ಥಿರ) ವಾದ ಕಾಲಚಕ್ರವು ಹೊರಳುಮರಳಿದರೆ ಈ ಸುಧಾರಕರ ಪೀಳಿಗೆಯಾದರೂ ಭವಿಷ್ಯತ್ಕಾಲದಲ್ಲಿ ವೇದಾಗಮಶಾಸ್ತ್ರಗಳನ್ನು ಒಪ್ಪಲೂಬಹುದು. ಸದ್ಯಃ ಶಾಸ್ತ್ರಾಧಾರವನ್ನೊಪ್ಪತಕ್ಕ ಸುಧಾರಕೇತರಜನರಾದರೂ ಇದ್ದಾರೆ. ಅವರ ಅಭಾವವನ್ನು ಹೇಳಲಾಗುವುದಿಲ್ಲ. ಆದ್ದರಿಂದ ನಾವು ಶಾಸ್ತ್ರದೃಷ್ಟಿಯುಳ್ಳವರಾಗಿ ಆ ವೇದಾಗಮಶಾಸ್ತ್ರಾಧಾರದಿಂದೇ ಧರ್ಮನಿರ್ಣಯಮಾಡಬೇಕಾಗಿದೆ. ಈ ಚಂಚಲವಾದ ಕಾಲದ ಅಥವಾ ಪರಿಸ್ಥಿತಿಯ ಸೆಳವಿಗೆ ಬಿದ್ದು ನಮ್ಮ ಪ್ರಾಚೀನಸ್ವತ್ವಕ್ಕೆರವಾಗತಕ್ಕವರು ನಾವಲ್ಲ.

ಸುಶಿಕ್ಷಿತರೆನಿಸಿಕೊಳ್ಳುವವರಲ್ಲಿಯೇ ಕೆಲವರು ನಮ್ಮೆದುರಾಳಾಗಿ ನಿಂತು 'ನಿಮ್ಮ ಸನಾತನಧರ್ಮಕ್ಕೆ ಧಿಕ್ಕಾರವಿರಲಿ, ಸನಾತನಧರ್ಮವು ಹಾಳಾಗಿಹೋಗಲಿ ; ನಿಮ್ಮ ಧರ್ಮವೇ ನಮಗೆ ಬೇಕಾಗಿಲ್ಲ' ಎಂದು ಮೊದಲಾಗಿ ತಮ್ಮ ತೀಕ್ಷ್ಣಜ್ಞಾನ

ಕಂತುಗಳ ಹುರುಪಿನಿಂದ ಸನಾತನ ವೈದಿಕ ಧರ್ಮವನ್ನು ಮೇರೆದಪ್ಪಿ ಹೀಯಾಳಿಸಿ ನುಡಿಯುತ್ತಿರುವರು ; ಇಷ್ಟೇ ಅಲ್ಲ, ತಮ್ಮ ಮೊತ್ತವನ್ನಿತ್ತುತ್ತರೋತ್ತರಿಸಿ ಬೆಳೆಯಿಸತೊಡಗಿದ್ದಾರೆ. ಅವರ ಪರಸಂಸ್ಕೃತಿಪ್ರಭಾವಜನ್ಯವಿಶ್ಲೇಷಣದೋಷದೂಷಿತಾಂತಃಕರಣವೃತ್ತಿವ್ಯಾಪ್ತದೃಷ್ಟಿಗೆದುರಾದ ಸನಾತನಧರ್ಮವು ವಿಪರೀತವಾಗಿ ಭಾಸವಾಗುತ್ತಿರುವುದು ಸಾಹಜಿಕವಲ್ಲವೇ? ಅದುಕಾರಣವೇ ನೀತಿಜ್ಞರು :—

ನಿಜದೋಷಾವೃತಮನಸಾಮತಿಸುಂದರಮೇವ ಭಾತಿ ವಿಪರೀತಮ್ ।
ಪಶ್ಯತಿ ಪಿತ್ತೋಪಹತಃ ಶಶಿಶುಭ್ರಂ ಶಂಖಮಪಿ ಪೀತಮ್ ||

ಯಾವುದಾದರೊಂದು ದೋಷದಿಂದಾವೃತವಾದ ಮನಸ್ಸುಳ್ಳವರಿಗೆ ಬಲು ಚಂದವಾಗಿರತಕ್ಕುದೇಯಾದರೂ ವಿಪರೀತವಾಗಿ ತೋರುವುದು. ಪಿತ್ತೋದ್ರೇಕಾದಿಗಳಿಂದ ಸಂಭವಿಸಿದ ಒಂದು ಬಗೆಯ ರೋಗ (ಕಾಮಾಲೆ) ಪೀಡಿತನಾದವನ ಕಣ್ಣಿಗೆ ಚಂದ್ರನಂತೆ ಬೆಳದಾದ ಶಂಖವು ಹಳದಿಯಾಗಿ ಕಂಡುಬರುವುದಲ್ಲವೇ? ಎಂಬುದಾಗಿ ಹೇಳುತ್ತಾರೆ.

ಅಂತಹ ಜನರ ಮನಸ್ಸಿನಲ್ಲಿ ಸದ್ಧರ್ಮವಿಷಯಕವಾದ ಶ್ರದ್ಧೆಯನ್ನು ಹುಟ್ಟಿಸುವುದು ಸುಲಭವಾದ ಕೆಲಸವಲ್ಲ ; ನಿಜವಾಗಿ ಗಾಢಸುಷುಪ್ತಿಸುಖವನ್ನನುಭವಿಸುತ್ತಿರುವವನನ್ನು ಯಾರಾದರೂ ಎಚ್ಚರಗೊಳಿಸಬಹುದು ; ಆದರೆ ಮೋಲುಮುಸುಕಿಕ್ಕಿ ಟಕ್ಕಿನಿಂದ ಮಲಗಿ ಗುರುಕಿಸಬ್ಬಗಳನ್ನು ಹೊರಡಿಸುವ ಕಕ್ಕನನ್ನೆಬ್ಬಿಸುವುದು ಕಡುಕಷ್ಟವು. ಬಿಲ್ಹಣನು :—

ವ್ಯುತ್ಪತ್ತಿರಾವರ್ಜಿತಕೋವಿದೋಪಿ
ನ ರಂಜನಾಯ ಕ್ರಮತೇ ಜಡಾನಾಮ್ ।
ನ ಮೌಕ್ತಿಕಚ್ಛಿದ್ರಕರೀ ಶಲಾಕಾ
ಪ್ರಗಲ್ಭತೇ ಕರ್ಮಣಿ ಟಂಕಿಕಾಯಾಃ ||

ಎಂದುಸುರಿರುವುದು ಈ ಮೇಲಿನ ನಮ್ಮ ನುಡಿಗಳಿಗುಪೋದ್ಬಲಕ (ಸ್ವಾಭಿಪ್ರಾಯಪುಷ್ಟ್ಯರ್ಥ) ವಾದುದೆನಿಸಬಹುದಲ್ಲವೇ? ಒಂದು ಪಕ್ಷದಲ್ಲಿ ಸಮುಚಿತವಾಗಿ ಅಂತಹ ಜನರ ತಿರಸ್ಕಾರವಚನಪಟಲವನ್ನು ತರ್ಕಬಲದಿಂದಲ್ಲಗಳೆಯಲುಹುದಾದರೂ ಕೊನೆಗೆ 'ಪವನಾಗ್ನಿಸಮಾಗಮೋಹ್ಯಯಮ್' ಎಂಬ ವಾಕ್ಯಾರ್ಥಾನುಭವವೇ ಫಲಿತಾಂಶರೂಪವಾಗಿ ಪರಿಣಮಿಸುವುದು.

ಒಟ್ಟಿನಲ್ಲಿ ಹೇಗಾದರೂ 'ಅಪೃಷ್ಟೋಽಪಿ ಹಿತಂ ಬ್ರೂಯಾತ್' ಎಂಬ ಧರ್ಮನೀತಿಯನ್ನನುಸರಿಸಿ ನಮ್ಮವರೆನಿಸುವವರಿಗೆ ಧರ್ಮಾಧರ್ಮವಿಚಾರಕ್ಕೊಳಪಟ್ಟ ನಾಲ್ಕು ಮಾತುಗಳನ್ನು ನಮಗೆ ತಿಳಿದ ಮಟ್ಟಿಗುಪದೇಶಿಸಬೇಕೆಂದು ನಮ್ಮ ಮನವೇಸುವುದು.

'ಸನಾತನಧರ್ಮಕ್ಕೆ ಧಿಕ್ಕಾರವಿರಲಿ, ಸನಾತನಧರ್ಮವು ಹಾಳಾಗಿಹೋಗಲಿ' ಎಂಬುದಾಗಿ ವೇದಬಾಹ್ಯರಾದ ಕೆಲಂಬರು ನುಡಿದರೂ ನುಡಿಯುತ್ತಿರಬಹುದು. ತನಗೆ ನಿಲುಕದಿರುವ ದ್ರಾಕ್ಷೆಯ ಹಣ್ಣಿನ ಗೊಂಚಲವನ್ನು ಹುಳಿಯೆಂದು ಹೀಯಾಳಿಸಿ ನುಡಿಯುವ ಗುಳ್ಳನಂತಿರುವವರ ಅಧಿಕ್ಷೇಪವಚನಗಳಿಗೆ ನಾವು ಬೆಳೆಯೆವು, ಮುಳಿಯೆವು. ಆದರೆ ಸನಾತನವೈದಿಕಧರ್ಮಾನುಯಾಯಿಗಳ ವಂಶೀಯರೆನಿಸಿಕೊಳ್ಳುವವರೇ ಇಹಾಮುತ್ರಸುಖಸಾಧನೀಭೂತವಾದ ಸ್ವಧರ್ಮವನ್ನು ಪೂರ್ವಾಪರವಿಚಾರವಿಲ್ಲದೆ ಧಿಕ್ಕರಿಸಿ ನುಡಿವ ಮಾತುಗಳನ್ನು ಕಿವಿಯಾರ ಕೇಳುವ ನಮಗಷ್ಟೇ ಅಲ್ಲ, ಸನಾತನ ವೈದಿಕಧರ್ಮದಲ್ಲಿ ನಿಷ್ಠೆಯುಳ್ಳ ಯಾರಿಗಾದರೂ ಸಖೇದಾಶ್ಚರ್ಯವೆನಿಸದಿರದು.

ಸರ್ವಪುರುಷಾರ್ಥಸಾಧನವಾದ ಧರ್ಮವೇ ಹಾಳಾಗಿಹೋಗಲೆಂದು ಬಯಸುವ ಪರಿಯು 'ಮೂಲೇ ಕುಠಾರಃ' ಎನ್ನುವಂತಿರುವುದು. ಮತ್ತು, 'ಸನಾತನ' ವೆಂದರೆ ನಿತ್ಯವೆಂದರ್ಥವು. ನಿತ್ಯವಾದ ಧರ್ಮವನ್ನು ಯಾರಾದರೂ ಧಿಕ್ಕರಿಸಿದರೂ, ಇಲ್ಲವೆ ಅದು ಹಾಳಾಗಿಹೋಗಲೆಂದು ಅನಿಷ್ಟಚಿಂತನೆಗೆಯ್ದರೂ, ಅಷ್ಟುಮಾತ್ರದಿಂದೇ ಅದಕ್ಕೆ ಯಾವ ಹಾನಿಯೂ ತಟ್ಟದು. ಪುರಾತನರು :—'**ಧರ್ಮ ಏವ ಹತೋ ಹನ್ತಿ**'(ಮನು. ೮-೧೫) ಎಂದು ನುಡಿದಿರುವಂತೆ ಧರ್ಮಕ್ಕೆ ಕೇಡನೆಣಿಸುವಾತನು ತಾನೇ ಹಾಳಾಗಿಹೋಗುವನು. ನಿತ್ಯವಾದ ಧರ್ಮವೆಂದಿಗೂ ಅಳಿಯದು.

ವೈದಿಕಧರ್ಮದ ಅಂತಿಮಸಾಧ್ಯವು ಕೇವಲ ಮೋಕ್ಷವಂತೆ! ಅದರಿಂದ ಲೌಕಿಕೋತ್ಕರ್ಷವು ಸಂಭವಿಸುವುದುಂಟೆ? ಆದ್ದರಿಂದ, ವ್ಯಕ್ತಿಯ ಲೌಕಿಕೋತ್ಕರ್ಷಕ್ಕೂ, ರಾಷ್ಟ್ರೋನ್ನತಿಗೂ ಅಂತಹ ಧರ್ಮದಿಂದುಪಯೋಗವೇನು? ಎಂದಾಶಂಕಿಸುವ ಚದುರರಿಗೆ ನಾವು ಹೇಳುವುದೇನೆಂದರೆ—ಸನಾತನವೈದಿಕಧರ್ಮದ ಅಂತಿಮಸಾಧ್ಯವು ಕೇವಲ ಮೋಕ್ಷವೆಂಬುದೇನೋ ನಿಜ ; ಆದರೂ ವೈದಿಕಧರ್ಮದಲ್ಲಿ ಲೌಕಿಕೋತ್ಕರ್ಷತೆಯು ಅನಿಷ್ಟವಾಗಿರುವುದಿಲ್ಲ. ಐಹಿಕೋತ್ಕರ್ಷವನ್ನು ಸಂಪಾದಿಸುವುದೇ ಮಾನವನ ಪ್ರಧಾನಕರ್ತವ್ಯವೆಂಬುದು ವೈದಿಕಧರ್ಮಾಭಿಮತವಲ್ಲವೆಂಬೀ ಸಂಗತಿಯನ್ನಾದರೋ ಯಾರೂ ಮರೆಯಕೂಡದು. ವೈದಿಕಧರ್ಮದಲ್ಲಿ ಪ್ರತಿಪಾದಿಸಲ್ಪಡುವ ನಿಜವಾದ ಮೋಕ್ಷಸ್ವರೂಪವು ಸಮಸ್ತಜೀವರ ಅಂತಿಮಧ್ಯೇಯವಾಗಿರುವುದೆಂಬ ವಿಷಯವನ್ನು ಆ ಚದುರರಾದರೂ ವಿಚಾರಪೂರ್ವಕವಾಗಿ ಸಮ್ಮತಿಸುವುದಾದರೆ, ಆ ಅಂತಿಮಧ್ಯೇಯಸಾಧಕವಾದ ಧರ್ಮವು ಸರ್ವರಿಗೂ ಉಪಾದೇಯವಾಗಿರುವುದೆಂದೇ ಹೇಳಬಹುದಲ್ಲವೆ? ಅಂತಹ ಧರ್ಮವಾದರೋ :—**ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸಧರ್ಮಃ** (ವೈ. ದ. ೧-೨) ಎಂಬಂತೆ ಐಹಿಕೋತ್ಕರ್ಷಕ್ಕೂ ಸಾಧನವಾಗಿರುತ್ತಿರುವಲ್ಲಿ ಸುಧಾರಕಂಮನ್ಯರು ಸನಾತನವೈದಿಕಧರ್ಮದಿಂದೇನುಪಯೋಗವೆಂದುಸುರುವುದೇಕೆ? ಕೃಷ್ಣದ್ವೈಪಾಯನಮುನಿಯು ಭಾರತದ ಕೊನೆಯಲ್ಲಿ :—

ಊರ್ಧ್ವಬಾಹುರ್ವಿರೌಮ್ಯೇಷ ನಚ ಕಶ್ಚಿಚ್ಛೃಣೋತಿ ಮೇ ।
ಧರ್ಮಾದರ್ಥಶ್ಚ ಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ ||

ಈ ನಾನು ಕೈಯೆತ್ತಿ ಗಟ್ಟಿಯಾಗಿ ಕೂಗಿ ಸರ್ವರನ್ನೂ ಕುರಿತು :—ಧರ್ಮವನ್ನನುಸರಿಸಿ ನಡೆವುದರಿಂದ ಅರ್ಥಕಾಮಗಳೆಂಬೆರಡು ಪುರುಷಾರ್ಥಗಳೂ ಸಾಧಿಸಲ್ಪಡುತ್ತವೆ. ಹೀಗಿರಲು ನೀವು ಸರ್ವಾರ್ಥಸಾಧಕವಾದ ಆ ಧರ್ಮವನ್ನದೇಕೆ ಅನುಷ್ಠಿಸುವುದಿಲ್ಲ? ಎಂದು ವಿಚಾರಿಸುತ್ತೇನೆ ; ಆದರೆ, ನನ್ನ ಈ ಆಕ್ರೋಶವನ್ನು ಯಾರೂ ಲಕ್ಷಿಸುವುದೇ ಇಲ್ಲ. ಏನುತಾನೇ ಮಾಡಲಿ! ಎಂದು ಹೇಳಿರುವ ಮಾತುಗಳನ್ನೇ ನಾವೂ ಈಗ ಅಡಿಗೋರಿಸುವ ಪ್ರಸಂಗವು ಪ್ರಾಪ್ತವಾಗಿರುವುದು.

ಪ್ರತಿಯೊಬ್ಬ ಮನುಷ್ಯನಿಗೂ ಐಹಿಕೋತ್ಕರ್ಷದಿಚ್ಛೆಯು ಇದ್ದೇ ಇರುವುದು. ನಾನು ವಿದ್ವಾಂಸನಾಗಬೇಕು, ವಿಶೇಷವಾಗಿ ಧನವನ್ನು ಸಂಪಾದಿಸಬೇಕು, ನನ್ನ ಕೀರ್ತಿಯು ಹಬ್ಬಲಿ, ಮನೆ, ಹೊಲ, ಮಡದಿ, ಮಕ್ಕಳು ಎಂಬೀ ಮುಂತಾದ ಸುಖಸಾಧನವಸ್ತುಗಳು ನನ್ನಿಷ್ಟಪ್ರಕಾರವಾಗಿ ದೊರೆಯಲಿ, ಬಹು ಜನರು ನನ್ನನ್ನು ಸತ್ಕರಿಸಲಿ ಎಂಬ ಮೊದಲಾದ ಬಯಕೆಯನ್ನೀಡೇರಿಸಿಕೊಳ್ಳುವುದಕ್ಕೋಸ್ಕರವೇ ಪ್ರತಿಯೊಬ್ಬನೂ ಹೆಣಗಾಡುತ್ತಿರುವನು. ದೈವವು ಅನುಕೂಲವಿರುವಾಗ ಅವನ ಮನೋರಥವು ನ್ಯೂನಾಧಿಕಪ್ರಮಾಣದಿಂದ ಕೈಗೂಡುವುದು. ದೈವವು ಪ್ರತಿಕೂಲವಾಗಲು—

ಯಚ್ಚಿನ್ತಿತಂ ತದಿಹ ದೂರತರಂ ಪ್ರಯಾತಿ ।
ಯಚ್ಚೇತಸಾ ನಗಣಿತಂ ತದಿಹಾಭ್ಯುಪೈತಿ ||

ಎಂಬ ಸ್ಥಿತಿಯೊದಗುವುದು. ಇದು ಒಬ್ಬ ವ್ಯಕ್ತಿಯ ಲೌಕಿಕೋತ್ಕರ್ಷದ ಮಾತಾಯಿತು. ಇನ್ನು, ರಾಷ್ಟ್ರೋತ್ಕರ್ಷದ ಪ್ರಕಾರವಾದರೂ ಹೀಗೇ ಇರುವುದು. ಮೇಲೆ ಹೇಳಿದಂತೆ ಐಹಿಕೋತ್ಕರ್ಷತೆಯ ಇಚ್ಛೆಯುಳ್ಳ ವ್ಯಕ್ತಿಗಳ ಸಮೂಹವೇ ರಾಷ್ಟ್ರವು. ಏಕೆಂದರೆ—ಮನುಷ್ಯನು ರಾಷ್ಟ್ರದ ಘಟಕಾವಯವನೆಂಬ ಮಾತು ಸರ್ವಸಮ್ಮತವಾದುದು. ಸಮಾನವಾಗಿರತಕ್ಕ ಧರ್ಮ, ಭಾಷೆ, ವೇಷ, ಆಚಾರ ಮುಂತಾದುವರ ಯೋಗದಿಂದ ಏಕರಾಷ್ಟ್ರದ ಕಲ್ಪನೆಯು ದೃಢವಾಗಿರುವುದು. ಆ ಆ ರಾಷ್ಟ್ರದೊಳಗಿನ ಜನರು ಇತರ ರಾಷ್ಟ್ರಗಳನ್ನು ತಮಗೆ ಸಂಬಂಧಪಟ್ಟವುಗಳಲ್ಲವೆಂಬ ಭೇದಭಾವನೆಯುಳ್ಳವರಾಗಿರುವುದರಿಂದೇ ತಮ್ಮ ರಾಷ್ಟ್ರದುತ್ಕರ್ಷವಾಗಬೇಕೆಂಬ ಹಂಬಲದಿಂದ ಅದಬಗ್ಗೆ ಬಹುವಿಧವಾಗಿ ಪ್ರಯತ್ನಿಸುತ್ತಿರುವರು.

ಇವೆರಡು ಸಂಗತಿಗಳೂ ಮಾನವಸ್ವಭಾವವನ್ನನುಸರಿಸಿವೆ. ವ್ಯಕ್ತಿಯ ಮತ್ತು ರಾಷ್ಟ್ರದ ಸ್ವಾರ್ಥಬುದ್ಧಿಯು ಸ್ವಾಭಾವಿಕವಾದುದು. ಈ ಸ್ವಾರ್ಥಬುದ್ಧಿಮೂಲಕವಾಗಿಯೇ ಜಗತ್ತಿನ ಆರಂಭದಿಂದ ವರ್ತಮಾನ ಸಮಯದ ವರೆಗೆ ಈ ಸೃಷ್ಟಿಯಲ್ಲಿ ಅಸಂಖ್ಯವಾದ ಅನರ್ಥಗಳು ಘಟಿಸಿವೆ, ಘಟಿಸುತ್ತಲಿವೆ, ಕಲ್ಪಾಂತದವರೆಗೆ ಘಟಿಸತಕ್ಕವುಗಳೇ. ಆದರೆ ತನ್ನ ಮತ್ತು ತನ್ನ ರಾಷ್ಟ್ರದ ಐಹಿಕೋತ್ಕರ್ಷವಾಗಬೇಕೆಂಬ ಮಾನವನ ಭಾವನೆಯು ಸ್ವಾಭಾವಿಕವಾದುದಾದರೂ ಅದು 'ನಾನು ಮತ್ತು ನನ್ನ' ದೆಂಬಭಿಮಾನಪೂರ್ವಕವಾದುದರಿಂದ, ಆ ಭಾವನೆಯು ರಾಗದ್ವೇಷಗಳಿಂದ ಯುಕ್ತವಾಗಿರುವುದು. ರಾಗದ್ವೇಷೋಪೇತವಾದ ಆ ಭಾವನೆಯಿಂದ ತನ್ನ ಮೇಲೆಯೂ ಅನ್ಯರ ಮೇಲೆಯೂ ಯಾವ ಕಾಲಕ್ಕೆ ಯಾವ ವಿಧವಾದ ಅನರ್ಥಗಳಾವರಿಸುವುವೆಂಬುದು ನಿಯಮವೇ ಇಲ್ಲ. ಪರಿಪರಿಯಾದ ಅನರ್ಥಗಳಿಗೆದೆಗೊಟ್ಟು ಕಷ್ಟಪಟ್ಟು ಇಷ್ಟಲ್ಲಿ ಪ್ರಯಾಸದಿಂದ ಸಂಪಾದಿಸಲ್ಪಟ್ಟ ಐಹಿಕೋತ್ಕರ್ಷವಾದರೂ ಅಲ್ಪಕಾಲವೇ ಇರತಕ್ಕದ್ದಾದಕಾರಣ, ಅದು ನಿಜವಾದುತ್ಕರ್ಷವೇ ಅಲ್ಲ.

ಜಗತ್ತಿನ ಆರಂಭದಿಂದ ಇಂದಿನವರೆಗೆ ಅನೇಕ ವ್ಯಕ್ತಿಗಳೂ, ರಾಷ್ಟ್ರಗಳ ಮುಖಂಡರೂ ವ್ಯಕ್ತಿಗಳ ಮತ್ತು ರಾಷ್ಟ್ರಗಳ ಉತ್ಕರ್ಷತೆಗಾಗಿ ಮನವಾರೆ ಹೆಣಗಾಡಿ ಮನದಬಯಕೆಯನ್ನೀಡೇರಿಸಿಕೊಂಡರೆಂಬುದು ಸುಪ್ರಸಿದ್ಧವಾಗಿರುವುದು. ಆದರೆ, ಅವರು ಸಾಧಿಸಿಕೊಂಡ ಉತ್ಕರ್ಷಗಳಲ್ಲಿ ಯಾವ ಉತ್ಕರ್ಷವು ಚಿರಕಾಲಿಕವಾಗಿ ಉಳಿದಿರುವುದು? ಯಾವುದೂ ಇಲ್ಲ. ಪರ್ಯಾಲೋಚಿಸಿದರೆ :—

ಕಸ್ಯೈಕಾಂತಂ ಸುಖಮುಪನತಂ ದುಃಖಮೇಕಾಂತತೋ ವಾ ।
ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ ||

ಎಂಬುದಾಗಿ ಮಹಾಕವಿಯಾದ ಕಾಳಿದಾಸನು ಹೇಳಿರುವಂತೆ, ಸುಖದ ಹಿಂದೆ ಹೇಗೆ ದುಃಖವು ನಿಯತವಾದುದೋ ಹಾಗೇ ಉತ್ಕರ್ಷದ ಬೆಂಬಿಡದೆ ಅಪಕರ್ಷವು ನಿಯತವಾಗಿದೆ. ಆದ್ದರಿಂದ ಯಾವಬಗೆಯಾದ ಲೌಕಿಕೋತ್ಕರ್ಷತೆಗಿಂತಲೂ ಧಾರ್ಮಿಕದುತ್ಕರ್ಷತೆಯು ಮಿಗಿಲಾದುದು. ಈ ಮೇಲೆ ಹೇಳಿದಂತೆ, ಧಾರ್ಮಿಕೋತ್ಕರ್ಷವು ಐಹಿಕ-ಪಾರಲೌಕಿಕನೆಂಬೆರಡೂ ವಿಧವಾಗಿರುವುದರಿಂದೇ ಅದು ನಿತ್ಯವಾಗಿರುವುದು. ಅದರಲ್ಲಿ ರಾಗದ್ವೇಷಾದಿದೋಷಗಳಿಲ್ಲದುದರಿಂದ ನಿರುಪದ್ರವವೂ, ಉತ್ತರೋತ್ತರವಾಗಿ ಅಭಿವೃದ್ಧಿಯನ್ನೈದುವುದರಿಂದ ಮುಮುಕ್ಷುಗಳಿಗತ್ಯಂತಾಭೀಷ್ಟವಾದುದೂ ಆಗಿರುವುದೆಂಬಲ್ಲಿ ತಿಲಮಾತ್ರವೂ ಸಂದೇಹವಿಲ್ಲ. ಅದುಕಾರಣವೇ, ಸಾರಾಸಾರವಿಚಾರಪರಾಯಣನಾದ ಮನುಷ್ಯನು ಯಾವ ಲೌಕಿಕೋತ್ಕರ್ಷದಲ್ಲಿಯೂ ವಿಶೇಷಾಸಕ್ತನಾಗದೆ ಧಾರ್ಮಿಕದುತ್ಕರ್ಷತೆಗೋಸುಗ ಭಗೀರಥಪ್ರಯತ್ನವನ್ನು ಮಾಡತಕ್ಕದ್ದು. ಹಾಗೂ ಧರ್ಮಾನುಷ್ಠಾನವನ್ನು ಪ್ರಾಧಾನ್ಯವಾಗಿಟ್ಟುಕೊಂಡು ತದನುಸಾರವಾಗಿ ಲೌಕಿಕದುತ್ಕರ್ಷತೆಯನ್ನೂ ಮಾಡಿಕೊಳ್ಳಲೇಬೇಕು. ಏಕೆಂದರೆ—ಸಾತ್ವಿಕವಾದ ಐಹಿಕೋತ್ಕರ್ಷವೇ ಅತ್ಯಂತಾಭೀಷ್ಟವಾದುದು. ರಾಜಸವೂ, ತಾಮಸವೂ ಆಗಿರತಕ್ಕ ಐಹಿಕಪಾರಲೌಕಿಕೋತ್ಕರ್ಷಗಳು ತ್ಯಾಜ್ಯವೂ, ಹೀನವೂ, ಅನಿಷ್ಟವೂ ಎಂಬುದಾಗಿಯೇ ವೈದಿಕಧರ್ಮಪ್ರವರ್ತಕರಾದ ಪುರಾತನರು ನಿರೂಪಿಸಿದ್ದಾರೆ. (ಸಶೇಷ)

ಶ್ರೀಮಜ್ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಜಯಂತಿಮಹೋತ್ಸವ.

ಬೆಂಗಳೂರು.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮಹಂತಿನ ಮಠದಲ್ಲಿ ಪರಮ ಪುಣ್ಯಕಾಲವೆನಿಸಿದ ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿಮಹೋತ್ಸವವು ಇಲ್ಲಿಯ ಸಮಸ್ತ ವೀರಶೈವ ದೈವಮಂಡಲಿಯೊಡನೆ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಗುರುಭಕ್ತಶಿರೋಮಣಿಗಳಾದ ಮ|| ರಾ|| ಸರಾಫ್ ಬಿ. ಬಸಪ್ಪನವರು ತಮ್ಮ ಮೂಲಾಚಾರ್ಯರಾದ ಶ್ರೀ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವ ಮೂರ್ತಿಯನ್ನು ಬೆಳ್ಳಿಯಿಂದ ನಿರ್ಮಿಸಿ ವಿಧ್ಯುಕ್ತವಾಗಿ ಪ್ರಾಣಪ್ರತಿಷ್ಠಾದಿಕರ್ಮಗಳನ್ನು ಮಾಡಿಸಿದುದು ವೀರಶೈವಸಮುದಾಯಕ್ಕೆಲ್ಲಾ ಆನಂದವನ್ನುಂಟುಮಾಡಿತು. ಈ ಮಹೋತ್ಸವಕ್ಕಾಗಿ ಅನೇಕ ಜನ ಗುರುಭಕ್ತರು ಆಗಮಿಸಿದ್ದರು. ಪೂಜಾದಿ ಸಕಲ ಕಾರ್ಯಗಳು ಸಮಾಪ್ತಿಗೊಂಡಮೇಲೆ ಮೈಸೂರು ದೇಶದ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರಾದ ಮ|| ರಾ|| ಕೆ. ಎಚ್. ರಾಮಯ್ಯನವರು, ಬಿ.ಎ., ಬಾರ್-ಅಟ್-ಲಾ ರವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಮ|| ರಾ|| ಗ್ರಂಥಿಗೆ ಅಂಗಡಿ ಹೆಬ್ಬೂರು ಸಿದ್ಧವೀರಪ್ಪನವರು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ವಿಷಯದಲ್ಲಿಯೂ ವೀರಶೈವಮತದ ಸನಾತನತ್ವದ ವಿಷಯದಲ್ಲಿಯೂ ಮನೋಹರವಾಗಿ ಭಾಷಣ ಮಾಡಿದರು. ಪಾಠಶಾಲಾ ವಿದ್ಯಾರ್ಥಿಗಳು ಷಟ್ಸ್ಥಲಗಳ ವಿಷಯದಲ್ಲಿಯೂ, ಮತಧರ್ಮದ ವಿಷಯದಲ್ಲಿಯೂ ಉಪನ್ಯಸಿಸಿದರು. ಅಧ್ಯಕ್ಷ ಮಹಾಶಯರು ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಪತ್ತಿ, ಇವರ ಮಹಿಮೆ, ಇವರಿಂದ ಸ್ಥಾಪಿತವಾದ ವೀರಶೈವಮತದ ಸನಾತನತ್ವ ಇವೇ ಮೊದಲಾದ ವಿಷಯಗಳ ಮೇಲೆ ಬಹು ಗಂಭೀರವಾಗಿಯೂ ಮನೋರಂಜಕವಾಗಿಯೂ ಯುಕ್ತಿಯುಕ್ತವಾಗಿಯೂ ಸಂಭಾಷಿಸಿದರು. ಇವರ ಭಾಷಣದ ಗಾಂಭೀರ್ಯವನ್ನು ಕೇಳಿ ಸರ್ವರೂ ಸಂತೋಷಸಾಗರದಲ್ಲಿ ಮುಳುಗಿ ಹೋಗಿದ್ದರು. ಸಭಾಕಾರ್ಯವು ಪೂರೈಸಿದನಂತರ ಜಗದಾಚಾರ್ಯರ ಮಹೋತ್ಸವವು ಪ್ರಾರಂಭವಾಯಿತು. ಆಚಾರ್ಯರ ದಿವ್ಯರಜತವಿಗ್ರಹವು ಕುಸುಮಗಳಿಂದಲೂ, ನಾನಾತರಹದ ವಿದ್ಯುದ್ದೀಪಗಳಿಂದಲೂ ಅಲಂಕೃತವಾದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಲ್ಪಟ್ಟಿತು. ಈ ರೀತಿಯಾಗಿ ವೈಭವಯುಕ್ತವಾದ ಮಹೋತ್ಸವವು ನಾನಾತರಹದ ಮಂಗಲವಾದ್ಯಗಳೊಡನೆ ಪಟ್ಟಣದ ಮುಖ್ಯಮುಖ್ಯ ಬೀದಿಗಳಲ್ಲೆಲ್ಲಾ ನೆರವೇರಿ ಮಹಂತಿನಮಠಕ್ಕೆ ಬಂದು ತಲ್ಪಿತು. ಅನಂತರ ಜಗದಾಚಾರ್ಯರಿಗೆ ಮಂಗಲಾರತಿಯಾಗಿ ಮಹೋತ್ಸವ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು. ಈ ಸಾರೆ ಹೊಸದಾಗಿ ನೆರವೇರಿಸಿದ ಈ ಮಹೋತ್ಸವಕಾರ್ಯದಲ್ಲಿ ಅನೇಕ ಜನ ಗುರುಭಕ್ತರು ಅಸಾಧಾರಣವಾದ ಭಕ್ತಿಯನ್ನು ವಹಿಸಿ ಕಾರ್ಯವನ್ನು ಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ಸಂತೋಷವೆನಿಸುತ್ತದೆ. ಬೆಂಗಳೂರು ಪುರವಾಸಿಗಳು ಇದೇ ರೀತಿಯಾಗಿ ಪ್ರತಿಯೊಬ್ಬ ಆಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿ ಧನ್ಯರಾಗಬೇಕೆಂದಾಶಿಸುವ,

ಓರ್ವ ಗುರುಭಕ್ತ.

ಮಧುಗಿರಿ ತಾಲ್ಲೂಕು ಜಕ್ಕೇನಹಳ್ಳಿ.

ಸ್ವಾಮಿ! ತಾ|| 13-2-33 ನೆಯ ವಾರದ ಪಂಚಾಚಾರ್ಯಪ್ರಭಾಪತ್ರಿಕೆಯಲ್ಲಿ ಅನುಜ್ಞೆಕೊಟ್ಟಿರುವಂತೆ ಈ ಗ್ರಾಮದ ವೀರಶೈವಮಂಡಲಿಯವರು ಶ್ರೀ ಜಗದ್ಗುರುಗಳ ಜಯಂತಿಮಹೋತ್ಸವವನ್ನು ಅತಿವಿಜೃಂಭಣೆಯಿಂದ ನಡೆಸಿದರು. ಶ್ರೀ ರಂಭಾಪುರೀ ಜಗದ್ಗುರು ಸ್ವಾಮಿಯವರು ಈಗ್ಗೆ 6 ತಿಂಗಳ ಕೆಳಗೆ ಈ ಗ್ರಾಮಕ್ಕೆ ಚಿತ್ತೈಸಿ ಗರಣಿಮಠದ ಶಂಭುಲಿಂಗಯ್ಯನವರ ಗೃಹಪಾವನವನ್ನು ಮಾಡಿ ಶಿವಪೂಜೆಯನ್ನು ನೆರವೇರಿಸಿ ಕೃಪೆಯಿಟ್ಟು 2 ದಿನಗಳು ಮೊಕ್ಕಾಂಮಾಡಿ ವೀರಶೈವರಲ್ಲಿದ್ದ ಪಾರ್ಟಿಯನ್ನು ನಿವಾರಿಸತಕ್ಕ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿದಂದಿನಿಂದಲೂ ಶ್ರೀಗುರುಗಳ ಅನುಗ್ರಹದಿಂದ ಈ ಮಂಡಲಿಯವರು ಗುರುವಾಜ್ಞೆಯನ್ನು ಶಿರಸ್ಸಿನಲ್ಲಿ ಹೊತ್ತು ನಡೆಸುತ್ತಿದ್ದಾರೆ.

ಬಿ. ಶಂಬಸಪ್ಪ, ಜಕ್ಕೇನಹಳ್ಳಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಫಾಲ್ಗುಣ ಶುದ್ಧ ತ್ರಯೋದಶಿ **(10-3-33)** ಶುಕ್ರವಾರ.



ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ತ್ರಯೋದಶಿ ಶುಕ್ರವಾರ **(10-3-33)** ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಪ್ರಸಿದ್ಧ ಬೀಡಿವ್ಯಾಪಾರಿಗಳಾದ ಜ್ಯೂಬಿಲಿಸ್ಟೋರ್ಸ್ ಪ್ರೊಪ್ರೈಟರ್ ಮ|| ರಾ|| ಎಂ. ಎಸ್. ಚನ್ನಬಸಪ್ಪನವರು ಕಳುಹಿಸಿರುವ ಹೊಸವರ್ಷದ ಅಂದವಾದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಈ ದಿವಸ ಸಾಯಂಕಾಲ ಶ್ರೀಮನ್ಮಹಾರಾಜರವರು ಬೆಂಗಳೂರು ನಗರದ ಶ್ರೀನರಸಿಂಹರಾಜ ಉದ್ಯಾನವನದಲ್ಲಿ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ. ಸಿ. ಐ. ಇ, ಇವರ 'ನಗರಭವನ'ದ ಶಂಕುಸ್ಥಾಪನೆಯನ್ನು ನೆರವೇರಿಸುವರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಜಗದಾಚಾರ್ಯರ ರಥೋತ್ಸವದ ನಿಮಿತ್ತವಾಗಿ ತುಮಕೂರು ಮುಕ್ಕಾಮಿನಿಂದ 8 ನೆಯ ತಾರೀಖಿನ ದಿವಸ ಸೀದಾ ಮಹಾಸಂಸ್ಥಾನಕ್ಕೆ ದಯಮಾಡಿಸುವದರಿಂದ ಆ ಕಾಲಕ್ಕೆ ಗುರುಭಕ್ತರೆಲ್ಲರೂ ಮಹಾಸಂಸ್ಥಾನಕ್ಕೆ ಆಗಮಿಸಿ ಗುರುದರ್ಶನವನ್ನು ಹೊಂದಿ ಪುನೀತರಾಗಬೇಕೆಂದು ಕೋರುತ್ತೇವೆ.

ಸ್ಪೇನ್‌ದೇಶದ ಮಾಜಿಚಕ್ರವರ್ತಿಗಳಾದ ಡಾನ್ ಅಲ್ಫಾನ್‌ಜೋರವರು ಇದೇ ಮಾರ್ಚಿ 1 ನೆಯ ತಾರೀಖಿನ ದಿವಸ ಬೆಳಗ್ಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ಅದೇ ದಿವಸ ಸಾಯಂಕಾಲ ಅವರು ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ವಾಣೀವಿಲಾಸ ಹೆರಿಗೆ ಮತ್ತು ಶಿಶುಸಂರಕ್ಷಣಗೃಹದ ಪ್ರವೇಶಮಹೋತ್ಸವವನ್ನು ನೆರವೇರಿಸಿ, ಅನಂತರ ಶ್ರೀಮನ್ಮಹಾರಾಜರವರೊಡನೆ ನಗರದ ಮುಖ್ಯಮುಖ್ಯ ಪ್ರದೇಶಗಳನ್ನು ಸಂದರ್ಶಿಸಿದರು. ಡಾನ್ ಅಲ್ಫಾನ್‌ಜೋರವರು ಮರುದಿವಸ ಪ್ರಾತಃಕಾಲ ಶ್ರೀಕೃಷ್ಣರಾಜಸಾಗರ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಸಾಯಂಕಾಲ ಬೇಟೆಗಾಗಿ ಕಾರಾಪುರಕ್ಕೆ ತೆರಳಿದರು.

ವರ್ತಮಾನಸಂಗ್ರಹ

ಕಳೆದ ವರ್ಷ ಜಪಾನಿನಲ್ಲಿ ಒಂದು ನಿಮಿಷಕ್ಕೆ 4 ಮಕ್ಕಳಂತೆ 21,00,600 ಮಕ್ಕಳು ಹುಟ್ಟಿದವಂತೆ!

ಭರತಖಂಡದ ನೂತನ ರಾಜ್ಯಾಂಗ ವ್ಯವಸ್ಥೆಗೆ ಸಂಬಂಧಪಟ್ಟ ವೈಟ್‌ಪೇಪರು ಇದೇ ಮಾರ್ಚಿ 17 ನೇ ತಾರೀಖಿನ ದಿವಸ ಲಂಡನ್ನಿನಲ್ಲಿ ಪ್ರಕಟಿಸಲ್ಪಡುವದು.

ಬಾಬುಶಿವಪ್ರಸಾದಗುಪ್ತರ ಮೊಮ್ಮಗುವು ಅವರ ಬಂಗಲೆಯ ಮೇಲ್ಭಾಗದ ಬಿಸಿಲುಮಚ್ಚಿನಲ್ಲಿ ಪಟವನ್ನಾಡಿಸುತ್ತಿದ್ದಾಗ ಕಾಲುಜಾರಿ ಕೆಳಕ್ಕೆಬಿದ್ದು ಮೃತಪಟ್ಟಿತು.

ರಷ್ಯಾದೇಶದ ಪೋಲೀಸರು ಮಾಸ್ಕೋ ನಗರದಲ್ಲಿ 50 ಜನ ಸ್ತ್ರೀಯರಿಂದ ಕೂಡಿದ ಒಂದು ಡಕಾಯಿತರ ಗುಂಪನ್ನು ಪತ್ತೆಮಾಡಿರುವರು. ಮಾಸ್ಕೋನಗರ ಒಂದರಲ್ಲಿಯೇ ಇವರು ಇದುವರೆಗೆ 30 ಕಡೆಗಳಲ್ಲಿ ಕಳ್ಳತನಗಳನ್ನು ನಡೆಯಿಸಿರುವರಂತೆ!

ಜರ್ಮನಿಯ ಒಂದಾನೊಂದು ಸರ್ಕಸ್ ಕಂಪೆನಿಯಲ್ಲಿರುವ ಗಸ್ಟವ್ ವಿಟ್ಟೆ ಎಂಬವನು ಬರ್ಲಿನ್ನಿನಲ್ಲಿ 10 ಪೌಂಡುಗಳ ಸಲುವಾಗಿ ಒಂದು ದಾವೆಯನ್ನು ತಂದಿರುವನು. ಇವನು 1913ನೇ ಇಸವಿಯಲ್ಲಿ 5 ದಿವಸಗಳ ವರೆಗೆ ಮಾತ್ರ ಅಲ್‌ಬೇನಿಯಾ ದೇಶದ ರಾಜನಾಗಿದ್ದನಂತೆ!

ಇದೇ ಮಾರ್ಚಿ 9 ನೇ ತಾರೀಖಿನ ದಿವಸ ಅಲಹಾಬಾದಿನಲ್ಲಿ ಪ್ರಾರಂಭವಾಗಲಿರುವ 'ರೈತರ ಪ್ರದರ್ಶನ'ಕ್ಕೆ ರಬ್ಬರ್ ಚಕ್ರಗಳುಳ್ಳ ಒಂದು ಎತ್ತಿನ ಬಂಡಿಯು ತಯಾರಿಸಿ ಕಳುಹಿಸಲ್ಪಟ್ಟಿರುವದು. ಇದರ ಚಕ್ರಗಳು ಮೋಟಾರ್ ಲಾರಿಯ ಚಕ್ರಗಳಂತೆ ಚಿಕ್ಕದಾಗಿರುವುವು. ಎತ್ತುಗಳಿಗೆ ಈ ಗಾಡಿಗಳನ್ನು ಎಳೆಯುವದು ಬಹಳ ಸುಲಭ. ಇತರ ಸಾಧಾರಣ ಗಾಡಿಗಳಲ್ಲಿ 3-4 ಎತ್ತುಗಳು ಎಳೆಯುವಷ್ಟು ಭಾರವನ್ನು ಈ ತರಹದ ಗಾಡಿಯಲ್ಲಿ ಎರಡು ಎತ್ತುಗಳು ಎಳೆಯುವವಂತೆ!

ಅಮೇರಿಕೆಯ ಇಂಡಿಯಾನಾ ದ್ವೀಪಕ್ಕೆ ಸೇರಿದ ಗ್ರೀನ್‌ಬರ್ಗ ನಗರದ ಥಾಮಸ್‌ಫೀಲ್ಡ್ ಎಂಬವರು ಈಗ್ಗೆ 20 ವರ್ಷಗಳ ಪೂರ್ವದಲ್ಲಿ ಕಾಯಿಲೆ ಬೀಳಲು, ಆತನು ಮೃತಪಡುವೆನೆಂದು ಭಾವಿಸಿ ತನಗೋಸ್ಕರ ಒಂದು ಶವದ ಪೆಟ್ಟಿಗೆಯನ್ನು ತಯಾರುಮಾಡಿಸಿ, ಒಳಭಾಗದಲ್ಲಿ ಮೃದುವಾಗಿರುವಂತೆ ಬೆಲೆಬಾಳುವ ರೇಷ್ಮೆಯ ಬಟ್ಟೆಗಳನ್ನು ಹಾಕಿಸಿ ಸಿದ್ಧಪಡಿಸಿದನು. ಆದರೆ ಆತನು ಇದುವರೆಗೂ ಮೃತನಾಗದೆ ಮೊನ್ನೆ ಅವನೇ ತನ್ನ 100 ನೇ ವರ್ಷ ಹುಟ್ಟಿದ ದಿನವನ್ನು ಆಚರಿಸಿದನಂತೆ!

ಲಂಡನ್ನಿನಲ್ಲಿ ಒಂದಾನೊಂದು ವಿಜ್ಞಾನ ಶೋಧನಾಲಯದಲ್ಲಿ ಕೆಲಸಮಾಡುತ್ತಿರುವ ಒಬ್ಬ ತರುಣ ಶಾಸ್ತ್ರಜ್ಞನು ಒಂದು ಹೊಸತರಹದ ಎಲೆಕ್ಟ್ರಿಕ್ ಬಲ್ಬನ್ನು ನಿರ್ಮಿಸಿರುವನು. ಇದಕ್ಕೆ ಇತರ ಬಲ್ಬುಗಳಿಗಿರುವಂತೆ ಒಳಗಡೆ ತಂತಿಯಿಲ್ಲ. ಅದರೊಳಗೆ ಒಂದು ತರಹ ಗಾಳಿಯು ತುಂಬಲ್ಪಟ್ಟಿದ್ದು ಆ ಗಾಳಿಯೇ ಪ್ರಕಾಶವಾಗಿ ಬೆಳಕನ್ನು ಕೊಡುವುದು! ಈ ವಿಧವಾದ ಬಲ್ಬುಗಳು ಇತರ ಬಲ್ಬುಗಳಿಗಿಂತಲೂ ಹೆಚ್ಚಿನ ಬೆಳಕನ್ನೂ ಕೊಡುವುವಲ್ಲದೆ ಕಡಿಮೆ ಕರೆಂಟನ್ನು ಉಪಯೋಗಿಸಿಕೊಳ್ಳುವುವಂತೆ!

ಮ್ಯಾಸಿಡೋನಿಯಾ ನಗರದ ಒಬ್ಬ ಉಪಾಧ್ಯಾಯನನ್ನು ಕೊಂದರೆಂಬ ಕಾರಣದಮೇಲೆ ಪೋಲಿಸರು 3 ಜನರನ್ನು ದಸ್ತಗಿರಿಮಾಡಿ ಅವರನ್ನು ರೈಲಿನಲ್ಲಿ ವಿಚಾರಣೆಗಾಗಿ ಮತ್ತೊಂದು ನಗರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಮಧ್ಯಮಾರ್ಗದಲ್ಲಿ 50 ಜನ ಸಶಸ್ತ್ರರಾದ ದರೋಡೆಕೋರರು ರೈಲನ್ನು ನಿಲ್ಲಿಸಿ ಆ ಮೂವರು ಅಪರಾಧಿಗಳನ್ನು ಕೊಂದು ಪರಾರಿಯಾದರು. ಅಪರಾಧಿಗಳಿಗೆ ವಿಚಾರಣೆಯಲ್ಲಿ ಲಘುವಾದ ಶಿಕ್ಷೆಯು ದೊರೆಯಬಹುದೆಂದು ಭಾವಿಸಿ, ಆ ದರೋಡೆಕೋರರು ಈ ರೀತಿ ತಮ್ಮ ಸೇಡನ್ನು ತೀರಿಸಿಕೊಂಡಿರಬೇಕೆಂದು ಊಹಿಸಲ್ಪಟ್ಟಿದೆ.

ಮೈಮನ್‌ಸಿಂಗಿನಲ್ಲಿ ಒಬ್ಬ ಗಿರಾಕಿಯು ಒಂದು ಅಂಗಡಿಗೆ ಹೋಗಿ ಬ್ರಿಟಿಷರಿಂದ ತಯಾರಿಸಲ್ಪಟ್ಟ ಸೀರೆಯನ್ನು ಕೊಡಬೇಕೆಂದು ಕೇಳಿದನು. ಅಂಗಡಿಯ ಯಜಮಾನನು ಸೀರೆಯು ಇಲ್ಲವೆಂದು ಹೇಳಲು ಗಿರಾಕಿಯು ಅಂಗಡಿಯಿಂದ ಹೊರಕ್ಕೆ ಹೊರಟನು. ಅಂಗಡಿಯವರು ಅಷ್ಟಕ್ಕೇ ಸುಮ್ಮನಿರದೆ 'ಕಳ್ಳ, ಕಳ್ಳ' ಎಂದು ಕಿರಚಿಕೊಂಡು ಆ ಗಿರಾಕಿಯನ್ನು ಹಿಂದಕ್ಕೆ ಎಳೆದು ತಂದು ಹಿಂಸೆಪಡಿಸಿದರು. ಕಡೆಗೆ ಇದು ವಿಚಾರಣೆಗೆ ಹೈಕೋರ್ಟಿನವರೆಗೂ ಹೋಗಿ ಯಜಮಾನನಿಗೆ 6 ತಿಂಗಳ ಕಠಿಣಸಜೆಯೂ ಅವನಲ್ಲಿ ಕೆಲಸಕ್ಕಿದ್ದ 5 ಜನರಿಗೆ 50 ರೂ. ನಿಂದ 100 ರೂ. ಗಳ ವರೆಗೆ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಬೆಳಗಾಂವ ಡಿ|| ಹೂಲಿಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುವ ಪಂಚವರ್ಣಬೃಹನ್ಮಠ ವೀರವಿಜಯ ಧರ್ಮಾರ್ಥ ಜ್ಯೋತಿಷ ವೈದಿಕ ಪಾಠಶಾಲೆಯ ಅಧ್ಯಾಪಕರಾದ ವೇ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ಶ್ರೀಮುಖಸಂವತ್ಸರದ ಪಂಚಾಂಗವನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಸದರಿ ಶಾಸ್ತ್ರಿಗಳು ಜ್ಯೋತಿಶ್ಶಾಸ್ತ್ರ ನಿಪುಣರಿದ್ದು ಶಾಸ್ತ್ರಕ್ಕನುಸಾರವಾಗಿ ಯಾವ ದೋಷಾದಿಗಳೂ ಇಲ್ಲದಂತೆ ಪಂಚಾಂಗವನ್ನು ಸಿದ್ಧಗೊಳಿಸಿರುತ್ತಾರೆ. ಈ ಪಂಚಾಂಗದಲ್ಲಿ ಲೌಕಿಕ ವೈದಿಕರಿಗೆ ಉಪಯುಕ್ತಗಳಾದ ಅನೇಕ ವಿಷಯಗಳು ಬರೆಯಲ್ಪಟ್ಟಿರುವುವು. ಸರ್ವವಿಷಯಗರ್ಭೀಕೃತವಾದ ಈ ಪಂಚಾಂಗವನ್ನು ಸಮಸ್ತ ಸನಾತನ ಧರ್ಮಾನುಯಾಯಿಗಳೂ ತರಿಸಿಕೊಂಡು ಪಂಚಾಂಗಕರ್ತೃಗಳಿಗೆ ಪ್ರೋತ್ಸಾಹವನ್ನೀಯಬೇಕೆಂದು ಬಯಸುತ್ತೇವೆ.

1932 ನೆಯ ಫೆಬ್ರವರಿ 22 ನೆಯ ತಾರೀಖಿನ ದಿವಸ ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ 15 ತಿಂಗಳ ಕಠಿಣಶಿಕ್ಷೆಗೆ ಗುರಿಯಾಗಿದ್ದ ಶ್ರೀಯುತ ಜಮುನಾದಾಸ ದ್ವಾರಕಾದಾಸರವರು ಇದೇ ಮಾರ್ಚಿ 1ನೇ ತಾರೀಖಿನ ದಿವಸ ಬಿಡುಗಡೆಮಾಡಲ್ಪಟ್ಟರು. ಇವರು ತಮಗೆ ವಿಧಿಸಿದ್ದ 200 ರೂಪಾಯಿ ಜುಲ್ಮಾನೆಯನ್ನು ಸರಕಾರಕ್ಕೆ ಪಾವತಿಮಾಡಿದ್ದಲ್ಲದೆ ಇನ್ನು ಮುಂದೆ ಕಾನೂನುಭಂಗದಚಳವಳಿಯಲ್ಲಿ ಭಾಗವಹಿಸುವದಿಲ್ಲವೆಂದು ವಚನವಿತ್ತಿರುವರು. ಹಾಗೂ ಗಾಂಧಿಯವರು ಪ್ರಾರಂಭದಲ್ಲಿ ಸರಕಾರದವರೊಡನೆ ಅಸಹಕಾರಮಾಡಿ ಚಳವಳಿಯನ್ನು ಪ್ರಾರಂಭಿಸಿ, ಈಗ ಅಸ್ಪೃಶ್ಯತಾನಿವಾರಣೆಯ ನೆಪದಿಂದ ಪುನಃ ಸರಕಾರದವರ ಸಹಕಾರವನ್ನೇ ಅಪೇಕ್ಷಿಸುತ್ತಿರುವದಕ್ಕಾಗಿ ಅವರಮೇಲೆ ಉಗ್ರವಾದ ಟೀಕೆಯನ್ನು ಮಾಡಿ ಒಂದು ಪ್ರಕಟನೆಯನ್ನು ಹೊರಡಿಸಿ, ತಮ್ಮ ವರ್ತನವನ್ನು ಸಮರ್ಥಿಸಿರುವರು.

ಚೀನಾದೇಶದ ದೊಡ್ಡ ಕೋಟೆಯು ಗೋಡೆಯು ಪ್ರಪಂಚದ 7 ಅತ್ಯಾಶ್ಚರ್ಯವಸ್ತುಗಳಲ್ಲಿ ಒಂದೆಂದು ಭಾವಿಸಲ್ಪಟ್ಟಿರುವದು. ಈ ಗೋಡೆಯು ಕ್ರಿ. ಪೂರ್ವ 200 ರಲ್ಲಿ ಅಂದರೆ ಈಗ್ಗೆ 2100 ವರ್ಷಗಳ ಹಿಂದೆ ಮೊದಲನೇ ಚೀನಾಚಕ್ರವರ್ತಿಯಾದ ಷಿ ಹ್ವಾಂಗ್-ಟಿ ಎಂಬವನಿಂದ ಕಟ್ಟಿಸಲ್ಪಟ್ಟಿತು. ಚೀನಾದೇಶವು ಆ ಕಾಲದಲ್ಲಿ ಅತ್ಯಂತ ನಾಗರಕದೇಶವಾಗಿದ್ದು ಸುತ್ತುಮುತ್ತಲ ರಾಜ್ಯಗಳಲ್ಲಿದ್ದ ಅನಾಗರಕರ ಭಯವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಈ ಕೋಟೆಯು ಕಟ್ಟಲ್ಪಟ್ಟಿತು. ಇದನ್ನು ಕಟ್ಟಲು 3,00,000 ಕೂಲಿಯವರು ಹಗಲು ರಾತ್ರಿ 15 ವರ್ಷಗಳವರೆಗೆ ಕೆಲಸಮಾಡಿದರಂತೆ! ಕೋಟೆಯು ಬಲವಾಗುವುದಕ್ಕಾಗಿ 10,00,000 ಜನರ ಶರೀರಗಳು ಗೋಡೆಯೊಳಗೆ ಹಾಕಲ್ಪಟ್ಟಿರುವವಂತೆ! ಮತ್ತು ಈ ಗೋಡೆಯಮೇಲೆ ಒಟ್ಟು 40,000 ಗೋಪುರಗಳು ಇರುವವಂತೆ! ಗೋಡೆಯು 25 ಅಡಿಗಳ ಅಗಲವಾಗಿದ್ದು ಎತ್ತರದಲ್ಲಿ 30 ಅಡಿಗಳಿಂದ 60 ಅಡಿಗಳವರೆಗೂ ಇರುವುದು. ಗೋಡೆಯು ಪೆಕಿಂಗಿಗೆ ಪೂರ್ವಕ್ಕೆ ಸುಮಾರು 100 ಮೈಲುಗಳ ದೂರದಲ್ಲಿ ಪ್ರಾರಂಭವಾಗಿ ಗೋಬಿ ಮರುಭೂಮಿಯವರೆಗೂ ಇರುವುದು.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವಾಹ್ವಾನ ಪತ್ರಿಕೆ.

ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆ

ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಪದ್ಧತಿಯ ಪ್ರಕಾರ ಇದೇ ಅಂಗಿರಸ ಸಂ|| ಫಾಲ್ಗುಣ ಶು|| ೧೩ ಶುಕ್ರವಾರ (ತಾ|| 10-3-1933) ದಿವಸ ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮದ ಪ್ರಕಾರ ಬೆಂಗಳೂರು ಪಟ್ಟಣದಲ್ಲಿ ನಡೆಸಲು ನಿರ್ಧರಿಸಿರುತ್ತದೆ.

ಕಾರ್ಯಕ್ರಮ.

ತಾ|| 10-3-1933 ಶುಕ್ರವಾರ :—

I. ಪ್ರಾತಃಕಾಲ ೬ ಘಂಟೆಯಿಂದ ೧೨ ರ ವರೆಗೆ ಮಹಾಂತಿನಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ

ಮಧ್ಯಾಹ್ನ ೧೨ ಘಂಟೆಗೆ.

II. ಮಹಾಂತಿನಮಠದಲ್ಲಿ ಭಕ್ತಮಾಹೇಶ್ವರ ಸಮಾರಾಧನೆ.

III. ಶ್ರೀ ರೇಣುಕಾಚಾರ್ಯರು ಪ್ರಪಂಚದಲ್ಲಿ ಮಾಡಿರುವ ಲೀಲೆಗಳ ವಿಷಯದಲ್ಲಿ ಭಾಷಣಗಳು.

ಸಾಯಂಕಾಲ ೫|| ಘಂಟೆಗೆ.

IV. ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆಟಿ. ಸಿ. ಇ. ಇವರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆ.

1. ಸ್ತೋತ್ರ ಮತ್ತು ವೇದಘೋಷ.
2. ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಫಂಡಿನ ವಾರ್ಷಿಕ ವರದಿಯನೋದುವದು.
3. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾರದ ವಾರ್ಷಿಕ ವರದಿಯನೋದುವದು.
4. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳ ಧಾರ್ಮಿಕ ಭಾಷಣಗಳು ನಡೆಯಲ್ಪಡುವವು.
5. ಅಧ್ಯಕ್ಷರ ಭಾಷಣ.

(1) ಸಾಯಂಕಾಲ ೭ ಘಂಟೆಯಿಂದ ೧೧ ರ ವರೆಗೆ ಮಹಾಂತಿನಮಠದಿಂದ ರಾಜಬೀದಿಗಳಲ್ಲಿ ನಂದಿಧ್ವಜಸಹಿತ ಪೂಜ್ಯರಾದ ಜಗದಾಚಾರ್ಯರ ಮೂರ್ತಿಯ ಪುಷ್ಪಕೋತ್ಸವವು.

(2) ಆಚಾರ್ಯರ ಉತ್ಸವಮೂರ್ತಿಯು ಮಠಕ್ಕೆ ಬಿಜಯಂಗೈಸಿದನಂತರ ಷೋಡಶೋಪಚಾರ ರಾಜೋಪಚಾರ ಪೂಜಾಪೂರ್ವಕ ಪ್ರಸಾದ ವಿನಿಯೋಗ.

(3) ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ.

ಬೆಂಗಳೂರು,
ತಾ|| 6—3—1933.
ದೇಶದ ಶೆಟ್ಟರು, ಯಜಮಾನರು.

ಬಾರ್ಶಿ.

ಪ್ರತಿವರ್ಷದ ಪದ್ಧತಿಯಪ್ರಕಾರ ಶ್ರೀ ಪರಾಂಡಕರ್‌ಸ್ವಾಮಿಗಳವರ ಮಠದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತಿಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು. ಜಗದಾಚಾರ್ಯರ ಭಾವಚಿತ್ರಗಳನ್ನು ಸಿಂಹಾಸನದಲ್ಲಿರಿಸಿ ರುದ್ರಾಭಿಷೇಕಾದಿಗಳು ನೆರವೇರಿಸಲ್ಪಟ್ಟವು. ಪೂಜಾದಿಕಾರ್ಯಗಳು ವಿಧ್ಯುಕ್ತರೀತಿಯಾಗಿ ನೆರವೇರಿದಮೇಲೆ ಆಚಾರ್ಯರ ಭಾವಚಿತ್ರಗಳನ್ನು ಮೋಟಾರುಗಾಡಿಯಲ್ಲಿ ವಿನ್ಯಾಸಮಾಡಿಸಿ ಬಹುವೈಭವದೊಡನೆ ಮೆರವಣಿಗೆಯನ್ನು ತೆಗೆಯುವದರಲ್ಲಿ ಬಂದಿತು. ಬೋರ್ಡಿಂಗ್ ಮತ್ತು ಪಾಠಶಾಲಾವಿದ್ಯಾರ್ಥಿಗಳೂ, ಊರೊಳಗಿನ ಅನೇಕ ಜನರೂ ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವವು ಪಟ್ಟಣದ ಯಾವತ್ತೂ ಮುಖ್ಯಮುಖ್ಯಬೀದಿಗಳಲ್ಲಿ ಸಂಚರಿಸಿ ಬಾರ್ಶಿಯ ಸುಪ್ರಸಿದ್ಧ ಶ್ರೀಮಂತ ಮ|| ರಾ|| ಅಣ್ಣಾಸಾಹೇಬ ಕಳಲಿಯವರ ಬಂಗಲೆಗೆ ಬಂದುಸೇರಿತು. ಅನಂತರ ವೇ|| ಬಾಳಲಿಂಗಸ್ವಾಮಿ ವೈರಾಗಕರ್ ಇವರ ಕೀರ್ತನೆಯು ಪ್ರಾರಂಭವಾಯಿತು. ಕೀರ್ತನಕಾರರು ತಮ್ಮ ಕೀರ್ತನದಲ್ಲಿ ಶಿವರಾತ್ರಿಯ ಮಹತ್ವವನ್ನು ನಾನಾರೀತಿಯಾಗಿ ಬಣ್ಣಿಸಿ ಸರ್ವರನ್ನೂ ಶಿವಲೀನಮನಸ್ಕರನ್ನಾಗಿ ಮಾಡಿದರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಮಾಪ್ತಿಗೊಳಿಸಲ್ಪಟ್ಟಿತು.

ಸಮಾಜಸೇವಕ.

ಹೊಳೆಆಲೂರ.

ಧಾರವಾಡ ಡಿ|| ರೋಣ ತಾ|| ಹೊಳೆಆಲೂರ ಗ್ರಾಮದ ಪಂಚಾಚಾರ್ಯ ಸೇವಾಸಂಘದವರು ಪದ್ಧತಿಪ್ರಕಾರ ಮಹಾಶಿವರಾತ್ರಿ ದಿವಸ ವೇ|| ರೇವಣಸಿದ್ಧಯ್ಯನವರು ಬಿಕ್ಷಾವರ್ತಿ ಹಿರೇಮಠ ಇವರ ಮಠಕ್ಕೆ ಸರ್ವರೂ ಆಗಮಿಸಿ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನು ಉಚಿತಾಸನದಲ್ಲಿ ಸ್ಥಾಪಿಸಿ ಷೋಡಶೋಪಚಾರಗಳಿಂದ ಪೂಜಿಸಿ ಗಂಧಪುಷ್ಪ ಪುಷ್ಪಮಾಲೆಗಳನ್ನು ಧರಿಸಿ ಕಾಯಿ ಕರ್ಪೂರ ನೈವೇದ್ಯ ತಾಂಬೂಲಗಳನ್ನು ಸಮರ್ಪಿಸಿದನಂತರ ಪಂಚಾಚಾರ್ಯ ಜಯಘೋಷದೊಡನೆ ಉತ್ಸವವು ಹೊರಟು ಬಾಜಾಬಜಂತ್ರಿಗಳ ವಾದ್ಯಗಳಿಂದಲೂ ತಾಳ ಮೃದಂಗ ಪೇಟಿ ಸಮ್ಮೇಳನದಿಂದ ಹಾಡುವ ಗುರುಭಜನೆಯಿಂದಲೂ ಮತ್ತು ಬಿರುಸುಬಾಣಗಳ ರಭಸದಿಂದಲೂ, ಪುರದ ಮುಖ್ಯಬೀದಿಗಳಲ್ಲಿ ಬರುವಾಗ್ಯೆ ಅಲ್ಲಲ್ಲಿಗೆ ಭಕ್ತರು ಪನ್ನೀರಿನ ಚಳೆಯನ್ನು ಕೊಟ್ಟು ಕಾಯಿಕರ್ಪೂರಗಳನ್ನು ಸಮರ್ಪಿಸಿ ತಮ್ಮ ಗುರುಭಕ್ತಿಯನ್ನು ತೋರ್ಪಡಿಸಿದರು. ರಾತ್ರಿ ೨ ಘಂಟೆಗೆ ಉತ್ಸವವು ಶ್ರೀ ಕಲ್ಮೇಶ್ವರ ದೇವಾಲಯಕ್ಕೆ ತಲ್ಪಿತು. ಶ್ರೀ ಜಗದ್ಗುರುಗಳ ಭಾವಪಟವನ್ನು ದೇವಾಲಯದಲ್ಲಿ ಸಿಂಹಾಸನದಲ್ಲಿರಿಸಿದನಂತರ ಈಶ್ವರನಿಗೆ ರುದ್ರಾಭಿಷೇಕಾದಿಗಳು ನಡೆದವು. ಅನಂತರ ಉತ್ಸವವು ನಂದೀಶ್ವರ ದೇವಾಲಯಕ್ಕೆ ತಲ್ಪಿ ಸೂರ್ಯೋದಯವಾಗುವವರೆಗೂ ಉತ್ಸವವು ೩ ಸಾರೆ ಪುರದ ಬೀದಿಗಳಲ್ಲಿ ಸಂಚರಿಸಿ ಪುನಃ ಈಶ್ವರ ದೇವಾಲಯಕ್ಕೆ ಬಂದು ಕಾಯಿಕರ್ಪೂರಗಳನ್ನು ಸಮರ್ಪಿಸಿದನಂತರ ಉತ್ಸವವು ವೇ|| ರೇವಣಸಿದ್ಧಯ್ಯನವರ ಮಠಕ್ಕೆ ತಲ್ಪಿತು. ಅನಂತರ ಮಂಗಲವನ್ನು ಮಾಡಿ ಆಚಾರ್ಯ ಜಯಘೋಷದೊಡನೆ ಯಾವತ್ತರಿಗೂ ಫಲಾಶೀರ್ವಾದ ಕೊಡಲ್ಪಟ್ಟಿತು. ಭಜನಾಸಂಘದವರು ಸೂರ್ಯೋದಯದವರೆಗೆ ಗುರುಭಕ್ತಿಯಿಂದಲೂ ಮನಾನಂದದಿಂದಲೂ ಭಜನೆಮಾಡಿದ ಬಗ್ಗೆ ವೇ|| ರೇವಣಸಿದ್ಧಯ್ಯನವರು ಭಿಕ್ಷಾವರ್ತಿಮಠ ಇವರು ಪ್ರೋತ್ಸಾಹಮೂಲಕ ಭಜನಾಸಂಘದವರಿಗೆ ೧ ರೂಪಾಯಿ ಮತ್ತು ಪಂಚಾಚಾರ್ಯರ ಭಾವಚಿತ್ರದ ಲಾಕೆಟ್ಟುಗಳನ್ನು ಆಶೀರ್ವಾದಪೂರ್ವಕವಾಗಿ ಕೊಟ್ಟರು. ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ೧ ರೂಪಾಯಿ ಸಮರ್ಪಿಸಿದರು.

ಭಜನಾಸಂಘದವರು.

ಶಿವಪೂಜಯ್ಯ ಭಿಕ್ಷಾವರ್ತಿ, ಹಿರೇಮಠ. ಮುದಕಪ್ಪ, ಮೆಣ್ಸಿಗಿ, ವೀರಪ್ಪ, ಸಾವಕಾರ. ಪರಸಪ್ಪ, ಹೈಬತ್ತಿ.

ಭಜನಾಸಂಘಕ್ಕೆ ಸಹಾಯಮಾಡಿದವರು.

ಚನ್ನಬಸವಯ್ಯ ಭಿಕ್ಷಾವರ್ತಿ ಹಿರೇಮಠ, ಆಲೂರ. ಅಯ್ಯಪ್ಪಯ್ಯ ರುದ್ರಯ್ಯ, ಗಾರವಾಡ. ಹುಚ್ಚಯ್ಯ ಮಠಪತಿ, ಆಲೂರ. ಮರಿಯಪ್ಪ, ಕೋಳೇರಿ. ಗದಿಗೆಪ್ಪ, ಬೀರನೂರ. ಬಸಪ್ಪ, ಸಜ್ಜನರ. ರುದ್ರಪ್ಪ, ಸಜ್ಜನರ. ಶಿವಪ್ಪ, ಯಾವಗಲ್ಲ. ಮಹಾದೇವಪ್ಪಾ, ಸೋಮೋಜಿ. ಬಸಪ್ಪ, ಪೂಜೇರ ಆಲೂರ. ಮುಂತಾದ ಯಾವತ್ತು ಸಮಾಜದವರು ಸೇವೆಮಾಡಿದ ಬಗ್ಗೆ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಕೇಳುವ,

ಗುರುಭಕ್ತ—ಬಿ. ಪಿ. ಕೋಳೂರ,
ಇಂಗ್ಲೀಷ ಮಾಸ್ತರ.

ಶ್ರೀ ಕೇದಾರೇಶ್ವರ ಯಾತ್ರಾರಂಭ.

ಮಹಾಶಯರೇ, ಶ್ರೀ ಕೇದಾರೇಶ್ವರ ಕವಾಟೋದ್ಘಾಟನವಾಗುವದು (ಬಾಗಿಲು ತೆಗೆಯುವದು) ಪ್ರತಿವರ್ಷ ಮಹಾಶಿವರಾತ್ರಿಯದಿವಸ ನಿಶ್ಚಯವಾಗುವದು ಸರ್ವರಿಗೂ ಗೊತ್ತಿರುವದಷ್ಟೆ! ತಾರೀಖು ೨೩-೨-೩೩ ಈ ದಿವಸ ಮಹಾಶಿವರಾತ್ರಿಯ ಜಾಗರಣೆಯಿದ್ದು ಶ್ರೀ ಜಗದ್ಗುರು ಮಹಾಸಂಸ್ಥಾನದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಲಿಂಗೋದ್ಭವ ಫೋಟೋಗಳನ್ನು ಷೋಡಶೋಪಚಾರಗಳಿಂದ ಪೂಜಿಸಿ ನಂತರ ಸದರಿ ಫೋಟೋಗಳನ್ನು ಪಾಲಕಿಯಲ್ಲಿರಿಸಿ ತಳಿರುತೋರಣಗಳಿಂದ ಅಲಂಕೃತವಾದ ಬೀದಿಗಳಲ್ಲಿ ಉತ್ಸವವು ಹೊರಟು ಪುನಃ ಸ್ವಸ್ಥಾನಕ್ಕೆ ಬಂದು ಪೀಠದಲ್ಲಿ ಮಂಡಿಸಿದನಂತರ ಪಂಚಾಚಾರ್ಯ ಮಹಾರಾಜಕೀ ಜೈ ಎಂದು ಜಯಘೋಷವು ಮಾಡಲ್ಪಟ್ಟಿತು. ಅನಂತರ ಶ್ರೀ ಕೇದಾರನಾಥನ ಧರ್ಮಮಹಾವಿದ್ಯಾಲಯದ ಪ್ರಧಾನ ಅಧ್ಯಾಪಕರಾದ ಪಂ|| ಮಹಿಮಾನಂದಶಾಸ್ತ್ರಿಗಳು ಮತ್ತು ಅನೇಕ ಪಂಡಿತರು ಶ್ರೀ ಜಗದಾಚಾರ್ಯರು ಉದ್ಧರಿಸಿದ ವಿಷಯಗಳಮೇಲೆ ಅನೇಕಮಹತ್ವವಾದ ಭಾಷಣಗಳನ್ನು ಮಾಡಿದರು. ಮತ್ತು ಶ್ರೀ ಕೇದಾರೇಶ್ವರನ ಬಾಗಿಲುತೆಗೆಯುವದು ತಾರೀಖು ೫-೫-೩೩ ನೆಯ ಶುಕ್ರವಾರ ಪ್ರಾತಃಕಾಲ ಶುಭಮುಹೂರ್ತದಲ್ಲಿ ನಿಶ್ಚಯವಾಗಿರುವದು. ಅದ್ದರಿಂದ ದರ್ಶನಾಭಿಲಾಷಿಗಳು ಶ್ರೀ ಕೇದಾರನಾಥ ಕವಾಟೋದ್ಘಾಟನವಾಗುವ ಸುಸಮಯಕ್ಕೆ ಬಂದು ಶ್ರೀ ಕೇದಾರೇಶ್ವರ ಮತ್ತು ಅಖಂಡ ಜ್ಯೋತಿಯ ದರ್ಶನಮಾಡಿಕೊಂಡು ಶ್ರೀ ಕೇದಾರೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುವ,

ಗುರುಲಿಂಗಯ್ಯ, ಸಿಂಧನೂರು.
ಉಷಾಮಠ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಗುರುಸಿದ್ಧದೇಶಿಕೇಂದ್ರಸ್ವಾಮಿಗಳ ಆಗಮನ ಹೊಸೂರು.

ಸೇಲಂ ಜಿಲ್ಲಾ ಹೊಸೂರು ಟವನ್ನಿಗೆ ಕಳೆದ ಫೆಬ್ರವರಿ 9 ನೆಯ ಗುರುವಾರ ದಿವಸ ಶ್ರೀ ಸಾರಂಗ್ಯಮಠಾಧಿಪತಿಗಳಾದ ಶ್ರೀ ಗುರುಸಿದ್ಧದೇಶಿಕೇಂದ್ರಶಿವಸುಬ್ರಮಣ್ಯಸ್ವಾಮಿಗಳವರ ಸ್ವಾರಿಯು ಬೆಳಗ್ಗೆ 10 ಗಂಟೆ ಸಮಯದಲ್ಲಿ ಚಿತ್ತೈಸಿತು. ಕೂಡಲೇ ರಾ|| ಶೆಟ್ರು ಅಣ್ಣಾಮಲೆಶೆಟ್ರು, ಶೆಟ್ರು ಬೊಮ್ಮಶೆಟ್ರು, ಶೆಟ್ರು ಮುನಿಯಪ್ಪಶೆಟ್ರು, ಶೆಟ್ರು ದೊಡ್ಡಯ್ಯಶೆಟ್ರು, ಯಜಮಾನ್ ವೀರಭದ್ರಶೆಟ್ರು, ಯಜಮಾನ್ ವಿಶ್ವನಾಥಶೆಟ್ರು ಇನ್ನೂ ಅನೇಕ ಮತಬಾಂಧವರೊಂದಿಗೆ ಛತ್ರಿ, ಚಾಮರ, ಮಂಗಳವಾದ್ಯದೊಡನೆ ಎದಿರುಗೊಂಡು ಸ್ವಾಮಿಗಳವರನ್ನು ಅಲಂಕರಿಸಲ್ಪಟ್ಟದ್ದ ಅಶ್ವದಮೇಲೆ ಮೂರ್ತಮಾಡಿಸಿ, ಮಂಗಳವಾದ್ಯದೊಡನೆ ದೇಶದಪೇಟೆಯಲ್ಲಿ ಹೊರಟು ಶ್ರೀ ವಿನಾಯಕ ದೇವಸ್ಥಾನಕ್ಕೆ ಬಿಜಯಮಾಡಿಸಿದರು. ಆ ದಿವಸ 6 ಗಂಟೆ ಮೇಲೆ ಮಹಾಸ್ವಾಮಿಗಳವರು ವೀರಶೈವಧರ್ಮವನ್ನು ಕುರಿತು ಅಮೋಘವಾದ ಭಾಷಣಮಾಡಿದರು. ದೇವಸ್ಥಾನದಲ್ಲಿ ಸ್ತ್ರೀ-ಪುರುಷರೇ ಅದಿಯಾಗಿ ಜನಗಳು ಕಿಕ್ಕಿರಿಯುವಂತೆ ತುಂಬಿದ್ದರು. ಅನಂತರ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು. ತಾರೀಖು 11-2-33 ದಿವಸ ಶಿಷ್ಯರ ಪ್ರಾರ್ಥನಾನುಸಾರವಾಗಿ ಸಾಯಂಕಾಲ 6 ಗಂಟೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಪತ್ತಿ ಮತ್ತು ರೇಣುಕಾಚಾರ್ಯರ ಲೀಲಾವಳಿಯನ್ನು ತಮ್ಮ ಗಂಭೀರಧ್ವನಿಯಿಂದಲೂ, ಶಾಸ್ತ್ರಾಧಾರದಿಂದಲೂ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಶಿಷ್ಯವೃಂದವೆಲ್ಲಾ ಕೇಳಿ ಆನಂದಸಾಗರದಲ್ಲಿ ಮುಳಗಿತು. ಅನಂತರ ಪಂಚಪೀಠಾಧಿಪತಿಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟಿತು. ಮಾರನೆಯ ದಿವಸ ಅದೇ ಪೇಟೆಯಲ್ಲಿ ಸ್ಥಾಪಿತವಾಗಿರುವ ವೀರಶೈವ ಲೈಬ್ರರಿಗೆ ದಯಮಾಡಿಸಿ, ಶ್ರೀ ಪಂಡಿತ ಕಾಶೀನಾಥಶಾಸ್ತ್ರಿಗಳವರು ಬರೆದಿರುವ ಗ್ರಂಥಗಳನ್ನು ಪರಾಮರ್ಶಿಸಿ ಅವರುವೀರಶೈವಮತಕ್ಕೆ ಮಾಡಿದ ಮಹದುಪಕಾರವನ್ನು ಕೊಂಡಾಡಿ ಆ ದಿವಸವೇ ಬೆಂಗಳೂರಿಗೆ ಹೊರಟರು.

ಕಂಚಿ ಮುನಿಸುಬ್ಬಯ್ಯಶೆಟ್ಟಿ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿ ನಡೆದ ಧರ್ಮಛತ್ರಪ್ರದರ್ಶನವೂ, ಪಂಚಾಯತಿ ಕಾನ್ಫರೆನ್ಸೂ.

ಈ ಉಭಯಮಹೋತ್ಸವ ಸಮಾರಂಭವು (ತಾ|| 5-2-1933) ನೇ ಭಾನುವಾರ ಶಿವಮೊಗ್ಗಾ ಡಿ|| ಡೆ|| ಕಮಿಷನರಾದ ಹಜರತ್ ಗುಲಾಂ ಮೊಹದೀನ್ ಮೇಕ್ರಿಯವರ ಅಗ್ರಾಸನಾಧಿಪತ್ಯದಲ್ಲಿ ಬಹು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಪ್ರಥಮತಃ ಸ್ಕೂಲ್ ಬಾಲಿಕೆಯಿಂದ ದೇವರ ಸ್ತೋತ್ರವು ಹೇಳಲ್ಪಟ್ಟು ಬಳಿಕ ಶ್ರೀ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳು ತಮ್ಮಿಂದ ರಚಿಸಲ್ಪಟ್ಟ ಅಧ್ಯಕ್ಷರ ಸ್ವಾಗತ ಪದ್ಯಗಳನ್ನು ಸುಶ್ರಾವ್ಯವಾಗಿ ಓದಿಹೇಳಿ ತತ್ಸಂಬಂಧವಾದ ಹಸ್ತಪತ್ರಗಳನ್ನು ಅಧ್ಯಕ್ಷರಿಗೂ, ಸಭಿಕರಿಗೂ, ಅರ್ಪಿಸಿದನಂತರ ಮ|| ರಾ|| ಸಾ|| ಗಾಜನೂರು ಮರಿಗಪ್ಪನವರು ತಮ್ಮ ತಂದೆಯವರಾದ ಕೈ|| ಚನ್ನಪ್ಪನವರ ವಾಗ್ದಾನವು ಈ ಧರ್ಮಛತ್ರಪ್ರದರ್ಶನ ಮೂಲಕ ನೆರವೇರುವ ಸುಯೋಗವು ಪ್ರಾಪ್ತವಾದುದರ ಸಂಬಂಧವಾಗಿ ಬರೆಯಲ್ಪಟ್ಟ ಲೇಖನವನ್ನು ವಿಶದವಾಗಿ ಓದಿಹೇಳಿ ಅಧ್ಯಕ್ಷರಿಗೆ ಸಮರ್ಪಿಸಿದರು. ಅನಂತರ ಅಧ್ಯಕ್ಷರವರು ಜನೋಪಕಾರಾರ್ಥವಾಗಿ ಕೈ|| ಚನ್ನಪ್ಪನವರು ಮಾಡಬೇಕೆಂದಿದ್ದ ಧರ್ಮಕಾರ್ಯವು ಅವರ ಸುಪುತ್ರರಿಂದ ಸಫಲವಾಗಿ ನಡೆಯುವದು ಹೇಗೆ ಕೀರ್ತಿಶರೀರಿಗಳಾದರೆಂಬ ವಿಷಯದಮೇಲೆ ಶ್ರೀ ರಾಮಚಂದ್ರಮೂರ್ತಿಯ ಸಾಮ್ಯವನ್ನು ತೋರಿಸಿ ಶ್ಲಾಘನೀಯವಾದ ಭಾಷಣವನ್ನು ಮಾಡಿದರು. ಬಳಿಕ ಅಧ್ಯಕ್ಷಮಹಾಶಯರ ದಿವ್ಯಹಸ್ತದಿಂದ ಛತ್ರದ ಬಾಗಿಲು ತೆರೆಯಲ್ಪಟ್ಟು ಜಯಘೋಷವು ಮಾಡಲ್ಪಟ್ಟ ತರುವಾಯ ಒಂದು ಘಂಟೆಯವರೆಗೆ ಅಲ್ಪಾಹಾರಕ್ಕಾಗಿ ಸಭೆಯು ವಿಸರ್ಜಿಸಲ್ಪಟ್ಟು ಪುನಃ ಸಭಾಮಂದಿರಕ್ಕೆ ಸರ್ವರೂ ದಯಮಾಡಿಸಿದ ಕೂಡಲೇ ಕುಂಸಿ ಸಬ್ ತಾಲೂಕು ಅಮಲ್ದಾರರು ಶ್ರೀ|| ಗುಂಡಪ್ಪ, ಬಿ. ಎ., ಯವರು ಪಂಚಾಯತಿಗಳು ಮಾಡಿದ ಪ್ರಶಂಸನೀಯವಾದ ಕಾರ್ಯಗೌರವಗಳನ್ನು ಚೆನ್ನಾಗಿ ವಿವರಿಸಿ, ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರವರು ತತ್ಸಂಬಂಧವಾದ ವಿಷಯವನ್ನು ಸರ್ವಜನರ ಮನಸ್ಸಿನಮೇಲೆ ಪರಿಣಾಮ ಹೊಂದುವ ಹಾಗೆ ಭಾಷಣವನ್ನು ಮಾಡಿದರು. ಈ ಮಹೋತ್ಸವಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಡಿ|| ಬೋರ್ಡ್ ಪ್ರೆಸಿಡೆಂಟರೂ ಹೆಲ್ತ್ಆಫಿಸರೂ ಡಿ|| ಮೆಡಿಕಲ್ ಆಫೀಸರೂ ಪ್ರಧಾನ ಪ್ಲೀಡರುಗಳೂ ಸಹ ಒಂದೊಂದು ವಿಷಯದಲ್ಲಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಅನಂತರ ಇಲ್ಲಿನ ಮಿಡ್ಲ್ ಸ್ಕೂಲ್ ಅ|| ಮಾ|| ಶ್ರೀ|| ನಾಗಾಜೋಯಿಸರವರು ಸ್ಕೌಟ್ ಸಂಬಂಧವಾದ ನೀತಿಯುಕ್ತ ಭಾಷಣವನ್ನು ಮಾಡಿದುದಲ್ಲದೆ ಮೊದಲೇ ಏರ್ಪಡಿಸಲ್ಪಟ್ಟ ಪ್ರಕಾರ ಸ್ಕೌಟ್ ವಿದ್ಯಾರ್ಥಿಗಳ ಸಿದ್ಧತೆಯು ಈ ಸಮಾರಂಭದ ಸಮಯದಲ್ಲಿ ದರ್ಶನೀಯವಾಗಿರುವಂತೆ ಮಾಡಿದ್ದುದು ಸ್ತುತ್ಯವು. ಅಮೇಲೆ ಮ|| ರಾ|| ದುದ್ದಿ ಗುರುಶಾಂತಪ್ಪಶ್ರೇಷ್ಠಿಯವರು ಮೇಲೆಕಂಡ ಮಹೋತ್ಸವಗಳ ಕಾರ್ಯನಿರ್ವಾಹಕರ ಹಾಗೂ ಛತ್ರವನ್ನು ಕಟ್ಟುವ ಬಗ್ಗೆ ಧರ್ಮಾರ್ಥವಾಗಿ ಯೋಗ್ಯವಾದ ಸ್ಥಳವನ್ನು ಉದಾರಭಾವದಿಂದ ಕೊಡಲ್ಪಟ್ಟ ಮ|| ರಾ|| ಯಜಮಾನರಾದ ಜವಳಿ ಗುರುಬಸವಪ್ಪನವರ ಗುಣಕಥನವನ್ನು ಮಾಡಿದರು. ಬಳಿಕ ಮ|| ರಾ|| ನ್ಯಾಮತಿ, ಚನ್ನಪ್ಪಶ್ರೇಷ್ಠಿಯವರು ಈ ಗ್ರಾಮದಲ್ಲಿ ಸಂತೆ ನಡೆಯುವದರ ಸಲುವಾಗಿ ಘನ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವದರ ಬಗ್ಗೆ ಧೈರ್ಯೋತ್ಸಾಹಗಳಿಂದ ಮಾಡಿದ ಭಾಷಣವು ಅವರ ವ್ಯವಹಾರಜ್ಞಾನ ಪೂರ್ಣಾನುಭವವನ್ನು ವ್ಯಕ್ತಗೊಳಿಸಿತ್ತೆಂಬುದರಲ್ಲಿ ಅತಿಶಯೋಕ್ತಿಯು ಇರಲಾರದು. ಮತ್ತು ಎಂ. ಬಸಪ್ಪನವರು ನೀರಾವರಿಯ ವಿಷಯವಾಗಿ ಘನ ಸರ್ಕಾರದವರನ್ನು ಪ್ರಾರ್ಥಿಸಲು ಬರೆದು ಓದಿದ ಲೇಖನವು ಪ್ರಯೋಜಕರಣೀಯವಾಗಿತ್ತು. ಹೀಗೆ ಮೇಲೆ ಕಂಡ ಭಾಷಣಗಳೆಲ್ಲಾ ಮುಗಿದನಂತರ ಅಧ್ಯಕ್ಷರವರು ತಮ್ಮ ಸ್ವಹಸ್ತದಿಂದ ಪಂಚಾಯತಿಯಲ್ಲಿ ಶ್ರದ್ಧೆಯನ್ನು ವಹಿಸಿರುವದಕ್ಕಾಗಿ ಛೇರ್‌ಮೆನ್‌ರವರಾದ ಮ|| ರಾ|| ಸಾ|| ಗಾಜನೂರು ಚನ್ನಬಸವಪ್ಪನವರಿಗೆ ಗೌರವಪೂರ್ವಕವಾದ ಮೆಡಲನ್ನೂ, ಅನೇಕ ಗ್ರಾಮಪಂಚಾಯತಿಯ ಛೇರ್‌ಮೆನ್‌ರವರಿಗೆ ಸರ್ಟಿಫಿಕೇಟುಗಳನ್ನೂ ಸಹ ದಯಪಾಲಿಸಿ ಸಮಯೋಚಿತವಾದ ಭಾಷಣವನ್ನು ಮಾಡಿದನಂತರ ಸಭಿಕರಿಗೆ ಪುಷ್ಪ, ಗಂಧ, ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಅಧ್ಯಕ್ಷರಾದಿಯಾಗಿ ಸಮಸ್ತ ಆಫೀಸರೂ ಸನ್ನಾಹಿತರಾಗಿ ಮೋಟಾರಿನಮೇಲೆ ಶಿವಮೊಗ್ಗಾಕ್ಕೆ ದಯಮಾಡಿಸಿದರು. ಈ ಗ್ರಾಮದಲ್ಲಿ ಇಂತಹ ಅಪೂರ್ವವಾದ ಮಹೋತ್ಸವವು ನಡೆದದ್ದು ಇದೇ ಪ್ರಥಮವಾಗಿದೆ. ಮತ್ತು ಅನೇಕ ಆಫೀಸರೂ ಖಾಸಗಿ ದೊಡ್ಡಮನುಷ್ಯರೂ ಸ್ಥಳಪರಸ್ಥಳದ ಮಹಾಜನರೂ ಸಾವಿರದಮೇಲೆ ನೆರೆದಿದ್ದುದು ನಮ್ಮಗಳ ಭಾಗ್ಯವೆಂತಲೇ ಹೇಳಬೇಕಾಗಿದೆ. ಮ|| ರಾ|| ಸಾ|| ಗಾಜನೂರು ತಿರುಕಪ್ಪನವರ ನೇತೃತ್ವದಲ್ಲಿ ನಡೆಯಲ್ಪಟ್ಟ ಈ ಘನ ಕಾರ್ಯವು ಹಾಗೂ ಮೇಲೆ ಕಂಡ ಉಭಯಕಾರ್ಯಗೌರವಗಳೂ ಸುಲಲಿತವಾಗಿ ನಡೆಯಲು ವಹಿಸಿದ ಕುಂಸಿ ಸಬ್ ತಾಲೂಕು ಅಮಲ್ದಾರರವರ ಮತ್ತು ಅವರ ಸಹಾಯಾಧಿಕಾರಿಗಳ ಶ್ರಮವೂ ಸಾರ್ಥಕವಾಯಿತು.

ಪ್ರೇಕ್ಷಕ.

ಶ್ರೀ ಜಗದ್ಗುರು ರೇಣುಕಾಚಾರ್ಯ ಫ್ರೀ ಬೋರ್ಡಿಂಗ್ ವಿಜಾಪೂರ.

ಪ್ರತಿವರ್ಷದಂತೆ ಈ ವರ್ಷವಾದರೂ ವಿಜಾಪೂರ ಸೆಂಟರಿನಲ್ಲಿ ನಡೆಯುವ ಮುಲ್ಕೀಪರೀಕ್ಷೆಗೆ ಬರುವ ವೀರಶೈವ ಬಡವಿದ್ಯಾರ್ಥಿಗಳಿಗಾಗಿ ತಾಸೆಬಾವಡಿಯ ಹತ್ತಿರ ಶ್ರೀಮಂತ ಸೊನ್ನದ ದೇಸಾಯಿಯವರ ಬಂಗಲೆಯಲ್ಲಿ ತೊರವಿ ಹಿರೇಮಠದ ಪಟ್ಟಾಧ್ಯಕ್ಷರಿಂದ ಊಟದ ವ್ಯವಸ್ಥೆಯು ಮಾಡಲ್ಪಡುವುದು. ಸದರಿ ಬೋರ್ಡಿಂಗಿನಲ್ಲಿ ಅನ್ನೋದಕವನ್ನು ತೆಗೆದುಕೊಳ್ಳುವ ಅಭಿಲಾಷೆಯುಳ್ಳ ವಿದ್ಯಾರ್ಥಿಗಳು ಮಾರ್ಚಿ ತಿಂಗಳು ೧೫ ನೇ ತಾರೀಖಿನೊಳಗಾಗಿ ತಮ್ಮ ಶಾಲೆಯ ಹೆಡ್ ಮಾಸ್ತರರಿಂದಾಗಲಿ ಊರೊಳಗಿನ ಯಾರಾದರೊಬ್ಬ ಪ್ರಮುಖರಿಂದಾಗಲಿ ಬಡವನೆಂಬ ಬಗ್ಗೆ ಸರ್ಟಿಫಿಕೇಟಿನೊಂದಿಗೆ ಅರ್ಜಿಯನ್ನು ಬಸಪ್ರಭಯ್ಯ, ದುಂಡಯ್ಯ ಹಿರೇಮಠ ಮುನಸೀಪಾಲಿಟಿ ಕನ್ನಡ ಶಾಲಾಮಾಸ್ತರ ವಿಜಾಪೂರ, ಈ ವಿಳಾಸಕ್ಕೆ ಕಳಿಸತಕ್ಕದ್ದು. ನಿಯಮಿತ ಕಾಲವನ್ನು ಮೀರಿಬಂದ ಅರ್ಜಿಗೆ ಗಮನಕೊಡಲಾಗುವುದಿಲ್ಲ. ಪರೀಕ್ಷೆಗೆ ಬರುವಾಗ ನಮ್ಮ ಕಡೆಯಿಂದ ಬೋರ್ಡಿಂಗಿನಲ್ಲಿ ಊಟಮಾಡಲಿಕ್ಕೆ ದೊರೆತ ಪರವಾನಗಿ ಪತ್ರವನ್ನು ಸಂಗಡ ತರತಕ್ಕದ್ದು.

ದುಂಡಪ್ಪ, ಬಸಪ್ಪ ಅಕ್ಕಿ ವ್ಯವಸ್ಥಾಪಕ,
ಶ್ರೀಜಗದ್ಗುರು ರೇಣುಕಾಚಾರ್ಯ
ಫ್ರೀ ಬೋರ್ಡಿಂಗ್, ವಿಜಾಪೂರ.

|| ಶ್ರೀ ||

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಾದ

ಹಜರತ್‌ಗುಲಾಂ ಮೊಹದೀನ್ ಮೇಕ್ರಿ

ಇವರ ಸನ್ನಿಧಿಯಲ್ಲಿ ಒಪ್ಪಿಸಿದ ಸ್ವಾಗತಪದ್ಯಾವಳಿ.

ಆವಂ ಪ್ರಶಾಂತಭಾವನ |
ದಾವಂ ಡೆಪ್ಯುಟಿಕಮಿಷನರೊಳಂ ಶ್ರೇಷ್ಠಂ ||
ಆವಂ ಧರ್ಮ ವಿಮರ್ಶಕ |
ನಾವಂ ತಾನಲ್ತೆ ಮೇಕ್ರಿನಾಮನುದಾರಂ ||೧||

ರಾಜಸಭಾಲಂಕಾರಂ |
ರಾಜಿತ ವಿಜ್ಞಾನ ಘನಪಯೋಧಿವಿಹಾರಂ ||
ಸೈಜಗುಣಾಲಂಕಾರಂ |
ಭಾಜನಮುರುಕೀರ್ತಿ ವಿಮಲದೇಶೋದ್ಧಾರಂ ||೨||

ವಿಕಸನಧಾನಸುಗುಣನೂ |
ಜನತನನ್ನು ತರಾಜಧರ್ಮಕಾರ್ಯಾಸ್ಪದನಾ ||
ಶ್ರಿತಕಲ್ಪಭೂಜನಧಿಕ |
ಪ್ರತಿಭಾಶ್ಯಂ ನೀನೆನಲ್ಕೆ ಸಂಶಯಮಿಹುದೇ ||೩||

ಮನ್ನಿಸುತಾಹ್ವಾನವ ನೀಂ |
ನನ್ನಿಯೊಳಾಗಮಿಸಲಿಂದು ಧನ್ಯರವಾಟೆಂ ||
ನಿನ್ನ ಕರಾಬ್ಜ ಸ್ಪರ್ಶಕೆ |
ಯನ್ನಮಮಾ ಪಡೆದು ತೆರೆದುದೇಂ ಯೋಗಮಿದೋ ||೪||

ಕೃತಕಾರ್ಯ ಮಿದೆಸೆದುದು ಮ |
ತಿ ತನ ಮನೋಬಯಕೆಯಂತೆ ನಿರ್ವಿಘ್ನತೆಯಿಂ ||
ಸತತಮಿದಭಿವರ್ಧಿಸೆ ಸ |
ನ್ಮತ ಘನಸರ್ಕಾರಕರ್ಪಿಸಿಹುದೇ ಸುಹಿತಂ ||೫||

ಶಿವರುದ್ರಶಾಸ್ತ್ರಿ ನಾಮಕ |
ಕವಿಮುದದಿಂ ರಾಜಭಕ್ತಿಪೂರ್ವಕಮಾದೀ ||
ಸುವಿಮಲಪದ್ಯಾವಳಿಯಂ |
ಶಿವಮೊಗೆ ಜಿಲ್ಲಾಧಿಪಂಗೆ ತಾನೊಪ್ಪಿಸಿದಂ ||೬||

ತಮ್ಮ ವಿಧೇಯರು,
ಗಾಜನೂರು ತಿರುಕಪ್ಪ ಮತ್ತು
ಸಹೋದರರು.

ಹಾರನಹಳ್ಳಿ,
ತಾ|| 5—2—33.

|| ಓಂ ನಮೋ ಭಗವತೇ ಜಗದ್ಗುರು ರೇಣುಕಾಚಾರ್ಯಾಯ ||

ಜೀಯಾತ್ ಶ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ |
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀ ಮಹಾರಥೋತ್ಸವಾಹ್ವಾನಪತ್ರಿಕಾ.

ಸ್ವಸ್ತಿಶ್ರೀಮನ್ನೃಪ ಶಾಲೀವಾಹನಶಕ ೧೮೫೫ ನೆಯ ಆಂಗೀರಸನಾಮಸಂವತ್ಸರದ ಫಾಲ್ಗುಣ ಶುದ್ಧ ೮ ಯಿಂದ ಫಾಲ್ಗುಣ ಬಹುಳ ೮ ವರೆಗೆ ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಅನಾದಿಕಾಲದಿಂದಲೂ ಜರಗುತ್ತಬಂದಿರುವಂತೆ ಈ ಸಂವತ್ಸರದಲ್ಲಿಯೂ ಮಹಾರಥೋತ್ಸವಾಂಗಭೂತಗಳಾದ ವೃಷಭೋತ್ಸವ, ಅಶ್ವಾರೋಹಣೋತ್ಸವ, ಆಂದೋಳಿಕೋತ್ಸವ, ಪುಷ್ಪೋತ್ಸವ, ಶಯನೋತ್ಸವ, ಸುಪ್ರಭಾತೋತ್ಸವ, ಂಕುನೋತ್ಸವ, ವಸಂತೋತ್ಸವ, ಅವಭೃತಸ್ನಾನ, ಭದ್ರಾನದೀವಿಹಾರೋತ್ಸವ ಮೊದಲಾದ ಸತ್ಕೋತ್ಸವಗಳೂ, ಫಾಲ್ಗುಣ ಶುದ್ಧ ತಾ|| ೧೦-೩-೧೯೩೩ ಶುಕ್ರವಾರ ಮಘಾನಕ್ಷತ್ರದಲ್ಲಿ || ಮಹಾರಥೋತ್ಸವವೂ ನೆರವೇರುವದಲ್ಲದೆ ಈ ಮಹಾರಥೋತ್ಸವಕ್ಕೆ ಈ ಧರ್ಮ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಬಿಜಯಂಗೈಸುತ್ತಾರಾದ ಪ್ರಯುಕ್ತ ಗುರುಭಕ್ತಿನಿಷ್ಠಾ ರಾದ ಸರ್ವರೂ ಈ ಸುಸಮಯದಲ್ಲಿ ಕಳಶ, ಛತ್ರ, ಮಿತ್ರ ಬಂದು ಉತ್ಸವಭಾಗಿಗಳಾಗಿ ಶ್ರೀಸ್ವಾಮಿಯ ಶ್ರೀಮುಡಿ ಪ್ರಸಾದಗಳನ್ನೂ ಶ್ರೀ ಮಹಾಗುರುದರ್ಶನಾಶೀರ್ವಾದಗ ಪಡೆದು ಧನ್ಯರಾಗತಕ್ಕದ್ದು. ಮತ್ತು ಶಿಲಾಮಂಟಪದ ಯದಲ್ಲಿ ಆಲೋಚನೆಯೂ ಇರುವದರಿಂದ ಸದ್ಭಕ್ತರಾಗಳೆ ಬಂದು ಯೋಗ್ಯಸಲಹೆಗಳನ್ನಿತ್ತು ಯಶಸ್ವಿಗಳಾಗಬೇಕೆಂದು ಕೋರುವ.

ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಏಜಂಟ್.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು " ವೀರಶೈವರತ್ನ " ಎಂಬ ನಾಮದಿಂದ ಪ್ರಸಿದ್ಧವಾಗಿದೆ. ' ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತಂಸುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬೆಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿ ಹಿಡಿತ, ನೆತ್ತಿಉರಿ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುಬಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕು ಮದ್ದುಗಳೂ ಹೋಮಿಯೊಪಥಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿಕಿತ್ಸೆಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ " ಆರೋಗ್ಯಭಾಗ್ಯದ ನೀತಿಸೂತ್ರ" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಣೆ ಸ್ಟ್ಯಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[27] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ), ಮಂಗಳೂರು. ದ. ಕ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗಡೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಫ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಕ್ಷೀಣಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[8] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ ರೆ:—ಪಿನಸಿ, ಒಂ ತಲೆನೋವು, ತಲೆಯ ಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾ

(Registered Trade Mark)

ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೭೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[9] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಮಾರ್ಚಿ ೧೯೩೩ [ಸಂಚಿಕೆ ೫೩

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗೃಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ಸಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗೃಹೀತಗಳಾಗಿರುವವು. ಈ ಗ್ರಂಥವು ೨೩೫ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
[13] ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೀಗುರುತತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು. **ಬೆಲೆ ೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸುಧಾರಿಸಿದ ವಿವಾಹ.

ಶಿವಗೊಂಡನಹಳ್ಳಿ.

ತರೀಕೆರೆ ತಾಲೂಕು ಅಜ್ಜಂಪುರದ ಸಮೀಪ ಶಿವಗೊಂಡನಹಳ್ಳಿ ಗ್ರಾಮದ ಪಟೇಲ್ ಕೆಂಚರಾಮೇಗೌಡರ ಅನುಜ ದೊಡ್ಡಶಿದ್ದಪ್ಪಶೆಟ್ಟರ ಪುತ್ರಿ ಚಿ|| ಸೌ|| ಮಲ್ಲಮ್ಮನೆಂಬ ವಧುವಿಗೂ ಚನ್ನಗಿರಿ ತಾ|| ತಾವರೆಗೆರೆ ಮ|| ರಾ|| ಚನ್ನಪ್ಪನವರ ಪುತ್ರ ಮುರಿಗೆಪ್ಪನೆಂಬ ವರನಿಗೂ ತಾ|| 3—3—33 ನೇ ಶುಕ್ರವಾರ ಶುಭಮುಹೂರ್ತದಲ್ಲಿ ಪಾಣಿಗ್ರಹಣ ಮಹೋತ್ಸವವು ಬ್ರಹ್ಮಶ್ರೀ ಅತ್ತಿಮೊಗೆ ಶಿವನಿಮಠದ ಬಸವಾರಾಧ್ಯರವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ಮಿತವಾದ ಖರ್ಚಿನಿಂದ ನೆರವೇರಿತು. ಈ ವಿವಾಹಕಾರ್ಯಕ್ಕೆ ಸ್ಥಳಪರಸ್ಥಳದ ಬಂಧುಬಾಂಧವರು ಇಷ್ಟಮಿತ್ರರು ಮತ್ತು ಶ್ರೀಜಗದ್ಗುರು ಶ್ರೀ ಶೈಲಪರ್ವತ ಸಂಸ್ಥಾನ ಏಜಂಟರು ವೇ|| ಅಜ್ಜಂಪುರದ ಹಿರೇಮಠದ ಆರ್. ಶಿ. ಆರಾಧ್ಯಸ್ವಾಮಿಯವರು ಅಜ್ಜಂಪುರದ ಪೇಟೆ ದೈವಾಚಾರದ ದೇಶದ ಶೆಟ್ಟರು ಸವಾಧಿ ಶೆಟ್ಟರ ಶಿದ್ದಪ್ಪ ಶೆಟ್ಟರು, ಪೇಟೆಯಜಮಾನ್ ಬಿ. ಯಂ. ಮರುಳಪ್ಪನವರು ಬುಕ್ಕಾಂಬುಧಿ ಮ|| ಎಸ್. ಚನ್ನಪ್ಪನವರು ಹಣ್ಣೆ ಪಟೇಲರು ಗೋಲ್ಡ್‌ಸ್ಮಿತ್ ಗುರಪ್ಪ ಮುಂತಾದವರು ದಯಮಾಡಿಸಿದ್ದರು. ಸಭಾಮಂಟಪದಲ್ಲಿ ನೂತನ ವಧೂವರರಿಗೆ ವೈದಿಕರ ಆಶೀರ್ವಾದ ಮಂತ್ರಾಕ್ಷತೆಯು ನಡೆದು ಸುಮಂಗಲೆಯರಿಂದ ಆರತ್ಯಕ್ಷತೆಯು ನಡೆದನಂತರ ಫಲತಾಂಬೂಲ ಪುಷ್ಪಹಾರ ದಕ್ಷಿಣೆಯ ವಿನಿಯೋಗಾನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯಿಂದ ಜಯಘೋಷದೊಡನೆ ಮೈಸೂರು ರಾಜಧಾನಿಯಲ್ಲಿ ಹೊರಡುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣೆಗಾಗಿ ವರನ ಕಡೆಯಿಂದ 2 ರೂಪಾಯಿ ವಧುವಿನ ಕಡೆಯಿಂದ 1 ರೂಪಾಯಿ ಒಟ್ಟು 3 ರೂಪಾಯಿ ತೆಗೆಯಬೇಕೆಂದು ಮೇಲ್ಕಂಡ ಏಜಂಟರವರು ಅಪ್ಪಣೆಮಾಡಿದ್ದರಿಂದ ವಿವಾಹಕಾರ್ಯಕರ್ತರಾದ ತಾವರೆಕೆರೆ ರುದ್ರಪ್ಪನವರು ಪಟೇಲ್ ಈಶ್ವರಪ್ಪ ಬಿನ್ ಕೆಂಚರಾಮೇಗೌಡರು ಸಭಿಕರಿಗೆ ಅಭಿವಂದಿಸಿ ಸದರಿ ರೂಪಾಯಿಗಳು ತೆಗೆಯಲ್ಪಟ್ಟು ಅಜ್ಜಂಪುರದ ಪೇಟೆ ದೈವಾಚಾರದ ದೇಶದ ಶೆಟ್ಟರ ವಶಕ್ಕೆ ಕೊಡಲ್ಪಟ್ಟ ಬಳಿಕ ಜಯಧ್ವನಿಯೊಡನೆ ಸಭೆಯು ಬರಖಾಸ್ತು ಆಯಿತು.

ಪುರೋಹಿತ ಎ. ಎಸ್. ಎಂ. ಬಸವಾರಾಧ್ಯ.

ಸತ್ಯವಾದಿಯ ಪ್ರಲಾಪ.

'ಸತ್ಯವಾದಿ' ಎಂಬ ಅಂಕಿತದಿಂದ ಯಾವನೋ ಒಬ್ಬನು ಸ್ಟಾರ್ ಪತ್ರಿಕೆಯಲ್ಲಿ ರೇಣುಕವಿಜಯ ಶೀರ್ಷಿಕೆಯಮೇಲೆ ಟೀಕಿಸಿ ಒಂದು ಲೇಖನವನ್ನು ಬರೆದಿದ್ದಾನೆ. ಮಠಸ್ಥಾಪನಾಚಾರ್ಯರ ವಿಷಯದಲ್ಲಿ ಮನಬಂದಂತೆ ಮಾತನಾಡುತ್ತಿರುವ ವಿಜಾತೀಯರು ಕಲ್ಪನೆಯ ಮಾಡಿ ದಾವಾಮಾಡಿಸಿದ್ದರೆನ್ನುವದು ಸರ್ವರಿಗೂ ವೇದ್ಯವೇ ಅದೆ. ಕೋರ್ಟಿನವರು ಕಲ್ಪನಾತ್ಮಕವಾದ ಆ ದಾವೆಯನ್ನೇ ವಜಾಮಾಡಿ ಖರ್ಚನ್ನು ಸಹ ಕೊಡುವಂತೆ ತೀರ್ಮಾನಿಸಿದರು. ಇಷ್ಟಾದರೂ ಈ ಮುಖಭಂಗಿತರು ಸುಮ್ಮನೆ ಕುಳಿತುಕೊಳ್ಳದೆ ಪುನಃ ಕಲಹಕ್ಕೆ ಕಾಲುಕೆರೆಯುತ್ತಿರುವರು. ಯಾವಾಗಲೂ ಕಲಹ ಮಾಡುತ್ತಿರುವದೇ ಇವರ ಹುಟ್ಟುಗುಣವಾಗಿದೆ. ಅನೇಕ ಜನ ದೊಡ್ಡಮನುಷ್ಯರ ಅಭಿಪ್ರಾಯದಂತೆ ಇಲ್ಲಿಯವರೆಗೆ ಶಾಂತವಾಗಿತ್ತು. ಇದನ್ನು ಲಕ್ಷ್ಯಕ್ಕೆ ತರದೆ ತಮ್ಮ ಕಾಯಕವನ್ನೇ ಸಾಗಿಸಿದ್ದಾದರೆ ಹಿಂದಿನಂತೆ ಕಡೇಮೆಟ್ಟಲನ್ನು ಹತ್ತುವದರಲ್ಲಿ ಸಂಶಯವಿಲ್ಲ. ಭೂಮಿಯಲ್ಲಿ ಬಿದ್ದು ಒದ್ದಾಡಿದರೂ ಮೀಸೆಗೆ ಮಣ್ಣು ಹತ್ತಿಲ್ಲವೆಂದು ನುಡಿಯುವ ಹೇಡಿಗಳಂತೆ ಇವರ ಸ್ಥಿತಿಯಾಗಿದೆ. ಜಡ್ಜರವರು ತಮ್ಮ ಜಡ್ಜ್‌ಮೆಂಟಿನಲ್ಲಿ ವಾದಿಯ ಹೇಳಿಕೆಯು ನಂಬತಕ್ಕದ್ದಾಗಿಲ್ಲವೆಂದು ಸ್ಪಷ್ಟವಾಗಿ ಬರೆದಿದ್ದರೂ ಅದನ್ನು ಮರೆಮಾಚಿ ಕುಚೇಷ್ಟೆಯನ್ನೆಬ್ಬಿಸಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಗುರುತಿರಸ್ಕಾರದಿಂದ ಈ ಜನ್ಮದಲ್ಲಿ ಪಡಬಾರದ ನಾನಾವಿಧವಾದ ತೊಂದರೆಗಳನ್ನು ಅನುಭವಿಸುತ್ತಿದ್ದರೂ ಇನ್ನೂ ಬುದ್ಧಿಯು ಬಾರದಿರುವದು ಕರ್ಮಶೇಷವೆಂದೇ ಹೇಳಬೇಕಾಗುತ್ತದೆ. ಸತ್ಯವಾದಿಯು ಸಭೆಯನ್ನು ಕೂಡಿಸಿ ನಿರ್ಣಯಿಸಬೇಕೆಂದು ಸೂಚಿಸಿರುತ್ತಾನೆ. ಇಲ್ಲಿಯವರೆಗೆ ನ್ಯಾಯಸ್ಥಾನವಾಯಿತು. ಇನ್ನುಮೇಲೆ ಸಭೆಯಾಗಬೇಕಂತೆ! ಅದೂ ಆಗಬಹುದು. ಬಾಲಕರಂತೆ ಅರ್ಥವಿಲ್ಲದ ನುಡಿಗಳನ್ನು ನುಡಿಯುತ್ತಿರುವ ಇಂಥವರ ಪ್ರಲಾಪಕ್ಕೆ ಎಂದಾದರೂ ಬೆಲೆಬರಬಹುದೇ?

ಗುರುಭಕ್ತ.

ಜಪಾನ್ ಸರ್ಕಾರದವರು ಮಂಚೂರಿಯಾ ರಾಜ್ಯ ಸಂಬಂಧದಲ್ಲಿ ಆಚರಿಸುತ್ತಿರುವ ನೀತಿಯು ನ್ಯಾಯವೆಂಬುದನ್ನು ಸಮರ್ಥನಮಾಡಲು ಜಿನೀವಾದಲ್ಲಿ 4 ಲಕ್ಷ ಪೌಂಡುಗಳನ್ನು ವೆಚ್ಚಮಾಡಿದರಂತೆ! ಜಿನೀವಾಕ್ಕೂ ಜಪಾನಿಗೂ ನಡೆದ ತಂತೀವ್ಯವಹಾರದ ಖರ್ಚೇ 4 ಸಾವಿರ ಪೌಂಡುಗಳಾಯಿತಂತೆ!

ಇದೇ ಮಾರ್ಚಿ 5 ನೇ ತಾರೀಖಿನ ದಿವಸ ರಾತ್ರಿ 2 ಘಂಟೆಯ ಸಮಯದಲ್ಲಿ ಧಾರವಾಡದ ಕರ್ನಾಟಕ ಹೈಸ್ಕೂಲಿನ ಆಫೀಸ್ ರೂಮಿಗೆ ಬೆಂಕಿಬಿದ್ದು ರಿಕಾರ್ಡುಗಳ ಮತ್ತು ಫರ್ನಿಚರುಗಳ ಸಮೇತವಾಗಿ ಸಂಪೂರ್ಣ ನಾಶವಾಯಿತು. ಬೆಂಕಿಯು ಕಟ್ಟಡದ ಇತರ ಭಾಗಗಳಿಗೆ ವ್ಯಾಪಿಸುವದರೊಳಗಾಗಿ ಸಮೀಪದಲ್ಲಿದ್ದ ಎಲೆಕ್ಟ್ರಿಕ್ ಪವರ್ ಹೌಸಿನವರು ಬಂದು ಬೆಂಕಿಯನ್ನು ಆರಿಸಿದರು. ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂಡುವ ಎಲ್ಲ ವಿದ್ಯಾರ್ಥಿಗಳಿಗೂ ಪ್ರಿನ್ಸಿಪಾಲರು ಅಪ್ಲಿಕೇಷನ್ ಫಾರಮ್ಮನ್ನು ಕೊಡದೇ ಇದ್ದುದೇ ಈ ಅನಾಹುತಕ್ಕೆ ಕಾರಣವೆಂದೂ, ಒಟ್ಟು 5000 ರೂ.ಗಳ ಲುಕ್ಸಾನಾಗಿರುವದೆಂದೂ ಊಹಿಸಲ್ಪಟ್ಟಿದೆ. ಈ ಅನಾಹುತಕ್ಕೆ ಮೂಲಕಾರಣರೆಂಬ ಸಂಶಯದಮೇಲೆ 5 ಜನ ವಿದ್ಯಾರ್ಥಿಗಳು ದಸ್ತಗಿರಿಮಾಡಲ್ಪಟ್ಟಿರುತ್ತಾರೆ

ಬೆಂಗಳೂರು ನೂತನ ಟೌನ್‌ಹಾಲ್ ಕಟ್ಟಡದ ಅಸ್ತಿಭಾರ ಶಿಲಾಪ್ರತಿಷ್ಠೆ.

ಬೆಂಗಳೂರಿನಲ್ಲಿ ನಿರ್ಮಿಸಿರುವ “ಟೌನ್ ಹಾಲ್” ಸಭಾಭವನದ ಅಸ್ತಿಭಾರ ಶಿಲೆಯ ಪ್ರತಿಷ್ಠಾಪನ ಮಹೋತ್ಸವವು ಮಾರ್ಚಿ 6 ನೆಯ ತಾರೀಖಿನ ದಿನ ನಡೆದ ಕಾಲದಲ್ಲಿ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ., ಸಿ. ಐ. ಇ., ಅವರು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ ಶ್ರೀಮನ್ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಜಿ. ಬಿ. ಇ., ಮಹಾಸ್ವಾಮಿಯವರ ಮಹಾಸನ್ನಿಧಿಯಲ್ಲಿ ಸಮರ್ಪಿಸಿದ ವಿಜ್ಞಾಪನಾಪತ್ರಿಕೆ.

ಮಹಾಸ್ವಾಮಿ,—ಆಗಿಂದಾಗ್ಗೆ ಸನ್ನಿಧಾನದ ಕೃಪಾಕಟಾಕ್ಷದಿಂದ ನನಗೆ ದೊರೆಯುತ್ತಲೇ ಬಂದಿರುವ ಅನೇಕ ಅನುಗ್ರಹಗಳಿಗಾಗಿ ನನ್ನ ವಿನಯಪೂರ್ವಕವಾದ ಕೃತಜ್ಞತೆಯನ್ನೂ ಮಹಾಪ್ರಭುಗಳವರಲ್ಲಿ ನನಗಿರುವ ಗಾಢವಾದ ರಾಜಭಕ್ತಿ ವಿಶ್ವಾಸಗಳನ್ನೂ ವ್ಯಕ್ತಪಡಿಸಲು ಅನುಜ್ಞೆಯನ್ನು ಬೇಡುವೆನು. ಮಹಾಸ್ವಾಮಿಯವರು ಉದಾರಚಿತ್ತದಿಂದ ಕರುಣಿಸಿರುವ ಈ ಮಹೋಪಕಾರಗಳ ಜೊತೆಗೆ, ಈ ನಗರಕ್ಕೆ ಅತ್ಯವಶ್ಯಕವಾಗಿದ್ದ ಈ ಸಭಾಭವನವನ್ನು ದೊರೆಯಿಸುವ ನನ್ನ ಈ ಅಲ್ಪಸೇವೆಯ ಸಂಬಂಧದಲ್ಲಿ ಮಹಾಸ್ವಾಮಿಯವರು ಕೃಪೆತೋರಿ ಅದರ ಶಂಕುಸ್ಥಾಪನೆಗಾಗಿ ಚಿತ್ತೈಸಿರುವುದರಿಂದ ಮತ್ತೊಂದು ದೊಡ್ಡ ಉಪಕಾರವನ್ನು ಮಾಡಲಾಗಿದೆ; ಇದಕ್ಕಾಗಿಯೂ ನನ್ನ ಆಂತರವಾದ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಅಭಿವೃದ್ಧಿಗೆ ಬರುತ್ತಲೂ, ದಿನೇ ದಿನೇ ವಿಸ್ತರಗೊಳ್ಳುತ್ತಲೂ ಇರತಕ್ಕ ಈ ಪುರಾತನ ನಗರದಲ್ಲಿ ನಾನು ನನ್ನ ಜೀವನದ ಬಹುಭಾಗವನ್ನು ಕಳೆದಿದ್ದೇನೆ. ನಾನು ಈ ನಗರದಲ್ಲಿ ಕೆಲಸಮಾಡಿದ್ದೇನೆ; ಈ ನಗರಕ್ಕೆ ನನ್ನ ಸೇವೆಯನ್ನು ಸಮರ್ಪಿಸಿದ್ದೇನೆ. ಈ ನಗರದಲ್ಲಿ ವಾಸಮಾಡುತ್ತಿರುವ ನಾನಾ ಜಾತಿ ಪಂಗಡಗಳ, ನಾನಾಜನಾಂಗಗಳ ಮತ್ತು ನಾನಾಮತಗಳ ಜನಗಳೊಡನೆಯೂ ನಾನು ಸೇರಿ ವರ್ತಿಸಿದ್ದೇನೆ. ನನ್ನ ಸೇವಾಸಾಮರ್ಥ್ಯವನ್ನು ಬಹುಮಟ್ಟಿಗೆ ಈ ನಗರದಲ್ಲಿಯೇ ಸಂಪಾದಿಸಿದ್ದೇನೆ. ಈ ಕಾರಣಗಳಿಂದ ಈ ನಗರದ ಸಂಬಂಧದಲ್ಲಿ ನಾನೊಂದು ಕರ್ತವ್ಯವನ್ನು ನೆರವೇರಿಸಬೇಕಾದುದು ಅಗತ್ಯವೆಂದು ನನಗೆ ತೋರಿಬಂದಿತು. ಪ್ರಕೃತಿ ದೇವಿಯು ಕರುಣಿಸಿರುವ ರಮಣೀಯತೆಯ ವಿಚಾರದಲ್ಲಾಗಲಿ, ಆರೋಗ್ಯ ಸಾಧಕವಾದ ವಾಯುಗುಣದ ವಿಚಾರದಲ್ಲಾಗಲಿ, ವ್ಯಾಪಾರ ವಾಣಿಜ್ಯಗಳಿಗೆ ದೊರೆಯುವ ಅನುಕೂಲಗಳ ವಿಚಾರದಲ್ಲಾಗಲಿ, ಮೈಸೂರು ಸಂಸ್ಥಾನದ ಮತ್ತಾವ ನಗರವೂ ಇದನ್ನು ಹೋಲಲಾರದೆಂದು ಹೇಳಿದರೆ ಅದೆಂದಿಗೂ ಅತಿಶಯೋಕ್ತಿಯಲ್ಲ. ಪ್ರತಿಯೊಂದು ನಗರದಲ್ಲಿಯೂ “ಟೌನ್ ಹಾಲ್” ಎಂಬ ಸಭಾಭವನವಿರಬೇಕಾದುದು ಈಗಿನ ಕಾಲದ ಸಂಪ್ರದಾಯವಾಗಿದೆ. ಇಂತಹ ಸಭಾಭವನವಿಲ್ಲದಿರುವ ಕೊರತೆಯನ್ನು ನಿವಾರಣೆಮಾಡುವ ಇಚ್ಛೆಯು ನನಗುಂಟಾಯಿತು. ಇಲ್ಲಿ ವಾಸಮಾಡುತ್ತ ನನ್ನಲ್ಲಿ ಅತ್ಯಂತ ದಯೆಯನ್ನು ತೋರಿಸಿರುವ ನನ್ನ ನಗರಬಾಂಧವರಿಗೆ ಅದರಿಂದ ಸಂತೋಷವುಂಟಾದೀತೆಂದು ಭಾವಿಸಿದೆನು. ಮಹಾಸ್ವಾಮಿಯವರ ಮತ್ತು ಮಹಾಸ್ವಾಮಿಯವರ ಪ್ರಜೆಗಳ ಸೇವೆಯಿಂದ ಸಂಪಾದಿಸಿದುದರಲ್ಲಿ ನಾನು ಉಳಿಸುವುದು ಸಾಧ್ಯವಾದ ಹಣವೆಲ್ಲ ಅದು ಯಾರಿಂದ ಮತ್ತು ಯಾರ ಮೂಲಕ ಲಭಿಸಿತೋ ಅವರ ಸೇವೆಗೇ ಸಮರ್ಪಿಸುವ ಪ್ರಯತ್ನಮಾಡುತ್ತಿದ್ದೇನೆಂದು ಮಹಾಸನ್ನಿಧಾನದಲ್ಲಿ ಅರಿಕೆಮಾಡಿದರೆ ವಿನಯಭಂಗವೆಂದು ಭಾವನೆಯುಂಟಾಗಲಾರದೆಂದು ನಂಬಿದ್ದೇನೆ. ಆ ಮೊಬಲಗನ್ನು ಅವರ ಸೇವೆಗೆ ಸಮರ್ಪಿಸಬೇಕಾದುದು ನನ್ನ ಮೊಟ್ಟಮೊದಲನೆಯ ಕರ್ತವ್ಯವೆಂದು ನಾನು ಸರ್ವದಾ ಭಾವಿಸಿದ್ದೇನೆ. ಆದುದರಿಂದಲೇ ಈ ನಗರದಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಮನೆಯಿಂದ ಬಂದು ಔಷಧ ತೆಗೆದುಕೊಂಡು ಹೋಗತಕ್ಕ ರೋಗಿಗಳಿಗಾಗಿ ಡಿಸ್ಪೆನ್ಸರಿಯೊಂದನ್ನು ಕಟ್ಟಿಸುವ ಯೋಚನೆಯು ನನಗೆ ಹೊಳೆದುದು; ಈಗ್ಗೆ ಸುಮಾರು ಹದಿನೈದು ವರುಷಗಳ ಹಿಂದೆ ನಾನು ಅದನ್ನು ಕಟ್ಟಿಸಿದೆನು. ಈ ನಗರದ ಯೋಗಕ್ಷೇಮದಲ್ಲಿ ಆದರವಿರತಕ್ಕವರೆಲ್ಲರೂ ಈ ನಗರವನ್ನು ಉತ್ತಮಪಡಿಸಿ, ಅದರ ಅಂದವನ್ನು ಹೆಚ್ಚಿಸಿ, ಅದರಲ್ಲಿ ದೊರೆಯುವ ಸೌಕರ್ಯಗಳನ್ನು ವೃದ್ಧಿಪಡಿಸಿ ಅದು ಇನ್ನೂ ಪ್ರಾಮುಖ್ಯಸ್ಥಿತಿಗೆ ಬರುವಂತೆ ಮಾಡುವ ಪ್ರಯತ್ನಗಳನ್ನು ಕೈಕೊಳ್ಳಲು ಆಗಿಂದಾಗ್ಗೆ ಸಭೆ ಸೇರಲನುಕೂಲಿಸುವಂತೆ ಒಂದು ಸಭಾಭವನವನ್ನು ಕಟ್ಟಿಸಬೇಕೆಂಬ ಪ್ರೇರಣೆಯುಂಟಾದುದೂ ಆದರಿಂದಲೇ. ಅವರುಗಳು ಹೀಗೆ ಪ್ರಯತ್ನಗಳನ್ನು ಮಾಡಿದಲ್ಲಿ ನಮ್ಮ ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂದು ಬಂದಿರುವ ಖ್ಯಾತಿಯನ್ನು ಅಳಿಯದಂತೆ ಕಾಪಾಡುವುದು ಮಾತ್ರವೇ ಅಲ್ಲದೆ ಮುಖ್ಯವಾದ ನಾನಾ ರೀತಿಗಳಲ್ಲಿ ಅದನ್ನು ಹೆಚ್ಚಿಸುವುದಕ್ಕೂ ಸಹಾಯವಾಗುತ್ತದೆ.

ನಾನು ಸಾರ್ವಜನಿಕ ಸೇವೆಯನ್ನು ಸಮರ್ಪಿಸಿದ ಅವಧಿಯ ಬಹುಕಾಲವನ್ನೂ ಈ ನಗರದಲ್ಲಿಯೇ ಕಳೆದಿರುವೆನಾದುದರಿಂದ ಇದರ ವಿಚಾರದಲ್ಲಿ ನಾನು ನಡೆಯಬೇಕೆಂದು ಭಾವಿಸಿ ಬಹುಕಾಲದಿಂದಲೂ ಯೋಚಿಸುತ್ತಿದ್ದ ಕರ್ತವ್ಯವು ನೆರವೇರುವಂತೆ ಅನುಗ್ರಹಿಸಿ ಪರಮಾತ್ಮನು ಕೃಪೆಮಾಡಿದ್ದಾನೆ. ನನ್ನ ಜೀವಮಾನದಲ್ಲಿಯೇ ಈ ದಿನವು ಕೇವಲ ಸಾರ್ಥಕವಾದ ಶ್ರೇಷ್ಠ ದಿವಸವೆಂದು ನಂಬಿದ್ದೇನೆ, ಮಹಾಸ್ವಾಮಿ.

ಮೈಸೂರು ಸಂಸ್ಥಾನದ ದಿವಾನ್‌ರವರಾಗಿ ಖ್ಯಾತಿಯನ್ನು ಪಡೆದಿರುವ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್ ಕೆಟಿ., ಸಿ. ಐ. ಇ., ಓ. ಬಿ. ಇ., ಅವರು ನನ್ನಲ್ಲಿ ಏಕಪ್ರಕಾರವಾಗಿ ಪ್ರೀತಿ ವಿಶ್ವಾಸಗಳನ್ನು ತೋರಿಸಿ ಉಪಕಾರಮಾಡಿದ್ದಾರೆ. ಇದಕ್ಕಾಗಿ ಅವರಲ್ಲಿ ನನಗಿರುವ ಕೃತಜ್ಞತೆಯನ್ನು ಸೂಚಿಸಲು ಮಹಾಸ್ವಾಮಿಯವರ ಅಪ್ಪಣೆಯನ್ನು ಬೇಡುವೆನು. ನನ್ನ ಸಲಹೆಯು ಕಾರ್ಯಕ್ಷೇತ್ರದಲ್ಲಿ ಒಂದು ರೂಪಕ್ಕೆ ಬಂದು ನನ್ನ ಆಶೆಯು ಈಡೇರುವಂತೆ ಮಾಡುವ ಭಾಗದಲ್ಲಿ ಅವರು ವಹಿಸಿದ ತೀವ್ರಾಸಕ್ತಿಗಾಗಿ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ನಿಜವಾದ ಸಂಗತಿಯನ್ನು ವ್ಯಕ್ತಪಡಿಸುವುದಾದರೆ ಸಭಾಭವನವೊಂದನ್ನು ಕಟ್ಟಿಸಬೇಕೆಂಬ ಸಲಹೆಯು ನನ್ನದಾದರೂ ಅದು ಸುಮುಖವಾಗಿ ಕಾರ್ಯರೂಪಕ್ಕೆ ತಿರುಗುವಂತೆ ಮಾಡಿದ ಕಷ್ಟಸಾಧ್ಯವಾದ ಕಾರ್ಯವೆಲ್ಲ ಅವರದೇ. ಕಟ್ಟಡಕ್ಕಾಗಿ ನಿವೇಶನವನ್ನು ಆರಿಸುವ ಕೆಲಸವನ್ನೂ, ಶಿಲ್ಪವಿದ್ಯಾನಿಪುಣರ ಆಲೋಚನೆಯನ್ನು ಕೇಳಿ ನಕ್ಷೆಗಳನ್ನು ವ್ಯವಸ್ಥೆಮಾಡುವ ಕೆಲಸವನ್ನೂ, ಅಂತು ಕಟ್ಟಡವು ನಿರ್ಮಿತವಾಗುವುದಕ್ಕೆ ಆವಶ್ಯಕವಾದ ಸಮಸ್ತ ಕಾರ್ಯಗಳನ್ನೂ ಅವರೇ ಸಂತೋಷದಿಂದ ನೆರವೇರಿಸಿದ್ದಾರೆ. ನನ್ನ ಅಭಿಲಾಷೆಯನ್ನು ಅವರಲ್ಲಿ ಬಿನ್ನವಿಸಿದಾಗಿನಿಂದಲೂ ಅವರು ತಮ್ಮ ಅನೇಕವಾದ ಮತ್ತು ಜರೂರಾದ ರಾಜ್ಯಾಡಳಿತ ಕಾರ್ಯಗಳ ಮಧ್ಯದಲ್ಲಿ ಅದರ ವಿಚಾರಕ್ಕೂ ಅವಕಾಶವನ್ನು ಕಲ್ಪಿಸಿಕೊಂಡು ಸಂತತವೂ ಅದನ್ನು ಕುರಿತು ಯೋಚಿಸಿ ಅದು ಈಡೇರುವಂತೆ ಮಾಡಲು ಸಹಾಯಮಾಡಿದ್ದಾರೆ. ಇದರ ವಿಚಾರದಲ್ಲಿ ತೀವ್ರಾಸಕ್ತಿಯನ್ನು ತೋರಿಸಿ ನನ್ನ ಅಭಿಲಾಷೆಯು ಈಡೇರುವುದಕ್ಕೆ ಬೇಕಾದ ಸಮಸ್ತ ಸೌಕರ್ಯಗಳನ್ನೂ ಅವರು ಕಲ್ಪಿಸಿಕೊಟ್ಟಿದ್ದಾರೆ. ಈ ಸಭಾಭವನದಿಂದ ಬೆಂಗಳೂರು ನಗರ ನಿವಾಸಿಗಳಿಗಿರತಕ್ಕ ಸೌಕರ್ಯವು ಹೆಚ್ಚುವುದೆಂಬ ಅಭಿಪ್ರಾಯದಿಂದ ಕೂಡಿ ಇದರ ಸಂಬಂಧದಲ್ಲಿ ಅವರು ನನ್ನಲ್ಲಿ ವಿಶೇಷವಾಗಿ ಆದರವನ್ನು ತೋರಿಸಿ ಉಪಕಾರ ಮಾಡಿದ್ದಾರೆ. ಬಹುಕಾಲದಿಂದ ನನ್ನ ಮನಸ್ಸಿನಲ್ಲಿದ್ದ ಅಭಿಲಾಷೆಯು ನೆರವೇರುವ ಸಮಯವು ಈಗ ಒದಗಿದೆ. ಆದಕಾರಣ ನಾನು ಕೃತಜ್ಞತೆಯಿಂದ ಅವರ ಉಪಕಾರವನ್ನು ಈ ಶುಭಸಮಯದಲ್ಲಿ ಸ್ಮರಿಸುವುದು ನನ್ನ ಕರ್ತವ್ಯವಾಗಿದೆ, ಮಹಾಸ್ವಾಮಿ.

ಈ ಸಭಾಭವನದ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸಿಕೊಟ್ಟು ಈ ನಗರವು ಇಲ್ಲಿಯ ನಿವಾಸಿಗಳಿಗೂ, ಒಟ್ಟು ಸಂಸ್ಥಾನಕ್ಕೂ ಇನ್ನೂ ಹೆಚ್ಚು ಪ್ರಯೋಜನಕರವಾಗಿ ಪರಿಣಮಿಸಲೆಂದು ಹರಸಿ ಶುಭಾಶಂಸನ ಮಾಡುವುದಕ್ಕಾಗಿ ಈ ಶುಭಸಮಯದಲ್ಲಿ ಮಹಾಪ್ರಭುಗಳವರು ಇಲ್ಲಿಗೆ ಚಿತ್ತೈಸಿರುವುದಕ್ಕಾಗಿ ನನ್ನ ಕೃತಜ್ಞತೆಯನ್ನೂ, ಗಾಢವಾದ ಭಕ್ತಿವಿಶ್ವಾಸಗಳನ್ನೂ ಮಹಾಸ್ವಾಮಿಯವರಿಗೆ ವ್ಯಕ್ತಪಡಿಸಲು ಮತ್ತೊಮ್ಮೆ ಅನುಜ್ಞೆಯನ್ನು ಬೇಡುವೆನು, ಮಹಾಸ್ವಾಮಿ.

ಬೆಂಗಳೂರು ಪೌರಸಭೆಯ ಅಧ್ಯಕ್ಷರ ಮತ್ತು ಸದಸ್ಯರುಗಳ ವಿಜ್ಞಾಪನಾಪತ್ರಿಕೆ.

ಮಹಾಸ್ವಾಮಿ,—ಮೈಸೂರು ಸಂಸ್ಥಾನದಲ್ಲಿ ಚಿರಸ್ಮಾರ್ಹವಾದುದೆಂದು ಪ್ರಖ್ಯಾತವಾಗುವ ಈ ಉತ್ಸವ ಸಮಯದಲ್ಲಿ ಬೆಂಗಳೂರು ನಗರದ ಪೌರಸಭೆಯ ಅಧ್ಯಕ್ಷರೂ ಸದಸ್ಯರೂ ಆದ ನಾವುಗಳು ಬೆಂಗಳೂರು ನಗರ ನಿವಾಸಿಗಳ ಪರವಾಗಿ ಮಹಾಸ್ವಾಮಿಯವರಿಗೆ ರಾಜಭಕ್ತಿ ವಿಶ್ವಾಸಗಳನ್ನು ಸಮರ್ಪಿಸಿ ಆತ್ಮಾದರದಿಂದ ಸ್ವಾಗತವನ್ನು ಬಯಸಲು ಅನುಜ್ಞೆಯನ್ನು ಬೇಡುತ್ತೇವೆ. ಈ ನಗರದ ‘ಟೌನ್ ಹಾಲ್’ ಎಂಬ ಸಭಾಭವನದ ಅಸ್ತಿಭಾರಶಿಲೆಯನ್ನು ಮಹಾಪ್ರಭುಗಳವರು ತಮ್ಮ ಅಮೃತಹಸ್ತದಿಂದ ಪ್ರತಿಷ್ಠಿಸಬೇಕೆಂಬುದಾಗಿ ನಾವು ಭಕ್ತಿಯಿಂದ ಬೇಡಿದೆವು. ಮಹಾಸ್ವಾಮಿಯವರು ನಮ್ಮ ಪ್ರಾರ್ಥನೆಯನ್ನು ನೆರವೇರಿಸಿ ಕೃಪೆಯನ್ನು ತೋರಿಸಿರುವುದಕ್ಕಾಗಿ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಮಹಾಸ್ವಾಮಿಯವರ ಪ್ರಭುತ್ವವು ಪ್ರಾರಂಭವಾದಾಗಿನಿಂದ ಕಳೆದಿರುವ ಮೂವತ್ತು ವರುಷಗಳ ಅವಧಿಯಲ್ಲಿ ಈ ನಗರವು ಸಂಸ್ಕೃತಿಯ ಮತ್ತು ವಾಣಿಜ್ಯದ ದೃಷ್ಟಿಯಿಂದ ಸಂಸ್ಥಾನದಲ್ಲಿಯೇ ಪ್ರಾಮುಖ್ಯವಾದ ನಗರವಾಗಿ ಪರಿಣಮಿಸಿದೆ. ಈ ನಗರವು ವಿಸ್ತೀರ್ಣದಲ್ಲಿಯೂ, ಜನಸಂಖ್ಯೆಯಲ್ಲಿಯೂ ಅತಿ ಶೀಘ್ರವಾಗಿ ಬೆಳೆದು ವೃದ್ಧಿಹೊಂದಿದೆ. ಇದರ ಫಲಿತಾಂಶವಾಗಿ ಈ ನಗರದಲ್ಲಿ ಪೂರ್ವದಿಂದಲೂ ಇದ್ದ ಭಾಗಗಳ ಜೊತೆಗೆ ರಮ್ಯವಾದ ಉಪನಗರಗಳಂತಿರುವ ಅನೇಕ ಬಡಾವಣೆಗಳು ಹೊಸದಾಗಿ ಏರ್ಪಟ್ಟಿವೆ. ನಗರವು ಬೆಳೆದಂತೆಯೇ ನಗರ ನಿವಾಸಿಗಳಿಗೆ ದೊರೆಯುವ ಸೌಕರ್ಯಗಳನ್ನು ಹೆಚ್ಚಿಸಿ ಉತ್ತಮಪಡಿಸಬೇಕಾದ ಆವಶ್ಯಕತೆಯೂ ಹೆಚ್ಚುತ್ತದೆ. ಸಂಸ್ಥಾನದಲ್ಲಿ ವಿದ್ಯಾವಂತರಾದ ಮೇಧಾವಿಗಳು ಹೆಚ್ಚು ಮಂದಿಗಳಿರುವ ಈ ನಗರದಲ್ಲಿ ಉತ್ತಮವಾದ ಸಭಾಭವನವಿಲ್ಲದ ಕೊರತೆಯು ಬಹುಕಾಲದಿಂದಲೂ ಇದ್ದಿತು. ಒಂದು ಉತ್ತಮವಾದ ಸಭಾಭವನವು ಅತ್ಯಾವಶ್ಯಕವಾದ ಸೌಕರ್ಯಗಳಲ್ಲೊಂದಾಗಿದೆ. ಹಣದ ಅನುಕೂಲತೆಯಿಲ್ಲದ ಕಾರಣ ಪೌರಸಭೆಯವರು ಸಭಾಭವನವನ್ನೇರ್ಪಡಿಸುವ ಕಾರ್ಯವನ್ನು ಕೈಕೊಳ್ಳಲು ಇದುವರೆಗೂ ಸಾಧ್ಯವಾಗಲಿಲ್ಲ. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರಿಗೆ ಈಗ್ಗೆ ಸುಮಾರು ಐವತ್ತು ವರುಷಗಳಿಂದಲೂ ಈ ನಗರದೊಡನೆ ಸಂಬಂಧವಿದೆ. ಅವರು ಈ ನಗರದ ಪೌರಸಭೆಯ ಅಧ್ಯಕ್ಷರಾಗಿಯೂ ಮತ್ತು ಈ ನಗರದ ನಾನಾಬಗೆಯ ಇತರ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿಯೂ ಈ ರೀತಿ ಬಹುಕಾಲವನ್ನು ಈ ನಗರದಲ್ಲಿ ಕಳೆದಿದ್ದಾರೆ. ಆದಕಾರಣ, ಇಲ್ಲಿ ಸಭಾಭವನವಿಲ್ಲದೆ ಹೋಗಿದ್ದ ಕೊರತೆಯನ್ನು ಅವರು ನಿವಾರಣೆಮಾಡಿ ಉಪಕರಿಸಿದುದು ಯುಕ್ತವೂ ಸಹಜವೂ ಆಗಿದೆ. ಉದಾರ ಹಸ್ತದಿಂದ ಅವರು 75,000 ರೂಪಾಯಿಗಳನ್ನು ಕೊಟ್ಟರು. ಆ ಮೊಬಲಗಿನ ಜೊತೆಗೆ ಪೌರಸಭೆಯವರು 25,000 ರೂಪಾಯಿಗಳನ್ನು ಒದಗಿಸಿದರು. ಉಳಿದ ಮೊಬಲಗನ್ನು ಮಹಾಸ್ವಾಮಿಯವರ ಸರಕಾರದವರು ದಯಪಾಲಿಸಿದರು. ಈ ರೀತಿ ವೆಚ್ಚಕ್ಕೆ ಹಣವು ಒದಗಿದುದರಿಂದ ಪೌರಸಭೆಯವರು ಇಷ್ಟರಲ್ಲಿಯೇ ಸಭಾಭವನವೊಂದನ್ನು ಪಡೆಯುವುದು ಸಾಧ್ಯವಾಗುವುದಾಗಿದೆ. ನಗರ ನಿವಾಸಿಗಳ ಹಿತಸಾಧನೆಗೂ, ಪುರೋಭಿವೃದ್ಧಿಗೂ ಆವಶ್ಯಕವಾದ ಸಮಸ್ತ ಕಾರ್ಯಕಲಾಪಗಳಿಗೂ ಈ ಸಭಾಭವನದಿಂದ ಸಹಾಯವಾಗುತ್ತದೆ, ಮಹಾಸ್ವಾಮಿ.

ನಮ್ಮ ಸಂಸ್ಥಾನದಲ್ಲಿ ಧರ್ಮಕಾರ್ಯವನ್ನಾಚರಿಸುವುದರ[illegible] ಪೂರ್ವದಿಂದಲೂ ವಾಡಿಕೆಯಾಗಿ ಬಂದ ವಿಧಾನಗಳನ್ನನುಸರಿಸಿಯೂ, ಹೆಚ್ಚು ಸಂತೋಷಕರವಾದ ಹೊಸ ಮಾರ್ಗವನ್ನನುಸರಿಸಿ [illegible] ಕೆ. ಪಿ. ಪುಟ್ಟಣ್ಣಶೆಟ್ಟರವರು ಈ ಧರ್ಮಕಾರ್ಯವನ್ನು ನೆರ[illegible]ರುಸುವುದಕ್ಕಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿದ್ದೇವೆ. [illegible] ಮರೀತಿಯಲ್ಲಿ ಶ್ಲಾಘನೀಯವಾದ ಜನೋಪಕಾರದ ಮೇಲ್ಪ[illegible]ಯನ್ನು ಅವರು ಒದಗಿಸಿದ್ದಾರೆ. ನಮ್ಮ ದೇಶಬಾಂಧವರು [illegible]ರಿಗೆ ಕೃತಜ್ಞರಾಗಿರುವುದಲ್ಲದೆ ಅವರ ಮೇಲ್ಪಂಕ್ತಿಯನ್ನೇ [illegible]ನ್ನಾಗಿ ಸರಿಸುತ್ತ ಬರುವವರ ಸಂಖ್ಯೆಯು ನಿರಂತರವೂ ಹೆಚ್ಚಾಗ[illegible] ಆಂತರವಾಗಿ ಹಾರೈಸುತ್ತೇವೆ, ಮಹಾಸ್ವಾಮಿ.

ಮಹಾಸ್ವಾಮಿಯವರು ನಮ್ಮಲ್ಲಿ ಕೃಪೆಯಿಟ್ಟು ಇಂದಿನ[illegible] ಉತ್ಸವವನ್ನು ನೆರವೇರಿಸಲು ಸಮ್ಮತಿಸಿ ಮಹೋಪಕಾರಮಾಡಿರುವುದಕ್ಕಾಗಿ ಗಾಢವಾದ ನಮ್ಮ ಕೃತಜ್ಞತೆಯನ್ನು ಸೂಚಿಸುತ್ತೇವೆ.

ಇತಿಹಾಸ ಪ್ರಸಿದ್ಧವಾದ ಈ ಪ್ರಾಚೀನ ನಗರದ ಸಭಾಭವನದ ಅಸ್ತಿಭಾರಶಿಲೆಯನ್ನು ಮಹಾಸ್ವಾಮಿಯವರು ತಮ್ಮ ಅಮೃತಹಸ್ತದಿಂದ ಪ್ರತಿಷ್ಠಿಸಿಕೊಟ್ಟು ಆ ಮೂಲಕ ನಮ್ಮಲ್ಲಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುವೆವು, ಮಹಾಸ್ವಾಮಿ,

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಉತ್ತರಕರ್ನಾಟಕ ವೀರಶೈವರಿಗೆ ಅಗತ್ಯ ಸೂಚನೆ.

ಲೇಖಕ:—ವೇ|| ಪಂಚಾಕ್ಷರಶಾಸ್ತ್ರಿಗಳು ಹಿರೇಮಠ, ಶಿರೋಳ.

ಉತ್ತರಕರ್ನಾಟಕವೆನಿಸಿದ ಧಾರವಾಡ, ಬೆಳಗಾಂವ, ವಿಜಾಪೂರ ಜಿಲ್ಲೆಗಳ ಕೆಲವೆಡೆಗಳಲ್ಲಿ ವೀರಶೈವರು ಅಂತ್ಯೇಷ್ಟಿವಿಧಿ (ಮರಣಕಾಲದಲ್ಲಿ ಮಾಡುವ ಕ್ರಿಯೆ) ಯನ್ನು ಆಚಾರ ಆರೋಗ್ಯಾದಿ ಘಾತಕವಾದ ರೀತಿಯಿಂದ ಮಾಡುತ್ತಲಿದ್ದಾರೆ. ಮೃತವಾದ ಒಂದು ಪ್ರಹರದಲ್ಲಿ ಸಮಾಧಿಕಾರ್ಯಗಳೆಲ್ಲಾ ಮುಗಿಯಬೇಕೆಂದು ಧರ್ಮಶಾಸ್ತ್ರಗಳು ಬೋಧಿಸುತ್ತವೆ. ಈಗ ಇದು ಇಡೀ ದಿವಸಕ್ಕೆ ದಿವಸವನ್ನೇ ಕಳೆದರೂ ಸಮಾಧಿಯನ್ನು ಸಮಾಪ್ತಿಗೊಳಿಸದೆ ಅನಾಚಾರ ಅನಾರೋಗ್ಯಕರವಾದ ರೀತಿಯಲ್ಲಿ ವರ್ತಿಸುವುದು ಹಾಸ್ಯಾಸ್ಪದವಾಗಿದೆ. ಮೃತಪುರುಷನ ಸಂಬಂಧಿಗಳು ದುಃಖಸಮುದ್ರದಲ್ಲಿ ಮುಳುಗಿರುವಾಗ ಉಳಿದವರು ಶೃಂಗಾರದ ಮೋಜುಮಜಲಿನಲ್ಲಿಯೂ ಮದ್ದು ಪಟಾಕಿಗಳನ್ನು ಹಾರಿಸುವದರಲ್ಲಿಯೂ ಉಬ್ಬಿ ಕುಣಿದಾಡುತ್ತಲಿರುವರು. ‘ಹೊಡದವರು ಹೆಣಕ್ಕೆ ಅತ್ತರೆ ಸ್ವನಾದಿಯವನು ತನ್ನ ಹಣಕ್ಕೆ ಅಳುವನು.’ ಎಂಬ ಗಾದೆಯಂತೆ ಮನೆಯವರು ಮಹಾದುಃಖದಲ್ಲಿರುವಾಗ ಜನಗಳು ಮನಬಂದಂತೆ ಅವರ ಹಣವನ್ನು ಹಾಳುಮಾಡುತ್ತಿರುವರಲ್ಲದೆ ಆಗಿನಕಾಲದಲ್ಲಿ ಆಗುತ್ತಿರುವ ತೊಂದರೆಯನ್ನು ಬಣ್ಣಿಸಿ ಬರೆಯುವದಾಗದಮಾತಾಗಿದೆ. ಶವದಮುಂದೆ ಕುಳಿತು ಕಂಠಶೋಷಮಾಡಿಕೊಂಡು ಅಳುತ್ತಿರುವ ಹೆಂಗಸರ ಪರಿತಾಪವನ್ನಾರೂ ಕೇಳುತ್ತಿರುವದಿಲ್ಲ. ಮೃತನ ಅಗಲುವಿಕೆಯ ದುಃಖಾಗ್ನಿಯು ಪ್ರಜ್ವಲಿಸಿ ಉರಿಯುತ್ತಿರುವಾಗ ನಿಯಮಿತಕಾಲದ ಆಹಾರವು ದೊರೆಯದ್ದರಿಂದ ಜಠರಾಗ್ನಿಯು ಉದ್ದೀಪನಗೊಂಡು ಸಂಕಟಬಾಧೆಗೊಳಗಾಗಿ ಅನಾಹುತಪ್ರಸಂಗಗಳು ಒದಗುತ್ತಲಿವೆ. ಸ್ಮಶಾನಯಾತ್ರೆಗಾಗಿ ಬಂದ ಮಹಾಶಯರು ಶಾಸ್ತ್ರೀಯ ಸಂಸ್ಕಾರಗಳಕಡೆಗೆ ಹಣಿಕಿಹಾಕದೆ ಮನೆಯವರ ಹಣವನ್ನು ಸೂರೆಮಾಡುವ ಪ್ರಸಂಗಗಳನ್ನೇ ಮುಂದೊಡ್ಡುತ್ತಿರುವರು. ಆದರೂ ಆಗಲಿ, ಆ ಕಾಲದಲ್ಲಿ ಧರ್ಮವಿಘಾತಕವಾದ ಕಾರ್ಯಗಳನ್ನು ಮಾಡುತ್ತಿರುವದು ಅತಿಹೇಯವಾಗಿದೆ. ಆರೋಗ್ಯದೃಷ್ಟಿಯಿಂದ ಮೃತಶರೀರವು ಮೂರುತಾಸಿನೊಳಗೆ ಸಮಾಧಿಯಾಗಿರಬೇಕು. ಅದಕ್ಕಿಂತ ಹೆಚ್ಚು ವೇಳೆ ಇಟ್ಟರೆ ಅದು ಯಾವ ರೋಗದಿಂದ ಮೃತವಾಗಿರುವದೋ ಆ ರೋಗವಿಷವಾಯುವು ಮೃತನ ದೇಹದಿಂದ ಮತ್ತಿಷ್ಟು ದೂಷಿತವಾಗಿ ಹೊರಬಿದ್ದು ಮನೆಯನ್ನೆಲ್ಲಾ ವ್ಯಾಪಿಸುವದು. ಈ ವಿಚಾರವನ್ನು ಪರಮತೀಯರು ಚೆನ್ನಾಗಿ ಪಾಲಿಸುತ್ತಿರುವರು. ನಮ್ಮವರು ಮೃತನ ಸಂಬಂಧಿಗಳು ಪರಗಾ[illegible]ಮದಿಂದ ಬರುವ ಹಾದಿಯನ್ನು ನೋಡುವದು ಬಹಳ ತಪ್ಪಾದ ಮಾರ್ಗವಾಗಿದೆ. ಹಾಗೆ ಹೇಳಿ ಕಳಿಸುವದು ಧರ್ಮಶಾ[illegible] ನೀತಿಗೂ ವಿರೋಧವಾದದ್ದು. ಹೇಳಿಕಳುಹಿಸಬಹುದಲ್ಲದೆ ಅವರು ಬಂದೇತೀರಬೇಕೆಂದು ಇಲ್ಲಿ ಕಾಯ್ದುಕೊಂಡುಕೂಡುವದು ಅನ್ಯಾಯವಾದುದು.

ಮೃತರ ಹೆಂಡತಿಯಾಗಲಿ, ಗಂಡನಾಗಲಿ, ಮಕ್ಕಳಾಗಲಿ, ಅಣ್ಣತಮ್ಮಂದಿರಾಗಲಿ, ತಂದೆತಾಯಿಗಳಾಗಲಿ ಪರಸ್ಥಳದಲ್ಲಿದ್ದರೆ ಅವರು ಮೂರು ತಾಸಿನೊಳಗೆ ಬರುವವರಿದ್ದರೆ ಹಾಗೆ ಕರೆಯಿಸಬಹುದು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಉಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “**ವೀರಶೈವರತ್ನ**” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ [illegible] ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ “**ಆರೋಗ್ಯಭಾಗ್ಯದ ನೀತಿಸೂತ್ರ**” ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[28] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ಬಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 360 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[9] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ನಿಶಾಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯುಳ್ಳಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[10] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಮಾರ್ಚಿ ೧೯೩೩ [ಸಂಚಿಕೆ ೪೪

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಶೈವೋಪನಿಷತ್ತು, ಸ್ವಯಂಭುವಾಗಮ, ಸುಪ್ರಭೇದಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿ ಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವುವು. ಈ ಗ್ರಂಥವು ೨೩೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
[14] ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ
ಶ್ರೀ ಕಂಠೀರವನರಸಿಂಹರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., **ಯವರ ಸನ್ನಿಧಿಯಲ್ಲಿ**
ರಾಜಭಕ್ತಿಯುತನಾದ ಎಡತೊರೆ ಬಿ. ಸಿದ್ಧಲಿಂಗಶೆಟ್ಟಿಯು ಭಕ್ತಿಪುರಸ್ಸರವಾಗಿ ಒಪ್ಪಿಸಿದ ವಿಜ್ಞಾಪನಾಪತ್ರಿಕಾ.

ಮಹಾಸ್ವಾಮಿ, ಮಹತ್ತರವಾದ ಅನೇಕ ರಾಜಕಾರ್ಯಗಳ ಸಂದಣಿಯಲ್ಲಿ ಬಿಡುವು ಮಾಡಿಕೊಂಡು ಪ್ರಸಕ್ತಪ್ರಯಾಣದ ಕ್ರಮವನ್ನು ಲೆಕ್ಕಿಸದೆ ಇಷ್ಟು ದೂರ ದಯಮಾಡಿಸಲು ಮಹಾಸ್ವಾಮಿಯವರು ಒಪ್ಪಿಗೆಯನ್ನು ಇತ್ತುದಕ್ಕಾಗಿ ನಾನು ಅತ್ಯಂತ ಕೃತಜ್ಞತೆಯುಳ್ಳವನಾಗಿರುತ್ತೇನೆ; ಅಲ್ಲದೆ ಈ ಸುಸಮಯದಲ್ಲಿ ಮಹಾಸ್ವಾಮಿಯವರಿಗೆ ಸುಸ್ವಾಗತವನ್ನು ಬಯಸಿ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಅರ್ಪಿಸಲು ಅಪ್ಪಣೆಯನ್ನು ಬೇಡುತ್ತೇನೆ. ಮಹಾಸ್ವಾಮಿಯವರ ಸವಾರಿಯು ಈ ಸ್ಥಳಕ್ಕೆ ಚಿತ್ತೈಸಿದುದು ಇದೇ ಮೊಟ್ಟಮೊದಲು. ಮಹಾಸ್ವಾಮಿಯವರು ನನ್ನ ಭಕ್ತಿಪುರಸ್ಸರವಾದ ಆಹ್ವಾನವನ್ನು ಸ್ವೀಕರಿಸಿದುದು ಮಹಾಸ್ವಾಮಿಯವರಿಗೆ ಮೈಸೂರು ಸಂಸ್ಥಾನದ ಪ್ರಜೆಗಳ ಮೇಲಿರುವ ಅಮೋಘವಾದ ಪ್ರೀತಿಯನ್ನೂ ಪ್ರಜಾಕ್ಷೇಮದಲ್ಲಿ ತಮಗಿರುವ ಅವಿಚ್ಛಿನ್ನವಾದ ಕುತೂಹಲವನ್ನೂ ಪ್ರಕಾಶಪಡಿಸುತ್ತದೆ. ಈ ದಿವಸದ ಶುಭಕಾರ್ಯದಲ್ಲಿ ಮಹಾಸ್ವಾಮಿಯವರು ಭಾಗಿಗಳಾದುದು ಈ ಪಟ್ಟಣಕ್ಕೆ ಭವಿಷ್ಯದಲ್ಲಿ ಉಂಟಾಗಬಹುದಾದ ವೈಭವದ ಶುಭಸೂಚನೆಯಾಗಿರುವುದಲ್ಲದೆ ಈ ಸುದಿನವು ನಮ್ಮೆಲ್ಲರಿಗೂ ಚಿರಸ್ಮರಣೀಯವಾಗಿರುವುದೆಂದು ಅರಿಕೆಮಾಡಿಕೊಳ್ಳುತ್ತೇನೆ.

ಮಹಾಸ್ವಾಮಿಯವರ ಅಮೃತ ಹಸ್ತಗಳಿಂದ ಈ ದಿವಸ ಶಂಕುಸ್ಥಾಪನೆ ಮಾಡಲ್ಪಡುವ ಈ ಕಟ್ಟಡವು ನಮ್ಮ ಮಾತೃಶ್ರೀಯವರಾದ ಶ್ರೀಮತಿ ಪುಟ್ಟತಾಯಮ್ಮನವರ ಜ್ಞಾಪಕಾರ್ಥವಾಗಿ ಸ್ಥಾಪಿಸಲ್ಪಡತಕ್ಕದ್ದಾಗಿರುತ್ತದೆ. ಸಕಲ ಜನಾಂಗದವರ ಮೇಲೆ ಅದರಲ್ಲಿಯೂ ಗರ್ಭಿಣಿಸ್ತ್ರೀಯರ ಮೇಲೆ ಅವರಿಗಿದ್ದ ಅನಿರ್ವಚನೀಯವಾದ ಪ್ರೀತಿ ವಿಶ್ವಾಸಗಳನ್ನು ನೋಡಿ ಅವರ ಹೆಸರಿನಲ್ಲಿ ಒಂದು ಹೆಂಗಸರ ಆಸ್ಪತ್ರೆಯನ್ನು ಸ್ಥಾಪಿಸುವುದಕ್ಕಿಂತಲೂ ಉತ್ತಮವಾದ ಬೇರೊಂದು ಕಾರ್ಯವಿಲ್ಲವೆಂದು ಭಾವಿಸಿ, ನನ್ನ ಮಾತೃಶ್ರೀಯವರ ಮನೋರಥಕ್ಕನುಗುಣವಾಗಿ ಈ ಕಟ್ಟಡವನ್ನು ದಾನಮಾಡಬೇಕೆಂಬ ನನ್ನ ಉದ್ದೇಶವನ್ನು ಈಡೇರಿಸಲು ಸಹಾಯಕರಾಗಿ ನಿಂತ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೂ, ಈ ಪಟ್ಟಣದ ಮ್ಯುನಿಸಿಪಾಲಿಟಿಯವರಿಗೂ, ನಮ್ಮ ಘನಸರ್ಕಾರದವರಿಗೂ ನನ್ನ ಕೃತಜ್ಞತೆಯನ್ನರ್ಪಿಸಲು ಬಹಳ ಆನಂದಪಡುತ್ತೇನೆ ಮಹಾಸ್ವಾಮಿ.

ಈ ಆಸ್ಪತ್ರೆಯು ಸುಮಾರು 300 ಚದರ ಮೈಲು ಭಾಗದಲ್ಲಿ ವಾಸವಾಗಿರುವ ಸುಮಾರು ಒಂದು ಲಕ್ಷಕ್ಕಿಂತಲೂ ಮೀರಿದ ಪ್ರಜೆಗಳಿಗೆ ಅನುಕೂಲವಾಗಿರುತ್ತದೆ. ಈ ಹೊಸ ಪಟ್ಟಣವು ಬಹು ಜಾಗ್ರತೆಯಾಗಿ ಬೆಳೆವಣಿಗೆಯಾಗುತ್ತಿರುವುದಲ್ಲದೆ, ಇದರ ಜನಸಂಖ್ಯೆಯು ಸಹ ತೀವ್ರವಾಗಿ ಹೆಚ್ಚುತ್ತಾ ಇರುತ್ತದೆ. ಈ ಆಸ್ಪತ್ರೆಯು ಈ ಪ್ರಾಂತದ ಜನರಿಗೆ ಬಹುಕಾಲದಿಂದಲೂ ಇದ್ದ ಕೊರತೆಯನ್ನು ನಿವಾರಿಸಿ ಹೆಚ್ಚಿನ ಸೌಕರ್ಯವನ್ನು ಕಲ್ಪಿಸುವುದೆಂಬ ಭರವಸೆಯುಳ್ಳವನಾಗಿರುತ್ತೇನೆ ಮಹಾಸ್ವಾಮಿ.

ಈ ಮಹೋತ್ಸವವನ್ನು ನೆರವೇರಿಸಲು ಮಹಾಸ್ವಾಮಿಯವರು ಒಪ್ಪಿಗೆಯನ್ನು ಇತ್ತುದುದಕ್ಕಾಗಿ ಮತ್ತೊಮ್ಮೆ ಮಹಾಸ್ವಾಮಿಯವರಿಗೆ ನನ್ನ ಭಕ್ತಿಪುರಸ್ಸರವಾದ ವಂದನೆಯನ್ನರ್ಪಿಸುತ್ತೇನೆ. ಇನ್ನು ಮುಂದೆ ಈ ಆಸ್ಪತ್ರೆಯು ಈ ಪ್ರಾಂತದ ಹೆಂಗಸರಿಗಿದ್ದ ಕಷ್ಟನಿವಾರಣೆ ಮಾಡಿ ಸುಖದಾಯಕಕೇಂದ್ರಸ್ಥಾನವಾಗಿ ಪರಿಣಮಿಸುತ್ತದೆಂದು ಹಾರೈಸುತ್ತೇನೆ.

ಮಹಾಸ್ವಾಮಿಯವರು ತಮ್ಮ ಅಮೃತಹಸ್ತದಿಂದ ಈ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ ಮಹಾಸ್ವಾಮಿ.

ಈ ಕ್ಷೇತ್ರದಲ್ಲಿ ಮೂರ್ತೀಭವಿಸಿರುವ ಶ್ರೀ|| ಚಂದ್ರಮೌಳೀಶ್ವರನು ಮಹಾಸ್ವಾಮಿಯವರಿಗೂ ರಾಜಕುಟುಂಬಕ್ಕೂ ಚಿರಾಯುರಾರೋಗ್ಯಗಳನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಸರ್ವದಾ ಪ್ರಾರ್ಥಿಸುತ್ತಿರುವ,

ಎಡತೊರೆ
16-3-1933.

ಮಹಾಸ್ವಾಮಿಯವರ ನಮ್ರಪ್ರಜೆ,
ಬಿ. ಸಿದ್ಧಲಿಂಗಶೆಟ್ಟಿ.

ಹಿಂದೀಪ್ರಚಾರಸಭಾ.
ಬೇಸಿಗೆಯ ಶಿಬಿರ.

ಮುಂದಿನ ತಿಂಗಳು 12ನೇ ತಾರೀಖು ಮೇಲ್ಕಂಡ ಶಿಬಿರವು ತೆರೆಯಲ್ಪಡುತ್ತದೆ. ಹಿಂದಿಯನ್ನು ಕಲಿಯಲಿಚ್ಛಿಸುವವರು ಮುಂದಿನ ತಿಂಗಳ 4 ನೇ ತಾರೀಖಿನೊಳಗಾಗಿ ಸಭಾಕಾರ್ಯಾಲಯದಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರುಮಾಡಿಸಬೇಕು. ಲಾಯರುಗಳಿಗೂ, ಅಧ್ಯಾಪಕರುಗಳಿಗೂ, ವರ್ತಕರಿಗೂ ಸಾಮಾನ್ಯಜ್ಞಾನವನ್ನು ಕೊಡುವದು ಮತ್ತು ಇತರರಿಗೆ ಹಿಂದಿಯ ಉನ್ನತಶಿಕ್ಷಣವನ್ನು ಕೊಡುವುದೇ ಈ ಶಿಬಿರದ ಉದ್ದೇಶ. ಹಿಂದಿಯ ಉತ್ತಮ ಅಧ್ಯಾಪಕರಾಗಬೇಕೆಂಬ ಕುತೂಹಲವುಳ್ಳವರಿಗೆ ಒಂದು ವಿದ್ಯಾಲಯವೂ ಏರ್ಪಡಿಸಿದೆ. ಶಿಕ್ಷಣ ಮತ್ತು ವಸತಿ ಉಚಿತ. ಅಂಥವರು ಈ ತಿಂಗಳು 30ನೇ ತಾರೀಖಿನೊಳಗಾಗಿ 8 ಆಣೆ ಪ್ರವೇಶಧನದೊಂದಿಗೆ ಕೆಳಗೆ ಕಂಡ ವಿಳಾಸಕ್ಕೆ ಅಪ್ಲಿಕೇಷನ್ ಹಾಕಿಕೊಳ್ಳಬೇಕು.

ಸಿ. ಆನಂದಾಳ್ವಾರ್,
" ಹಿಂದೀಪ್ರಚಾರಕ್ "
ಹಿಂದೀಪ್ರಚಾರಸಭಾ (ರಿಜಿಸ್ಟರ್ಡ್). ಮೈಸೂರು.

ಜಯಂತಿಮಹೋತ್ಸವಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ತಾ|| 10-3-1933 ನೇ ಶುಕ್ರವಾರದಿವಸ ಹೊಸ ಹುಬ್ಬಳ್ಳಿಯ ಹನ್ನೆರಡು ಮಠದಲ್ಲಿ ಒಳ್ಳೆ ವಿಜೃಂಭಣೆಯಿಂದ ಜರುಗಿತು. ಉತ್ಸವ ದಿವಸಕ್ಕಿಂತ ಪೂರ್ವದಲ್ಲಿ 5 ದಿವಸಗಳವರೆಗೆ ಶ್ರೀ ರೇಣುಕಾಚಾರ್ಯರ ಮಹಿಮೆಗಳ ಬಗ್ಗೆ ಹಿರೇಮಠದ ಪಟ್ಟದ ಮರಿಗಳವರಾದ ಶಿವಲಿಂಗದೇವರು ಪುರಾಣಶ್ರವಣವನ್ನು ಒಳ್ಳೆ ಸುಶ್ರಾವ್ಯವಾಗಿ ಮಾಡಿಸಿದರು. ಉತ್ಸವದ ದಿವಸ ಪ್ರಾತಃಕಾಲ ಶ್ರೀ ರೇಣುಕರ ರಜತ ವಿಗ್ರಹಕ್ಕೆ ರುದ್ರಾಭಿಷೇಕ ಮಾಡಲ್ಪಟ್ಟಿತು. ಅನಂತರ ಮಠದಲ್ಲಿ ಗಣಾರಾಧನೆಯು ನಡೆಯಿತು. ಸಾಯಂಕಾಲಕ್ಕೆ ಹನ್ನೆರಡು ಮಠದಿಂದ ಜಗದ್ಗುರು ರೇಣುಕರ ವಿಗ್ರಹವನ್ನು ಪಲ್ಲಕ್ಕಿಯಲ್ಲಿಯೂ ಹನ್ನೆರಡುಮಠದ ಶ್ರೀಗಳವರನ್ನು ಮೇಣೆಯಲ್ಲಿಯೂ ಮೂರ್ತಮಾಡಿಸಿ ಸುವಾಸಿನಿಯರ ನೀರಾಜನಗಳನ್ನು ಸ್ವೀಕರಿಸುತ್ತ ಬ್ಯಾಂಡು, ಕರಡಿ, ಕಹಳೆ ಮುಂತಾದ ಸಕಲ ವಾದ್ಯಗಳಿಂದಲೂ ಹಿರೇಹೊನ್ನಿಹಳ್ಳಿ ಶಿರುಗುಪ್ಪಿ ನೂಲವಿ ಹಳೇಹುಬ್ಬಳ್ಳಿ ಮುಂತಾದ ಊರುಗಳ ಭಜನಾಸಂಘಗಳಿಂದಲೂ ಸಮ್ಮಿಲಿತವಾಗಿ ಮಹೋತ್ಸವವು ತಳಿರುತೋರಣಗಳಿಂದ ಅಲಂಕೃತವಾದ ರಾಜಮಾರ್ಗಗಳಲ್ಲಿ ಹಾಯ್ದು 10 ಘಂಟೆಗೆ ಮಠಕ್ಕೆ ತಲ್ಪಿತು. ಅನಂತರ ಸಭೆ ಸೇರಿ ನಲವಡಿ ಶ್ರೀಕಂಠಶಾಸ್ತ್ರಿಗಳು ಜಯಂತಿಯ ಬಗ್ಗೆ ಮಿ|| ಎಸ್. ಸಿ. ಪಾಲೇಮಾಡಿ ಮಠ ಬಿ. ಎ. ಎಲ್. ಎಲ್. ಬಿ. ವಕೀಲರು ಜಯಂತಿಗಳ ಅವಶ್ಯಕತೆಯಬಗ್ಗೆ ಹಾಗೂ ಮಿ|| ಪಿ. ಆಯ್ ಹಿರೇಮಠ ಅಡ್ವೋಕೇಟ್ ಇವರು ಪಂಚಾಚಾರ್ಯರ ಜಯಂತಿಯು ವೀರಶೈವರ ಭಕ್ತಿದ್ಯೋತಕವೆಂಬ ಬಗ್ಗೆ ಬಹುಸರಸವಾಗಿ ಭಾಷಣಮಾಡಿದರು. ಅನಂತರ ಎಲ್ಲಾ ಭಜನಾಸಂಘದವರಿಗೆ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನು ಕೆತ್ತಿದ ರಜತದ ಮೆಡ್ಡಲುಗಳು ಶ್ರೀಗಳವರಿಂದ ಆಶೀರ್ವದಿಸಲ್ಪಟ್ಟವು. ಈ ಉತ್ಸವವನ್ನು ಯಶಸ್ವಿಯಿಂದ ನಡೆಯಿಸಲು ಇಲ್ಲಿಯ ಶ್ರೀ ವೇ|| ಅನ್ನದಾನಯ್ಯನವರು ಚೌಕೀಮಠ ಮತ್ತು ವೇ|| ಗುರುಸಿದ್ಧಯ್ಯನವರು ನರೇಂದ್ರದ ಬಸಲಿಂಗಯ್ಯನವರು ಶಾಸ್ತ್ರಿ, ಮ|| ರಾ|| ಕೋಟೆಪ್ಪನವರು ಅಂಗಡಿ ವಿರುಪಾಕ್ಷಪ್ಪನವರು ವಾಲಿಶೆಟ್ಟರ ರಾಚಪ್ಪನವರು ಶರವೀರ ಶೆಟ್ಟರ ಶಂಕರಪ್ಪನವರು ಬಳ್ಳೊಳ್ಳಿ ಸಿದ್ದಪ್ಪನವರು ಕವಳ್ಳಾರ ಸಿದ್ದೇಶ್ವರ ಕಂಪನಿ ಮಾಲಕ ಪುಟ್ಟಪ್ಪನವರು ಮುಂಡಸಿ ರಾಚಪ್ಪನವರು ಹುರಕಡ್ಲಿ ವಿರೂಪಾಕ್ಷಪ್ಪನವರು ವಂಗಿ ಇವರು ವಿಶೇಷಶ್ರಮವಹಿಸಿ ಗುರುಸಾರ್ವಭೌಮನ ಉತ್ಸವ ಕಾರ್ಯವನ್ನು ನಿರ್ವಿಘ್ನತೆಯಿಂದ ಸಾಗಿಸಿದ್ದಕ್ಕೆ ಇವರು ಆಯುರಾರೋಗ್ಯಭಾಗ್ಯಶಾಲಿಗಳಾಗಿ ಮಹದಾಚಾರ್ಯರ ಉತ್ಸವವನ್ನು ತಪ್ಪದೆಮಾಡುತ್ತ ಭಕ್ತಿಯುತರಾಗಲೆಂದು ಶ್ರೀಗಳವರು ಅಪ್ಪಣೆ ಕೊಡಿಸಿದರು. ಅನಂತರ ಮಂಗಲವಾದಿ ಸಭೆಯು ವಿಸರ್ಜನವಾಯಿತು.

R. G. Nashipudi.

ಶಿಂಗಟಾಲೂರು.

ಮುಂಡರಗಿ ಪೇಟಾ ಶಿಂಗಟಾಲೂರು ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಪದ್ಧತಿಪ್ರಕಾರ ಶ್ರೀಮದ್ವೀರಶೈವಮತಸ್ಥಾಪನಾಚಾರ್ಯರಾದ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯು ಶ್ರೀ ದೇವಸ್ಥಾನದ ಪಂಚಕಮಿಟಿಯವರಿಂದ ಇದೇ ಫಾಲ್ಗುಣ ಶುದ್ಧ ೧೩ ಶುಕ್ರವಾರ ದಿವಸ ನೆರವೇರಿಸಲ್ಪಟ್ಟಿತು. ರಜತನಿರ್ಮಿತವಾದ ಜಗದಾಚಾರ್ಯರ ಲಿಂಗೋದ್ಭವಮೂರ್ತಿಗೂ ಶಿವಕ್ಷೇತ್ರಪುರುಷನಾದ ಶ್ರೀ ವೀರೇಶ್ವರಮೂರ್ತಿಗೂ ವಿಧ್ಯುಕ್ತಪ್ರಕಾರ ಬ್ರ|| ಶ್ರೀ|| ಸಿದ್ಧಾಂತಿ ಮಾಗಳದ ಗಂಗಾಧರಶಾಸ್ತ್ರಿಗಳವರ ಪೌರೋಹಿತ್ಯದ ಕೆಳಗೆ ಶ್ರೀ ಪಂಚಾಮೃತಾಭಿಷೇಕವು ಸಹಸ್ರಬಿಲ್ವಾರ್ಚನೆಯೊಡನೆ ನಡೆಯಿಸಲ್ಪಟ್ಟಿತು. ಆಕಸ್ಮಾತ್ತಾಗಿ ಶಿಂಗಟಾಲೂರಿಗೆ ಬಂದಿದ್ದ ಗದಗ ಮ|| ರಾ|| ಭಂಗಾರಶೆಟ್ಟಿ ದೊಡ್ಡವೀರಪ್ಪನವರು ದೇವಸ್ಥಾನದಲ್ಲಿ ಜಗದಾಚಾರ್ಯರ ಜಯಂತಿಯು ನಡೆಯುವದೆಂಬ ವಾರ್ತೆಯನ್ನು ಕೇಳಿ ದೇವಸ್ಥಾನಕ್ಕೆ ಬಂದು ಯಾವತ್ತು ಪೂಜಾಕಾರ್ಯದಲ್ಲಿ ನಿರತರಾಗಿದ್ದರು. ಪೂಜಾನಂತರ ಬಂದಂಥ ಅತಿಥಿ ಅಭ್ಯಾಗತರಿಗೆಲ್ಲ ಅನ್ನಸಂತರ್ಪಣೆಯು ನಡೆಯಿತು. ಸದರಿ ಜಯಂತ್ಯುತ್ಸವದ ಖರ್ಚಿಗಾಗಿ ವರ್ಷಾಶನರೂಪದಿಂದ ಕಳಿಸಿಕೊಡುತ್ತಿರುವ ಮ|| ರಾ|| ಬನ್ನಿಕಲ್ಲ ಪಾಟೀಲ ಬಸವನಗೌಡರು ಆರು ರೂಪಾಯಿಗಳನ್ನೂ ಚಿತ್ರವಾಡಗಿ ಶ್ರೀಮಂತ ಗುಗ್ರಿ ಹುಚ್ಚಪ್ಪನವರು ಹತ್ತು ರೂಪಾಯಿಗಳನ್ನೂ ಕಳಿಸಿದ್ದರು. ಮೂಲಮತಸ್ಥಾಪಕರ ಜಯಂತಿಯ ಪೂಜಾಕಾರ್ಯದಲ್ಲಿ ನಿರತರಾದ ಹಾಗೂ ಧನರೂಪದಿಂದ ಸಹಾಯಮಾಡಿದ ಮತ್ತು ಸೇವೆಯಲ್ಲಿ ತತ್ಪರರಾದ ಯಾವತ್ತು ಮಹಾಶಯರಿಗೆ ಸದ್ಗುರು ರೇಣುಕನೂ ಹಾಗೂ ಸ್ಥಾನಾಧಿದೇವನಾದ ಶ್ರೀ ವೀರೇಶನೂ ಸಕಲಸನ್ಮಂಗಲವನ್ನನುಗ್ರಹಿಸಲಿ.

ಪ್ರತ್ಯಕ್ಷದರ್ಶಿ.

ಸೊಲ್ಲಾಪುರ.

ಇಲ್ಲಿಯ "ಶ್ರೀ ರೇಣುಕಾಚಾರ್ಯಸಂಘ" ದ ವತಿಯಿಂದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಇದೇ ಫಾಲ್ಗುಣ ಶುದ್ಧ ೧೩ ಶುಕ್ರವಾರ ದಿವಸ ಒಳ್ಳೇ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ಸಭಾಸ್ಥಾನವು ಶೃಂಗರಿಸಲ್ಪಟ್ಟು ಮಧ್ಯದಲ್ಲಿ ಆಚಾರ್ಯರ ಭಾವಪಟವು ಮಂಡಿಸಲ್ಪಟ್ಟಿತು. ಸಭೆಗೆ ಅನೇಕ ಜನ ಮುಖಂಡಜನರು ಆಗಮಿಸಿದ್ದರಿಂದ ಸಭಾಸ್ಥಾನವು ಶೋಭಾಯಮಾನವಾಗಿದ್ದಿತು. ಮೊದಲು ಆಚಾರ್ಯರ ಭಜನೆಯಾದ ಬಳಿಕ ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀಯುತ ಸಿದ್ಧರಾಮಪ್ಪ ಅಣ್ಣಾ ಧುಮ್ಮಾ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ಜರುಗಿತು. ಸಭೆಯಲ್ಲಿ ಆಚಾರ್ಯರ ವಿಷಯವಾಗಿ ಶ್ರೀ|| ಮಹಾಲಿಂಗಪ್ಪ ಅಂಬಲಿ, ಶ್ರೀ|| ರೇವಯ್ಯಾಸ್ವಾಮಿ ಹೊನಸಳಕರ ಶ್ರೀ|| ಬಸಲಿಂಗಶಾಸ್ತ್ರೀಪುರಾಣೀಕ ಶ್ರೀ|| ಪಂಚಾಕ್ಷರಿಗವಾಯಿ ಶ್ರೀ|| ಮಲ್ಲಿಕಾರ್ಜುನಶಾಸ್ತ್ರಿ ಮಣ್ಣೂರ ಮುಂತಾದವರ ವಿಚಾರ ಪರಿಪೂರ್ಣವಾದ ಭಾಷಣಗಳಾದವು. ಅನಂತರ ಅಧ್ಯಕ್ಷರ ಸಮಾರೋಪಭಾಷಣವಾದ ಬಳಿಕ ಅಧ್ಯಕ್ಷರಿಗೂ, ಸಭಿಕರಿಗೂ ಹಾರತುರಾಯಿಗಳು ಸಮರ್ಪಿಸಲ್ಪಟ್ಟವು. ಆ ಮೇಲೆ ಇಲ್ಲಿಯ ಶ್ರೀಯುತ ಮಹಾಲಿಂಗಪ್ಪ ಅಂಬಲಿ ಇವರಿಂದ ಶ್ರೀ ರೇಣುಕಾಚಾರ್ಯ ಸಂಘದ ಪೋಷಣಕ್ಕಾಗಿ ೨ ರೂ. ಗಳು ಸಮರ್ಪಿಸಲ್ಪಟ್ಟವು. ಆ ಮೇಲೆ ಮಂಗಳವಾದಬಳಿಕ ಆಚಾರ್ಯರ ಜಯಘೋಷದೊಡನೆ ಸಭೆಯ ಕೆಲಸವು ಸಮಾಪ್ತಿಗೊಂಡಿತು.

ಶ್ರೀ ರೇಣುಕಾಚಾರ್ಯಸಂಘ ಸೊಲ್ಲಾಪುರ.

ದಿಗ್ಗಾವಿ.

ಜಗನ್ನಿಯಾಮಕನಾದ ಈಶ್ವರನ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಪ್ರಸಿದ್ಧವಾದ ಶ್ರೀ ಕೊಲ್ಲೀಪಾಕಿ ಸೋಮೇಶ್ವರ ಲಿಂಗದಿಂದ ಅವತಾರಮಂ ತಾಳಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪರಮಪವಿತ್ರವಾದ ಶುಭದಿವಸವು ಇದೇ ಅಂಗೀರಸ ನಾಮಸಂವತ್ಸರ ಫಾಲ್ಗುಣ ಶು|| ೧೩ ಗುರುವಾರ ತಾ|| 10-3-33 ಕ್ಕೆ ಪ್ರಾಪ್ತವಾಗಿದೆ. ಆದರೆ ಸನಾತನ ಧರ್ಮಾವಲಂಬಿಗಳಾದ ವೀರಶೈವರೆಲ್ಲರು ತಮ್ಮ ತಮ್ಮ ಗ್ರಾಮಗಳಲ್ಲಿ ಈ ಮಂಗಲಕಾರ್ಯವನ್ನು ಮಾಡುವಂತೆ ಶ್ರೀ ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯ ಹಿರೇಮಠ ಇವರ ಹೇಳಿಕೆಯಂತೆ ಸದರಿ ಬೃಹನ್ಮಠದಲ್ಲಿ ಪ್ರಾತಃಕಾಲಕ್ಕೆ ಆಚಾರ್ಯರ ವಿಗ್ರಹಕ್ಕೆ ಶ್ರೀಗಳ ನೇತೃತ್ವದಕೆಳಗೆ ಷೋಡಶೋಪಚಾರ ಪೂಜಾನುಷ್ಠಾನ ಮತ್ತು ಸ್ಥಲಪರಸ್ಥಲದಿಂದ ಬಂದಿರತಕ್ಕ ಭಕ್ತಮಾಹೇಶ್ವರರಿಗೆ ಮೃಷ್ಟಾನ್ನಭೋಜನದಿಂದ ಸಂತೋಷಗೊಳಿಸಲ್ಪಟಿತು. ಸಾಯಂಕಾಲ ಎಂಟುಘಂಟೆಗೆ ಪಂಚಾಚಾರ್ಯರ ಸೇವಾಸಂಘದವರಿಂದ ಭಜನೆಯುಪ್ರಾರಂಭವಾಯಿತು. ಶ್ರೋತೃಗಳು ರೇಣುಕರ ಅದ್ಭುತಲೀಲೆಗಳಿಂದ ಕೂಡಿದ ಸುಶ್ರಾವ್ಯವಾದ ಪದಗಳನ್ನು ಕೇಳುತ್ತಲೂ ಮಧ್ಯೆಮಧ್ಯೆ ಜಯಜಯಕಾರಧ್ವನಿಯನ್ನುಮಾಡುತ್ತಲೂ ಇದ್ದರು. ಅನಂತರ ಸಭಿಕರಿಗೆ ಶ್ರೀಗಳು ತಮ್ಮ ಅಮೃತವಾಣಿಯಿಂದ (ಶಿವೇಕೃದ್ಧೇಗುರುಸ್ತ್ರಾತಾ ಗುರೌಕೃದ್ಧೇನಕಶ್ಚನ ತಸ್ಮಾದಿಷ್ಟಂ ಗುರೋಃಕಾರ್ಯಂಕಾಯೇ ಮನಸಾಗಿರಾ) ಎಂಬಂತೆ ಗುರುವಿಗಿಂತಲೂ ಅಧಿಕವಾದವನು ಬೇರೆ ಯಾವದೂ ಇಲ್ಲ. ಆದಕಾರಣ ಹಗಲಿರಳು ಪ್ರತಿಯೊಬ್ಬ ಮಾನವನೂ ಗುರುಧ್ಯಾನಾಸಕ್ತನಾಗಿರದೆ ಹೋದರೆ ಆಡಿನ ಕೊರಳೊಳಗಿರುವ ಮೊಲೆಯಂತೆ ಜನ್ಮವ್ಯರ್ಥಮಾಡಿಕೊಳ್ಳದೆ ಗುರುಭಕ್ತಿ, ದೈವಭಕ್ತಿ ಮಾತಾಪಿತೃಭಕ್ತಿಗಳಿಂದ ಜನ್ಮಸಾರ್ಥಕಮಾಡಿಕೊಳ್ಳಬೇಕೆಂದು ಸರ್ವರಿಗೆ ಸಂತೋಷವಾಗುವಹಾಗೆ ತಿಳಿಸಿದರು. ಅನಂತರ ಶ್ರೀಯುತ ರಾಮರಾವ ಪೋಲೀಸಪಾಟೀಲ ಕಲಕಂಭ ಮ|| ರಾ|| ಸಂಗನಗೌಡ ಪೋಲೀಸ ಅಳ್ಳಿ, ಮ|| ಮಲ್ಲಪ್ಪಣ್ಣಾ ಎಡಗಲ್ಲ, ಸಾತೀನ ಸಾಂತನೂರು ಮತ್ತು ಸ್ವಗ್ರಾಮದ ಮಾಲಿಪೋಲೀಸಪಾಟೀಲ ಮೊದಲಾದ ಮಂಡಳಿಗೆಲ್ಲಾ ಆಶೀರ್ವಾದಮಾಡಿದನಂತರ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ, ಷಣ್ಮುಖಪ್ಪ, ದಿಗ್ಗಾವಿ.

ಕಿರಸೂರು.

ಯಾವ ಭಗವತ್ಪಾದರು ಜಗದಾದಿಯಲ್ಲಿ ಜಗದೀಶನ ಮುಖದಿಂದುದಯಿಸಿ ವೇದಾಗಮೋಪನಿಷತ್ಪ್ರತಿಪಾದಿತವಾದ ವೀರಶೈವ ಮತವನ್ನು ಸ್ಥಾಪಿಸಿ ಚಿರಸ್ಮರಣೀಯರಾಗಿರುವರೋ ಅಂಥ ಗುರುಪುಂಗವರ ಸ್ಮರಣೆಯನ್ನು ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾದ್ದರಿಂದ ಬಾಗಲಕೋಟೆ ತಾಲೂಕಿಗೆ ಸೇರಿದ ಕಿರಸೂರುಗ್ರಾಮದಲ್ಲಿ ಇಲ್ಲಿಯ ಬೃಹನ್ಮಠಾಧ್ಯಕ್ಷರಾದ ಪಟ್ಟದಸ್ವಾಮಿಗಳ ಆಜ್ಞಾನುಸಾರ ಪ್ರಮುಖರೆಲ್ಲರೂ ಕೂಡಿ ಈ ಪೂಜ್ಯಪಾದರ ಜಯಂತಿಮಹೋತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ನೆರೆಯಿಸಬೇಕೆಂದು ಮೊದಲೇ ನಿಶ್ಚಯಿಸಿದ ಪ್ರಕಾರ ತಾ|| ೨೨-೨-೩೩ ನೆಯ ಬುಧವಾರದಿಂದ ತಾ|| ೨೪-೨-೩೩ ನೆಯ ಶುಕ್ರವಾರ ಪರ್ಯಂತ ಸಮಸ್ತರೂ ಕೃಷಿಕರ್ಮಾದಿಗಳಿಗೆ ಹೋಗದೆ ಈ ದಿವಸಗಳನ್ನು ದೊಡ್ಡಹಬ್ಬದಂತೆ ಆಚರಿಸಬೇಕೆಂದೂ ಮತ್ತು ಪುರವನ್ನು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಶೃಂಗರಿಸಬೇಕೆಂದೂ ಡಂಗುರವನ್ನು ಸಾರಿದ್ದರಿಂದ ಸಮಸ್ತ ಪುರಜನರು ಪುರವನ್ನು ಅಲಂಕರಿಸುವದರಲ್ಲಿಯೇ ಲೀನರಾಗಿ ಎಲ್ಲಿ ನೋಡಿದಲ್ಲಿ ಜಗದಾಚಾರ್ಯರ ಮತ್ತು ಬೃಹನ್ಮಠಾಧೀಶರ ಜಯಘೋಷವೇ ಕೇಳುತ್ತಿತ್ತು. ತಾರೀಖು ೨೨-೨-೩೩ ನೆಯ ಬುಧವಾರ ಸಾಯಂಕಾಲ ೫ ಘಂಟೆಗೆ ಮ|| ರಾ|| ಲಿಂಗನಗೌಡ ಮುದಿಗೌಡ ಪಾಟೀಲ ಇವರ ಗೃಹದಲ್ಲಿ ಸ್ಥಾಪಿಸಲ್ಪಟ್ಟ ದಿವ್ಯಸಿಂಹಾಸನದಲ್ಲಿರಿಸಿದ ತಮ್ಮ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನು ಬಹುಸುಂದರವಾದ ಆಂದೋಲಿಕೆಯಲ್ಲಿರಿಸಿ ವಿಶೇಷವಾದ ವೈಭವದೊಡನೆ ಬೃಹನ್ಮಠಕ್ಕೆ ತಲ್ಪಿಸಿದನಂತರ ಬುಧವಾರ ಸಾಯಂಕಾಲ ೭ ಘಂಟೆಯಿಂದ ೧೦ ಘಂಟೆಯವರೆಗೆ ರುದ್ರಾಭಿಷೇಕವು (ಶ್ರೀಗಳವರ) ಪಾದಪೂಜೆಯೂ ಜರುಗಿ ಅನಂತರ ೧೧ ಘಂಟೆಗೆ ಮ|| ರಾ|| ಭೀಮರಾವ ಶ್ರೀನಿವಾಸರಾವ ಕುಲಕರ್ಣಿ ಇವರ ಅಧ್ಯಕ್ಷತೆಯಕೆಳಗೆ ಪ್ರಚಂಡ ಸಭೆಯು ಸೇರಿ ಪ್ರಥಮದಲ್ಲಿ ಸುವರ್ಣಮಯ ಆಭರಣಗಳಿಂದ ಅಲಂಕೃತವಾದ ತೊಟ್ಟಿಲಲ್ಲಿ ಶ್ರೀ ಜಗದಾಚಾರ್ಯರ ಭಾವಚಿತ್ರ ಇರಿಸಿ ಪೂಜ್ಯಪಾದರ ಜನ್ಮೋತ್ಸವವನ್ನು ನಡೆಯಿಸಿದರು. ಅನಂತರ ಸಣ್ಣಬಾಲಕರಿಂದ ಜಯಂತಿಯನ್ನು ಏಕೆಮಾಡಬೇಕು. ಎಂಬ ವಿಷಯದಮೇಲೆ ಸಂವಾದಗಳು ಸುಶ್ರಾವ್ಯವಾಗಿ ಜರುಗಿದಮೇಲೆ ಮ|| ರಾ|| ಶಿವನಗೌಡ ಪಾಟೀಲ ಇವರು ಶಿಕ್ಷಣದಮೇಲೆ ಭಾಷಣಮಾಡಿದರು. ಜಯಂತಿಯ ಮಹೋತ್ಸವದ ಮಹತ್ವ ಮತ್ತು ಬ್ರಹ್ಮಚರ್ಯ ಎಂಬೆರಡು ವಿಷಯಗಳಮೇಲೆ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಇವರು ಸರ್ವರಿಗೂ ಹೃದಯಂಗಮವಾಗುವಂತೆ ಅಸ್ಖಲಿತವಾಣಿಯಿಂದ ಆಜ್ಞಾಪಿಸಿದರು. ಅನಂತರ ಅಧ್ಯಕ್ಷರು ಸಮಯೋಚಿತ ಭಾಷಣಮಾಡಿದರು. ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆಯೂ, ಶ್ರೀಗಳವರ ಜಯಘೋಷದೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟ ಮೇಲೆ ಪ್ರಾತಃಕಾಲ ೬ ಘಂಟೆಯವರೆಗೂ ಜಗದಾಚಾರ್ಯರ ಭಜನೆಯು ಅಖಂಡಿತವಾಗಿ ನಡೆದು ತಾ|| ೨೩-೨-೩೩ ಗುರುವಾರ ಪ್ರಾತಃಕಾಲ ೭ ಘಂಟೆಗೆ ಶ್ರೀ ಜಗದಾಚಾರ್ಯರ ಆಂದೋಲನೋತ್ಸವವು ಬಹುವೈಭವದೊಡನೆ ಬೃಹನ್ಮಠದಿಂದ ಹೊರಟು ಅನೇಕ ವಾದ್ಯವಿಶೇಷಗಳ ಪ್ರತಿಧ್ವನಿಯಿಂದ ನಗರವೆಲ್ಲವೂ ತುಂಬಿಹೋಗಿತ್ತು. ಈ ಮಹೋತ್ಸವಕ್ಕೆ ಪರಸ್ಥಲದ ಜನರು ನಾಲ್ಕೈದುನೂರರವರೆಗೂ ಕೂಡಿದ್ದರು. ಅಲ್ಲಲ್ಲಿ ಮಂಗಲಾರತಿಗಳಿಂದಲೂ ಪುಷ್ಪಮಾಲಿಕೆಗಳ ಅರ್ಪಣದಿಂದಲೂ ಉತ್ಸವವು 'ನಭೂತೋ ನ ಭವಿಷ್ಯತಿ' ಎಂಬುಕ್ತಿಯಂತೆ ಜರುಗಿತೆಂದರೂ ಅತಿಶಯೋಕ್ತಿಯಾಗಲಾರದು. ಸರ್ವರೂ ಆನಂದತುಂದಿಲಹೃದಯರಾಗಿ ಉತ್ಸವವನ್ನು ಮಧ್ಯಾಹ್ನ ೧೨ ಘಂಟೆಗೆ ಬೃಹನ್ಮಠಕ್ಕೆ ತಲ್ಪಿಸಿದನಂತರ ಮಹಾಗಣಾರಾಧನೆಯು ರಾತ್ರಿ ೧೧ ಘಂಟೆಯವರೆಗೂ ನಡೆಯಿತು. ತಾ|| ೨೪-೨-೩೩ ನೆಯ ಶುಕ್ರವಾರ ಮ|| ರಾ|| ಬಾಪುರಾವ ಕುಲಕರ್ಣಿ ಇವರ ಅಧ್ಯಕ್ಷತೆಯಕೆಳಗೆ ಸಾರ್ವಜನಿಕಸಭೆಯು ನೆರೆದು ಕನ್ಯಾಶುಲ್ಕನಿಷೇಧ ಎಂಬ ವಿಷಯದಮೇಲೆ ಶ್ರೀ ಮುಂದಪ್ಪಾ ಬೆಳವಲ ಶ್ರೀ ಮಾನಪ್ಪ ಪಂಚಾಳ ಶ್ರೀ ನಾಗಪ್ಪ ಹೂಗಾರ ಶ್ರೀ ಸಿದ್ದಪ್ಪ ಕಂಕಣಮೇಲ ಈ ನಾಲ್ವರೂ ಸರಸವಾಗಿ ಭಾಷಣಮಾಡಿದರು. ಪ್ರಾಪಂಚಿಕರ ಕರ್ತವ್ಯವೆಂಬ ವಿಷಯದ ಮೇಲೆ ಶ್ರೀ ಬಸಯ್ಯ ಬಸನಾಳ ಇವರು ಚೆನ್ನಾಗಿ ತಿಳಿಸಿ ಹೇಳಿದರು. ಸಮಾಜಸುಧಾರಣೆ ಮತ್ತು ಪಾತಿವ್ರತ್ಯ ಎಂಬ ವಿಷಯದ ಮೇಲೆ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಸರ್ವರಿಗೂ ಬೋಧವಾಗುವಂತೆ ಆಜ್ಞಾಪಿಸಿದರು. ಆ ಮೇಲೆ ಅಧ್ಯಕ್ಷಮಹಾಶಯರು ಸಮಯೋಚಿತ ಭಾಷಣಮಾಡಿ ಮನುಷ್ಯರ ಕರ್ತವ್ಯದ ಮೇಲೆ ಗಂಭೀರವಾಗಿ ಭಾಷಣವಮಾಡಿದಮೇಲೆ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಶ್ರೀ ಸಿದ್ಧಮಲ್ಲಿಕಾರ್ಜುನ ಮಹಾಶಿವಾಚಾರ್ಯ ಮಹಾರಾಜಕಿಜಯ ಎಂಬ ಘರ್ಜನೆಯಿಂದ ಸಭೆಯು ವಿಸರ್ಜಿಸಿತು.

ಆರ್. ಸಿ. ರಿಬಂಗಾಡಿ.

ದಾವಣಗೆರೆ.

ಈ ಪಟ್ಟಣದ ವೀರಶೈವಮಹಾಜನರು ಈ ಮೊದಲೆ ನಿಶ್ಚಯಿಸಿದ ಪ್ರಕಾರ ತಾ|| ೧೦-೩-೩೩ ನೇ ಪ್ರಾತಃಕಾಲ ೫ ಘಂಟೆಯಿಂದ ೬ ಘಂಟೆವರೆಗೂ ವೇದೋಕ್ತವಾಗಿ ಶ್ರೀ ಸ್ವಾಮಿಗೆ ಪೂಜಾಕಾರ್ಯವು ನಡೆಸಲ್ಪಟ್ಟಿತು. ಅನಂತರದಲ್ಲಿ ಪುಷ್ಪಹಾರಗಳಿಂದ ಅಲಂಕೃತವಾದ ಆಂದೋಳಿಕೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಫೋಟೋವನ್ನು ಇರಿಸಿ ಮತ್ತು ಅಫ್ತಾಗಿರಿ ಭೂಛತ್ರದೊಡನೆ ಶ್ವೇತಛತ್ರಿ ಉಭಯ ಚಾಮರ ಮೊದಲಾದ ಬಿರುದಾವಳಿಗಳಿಂದಲೂ ಬಾಜಾಭಜಂತ್ರಿ ಮೊದಲಾದ ವಾದ್ಯಗಳಿಂದಲೂ ಮಂಜುಳವಾದ ಆಚಾರ್ಯರ ಸ್ತೋತ್ರಗಳಿಂದಲೂ ಟೌನಿನ ಮುಖ್ಯವಾದ ರಾಜಬೀದಿಗಳಲ್ಲಿ ಅಲ್ಲಲ್ಲಿಗೆ ಗುರುಭಕ್ತರಿಂದ ಒಪ್ಪಿಸಲ್ಪಡುತ್ತಲಿರುವ ಫಲ ಕರ್ಪೂರಾದಿಗಳನ್ನು ಸ್ವೀಕರಿಸುತ್ತ ಉತ್ಸವವು ೧೦ ಘಂಟೆಗೆ ಸರಿಯಾಗಿ ವೇ|| ಹಿರೇಮಠದ ಮಹಾಲಿಂಗಯ್ಯನವರ ಮಠಕ್ಕೆ ತಲ್ಪಿತು. ಆ ಮೇಲೆ ಬಂದಿದ್ದ ಯಾವತ್ತು ಜನರು ಉಪಾಹಾರದಿಂದ ಸತ್ಕರಿಸಲ್ಪಟ್ಟರು. ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಘೋಷವು ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾದ ಬಳಿಕ ಈ ಮತಸ್ಥಾಪನಾಚಾರ್ಯ ಜಗದ್ಗುರುಗಳವರ ಜಯಂತಿಯನ್ನು ನೆರವೇರಿಸುವ ಸುಯೋಗವು ಪ್ರಾಪ್ತವಾದುದರ ಜ್ಞಾಪಕಾರ್ಥವಾಗಿ ಶ್ರೀ ಪಂಚಾಚಾರ್ಯ ಪ್ರಭಾ ಪೋಷಣೆಗಾಗಿ ೧ ರೂಪಾಯಿಯನ್ನು ಯಜಮಾನ್ ಬೆಳ್ಳೂಡಿ ವೀರಪ್ಪನವರ ವಶಕ್ಕೆ ಒಪ್ಪಿಸಿ ತಮ್ಮ ನೈಜವಾದ ಗುರುಭಕ್ತಿಯನ್ನು ವ್ಯಕ್ತಗೊಳಿಸಿದರು. ಈ ಮಹೋತ್ಸವಕಾರ್ಯವು ಸುಲಲಿತವಾಗಿ ನಡೆಯುವಂತೆ ಶ್ರಮವನ್ನು ವಹಿಸಿ ಜನ್ಮಸಾರ್ಥಕ್ಯವನ್ನುಂಟುಮಾಡಿಕೊಂಡಿರುವ ವೇ|| ಹಿರೇಮಠದ ಬಸಪ್ಪಯ್ಯನವರ ಮಕ್ಕಳು ಷಡಕ್ಷರಯ್ಯಪ್ಪನವರಿಗೂ ಯಜಮಾನ್ ಬೆಳ್ಳೂಡಿ ವೀರಪ್ಪನವರಿಗೂ ಹಾಗೂ ಈ ಮಹೋತ್ಸವಕ್ಕಾಗಿ ಯಥಾಶಕ್ತಿಸಹಾಯಮಾಡಿ ಕಾರ್ಯಭಾಗಿಗಳಾಗಿ ತಮ್ಮ ಪವಿತ್ರಧರ್ಮವನ್ನು ಗುರುಸೇವಾದ್ವಾರಾ ತೋರಿಸಿ ಕೃತಾರ್ಥರಾಗಿರುವ ಇಲ್ಲಿನ ವೀರಶೈವ ಮಂಡಳಿಯವರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ದೀರ್ಘ ಆಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ಮಲೆಬೆನ್ನೂರು ಮಠದ ಹಾಲಸಿದ್ಧಪ್ಪಯ್ಯ,
ಮಂಡಿಮರ್ಚೆಂಟ್ ದಾವಣಗೆರೆ.

ರಾಣೀಬೆನ್ನೂರು.

ರಾಣೀಬೆನ್ನೂರು ಕುರುಬಗೇರಿಯಲ್ಲಿರುವ ಶ್ರೀ ಚರಂತಿ ಮಠದಲ್ಲಿ ಶ್ರೀ ಜಗದ್ಗುರು ಭಜನಾಸಂಘದವರೂ ಮತ್ತು ಓಣಿಯ ಪ್ರಮುಖಜನರೂ ಸೇರಿ ಇದೇ ಅಂಗಿರಸ ಸಂವತ್ಸರದ ಫಾಲ್ಗುಣ ಶುದ್ಧ ತ್ರಯೋದಶಿ ಶುಕ್ರವಾರ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಬಹುಸಂಭ್ರಮದಿಂದ ನಡೆಯಿಸಿದರು. ಫಾಲ್ಗುಣ ಶುದ್ಧ ದಶಮಿಯ ದಿವಸ ಶಕ್ತಿಪೂಜಾ ಏಕಾದಶಿ ದಿವಸ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ದ್ವಾದಶೀ ದಿವಸ ಭಜನೆಯು ತ್ರಯೋದಶಿ ದಿವಸ ಪ್ರಾತಃಕಾಲ ಅಗ್ನಿಪೂಜಾ ಮಧ್ಯಾಹ್ನ ಮಹಾಗಣಾರಾಧನೆ ಸಾಯಂಕಾಲ ರಥೋತ್ಸವ ಹೀಗೆ ಮೂರುನಾಲ್ಕು ದಿವಸಗಳವರೆಗೂ ಗುರುಜಯಂತಿಯ ಕಾರ್ಯವು ಜರಗಿತು. ಈ ಮಹೋತ್ಸವಕ್ಕೆ ಹುಬ್ಬಳ್ಳಿ ಧಾರವಾಡ ದಾವಣಗೇರಿ, ಬಂಕಾಪೂರ, ಕೋಡ, ಲಿಂಗದಹಳ್ಳಿ, ಮಲ್ಲೂರು, ಬ್ಯಾಡಗಿ, ಹಲಗೇರಿ ಮುಂತಾದ ಅನೇಕ ಊರುಗಳಿಂದ ಮಹಾಜನಗಳು ಆಗಮಿಸಿ ಈ ಜಯಂತಿಕಾರ್ಯದಲ್ಲಿ ಭಾಗಿಗಳಾಗಿದ್ದರು. ಶ್ರೀ ಮಠದಲ್ಲಿ ಮೂರು ದಿವಸಗಳವರಿವಿಗೂ ದಾಸೋಹವು ಉತ್ತಮರೀತಿಯಿಂದ ನಡೆಯುತ್ತಲೇ ಇತ್ತು. ಪರಮತಸ್ಥರಿಗೆ ಸೀದಾಸಾಮಗ್ರಿಯು ಒದಗಿಸಲ್ಪಡುತ್ತಿತ್ತು. ಜಗದಾಚಾರ್ಯರು ಈ ಸದ್ಭಕ್ತರಿಗೆಲ್ಲಾ ಸನ್ಮಂಗಲವನ್ನುಂಟುಮಾಡಲಿ.

ಓರ್ವ ಉತ್ಸವಭಾಗಿ.

ದಾವಣಗೆರೆ.

ದಾವಣಗೆರೆ ವೀರಶೈವ ಮಹಾಜನರು ಹಳೇಪೇಟೆ ಶ್ರೀ ಹಿರೇಮಠದಲ್ಲಿ ಪದ್ಧತಿಯಂತೆ ಕಳೆದ ೨೩ ನೇ ತಾರೀಖು ಬುಧವಾರ ಪ್ರಾತಃಕಾಲ ೬ ಘಂಟೆಯಿಂದ ೭ ಘಂಟೆಯ ವರೆಗೆ ಶ್ರೀ ಸ್ವಾಮಿಗೆ ಪೂಜೆಯಾಗಿ ಪ್ರಸಾದ ವಿನಿಯೋಗ ಆದನಂತರದಲ್ಲಿ ಶೃಂಗರಿಸಿದ ಪಂಚಕಲಶಯುಕ್ತವಾದ ಆಂದೋಳಿಕೆಯಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯರೂ ಹಾಗೂ ವಿಶ್ವಾರಾಧ್ಯರ ಭಾವಚಿತ್ರಗಳನ್ನು ಇರಿಸಿ ಅಪ್ತಗಿರಿಭೂಛತ್ರದೊಡನೆ ಉಭಯಚಾಮರ ಮೊದಲಾದ ಬಿರುದಾವಳಿಗಳಿಂದಲೂ, ಭಾಜಾಭಜಂತ್ರಿಯಿಂದಲೂ ಹಾಗೂ ಚಿಕ್ಕ ಬಾಲಕರ ಮಂಜುಳವಾದ ಭಜನೆಯಿಂದಲೂ ಟೌನಿನ ಮುಖ್ಯವಾದ ರಾಜಬೀದಿಗಳಲ್ಲೆಲ್ಲಾ ಉತ್ಸವಹೊರಟು ಮಧ್ಯಾಹ್ನ ೧೨ ಘಂಟೆಗೆ ಶ್ರೀ ಮಠವನ್ನು ತಲ್ಪಿತು. ತರುವಾಯ ಬಂದಿರತಕ್ಕ ಮಹಾಜನಗಳಿಗೆ ಪ್ರಸಾದವು ಕೊಡಲ್ಪಟ್ಟಿತು. ಆಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ವಿಸರ್ಜನೆಯಾಯಿತು.

ಶ್ರೀ ವೀರಶೈವಸಮಾಜ,
ಶೆಟ್ಟರು, ಯಜಮಾನರು, ದಾವಣಗೆರೆ.

ಹಾರ್ನಹಳ್ಳಿ.

ಶಿವಮೊಗ್ಗಾ ಜಿ|| ಹಾರನಹಳ್ಳಿಯಲ್ಲಿ ಶ್ರೀ ಗುರುಸಾರ್ವಭೌಮರ ಪರಮಪವಿತ್ರವಾದ ಜಯಂತಿಮಹೋತ್ಸವಗಳನ್ನು ನೆರವೇರಿಸುವ ಸುಯೋಗವು ಆಗಿಂದಾಗ್ಗೆ ಪ್ರಾಪ್ತಿಯಾಗುತ್ತಿರುವದು ನಮ್ಮಗಳ ಭಾಗ್ಯವಿಶೇಷವೆಂತಲೇ ಹೇಳಬೇಕಾಗಿದೆ. ಈ ಗ್ರಾಮದಲ್ಲಿ ಕಳೆದ ಫಾಲ್ಗುಣ ಶು|| ೧೩ ತಾ|| 10-3-33 ನೇ ಶುಕ್ರವಾರ ಈ ಗ್ರಾಮದ ಸಮಸ್ತವೀರಶೈವರೂ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಗಾಚಾರ್ಯರ ಜಯಂತಿಯನ್ನು ಉತ್ಸವ, ಕೀರ್ತನ, ಭಜನಾದಿಗಳಿಂದ ನೆರವೇರಿಸಿ, ಧನ್ಯರಾದರು.

ಓರ್ವ ಉತ್ಸವಭಾಗಿ.

ಯಾದಗಿರಿ.

ಶ್ರೀಮದ್ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯಭಗವತ್ಪಾದರ ಜಯಂತಿಮಹೋತ್ಸವವು ಪದ್ಧತಿಪ್ರಕಾರ ಇದೇ ಅಂಗಿರಸನಾಮ ಸಂವತ್ಸರದ ಫಾಲ್ಗುಣ ಶು|| ೧೩ ಶುಕ್ರವಾರ ತಾ|| ೧೦-೩-೩೩ ನೆಯ ದಿವಸ ಯಾದಗಿರಿ ಶಂಕರಸಂಸ್ಕೃತಕಾಲೇಜಿನಲ್ಲಿ ನೆರವೇರಿಸಲ್ಪಟ್ಟಿತು. ಉದಯದಲ್ಲಿ ಶ್ರೀ ಜಗದ್ಗುರುಗಳ ಭಾವಪಟಕ್ಕೆ ವಿಧ್ಯುಕ್ತವಾದ ಪೂಜೆಯು ಮಧ್ಯಾಹ್ನ ಸಂತರ್ಪಣೆಯು ಸಾಯಂಕಾಲ ಶ್ರೀ ಪಟ್ಟಾಧ್ಯಕ್ಷ ಸೋಮಶೇಖರಸ್ವಾಮಿ ಮಲಕೂಡ ಇವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಪ್ರೌಢವಿದ್ಯಾರ್ಥಿಗಳ ಭಾಷಣವಾದನಂತರ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಬೋಧಪ್ರದವಾಗಿ ಭಾಷಣಮಾಡಿದ ತರುವಾಯ ಅಧ್ಯಕ್ಷರ ಭಾಷಣವಾಗಿ ಜಗದ್ಗುರುಗಳ ಲಿಂಗೋದ್ಭವಮೂರ್ತಿಗೆ ಮಹಾಮಂಗಲಮಾಡಿ, ಜಗದ್ಗುರು ರೇಣುಕಾಚಾರ್ಯಮಹಾರಾಜಕೀ ಜಯ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ವೀರಭದ್ರಶರ್ಮಾ ಎಡ್ಯಾಮಿ,
ಶಂಕರಕಾಲೇಜ, ಯಾದಗಿರಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮೈಸೂರು ಪಟ್ಟಣದ ಆರೋಗ್ಯ.

ಈ ತಿಂಗಳು 8 ನೇ ತಾರೀಖಿನಲ್ಲಿ ಮಧುಮೂತ್ರದಿಂದ ಒಬ್ಬರು ಕ್ಷಯದಿಂದ ಒಬ್ಬರು ವಾರ್ಧಕ್ಯದಿಂದ ಒಬ್ಬರು ಜ್ವರದಿಂದ ಒಬ್ಬರು ಸೆಪ್ಟಿಕ್‌ಪಾಯಸನ್ ಎಂಬ ವಿಷದಿಂದ ಒಬ್ಬರು ಭೇದಿಯಿಂದ ಒಬ್ಬರು, ಮೂತ್ರರೋಗದಿಂದ ಒಬ್ಬರು, ಬೆಂಕಿಯಿಂದ ಒಬ್ಬರು ಒಟ್ಟು 8 ಜನಗಳು ಸತ್ತರು. ಅನೇಕ ರೋಗಗಳ ಹಾವಳಿಯು ಬಲವಾಗಿರುವುವು. ಅನೇಕ ಸ್ಥಳಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅನೇಕದೊಡ್ಡ ಮನುಷ್ಯರ ಬಂಗಲೆಗಳು ವರ್ಕ್‌ಷಾಪ್‌ಗಳು, ತೋಟಗಳು, ಇವುಗಳೇ ಮೊದಲಾದುವುಗಳಲ್ಲಿ ಬಹಳ ನೀರು ಪೋಲಾಗುವುದು. ಗೃಹಕೃತ್ಯಗಳಿಗೆ ನೀರು ಅನೇಕರಿಗೆ ದೊರೆಯುವುದಿಲ್ಲ. ತೋಟಗಳಿಗೂ ಬಚ್ಚಲುಗಳಿಗೂ, ಚಿಟ್ಟಗಳಿಗೂ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಾಗಿ ನೀರು ಸರಬರಾಜು ಆಗುವುದು. ಮುನಿಸಿಪಲ್ ನೌಕರರು ಹೆಚ್ಚು ಶ್ರದ್ಧೆಯಿಂದ ಕೆಲಸಮಾಡಬೇಕೆಂದು ಕೆಲವು ಜನ ಕೌನ್ಸಿಲರುಗಳು ಹೇಳಿದ್ದಕ್ಕೆ ಪ್ರೆಸಿಡೆಂಟರೇ ಮೊದಲಾದವರು ಅವರನ್ನು ಆಕ್ಷೇಪಿಸಿದರು. ಈ ನ್ಯೂನಾತಿರಿಕ್ತಗಳಿಗೆ ಯಾರು ಜವಾಬ್ದಾರರು ಎಂಬದಾಗಿ ಕೆಲವು ಜನಕೌನ್ಸಿಲರುಗಳು ಮತ್ತು ಕೆಲವು ಜನ ರೇಟ್ ಪೇಯರುಗಳು ಕೇಳುತ್ತಾರೆ. ಇದಕ್ಕೆ ಪ್ರೆಸಿಡೆಂಟರು ಹೆಲ್ತ್ ಆಫೀಸರು ಉತ್ತರವಾದಿಗಳೆಂದು ಕೆಲವರು ಅಭಿಪ್ರಾಯಪಡುತ್ತಾರೆ. ತಮ್ಮ ಗೋಳನ್ನು ಹೇಳಿಕೊಳ್ಳದೆ ಉದಾಸೀನರಾಗಿರುವ ರೇಟ್ ಪೇಯರುಗಳು ಇದಕ್ಕೆ ಉತ್ತರವಾದಿಗಳೆಂದು ಇತರರು ಹೇಳುತ್ತಾರೆ. ರೇಟ್‌ಪೇಯರುಗಳು ತಮ್ಮ ಹಕ್ಕುಬಾಧ್ಯತೆಗಳಿಗೋಸ್ಕರ ನಿರ್ದಾಕ್ಷಿಣ್ಯವಾಗಿ ಹೊಡೆದಾಡುವುದನ್ನು ಕಲಿತುಕೊಂಡಹೊರ್ತು ಕೌನ್ಸಿಲರುಗಳು ಮತ್ತು ಮುನಿಸಿಪಲ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುವುದಿಲ್ಲ.

ಎಂ. ವಿ.

ಹೊಸಯಡತೊರೆ ಹೆಂಗಸರ ಆಸ್ಪತ್ರೆಯ ಶಂಕುಸ್ಥಾಪನಾಮಹೋತ್ಸವಕ್ಕೆ ಶ್ರೀಮದ್ಯುವರಾಜರ ಆಗಮನ.

ಹೊಸಟೌನಿನಲ್ಲಿರುವ ಮ|| ರಾ|| ಸಾಹುಕಾರ್ ಬಳೆ ಶಿದ್ದಲಿಂಗಶೆಟ್ಟರವರು ತಮ್ಮ ತಾಯಿಯವರಾದ ಶ್ರೀಮತಿ ಪುಟ್ಟತಾಯಮ್ಮನವರ ಜ್ಞಾಪಕಾರ್ಥವಾಗಿ ಒಂದು ಹೆರಿಗೆ ಆಸ್ಪತ್ರೆಯನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುವುದಾಗಿ ಸಂಕಲ್ಪಮಾಡಿದ್ದ ಪ್ರಕಾರ ಶ್ರೀಮದ್ಯುವರಾಜರವರನ್ನು ಸದರಿ ಕಟ್ಟಡದ ಶಂಕುಸ್ಥಾಪನಾಮಹೋತ್ಸವಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದರ ಮೇಲೆ ಈ ಮಾಹೆ 16 ನೆಯ ಗುರುವಾರ ಸಾಯಂಕಾಲ 5½ ಘಂಟೆಗೆ ಶ್ರೀಮದ್ಯುವರಾಜರವರು ತಮ್ಮ ಪ್ರವೇಟ್‌ಸೆಕ್ರೆಟರಿಯವರು ಮತ್ತು ಡೆಪ್ಯುಟೀಕಮಿಷನರಸಾಹೇಬರೊಡಗೂಡಿ ಸದರಿ ಕಟ್ಟಡದ ಹತ್ತಿರಹಾಕಿದ ಸಭಾಮಂಟಪಕ್ಕೆ ದಯಮಾಡಿಸಿದರು. ಸ್ತ್ರೀ-ಪುರುಷರಾದಿಯಾಗಿ ಸಾವಿರಾರು ಜನರುಗಳು ಸೇರಿದ್ದರು. ಮಹಾಸ್ವಾಮಿಯವರು ಸಭಾಮಂಟಪಕ್ಕೆ ದಯಮಾಡಿ ಪೀಠವನ್ನು ಅಲಂಕರಿಸಿದ ಕೂಡಲೆ ಸರ್ವರೂ ಸಂತೋಷಭರಿತರಾಗಿ ಕರತಾಡನವನ್ನು ಮಾಡಿದರು. ಮ|| ರಾ|| ಸಾಹುಕಾರ್ ಬಳೆ ಶಿದ್ದಲಿಂಗಶೆಟ್ಟರವರು ಒಂದು ಅಡ್ರೆಸ್ಸನ್ನು ಓದಿ ಸುವರ್ಣಮಯವಾದ ಫ್ರೇಮಿನಲ್ಲಿಟ್ಟು ಸದರಿ ಅಡ್ರೆಸ್ಸನ್ನು ಓದಿ ಸರ್ವರಿಗೂ ಸಂತೋಷವುಂಟುಮಾಡಿದರು. ಅನಂತರ ಸದರಿ ಕಟ್ಟಡದ ಶಂಕುಸ್ಥಾಪನಾಮಹೋತ್ಸವವನ್ನು ಮಹಾಸ್ವಾಮಿಯವರು ತಮ್ಮ ಅಮೃತಹಸ್ತದಿಂದ ನೆರವೇರಿಸಿದರು. ಅನಂತರ ಮಹಾಸ್ವಾಮಿಯವರಿಗೆ ಮ|| ರಾ|| ಶೆಟ್ಟರು ಪುಷ್ಪಮಾಲಿಕೆಯನ್ನು ಒಪ್ಪಿಸಿದಮೇಲೆ ಸಭೆಯು ಮುಕ್ತಾಯವಾಯಿತು. ಅನಂತರ ಟ್ರಾವಲರ್ಸ್ ಬಂಗಲೆಯಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡನಂತರ ಹೊಸಪಟ್ಟಣವನ್ನು ಪರಾಂಬರಿಸಿ ಮೈಸೂರಿಗೆ ವಾಪಸು ದಯಮಾಡಿಸಿದರು. ಈ ಮಹೋತ್ಸವಕ್ಕೆ ಅನೇಕ ಸರ್ಕಾರಿ ಉದ್ಯೋಗಿಗಳೂ, ಲಾಯರುಗಳೂ, ಖಾಸಗಿ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ಸರ್ವರಿಗೂ ಫಲಹಾರ ಹೂವನ್ನು ಮ|| ರಾ|| ಶೆಟ್ಟರು ಒಪ್ಪಿಸಿದರು. ಈ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಸರ್ವರೂ ಸಂತೋಷಭರಿತರಾಗಿ ಮ|| ರಾ|| ಶಿದ್ದಲಿಂಗಶೆಟ್ಟರ ಗುಣಕಥನಮಾಡುತ್ತಾ ತೆರಳಿದರು.

ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ವಿಶ್ವಕರ್ಮ ಮಹಾಸಭೆ.

ಶ್ರವಣಬೆಳ್ಗೊಳದ ಶ್ರೀ|| ವೆಂಕಟಾಚಾರ್ಯಸ್ವಾಮಿಗಳ ಪುತ್ರರು, ಶ್ರೀಯುತ, ಎಸ್. ವಿ. ಗುರುಮೂರ್ತಿಆಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ, ತಾ 5, 6, 7, 8-3-1933 ನೇ ಬುಧದಿನಗಳಲ್ಲಿ ಚಿಕ್ಕಬಳ್ಳಾಪುರದಿಂದ 1½ ಮೈಲಿ ದೂರದಲ್ಲಿರುವ ಶ್ರೀ ಪಾಪಾಘ್ನಿಮಠದಲ್ಲಿ ಶ್ರೀ ವಿಶ್ವಕರ್ಮ ಗುರು, ಪಟ್ಟಾಭಿಷೇಕ ಮಹೋತ್ಸವ ನಿಶ್ಚಯ, ಶ್ರೀ ಕಾಳಿಕಾಂಬಾಕಮಟೇಶ್ವರೀ ದೇವಸ್ಥಾನದ ಅಭಿವೃದ್ಧಿವಿಚಾರ ವಗೈರೆ ವಿಶ್ವಕರ್ಮಮತಧರ್ಮಾಭಿವೃದ್ಧಿಗೆ ಸರಿಯಾದ ತೀರ್ಮಾನಗಳನ್ನು ಮಾಡಿ, ಶ್ರೀಮನ್ಮಹಾರಾಜರವರಿಗೂ, ಅವರ ಘನಸರ್ಕಾರದವರಿಗೂ ತಿಳುಹಿಸಿ, ಸನ್ಮಂಗಳವನ್ನುಂಟುಮಾಡಲು ಪ್ರಾರ್ಥಿಸುವ ಬಗ್ಗೆ ಮೀಟಿಂಗ್ ಏರ್ಪಡಿಸಿರುವುದರಿಂದ ಅಲ್ಲಲ್ಲಿರುವ ವಿಶ್ವಕರ್ಮಮಹಾಜನಗಳೆಲ್ಲರೂ ಸದರಿ ಮಹಾಕ್ಷೇತ್ರಕ್ಕೆ ದಯಮಾಡಿಸಿ, ಕುಲಗುರು ದೇವಕಾರ್ಯಗಳಿಗೆ ತಮ್ಮ ತನುಮನಧನಗಳಿಂದ ಸಂಪೂರ್ಣಸಹಾಯಮಾಡಿ, ಪುಣ್ಯಭಾಗಿಗಳಾಗಿ ಸದ್ಗತಿಯನ್ನು ಹೊಂದತಕ್ಕದ್ದೆಂದೂ ಮತ್ತು ಚಿಕ್ಕಬಳ್ಳಾಪುರದ ನಗರ್ತಪೇಟೆ 2239 ನೇ ನಂಬರ್ ಬಿಲ್ಡಿಂಗ್‌ನಲ್ಲಿ ಮೊಕ್ಕಾಂಮಾಡಿರುವ, ಮೇಲ್ಕಂಡ ವಿಶ್ವಕರ್ಮ ಮಹಾಸಭಾಧ್ಯಕ್ಷರಾದ ಶ್ರೀ ಎಸ್. ವಿ. ಗುರುಮೂರ್ತಿ ಆಚಾರ್ಯಸ್ವಾಮಿಗಳವರ ವಿಳಾಸಕ್ಕೆ ಈ ಗುರುಪೀಠಕ್ಕೆ ಅರ್ಹರಾದ ಬಾಲಬ್ರಹ್ಮಚಾರಿಗಳು ತಮ್ಮ ಭಾವಚಿತ್ರ (ಫೋಟೋ) ಗಳನ್ನು ತಾ|| 1-4-33 ನೆಯ ದಿವಸದೊಳಗಾಗಿ ಪೋಸ್ಟ್ ಅಕ್ನಾಲೆಡ್ಜ್‌ಮೆಂಟು ರಿಜಿಸ್ಟರ್ ಮೂಲಕ ಕಳುಹಿಸಿಕೊಡತಕ್ಕದ್ದು. ಇತರರ ಪಾಲಿಟ್ರಿಕಟಿಸಿಗಳನ್ನು ನಂಬಲಾಗುವುದಿಲ್ಲ. ಇತರ್ಯಾರಿಗೂ ಈ ಬಗ್ಗೆ ಒಂದು ಕಾಸನ್ನೂ ಸಹಾ ಕೊಡಲಾಗದು. ಎಲ್ಲಾ ವಿಚಾರಗಳನ್ನೂ ಸದರಿ ಅಧ್ಯಕ್ಷರಿಂದಲೇ ತಿಳಿದುಕೊಳ್ಳತಕ್ಕದ್ದು ಎಂಬದಾಗಿ ಶ್ರೀಗುರುಮಠ, ಶ್ರೀ ಕಾಳಿಕಾಂಬಾಕಮಟೇಶ್ವರೀ ದೇವಸ್ಥಾನದ ಮತ್ತು ಶ್ರೀ ವಿಶ್ವಕರ್ಮ ಮಹಾಸಭೆಯ ಮ್ಯಾನೇಜಿಂಗ್ ಕಮಿಟಿಯ ಮುಖ್ಯಾಧಿಕಾರಿಗಳ ಪರವಾಗಿ ಸದರಿ ಸೆಕ್ರೆಟರಿ ಸಿ. ವೆಂಕಟ್ರಾಯಪ್ಪಾಚಾರ್ಯರು ಈ ಮೂಲಕ ಎಲ್ಲರಿಗೂ ತಿಳುಹಿಸಲು ಅಪೇಕ್ಷಿಸುತ್ತಾರೆ.

ಸಿ. ವೆಂಕಟ್ರಾಯಪ್ಪಾಚಾರ್ಯ,
ಆನರರಿ ಸೆಕ್ರೆಟರಿ, ಶ್ರೀ ಪಾಪಾಘ್ನಿಮಠ.
ಶ್ರೀ ಕಾಳಿಕಾಂಬಾಕಮಟೇಶ್ವರಿ ದೇವಸ್ಥಾನ
ಮತ್ತು ಶ್ರೀ ವಿಶ್ವಕರ್ಮ ಮಹಾಸಭೆ,
ಕಂದವಾರಪೇಟೆ, ಚಿಕ್ಕಬಳ್ಳಾಪುರ.

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ
ಪಂಚಕಮಿಟಿಯಿಂದಾ

ಜಾಹೀರವಿನಂತಿ.

ಶ್ರೀ ಸ್ವಾಮಿಯ ರಥೋತ್ಸವವು ಪುರಾತನ ಪದ್ಧತಿಗನುಸರಿಸಿ ಶ್ರೀ ಮುಖನಾಮಸಂವತ್ಸರ ಚೈತ್ರ ಶುದ್ಧ ೫ ಶುಕ್ರವಾರ (ತಾ|| ೩೧-೩-೩೩ ನೇ) ದಿವಸ ಸಾಯಂಕಾಲ ೫ ಘಂಟೆಗೆ ನಡೆಯುವದು. ರಥೋತ್ಸವಕ್ಕೆ ಸಂಬಂಧಪಟ್ಟ ಪುರೋಕ್ತಕಾರ್ಯಗಳು ಹಾಗೂ ಶ್ರೀ ರುದ್ರಾಭಿಷೇಕವು ಚೈತ್ರ ಶುದ್ಧ ೧ ರಿಂದಾ ಶುದ್ಧ ೫ ರವರೆಗೆ ನಡೆಯುತ್ತದೆ. ಶುದ್ಧ ೬ ಶನಿವಾರ ಉದಯಕ್ಕೆ ಅಗ್ನಿಕುಂಡಮಹೋತ್ಸವವು ಶುದ್ಧ ೭ ರವಿವಾರ ಸಾಯಂಕಾಲಕ್ಕೆ ಗಿರಿಪ್ರದಕ್ಷಿಣೆಯೂ, ವಸಂತೋತ್ಸವೂ ನಡೆಯುತ್ತದೆ. ಇದೇ ದಿವಸ ಅಂದರೆ ತಾರೀಖು ೨-೪-೩೩ ನೇ ದಿವಸ ಉದಯ ೮ ಘಂಟೆಗೆ ಜನರಲ್ ಕಮಿಟಿಯು ಕೂಡುವದು. ಮತ್ತು ಈ ವರ್ಷ ಹೊಸದಾಗಿ ಶನಿವಾರ ಹಾಗೂ ರವಿವಾರ ಈ ಎರಡು ದಿವಸ ಕುಸ್ತಿ ಆಡಿಸುವ ಏರ್ಪಾಡುಮಾಡಿರುವದಲ್ಲದೆ ಕುಸ್ತಿ ಹುಡುಗರಿಗೆ ಅವರವರ ಯೋಗ್ಯತೆಗನುಸರಿಸಿ ಇನಾಮು ಕೊಡುವದರಲ್ಲಿ ಬರುವದು. ಕಾರಣ ಯಾವತ್ತು ಜನರು ದಯವಿಟ್ಟು ಆಗಮಿಸಬೇಕಾಗಿ ವಿನಂತಿ.

ಇಲ್ಲಿಗೆ ಬರತಕ್ಕ ಜನರು ಪಾಲಿಸೆತಕ್ಕ ನಿಯಮಗಳು.

(೧) ವ್ಯಾಪಾರಿ ಜನರು ಚಹಾದ ಅಂಗಡಿಯವರು ಮತ್ತು ನಾಟಕ ಕಂಪನಿಯವರು ಕಮಿಟಿಯವರ ಪರವಾನಗಿ ಶಿವಾಯ ಗುಡಾರ ಹೊಡಿಯಬಾರದು.

(೨) ಅಗ್ನಿಕುಂಡದಲ್ಲಿ ದೇವರನ್ನು ಧರಿಸಿದವರ ಶಿವಾಯ ಇತರರು ಹೋಗಬಾರದು. ಇತರರು ಹೋಗುವ ಸಂಕಲ್ಪವಿದ್ದಲ್ಲಿ ಒಂದು ರೂಪಾಯಿ ಕೊಟ್ಟು ಕಮಿಟಿಯವರಿಂದ ಮುನ್ನಾದಿವಸ ಟಿಕೀಟಪಡೆದು ಹೋಗಲುಬಹುದು.

(೩) ನದೀತೀರದಲ್ಲಿ ಮಲಮೂತ್ರ ವಿಸರ್ಜನೆ ಮಾಡಬಾರದು. ಜನವಟ್ಟಿಣೆಯನ್ನು ಬಿಟ್ಟು ೨ ಫರ್ಲಾಂಗು ದೂರ ಹೋಗತಕ್ಕದ್ದು.

(೪) ದನಗಳಿಗೆ ನೀರು ಕುಡಿಸುವದು ಮೈತೊಳೆಯುವದು ನದಿಯ ಮೇಲ್ಭಾಗದಲ್ಲಿ ಮಾಡಬಾರದು. ಅಗ್ನಿಕುಂಡದ ಕೆಳಭಾಗದಲ್ಲಿ (ಕಾಲುಹೊಳೆಗೆ) ದನಗಳನ್ನು ಒಯ್ಯತಕ್ಕದ್ದು.

(೫) ಅಗ್ನಿಕುಂಡದಲ್ಲಿ ಜನರು ತಾವು ನಿಂತಸ್ಥಳದಿಂದ ಕಾಯಿ ಒಗೆಯುತ್ತಿರುವದರಿಂದ ಜನರಿಗೆ ಅಪಾಯವಾಗುವ ಸಂಭವವದೆ. ಕಾರಣ ಆ ರೀತಿ ಯಾರೂ ಕಾಯಿ ಒಗೆಯಬಾರದು.

ಈ ಎಲ್ಲ ವಿಷಯಗಳನ್ನು ಸರ್ವರೂ ದಯವಿಟ್ಟು ಪಾಲಿಸಬೇಕು. ಕದಾಚಿತ್ ತದ್ವಿರುದ್ಧ ವರ್ತಿಸಿದವರನ್ನು ಪೋಲೀಸರ ತಾಬಾಮಾಡಲಾದೀತು.

ಸೂಚನೆ—ಈ ವರ್ಷ ಇಲ್ಲಿಗೆ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಗದಗ ಶ್ರೀ ದತ್ತಾತ್ರೇಯ ನಾಟಕ ಕಂಪನಿಯು ಬರತಕ್ಕದ್ದಿರುವದು.

ತಾರೀಖು ೧೦-೩-೩೩ ನೇ ಇಸ್ವಿ.

ಸರಪಂಚ,
ಫಕೀರಯ್ಯಾ ಬೆಳವಿಗಿ ಹಿರೇಮಠ
ಶಿಂಗಟಾಲೂರ.

ಪ್ರೆಸಿಡೆಂಟ,
S. V. Kubasad.

ಪಂಚಾಚಾರ್ಯ ಪ್ರಭಾ.

೧೯೩೩ನೇ ಮಾರ್ಚಿ ತಾ|| ೨೦ ನೇ ಸೋಮವಾರ.

ಧರ್ಮರಕ್ಷಣ.

ಈಗಿನ ನೂತನ ರಾಜಕೀಯಾಂಗಣದಲ್ಲಿ ನಿಂತು ಕೆಲಸಮಾಡುತ್ತಿರುವ ಕೆಲ ಪಟುಮತಿಗಳು ರಾಜಕೀಯ ಏಕೀಕರಣದಲ್ಲಿ ಕೆಲಸಮಾಡುತ್ತ ಅದಕ್ಕನುಗುಣವಾದ ಕಾರ್ಯವನ್ನು ಮಾಡಿ ಐಹಿಕ ಸೌಖ್ಯವನ್ನು ಹೊಂದುವದು ಕರ್ತವ್ಯವಾಗಿದ್ದರೂ, ಅದನ್ನು ಬಿಟ್ಟು ಕೇವಲ ಇಹಸುಖಸಾಧಕವಾದ ರಾಜಕೀಯ ಸುಧಾರಣೆಗೂ ಪರಸುಖಸಾಧಕವಾದ ಧರ್ಮಸುಧಾರಣೆಗೂ, ಯಾವವಿಧವಾದ ಸಂಬಂಧವಿಲ್ಲದಿದ್ದರೂ ಅವೆರಡಕ್ಕೂ ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು ಸೃಷ್ಟಿಕಾಲಾರಂಭದಿಂದ ಶ್ರುತಿಸ್ಮೃತಿಗಳಲ್ಲಿ ಸಿದ್ಧವಾಗಿ ಬಂದಿರುವ ಸನಾತನಧರ್ಮವನ್ನು ವಿನಿಮಯಗೊಳಿಸಬೇಕೆಂದು ಸನಾತನಧರ್ಮಿಗಳಮೇಲೆ ಹೋರಾಡುತ್ತಿರುವುದೊಂದು ಸಾಹಸವೇ ಸರಿ! ಆದರೆ "ಚೋದನಾಲಕ್ಷಣೋಽರ್ಥೋ ಧರ್ಮಃ" ಎಂದು ಜೈಮಿನ್ಯಾಚಾರ್ಯರು ಹೇಳಿರುವ ಸೂತ್ರಪ್ರಕಾರವಾಗಿ ಯಾವುದನ್ನು ಮಾಡಬೇಕೋ ಯಾವುದನ್ನು ಮಾಡಬಾರದೋ ಎಂಬುದನ್ನು ತಿಳಿಸಿಕೊಡುವುದೇ ಧರ್ಮವೆನಿಸುತ್ತದೆ. ಇದಕ್ಕನುಗುಣವಾಗಿ ಧರ್ಮಶಾಸ್ತ್ರವು. ಸನಾತನಧರ್ಮಾವಲಂಬಿಗಳನ್ನು ಕುರಿತು ಇದನ್ನು ಮಾಡಬೇಕು. ಇದನ್ನು ಮಾಡಬಾರದು. ಮಾಡಬಾರದುದನ್ನು ಮಾಡುವುದರಿಂದ ಆತ್ಮನು ಅಧೋಗತಿಗೀಡಾಗುವನು. ಮಾಡಬೇಕಾದುದನ್ನು ಮಾಡುವುದರಿಂದ ಆತ್ಮನು ಉದ್ಧಾರವಾಗುವನು. ಎಂದು ವಿಧಿನಿಷೇಧಗಳನ್ನು ಮಾಡಿರುವದು.

ಇಂಥ ಧರ್ಮತತ್ವಗಳನ್ನು ತಲೆಕೆಳಗುಮಾಡಲಿಚ್ಛಿಸಿ ಯಾವುದು ಧರ್ಮಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟಿರುವುದೋ ಅದನ್ನೇ ಮಾಡಬೇಕೆಂತಲೂ, ಯಾವುದು ವಿಧಿಸಲ್ಪಟ್ಟಿರುವುದೋ ಅದನ್ನು ಬಿಡಬೇಕೆಂತಲೂ ವಾದಿಸಹತ್ತಿರುತ್ತಾರೆ. ವರ್ಣಾಶ್ರಮಧರ್ಮಗಳುಂಟೆಂದು ಧರ್ಮಗ್ರಂಥಗಳು ಸಾರುತ್ತಿದ್ದರೆ ಇವರು ಇಲ್ಲವೆಂದು ಸಾರುತ್ತಿರುವರು. ಸ್ಪೃಶ್ಯಾಸ್ಪೃಶ್ಯಗಳುಂಟೆಂದು ಸಾರುತ್ತಿದ್ದರೆ, ಇವರು ಇಲ್ಲವೆಂದು ಸಾರುತ್ತಿರುವರು. ವಿಧವಾ ವಿವಾಹ ಪ್ರೌಢ ವಿವಾಹಾದಿಗಳನ್ನು ಧರ್ಮಶಾಸ್ತ್ರಗಳು ನಿಷೇಧಿಸುತ್ತಿದ್ದರೆ ಇವರು ಗೌರವಿಸುತ್ತಿರುವರು. ಮತ್ತು ಧರ್ಮವೆಂಬುದು ಯಾವಾಗಲೂ ಬದಲಾವಣೆಯನ್ನು ಪಡೆಯದೆ ಏಕರೂಪದಿಂದ ಇರುವುದೆಂದು ಹೇಳುತ್ತಿದ್ದರೆ ತಾವು ಬದಲಾವಣೆಯಾದಂತೆ ಧರ್ಮವು ಕಾಲಾನುಸಾರವಾಗಿ ಬದಲಾವಣೆಯಾಗಬಹುದೆಂದು ವಾದಿಸಹತ್ತಿರುತ್ತಾರೆ. ಧರ್ಮವು ಕಾಲಾನುಸಾರವಾಗಿ ಬದಲಾವಣೆ ಮಾಡುವುದಕ್ಕೆ ಬರುವುದಾಗಿದ್ದರೆ ಅದೆಂದಿಗೂ ಧರ್ಮವೆನಿಸಿಕೊಳ್ಳಲಾರದು. ಅಂಥ ಬದಲಾವಣೆಯಾಗುವ ಅಸ್ಥಿರವಾದ ಧರ್ಮದಿಂದ ಸ್ವರ್ಗಾದಿಸಿದ್ಧಿಗಳಾಗಲಿ ಮುಕ್ತಿಯಾಗಲಿ ಒಂದೂ ದೊರಿಯದೇ ಹೋಗಬೇಕಾದೀತು. ಮತ್ತು ಈ ಧರ್ಮನಿಬಂಧನೆಯು ಸೃಷ್ಟಿಸ್ಥಿತಿಕರ್ತನಾದ ಪರಮೇಶ್ವರನಿಂದುಂಟಾದುದರಿಂದ ಇದು ತ್ರಿಕಾಲಾಬಾಧಿತವಾಗಿರಬೇಕೇಹೊರತು ಅಧುನಿಕರ ಇಚ್ಛಾನುಗುಣವಾಗಿ ತಮ್ಮ ತಮ್ಮ ಸ್ವೇಚ್ಛಾವ್ಯವಹಾರಗಳ ಸೌಕರ್ಯಕ್ಕಾಗಿ ಇವರ ಜತೆಯಲ್ಲಿದ್ದು ಇವರು ಹೇಳಿದಂತೆ ಕೇಳಿ ಕುಣಿಯುವ ಸ್ವಭಾವವು ಅದಕ್ಕಿಲ್ಲ. ಯಾವುದು ಅಂಥ ಅಲ್ಪಜ್ಞರಾದ ಪುರುಷರಿಂದ ಮಾಡಲ್ಪಟ್ಟಿರುವುದೋ ಅದು ಒಂದು ಕಾಲದಲ್ಲಿ ನಾಶವಾಗಲೂ ಬಹುದು. ಅಥವಾ ಬದಲಾವಣೆಯಾಗಲೂ ಬಹುದು. ಈ ಧರ್ಮವು ವೇದಮೂಲಕವಾಗಿ ಈಶ್ವರಪ್ರಣೀತವಾದುದರಿಂದ ಎಂದೂ ವಿನಿಮಯಹೊಂದುವುದಿಲ್ಲ. ವೇದಶಾಸನವು ಭಗವಂತನಿಂದ ನಿರ್ಮಿತವಾದುದರಿಂದ ವೇದವಿಹಿತವಾದ ಧರ್ಮಕ್ಕೆ ಅಸ್ಥಿರತ್ವವನ್ನು ಹೇಳುವುದು ಮಹಾಪಾತಕರವೇ ಸರಿ. ಕೆಲವರು ಆ ಕಾಲದಲ್ಲಿ ಏನು ನಡವಳಿಕೆಯಿತ್ತೋ ಅದಕ್ಕನುಗುಣವಾಗಿ ಋಷಿಗಳು ಧರ್ಮಗ್ರಂಥವನ್ನು ಬರೆದರು. ಈಗಿನ ಕಾಲದ ನಡವಳಿಕೆಗಳೇ ಆಗ ಇದ್ದಲ್ಲಿ ಅದಕ್ಕನುಗುಣವಾಗಿಯೇ ಬರೆಯುತ್ತಿದ್ದರು. ಆದ್ದರಿಂದ ಈಗಿನಕಾಲಕ್ಕೆ ಸರಿಯಾಗಿ ಆ ಧರ್ಮಗಳನ್ನೆಲ್ಲಾ ತಿದ್ದಿಕೊಳ್ಳಬೇಕೆಂದು ಹೇಳುತ್ತಿರುವರು. ಹಾಗೆ ಧರ್ಮನಿಬಂಧನೆಗಳನ್ನು ಋಷಿಗಳು ಆಯಾಯ ಕಾಲಾನುಸಾರವಾಗಿ ರಚಿಸಿದ್ದರೆ ಅಂಥವುಗಳನ್ನು ಬೇಕಾದ ಹಾಗೆ ಬದಲಾಯಿಸಬಹುದಾಗಿತ್ತು. ಹಾಗೆ ಋಷಿಗಳು ಸ್ವತಃ ಅಂಥ ಧರ್ಮಗಳನ್ನು ಯಾವುದನ್ನೂ ಹೊಸದಾಗಿ ನಿರ್ಮಿಸಿಲ್ಲ. ಅಪೌರುಷೇಯವಾದ ಶ್ರುತೀದೇವಿಯು ಯಾವುದನ್ನು ಲೋಕಾನುಗ್ರಹಕ್ಕಾಗಿ ಅನುಗ್ರಹಿಸಿರುವಳೋ ಅದನ್ನೆಲ್ಲಾ ಮನ್ವಾದಿ ಋಷಿಗಳು ತಪಸ್ಸಿದ್ಧಿಯಿಂದ ತಿಳಿದು ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ತಮ್ಮ ವಾಕ್ಯಗಳಿಂದ ಬೋಧಿಸಿದರಲ್ಲದೆ ಸ್ವತಃ ತಾವೇ ಕಾಲಾನುಸಾರವಾಗಿ ಇದು ಧರ್ಮವು. ಇದು ಅಧರ್ಮವು ಎಂದು ರಚನೆಯನ್ನು ಮಾಡಲಿಲ್ಲ. ಹಾಗೆ ಅವರೇ ರಚನೆಮಾಡಿದ್ದ ಪಕ್ಷದಲ್ಲಿ ಈಗಿನವರೂ ಸಹ ತಮ್ಮ ತಮ್ಮ ಇಚ್ಛಾನುಸಾರವಾಗಿ ಅಧರ್ಮವನ್ನು ಧರ್ಮವನ್ನಾಗಿಯೂ ಧರ್ಮವನ್ನು ಅಧರ್ಮವನ್ನಾಗಿಯೂ ವಿನಿಮಯಮಾಡಬಹುದಾಗಿತ್ತು. ಮನುಷ್ಯಕೃತವಾದವುಗಳು ಹೇಗೆಬೇಕಾದರೂ ವಿನಿಮಯಮಾಡುವುದಕ್ಕೆ ಬಂದೇ ಬರುತ್ತದೆ ಆದ್ದರಿಂದ ಎಂದು ಈ ಜಗತ್ತು ಈಶ್ವರನಿಂದುತ್ಪನ್ನವಾಯಿತೋ ಅಂದೇ ಜಗದ್ಧಿತಾರ್ಥವಾಗಿ ಈಶ್ವರನು ಇಂಥ ಕೃತಿಗಳೇ ಅಧರ್ಮಗಳೆಂದೂ, ಇಂಥ ಕೃತಿಗಳೇ ಧರ್ಮಗಳೆಂದೂ ನಿರ್ಣಯಿಸಿರುತ್ತಾನೆ. ಹಾಗಿದ್ದರೂ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಯ ಬಲದಿಂದ ತಮಗೆ ಕಷ್ಟವಾಗಿ ತೋರಿಬರುವ ಮತ್ತು ವಿಹಾರಕ್ಕೆ ವಿರುದ್ಧವಾಗಿರುವ ಧರ್ಮನಿಯಮವನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಾ, ಮೇಲೆ ಮಾತ್ರ ನಾವು ಭಾರತೀಯರು, ನಾವು ವೇದಮತಾನುಯಾಯಿಗಳು, ನಾವು ಸನಾತನಧರ್ಮಿಗಳು ಎಂದು ವಿಜೃಂಭಿಸುತ್ತಿರುವದು ಸಖೇದಾಶ್ಚರ್ಯಜನಕವಾಗಿತೋರುತ್ತದೆ.

ಸ್ಮೃತಿಕಾರರು ವೇದಗಳಲ್ಲಿ ಅಸ್ಪಷ್ಟವಾಗಿಯೂ ಗೂಢವಾಗಿಯೂ ಇರುವ ಧರ್ಮಾಧರ್ಮ ರಹಸ್ಯವನ್ನೇ ಸಷ್ಟವಾಣಿಯಿಂದ ಹೇಳಿದ್ದಾರೆಂಬುವುದಕ್ಕೆ ಕವಿಕುಲತಿಲಕನಾದ ಕಾಳಿದಾಸನೆಂಬ ಮಹಾಕವಿಯು ಬರೆದ ರಘುವಂಶವೆಂಬ ಕಾವ್ಯದಲ್ಲಿ

ಶ್ರುತೇರಿವಾರ್ಥಂ ಸ್ಮೃತಿರನ್ವಗಚ್ಛತ್ ||

ಮನ್ವಾದಿಸ್ಮೃತಿಗಳ ಅರ್ಥವೆಲ್ಲವೂ ವೇದಾರ್ಥವನ್ನೇ ಹೇಗೆ ಅನುಸರಿಸುತ್ತದೆಯೋ ಹಾಗೆ ದಿಲೀಪ ಮಹಾರಾಜನು ನಂದಿನಿಯನ್ನು ಹಿಂಬಾಲಿಸಿದನು ಎಂದು ಹೇಳಿರುವುದನ್ನು ಪರಿಶೀಲಿಸಿದರೆ ಸ್ಮೃತಿಕಾರರು ಹೇಳಿರುವ ಧರ್ಮನಿಬಂಧನೆಗಳೆಲ್ಲವೂ ಅಪೌರುಷೇಯವಾದ ಶ್ರುತೀದೇವಿಯ ಅಭಿಪ್ರಾಯವಲ್ಲದೆ ಸ್ವಾಭಿಪ್ರಾಯವಲ್ಲವೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಮನುವು ಸಹ ಧರ್ಮಾಧರ್ಮ ಸ್ವರೂಪವನ್ನು ವಿವರಿಸಿ

ಧರ್ಮಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ||

ಧರ್ಮವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಶ್ರುತಿಯೇ ಪರಮಪ್ರಮಾಣವಾಗಿದೆಯೆಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾನಲ್ಲದೆ ನಮ್ಮಿಂದಲೇ ಮಾನವೋದ್ಧಾರಕ್ಕಾಗಿ ಕಾಲಾನುಗುಣವಾಗಿ ಧರ್ಮಗಳು ರಚಿಸಲ್ಪಟ್ಟಿರುವುವೆಂದು ಮನ್ವಾದಿಗಳಿಂದ ಎಲ್ಲಿಯೂ ಹೇಳಲ್ಪಟ್ಟಿಲ್ಲವು. ಆದ್ದರಿಂದ ಸೃಷ್ಟಿಕಾಲಾರಭ್ಯ ಪರಮೇಶ್ವರನಿಂದ ಯಾವುದು ಧರ್ಮವೆಂದೂ, ಯಾವುದು ಅಧರ್ಮವೆಂದೂ ವೇದದಲ್ಲಿ ವಿಭಾಗಮಾಡಲ್ಪಟ್ಟಿರುತ್ತವೆಯೋ ಅವುಗಳೆಲ್ಲವೂ ಇದ್ದಕ್ಕಿದ್ದ ಹಾಗೆಯೇ ಅಚ್ಚಳಿಯದಂತೆ ಇರಬೇಕಲ್ಲದೆ ವಿನಿಮಯ ಹೊಂದುವುದಿಲ್ಲವೆಂದು ತಿಳಿದುಕೊಂಡಿರುವುದೇ ವೇದಮತಾವಲಂಬಿಗಳ ದೃಢವಾದ ನಂಬಿಗೆಯಾಗಿರುತ್ತದೆ. ಆದರೆ ಕೆಲವರು ಈ ಧರ್ಮಾಧರ್ಮಗಳನ್ನು ವ್ಯತ್ಯಸ್ತವಾಗಿ ತಿಳಿದುಕೊಂಡಿದ್ದಾರೆ. ಕಾಮಾಲೆ ರೋಗಬಂದವನಿಗೆ ಶಂಖವು ಪೀತವರ್ಣವಾಗಿ ತೋರಿಬರುತ್ತಿದ್ದರೂ ಆ ಶಂಖದ ಧಾವಳ್ಯವೆಂಬ ನೈಜಗುಣವು ತ್ರಿಕಾಲಾಬಾಧಿತವೇ ಆಗಿರುವಂತೆ ಸಂಸರ್ಗದೋಷದಿಂದ ಧರ್ಮವು ಅಧರ್ಮವಾಗಿಯೂ ಅಧರ್ಮವು ಧರ್ಮವಾಗಿಯೂ ತೋರಿಬರುತ್ತಿದ್ದರೂ ಅವುಗಳ ಸ್ವಭಾವವು ಎಂದೂ ಬದಲಾವಣೆಯಾಗದೆ ಧರ್ಮವು ಪುಣ್ಯಫಲವನ್ನೂ, ಅಧರ್ಮವು ಪಾಪಫಲವನ್ನೂ ಕೊಡುವುದಕ್ಕೆ ಸಿದ್ಧವಾಗಿಯೇ ಇರುತ್ತದೆ. ಆ ಕಾಮಾಲೆರೋಗವು ಎಂದು ನಿವೃತ್ತಿಯಾಗುವುದೋ ಆಗ ಶಂಖವು ಶುಭ್ರವಾದುದೆಂಬ ನಿಶ್ಚಯಬುದ್ಧಿಯು ಹುಟ್ಟುವಂತೆ ಪಾಶ್ಚಾತ್ಯ ಸಂಸರ್ಗವು ಎಂದು ಬಿಟ್ಟುಹೋಗಿ ಆಸ್ತಿಕ್ಯಬುದ್ಧಿಯುಂಟಾಗುವುದೋ ಅಂದು ಈ ಧರ್ಮಾಧರ್ಮಗಳ ಯಥಾರ್ಥಜ್ಞಾನವುಂಟಾಗಿ, ಆತ್ಮನಾಶಕಾರಿಯೂ ಭ್ರಮಾತ್ಮಕವೂ ಆದ ಧರ್ಮಾಧರ್ಮಗಳ ವಿನಿಮಯಜ್ಞಾನವೂ ನಾಶಹೊಂದುವದು. ಆದ್ದರಿಂದ ಕರುಣಾಸಾಗರನಾದ ಪರಮೇಶ್ವರನಿಂದ ವಿಧಿಸಲ್ಪಟ್ಟಿರುವ ಚಿರಸ್ಥಾಯಿಗಳಾದ ಧರ್ಮಾಧರ್ಮಗಳ ವಿಷಯದಲ್ಲಿ ಸಂಭವಿಸುತ್ತಿರುವ ವೈಪರೀತ್ಯಜ್ಞಾನವು ನಷ್ಟವಾಗಿ ಯಥಾರ್ಥಜ್ಞಾನವನ್ನುಂಟುಮಾಡಲೆಂದು ಈಶ್ವರನನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

1933 ನೇ ಮಾರ್ಚಿ ಮಾಹೆಯಲ್ಲಿ ನಡೆಯತಕ್ಕ ಲೋವರ್‌ಸೆಕೆಂಡರಿ ಪರೀಕ್ಷೆಗೆ ದೊಡ್ಡಬಳ್ಳಾಪುರದ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ದೊಡ್ಡಬಳ್ಳಾಪುರದ ಘಣಾಂಕಪುರದಮಠದ. ವೇ|| ಬಸವಾರಾಧ್ಯ ಮಹಾಂತಪಾದರವರು ಪದ್ಧತಿಯಮೇರೆಗೆ ತಮ್ಮ ಮಠದಲ್ಲಿ ಭೋಜನಕ್ಕೆ ಏರ್ಪಡಿಸಿರುತ್ತಾರೆ.

ರಾಜಧಾನಿಯ ಹಳೇ ಅಗ್ರಹಾರದ ನಿವಾಸಿಗಳಾದ ಮ|| ರಾ|| ಪುಟ್ಟಣ್ಣನವರು ತಮ್ಮ ಪುತ್ರಿ ಹ|| ಕುಂ|| ಕೋ|| ಯಾದ ಚಿ|| ವೆಂಕಟಮ್ಮನನ್ನು ಮ|| ರಾ|| ನಂಜಪ್ಪನವರ ಪುತ್ರ ಚಿ|| ಶಂಭುಲಿಂಗಪ್ಪನಿಗೆ ಕೊಟ್ಟು ರಾಜಧಾನಿಯ ಶ್ರೀ ಕಪಿಲಮಲ್ಲಿಕಾರ್ಜುನಸ್ವಾಮಿಯ ಮಠದಲ್ಲಿ ಕಳೆದ ತಿಂಗಳು 27 ನೆಯ ತಾರೀಖು ಸೋಮವಾರ ದಿವಸ ಬಹು ವಿಜೃಂಭಣೆಯಿಂದ ಲಗ್ನಕಾರ್ಯವನ್ನು ನೆರವೇರಿಸಿದರು. ಬಂದ ಇಷ್ಟಮಿತ್ರರನ್ನು ಬಂಧುಬಾಂಧವರನ್ನು ವಿಶರಣೆಯಿಂದ ಸತ್ಕರಿಸಿದರು. ಈ ಮಹೋತ್ಸವ ಸಮಯದಲ್ಲಿ ಅರಮನೆ ಸಂಗೀತ ವಿದ್ವಾಂಸರಾದ ಸಂಗೀತರತ್ನ ಶ್ರೀ ವಾಸುದೇವಾಚಾರ್ಯರ ಸಂಗೀತವನ್ನು ಏರ್ಪಡಿಸಿ ರಾಜಧಾನಿಯಲ್ಲಿರುವ ಪುರಪ್ರಮುಖರನ್ನೂ, ವರ್ತಕರನ್ನೂ ವಿಶೇಷ ಗೌರವಗಳಿಂದ ಆದರಿಸಿದರು. ಈ ವಧೂವರರಿಗೆ ಉಮಾರಮಣನು ದೀರ್ಘಾಯುರಾರೋಗ್ಯಭಾಗ್ಯಗಳನ್ನಿತ್ತು ರಕ್ಷಿಸಲಿ.

ವರ್ತಮಾನಸಂಗ್ರಹ

ಕಳೆದವಾರ ಮುಂಬಯಿಯಲ್ಲಿ 358 ಜನರಿಗೆ ಸಿಡುಬುತಗಲಿ ಆ ಪೈಕಿ 186 ಜನರು ಮೃತಪಟ್ಟರು.

ದಂಡಿಗ್ರಾಮದಲ್ಲಿ ಸಂಪೂರ್ಣವಾಗಿ ಹಲ್ಲುಗಳು ಹುಟ್ಟಿರುವ ಒಂದು ಶಿಶುವು ಜನಿಸಿರುವದಂತೆ!

ಪ್ರೊಫೆಸರ್ ಬರ್ಗಿಯಸ್ ಎಂಬುವರು ಗರಗಸದ ಹೊಟ್ಟಿನಿಂದ ಸಕ್ಕರೆಯನ್ನು ತಯಾರುಮಾಡುವ ವಿಧಾನವನ್ನು ಕಂಡುಹಿಡಿದಿರುವರಂತೆ!

ಸ್ವೀಡನ್‌ದೇಶದ ಮಾರ್ಗಟಾ ಆಲ್ಸನ್ ಎಂಬ ನಟಿಯು 7,50,000 ರೂಪಾಯಿಗಳಿಗೆ ತನ್ನ ಕಣ್ಣುಗಳನ್ನು ಇನ್ಷ್ಯೂರ್ ಮಾಡಿಸಿರುವಳಂತೆ!

ದತಿಯಾಸಂಸ್ಥಾನದ ಮಹಾರಾಜರು ತಮ್ಮ ರಜತ ಮಹೋತ್ಸವದ ಸಂದರ್ಭದಲ್ಲಿ ರೈತರಿಗೆ 6 ಲಕ್ಷ ರೂಪಾಯಿಗಳ ಕಂದಾಯದ ರಿಮಿಷನ್ ಕೊಟ್ಟಿರುತ್ತಾರೆ.

ಬರೇಲಿಗ್ರಾಮದ ಒಬ್ಬ ಹುಡುಗಿಯು ತನ್ನನ್ನು 65 ವರ್ಷ ವಯಸ್ಸಿನ ಮುದುಕನಿಗೆ ಕೊಟ್ಟು ಮದುವೆಮಾಡಿದರೆಂಬ ಕಾರಣದಮೇಲೆ ಮೈಗೆ ಬೆಂಕಿಯನ್ನು ಹತ್ತಿಸಿಕೊಂಡು ಪ್ರಾಣಬಿಟ್ಟಳು.

ಪಂಜಾಬಿನ 3 ಜನ ಪೋಲೀಸ್ ಕಾನ್ಸ್ಟೆಬಲರು ಒಬ್ಬ ಭಿಕ್ಷುಕನ ಬಳಿಯಲ್ಲಿದ್ದ 150 ರೂಪಾಯಿಗಳನ್ನು ಅಪಹರಿಸಿ ಅವನನ್ನು ಹೊಡೆದರೆಂಬ ಕಾರಣದ ಮೇಲೆ ಪ್ರತಿಯೊಬ್ಬರೂ ಮೂರು ಮೂರು ವರ್ಷಗಳ ಕಠಿಣ ಸಜೆಗೆ ಗುರಿಯಾದರು.

ಪ್ಯಾರಿಸ್‌ನಗರದ ಒಬ್ಬಾನೊಬ್ಬ ವಿವಾಹಿತ ನಟಿಯು ತನ್ನ ಗಂಡನು ರಾತ್ರಿಯ ವೇಳೆಗಳಲ್ಲಿ ಬಹಳ ಗಟ್ಟಿಯಾಗಿ ಗೊರಕೆ ಹೊಡೆಯುವದರಿಂದ ತಮ್ಮ ವಿವಾಹ ವಿಚ್ಛೇದನಕ್ಕೆ ಅಪ್ಪಣೆಮಾಡಬೇಕೆಂದು ಕೋರ್ಟಿನಲ್ಲಿ ದಾವೆಯನ್ನು ತಂದಿರುವಳು!

ಪ್ರತಿಯೊಬ್ಬ ಮನುಷ್ಯನಿಗೂ 24 ಬೆನ್ನಿನ ಎಲಬುಗಳಿರುವುವು. ಆದರೆ ಉತ್ತರಧ್ರುವದಲ್ಲಿ ವಾಸಮಾಡುವ ಎಸ್ಕಿಮೋಜನರಲ್ಲಿ ಶೇಕಡಾ 16 ಜನಗಳಿಗೆ 25 ಮೂಳೆಗಳು ಬೆಳೆಯುವವಂತೆ! ಅದೂ ಗಂಡಸರಿಗೆ ಮಾತ್ರವೇ ವಿಶೇಷವಾಗಿ ಬೆಳೆಯುವವಂತೆ!

ಮೀರತ್ತಿನ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಕಳೆದ ಮಾರ್ಚಿ 13 ನೇ ತಾರೀಖಿನ ದಿವಸ ಒಂದು ಭಯಂಕರ ಕೃತ್ಯವು ನಡೆಯಿತು. ಸದರಿ ಹಳ್ಳಿಯ ವಾಸಸ್ಥನಾದ ಗೋಸ್ವೇನ್ ಎಂಬಾತನು ಎಲ್ಲಿಯೋ ಹೋಗಿದ್ದು ಹಿಂತಿರುಗಿ ಮನೆಗೆ ಬಂದು ನೋಡುವಾಗ್ಗೆ ಅವನ ಸಂಸಾರದ 7 ಜನರು ಕೊಲ್ಲಲ್ಪಟ್ಟಿದ್ದರು.

ಫ್ರಾನ್ಸ್‌ದೇಶಕ್ಕೆ ಸೇರಿದ ಛಾಟರೋಕ್ಸ್ ಎಂಬ ನಗರದ ಮೃಗಾಲಯದಲ್ಲಿ 'ಪ್ರಿನ್ಸ್' ಎಂಬ ಒಂದು ಸಿಂಹವಿರುವದು. ಈ ಸಿಂಹವು ತನ್ನನ್ನು ಕೂಡಿದ್ದ ಬೋನಿನ ಸಲಾಕಿಗಳನ್ನು ಕಚ್ಚಿ ಮೂರು ಹಲ್ಲುಗಳನ್ನು ಮುರಿದುಕೊಂಡಿತು. ದಂತವೈದ್ಯನೊಬ್ಬನು ಈಗ ಆ ಸಿಂಹಕ್ಕೆ 3 ಚಿನ್ನದ ಹಲ್ಲುಗಳನ್ನು ಮಾಡಿರುವನಂತೆ!

ಅಲಹಾಬಾದಿನ ಮಿ|| ರೀಗೋರನರ ಖೂನಿಯ ಮೊಖದ್ದಮೆಯಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಮಿ|| ರೀಗೋರನರ ಪತ್ನಿಯೂ ಮತ್ತು ಸ್ಮೋಕ್ರೇಸ್ಟನ್ನನೂ ಜ್ಯುಡಿಷಿಯಲ್ ಕಮಿಷನರ ಮುಂದೆ ಅಪ್ಪೀಲ್ ಮಾಡಿರುವಲ್ಲಿ, ಕಮಿಷನರು ಅಪರಾಧಿಗಳು ಇವರೇ ಎಂಬುದಕ್ಕೆ ಸಾಕಾದಷ್ಟು ರುಜುವಾತುಗಳಿಲ್ಲವೆಂದು ಭಾವಿಸಿ ಇಬ್ಬರನ್ನೂ ಬಿಡುಗಡೆ ಮಾಡಿದರು.

ದೆಹಲಿಯ ಖಾನ್‌ಬಹದ್ದೂರ್ ಅಬ್ದುಲ್‌ರಹೀಂ ಎಂಬುವರು ಭರತಖಂಡದ ಸೆಕ್ರೆಟರಿ ಆಫ್ ಸ್ಟೇಟ್‌ರವರ ಮೇಲೆ 15 ಕೋಟಿ ರೂಪಾಯಿಗಳಿಗೆ ಒಂದು ದಾವೆಯನ್ನು ತಂದಿರುವರು. ತಾವು ಮೊಗಲ್ ಚಕ್ರವರ್ತಿಗಳ ವಂಶೀಯರೆಂದೂ, ಶಿಪಾಯಿ ದಂಗೆಯ ಸಮಯದಲ್ಲಿ ತಮ್ಮ ಪೂರ್ವಜರ ಅನುಭವದಲ್ಲಿದ್ದ ಅಪಾರ ಜಮೀನುಗಳನ್ನು ಸರಕಾರದವರು ಜಫ್ತಮಾಡಿರುವರೆಂದೂ, ದಾವೆಯಲ್ಲಿ ನಮೂದಿಸಿರುತ್ತಾರೆ

ಅಮೇರಿಕೆಯ ಲೂಸಿಯಾನಾ ಎಂಬ ಪ್ರದೇಶದ ಹತ್ತಿರದಲ್ಲಿ 2460 ಅಡಿಗಳ ಕೆಳಗೆ ಒಂದು ವಿಚಿತ್ರಪ್ರಾಣಿಯ ಮೂಳೆಗಳು ದೊರಕಿರುವುವು. ಪ್ರಾಣಿಶಾಸ್ತ್ರಜ್ಞರು ಅದನ್ನು ಪರಿಶೋಧಿಸಿ, ಆ ಪ್ರಾಣಿಯು ಈಗ್ಗೆ ಸುಮಾರು 5,00,00,000 ವರ್ಷಗಳ ಪೂರ್ವದಲ್ಲಿ ವಾಸವಾಗಿತ್ತೆಂದೂ, ಅದನ್ನು ಅಲ್ಪಸ್ವಲ್ಪವಾದರೂ ಹೋಲುವಂಥ ಯಾವ ಪ್ರಾಣಿಯೂ ಈಗ ಭೂಮಿಯಲ್ಲಿಲ್ಲವೆಂದೂ ಅಭಿಪ್ರಾಯಪಟ್ಟಿರುವರು.

ಇಟಲಿ ದೇಶದ ಒಬ್ಬ ಇಂಜನಿಯರು 'ಕಾಸ್ಮಿಕ್ ರೇಸ್' ಎಂಬ ವಿಲಕ್ಷಣವಾದ ಕಿರಣಗಳನ್ನು ಶೇಖರಿಸುವ ಒಂದು ಹೊಸಯಂತ್ರವನ್ನು ನಿರ್ಮಿಸಿರುವನು! ಈ ಯಂತ್ರದ ಸಹಾಯದಿಂದ ಅವನು ಒಣಗಿಹೋದ ಮರದ ಎಲೆಗಳು ಪುನಃ ಯಥಾಸ್ಥಿತಿಗೆ ಬರುವಂತೆ ಮಾಡಿರುವನಂತೆ! ಈ ಕಿರಣಗಳ ಸಹಾಯದಿಂದ ಅಂತರಿಕ್ಷದಲ್ಲಿ ಹಾರಿಹೋಗುವ ವಿಮಾನಗಳನ್ನು ಕೆಡೆದು ನಿಲ್ಲಿಸಬಹುದಂತೆ! ಮತ್ತು ಅಪೇಕ್ಷೆಪಟ್ಟಾಗ ಮಳೆಯು ಹುಯ್ಯುವಂತೆ ಮಾಡಬಹುದಂತೆ!

ಇದೇ ಮಾರ್ಚಿ 14 ನೇ ತಾರೀಖಿನ ದಿವಸ ಮುಂಬಯಿಯ ಬಾಲಾರ್ಡ್ ಪಿಯರಿನಲ್ಲಿ ಜಹಜಿಗೆ ಟಪಾಲುಗಳನ್ನು ಸಾಗಿಸುತ್ತಿದ್ದ ಒಂದು ಮೋಟಾರುಲಾರಿಯು ಸಮುದ್ರದಲ್ಲಿ ಮುಗುಚಿ ಲಾರಿಯನ್ನು ನಡೆಯಿಸುವವನೂ, 3 ಜನ ಕೂಲಿಗಳೂ, 11 ಟಪಾಲ್ ಚೀಲಗಳೂ ಸಮುದ್ರಪಾಲಾದುವು. ಈ ಸಮಾಚಾರವು ತಿಳಿದ ಕೂಡಲೇ ಪೋರ್ಟಿನ ಸೂಪರಿಂಟೆಂಡೆಂಟರಾದ ಮಿ|| ಡಿಗ್ಸ್‌ರವರು ಬಂದು ಇಬ್ಬರು ಕೂಲಿಗಳನ್ನೂ ಡ್ರೈವರನ್ನೂ ನೀರಿನಿಂದ ಎತ್ತಿಸಿದರು. 8 ಟಪ್ಪಾಲುಚೀಲಗಳೂ ತೆಗೆಯಲ್ಪಟ್ಟವು.

ರುಮಾನಿಯಾ ದೇಶದ ಒಬ್ಬ ವಿದ್ಯಾರ್ಥಿಯು ಪ್ರಪಂಚದಲ್ಲಿ ಬೇಸರಹೊಂದಿ ಆತ್ಮಹತ್ಯಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಹೃದಯಕೋಶವಿರುವ ಭಾಗಕ್ಕೆ ಎರಡುಸಾರೆ ಗುಂಡುಗಳನ್ನು ಹೊಡೆದುಕೊಂಡು ಕೆಳಕ್ಕೆ ಬಿದ್ದನು. ಅಷ್ಟರಲ್ಲಿ ಯಾರೋ ಕೆಲವರು ಬಂದು ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಪರೀಕ್ಷಿಸಿದಾಗ ವಿದ್ಯಾರ್ಥಿಯು ಮೃತನಾಗಿರಲಿಲ್ಲ. ಆತನ ಹೃದಯಕೋಶವು ಎಲ್ಲರಿಗೂ ಇರುವಂತೆ ಎಡಭಾಗದಲ್ಲಿರದೆ ಬಲಭಾಗದಲ್ಲಿದ್ದುದರಿಂದ ಗುಂಡಿನ ಏಟು ಹೃದಯಕೋಶಕ್ಕೆ ತಗಲಿರಲಿಲ್ಲ!

ಇಂಗ್ಲೆಂಡಿನ ಸಿನಿಮಾವಿಷಯಗಳ ಸಂಬಂಧವಾದ 'ಕಿನಮೊಟೊಗ್ರಾಫ್ ವೀಕ್ಲಿ' ಎಂಬ ವಾರಪತ್ರಿಕಾಕರ್ತರು, ಇಂಗ್ಲೆಂಡಿನಲ್ಲಿ ಪ್ರತಿವಾರವೂ 2,40,00,000 ಜನರು ಸಿನಿಮಾಗಳನ್ನು ನೋಡಲು ಹೋಗುವರೆಂದೂ, ಇದರಿಂದ ವರ್ಷವೊಂದಕ್ಕೆ 61,50,00,000 ರೂಪಾಯಿಗಳ ಉತ್ಪತ್ತಿಯಾಗುವದೆಂದೂ, ಇದರಲ್ಲಿ 10,50,00,000 ರೂಪಾಯಿಗಳು ತೆರಿಗೆಯರೂಪದಲ್ಲಿ ಸರಕಾರಕ್ಕೂ, 16,50,00,000 ರೂಪಾಯಿಗಳು ಚಲನಚಿತ್ರಗಳ ಬಾಡಿಗೆಯರೂಪದಲ್ಲಿ ಕಂಪೆನಿಗೂ ಹೋಗುವದೆಂದು ಲೆಕ್ಕಹಾಕಿರುತ್ತಾರೆ.

ಆರ್ಥಿಕದುರವಸ್ಥೆಯ ದೆಸೆಯಿಂದ ಯೂರೋಪಿನಲ್ಲಿ ಶವಗಳನ್ನು ದಹನಮಾಡುವ ಪದ್ಧತಿಯು ಆಚರಣೆಗೆ ಬರುತ್ತಿರುವದಂತೆ! 1931 ನೇ ಇಸವಿಯಲ್ಲಿ ಇಂಗ್ಲೆಂಡ್ ಒಂದರಲ್ಲಿಯೇ 5195 ಶವಗಳೂ, 1932 ರಲ್ಲಿ 6315 ಶವಗಳೂ ದಹನಮಾಡಲ್ಪಟ್ಟುವು! ಯೂರೋಪಿನ ಇತರ ದೇಶಗಳಲ್ಲಿಯೂ ಈ ಆಚರಣೆಯು ಕ್ರಮೇಣ ಹೆಚ್ಚುತ್ತ ನಡೆದಿರುವದು. ಈ ದಹನಪದ್ಧತಿಯು ನಮ್ಮ ಹಿಂದೂ ದೇಶಕ್ಕಿಂತಲೂ ಯೂರೋಪ್ ದೇಶದಲ್ಲಿ ಹೆಚ್ಚು ವೆಚ್ಚವಾಗುವದಾದರೂ, ಸಮಾಧಿ ಮಾಡುವದಕ್ಕಿಂತಲೂ ಕಡಮೆ ವೆಚ್ಚವಾಗುವದಂತೆ!

ಹಂಗೇರೀ ದೇಶದ ಒಂದು ಹಳ್ಳಿಯಲ್ಲಿರುವ 72 ವರ್ಷ ವಯಸ್ಸಿನ ಮುದುಕನೊಬ್ಬನು 4 ತಿಂಗಳ ಹಿಂದೆ ಮೃತಳಾದ ತನ್ನ ಹೆಂಡತಿಯ ಮೇಲೆ ಒಂದು ದಾವೆಯನ್ನು ತಂದು, ಅವಳ ಗರ್ಭದಲ್ಲಿ ಜನಿಸಿದ ಮಕ್ಕಳು ತನ್ನವಲ್ಲವೆಂದೂ, ಆ ಮಕ್ಕಳಿಗೆ ಮುಂದೆ ತನ್ನ ಆಸ್ತಿಯಲ್ಲಿ ಯಾವ ಹಕ್ಕೂ ಇಲ್ಲದಂತೆ ಮಾಡುವದಕ್ಕೋಸ್ಕರ ತನ್ನ ವಿವಾಹವನ್ನು ರದ್ದುಪಡಿಸಬೇಕೆಂದೂ ಪ್ರಾರ್ಥಿಸಿರುವನು. ತನ್ನ ಹೆಂಡತಿಯು ಮತ್ತೊಬ್ಬನನ್ನು ಪ್ರೀತಿಸುತ್ತಿದ್ದಳೆಂದು ಅವನಿಗೆ ದೊರೆತ ಕೆಲವು ಕಾಗದಪತ್ರಗಳಿಂದ ತಿಳಿದು ಬಂದುದೇ ಈ ವಿಚಿತ್ರದಾವೆಗೆ ಕಾರಣವಂತೆ!

ಉತ್ತರಕಾನಡಾಜಿಲ್ಲೆಯಲ್ಲಿರುವ ಶಿರಸಿಯಲ್ಲಿ ಸುಪ್ರಸಿದ್ಧವಾದ ಮಾರಮ್ಮನ ಜಾತ್ರೆಯು ಈ ತಿಂಗಳ ೧ ನೆ ತಾರೀಖಿನಿಂದ ಪ್ರಾರಂಭವಾಯಿತು. ಈ ಜಾತ್ರೆಯಲ್ಲಿ ಅನೇಕ ಕುರಿ ಕೋಣಗಳು ವಧಿಸಲ್ಪಡುತ್ತಿದ್ದ ವಾಡಿಕೆಯನ್ನು ಜೀವದಯಾಸಂಘದವರು ತಮ್ಮ ಸಾಹಸವನ್ನೆಲ್ಲಾ ತೋರಿಸಿ ಪ್ರಾಣಿವಧೆಯನ್ನು ತಪ್ಪಿಸಿ ಪ್ರಾಣಿಬಲಿಗೆ ಬದಲಾಗಿ ದೇವರಿಗೆ ಹಣ್ಣುಕಾಯಿ ಮುಂತಾದ ಸೌಮ್ಯಪದಾರ್ಥಗಳನ್ನು ಒಪ್ಪಿಸುವಂತೆ ಮಾಡಿ ಜೀವದಯಾಸಂಘವು ತನ್ನ ನಾಮವನ್ನು ಅನ್ವರ್ಥಕಮಾಡಿಕೊಂಡಿತೆಂದು ಕೇಳಿ ನಾವುಗಳು ಬಹಳವಾಗಿ ಆನಂದಿಸುತ್ತೇವೆ.

ಶ್ರೀಮನ್ಮಹಾರಾಜರವರು ಮಾರ್ಚಿ 16 ನೇ ತಾರೀಖಿನ ದಿವಸ ಹೊಸ ಎಡತೊರೆಯಲ್ಲಿ ಮ|| ರಾ|| ಬಳೆ ಸಿದ್ಧಲಿಂಗಶೆಟ್ಟರು ಹೆಂಗಸರ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಿದ ಸಮಯದಲ್ಲಿ ಮಾಡಿದ ಭಾಷಣ.

ಮ|| ರಾ|| ಸಿದ್ಧಲಿಂಗಶೆಟ್ಟರೇ, ಭಗಿನಿಯರೇ ಮತ್ತು ಸದಸ್ಯರೇ.

ಇಂದಿನ ಸಾಯಂಕಾಲದ ಸಮಾರಂಭದಲ್ಲಿ ಭಾಗವಹಿಸಲು ನನಗೆ ಅತ್ಯಂತ ಸಂತೋಷವಾಗುವದು. ಮ|| ರಾ|| ಸಿದ್ಧಲಿಂಗಶೆಟ್ಟರು ಒಪ್ಪಿಸಿದ ಬಿನ್ನವತ್ತಳೆಗೂ ಮತ್ತು ಅದರಲ್ಲಿ ಗರ್ಭೀಕರಿಸಲ್ಪಟ್ಟಿರುವ ಸದಭಿಪ್ರಾಯಗಳಿಗೂ ಅವರನ್ನು ವಂದಿಸುತ್ತೇನೆ. ಈ ನಮ್ಮ ಮನೋಹರವಾದ ಮತ್ತು ಅಭಿವೃದ್ಧಿಹೊಂದುತ್ತಿರುವ ನಗರದ ಪ್ರಥಮಸಂದರ್ಶನದಿಂದ ನನಗುಂಟಾದ ಆನಂದವು. ಇಲ್ಲಿನ ಪ್ರಜೆಗಳು ನನಗೆ ಮಾಡಿದ ಅತ್ಯಂತ ಪ್ರೀತಿಪೂರ್ವಕವಾದ ಸ್ವಾಗತದಿಂದ ಇಮ್ಮಡಿಯಾಗುತ್ತದೆ.

ಕೆಲವು ವರ್ಷಗಳ ಹಿಂದೆ ಈ ನಮ್ಮ ನಗರಕ್ಕೆ ಪ್ರವಾಹದ ಹಾವಳಿಯಿಂದ ಸಂಭವಿಸಿದ ನಷ್ಟವು ಇನ್ನೂ ವ್ಯಸನವನ್ನುಂಟುಮಾಡತಕ್ಕದ್ದಾಗಿದೆ. ಆದರೆ ಅದರಿಂದ ಸಂಭವಿಸಿದ ಕಷ್ಟನಷ್ಟಗಳಿಂದ ಧೈರ್ಯಗುಂದದೆ ದಿನದಿನಕ್ಕೆ ಈ ನಗರವು ಬೆಳೆಯುತ್ತಿರುವ ಪ್ರಾಮುಖ್ಯತೆಗೆ ತಕ್ಕ ಹಾಗೆ ಈ ಹೊಸನಗರವನ್ನು ನಿರ್ಮಾಣಮಾಡಿರುವದು. ಇಲ್ಲಿಯ ಜನರ ದೃಢಸಂಕಲ್ಪವನ್ನೂ, ಸ್ಥೈರ್ಯವನ್ನೂ, ವ್ಯಕ್ತಗೊಳಿಸುತ್ತದೆ. ಈ ಪಟ್ಟಣನಿರ್ಮಾಣವಿಷಯದಲ್ಲಿ ನೀವು ಮಾಡಿರುವ ಪ್ರಯತ್ನಗಳು ಡಿಸ್ಟ್ರಿಕ್ಟ್‌ಬೋರ್ಡಿನವರ ಉತ್ಸಾಹದಿಂದಲೂ ಮತ್ತು ಸರ್ಕಾರದವರ ಸಹಾಯವಿಶೇಷದಿಂದಲೂ ಸಂಪೂರ್ಣಫಲಕಾರಿಯಾದದ್ದನ್ನು ನೋಡಿ ನಾನು ತುಂಬಾಸಂತೋಷಿಸುತ್ತೇನೆ.

ಈ ನಗರದ ಪ್ರಜೆಗಳಲ್ಲಿ ಪ್ರಮುಖರಾದ ಮ|| ರಾ|| ಬಳೆ ಸಿದ್ಧಲಿಂಗಶೆಟ್ಟರ ಉದಾರಸಹಾಯದಿಂದ ಈ ನಗರವು ಶೀಘ್ರದಲ್ಲಿಯೇ ಒಂದು ಹೆಂಗಸರ ಆಸ್ಪತ್ರೆಯನ್ನು ಹೊಂದುವದು. ಗ್ರಾಮಗಳ ಅಭಿವೃದ್ಧಿಯಲ್ಲಿ ಆಸಕ್ತರಾದವರಿಗೆಲ್ಲರಿಗೂ, ಸಂತೋಷವನ್ನುಂಟುಮಾಡುವದೆಂದು ಧಾರಾಳವಾಗಿ ಹೇಳಬಹುದು. ಕಷ್ಟಪಡುವ ಸ್ತ್ರೀಯರ ಅನುಕೂಲವೇ ಮುಖ್ಯವೆಂದು ಭಾವಿಸಿದ್ದ ತಾಯಿಯ ಜ್ಞಾಪಕಾರ್ಥವಾಗಿ ಕರ್ತವ್ಯಪರನಾದ ಪುತ್ರನಾವನೂ ಇದಕ್ಕಿಂತಲೂ ಮಹತ್ವದ ಪುಣ್ಯಕಾರ್ಯವನ್ನು ಮಾಡಲಾರನು. ಮ|| ರಾ|| ಸಿದ್ಧಲಿಂಗಶೆಟ್ಟರ ಉದಾರವಾದ ಮನಸ್ಸು ಇಂತಹ ಅತ್ಯಂತ ಮಹತ್ವದ ಜನೋಪಕೃತಿಯಲ್ಲಿ ಪ್ರವರ್ತಿಸಿದುದಕ್ಕಾಗಿ ನನಗೆ ಅತ್ಯಂತ ಸಂತೋಷವಾಗಿರುವುದು.

ಗ್ರಾಮಾಂತರಗಳಲ್ಲಿ ಹೆರಿಗೆಯ ಸೌಕರ್ಯಗಳು ಅವಶ್ಯಕವಾಗಿರುವದೆಂಬ ಭಾವನೆಯು ಜನರಲ್ಲಿ ಬಲಿಯೇರುತ್ತಿರುವದು ಈ ನಾಗರಿಕಕಾಲದ ಸಂತೋಷಪ್ರದವಾದ ಚಿಹ್ನೆಯಾಗಿದೆ. ಇಂಥ ಸ್ತ್ರೀಯರ ಆಸ್ಪತ್ರೆಗಳನ್ನು ಹೆಚ್ಚುಹೆಚ್ಚಾಗಿ ಕಟ್ಟುವದರಿಂದಲೇ ಈ ವಿಧವಾದ ಉಪಚಾರದ ಸೌಕರ್ಯವು ಗ್ರಾಮಾಂತರಗಳಲ್ಲಿ ವಾಸಮಾಡುವ ಜನರಿಗೆ ದೊರೆಯಲು ಅನುಕೂಲವಾಗುವದು.

ಈ ಸಂದರ್ಭದಲ್ಲಿ ಎಡತೊರೆಯ ನಿವಾಸಿಗಳು ಇಲ್ಲಿ ಒಂದು ಹೆರಿಗೆ ಮತ್ತು ಶಿಶುಸಂರಕ್ಷಣಾಸಂಸ್ಥೆಯನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಲೆಂದು ಆಶಿಸುತ್ತೇನೆ. ಈ ಸಂಬಂಧದಲ್ಲಿ ಮೈಸೂರು ನಗರದಲ್ಲಿ ವಿಶೇಷಕಾರ್ಯಗಳನ್ನು ಮಾಡುತ್ತಿರುವ ರೆಡ್‌ಕ್ರಾಸ್‌ಸೊಸೈಟಿಯವರು ನಿಮಗೆ ಅವಶ್ಯಕವಾದ ಸಹಾಯವನ್ನು ಮಾಡುವರೆಂದು ನಂಬುತ್ತೇನೆ ಈ ನಗರದಲ್ಲಿ ಜಾಗ್ರತೆಯಾಗಿ ನಿರ್ಮಿಸಲ್ಪಡುವ ಹೆಂಗಸರ ಆಸ್ಪತ್ರೆಯಜೊತೆಗೆ ಹೆರಿಗೆ ಮತ್ತು ಶಿಶುಸಂರಕ್ಷಣಾಸಂಸ್ಥೆಯು ಅತ್ಯಂತ ಉಪಯುಕ್ತವಾಗುದೆಂದು ನನ್ನ ಭಾವನೆಯಾಗಿರುವದು.

ಭಗಿನಿಯರೇ ಮತ್ತು ಸದಸ್ಯರೇ, ಈಗ ನನಗೆ ಈ 'ಈ ಪುಟ್ಟತಾಯಮ್ಮ ಹೆಂಗೆಆಸ್ಪತ್ರೆ' ಯ ಶಂಕುಸ್ಥಾಪನೆಯನ್ನು ನೆರವೇರಿಸಲು ಬಹಳ ಸಂತೋಷವಾಗುತ್ತದೆ. ಈ ಕಟ್ಟಡವು ಜಾಗ್ರತೆಯಾಗಿ ಕಟ್ಟಲ್ಪಟ್ಟು ಅದರಿಂದ ಈ ನಗರದ ಅಂದವು ಮತ್ತಷ್ಟು ಹೆಚ್ಚಾಗಲೆಂದು ಆಶಿಸುತ್ತೇನೆ. ಈ ಆಸ್ಪತ್ರೆಯು ವಿಶೇಷವಾಗಿ ಅಭಿವೃದ್ಧಿಹೊಂದಿ, ಕಾಲಕ್ರಮದಲ್ಲಿ ಈ ಪ್ರಾಂತದ ಜನರೆಲ್ಲರೂ ಇದರ ಪ್ರಯೋಜನಗಳನ್ನು ಹೊಂದುವರೆಂದು ಆಶಿಸುತ್ತೇನೆ.

ಸ್ವೀಕಾರ

ಶಿವಮೊಗ ಡಿ|| ಹೊಸಂತಿಯಲ್ಲಿರುವ ಮ|| ರಾ|| ಬ್ರಹ್ಮಶೆಟ್ಟರ ಸಿದ್ಧಸಂಗಪ್ಪಶೆಟ್ಟರ ಪುತ್ರ ಚಿ|| ಮಹಂತಪ್ಪನವರು ಬಿ. ಎ., ಎಲ್. ಎಲ್. ಬಿ. ವಕೀಲ್ ಸಾಗರ ಇವರಿಗೆ ನೇಮತಿಯಲ್ಲಿರುವ ಮ|| ರಾ|| ಕುಡುಪಲಿ ಬಸವಲಿಂಗಪ್ಪನವರ ಅಣ್ಣಂದಿರಾದ ಕುಡುಪಲಿ ಮ|| ರಾ|| ರುದ್ರಪ್ಪನವರ ಪುತ್ರಿ ಚಿ|| ಸೌ|| ಹಾಲಮ್ಮನನ್ನು ಕೊಟ್ಟು ತೀರ್ಥರಾಮೇಶ್ವರ ಕ್ಷೇತ್ರದಲ್ಲಿ ನಡೆದ ವಿವಾಹಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಲ್ಪಟ್ಟ **5** ರೂ. ಮತ್ತು ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ **10** ರೂ. ಒಟ್ಟು **15** ರೂ. ಗಳೂ ಮ|| ರಾ|| ನೇಮತಿ ಹೊಮ್ಮರಡಿ ಸಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ನಿವಾಸಿಗಳಾದ ಶ್ರೀ|| ಶಿದ್ಧರಾಮಪ್ಪಾ ಕಾಶೀನಾಥಪ್ಪಾ ಖಾನಾಪುರೆ ಇವರ ಪುತ್ರರಾದ ಚಿ|| ರಾ|| ಭೀಮಶಂಕರಪ್ಪಾ ಇವರಿಗೆ ಶ್ರೀಮಂತ ಬಸವಲಿಂಗಪ್ಪಾ ತಮ್ಮಣ್ಣಪ್ಪಾ ಉಟಗಿ ಇವರ ಪುತ್ರಿ ಚಿ|| ಸೌ|| ಪಾರ್ವತೀಬಾಯಿಯನ್ನು ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ ಶಿದ್ಧರಾಮಪ್ಪಾ ಕಾಶೀನಾಥಪ್ಪಾ ಖಾನಾಪುರೆ ಇವರು ಪ್ರಭಾಪೋಷಣಕ್ಕೋಸ್ಕರ **5** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ದಾವಣಗೆರೆಯ ವೀರಶೈವಮಹಾಜನರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು ವೇ|| ಮಲೆಬೆನ್ನೂರುಮಠದ ಹಾಲಸಿದ್ಧಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ವಿವಾಹಮಹೋತ್ಸವ.

ಸ್ಥಿರಚರಾತ್ಮಕವಾದ ಈ ಜಗತ್ತು ಯಾವ ಮಹಾತ್ಮನಿಂದ ರಚಿಸಲ್ಪಟ್ಟಿತೋ ಅಂಥ ಪರಶಿವನ ಕೃಪೆಯಿಂದ ಶ್ರೀ ವೀರಗೋತ್ರೋದ್ಭವರಾದ ಸಿದ್ಧರಾಮಪ್ಪಾ, ಕಾಶೀನಾಥಪ್ಪಾ ಖಾನಾಪುರೆ ಇವರ ಚಿರಂಜೀವರಾದ ಭೀಮಶಂಕರಪ್ಪಾ ಇವರಿಗೆ ನಂದಿಗೋತ್ರೋದ್ಭವರಾದ ಶ್ರೀಮಂತ ಬಸವಲಿಂಗಪ್ಪಾ, ತಮ್ಮಣ್ಣಪ್ಪಾ, ಉಟಗೆ ಮುಕ್ಕಾಂ ಅವಸೆ ಇವರ ಪುತ್ರಿ ಚಿ|| ಕುಂ|| ಸೌ|| ಪಾರ್ವತೀಬಾಯಿ ಇವರನ್ನು ನೇಮಕಮಾಡಿ ಲಗ್ನಸಮಾರಂಭವು ನೆರವೇರಿಸಲ್ಪಟ್ಟಿತು. ಸದರೀ ವಿವಾಹಕಾರ್ಯಕ್ರಮಗಳನ್ನು ಗುರುಹಿರಿಯರೆಲ್ಲರೂ ಕೂಡಿ ಮಿ-ಮಾಘವದ್ಯ ೩ ಸೋಮವಾರ ದೀಕ್ಷಾಕರ್ಮವು ಮತ್ತು ಅದೇ ದಿನ ಹಂದ್ರಾಲೇಪನವು, ೪ ಮಂಗಳವಾರದಿನ ನಾಂದೀಶಮಾರಾಧನವು, ೫ ಬುಧವಾರ ಅಕ್ಷತಾರೋಪಣಾದಿ ಶುಭಕಾರ್ಯಗಳು ಶ್ರೀಮದ್ವೀರಶೈವ ಸಂಸ್ಕೃತ ವಾರದ ಪಾಠಶಾಲಾಧ್ಯಾಪಕರಾದ ವೇ|| ಶಂ|| ಜಗದೀಶಶಾಸ್ತ್ರಿಗಳು ನಾಲವಾರ ಇವರ ನೈಪುಣ್ಯತ್ವದಲ್ಲಿ ಶಾಸ್ತ್ರೀಯವಾಗಿ ಅತ್ಯಂತ ವಿಜೃಂಭಣೆಯಿಂದ ಜರುಗಿದವು. ಗುರುವಾರ ಸಾಯಂಕಾಲ ವಧೂವರರ ಮೆರವಣಿಗೆಯು ಬಹು ಅಟ್ಟಹಾಸದಿಂದ ನಡೆಯಿತು. ಆರತಿಗಳಂ ಪಿಡಿದು ಸಾಲ್ಗಿಡಿದು ಹೋಗುತ್ತಿರುವ ಸುವಾಸಿನಿಯರಿಂದಲೂ, ಪ್ರಜ್ವಲಿಸುತ್ತಿರುವ ನಾನಾವಿಧ ದೀಪಾವಳಿಗಳಿಂದಲೂ, ಮುಂಬಾಗದಲ್ಲಿ ಭೋರ್ಗರೆಯುವ ವಾದ್ಯವೃಂದಗಳಿಂದಲೂ, ಉತ್ಸವಕ್ಕೆ ವಿಶೇಷವಾದ ಕಳೆಯುಂಟಾಗಿದ್ದಿತು. ಮೆರವಣಿಗೆಯು ರಾತ್ರಿ ೧೨ ಘಂಟೆಗೆ ಮಲ್ಲಿಕಾರ್ಜುನದೇವಾಲಯಕ್ಕೆ ತಲ್ಪಿ ಮಂಗಳಾರತಿಯನ್ನು ಮಾಡಿ ಪುನಃ ಸ್ವಗೃಹವನ್ನು ಸೇರಿತು. ತಳಿರುತೋರಣಗಳಿಂದಲೂ, ಜೋಲಾಡುತ್ತಿರುವ ನಾರಿಕೇಳಫಲದ ಗೊಂಚಲುಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಮಂಟಪವು ಭವ್ಯವಾಗಿ ಅಲಂಕರಿಸಲ್ಪಟ್ಟಿದ್ದಿತು. ಈ ಲಗ್ನಸಮಾರಂಭಕ್ಕಾಗಿ ಶ್ರೀಮದ್ರಂಭಾಪುರಿ ಶಾಖಾನುವರ್ತಿಗಳಾದ ಶ್ರೀ|| ಷ|| ಬ್ರ|| ವಿ ಜಹಗೀರ್‌ದಾರ್ ಕುಲಗುರು ವಿರೂಪಾಕ್ಷ ಶಿವಾಚಾರ್ಯ ಮಾಣಿಕೂರಕರ್‌ರವರೂ ಮತ್ತು ಆಪ್ತಜನರೂ ಸುತ್ತುಮುತ್ತಿನ ಹಳ್ಳಿಯ ಜನರೂ ವಿಶೇಷವಾಗಿ ಬಂದಿದ್ದರು. ಸ್ವಜನಪರಜನರಿಗೆ ಅನ್ನಸಂತರ್ಪಣೆಯು ನಡೆಯಿತು. ಸಿದ್ಧರಾಮಪ್ಪಾ, ಕಾಶೀನಾಥಪ್ಪಾ ಖಾನಾಪುರೆ ಇವರು ಪ್ರಭಾಪೋಷಣಕ್ಕಾಗಿ ೫ ರೂಪಾಯಿಗಳನ್ನು ಅರ್ಪಿಸಿದ್ದಾರೆ. ಇವರಿಗೂ ಮತ್ತು ವಧೂವರರಿಗೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಶುಭಾಶೀರ್ವಾದಗಳನ್ನು ಮಾಡಲೆಂದು ಆಶಿಸುತ್ತೇನೆ.

ಗುರುಶಾಂತಶರ್ಮಾ ಹಿರೇಮಠ, ಹೊಳಗುಂದಿ,
ವಾರದ ಸಂಸ್ಕೃತಪಾಠಶಾಲಾ, ಸೋಲಾಪುರ.

ಮಾನವನ ಜೀವಿತಕಾಲ ಮತ್ತು ಪ್ರಯೋಜನ.

[ಲೇಖಕ—ಕನ್ನತಳಪಿ ಅನವಟ್ಟಿ ರಾಮರಾಯರು.]

ಅಲ್ಪಭಕ್ತಿಗೆ ಪ್ರಾತಃಕಾಲವು ಹೇಗೆ ಸಂತೋಷಪ್ರದವೋ, ಗೂಬೆಗೆ ಸಾಯಂಕಾಲವು ಹೇಗೆ ಮನೋಹರವೋ, ಅಮೃತವು ಜೇನುಹುಳುಗಳಿಗೆ ಹೇಗೆ ರುಚಿಕರವೋ, ಮಾಂಸವು ಗಿಡಗಕ್ಕೆ ಹೇಗೆ ಸಂತೋಷಜನಕವೋ ಹಾಗೆಯೇ ಮಾನವನಿಗೆ ತನ್ನ ಜೀವಿತಕಾಲವು ಅವನಿಗೆ ಸುಖಕರವಾಗಿ ಕಾಣಬಂದಾಗ್ಯೂ, ನಿಜವಾದ ಸಂತೋಷಪ್ರದವಾದುದಲ್ಲವಾಗಿಯೂ, ಹೊಗಳಿಸಿಕೊಳ್ಳುವ ಸ್ಥಿತಿಯದ್ದಾಗ್ಯೂ ತ್ಯಜಿಸುವುದಕ್ಕಾಗಿಯೂ, ಮನೋಹರಜನಕವಾಗಿದ್ದರೂ ಅಸಂಪೂರ್ಣವಾಗಿಯೂ, ನೀಚನಾಗಿದ್ದರೂ ತ್ಯಜಿಸುವುದಕ್ಕಾಗದೆಯೂ ಇರುವುದರಿಂದ ಮಾನವನು ತನ್ನ ಪಾಲಿಗೆ ಬಂದುದನ್ನೆಲ್ಲಾ ಅನುಭವಿಸಬೇಕಾಗಿದೆಯೇ ಹೊರತು, ತನಗೆ ಬೇಡವೆಂದು ಜಿಗುಪ್ಸೆಹೊಂದಿದ್ದರೂ ಎಂದಿಗೂ ಇವುಗಳನ್ನು ಸಂಪೂರ್ಣ ತ್ಯಾಗಮಾಡಲು ಶಕ್ತನಾಗಿಲ್ಲ. ಮಾನವನ ಸ್ಥಿತಿಯು ಹೀಗಿರುವುದರಿಂದ ಅವನು ತನ್ನ ಜೀವಮಾನವನ್ನು ಎಷ್ಟು ಉತ್ತಮಸ್ಥಿತಿಗೆ ತಂದುಕೊಳ್ಳಬೇಕೆಂದು ಪ್ರಯತ್ನಪಡಬಹುದೋ ಅಷ್ಟು ಪ್ರಯತ್ನಪಡಲು ಕಲಿತುಕೊಳ್ಳಬೇಕು. ಹೀಗಾಗುವುದಾದರೆ ಮಾನವನ ಜೀವಿತಕಾಲವು ಉತ್ತಮಸ್ಥಿತಿಗೆ ಕ್ರಮೇಣ ಬರುವಂತಾಗುವುದರಲ್ಲಿ ಸಂಶಯವಿಲ್ಲ.

ನಾವು ಅಯೋಗ್ಯರೊಡನೆ ಬೆರೆತು ಸಂಭಾಷಿಸಿ ಯೋಚನೆಗೆ ಕಸ್ತು ಮಾಡಬಾರದು. ಏಕೆಂದರೆ ಅವರಲ್ಲಿ ಯಾವುದೂ ಯೋಗ್ಯವಾಗಿ ಕಾಣಬರುವುದಿಲ್ಲ. ಅಲ್ಲದೆ ಅವರು ತಾವೇ ಬುದ್ಧಿವಂತರೆಂದು ಪಟಿಸಿ ಹೇಳಿಕೊಳ್ಳುತ್ತಿರುವಾಗ ಅವರ ಮಾತುಗಳಲ್ಲಿ ನಂಬಿಕೆಯನ್ನಿಡಬಾರದು. ಅವರು ಹೇಳುವ ವಿಷಯಗಳನ್ನು ಕುರಿತು ಅವರೆದುರಿಗೆ ಹಿಂದೂಡಿಸಬಾರದು. ಅಲ್ಲದೆ ಅವರಲ್ಲಿ ನಮ್ಮ ಪ್ರೀತಿಯನ್ನಿಡಬಾರದು. ಅವರು ಇತರರಿಗೆ ಹೇಳುವಮಾತುಗಳೂ, ನಡೆವ ನಡವಳಿಕೆಗಳೂ ನಮಗೆ ಅಭಿರುಚಿಯನ್ನು ಹುಟ್ಟಿಸುವಂತಿರಬಹುದು. ಆದರೂ ನಾವು ಬಹುಎಚ್ಚರಿಕೆಯಿಂದಿರಬೇಕು. ಅಂತವರ ಮಾತುಗಳು ಚಿನ್ನಕ್ಕೆ ಮಾರ್ಕೆಟ್ಟಿನಂತಿರಬಹುದು. ಅವರೊಡನೆ ಎಷ್ಟುಕಾಲ ಮಾರ್ಗಸುತ್ತಿರುವೆವೋ ಅಷ್ಟುಕಾಲವನ್ನು ವಜ್ರದನಿಧಿಯನ್ನು ಕೊಟ್ಟರೂ ಹಿಂದಿರುಗಿಸಲಾಗುವುದಿಲ್ಲ. ಆದ್ದರಿಂದ ಮಾನವನೇ! ನಿನ್ನ ಕಾಲವನ್ನು ಸದ್ಗುಣಗಳಿಂದ ತುಂಬಿತುಳುಕುವಂತೆ ಮಾಡಿಕೊಳ್ಳುವುದು ಸರ್ವೋತ್ತಮವೆಂದು ಭಾವಿಸಪಡೆದುಕೊಳ್ಳುತ್ತಿರಬೇಕು.

ಮಾನವನಿಗೆ ಒಂದೊಂದುವೇಳೆ ಬೇಸರಹುಟ್ಟಿ 'ದೇವರೆ! ಎಂತಹಕಷ್ಟವು ಪ್ರಾಪ್ತವಾಗಿರುವುದಲ್ಲ. ನಾನು ಹುಟ್ಟಬಾರದಾಗಿದ್ದಿತು. ಹುಟ್ಟಿ ಮೃತನಾಗಿದ್ದರೂ ಚೆನ್ನಾಗಿದ್ದಿತಲ್ಲ.' ಎಂದು ಹೇಳಿಕೊಳ್ಳುವುದುಂಟಷ್ಟೆ. ಈ ರೀತಿ ಅಂದುಕೊಳ್ಳಬಾರದು. ಅಲ್ಲದೆ, 'ಭಗವಂತನೆ! ನೀನೇ ಹೀಗೇಕೆಮಾಡಿರುವೆ?' ಎಂದು ಅವನನ್ನು ಬೈಯಬೇಡ. ನೀನು ಜನಿಸದೆ ಇದ್ದಿದ್ದರೆ ಇಂತಹ ಕಷ್ಟಗಳೆಲ್ಲಾ ಎಲ್ಲಿ ಪ್ರಾಪ್ತವಾಗುತ್ತಿದ್ದುವು? ಒಳ್ಳೆಯದು ನಿನ್ನ ಅಧೀನವಾಗಿರುವುದೆ? ಒಳ್ಳೆಯದಿಲ್ಲವೆಂಬುದೇ ಅಲ್ಲಿ ಕೆಟ್ಟದ್ದು ಇರಲೇಬೇಕು. ಕಾಲವನ್ನು ದೂಷಿಸುವುದಾದರೆ ನೀನು ನಿನ್ನನ್ನೆ ನಿಂದಿಸಿಕೊಂಡತಾಗುವುದಿಲ್ಲವೊ ನೋಡು. ಹೇಗೆಂದರೆ, ಮೀನು ಹಿಡಿಯುವವನು ಮೀನನ್ನು ಹಿಡಿಯುವ ಗಾಣದಕೊನೆಯಲ್ಲಿ ಒಂದು ಹುಳವನ್ನು ಸಿಕ್ಕಿಸಿ, ನೀರಿನಲ್ಲಿ ಬಿಡುವನು. ಇದನ್ನು ನೋಡಿದ ಮೀನು ಅದನ್ನು ತಿನ್ನಲು ಹೋಗಿ ಬಾಯಿಹಾಕಿದಾಗ್ಗೆ ಹುಳದ ಹಿಂಬಾಗದಲ್ಲಿದ್ದ ಕೊಂಡಿಯು ಚುಚ್ಚಿಕೊಂಡು ತಾನು ಸಿಕ್ಕಿಕೊಳ್ಳುವಂತೆ, ನಮ್ಮ ತಿಳಿವಳಿಕೆಯಿಲ್ಲದೆ ಮಾಡಿಕೊಂಡಕಾಲಕ್ಕೆ ನಾವೇ ದುಃಖಕ್ಕೆ ಭಾಗಿಗಳಾಗಬೇಕು. ಇಟ್ಟಿರುವ ಬೋನಿನಲ್ಲಿ ಸಿಕ್ಕಿಕೊಂಡರೆ ಕಷ್ಟವೆಂದು ತಿಳಿದಿದ್ದರೆ ಸಿಂಹವು ಅದರೊಳಗೆ ಪ್ರವೇಶಿಸುತ್ತಿದ್ದಿತೆ? ನಶ್ವರವಾದ ಈ ದೇಹದೊಳಗೆ ಜೀವಕ್ಕೆ ಕಷ್ಟವೆಂದು ತಿಳಿದಿದ್ದರೆ ಹೀಗೆ ಶರೀರಕ್ಕೆ ಪ್ರವೇಶಿಸುತ್ತಿದ್ದನೆ? ಜೀವಿಸಿರಬೇಕೆಂದು ಕುತೂಹಲಪಡುತ್ತಿದ್ದನೆ? ಕೃಪಾಸಾಗರನಾದ ಭಗವಂತನು ನಿನ್ನನ್ನು ಹೀಗೇಕೆ ನಿರ್ಮಿಸಬೇಕಾಗಿದ್ದಿತು? ನಿನ್ನ ಸುಖದುಃಖಾದಿಗಳು ನಿನ್ನ ಗೋಚರಕ್ಕೆ ಬಾರದೇ ಹೋಗಿರುವುದೇ ಮುಖ್ಯಕಾರಣವಾಗಿ ಮಾಡುವಕಾರ್ಯಗಳಲ್ಲಿ ಸುಖವನ್ನು ಬಯಸುತ್ತಿರುವ ಕಾರ್ಯಗಳಿಂದ ಮಾನವನು ಸುಖದುಃಖಗಳಿಂದ ಕೂಡಿ ಜೀವಮಾನವನ್ನು ಕಳೆಯಬೇಕಾಗಿದೆ.

ಸ್ಥಳದ ಗುಣವನ್ನು ಅರಿಯದ ಪಕ್ಷಿಯು ಪಂಜರದೊಳಗೆ ಸೇರಿಕೊಂಡಮೇಲೆ ಎಷ್ಟು ಶ್ರಮಪಟ್ಟಾಗ್ಗೂ ಏನೂ ಪ್ರಯೋಜನವಿರುವುದಿಲ್ಲವಾಗಿರುವುದೋ, ಹಾಗೆಯೇ ಭಗವಂತನು ನಿನ್ನನ್ನು ಹೇಗೆ ಸೃಷ್ಟಿಸಬೇಕೆಂದು ವಿಧಾಯಕಮಾಡಿ ಸೃಷ್ಟಿಸಿರುವನೊ ಅದರಂತೆಯೇ ನೀನು ಇಹಲೋಕದಲ್ಲಿ ಜನಿಸಿ ಅನುಭವಿಸಬೇಕಾಗಿಯೇ ಇದ್ದು, ಫಲಾಫಲಗಳನ್ನು ಭುಂಜಿಸಲೇಬೇಕಲ್ಲದೆ ನೀನು ಎಷ್ಟು ಪ್ರಯತ್ನಪಟ್ಟರೂ ಬಿಡಿಸಿಕೊಳ್ಳಲು ಸಾಧ್ಯವಾಗಲಾರದು. ಈ ಕಾರಣದಿಂದ ಭಗವಂತನು ಕೆಟ್ಟಸ್ಥಲದಲ್ಲಿಯೇ ಸೃಷ್ಟಿಪಟ್ಟುಕೊಂಡಿರಬೇಕು. ಅಲ್ಲದೆ ಎಲ್ಲಾ ವಿಧವಾದ ತೊಂದರೆಗಳನ್ನು ಅನುಭವಿಸುವುದಕ್ಕೆ ಸಿದ್ಧನಾಗಿ ಯಾವಾಗ ಎಲ್ಲಿ ಕೆಡಕುಕಾಣಬರುವುದೋ ಅಲ್ಲಿ ಅಪಾಯವಿರುವುದೆಂದು ನಿನ್ನ ಬುದ್ಧಿವಂತಿಕೆಯಿಂದ ತಿಳಿದುಕೊಳ್ಳುತ್ತಾ ಜಾಗರೂಕನಾಗಿರಬೇಕು. ನೀನು ಮಲಗುವ ಹಾಸಿಗೆಯು ಹತ್ತಿಯಿಂದಮಾಡಲ್ಪಟ್ಟಿದ್ದರೆ ಅದರಮೇಲೆ ಎಷ್ಟುಕಾಲಮಲಗಿದ್ದರೂ ಸುಖಕರವಾಗಿರುವುದೆಂದೂ, ಮಲ್ಲಿಗೆ ಹೂವು ಹರಡಿದ್ದರೆ ಅಲ್ಲಿ ಅಪಾಯಕರವೆಂದೂ ಭಾವಿಸಿಕೊಂಡಿರಬೇಕು. ಮಾನವನು ನೀಚನೆಂದೆನಿಸಿಕೊಂಡಿರುವುದರಿಂದಲೂ. ಮರಣಹೊಂದುವುದೇ ಸರ್ವೋತ್ತಮವು. ಮಾಡುವಕೆಲಸ ಕೈಲಾಗದಿದ್ದರೆ ಅಸ್ವಸ್ಥಕ್ಕೀಡುವುದುತ್ತಮವಲ್ಲವೆ? ಯಾವಾಗ ನಿನ್ನ ಜೀವಿತಕಾಲವು ಶ್ರೇಷ್ಠವಾಗಿರುವುದೆಂದು ಜ್ಞಾನಿಗಳು ಹೊಗಳುವರೋ ಅಂತಹ ನಿನ್ನ ಜೀವಿತಕಾಲವನ್ನು ಕಾಪಾಡಿಕೊಳ್ಳಲು ಪ್ರಯತ್ನಪಡುವುದೇ ನಿನ್ನ ಕರ್ತವ್ಯವು.

ಎಲೈ ಮಾನವನೇ! ಈ ಅವಿವೇಕಿಯಿಂದ ನನ್ನ ಉತ್ತಮಕಾಲವೆಲ್ಲಾ ಹಾಳಾಯಿತು ಎಂದು ಆಕ್ಷೇಪಣೆಮಾಡಬೇಡ. ಏಕೆಂದರೆ ನಿನಗಿರುವ ಅಲ್ಪಕಾಲದಲ್ಲಿ ಸೌಖ್ಯಗಳು ಕಮ್ಮಿಯಾದವೆಂದೇ ಭಾವಿಸು. ನಿನ್ನ ಅವಿವೇಕದಿಂದ ಕಳೆದ ಕಾಲವನ್ನು ಮಗುವಾಗಿಯೂ, ಬಾಲಕನಾಗಿಯೂ ವಯೋವಂತನಾಗಿಯೂ, ರೋಗಿಷ್ಠನಾಗಿಯೂ, ಮುದಿಯನಾಗಿಯೂ ಇದ್ದು ಜೀವಿಸಿಕೊಂಡಿರುವಿಯಷ್ಟೆ. ಇವುಗಳನ್ನೆಲ್ಲಾ ಒಟ್ಟುಗೂಡಿಸಿದರೆ ಎಷ್ಟುಕಾಲವು ಕಳೆದಂತಾಯಿತು ಯೋಚಿಸು.

ಜೀವಿತಕಾಲವನ್ನು ನಿನಗೆ ಆಶೀರ್ವದಿಸಿಕೊಟ್ಟ ಮಹಾನುಭಾವನಾದ ಭಗವಂತನೇ ಮುಂದಕ್ಕೆ ನಿನಗೆ ಒಳ್ಳೆಯದಾಗಲೆಂದೇ ಕಾಲವನ್ನು ಕಮ್ಮಿಮಾಡಿರುವನೆಂದೇ ಜ್ಞಾಪಕವಿಡು. ಬಹುಕಾಲ ಜೀವಿಸಿಕೊಂಡಿರುವುದಾದರೆ ಮುಂದಕ್ಕೆ ಏನೇನು ಅನುಭವಿಸಬೇಕಾಗಿ ಬರುವುದೋ? ಒಳ್ಳೆಯದಕ್ಕೆ ಬದಲಾಗಿ ಕಷ್ಟದಲ್ಲಿ ಪಶ್ಚಾತ್ತಾಪನಾಗಲೆಂದೇ ನೀನು ಅಪೇಕ್ಷಿಸುವೆಯೋ? ನೀನು ಮಾಡಿದ ಕರ್ಮಗಳಿಗೆ ತಕ್ಕಫಲಗಳನ್ನು ಅನುಭವಿಸಬೇಕೆಂದೇ ಭಗವಂತನು ನಿನ್ನ ಜೀವಿತಕಾಲವನ್ನು ಕಮ್ಮಿ ಮಾಡಿರುವನೆಂದು ಭಾವಿಸಲಾರೆಯೊ?

ತಿಪ್ಪಗೊಂಡನಹಳ್ಳಿ ಜಲಾಶಯದ ಪ್ರಾರಂಭೋತ್ಸವ.

ಬೆಂಗಳೂರು ಮಾ. ೧೫.

ಶ್ರೀಮನ್ಮಹಾರಾಜರವರು ಈ ದಿವಸ ಪ್ರಾತಃಕಾಲ ತಿಪ್ಪಗೊಂಡನಹಳ್ಳಿ ಜಲಾಶಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಬೆಂಗಳೂರು ನಗರಾಭಿವೃದ್ಧಿಯ ಯೋಗ್ಯತಾನುಸಾರವಾಗಿ ತೃಪ್ತಿಕರವಾದ ನೀರಿನ ವಿನಿಯೋಗವಿಲ್ಲದಿದ್ದುದು ಒಂದು ದೊಡ್ಡ ಕೊರತೆಯಾಗಿದ್ದಿತು. ಆದರೆ ಇಂದಿನ ಮಹೋತ್ಸವದಿಂದ ಈ ಕೊರತೆಯು ನಿವಾರಿಸಲ್ಪಟ್ಟು ಈ ದಿವಸದಾರಭ್ಯ ಬೆಂಗಳೂರು ಪ್ರಜೆಗಳಿಗೆ ಸಮೃದ್ಧಿಯಾಗಿ ನೀರು ವಿನಿಯೋಗಿಸಲ್ಪಡುವುದು. ಬೆಂಗಳೂರಿಗೆ ಪಶ್ಚಿಮಭಾಗದಲ್ಲಿ ಸುಮಾರು 21 ಮೈಲಿಗಳ ದೂರದಲ್ಲಿರುವ ತಿಪ್ಪಗೊಂಡನಹಳ್ಳಿಯ ಬಳಿ ಅರ್ಕಾವತಿಯನ್ನು ಅಡ್ಡಕಟ್ಟಿ ತನ್ಮೂಲಕ ಶೇಖರವಾದ ನೀರನ್ನು ಶಾಸ್ತ್ರೀಯವಿಧಾನಗಳಿಂದ ಶುಭ್ರಪಡಿಸಿ, ಬೆಂಗಳೂರಿಗೆ ವಿನಿಯೋಗಿಸುವ ರೀತಿಯು ನಮ್ಮ ಮೈಸೂರಿನ ಇಂಜನಿಯರುಗಳಿಂದ ಸಫಲವಾಗಿದೆ.

ತಿಪ್ಪಗೊಂಡನಹಳ್ಳಿ ಪಂಪಿಂಗ್‌ಸ್ಟೇಷನ್ ಬಳಿ ಸುಂದರವಾದ ಸಭಾಂಗಣವು ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದಿತು. ಸುಮಾರು 8-45 ಘಂಟೆಯ ಹೊತ್ತಿಗೆ ಸಭಾಂಗಣವು ಪ್ರೇಕ್ಷಕರಿಂದ ತುಂಬಿ ತುಳುಕಾಡುತ್ತಿದ್ದಿತು. 9 ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಸರ್ ಮಿರ್ಜಾ ಮತ್ತು ಎ. ಡಿ. ಸಿ. ಗಳೊಂದೊಡಗೂಡಿ ಜಲಾಶಯವನ್ನು ಸಮೀಪಿಸಿದರು. ಸಂಸ್ಥಾನದ ಚೀಫ್ ಇಂಜನಿಯರಾದ ಮಿ|| ಎಂ. ಜಿ. ರಂಗಯ್ಯನವರೂ, ತಿಪ್ಪಗೊಂಡನಹಳ್ಳಿ ಎಗ್ಸಿಕ್ಯೂಟಿವ್ ಇಂಜನಿಯರ್ ಮಿ|| ಲಕ್ಷ್ಮೀನರಸಿಂಹಯ್ಯನವರೂ ಪ್ರಭುಗಳನ್ನು ಬರಮಾಡಿಕೊಂಡರು.

ಮಂಗಳಾಚರಣೆಯಾದ ನಂತರ ಮಿ|| ಎಂ. ಜಿ. ರಂಗಯ್ಯನವರು ಇಲಾಖೆಯ ಪರವಾಗಿ ಬಿನ್ನವತ್ತಳೆಯನ್ನರ್ಪಿಸಿದರು.

ಬಿನ್ನವತ್ತಳೆಯಲ್ಲಿ ಸಂಸ್ಥಾನದ ಚೀಫ್ ಇಂಜನಿಯರವರು ಬೆಂಗಳೂರು ನೀರಿನ ಸರಬರಾಯಿ ಕಾಮಗಾರಿಗಳ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರು ನೀರಿನ ಕೊರತೆಯು ನಿವಾರಣೆಯಾಗುವುದೆಂದೂ, 24 ಗಂಟೆಗಳಲ್ಲಿ 6 ಮಿಲಿಯನ್ ಗ್ಯಾಲನ್ನುಗಳು ರವಾನಿಸಲ್ಪಡುವುದೆಂದೂ, ಬೆಂಗಳೂರು ದಂಡಿಗೆ 6 ಮಿಲಿಯನ್ನುಗಳಲ್ಲಿ ಎರಡು ಮಿಲಿಯನ್ ಗ್ಯಾಲನ್ನುಗಳನ್ನು ಸಾವಿರ ಗ್ಯಾಲನ್ನುಗಳಿಗೆ $7\frac{1}{2}$ ಆಣೆಯಂತೆ ವಿನಿಯೋಗಿಸಲ್ಪಡುವುದೆಂದೂ ತಿಳಿಸಿದರು. ನೀರನ್ನು ಶುಭ್ರಪಡಿಸುವ ರೀತಿ ಪಂಪಿಗ್ ವಿಧಾನ ಮುಂತಾದುವನ್ನು ವಿವರಿಸಿದರು. ಕಡೆಯಲ್ಲಿ ಮಿ|| ರಂಗಯ್ಯನವರು, ನಿವೃತ್ತ ಚೀಫ್ ಇಂಜನಿಯರ್ ಮಿ|| ಜಾನ್‌ಭೋರ್‌ರವರನ್ನೂ, ಸಿ. ಎಂ. ಕರಿಯಪ್ಪನವರನ್ನೂ, ಕೀರ್ತಿಶೇಷರಾದ ಮಿ|| ವೆಂಕಟಸುಬ್ಬರಾಯರನ್ನೂ ಮತ್ತು ಮಿ|| ಎಸ್. ಲಕ್ಷ್ಮೀನರಸಿಂಹಯ್ಯನವರನ್ನೂ ಅಭಿನಂದಿಸಿದರು. ಜಲಾಶಯಕ್ಕೆ 'ಶ್ರೀ ಚಾಮರಾಜೇಂದ್ರ ಜಲಾಶಯ' ಎಂಬುದಾಗಿ ನಾಮಕರಣ ಮಾಡಬೇಕೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸಿದರು.

ಶ್ರೀಮನ್ಮಹಾರಾಜರವರು ಮೈಸೂರು ಇಂಜನಿಯರುಗಳ ಸಾಹಸವನ್ನೂ, ಉತ್ಸಾಹವನ್ನೂ ಕೊಂಡಾಡಿ ಒಂದು ಸಣ್ಣ ಭಾಷಣವನ್ನು ಮಾಡಿದರು.

"ಈ ಜಲಾಶಯದ ರಚನೆಯು ಆರಂಭದಿಂದ ಅಂತ್ಯದವರೆವಿಗೂ ನಮ್ಮ ಮೈಸೂರು ಇಂಜನಿಯರುಗಳಿಂದಲೇ ನಿರ್ಮಿತವಾಗಿ ಪೂರ್ತಿಸಲ್ಪಟ್ಟಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಇದರಲ್ಲಿ ಶೇಖರಿಸಲ್ಪಡುತ್ತಿರುವುದು ಮೈಸೂರು ಜಲ. ಈ ಜಲಾಶಯವನ್ನು ಸೃಷ್ಟಿಸಿದುದು ಮೈಸೂರು ಬುದ್ಧಿ. ಜಲವನ್ನು ವಾಹಿನಿಯಾಗಿ ಒಯ್ಯುವುದು ಮೈಸೂರಿನ ವಿದ್ಯುಚ್ಛಕ್ತಿ. ಅವಕ್ಕೆ ಉಪಯೋಗಿಸಲ್ಪಡುತ್ತಿರುವ ಕೊಳವೆಗಳು ಮೈಸೂರಿನವು. ಮೊದಲಿನಿಂದ ಕೊನೆಯವರಿವಿಗೂ ಎಲ್ಲಾ ಮೈಸೂರೇ! ಈ ಜಲಾಶಯವು ಮೈಸೂರಿನ ನಿರ್ಮಾಣಶಕ್ತಿಯ ಅದ್ವಿತೀಯ ನಿದರ್ಶನ. ಮ|| ರಾ|| ರಂಗಯ್ಯನವರೇ! ಈ ಜಲಾಶಯವನ್ನು ಅತ್ಯಂತ ಸಮರ್ಪಕವಾಗಿ ನಿರ್ಮಿಸಿ ನಿರ್ವಹಿಸಿದ ಕೀರ್ತಿಯು ನಿಮ್ಮದು. ಇದಕ್ಕಾಗಿ ನಾವು ನಿಮ್ಮನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಈಗ ನಾವು ತೆರೆಯುತ್ತಿರುವ ಧಾರಾಪ್ರವಾಹವು ಬೆಂಗಳೂರು ನಗರಕ್ಕೆ ಇತೋಪ್ಯತಿಶಯವಾದ ಆಯುರಾರೋಗ್ಯಾಭಿವೃದ್ಧಿಯನ್ನು ಪ್ರಸಾದಿಸಲೆಂದು ನಾವು ಹಾರೈಸುತ್ತೇವೆ. ಕೆಂಪೇಗೌಡನು ಬೆಂಗಳೂರು ನಗರವನ್ನು ಪ್ರತಿಷ್ಠಾಪಿಸಿದನು. ಆಗಿನಿಂದಲೂ ದಿನದಿನಕ್ಕೂ, ವರ್ಷವರ್ಷಕ್ಕೂ ಈ ನಗರವು ಅಭಿವೃದ್ಧಿಯನ್ನು ಹೊಂದುತ್ತಿದೆ. ಈಗ ನಮ್ಮ ಇಂಡಿಯಾದಲ್ಲಿ ವಿಸ್ತೀರ್ಣದಲ್ಲಿ ಇದು ಒಂಭತ್ತನೆಯ ಸ್ಥಾನವನ್ನು ಪಡೆದಿದೆ. ಅಹಮದಾಬಾದಿನ ನಂತರ ಇದೇ ದೊಡ್ಡ ನಗರ. ಲಕ್ನೋ, ಅಮೃತಸರ ಮತ್ತು ಕರಾಚಿ ಇವುಗಳು ಬೆಂಗಳೂರಿನ ನಂತರ ಶ್ರೇಣಿಯಲ್ಲಿ ಬರತಕ್ಕವು. ಬೆಂಗಳೂರು ನಗರವನ್ನು ಇಂಡಿಯಾದ ಹೊರಗಿನ ನಗರಗಳೊಂದಿಗೆ ಹೋಲಿಸಿದರೆ, ಕೇಪ್‌ಟೌನ್ ಮತ್ತು ಕೊಲಂಬೋ ಮುಂತಾದ ಪ್ರಮುಖರೇವುಪಟ್ಟಣಗಳೊಂದಿಗೂ, ಫ್ಲಾರೆನ್ಸ್ ಮತ್ತು ಟೆಹರಾನ ಮುಂತಾದ ಇತಿಹಾಸ ಪ್ರಸಿದ್ಧ ನಗರಗಳೊಂದಿಗೂ ಹೋಲಿಸಬಹುದು. ನಮ್ಮ ಬೆಂಗಳೂರು ನಗರವು ಈಗಿನ ಪ್ರಪಂಚದ ಅತ್ಯಂತ ಮುಂದರಿದ ನವನಾಗರಿಕ ನಗರಗಳೊಂದಿಗೆ ಸರಿಸಮನಾಗಿ ನಿಲ್ಲುವುದು. ಕುಮುದ್ವತಿ ಮತ್ತು ಅರ್ಕಾವತಿ ನದಿಗಳ ಪವಿತ್ರಜಲದಿಂದ ಈ ಜಲಾಶಯವು ಭರಿತವಾಗಿದೆ. ಸ್ವತಃ ಪವಿತ್ರವಾದ ಈ ಜಲವು ಆಧುನಿಕ ವಿಜ್ಞಾನ ಯಂತ್ರಗಳಿಂದ ಇನ್ನೂ ಶುದ್ಧಿಗೊಳಿಸಲ್ಪಟ್ಟು ಕಲ್ಯಾಣಪುರಿಯಾದ ಬೆಂಗಳೂರು ನಗರಕ್ಕೆ ಅಮೃತ ಪ್ರವಾಹದಂತೆ ಪ್ರವಹಿಸುವುದು" ಎಂದು ಭಾಷಣಮಾಡಿದ ನಂತರ ಶ್ರೀಮನ್ಮಹಾರಾಜರವರು ಜಲಾಶಯದ ಪ್ರಾರಂಭೋತ್ಸವವನ್ನು ನೆರವೇರಿಸಿ ಅಲ್ಲಿನ ಕೆಲಸಗಳನ್ನು ಪರಾಂಬರಿಸಿದರು. ಚೀಫ್ ಇಂಜನಿಯರವರು ಸವಿಸ್ತಾರವಾಗಿ ಎಲ್ಲವನ್ನೂ ವಿವರಿಸಿದರು.

ಜಂಜೀರಾ ನವಾಬರೂ ನಾಗೋಡಿನ ರಾಜರೂ, ಧರಂಪುರದ ಮಹಾರಾಜರೂ, ಸಂಡೂರ್ ಮನೆತನದವರೂ ಈ ಉತ್ಸವಕ್ಕೆ ದಯಮಾಡಿಸಿದ್ದರು. ಮಹೋತ್ಸವದ ಸಲುವಾಗಿ ಅತಿಥಿಗಳಿಗೆ ಫಲಹಾರ ವಿನಿಯೋಗವಾಯಿತು. ಮಹೋತ್ಸವವು ಸುಮಾರು ೧೦ ಗಂಟೆಗೆ ಪರಿಸಮಾಪ್ತಿಯಾಯಿತು. ಅನಂತರ ಮಹಾಪ್ರಭುಗಳು ದಾರಿಯುದ್ದಕ್ಕೂ ರಾಜಭಕ್ತಿಯುತವಾದ ಆತಿಥ್ಯವನ್ನು ಸ್ವೀಕರಿಸಿ ಬೆಂಗಳೂರಿಗೆ ಹಿಂತಿರುಗಿದರು.

(ತಾಯಿನಾಡು)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೀತಿಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರೆತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಸ್ಸಿಗೆ ಆಣೆ 0-9-0, 1 ಡಿಸ್ಸಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನೆತ್ತಿ ಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇತ್ಯ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[29] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನವು. ನಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಛೋಪಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಹುತಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[10] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	**12 As.**
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.



ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[11] ಪೋ. ಬಾ. ೫೧೦, ಮದರಾಸು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ಮಾರ್ಚಿ ೧೯೩೩ [ಸಂಚಿಕೆ ೪೫

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಶೈವೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿ ಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವುವು. ಈ ಗ್ರಂಥವು ೨೩೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಬೇಕಾಗಿದೆ.

ಹೈದರಾಬಾದು, ರಾಯಚೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಜಮಾನ್ ಅಂಡ್ ಸನ್,
ರಬ್ಬರ್ ಸ್ಟಾಂಪ್ ಮತ್ತು ಫೋಟೋ
[15] ಬ್ಲಾಕುಗಳನ್ನು ತಯಾರಿಸುವವರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮಹಾಶಿವರಾತ್ರಿಯ ಸಮಾರಂಭ
ಚಿಕ್ಕಮಗಳೂರು.

ಕಳೆದ ಮಾಘ ಕೃಷ್ಣ ೧೪ ಬುಧವಾರ ಪ್ರತಿವರ್ಷದ ಪದ್ಧತಿಯಂತೆ ಕಾಫಿಪ್ಲಾಂಟರ್ ಮ|| ರಾ|| ಬಿಜ್ಜಾಲೆ ಗುರುಸಿದ್ಧಪ್ಪಶೆಟ್ಟರವರು ಆ ದಿನ ಗುರುಮೂರ್ತಿಗಳನ್ನು ಬರಮಾಡಿಕೊಂಡು ತಮ್ಮ ಗೃಹದಲ್ಲಿ ಯಥಾವಿಧಿಯಾಗಿ ಶಿವಲಿಂಗಪೂಜಾ ಗುರುಪೂಜೆಗಳನ್ನು ನೆರವೇರಿಸಿ ರಾತ್ರಿ ೧೦ಕ್ಕೆ ಘಂಟೆಯ ಮೇಲೆ ತಾವು ನೂತನವಾಗಿ ೫೦೦ ರೂಪಾಯಿಗಳಿಂದ ತಯಾರುಮಾಡಿಸಿ ನೊನ್ನೆ ಚಿಕ್ಕಮಗಳೂರಿನಲ್ಲಿ ಪ್ರದರ್ಶನಕ್ಕಿಟ್ಟಿದ್ದ ದಿವ್ಯವಾದ ಮಂಟಪವನ್ನು ಈಶ್ವರನ ಫೋಟೋಗಳಿಂದ ಅಲಂಕರಿಸಿ ವೇ|| ಜ|| ನಂಜುಂಡಾರಾಧ್ಯಶಾಸ್ತ್ರಿಗಳವರು ಶಿವಕಥಾಪಂಡಿತ ಇವರಿಂದ ಮನೋಹರವೂ ಅಮೋಘವೂ ಆದ ಶಿವಕೀರ್ತನೆಯನ್ನು ಮಾಡಿಸಿ ಅನಂತರ ಮಂಗಳಾರತಿ ಪ್ರಸಾದಗಳೊಂದಿಗೆ ಬಂದಿದ್ದ ಯಾವತ್ತು ಜನಗಳಿಗೆ ಸತ್ಕರಿಸಿದರು.

ವೀರಣ್ಣಯ್ಯ, ಅಯ್ಯನಹಳ್ಳಿಮಠ.

ಸ್ವೀಕಾರ

ಶಿರಹಟ್ಟಿ ತಾಲೂಕು ಸಿಟ್ಟೂರು ಗ್ರಾಮದ ವೇ|| ಹಿರೇಮಠದ ವೀರಯ್ಯನವರ ಪುತ್ರಿ ಪಾರ್ವತೀಬಾಯಿಯನ್ನು ವೇ|| ಬಾಳೇಹಳ್ಳಿಮಠದ ಜೋಗಯ್ಯನವರ ಪುತ್ರ ಚಿ|| ಚನ್ನಬಸಯ್ಯನವರಿಗೆ ಕೊಟ್ಟು ಲಕ್ಷ್ಮೇಶ್ವರದಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಂದರ್ಭದಲ್ಲಿ ವರನ ಕಡೆಯಿಂದ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ವೇ|| ಕಾಶಪ್ಪಯ್ಯನವರು ಚನ್ನಪ್ಪಯ್ಯನವರು ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ನಿವಾಸಿಗಳಾದ ನಂದಿಗುಡಿಮಠದ ಅಕ್ಕಿಮಂಡಿ ವೇ|| ಎನ್. ರುದ್ರಯ್ಯನವರು ಆಪನಹಳ್ಳಿಯಲ್ಲಿರುವ ನಂದಿಗುಡಿಮಠದ ವೇ|| ರುದ್ರಯ್ಯನವರ ಮಗ ಚಿ|| ಜಂಗಲೀಶ್ವರನಿಗೆ ಕೊಡಿಗೆಮಠದ ವೇ|| ಚಿಕ್ಕವೀರಯ್ಯನವರ ಪುತ್ರಿ ಚಿ|| ಸೌ|| ನಂಜಮ್ಮನನ್ನು ಕೊಟ್ಟು ಧರ್ಮಾರ್ಥವಾಗಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಕಂಬಾಳಿಮಠದ ವೇ|| ವಿಶ್ವನಾಥಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಧಾರ್ವಾಡ ಡಿ|| ಹಾವೇರಿಯ ನಡುವಿನಮಠದಲ್ಲಿ ನೆರವೇರಿದ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಬಣ್ಣದಮಠದ ವೇ|| ಚನ್ನಮಲ್ಲಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಚನ್ನಪಟ್ಟಣದ ಸಿಂಗರ್‌ಕಂಪನಿಯ ಏಜಂಟರಾದ ಶ್ರೀ|| ಕೆ. ಮಲ್ಲಪ್ಪನವರು ಕ್ಲೋಸ್‌ಪೇಟೆ ತಾಲೂಕಿಗೆ ಸೇರಿದ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯವರ ಬೆಟ್ಟದಲ್ಲಿ ಶ್ರೀ ರೇಣುಕಭಗವತ್ಪಾದರ ಜಯಂತಿ ಮಹೋತ್ಸವವನ್ನು ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ತಿದ್ದುಪಡಿ.

(ಕಳೆದವಾರದ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ತೀರ್ಥರಾಮೇಶ್ವರಕ್ಷೇತ್ರದಲ್ಲಿ ನೆರವೇರಿದ ವಿವಾಹಮಹೋತ್ಸವ ಸಂಬಂಧವಾದ ಸ್ವೀಕಾರವನ್ನು ಈ ಕೆಳಗೆ ಕಂಡಂತೆ ಓದಿಕೊಳ್ಳಬೇಕಾಗಿ ಕೋರಿದೆ.)

ಶಿವಮೊಗ್ಗ ಡಿ|| ಹೊಸಂತಿಮಠದಲ್ಲಿರುವ ಮ|| ರಾ|| ಬ್ರಹ್ಮಶೆಟ್ಟರ ಸಿದ್ಧಲಿಂಗಪ್ಪಶೆಟ್ಟರ ಪುತ್ರ ಚಿ|| ಹೆಚ್. ಮಹಂತಪ್ಪನವರು ಬಿ. ಎ. ಎಲ್. ಎಲ್. ಬಿ. ವಕೀಲ್ ಸಾಗರ ಇವರಿಗೆ ನೇಮತಿ ಕುಡುಪಲಿ ಮ|| ರಾ|| ಬಸವಲಿಂಗಪ್ಪನವರ ಅಣ್ಣಂದಿರಾದ ಮ|| ರಾ|| ಕುಡುಪಲಿ ರುದ್ರಪ್ಪನವರ ಪುತ್ರಿ ಚಿ|| ಸೌ|| ಹ|| ಕು|| ಕೋ|| ಹಾಲಮ್ಮನನ್ನು ಕೊಟ್ಟು ತೀರ್ಥರಾಮೇಶ್ವರ ಕ್ಷೇತ್ರದಲ್ಲಿ ವಿವಾಹಮಹೋತ್ಸವವು ನಡೆದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಪರವಾಗಿ ಮ|| ರಾ|| ಸಿದ್ಧಲಿಂಗಪ್ಪ ಶೆಟ್ಟರಿಂದ ಸಮರ್ಪಿಸಲ್ಪಟ್ಟ 5 ರೂ. ವಧುವಿನ ಪರವಾಗಿ ಮ|| ರಾ|| ಕುಡುಪಲಿ ಬಸವಲಿಂಗಪ್ಪನವರಿಂದ ಸಮರ್ಪಿಸಲ್ಪಟ್ಟ 10 ರೂ. ಒಟ್ಟು 15 ರೂ. ಗಳು ಮ|| ರಾ|| ಹೊಮ್ಮರಡಿ ಸಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಬೆಂಗಳೂರು.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮಹಾಂತಿನಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಇಲ್ಲಿಯ ಸಮಸ್ತವೀರಶೈವ ದೈವಮಂಡಲಿಯೊಡನೆ ಅತ್ಯಂತವೈಭವದಿಂದ ನೆರವೇರಿಸಲ್ಪಟ್ಟಿತು. ಆ ಪುಣ್ಯದಿನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕವೂ, ಸಹಸ್ರಬಿಲ್ವಾರ್ಚನೆಯೂ ಶಾಸ್ತ್ರೋಕ್ತವಾಗಿ ನೆರವೇರಿಸಲ್ಪಟ್ಟನಂತರ ಅದೇ ಮಹಾಂತಿನಮಠದಲ್ಲಿ ಭಕ್ತ ಮಾಹೇಶ್ವರ ಸಮಾರಾಧನೆಯು ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕಾಗಿ ಅನೇಕಜನ ಗುರುಭಕ್ತರು ಆಗಮಿಸಿದ್ದರು. ಆ ಜಯಂತಿಮಹೋತ್ಸವದ ಪೂರ್ವದಿನಗಳಲ್ಲಿ (ಅಂದರೆ) ಬುಧವಾರ ತಾ|| 8-3-33 ಸಾಯಂಕಾಲ ಆರುಘಂಟೆಯಿಂದ ಮ|| ರಾ|| ಎ. ವಿ. ನರಸಿಂಹಯ್ಯಂಗಾರ್, ಬಿ.ಎ., ಬಿ.ಎಲ್., ಇವರ ಅಧ್ಯಕ್ಷತೆಯಲ್ಲಿಯೂ, ಮತ್ತು ತಾ|| 9.3-33 ನೆಯ ಗುರುವಾರ ಸಾಯಂಕಾಲ ಆರುಘಂಟೆಯಿಂದ ಮ|| ರಾ|| ಅಡ್ವೊಕೇಟ್ ಎಂ. ಬಿ. ವರದರಾಜಯ್ಯಂಗಾರ್ ಬಿ.ಎ., ಬಿ.ಎಲ್., ಇವರ ಅಧ್ಯಕ್ಷತೆಯಲ್ಲಿಯೂ, ವೇ|| ಶ್ರೀ|| ಪಂ|| ಮೈಸೂರು ಗೌರೀದೇವುದು ಶಾಸ್ತ್ರಿಗಳವರಿಂದ ಶ್ರೀ ರೇಣುಕವಿಜಯವೆಂಬ ಪುರಾಣಪಠನವೂ, ವೇ|| ಶ್ರೀ|| ಕನ್ನಡಪಂಡಿತ ಮೈಸೂರು ನಾರಾಯಣಜೋಯಿಸರವರಿಂದ ಪುರಾಣದ ವ್ಯಾಖ್ಯಾನವೂ ಅತ್ಯಂತಮನೋಹರವಾದ ಸಂಗೀತದಿಂದಲೂ, ಪ್ರತಿಯೊಬ್ಬರ ಮನಸ್ಸನ್ನಾಕರ್ಷಿಸುವ ಸಂಭಾಷಣೆಗಳಿಂದಲೂ ಅತ್ಯಂತಆನಂದದೊಡನೆ ನೆರವೇರಿಸಲ್ಪಟ್ಟಿತು. ಆ ಜಯಂತಿಮಹೋತ್ಸವದಿವಸದಲ್ಲಿ ಅತ್ಯಂತಸುಂದರವಾಗಿ ರಚಿಸಲ್ಪಟ್ಟ ಪೆಂಡಾಲಿನಲ್ಲಿ ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆ.ಟಿ.ಸಿ.ಐ.ಇ., ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಪ್ರಥಮದಲ್ಲಿ ವೈದಿಕವಿದ್ಯಾರ್ಥಿಗಳಿಂದ ವೇದಘೋಷವೂ ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವೂ ಆದನಂತರ ವೇ|| ಅಕ್ಕಿಮಂಡಿ ಎನ್. ರುದ್ರಯ್ಯನವರು ಸದರಿ ಜಯಂತಿ ಫಂಡಿನ ವಾರ್ಷಿಕವರದಿಯನ್ನೂ ಮತ್ತು ಸದರಿ ಜಯಂತಿಫಂಡಿಗೆ ಕಳೆದವರ್ಷ ವಸೂಲಿಯಾದ ರೂಪಾಯಿ 401-11-2 ಮತ್ತು ಸದರಿ ಫಂಡಿನಿಂದ ಬಡ್ಡಿ ರೂಪಾಯಿ 110-0-0 ಇದರಲ್ಲಿ ಖರ್ಚು ರೂಪಾಯಿ 402-7-3 ಜಾತಾ ರೂಪಾಯಿ 109-3-11 ಅಸಲ್‌ಫಂಡಿಗೆ ಜಮಾ ಆಗಿ ಒಟ್ಟು ರೂಪಾಯಿ 1312-12-1 ಗೌರ್ನಮೆಂಟು ಹುಜೂರು ಟ್ರೆಜರಿಯಲ್ಲಿರುತ್ತೆ ಎಂಬ ವಿಷಯವನ್ನೂ, ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥಭಂಡಾರದ ವಾರ್ಷಿಕವರದಿಯನ್ನೂ ಸಭಿಕರಮನಸ್ಸಿಗೆ ಬರುವಂತೆ ಓದಿಹೇಳಿದರು. ಮತ್ತು ಮ|| ರಾ|| ಶಾಂತವೀರಪ್ಪನವರ ಬುಳ್ಳಪ್ಪನವರು ತಮ್ಮ ಸ್ವಾರ್ಜಿತ ಯಾವತ್ತು ದ್ರವ್ಯವನ್ನು ಶ್ರೀ ಮದ್ರಂಭಾಪುರೀ ಶ್ರೀ ಜಗದ್ಗುರುಗಳವರಿಗೆ ಸಮರ್ಪಿಸಿ ಅವರಿಂದ ಪಂಚಾಚಾರ್ಯ ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿ ಅನ್ನೋದಕವಸತಿಗಳನ್ನೇರ್ಪಡಿಸಿ ತಾವೇ ಸ್ವಂತವಾಗಿ ಸದರಿ ವಿದ್ಯಾರ್ಥಿಗಳ ಪೋಷಣ ವಗೈರೆಗಳನ್ನು ಮಾಡಿಸುತ್ತಿರುವರಲ್ಲದೆ ಈ ಸಂಸ್ಥೆಗೆ ಟ್ರಸ್ಟಿಗಳನ್ನೂ ಕೂಡ ಏರ್ಪಡಿಸಿರುವರು. ಈ ಪಾಠಶಾಲೆಯಲ್ಲಿ ಹದಿನಾಲ್ಕುಮಂದಿ ವಿದ್ಯಾರ್ಥಿಗಳಿರುವರು. ಇವರಲ್ಲಿ ಆರುಜನ ವಿದ್ಯಾರ್ಥಿಗಳು ದೊಡ್ಡಕ್ಲಾಸಿನಲ್ಲಿರುವರು. ಎಂಟುಜನ ವಿದ್ಯಾರ್ಥಿಗಳು ಚಿಕ್ಕಕ್ಲಾಸಿನಲ್ಲಿರುವರು. ಈ ಪಾಠಶಾಲೆಯ ಧರ್ಮಕರ್ತರು ಇತೋಪ್ಯತಿಶಯವಾಗಿ ಪಾಠಶಾಲೆಯು ಅಭಿವೃದ್ಧಿಗೆ ಬರಲೆಂದು ಅಪೇಕ್ಷಿಸುತ್ತಿರುವರೆಂದು ಹೇಳಿ ಭಾಷಣವನ್ನು ವಿರಮಿಸಿದರು. ಮತ್ತು ಅದೇ ಪಾಠಶಾಲೆಯ ವಿದ್ಯಾರ್ಥಿಗಳು ಧಾರ್ಮಿಕಭಾಷಣಗಳನ್ನು ಸಪ್ರಮಾಣವಾಗಿ ಸಭಿಕರಮನಸ್ಸಿಗೆ ಆನಂದವಾಗುವಂತೆ ಮಾಡಿದರು. ಅನಂತರ ಮ|| ರಾ|| ದೊಡ್ಡಬಳ್ಳಾಪುರದ ರುದ್ರಪ್ಪನವರು ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸಪ್ರಮಾಣವಾಗಿಯೂ, ಸಂಯುಕ್ತವಾಗಿಯೂ ಸಂಭಾಷಿಸಿದರು. ಅನಂತರ ಮೇಲ್ಕಂಡ ಪಂಡಿತರುಗಳಿಂದ ಸದರಿ ಪುರಾಣದ ಪಠನವು ರಸಭರಿತವಾಗಿಯೂ, ಸುಶ್ರಾವ್ಯವಾಗಿಯೂ ನಡೆಯಿಸಲ್ಪಟ್ಟಿತು.

ಅನಂತರ ಅಧ್ಯಕ್ಷಮಹಾಶಯರು ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹಾಮಹಿಮೆಗಳನ್ನು ಕೊಂಡಾಡಿ ಅವರ ಮೂಲಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳಿ ಇದೇ ರೀತಿಯಾಗಿಯೇ ಜಯಂತಿಯು ಮಹೋತ್ಸವಕಾರ್ಯವು ಇತೋಪ್ಯತಿಶಯವಾಗಿ ನಡೆಯಲೆಂದು ಸಂಭಾಷಿಸಿದರು. ಇವರ ಆಸ್ತಿಕಭಾಷಣವನ್ನು ಕೇಳಿ ಸರ್ವರೂ ಆನಂದಸಾಗರದಲ್ಲಿ ಮುಳುಗಿಹೋಗಿದ್ದರು. ಸಭಾಕಾರ್ಯವು ಪೂರೈಸಿದ ನಂತರ ಜಗದಾಚಾರ್ಯರ ಮಹೋತ್ಸವವು ಪ್ರಾರಂಭವಾಯಿತು. ಮ|| ರಾ|| ಗುಡೇಮಾರನಹಳ್ಳಿ ಶಿವಪ್ಪನವರ ಸುಪುತ್ರ ಮಲ್ಲಿಕಾರ್ಜುನಪ್ಪನವರು ತಮ್ಮ ಅನನ್ಯಭಕ್ತಿಯಿಂದ ತಾವು ಹೋದವರ್ಷ ಮಾಡಿಸಿಕೊಟ್ಟ ಪಂಚಲೋಹ ಲಿಂಗೋದ್ಭವ ರೇಣುಕಮೂರ್ತಿಗೆ ಈ ವರ್ಷವೂ ಕೂಡ ತಮ್ಮ ಸಂಕಲ್ಪದಂತೆ ಸುವರ್ಣ ರಚಿತವಾದ ಕಿರೀಟವನ್ನೂ, ಪುಷ್ಪರಾಗ ಕಲ್ಲುಗಳಿಂದ ರಚಿತವಾದ ಫಾಲನೇತ್ರವನ್ನೂ ಮಾಡಿಸಿದುದು ವೀರಶೈವ ಸಮುದಾಯಕ್ಕೆಲ್ಲಾ ಅತ್ಯಾನಂದವನ್ನುಂಟುಮಾಡಿತು. ಈ ನೂತನಕಿರೀಟ ಫಾಲನೇತ್ರ ಇವುಗಳಿಂದೊಡಗೂಡಿದ ಆಚಾರ್ಯರ ದಿವ್ಯಲಿಂಗೋದ್ಭವಮೂರ್ತಿಯು ಕುಸುಮಗಳಿಂದಲೂ ನಾನಾತರಹದ ವಿದ್ಯುದ್ದೀಪಗಳಿಂದಲೂ ಅಲಂಕೃತವಾದ ರಥದಲ್ಲಿ ಮೂರ್ತಗೊಳಿಸಲ್ಪಟ್ಟಿತು. ಈ ರೀತಿಯಾಗಿ ವೈಭವಯುಕ್ತವಾದ ಮಹೋತ್ಸವವು ನಂದೀಧ್ವಜ ಸಮೇತವಾಗಿ ನಾನಾತರಹದ ಮಂಗಲವಾದ್ಯಗಳೊಡನೆ ಪಟ್ಟಣದ ಮುಖ್ಯಮುಖ್ಯ ರಾಜಬೀದಿಗಳಲ್ಲೆಲ್ಲಾ ನೆರವೇರಿ ಮಹಂತಿನಮಠಕ್ಕೆ ಬಂದು ತಲುಪಿತು. ನಂತರ ಜಗದಾಚಾರ್ಯರಿಗೆ ಮಂಗಲಾರತಿಯಾಗಿ ಮಹೋತ್ಸವಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು. ಈ ಮಹೋತ್ಸವ ಕಾರ್ಯದಲ್ಲಿ ಅನೇಕ ಜನ ಗುರುಭಕ್ತರು ಅಸಾಧಾರಣವಾದ ಭಕ್ತಿಯನ್ನು ವಹಿಸಿ ಕಾರ್ಯವನ್ನು ಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ಸಂತೋಷವೆನಿಸುತ್ತದೆ. ಉತ್ಸವದ ಮಾರನೇ ದಿನ ಸಾಯಂಕಾಲ ಆರು ಘಂಟೆಯಿಂದ ಮ|| ರಾ|| ಹೈಕೋರ್ಟ್ ಚೀಫ್ ಜಡ್ಜ್ ಪಿ ಮಹಾದೇವಯ್ಯನವರು ಈ ಮಹಾಶಯರ ಅಧ್ಯಕ್ಷತೆಯಲ್ಲಿ ಪದ್ಧತಿಪ್ರಕಾರ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವೂ ವೇದಘೋಷವೂ ಆದನಂತರ ಸಭಾಕಾರ್ಯವು ಪ್ರಾರಂಭವಾಯಿತು. ಮ|| ರಾ|| ದೊಡ್ಡಬಳ್ಳಾಪುರದ ರುದ್ರಪ್ಪನವರು ತಮಗೆ ಕೊಟ್ಟ ಕ್ಲುಪ್ತ ಸಮಯದಲ್ಲಿ ಧಾರ್ಮಿಕ ವಿಷಯವಾಗಿ ಒಂದೆರಡು ವಿಷಯಗಳನ್ನು ಯುಕ್ತಿಯುಕ್ತವಾಗಿ ಹೇಳಿ ಸಭಿಕರನ್ನು ಸಂತೋಷಪಡಿಸಿದನಂತರ ಪ್ರತಿದಿನದಂತೆ ಶ್ರೀ ರೇಣುಕವಿಜಯ ಪುರಾಣಶ್ರವಣವು ಅತಿವೈಭವದಿಂದ ನಡೆಯಿಸಲ್ಪಟ್ಟಿತು. ಪುರಾಣವು ಮುಗಿದನಂತರ ಅಧ್ಯಕ್ಷಮಹಾಶಯರು ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಪತ್ತಿ ಇವರ ಮಹಿಮೆ ಇವರಿಂದ ಸ್ಥಾಪಿತವಾದ ವೀರಶೈವಮತದ ಸನಾತನತ್ವ ಇವೇ ಮೊದಲಾದ ವಿಷಯಗಳ ಮೇಲೆ ಬಹು ಗಂಭೀರವಾಗಿಯೂ ಮನೋರಂಜಕವಾಗಿಯೂ ಸಂಭಾಷಿಸಿದರು. ಸಭಾ ಮುಕ್ತಾಯವಾಯಿತು. ಮಂಗಲವಾದನಂತರ ಪ್ರಸಾದವು ಹಂಚಲ್ಪಟ್ಟು ಪುಷ್ಪಹಾರಾದಿಗಳು ಅಧ್ಯಕ್ಷರಿಗೆ ವಿನಿಯೋಗಿಸಲ್ಪಟ್ಟವು. ಮತ್ತು ಮಾರನೇ ಭಾನುವಾರ ಸಾಯಂಕಾಲ ಆರು ಘಂಟೆಯಿಂದ ಮ|| ರಾ|| ಡಾಕ್ಟರ್ ಬಿ. ನಂಜಪ್ಪ ಈ ಮಹಾಶಯರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಈ ಸಭೆಗೆ ಅನೇಕ ಜನ ಗುರುಭಕ್ತರೂ ಅನೇಕ ಮಹಿಳೆಯರೂ ಆಗಮಿಸಿದ್ದರು. ವೇ|| ಶಿವಕಥಾಪಂಡಿತ ಕೀರ್ತನ ಕಂಠೀರವ ಇತ್ಯಾದಿ ಬಿರುದಾಂಕಿತರಾದ ಶಿವದೇವಶಾಸ್ತ್ರಿಗಳವರು ಗುರೂತ್ಕೃಷ್ಟತೆ ಸಿದ್ಧಾಂತದಿಂದಲೂ ಪಂಚಾಕ್ಷರಿ ಮಹಾಮಂತ್ರದ ಉಪನ್ಯಾಸಪೂರ್ವಕವಾಗಿ '' ಕಿರಾತಾರ್ಜುನೀಯ '' ಎಂಬ ಕೀರ್ತನವನ್ನು ರಸಭರಿತವಾಗಿ ಮಾಡಿ ಸಭಿಕರನ್ನು ಸಂತೋಷಪಡಿಸಿದರು. ಕೀರ್ತನವು ಮುಗಿದನಂತರ ಅಧ್ಯಕ್ಷಮಹಾಶಯರು ಧರ್ಮಬೋಧಕವಾದ ಮಾತುಗಳನ್ನು ಹೇಳಿ ಸದರಿ ಶಿವಕಥಾಪಂಡಿತರ ವಿಷಯದಲ್ಲಿ ಅವರ ಅದ್ಭುತ ಶಕ್ತಿಯನ್ನು ನೋಡಿ ಸಭಿಕರೆದುರಿಗೆ ಆನಂದೋದ್ಗಾರವನ್ನು ಮಾಡಿದರು. ಸಭಾವಿಸರ್ಜನೆಯಾಯಿತು. ಪ್ರಸಾದವಿನಿಯೋಗಪೂರ್ವಕ ಅಧ್ಯಕ್ಷರಿಗೆ ಪುಷ್ಪಹಾರಾದಿಗಳು ಸಮರ್ಪಿಸಲ್ಪಟ್ಟವು. ಮತ್ತೊಂದು ವಿಷಯವನ್ನು ವಿಜ್ಞಾಪಿಸಿಕೊಳ್ಳುವುದೇನೆಂದರೆ ಪಂಡಿತರಾದವರು ಜಯಂತಿಮಹೋತ್ಸವಕಾಲದಲ್ಲಿ ದಯಮಾಡಿಸಿ ಇಲ್ಲಿ ನಡೆಯುವ ಸಭೆಯಲ್ಲಿ ಮತಸಂಬಂಧವಾದ ಧಾರ್ಮಿಕ ವಿಷಯಗಳನ್ನು ಬೋಧಿಸಿ ಅವರ ಪ್ರೀತಿಗೆ ಪಾತ್ರರಾಗಿ ಅವರ ಸತ್ಕಾರವನ್ನು ಅಂಗೀಕರಿಸಬೇಕೆಂದು ಕೋರುವುದಲ್ಲದೆ ಮುಂಚಿತವಾಗಿಯೇ ಬರಲಪೇಕ್ಷೆಯುಳ್ಳ ಪಂಡಿತರುಗಳು ಇಲ್ಲಿಯ ದೇಶದ ಶೆಟ್ಟರು ಯಜಮಾನರುಗಳಿಗೆ ಅಡ್ರಸ್ಸು ಮೊದಲಾದುದನ್ನು ತಿಳುಹಿಸಬೇಕಾಗುವುದು. ಹೀಗೆ ತಾವು ದಯಮಾಡಿಸುವುದು ಸಮಾಜೋನ್ನತಿಯಕಾರ್ಯವೆಂದೇ ತಿಳಿಯುತ್ತೇನೆ.

ಪ್ರೇಕ್ಷಕ.

ಬಿಡದಿ.

ಶ್ರೀಮತ್ಪರಶಿವಪಂಚವದನೋದ್ಭವರಾಗಿ ಜಗದಾದಿಯಿಂದಲೂ ವೀರಶೈವ ಮಹಾಮತಸ್ಥಾಪಕರಾದ ಪಂಚಾಚಾರ್ಯರಲ್ಲೋರ್ವರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವು ಇದೇ ಫಾಲ್ಗುಣ ಶುದ್ಧ ತ್ರಯೋದಶಿ ತಾ|| 10-3-33ನೇ ಶುಕ್ರವಾರ ಬಿಡದಿ ಗ್ರಾಮದಲ್ಲಿ ಪದ್ಧತಿ ಪ್ರಕಾರ ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು. ಈ ದಿನ ಪ್ರಾತಃಕಾಲ 9 ಘಂಟೆಯ ಮೇಲೆ ಬಸವೇಶ್ವರ ದೇವಾಲಯದಲ್ಲಿ ಶ್ರೀ ರೇಣುಕಾಚಾರ್ಯರ ರಜತಮೂರ್ತಿಗೆ ವಿಧ್ಯುಕ್ತವಾಗಿ ಪೂಜಾಕಾರ್ಯಗಳು ನೆರವೇರಿಸಲ್ಪಟ್ಟವು. ರಾತ್ರಿ 9 ಘಂಟೆಯ ಮೇಲೆ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟ ರಥದ ಮೇಲೆ ಶ್ರೀ ರೇಣುಕಾಚಾರ್ಯರ ರಜತಮಂಗಲಮೂರ್ತಿಯೂ ಮತ್ತು ಮಹಾವೃಷಭೇಶ್ವರ ವಾಹನ ಸಹಿತ ಉಮಾಮಹೇಶ್ವರ ಮೂರ್ತಿಯೂ ಮೂರ್ತಗೊಳಿಸಲ್ಪಟ್ಟನಂತರ ದೇಶದ ಶೆಟ್ಟರು ಗ್ರಾಮದ ಪ್ರಮುಖರೇ ಮೊದಲಾದ ಸಕಲ ಸದ್ಭಕ್ತರೂ ಸೇರಿ ರಥೋತ್ಸವವನ್ನು ಬಸವೇಶ್ವರ ದೇವಾಲಯದಿಂದ ಪ್ರಾರಂಭಿಸಿ ರಾಜಮಾರ್ಗ ಮೊದಲಾಗಿ ಗ್ರಾಮದ ಸಕಲ ಬೀದಿಗಳಲ್ಲೂ ನಡೆಸಿದರು. ಆ ಕಾಲದಲ್ಲಿ ಶ್ರೀ ಗುರುಸಾರ್ವಭೌಮನ ಸುಂದರ ತೇಜೋಮೂರ್ತಿಯನ್ನು ನೋಡಿದೊಡನೆಯೇ ಆನಂದತುಂದಿಲಹೃದಯರಾದ ಸಮಸ್ತರೂ ತಮ್ಮ ತಮ್ಮ ಮನೆಯ ಮುಂಭಾಗಕ್ಕೆ ಮಹೋತ್ಸವವು ದಯಮಾಡಿಸಿದ ಕೂಡಲೆ ಫಲಪುಷ್ಪ ನೀರಾಜನಾದಿಗಳನ್ನು ಮಹಾಸ್ವಾಮಿಯವರಿಗೆ ಸಮರ್ಪಿಸಿ ತಮ್ಮ ಗುರುದೇವತಾಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಮಹೋತ್ಸವವು ರಾತ್ರಿ 12 ಘಂಟೆಗೆ ಸ್ವಸ್ಥಾನಕ್ಕೆ ಬಿಜಯಂಗೈಸಿದಮೇಲೆ ನೀರಾಜನವು ಬೆಳಗಲ್ಪಟ್ಟು ಪೂರ್ತಿಗೊಳಿಸಲ್ಪಟ್ಟಿತು. ಸಮಸ್ತ ಸದ್ಭಕ್ತರಿಗೂ ಜಗದಾಚಾರ್ಯರು ಸನ್ಮಂಗಳಗಳನ್ನೀಯಲೆಂದು ಕೋರುವ,

ದೇಶದಶೆಟ್ಟರು.

ಹಾವೇರಿ.

ಹಾವೇರಿ ನಡುವಿನ ಮಠದಲ್ಲಿ ಪದ್ಧತಿಯ ಪ್ರಕಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಫಾಲ್ಗುಣ ಶು|| ೧೩ ಶುಕ್ರವಾರ ತಾ|| 10-3-33 ನೇ ದಿವಸ ಗ್ರಾಮದ ಪ್ರಮುಖರಿಂದ ಬಹುವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಮೊದಲೇ ಗೊತ್ತುಪಡಿಸಿದಂತೆ ಗ್ರಾಮದ ಎಲ್ಲಾ ಬೀದಿಗಳೂ ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಭಗವತ್ಪಾದರ ರಜತವಿಗ್ರಹಕ್ಕೆ ಪ್ರಾತಃಕಾಲದಲ್ಲಿ ರುದ್ರಾಭಿಷೇಕವು ವಿಧ್ಯುಕ್ತವಾಗಿ ವೇ|| ನಡುವಿನ ಮಠದ ಚಂದ್ರಶೇಖರಯ್ಯನವರಿಂದ ಮಾಡಲ್ಪಟ್ಟಿತು. ಮಧ್ಯಾಹ್ನ ಗಣಾರಾಧನೆಯಾದನಂತರ ಸಾಯಂಕಾಲದಲ್ಲಿ ಅಲಂಕೃತವಾದ ಪಂಚಕಲಶಯುಕ್ತ ಪಲ್ಲಕ್ಕಿಯಲ್ಲಿ ಭಗವತ್ಪಾದರ ವಿಗ್ರಹವನ್ನು ಮೂರ್ತಮಾಡಿಸಿ ಗ್ರಾಮದ ಮುಖ್ಯಬೀದಿಗಳಲ್ಲಿ ಸಕಲ ವಾದ್ಯವೈಭವದಿಂದಲೂ ಹಾವೇರಿ ವೀರಾಪುರದ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರ ಮಂಜುಳವಾದ ಭಜನೆಯಿಂದಲೂ ಉತ್ಸವವು ಮಧ್ಯರಾತ್ರಿಗೆ ಮಠಕ್ಕೆ ಬಂದು ತಲ್ಪಿತು. ನಂತರ ಶ್ರೀ ಜಗದ್ಗುರುಗಳ ಶ್ರೇಯಃಪ್ರಾರ್ಥನೆಯೊಡನೆ ಯಾವತ್ತು ಮಹಾಜನಗಳಿಗೆ ಪ್ರಸಾದವು ಹಂಚಲ್ಪಟ್ಟಿತು.

ಉತ್ಸವಭಾಗಿ,
ಜಗದ್ಗುರು ಪಂಚಾಚಾರ್ಯ ಭಜನಾಸಂಘದ
ಸೆಕ್ರೆಟರಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಶಿವಾನಂದಾಶ್ರಮದಲ್ಲಿ ಮಹಾಶಿವರಾತ್ರಿಯ ಕಾಲಕ್ಕೆ ನಡೆದ ನೂತನಜಾತ್ರೆಯ ಸಮಾರಂಭ ಕಂಸಾಗರದ ಎಸ್ಟೇಟು ಕಡೂರು.

ಜಗತ್ತಿನಲ್ಲಿ ಪ್ರತಿಯೊಂದು ಜನಾಂಗವು ತಮ್ಮ ತಮ್ಮ ಉನ್ನತಿಯನ್ನೇ ಬಯಸುತ್ತಿರುವ ಸಂಗತಿಯು ನಿರ್ವಿವಾದವಾಗಿರುವುದು. ಇದರಂತೆ ನಮ್ಮ ಪ್ರಾಂತದಲ್ಲಿ ಸಮಾಜಸುಧಾರಣೆ ವಿದ್ಯೆಯ ಏಳಿಗೆಗೆ ಜ್ಞಾನದಪ್ರಸಾರಣೆ ಸಂಘಶಕ್ತಿಯ ಬೆಳವಣಿಗೆ ಮುಂತಾದವುಗಳಲ್ಲಿ ಜನಗಳು ಪ್ರಯತ್ನಮಾಡುತ್ತಿರುವುದು ಯಾರಿಗೆತಾನೆ ಸಂತೋಷವನ್ನುಂಟುಮಾಡಲಿಕ್ಕಿಲ್ಲ ? ಮತ್ತು ಕಡೂರು ಬೀರೂರು ಪ್ರದೇಶಗಳಲ್ಲಿ ವ್ಯವಹಾರವು ಬಹಳಮಟ್ಟಿಗೆ ಕಡಿಮೆಯಾಗಿ ಸಂಘಶಕ್ತಿಯಿಲ್ಲದೆ ಅಂಧಕಾರಮಯವಾಗಿರುವುದು. ಇದನ್ನು ತಿಳಿದು ಮೇಲ್ಕಂಡ ಆಶ್ರಮಸ್ಥಾಪನಾಚಾರ್ಯರಾದ ಶ್ರೀ ಷಟ್ಸ್ಥಲಭಕ್ತ ಚನ್ನಬಸವಸ್ವಾಮಿಗಳವರು ಮುಂಚಿತವಾಗಿಯೇ ಕೆಲವು ಸುಶಿಕ್ಷಿತ ಜನರನ್ನು ಬರಮಾಡಿಕೊಂಡು ಆಲೋಚನೆ ನಡೆಸಿದ್ದರಲ್ಲಿ ಜನಗಳಲ್ಲಿ ಸಂಘಶಕ್ತಿಯು ತನ್ಮೂಲಕ ವ್ಯವಹಾರವು ನಡೆದು ಆರ್ಥಿಕ ವೃದ್ಧಿಯು ಉಂಟಾಗುವಂತೆ ಮಾಡಬೇಕಾಗಿದ್ದರೆ, ಪ್ರತಿವರ್ಷ ಶಿವರಾತ್ರಿಯ ಮಹೋತ್ಸವಕಾಲಕ್ಕೆ ಆಶ್ರಮದಲ್ಲಿ ಒಂದು ಜಾತ್ರೆ ನಡೆಯುವಂತೆ ಮಾಡಿದರೆ ಕೈಕೊಂಡಿರುವ ಉದ್ದೇಶಗಳೆಲ್ಲಾ ಕ್ಷಿಪ್ರದಲ್ಲಿಯೇ ನೆರವೇರಿ ಈ ಪ್ರಾಂತವು ಮುಂದುವರಿಯಲು ಅನುಕೂಲವಾಗುತ್ತದೆಂಬ ಯಾವತ್ತರ ಅನುಮೋದನಪ್ರಕಾರ ಜಾತ್ರೆಯು ನಿರ್ಣಯವಾಯಿತು. ಇದಕ್ಕೆ ಶ್ರೀ ಪೂಜ್ಯಪಾದರಾದ ಚನ್ನಬಸವಸ್ವಾಮಿಗಳವರ ಅನುಗ್ರಹವೇ ಕಾರಣವಾಗಿರುವುದು. ಮರುದಿವಸದಿಂದಲೇ ಶ್ರೀಗಳವರು ಕೆಲವು ಗ್ರಾಮಗಳಲ್ಲಿ ಸಂಚರಿಸಿ ಭಕ್ತಾದಿಗಳ ಸಹಾಯದಿಂದ ಈ ವರ್ಷ ಜಾತ್ರೆಯು ನಡೆಯುವಂತೆ ಮಾಡಿದರು. ಇದು ಬಹಳ ಸಂತೋಷಜನಕವಾದ ಸಂಗತಿಯಲ್ಲದೆ ಇದು ಗುರುಮಹಿಮೆಯ ಪ್ರಭಾವವೇ ಸರಿ. ಜಾತ್ರೆಯ ಸಮಾರಂಭವು ಸುಸೂತ್ರವಾಗಿ ನಡೆಯಿಸಲ್ಪಟ್ಟಿದ್ದರಿಂದ ಆ ವಿಷಯವನ್ನಷ್ಟು ಬರೆದು ಲೇಖನವನ್ನು ಮುಗಿಸುವೆನು. ತಾ|| ೨೨-೨-೩೩ ಲಾಗಾಯ್ತು ತಾ|| ೨೫-೨-೩೩ ರವರೆಗೆ ಮಹಾಶಿವರಾತ್ರಿಯ ಸಂಬಂಧದಲ್ಲಿ ಜಾತ್ರೆಯ ಮಹೋತ್ಸವವನ್ನು ನಡೆಯಿಸಬೇಕಾಗಿ ನಿಶ್ಚಯಿಸಿರೋಣದರಿಂದ ಈ ಸಮಾರಂಭಕ್ಕೆ ಬರಬೇಕೆಂದು ಅನೇಕ ಗ್ರಾಮಗಳ ಸದ್ಗೃಹಸ್ಥರ ಕಡೆಗೆ ಆಮಂತ್ರಣಪತ್ರಿಕೆಗಳು ಕಳುಹಿಸಲ್ಪಟ್ಟಿದ್ದವು. ಆ ಪ್ರಕಾರ ಬೀರೂರು, ಕಡೂರು, ಅರಸೀಕೆರೆ, ಶಿವಮೊಗ್ಗಾ, ಬೆಂಗಳೂರು ಚಿಕ್ಕಮಗಳೂರು ಮುಂತಾದ ಕಡೆಯಿಂದ ಅನೇಕ ಜನಗಳು ಆಗಮಿಸಿದ್ದರು. ಚಿಕ್ಕಮಗಳೂರಿನಿಂದ ಶ್ರೀಮಂತರೂ, ಮುಂದಾಳುಗಳೂ ಆದ ಕಾಫಿಪ್ಲಾಂಟರ್ ಮ|| ರಾ|| ಸಿ. ಪಿ. ಬಸವೇಗೌಡರು ಕೆಲವು ಮುಖಂಡರೊಂದಿಗೆ ಬಂದಿದ್ದರು. ಆಮಂತ್ರಣಪತ್ರಿಕೆಯಲ್ಲಿ ತಿಳಿಸಿದ ಪ್ರಕಾರ ಮಹಾಶಿವರಾತ್ರಿಯ ದಿವಸ ಕರ್ತೃ ಶ್ರೀ ಮರುಳುಸಿದ್ಧೇಶ್ವರಸ್ವಾಮಿಗೆ ಶ್ರೀ ರುದ್ರಾಭಿಷೇಕ ಪೂಜಾದಿಗಳು ಜರಗಿಸಲ್ಪಟ್ಟು ಶಿವಕೀರ್ತನ, ಶಿವಪುರಾಣ, ಶಿವಭಜನೆ ಮೂಲಕ ಜಾಗರಣೆಯು ನಡೆಯಿತು. ಮರುದಿವಸ ಸಕಲಬಿರುದಾವಳಿಗಳಿಂದ ಶ್ರೀ ಕರ್ತೃಸ್ವಾಮಿಯ ಆಂದೋಳಿಕೋತ್ಸವವು, ಶುಕ್ರವಾರ ಶನಿವಾರ ದನಗಳ ಪ್ರದರ್ಶನ ಆಟಪಾಟಗಳು ನಡೆದು ಉತ್ತಮವಾದ ರಾಸುಗಳಿಗೆ ಬಹುಮಾನ ಹಂಚಲ್ಪಟ್ಟವು. ಆ ದಿವಸ ರಾತ್ರಿ ಸರಸ್ವತೀಪುರ ಹಿರಿಯೂರಿನಿಂದ ಬಂದಿದ್ದ ನಾಟಕಗಳು ನಡೆದು ಸದರಿ ಕಂಪೆನಿಯವರು ಮಹಾಸ್ವಾಮಿಗಳವರ ಆಶ್ರಮಕ್ಕೆ ಒಂದೊಂದು ನಾಟಕದ ಉತ್ಪತ್ತಿಯನ್ನು ಉಚಿತವಾಗಿ ಒಪ್ಪಿಸಿದರು. ಇಲ್ಲಿಗೆಬಂದ ಜ್ಞಾಪಕಾರ್ಥವಾಗಿ ಶ್ರೀ ಮರುಳುಸಿದ್ಧೇಶ್ವರಸ್ವಾಮಿ ಕೃಪಾಪೋಷಿತ ನಾಟಕಮಂಡಳಿಯೆಂತಲೂ ಮತ್ತೊಂದಕ್ಕೆ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕಮಂಡಳಿಯೆಂತಲೂ ಹೆಸರನ್ನಿಟ್ಟರು. ಇದೇ ಪ್ರಥಮವರ್ಷವಾದ್ದರಿಂದ ಜನಗಳು ಬರುವುದು ಹೋಗುವುದು ವಿಶೇಷವಾಗಿತ್ತು. ಪ್ರದರ್ಶನಕಾಲದಲ್ಲಿ ಬಹುಮಾನವನ್ನು ಹಂಚಲು ಅಧ್ಯಕ್ಷಸ್ಥಾನವನ್ನು ವಹಿಸುವಂತೆ ಮೊದಲೇ ಪ್ರಾರ್ಥಿಸಿಕೊಂಡಮೇರೆಗೆ ಕಡೂರು ಡಿಸ್ಟ್ರಿಕ್ಟು ಡೆಪ್ಯುಟೀ ಕಮಿಷನರ್‌ಸಾಹೇಬರವರು ನಿಯಮಿತವೇಳೆಗೆ ಬರಲು ಶ್ರೀಸ್ವಾಮಿಗಳವರು ಪ್ರಮುಖರೊಂದಿಗೆ ಹೋಗಿ ಎದುರುಗೊಂಡು ಮಂಗಲವಾದ್ಯದೊಡನೆ ಸಭಾಮಂಟಪಕ್ಕೆ ಕರೆದುಕೊಂಡುಬಂದರು. ಆ ಕಾಲಕ್ಕೆ ಜನಸಂದಣಿಯು ವಿಶೇಷವಾಗಿತ್ತು. ಅನೇಕರು ಇಂಥ ಪೂಜ್ಯ ಗುರುಮೂರ್ತಿಗಳು ನಮ್ಮ ಪ್ರಾಂತ ಅವತರಿಸಿ ಸುಧಾರಣಕಾರ್ಯಗಳನ್ನು ನಡೆಯಿಸುತ್ತಿರುವುದನ್ನು ನೋಡಿ ನಾವು ಧನ್ಯರಾದೆವೆಂದು ಆಲೋಚಿಸುತ್ತಿದ್ದರು. ಸಭಾಮಂಟಪವು ಕದಳೀಸ್ತಂಭತೋರಣಗಳಿಂದ ಶೋಭಾಯಮಾನವಾಗಿತ್ತು. ಸಾಹೇಬರವರ ಸಭಾಪ್ರವೇಶವಾದಕೂಡಲೆ ಕರತಾಡನವಾಗಿ ಆನಂದದಿಂದ ಅನುಗುಣವಾದ ಸ್ಥಳದಲ್ಲಿ ಎಲ್ಲರೊಂದಿಗೆ ವಿಶ್ರಮಿಸಿದರು. ಸ್ವಾಗತವನ್ನು ಬಯಸಿದನಂತರ ಅಡ್ವೊಕೇಟ್ ಶ್ರೀ|| ಬಸವಲಿಂಗಯ್ಯನವರು ಹೇಳಿದ್ದೇನೆಂದರೆ, ಮಹಾಸ್ವಾಮಿಗಳವರು ಈ ಪ್ರಾಂತ್ಯದ ಸದ್ಭಕ್ತರೊಂದಿಗೆ ಪ್ರಯತ್ನದಿಂದ ಜಾತ್ರೆಯನ್ನು ನಡೆಸಿದುದು ತುಂಬಾ ಸಂತೋಷಪ್ರದವಾದುದಾಗಿದೆ. ಈ ಪ್ರಾಂತ್ಯ ವ್ಯಾಪಾರಾಭಿವೃದ್ಧಿಗೂ, ಜನಗಳು ವಿಶೇಷವಾಗಿ ಸೇರುವುದಕ್ಕೂ ಅನುಕೂಲವಾದ ಮಾರ್ಗವಾಗಿರುವುದು. ಇಂಥ ಮಹನೀಯರಿಂದಲೇ ಒಂದೊಂದು ಮಹಾತ್ಕಾರ್ಯವು ಜರಗತಕ್ಕದ್ದಾಗಿದೆ. ಆದ್ದರಿಂದ ಸರ್ವರೂ ಧನ್ಯವಾದಗಳನ್ನು ಸಮರ್ಪಣಮಾಡತಕ್ಕದ್ದೆಂದು ಹೇಳಿ ವಿರಮಿಸಿದರು. ಸಭೆಯಲ್ಲಿ ವಿದ್ವಾಂಸರೂ, ಅಧಿಕಾರಿಗಳೂ ಶ್ರೀಮಂತರೂ ಮಿಳಿತರಾಗಿದ್ದರು. ಅನಂತರ ಅಧ್ಯಕ್ಷರು ಸಮಯೋಚಿತವಾದ ಭಾಷಣಮಾಡಿ ಇನ್ನು ಮುಂದೆ ನಡೆಯತಕ್ಕ ಸತ್ಕಾರ್ಯಗಳಿಗೆ ನಮ್ಮಿಂದ ಆಗತಕ್ಕ ಸಹಾಯವನ್ನು ಮಾಡುತ್ತೇವೆಂದು ಹೇಳಿ ಶ್ರೀಗಳವರ ಯೋಗ್ಯತಾವಿಶೇಷಗಳನ್ನು ಪ್ರತ್ಯಕ್ಷನೋಡಿ ಸಂತೋಷಪೂರ್ವಕ ಅಪ್ಪಣೆಕೊಡಿಸಿದರು. ಡೆಪ್ಯುಟೀ ಕಮಿಷನರ್‌ಸಾಹೇಬರವರು ಪ್ರೀತಿಪೂರ್ವಕವಾಗಿ ಬಂದು ಅಧ್ಯಕ್ಷಸ್ಥಾನವನ್ನು ವಹಿಸಿದ್ದಕ್ಕೋಸ್ಕರ ವಹಿಯಿಂದ ಅಭಾರಮನ್ನಿಸಲ್ಪಟ್ಟು ಹಾರತುರಾಯಿ ಗಂಧತಾಂಬೂಲಗಳು ಸಮರ್ಪಿಸಿ ಘನವನ್ನೈದಿದ ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಜಯಘೋಷವು ನಡೆದು ಸಭೆಯು ಬರಖಾಸ್ತಾಯಿತು. ಅಧ್ಯಕ್ಷರು ಆ ದಿನವೇ ದಯಮಾಡಿಸಿದರು. ಈ ಮಹತ್ಕಾರ್ಯದಲ್ಲಿ ಚನ್ನಾಪುರ ಸರಸ್ವತೀಪುರ ಮುಂತಾದ ಗ್ರಾಮದ ಜನಗಳೊಂದಿಗೆ ಮೊದಲಿಂದಲೂ ಕೊನೆಯವರೆವಿಗೂ ಕಾರ್ಯದರ್ಶಿಗಳಾಗಿದ್ದ ಪಟ್ಟಣಗೆರೆ ಚೇರಮನ್ ಶ್ರೀ ಅನಂತಯ್ಯನವರೂ, ಬೀರೂರಲ್ಲಿರುವ ಸ್ಯಾನಿಟರಿ ಮ|| ರಾ|| ಶಿವರುದ್ರಯ್ಯನವರೂ ಸಹ ಎಲ್ಲರ ಸಂತೋಷಕ್ಕೂ ಶ್ಲಾಘನೆಗೂ ಪಾತ್ರರಾದರು. ಜನವಸತಿಯು ಹೆಚ್ಚಾಗಿ ಸೇರಿ ದನಗಳ ಪ್ರದರ್ಶನ ಮೊದಲಾದವುಗಳಿಂದ ವ್ಯಾಪಾರಗಳು ವೃದ್ಧಿಯಾಗುವಂಥ ಒಂದುಜಾತ್ರೆಯನ್ನು ಈ ಪ್ರಾಂತ ನಡೆಯುವಂತೆ ಮಾಡಿ ಹಿಂದೆ ಉಳಿದವರೆಲ್ಲರೂ ಮುಂದೆ ಬರುವಂಥ ಮಾರ್ಗವನ್ನು ತೋರಿಸಿ ಸರ್ವರ ವಂದನೆಗೆ ಪಾತ್ರರಾದ ಶ್ರೀಚನ್ನಬಸವ ಶಿವಾಚಾರ್ಯಮಹಾಸ್ವಾಮಿಯವರಿಗೆ ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಗುರುಪಾದಸೇವಕ
ಶ್ರೀ ಶಿವಕಥಾಭೂಷಣ ವೇ|| ಜಿ. ನಂಜುಂಡಾರಾಧ್ಯ.

ಶ್ರೀ ಜಗದ್ಗುರು ಪರ್ವತ ಸಂಸ್ಥಾನ ಸರ್ಕೀಟಿನ ಗುರುಸ್ಥಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಹಾಸಭಾ ಕಪ್ಪಗಲ್ಲು.

ಬಳ್ಳಾರಿಜಿಲ್ಲಾ ಪೈಕಿ ಕಪ್ಪಗಲ್ಲು ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತಸಂಸ್ಥಾನ ಸರ್ಕೀಟಿನ ಗುರುಸ್ಥಾಧಿಕಾರಿಗಳಾದ ಶ್ರೀ ಷ|| ಬ್ರ|| ಪಂ|| ರೇವಣಸಿದ್ಧಶಿವಾಚಾರ್ಯ ಪಟ್ಟದ ಮಹಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಗಜಾಶ್ವಾದಿ ಸಕಲ ಸಿಬ್ಬಂದಿಯೊಡನೆ ಈ ಗ್ರಾಮಕ್ಕೆ ದಯಮಾಡಿಸಿ ೧೫ ದಿವಸಗಳಾದವು. ಪುರಪ್ರಮುಖರಾದ ಪಾಟೀಲ ಬಸನಗೌಡ್ರು ಭೀಮಸೇನರಾವ್. ಚಿತ್ರಿಕಿ ಶಿವಪ್ಪನವರು, ಹೂಗಾರನಾಗಪ್ಪ, ಇವರು ತಾ|| 15-3.33 ನೇ ದಿವಸ ಶ್ರೀ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಮಹಾಸಭೆಯನ್ನು ಏರ್ಪಡಿಸಿದರು. ಸಭೆಗೆ ಪ್ರಮುಖ ಪರಮತೀಯರು ಬಂದಿದ್ದರು. ಸರ್ವಾಧಿಕಾರಿಗಳಾದ ಶೇ. ಯಂ. ಸಿ. ಮಲ್ಲಯ್ಯನವರು ತಾಡಪತ್ರಿ ಇವರು ಪ್ರಾಸ್ತಾವಿಕಭಾಷಣವನ್ನು ಮಾಡಿದರು. ಕಪ್ಪಗಲ್ಲು ಭೀಮಸೇನರಾವ್ ಇವರು ಸನಾತನಧರ್ಮದ ವಿಷಯವಾಗಿ ದೇವಸ್ಥಾನಗಳಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸಬಾರದೆಂದು ಒಳ್ಳೇಸ್ವಾರಸ್ಯವಾಗಿ ವ್ಯಾಖ್ಯಾನಮಾಡಿದರು. ಅಧ್ಯಕ್ಷರಾದ ಸ್ವಾಮಿಗಳು ಸದ್ಯಃ ಸನಾತನ ಧರ್ಮದಲ್ಲಿ ಅಸ್ಪೃಶ್ಯತೆ ಹೆಚ್ಚಿ ಪವಿತ್ರವಾದ ದೇವಾಲಯಗಳಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸಲಿಕ್ಕೆ ಗಾಂಧಿಯವರು ಬದ್ಧರಾಗಿ ನಿಂತಿದ್ದಾರೆ. ಇದು ಕೇವಲ ಅನ್ಯಾಯ, ಇದರಿಂದ ಯಾವ ಫಲಕಾರಿಯೂ ಆಗುವದಿಲ್ಲ. ಜನಗಳಿಗೆ ಮಾತ್ರ ಅಸಮಾಧಾನವಾಗುವದು ಇದರಿಂದ ಏನೂ ಆಗಲಾರದು. ಬಹು ಸಮಾಜದವರಿಗೆ ವಿರೋಧವಾಗುವ ಕಾರ್ಯವನ್ನು ಯಾರೂ ಮಾಡಬಾರದು. ಪ್ರೇಮಾತಿಶಯವೇ ಫಲವನ್ನುಂಟುಮಾಡುತ್ತದೆ. ಹಾಗೂ ಸನಾತನಧರ್ಮ ಅಂದರೆ ಇವತ್ತಿನ ಧರ್ಮವಲ್ಲ. ಅನಾದಿಸಂಸಿದ್ಧವಾದ ಧರ್ಮವು. ಈ ಧರ್ಮದಲ್ಲಿ ಅಗಸ್ತ್ಯ, ದಧೀಚಿ, ಸಾನಂದ, ವ್ಯಾಸ ಹರಕಂಠ ಉಪಮನ್ಯು ಮೊದಲಾದ ಋಷಿಪುಂಗವರು ಲೋಕಚಕ್ರವರ್ತಿಗಳಾದ ರಾವಣ ವಿಭೀಷಣಾದಿಗಳು ಜನಮೇಜಯಭೂಪಾಲ, ಸತ್ಯನಿಧಿ ಮೊದಲಾದ ರಾಜರು ಅಸಾಧಾರಣವಾದ ಭಕ್ತಿಯಿಂದ ನಡೆದು ಕೃತಾರ್ಥರಾಗಿರುವರು. ಲೋಕಮಾನ್ಯರೂ ಒಳ್ಳೇಮೇಧಾವಿಗಳೂ ಆದ ಶ್ರೀ ಬಾಲಗಂಗಾಧರತಿಲಕರವರು ಸನಾತನಧರ್ಮದಲ್ಲಿ ನಂಬಿಗೆ ಇಟ್ಟು ಸ್ವರಾಜ್ಯದ ಚಳವಳಿಗೆ ಮಾರ್ಗವನ್ನು ಹಾಕಿಹೋದರು. ಇವರಂತೆ ಗಾಂಧಿಯವರೂ ಇವರ ಅನುಯಾಯಿಗಳೂ ಸನಾತನಧರ್ಮದಲ್ಲಿ ಭಕ್ತಿಯಿಟ್ಟು ಕೃತಾರ್ಥರಾಗಬೇಕಾಗಿತ್ತು. ನಿರರ್ಥಕವಾದ ಕಾರ್ಯಕ್ಕೆ ಮನಸ್ಸು ಹಾಕಿರುವರು. ಉಸುಕಿನಲ್ಲಿ ಎಣ್ಣೆಯನ್ನು ತೆಗೆದಂತೆಯೆಂದು ಭಾವಿಸಬೇಕಾಗಿದೆ. ಏಕೆಂದರೆ ಅಸ್ಪೃಶ್ಯರು ದೇವಸ್ಥಾನಗಳಲ್ಲಿ ಯಾವ ಕಾಲದಿಂದಲೂ ಪ್ರವೇಶಮಾಡಿಲ್ಲ. ಮುಂದಾದರೂ ಪ್ರವೇಶಮಾಡಬೇಕಾದರೆ ಎಷ್ಟೋ ಪ್ರಾಣಗಳು ಹೋಗುವ ಪ್ರಸಕ್ತಿ ಅದೆ. ಹಿಂದಕ್ಕೆ ಚತುರಂಗಬಲ ಸಮೇತನಾಗಿ ರಾಜ್ಯಕಾರಭಾರವನ್ನು ಮಾಡಿಹೋದ .ಅವರಂಗಜೇಬನು ಹಿಂದೂಮತಕ್ಕೆ ಕಡುವೈರಿಯಾಗಿ ಎಷ್ಟೋ ಹಿಂದೂ ದೇವಸ್ಥಾನಗಳನ್ನು ನಾಶಮಾಡುತ್ತ ಬಂದನು. ಶ್ರೀ ಕ್ಷೇತ್ರಕಾಶಿ ಜಂಗಮವಾಡಿ ವಿಶ್ವಾರಾಧ್ಯ ಪೀಠದಲ್ಲಿ ಅವನ ಗರ್ವಹರಣವಾಗಿ ದುಃಖಿಸ್ತೀಡಾದನು. ಶಾಸ್ತ್ರಕ್ಕೆ ವಿರುದ್ಧವಾಗಿ ನಡೆದರೆ ಅದು ಎಂದೂ ಜಯವಾಗುವುದಿಲ್ಲ. ಗಾಂಧಿಯವರು ಇಷ್ಟು ದಿನ ಸ್ವರಾಜ್ಯ ಚಳವಳಿ ಮಾಡಿದರು. ಅದರಿಂದ ಯಾವ ವಿಧವಾದ ಫಲವು ತೋರಲಿಲ್ಲ. ಅದು ಹುಳಿ ಆಯಿತೆಂದು ತಿಳಿದು ಈಗ ಹೀಗೆ ತಿರುಗಿದ್ದಾರೆ. ಕೆಲದಿವಸ ಧರ್ಮದ ವಿಷಯವಾಗಿ ಚಳವಳಿಮಾಡಿ ಸ್ವರಾಜ್ಯವನ್ನು ಹ್ಯಾಗೆ ಪಡೆದುಕೊಂಡರೋ ಇವರ ಫಲವನ್ನಾದರೂ ಹಾಗೆ ಎಂದು ಭಾವಿಸಬೇಕಾಗಿದೆ. ಗಾಂಧಿಯವರ ಲೇಖಕ್ಕೆ ಕೆಲಕೆಲ ಜನರು ಮರುಳಾಗಿ ಗೌರ್ನಮೆಂಟ ಉದ್ಯೋಗಕ್ಕೆ ರಾಜೀನಾಮೆಕೊಟ್ಟು ಚಳವಳಿಮಾಡಿ ಜೈಲಿನಲ್ಲಿ ಬಿದ್ದರು. ಗಾಂಧಿಯವರ ವಾತಾವರಣವು ಬೇರೆ ಆಯಿತೆಂದು ತಿಳಿದು ಸರ್ಕಾರಕ್ಕೆ ಕ್ಷಮಾಪಣೆ ಬೇಡಿಕೊಂಡು ಇನ್ನು ಚಳವಳಿ ಮಾಡುವದಿಲ್ಲವೆಂದು ಕರಾರು ಬರೆದುಕೊಟ್ಟು ತಮ್ಮ ತಮ್ಮ ಗ್ರಾಮಕ್ಕೆ ಬರಲಿಕ್ಕೆ ಹತ್ತಿರುತ್ತಾರೆ. ಹೊಸದಾಗಿ ಈಗ ಜೈಲಿಗೆ ಹೋಗುವವರೇ ಕಡಿಮೆ. ಆದರೂ ಇವರಮೇಲಿಂದ ಸ್ವರಾಜ್ಯವು ಹ್ಯಾಗೆ ದೊರೆಯಬೇಕು ? ಪವಿತ್ರವಾದ ಧರ್ಮವೆಂಬ ಕ್ಷೀರದಲ್ಲಿ ಉಪ್ಪು ಹಾಕಲಿಕ್ಕೆ ಹತ್ತಿರುತ್ತಾರೆ. ಇಂಥ ಲೋಕವಿರುದ್ಧಕಾರ್ಯಕ್ಕೆ ಗಾಂಧಿಯವರೂ ಇವರ ಅನುಯಾಯಿಗಳೂ ಕೈಹಾಕಿರುವದು ಸಮಾಜಕ್ಕೆ ಒಪ್ಪಿಗೆ ಇಲ್ಲ. ಈ ಕಾರ್ಯವನ್ನು ಅರಣ್ಯಪಾಲು ಮಾಡಿ ಬಹುಜನರಿಗೆ ಹಿತವಾಗುವ ಸ್ವರಾಜ್ಯದ ಚಳವಳಿ ಮಾಡಿದರೆ ಸರ್ವರೂ ಪ್ರಾಣಕೊಡಲಿಕ್ಕೆ ಈಗಲೂ ತಯಾರ ಇದ್ದಾರೆಂದು ಭಾವಿಸಿರಿ. ಹಿಂದಕ್ಕೆ ದಯಾದಾಕ್ಷಿಣ್ಯಹೃದಯಳಾದ ವಿಕ್ಟೋರಿಯಾ ಮಹಾರಾಣಿಯವರು ಒಳ್ಳೇಕಾರ್ಯದಕ್ಷತೆಯಿಂದ ರಾಜ್ಯಕಾರಭಾರವನ್ನು ನಡೆಯಿಸಿದಾಗ್ಯೂ ಧರ್ಮದಲ್ಲಿ ಯಾರೂ ಕೈಹಾಕಬಾರದೆಂದು ಇದುವರಿವಿಗೆ ಶಾಶ್ವತವಾಗಿ ಇರುವ ಕಾನೂನಮಾಡಿ ಕೃತಾರ್ಥಳಾಗಿ ಹೋಗಿದ್ದಾಳೆ. ದಿಲ್ಲಿಯಲ್ಲಿ ಸದ್ಯಃ ನಡೆಯುವ ಗೌರ್ನಮೆಂಟಕಮಿಟಿಯವರು ಸನಾತನಧರ್ಮಸಂಬಂಧ ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶಮಾಡಿಸುವ ಸಂಬಂಧವಾಗಿ ಯಾವ ವಿಧವಾದ ಅವಕಾಶವನ್ನೂ ಕೊಡಬಾರದೆಂದು ಸೂಚಿಸಬೇಕೆಂದು ಇವೇ ಮೊದಲಾದ ವಿಷಯಗಳಮೇಲೆ ಬಹು ಸ್ವಾರಸ್ಯವಾಗಿ ಬೋಧಮಾಡಿದರು. ಈ ಬೋಧಾಮೃತವನ್ನು ಕೇಳಿ ಸರ್ವರೂ ತಲೆಹಾಕುತ್ತಲೇ ಇದ್ದರು. ಈ ಯಾವತ್ತೂ ವಿಷಯಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು. ಈ ಮಹಾಸಭೆಗೆ ಪ್ರೋತ್ಸಾಹವನ್ನು ಕೊಟ್ಟ ಭೀಮಸೇನರಾವ್ ಇವರು ಬ್ರಾಹ್ಮಣ ಧರ್ಮದವರು. ಕಾಶಿ, ರಾಮೇಶ್ವರ, ಪಂಡರಾಪುರ ಮೊದಲಾದ ಕ್ಷೇತ್ರಗಳ ದರ್ಶನವನ್ನು ಕೆಲವು ವರ್ಷಗಳ ಹಿಂದೆ ಮಾಡಿಕೊಂಡು ಬಳ್ಳಾರಿ ಗಡಿಗಿಯವರ ತೋಟದ ಸಮೀಪದಲ್ಲಿರುವ ಅಮರೇಶ್ವರ ದೇವಸ್ಥಾನದಲ್ಲಿ ೫-೬ ತಿಂಗಳ ಪುರಾಣ ಇಟ್ಟು ಅನೇಕರಿಗೆ ಅನ್ನದಾನಮಾಡಿ ಪುರಾಣಶ್ರವಣ ಮಾಡಿಸಿದರು. ಈಗ್ಯೂ ಸನಾತನಧರ್ಮಸುಧಾರಣಕ್ಕಾಗಿ ಸತತ ಪ್ರಯತ್ನಪಡುತ್ತಿರುವದನ್ನು ನೋಡಿ ಅಧ್ಯಕ್ಷರಾದ ಮಹಾಸ್ವಾಮಿಗಳು ಬಹು ಉತ್ತೇಜನಕೊಟ್ಟರು. ಪ್ರತಿಯೊಬ್ಬ ಮತೀಯರು ಸನಾತನಧರ್ಮದಲ್ಲಿ ವಿಶ್ವಾಸವುಳ್ಳವರಾಗಿದ್ದರೆ ದೇವತ್ವವನ್ನೂ ಋಷಿತ್ವವನ್ನೂ ಪಡೆಯುತ್ತಾರೆ. ಬೊಳ್ಳು ಲೇಖಗಳಲ್ಲಿ ಮನಸ್ಸು ಹಾಕಬಾರದು. ಯತೋಧರ್ಮಸ್ತತೋಜಯಃ.

ಪಾಟೀಲ್ ಬಸವನಗೌಡ, ಕಪ್ಪಗಲ್ಲು.

ಕರ್ನಾಟಕಸಂಘ.

ವೈದ್ಯರತ್ನಂ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರವರ ಆಯುರ್ವೇದ ಮತ್ತು ಯುನಾನಿ ಮಹಾಪಾಠಶಾಲಾಮಂಡಲಿಯ ಕರ್ನಾಟಕಸಂಘದ ಸಾಹಿತ್ಯೋತ್ಸವವು ಈ ತಿಂಗಳು 16 ನೇ ತಾರೀಖು ಸಾಯಂಕಾಲ 6 ಗಂಟೆಯಲ್ಲಿ ಆಯುರ್ವೇದ ಸಭಾಮಂದಿರದಲ್ಲಿ ನಡೆಯಿತು. ಕರ್ನಾಟಕ ಸಾಹಿತ್ಯ ಸಮ್ಮೇಳನ ಸಪ್ತಾಹದ ಅಂತಿಮದಿವಸದ ಮಹಾಸಭೆಗೆ ಅನೇಕ ದೊಡ್ಡಮನುಷ್ಯರು, ನಾರೀಮಣಿಗಳು, ವಿದ್ಯಾರ್ಥಿಗಳು ದಯಮಾಡಿಸಿದ್ದರು. ಆಯುರ್ವೇದದ ಕಾಲೇಜಿನ ಅಧ್ಯಕ್ಷರಾದ ಮ|| ರಾ|| ರಾಮಕೃಷ್ಣರಾಯರವರು ಇವರ ಸಹಾಯೋಪಾಧ್ಯಾಯರು, ಯುನಾನಿ ಮಹಾಪಾಠಶಾಲೆಯ ಅಧ್ಯಕ್ಷರು, ಅವರ ಸಹಾಯೋಪಾಧ್ಯಾಯರು, ಈ ಎರಡುಕಾಲೇಜುಗಳ ಹಿಂದೂ ಮತ್ತು ಮಹಮ್ಮದೀಯ ವಿದ್ಯಾರ್ಥಿಗಳು ಇವರೆಲ್ಲರೂ ಈ ಸಭೆಯ ಕೆಲಸಗಳನ್ನು ಅತ್ಯಂತ ಸಮರ್ಪಕವಾಗಿ ನಡೆಯಿಸಿದರು. ಈ ಸಭೆಯ ಅಗ್ರಾಸನವನ್ನು ಮ|| ರಾ|| ಪ್ರೊಫೆಸರ್ ಟಿ. ಎಸ್. ವೆಂಕಣಯ್ಯ, ಎಂ. ಎ. ಯವರು ಅಲಂಕರಿಸಿದ್ದರು. ಸಭೆಯು ಉಪಕ್ರಮವಾದ ಕೂಡಲೆ ದೇವತಾಪ್ರಾರ್ಥನೆಯು ಮಾಡಲ್ಪಟ್ಟಿತು. ತರುವಾಯ ಈ ಆಯುರ್ವೇದ ಕಾಲೇಜಿನ ಕಮಿಟಿಮೆಂಬರುಗಳಲ್ಲಿ ಮುಖಂಡರಾದ ಆಯುರ್ವೇದ ವಿದ್ವಾಂಸರಲ್ಲಿ ಅಗ್ರಗಣ್ಯರಾದ ಮ|| ರಾ|| ಕೃಷ್ಣಶಾಸ್ತ್ರಿಗಳವರು ಈ ಸಭೆಗೆ ಮ||ರಾ|| ಪ್ರೊಫೆಸರ್ ವೆಂಕಣ್ಣಯ್ಯನವರು ಅಧ್ಯಕ್ಷರಾಗಿ ಸಭೆಯ ಕೆಲಸಗಳನ್ನು ನೆರವೇರಿಸಬೇಕೆಂದು ಸೂಚಿಸಿದರು. ಡಾ|| ಶ್ರೀನಿವಾಸಯ್ಯಂಗಾರ್ಯರವರು ಇದನ್ನು ಅನುಮೋದಿಸಿದರು. ಸರ್ವರೂ ಇದಕ್ಕೆ ಒಪ್ಪಿದರು. ಪ್ರೊಫೆಸರ್ ವೆಂಕಣ್ಣಯ್ಯನವರು ಅಗ್ರಾಸನವನ್ನು ವಹಿಸಿ ಸಂಕ್ಷೇಪವಾಗಿ ಉಪಕ್ರಮಭಾಷಣದಲ್ಲಿ ಈ ಸಭೆಯ ಆರ್ಗನೈಜರುಗಳ ಪರಿಶ್ರಮಗಳನ್ನು ಶ್ಲಾಘಿಸಿ ಶ್ರೀಮಾನ್ ಮಹಾರಾಜರವರ ಕಾಲೇಜು ಪಾಠಕರಾದ ಮ|| ರಾ|| ಬಿ. ಎಂ. ಶ್ರೀಕಂಠಯ್ಯ ಎಂ. ಎ. ಯವರು ಕರ್ನಾಟಕ ಸಾಹಿತ್ಯದ ವಿಷಯದಲ್ಲಿ ಮಾತನಾಡುವರೆಂದು ಅಪ್ಪಣೆಕೊಡಿಸಿದರು. ಮ|| ರಾ|| ಶ್ರೀಕಂಠಯ್ಯನವರು ಸಾಹಿತ್ಯಶಬ್ದಾರ್ಥವನ್ನು ನಿರೂಪಿಸಿ ವೇದಶಾಸ್ತ್ರಪುರಾಣೇತಿಹಾಸಗಳೇ ಮೊದಲಾದ ಸಕಲ ಗ್ರಂಥಗಳು ಸಾಹಿತ್ಯಕ್ಕೆ ಸೇರಿದವುಗಳೆಂಬುದಾಗಿಯೂ ಈ ಸಾಹಿತ್ಯದಲ್ಲಿ ಸತ್ಕಾವ್ಯಾಲಾಪವು ಹೇಗೋ ಹಾಗೆ ಅಸತ್ಕಾವ್ಯಾಲಾಪಕ್ಕೂ ಅವಕಾಶವಿರುವುದೆಂಬುದಾಗಿಯೂ ಅಸತ್ಕಾವ್ಯಾಲಾಪವನ್ನು ಮೂಲೆಗೆ ತಳ್ಳಿ ಸತ್ಕಾವ್ಯಾಲಾಪವನ್ನು ಮುಂದಕ್ಕೆ ಇಟ್ಟು ಸಕಲ ಸ್ತ್ರೀಪುರುಷರೂ ಸತ್ಕಾವ್ಯಾಲಾಪದಿಂದ ಆತ್ಮಾವಲಂಬಿಗಳಾಗಿ ಧರ್ಮಾರ್ಥಕಾಮಮೋಕ್ಷಗಳ ಪ್ರಾಪ್ತಿಗೋಸ್ಕರ ಶ್ರದ್ಧೆಯಿಂದ ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿ ತಮ್ಮ ಕರ್ತವ್ಯವನ್ನು ಮಾಡಿದರೆ ಪ್ರಪಂಚವೆಲ್ಲಾ ಧರ್ಮಕ್ಕೆ ಮಾತೃಭೂಮಿಯಾಗಿ ಮಾಡಲ್ಪಡುವುದು ಹೇಗೆ ಸಾಧ್ಯವೋ ಅದನ್ನು ಸಂಕ್ಷೇಪವಾಗಿ ನಿರೂಪಿಸಿ ಕನ್ನಡದಲ್ಲಿ ಪ್ರಾಚೀನ ಗ್ರಂಥಗಳಲ್ಲಿಯೂ ನವೀನ ಗ್ರಂಥಗಳಲ್ಲಿಯೂ, ಯಾವಯಾವವು ಕರ್ನಾಟಕರನ್ನು ಮುಂದಕ್ಕೆ ತರುವುದಕ್ಕೆ ಸಾಧಕಗಳಾಗಿರುವುವೋ ಅದನ್ನು ಇಟ್ಟುಕೊಂಡು ನಾಗರಿಕತೆಯಲ್ಲಿ ಅಗ್ರಗಣ್ಯರಾದ ಪೂರ್ವ ಮತ್ತು ಪಶ್ಚಿಮದೇಶೀಯರಲ್ಲಿ ಪುರುಷಾರ್ಥಪ್ರಾಪ್ತಿಗೆ ಸಾಧಕವಾದ ನವೀನಸಾಹಿತ್ಯಶಾಸ್ತ್ರ ಮೊದಲಾದ ಗ್ರಂಥಗಳ ಪೈಕಿ ಯಾವಯಾವುದು ಅತ್ಯಂತ ಸಾಧಕಗಳೋ ಅವುಗಳನ್ನು ಕನ್ನಡ ಭಾಷೆಗೆ ಪರಿವರ್ತನಮಾಡಿಕೊಂಡು ಸಾಹಿತ್ಯಕೋವಿದರಾಗಿಯೂ ಸಕಲ ನವೀನಶಾಸ್ತ್ರವಿಶಾರದರಾಗಿಯೂ ಇರತಕ್ಕವರು ಸದರಿ ಶಾಸ್ತ್ರಗಳ ವಿಚಾರಕ್ಕೂ ಪ್ರಚಾರಕ್ಕೂ ಊರುಗಳಲ್ಲಿ ಮಾತ್ರವೇ ಅಲ್ಲದೆ ಗ್ರಾಮಗಳಲ್ಲಿಯೂ ಅವಕಾಶಮಾಡಿ ಮಾತುಗಳಲ್ಲಿ ಮಾತ್ರವೇ ಅಲ್ಲದೆ ಕೃಷಿ. ಕೈಗಾರಿಕೆ, ವ್ಯಾಪಾರ ಮೊದಲಾದುವುಗಳಿಗೆ ಸಂಬಂಧಪಟ್ಟ ಸಕಲಶಾಸ್ತ್ರಗಳೂ ಜನಗಳ ಅನುಷ್ಠಾನಕ್ಕೆ ಬರುವಂತೆ ಮಾಡಿ ಸರ್ವರೂ ದೇಹಬಲವನ್ನು ಅಥವಾ ಬುದ್ಧಿಬಲವನ್ನು ವಿನಿಯೋಗಿಸಿ ಆತ್ಮಾವಲಂಬಿಗಳಾಗಿ ಪ್ರತಿಯೊಬ್ಬರೂ ಸರ್ವರ ಸೇವೆಯಿಂದ ಗುಣೈಕಪಕ್ಷಪಾತಿಗಳಾಗಿ ಬದುಕುವಂತೆ ಮಾಡತಕ್ಕದ್ದೇ ಸಾಹಿತ್ಯದ ಧ್ಯೇಯವೆಂದೂ ಅಪ್ಪಣೆಕೊಡಿಸಿ ತಾವು ಹೇಳಿದ್ದನ್ನು ಸರ್ವರ ಅನುಭವಕ್ಕೂ ಬರುವಂತೆ ಮಾಡುವುದಕ್ಕೋಸ್ಕರ ಯುಕ್ತಿಯುಕ್ತವಾದ ಕೆಲವು ಇತಿಹಾಸಗಳನ್ನೂ ಅಪ್ಪಣೆಕೊಡಿಸಿದರು. ಗ್ರಾಮಸ್ಥರು ಸಂಪದಭಿವೃದ್ಧಿಗೆ ಸಾಧಕವಾದ ಅನಾದಿಯಾಗಿ ಬಂದಿರತಕ್ಕ ಕೃಷಿ. ಕೈಗಾರಿಕೆಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ಅರ್ಥಶೂನ್ಯಭೋಜನ ಅಪೇಯಪಾನ ಅಗಮ್ಯಗಮನ, ಫಿಲ್ಮುಷೋ, ಟಾಕಿಮುಷೋ ಮೊದಲಾದ ವ್ಯಾಪಾರಗಳ ಪಾಶಕ್ಕೆ ಬಿದ್ದು ಅಧೋಗತಿಗೆ ಬರದೇ ಇರಬೇಕಾದರೆ ವಿದ್ಯಾಭ್ಯಾಸದ ಏರ್ಪಾಡುಗಳು ಹೇಗೆ ಇರಬೇಕೋ, ಅಸತ್ಕಾವ್ಯಾಲಾಪವು ಹೇಗೆ ಕಡಿಮೆಯಾಗಬೇಕೋ ಸಂಪದಭಿವೃದ್ಧಿಗೆ ಸಾಧಕವಾದ ಸಕಲಶಾಸ್ತ್ರಗಳಿಗೂ ಉತ್ತೇಜನವು ಹೇಗೆ ಕೊಡಲ್ಪಡಬೇಕೋ ಪ್ರಭುತ್ವವನ್ನು ಮಾಡತಕ್ಕ ಅಧಿಕಾರಿಗಳ ಶಿಕ್ಷಣವು ಪಾಠಕರ ಶಿಕ್ಷಣವು ಹೇಗಿರಬೇಕೋ ಪ್ರತಿಸಮಯದಲ್ಲಿಯೂ ಸಕಲ ಶಾಸ್ತ್ರಗಳಲ್ಲಿಯೂ ಹೊಸದಾಗಿ ಕಂಡುಹಿಡಿಯಲ್ಪಟ್ಟ ಇಹಪರಸೌಖ್ಯಗಳಿಗೆ ಸಾಧಕವಾದ ವಿಜ್ಞಾನಗಳು ಹೇಗೆ ಅನುಷ್ಠಾನಕ್ಕೆ ತಂದುಕೊಳ್ಳಲ್ಪಡಬೇಕೋ ಈ ವಿಷಯಗಳನ್ನೆಲ್ಲಾ ಸಂಕ್ಷೇಪವಾಗಿ ತಿಳಿಸಿ ಸಭೆಗೆ ಪರಮಾನಂದವನ್ನುಂಟುಮಾಡಿದರು.

ಮಹಾರಾಣಿಯವರ ಕಾಲೇಜಿನ ಲೇಡಿ ಪ್ರೊ|| ಗಳಾದ ಶ್ರೀಮತಿ ಕನಕಲಕ್ಷ್ಮಮ್ಮನವರು ಕರ್ನಾಟಕ ಸಾಹಿತ್ಯದ ವಿಷಯದಲ್ಲಿ ಒಂದು ಉಪನ್ಯಾಸವನ್ನು ಮಾಡುವರೆಂದು ಪ್ರೆಸಿಡೆಂಟರವರು ಸಭೆಗೆ ಶ್ರುತಪಡಿಸಿದರು. ಶ್ರೀಮತಿ ಕನಕಲಕ್ಷ್ಮಮ್ಮನವರು ನಮ್ಮ ಸಂಸ್ಥಾನದ ಸಕಲ ವಿದ್ಯಾವಿಶಾರದೆಯರಾದ ನಾರೀಮಣಿಗಳಲ್ಲಿ ಒಬ್ಬರಾಗಿರುವರು. ಇವರು ಎಂ.ಎ., ಪರೀಕ್ಷೆಗಳನ್ನು ಕೊಟ್ಟಿರುವುದಲ್ಲದೆ ವಿಲಾಯಿತಿ ಮೊದಲಾದ ಪಾಶ್ಚಾತ್ಯದೇಶಗಳಿಗೆ ದಯಮಾಡಿಸಿ ಅಲ್ಲಿ ಸ್ತ್ರೀವಿದ್ಯಾಭ್ಯಾಸವು ಹೇಗಿರುವುದೋ ಸಕಲಜನಗಳೂ ಕೂಡ ಸಂಪದಭಿವೃದ್ಧಿಯ ಕೆಲಸಗಳ ಪೈಕಿ ತಮಗೆ ಯಾವುದರಲ್ಲಿ ಪ್ರವೇಶವಿರುವುದೋ ಅದನ್ನವಲಂಬಿಸಿ ಹೇಗೆ ಆತ್ಮಾವಲಂಬಿಗಳಾಗಿ ಇಹಪರಸೌಖ್ಯಗಳನ್ನು ಸಂಪಾದಿಸಿಕೊಳ್ಳುತ್ತಲಿರುವರೋ ಅದನ್ನೆಲ್ಲಾ ನೋಡಿಕೊಂಡು ಬಂದು ನಮ್ಮ ದೇಶದ ಸ್ತ್ರೀಯರು ದೇಹಶಕ್ತಿಯಿಂದಲೂ, ಬುದ್ಧಿಶಕ್ತಿಯಿಂದಲೂ, ಹೇಗೆ ಆತ್ಮಾವಲಂಬಿಗಳಾಗುವಂತೆ ಮಾಡಲ್ಪಡಬಹುದೋ ಅದನ್ನು ತಿಳಿದುಕೊಂಡಿರುವರು. ಇದಲ್ಲದೆ ಪೂರ್ವ ಮತ್ತು ಪಶ್ಚಿಮದೇಶೀಯ ಸಾಹಿತ್ಯಗಳ ಮರ್ಮಗಳನ್ನು ಕೂಡ ತಿಳಿದುಕೊಂಡಿರುವರು. ಸತ್ಕಾವ್ಯಾಲಾಪದಿಂದ ಇಹಪರಸೌಖ್ಯಗಳು ಹೇಗೆ ಹಸ್ತಗತವಾಗುವುವೋ

[6ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೩ನೇ ಮಾರ್ಚಿ ತಾ|| ೨೭ ನೇ ಸೋಮವಾರ.

ನೂತನವರ್ಷಾರಂಭ.

ಸೃಷ್ಟಿಸ್ಥಿತಿಸಂಹಾರಕರ್ತನಾದ ಶ್ರೀ ಪರಮೇಶ್ವರನು ಸ್ಥಾವರ ಜಂಗಮಾತ್ಮಕವಾದೀ ಪ್ರಪಂಚವನ್ನು ಸೃಷ್ಟಿಮಾಡಿ ಸಕಲ ಜೀವಿಗಳನ್ನುದ್ಧರಿಸುವುದಕ್ಕಾಗಿ ವರ್ಷ, ಮಾಸ, ಋತು, ಕಾಲ, ಗ್ರಹಾದಿ ಸರ್ವಸಾಮಗ್ರಿಗಳನ್ನು ಒದಗಿಸಿ ವೇದಾಗಮಾದಿಗಳನ್ನು ಸೃಷ್ಟಿಸಿ ತನ್ನಿಂದ ಸೃಷ್ಟಿಸಲ್ಪಟ್ಟ ಇಂದ್ರಾದಿ ದೇವತೆಗಳಿಗೆ ಆಯಾಯ ದಿಕ್ಪಾಲನಾಧಿಕಾರವನ್ನು ವಹಿಸಿದುದರಿಂದ ಈ ದಿವಸವನ್ನು (ಚೈತ್ರಶುದ್ಧಪ್ರತಿಪತ್ತನ್ನು) ಯುಗಾದಿಯೆಂದು ಕರೆಯುವ ರೂಢಿಯು ನಮ್ಮ ಭಾರತೀಯರಲ್ಲಿ ಅನಾದಿಕಾಲದಿಂದ ಬಂದಿರುತ್ತದೆ. ಈ ಶುಭದಿವಸವನ್ನು ವೇದಾಗಮಾವಲಂಬಿಗಳಾದ ಆಸ್ತಿಕ ಮಹಾಜನಗಳು ಬಹು ಮುಖ್ಯವಾದ ದಿವಸವನ್ನಾಗಿ ಭಾವಿಸುವರು. ತಮ್ಮ ತಮ್ಮ ಜನಗಳು ಕಾರ್ಯಾರ್ಥವಾಗಿ ಯಾವ್ಯಾವ ದೂರದೇಶಗಳಿಗೆ ಹೋಗಿದ್ದರೂ ಈ ದಿವಸ ಮಾತ್ರ ತಮ್ಮ ತಮ್ಮ ಸ್ಥಾನಗಳಿಗೆ ಬಂದು ತಮ್ಮ ತಮ್ಮ ಪತ್ನೀಪುತ್ರಾದಿಗಳನ್ನು ಸೇರಿ ತೈಲಾಭ್ಯಂಜನಮಾಡಿ ಗೃಹಗಳನ್ನು ಅಲಂಕರಿಸಿ ಅವರವರ ಮತಪದ್ಧತಿಪ್ರಕಾರ ನಿತ್ಯವಿಧಿಯನ್ನು ಮುಗಿಸಿ ಭದ್ರಪೀಠದಲ್ಲಿ ಕುಳಿತು ಆಚಮನ ಪ್ರಾಣಾಯಾಮಾದಿಗಳನ್ನು ಮಾಡಿ ಪುಷ್ಪಾಕ್ಷತಪಾಣಿಯಾಗಿ ನೂತನ ಪಂಚಾಂಗರೀತಿಯಾಗಿ ದೇಶಕಾಲಗಳನ್ನು ಹೇಳಿ

> ಅಸ್ಮಿನ್ ಶ್ರೀಮುಖ ಸಂವತ್ಸರೇ ಮಮ ಸಕುಟುಂಬಸ್ಯ ವರ್ಷಾಂತ ಕ್ಷೇಮಮಂಗಳಾವಾಪ್ತ್ಯರ್ಥಂ ಆರೋಗ್ಯಪ್ರಾಪ್ತ್ಯರ್ಥಂ| ಪ್ರಾರೀಪ್ಸಿತ ಕಾರ್ಯನಿರ್ವಿಘ್ನ ಸಮಾಪ್ತ್ಯರ್ಥಂಚ ಗುರುಪೂಜಾಂ ನಿಂಬಪತ್ರಭಕ್ಷಣಂ ಚ ಕರಿಷ್ಯೇ ||

ಎಂದು ಸಂಕಲ್ಪಮಾಡಿ ಕ್ರಮದಿಂದ ತನ್ನ ಕುಲಗುರುವಿನ ಪೂಜೆಯನ್ನು ಮಾಡಿ ನಿಂಬ ಪತ್ರವನ್ನು (ಬೇವನ್ನು) ಸೇವಿಸಿ ತನ್ನ ಇಷ್ಟಮಿತ್ರರೊಂದಿಗೆ ಸುಖಭೋಜನಮಾಡಿ ನೂತನಾಂಬರಧಾರಿಗಳಾಗಿ ಶ್ರೀಮುಖಸಂವತ್ಸರದ ಪಂಚಾಂಗದಲ್ಲಿ ಹೇಳಿರುವ ಫಲಾಫಲಗಳನ್ನು ಶ್ರವಣಮಾಡುತ್ತ ಗುರುದೇವತಾ ದರ್ಶನಮಾಡಬೇಕು. ಹೀಗೆ ಈ ದಿವಸ ಸಂತೋಷದಿಂದ ಕಾಲವನ್ನು ಕಳೆಯುವದರಿಂದ ಆ ವರ್ಷವೆಲ್ಲವೂ ಆತನಿಗೆ ಬರತಕ್ಕ ವಿಪತ್ಪರಂಪರೆಗಳೆಲ್ಲವೂ ಪರಿಹಾರವಾಗಿ ಸುಖಪರಂಪರೆಯುಂಟಾಗುವದು. ಜಗತ್ತಿನಲ್ಲಿ ಮನುಷ್ಯನಿಗೆ ಸಂತೋಷವೇ ಮುಖ್ಯವಾದುದು, ಎಷ್ಟೋ ಧನವಿದ್ದರೂ ಬಲಿಷ್ಠರಾಗಿದ್ದರೂ ದೊಡ್ಡ ಅಧಿಕಾರವಿದ್ದರೂ ಸಂತೋಷವೊಂದಿಲ್ಲದಿದ್ದರೆ ಅವುಗಳೊಂದೂ ಪ್ರಯೋಜನಕ್ಕೆ ಬರಲಾರವು.

> ಸರ್ಪಾಃ ಪಿಬಂತಿ ಪವನಂ ನಚ ದುರ್ಬಲಾಸ್ತೇ ಶುಷ್ಕೈಸ್ತೃಣೈರ್ವನಗಜಾ ಬಲಿನೋಭವಂತಿ | ಕಂದೈಃಫಲೈರ್ಮುನಿವರಾಃ ಕ್ಷಪಯಂತಿ ಕಾಲಂ ಸಂತೋಷ ಏವ ಪುರುಷಸ್ಯ ಪರಂನಿಧಾನಂ ||

ಸರ್ಪಗಳು ವಾಯುವನ್ನು ಆಹಾರಮಾಡಿಕೊಂಡಿದ್ದರೂ ಸಂತೋಷವುಳ್ಳವುಗಳಾಗಿರುವುದರಿಂದ ಬಲಿಷ್ಠಗಳಾಗಿಯೇ ಇರುತ್ತವೆ. ಕಾಡಿನ ಆನೆಗಳು ಒಣಗಿದ ಹುಲ್ಲನ್ನು ತಿನ್ನುತ್ತಿದ್ದರೂ ಸಂತೋಷವುಳ್ಳವುಗಳಾಗಿರುವುದರಿಂದ ಬಲಶಾಲಿಗಳಾಗಿಯೇ ಇರುತ್ತವೆ. ಋಷಿಗಳು ಕಾಡಿನಲ್ಲಿ ಕಂದಮೂಲಗಳನ್ನು ತಿಂದುಕೊಂಡಿದ್ದರೂ ಸಂತೋಷದಿಂದ ಕಾಲಕಳೆಯುತ್ತಾರೆ. ಪುರುಷನಿಗೆ ಸಂತೋಷವೆಂಬುದೇ ಮುಖ್ಯವಾದುದು. ಆದ್ದರಿಂದ ಬಡವನಾಗಿರಲಿ, ಬಲ್ಲಿದವನಾಗಿರಲಿ ಇದ್ದುದರಲ್ಲಿಯೇ ಸಂತೋಷದಿಂದ ಕಾಲಕ್ಷೇಪಮಾಡುವುದೇ ಮಾನವಜನ್ಮದ ಮುಖ್ಯ ಗುರಿಯಾಗಿರುವುದು.

ಮಹಾಶಯರೇ ? ಈಶ್ವರಾನುಗ್ರಹದಿಂದ ನಾವೆಲ್ಲರೂ ಶ್ರೀಮದಾಂಗಿರಸಸಂವತ್ಸರವನ್ನು ಸಂತೋಷದಿಂದ ಕಳೆದೆವು. ಈ ದಿವಸ ಶ್ರೀಮುಖಸಂವತ್ಸರವು ಮೆಲ್ಲಮೆಲ್ಲನೆ ನಮ್ಮ ಭಾರತಭೂಮಿಗೆ ಪದಾರ್ಪಣವನ್ನು ಮಾಡಿದೆ. ನಾವುಗಳು ಹಿಂದಿನ ಸಂವತ್ಸರದಂತೆ ಈ ಸಂವತ್ಸರದಲ್ಲಿಯೂ ಯಥಾಲಾಭಸಂತುಷ್ಟರಾಗಿ ಕಾಲವನ್ನು ಕಳೆಯುವಂತೆ ಈಶ್ವರನು ನಮ್ಮೆಲ್ಲರನ್ನೂ ಅನುಗ್ರಹಿಸಲೆಂದು ಬೇಡುತ್ತೇವೆ.

> ಧಾರಾಧರಾಃ ಕ್ಷ್ಮಾಮಖಿಲಾಂ ಪ್ರಕುರ್ಯುಃ ಧಾರಾಧರಾಂ ಶ್ರೀಮುಸುಭಿಕ್ಷರಮ್ಯಾಂ | ಸಂಪೂರ್ಣಸಸ್ಯಾನಿ ಫಲಂತಿ ಭೂಮೌ ಗೀತೋತ್ಸವಾಶ್ಚಾಬ್ದಪತೌ ಶಶಾಂಕೇ ||

ಎಂಬ ಪ್ರಮಾಣದಿಂದ ಈ ಸಂವತ್ಸರಕ್ಕೆ ಚಂದ್ರನು ರಾಜನಾಗಿರುವುದರಿಂದ ಪ್ರಪಂಚದಲ್ಲಿ ಜಲಸಮೃದ್ಧಿಯೂ ಸಸ್ಯಾಭಿವೃದ್ಧಿಯೂ ಜನಸೌಖ್ಯವೂ ಉಂಟಾಗುತ್ತದೆ. ಬೃಹಸ್ಪತಿಯು ಮಂತ್ರಿಯಾದುದರಿಂದ ಸುವೃಷ್ಟಿಯು ಧೊರೆಗಳಲ್ಲಿ ಒಬ್ಬರಿಗೊಬ್ಬರಿಗೆ ವೈಮನಸ್ಯವು ಪ್ರಜಾಭಿವೃದ್ಧಿಯುಂಟಾಂಗುವುದು. ಬುಧನು ಸೇನಾಧಿಪತಿಯೂ ಅರ್ಘಾಧಿಪತಿಯೂ ಮೇಘಾಧಿಪತಿಯೂ ಆಗಿರುವುದರಿಂದ ಕೆಲವೆಡೆಯಲ್ಲಿ ಖಂಡವೃಷ್ಟಿಯೂ ಸಸ್ಯಾಭಿವೃದ್ಧಿಯೂ ಮಧ್ಯದೇಶದಲ್ಲಿ ಅತಿವೃಷ್ಟಿಯೂ ವಿಶೇಷಫಾಳಿಯೂ ಸಂಭವಿಸುವುದು. ಸೂರ್ಯನು ಸಸ್ಯಾಧಿಪತಿ ಮತ್ತು ನೀರಸಾಧಿಪತಿಯೂ ಆದುದರಿಂದ ಬೆಳೆಯು ಸಾಧಾರಣವಾಗಿ ಬೆಳೆದರೂ ರೋಗೋಪದ್ರವವು ಹೆಚ್ಚುವುದು. ಶುಕ್ರನು ಧಾನ್ಯಾಧಿಪನಾದುದರಿಂದ ಅಕ್ಕಿ ಜೋಳ ಮುಂತಾದ ಬೆಳಧಾನ್ಯವು ವೃದ್ಧಿಯಾಗುವುದು. ಕುಜನು ರಸಾಧಿಪನಾದುದರಿಂದ ಸೀಪದಾರ್ಥಗಳ ಬೆಲೆಯು ಹೆಚ್ಚುವದು. ಸೂರ್ಯನು ಹಗಲು ಮೇಷರಾಶಿಯನ್ನು ಪ್ರವೇಶಿಸುವುದರಿಂದ ಕಲಹವೂ ರೋಗಾಧಿಕ್ಯವೂ ಚೋರಬಾಧೆಯು ವ್ಯಾಘ್ರಾದಿ ಕ್ರೂರಜಂತುಗಳ ಬಾಧೆಯೂ ಉಂಟಾಗುವುದು. ಸೂರ್ಯನು ರಾತ್ರಿ ಆರಿದ್ರಾನಕ್ಷತ್ರವನ್ನು ಪ್ರವೇಶಿಸುವುದರಿಂದ ಸುಭಿಕ್ಷೆಯೂ, ಗುರುವು ವರ್ಷಾದಿಯಿಂದ ಶ್ರಾವಣಶುಕ್ಲಾಷ್ಟಮಿಯವರೆಗೆ ಸಿಂಹರಾಶಿಯಲ್ಲಿರುವುದರಿಂದ ರಾಜರುಗಳಿಗೆ ಕಷ್ಟವೂ ಸತ್ಪುರುಷರಿಗೆ ತೊಂದರೆಯೂ ಸಂಭವಿಸುವದು. ಅನಂತರ ರಾಜಪ್ರಜೆಗಳಲ್ಲಿ ಪ್ರೇಮವು ಬೆಳೆಯುವದು. ಚೈತ್ರಮಾಸದಲ್ಲಿ ಧಾನ್ಯ ತೈಲ ಪಶ್ವಾದಿಗಳ ಬೆಲೆ ಹೆಚ್ಚುವುದು. ವೈಶಾಖದಲ್ಲಿ ಧಾನ್ಯದ ಬೆಲೆಯು ಸಮವಾಗುವದು. ಸುವರ್ಣಾದಿ ಕೆಂಪುಪದಾರ್ಥಗಳ ಬೆಲೆಯು ಹೆಚ್ಚುವದು. ಜ್ಯೇಷ್ಠದಲ್ಲಿ ಹತ್ತಿ ಮುಂತಾದಪದಾರ್ಥಗಳ ಬೆಲೆ ಹೆಚ್ಚುವದು.

ಆಷಾಢಮಾಸದಲ್ಲಿ ಕೆಂಪುಪದಾರ್ಥಗಳ ಬೆಲೆಹೆಚ್ಚುವುದು. ಶ್ರಾವಣದಲ್ಲಿ ಧಾನ್ಯದ ಬೆಲೆ ಸಾಧಾರಣವಾಗಿದ್ದು ಗುಡ ಮಹಿಷ ಮುಂತಾದುವುಗಳ ಬೆಲೆಯು ಹೆಚ್ಚಿ ರೋಗೋಪದ್ರವವುಂಟಾಗುವುದು. ಮತ್ತು ಖಂಡವೃಷ್ಟಿ. ಭಾದ್ರಪದದಲ್ಲಿ ಸಕ್ರೆ ಎಣ್ಣೆ ಕೆಂಪುವಸ್ತುಗಳ ಬೆಲೆ ಹೆಚ್ಚುವುದು. ಆಶ್ವಯುಜದಲ್ಲಿ ತೆಂಗು ಚಿನ್ನ ಸಕ್ರೆ ಬೆಲೆ ಹೆಚ್ಚುವದು. ಸಸ್ಯವು ಕೆಡುವುದು, ಕಾರ್ತಿಕದಲ್ಲಿ ಧಾನ್ಯದ ಬೆಲೆಯು ಹೆಚ್ಚುವದು. ರೋಗೋಪದ್ರವವು, ಫಾಲ್ಗುಣದಲ್ಲಿ ಹತ್ತಿ, ಎಳ್ಳು ಎಣ್ಣೆ ಬೆಲೆಯು ಹೆಚ್ಚುವದು.

ಶ್ರೀ ಪರಮೇಶ್ವರನ ಮುಖದಿಂದ ಜನಿಸಿದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಈ ನೂತನವರ್ಷವೆಲ್ಲಾ ನಮ್ಮ ಪತ್ರಿಕಾವಾಚಕರಿಗೆ ದೀರ್ಘಾಯುರಾರೋಗ್ಯಭಾಗ್ಯಪರಂಪರೆಯನ್ನಿತ್ತು ಬರಬಹುದಾದ ವಿಪತ್ಪರಂಪರೆಯನ್ನೆಲ್ಲಾ ನಾಶಗೊಳಿಸಿ ಪ್ರಾರಂಭಕಾರ್ಯಗಳಿಗೆ ಫಲವನ್ನಿತ್ತು ಕಾಪಾಡಲೆಂದು ಬೇಡುತ್ತೇವೆ.

> ಸ್ವಸ್ತಿಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯೇನ ಮಾರ್ಗೇಣ ಮಹೀಂಮಹೀಶಾಃ | ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಸ್ಸಮಸ್ತಾಸ್ಸುಖಿನೋಭವಂತು || ಕಾಲೇವರ್ಷತು ಪರ್ಜನ್ಯಃ ಪೃಥಿವೀಸಸ್ಯಶಾಲಿನೀ | ದೇಶೋಯಂ ಕ್ಷೋಭರಹಿತಃ ಬ್ರಾಹ್ಮಣಾಸ್ಸಂತು ನಿರ್ಭಯಾಃ ಅಪುತ್ರಾಃ ಪುತ್ರಿಣಸ್ಸಂತು ಪುತ್ರಿಣಸ್ಸಂತು ಪೌತ್ರಿಣಃ | ಅಧನಾಸ್ಸಧನಾಸ್ಸಂತು | ಜೀವಂತುಶರದಶ್ಶತಂ ||

ಒಳದೇಶದ ವೃತ್ತಾಂತಗಳು.

ಫ್ರೆಂಚ್‌ರಾಕ್ಸಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಶ್ರೀ|| ಜೆ. ರುದ್ರಪ್ಪನವರು ಎಂ.ಎ., ಎಲ್‌ಎಲ್ ಬಿ. ಇವರು ಮಂಡ್ಯದ ಮುನ್ಸೀಫರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಆಸ್ಥಾನ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ|| ಯಜ್ಞ ಸಂಪತ್ಕೃಷ್ಣ ಜೋಯಿಸರು ಕಳುಹಿಸಿರುವ ಶ್ರೀಮುಖಸಂವತ್ಸರದ ಪಂಚಾಂಗವನ್ನು ಆತ್ಮಾನಂದದಿಂದ ಸ್ವೀಕರಿಸಿರುತ್ತೇವೆ.

ಲಂಡನ್ನಿನಲ್ಲಿ ನಡೆಯಲಿರುವ ಜಾಯಿಂಟ್ ಪಾರ್ಲಿಮೆಂಟರೀ ಕಮಿಟಿಯಲಿ ಭಾಗವಹಿಸಲು ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡುವರೆಂದು ತಿಳಿದುಬಂದಿದೆ.

ನಾಟಕ ಸಿನಿಮಾ ಮೊದಲಾದ ವಿನೋದಗಳಲ್ಲಿ ಪ್ರೇಕ್ಷಕರಿಂದ ವಸೂಲಾಗುವ ಹಣದಮೇಲೆ ಶೇಕಡಾ 12½ ಯಷ್ಟು ತೆರಿಗೆಯನ್ನು ವಸೂಲ್ಮಾಡತಕ್ಕದ್ದೆಂದು ಸರಕಾರದವರು ಅಪ್ಪಣೆಮಾಡಿರುತ್ತಾರೆ. ಇದು ಏಪ್ರಿಲ್ ತಿಂಗಳಿಂದ ಜಾರಿಗೆ ಬರುವದೆಂದು ತಿಳಿದುಬಂದಿದೆ.

ರಾಜಧಾನಿಯ ಪ್ರಸಿದ್ಧ ಸುಗಂಧದ್ರವ್ಯಗಳ ವ್ಯಾಪಾರಿಗಳಾದ ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿಯ ಪ್ರೊಪ್ರೈಟರ್ ಶ್ರೀ|| ಎಂ. ವಿ. ನಾರಾಯಣ ರಾಯರು ಕಳುಹಿಸಿರುವ ಶ್ರೀಮುಖ ಯುಗಾದಿಯ ಶುಭವಾದನವನ್ನು ಸಂತೋಷದಿಂದ ಸ್ವೀಕರಿಸಿರುತ್ತೇವೆ. ಜಗದೀಶ್ವರನು ಶ್ರೀ|| ನಾರಾಯಣರಾಯರಿಗೆ ನೂತನವರ್ಷದಲ್ಲಿ ಸಮಸ್ತ ಸನ್ಮಂಗಳಗಳನ್ನುಂಟುಮಾಡಲಿ.

ಜಿ. ಸಿ. ಶಂಕರಪ್ಪನವರು ಮತ್ತು ಟಿ. ನಾರಾಯರಾವ್ ಇವರುಗಳ ಸಂಪಾದಕತದಲ್ಲಿ "ಮೈಸೂರು ಪತ್ರಿಕೆ" ಎಂಬ ನೂತನವಾದ ಕರ್ಣಾಟಕಭಾಷೆಯಲ್ಲಿ ದೈನಂದಿನಪತ್ರಿಕೆಯೊಂದು ನಾಳೆ ದಿವಸ ಮೈಸೂರು ರಾಜಧಾನಿಯಲ್ಲಿ ಜನ್ಮಧಾರಣ ಮಾಡುತ್ತದೆಂಬ ಶುಭವಾರ್ತೆಯನ್ನು ಕೇಳಿ ಸಂತೋಷಿಸುತ್ತೇವೆ. ಪ್ರಾಯಶಃ ಸರ್ವಜನಹಿತೋಪಕಾರತ್ವವೇ ಈ ಪತ್ರಿಕೆಯ ಮುಖ್ಯೋದ್ದೇಶವಾಗಿರುವುದರಿಂದ ಈ ಪತ್ರಿಕೆಯೆಂಬ ಶಿಶುವು ಸರ್ವತೋಮುಖವಾಗಿ ಬೆಳೆದು ಇದರ ಅಂಗಗಳ ಸೌಷ್ಟವದಿಂದ ಕರ್ಣಾಟಕ ಪ್ರಪಂಚಕ್ಕೆ ಆಹ್ಲಾದವನ್ನುಂಟುಮಾಡಲೆಂದು ಕೋರುತ್ತೇವೆ.

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯವರ ರಥೋತ್ಸವವು ನಿನ್ನೆ ದಿವಸದಿಂದ ಪ್ರಾರಂಭವಾಗಿರುತ್ತದೆ, ಮುಂದಿನ ತಿಂಗಳು 2 ನೆ ತಾರೀಕು ಭಾನುವಾರ ದಿವಸ ಮಹಾರಥೋತ್ಸವವು ನಡೆಯುತ್ತದೆ. ತಾ|| 9 ರ ವರಿವಿಗೂ ಅವಿಚ್ಛಿನ್ನವಾಗಿ ಪ್ರತಿದಿವಸವೂ ಭಕ್ತಾದಿಗಳ ಸೇವಾರ್ಥವು ಪದ್ಧತಿಯಪ್ರಕಾರ ನಡೆಯುವದು ಹೀಗೆ ಹದಿನೈದು ದಿವಸಗಳವರಿವಿಗೆ ಮಾಮೂಲುಮೇಲೆ ಮಹಾಸ್ವಾಮಿಯ ಉತ್ಸವವು ನಡೆಯುವುದರಿಂದ ಭಕ್ತಾದಿಗಳು ಈ ಮಹೋತ್ಸವಕ್ಕೆ ಆಗಮಿಸಿ, ಸ್ವಾಮಿಯ ಸೇವೆಯಿಂದ ಕೃತಾರ್ಥರಾಗಬೇಕೆಂದು ಅಲ್ಲಿಯ ಕಾರ್ಯದರ್ಶಿಗಳು ಕೋರುತ್ತಾರೆ.

ಶ್ರೀರಂಗಪಟ್ಟಣದ ತಾಲ್ಲೂಕು ಕಟ್ಟೇರಿಗ್ರಾಮದ ಹತ್ತಿರ ಇರ್ವಿನ್‌ನಾಲಾ ಪೈರೋಡಿನ ಸಮೀಪದಲ್ಲಿ ನೂತನವಾಗಿ ಕಟ್ಟಿಸಿರುವ ದೇವಾಲಯದಲ್ಲಿ ಶ್ರೀ ಮಹಾದೇವಿ ಎಳೂರಮ್ಮನವರ ಕಳಾಪ್ರತಿಷ್ಠೆಯು ಕಳೆದ ಅಂಗಿರಸ ಸಂವತ್ಸರದ ಮಾಘ ಶುದ್ಧ ದಶಮಿ ಭಾನುವಾರ (ತಾ|| 5-2-33) ದಿವಸ ನೆರವೇರಿ ತಾ|| 17-3-33 ನೇ ಶುಕ್ರವಾರ ಮಹಾ ಮಂಗಳಾರತಿಯು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕೆ 5-6 ಸಾವಿರ ಜನ ಭಕ್ತಾದಿಗಳು ಆಗಮಿಸಿದ್ದರು. ಮಹಾ ಮಂಗಳಾರತಿಯಾದನಂತರ ಸಹಸ್ರಾರು ಜನರಿಗೆ ಅನ್ನಸಂತರ್ಪಣೆಯು ನಡೆದು ಸಾಯಂಕಾಲ 6 ಘಂಟೆಯ ಮೇಲೆ ದೇವಸ್ಥಾನದಲ್ಲಿ ರಾಜಧಾನಿಯ ನಿವಾಸಿಗಳಾದ ಅಭಿನವ ವಾಲ್ಮೀಕಿ, ಹರಿಕಥಾ ಕೇಸರಿ ಶ್ರೀ|| ಪುಟ್ಟಣ್ಣಭಾಗವತರಿಂದ ಸತಿಸುಲೋಚನ ಎಂಬ ಹರಿಕಥಾ ಶ್ರವಣವು ನಡೆಯಿತು.

ವರ್ತಮಾನಸಂಗ್ರಹ

ಮಾರ್ಚಿ 18 ಕ್ಕೆ ಆಖೈರಾದ ವಾರದಲ್ಲಿ ಮುಂಬಯಿಯಿಂದ 99,14,721 ರೂಪಾಯಿಗಳ ಭಂಗಾರವು ಪರದೇಶಗಳಿಗೆ ರವಾನಿಸಲ್ಪಟ್ಟಿತು.

ಪೂರ್ವಕಾಲದಲ್ಲಿ ಮನುಷ್ಯರೆಲ್ಲರೂ ಮೀನುಗಳಾಗಿದ್ದರಂತೆ! ಆದುದರಿಂದಲೇ ನಾವು ಆಕಳಿಸುವೆವೆಂದು ಜರ್ಮನಿಯ ಒಬ್ಬ ಶಾಸ್ತ್ರಜ್ಞರು ಹೇಳುತ್ತಿರುವರು!

ತಮ್ಮ ದೇಶದ ಸ್ತ್ರೀಯರಾರೂ ಪ್ಯಾರಿಸ್ ನಗರದ ಉಡುಪುಗಳನ್ನು ಕೊಂಡುಕೊಳ್ಳಕೂಡದೆಂದು ಇಟಲಿ ಸರಕಾರದವರು ಹೊಸದೊಂದು ಕಾನೂನನ್ನು ಮಾಡಿರುವರು.

ಸ್ಪೇನ್‌ದೇಶದ ಮಾಜಿ ಚಕ್ರವರ್ತಿಗಳಾದ ಡಾನ್ ಅಲ್‌ಫಾನ್‌ಜೋರವರು ಮೈಸೂರು ಮತ್ತು ಹೈದರಾಬಾದ್‌ಸಂಸ್ಥಾನಗಳ ಸಂಚಾರವನ್ನು ಮುಗಿಸಿ ಕಳೆದ 13 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಜಹಜು ಹತ್ತಿ ಯೂರೋಪಿಗೆ ಪ್ರಯಾಣಮಾಡಿದರು.

ಲಂಡನ್‌ನಗರದ ಕಿಂಗ್ಸ್‌ಕ್ರಾಸ್ ರಸ್ತೆಯಲ್ಲಿ ಟ್ರಾಂಗಾಡಿಗಳು ತಿರುಗಾಡುವ ಕಂಬಿಯ ಮೇಲೆ ಒಂದು ಸಣ್ಣ ಕಬ್ಬಿಣದ ಚೂರು ಸಿಕ್ಕಿಕೊಂಡು ಒಂದು ಟ್ರಾಂಗಾಡಿಯು ಕಲೆಕೆಳಗಾಗಿ ಮೊಗಚಿಕೊಂಡಿತು. ದೈವವಶಾತ್ ಯಾರಿಗೂ ಪ್ರಾಣಾಪಾಯವಾಗಲಿಲ್ಲ!

ಪ್ರಪಂಚದಲ್ಲೆಲ್ಲಾ ಅತ್ಯಂತ ಶೆಖೆಯಾದ ಸ್ಥಳವು ಹಿಮಾಲಯಪರ್ವತದಲ್ಲಿರುವದಂತೆ! ಕಾಶ್ಮೀರಸಂಸ್ಥಾನಕ್ಕೆ ಸೇರಿದ ಲಾಡಕ್ ಎಂಬ ಪ್ರದೇಶವು ಹಿಮಾಲದ ಉನ್ನತವಾದ ಪ್ರದೇಶದಲ್ಲಿದ್ದು ಒಂದೊಂದುಸಾರೆ ಅಲ್ಲಿ ಹವವು 160 ಡಿಗ್ರಿಗಳಷ್ಟು ಕಾವಾಗಿರುವದಂತೆ!

ಗೌರೀಶಂಕರ ಶಿಖರದಮೇಲೆ ಹಾರುವುದಕ್ಕಾಗಿ ತಯಾರಿಸಿರುವ ವಿಮಾನುಗಳು ಹಿಮಾಲಯಪರ್ವತದ ತಪ್ಪಲಿನಲ್ಲಿರುವ ಪೂರ್ಣಿಯಾ ಎಂಬಲ್ಲಿಗೆ ಬಂದಿರುವುವು. ಇಲ್ಲಿ ಯಂತ್ರ ಮೊದಲಾದುವುಗಳನ್ನು ಮತ್ತೊಂದಾವರ್ತಿ ಪರೀಕ್ಷಿಸಿದನಂತರ ಪರ್ವತದಮೇಲೆ ಹಾರುವರು.

ಕ್ಲೀವ್‌ಲೆಂಡ್ ದೇಶದ ಡಾ|| ಮಿಲ್ಲರ್ ಎಂಬುವರು ಸೌಂದರ್ಯದಲ್ಲಿ ಸಂಗೀತವಿರುವದೆಂದು ಕಂಡುಹಿಡಿದಿರುವರು! ಇವರು ನಿರ್ಮಿಸಿರುವ ಯಂತ್ರದ ಮುಂದೆ ಸೌಂದರ್ಯವತಿಯು ಬಂದರೆ ಅದು ಸುಸ್ವರದಿಂದ ಹಾಡುವದು! ಕುರೂಪಿಯು ಬಂದರೆ ಅಪಸ್ವರವನ್ನೇ ಬೀರುವದು!

ಲಾಹೋರಿನಲ್ಲಿ ಶಾಂತಿದೇವಿ ಎಂಬ ಹಿಂದೂ ಸ್ತ್ರೀಯು ಅಕಸ್ಮಾತ್ ಕಾಲುಜಾರಿ ಮನೆಯ ಮೇಲ್ಭಾಗದಿಂದ ಕೆಳಕ್ಕೆ ಬಿದ್ದು ಎರಡು ಘಂಟೆಗಳನಂತರ ಆಸ್ಪತ್ರೆಯಲ್ಲಿ ಮೃತಪಟ್ಟಳು. ಆದರೆ ಅವಳು ಬೀಳುವಾಗ ಕಂಕುಳಲ್ಲಿದ್ದ ಮಗುವಿಗೆ ಮಾತ್ರ ಯಾವ ಅಪಾಯವೂ ಆಗಲಿಲ್ಲ!

ಕ್ರಾಂತಿಕಾರರ ಅತ್ಯಾಚಾರವನ್ನು ತಡೆಯಲು ಬಂಗಾಳಾಸರಕಾರದವರು ಹೊಸಕಾನೂನನ್ನು ಹೊರಡಿಸಿರುವರು. ಈ ಕಾನೂನುಪ್ರಕಾರವಾಗಿ ಯಾರೂ ತಮ್ಮ ಜಾತಿ ಮತ್ತು ಪದ್ಧತಿಗೆ ವಿರೋಧವಾಗಿ ಉಡುಪುಗಳನ್ನು ಧರಿಸಕೂಡದು. ತಪ್ಪಿದರೆ 6 ತಿಂಗಳ ಕಠಿಣಸಜೆಗೆ ಗುರಿಯಾಗುವರು.

ಲಂಡನ್ನಿನಲ್ಲಿರುವ ಬ್ರಿಟಿಷ್ ಮ್ಯೂಜಿಯಂ (ವಿವಿಧ ವಸ್ತುಪ್ರದರ್ಶನ ಶಾಲೆಯು) ಹಳೇ ಕಟ್ಟಡವು ಬೆಂಕಿಯಿಂದ ಅಪಾಯವನ್ನು ಹೊಂದದಿರುವ ಪದಾರ್ಥಗಳಿಂದ ಹೊಸದಾಗಿ ಕಟ್ಟಲ್ಪಡುವದಂತೆ! ಈ ಕೆಲಸವು 5 ವರ್ಷಗಳಕಾಲ ನಡೆಯುವದಂತೆ! ಮತ್ತು 52,50,000 ರೂ. ಗಳ ವೆಚ್ಚವಾಗುವದಂತೆ!

ಜೂಗೋಸ್ಲೇವಿಯಾ ದೇಶದ ಒಬ್ಬ ಮನುಷ್ಯನು 500 ಪೌಂಡುಗಳ ಕರೆನ್ಸಿನೋಟುಗಳನ್ನು ತನ್ನ ಮನೆಯ ಅಟ್ಟದ ಮೇಲೆ ಒಂದು ಪೆಟ್ಟಿಗೆಯಲ್ಲಿ ಮುಚ್ಚಿಟ್ಟಿದ್ದನಂತೆ! ಕೆಲವು ದಿವಸಗಳನಂತರ ಅವನು ಅವುಗಳನ್ನು ನೋಡಲು ಬಾಗಿಲು ತೆರೆದಾಗ 8-10 ಸುಂಡಿಲಿಗಳು ನೋಟುಗಳ ಚೂರುಗಳ ಮಧ್ಯದಲ್ಲಿ ಆಟವಾಡುತ್ತಿದ್ದವಂತೆ!

ಇನ್ನು ಮುಂದೆ ವೃದ್ಧರಾರೂ ತಮ್ಮ ತಲೆಗೂದಲು ಉದುರಿಹೋಯಿತೆಂದು ಚಿಂತಿಸಬೇಕಾದುದಿಲ್ಲ! ಕ್ಯಾಂಡನ್‌ನಗರದ 'ರೇ ಥೆರಪಿ' ಸಂಸ್ಥೆಯವರು ಎಲೆಕ್ಟ್ರಿಕ್ ಕರೆಂಟಿನಿಂದ ಕೂದಲನ್ನು ಬೆಳೆಯಿಸಬಹುದಾದ ಹೊಸ ಮಾರ್ಗವನ್ನು ಕಂಡುಹಿಡಿದಿರುವರು. ಇದರಿಂದ ಎಂಥ ಬೋಳುತಲೆಯುಳ್ಳಾದರೂ ಕೆಲವು ವಾರಗಳಲ್ಲಿಯೇ ಕೂದಲು ಚೆನ್ನಾಗಿ ಬೆಳೆಯುವುದಂತೆ!

ಕಲ್ಕತ್ತಾ ಪೋಲೀಸರು ಅನುಮಾನದಮೇಲೆ ಒಬ್ಬ ಸ್ತ್ರೀಯಳ ಮನೆಯನ್ನು ಶೋಧಮಾಡಿ ಅನೇಕ ಸಿಡಿಮದ್ದುಗಳನ್ನು ಪತ್ತೆಮಾಡಿರುತ್ತಾರೆ. ಸರ್ಕಾರಿಕಟ್ಟಡಗಳನ್ನೂ ಹಾಗೂ ಯುರೋಪಿಯನ್ನರ ಮನೆಗಳನ್ನೂ ನಾಶಪಡಿಸುವದಕ್ಕಾಗಿ ಆ ಸಿಡಿಮದ್ದುಗಳು ಶೇಖರಿಸಲ್ಪಟ್ಟಿದ್ದವಂತೆ! ಈ ಸಂಬಂಧದಲ್ಲಿ ಪೋಲೀಸರು ಅನೇಕ ತರುಣರನ್ನು ದಸ್ತಗಿರಿಮಾಡಿರುತ್ತಾರೆ.

ಲಾಸ್ ಆಂಗಲೆಸ್ ನಗರದ ಜನರಲ್ ಆಸ್ಪತ್ರೆಯಲ್ಲಿ ಮೆಕ್ಸಿಕೋ ದೇಶದ ಒಬ್ಬ 20 ವರ್ಷದ ತರುಣಿಯು ಚಿಕಿತ್ಸೆಯನ್ನು ಹೊಂದುತ್ತಿರುವಳು. ಅವಳ ದೇಹದ ಶಾಖವು 110 ಡಿಗ್ರಿಗಳಿಗೆ ಏರಿದ್ದರೂ ಇನ್ನೂ ಜೀವಿತಳಾಗಿಯೇ ಇರುವದರಿಂದ ಡಾಕ್ಟರುಗಳಿಗೆ ಅತ್ಯಾಶ್ಚರ್ಯವಾಗಿರುವದಂತೆ! ಪ್ರಾಯಶವಾಗಿ ಶಾಖವು 107 ಡಿಗ್ರಿಗಳಿಗಿಂತಲೂ ಹೆಚ್ಚಾದರೆ ಮನುಷ್ಯನು ಬದುಕುವುದು ಕಷ್ಟ!

ಮೆಕ್ಸಿಕೊದೇಶಕ್ಕೆ ಸೇರಿದ ಒಂದಾನೊಂದು ನಾಟಕಶಾಲೆಯಲ್ಲಿ ಎಲೆಕ್ಟ್ರಿಕ್‌ತಂತಿಯು ಅಕಸ್ಮಾತ್ ಕಿತ್ತು 20 ಜನರು ಕೂಡಲೇ ಮೃತಪಟ್ಟರು. ಅನಂತರ ನಾಟಕಶಾಲೆಗೆ ಬೆಂಕಿಯು ಹತ್ತಿಕೊಂಡಿದ್ದರಿಂದ ಜನರು ಸಿಕ್ಕಿದಹಾಗೆ ನುಗ್ಗಿದರು. ಆ ನುಗ್ಗಾಟದಲ್ಲಿಯೂ ಅನೇಕರು ಸತ್ತರು. ಅಂತೂ ಆ ಅನಾಹುತದಲ್ಲಿ ಒಟ್ಟು 41 ಜನರು ಮೃತಪಟ್ಟರು. 70 ಜನರಿಗೆ ತುಂಬಾ ಗಾಯಗಳಾಗಿರುವವು.

ಕೆಲವು ದಿವಸಗಳ ಹಿಂದೆ ಜಪಾನ್ ದೇಶದಲ್ಲಿರುವ 'ಚಿಚಿಬೂ' ಪರ್ವತಗಳ ಮೇಲೆ ಏಕಕಾಲದಲ್ಲಿ ಇಬ್ಬರು ಸೂರ್ಯರು ಕಾಣಿಸಿಕೊಂಡರು. ಟೋಕಿಯೋ ನಗರದ ಹವಾಪರೀಕ್ಷಾ ಸಂಸ್ಥೆಯವರು ಪರ್ವತದ ಮೇಲ್ಭಾಗದ ಶೈತ್ಯದಿಂದ ಘನೀರೂಪವನ್ನು ಹೊಂದಿದ ಮೋಡಗಳ ಮುಖಾಂತರವಾಗಿ ಸೂರ್ಯಕಿರಣಗಳು ಬರುವದರಿಂದ ಈ ವಿಚಿತ್ರದೃಶ್ಯವು ಕಾಣಿಸಿತೆಂದು ಅಭಿಪ್ರಾಯಪಟ್ಟಿರುತ್ತಾರೆ.

ಜಪಾನಿನ ಒಬ್ಬ ಶಾಸ್ತ್ರಜ್ಞನು ಗುಂಡಿನೇಟನ್ನು ತಡೆಯಬಲ್ಲ ಹೊಸತರಹ ಅಂಗಿಗಳನ್ನು ತಯಾರಿಸಿರುವನು. ಈ ಅಂಗಿಗಳು ಒಂದು ತರಹ ರೇಷ್ಮೆಯಿಂದ ತಯಾರಿಸಲ್ಪಡುವವಂತೆ! ಜಪಾನಿನ ಸೈನ್ಯದ ಇಲಾಖೆಯವರು ಈ ಅಂಗಿಗಳನ್ನು ಪರೀಕ್ಷಿಸಿ ಇವು ನಿಜವಾಗಿಯೂ ಗುಂಡಿನೇಟುಗಳನ್ನು ತಡೆಯುವವೆಂದು ಒಪ್ಪಿರುತ್ತಾರೆ. ಈ ಅಂಗಿಗೆ ಉಪಯೋಗಿಸುವ ಬಟ್ಟೆಯ ಕ್ರಯವಾದರೂ ಬಹು ಸ್ವಲ್ಪ. ಗಜ 1 ಕ್ಕೆ 12 ಆಣೆ!

ಒಬ್ಬನೊಬ್ಬ ಫ್ರಾನ್ಸ್‌ದೇಶಸ್ಥನು ಸೊಳ್ಳೆಗಳ ನಾಶಕ್ಕಾಗಿ ಒಂದು ಹೊಸತರಹ ಯಂತ್ರವನ್ನು ನಿರ್ಮಿಸಿರುವನು. ಈ ಯಂತ್ರವು ಒಂದು ಕೊಳವೆಯಂತಿದ್ದು ಅದರ ಒಂದು ಕೊನೆಯಲ್ಲಿ ಒಂದು ಎಲೆಕ್ಟ್ರಿಕ್ ದೀಪವೂ ಮತ್ತೊಂದು ಕೊನೆಯಲ್ಲಿ ಒಂದು ಚೀಲವೂ ಇರುವುವು. ದೀಪದ ಬೆಳಕಿಗೆ ಸೊಳ್ಳೆಗಳು ಕೊಳವೆಯನ್ನು ಪ್ರವೇಶಿಸಿದ ಕೂಡಲೇ ಕೊಳವೆಯಲ್ಲಿರುವ ಒಂದು ಸಣ್ಣ ಯಂತ್ರವು ಅವುಗಳನ್ನು ಒಳಕ್ಕೆ ಸೆಳೆದುಕೊಂಡು ಚೀಲಕ್ಕೆ ಸೇರಿಸುವುವು!

ಯುಗೋಸ್ಲೇವಿಯಾ ನಗರದ ಸಮೀಪದ ಒಂದು ಹಳ್ಳಿಯಲ್ಲಿ ಒಬ್ಬ ರೈತನು ಒಂದು ಬೆಕ್ಕನ್ನು ಸಾಕಿದ್ದನು. ಈ ಬೆಕ್ಕು ಯಾವ ಆಹಾರವನ್ನೂ ತಿನ್ನುತ್ತಿರಲಿಲ್ಲ. ಇಲಿಗಳನ್ನೂ ಹಿಡಿಯುತ್ತಿರಲಿಲ್ಲ. ಹೀಗಿದ್ದರೂ ಅದು ಪುಷ್ಟಿಯಾಗಿಯೇ ಇರುತ್ತಿತ್ತು. ಇದರ ರಹಸ್ಯವನ್ನು ಪರೀಕ್ಷಿಸಬೇಕೆಂದು ರೈತನು ಹೊಂಚುಹಾಕುತ್ತಿರಲು ಆ ಬೆಕ್ಕು ಒಂದು ದಿವಸ ಹಸುಗಳ ಹಾಲು ಕರೆಯುವದಕ್ಕೆ ಸ್ವಲ್ಪಹೊತ್ತಿಗೆಮುಂಚೆ ಹಸುಗಳನ್ನು ಕಟ್ಟಿದ್ದ ಜೋಪಡಿಗೆ ಹೋಗಿ ಕೆಚ್ಚಲುಗಳಿಂದ ಹಾಲನ್ನು ಕುಡಿಯುವುದಕ್ಕೆ ಪ್ರಾರಂಭಿಸಿತಂತೆ!

ಲಂಡನ್ನಿನ ಬ್ಯಾಚಲರ್ ಎಂಬ ಶಾಸ್ತ್ರಜ್ಞರು ಹತ್ತು ವರ್ಷಗಳ ಕಾಲ ಶೋಧಮಾಡಿ ಒಂದು ಹೊಸತರಹ ಕಿರಣಗಳನ್ನು ಶೋಧನೆ ಮಾಡಿರುವರು! ಈ ಕಿರಣಗಳಿಂದ ಹೂವಿನ ಮೊಗ್ಗುಗಳು ಕೆಲವು ನಿಮಿಷಗಳೊಳಗಾಗಿ ಚೆನ್ನಾಗಿ ಅರಳಿ ಹೂವಾಗುವವಂತೆ! ನೂರಾರು ಗಜಗಳ ದೂರದಲ್ಲಿರುವ ಪದಾರ್ಥಗಳನ್ನು ಕತ್ತಲೆಯಲ್ಲಿ ಸ್ಪಷ್ಟವಾಗಿ ಫೋಟೋತೆಗೆಯಬಹುದಂತೆ! ಅನೇಕ ಕಠಿಣ ಕಾಯಿಲೆಗಳನ್ನು ಸುಲಭವಾಗಿ ಗುಣಪಡಿಸಬಹುದಂತೆ! ಮತ್ತು ಧಾನ್ಯದ ಬೀಜಗಳನ್ನು ಈ ಕಿರಣಗಳಲ್ಲಿಟ್ಟು ಅನಂತರ ಭೂಮಿಯಲ್ಲಿ ಬಿತ್ತಿದರೆ, ಇಮ್ಮಡಿಯಾಗಿ ಫಸಲನ್ನು ಕೊಡುವದಂತೆ!

ಬ್ರೈಟನ್‌ನಗರದ ಒಬ್ಬ ಧನಾಢ್ಯನಾದ ಕಲ್ಲಿದ್ದಲು ವ್ಯಾಪಾರಿಯ ಮಗನಾದ ಆರ್ಥರ್ ಹಿಲ್ ಎಂಬುವನು ಯಾವುದೋ ಒಂದು ಹಳೆಯ ಪುಸ್ತಕವನ್ನು 6 ಆಣೆಗಳಿಗೆ ಕೊಂಡುಕೊಂಡು ಅದನ್ನು ಓದುತ್ತಿರುವಾಗ್ಗೆ ಅದರಲ್ಲಿ ಒಂದು ಹಳೇ ಭೂಪಟವು ದೊರೆಯಿತು. ಅದರಲ್ಲಿ ಪೆಸಿಫಿಕ್‌ಸಾಗರದಲ್ಲಿರುವ ಕಾಕಸ್ ದ್ವೀಪದಲ್ಲಿ ಕೋಟ್ಯಂತರ ರೂಪಾಯಿಗಳ ಅಪಾರವಾದ ಆಸ್ತಿಯು ಬಚ್ಚಿಡಲ್ಪಟ್ಟಿರುವ ವಿಷಯವು ಬಹು ವಿಶದವಾಗಿ ವಿವರಿಸಲ್ಪಟ್ಟಿತ್ತು. ಈಗ ಆತನು ಭೂಪಟವನ್ನು ಸುರಕ್ಷಿತವಾಗಿರಲು ಬ್ಯಾಂಕಿನಲ್ಲಿರಿಸಿ, ಸದರಿ ಐಶ್ವರ್ಯವನ್ನು ತೆಗೆದುಕೊಂಡು ಬರುವುದಕ್ಕೋಸ್ಕರ ಕಾಕಸ್‌ದ್ವೀಪಕ್ಕೆ ಪ್ರಯಾಣಮಾಡಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿರುವನಂತೆ!

ಆಲ್ಬೇನಿಯಾ ದೇಶದ ಜೇನೆಟ್ ವಾಲೋರಾ ಎಂಬ ಮಹಾಸೌಂದರ್ಯವತಿಯಾದ ಸ್ತ್ರೀಯು ಕೆಲವು ದಿವಸಗಳ ಹಿಂದೆ ಲಂಡನ್ನಿನಲ್ಲಿ ಆತ್ಮಹತ್ಯಮಾಡಿಕೊಂಡಳು. ಇವಳು ಮೊದಲು ಆಲ್ಬೇನಿಯಾ ದೇಶದ ಜೋಗ್ ದೊರೆಯ ಪ್ರೀತಿಪಾತ್ರಳಾಗಿದ್ದಳು. ಈಚೆಗೆ ಆ ದೊರೆಯು ಇವಳನ್ನು ಬಿಟ್ಟು ಮತ್ತೊಬ್ಬ ಇಟಲೀ ದೇಶದ ಸುಂದರಿಯನ್ನು ಪ್ರೀತಿಸಲಾರಂಭಿಸಿದನು. ಅನಂತರ ಇವಳು ರೋಂ ನಗರಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಗೂಢಚಾರಳಾಗಿದ್ದಳು. ಆದರೆ ಇವಳಿಂದ ಅಷ್ಟು ಮಹತ್ವದ ಕಾರ್ಯವೇನೂ ನಡೆಯಲಿಲ್ಲವಾದ್ದರಿಂದ ಇಟಲಿ ಸರಕಾರದವರು ಇವಳನ್ನು ಕೆಲಸದಿಂದ ವಜಾಮಾಡಿದರು. ಅಲ್ಲಿಂದ ಇಂಗ್ಲೆಂಡಿಗೆ ಬಂದು ಆಲ್ಬೇನಿಯಾ ರಾಜನ ಪ್ರೇಮವನ್ನು ಪುನಃ ಸಂಪಾದಿಸಲು ಪ್ರಯತ್ನಿಸಿ ಅದರಿಂದ ಯಾವ ಪ್ರಯೋಜನವೂ ಆಗದೆ ಕಡೆಗೆ ನಿರಾಶಳಾಗಿ ಆತ್ಮಹತ್ಯ ಮಾಡಿಕೊಂಡಳು!

ಲಂಡನ್ ಮೊದಲಾದ ನಗರಗಳಲ್ಲಿ ದೊಡ್ಡದೊಡ್ಡ ಅಂಗಡಿಗಳ ಮುಂದುಗಡೆ ಗಾಜಿನ ಬಾಗಿಲುಗಳಿದ್ದು ಅಂಗಡಿಯಲ್ಲಿರುವ ಪದಾರ್ಥಗಳೆಲ್ಲವೂ ಹೊರಕ್ಕೆ ಕಾಣುವಂತೆ ಪ್ರದರ್ಶಿಸುವರು. ರಾತ್ರಿಯ ವೇಳೆಗಳಲ್ಲಿ ಸಹ ಈ ಕನ್ನಡಿಯ ಬಾಗಿಲುಗಳು ಹಾಗೆಯೇ ಇರುವವು. ಚೋರಾಗ್ರೇಸರರು ಅನೇಕಸಾರಿ ಬಹು ಸಾಹಸದಿಂದ ಗಾಜಿನ ಬಾಗಿಲುಗಳನ್ನು ಒಡೆದು ಒಳಗಿರುವ ಅಮೂಲ್ಯ ವಸ್ತುಗಳನ್ನು ಅಪಹರಿಸಿಕೊಂಡು ಹೋಗುವರು. ಇದನ್ನು ತಪ್ಪಿಸಲು ಲಂಡನ್ನಿನ ಒಬ್ಬ ಇಂಜನಿಯರು ಒಂದು ಹೊಸ ಮಾರ್ಗವನ್ನು ಕಂಡುಹಿಡಿದಿರುವರು. ಯಾವುದಾದರೊಂದು ಗಾಜಿನ ಬಾಗಿಲನ್ನು ಒಡೆದಕೂಡಲೇ ಒಳಗೆ ಮುಚ್ಚಿಟ್ಟಿರುವ ಎರಡು ಬಾಂಬುಗಳು ಸಿಡಿಯುವುವು. ಒಂದು ಬಾಂಬಿನಿಂದ ಅಪಾರವಾದ ಹೊಗೆಯು ಹೊರಟು ಸುತ್ತಮುತ್ತಲ ಪದಾರ್ಥಗಳು ಯಾವುವೂ ಕಾಣಿಸದಂತೆ ಮಾಡುವದು. ಮತ್ತೊಂದರಿಂದ ಅಮೋನಿಯಾ ಎಂಬ ವಿಷದ ಗಾಳಿಯು ಹೊರಟು ಕಳ್ಳನನ್ನು ಓಡಿಹೋಗುವಂತೆ ಮಾಡುವದು. ಇಷ್ಟೇ ಅಲ್ಲ! ಕಾಲುಮೈಲಿಯವರೆಗೆ ಕೇಳಿಸುವ ಒಂಟು ಸೀಟಿಯು ಪೋಲೀಸರಿಗೆ ಕಳ್ಳನ ಆಗಮನವನ್ನು ಸೂಚಿಸುವದು! ಅಂಗಡಿಯ ಹೊರಭಾಗದಲ್ಲಿ ಒಂದು ಕೆಂಪು ದೀಪವು ಹತ್ತಿಕೊಂಡು ರಸ್ತೆಯಲ್ಲಿ ಓಡಾಡುವವರಿಗೆ ಎಚ್ಚರಿಕೆಯನ್ನು ಕೊಡುವದು!

ಮೈಸೂರುಸಂಸ್ಥಾನದ ವಿಶ್ವಕರ್ಮಮಹಾಸಭೆಯು ಬರುವ ಏಪ್ರಿಲ್ 5, 6, 7 ಮತ್ತು 8 ನೇ ತಾರೀಖುಗಳಲ್ಲಿ ಶ್ರೀ ಪಾಪಾಕ್ಷಿ ಮಠದಲ್ಲಿ ನಡೆಯುತ್ತದೆ.

[3ನೆಯ ಪುಟದಿಂದ ಮುಂದುವರಿದುದು]

ಅವುಗಳನ್ನು ತಿಳಿದುಕೊಂಡಿರುವರು. ಇಷ್ಟಾರ್ಥಸಿದ್ಧಿಗೆ ಆರೋಗ್ಯ ಭಾಗ್ಯವು ಹೇಗೆ ಸಾಧಕವೋ ಅದನ್ನು ತಿಳಿದುಕೊಂಡು ಅನುಷ್ಠಾನದಲ್ಲಿಟ್ಟುಕೊಂಡಿರುವರು. ಸಾಹಿತ್ಯಕ್ಕೆ ಸಂಬಂಧಪಟ್ಟ ವೇದ ಶಾಸ್ತ್ರ ಪುರಾಣೇತಿಹಾಸಗಳ ವಿಷಯವನ್ನು ಕಾವ್ಯ, ನಾಟಕ, ಆಖ್ಯಾನ, ಆಖ್ಯೇಯ ಮೊದಲಾದುವುಗಳಲ್ಲಿ ಯಾವ ಯಾವವು ಇಹಪರಸೌಖ್ಯಗಳಿಗೆ ಸಾಧಕವೋ ಅವುಗಳನ್ನು ತಿಳಿದುಕೊಂಡಿರುವರು. ಈ ಉಪನ್ಯಾಸದಲ್ಲಿ ಇವುಗಳ ಪೈಕಿ ಯಾವ ಸಾಹಿತ್ಯವನ್ನು ಸರಿಯಾಗಿ ವಿನಿಯೋಗಿಸಿದರೆ ಆರ್ಯಮಹಿಳೆಯರು ಸ್ವಶಕ್ತಿಯಿಂದ ಕಾರ್ಯಚತುರೆಯರಾಗಿ ಬದುಕಬಹುದೋ ಅಂಥ ಪದವಿಗೆ ಯಾವ ಯಾವ ಸಾಹಿತ್ಯಗಳು ಅವಶ್ಯಕವೋ ಅವುಗಳನ್ನು ನಿರೂಪಿಸಿ ತಮ್ಮ ಸಹೋದರರೂ, ಸಹೋದರಿಯರೂ ಧರ್ಮಾರ್ಥ ಕಾಮ ಮೋಕ್ಷಗಳನ್ನು ಹೇಗೆ ಪಡೆಯಬೇಕೋ ಅದನ್ನು ಪ್ರಕಾಶಪಡಿಸಿದರು.

ತರುವಾಯ ಸಭಾಧ್ಯಕ್ಷರು ತಮ್ಮ ಲೋಕೋತ್ತರವಾದ ಉಪನ್ಯಾಸದಿಂದ ಸಭೆಯಲ್ಲಿ ಸರ್ವರೂ ಆನಂದ ಪರವಶರಾಗುವಂತೆ ಮಾಡಿದರು. ಪ್ರೊ|| ವೆಂಕಣ್ಣಯ್ಯನವರು ಎಂ.ಎ. ಪರೀಕ್ಷೆಯೇ ಮೊದಲಾದುವನ್ನು ಕೊಟ್ಟು ಪ್ರೊ|| ಪದವಿಗೆ ಅಲಂಕಾರಪ್ರಾಯರಾಗಿದ್ದಾಗ್ಯೂ ಅನೇಕ ಸಾವಿರ ವರ್ಷಗಳಿಂದ ಈ ಪ್ರಪಂಚದ ಪ್ರಾಚೀನ ಗ್ರಂಥಗಳಲ್ಲಿ ಇಹಪರ ಸೌಖ್ಯಗಳಿಗೆ ಸಾಧಕವಾದ ಯಾವ ಯಾವ ಧರ್ಮಗಳು ಹೇಳಲ್ಪಟ್ಟಿವೆಯೋ ಅವುಗಳು ಪ್ರಾಚೀನ ವಿಷಯಗಳೆಂದು ಉಪೇಕ್ಷಿಸಲ್ಪಡಬಾರದೆಂಬುದಾಗಿಯೂ, ಪ್ರಾಚೀನ ವಿಷಯಗಳೇ ಮರೆಯಲ್ಪಟ್ಟು ನವೀನ ವಿಷಯಗಳಾಗಿ ಪರಿಣಮಿಸುವುದೆಂಬುದಾಗಿಯೂ ಈ ನವೀನ ವಿಷಯಗಳೆಂದು ಹೇಳಲ್ಪಡತಕ್ಕ ಅನೇಕ ಸಂಗತಿಗಳು ಅನೇಕ ಸಾವಿರ ವರ್ಷಗಳ ಕೆಳಗೆ ಪ್ರಾಚೀನರಿಗೆ ಗೊತ್ತಾಗಿತ್ತೆಂದು ತೋರಿಸಿ ಪ್ರಾಚೀನರು ಕುಂಠರೆಂಬುದಾಗಿ ತಿಳಿದುಕೊಳ್ಳುವುದು ತಪ್ಪೆಂಬುದಾಗಿಯೂ, ಪ್ರಪಂಚವು ಸೃಷ್ಟಿಸಲ್ಪಟ್ಟಾರಭ್ಯ ಯಾವ ಯಾವ ವಿದ್ಯೆಗಳು ಇಷ್ಟಾರ್ಥಸಿದ್ಧಿಗೆ ಸಾಧಕಗಳಾಗಿ ಪರಿಣಮಿಸಿರುವುವೋ ಅವುಗಳನ್ನು ಸರಿಯಾಗಿ ತಿಳಿದುಕೊಂಡು ಪ್ರಾಚೀನರಿಗಿಂತಲೂ ಹೊಸ ವಿಷಯಗಳನ್ನು ಗೊತ್ತುಮಾಡಿ ಅವುಗಳ ಪ್ರಯೋಜನವನ್ನು ಹೊಂದಿ ಪ್ರಾಚೀನರಿಗಿಂತಲೂ ನಾವು ಹೆಚ್ಚು ಎಂಬುದಾಗಿ ಕಾರ್ಯತಃ ತೋರಿಸತಕ್ಕ ಶಕ್ತಿಯನ್ನು ಸಂಪಾದಿಸಿಕೊಂಡು ದುರಹಂಕಾರಿಗಳಾಗದೆ 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆಗೆ ಅನುಸಾರವಾಗಿ ಸತ್ಕಾರ್ಯಾಲಾಪವನ್ನು ಮಾಡುವುದು ಅವಶ್ಯಕವೆಂಬುದನ್ನೂ, ಇಹಪರ ಸೌಖ್ಯಗಳಿಗೆ ಸಾಧಕವಾದ ಸಕಲ ಸದ್ವಿದ್ಯೆಗಳನ್ನೂ, ಹೊನ್ನು ಹೆಣ್ಣು ಮಣ್ಣು ಅಧಿಕಾರ ಮೊದಲಾದುವುಗಳ ಪ್ರಯೋಜನಗಳನ್ನೂ ಅಪೇಕ್ಷಿಸದೆ ಸರ್ವರೂ ಸುಖವಾಗಿರುವಂತೆ ಮಾಡುವುದು ಕ್ಷೇಮಸ್ಕರ ವಿದ್ಯಾಭ್ಯಾಸರೂಪವಾದ ತಪಸ್ಸನ್ನು ಹೇಗೆ ಮಾಡಬೇಕೋ ಅದನ್ನೂ, ಸರ್ವರೂ ತಿಳಿದುಕೊಳ್ಳುವುದು ಅವಶ್ಯಕವೆಂದು ತೋರಿಸಿದರು. ಐಹಿಕಸುಖಕ್ಕೆ ಸಾಧಕವಾದ ಹೊನ್ನು, ಹೆಣ್ಣು, ಮಣ್ಣು ಅಧಿಕಾರ ಮೊದಲಾದುವುಗಳು ನಾವು ದೇಹವನ್ನು ಬಿಟ್ಟು ಹೋಗುವಾಗ ನಮ್ಮ ಜೊತೆಯಲ್ಲಿ ಯಾವುದೂ ಹೇಗೆ ಬರುವುದಿಲ್ಲವೋ ನಾವು ಮಾಡಿದ ಪುಣ್ಯಪಾಪಗಳು ಮಾತ್ರ ಈ ಲೋಕದಲ್ಲಿಯೂ ಲೋಕಾಂತರದಲ್ಲಿಯೂ ಹೇಗೆ ಇಷ್ಟಾರ್ಥಸಾಧನಗಳಾಗುವುವೋ ಅವುಗಳನ್ನು ನಿರೂಪಿಸಿ ಅಂಥ ವಿಷಯಗಳು ಸತ್ಕಾವ್ಯಗಳೆಂಬುದಾಗಿ ತೋರಿಸಿ, ಇಂಥಾ ಸತ್ಕಾವ್ಯಗಳು ಯಾವ ಭಾಷೆಯಲ್ಲಿ ವಿಶೇಷವಾಗಿರುವುವೋ ಆ ಭಾಷೆಯನ್ನು ಅಪಠಕ್ಕವರು ಹೇಗೆ ಸಂಪತ್ತಿನ ಶಿಖರದಲ್ಲಿ ಇರುವರೋ ಅದನ್ನೂ ತೋರಿಸಿ ನಮ್ಮ ಕರ್ನಾಟಕ ಸಾಹಿತ್ಯವು ಇಹಪರಸೌಖ್ಯಗಳಿಗೆ ಸಾಧಕವಾಗುವಂತೆ ಮಾಡಲ್ಪಡಬೇಕಾದರೆ ಹೇಗೆ ಕನ್ನಡಭಾಷಾಭಿಮಾನಿಗಳು ಜೇನುಹುಳುಗಳು ಸಕಲ ಪುಷ್ಪಗಳಿಂದಲೂ ಮಕರಂದವನ್ನು ಹೇಗೆ ಪರಿಗ್ರಹಿಸುವುವೋ ಹಾಗೆ ಸಕಲಸಾಹಿತ್ಯಗಳಿಂದಲೂ, ಸಕಲಶಾಸ್ತ್ರಗಳಿಂದಲೂ ಇಹಪರಸೌಖ್ಯಗಳಿಗೆ ಸಾಧಕವಾದ ಧರ್ಮಗಳನ್ನು ಶೇಖರಿಸಿ ಅವುಗಳ ಪ್ರಯೋಜನವನ್ನು ಹೊಂದಬೇಕೆಂದು ವಿಜ್ಞಾಪಿಸಿ ಲೋಕೋತ್ತರವಾದ ಹಿತೋಪದೇಶವನ್ನು ಮಾಡಿ ಸರ್ವರ ವಂದನೆಗಳಿಗೂ ಪಾತ್ರರಾದರು. ವೃದ್ಧಪಿತಾಮಹರಾದ ಮ|| ರಾ|| ಎಂ. ವೆಂಕಟಕೃಷ್ಣಯ್ಯನವರು ಈ ಸಾಹಿತ್ಯೋತ್ಸವದ ಆರ್ಗನೈಜರ್‌ಗಳಾದ ಮ|| ರಾ|| ರಾಮಕೃಷ್ಣರಾವ್ ಮೊದಲಾದ ಮಹನೀಯರಿಗೂ ಉಪನ್ಯಾಸಕರಿಗೂ ಸಭಾಧ್ಯಕ್ಷರಿಗೂ, ಸಭೆಯ ಪಕ್ಷವಾಗಿ ವಂದನೆಗಳನ್ನು ಅರ್ಪಿಸಿ ಈ ಸಾಹಿತ್ಯೋತ್ಸವದಲ್ಲಿ ನಡೆದ ಸಲಹೆಗಳಂತೆ ಕನ್ನಡ ಭಾಷೋಜ್ಜೀವನದ ಪರಿಣಾಮವು ನಮ್ಮ ಶ್ರೀಮನ್ಮಹಾರಾಜರವರ ಕಿರೀಟದಲ್ಲಿ ನಾಯಕಮಣಿಯಾಗಿ ಪ್ರಜ್ವಲಿಸಲೆಂದು ಆಶೀರ್ವಾದವನ್ನು ಮಾಡಿ ಸಭೆಯನ್ನು ಉಪಸಂಹರಿಸಿದರು. ಅನಂತರ ಸಾವಿನಸಮುಕ್ಕೆ ಎಂಬ ಒಂದು ನಾಟಕವು ಅಭಿನಯಿಸಲ್ಪಟ್ಟಿತು. ಈ ನಾಟಕವನ್ನು ಆಡುವುದರಲ್ಲಿ ವಿದ್ಯಾರ್ಥಿಗಳು ಅಸಾಧಾರಣವಾದ ಪಾಂಡಿತ್ಯವನ್ನು ತೋರಿಸಿದರು. ಕರ್ನಾಟಕ ಸಾಹಿತ್ಯಕ್ಕೆ ಸಕಲಸನ್ಮಂಗಳವುಂಟಾಗಲಿ.

ಎಂ. ವಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಅನುಕರಣೀಯ ಶಾಸ್ತ್ರೋಕ್ತವಿವಾಹವು.

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಜಗತ್ತಿನಲ್ಲೆಲ್ಲಾ ದ್ರವ್ಯಾಭಾವವೇ ಕಂಡುಬರುತ್ತದೆ. ಇಂಥಾ ಕಠಿಣಸ್ಥಿತಿಯಲ್ಲಿ ಸಂಸಾರ ಸಾಗುವದು ಕಷ್ಟಸಾಧ್ಯವು. ಲಗ್ನಾದಿ ನೈಮಿತ್ತಿಕಕಾರ್ಯಗಳಿಗಂತೂ ಸ್ವಲ್ಪವೂ ಅವಕಾಶವಿರುವುದಿಲ್ಲ. ಆದರೂ ಸಂಸಾರಿಕರಿಗೆ ತಮ್ಮ ಪ್ರೌಢವಯಸ್ಸಿನ ಹೆಣ್ಣುಮಕ್ಕಳು ಗಂಡುಮಕ್ಕಳನ್ನು ನೋಡಿದ ಕೂಡಲೆ ಸಾಲವಾಗಿ ಮನೆಮಾರುಗಳು ಹೋದರೂ ಚಿಂತೆಯಿಲ್ಲ. ಮಕ್ಕಳ ಲಗ್ನಪೂರೈಸಬೇಕೆಂದೂ ಹಾಗೆ ಮಾಡದಿದ್ದರೆ ನಮ್ಮ ಜನ್ಮವೇ ಅಸಾರ್ಥಕವಾಗಬಹುದೆಂದೂ ಕಲ್ಪಿಸಿ ಅವರ ಸಂಪದಭಿವೃದ್ಧಿಸಾಧನಗಳ ಕಡೆಗೆ ಲಕ್ಷ್ಯಕೊಡದೆ ಯೋಗ್ಯತೆ ಮೀರಿ ಖರ್ಚು ಮಾಡುತ್ತಾ ದೊಡ್ಡ ದೊಡ್ಡ ಘರಾಣೆಗಳು ಕ್ಷೀಣದೆಸೆಗೆ ಬರುತ್ತಲಿವೆ. ಆದ್ದರಿಂದ ತಮ್ಮ ಪ್ರಪಂಚದ ಯೋಗ್ಯತೆಯನ್ನು ವಿಚಾರಿಸದೆ ಕೇವಲ ಸಂತಾನಾಭಿವೃದ್ಧಿ ಕಾರ್ಯಗಳ ಕಡೆಗೇನೇ ಮುಖ್ಯ ದೃಷ್ಟಿಯಿಟ್ಟದ್ದರಿಂದಲೂ ಹಿಂದಿನ ಸಕಾಲದಲ್ಲಿ ನಡೆಯುತ್ತಬಂದ ಲಗ್ನಾದಿ ಕಾರ್ಯಗಳಲ್ಲಿಯ ದುಂದುಖರ್ಚಿನ ಕಿತ್ತಿಯನ್ನು ಈ ಕನಿಷ್ಟಕಾಲದಲ್ಲಿಯೂ ವೃದ್ಧಾಚಾರ ಬಿಡಕೂಡದೆಂದು ಪೂರ್ವಾಪರ ವಿಚಾರವಿಲ್ಲದೆ ತೀರುತ್ತಾ ತಾವು ಪ್ರೇಮಪೂರ್ವಕ ಮಾಡಿದ ಕಾರ್ಯಗಳಿಂದಲೇ ಪಶ್ಚಾತ್ತಾಪವನ್ನು ಹೊಂದಬೇಕಾಗಿ ಬಂದಿರುತ್ತದೆ. ಆದರೆ ಈ ವಿವಾಹವು ಹಾಗಲ್ಲ. ಏಕೆಂದರೆ—ಈ ವಧೂವರರುಗಳ ಘರಾಣೆಗಳು ಶ್ರೀಮಂತರ ಪೈಕಿ ಇದ್ದು ಬೇಕಾದಷ್ಟು ಖರ್ಚು ಮಾಡುವಂತಿದ್ದರೂ, ದ್ರವ್ಯದ ಮದದಿಂದ ದ್ರವ್ಯದ ಪ್ರಾಧಿಮೆಯನ್ನೇ ತೋರಿಸತಕ್ಕ ಸುಂದರ ಶೃಂಗಾರ ಮದ್ದು ಮೊದಲಾದ ನಿರುಪಯೋಗಿ ಪದಾರ್ಥಗಳಿಂದ ಉತ್ಸವಶೋಭಾ ವಗೈರೆ ಕಡೆಗೆ ಸ್ವಲ್ಪವೂ ಲಕ್ಷ್ಯಕೊಡದೆ ಒಂದೇ ದಿವಸದಲ್ಲಿ ಶ್ರೀ|| ಶಿರಹಟ್ಟಿ ತಾಲೂಕ ಪೈಕಿ ಸಿಟ್ಟೂರಗ್ರಾಮದ ಹಿರೇಮಠದ ವೀರಯ್ಯನವರು ತಮ್ಮ ಸುಪುತ್ರಿ ಪಾರ್ವತೀಬಾಯಿಯನ್ನು ಲಕ್ಷ್ಮೇಶ್ವರ ಮುಕ್ಕಾಮಿನ ತಮ್ಮ ಬಿಡಿಕೆ ಮನೆಯಲ್ಲಿಯೇ ಇಲ್ಲಿಯ ಶೀರಾ ಶ್ರೀ|| ಬಾಳೇಹಳ್ಳಿಮಠದ ಜೋಗಯ್ಯನವರ ಸುಪುತ್ರ ಚನ್ನಬಸಯ್ಯನವರಿಗೆ ನಿಷ್ಕಾಮಬುದ್ಧಿಯಿಂದ ಉಡಿಗೆ ತೊಡಿಗೆ ವಗೈರೆ ಯಾವದನ್ನೂ ಅಪೇಕ್ಷಿಸದೆ ವಿಧ್ಯುಕ್ತವಾಗಿ ತಾ|| ೧೫-೩-೩೩ ನೇ ದಿವಸ ಕನ್ಯಾದಾನ ಮಾಡಿಕೊಟ್ಟು ಇಲ್ಲಿಯ ವೀರಶೈವ ಜನಾಂಗಕ್ಕೆ ಮಾರ್ಗದರ್ಶಿಗಳಾದರು. ಆ ಕಾಲದಲ್ಲಿ ಪಂಚಾಚಾರ್ಯಪ್ರಭಾ ಪೋಷಣೆಗೆ ವರನ ಪಕ್ಷದವರು ೨ ರೂಪಾಯಿಗಳನ್ನು ಅರ್ಪಿಸಿಯೇ ತಮ್ಮ ಗ್ರಾಮದ ಯಾವತ್ತು ಬಾಬುಗಳನ್ನು ಪೂರೈಸಿದರು. ಈ ಪ್ರಕಾರದ ಪದ್ಧತಿಯನ್ನು ನಮ್ಮ ಮತದಲ್ಲಿ ಪ್ರತಿಯೊಬ್ಬರೂ ಸ್ವೀಕರಿಸಿ ತಮ್ಮ ಐಶ್ವರ್ಯದ ವಿನಿಯೋಗವನ್ನು ಲೋಕೋಪಯುಕ್ತ ಸ್ಥಿರವಾದ ಕಾರ್ಯಗಳಿಗೆ ಮಾಡಿ ಕೀರ್ತಿಕಾಯರಾಗಬೇಕಾಗಿ ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ,
ಮರುಳಸಿದ್ದಪ್ಪ ಗಾಂಜಾ ಲಕ್ಷ್ಮೇಶ್ವರ.

ಶ್ವೇತಪತ್ರ.

ಫೆಡರೇಷನ್ ಸ್ಥಾಪನೆಗೆ ಷರತ್ತುಗಳು.

ಡೆಲ್ಲಿ ಮಾರ್ಚಿ ೧೯

ಬಹಳ ತೀವ್ರಾಸಕ್ತಿಯಿಂದ ನಿರೀಕ್ಷಿಸಲಾಗುತ್ತಿದ್ದ ವೈಟ್ ಪೇಪರಿನಲ್ಲಿ ಅಷ್ಟು ಆಶ್ಚರ್ಯಕರವಾದ ಅಂಶಗಳೇನೂ ಕಂಡುಬಂದಿಲ್ಲ. ಒಂದುವೇಳೆ ಕಂಡುಬಂದಿದ್ದರೂ, ಅವು ತೀರ ಸ್ವಲ್ಪ. ಏಕೆಂದರೆ ಮೂರನೇ ರೌಂ. ಟೇ ಸಮ್ಮೇಳನದಲ್ಲಿ ಒಪ್ಪಿಗೆಗೆ ಬಂದ ಅಂಶಗಳ ಆಧಾರದ ಮೇಲೆಯೇ ವೈಟ್ ಪೇಪರಿನ ಮೆಜಾರಿಟಿ ಸಲಹೆಗಳು ರಚಿಸಲಾಗಿವೆ. ವೈಟ್ ಪೇಪರಿನ ಕೆಲವು ಕಡೆಗಳಲ್ಲಿ ಸಮ್ಮೇಳನದ ತೀರ್ಮಾನಗಳು ಹಾಗೆಯೇ ಇಳಿಸಲ್ಪಟ್ಟು ಸಂಗ್ರಹವಾಗಿ ಮುಂದಿನ ರಾಜ್ಯಶಾಸನದ ತಿರುಳನ್ನು ವ್ಯಕ್ತಪಡಿಸುವಂತೆ ತೋರಿಸಲಾಗಿದೆ. ವೈಟ್ ಪೇಪರಿನಲ್ಲಿ ೧೧೯ ಪುಟಗಳಿವೆ. ಉದ್ದಿಷ್ಟವಾದ ಸಲಹೆಗಳೇ ೪೨ ಪುಟಗಳಷ್ಟಿವೆ. ಉಳಿದ ಪುಟಗಳಲ್ಲಿ ಪೀಠಿಕೆ, ಪರಿಶಿಷ್ಟ ಮತ್ತು ಸಲಹೆಗಳ ಸಂಗ್ರಹ ರೂಪ ಇತ್ಯಾದಿಗಳನ್ನು ಕೊಡಲಾಗಿವೆ. ಪಾರ್ಲಿಮೆಂಟಿನಲ್ಲಿ ತೊರಬೀಳಬಹುದಾದ ವಾದಗಳನ್ನು ವೈಟ್ ಪೇಪರು ನಿರೀಕ್ಷಿಸಿರುವುದಿಲ್ಲ. ಈ ವೈಟ್ ಪೇಪರಿನಲ್ಲಿ ಕಂಡುಬರುವ ಶಬ್ದಪ್ರಯೋಗವೇ ಬಹುಶಃ ಸುಧಾರಣಾ ಮಸೂದೆಯಲ್ಲಿ ಕಂಡುಬರಲಾರದು. ಒಟ್ಟು ಮುಖ್ಯ ಉದ್ದೇಶವೇನೆಂದರೆ—೧೯೩೧ ನೇ ಡಿಸೆಂಬರಿನಲ್ಲಿ ಆದ ಪಾರ್ಲಿಮೆಂಟಿನ ತೀರ್ಮಾನಕ್ಕನುಗುಣವಾಗಿ ಜವಾಬ್ದಾರಿ ಸರ್ಕಾರ, ದೇಶೀಯ ಸಂಸ್ಥಾನ ಮತ್ತು ಪ್ರಾಂತ್ಯಗಳ ಫೆಡರೇಷನ್ ಇವನ್ನು ಇಂಡಿಯಾದಲ್ಲಿ ಸ್ಥಾಪಿಸುವುದೇ. ಇಂಡಿಯಾದಲ್ಲಿ ಒಟ್ಟು ಹನ್ನೊಂದು ಪ್ರಾಂತ್ಯಗಳು ಸಿಂಧ್ ಮತ್ತು ಒರಿಸ್ಸಾ ಸಹಿತ ಫೆಡರೇಷನ್ನಿಗೆ ಸೇರಬಹುದಾದ ಪ್ರತ್ಯೇಕ ಯೂನಿಟ್ಟುಗಳಾಗುವುವು. ಈ ಪ್ರಾಂತಗಳು ಗವರ್ನರಿಂದ ಆಳಲ್ಪಡುವುವು. ಗವರ್ನರು ಚಕ್ರವರ್ತಿಯವರ ಪ್ರತಿನಿಧಿಗಳಾಗಿರುವರಲ್ಲದೆ, ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಿಗೆ ಜವಾಬ್ದಾರರಾದ ಮಿನಿಸ್ಟರುಗಳ ಸಲಹೆ ಮತ್ತು ಸಹಾಯಗಳೊಡನೆ ಆಡಳಿತವನ್ನು ನಿರ್ವಹಿಸುವರು. ಇದೇ ಪ್ರಕಾರವಾಗಿ ಫೆಡರಲ್ ಸರ್ಕಾರದಲ್ಲಿ ಒಬ್ಬ ಗವರ್ನರ್ ಜನರಲ್‌ರವರು ಇರುವರು. ಫೆಡರಲ್ ಸಭೆಗಳಿಗೆ ಜವಾಬ್ದಾರರಾದ ಮಿನಿಸ್ಟರುಗಳ ಸಹಾಯ ಸಲಹೆಗಳೊಡನೆ ಗವರ್ನರ್ ಜನರಲ್‌ರವರು ಆಡಳಿತವನ್ನು ನಡೆಯಿಸುವರು. ಪ್ರಾಂತಗಳ ಡಿಫೆನ್ಸ್, ಪರಕೀಯ ಮತ್ತು ಎಕ್ಲೆಸಿಯಾಸ್ಟಿಕಲ್ ಆಡಳಿತಗಳಿಗೆ ಗವರ್ನರ್ ಜನರಲ್‌ರವರೇ ವ್ಯಕ್ತಿಶಃ ಜವಾಬ್ದಾರರಾಗುವರು. ರಿಜರ್ವ್ ಅಂಶಗಳಿರುವುದಿಲ್ಲ. ರಾಜಕೀಯ ಸುಧಾರಣಾಮಸೂದೆಯು ಪಾಸಾದ ಮಾತ್ರದಿಂದಲೇ ಕೂಡಲೇ ಫೆಡರಲ್ ಏರ್ಪಾಟಿನ ಭಾಗವು ಜಾರಿಗೆ ಬಂದಂತಾಗುವುದಿಲ್ಲ. ಆಗತಾನೇ ದೇಶೀಯ ರಾಜರುಗಳ ಇತ್ಯರ್ಥ ಮುಂತಾದ ಮೊದಲನೇ ಕಾರ್ಯಗಳು ಪೂರ್ತಿಯಾದಂತಾಗುವವು. ಫೆಡರೇಷನ್ನಿಗಿಂತ ಮುಂಚೆ ಪ್ರಾಂತಿಕ ಸ್ವಾತಂತ್ರ್ಯವು ಸ್ಥಾಪಿಸಲ್ಪಡುವ ಅವಧಿಯನ್ನು ಗೊತ್ತುಪಡಿಸುವ ಅಂಶವು [ಆ ಅವಧಿಯು ಎಷ್ಟೇ ಸ್ವಲ್ಪದ್ದಿರಲಿ] ಶಾಸನದಲ್ಲಿ ಅಡಕಗೊಳಿಸಲಾಗುವುದು. ಫೆಡರೇಷನ್ ಸ್ಥಾಪನೆಯು ಇನ್ನೂ ಮುಂದಕ್ಕೆ ಹೋಗುವ ಪರಿಸ್ಥಿತಿಯಲ್ಲಿ, ಪ್ರಾಂತ್ಯಗಳಲ್ಲಿ ಹೊಸ ಸುಧಾರಣೆಗಳನ್ನು ಮಾತ್ರ ಜಾರಿಗೆ ತರಬೇಕೆಂದು ಸರ್ಕಾರದವರು ಉದ್ದೇಶಪಟ್ಟಿಲ್ಲ.

ದೇಶೀಯ ಸಂಸ್ಥಾನಗಳ ಇಡೀ ಪ್ರಜಾ ಸಂಖ್ಯೆಯಲ್ಲಿ ಅರ್ಧಮಟ್ಟಿಗಾದರೂ ಪ್ರಾತಿನಿಧ್ಯತೆಯಿಂದ ಕೂಡಿದ ರಾಜರುಗಳು ಅಪ್ಪರ್ ಛೇಂಬರಿನಲ್ಲಿ ಸಂಸ್ಥಾನಗಳಿಗೋಸ್ಕರ ತೆಗೆದಿಡಲಾಗಿರುವ ಸ್ಥಾನಗಳಲ್ಲಿ ಅರ್ಧದಷ್ಟನ್ನು ಭರ್ತಿ ಮಾಡಿದರೆ ಫೆಡರೇಷನ್ ಸ್ಥಾಪನೆಗೆ ಅನುಕೂಲವಾಗುವುದು. ಸಂಸ್ಥಾನಗಳಲ್ಲಿ ಪ್ರಾಪ್ತವಾಗುವ ಅನಿರೀಕ್ಷಿತ ತೊಂದರೆಗಳಿಂದಲೂ, ಪ್ರಪಂಚದ ಆರ್ಥಿಕ ದುಸ್ಥಿತಿಗಳಿಂದಲೂ, ಸರ್ಕಾರದ ಕಾರ್ಯಕ್ರಮಗಳಿಗೆ, ಮತ್ತು ಏರ್ಪಾಟುಗಳಿಗೆ ತೊಂದರೆಯುಂಟಾದರೆ, ಇಂಡಿಯಾದ ಪ್ರಜಾಭಿಪ್ರಾಯದೊಡನೆ ಇಡೀ ಪರಿಸ್ಥಿತಿಯನ್ನು ಪರ್ಯಾಲೋಚಿಸಲು ಸರ್ಕಾರದವರು ಬಾಧ್ಯರಾಗಿರುತ್ತಾರೆ.

ಫೆಡರಲ್ ನ್ಯಾಯವಿಧಾಯಕ ಸಭೆಗಳು ಎರಡು. [ಬೈಕ್ಯಾಮರಲ್] ಈ ಎರಡು ಛೇಂಬರುಗಳಿಗೆ ಒಂದೇ ಪ್ರಕಾರದ ಅಧಿಕಾರಗಳು ಒಪ್ಪಿಸಲಾಗುವುವು. ಆದರೆ ಹಣಕಾಸಿನ ವಿಷಯಗಳಲ್ಲಿ ಕೆಲವು ಹಿಡಿತಗಳಿರುವುವು. ಕೆಳಗಿನ ಛೇಂಬರಿನಲ್ಲಿ ೩೭೫ ಸದಸ್ಯರಿರುವರು. ಮೇಲಿನ ಛೇಂಬರಿನಲ್ಲಿ ೨೬೦ ಸದಸ್ಯರಿರುವರು. ಮೊದಲಿನ ಸಭೆಯಲ್ಲಿ ೧೨೫, ಎರಡನೆಯ ಸಭೆಯಲ್ಲಿ ೧೦೦ ಈ ಸ್ಥಾನಗಳನ್ನು ಸಂಸ್ಥಾನಿಕ ಚುನಾವಣೆ ಕ್ಷೇತ್ರಗಳ ಮುಖಾಂತರ ಭರ್ತಿಯಾಗುವುವು.

ಫ್ರಾಂಚೈಸ್ ಕಮಿಟಿಯು ಮಾಡಿದ ಶಿಫಾರಸಿನಂತೆಯೇ ಫೆಡರಲ್ ಸಭೆಗಳು ಇರುವುವು. ಪ್ರಾಂತಿಕ ಸಭೆಗಳು ಸ್ವಲ್ಪಮಟ್ಟಿಗೆ ದೊಡ್ಡದಾಗಿಮಾಡಲ್ಪಡುವುವು. ೧೧ ಪ್ರಾಂತ್ಯಗಳಲ್ಲಿ, ಸಂಯುಕ್ತಪ್ರಾಂತ್ಯ, ಬೀಹಾರ್ ಮತ್ತು ಬಂಗಾಳ ಇಲ್ಲಿ ಎರಡೆರಡು ಸಭೆಗಳು ಇರುವುವು. [ಬೈಕ್ಯಾಮರಲ್] ಪ್ರಾಂತ್ಯಗಳ ಕೆಳಸಭೆಗೆ ಸ್ಥಾನಗಳ ವಿಭಾಗ, ಚುನಾವಣೆಯ ರೀತಿ, ಇವು ಕೋಮುವಾರು ತೀರ್ಮಾನದಲ್ಲಿ ಕಂಡುಬಂದ ಪ್ರಕಾರ ಇರತಕ್ಕದ್ದು. ಆದರೆ ಪೂನಾ ಒಪ್ಪಂದದಲ್ಲಿ ಕಂಡುಬರುವ ಬದಲಾವಣೆಗಳು ಅನ್ವಯಿಸತಕ್ಕದ್ದು. ಒರಿಸ್ಸಾ ಪ್ರಾಂತ್ಯವು ಬೇರೆಯಾಗಬೇಕು. ಫ್ರಾಂಚೈಸ್ ಕಮಿಟಿಯವರು ಶಿಫಾರಸು ಮಾಡಿದಂತೆಯೇ ಪ್ರಾಂತ್ಯಗಳಲ್ಲಿ ಚುನಾವಣೆಯ ಶೀಲತೆಯಿರಬೇಕು.

ಗವರ್ನರ್ ಜನರಲ್‌ರವರೂ, ಗವರ್ನರುಗಳೂ ಅನೇಕ ವಿಶೇಷ ಜವಾಬ್ದಾರಿಗಳಿಂದ ಕೂಡಿರುವರು. ಅವರು ಅವಶ್ಯಕ ಬಿದ್ದರೆ ಮಿನಿಸ್ಟರುಗಳ ಸಲಹೆಗೆ ವ್ಯತಿರೇಕವಾಗಿ ವರ್ತಿಸಲು ಅವಕಾಶವುಂಟು. ಗವರ್ನರ್ ಜನರಲ್‌ರವರ ವಿಶೇಷ ಅಧಿಕಾರಗಳು ರೌಂ. ಟೇ. ಸಮ್ಮೇಳನದಲ್ಲಿ ಈಗಾಗಲೆ ಚರ್ಚೆಯಾಗಿವೆ. ಮತ್ತು ಚೆನ್ನಾಗಿ ವಿವರಿಸಲ್ಪಟ್ಟಿವೆ. ಅವು ಯಾವುವೆಂದರೆ—ಶಾಂತಿರಕ್ಷಣೆ. ಹಣಕಾಸಿನ ಭದ್ರತೆ, ಮೈನಾರಿಟಿಗಳ ಹಿತರಕ್ಷಣೆ, ಸರ್ಕಾರಿ ನೌಕರರ ರಕ್ಷಣೆ, ದೇಶೀಯ ಸಂಸ್ಥಾನಗಳ ಹಕ್ಕುಬಾಧ್ಯತೆಗಳನ್ನು ಕಾಪಾಡುವುದು, ವ್ಯಾಪಾರ ಸಂಬಂಧವಾದ ಭೇದಭಾವಗಳನ್ನು ತಪ್ಪಿಸುವುದು. ರಿಜರ್ವ್ಡ್ ಬಾಬುಗಳ ಆಡಳಿತವನ್ನು ನಿರ್ವಹಿಸುವುದು ಇತ್ಯಾದಿ ಗವರ್ನರುಗಳ ಅಧಿಕಾರಗಳು ಹೆಚ್ಚು ಕಡಿಮೆ ಇದೇ ಪ್ರಕಾರ ಇರುತ್ತವೆ. ಆದರೆ ಹಣಕಾಸಿನ ಭದ್ರತೆಯ ಜವಾಬ್ದಾರಿಯು ಅವರಿಗಿರುವದಿಲ್ಲ. ಕೆಲವು ಸ್ಥಳೀಯ ಬದಲಾವಣೆಗೆ ಅವರು ಬಾಧ್ಯರಾಗುವರು. ದೂರಮಾಡಲ್ಪಟ್ಟ ಅಥವಾ ಹಿಂದುಳಿದ ಪ್ರದೇಶಗಳ ವಿಷಯದಲ್ಲಿ ಗವರ್ನರುಗಳ ವಿಶೇಷ ಜವಾಬ್ದಾರಿ ಇರುತ್ತದೆ. ಮಿನಿಸ್ಟರುಗಳ ಸಲಹೆಯನ್ನು ಸದಾ ಗವರ್ನರ್ ಜನರಲ್‌ರವರಾಗಲೀ ಅಥವಾ ಗವರ್ನರುಗಳಾಗಲೀ ತಳ್ಳಿಬಿಡಬೇಕೆಂದು ಉದ್ದೇಶ್ಯಪಟ್ಟಿಲ್ಲ. ಅನೇಕ ಸಂದರ್ಭಗಳಲ್ಲಿ ವಿಶೇಷ ಜವಾಬ್ದಾರಿಗಳು ನಿರ್ವಹಿಸಲ್ಪಡುವ ಸಂಭವ ಒದಗಿದಾಗ ಪರಸ್ಪರ ಒಪ್ಪಿಗೆಗೆ ಬರಬೇಕಾಗುವದು. ಮಿನಿಸ್ಟರುಗಳ ಆಡಳಿತಕ್ಕೆ ವಹಿಸಲ್ಪಟ್ಟ ವಿಷಯಗಳ ಮೇಲೆ ಅವರಿಗೆ ಸಂಪೂರ್ಣ ಅಧಿಕಾರವುಂಟು.

ಹಣಕಾಸಿನ ತೊಡಕಿನ ಸಲಹೆಗಳೆಂದರೆ ಕೆಲವು ಪ್ರಥಮದ ಏರ್ಪಾಟುಗಳನಂತರ ವರಮಾನ ತೆರಿಗೆಯ ಆದಾಯದಲ್ಲಿ ಶೇ|| ೫೦ ರಿಂದ ೭೫ ರಷ್ಟನ್ನು ಫೆಡರೇಷನ್ನಿಗೆ ಒಪ್ಪಿಸಬೇಕಾಗುವುದು. ಉಳಿದವು ಪ್ರಾಂತ್ಯಗಳಿಗೆ ಸೇರುವವು.

ಸೆಣಬಿನ ರಫ್ತು ತೆರಿಗೆಯ ವಿಷಯದಲ್ಲಿ ಬಹಳ ವಿಚಿತ್ರವಾದ ಏರ್ಪಾಟು ಸೂಚಿಸಲಾಗಿದೆ. ಅದರ ಅರ್ಧದಷ್ಟನ್ನಾದರೂ ಸೆಣಬು ಬೆಳೆಯುವ ಪ್ರದೇಶಗಳಿಗೆ ವಿಭಾಗಿಸಲ್ಪಡಬೇಕಾಗುವುದು.

ಇಂಡಿಯನ್ ಸಿವಿಲ್ ಸರ್ವಿಸ್, ಪೋಲೀಸ್ ಸರ್ವಿಸ್ ಇವುಗಳಿಗೆ ಸ್ಟೇಟ್ ಸೆಕ್ರೆಟರಿಯವರೇ ಸಾರೋದ್ಧಾರವಾಗಿ ನಿಯಮಿಸತಕ್ಕದ್ದೆಂಬ ನಿಬಂಧನೆಯ ನಮೂದು ಮಾಡಲಾಗಿದೆ. ಆದರೆ ೫ ವರ್ಷಗಳ ನಂತರ ವಿಚಾರಣೆ ಕ್ರಮವು ನಡೆಯುವುದು. ಈ ಉಪನಿಬಂಧನೆಗೆ ಒಳಪಡಬೇಕಾಗುವುದು.

ಶಾಸನಾತೀತವಾದ ರೈಲ್ವೆಬೋರ್ಡೊಂದು ನಿಯಮಿಸಲ್ಪಡುವುದು.

ಫೆಡರಲ್ ಮಂತ್ರಿಮಂಡಲವು ದ್ವಿದಳ ಪದ್ಧತಿಯನ್ನು ಅನುಸರಿಸುತ್ತದೆ. ಗವರ್ನರ್ ಜನರಲ್‌ರವರಿಗೆ ಸಹಾಯ ಮಾಡಲು ಮೂವರು ಕೌನ್ಸಿಲರುಗಳಿರುವರು. ರಿಜರ್ವ್ ಬಾಬುಗಳನ್ನು ನಿರ್ವಹಿಸುವರು. ಎರಡೂ ಛೇಂಬರುಗಳ ಮುಂದೆ ಆಡುವಾಲು ಹೇಳಿಕೊಳ್ಳುವ ಹಕ್ಕುಂಟು. ಆದರೆ ವೋಟುಮಾಡುವ ಅಧಿಕಾರವನ್ನು ಹೊಂದುವುದಿಲ್ಲ.

ಫೆಡರಲ್ ಅಪ್ಪರ್ ಸಭೆಯಲ್ಲಿ ೨೬೦ ಸದಸ್ಯರಿರುವರು. ಆ ಪೈಕಿ ೧೦೦ ಸದಸ್ಯರು ದೇಶೀಯ ಸಂಸ್ಥಾನದ ಪ್ರತಿನಿಧಿಗಳಾಗಿರುವರು. ಇನ್ನು ೧೫೦ ಸದಸ್ಯರು ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಿಂದ ಚುನಾಯಿಸಲ್ಪಡುವರು. ಒಂದೇ ಒಂದು ವೋಟಿನ ಅಧಿಕಾರವು ಕೊಡಲಾಗುವುದು. ಗವರ್ನರ್ ಜನರಲ್‌ರವರು ೧೦ ಜನರನ್ನು ನಾಮಕರಣ ಮಾಡುವರು. ಫೆಡರಲ್ ಕೆಳಗಿನ ಛೇಂಬರಿನಲ್ಲಿ ೩೭೫ ಸದಸ್ಯರಿರುವರು. ಆ ಪೈಕಿ ೧೨೫ ದೇಶೀಯ ಸಂಸ್ಥಾನದ ಪ್ರತಿನಿಧಿಗಳಿರುವರು. ಉಳಿದ ಸದಸ್ಯರು ತಮ್ಮ ತಮ್ಮ ಚುನಾವಣೆ ಕ್ಷೇತ್ರಗಳಿಂದ ಚುನಾಯಿಸಲ್ಪಡುವರು.

ಹಣಕಾಸುಗಳ ವಿಷಯದಲ್ಲಿ ಗವರ್ನರ್ ಜನರಲ್‌ರವರಿಗೆ ಸಲಹೆಕೊಡಲು ಒಬ್ಬ ಅಡ್ವೈಜರು ನಿಯಮಿಸಲ್ಪಡುವರು. ಫೆಡರಲ್ ರಾಜ್ಯಶಾಸನವು ಕೆಲಸಮಾಡುವುದಕ್ಕೆ ಮುನ್ನ ಭಾರತದ ಶಾಸನ ಮೂಲಕ ರಿಜರ್ವ್ ಬ್ಯಾಂಕಿನ ಸ್ಥಾಪನೆಯಾಗಬೇಕು.

ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಿಗೆ ವೋಟರುಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವರು. ಇಡೀ ಪ್ರಜಾಕೋಟಿಯಲ್ಲಿ ಶೇ|| ೧೪ ರಷ್ಟು ಜನರಿಗೆ ಬ್ರಿಟಿಷ್ ಇಂಡಿಯಾದಲ್ಲಿ ವೋಟಿನ ಹಕ್ಕುಂಟು. ಫೆಡರಲ್ ಸಭೆಗಳ ವೋಟುದಾರರ ಸಂಖ್ಯೆ ೮ ಮಿಲಿಯನ್‌ಗಳಷ್ಟು.

ಸಂಸ್ಥಾನಗಳಿಗೆ ಸ್ಥಾನ ವಿಭಾಗವು ವಂಶಪಾರಂಪರ್ಯದ ತೋಫಿನ ಮರ್ಯಾದೆ ಮತ್ತು ಇತರ ಅಂಶಗಳನ್ನು ಅವಲಂಬಿಸುತ್ತದೆ. ಕೆಳಗಿನ ಛೇಂಬರಿನಲ್ಲಿ ಸಂಸ್ಥಾನಗಳ ಸ್ಥಾನದ ವಿಭಾಗವು ಜನಸಂಖ್ಯೆಯನ್ನು ಅವಲಂಬಿಸುತ್ತದೆ. ಎರಡೂ ಫೆಡರಲ್ ಛೇಂಬರುಗಳಿಗೆ ಏಕಪ್ರಕಾರವಾದ ಅಧಿಕಾರಗಳನ್ನು ಕೊಡಲಾಗುವದು. ಆದರೆ ಹಣಕಾಸಿನ ಮಸೂದೆಗಳು ಮೊದಲು ಕೆಳಗಿನ ಸಭೆಯಲ್ಲಿ ಸೂಚಿಸಲ್ಪಡಬೇಕಾಗಿರುವುದು.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತೆಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಸ್ಸಿಗೆ ಆಣೆ 0-9-0, 1 ಡಿಸ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುಬಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇನ್ನು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[29] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರಗೀ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಗಡೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಸಕ್ಕರೆನೋವು, ನರಗಳಲ್ಲಿಯೂ ಸಂಧುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಷಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆವಾರಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[10] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಟು	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೬

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[12] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಏಪ್ರಿಲ್ ೧೯೩೩ [ಸಂಚಿಕೆ ೪೬

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗೃಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗೃಹೀತಗಳಾಗಿರುವುವು. ಈ ಗ್ರಂಥವು ೨೨೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು



ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರಿಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [16]

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಓಕ್ ಮರವು ಬಾಸ್ಕಿಯರ್ ಪರ್ವತದಮೇಲೆ ರ್ಯಾಂಕೊವಿಚ್ ಎಂಬ ಗ್ರಾಮದಲ್ಲಿರುವದು. ಈ ಮರದ ಬುಡವು ಸುಮಾರು 34 ಅಡಿಗಳ ಸುತ್ತಳತೆಯುಳ್ಳದಾಗಿ, ಟೊಳ್ಳಾಗಿರುವದು. ಇದರ ಒಳಭಾಗದಲ್ಲಿ ನೂರಾರು ಜನರು ನಿಲ್ಲುವಷ್ಟು ಅವಕಾಶವಿರುವುದಂತೆ! ಕುರುಬರು ದೊಡ್ಡಮಳೆ ಬಂದಾಗ ತಮ್ಮ ಕುರಿಯಮಂದೆಗಳೊಡನೆ ಇದರೊಳಗೆ ನಿಂತುಕೊಳ್ಳುವರಂತೆ!

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು. **ಬೆಲೆ ೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ರತ್ನಗಿರಿಯ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಕೆಲವುಜನ ಕಳ್ಳರು ಒಬ್ಬ ವರ್ತಕನ ಮನೆಗೆ ನುಗ್ಗಿ 2300 ರೂ. ಗಳ ಬೆಲೆಯುಳ್ಳ ಒಡವೆವಸ್ತುಗಳನ್ನು ಅಪಹರಿಸಿಕೊಂಡುಹೋದರು. ಪೋಲೀಸರು ಕಳ್ಳರನ್ನು ಬೆನ್ನಟ್ಟಿ ಒಬ್ಬನನ್ನು ಮಾತ್ರ ದಸ್ತಗಿರಿಮಾಡಿ ಅವನನ್ನು ಮೆರವಣಿಗೆಮಾಡಿಕೊಂಡು ಊರಿನೊಳಕ್ಕೆ ಬಂದರು. ಒಂದು ದೇವಾಲಯದಮುಂದೆ ಅನೇಕರು ಸೇರಿ ಕಳ್ಳತನದ ವಿವರವನ್ನು ಕೇಳಲು, ಆ ಕಳ್ಳನು ಬಹುಉತ್ಸಾಹದಿಂದ ಎಲ್ಲವನ್ನೂ ವಿವರಿಸಿ, ಕಡೆಯಲ್ಲಿ ಯಾವರೀತಿ ತಪ್ಪಿಸಿಕೊಂಡೆವೆಂಬ ಭಾಗವನ್ನು ಹೇಳುವಾಗ ನಿಜವಾಗಿಯೂ ಓಡುವದಕ್ಕೇ ಪ್ರಾರಂಭಿಸಿದನು. ಪೋಲೀಸರು ಅವನನ್ನು ಪುನಃ ಹಿಡಿಯಲು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವ.

ಕೋಲಾರ್‌ಪೇಟೆ ತಾ|| ಶ್ರೀ ರೇವಣಸಿದ್ಧೇಶ್ವರಸ್ವಾಮಿಯವರ ಬೆಟ್ಟದಲ್ಲಿ ಪಲ್ಗುಣವೇರಿಗೆ ತಾ|| 10-3-33 ನೆಯ ಶುಕ್ರವಾರ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ಜರಗಿತು. ಶ್ರೀ ಗಿರಿಯಮೇಲೆ ನೆಲೆಸಿರುವ, ಶ್ರೀ ಭಗವತ್ಪಾದರವರ ಉತ್ಸವಮೂರ್ತಿಗೆ ವಿಧ್ಯುಕ್ತಪ್ರಕಾರ, ರಾಜಾಪುರದಮಠದ ಬ್ರಂ|| ಶ್ರೀ|| ಪಟ್ಟದಸ್ವಾಮಿಗಳವರಿಂದಲೂ ಮತ್ತು ಅರ್ಚಕ ವೀರಭದ್ರಯ್ಯನವರಿಂದಲೂ ರುದ್ರಾಭಿಷೇಕವೂ, ಸಹಸ್ರಬಿಲ್ವಾರ್ಚನೆಯೂ, ಪಂಚಾಮೃತಾಭಿಷೇಕವೂ ನಡೆಯಿತು. ಮಧ್ಯಾಹ್ನ ಬಂದ ಅತಿಥಿ ಅಭ್ಯಾಗತರಿಗೆಲ್ಲಾ ಮೃಷ್ಟಾನ್ನಭೋಜನವು ನಡೆಯಿತು. ಸಾಯಂಕಾಲ ಶ್ರೀ ಗಿರಿಯಲ್ಲಿ ಭೀಮೋತ್ಸವದಿಯಿಂದ ಶ್ರೀ ಜಗದಾಚಾರ್ಯರ ಉತ್ಸವವು ಕೆಳಗಡೆ ಶ್ರೀ ತೇರುಬೀದಿಯಲ್ಲಿ ಹೊರಟು, ರಾಜಾಪುರಮಠದ ಮುಂದುಗಡೆಯಿಂದ ಪುನಃ ಶ್ರೀ ಗಿರಿಯನ್ನು ಸಲ್ಲಿತು. ಈ ದಿವಸದ ಉತ್ಸವಕ್ಕೆ ನಮ್ಮ ಕೋಲಾರ್‌ಪೇಟೆ ಸಬ್‌ಡಿವಿಜನ್ ಆಫೀಸರವರಾದ ಮ|| ರಾ|| ಜೆ. ಬಿ. ಮಲ್ಲಾರಾಧ್ಯರವರು ದಯಮಾಡಿಸುವವರಕ್ಕೆ ಸಿದ್ಧರಿದ್ದು, ಕಾರ್ಯಗೌರವದಿಂದ ದಯಮಾಡಿಸಲಿಲ್ಲ. ಹಾಗೆ ಅವರು ದಯಮಾಡಿಸಿದ್ದ ಪಕ್ಷದಲ್ಲಿ ಜಯಂತಿಯು ಇನ್ನೂ ಶೋಭಾಯಮಾನವಾಗುತ್ತಿತ್ತು. ವರ್ಷೇವರ್ಷೇ ಶ್ರೀ ಭಗವತ್ಪಾದರು ನೆಲೆಸಿರುವ ಈ ಪವಿತ್ರಗಿರಿಯಲ್ಲಿ ಶ್ರೀ ಜಯಂತಿಯನ್ನು ಇತಿಹ್ಯೋಕ್ತಕ್ರಮವಾಗಿ ವೈಭವದಿಂದ ನಡೆಯಿಸಿ ಶ್ರೀ ಗಿರಿಯಬಳಿ ಇರುವ ಅರ್ಚಕಮಹಾಶಯರುಗಳು ಮತ್ತು ಗ್ರಾಮವಾಸಿಗಳು, ಧರ್ಮದರ್ಶಿಗಳು, ಕಾರ್ಯದರ್ಶಿಗಳು ಮುತವರ್ಜಿಯಿಂದ ಶ್ರೀ ಭಗವತ್ಪಾದರವರ ಕೃಪೆಗೆ ಪಾತ್ರರಾಗುತ್ತಾರೆಂದು ನಂಬುತ್ತೇನೆ. ಮತ್ತು ಆ ದಿವಸ ಶ್ರೀ ಗಿರಿಯ ಕಾರ್ಯದರ್ಶಿಗಳಾಗಲೀ, ಧರ್ಮದರ್ಶಿಗಳಾಗಲೀ ಹಾಜರ್ ಇಲ್ಲದೆ ಹೋದದ್ದು ಶೋಚನೀಯವಾದ ಸಂಗತಿ.

ಪ್ರತ್ಯಕ್ಷದರ್ಶಿ.

ಕ್ಯಾನುಭೋಗನಹಳ್ಳಿಯಲ್ಲಿ ನಡೆದ ಉಪಾಧ್ಯಾಯರ ಸಂಘ.

ತರೀಕೆರೆ ತಾಲ್ಲೂಕು ಕ್ಯಾನುಭೋಗನಹಳ್ಳಿಯೆಂಬ ಗ್ರಾಮದಲ್ಲಿ ಒಂದು ಪ್ರೈಮರಿಸ್ಕೂಲು ಇರುತ್ತದೆ. ಈ ಸ್ಕೂಲಿನಲ್ಲಿ ಕೆ. ಜಿ. ಬಸವಯ್ಯನೆಂಬುವರು ಸ್ಕೂಲುಮಾಸ್ಟರಾಗಿ ಬೋಧನಾಕ್ರಮದಲ್ಲಿ ಪಟುಮತಿಗಳಾದುದರಿಂದ ಸರ್ವಜನಾದರಣೀಯರಾಗಿದ್ದಾರೆ. ಮತ್ತು ಅಜ್ಜಂಪುರದ ಉಪಾಧ್ಯಾಯರ ಸಂಘದ ಪಕ್ಷದವರಾಗಿ ಸದರಿ ಸಂಘದ ನಡವಳಿಕೆಗಳ ಸರ್ವಸ್ವಾತಂತ್ರ್ಯವನ್ನು ಈ ಗ್ರಾಮದ ಸ್ಕೂಲು ಕಮಿಟಿಮೆಂಬರುಗಳ ಮತ್ತು ಗ್ರಾಮ ಮಹಾಜನಗಳ ಪ್ರೋತ್ಸಾಹದಿಂದ ಕೆ. ಜಿ. ಬಸವಯ್ಯನವರ ಇಷ್ಟದಂತೆ ತಾರೀಖು 18-3-33 ನೇ ಶನಿವಾರ ಪ್ರೈಮರಿ ಸ್ಕೂಲು ಪಕ್ಕದ ಬಯಲಿನಲ್ಲಿ ತಳಿರುತೋರಣಗಳಿಂದ ಅಲಂಕೃತವಾದ ಚಪ್ಪರದಲ್ಲಿ ಕಡೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಎಜುಕೇಷನ್ ಆಫೀಸರವರಾದ ಮ|| ಕೆ. ಎಸ್. ಸುಬ್ಬರಾವ್ ಬಿ.ಎ. ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಆಫೀಸರೂ ಉಪಾಧ್ಯಾಯರೂ ಮಹಾಜನಗಳು ಆಗಮಿಸಿದ್ದರು. ಸಂಘದ ಅಭಿವೃದ್ಧಿಸ್ಥಿತಿಯನ್ನು ಕುರಿತು ದೇವತಾಪ್ರಾರ್ಥನೆಯೊದಲಾಗಿ ಉಪನ್ಯಾಸಗಳು ನಡೆದು ನೆರೆದ ಮಹಾಜನಗಳಿಗೆ ಫಲಹಾರ ತಾಂಬೂಲಾದಿಗಳನ್ನು ಹಂಚಿ ಜಯಘೋಷದೊಡನೆ ಸಭೆಯು ಭರಖಾಸ್ತು ಮಾಡಲ್ಪಟ್ಟಿತು. ನಮ್ಮ ಗ್ರಾಮದ ಸ್ಕೂಲುಮಾಸ್ತರು ಅಜ್ಜಂಪುರದ ಉಪಾಧ್ಯಾಯರುಗಳ ಸಂಘದ ಕಾರ್ಯವನ್ನು ನಿರ್ವಹಿಸಿ ಕೀರ್ತಿಯನ್ನು ಸಂಪಾದಿಸಿರುತ್ತಾರೆ. ಭಗವಂತನು ಇವರಿಗೆ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ.

ಓರ್ವ ಪ್ರೇಕ್ಷಕ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೀರಶೈವ ಸಾಮಾಜಿಕ ಸುಧಾರಣೆಗಳು.

ಲೇಖಕ—ವೇ|| ಪಂಚಾಕ್ಷರಶಾಸ್ತ್ರೀ ಹಿರೇಮಠ ಶಿರೋಳ.

ವೀರಶೈವ ಸಮಾಜದಲ್ಲಿ ಅಂಟಿಕೊಂಡಿರುವ ಅವಿವೇಕತನದ ಆಚರಣೆಗಳನ್ನು ನಿವಾರಣೆ ಮಾಡುವದೇ ಪ್ರಸ್ತುತ ಲೇಖದ ಉದ್ದೇಶವಾಗಿದೆ. ವೀರಶೈವ ಸದ್ಧರ್ಮದ ಪ್ರಭೆಯನ್ನು ಸರ್ವತ್ರ ಪ್ರಸಾರಮಾಡುತ್ತಲಿದ್ದ ಪಂಚಾಚಾರ್ಯಪ್ರಭಾ ಪತ್ರಿಕಾಮೂಲಕ ಈ ಕಾರ್ಯವು ಸುಲಭವಾಗಿ ಸಾಧಿಸುವದು. ನಾವು ಉತ್ತರಕರ್ನಾಟಕ ವೀರಶೈವರಲ್ಲಿ ನಡೆಯುತ್ತಲಿದ್ದ ಅಂತ್ಯೇಷ್ಟಿ ವಿಧಿಯ ಈಗಿನ ತಪ್ಪು ತೊಡಕಿನ ರೀತಿ ನಡತೆಗಳನ್ನು ವಿಶದವಾಗಿ ತಾ|| ೧೩-೩-೩೩ ನೇ ಸಂಚಿಕೆಯಲ್ಲಿ ಕೊಟ್ಟಿದ್ದು ವಾಚಕರ ಸ್ಮೃತಿಪಥದಲ್ಲಿರಬಹುದು. ಆ ಚಿಕ್ಕ ಲೇಖದ ಸಿಂಹನಾದವನ್ನು ಯಾರೂ ಲಕ್ಷ್ಯಿಸದಿದ್ದರೂ ಇಂದಿಲ್ಲ ನಾಳೆಯಾದರೂ ಈ ದುಷ್ಟಪದ್ಧತಿಯನ್ನು ದೂರ ಮಾಡುವರೆಂಬ ಹಂಬಲದಿಂದ ಬರೆದಿರುತ್ತೇನೆ. ಮೃತಸಮಯದಲ್ಲಿ ಆಗುತ್ತಿರುವ ಅನ್ಯಾಯದ ಪರಮಾವಧಿಯನ್ನು ಸಮಾಜದ ಪ್ರಮುಖರು ಸ್ವಲ್ಪ ಕಣ್ತೆರೆದು ನೋಡಲೆಂದು ಅತ್ಯಾಗ್ರಹದಿಂದ ತಿಳುಹಿಸುತ್ತೇನೆ. ಹಾಗೆಯೇ ಇನ್ನೊಂದು ವಿಷಯದ ಕಡೆಗೆ ಮಹಾಜನಗಳು ಲಕ್ಷ್ಯಮಾಡಬೇಕು. ಅದೇನೆಂದರೆ—ವೀರಶೈವರು ಮತ್ತೊಬ್ಬರ ಮನೆಗೆ ಊಟಕ್ಕೆ ಹೋಗಬೇಕಾದರೆ ತಂಬಿಗೆ ಥಾಲಿಯನ್ನು ತೆಗೆದುಕೊಂಡು ಹೋಗದಿರುವದು ಅತ್ಯಂತ ಅನಾಚಾರವನ್ನು ತೋರಿಸುವುದು. ಸಾಮಾನ್ಯವಾಗಿ ಊಟದ ಸಮಾರಂಭದಲ್ಲಿ ಇದರ ಪ್ರಯೋಜನವು ತಿಳಿಯದಿದ್ದರೂ ಮಹಾಸಮಾರಂಭಗಳಲ್ಲಿ ಚೆನ್ನಾಗಿ ಗೊತ್ತಾಗುವುದು. ಸಾವಿರಾರು ಜನಗಳ ಭೋಜನ ಸಮಯದಲ್ಲಿ ಆಮಂತ್ರಣ ಕೊಟ್ಟ ಯಜಮಾನನು ಪ್ರತಿಯೊಬ್ಬರಿಗೆ ತಂಬಿಗೆ ಥಾಲಿಗಳನ್ನು ಕೊಡಲು ಸಾಧ್ಯವಿಲ್ಲ. ಇದ್ದ ಹತ್ತಿಪ್ಪತ್ತು ತಂಬಿಗೆಗಳೇ ಸಾವಿರಾರು ಜನಗಳಿಗೆ ಭೆಟ್ಟಿಯಾಗಬೇಕು. ಒಬ್ಬರು ಕುಡಿದುಳಿದ ನೀರೇ ಸರ್ವರೂ ಕುಡಿಯಬೇಕಾಗುವದು. ಭೋಜ್ಯ ಪದಾರ್ಥಗಳನ್ನು ಶಿವಾರ್ಪಣ ಮಾಡಲು ಅರ್ಘ್ಯವನ್ನು ಬಿಡುವ ವಿಧಿಯಂತೂ ಅಗ್ಗ ಅರಣ್ಯಪಾಲಾಗಿರುವದು. ಧಾರ್ಮಿಕ ವಿಧಿಯ ಮಾತಂತಿರಲಿ. ಆರೋಗ್ಯವಿಚಾರಾಂಶದಿಂದಂತೂ ಅತ್ಯಂತ ಭಯಾನಕವು ಕಾಣುವದು. ಊಟಮಾಡುವ ಸಮಯದಲ್ಲಿ ನೀರುಬೇಕಾದರೆ ತಕ್ಷಣವೇ ದೊರೆಯಲಾರದು. ಊಟಮಾಡಿದನಂತರವಾದರೂ ಬೇಗನೆ ಸಿಗದೆ ಕೈಒಣಗಿಸಿಕೊಂಡು ಬಾಯಿಕುಂಟ ಮುಸರಿಯನ್ನು ಮಾಡಿಕೊಂಡು ಕಳಗೆಟ್ಟಿನೊಳಗಿನ ನೀರನ್ನು ಕುಡಿದ ಎತ್ತು ಎಮ್ಮೆಯಂತೆ ಟಕಮಕ ನೋಡುತ್ತ 'ನೀರು ನೀರು' ಎಂದು ಹಂಬಲಿಸುವ ಪರಿತಾಪದ ವರ್ಣನೆಯನ್ನು ಎಷ್ಟುಮಾಡಿದರೂ ತೀರದು. ನಮ್ಮ ಮನೆಯಿಂದ ಎರಡನೆಯವರ ಮನೆಗೆ ಊಟಕ್ಕೆ ಹೋಗಬೇಕಾದರೆ ಮಡಿಬಟ್ಟೆಯನ್ನುಟ್ಟುಕೊಂಡು ಕೈಯಲ್ಲಿ ತಂಬಿಗೆ (ಥಾಲಿಯನ್ನು) ತೆಗೆದುಕೊಂಡು ಹೋಗುವುದು ಭೂಷಣವೂ, ಅನುಕೂಲವೂ ಆಗುವದು. ಈಗ ನಮ್ಮ ಉತ್ತರ ಕರ್ನಾಟಕದ ವೀರಶೈವ ಮಹಾನುಭಾವರು ಒಬ್ಬರಮನೆಗೊಬ್ಬರು ವಿಶೇಷಕಾಲದಲ್ಲಿ ಊಟಕ್ಕೆ ಹೋಗುತ್ತಿರುವ ಸಡಗರವನ್ನು ನೋಡಿದರೆ ಬಹುವ್ಯಸನವಾಗುವದು. ಚರ್ಮದ ರಕ್ಷೆಗಳನ್ನು ಮೆಟ್ಟಿಕೊಂಡು ಕೋಟು ರುಮಾಲುಗಳಿಂದ ಭೂಷಿತರಾಗಿ ಕೈಯಲ್ಲಿ ಚುಟ್ಟಕ್ಕೆ ಬೆಂಕಿಯನ್ನು ಹಚ್ಚಿ ಸೇದುತ್ತ ಅಭಿನವ ಆಂಗ್ಲಮ್ಲೇಂಛರಂತೆ ಅಲೆದಾಡುತ್ತ ಹೋಗುತ್ತಿರುವರು. ಊಟದವರ ಮನೆಗೆ ಹೋದಕೂಡಲೇ ಇವರು ದುಶ್ಚಟಗಳ ಸೇವೆಯನ್ನು (ಚುಟ್ಟಾ ಸಿಗರೇಟ ಸೇದುವದು ಎಲಿ ಅಡಿಕೆತಿಂದುಗುಳುವದು) ಮಾಡಿ ಜುಲುಮೆಯ ಸ್ವಭಾವದಿಂದ ಉಸುರ್ಗಳೆದು ಊಟಕ್ಕೆ ಸ್ವಲ್ಪ ತಡವಾಗುವ ಕೋಟನ್ನು ಮಾತ್ರ ಕಳೆದು (ಬಹಳ ಸುಧಾರಿಸಿದ ಜನಗಳು ಒಳಅಂಗಿಯನ್ನು ತೊಟ್ಟುಕೊಂಡು, ಹಾಗೆಯೇ ಊಟಕ್ಕೆ ಕೂಡ್ರುವರು) ಧರ್ಮಜ್ಞಾನಶೂನ್ಯತೆಯ ಕತ್ತಲೆಯಲ್ಲಿರುವ ನಮ್ಮ ಸಮಾಜದಲ್ಲಿ ಮಹಾಸಮಾರಂಭಗಳ ಊಟದ ಕಾಲದಲ್ಲಿ ಬಹಳ ಅನಾಚಾರಗಳೂ ಅನಾರೋಗ್ಯಪ್ರದರ್ಶಕವೂ ಆದ ನೋಟಗಳನ್ನು ಕಣ್ಣಾರೆ ಕಾಣುತ್ತಿರುವ ಈ ಪದ್ಧತಿಯನ್ನು ತಪ್ಪಿಸಿ ಪ್ರತಿಯೊಬ್ಬರೂ ಊಟಕ್ಕೆ ಬರಬೇಕಾದರೆ ತಂಬಿಗೆ ಥಾಲಿಯನ್ನು ಅವಶ್ಯತರಬೇಕೆಂಬ ಕಟ್ಟಳೆಯನ್ನು ಮಾಡುವದು ವಿಹಿತವಾದದ್ದು. ಇದಕ್ಕಿಂತಲೂ ಇನ್ನೊಂದು ಮಹತ್ವದ ವಿಷಯವೇನೆಂದರೆ ಊಟಕ್ಕೆ ಹೇಳಿಸಿಕೊಂಡವರೆಲ್ಲರೂ ನಿಯಮಿತಕಾಲಕ್ಕೆ ಯಾವತ್ತರೂ ಕೂಡಿಕೊಂಡು ಏಕಕಾಲದಲ್ಲಿ ಕುಳಿತುಕೊಂಡು ಊಟಮಾಡುವದಿಲ್ಲ. ಒಬ್ಬೊಬ್ಬರ ಮನೆಗೆ ಹತ್ತಿಪ್ಪತ್ತು ಸಾರೆ ಎಡತಾಕಿ ಕರೆಯಬೇಕಾಗುತ್ತದೆ. ಊಟಕ್ಕೆ ಹೇಳಿದ ಯಜಮಾನನು ಬಂದ ಬಂದವರನ್ನೆಲ್ಲ ಆಗಾಗಲೇ ಅವರನ್ನು ಊಟಮಾಡಿಸಿ ತಾನು ಉಣ್ಣದೆ ಆ ಅಣ್ಣವರು ಬರತಕ್ಕವರಿದ್ದಾರೆ. ಅವರ ಕೂಡ ನಾನಿರಬೇಕಾಗುತ್ತದೆ. ಎಂದು ಹೇಳುತ್ತ ಸಂಜೆಯ ಮೂರು ತಾಸು ರಾತ್ರಿಯವರೆಗೆ ಮನೆಯಲ್ಲಿ ಹತ್ತಿಪ್ಪತ್ತು ಸಾರೆ ಪಂಕ್ತಿಗಳನ್ನು ಮಾಡುತ್ತಾನೆ. ಪ್ರತಿಸಾರೆ ಊಟಮಾಡಿಬಿದ್ದ ಮುಸರೆಯಮೇಲೆ ಸರ್ವರ ಊಟಮಾಡುತ್ತಿರುವ ಭಯಾನಕನೋಟದಿಂದ ಹೃದಯವು ಸಡುಗಲಾರದೇ! ಗಂಡಸರೆಲ್ಲರ ಊಟವಾಗದ್ದರಿಂದ ಹೆಂಗಸರ ಊಟವು ಅಪರರಾತ್ರಿಗೆ ಬೀಳುವದು. ಒಮ್ಮೊಮ್ಮೆ ಮೂಡಲು ಹರಿಯುವ ಹೊತ್ತಿಗೆ ಊಟಮಾಡುತ್ತಿರುವದನ್ನು ನೋಡುತ್ತಿರುತ್ತೇವೆ. ಈ ಕೆಟ್ಟಪದ್ಧತಿಗಳು ಬೇಕಾದಷ್ಟು ಅಟ್ಟಹಾಸಮಾಡುತ್ತಲಿದ್ದರೂ ಸಮಾಜಪ್ರಮುಖರು ಇತ್ತಕಡೆಗೆ ನೋಡದಿರುವದು ವಿಹಿತವಲ್ಲ. ಊಟಕ್ಕೆ ಹೇಳುವದು ಮತ್ತು ಕರೆಯುವದು ಒಂದೇ ಸಾರೆ ಊಟಮಾಡುವದು ಒಂದೇ ಪಂಕ್ತಿಯಾಗಬೇಕು. ಆ ಪಂಕ್ತಿಗೆ ಬಾರದೆ ಹೋದರೆ ಪುನಃ ಊಟಕ್ಕೆ ಸೇರಲೇಬಾರದೆಂಬ ಸಾಮಾಜಿಕ ಕಟ್ಟು ಆಗಬೇಕು. ಇದರಿಂದ ಬಹಳ ಅನುಕೂಲವಾಗುತ್ತದೆ. ಪರಮತೀಯರಲ್ಲಿ ಈ ಊಟದ ಪದ್ಧತಿಯಾದರೂ ಚೆನ್ನಾಗಿರುತ್ತದೆ. ಅತ್ಯಂತ ಶ್ರೇಷ್ಠವಾದ ವೀರಶೈವ ಸಮಾಜದಲ್ಲಿ ಇಂಥ ಅನಾಚಾರಗಳು ಲೋಪವಾಗದ ವಿನಾ ಈ ಸಮಾಜವು ಸುಧಾರಿಸಲಾರದು. ಸಮಾಜಾಂತರ್ಗತವಾದ ಈ ಅವಿವೇಕತನವನ್ನು ಖಂಡಿತವಾಗಿ ಹೊರಗೆಡವಿದ್ದಕ್ಕೆ ಕೆಲವರು ಕುಪಿತರಾಗಬಹುದು. ಇದ್ದದ್ದನ್ನು ಬಯಲಿಗಿಟ್ಟು ಅದರ ಕುಂದುಕೊರತೆಯನ್ನು ದೂರ ಮಾಡಿಕೊಂಡು ಸಮಾಜ ಸುಧಾರಣೆಯಾಗಬೇಕೆಂಬ ಹಂಬಲದ ಹವಣಿಕೆಯಿಂದ ಈ ಲೇಖವನ್ನು ಬರೆದಿರುತ್ತೇವೆ. ಯಾವತ್ತರೂ ಇತ್ತಕಡೆಗೆ ಹೊರಳಿ ಸಮಾಜೋದ್ಧಾರದ ಈ ಕಾರ್ಯಗಳನ್ನು ಮಾಡಿ ಆ ಪ್ರಕಾರ ನಿರ್ಣಯಮಾಡಿ ಪ್ರಭಾಸಂಪಾದಕರ ಸನ್ನಿಧಿಗೆ ತಿಳುಹಿಸಬೇಕು.

ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನ.

ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನದಲ್ಲಿ ಶ್ರೀಜಗದ್ಗುರು ರೇಣುಕಶಿವಾಚಾರ್ಯರ ಜಯಂತಿ ದಿವಸದಲ್ಲಿ ಮಹಾರಥೋತ್ಸವವು ಜರ್ಝವಾಗಿ ನೆರವೇರಿತು. ತದಂಗಭೂತಗಳಾದ ಕಾರ್ಯಗಳೆಲ್ಲವೂ ಕ್ರಮೇಣ ಜರಗುತ್ತ ಫಾಲ್ಗುಣ ಬಹುಳ ೬ ಶುಕ್ರವಾರಕ್ಕೆ ನೆರವೇರಿದವು. ಶ್ರೀಮನ್ಮಹಾರಾಜರವರು ಶ್ರೀ ಮಠಕ್ಕೆ ಆಗಮಿಸಿದ್ದ ಕಾಲದಲ್ಲಿ ಆಗಮಿಸಿದ್ದ ಮಹಾಶಯರು ಶ್ರೀ ಸಂಸ್ಥಾನ ಮಠದ ಜೀರ್ಣೋದ್ಧಾರ ವಿಷಯಕವಾಗಿ ವಿಚಾರಣೆಮಾಡಿ ಮಠವನ್ನು ಶಿಲಾಮಯವನ್ನಾಗಿ ಮಾಡಬೇಕೆಂದು ನಿರ್ಧರಿಸಿ ಶಕ್ತ್ಯನುಸಾರ ಶಿಲಾಮಂಟಪಗಳನ್ನು ಕಟ್ಟಿಸಲು ವಾಗ್ದಾನಮಾಡಿದ್ದಂತೆ ಕೆಲವರು ಹಣವನ್ನು ಪಾವತಿಮಾಡಿದ್ದಾರೆ. ಉಳಿದವರು ಮಾಡುವವರಲ್ಲಿಯೂ ಇದ್ದಾರೆ. ಈ ವರ್ಷದ ಉತ್ಸವದ ಸಮಯದಲ್ಲಿಯೂ ಉತ್ಸವಕ್ಕೆ ಬಂದಿದ್ದ ಶ್ರೀಯುತ ಅಲ್ದೂರು ಕಾಫೀಪ್ಲಾಂಟರ್ ಯಜಮಾನ ಪುಟ್ಟಣ್ಣಶೆಟ್ಟರೂ ಕಾಫೀಪ್ಲಾಂಟರ್ ಶ್ರೀಯುತ ಚಿಕ್ಕಮಗಳೂರು ಕೋಟೆಸಿದ್ದಲಿಂಗಪ್ಪಶೆಟ್ಟರೂ ಶ್ರೀಯುತ ಅಲ್ದೂರು ಕಾಫೀಪ್ಲಾಂಟರ್ ಹಳೇಬೀಡು ಬಸವಪ್ಪಶೆಟ್ಟರು ಶ್ರೀಯುತ ಮಾವಿನಕೆರೆ ಬೀರೂರು ಕಲ್ಲಪ್ಪಶೆಟ್ಟರು ಶ್ರೀಯುತ ಕಾಫೀಪ್ಲಾಂಟರ್ ಅಲ್ದೂರ್ ಬಿ. ಪಿ. ಮಲ್ಲಪ್ಪಶೆಟ್ಟರು ಶ್ರೀಯುತ ಎಂ. ಸಿ. ಇಂಗ್ಲೀಷ ಸ್ಕೂಲ್‌ಹೆಡ್‌ಮಾಸ್ಟರ್ ಚಂದ್ರಶೇಖರಪ್ಪನವರು ಮೂಡಿಗೆರೆ ಶ್ರೀಯುತ ಎಂ. ಸಿ. ಅಸಿಸ್ಟೆಂಟ್ ಸರ್ಜನ್ ನಂಜಪ್ಪನವರು ಮೂಡಿಗೆರೆ ಶ್ರೀಯುತ ಹುಮಕೂರು ಸಾಹುಕಾರ್ ಭಾವಿಕಟ್ಟೆ ಸದಾಶಿವಪ್ಪನವರು ಮುಂತಾದ ಮಹಾಶಯರು ಶ್ರೀ ಮಹಾಜಗದ್ಗುರುಗಳವರ ಸನ್ನಿಧಾನದಲ್ಲಿ ಸಭೆಗೂಡಿ ಚರ್ಚಿಸಿ ಈಗಿರುವ ಶ್ರೀ|| ಸಂ|| ಮಠವು ಸುಂದರವಾದ ಮತ್ತು ಭದ್ರವಾದ ತಳಹದಿಯುಳ್ಳದ್ದಾಗಿರುವದರಿಂದ ಇದನ್ನು ತೆಗೆಯಕೂಡದೆಂತಲೂ ಮೇಲಿನ ಭಾಗವನ್ನು ಸರಿಪಡಿಸಬೇಕೆಂತಲೂ ಈ ಮಠಕ್ಕಿಂತಲೂ ಹಿಂದೆ ಇದ್ದ ಪ್ರಾಚೀನ ಮಠದ ಜಾಗದಲ್ಲಿ ನೂತನವಾಗಿ ಶಿಲಾಮಠವನ್ನು ಮಾಡಬೇಕೆಂತಲೂ ಅಲ್ಲಿ ನೀರಿನಕೊರತೆ ಇರುವದರಿಂದ ಆ ಭಾಗದಲ್ಲಿ ನೀರು ಬರುವದಕ್ಕಿರುವ ಕಾಲುವೆಯನ್ನು ಸರಿಯಾಗಿ ಕಟ್ಟಿಸಬೇಕೆಂತಲೂ ಬಹುಮತವಾಗಿ ನಿರ್ಣಯಿಸಲ್ಪಟ್ಟಿತು. ಅಖಿಲವೀರಶೈವರೂ ಶ್ರೀಜಗದ್ಗುರು ಮಹಾಪೀಠದ ಜೀರ್ಣೋದ್ಧಾರಕ್ಕೆ ಮುಂದುವರಿದು ತಮ್ಮ ವಂಶದ ಕೀರ್ತಿಪ್ರತಿಷ್ಠೆಗಳನ್ನು ಸ್ಥಿರಗೊಳಿಸಬೇಕೆಂದು ಕೋರುತ್ತೇನೆ.

ಶ್ರೀ ಜಗದ್ಗುರು ಮಹಾಸಂಸ್ಥಾನ
ಏಜಂಟ.

ಶ್ರೀಗುರು ದತ್ತಾತ್ರಯ ಬಾಬಾಬುಡನ್‌ಸ್ವಾಮಿ ಪೀಠದ ಘೋಷಾಪಾದ್ರಿಯವರ ಆಗಮನ.

ಘೋಷಾಪಾದ್ರಿಯವರು ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ ಮಠಕ್ಕೆ ಅವಲೋಕನಕಾಂಕ್ಷೆಯಿಂದ ತಾ|| ೨೧-೩-೩೩ ಮಂಗಳವಾರ ಸಾಯಂಕಾಲ ಎಮ ಘಂಟೆಗೆ ಆಗಮಿಸಿದರು. ಜೊತೆಯಲ್ಲಿ ಬಾಳೆಹೊನ್ನೂರು ಸಾಹುಕಾರ್ ಸಾಹೇಬರೂ ಮತ್ತು ಅಲ್ದೂರು ಕಾಫಿಪ್ಲಾಂಟರ್ ಸಾಹೇಬರು ಮೊದಲಾದ ಅನೇಕ ಮಹಮ್ಮದೀಯ ಶ್ರೀಮಂತರೂ ಆಗಮಿಸಿದ್ದರು. ಶ್ರೀ ಜಗದ್ಗುರುಗಳವರ ಮುಕ್ಕಾಂ ಮಠದಲ್ಲಿಯೇ ಇತ್ತು. ಸದರಿಯವರು ಬರುವದು ಮೊದಲೇ ಸನ್ನಿಧಾನಕ್ಕೆ ಅರಿಕೆಯಾಗಿದ್ದುದರಿಂದ ತಕ್ಕ ವ್ಯವಸ್ಥೆಯೂ ಇಡಲ್ಪಟ್ಟಿತ್ತು. ಶ್ರೀ ಘೋಷಾಪಾದ್ರಿಯವರು ಬಂದಕೂಡಲೆ ಮೊದಲು ಸ್ವಾಮಿಯ ಆಲಯಕ್ಕೆ ಬಂದು ಮಂಗಳವನ್ನು ಮಾಡಿಸಿ ಪವಿತ್ರಸ್ಥಾನಗಳೆಲ್ಲವನ್ನೂ ಸಂದರ್ಶಿಸುತ್ತ ಅತಿ ಪ್ರಾಚೀನವಾದ ಮಹಾಪೀಠದ ಸಂದರ್ಶನದಿಂದುಂಟಾದ ಆನಂದವನ್ನು ವ್ಯಕ್ತಮಾಡುತ್ತ ದರ್ಬಾರ್ ಹಾಲಿನಲ್ಲಿ ಶ್ರೀ ಜಗದ್ಗುರುಗಳವರೊಡನೆ ಸ್ವಲ್ಪ ಹೊತ್ತು ಸಂಭಾಷಣೆಯನ್ನು ಮಾಡಿ ಪ್ರೇಮವನ್ನು ವ್ಯಕ್ತಗೊಳಿಸಿ ಅಭೂತಪೂರ್ವವಾದ ಆನಂದದಿಂದ ಪ್ರಯಾಣಮಾಡಿದರು. ಈ ಅನ್ಯೋನ್ಯ ಪ್ರೇಮದಿಂದ ಉಭಯಮತೀಯರ ಸೌಹಾರ್ದಭಾವಕ್ಕೆ ಕಾರಣವೆಂದು ಹೇಳಲು ಅಡ್ಡಿಯಿಲ್ಲ. ಸದರಿಯವರು ಶಾಂತರೂ ಸದ್ಗುಣಿಗಳೂ ನಿಷ್ಪಕ್ಷಪಾತಿಗಳೂ ಆಗಿರುವದು ಆ ಪೀಠಕ್ಕೆ ಭೂಷಣವೇ ಸರಿ. ಇವರಿಗೆ ಭಗವಂತನು ಆಯುರಾರೋಗ್ಯವನ್ನು ಕೊಟ್ಟು ರಕ್ಷಿಸಲೆಂದು ಕೋರುವೆನು.

ಹೆಚ್. ಯಂ. ಚನ್ನಬಸವಾರಾಧ್ಯ.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಅರಸೀಕೆರೆ ತಾ|| ದಿಬ್ಬೂರು.

ಪ್ರತಿವರ್ಷದ ಪದ್ಧತಿಯಮೇರೆ ಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ಸ್ಕೂಲ್‌ಮಾಸ್ಟರ್ ಎ. ಚನ್ನಪ್ಪನವರು ವ್ಯಾಪಾರಿ ಚನ್ನಬಸವೇಗೌಡರಮಂದಿರದಲ್ಲಿ ಅತ್ಯಂತ ಗುರುಭಕ್ತಿಯಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಬಿಳುನೇರಲು ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಮತ್ತು ಹರಳಕಟ್ಟದ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಗರುಗದಹಳ್ಳಿ ವಗೈರೆ ಗ್ರಾಮಗಳ ವೀರಶೈವ ಮಹಾಜನಗಳು ಮತ್ತು ಗ್ರಾಮದ ಪ|| ದಾಸೇಗೌಡರು ವೀರಬಸಪ್ಪ ಮಾಡಾಳ್ ಚಿಕ್ಕಣ್ಣ ಮರುಳೈಯ್ಯ ದ್ಯಾವಣ್ಣ ಚೌಡೈಯ್ಯ ಮಂಜಣ್ಣ ರಂಗಣ್ಣ ಗವೀ ರಂಗೇಗೌಡ ವಗೈರೆ ದೊಡ್ಡಮನುಷ್ಯರು ಸಹ ದಯಮಾಡಿಸಿ ಮೇಲ್ಕಂಡ ಚನ್ನಬಸವೇಗೌಡರ ಮಂದಿರದಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ್ದ ಮಂಟಪದಲ್ಲಿ ಶ್ರೀರೇಣುಕಾಚಾರ್ಯರ ಭಾವಚಿತ್ರ ಪಟವನ್ನು ಇರಿಸಿ ಗಂಧ ಅಕ್ಷತೆ ಬಿಲ್ವಪತ್ರೆ ಮೊದಲಾದ ಸಾಮಗ್ರಿಗಳಿಂದ ವಿಧ್ಯುಕ್ತವಾಗಿ ಪೂಜಿಸಿ ಮಹಾಮಂಗಳಾರತಿ ನೈವೇದ್ಯಾದಿಗಳನ್ನು ಮಾಡಿದಮೇಲೆ ಆಚಾರ್ಯರ ಚಿತ್ರಪಟವನ್ನು ಪಲ್ಲಕ್ಕಿಯಲ್ಲಿರಿಸಿ ಛತ್ರಚಾಮರ ಬಾಜಭಜಂತ್ರಿ ಆರತಿ ಮೊದಲಾದ ವೈಭವಗಳಿಂದ ಗ್ರಾಮದಲ್ಲೆಲ್ಲ ಮೆರವಣಿಗೆ ಉತ್ಸವವು ನೇತ್ರಾನಂದಕರವಾಗಿ ನಡೆಯಿಸಲ್ಪಟ್ಟಿತು.

ಓರ್ವ ಉತ್ಸವಭಾಗಿ.

ರಾಜನ ಧರ್ಮವೂ, ಪ್ರಜೆಗಳ ಕರ್ತವ್ಯವೂ ಇವೇ ರಾಜ್ಯಾಭಿವೃದ್ಧಿಗೆ ಕಾರಣಗಳು.

[ಲೇಖಕ—ಕನ್ನಡಕವಿ ಅನವಟ್ಟಿ ರಾಮರಾಯರು.]

ಈ ಪ್ರಪಂಚದಲ್ಲಿ ಸುಜೀವಿಗಳೆಂತಲೂ, ದುರ್ಜೀವಿಗಳೆಂತಲೂ ಎರಡು ವಿಧಗಳು. ಸುಜೀವಿಗಳು ಧರ್ಮಾಪೇಕ್ಷದಿಂದ ಸತ್ಕಾರ್ಯಗಳನ್ನು ಮಾಡುವರು. ದುರ್ಜೀವಿಗಳು ದುಷ್ಟಕಾರ್ಯಗಳನ್ನೆಸಗುವರು. ಈ ಕಾರ್ಯಗಳಿಗೆ ಜೀವನ ಸಂಸ್ಕಾರವೇ ಮುಖ್ಯಕಾರಣವು. ಪೂರ್ವಜನ್ಮದಲ್ಲಿ ಮಾಡಿದ ಸುಕೃತದಿಂದ ಈ ಲೋಕದಲ್ಲಿ ಉತ್ತಮಪದವಿಗಳನ್ನು ಹೊಂದಿ ಲೋಕೋಪಕಾರಿಯಾಗಿರುವುದೇ ಸುಜೀವಿಯ ಲಕ್ಷಣ. ಲೋಕಹಿಂಸೆಯನ್ನು ಮಾಡುತ್ತಾ, ಕಷ್ಟಜೀವಿಯಾಗಿ ಜೀವಿಸುತ್ತಿರುವುದೇ ದುರ್ಜೀವಿಯ ಲಕ್ಷಣ. ಸುಗುಣಿಯೂ, ದುರ್ಗುಣಿಯೂ ಇವರಿಬ್ಬರೂ ಒಂದೇ. ಆದರೆ ಕಾಲ ವ್ಯತ್ಯಾಸದಿಂದ ಸುಗುಣಿಯು ಸತ್ತಮೇಲೆ ಜನರಿಗೆ ವ್ಯಸನ, ದುರ್ಗುಣಿಯು ಸತ್ತಮೇಲೆ ಸಂತೋಷ. ಸುಗುಣವಂತರನ್ನೇ ದೇವರು ನಿರ್ಮಿಸಿದ್ದ ಮಾತ್ರಕ್ಕೆ ಅಷ್ಟು ಮಹಿಮೆಗೆ ಪಾತ್ರರಾಗುತ್ತಿರಲಿಲ್ಲ. ದುರ್ಗುಣವಿದ್ದರೆ ಉಭಯರ ಗುಣ ತಾರತಮ್ಯದಿಂದ ಜನರಿಗೇ ಗೊತ್ತಾಗಲವಕಾಶವಾಗಿರುವುದು. ಭಗವಂತನು ಒಬ್ಬನನ್ನು ರಾಜನನ್ನಾಗಿಯೂ, ಮತ್ತೊಬ್ಬನನ್ನು ಝಾಡಮಾಲಿಯನ್ನಾಗಿಯೂ, ಒಬ್ಬನನ್ನು ವಿದ್ಯಾವಂತನನ್ನಾಗಿಯೂ ಮತ್ತೊಬ್ಬನನ್ನು ವಿದ್ಯಾಹೀನನನ್ನಾಗಿಯೂ, ಒಬ್ಬನನ್ನು ಆರೋಗ್ಯವಂತನನ್ನಾಗಿಯೂ, ಮತ್ತೊಬ್ಬನನ್ನು ರೋಗಿಯನ್ನಾಗಿಯೂ, ಒಬ್ಬನನ್ನು ಧನವಂತನನ್ನಾಗಿಯೂ, ಮತ್ತೊಬ್ಬನನ್ನು ದರಿದ್ರನನ್ನಾಗಿಯೂ ಇರುವಂತೆ ಮಾಡುವುದಕ್ಕೆ ಅವನವನ ಪೂರ್ವಕರ್ಮಶೇಷವೇ ಕಾರಣವೆಂದು ಶಾಸ್ತ್ರವು ನಿರೂಪಿಸುವುದು. ಹೀಗಿರುವಲ್ಲಿ ರಾಜನಾಗುವುದೆಂದರೆ ಅವನ ಪೂರ್ವಪುಣ್ಯದ ಸುಕೃತವೆಂದೇ ತಿಳಿಯಬೇಕು. ಶರೀರಕ್ಕೆ ಜೀವನು ಹೇಗೋ, ಇಂದ್ರಿಯಗಳಲ್ಲೆಲ್ಲಾ ನೇತ್ರವು ಹೇಗೋ ಹಾಗೆಯೇ ರಾಜ್ಯಕ್ಕೆ ರಾಜನಾದವನು ಮುಖ್ಯನು. ರಾಜನಾದವನು ತನ್ನ ಕರ್ತವ್ಯವನ್ನು ನಡಿಸಿಕೊಂಡುಬಂದರೆ ಲೋಕವು ಉದ್ಧಾರವಾಗುವುದು. ಹಾಗಿಲ್ಲದಿದ್ದರೆ ಲೋಕವೇ ನಾಶವಾಗುವುದೆಂದು ತಿಳಿಯಬೇಕು. ಈ ಕಾರಣದಿಂದ ರಾಜನು ಲೋಕದಲ್ಲಿ ಶ್ರೇಷ್ಠನೆಂದೇ ತಿಳಿಯಬೇಕು. ಭಗವಂತನ ಪ್ರೀತಿಗೆ ಪಾತ್ರನಾದ ಹೊರತು ರಾಜತ್ವವು ಎಂದಿಗೂ ಲಭಿಸುವುದಿಲ್ಲವೆಂದರಿಯಬೇಕು.

ಎಲೈ ರಾಜನೆ! ನೀನು ಭಗವಂತನ ಪ್ರೀತಿಗೆ ಪಾತ್ರನಾಗಿರುವೆ. ಮಹರ್ಷಿಯರೂ, ನಿನ್ನ ಆಶ್ರಿತರೂ ಈ ಸ್ಥಾನಕ್ಕೆ ತರಲು ತಾವೇ ತಕ್ಕ ವಿಧಿಗಳನ್ನೇರ್ಪಡಿಸಿಕೊಳ್ಳದೆ, ಶಾಸ್ತ್ರಾಧಾರಗಳ ಮೇಲೆ ರಾಜತ್ವಕ್ಕೆ ಬೇಕಾದ ಧರ್ಮಗಳು ಇರಬೇಕೆಂಬ ಶಾಸ್ತ್ರಾಧಾರದ ಕಟ್ಟಳೆಗಳನುಸಾರವಾಗಿ ನಡೆಯಬೇಕೆಂದು ಯೋಚಿಸಿ, ನಿನ್ನನ್ನು ಈ ಗೌರವಸ್ಥಾನಕ್ಕೆ ತಂದು ಗೌರವಿಸುತ್ತಿರುವರೆಂದು ತಿಳಿಯಬೇಕು. ಹೀಗಿರುವಾಗ್ಗೆ ರಾಜನಾದವನು ಅವರಿಗೆ ನಂಬಿಕೆಯನ್ನು ಕೊಟ್ಟು ಧರ್ಮಪರಿಪಾಲನೆಯನ್ನು ನಡಿಸಿಕೊಂಡು ಬರುತ್ತಿರುವೆನೆಂಬ ಧರ್ಮಗಳನ್ನೂ, ಅವುಗಳ ಫಲಾಫಲಗಳನ್ನೂ, ಕುರಿತು ಯೋಚಿಸು.

ರಾಜನೆ! ನೀನಾದರೋ ನಿನ್ನ ಪದವಿಗೆ ತಕ್ಕಂತೆ ಅಸಮಾನವಾದ ವಸನಂಗಳನ್ನು ತೊಟ್ಟುಕೊಂಡು, ಚಿನ್ನದ ಸಿಂಹಾಸನದಲ್ಲಿ

ಮಂಡಿಸಿ, ರಾಜಧರ್ಮವೆಂಬ ಕಿರೀಟವನ್ನು ಧರಿಸಿ ರಾಜ್ಯಾಧಿಕಾರವನ್ನು ವಹಿಸಿರುವೆನೆಂಬ ಭಾವವನ್ನು ರಾಜದಂಡವನ್ನು ಹಿಡಿದಿರುವೆ. ಇವುಗಳಿಂದೂ ನಿನ್ನ ಪ್ರಯೋಜನಕ್ಕಾಗಿಲ್ಲವೆಂದು ತಿಳಿದು, ನಿನ್ನ ಅಧಿಕಾರ ಕಾಲದಲ್ಲಿ ಮಾತ್ರ ಉಪಯೋಗಿಸಬೇಕೆಂದು ಚೆನ್ನಾಗಿ ತಕ್ಕದ್ದು. ರಾಜನ ಅಸಮಾನವಾದ ಯಶಸ್ಸು ಹರಡದ್ದರೆ ರಾಜ್ಯದ ಪ್ರಜೆಗಳನ್ನು ಪಾಲಿಸಿಕೊಂಡು ಬರುವ ಹೊರತು ಮತ್ತಾವ ವಿಧವೂ ಇರುವುದಿಲ್ಲ. ಪ್ರಜೆಗಳಿಂದ ಬರುವ ಸಂತೋಷಜನಕವಾದ ಉತ್ಸಾಹವೇ ಕಾ ದರ್ಗ, ರಾಜ್ಯ, ಇವು ರಾಜನ ವಶವರ್ತಿಯಾಗಿರುವುವು. ತಾದವನು ಅಧರ್ಮಮಾರ್ಗಪ್ರವೃತ್ತನಾದುದಾದರೆ, ಪ್ರಜೆಗಳಿಂದ ದತ್ತವಾದ ಸ್ವಾತಂತ್ರ್ಯಮರ್ಯಾದೆ ಮುಂದುವ ಗಳೆಲ್ಲಾ ಎಲ್ಲಿಯೋ ಮಾಯವಾಗಿ ಹೋಗುವುವು.

ರಾಜನ ಮನಸ್ಸಾದರೋ ತನ್ನ ಅಧಿಕಾರದ ಮಹಿ ತುಂಬಿ ತುಳುಕುತ್ತಿರುವುದು. ಅವನು ಸರ್ವದಾ ಯೋ ಯೋಚನೆಗಳನ್ನು ಮಾಡುತ್ತಿರುತ್ತಾ, ನೂತನಮಾ ಹುಡುಕುತ್ತಿರುತ್ತಾ ಇರುವುದೇ ರಾಜಧರ್ಮವು. ರಾಜ್ಯದಲ್ಲಿರುವ ಅಸಮಾನ ಪ್ರಜ್ಞಾಶಾಲಿಗಳಾದ ವ ರನ್ನು ಕರೆಯಿಸಿಕೊಂಡು, ಸಭೆಯನ್ನು ಮಾಡಿ, ಅವರ ಮ ಗಳನ್ನು ಹೊರಡಿಸಲು ಅವರಿಗೆ ಸ್ವಾತಂತ್ರ್ಯವನ್ನು ಕೊ ಯಗಳನ್ನು ಚರ್ಚೆಮಾಡಿ, ಬಂದ ವಿಷಯಗಳನ್ನೆಲ್ಲಾ ಸ್ಸಿನಿಂದ ಲಾಲಿಸಬೇಕು. ರಾಜನು ಪ್ರಜೆಗಳಲ್ಲಿ ವನ್ನಿಟ್ಟುಕೊಳ್ಳದೆ, ಪ್ರಜೆಗಳೇ ದೇವರೆಂದು ಭಾವಿಸಿ, ಸ ವಾಗಿ ನಡಿಸಿಕೊಂಡು ಬರುವುದೇ ರಾಜಧರ್ಮವು. ಅ ಗಳಲ್ಲಿನ ಯೋಗ್ಯತಾವಿಶೇಷಗಳನ್ನು ಬಹು ಬುದ್ಧಿವಂ ತಿಳಿದುಕೊಂಡು ಪ್ರಜಾಕಾರ್ಯನಿರ್ವಾಹಮಾಡುವ ಶಕ್ತ ಕಾರಿಗಳನ್ನು ನೇಮಿಸಬೇಕು. ರಾಜನಿಯಮಿತರಾದ ಹಿತಿಗಳು ಸತ್ಯವಂತರಾಗಿಯೇ ಇರಬೇಕು. ಅಲ್ಲದೆ ಅ ಮಂಡಲಿಯವರು ಬಹು ಬುದ್ಧಿಶಾಲಿಗಳಾಗಿರಬೇಕು. ಆಪ್ತರಾಗಿ ವರ್ತಿಸುವವರು ರಾಜನಿಗೆ ದ್ರೋಹವನ್ನು ಗೆಲೂ ಮಾಡಕೂಡದು.

ರಾಜನು ಪರರಾಜ್ಯದಲ್ಲಿನ ವಿಚಿತ್ರ ಕಲೆಗಳನ್ನು ಅವು ತನ್ನ ರಾಜ್ಯದಲ್ಲಿ ನೆಲೆಗೊಳ್ಳುವಂತೆಮಾಡಿ, ಪ್ರಜೆ ಗಳಲ್ಲಿ ಬುದ್ಧಿವಂತರಾಗಿರಲು ಏರ್ಪಾಡುಮಾಡುವುದ ವಿಧವಾದ ಶಾಸ್ತ್ರಗಳೆಲ್ಲಾ ರಾಜ್ಯಾಭಿವೃದ್ಧಿಗೆ ಬರುವ ಅವುಗಳಿಗೆ ಉತ್ತೇಜನವನ್ನು ಕೊಡುತ್ತಿರಬೇಕು.

ರಾಜನಾದವನು ವಿದ್ಯಾವಂತರನ್ನೂ, ಅಸಮಾನವತ್ತ ಮತಿಗಳನ್ನೂ ನೋಡಿ ಸಂತೋಷಪಡುತ್ತಾ ಅವರ ಗೀತವಾದ ಅಮೋಘ ಯೋಚನಾರತ್ನಗಳನ್ನು ಪ್ರಜಾ ಪ್ರವೇಶಕ್ಕೆ ಮಾರ್ಗದರ್ಶಕವಾಗಿರಲು ಪ್ರೋತ್ಸಾಹಕ ವುದೇ ರಾಜನ ಧರ್ಮವು. ಇದರಿಂದ ರಾಜನು ಪರ ವಾಗಿರುವುದರಲ್ಲಿ ಸಂಶಯವಿಲ್ಲ.

ರಾಜ್ಯದಲ್ಲಿರುವ ವ್ಯಾಪಾರಿಗಳನ್ನು ಅಭಿವೃದ್ಧಿಗೆ ತ ಐಶ್ವರ್ಯವಂತರೂ, ಭೂಮಿಯನ್ನು ಹಸನುಮಾಡಬೇಕೆಂ ಯಗಾರರೂ, ಕೈಗಾರಿಕೆಯಲ್ಲಿ ನಿಪುಣರಾದ ಕಸಬ ವಿದ್ಯಾಭಿವೃದ್ಧಿಯಲ್ಲಿರಬೇಕೆಂಬ ವಿದ್ಯಾರ್ಥಿಗಳೂ ಎಲ್ಲಾ ರಾಜನು ಅವರವರ ವಿದ್ಯೆಗಳಲ್ಲಿ ಅಭಿವೃ ಬೇಕಾದ ಸಹಾಯಸಂಪತ್ತುಗಳನ್ನೊದಗಿಸಿಕೊಡುತ್ತಾ ರಾಜಧರ್ಮವಾಗಿರುವುದು.

ರಾಜನಾದವನು ಹೊಸಹೊಸರಾಜ್ಯಗಳನ್ನು ಸ್ಥಾಪಿ ದೊಡ್ಡಹಡಗುಗಳನ್ನು ಏರ್ಪಡಿಸುವುದೂ, ವ್ಯವಸಾಯಕ್ಕೆ ವಾದ ನದಿಗಳಿಂದಲೂ, ಕೆರೆಗಳಿಂದಲೂ ಕಾಲುವೆಗಳನ್ನು ಸುವುದೂ, ಹಡಗುಸಾಲುವಸ್ಥಳವನ್ನು ಏರ್ಪಡಿಸುವುದೂ ಐಶ್ವರ್ಯವಂತರಾಗಿ ಸುಜೀವಿಗಳಾಗಿರುವಂತೆ ಮಾಡ ರಾಜ್ಯದಬಲವನ್ನು ಹೆಚ್ಚಿಸುವುದೂ ರಾಜಧರ್ಮವು. ಪ್ರಪಂ ಪಕ್ಷಪಾತವನ್ನು ಬಿಟ್ಟುಮಾಡದೆ 'ಸರ್ವೇಜನಾಃ ಸುಖಿನೋಭವಂತು' ಎಂದು ಹೇಳಿರುವ ರೀತಿಯಾಗಿ, ಸಕಲಮತೀಯರಿಗೂ ಅ ಮತಾನುಸಾರವಾಗಿ ಅನುಕೂಲ್ಯವನ್ನು ಕಲ್ಪಿಸಿಕೊಡು ಅವೇ ಮುಂತಾದ ಏರ್ಪಾಡುಗಳಿಂದ ಪ್ರಜೆಗಳು ತಾವು ಸುವಕಾರ್ಯಗಳಲ್ಲಿ ಶ್ರದ್ಧೆ, ಶ್ರಮೆಗಳಿಂದಮಾಡುವ ಕಾ ತಕ್ಕತಕ್ಕ ಫಲಗಳು ಹೊಂದಿಸುವಂತೆ ಮಾಡುವುದೂ, ಇ ಲಾದ ಮುಖ್ಯಕಾರಣಗಳೆಲ್ಲಾ ನ್ಯಾಯವಿಧಾನದಂತೆ ಮುಖ್ಯರಾಜಧರ್ಮವಾಗಿರುವುದು.

ರಾಜನು ಕೊಡುವ ತೀರ್ಮಾನಗಳು ಕಾರುಣ್ಯಪೂ ವುದೇ ಪ್ರಾಮುಖ್ಯವಾಗಿರಬೇಕು. ತಪ್ಪಿತಸ್ಥರಿ ಕೊಡುವ ಶಿಕ್ಷೆಗಳು ದೃಢಪ್ರತಿಜ್ಞೆಯುಳ್ಳದಾಗಿಯೂ, ರಹಿತವಾಗಿಯೂ ಇರುವುದೇ ರಾಜಧರ್ಮವು.

ಪ್ರಜೆಗಳ ಸುಖದುಃಖಗಳನ್ನು ಲಾಲಿಸುವುದರಲ್ಲಿ ತುಂಬಾ ಆತುರದಿಂದ ಕಿವಿಗಳನ್ನು ಯಾವಾಗಲೂ ತೆರೆದಿ ಅಲ್ಲದೆ ರಾಜನಿಬಂಧನೆಗೆ ವ್ಯತಿರಿಕ್ತವಾಗಿ ನಡೆಯುವವರ ದಲ್ಲಿ ಕಠಿಣಹೃದಯನಾಗಿಯೂ, ಕೆಲವು ಸಮಯಗಳಲ್ಲಿ ಕೃಪೂರಿತನಾಗಿಯೂ ಇರಬೇಕು.

ರಾಜನು ಪ್ರಜೆಗಳ ವಿಷಯದಲ್ಲಿ ಹೀಗಿರುವುದನ್ನು ನೋ ಪ್ರಜೆಗಳು ರಾಜನನ್ನು ತಮ್ಮ ತಂದೆಯಂತೆಯೇ ಭಾವಿಸಿ ಆ ಮರ್ಯಾದೆಯನ್ನೂ, ಪ್ರೀತಿಯನ್ನೂ ತೋರಿಸುವರಲ್ಲದೆ ತಮ್ಮ ಸಂತೋಷಾತಿಶಯಗಳೆಲ್ಲಾ ರಾಜನೇ ಯಜಮಾನ ತಿಳಿಯುವರು. ಈ ರೀತಿ ನಡೆಯುವುದರಿಂದ ರಾಜನ ಮನಸ್ಸಿ ಪ್ರಜಾಪ್ರೀತಿಧರ್ಮವು ವಿಶೇಷವಾಗಿ ಅವನ ಹೃದಯದಲ್ಲಿ

ಮಾರ್ಚಿ 27 ನೇ ತಾರೀಖಿನ ದಿವಸ ದೆಹಲಿಯ ಅಖಿಲಭಾರತ ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯವರು ಸಭೆ ಸೇರಿ, ಶ್ವೇತಪತ್ರವು ತೀರಾ ಅಸಮರ್ಪಕವಾಗಿರುವದೆಂದೂ, ಅದನ್ನು ಖಂಡಿಸಲು ಇಡೀ ಭರತಖಂಡದಲ್ಲೆಲ್ಲಾ ಏಪ್ರಿಲ್ 9ನೇ ತಾರೀಖಿನ ದಿವಸ ಸಭೆಗಳನ್ನು ಸೇರಿಸಬೇಕೆಂದೂ, ತೀರ್ಮಾನಮಾಡಿರುತ್ತಾರೆ.

ಫರುಕ್ಕಾಬಾದಿನ ಡಫರಿನ್ ಆಸ್ಪತ್ರೆಯಲ್ಲಿ ಒಬ್ಬ ಗರ್ಭಿಣಿಯು ಹೆರಿಗೆಗಾಗಿ ಬಂದಳು. ಕ್ರಮಪ್ರಕಾರವಾಗಿ ಹೆರಿಗೆಯಾಗದೆ ಡಾಕ್ಟರು ಆಪರೇಷನ್ ಮಾಡಿ ಶಿಶುವನ್ನು ಆಚೆಗೆ ತೆಗೆಯುವಲ್ಲಿ ಶಿಶುವಿನ ಕೊರಳ ಸುತ್ತಲೂ ಒಂದು ಸಜೀವವಾದ ಸರ್ಪವು ಸುತ್ತಿಕೊಂಡಿದ್ದಿತು. ಸ್ವಲ್ಪ ಹೊತ್ತಿನ ನಂತರ ಶಿಶು, ತಾಯಿ ಮತ್ತು ಸರ್ಪ ಮೂವರೂ ಮೃತಪಟ್ಟರು.

ಜರ್ಮನಿಯ ರಾಜಕೀಯ ಗಲಭೆಗಳ ಸಂಬಂಧದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ ಭಾರತೀಯನು ಮಾರ್ಚಿ 25 ನೆಯ ತಾರೀಖಿನ ದಿವಸ ಬಿಡುಗಡೆ ಮಾಡಲ್ಪಟ್ಟನು. ಜರ್ಮನ್ ಸರಕಾರದವರು ದಸ್ತಗಿರಿಯಾಗಿದ್ದಾಗ ಅವನ ವಿಷಯದಲ್ಲಿ ಯೋಗ್ಯರೀತಿಯಲ್ಲಿ ವರ್ತಿಸಿದರೆಂದೂ, ಮಾರ್ಚಿ 31 ನೇ ತಾರೀಖಿನೊಳಗಾಗಿ ಜರ್ಮನಿಯನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆಮಾಡಿದರೆಂದೂ ತಿಳಿದುಬಂದಿದೆ.

ಲಂಡನ್ನಿನಲ್ಲಿ ಹಿಂದೂಸ್ಥಾನಕ್ಕೆ ಟಪಾಲುಗಳನ್ನು ತರುತ್ತಿದ್ದ ಏರೋಪ್ಲೇನಿಗೆ ಬೆಲ್ಜಿಯಮ್ಮಿನ ಸಮೀಪದಲ್ಲಿ ಅಕಸ್ಮಾತ್ ಅಪಾಯವುಂಟಾಗಿ ಏರೋಪ್ಲೇನು ಮುರಿದುಬಿತ್ತು. ಇದರಿಂದ 8 ಜನ ಬ್ರಿಟಿಷರು 3 ಜನ ಜರ್ಮನ್ನರು ಒಬ್ಬ ಬೆಲ್ಜಿಯನ್ ಮತ್ತು 4 ಜನ ಸ್ತ್ರೀಯರು ಮೃತಪಟ್ಟರು. ಏರೋಪ್ಲೇನು ನೆಲಕ್ಕೆ ಬಿದ್ದಾಗ ಹೊಲದಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಹುಡುಗರಿಗೆ ಅಪಾಯವುಂಟಾಗಿ ಅವರು ಕೂಡಲೇ ಮೃತಪಟ್ಟರು. ಟಪ್ಪಾಲು ಚೀಲಗಳಿಗೆ ಮಾತ್ರ ಯಾವ ಅಪಾಯವೂ ಉಂಟಾಗಲಿಲ್ಲ.

ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ ದಸ್ತಗಿರಿಯಾಗುವ ಸ್ವಯಂಸೇವಕರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುತ್ತಿತ್ತು. ಆದರೆ ಈಚೆಗೆ ಕಲ್ಕತ್ತೆಯಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿದ್ದ ರಾಷ್ಟ್ರೀಯ ಮಹಾಸಭೆಯ ಸಂಬಂಧದಲ್ಲಿ ದಸ್ತಗಿರಿಯಾಗುವವರ ಸಂಖ್ಯೆಯು ಇದ್ದಕ್ಕಿದ್ದಹಾಗೆ ಹೆಚ್ಚಿ ಹೋಗಿರುವದು. ಮಾರ್ಚಿ 27 ನೆಯ ತಾರೀಖಿನ ದಿವಸ ಸ್ವಾಗತಸಮಿತಿಯ ಪ್ರಥಮ ದ್ವಿತೀಯ ಅಧ್ಯಕ್ಷರೂ, ಆಲ್‌ಇಂಡಿಯಾ ಸ್ಪಿನ್ನರ್ಸ್ ಅಸೋಸಿಯೇಷನ್ನಿನಲ್ಲಿ 3 ಜನರೂ, ಶ್ರೀ ಸುರೇಶಬಾನರ್ಜಿಯವರ ಗೃಹದಲ್ಲಿ 11 ಜನ ಸ್ವಯಂಸೇವಕರೂ, ಪ್ರತಾಪಗಡ ಮತ್ತು ಖುಲನಾದಿಂದ ಬಂದ 10 ಜನರೂ ದಸ್ತಗಿರಿ ಮಾಡಲ್ಪಟ್ಟರು. ಇದೇ ದಿವಸ ಲಾಹೋರಿನಲ್ಲಿ ಕಲ್ಕತ್ತಾ ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದು ಹೇಳಿಕೊಂಡು ರೈಲ್ವೇ ಸ್ಟೇಷನ್ನಿಗೆ ಮೆರವಣಿಗೆಮಾಡಿಕೊಂಡು ಹೋಗುತ್ತಿದ್ದ 14 ಜನರು ದಸ್ತಗಿರಿಮಾಡಲ್ಪಟ್ಟರು. 29 ನೆಯ ತಾರೀಖಿನ ದಿವಸ ಲಾಹೋರಿನ ಸರ್ವೆಂಟ್ಸ್ ಆಫ್ ಇಂಡಿಯಾ ಪೀಪಲ್ಸ್ ಸೊಸೈಟಿಯ ಕಾರ್ಯದರ್ಶಿಗಳಾದ ಲಾಲಾಜಗನ್ನಾಥರು ಪೋಲೀಸರ ಅಜ್ಞೆಯನ್ನು ಮೀರಿ ಕಲ್ಕತ್ತೆಗೆ ಪ್ರಯಾಣಮಾಡುವಾಗ್ಗೆ ದಸ್ತಗಿರಿಮಾಡಲ್ಪಟ್ಟರು. 30 ನೆಯ ತಾರೀಖಿನ ದಿವಸ ಪೂರ್ಣಿಯಾದಿಂದ ಕಾಲ್ನಡಿಗೆಯಲ್ಲಿಯೇ ಕಲ್ಕತ್ತೆಗೆ ಬಂದ 17 ಪ್ರತಿನಿಧಿಗಳೂ, ಸಂಯುಕ್ತಪ್ರಾಂತಗಳಿಂದ ಬಂದ 96 ಪ್ರತಿನಿಧಿಗಳೂ, ಆನಂದಬಜಾರು ಪತ್ರಿಕಾ ಸಂಪಾದಕರೂ ದಸ್ತಗಿರಿಮಾಡಲ್ಪಟ್ಟರು. ರಾಷ್ಟ್ರೀಯ ಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ|| ಮಾಧವ ಶ್ರೀಧರ ಅಣೆಯವರು ಖರಗಪುರದಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಕಾಂಗ್ರೆಸ್ ಸ್ವಾಗತಸಮಿತಿಯ ತೃತೀಯ ಅಧ್ಯಕ್ಷರಾದ ಶ್ರೀ|| ಸುರೇಶಚಂದ್ರಮಜುಂದಾರರೂ, ಶ್ರೀ|| ಎ. ಪಿ. ಗುಪ್ತರವರೂ, ಅಸನ್‌ಸೋಲಿನಲ್ಲಿ 16 ಜನ ಪ್ರತಿನಿಧಿಗಳೂ, ಶೀಲ್ದಾ ಮತ್ತು ಹೌರಾದಲ್ಲಿ 19 ಜನ ಪ್ರತಿನಿಧಿಗಳು ಡಾ|| ಆಲಂರವರೂ, ದೇಶಬಂಧು ಚಿತ್ತರಂಜನದಾಸರವರ ಸಹೋದರಿಯಾದ ಶ್ರೀಮತಿ ಊರ್ಮಿಳಾದೇವಿಯರೂ 'ಲಿಬರ್ಟಿ' ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀನಾರಾಯಣದತ್ತರವರೂ ಡಾ|| ಚಾರುಚಂದ್ರಬ್ಯಾನರ್ಜಿಯವರೂ ಕಲ್ಕತ್ತಾ ಕೌಂಸಭೆಯ ಸದಸ್ಯರಾದ ಮಿಸ್ ಜ್ಯೋತಿರ್ಮಯಿಗಂಗೂಳಿಯವರೂ 'ನಾಯಕ' ಪತ್ರಿಕೆಯ ಸಂಪಾದಕರಾದ ಡಾಕ್ಟರ್ ಪ್ರತಾಪಚಂದ್ರ ಗುಹಾರವರೂ, ಶ್ರೀ|| ದೇವದಾಸ ಗಾಂಧಿಯವರೂ ದಸ್ತಗಿರಿ ಮಾಡಲ್ಪಟ್ಟರು. ಕೇರಳಾದಿಂದ ಬಂದ ನಾಲ್ಕುಜನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರೂ ಇತರ 7 ಜನ ಪ್ರತಿನಿಧಿಗಳೂ ಕಲ್ಕತ್ತೆಯಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಹೌರಾ ಸ್ಟೇಷನ್ನಿನಲ್ಲಿ ಬೇರೆ ಬೇರೆ ಪ್ರಾಂತಗಳಿಂದ ಬಂದ 25 ಜನ ಪ್ರತಿನಿಧಿಗಳು ದಸ್ತಗಿರಿ ಮಾಡಲ್ಪಟ್ಟರು. ಸ್ವಾಮಿವಿವೇಕಾನಂದರ ಸಹೋದರರಾದ ಡಾಕ್ಟರ್ ಭೂಪೇಂದ್ರನಾಥ ದತ್ತರವರೂ ಹಾಗೂ 23 ಜನ ಪ್ರತಿನಿಧಿಗಳು ದಸ್ತಗಿರಿ ಮಾಡಲ್ಪಟ್ಟರು. ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವದಕ್ಕೋಸ್ಕರ ಬೆನಾರಸ್ಸಿನಿಂದ 30 ನೇ ತಾರೀಖಿನ ಸಾಯಂಕಾಲ ಕಲ್ಕತ್ತೆಗೆ ಪ್ರಯಾಣ ಬೆಳೆಸಿದ ಪಂಡಿತ ಮದನಮೋಹನ ಮಾಳವೀಯರವರು 31 ನೇ ತಾರೀಖಿನ ಬೆಳಗಿನ ಝಾವ 4 ಘಂಟೆಯ ಸಮಯದಲ್ಲಿ ಅಸನ್‌ಸೋಲ್ ಸ್ಟೇಷನ್ನಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಇವರ ಜೊತೆಯಲ್ಲಿ ಇವರ ಮಗ ಪಂ|| ಗೋವಿಂದಮಾಳವೀಯರೂ ಮೊಮ್ಮಗನಾದ ಪಂ|| ಶ್ರೀಧರಮಾಳವೀಯರೂ ದಸ್ತಗಿರಿಮಾಡಲ್ಪಟ್ಟರು. ಡಾಕ್ಟರ್ ಸಯ್ಯದ್‌ಮಹಮುದ್‌ರವರು ಕಿಯೋಲ್ ಸ್ಟೇಷನ್ನಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಇದೇರೀತಿ ಲೆಕ್ಕವಿಲ್ಲದಷ್ಟು ಪ್ರತಿನಿಧಿಗಳು ದಸ್ತಗಿರಿಯಾಗುತ್ತಿರುವರು. ಅಲಹಾಬಾದ್ ಮೊದಲಾದ ಮುಖ್ಯಮುಖ್ಯ ಸ್ಥಳಗಳಲ್ಲಿ ಕಲ್ಕತ್ತಾ ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದು ತೋರುವವರಾರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರವರು ಅಪ್ಪಣೆಮಾಡಿರುತ್ತಾರೆ.

ನಿದ್ರೆಯ ವಿಚಿತ್ರತೆ.

ಸ್ತ್ರೀಯರು ಪುರುಷರಿಗಿಂತಲೂ ಚೆನ್ನಾಗಿ ನಿದ್ರೆ ಮಾಡುವರು. ಪ್ರಾಯಿಕವಾಗಿ ಪ್ರತಿಯೊಬ್ಬ ಮನುಷ್ಯನೂ ಒಂದು ರಾತ್ರಿಯಲ್ಲಿ 35 ಸಾರೆ ಎಚ್ಚರವನ್ನು ಹೊಂದುವನು. ಆದರೆ ನಿದ್ರೆಯಿಂದ ಸಂಪೂರ್ಣವಾಗಿ ಎಚ್ಚತ್ತನಂತರ ಅದು ಜ್ಞಾಪಕದಲ್ಲಿರುವದಿಲ್ಲ!

ಗಾಢವಾಗಿ ನಿದ್ರೆಮಾಡುವವರು 25 ನಿಮಿಷಗಳಿಗೆ ಒಂದಾವರ್ತಿ ಹೊರಳುವರು. ಸಾಮಾನ್ಯವಾಗಿ ನಿದ್ರೆ ಮಾಡುವವರು 15 ನಿಮಿಷಗಳಿಗೆ ಒಂದಾವರ್ತಿ ಹೊರಳುವರು. ಸೂಕ್ಷ್ಮವಾಗಿ ನಿದ್ರೆಮಾಡುವವರು 8 ನಿಮಿಷಗಳಿಗೆ ಒಂದಾವರ್ತಿ ಹೊರಳುವರು!

ನೀಲಿಬಣ್ಣವು ಮನುಷ್ಯನ ಮನಸ್ಸಿನಲ್ಲಿ ನಿದ್ರೆ ಮಾಡಬೇಕೆಂಬ ಅಪೇಕ್ಷೆಯನ್ನು ಹುಟ್ಟಿಸುವದಂತೆ! ಆದುದರಿಂದಲೇ ನೀಲಿಬಣ್ಣವನ್ನು ಪಯೋಗಿಸುವ ಚಿತ್ರಗಾರರು ಅನೇಕವೇಳೆಗಳಲ್ಲಿ ಚಿತ್ರಿಸುತ್ತಿದ್ದ ಹಾಗೆಯೇ ನಿದ್ರೆಮಾಡುವರಂತೆ!

ಜೋಹನಸ್‌ಬರ್ಗ್‌ನಗರದ ಒಬ್ಬ ತರುಣಿಯು 1910 ನೆಯ ಇಸವಿಯಲ್ಲಿ ತನ್ನ ಪ್ರೇಮಪಾತ್ರನು ಕೊಲ್ಲಲ್ಪಟ್ಟನೆಂಬ ವ್ಯಸನದಿಂದ ಮಲಗಿದವಳು 1928 ನೆಯ ಇಸವಿ ಆಗಸ್ಟ್ 19 ನೆಯ ತಾರೀಖಿನ ದಿವಸ ಎಚ್ಚತ್ತಳಂತೆ! ವಿಸ್ಕಾನ್ಸಿನ್‌ನಗರದ ಮಿಸೆಸ್ ಶಾರ್ಲೋಟ್ ಎಂಬಾಕೆಯು 17 ತಿಂಗಳುಗಳವರೆಗೆ ಮಲಗಿದ್ದಳಂತೆ! ಈ ಅವಧಿಯಲ್ಲಿ ಇವಳಿಗೆ ಮೂಗಿನಮುಖಾಂತರ ಆಹಾರವನ್ನು ಕೊಡುತ್ತಿದ್ದರಂತೆ!

ಸ್ವೀಕಾರ

ಅರಸೀಕೆರೆ ತಾಲೂಕು ದಿಬ್ಬೂರು ಸ್ಕೂಲ್‌ಮಾಸ್ಟರಾದ ಮ||ರಾ|| ಎ. ಚನ್ನಪ್ಪನವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೀರಶೈವ ಸಾಮಾಜಿಕ ಸುಧಾರಣೆಗಳು.

ಲೇಖಕ—ವೇ|| ಪಂಚಾಕ್ಷರಶಾಸ್ತ್ರೀ ಹಿರೇಮಠ ಶಿರೋಳ.

ವೀರಶೈವ ಸಮಾಜದಲ್ಲಿ ಅಂಟಿಕೊಂಡಿರುವ ಅವಿವೇಕತನದ ಆಚರಣೆಗಳನ್ನು ನಿವಾರಣೆ ಮಾಡುವದೇ ಪ್ರಸ್ತುತ ಲೇಖದ ಉದ್ದೇಶವಾಗಿದೆ. ವೀರಶೈವ ಸದ್ಧರ್ಮದ ಪ್ರಭೆಯನ್ನು ಸರ್ವತ್ರ ಪ್ರಚಾರಮಾಡುತ್ತಲಿದ್ದ ಪಂಚಾಚಾರ್ಯಪ್ರಭಾ ಪತ್ರಿಕಾಮೂಲಕ ಈ ಕಾರ್ಯವು ಸುಲಭವಾಗಿ ಸಾಧಿಸುವದು. ನಾವು ಉತ್ತರಕರ್ನಾಟಕ ವೀರಶೈವರಲ್ಲಿ ನಡೆಯುತ್ತಲಿದ್ದ ಅಂತ್ಯೇಷ್ಟಿ ವಿಧಿಯ ಈಗಿನ ತಪ್ಪು ತೊಡಕಿನ ರೀತಿ ನಡತೆಗಳನ್ನು ವಿಶದವಾಗಿ ತಾ|| ೧೩-೩-೩೩ ನೇ ಸಂಚಿಕೆಯಲ್ಲಿ ಕೊಟ್ಟಿದ್ದು ವಾಚಕರ ಸ್ಮೃತಿಪಥದಲ್ಲಿರಬಹುದು. ಆ ಚಿಕ್ಕ ಲೇಖದ ಸಿಂಹನಾದವನ್ನು ಯಾರೂ ಲಕ್ಷಿಸದಿದ್ದರೂ ಇಂದಿಲ್ಲ ನಾಳೆಯಾದರೂ ಈ ದುಷ್ಪದ್ಧತಿಯನ್ನು ದೂರಮಾಡುವರೆಂಬ ಹಂಬಲದಿಂದ ಬರೆದಿರುತ್ತೇನೆ. ಮೃತಸಮಯದಲ್ಲಿ ಆಗುತ್ತಿರುವ ಅನ್ಯಾಯದ ಪರಮಾವಧಿಯನ್ನು ಸಮಾಜದ ಪ್ರಮುಖರು ಸ್ವಲ್ಪ ಕಣ್ತೆರೆದು ನೋಡಲೆಂದು ಅತ್ಯಾಗ್ರಹದಿಂದ ತಿಳುಹಿಸುತ್ತೇನೆ. ಹಾಗೆಯೇ ಇನ್ನೊಂದು ವಿಷಯದ ಕಡೆಗೆ ಮಹಾಜನಗಳು ಲಕ್ಷ್ಯವಿಡಬೇಕು. ಅದೇನೆಂದರೆ—ವೀರಶೈವರು ಮತ್ತೊಬ್ಬರ ಮನೆಗೆ ಊಟಕ್ಕೆ ಹೋಗಬೇಕಾದರೆ ತಂಬಿಗೆ ಥಾಲಿಯನ್ನು ತೆಗೆದುಕೊಂಡು ಹೋಗದಿರುವದು ಅತ್ಯಂತ ಅನಾಚಾರವನ್ನು ತಿಳಿಸುವುದು. ಸಾಮಾನ್ಯವಾಗಿ ಊಟದ ಸಮಾರಂಭದಲ್ಲಿ ಇದರ ಪ್ರಯೋಜನವು ತಿಳಿಯದಿದ್ದರೂ ಮಹಾಸಮಾರಂಭಗಳಲ್ಲಿ ಚೆನ್ನಾಗಿ ಗೊತ್ತಾಗುವದು. ಸಾವಿರಾರು ಜನಗಳ ಭೋಜನ ಸಮಯದಲ್ಲಿ ಆಮಂತ್ರಣ ಕೊಟ್ಟ ಯಜಮಾನನು ಪ್ರತಿಯೊಬ್ಬರಿಗೆ ತಂಬಿಗೆ ಥಾಲಿಗಳನ್ನು ಕೊಡಲು ಸಾಧ್ಯವಿಲ್ಲ. ಇದ್ದ ಹತ್ತಿಪ್ಪತ್ತು ತಂಬಿಗೆಗಳೇ ಸಾವಿರಾರು ಜನರಿಗೆ ಭೆಟ್ಟಿಯಾಗಬೇಕು. ಒಬ್ಬರು ಕುಡಿದುಳಿದ ನೀರೇ ಸರ್ವರೂ ಕುಡಿಯಬೇಕಾಗುವದು. ಭೋಜ್ಯ ಪದಾರ್ಥಗಳನ್ನು ಶಿವಾರ್ಪಣ ಮಾಡಲು ಅರ್ಘ್ಯವನ್ನು ಬಿಡುವ ವಿಧಿಯಂತೂ ಅಗ್ಗ ಅರಣ್ಯಪಾಲಾಗಿರುವದು. ಧಾರ್ಮಿಕ ವಿಧಿಯ ಮಾತಂತಿರಲಿ. ಆರೋಗ್ಯವಿಚಾರಾಂಶದಿಂದಂತೂ ಅತ್ಯಂತ ಭಯಾನಕವು ಕಾಣುವದು. ಊಟಮಾಡುವ ಸಮಯದಲ್ಲಿ ನೀರುಬೇಕಾದರೆ ತಕ್ಷಣವೇ ದೊರೆಯಲಾರದು. ಊಟಮಾಡಿದನಂತರವಾದರೂ ಬೇಗನೆ ಸಿಗದೆ ಕೈಒಣಗಿಸಿಕೊಂಡು ಬಾಯಿಕುಂಟ ಮುಸುರಿಯನ್ನು ಮಾಡಿಕೊಂಡು ಕೀಲಗಿಟ್ಟಿನೊಳಗಿನ ನೀರನ್ನು ಕುಡಿದ ಎತ್ತು ಎಮ್ಮೆಯಂತೆ ಟಕಮಕ ನೋಡುತ್ತ 'ನೀರು ನೀರು' ಎಂದು ಹಂಬಲಿಸುವ ಪರಿತಾಪದ ವರ್ಣನೆಯನ್ನು ಎಷ್ಟುಮಾಡಿದರೂ ತೀರದು. ತನ್ನ ಮನೆಯಿಂದ ಎರಡನೆಯವರ ಮನೆಗೆ ಊಟಕ್ಕೆ ಹೋಗಬೇಕಾದರೆ ಮಡಿಬಟ್ಟೆಯನ್ನುಟ್ಟುಕೊಂಡು ಕೈಯಲ್ಲಿ ತಂಬಿಗೆ (ಥಾಲಿಯನ್ನು) ತೆಗೆದುಕೊಂಡು ಹೋಗುವುದು ಭೂಷಣವೂ, ಅನುಕೂಲವೂ ಆಗುವದು. ಈಗ ನಮ್ಮ ಉತ್ತರಕರ್ನಾಟಕದ ವೀರಶೈವ ಮಹಾನುಭಾವರು ಒಬ್ಬರಮನೆಗೊಬ್ಬರು ವಿಶೇಷಕಾಲದಲ್ಲಿ ಊಟಕ್ಕೆ ಹೋಗುತ್ತಿರುವ ಸಡಗರವನ್ನು ನೋಡಿದರೆ ಬಹು ವ್ಯಸನವಾಗುವದು. ಚರ್ಮದ ರಳ್ತಿಗಳನ್ನು ಮೆಟ್ಟಿಕೊಂಡು ಕೋಟು ರುಮಾಲುಗಳಿಂದ ಭೂಷಿತರಾಗಿ ಕೈಯಲ್ಲಿ ಚುಟ್ಟಕ್ಕೆ ಬೆಂಕಿಯನ್ನು ಹಚ್ಚಿ ಸೇದುತ್ತ ಅಭಿನವ ಆಂಗ್ಲ ಮ್ಲೇಂಛರಂತೆ ಅಲೆದಾಡುತ್ತ ಹೋಗುತ್ತಿರುವರು. ಊಟದವರ ಮನೆಗೆ ಹೋದಕೂಡಲೇ ಇವರು ದುಶ್ಚಟಗಳ ಸೇವೆಯನ್ನು (ಚುಟ್ಟಾ ಸಿಗರೇಟ ಸೇದುವದು ಎಲಿ ಅಡಿಕೆತಿಂದುಗುಳುವದು) ಮಾಡಿ ಜುಲುಮೆಯ ಸ್ವಭಾವದಿಂದ ಉಸುರ್ಗಳೆದು ಊಟಕ್ಕೆ ಸ್ವಲ್ಪ ತೊಡಕಾಗುವ ಕೋಟನ್ನು ಮಾತ್ರ ಕಳೆದು (ಬಹಳ ಸುಧಾರಿಸಿದ ಜನಗಳು ಒಳಅಂಗಿಯನ್ನು ತೊಟ್ಟುಕೊಂಡು, ಹಾಗೆಯೇ ಊಟಕ್ಕೆ ಕೂಡ್ರುವರು) ಧರ್ಮಜ್ಞಾನಶೂನ್ಯತೆಯ ಕತ್ತಲೆಯಲ್ಲಿರುವ ನಮ್ಮ ಸಮಾಜದಲ್ಲಿ ಮಹಾಸಮಾರಂಭಗಳ ಊಟದ ಕಾಲದಲ್ಲಿ ಬಹಳ ಅನಾಚಾರಗಳೂ ಅನಾರೋಗ್ಯಪ್ರದರ್ಶಕವೂ ಆದ ನೋಟಗಳನ್ನು ಕಣ್ಣಾರೆ ಕಾಣುತ್ತಿರುವ ಈ ಪದ್ಧತಿಯನ್ನು ತಪ್ಪಿಸಿ ಪ್ರತಿಯೊಬ್ಬರೂ ಊಟಕ್ಕೆ ಬರಬೇಕಾದರೆ ತಂಬಿಗೆ ಥಾಲಿಯನ್ನು ಅವಶ್ಯತರಬೇಕೆಂಬ ಕಟ್ಟಳೆಯನ್ನು ಮಾಡುವದು ಹಿತಕರವಾದದ್ದು. ಇದಕ್ಕಿಂತಲೂ ಇನ್ನೊಂದು ಮಹತ್ವದ ವಿಷಯವೇನೆಂದರೆ ಊಟಕ್ಕೆ ಹೇಳಿಸಿಕೊಂಡವರೆಲ್ಲರೂ ನಿಯಮಿತಕಾಲಕ್ಕೆ ಯಾವತ್ತರೂ ಕೂಡಿಕೊಂಡು ಏಕಕಾಲದಲ್ಲಿ ಕುಳಿತುಕೊಂಡು ಊಟಮಾಡುವದಿಲ್ಲ. ಒಬ್ಬೊಬ್ಬರ ಮನೆಗೆ ಹತ್ತಿಪ್ಪತ್ತು ಸಾರೆ ಎಡತಾಕಿ ಕರೆಯಬೇಕಾಗುತ್ತದೆ. ಊಟಕ್ಕೆ ಹೇಳಿದ ಯಜಮಾನನು ಬಂದ ಬಂದವರನ್ನೆಲ್ಲ ಆಗಾಗಲೇ ಅವರನ್ನು ಊಟಮಾಡಿಸಿ ತಾನು ಉಣ್ಣದೆ ಆ ಅಣ್ಣನವರು ಬರತಕ್ಕವರಿದ್ದಾರೆ. ಅವರ ಕೂಡ ನಾನಿರಬೇಕಾಗುತ್ತದೆ. ಎಂದು ಹೇಳುತ್ತ ಸಂಜೆಯ ಮೂರು ತಾಸು ರಾತ್ರಿಯವರೆಗೆ ಮನೆಯಲ್ಲಿ ಹತ್ತಿಪ್ಪತ್ತು ಸಾರೆ ಪಂಕ್ತಿಗಳನ್ನು ಮಾಡುತ್ತಾನೆ. ಪ್ರತಿಸಾರೆ ಊಟಮಾಡಿಬಿಟ್ಟ ಮುಸರೆಯಮೇಲೆ ಸರ್ವರ ಊಟಮಾಡುತ್ತಿರುವ ಭಯಾನಕನೋಟದಿಂದ ಹೃದಯವು ನಡುಗಲಾರದೇ! ಗಂಡಸರೆಲ್ಲರ ಊಟವಾಗದ್ದರಿಂದ ಹೆಂಗಸರ ಊಟವು ಅಪರರಾತ್ರಿಗೆ ಬೀಳುವದು. ಒಮ್ಮೊಮ್ಮೆ ಮೂಡಲು ಹರಿಯುವ ಹೊತ್ತಿಗೆ ಊಟಮಾಡುತ್ತಿರುವದನ್ನು ನೋಡುತ್ತಿರುತ್ತೇವೆ. ಈ ಕಟ್ಟುಪದ್ಧತಿಗಳು ಬೇಕಾದಷ್ಟು ಅಟ್ಟಹಾಸಮಾಡುತ್ತಲಿದ್ದರೂ ಸಮಾಜಪ್ರಮುಖರು ಇತ್ತಕಡೆಗೆ ನೋಡದಿರುವದು ಹಿತವಲ್ಲ. ಊಟಕ್ಕೆ ಹೇಳುವದು ಮತ್ತು ಕರೆಯುವದು ಒಂದೇ ಸಾರೆ ಊಟಮಾಡುವದು ಒಂದೇ ಪಂಕ್ತಿಯಾಗಬೇಕು. ಆ ಪಂಕ್ತಿಗೆ ಬಾರದೆ ಹೋದರೆ ಪುನಃ ಊಟಕ್ಕೆ ನೀಡಲೇಬಾರದೆಂಬ ಸಾಮಾಜಿಕ ಕಟ್ಟು ಆಗಬೇಕು. ಇದರಿಂದ ಬಹಳ ಅನುಕೂಲವಾಗುತ್ತದೆ. ಪರಮತೀಯರಲ್ಲಿ ಈ ಊಟದ ಪದ್ಧತಿಯಾದರೂ ಚೆನ್ನಾಗಿರುತ್ತದೆ. ಅತ್ಯಂತ ಶ್ರೇಷ್ಠವಾದ ವೀರಶೈವ ಸಮಾಜದಲ್ಲಿ ಇಂಥ ಅನಾಚಾರಗಳು ಲೋಪವಾಗದ ವಿನಾ ಈ ಸಮಾಜವು ಸುಧಾರಿಸಲಾರದು. ಸಮಾಜಾಂತರ್ಗತವಾದ ಈ ಅವಿವೇಕತನವನ್ನು ಖಂಡಿತವಾಗಿ ಹೊರಗೆಡವಿದ್ದಕ್ಕೆ ಕೆಲವರು ಕುಪಿತರಾಗಬಹುದು. ಇದ್ದದ್ದನ್ನು ಬಯಲಿಗಿಟ್ಟು ಅದರ ಕುಂದುಕೊರತೆಯನ್ನು ದೂರಮಾಡಿಕೊಂಡು ಸಮಾಜ ಸುಧಾರಣೆಯಾಗಬೇಕೆಂಬ ಹಂಬಲದ ತವಕದಿಂದ ಈ ಲೇಖವನ್ನು ಬರೆದಿರುತ್ತೇವೆ. ಯಾವತ್ತರೂ ಇತ್ತಕಡೆಗೆ ಹೊರಳಿ ಸಮಾಜೋದ್ಧಾರದ ಈ ಕಾರ್ಯಗಳನ್ನು ಮಾಡಿ ಆ ಪ್ರಕಾರ ನಿರ್ಣಯಮಾಡಿ ಪ್ರಭಾಸಂಪಾದಕರ ಸನ್ನಿಧಿಗೆ ತಿಳುಹಿಸಬೇಕು.

ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನ.

ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನದಲ್ಲಿ ಶ್ರೀಜಗದ್ಗುರು ರೇಣುಕಶಿವಾಚಾರ್ಯರ ಜಯಂತಿ ದಿವಸದಲ್ಲಿ ಮಹಾರಥೋತ್ಸವವು ನಿರ್ವಿಘ್ನವಾಗಿ ನೆರವೇರಿತು. ತದಂಗಭೂತಗಳಾದ ಕಾರ್ಯಗಳೆಲ್ಲವೂ ಕ್ರಮೇಣ ಜರಗುತ್ತ ಫಾಲ್ಗುಣ ಬಹುಳ ೬ ಶುಕ್ರವಾರಕ್ಕೆ ನೆರವೇರಿದವು. ಶ್ರೀಮನ್ಮಹಾರಾಜರವರು ಶ್ರೀ ಮಠಕ್ಕೆ ಆಗಮಿಸಿದ್ದ ಕಾಲದಲ್ಲಿ ಆಗಮಿಸಿದ್ದ ಮಹಾಶಯರು ಶ್ರೀ ಸಂಸ್ಥಾನ ಮಠದ ಜೀರ್ಣೋದ್ಧಾರ ವಿಷಯಕವಾಗಿ ವಿನಿಮಯಮಾಡಿ ಮಠವನ್ನು ಶಿಲಾಮಯವನ್ನಾಗಿ ಮಾಡಬೇಕೆಂದು ನಿರ್ಧರಿಸಿ ತದನುಸಾರ ಶಿಲಾಮಂಟಪಗಳನ್ನು ಕಟ್ಟಿಸಲು ವಾಗ್ದಾನಮಾಡಿದ್ದಂತೆ ಕೆಲವರು ಹಣವನ್ನು ಪಾವತಿಮಾಡಿದ್ದಾರೆ. ಉಳಿದವರು ಮಾಡುವವರಲ್ಲಿಯೂ ಇದ್ದಾರೆ. ಈ ವರ್ಷದ ಉತ್ಸವದ ಸಮಯದಲ್ಲಿಯೂ ಉತ್ಸವಕ್ಕೆ ಬಂದಿದ್ದ ಶ್ರೀಯುತ ಆಲ್ದೂರು ಕಾಫೀಪ್ಲಾಂಟರ್ ಯಜಮಾನ ಪುಟ್ಟಣ್ಣಶೆಟ್ಟರೂ ಕಾಫೀಪ್ಲಾಂಟರ್ ಶ್ರೀಯುತ ಚಿಕ್ಕಮಗಳೂರು ಕೋಟೆಸಿದ್ಧಲಿಂಗಪ್ಪಶೆಟ್ಟರೂ ಶ್ರೀಯುತ ಆಲ್ದೂರು ಕಾಫೀಪ್ಲಾಂಟರ್ ಹಳೇಬೀಡು ಬಸವಪ್ಪಶೆಟ್ಟರು ಶ್ರೀಯುತ ದಾವಣಗೆರೆ ಬೀರೂರು ಕಲ್ಲಪ್ಪಶೆಟ್ಟರು ಶ್ರೀಯುತ ಕಾಫೀಪ್ಲಾಂಟರ್ ಆಲ್ದೂರ್ ಬಿ. ಪಿ. ಮಲ್ಲಪ್ಪಶೆಟ್ಟರು ಶ್ರೀಯುತ ಎಂ. ಸಿ. ಇಂಗ್ಲೀಷ ಸ್ಕೂಲ್‌ಹೆಡ್‌ಮಾಸ್ಟರ್ ಚಂದ್ರಶೇಖರಪ್ಪನವರು ಮೂಡಿಗೆರೆ ಶ್ರೀಯುತ ಎಂ. ಸಿ. ಅಸಿಸ್ಟೆಂಟ್ ಸರ್ಜನ್ ನಂಜಪ್ಪನವರು ಮೂಡಿಗೆರೆ ಶ್ರೀಯುತ ಹುಮಕೂರು ಸಾಹುಕಾರ್ ಭಾವಿಕಟ್ಟಿ ಸದಾಶಿವಪ್ಪನವರು ಮುಂತಾದ ಮಹಾಶಯರು ಶ್ರೀ ಮಹಾಜಗದ್ಗುರುಗಳವರ ಸನ್ನಿಧಾನದಲ್ಲಿ ಸಭೆಗೂಡಿ ಚರ್ಚಿಸಿ ಈಗಿರುವ ಶ್ರೀ|| ಸಂ|| ಮಠವು ಸುಂದರವಾದ ಮತ್ತು ಭದ್ರವಾದ ಕಳಶದಿಯುಳ್ಳದ್ದಾಗಿರುವದರಿಂದ ಇದನ್ನು ತೆಗೆಯಕೂಡದೆಂತಲೂ ಮೇಲಿನ ಭಾಗವನ್ನು ಸರಿಪಡಿಸಬೇಕೆಂತಲೂ ಈ ಮಠಕ್ಕಿಂತಲೂ ಹಿಂದೆ ಇದ್ದ ಪ್ರಾಚೀನ ಮಠದ ಜಾಗದಲ್ಲಿ ನೂತನವಾಗಿ ಶಿಲಾಮಠವನ್ನು ಮಾಡಬೇಕೆಂತಲೂ ಅಲ್ಲಿ ನೀರಿನಕೊರತೆ ಇರುವದರಿಂದ ಆ ಭಾಗದಲ್ಲಿ ನೀರು ಬರುವದಕ್ಕಿರುವ ಕಾಲುವೆಯನ್ನು ಸರಿಯಾಗಿ ಕಟ್ಟಿಸಬೇಕೆಂತಲೂ ಬಹುಮತವಾಗಿ ನಿರ್ಣಯಿಸಲ್ಪಟ್ಟಿತು. ಅಖಿಲವೀರಶೈವರೂ ಶ್ರೀಜಗದ್ಗುರು ಮಹಾಪೀಠದ ಜೀರ್ಣೋದ್ಧಾರಕ್ಕೆ ಮುಂದುವರಿದು ತಮ್ಮ ವಂಶದ ಕೀರ್ತಿ ಪ್ರತಿಷ್ಠೆಗಳನ್ನು ಸ್ಥಿರಗೊಳಿಸಬೇಕೆಂದು ಕೋರುತ್ತೇನೆ.

ಶ್ರೀ ಜಗದ್ಗುರು ಮಹಾಸಂಸ್ಥಾನ
ಏಜಂಟ.

ಶ್ರೀಗುರು ದತ್ತಾತ್ರಯ ಬಾಬಾಬುದರ್ಸ್ವಾಮಿ ಪೀಠದ ಘೋಷಾಪಾದ್ರಿಯವರ ಆಗಮನ.

ಘೋಷಾಪಾದ್ರಿಯವರು ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ ಮಠಕ್ಕೆ ಅವಲೋಕನಕಾಂಕ್ಷೆಯಿಂದ ತಾ|| ೨೧-೩-೩೩ ಮಂಗಳವಾರ ಸಾಯಂಕಾಲ ಐದು ಘಂಟೆಗೆ ಆಗಮಿಸಿದರು. ಜೊತೆಯಲ್ಲಿ ಬಾಳೆಹೊನ್ನೂರು ಸಾಹುಕಾರ್ ಸಾಹೇಬರೂ ಮತ್ತು ಆಲ್ದೂರು ಕಾಫಿಪ್ಲಾಂಟರ್ ಸಾಹೇಬರು ಮೊದಲಾದ ಅನೇಕ ಮಹಮ್ಮದೀಯ ಶ್ರೀಮಂತರೂ ಆಗಮಿಸಿದ್ದರು. ಶ್ರೀ ಜಗದ್ಗುರುಗಳವರ ಮುಕ್ಕಾಂ ಮಠದಲ್ಲಿಯೇ ಇತ್ತು. ಸದರಿಯವರು ಬರುವದು ಮೊದಲೇ ಸನ್ನಿಧಾನಕ್ಕೆ ಅರಿಕೆಯಾಗಿದ್ದುದರಿಂದ ತಕ್ಕ ವ್ಯವಸ್ಥೆಯೂ ಇಡಲ್ಪಟ್ಟಿತ್ತು. ಶ್ರೀ ಘೋಷಾಪಾದ್ರಿಯವರು ಬಂದಕೂಡಲೆ ಮೊದಲು ಸ್ವಾಮಿಯ ಆಲಯಕ್ಕೆ ಬಂದು ಮಂಗಲವನ್ನು ಮಾಡಿಸಿ ಪವಿತ್ರಸ್ಥಾನಗಳೆಲ್ಲವನ್ನೂ ಸಂದರ್ಶಿಸುತ್ತ ಅತಿ ಪ್ರಾಚೀನವಾದ ಮಹಾಪೀಠದ ಸಂದರ್ಶನದಿಂದುಂಟಾದ ಆನಂದವನ್ನು ವ್ಯಕ್ತಮಾಡುತ್ತ ದರ್ಬಾರ್ ಹಾಲಿನಲ್ಲಿ ಶ್ರೀ ಜಗದ್ಗುರುಗಳವರೊಡನೆ ಸ್ವಲ್ಪ ಹೊತ್ತು ಸಂಭಾಷಣೆಯನ್ನು ಮಾಡಿ ಪ್ರೇಮವನ್ನು ವ್ಯಕ್ತಗೊಳಿಸಿ ಅಭೂತಪೂರ್ವವಾದ ಆನಂದದಿಂದ ಪ್ರಯಾಣಮಾಡಿದರು. ಈ ಅನ್ಯೋನ್ಯ ಪ್ರೇಮ

ದೇಶದ ವೃತ್ತಾಂತಗಳು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಂ ಪ್ರಾಂತದಿಂದ ಬಾರ್ಸಿಗೆ ಪ್ರಯಾಣಮಾಡಿ ಸ ಕಾಶೀಕ್ಷೇತ್ರಕ್ಕೆ ಪ್ರಯಾಣಮಾಡಿರುತ್ತಾರೆ.

ಉದ್ಯೋಗಿಗಳಾದ ಇಂಜನಿಯರಿಂಗ್ ಗ್ರ್ಯಾಜು 'ಗಳಿಗೆ ಡಿಪಾಜಿಟ್ ಇಲ್ಲದೆ ಸಣ್ಣಸಣ್ಣ ಕಂಟ್ರಾ ನ್ನು ಕೊಡಬಹುದೆಂದು ಸರ್ಕಾರದವರು ಮಾಡಿರುತ್ತಾರೆ.

ರ್ಚಿ 30 ನೇ ತಾರೀಖಿನ ಬೆಳಿಗ್ಗೆ ಶ್ರೀಮದ್ಯು ರವರು ಇಂಗ್ಲೆಂಡಿಗೆ ಪ್ರಯಾಣಮಾಡುವುದ ಬೆಂಗಳೂರಿನಿಂದ ಗುಂತಕಲ್ ಮಾರ್ಗವಾಗಿ ಯಿಗೆ ಪ್ರಯಾಣ ಬೆಳಸಿದರು.

ಶ್ರೀ ಪಟ್ಯಾಲ್ 31 ನೆಯ ತಾರೀಖಿನ ರಾತ್ರಿ ಬೆಂಗ ನಗರದ ಮೆಜೆಸ್ಟಿಕ್ ಸಿನಿಮಾಮಂದಿರದಲ್ಲಿ ೧೦|| ಬಂದ ೧೧|| ಗಂಟೆಯವರೆವಿಗೂ ಬಹಳ ಮಾರಾ ನಾಯಿತೆಂದೂ. ಇದರಿಂದ ಅನೇಕ ಜನರಿಗೆ ಗಾಯಗಳಾಗಿರುವದೆಂದೂ ತಿಳಿದುಬಂದಿದೆ.

ಮಾರ್ಚಿ 28 ನೇ ತಾರೀಖಿನ ದಿವಸ ಹೈದ ಪ್ರಥಮರಾಜಕುಮಾರರಾದ ಪ್ರಿನ್ಸ್ ರವರು ಕುಟುಂಬ ಸಮೇತರಾಗಿ ಬೆಂಗಳೂರಿಗೆ ಐಡಿಸಿ 'ಕುಮಾರಪಾರ್ಕ್' ನಲ್ಲಿ ಇಳಿದುಕೊಂ . ಬೇಸಿಗೆ ಕಾಲವನ್ನು ಇವರು ಬೆಂಗಳೂರಿ ಕಳೆಯುವರೆಂದು ತಿಳಿದುಬಂದಿದೆ.

ಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂ ದ ಮಿ|| ಸಿ. ಎಚ್. ರಣಜೋಧ್‌ಸಿಂಗ್‌ರ ಂಗಳೂರು ನಗರದಲ್ಲಿ 1931-32 ನೇ ಇಸವಿ ನಡೆದ ಅಪರಾಧಗಳನ್ನು ಪತ್ತೆಮಾಡಿದ ಪೋ ಅಧಿಕಾರಿಗಳಿಗೆ 465 ರೂಪಾಯಿಗಳನ್ನು ಬಹು ಮಾನವಾಗಿ ಹಂಚಿದರು.

ಈ ಪ್ರಾಂತಿಕೆಗಳ ಸಲುವಾಗಿ ಉಪಯೋಗಿಸುವ ಜಮೀ ಎರಡು ವಿಧ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ 10 ರೂ. ಗಳಂತೆಯೂ ಇತರ ಡಿಸ್ಟ್ರಿಕ್ಟ್ ನಗಳಲ್ಲಿ ಮತ್ತು ದಾವಣಗೆರೆಯಲ್ಲಿ ಎಕರೆಯೊಂ ರೂ. ಗಳಂತೆಯೂ, ಇತರ ಸ್ಥಳಗಳಲ್ಲಿ ಎಕರೆ ರೂ. ನಂತೆಯೂ ಕಂದಾಯವನ್ನು ವಿಧಿಸಬೇ ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ರು ಡಿ|| ಆಲ್ದೂರಿನ ಪ್ರಸಿದ್ಧ ಕಾಫೀಪ್ಲಾಂ ಮೈಸೂರು ಪ್ರಜಾಪ್ರತಿನಿಧಿಸಭೆಯ ಮೆಂಬ ಆದ ಶ್ರೀ|| ಬಿ. ಪಿ. ಬಸಪ್ಪಶೆಟ್ಟರವರು ಇದೇ 8 ನೆಯ ತಾರೀಖಿನ ದಿವಸ ಚಿಕ್ಕಮಗಳೂ ಲವಕಾಶನಡೆಯಲಿರುವ ಕಡೂರು ಡಿಸ್ಟ್ರಿಕ್ಟ್‌ಬೋರ್ಡ್ ಗಿಯೂ. ನೆಗೆ ಒಬ್ಬ ಉಮೇದುವಾರರಾಗಿ ನಿಂತಿರು ಪ್ರಜಾಪ್ರತಿನಿಧಿಸಭೆ ಮೊದಲಾದ ಸಾರ್ವಜ ಗಳಲ್ಲಿ ಮೆಂಬರರಾಗಿ ಇವರು ಇದುವರೆಗೆ ಏಕೇ ಗಿ ಪ್ರಜಾಸೇವೆಯನ್ನು ಮಾಡಿರುತ್ತಾರೆ. ಈ ಅವಸರದ ಚುನಾವಣೆಯಲ್ಲಿಯೂ ಇವರು ಉತ್ತೀರ್ಣ ಸುವರೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ

ಒಬ್ಬ ಹುಡುಗಿಯು ತನ್ನ ಗಂಡನೊಡನೆ ಹೋಗಲು ಇಷ್ಟಪಡದೆ ಆತ್ಮಹತ್ಯಮಾಡಿ ನು.

ದರಾಬಾದಿನ 25 ವರ್ಷದ ಒಬ್ಬ ಬ್ರಾಹ್ಮಣ ನು 16 ವರ್ಷದ ಅಸ್ಪೃಶ್ಯಕನ್ಯೆಯೊಬ್ಬಳನ್ನು ಹವಾದನಂತೆ!

ಲಾರ್ಡ್ ಅರ್ವಿನ್ನರು ಬೇಟೆಗೆ ಹೋಗಿದ್ದಾಗ ಕುದು ಂದ ಕೆಳಕ್ಕೆಬಿದ್ದರು. ಆದರೆ ವಿಶೇಷ ಅಪಾಯ ಸಂಭವಿಸಲಿಲ್ಲ.

ಅಮೇರಿಕೆಯ ಪ್ರಸಿದ್ಧ ಹಾಲ್‌ರೋಚ್ ಫಿಲಂ ನಿಯವರು ಒಂದು ನಕಲಿ ಆಟಕ್ಕಾಗಿ 100 ಮೋ ಗಳನ್ನು ನಾಶಪಡಿಸಿದರಂತೆ!

ಇಂಗ್ಲೆಂಡಿನ ಹಾಲಿನ ಕಂಪೆನಿಗಳಲ್ಲಿ ಪ್ರತಿವರ್ಷವೂ ಕಳ್ಳತನದಿಂದ ಮತ್ತು ಒಡೆಯುವದರಿಂದ 6,50,00,000 ಹಾಲಿನ ಶೀಸೆಗಳು ಹೋಗುವವಂತೆ!

ಕಳೆದ 14 ವರ್ಷಗಳಿಂದೀಚೆಗೆ ಇಂಗ್ಲೆಂಡಿನ ರಸ್ತೆಗಳ ಅನಾಹುತದಿಂದ ಸುಮಾರು 20,00,000 ಗಂಡಸರು, ಹೆಂಗಸರು ಮತ್ತು ಮಕ್ಕಳು ಮೃತಪಟ್ಟರಂತೆ!

ತಿರುವರೂರು ಎಂಬಲ್ಲಿ 30 ವರ್ಷದ ಸ್ತ್ರೀಯಳು ಏಕಕಾಲದಲ್ಲಿ 3 ಹೆಣ್ಣುಮಕ್ಕಳನ್ನು ಪ್ರಸವಿಸಿರುವಳಂತೆ! ಮೂರು ಮಕ್ಕಳೂ ಸೌಖ್ಯವಾಗಿರುವವಂತೆ!

ಬೂಲಾವಾಯೋ ನದಿಯ ತೀರದಲ್ಲಿ ವಾಸಮಾಡುವ ರೈತರು ತಮ್ಮ ಪೈರುಗಳಿಗೆ ವಿಶೇಷ ನಷ್ಟವನ್ನುಂಟು ಮಾಡುವ ಮೊಸಳೆಗಳನ್ನು ಡೈನಮೈಟ್‌ಗಳಿಂದ ಕೊಲ್ಲುವರಂತೆ!

ಇಂಗ್ಲೆಂಡಿನ ಲೀಡ್ಸಿನಲ್ಲಿ ವ್ಯಾಸಂಗಮಾಡುತ್ತಿದ್ದ 22 ವರ್ಷ ವಯಸ್ಸಿನ ತರ್‌ಪಾಲ್‌ಮೆಂಗಿ ಎಂಬ ಭಾರತೀಯ ವಿದ್ಯಾರ್ಥಿಯು ವಿಷಪಾನಮಾಡಿ ಮೃತಪಟ್ಟನು.

ಮುಂಬಯಿಯ ಧನಿಕ ವರ್ತಕರಲ್ಲೊಬ್ಬರಾದ ಶ್ರೀ ಕೃಷ್ಣ ನೀತಿಸೇಠರವರು ವ್ಯಾಪಾರದಲ್ಲಿ ತಮಗೆ ವಿಶೇಷ ನಷ್ಟವು ಸಂಭವಿಸಿತೆಂಬ ಕಾರಣದ ಮೇಲೆ ಆತ್ಮಹತ್ಯ ಮಾಡಿಕೊಂಡರು.

ಹಿಂದೂಸ್ಥಾನದಿಂದ ಇಂಗ್ಲೆಂಡಿಗೆ ಟಪಾಲನ್ನು ಒಯ್ಯುವ ಪಿ. ಅಂಡ್ ಒ. ಕಂಪನಿಯವರಿಗೆ ಇಂಡಿಯಾ ಸರಕಾರದವರು ಪ್ರತಿವರ್ಷವೂ 6,00,000 ರುಪಾಯಿಗಳನ್ನು ಕೊಡುವರಂತೆ!

ದೇಶೀಯರಾಜರುಗಳು ತಮ್ಮ 18 ಷರತ್ತುಗಳನ್ನು ನಡೆಯಿಸಿಕೊಟ್ಟ ಹೊರತು ತಾವು ಫೆಡರೇಷನ್ನಿಗೆ ಸೇರುವದಿಲ್ಲವೆಂದು ಬ್ರಿಟಿಷ್ ಸರ್ಕಾರಕ್ಕೆ ಒಂದು ದೀರ್ಘವಾದ ಪತ್ರವನ್ನು ಬರೆದಿರುವರಂತೆ!

ಅಹಮದಾಬಾದಿನಲ್ಲಿ ಪರದೇಶದ ಮಾಲುಗಳನ್ನು ಮಾರುವವರಿಗೆ ಕೆಲವು ಭಯೋತ್ಪಾದಕ ಪತ್ರಗಳು ಬಂದಿರುವವಂತೆ! ಈ ಪತ್ರಗಳಿಗೆ ಗುಜರಾತ ಪ್ರಾಂತದ ಕ್ರಾಂತಿಕಾರರ ಸಂಘದ ರುಜುವಿರುವದಂತೆ!

ಅಮೇರಿಕೆಯ ಡಾಕ್ಟರ್ ಎಡ್ವರ್ಡ್-ಡಿ-ಮಾಂಟೀಗಲ್ ಎಂಬುವರು ಎಂಥ ಹಲ್ಲುನೋವನ್ನಾದರೂ ಕ್ಷಣಮಾತ್ರದಲ್ಲಿ ಅಲ್ಟ್ರಾ ವೈಯೊಲೆಟ ಎಂಬ ಕಿರಣಗಳ ಸಹಾಯದಿಂದ ಗುಣಪಡಿಸುವ ಮಾರ್ಗವನ್ನು ಕಂಡುಹಿಡಿದಿರುವರಂತೆ!

ರಷ್ಯಾದೇಶದ ಇಬ್ಬರು ಶಾಸ್ತ್ರಜ್ಞರು ಒಂದು ನೂತನ ಎಲೆಕ್ಟ್ರಿಕ್ ಯಂತ್ರವನ್ನು ನಿರ್ಮಿಸಿರುವರು. ಈ ಯಂತ್ರದ ಸಹಾಯದಿಂದ ಗರ್ಭಿಣೀಸ್ತ್ರೀಯರ ಹೊಟ್ಟೆಯಲ್ಲಿರುವ ಶಿಶುವು ಹೆಣ್ಣೋ ಗಂಡೋ ಎಂಬುದನ್ನು ನಿರ್ಧರಿಸಬಹುದಂತೆ!

ಮಾರ್ಚಿ 28 ನೇ ತಾರೀಖಿನ ದಿವಸ ಚಿತ್ತಗಾಂಗಿಗೆ ಸೇರಿದ ಪರಿಯಾ ಎಂಬ ಸ್ಥಳದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರು ದೀಕ್ಷಿತ ಎಂಬುವರನ್ನು ಯಾರೋ ಗುಂಡಿನಿಂದ ಕೊಂದರು. ಕ್ರಾಂತಿಕಾರರೇ ಈ ಕೃತ್ಯವನ್ನು ಮಾಡಿರಬಹುದೆಂದು ಊಹಿಸಲ್ಪಟ್ಟಿದೆ.

ಅಳ್ವಾರ್ ಮಹಾರಾಜರು ಭಾರತಧರ್ಮ ಮಹಾಮಂಡಲಕ್ಕೆ 10,000 ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿರುವದಲ್ಲದೆ ಸನಾತನ ಧರ್ಮದ ರಕ್ಷಣೆಗಾಗಿ ಪ್ರತಿವರ್ಷವೂ 1,00,000 ರೂಪಾಯಿಗಳನ್ನು ವಿನಿಯೋಗಿಸುವದಾಗಿ ವಚನವಿತ್ತಿರುವರು!

ಜರ್ಮನಿಯ ಒಬ್ಬ ಶಾಸ್ತ್ರಜ್ಞನು ಒಂದು ನೂತನ ಯಂತ್ರಸಾಧನವನ್ನು ನಿರ್ಮಿಸಿರುವನು. ಇದರ ಸಹಾಯದಿಂದ ಪ್ರಪಂಚದ ಯಾವುದಾದರೂ ಒಂದುಭಾಗದಲ್ಲಿ ನಡೆಯುವ ವಿದ್ಯಮಾನಗಳನ್ನು ಅರ್ಧನಿಮಿಷದೊಳಗಾಗಿ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ನೋಡಬಹುದಂತೆ!

ಮಾರ್ಚಿ 24 ನೇ ತಾರೀಖಿನ ದಿವಸ ಜಲಪೈಗುರಿ ಜಿಲ್ಲೆಯ ಬನಸ್ಪತಿಯ ವಾರ್ಷಿಕಜಾತ್ರೆಯಲ್ಲಿ ಪೋಲೀಸರ ಆಜ್ಞೆಯನ್ನು ಮೀರಿ ಕಾಂಗ್ರೆಸ್ ಜನರು ಬಹಿರಂಗಸಭೆಯನ್ನು ಸೇರಿಸಿದರೆಂದೂ, ಜನರನ್ನು ಚದರಿಸಲು ಪೋಲೀಸರು ಗುಂಡುಹಾರಿಸಿದುದರಿಂದ ಒಬ್ಬನು ಮೃತಪಟ್ಟನೆಂದೂ ತಿಳಿದುಬಂದಿದೆ.

ಮಾರ್ಚಿ 27 ನೇ ತಾರೀಖಿನ ದಿವಸ ದೆಹಲಿಯ ಅಖಿಲಭಾರತ ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯವರು ಸಭೆ ಸೇರಿ, ಶ್ವೇತಪತ್ರವು ತೀರಾ ಅಸಮರ್ಪಕವಾಗಿರುವದೆಂದೂ, ಅದನ್ನು ಖಂಡಿಸಲು ಇಡೀ ಭರತಖಂಡದಲ್ಲೆಲ್ಲಾ ಏಪ್ರಿಲ್ 9ನೇ ತಾರೀಖಿನ ದಿವಸ ಸಭೆಗಳನ್ನು ಸೇರಿಸಬೇಕೆಂದೂ, ತೀರ್ಮಾನಮಾಡಿರುತ್ತಾರೆ.

ಫರುಕ್ಕಾಬಾದಿನ ಡಫರಿನ್ ಆಸ್ಪತ್ರೆಯಲ್ಲಿ ಒಬ್ಬ ಗರ್ಭಿಣಿಯು ಹೆರಿಗೆಗಾಗಿ ಬಂದಳು. ಕ್ರಮಪ್ರಕಾರವಾಗಿ ಹೆರಿಗೆಯಾಗದೆ ಡಾಕ್ಟರರು ಆಪರೇಷನ್ ಮಾಡಿ ಶಿಶುವನ್ನು ಈಚೆಗೆ ತೆಗೆಯುವಲ್ಲಿ ಶಿಶುವಿನ ಕೊರಳ ಸುತ್ತಲೂ ಒಂದು ಸಜೀವವಾದ ಸರ್ಪವು ಸುತ್ತಿಕೊಂಡಿದ್ದಿತು. ಸ್ವಲ್ಪ ಹೊತ್ತಿನ ನಂತರ ಶಿಶು, ತಾಯಿ ಮತ್ತು ಸರ್ಪ ಮೂವರೂ ಮೃತಪಟ್ಟರು.

ಜರ್ಮನಿಯ ರಾಜಕೀಯ ಗಲಭೆಗಳ ಸಂಬಂಧದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ ಭಾರತೀಯನು ಮಾರ್ಚಿ 25 ನೆಯ ತಾರೀಖಿನ ದಿವಸ ಬಿಡುಗಡೆ ಮಾಡಲ್ಪಟ್ಟನು. ಜರ್ಮನ್ ಸರಕಾರದವರು ದಸ್ತಗಿರಿಯಾಗಿದ್ದಾಗ ಅವನ ವಿಷಯದಲ್ಲಿ ಯೋಗ್ಯರೀತಿಯಲ್ಲಿ ವರ್ತಿಸಿದರೆಂದೂ, ಮಾರ್ಚಿ 31 ನೇ ತಾರೀಖಿನೊಳಗಾಗಿ ಜರ್ಮನಿಯನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆಮಾಡಿದರೆಂದೂ ತಿಳಿದುಬಂದಿದೆ.

ಲಂಡನ್ನಿನಲ್ಲಿ ಹಿಂದೂಸ್ಥಾನಕ್ಕೆ ಟಪಾಲುಗಳನ್ನು ತರುತ್ತಿದ್ದ ಏರೋಪ್ಲೇನಿಗೆ ಬೆಲ್ಜಿಯಮ್ಮಿನ ಸಮೀಪದಲ್ಲಿ ಅಕಸ್ಮಾತ್ ಅಪಾಯವುಂಟಾಗಿ ಏರೋಪ್ಲೇನು ಮುರಿದುಬಿತ್ತು. ಇದರಿಂದ 8 ಜನ ಬ್ರಿಟಿಷರು 3 ಜನ ಜರ್ಮನ್ನರು ಒಬ್ಬ ಬೆಲ್ಜಿಯನ್ ಮತ್ತು 4 ಜನ ಸ್ತ್ರೀಯರು ಮೃತಪಟ್ಟರು. ಏರೋಪ್ಲೇನು ನೆಲಕ್ಕೆ ಬಿದ್ದಾಗ ಹೊಲದಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಹುಡುಗಿಯರಿಗೆ ಅಪಾಯವುಂಟಾಗಿ ಅವರು ಕೂಡಲೇ ಮೃತಪಟ್ಟರು. ಟಪ್ಪಾಲು ಚೀಲಗಳಿಗೆ ಮಾತ್ರ ಯಾವ ಅಪಾಯವೂ ಉಂಟಾಗಲಿಲ್ಲ.

ಕಾನೂನುಭಂಗದ ಚಳವಳಿಯ ಸಂಬಂಧದಲ್ಲಿ ದಸ್ತಗಿರಿಯಾಗುವ ಸ್ವಯಂಸೇವಕರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುತ್ತಿತ್ತು. ಆದರೆ ಈಚೆಗೆ ಕಲ್ಕತ್ತೆಯಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿದ್ದ ರಾಷ್ಟ್ರೀಯ ಮಹಾಸಭೆಯ ಸಂಬಂಧದಲ್ಲಿ ದಸ್ತಗಿರಿಯಾಗುವವರ ಸಂಖ್ಯೆಯು ಇದ್ದಕ್ಕಿದ್ದಹಾಗೆ ಹೆಚ್ಚಿಹೋಗಿರುವದು. ಮಾರ್ಚಿ 27 ನೆಯ ತಾರೀಖಿನ ದಿವಸ ಸ್ವಾಗತಸಮಿತಿಯ ಪ್ರಥಮ ದ್ವಿತೀಯ ಅಧ್ಯಕ್ಷರೂ, ಆಲ್‌ಇಂಡಿಯಾ ಸ್ಪಿನ್ನರ್ಸ್ ಅಸೋಸಿಯೇಷನ್ನಿನಲ್ಲಿ 3 ಜನರೂ, ಶ್ರೀ ಸುರೇಶಬಾನರ್ಜಿಯವರ ಗೃಹದಲ್ಲಿ 11 ಜನ ಸ್ವಯಂಸೇವಕರೂ, ಪ್ರತಾಪಗಡ ಮತ್ತು ಖುಲನಾದಿಂದ ಬಂದ 10 ಜನರೂ ದಸ್ತಗಿರಿ ಮಾಡಲ್ಪಟ್ಟರು. ಇದೇ ದಿವಸ ಲಾಹೋರಿನಲ್ಲಿ ಕಲ್ಕತ್ತಾ ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದು ಹೇಳಿಕೊಂಡು ರೈಲ್ವೇ ಸ್ಟೇಷನ್ನಿಗೆ ಮೆರವಣಿಗೆಮಾಡಿಕೊಂಡು ಹೋಗುತ್ತಿದ್ದ 14 ಜನರು ದಸ್ತಗಿರಿಮಾಡಲ್ಪಟ್ಟರು. 29 ನೆಯ ತಾರೀಖಿನ ದಿವಸ ಲಾಹೋರಿನ ಸರ್ವೆಂಟ್ಸ್ ಆಫ್ ಇಂಡಿಯಾ ಪೀಪಲ್ಸ್ ಸೊಸೈಟಿಯ ಕಾರ್ಯದರ್ಶಿಗಳಾದ ಲಾಲಾಜಗನ್ನಾಥರು ಪೋಲೀಸರ ಆಜ್ಞೆಯನ್ನು ಮೀರಿ ಕಲ್ಕತ್ತೆಗೆ ಪ್ರಯಾಣಮಾಡುವಾಗ ದಸ್ತಗಿರಿಮಾಡಲ್ಪಟ್ಟರು. 30 ನೆಯ ತಾರೀಖಿನ ದಿವಸ ಪೂರ್ಣಿಯಾದಿಂದ ಕಾಲ್ನಡಿಗೆಯಲ್ಲಿಯೇ ಕಲ್ಕತ್ತೆಗೆ ಬಂದ 17 ಪ್ರತಿನಿಧಿಗಳೂ, ಸಂಯುಕ್ತಪ್ರಾಂತಗಳಿಂದ ಬಂದ 96 ಪ್ರತಿನಿಧಿಗಳೂ, ಆನಂದಬಜಾರು ಪತ್ರಿಕಾ ಸಂಪಾದಕರೂ ದಸ್ತಗಿರಿಮಾಡಲ್ಪಟ್ಟರು. ರಾಷ್ಟ್ರೀಯ ಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ|| ಮಾಧವ ಶ್ರೀಧರ ಆಣೆಯವರು ಖರಗಪುರದಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಕಾಂಗ್ರೆಸ್ ಸ್ವಾಗತಸಮಿತಿಯ ತೃತೀಯ ಅಧ್ಯಕ್ಷರಾದ ಶ್ರೀ|| ಸುರೇಶಚಂದ್ರಮುಜುಂದಾರರೂ, ಶ್ರೀ|| ಎ. ಪಿ. ಗುಪ್ತರವರೂ, ಅಸನ್ಸೋಲಿನಲ್ಲಿ 16 ಜನ ಪ್ರತಿನಿಧಿಗಳೂ, ಸೀಲ್ದಾ ಮತ್ತು ಹೌರಾದಲ್ಲಿ 19 ಜನ ಪ್ರತಿನಿಧಿಗಳು ಡಾ|| ಆಲಂರವರೂ, ದೇಶಬಂಧು ಚಿತ್ತರಂಜನದಾಸರವರ ಸಹೋದರಿಯಾದ ಶ್ರೀಮತಿ ಊರ್ಮಿಳಾದೇವಿಯರೂ 'ಲಿಬರ್ಟಿ' ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀನಾರಾಯಣದತ್ತರವರೂ ಡಾ|| ಚಾರುಚಂದ್ರಬ್ಯಾನರ್ಜಿಯವರೂ ಕಲ್ಕತ್ತಾ ಪೌರಸಭೆಯ ಸದಸ್ಯರಾದ ಮಿಸ್ ಜ್ಯೋತಿರ್ಮಯಿಗಂಗೂಲಿಯವರೂ 'ನಾಯಕ' ಪತ್ರಿಕೆಯ ಸಂಪಾದಕರಾದ ಡಾಕ್ಟರ್ ಪ್ರತಾಪಚಂದ್ರ ಗುಹಾರವರೂ, ಶ್ರೀ|| ದೇವದಾಸ ಗಾಂಧಿಯವರೂ ದಸ್ತಗಿರಿ ಮಾಡಲ್ಪಟ್ಟರು. ಕೇರಳಾದಿಂದ ಬಂದ ನಾಲ್ಕು ಜನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರೂ ಇತರ 7 ಜನ ಪ್ರತಿನಿಧಿಗಳೂ ಕಲ್ಕತ್ತೆಯಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಹೌರಾ ಸ್ಟೇಷನ್ನಿನಲ್ಲಿ ಬೇರೆ ಬೇರೆ ಪ್ರಾಂತಗಳಿಂದ ಬಂದ 25 ಜನ ಪ್ರತಿನಿಧಿಗಳು ದಸ್ತಗಿರಿ ಮಾಡಲ್ಪಟ್ಟರು. ಸ್ವಾಮಿವಿವೇಕಾನಂದರ ಸಹೋದರರಾದ ಡಾಕ್ಟರ್ ಭೂಪೇಂದ್ರನಾಥ ದತ್ತರವರೂ ಹಾಗೂ 23 ಜನ ಪ್ರತಿನಿಧಿಗಳು ದಸ್ತಗಿರಿ ಮಾಡಲ್ಪಟ್ಟರು. ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವದಕ್ಕೋಸ್ಕರ ಬೆನಾರಸ್ಸಿನಿಂದ 30 ನೇ ತಾರೀಖಿನ ಸಾಯಂಕಾಲ ಕಲ್ಕತ್ತೆಗೆ ಪ್ರಯಾಣ ಬೆಳೆಯಿಸಿದ ಪಂಡಿತ ಮದನಮೋಹನ ಮಾಳವೀಯರವರು 31 ನೇ ತಾರೀಖಿನ ಬೆಳಗಿನ ಝಾವ 4 ಘಂಟೆಯ ಸಮಯದಲ್ಲಿ ಅಸನ್ಸೋಲ್ ಸ್ಟೇಷನ್ನಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಇವರ ಜೊತೆಯಲ್ಲಿ ಇವರ ಮಗ ಪಂ|| ಗೋವಿಂದಮಾಳವೀಯರೂ ಮೊಮ್ಮಗನಾದ ಪಂ|| ಶ್ರೀಧರಮಾಳವೀಯರೂ ದಸ್ತಗಿರಿಮಾಡಲ್ಪಟ್ಟರು. ಡಾಕ್ಟರ್ ಸಯ್ಯದ್‌ಮಹಮದ್‌ರವರು ಕಿಯೋಲ್ ಸ್ಟೇಷನ್ನಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಇದೇರೀತಿ ಲೆಕ್ಕವಿಲ್ಲದಷ್ಟು ಪ್ರತಿನಿಧಿಗಳು ದಸ್ತಗಿರಿಯಾಗುತ್ತಿರುವರು. ಅಲಹಾಬಾದ್ ಮೊದಲಾದ ಮುಖ್ಯಮುಖ್ಯ ಸ್ಥಳಗಳಲ್ಲಿ ಕಲ್ಕತ್ತಾ ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದು ತೋರುವವರಾರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರವರು ಅಪ್ಪಣೆಮಾಡಿರುತ್ತಾರೆ.

ನಿದ್ರೆಯ ವಿಚಿತ್ರತೆ.

ಸ್ತ್ರೀಯರು ಪುರುಷರಿಗಿಂತಲೂ ಚೆನ್ನಾಗಿ ನಿದ್ರೆ ಮಾಡುವರು. ನ್ಯಾಯಕವಾಗಿ ಪ್ರತಿಯೊಬ್ಬ ಮನುಷ್ಯನೂ ಒಂದು ರಾತ್ರಿಯಲ್ಲಿ 35 ಸಾರೆ ಎಚ್ಚರವನ್ನು ಹೊಂದುವನು. ಆದರೆ ನಿದ್ರೆಯಿಂದ ಸಂಪೂರ್ಣವಾಗಿ ಎಚ್ಚತ್ತನಂತರ ಅದು ಜ್ಞಾಪಕದಲ್ಲಿರುವದಿಲ್ಲ!

ಗಾಢವಾಗಿ ನಿದ್ರೆಮಾಡುವವರು 25 ನಿಮಿಷಗಳಿಗೆ ಒಂದಾವರ್ತಿ ಹೊರಳುವರು. ಸಾಮಾನ್ಯವಾಗಿ ನಿದ್ರೆ ಮಾಡುವವರು 15 ನಿಮಿಷಗಳಿಗೆ ಒಂದಾವರ್ತಿ ಹೊರಳುವರು. ಸೂಕ್ಷ್ಮವಾಗಿ ನಿದ್ರೆಮಾಡುವವರು 8 ನಿಮಿಷಗಳಿಗೆ ಒಂದಾವರ್ತಿ ಹೊರಳುವರು!

ನೀಲಿಬಣ್ಣವು ಮನುಷ್ಯನ ಮನಸ್ಸಿನಲ್ಲಿ ನಿದ್ರೆ ಮಾಡಬೇಕೆಂಬ ಅಪೇಕ್ಷೆಯನ್ನು ಹುಟ್ಟಿಸುವದಂತೆ! ಆದುದರಿಂದಲೇ ನೀಲಿಬಣ್ಣವನ್ನುಪಯೋಗಿಸುವ ಚಿತ್ರಗಾರರು ಅನೇಕವೇಳೆಗಳಲ್ಲಿ ಚಿತ್ರಿಸುತ್ತಿದ್ದ ಹಾಗೆಯೇ ನಿದ್ರೆಮಾಡುವರಂತೆ!

ಜೋಹನಸ್‌ಬರ್ಗ್‌ನಗರದ ಒಬ್ಬ ತರುಣಿಯು 1910 ನೆಯ ಇಸವಿಯಲ್ಲಿ ತನ್ನ ಪ್ರೇಮಪಾತ್ರನು ಕೊಲ್ಲಲ್ಪಟ್ಟನೆಂಬ ವ್ಯಸನದಿಂದ ಮಲಗಿದವಳು 1928 ನೆಯ ಇಸವಿ ಆಗಸ್ಟ್ 19 ನೆಯ ತಾರೀಖಿನ ದಿವಸ ಎಚ್ಚತ್ತಳಂತೆ! ವಿಸ್ಕಾನ್ಸಿನ್‌ನಗರದ ಮಿಸೆಸ್ ಸ್ಟಾರ್ಟೋವಿಟ್ಜ ಎಂಬಾಕೆಯು 17 ತಿಂಗಳುಗಳವರೆಗೆ ಮಲಗಿದ್ದಳಂತೆ! ಈ ಅವಧಿಯಲ್ಲಿ ಇವಳಿಗೆ ಮೂಗಿನಮುಖಾಂತರ ಆಹಾರವನ್ನು ಕೊಡುತ್ತಿದ್ದರಂತೆ!

ಸ್ವೀಕಾರ

ಅರಸೀಕೆರೆ ತಾಲೂಕು ದಿಬ್ಬೂರು ಸ್ಕೂಲ್‌ಮಾಸ್ಟರಾದ ಮ||ರಾ|| ಎ. ಚನ್ನಪ್ಪನವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ನೆಯ ಪುಟದಿಂದ ಮುಂದುವರಿದುದು.]

ಅಪೇಕ್ಷಿಸುವುದಿಲ್ಲವೆಂದೂ ಮುಂತಾಗಿ ಸರ್ ಹೋರರು ಹೇಳಿದರು.

ಸರ್ ಹೋರರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಹೇಳಿರುವುದೇನೆಂದರೆ:—

"ಕೇವಲ ಎರಡು ಮೂರು ದಿವಸಗಳ ಚರ್ಚೆಯಾದ ಮೇಲೆ ನಿಮ್ಮನ್ನೂ ಮತ್ತು ಇಂಡಿಯಾದ ಮಹಾಜನಾಭಿಪ್ರಾಯವನ್ನೂ ನಿರ್ದಿಷ್ಟವಾದ ತೀರ್ಮಾನಗಳಿಗೆ ಬರಬೇಕೆಂದು ನಿರೀಕ್ಷಿಸುವುದು ತೀರ ಅನ್ಯಾಯವೆಂದೂ, ಇಲ್ಲವೇ ಅಪರಾಧವೆಂದೂ ಹೇಳಬೇಕಾಗುತ್ತದೆ. ಸರ್ಕಾರದವರು ತಮ್ಮ ಸಾಮಾನ್ಯ ರೀತಿನೀತಿಯನ್ನೂ, ನಡವಳಿಕೆಯನ್ನೂ ಬದಲಾಯಿಸಿದ್ದಾರೆಂದು ಹೇಳುವುದು ಬರೀ ಟೊಳ್ಳುಮಾತೇ ಸರಿ. ಈ ಸಭೆಯು ಆ ಗುಂಪು ಇಲ್ಲವೇ ಬೇರೊಂದು ಗುಂಪಿನ ಒತ್ತಾಯದಿಂದ ಸರ್ಕಾರದವರು ತಮ್ಮ ದಾರಿಯನ್ನು ಬದಲಾಯಿಸಿದ್ದಾರೆಂದು ಹೇಳುವುದಂತೂ ಅಸತ್ಯವಾದ ಅಂಶವಾಗಿದೆ. ಕಳೆದ ಶತಮಾನದ ಇತಿಹಾಸವನ್ನೂ, ವರ್ಷಂಪ್ರತಿ ಇಂಡಿಯಾಕ್ಕೆ ರಾಜಕೀಯ ಸುಧಾರಣೆಗಳನ್ನು ಸಲ್ಲಿಸುವುದಾಗಿ ಮಾತುಕೊಡುತ್ತಾ ಬಂದಿರುವ ಅಂಶವನ್ನೂ ಪಾರ್ಲಿಮೆಂಟು ಗಮನಿಸದೆ ಇದ್ದರೆ, ಅದರಂಥಾ ತಿಳಿಗೇಡಿತನದ ಕಾರ್ಯಬೇರೊಂದಿಲ್ಲ. ಬಹು ಪುರಾತನದ ಇತಿಹಾಸವನ್ನೂ, ನೈತಿಕಧರ್ಮವನ್ನೂ ಮತ್ತು ಇತ್ತ ವಚನವನ್ನೂ ದುರ್ಲಕ್ಷಿಸುವುದು ತೀರ ಅನ್ಯಾಯ, ಅಕ್ರಮ ಮತ್ತು ಆತ್ಮವಿನಾಶವಾದುದು"

ಪೂರ್ವ ದೇಶಗಳ ಸಮಸ್ಯೆಯನ್ನು ಪ್ರಸ್ತಾಪಿಸಿ, ಏಷ್ಯಾ ದೇಶದ ಪ್ರಶ್ನೆಗಳಿಂದ ಇಂಡಿಯಾ ಪ್ರಶ್ನೆಯನ್ನು ದೂರಮಾಡುವುದು ಯೋಗ್ಯವಲ್ಲವೆಂದು ಸರ್ ಹೋರರು ತಿಳಿಸಿ, ಏಷ್ಯಾಖಂಡದಲ್ಲಿ ಇಷ್ಟು ಉಗ್ರತರವಾದ ಆಂದೋಲನವಾಗುತ್ತಿದ್ದರೂ, ಇಂಡಿಯಾ ದೇಶವು ತನ್ನ ಹಕ್ಕುಬಾಧ್ಯತೆಗಳಿಗಾಗಿ ಉಚ್ಚಸ್ವರದಿಂದ ಕೂಗುತ್ತಿರುವುದರ ಮತ್ತು ಸರ್ಕಾರದಲ್ಲಿ ತನಗೆ ಹೆಚ್ಚು ಹೆಚ್ಚು ಭಾಗವಿರುವಂತೆ ಬೇಡುವುದರ ಆಶ್ಚರ್ಯವಾದರೂ ಏನು? ಎಂದು ಕೇಳಿದರು.

ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ, ಸರ್ ಹೋರರು ಹೇಳಿದುದೇನೆಂದರೆ:—

"ಇಂಡಿಯಾ ಸರ್ಕಾರದಲ್ಲಿ ಬಹಳ ಬದಲಾವಣೆಗಳಾಗಲೇ ಬೇಕು. ಗತ್ಯಂತರವಿಲ್ಲ. ಕೇಂದ್ರದಲ್ಲಿಯೂ ಮತ್ತು ಪ್ರಾಂತ್ಯಗಳಲ್ಲಿಯೂ ಮೇಲಧಿಕಾರಿಗಳು ಬಲಾಢ್ಯರಾಗಿರುವುದು ಅತ್ಯಗತ್ಯವಾಗಿದೆ. ಕೇಂದ್ರದಲ್ಲಿ ಜವಾಬ್ದಾರಿಯನ್ನು ಸ್ಥಾಪಿಸುವ ಸಲಹೆಗಳನ್ನು ಕೊಡದಿದ್ದರೆ, ಪ್ರಾಂತಿಕ ಸ್ವಾತಂತ್ರ್ಯಕ್ಕೆ ಸೌಹಾರ್ದವು ಸಿಗುವಂತಿಲ್ಲ. ಸಪ್ರೂ! ಸರಿಯೋ! ಅಂತೂ ಕಳೆದ ಶತಮಾನದ ಬಹುಕಾಲದಿಂದಲೂ, ಇಂಡಿಯಾ ದೇಶವನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ನಡೆಸಿಕೊಂಡು ಬರುತ್ತಿದ್ದೇವೆ. ಇಂಡಿಯಾದ ಪ್ರಗತಿಗೆ ಬ್ರಿಟಿಷ್ ಪ್ರಜಾಸತ್ತಾತ್ಮಕ ಸಂಸ್ಥೆಗಳಂತಹ ಸಂಸ್ಥೆಗಳು ಅವಶ್ಯಕವೆಂಬ ಭಾವನೆಯು ಇಂಡಿಯಾದ ಮುಂದಾಳುಗಳಲ್ಲಿ ಉಂಟಾಗುವಂತೆ ಮಾಡಿದ್ದೇವೆ. ನಾವು ಹಿಂದೆ ಕೊಟ್ಟ ವಚನಗಳಿಗೆ ರಾಜಕೀಯ ಸುಧಾರಣೆಗಳನ್ನು ಎಂದು ಕೊಡಬೇಕು. ಯಾವ ಪ್ರಕಾರ ಕೊಡಬೇಕು. ಎಂಬ ಇಚ್ಛೆಯು ಸಂಪೂರ್ಣ ಸ್ವಾತಂತ್ರ್ಯವಿರುವುದು. ದುರ್ಬಲರನ್ನು ಹಿಂಸೆಗೊಳಿಸುವ ದುರಾತ್ಮರನ್ನು ತಡೆಬಡೆದು ಶಾಂತಿಸ್ಥಾಪನೆಯನ್ನುಂಟುಮಾಡಿ ರಕ್ಷಿಸುವುದು ಸರ್ಕಾರದ ಕರ್ತವ್ಯ. ಆದ್ದರಿಂದಲೇ ಮೇಲಿನ ಅಧಿಕಾರಿಗಳಿಗೆ ಬಲವತ್ತರವಾದ ಅಧಿಕಾರಗಳಿರಬೇಕು. ಅನಾಯಕತ್ವವನ್ನು ತಪ್ಪಿಸುವುದಕ್ಕೂ ಮೈನಾರಿಟಿ ಕೋಮುಗಳವರನ್ನು ಕಾಪಾಡುವುದಕ್ಕೂ ಅಧಿಕಾರವು ಅತ್ಯವಶ್ಯಕ. ಸೇಫ್ ಗಾರ್ಡುಗಳು ಕೇವಲ ಕಾಗದದ ಸೇಫ್ ಗಾರ್ಡುಗಳಲ್ಲ. ಅವಶ್ಯಕವಿದ್ದರೆ ಆ ಸೇಫ್ ಗಾರ್ಡುಗಳು ಅಕ್ಷರಶಃ ಪಾಲಿಸಲ್ಪಡುವುವು. ಫೆಡರೇಷನ್ ಯಶಸ್ವಿಯಾಗಬೇಕಾದರೆ ಇಂಡಿಯಾದ ಬಗ್ಗೆ ನಂಬಿಕೆ ಅಳಿಯದಂತೆ ನೋಡಿಕೊಳ್ಳಬೇಕು. ಇದನ್ನು ಇಂಡಿಯಾದ ಪ್ರತಿಯೊಬ್ಬ ಬಂಡವಾಳಗಾರರೂ ಗಮನದಲ್ಲಿಡಬೇಕು. ಇಂಡಿಯಾದ ಸಾಲದಲ್ಲಿ ಅರ್ಧದಷ್ಟು ಇಂಡಿಯಾದ ಸಲುವಾಗಿ ಮಾಡಲಾಗಿದೆ. ಇಂಡಿಯಾದ ಹಣಕಾಸಿನ ಭವಿಷ್ಯವು ಬಹಳ ಶಿಥಿಲವಾಗುವ ಸೂಚನೆಯು ಇದ್ದರೆ ಪಾರ್ಲಿಮೆಂಟು ಸರ್ಕಾರದ ಸಲಹೆಗಳನ್ನು ಎಂದೂ ಒಪ್ಪುವುದಿಲ್ಲವೆಂದು ಬಂಡವಾಳಗಾರರು ಭರವಸೆ ಹೊಂದಬಹುದು."

ಲೇಬರ್ ಪಕ್ಷದ ಪರವಾಗಿ ಮೇಜರ್ ಅಟ್ಲಿಯವರು ಒಂದು ಹೇಳಿಕೆಯನ್ನು ಓದಿ ಹೇಳಿ ರಾಜಕೀಯ ಖೈದಿಗಳನ್ನು ಖುಲಾಸೆ ಮಾಡಬೇಕೆಂದರು. ತಮ್ಮ ಗುಂಪಿನವರು ಜಾಯಿಂಟ್ ಸೆಲೆಕ್ಟ್ ಕಮಿಟಿಯೊಡನೆ ಸಹಕರಿಸುವುದಾಗಿಯೂ ಕಮಿಟಿಯ ವರದಿಯಲ್ಲಿ ತಮ್ಮ ಮನೋಗತವು ಅಡಕಗೊಳ್ಳುವಂತೆ ತಾವು ಸರ್ವ ಪ್ರಯತ್ನವನ್ನು ಮಾಡುವುದಾಗಿಯೂ ಹೇಳಿದರು.

ಎರಡನೆಯ ದಿವಸದ ಚರ್ಚೆ.

ಲಂಡನ್ ಮಾ. ೨೮.

ಈ ದಿನ ಕಾಮನ್ಸ್ ಸಭೆಯಲ್ಲಿ ವೈಟ್‌ಪೇಪರಿನ ವಿಷಯವಾಗಿ ಎರಡನೆಯ ದಿವಸದ ಚರ್ಚೆಯು ಆರಂಭವಾಯಿತು.

ಮಿ|| ಟಾಮ್ ವಿಲಿಯಂಸ್‌ರವರು ಮಾತನಾಡುತ್ತಾ, ಭಾರತೀಯರು ಪ್ರಗತಿಯನ್ನೈದಬೇಕಾದರೆ ಮತ್ತು ತಮ್ಮ ಆಡಳಿತವನ್ನು ತಾವು ನಿರ್ವಹಿಸಲು ಶಕ್ತಿಯನ್ನು ಪಡೆಯಬೇಕೆಂದು ಇಷ್ಟಪಡಬೇಕಾದರೆ ಮತ್ತು ದೇಶಾಭಿಮಾನವೂ, ಸಮಾಜಜಾಗ್ರತಿಯೂ ಅವರಲ್ಲಿ ಉತ್ಪನ್ನವಾಗಬೇಕಾದರೆ ಜಾಯಿಂಟ್‌ಸೆಲೆಕ್ಟ್ ಕಮಿಟಿಯು ಸೇಫ್‌ಗಾರ್ಡುಗಳ ಕಠಿಣತೆಯನ್ನು ನಿವಾರಿಸಬೇಕೆಂದು ಹೇಳಿದರು. ಇಂಡಿಯಾದೇಶವು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಎಂದಾದರೂ ಗಳಿಸುವುದೆಂಬುದಕ್ಕೆ ವೈಟ್‌ಪೇಪರಿನಲ್ಲಿ ಸೂಚನೆಯೇ ಕಂಡುಬರುವುದಿಲ್ಲವೆಂದರು. ತರುವಾಯ ಹಣಕಾಸು ಮತ್ತು ಡಿಫೆನ್ಸ್ ಬಾಬನ್ನು ಪ್ರಸ್ತಾಪಿಸಿ ಭಾರತೀಯ ರಾಜಕಾರಣ ಪಟುಗಳು ಬಹಳ ಸಾಮರ್ಥ್ಯದಿಂದ ಆಡಳಿತವನ್ನು ನಿರ್ವಹಿಸಲು ಹವಣಿಸಿದರೂ ಅವರ ವಶಕ್ಕೆ ಮೇಲಿನ ಬಾಬುಗಳು ಒಪ್ಪಿಸುವ ಸಂಭವವೇ ಇಲ್ಲವೆಂದು ಮಿ|| ಟಾಮ್ ವಿಲಿಯಂಸ್‌ರವರು ನುಡಿದರು. ಸೈನ್ಯದಲ್ಲಿ ಭಾರತೀಯರಿಗೆ ಪ್ರಾಮುಖ್ಯತೆ ಕೊಡಲಾಗುವ ಅಂಶವೂ ಸಹಾ ಕಾಣಬರುತ್ತಿಲ್ಲವೆಂದು ತಿಳಿಸಿದರು. ಹೊಸ ರಾಜ್ಯಶಾಸನವು ಎಂದು ಚಲಾವಣೆಗೆ ಬರುವುದೆಂಬ ವಿಷಯವನ್ನು ವಿಧಿವತ್ತಾಗಿ ಗೊತ್ತುಪಡಿಸಿಲ್ಲವೆಂದೂ ಚಲಾವಣೆಗೆ ಬರಬೇಕಾದರೆ ಬೇಕಾದಷ್ಟು ಷರತ್ತುಗಳು ಪರಿಷ್ಕಾರವಾಗಬೇಕಾಗಿರುವುದೆಂದೂ ಹೇಳಿದರು. ಹಣಕಾಸಿನಮೇಲೆ ಹತೋಟಿ, ಇಂಡಿಯಾದಲ್ಲಿ ಬ್ರಿಟಿಷರ ಹಿತರಕ್ಷಣೆ, ಇವುಗಳ ವಿಷಯದಲ್ಲಿ ತಮಗೆ ಬಹಳ ಅನುಮಾನವಿದೆಯೆಂದೂ ಮಿ|| ಟಾಂಮ್‌ವಿಲಿಯಂಸ್‌ರವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ತರುವಾಯ ಸರ್ ಜಾನ್ ಸೈಮನ್ನರು ಭಾಷಣಮಾಡಿದರು. ಪಾರ್ಲಿಮೆಂಟಿನಮೇಲೆ ಭಾರೀಜವಾಬ್ದಾರಿಯು ಹೊರೆಬಿದ್ದಿದೆ ಎಂದು ಹೇಳಿದರು. ಕೇಂದ್ರದಲ್ಲಿ ಜವಾಬ್ದಾರಿಯನ್ನು ಸ್ಥಾಪಿಸಬೇಕಾದರೆ ಸಮಗ್ರ ಭಾರತದಕಡೆ ದೃಷ್ಟಿಯಿಡಬೇಕೆಂದೂ, ಬ್ರಿಟಿಷ್‌ಹಿಂದೂಸ್ಥಾನದ ಮತ್ತು ದೇಶೀಯ ರಾಜರುಗಳಲ್ಲಿ ವ್ಯತ್ಯಾಸಗಳನ್ನುಂಟುಮಾಡಿದರೆ ಆಗುವ ಕೆಟ್ಟ ಪರಿಣಾಮಗಳನ್ನು ಗಮನಿಸಬೇಕೆಂದೂ, ಪೋಲೀಸುಬಾಬು ಪ್ರಾಂತಿಕವಿಷಯವಾಗಿರಬೇಕೆಂದೂ ಮುಂತಾಗಿ ಹೇಳಿದರು.

ಮಿ|| ವೆಡ್ಜ್ ವುಡ್‌ರವರು ಮಾತನಾಡಿ ಮುಂದೆ ಪಾರ್ಲಿಮೆಂಟ್ ಹೇಡಿತನದಿಂದ ತನ್ನ ಜವಾಬ್ದಾರಿಯನ್ನು ಬಿಟ್ಟುಬಿಡುತ್ತಿರುವುದೆಂದೂ ವಿಸಾರತ್ ಶಿಕ್ಷೆ ಕೆಲಸಗಾರರ ಕೆಲಸದ ಅವಧಿ, ಗಣಿಗಳ ಕೆಲಸ ದೇಶೀಯ ಸಂಸ್ಥಾನಗಳಲ್ಲಿ ರೈತಾಪಿ ಜನರ ದಾಂಧಲೆಗಳನ್ನು ಅಡಗಿಸಲು ಸೈನ್ಯವನ್ನು ಉಪಯೋಗಿಸುವಿಕೆ, ಈ ವಿಷಯಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶವಿಲ್ಲದಂತಾಗುವುದೆಂದೂ ಮುಂದೆ ಇನ್ನೂ ಕಟುತರವಾದ ಅಧಿಕಾರಿಗೆ ಈ ಪಾರ್ಲಿಮೆಂಟು ಅನುಭವಿಸುತ್ತಿರುವ ಅಧಿಕಾರಗಳನ್ನು ಒಪ್ಪಿಸುವುದು ತೀರ ಅನ್ಯಾಯವಾದುದೆಂದೂ ಸಂಕುಚಿತ ಸ್ವಭಾವದ ರಾಜರುಗಳ ಮತ್ತು ಕೋಟ್ಯಧೀಶ್ವರ ಅಥವಾ ಅವರ ಅನುಯಾಯಿಗಳ ವಶಕ್ಕೆ ಅಧಿಕಾರವನ್ನು ಒಪ್ಪಿಸಲಾಗುವುದೆಂದೂ, ಇದು ಅನುಚಿತವಾದುದೆಂದೂ ಹೇಳಿದರು. ಯಾವ ಬಗೆಯಾದ ತ್ಯಾಗವೂ ಇಲ್ಲದೆ ರಾಜರುಗಳು ಫೆಡರೇಷನ್ನಿಗೆ ಸೇರುವರೆಂದೂ ಅಧಿಕಾರವನ್ನು ಪಡೆದು ಇಂಡಿಯಾ ಸರ್ಕಾರಕ್ಕೆ ಆಜ್ಞೆಮಾಡುವ ಪರಿಸ್ಥಿತಿಗೆ ಬರುವರೆಂದೂ, ಇಂಡಿಯಾ ಸರ್ಕಾರವು ನಿರ್ಬಲವಾಗುವುದೆಂದೂ ತಿಳಿಸಿ ಯಾವ ಜನರ ವಿಷಯದಲ್ಲಿ ಅಪನಂಬಿಕೆಯನ್ನು ತಾಳಿರುವುವೋ ಅವರಿಗೇ ಫೆಡರೇಷನ್ ರಾಜ್ಯಪದ್ಧತಿಯಲ್ಲಿ ಅಧಿಕಾರಗಳು ಕೊಡಲಾಗುವುದೆಂದೂ, ಪ್ರಾಂತಿಕ ಚುನಾವಣೆದಾರರಲ್ಲಿ ಮಾತ್ರ ಮುಂದಿನ ಆಸೆ ಇದೆ ಎಂದೂ ಮಿ|| ವೆಡ್ಜ್ ವುಡ್‌ರವರು ನುಡಿದರು.

ಮಿ|| ಬರ್ನೇಸ್‌ರವರು ಅನಂತರ ಭಾಷಣ ಮಾಡಿದರು. ಇಂಡಿಯಾದ ರಾಜಕಾರಣ ಪಟುಗಳ ವಿಷಯವಾಗಿ ಹಾಸ್ಯಮಾಡುವುದನ್ನು ಖಂಡಿಸಿದರು. ಸರ್ ಸಪ್ರು ಮತ್ತು ಇತರರು ಬಹುಮಟ್ಟಿಗೆ ಕಾಲ ಮತ್ತು ಹಣದ ತ್ಯಾಗಮಾಡಿ ಶಾಸನರಚನೆಯ ಉದ್ಯಮದಲ್ಲಿ ಸಹಕರಿಸಿದರೆಂದೂ ಅವರಿಗೆ ಬ್ರಿಟನ್ ಕೃತಜ್ಞತೆಯಿಂದಿರಲೇಬೇಕೆಂದೂ ಹೇಳಿದರು. ದೇಶೀಯ ರಾಜರುಗಳು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಹೆಚ್ಚು ಹೆಚ್ಚು ಸುಧಾರಣೆಗಳನ್ನು ಕಲ್ಪಿಸಬೇಕೆಂದೂ ಕೆಲವು ಸಂಸ್ಥಾನಗಳಲ್ಲಿ ನಿರಂಕುಶಾಧಿಕಾರವು ಅತ್ಯತಿಹತವಾಗಿದೆಯೆಂದೂ ಸಹಿಸಲಸಾಧ್ಯವಾಗಿದೆಯೆಂದೂ ತಿಳಿಸಿದರು. (ತಾಯಿನಾಡು.)

ಶ್ವೇತಪತ್ರಪ್ರಶಸ್ತಿ.

'ಶ್ವೇತಪತ್ರವು ಬಹಳ ಅಸಮರ್ಪಕವಾಗಿದೆ'
ಜೆ. ಎನ್. ಬಸು, ಕಲಕತ್ತ.

'ಶ್ವೇತಪತ್ರವು ಕಠ್ರಗಿದೆ' ಎನ್. ಸಿ. ಕೇಳ್ಕರ್.

'ಅಡಿಗಲ್ಲನ್ನು ಸಡಲಿಸದೆ ಮೇಲಿನ ಕಟ್ಟಡ ಭದ್ರಪಡಿಸುವದು ತೃಪ್ತಿಕರವಾಗಿಲ್ಲ.' ಸರ್ ಸಪ್ರು.

'ಶ್ವೇತಪತ್ರದಲ್ಲಿ ಭಾರತೀಯರ ಸುಖ ಸಂತೋಷಗಳಿಗೆ ಸಂಬಂಧಪಟ್ಟ ಒಂದು ವಾದವೂ ಇಲ್ಲ. 'ದೊಡ್ಡವನಾಗಯ್ಯ ಮದುವೆ ಮಾಡುತ್ತೇನೆ' ಎಂದು ತಂದೆ ಮಗನಿಗೆ ಹೇಳುವ ಹಾಗಿದೆ ಈ ಶ್ವೇತಪತ್ರದಲ್ಲಿ ಹೇಳಿರುವುದು.'
ಜೆ. ಎಸ್. ಆರ್. ಮೆಹತಾ.

'ಶ್ವೇತಪತ್ರವು ನಮಗೆ ಜವಾಬ್ದಾರಿ ಸರಕಾರದ ನೆರಳನ್ನು ಸಹ ತೋರಿಸುವದಾಗಿಲ್ಲ.' ಮನೋಹರಲಾಲ್.

'ರಾಷ್ಟ್ರಪಕ್ಷದವರಿಗಿದು ಬೇಡ. ದೇಶ ಹಿತ ಬಯಸದವರಿಗೆ ತೃಪ್ತಿಕರವಾಗಿರಬಹುದು. ಸ್ವಾತಂತ್ರ್ಯವೆಂಬುದು ಗಗನಕುಸುಮ' ಸಿ. ವೈ. ಚಿಂತಾಮಣಿ.

'ಇದರಿಂದ ಸರಕಾರದವರು ಯಾರನ್ನು ಮೆಚ್ಚಿಸುವರೋ? ದೇವರೇ ಬಲ್ಲ.' ರಾಜಾನರೇಂದ್ರನಾಥ.

'ಓದಿದಷ್ಟು ಅತೃಪ್ತಿಯೂ ಅಸಮಾಧಾನವೂ ಹೆಚ್ಚುತ್ತದೆ.'
ಎಸ್. ಬಿ. ತಾಂಬೆ.

'ಇದನ್ನು ನೋಡಿದರೆ ಭಾರತೀಯರಿಗೆ ನಿಜವಾದ ಸ್ವಾತಂತ್ರ್ಯವನ್ನು ಕೊಡದೆ ಅವರನ್ನು ನೆಲಕ್ಕೆ ಮೆಟ್ಟಬೇಕೆಂಬ ಬ್ರಿಟಿಷರ ಅಂತರ್ಯವು ಹೊರಪಡುವುದು.' ಆರ್. ಶ್ರೀನಿವಾಸಯ್ಯಂಗಾರ್.

'ಶ್ವೇತಪತ್ರವನ್ನು ನೋಡಿದರೆ 'ವೈಟ್ ಹಾಲ್'ನಲ್ಲಿ ಕೂತು ಭರತಖಂಡವನ್ನು ಆಳುವುದಕ್ಕಾಗಿಯೇ ರಚಿಸಿರುವುದೆಂದು ತೋರುತ್ತದೆ' ಎಂ. ಎ. ಜಿನ್ನ.

'ಬ್ರಿಟಿಷರ ರಾಜಕಾರಣ ಪಟುಗಳಲ್ಲಿ ನಾವು ನಂಬುಗೆಯುಳ್ಳದಿರಲು ಅವರಲ್ಲಿ ಗೌರವ ಇಡದಿರಲು ಕಾರಣಗಳಿವೆ. ಶ್ವೇತಪತ್ರವೇ ಅದಕ್ಕೆ ಉದಾಹರಣೆ. ಇದರಿಂದ ಇಂಡಿಯಾಕ್ಕೂ ಬ್ರಿಟನ್ನಿಗೂ ಕಲಹವೇ ಸಿದ್ಧ.' ಹೃದಯೇಂದ್ರನಾಥಕುಂಜ್ರು.

'ಬ್ರಿಟಿಷರಿಗೆ ಭಯವೊಂದು ಕಡೆ; ಸಂಶಯವೊಂದು ಕಡೆ ಈ ಬಗೆಯ ಭಾವನೆಯಿಂದ ಸುಧಾರಣೆಯ ಸಲಹೆಮಾಡಿದ್ದಾರೆ. ಜವಾಬ್ದಾರಿ ಸರಕಾರದ ನೆರಳೇ ಭಾರತೀಯರಿಗೆ ಬರುವುದು. ಇದು ಯಾರ ಅಂಗೀಕಾರಕ್ಕೂ ಯೋಗ್ಯವಾಗಿಲ್ಲ.'
ಮದರಾಸಿನ 'ಹಿಂದು'

'ಈ ಪ್ರಚಂಡ ಬೂಟಾಟಿಕೆಯಿಂದ ಯಾರೂ ಮೋಸಹೋಗುವಂತಿಲ್ಲ. ಭಾರತೀಯರ ಮುಖಕ್ಕೆ ಮುಸುಕೆಳೆದಿದೆ ಈ ಶ್ವೇತಪತ್ರ. ಬ್ರಿಟನ್ನು ಭರತಖಂಡಕ್ಕೆ ನೀಡಿರುವುದು ಅದರ ಗೌರವಕ್ಕೆ ಹಾನಿತರುವಂತಹುದಾಗಿದೆ. ಭಾರತವಂತೂ ಅದನ್ನು ಸ್ವೀಕರಿಸುವ ಹಾಗಿಲ್ಲ.' ಮದರಾಸಿನ 'ಸ್ವರಾಜ್ಯ'

'ನಾಯಕರೆಲ್ಲ ಒಂದಾಗಿ ಈ ಶ್ವೇತಪತ್ರದ ಟೊಳ್ಳುತನವನ್ನು ಬಯಲಿಗಿಡಬೇಕು.' ಪುಣೆಯ 'ಮರಾಠಾ'

'ಶ್ವೇತಪತ್ರವು ಹೊರಬಿದ್ದು ಚೀಲದಿಂದ ಬೆಕ್ಕು ಹೊರಬಿದ್ದಂತಾಗಿದೆ; ಪರ್ವತಬಿಲದಿಂದ ಒಂದು ಇಲಿಯು ಹುಟ್ಟಿದಂತಾಗಿದೆ.' ದಿ ರಂಗೂನ್ ಮೇಲ್.

'ಇನ್ನು ಮುಂದೆ ಈ ವಿಚಾರದಲ್ಲಿ ಚರ್ಚೆಗಳೇಕೆ; ವಾದವೇಕೆ? ವಾದಮಾಡಿ ಕಿಟ್ಟ ಬರೆದು ಆಲಿಸಿ ೫ ವರ್ಷ ಕಳೆದೆವು. ಇನ್ನೂ ಏತಕ್ಕೆ ಈ ನರಕಯಾತನೆ?' ಕೆ. ಎಸ್. ದತ್ತ.

'ಭರತಖಂಡದ ಹಣೇ ಬರಹವು ಚೆನ್ನಾಗಿಲ್ಲ. ಅದಕ್ಕೆ ಶನಿಕಾಟ ಬಹಳವಾಗಿದೆ. ಇನ್ನು ಕಲಿಗಳ ಮಾತೇನು? ಶ್ವೇತಪತ್ರದಲ್ಲಿ ಸೂಚಿತವಾಗಿರುವುದು ಸ್ವಾತಂತ್ರ್ಯವಲ್ಲ; ಶಾಶ್ವತ ದುಃಖ.'
ವಿ. ವಿ. ಗಿರಿ.

'ಸ್ತ್ರೀಯರಿಗಂತೂ ಇದು ಪರಮ ಅನ್ಯಾಯಮಾಡಿದೆ.'
ಬೇಗಂ ಷಾ ನವಾಜ್.

'ಶಾಸನ ಸಭೆಗಳಿಗೆ ಹಣಕಾಸಿನ ವ್ಯವಹಾರದ ಮೇಲಧಿಕಾರವಿಲ್ಲ. ಗವರ್ನರ್ ಜನರಲ್ಲರಿಗೇ ಸರ್ವಾಧಿಕಾರ. ಬಹಳ ಅಸಮರ್ಪಕ.' ಮುಂಬಯಿ ಪತ್ತನ ವರ್ತಕರ ಸಂಘ.

'ಶ್ವೇತಪತ್ರದಿಂದ ಯಾರಿಗೂ ತೃಪ್ತಿಯುಂಟಾಗಿಲ್ಲ. ಸಂರಕ್ಷಣೆಗಳುಳ್ಳ ಬೇಲಿ ನೋಡಿದರೆ ನಮಗೆ ದಕ್ಕುವುದು 'ದೇಹಲಿ ಲಡ್ಡು' ಎಂದೇ ಕಂಡುಬರುತ್ತದೆ.' ಭಾ-ವಾ|| ಸಂಘಾಧ್ಯಕ್ಷ ಶ್ರೀ ಓಜಾ.

'ಪೂರ್ಣ ನಿರಾಶೆಯುಂಟುಮಾಡಿದೆ. ಇದು ಬರೀ ಶಕ್ತಿನ ಏರ್ಪಾಟು. ಇದು ನಮಗೆ ಬೇಕಿಲ್ಲ.' ವರ್ತಕರ ಪ್ರಮುಖರು.

'ಶ್ವೇತ ಪತ್ರದ ಪ್ರತ್ಯಕ್ಷರವೂ ಬ್ರಿಟೀಷರ ಹಿತಕ್ಕಾಗಿ ಬರೆದಿದೆ.' ಸರ್ ಲಲ್ಲೂಭಾಯಿ ಶಾಮಲ್ದಾಸ್.

ವ್ಯಾಪಾರಿಗಳ ತಂಡವು ಇದನ್ನು ಒಂದು ಶಾಪವೆಂದು ಭಾವಿಸುತ್ತದೆ.' ಕರಾಚಿ ವಾಣಿಜ್ಯಸಂಘ ಸುಂದರದಾಸ್.

'ನಾನು ಆ ಶ್ವೇತಪತ್ರವನ್ನು ಇಕ್ಕಳದಿಂದ ಸಹಾ ಮುಟ್ಟುವುದಿಲ್ಲ.' ಡಾ|| ಖರೆ.

'ಶ್ವೇತಪತ್ರವನ್ನು ತಿಪ್ಪೆಗೆಸೆಯಿರಿ.' ವಿ. ಜೆ. ಪಟೇಲ್.

'ಕಾಂಗ್ರೆಸ್ಸಿನವರು ಇದರ ವಿಚಾರ ಎತ್ತಬೇಕಾದ್ದೇ ಇಲ್ಲ. ಬಿಳೀ ಪತ್ರವಾಗಲಿ, ಕರೀಪತ್ರವಾಗಲಿ, ಉದಾಸೀನವೇ ನಮ್ಮ ನೀತಿ.' ಡಾ|| ಆಲಂ.

'ಶ್ವೇತಪತ್ರವು ಬಹಳ ಅತೃಪ್ತಿಕರವಾಗಿದೆ.'
ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ.

'ನಿಜ ಹೇಳಬೇಕಾದರೆ ಶ್ವೇತಪತ್ರವು (ಭಾರತೀಯರ) ಕೇಡುಗಾಲದ ಶಸ್ತ್ರ. ಇದು ಶುದ್ಧ ಠಕ್ಕಿನ ರಚನೆ. ನಿನ್ನ ಎಂಜಲಲ್ಲಿ ನೀನೇ ಮುಳುಗು ಹಾಕೆಂದು ಶ್ವೇತಪತ್ರವನ್ನು ಬ್ರಿಟನ್ನಿಗೇ ಬಿಡುವುದು ಮೇಲು.' ಡಿ. ವಿ. ಗುಂಡಪ್ಪ.

'ಶ್ವೇತಪತ್ರವು ತೃಪ್ತಿಕರವಾಗಿಲ್ಲ. ಅದರಲ್ಲಿ ಚಿತ್ರವು ಪೂರ್ಣವಾಗಿಲ್ಲ.' ಡಾ|| ಜಿಯಾ ಉದ್ದೀನ್ ಅಹಮದ್.

'ಗವರ್ನರ್ ಜನರಲ್ಲಿಗಿರುವ ಅಧಿಕಾರ ನೋಡಿದರೆ ಸರಕಾರರಥವನ್ನು ಕಿರುಬೆರಳಿಂದ ಉರುಳಿಸುವಂತಿದೆ.'
ಮಿ|| ಅನ್ವರ್ ಉಲ್ ಅಜೀಂ.

'ಇದು ಚೌಚೌ. ಎಲ್ಲರೂ ಇದನ್ನು ಎಸೆಯಬೇಕು. ಗವರ್ನರ್ ಜನರಲ್ ಇನ್ನು ಮೇಲೆ ಮುಸೋಲಿನಿ. ಇದೆಲ್ಲ ಪ್ರಭುತ್ವಬದ್ಧದ ನಿರಂಕುಶಾಧಿಕಾರ' ಮಿ|| ಮಲ್ಲಿಕ್‌ಬರಕತ್ ಅಲಿ.

'ಮುಖಮಲ್ ಕೈಚೀಲದೊಳಗಣ ವಜ್ರಮುಷ್ಟಿಯಂತಿದೆ ಶ್ವೇತಪತ್ರ.' ಖಾಸಿ ಅಬ್ದುಲ್ ರಹಿಮಾನ್.

'ಇನ್ನೊಂದು ಸಂರಕ್ಷಣಾ ಬೇಲಿಯಿಲ್ಲದಿದ್ದರೆ ಅಂಗೀಕರಿಸುತ್ತಿದ್ದೆ.' ಮೌಲಾನಾ ಷೌಕತಾಲಿ.

'ಇದರಿಂದ ಬಿಡಿಕಾಸಿನ ಪ್ರಯೋಜನವೂ ಆಗುವ ಹಾಗಿಲ್ಲ.'
ಎ. ಕೆ. ಫಜಲುಲ್ ಹಕಾ.

'ಶ್ವೇತಪತ್ರವು ದೇಶಕ್ಕೆ ಬೇಕಿಲ್ಲ. ಮುಸಲ್ಮಾನರಿಗಂತೂ ಅದು ಸಂತುಷ್ಟಿಗೊಳಿಸುವಂತೆಯೇ ಇಲ್ಲ.'
ಸರ್ ಮಹಮದ್ ಇಕಬಲ್.

'ಅಷ್ಟೇನೂ ಅತೃಪ್ತಿಕರವಾಗಿಲ್ಲ.'
ಸರ್ ಅಬ್ದುಲ್ ಕ್ವಾಯಂ.

'ಇದಕ್ಕಿಂತ ಹೆಚ್ಚಾಗಿ ನಾನು ನಿರೀಕ್ಷಿಸಲಿಲ್ಲ. ಶ್ವೇತಪತ್ರದಲ್ಲಿ ಜವಾಬ್ದಾರಿ ಸರಕಾರದ ವಾಸನೆಯೇ ಇಲ್ಲ.'
ಮಹಮ್ಮದಾಲಿ ಜಿನ್ನ.
ವಿಶ್ವಕರ್ನಾಟಕ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎನ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಪ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳುಬಿಸಿ, ಕಣ್ಣುಹಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಫ್ಪಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ತುರಿ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕ್ಕ ಮಕ್ಕಳ ಮದ್ದುಗಳೂ ಹೋಮಿಯೋಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿಕಿತ್ಸೆಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[31] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು,** ದ. ಕ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಉಬ್ಬಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯನ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[12] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[13] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಏಪ್ರಿಲ್ ೧೯೩೩ [ಸಂಚಿಕೆ ೪೭

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ಸಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವುವು. ಈ ಗ್ರಂಥವು ೨೮೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು



ಯಜಮಾರ್ ಅಂಡ್ ಸನ್
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್ ಬೋರ್ಡ್, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [17]

ಅಮೇರಿಕೆಯ ಟೆಕ್ಸಾಸ್‌ನಗರದ ಡೆಪ್ಯುಟಿಮಾರ್ಷಲ್ ಬಿಲ್ಲಿಂಗ್‌ಸ್ಲೇರವರು ಒಬ್ಬ ಕಳ್ಳನನ್ನು ಅಟ್ಟಿಸಿಕೊಂಡು ಹೋಗುವಾಗ ಕಳ್ಳನು ಅವರಿಂದ ತಪ್ಪಿಸಿಕೊಂಡು ಹೋದನು. ರಾತ್ರಿ ಅವರು ಮಲಗಿದ್ದಾಗ ಕಳ್ಳನು ಅವರ ಕೊಠಡಿಯ ಬೀರುವಿನಲ್ಲಿ ಅವಿತುಕೊಂಡಿರುವಂತೆ ಕನಸಾಯಿತಂತೆ! ಅವರು ಕೂಡಲೇ ಎಚ್ಚತ್ತು, ಬೀರುವನ್ನು ತೆರೆದು ನೋಡಲು ಕಳ್ಳನು ನಿಜವಾಗಿಯೂ ಅದರಲ್ಲಿ ಅವಿತುಕೊಂಡಿದ್ದನಂತೆ!

ಶ್ರೀಗುರುತತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶ್ರೀ ಎಡೆಯೂರು ಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯವರ ರಥೋತ್ಸವ.

ಇದೇ ಏಪ್ರೀಲ್ ಮಾಹೆ 2 ನೇ ತಾರೀಖು ಭಾನುವಾರ ದಿವಸ ಪದ್ಧತಿಪ್ರಕಾರ ರಥೋತ್ಸವವು ಅತಿವೈಭವದಿಂದ ನೆರವೇರಿತು. ಯಥೇಚ್ಛವಾಗಿ ಅಂಗಡಿಗಳು ದನಗಳು 7-8 ಸಾವಿರ ಜನ ಸ್ವಾಮಿಭಕ್ತರು ಸೇರಿದ್ದರು. ತೇರಿಗೆ ಸರಪಣಿಗಳಿಲ್ಲದೆ ಹಗ್ಗಗಳಿಂದ ಎಳೆಯುತ್ತ ಕೊಂಡರೆ ಹರಿಯುತ್ತಿರುವುದನ್ನು ನೋಡಿ ಯಡತೊರೆ ಸಾಹುಕಾರ್ ಮ|| ರಾ|| ಬಳೆ ಸಿದ್ಧಲಿಂಗಶೆಟ್ಟರವರು ಈ ಸಾರಿ ರಥೋತ್ಸವಕ್ಕೆ ಎರಡು ಭಾರಿ ಸರಪಣಿಗಳನ್ನು (ಸುಮಾರು 200 ರೂಪಾಯಿ ಬೆಲೆ) ಒಪ್ಪಿಸಿ ಶ್ರೀ ಸ್ವಾಮಿಯವರ ಕೃಪಾಕಟಾಕ್ಷಕ್ಕೂ ಭಕ್ತರುಗಳ ಮೆಚ್ಚಿಗೆಗೂ ಪಾತ್ರರಾದರು. ಈ ಜಾತ್ರೆಗೆ ಬಂದಿದ್ದ ಜನಗಳಿಗೆ ಊಟದ ಏರ್ಪಾಡನ್ನು ಹುಲಿಯೂರು ದುರ್ಗದ ವೇ|| ಗುರುಸಿದ್ಧಶಾಸ್ತ್ರಿಗಳವರು ಮಾಮೂಲು ಪ್ರಕಾರ ಈ ಸಾರಿಯೂ ತುಂಬಾ ವಿಚಕ್ಷಣೆಯಿಂದ ನೆರವೇರಿಸಿ ಪುಣ್ಯಭಾಗಿಗಳಾದರು. ಇವರಿಗೆ ಸಹಾಯಕರಾದ ಸಂತೆಮಾವತ್ತೂರು ಮ|| ರಾ|| ಹೊಸಳ್ಳಪ್ಪನವರ ಮಹನತ್ತು ಶ್ಲಾಘನೀಯವಾದದ್ದು. ಶ್ರೀ ದೇವಸ್ಥಾನದ ಧರ್ಮದರ್ಶಿಗಳಲ್ಲಿ ಪ್ರಮುಖರಾದ ಕುಣಿಗಲು ಮ|| ರಾ|| ರುದ್ರಪ್ಪನವರು ಮತ್ತು ಸ್ಥಾನಿಕರಾದ ವೇ|| ಸಿದ್ಧಲಿಂಗಶಾಸ್ತ್ರಿಗಳವರು ಇವರುಗಳು ಈ ದೇವಸ್ಥಾನದ ವಿಷಯದಲ್ಲಿ ಶ್ರದ್ಧೆವಹಿಸಿ ಕೆಲಸ ಮಾಡುತ್ತಿರುವುದು ತುಂಬಾ ಪ್ರಶಂಸನೀಯವಾದದ್ದು. ಈ ರಥೋತ್ಸವಕ್ಕೆ ಅಸಿಸ್ಟೆಂಟ್ ಕಮಿಷನರು ಮ|| ರಾ|| ಸಿದ್ದಣ್ಣಗೌಡರು ಮ|| ರಾ|| ಅಮಲ್ದಾರ್ ರಾಜಶೇಖರ ಒಡೆಯರವರು ಅಮಲ್ದಾರ್ ಮ|| ರಾ|| ಚೆಲುವಪ್ಪಅಯ್ಯರ್‌ರವರು ಯಜುಕೇಷನ್ ಏ.ಜಿ. ಯವರ ಆಫೀಸಿನ ಸೂಪರಿಂಟೆಂಡೆಂಟರು ಮ|| ರಾ|| ಸಿದ್ಧರಾಮಯ್ಯನವರು ಮ|| ರಾ|| ಅಡ್ವೋಕೇಟ್ ಗುರುನಂಜಯ್ಯನವರು ಮತ್ತು ಅನೇಕಜನ ಖಾಸಗಿ ದೊಡ್ಡಮನುಷ್ಯರುಗಳು ಆಗಮಿಸಿದ್ದರು. ವೀರಶೈವ ಸಮಾಜಕ್ಕೆ ಕೇಂದ್ರಸ್ಥಾನವಾದ ಶ್ರೀ ಯಡಿಯೂರು ಕ್ಷೇತ್ರದಲ್ಲಿ ಶ್ರೀ ಸ್ವಾಮಿಯವರ ರಥೋತ್ಸವವು ಅತಿವೈಭವದಿಂದ ನೆರವೇರಿತು. ನೀರಿನ ಅನುಕೂಲತೆಯು ಚೆನ್ನಾಗಿತ್ತು. ಯಾವ ವಿಧವಾದ ರೋಗಾದಿ ಉಪದ್ರವವೂ ಇರಲಿಲ್ಲ. ಆದರೆ ಈ ದೇವಸ್ಥಾನಕ್ಕೆ ಪಾರುಪತ್ತೇಗಾರರು ಅನ್ಯಮತೀಯರಾದ್ದರಿಂದ ದೇವಸ್ಥಾನದ ಒಳಗಡೆಯಲ್ಲಿ ಹಿಗಾ ನೋಡುವುದಕ್ಕೆ ಅವಕಾಶವಿಲ್ಲವಾಗಿರುತ್ತದೆ. ಇಬ್ಬರು ಪಾರುಪತ್ತೇಗಾರರು ಇರುವುದು ಅನಾವಶ್ಯಕವಾದದ್ದು. ಒಳಗೂ ಹೊರಗೂ ನೋಡತಕ್ಕ ಬುದ್ಧಿವಂತರಾದ ಒಬ್ಬ ಪಾರುಪತ್ತೇಗಾರರನ್ನು ಘನಸರ್ಕಾರದವರು ನೇಮಿಸಿ ಶ್ರೀ ದೇವಸ್ಥಾನದ ಉನ್ನತಿಗೆ ಉತ್ತೇಜನ ಕೊಡುತ್ತಾರೆಂದು ನಂಬಿರುತ್ತೇವೆ.

ಪ್ರತ್ಯಕ್ಷದರ್ಶಿ.

ವಿವಾಹಮಹೋತ್ಸವ.

ಕಡೂರ್ ತಾ|| ಕಡೂರುಹಳ್ಳಿ ಗ್ರಾಮದಲ್ಲಿರುವ ಕಲ್ಲುಮಠದ ವೇ|| ಭಟ್ಟಯ್ಯನವರ ಸುಪುತ್ರಿ ಹ|| ಸಂ|| ಸೌ|| ಚಿ|| ಸೌ|| ಪಾರ್ವತಮ್ಮನೆಂಬ ಕನ್ಯೆಯನ್ನು ತೀರ್ಥಹಳ್ಳಿ ತಾಲೂಕು ಕೊಗ್ರೇಮಠದಲ್ಲಿರುವ ಕಳೂರುಮಠದ ವೇ|| ನಂಜಯ್ಯನವರ ಪುತ್ರ ಚಿ|| ವೇ|| ಕೆ. ಎಂ. ಸಿದ್ಧಪ್ಪಯ್ಯಶಾಸ್ತ್ರಿ ಎಂಬ ವರನಿಗೆ ಕೊಟ್ಟು ಕಡೂರುಹಳ್ಳಿಯಲ್ಲೇ ಇದೇ ಅಂಗಿರಸ ನಾಮಸಂವತ್ಸರ ಫಾಲ್ಗುಣ ಶು|| ೧೧ ನೆಯ ತಾ|| 8-3-1933 ನೇ ಬುಧವಾರ ಪಂಚಕಲಶಸ್ಥಾಪನಾಪೂರ್ವಕ ಶಾಸ್ತ್ರೋಕ್ತವಾಗಿ ಕನ್ಯಾದಾನ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ಶುಭಕಾರ್ಯಕ್ಕೆ ಅನೇಕ ಗ್ರಾಮಗಳ ಚರಪಟ್ಟಾಧಿಕಾರಿಗಳು ಮಠಸ್ಥರು, ಗೌಡರು, ಬಂಧುಗಳು ಸಹ ಆಗಮಿಸಿದ್ದರು. ನೆರೆದ ಸಭಾಮಂದಿರದಲ್ಲಿ ಶಿವನಾಮಸ್ಮರಣಪೂರ್ವಕವಾದ ಸ್ತೋತ್ರವೂ, ಮಂಗಲವಾದ್ಯವೂ, ಸಂಗೀತವೂ, ವೇದಘೋಷವೂ, ನಡೆದವು. ಈ ಕಾರ್ಯವು ಮಳಲಿಮಠದ ಶ್ರೀ ಗುರುನಾಗಾರ್ಜುನ ಶಿವಾಚಾರ್ಯರ ಅಧ್ಯಕ್ಷತೆಯಲ್ಲೂ, ಉಡೇವದ ಚಿಕ್ಕಮ್ಮರುಮಠದ ವೇ|| ಮರುಳಸಿದ್ದಯ್ಯನವರ ಕಾರ್ಯಾಧ್ಯಕ್ಷತೆಯಲ್ಲೂ ಉಡೇವದ ಚಿಟ್ಟಿದಾವರೆಕೆರೆಮಠದ ವೇ|| ಕೊಟ್ರಪ್ಪಶಾಸ್ತ್ರಿಗಳ ಪೌರೋಹಿತ್ಯದಲ್ಲಿಯೂ ನಡೆದು ಪ್ರಭಾಪೋಷಣೆಗಾಗಿ ವಧೂವರರಿಂದ ತೆಗೆಯಿಸಿದ ೨ ರೂಪಾಯಿಗಳು ವೇ|| ಕೊಟ್ರಪ್ಪಶಾಸ್ತ್ರಿಗಳ ದ್ವಾರಾ ಶ್ರೀ ಪ್ರಭಾಕ್ಕೆ ರವಾನಿಸಲಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಕಾಶೀ ಹಿಂದೂ ವಿಶ್ವವಿದ್ಯಾನಿಲಯದವರು ಹೊಸದಾಗಿ ಒಂದು ಪುರೋಹಿತರ ಪರೀಕ್ಷೆಯನ್ನು ಏರ್ಪಡಿಸಿರುವರು!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ರೇಣುಕಾಚಾರ್ಯ ಫ್ರೀ ಬೋರ್ಡಿಂಗ ವಿಜಾಪುರ.

ಪ್ರತಿವರುಷದಂತೆ ಈ ವರುಷವಾದರೂ ಜಾಹಿರಾತಿನ ಮೂಲಕ ಪ್ರಸಿದ್ಧಪಡಿಸಿದಪ್ರಕಾರ ಶ್ರೀ ತೊರವಿ ಹಿರೇಮಠ ಪಟ್ಟದಸ್ವಾಮಿಗಳವರು ಮುಲಕಿ ಪರೀಕ್ಷೆಗೆ ಬಂದ (೩೫) ಜನ ವೀರಶೈವ ವಿದ್ಯಾರ್ಥಿಗಳಿಗೆ ಅನ್ನೋದಕವ್ಯವಸ್ಥೆಯನ್ನು ಚೆನ್ನಾಗಿ ಮಾಡಿಸಿದ್ದರು. ಈ ಹುಡುಗರಲ್ಲಿ (೨೭) ಜನ ವೀರಶೈವವಿದ್ಯಾರ್ಥಿಗಳಲ್ಲದೆ ೨ ಅಂಬಿಗ, ೧ ಕ್ಷತ್ರಿಯ, ೧ ಕುರುಬ, ೧ ಮುಸಲ್ಮಾನ, ೧ ದಾಸರು, ೧ ಡೊಂಬರು ೧ ಲಮಾಣಿ ಈ ಪ್ರಕಾರ (೮) ಇತರ ಜಾತೀಯ ವಿದ್ಯಾರ್ಥಿಗಳೂ ಬಂದಿದ್ದರು.

ಇದಕ್ಕೆ ವಿಜಾಪೂರ ತಾಲೂಕು ಶಿಕ್ಷಕಸೊಸೈಟಿಯ ಎಲ್ಲ ಶಿಕ್ಷಕರೂ ಕೂಡಿಸಿ ಹತ್ತುರೂಪಾಯಿಗಳನ್ನು ಕೊಟ್ಟರು. ಇದರಂತೆ ಇನ್ನುಳಿದ ಶಿಕ್ಷಕಸೊಸೈಟಿಯವರಾದರೂ ಸಹಾಯಮಾಡತಕ್ಕದ್ದು. ಮತ್ತು ಇದಕ್ಕೆ ಮ|| ರಾ|| ದತ್ತಾತ್ರಯ ಬಳವಂತಜೋಶಿ ಪ್ಲೀಡರ ವಿಜಾಪೂರ ಇವರು ದೀವಿಗೆಯನ್ನು ಒದಗಿಸಿ ಕೊಟ್ಟರು. ಇದಲ್ಲದೆ ಡಿ. ಬಿ. ಫಡಣೀಸ ಮತ್ತು ಇವರ ಮಿತ್ರಮಂಡಳಿ ಗೋಖಲೆ ಮೊದಲಾದವರೂ ಮುನಿಸಿಪಾಲಟಿ ಶಾಲಾಮಾಸ್ತರರೂ ಬಹಳ ಸಹಾಯಮಾಡಿದರು. ಮತ್ತು ಮುಸ್ಸಯ್ಯಸ್ವಾಮಿಮಠದ ವ್ಯವಸ್ಥಾಪಕರು ಪ್ರತಿವರುಷದಂತೆ ಹುಡುಗರಿಗೆ ಊಟಮಾಡಲಿಕ್ಕೆ ಸ್ಥಾನವನ್ನು ಕೊಟ್ಟರು. ಇದರಂತೆ ಮುಂದಾದರೂ ಮೇಲ್ಕಂಡ ಮಹನೀಯರಲ್ಲದೆ ಇನ್ನುಳಿದ ಭಕ್ತಮಾಹೇಶ್ವರರೂ, ಶಿಕ್ಷಕರೂ ಸಹಾಯಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಲೆಂದು ಆಶಿಸುವೆನು.

ಪ್ರತ್ಯಕ್ಷದರ್ಶಿ.

ನಮ್ಮ ನಾಡಿನ ಪಂಚಾಂಗಗಳ ಪ್ರಭಾವ.

ಲೇಖಕ—ಉತ್ತರಕನ್ನಡಿಗನಾದ
'ದೈವಜ್ಞವಿನೋದ' ಶಿರೋಳ.

ಉತ್ತರ ಕರ್ನಾಟಕದಲ್ಲಿ ಈಗ ಪಂಚಾಂಗಗಳ ಉದಯದ ಸುಗ್ಗಿಯು. ಇವು ಧೂಮಕೇತುವಿನಂತೆ ತೋರಿ ಆಸ್ತಿಕರನ್ನು ಸಂಶಯ ಸಮುದ್ರದಲ್ಲಿ ಧುಮುಕಿಸತೊಡಗಿವೆ. ಪಂಚಾಂಗಗಳೆಷ್ಟು ಉದಯವಾಗುವವೋ ಅಷ್ಟು ಭಿನ್ನಭಿನ್ನವಾದ ಗಣಿತದಿಂದ ಸಿದ್ಧವಾಗಿರುವವು. ಧಾರವಾಡದಲ್ಲಿ ಕುಳಿತು ಗುಣಿಸಿದವರಿಗೂ ಗದಗಿನಲ್ಲಿ ಗುಣಿಸಿದವರಿಗೂ ಭೂಮ್ಯಾಕಾಶದಷ್ಟು ಅಂತರ ಅದಿರಲಿ, ಗದಗಿನಲ್ಲಿಯೇ ಉದಯವಾದ ಎರಡು ಪಂಚಾಂಗಗಳು ನೇಕು ಹಿಮಾಲಯದಂತೆ ಕಾದಿಕೊಂಡಿರುತ್ತವೆ. ಪರಪನಹಳ್ಳಿ ಮಹಾಗಾಂವದ ಕಡೆಗೆ ಹೋದರಂತೂ ತೀರಿತು. 'ಅಲ್ಲಿಗೆ ಪಂಚಾಂಗಂಪಡಿರೊಟ್ಟಿ' ಎಂಬಂತಾಗುವದು. ಕನ್ನಡನಾಡಿನ ಸಾಹಿತ್ಯದ ರಂಗಭೂಮಿಯಲ್ಲಿ ಪಂಚಾಂಗಕರ್ತರಿಗೆ ಪ್ರವೇಶವು ಬೇಕಿಲ್ಲವೇನು? ತಮ್ಮ ಹೆಸರು ಪ್ರಸಿದ್ಧವಾಗಬೇಕಾದರೆ ಈ ರೀತಿ ಯದ್ವಾತದ್ವಾ ಪಂಚಾಂಗಗಳನ್ನು ಪ್ರಕಟಿಸಿ ಪ್ರಚಾರ ಮಾಡುವದು ವಿಹಿತವಲ್ಲ. ಗಣಿತದೋಷದ ಕಾರ್ಗತ್ತಲೆಯು ಕಾಣದಂತೆ ರಂಟೆ ಕುಂಟೆಹೊಡೆಯುವ ಮುಹೂರ್ತಗಳನ್ನೇ ಹೆಚ್ಚಾಗಿಹಾಕಿ ಪಂಚಾಂಗದ ಪಕ್ಕಪಾಲು ನಿಷ್ಪ್ರಯೋಜನವಿಷಯಗಳನ್ನು ತುಂಬಿ ಜಾಹಿರಾತುದಾರರ ದುಡ್ಡಿನರುಚಿಗೆ ಅವರಿಗೆ ಸವಲತ್ತು ಕೊಟ್ಟು ಇಡೀ ಪಂಚಾಂಗದ ಗೌರವವನ್ನೇ ಕಳೆಯುತ್ತಿರುವುದು ಖೇದಜನಕವೇಸರಿ. ಈಗಿನ ನಮ್ಮ ಪಂಚಾಂಗಕರ್ತರು ಯಾವ ಸಿದ್ಧಾಂತ ಪ್ರಮಾಣಾಧಾರದಿಂದ ತಮ್ಮ ಪಂಚಾಂಗಗಳನ್ನು ಗುಣಿಸಿ ಪ್ರಕಟಿಸಿರುತ್ತಾರೆಂಬುವದನ್ನು ಸ್ಪಷ್ಟವಾಗಿ ಪ್ರಸಿದ್ಧಪಡಿಸಬೇಕು. ಖಗೋಲದಲ್ಲಿ ಸಂಚರಿಸುತ್ತಿರುವ ಗ್ರಹಾದಿಗಳ ಚಲನವಲನ ಅಸ್ತೋದಯಗಳನ್ನು ಸಪ್ರಮಾಣವಾಗಿ ಸಿದ್ಧಾಂತಗೊಳಿಸಿಕೊಂಡು ಪ್ರಸಿದ್ಧಪಡಿಸಿದ ವಿಷಯವು ಬಾಯಿಮಾತಿನಲ್ಲಿಯೂ ಪಂಚಾಂಗದಲ್ಲಿಯೂ ಉಳಿಯದೆ ಇಡೀ ಪ್ರಪಂಚಕ್ಕೆ ಪ್ರತ್ಯಕ್ಷವಾಗಿ ಕಾಣಬೇಕಾಗುವದು. ಜ್ಯೋತಿಶ್ಶಾಸ್ತ್ರವು ಬಾಯಿಪುರಾಣವಲ್ಲ. 'ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ ಚಂದ್ರಾರ್ಕೌ ಯತ್ರಸಾಕ್ಷಿಣೌ' ಸೂರ್ಯಚಂದ್ರರಿಗೊದಗುವ ಗ್ರಹಣಾದಿಗಳಿಂದಲೂ ಗುರು-ಶುಕ್ರಾಸ್ತೋದಯಾದಿಗಳಿಂದಲೂ ಸರ್ವಸಾಮಾನ್ಯಜನಗಳಿಗೂ ಸಹ ಪ್ರತ್ಯಕ್ಷವಾಗಿ ತೋರುತ್ತಿರುವದು. ಇವಲ್ಲದೆ ಇನ್ನುಳಿದ ಗ್ರಹಗಳ ಚರ್ಯವು ಸಂಶೋಧಕಬುದ್ಧಿಶಾಲಿಗಳಿಂದ ಪ್ರತ್ಯಕ್ಷವಾಗಿ ಕಂಡುಹಿಡಿಯಲ್ಪಡುವದು. ಅದು ಏನೇ ಇರಲಿ. ನಮ್ಮ ಪಂಚಾಂಗಕರ್ತರು ದಯವಿಟ್ಟು ತಮ್ಮಿಂದಾಗುತ್ತಿರುವ ತಪ್ಪುತೊಡಕನ್ನು ಸುಧಾರಿಸಿಕೊಳ್ಳಲು ಆಗಲಿಕ್ಕಿಲ್ಲ. ಯಾಕೆಂದರೆ ತಾವು ಪ್ರಚಾರಮಾಡುತ್ತಾ ಬಂದಂದಿನಿಂದ ಆಗುತ್ತಲಿದ್ದ ತಪ್ಪುಗಳನ್ನು ಜಗತ್ತೇ ಹೇಳಿದರೂ ಕೇಳದೆ ಪುನಃಪುನಃ ಹೊರಡಿಸುತ್ತಲಿದ್ದಾರೆ. ಆಗಲಿ, ಕರ್ನಾಟಕಸಾಹಿತ್ಯಸಮಿತಿಯವರು ಈ ಜ್ಯೋತಿಶ್ಶಾಸ್ತ್ರದಕಡೆಗೆ ಸ್ವಲ್ಪ ಹೊರಳಿ ಪಂಚಾಂಗಕರ್ತರ ಸಮಾಚಾರವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಗತವರುಷಾಂತದಲ್ಲಿ ಅಸ್ತನಾದ ಶುಕ್ರನಬಗ್ಗೆ ನಮ್ಮ ಉತ್ತರಕನ್ನಡನಾಡಿನ ಪಂಚಾಂಗದವರ ತಪ್ಪೊಂದನ್ನೇ ಈಗ ವಾಚಕರ ಮುಂದಿಟ್ಟು ಈ ಲೇಖವನ್ನು ವಿರಮಿಸುವೆನು. ಶುಕ್ರಾಸ್ತಕಾಲವು ಫಾಲ್ಗುಣ ಶು|| ಪೌರ್ಣಿಮ ಎಂದು ಒಬ್ಬರು. ಮತ್ತೊಬ್ಬರು ಫಾಲ್ಗುಣ ಬ|| ೫. ಬೇರೊಬ್ಬರು ಫಾಲ್ಗುಣ ಬ|| ೭ ಮುಗದೊಬ್ಬರು ಫಾಲ್ಗುಣ ಬ|| ೯ ಇನ್ನೊಬ್ಬ ಮಹಾಶಯರು ಫಾಲ್ಗುಣ ಬ|| ೧೧ ಮತ್ತೊಬ್ಬ ಮಹಾನುಭಾವರು ಫಾಲ್ಗುಣ ಬ|| ೧೨. ಹೀಗಾದಬಳಿಕ ಪಂಚಾಂಗವನ್ನು ನೋಡಿ ಪರಮಆಸ್ತಿಕಭಾವನೆಯಿಂದ ನೆರವೇರುವ ಕಲ್ಯಾಣಮಹೋತ್ಸವಗಳ ಫಲಾಫಲಗಳು ಪಂಚಾಂಗಮಾಡಿದ ಪುಣ್ಯಾತ್ಮರ ಪಾಲಿಗೆ ಬರಲಿಕ್ಕಿಲ್ಲವೇ? ಶುಕ್ರನೆಂದರೆ ಎಲ್ಲಿಯೋ ಮೂಲೆಯಲ್ಲಿ ಅಡಗಿರುವ ಗ್ರಹವಲ್ಲ. ಪ್ರತಿದಿವಸ ಬೆಳಗ್ಗೆ ೩ ಗಂಟೆಗೆ ಮೂಡಿ ಸೂರ್ಯೋದಯದವರೆಗೆ ಪ್ರಕಾಶನಾಗಿರುವನು. ಇದಕ್ಕೆ ಬೆಳಗಿನ ಬೆಳ್ಳಿಚಿಕ್ಕಿಯೆನ್ನುವದು ಪ್ರಸಿದ್ಧವಿದೆ ಈ ಬೆಳ್ಳಿಚಿಕ್ಕಿಯು ಫಾಲ್ಗುಣ ಬ|| ೧ ದಿವಸ ದುರ್ಬೀಣಯಂತ್ರಮೂಲಕ ನೋಡಿದರೂ ಕಾಣಲಿಲ್ಲಾ. ಪಂಚಾಂಗದಲ್ಲಿ ಮಾತ್ರ ಫಾಲ್ಗುಣ ಬ|| ೧೨ ವರೆಗೆ ಅತ್ಯಂತತೇಜೋಮಯವಾಗಿ ಹೊಳೆಯುತ್ತಿತ್ತು. ಈ ಹನ್ನೆರಡು ದಿವಸಗಳಲ್ಲಿ ಬೇಕಾದಷ್ಟು ವಿವಾಹಕಾರ್ಯಗಳಾದವು. ಹಸಿಬಿಸಿಪಾಂಡಿತ್ಯವೆಂಬಾಧಾರದಿಂದ ಪಂಚಾಂಗಗುಣಿಸಿ ಪ್ರಕಟಿಸಿ ಪಾಪದ ಪಾಲುಗಾರರಾಗುವದಕ್ಕಿಂತ ಹಳ್ಳಿಊರುಗಳಲ್ಲಿ ಕವಡೆಹೊತ್ತಿಗೆ ಹೇಳಿಶಿವ ಎಂದು ಉದರಪೋಷಣಮಾಡಿಕೊಳ್ಳುವದು ವಿಹಿತವಾದದ್ದು. ಅಭಿಮಾನವಿದ್ದರೆ ಸಿದ್ಧಾಂತರೀತ್ಯಾ ಪಂಚಾಂಗಗಳನ್ನು ಗುಣಿಸಿ ಪ್ರಸಿದ್ಧಪಡಿಸಿ ಹೆಸರುವಾಸಿಗಳಾಗಲೆಂದು ದೈವಜ್ಞವಿನೋದನು ಹಾರೈಸುತ್ತಾನೆ.

ಭಾರತೀಯರ ದುರ್ಗತಿ.

ಭಾರತೀಯರು ಒಂದಾನೊಂದುಕಾಲದಲ್ಲಿ ಸದ್ಗತಿಯ ಶಿಖರದಲ್ಲಿದ್ದರು. ಈಗ ದುರ್ಗತಿಯ ಪಾತಾಳದಲ್ಲಿರುವರು. ಇದಕ್ಕೆ ತಾವೇ ಮುಖ್ಯ ಕಾರಣವೆಂದು ಅವರು ತಿಳಿದುಕೊಂಡಿಲ್ಲ. ಪಾಶ್ಚಾತ್ಯರಲ್ಲಿಯೂ, ಪೂರ್ವಾತ್ಯರಲ್ಲಿಯೂ, ಅನೇಕರು ಒಳ್ಳೇಸ್ಥಿತಿಯಲ್ಲಿರುವುದನ್ನು ನೋಡಿ ನಮಗೆ ಯಾಕೆ ಇಂಥಾ ಒಳ್ಳೆಯಸ್ಥಿತಿಯು ಬರಲಿಲ್ಲವೆಂದು ಸಂಕಟಪಡುತ್ತಾರೆ. ನಮ್ಮ ಗುಲಾಮಗಿರಿಯನ್ನು ತಪ್ಪಿಸಿಕೊಳ್ಳುವದಕ್ಕೆ ಏನು ಮಾಡಬೇಕೆಂಬ ಪರ್ಯಾಲೋಚನೆಯು ಉಪಕ್ರಮವಾಗಿದೆ. ಈ ಪರ್ಯಾಲೋಚನೆಯು ಕೆಲಸವನ್ನು ಸರಿಯಾಗಿ ಮಾಡಿದರೆ ನಮಗೆ ಸದ್ಗತಿಯುಬರುವುದು. ಪಾಶ್ಚಾತ್ಯರು ಖಾನೇಷುಮಾರಿಲೆಕ್ಕದಲ್ಲಿ ತಮ್ಮಲ್ಲಿ ಸರಾಸರಿವಯಸ್ಸು 55 ವರ್ಷಗಳೆಂಬುದಾಗಿಯೂ, ಭಾರತೀಯರಲ್ಲಿ 23 ವರ್ಷಗಳೆಂಬುದಾಗಿಯೂ, ತಮ್ಮಲ್ಲಿ ಅನಿವಾರಣೀಯವಾದ ರೋಗಗಳಿಂದ ಸಾಯತಕ್ಕ ಸಂಖ್ಯೆಯು ಬಹಳ ಕಡಿಮೆಯೆಂಬುದಾಗಿಯೂ, ಭಾರತೀಯರಲ್ಲಿ ವರುಷಕ್ಕೆ 50 ಲಕ್ಷ ಜನಗಳವರೆಗೂ ಸಾಯುವರೆಂದು ಬರೆದಿರುತ್ತಾರೆಂಬುದಾಗಿಯೂ, ಇದಕ್ಕೆ ಅವರ ಆಹಾರ, ನಿಯಮಗಳೇ ಮುಖ್ಯ ಕಾರಣವೆಂಬುದಾಗಿಯೂ ಹೇಳಿಕೊಳ್ಳುತ್ತಾರೆ.

ಯುಕ್ತಾಹಾರ ವಿಹಾರಗಳ ವಿಷಯಗಳಲ್ಲಿ ನಮ್ಮ ಆಯುರ್ವೇದವೂ ನಮ್ಮ ಯೋಗಶಾಸ್ತ್ರಗಳು ಕೊಟ್ಟಿರತಕ್ಕ ಸೂಚನೆಗಳನ್ನು ಈಗ ಪಾಶ್ಚಾತ್ಯರು ಉಪದೇಶಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಡಾ|| ಡಿ. ಎಚ್. ಕ್ರಿಸ್ ರವರು "ಓರಿಯಂಟಲ್ ವಾಚ್‌ಮನ್ ಅಂಡ್ ಹೆರಾಲ್ಡ್ ಆಫ್ ಹೆಲ್ತ್" ಎಂಬ ಪತ್ರಿಕೆಗೆ ಯುಕ್ತಾಹಾರ ವಿಹಾರದ ವಿಷಯದಲ್ಲಿ ಒಂದು ಲೇಖನವನ್ನು ಬರೆದಿರುವರು. ಆಯುರಾರೋಗ್ಯ ಐಶ್ವರ್ಯಗಳನ್ನೂ ಧರ್ಮಾರ್ಥ ಕಾಮ ಮೋಕ್ಷಗಳನ್ನೂ ಹೊಂದಬೇಕಾದರೆ ಆಹಾರ, ವಿಹಾರಗಳಲ್ಲಿ ಮಿತವಾಗಿರಬೇಕೆಂದು ಇವರು ಹೇಳಿರುವರು. ಸಮಸ್ತ ಮನೋವಾಕ್ಕರ್ಮಗಳಲ್ಲಿಯೂ, "ಅತಿ ಸರ್ವತ್ರ ವರ್ಜಯೇತ್, ಎಂಬ ನಮ್ಮ ಆಯುರ್ವೇದದ ವಿಧಿಯನ್ನು ನಿರೂಪಿಸಿರುವರು. ನಮ್ಮ ಯೋಗಶಾಸ್ತ್ರದ ಮಹಿಮೆಯು ಪಾಶ್ಚಾತ್ಯರಲ್ಲಿ ಅನೇಕರಿಗೆ ಗೊತ್ತಿಲ್ಲ. ನಮ್ಮ ಪಂಚೇಂದ್ರಿಯಗಳಿಗೂ ಸದ್ವಿಷಯಗಳು ಹೇಗೋ ಹಾಗೆ ದುರ್ವಿಷಯಗಳೂ ಇರುವುವು. ದುರ್ವಿಷಯಗಳನ್ನು ಪರಿತ್ಯಾಗಮಾಡಿ ಸದ್ವಿಷಯಗಳಲ್ಲಿ ಆಸಕ್ತರಾದರೆ ಅನೇಕ ಅನರ್ಥಗಳು ತಪ್ಪುವುವು. ಅಂತರ್ಗತವಾದ ಕಾಮ ಕ್ರೋಧಾದಿ ಅರಿಷಡ್ವರ್ಗಗಳನ್ನು ಗೆದ್ದರೆ ಹೊರಗಿನ ಶತ್ರುಗಳನ್ನು ಗೆಲ್ಲುವ ಶಕ್ತಿಯು ಸುಲಭವಾಗಿ ಬರುವುದು. ಈ ವಿಷಯವನ್ನು ಈ ಡಾಕ್ಟರ್ ಸಾಹೇಬರವರು ಉಚಿತವಾಗಿ ತಿಳಿದುಕೊಂಡು "Keeps clean inside and outside" ಎಂಬದಾಗಿ ಹೇಳಿರುವರು. ಆದರೆ 50 ವರ್ಷವಯಸ್ಸಾದ ಮೇಲೆ ಮಾಂಸಾದಿ ಆಹಾರಗಳನ್ನು ಬಿಡಬೇಕೆಂದು ಹೇಳುವರು. ಇದನ್ನು ನೋಡಿದರೆ ಯುಕ್ತಾಹಾರ ನೇಮಗಳು ಇವರಿಗೆ ಇನ್ನೂ ಗೊತ್ತಾಗಿರುವುದಿಲ್ಲವೆಂದು ಹೇಳಬಹುದು. ಬಾಲ್ಯದಿಂದಲೂ ಆಹಾರ ನಿಯಮಗಳು ಅನುಷ್ಠಾನಕ್ಕೆ ಬಂದರೆ ವಯಸ್ಸು ಆದಹಾಗೆಲ್ಲಾ ಆ ನಿಯಮಗಳ ಪ್ರಯೋಜನಗಳು ಹಸ್ತಗತವಾಗುವುವು. ಆರೋಗ್ಯದೃಢಕಾಯತೆಯು ಲಭ್ಯವಾಗುವುದು. ಸಕಲಮನೋವಾಕ್ಕರ್ಮಗಳ ಚಲನೆಗಳಲ್ಲಿಯೂ ಕೂಡ ಆರೋಗ್ಯನಿಯಮಗಳನ್ನು ಬಾಲ್ಯದಿಂದ ಅನುಷ್ಠಾನಕ್ಕೆ ತಂದುಕೊಂಡವರು ಕೇವಲ ವಾರ್ಧಕ್ಯದಲ್ಲಿಯೂ ಕೂಡ ರೋಗಾದಿಗಳಿಗೆ ಗುರಿಯಾಗುವುದಿಲ್ಲ. ಇವರ 2 ನೇರೂಲು:—8 ಅಥವಾ 9 ಘಂಟೆಗಳ ನಿದ್ರೆಯನ್ನು ಮಾಡಬೇಕೆಂದು ಬರೆದಿರುವರು. ನಿದ್ರೆಯವಿಷಯದಲ್ಲಿ ಈ ನಿಯಮವು ಸರ್ವರಿಗೂ ಒಂದೇ ವಿಧವಾಗಿ ಅನ್ವಯಿಸುವುದಿಲ್ಲ. ಶೈಶವಾವಸ್ಥೆಯಲ್ಲಿ 20 ಗಂಟೆಗಳವರೆಗೂ ನಿದ್ರೆಗೆ ಅವಕಾಶವನ್ನು ಕೊಡಬೇಕು. ಬಾಲ್ಯಾವಸ್ಥೆಯಲ್ಲಿ ಈ ನಿದ್ರೆಯು ಸ್ವಲ್ಪ ಕಡಿಮೆ ಆಗಬಹುದು. ಕೌಮಾರಾವಸ್ಥೆಯಲ್ಲಿ ಇನ್ನೂ ಸ್ವಲ್ಪ ಕಡಿಮೆಯಾಗಬಹುದು. ವಾರ್ಧಕ್ಯದಲ್ಲಿ ಬಹಳ ಕಡಿಮೆಯಾಗಬಹುದು. ದಿನಕ್ಕೆ 8-9 ಘಂಟೆಗಳ ನಿದ್ರೆಯು ಉತ್ಕಟವಾದ ಯೌವನಾವಸ್ಥೆಯಲ್ಲಿರತಕ್ಕವರಿಗೆ ಅನ್ವಯಿಸುವುದು. ದಿನಕ್ಕೆ 8-10 ಘಂಟೆಗಳಿಗೆ ಕಡಿಮೆಯಿಲ್ಲದೆ ದೇಹಶಕ್ತಿಯಿಂದಲೂ, ಬುದ್ಧಿಶಕ್ತಿಯಿಂದಲೂ ಕೆಲಸಮಾಡತಕ್ಕವರು ಉಂಟು. ಅಂಥವರಿಗೆ ಸ್ವಲ್ಪ ಹೆಚ್ಚು ವಿಶ್ರಾಂತಿಯು ಬೇಕಾಗುತ್ತದೆ. ಅಜಿತೇಂದ್ರಿಯರಾಗಿ ಕಾಮೋಪಭೋಗಗಳಲ್ಲಿ ಮುಳುಗಿ ತೇಲತಕ್ಕವರುಂಟು. ಅವರು ಎಷ್ಟು ಕಷ್ಟಪಟ್ಟಾಗ್ಯೂ ನಿದ್ರೆಯ ಔಷಧಗಳನ್ನು ಎಷ್ಟು ತೆಗೆದುಕೊಂಡಾಗ್ಯೂ ಅವರಿಗೆ ಗಾಢನಿದ್ರೆಯು ದುರ್ಲಭವಾಗುವುದು. ಯುಕ್ತಾಹಾರ, ವಿಹಾರಗಳು ಯಾರಿಗೆ ಇರುವುವೋ ಅವರಿಗೆ ಮಾತ್ರ ಈ ರೂಲುಗಳು ಅನ್ವಯಿಸುವುವು. ಅನೇಕ ಪಾಶ್ಚಾತ್ಯರು ದಿನಕ್ಕೆ 2-3 ಆವರ್ತಿ ಊಟಗಳನ್ನು ಎರಡು ಮೂರಾವರ್ತಿ ಉಪಹಾರಗಳನ್ನು ತೆಗೆದುಕೊಳ್ಳುವುದುಂಟು. ಪ್ರಾತಃಕಾಲದಲ್ಲಿ 10-11 ಘಂಟೆಗೆ ಒಂದಾವರ್ತಿ ಲಘುವಾದ ಭೋಜನವನ್ನು ಸಾಯಂಕಾಲ 6-7 ಘಂಟೆಗೆ ಸರಿಯಾಗಿ ಪುಷ್ಟಿಕರವಾದ ಆಹಾರವುಳ್ಳ ಭೋಜನವನ್ನೂ ಮಾಡಬೇಕೆಂಬುದಾಗಿಯೂ, ಮಧ್ಯಕಾಲದಲ್ಲಿ ಯಾವ ಆಹಾರವನ್ನು ತೆಗೆದುಕೊಳ್ಳಕೂಡದೆಂಬುದಾಗಿಯೂ, ಇವರು ಹೇಳಿರುವರು. ಇದು ಆಯುರ್ವೇದವೇ ಮೊದಲಾದ ಅನೇಕ ಭಾರತೀಯ ಗ್ರಂಥಗಳಲ್ಲಿ ಅನೇಕ ಶತಮಾನಗಳಿಗೆ ಮುಂಚೆಯೇ ಹೇಳಲ್ಪಟ್ಟಿತು. ಈಗಲೂ ಭಾರತೀಯರಲ್ಲಿ ಅನೇಕರಲ್ಲಿ ಈ ನಿಯಮವು ಅನುಷ್ಠಾನದಲ್ಲಿರುವುದು. ಆರೋಗ್ಯನಿಯಮಗಳು ಹೀಗಿದ್ದಾಗ್ಯೂ ಪಾಶ್ಚಾತ್ಯರಲ್ಲಿ ಸರಾಸರಿವಯಸ್ಸು 55 ವರ್ಷವೆಂಬದಾಗಿಯೂ, ಭಾರತೀಯರಿಗೆ ಸರಾಸರಿವಯಸ್ಸು 23 ಎಂಬದಾಗಿಯೂ, ಸರಕಾರದ ಖಾನೇಷುಮಾರಿಲೆಕ್ಕಗಳಿಂದ ಗೊತ್ತಾಗುತ್ತದೆ. ಹೀಗೆ ಆಗುವುದಕ್ಕೆ ಕಾರಣವೇನೆಂದು ಅನೇಕರು ಕೇಳುವರು. ಇದಕ್ಕೆ ಭಾರತೀಯರು ನಮ್ಮ ನಿತ್ಯನೈಮಿತ್ತಿಕಕರ್ಮಗಳಲ್ಲಿ ಅವಶ್ಯಕವಾದವುಗಳನ್ನು ಬಿಟ್ಟಿದ್ದೇ ಮುಖ್ಯಕಾರಣ. ಗುಣಕರ್ಮಗಳಿಗೆ ಅನುಸಾರವಾಗಿ ಹುಟ್ಟಿದ ವರ್ಣಾಶ್ರಮಧರ್ಮಗಳನ್ನು ದುರುಪಯೋಗಪಡಿಸಿ ಭೇದಭಾವಗಳನ್ನು ಹೆಚ್ಚಿಸಿಕೊಂಡು ಏಕಮತಕ್ಕೆ ಹಾನಿಯನ್ನು ತಂದುಕೊಂಡರು. ಇದರಿಂದ ಜನಗಳ ದೌರ್ಭಾಗ್ಯವು ಉಂಟಾಯಿತು. ಹೆಚ್ಚಾದ ಏಕಮತವುಳ್ಳವರು ನಮ್ಮ ದೇಶಕ್ಕೆ ಬಂದರು. ಶಸ್ತ್ರಾಸ್ತ್ರಗಳನ್ನು ಮದ್ದು, ಗುಂಡು ಮೊದಲಾದುವುಗಳನ್ನು ಇಟ್ಟುಕೊಳ್ಳಕೂಡದೆಂದೂ ನಮಗೆ ನಿಯಮವನ್ನು ಮಾಡಿ ತಾವು ಅವುಗಳನ್ನು ಇಟ್ಟುಕೊಂಡು ತಾವು ಸಾವಿರಾರು ಜನಗಳಿದ್ದಾಗ್ಯೂ ಕೋಟ್ಯಂತರ ಭಾರತೀಯರು ಗುಲಾಮರಾಗಿರುವಂತೆ ಮಾಡಿಕೊಂಡುದೇ ನಮ್ಮ ಅಲ್ಪಾಯಸ್ಸಿಗೆ ಮುಖ್ಯಕಾರಣ. ನಾವು ಹಗಲೂ ರಾತ್ರಿ ಕಷ್ಟಪಟ್ಟು ಕೆಲಸಮಾಡಿ ಸಂಪಾದಿಸಿದ್ದರಲ್ಲಿ ಹೊಟ್ಟೆಗೂ, ಬಟ್ಟೆಗೂ ಸಾಲದೇಯಿರುವಂತೆ ಮಾಡಿಕೊಂಡು ಶಸ್ತ್ರಾಸ್ತ್ರಗಳಿಂದಲೂ, ಮದ್ದು, ಗುಂಡುಗಳಿಂದಲೂ, ನಮ್ಮನ್ನು ಆಳತಕ್ಕವರಿಗೆ ಕೊಟ್ಟು ಉಳಿದಿದ್ದರಲ್ಲಿ ಹೊಟ್ಟೆಗೂ ಬಟ್ಟೆಗೂ ಬೇಕಾದದ್ದನ್ನು ಸಂಪಾದಿಸಿಕೊಳ್ಳಬೇಕು. ನಮ್ಮನ್ನು ಆಳತಕ್ಕ ಜನಗಳು ನಾವು ಸಂಪಾದಿಸಿದ್ದರಲ್ಲಿ ಎಷ್ಟು ಭಾಗವನ್ನು ಹೊಂದುವರೋ, ನಮಗೆ ಉಳಿಯುವುದೋ ಅದನ್ನು ಪರಿಶೀಲಿಸಿದರೆ ಅವರ ಸರಾಸರಿ ವಯಸ್ಸು 55 ಆಗಿರುವುದಕ್ಕೂ, ನಮ್ಮ ಸರಾಸರಿ ವಯಸ್ಸು 2

ಇವರೀರ್ವರಿಗೂ ಒಬ್ಬ ಯುವತಿಯ ವಿಷಯವಾಗಿ ಮನಸ್ತಾಪವಿತ್ತೆಂದು ತಿಳಿದುಬಂದಿದೆ.

ಮೈಸೂರು ಸಂಸ್ಥಾನದ ಮಂತ್ರಿವರ್ಯರಾದ ಸರ್ ಮಿರ್ಜಾರವರು ಸರ್ಕಾರಿಯುದ್ಯೋಗಿಗಳೊಡನೆ ಕಳೆದ (31-3-33) ಶುಕ್ರವಾರ ಪ್ರಾತಃಕಾಲ ಬಾಳೆಹೊನ್ನೂರು ಶ್ರೀ ಜಗದ್ಗುರು ರೇಣುಕಾಚಾರ್ಯರ ಪುಣ್ಯಾಶ್ರಮಕ್ಕೆ ಆಗಮಿಸಿ ಅಲ್ಲಿ ಶ್ರೀ ವೀರೇಶನಿಗೆ ಮಂಗಳಾರತಿಯನ್ನು ಮಾಡಿಸಿ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳ ದರ್ಶನವನ್ನು ಮಾಡಿ ಒಂದು ಘಂಟೆಯವರೆವಿಗೂ ಶ್ರೀಗಳವರೊಡನೆ ಸಂಭಾಷಿಸಿ ಆಶ್ರಮದಲ್ಲಿ ರಾರಾಜಿಸುತ್ತಿದ್ದ ಪುಣ್ಯಸ್ಥಾನಗಳನ್ನವಲೋಕಿಸಿ ಜಗದ್ಗುರುಗಳಿಂದ ಆಶೀರ್ವಾದ ಪಡೆದು ಮುಂದೆ ಶೃಂಗೇರಿಮಾರ್ಗವಾಗಿ ಪ್ರಯಾಣಬೆಳೆಯಿಸಿದರು.

ವರ್ತಮಾನಸಂಗ್ರಹ

ಜುಗೋಸ್ಲೇವಿಯಾ ಸರಕಾರದವರು ಮದುವೆಯಾಗದೆ ಇರುವ 30 ವರ್ಷಕ್ಕೆ ಮೇಲ್ಪಟ್ಟ ಗಂಡಸರಿಗೆ ತೆರಿಗೆಯನ್ನು ವಿಧಿಸಿರುವರು.

ಅಮೇರಿಕೆಯ ಲಾಸ್ ಅಂಗಲ್ಸ್‌ನಗರದ 6 ಅಡಿ ಎತ್ತರವಾದ ಒಬ್ಬ ಕ್ರೈಸ್ತಪಾದ್ರಿಯು 42 ಇಂಚ್ ಎತ್ತರವುಳ್ಳ ಒಬ್ಬ ಕುಬ್ಜೆಯನ್ನು ಮದುವೆಯಾಗುವನಂತೆ!

ಕೊಲಂಬೋನಗರದ ಒಬ್ಬ ಸ್ತ್ರೀಯು 18 ಅಂಗುಲ ಉದ್ದವಾದ ಸಜೀವವಾದ ಒಂದು ಓತೀಕಾಟ (ಹೆಂಟೇಗೊದ್ದ) ವನ್ನು ಆಭರಣದೋಪಾಯದಲ್ಲಿ ಕುತ್ತಿಗೆಯಲ್ಲಿ ಧರಿಸುವಳಂತೆ!

ಇಂಗ್ಲೆಂಡಿನ ಹಡಗುಗಳ ಕಂಪನಿಯವರು ಜಪಾನಿಗೆ ಹೊಸದಾಗಿ 4 ಹಡಗುಗಳನ್ನು ಮಾರಿರುತ್ತಾರೆ. ಇದುವರೆಗೆ ಜಪಾನಿನವರು ಇಂಗ್ಲೆಂಡಿನಿಂದ 16 ಹಡಗುಗಳನ್ನು ಕೊಂಡುಕೊಂಡಿರುತ್ತಾರೆ.

ಕಲ್ಕತ್ತಾ ಕಾಂಗ್ರೆಸ್ ಸಂಬಂಧದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ ಪಂ|| ಮಾಳವೀಯರವರೇ ಮೊದಲಾದ ಮುಖಂಡರೂ ಹಾಗೂ ಸ್ವಯಂಸೇವಕರೆಲ್ಲರೂ ಏಪ್ರೈಲ್ ಮತ್ತು 4 ನೇ ತಾರೀಖಿನ ದಿವಸ ಬಿಡುಗಡೆ ಮಾಡಲ್ಪಟ್ಟರು.

ಬೆಲ್‌ಗ್ರೇಡ್‌ನಗರದ ಹ್ಯಾರಿಸ್ ಸ್ಕಿಲ್ಲೀಟರ್ ಎಂಬ ಒಬ್ಬ 20 ವರ್ಷದ ತರುಣನಿರುವನು. ಇವನು ಈಗಾಗಲೇ 7½ ಅಡಿ ಎತ್ತರವುಳ್ಳವನಾಗಿದ್ದು, ಸಂಪೂರ್ಣವಾಗಿ ಬೆಳೆಯುವಹೊತ್ತಿಗೆ 9 ಅಡಿ ಎತ್ತರವುಳ್ಳವನಾಗುವನೆಂದು ಡಾಕ್ಟರರು ಅಭಿಪ್ರಾಯಪಡುತ್ತಿರುವರು!

ಹಿಮಾಲಯಾ ಪರ್ವತದ ಅತ್ಯುನ್ನತವಾದ ಕಾಂಚನಗಂಗಾ ಶಿಖರದ ಮೇಲೆ ಹಾರಾಡುವದಕ್ಕಾಗಿ ಹೊರಟಿರುವ ವಿಮಾನಗಳು ಮೊನ್ನೆ ಏಪ್ರೈಲ್ 3 ನೇ ತಾರೀಖಿನ ದಿವಸ 30,000 ಅಡಿಗಳ ಎತ್ತರದವರೆಗೂ ಹಾರಿ ಕಾಂಚನಗಂಗಾ ಶಿಖರವನ್ನು ಪ್ರದಕ್ಷಿಣೆಮಾಡಿಕೊಂಡುಬಂದವು.

ಆಕ್ಸ್‌ಫರ್ಡ್ ಬೇಲಿಯಲ್ ಕಾಲೇಜಿನ ಪದವೀಧರನಾದ ಒಬ್ಬಾನೊಬ್ಬ ಬೆಂಗಾಲಿಯು ದೇಹಲಿಯಲ್ಲಿ 13 ರೂಪಾಯಿಗಳ ಸಂಬಳದ ಮೇಲೆ ಬೀದಿಯ ಕಸವನ್ನು ಗುಡಿಸುವ ಕೆಲಸಕ್ಕೆ ಸೇರಿಕೊಂಡಿರುವನಂತೆ! ಇವನು ಈ ಮೊದಲು ಮುಂಬಯಿಯಲ್ಲಿ ಬೂಟ್ಸುಗಳಿಗೆ ಬಣ್ಣವನ್ನು ಹಾಕುವ ಕೆಲಸದಲ್ಲಿದ್ದನಂತೆ!

ಜರ್ಮನಿದೇಶದ ಹಾರ್ಪೆಲ್ ಎಂಬ ಗ್ರಾಮದಲ್ಲಿ ಹೊಸದಾಗಿ ಮದುವೆಯಾದ ದಂಪತಿಗಳು ಮುನಿಸಿಪಾಲಿಟಿಗೋಸ್ಕರ ಎರಡೆರಡು ಹಣ್ಣಿನ ಗಿಡಗಳನ್ನು ಹಾಕುವ ಪದ್ಧತಿಯು ಬಹುಕಾಲದಿಂದ ನಡೆದುಬಂದಿರುತ್ತದೆ. ಇದರಿಂದ ಆ ಗ್ರಾಮದಲ್ಲಿ ಎಲ್ಲಿ ನೋಡಿದರೂ ಹಣ್ಣಿನಗಿಡಗಳೇ ತುಂಬಿರುವವಂತೆ!

ಝೀಲಮ್ಮಿನ ಮಹಮದ್‌ಜಾಮನ್ ಎಂಬುವನು ಮೂರುಸಾರೆ ಮರಣದಂಡನೆಗೆ ಗುರಿಯಾಗಿದ್ದು, 3 ಸಾರಿಯೂ ಹೈಕೋರ್ಟಿಗೆ ಅಪೀಲ್‌ಮಾಡಿ ಬಿಡುಗಡೆ ಹೊಂದಿದ್ದನು. ಈಗ ಫಜಲ್‌ದಾದ್ ಎಂಬುವನನ್ನು ಖೂನಿ ಮಾಡಿದನೆಂಬ ಕಾರಣದಮೇಲೆ ಪುನಃ ಮರಣದಂಡನೆಗೆ ಗುರಿಯಾಗಿರುವನು! ಜಾಮನ್ನನು ಪುನಃ ಹೈಕೋರ್ಟಿಗೆ ಅಪೀಲ್ ಮಾಡಿಕೊಂಡಿರುವನು!

ಬರ್ಲಿನ್‌ನಗರದ ವಸ್ತುಪ್ರದರ್ಶನಶಾಲೆಯಲ್ಲಿ ಒಂದು ವಿಚಿತ್ರವಾದ ನೂತನ ಯಂತ್ರಸಾಧನವು ಪ್ರದರ್ಶಿಸಲ್ಪಟ್ಟಿರುವದು. ಈ ಯಂತ್ರವು ಒಂದು ಮನುಷ್ಯನ ಆಕಾರದಲ್ಲಿರುವದು. ಇದು ಪೋಲೀಸರಂತೆ ರಸ್ತೆಯಲ್ಲಿ ಓಡಾಡುವ ಗಾಡಿಗಳಿಗೆ ಮಾರ್ಗವನ್ನು ತೋರಿಸುವದಲ್ಲದೆ, ಕಾಯಿದೆಯನ್ನು ಮೀರಿ ತಪ್ಪುಮಾರ್ಗದಲ್ಲಿ ಹೋಗುವ ಮೋಟಾರುಗಳ ನಂಬರುಗಗಳನ್ನು ಫೋಟೋತೆಗೆಯುವದಂತೆ!

ಅಮೇರಿಕೆಯಲ್ಲಿ 'ಮೇಕನ್' ಎಂಬ ದೊಡ್ಡ ಆಕಾಶವಿಮಾನವು ತಯಾರುಮಾಡಲ್ಪಟ್ಟಿರುವುದು. ಈ ಹೊಸವಿಮಾನದ ಗರ್ಭದಲ್ಲಿ ಅನೇಕ ಸಣ್ಣ ವಿಮಾನಗಳು ಗುಪ್ತರೀತಿಯಲ್ಲಿ ಇಡಲ್ಪಟ್ಟಿರುವವಂತೆ! ಈ ಯಂತ್ರವನ್ನು ನಿರ್ಮಿಸಿರುವ ವಿಧಾನವೂ ಮತ್ತು ವಿಮಾನಗಳನ್ನು ಗರ್ಭೀಕರಿಸಿರುವ ಮಾರ್ಗವೂ ಶತ್ರುಪಕ್ಷದವರಿಗೆ ತಿಳಿಯದಂತೆ ಬಹಳ ಜಾಗರೂಕತೆಯಿಂದ ಕಾದಿಟ್ಟಿರುವರಂತೆ!

ಅಮೇರಿಕಾಸರಕಾರದವರು 1931 ನೆಯ ಇಸವಿಯಲ್ಲಿ 50 ಲಕ್ಷ ಡಾಲರುಗಳನ್ನು ವೆಚ್ಚಮಾಡಿ ಕಟ್ಟಿಸಿದ್ದ 'ಅಕ್ರಾನ್' ಎಂಬ ದೊಡ್ಡ ವಿಮಾನವು ಇದೇ ಏಪ್ರೈಲ್ 5 ನೇ ತಾರೀಖಿನ ದಿವಸ ಅಕಸ್ಮಾತ್ ಸಮುದ್ರದಲ್ಲಿ ಬಿದ್ದು ನಾಶಹೊಂದಿತು. ವಿಮಾನದಲ್ಲಿದ್ದ 75 ಜನರ ಪೈಕಿ 4 ಜನರು ಮಾತ್ರ ಬದುಕಿಕೊಂಡರೆಂದು ತಿಳಿದುಬಂದಿರುವದು. ಈ ವಿಮಾನಯಂತ್ರವು 785 ಅಡಿಗಳ ಉದ್ದವಾಗಿದ್ದು 4480 ಕುದುರೆಗಳ ಶಕ್ತಿಯುಳ್ಳದಾಗಿತ್ತು.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ 47ನೇ ಅಧಿವೇಶನವು ಏಪ್ರೈಲ್ 3 ನೇ ತಾರೀಖಿನ ದಿವಸ ಕಲ್ಕತ್ತೆಯಲ್ಲಿ ನೆರವೇರಿತು. ಪ್ರಥಮತಃ ಶ್ರೀಮತಿ ಸೇನಗುಪ್ತರು ಎಸ್‌ಪ್ಲನೇಡ್ ಜಂಕ್ಷನ್ನಿನ ಹತ್ತಿರ 250 ಜನ ಪ್ರತಿನಿಧಿಗಳೊಡನೆ ರಾಷ್ಟ್ರೀಯ ಮಹಾಸಭೆಯನ್ನು ಪ್ರಾರಂಭಿಸಿದರು. ಪೋಲೀಸರು ಕೂಡಲೇ ಅಲ್ಲಿಗೆ ಬಂದು ಜನರ ಮೇಲೆ ಲಾಠೀಪ್ರಹಾರಮಾಡಿ ನೂರಾರು ಜನರನ್ನು ದಸ್ತಗಿರಿಮಾಡಿದರು. ಅನಂತರ ಅದೇ ಸ್ಥಳದಲ್ಲಿ ಬಿಹಾರ ಪ್ರತಿನಿಧಿಗಳಾದ ಶ್ರೀ ದೇವನಂದನ ಝೀರವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆಯು ಪ್ರಾರಂಭವಾಯಿತು. ಪೋಲೀಸರು ಪುನಃ ಲಾಠೀಪ್ರಹಾರಮಾಡಿ ಅನೇಕರನ್ನು ದಸ್ತಗಿರಿಮಾಡಿದರು. ಅನಂತರ ಶ್ರೀ ಬಾರೆಯವರು ಅಧ್ಯಕ್ಷರಾದರು. ಪೋಲೀಸರು ಅವರನ್ನೂ ದಸ್ತಗಿರಿಮಾಡಿದರು! ಕಡೆಗೆ ಸಾಯಂಕಾಲ 4 ಗಂಟೆಯ ಹೊತ್ತಿಗೆ ಕಲಿಕತ್ತೆಯ ಚಿತ್ತರಂಜನ, ವಿವೇಕಾನಂದ ರಸ್ತೆಗಳು ಕೂಡುವ ಸ್ಥಳದಲ್ಲಿ ಗಣೇಶಟಾಕಿಮಂದಿರದ ಎದುರುಗಡೆ ಮಹಾಸಭೆಯು ಸೇರಿತು. 200 ಜನ ಪ್ರತಿನಿಧಿಗಳು ಸೇರಿದರು. ಕಾಂಗ್ರೆಸ್ ಧ್ವಜವು ಹಾರುತ್ತಿರಲು ಒಬ್ಬ ಪ್ರತಿನಿಧಿಗಳು ಪಂ|| ಮಾಳವೀಯರವರ ಭಾಷಣವನ್ನು ಓದಿದರು. ಭರತಖಂಡಕ್ಕೆ ಸಂಪೂರ್ಣಸ್ವಾತಂತ್ರ್ಯವು ಬೇಕು ಮತ್ತು ಸತ್ಯಾಗ್ರಹವೇ ಸ್ವಾತಂತ್ರ್ಯಸಾಧನೆಯ ಶಸ್ತ್ರ ಎಂಬೆರಡು ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಅಷ್ಟರಲ್ಲಿ ಪೋಲೀಸರು ನಾಲ್ಕುಕಡೆಗಳಿಂದಲೂ ನುಗ್ಗಿಬಂದು ಜನರಮೇಲೆ ಲಾಠೀಪ್ರಹಾರ ಮಾಡಿ ಎಲ್ಲರನ್ನೂ ದಸ್ತಗಿರಿ ಮಾಡಿದರು! ಅಂತೂ ಮಹಾಸಭೆಯ ಸಂಬಂಧವಾಗಿ ಒಟ್ಟು 1500 ಜನರು ದಸ್ತಗಿರಿಮಾಡಲ್ಪಟ್ಟರು.

ವಿಚಿತ್ರಪ್ರಪಂಚ.

ಪ್ರತಿಯೊಬ್ಬ ಮನುಷ್ಯನ ತಲೆಬುರುಡೆಯಲ್ಲಿಯೂ 22 ಮೂಳೆಗಳಿರುವುವು!

ಅಂಟಾರ್ಕ್ಟಿಕ್ ಸಮುದ್ರದಲ್ಲಿ ಪ್ರತಿವರ್ಷವೂ ಹತ್ತು ಸಾವಿರ ತಿಮಿಂಗಿಲಗಳು ಹಿಡಿಯಲ್ಪಡುವುವು!

ಪ್ರಪಂಚದಲ್ಲಿ 800 ಬೇರೆ ಬೇರೆ ಜಾತಿಯ ಮರಗಳಿರುವುವು!

ಜಾಡರಹುಳುಗಳು ಆಹಾರವಿಲ್ಲದೆ ಒಂದು ವರ್ಷದವರೆಗೂ ಜೀವಿಸಿರಬಲ್ಲವು!

ಗ್ರೇಟ್‌ಬ್ರಿಟನ್ ದ್ವೀಪದಲಿರುವ ರೈಲ್ ರಸ್ತೆಗಳನ್ನು ಒಟ್ಟುಗೂಡಿಸಿದರೆ, ಭೂಮಂಡಲವನ್ನು ಎರಡಾವರ್ತಿ ಪ್ರದಕ್ಷಿಣೆಮಾಡಿದಷ್ಟು ಉದ್ದವಾಗುವದು!

ತಿಮಿಂಗಿಲಗಳ ಚರ್ಮವು 2 ಅಡಿಗಳವರೆಗೂ ದಪ್ಪವಾಗಿರುವುದುಂಟು! ಇವು 500 ವರ್ಷಗಳವರೆಗೂ ಜೀವಿಸಿರಬಲ್ಲವು!

ಅನೇಕ ಪಕ್ಷಿಗಳು ಗಂಟೆಯೊಂದಕ್ಕೆ 60 ಮೈಲುಗಳ ವೇಗದಲ್ಲಿ ಹಾರುವುವು!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಕಾಲುವೆಯು ಚೀನಾದೇಶದಲ್ಲಿರುವದು! ಇದು ಪ್ರಾರಂಭದಿಂದ ಕೊನೆಯವರೆಗೆ 2100 ಮೈಲುಗಳ ಉದ್ದವಾಗಿರುವದು!

ಮನುಷ್ಯನ ಹೃದಯವು ದಿನ 1 ಕ್ಕೆ 1,00,000 ಸಾರೆ ಚಲಿಸುವದು!

ಅಮೇರಿಕೆಯಲ್ಲಿರುವ ವಿಕ್ಟೋರಿಯಾ ಜಲಪಾತದ ಘರ್ಜನೆಯು 17 ಮೈಲುಗಳವರೆಗೆ ಕೇಳಿಸುವದು!

ಚಿಕಾಗೋ ನಗರದಲ್ಲಿರುವ ವಿವಿಧವಸ್ತುಪ್ರದರ್ಶನಾಲಯದಲ್ಲಿ 6000 ವರ್ಷಗಳ ಹಿಂದಿನ ಒಂದು ಮೊಟ್ಟೆಯಿರುವದು!

ಹಿಂದೂಸ್ಥಾನದಲ್ಲಿರುವ ಶತದ್ರು ನದಿಯು ಪ್ರಪಂಚದ ಎಲ್ಲ ನದಿಗಳಿಗಿಂತಲೂ ವೇಗವಾಗಿ ಹರಿಯುವದು!

ಬಂಗಾಳಾದಲ್ಲಿ ಪಾಚಿಕಟ್ಟಿದ ಪುರಾತನವೃಕ್ಷವೊಂದಿರುವದು! ಇದು ಹುಟ್ಟಿ 10,00,000 ವರ್ಷಗಳಾಗಿರುವದೆಂದು ಊಹಿಸಲ್ಪಟ್ಟಿರುವದು!

ಸಾಲ್ಮನ್, ಪೈಕ್ ಮತ್ತು ಗೋಲ್ಡ್‌ಫಿಷ್ ಎಂಬ ಮೂರು ಜಾತಿಯ ಮೀನುಗಳು ಯಾವಾಗಲೂ ನಿದ್ರೆ ಮಾಡುವದಿಲ್ಲ!

ಆಫ್ರಿಕಾದೇಶದ ನೈಲ್‌ನದಿಯ ಕಣಿವೆಯಲ್ಲಿ 40 ಅಡಿಗಳ ಉದ್ದವಾದ ಅದ್ಭುತಾಕಾರದ ಹಾವುಗಳಿರುವುವು!

ಸ್ವೀಕಾರ

ಕಡೂರು ತಾಲೂಕು ಕಡೂರುಹಳ್ಳಿಗ್ರಾಮದ ಕಲ್ಲುಂಡೀಮಠದ ವೇ|| ಪುಟ್ಟಯ್ಯನವರ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೂ ತೀರ್ಥಹಳ್ಳಿ ತಾ|| ಕೊಗ್ರೀ ಮಠದಲ್ಲಿರುವ ಕಳೂರುಮಠದ ವೇ|| ನಂಜಯ್ಯನವರ ಪುತ್ರ ಚಿ|| ವೇ|| ಕೆ. ಎಂ. ಸಿದ್ಧಪ್ಪಯ್ಯಶಾಸ್ತ್ರಿಗಳಿಗೂ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ **2** ರೂ. ಗಳು ಉಡೊವದ ಬೆಟ್ಟದಾವರೆಕೆರೆಮಠದ ವೇ|| ಕೊಟ್ರಪ್ಪಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಚಳ್ಳಕೆರೆ ತಾಲೂಕು ಕೊರ್ಲಕುಂಟೆಯಲ್ಲಿರುವ ಮ|| ರಾ|| ಗಾರೇಮನೆ ಚನ್ನಮಲ್ಲಪ್ಪನವರ ಮಕ್ಕಳು ಚಿ|| ವೃಷಭೇಂದ್ರಪ್ಪನಿಗೂ ಕಲ್ಯಾಣದುರ್ಗದ ತಾ|| ತಿಪ್ಪನಹಳ್ಳಿಯಲ್ಲಿರುವ (ಮ|| ರಾ|| ಪಿ. ಗ. ಮಲ್ಲಪ್ಪನವರ ಪಡ್ಡಕರು) ಮ|| ರಾ|| ನರಪ್ಪನವರ ಪುತ್ರಿ ಚಿ|| ಸೌ|| ಬಸವಮ್ಮನಿಗೂ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ **1-8-0** ಯು ವೇ|| ಬ್ರ|| ಶ್ರೀ ಮಂಗಪೋಟೆ ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಇಜ್ಜಂಗಿ ಗ್ರಾಮವಾಸಿಗಳಾದ ಮ|| ರಾ|| ಶಿವಲಿಂಗಪ್ಪ ಗೋಣಿ ಇವರ ಪುತ್ರ ಚಿ|| ವಿರೂಪಾಕ್ಷಪ್ಪನಿಗೂ ಧಾರವಾಡ ಡಿ|| ಹೊಸರಿತ್ತಿ ಗ್ರಾಮದಲ್ಲಿರುವ ಮ|| ರಾ|| ಕೋಟಪ್ಪ ಹಳ್ಳೀಕೇರಿ ಇವರ ಪುತ್ರಿ ಚಿ|| ಸೌ|| ಚನ್ನಬಸವ್ವನಿಗೂ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಲ್ಪಟ್ಟ **1** ರೂ. ವೇ|| ಬಸಯ್ಯನವರು, ಮುದೇನಗುಡಿ. ಗದಗ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ನೆಯ ಪುಟದಿಂದ ಮುಂದುವರಿದುದು]

ಯನ್ನೂ ಮತ್ತು ಅದನ್ನು ಸಮರ್ಥಿಸುವ ಮಂತ್ರಿಶ್ರೇಷ್ಠರ ಉದಾರಭಾವವನ್ನೂ ಅಪ್ಪಣೆಕೊಡಿಸಿದರು. ಮಹಾಸಂಸ್ಥಾನದ ಆಸ್ಥಾನವಿದ್ವಾನ್ ಪುರಾಣರತ್ನ ಬಸವಲಿಂಗಶಾಸ್ತ್ರಿಗಳು ಸುಣಕಲ್ಲು ಬಿದರಿ ಆರಾಧ್ಯಮಠ ಇವರು ಅಭಿನಂದನಪತ್ರಿಕೆಯನ್ನೋದಿದರು. ಅಮಾತ್ಯಪುಂಗವರು ಕೃತಪೂರ್ವರಾಗಿದ್ದ ವಿಷಯವನ್ನು ಆಲಿಸಿ ತಮಗುಂಟಾದ ಮಹಾನಂದವನ್ನು ವ್ಯಕ್ತಮಾಡುತ್ತ ಶ್ರೀ ಜಗದ್ಗುರುಗಳವರಿಂದ ಫಲಾಶೀರ್ವಾದವನ್ನು ಪಡೆದು ಆದರೋಪಚಾರವನ್ನು ಅಂಗೀಕರಿಸಿ ಪ್ರಯಾಣ ಬೆಳೆಸಿದರು. ನಮ್ಮನ್ನಾಳುವ ಶ್ರೀಮನ್ಮಹಾಪ್ರಭುಗಳವರ ಅನುರಾಗಕ್ಕೂ ಚಕ್ರವರ್ತಿಗಳವರ ಅನುರಾಗಕ್ಕೂ ಪಾತ್ರರಾದ ಸದ್ಗುಣ ಮಂಡಿತರಾತ ಸ್ವದೇಶಾಭ್ಯುದಯಕಾರ್ಯದಲ್ಲಿ ದಕ್ಷತೆಯಿಂಲೂ ಚತುರತೆಯಿಂದಲೂ ಅವಿಶ್ರಾಂತ ಶ್ರಮಿಪಡುತ್ತಿರುವ ಪ್ರಜಾನುರಾಗಿಗಳಾದ ಅಮಾತ್ಯಶ್ರೇಷ್ಠರು ಯಶಸ್ವಿಗಳೂ ಜಯಶೀಲರೂ ಆಗಿ ಪತ್ನೀಪುತ್ರಾದಿಗಳೊಡನೆ ಚಿರಕಾಲ ಬಾಳಲೆಂದು ಭಗವಂತನನ್ನು ಧ್ಯಾನಿಸುತ್ತೇನೆ.

C. K. Mallappa Setty,
Chickmagalur.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ |
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ಜಗದ್ಗುರು ಶಿವಾನಂದರಾಜೇಂದ್ರ
ಶಿವಾಚಾರ್ಯಮಹಾಸ್ವಾಮಿಗಳವರು
ಮೈಸೂರು ಸಂಸ್ಥಾನದ ಸಚಿವಶ್ರೇಷ್ಠರಾದ
ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್,
ಬಿ.ಎ., ಒ.ಬಿ.ಇ., ರವರಲ್ಲಿ
ವಿವರಿಸುವುದೇನೆಂದರೆ—

ಮಹೋದಯರೇ,

ಪವಿತ್ರವಾದ ಈ ರಂಭಾಪುರೀಮಹಾಕ್ಷೇತ್ರದಲ್ಲಿ ರಾರಾಜಿಸುವ ವೀರಸಿಂಹಾಸನ ಮಹಾಪೀಠಕ್ಕೆ ನಿಮ್ಮ ಶುಭಾಗಮನದಿಂದುಂಟಾದ ಮಹಾನಂದವನ್ನು ಇಷ್ಟೆಂದು ವರ್ಣಿಸಲು ಸಾಧ್ಯವಿಲ್ಲ. ಈ ಆಶ್ರಮವು, ಶ್ರೀ ಭಗವತ್ಪಾದ ರೇಣುಕಾಚಾರ್ಯರು ಮುನಿಪುಂಗವರಾದ ಅಗಸ್ತ್ಯಾದಿ ಮಹರ್ಷಿಗಳಿಗೆ ವೀರಶೈವತತ್ತ್ವೋಪದೇಶವನ್ನು ಮಾಡಿದ ಪವಿತ್ರಸ್ಥಾನವಾಗಿರುವದಲ್ಲದೆ ಶ್ರೀಮದದ್ವೈತಮತಸ್ಥಾಪನಾಚಾರ್ಯರಾದ ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನೂ ಮತ್ತು ರತ್ನಗರ್ಭಗಣಪತಿಯನ್ನೂ ಅನುಗ್ರಹಿಸಿದ ಸ್ಥಾನವಾಗಿರುತ್ತದೆ. ಪರಮಪವಿತ್ರವೂ, ಪಾಪವಿಧ್ವಂಸಿನಿಯೂ ಆದ ಶ್ರೀ ತುಂಗಭದ್ರಾತೀರದಲ್ಲಿ ಪ್ರಕಾಶಿಸುತ್ತಿರುವ ಮತ್ತು ಗೋತ್ರಾಧಿಪತಿಯಾದ ಶ್ರೀ ವೀರಭದ್ರ, ಭದ್ರಕಾಳೀ ಮುಂತಾದ ದೇವತೆಗಳಿಂದ ರಾರಾಜಿಸುತ್ತಿರುವ ಈ ಪೀಠವು ಹಿಂದೆ ನಾಲ್ಕು ವರ್ಷಗಳವರೆವಿಗೂ ಗುರುಗಳಿಲ್ಲದೆ ಅನಾಥವಾಗಿದ್ದು, ಧರ್ಮಾವತಾರಿಗಳಾದ ಮಹಾಪ್ರಭುವರ್ಯರ ಕಟಾಕ್ಷದಿಂದ ಈಗ ಸನಾಥವಾಗಿ ಪ್ರಕಾಶಿಸುತ್ತಿರುವುದರಿಂದ ಈ ಮಹಾಪೀಠಕ್ಕೆ ಈಗ ತಾವು ಆಗಮಿಸಿದುದು ಈ ಪೀಠದ ಪುರೋಭಿವೃದ್ಧಿಯ ಶುಭಲಕ್ಷಣವೆಂದು ನಾವು ಸಂತೋಷಪಡುತ್ತೇವೆ.

ಶ್ರೀ ಜನಕಮಹಾರಾಜನಂತೆ ರಾಜರ್ಷಿಗಳೂ, ಶ್ರೀ ರಾಮನಂತೆ ದಯಾದಾಕ್ಷಿಣ್ಯಾದಿ ಗುಣಭರಿತರೂ ಪರಮಾಸ್ತಿಕರೂ ಸಾಕ್ಷಾದ್ಧರ್ಮಾವತಾರಿಗಳೂ ಆದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ತಮ್ಮಲ್ಲಿ ಸ್ವಭಾವತಃ ನೆಲೆಗೊಂಡಿರುವ ರಾಜ್ಯಭಾರಕೌಶಲ, ಸ್ವಾಮಿಭಕ್ತಿ, ಪ್ರಜಾವತ್ಸಲತೆ, ಅಸಾಧಾರಣಬುದ್ಧಿಚತುರತೆ ಮುಂತಾದ ಸುಗುಣಾವಳಿಯನ್ನು ಪರಿಶೀಲಿಸಿ ತಮಗೆ ಈ ಪ್ರಧಾನ ಸಚಿವಪದವಿಯನ್ನು ಅನುಗ್ರಹಿಸಿದುದು ನಮಗೂ ನಮ್ಮ ಶಿಷ್ಯಕೋಟಿಗೂ ಪರಮಾನಂದವನ್ನುಂಟುಮಾಡಿರುತ್ತದೆ.

ಮತ್ತು ತಾವು ಈ ದಿವಾನ್‌ಪದವಿಯನ್ನು ಅಲಂಕರಿಸಿದಂದೀಚೆಗೆ ನಮ್ಮ ಮಹಾಪ್ರಭುಗಳ ಆಳ್ವಿಕೆಯಲ್ಲಿರುವ ಮೈಸೂರು ಸಂಸ್ಥಾನವು ಪ್ರಪಂಚದಲ್ಲೆಲ್ಲಾ ಮಾದರಿ ರಾಜ್ಯವೆಂದು ಖ್ಯಾತಿಗೊಂಡು ಸಂಸ್ಥಾನದ ಪ್ರಜೆಗಳಿಗೆಲ್ಲಾ ಅನೇಕವಿಧಗಳಾದ ಸೌಕರ್ಯಗಳು ದೊರಕಿರುತ್ತವೆ.

ಸಂಸ್ಥಾನದ ಪ್ರಜೆಗಳಿಗೆ ತಮ್ಮಿಂದ ಇನ್ನೂ ಸರ್ವತೋಮುಖವಾಗಿ ಅನಂತಸೌಕರ್ಯಗಳು ದೊರೆಯಬೇಕಾಗಿರುವುದರಿಂದ ಈ ಶ್ರೇಷ್ಠತರವಾದ ಮಂತ್ರಿಪದವಿಯು ತಮ್ಮಲ್ಲಿ ಇನ್ನೂ ಅನೇಕ ವರ್ಷಗಳವರೆವಿಗೂ ಸ್ಥಿರಗೊಂಡಿರಲೆಂದು ಶ್ರೀ ಭಗವತ್ಪಾದ ರೇಣುಕಾಚಾರ್ಯರನ್ನು ಪ್ರಾರ್ಥಿಸುತ್ತೇವೆ. ಮತ್ತು ತಮ್ಮ ಅನಿತರ ಸಾಧಾರಣವಾದ ರಾಜ್ಯರಕ್ಷಣ ನೈಪುಣ್ಯವನ್ನು ನೋಡಿ ನಮ್ಮ ಬ್ರಿಟಿಷ್ ಸಾರ್ವಭೌಮರು ತಮಗೆ 'ಸರ್' ಎಂಬ ಪ್ರಶಸ್ತಿಯನ್ನು ದಯಪಾಲಿಸಿದುದಕ್ಕಾಗಿ ನಾವು ಆನಂದಸಾಗರದಲ್ಲಿ ಮಗ್ನರಾಗಿದ್ದೇವೆ. ಮತ್ತು ಈ ಮಂತ್ರಿಪದವಿಯಲ್ಲಿ ತಾವು ವಿಶೇಷವಾದ ಪ್ರೌಢಿಮೆಯನ್ನು ಪ್ರಯೋಗಿಸಿ ನಮ್ಮ ದೇಶವು ಬ್ರಿಟಿಷರಿಗೆ ಕೊಡುತ್ತಿದ್ದ ಪೊಗದಿಯಲ್ಲಿ 10½ ಲಕ್ಷದವರೆವಿಗೂ ಪೊಗದಿಯ ಭಾರವನ್ನು ಕಡಿಮೆಮಾಡಿಸಿದ್ದುದೊಂದು ನಮ್ಮ ದೇಶಾಭ್ಯುದಯದ ಶುಭಸೂಚನೆಯಾಗಿರುತ್ತದೆ.

ಮತ್ತು ಈ ನಮ್ಮ ಭರತಖಂಡದಲ್ಲುಂಟಾಗಿರುವ ರಾಜಕೀಯ ವಿಪ್ಲವವನ್ನು ಶಾಂತಿಗೊಳಿಸುವುದಕ್ಕಾಗಿ ವಿಲಾಯಿತಿಯಲ್ಲಿ ನಡೆದ ರೌಂಡ್‌ಟೇಬಲ್ ಕಾನ್ಫರನ್ಸುಗಳಿಗೆ ತಾವು ಪ್ರಯಾಣ ಬೆಳೆಯಿಸಿ, ಅಲ್ಲಿಯ ಕಾರ್ಯಕಲಾಪಗಳನ್ನೆಲ್ಲಾ ಬಹುಧೈರ್ಯದಿಂದ ನಿರ್ವಹಿಸಿ ನಮ್ಮ ಮೈಸೂರು ರಾಜ್ಯಕ್ಕೆ ಉತ್ತರೋತ್ತರ ಇನ್ನೂ ಅನಂತ ಶುಭಸಂಪದೆಯುಂಟಾಗುವಂತೆ ಪ್ರಯತ್ನಮಾಡಿರುವುದಕ್ಕಾಗಿ ನಾವು ಬಹಳವಾಗಿ ಸಂತೋಷಿಸುತ್ತೇವೆ.

ಹೀಗೆ ಅಹೋರಾತ್ರಿಯೂ ಕಾಯ ವಾಕ್ ಮನಸ್ಸುಗಳಲ್ಲಿ ರಾಜಭಕ್ತಿಪರಾಯಣರಾಗಿ ಪ್ರಜಾಸೇವೆಯೇ ಈಶಸೇವೆಯೆಂದು ಭಾವಿಸಿ ಪ್ರಜಾಸಂಪದ್ವೃದ್ಧಿಸಾಧಕಗಳಾದ ರಾಜ್ಯಕಾರ್ಯಗಳಲ್ಲಿಯೇ ಆಸಕ್ತರಾಗಿರುವ ತಮಗೆ ಇಹೋಪ್ಯತಿಶಯವಾದ ಬುದ್ಧಿಸಾಮರ್ಥ್ಯವೂ ಸಂಪೂರ್ಣ ಆಯುರಾರೋಗ್ಯಭಾಗ್ಯಪರಂಪರೆಯೂ ಲಭಿಸಲೆಂದು ಶಿವಸ್ಮರಣಪೂರ್ವಕವಾಗಿ ತಮ್ಮನ್ನು ಆಶೀರ್ವದಿಸುತ್ತೇವೆ

ತಾ|| 31—3—33

ಇತ್ಯಾಶಿಷಃ.

ಮಾರಿಜಾತ್ರೆಯ ಘೋರಕೃತ್ಯಗಳು.

ಪ್ರತಿವರುಷದಲ್ಲಿಯೂ ಸಾಮಾನ್ಯವಾಗಿ ಅನೇಕ ಗ್ರಾಮಗಳಲ್ಲಿ ವಾಡಿಕೆಯಾಗಿ ಮಾರಿಜಾತ್ರೆಯು ನಡೆಯುವುದು. ಈ ವೇಳೆಯಲ್ಲಿ ದೇವತೆಯ ಪ್ರೀತ್ಯರ್ಥವಾಗಿಯೆಂದು ಹೇಳುತ್ತ, ಮನುಷ್ಯರು ತಾವು ಮಾಂಸಭಕ್ಷಣಮಾಡುವುದಕ್ಕಾಗಿ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಾರೆ. ಸುಮ್ಮನೆ ಅಂದರೆ ಪ್ರಾಣಿಗೆ ಹೆಚ್ಚು ಸಂಕಟವಾಗದಂತೆ ಅದನ್ನು ಒಂದು ಏಟಿನಲ್ಲಿ ಕೊಲ್ಲುವುದಿಲ್ಲ. ಈ ಕೆಳಗೆ ಹೇಳುವ ರೀತಿಗಳಲ್ಲಿ ಅವುಗಳಿಗೆ ಚಿತ್ರಹಿಂಸೆಯನ್ನು ಮಾಡುವುದಲ್ಲದೆ, ಅಂತಹ ಕೃತ್ಯಗಳನ್ನು ಮಾಡುವವರು, ನೋಡುವವರು ಸಹ ತಮ್ಮ ಯತ್ಕಿಂಚಿತ್ ದಯಾರಸವನ್ನು ಕಳೆದುಕೊಂಡು ಅತಿಯಾಗಿ ಪಿಶಾಚಿಸ್ವಭಾವವನ್ನು ಹೆಚ್ಚಿಸಿಕೊಂಡು ಹೆಚ್ಚು ಕಡಮೆ ಬಹಳ ಕಷ್ಟದಿಂದ ಸಂಪಾದಿಸಿಕೊಂಡ ಮನುಷ್ಯಸ್ವಭಾವದ ದಯಾರಸವನ್ನು ಕಳೆದುಕೊಳ್ಳುತ್ತಾರೆ. ಅನೇಕ ಜನ್ಮಗಳು ಹೀಗೆಮಾಡಿದರೆ, ನರರಾಕ್ಷಸರಾಗುತ್ತಾರೆ. ಒಂದು ಜನ್ಮದಲ್ಲಿ ಇಂತಹ ಕೃತ್ಯಗಳನ್ನು ಮಾಡೋಣದರಿಂದಲೂ, ಒತ್ತಾಸೆಕೊಡೋಣದರಿಂದಲೂ ಇವರಿಗೆ ತುಂಬಾಪಾಪವು ಪ್ರಾಪ್ತವಾಗುವುದು. ಬರುವ ಜನ್ಮಗಳಲ್ಲಿ ಬಹಳ ಸಂಕಟಕ್ಕೆ ಸಿಕ್ಕಿ ನರಳುವರು.

ಆದುದರಿಂದ ಇವೊಂದನ್ನೂ ತಿಳಿಯದೆ ಸ್ವಾರ್ಥಪರರಾದ ಕೆಲವು ಕಪಟಜನರಿಂದ ಪ್ರೇರಿತರಾಗಿ ಈ ಘೋರಕೃತ್ಯಗಳನ್ನು ಮಾಡುವ ಮೂಢಜನರಿಗೆ ತಿಳುವಳಿಕೆಯನ್ನು ಕೊಡುವುದೂ, ಮೂಗುಪ್ರಾಣಿಗಳಿಗೆ ಸಂಕಟವನ್ನು ತಪ್ಪಿಸುವುದೂ ಥಿಯಸಾಫಿಕಲ್ ಸೊಸೈಟಿ ಮೆಂಬರುಗಳಿಗೆ ಬಹಳ ಮುಖ್ಯವಾದ ಕರ್ತವ್ಯವು. ಈ ತಿಳುವಳಿಕೆಯನ್ನು ಕೊಡುವ ಮತ್ತು ಈ ಘೋರಕೃತ್ಯವನ್ನು ತಪ್ಪಿಸುವ ಕರ್ತವ್ಯವನ್ನು ನಮ್ಮ ಫೆಡರೇಷನ್ ಒಟ್ಟು ವಹಿಸುವುದು ಅತ್ಯಾವಶ್ಯಕವು. ಪ್ರತಿ ಮೆಂಬರು ಮತ್ತು ಲಾಡ್ಜು ಸಹ ಬರುವ ವರುಷದಲ್ಲಿ ಇದಕ್ಕೆ ವಿಶೇಷಗಮನವನ್ನು ಕೊಡುವುದು ಶ್ರೇಯಸ್ಕರವು. ಇದಕ್ಕಾಗಿ ಈಗ ಸೊಸೈಟಿಯ ಮೆಂಬರುಗಳಲ್ಲದೆ, ಇತರ ಸಜ್ಜನರು ಏರ್ಪಡಿಸಿರತಕ್ಕ ಪ್ರಾಣಿದಯಾಸಂಘ ಮುಂತಾದ ಸಂಘಗಳಲ್ಲಿ ಸೊಸೈಟಿ ಮೆಂಬರುಗಳು ಸೇರಿಕೊಂಡು ಅವುಗಳಿಗೆ ಸಹಕಾರವನ್ನು ಕೊಡಬೇಕು. ಅಂತಹ ಶಾಖಾಸಮಾಜಗಳನ್ನು ಅಲ್ಲಲ್ಲಿ ಏರ್ಪಡಿಸಬೇಕು. ಅಲ್ಲಿನ ಸತ್ಪುರುಷರನ್ನು ಈ ಸಂಘಕ್ಕೆ ಸೇರಿಸಕೊಳ್ಳಬೇಕು. ವಾರಗಟ್ಲೆ ಮೀಟಿಂಗುಗಳಿಂದಲೂ, ಸಂತೆ-ಜಾತ್ರೆ ಮುಂತಾದ ಕಡೆಗಳಲ್ಲಿ ಕರಪತ್ರಗಳನ್ನು ಹಂಚುವದರ ಮೂಲಕವೂ, ಈ ಘೋರಕೃತ್ಯಗಳ ಫೋಟೋಗಳನ್ನು ತೆಗೆದು ಪ್ರದರ್ಶಿಸುವುದರಿಂದಲೂ ಜನಗಳ ಮನಸ್ಸನ್ನು ಪಕ್ವಮಾಡಬೇಕು. ಅಲ್ಲದೆ ನ್ಯಾಯವಿಧಾಯಕ ಸಭೆಯಿಂದ ಈ ತರಹ ಹಿಂಸಕರವಾದ ರೀತಿಯಲ್ಲಿ ಪ್ರಾಣಿಗಳನ್ನು ವಧೆಮಾಡಕೂಡದೆಂದಾಗಲೀ, ಅಥವಾ ಅದು ಸಧ್ಯಕ್ಕೆ ಸಾಧ್ಯವಿಲ್ಲದಿದ್ದರೆ ಅಂತಹ ಕಾರ್ಯಗಳು ಮರೆಯಾಗಿ ಯಾರೊಬ್ಬರಿಂದಲೂ ನೋಡಲು ಸಾಧ್ಯವಿಲ್ಲದ ರೀತಿಯಲ್ಲಿ ನಡೆಸಲ್ಪಡಬೇಕೆಂದು ಕಾನೂನನ್ನು ಏರ್ಪಡಿಸಲು ಪ್ರಯತ್ನಮಾಡಬೇಕು.

ಘೋರಕೃತ್ಯಗಳು.

1. ಗಬ್ಬದಕುರಿಯನ್ನು ಅದರ ಹೊಟ್ಟೆಯ ಮೇಲೆ ಕತ್ತರಿಸುವುದರಿಂದಲೂ.

2. ಕೋಣವನ್ನು ಹೊಡೆಹೊಡೆದು ಕರಿಗಾಲಾಗಿ ಕಾತರಿಸುವಂತೆಮಾಡಿ ಸುಣ್ಣದನೀರನ್ನು ಕುಡಿಸಿ, ತಲೆಯನ್ನು ಬಗ್ಗಿಸಿಕಟ್ಟಿ ಕಡಿಯುವದರಿಂದಲೂ.

3. ಹಂದಿಯನ್ನು ಸಜೀವವಾಗಿ ಹೂಳಿ ಅದರ ಮೂತಿಗೆ ಬಲವಾದ ಹಗ್ಗವನ್ನು ಕಟ್ಟಿ ಆ ಮೂತಿಯಮೇಲೆ ದೊಡ್ಡ ಕಕ್ಕಡಹಾಕಿದ ನಂದಾದೀಪವನ್ನು ಉರಿಸುವುದರಿಂದಲೂ.

4. ಗಬ್ಬದಗೋವಿನ ಹಿಂಗಾಲುಮುಂಗಾಲುಗಳನ್ನು ನಾಲ್ಕು ಗೂಟಗಳಿಗೆ ಗಟ್ಟಿಯಾಗಿ ಕಟ್ಟಿ ಅದರ ಬಾಲವನ್ನು ಹಿಂದಿನಮರಕ್ಕೂ, ತಲೆಯನ್ನು ಮುಂದಿನ ಮರಕ್ಕೂ ಬಲವಾಗಿ ಬಿಗಿದು ಹೊಟ್ಟೆಯಿಂದ ಮೊದಲುಮಾಡಿಕೊಂಡು ಅದರ ಚರ್ಮವನ್ನೆಲ್ಲಾ ಸುಲಿದು, ಆ ಚರ್ಮದಿಂದ 'ಧಗಂ' ಎಂಬ ವಾದ್ಯವನ್ನು ಮಾಡಿಸಿ ಬಾರಿಸಿದಮೇಲೆ ಕಟ್ಟಿದ ಆಕಳನ್ನು ಬಿಚ್ಚಿ ಅದು ನಾಲ್ಕು ಹೆಜ್ಜೆ ನಡೆದು ಸಾಯುವಂತೆ ಮಾಡುವುದರಿಂದಲೂ ಇಂತಹ ಘೋರಕಾರ್ಯಗಳಿಂದ ಗ್ರಾಮಗಳಿಗೆ ಶಾಂತಿಮಾಡುತ್ತಾರೆ.

ಇಂತಹ ಕೃತ್ಯಗಳಿಂದ ಪಾಪವನ್ನು ಕಟ್ಟಿಕೊಂಡು ದಯಾರಸವನ್ನು ಕಳೆದುಕೊಳ್ಳುವರಲ್ಲದೆ ಹಳ್ಳಿಯ ಜನರು ತಮ್ಮ ಯೋಗ್ಯತೆಮೀರಿ ತುಂಬಾ ದುಡ್ಡನ್ನು ಖರ್ಚುಮಾಡಿ ಅನಂತರ ಬಹಳ ಪೇಚಾಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಮನೆಯೊಂದಕ್ಕೆ ಕನಿಷ್ಟಪಕ್ಷ ಹತ್ತು ರೂಪಾಯಿ ವಸೂಲಾಗುತ್ತದೆಯೆಂದು ಹೇಳುತ್ತಾರೆ. ಇದು ಅವರು ನಗದಾಗಿ ಜಾತ್ರೆಖರ್ಚಿಗೆ ಕೊಡುವ ರೊಕ್ಕ. ಇದಲ್ಲದೆ ಬಂಧುಬಳಗದವರು ಜಾತ್ರೆಗಾಗಿ ಇವರ ಮನೆಗಳಿಗೆ ಬರುತ್ತಾರೆ. ಇವರಿಗೆ ಮಿಠಾಯಿ ಮೊದಲಾದ ತಿಂಡಿಗಳನ್ನು ಕೊಟ್ಟು ಉಪಚರಿಸಬೇಕು. ಅದಕ್ಕೆ ಐದು ರೂಪಾಯಿ ವೆಚ್ಚವಾಗುವುದೆಂದು ಲೆಖ್ಖ ಹಾಕಿದರೂ ಹದಿನೈದು ರೂಪಾಯಾಯಿತು. ಅನೇಕ ಬಡರೈತರಿಗೆ ವರ್ಷಕ್ಕೆ ಸರ್ಕಾರದ ಅಂದಾಜುಪ್ರಕಾರವೇ ಸರಾಸರಿ ವಾರ್ಷಿಕ ಆದಾಯವು ಇಪ್ಪತ್ತು ರೂಪಾಯಿ ಇರುವಲ್ಲಿ ಹದಿನೈದು ರೂಪಾಯಿಯನ್ನು ಹೀಗೆ ಕಳೆದು ಬಿಟ್ಟಮೇಲೆ ಆ ಕುಟುಂಬವು ಬದುಕುವುದು ಹೇಗೆ? ಇದೊಂದನ್ನೂ ಯೋಚಿಸಲಾರದ ತಿಳುವಳಿಕೆಯೂ ವಿವೇಕವೂ ಇಲ್ಲದ ರೈತರಿಗೆ ತಕ್ಕ ತಿಳುವಳಿಕೆಯನ್ನು ಕೊಟ್ಟು ಅವರ ಕಷ್ಟವನ್ನು ಸ್ವಲ್ಪವಾದರೂ ಕಡಿಮೆಮಾಡುವುದು ಬಹಳ ಪುಣ್ಯಕರವಾದ ಕೆಲಸವು.

M. Raghavendra Rao.
('ದಿವ್ಯಜ್ಯೋತಿ'ಯಿಂದ).

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦–೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦–೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರಬೇತದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಪ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಲಬಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆ ಹಿಡಿತ, ನಿತ್ರಾಣ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು. ಒಣ ಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮಿನ ರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್‍ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇತರ ಮದ್ದುಗಳೂ ಹೋಮಿಯೊಪಥಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿಕ್ಕೆಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗಿನಾದವರಿಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[32] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ). **ಮಂಗಳೂರು, ದ. ಕ**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುವುದಲ್ಲದೆ, [illegible] ನೀರು ಮತ್ತು ಗಾಳಿಯ ವ್ಯತ್ಯಾಸದಿಂದ ಅಂಟಿಗೊಂಡಿದ್ದ ಎಂತಹ ಕಠಿನವಾದ ಅಜೀರ್ಣವಾದರೂ ಜೀರ್ಣಗೊಂಡು ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತವೆ. ಜ್ವರವೇ ಮೊದಲಾದ ರೋಗಗಳಿಗೆ [illegible] ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತವೆ. [illegible] ಶೀತ, ಶೀತವಾತ, [illegible] ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲೂಯೆಂಜಾ, ಪ್ಲೇಗು, [illegible] ಅಜೀರ್ಣದ ಹೊಟ್ಟೆನೋವು [illegible] (ಪಕ್ಕೆ ಎಳೆತ) [illegible]

ದಿನವೇ ಪರೀಕ್ಷಿಸಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ಟ್ರೇಡ್ ಮಾರ್ಕನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[13] **ಬ್ರ್ಯಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಪಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
[illegible] ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೭೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[14] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೪ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ನೇ ಏಪ್ರಿಲ್ ೧೯೩೨ [ಸಂಚಿಕೆ ೪೮

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಶೈವೋಪನಿಷತ್ತು, ಸ್ವಾಯಂಭುವಾಗಮ, ಸುಪ್ರಭೇದಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವವು. ಈ ಗ್ರಂಥವು ೨೩೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸ್ವೀಕಾರ

ಶಿವಮೊಗ್ಗ ಡಿ|| ಸೊರಬ ತಾ|| ಉಳವಿ ಹೋಬಳಿ ಶ್ರೀ ಮಹಾಸಂಸ್ಥಾನ ಕ್ಯಾಸನೂರು ಮಠದ ಶ್ರೀ|| ಷ|| ಬ್ರ|| ಪಂಡಿತ ಗುರುವೃಷಭರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ 1 ರೂ. ಯು ಮದಗಮಾಸೂರು ಹಿರೇಮಠದ ವೇ|| ಚನ್ನವೀರಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಅನಂತಪುರಜಿಲ್ಲಾ ಮಡಕಶಿರಾ ತಾ|| ಅಮರಾಪುರದಲ್ಲಿ
ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ತಿರ್ಯಗಾಂದೋಲನ ಮಹೋತ್ಸವ.

ತಾ|| 7-4-1932 ನೇ ಶುಕ್ರವಾರ ಅಮರಾಪುರದ ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀಮದ್ರಂಭಾಪುರೀ ಶ್ರೀ ಜಗದ್ಗುರುಗಳವರು ಅಮರಾಪುರಕ್ಕೆ ಸಾಯಂಕಾಲ 4 ಘಂಟೆ ಸಮಯಕ್ಕೆ ಬಿಜಯಂಗೈಸಿದರು. ಪುರವು ಚಪ್ಪರ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಸಕಾಲಕ್ಕೆ ಅಮರಾಪುರದ ಪಟೇಲ್ ಲಿಂಗಪ್ಪಗೌಡರು ಉತ್ತಮ ಬುದ್ಧಿನಾಗಪ್ಪನವರು ಎಲೆ ಸಂಣಪ್ಪನವರು ಗೊಂಚಿಗಾರ ಸಿದ್ಧಲಿಂಗಪ್ಪನವರು ಓರಪ್ಪನವರ ತಿಪ್ಪಯ್ಯನವರು, ಕೋಡಿಗಹಳ್ಳಿ ರುದ್ರಪ್ಪನವರು, ಓರಪ್ಪನವರ ಮರಿಬಸಂಣನವರು ಮುಂತಾದ ಪುರಪ್ರಮುಖ ಮಹಾಶಯರು ಇಸ್ತಕಬಾಲಸಹಿತ ಶ್ರೀ ಪೂಜ್ಯಭಗವತ್ಪಾದರವರನ್ನು ಸಂದರ್ಶಿಸಿ ಸರ್ವರ ಪರಿಚಯವನ್ನು ಅರಿಕೆಮಾಡಿಕೊಂಡು ಉತ್ಸವಕ್ಕೆ ಅಪ್ಪಣೆಯನ್ನು ಕೇಳಿಕೊಂಡರು. ಶ್ರೀ ಜಗದ್ಗುರುಗಳವರು ಭಕ್ತರ ಪ್ರಾರ್ಥನೆಯಮೇರೆಗೆ ಸಿಂಹಲಲಾಟ ಪಂಚಕಲಶಯುಕ್ತ ತಿರ್ಯಗಾಂದೋಲಿಕಾರೋಹಣವಂ ಮಾಡಿದರು. ತಕ್ಷಣವೇ ಸಕಲ ವಾದ್ಯಗಳೂ ಘೋರ್ಗರೆದವು. ವೇದಘೋಷದಿಂದಲೂ ಪರಾಕುಗಳಿಂದಲೂ ಆಚಾರ್ಯವರ್ಯರ ಜಯಘೋಷದಿಂದಲೂ ಉತ್ಸವವು ಅತಿ ವಿಜೃಂಭಣೆಯಿಂದ ಸರ್ವಬೀದಿಗಳಲ್ಲಿಯೂ ಜರಗಿತು. ಉತ್ಸವಕಾಲದಲ್ಲಿ ಸಾಲಂಕೃತವಾದ ತಮ್ಮ ಚಪ್ಪರದಲ್ಲಿ ಮಹಮ್ಮದೀಯ ಮತೀಯರಾದ ಬಕ್ಷಿ ಚಾಬೂಮಿಯಾ ಸಾಹೇಬರ ಪರವಾಗಿ ಜಾಫರ್ ಸಾಬರು ಉರ್ದು ಭಾಷೆಯಲ್ಲಿ ಅಡ್ರೆಸ್ಸನ್ನೊಪ್ಪಿಸಿದರು. ಉತ್ಸವಭಾಗಿಗಳಾದ ಪ್ರಜಾ ಸಂಖ್ಯೆಯು ಪ್ರಾಯಃ ೮೦೦೦ ಕ್ಕಿಂತಲೂ ಹೆಚ್ಚಿರಬಹುದು. ಮತಾಂತರದವರೂ ಭೇದವಿಲ್ಲದೆ ಗೌರವಿಸಿದುದು ಅವರ ಉತ್ತರೋತ್ತರ ಶ್ರೇಯಸ್ಸಿಗೆ ಕಾರಣವಾಗಿದೆ. ಪೋಲೀಸ್ ಉಸ್ತುವಾರಿಯು ದರ್ಪದಿಂದಿರ್ದುದರಿಂದಲೂ ಮೆ|| ಡೆ|| ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಸಾಹೇಬರವರ ಮೊಕ್ಕಾಂ ಇದ್ದುದರಿಂದಲೂ ಉತ್ಸವವು ನಿರ್ವಿಘ್ನವಾಗಿ ವಿಜೃಂಭಣೆಯಿಂದ ಜರಗಿ ಪ್ರಧಾನಮಂಟಪಕ್ಕೆ ಆಗಮಿಸಿದ ಕೂಡಲೇ ಮಹಾಚಾರ್ಯರವರು ಆಂದೋಲಿಕೆಯಿಂದವತರಿಸಿ ಸಾಲಂಕೃತ ಸಿಂಹಾಸನವನ್ನಲಂಕರಿಸಿದರು. ಪುರಪ್ರಮುಖರ ಮತ್ತು ಸಮ್ಮಿಲಿತ ಜನಸಮುದಾಯದ ಆನಂದಕ್ಕೆ ಪಾರವೇ ಇರಲಿಲ್ಲ. ಸಮ್ಮುಖದ ಪಂ|| ಪುರಾಣರತ್ನ ಬಸವಲಿಂಗಶಾಸ್ತ್ರಿಗಳವರು ಸುಣಕಲ್ಬಿದರಿ ಇವರು ಗುರುಭಕ್ತಿಯೇ ಶ್ರೇಯಸ್ಸಿಗೆ ಕಾರಣವೆಂಬುವ ವಿಷಯವನ್ನು ವಿವರಿಸಿದನಂತರ ಶ್ರೀಮಾನ್ ಪಟೇಲ್ ಲಿಂಗೇಗೌಡರವರ ಚಿ|| ಮುರಿಗೇಂದ್ರಪ್ಪನವರು ಅಸ್ಖಲಿತ ವಾಣಿಯಿಂದ ಇಂಗ್ಲೀಷಿನಿಂದಲೂ ಕಾವ್ಯತೀರ್ಥ ವೀರಭದ್ರಶಾಸ್ತ್ರಿಗಳು ಅಮರಾಪುರಮಠ ಇವರು ಕನ್ನಡದಿಂದಲೂ ಅಡ್ರೆಸ್ಸನ್ನು ಒಪ್ಪಿಸಿದನಂತರ ಶ್ರೀ ಜಗದಾಚಾರ್ಯರವರು ತಮ್ಮ ಪ್ರಸಾದ ವಾಣಿಯಿಂದ ಸರ್ವಮತಸಮ್ಮತವಾಗಿ ಧರ್ಮೋಪದೇಶಂಗೈದ ಬಳಿಕ ಧರ್ಮಪೀಠಾಧೀಶರ ದೇಶಸಂಚಾರಕ್ಕೆ ಶ್ರೀಮನ್ಮಹೀಶೂರ ಮಹಾಪ್ರಭುಗಳವರು ಸಂಪೂರ್ಣಾವಕಾಶವನ್ನಿತ್ತಂತೆ ಬ್ರಿಟಿಷ್ ಚಕ್ರವರ್ತಿಗಳೂ ಮತ್ತು ಅನಂತಪುರದ ಜಿಲ್ಲಾ ಪ್ರಭುಗಳವರೂ ಅವಕಾಶವನ್ನಿತ್ತುದಕ್ಕಾಗಿ ಅವರ ಶ್ರೇಯಃಪ್ರಾರ್ಥನೆಯಾಗಿ ಶ್ರೀಮದ್ಭಗವತ್ಪಾದರವರ ಜಯಘೋಷದಿಂದ ಸಭೆಯು ವಿಸರ್ಜನೆಯಾಯಿತು. ಅಮರಾಪುರದ ವೀರಶೈವ ಮಹಾಜನಗಳು ಆಚಾರ್ಯಭಕ್ತಿಯಿಂದ ನಮ್ರರಾಗಿ ಮಹಾಗುರುಗಳ ಸೇವೆಯನ್ನು ಮಾಡಲು ಬದ್ಧಾದರರಾಗಿ ಇತರರಿಗೆ ಮಾರ್ಗದರ್ಶಕರಾಗಿರುವದರಿಂದ ಈ ಮಹಾಶಯರಿಗೆ ಜಗದಾಚಾರ್ಯರು ಉತ್ತರೋತ್ತರ ಶುಭಪರಂಪರೆಯನ್ನೀಯಲೆಂದು ಆಶಿಸುತ್ತೇನೆ.

ಎಸ್. ಸಿ. ಪಿ. ರುದ್ರಾರಾಧ್ಯ,
ಸೊರಬ.

ಇಂಗ್ಲೆಂಡಿನ ಒಂದು ದೊಡ್ಡಕಾರ್ಖಾನೆಯಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಒಂದು ದೂರದರ್ಶಕಯಂತ್ರವು ತಯಾರಿಸಲ್ಪಡುತ್ತಿರುವದು. ಇದರ ಭೂತಕನ್ನಡಿಯು 34 ಅಡಿಗಳ ಅಗಲವಾಗಿದ್ದು ಇದರ ಸಹಾಯದಿಂದ 2,00,00,00,00,00,00,00,00,000 ಮೈಲುಗಳ ದೂರದಲ್ಲಿರುವ ನಕ್ಷತ್ರಗಳನ್ನು ಸ್ಪಷ್ಟವಾಗಿ ನೋಡಬಹುದಂತೆ! ಅದರಲ್ಲಿ ಕಾಣುವ ನಕ್ಷತ್ರಗಳ ಬೆಳಕು ಈ ಭೂಮಿಯನ್ನು ತಲಪಬೇಕಾದರೆ 40,00,00,000 ವರ್ಷಗಳ ಕಾಲಹಿಡಿಯುವದಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಶಂಕರ ಸಂಸ್ಕೃತ ಕಾಲೇಜಿನ ಶುಭೋದಯವು.

ಈ ದಿವಸ ತಾ|| ೨ ಖುರ್ದಾದಸನ್ನ ೧೩೪೨ ಫಸಲಿ ದಿವಸ ಜರುಗಿದ ಕಮಿಟಿಯ ನಿರ್ಣಯಪ್ರಕಾರ ಉದಯ ೮ ಘಂಟೆಗೆ ಕೆಳಗೆ ವಿವರಿಸಿರುವ ಮೆಂಬರರ ಹಾಜರಿಯಲ್ಲಿ ಕಮಿಟಿ ಕೂಡಿಸಲ್ಪಟ್ಟಿತು. ಶ್ರೀಯುತ ಎನ್. ರುದ್ರಪ್ಪಸಾಹೇಬ ವಕೀಲ ಹೈಕೋರ್ಟ ಇವರ ಸೂಚನೆಗೆ ಶ್ರೀಯುತ ಶ್ರೀನಿವಾಸರಾವಸಾಹೇಬ ವಕೀಲ ಹೈಕೋರ್ಟ ಹೈದ್ರಾಬಾದ ಇವರು ಅನುಮೋದಕೊಟ್ಟ ಮೇರೆಗೆ ಶ್ರೀಯುತ ಪಂಡಿತ ಬಾಪುರಾವಸಾಹೇಬ ವಕೀಲ ಹೈಕೋರ್ಟ ಇವರನ್ನು ಕಮಿಟಿಯ ಅಧ್ಯಕ್ಷರನ್ನಾಗಿ ಸರ್ವಮೆಂಬರರ ಒಪ್ಪಿಗೆಯಿಂದ ನೇಮಿಸುವದಾಯಿತು. ಮಹಕಮೆ ನಿಜಾಮತವು ಮೂರಮಜ ಹಬಿ ಮುರಾಶಿಲಾಸಿ (೧೧೩೨) ತಾ|| ೨೧ ಬಹಿಮನ್ನ ಸನ್ನ ೧೩೪೨ ಫ|| ಓದಲ್ಪಟ್ಟಿತು. ಮತ್ತು ಸದರಿ ಮುರಾಶಿಲಾಪ್ರಕಾರ ೧. ಬಾಪುರಾವಸಾಹೇಬ ವಕೀಲ ಹೈಕೋರ್ಟ, ೨. ಶ್ರೀಯುತ ಎನ್. ರುದ್ರಪ್ಪಸಾಹೇಬ ವಕೀಲ ಹೈಕೋರ್ಟ, ೩. ಶ್ರೀಯುತ ಹಂಪಣ್ಣನವರು, ೪. ಶ್ರೀಯುತ ವೀರನಗೌಡ್ರು, ೫. ಶ್ರೀಯುತ ಸಣ್ಣಚೆನ್ನಪ್ಪನವರು ಈ ಐವರಲ್ಲದೆ ತೆಗೆಯಲ್ಪಟ್ಟ ಎಳುಜನ ಮೆಂಬರರ ಪ್ರತಿಯಾಗಿ ಕೆಳಗೆ ವಿವರಿಸುವ ಎಳುಜನ ಸದ್ಗೃಹಸ್ಥರನ್ನು ಕಮಿಟಿಗೆ ಬರಮಾಡಿಕೊಂಡಿತ್ತು. ೧. ಶ್ರೀಯುತರುಗಳಾದ ಶ್ರೀನಿವಾಸರಾವಸಾಹೇಬ ವಕೀಲ ಹೈಕೋರ್ಟ ಮುದ್ದನೂರ, ೨. ಸಿದ್ದಪ್ಪಸಾಹೇಬ ವಕೀಲ ಗುಲ್ಬುರ್ಗಾ, ೩. ಸಿದ್ದರಾಮಪ್ಪಸಾಹೇಬ ವಕೀಲ ಗುಲ್ಬುರ್ಗಾ, ೪. ಗುರುನಾಥರಡ್ಡಿಸಾಹೇಬ ವಕೀಲ ಸುರಪೂರ ೫. ರಾಜನಗೌಡಸಾಹೇಬ ವಕೀಲ ಯಾದಗಿರಿ, ೬. ಮುನಿಯಪ್ಪನವರು ರಾಯಚೂರ, ೭. ರಾಚೋಟಿಪ್ಪನವರು ಆದವಾನಿ. ಮೇಲೆವಿವರಿಸಿದ ಒಟ್ಟು (೧೨) ಜನರಲ್ಲಿ ಶ್ರೀಯುತ ರಾಚೋಟಿಪ್ಪನವರು ಅಜಾರಿದ್ದ ಮೂಲಕ ಕಮಿಟಿಯಲ್ಲಿ ಹಾಜರ ಆಗಲಿಲ್ಲ. ಪರಂತು ಕೂಡಾ ಕಮಿಟಿಯಕಾರ್ಯವನ್ನು ನಡೆಸಲು ತಮ್ಮ ಒಪ್ಪಿಗೆಯನ್ನು ತಿಳಿಸಿರುತ್ತಾರೆ. ಕೋರಂ ಸಂಪೂರ್ಣವಿದ್ದ ಕಾರಣ ಕೆಳಗೆ ವಿವರಿಸುವ ಪ್ರಕಾರ ಸರ್ವಜನರ ಒಪ್ಪಿಗೆಯಿಂದ ಠರಾವುಗಳು ಮಂಜೂರುಮಾಡಲ್ಪಟ್ಟವು.

ಠರಾವುಗಳು.

೧. ಧಾರ್ಮಿಕ ಮತ್ತು ಲಾಭದಾಯಕವಾದ ಈ ಸಂಸ್ಥೆಯ ಪೋಷಕತ್ವವನ್ನು ಒಪ್ಪಿಕೊಂಡದ್ದಕ್ಕಾಗಿ ಘನವಾದ ನಿಜಾಂಸರಕಾರದ ಆಭಾರವು ಮನ್ನಿಸಲ್ಪಟ್ಟಿತು. ೨. ಪಂಡಿತ ಬಾಪುರಾವಸಾಹೇಬ ವಕೀಲ ಹೈಕೋರ್ಟ ಇವರು ಅಧ್ಯಕ್ಷರೆಂಬುದಾಗಿಯೂ, ಶ್ರೀಯುತ ಎನ್. ರುದ್ರಪ್ಪಸಾಹೇಬ ವಕೀಲ ಹೈಕೋರ್ಟ ಇವರು ಉಪಾಧ್ಯಕ್ಷರೆಂಬುದಾಗಿಯೂ, ಶ್ರೀಯುತರುಗಳಾದ ಹಂಪಣ್ಣನವರು ಜನರಲ್ ಸೆಕ್ರೆಟರಿಯೆಂಬುದಾಗಿಯೂ, ವೀರನಗೌಡ್ರು ಅಸಿಸ್ಟೆಂಟ್ ಸೆಕ್ರೆಟರಿ ಎಂಬುದಾಗಿಯೂ, ಸಣ್ಣಚೆನ್ನಪ್ಪನವರು ಖಜಾನೆದಾರರೆಂಬುದಾಗಿಯೂ, ಮುನಿಯಪ್ಪನವರು ಆಡಿಟರ್ ಎಂಬುದಾಗಿಯೂ, ರಾಜನಗೌಡ ವಕೀಲರು ದಾನವಾಗಿ ಕೊಟ್ಟಿರುವ ಅಂಗಡಿಗಳ ಮತ್ತು ಕಟ್ಟಡಗಳ ಮೇಲ್ವಿಚಾರಕರೆಂಬುದಾಗಿಯೂ, ಸಿದ್ದಪ್ಪ ವಕೀಲರು ಬೋರ್ಡಿಂಗಿನ ಮೇಲ್ವಿಚಾರಕರೆಂಬುದಾಗಿಯೂ ಶ್ರೀನಿವಾಸರಾವಸಾಹೇಬ ವಕೀಲ ಹೈಕೋರ್ಟ ಮತ್ತು ಸಿದ್ದರಾಮಪ್ಪ ವಕೀಲ ಈ ಉಭಯರು ಮುಶೀರ್‌ಕಾನೂನು ಎಂಬುದಾಗಿಯೂ ಮತ್ತು ಇನ್ನುಳಿದ ಮೆಂಬರರು ವ್ಯವಸ್ಥಾಪಕರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಸೂಚನೆ—೧. ಶ್ರೀಯುತ ಹಂಪಣ್ಣನವರ ವಿಷಯಪ್ರಸ್ತಾಪಿಸುವ ಅವಶ್ಯವಿರುವದೇನೆಂದರೆ ಇವರನ್ನು ಆಪ್ತರಾಗಿರುವದರಿಂದ ದಾನಶೈಲ ಧರ್ಮವೀರರು ನಂಬಿರುವರಲ್ಲದೆ ಘನವಾದ ನಿಜಾಂಸರಕಾರವು ಕೂಡ ಇವರ ಕಾರ್ಯದಕ್ಷತೆಯನ್ನು ಕಂಡು ಸೆಕ್ರೆಟರಿಗಳಾಗಿ ಕೆಲಸಮಾಡಲು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ. ೨. ಶ್ರೀಯುತ ವೀರನಗೌಡ್ರು ಮುಂಚೆ ತಾ|| ೨೪ ಇಸ್ಫಂದಿಯಾರ ಸನ್ನ ೧೩೪೧ ಫ|| ಯ ಕಮಿಟಿಯ ನಿರ್ಣಯಪ್ರಕಾರ ಮುಂತಜಿಂರನ್ನಾಗಿ ನೇಮಿಸಲ್ಪಟ್ಟಿರುವದು. ಸದರಿ ಕೆಲಸಗಳನ್ನು ಕೂಡಾ ಸಹಾಯ ಜನರಲ್ ಸೆಕೆಟರಿಯ ಜೊತೆಗೆ ಪೂರೈಸತಕ್ಕದ್ದು. ಈ ಕೆಲಸಕ್ಕಾಗಿ ಅವರಿಗೆ ಈ ಮುಂಚೆ ದೊರೆಯುವ ಅಲೋಯನ್ಸ್ ಮುಂದೆಯೂ ದೊರೆಯುವದು.

ಕೋರ್ಟಿನಲ್ಲಿ ನಡೆದಿರುವ ಪ್ರಕರಣಗಳಲ್ಲಿ ಇದುವರೆಗೂ ಖರ್ಚಾಗಿರುವ ೨೨೮೪||—೩ ಮತ್ತು ಮುಂದೆ ಖರ್ಚಾಗುವದು ವ ಅಗತ್ಯವಿರುವ ಖರ್ಚಿನಪಟ್ಟಿಯಪ್ರಕಾರ (೬೦೦) ರೂ. ಒಟ್ಟು (೨೮೮೪||—೩) ಸಿಕ್ಕಾ ಹಾಲಿ ಮಂಜೂರಮಾಡಿರುತ್ತದೆ. ೪. ಧಾರವಾಡ ಬ್ಯಾಂಕಿನಿಂದ ಬರಬೇಕಾದ ಹಣವನ್ನು ತರಿಸಿಕೊಂಡು ಯಾದಗಿರಿಯ ಅರ್ಬನ್ ಬ್ಯಾಂಕಿನಲ್ಲಿ ೨ ವರುಷದ ಮಟ್ಟಿಗೆ ಜಮಾಮಾಡತಕ್ಕದ್ದು. ಧಾರವಾಡ ಬ್ಯಾಂಕಿನಿಂದ ಬಡ್ಡಿ ಹಣ ಸರಿಯಾದ ವೇಳೆಗೆ ದೊರೆಯುವದಿಲ್ಲ. ಹಾಗೂ ಯಾದಗಿರಿಯ ಅರ್ಬನ್ ಬ್ಯಾಂಕಿನ ಬಡ್ಡಿಯ ದರಕ್ಕಿಂತಲೂ ಅಲ್ಲಿಯ ಬಡ್ಡಿಯ ದರವು ಕಡಿಮೆ ಇರುತ್ತದೆ.

೫. ಕಲ್ಬುರಗಿಯ ಸೆಂಟ್ರಲ್ ಬ್ಯಾಂಕಿನಲ್ಲಿ ಜಮಾ ಇರುವ ಹಣ ಇಪ್ಪರಲ್ಲಿ ಪರತ ಸಿಗುವದದೆ. ಆ ಹಣವನ್ನು ಕೂಡ ಯಾದಗಿರಿಯ ಅರ್ಬನ್‌ಬ್ಯಾಂಕಿನಲ್ಲಿ ೧ ವರುಷದ ಮಟ್ಟಿಗೆ ಜಮಾ ಮಾಡತಕ್ಕದ್ದು. ಯಾಕೆಂದರೆ ಶ್ರೀಯುತ ಎನ್. ರುದ್ರಪ್ಪಸಾಹೇಬ ವಕೀಲ ಹೈಕೋರ್ಟ ಇವರಿಂದ ಕಲ್ಬುರಗಿಯ ಬ್ಯಾಂಕಿನಲ್ಲಿ ದರ ವರುಷ ದರ ಶೇಕಡ ಕರಾರಿರುವ ಬಡ್ಡಿಯ ದರ ೬ ರುಪಾಯಿಯು ಕಡಮೆಯಾಗುವದೆಂದು ತಿಳಿದುಬಂದಿದೆ.

೬. ನಿಜಾಮ ವೀರಶೈವ ಶಂಕರಕಾಲೇಜಿನ ಕಾರ್ಯಿದ್ದಿಯ ೧/೧೫ ನೇಮದಲ್ಲಿ ಸೆಕ್ರೆಟರಿ ಹೆಸರಿನಿಂದ ಪತ್ರವ್ಯವಹಾರ ಮಾಡತಕ್ಕದೆಂದ ಇರುತ್ತದೆ. ಪತ್ರವ್ಯವಹಾರವೆಂಬ ಶಬ್ದವು ಬಹು ವಿಸ್ತಾರವಾದದ್ದಿರುತ್ತದೆ. ಆ ಶಬ್ದದಲ್ಲಿ ಕಾಲೇಜಿನಿಂದ ದಾವೆಗಳ ದಾಖಿಲ್‌ಮಾಡುವ ಮತ್ತು ಕಾಲೇಜಿನ ವಿರುದ್ಧವಾದ ಪ್ರಕರಣಗಳಲ್ಲಿ ಕಾಲೇಜಿನವರೆ ಇಂಥ ಕೆಲಸಮಾಡುವ ಅಧಿಕಾರ ಈಗಿರುವ ಪ್ರಕರಣಗಳಲ್ಲಿ ಮತ್ತು ಮುಂದೆ ಒದಗುವ ಪ್ರಕರಣಗಳಲ್ಲಿ ಜನರಲ್ ಶೆಕ್ರಟರಿಗಳವರಿಗೆ ಇರುತ್ತದೆ.

೭. ನಿಜಾಮ ವೀರಶೈವ ಶಂಕರ ಸಂಸ್ಕೃತ ಅಭ್ಯಾಸದ ೬ ನೆಯ ಕಲಮಿನಲ್ಲಿ ಬರೇ ಕಲ್ಕತ್ತಾ ಎಂಬುದಾಗಿ ಬರೆದಿದೆ ಕಲ್ಕತ್ತಾ ಅಲ್ಲದೆ ಮದ್ರಾಸ ಪರೀಕ್ಷೆಗೆ ಕೂಡಲಿಚ್ಛೆವುಳ್ಳ ವಿದ್ಯಾರ್ಥಿಗಳ ಅಭ್ಯಾಸವು ಕೂಡ ಈ ಕಾಲೇಜಿನಲ್ಲಿ (ಪುನಃ ಆಲೋಚನೆಮಾಡುವವರೆಗೆ) ಮಾಡಿಸಲು ಅಪ್ಪಣೆಯಿರುವದು.

೮. ನಿಜಾಮ ವೀರಶೈವ ಶಂಕರಸಂಸ್ಕೃತಕಾಲೇಜಿನ ನೇಮಗಳ ಕಡೇಭಾಗದಲ್ಲಿ ತೋರಿಸಿರುವ ಸೂಟಿದಿವಸಗಳ ಲಿಷ್ಟಿನಲ್ಲಿ ಸಾಲಿರಮು ಬಾರಿಕಿನ ದಿವಸವು ಕೂಡಾ ಸೇರಿಸತಕ್ಕದ್ದು.

೯. ವೇ|| ಪಂ|| ಬಸವರಾಜಶಾಸ್ತ್ರಿಗಳವರು ಸದ್ಯ ಆಕ್ಟಿಂಗ್ ಪ್ರಿನ್ಸಿಪಾಲರಾಗಿ ಕೆಲಸಮಾಡುತ್ತಿರುವರು. ಅವರು ಮಾಡುತ್ತಿರುವ ಕಾರ್ಯದ ಮೇಲಿಂದ ಸದ್ಯ ಪಡೆಯುತ್ತಿರುವ ಸಂಬಳದಲ್ಲಿಯೇ ಅವರನ್ನು ಕಾಯಮ್ ಪ್ರಿನ್ಸಿಪಾಲರನ್ನಾಗಿ ನೇಮಿಸಿರುತ್ತದೆ.

೧೦. ಧಾರ್ಮಿಕಗ್ರಂಥಗಳ ಖರೀದಿಯ ಬಗ್ಗೆ ಪ್ರತಿವರುಷ ೨೦೦ ರುಪಾಯಿಗಳವರೆಗೆ ಮಂಜೂರಿಕೊಡುತ್ತದೆ.

೧೧. ಪರಭಾಷೆಗಳಲ್ಲಿರುವ ಧಾರ್ಮಿಕಗ್ರಂಥಗಳಲ್ಲಿ ವರ್ಕಿಂಗ್ ಕಮಿಟಿಗೆ ಅತಿ ಅವಶ್ಯ ಕಂಡವುಗಳನ್ನು ದೇಶಭಾಷೆಗಳಲ್ಲಿ ಭಾಷಾಂತರಮಾಡಿಸಿ ಮುದ್ರಣಮಾಡಿಸಲು ಅಪ್ಪಣೆಕೊಡುತ್ತದೆ.

೧೨. ಕಾಲೇಜಿನ ವಿದ್ಯಾರ್ಥಿಗಳ ವ್ಯಾಯಾಮದ ಬಗ್ಗೆ ವರ್ಕಿಂಗ್ ಕಮಿಟಿಯು ಆಲೋಚಿಸಿ ತೀವ್ರವ್ಯವಸ್ಥೆಮಾಡತಕ್ಕದ್ದು.

೧೩. ಪ್ರತಿವರುಷ ಒಂದು ಸಾರೆ ಸಾರ್ವಜನಿಕವಾಗಿ ವಾರ್ಷಿಕೋತ್ಸವವನ್ನು ಮಾಡಲು ಮಂಜೂರು ಕೊಡುತ್ತದೆ. ತಾರೀಖಿನ ನಿರ್ಣಯಮಾಡಲು ಮ್ಯಾನೇಂಜಿಗ್ ಕಮಿಟಿಗೆ ಅಧಿಕಾರವಿರುವದು.

೧೪. ಶಾಸ್ತ್ರಿಗಳವರು ಮಾಸ್ತರರು ಬೇಸಿಗೆ ದಿವಸಗಳ ಸೂಟಿಯಲ್ಲಿ ಹದಿನೈದು ದಿವಸ ಸುತ್ತುಮುತ್ತಿನ ಗ್ರಾಮಗಳಲ್ಲಿರುವ ವೀರಶೈವರಲ್ಲಿ ಧರ್ಮಜಾಗೃತಿಯನ್ನು ಮತ್ತು ಕಾಲೇಜಿನ ಉದ್ದೇಶವನ್ನು ಜನಗಳಿಗೆ ತಿಳಿಸುವದಕ್ಕಾಗಿ ಅವಶ್ಯವಾಗಿ ಸಂಚರಿಸತಕ್ಕದ್ದು ಅವರ ಪ್ರವಾಸಖರ್ಚನ್ನು ಕಾಲೇಜಿನಿಂದ ವರ್ಕಿಂಗ ಕಮಿಟಿಯು ಕೊಡುವದು.

೧೫ ಬೇಸಿಗೆಯಲ್ಲಿ ಯಾದಗಿರಿಯಲ್ಲಿ ಅತಿಶಯ ಉಷ್ಣತೆ ಇರುವದರಿಂದ ಅರ್ದಿಬೇಹಿಸ್ತ ತಿಂಗಳ ೧ ನೇ ತಾರೀಖಿನಿಂದ ಸೂಟಿ ದಿವಸಗಳು ಪ್ರಾರಂಭವಾಗುವವರೆಗೆ ಪಾಠದ ವೇಳೆಯನ್ನು ಉದಯ ೭ ರಿಂದ ೧೧ ಘಂಟೆಯವರೆಗೆ ಮತ್ತು ಮಧ್ಯಾಹ್ನ ೩ ಘಂಟೆಯಿಂದ ೫ ಘಂಟೆವರೆಗೆ ನೇಮಿಸಲು ಮಂಜೂರಿ ಕೊಡಲ್ಪಡುತ್ತದೆ.

೧೬. ಈ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಪಂಡಿತ ಪರೀಕ್ಷೆ ತೇರ್ಗಡೆಯಾದ ಮೊದಲನೇ ವಿದ್ಯಾರ್ಥಿಗೆ ಕಾಲೇಜಿನಿಂದ (ಮೆಡಲ್) ಪದಕವನ್ನು ಕೊಡಲು ನಿರ್ಣಯಿಸಿರುತ್ತದೆ.

೧೭. ಈ ಕಮಿಟಿಯ ನಿರ್ಣಯಗಳ ಪ್ರತಿಯು ಸರ್ಕಾರಿ ಮಹಾಕ್ಮಗಳಲ್ಲಿ ಕಳಿಸಲು ಮತ್ತು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಪಡಿಸಲು ಅಪ್ಪಣೆಕೊಡುತ್ತದೆ. ಫಕ್ತ

ಉರ್ದುಸಹಿ, ಪಂ|| ಬಾಪುರಾವಸಾಹೇಬ ವಕೀಲ, ಎನ್. ರುದ್ರಪ್ಪ ಸಾ|| ವಕೀಲ, ಶ್ರೀನಿವಾಸರಾವ ಸಾ|| ವಕೀಲ, ರಾಚಪ್ಪ ಸಾ|| ವಕೀಲ, ಸಿದ್ದರಾಮಪ್ಪ ಸಾ|| ವಕೀಲ, ಗುರುನಾಥರಡ್ಡಿ, ಸಾ|| ವಕೀಲ, ವೀರನಗೌಡ್ರು ಪಾಟೀಲ, ಸಿದ್ದಪ್ಪ ಸಾ|| ವಕೀಲ ಕನ್ನಡಸಹಿ, ಹಂಪಣ್ಣ ಸೆಕ್ರೆಟರಿ, ಚೆನ್ನಪ್ಪ-ರಾಚಪ್ಪ, ದಸ್ತಾಪೂರ ಮುನಿಯಪ್ಪ.

ತಾ|| ೩ ಖುರ್ದಾದ ಸನ್ನ ೧೩೪೨ ಫಸಲಿ, ಶುಕ್ರವಾರ
ಹಂಪಣ್ಣ ಸೆಕ್ರೆಟರಿ.

ಚಿಕ್ಕಮಗಳೂರಿನಲ್ಲಿ ಗಣಪತಿ ದೇವಸ್ಥಾನದ ಶಂಕುಸ್ಥಾಪನೆ ಮಾಡಿದ ಸಮಯದಲ್ಲಿ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಮಾಡಿದ ಭಾಷಣ.

ಬೆಂಗಳೂರಿನಲ್ಲಿ ಕ್ರೈಸ್ತಮತದವರ ಒಂದು ಚರ್ಚಿನ ಶಂಕುಸ್ಥಾಪನೆ ಮಾಡುವ ಸುಯೋಗವೂ ಸಂತೋಷವೂ ಈಗ್ಗೆ ಸ್ವಲ್ಪ ಹಿಂದೆ ನನಗೆ ಲಭಿಸಿದ್ದುವು. ಹಿಂದೂ ಸಂಗಡದ ನನ್ನ ದೇಶಬಾಂಧವರ ಆಹ್ವಾನದ ಮೇಲೆ ಈ ದೇವಸ್ಥಾನದ ಶಂಕುಸ್ಥಾಪನೆ ಮಾಡುವ ಭಾಗ್ಯವು ನನಗೆ ಈ ದಿನ ದೊರೆತಿದೆ.

ನಮ್ಮ ಜೀವನದ ಪರಿಸ್ಥಿತಿಯು ಎಂಥದಾಗಿರಬೇಕೆಂಬುದು ನಮ್ಮ ಯತ್ನಕ್ಕೆ ಅವಕಾಶವಿಲ್ಲದೆ ಬಹುಮಟ್ಟಿಗೆ ಮೊದಲೇ ನಿರ್ಧರವಾಗಿ ಹೋಗಿರುತ್ತದೆ. ನಾವು ಯಾವ ಮತದವರ ಮನೆಯಲ್ಲಿ ಹುಟ್ಟಬೇಕು. ನಾವು ಯಾವ ಸನ್ನಿವೇಶಗಳಲ್ಲಿ ಹುಟ್ಟಬೇಕು, ಯಾವ ಬಗೆಯ ಗುಣಗಳೊಡಗೂಡಿ ನಾವು ಜೀವನಯಾತ್ರೆಯನ್ನಾರಂಭಿಸಬೇಕು ಎಂಬ ವಿಚಾರಗಳಲ್ಲಿ ನಮ್ಮ ಪ್ರಯತ್ನವೇನೂ ಸಾಗುವಂತಿಲ್ಲದೆ ಅವು ನಡೆದುಹೋಗಿರುತ್ತವೆ. ಒಳ್ಳೆಯದೋ, ಕೆಟ್ಟದೋ ಅಂತು ಅವಶ್ಯಕವೋ ನಾವು ಅಧೀನರಾಗಿ ಬೇರೆ ಬೇರೆ ಮತಗಳಲ್ಲಿ ನಾವು ಹುಟ್ಟಿಬಿಟ್ಟೆವು. ಆದಕಾರಣ, ನಮ್ಮ ವಶದಲ್ಲಿಲ್ಲದೆ ಇದ್ದ ಈ ಅಂಶವನ್ನು ಪರಿಗಣಿಸದೆ ಬೇರೆ ಬೇರೆ ಮತಗಳಿಗೆ ಸೇರಿದವರಾದ ನಾವೆಲ್ಲರೂ ಪರಸ್ಪರವಾಗಿ ಸಹೋದರ ಭಾವದಿಂದ ವರ್ತಿಸುವುದು ಅವಶ್ಯಕವಲ್ಲವೆ? ನಮ್ಮ ಮತಕ್ಕೆ ಸೇರಿಲ್ಲದ ಮನುಷ್ಯನನ್ನು ಅವನು ನಮ್ಮ ಮತದವನಲ್ಲವೆಂಬ ಕಾರಣಕ್ಕಾಗಿಯೇ ಕಡಿಮೆಯಾಗಿ ಪ್ರೀತಿಸುವುದು ಯುಕ್ತವೆನಿಸೀತೆ? ಜನರು ತಮ್ಮಲ್ಲಿ ಯಾರು ಶ್ರೇಷ್ಠರೆಂಬುದನ್ನು ಇಂಥ ಕಾರಣಗಳ ಮೇಲೆ ನಿರ್ಣಯಿಸಲು ಪ್ರಾರಂಭಿಸುವುದು ನೀತಿಶಾಸ್ತ್ರವಿರುದ್ಧವಾದ ವಿಚಾರ; ಮತಧರ್ಮಗಳಿಗಂತು ಹಾಗೆ ಮಾಡುವುದು ಮತ್ತೂ ವಿರುದ್ಧವಾದುದು; ಆ ರೀತಿ ಮಾಡುವುದು ಯುಕ್ತವೆನ್ನಿಸುವಂತೆಯೇ ಇಲ್ಲ.

ಅನ್ಯಮತದವರಲ್ಲಿ ಸಹಿಷ್ಣುತೆಯನ್ನು ತೋರಿಸುವುದು ಹಿಂದುಗಳಿಗೆ ಅನೂಚಾನವಾಗಿ ನಡೆದುಬಂದಿರುವ ಸಂಪ್ರದಾಯ. ಬೋಧನೆಯ ಮೂಲಕ ಇತರ ಮತಗಳವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕೆಂದು ಸನಾತನ ಧರ್ಮದಲ್ಲಿ ಹೇಳಿಲ್ಲ. ಆದಕಾರಣ, ತಮ್ಮ ಮತದಲ್ಲಿದ್ದಷ್ಟೇ ಜನರು ಸಾಕೆಂದು ಹಿಂದುಗಳು ತೃಪ್ತಿಹೊಂದುವವರಾದರು. ಇತರ ಮತಗಳವರನ್ನು ತಮ್ಮ ಮತಕ್ಕೆ ಸೇರಿಸಿ ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳಬೇಕೆಂಬ ಬಯಕೆಯೇ ಹಿಂದುಗಳಿಗಿಲ್ಲ. ಅನ್ಯಮತಸಹಿಷ್ಣುತೆಯು ನಿಮ್ಮ ಮತದ ಮುಖ್ಯ ಲಕ್ಷಣ. ಇದಕ್ಕೆ ಸ್ವಲ್ಪವೂ ಚ್ಯುತಿಯುಂಟಾಗದಂತಿರಲೆಂಬುದೇ ನನ್ನ ಹಾರೈಕೆ. ನೀವುಗಳು ನಿಮ್ಮ ಮತದಲ್ಲಿ ಶ್ರದ್ಧೆಯುಳ್ಳವರಾಗಿರುವಿರಿ. ಆದರೂ, ಇತರ ಮತಗಳವರಲ್ಲಿ ಪ್ರೀತಿ ವಿಶ್ವಾಸಗಳನ್ನೇ ತೋರಿಸುವಿರಿ. ಇದೇ ನಿಜವಾದ ಮತಧರ್ಮ. ಇದನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು.

ಈ ರೀತಿಯಲ್ಲಿ ನಿಜವಾದ ಮತಧರ್ಮವನ್ನವಲಂಬಿಸಿ ನಡೆಯುತ್ತಿರುವ ಹಿಂದುಗಳಲ್ಲಿ, ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರಿಗಿಂತಲೂ ಉತ್ತಮವಾದ ನಿದರ್ಶನವು ಮತ್ತೆಲ್ಲಿ ದೊರೆಯುವುದು? ಮಹಾಸ್ವಾಮಿಯವರು ಅನ್ಯಮತಸಹಿಷ್ಣುತೆಗೂ, ಉದಾರಭಾವನೆಗಳಿಗೂ, ಮೂರ್ತಿವತ್ತಾದ ನಿದರ್ಶನ. ಅವರು ಸನಾತನ ಧರ್ಮದಲ್ಲಿ ಪೂರ್ಣಶ್ರದ್ಧೆಯುಳ್ಳವರಾಗಿಯೂ ಇದ್ದಾರೆ; ಅಲ್ಲದೆ ಇತರ ಮತದವರಿಗೆ ಒಳ್ಳೆಯದನ್ನು ಕೋರುತ್ತ ಅವರಿಗೆ ವಿಶೇಷ ಸಹಾಯವನ್ನು ಮಾಡುತ್ತಲೂ ಬಂದಿದ್ದಾರೆ.

ಮಹಾತ್ಮಾಗಾಂಧಿಯವರು ಹರಿಜನರೆಂದು ಹೆಸರಿಟ್ಟಿರುವವರ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುವೆನು. ಹಿಂದುಗಳ ಸಮಾಜದಲ್ಲಿ ಅವರಿಗೆ ಯುಕ್ತವಾದಸ್ಥಾನವು ದೊರೆಯುವಂತೆ ಮಾಡುವುದಕ್ಕಾಗಿ ಮಹಾತ್ಮಾಗಾಂಧಿಯವರು ಶ್ಲಾಘ್ಯರೀತಿಯಲ್ಲಿ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಸನಾತನಧರ್ಮದ ಪುರೋಭಿವೃದ್ಧಿಯಲ್ಲಿಯೂ ತನ್ಮೂಲಕ ಭರತಖಂಡದ ಏಳಿಗೆಯಲ್ಲಿಯೂ ಆಸಕ್ತಿಯುಳ್ಳವರೆಲ್ಲರೂ ಅವರ ಪ್ರಯತ್ನಗಳು ಯಶಸ್ವಿಯಾಗಿ ಸಫಲವಾಗಲೆಂದು ಹಾರೈಸುವುದರಲ್ಲಿ ಸಂಶಯವಿಲ್ಲ. ಆದರೂ, ದೇವಸ್ಥಾನಗಳಿಗೆ ಹರಿಜನರು ಪ್ರವೇಶಮಾಡುವುದಕ್ಕೆ ಅವಕಾಶವಿರಬೇಕೇ ಎಂಬುದನ್ನು ಇತ್ಯರ್ಥಪಡಿಸುವುದು ಬಹುಕಷ್ಟವಾದ ವಿಚಾರ. ಇದು ಮತಧರ್ಮಕ್ಕಿಂತಲೂ ಹೆಚ್ಚಾಗಿ ಸಾಮಾಜಿಕ ಸ್ನೇಹವರ್ತನೆಯ ನಯನೀತಿಗಳಿಗೆ ಸಂಬಂಧಪಟ್ಟಿದೆ. ಆಹಾರ, ನೈರ್ಮಲ್ಯ ಮುಂತಾದ ವಿಚಾರಗಳಲ್ಲಿ ಹರಿಜನರಸ್ಥಿತಿಯು ಉತ್ತಮಪಡುತ್ತ ಹೋದಂತೆಲ್ಲ ದೇವಾಲಯಪ್ರವೇಶ ಮುಂತಾದುವುಗಳಿಗೆ ಹಕ್ಕು ತಾನಾಗಿಯೇ ದೊರೆಯುತ್ತದೆ. ಮತಧರ್ಮದಮೇರೆಗೆ ಅದಕ್ಕೆ ಅವಕಾಶವುಂಟೇ ಎಂದು ಕೇಳಿದರೆ ಇಲ್ಲವೆಂದು ಉತ್ತರಕೊಡುವೆನು. ಸಾಮಾಜಿಕದೃಷ್ಟಿಯಿಂದ ಅವರಿಗೆ ಕರುಣೆಯನ್ನು ತೋರಿಸಿ ಅವಕಾಶಕೊಟ್ಟೇಕೊಡುವ ಕಾಲವೂ ಬರುತ್ತದೆ. ಆದರೆ ಕೇವಲ ಮತಧರ್ಮದ ಆಧಾರದಮೇಲೆ ಕೇಳಿದರೆ ಅದು ದೊರೆಯುವುದು ಕಷ್ಟ. ಆದಕಾರಣ, ಸಮಾಜಸಂಬಂಧವಾದ ಸ್ನೇಹವರ್ತನೆಯ ಆಧಾರದಮೇಲೆ ಅದನ್ನು ಇತ್ಯರ್ಥಪಡಿಸುವುದೇ ಸರಿಯಾದಮಾರ್ಗ. ಈ ಅಭಿಪ್ರಾಯವು ವಿಲಕ್ಷಣವಾಗಿರುವಂತೆ ಕೆಲವರಿಗೆ ತೋರಬಹುದು. ಆದರೂ ನನ್ನ ಈ ಅಭಿಪ್ರಾಯವೇ ಸರಿಯೆಂದು ನಾನು ನಂಬಿದ್ದೇನೆ. ಮತಧರ್ಮದ ವಿಚಾರವನ್ನೇ ಎತ್ತದೆ ಪರಸ್ಪರ ಸ್ನೇಹವರ್ತನೆಗೆ ಈ ಸುಧಾರಣೆಯು ಅವಶ್ಯಕವೆಂಬುದನ್ನೇ ಮುಂದಿಟ್ಟುಕೊಂಡು ಪ್ರಯತ್ನಮಾಡಿದರೆ, ದೇವಾಲಯ ಪ್ರವೇಶದ ಈ ಸಮಸ್ಯೆಯು ಹೆಚ್ಚು ಸುಲಭವಾಗಿಯೂ, ಹೆಚ್ಚು ತೃಪ್ತಿಕರವಾಗಿಯೂ ಬಗೆಹರಿಯುವುದೆಂದು ತೋರುತ್ತದೆ. ಅದಾಗ್ಯೂ ಪ್ರೀತಿವಿಶ್ವಾಸಗಳು ಹೆಚ್ಚಿದಂತೆಲ್ಲಾ ಇದು ನಿಧಾನವಾಗಿ ತನ್ನಷ್ಟಕ್ಕೆ ತಾನೇ ನೆರವೇರಬೇಕು. ಹಾಗಿಲ್ಲದೆ ಬಲಾತ್ಕಾರದಿಂದ ಒತ್ತಡವೇಗೇ ಇದು ಸಾಧ್ಯವಾಗಬೇಕೆಂದು ಪ್ರಯತ್ನಿಸಿ ಫಲವಿಲ್ಲ. ಇಂಥ ವಿಚಾರದಲ್ಲಿ ಆ ರೀತಿಮಾಡಿದರೆ ಪ್ರಯೋಜನವಿಲ್ಲ. ಈ ವಿಚಾರದಲ್ಲಿಯೂ, ಸಮಾಜಕ್ಕೂ ಮತಕ್ಕೂ ಸಂಬಂಧಪಟ್ಟ ಇತರ ಅನೇಕ ವಿಚಾರಗಳಲ್ಲಿಯೂ ಕಾಲಮಹಿಮೆಯಿಂದ ಸುಧಾರಣೆಗಳು ತಮ್ಮಷ್ಟಕ್ಕೆ ತಾವೇ ಸದ್ದಿಲ್ಲದೆ ನಡೆಯುತ್ತಿವೆ.

ಈ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದ ಅವಶ್ಯಕಾರ್ಯವೇನು? ಹಬ್ಬಿಕೊಂಡು ಮುಂದಕ್ಕೆ ಹೋಗುತ್ತಿರುವ ಬಳ್ಳಿಯನ್ನು ಮೃದುವಾದ ಮತ್ತು ಸ್ಥೈರ್ಯವುಳ್ಳ ಹಿಡಿತದಲ್ಲಿ ಕೊಂಚ ಒತ್ತಿಹಿಡಿದು ಅದಕ್ಕೆ ಘಾಸಿಯಾಗದಹಾಗೆ ಸರಿಯಾದ ಕಡೆಗೆ ತಿರುಗಿಸುವಂತೆ ನಮ್ಮ ಉದ್ದೇಶಸಾಧನೆಗಾಗಿ ಸರಿಯಾದ ಮಾರ್ಗದಲ್ಲಿ ಅಲ್ಪಸ್ವಲ್ಪ ಸಹಾಯಮಾಡುವುದೇ ನಾವು ಅವಶ್ಯವಾಗಿಮಾಡಬೇಕಾದ ಕಾರ್ಯ. ಅಷ್ಟೇಹೊರತು ಬಳ್ಳಿಯನ್ನು ರಭಸದಿಂದ ಜಗ್ಗಿಸಿ ಎಳೆಯುವುದಾಗಲಿ ಅಥವಾ ಒರಟಾಗಿ ಅಲುಗಿಸುವುದಾಗಲಿ ಸರ್ವಥಾ ಯುಕ್ತವಲ್ಲ.

ಬೀರೂರು ಶಿವಾನಂದಾಶ್ರಮಕ್ಕೆ ಮೈಸೂರು ಸಚಿವಶ್ರೇಷ್ಠರಾದ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ.ಎ., ಒ.ಬಿ.ಇ., ಇವರ ಆಗಮನ.

ತಾ|| 1-4-33 ನೇ ಶನಿವಾರ 12 ಘಂಟೆಗೆ ಸರಿಯಾಗಿ ದಿವಾನ್ ಸಾಹೇಬರವರು ತಮ್ಮ ಪ್ರೈವೇಟ್ ಸೆಕ್ರೆಟರಿಗಳೂ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರೂ, ಇಂಜನೀಯರಿಂಗ್ ಸಾಹೇಬರು ಇವರೊಂದಿಗೆ ಬೀರೂರಿಗೆ ದಯಮಾಡಿಸಿದರು. ಇವರನ್ನು ಸತ್ಕರಿಸಲು ಅಲ್ಲಲ್ಲಿ ಹಲವು ತೋರಣಗಳಿಂದ ಪುರವೀಧಿಗಳು ಅಲಂಕರಿಸಲ್ಪಟ್ಟಿದ್ದುವು. ಪ್ರಾರಂಭದಲ್ಲಿ ಬೀರೂರು ಶಿವಾನಂದಾಶ್ರಮಕ್ಕೆ ಯಜಮಾನರಾದ ನರಸಿಂಹರಾಜಪುರದ ಇಂ. ವಿ. ಶಾಂತಪ್ಪಶೆಟ್ಟರು ಗ್ರಾಮದ ಕೌನ್ಸಿಲ್ ಮೆಂಬರಾದ ಸತ್ಯನಾರಾಯಣಶೆಟ್ಟರೇ ಮೊದಲಾದ ಗ್ರಾಮದ ಜನರೊಂದಿಗೆ ತಮ್ಮ ಆಶ್ರಮದ ಹತ್ತಿರ ನಿಂತಿದ್ದು ದಿವಾನರವರನ್ನು ಆಶ್ರಮಕ್ಕೆ ದಯಮಾಡಿಸಿಕೊಂಡುಬಂದರು. ಸರ್ ಮಿರ್ಜಾರವರು ಉಚಿತಾಸನವನ್ನಲಂಕರಿಸಿದ ಬಳಿಕ ಶಾಂತಪ್ಪಶೆಟ್ಟರು ಸ್ವಾಮಿ! ಈ ಆಶ್ರಮವನ್ನು ನಾನು ಧರ್ಮಾರ್ಥವಾಗಿ ಕಟ್ಟಿಸಿ ಕೆಲವು ವೀರಶೈವ ಬಡ ವಿದ್ಯಾರ್ಥಿಗಳಿಗೆ ಶಕ್ತ್ಯನುಸಾರ ಸಹಾಯಮಾಡುತ್ತ ಆಶ್ರಮದಲ್ಲಿ ಸಂಸ್ಕೃತಸ್ಕೂಲಿನಲ್ಲಿ ಇಂಗ್ಲೀಷು, ಕನ್ನಡ ಪಾಠ ಹೇಳಿಸುತ್ತಾ ಇದ್ದೇನೆ. ಈ ಕಾರ್ಯವು ಶಾಶ್ವತವಾಗಿ ನಡೆಯಲು ಹತ್ತುಸಾವಿರ ರೂಪಾಯಿಗಳು ಫಂಡನ್ನು ಸರ್ಕಾರಿ ಬ್ಯಾಂಕಿನಲ್ಲಿಟ್ಟು ಬಡ್ಡಿಯಿಂದ ಸರ್ಕಾರದವರಿಂದಲೇ ಟ್ರಸ್ಟಿಗಳನ್ನು ನೇಮಿಸಿ ನಡೆಯಿಸಬೇಕಾಗಿ ನನ್ನ ಅಪೇಕ್ಷೆಯಿರುವದು. ಇದಕ್ಕಾಗಿ ಘನಸರ್ಕಾರದವರು ತಕ್ಕ ಸಲಹೆಯೊಂದಿಗೆ ಈ ಕಾರ್ಯವನ್ನು ನಡೆಯಿಸಿಕೊಡಬೇಕು. ಇದಕ್ಕಾಗಿ ತಮ್ಮ ಸಮಕ್ಷಮದಲ್ಲಿ ಈಗ ಎರಡು ಸಾವಿರ ರೂಪಾಯಿಗಳನ್ನು ಪಾವತಿಮಾಡುತ್ತೇನೆ. ಉಳಿದ ಎಂಟು ಸಾವಿರ ರೂಪಾಯಿಗಳು ಈ ತಿಂಗಳು ಅಖೈರು ಒಳಗೆ ನಮ್ಮ ಬಾಬತು ಸ್ಥಿರಸೊತ್ತನ್ನು ಬೀರೂರು ವೀರಶೆಟ್ಟ್ಯನವರ ಚೆನ್ನಯ್ಯನವರಿಗೆ ವಿಕ್ರಯಮಾಡಿ ಅವರಿಂದಲೇ ಬ್ಯಾಂಕಿಗ ಸಲ್ಲುವಂತೆ ಮಾಡಿಸುತ್ತೇನೆ. ಇದಕ್ಕಾಗಿ ಶೇಕಡ ಮಾಹೆಯಾನಾ ಆರು ರೂಪಾಯಿಗಳಂತೆ ಬಡ್ಡಿಕೊಡಿಸಿ ಇಲ್ಲಿ ಸಂಸ್ಕೃತ ಮತ್ತು ಮತವಿಷಯಗಳನ್ನು ಹೇಳತಕ್ಕ ಶಾಸ್ತ್ರಿಗಳಿಗೆ ಮಾಹೆಯಾನಾ ಗ್ರಾಂಟು ಮುಂಜೂರ್ಮಾಡಿಸಿಕೊಡಬೇಕಾಗಿ ವಿಜ್ಞಾಪನಪತ್ರಿಕೆಯ ದ್ವಾರಾ ಪ್ರಾರ್ಥಿಸಿದರು. ದಿವಾನ್ ಸಾಹೇಬರು ಶೆಟ್ಟರ ಕೋರಿಕೆಯನ್ನು ಕೇಳಿ ಬಹಳ ಸಂತೋಷಪಟ್ಟು ಸಾಧ್ಯವಾದಷ್ಟು ಅನುಕೂಲಪಡಿಸಿಕೊಡುತ್ತೇವೆಂದು ಅಪ್ಪಣೆಮಾಡಿದರು. ಅನಂತರ ಫಲಪುಷ್ಪಾಹಾರತುರಾಯಿಗಳೊಂದಿಗೆ ಸತ್ಕಾರವನ್ನು ಸ್ವೀಕಾರಮಾಡಿ ಹೊರಟು ಮುನಿಸಿಪಾಲಿಟಿ ಆಫೀಸಿನ ಹತ್ತಿರ ಕಾದಿದ್ದ ಕೌನ್ಸಿಲ್ ಮೆಂಬರರ ಮತ್ತು ಗ್ರಾಮಸ್ಥರ ಸತ್ಕಾರವನ್ನು ಸ್ವೀಕರಿಸಿ ಬೀರೂರಿಗೆ ಹೈಸ್ಕೂಲು ಕೊಡಿಸಿಕೊಡುವ ವಿಷಯದಲ್ಲಿ ಪ್ರಾರ್ಥಿಸಿದ ಮನವಿಯನ್ನು ಕೇಳಿ ಕಡೂರಿಗೆ ದಯಮಾಡಿಸಿದರು.

ತಾ|| 3.4.33 ನೇ ಸೋಮವಾರ ಕಡೂರು ತಾಲೂಕು ಅಮಲ್ದಾರರವರ ಮುಖೇನ ಶೆಟ್ಟರು ಎರಡು ಸಾವಿರ ರೂಪಾಯಿಗಳನ್ನು ಟ್ರಜರಿಗೆ ಪಾವತಿಮಾಡಿದರು. ಈ ರೀತಿ ಧರ್ಮಕಾರ್ಯಾಸಕ್ತರಾದ ಶಾಂತಪ್ಪಶೆಟ್ಟರಿಗೆ ಭಗವಂತನು ದೀರ್ಘಾಯುರಾರೋಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಮರಣಶಯ್ಯೆಯಲ್ಲಿನ ಶರಣ.

ಕಾನಾಮಡುವು.

ಚರಾಚರವಸ್ತುಗಳಿಗಾಧಾರನಾದ ಪರಮಾತ್ಮನ ಅಂಶರೂಪಿಯಾದ ಶ್ರೀ ಶರಣಾರ್ಯನು ಕಾನಾಮಡುವು ಎಂಬ ಗ್ರಾಮದಲ್ಲಿ ನೆಲಸಿ, ತನ್ನ ಲೀಲಾಜಾಲಗಳನ್ನು ಸಕಲಜನಗಳಿಗೂ ವಿದಿತಗೊಳಿಸಿರುವುದು ಸರ್ವರಿಗೂ ತಿಳಿದವಿಷಯವೇ ಸರಿ. ಈ ಪ್ರಥಮಶರಣನಿಂದ ಆದಿಯಾಗಿ ಇಲ್ಲಿಗೆ ಮೂರುತಲೆಗಳು ಕಳೆದವು. ಅಂದಿನಿಂದಲೂ ಇಲ್ಲಿ ಯಾವಾಗಲೂ ದಾಸೋಹವು ನಡೆಯುತ್ತಲೇಬಂದಿದೆ. ಈ ಮಠಕ್ಕೆ 3ನೆಯ ಅಧಿಕಾರಿಗಳಾಗಿದ್ದ ಶ್ರೀಯುತ ಶರಣಚನ್ನಬಸಪ್ಪನವರು 1897 ರಲ್ಲಿ ಜನ್ಮವೆತ್ತಿ ತಮ್ಮ ಪೂರ್ವಜರ ಕೀರ್ತಿಯನ್ನು ಪ್ರಕಾಶಗೊಳಿಸುತ್ತಾ ಇದ್ದರು. ಇವರು ಕೇವಲ ದಯಾರ್ದ್ರಹೃದಯರೂ, ಶಾಂತಸ್ವಭಾವಿಗಳೂ, ಅತಿಥಿಸತ್ಕಾರದಲ್ಲಿ ತನುಮನಧನಗಳನ್ನು ಅರ್ಪಿಸಿದವರೂ ಆಗಿದ್ದರು. ಈಗ ಎಲ್ಲೆಲ್ಲಿಯೂ ಬಾಧಿಸುತ್ತಿರುವ ಆರ್ಥಿಕದುಸ್ಥಿತಿಯ ಸಮಯದಲ್ಲಿಯೂ ಧೈರ್ಯಗುಂದದೆ, ತಮ್ಮಲ್ಲಿಗೆ ಬರುವ ಅತಿಥಿಗಳನ್ನು ಸತ್ಕರಿಸುತ್ತಿದ್ದರು. ಇವರು ದೀನಬಂಧುಗಳೂ, ವಿದ್ಯಾರ್ಥಿಗಳ ಆಶ್ರಯದಾತರೂ, ಗುರುಲಿಂಗಜಂಗಮಪ್ರೇಮಿಗಳೂ ಆಗಿದ್ದರು. ಇವರು 1932 ನೆಯ ಇಸವಿಯಲ್ಲಿ ಇಲ್ಲಿಯ ಬಡಬಾಲಕರ ವಿದ್ಯಾಭಿವೃದ್ಧಿಗಾಗಿ ಒಂದು ಫ್ರೀಬೋರ್ಡಿಂಗನ್ನು ಸ್ಥಾಪಿಸಿರುವರಲ್ಲದೆ, ಫಸ್ಟ್‌ಗ್ರೇಡ್ ಹೈಯರ್ ಎಲಿಮೆಂಟರಿ ಶಾಲೆಯೊಂದನ್ನು ಸ್ಥಾಪಿಸಿ ಕೀರ್ತಿಯನ್ನು ಪಡೆದಿರುತ್ತಾರೆ.

ಇಂತಹ ಮಹನೀಯರು ನಮ್ಮ ಸಮಾಜದ ದುರ್ದೈವದಿಂದ ಇದೇ ಚೈತ್ರ ಶುದ್ಧ ೧೦ ಬುಧವಾರ ಬೆಳಗ್ಗೆ 3 ಗಂಟೆಗೆ ತಮ್ಮ ಸ್ಥೂಲ ಕಳೇಬರವನ್ನು ಬಿಟ್ಟರೆಂಬ ವಿಷಯವನ್ನು ತಿಳುಹಿಸಲು ಬಹಳ ವಿಷಾದಿಸುತ್ತೇನೆ. ಈ ಮಹನೀಯರ ಮರಣವಾರ್ತೆಯು ಸಕಲ ಪ್ರಜೆಗಳ ಹೃದಯಕ್ಕೆ ಶೂಲವನ್ನು ತಿವಿಯಿತು, ಕರ್ಣಗಳಲ್ಲಿ ಕಾದಸೀಸವ ಸುರಿಯಿತು. ಬಹುಜನಗಳು ಸೇರಿ ಈ ಮಹನೀಯರ ಉತ್ತರಕ್ರಿಯೆಯನ್ನು ಯಥಾವಿಧಿಯಾಗಿ ನೆರವೇರಿಸಿದರು. ಇವರಿಗೆ ಓರ್ವ ಕುವರಿಯೂ, ಓರ್ವ ಕುವರನೂ ಇರುವರು. ಇವರು ಕೇವಲ ಎಳೆಯಬಾಲಕರು ಇವರಿಗೂ ಮತ್ತು ಇತರ ಹಿರಿಯರಿಗೂ ಈ ಶರಣರ ವಿಯೋಗದಿಂದುಂಟಾದ ದುಃಖವನ್ನು ಇಷ್ಟೇ ಎಂದು ಬರೆಯಲು ಈ ಲೇಖನಿಯು ಸಮರ್ಥವಾಗಲಾರದು. ಇವರ ಕುಟುಂಬವರ್ಗಕ್ಕೆ ದುಃಖಶಮನವನ್ನೂ, ಶರಣರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ಜಗದೀಶ್ವರನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುವ,

Khanamadugu, N. M. Channaveeriah,
8-4-33. Teacher.

ಶ್ರೀ ವಿಶ್ವಕರ್ಮ ಜಯಂತ್ಯುತ್ಸವ, ಮೈಸೂರು.

ಹಿಂದೂಧರ್ಮದ ಮೂಲಗ್ರಂಥಗಳಾದ ಋಗಾದಿವೇದಗಳೂ, ಸ್ಮೃತೀತಿಹಾಸಾದಿಗಳೂ ಯಾವ ಪರಬ್ರಹ್ಮನನ್ನು ಮೂಲಪುರುಷನೆಂದು ಭಾವಿಸಿ, ಸರ್ವೋತ್ತಮದೇವರೆಂದೂ, ಜಗತ್ಕಾರಣವಸ್ತುವೆಂದೂ ಮುಕ್ತಕಂಠದಿಂದ ಹೇಳಿರುವುವೋ, ಆ ಶ್ರೀ ವಿಶ್ವಕರ್ಮಪರಮಾತ್ಮನನ್ನು ತಮ್ಮ ಮತದ ಧ್ಯೇಯವಸ್ತುವೆಂದು ಇಂದೂ ಪೂಜಿಸುತ್ತಿರುವ ಭಾರತೀಯ ವಿಶ್ವಕರ್ಮಜನಾಂಗದ ಪರವಾಗಿ ಮೈಸೂರು ಶ್ರೀ ವಿಶ್ವಕರ್ಮಸಮಾಜದವರು ಈ ವರ್ಷದ ಶ್ರೀ ವಿಶ್ವಕರ್ಮಜಯಂತಿಯನ್ನು ಇದೇ ಶ್ರೀಮುಖ ಸಂ|| ದ ಯುಗಾದಿಯಾರಭ್ಯ ದಶಮಿಯವರೆಗೂ ಶ್ರೀ ಕಮಠೇಶ್ವರಸ್ವಾಮಿಯವರ ದೇವಾಲಯದಲ್ಲಿ ಅರ್ಚಾವತಾರ ರೂಪದಿಂದ ಪ್ರಧಾನತ್ವವನ್ನು ಪಡೆದು ನೆಲೆಸಿರುವ ಶ್ರೀ ವಿಶ್ವಕರ್ಮಸ್ವಾಮಿಯವರ ಸನ್ನಿಧಿಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಿದರು. ಪ್ರಥಮದಿನ ಪಂಚಬ್ರಹ್ಮಕಲಶಸ್ಥಾಪನೆ, ವೈಶ್ವಕರ್ಮಹೋಮ, ಷೋಡಶೋಪಚಾರಕೈಂಕರ್ಯಗಳು; ಅದರಂತೆ ದಶಮಿಯವರೆಗೂ ಪ್ರತಿ ಪ್ರಾತಃಕಾಲವೂ ಮಹಾಭಿಷೇಕ, ಮಹಾಪ್ರಸಾದವಿನಿಯೋಗಾದಿಗಳು ನಡೆಸಲ್ಪಟ್ಟವು.

ಶ್ರೀ ಜಯಂತಿಯ ಕಾರ್ಯಕಲಾಪಗಳಲ್ಲಿ ಬಹುಮುಖ್ಯಭಾಗನೆಂದರೆ, ಪ್ರತಿ ಸಾಯಂಕಾಲದ ಉಪನ್ಯಾಸ, ಕೀರ್ತನೆಗಳ ಸರಣಿ. ಶ್ರೀ ಶಿಲ್ಪಿಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ಪ್ರತಿನಿತ್ಯದ ಸಭೆಯಲ್ಲೂ ಅಧ್ಯಕ್ಷಪದವಿಯನ್ನಲಂಕರಿಸಿ ಸಭಾಕಾರ್ಯಗಳನ್ನು ಸುಸೂತ್ರವಾಗಿ ನಡೆಸಿದುದಲ್ಲದೆ, ಅವರೇ 'ಶ್ರೀ ವಿಶ್ವಕರ್ಮಸರ್ವೇಶ್ವರತ್ವ, ಭಗವನ್ಮೂರ್ತಿನಿರ್ಮಾಣಚಾತುರ್ಯ, ಮಹಾತ್ಮಯಾಗಂಟೀಶ್ವರರು, ಎಂಬ ವಿಷಯಗಳಮೇಲೆ ದಿವ್ಯವಾದ ಉಪನ್ಯಾಸಗಳನ್ನು ಕೊಟ್ಟು ಸುಜ್ಞಾನವನ್ನುಂಟುಮಾಡಿದರು. ಶ್ರೀ ಎನ್. ಬಿ. ಚಂದ್ರಶೇಖರಾಚಾರ್ಯರು ವಿಶ್ವಕರ್ಮ ಪುರಾಣಮಹತ್ವವನ್ನೂ, ಶ್ರೀ ಗಂಗಾಧರಮೂರ್ತಿಗಳು ವಿಶ್ವಕರ್ಮಜಯಂತ್ಯಾಚರಣೆಯ ಅವಶ್ಯಕತೆಯನ್ನು ಕುರಿತು ಭಾಷಣಗಳನ್ನು ಮಾಡಿದರು. ಶ್ರೀ|| ಅಪ್ಪಾಜಿಸ್ವಾಮಿಗಳು 'ಕಾಶೀವಿಶ್ವಕರ್ಮೇಶ್ವರಮಹಿಮೆ' ಶ್ರೀಮಾನ್ ಸೋಮನಹಳ್ಳಿ ಚಲುವಾಚಾರ್ಯರು 'ಅನಸೂಯಾ ಪಾತಿವ್ರತ್ಯಮಹಿಮಾ' ಮತ್ತು 'ಈಶ್ವರಾಸ್ತ್ರಪ್ರದಾನ' ಶ್ರೀಮಾನ್ ಹೆತ್ತಗೋನಹಳ್ಳಿ ಚಲುವಾಚಾರ್ಯರು 'ಸೀಮಂತಿನಿಯ ವ್ರತಾನುಷ್ಠಾನಫಲ' ಎಂಬ ಕೀರ್ತನಗಳನ್ನು ನಡೆಸಿ ಜನಮನೋರಂಜನೆಮಾಡಿದರು. ಕೊನೆಯದಿನ ಸುಪ್ರಭಾತಕ್ಕೆ ಶ್ರೀ ಬ್ರಹ್ಮೋತ್ಸವವು ಸಕಲ ವಾದ್ಯವೈಭವದೊಡನೆ ನೆರವೇರಿತು.

5-4-33 ನೇ ಸಾಯಂಕಾಲ ವಿಶ್ವಕರ್ಮಬ್ರಾಹ್ಮಣ ಮಹಾಸಭೆಯಲ್ಲಿ ಶ್ರೀ|| ಆಯುರ್ವೇದ ವೈದ್ಯಭೂಷಣ ತಲಕಾಡು ಗೋಪಾಲ ಕೃಷ್ಣಮಾಚಾರ್ಯರವರಿಂದ ಶ್ರೀ ಜಯಂತಿಯ ಸಲುವಾಗಿಯೇ ರಚಿಸಲ್ಪಟ್ಟಿದ್ದ 'ಶ್ರೀ ವಿಶ್ವಕರ್ಮಸ್ತವ'ವೂ, ಹಾರನಹಳ್ಳಿ ಸ್ಕೂಲ್ಮಾಸ್ಟರು ಶ್ರೀಮಾನ್ ಎ. ಗಂಗಾಧರಯ್ಯನವರ 'ಅಭ್ಯುದಯ ಸಂದೇಶ'ವೂ ಓದಲ್ಪಟ್ಟುವು. ಸ್ವಾಗತೋಪನ್ಯಾಸವಾದ ಬಳಿಕ ಹಾಸನದಲ್ಲಿರುವ ಶ್ರೀಮಾನ್ ಕೆ. ನರಸಿಂಹಾಚಾರ್ಯರೇ ಮೊದಲಾದವರು ಮತಾಭಿವೃದ್ಧಿಯ ಮೇಲೆ ಉಪನ್ಯಾಸಮಾಡಿದರು. ಅನಂತರ ಶ್ರೀಮಾನ್ ಎನ್. ಬಿ. ಚಂದ್ರಶೇಖರಾಚಾರ್ಯರು ಸಮಾಜದ ದುಃಸ್ಥಿತಿಯನ್ನು ಮನಕರಗುವಂತೆ ವಿವರಿಸಿ ಅದು ಅಭಿವೃದ್ಧಿ ಹೊಂದಲು ಸರ್ವಮತಬಾಂಧವರ ಸಹಕಾರವೂ ಹೇಗೆ ಒದಗಬೇಕೆಂಬುದನ್ನೂ, ಸಮಾಜದ ಹಿಂದಿನ ನಿಯಮಗಳನ್ನು ಸ್ವಲ್ಪ ಬದಲಾಯಿಸಿ ಪುನರ್ವ್ಯವಸ್ಥಾಕ್ರಮವನ್ನು ಯಾವರೀತಿ ರೂಪುಗೊಳಿಸಿ ಅನುಷ್ಠಾನಕ್ಕೆ ತರಬೇಕೆಂಬುದನ್ನೂ ವಿವರಿಸಿದರು. ತರುವಾಯ ಅಧ್ಯಕ್ಷರ ಭಾಷಣ, ವಂದನಾರ್ಪಣ, ಮಂಗಳಾರತಿ, ರಾಜಾಶೀರ್ವಾದ, ಜಯಕಾರಗಳೊಡನೆ ಸಮಾರಂಭವು ಪರಿಸಮಾಪ್ತಿಹೊಂದಿತು.

ಪಿ. ಎನ್. ಶ್ರೀಕಂಠಾಚಾರ್ಯ,
ಅಧ್ಯಕ್ಷ,
ಶ್ರೀ ವಿಶ್ವಕರ್ಮಸಮಾಜ, ಮೈಸೂರು.

ಶ್ರೀ ಕ್ಯಾಸನೂರು ಮಹಾಸ್ವಾಮಿಗಳವರ ನಿಧನ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಸೊರಬ ತಾ|| ಉಳವಿ ಹೋಬಳಿ ಶ್ರೀ ಮಹಾಸಂಸ್ಥಾನ ಕ್ಯಾಸನೂರು ಮಠದ ಷ|| ಬ್ರ|| ಪಂಡಿತ ಗುರುವೃಷಭ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿಕಾರಿಪುರ ತಾಲೂಕು ಹಿರೇಜಂಬೂರು ಪ್ರಿಯಭಕ್ತಾದಿಗಳ ಅಂದರೆ ಡಿಸ್ಟ್ರಿಕ್ಟ್ ಲೋಕಲ್‌ಬೋರ್ಡ್ ಮೆಂಬರ ಮತ್ತು ಅಸೆಂಬ್ಲಿ ಮೆಂಬರರಾದ ಶ್ರೀಯುತ ವೀರಬಸಪ್ಪನವರು ಉಜ್ಜಮಳ್ಳರ ಮತ್ತು ಜಮೀನ್ದಾರ ತೆಡಗಣಿ ವೀರಪ್ಪನವರು ಶ್ರೀಯುತ ಲೋಕಪ್ಪ ವೃಡಗಣಿ, ಮ|| ರಾ|| ಬಸವಣ್ಣೆಪ್ಪಹರಗೊಳ್ಳಿ ಇನ್ನೂ ಮುಂತಾದ ಭಕ್ತಾದಿಗಳ ಕೋರಿಕೆಮೇರೆ ಹಾಗೂ ಜಂಬೂರ ಹಿರೇಮಠದ ವೀರಪ್ಪಯ್ಯನವರ ಮಕ್ಕಳು ವೀರಯ್ಯ ವ|| ಚನ್ನಬಸಯ್ಯ ಚಿಕ್ಕಜಂಬೂರ ವೇ|| ವೀರಸಂಗಯ್ಯನವರ ದತ್ತಕ ಮಗನ ಮಾಹೇಶ್ವರದೀಕ್ಷಾ ಮಹೋತ್ಸವಕ್ಕೆ ಹಿರೇಜಂಬೂರಿಗೆ ತಾರೀಖು ೧೬-೩-೩೩ ನೇ ದಿವಸ ದಯಮಾಡಿಸುವ ಬಗ್ಗೆ ಶ್ರೀಗಳು ಮಠದಿಂದ ಹೊರಡುವ ಪೂರ್ವದಿನ ಅಂದರೆ ಅಂಗಿರಸ ಸಂ|| ಫಾಲ್ಗುಣ ಬ|| ೨ ನೇ ಮಂಗಳವಾರ ರಾತ್ರಿ ಮಠದಲ್ಲಿ ಜ್ವರವು ವಿಶೇಷವಾಗಿ ಬಂದಾಗ್ಯೂ ಈ ಜಂಬೂರಿನವರ ಬಿನ್ನಹವನ್ನು ಕೈಕೊಂಡಿದ್ದರಿಂದ ಕ್ಯಾಸನೂರಿಂದ ಹೊರಟು ಫಾಲ್ಗುಣ ಬ|| ೬ ಶುಕ್ರವಾರ ಶಿವದೀಕ್ಷಾ ಕಾರ್ಯವನ್ನು ದೇಹಸ್ವಾಸ್ಥ್ಯವಿಲ್ಲದಿದ್ದರೂ ಭಕ್ತಾದಿಗಳಿಗೆ ದೀಕ್ಷಾ ವಿಷಯವಾಗಿ ಬೋಧಿಸಿ ಸದರಿ ಶಿಷ್ಯರಿಗೆ ಕುಟುಂಬ ದೀಕ್ಷೆಯನ್ನು ಮಾಡಿದರು. ತದನಂತರ ಸ್ವಾಮಿಗಳಿಗೆ ಅಸ್ವಸ್ಥತೆಯು ಹೆಚ್ಚಿತು. ಇದನ್ನು ಕಂಡು ಜಂಬೂರ ಭಕ್ತಮಹಾಜನಗಳು ಆದರಾತಿಥ್ಯವನ್ನು ಯೋಗ್ಯರೀತಿಯಿಂದ ನಡಿಸಿ ಔಷಧೋಪಚಾರವನ್ನು ಮಾಡಿದಾಗ್ಯೂ ಗುಣವಾಗದೆ ಇದ್ದುದರಿಂದ ಶ್ರೀಗಳವರು ತೊಗರ್ಸಿ ಷ|| ಬ್ರ|| ಪಂಚವಣ್ಣಿಗೆ ಬೃಹನ್ಮಠದ ಸ್ವಾಮಿಗಳನ್ನೂ ತೊಗರ್ಸಿ ಷ|| ಬ್ರ|| ಮಳೆಬೃಹನ್ಮಠದ ಸ್ವಾಮಿಗಳನ್ನೂ ಬೇಗಾವಿ ಶ್ರೀ|| ಮಹಾಸ್ವಾಮಿಗಳನ್ನೂ ಕರೆಸಿಕೊಂಡು ಮುಂದೆ ಆಗ ಬೇಕಾದ ಮಠದ ಕಾರ್ಯಕ್ರಮಗಳನ್ನೆಲ್ಲಾ ಪೂರೈಸಬೇಕೆಂದು ತಿಳಿಸಿದರು. ಮೊದಲೇ ಶಿಷ್ಯನನ್ನಾಗಿ ಮಾಡಿಟ್ಟುಕೊಂಡ ಧಾರವಾಡ ಜಿಲ್ಲಾ ರಾಣೇಬೆನ್ನೂರು ಹಿರೇಮಠದ

[೬ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೩ನೇ ತಾ|| ಏಪ್ರಿಲ್ ೧೭ನೇ ಸೋಮವಾರ.

ದೇವತೋಪಾಸನೆ.

"ಲೀಯತೇ ಗಮ್ಯತೇ ಯತ್ರ ಜಗದೇತಚ್ಚರಾಚರಂ" ಯಾವನಲ್ಲಿ ಸೃಷ್ಟಿಗಿಂತ ಮೊದಲು ಚರಾಚರಾತ್ಮಕವಾದ ಜಗತ್ತು ನಾಮರೂಪವಿಭಾಗವಿಲ್ಲದೆ ಸೂಕ್ಷ್ಮರೂಪದಿಂದ ಇದ್ದು, ಸೃಷ್ಟಿಸಮಯದಲ್ಲಿ ಸ್ಥೂಲಾಕೃತಿಯನ್ನು ಧರಿಸುವುದೋ, ಆ ಜಗದಾಧಾರವಾದ ವಸ್ತುವೇ ಲಿಂಗವೆನಿಸುತ್ತದೆ. ಆ ಲಿಂಗವೇ ಬ್ರಹ್ಮವೆಂದೂ, ಶಿವನೆಂದೂ, ಸೂರ್ಯನೆಂದೂ, ಶಕ್ತಿಯೆಂದೂ, ಹರಿಯೆಂದೂ ಅವರವರ ಇಚ್ಛಾನುಗುಣವಾಗಿ ಅನೇಕ ನಾಮಗಳಿಂದ ವ್ಯವಹರಿಸಲ್ಪಟ್ಟಿರುತ್ತದೆ.

"ಸರ್ವಲಿಂಗಗ್ಂ ಸ್ಥಾಪಯತಿ" ಎಂದು ನಾರಾಯಣೋಪನಿಷತ್ತು "ತತ್ರಾಗ್ನೇಸ್ತಂತರ್ಮನಸೋ ಲಿಂಗಮಾಹುಃ" ಎಂದು ಕಠವಲ್ಲ್ಯುಪನಿಷತ್ತು "ಲಿಂಗೇ ಸುಷುಪ್ತಿಃ" ಎಂದು ಹಂಸೋಪನಿಷತ್ತು ಹೀಗೆ ಅನೇಕೋಪನಿಷತ್ತುಗಳು ಲಿಂಗವೇ ಪರವಸ್ತುವೆಂದು ಹೇಳುತ್ತವೆಯಲ್ಲದೆ "ಲಿಂಗಂ ಬ್ರಹ್ಮಸನಾತನಂ" ಸನಾತನವಾದ ಪರಬ್ರಹ್ಮವೇ ಲಿಂಗವೆಂದು ಲಿಂಗಪುರಾಣದಲ್ಲಿಯೂ "ದರ್ಶಯಾಮಾಸದೇವಾನಾಂ ಮುರಾರಿರ್ಲಿಂಗಮೈಶ್ವರಂ" ಮುರಾರಿಯು ದೇವತೆಗಳಿಗೆ ಶಿವಲಿಂಗವನ್ನು ತೋರಿಸಿದನೆಂದು ವಾಮನಪುರಾಣದಲ್ಲಿಯೂ ಹೇಳಲ್ಪಟ್ಟಿದೆ. ಹೀಗೆ ಶ್ರುತಿಸ್ಮೃತಿಪುರಾಣೇತಿಹಾಸಗಳು ಏಕಕಂಠದಿಂದ ಆ ಸರ್ವವ್ಯಾಪಿಯಾದ ಜಗದೀಶ್ವರನನ್ನು ಲಿಂಗವೆಂದು ಉದ್ಘೋಷಿಸುವುದರಿಂದ ಲಿಂಗವೆಂದರೆ ಸೃಷ್ಟಿಸ್ಥಿತಿಸಂಹಾರಕರ್ತನಾದ ದೇವನೆಂದು ಸ್ಪಷ್ಟವಾಗುತ್ತದೆ. ಈ ಲಿಂಗವೇ ಕೆಲವರಿಗೆ ಪಾರ್ವತೀಪತಿಯಾದ ಶಿವಾಕಾರವಾಗಿಯೂ, ಕೆಲವರಿಗೆ ಲಕ್ಷ್ಮೀಪತಿಯ ಆಕಾರವಾಗಿಯೂ, ಕೆಲವರಿಗೆ ಗಣಪತಿಯ ಆಕಾರವಾಗಿಯೂ ಹೀಗೆ ಯಾರು ಬಹುಕಾಲದಿಂದ ಯಾವ ಆಕಾರವನ್ನು ಸ್ಮರಿಸುತ್ತಲೂ, ಪೂಜಿಸುತ್ತಲೂ ನಮಸ್ಕರಿಸುತ್ತಲೂ ಬಂದಿರುತ್ತಾರೆಯೋ, ಅವರವರಿಗೆಲ್ಲಾ ಆ ಲಿಂಗರೂಪನಾದ ಪರಮೇಶ್ವರನೊಬ್ಬನೇ ಆಯಾಯ ರೂಪದಿಂದಲೇ ಸಾಕ್ಷಾತ್ಕಾರವಾಗಿ ಅವರವರ ಕೋರಿಕೆಗಳನ್ನು ಈಡೇರಿಸುವನು. "ಭಿನ್ನರುಚಿರ್ಹಿಲೋಕಃ" ಎಂಬ ವಚನಾನುಸಾರವಾಗಿ ಒಬ್ಬೊಬ್ಬನ ಅಭಿರುಚಿಯು ಒಂದೊಂದು ವಿಧವಾಗಿರುವುದರಿಂದ ಲೋಕದಲ್ಲಿ ಅನೇಕ ಮತಗಳು ರೂಢಿಯಲ್ಲಿ ಬಂದಿರುತ್ತವೆ. ಶಿವನನ್ನು ಉಪಾಸಿಸುವುದರಿಂದ ಶೈವರೆಂತಲೂ, ವಿಷ್ಣುವನ್ನು ಉಪಾಸಿಸುವುದರಿಂದ ವೈಷ್ಣವರೆಂತಲೂ, ಜಿನನನ್ನು ಉಪಾಸಿಸುವುದರಿಂದ ಜೈನರೆಂತಲೂ, ಕ್ರಿಸ್ತನನ್ನು ಉಪಾಸಿಸುವುದರಿಂದ ಕ್ರೈಸ್ತರೆಂತಲೂ ಹೇಳಿಸಿಕೊಳ್ಳಲ್ಪಟ್ಟರೂ ಇವರಿಗೆಲ್ಲಾ ಆಗುವ ಮೋಕ್ಷರೂಪವಾದ ಫಲವಾದರೋ ಒಂದೇ ಅಲ್ಲದೆ ಬೇರೆ ಬೇರೆ ಫಲಗಳಿಲ್ಲವು. ಎಲ್ಲಾ ಮತಗಳೂ ಮೋಕ್ಷವೇ ಪರಮಧ್ಯೇಯವೆಂದು ಒಪ್ಪುವವು. ಮೋಕ್ಷವೆಂದರೆ ಬಿಡುಗಡೆಯೆಂದರ್ಥ. ಯಾವನು ಅಪರಾಧವನ್ನು ಮಾಡುತ್ತಾನೆಯೋ ಅವನು ರಾಜಪುರುಷನಿಂದ ಬಂಧಿಸಲ್ಪಡುತ್ತಾನೆ. ಪುನಃ ಆತನು ದುರ್ಮಾರ್ಗಕ್ಕೆ ಬೀಳದೆ ರಾಜನಶಾಸನವನ್ನು ಪಾಲಿಸುತ್ತಾ ಬಂದರೆ ಬಂಧನದಿಂದ ಮುಕ್ತನಾಗುವುದನ್ನು ನಾವು ನೋಡುತ್ತಲಿದ್ದೇವೆ. ಹೀಗೆ ಜೀವರು ಸಾಕ್ಷಾತ್ ಪರಮೇಶ್ವರನ ಆಜ್ಞೆಗೆ ಒಳಪಟ್ಟಿದ್ದರೂ ಆ ಪರಮೇಶ್ವರನ ಭಯವಿಲ್ಲದೆ ಮೋಹಾತುರರಾಗಿ ಅನೇಕ ಪಾಪಗಳನ್ನು ಮಾಡುತ್ತ ಬಂದದ್ದರಿಂದ ಈ ದುಃಖರೂಪವಾದ ಸಂಸಾರವೆಂಬ ಬಂಧನದಲ್ಲಿ ಶಿಕ್ಕು ವಿಷದಲ್ಲಿ ವಾಸಮಾಡಿದ ಕ್ರಿಮಿಗೆ ಆ ವಿಷವೇ ಗ್ರಾಹ್ಯವಾಗಿ ತೋರುವಂತೆ ಬಹುಕಾಲದ ಅನುಭವದಿಂದ ಈ ಜರಾಮರಣರೂಪವಾದ ದುಃಖವನ್ನೇ ಸುಖವನ್ನಾಗಿ ಭಾವಿಸಿಕೊಂಡು ಬಂದಿದ್ದಾರೆ. ಸರ್ವಜ್ಞ ಶಿಖಾಮಣಿಗಳಾದ ಪೂರ್ವಾಚಾರ್ಯರು ಭವಸಮುದ್ರದಲ್ಲಿ ಮುಳುಗೇಳುತ್ತ ಕಷ್ಟಪಡುವ ಜೀವರಿಗೆ ಮೋಕ್ಷಮಾರ್ಗಗಳನ್ನು ತಿಳಿಸಿದರು. ಆ ಕಾಲದಲ್ಲಿ ಯಾವ ಯಾವ ಮಾನವರು ಯಾವ ಯಾವ ಆಚಾರ್ಯ ಪುರುಷರಿಗೆ ಶರಣಾಗತರಾಗಿ ಪರಮಾತ್ಮರಾಜ್ಯವನ್ನು ಸೇರಲು ಯಾವ ಯಾವ ಉಪಾಸನಾಮಾರ್ಗವನ್ನು ಅನುಸರಿಸಿದರೋ ಅವರವರ ವಂಶಾನುಕ್ರಮವಾಗಿ ಆಯಾಯ ಉಪಾಸನಾಮಾರ್ಗಗಳೇ ಆಯಾಯ ಜನಸಮೂಹದಲ್ಲಿ ವಿಶೇಷ ಬಳಕೆಗೆ ಬಂದು ವಜ್ರಲೇಪದಂತೆ ಘಟ್ಟಿಗೊಂಡಿರುವುದರಿಂದ ಅವನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಬದಲಾಯಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಈಗಿನ ಕೆಲ ಪಂಡಿತರು ಅದೂ ತಪ್ಪು, ಇದೂ ತಪ್ಪು ಎಂದು ತಮ್ಮ ತಮ್ಮ ಪಾಂಡಿತ್ಯವನ್ನು ತೋರ್ಪಡಿಸುವುದಕ್ಕಾಗಿ ಪಟಾಟೋಪವನ್ನು ನಡೆಸುತ್ತಿರುವರು. ಇವರು ಹೇಳುವುದರಲ್ಲಾದರೂ ಅನೇಕ ದೋಷಗಳು ಕಂಡುಬಂದೇಬರುತ್ತವೆ. ದೋಷದೃಷ್ಟಿಯುಳ್ಳವನಿಗೆ ಎಲ್ಲದರಲ್ಲಿಯೂ ದೋಷವು ಕಂಡುಬರುತ್ತದೆ. ಗುಣೈಕಪಕ್ಷಪಾತಿಗೆ ಯಾವ ಪದಾರ್ಥದಲ್ಲಾದರೂ ಒಂದೊಂದು ಗುಣಾಂಶವು ಕಂಡುಬಂದೇ ಬರುತ್ತದೆ. ಆದರೆ ಸತ್ಪುರುಷನು ಗುಣವನ್ನು ಮಾತ್ರ ಹೊಗಳುವನಲ್ಲದೆ ದೋಷವನ್ನು ಉದ್ಘಾಟಿಸುವುದಿಲ್ಲ. ದುರ್ಗುಣಿಯು ಗುಣಗಳನ್ನು ಆಚ್ಛಾದಿಸಿ ದೋಷಗಳನ್ನೇ ತೋರಿಸುವನು. ಇವರ ಮಾತಿಗೆ ಕಿವಿಗೊಟ್ಟು ತಮ್ಮ ಕುಲಕ್ರಮದಿಂದ ಬಂದ ಆಚಾರ್ಯಭಗವತ್ಪಾದರನ್ನು ಅಶ್ರದ್ಧೆಯಿಂದ ಕಾಣುವುದಾಗಲಿ ತಮ್ಮ ತಮ್ಮ ಮನೆದೇವರನ್ನು ತ್ಯಜಿಸುವುದಾಗಲಿ ಮಾಡಿದ್ದಾದರೆ ಎರಡುಕಣಾ ಕಾದ ದಾಸಯ್ಯನಂತೆ ಉಭಯಭ್ರಷ್ಟರಾಗಿ ಹೋಗಬೇಕಾಗುತ್ತದೆ. ಇದೇ ಅಭಿಪ್ರಾಯವನ್ನು "ಶ್ರೇಯಾನ್ ಸ್ವಧರ್ಮೋವಿಗುಣಃ ಪರಧರ್ಮಾದನುಷ್ಠಿತಾತ್" ಎಂಬ ಗೀತಾವಾಕ್ಯವು ಸ್ವಧರ್ಮವೇ ಶ್ರೇಯಸ್ಸನ್ನು ಉಂಟುಮಾಡುವುದೆಂದು ಬೋಧಿಸುತ್ತದೆ. ಒಬ್ಬ ನಟನು ಅನೇಕ ವೇಷಗಳನ್ನು ಹಾಕಿಕೊಂಡು ರಂಗಸ್ಥಲಕ್ಕೆ ಬಂದು ಭಿನ್ನಭಿನ್ನ ಆಕಾರಗಳನ್ನೂ ಭಿನ್ನಭಿನ್ನ ವ್ಯಾಪಾರಗಳನ್ನೂ ನಟಿಸುತ್ತ ಸಭಿಕರೆಲ್ಲರ ಮನಸ್ಸನ್ನು ಆಕರ್ಷಿಸುವಂತೆ, ನಾಮರೂಪಕ್ರಿಯೆಗಳೊಂದೂ ಇಲ್ಲದ ಲಿಂಗರೂಪನಾದ ಜಗದೀಶ್ವರನೊಬ್ಬನೇ ಕಲ್ಪಿತಗಳಾದ ನಾನಾ ರೂಪಗಳನ್ನು ಧರಿಸಿಕೊಂಡು ಈ ಜಗತ್ತೆಂಬ ರಂಗಸ್ಥಲಕ್ಕಿಳಿದು ಅವರವರ ಇಚ್ಛಾನುಸಾರವಾಗಿ ಲೀಲೆಗಳನ್ನು ತೋರಿಸುತ್ತ ಜೀವಿಗಳನ್ನು ತನ್ನ ವಶಮಾಡಿಕೊಳ್ಳುವನು. ಹಿಂದಿನ ಅನೇಕ ಮಹನೀಯರು ಅಖಂಡವಾದ ಆ ಲಿಂಗವನ್ನು ಅನೇಕ ರೂಪದಿಂದ ಧ್ಯಾನಿಸಿ ಪ್ರತ್ಯಕ್ಷಮಾಡಿಕೊಂಡಿರುತ್ತಾರೆ. ವೈಷ್ಣವ ಸಂಪ್ರದಾಯವನ್ನನುಸರಿಸಿದ ಮಹನೀಯರಿಗೆ ಲಿಂಗವು ಶಂಖಚಕ್ರಧಾರಿಯಾದ ವಿಷ್ಣುರೂಪದಿಂದ ಕಾಣಿಸಿಕೊಂಡಿತು. ಶೈವಸಂಪ್ರದಾಯದ ಮಹಾತ್ಮರಿಗೆ ಫಾಲನೇತ್ರಧಾರಿಯಾದ ಶಿವರೂಪದಿಂದ ಕಾಣಿಸಿಕೊಂಡಿತು. ಚಾಮುಂಡೋಪಾಸಕರಾದ ಮಹಾತ್ಮರಿಗೆ ಸಿಂಹವಾಹಿನಿಯಾದ ಶಕ್ತಿರೂಪದಿಂದ ಕಾಣಿಸಿಕೊಂಡಿತು. ಅಂದಿನಿಂದಲೂ ಆಯಾಯ ಮಹಾತ್ಮರಿಗೆ ಅನೇಕರು ಶಿಷ್ಯರಾಗಿ ಬಂದಿರುತ್ತಾರೆ. ಪಶುವರ್ಗದಲ್ಲಿ ಸೇರಿದ ಕಾಮಧೇನುವು, ಪಾಷಾಣದಲ್ಲಿ ಸೇರಿದ ಚಿಂತಾಮಣಿಯು, ವೃಕ್ಷವರ್ಗದಲ್ಲಿ ಸೇರಿದ ಕಲ್ಪವೃಕ್ಷವು ಬೇಡಿದ ಇಷ್ಟಾರ್ಥಗಳನ್ನು ಕೊಡುವುದರಲ್ಲಿ ಸಿದ್ಧವಾಗಿರುವಾಗ ಜಗಜ್ಜನ್ಮಾದಿಕಾರಣವೂ ಸರ್ವನಿಯಾಮಕವೂ ಆದ ಪರಬ್ರಹ್ಮರೂಪಿಯಾದ ಲಿಂಗವು ಭಕ್ತರ ಇಷ್ಟಾನುಸಾರಿಗಳಾದ ರೂಪಗಳಿಂದ ಪ್ರತ್ಯಕ್ಷವಾಗಿ ಮೋಕ್ಷವೆಂಬ ಅಮೃತಫಲವನ್ನು ಕೊಡುವುದರಲ್ಲೇನು ಆಶ್ಚರ್ಯ? ಆದ್ದರಿಂದ ಯಾವ ಯಾವ ಆಚಾರ್ಯರು ಇದುವರೆಗೆ ತಮ್ಮ ತಮ್ಮ ಶಿಷ್ಯಮಂಡಲಿಯಲ್ಲಿ ಯಾವ ಯಾವ ಧ್ವಜವನ್ನು ಊರಿರುವರೋ ಅವುಗಳನ್ನು ಆ ಮಂಡಲಿಯು ಬಿಟ್ಟು ಕದಲಬಾರದು. ಅಂದರೆ ಶೈವರು ಶೈವಧ್ವಜವನ್ನವಲಂಬಿಸಿ ವೈಷ್ಣವರು ವಿಷ್ಣುಧ್ವಜವನ್ನವಲಂಬಿಸಿ ಜೈನರು ಜೈನಧ್ವಜವನ್ನವಲಂಬಿಸಿ ಮುಕ್ತಿಸೋಪಾನವನ್ನೇರಬೇಕು. ಇದರಿಂದ ಗಂಗಾ, ಗೋದಾವರಿ ಮುಂತಾದ ಹೆಸರುಗಳಿಂದ ಭಿನ್ನಭಿನ್ನ ಮಾರ್ಗಗಳಲ್ಲಿ ಹರಿಯುವ ನದಿಗಳು ಮಹಾಸಮುದ್ರದಲ್ಲಿಯೇ ಬಿದ್ದು ವಿಶ್ರಾಂತಿ ಸೌಖ್ಯವನ್ನು ಹೊಂದುವಂತೆ ಅವರವರಿಷ್ಟಪ್ರಕಾರ ಅನೇಕ ದೇವತೋಪಾಸಕರಾದ ಜೀವರೆಲ್ಲರೂ ಸರ್ವದೇವಮಯವಾದ ಮಹಾಲಿಂಗವೆಂಬ ಅಮೃತಾಬ್ಧಿಯನ್ನು ಸೇರಿ ನಿತ್ಯಾನಂದವನ್ನು ಅನುಭವಿಸುವರೆಂಬುದೇ ಸಕಲ ಸಿದ್ಧಾಂತಗಳ ಸಾರವಾಗಿದೆ.

ಒಳದೇಶದ ವೃತ್ತಾಂತಗಳು.

ಶ್ರೀ ಕಾಶೀಕ್ಷೇತ್ರಕ್ಕೆ ಪ್ರಯಾಣಮಾಡಿದ್ದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ನಿನ್ನೆದಿವಸ ರಾಜಧಾನಿಗೆ ಆಗಮಿಸಿದರು.

ಇದೇ ಏಪ್ರಿಲ್ 7 ನೇ ತಾರೀಖು ಶುಕ್ರವಾರ ಬೆಳಗ್ಗೆ ರಾಜಧಾನಿಯ ದೇವಾಂಗದ ರಾಮಚಂದ್ರನೆಂಬ 16 ವಯಸ್ಸಿನ ತರುಣನು ದೊಡ್ಡ ಕೆರೆಯಲ್ಲಿ ಬಟ್ಟೆಯನ್ನು ಒಗೆಯುತ್ತಿದ್ದಾಗ ಕಾಲು ಜಾರಿ ನೀರಿನಲ್ಲಿ ಮುಳುಗಿ ಮೃತಪಟ್ಟನು.

ಶಿವಮೊಗ್ಗಾ ಡಿ|| ಕುಂಸಿ ತಾಲೂಕಿಗೆ ಸೇರಿದ ಹಾರನಹಳ್ಳಿಯಲ್ಲಿ ಈಗ್ಗೆ 10-12 ದಿವಸಗಳ ಹಿಂದೆ ತಿಮ್ಮ ಎಂಬ ಕೂಲಿಯವನನ್ನು ಯಾರೋ ಕೊಲೆಮಾಡಿ ಹುಬ್ಬನಹಳ್ಳಿ ಕೆರೆಯಲ್ಲಿ ಬಿಸಾಡಿದ್ದರಂತೆ! ಪೋಲೀಸರು ತನಿಖೆಮಾಡುತ್ತಿರುವರು.

ಬೆಂಗಳೂರು ಬಸಪ್ಪನವರ ಛತ್ರದಲ್ಲಿ ವಾಸವಾಗಿದ್ದ ಮುತ್ತುರಾಜು ಎಂಬುವನು ಕಳೆದ 10 ನೇ ತಾರೀಖು ಸೋಮವಾರ ರಾತ್ರೆ ಲಿಂಗಪ್ಪನೆಂಬುವನನ್ನು ಕೊಂದುಹಾಕಿ, ಮೃತನ ಹೆಂಡತಿಯನ್ನು ಹೊಡೆದು ಗಾಯಪಡಿಸಿ ತಲೆತಪ್ಪಿಸಿಕೊಂಡಿದ್ದನು. ಪೋಲೀಸರು ಅಪರಾಧಿಯನ್ನು 13 ನೇ ತಾರೀಖಿನ ದಿವಸ ದಸ್ತಗಿರಿಮಾಡಿ ಲಾಕಪ್ಪಿನಲ್ಲಿಟ್ಟು ತನಿಖೆ ಮಾಡುತ್ತಿರುವರು.

ಇದೇ ಏಪ್ರಿಲ್ 14 ನೇ ತಾರೀಖಿನ ದಿವಸ ಸಾಯಂಕಾಲ ಮೈಸೂರು ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ರಾಜಧಾನಿಯ ಪ್ರಸಿದ್ಧ ಕಂಟ್ರಾಕ್ಟರಾದ ಶ್ರೀ|| ಮೇಸ್ತ್ರಿ ಚಲುವಾಚಾರಿ ಅಂಡ್ ಬ್ರದರ್ಸ್‌ರವರಿಂದ ಮಂಡಿಮೊಹಲ್ಲಾ ಇರ್ವಿನ್ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಲ್ಪಟ್ಟಿರುವ ಭವ್ಯವಾದ 'ತಿಮ್ಮಯ್ಯಾಚಾರಿ ಛತ್ರ' ದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಬೆಂಗಳೂರು ಕಂಟ್ರೋಲರವರ ಆಫೀಸು ಗುಮಾಸ್ತೆಯಾಗಿದ್ದ ಎನ್. ಎಸ್ ಶರ್ಮ ಎಂಬುವರು ಮೈಸೂರು ಸಾಲದ ಪತ್ರಗಳ ಬಡ್ಡಿಗಾಗಿ ಎಂದು ಹೇಳಿ ಒಂದುಸಾರಿ 350 ರೂ. ಗಳಿಗೂ ಎರಡನೇ ಸಾರಿ 5,750 ರೂ. ಗಳಿಗೂ ಖಜಾನೆಗೆ ಚೆಕ್ಕುಗಳನ್ನು ಬರೆದು ಮೇಲಧಿಕಾರಿಗಳಿಂದ ರುಜುಮಾಡಿಸಿ, ಸದರಿ ಹಣವನ್ನು ದುರುಪಯೋಗಪಡಿಸಿದನೆಂಬ ಕಾರಣದ ಮೇಲೆ ಪೋಲೀಸರು ಶರ್ಮರವರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಬರುವ ತಿಂಗಳು 1 ನೇ ತಾರೀಖಿನ ಲಾಗಾಯಿತು ಮೈಸೂರು ಬೆಂಗಳೂರು ಮೊದಲಾದ ನಗರಗಳಲ್ಲಿ ನಾಟಕ, ಸಿನಿಮಾ ಮೊದಲಾದ ವಿನೋದಪ್ರದರ್ಶನಗಳ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದೆಂದು ಸರಕಾರದವರು ವಿಧಿಸಿರುವದು ಸರಿಯಷ್ಟೆ! ಕಳೆದ ಮಂಗಳವಾರದ ದಿವಸ ಬೆಂಗಳೂರು ಸಿಟಿ ಪ್ಯಾರಮೌಂಟ್ ಥಿಯೇಟರಿನಲ್ಲಿ ಒಂದು ಬಹಿರಂಗಸಭೆಯು ಸೇರಿ ಈ ತೆರಿಗೆಯನ್ನು ವಿಧಿಸುವದು ನ್ಯಾಯವಲ್ಲವೆಂದು ತೀರ್ಮಾನಮಾಡಿ ಸರ್ಕಾರಕ್ಕೆ ವಿಜ್ಞಾಪಿಸಿರುತ್ತಾರೆ.

ಬೆಂಗಳೂರು ಕಂಟೋನ್ಮೆಂಟನ್ನು ಮೈಸೂರು ಸರಕಾರಕ್ಕೆ ಹಿಂತಿರುಗಿ ಕೊಡುವ ವಿಷಯದಲ್ಲಿ ಮೈಸೂರು ಸರಕಾರಕ್ಕೂ ಇಂಡಿಯಾ ಸರಕಾರಕ್ಕೂ ಬಹು ಕಾಲದಿಂದಲೂ ಪತ್ರವ್ಯವಹಾರವು ನಡೆಯುತ್ತಿರುವದು ಸರಿಯಷ್ಟೇ! ಈ ವಿಷಯದಲ್ಲಿ ಇಂಡಿಯಾ ಸರಕಾರದವರು ಕಂಟೋನ್ಮೆಂಟಿನಲ್ಲಿ ಸೈನ್ಯವಿರುವ ಭಾಗವನ್ನು ಬಿಟ್ಟು ಉಳಿದ ಭಾಗವನ್ನೆಲ್ಲಾ ಮೈಸೂರು ಸರಕಾರಕ್ಕೆ ಬಿಟ್ಟುಕೊಡಲು ಒಪ್ಪಿಕೊಂಡಿರುವರೆಂದೂ, ಇದಕ್ಕೆ ಸಂಬಂಧಪಟ್ಟ ಕೆಲವು ಅಂಶಗಳು ಸಮರ್ಪಕವಾಗಿ ತೀರ್ಮಾನಿಸಲ್ಪಟ್ಟನಂತರ ದಂಡಿನ ಪ್ರದೇಶವನ್ನು ಮೈಸೂರಿಗೆ ವಹಿಸುವರೆಂದೂ ತಿಳಿದುಬಂದಿದೆ.

ಬೆಂಗಳೂರು ನಗರದಲ್ಲಿ ಒಬ್ಬ ತರುಣನು ಶ್ರೀಮಂತನಂತೆ ಉಡುಪುಗಳನ್ನು ಧರಿಸಿ, ಒಂದು ಜವಾಹಿರಿ ಅಂಗಡಿಗೆ ಹೋಗಿ ಒಂದು ಉಂಗುರವನ್ನು ತೆಗೆದುಕೊಂಡು ಪುನಃ ಬರುವುದಾಗಿ ಹೇಳಿ ತಾನು ಜೊತೆಯಲ್ಲಿಯೇ ತಂದಿದ್ದ ಬೈಸಿಕಲ್ಲನ್ನು ಅಂಗಡಿಯ ಬಾಗಿಲಿನಲ್ಲಿ ಬಿಟ್ಟು ಹೊರಟುಹೋದನು. ತರುಣನು ಎಷ್ಟು ಹೊತ್ತಾದರೂ ಹಿಂತಿರುಗಿ ಬರದಿರಲು ವರ್ತಕನು ಸಂಶಯದಿಂದ ವಿಚಾರಿಸುವಲ್ಲಿ ಬೈಸಿಕಲ್ಲು ಬಾಡಿಗೆಯದೆಂದು ತಿಳಿದು ಬಂದಿತು. ವರ್ತಕನು ಕೂಡಲೇ ಪೋಲೀಸರಿಗೆ ವರ್ತಮಾನಕೊಟ್ಟನು. ಪೋಲೀಸರು ಅಪರಾಧಿಯನ್ನು ಹುಡುಕುತ್ತಿದ್ದಾರೆ.

ವರ್ತಮಾನಸಂಗ್ರಹ

ಇಂಗ್ಲೆಂಡ್ ದೇಶದ ಕೆಲವು ಇಂಜನಿಯರುಗಳು, ನೀರಿನಲ್ಲಿ ಬಿದ್ದರೂ ಮುಳುಗದೆ ಇರುವ ಹೊಸತರಹ ಏರೋಪ್ಲೇನನ್ನು ತಯಾರಿಸಿರುವರು!

ಚೀಣಾದೇಶದ ದೊಡ್ಡ ಗೋಡೆಯ ಸಮೀಪದಲ್ಲಿರುವ ಲೆಂಕ್‌ಗೋ ಎಂಬ ಬಲವಾದ ಕೋಟೆಯನ್ನು ಜಪಾನ್ ಸೈನಿಕರು ಬಹಳ ಸಾಹಸದಿಂದ ಗೆದ್ದರು.

ಐರ್ಲೆಂಡಿನ ಪ್ರೆಸಿಡೆಂಟರಾದ ಮಿ|| ಡಿ. ವೇಲರಾರವರು ತಮ್ಮ ಸಂಬಳವನ್ನು ತಾವಾಗಿ 2500 ಪೌಂಡುಗಳಿಂದ 1500 ಪೌಂಡುಗಳಿಗೆ ಕಡಿಮೆಮಾಡಿಕೊಂಡಿರುವರು!

ಮೀರಪುರದಲ್ಲಿ ವಾಸವಾಗಿದ್ದ ಒಬ್ಬ ಸಾಧುವು ಸಮಾಧಿಮಾಡಲ್ಪಟ್ಟ ಶವಗಳನ್ನು ಕಿತ್ತುತಿನ್ನುತ್ತಿದ್ದನೆಂಬ ಅಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವನು.

ಕಳೆದಭಾನುವಾರ ಬೆಳಗ್ಗೆ ಶ್ರೀಮತಿ ಸರೋಜಿನೀ ನಾಯಡುರವರು ಯರವಾಡಾ ಕಾರಾಗೃಹದಿಂದ ಬಿಡುಗಡೆಹೊಂದಿದರು. ಅವರು ಮಧ್ಯಾಹ್ನ ಗಾಂಧಿಯವರನ್ನು ಕಂಡು ಅನಂತರ ಮುಂಬಯಿಗೆ ಪ್ರಯಾಣಮಾಡಿದರು.

ಅಮೇರಿಕೆಗೆ ಸೇರಿದ ಸಾಂಟಕ್ರೂಜ್ ಎಂಬಲ್ಲಿ ದವಸಧಾನ್ಯಗಳೇ ಮೊದಲಾದ ಪದಾರ್ಥಗಳನ್ನು ಕೊಂಡುಕೊಳ್ಳುವವರೇ ಇಲ್ಲದೆ ಅನೇಕ ಟನ್‌ಗಳಷ್ಟು ಕಾಫೀಬೀಜ, ಗೋಧಿ, ಹಾಗೂ 60,000 ಉತ್ತಮವಾದ ಕುರಿಗಳು ಸುಡಲ್ಪಟ್ಟವು!

ಇಟಲಿ ದೇಶದ ಸಮೀಪದಲ್ಲಿರುವ ಮೆಸ್ಸಿನಾ ಎಂಬ ದ್ವೀಪದ ಹತ್ತಿರ ಎರಡು ಟನ್ ತೂಕವುಳ್ಳ ಒಂದು ಅದ್ಭುತವಾದ ಮೀನು ಹಿಡಿಯಲ್ಪಟ್ಟಿತು. ಆ ಮೀನಿನ ಹೊಟ್ಟೆಯಲ್ಲಿ ಎರಡು ಹಂಡ್ರೆಡ್‌ವೇಟ್ ತೂಕವಿದ್ದ ಮತ್ತೊಂದು ದೊಡ್ಡಮೀನು ಇದ್ದಿತಂತೆ!

ಅಮೇರಿಕೆಯ ಕನೆಕ್ಟಿಕಟ್ ಎಂಬ ಊರಿನಲ್ಲಿ 50 ಎಕರೆಗಳ ವಿಸ್ತೀರ್ಣವುಳ್ಳ ಒಂದು ದೊಡ್ಡ ತೋಟವಿರುವದು. ಈ ತೋಟದ ಮಾಲಕರಾದ ಪಾಲ್ವೆಲ್ ಎಂಬುವರು ತೋಟದ ಕೆಲಸಕಾರ್ಯಗಳೆಲ್ಲವೂ ಎಲೆಕ್ಟ್ರಿಕ್ ಪವರಿನಿಂದಲೇ ನಡೆಯುವಂತೆ ಏರ್ಪಡಿಸಿರುವರಂತೆ!

ಕೆಲವು ದಿವಸಗಳ ಹಿಂದೆ ಆಫ್ರಿಕಾದೇಶಕ್ಕೆ ಸೇರಿದ 'ಕೇಪ್‌ಟೌನ್' ಎಂಬ ನಗರದಿಂದ 2,83,05,000 ರೂಪಾಯಿಗಳ ಬೆಲೆಯುಳ್ಳ ಭಂಗಾರವು ಲಂಡನ್ನಿಗೆ ರವಾನಿಸಲ್ಪಟ್ಟಿತು. 3 ವಾರಗಳನಂತರ ಆ ಭಂಗಾರವು ಲಂಡನ್ನಿಗೆ ತಲಪಿದಾಗ ಅದರ ಬೆಲೆಯು 3,75,00,000 ರೂಪಾಯಿಗಳಾಗಿದ್ದಿತಂತೆ!

ಬ್ರಿಟಿಷ್ ಚಕ್ರಾಧಿಪತ್ಯವು 1,34,91,977 ಚದರಮೈಲುಗಳುಳ್ಳದಾಗಿದ್ದು, ಇದರಲ್ಲಿ ಒಟ್ಟು 45,00,00,000 ಜನರು ವಾಸಮಾಡುತ್ತಿರುವರು. ಇದರಲ್ಲಿ ಮುಕ್ಕಾಲುಪಾಲು ಜನರು ಇಂಡಿಯಾ ಮತ್ತು ಸಿಲೋನಿನಲ್ಲಿ ವಾಸಿಸುವರು! ಮತ್ತು ಈ ಒಟ್ಟು ಜನಸಂಖ್ಯೆಯಲ್ಲಿ 6,65,00,000 ಜನರು ಮಾತ್ರ ಬಿಳಿಯಜನರಾಗಿರುವರು!

ಬ್ಯಾರನ್ ವಾನ್ ವರ್ಸ್‌ಚೂಯರ್ ಎಂಬ ಶಾಸ್ತ್ರಜ್ಞರು ಅನೇಕ ವರ್ಷಗಳವರೆಗೆ ಶೋಧಮಾಡಿ, ಮಕ್ಕಳು ವಿಶೇಷವಾಗಿ ರಾತ್ರಿಯ ಕಾಲದಲ್ಲಿಯೇ ಜನಿಸುವವೆಂದೂ, ಅವಳಿ ಮಕ್ಕಳು ವಿಶೇಷವಾಗಿ ಮಧ್ಯಾಹ್ನದ ಹೊತ್ತಿನಲ್ಲಿ ಜನಿಸುವವೆಂದೂ, ಪ್ರತಿಸಂಸಾರದಲ್ಲಿಯೂ ಕಡೆಯಲ್ಲಿ ಹುಟ್ಟಿದ ಮಗುವೇ ಹೆಚ್ಚು ಬುದ್ಧಿಯುಳ್ಳದ್ದಾಗಿರುವದೆಂದೂ ನಿರ್ಧರಿಸಿರುವರು!

ಜಪಾನ್ ದೇಶದ ಎರಡು ಸಬ್‌ಮೆರೀನ್‌ಗಳು ತಮ್ಮ ದೇಶದ ಸಮೀಪದಲ್ಲಿ ಸುಳಿದಾಡುತ್ತಿರುವದನ್ನು ಆಸ್ಟ್ರೇಲಿಯಾ ಸರಕಾರದವರು ಕಂಡು ಜಪಾನ್ ದೇಶದವರು ತಮ್ಮ ದೇಶದ ಮೇಲೆ ದಂಡೆತ್ತಿಬರಬಹುದೆಂಬ ಸಂಶಯದಿಂದ ತಮ್ಮ ದೇಶದ ರಕ್ಷಣೋಪಾಯಗಳನ್ನು ಹೆಚ್ಚಿಸಲು 10 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ನಿರ್ಧರಿಸಿರುವರು!

ಇಟಲಿ ಸರ್ಕಾರದ 'ಏರ್ ಮಿನಿಸ್ಟರ' ರಾದ ಜನರಲ್ ಬಾಲ್ಬೋರವರು ತಮ್ಮ ಕೈಕೆಳಗಿರುವ ಆಫೀಸುಗಳಲ್ಲಿ ಮೇಜುಗಳಿಗೆ ಡ್ರಾಯರುಗಳನ್ನು ಇಡಕೂಡದೆಂದು ಅಪ್ಪಣೆ ಮಾಡಿರುವರು. ಮೇಜುಗಳಿಗೆ ಡ್ರಾಯರುಗಳಿದ್ದರೆ. ಕಾಗದಗಳನ್ನು ಅದರೊಳಗಿಟ್ಟು ಮರೆತುಬಿಡುವರಂತೆ! ಅದನ್ನು ತಪ್ಪಿಸುವುದಕ್ಕಾಗಿ ಮೇಲ್ಕಂಡ ಹೊಸ ಆಜ್ಞೆಯು ಹೊರಡಿಸಲ್ಪಟ್ಟಿರುವದಂತೆ!

ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಟ್ಟು 9,95,52,05,000 ಪೌಂಡುಗಳ ಸಾಲವಿರುವದು! ಈ ಪೈಕಿ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ದೇಶಗಳು 7,00,00,00,000 ಪೌಂಡುಗಳನ್ನೂ, ಇಂಡಿಯಾ ದೇಶವು 74,30,00,000 ಪೌಂಡುಗಳನ್ನೂ, ಆಸ್ಟ್ರೇಲಿಯಾ ದೇಶವು 49,40,00,000 ಪೌಂಡುಗಳನ್ನೂ ಕೆನಡಾದೇಶವು 46,30,00,000 ಪೌಂಡುಗಳನ್ನೂ ಕೊಡಬೇಕು!

ಫಿನ್‌ಲೆಂಡ್ ದೇಶದಲ್ಲಿ 103 ವರ್ಷವಯಸ್ಸಿನ ಒಬ್ಬ ವೃದ್ಧನಿರುವನು! ಇವನು ಇನ್ನೂ 40 ವರ್ಷ ವಯಸ್ಸಿನವರಷ್ಟು ಬಲವಾಗಿರುವನಲ್ಲದೆ ಆರ್ಕ್ಟಿಕ್ ಪ್ರಾಂತದಲ್ಲೆಲ್ಲಾ ಮಹಾಬಲಿಷ್ಠನಾದ ಬೇಟೆಗಾರನೆಂಬ ಪ್ರಸಿದ್ಧಿಯನ್ನೂ ಹೊಂದಿರುವನು. ಇವನ ತಲೆಕೂದಲು 12 ಅಡಿಗಳಷ್ಟು ಉದ್ದವಾಗಿದ್ದು, ಅದನ್ನು ತನ್ನ ಕುತ್ತಿಗೆಯ ಸುತ್ತಲೂ ಒಂದು ಚೀಲದೊಳಗೆ ಮುಚ್ಚಿಟ್ಟುಕೊಂಡಿರುವನಂತೆ!

ಜುಗೊಸ್ಲೇವಿಯಾ ದೇಶಕ್ಕೆ ಸೇರಿದ ಓಸೆಕ್ ಎಂಬ ಗ್ರಾಮದ ಪೀಟರ್ ಜಾಂಕೊವಿಚ್ ಎಂಬಾತನು ತನ್ನ ಬಳಿಯಲ್ಲಿದ್ದ ಹಸುಗಳನ್ನೆಲ್ಲಾ ಮಾರಿ ಬಂದಹಣವನ್ನು ತನ್ನ ಹುಲ್ಲಿನ ಚಾಪೆಯ ಕೆಳಗೆ ಮುಚ್ಚಿಟ್ಟಿದ್ದನು. ಬೆಳಗ್ಗೆ ಎದ್ದು ನೋಡಿದಾಗ ಚಾಪೆಯಕೆಳಗೆ ಹಣವನ್ನು ಕಾಣದೆ ನಿರಾಶೆಯಿಂದ ಪ್ರಾಣಹತ್ಯಮಾಡಿಕೊಂಡನು! ಸ್ವಲ್ಪ ಹೊತ್ತಿನನಂತರ ಅವನ ಹೆಂಡತಿಯು ಬಂದು ನೋಡಿದಾಗ ಹಣವು ಚಾಪೆಯ ಕೆಳಗೇ ಇದ್ದಿತಂತೆ!

ಇಟಲಿದೇಶದ ಸರ್ವಾಧಿಕಾರಿಗಳಾದ ಮುಸ್ಸೋಲಿನಿಯವರು ತಮ್ಮ ದೇಶದಲ್ಲಿ ಪ್ರಜಾಸಂಖ್ಯೆಯು ಹೆಚ್ಚಲೆಂಬ ಉದ್ದೇಶದಿಂದ ಹೊಸ ಹೊಸ ಪ್ರಯತ್ನಗಳನ್ನು ಮಾಡುತ್ತಲೇ ಇರುವರು. ಅಧಿಕಾರಿಗಳು ಜನರನ್ನು ಮದುವೆಯಾಗುವಂತೆ ಪ್ರೋತ್ಸಾಹಿಸುವರು! ವೆನಿಸ್ ನಗರದ ಅಧಿಕಾರಿಗಳು ಹೊಸದಾಗಿ ಮದುವೆಯಾಗುವರೆಲ್ಲರಿಗೂ ಮಲಗುವ ಮನೆ ಮತ್ತು ಅಡಿಗೆಯ ಮನೆಗೆ ಬೇಕಾಗುವ ಎಲ್ಲ ಪದಾರ್ಥಗಳನ್ನೂ 12 ತಿಂಗಳ ಬಾಡಿಗೆಯನ್ನೂ ಉಚಿತವಾಗಿ ಕೊಡುವರಂತೆ!

ಲಂಡನ್ನಿನಲ್ಲಿ ವಾಸವಾಗಿದ್ದ ಒಬ್ಬ ಧನಾಢ್ಯನಾದ ಗ್ರೀಕ್‌ದೇಶಸ್ಥನು ತನ್ನ ಆಸ್ತಿಯನ್ನೆಲ್ಲಾ ತನ್ನ ಪತ್ನಿಯ ಹೆಸರಿಗೆ ಬರೆದು ಮೃತಪಟ್ಟನು. ಗ್ರೀಕ್‌ದೇಶದ ಕಾಯಿದೆಯ ಪ್ರಕಾರವಾಗಿ ಮರಣಶಾಸನವನ್ನು ಬರೆಯುವವನು ತನಗೆ ಅಥವಾ ತನ್ನ ಆಸ್ತಿಗೆ ಯಾವ ವಿಧವಾದ ಸಂಬಂಧವನ್ನೂ ಹೊಂದದಿರುವವರ ಎದುರಿಗೆ ಅಂತರಂಗದಲ್ಲಿ ಮರಣಶಾಸನವನ್ನು ಬರೆಯಬೇಕು. ಆದರೆ ಈತನು ಹಾಗೆ ಮಾಡದೆ ಬಹಿರಂಗವಾಗಿ, ಅನೇಕ ಜನ ಬಂಧುಮಿತ್ರರ ಮುಂದೆ ಮರಣಶಾಸನವನ್ನು ಬರೆದಿದ್ದರಿಂದ, ಸದರಿ ಶಾಸನವು ಅಕ್ರಮವೆಂದೂ, ಅದನ್ನು ರದ್ದು ಮಾಡಬೇಕೆಂದೂ, ಮೃತನ ಸಮೀಪಬಂಧುವೊಬ್ಬನು ಕೋರ್ಟಿನಲ್ಲಿ ದಾವೆಯನ್ನು ಹೂಡಿರುವನು.

ವಿಚಿತ್ರಪ್ರಪಂಚ.

ಇಂಗ್ಲೆಂಡ್ ದೇಶದಲ್ಲಿ ಒಟ್ಟು 300 ದ್ವೀಪಗಳಿರುವುವು!

ಲಂಡನ್ನಿನ ಪಾರ್ಲಿಮೆಂಟಿನ ಕಟ್ಟಡದಲ್ಲಿ 1,100 ಕೊಠಡಿಗಳಿರುವುವು!

ಪ್ರತಿಯೊಬ್ಬಮನುಷ್ಯನ ಶರೀರದಲ್ಲಿಯೂ 200 ಮೂಳೆಗಳಿರುವುವು!

ಆಫ್ರಿಕಾ ದೇಶದ ಆನೆಯು ಮೃಗಗಳೆಲ್ಲೆಲ್ಲಾ ಅತ್ಯಂತ ದೊಡ್ಡದಾಗಿರುವದು!

ಹಾಲೆಂಡ್ ದೇಶದಲ್ಲಿ 10,000 ಗಾಳಿಯಿಂದ ತಿರುಗುವ ಯಂತ್ರಗಳಿರುವುವಂತೆ!

ನಮ್ಮ ಕಣ್ಣಿನರಪ್ಪೆಯು $\frac{1}{300}$ ಸೆಕೆಂಡುಗಳಲ್ಲಿ ಒಂದಾವರ್ತಿ ಮುಚ್ಚಿ ತೆರೆಯಬಲ್ಲದಂತೆ!

ಚಂದ್ರನಿಂದ ಹೊರಡುವ ಕಿರಣಗಳು ಈ ಭೂಮಿಯನ್ನು $1\frac{1}{4}$ ಕ್ಷಣಗಳಲ್ಲಿ ತಲಪುವುವಂತೆ!

ರೇಡಿಯಂ ಎಂಬ ಲೋಹವು ಚಿನ್ನಕ್ಕಿಂತಲೂ 1,70,000 ಪಾಲು ಹೆಚ್ಚು ಬೆಲೆಯುಳ್ಳದ್ದಾಗಿರುವದು!

ಪ್ರತಿಯೊಬ್ಬ ಮನುಷ್ಯನ ಶರೀರದಲ್ಲಿಯೂ 520 ಬೇರೆಬೇರೆ ವಿಧವಾದ ಮಾಂಸಖಂಡಗಳಿರುವವಂತೆ!

ನಾವು ಉಸಿರಾಡುವ ಗಾಳಿಯು ಅಂತರಿಕ್ಷದಲ್ಲಿ $12\frac{1}{2}$ ಮೈಲುಗಳ ಎತ್ತರದವರೆಗೂ ವ್ಯಾಪಿಸಿರುವದಂತೆ!

ಕ್ಯಾಂಗರೂ ಎಂಬ ಆಸ್ಟ್ರೇಲಿಯಾ ದೇಶದ ಮೃಗವು 60 ಅಡಿಗಳಿಂದ 70 ಅಡಿಗಳವರೆಗೆ ಸುಲಭವಾಗಿ ಹಾರಬಲ್ಲದು!

ಒಂದು ಔನ್ಸ್ ($2\frac{1}{2}$ ತೊಲ) ತೂಕ ಚಿನ್ನವನ್ನು 146 ಚದರ ಅಡಿಗಳ ಅಗಲವಾಗುವಷ್ಟು ತೆಳುವಾದ ತಗಡಾಗಿ ಬಡಿಯಬಹುದು!

ಉತ್ತರಧ್ರುವದ ವಾತಾವರಣದಲ್ಲಿ ಎರಡು ಮೈಲುಗಳ ದೂರದಲ್ಲಿರುವ ಮನುಷ್ಯರು ಒಬ್ಬರೊಡನೊಬ್ಬರು ಸುಲಭವಾಗಿ ಮಾತನಾಡಬಹುದಂತೆ!

ಕ್ಯಾಲಿಫೋರ್ನಿಯಾ ದೇಶದಲ್ಲಿರುವ "ಮೃತ್ಯುವಿನ ಕಣಿವೆ" ಎಂಬ ಪ್ರದೇಶವು ಪ್ರಪಂಚದಲ್ಲೆಲ್ಲಾ ಅತ್ಯಂತ ಶಖೆಯಾದ ಪ್ರದೇಶವಾಗಿರುವದೆಂದು ನಿರ್ಧರಿಸಲ್ಪಟ್ಟಿರುವದು!

ಮಾಂಸಖಂಡದಲ್ಲಿ ನರಗಳು $\frac{1}{500}$ ಇಂಚ್ ದಪ್ಪನಾಗಿರುವವು. ಪ್ರತಿಯೊಬ್ಬ ಮನುಷ್ಯನ ರಟ್ಟೆಯಲ್ಲಿ ಇಂಥ 5,00,000 ನರಗಳಿರುವವು. 12ಔನ್ಸ್ ಅಥವಾ 30 ತೊಲ ತೂಕವಾಗುವಷ್ಟು ನರಗಳು ಒಟ್ಟುಗೂಡಿ 2,000 ಪೌಂಡ್ ತೂಕವನ್ನು ಎತ್ತಬಲ್ಲವು!

ಪ್ರತಿಯೊಬ್ಬ ಮನುಷ್ಯನ ಚರ್ಮದಲ್ಲಿಯೂ ಸುಮಾರು 30,00,000 ಸಣ್ಣ ಸಣ್ಣ ರಂಧ್ರಗಳಿರುವವು. ಈ ರಂಧ್ರಗಳಲ್ಲಿ $\frac{1}{3}$ ನೇ ಭಾಗವು ಮುಚ್ಚಲ್ಪಟ್ಟರೆ ಮನುಷ್ಯನು ಕೂಡಲೇ ಮೃತಪಡುವನು. ಒಬ್ಬ ಪರ್ಶಿಯಾದೇಶದ ನರ್ತಕಿಯು ತನ್ನ ಶರೀರವನ್ನು ಭಂಗಾರದಿಂದ ಅಲಂಕರಿಸಿಕೊಂಡು ಕೆಲವು ಗಂಟೆಗಳಲ್ಲಿಯೇ ಮೃತಪಟ್ಟಳು!

ಪ್ರತಿಯೊಂದು ತೊಟ್ಟು ರಕ್ತದಲ್ಲಿಯೂ 50,00,000 ಕೆಂಪುಕಣಗಳೂ, 20 ಅಥವಾ 30 ಸಾವಿರ ಬಿಳಿಯಕಣಗಳೂ ಇರುವುವು. ಈ ಅಸಂಖ್ಯಾಕಗಳಾದ ಕಣಗಳನ್ನು 'ಮೈಕ್ರೊಸ್ಕೋಪ್' ಎಂಬ ಯಂತ್ರದಲ್ಲಿ ಸುಲಭವಾಗಿ ಲೆಕ್ಕಮಾಡಬಹುದು. ಕೆಂಪುಕಣಗಳು ನಿಜವಾಗಿಯೂ ಹಳದಿಯ ಬಣ್ಣವಾಗಿರುವುವು. ಆದರೆ ಅವು ಲಕ್ಷಗಟ್ಟಲೆ ಒಟ್ಟುಗೂಡುವದರಿಂದ ಕೆಂಪಗೆ ಕಾಣುವವಂತೆ!

ಸಾಧಾರಣವಾಗಿ ಒಬ್ಬ ಹೆಂಗಸಿನ ಶರೀರದಲ್ಲಿ 9 ಗ್ಯಾಲನ್ ನೀರು, 7,200 ಗ್ಯಾಲನ್ ಆಕ್ಸಿಜನ್, ಒಬ್ಬ ಮನುಷ್ಯನನ್ನು ಅನೇಕ ಸಹಸ್ರ ಅಡಿಗಳ ಮೇಲಕ್ಕೆ ಎತ್ತಲು ಸಾಕಾದಷ್ಟು ಹೈಡ್ರೋಜನ್, 60 ವರ್ಷಗಳವರೆಗೆ ದಿನತಪ್ಪಿದಿನವೂ ಒಂದೊಂದು ಸೀಸದ ಕಡ್ಡಿಯನ್ನು ತಯಾರಿಸಬಹುದಾದಷ್ಟು ಕಾರ್ಬನ್, 5 ಸಣ್ಣ ಮೊಳೆಗಳಾಗುವಷ್ಟು ಕಬ್ಬಿಣ, 8000 ಕಡ್ಡೀಪೆಟ್ಟಿಗೆಗಳಾಗುವಷ್ಟು ಫಾಸ್ಫರಸ್, ಸ್ವಲ್ಪ ಉಪ್ಪು, ಕೆಲವು ಪೌಂಡುಗಳ ತೂಕ ನೈಟ್ರೋಜನ್ನೂ ಇರುವವಂತೆ! ಈ ಪದಾರ್ಥಗಳ ಒಟ್ಟು ಕ್ರಯ 2ರೂ. 10ಆಣೆ ಯಾಗುವದು.

[3ನೇ ಪುಟದಿಂದ ಮುಂದುವರಿದುದು]

ವೃಷಭ ಗೋತ್ರೋತ್ಪನ್ನರಾದ ವೇ|| ವೀರಪ್ಪಯ್ಯನವರ ಪುತ್ರ|| ಶ್ರೀ ಗಂಗಾಧರಸ್ವಾಮಿ ಮಠದೇವರ ಹೆಸರಿಗೆ ಮರಣಶಾಸನವ (ವಿಲ್) ನ್ನು ಬರೆಯಿಸಿ ತಮ್ಮ ಸಹಿಸಿಸಿ ಹೆಬ್ಬೆಟ್ಟಿನಗುರ್ತು ಸಹ ಮಾಡಿ ಮುಂದಾಗಬೇಕಾದ ಮಠದ ಆಡಳಿತ ಕ್ರಮವನ್ನು ಧಾ|| ಜಿಲ್ಲಾ ಮದಗನೂರು ಹಿರೇಮಠದ ಗಂಗಾಧರಪ್ಪಯ್ಯನವರನ್ನು ಕರೆಯಿಸಿ ಭಕ್ತಾದಿಗಳ ಸಮಕ್ಷಮ ಈ ವಿಷಯ ತಿಳಿಸಿದರು. ಮತ್ತು ಮುಂದೆ ತಮ್ಮ ಗದ್ದುಗೆಯನ್ನು ಈ ಗ್ರಾಮದ ಬಾಳೇಕೊಪ್ಪದ ಮಠದ ಚೌಕಿನ ಜಾಗದಲ್ಲಿರುವ ಬಿಲ್ವವೃಕ್ಷಗಳ ಮಧ್ಯದಲ್ಲಿ ಮಾಡಿಸಿ ಸುಮಾರು ಹನ್ನೊಂದು ಅಂಕಣದ ಕಲ್ಲಿನ ಇಮಾರತಿಯನ್ನು ಇದೇ ಹಿರೇಜಂಬೂರು ಮಹಾಜನಗಳ ಒಪ್ಪಿಗೆಪ್ರಕಾರ ಸಂದಾದಿವಿಗೆ ಪೂಜಾ ವಿನಿಯೋಗಾದಿಗಳು ಲೋಪವಿಲ್ಲದಂತೆ ಜರುಗಿಸುವಂತೆ ಅಪ್ಪಣೆ ಕೊಟ್ಟನಂತರ ಸೊರಬದ ಮ|| ರಾ|| ತತ್ಕೂರು ಗಂಗಾಧರಪ್ಪನ ಕಡೆಯಿಂದ ತಂದ ೪೦೭೧ ರೂಪಾಯಿಗಳಲ್ಲಿ ಸದರಿ ಪ್ರಮುಖಜನರು ಹಿಂದೆ ಬರೆಸಿದ ಪ್ರಕಾರ ನಡೆಯಿಸಿಕೊಂಡು ಹೋಗಬೇಕಾಗಿ ತಿಳಿಸಿದರು. ಅನಂತರ ನವಮಿ ಚಂದ್ರವಾರ ಬೆಳಗಿನ ಆರುಘಂಟೆಗೆ ಪೂರ್ವಾಂಗಗಳಾದ ಕ್ರಿಯೆಗಳನ್ನೆಲ್ಲಾ ಮಾಡಿಸಿಕೊಂಡು ಶ್ರೀ ಮಹಾಸ್ವಾಮಿಗಳವರ ಪಾದಕಮಲಗಳಮೇಲೆ ಮಸ್ತಕವನ್ನು ಇಟ್ಟು ತಾರಕೋಪದೇಶವಾದನಂತರ ಶಿಷ್ಯಸಮುದಾಯದ ಜಯಘೋಷವು ಜರುಗುತ್ತಿರಲು ಶಿವನಾಮೋಚ್ಚಾರದೊಡನೆ ಪರಂಧಾಮವನ್ನೈದಿದರು. ಚಿಕ್ಕಸವಿ ನೀರಲಗಿ ಪಾಟೀಲರು ಶಿರಾಳಕೊಪ್ಪದ ಶೆಟ್ಟಿ ಸಾಹುಕಾರರು ಗೌಡ್ರು ಮುಂತಾದ ಅಜೂಬಾಜೂ ಗ್ರಾಮಗಳ ವೀರಶೈವ ಶಿಷ್ಯಸಮುದಾಯವು ಕಲೆತು ಶ್ರೀಗಳವರು ಅಪ್ಪಣೆಕೊಡಿಸಿದ ಸ್ಥಳದಲ್ಲಿ ಶಾಸ್ತ್ರೋಕ್ತ ಕ್ರಿಯಾ ಸಮಾಧಿಯನ್ನು ಮಾಡಿಸಿ ಮಹಾಸ್ವಾಮಿಗಳವರ ಲಿಂಗಕಳೇಬರೋತ್ಸವವು ಛತ್ರಿ, ಚಾಮರ, ಮಕರತೋರಣ ವಗೈರೆ ಬಿರುದಾವಳಿಗಳೊಡನೆಯೂ ವಾದ್ಯವೈಭವದೊಡನೆಯೂ ಶಿವಭಜನೆಯೊಡನೆಯೂ ಹೊರಟಿತು. ಆ ಕಾಲಕ್ಕೆ ಜಂಬೂರುಗ್ರಾಮದವರೆಲ್ಲಾ ತಮ್ಮ ತಮ್ಮ ಮನೆಗಳ ಮುಂಭಾಗವನ್ನು ಸಾರಣೆ ಕಾರಣೆ ತಳಿರುತೋರಣಗಳಿಂದ ಅಲಂಕರಿಸಿ ಪ್ರತಿಯೊಬ್ಬರು ಆರತಿ ಕಾಯಿಕರ್ಪೂರ ಕಾಣಿಕೆಗಳನ್ನು ಅರ್ಪಿಸಿ ಜಯಘೋಷವನ್ನು ಮಾಡುತ್ತಿರಲು ಸಮಾಧಿಯಸ್ಥಳಕ್ಕೆ ರಾತ್ರಿ ಸುಮಾರು ೧೨ ಘಂಟೆಗೆ ಉತ್ಸವವು ತಲ್ಪಿ ಶ್ರೀ ಮಹಾಸ್ವಾಮಿಗಳವರ ಲಿಂಗದೇಹವು ವಿಧಿವತ್ತಾಗಿ ನಿಕ್ಷೇಪಗೊಳಿಸಲ್ಪಟ್ಟು ಮಹೇಶ್ವರರಿಗೆ ಭೂರಿದಕ್ಷಿಣ ದಾನಾದಿಗಳು ಕೊಡಲ್ಪಟ್ಟವು. ಲಿಂಗೈಕ್ಯರಾದ ಶ್ರೀಗಳವರು ಒಳ್ಳೆ ವಿದ್ವಾಂಸರಾಗಿಯೂ ಮಹಾಕರ್ಮಠರಾಗಿಯೂ ವೀರಶೈವ ಸಿದ್ಧಾಂತವನ್ನು ಚನ್ನಾಗಿ ಅರಿತವರಾಗಿಯೂ ಲಿಂಗನಿಷ್ಠರಾಗಿಯೂ ಇದ್ದುದರಿಂದ ಇವರ ಸದ್ಬೋಧೆಯಿಂದ ಇತ್ತಕಡೆಯ ಭಕ್ತಾದಿಗಳು ಬಹಳವಾಗಿ ಸುಧಾರಣೆಯನ್ನು ಪಡೆದಿದ್ದಲ್ಲದೆ ಶ್ರೀಗಳವರ ಯಶಸ್ಸು ಎಲ್ಲ ಕಡೆಯಲ್ಲಿಯೂ ವ್ಯಾಪಿಸಿದ್ದಿತು. ಇವರ ವಿಯೋಗದಿಂದ ನಮ್ಮ ಸಮಾಜಕ್ಕೆ ಒಂದು ದೊಡ್ಡ ಹಾನಿಸಂಭವಿಸಿದಂತಾಯಿತು. ಇವರ ಉತ್ತರಾಧಿಕಾರವನ್ನು ವಹಿಸಿದ ಸ್ವಾಮಿಗಳು ಇವರಂತೆ ಭಕ್ತೋದ್ಧರಣ ಕಾರ್ಯದಲ್ಲಿ ಆಸಕ್ತರಾಗಿ ದಿಗ್ವಿಜಯ ಪಡೆಯಲೆಂದು ಹಾರೈಸುವೆವು. ಈ ಸಮಯದಲ್ಲಿ ಪ್ರಭಾಪೋಷಣಕ್ಕೆ ಒಂದು ರೂಪಾಯಿ ಕಳಿಸಿದೆ.

ಗುರುಕಿಂಕರ ಚನ್ನವೀರಾರಾಧ್ಯ, ಹಿರೇಮಠ.

ದೊಡ್ಡ ಲೋಕಕ್ಷಯಕಾರಿಯಾವುದು ?
ಮದ್ಯಾರ್ಕ (ಸಾರಾಯಿ.)

(ಡಾಕ್ಟರ್ ಜಾನ್ ಹಾರ್ವಿ ಕೆಲ್ಲಾಗ್ ಇವರಿಂದ)

ಸಾರಾಯಿ ಅಥವಾ ಮದ್ಯಾರ್ಕವೆಂಬುದು ಒಂದು ವಿಷವು. ವಿಷವೆಂದರೆ ಸಾಮಾನ್ಯವಿಷವಲ್ಲ. ಪ್ರಪಂಚದಲ್ಲಿರುವ ಎಲ್ಲಾ ವಿಷಗಳಿಂದಲೂ ನೇರಿ ಆಗುವ ಒಟ್ಟು ಮರಣಸಂಖ್ಯೆಗಿಂತ, ಮದ್ಯವಿಷದಿಂದ ಆಗುವ ಮರಣ ಸಂಖ್ಯೆಯು ಅಧಿಕವು.

ಮದ್ಯವೆಂಬುದು ಅಂತಹ ಕ್ರೂರವಿಷದ ಗೋಷ್ಠಿಯಲ್ಲಿ ಸೇರಿದೆ. ಇದರಲ್ಲಿ ಮಿಥಿಲಿಕ್ ಮಧುಸಾರ, ಮರದ ಮಧುಸಾರ, ಎಮಿಲಿಕ್, ಪ್ರಾಫೆಲಿಕ್, ಎಥಿಲಿಕ್ ಮುಂತಾಗಿ ಬೇರೆಬೇರೆ ಅನೇಕತರದ ಸಾರಾಯಿಗಳುಂಟು. ಯಾವ ಜಾತಿಯದೇ ಆಗಿದ್ದರೂ, ಅದೊಂದು ಕ್ರೂರವಿಷವೆಂಬುದರಲ್ಲಿ ಸಂದೇಹವಿಲ್ಲ. ವಿಷದ ಜಾತಿಗೆ ಸೇರಿದಮೇಲೆ ಅದರಿಂದ ಕ್ಷೇಮವನ್ನು ನಿರೀಕ್ಷಿಸುವುದು ಅಸಂಭವವಲ್ಲವೆ?

ಸಾರಾಯಿವೆಂಬುದು ಪ್ರಾಣಿಜನ್ಯವಾದ ಒಂದು ಮಲಪದಾರ್ಥವು.

ಮದದ್ರಾವಕವೆಂಬುದು ವಿಷಮಾತ್ರವೇ ಅಲ್ಲ. ಅದೊಂದು ಮಲಪದಾರ್ಥವು. ಅಂತಹ ಕಶ್ಮಲದಿಂದ ಮೈಗೆ ಒಳ್ಳೆಯದಾಗುವದೆಂಬುದನ್ನು ಯಾರೂ ನಿರೀಕ್ಷಿಸುವುದಕ್ಕಿಲ್ಲ. ಮನುಷ್ಯರ ಮಲವು ಕೇವಲ ವಿಷವಾದುದರಿಂದಲೇ ಅಲ್ಲವೆ ಆಗಾಗ ಅದನ್ನು ನಾವು ನಿಶ್ಶೇಷವಾಗಿ ದೂರೀಕರಿಸುವೆವು? ಪ್ರಾಣಿಸಂಬಂಧ ಮಲ, ಮೂತ್ರ, ಬೆವರು, ಕಫ ಮುಂತಾಗಿ ಎಲ್ಲಾ ವಿಧವಾದ ಕಶ್ಮಲಗಳ ವಿಷಯದಲ್ಲಿಯೂ ನಾವು ಎಷ್ಟೋ ಅಸಹ್ಯಪಡುವೆವು. ಅದರ ಸಂಪರ್ಕವಾಗದಂತೆ ಎಷ್ಟೋ ಜಾಗ್ರತೆಯಾಗಿರುವೆವು. ಆಹಾರಪದಾರ್ಥಗಳಿಗಾಗಲಿ, ಕುಡಿಯುವ ನೀರಿಗಾಗಲಿ ಅದರ ಗಂಧಮಾತ್ರವಾದರೂ ಸೋಕದಂತೆ ಎಚ್ಚರ ತೆಗೆದುಕೊಳ್ಳುವೆವು. ಮಧುಸಾರವೂ ಅಂತಹ ಕಶ್ಮಲಪದಾರ್ಥವೇ! "ಯೀಸ್ಟ್" ಎಂಬ ಗಿಡದ ಮಲಪದಾರ್ಥವೇ ಅದು. ಆ ಗಿಡವು ತನ್ನ ವಿಷವನ್ನೇ ತಾನು ಸಹಿಸಿಕೊಳ್ಳಲಾರದು. ಸಕ್ಕರೆ ಕರಗಿದ ನೀರಿನಲ್ಲಿ (ಷುಗರ್ ಸೊಲ್ಯೂಷನ್) ಈ ಸಸಿಯು ಹುಟ್ಟಿದ ೨೪ ಘಂಟೆಗಳೊಳಗಾಗಿ, ಈ ಗಿಡದಿಂದ ಕಳವೆಯ ಪದಾರ್ಥಗಳು ಹೊರಬೀಳಲಾರಂಭಿಸುವುದರಿಂದ, ಅದು ಹಾಗೆ ಹೊರಬೀಳುವುದಕ್ಕೆ ಮೊದಲು ಆ ಗಿಡವು ಒಂದು ನಿಮಿಷದಲ್ಲಿ ಎಷ್ಟುಪಾಲು ಬೆಳವಳಿಕೆಯನ್ನು ಹೊಂದಿತೋ, ಅಷ್ಟುಮಾತ್ರ ಬೆಳೆಯಲು ಒಂದು ಸಾವಿರ ನಿಮಿಷಗಳಕಾಲವು ಬೇಕಾಗುವುದು. ಹೀಗೆ ಆ ಗಿಡದ ಬೆಳವಳಿಕೆಯಲ್ಲಿ ಸಾವಿರಪಾಲು ಶಕ್ತಿಯು ಕಡಿಮೆಯಾಗುವುದಕ್ಕೆ, ಆ ಸಕ್ಕರೆಯ ದ್ರಾವಕದಲ್ಲಿ ಮದ್ಯವಿಷವು ಸೇರಿದುದೇ ಕಾರಣವು. ಅದರಿಂದ ಹೊರಟ ಕಶ್ಮಲವೇ ಅದನ್ನು ಕೊಲ್ಲುವುದರಿಂದ ಕೆಲವು ದಿನಗಳೊಳಗಾಗಿ ಆ ಗಿಡವು ಸತ್ತು ಹೋಗುವುದು.

ಗಿಡವು ಸತ್ತುದಕ್ಕೆ ನಿದರ್ಶನವೇನೆಂದರೆ, ಕೆಲವು ದಿನಗಳಮೇಲೆ ಸಕ್ಕರೆಯ ದ್ರಾವಕದಲ್ಲಿ ನೊರೆಹೊರಡುವುದು. ಗಿಡದ ಬೆಳವಳಿಕೆಯು ನಿಂತುದೇ ಇದಕ್ಕೆ ಸೂಚಕವೆಂದು ಗ್ರಹಿಸಬೇಕು.

ಮತ್ತೊಂದು ವಿಶೇಷವೇನೆಂದರೆ, ಕೀಳು ತರದ ಪ್ರಾಣಿಯ ಮಲಪದಾರ್ಥವು ಮೇಲುತರದ ಪ್ರಾಣಿಗಳ ಆಹಾರರೂಪವಾಗಿ ಉಪಯೋಗಿಸಲ್ಪಡಬಹುದೆಂಬುದಕ್ಕೆ ಇದುಹೊರತು ಬೇರೆಲ್ಲಿಯೂ ಯಾವ ದೃಷ್ಟಾಂತವನ್ನೂ ನಾವು ಕಾಣುವುದಕ್ಕಿಲ್ಲ. ಹೀಗಿರುವಾಗಲೂ ಮಲರೂಪವಾದ ಈ ಮಧುಸಾರವನ್ನು ಮನುಷ್ಯರು ಪಾನೀಯವಾಗಿ ಉಪಯೋಗಿಸುವುದು ಅಸಭ್ಯವಲ್ಲವೇ? ದೈವಸೃಷ್ಟಿಯಲ್ಲಿ ಇದೂ ಒಂದು ಆಹಾರಪದಾರ್ಥವಾಗಿ ಏರ್ಪಟ್ಟಿದೆಯೆಂದು ಕೆಲವರು ಮೂಢವಿಶ್ವಾಸವನ್ನಿಟ್ಟಿರುವರು. ತಿಳುವಳಿಕೆಯಿಲ್ಲದ ಮೂಢಜನರು ಮಾತ್ರವೇ ಅಲ್ಲದೆ, ಕೆಲವು ವಿದ್ಯಾವಂತರಲ್ಲಿಯೂ ಈ ಅಭಿಪ್ರಾಯವುಂಟು. ಡಾಕ್ಟರುಗಳಲ್ಲಿ ಕೆಲವರು ಸಾರಾಯಿಗಳಲ್ಲಿ ಕೆಲವನ್ನು ಔಷಧ ಪದಾರ್ಥವೆಂದು ಸಾಧಿಸುವುದುಂಟು. ಮದ್ಯವು ಮೈಗೆ ಒಳ್ಳೆಯದೆಂದೂ, ಅದರಲ್ಲಿ ಕೆಲವು ಔಷಧಗುಣವುಂಟೆಂದೂ ಹೇಳುವರು. ಈ ಹೇಳಿಕೆಯು ನಿರಾಧಾರವಾದುದೆಂದು ಶಾಸ್ತ್ರೀಯವಾದ ನಿರೂಪಣಗಳಿಂದ ತೋರಿಸಬಹುದು. ಹೇಗೆಂದರೆ—

"ಈಸ್ಟ್" ಗಿಡವು ಹೇಗೋ ಹಾಗೆಯೇ, ಮನುಷ್ಯದೇಹವೂ ಜೀವವುಳ್ಳ "ಸೆಲ್ಸ್" ಎಂಬ ಅಣುಕೋಶಗಳಿಂದ ಏರ್ಪಟ್ಟಿದೆ. ಆ "ಸೆಲ್" ಗಳೇ ಪಿತ್ತರಸವನ್ನು ಉಂಟುಮಾಡುವುದಕ್ಕೂ, ವಿಷನಿವಾರಣೆಗೂ, ಆಹಾರಜೀರ್ಣಕಾರ್ಯಕ್ಕೂ, ಶರೀರದಲ್ಲಿ ತ್ರಾಣವನ್ನುಂಟುಮಾಡುವುದಕ್ಕೂ ಏರ್ಪಟ್ಟ ಮುಖ್ಯ ಸಾಧನಗಳೆನಿಸಿವೆ. ನಮ್ಮ ಬುದ್ಧಿಶಕ್ತಿಗೂ ಮನೋವಿಕಾರಗಳಿಗೂ ಅವೇ ಕಾರಣಗಳು.

ರಕ್ತದ ಸೆಲ್‌ಗಳು (ಅಣುಕೋಶಗಳು) ಎರಡು ಬಗೆಯಾಗಿವೆ. ಗುಂಡಗೆ (ವರ್ತುಲವಾಗಿ) ಸಣ್ಣಗಿರುವ ಕೆಂಪುಬಣ್ಣದ ಸೆಲ್‌ಗಳು ಒಂದು ಬಗೆ. ಇವೇ ಆಕ್ಸಿಜನ್ ಎಂಬ ಪ್ರಾಣವಾಯುವನ್ನು ಮೈಗೆ ಸೇರಿಸುವುವು. ರಕ್ತ ಸಂಚಾರದ ವೇಗದಿಂದ ಎಳೆಯಲ್ಪಟ್ಟಾಗ ಮಾತ್ರ ಇವು ಅತ್ತಿತ್ತ ಕದಲುವುವು. ಅದಲ್ಲದೆ ಮತ್ತೊಂದು ಬಗೆಯ ಅಣುಕೋಶಗಳು ದೇಹದಲ್ಲಿರುವುವು. ಅವು ಬಿಳೀಬಣ್ಣದವುಗಳಾದುದರಿಂದ, ಶ್ವೇತಕಣಗಳೆಂದು ಅವಕ್ಕೆ ಹೆಸರು. ಈ ಕಣಗಳು ಬಹಳ ಆಶ್ಚರ್ಯಕರವಾದ ಕೆಲಸ ಮಾಡುತ್ತಿರುವುವು. ರಕ್ತವಾಹಿನಿಗಳಲ್ಲಿ (ರಕ್ತದ ಕಾಲುವೆಗಳಲ್ಲಿ) ಬೇರೆ ಯಾವುದಾದರೂ ಅನ್ಯವಸ್ತುವಿನ ಸಂಪರ್ಕವುಂಟಾದಂತೆ ತೋರಿದಕ್ಷಣವೇ, ಮೇಲ್ಕಂಡ ಶ್ವೇತಕಣಗಳು ಅದನ್ನಿದಿರಿಸುವುದಕ್ಕಾಗಿ ನಾನಾಕಡೆಗಳಿಂದ ಬಂದು ಸೇರುವುವು. ಒಂದೊಂದು "ಸ್ಲೋ" ವೇಗದಿಂದ ಆ ಅನ್ಯವಸ್ತುವನ್ನು ರಕ್ತದಿಂದೋಡಿಸುವುದಕ್ಕಾಗಿ, ಅದರ ಸಮೀಪಕ್ಕೆ ಬಂದು ಕೂಡುವುವು. ಈ ಕಣಗಳೇ ನಮ್ಮ ಶರೀರವನ್ನು ಕಾಪಾಡತಕ್ಕವು. ರಕ್ತವಾಹಿನಿಗಳಲ್ಲಿ ಬಂದು ಸೇರಬಹುದಾದ ವಿಷಕ್ರಿಮಿಗಳನ್ನೂ, ಕಶ್ಮಲಗಳನ್ನೂ, ಇತರ ವಸ್ತುಗಳನ್ನೂ ಅವು ಇದಿರಿಸಿ ನಾಶಮಾಡಲು ಪ್ರಯತ್ನಿಸುವುವು. ಒಂದು ಬೇಟೆನಾಯಿಯು ಒಂದು ಸಣ್ಣ ಕಾಡುಮೃಗದಮೇಲೆಯೂ, ಒಂದು ಬೆಕ್ಕು ಸುಂಡಿಲಿಯ ಮೇಲೆಯೂ ಬೀಳುವಂತೆ, ಈ ಕಣಗಳು ಶರೀರಕ್ಕೆ ವಿರೋಧಿಗಳಾದ ಅನ್ಯವಸ್ತುಗಳಮೇಲೆ ಬೀಳುವುವು. ಮತ್ತು ಒಂದು ಪಟಾಲಮ್ಮಿಗೆ ಒಳಪಟ್ಟ ಸೈನಿಕರಂತೆ, ಅವು ಒಂದೇ ಏಕಮತ್ಯದಿಂದಲೂ ಶತ್ರುವನ್ನಿದಿರಿಸಲು ಮುಂದೆ ಬೀಳುವುವು.

"ಬಾಟಲ್ ಕ್ರೀಕ್ ಸ್ಯಾನಿಟೋರಿಯಂ" ಎಂಬೀ ನಮ್ಮ ಆರೋಗ್ಯರಕ್ಷಣಶಾಲೆಯಲ್ಲಿರುವ ರೋಗಿಗಳಿಗೆ, ಮೇಲ್ಕಂಡ ರಕ್ತಕಣಗಳ ಸಂಚಾರಕ್ರಮವನ್ನು ನಾವು ಜಂಗಮ ಚಿತ್ರಪ್ರದರ್ಶನಗಳ (ಸಿನಿಮಾ) ಮೂಲಕವಾಗಿ ತೋರಿಸುತ್ತಿರುವೆವು. ಅದರಲ್ಲಿ ಆ ಬಿಳೀಸೆಲ್ಲುಗಳು ರಕ್ತವಾಹಿನಿಯಲ್ಲಿ ಯಾವುದಾದರೂ ಅನ್ಯವಸ್ತುವಿನ ಅಣುಮಾತ್ರವಾದ ಸಣ್ಣ ಕಣವು ಸೇರಿಸಲ್ಪಟ್ಟೊಡನೆ, ಅದರ ಮೇಲೆಬಿದ್ದು, ಅದನ್ನು ಸಣ್ಣಸಣ್ಣ ಶಕಲಗಳನ್ನಾಗಿ ಒಡೆದು, ಆ ತುಂಡುಗಳನ್ನೆಲ್ಲ ಹೊತ್ತುಕೊಂಡು ಹೋಗುವ ರೀತಿಯನ್ನು ಪ್ರತ್ಯಕ್ಷವಾಗಿ, ಸ್ಪಷ್ಟವಾಗಿ ನೋಡಬಹುದು. ಹೀಗೆ ಈ ಬಿಳೀ ಸೆಲ್‌ಗಳು ನಮ್ಮ ಶರೀರಕ್ಕೆ ವಿರೋಧಿಗಳಾದ ಕ್ರಿಮಿಗಳನ್ನೂ, ಕಶ್ಮಲಗಳನ್ನೂ ಸಾಗಿಸಿಕೊಂಡು ಹೋಗಿ, ರಕ್ತವನ್ನು ಶುದ್ಧವಾಗಿರಿಸಿ, ನಮ್ಮನ್ನು ಕಾಪಾಡುವುವು. ಒಂದೊಂದು ಕೊಟ್ಪ ರಕ್ತದಲ್ಲಿ ಈ ಶ್ವೇತಕಣಗಳ ಸಂಖ್ಯೆಯು ಲಕ್ಷೋಪಲಕ್ಷವಾಗಿದ್ದು, ನಮ್ಮನ್ನು ಅಪಾಯದಿಂದ ತಪ್ಪಿಸಿ ಶರೀರವನ್ನು ಕಾಪಾಡುವುವು.

(ಸಶೇಷ.)

ಯಜಮಾನ್ ಅಂಡ್ ಸನ್ಸ್
ರಬ್ಬರ್ ಮೊಹರು
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [18]

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇನೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಂಪುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲಾಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬಿರಿತರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಸ್ಸಿಗೆ ಆಣೆ 0-9-0, 1 ಡಿಸ್ಸಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಪಿಡಿತ, ಚಿತ್ತಉರಿ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಸ್ಸಿಗೆ 0-9-0, 1 ಡಿಸ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಕ್ಕು ಮದ್ದುಗಳೂ ಹೋಮಿಯೊಪತಿ ಔಷಧಗಳೂ ಪರೀಕ್ಷಿಸಿಕೊಡುವ ದೃಷ್ಟಿಚಿಕಿತ್ಸಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[33] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾಂಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನವು. ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೋಃಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[14] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ	೦—೧—೦
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯೊಳ್ಳಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೫೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[15] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೪ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ಏಪ್ರಿಲ್ ೧೯೩೩ [ಸಂಚಿಕೆ ೪೯

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಶೈವೋಪನಿಷತ್ತು, ಸ್ವಾಯಂಭುವಾಗಮ, ಸುಪ್ರಭೇದಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿರುವವು. ಈ ಗ್ರಂಥವು ೨೩೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು



ಫೋಟೊ, ಲೈನ್, ಬ್ಲಾಕುಗಳು ಹಿತ್ತಾಳೆ, ಸೀಸದ, ಬ್ಲಾಕುಗಳು ಅರಗಿನಶೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [19]

ಕೊಡಕ್ ಕಂಪೆನಿಯವರು ಜೇಬಿನಲ್ಲಿಟ್ಟುಕೊಳ್ಳಬಹುದಾದಷ್ಟು ಚಿಕ್ಕದಾದ ಚಲನ ಚಿತ್ರದ ಕ್ಯಾಮರಾವನ್ನು ತಯಾರುಮಾಡಿರುವರು. ಇದರ ಕ್ರಯ 150 ರೂ ಮಾತ್ರ! ಇದರಿಂದ ತೆಗೆಯುವ ಚಿತ್ರವು ಟಪಾಲು ಸ್ಟಾಂಪಿನ 26 ನೇ ಒಂದು ಭಾಗದಷ್ಟು ಚಿಕ್ಕದಾಗಿದ್ದು, ಅದನ್ನು ಯಂತ್ರದಲ್ಲಿ ಹಾಕಿದಾಗ, ಅದರ ಛಾಯಾಚಿತ್ರವು ಗೋಡೆಯಮೇಲೆ 43,000 ದಷ್ಟು ದೊಡ್ಡದಾಗಿ ಕಾಣಿಸುವದಂತೆ!

ಶ್ರೀಗುರುತತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು. **ಬೆಲೆ ೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಲಿಬರಲ್ ಫೆಡರೇಷನ್ ಸಂಘ.

ಈ ತಿಂಗಳು 15 ನೇ ತಾರೀಖಿನಲ್ಲಿ ಕಲ್ಕತ್ತಾಪಟ್ಟಣದಲ್ಲಿ ಈ ಸಂಘದ ಅಧಿವೇಶನವು ನಡೆಯಿತು. ಈ ಅಧಿವೇಶನದ ಪ್ರೆಸಿಡೆಂಟರು ರೆಸೆಪ್ಷನ್ ಕಮಿಟಿ ಛೇರ್‌ಮೆನ್‌ರವರು. ಮೆಂಬರುಗಳು ಇವರುಗಳೆಲ್ಲಾ ಮಾಡಿದ ಉಪನ್ಯಾಸಗಳ ಠರಾವುಗಳನ್ನು ಪರಿಶೀಲಿಸಿದರೆ ಬ್ರಿಟಿಷ್ ದೈಹಾರ್ದಗಳು ಬ್ರಿಟಿಷ್ ಧರ್ಮಗಳಿಗೆ ವಿರೋಧವಾಗಿ ನಡೆದಾಗ್ಯೂ, ಇಂಡಿಯಾದೇಶದಲ್ಲಿ ಲಿಬರಲ್ ಸಂಘದವರು ಕೋಪತಾಪಗಳಿಗೆ ಅಧೀನರಾಗದೆ ಬ್ರಿಟಿಷ್ ಜನಗಳಿಗೂ ಭಾರತೀಯರಿಗೂ ಪರಸ್ಪರ ಪ್ರೀತಿಯು ಹೆಚ್ಚುವಂತೆ ಮಾಡಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೂ ಬ್ರಿಟಿಷ್ ಸಾಂಕೇತಿಕ ಶಾಸನಧರ್ಮಕ್ಕೂ ಯಾವ ನ್ಯೂನತೆಯೂ ಬರದಂತೆ ಮಾಡಬೇಕೆಂದು ಪ್ರಯತ್ನಮಾಡಿರುವರು. ಈ ಪ್ರಯತ್ನವನ್ನು ನೆರವೇರಿಸುವದಕ್ಕೋಸ್ಕರ ಈ ಫೆಡರೇಷನ್ ಸಂಘ ವಿಲಾಯತಿಗೆ ಬಂದು ಡೆಪ್ಯುಟೇಷನ್ ವನ್ನು ಕಳುಹಿಸಬೇಕೆಂದು ಠರಾವು ಮಾಡಿರುವರು. ಈ ಡೆಪ್ಯುಟೇಷನ್ನಿಗೆ ಚುನಾಯಿಸಲ್ಪಟ್ಟಿರುವ ಮೆಂಬರುಗಳು:— 1. ಮ|| ರಾ|| ಸಿ. ವೈ. ಚಿಂತಾಮಣಿಯವರು, 2. ಮ|| ರಾ|| ಪಂಡಿತ ಕುಂಜ್ರುರವರು, 3. ಮ|| ರಾ|| ಎನ್. ಎಂ. ಜೋಶೀಯವರು, 4. ಮ|| ರಾ|| ಠಾಕೂರ್ ಹನುಮಾನ್‌ಸಿಂಗ್‌ರವರು, 5. ಮ|| ರಾ|| ಡಿ. ಜಿ. ದಲ್ವೀಯರವರು, 6. ಮ|| ರಾ|| ಲಾರ್ಡ್ ಸಿನ್ಹಾರವರು, 7. ಮಿ|| W. H. ಥಾಂಪ್ಸನ್‌ರವರು, 8. ಮಿ|| W. C. ವರ್ಡ್ಸ್‌ವರ್ತ್‌ರವರು, 9. Sir D. P. ಸರ್ವಾಧಿಕಾರಿಯವರು, 10. ಮಿಸೆಸ್ ಕುಮುದಿನಿ ಬೋಸ್‌ರವರು ಮತ್ತು ಮಿಸ್ ಜ್ಯೋತಿರ್ಮಯಿ ಗಂಗೂಲಿಯವರು ಈ ಮೆಂಬರುಗಳು ವಿಲಾಯತಿಗೆ ಹೋಗಿ ಬ್ರಿಟಿಷ್ ಗೌರ್ನಮೆಂಟಿನವರು ಬ್ರಿಟಿಷ್ ಧರ್ಮಗಳಿಗೆ ಅನುಸಾರವಾಗಿ ನಡೆಯುವಂತೆ ಮಾಡಬೇಕೆಂದು ಠರಾವುಮಾಡಿದರು. ಇದರಿಂದ ಪ್ರಯೋಜನವಾಗಬೇಕಾದರೆ ಭಾರತೀಯರು ಮಾಡತಕ್ಕ ಕೆಲಸಗಳನ್ನು ಮಾಡುವುದರಲ್ಲಿ ಉದಾಸೀನರಾಗಿರಬಾರದು. ಬ್ರಿಟಿಷ್‌ಜನಗಳು ದೈಹಾರ್ದಗಳಾಗಿ ಭಾರತೀಯರಾದ ನಮ್ಮನ್ನು ಗುಲಾಮಗಿರಿಗೆ ತರುವುದಕ್ಕೆ ಕಾರಣವೇನೋ, ಅದನ್ನು ಗೊತ್ತುಮಾಡಿ ಅದನ್ನು ನಿವಾರಣೆಮಾಡಿಕೊಳ್ಳಬೇಕು. ನಮ್ಮ ಜಾತಿಭೇದ, ಮತಭೇದ, ಕೋಮಿನಭೇದ, ಪರಸ್ಪರದ್ವೇಷ, ಇವುಗಳೇ ನಮ್ಮ ಗುಲಾಮಗಿರಿಗೆ ಮುಖ್ಯಕಾರಣ. ಈ ಭೇದಭಾವಗಳನ್ನು ಬಿಟ್ಟು ಐಕಮತ್ಯದಿಂದ ನಡೆಯುವುದನ್ನು ನಾವು ಅನುಷ್ಠಾನಕ್ಕೆ ತಂದುಕೊಂಡ ಹೊರತು ನಮ್ಮ ಗುಲಾಮಗಿರಿಯು ಹೋಗುವದಿಲ್ಲ. ಈ ವಿಷಯಕ್ಕೆ ಎಲ್ಲಾ ಭಾರತೀಯರ ಗಮನವೂ ಕೊಡಲ್ಪಡಬೇಕು.

ಎಂ. ವೆಂಕಟಕೃಷ್ಣಯ್ಯ.

ಸೋಲಾಪುರ ಜಿಲ್ಲಾ ವೀರಶೈವಪರಿಷತ್ತು.

ಎರಡನೆಯ ಅಧಿವೇಶನ.

ಮೇಲ್ಕಂಡ ಪರಿಷತ್ತು, ಸೊಲ್ಲಾಪುರ ತಾಲೂಕಿಗೆ ಸೇರಿದ ಹೋಟಗಿ ಗ್ರಾಮದಲ್ಲಿ ಇಲ್ಲಿಯ ಬೃಹನ್ಮಠಾಧ್ಯಕ್ಷ ಶ್ರೀ ಬಾಲತಪಸ್ವಿ ಷ|| ಬ್ರ|| ಚನ್ನವೀರಶಿವಾಚಾರ್ಯಸ್ವಾಮಿಗಳವರ ಕೃಪಾಬಲದಿಂದ ಇದೇ ಏಪ್ರಿಲ್ 29 ಮತ್ತು 30 ಈ ಎರಡು ತಾರೀಖುಗಳಲ್ಲಿ ನೆರವೇರುವದು. ಸಭೆಯು ಅಧ್ಯಕ್ಷಸ್ಥಾನವನ್ನು ಸೊಲ್ಲಾಪುರದ ಪ್ರಸಿದ್ಧ ಮುಂದಾಳುಗಳಾದ ಡಾ|| ಜಗದೇವರಾವ ದೇಶಮುಖ ಇವರು ವಹಿಸುವರು. ಸಭೆಯಲ್ಲಿ ಧರ್ಮಜಾಗೃತಿ, ಧರ್ಮಗ್ರಂಥಪ್ರಸಾರ, ವೃತ್ತಪತ್ರಿಕೆ, ವಾಙ್ಮಯ, ಪಾಠಶಾಲಾ, ಬೋರ್ಡಿಂಗ್ ಮೊದಲಾದ ವಿಷಯಗಳ ಮೇಲೆ ಚರ್ಚೆಯಾಗಿ ನಿರ್ಣಯಗಳಾಗುವವು. ಆದುದರಿಂದ ಈ ಧಾರ್ಮಿಕ ಪರಿಷತ್ತಿಗೆ ಸರ್ವ ವೀರಶೈವರೂ ಆಗಮಿಸಿ ಮತಾಭಿವೃದ್ಧಿಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುವ,

ಸೆಕ್ರೆಟರಿ,
ರೇವಣಸಿದ್ಧ ಭೋಜಪ್ಪಾ ಕಾಮಗಾರ,
ಮುಲ್ಕಿ ಪಾಟೀಲ, ಹೋಟಗಿ.

ನೋಟ್:—ಈ ಹೋಟಗಿ ಗ್ರಾಮವು ಜಂಕ್ಷನ್ನಿನ ಸ್ಥಳವಾಗಿದ್ದು ಸೋಲಾಪುರಕ್ಕೆ 7 ಮೈಲು ದೂರದಲ್ಲಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಅನಂತರೂಪವಾಗಿರುವ ಈ ವಿಶ್ವದಲ್ಲಿ ಯೋಚಿಸಿನೋಡಿದರೆ ಮಾನವಜನ್ಮವೇ ಸರ್ವೋತ್ಕೃಷ್ಟವಾದುದೆಂದು ಅನುಭವಸಿದ್ಧವಾಗುವುದು. ಮಾನವನಿಗೆ ತನ್ನ ಜನ್ಮದ ಯೋಗ್ಯತೆಯು ಎಂತಹದೆಂಬುದು ಗೊತ್ತಾದರೇನೇ ಸಾತ್ವಿಕವೃತ್ತಿಯ ವಿಕಾಸವೂ ಸರ್ವಜೀವರಲ್ಲಿ ಸಮತೆಯೂ, ಅಹಂಭಾವದ ಅಭಾವವೂ, ಕರ್ತವ್ಯಜಾಗೃತಿಯನ್ನು ಸ್ಥಿರಗೊಳಿಸುವ ಮನೋನಿಗ್ರಹವೂ ಮುಂತಾದುದು ಅವನಲ್ಲಿ ತಲೆದೋರಲು ಅನುವಾಗುವುದು. ಆತ್ಮವಿಕಾಸವನ್ನು ಜೊತೆಗೊಳಿಸಿ ಆತ್ಮೋದ್ಧಾರದ ನಿಲುಕಡೆಗೆ ಒಯ್ಯುಮುಟ್ಟಿಸತಕ್ಕದ್ದಾದ ಆಧ್ಯಾತ್ಮಿಕೋನ್ನತಿಯನ್ನು ಪ್ರತಿಯೊಬ್ಬನೂ ಪಡೆಯಬೇಕಾದುದು ಅತ್ಯಾವಶ್ಯಕವಾದ ಆದ್ಯಕರ್ತವ್ಯವು. ಇಷ್ಟೇ ಅಲ್ಲ, ಮನುಷ್ಯನು ತನ್ನ ಜನ್ಮದ ಯೋಗ್ಯತೆಯನ್ನು ಎಲ್ಲಿಯವರೆಗೆ ತಿಳಿದವನಾಗಿರುವನೋ ಅಲ್ಲಿಯವರೆಗೂ ಅವನು ಕಲಿತವನೂ, ಶರೀರದಿಂದ ಗಟ್ಟಿಮುಟ್ಟನೂ, ಚಿತ್ತೋನ್ನತಿಯುಳ್ಳವನೂ ಆಗಿದ್ದರೂ ಕೂಡ ಆ ವಿದ್ವತ್ತೆ, ಗಟ್ಟಿಮುಟ್ಟತನ, ಚಿತ್ತೋನ್ನತಿಗಳಿಗೆ ಅಧ್ಯಾತ್ಮಜ್ಞಾನದ ಜೋಡು (ಜೊತೆಯು) ಇಲ್ಲದ ಮೂಲಕ ಅವನು ಏಕಾಂಗಿಯೆಂದೇ ಹೇಳಲ್ಪಡುತ್ತಾನೆ. ಒಟ್ಟಿನಲ್ಲಿ ಮನುಷ್ಯನು ಕೇವಲ ವ್ಯಾವಹಾರಿಕ ಕೃತ್ಯಗಳಲ್ಲಿ ತೊಡಗಿರುವುದೇ ಅವನ ಮುಖ್ಯವಾದ ಧ್ಯೇಯವಲ್ಲ. ಎಂತಹ ಬಿಕ್ಕಟ್ಟಿನ ಪ್ರಸಂಗವು ಬಂದೊದಗಿದರೂ ಮನಸ್ಸನ್ನು ಚಂಚಲವಾಗದ ಹಾಗೆ ಮಾಡಿ ಆಧ್ಯಾತ್ಮಿಕೋನ್ನತಿಯಿಂದ ಆ ಮನಸ್ಸಿಗೆ ಪೂರ್ಣಶಾಂತಿಯನ್ನೊದಗಿಸಿಕೊಡಲು ಶಕ್ಯವಿದೆ. ಹಂಸದ ಚಂಚೂಪುಟವು ಹಾಲುನೀರುಗಳನ್ನು ಬೇರ್ಪಡಿಸುತ್ತಿರುವಂತೆ, ಆಧ್ಯಾತ್ಮಿಕ ಸಂಸ್ಕಾರವಿಶಿಷ್ಟವಾದ ಮನೋವೃತ್ತಿಯು ವಿಶ್ವದೊಳಗಿನ ಸಾರಾಸಾರವನ್ನು ವಿಂಗಡಿಸುವುದು. ಅಧ್ಯಾತ್ಮವಿಚಾರದ ದಾರಿಯನ್ನೇ ಅರಿಯದ ಮನವು ಸಮಾಧಾನವನ್ನು ಹೊಂದದೆ ಬಿಸಿಲ್ಗುದುರೆಯನ್ನು ಅಗ್ಗಣಿಯೆಂದರಿದು ಕೆಟ್ಟಿಗೊಳ್ಳುವನಂತೆ, ಅಸಾರರೂಪಗಳಾದ ವಸ್ತುಗಳ ಹಂಬಲದಿಂದ ಬಹಳವಾಗಿ ಬಳಲುವುದು. ನೀರು ಹಸರು, ಹಳದಿ, ಕೆಂಪು ಮೊದಲಾದ ಬೇರೆ ಬೇರೆ ಬಣ್ಣಗಳೊಡನಾಟದಿಂದ ಆ ಆ ರೂಪಗಳನ್ನು ಪಡೆಯುವಂತೆ, ಮನುಷ್ಯನ ಇಚ್ಛೆಯೆಂಬುದು ಮೊದಲು ಶುದ್ಧವಾಗಿರುವುದು, ಅದು ಬಹಿರ್ಮುಖವಾಗಿ ಹೊರಗಿನ ಬೇರೆಬೇರೆ ವಿಷಯಗಳನ್ನವಲಂಬಿಸಿ ವನಿತೇಚ್ಛೆ, ಧನೇಚ್ಛೆಯೆಂಬೀಮುಂತಾದ ಹೆಸರುಗಳನ್ನು ಪಡೆಯುವುದು. ಬಾಹ್ಯವಿಷಯಗಳ ಹಂಬಲವುಳ್ಳ ಮನಸ್ಸು ಯಾವಾಗಲೂ ನಾನಾವಿಧಕಲ್ಪನೆಗೊಳಗಾಗಿ ನಿಜವಾದ ಶಾಂತಿಯನ್ನು ಪಡೆಯದೆ ಕೊರಗುತ್ತಿರುವುದು. ಆದರೆ, ಸಾರಭೂತವೆನಿಸುವ ಆಧ್ಯಾತ್ಮಿಕ ವಿಷಯದಕಡೆಗೆ ಹೊರಳಿದ ಅಂತರ್ಮುಖವೃತ್ತಿಯುಳ್ಳ ಮನಸ್ಸಾದರೋ ತೀವ್ರವಾಗಿ ಸುಖಶಾಂತಿಯನ್ನು ಹೊಂದುವುದು. ಇಷ್ಟೇ ಅಲ್ಲ, ಆಧ್ಯಾತ್ಮಿಕ ವಿಷಯದಲ್ಲಿ ವಿಶೇಷವಾಗಿ ಆಸಕ್ತಿಯುಳ್ಳ ಚಿತ್ತವೃತ್ತಿಗೆ ಇಂಥದೇ ಇಷ್ಟೇ ಲಾಭವಾಗುವುದೆಂದು ಹೇಳಲಿಕ್ಕೆ ಬರುವುದಿಲ್ಲ. ಆದರೆ ಅದನ್ನು ಸಾಧಿಸದಿರುವುದರಿಂದಮಾತ್ರ ಅಪರಿಮಿತ ಹಾನಿಯಾಗುವುದು.

ನಾನು ಯಾರು? ಎಲ್ಲಿಂದ ಬಂದೆನು? ನಾನು ಈ ವಿಧವಾಗಿ ಜನ್ಮವನ್ನೆತ್ತಿ ಸಂಸೃತಿಪ್ರವಾಹದೊಳು ಬಿದ್ದು ಹರಿದುಹೋಗುತ್ತಿರಲು ಕಾರಣವೇನು? ಕಡೆಗೆ ನಾನು ಎಲ್ಲಿಗೆ ಹೋಗಬೇಕಾಗಿರುವುದು? ಪ್ರತಿದಿನವೂ ಮಾನಸಿಕ ಶಾರೀರಕ ಕರ್ಮಗಳನ್ನು ಮಾಡಲೇಬೇಕಾದುದೆಂಬೀ ಕೋಟಲೆಯು ನನ್ನ ಬೆಂಬಿಡದಿರಲು ಕಾರಣವೇನಿರಬಹುದು? ಇವೆಲ್ಲದರ ನಿಯಂತೃತ್ವವು ಯಾರ ಕಡೆಗಿರುವುದು? ಅವನು ಇವೆಲ್ಲವನ್ನು ಮಾಡುವುದರಲ್ಲಿ ಹೇತುವೇನಿರಬಹುದು? ಎಂಬೀ ಮುಂತಾದುದರ ವಿಚಾರವಿಲ್ಲದವನು ಮನುಷ್ಯಕೋಟಿಯಲ್ಲಿ ಪರಿಗಣಿಸಲ್ಪಡುತ್ತಿರುವವನಾದರೂ ಮಾನವಜನ್ಮದ ಯೋಗ್ಯತೆಯನ್ನರಿಯದವನಾದುದರಿಂದ ಅವನಲ್ಲಿ ಮನುಷ್ಯತ್ವವಿರುವುದೆಂದು ಹೇಳಬಹುದೇನು? ಓರ್ವ ಹಿಂದೀಯ ಸಾಧುಪುರುಷನು :—

ಆದಮೀ ಆದಮೀ ಸಬ್ ಕೋಯಿ ಕಹೆ,
ಆದಮೀಕಾ ಬಡಾ ಸುಕಾಲ ಹೈ ।
ಮಗರ್ ಜಿಸ್ ಆದಮೀನೆ ಆದಮೀಪನ್ ಹೊ
ಉಸಕಾ ಬಡಾ ದುಕಾಲ ಹೈ ॥

ನಾನೂ ಮನುಷ್ಯನೇ, ನೀನೂ ಮನುಷ್ಯನೇ, ಎಂದು ಎಲ್ಲರೂ ತಾವು ಮನುಷ್ಯರೆಂದೇ ಎದೆ ತಟ್ಟಿ ಹೇಳುತ್ತಾರೆ; ಎಲ್ಲಿ ನೋಡಿದಠಲ್ಲಿ ಮನುಷ್ಯರ ಸುಗ್ಗಿಯೇ! ಆದರೆ, ಮನುಷ್ಯತ್ವವುಳ್ಳ ಮಾನವರ ಬರಗಾಲವಾದರೋ ಹೆಚ್ಚಾಗಿರುವುದು ಕಂಡುಬರುತ್ತದೆ: ಎಂಬುದಾಗಿ ಹೇಳಿರುವುದು ಮನನೀಯವಾಗಿದೆ.

ಮನುಷ್ಯಜನ್ಮದ ಮಹತ್ತ್ವವನ್ನರಿತು, ಅದರಿಂದ ಸಾಧಿಸಲ್ಪಡತಕ್ಕದ್ದು ಮುಖ್ಯವಾದುದು ಯಾವುದು? ಎಂಬೀ ಮುಂತಾದ ವಿಚಾರಪರಾಯಣನಾದವನಿಗೆ ಆಧ್ಯಾತ್ಮಿಕ ಜ್ಞಾನದಿಂದ ಈ ಮೇಲೆ ನಿರ್ದಿಷ್ಟವಾದ ಎಲ್ಲದರ ಜಿಜ್ಞಾಸೆಯು ತೃಪ್ತವಾಗಿ, ಆ ಮೂಲಕ ವಿಶಿಷ್ಟತರವಾದ ಮಾನಸಿಕ ಮತ್ತು ಶಾರೀರಕ ಸ್ವಾಸ್ಥ್ಯವು ಲಭಿಸುವುದು. ಉತ್ತಮವಿಷಯಕವಾದ ಜ್ಞಾನದಿಂದ, ಸಾಮಾನ್ಯವಾಗಿ ತೋರಲ್ಪಡುವ ಕ್ಷುಲ್ಲಕಪದಾರ್ಥಗಳಲ್ಲಿಯು ಕೂಡ ಎಷ್ಟು ಅಲೌಕಿಕತ್ವವು ತುಂಬಿದೆಯೆಂದೂ ಈ ನಾಮರೂಪಾತ್ಮಕ ವಿಶ್ವಪ್ರಪಂಚನಿರ್ಮಾಣದಲ್ಲಿ ಅವನು ತೋರಿಸಿದ ಕೌಶಲವು ಎಷ್ಟು ವಿಚಿತ್ರವಾಗಿರುವುದೆಂದೂ ಈ ಮುಂತಾದ ಪರಮೇಶ್ವರನ ಅಗಾಧವಾದ ಸಾಮರ್ಥ್ಯದ ವಿಷಯದಲ್ಲಿ ಮನುಷ್ಯನ ಬುದ್ಧಿವೃತ್ತಿಯು ಕುಂಠಿತವಾಗುವುದಲ್ಲದೆ, ತನ್ನಲ್ಲಿ ಅಹಂಮನ್ಯತೆಯು ಅಡಗಿ ಸಾರ್ವತ್ರಿಕವಾಗಿ, ಉತ್ಕಟವೂ, ಸಾತ್ವಿಕವೂ ಆದ ಭಾವನೆಯುಂಟಾಗುವುದು. ಮನುಷ್ಯನಿಗೆ ಒಮ್ಮೆ ಈ ಬಗೆಯ ಆಧ್ಯಾತ್ಮಿಕ ದೃಷ್ಟಿಯು ಪ್ರಾಪ್ತವಾಯಿತೆಂದರೆ ಅವನ ಬಲವೇ ಬೇರೆಯಾಗುತ್ತದೆ.

ಈಶ್ವರನಿರ್ಮಿತವಾದ ಈ ವಿಶ್ವಪ್ರಪಂಚವು ಆಧ್ಯಾತ್ಮಿಕಭಾವನೆಯುಳ್ಳವನನ್ನು ಬಾಧಿಸಲಾರದು. ಪ್ರಪಂಚವು ಅಂದರೆ, ನಾಮರೂಪಾತ್ಮಕವಿಸ್ತಾರವು. ಆಧ್ಯಾತ್ಮಿಕಭಾವನೆಯುಳ್ಳವನೆಂದರೆ, ಶಾಂಭವಜ್ಞಾನಸಂಪನ್ನನು. ಅಂತಪ್ಪ ಶಿವಜ್ಞಾನಿಗಾದರೂ ಶರೀರಾದಿಪ್ರಪಂಚವಿರುವುದಿಲ್ಲವೆಂತಲ್ಲ. ಆದರೂ ಅವನು ನಾಮರೂಪಾತ್ಮಕಗಳಾದ ಶರೀರಾದಿ ಆ ಅನಾತ್ಮಪದಾರ್ಥಗಳಲ್ಲಿ 'ನಾನು, ನನ್ನದು' ಎಂಬ ಅಹಂಕಾರ, ಮಮಕಾರರಹಿತನಾಗಿರುವುದರಿಂದ ಬಾಧಕವಿಲ್ಲ. ಆತ್ಮಾನಾತ್ಮವಿವೇಕಶೂನ್ಯರಾದ ಜಡವಾದಿಗಳಿಗಾದರೋ ಆ ಶರೀರಾದಿಪ್ರಪಂಚವು ಬಾಧಕವಾಗಿರುವುದು. ಅದುಕಾರಣವೇ, ಅಧ್ಯಾತ್ಮಸಂಸ್ಕಾರವೃತ್ತಿಯುಳ್ಳವನು ಯಾವಾಗಲೂ ತನ್ನಲ್ಲಿ ವಿವೇಕವು ಜಾಗರೂಕವಾಗಿರುವುದರಿಂದ ಧೈರ್ಯವುಳ್ಳವನೂ ಸಮಾಧಾನಿಯೂ ಆಗಿರುತ್ತಾನೆ. ದೇಹ ಮುಂತಾದ ಅನಾತ್ಮ (ಜಡ, ಅಸಾರ, ಭೌತಿಕ) ಪದಾರ್ಥಗಳಲ್ಲಿ 'ನಾನು, ನನ್ನದು' ಎಂಬ ತಾದಾತ್ಮ್ಯಬುದ್ಧಿಯುಳ್ಳವನಾದರೋ ಪ್ರಪಂಚವೋಹಿ ಎನಿಸುತ್ತಾನೆ, ಇಂತಹ ಮನುಷ್ಯನೇ ಸಂಸಾರಿಯು, ಸಂಸಾರಿಯೇ ಬದ್ಧನು; ಸಂಸಾರಿಯೆನಿಸುವ ಜೀವನಿಗೆ ಎಂದಿಗೂ ಶಾಂತಿಯೇ ಇಲ್ಲ. ಏಕೆಂದರೆ, ಪ್ರಾಪಂಚಿಕವಿಷಯಗಳ ಮೇಲಿನ ಮೋಹವು ಆತ್ಮನ ಸಾಹಜಿಕವಾದ ಶಾಂತಿಗೆ ಪ್ರತಿಬಂಧಕವಾಗಿದೆ. ಅದ್ದರಿಂದ, ಬಲ್ಲವರು 'ಮೋಹವೇ ಸಂಸೃತಿವೃಕ್ಷಕ್ಕೆ ಬೀಜ'ವೆಂದುಸುರುವರು. ಇದರಿಂದ ವನಿತಾದಿ ಪ್ರಾಪಂಚಿಕವಿಷಯಗಳು ಬಂಧಕಗಳಲ್ಲ, ಅವುಗಳ ಮೇಲಿನ ಮೋಹವೇ ಜೀವನ ಸಂಸಾರದೆಡೆಯಾಟಕ್ಕೆ ಹೇತುವೆಂಬುದು ಸಿದ್ಧವಾಗುತ್ತದೆ; ಹೊರಗೆ ತೋರಿಕೆಗೆ ಮಾತ್ರ ಹೆಂಡತಿ ಮಕ್ಕಳು ಮನೆ ಮುಂತಾದುದನ್ನು ಬಿಟ್ಟು ಬಿಡಾಡಿಗಳಾಗಿ ತಿರುಗಾಡುವವರೆಲ್ಲ 'ಇತೋಭ್ರಷ್ಟಸ್ತತೋಭ್ರಷ್ಟಃ' ಎಂಬಂತಾಗಲು ವಿಷಯಗಳಲ್ಲಿಯ ಮನೋಗತವ್ಯಾಮೋಹವನ್ನು ಬಿಡದಿರುವಿಕೆಯೇ ಕಾರಣವೆಂದು ಹೇಳುವ ಉದ್ದೇಶದಿಂದೇ ನಾವು ಬೋಧಂತಾಕರದಲ್ಲಿ—

ಹೆಸರಿಗೆ ನೀಂ ಸನ್ಯಾಸಿಯಲ್ಲದೇ ವಿರತಿಯೆಂಬುದೆಳ್ಳಷ್ಟಿಲ್ಲ।
ವಸುಧೆಯ ಮೇಲಣ ಧನವನಿತಾದಿವಿಷಯದಾಶೆಯನು ಬಿಟ್ಟಿಲ್ಲ॥

ಎಂಬುದಾಗಿ ನಿರೂಪಿಸಿದ್ದೇವೆ.

ಮೋಹವು ತೊಲಗಬೇಕಾದರೋ ದೋಷದೃಷ್ಟಿಯು ಬೇಕು. ಮೋಹವು ಅಂದರೆ ಯಾವುದಾದರೊಂದು ವಿಷಯದಲ್ಲಿ ಅದು ಸುಖಕ್ಕೆ ಸಾಧನವೆಂಬ ಭಾವನೆಯುಂಟಾಗುವಿಕೆಯು; ಅದೇ ವಿಷಯವೇ ನಮಗೆ ಪ್ರತಿಕೂಲವಾಗಿ ದುಃಖಕ್ಕೆ ಸಾಧನವೆಂದು ತಿಳಿಯಲ್ಪಟ್ಟಾಗಲೇ ಆ ವಿಷಯದಲ್ಲಿ ಮೋಹಕ್ಕೆ ವಿರುದ್ಧವಾದ ದ್ವೇಷರೂಪವಾದ ದೋಷದೃಷ್ಟಿಯುಂಟಾಗುವುದು. ಪ್ರತಿಯೊಂದು ವಿಷಯವೂ ಯಾವಾಗಲೂ ಸುಖಕ್ಕೇನೇ ಸಾಧನವಾಗಿರುವುದೆಂದು ಹೇಳಲಾಗುವುದಿಲ್ಲ; ಇಷ್ಟೇ ಅಲ್ಲ, ಜಗತ್ತಿನಲ್ಲಿ ಆನಂದನಿಧಿಯಾದ ಪರಶಿವನ ಹೊರತು ಮಿಕ್ಕ ಯಾವ ವಿಷಯಗಳಾದರೂ ಅನಿತ್ಯ, ಜಡ, ದುಃಖರೂಪಗಳಾದುದರಿಂದ ಅವೆಲ್ಲವೂ ಸುಖರೂಪಗಳೂ ಅಲ್ಲ, ಸುಖಕ್ಕೆ ಸಾಧನಗಳಂತೂ ಅಲ್ಲವೇ ಅಲ್ಲ.

ವಿಷಯಗಳು ಸುಖರೂಪಗಳಾಗಿರದಿದ್ದರೆ ಹೋಗಲಿ, ಸುಖಕ್ಕೆ ಸಾಧನಗಳೂ ಆಗಲಾರವೋ? ಹಾಗಲ್ಲದ ಪಕ್ಷದಲ್ಲಿ ದೊಡ್ಡದೊಡ್ಡ ಪಂಡಿತರೆನಿಸಿಕೊಳ್ಳುವ ಭೌತಿಕಸುಖವಾದಿಗಳು ದಡ್ಡರೇನು? ಎಂದರೆ, ಅವರಿಗೆ ನಾವು ದಡ್ಡರೆಂದು ಹೇಳಲಾರೆವು. ಆದರೆ ವಿಷಯಗಳೇ ಸುಖಕ್ಕೆ ಸಾಧನಗಳೆಂದು ಅವರು ಛಲವಾದಿ (ಹಠವಾದಿ) ಗಳಾದರೆ ಮಾತ್ರ ಅವರನ್ನು, ಮಳಲನ್ನು ಗಾಣದಲ್ಲಿ ಹಾಕಿ ಅದರಿಂದ ಎಣ್ಣೆಯನ್ನು ತೆಗೆದು ಹಣವನ್ನು ಗಳಿಸಿ ಸುಖಿಯಾಗುವೆನೆಂಬ ಅರೆಮರುಳನ ಸಹಾಧ್ಯಾಯಿಗಳೆಂದು ತಿಳಿಯದಿರಲಾರೆವು. 'ಸುಷ್ಯತು ದುರ್ಜನಃ' ಎಂಬನ್ಯಾಯದಂತೆ, ವಿಷಯಗಳಿಂದ ಸುಖವುಂಟೆಂದೊಪ್ಪಿದರೂ, ತನ್ಮೂಲಕ ಈ ಜಗತ್ತಿನಲ್ಲಿ ಯಾವನು ತಾನೇ ಕೃತಾರ್ಥನಾಗಿದ್ದಾನೆ? ಮತ್ತು ವಿಷಯಸುಖವು ಹಂಗಿನದು. ವಿಷಯಗಳೂ ಅವುಗಳನ್ನು ಪಭೋಗಿಸತಕ್ಕ ಇಂದ್ರಿಯಾದಿಗಳೂ ಒಂದೇ ಕಾಲದಲ್ಲಿ ಸರಿಯಾಗಿ ಇದ್ದರೇನೇ ಅಲ್ಲವೇ ವಿಷಯಸುಖವು? ಹಾಗಿದ್ದರೂ ಮನುಷ್ಯನ ಮನಸ್ಸು ಯಾವಾಗಲೂ ಒಂದೇ ಬಗೆಯ ಒಂದೇ ವಿಷಯದ ಇಚ್ಛೆಯುಳ್ಳದ್ದಾಗಿಯೂ ಅದೊಂದನ್ನೇ ತನಗೆ ಸುಖಸಾಧನವಾದುದೆಂಬುದಾಗಿಯೂ ನಂಬುವುದೇ? ವಿಷಯಗಳಾದರೋ ಆ ಬಗೆಯ ವಿಶ್ವಾಸಕ್ಕೆ ಪಾತ್ರವಾಗಿವೆಯೇ? ಈ ದಿವಸ ಯಾವ ವಿಷಯವು ಸುಖಸಾಧನವಾದುದೆಂದು ತಿಳಿಯಲ್ಪಡುವುದೋ ಮರುದಿವಸವೇ ಇಷ್ಟೇ ಅಲ್ಲ, ಮರುಗಳಿಗೆಯಲ್ಲಿಯೇ ಅದೇ ವಿಷಯವು ತನಗೆ ದುಃಖವನ್ನುಂಟುಮಾಡುವುದೆಂಬುದಾಗಿ ಮೋಹವಿದ್ದೆಡೆಯಲ್ಲಿ ದೋಷದೃಷ್ಟಿಯು ಬಂದು ಕುಳಿತುಕೊಳ್ಳುವುದು. ಹೀಗೆಯೇ ವಿಷಯಗಳು ನಿಯತಗಳಾದ ಸುಖಸಾಧನವಾದವುಗಳೆಂದು ಯಾವನೂ ಸಿದ್ಧಮಾಡಲಾರನು.

ಗುದ್ದಿಸಿಕೊಳ್ಳುವುದೂ ಒಂದು ಸುಖಸಾಧನವೇ? ಅಲ್ಲ. ಹಾಗಿದ್ದರೆ ಒಬ್ಬರಿಗೊಬ್ಬರು ಹೊಡೆದಾಡುವುದರಿಂದ ಸುಖವುಂಟೆಂದು ತಿಳಿಯಬಹುದಾಗಿದ್ದಿತಲ್ಲವೇ? ವಾತರೋಗಿಯಾದರೋ ಮೋಡಮುಸುಕಿ ತಂಗಾಳಿ ಬೀಸುವ ದಿನದಲ್ಲಿ, ಗುದ್ದಿಸಿಕೊಳ್ಳುವದರಿಂದೇ ತನಗೆ ಸುಖವುಂಟೆಂದು ಹೇಳುತ್ತಾನೆ. ಅವನ ಹೇಳಿಕೆಯಂತೆ ಮಿಕ್ಕವರೂ ಗುದ್ದಿಸಿಕೊಳ್ಳುವುದರಿಂದೇ ಸುಖವುಂಟೆಂದು ಭಾವಿಸಿ ಆ ಕೆಲಸದಲ್ಲಿ ತೊಡಗಿದವರುಂಟೇ? ಹಾಗೇ ಅಜ್ಞಾನ ಇಲ್ಲವೆ ವಿಷಯವ್ಯಾಮೋಹವೆಂಬ ರೋಗಪೀಡಿತರು ಕಷ್ಟಕರಗಳಾದ ವಿಷಯಗಳನ್ನೇ ಸುಖಸಾಧನಗಳೆಂದು ಸಾರುತ್ತಿರುವುದು ಸೋಜಿಗವಲ್ಲ.

ಅಗ್ನಿಗತಜ್ವರವು ಅರುಚಿ, ಬಾಯಾರಿಕೆ ಮೊದಲಾದ ವಿಕಾರಗಳಿಂದರಿಯಲ್ಪಡುತ್ತಿರುವಂತೆ, ಮನುಷ್ಯನ ಮನೋಗತವಾದ ವಿಷಯವ್ಯಾಮೋಹವು ಅನುಕೂಲಪ್ರತಿಕೂಲಗಳ ಸಂದರ್ಭಗಳಲ್ಲಿ ರಾಗದ್ವೇಷಾದಿಗಳ ಮೂಲಕ ತಿಳಿಯಲ್ಪಡುತ್ತದೆ. ಆ ಜ್ವರರೋಗಪೀಡಿತನ ಬಾಯಾರಿಕೆಯು ಅವನು ಬೇಡಿದ ಹಾಗೆಲ್ಲ ತಣ್ಣೀರನ್ನು ಕೊಡುತ್ತ ಹೋದರೇನೇ ಅವನಿಗೆ ಸುಖವುಂಟಾಗುವುದೆಂದು ಹೇಳುವುದು ತಪ್ಪು. ಹಾಗೇ ಆತ್ಮನನ್ನು ಅಂಟಿಕೊಂಡಿರುವ ಅಜ್ಞಾನ (ಮೋಹ) ರೂಪವಾದ ಅಗ್ನಿಗತ ಜ್ವರನಿವೃತ್ತಿಗೆ ಉಪಾಯವಾವುದೋ ಅದನ್ನು ಯೋಚಿಸದೆ ವಾಸನಾರೂಪ ಬಾಯಾರಿಕೆಯನ್ನು ಕಳೆಯುವುದಕ್ಕೆಂದು ಮನಸ್ಸು ಬೇಡಿದ ಹಾಗೆಲ್ಲ ವಿಷರೂಪವಾದ ಸೀತಾಳವನ್ನೊದಗಿಸಿಕೊಡಲು ವಾಸನಾರೂಪ ಬಾಯಾರಿಕೆಯು ಮತ್ತಷ್ಟು ಹೆಚ್ಚಾಗುತ್ತಲಿರುವುದೆಂಬ ಸಂಗತಿಯು ಸರ್ವಾನುಭವಸಿದ್ಧವಾಗಿರುವುದು. ಮತ್ತು ಪುರಾತನರಾದ ಬ್ರಹ್ಮರ್ಷಿಗಳೂ ರಾಜರ್ಷಿಗಳೂ ಈ ಬಗ್ಗೆ ತಮ್ಮ ಅನುಭವಸಿದ್ಧವಾದ ವಚನಗಳಿಂದ ಚೆನ್ನಾಗಿ ಬೋಧಿಸಿದ್ದಾರೆ. ಪೂರ್ವಕಾಲದಲ್ಲಿ ಸಪ್ತರ್ಷಿಗಳು ತಪಸ್ಸನ್ನಾಚರಿಸುತ್ತ ಸಂಚರಿಸುತ್ತಿರಲು, ದೈವವಶದಿಂದ ಒಮ್ಮೆ ಅನಾವೃಷ್ಟಿಮೂಲಕ ಬರಗಾಲವೊದಗಿತು; ಆದರೂ ಆ ಮಹರ್ಷಿಗಳು ಅಲ್ಲಲ್ಲಿ ಅಲ್ಪಸ್ವಲ್ಪವಾಗಿ ಸಿಕ್ಕ ಕಂದಮೂಲಾದಿಗಳ ಸೇವನೆಯಿಂದೇ ಸಂತುಷ್ಟರಾಗಿ ತಮ್ಮ ಧಾರ್ಮಿಕಾನುಷ್ಠಾನದಲ್ಲಿ ಆಸಕ್ತರಾಗಿರಲು, ವೃಷಾದರ್ಭಿಯೆಂಬ ರಾಜನು ಅವರ ಬಳಿಗೆ ಬಂದು ಭೂರಿ ಧನ ಮುಂತಾದುದನ್ನು ಅವರಿಗೆ ಅರ್ಪಿಸಲು ಸಿದ್ಧನಾಗಿದ್ದರೂ ಕೂಡ ಆ ತಪಸ್ವಿಗಳು ಅದನ್ನು ನಿರಾಕರಿಸಿ ತಮಗೆ ಪರಮೇಶ್ವರನು ಅನುಕೂಲಮಾಡಿಕೊಟ್ಟಿದ್ದುದರಲ್ಲಿಯೇ ಸಂತೃಪ್ತರಾಗಿ ಹೆಚ್ಚಿನ ವಿಷಯಗಳಾಶೆಯನ್ನು ತೊರೆದು, ತಮ್ಮ ಆತ್ಮೋನ್ನತಿಗೆ ಮುಖ್ಯ ಸಾಧನವಾದ ಸದ್ಧರ್ಮಾನುಷ್ಠಾನವೊಂದು ಅವ್ಯಾಹತವಾಗಿ ಸಾಗಿದರೆ ಸಾಕೆಂಬ ನಿಶ್ಚಿತವೃತ್ತಿಯುಳ್ಳವರಾಗಿದ್ದುದರಿಂದೇ ಅವರ ಬಾಯಿಂದ—

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ಸರ್ವಂ ತನ್ನಾಲಮೇಕಸ್ಯ ತಸ್ಮಾದ್ವಿದ್ವಾಂಚ್ಛಮಂ ಚರೇತ್ ॥

ಪೃಥಿವಿಯೊಳಗಿನ ನೆಲ್ಲು ಇಲ್ಲವೆ ಜವೆ, ಬಂಗಾರ, ಪಶುಗಳು, ಸ್ತ್ರೀಯರು ಎಂಬೀ ವಸ್ತುಗಳೆಷ್ಟಿರುವುವೋ ಅವೆಲ್ಲವೂ ಒಬ್ಬನ ಸುಖವಾಸನೆಗಳನ್ನು ಕೂಡ ತೃಪ್ತಿಪಡಿಸಲಾರವು. ಅದ್ದರಿಂದ ವಿದ್ವಾಂಸನು ಮನೋನಿಗ್ರಹದಿಂದ ಶಾಂತಿಯನ್ನು ಪಡೆಯತಕ್ಕದ್ದು; ಎಂಬ ವಾಕ್ಯಗಳು ಹೊರಬಿದ್ದವು. ಈ ವಿಷಯವು ಮಹಾಭಾರತದಲ್ಲಿ ಅನುಶಾಸನಪರ್ವದ ೯೩ ನೆಯ ಅಧ್ಯಾಯದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಮತ್ತು, ಆದಿಪರ್ವದ ೭೫ ನೆಯ ಅಧ್ಯಾಯದಲ್ಲಿರುವ ಯಯಾತಿಯ ಕಥೆಯಾದರೂ ಬೋಧಪ್ರದವಾಗಿದೆ. ಯಯಾತಿಯು ತನ್ನ ಮಗನ (ಪುರುವಿನ) ಯೌವನವನ್ನು ತೆಗೆದುಕೊಂಡು, ಬಹುಕಾಲದ ವರೆಗೆ ವಿಷಯಸೌಖ್ಯವನ್ನನುಭವಿಸಿಯೂ ಕೊನೆಗೆ ತೃಪ್ತನಾಗದೆ ಮರಳಿ ಮಗನಿಂದ ತನ್ನ ಮುಪ್ಪನ್ನು ತೆಗೆದುಕೊಂಡು ತನಗೆ ಅನುಭೂತವಾದ ವಿಷಯದಬಗ್ಗೆ ಹೀಗೆ ನುಡಿದಿರುವನು—

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

ವಿಷಯಗಳುಪಭೋಗದಿಂದ ವಿಷಯವಾಸನೆಯು ತೃಪ್ತವಾಗದೆ, ಹವನದ್ರವ್ಯದಿಂದ ಅಗ್ನಿಯು ಪ್ರಜ್ವಲಿತವಾಗುವಂತೆ ಉಪಭೋಗದಿಂದ ಅದು ಮತ್ತಷ್ಟು ಹೆಚ್ಚಾಗುವುದು. (ಈ ಶ್ಲೋಕವು ಮನುಸ್ಮೃತಿಯಲ್ಲಿಯೂ, ಗೀತೆಯಲ್ಲಿಯೂ ಬಂದಿದೆ.)

ವಿಷಯವಾಸನೆಯೆಂಬ ಕೊಳಬಕ್ಕನಾಳಾಗಿರುವ ಸಹಸ್ರಾಧಿಪನೇನು, ಸಾಹುಕಾರನೇನು, ಸಾರ್ವಭೌಮನೇನು, ಇಂದ್ರನೇನು, ಯಾರಿಗೂ ಶಾಂತಿಯೆಂಬುದೇ ಇಲ್ಲ. ಈ ಜಗತ್ತಿನಲ್ಲಿ ವಿಷಯವ್ಯಾಮೋಹವಿಲ್ಲದ ಶಿವಜ್ಞಾನಿಯೋರ್ವನೇ ಅಚ್ಚಸುಖಿಯು. ಇದಕ್ಕೆ ವಿಪರೀತವಾಗಿ, ಕುಕ್ಕಿ ತುಂಬ ಕೂಳನುಂಡು ಚಕ್ಕುತ್ತುಂಬ ನಿದ್ದೆಮಾಡಿ ಇಕ್ಕುಚಾಪನಾಟದಲ್ಲಿ ಕಾಲಕಳೆಯುವುದೇ ಅಚ್ಚಸುಖವೆಂಬುದಾಗಿ ಬಡಬಡಿಸುವ ಹುಚ್ಚುಮಾನಸರೀಗ ಹೆಚ್ಚಾಗುತ್ತಲಿದ್ದಾರೆ. ಮನವೆಳಸಿದ ವಿಷಯಗಳನ್ನು ಮನವಾರೆ ಉಪಭೋಗಿಸಲು ಅನುಕೂಲಗಳಾದ ಸಾಧನಸಾಮಗ್ರಿಗಳು ಎಲ್ಲಿನೋಡಿದಠಲ್ಲಿ ಹೇಗೆಬೇಕೋ ಹಾಗೆ ದೊರೆಯುತ್ತಿರುವ ಈಗಿನ ಕಾಲವೇ ಸುಧಾರಿಸಿದ ಕಾಲವಂತೆ! ಹಿಂದಿನಕಾಲದ ಹಿಂದುಗಳ ಮಿದುಳು ಮದಡವಾಗಿದ್ದಿತಂತೆ! ಅಯ್ಯೋ ಅಜ್ಞಾನವೇ!

ಗುಡ್ಡವನ್ನೆಲ್ಲ ಕೋಡಿ (ಅಗಿದು) ಕಡೆಗೆ ಒಂದು ಇಲಿಯನ್ನು ಸಂಪಾದಿಸಿದನೆಂಬ ಗಾದೆಯವಳತಿನಂತೆ, ನೆಲ, ನೀರು, ಬೆಂಕಿ, ಗಾಳಿ ಮುಂತಾದ ಜಡಪದಾರ್ಥಗಳನ್ನೆಲ್ಲ ಮಥಿಸಿ ವಿಷಯೋಪಭೋಗದ ಎಷ್ಟು ಸಾಮಗ್ರಿಗಳನ್ನು ಹೆಚ್ಚಿಸಿದರೂ ಕಡೆಗೆ ಅದರಿಂದ ಸುಖಾಭಾಸವಮಾತ್ರ ದೊರೆವಂತಾಗುವುದಲ್ಲದೆ ನಿಜವಾದ ಸುಖವು ಲಭಿಸುವುದುಂಟೇ? ವಿಷಯಜನ್ಯ ಸುಖಾಭಾಸಕ್ಕೂ ನಿರ್ವಿಷಯ ರೂಪವಾದ ನಿಜಾನಂದಕ್ಕೂ ಪಡುವಣ, ಮೂಡಣ, ಹುಣ್ಣಿಮೆ, ಅಮವಾಸೆಗಳಿಗಿರುವಷ್ಟು ವ್ಯತ್ಯಾಸವಿದೆ. ರೋಗಿಯ ಎದುರಿಗೆ ಅಪಥ್ಯಪದಾರ್ಥಗಳನ್ನಿರಿಸಿದರೆ, ಮೊದಲೇ ಬಾಯಿಸವಿಗೆಳಸುವ ಅವನು ಅವುಗಳನ್ನು ತಿನ್ನದಿರುವನೇ? ತಿಂದಬಳಿಕ ರೋಗವು ಉಲ್ಬಣವಾಗದಿರುವುದೇ? ಹಾಗೇ, ವಿಷಯಗಳಲ್ಲಿ ಪ್ರವೃತ್ತಿಸುವುದೇ ಸ್ವಾಭಾವಿಕವಾದ ಮನೋವೃತ್ತಿಯುಳ್ಳ ಜೀವರಿಗೆ ಅವರಿಷ್ಟಪ್ರಕಾರವಾಗಿ ವಿಷಯೋಪಭೋಗಸಾಧನೆಗಳನ್ನು ಕಲ್ಪಿಸಿಕೊಟ್ಟ ಹಾಗೆಲ್ಲ ಅವರ ಸಂಸೃತಿರೋಗವು ಹೆಚ್ಚಾಗುವುದರಿಂದ ಅವರು ನಿಜಾನಂದಕ್ಕೆ ದೂರವಾಗುವರೆಂಬಲ್ಲಿ ಸಂದೇಹವೇ ಇಲ್ಲ. ಇದರಿಂದ, ಭೌತಿಕ ಸುಖವಾದಿಗಳನ್ನು 'ಸ್ವಯಂನಷ್ಟಃ ಪರಂನಾಶಯತಿ' ಎಂಬ ನಾಣ್ನುಡಿಗೆ ಗುರಿಯಾದವರೆಂದು ಹೇಳಬಾರದೇಕೆ? ಈಗಲಾದರೋ ಎಲ್ಲರೂ ವಿಮಾನದಲ್ಲಿ ಕುಳಿತು ವಿಹರಿಸುವಕಾಲವೆಂದು ಬಹುಜನರು ಹಿಗ್ಗಿರುವರು. ಮುಂದೆ ಇದಕ್ಕಿಂತ ಮಿಗಿಲಾದ ವ್ಯಾವಹಾರಿಕ ಸೌಕರ್ಯಗಳೊದಗಿಸಲ್ಪಡುವುವಾದರೂ ಅಷ್ಟುಮಾತ್ರದಿಂದೇ ಜೀವರು ತೃಪ್ತರಾಗುವುದಕ್ಕೆ ಬದಲಾಗಿ ಅದಕ್ಕಿಂತ ಹೆಚ್ಚಿನ ಸೌಕರ್ಯಗಳನ್ನು ಕಂಡುಹಿಡಿಯುವುದಕ್ಕೋಸ್ಕರ ಈಗಿನಂತೆಯೇ ಹೆಣಗಾಡುವವರಾಗಿ, ಮತ್ತು ಅಚ್ಚಸುಖದ ದಾರಿಯನ್ನೇ ಬಿಟ್ಟು ಬಹುವಿಧವಾದ ಕೋಟಲೆಯಿಂದ ಬಳಲುವರೆಂಬ ಭವಿಷ್ಯವನ್ನು ಈಗಲೇ ಹೇಳಲಭ್ಯಂತರವೇನು?

ಹೂವು, ಗಂಧ, ಹೆಣ್ಣು ಮುಂತಾದ ವಿಷಯಜನ್ಯ ಸುಖವನ್ನೇ ಮುಖ್ಯವಾದ ಧ್ಯೇಯವೆಂಬ ಭಾವನೆಯುಳ್ಳವರು ಕೇವಲ ಸ್ವಾರ್ಥಿಗಳಾಗಿ ವ್ಯವಹರಿಸುತ್ತಾರೆ. ಇವರು ತಮ್ಮ ವಿಷಯೋಪಭೋಗಕ್ಕೆ ಸ್ವಲ್ಪವಾದರೂ ಕೊರತೆ ಬರಬಾರದೆಂಬ ಹೇತುವಿನಿಂದ ಹಗಲಿರುಳೆನ್ನದೆ ಆ ಬಗ್ಗೆ ಬಹು ಶ್ರಮಪಟ್ಟು ಸ್ವಕಾರ್ಯವನ್ನು ಸಾಧಿಸಿಕೊಳ್ಳುವುದರಲ್ಲಿಯೇ ಮುಂದುವರಿಯುತ್ತಿರುವರು. ಇಂಥವರಿಗೆ ಧಾರ್ಮಿಕ ವಿಚಾರವೆಂದರೆ ಗೊತ್ತೇ ಇರುವುದಿಲ್ಲ. ಪ್ರಸಂಗಾನುಸಾರವಾಗಿ ಯಾರಾದರೂ ಆ ವಿಷಯಕವಾಗಿ ಒಂದೆರಡು ಮಾತುಗಳನ್ನು ಪ್ರಸ್ತಾಪಿಸಿದರೆ ಅದನ್ನು ಇವರು ಕಿವಿಯಲ್ಲಿಯೇ ಹಾಕಿಕೊಳ್ಳುವುದಿಲ್ಲ; ಅಕಸ್ಮಾತ್ತಾಗಿ ಕಿವಿಗೆ ಬಿದ್ದರೂ ಆ ಬಹಿರ್ಮುಖರು—ಧರ್ಮ, ಧರ್ಮವಂತೆ! ಗೊಡ್ಡುಧರ್ಮವು; ಅದರಲ್ಲೇನಿದೆ ಹುರುಳು? ಧರ್ಮವು ಅಂದರೆ, ಅದೊಂದು ಬಗೆಯ ಮಾದಕದ್ರವ್ಯದಂತಿರುವುದು; ಎಂದು ಹೀಯಾಳಿಸುವರು. ಇಷ್ಟೇ ಅಲ್ಲ, ದುಡಿಯಲಾರದ ಸೋಮಾರಿಗಳೂ ವ್ಯಾವಹಾರಿಕಜ್ಞಾನವಿಲ್ಲದ ಮುದುಕರೂ ಏನೇನೋ ಭಾವಿಸಿಕೊಂಡು ಬರೆದಿಟ್ಟಿರುವ ಕೆಲಸಕ್ಕೆಬಾರದ ಮಾತುಗಳಿಗೆ 'ಶಾಸ್ತ್ರ' ಗಳೆಂದೂ ಅವುಗಳಿಂದ ಪ್ರತಿಪಾದಿಸಲ್ಪಡುವುದೇ ಧರ್ಮವೆಂದೂ ತಿಳಿಯುವುದು ನಮ್ಮಂಥ ಸುಶಿಕ್ಷಿತರಿಗೊಪ್ಪತಕ್ಕದ್ದಲ್ಲ, ಎಂಬುದಾಗಿ ಬರಹದಿಂದ ಹುರುಬುಗೊಳಿಸುತ್ತಲೂ ಇದ್ದಾರೆ. ಆರ್ಯಸಂಸ್ಕೃತಿಗೆ ದೂರವಾಗಿರತಕ್ಕವರ ಬಾಯಿಂದ ಈ ತೆರದ ನುಡಿಗಳು ಹೊರಡುವುದು ನ್ಯಾಯವಾದುದೇ ಸರಿ. ಆದರೆ ಯಾರಿಗೆ ಪರಮ ಪುರುಷಾರ್ಥವೇ ತಮ್ಮ ಮುಖ್ಯವಾದ ಧ್ಯೇಯವಾಗಿದ್ದಿತೋ ಅಂತಪ್ಪ ಆರ್ಯರ ವಂಶೀಯರೆಂದು ಹೇಳಲ್ಪಡುವವರು ಕೂಡ ವಿಷಯಾಸಕ್ತಿಯಿಂದ ಕಂಗೆಟ್ಟು ಕಂಗಾಲರಾಗಿ ತಾವು ಯಾರೆಂಬುದರ ಪರಿವೆಯಿಲ್ಲದೆ ಮನಬಂದಂತೆ ವ್ಯವಹರಿಸುತ್ತಿರುವರಲ್ಲಾ! ಅವರು ಇನ್ನಾದರೂ ತಮ್ಮ ಹಿರಿಯರ—

ಪತಿತಃ ಪಶುರಪಿ ಕೂಪೇ ನಿಃಸರ್ತುಂ ಚರಣಚಾಲನಂ ಕುರುತೇ ।
ಧಿಕ್ ತ್ವಾಂ ಚಿತ್ತ ಭವಾಬ್ಧೇರಿಚ್ಛಾಮಪಿ ನೋ ಬಿಭರ್ಷಿ ನಿಃಸರ್ತುಮ್ ॥

ಎಂಬುದಾಗಿರುವ ಹಿತೋಪದೇಶವಚನವನ್ನು ಮುಂದಿರಿಸಿಕೊಂಡು ತಮ್ಮ ಮನಸ್ಸಿಗಾದರೂ ತಾವೇ ಬುದ್ಧಿಯನ್ನು ಹೇಳಿಕೊಳ್ಳುವುದೊಳಿತಲ್ಲವೇ?

ಮಿತಿಮೀರಿ ವಿಷಯವಾಸನಾರೂಪ ಪ್ರವಾಹದಲ್ಲಿ ಧುಮುಕಿರುವ ಈ ಕಾಲದಲ್ಲಿಯ ಜನದ ಸ್ಥಿತಿಯು ಒಡಲು ತುಂಬಿ ಹರಿಯುವ ಹೊಳೆಯ ಸೆಳವಿಗೆ ಸಿಲ್ಕಿದವನ ಪರಿಯಂತಿರುವುದು. ವೃಕಾಗ್ನಿಯೆಂಬ ದೋಷದೂಷಿತವಾದ ಹೊಟ್ಟೆಯುಳ್ಳವನಿಗೆ ಹಸಿವು ಹಿಂಗದಿರುವಂತೆ, ವಿಷಯವಾಸನಾದೋಷದೂಷಿತ ವೃತ್ತಿಯುಳ್ಳವರಿಗಾದರೂ ತೃಪ್ತಿಯೆಂಬುದು ಎಂದಿಗೂ ಸಂಭವಿಸದು. ದೇವಾಸುರರೊಂದುಗೂಡಿ ಜಲಮಥನ ಮಾಡಿದರೂ ಕೂಡ ಅವರ ಪ್ರಯತ್ನಕ್ಕೆ [illegible]ಯಾಗಿ ಕೆಲವು ವಿಷಯೋಪಭೋಗಸಾಮಗ್ರಿಗಳು ಲಭಿಸಿದವು. ಆದರೂ ಅವರು ಅಷ್ಟಕ್ಕೇ ಹಿಂದಕ್ಕೆ ಸರಿಯದೆ ಮತ್ತು ಕಡಲನ್ನು ಕಡೆದುದರಿಂದ ಕಡೆಗೆ ವಿಷ (ದುಃಖ)ರೂಪ ಫಲವನ್ನು ಅನುಭವಿಸಬೇಕಾಯಿತಲ್ಲವೇ? ಹಾಗೇ ಜಡವೂ ಅನಿತ್ಯವೂ ಆದ ಅಸಾರರೂಪಗಳಾದ ಅನಾತ್ಮಪದಾರ್ಥಗಳ ಮಥನಾಸಕ್ತರಾಗಿ ತೃಪ್ತಿಪಡೆಯದೆ ದಿನದಿನಕ್ಕೆ ಹೆಚ್ಚಾಗಿ ವಿಷಯೋಪಭೋಗಸಾಮಗ್ರಿಗಳನ್ನೇ ಕಂಡುಹಿಡಿಯಲು ಯತ್ನಿಸುತ್ತಿರುವವರ ಗಡಿಬಿಡಿಯ ಗದ್ದಲದ ಸದ್ದು ಇಂದಿಲ್ಲ ಮುಂದೆ ಕೆಲವೆಡೆಯಲ್ಲಾದರೂ ಕ್ರಮೇಣ ಅಡಗಬಹುದು. ಆಗಲಾದರೂ ಜಡವಾದಿಗಳು, ಓಹೋ! ನಾವು ದಾರಿಯನ್ನೇ ತಪ್ಪಿದ್ದೇವೆ ಎಂದೆಚ್ಚತ್ತು, ಅಚ್ಚಸುಖವು ದೊರೆವ ದಾರಿಯಕಡೆ ಹೊರಳದಿರಲಾರರು. (ಸಶೇಷ)

ಕುಣಿಗಲ್ ತಾಲ್ಲೂಕು ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಯವರ ರಥೋತ್ಸವವೂ ಮತ್ತು ದನಗಳ ಪ್ರದರ್ಶನವೂ.

ಶ್ರೀ ಸ್ವಾಮಿಯವರ ಜಾತ್ರೆ ರಥೋತ್ಸವವು ಪದ್ಧತಿಯಂತೆ ಶ್ರೀಮುಖನಾಮಸಂವತ್ಸರದ ಚೈತ್ರ ಶುದ್ಧ ೭ ತಾರೀಕು 2-4-33 ನೆಯ ಭಾನುವಾರ ವಿಜೃಂಭಣೆಯಿಂದ ನಡೆಯಿತು. ಅಸೂಯಾಪರರಾದ ಯಾರೋ ಕೆಲವು ಜನ ದುಷ್ಟರು ಈ ವರುಷ ಜಾತ್ರೆ ನಡೆಯುವುದಿಲ್ಲವೆಂಬ ಸುಳ್ಳು ಸುದ್ದಿಯ ಕಾರಣಗಳನ್ನು ಹುಟ್ಟಿಸಿ ಪ್ರಚಾರಗೊಳಿಸಿದರೆಂಬ ವರ್ತಮಾನ. ಆದರೇನು? ಈ ದುರಾತ್ಮರ ಮನೋರಥವು ಅಷ್ಟಾಗಿ ನೆರವೇರಿದಂತಾಗಲಿಲ್ಲ. ರಥೋತ್ಸವದ ದಿನ ಜನಸಾಮಾನ್ಯ, ಅನಂತರ ಎಂದಿನಂತೆ ಅಸಂಖ್ಯಾತ ಭಕ್ತವೃಂದವು ತಂಡೋಪತಂಡವಾಗಿ ಬಂದು ಸೇರಿತು. ಮತ್ತು ಜಾತ್ರೆಗೆ ಈ ವರುಷ ಸುಮಾರು 5-6 ಸಾವಿರದ ವರೆಗೂ ದನಗಳು ಸೇರಿದ್ದವು. ತಾ|| 3-4-33 ರಲ್ಲಿ ಕುಣಿಗಲ್ ತಾ|| ವೆಟರನರಿ ಡಾಕ್ಟರ್‌ರವರ ಪ್ರಮುಖತೆಯಲ್ಲಿ ಒಂದು ಕಮಿಟಿಯು ಏರ್ಪಟ್ಟು ಉತ್ತಮ ಜಾತಿ ರಾಸುಗಳ ಚುನಾವಣೆಯ ಕೆಲಸವು ನಡೆಯಿತು. ತಾ|| 4-4-33 ನೆಯ ಮಂಗಳವಾರ ಪ್ರಾತಃಕಾಲ 9 ಘಂಟೆಗೆ ಜಾತ್ರೆ ಆವರಣದಲ್ಲಿ ಸುಂದರವಾಗಿ ಕಟ್ಟಲ್ಪಟ್ಟಿರುವ ರೆಸ್ಟ್‌ಹೌಸ್ (ವಿಶ್ರಾಂತಿಗೃಹ) ಮುಂಭಾಗದಲ್ಲಿ ತಾಲ್ಲೂಕು ಅಮಲ್ದಾರ್ ಸಾಹೇಬರವರಾದ ಮ|| ರಾ|| ಸಿ. ಕೆ. ಚೆಲ್ಲಪ್ಪ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆಯಿತು. ಈ ಸಭೆಗೆ ಜಾತ್ರೆ ಡ್ಯೂಟಿಗಾಗಿ ದಯಮಾಡಿಸಿದ್ದ ಮ|| ರಾ|| ಅಮೃತೂರು ಸಬ್ ಅಸಿಸ್ಟೆಂಟ್ ಸರ್ಜನ್‌ರವರು ಕುಣಿಗಲ್ ವೆಟರಿನರಿ ಡಾಕ್ಟರ್‌ರವರು ಕೋ-ಅಪರೇಟಿವ್ ಮತ್ತು ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳು, ಅಸೆಂಬ್ಲಿ ಮತ್ತು ತುಮಕೂರು ಡಿ|| ಬೋ|| ಮೆಂಬರ್, ಮ|| ರಾ|| ಬಾಳೇಗೌಡರು, ಮೈಸೂರು ಡಿ|| ಬೋ|| ಮೆಂಬರ್ ಮ|| ರಾ|| ಎಸ್. ಅಬ್ದುಲ್ ಅಜೀಜ್ ಸಾಹೇಬರು, ಶ್ರೀ ಸ್ವಾಮಿದೇವಸ್ಥಾನದ ಧರ್ಮದರ್ಶಿಗಳ ಕಮಿಟಿಯವರು ದಯಮಾಡಿಸಿದ್ದರಲ್ಲದೆ, ಇನ್ನೂ ಅನೇಕ ಮುಖಂಡರು ದಯಮಾಡಿಸಿದರು. ದನಗಳವ್ಯಾಪಾರಸ್ಥರು, ಇತರರು ಸಹ 1000, ಜನಗಳವರೆಗೆ ಸೇರಿತ್ತು. ಕಾಲಾನುಗುಣವಾದ ಉಪನ್ಯಾಸಗಳು ಮಾಡಲ್ಪಟ್ಟವು. ಅನಂತರ ಕಮಿಟಿಯವರಿಂದ ಮೊದಲೇ ಚುನಾಯಿಸಲ್ಪಟ್ಟಿದ್ದ ರಾಸುಗಳು ತರಲ್ಪಟ್ಟು ನಿರ್ಧರಿಸಿದ್ದ ಮೇರೆ ಅಮಲ್ದಾರ್‌ಸಾಹೇಬರವರ ಅಮೃತಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟು ಸಭಾಕಾರ್ಯವು ಬಹಳ ವಿಜೃಂಭಣೆಯಿಂದ ನೆರವೇರಿತು. ಈ ಜಾತ್ರೆಯಲ್ಲಿ ದನಗಳ ಪ್ರದರ್ಶನಮಹೋತ್ಸವವು ನಡೆದುದ್ದು ಇದೇ ಮೊದಲು. ಇಲ್ಲಿನ ವೆಲ್‌ಬೋರಿಂಗ್ ಕೆಲಸವು ಪೂರೈಸಿಲ್ಲವಾಗಿ ಈ ಪ್ರಚಂಡಜಾತ್ರೆಯ ಜನಾರೋಗ್ಯರಕ್ಷಣೆಗಾಗಿ ಅಮಲ್‌ದಾರ್ ಸಾಹೇಬರವರು ನದೀ ಪಕ್ಕದಲ್ಲೂ, ಕೆರೆ ಅಂಗಳದಲ್ಲೂ ಹಂಗಾಮಿ ತೊಂಡಗಳನ್ನೂ ಭಾವಿಗಳನ್ನೂ ಏರ್ಪಡಿಸಿ, ದೇವಸ್ಥಾನದ ಸಮೀಪದಲ್ಲಿರುವ ದೊಡ್ಡ ಕಲ್ಯಾಣಿಯು ಸಹ ಶೋಧಿಸಲ್ಪಟ್ಟು ಜನಸ್ತೋಮಕ್ಕೆ ಶುದ್ಧವಾದ ನೀರನ್ನು ಒದಗಿಸಿಕೊಟ್ಟುದಲ್ಲದೆ ಜಾತ್ರೆ ಸೌಕರ್ಯಕ್ಕೆ ಏರ್ಪಡಿಸಿದ್ದ ಸ್ಯಾನಿಟೇಷನ್ ಮುಂತಾದ ಕಾರ್ಯಕ್ರಮಗಳೆಲ್ಲಾ ಪೋಲೀಸ್ ಇನ್ಸ್‌ಪೆಕ್ಟರ್ ಮ|| ರಾ|| ಜಿ. ಮುನಿವೆಂಕಟಪ್ಪ ನಾಯಕರು ಜಾತ್ರೆ ಜನಗಳಿಗೆ ಲೇಶವೂ ಅವಕಾಶವಾಗದಂತೆ ಸರಿಯಾದ ಪೋಲೀಸ್ ಸಿಬ್ಬಂದಿಯನ್ನು ಏರ್ಪಡಿಸಿ ತಾವು ಖುದ್ದಾಗಿ ಎಲ್ಲಾ ಉಸ್ತುವಾರಿ, ವಿಚಾರಣೆಗಳನ್ನು ತೆಗೆದುಕೊಳ್ಳುತ್ತಿದ್ದುದರಿಂದ ಈ ಭಾರಿ ಜಾತ್ರೆಯಲ್ಲಿ ಕಳವು, ಸುಲಿಗೆ, ಜೂಜು, ನೆಮ್ಮದಿಭಂಗ ಮೊದಲಾದ ಯಾವ ದುಷ್ಪರಿಣಾಮವೂ ತಲೆದೋರದಂತೆ ಸುರಕ್ಷಿತವಾಗಿತ್ತು. ಈ ಉಭಯ ಮಹಾಶಯರುಗಳ ಕಾರ್ಯದಕ್ಷತೆಯು ತುಂಬಾ ಸ್ತುತ್ಯವಾದದ್ದು. ಶ್ರೀ ಸ್ವಾಮಿದೇವಸ್ಥಾನದ ಧರ್ಮದರ್ಶಿಗಳ ಕಮಿಟಿಯ ಅಗ್ರೇಸರರಾದ ಮ|| ರಾ|| ಕೆ. ಎಸ್. ರುದ್ರಪ್ಪನವರು ಅವಿಶ್ರಾಂತಶ್ರಮವನ್ನು ವಹಿಸಿ, ಸ್ವಾಮಿ ಭಕ್ತಾದಿಗಳಿಗೆ ಸ್ಥಳ ವಸತಿ, ಸೇವಾಕಾರ್ಯಗಳಿಗೆ ಅನುಕೂಲತೆ ಮುಂತಾದವುಗಳನ್ನು ಒದಗಿಸಿಕೊಡುತ್ತಾ ಯಾತ್ರಾರ್ಥಿಗಳ ಹಿತಚಿಂತನೆಯಲ್ಲೇ ಉತ್ಸಾಹಿಗಳಾಗಿದ್ದುದು ತುಂಬಾ ಭೂಷಣವಾಗಿತ್ತು. ಮತ್ತು ಹುಲಿಯೂರುದುರ್ಗದ ಮಠದ ಗುರುಸಿದ್ಧ ಶಾಸ್ತ್ರಿಗಳು ಸಂತೇಮಾವತ್ತೂರು ಮ|| ರಾ|| ಹೊಸಳ್ಳಪ್ಪನವರು ಸಹ ದೇಹಶ್ರಮವನ್ನು ಲಕ್ಷಿಸದೆ ಪ್ರತಿವರುಷದಂತೆ ಈ ವರುಷದ ಜಾತ್ರೆಯಲ್ಲಿ ಹಗಲೂ ರಾತ್ರಿಯೆನ್ನದೆ ವಂದೇಸಮನಾಗಿ ಜಾತ್ರೆಜನಗಳಿಗೆ (ದಾಸೋಹ) ಅನ್ನಸಂತರ್ಪಣೆ ನಡೆಸಿ ಭೂತತೃಪ್ತಿಯನ್ನುಂಟುಮಾಡಿದ್ದು ಮತ್ತು ಇದರಂತೆ ನಡೆಸಲು ಬದ್ಧಕಂಕಣರಾಗಿರುವುದು ತುಂಬಾ ಸ್ತೋತ್ರಾರ್ಹವಾದದ್ದು ಇವರುಗಳೇ ಧನ್ಯರು. ಮತ್ತೊಂದು ವಿಚಾರ! ಸ್ವಾರ್ಥಪರರಾದ ಕೆಲವು ಜನ ವಂಚಕರು ಹೊಸದಾಗಿ ಅಲ್ಲಲ್ಲಿ ಸಿದ್ಧಲಿಂಗೇಶ್ವರಸ್ವಾಮಿಗುಡಿ ಎಂಬ ಕಲ್ಪನೆಮಾಡಿಕೊಂಡು ತಿಳಿಯದ ಭಕ್ತಾದಿಗಳಿಗೆ ಮರುಳುಗೊಳಿಸಿ ಶ್ರೀ ಸ್ವಾಮಿಯವರ ರಥೋತ್ಸವದ ಕಾಲದಲ್ಲಿ ಎಡೆಯೂರು ಶ್ರೀ ಮಹಾಸನ್ನಿಧಿಯಲ್ಲಿ ಸಲ್ಲತಕ್ಕ ಮುಂಡೆ, ಕಪ್ಪಕಾಣಿಕೆ ವಗೈರೆಯನ್ನೆಲ್ಲಾ ತಾವೇ ಸುಲಿದುಕೊಳ್ಳುತ್ತಿದ್ದಾರೆಂಬ ವದಂತಿ ಬಹಳವಾಗಿ ಹಬ್ಬಿದೆ. ಇದು ಅನ್ಯಾಯ ಮತ್ತು ಅಧರ್ಮ. ಇಂಥವರಿಗೆ ಭಗವಂತನ ಶಿಕ್ಷೆ ಬೇರೆ ಇದ್ದೇ ಇದೆ. ಇಂತಹ ವಂಚಕರ ಮಾತುಗಳಿಗೆ ಭಕ್ತಾದಿಗಳು ಗಮನಕೊಡತಕ್ಕದ್ದು ಯೋಗ್ಯವಲ್ಲ. ಏಕೆಂದರೆ, ಮಹಾಮಹಿಮನೂ, ಭವರೋಗವೈದ್ಯನೂ, ಭಕ್ತಾಭೀಷ್ಟದಾಯಕನೂ ಆದ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಯವರು ನೆಲೆಗೊಂಡಿರುವ ಮೂಲಸ್ಥಾನವೂ, ಪುರಾಣಪ್ರಸಿದ್ಧವೂ ಆದ ಈ ಎಡೆಯೂರುಕ್ಷೇತ್ರಕ್ಕೆ ಜಾತ್ರೆಕಾಲದಲ್ಲಿ ಭಕ್ತಾದಿಗಳು ಆಗಮಿಸಿ ತಮ್ಮಗಳ ಕಷ್ಟನಿವಾರಣೆಯ ಪ್ರಾರ್ಥನಾರೂಪವಾದ ಮುಂಡೆ, ಕಪ್ಪಕಾಣಿಕೆ ಮುಂತಾದವುಗಳನ್ನು ಸ್ವಾಮಿಯ ಸನ್ನಿಧಿಯಲ್ಲಿ ಸಲ್ಲಿಸುವುದು ಸಾರ್ಥಕವೂ, ಭಕ್ತಾದಿಗಳ ಪರಂಪರೆಯ ಧರ್ಮಸಂಕಲ್ಪವೂ ಆಗಿರುತ್ತದೆ. ಆದಕಾರಣ ಸಕಲ ಭಕ್ತಾದಿಗಳೂ ಪೂರ್ವದ ಆಚರಣೆಯನ್ನು ಗಮನಿಸಿ ಈ ದೇವತಾಸನ್ನಿಧಿಯಲ್ಲೇ ತಮ್ಮ ಪ್ರಾರ್ಥನೆಗಳನ್ನು ಸಮರ್ಪಿಸಿ ಕೃತಕೃತ್ಯರಾಗಬೇಕೆಂದು ವಿನಂತಿ. ಮತ್ತು ಇಂಥ ವಂಚಕರ ವಿಷಯವು ಸರ್ಕಾರದವರ ಗಮನಕ್ಕೂ ಮುಟ್ಟಿದೆ. ಘನಸರ್ಕಾರದವರು ಈ ವಿಚಾರದಲ್ಲಿ ತಕ್ಕ ಬಂದೋಬಸ್ತು ಮಾಡದೆ ಇರಲಾರರೆಂಬ ನಿರೀಕ್ಷಣೆಯೂ ಇದೆ.

ತಾ|| 13-4-33. ಶ್ರೀ ಗುರುಪಾದಶಂಕರ.

ಉಪವಾಸ.

ಪ್ರಪಂಚದಲ್ಲಿರತಕ್ಕ ಮತಗಳೆಲ್ಲಾ ಉಪವಾಸವ್ರತದ ಮಹಿಮೆಯನ್ನು ಹೇಳುತ್ತವೆ. ಉಪವಾಸದಿಂದ ದೇಹವು ಶುದ್ಧಿಯಾಗುವುದು. ಆತ್ಮವು ಶುದ್ಧಿಯಾಗುವುದು, ಇಂದ್ರಿಯನಿಗ್ರಹವು ಸಾಧ್ಯವಾಗುವುದು, ಮನಸ್ಸು ನಿರ್ಮಲವಾಗುವುದು, ನಮ್ಮ ಗಾಯತ್ರೀ ಮಂತ್ರದಲ್ಲಿ ಬುದ್ಧಿಯು ತೀಕ್ಷ್ಣವಾಗುವಂತೆ ಮಾಡುವೆ ಎಂಬದಾಗಿ ಪ್ರಾರ್ಥನೆಯಿರುವುದು. ಪಾಪಕರ್ಮಗಳನ್ನು ಬಿಟ್ಟು ಪುಣ್ಯಕರ್ಮವಾಡುವುದರಲ್ಲಿ ಮನಸ್ಸು ತೀಕ್ಷ್ಣವಾಗಿರಬೇಕಾದರೆ ಉಪವಾಸವು ಆವಶ್ಯಕ. ಉಪವಾಸವ್ರತಕ್ಕೆ ಕಾರಣವುಂಟು. ನಮ್ಮ ದೇಹವು ಪರಿಪೂರ್ಣವಾದ ಆರೋಗ್ಯಸ್ಥಿತಿಯಲ್ಲಿರಬೇಕಾದರೆ ಯುಕ್ತಾಹಾರ ವಿಹಾರಗಳು ಆವಶ್ಯಕ. ಅನೇಕರಿಗೆ ಭೋಜನಮಾಡುವ ನಿಯಮಗಳೇ ತಿಳಿಯದು. ಯಾವ ಪದಾರ್ಥಗಳು ಆಯುರಾರೋಗ್ಯಗಳಿಗೆ ಆವಶ್ಯಕವೋ ಯಾವ ಆಹಾರಗಳು ಅವುಗಳಿಗೆ ಪ್ರತಿಕೂಲವೋ ಅದನ್ನು ನಾವು ತಿಳಿದುಕೊಂಡಿರುವುದಿಲ್ಲ. ರುಚಿಯಾದ ಆಹಾರಗಳನ್ನು ಮಿತಮೀರಿ ತೆಗೆದುಕೊಳ್ಳುತ್ತೇವೆ. 'ಅತಿಸರ್ವತ್ರ ವರ್ಜಯೇತ್' ಎಂಬ ಧನ್ವಂತರಿಯಿಂದ ಹೇಳಲ್ಪಟ್ಟ ನಿಯಮಗಳನ್ನು ಪ್ರತಿನಿತ್ಯದಲ್ಲೂ ಉಲ್ಲಂಘಿಸುತ್ತೇವೆ. ಫಲವು ಕರ್ಮಕ್ಕೆ ಅನುಸಾರವಾಗಿರುವುದೆಂದು ನಾವು ತಿಳಿದುಕೊಂಡಿರುವುದಿಲ್ಲ. ಪುಣ್ಯಕ್ಕೆ ಪುಣ್ಯದ ಫಲವೂ ಪಾಪಕ್ಕೆ ಪಾಪದ ಫಲವೂ ತಪ್ಪದೇ ಬರುವುದು. ಅದನ್ನು ಪ್ರತಿನಿಮಿಷದಲ್ಲೂ ನಾವು ನೋಡುತ್ತೇವೆ. ಇದು ಪುಣ್ಯ ಇದು ಪಾಪ ಎಂಬುದಾಗಿ ಸೂಚಿಸುವುದಕ್ಕೆ ದೇವರು ಮನಸ್ಸಾಕ್ಷಿರೂಪವಾಗಿ ನಮ್ಮಲ್ಲಿಯೇ ಇರುತ್ತಾನೆ. ಕಣ್ಣಿಗೆ ಕಾಣದೇ ಇದ್ದ ಮಾತ್ರದಿಂದಲೇ ದೇವರು ಇರುವುದಿಲ್ಲ ಪಾಪಕರ್ಮಗಳನ್ನು ಮಾಡಿ ದಕ್ಕಿಸಿಕೊಳ್ಳಬಹುದು. ಎಂಬ ಮನೋಭಾವದಿಂದ ಸ್ವಾರ್ಥಪರರಾದವರು ತಿಳಿದುಕೊಂಡು ಮೋಸಹೋಗುವರು. ಮೋಸದಿಂದ ಬದುಕಬಹುದೆಂದು ಆದಿಭಾಗದಲ್ಲಿ ತೋರುವುದು. ಉತ್ತರಾವಸ್ಥೆಗೆ ಬಂದಕೂಡಲೇ ಪಾಪಕ್ಕೆ ಅನುರೂಪವಾದ ಶಿಕ್ಷೆಯು ಆಗುವುದು. ಜಾನ್ ಸಿಕಲಿಸ್ಟರೇ ಮೊದಲಾದವರು ಇದಕ್ಕೆ ಸಾಕ್ಷಿ. ಇಂತಹ ದುರವಸ್ಥೆಗಳಿಗೆ ಆಹಾರವ್ಯವಹಾರಗಳ ಮಿತಿಯನ್ನು ಮೀರುವುದೇ ಮುಖ್ಯಕಾರಣ. ಅದಕ್ಕೋಸ್ಕರ ಸಕಲಮತದವರೂ ಕೂಡ ದೇವರ ಪ್ರಸನ್ನತೆಯನ್ನು ಅಪೇಕ್ಷಿಸತಕ್ಕವರು ಉಪವಾಸವ್ರತದಲ್ಲಿ ಆಸಕ್ತರಾಗಿರಬೇಕೆಂದು ಹೇಳಿದ್ದಾರೆ. ಭಾರತೀಯರ ಪೈಕಿ ಕೆಲವರಲ್ಲಿ ಏಕಾದಶಿ ಮೊದಲಾದ ಕೆಲವು ದಿವಸಗಳಲ್ಲಿ ಉಪವಾಸವನ್ನು ನಿಯಮಿಸಿರುವರು. ಮಹಮ್ಮದೀಯರಲ್ಲಿ 40 ದಿವಸ ಉಪವಾಸವು ನಿಯಮಿಸಲ್ಪಟ್ಟಿರುವುದು ಕರ್ನಲ್ ಅಟ್ಕಿನ್‌ರೇ ಮೊದಲಾದ ಡಾಕ್ಟರ್‌ಗಳು ಪ್ರಭುಗಳಲ್ಲಿಯೂ ಕೋಟೀಶ್ವರರಾದ ಇತರರಲ್ಲಿಯೂ ಅಭಕ್ಷ್ಯಭೋಜನ ಅಪೇಯಪಾನ ಅಗಮ್ಯಾಗಮನ ಮೊದಲಾದುವುಗಳಲ್ಲಿ ಯಾರು ಮುಳುಗಿ ಕೇಲುತ್ತಲಿರುವರೋ ಅವರಿಗೆ ಕೇವಲ ಪುಷ್ಟಿಕರವಾದ ಆಹಾರವಿಹಾರಗಳನ್ನು ನಿರೋಧಮಾಡಿ ಅನ್ನ ನೀರು ಎರಡಲ್ಲಿಡುವರು ಅದನ್ನು ಕೂಡ ಪ್ರಾಣಧಾರಣೆಗೆ ಎಷ್ಟೋ ಅಷ್ಟುಮಾತ್ರಕೊಟ್ಟು ಪಥ್ಯದಲ್ಲಿರುವಂತೆ ಮಾಡುವರು. ಹೀಗೆ 30-40 ದಿವಸಗಳು ಆಹಾರನಿಯಮಗಳನ್ನು ಉಲ್ಲಂಘಿಸದಂತೆ ಮಾಡಿ ಬೊಜ್ಜನ್ನು ಕರಗಿಸಿ ಅನೇಕ ರೋಗಗಳಿಗೆ ತೌರುಮನೆಯಾಗಿರತಕ್ಕ ದೇಹಗಳನ್ನು ವಜ್ರಕಾಯವಾಗುವಂತೆ ಮಾಡಿರುವರು. ಕೆಲವು ಜನಗಳು ಹಾಸಿಗೆಯಿಂದ ಎದ್ದಕೂಡಲೇ ಕಾಫಿ, ಟೀ, ಮೊದಲಾದುವುಗಳನ್ನು ತೆಗೆದುಕೊಳ್ಳುವರು. ಸ್ನಾನಾದಿಗಳನ್ನು ಪೂರೈಸಿಕೊಂಡು ರೊಟ್ಟಿ, ಕಾಫಿ ಮೊದಲಾದವುಗಳನ್ನು ತೆಗೆ

(6 ನೇ ಪುಟವನ್ನು ನೋಡಿ.)

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ
ಹಾಗೂ
ಶ್ರೀ ಜಗದ್ಗುರು ದಾರುಕಾಚಾರ್ಯರ
ಜಯಂತಿಮಹೋತ್ಸವಗಳು.

ವೈಶಾಖ ಶು॥ ೩ ಗುರುವಾರ. ವೈಶಾಖ ಶು॥ ೫ ಶನಿವಾರ.



ಶ್ರೀ ದ್ರಾಕ್ಷಾರಾಮ ರಾಮನಾಥಲಿಂಗದಿಂದ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ
ಅವತಾರವು.



ಶ್ರೀ ವಟವೃಕ್ಷ ಸಿದ್ಧೇಶ್ವರಲಿಂಗದಿಂದ
ಶ್ರೀ ಜಗದ್ಗುರು ದಾರುಕಾಚಾರ್ಯರ
ಅವತಾರವು.

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀ ಹಿಮವತ್ಕೇದಾರ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀರಾಮನಾಥ, ಶ್ರೀ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತ ಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವದರಿಂದ ಸರ್ವ ಗುರುಭಕ್ತರೂ ಈ ಜಯಂತಿಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸತಕ್ಕದ್ದಾಗಿದೆ. ವೈಶಾಖ ಶು॥ ೩ ಗುರುವಾರ ತಾ॥ ೨೭-೪-೩೩ ನೆಯ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನೂ, ವೈಶಾಖ ಶು॥ ೫ ಶನಿವಾರ ತಾ॥ ೨೯-೪-೩೩ ನೆಯ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿಮಹೋತ್ಸವಗಳನ್ನು ಆಯಾಯ ಪವಿತ್ರತಿಥಿಗಳಲ್ಲಿ ಅತ್ಯಂತ ಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಈಗಲಾದರೂ ಶುದ್ಧಸಂಪ್ರದಾಯದ ವೀರಶೈವರು ಈ ಮೊದಲು ಮೂವರು ಆಚಾರ್ಯರ ಜಯಂತಿಗಳನ್ನು ಅತಿ ವೈಭವದಿಂದ ನೆರವೇರಿಸಿದಂತೆ, ಈಗ ಪ್ರಾಪ್ತವಾಗಿರುವ ಆಚಾರ್ಯರ ಜಯಂತಿಮಹೋತ್ಸವಗಳನ್ನಾದರೂ ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೇರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಆಯುರಾರೋಗ್ಯಾದಿಸಕಲಸಂಪತ್ಸಮೃದ್ಧಿಯನ್ನು ಹೊಂದಿ ನಿತ್ಯಸುಖಿಗಳಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದೊಡ್ಡಪೇಟೆಯಲ್ಲಿ ಬಹಳ ವೇಗವಾಗಿ ಬೈಸಿಕಲ್ಲನ್ನು ಬಿಟ್ಟನೆಂಬ ಕಾರಣದಮೇಲೆ ಅಬ್ದುಲ್ಲಾ ಸಾಬ್ ಎಂಬವನಿಗೆ ಸಿಟಿ ಮ್ಯಾಜಿಸ್ಟ್ರೇಟರು 1 ರೂ. ಜುಲ್ಮಾನೆಯನ್ನು ವಿಧಿಸಿದರು.

ಇದೇ ಏಪ್ರಿಲ್ 19 ನೇ ತಾರೀಖಿನ ದಿವಸ ಸಾಯಂಕಾಲ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಭವನದ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಇದೇ ಏಪ್ರಿಲ್ 18 ನೇ ತಾರೀಖಿನ ದಿವಸ ಚಿಕ್ಕಮಗಳೂರಿನ ಮುನಿಸಿಪಲ್ ವಾಟರ್ ಸಪ್ಲೈಯರ್ ಸ್ಯಾಮುಯಲ್ ಎಂಬವರ ಮನೆಯಲ್ಲಿ 4 ಕಾಲು ಮತ್ತು 4 ರೆಕ್ಕೆಗಳುಳ್ಳ ಒಂದು ಕೋಳೀಮರಿಯು ಹುಟ್ಟಿ ಸ್ವಲ್ಪ ಹೊತ್ತಿನನಂತರ ಮೃತಪಟ್ಟಿತೆಂದು ತಿಳಿದುಬಂದಿದೆ.

ಬೆಂಗಳೂರು ನಗರದ ಪಯೋನಿಯರ್ ಪವರ್ ಲಾಂಡ್ರಿಯಲ್ಲಿ ನೌಕರನಾಗಿದ್ದ ಗೋವಿಂದ ಎಂಬವನು ಲಾಂಡ್ರಿಯ ಬಟ್ಟೆಗಳನ್ನು 3 ಸಾರೆ ಕಳ್ಳತನ ಮಾಡಿದನೆಂಬ ಅಪಾದನೆಯಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗೆ 1 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ 'ಡೈಮಂಡ್ ಲೀಗ್' ನವರು ಈ ತಿಂಗಳ ಅಂತ್ಯಭಾಗದಲ್ಲಿ ಒಂದು ಸ್ವದೇಶೀ ವಸ್ತುಪ್ರದರ್ಶನವನ್ನು ನಡೆಯಿಸುವರೆಂದೂ, ಪ್ರೇಕ್ಷಕರಿಗೆ ಉಚಿತಪ್ರವೇಶವನ್ನು ಕಲ್ಪಿಸುವರೆಂದೂ, ಮೈಸೂರು ಸ್ವದೇಶೀ ವಸ್ತುಪ್ರದರ್ಶನದವರು ಇದಕ್ಕಾಗಿ 25 ರೂ. ಗಳನ್ನು ಸಹಾಯ ಮಾಡಿರುವರೆಂದೂ ತಿಳಿದುಬಂದಿದೆ.

ಬೆಂಗಳೂರು ನಗರದ ಉಪಯೋಗಕ್ಕಾಗಿ ಹೊಸದಾಗಿ ನಿರ್ಮಿಸಲ್ಪಟ್ಟಿರುವ ತಿಪ್ಪಗೊಂಡನಹಳ್ಳಿ ಜಲಾಶಯದ ನೀರಿನಲ್ಲಿ ಕೆಲವು ದೋಷಗಳಿರುವವೆಂದೂ, ಅದನ್ನು ಉಪಯೋಗಿಸುವದರಿಂದ ಜನರ ಆರೋಗ್ಯವು ಕೆಡುವುದೆಂದೂ, ಡಾಕ್ಟರ್ ಎ. ಕೆ. ವಾಣಿಯವರು ಸಂಸ್ಥಾನದ ಚೀಫ್ ಇಂಜನಿಯರಿಗೆ ಒಂದು ಎಚ್ಚರಿಕೆ ಪತ್ರವನ್ನು ಬರೆದಿರುವರು. ಈ ಬಗ್ಗೆ ಚೀಫ್ ಇಂಜನಿಯರು ಅವಶ್ಯಕವಾದ ಪರೀಕ್ಷೆಗಳನ್ನು ನಡೆಯಿಸುತ್ತಿರುವರೆಂದು ತಿಳಿದುಬಂದಿದೆ.

ಲಂಡನ್ನಿನಲ್ಲಿ ಸೇರಲಿರುವ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಕಾರ್ಯಗಳಲ್ಲಿ ಭಾಗವಹಿಸುವದಕ್ಕಾಗಿ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಇದೇ ಏಪ್ರಿಲ್ 20 ನೇ ತಾರೀಖಿನ ದಿವಸ ಬೆಳಗ್ಗೆ ಬೆಂಗಳೂರಿನಿಂದ ಗುಂತಕಲ್ ಮಾರ್ಗವಾಗಿ ಮುಂಬಯಿಗೆ ಪ್ರಯಾಣ ಬೆಳೆಸಿದರು. ಅನೇಕ ಪ್ರಮುಖ ಸರ್ಕಾರೀ ಅಧಿಕಾರಿಗಳೂ ಹಾಗೂ ಊರಿನ ದೊಡ್ಡಮನುಷ್ಯರೂ ಸ್ಟೇಷನ್ನಿಗೆ ಹೋಗಿ ಸರ್ ಮಿರ್ಜಾರವರಿಗೆ ಶುಭಪ್ರಯಾಣವನ್ನು ಬಯಸಿದರು.

ಮೈಸೂರು ಗೆಜೆಟ್.

ಮೈಸೂರಿನ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಟಿ. ವಿ. ಎ. ಈಶ್ವರನ್ ಬಿ.ಎ., ಇವರು ಶಿವಮೊಗ್ಗಾ ಡಿ॥ ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಅಫಿಸಿಯೇಟಿಂಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಎನ್. ಜಿ. ಪಾವಂಜಿಯವರು ಸದರಿ ಕೆಲಸದಲ್ಲಿ ಖಾಯಂಮಾಡಲ್ಪಟ್ಟಿರುತ್ತಾರೆ.

ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ॥ ಎಚ್. ವಿ. ರಾಮಸ್ವಾಮಿ ಬಿ.ಎ., ಬಿ.ಎಲ್ ರವರು ಸರ್ಕಾರದ ಜನರಲ್ ಸೆಕ್ರೆಟರಿಗಳಾಗಿ ಬದಲಿ ನೇಮಿಸಲ್ಪಟ್ಟಿರುತ್ತಾರೆ. ಜನರಲ್ ಅಂಡ್ ರೆವಿನ್ಯೂ ಸೆಕ್ರೆಟೆರಿಯಟ್ಟಿನಲ್ಲಿ ಸರ್ಕಾರದ ಅಂಡರ್ ಸೆಕ್ರೆಟರಿಗಳಾಗಿ ಕೆಲಸಮಾಡುತ್ತಿದ್ದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ಚನ್ನರಾಜೇಅರಸ್ ಬಿ.ಎ., ಎಲ್‌ಎಲ್.ಬಿ., ಇವರು ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿರುತ್ತಾರೆ.

ಸರ್ಕಾರದ ಚೀಫ್ ಸೆಕ್ರೆಟರಿಗಳಾದ ಮಿ॥ ಎನ್. ಮಾಧವರಾವ್ ಬಿ.ಎ., ಬಿ.ಎಲ್ ರವರು ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಕೆಲಸಕಾರ್ಯಗಳ ಸಂಬಂಧವಾಗಿ ದಿವಾನರೊಡನೆ ಲಂಡನ್ನಿಗೆ ಪ್ರಯಾಣ ಮಾಡುವದರಿಂದ ಅವರು ಲಂಡನ್ನಿನಿಂದ ಹಿಂತಿರುಗುವವರೆಗೆ ಅಥವಾ ಮತ್ತೊಂದು ಆರ್ಡರನ್ನು ಮಾಡುವವರೆಗೆ ಸರ್ಕಾರದ ಜನರಲ್ ಸೆಕ್ರೆಟರಿಗಳಾದ ಮಿ॥ ಆರ್. ರಂಗರಾವ್ ಬಿ.ಎ.,ಬಿ.ಎಲ್ ರವರು ಸರ್ಕಾರದ ಚೀಫ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಸಂಸ್ಥಾನದ ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಾಮದ್ ಇಸ್ಮಾಯಿಲ್ ಕೆಟಿ, ಸಿ.ಐ.ಇ., ಓ.ಬಿ.ಇ., ಯವರು ಲಂಡನ್ನಿನಲ್ಲಿ ನಡೆಯಲಿರುವ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಗೆ ಪ್ರಯಾಣ ಮಾಡುವದರಿಂದ ಮೇಲ್ಕಂಡ ಅವಧಿಯಲ್ಲಿ ಪ್ರಥಮ ಸಚಿವರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮಿ॥ ಎಂ. ಎನ್. ಕೃಷ್ಣರಾವ್ ಬಿ.ಎ., ಇವರು ಅಫಿಸಿಯೇಟಿಂಗ್ ದಿವಾನರಾಗಿಯೂ ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಮಿ॥ ಕೆ. ಮ್ಯಾಥ್ಯೂ ಬಿ.ಎ., ಇವರು ಪ್ರಥಮ ಸಚಿವರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಈ ಪ್ರಪಂಚದ ಜನಸಂಖ್ಯೆಯಲ್ಲಿ ಪ್ರತಿ ನೂರಕ್ಕೆ 10 ಜನರು ಅಥವಾ ಸುಮಾರು 17,50,00,000 ಜನರು ಇಂಗ್ಲಿಷ್ ಮಾತನಾಡುವರಂತೆ!

ಇಂಡಿಯಾ ದೇಶದಲ್ಲಿ ಒಟ್ಟು 39,000 ಮೈಲುಗಳ ರೈಲುರಸ್ತೆಯಿರುವದು. ಇವುಗಳ ಮೇಲೆ ಪ್ರತಿವರ್ಷವೂ 60,00,00,000 ಜನರು ಪ್ರಯಾಣಮಾಡುವರಂತೆ!

ಸೇಂಟ್‌ಲೂಯಿ ನಗರದಲ್ಲಿರುವ ರಾಬರ್ಟ್ ವಾಡ್ಲೋ ಎಂಬ 15 ವರ್ಷದ ತರುಣನು 7 ಅಡಿ 8 ಅಂಗುಲ ಎತ್ತರವಾಗಿದ್ದು 340 ಪೌಂಡ್ ತೂಕವುಳ್ಳವನಾಗಿರುವನಂತೆ!

ಮ್ಯಾಂಚೆಸ್ಟರ್ ನಗರದ ವಿಲ್‌ಫ್ರೆಡ್ ಬ್ರೈಟನ್ ಎಂಬ 20 ವರ್ಷದ ತರುಣನು 7½ ಟನ್ ತೂಕವುಳ್ಳ ಮೋಟಾರ್ ಗಾಡಿಯನ್ನು ತನ್ನ ಹಲ್ಲುಗಳಿಂದ ಎಳೆಯಬಲ್ಲನಂತೆ!

ಮುಂಬಯಿಯ ಜಹಾಂಗೀರ್ ಮೋಕೆ ನಿಜ ಎಂಬಾತನು ಒಬ್ಬ ಬಾಲಿಕೆಯ ಮೇಲೆ ಅತ್ಯಾಚಾರ ನಡೆಸಿದನೆಂಬ ಕಾರಣದ ಮೇಲೆ 4 ವರ್ಷಗಳ ಕಠಿಣಸಜೆಗೆ ಗುರಿಯಾದನು.

ಕಚ್ ಡಿಸ್ಟ್ರಿಕ್ಟಿನಲ್ಲಿ ಕೆಲವು ದಿವಸಗಳಹಿಂದೆ ಯಾರೋ ಕೆಲವು ದುರಾತ್ಮರು ಒಬ್ಬ ಪೋಸ್ಟ್ ಜವಾನನನ್ನು ಕೊಂದು ಟಪ್ಪಾಲ್ ಚೀಲಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ.

1931 ನೇ ವರ್ಷದಲ್ಲಿ ಅಮೇರಿಕೆಯಲ್ಲಿ 2,342 ಬ್ಯಾಂಕುಗಳು ದಿವಾಳಿಯಾದವು! ಈ ಬ್ಯಾಂಕುಗಳಲ್ಲಿ 6,00,00,00,000 ರೂ. ಗಳಿಗಿಂತಲೂ ಹೆಚ್ಚು ಹಣವು ಡಿಪಾಜಿಟ್ಟು ಇಡಲ್ಪಟ್ಟಿದ್ದಿತು!

ಇಡೀ ಭರತಖಂಡವು ಬ್ರಿಟಿಷರಿಗೆ ಸೇರಿಲ್ಲ! ಒಟ್ಟು 203 ಚದರಮೈಲುಗಳ ವಿಸ್ತೀರ್ಣವುಳ್ಳ 5 ಊರುಗಳು ಫ್ರೆಂಚರಿಗೆ ಸೇರಿರುವವು! ಅದರಲ್ಲಿ ಒಟ್ಟು 2,50,000 ಜನರು ವಾಸಮಾಡುವರು!

ಕೆಲವು ದಿವಸಗಳಹಿಂದೆ ಅಹಮದಾಬಾದಿನಲ್ಲಿ ಇನ್‌ಸ್ಪೆಕ್ಟರ್ ಗ್ರೀನ್‌ರವರನ್ನು ಕೊಲೆಮಾಡಿದ ಸಾರ್ಜೆಂಟ್ ಹೊಸ್ಟನ್ನರಿಗೆ ಮುಂಬಯಿ ಹೈಕೋರ್ಟ್ ಜಡ್ಜರವರು ಮರಣದಂಡನೆಯನ್ನು ವಿಧಿಸಿದರು.

ಇಟಲಿ ದೇಶದ ಸರ್ವಾಧಿಕಾರಿಗಳಾದ ಸಿನಾರ್ ಮುಸ್ಸೋಲಿನಿಯವರು ತಮ್ಮ ದೇಶದಲ್ಲಿ ಇನ್ನು ಮುಂದೆ ಎಲ್ಲರೂ ಕೆಂಪಗೆ ಸುಟ್ಟ ರೊಟ್ಟಿಯನ್ನೇ ತಿನ್ನಬೇಕೆಂದು ಹೊಸದೊಂದು ಕಾನೂನನ್ನು ಹೊರಡಿಸಿರುವರಂತೆ!

ಜೇರ್ಮನ್‌ಸರಕಾರದವರು ತಮ್ಮ ದೇಶದಲ್ಲಿ ಸದ್ಯಃ ಪ್ರಾಪ್ತವಾಗಿರುವ ರಾಜಕೀಯ ಆಂದೋಲನವು ನಿಲ್ಲುವವರೆಗೂ ಯಾರೂ ಹಬ್ಬ ಮತ್ತು ಉತ್ಸವಾದಿಗಳನ್ನು ಆಚರಿಸಕೂಡದೆಂದು ಅಪ್ಪಣೆ ಮಾಡಿರುವರು.

ಕಲ್ಕತ್ತಾ ಹೈಕೋರ್ಟಿನ ಮಾಜೀ ಜಡ್ಜರೂ, ರಾಷ್ಟ್ರಮಹಾಸಭೆಯ ಮಾಜೀ ಅಧ್ಯಕ್ಷರೂ ಆಗಿದ್ದ ಮಿ॥ ಎಸ್. ಹಸನ್ ಇಮಾಂರವರು ಏಪ್ರಿಲ್ 19 ನೇ ತಾರೀಖಿನ ಬೆಳಗ್ಗೆ ಪಾಟ್ನಾದಲ್ಲಿ ಮೃತಪಟ್ಟರು.

ಮೌಂಟ್ ಎವರೆಸ್ಟ್ ಪರ್ವತದಮೇಲೆ ಹಾರುವದಕ್ಕೆ ಲಂಡನ್ನಿನಿಂದ ಬಂದಿರುವ ವೈಮಾನಿಕರು ಏಪ್ರಿಲ್ 19 ನೇ ತಾರೀಖಿನ ದಿವಸ ಎರಡನೇ ಸಾರಿ ಸದರಿ ಪರ್ವತವನ್ನು ಬಳಸಿಬಂದರು. ಇದಕ್ಕೆ ಒಟ್ಟು 4 ಘಂಟೆಗಳ ಕಾಲ ಹಿಡಿಯಿತಂತೆ!

ವಾಯವ್ಯಪ್ರಾಂತದಲ್ಲಿ 120 ವರ್ಷ ವಯಸ್ಸಿನ ಮಹಮ್ಮದೀಯನೊಬ್ಬನು ಕೆಲವು ದಿವಸಗಳ ಹಿಂದೆ ಮೃತಪಟ್ಟನು. ಇವನು ಒಟ್ಟು 12 ಜನ ಸ್ತ್ರೀಯರನ್ನು ಮದುವೆಯಾಗಿದ್ದನಂತೆ! ಆದರೂ ಇವನು ಸಾಯುವಾಗ ಒಬ್ಬಳೂ ಜೀವಿಸಿರಲಿಲ್ಲ!

ದಕ್ಷಿಣ ಕ್ಯಾಲಿಫೋರ್ನಿಯಾ ದೇಶದ ತೋಟಗಾರರು ತಮ್ಮಲ್ಲಿ ಬಿಕರಿಯಾಗದೇ ನಿಂತ 200 ರೈಲ್ವೇ ಗಾಡಿಗಳ ತುಂಬ ಕಿತ್ತಲೆಹಣ್ಣನ್ನು ಸಂಯುಕ್ತ ಸಂಸ್ಥಾನದ ಮುಖ್ಯಮುಖ್ಯ ನಗರಗಳಲ್ಲಿರುವ ನಿರುದ್ಯೋಗಿಗಳ ಸಲುವಾಗಿ ಕಳುಹಿಸಿರುವರು!

ದಕ್ಷಿಣ ಅಮೇರಿಕಾದೇಶಕ್ಕೆ ಸೇರಿದ "ಚಿಲೀ" ಎಂಬ ದೇಶದಲ್ಲಿ 3,000 ಮೈಲುಗಳ ರೈಲ್ವೆ ಪ್ರಯಾಣಕ್ಕೆ 15 ರೂ. ಮಾತ್ರ ಚಾರ್ಜಾಗುವದಂತೆ! ಅಂದರೆ ನಂಜನಗೂಡಿನಿಂದ ಬೆಂಗಳೂರಿಗೆ ಇರುವಷ್ಟು ದೂರದ ಪ್ರಯಾಣಕ್ಕೆ 8 ಅಣೆಗಳಾದಂತಾಯಿತು!

ಏಪ್ರಿಲ್ 17 ನೇ ತಾರೀಖಿನ ದಿವಸ ಕಾಲ್ಕಾದಿಂದ ಸಿಮ್ಲಾಕ್ಕೆ ಪ್ರಯಾಣ ಮಾಡುತ್ತಿದ್ದ ಪ್ಯಾಸೆಂಜರ್ ರೈಲುಗಾಡಿಯು ಧರಂಪುರ ಸ್ಟೇಷನ್ನಿಗೆ 3 ಫರ್ಲಾಂಗುಗಳ ದೂರದಲ್ಲಿ ಕಂಬಿ ತಪ್ಪಿ ನೆಲಕ್ಕುರುಳಿತು. ಇದರಿಂದ 10 ಜನ ಪ್ರಯಾಣಿಕರಿಗೆ ಗಾಯಗಳಾದುವು.

ಜುಗೋಸ್ಲೇವಿಯಾ ಸರಕಾರದವರು ತಮ್ಮ ದೇಶದಲ್ಲಿ ಇನ್ನು ಮುಂದೆ ಮದುವೆಯಾಗಲಪೇಕ್ಷಿಸುವವರೆಲ್ಲರೂ ಆರೋಗ್ಯದೃಢಕಾಯರಾಗಿರುವರೆಂಬ ಬಗ್ಗೆ ಪ್ರಥಮತಃ ಡಾಕ್ಟರರಿಂದ ಸರ್ಟಿಫಿಕೇಟನ್ನು ಪಡೆಯಬೇಕೆಂದು ಹೊಸದಾಗಿ ಕಾನೂನು ಮಾಡಿರುವರು!

ಬಂಗಾಳಾ ಪ್ರಾಂತಕ್ಕೆ ಸೇರಿದ ಹಬೀಗಂಜ್ ಎಂಬ ಗ್ರಾಮದಲ್ಲಿ ಒಬ್ಬ ಅಪರಾಧಿಯನ್ನು ದಸ್ತಗಿರಿಮಾಡಲು ಹೋಗಿದ್ದಾಗ ಒಂದು ಶಿಶುವನ್ನು ತುಳಿದು ಕೊಂದರೆಂಬ ಕಾರಣದ ಮೇಲೆ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರವರು ದಸ್ತಗಿರಿಮಾಡಲ್ಪಟ್ಟಿರುವರು.

ಮ್ಯಾಸಿಡೋನಿಯಾ ದೇಶಕ್ಕೆ ಸೇರಿದ ಪೆಟ್ರಿಚ್‌ಗ್ರಾಮದಲ್ಲಿರುವ ಮೇರಿಯಳ ಚರ್ಚಿನಲ್ಲಿ ಕಳೆದ ಈಸ್ಟರ್ ಹಬ್ಬದ ದಿವಸ ಯೇಸುಕ್ರಿಸ್ತನ ಶಿಲುಬೆಯ ಮೇಲೆ ಅಲಂಕರಿಸಿದ್ದ ಹೂ ಗೊಂಚಲು ಒಣಗಿಹೋಗಿದ್ದರೂ, ಇದ್ದಕ್ಕಿದ್ದಹಾಗೆ ಪುನಃ ಚಿಗುರಿ 3 ಕುಡಿಗಳು ಹೊರಟಿದ್ದವಂತೆ!

ಅಮೇರಿಕೆಯ ಲಾಸ್ ಅಂಗಲ್ಸ್ ನಗರದ ಒಬ್ಬ ಬಡಗಿಯವನು 5 ವರ್ಷಗಳಕಾಲ ಕಷ್ಟಪಟ್ಟು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಒಂದು ಬೈಬಲ್ಲನ್ನು ಸಂಪೂರ್ಣವಾಗಿ ಕೈಯಿಂದಲೇ ಛಾಪಿಸಿರುವನಂತೆ! ಈ ಗ್ರಂಥವು 8048 ಪುಟಗಳಿಂದ ಕೂಡಿ ½ ಟನ್ ತೂಕವಾಗಿರುವದಂತೆ!

ಆಂಡ್ರೂ ಕಾರ್ನೆಗಿ ಎಂಬ ಸ್ಕಾಟ್ಲೆಂಡ್ ದೇಶಸ್ಥನು ಸ್ವಸಾಮರ್ಥ್ಯದಿಂದ ಅಪಾರ ದ್ರವ್ಯವನ್ನು ಸಂಪಾದಿಸಿ ಅದರಲ್ಲಿ 1,00,00,00,000 ರೂ. ಗಳಿಗಿಂತಲೂ ಹೆಚ್ಚು ಹಣವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿ, 7,50,00,000 ರೂ. ಗಳನ್ನು ಮಾತ್ರ ತನ್ನ ಪತ್ನಿ ಮತ್ತು ಪುತ್ರಿಗೆ ಬಿಟ್ಟು ಮೃತಪಟ್ಟನು!

ಒಬ್ಬ ಬ್ರಿಟಿಷ್ ಶಾಸ್ತ್ರಜ್ಞನು 12 ಗಂಟೆಗಳ ಮುಂಚಿತವಾಗಿ ವಾಯುಗುಣವನ್ನು ತಿಳಿಸುವಂಥ ಒಂದು ಸಣ್ಣ ಯಂತ್ರವನ್ನು ನಿರ್ಮಿಸಿರುವನಂತೆ! ಇದರಿಂದ ನಮ್ಮ ಸುತ್ತಮುತ್ತಲ ವಾಯುಮಂಡಲದಲ್ಲಿ 12 ಗಂಟೆಗಳವರೆಗೆ ಆಗಬಹುದಾದ ವ್ಯತ್ಯಾಸಗಳೂ, ಮಳೆಯು ಬರುವ ವಿಷಯವೂ ಸ್ಪಷ್ಟವಾಗಿ ಗೊತ್ತಾಗುವದಂತೆ!

ಇಂಡಿಯಾ ದೇಶದಲ್ಲಿ ಅನೇಕ ಲಕ್ಷ ಮೈಲುಗಳ ಉದ್ದ ಕಾಲುವೆಗಳಿರುವವು! ಇವುಗಳಿಂದ ಪ್ರತಿವರ್ಷವೂ 4,80,00,000 ಎಕರೆಗಳ ಭೂಮಿಯು ಸಾಗುವಳಿಯಾಗುವದು. ಪಂಜಾಬಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಸುಕ್ಕೂರ್ ಅಣೆಕಟ್ಟು ಒಂದರಿಂದಲೇ ಪ್ರತಿವರ್ಷವೂ 60,00,000 ಎಕರೆಗಳ ಜಮೀನು ಸಾಗುವಳಿಯಾಗುವದಂತೆ!

ವಿಚಿತ್ರಪ್ರಪಂಚ.

'ಮೌಂಟ್ ಎಟ್ನಾ' ಎಂಬ ಅಗ್ನಿಪರ್ವತವು 2500 ವರ್ಷಗಳಿಂದಲೂ ಹೊಗೆಯಾಡುತ್ತಿರುವದಂತೆ!

ನಮ್ಮ ತಲೆಯಲ್ಲಿರುವ ಪ್ರತಿಯೊಂದು ಕೂದಲಿನ ತಳದಲ್ಲಿಯೂ ಒಂದೊಂದು ಮಾಂಸಖಂಡವಿರುವದಂತೆ!

ಇಂಡಿಯಾ ದೇಶದಲ್ಲಿ ಪ್ರತಿವರ್ಷವೂ 3,00,000 ಜನರು ನಾಗರಹಾವಿನ ಕಡಿತದಿಂದ ಸಾಯುವರಂತೆ!

ಇಂಡಿಯಾ ದೇಶದ ಜನರು 220 ಬೇರೆಬೇರೆ ಭಾಷೆಗಳನ್ನು ಮಾತಾಡುವರಂತೆ! ಟಿಬೆಟ್ ದೇಶ ಒಂದರಲ್ಲಿಯೇ 145 ಭಾಷೆಗಳು ರೂಢಿಯಲ್ಲಿರುವವಂತೆ!

ಅಟ್ಲಾಂಟಿಕ್ ಸಾಗರದಲ್ಲಿ 7,96,07,000 ಘನ ಮೈಲುಗಳ ಆಳತೆಯುಳ್ಳ ಕೆರೆಯಲ್ಲಿ ಶೇಖರಿಸಬಹುದಾದಷ್ಟು ಅಥವಾ 3,25,00,00,00,00,00,00,000 ಟನ್ ನೀರಿರುವದಂತೆ!

ಅಟ್ಲಾಂಟಿಕ್ ಸಾಗರದಲ್ಲಿ ಒಂದು ಟನ್ ನೀರಿನಲ್ಲಿ 81 ಪೌಂಡುಗಳ ಉಪ್ಪು, ಪೆಸಿಫಿಕ್‌ಸಾಗರದಲ್ಲಿ ಒಂದು ಟನ್ ನೀರಿನಲ್ಲಿ 79 ಪೌಂಡುಗಳ ಉಪ್ಪು ಇರುವುದು! ಆದರೆ ಮೃತ್ಯುಸರೋವರದಲ್ಲಿ ಒಂದು ಟನ್ನಿನಲ್ಲಿ 187 ಪೌಂಡುಗಳ ಉಪ್ಪು ಇರುವುದಂತೆ!

ಮೇಜರ್ ಜಾಕ್ ಸ್ಯಾವೇಜ್ ಎಂಬ ಬ್ರಿಟಿಷ್ ವೈಮಾನಿಕನು 3,00,00,00,000 ಮೇಣದ ಬತ್ತಿಗಳ ಪ್ರಕಾಶವುಳ್ಳ ಸರ್ಚ್‌ಲೈಟ್ ಒಂದನ್ನು ನಿರ್ಮಿಸಿರುವನಂತೆ! ಈ ದೀಪದ ಬೆಳಕು ಆಕಾಶದಲ್ಲಿ 25,000 ಅಡಿಗಳವರೆಗೆ ಅಥವಾ ಸುಮಾರು 5 ಮೈಲುಗಳವರೆಗೆ ಹೋಗಬಲ್ಲುದಂತೆ!

ಯಂತ್ರಗಳಿಗೋಸ್ಕರ ಮಾಡುವ ತಿರುಪಿನ ಮೊಳೆಗಳಲ್ಲಿ ಗಡಿಯಾರಗಳಿಗೆ ಉಪಯೋಗಿಸುವ ಮೊಳೆಗಳೇ ಅತ್ಯಂತ ಸಣ್ಣವು. ಕೆಲವು ಸಣ್ಣ ಸಣ್ಣ ಕೈ ಗಡಿಯಾರಗಳಿಗೆ ಉಪಯೋಗಿಸುವ ಮೊಳೆಗಳು 1/34,000 ಅಂಗುಲದಷ್ಟು ಸೂಕ್ಷ್ಮವಾಗಿರುವುವಂತೆ! ಇಂತಹ 4,82,000 ಮೊಳೆಗಳನ್ನು ಒಟ್ಟುಗೂಡಿಸಿದರೆ 1 ಪೌಂಡು ತೂಕವಾಗುವುದಂತೆ!

ಪೂರ್ವ ಆಫ್ರಿಕಾದೇಶದಲ್ಲಿ ಗೋರಂಗೋರೋ ಎಂಬ ಅತ್ಯದ್ಭುತವಾದ ಜ್ವಾಲಾಮುಖಿಯಿರುವುದು! ಈ ಜ್ವಾಲಾಮುಖಿಯು ಸದ್ಯಃ ಆರಿಹೋಗಿ, ಅದರ ಮೇಲ್ಭಾಗದಲ್ಲಿ ಒಂದು ದೊಡ್ಡ ಸರೋವರವಿರುವದು. ಅದರ ಸುತ್ತಲೂ ಅರಣ್ಯದೋಪಾದಿಯಲ್ಲಿ ಗಿಡಗಳು ಬೆಳೆದಿರುವವು. ಈ ಪ್ರದೇಶವು ಒಂದು ಕಡೆಯಿಂದ ಮತ್ತೊಂದು ಕಡೆಗೆ 12 ಮೈಲುಗಳ ಉದ್ದವಾಗಿಯೂ, 35 ಮೈಲುಗಳ ಸುತ್ತಳತೆಯುಳ್ಳದಾಗಿಯೂ, 2000 ಅಡಿಗಳ ಆಳವಾಗಿಯೂ ಇರುವದಂತೆ! ಚೆನ್ನಾಗಿ ಪರಿಶ್ರಮಹೊಂದಿದ ಭೂಗರ್ಭಶಾಸ್ತ್ರಜ್ಞರಿಗೆ ಮಾತ್ರವೇ ಇದು ನಂದಿಹೋದ ಜ್ವಾಲಾಮುಖಿಯೆಂದು ಗೊತ್ತಾಗುವುದಂತೆ!

ಸ್ವೀಕಾರ

ಅರಸೀಕೆರೆ ತಾಲೂಕು ಹುಲ್ಲೂರು ಗ್ರಾಮ ನಿವಾಸಿಗಳಾದ ಮ॥ ರಾ॥ ಶ್ರೀಮಂತ ಮರುಳಸಿದ್ಧಪ್ಪನವರು ತಮ್ಮ ಗ್ರಾಮದಲ್ಲಿ ನೆರವೇರಿದ ಒಂದು ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

(3 ನೇ ಪುಟದಿಂದ ಮುಂದುವರಿದುದು.)

ಕೊಳ್ಳುವರು. 10 ಗಂಟೆಗೆ ಊಟಮಾಡುವರು. 2 ಅಥವಾ 3 ಗಂಟೆಗೆ ಉಪ್ಪಿಟ್ಟು, ಕಾಫಿ ಮೊದಲಾದ ಆಹಾರಗಳನ್ನು ತೆಗೆದುಕೊಳ್ಳುವರು ರಾತ್ರಿ 8 ಗಂಟೆ ಒಳಗಾಗಿ ಊಟವನ್ನು ಮಾಡುವರು. ಮಲಗುವುದಕ್ಕೆ ಮುಂಚೆ ಹಾಲು ಮೊದಲಾದುವುಗಳನ್ನು ತೆಗೆದುಕೊಳ್ಳುವರು. ಇಂಥಾ ಹೊಟ್ಟೆಬಾಕರಿಗೆ ಅಜೀರ್ಣದಿಂದ ಉಂಟಾಗತಕ್ಕ ಅನೇಕ ರೋಗಗಳು ಬರುವುವು. ಈ ರೋಗಗಳಿಂದ ಅಕಾಲಮರಣವನ್ನು ಕೂಡ ಹೊಂದುವರು. ಇದನ್ನು ತಪ್ಪಿಸುವುದಕ್ಕೋಸ್ಕರ ಪುರಾತನರು ತೀರ್ಥಯಾತ್ರೆಯನ್ನೂ ಉಪವಾಸವ್ರತವನ್ನು ವಿಧಾಯಕಮಾಡಿರುವರು. ಪೂರ್ವಕಾಲದಲ್ಲಿ ತೀರ್ಥಯಾತ್ರೆಯನ್ನು ಮಾಡತಕ್ಕವರು ನಡೆದುಕೊಂಡು ಹೋಗುತ್ತಿದ್ದರು. ಈ ಸಂಚಾರವು ವ್ಯಾಯಾಮರೂಪವಾಗಿ ಪರಿಣಮಿಸುತ್ತಿತ್ತು. ಇದರಿಂದ ಅನೇಕರೋಗಗಳು ಪರಿಹಾರವಾಗುತ್ತಿದ್ದುವು. ಈಗ ಮೋಟಾರುಗಳೂ ಬಸ್ಸುಗಳೂ ರೈಲುಗಳೂ ತೀರ್ಥಯಾತ್ರೆಗೆ ಅನುಕೂಲವಾಗುತ್ತಲಿವೆ. ನಡೆದುಕೊಂಡು ಹೋಗುತ್ತಿದ್ದಾಗ ಎಷ್ಟು ಪ್ರಯೋಜನವಾಗುತ್ತಿತ್ತೋ ಅಷ್ಟು ಪ್ರಯೋಜನವು ಮೋಟಾರು ಮೊದಲಾದುವುಗಳ ಸಹಾಯದಿಂದ ತೀರ್ಥಯಾತ್ರೆಯನ್ನು ಮಾಡತಕ್ಕವರಿಗೆ ಉಂಟಾಗುತ್ತಲಿಲ್ಲ. ಇದಕ್ಕೆ ದೇಹದಂಡನೆ ಇಲ್ಲದೆ ಅಭಕ್ಷ್ಯಭೋಜನ ಅಪೇಯಪಾನ ಅಗಮ್ಯಾಗಮನ ಮೊದಲಾದ ದುಷ್ಕರ್ಮಗಳಿಗೆ ಅವಕಾಶ ಮಾಡುವುದೇ ಮುಖ್ಯಕಾರಣ. ಉಪವಾಸವ್ರತದಿಂದ ಈ ಅನರ್ಥಗಳು ಪರಿಹಾರವಾಗುವುವು. ಈ ವಿಷಯವನ್ನು ಪರ್ಯಾಲೋಚಿಸಿ ದೀರ್ಘಾಯುರಾರೋಗ್ಯ ನಿಯಮಗಳಂತೆ ನಡೆದರೆ ಈಶ್ವರನ ಕೃಪೆಯಿಂದ ಐಶ್ವರ್ಯವೂ ಕೂಡ ಅಪ್ರಾರ್ಥಿತವಾಗಿ ಲಭ್ಯವಾಗುವುದು. ಪುರುಷಾರ್ಥಪ್ರಾಪ್ತಿಗೆ ಯಾರು ಆಹಾರ ವಿಹಾರಗಳನ್ನು ಶಾರೀರಕ ಧರ್ಮಶಾಸ್ತ್ರಕ್ಕೆ ಅನುಸಾರವಾಗಿ ಕ್ರಮಪಡಿಸಿಕೊಳ್ಳುವರೋ ಅವರಿಗೆ ಉಪವಾಸವ್ರತವು ಅವಶ್ಯಕವಿಲ್ಲ. ಆದರೆ ಈ ಬಾಬುಗಳಲ್ಲಿ ಯಾರು ಚಪಲಚಿತ್ತರೋ ಅವರು ಉಪವಾಸವ್ರತವನ್ನು ಅನುಷ್ಠಾನಕ್ಕೆ ತಂದುಕೊಳ್ಳದೇ ಇದ್ದರೆ ಅನಿವಾರಣೀಯವಾದ ರೋಗಗಳಿಗೂ ಅಕಾಲಮರಣಕ್ಕೂ ಗುರಿಯಾಗುವರು. ಮಿತಮೀರಿ ತೆಗೆದುಕೊಂಡರೆ ಅಮೃತವೂ ಕೂಡ ವಿಷವಾಗುವುದು. ಮಿತಿಯನ್ನು ತಿಳಿದುಕೊಳ್ಳುವುದು ಕಷ್ಟವಲ್ಲ. ತೃಪ್ತಿಯಾದ ಕೂಡಲೇ ಚಾಪಲ್ಯಕ್ಕೆ ಗುರಿಯಾಗಿ ಹೆಚ್ಚಾಗಿ ಸೇವಿಸದೆ ಇರತಕ್ಕದ್ದೇ ಆಯುರ್ವೇದದ ನಿಯಮವು. ಈ ನಿಯಮದಂತೆ ನಡೆಯುತಕ್ಕವರಿಗೆ ದೀರ್ಘಾಯುರಾರೋಗ್ಯಗಳು ಮಾತ್ರವೇ ಅಲ್ಲದೆ ಐಶ್ವರ್ಯವೂ ಕೂಡ ಪ್ರಾಸಂಗಿಕವಾಗಿ ಲಭ್ಯವಾಗುವುವು. ಈ ವಿಷಯಗಳನ್ನು ಪರ್ಯಾಲೋಚಿಸಿ ಮಹಾಜನಗಳು ಈ ಶಾಸ್ತ್ರನಿಯಮಗಳ ಪ್ರಯೋಜನವನ್ನು ಹೊಂದುವರೆಂದು ನಾನು ನಂಬಿದ್ದೇನೆ.

ಎಂ. ವಿ.

ಶಾಸ್ತ್ರಗಳ ಪ್ರದರ್ಶನ.

ಈ ತಿಂಗಳ 17 ನೇ ತಾರೀಖಿನಲ್ಲಿ ಸೆಂಟ್ರಲ್ ಕಾಲೇಜ್ ಹಾಲಿನಲ್ಲಿ ದಕ್ಷಿಣ ಇಂಡಿಯಾದ ಶಾಸ್ತ್ರಸಂಘದವರು ಮತ್ತು ಬೆಂಗಳೂರು ಪಟ್ಟಣದ ಬಯಲಾಜಿಕಲ್ ಕೆಮಿಸ್ಟ್ರಿಗಳ (ರಸಾಯನಶಾಸ್ತ್ರ) ಮೀಟಿಂಗ್ ನಡೆಯಿತು. ಅನೇಕ ದೊಡ್ಡ ಮನುಷ್ಯರು ದಯಮಾಡಿಸಿದ್ದರು. ನಮ್ಮ ದಿವಾನ್ ಸರ್ ಮಿರ್ಜಾ ಎಮ್. ಇಸ್ಮಾಯಿಲ್‌ರವರು ಅಗ್ರಾಸನವನ್ನು ವಹಿಸಿದ್ದರು. ನಮ್ಮ ಸೀನಿಯರ್ ಸರ್ಜನ್‌ರಾದ ಡಾ. ಎಲ್. ಸುಬ್ರಾಯರವರು ಈ ಸಂಘದ ಪ್ರೆಸಿಡೆಂಟರಾಗಿರುವರು. ದಿವಾನ್ ಸಾಹೇಬರವರಿಗೆ ಸ್ವಾಗತಪೂರ್ವಕವಾದ ಒಂದು ಉಪನ್ಯಾಸವನ್ನು ಮಾಡಿ, ಸರ್ ಮಿರ್ಜಾ ಸಾಹೇಬರವರ ದಿವಾನ್‌ಗಿರಿಯಲ್ಲಿ ಶಾಸ್ತ್ರಗಳ ಅಭಿವೃದ್ಧಿಗೆ ಹೇಗೆ ಅಸಾಧಾರಣವಾದ ಉತ್ತೇಜನವು ಕೊಡಲ್ಪಟ್ಟಿರುವುದೋ, ದೃಷ್ಟಿಗೆ ಸಂಬಂಧಪಟ್ಟ ಶಾಸ್ತ್ರ, ವಿದ್ಯುಚ್ಛಕ್ತಿ, ರೇಡಿಯೋ, ಟಿವಿಷನ್, ಜೂ-ಆಲಜಿ, ಜಿಯಾಲಜಿ, ಫಿಜಿಕ್ಸ್ (ಭೌತಿಕಶಾಸ್ತ್ರ) ಕೆಮಿಸ್ಟ್ರಿ (ರಸಾಯನಶಾಸ್ತ್ರ, ಬಯೋಕೆಮಿಸ್ಟ್ರಿ, ವೈದ್ಯಶಾಸ್ತ್ರ) ಮೊದಲಾದುವುಗಳು ನಾಗರೀಕತೆಯುಳ್ಳ ಪ್ರಪಂಚದಲ್ಲಿ ಎಷ್ಟು ಕ್ರಿಯೆಗಳನ್ನು ಮಾಡಿರುವುವೋ, ಘಂಟೆಗೆ 1000 ಮೈಲಿಗಳಿಗಿಂತಲೂ ಹೆಚ್ಚಾಗಿ ವಿಮಾನಗಳಲ್ಲಿ ಸಂಚರಿಸುವುದು ಹೇಗೆ ಸಾಧ್ಯವಾಗಿರುವುದೋ, ಕೃಷಿ ಕೈಗಾರಿಕೆ ಮೊದಲಾದುವುಗಳಲ್ಲಿ ಕೋಟ್ಯಂತರ ಜನಗಳು ಮಾಡತಕ್ಕ ಕೆಲಸವನ್ನು ಒಂದೊಂದು ಯಂತ್ರವು ಹೇಗೆ ಮಾಡುವುದೋ, ಚಕ್ರವರ್ತಿಗಳಿಗೆ ಸಾಧ್ಯವಾಗಿದ್ದ ಆಹಾರಗಳು, ಉಡಿಗೆಗಳು ಬಡವರಿಗೂ ಕೂಡ ಈಗ ಹೇಗೆ ಶಾಸ್ತ್ರಬಲದಿಂದ ಲಭ್ಯವಾಗಿರುವವೋ ಅವುಗಳನ್ನೆಲ್ಲಾ ನಿರೂಪಿಸಿ ಲೋಕೋತ್ತರವಾದ ಒಂದು ಉಪನ್ಯಾಸವನ್ನು ಮಾಡಿದರು. ದಿವಾನ್ ಸಾಹೇಬರವರು ಶಾಸ್ತ್ರಗಳಿಂದಾಗಿರುವ ಕೆಲಸಗಳನ್ನು ಕುರಿತು ಅತ್ಯಂತ ಪ್ರೋತ್ಸಾಹಕರವಾದ ಒಂದು ಉಪನ್ಯಾಸವನ್ನು ಮಾಡಿ, ಈ ಶಾಸ್ತ್ರಸಂಘದವರು ಮಾಡುತ್ತಲಿರುವ ಕೃಷಿಯು ಜಗದೀಶ್ವರನ ಕೃಷಿಗೆ ಸಮಾನವಾದದ್ದೆಂದು ನಿರೂಪಿಸಿ ನಮ್ಮ ಸಂಸ್ಥಾನದ ಅದೃಷ್ಟಪರಿಪಾಕದಿಂದ ಸರ್ ಸಿ. ವಿ. ರಾಮನ್‌ರವರು ನಮ್ಮ ಸೈನ್ಸ್ ಇನ್‌ಸ್ಟಿಟ್ಯೂಟಿಗೆ ಡೈರೆಕ್ಟರಾಗಿ ದೊರೆತಿರುವರೆಂಬುದಾಗಿಯೂ ದೇವರ ಅನುಗ್ರಹದಿಂದ ಡಾ|| ಎಂ. ಓ. ಫಾರೆಸ್ಟರ್‌ರವರು, ಡಾ|| ಫೌಲರ್‌ರವರೂ ಬೆಂಗಳೂರಿನಲ್ಲಿ ಇದ್ದುಕೊಂಡು ನಿಷ್ಕ ಸೇವೆಮಾಡಿಕೊಂಡಿರುವರೆಂಬುದಾಗಿಯೂ ಈ ತ್ರಿಮೂರ್ತಿಗಳ ಶಾಸ್ತ್ರೋದ್ಧಾರದ ಮೆಹನತ್ತಿನಿಂದ ಮೈಸೂರು ಸಂಸ್ಥಾನವು ಶೀಘ್ರದಲ್ಲಿಯೇ ಜರ್ಮನಿ, ಜಪಾನ್ ಮೊದಲಾದ ದೇಶಗಳಂತೆ ಈ ಭೂಮಿಯೇ ಸ್ವರ್ಗವಾಗುವಂತೆ ಮಾಡತಕ್ಕ ಶಾಸ್ತ್ರಗಳಿಗೆ ಮಾತೃಭೂಮಿಯಾಗುವುದೆಂಬುದಾಗಿಯೂ ಅಪ್ಪಣೆಕೊಡಿಸಿ ಈ ಸಂಘಗಳಿಗೂ ಶಾಸ್ತ್ರಾಭ್ಯಾಸವನ್ನು ಮಾಡತಕ್ಕ ಪಾಠಕರಿಗೂ ವಿದ್ಯಾರ್ಥಿಗಳಿಗೂ ನಮ್ಮ ದೇಶಕ್ಕೂ ದೇವರು ಸಕಲ ಸನ್ಮಂಗಳವನ್ನು ಮಾಡಲೆಂದು ಕೋರಿದರು. ಇವರ ಕೋರಿಕೆಯು ಸಫಲವಾಗಲಿ. ಇವರ ದಿವಾನ್‌ಗಿರಿಯಲ್ಲಿ ನಮ್ಮ ಸೈನ್ಸ್ ಇನ್‌ಸ್ಟಿಟ್ಯೂಟಿಗೆ ಸರ್ ಸಿ. ವಿ. ರಾಮನ್‌ರವರ ಮೆಹನತ್ತು ದೊರೆಯುವಂತೆ ಏರ್ಪಾಡುಮಾಡಲ್ಪಟ್ಟಿತು. ಈ ಏರ್ಪಾಡಿನಿಂದಾಗತಕ್ಕ ಮಂಗಳಪ್ರಮಾಣವನ್ನು ಈಗ ಹೇಳುವುದು ಅಸಾಧ್ಯ. ಜರ್ಮನಿ, ಜಪಾನ್ ಮೊದಲಾದುವುಗಳು ಹೇಗೆ ಸಕಲ ಶಾಸ್ತ್ರಗಳಿಗೂ ಮಾತೃಭೂಮಿಯಾಗಿರುವುವೋ, ಹಾಗೆ ಮೈಸೂರು ಕೂಡ ಸಕಲ ಶಾಸ್ತ್ರಗಳಿಗೂ ಪಿತೃಭೂಮಿಯಾಗಲಿ. ನಮ್ಮ ಮಹಾರಾಜರವರು ಮತ್ತು ಸರ್ ಮಿರ್ಜಾರವರು ಈ ಪ್ರಪಂಚದ ಪ್ರಭುಗಳಲ್ಲಿಯೂ ಮುಖ್ಯಮಂತ್ರಿಗಳಲ್ಲಿಯೂ ಅಗ್ರಗಣ್ಯರಾಗಿ ಸರ್ವರ ಪೂಜೆಗೂ ಪಾತ್ರರಾಗಲೆಂದು ನಾನು ಕೋರುತ್ತೇನೆ.

ಎಂ. ವೆಂಕಟಕೃಷ್ಣಯ್ಯ.

ದೊಡ್ಡ ಲೋಕಕ್ಷಯಕಾರಿಯಾವದು ಮದ್ಯಾರ್ಕ (ಸಾರಾಯಿ.)

(ಡಾ|| ಜಾನ್ ಹಾರ್ವಿ ಕೆಲ್ಲಾಗ್ ಇವರಿಂದ).

ಕಳೆದ ಸಂಚಿಕೆಯಿಂದ ಮುಂದುವರಿದುದು.

ಆದರೆ ನಮ್ಮ ರಕ್ತದಲ್ಲಿ ಮದ್ಯದ ವಿಷಸಂಬಂಧವಿಲ್ಲದಿದ್ದಾಗಮಾತ್ರವೇ ಮೇಲ್ಕಂಡ ಬಿಳೀ “ಸೆಲ್” ಗಳು ಅನ್ಯವಸ್ತುವಿನೊಡನೆ ಹೋರಾಡಬಲ್ಲವು. ಸಾರಾಯಿಯೆಂಬುದು ಮೇಲ್ಕಂಡ ಕಣಗಳಿಗೆ ಆ ಶಕ್ತಿಯನ್ನು ತಗ್ಗಿಸಿ ಅವನ್ನು ಜಡವಾಗಿ ಮಾಡಿಬಿಡುವುದು. ಮುಖ್ಯವಾಗಿ ನಿಶಾಪದಾರ್ಥಗಳ ಸಂಬಂಧವಿದ್ದಲ್ಲಿ ಆ “ಸೆಲ್‌ಗಳ” ಶಕ್ತಿಯು ನಡೆಯದು. ಅವು ಆ ವಿಷಸಂಬಂಧದಿಂದಲೇ ಪ್ರಜ್ಞೆತಪ್ಪಿ ಜಡವಾಗುವದರಿಂದ, ಮೊದಲಿನಂತೆ ಚಟುವಟಿಕೆಯಿಂದ ಕೆಲಸ ಮಾಡಲಾರವು. ಅಷ್ಟೇಕೆ? ಮೊದಲು ರಕ್ತವಾಹಿನಿಯಲ್ಲಿ ಅನ್ಯವಸ್ತುವನ್ನು ಕಂಡೊಡನೆ ಅವು ಎಷ್ಟು ಆತುರದಿಂದ ಎಲ್ಲಾ ಸೇರಿ ಮೇಲೆ ಬಿದ್ದು ಅದನ್ನು ತುಂಡುತುಂಡಾಗಿ ಮುರಿದು ಸಾಗಿಸುತ್ತಿದ್ದುವೋ, ಅಷ್ಟು ಭಯದಿಂದ ಆ ವಸ್ತುವಿನ ಸಂಪರ್ಕವನ್ನು ತಪ್ಪಿಸಿಕೊಂಡು ಹಿಂದೆ ಬಿದ್ದು ಓಡುವುವು. ಈ ಕಾರಣದಿಂದಲೇ ಪ್ರಾಯಿಕವಾಗಿ ಕಫ, ಜ್ವರ, ಸನ್ನಿಪಾತ, ಮುಂತಾದ ಸೋಂಕುರೋಗಗಳು ಮದ್ಯಪಾಯಿಗಳಿಗೆ ತಗುಲಿದರೆ, ಮರಣದಲ್ಲಿ ಪರ್ಯವಸಿತವಾಗುವುದೇ ಹೊರತು ಅವರು ಬದುಕುವುದು ಬಹಳ ಕಡಿಮೆ. ಅವರ ಬಿಳೀ ಸೆಲ್‌ಗಳಲ್ಲಿ ವ್ಯಾಧಿನಿರೋಧ ಶಕ್ತಿಯಿಲ್ಲದೆ ಅವು ಜಡವಾಗಿರುವುದೇ ಇದಕ್ಕೆ ಕಾರಣವೆಂಬುದು ಸ್ಪಷ್ಟವು.

ಶರೀರದ ಬೇರೆ ಎಲ್ಲಾ ರಚನಾವಯವಗಳೂ ಇದೇ ರೀತಿಯಲ್ಲಿ ಮದ್ಯವಿಷದಿಂದ ಜಡವಾಗಿ ಕಾರ್ಯಸಾಮರ್ಥ್ಯವಿಲ್ಲದಂತಾಗುವುವು. ಎಂದರೆ, ಮಿದುಳಿನಲ್ಲಿ ಆಲೋಚನಾಶಕ್ತಿಯೂ, ಜ್ಞಾಪಕ ಶಕ್ತಿಯೂ ತಗ್ಗುವುದು. ಸಾಧಾರಣ ಮನುಷ್ಯರಿಗೆ ಯಾವುದಾದರೂ ಒಂದು ವಿಚಾರದಲ್ಲಿ ಊಹಾಪೋಹಗಳೂ, ದೀರ್ಘಾಲೋಚನೆಗಳೂ ಹುಟ್ಟುವಂತೆ ಮದ್ಯಪಾಯಿಗಳಿಗೆ ಬುದ್ಧಿಯು ಸ್ಫುರಿಸಲಾರದು. ಮದ್ಯಪಾಯಿಗಳಿಗೆ ನರಗಳಲ್ಲಿಯೂ ಬಲವು ಕಡಿಮೆ. ಮುಖ್ಯವಾಗಿ ಒಂದೇ ಮಾತಿನಲ್ಲಿ ಸಂಕ್ಷೇಪಿಸಿ ಹೇಳಬೇಕೆಂದರೆ, ನಿಶಾಪದಾರ್ಥಗಳು ದೇಹದ ಎಲ್ಲಾ ಅವಯವಗಳಲ್ಲಿಯೂ ದುರ್ನಿವಾರ್ಯವಾದ ಒಂದು ವಿಷಸಂಬಂಧವನ್ನು ಕಲ್ಪಿಸಿ, ಮತ್ತೇರಿದ ಮನುಷ್ಯನು ಹೇಗೋ ಹಾಗೆ ಅವುಗಳನ್ನೂ ಜಡವಾಗಿ ಮಾಡಿಬಿಡುವುವು.

ಮದ್ಯದಿಂದ ಮಿದುಳಿಗೆ ಹಾನಿ.

ಮದ್ಯವು ಬುದ್ಧಿವಿಕಾಸವನ್ನು ತಗ್ಗಿಸುವುದು. ನಮ್ಮ ಶರೀರದಲ್ಲಿ ಮಿದುಳೆಂಬುದೇ ದೇಹದ ಅವಯವಗಳೆಲ್ಲಾ ಸರಿಯಾಗಿ ಕೆಲಸ ಮಾಡುವುದಕ್ಕೆ ಮಾರ್ಗದರ್ಶಿಯಾಗಿದೆ. ಆ ಮಿದುಳಿನ ‘ಸೆಲ್’ ಗಳಿಗೆ ಮದ್ಯವು ಮಹಾ ಕ್ರೂರವಿಷವೆಂದೇ ಹೇಳಬೇಕು. ಮದ್ಯವು ಅವು ಕೆಲಸ ಮಾಡಲಾರದಂತೆ ಮಾಡುವುದು.

ಮದ್ಯವು ದೇಹಕ್ಕೆ ಉದ್ವೇಗಕಾರಿಯಲ್ಲವೆಂಬ ಸುಳ್ಳು ನಂಬಿಕೆಯನ್ನು “ಪರಾಸೆಲ್ಸಸ್” ಎಂಬವನೊಬ್ಬನು ವೈದ್ಯರಲ್ಲಿ ತನ್ನ ಪ್ರಾವೀಣ್ಯವನ್ನು ಹೇಳಿಕೊಂಡು ಅಲ್ಲಲ್ಲಿ ಹರಡಿದುದರ ಮೇಲೆ ಜನಗಳಿಗೆ ಬಹುಕಾಲದವರೆಗೆ ಆ ಮಾತಿನಲ್ಲಿಯೇ ನಂಬಿಕೆಯಿತ್ತು. ಮನುಷ್ಯರ ಮತ್ತು ಇತರ ಪ್ರಾಣಿಗಳ ಶರೀರದಲ್ಲಿ ಈ ನಿಶಾಪದಾರ್ಥಗಳ ಕಾರ್ಯವೇನೆಂಬುದನ್ನು ಚೆನ್ನಾಗಿ ಪರೀಕ್ಷಿಸಿದಮೇಲೆ ಅದು ಶುದ್ಧ ತಪ್ಪೆಂದು ನಿರ್ಧರವಾಯಿತು. ಮದ್ಯವು ದೇಹದ ಲವಲವಿಕೆಯನ್ನು ತಪ್ಪಿಸಿಬಿಡುವುದರೊಡನೆ, ಪ್ರಾಣಕ್ಕೆ ಅಪಾಯಕರವು. “ಕಾರ್ನಿಜಿ ಇನ್ಸ್ಟಿಟ್ಯೂಷನ್” ಎಂಬ ಸಂಸ್ಥೆಯಲ್ಲಿ ಡಾಕ್ಟರಾಗಿದ್ದ ಬೆನಿಡಿಕ್ಟ್ ಎಂಬುವರು, ಮದ್ಯವೆಂಬುದು ಮನುಷ್ಯರ ಪ್ರಾಣಾಧಾರವನ್ನೇ ತಿಂದುಹಾಕುವ ವಿಷವೆಂಬುದನ್ನು ಪರೀಕ್ಷಾಪೂರ್ವಕವಾಗಿ ನಿರೂಪಿಸಿರುವರು. ಮದ್ಯದಿಂದ ಮುಖ್ಯವಾಗಿ ಮಿದುಳಿನಲ್ಲಿಯೇ ನ್ಯೂನತೆಯು ಏರ್ಪಡುವುದು. ಮಿದುಳಿನಲ್ಲಿ ಎಡಬಲಭಾಗಗಳೆಂಬ ಎರಡು ಭೇದಗಳುಂಟು. ಒಂದು ಭಾಗದ ಮಿದುಳು ಕೆಲಸಮಾಡಿ ಸೋತುಹೋಗಿದ್ದಾಗ, ಮತ್ತೊಂದು ಭಾಗವು ಕೆಲಸಮಾಡುವುದು. ಸ್ವಾಭಾವಿಕವಾಗಿ ನಾವು ಎಡಭಾಗದ ಮಿದುಳಿನಿಂದಲೇ ಬುದ್ಧಿಕಾರ್ಯವನ್ನು ನಡೆಸುವೆವು. (ಎಡಚರು) ಎಂದರೆ ಎಡಗೈಯಿಂದ ಕೆಲಸಮಾಡುವವರು, ಪ್ರಾಯಿಕವಾಗಿ ಬಲಮಿದುಳಿನಿಂದ ಯೋಚನೆಮಾಡುವರು. ಈ ಕಾರಣದಿಂದಲೇ ಎಡಗೈಯಿಂದ ಕೆಲಸಮಾಡುವ ವಾಡಿಕೆಯುಳ್ಳ ಮಕ್ಕಳನ್ನು ಹಾಗೆಯೇ ಬಿಟ್ಟುಬಿಡಬೇಕೇ ಹೊರತು, ಬಲಗೈಯಿಂದ ಕೆಲಸಮಾಡುವಂತೆ ನಿರ್ಬಂಧಿಸಬಾರದೆಂಬ ನಿಯಮವುಂಟು. ಏಕೆಂದರೆ ಅಂತಹ ಮಕ್ಕಳು ಎಡಗೈಯಿಂದ ಕೆಲಸ ಮಾಡುವುದನ್ನು ನೋಡಿದಾಗಲೇ, ಅಂತವರಿಗೆ ಬಲಭಾಗದ ಮಿದುಳಿನಿಂದಲೇ ಆಲೋಚನೆಯ ಕಾರ್ಯಗಳು ಜನ್ಮಸಿದ್ಧವಾಗಿ ನಡೆಯುವುದೆಂದು ಏರ್ಪಡುವುದು. ಮದ್ಯವು ಇಂತಹ ಎರಡು ಮಿದುಳುಗಳಲ್ಲಿ ಒಂದು ಭಾಗವನ್ನು ಮಾತ್ರ ಕೆಡಿಸುವುದೆಂಬ ನಿಯಮವಿಲ್ಲ. ಎರಡು ಭಾಗದ ಮಿದುಳಿಗೂ ಅದು ಕಾರ್ಯಸಾಮರ್ಥ್ಯವನ್ನು ಮಾತ್ರ ತಗ್ಗಿಸುವುದು.

ಮದ್ಯವೆಂಬುದು ಜೀವದ ಚಕ್ರದ ವೇಗವನ್ನು ತಗ್ಗಿಸಿಬಿಡುವುದು. ಹೆಂಡ ಅಥವಾ ಸಾರಾಯಿಯನ್ನು ಕುಡಿದಮೇಲೆ ಉಂಟಾಗುವ ಆನಂದವು ಅಥವಾ ಮದವು, ದೇಹಶಕ್ತಿಯ ಉತ್ತೇಜನವೆಂದು ತಿಳಿಯಬಾರದು. ಅದು ಶರೀರದ ಉತ್ಸಾಹಶಕ್ತಿಯನ್ನು ತಗ್ಗಿಸುವ ಸೂಚನೆಯೇಹೊರತು ಬೇರೆಯಲ್ಲ. “ಈಥರ್” ಮುಂತಾದ ಮಯಕವನ್ನು ತರತಕ್ಕ ಬೇರೆ ಎಲ್ಲಾ ವಿಷಗಳೂ, ಔಷಧಿಗಳೂ, ಇದೇ ಅನರ್ಥವನ್ನು ತಂದಿಡುವುವು. ಮದ್ಯವನ್ನು ಒಂದು ಮಯಕದ ಔಷಧವೆಂದು ಹೇಳಬಹುದು.

ಬಹಳ ವೇಗವಿಲ್ಲದ ವೈನ್, ಬಿಯರ್, ಮುಂತಾದುವು ದೇಹಕ್ಕೇನೂ ಕೆಡುಕನ್ನುಂಟುಮಾಡುವುದಿಲ್ಲವೆಂದೂ, ಅವುಗಳನ್ನು ಉಪಯೋಗಿಸುವುದು ಒಳ್ಳೆಯದೆಂದೂ ಕೆಲವರು ಹೇಳುವುದನ್ನು ನೀವು ಕೇಳಬಹುದು. ಶಾಸನಸಭೆಗಳಲ್ಲಿ ಸಹ ಮದ್ಯಪಾನ ನಿರೋಧದ ಕಾಯಿದೆಗೆ ಸಮ್ಮತಿಸದವರು ಮೇಲೆ ಹೇಳಿದಂತೆ ವಿಶೇಷವೇಗವಿಲ್ಲದ ವೈನ್ ಮುಂತಾದುವುಗಳನ್ನು ಕುಡಿಯಲು ಅವಕಾಶವಿರುವಂತೆ ಕಾಯಿದೆಯನ್ನು ಬದಲಾಯಿಸಬಹುದೆಂದೂ ಹೇಳುವರು. ಆದರೆ ಈಚೆಗೆ ಅವುಗಳನ್ನು ಪರಿಶೋಧಿಸಿ ನೋಡಿದುದರಲ್ಲಿ, ಒಂದು ಬಟ್ಟಲಿನಷ್ಟು ಬಿಯರಿನಲ್ಲಿರುವ ಮಧುಸಾರವು ಎಷ್ಟು ಕೆಡುಕನ್ನುಂಟುಮಾಡುವುದೆಂಬುದನ್ನು ಚೆನ್ನಾಗಿ ನಿರೂಪಿಸಿ ತೋರಿಸಬಹುದು. ಕಾರ್ನಿಜಿ ಸಂಸ್ಥೆಯ ಡಾಕ್ಟರ್ ಮೈಲ್ಸ್ ಎಂಬವರು, ಇದೇ ವಿಷಯವನ್ನು ಕುರಿತು, ಮದದ್ರಾವಕಗಳನ್ನು ಮಿತವಾಗಿ ಸೇವಿಸುವ ಅನೇಕ ಜನರ ದೇಹಪರೀಕ್ಷೆಯನ್ನೂ, ಬುದ್ಧಿಪರೀಕ್ಷೆಯನ್ನೂ ಮಾಡಿ, ಶೇಕಡ 2.75 (ಎರಡೂಮುಕ್ಕಾಲು) ಪಾಲಿನಷ್ಟು ಎಂದರೆ, ಅತಿ ಸ್ವಲ್ಪ ವೇಗವಿದ್ದ ಮದದ್ರಾವಕವು ಕೂಡ ಅತಿ ಸೂಕ್ಷ್ಮವಾದ ದೇಹಯಂತ್ರಕ್ಕೆ ವಿಷರೂಪವಾಗಿ ಪರಿಣಮಿಸಿ, ಆ ಯಂತ್ರವನ್ನು ಕೆಡಿಸುವುದೆಂದು ನಿರೂಪಿಸಿರುವರು.

(ಸಶೇಷ.)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “**ವೀರಶೈವರತ್ನ**” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಟ್ಟುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುತ್ತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತೆಜ್ವರ, ಮೈಲಿಗೆ, [illegible], [illegible] ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಪ್ಪಿಗೆ ಆಣೆ 0-9-0, 1 ಡಿಪ್ಪಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣು ಹಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು. ಕ್ರಯ ಅರ್ಧ ಡಿಪ್ಪಿಗೆ 0-9-0, 1 ಡಿಪ್ಪಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಪ್ಪಿಗೆ 0-9-0, 1 ಡಿಪ್ಪಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕಿತ್ಸೆ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ “ಆರೋಗ್ಯಭಾಗ್ಯದ ನೀತಿಸೂತ್ರ” ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[34] **ಮಲೇರಿಯಾನ ಕಂಪೆನಿ.** ನಂಬ್ರ 21 (ಹಂಪನಕಟ್ಟೆ). **ಮಂಗಳೂರು** ದ. ಕ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದ ಭೇದಿ (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಗಳಾಗುವುವು. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[15] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.

ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[16] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

⑦

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಮೇ ೧೯೩೩ [ಸಂಚಿಕೆ ೧

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ~~ಸಂಗ್ರಹೀತವಾಗಿರುವುದಲ್ಲದೆ~~, ಅಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರುಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳೂ ವಿಶೇಷವಾಗಿ ~~ಸಂಗ್ರಹೀತಗಳಾಗಿರುವುವು~~. ~~ಈ~~ ಗ್ರಂಥವು ೩೨೮ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿಂದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂಘದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ~~[illegible] ಆಣೆ~~. ೧|| ರೂಪಾಯಿ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಯಜಮಾನ್ ಅಂಡ್ ಸನ್ಸ್
ರಬ್ಬರ್ ಮೊಹರು
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡ್, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [20]

ಶ್ರೀಮದ್ರಂಭಾಪುರೀ ವೀರ[illegible]ಹಾಸನಾಧೀಶ ಶ್ರೀ ೧೦೮ ಜಗದ್ಗುರು [illegible] ರಾಜೇಂದ್ರ ಶಿವಾಚಾರ್ಯ[illegible]ದ ಸಿಂ[illegible]ಗಮನ.

[illegible] ಚಿತಾಂದೋಲ

ಅನಂತಪುರ ಜಿಲ್ಲಾ ಮಡ[illegible]ವಾದ್ಯಗಳು [illegible]ಯಿ ಬಂದ ಗ್ರಾಮದ ಶ್ರೀಮಾನ್ ಭೋಜೆಗ[illegible] ಜಯ್ಯನ[illegible]. ಇದುವ[illegible] ರಂಗಬಲ ಸಮೇತ ಸಮುಹ[illegible] ಬೇಕೆಂದು ಶ್ರೀಮಜ್ಜಗದ[illegible] [illegible]ಲಿಗೆ ಇವರ ಪಾ[illegible]ರವರು ತಾ|| 24-4-33 ನೇ ಸೋಮವಾರ ಸಾಯಂಕಾಲ 4 ಘಂಟೆಗೆ ಜಂಬಲ್‌ಬಂಡೆ ಗ್ರಾಮಕ್ಕೆ ದಯಮಾಡಿಸಿದರು. ವಿಲೇಜ್ ಮ್ಯಾಜಿಸ್ಟ್ರೇಟ್ ಶ್ರೀಮಾನ್ ಭೋಜೇಗೌಡರು ಸುತ್ತಮುತ್ತಲಿರುವ ಅನೇಕ ಗ್ರಾಮಗಳ ಭಕ್ತಸಮೂಹವನ್ನು ಬರಮಾಡಿಕೊಂಡು ಇಷ್ಟಕಪಾಲಸಮೇತರಾಗಿ ಶ್ರೀ ಜಗದ್ಗುರುಗಳವರನ್ನು ಸಂದರ್ಶಿಸಿ ಸರ್ವರ ಪರಿಚಯವನ್ನು ಅಂಕಿತಮಾಡಿಕೊಂಡು ಉತ್ಸವಕ್ಕೆ ಅಪ್ಪಣೆಯನ್ನು ಕೇಳಿಕೊಂಡರು. ಮಹಾಸ್ವಾಮಿಗಳವರು ಭಕ್ತಸಮೂಹದ ಪ್ರಾರ್ಥನೆಯನ್ನು ದಿವ್ಯಚಿತ್ತಕ್ಕೆ ತಂದು ಸಾಲಂಕೃತಸಿಂಹಲಲಾಟಪಂಚಕಲಶಯುಕ್ತ ಸುವರ್ಣರಜತತಿಲ್ಯಗಾಂದೋಲಿಕೆ (ಅಡ್ಡಪಲ್ಲಕ್ಕಿ) ಯನ್ನಾರೋಹಣವಂಗೈದಕ್ಷಣವೇ ನೆರೆದ ಭಕ್ತಸಮೂಹವು ಶ್ರೀಮದಾಚಾರ್ಯರ ಜಯಘೋಷವನ್ನು ಮಾಡುತ್ತಿರಲು ಉತ್ಸವವು ಪ್ರಚಲಿತವಾಗಿ ದರ್ಶನ ಫಲಾಶೀರ್ವಾದಗಳಿಂದ ಸರ್ವರನ್ನೂ ಕೃತಾರ್ಥರನ್ನಾಗಿ ಮಾಡಿ ಶ್ರೀಮಾನ್ ಭೋಜೇಗೌಡರು ರಚಿಸಿದ ಅವರ ಧರ್ಮಛತ್ರದಲ್ಲಿ ನಿರ್ಮಿಸಿದ್ದ ಸಾಲಂಕೃತ ಪ್ರಧಾನಮಂಟಪದೊಳ್ ವಿರಾಜಿಸುತ್ತಿದ್ದ ಸುವರ್ಣರಜತಸಿಂಹಾಸನದೊಳ್ಮಂಡಿಸಿ ಸರ್ವಸುಖಕ್ಕೂ ಗುರುಭಕ್ತಿಯೇ ಕಾರಣವೆಂಬುದನ್ನು ಅಮೃತಮಯವಾದ ವಾಣಿಯಿಂದ 1 ಘಂಟೆಯವರೆಗೂ ಸದುಪದೇಶವಂಗೈದು ಸಭಾವಿಸರ್ಜನೆಗೆ ಅಪ್ಪಣೆಯನ್ನು ದಯಪಾಲಿಸಿದರು. ಶ್ರೀಮಾನ್ ಭೋಜೇಗೌಡರು ಉತ್ಸವಭಾಗಿಗಳಾದ ಪ್ರಾಯಶಃ 2000 ಸಮಸ್ತ ಆಬಾಲವೃದ್ಧರನ್ನೂ ಅನ್ನಸಂತರ್ಪಣೆಯಿಂದ ತೃಪ್ತಿಗೊಳಿಸಿದರು. ಬಳಿಕ ಶ್ರೀ ಮಹಾಜಗದ್ಗುರುಗಳವರ ಆತಿಥ್ಯದಲ್ಲಿ ಬದ್ಧಕಂಕಣರಾಗಿ ಅನುಷ್ಠಾನವಂ ಮಾಡಿಸಿ ವಿಧಿವತ್ತಾಗಿ ಮಹಾಗುರುಪೂಜೆಯಂಗೈದು ಅವರ ಕೃಪೆಗೆ ಪಾತ್ರರಾಗಿ ಮಹಾಸಂಸ್ಥಾನದ ಪದ್ಧತಿಯ ಮೇರೆಗೆ 160 ರೂ. ಪಾದಕಾಣಿಕೆಯನ್ನು ಸಮರ್ಪಿಸಿದ್ದಲ್ಲದೆ ಪ್ರತಿವರ್ಷವೂ ಮಹಾಸಂಸ್ಥಾನದಲ್ಲಿ ಜರಗುವ ಶ್ರೀ ಭಗವತ್ಪಾದ ರೇಣುಕಾಚಾರ್ಯರ ಜಯಂತ್ಯುತ್ಸವಕ್ಕಾಗಿ ತಾವೂ ತಮ್ಮ ಉಭಯಪತ್ನಿಯರೂ ಮತ್ತು ತಮ್ಮ ಪುತ್ರಿಯೂ ಮತ್ತು ತಮ್ಮ ಅಳಿಯಂದಿರು ಹೀಗೆ ಐದುಜನಗಳ ಹೆಸರಿನಿಂದ ಪ್ರತಿಯೊಬ್ಬರಿಗೂ 30 ರೂ. ಗಳಂತೆ [illegible]50 ರೂ. ಗಳನ್ನು ಸಮರ್ಪಿಸಿದರು. ಈ ವಿಷಯವು ಮುಂದೆ [illegible]ನವಾಗುವುದು. ಮಹಾ[illegible]ಗಳವರಿಂದ ಮುಂದೆ [illegible]ರಿಂದ, [illegible]ತುವ ಸಂಸ್ಕೃತಧಮ[illegible] [illegible]ಯೋಗ್ಯತೆ ತಮ್ಮ ವಿಷಸಂಪತ್ತ 500 ರೂ. ತಮ್ಮ [illegible] ತ್ತವು. [illegible] ವೂ|| ಶ್ರೀ|| [illegible]ರ ಹೆಸರಿನಿಂದ [illegible] [illegible]ಯ ಪತ್ನಿಯವರಾದ ವೂ|| ಶ್ರೀ|| ಚನ್ನಮ್ಮನವರ ಹೆಸರಿನಿಂದ 100 ರೂ. ತಮ್ಮ ಪುತ್ರಿಯವರಾದ ಚಿ|| ಸೌ|| ಪಾರ್ವತಮ್ಮನವರ ಹೆಸರಿನಿಂದ 100 ರೂ. ತಮ್ಮ ಪುತ್ರಿಯವರ ಪತಿಯಾದ ರಾ|| ನಂಜೇಗೌಡರ ಹೆಸರಿನಿಂದ 100 ರೂ. ಅಂತು ಹೀಗೆ ಐವರ ಹೆಸರಿನಿಂದ 1050 ರೂಪಾಯಿಗಳನ್ನು ಉದಾರಭಾವದಿಂದ ಮಹಾಪಾದದಲ್ಲಿ ಸಗದಾಗಿ ಸಮರ್ಪಿಸಿ ಜಗದ್ಗುರುಗಳವರ ಕೃಪೆಗೆ ಪಾತ್ರರಾಗಿ ಫಲಾಶೀರ್ವಾದವನ್ನು ಪಡೆದು ಧನ್ಯರಾದರು. ಇದುವೇ ಮನುಷ್ಯಜನ್ಮದ ಕರ್ತವ್ಯಕರ್ಮ. ಗುರುಭಕ್ತಿವಂತರ ಆಚಾರ. ಧನಿಕರ ಶ್ರೇಯಸ್ಸು. ಶ್ರಮುಖಮಹಾಶಯರ ಉದಾರಭಾವ. ಇಂತಹ ಗುರುಕೃಪಾಪಾತ್ರನಾದ ಪುರುಷಸಿಂಹರುಗಳಲ್ಲವೇ ಶಿವಲೋಕಸುಖಭೋಗವು? ಭೂಲೋಕದಲ್ಲಿ ಶ್ರೀ ಭೋಜೇಗೌಡರೇ ಧನ್ಯರು. ಶ್ರೀಮಜ್ಜಗದ್ಗುರು ರೇಣುಕಶಿವಾಚಾರ್ಯರು ಇವರ ಪುತ್ರಿಯ ದ್ವಾರಾ ವಂಶವರ್ಧನವನ್ನು ಮಾಡಿ ಇಹೋಪ್ರತಿಶಯವಾಗಿ ಮಹಾಸಾದಕ್ಕೆ ಸೇವೆಯನ್ನು ಮಾಡಬೇಕೆಂದಿರುವ ಇವರ ಸತ್ಸಂಕಲ್ಪವನ್ನು ನಡೆಯಿಸಿಕೊಟ್ಟು ಸಂಕಲ್ಪ ಸಾಫಲ್ಯವನ್ನುಂಟುಮಾಡಲೆಂದು ದಯಾಮಯರಾದ ಶ್ರೀಮದಾಚಾರ್ಯವರ್ಯರನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಈ ನಮ್ಮ ಮಹಾಜಗದ್ಗುರುಗಳವರ ಕರುಣಾಪ್ರಭಾವವು ಮಹಾಪೀಠ ಮತ್ತು ಸಮಾಜ ಇವುಗಳ ಅಭಿವೃದ್ಧಿಗೆ ಶ್ರೀಮಾನ್ ಭೋಜೇಗೌಡರಂತಹ ದಾನಶೂರ ವ್ಯಕ್ತಿಗಳನ್ನು ತರಬೇಕುವದಾಗುತ್ತಿರುವುದರಿಂದ ಈಹೊತ್ತಿಗೆ ಇಂತಹ ಜಗದ್ಗುರುಗಳವರನ್ನು ಪಡೆದ ವೀರಶೈವ ಜಗತ್ತೇ ಧನ್ಯ !

ಪ್ರತ್ಯಕ್ಷದರ್ಶಿ.

ರೇವಣಸಿದ್ಧೇಶ್ವರ ರಥೋತ್ಸವ.

ಕ್ಲೋಸ್‌ಪೇಟೆ ತಾಲ್ಲೂಕು ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯವರ ಗಿರಿಯಲ್ಲಿ ಮಾಮೂಲ್ ಮೇರೆಗೆ ಇದೇ ವೈಶಾಖ ಶು|| ೧೩ ಭಾನುವಾರದಿಂದ ಬಹುಳ ತದಿಗೆ ಶುಕ್ರವಾರದವರೆಗೆ ಶ್ರೀ ಸ್ವಾಮಿಯವರ ಜಾತ್ರೆಯು ನಡೆಯುತ್ತದೆ. ಉತ್ತರ ಇಂಡಿಯಾದಿಂದಲೂ, ದಕ್ಷಿಣ ಇಂಡಿಯಾದಿಂದಲೂ ಅನೇಕ ಸಹಸ್ರಜನಭಕ್ತಾದಿಗಳು ಶ್ರೀ ಭಗವತ್ಪಾದರ ದರ್ಶನಕ್ಕೆ ದಯಮಾಡಿಸುತ್ತಾರೆ. ನೀರು, ನೆಳಲುಗಳವಸತಿ ಚನ್ನಾಗಿದೆ.

ವೈಶಾಖ ಶು|| ೧೩ ಭಾನುವಾರ (7-5-33) ಧ್ವಜಾರೋಹಣ.

ವೈ|| ಶು|| ೧೪ ಸೋಮವಾರ (8-5-33) ಗಿರಿಜಾಕಲ್ಯಾಣ, ಅಗ್ನಿಕುಂಡ.

ವೈ|| ಶು|| ಪೌರ್ಣಮಿ ಮಂಗಳವಾರ (9-5-33) ರಥೋತ್ಸವ.

ವೈ|| ಬ|| ೧ ಬುಧವಾರ (10-5-33) ಶ್ರೀಗಿರಿಪ್ರದಕ್ಷಿಣೆಗೆ ರಾವಣಾಸುರೋತ್ಸವ ಮತ್ತು ವೃಷಭೋತ್ಸವ.

ವೈ|| ಬ|| ೨ ಗುರುವಾರ (11-5-33) ವಸಂತೋತ್ಸವ.

ವೈ|| ಬ|| ೩ ಶುಕ್ರವಾರ (12-5-33) ಹೂವಿನಪಾಲಕಿ ಉತ್ಸವ.

ಮೇಲ್ಕಂಡಂತೆ ಶ್ರೀ ಭಗವತ್ಪಾದರವರ ಉತ್ಸವಾದಿಗಳು ಬಹಳ ವಿಜೃಂಭಣೆಯಿಂದ ನಡೆಯುವಪ್ರಯುಕ್ತ ಸಕಲರೂ ದಯಮಾಡಿಸಿ ಶ್ರೀ ರೇಣುಕಭಗವತ್ಪಾದರ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

ಶ್ರೀಗಿರಿಯು ಕ್ಲೋಸ್‌ಪೇಟೆಯಿಂದ 7 ಮೈಲು ಇದೆ. ಮೋಟಾರ್‌ಬಸ್ಸುಗಳು ದೊರೆಯುತ್ತವೆ.

ಗುರುಭಕ್ತರು.

ಅಮೇರಿಕೆಯ ಮಿಲ್ವಾಕೀ ನಗರದ 'ವೆಸ್ಟ್‌ಅಲಿಸ್ ಪ್ರೆಸ್‌ಬಿಟೇರಿಯನ್ ಚರ್ಚ್'ನ ಅಧಿಕಾರಿಗಳು ತಮ್ಮ ಚರ್ಚಿಗೆ ಮೋಟಾರಿನಲ್ಲಿ ಬರುವ ಜನರಿಗೆಲ್ಲಾ ಪೆಟ್ರೋಲನ್ನು ಉಚಿತವಾಗಿ ಕೊಡುವರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಈಗ ಎತ್ತ ನೋಡಿದರತ್ತ ಪರಿಸ್ಥಿತಿಯು ವಿಲಕ್ಷಣ ಪರಿಣಾಮ ಮೂಲಕವಾಗಿ ಸಂಭವಿಸಿರುವ ಜೀವನಕಲಹದ ಹಬ್ಬುಗೆಯಿಂದ:—

ದನ್ತಾನಾಂ ಭಾಸ್ಕರೀಣಾಂ ಚ ಘೋರಯುದ್ಧಂ ಪ್ರವರ್ತತೆ ।
ನಜಾನೆ ಗಿರಿಜಾಜಾನೆ! ಕೇಷಾಂ ಭಂಗೋ ಭವಿಷ್ಯತಿ ॥

ಎಂಬುದಾಗಿ ಕೇಳಬರುವ ಸೊಲ್ಲಿನ ಫಲಿತಾಂಶವೆಂತಾದಪುದೋ ಅದನ್ನಾರು ಬಲ್ಲರು? ಜಗತ್ತಿನಲ್ಲಿ ಮಾನವರ ಬಹಿಃಪ್ರಾಣವೆನಿಸುವ ನಮ್ಮ ಹೊನ್ನು ಬಿಡುವಿಲ್ಲದೆ ಹರಿವ ಹೊಳೆಯಂತೆ ಹರಿದು ಪಡುಗಡಲನ್ನು ಸೇರುತ್ತಿರುವುದು. ಸರ್ವದೇಶಗಳೂ ಅರ್ಥಿಕನ್ಯೂನತೆಯೆಂಬ ಪಿಡುಗಿನಿಂದುಂಟಾದ ವ್ಯಾವಹಾರಿಕದ ತೊಂದರೆಯಿಂದ ಪರಿಪರಿಯ ಗಂಡಾಂತರಗಳಿಗೊಳಪಟ್ಟು ನರಳುತ್ತಿರುವುವು. ಅದರಲ್ಲಿಯೂ ಭಾರತೀಯರಾದರೋ ಧಾರ್ಮಿಕದೃಷ್ಟಿಯಿಂದಲೂ, ವ್ಯಾವಹಾರಿಕಸ್ಥಿತಿಯಿಂದಲೂ ಅವನತಿಗೀಡಾಗಿರುವುದನ್ನು ಯೋಚಿಸಿದರೆ ತುಪ್ಪವೂ ಇಲ್ಲ, ಎಣ್ಣೆಯೂ ಇಲ್ಲ; ಬರೇ ಧೂಪಾರ್ತಿಯೊಂದೇ ಕೈಯಲ್ಲುಳಿಯಿತೆಂಬಂತಾಗಿರುತ್ತಾರೆ. ಹಿಂದೂಸ್ಥಾನದೊಳಗಿನ ಅಶಿಕ್ಷಿತರಿಗೆ ಸಂಬಂಧಪಟ್ಟ [illegible] ಹಾಗಿರಲಿ, ಸುಶಿಕ್ಷಿತರೆನ್ನುವವರ ಹಾಡೇ ಅಪಸ್ವರವಾಗಿ ಕೇಳಬರುತ್ತಿರುವುದು. ಅವರ ಹಾಡು ತೆನುಗು ಸಂಸ್ಕೃತ-ಕನ್ನಡವೆಂಬ ಮೂರು ಬೆರಕೆಯ ಪದ್ಯವನ್ನು ಹೋಲುವುದು:—

ತಣ್ಣಿಲಾಯಿ ಗೃಹಮಂದು ನಸನ್ತಿ
ತಿಂಡಿಕೈದಿ ಬಹುಮಂದಿ ವಸನ್ತಿ ।
ಕುಂಡಲನ್ನು ಪರಿತೋಷಿ ಲುಠನ್ತಿ
ರಣ್ಣನಾಸುತಲು ಎಲ್ಲ ಹಸನ್ತಿ ॥

ಮನೆಯಲ್ಲಿ ಅಕ್ಕಿಯೇ ಇಲ್ಲ, ಅಯ್ಯೋ! ಕೂಳಿಗಾಗಿ ಮನೆಯಲ್ಲಿ ಬಹುಜನರಿರುವರಲ್ಲಾ, ಮನೆಯೊಳಗಿರುವ ಅಲ್ಯುಮಿನಿಯಂ ಭಾಂಡೆಗಳು ಬರಿದಾಗಿ ಅತ್ತಿತ್ತ ಉರುಳಾಡುತ್ತಿವೆ; ಈ ನನ್ನ ಅವಸ್ಥೆಯನ್ನು ನೋಡಿ ರಂಡೇಮಕ್ಕಳು ನಗುತ್ತಾರೆ; ಏನು ತಾನೇ ಮಾಡಲಿ?

ಈ ಬಗೆಯ ದೈನ್ಯೋಕ್ತಿಗಳು ಎಲ್ಲರ ಬಾಯಿಂದ ಹೊರಡುವುದಿಲ್ಲವೆಂದು ಹೇಳಬಹುದಾದರೂ, ಈಗ ಈಗೋಳೇ ಎಲ್ಲಕಡೆ ಹೆಚ್ಚುತ್ತ ನಡೆದಿರುವುದೆಂಬ ಸಂಗತಿಯನ್ನು ಅರಿಯದವರಾರೂ ಇಲ್ಲ. ಇನ್ನು ಮುಂದಿನ ಮಾತು ಮುಂದೆ! ಈ ರೀತಿಯಾಗಿ ಸಾರ್ವತ್ರಿಕವಾದ ಅನೇಕವಿಧವಾದ ಅನನುಕೂಲತೆಯಿಂದ ಜನರ ಉಪಜೀವನವು ಕೂಡ ಸುಸೂತ್ರವಾಗಿ ಸಾಗದಂತಾಗಿರುವುದು. ಒಬ್ಬನ ಕೌಟುಂಬಿಕಪೋಷಣೆಯು ಯಾವಬಗೆಯ ಚೊಬ್ಬಾಟವಿಲ್ಲದೆ ಜರುಗಲೆಂದು ಅವನು ಇಡೀದಿವಸವೆಲ್ಲ ದುಡಿದರೂ ಹೊಟ್ಟೆತುಂಬ ಅನ್ನವೇ ಸಿಕ್ಕುವುದಿಲ್ಲವೆಂಬ ಕೂಗು ಮತ್ತೆಯೂ ಕೇಳಬರುವುದು. ಈ ಕಾಲದ ಜನರ ಬಾಳುವೆಯ ಪರಿಸ್ಥಿತಿ ಹೀಗಾಗಿರಲು ಅನೇಕ ಕಾರಣಗಳಿರುವುವೆಂದು ತಿಳಿದುಬಂದರೂ ಅವೆಲ್ಲವೂ ಅಧರ್ಮಾಚರಣೆಯೆಂಬುದೊಂದರ ಹೊಟ್ಟೆಯೊಳಗಿರುವುವು. ಹೀಗೆ ಹೇಳಲ್ಪಡುವ ಈ ನಮ್ಮ ಮಾತು ಒಂದಕ್ಕೊಂದು ಸಂಬಂಧವಿಲ್ಲದುದೆಂದು ಥಟ್ಟನೆ ಯಾರಾದರೂ ನುಡಿಯಬಹುದು. ಆದರೂ, ಅವರು ಆ ನುಡಿಯನ್ನು ಸಹಸಾ ನಿರಾಕರಿಸಲು ದುಡುಕದೆ ಸಾವಧಾನಮನಸ್ಸಿನಿಂದ ಸ್ವಲ್ಪವಾದರೂ ಆಲೋಚನೆಮಾಡುವುದೊಳ್ಳೆಯದು.

'ಅಧರ್ಮಾಚರಣೆ' ಅಂದರೇನು? ಧರ್ಮದ ಕಟ್ಟಳೆಯನ್ನನುಸರಿಸಿ ನಡೆಯದಿರುವುದು. 'ಧರ್ಮವು' ಅಂದರೇನು? ಇದರ ವ್ಯಾಪ್ತಿಯು ಬಲು ಆಳವಾಗಿದೆ. ಆದರೂ 'ಸ್ವೈರಾಚರಣೆಗೆ ನಿರ್ಬಂಧವನ್ನು ಹಾಕುವುದು' ಎಂಬುದಿಷ್ಟೇ ಅದರ ಗುಟ್ಟು. ಉಣ್ಣು, ತಿರುಗಾಡು, ಕ್ರೀಡಿಸು, ನಿದ್ದೆಮಾಡು ಎಂಬ ಮುಂತಾದುದರ ಬಗ್ಗೆ ಯಾರೂ ಯಾರಿಗೂ ಹೇಳುವುದೇ ಬೇಡ. ಈ ವ್ಯವಹಾರಗಳು ಆ ಆ ಇಂದ್ರಿಯಗಳ ನೈಸರ್ಗಿಕ ಧರ್ಮಗಳಾಗಿರುತ್ತವೆ. ಆ ಆ ಇಂದ್ರಿಯಗಳಿಗೆ ಯಾವ ಬಗೆಯ ನಿರ್ಬಂಧವಿಲ್ಲದಿರುವಿಕೆಯೇ ಸ್ವೈರಾಚರಣೆಗೆ ಮೂಲ ಹೇತುವು. ಯಾವದೊಂದೂ ನಿರ್ಬಂಧಕ್ಕೊಳಪಡದ ಸ್ವೈರಕನದಿಂದ್ರಿಯಗಳು ಕಡಿವಾಣವಿಲ್ಲದ ಕುದುರೆಗಳಂತಿರುವುವು. ಕಡಿವಾಣಗಳಿಲ್ಲದ ಕುದುರೆಗಳು ರಥಕ್ಕೆ ಹೂಡಲ್ಪಟ್ಟವಾದರೆ ಅವುಗಳಿಂದ ಹೇಗೆ ಅನರ್ಥವು ಸಂಭವಿಸುವುದೋ ಹಾಗೇ ಸ್ವಭಾವತಃ ಸ್ವೈರವೃತ್ತಿಯುಳ್ಳ ಇಂದ್ರಿಯಗಳಿಗಾದರೂ ಯಾವದೊಂದೂ ನಿರ್ಬಂಧವಿಲ್ಲವಾದರೆ ಅವುಗಳಿಂದಲೂ ಅನರ್ಥಪರಂಪರೆಗಳೊದಗುವುವೆಂಬುದು ಅನುಭವಸಿದ್ಧವು. ಅದು ಕಾರಣವೇ ಕಠೋಪನಿಷತ್ತಿನಲ್ಲಿ (೧-೩) ಇಂದ್ರಿಯಗಳು ಕುದುರೆಗಳಿಗೆ ಹೋಲಿಸಲ್ಪಟ್ಟಿವೆ. ಇಷ್ಟೇ ಅಲ್ಲ ಆ ಉಪನಿಷತ್ತಿನ 'ಆತ್ಮಾನಂ ರಥಿನಂ ವಿದ್ಧಿ' ಎಂಬ ಮೊದಲಾದ ಮಂತ್ರವರ್ಣಗಳಲ್ಲಿ ಆತ್ಮನು, ಶರೀರವು, ಬುದ್ಧಿಯು, ಮನಸ್ಸು, ಇಂದ್ರಿಯಗಳು ಎಂಬಿವು ಅನುಕ್ರಮವಾಗಿ ರಥಾರೂಢನಾದ ಯಜಮಾನನು, ರಥವು, ಸಾರಥಿಯು, ಕಡಿವಾಣವು, ಕುದುರೆಗಳು ಎಂಬಿವುಗಳಿಗೆ ಹೋಲಿಸಿ ಬಣ್ಣಿಸಲ್ಪಟ್ಟಿವೆ. ಆ ಉಪನಿಷದ್ವಚನಸಾರವನ್ನೇ ಓರ್ವ ಮಹಾನುಭಾವನು ಹೀಗೆ ಹೇಳುತ್ತಾನೆ:—

ದೇಹಸ್ಯಂದನ ಏವ ತತ್ರ ತುರಗಾಃ ಪ್ರಾಣೇನ್ದ್ರಿಯಾಣ್ಯೇವಚ
ಬುದ್ಧಿಃ ಸಾರಥಿರೇವ ಧಾರಯತಿ ಯಸ್ತ್ವೇಷಾಂ ಕರೇ ರಶ್ಮಯಃ ।
ಸಂಯನ್ತುಂ ಯದಿ ಸಾರಥಿರ್ನತುರಗಾನೇತಾ ನಯಂ ಶಕ್ನುತೇ
ಗರ್ತಾಯಾಂ ನನು ಪಾತಯನ್ತಿ ತುರಗಾ ಮತ್ತಾಃಸಸೂತಂರಥಮ್ ॥

ದೇಹವೆಂಬುದೇ ರಥವು, ಜ್ಞಾನೇಂದ್ರಿಯಗಳೇ ಅದಕ್ಕೆ ಹೂಡಿದ ಕುದುರೆಗಳು, ಆ ಕುದುರೆಗಳನ್ನು ನಡೆಸುವ ಬುದ್ಧಿಯೇ ಸಾರಥಿಯು, ಬುದ್ಧಿರೂಪನಾದ ಆ ಸಾರಥಿಯ ಕೈಯಲ್ಲಿರತಕ್ಕ ಸಾರಾಸಾರವಿಚಾರಾತ್ಮಕ ಮನೋವೃತ್ತಿಗಳೆಂಬವೇ ಕುದುರೆಗಳನ್ನು ಅತ್ತಿತ್ತ ಹೋಗಲೀಸುವ ಕಡಿವಾಣದ ಹಗ್ಗಗಳು; ಈ ಸಾರಥಿಯು ಈ ಕುದುರೆಗಳನ್ನು ತನ್ನಧೀನವಾಗಿಟ್ಟುಕೊಳ್ಳಲು (ಸಂಯಮನಗೊಳಿಸಲು) ಸಮರ್ಥನಾಗದಿದ್ದರೆ, ಕೊಬ್ಬಿದ ಕುದುರೆಗಳು ಸಾರಥಿಯನ್ನೂ ರಥವನ್ನೂ ಸ್ವೈರವೃತ್ತಿಯಿಂದೆಳೆದೊಯ್ದು ಆಳವಾದ ತಗ್ಗಿನಲ್ಲಿ ಚೆಲ್ಲಿಬಿಡುತ್ತವೆ.

ಅದ್ದರಿಂದ, ಇಂದ್ರಿಯಗಳ ಚಾಪಲ್ಯವು ಅನರ್ಥಕ್ಕೆ ಹೇತುವಾಗಿರುವುದು. ಶಿಕ್ಷಣದೋಷದಿಂದಲೋ ಸಂಸರ್ಗದೋಷದಿಂದಲೋ ಇಂದ್ರಿಯಗಳ ಸ್ವೈರವೃತ್ತಿಗೆ ಮೆಚ್ಚಿದ ಜನರು ದಿನದಿನಕ್ಕೆ ಬಗೆಬಗೆಯ ವಿಷಯೋಪಭೋಗಲಾಲಸೆಯಿಂದ ಆ ಆ ವಿಷಯಗಳ ಪ್ರಾಪ್ತಿಗಾಗಿ ಎಡೆಬಿಡದೆ ಹೆಣಗಾಡುತ್ತಿರುವರು. ಕೇವಲ ವಿಷಯೇಂದ್ರಿಯಗಳ ಸಂಯೋಗದಿಂದೇ ನಾವು ಕೃತಾರ್ಥರಾಗುವೆವೆಂಬ ನಂಜು ತಲೆಗೇರಿದ ಜನರು ವಿಷಯೋಪಭೋಗವಾಸನೆಯನ್ನು ತೃಪ್ತಿಪಡಿಸುವ ಹಂಬಲದಿಂದ ಹಗಲಿರುಳೆನ್ನದೆ ಎಷ್ಟೋ ಕಸರತ್ತು ಮಾಡುತ್ತಿರುವರಾದರೂ 'ಅಮ್ಮ ನೂಕುದೆಲ್ಲ ಬೊಮ್ಮಗ ನುಡದಾರವಾಗಲಿಲ್ಲ' ವೆಂಬ ಗಾದೆಯಂತೆ ಅವರ ಮನದ ಹಪಹಪೆಯು ಕಡಿಮೆಯಾಗದಿರುವುದರಿಂದ ಮತ್ತೂ ಮೋರೆಯನ್ನು ಕಿವುಚಿ ನರಳುತ್ತಲೇ ಇರುವರು. ವಿಷಯಸುಖದ ಮೋಹಪಾಶಗತರಾದ ಮನುಷ್ಯರಲ್ಲಿ ಸತ್ಪ್ರವೃತ್ತಿಯೇ ಅಭಾವವಾಗಿ ದುಷ್ಪ್ರವೃತ್ತಿಯು ಬೆಳೆದು, ನಾಸ್ತಿಕತೆಯೂ ರಾಕ್ಷಸಸ್ವಭಾವವೂ ಎಂಬೀ ದುರ್ಗುಣಗಳು ಮನೆಮಾಡುತ್ತವೆ. ಈ ವಿಧವಾದ ದುರ್ಗುಣಗಳೇ ಮನುಷ್ಯನ ಅಧೋಗತಿಗೆ ಕಾರಣವಾಗಿರುವುವು. ಈ ತೆರದ ಮನುಷ್ಯರೇ ಹೆಚ್ಚಿದ ರಾಷ್ಟ್ರವಾದರೂ ರಸಾತಳಕ್ಕಿಳಿಯುವುದು.

'ಸುಧಾರಣೆ' ಅಂದರೆ ಮನುಷ್ಯರ ಸ್ವಾಭಾವಿಕವಾದ ಸ್ವೈರವರ್ತನಕ್ಕೆ ತಕ್ಕ ಅನುಕೂಲ್ಯವನ್ನು ಕಲ್ಪಿಸಿಕೊಡುವುದೆಂಬರ್ಥವು ಗ್ರಹಿಸಲ್ಪಡುವುದಾದರೆ 'ಇದನ್ನು ಮಾಡತಕ್ಕದ್ದು, ಇದನ್ನು ಮಾಡಕೂಡದು' ಎಂಬ ಕಾನೂನಿನ (ನಿರ್ಬಂಧದ) ಆವಶ್ಯಕತೆಯೇನು? ಯಾವುದಕ್ಕೂ ಯಾವ ಬಗೆಯ ನಿರ್ಬಂಧವೇ ಇಲ್ಲ. ಮನಬಂದ ತೆರದಿ ಹೂಡಿ ಹೋಗಲಿ! ಎಂಬ ಮಾತಿನ ಮೇಲೆಯೇ ಕೈಯೂರಿ ಜಗತ್ತಿನ ಸರ್ವವ್ಯವಹಾರವೂ ಸರಿಯಾಗಿ ನಡೆಯಲು ಶಕ್ಯವಿರುವುದೇ? ಇಲ್ಲ. ಅದ್ದರಿಂದ ಸಮಾಜಸುಧಾರಣೆಗಾಗಿ ಅಂದರೆ ಸರ್ವಜನರ ಹಿತಕ್ಕಾಗಿ ಸ್ವಭಾವತಃ ಪ್ರಾಪ್ತವಾದ ಸ್ವೈರಾಚರಣೆಗೆ ನಿರ್ಬಂಧವನ್ನು ಹಾಕುವುದೇ 'ಧರ್ಮ' ವೆಂದು ತಿಳಿವುದು ವಿಹಿತವು. ಅದು ಲೌಕಿಕ ಅಧ್ಯಾತ್ಮಿಕ ವಿಷಯಗಳನ್ನನುಲಕ್ಷಿಸಿ ವ್ಯವಹಾರ ಪರಮಾರ್ಥಗಳಲ್ಲಿ ಬೇರೆಬೇರೆ ಹೆಸರುಗಳಿಂದ ಕರೆಯಲ್ಪಟ್ಟರೂ ಮನುಷ್ಯರಿಗೆ ಆತ್ಮಸಂಯಮನಗುಣವನ್ನು ಕಲಿಸಿ ಶಾಂತಿಯನ್ನೊದಗಿಸಿಕೊಡುವುದೇ ಅದರ ಮುಖ್ಯವಾದ ಧ್ಯೇಯವು. ಅಂತಪ್ಪ ಧರ್ಮವನ್ನೇ ಧಿಕ್ಕರಿಸುವವರೂ ಹಾಳಾಗಿ ಹೋಗಲೆಂದು ಶಪಿಸುವವರೂ ಸುಧಾರಣೆಯ ಮಾರ್ಗವನ್ನನುಸರಿಸಿ ನಡೆಯುತ್ತಿರುವರೋ ಆ ಮಾರ್ಗಭ್ರಷ್ಟರಾಗಿರುವರೋ ಎಂಬ ಸಾಧಕಬಾಧಕ ವಿಚಾರವನ್ನು ತಮ್ಮಲ್ಲಿ ತಾವೇ ಮಾಡಿಕೊಳ್ಳಲು ಯೋಗ್ಯತೆಯುಳ್ಳದಷ್ಟು ಅಶಿಕ್ಷಿತಮತಿಗಳಾಗಿರುವುದಿಲ್ಲವಷ್ಟೆ!

ಈ ಬಗೆಯ ಸಮಾಜಸುಧಾರಣೆಯನ್ನನುಲಕ್ಷಿಸಿಯೇ ಅಯ್ದು ಸಾವಿರ ವರ್ಷಗಳ ಹಿಂದಿನ ಹಿರಿಯರು (ಮ. ಭಾ. ಶಾಂತಿ. ೨೯೪-೨೯):—

ಆಹಾರನಿದ್ರಾಭಯಮೈಥುನಂ ಚ
ಸಮಾನಮೇತತ್ಪಶುಭಿರ್ನರಾಣಾಮ್ ।
ಧರ್ಮೋ ಹಿ [illegible]ಮಧಿಕೋ ವಿಶೇಷೊ
ಧರ್ಮೇಣ [illegible] ಪಶುಭಿಃ ಸಮಾನಃ ॥

ಆಹಾರ, ನಿದ್ರೆ, ಅಂಜಿಕೆ, ಮೈಥುನ ಎಂಬೀವ್ಯವಹಾರಗಳು ಮನುಷ್ಯರಿಗೂ ಪಶುಗಳಿಗೂ ಸಮವಾಗಿಯೇ ಪ್ರಾಪ್ತವಾಗಿವೆ. ಆದರೆ, ಧರ್ಮವೆಂಬುದೇ (ಅಂದರೆ ಈ ನೈಸರ್ಗಿಕವಾದ ನಡುವಳಿಕೆಗಳಿಗೆ ಕಟ್ಟಳೆಯನ್ನು ಮಾಡುವುದೇ) ಮನುಷ್ಯರಿಗೂ ಪಶುಗಳಿಗೂ ಇರುವ ಭೇದವು. ಅಂತಪ್ಪ ಧರ್ಮವಿಲ್ಲದವರು (ಸ್ವೈರಮನೋವೃತ್ತಿಗೆ ಮರ್ಯಾದೆಯೇ ಇಲ್ಲದವರು) ಪಶುಗಳೇ ಸರಿ!

ಎಂದುಪದೇಶಿಸಿದ್ದಾರೆ. ಈ ಉಪದೇಶವಚನವು ತ್ರಿಕಾಲಾಬಾಧಿತವಾದುದು.

ಇನ್ನು, ಸನಾತನ ಧರ್ಮಾನುಯಾಯಿಗಳಲ್ಲಿಯೇ ಕೆಲಂಬರು ಧೃತರಾಷ್ಟ್ರನು:—

ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿ
ರ್ಜಾನಾಮ್ಯಧರ್ಮಂ ನಚ ಮೇ ನಿವೃತ್ತಿಃ ।
ಕೇನಾಪಿ ದೇವೇನ ಹೃದಿಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥

ನಾನು ಧರ್ಮವಾವುದೆಂಬುದನ್ನೇನೋ ಬಲ್ಲೆನು. ಆದರೆ, ಅತ್ತಕಡೆ ನನ್ನ ಪ್ರವೃತ್ತಿಯೇ ಆಗಲೊಲ್ಲದು; ಮತ್ತು ಅಧರ್ಮವೆಂಬುದೂ ನನಗೆ ಗೊತ್ತಿದೆ. ಆದರೇನು? ಅದನ್ನು ಬಿಡಬೇಕೆಂಬ ವೃತ್ತಿಯೇ ನನ್ನಲ್ಲಿ ತಲೆದೋರದು; ನನ್ನ ಹೃದಯದಲ್ಲಿ ವಾಸಿಸುವ ದೇವರ ಪ್ರೇರಣೆಯು ಹೇಗಾಗುವುದೋ ಹಾಗೆ ನಾನು ವರ್ತಿಸುತ್ತೇನೆ; ಅದ್ದರಿಂದ ಈ ಅಧರ್ಮಾಚರಣೆಯ ಬಗ್ಗೆ ನಾನು ಹೊಣೆಗಾರನಲ್ಲವಷ್ಟೇ! ಎಂಬುದಾಗಿ ನುಡಿದಿರುವುದನ್ನೇ ಮುಂದೆ ಮಾಡಿ ಮಾತಾಡುವ ಠಕ್ಕಭಕುತರೂ, ಮುಖ್ಯಠರೂ ಭೆಟ್ಟಿಯಾಗುತ್ತಿರುವರು. ಆದರೆ, ಹೀಗೆ ಹೇಳುವುದರಲ್ಲೇನೂ ಪುರುಷಾರ್ಥವಿಲ್ಲ. ಮನುಷ್ಯನ ಬುದ್ಧಿಯಲ್ಲಿ ಕರ್ಮಾನುಸಾರವಾಗಿ ವಾಸನೆಗಳು ಮೈದೋರಿದರೂ ಅವುಗಳಲ್ಲಿ ಒಳ್ಳೆಯದಾವುದು ಕೆಟ್ಟದ್ದಾವುದೆಂಬುದನ್ನು ವಿಂಗಡಿಸಿ ತಿಳಿದುಕೊಳ್ಳುವ[illegible] ಸ್ವಾತಂತ್ರ್ಯವು, ಅದೂ ಮನುಷ್ಯನಲ್ಲಿ ಇಲ್ಲವೇ ಇಲ್ಲವೆಂದು ಹೇಳಲಿಕ್ಕೆ ಬರುವಂತಿಲ್ಲ. ಇಷ್ಟೇ ಅಲ್ಲ, ಕೆಟ್ಟವಾಸನೆಯನ್ನೊಕ್ಕಲಿಕ್ಕಿ, ಒಳ್ಳೆಯ ವಾಸನೆಯನ್ನು ಕಾಯ್ದಿಟ್ಟುಕೊಂಡು ತದನುಸಾರವಾಗಿ ಪ್ರಯತ್ನಿಸುವುದು ಮನುಷ್ಯನ ಸ್ವಾಧೀನವಿದೆ. ವಸ್ತುಸ್ಥಿತಿಯು ಹೀಗಿದ್ದರೂ ಈಶ್ವರಪ್ರೇರಣೆಯಿಂದೋ, ಪ್ರಾರಬ್ಧಕರ್ಮದಿಂದೋ ನಾನು ದುಷ್ಕೃತ್ಯವನ್ನು ಮಾಡಿದೆನೆಂದು ಹೇಳುವ ಮನುಷ್ಯನನ್ನು ಜನವಂಚಕನೆಂದೂ, ದುರ್ಬಲನೆಂದೂ ತಿಳಿಯಬೇಕು.

ಪ್ರಾರಬ್ಧವಾದದಂತೇ ಆಧುನಿಕಕಾಲದಲ್ಲಿ ನಿಸರ್ಗವಾದವೆಂಬುದೂ ಮುಂದೆ ಬರತೊಡಗಿದೆ. ಮನುಷ್ಯನು ನೇಚರ (ನಿಸರ್ಗ)ದ ಡಿಂಗರಿಗನು, ಅವನ ಕೈಯಲ್ಲೇನೂ ಇರುವುದಿಲ್ಲ, ಎಲ್ಲ ಸಂಗತಿ[illegible] ನಿಸರ್ಗಾನುಸಾರವಾಗಿಯೇ ಘಟಿಸುವುವು. ಸತ್ಪ್ರವೃತ್ತಿಯಾಗಲಿ, ಅಸತ್ಪ್ರವೃತ್ತಿಯಾಗಲಿ ನಿಸರ್ಗ (ನೇಚರ) ವೆಂದೇ ತಿಳಿಯತಕ್ಕದ್ದು. ಎಂದು ಪ್ರತಿಪಾದಿಸಲ್ಪಡುವ ನಿಸರ್ಗವಾದವು ಪ್ರಾಚೀನಕಾಲದ ಸ್ವಭಾವವಾದವನ್ನೇ ಹೋಲುತ್ತದೆ. ಈ ವಿಚಾರಸರಣಿಯನ್ನೊಪ್ಪಿಕೊಂಬಟ್ಟರೆ, ಮನುಷ್ಯನನ್ನು ಒಂದು ಬಗೆಯ ಯಂತ್ರವೆಂದೇ ತಿಳಿಯಬೇಕಾಗುವುದು. ಈ ಯಂತ್ರವನ್ನು ನಡೆಸುವ ನಿಸರ್ಗವು ಅಂದರೆ ಸ್ವಭಾವವು ಅಥವಾ ನೇಚರವೆಂಬುದರ ಸ್ವರೂಪವೇನು? ಅದು ಹೇಗಿರುವುದೆಂದು ಕಲ್ಪನೆಮಾಡಬೇಕು? ಅದು ಹೀಗೇ ಇರುವುದೆಂಬ ಕಲ್ಪನೆಮಾಡಿದರೂ ಹೊಳೆಯುವುದೇ? ಇಲ್ಲ. ಬುದ್ಧಿಯುಳ್ಳ ಮಾನವಪ್ರಾಣಿಯು ಯಾವ ನಿಸರ್ಗದಿಂದುಂಟಾದನೋ, ಆ ನಿಸರ್ಗವು ಸ್ವತಃ ಬುದ್ಧಿಯುಳ್ಳದ್ದೇ ಆಗಿರಬೇಕಲ್ಲವೇ? ಹಾಗಿದ್ದಪಕ್ಷದಲ್ಲಿ, ಇದಕ್ಕೆ ಅಪ್ರತ್ಯಕ್ಷವಾಗಿ ಈಶ್ವರಪಾರತಂತ್ರ್ಯವಾದವೆಂದೇ ಹೆಸರಿಡಬೇಕಲ್ಲವೇ? ನಿಸರ್ಗವು ಬುದ್ಧಿಶೂನ್ಯವೂ ಅಥವಾ ಜ್ಞಾನಶೂನ್ಯವೂ ಆಗಿರುವುದೆನ್ನುವುದಾದರೆ, ಈ ಮಾನವನ ಬುದ್ಧಿಯು (ಜ್ಞಾನವು) ಯಾವುದರಿಂದ ಹುಟ್ಟಿತು? ಎಂಬೀ ಪ್ರಶ್ನೆಗೆ ಸರಳವಾದ ಉತ್ತರವನ್ನು ಕೊಡಲಾಗುವುದಿಲ್ಲ. ಬುದ್ಧಿಶೂನ್ಯವಾದ ನಿಸರ್ಗದಿಂದ ಬುದ್ಧಿಯುಕ್ತವಾದ ಪ್ರಾಣಿವರ್ಗದುತ್ಪತ್ತಿಯು ಅದೆಂತು ಸಂಭವಿಸುವುದು? ಚೇತನವರ್ಗದುತ್ಪತ್ತಿಗೆ ಕಾರಣವಾದ ವಸ್ತುವಾದರೂ ಚಿದ್ರೂಪವಾದುದೇ ಇರಲಿಕ್ಕೆ ಬೇಕಲ್ಲವೇ? ಆ ಚಿದ್ರೂಪವಸ್ತುವೇ ನಮಗೆಲ್ಲ ಮಂಗಳಮಯವಾದ ದೇವರೆಂದು ಈ ಹಿಂದೆ ನಾವು ಸ್ಪಷ್ಟವಾಗಿ ನಿರ್ಣಯಗೊಳಿಸಿರುವೆವು. ಬುದ್ಧಿಶೂನ್ಯವಾದ ನಿಸರ್ಗವಾದವು ಬುದ್ಧಿವಾದದಿಂದ ತುಲನೆಮಾಡಿ ನೋಡಿದರೆ ಅದೊಂದು ಭಾವನಾಮಯವಾದುದೆಂದೇ ಕಂಡುಬರುವುದು. ವೇದಾಗಮ ಪ್ರಮಾಣವನ್ನನುಸರಿಸಿದ ಯುಕ್ತಿಯುಕ್ತವಾದ ಬುದ್ಧಿವಾದದಿಂದ ನಿರ್ಣಯಿಸಲ್ಪಡುವ ಕಾರ್ಯಕಾರಣಭಾವವಿಚಾರವೆಂಬ ಒರೆಗಲ್ಲಿಗೆ ನಿಸರ್ಗವಾದವನ್ನು ಹಚ್ಚಿ ತಿಕ್ಕಿನೋಡಿದರೆ ಅದು ಕಾಲೂರಿ ನಿಲ್ಲಲಾರದು.

ಮನುಷ್ಯನ ಬುದ್ಧಿಯು ಪ್ರವೃತ್ತಿಸ್ವಾತಂತ್ರ್ಯದ ವಿಷಯದಲ್ಲಿ ನಿಸರ್ಗವನ್ನು ಸೋಲಿಸುವುದು. ಆಹಾರವನ್ನು ಭುಂಜಿಸುವುದು, ಸಂತತಿಯನ್ನು ಹುಟ್ಟಿಸುವುದು ಮುಂತಾದ ವ್ಯವಹಾರಗಳಲ್ಲಿ ಮನುಷ್ಯನ ಪ್ರವೃತ್ತಿಯೇ ಮನುಷ್ಯತ್ವ ಮೂಲಕವಾಗಿ ಹೊಣೆಯಾಗಿದೆ. ದೇಹದ ಮೇಲೆ ಕೂದಲು ಹುಟ್ಟುವಂತೆ ಸಂತತಿಯು ತನ್ನಷ್ಟಕ್ಕೆ ತಾನೇ ಹುಟ್ಟುವುದಿಲ್ಲ. ಈ ವಿಷಯದಲ್ಲಿ ಪ್ರವೃತ್ತಿಯ ಆವಶ್ಯಕತೆ[illegible]ಯುಂಟಲ್ಲವೇ? ಮನುಷ್ಯನು ಆತ್ಮ ಸಂಯಮನವುಳ್ಳವನಾಗಿ [illegible]ವೃತ್ತಿಯನ್ನು ನಿಗ್ರಹಿಸುವನಾದರೆ ನಿಸರ್ಗವು ಏನುತಾನೇ [illegible]? ಇಷ್ಟರಮಟ್ಟಿಗಾದರೂ ಮನುಷ್ಯನ ಸ್ವಾತಂ[illegible] [illegible]ಯಿಕ್ಕಾದವೆಲ್ಲವೂ ಶಮನವಾಗದಿರದು. [illegible]ಕೆಂಪವೂ ಎಂಬೀ ಮುಂತಾದ ಏಪ[illegible] [illegible] ಕೈಯಲ್ಲಿರುವುವೆಂದು ಯಾರೂ [illegible] ಅದು ಕೆಟ್ಟದ್ದು ಎಂಬ ತಿ[illegible] [illegible]ರುವುದರಿಂದ ಆ ತಿಳುವಳಿಕೆಯು [illegible]

ರೂಪವಾದ ವಿವೇಕ ಪೂರ್ವಕವಾಗಿ ಒಳ್ಳೆಯದನ್ನು ಬೇರ್ಪಡಿಸಿ ಅದನ್ನೇ ಪರಿಗ್ರಹಿಸಲು ಪ್ರಯತ್ನಿಸಬೇಕು. ಒಂದುವೇಳೆ ಕರ್ಮಾನುಸಾರವಾಗಿ ವಾಸನೆಯುಂಟಾಗುವುದೆಂಬ ಮಾತನ್ನೊಪ್ಪಿಕೊಂಡರೂ ಮನುಷ್ಯನು ತನ್ನಲ್ಲಿರುವ ಸಾರಾಸಾರ ವಿಚಾರವನ್ನು ಪ್ರಯೋಗಿಸಿಕೊಳ್ಳದೆ ಪ್ರವಾಹದಲ್ಲಿ ತೇಲಿಹೋಗುವ ಕಟ್ಟಿಗೆಯಂತೆ ಕೇವಲ ಅಸ್ವತಂತ್ರನೇ ತಾನೆಂಬುದಾಗಿ ತಿಳಿಯುವುದು ಮರುಳತನವೇ ಸರಿ. ಯೋಗವಾಸಿಷ್ಠದಲ್ಲಿ:—

ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹನ್ತೀ ವಾಸನಾಸರಿತ್ ।
ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ ॥

ವಾಸನೆಯ ಪ್ರವಾಹವು ಒಳ್ಳೆಯದು ಕೆಟ್ಟದ್ದು ಎಂಬ ಎರಡೂ ಮಾರ್ಗಗಳಿಂದ ಹರಿಯುತ್ತದೆ. ಮನುಷ್ಯನು ಪುರುಷಾರ್ಥದ ಪ್ರಯತ್ನದಿಂದ ಈ ವಾಸನೆಯ ಪ್ರವಾಹವನ್ನು ಒಳ್ಳೆಯ ಮಾರ್ಗದಿಂದೇ ಹರಿಯಗೊಡಬೇಕಲ್ಲದೆ ಅದನ್ನು ಕೆಟ್ಟಹಾದಿಯಿಂದ ಹರಿಯಗೊಡಬಾರದು.

ಈ ರೀತಿಯಾಗಿ, ಬೌದ್ಧಿಕದೃಷ್ಟಿಯಿಂದ ವಿಚಾರಿಸಿದರೆ ಒಳ್ಳೆಯ ಕೆಟ್ಟ ಪ್ರವೃತ್ತಿಗಳ ಬಗ್ಗೆ ಎಲ್ಲ ಬಗೆಯಿಂದಲೂ ಮನುಷ್ಯನೇ ಹೊಣೆಗಾರನೆಂಬುದು ಸಿದ್ಧವಾಗುತ್ತದೆ. ಈ ಹೊಣೆಗಾರಿಕೆಯನ್ನು ತಪ್ಪಿಸುವುದಕ್ಕಾಗಿ ಪ್ರಾರಬ್ಧವಾದವನ್ನೋ ನಿಸರ್ಗವಾದವನ್ನೋ ಮುಂದೆಮಾಡುವುದನ್ನು ಮೈಗಳ್ಳತನವೆಂದು ಹೇಳಬಹುದು. ಅದ್ದರಿಂದ ತನ್ನ ಉನ್ನತಿ ಅವನತಿಗಳ ಬಗ್ಗೆ ಪ್ರಯತ್ನಿಸುವುದರಲ್ಲಿ ಮನುಷ್ಯನು ಪೂರ್ಣಸ್ವತಂತ್ರನಿದ್ದಾನೆ.

(ಸಶೇಷ)

ಶ್ರೀ ಜಗದ್ಗುರುಗಳವರ ಆಗಮನ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಅಮರಾಪುರಕ್ಕೆ ಬಿಜಯಂಗೈಸಿದ ಸಂಗತಿಯು ಸರ್ವತ್ರ ವಿಶ್ರುತವೇ ಆದೆ. ಅಲ್ಲಿಂದ ಮಡಕಶಿರಾ ತಾಲ್ಲೂಕು ವಲಸಿಗ್ರಾಮದ ಮಠಾಧಿಕಾರಿಗಳಾದ ವೇ|| ಹಂಪಯ್ಯನವರು ಶ್ರೀಯುತ ಸಾಹು[illegible]ರ್ ಲುಕ್‌ಬುದ್ಧಿ ಶ್ರೀಯುತ ಚಿಕ್ಕವೀರಪ್ಪನವರು ಶ್ರೀ ಶಂಕರಪ್ಪನವರು ದೊಡ್ಡೇರಿ ಶ್ರೀ ನಾಗಪ್ಪಗೌಡರು ಪಟೇಲ್, ಶ್ರೀ ರುದ್ರಪ್ಪನವರು ಮುಂತಾದ ವೀರಶೈವ ಭಕ್ತಮಂಡಲಿಯು ಪ್ರಾರ್ಥಿಸಿಕೊಂಡ ಮೇರೆಗೆ ಶ್ರೀ ಜಗದ್ಗುರುಗಳವರು ಚತುರಂಗಬಲಸಮೇತ ಸಮಸ್ತ ಬಿರುದಾವಳಿಗಳೊಡನೆ ತಾ|| 14-4-33 ನೇ ಸಾಯಂಕಾಲ 4 ಘಂಟೆಗೆ ಬಿಜಯಂಗೈಸಿದರು. ಸಮಸ್ತ ಭಕ್ತರು ಇಷ್ಟಕಪಾಲಸಮೇತ ಶ್ರೀ ಜಗದ್ಗುರುಗಳನ್ನು ಸಂದರ್ಶಿಸಿ ಸಿಂಹಲಲಾಟ ಪಂಚಕಲಶಯುಕ್ತ ಸುವರ್ಣರಜತನಿರ್ಮಿತ ತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವದಿಂದ ಬಿಜಯಮಾಡಿಸಿಕೊಂಡು ಬಂದು ತನುಮನೋಧನಗಳಿಂದ ಸೇವೆಯನ್ನು ಮಾಡಿ ಕೃತಾರ್ಥರಾದರು. ಅದರಂತೆಯೇ ಗುಡಿಬಂಡೆ ಗ್ರಾಮದ ಶ್ರೀಮಾನ್ ಲೇಟ್ ಡಿಸ್ಟ್ರಿಕ್ಟ್ ಬೋರ್ಡ್‌ಮೆಂಬರ್ ಯಜಮಾನ್ ಮುದ್ದೀರಯ್ಯಗೌಡರ ಯಾಜಮಾನ್ಯದಿಂದ ವೇ|| ಪ್ರಸನ್ನಪ್ಪಯ್ಯನವರು ಮಠದ ವೇ|| ಈಶ್ವರಯ್ಯನವರು ಫಲಾರದ ಶ್ರೀಯುತ ಜಿ ಚನ್ನಬಸವೇಗೌಡರು ವಿಲೇಜ್ ಮ್ಯಾಜಿಸ್ಟ್ರೇಟ್ ಮತ್ತು ಎಜ್ಯುಕೇಷನಲ್ ಕೌನ್ಸಿಲರ್ ಮತ್ತು ಸಾಹುಕಾರ್ ಶ್ರೀ ಚಿಕ್ಕಮಲ್ಲಯ್ಯಗೌಡರು ಪಟೇಲ್ ಶ್ರೀ ಕೊಂತಲ್ ಹನುಮೇಗೌಡರು ತಾಲ್ಲೂಕು ಬೋರ್ಡ್ ವೈಸ್‌ಪ್ರೆಸಿಡೆಂಟ್ ಶ್ರೀ ಭೋಜಯ್ಯಗೌಡರು ವಿಲೇಜ್ ಮ್ಯಾಜಿಸ್ಟ್ರೇಟ್ ಬಂಬಲಬಂಡೆ ಶ್ರೀ ಗಿರಿಯಪ್ಪಶೆಟ್ಟರು ಶ್ರೀ ಕುರಿಯಪ್ಪನವರ ಲಿಂಗಪ್ಪನವರು ಶ್ರೀ ಚಿಕ್ಕವೀರಪ್ಪನವರು ಮುಂತಾದ ಪುರಪ್ರಮುಖ ಮಹಾಶಯರು ತಳಿರುತೋರಣಗಳಿಂದ ಪುರಾಲಂಕಾರವನ್ನು ಮಾಡಿ ತಮ್ಮ ಗ್ರಾಮಕ್ಕೂ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡ ಮೇರೆಗೆ ಭಕ್ತರ ಪ್ರಾರ್ಥನೆಯನ್ನು ಮಾನ್ಯಮಾಡಿ ಉತ್ಸವಕ್ಕೆ ಅಪ್ಪಣೆಯನ್ನು ಕೊಡಿಸಿದನಂತರ ಸಮಸ್ತ ಭಕ್ತರು ಇಷ್ಟಕಪಾಲಸಮೇ[illegible] ಶ್ರೀ ಪೂಜ್ಯ ಭಗವತ್ಪಾದರವರನ್ನು ಸಂದರ್ಶಿಸಿದ[illegible]ತರ ಶ್ರೀ[illegible]ಮದಾಚಾರ್ಯ ಚರಣರವರು ಸಾಲಂಕೃ[illegible]ದ ಸಿಂಹ[illegible]ಲಾಟ ಪಂಚಕಲಶಯುಕ್ತ ಸುವರ್ಣ[illegible]ತಾಂದೋ[illegible]ಯ [illegible]ಕ್ಕೀರೋಹಣಗೈದ[illegible] ವಾದ್ಯಗಳು [illegible]ವಾಯಿಗಳ[illegible] [illegible]. ಸರ್ವ[illegible] [illegible]ಜಯಸ್ಪಟಿತು. ಇದು[illegible] [illegible] ದಿಕ[illegible] ಆನಂದ ಸಮಯದಲ್ಲಿ ಉತ್ಸವವು ಪುರವೀಧಿಯಲ್ಲಿ ಪ್ರಚಲಿತವಾಯಿತು. ಅಲ್ಲಲ್ಲಿ ನೀರಾಜನಗಳಾಗಿ ಫಲಾಶೀರ್ವಾದವನ್ನು ಪಡೆಯುತ್ತಿದ್ದುದರಿಂದ ಉತ್ಸವವು ಬಹಳ ವಿಜೃಂಭಣೆಯಿಂದ ಸರ್ವವೀಧಿಗಳಲ್ಲಿಯೂ ಜರಗಿ ಪ್ರಧಾನಮಂಟಪಕ್ಕೆ ಬಂದನಂತರ ಮಂಗಲಧ್ವನಿಯು ಮೊಳಗುತ್ತಿರಲು ಮಹಾಸ್ವಾಮಿಗಳವರು ಪಲ್ಲಕ್ಕಿಯಿಂದವತರಿಸಿ ದೇದೀಪ್ಯಮಾನವಾದ ಸಿಂಹಾಸನದಲ್ಲಿ ಮಂಡಿಸಿ ಪೌರರಲ್ಲಿರುವ ಆಚಾರ್ಯಭಕ್ತಿಗೆ ಸಂತುಷ್ಟರಾಗಿ ನೆರೆದ ಸಮಸ್ತ ಭಕ್ತಮಂಡಲಿಗೆ ಉತ್ತರೋತ್ತರ ಶ್ರೇಯೋಭಿವೃದ್ಧಿಯಾಗಲೆಂದು ಆಶೀರ್ವದಿಸಿ ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ದಯಪಾಲಿಸಿದರು.

G. Channabasave Gowda,
Village Magistrate.

ದೊಡ್ಡ ಲೋಕಕ್ಷಯಕಾರಿಯಾವದು ಮದ್ಯಾರ್ಕ (ಸಾರಾಯ.)

(ಡಾ|| ಜಾನ್ ಹಾರ್ವಿ ಕೆಲ್ಲಾಗ್ ಇವರಿಂದ).

ಕಳೆದ ಸಂಚಿಕೆಯಿಂದ ಮುಂದುವರಿದುದು.

ಅಮೆರಿಕದಲ್ಲಿ ಹುಚ್ಚು ಹಿಡಿದ ಶ್ರೀಮಂತರ ಸಮುದಾಯ.

ಬುದ್ಧಿಭ್ರಮ, ಮಂಕು, ಹುಚ್ಚು, ನಪುಂಸಕತ್ವ, ಇವಕ್ಕೆ ಮದದ್ರಾವಕವು ಕಾರಣವಾಗುವುದೆಂಬುದಕ್ಕೆ ಬಹುಕಾಲದ ನಿದರ್ಶನಗಳಿವೆ. ಈ ದೇಶದಲ್ಲಿ ಮದ್ಯಪಾನದ ಪರಿಣಾಮದಿಂದಲೇ ಹುಚ್ಚು ಹಿಡಿದವರ ಸಂಖ್ಯೆಯು ಹೆಚ್ಚಾಗಿದೆ. ಯುನೈಟೆಡ್‌ಸ್ಟೇಟ್ಸ್ ಪ್ರಾಂತ್ಯದ ಜನಸಂಖ್ಯೆಯಲ್ಲಿ ಶೇಕಡಾ ಒಬ್ಬರಂತೆ ಮೇಲ್ಕಂಡ ವ್ಯಾಧಿಯುಳ್ಳವರೇ ಕಾಣಿಸುತ್ತಿರುವರು. ಹುಚ್ಚು ಹಿಡಿದವರು, ಮಂಕುಕವಿದವರು, ನಪುಂಸಕರು, ಅಸಸ್ಥಾರಿಗಳು ಇವರ ಸಂಖ್ಯೆಯು ಇನ್ನೂ ಕೂಡ ಹೆಚ್ಚುತ್ತಲೇ ಬರುತ್ತಿರುವುದು. ಇಂಥವರು ಸಮುದಾಯಕ್ಕೆ ಒಂದು [illegible]ಂತಿರುವರೇ ಹೊರತು, ಇವರಿಂದ ಲೋಕಕ್ಕೆ [illegible] ಉಪಕಾರವೂ ಆಗುವಂತಿಲ್ಲ. ಅಲ್ಲಿನ ಅನೇಕ [illegible]ತಗಳಲ್ಲಿ ಮೇಲ್ಕಂಡ ರೋಗಿಗಳಿಗಾಗಿಯೇ [illegible]ಟ್ಟ ದೊಡ್ಡದೊಡ್ಡ ಆಸ್ಪತ್ರೆಗಳನ್ನೂ, ಚಿಕಿತ್ಸಾಶಾಲೆ[illegible] ಎಲ್ಲೆಲ್ಲಿಯೂ ಕಾಣಬಹುದು. ಅಲ್ಲಿಯ ಅನೇಕ [illegible]ತಗಳಲ್ಲಿ ಸರಕಾರದವರು ದೇಶದ ಮೊತ್ತ ಆದಾ[illegible] ಮೂರರಲ್ಲಿ ಅಥವಾ ನಾಲ್ಕರಲ್ಲಿ ಒಂದುಪಾಲನ್ನು ಈ ಚಿಕಿತ್ಸಾಶಾಲೆಗಳಿಗಾಗಿಯೇ ಖರ್ಚುಮಾಡುತ್ತಿರುವರು. ಕುಡಿತವೇ ಇದಕ್ಕೆ ಕಾರಣವೆಂದು ಚೆನ್ನಾಗಿ ನಿರೂಪಣಕ್ಕೆ ಬಂದಿದೆ.

ಶ್ವಾಸಕೋಶಗಳಿಗೆ ಸಾರಾಯದಿಂದಾಗುವ ಹಾನಿ.

ಕಫವಾತಜ್ವರವು (ನ್ಯುಮೋನಿಯಾ) ಕಾಣಿಸಿಕೊಂಡಮೇಲೆ ಮದ್ಯಪಾಯಿಗಳು ಬದುಕುವುದು ಅಪೂರ್ವವು.

ಮದ್ಯವು ಹೊಟ್ಟೆಗೆ ಬಿದ್ದು, ಅದರಿಂದ ಮತ್ತೇರಿಳಿದಮೇಲೆ, ಅದರ ಕೆಲಸವು ತೀರಿತೆಂದು ಕುಡುಕರು ನಂಬಿರುವರು. ಅದು ಹಾಗಲ್ಲ. ಆ ಮದ್ಯವು ತಮ್ಮ ಶ್ವಾಸಾಶಯಗಳಲ್ಲಿ ಮಾಡುವ ಕೆಲಸವೆಂಥದೆಂಬುದು ಅವರಿಗೆ ತಿಳಿಯದು.

ಶ್ವಾಸಾಶಯಗಳ ಮಾರ್ಗವಾಗಿಯೇ ಪ್ರಾಣವಾಯುವು ದೇಹದ ಒಂದೊಂದು ಅವಯವಗಳಿಗೂ ಹೋಗಿ ಸೇರುವುದು. ಹೇಗೆಂದರೆ, ಶ್ವಾಸಾಶಯಗಳು ಜತೆಯಾಗಿ ಸೇರಿರುವ ಎರಡು ತಿತ್ತಿಗಳಹಾಗೆ ಕೆಲಸ ಮಾಡುತ್ತಿವೆ. ಆ ತಿತ್ತಿಗಳ ಒತ್ತುವಿಕೆಯಿಂದಲೇ ಆಕ್ಸಿಜನ್ ಎಂಬ ಪ್ರಾಣವಾಯುವು ರಕ್ತದಲ್ಲಿ ಸೇರಿ ಆ ರಕ್ತದಮೂಲಕ ಎಲ್ಲಾ ಸೂಕ್ಷ್ಮಭಾಗಗಳಿಗೂ ಉಯ್ಯಲ್ಪಡುವುದು. ಆ ಶ್ವಾಸಾಶಯಗಳನ್ನು ಸುತ್ತಿ ಮೃದುವಾದ ಪರೆಗಳುಂಟು. ಅವುಗಳನ್ನು ಬಿಚ್ಚಿದರೆ ಸಾವಿರ ಚದರಡಿಗಳ ವಿಸ್ತಾರಕ್ಕೆ ಹರಡಬಹುದು. ಇಂತಹ ಪರೆಗಳಲ್ಲಿ ಬಹಳ ಮೃದುವಾದ 'ಸೆಲ್' ಗಳು ಲಕ್ಷೋಪಲಕ್ಷ ಸಂಖ್ಯೆಯಿಂದಿರುವುವು. ಶ್ವಾಸದ ಮೂಲಕ ದೇಹದೊಳಕ್ಕೆ ಬರುವ ಕ್ರಿಮಿಗಳಿಂದ ಮೈಗೆ ಕೆಡುಕೇನೂ ಏರ್ಪಡದಂತೆ ಇವು ದೇಹವನ್ನು ರಕ್ಷಿಸುತ್ತಿರುವುವು. ಮನುಷ್ಯನು ಮದ್ಯಸೇವನೆಮಾಡುವುದರಿಂದ, ಲಕ್ಷೋಪಲಕ್ಷ ಸಂಖ್ಯೆಯ 'ಸೆಲ್' ಗಳೆಲ್ಲ ವಿಷಸಂಬಂಧದಿಂದ ಶಕ್ತಿಗುಂದುವುವು. [illegible]ದುದರಿಂದ ಅಂಥವನಿಗೆ ನ್ಯೂಮೋನಿಯಾ ಜ್ವರವು ಬಂದರೆ, ಅದನ್ನು ತಡೆಯುವ ಶಕ್ತಿಯಿಲ್ಲದೆ ಅದರಿಂದ ಮರಣಕ್ಕೆ ತುತ್ತಾಗುವುದು ನಿಶ್ಚಯವು.

ನಿಶಾದ್ರಾವಕಗಳು ಹೃದಯವನ್ನೂ ರಕ್ತನಾಳಗಳನ್ನೂ ಕೆಡಿಸಿಬಿಡುವುವು.

ಮುನ್ನೂರು ಟನ್ನಿನಷ್ಟು ಭಾರವನ್ನು ಒಂದಡಿ ಮೇಲಕ್ಕೆ ಎತ್ತುವುದಕ್ಕೆ ಎಷ್ಟು ಪ್ರಯತ್ನವು ಬೇಕೋ, ಹೃದಯಕ್ಕೆ ಒಂದು ದಿನದ ಕೆಲಸದಿಂದ ಅಷ್ಟು ಶ್ರಮವು ಏರ್ಪಡುವುದು. ಹೃದಯವು ದೇಹಕ್ಕೆಲ್ಲಾ ವ್ಯಾಪಿಸುವಂತೆ ಒತ್ತಿಕೊಡಬೇಕಾದ ರಕ್ತದಪ್ರಮಾಣವು ಅಪರಿಮಿತವಾಗಿರುವುದು. ಸಾಧಾರಣವಾಗಿ ನಾವು ಪ್ರತಿದಿನವೂ ಶ್ವಾಸಿಸುವ ಗಾಳಿಯಷ್ಟು ಪ್ರಮಾಣದ ರಕ್ತವನ್ನು ಅದು ಪಂಪುಮಾಡಬೇಕಾಗಿದೆ. ಒಬ್ಬ ಮನುಷ್ಯನು ವೇಗದಿಂದೋಡುವಾಗ, ಒಂದೊಂದು ನಿಮಿಷಕ್ಕೂ ಹೃದಯವು ಅರ್ಧ ಪೀಪಾಯಿನಷ್ಟು ರಕ್ತವನ್ನು ಒತ್ತಿಕೊಡಬೇಕಾಗಿದೆ. ಮದ್ಯಪಾನದಿಂದ ಈ ಹೃದಯವು ದುರ್ಬಲವಾಗಿ ಬಿಡುವುದು. ಗಾಬರಿ, ಭೇಕು, ಮೂರ್ಛೆ, ಮಯಕ ಇಂತಹ ರೋಗಗಳಿದ್ದ ಸಂದರ್ಭದಲ್ಲಿ ಮದ್ಯರಸದ ಸಂಬಂಧವೇ ಕೂಡದು. ಅಂತಹ ಸ್ಥಿತಿಯಲ್ಲಿ ಔಷಧಗಳಿಗೆ ಇದರ ಮಿಶ್ರಣವು ಅಪಕಾರಕವೇ ಹೊರತು ಉಪಕಾರವಲ್ಲವೆಂಬುದು ಸಮರ್ಥರಾದ ವೈದ್ಯರಿಗೆ ತಿಳಿಯದೆ ಇರಲಾರದು.

ನಾನು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವಾಗ ಪ್ರಥಮಚಿಕಿತ್ಸೆಗೆ ಬೇಕಾದ ಸಾಧನೆಗಳಲ್ಲಿ ಒಂದು ಸೀಸೆ ಬ್ರಾಂದಿಯನ್ನು ಸಿದ್ಧವಾಗಿ ಇಟ್ಟುಕೊಂಡಿರಬೇಕೆಂಬ ನಿಯಮವಿತ್ತು. ಈಗೀಗ ಅದರ ಅವಶ್ಯಕತೆಯಿಲ್ಲ. ಮೊದಮೊದಲು ನಾನು ಶಸ್ತ್ರಚಿಕಿತ್ಸೆಯನ್ನಾರಂಭಿಸಿದಾಗಲೂ, ಭಯ ಮೂರ್ಛೆಯ (Sheek) ರೋಗಗಳಿಗೆ ಮದ್ಯವನ್ನು ಚರ್ಮದ ಮೂಲಕವಾಗಿ ಚುಚ್ಚಿ ಸೇರಿಸುವ ಪದ್ಧತಿಯಿತ್ತು. ಆದರೆ ಈಚೀಚೆಗೆ ಹಾಗೆ ಮಾಡುವುದು ಮತ್ತಷ್ಟು ಮಯಕಕ್ಕೆ [illegible] ಹೊರತು ಉತ್ತೇಜನಕಾರಿಯಲ್ಲವೆಂದು ತಿಳಿದುಬಂದುದರಿಂದ ಈಗ ಆ ಪದ್ಧತಿಯಿಲ್ಲ.

ಮುಖ್ಯವಾಗಿ ಔಷಧ ದ್ರವ್ಯಗಳಲ್ಲಿ ಈ ಮದ್ಯವನ್ನು ಸಂಪೂರ್ಣವಾಗಿ ನೀಗಿಸಿಯೇ ಬಿಡಬಹುದು. ಇದೇ ವಿಷಯವಾಗಿ ಬ್ರಿಟಿಷ್ ವೈದ್ಯಸಂಘದ ಪ್ರೆಸಿಡೆಂಟರಾದ, ಸರ್ ಜೇಮ್ಸ್ ಬಾರ್, ಎಂಬವರು ಮದ್ಯ ಸಂಬಂಧವಿಲ್ಲದೆ ಗುಣವಾಗದ ವ್ಯಾಧಿ ಯಾವುದಾದರೂ ಇದೆಯೇ ಎಂಬುದು ನನಗೆ ತಿಳಿದಿಲ್ಲ. ಬೇಗನೆ ಗುಣವಾಗುವ ವ್ಯಾಧಿಯು ಮದ್ಯಸಂಬಂಧದಿಂದ ಗುಣವಾಗದೆ ಹೋಗಬಹುದು. ಎಂದು ಹೇಳಿರುವರು. ಹಾಗೆಯೇ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಜರ್ನಲಿನಲ್ಲಿ ಡಾಕ್ಟರ್ ಲೀ ಎಂಬುವರು ಕೂಡ ಮದ್ಯದಿಂದ ಯಾವವ್ಯಾಧಿಗೂ ಗುಣವಿಲ್ಲ. ಅಫೀಮ್ ಮುಂತಾದುವುಗಳಂತೆ ಅದೂ ಒಂದು ಮಯಕದ ಔಷಧವೇ ಎಂದು ಹೇಳುವರು.

ವಿಸ್ಕಿಯನ್ನು ಔಷಧಗಳಲ್ಲಿ ಸೇರಿಸಿಕೊಡುವುದೇಕೇ?

ಹತ್ತು ದಿನಗಳಿಗೊಮ್ಮೆ ಒಂದು ಪೈಂಟ್ ವಿಸ್ಕಿಗಿಂತ ಹೆಚ್ಚಾಗಿ ಯಾವ ರೋಗಿಗೂ ಕೊಡಕೂಡದೆಂಬುದು ಈಗಿನ ಕಾಯಿದೆ. ಅದನ್ನು ತಪ್ಪಿಸಿ ಆಯಾ ಡಾಕ್ಟರುಗಳು ತಮಗೆ ತೋರಿದಂತೆಯೂ, ರೋಗಿಗಳ ಸ್ಥಿತಿಗೆ ತಕ್ಕಂತೆಯೂ, ಇಷ್ಟಬಂದಹಾಗೆ ಅದನ್ನು ಸೇರಿಸಿಕೊಡಲು ತಮಗೆ ಸ್ವಾತಂತ್ರ್ಯವು ಬೇಕೆಂದು ಹೇಳುವರು. ಈಗ ಡಾಕ್ಟರುಗಳಿಗೆ ಔಷಧಿಗಳಿಗಾಗಿ ಮದ್ಯವನ್ನು ಇಷ್ಟಬಂದ ಹಾಗೆ ಸೇರಿಸಿಕೊಡುವ ಸ್ವಾತಂತ್ರ್ಯವಿದ್ದೇ ಇದೆ. ರೋಗಿಯ ಅಪೇಕ್ಷೆಯಂತೆ ಅವರು ಎಷ್ಟಾದರೂ ಸೇರಿಸಬಹುದು. ಸಾರಾಯದಿಂದಾಗದುದು ವಿಸ್ಕಿಯಿಂದೇನಾಗುವುದು. ಆದರೆ ವಿಸ್ಕಿಯಲ್ಲಿರುವ ಸುಗಂಧವು ಸಾರಾಯದಲ್ಲಿಲ್ಲ. ವಿಸ್ಕಿಯ ಅಭ್ಯಾಸವುಳ್ಳವರೂ, ಅದರ ರುಚಿಯನ್ನು ಬಲ್ಲವರೂ, ಅದಕ್ಕೆ ಸಾರಾಯವು ಎಂದೂ ಸಮಾನವಾಗಲಾರದೆಂದು ಹೇಳುವುದರಿಂದ ವಿಸ್ಕಿಯನ್ನು ಡಾಕ್ಟರುಗಳು ರೋಗಿಗಳ ಅಭಿಲಾಷೆಯಮೇಲೆ ಹೆಚ್ಚಿಸಲು ತಮಗೆ ಸ್ವಾತಂತ್ರ್ಯಕೊಡಬೇಕೆಂದು ಹೇಳುವರು.

[6ನೆಯ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಆರುವರ್ಷಗಳು ತುಂಬಿ ಏಳನೇ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೩ನೇ ಮೇ ತಾ|| ೧ನೇ ಸೋಮವಾರ.

ಆರನೆಯ ವರ್ಷದ ಸಮಾಪ್ತಿ.

ಸನಾತನಧರ್ಮಾನುಯಾಯಿಗಳಿಗೆ ಅತ್ಯಂತ ಮಾನ್ಯಗಳಾಗಿರುವ ಅರವತ್ತು ಸಂವತ್ಸರಗಳಲ್ಲಿ ಮೊದಲನೆಯದಾಗಿ ಪರಮಶ್ರೇಷ್ಠವೆನಿಸಿಕೊಂಡಿರುವ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ಶುಭದಿವಸದಲ್ಲಿ ಪ್ರಾಪ್ತವಾಗುವ ಶ್ರೀಮಜ್ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವದ ಪುಣ್ಯದಿವಸದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿದ 'ಪಂಚಾಚಾರ್ಯಪ್ರಭಾ' ನಾಮಕವಾದ ಈ ಪತ್ರಿಕೆಗೆ ಈ ಶ್ರೀಮುಖನಾಮಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ಆರು ವರ್ಷಗಳು ತುಂಬಿ ಏಳನೆಯ ವರ್ಷವು ಪ್ರಾಪ್ತವಾಗಿರುವುದು. ವೀರಶೈವಮತಸ್ಥಾಪಕರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಅಸಾಧಾರಣ ಲೀಲೆಗಳನ್ನೂ ಅವರಿಂದ ಸ್ಥಾಪಿತವಾದ ವರ್ಣಾಶ್ರಮಧರ್ಮ ಪ್ರತಿಪಾದಕವೀರಶೈವಮತದ ತತ್ತ್ವಗಳನ್ನೂ ಜಗತ್ತಿನಲ್ಲೆಲ್ಲಾ ಪ್ರಕಾಶಿಸುವಂತೆ ಮಾಡಬೇಕೆಂಬ ಸದುದ್ದೇಶದಿಂದ ಜನ್ಮವೆತ್ತಿರುವ ಈ ಪತ್ರಿಕೆಯು ಆ ಪೂಜ್ಯಪಾದರ ಮಹಿಮಾತಿಶಯಗಳನ್ನು ಲೋಕದಲ್ಲೆಲ್ಲಾ ತಿಳಿಯಪಡಿಸಿ ಸರ್ವರನ್ನೂ ಅವರಲ್ಲಿ ಭಕ್ತಿಯುಳ್ಳವರನ್ನಾಗಿ ಮಾಡಿ ತನ್ನ ಪವಿತ್ರಾಭಿಧಾನವನ್ನು ಅನ್ವರ್ಥಕಮಾಡಿಕೊಂಡಿರುವುದು. ಜಗದ್ವಿಖ್ಯಾತರಾದ ಪಂಚಾಚಾರ್ಯ ಪೂಜ್ಯಪಾದರು ಗಗನಮಾರ್ಗದಿಂದ ಸೇತುಹಿಮಾಚಲಪರ್ಯಂತವಾಗಿ ಸಂಚರಿಸಿ, ತಮ್ಮ ಪವಿತ್ರಪಾದವಿನ್ಯಾಸದಿಂದ ಅನೇಕ ಸ್ಥಲಗಳನ್ನು ಪವಿತ್ರಕ್ಷೇತ್ರಗಳನ್ನಾಗಿ ಮಾಡಿದ ವಿಷಯವು ಈ ಪತ್ರಿಕೆಯ ದ್ವಾರಾ ಸರ್ವರಿಗೂ ವೇದ್ಯವಾದುದಾಗಿದೆ. ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮೊದಲಾದ ಮಹರ್ಷಿಪುಂಗವರಿಗೂ, ವಿಭೀಷಣ, ವಿಕ್ರಮಾರ್ಕ, ನೀಲಗಲ, ಚೋಳ, ದೇವನಂದನ, ಗೌತಮೇಂದ್ರ, ಜಯನಂದದೇವ, ಮೊದಲಾದ ಚಕ್ರವರ್ತಿಗಳಿಗೂ ಶಿವಸಿದ್ಧಾಂತವನ್ನುಪದೇಶಿಸಿ ಇವರೆಲ್ಲರನ್ನೂ ಯಾವ ಮಹಾತ್ಮರು ಶಿಷ್ಯರನ್ನಾಗಿ ಮಾಡಿಕೊಂಡು ತಮ್ಮ ಪವಿತ್ರ ಕೀರ್ತಿಯನ್ನು ಜಗತ್ತಿನಲ್ಲೆಲ್ಲಾ ಪ್ರಸರಿಸಿದರೋ, ಅಂಥ ಲೋಕವಂದ್ಯ ಜಗದಾಚಾರ್ಯರ ನಾಮಸಂಕೀರ್ತನವೇ ಈ ನಾಸ್ತಿಕಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು, ಆ ಜಗದಾಚಾರ್ಯರ ಪವಿತ್ರಾಭಿಧಾನವನ್ನು ಧಾರಣಮಾಡಿದ ಈ ಪತ್ರಿಕೆಯು ಧರ್ಮಶಾಸ್ತ್ರಾನುಸಾರವಾದ ತನ್ನಲ್ಲಿ ಹೊರಡುವ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪುಣ್ಯನಾಮಸಂಕೀರ್ತನವನ್ನು ದಿಶದಿಕ್ಕುಗಳಲ್ಲಿಯೂ ಹರಡುವಂತೆ ಮಾಡಿ, ಆಸ್ತಿಕಜನಮಾನ್ಯವಾಗಿರುವುದೆಂಬ ವಿಷಯವನ್ನು ನೋಡಿ ಸಂತೋಷಪಡಬೇಕಾಗಿದೆ. ಜಾತಿಸಾಂಕರ್ಯದ ಪ್ರಭಾತದಿಂದ ಅತ್ಯಂತ ಜರ್ಝರಿತವಾಗುತ್ತಿರುವ ಸನಾತನ ಧರ್ಮದ ರಕ್ಷಣೆಯ ಬಗ್ಗೆ ಅನೇಕ ಲೇಖಗಳನ್ನು ಪ್ರಕಟಮಾಡಿ ಜಾತಿಸಾಂಕರ್ಯವಾದಿಗಳ ದುಷ್ಟಾಭಿಪ್ರಾಯವನ್ನು ಖಂಡಿಸಿ ಜಾತಿಭೇದವು ನಮ್ಮ ಭರತಖಂಡದಲ್ಲಿ ಅನಾದಿಕಾಲದಿಂದಲೂ ರೂಢಮೂಲವಾಗಿರುವದೆಂದು ವೇದಾಗಮಾದಿ ಪ್ರಮಾಣಗಳ ದ್ವಾರಾ ಜನರ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಅತ್ಯಾದರವುಳ್ಳದ್ದನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುದೇವತಾಭಕ್ತಿರೂಪಬೀಜವನ್ನು ಬಿತ್ತಿ ಅಂಕುರಿಸಿ ಪಲ್ಲವಿಸಿ ಫಲಿಸುವಂತೆ ಮಾಡಿತು. ಈ ಮತದ ಬಗ್ಗೆ ಅನ್ಯಮತೀಯರಲ್ಲುಂಟಾಗಿದ್ದ ನಾನಾ ತರಹದ ಸಂದೇಹಗಳನ್ನು ದೂರಮಾಡಿ ಈ ಮತದ ಉದಾತ್ತತತ್ತ್ವಗಳನ್ನು ಸರ್ವರಿಗೂ ತಿಳುಹಿಸಿ, ಸರ್ವಮತೀಯರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡಿತು. ಅತ್ಯಂತಕಠಿಣವಾದ ಧರ್ಮಶಾಸ್ತ್ರದ ರಹಸ್ಯವನ್ನು ತಿಳಿಯಲು ಅಸಮರ್ಥರಾದವರೆಲ್ಲರಿಗೂ ತನ್ನ ಸುಗಮವಾದ ಭಾಷಾಶೈಲಿಯಿಂದ ಈ ಮತದ ಸಿದ್ಧಾಂತವನ್ನೂ ಧರ್ಮಕರ್ಮಗಳನ್ನೂ ಬೋಧಿಸಿ ಅನೇಕರನ್ನು ಮತತತ್ತ್ವಜ್ಞರನ್ನಾಗಿ ಮಾಡಿತು. ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಮತೋದ್ಧಾರದ ಕಾರ್ಯಗಳನ್ನು ಸರ್ವತೋಮುಖವಾಗಿ ಮಾಡಿ ಭರತಖಂಡದಲ್ಲಿರುವ ಸಮಸ್ತ ಸತ್ಪುರುಷರ ಪರಮಪ್ರೀತಿಗೆ ಕಾರಣವಾಗಿರುವುದು. ಕೇವಲ ಮತೋದ್ಧಾರಕ್ಕಾಗಿಯೇ ಜನ್ಮವೆತ್ತಿ ಆದರಂತೆ ಕಾರ್ಯವನ್ನು ಕೈಕೊಂಡಿರುವ ಈ ಪತ್ರಿಕೆಯ ಸದುದ್ದೇಶವನ್ನು ಕಂಡು ಅನೇಕಜನ ಗುರುಭಕ್ತರು ಹಗಲಿರುಳೂ ಇದರ ಅಭಿವೃದ್ಧಿಗಾಗಿ ತನುಮನೋಧನಗಳನ್ನರ್ಪಿಸಿ ಪ್ರೀತಿಯಿಂದ ಕಾರ್ಯಮಾಡುತ್ತಿರುವರು. ಮತಸ್ಥಾಪನಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲವಾಗಿ ಬಾಳಿ ಮತೋದ್ಧಾರ ಕಾರ್ಯವನ್ನು ಮಾಡಲೆಂಬ ಸದುದ್ದೇಶದಿಂದ ಭರತಖಂಡದಲ್ಲಿರುವ ಅನೇಕಜನ ಗುರುಭಕ್ತಿ ಪರಾಯಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗಧಾರಣ, ದೀಕ್ಷಾ, ವಿವಾಹ, ಗಣಾರಾಧನ ಮೊದಲಾದ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸಿ ಕಳುಹಿಸುತ್ತಿರುವ ವಿಷಯವು ಪ್ರತಿವಾರದಲ್ಲಿಯೂ ಪ್ರಕಟವಾಗುತ್ತಿರುವ ಸ್ವೀಕಾರದಿಂದಲೇ ವ್ಯಕ್ತವಾಗುವದು. ಇದರಂತೆಯೇ ಪ್ರತಿಯೊಬ್ಬ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿಗಾಗಿ ಸರ್ವರೀತಿಯಿಂದಲೂ ಸಹಾಯಮಾಡಿ ಶ್ರೀ ಜಗದಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ. ವೀರಶೈವಮತದಲ್ಲಿ ಧರ್ಮಶಾಸ್ತ್ರಾನುಸಾರವಾಗಿ ವರ್ಣಾಶ್ರಮಧರ್ಮಗಳನ್ನು ಪ್ರತಿಪಾದನ ಮಾಡಿ ಈ ಮತದ ನಿಜಸ್ವರೂಪವನ್ನು ಬೋಧಿಸುವ ಪತ್ರಿಕೆಯೆಂದರೆ ಇದೊಂದೇ ಆಗಿದೆ. ಸದಾ ವೀರಶೈವಮತದ ವಿಷಯದಲ್ಲಿ ಶಾಸ್ತ್ರಸಮ್ಮತವಾದ ಲೇಖಗಳನ್ನು ಪ್ರಕಟಿಸಿ, ಸಕಲರಿಗೂ ಧರ್ಮತತ್ತ್ವಾಮೃತವನ್ನು ಪಾನಮಾಡಿಸಿ ಸರ್ವರನ್ನೂ ಧರ್ಮನಿರತರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಪ್ರತಿಯೊಬ್ಬರೂ ನಿರತಿಶಯವಾದ ಪ್ರೀತಿಯನ್ನಿಟ್ಟು ಚಂದಾದಾರರಾಗಿ ಇದರ ಅಭಿವೃದ್ಧಿಯನ್ನು ಕೋರಬೇಕೆಂದು ಬಯಸುತ್ತೇವೆ. ಜಗದಾಚಾರ್ಯರು ಯಾವಾಗಲೂ ತಮ್ಮ ಸೇವೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನನುಗ್ರಹಿಸಿ ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಇಂಗ್ಲೆಂಡಿಗೆ ಸೇರಿದ ಬ್ರಾಡ್‌ಫರ್ಡ್ ನಗರದಲ್ಲಿ 6 ಅಡಿ ಮತ್ತು ಅದಕ್ಕಿಂತಲೂ ಎತ್ತರವಾಗಿರುವ ಜನರ ಸಲುವಾಗಿ ಒಂದು ಹೊಸಸಂಘವು ಏರ್ಪಡಿಸಲ್ಪಟ್ಟಿರುವದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಮುನಿಸಿಪಾಲಿಟಿಯವರು ಎಣ್ಣೆ, ಅಡಿಕೆ, ಕಾಫಿ, ಕಡಿಮೆಕ್ರಯದ ಬಟ್ಟೆ ಇವುಗಳ ಮೇಲೆ ಹೊಸದಾಗಿ ತೆರಿಗೆಯನ್ನು ವಿಧಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಜೂನ್ 16 ನೇ ತಾರೀಖು ಸೋಮವಾರದ ದಿವಸ ಬೆಂಗಳೂರು ಅಠಾರಾ ಕಛೇರಿಯಲ್ಲಿ ಪ್ರಾರಂಭವಾಗುವದು.

ಬೆಂಗಳೂರು ನಗರದ ಬಸೆಟ್ಟಿಪೇಟೆಯಲ್ಲಿದ್ದ ಶ್ರೀಮತಿ ಕೋಲಾರದ ತಾಯಮ್ಮ ಎಂಬಾಕೆಯು ತನ್ನ ಆಸ್ತಿಯನ್ನೆಲ್ಲಾ ಅಶಕ್ತರ ಪೋಷಣೆಗೆಂದು ವಹಿಸಿ ಕಾಶಿಗೆ ಪ್ರಯಾಣಮಾಡಿದಳೆಂದು ತಿಳಿದುಬಂದಿದೆ.

ಭದ್ರಾವತಿ ಫಾರೆಸ್ಟ್ ರೇಂಜ್ ಆಫೀಸರವರು ಸುಮಾರು 20 ಅಡಿ ಆಳವಾದ ಹಳ್ಳದಲ್ಲಿ ಮೇಲಕ್ಕೆ ಹತ್ತಲಾರದೆ ಬಿದ್ದಿದ್ದ ಒಂದು ಭಾರಿ ಹುಲಿಯನ್ನು ಬೋನಿನಲ್ಲಿ ಹಿಡಿದು ರಾಜಧಾನಿಯಲ್ಲಿರುವ ಅರಮನೆ ಖಾಸ್‌ಬಂಗಲೆಗೆ ಕಳುಹಿಸಿರುತ್ತಾರೆ.

ಬೆಂಗಳೂರು ನಗರದ ಮ|| ಎಚ್. ಕೆ. ರಾಮಯ್ಯ ಎಂಬವರು ಹೊಸಮೋಟಾರ್ ಗಾಡಿಯನ್ನು ಕೊಂಡುಕೊಂಡು ಆ ವಿಷಯವನ್ನು ಸರ್ಕಾರಕ್ಕೆ ತಿಳುಹಿಸಲಿಲ್ಲವೆಂಬ ಕಾರಣದ ಮೇಲೆ ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 5 ರೂ. ಜುಲ್ಮಾನೆಯನ್ನು ವಿಧಿಸಿದರು.

ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನ ತೃತೀಯ ವಾರ್ಷಿಕ ಸಭೆಯು ಮೇ ತಿಂಗಳು 10 ಮತ್ತು 11 ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವದೆಂದೂ, ಶ್ರೀಮತಿ ಸರೋಜಿನೀನಾಯಡುರವರು ಇದರ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದೂ ತಿಳಿದುಬಂದಿದೆ.

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ ಒಂದು ಕಾನೂನನ್ನು ರಚಿಸುವ ವಿಷಯವಾಗಿ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಮಾಡಲು ಅವಕಾಶ ಕೊಡಬೇಕೆಂದು ಕೆಲವು ಪ್ರತಿನಿಧಿಗಳು ಸರಕಾರದವರನ್ನು ಕೇಳಿಕೊಂಡಿದ್ದರು. ಆದರೆ ಸರಕಾರದವರು ಈ ವಿಷಯವನ್ನು ಸದರಿ ಸಭೆಯಲ್ಲಿ ಚರ್ಚಿಸಲು ಅವಕಾಶ ಕೊಡುವದಿಲ್ಲವೆಂದು ತಿಳಿಸಿರುತ್ತಾರೆ. ಸ್ತುತ್ಯ!

ಏಪ್ರೆಲ್ 21 ನೇ ತಾರೀಖು ಶುಕ್ರವಾರ ರಾತ್ರಿ ಇಬ್ರಾಹಿಂ ಉರುಫ್ ಗುಟಕ್ ಎಂಬ ಕಳ್ಳನು ಬೆಂಗಳೂರುನಗರದ ಕೆಂಗೇರಿಸ್ಟೇಷನ್ ಸಮೀಪದಲ್ಲಿರುವ ಲಾಯರ್ ಮ|| ವೆಂಕಟೇಶರಾಯರ ಮನೆಯ ಕಿಟಕಿಯ ಸಲಾಕಿಯನ್ನು ಕಿತ್ತು ಒಳಕ್ಕೆನುಗ್ಗಿ ಕಳ್ಳತನಮಾಡುತ್ತಿದ್ದಾಗ ಮನೆಯವರು ಎಚ್ಚತ್ತು ನೆರೆಹೊರೆಯವರ ಸಹಾಯದಿಂದ ಕಳ್ಳನನ್ನು ಹಿಡಿದು ಪೋಲೀಸರ ವಶಕ್ಕೆ ಒಪ್ಪಿಸಿದರು. ಪೋಲೀಸರು ತನಿಖೆ ಮಾಡುತ್ತಿರುವರು.

ಬೆಂಗಳೂರು ನಗರದ ಹಳೇ ಬೊಂಬುಬಜಾರ್ ರಸ್ತೆಯಲ್ಲಿ ಅಕ್ಕಸಾಲಿಗ ಕೆಲಸವನ್ನು ಮಾಡುತ್ತಿದ್ದ ಮಹಮದ್‌ಪೀರ್ ಎಂಬಾತನು ತನ್ನ ಹೆಂಡತಿಯ ನಡವಳಿಕೆಯ ವಿಷಯದಲ್ಲಿ ಅತೃಪ್ತಿಹೊಂದಿ ಕಳೆದ ಏಪ್ರೆಲ್ 24 ನೆಯ ತಾರೀಖು ಸಾಯಂಕಾಲ ತನ್ನ ಮೈಮೇಲಿನ ಬಟ್ಟೆಗೆ ಸೀಮೆಯೆಣ್ಣೆಯನ್ನು ಹಾಕಿಕೊಂಡು ಬೆಂಕಿಹಚ್ಚಿಕೊಂಡನು. ಇದರಿಂದ ಅವನ ಮೈ ಕೆಲವು ಕಡೆಗಳಲ್ಲಿ ಸುಟ್ಟುಹೋಗಿರುವದು. ಇದನ್ನು ಕಂಡವರು ಕೂಡಲೇ ಬೆಂಕಿಯನ್ನು ಆರಿಸಿ ಅವನನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ.

ಬೆಂಗಳೂರು ನಗರದಲ್ಲಿ ಬಹುಕಾಲದಿಂದ ಜೂಜಾಡುತ್ತಿದ್ದ 15 ಜನರನ್ನು ಪೋಲೀಸರು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದ್ದರು. ಸಿಟಿ ಮ್ಯಾಜಿಸ್ಟ್ರೇಟರಾದ ಮಿ|| ಎಸ್ ನಾರಾಯಣರಾಯರು ಮೊಕದ್ದಮೆಯನ್ನು [illegible] ವಿಚಾರಿಸಿ 14 ಜನರಿಗೆ ಐದೈದು ರೂಪಾಯಿ ಇನ್ಸ್[illegible]ಗೆ [illegible] ರೂಪಾಯಿ ಜುಲ್ಮಾನೆಯನ್ನು ವಿಧಿ[illegible] ಜುಲ್ಮಾ[illegible]ವು ವಸೂಲಾದರೆ ಪತ್ತೆಮಾಡಿದ [illegible] ಇಂಗೆ 60 [illegible]ಯಿಗಳನ್ನು ಬಹುಮಾನವಾಗಿ [illegible]ನಮಾಡಿದರು.

ಮೈಸೂರು ಗೆಜೆಟ್.

ಶಿಡ್ಲಘಟ್ಟ ತಾಲ್ಲೂಕಿನ ಅಮಲ್ದಾರರಾದ ಮಿ|| ವೀರುದ್ರಯ್ಯ, ಬಿ.ಎ., ಇವರು ಸಕಲೇಶಪುರದ ಸಬ್‌ಡಿವಿಜನ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಲ್ಯಾನ್ಸರ್ಸ್ ಕಮ್ಯಾಂಡೆಂಟರಾದ ಮೇಜರ್ ಬಿ. ಪಿ. ಕೃಷ್ಣೇಅರಸ್, ಎಂ.ಸಿ., ಐ.ಡಿ.ಎಸ್.ಎಂ., ರವರು ಲೆಫ್ಟಿನೆಂಟ್ ಕರ್ನಲ್ ಪದವಿಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಮಿ|| ಡಿ ಎನ್. ಪುಟ್ಟಣ್ಣ ಬಿ. ಎ., ಎಫ್. ಆರ್. ಸಿ. ಎಸ್. ರವರು ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರಾಗಿ ಬದಲಿ ನೇಮಿಸಲ್ಪಟ್ಟಿರುತ್ತಾರೆ.

ಪ್ಯಾಲೇಸ್ ಬಾಡಿಗಾರ್ಡಿನ ಕಮ್ಯಾಂಡೆಂಟರೂ, ಶ್ರೀಮನ್ಮಹಾರಾಜರವರ ಆನರರಿ ಎಡ್-ಡಿ-ಕ್ಯಾಂಪರೂ ಆದ ಮೇಜರ್ ಎಸ್. ಗೋಪಾಲರಾಯರು ಲೆಫ್ಟಿನೆಂಟ್ ಕರ್ನಲ್ ಪದವಿಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಫಸ್ಟ್ ಗ್ರೇಡ್ ಅಸಿಸ್ಟೆಂಟ್ ಸರ್ಜನ್ನರಾದ ಮಿ|| ಎ. ಎ. ಅಯ್ಯಂಗಾರ್ ಎಲ್. ಆರ್. ಸಿ. ಪಿ., ಎಂ. ಆರ್. ಸಿ. ಎಸ್. ರವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಹಾಸನದ ಸಬ್‌ಡಿವಿಜನ್ ಆಫೀಸರಾದ ಮಿ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ., ಇವರು ಜನರಲ್ ಅಂಡ್ ರೆವಿನ್ಯೂ ಸೆಕ್ರೆಟೆರಿಯಟ್ಟಿನ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ, ತುಮಕೂರು ಡಿ|| ಟ್ರೆಜರಿ ಆಫೀಸರಾದ ಮಿ|| ಜಾರ್ಜ್ ಮ್ಯಾಥ್ಯೂ, ಬಿ.ಎಸ್‌ಸಿ., ರವರು ಹಾಸನದ ಸಬ್‌ಡಿವಿಜನ್ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಜನರಲ್ ಅಂಡ್ ರೆವಿನ್ಯೂ ಸೆಕ್ರೆಟೆರಿಯಟ್ಟಿನ ರಿಜಿಸ್ಟ್ರರರಾದ ಮಿ|| ಸಿ. ಎಸ್. ಶ್ರೀನಿವಾಸಾಚಾರ್ ಬಿ.ಎ.,ರವರು ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ರಾಜಧಾನಿಗೆ ಪರಸ್ಥಳಗಳಿಂದ ಆಗಮಿಸುವ ಅತಿಥಿಗಳನ್ನು ಸತ್ಕರಿಸುವದಕ್ಕಾಗಿ ಮೇ 1 ನೆಯ ತಾರೀಖಿನಿಂದ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ. ಇದೇ ಸಮಯದಲ್ಲಿ ರಾಜಧಾನಿಯಲ್ಲಿ ನಡೆಯುವ ಮೈಸೂರಿನ ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನಕ್ಕೆ ಸಂಬಂಧಪಟ್ಟ ಏರ್ಪಾಡುಗಳ ಮೇಲ್ವಿಚಾರಣೆಯೂ ಇವರಿಗೆ ವಹಿಸಲ್ಪಟ್ಟಿರುವದು.

ವರ್ತಮಾನಸಂಗ್ರಹ

ಯಾರ್ಕ್‌ಷೈರಿನಲ್ಲಿರುವ ಯಿ-ಜೆಕರ್ಸ್-ಇನ್ ಎಂಬ ಹೋಟೇಲಿನಲ್ಲಿ ಕಳೆದ 170 ವರ್ಷಗಳಿಂದಲೂ ಬೆಂಕಿಯು ಉರಿಯುತ್ತಲೇ ಇರುವದಂತೆ!

ಅಮೇರಿಕಾದೇಶಕ್ಕೆ ಹೋಗಿದ್ದ ಮೌಲಾನಾಷೌಕತಲಿಯವರು ಏಪ್ರೆಲ್ 26 ನೇ ತಾರೀಖಿನ ದಿವಸ ಮುಂಬಯಿಗೆ ಹಿಂತಿರುಗಿ ಬಂದರು.

ಇಂಗ್ಲೆಂಡಿನ ಕೆಲವು ಇಂಜನಿಯರರು ಸಂಪೂರ್ಣವಾಗಿ ಕಲ್ಲಿದ್ದಿಲಿನಿಂದಲೇ ನಡೆಯುವ ಒಂದು ಹೊಸ ತರಹದ ಮೋಟಾರನ್ನು ನಿರ್ಮಿಸಿರುವರಂತೆ!

ಇನ್ಸ್ಪೆಕ್ಟರ್ ಗ್ರೀನರವನ್ನು ಗುಂಡಿನಿಂದ ಕೊಂದನೆಂಬ ಕಾರಣದಮೇಲೆ ಮರಣದಂಡನೆಗೆ ಗುರಿಯಾಗಿರುವ ಸಾರ್ಜೆಂಟ್ ಹೂಪ್ಸನ್ನನು ಮೇ 15 ನೇ ತಾರೀಖಿನದಿವಸ ಸಬರಮತಿ ಜೈಲಿನಲ್ಲಿ ಗಲ್ಲಿಗೇರಿಸಲ್ಪಡುವನು.

ಚೀನಾ ಮತ್ತು ಜಪಾನ್ ಯುದ್ಧವು ದಿನದಿನಕ್ಕೆ ಪ್ರಬಲಿಸುತ್ತಲೇ ಇರುವದು. ಕಳೆದವಾರ ಜಪಾನ್ ಸೈನಿಕರು ಅನೇಕ ದೊಡ್ಡ ದೊಡ್ಡ ಕಲ್ಲಿದ್ದಲು ಗಣಿಗಳಿದ್ದ ಸುಮಾರು 1,500 ಚದರ ಮೈಲುಗಳ ಪ್ರದೇಶವನ್ನು ಆಕ್ರಮಿಸಿರುವರು.

ಏಪ್ರೆಲ್ 22 ನೇ ತಾರೀಖಿಗೆ ಕೊನೆಯಾದ ವಾರದಲ್ಲಿ ಮುಂಬಯಿಯಿಂದ 7,57,440 ರೂಪಾಯಿಗಳ ಬಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟಿತು. ಇದುವರೆಗೆ ಸಾಗಿಸಲ್ಪಟ್ಟ ಬಂಗಾರದ ಒಟ್ಟು ಕ್ರಯ 1,22,47,38,253 ರೂ.

ಕಲ್ಕತ್ತಾ ಯೂನಿವರ್ಸಿಟಿ ಇನ್ಸ್ಟಿಟ್ಯೂಟಿನ ಮೆಂಬರರು ರಾಜಕೀಯ ಚಳವಳಿಯಲ್ಲಿ ಭಾಗವಹಿಸುವರೆಂಬ ಕಾರಣದಮೇಲೆ ಬಂಗಾಳಾ ಸರಕಾರದವರು ಸದರಿ ಇನ್ಸ್ಟಿಟ್ಯೂಟಿಗೆ ಕೊಡುತ್ತಿದ್ದ ವರ್ಷಾಸನವನ್ನು ನಿಲ್ಲಿಸಿರುವರಂತೆ!

ರಾತ್ರಿಯವೇಳೆ ಸಿಡಿಮದ್ದುಗಳನ್ನು ಹಾಕುವಂಥ ಹೊಸದೊಂದು ವಿಮಾನವು ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟಿರುವದು! 'ರಾಯಲ್ ಏರ್ ಫೋರ್ಸ್' ಎಂಬ ಸೈನ್ಯದ ಉಪಯೋಗಕ್ಕೆ ಇಂಥ 15 ವಿಮಾನಗಳು ತಯಾರಾಗುತ್ತಿವೆಯಂತೆ!

ಗೊಂಡಿಯಾನಗರದ ಮುನಿಸಿಪಲ್ ಮೆಂಬರರಾದ ಬಲಿರಾಂ ಎಂಬವರು ಇತರ 4 ಜನರೊಡನೆ 17 ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣಕನ್ಯೆಯನ್ನು ಬಲಾತ್ಕಾರವಾಗಿ ಎಳೆದುಕೊಂಡು ಹೋದರೆಂಬ ಕಾರಣದಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು.

ರಷ್ಯಾಸರ್ಕಾರದವರು ಕ್ಯಾಸ್ಪಿಯನ್ ಸಮುದ್ರದಿಂದ ಕಪ್ಪು ಸಮುದ್ರದವರೆಗೆ ಸುಮಾರು 400 ಮೈಲು ಉದ್ದವಾಗುವ ಒಂದು ಭಾರಿ ಕಾಲುವೆಯನ್ನು ತೆಗೆಯಬೇಕೆಂದು ಆಲೋಚಿಸುತ್ತಿದ್ದಾರೆ. ಇದರಿಂದ ಮಧ್ಯ ಏಷ್ಯಾಖಂಡದ ವ್ಯಾಪಾರದ ಸ್ಥಿತಿಗತಿಗಳು ಮುಂದುವರಿಯಲನುಕೂಲವಾಗುವುವಂತೆ!

ಒಬ್ಬಾನೊಬ್ಬ ಪ್ರಸಿದ್ಧ ರಸಾಯನಶಾಸ್ತ್ರಪ್ರವೀಣನು ಗಂಡಹೆಂಡರು ಒಬ್ಬರನ್ನೊಬ್ಬರು ಎಷ್ಟರಮಟ್ಟಿಗೆ ಪ್ರೀತಿಸುವರೆಂಬುದನ್ನು ಪತ್ತೆಮಾಡುವ ಒಂದು ಹೊಸ ತರಹದ ಯಂತ್ರವನ್ನು ನಿರ್ಮಿಸಿರುವನಂತೆ! ಇದರಿಂದ ಇನ್ನು ಮುಂದೆ ಪ್ರೇಮವಿಲ್ಲದ ತರುಣತರುಣಿಯರಿಗೆ ಮದುವೆಯಾಗದಂತೆ ಮಾಡಬಹುದಾಗಿದೆ.

ಯೂಗೋಸ್ಲೇವಿಯಾ ದೇಶದ ಅಧಿಕಾರಿಗಳು ಕಳ್ಳತನದಿಂದ ಸಾಗಿಸಲ್ಪಟ್ಟು ಬಚ್ಚಿಡಲ್ಪಟ್ಟಿದ್ದ ಹೊಗೆಸೊಪ್ಪಿಗಾಗಿ ಕೋರ್ಕೆ ಎಂಬಸ್ಥಳದಲ್ಲಿ ನೆಲವನ್ನು ಅಗೆಯುತ್ತಿದ್ದಾಗ 1,80,000 ರೂಪಾಯಿಗಳ ಬೆಲೆಯುಳ್ಳ ಚಿನ್ನ ಬೆಳ್ಳಿಯ ನಾಣ್ಯಗಳು ದೊರೆತವಂತೆ! ಈ ನಾಣ್ಯಗಳು 1912 ನೇ ವರ್ಷದಲ್ಲಿ ನಡೆದ ಬಾಲ್ಕನ್‌ಯುದ್ಧದ ಕಾಲದಲ್ಲಿ ಹೂಳಿಡಲ್ಪಟ್ಟಿರಬೇಕೆಂದು ಊಹಿಸಲ್ಪಟ್ಟಿದೆ.

ಅಮೇರಿಕಾ ದೇಶದ ಒಬ್ಬ 12 ವರ್ಷ ವಯಸ್ಸಿನ ಹುಡುಗಿಯು 2 ವರ್ಷಗಳ ಹಿಂದೆ ಕೋತಿಯಿಂದ ಕಚ್ಚಲ್ಪಟ್ಟಳು. ಅಂದಿನಿಂದಲೂ ಅವಳಿಗೆ ರಾತ್ರಿಯವೇಳೆಯಲ್ಲಿ ಭಯಂಕರ ಸ್ವಪ್ನಗಳಾಗುತ್ತಿದ್ದುವಂತೆ! ಆಕೆಯು ಕೋರ್ಟಿನಲ್ಲಿ ಈ ಸಂಬಂಧ ಒಂದು ದಾವೆಯನ್ನು ತರಲು ಜಡ್ಜರು ಕೋತಿಯ ಮಾಲಿಕನಿಂದ ಅವಳಿಗೆ 2,250 ರೂ.ಗಳ ಪರಿಹಾರದ್ರವ್ಯವನ್ನು ಕೊಡಿಸಿದರಂತೆ!

ಈಗ್ಗೆ ಸುಮಾರು 35 ವರ್ಷಗಳ ಕೆಳಗೆ ಕ್ವೀನ್ಸ್‌ಲೆಂಡಿನಲ್ಲಿರುವ ಜಾರ್ಜ್ ಮಾರಿಸ್ನ್ ಎಂಬಾತನನ್ನು ಕುದುರೆಯು ಒದ್ದುದರಿಂದ ಅವನ ದವಡೆಗಳು ಹಿಡಿದುಬಿಟ್ಟು ಅದನ್ನು ಬಿಡಿಸಲು ಡಾಕ್ಟರುಗಳು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಅಂದಿನಿಂದಲೂ ಆತನು ದ್ರವರೂಪವಾದ ಆಹಾರವನ್ನೇ ಸೇವಿಸುತ್ತಿದ್ದನು. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಆತನು ಅಕಸ್ಮಾತ್ ಮಂಚದ ಮೇಲಿನಿಂದ ಮುಮ್ಮುಖನಾಗಿ ಕೆಳಕ್ಕೆ ಬಿದ್ದನು. ಇದರಿಂದ ಅವನ ದವಡೆಯು ಪುನಃ ಸರಿಹೋಗಿ ಅಂದಿನಿಂದ ಮೊದಲಿನಂತೆ ಆಹಾರವನ್ನು ಸೇವಿಸಲಾರಂಭಿಸಿರುವನಂತೆ!

ಅಮೇರಿಕೆಯ ಒಬ್ಬ ಟ್ರಾಂವೇ ಕಂಡಕ್ಟರು, ಟ್ರಾಮಿನ ಚಾರ್ಜನ್ನು ಕೊಟ್ಟಿಲ್ಲವೆಂಬ ಅಪಾದನೆಯ ಮೇಲೆ ಒಬ್ಬ ಪ್ರಯಾಣಿಕನನ್ನು ಕೆಳಕ್ಕಿಳಿಯುವಂತೆ ಹೇಳಿದನು. ಪ್ರಯಾಣಿಕನು 7 ಸೆಂಟುಗಳನ್ನು ಕೊಟ್ಟಿರುವೆನೆಂದು ಎಷ್ಟು ಹೇಳಿದರೂ ಕಂಡಕ್ಟರು ಒಪ್ಪದೆ ಪ್ರಯಾಣಿಕನನ್ನು ಬಲಾತ್ಕಾರವಾಗಿ ಕೆಳಕ್ಕಿಳಿಸಿದನು. ಅಷ್ಟರಲ್ಲಿ ಎದುರುಗಡೆಯಿಂದ ಇನ್ನೊಂದು ಟ್ರಾಂ ಬರುತ್ತಿದ್ದು ಪ್ರಯಾಣಿಕನು ಅದಕ್ಕೆ ಸಿಕ್ಕು ಮೃತಪಟ್ಟನು. ಅನಂತರ ವಿಚಾರಿಸುವಲ್ಲಿ ಪ್ರಯಾಣಿಕನು ಟ್ರಾಂ ಚಾರ್ಜನ್ನು ನಿಜವಾಗಿಯೂ ಪಾವತಿಮಾಡಿದ್ದನೆಂದು ತಿಳಿದುಬಂದಿತು. ಹೀಗೆ ಕಂಡಕ್ಟರನ ಅಚಾತುರ್ಯದಿಂದ ನಡೆದ ಅನರ್ಥದಿಂದ ಟ್ರಾಂವೇ ಕಂಪನಿಯವರು ಮೃತನ ಬಂಧುಗಳಿಗೆ 40,000 ರುಪಾಯಿಗಳ ಪರಿಹಾರ ದ್ರವ್ಯವನ್ನು ಕೊಡಬೇಕಾಗಿಬಂದಿತು.

ದಕ್ಷಿಣ ಅಮೇರಿಕಾದೇಶದಲ್ಲಿರುವ ಪೆರುಗ್ವೇ ಎಂಬ ಸ್ವತಂತ್ರರಾಜ್ಯಕ್ಕೆ ಡಾಕ್ಟರ್ ತಾರಾ ಎಂಬವರು ಹೊಸದಾಗಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ಇವರು ಅಧಿಕಾರಕ್ಕೆ ಬಂದಕೂಡಲೇ ತಮಗೆ ವಿರೋಧಿಗಳಾಗಿದ್ದವರೆಲ್ಲರನ್ನೂ ದಸ್ತಗಿರಿ ಮಾಡುವಂತೆ ಅಪ್ಪಣೆ ಮಾಡಿದರು. ಆ ರಾಜ್ಯಕ್ಕೆ ಪೂರ್ವದಲ್ಲಿ ಪ್ರೆಸಿಡೆಂಟರಾಗಿದ್ದ ಸಿನಾರ್ ಬ್ರಿಂ ಎಂಬವರೂ ಹೊಸ ಅಧ್ಯಕ್ಷರಿಗೆ ವಿರೋಧಿಗಳಾಗಿದ್ದರು. ಸೀನಾರ್ ಬ್ರಿಂರವರು ಈ ವಿಷಯವನ್ನೆಲ್ಲಾ ಮೊದಲೇ ಅರಿತಿದ್ದು ತಮ್ಮನ್ನು ದಸ್ತಗಿರಿ ಮಾಡಲು ಪೋಲೀಸರು ಮನೆಯ ಸಮೀಪಕ್ಕೆ ಬಂದ ಕೂಡಲೇ ಅವರ ಮೇಲೆ ಗುಂಡುಗಳನ್ನು ಹಾರಿಸಿ, ಅನೇಕರನ್ನು ಗಾಯಪಡಿಸಿ ಕೊನೆಗೆ ತಾವೂ ಆತ್ಮಹತ್ಯೆ ಮಾಡಿಕೊಂಡರು. ಪತಿಯ ಮರಣವನ್ನು ನೋಡಿ ಆತನ ಪತ್ನಿಯೂ ಆತ್ಮಹತ್ಯೆಮಾಡಿಕೊಂಡಳು.

ಜಾಯಿಂಟ್ ಸೆಲೆಕ್ಟ್ ಕಮಿಟಿಗೆ

ಭಾರತೀಯ ಪ್ರತಿನಿಧಿಗಳು

ಜಾಯಿಂಟ್ ಪಾರ್ಲಿಮೆಂಟರಿ ಸೆಲೆಕ್ಟ್ ಕಮಿಟಿಗೆ ೭ ಜನ ಸಂಸ್ಥಾನಗಳ ಪ್ರತಿನಿಧಿಗಳೂ, ೨೧ ಜನ ಬ್ರಿಟಿಷ್ ಹಿಂದುಸ್ಥಾನದ ಪ್ರತಿನಿಧಿಗಳೂ ಆರಿಸಲ್ಪಟ್ಟಿದ್ದಾರೆ.

ಸಂಸ್ಥಾನಗಳು

೧ ಸರ್ ಅಕಬರ ಹೈದರಿ, ೨ ಸರ್ ವಿ ಟಿ. ಕೃಷ್ಣಮಾಚಾರಿ, ೩ ನವಾಬ ಸರ್ ಲಿಯಾಕತ ಹುಸೇನ, ೪ ಸರ್ ಮನುಭಾಯಿಮೆಹತಾ, ೫ ಸರ್ ಮಿರ್ಜಾ ಮಹಮ್ಮದ ಇಸ್ಮಾಯಿಲ್, ೬ ಪ್ರಭಾಶಂಕರ ಪಟ್ಟಾಣಿ, ೭ ರಾ|| ಸಾ|| ವೈ. ವಿ ಕೋಂಬರೆ.

ಬ್ರಿಟಿಷ್ ಹಿಂದುಸ್ಥಾನ

೧ ನಾ|| ಆಗಾಖಾನ, ೨ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ, ೩ ಡಾ|| ಆರ್. ಬಿ. ಅಂಬೇಡಕರ್, ೪ ಸರ್ ಹ್ಯುಬರ್ಟ್ ಕಾರ್, ೫ ಮಿ|| ಎ. ಎಚ್. ಘಜನಾವಿ, ೬ ಸರ್ ಹೆನ್ರಿಗಿಡನೆ, ೭ ಸರ್ ಹರಿಸಿಂಗಗೋರ್, ೮ ಮಿ|| ಎ. ರಂಗಸ್ವಾಮಿ ಅಯ್ಯಂಗಾರ್, ೯ ಬ್ಯಾ|| ಎಂ. ಆರ್. ಜಯಕರ್, ೧೦ ಮಿ|| ಎನ್. ಎಂ. ಜೋಶಿ, ೧೧ ಮಿ|| ಎನ್. ಸಿ. ಕೇಳಕರ್ ೧೨ ಸರ್ ಎ. ಪಿ. ಪಾತ್ರೊ, ೧೩ ಸರ್ ಅಲ ರಹೀಮ, ೧೪ ಸರ್ ತೇಜಬಹದ್ದೂರ್ ಸಪ್ರು, ೧೫ ನಾ|| ಸರ್ ಫಿರೋಜ ಸೆಠನಾ, ೧೬ ಡಾ|| ಶಾಫತ ಅಹಮದ ಖಾನ, ೧೭ ಬೇಗಂ ಶಾಹ ನವಾಜ, ೧೮ ಸರದಾರ್ ಭೂತಸಿಂಗ, ೧೯ ಸರ್ ಎನ್. ಎನ್. ಸರಕಾರ, ೨೦ ಸರ್ ಪುರುಷೋತ್ತಮದಾಸ ಠಾಕೂರದಾಸ, ೨೧ ಚೌಧರಿ ಜಾಫರ ಅಲ್ಲೀಖಾನ.

ಸ್ವೀಕಾರ

ಮೈಸೂರು ರಾಜಧಾನಿಯಲ್ಲಿರುವ ಹೊಸಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಬಸವಲಿಂಗಸ್ವಾಮಿಗಳವರು ತಮ್ಮ ಮಠದಲ್ಲಿ ವೈಶಾಖ ಶುದ್ಧ ೩ ದಿವಸ ಶ್ರೀ ಜಗದ್ಗುರು ವಿಶೋರಾಮಾರಾಧ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **1** ರೂ. ಯನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಮ|| ರಾ|| ಲಕ್ಕುವಳ್ಳಿ ಹೊಸಮನೆ ರುದ್ರಪ್ಪಶೆಟ್ಟರ ಪುತ್ರ ಚಿ|| ಶಾಂತಪ್ಪನಿಗೆ ಹಲ್ಕೂರಲ್ಲಿರುವ ಮ|| ರಾ|| ತರೀಕೆರೆ ಪುಟ್ಟಪ್ಪಶೆಟ್ಟರ ಪುತ್ರಿ ಚಿ|| ಸೌ|| ಬಸಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ.ಗಳು ಮ|| ರಾ|| ಹಲ್ಕೂರು ಸಾಹುಕಾರ ಮರಳಸಿದ್ಧಪ್ಪಶೆಟ್ಟರವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೆಯ ಪುಟದಿಂದ ಮುಂದುವರಿದುದು.]

ಆದರೆ ವಾಸ್ತವದಲ್ಲಿ ಯಾವ ವ್ಯಾಧಿಗಾಗಲಿ ಬೀರ್ ಸಾರಾಯಿ ವ್ಹಿಸ್ಕಿ ಎಂಬಿವು ಬೇಕಾದುದೇ ಇಲ್ಲ. ಯಾವ ವಿಧವಾದ ಕೆಲಸ ಮಾಡುವುದಕ್ಕೂ ಅದು ಅವಶ್ಯಕವಿಲ್ಲ. 50 ಮಂದಿ ಪ್ರಬಲ ವೈದ್ಯರು ಕೂಡಿ, ರೋಗವಿಷಯದಲ್ಲಿ ಈ ಮದದ್ರಾವಕದ ಗುಣಾವಗುಣಗಳನ್ನು ಚರ್ಚಿಸಿ ಈ ಕೆಳಗೆ ಕಂಡ ಎರಡು ತೀರ್ಮಾನಗಳನ್ನು ಬರೆದಿರುವರು.

(1) ಶರೀರಕ್ಕೆ ಅವಶ್ಯಕವಾದ ಅಥವಾ ಉಪಯೋಗಕರವಾದ ಯಾವ ಗುಣಾಂಶವೂ ಸಾರಾಯಿಯದಲ್ಲಿ ಕಂಡುಬಂದಿಲ್ಲ.

(2) ಮಧುಸಾರವೆಂಬುದು ಒಂದು ವಿಷವು. ಸ್ವಲ್ಪವಾಗಿ ಸೇವನೆ ಮಾಡಿದರೆ ಕಾಲಕ್ರಮದಿಂದಲೂ, ಅಧಿಕವಾಗಿ ಸೇವಿಸಿದರೆ ಶೀಘ್ರದಲ್ಲಿಯೂ ಅಪಾಯವನ್ನುಂಟುಮಾಡುವುದೇನಾಶ್ಚರ್ಯವು.

ಕುಡುಕರ ಮೂಗು ಕೆಂಪಾಗಿರುವುದೇಕೆ?

ನಾವು ಮೇಲೆ ಹೇಳಿದ ವಿವರಣಗಳಿಂದ, ರಕ್ತವು ನಾಳಗಳಲ್ಲಿ ಹಿಂದಕ್ಕೂ ಮುಂದಕ್ಕೂ ಸರಿದಾಡುವುದೆಂದು ತೋರಿಸಿರುವೆವು. ಸಾರಾಯವು ಈ ರಕ್ತ ಚಲನೆಗೆ ಕಾರಣವಾದ ಹೃದಯವನ್ನೂ, ರಕ್ತನಾಳಗಳ ತಡಿಕೆಯನ್ನೂ ಕೆಡಿಸಿಬಿಡುವುದರಿಂದ, ರಕ್ತದ ಒತ್ತಾಟವು ಸಿಕ್ಕಿದಹಾಗೆ ಹೆಚ್ಚು ಕಡಿಮೆಯಾಗಿ ಮೂರ್ಛೆರೋಗಕ್ಕೆ ಕಾರಣವಾಗುವುದು. ಮದ್ಯದಿಂದ ಶರೀರದೊಳಗಿನ ಅಣುಕೋಶಗಳು (ಗೂಡುಗಳು) ವಿಸ್ತರಿಸುವಂತೆ ರಕ್ತನಾಳವೂ ಅಗಲುವುದರಿಂದ, ರಕ್ತದಸಂಚಾರವೂ ಮಂದವಾಗುವುದು. ಕುಡುಕರ ಮೂಗು ಕೆಂಪಾಗಿರುವುದಕ್ಕೆ ಇದೇ ಕಾರಣವು. ರಕ್ತಸಂಚಾರವು ಸರಿಯಾಗಿ ನಡೆಯದಂತೆ ರಕ್ತನಾಡಿಗಳು ಜಡವಾಗಿರುವುದರಿಂದ ಕೆನ್ನೆಗಳಲ್ಲಿ ಮೊಡವೆಗಳೂ, ಸಾರಾಯದಬಣ್ಣವೂ ಏರ್ಪಡುವುದು. ಅಂಥವರಿಗೆ ಶರೀರದ ಸಪ್ತಧಾತುಗಳೂ ಒಳಗೆ ಹೊರಗೆಲ್ಲಾ ಕೆಟ್ಟುಹೋಗುವುವು. ಕಾಳಜ, ಜಠರ, ಮೂತ್ರಕೋಶ, ಮಿದುಳು ಎಲ್ಲವೂ ದುರ್ಬಲವಾಗಿ ಬಣ್ಣಗೆಡುವುವು. ಹೀಗೆ ಎಲ್ಲಾ ಅಂಗಗಳೂ ದುರ್ಬಲವಾಗುವುದರಿಂದ ರೋಗನಿವಾರಣಶಕ್ತಿಯು ಸಂಪೂರ್ಣವಾಗಿ ನಷ್ಟವಾಗುವುದು.

ಮದ್ಯದಿಂದ ಜೀರ್ಣಶಕ್ತಿಯು ಕೆಡುವುದು.

ಸಾರಾಯವು ಜೀರ್ಣಕಾರ್ಯಕ್ಕೆ ಏನೇನೂ ಸಹಾಯಮಾಡಲಾರದು. ಪ್ರೊಫೆಸರ್ ರಾಡ್ಜಿಕೌಸ್ಕಿ ಎಂಬವರು, ಸಾರಾಯಿಸಂಬಂಧವಿದ್ದರೆ, "ಗ್ಯಾಸ್ಟ್ರಿಕ್ ಜೂಸ್" ಎಂಬ ಜಠರರಸದಲ್ಲಿ "ಪೆಪ್ಸಿನ್" ಇರುವುದಿಲ್ಲವೆಂದು ಹೇಳಿದುದರಮೇಲೆ, ಪುನಃ ನಾವು ಪರಿಶೋಧನೆಮಾಡಿದುದರಲ್ಲಿ ಅವರ ಹೇಳಿಕೆಯು ನಿಜವೆಂದು ತಿಳಿದುಬಂದಿದೆ. ಮದ್ಯವು ಹೊಟ್ಟೆಯ ಅನ್ನಾಶಯದಲ್ಲಿ ಜಠರರಸವು ಹೆಚ್ಚಾಗಿ ಉತ್ಪತ್ತಿಯಾಗುವಂತೆ ಮಾಡುವುದು. ಆದರೆ ಅದರಲ್ಲಿ "ಪೆಪ್ಸಿನ್" ಇರುವುದಿಲ್ಲ. ಸರಿಯಾದ ಜೀರ್ಣಕಾರ್ಯಕ್ಕೆ ಇದು ಬಹುಮುಖ್ಯವಾದ ವಸ್ತುವು. ಮದದ್ರಾವಕಗಳು, ಅದರಲ್ಲಿಯೂ ಮುಖ್ಯವಾದ ಬೀರ್, ವೈನ್, ಇವು ಜೀರ್ಣಶಕ್ತಿಯನ್ನು ತಗ್ಗಿಸುವುದೆಂದು ಪ್ರಸಿದ್ಧ ಡಾಕ್ಟರುಗಳು ಪರೀಕ್ಷಿಸಿ ನಿರ್ಧರಿಸಿರುವರು. ತಿಂದ ಆಹಾರಪದಾರ್ಥಗಳು ಅನ್ನಕೋಶಕ್ಕೆ ಬಂದು ಸೇರಿದಮೇಲೆ ಅದು ಒಂದೊಂದು ಸೌಟಿನಷ್ಟು ಪ್ರಮಾಣದಲ್ಲಿ "ಪೈಲೋರಸ್" ಮೂಲಕವಾಗಿ ಸಣ್ಣ ಕರುಳಿಗೆ ಸಾಗಿಸಲ್ಪಡುವುದು. ಅಲ್ಲಿಂದ "ಇಲ್ಯೂಮ್" ಎಂಬ ಕೆಳಗಿನ ಭಾಗಕ್ಕೆ ಬರುವುದು. ಹೀಗೆ ನಾಲ್ಕುಘಂಟೆಗಳಕಾಲದವರೆಗೆ ನಡೆಯುವುದರಲ್ಲಿ ಆಹಾರವಸ್ತುವೆಲ್ಲ ಕರುಳಿನಕೆಳಭಾಗಕ್ಕೆ ಬಂದುಸೇರುವುದು. ಅಲ್ಲಿಂದಾಚೆಗೆ ಆ ಆಹಾರವು "ಕೊಲೋನಿ" ಗೆ ಸೇರಲು, ಮತ್ತೆ ನಾಲ್ಕು ಘಂಟೆಗಳ ಕಾಲವು ಹಿಡಿಯುವುದು. ಮಧುಸಾರವು ಜಠರದೊಳಗಿನ ಮೇಲ್ಕಂಡ ಕಾರ್ಯಶಕ್ತಿಗಳನ್ನೆಲ್ಲಾ ತಗ್ಗಿಸಿ, ಜೀರ್ಣಕಾರ್ಯವು ಬೇಗನೆ ನಡೆಯದಂತೆ ತಾಮಸಮಾಡುವುದು.

ಮದ್ಯದಿಂದ ಕಾಳಜಗಳಲ್ಲಿ ಆಗುವ
ದುಷ್ಪರಿಣಾಮಗಳು.

ಕಾಳಜದಲ್ಲಿ ಸುಮಾರು ಒಂದುಕೋಟಿಗಿಂತ ಹೆಚ್ಚು ಗೂಡುಗಳು (ಸೆಲ್‌ಗಳು) ಉಂಟು. ಈ ಗೂಡುಗಳಿಂದಲೇ ಪಿತ್ತರಸವುಂಟಾಗಿ, ಅದು ವಿಷದೋಷವನ್ನು ನೀಗಿಸಿ ದೇಹವನ್ನು ಕಾಪಾಡತಕ್ಕದಾಗಿದೆ. ಸಾರಾಯವು ಅಂತಹ ಗೂಡುಗಳನ್ನೆಲ್ಲ ಕೆಡಿಸಿ ಕೊನೆಗೆ ಅವುಗಳನ್ನು ಅನುಪಯೋಗವಾದ ಕೊಬ್ಬಿನರೂಪಕ್ಕೆ ಮಾರಿಸಿಬಿಡುವುದು. ಬೀರನ್ನು ಕುಡಿಯುವವರ ಕಾಳಜವು ತನ್ನ ಮೃದುತ್ವವನ್ನೂ ಸಹಜತ್ವರೂಪವನ್ನೂ ಕಳೆದುಕೊಂಡು ಕಾಲ್ಜೋಡುಗಳ ಹಿಮ್ಮಡಿಗೆ ಹೊಡೆಯುವ ಗುಂಡುಮೊಳೆಗಳ ಆಕಾರಕ್ಕಿರುವ ಗಂಟುಗಳಿಂದ ಮುಚ್ಚಲ್ಪಡುವುವು. ಅದಕ್ಕಾಗಿಯೇ ಸಾರಾಯಸಂಬಂಧವುಳ್ಳ ಕಾಳಜಕ್ಕೆ "ಮೊಳೆಬಡಿದ ಕಾಳಜ" ವೆಂಬ ಹೆಸರುಬಂದಿದೆ. ಇದಕ್ಕೆ ನಿದರ್ಶನಗಳೂ ಕಂಡು ಬರುತ್ತಿವೆ.

ಮದ್ಯ(ಬೀರ್) ಕುಡಿಯುವವರು ಮೂತ್ರ
ವ್ಯಾಧಿಯಿಂದ ಸಾಯುವುದೇಕೆ?

ಕಾಳಜದಲ್ಲಿ ಹೇಗೋಹಾಗೆ ಮೂತ್ರಕೋಶವೊಂದೊಂದರಲ್ಲಿಯೂ 10 ಲಕ್ಷ ಸೆಲ್‌ಗಳಿವೆ. ಈ ಒಂದೊಂದು ಸೆಲ್ಲಿನಿಂದಲೂ ಮೂತ್ರೋತ್ಪತ್ತಿಯಾಗುತ್ತಿರುವುದು. ಆದರೆ ಆ ಮೂತ್ರಪ್ರಮಾಣವನ್ನು ನೋಡಿದರೆಮಾತ್ರ, ಆಶ್ಚರ್ಯವಾಗುವುದು. ಒಂದೊಂದು ಸೆಲ್ಲಿನಿಂದ ಒಂದು ಲವಮಾತ್ರದಷ್ಟು ಮೂತ್ರವು ಜಿನುಗಲು ಮೂರುತಿಂಗಳ ಕಾಲವು ಬೇಕು. ಎಂದರೆ ಒಂದು ಟೀ ಸೌಟಿನಷ್ಟು ಮೂತ್ರೋತ್ಪತ್ತಿ ಮಾಡುವುದಕ್ಕೆ ಒಂದುಗೂಡಿಗೆ 60 ವರ್ಷಗಳಕಾಲವು ಬೇಕಾಗುವುದು. ಮದ್ಯಸಾರವೆಂಬುದು ವಿಷವಾದುದರಿಂದಲೂ, ಆ ವಿಷವಸ್ತುವು ಮೂತ್ರಕೋಶದಮೂಲಕವಾಗಿಯೇ ಹೊರಬೀಳಬೇಕಾಗುವುದರಿಂದಲೂ, ಆ ಮೂತ್ರಕೋಶದ ಗೂಡುಗಳು ಅಧಿಕಕಾರ್ಯದಿಂದ ಶಕ್ತಿಗುಂದಿ, ಕಾಲಕ್ರಮದಲ್ಲಿ ಬೇಗನೆ ಕೆಟ್ಟುಹೋಗುವುವು. ಇದರಿಂದ ಕುಡುಕರು ಕುಡಿತದಲ್ಲಿ ಎಷ್ಟೇ ಮಿತವಾಗಿದ್ದರೂ, ಹೆಚ್ಚುಕಾಲ ಬದುಕಿರುವುದು ಕಡಿಮೆ. ಬೀರ್ ಕುಡಿಯುವವರಿಗೆ ಪ್ರಾಯಕವಾಗಿ "ಬ್ರೈಟ್ಸ್" ಎಂಬ ವ್ಯಾಧಿಯೇ ಮರಣಕಾರಿಯು. ಗ್ರೇಟ್ ಬ್ರಿಟನ್ನಿನಲ್ಲಿರುವ "ಟೆಂಪರೆನ್ಸ್ ಇನ್‌ಷೂರೆನ್ಸ್ ಸೊಸೈಟಿ" ಯವರು ಇದೇವಿಷಯವಾದ ಖಾನೇಷುಮಾರಿಯನ್ನು ತೆಗೆದು ಪರಿಶೋಧಿಸಿದುದರಲ್ಲಿ, ಇತರ ಜನರಿಗಿಂತಲೂ ಮದ್ಯಪಾಯಿಗಳ ಆಯುಃಪರಿಮಿತಿಯು 10 ಅಥವಾ 15 ವರ್ಷಗಳು ಕಡಿಮೆಯೆಂದು ತಿಳಿದುಬಂದಿದೆ.

ಚಾಣಕ್ಯನ ಅರ್ಥಶಾಸ್ತ್ರ.

ಪ್ರಥಮಭಾಗ (೧ ನೆಯ ಅಧ್ಯಾಯ)

ವಿದ್ಯಾಸಮುದ್ದೇಶ.

[ಲೇಖಕ—ಕನ್ನಡಕವಿ ಅನವಟ್ಟಿ ರಾಮರಾಯರು.]

೧. ಕೌಟಿಲ್ಯನ ಮತಾನುಸಾರವಾಗಿ ಆನ್ವೀಕ್ಷಿಕಿ, ವೇದ, ವಾರ್ತೆ ಮತ್ತು ದಂಡನೀತಿ ಎಂಬಿವೇ ನಾಲ್ಕು ಶಾಸ್ತ್ರಗಳು. ಇವುಗಳಲ್ಲಿ ಆನ್ವೀಕ್ಷಿಕಿ ಎಂಬ ಶಾಸ್ತ್ರದಲ್ಲಿ ಸಾಂಖ್ಯ, ಯೋಗ ಮತ್ತು ದೇವರೇ ಇಲ್ಲವೆಂದು ಸಾಧಿಸುವ ಲೋಕಾಯತ ಎಂಬಿವುಗಳು ಗರ್ಭಿತವಾಗಿವೆ. ವೇದದಲ್ಲಿ, ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳು ಸೇರಿವೆ. ವಾರ್ತೆಯಲ್ಲಿ ವ್ಯವಸಾಯಕ್ರಮ, ಪಶುಪಾಲನೆ, ಮತ್ತು ವ್ಯಾಪಾರ ಈ ವಿಷಯಗಳು ಒಳಗೊಂಡಿವೆ. ದಂಡನೀತಿಶಾಸ್ತ್ರದಲ್ಲಿ ರಾಜಕೀಯಸಂಬಂಧವಾದ ವಿಷಯಗಳು ಒಳಗೊಂಡಿವೆ.

೨. ಮನುಚಕ್ರವರ್ತಿಯು, ವೇದ, ವಾರ್ತೆ ಮತ್ತು ದಂಡನೀತಿ ಎಂಬುದಾಗಿ ಮೂರು ಶಾಸ್ತ್ರಗಳುಂಟೆಂದು ಅಭಿಪ್ರಾಯಪಡುತ್ತಾನೆ. ಅಲ್ಲದೆ ಆನ್ವೀಕ್ಷಿಕಿ ಎಂಬ ಶಾಸ್ತ್ರವು ವೇದದ ಒಂದು ಪ್ರಾಮುಖ್ಯ ಭಾಗವಿರುವುದೆಂದು ಅಭಿಪ್ರಾಯಪಡುತ್ತಾನೆ.

೩. ಬೃಹಸ್ಪತಿಯು ವಾರ್ತೆ ಮತ್ತು ದಂಡನೀತಿ ಇವು ಎರಡೇ ಶಾಸ್ತ್ರಗಳೆಂತಲೂ, ವೇದಗಳು ಪ್ರಾಪಂಚಿಕ ವಿಷಯಜ್ಞಾನವನ್ನು ಮಾನವರಿಗೆ ಬೋಧಿಸಲು ಸಂಗ್ರಹರೂಪವಾಗಿರುವುದೆಂತಲೂ ಅಭಿಪ್ರಾಯಪಡುತ್ತಾನೆ.

೪. ಉಶನನಾದರೋ ದಂಡನೀತಿ ಎಂಬುದೊಂ ರುವುದು. ಇದು ಇತರ ಶಾಸ್ತ್ರಗಳಿಗೆ ಆಧಾರಭೂತವ ಗಿರುವುದೆಂದು ಹೇಳುವನು.

೫. ಕೌಟಿಲ್ಯನು ಶಾಸ್ತ್ರಗಳು ನಾಲ್ಕು. ಈ ನಾಲ ಶಾಸ್ತ್ರಗಳ ಆಧಾರದಿಂದಲೇ ಸದ್ಗುಣ ಮತ್ತು ವಿ ರ್ಯಗಳನ್ನು ಹೊಂದಲು ಸಾಧನಭೂತವಾಗಿರುವುದೆಂ ಅಭಿಪ್ರಾಯಪಡುವನು.

೬. ಮೂರುವೇದಗಳ ಸಹಾಯದಿಂದ ಧರ್ಮಾಧ ಕಾರ್ಯಗಳೂ, ವಾರ್ತೆಯಿಂದ ಐಶ್ವರ್ಯ ಮತ್ತು ದಾ ದ್ರ್ಯಗಳೂ, ದಂಡನೀತಿಯಿಂದ ನ್ಯಾಯಾನ್ಯಾ ವಿಮರ್ಶೆಯೂ, ಬಲಾಬಲ ವಿಷಯಗಳೂ ತಿಳಿಯಬರು ವೆಂದು ಹೇಳಲ್ಪಟ್ಟಿದೆ.

೭. ಮೇಲೆ ಹೇಳಿದ ಶಾಸ್ತ್ರಗಳನ್ನೆಲ್ಲಾ ಕುರಿ ಪರ್ಯಾಲೋಚಿಸಿದುದಾದರೆ, ಇವುಗಳೆಲ್ಲಾ ಆನ್ವೀ ಕ್ಷಿಕಿ ಎಂಬ ಶಾಸ್ತ್ರವು, ಪ್ರಪಂಚಕ್ಕೆ ವಿಶೇಷ ಸಹಾ ಕರವಾದುದಾಗಿಯೂ, ಮಾನವನಿಗೆ ಪ್ರಾಪ್ತವಾಗ ಸುಖದುಃಖ ಕಾಲಗಳಲ್ಲಿ ಮನಸ್ಸನ್ನು ಸ್ವಾಧೀನ ತಂದುಕೊಳ್ಳಲು ಸಹಾಯ ಮಾಡತಕ್ಕುದಾಗಿಯ ಇರುವುದೊಂದಲ್ಲದೆ ವಾಚಾಳತೆ ಮತ್ತು ಕರ್ಮ ಇ ಗಳನ್ನಭಿವೃದ್ಧಿಯನ್ನೈದಿಸಲು ವಿಶೇಷ ಸಹಕಾರಿಯ ಗಿರುವಂತೆ ಸಹಾಯ ಮಾಡುವುದೆಂದೂ ಹೇಳಲ್ಪಟ್ಟ

೮. ಎಲ್ಲಾ ವಿಧವಾದ ತಿಳುವಳಿಕೆಯನ್ನು ಹು ಸುವುದಕ್ಕೆ ಸಾಧನಭೂತವಾಗಿಯೂ, ಸಕಲ ಕಾಯ ಗಳನ್ನು ನಿರ್ವಾಹಮಾಡಿ ಆಗಮಾಡಿಸಲು ದಾರಿಯ ತೋರಿಸುವುದಾಗಿಯೂ ಎಲ್ಲಾ ಸದ್ಗುಣಜ್ಞಾನ ಳನ್ನುಂಟುಮಾಡಿಕೊಳ್ಳುವುದಕ್ಕೆ ಸಹಕಾರಿಯಾಗಿ ವುದೇ ಆನ್ವೀಕ್ಷಿಕಿ ಶಾಸ್ತ್ರವೆಂದು ಹೇಳಲ್ಪಟ್ಟಿದೆ.

೨ ನೆಯ ಅಧ್ಯಾಯ.

ವೇದದಲ್ಲಿ ಋಗ್ವೇದ, ಯಜುರ್ವೇದ, ಮ ಸಾಮವೇದಗಳೆಂದು ಮೂರು ಭಾಗಗಳಿವೆ. ಅ ಅಥರ್ವಣವೇದವೆಂತಲೂ, ಮತ್ತೊಂದು ಭಾಗ ಪ್ರಂ ರಾಮಾಯಣ ಮತ್ತು ಭಾರತ, ಇವು ವೇದಕ್ಕೆ ಸ ಶಗಳೆಂದು ಹೇಳಲ್ಪಟ್ಟಿವೆ.

ವೇದಕ್ಕೆ ಅಂಗಗಳಾವುವೆಂದರೆ—ಶಿಕ್ಷಾ, ವ್ಯಾ ರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಮತ್ತು ಕಲ್ಪ.

೧. ಶಿಕ್ಷೆಯಲ್ಲಿ,—ವೇದ ಮಂತ್ರಗಳನ್ನು ಉಚ್ಚ ಸುವಾಗ್ಗೆ, ಉದಾತ್ತಾನುದಾತ್ತಾದಿ ಸ್ವರಗಳ ಕ್ರಮ ಳನ್ನು ಅನುಸರಿಸಿ ಹೀಗೆಯೇ ಉಚ್ಚರಿಸಬೇಕೆಂ ವಿಧ್ಯನುಸಾರವಾದ ಕ್ರಮಗಳನ್ನು ಸ್ಪಷ್ಟವಾಗಿ ತೋ ಸುವ ಮಾರ್ಗವನ್ನು ಬೋಧಿಸುವುದು.

೨. ಕಲ್ಪದಲ್ಲಿ—ಕರ್ಮಗಳನ್ನು ಹೀಗೆಯೇಮಾ ಬೇಕೆಂಬ ವಿಧಿಗಳು ಹೇಳಲ್ಪಟ್ಟಿವೆ.

೩. ವ್ಯಾಕರಣದಲ್ಲಿ—ಭಾಷಾಜ್ಞಾನವು ವೃ ಹೊಂದುವ ಮಾರ್ಗಗಳು ತೋರಿಸಲ್ಪಟ್ಟಿವೆ.

೪. ನಿರುಕ್ತ—ವೇದಗಳಲ್ಲಿ ಬರುವ ಅನೇಕ ಕ ವಾದ ಪದಗಳ ಅರ್ಥವಿವರಣೆಯು ಇದರಲ್ಲಿ ಹೇ ಟ್ಟಿದೆ.

೫. ಛಂದಸ್ಸು—ಇದು ವೃತ್ತ ಮತ್ತು ಶ್ಲೋ ಗಳನ್ನು ಕವನ ಮಾಡುವುದಕ್ಕೆ ತಿಳಿಯಬೇಕಾಗಿರು ಅಂಶಗಳನ್ನು ಒಳಗೊಂಡಿರುವುದು.

೬. ಜ್ಯೋತಿಷ— ಖಗೋಳ, ಭೂಗೋಳಗಳ ಯಗಳೂ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಗಳೇ ಮೊದಲಾದವುಗಳೂ ಇದರಲ್ಲಿ ಹೇಳಲ್ಪಟ್ಟಿರುವು

ಅಮೇರಿಕೆಯಲ್ಲಿ ಮಿ|| ಜಾರ್ಜ್ ಎಫ್. ಮಾರ್ಕ ಎಂಬೊಬ್ಬ ಶ್ರೀಮಂತನಿರುವನು. ಕೆಲವುಜನ ದರೋ ಕೋರರು 1,50,000 ರೂಪಾಯಿಗಳನ್ನು ಕೂಡ ಕೊಡದಿದ್ದರೆ ನಿನ್ನನ್ನು ಅಪಹರಿಸಿಕೊಂಡು ಹೋ ವೆವೆಂದು ಇವರಿಗೊಂದು ಪತ್ರವನ್ನು ಬರೆದಿರುವ ಇದರಿಂದ ಭಯಗ್ರಸ್ತನಾದ ಮಾರ್ಕ್ಸನು ತನ್ನ ಬ ಲೆಯ ಸುತ್ತಲೂ ಒಂದು ದೊಡ್ಡ ಕಂದಕವ ತೋಡಿಸಿ, ಅದನ್ನು ನೀರಿನಿಂದ ಭರ್ತಿಮಾಡಿ, ಅದ ಯಾರೂ ಈಜಿಕೊಂಡುಬರದಂತೆ ಬಹಳ ವೇಗವ ವಿದ್ಯುಚ್ಛಕ್ತಿಯನ್ನು [illegible]ರುವನಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಕಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ರಾಳಿಭಸ್ಮ	೧	೦—೮—೦
ಜಿನಭಸ್ಮ	೧	೦—೮—೦
ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ೀದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಯೂ ಮತ್ತು ನಯವಾಗಿಯೂ ಇರುವದರಿಂದ ತಲೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕಡದೆ ಹೊಸಪೇಟಾಗಳಂತೆಯೇ ಕಾಣಿ ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. [illegible] ಹೊಸಮನೆ,
ಪೋ|| ಗು[illegible], ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಕ್ರಯದಾಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲ್ಯಾಫ್ರ್ಯಾಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣತೆಜ್ವರ, ಮೈಲಿಗೆ, ಕೋರ, ಕೋಬರಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬೇನೆ, ಬಹಳ ಬೆವರು, ಮೆದುಳು ಬಿಸಿ, ಕಣ್ಣುಹಿಡಿತ, ನಿತ್ತಲಾರಿ, ನಿದ್ರಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಕಪ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಹ್ಯೂಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಕೀಲು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಬಿಸ್ಕು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[35] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು. ದ. ಕ**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರನೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಸಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಕ್ಷೇಮಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[16] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಆರುವರ್ಷಗಳು ತುಂಬಿ ಏಳನೇ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೩ ನೇ ಮೇ ತಾ|| ೧ ನೇ ಸೋಮವಾರ.

ಆರನೆಯ ವರ್ಷದ ಸಮಾಪ್ತಿ.

ಸನಾತನಧರ್ಮಾನುಯಾಯಿಗಳಿಗೆ ಅತ್ಯಂತ ಮಾನ್ಯಗಳಾಗಿರುವ ಅರವತ್ತು ಸಂವತ್ಸರಗಳಲ್ಲಿ ಮೊದಲನೆಯದಾಗಿ ಪರಮಶ್ರೇಷ್ಠವೆನಿಸಿಕೊಂಡಿರುವ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ಶುಭದಿವಸದಲ್ಲಿ ಪ್ರಾಪ್ತವಾಗುವ ಶ್ರೀಮಜ್ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವದ ಪುಣ್ಯದಿವಸದಲ್ಲಿ ವೀರಶೈವಮತೋದ್ಧಾರಕ್ಕಾಗಿ ಜನ್ಮವೆತ್ತಿದ 'ಪಂಚಾಚಾರ್ಯಪ್ರಭಾ' ನಾಮಕವಾದ ಈ ಪತ್ರಿಕೆಗೆ ಈ ಶ್ರೀಮುಖನಾಮಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ಆರುವರ್ಷಗಳು ತುಂಬಿ ಏಳನೆಯ ವರ್ಷವು ಪ್ರಾಪ್ತವಾಗಿರುವುದು. ವೀರಶೈವಮತಸ್ಥಾಪಕರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಅಸಾಧಾರಣ ಲೀಲೆಗಳನ್ನೂ ಅವರಿಂದ ಸ್ಥಾಪಿತವಾದ ವರ್ಣಾಶ್ರಮಧರ್ಮಪ್ರತಿಪಾದಕವೀರಶೈವಮತದ ತತ್ತ್ವಗಳನ್ನೂ ಜಗತ್ತಿನಲ್ಲೆಲ್ಲಾ ಪ್ರಕಾಶಿಸುವಂತೆ ಮಾಡಬೇಕೆಂಬ ಸದುದ್ದೇಶದಿಂದ ಜನ್ಮವೆತ್ತಿರುವ ಈ ಪತ್ರಿಕೆಯು ಆ ಪೂಜ್ಯಪಾದರ ಮಹಿಮಾತಿಶಯಗಳನ್ನು ಲೋಕದಲ್ಲೆಲ್ಲಾ ತಿಳಿಯಪಡಿಸಿ ಸರ್ವರನ್ನೂ ಅವರಲ್ಲಿ ಭಕ್ತಿಯುಳ್ಳವರನ್ನಾಗಿ ಮಾಡಿ ತನ್ನ ಪವಿತ್ರಾಭಿಧಾನವನ್ನು ಅನ್ವರ್ಥಕಮಾಡಿಕೊಂಡಿರುವುದು. ಜಗದ್ವಿಖ್ಯಾತರಾದ ಪಂಚಾಚಾರ್ಯ ಪೂಜ್ಯಪಾದರು ಗಗನಮಾರ್ಗದಿಂದ ಸೇತುಹಿಮಾಚಲಪರ್ಯಂತವಾಗಿ ಸಂಚರಿಸಿ, ತಮ್ಮ ಪವಿತ್ರಪಾದವಿನ್ಯಾಸದಿಂದ ಅನೇಕ ಸ್ಥಲಗಳನ್ನು ಪವಿತ್ರಕ್ಷೇತ್ರಗಳನ್ನಾಗಿ ಮಾಡಿದ ವಿಷಯವು ಈ ಪತ್ರಿಕೆಯ ದ್ವಾರಾ ಸರ್ವರಿಗೂ ವೇದ್ಯವಾದುದಾಗಿದೆ. ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮೊದಲಾದ ಮಹರ್ಷಿಪುಂಗವರಿಗೂ, ವಿಭೀಷಣ, ವಿಕ್ರಮಾರ್ಕ, ನೀಲಗಲ, ಚೋಳ, ದೇವನಂದನ, ಗೌತಮೇಂದ್ರ, ಜಯನಂದದೇವ, ಮೊದಲಾದ ಚಕ್ರವರ್ತಿಗಳಿಗೂ ಶಿವಸಿದ್ಧಾಂತವನ್ನುಪದೇಶಿಸಿ ಇವರೆಲ್ಲರನ್ನೂ ಯಾವ ಮಹಾತ್ಮರು ಶಿಷ್ಯರನ್ನಾಗಿ ಮಾಡಿಕೊಂಡು ತಮ್ಮ ಪವಿತ್ರ ಕೀರ್ತಿಯನ್ನು ಜಗತ್ತಿನಲ್ಲೆಲ್ಲಾ ಪ್ರಸರಿಸಿದರೋ, ಅಂಥ ಲೋಕವಂದ್ಯ ಜಗದಾಚಾರ್ಯರ ನಾಮಸಂಕೀರ್ತನವೇ ಈ ನಾಸ್ತಿಕಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು, ಆ ಜಗದಾಚಾರ್ಯರ ಪವಿತ್ರಾಭಿಧಾನವನ್ನು ಧಾರಣಮಾಡಿದ ಈ ಪತ್ರಿಕೆಯು ಧರ್ಮಶಾಸ್ತ್ರಾನುಸಾರವಾದ ತನ್ನಲ್ಲಿ ಹೊರಡುವ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪುಣ್ಯನಾಮಸಂಕೀರ್ತನವನ್ನು ದಿಶದಿಕ್ಕುಗಳಲ್ಲಿಯೂ ಹರಡುವಂತೆ ಮಾಡಿ, ಆಸ್ತಿಕಜನಮಾನ್ಯವಾಗಿರುವುದೆಂಬ ವಿಷಯವನ್ನು ನೋಡಿ ಸಂತೋಷಪಡಬೇಕಾಗಿದೆ. ಜಾತಿಸಾಂಕರ್ಯದ ಪ್ರಘಾತದಿಂದ ಅತ್ಯಂತ ಜರ್ಝರಿತವಾಗುತ್ತಿರುವ ಸನಾತನಧರ್ಮದ ರಕ್ಷಣೆಯ ಬಗ್ಗೆ ಅನೇಕ ಲೇಖಗಳನ್ನು ಪ್ರಕಟಮಾಡಿ ಜಾತಿಸಾಂಕರ್ಯವಾದಿಗಳ ದುಷ್ಟಾಭಿಪ್ರಾಯವನ್ನು ಖಂಡಿಸಿ ಜಾತಿಭೇದವು ನಮ್ಮ ಭರತಖಂಡದಲ್ಲಿ ಅನಾದಿಕಾಲದಿಂದಲೂ ರೂಢಮೂಲವಾಗಿರುವದೆಂದು ವೇದಾಗಮಾದಿ ಪ್ರಮಾಣಗಳ ದ್ವಾರಾ ಜನರ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಅತ್ಯಾದರವುಳ್ಳದ್ದನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುದೇವತಾಭಕ್ತಿರೂಪಬೀಜವನ್ನು ಬಿತ್ತಿ ಅಂಕುರಿಸಿ ಪಲ್ಲವಿಸಿ ಫಲಿಸುವಂತೆ ಮಾಡಿತು. ಈ ಮತದ ಬಗ್ಗೆ ಅನ್ಯಮತೀಯರಲ್ಲುಂಟಾಗಿದ್ದ ನಾನಾತರಹದ ಸಂದೇಹಗಳನ್ನು ದೂರಮಾಡಿ ಈ ಮತದ ಉದಾತ್ತತತ್ತ್ವಗಳನ್ನು ಸರ್ವರಿಗೂ ತಿಳುಹಿಸಿ, ಸರ್ವಮತೀಯರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡಿತು. ಅತ್ಯಂತಕಠಿಣವಾದ ಧರ್ಮಶಾಸ್ತ್ರದ ರಹಸ್ಯವನ್ನು ತಿಳಿಯಲು ಅಸಮರ್ಥರಾದವರೆಲ್ಲರಿಗೂ ತನ್ನ ಸುಗಮವಾದ ಭಾಷಾಶೈಲಿಯಿಂದ ಈ ಮತದ ಸಿದ್ಧಾಂತವನ್ನೂ ಧರ್ಮಕರ್ಮಗಳನ್ನೂ ಬೋಧಿಸಿ ಅನೇಕರನ್ನು ಮತತತ್ತ್ವಜ್ಞರನ್ನಾಗಿ ಮಾಡಿತು. ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಮತೋದ್ಧಾರದ ಕಾರ್ಯಗಳನ್ನು ಸರ್ವತೋಮುಖವಾಗಿ ಮಾಡಿ ಭರತಖಂಡದಲ್ಲಿರುವ ಸಮಸ್ತ ಸತ್ಪುರುಷರ ಪರಮಪ್ರೀತಿಗೆ ಕಾರಣವಾಗಿರುವುದು. ಕೇವಲ ಮತೋದ್ಧಾರಕ್ಕಾಗಿಯೇ ಜನ್ಮವೆತ್ತಿ ಅದರಂತೆ ಕಾರ್ಯವನ್ನು ಕೈಕೊಂಡಿರುವ ಈ ಪತ್ರಿಕೆಯ ಸದುದ್ದೇಶವನ್ನು ಕಂಡು ಅನೇಕಜನ ಗುರುಭಕ್ತರು ಹಗಲಿರುಳೂ ಇದರ ಅಭಿವೃದ್ಧಿಗಾಗಿ ತನುಮನೋಧನಗಳನ್ನರ್ಪಿಸಿ ಪ್ರೀತಿಯಿಂದ ಕಾರ್ಯಮಾಡುತ್ತಿರುವರು. ಮತಸ್ಥಾಪನಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲವಾಗಿ ಬಾಳಿ ಮತೋದ್ಧಾರ ಕಾರ್ಯವನ್ನು ಮಾಡಲೆಂಬ ಸದುದ್ದೇಶದಿಂದ ಭರತಖಂಡದಲ್ಲಿರುವ ಅನೇಕಜನ ಗುರುಭಕ್ತಿಪರಾಯಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗಧಾರಣ, ದೀಕ್ಷಾ, ವಿವಾಹ, ಗಣಾರಾಧನ ಮೊದಲಾದ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸಿ ಕಳುಹಿಸುತ್ತಿರುವ ವಿಷಯವು ಪ್ರತಿವಾರದಲ್ಲಿಯೂ ಪ್ರಕಟವಾಗುತ್ತಿರುವ ಸ್ವೀಕಾರದಿಂದಲೇ ವ್ಯಕ್ತವಾಗುವದು. ಇದರಂತೆಯೇ ಪ್ರತಿಯೊಬ್ಬ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿಗಾಗಿ ಸರ್ವರೀತಿಯಿಂದಲೂ ಸಹಾಯಮಾಡಿ ಶ್ರೀ ಜಗದಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ. ವೀರಶೈವಮತದಲ್ಲಿ ಧರ್ಮಶಾಸ್ತ್ರಾನುಸಾರವಾಗಿ ವರ್ಣಾಶ್ರಮಧರ್ಮಗಳನ್ನು ಪ್ರತಿಪಾದನಮಾಡಿ ಈ ಮತದ ನಿಜಸ್ವರೂಪವನ್ನು ಬೋಧಿಸುವ ಪತ್ರಿಕೆಯೆಂದರೆ ಇದೊಂದೇ ಆಗಿದೆ. ಸದಾ ವೀರಶೈವಮತದ ವಿಷಯದಲ್ಲಿ ಶಾಸ್ತ್ರಸಮ್ಮತವಾದ ಲೇಖಗಳನ್ನು ಪ್ರಕಟಿಸಿ, ಸಕಲರಿಗೂ ಧರ್ಮತತ್ತ್ವಾಮೃತವನ್ನು ಪಾನಮಾಡಿಸಿ ಸರ್ವರನ್ನೂ ಧರ್ಮನಿರತರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಪ್ರತಿಯೊಬ್ಬರೂ ನಿರತಿಶಯವಾದ ಪ್ರೀತಿಯನ್ನಿಟ್ಟು ಚಂದಾದಾರರಾಗಿ ಇದರ ಅಭಿವೃದ್ಧಿಯನ್ನು ಕೋರಬೇಕೆಂದು ಬಯಸುತ್ತೇವೆ. ಜಗದಾಚಾರ್ಯರು ಯಾವಾಗಲೂ ತಮ್ಮ ಸೇವೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನನುಗ್ರಹಿಸಿ ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಇಂಗ್ಲೆಂಡಿಗೆ ಸೇರಿದ ಬ್ರಾಡ್‌ಫರ್ಡ ನಗರದಲ್ಲಿ 6 ಅಡಿ ಮತ್ತು ಅದಕ್ಕಿಂತಲೂ ಎತ್ತರವಾಗಿರುವ ಜನರ ಸಲುವಾಗಿ ಒಂದು ಹೊಸಸಂಘವು ಏರ್ಪಡಿಸಲ್ಪಟ್ಟಿರುವದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಮುನಿಸಿಪಾಲಿಟಿಯವರು ಎಣ್ಣೆ, ಅಡಿಕೆ, ಕಾಫಿ, ಕಡಿಮೆಕ್ರಯದ ಬಟ್ಟೆ ಇವುಗಳ ಮೇಲೆ ಹೊಸದಾಗಿ ತೆರಿಗೆಯನ್ನು ವಿಧಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಜೂನ 16 ನೇ ತಾರೀಖು ಸೋಮವಾರದ ದಿವಸ ಬೆಂಗಳೂರು ಅಠಾರಾ ಕಛೇರಿಯಲ್ಲಿ ಪ್ರಾರಂಭವಾಗುವದು.

ಬೆಂಗಳೂರು ನಗರದ ಬಸೆಟ್ಟಿಪೇಟೆಯಲ್ಲಿದ್ದ ಶ್ರೀಮತಿ ಕೋಲಾರದ ತಾಯಮ್ಮ ಎಂಬಾಕೆಯು ತನ್ನ ಆಸ್ತಿಯನ್ನೆಲ್ಲಾ ಅಶಕ್ತರ ಪೋಷಣೆಗೆಂದು ವಹಿಸಿ ಕಾಶಿಗೆ ಪ್ರಯಾಣಮಾಡಿದಳೆಂದು ತಿಳಿದುಬಂದಿದೆ.

ಭದ್ರಾವತಿ ಫಾರೆಸ್ಟ ರೇಂಜ್ ಆಫೀಸರವರು ಸುಮಾರು 20 ಅಡಿ ಆಳವಾದ ಹಳ್ಳದಲ್ಲಿ ಮೇಲಕ್ಕೆ ಹತ್ತಲಾರದೆ ಬಿದ್ದಿದ್ದ ಒಂದು ಭಾರಿ ಹುಲಿಯನ್ನು ಬೋನಿನಲ್ಲಿ ಹಿಡಿದು ರಾಜಧಾನಿಯಲ್ಲಿರುವ ಅರಮನೆ ಖಾಸ್‌ಬಂಗಲೆಗೆ ಕಳುಹಿಸಿರುತ್ತಾರೆ.

ಬೆಂಗಳೂರು ನಗರದ ಮ|| ಎಚ್. ಕೆ. ರಾಮಯ್ಯ ಎಂಬವರು ಹೊಸಮೋಟಾರ್ ಗಾಡಿಯನ್ನು ಕೊಂಡುಕೊಂಡು ಆ ವಿಷಯವನ್ನು ಸರ್ಕಾರಕ್ಕೆ ತಿಳುಹಿಸಲಿಲ್ಲವೆಂಬ ಕಾರಣದ ಮೇಲೆ ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 5 ರೂ. ಜುಲ್ಮಾನೆಯನ್ನು ವಿಧಿಸಿದರು.

ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನ ತೃತೀಯ ವಾರ್ಷಿಕ ಸಭೆಯು ಮೇ ತಿಂಗಳು 10 ಮತ್ತು 11 ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವದೆಂದೂ, ಶ್ರೀಮತಿ ಸರೋಜನೀನಾಯಡುರವರು ಇದರ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದೂ ತಿಳಿದುಬಂದಿದೆ.

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ-ಒಂದು ಕಾನೂನನ್ನು ರಚಿಸುವ ವಿಷಯವಾಗಿ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಮಾಡಲು ಅವಕಾಶ ಕೊಡಬೇಕೆಂದು ಕೆಲವು ಪ್ರತಿನಿಧಿಗಳು ಸರಕಾರದವರನ್ನು ಕೇಳಿಕೊಂಡಿದ್ದರು. ಆದರೆ ಸರಕಾರದವರು ಈ ವಿಷಯವನ್ನು ಸದರಿ ಸಭೆಯಲ್ಲಿ ಚರ್ಚಿಸಲು ಅವಕಾಶ ಕೊಡುವದಿಲ್ಲವೆಂದು ತಿಳಿಸಿರುತ್ತಾರೆ. ಸ್ತುತ್ಯ!

ಏಪ್ರೆಲ್ 21 ನೇ ತಾರೀಖು ಶುಕ್ರವಾರ ರಾತ್ರಿ ಇಬ್ರಾಹಿಂ ಉರುಫ್ ಗುಟಕ್ ಎಂಬ ಕಳ್ಳನು ಬೆಂಗಳೂರುನಗರದ ಕೆಂಗೇರಿಸ್ಟೇಷನ ಸಮೀಪದಲ್ಲಿರುವ ಲಾಯರ್ ಮ|| ವೆಂಕಟೇಶರಾಯರ ಮನೆಯ ಕಿಟಕಿಯ ಸಲಾಕಿಯನ್ನು ಕಿತ್ತು ಒಳಕ್ಕೆನುಗ್ಗಿ ಕಳ್ಳತನಮಾಡುತ್ತಿದ್ದಾಗ ಮನೆಯವರು ಎಚ್ಚತ್ತು ನೆರೆಹೊರೆಯವರ ಸಹಾಯದಿಂದ ಕಳ್ಳನನ್ನು ಹಿಡಿದು ಪೋಲೀಸರ ವಶಕ್ಕೆ ಒಪ್ಪಿಸಿದರು. ಪೋಲೀಸರು ತನಿಖೆ ಮಾಡುತ್ತಿರುವರು.

ಬೆಂಗಳೂರು ನಗರದ ಹಳೇ ಬೊಂಬುಬಜಾರ್ ರಸ್ತೆಯಲ್ಲಿ ಅಕ್ಕಸಾಲಿಗ ಕೆಲಸವನ್ನು ಮಾಡುತ್ತಿದ್ದ ಮಹಮದ್‌ಪೀರ್ ಎಂಬಾತನು ತನ್ನ ಹೆಂಡತಿಯ ನಡವಳಿಕೆಯ ವಿಷಯದಲ್ಲಿ ಅತೃಪ್ತಿಹೊಂದಿ ಕಳೆದ ಏಪ್ರೆಲ್ 24 ನೆಯ ತಾರೀಖು ಸಾಯಂಕಾಲ ತನ್ನ ಮೈಮೇಲಿನ ಬಟ್ಟೆಗೆ ಸೀಮೆಯೆಣ್ಣೆಯನ್ನು ಹಾಕಿಕೊಂಡು ಬೆಂಕಿಹಚ್ಚಿಕೊಂಡನು. ಇದರಿಂದ ಅವನ ಮೈ ಕೆಲವು ಕಡೆಗಳಲ್ಲಿ ಸುಟ್ಟುಹೋಗಿರುವದು. ಇದನ್ನು ಕಂಡವರು ಕೂಡಲೇ ಬೆಂಕಿಯನ್ನು ಆರಿಸಿ ಅವನನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ.

ಬೆಂಗಳೂರು ನಗರದಲ್ಲಿ ಬಹುಕಾಲದಿಂದ ಜೂಜಾಡುತ್ತಿದ್ದ 15 ಜನರನ್ನು ಪೋಲೀಸರು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದ್ದರು. ಸಿಟಿ ಮ್ಯಾಜಿಸ್ಟ್ರೇಟರಾದ ಮಿ|| [illegible]ಸ್ ನಾರಾಯಣರಾಯರು ಮೊಕದ್ದಮೆಯನು [illegible] ವಿಚಾರಿಸಿ 14 ಜನರಿಗೆ ಐದೈದು ರೂಪಾಯಿ ಇನ್ನೊ[illegible]ಬ್ಬನಿಗೆ [illegible] ರೂಪಾಯಿ ಜುಲ್ಮಾನೆಯನ್ನು ವಿಧಿ[illegible] ಜುಲ್ಮಾ[illegible]ವು ವಸೂಲಾದರೆ ಪತ್ತೆಮಾಡಿದ ಪೋ[illegible]ಸರಿಗೆ 60 [illegible]ಪಾಯಿಗಳನ್ನು ಬಹುಮಾನವಾಗಿ [illegible]ರ್ಪನಮಾಡಿದರು.

ಮೈಸೂರು ಗೆಜೆಟ್.

ನ್ನಪಟ್ಟ ತಾಲ್ಲೂಕಿನ ಅಮಲ್ದಾರರಾದ ಮಿ|| ವೀರುದ್ರಯ್ಯ, ಬಿ.ಎ., ಇವರು ಸಕಲೇಶಪುರದ ಡಿವಿಜನ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಲ್ಯಾನ್ಸರ್ಸ್ ಕಮ್ಯಾಂಡೆಂಟರಾದ ರ್ ಬಿ. ಪಿ. ಕೃಷ್ಣೇಅರಸ್, ಎಂ.ಸಿ., ಐ.ಡಿ. ಎಂ., ರವರು ಲೆಫ್ಟನೆಂಟ್ ಕರ್ನಲ್ ಪದವಿಗೆ ಸಲ್ಪಟ್ಟಿರುತ್ತಾರೆ.

ಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಸರಾದ ಮಿ|| ಡಿ. ಎನ್. ಪುಟ್ಟಣ್ಣ ಬಿ. ಎ., ಆರ್. ಸಿ. ಎಸ್. ರವರು ಮೆಡಿಕಲ್ ಸ್ಕೂಲಿನ ಸಿಪಾಲರಾಗಿ ಬದಲಿ ನೇಮಿಸಲ್ಪಟ್ಟಿರುತ್ತಾರೆ.

ವ್ಯಾಲೇಸ್ ಬಾಡಿಗಾರ್ಡಿನ ಕಮ್ಯಾಂಡೆಂಟರೂ, ಮನ್ಮಹಾರಾಜರವರ ಆನರರಿ ಎಡ್-ಡಿ-ಕ್ಯಾಂಪರ ಆದ ಮೇಜರ್ ಎಸ್. ಗೋಪಾಲರಾಯರು ನೆಂಟ್ ಕರ್ನಲ್ ಪದವಿಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಫಸ್ಟ್ ಅಸಿಸ್ಟೆಂಟ್ ಸರ್ಜನ್ನರಾದ ಮಿ|| ಎ. ಎ. ಂಗಾರ್ ಎಲ್. ಆರ್. ಸಿ. ಪಿ., ಎಂ. ಆರ್. ಸಿ. ರವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ರ್ಗಾಯಿಸಲ್ಪಟ್ಟಿರುತ್ತಾರೆ.

ಹಾಸನದ ಸಬ್‌ಡಿವಿಜನ ಆಫೀಸರಾದ ಮಿ|| ಜಿ. ಕಾರ್ಜುನಯ್ಯ, ಬಿ.ಎ., ಇವರು ಜನರಲ್ ಅಂಡ್ ನ್ಯೂ ಸೆಕ್ರೆಟೆರಿಯಟ್ಟಿನ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ, ತುಮಕೂರು ಡಿ|| ಟ್ರೆಜರಿ ಆಫೀಸರಾದ ಜಾರ್ಜ ಮ್ಯಾಥ್ಯು, ಬಿ.ಎಸ್‌ಸಿ., ರವರು ಸನದ ಸಬ್‌ಡಿವಿಜನ ಆಫೀಸರಾಗಿಯೂ ವರ್ಗಾ ಸಲ್ಪಟ್ಟಿರುತ್ತಾರೆ.

ಜನರಲ್ ಅಂಡ್ ರೆವಿನ್ಯೂ ಸೆಕ್ರೆಟೆರಿಯಟ್ಟಿನ ರಜಿಸ್ಟ್ರರರಾದ ಮಿ|| ಸಿ. ಎಸ್. ಶ್ರೀನಿವಾಸಾಚಾರ್ ಇವರು ಜೂನ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ರಾಜಧಾನಿಗೆ ಪರಸ್ಥಳಗಳಿಂದ ಆಗಮಿಸುವ ಅತಿಥಿಗಳನ್ನು ಸತ್ಕರಿಸುವದಕ್ಕಾಗಿ ಮೇ 1 ನೆಯ ರೀಖಿನಿಂದ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ. ಇದೇ ಸಮಯದಲ್ಲಿ ರಾಜಧಾನಿಯಲ್ಲಿರುವ ಮೈಸೂರಿನ ಪ್ರಜಾಪ್ರತಿನಿಧಿಸಭೆಯ ಬಜೆಟ್ ವೇಶನಕ್ಕೆ ಸಂಬಂಧಪಟ್ಟ ಏರ್ಪಾಡುಗಳ ಮೇಲ್ವಿಚಾರಣೆಯೂ ಇವರಿಗೆ ವಹಿಸಲ್ಪಟ್ಟಿರುವದು.

ವರ್ತಮಾನಸಂಗ್ರಹ

ಯಾರ್ಕ್‌ಷೈರಿನಲ್ಲಿರುವ ಯಿ-ಚೆಕರ್ಸ್-ಇನ ಎಂಬ ಹೋಟೇಲಿನಲ್ಲಿ ಕಳೆದ 170 ವರ್ಷಗಳಿಂದಲೂ ಬೆಂಕಿಯು ರಿಯುತ್ತಲೇ ಇರುವದಂತೆ!

ಅಮೇರಿಕಾದೇಶಕ್ಕೆ ಹೋಗಿದ್ದ ಮೌಲಾನಾಷೌಕತಲಿಯವರು ಏಪ್ರೆಲ್ 26 ನೇ ತಾರೀಖಿನ ದಿವಸ ಂಬಯಿಗೆ ಹಿಂತಿರುಗಿ ಬಂದರು.

ಇಂಗ್ಲೆಂಡಿನ ಕೆಲವು ಇಂಜನಿಯರರು ಸಂಪೂರ್ಣ ಾಗಿ ಕಲ್ಲಿದ್ದಲಿನಿಂದಲೇ ನಡೆಯುವ ಒಂದು ಹೊಸ ತರದ ಮೋಟಾರನ್ನು ನಿರ್ಮಿಸಿರುವರಂತೆ!

ಇನಸ್ಪೆಕ್ಟರ್ ಗ್ರೀನರವನ್ನು ಗುಂಡಿನಿಂದ ಕೊಂದ ಂಬ ಕಾರಣದಮೇಲೆ ಮರಣದಂಡನೆಗೆ ಗುರಿಯಾಗಿ ವ ಸಾರ್ಜೆಂಟ್ ಹೂಪ್ಸನ್ನನು ಮೇ 15 ನೇ ತಾರೀ ನದಿವಸ ಸಬರಮತಿ ಜೈಲಿನಲ್ಲಿ ಗಲ್ಲಿಗೇರಿಸಲ್ಪಡುವನು.

ಚೀಣಾ ಮತ್ತು ಜಪಾನ ಯುದ್ಧವು ದಿನದಿನಕ್ಕೆ ಬಲಿಸುತ್ತಲೇ ಇರುವದು. ಕಳೆದವಾರ ಜಪಾನ ಸೈನಿಕರು ಅನೇಕ ದೊಡ್ಡ ದೊಡ್ಡ ಕಲ್ಲಿದ್ದಲು ಗಣಿಗಳ ದ ಸುಮಾರು 1,500 ಚದರ ಮೈಲುಗಳ ಪ್ರದೇಶ ನ್ನು ಆಕ್ರಮಿಸಿರುವರು.

ಏಪ್ರೆಲ್ 22 ನೇ ತಾರೀಖಿಗೆ ಕೊನೆಯಾದ ವಾರದಲ್ಲಿ ಮುಂಬಯಿಯಿಂದ 7,57,140 ರೂಪಾಯಿಗಳ ಂಗಾರವು ಪರದೇಶಗ[illegible]ಸಲ್ಪಟಿತು. ಇದುವರೆಗೆ ಸಾಗಿಸಲ್ಪಟ್ಟ ಭಂಗಾರದ ಒಟ್ಟು ಕ್ರಯ 1,22,47,38,253 ರೂ.

ಕಲ್ಕತ್ತಾ ಯೂನಿವರ್ಸಿಟಿ ಇನಸ್ಟಿಟ್ಯೂಟಿನ ಮೆಂಬರರು ರಾಜಕೀಯ ಚಳವಳಿಯಲ್ಲಿ ಭಾಗವಹಿಸುವರೆಂಬ ಕಾರಣದಮೇಲೆ ಬಂಗಾಳಾ ಸರಕಾರದವರು ಸದರಿ ಇನಸ್ಟಿಟ್ಯೂಟಿಗೆ ಕೊಡುತ್ತಿದ್ದ ವರ್ಷಾಸನವನ್ನು ನಿಲ್ಲಿಸಿರುವರಂತೆ!

ರಾತ್ರಿಯವೇಳೆ ಸಿಡಿಮದ್ದುಗಳನ್ನು ಹಾಕುವಂಥ ಹೊಸದೊಂದು ವಿಮಾನವು ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟಿರುವದು! 'ರಾಯಲ್ ಏರ್ ಫೋರ್ಸ' ಎಂಬ ಸೈನ್ಯದ ಉಪಯೋಗಕ್ಕೆ ಇಂಥ 15 ವಿಮಾನಗಳು ತಯಾರಾಗುತ್ತಿವೆಯಂತೆ!

ಗೊಂಡಿಯಾನಗರದ ಮುನಿಸಿಪಲ್ ಮೆಂಬರರಾದ ಬಲಿರಾಂ ಎಂಬವರು ಇತರ 4 ಜನರೊಡನೆ 17 ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣಕನ್ನೆಯನ್ನು ಬಲಾತ್ಕಾರವಾಗಿ ಎಳೆದುಕೊಂಡು ಹೋದರೆಂಬ ಕಾರಣದಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು.

ರಷ್ಯಾಸರ್ಕಾರದವರು ಕ್ಯಾಸ್ಪಿಯನ ಸಮುದ್ರದಿಂದ ಕಪ್ಪು ಸಮುದ್ರದವರೆಗೆ ಸುಮಾರು 400 ಮೈಲು ಉದ್ದವಾಗುವ ಒಂದು ಭಾರಿ ಕಾಲುವೆಯನ್ನು ತೆಗೆಯಬೇಕೆಂದು ಆಲೋಚಿಸುತ್ತಿದ್ದಾರೆ. ಇದರಿಂದ ಮಧ್ಯ ಏಷ್ಯಾಖಂಡದ ವ್ಯಾಪಾರದ ಸ್ಥಿತಿಗತಿಗಳು ಮುಂದುವರಿಯಲನುಕೂಲವಾಗುವುವಂತೆ!

ಒಬ್ಬಾನೊಬ್ಬ ಪ್ರಸಿದ್ಧ ರಸಾಯನಶಾಸ್ತ್ರಪ್ರವೀಣನು ಗಂಡಹೆಂಡರು ಒಬ್ಬರನ್ನೊಬ್ಬರು ಎಷ್ಟರಮಟ್ಟಿಗೆ ಪ್ರೀತಿಸುವರೆಂಬುದನ್ನು ಪತ್ತೆಮಾಡುವ ಒಂದು ಹೊಸತರಹದ ಯಂತ್ರವನ್ನು ನಿರ್ಮಿಸಿರುವನಂತೆ! ಇದರಿಂದ ಇನ್ನು ಮುಂದೆ ಪ್ರೇಮವಿಲ್ಲದ ತರುಣತರುಣಿಯರಿಗೆ ಮದುವೆಯಾಗದಂತೆ ಮಾಡಬಹುದಾಗಿದೆ.

ಯೂಗೋಸ್ಲೇವಿಯಾ ದೇಶದ ಅಧಿಕಾರಿಗಳು ಕಳ್ಳತನದಿಂದ ಸಾಗಿಸಲ್ಪಟ್ಟು ಬಚ್ಚಿಡಲ್ಪಟ್ಟಿದ್ದ ಹೊಗೆಸೊಪ್ಪಿಗಾಗಿ ಕೋರ್ಕ ಎಂಬಸ್ಥಳದಲ್ಲಿ ನೆಲವನ್ನು ಅಗೆಯುತ್ತಿದ್ದಾಗ 1,80,000 ರೂಪಾಯಿಗಳ ಬೆಲೆಯುಳ್ಳ ಚಿನ್ನಬೆಳ್ಳಿಯ ನಾಣ್ಯಗಳು ದೊರೆತವಂತೆ! ಈ ನಾಣ್ಯಗಳು 1912 ನೇ ವರ್ಷದಲ್ಲಿ ನಡೆದ ಬಾಲ್ಕನಯುದ್ಧದ ಕಾಲದಲ್ಲಿ ಹೂಳಿಡಲ್ಪಟ್ಟಿರಬೇಕೆಂದು ಊಹಿಸಲ್ಪಟ್ಟಿದೆ.

ಅಮೇರಿಕಾ ದೇಶದ ಒಬ್ಬ 12 ವರ್ಷ ವಯಸ್ಸಿನ ಹುಡುಗಿಯು 2 ವರ್ಷಗಳ ಹಿಂದೆ ಕೋತಿಯಿಂದ ಕಚ್ಚಲ್ಪಟ್ಟಳು. ಅಂದಿನಿಂದಲೂ ಅವಳಿಗೆ ರಾತ್ರಿಯವೇಳೆಯಲ್ಲಿ ಭಯಂಕರ ಸ್ವಪ್ನಗಳಾಗುತ್ತಿದ್ದುವಂತೆ! ಆಕೆಯು ಕೋರ್ಟಿನಲ್ಲಿ ಈ ಸಂಬಂಧ ಒಂದು ದಾವೆಯನ್ನು ತರಲು ಜಡ್ಜರು ಕೋತಿಯ ಮಾಲಿಕನಿಂದ ಅವಳಿಗೆ 2,250 ರೂ.ಗಳ ಪರಿಹಾರದ್ರವ್ಯವನ್ನು ಕೊಡಿಸಿದರಂತೆ!

ಈಗ್ಗೆ ಸುಮಾರು 35 ವರ್ಷಗಳ ಕೆಳಗೆ ಕ್ವೀನ್ಸ್‌ಲೆಂಡಿನಲ್ಲಿರುವ ಜಾರ್ಜ ಮಾರಿಸ್ ಎಂಬಾತನನ್ನು ಕುದುರೆಯು ಒದ್ದುದರಿಂದ ಅವನ ದವಡೆಗಳು ಹಿಡಿದುಬಿಟ್ಟು ಅದನ್ನು ಬಿಡಿಸಲು ಡಾಕ್ಟರುಗಳು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಅಂದಿನಿಂದಲೂ ಆತನು ದ್ರವರೂಪವಾದ ಆಹಾರವನ್ನೇ ಸೇವಿಸುತ್ತಿದ್ದನು. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಆತನು ಅಕಸ್ಮಾತ್ ಮರದ ಮೇಲಿನಿಂದ ಮುಮ್ಮುಖನಾಗಿ ಕೆಳಕ್ಕೆ ಬಿದ್ದನು. ಇದರಿಂದ ಅವನ ದವಡೆಯು ಪುನಃ ಸರಿಹೋಗಿ ಅಂದಿನಿಂದ ಮೊದಲಿನಂತೆ ಆಹಾರವನ್ನು ಸೇವಿಸಲಾರಂಭಿಸಿರುವನಂತೆ!

ಅಮೇರಿಕೆಯ ಒಬ್ಬ ಟ್ರಾಂವೇ ಕಂಡಕ್ಟರು, ಟ್ರಾಮಿನ ಚಾರ್ಜನ್ನು ಕೊಟ್ಟಿಲ್ಲವೆಂಬ ಅಪವಾದವನ್ನು ಮೇಲೆ ಒಬ್ಬ ಪ್ರಯಾಣಿಕನನ್ನು ಕೆಳಕ್ಕಿಳಿಯುವಂತೆ ಹೇಳಿದನು. ಪ್ರಯಾಣಿಕನು 7 ಸೆಂಟುಗಳನ್ನು ಕೊಟ್ಟಿರುವೆನೆಂದು ಎಷ್ಟು ಹೇಳಿದರೂ ಕಂಡಕ್ಟರು ಒಪ್ಪದೆ ಪ್ರಯಾಣಿಕನನ್ನು ಬಲಾತ್ಕಾರದವಾಗಿ ಕೆಳಕ್ಕಿಳಿಸಿದನು. ಅಷ್ಟರಲ್ಲಿ ಎದುರುಗಡೆಯಿಂದ ಇನ್ನೊಂದು ಟ್ರಾಂ ಬರುತ್ತಿದ್ದು ಪ್ರಯಾಣಿಕನು ಅದಕ್ಕೆ ಸಿಕ್ಕು ಮೃತಪಟ್ಟನು. ಅನಂತರ ವಿಚಾರಿಸುವಲ್ಲಿ ಪ್ರಯಾಣಿಕನು ಟ್ರಾಂ ಚಾರ್ಜನ್ನು ನಿಜವಾಗಿಯೂ ಪಾವತಿಮಾಡಿದ್ದನೆಂದು ತಿಳಿದುಬಂದಿತು. ಹೀಗೆ ಕಂಡಕ್ಟರನ ಅಚಾತುರ್ಯದಿಂದ ನಡೆದ ಅನರ್ಥದಿಂದ ಟ್ರಾಂವೇ ಕಂಪನಿಯವರು ಮೃತನ ಬಂಧುಗಳಿಗೆ 40,000 ರುಪಾಯಿಗಳ ಪರಿಹಾರದ್ರವ್ಯವನ್ನು ಕೊಡಬೇಕಾಗಿಬಂದಿತು.

ದಕ್ಷಿಣ ಅಮೇರಿಕಾದೇಶದಲ್ಲಿರುವ ಪೆರುಗ್ವೇ ಎಂಬ ಸ್ವತಂತ್ರರಾಜ್ಯಕ್ಕೆ ಡಾಕ್ಟರ್ ತಾರಾ ಎಂಬವರು ಹೊಸದಾಗಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ಇವರು ಅಧಿಕಾರಕ್ಕೆ ಬಂದಕೂಡಲೇ ತಮಗೆ ವಿರೋಧಿಗಳಾಗಿದ್ದವರೆಲ್ಲರನ್ನೂ ದಸ್ತಗಿರಿ ಮಾಡುವಂತೆ ಅಪ್ಪಣೆ ಮಾಡಿದರು. ಆ ರಾಜ್ಯಕ್ಕೆ ಪೂರ್ವದಲ್ಲಿ ಪ್ರೆಸಿಡೆಂಟರಾಗಿದ್ದ ಸಿನಾರ್ ಬ್ರಿಂ ಎಂಬವರೂ ಹೊಸ ಅಧ್ಯಕ್ಷರಿಗೆ ವಿರೋಧಿಗಳಾಗಿದ್ದರು. ಸೀನಾರ್ ಬ್ರಿಂರವರು ಈ ವಿಷಯವನ್ನೆಲ್ಲಾ ಮೊದಲೇ ಅರಿತಿದ್ದು ತಮ್ಮನ್ನು ದಸ್ತಗಿರಿ ಮಾಡಲು ಪೋಲೀಸರು ಮನೆಯ ಸಮೀಪಕ್ಕೆ ಬಂದಕೂಡಲೇ ಅವರ ಮೇಲೆ ಗುಂಡುಗಳನ್ನು ಹಾರಿಸಿ, ಅನೇಕರನ್ನು ಗಾಯಪಡಿಸಿ ಕೊನೆಗೆ ತಾವೂ ಆತ್ಮಹತ್ಯ ಮಾಡಿಕೊಂಡರು. ಪತಿಯ ಮರಣವನ್ನು ನೋಡಿ ಆತನ ಪತ್ನಿಯೂ ಆತ್ಮಹತ್ಯಮಾಡಿಕೊಂಡಳು.

ಜಾಯಿಂಟ್ ಸೆಲೆಕ್ಟ್ ಕಮಿಟಿಗೆ

ಭಾರತೀಯ ಪ್ರತಿನಿಧಿಗಳು

ಜಾಯಿಂಟ್ ಪಾರ್ಲಿಮೆಂಟರಿ ಸೆಲೆಕ್ಟ್ ಕಮಿಟಿಗೆ ೭ ಜನ ಸಂಸ್ಥಾನಗಳ ಪ್ರತಿನಿಧಿಗಳೂ, ೨೧ ಜನ ಬ್ರಿಟಿಷ್ ಹಿಂದುಸ್ಥಾನದ ಪ್ರತಿನಿಧಿಗಳೂ ಆರಿಸಲ್ಪಟ್ಟಿದ್ದಾರೆ.

ಸಂಸ್ಥಾನಗಳು

೧ ಸರ್ ಅಕಬರ ಹೈದರಿ, ೨ ಸರ್ ವಿ. ಟಿ. ಕೃಷ್ಣಮಾಚಾರಿ, ೩ ನವಾಬ ಸರ್ ಲಿಯಾಕತ ಹುಸೇನ, ೪ ಸರ್ ಮನುಭಾಯಿಮೆಹತಾ, ೫ ಸರ್ ಮಿರ್ಜಾ ಮಹಮ್ಮದ ಇಸ್ಮಾಯಿಲ್, ೬ ಪ್ರಭಾಶಂಕರ ಪಟ್ಟಾಣಿ, ೭ ರಾ|| ಸಾ|| ವೈ. ವಿ. ತೋಂಬರೆ.

ಬ್ರಿಟಿಷ್ ಹಿಂದುಸ್ಥಾನ

೧ ನಾ|| ಆಗಾಖಾನ, ೨ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ, ೩ ಡಾ|| ಆರ್. ಬಿ. ಅಂಬೇಡಕರ್, ೪ ಸರ್ ಹ್ಯುಬರ್ಟ ಕಾರ್, ೫ ಮಿ|| ಎ. ಎಚ್. ಘಜನಾವಿ, ೬ ಸರ್ ಹೆನ್ರಿಗಿಡನೆ, ೭ ಸರ್ ಹರಿಸಿಂಗಗೋರ್, ೮ ಮಿ|| ಎ. ರಂಗಸ್ವಾಮಿ ಅಯ್ಯಂಗಾರ್, ೯ ಬ್ಯಾ|| ಎಂ. ಆರ್. ಜಯಕರ್, ೧೦ ಮಿ|| ಎನ್. ಎಂ. ಜೋಶಿ, ೧೧ ಮಿ|| ಎನ್. ಸಿ. ಕೇಳಕರ್ ೧೨ ಸರ್ ಎ. ಪಿ. ಪಾತ್ರೊ, ೧೩ ಸರ್ ಅಲ ರಹೀಮ, ೧೪ ಸರ್ ತೇಜಬಹದ್ದೂರ್ ಸಪ್ರು, ೧೫ ನಾ|| ಸರ್ ಫಿರೋಜ ಸೆತನಾ, ೧೬ ಡಾ|| ಶಾಫತ ಅಹಮದ ಖಾನ, ೧೭ ಬೇಗಂ ಶಾಹ ನವಾಜ, ೧೮ ಸರದಾರ್ ಭೂತಸಿಂಗ, ೧೯ ಸರ್ ಎನ್. ಎನ್. ಸರಕಾರ, ೨೦ ಸರ್ ಪುರುಷೋತ್ತಮದಾಸ ಠಾಕೂರದಾಸ, ೨೧ ಚೌಧರಿ ಜಾಫರ ಅಲ್ಲೀಖಾನ.

ಸ್ವೀಕಾರ

ಮೈಸೂರು ರಾಜಧಾನಿಯಲ್ಲಿರುವ ಹೊಸಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಬಸವಲಿಂಗಸ್ವಾಮಿಗಳವರು ತಮ್ಮ ಮಠದಲ್ಲಿ ವೈಶಾಖ ಶುದ್ಧ ೩ ದಿವಸ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ 1 ರೂ. ಯನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಮ|| ರಾ|| ಲಕ್ಕುವಳ್ಳಿ ಹೊಸಮನೆ ರುದ್ರಪ್ಪಶೆಟ್ಟರ ಪುತ್ರ ಚಿ|| ಶಾಂತಪ್ಪನಿಗೆ ಹುಲ್ಕೂರಲ್ಲಿರುವ ಮ|| ರಾ|| ತರಿಕೆರೆ ಪುಟ್ಟಪ್ಪಶೆಟ್ಟರ ಪುತ್ರಿ ಚಿ|| ಸೌ|| ಬಸಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 2 ರೂ.ಗಳು ಮ|| ರಾ|| ಹುಲ್ಕೂರು ಸಾಹುಕಾರ ಮರಳಸಿದ್ದಪ್ಪಶೆಟ್ಟರವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	[illegible] ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಲಿಂಗೋತ್ಪತ್ತಿ ಲಾಕೆಟ್ಸ್	೨
लिंगधारणचंद्रिका (संस्कृत)	
महानारायणोपनिषत् (वीरशैवभाष्य-संस्कृत)	
वीरशैवेंदुशेखर (संस्कृत)	

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರು ಇರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರುಗಳು ಇವರು ತಮ್ಮ [illegible] ಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ [illegible] ಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ [illegible] ಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕ ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ [illegible] ಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ [illegible] ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು [illegible] ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. **ಬೆಲೆ ೧ ರೂಪಾಯಿ.**

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಪ್ತ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾ ಗಳನ್ನು ಕೊಟ್ಟ ರು. ಪ್ರಸಿದ್ಧವಾ ನಶ್ಯದ ಪುಡಿಯ ಸ್ವಸ್ಥವಾಗುವ ಧಿಗಳು ಯಾವ ರೆ:—ಪಿನಸಿ, ತಲೆನೋವು, ಲ್ಲಿನ ರೋಗಗ ಕಣ್ಣುಗಳಲ್ಲಿ ಉ

(Registered Trade Mark)

ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರಭು ತಮ್ಮ ಗೃಹದಲ್ಲಿ ಕುಟುಂಬಸಮೇತವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರಯಿ

ಗುರುಬಸವ ಆ [illegible] ಕಂಪೆನಿ ಲಿಮಿಟೆಡ

[17] [illegible] ೇ. ಬಾ. ೫೧೦, ಮದರ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ [illegible] ಬ್ರ|| [illegible] ದ ಮುದ್ರಿಸಿ ಪ್ರಕಟಿಸಲ್ಪ

ಪಂಚಾ

ಪ್ರತಿ

ಪಂಚಾಸ್ಯಾನನ

ಪಂಚಾಚಾರನಿ

ಓದವರಿಗೆ ೧ ರೂ. ೧೧ ಆ

ಸಂಪುಟ ೭.]

ಬಿಳಿ ಎಂಬಿವೇ
ವೆಂದು ಹೇಳ
ಶ್ಯನ ಸಿದ್ಧಾದಿ
ಯುಗಗಳೆಂತಿವೆ.
ಗೆ ಯುಗಗಳಂತ
ಬಂದೇ ಕೃತಯುಗ

ವರ್ಷಗಳ ಹಿಂದೆ ಆಗಿ
ಒಂದುಂಟಾದ ಸಾಮ
ಯರನ್ನು ಹಾಗಿರಲಿ
ಲ್ಲಿ ಸದ್ಭಾವನೆಯುಳ್ಳ
ತೇಜದಿಂದ ಥಳಥಳ
ಘೋರವಾದ ಕಲಿಯುಗ
ವಾಗುವುದಿಲ್ಲ; ಮತ್ತು
ಅವರು ಮೈದೋರದಿರ
ವಾಗಲ್ಲದದಿರುವುದರಿಂದೇ
ಆದರೆ, ಯಾರ ಅಸ್ತಿತ್ವ
ಮಾದ ನಿಯುತಿಗೊಳಪಟ್ಟಿರು
ಮಹನೀಯರೂ ಪ್ರಾತಃಸ್ಮರ
ಳಿಲೂ ಬಹು ರತ್ನವಸುಂಧ
ರು; ಮತ್ತು ತಮ್ಮ ದಿವ್ಯ
ಶರಾದ ನಾಸ್ತಿಕರನ್ನು ತುತ
(ಸಶೇಷ)

ರಥೋತ್ಸವ.

ಕಲಘಟಗಿ ತಾಲೂಕ ಪೈಕಿ ಶಿವನಾಪುರವೆಂಬ ಗ್ರಾಮದಲ್ಲಿ ಪ್ರತಿವರ್ಷ ಜರಗುವಂತೆ ತಾ|| 1-5-33 ಸೋಮವಾರ ದಿವಸ ಅಲ್ಲಿಯ ಗ್ರಾಮದೇವರ ರಥೋತ್ಸವವಾಯಿತು. ಪ್ರತಿವರ್ಷದಂತೆ ಈ ವರ್ಷವಾದರೂ ಶಿವನಾಪುರದ ದೈವದವರು ಪಾಲಕಿ ಹೊರಡಿಸಿಕೊಂಡು ಬರಲಿಕ್ಕೆ ಬೆಲವಂತರದ ಹಿರಿಯರಿಗೆ ರಥೋತ್ಸವದ ಮುನ್ನಾದಿವಸ ಉಲಪಿಕೊಟ್ಟು ಕಳಿಸಿದ್ದರು. ಬೆಲವಂತರದ ಹಿರಿಯರು ತಳವಾರನ ಕೈಯಲ್ಲಿ ಕೊಟ್ಟು ಕಳಿಸಿದ್ದಾರೆಂದು ಉಲಪಿಯನ್ನು ಹಿಂದಕ್ಕೆ ಕಳಿಸಿ ಅದೇ ದಿವಸ ರಾತ್ರಿ ಊರಲ್ಲೆಲ್ಲ ಬೆಲವಂತರದವರಾರೂ ಶಿವನಾಪುರದ ಜಾತ್ರೆಗೆ ಹೋಗಬಾರದೆಂದು ಡಂಗುರ ಸಾರಿಸಿದರು. ಇದೊಂದೇ ಸಾರೆ ಯಾಕೆ ಹಿಂದಕ್ಕೆ ಅನೇಕ ಸಾರೆ ಉಲಪಿ ತಳವಾರನ ಕೈಯಿಂದಲೇ ತೆಗೆದುಕೊಂಡು ರಥೋತ್ಸವಕ್ಕೆ ಹೋಗಿ [illegible] ಬೆಲವಂತರದ [illegible] ಕೆಲವು ಹುಡುಗಪಾಟಿಯ ಜನರು ಹಲಗಿ ಮಜಲು ತೆಗೆದುಕೊಂಡು ಶಿವನಾಪುರಕ್ಕೆ ಹೋದಾಗ್ಗೆ ಅಲ್ಲಿಯ ಒಬ್ಬ ಹುಡುಗನು ಏನೋ ಕಾರಣದಿಂದ ಹೋದ ಜನರ ಮೈಮೇಲೆ ಬಂದನೆಂದು ಆ ವಿಷಯವಾಗಿ ಕೇಸು ನಡೆದು ಅದರಲ್ಲಿ ರಾಜೀ ಆದರು. ರಾಜೀ ಆದರೂ ಬೆಲವಂತರದ ಕೆಲವು ಹುಡುಗರ ಮನಸ್ಸಿನಲ್ಲಿಯ ಭಾವನೆ ಅಳಿಯಲಿಲ್ಲ. ಈ ವಿಷಯವನ್ನು ಬೆಲವಂತರದ ಹಿರಿಯರು ವಿಚಾರಮಾಡತಕ್ಕದ್ದಿತ್ತು. ಏನೊಂದೂ ವಿಚಾರಮಾಡದೆ ಆ ಹುಡುಗರ ಮಾತು ಕೇಳಿ ಉಲಪಿ ಸೇವಮಾಡಿ ಜಾತ್ರೆಗೆ ಹೋಗಬಾರದೆಂದು ಕಟ್ಟುಮಾಡಿದರು. ಈ ಹಿರಿಯರು ಹೀಗೆ ಮಾಡಬಾರದಾಗಿತ್ತು. ಹೋಗುವದು ತಮ್ಮ ಮನಸ್ಸಿನಲ್ಲಿ ಇಲ್ಲದಿದ್ದರೆ ಬಿಡಬೇಕಾಗಿತ್ತು. ಪಾಲಕಿ ಒಯ್ಯಲಿಕ್ಕೆ ಅಡಂಬವೇಕೆ? ಅದೂ ಬಿಡಲಿ. ಉಳಿಕೆ ಜನರಿಗೆ ಜಾತ್ರೆಗೆ ಹೋಗಲಿಕ್ಕೆ ಅಡ್ಡಿಮಾಡಬೇಕೆ? ಈ ಹಿರಿಯರ ಬುದ್ಧಿಯನ್ನು ಎಷ್ಟು ವರ್ಣಿಸಿದರೂ ತೀರದು. ಯಾರಾದರೂ ದೇಶದಲ್ಲಿ ಇಲ್ಲಿಯವರಿಗೆ ಈತರದ ಕಾರ್ಯವನ್ನು ಕೇಳಿರುವರೆ? ಇದೊಂದು ಹೊಸತರಹದ ಹಿರಿಯತನದ ಜಾಣ್ಮೆ. ಸಮಾಜಬಾಂಧವರೇ, ಎಲ್ಲಿಯವರೆಗೆ ಜನರ ಮಡ್ಡುತನ ಹೋಗುವುದಿಲ್ಲವೋ ಅಲ್ಲಿಯವರೆಗೆ ಪ್ರತಿಯೊಂದು ಊರಲ್ಲೇಕೆ ಇದೇ ಸಮಾಜದಲ್ಲಿಯೇ ಒಡಕು ಇದ್ದದ್ದೇ. ಬೆಲವಂತರದವರಿಗೆ ಇನ್ನಾದರೂ ಬುದ್ಧಿ ಬರುವುದು ಒಳ್ಳೆಯದು.

ಓರ್ವ ಸಮಾಜಸೇವಕ.

ಶ್ರೀ ಜಗದ್ಗುರುಗಳವರ ಆಗಮನ.

ಮಡಕಶಿರಾ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಮಡಕಶಿರಾ ಗ್ರಾಮದ ಭಕ್ತಮಂಡಲಿಯವರ ಪ್ರಾರ್ಥನಾನುಸಾರ ತಾ|| 25-4-33 ನೆಯ ಮಂಗಳವಾರ ಸಾಯಂಕಾಲ 5 ಘಂಟೆಗೆ ಚತುರಂಗಬಲ ಸಮೇತ ಸಕಲ ಬಿರುದಾವಳಿಗಳೊಡನೆ ಮಡಕಶಿರಾಕ್ಕೆ ಬಿಜಯಂಗೈಸಿದರು. ವೇ|| ಕೆಳಗಿನ ಮಠದ ಪಟ್ಟಾಧಿಕಾರಿಗಳು, ವೇ|| ಮಠದ ಗುರುಸಿದ್ಧಪ್ಪಯ್ಯನವರು, ತಾಲೂಕು ಬೋರ್ಡ್ ಪ್ರೆಸಿಡೆಂಟ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್ ಶ್ರೀಮಾನ್ [illegible]ದ್ದಪ್ಪನಗೌಡರು, ಶ್ರೀ ಬಂಡೆ ಪಾತಣ್ಣನವರು, ಎಂ. ಚನ್ನಪ್ಪನವರು, ಬಂಡೆ ವೀರಪ್ಪನವರು, ಶಿವಂಕಣ್ಣನವರ ನಂಜುಂಡಪ್ಪನವರು ಮುಂತಾದ ಪುರಪ್ರಮುಖ ಮಹಾಶಯರು ಪುರಾಲಂಕಾರಮಾಡಿ ಇಷ್ಟಕಪಾಲದೊಡನೆ ಶ್ರೀ ಜಗದ್ಗುರುಗಳವರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದರು. ಶ್ರೀ ಜಗದ್ಗುರುಗಳವರನ್ನು ಸಂದರ್ಶಿಸಲು ಅನೇಕ ಗ್ರಾಮಗಳಿಂದ 5000 ದ ವರೆಗೆ ಜನಗಳು ಬಂದಿದ್ದರು. ವಿಶೇಷ ಜನ ಸಂದಣಿಯುದ್ದರಿಂದ ಪೋಲೀಸ್ ಉತ್ಸವಾರಿಯು ಬಹು ಸಮರ್ಪಕವಾಗಿದ್ದಿತು. ಮ|| ಸೂರ್ಯಪ್ರಕಾಶರಾವ್ ಬಿ.ಎ., ತಹಶೀಲ್ದಾರ್, ಮಡಕಶಿರಾ ಮತ್ತು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಪಾದಿಯವರು ಸಹ ಆಗಮಿಸಿ ಉತ್ಸವಕ್ಕೆ ಬಹು ಶೋಭೆಯನ್ನುಂಟುಮಾಡಿದ್ದರು. ಮಹಾಸ್ವಾಮಿಗಳವರು ದಯಮಾಡಿಸಿದ ಕೂಡಲೇ ಅಧಿಕಾರಿವರ್ಗದವರ ಮತ್ತು ಪುರಪ್ರಮುಖಮಹಾಶಯರ ಪರಿಚಯವಾಗಿ ಭಕ್ತಸಮುದಾಯದ ಪ್ರಾರ್ಥನಾಮೇರೆಗೆ ಶ್ರೀಮಜ್ಜಗದ್ಗುರುಗಳವರು ಸಾಲಂಕೃತ ಸಿಂಹಲಲಾಟ ಪಂಚಕಲಶಯುಕ್ತ ಸುವರ್ಣರಜತ ತಿರ್ಯಗಾಂದೋಲಿಕೆಯನ್ನಾರೋಹಣಂಗೈದ ಸಮಿಪದಲ್ಲಿಯೇ ಶ್ರೀಮದಾಚಾರ್ಯರ ಜಯಘೋಷದೊಡನೆ ಸರ್ವರ ಕರತಾಡನದಿಂದ ಉತ್ಸವಕ್ಕೆ ಶುರುವುಂಟಾಯಿತು. ಶ್ರೀಮಾನ್ ಸಿದ್ಧಪ್ಪಗೌಡರ ಅಭಿಲಾಷೆಯ ಪ್ರಕಾರ ಉತ್ಸವದ ಫೋಟೋ ತೆಗೆಯಲ್ಪಟ್ಟಿತು. ಬಳಿಕ ಉತ್ಸವವು ಪುರವೀಧಿಯಲ್ಲಿ ಅತಿವೈಭವದಿಂದ ಜರಗಿ ಪ್ರಧಾನಮಂಟಪಕ್ಕೆ ಬಂದಕೂಡಲೇ ಮಹಾಸ್ವಾಮಿಗಳವರು ಪಲ್ಲಕ್ಕಿಯಿಂದವತರಿಸಿ ಸಾಲಂಕೃತಪ್ರಧಾನಮಂಟಪದಲ್ಲಿ ವಿರಾಜಿಸುತ್ತಲಿದ್ದ ಸಿಂಹಾಸನದೊಳ್ ಮಂಡಿಸಿದರು. ಅಕ್ಷಣವೇ ಶ್ರೀಮದಾಚಾರ್ಯರ ಜಯಘೋಷವೂ ಸರ್ವರ ಕರತಾಡನವೂ ಉಂಟಾದವು. ಬಳಿಕ ಆಸ್ಥಾನವಿದ್ವಾನ್ ಪುರಾಣಿಕ ವೇ|| ವೃಷಭಲಿಂಗಶಾಸ್ತ್ರಿಗಳು ಆರಾಧ್ಯಮಠ ಕುಣಕಲ್ ಬಿದರ ಇವರು ಗುರುಭಕ್ತಿಯಿಂದ ಧರ್ಮಸಂಪತ್ತನ್ನು ಪಡೆದುಕೊಂಡು ತಮ್ಮ ಐಹಿಕಾಮುಷ್ಮಿಕ ಫಲಸಿದ್ಧಿಯನ್ನು ಹೊಂದಿ ಸುಖಿಸುವುದು ಪ್ರತಿಯೊಬ್ಬ ಮಾನವನ ಕರ್ತವ್ಯಕರ್ಮವೆಂಬ ವಿಷಯವಾಗಿ ಭಾಷಣವನ್ನು ಮಾಡಿದರು. ತರುವಾಯ ಜಗದ್ಗುರುಗಳವರು ಸದರಿ ವಿಷಯವನ್ನೇ ಕುರಿತು ತಮ್ಮ ಅಸ್ಖಲಿತವಾಣಿಯಿಂದ ವಿಸ್ತಾರವಾಗಿ ಅಪ್ಪಣೆಯನ್ನು ಕೊಡಿಸಿ ನೆರೆದ ಸಭೆಗೆ ಆಶೀರ್ವಾದ ನಡೆದ ತರುವಾಯ ಸಭಾವಿಸರ್ಜನೆಗೆ ಅಪ್ಪಣೆಯನ್ನು ದಯಪಾಲಿಸಿದರು. ಹಾಲಿದ್ದಾಗ ಹಬ್ಬವನ್ನು ಮಾಡಿದವನೇ ಧನ್ಯನು. ಪ್ರಾಣಿಕೋಟಿಯಲ್ಲಿ ತನ್ನದು ದೋಷದಿಂದ ಸೂರ್ಯಪ್ರಕಾಶವನ್ನು ನೋಡದಂತಿರುವ ಗೂಬೆಗೂ ಪ್ರಕಾಶವನ್ನು ನೋಡಿ ಆನಂದಿಸುವಂತೆ ಮಾಡಬೇಕೆಂದು ಸರ್ವಶಕ್ತನಾದ ಭಗವಂತನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಏಕಾದಶರುದ್ರಾಭಿಷೇಕೋತ್ಸವ,

ಮುಧೋಳ.

[illegible] ಶ್ರೀಮಹಾಂತಸ್ವಾಮಿಚರಮೂರ್ತಿಗಳವರ ಮಠದಲ್ಲಿ ಇದೇ ಚೈತ್ರ ಶು|| ೪ ಗುರುವಾರ ಶ್ರೀ ಶಿವಲಿಂಗೇಶ್ವರ ಮೂರ್ತಿಗೆ ಏಕಾದಶರುದ್ರಾಭಿಷೇಕವು ಪ್ರಾರಂಭವಾಯಿತು. ಈ ರುದ್ರಾಭಿಷೇಕಕಾರ್ಯಕ್ಕಾಗಿ ಶ್ರೀ|| ಷ|| ಬ್ರ|| ಹಾಲಹಳ್ಳಿ ಚನ್ನಬಸವಪಟ್ಟದಸ್ವಾಮಿಗಳು, ಬೆಳಕುಂದಿ ಹಿರೇಮಠದ ನಿರಂಜಪ್ಪನವರು ಶಿವಜಿ ಶಂಕರಶಾಸ್ತ್ರಿಗಳೇ ಮೊದಲಾದ ೧೧ ಜನರು ಆಗಮಿಸಿದ್ದರು. ಮೊದಲನೆಯ ದಿವಸ ಬಿಚಕುಂದೆ ನಾಗಪ್ಪ ಬೆಳಕುಣೆ ಇವರ ಪೂಜೆಯು ಪ್ರಾರಂಭವಾಯಿತು. ೨ ನೆಯ ದಿವಸ ಅಣ್ಣಾರಾವ ಪಾಟೀಲಗೋಧಿಪುರ, ೩ ನೆಯ ದಿವಸ ಕಲ್ಲಪ್ಪ ಪೋಲೀಸ ಪಾಟೀಲ ಜೋಳದಾಪುರ, ೪ ನೆಯ ದಿವಸ ಖಾನಾಪುರ ಪೋಲೀಸಪಾಟೀಲ ಬಾಬಾರಾವ ಮರಾಠೆ, ೫ ನೆಯ ದಿವಸ ಸಂಗ್ರಾಮರಾವ ದೇಶಮುಖ, ಮುಂರಾಳ, ೬ ನೆಯ ದಿವಸ ಮಾಧವರಾವ ದೇಶಮುಖ ಬ್ಯಾಬ್ರಿ, ೭ ನೆಯ ಸಂಗ್ರಾಮರಾವ ಕೊ|| ಪಾಟೀಲ ಕೊಳ್ಳೂರು, ೮ ನೆಯ ದಿವಸ ಗುಂಡಪ್ಪ ಖಳುರೆ; ೯ ನೆಯ ದಿವಸ ಕೊಟಿಗ್ಯಾಳ ಸರ್ವಭಕ್ತರು ೧೦ ನೆಯ ದಿವಸ ನರಸಿಂಗರಾವ ಮಾಲಿಪಾಟೀಲ ಮರಾಠೆ, ೧೧ ನೆಯ ದಿವಸ ಗುರುಬಸಪ್ಪ ಬಸನಾಳ ಇವರೆಲ್ಲರ ಪೂಜೆಗಳು ನೆರವೇರಿದವು. ಕಡೆ ದಿವಸ ಮಧ್ಯಾಹ್ನ ೪ ಘಂಟೆ ವರೆಗೆ ಪೂಜೆಯು ನಡೆದು ೧೦೦೦ ಜನರ ಸಂತರ್ಪಣವು ನೆರವೇರಿತು. ಯಥಾಶಕ್ತಿ ಗೋದಾನಹಿರಣ್ಯದಾನವು ನೆರವೇರಿತು. ಅನೇಕ ಜನರು ಬಂದು ರುದ್ರಾಭಿಷೇಕ ಮಹೋತ್ಸವವನ್ನು ನೋಡಿ, ಸಂತೋಷಸಾಗರದಲ್ಲಿ ಮುಳುಗಿ ಇಂಥ ಮಹಾಕಾರ್ಯವನ್ನು ಎಂದೂ ಕಂಡಿದ್ದಿಲ್ಲವೆಂದು ನುಡಿಯುತ್ತ ಶ್ರೀ ಮಹಾಂತಸ್ವಾಮಿಗಳ ದರ್ಶನವನ್ನು ಮಾಡಿಕೊಂಡು ತೆರಳುತ್ತಿದ್ದರು. ಕಡೆಯ ಗಣಾರಾಧನೆಯು ಚೈತ್ರ ಶು|| ೧೪ ದಿವಸ ನಡೆಯಿತು. ಆ ಕಾಲಕ್ಕೆ ಅನೇಕ ಕಡೆಯಿಂದ ಅನೇಕ ಜನರು ವಾದ್ಯವೈಭವದೊಡನೆ ಆಗಮಿಸಿದ್ದರು. ಎಲ್ಲಿ ನೋಡಿದರೂ ವಾದ್ಯಧ್ವನಿಯೇ ಕೇಳಬರುತ್ತಿತ್ತು. ಉತ್ಸವವಾದನಂತರ ಜೋಡಜವಳಗ ಸದಾನಂದಬುವಾ ಇವರ ಕೀರ್ತನವು ಸುಶ್ರಾವ್ಯವಾಗಿ ನಡೆಯಿತು. ಮಠದ ಹಾವಪ್ಪನವರು, ಅವರಾದಿಸಿದ್ದಯ್ಯನವರು, ವೀರಪ್ಪ ಹೊಸರಾಣಿ ವಿಶ್ವನಾಥಪ್ಪ ಖಡಕೆ, ಮುದಕಪ್ಪ ಕತ್ತೆ, ಮಾಗಲಪ್ಪ, ಪೋಲೀಸ ಪಾ|| ಶಿವಬಸಪ್ಪ ಹಲಬುರ್ಗಿ ಭೀಮಣ್ಣ ಬಿಚಕುಂದೆ ಇವರೇ ಮೊದಲಾದ ಪ್ರಮುಖರು ಬಹುಭಕ್ತಿಯಿಂದ ಕೆಲಸಮಾಡಿದರು. ಇವರಿಗೆ ಶ್ರೀ ಜಗದಾಚಾರ್ಯರು ಮಂಗಲವನ್ನೀಯಲಿ. ಆ ಕಾಲಕ್ಕೆ ಪಂಚಾಚಾರ್ಯಪ್ರಭಾ ಪೋಷಣೆಗೆ ೧ ರೂಪಾಯಿ ತೆಗೆಯಲ್ಪಟ್ಟಿತು.

ಕಾರ್ಯದರ್ಶಿ
ಗುರುಬಸಪ್ಪ ಬಸನಾಳ ಮುಧೋಳ.

ಶ್ರೀ ರೇವಣಸಿದ್ಧೇಶ್ವರಸ್ವಾಮಿ ರಥೋತ್ಸವಾಹ್ವಾನ ಪತ್ರಿಕಾ.

ಶ್ರೀಗುರುಸಿದ್ಧಲಿಂಗ ನಟರಾಜಮನೋಂಬುಜ ಭೃಂಗ ಸತ್ಯವೇ |
ದಾಗಮಸೂತ್ರಸಂಗ ಮಹಿಮಪ್ರದ ಮೃತ್ಯುವಿಭಂಗ ಮಂತ್ರಸಂ ||
ಯೋಗ ಕೃಪಾಂತರಂಗ ವೃಷಭಧ್ವಜ ದಿವ್ಯ ಸುಧಾಂಗ ದೇವಸ |
ದ್ರಾಗ ದೊಳಿಂದು ಮಂಗಳವ ಪಾಲಿಸು ರೇವಣಸಿದ್ಧಮಹಾಪ್ರಭೋ ||೧||

ಭೂಲೋಕದ ಭಕ್ತರ ಉದ್ಧಾರಕ್ಕೋಸ್ಕರ ಶ್ರೀ ಸೋಮನಾಥಲಿಂಗದಿಂದ ಉದ್ಭವಿಸಿದ ದಿವ್ಯಮೂರ್ತಿಗಳಾದ ಶ್ರೀ ರೇಣುಕಾಚಾರ್ಯರವರು ತಮ್ಮ ಲೋಕಸಂಚಾರಕಾಲದಲ್ಲಿ ಸಪ್ತಸಮುದ್ರಗಳನ್ನು ಪಾನಮಾಡಿದ ಅಗಸ್ತ್ಯಮಹರ್ಷಿಗಳನ್ನು ಬೋಧಾಮೃತದಿಂದ ಪುನೀತರನ್ನಾಗಿ ಮಾಡಿಯೂ, ಲಂಕಾಧಿಪತಿಯಾದ ವಿಭೀಷಣನ ಪ್ರಾರ್ಥನಾನುಸಾರವಾಗಿ ಮೂರುಕೋಟಿ ಗುರುರೂಪವನ್ನು ಒಂದೇ ಮುಹೂರ್ತದಲ್ಲಿ ಧರಿಸಿ, ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ಭಕ್ತನ ಇಷ್ಟವನ್ನು ನೆರವೇರಿಸಿಯೂ, ಭೂಲೋಕದ ಸಾಧುಜನರಿಗೆ ಮಹತ್ತರವಾಗಿ ಹಿಂಸೆಯನ್ನುಂಟುಮಾಡುತ್ತಿದ್ದ ಗೋರಕ್ಷನ ಗರ್ವವನ್ನು ಮುರಿದು ಯಕ್ಷದಂಪತಿಗಳನ್ನು ಫಾಲನೇತ್ರದಿಂದ ಭಸ್ಮೀಕೃತರನ್ನಾಗಿಮಾಡಿ ಲೋಕಕ್ಕೆ ಮಹದುಪಕಾರವನ್ನು ಎಸಗಿ, ಕಾಂಚೀನಗರದ ದೊರೆಯ ಪ್ರಾರ್ಥನಾನುಸಾರವಾಗಿ ಕಾಂಚಿಗೆ ದಯಮಾಡಿಸಿ, ಚಲಿಸುತ್ತಿದ್ದ ಶ್ರೀ ವರದರಾಜಸ್ವಾಮಿ ಮಸ್ತಕವನ್ನು ತಮ್ಮ ದಿವ್ಯಹಸ್ತ ಸ್ಪರ್ಶಮಾತ್ರದಿಂದ ನಿಲ್ಲಿಸಿ ಮಹಾಮಹಿಮೆಯನ್ನು ಪ್ರದರ್ಶಿಸಿ, ಈ ರೀತಿ ಅನೇಕ ಅದ್ಭುತಮಹಿಮೆಗಳನ್ನು ತೋರ್ಪಡಿಸುತ್ತಾ ಲೋಕಸಂಚಾರದಲ್ಲಿ ತಮ್ಮ ಅನುಷ್ಠಾನಕ್ಕೆ ಅನುಕೂಲವೆಂದು ತಿಳಿದು ನೆಲಗೊಂಡ ಶ್ರೀಮದಖಿಲಭೂಮಂಡಲ ಮಂಡನಾಯಮಾನ ಶ್ರೀಮದ್ರಾಜಾಧಿರಾಜ ಸಮಸ್ತ ಬಿರುದಪ್ರತಾಪ ತೇಜೋನಿಧಿ ಶ್ರೀಮತ್ಕರ್ಣಾಟಕ ದೇಶಾಧೀಶ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಂದ ಪರಿಪಾಲಿತವಾದ ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ತಾಲ್ಲೂಕ್ ಅವ್ವೇರಹಳ್ಳಿ ಬಳಿ ಇರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ರಥೋತ್ಸವವು ಪ್ರತಿವರ್ಷವೂ ನಡೆಯುವಂತೆ ಇದೇ ಶ್ರೀಮುಖನಾಮ ಸಂವತ್ಸರದ ವೈಶಾಖ ಶುದ್ಧ ಪೂರ್ಣಿಮಾ ಮಂಗಳವಾರ (ತಾ|| 9-5-33) ದಿವ ೯|| ಘಂಟೆ ಮೇಲೆ ೧೦|| ಘಂಟೆಯೊಳಗಾಗಿ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಸ್ವಾಮಿಯ ಮಹಾರಥೋತ್ಸವವು ನಡೆಸಲ್ಪಡುವುದರಿಂದ ತಾವು ತಮ್ಮ ಮಿತ್ರ-ಕಳತ್ರ ಸಮೇತರಾಗಿ ದರ್ಶನಕ್ಕಾಗಿ ಮಹೋತ್ಸವ ಭಾಗಿಗಳಾಗಿ ಸ್ವಾಮಿಯಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

ಕಾರ್ಯಕ್ರಮಗಳು.

7-5-33 ಶು|| ೧೨ ಭಾನುವಾರ ಅಂಕುರಾರ್ಪಣ, ಧ್ವಜಾರೋಹಣಾದಿ, ಸರ್ಕಾರದವರು. 8-5-33 ಶು|| ೧೩ ಸೋಮವಾರ ಗಿರಿಜಾಕಲ್ಯಾಣ, ಭೀಮಾಚಾರ್ಯರ ಸೇವಾ. 8-5-33 ಶು|| ೧೩ ಬಸವೇಶ್ವರ ಅಗ್ನಿಕುಂಡ ಇತ್ಯಾದಿ, ಅವ್ವೇರಹಳ್ಳಿ ಗ್ರಾಮಸ್ಥರು. 9-5-33 ಶು|| ೧೫ ಮಂಗಳವಾರ ಮಹಾರಥೋತ್ಸವ, ಸರ್ಕಾರದವರು. 10-5-33 ಬ|| ೧ ಬುಧವಾರ ಹಗಲು ಗಿರಿಪ್ರದಕ್ಷಿಣೆ, ರಾತ್ರಿ ಅಡ್ಡಪಾಲಕೀ ಉತ್ಸವಗಳು, ಅವ್ವೇರಹಳ್ಳಿಗ್ರಾಮಸ್ಥರ ಸೇವಾ. 11-5-33 ಬ|| ೨ ಗುರುವಾರ ಹಗಲು ತೀರ್ಥಸ್ನಾನ, ಸರಕಾರದವರು. ರಾತ್ರಿ ಅಶ್ವವಾಹನೋತ್ಸವ, ನೆಲಮಲೆ ಗ್ರಾಮಸ್ಥರ ಸೇವಾ. ಮತ್ತು ರಾವಣಾಸುರವಾಹನೋತ್ಸವ, ಮುಗಳಿಹಳ್ಳಿ ರುದ್ರಪ್ಪನವರ ಸೇವಾ. 12-5-33 ಬ|| ೩ ಶುಕ್ರವಾರ ವೃಷಭವಾಹನೋತ್ಸವ, ಅದಲಗೆರೆ ಬಸಪ್ಪನವರ ಸೇವಾ.

ಯಾತ್ರಿಕರ ಊಟಉಪಚಾರದ ಸೌಕರ್ಯವು ಈ ಕೆಳಗಿನಂತೆ ಮಹನೀಯರುಗಳಿಂದ ಏರ್ಪಡಿಸಲ್ಪಟ್ಟಿರುತ್ತದೆ.

ಮಹಾರಾಜಶ್ರೀಗಳಾದ ಮಾಯಗಾನಹಳ್ಳಿ ಪಟೇಲ್ ಮತ್ತು ಜೋಡಿದಾರ್, ಎಂ. ಬಿ. ಗುರುಲಿಂಗಯ್ಯನವರು, ಬಾನಂದೂರು ಶಿವಾಚಪ್ಪನವರ ರೇವಣ್ಣನವರು, ಬಿಡದಿ ಬಿ. ಸಿ. ರೇವಣ್ಣನವರು, ಅರ್ಚಕರಹಳ್ಳಿ ಪಟೇಲ್ ಸೋಮಣ್ಣನವರು, ಕೆಂಗಲಾಪುರದ ಶ್ಯಾನುಭೋಗ್ ರಾಮಣ್ಣನವರು, ಹೊರೆಹಳ್ಳಿ ತೋಟದಪ್ಪನವರು, ಹೆಜ್ಜಾಲದ ಸಿದ್ದಬಸಪ್ಪನವರು, ಬೋರನಾಯ್ಕನಹಳ್ಳಿ ಗಂಗಪ್ಪನವರು, ಹುಲುವೇನಹಳ್ಳಿ ಗಂಗೇದೇವಣ್ಣನವರು, ಬ್ಯಾಡರಹಳ್ಳಿ ನಂಜಪ್ಪನವರು ಮತ್ತು ಬಸಪ್ಪನವರು, ಮುದುವಾಡಿ ಸ್ಕೂಲ್ ಮಾಸ್ಟರು ಶಿವಾಚಾರ್ರು, ಚೀಲೂರು ಭೀಮಾಚಾರ್ರು, ಮತ್ತು ಕೋಟಹಳ್ಳಿ, ನೆಲಮಲೆ, ಹುಲಿಕೆರೆ, ಗುನ್ನೂರು, ಅವ್ವೇರಹಳ್ಳಿ, ಮತ್ತಿಕುಂಟೆ ವೀರೇಗೌಡನದೊಡ್ಡಿ, ಚಿಕ್ಕೇನಹಳ್ಳಿ, ಸಬ್ಬಕೆರೆ, ಕಾಯಂಗುಣ, ಹೊಸಹಳ್ಳಿ ವಗೈರೆ ಗ್ರಾಮಸ್ಥರುಗಳಿಂದ ಪ್ರತ್ಯೇಕಪ್ರತ್ಯೇಕ ಅರವಂಟಿಗೆಗಳು ಏರ್ಪಡಿಸಲ್ಪಡುತ್ತವೆ.

ಕಾರ್ಯದರ್ಶಿಗಳು—ಎಂ. ಬಿ. ಗುರುಲಿಂಗಯ್ಯನವರು, ಮಾಯಗಾನಹಳ್ಳಿ ಪಟೇಲರು ಮತ್ತು ಜೋಡಿದಾರರು.

ಧರ್ಮದರ್ಶಿಗಳು—ಮಹಾರಾಜಶ್ರೀಗಳಾದ ಬಿಡದಿ ಬಿ. ಸಿ. ರೇವಣ್ಣನವರು, ಅವ್ವೇರಹಳ್ಳಿ ಶ್ಯಾನುಭೋಗ್ ಲಕ್ಷ್ಮೀನರಸಿಂಹಯ್ಯನವರು, ವೀರಭದ್ರಯ್ಯನವರು, ಪಟೇಲ್ ಮಾಯಿಗೌಡರು, ಪಟೇಲ್ ಹನುಮೇಗೌಡರು, ಪಟೇಲ್ ಚೌಡೇಗೌಡರು.

Closepet,
29—4—33.

K. Seshagiri Rao,
Amildar.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಮೇ ತಾ|| ೮ ನೇ ಸೋಮವಾರ.

ಲಿಂಗಪೂಜೆ.

ಚರಾಚರಾತ್ಮಕವಾದೀ ಜಗತ್ತಿಗಾಧಾರವಾಗಿರುವ ಲಿಂಗರೂಪವಾದ ವಸ್ತುವನ್ನು ವೀರಶೈವರು ದೇಹದಲ್ಲಿ ಧರಿಸಿಕೊಂಡು ಅಸಾಧಾರಣ ಭಕ್ತಿಯಿಂದ ಪೂಜಿಸುತ್ತಿರುವರು. ಆದರೆ ಇವರು ಪೂಜಿಸುವ ಶಿವಲಿಂಗಮೂರ್ತಿಯು ಇತರರು ಆರಾಧಿಸುವ ಮೂರ್ತಿಗಳಂತೆ ಹಸ್ತಪಾದಾದ್ಯವಯವಗಳಿಂದ ಕೂಡಿಲ್ಲವು. ಆಕಾಶವು ಹೇಗೆ ಸರ್ವವ್ಯಾಪಕವಾಗಿರುತ್ತದೆಯೋ ಹಾಗೆ ಲಿಂಗವು ಅಣುರೇಣುತೃಣಕಾಷ್ಠಾದಿಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ. ಲಿಂಗವಿಲ್ಲದ ಸ್ಥಲವಿಲ್ಲ. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿಯು ಇದೇ ಅರ್ಥವನ್ನು ಬೋಧಿಸುತ್ತದೆ. ಈ ಲಿಂಗರೂಪವಸ್ತುವು ವಚನಕ್ಕಾಗಲಿ, ಮನಸ್ಸಿಗಾಗಲಿ, ಶರೀರಕ್ಕಾಗಲಿ ಗೋಚರವಾಗಲಾರದು. ಯಾರು ಯೋಗಶಕ್ತಿಯಿಂದ ಚಿತ್ತೈಕಾಗ್ರತೆಯನ್ನು ಪಡೆದಿರುವರೋ ಅಂತಹಯೋಗಿಪುರುಷರ ಹೃದಯಕಮಲದಲ್ಲಿ ಮಿಂಚಿನಂತೆ ತೋರುತ್ತದೆ. ಇಂತಹ ಯೋಗಶಕ್ತಿಯು ಪ್ರಪಂಚವ್ಯವಹಾರಗಳಲ್ಲಿ ಮಗ್ನರಾಗಿರುವ ಕಿಂಚಿದ್ಜ್ಞರಾದ ಮಾನವರಿಗೆ ಸಂಘಟಿಸಲಾರದು. ಆದಕ್ಕಾಗಿಯೇ ಅವಿಭಕ್ತವಾದ ನಾಮರೂಪಕ್ರಿಯೆಗಳುಳ್ಳ ಆ ಲಿಂಗವು ~~[illegible]~~ ಸ್ಥೂಲಾಕಾರವನ್ನು ಹೊಂದಿ ಜೀವಿಗಳನ್ನುದ್ಧರಿಸುತ್ತದೆಯೆಂದು ಅನೇಕ ಮಹರ್ಷಿಗಳು ಪ್ರತಿಪಾದಿಸಿದ್ದಾರೆ. 7 ಶಿವನ ಸ್ಥೂಲಾಕಾರಗಳು ಭಕ್ತರ ಇಚ್ಛಾನುಗುಣವಾಗಿ ಅನಂತವಿಧಗಳಾಗಿದ್ದರೂ ಆ ಆಕಾರಗಳು ಸಾಮಾನ್ಯವಾಗಿ ಎರಡು ವಿಧಗಳಾಗಿವೆ. ಇವುಗಳಲ್ಲಿ ಒಂದು ಘೋರಾಕಾರವಾದುದು; ಇನ್ನೊಂದು ಅಘೋರಾಕಾರವಾದುದು. ಘೋರಾಕಾರವೆಂದರೆ ಭಯಂಕರವಾದ ಆಕಾರವೆಂದರ್ಥ. ಅಘೋರಾಕಾರವೆಂದರೆ ಶಾಂತಾಕಾರವೆಂದರ್ಥ. ಅಂದರೆ ಮನುಷ್ಯನಂತೆ ಕರಚರಣಾದ್ಯವಯವಗಳಿಂದಲೂ, ಕಂಠಾಭರಣಾದ್ಯಲಂಕಾರಗಳಿಂದಲೂ, ದುಷ್ಟನಿಗ್ರಹಾರ್ಥಗಳಾದ ಪರಶು ತ್ರಿಶೂಲಾದಿ ಆಯುಧಗಳಿಂದಲೂ ಪತ್ನೀಪುತ್ರಾದಿ ಪರಿವಾರದಿಂದಲೂ ಕೂಡಿರುವ ಆಕಾರಗಳೇ ಘೋರಮೂರ್ತಿಗಳೆನಿಸುತ್ತವೆ. ಇಂತಹ ಕರಚರಣಾದ್ಯವಯವಾದಿಗಳೊಂದೂ ಇಲ್ಲದೆ ಆಕಾಶದಂತೆ ಗೋಳಾಕಾರವಾದ ಪಂಚಸೂತ್ರಯುವಾದ ಆಕಾರವೇ ಅಘೋರಾಕಾರವೆನಿಸುತ್ತದೆ. ಈ ಅರ್ಥವು ಆಗಮಗಳಲ್ಲಿ ಉಕ್ತವಾಗಿರುವುದಲ್ಲದೆ "ಯಾತೇ ರುದ್ರ ಶಿವಾತನೂರಘೋರಾಪಾಪಕಾಶಿನೀ" ಎಂಬ ಶ್ರುತಿಯೂ ಸ್ಪಷ್ಟವಾಗಿ ಹೇಳಿರುತ್ತದೆ. ಈ ಅಘೋರಮೂರ್ತಿಗೆ ಆಗಮಗಳು ಲಿಂಗವೆಂದೂ ಘೋರಮೂರ್ತಿಗೆ ಬೇರವೆಂದೂ ಬೋಧಿಸುವವು. ಕಾಶೀ, ಶ್ರೀಶೈಲ, ಹಿಮಾಲಯ ಮುಂತಾದ ಸ್ಥಳಗಳಲ್ಲಿ ರಾರಾಜಿಸುವ ಮೂರ್ತಿಗಳು ಅಘೋರಮೂರ್ತಿಗಳೆನಿಸಿಕೊಂಡಿರುವುದರಿಂದ ಇವುಗಳು ವಿಶ್ವೇಶಲಿಂಗ, ಮಲ್ಲಿಕಾರ್ಜುನಲಿಂಗ ಕೇದಾರೇಶ್ವರಲಿಂಗ ಎಂದು ವ್ಯವಹರಿಸಲ್ಪಟ್ಟಿರುತ್ತವೆ. ವೀರಶೈವ ಸಿದ್ಧಾಂತವು ಸಹ ಇಂತಹ ಅಘೋರಮೂರ್ತಿಯಾದ ಲಿಂಗವೇ ಮುಕ್ತಿಸಾಧನವೆಂದು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ~~ಯಾರು ಲಿಂಗಧಾರಕರೋ ಅವರೇ ವೀರಶೈವರು.~~

ರಮೇದ್ಯಸ್ತುಹಸ್ತೇನ ಲಿಂಗಾಕಾರಂ ಶಿವಂಸದಾ |
ಹಸ್ತಸ್ಥಿತಂ ವಿದ್ಧಿ ಮುಕ್ತಿದಂ ಸಂಪದಾಂಪದಂ ||

ಯಾರು ಲಿಂಗಾಕಾರವಾದ ಈಶ್ವರನನ್ನು ಹಸ್ತದಲ್ಲಿ ಧರಿಸಿ ಪೂಜಿಸುವರೋ ಅವರಿಗೆ ಮುಕ್ತಿಸಂಪತ್ತು [illegible]ಕವಾದುದೆಂದು ವಾತುಲಾಗಮವು ಅಘೋರಮೂರ್ತಿಸ್ವರೂಪವೆನಿಸಿದ ಲಿಂಗದಮಹತ್ವವನ್ನು ವಿಶೇಷವಾಗಿ ಕೊಂಡಾಡಿರುತ್ತದೆ. ಮತ್ತು ವೀರಶೈವಸಿದ್ಧಾಂತಿಯಾಗಿ ಉಪಾಸ್ಯವಾದ ವಸ್ತುವು ತನ್ನ ಲಿಂಗನೆಂಬ ನಿಜನಾಮದಿಂದಲೇ ಶೋಭಿಸುತ್ತಿರುವದು. ಸ್ಥೂಲಶರೀರದಲ್ಲಿ ರಾರಾಜಿಸುವ ವಸ್ತುವು ಇಷ್ಟಲಿಂಗವೆಂತಲೂ, ಸೂಕ್ಷ್ಮಶರೀರದಲ್ಲಿ ರಾರಾಜಿಸುವ ವಸ್ತುವು ಪ್ರಾಣಲಿಂಗವೆಂತಲೂ, ಕಾರಣಶರೀರದಲ್ಲಿ ರಾರಾಜಿಸುವ ವಸ್ತುವು ಭಾವಲಿಂಗವೆಂತಲೂ ಹೇಳಿಸಿಕೊಳ್ಳಲ್ಪಡುವವು. ಸರ್ವವ್ಯಾಪಕವಾದ ಆಕಾಶವು ಹೇಗೆ ಘಟಮಠಾದ್ಯುಪಾಧಿಗಳಿಂದ ಘಟಾಕಾಶ ಮಠಾಕಾಶ ಎಂದು ಅನಂತಉಪನಾಮಗಳನ್ನು ಹೊಂದಿರುತ್ತದೆಯೋ ಹಾಗೆ ಜಗತ್ಸೃಷ್ಟಿಸ್ಥಿತಿಸಂಹಾರಕರ್ತೃತ್ವವನ್ನು ವಹಿಸಿದ ಪರಶಿವಲಿಂಗವೊಂದೇ ಆಯಾಯ ಉಪಾಸಕನ ಸ್ಥೂಲ, ಸೂಕ್ಷ್ಮ, ಕಾರಣಶರೀರರೂಪ ಉಪಾಧಿನಿಮಿತ್ತದಿಂದ ತನ್ನ ನಿಜನಾಮದೊಂದಿಗೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳೆಂಬ ವಿಶೇಷ ನಾಮಗಳಿಂದೊಡಗೂಡಿದ್ದರೂ ಲಿಂಗವೆಂಬ ಯಥಾರ್ಥವಾದ ಸಾಮಾನ್ಯನಾಮದಿಂದಲೇ ಶೋಭಿಸುತ್ತಿರುವುದು. ರಾಮೇಶ್ವರದಲ್ಲಿ ಶೋಭಿಸುತ್ತಿರುವ ಲಿಂಗವು ರಾಮೇಶ್ವರ ಎಂಬ ವಿಶೇಷಣದಿಂದ ಕೂಡಿದ್ದರೂ ಸ್ವಭಾವಸಿದ್ಧವಾದ ಲಿಂಗವೆಂಬ ಪದವು ಸೇರಿಕೊಂಡಿರುವಂತೆ ಆ ಲಿಂಗವು ಭಕ್ತರ ಇಚ್ಛಾನುಸಾರವಾಗಿ ಇಷ್ಟ, ಪ್ರಾಣ, ಭಾವ ಮುಂತಾದ ವಿಶೇಷಣಗಳಿಂದೊಡಗೂಡಿದ್ದರೂ ತನ್ನ 'ಲಿಂಗ' ಎಂಬ ನಿಜನಾಮವನ್ನು ಬಿಟ್ಟಿಲ್ಲವು. ಆದರೆ ಸ್ಥೂಲೋಪಾಸನೆಯಿಲ್ಲದೆ ಸೂಕ್ಷ್ಮೋಪಾಸನೆಯು ಸಿದ್ಧಿಸುವುದಿಲ್ಲವು. ಲೋಕದಲ್ಲಿ ಬಾಲಕರು ಮೊದಲು ಸ್ಥೂಲಾಕಾರವಾಗಿ ಅಕ್ಷರಾಭ್ಯಾಸಮಾಡದೆ ಇದ್ದಲ್ಲಿ ಆತನಿಗೆ ಆ ವಿದ್ಯೆಯು ಹೇಗೆ ಸ್ವಾಧೀನವಾಗಲಾರದೋ ಹಾಗೆ ಆನಂದಘನವಾದ ಮಹಾಲಿಂಗೋಪಾಸನೆಯು ಸಿದ್ಧಿಸಬೇಕಾದರೆ ಸ್ಥೂಲಲಿಂಗೋಪಾಸನೆಯಲ್ಲಿ ತಾನು ತೇರ್ಗಡೆಯಾಗಲೇಬೇಕಾಗಿರುವುದರಿಂದ ಮೊದಲು ಸ್ಥೂಲವಾದ ಇಷ್ಟಲಿಂಗೋಪಾಸನೆಯೆಂಬ ಮಾರ್ಗದಲ್ಲಿ ಪ್ರವೇಶಿಸಲೇಬೇಕು. ಎಲ್ಲರೂ ದುಃಖನಾಶಕವಾದ ಜ್ಯೋತಿರ್ಲಿಂಗಧಾರಣಶಕ್ತಿಯನ್ನು ಪಡೆಯಬೇಕಾದರೆ ಆ ಲಿಂಗನಾಮದಿಂದಲೇ ಬಾಹ್ಯಲಿಂಗವನ್ನು ಧರಿಸಿ ಉಪಾಸಿಸುತ್ತಿರಬೇಕು. ಇದೇ ಅಭಿಪ್ರಾಯವನ್ನು ವೀರಶೈವಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯರು—

ಅಂತರ್ಧಾರಯಿತುಂ ಲಿಂಗಮಶಕ್ತ: ಶಕ್ತ ಏವವಾ |
ಬಾಹ್ಯಂಚ ಧಾರಯೇಲ್ಲಿಂಗಂ ತದ್ರೂಪಂ [illegible] ಯುಕ್ತಿತ: ||

ಎಂದು ಸ್ಪಷ್ಟವಾಗಿ ಹೇಳಿರುವರು." ಈ ಲಿಂಗೋಪಾಸಕನು ಬಾಲ್ಯಾದಾರಭ್ಯ ಕಾಯವಾಕ್‌ಮನಸ್ಸುಗಳಲ್ಲಿಯೂ "ಲಿಂಗ ಲಿಂಗ" ಎಂಬ ಶಬ್ದವನ್ನೇ ವಿಶೇಷವಾಗಿ ಧ್ಯಾನದಲ್ಲಿಯೂ ಪೂಜೆಯಲ್ಲಿಯೂ ವ್ಯವಹಾರ ಮಾಡುತ್ತಿರುವುದರಿಂದ ಈತನಿಗೆ ಆಧ್ಯಾತ್ಮಿಕ ಸಂಸ್ಕಾರವು ವಿಶೇಷವಾಗಿ ಬೆಳೆಯುತ್ತಿರುವುದರಿಂದ "ಏಕೇನಜನ್ಮನಾಮುಕ್ತಿರ್ವೀರಾಣಾಂತು ಮಹೇಶ್ವರಿ" ಲಿಂಗೋಪಾಸಕರಾದ ವೀರಶೈವರಿಗೆ ಒಂದೇ ಜನ್ಮದಲ್ಲಿ ಮುಕ್ತಿಯು ದೊರೆಯುವುದೆಂದು ಪಾರಮೇಶ್ವರಾಗಮವು ಸಾರಿರುವುದು. ಆದುದರಿಂದ ಸರ್ವರೂ ಅಘೋರರೂಪ ಲಿಂಗಮೂರ್ತಿಯನ್ನು ಪೂಜಿಸಿ ಮೋಕ್ಷಸುಖವನ್ನು ಪಡೆದು ಧನ್ಯರಾಗಬೇಕೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರುಸಂಸ್ಥಾನದ 7 ನೇ ಸ್ಕೌಟ್‌ರ್ಯಾಲಿಯು ನಾಳೇ 9 ನೇ ತಾರೀಖಿನಿಂದ 14 ನೇ ತಾರೀಖಿನವರೆಗೆ ಹಾಸನದಲ್ಲಿ ನಡೆಯುವದು.

ರಾಜಧಾನಿಯ ಕೃಷ್ಣರಾಜಮೊಹಲ್ಲಾ ದೀವಟಿಗೆ ಬೀದಿಯಲ್ಲಿದ್ದ 20 ವರ್ಷವಯಸ್ಸಿನ ನಂಜಮ್ಮನೆಂಬುವಳು ಕಳೆದವಾರ ನೇಣುಹಾಕಿಕೊಂಡು ಸತ್ತಳು.

ಮೈಸೂರು ಸಂಸ್ಥಾನದ ಹೊಸರೆಸಿಡೆಂಟರಾ[illegible] ಲೆಫ್ಟನೆಂಟ್ ಕರ್ನಲ್ ಪ್ಲೌಡ್‌ರವರು ಮೇ 1 [illegible] ತಾರೀಖಿನ ದಿವಸ ಬೆಂಗಳೂರಿಗೆ ಒಂದು ತವ[illegible] ಚಾರ್ಜನ್ನು ವಹಿಸಿಕೊಂಡರು.

ರಾಜಧಾನಿಯ ಮೆಸ್ಸರ್ಸ್ ಎಚ್. ಜಿ. ಲಿಂಗ[illegible] ಅಂಡ್ ಸನ್ಸ್‌ರವರು ಕಳುಹಿಸಿರುವ ಶ್ರೀಮುಖನ[illegible]ತ್ಸರದ ಸಚಿತ್ರ ಕರ್ನಾಟಕಬಾಲಬೋಧೆಯ [illegible] ಗಾದಿಕೈಪಿಡಿ' ಯನ್ನು ಅತ್ಯಾನಂದದಿಂದ ಸ್ವೀಕ[illegible]ರುತ್ತೇವೆ.

ಮೈಸೂರು ಸರ್ಕಾರದವರು ನಮ್ಮ ಸಂಸ್ಥಾ[illegible] ಕುದುರೆಜೂಜು, ನಾಟಕ, ಬಯಾಸ್ಕೋಪು ವ[illegible] ದುವುಗಳ ಮೇಲೆ ಇದೇ ಮೇ ತಿಂಗಳಿಂದ ವ[illegible] ರೂಪಾಯಿ [illegible] ರಾಗುವದು.

ಡಬೇಕೆಂದು ವಿಧಿಸಿದ್ದ ಶಿರಿಗೆಯನ್ನು ಜುಲೈ ತಿಂ[illegible]ಳಿಂದ ಜಾರಿಗೆ ತರತಕ್ಕದ್ದೆಂದು ಅಪ್ಪಣೆಮಾಡಿರುತ್ತಾ[illegible]

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟರವರ ಕೋ[illegible]ರ್ಟಿನಲ್ಲಿ ನಡೆಯುತ್ತಿರುವ ವಿಜಯದಶಮಿ ಗಲಭೆಗ[illegible] ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ 34 ಜನರ ಪೈ[illegible] 7 ಜನರು ಬಿಡುಗಡೆಮಾಡಲ್ಪಟ್ಟರು. ಮಿಕ್ಕವರಮೇ[illegible] ಚಾರ್ಜುಮಾಡಲ್ಪಟ್ಟಿರುವದು. ಮೇ 12 ನೆಯ ತಾರೀ[illegible]ಖಿನ ದಿವಸ ಪಾಟೀಸವಾಲು ನಡೆಯುವದು.

ಕೃಷ್ಣರಾಜಪೇಟೆಯಿಂದ ರಾಜಧಾನಿಗೆ ಬರುತ್ತಿ[illegible] ಮೋಟಾರ್‌ಬಸ್ಸಿನಲ್ಲಿ ನಿಯಮಿತ ಸಂಖ್ಯೆಗಿಂತಲ[illegible] ಹೆಚ್ಚುಜನರನ್ನು ಕೂಡಿಸಿದರೆಂಬ ಅಪಾದನೆಯ ಮೇ[illegible] ಮೈಸೂರು ಸಿಟಿ ಮ್ಯಾಜಿಸ್ಟ್ರೇಟರವರು ಗೌಸ್‌ಖಾ[illegible] ಎಂಬ ಮೋಟಾರ್ ಡ್ರೈವರಿಗೂ, ಮಂಜಪ್ಪ ಎಂ[illegible] ಕಂಡಕ್ಟರಿಗೂ ತಲಾ 25 ರೂ. ಜುಲ್ಮಾನೆ ತಪ್ಪಿದ[illegible] 2 ವಾರಗಳ ಸಜೆಯನ್ನು ವಿಧಿಸಿದರು.

ರಾಜಧಾನಿಯ ಮಂಡಿಮೊಹಲ್ಲಾ ನವಾಯಿ ಬೀ[illegible]ಯಲ್ಲಿರುವ ಸಾಬ್‌ಜಾನ್ ಎಂಬುವನ ಮನೆಯ[illegible] ದುರ್ಗಾಸಿಂಗ್ ಮೊದಲಾದ 7 ಜನರು ಜೂಜಾಡುತ್ತಿ[illegible]ದ್ದರೆಂಬ ಕಾರಣದಮೇಲೆ ಪೋಲೀಸರು ಅವರನ್ನೆಲ್ಲಾ [illegible] ದಸ್ತಗಿರಿಮಾಡಿ ಮೊಕದ್ದಮೆ ಹೂಡಿದ್ದರು. ಸಿಟಿ [illegible] ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಪ್ರತಿಯೊ[illegible]ಬ್ಬರಿಗೂ 10 ರೂ. ಯಂತೆ ಜುಲ್ಮಾನೆ, ತಪ್ಪಿದರೆ ಒಂದು [illegible] ವಾರ ಸಜೆಯನ್ನು ವಿಧಿಸಿದರು.

ಶ್ರೀಮನ್ಮಹಾರಾಜರವರು ರಾಜಧಾನಿಯಲ್ಲಿರುವ [illegible] ಬಾಸ್‌ಬಂಗಲೆಗೆ ಸೀಮೆಯಿಂದ ಎರಡು ಚಿಕ್ಕವಯ[illegible]ಸ್ಸಿನ ಜೀಬ್ರಾ (ಹೇಸರಕತ್ತೆ) ಗಳನ್ನು ತರಿಸಿರುತ್ತಾರೆ[illegible] ಇವು ಕಳೆದವಾರ ಜಹಜಿನಲ್ಲಿ ಮದ್ರಾಸಿಗೆ ಬಂದವು[illegible] ಬಾಸ್‌ಬಂಗಲೆಯ ಮೃಗಾಲಯದ ಸೂಪರಿಂಟೆಂಡೆಂಟ[illegible]ರಾದ ಶ್ರೀ|| ಸಿದ್ಧರಾಜೇಅರಸರವರು ಮದ್ರಾಸಿಗೆ [illegible] ಪ್ರಯಾಣಮಾಡಿ ಅವುಗಳನ್ನು ರಾಜಧಾನಿಗೆ ಸಾಗಿಸಿ[illegible] ತಂದರು.

ಹಿಂದೂಸ್ಥಾನದಿಂದ [illegible]ರುವ ಸುವರ್ಣಪ್ರವಾಹದಿಂದ ಚಿನ್ನದ ವ್ಯಾಪಾರ ಮಾಡುವ ಕೆಲವು ಬ್ರಿಟಿಷ್ ಕಂಪೆನಿಗಳಿಗೆ ಅಪಾರ ಲಾಭವು ದೊರೆಯುತ್ತಿರುವದು. ಇದರಲ್ಲಿ ಕೋಲಾರದ 'ಛಾಂಪಿಯನ್ ರೀಫ್ಸ್' ಚಿನ್ನದ ಗಣಿಯವರಿಗೆ ಬಂದಿರುವ ಲಾಭವೇ ಮುಖ್ಯವಾದುದು. 1931 ನೆಯ ಇಸವಿಯಲ್ಲಿ ಈ ಕಂಪೆನಿಗೆ 8,99,460 ರೂಪಾಯಿಗಳ ಲಾಭವು ಮಾತ್ರ ದೊರಕಿದ್ದು 1932 ನೆಯ ಇಸವಿಯಲ್ಲಿ 19,28,835 ರೂಪಾಯಿಗಳ ಲಾಭವು ದೊರಕಿರುವದಂತೆ!

ಕಳೆದ ಮೇ 30 ನೇ ತಾರೀಖು ಭಾನುವಾರ ದಿವಸ ಬೆಂಗಳೂರಿನ ಫಾಲ್ಫಿಂಕ್ಲಬ್ಬಿನ ಸದಸ್ಯರಾದ ಸಂಗೀತ ವಿದ್ವಾನ್ ಮ|| ಪಿ. ಶ್ರೀ[illegible]ನವರ ಕುಮಾರಿ ಬೈರಮ್ಮನೆಂಬ 9½ [illegible]ವರ್ಷದ ಹುಡುಗಿಯು ಈಜುಕಲಿಸುವ ಉಪಾಧ್ಯಾ[illegible] ಸರಾಯರ [illegible]ರಾದ ಮ|| ಬಿ. ಆರ್. ಶ್ರೀನಿವಾ[illegible] ಪ್ರಾಕ್ಟೀ[illegible] [illegible]ರಿಯಲ್ಲಿ ಕೆಂಪಾಂಬುಧಿಕೆರೆಯಲ್ಲಿ ಈಜುವಳೆ[illegible] [illegible]ಲ 6 ಗಂಟೆಯಿಂದ ಮಧ್ಯಾಹ್ನ 4-30 ಗಂ[illegible] [illegible]ಗೆ 10-30 ಗಂಟೆಗಳ ಕಾಲ ದಡಕ್ಕೆ ಬರದೆ [illegible] ಇದೀಪ್ರಪಂಚದಲ್ಲಿ ಈ ವಯಸ್ಸಿನವರು [illegible] ಸುಮಾರು 9-56 ಗಂಟೆಗಳಿಗಿಂತಲೂ ಹೆಚ್ಚಾಗಿ ಈಜಿ[illegible]ದ್ದಿಲ್ಲವಂತೆ!

ಮೈಸೂರು ಗೆಜೆಟ್.

ಬೆಂಗಳೂರಿನಲ್ಲಿ ಹೊಸದಾಗಿ ಕಟ್ಟಲ್ಪಡುತ್ತಿರುವ [illegible] ಹೆರಿಗೆ ಆಸ್ಪತ್ರೆಯನ್ನು 'ವಾಣೀವಿಲಾಸ ಆಸ್ಪತ್ರೆ' ಯೆಂದು ಕರೆಯತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಸ್ಪೆಷಲ್ ಡ್ಯೂಟಿಯ ಮೇಲೆ ಹೋಗಿರುವ ಮಿ[illegible] ಟಿ. ಸಿಂಗಾರವೇಲು ಮೊದಲಿಯಾರ್ ಬಿ.ಎ., ಬಿ.ಎಲ್. [illegible]ರವರ ಸ್ಥಾನದಲ್ಲಿ ಸದ್ಯಃ ಅಸಿಸ್ಟೆಂಟ್ ಕಂಟ್ರೋ[illegible]ಲರಾಗಿರುವ ಮಿ|| ಕೆ. ಸುಬ್ಬರಾವ್ ಬಿ. ಎ. ಇವ[illegible] ಏಪ್ರಿಲ್ 21 ನೇ ತಾರೀಖಿನಿಂದ ದಿವಾನರ ಪ್ರೈವೇ[illegible] ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

[illegible]ಸೂರು ಗೌರ್ನಮೆಂಟ್ ಪ್ರೆಸ್ಸಿನ ಸೂಪರಿಂಟೆಂ[illegible], ಮೈಸೂರು ಗೆಜೆಟ್ಟಿನ ಕಂಪೈಲರೂ ಆದ [illegible] ಪುಟ್ಟಯ್ಯನವರು ಬಿ. ಎ. ಇವರಿಗೆ ಅವರು [illegible]ಗಿಸಿಕೊಳ್ಳುವ ತಾರೀಖಿನಿಂದ 4 ತಿಂಗಳ [illegible] ರಜೆಯು ಕೊಡಲ್ಪಟ್ಟಿದೆ. ಈ ಅವಧಿಯಲ್ಲಿ [illegible] ಸೂಪರಿಂಟೆಂಡೆಂಟರಾದ ಮಿ|| ಬಿ. ಶ್ರೀನಿ[illegible]ಂಗಾರ್ ಬಿ. ಎ. ಇವರು ಗವರ್ನಮೆಂಟ್ [illegible] ಸೂಪರಿಂಟೆಂಡೆಂಟರಾಗಿಯೂ, ಮೈಸೂರು [illegible] ಕಂಪೈಲರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

[illegible]ಸೂರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ [illegible] ಆಫೀಸರೂ, ಮೈಸೂರು ಮೆಡಿಕಲ್ ಕಾಲೇ[illegible]ಸಿಪಾಲರೂ ಆದ ಡಾ|| ಜೆ. ಎಫ್. ರಾಬಿ[illegible]ಗೆ ಮೇ 23 ನೇ ತಾರೀಖಿನಿಂದ 8 ತಿಂಗಳ [illegible] ಕೊಡಲ್ಪಟ್ಟಿರುತ್ತದೆ. ಈ ಅವಧಿಯಲ್ಲಿ [illegible] ಮತ್ತೊಂದು ಆರ್ಡರ್ ಮಾಡುವವರೆಗೆ ಬೆಂಗ[illegible]ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀ[illegible] ಮಿ|| ಡಿ. ಎಸ್. ಪುಟ್ಟಣ್ಣನವರು ಕೃಷ್ಣರಾ[illegible] ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿಯೂ, [illegible] ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಇರತ[illegible] ಈ ಅವಧಿಯಲ್ಲಿ ಬೆಂಗಳೂರು ವಿಕ್ಟೋರಿಯಾ [illegible] ಸರ್ಜನ್ನರಾದ ಮಿ|| ಬಿ. ಸಂಜಪ್ಪನವರು [illegible]ಲಸದ ಜತೆಗೆ ಮೆಡಿಕಲ್ ಆಫೀಸರವರ ಕೆಲಸ [illegible] ನೋಡಿಕೊಳ್ಳತಕ್ಕದ್ದು.

[illegible]ಕಾರದವರು ಬೆಂಗಳೂರಿನಲ್ಲಿ ಕಟ್ಟಲ್ಪಡುವ ಟೆಕ್ [illegible] ಇನ್‌ಸ್ಟಿಟ್ಯೂಟ್ ಸ್ಕೀಮಿನ ಆಡಳಿತವನ್ನು [illegible]ಸುವದಕ್ಕೆ ಎರಡು ವರ್ಷಗಳ ವರೆಗೆ ಒಂದು [illegible]ಜ್‌ಮೆಂಟ್ ಬೋರ್ಡನ್ನು ನೇಮಿಸಿರುತ್ತಾರೆ. [illegible]ರ್ಡಿಗೆ ರಾಜಮಂತ್ರಪ್ರವೀಣ ಮಿ|| ಕೆ. [illegible]ರವರು ಛೇರ್‌ಮನ್ನರಾಗಿಯೂ, ರಾಜಸಭಾ[illegible] ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣ [illegible] ಕೆಟಿ.ಸಿ.ಐ.ಇ., ಮಿ|| ಬಿ. ಕೆ. ಗರುಡಾಚಾರ್ರು, [illegible]ಸಾಹೇಬ್ ಮಿ|| ಎ. ತಂಗವೇಲು ಮೊದಲಿಯಾ[illegible] [illegible] ರಾವ್‌ಸಾಹೇಬ್ ಸಿ. ಹಯ[illegible]ರಾಯರು ಬಿ.ಎ., ಬಿ.ಎಲ್., ವಿದ್ಯಾಭ್ಯಾಸದ [illegible]ಬಾ ಡೈರೆಕ್ಟರವರು, ಕೈಗಾರಿಕೆ ಮತ್ತು ವಾಣಿ[illegible]ಜ್ಯ ಡೈರೆಕ್ಟರವರು, ಚೀಫ್ ಇಂಜನಿಯರು [illegible] ಇಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರು [illegible]ರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

[illegible]ಕ್ಸ್‌ಪ್ರೆಸ್ ರೈಲ್ವೇ ಇಂಜನ್ನುಗಳು ಪ್ರತಿನೂರು [illegible]ಗಳ ಪ್ರಯಾಣಕ್ಕೆ 2 ಟನ್ ಕಲ್ಲಿದ್ದಲನ್ನು ಉಪ[illegible]ಗಿಸಿಕೊಳ್ಳುವವಂತೆ!

[illegible]ದೇ ಮೇ 1 ನೇ ತಾರೀಖಿನ ದಿವಸ ಮುಂಬಯಿ [illegible]ರನರು ಇಂಗ್ಲೆಂಡಿಗೂ ಹಿಂದೂಸ್ಥಾನಕ್ಕೂ [illegible] ಟೆಲಿಫೋನ್ ಸರ್ವಿಸ್ಸಿನ ಪ್ರಾರಂಭೋತ್ಸವ [illegible]ನೆರವೇರಿಸಿದರು.

[illegible] ದ್ವೀಪಗಳಲ್ಲಿ ಹೆಂಗಸರು ಕಷ್ಟಪಟ್ಟು [illegible] ಸಂಪಾದನೆಮಾಡುವರಂತೆ! ಪುರುಷರು [illegible]ಯರ ಮನಸ್ಸನ್ನು ರಂಜಿಸುವದಕ್ಕಾಗಿ ಸರ್ವ[illegible]ವಿಧವಾಗಿ ಅಲಂಕರಿಸಿಕೊಳ್ಳುವದರಲ್ಲಿಯೇ [illegible]ರುವರಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಚಾಕು [illegible] ನಗರದಲ್ಲಿ ಪ್ರದರ್ಶನಕ್ಕಿಡಲ್ಪಟ್ಟಿರುವ [illegible] 1851 ನೇ ವರ್ಷದಲ್ಲಿ ತಯಾರಿಸಲ್ಪಟ್ಟಿ[illegible], ಅದರಲ್ಲಿ 1851 ಅಲಗುಗಳಿರುವವಂತೆ! [illegible]ಮಾರು 55 ಪೌಂಡುಗಳು!

[illegible]ಯಕಾಲದಲ್ಲಿ ಹೊರಕ್ಕೆ ಕರೆದುಕೊಂಡು [illegible]ಥವಾ ಸವಾರಿ ಮಾಡುವ ಪ್ರಾಣಿಗಳಿಗೆಲ್ಲಾ [illegible]ಒಂದೊಂದು ಕೆಂಪು ದೀಪವನ್ನು ಕಟ್ಟಬೇ[illegible] ಅಮೇರಿಕೆಗೆ ಸೇರಿದ ಓಹಿಯೋನಗರದಲ್ಲಿ [illegible]ಸಕಾನೂನು ಜಾರಿಗೆ ತರಲ್ಪಟ್ಟಿರುವದು! [illegible] ನಗರದ ಕೆಲಕೆಲವು ಆಫೀಸುಗಳಲ್ಲಿ ಫೋಟೋಗಳನ್ನು ತೆಗೆದುಕೊಳ್ಳುವದಕ್ಕಾಗಿ ಚಲನಚಿತ್ರಗಳ ಕ್ಯಾಮರಾಗಳನ್ನು ಮರೆಯಲ್ಲಿ ಇಟ್ಟಿರುವರು! ಇದರಿಂದ ಕೆಲಸಗಾರರ ಸೋಮಾರಿತನವು ಬಹಿರಂಗವಾಗುವದು!

ಕೇಪ್ ಕಾಲೋನಿಗೆ ಸೇರಿದ ಸ್ಟ್ರಾಟ್‌ಫರ್ಡ್ ಎಂಬ ಊರಿನಲ್ಲಿ ಕೆಲವು ದಿವಸಗಳಹಿಂದೆ ಒಬ್ಬ ಸ್ತ್ರೀಯು 18½ ಪೌಂಡ್ ತೂಕವೂ 27 ಅಂಗುಲ ಉದ್ದವಾಗಿಯೂ ಇದ್ದ ಒಂದು ಶಿಶುವನ್ನು ಪ್ರಸವಿಸಿದಳು. ಜನನವಾದ ಸ್ವಲ್ಪಹೊತ್ತಿನಲ್ಲಿಯೇ ಶಿಶುವು ಮೃತಪಟ್ಟಿತು!

ಜರ್ಮನ್‌ದೇಶದ ರಾಜಧಾನಿಯಾದ ಬರ್ಲಿನ್‌ನಗರದಲ್ಲಿ ರಸ್ತೆಗಳ ಮೂಲೆಗಳಲ್ಲಿ ನಿಲ್ಲುವ ಪೋಲೀಸರಿಗೆಲ್ಲಾ ಒಂದೊಂದು ಕ್ಯಾಮರಾ ಕೊಡಲ್ಪಟ್ಟಿರುವದು. ರಸ್ತೆಯಲ್ಲಿ ಏನಾದರೂ ಅನಾಹುತಗಳಾದರೆ, ಅಥವಾ ಗಲಾಟೆಗಳು ನಡೆದರೆ ಅವರು ಕೂಡಲೇ ಅದರ ಫೋಟೋವನ್ನು ತೆಗೆದುಕೊಳ್ಳುವರು!

ಅಸ್ಪೃಶ್ಯತಾನಿವಾರಣೆಯ ಸಲುವಾಗಿ ಗಾಂಧಿಯವರು ಇಂದಿನಿಂದ 21 ದಿವಸಗಳವರೆಗೆ ಉಪವಾಸ ವ್ರತವನ್ನು ಮಾಡುವರಂತೆ! ಈ ಮಧ್ಯೆ ಗಾಂಧಿಯವರು ಉಪವಾಸವನ್ನು ಪ್ರಾರಂಭಿಸಿದ ಕೂಡಲೇ ಸರಕಾರದವರು ಅವರನ್ನು ಬಂಧನದಿಂದ ಬಿಡುಗಡೆ ಮಾಡುವರೆಂದು ಒಂದು ಸುದ್ದಿ!

ಪನವೇಲದ ಶ್ರೀ ಧೂತಪಾಪೇಶ್ವರ ಕಾರ್ಖಾನೆಯ ಮಾಲಕರಾದ ಶ್ರೀ|| ಜಿ. ಎ. ಪುರಾಣಿಕ ಮತ್ತು ಎಂ. ಎ. ಪುರಾಣಿಕರವರು ತಮ್ಮ ತಂದೆಯವರ ಕಡೆಯ ಅಭಿಲಾಷೆಯಂತೆ 50,000 ರೂಪಾಯಿಗಳ ಬೆಲೆಯುಳ್ಳ ಆಸ್ತಿಯನ್ನು ಆಯುರ್ವೇದದ ಅಭಿವೃದ್ಧಿಗಾಗಿ ಧಾರೆಯೆರೆದಿರುವರು ಸ್ತುತ್ಯ!

ಇದೇ ಮೇ 2 ನೇ ತಾರೀಖಿನ ರಾತ್ರಿ ಪಂಜಾಬ್ ಮೇಲ್ ಗಾಡಿಯು 'ಮೊಕೇಮೇಘಾಟ್' ಎಂಬ ಸ್ಥಳದಲ್ಲಿ ಕಂಬಿತಪ್ಪಿ ಉರುಳಿದುದರಿಂದ 4 ಜನರು ಮೃತಪಟ್ಟರು. 7 [illegible]ಗೆ ಗಾಯಗಳಾದವು. ಯಾರೋ [illegible] ಈ ಅನಾಹುತವು ಸಂಭವಿಸಿತೆಂದು ತಿಳಿದುಬಂದಿದೆ.

ಆಫ್ರಿಕಾಖಂಡಕ್ಕೆ ಸೇರಿದ ಬೋರ್ನಿಯೋನಗರದ ಹುಡುಗಿಯರೆಲ್ಲಾ ಸ್ವಾಭಾವಿಕವಾದ ತಮ್ಮ ಹಲ್ಲುಗಳನ್ನು ಕೀಳಿಸಿಕೊಂಡು ಹಿತ್ತಾಳೆಯ ಹಲ್ಲುಗಳನ್ನು ಕಟ್ಟಿಸಿಕೊಳ್ಳುವರಂತೆ! ನಾಯಿಗಳಿಗೂ ಬಿಳಿಯ ಹಲ್ಲುಗಳೇ ಇರುವದರಿಂದ, ಬಿಳಿಯಹಲ್ಲುಗಳನ್ನು ಹೊಂದಿರುವದು ಅವಮಾನಕರವೆಂದು ಅವರ ಭಾವನೆಯಂತೆ!

ಬರ್ಲಿನ್ ನಗರದ ಫ್ರಾ ಫ್ರೀಡಾ ಮಿಕೇಲೀಟ್ ಎಂಬ ಸ್ತ್ರೀಯು ಕಳ್ಳತನದ ಅಪಾದನೆಗಾಗಿ 2 ವರ್ಷಗಳ ಕಠಿಣ ಸಜೆಗೆ ಗುರಿಯಾದಳು! ಅವಳು ಸುಮಾರು 420 ಪೌಂಡುಗಳ ತೂಕವುಳ್ಳವಳಾಗಿದ್ದು ಜೈಲಿನ ಬಾಗಿಲು ಹಿಡಿಸಲಾರದಷ್ಟು ಸ್ಥೂಲವಾಗಿದ್ದುದರಿಂದ ಅಧಿಕಾರಿಗಳು ಅವಳನ್ನು ಕ್ಷಮಿಸಿ ಮನೆಗೆ ಕಳುಹಿಸಿದರಂತೆ!

ನಾಗಪುರದಲ್ಲಿ ಒಂದು ದೊಡ್ಡ ಮನೆಗೆ ಬೆಂಕಿಯು ಬಿದ್ದಿತು. ಅದರೊಳಗೆ ಇಬ್ಬರು ಹುಡುಗರು ಇದ್ದರು. ಜನರು ತಂಡೋಪತಂಡವಾಗಿ ಬಂದು, ಮನೆಯು ಉರಿಯುತ್ತಿರುವದನ್ನು ನೋಡುತ್ತಿದ್ದರೇ ಹೊರತು, ಯಾರೂ ಮನೆಯೊಳಗಿದ್ದ ಮಕ್ಕಳನ್ನು ರಕ್ಷಿಸಲು ಪ್ರಯತ್ನಿಸಲಿಲ್ಲ. ಕಡೆಗೆ ಒಬ್ಬ ಚಿಕ್ಕಹುಡುಗನು ಧೈರ್ಯದಿಂದ ಒಳಕ್ಕೆ ನುಗ್ಗಿ ಮಕ್ಕಳನ್ನು ರಕ್ಷಿಸಿದನು!

ದಕ್ಷಿಣಅಮೇರಿಕಾದೇಶದಲ್ಲಿರುವ ಸೆಂಟ್ರಲ್‌ಪೆರು ಎಂಬ ದೇಶದ ಅಧ್ಯಕ್ಷರಾದ ಸೆರ್ರೋ ಎಂಬುವರು ಲೈಮಾ ಎಂಬ ಊರಿನಲ್ಲಿ 20ಸಾವಿರ ಯುವಕರ ಪ್ರದರ್ಶನವೊಂದನ್ನು ಪರಾಂಬರಿಸುತ್ತಿದ್ದಾಗ ಯಾರೋ 3 ಜನರು ಅವರ ಮೇಲೆ ಗುಂಡುಹಾರಿಸಿ ಕೊಂದರು. ಪೋಲೀಸರು ಕೊಲೆಪಾತಕರಲ್ಲಿ ಇಬ್ಬರನ್ನು ಅಲ್ಲಿಯೇ ಗುಂಡಿನಿಂದ ಕೊಂದರು. ಇನ್ನೊಬ್ಬನನ್ನು ದಸ್ತಗಿರಿ ಮಾಡಿರುವರು.

ಇದೇ ಮೇ 1 ನೇ ತಾರೀಖಿನ ದಿವಸ ಮುಂಬಯಿ ಸೆಂಟ್ರಲ್ ಬ್ಯಾಂಕಿನಲ್ಲಿ ಮಿ|| ಜೋಷಿ ಎಂಬುವರು 15,000 ರೂಪಾಯಿಗಳ ಸರ್ಕಾರಿ ಸೆಕ್ಯೂರಿಟಿ ಬಾಂಡುಗಳಿಗೆ ಬಡ್ಡಿ ತೆಗೆದುಕೊಳ್ಳುವುದಕ್ಕಾಗಿ ರುಜುಮಾಡುತ್ತಿದ್ದಾಗ ಯಾವನೋ ಒಬ್ಬ ಥಟ್ಟನೆ ಬಾಂಡುಗಳನ್ನು ಕಿತ್ತುಕೊಂಡು ಓಡಿಹೋದನು. ಪೋಲೀಸರು ಅನುಮಾನದ ಮೇಲೆ 3 ಜನರನ್ನು ದಸ್ತಗಿರಿ ಮಾಡಿರುವರು. ಆದರೆ ಅವರ ಬಳಿಯಲ್ಲಿ ಯಾವ ಮಾಲೂ ಇರಲಿಲ್ಲವಂತೆ!

ಚಿಲಿಯನ್ ಸರಕಾರದವರು 1879 ನೇ ಇಸವಿಯಲ್ಲಿ ನಡೆದ ಪೆಸಿಫಿಕ್ ಯುದ್ಧದಲ್ಲಿ ಭಾಗಿಗಳಾಗಿದ್ದು ಪೆನ್ಷನ್ ಪಡೆದ ಸಿಪಾಯಿಗಳೆಲ್ಲರೂ ವಿವಾಹಿತರಾಗಿರುವರೆಂಬ ಬಗ್ಗೆ ಸರಿಯಾದ ರುಜುವಾತುಗಳನ್ನು ಕೊಡದಿದ್ದರೆ ಇನ್ನು ಮುಂದೆ ಪೆನ್ಷನ್ನನ್ನು ನಿಲ್ಲಿಸಲಾಗುವದೆಂದು ಒಂದು ಹೊಸ ಕಾನೂನನ್ನು ಮಾಡಿರುವರು. ಇದರಿಂದ 70 ವರ್ಷಕ್ಕೆ ಮೇಲ್ಪಟ್ಟು 80 ವರ್ಷದೊಳಗಿನ ಅನೇಕ ಜನ ಸಿಪಾಯಿಗಳು ಹೊಸದಾಗಿ ವಿವಾಹ ಮಾಡಿಕೊಳ್ಳುತ್ತಿರುವರಂತೆ!

ಜರ್ಮನಿ ದೇಶದ ನಾಜಿಸಂಗಡದ ಜನರು ಜೂ (ಯೆಹೂದ್ಯ) ಜನರನ್ನು ಸಂಪೂರ್ಣ ದ್ವೇಷಿಸುವರಾದರೂ ಎರಿಕ್ ಹನುಸ್ಸೆನ್ ಎಂಬ ಒಬ್ಬನಲ್ಲಿ ಮಾತ್ರ ವಿಶ್ವಾಸವುಳ್ಳವರಾಗಿದ್ದರು. ಹನುಸ್ಸೇನನು ಜ್ಯೋತಿಶ್ಶಾಸ್ತ್ರಪ್ರವೀಣನಾಗಿದ್ದು ಅನೇಕ ಕೋರ್ಟುಗಳಲ್ಲಿ ಮತ್ತು ದೇಶವಿದೇಶಗಳಲ್ಲಿ ಭವಿಷ್ಯದ್ವರ್ತಮಾನವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಹೇಳಿ ಪ್ರಸಿದ್ಧಿಹೊಂದಿದ್ದನು. ಹಿಟ್ಲರರಿಗೂ ಮತ್ತು ಅವರ ಪಂಗಡಕ್ಕೂ ಆಗುವ ಜಯವನ್ನು ಇವನು ಪೂರ್ವಭಾವಿಯಾಗಿಯೇ ತಿಳಿಸಿದ್ದನಂತೆ! ಇಂಥವನು ಕೆಲವು ದಿವಸಗಳ ಹಿಂದೆ ಬರ್ಲಿನ್‌ನಗರದ ಸಮೀಪದ ಒಂದು ಅರಣ್ಯದಲ್ಲಿ ಕೊಲ್ಲಲ್ಪಟ್ಟಿದ್ದನು. ಅವನ ಶರೀರದ ಮೇಲೆ ಅನೇಕ ಗುಂಡಿನೇಟುಗಳು ಬಿದ್ದಿದ್ದುವು. ಪೋಲೀಸರು ತನಿಖೆ ಕ್ರಮಗಳನ್ನು ನಡೆಸುತ್ತಿರುವರು.

ದೆಹಲಿಯಲ್ಲಿ ಒಂದು ವಿಚಿತ್ರ ಕಳ್ಳತನವು ನಡೆದಿರುವದು! ಲ್ಯಾನ್ಸ್-ನಾಯಕ್ ವಸಂತರಾಂ ಎಂಬಾತನು ಸಂಚಾರಾರ್ಥವಾಗಿ ಪೇಟೆಗೆ ಹೋಗಿದ್ದಾಗ ಚಾಂದ್ನಿಚೌಕದಲ್ಲಿ [illegible] ಏನಾದರೂ ಭಿಕ್ಷೆಯನ್ನು ಕೊಡುವಂತೆ ಕೇಳಿದರು. ವಸಂತರಾಮನು ತನ್ನ ಬಳಿಯಲ್ಲಿ ಏನೂ ಇಲ್ಲವೆಂದು ಹೇಳಲು [illegible] ಸಾಧುಗಳು 'ನೀನು ನಮಗೆ ಏನೂ ಕೊಡದಿದ್ದರೆ ನಿನ್ನ ಬಳಿಯಲ್ಲಿರುವದನ್ನೆಲ್ಲಾ ಕಳೆದುಕೊಳ್ಳುವೆ' ಎಂದರು. ವಸಂತರಾಮನು ಸಂಶಯಗ್ರಸ್ತನಾಗಿ ಜೇಬಿನಲ್ಲಿ ಕೈಹಾಕಿ ನೋಡಲು ಅದರಲ್ಲಿದ್ದ ದುಡ್ಡಿನ ಚೀಲವೂ, ಚೀಲದಲ್ಲಿದ್ದ 80 ರೂಪಾಯಿಗಳೂ ಮಾಯವಾಗಿದ್ದವು. ಆ ಸಾಧುಗಳೇ ಕಳ್ಳತನ ಮಾಡಿರಬಹುದೆಂದು ಅವನು ಅವರೀರ್ವರನ್ನೂ ಪೋಲೀಸ್ ಸ್ಟೇಷನ್ನಿಗೆ ಎಳೆದುಕೊಂಡುಹೋದನು. ಪೋಲೀಸರು ಸಾಧುಗಳನ್ನು ಶೋಧಿಸಲು ಅವರ ಬಳಿಯಲ್ಲಿ ಹಣವಿರಲಿಲ್ಲವಾದ್ದರಿಂದ ಸಾಧುಗಳನ್ನು ಸುಮ್ಮನೆ ಬಿಟ್ಟುಬಿಟ್ಟರು. ಕಳ್ಳರಾರೆಂಬುದು ಪತ್ತೆಯಾಗಲೇ ಇಲ್ಲ!

ಯಜಮಾನ್ ಅಂಡ್ ಸನ್
ರಬ್ಬರ್ ಮೊಹರು ಸ್ಟ್ಯಾಂಪ್
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ. ಸೀಸದ, ಬ್ಲಾಕುಗಳು
ಆಂಗಿನಪಿನ್ನುಗಳು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡ್. ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [21]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible]

13-5-74

ಚಾಣಕ್ಯನ ಅರ್ಥಶಾಸ್ತ್ರ ನೀತಿ

~~ಪ್ರಥಮಭಾಗ (೧ ನೆಯ ಅಧ್ಯಾಯ)~~

~~ವಿದ್ಯಾಸಮುದ್ದೇಶ~~

~~[illegible]~~

~~(ಮುಂದುವರಿದುದು)~~

ವರ್ಣಾಶ್ರಮಧರ್ಮ ವಿವರಣೆ.

ವೇದದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬುದಾಗಿ ನಾಲ್ಕು ವರ್ಣಗಳು ಹೇಳಲ್ಪಟ್ಟಿವೆ.

೧. ಬ್ರಾಹ್ಮಣ—ಇವನು ವೇದಾಧ್ಯಯನವನ್ನು ಮಾಡಿ ಅದನ್ನು ಯೋಗ್ಯರಾದ ಬ್ರಾಹ್ಮಣರಿಗೆ ಹೇಳಿಕೊಡುವುದು, ಯಜ್ಞಮಾಡುವುದು, ಅಲ್ಲದೆ ಮತ್ತೊಬ್ಬರು ಮಾಡುವ ಯಜ್ಞಕಾರ್ಯದಲ್ಲಿ ಸಹಾಯಮಾಡುವುದು, ದಾನಮಾಡುವುದು, ಮತ್ತು ದಾನವನ್ನು ಪರಿಗ್ರಹಮಾಡುವುದು ಇವೇ ಇವನ ಕರ್ಮಗಳು.

೨. ಕ್ಷತ್ರಿಯ—ವೇದಾಭ್ಯಾಸ ಮಾಡುವುದು, ಯಜ್ಞಯಾಗಾದಿ ಕರ್ಮಗಳನ್ನು ನಡೆಸುವುದು, ದಾನಧರ್ಮಗಳನ್ನಾಚರಿಸುವುದು, ಸೈನ್ಯದಲ್ಲಿದ್ದು ಕೆಲಸಮಾಡುವುದು, ಪ್ರಾಣಿಗಳನ್ನು ಪರಿಪಾಲಿಸುವುದು, ಇವೇ ಇವನ ಕರ್ತವ್ಯಗಳು.

೩. ವೈಶ್ಯ—ವೇದಾಭ್ಯಾಸ, ಯಜ್ಞ, ದಾನಧರ್ಮ, ವ್ಯವಸಾಯ, ಪಶುಪಾಲನೆ ಮತ್ತು ವ್ಯಾಪಾರಾದಿಗಳನ್ನು ಮಾಡುವುದೇ ಇವನ ಕರ್ತವ್ಯ.

೪. ಶೂದ್ರ—ಬ್ರಾಹ್ಮಣಸೇವೆ, ವ್ಯವಸಾಯ, ಪಶುಪಾಲನೆ, ವ್ಯಾಪಾರ, ಕೈಗಾರಿಕೆ ಮೊದಲಾದ ಕಾರ್ಯಗಳನ್ನು ಮಾಡುವುದೇ ಇವನ ಕರ್ತವ್ಯ.

ಆಶ್ರಮ ಮತ್ತು ಧರ್ಮಗಳು.

ಆಶ್ರಮಗಳು [illegible]ಕಾರವು. ಮತ್ತು ಅವುಗಳಲ್ಲಿ ನಡೆಸ [illegible] ಲ್ಪಡಬೇಕಾದ ಧರ್ಮಗಳಾವುವೆಂದರೆ:—

೧. ಬ್ರಹ್ಮಚರ್ಯ—ಈ ಆಶ್ರಮದಲ್ಲಿ ವೇದಾಭ್ಯಾಸವನ್ನು ಮಾಡಿ ಪಂಚಮಹಾಯಜ್ಞಗಳನ್ನಾಚರಿಸಿ ಬಲಿಹರಣವಮಾಡಿ, ಭಿಕ್ಷಾವೃತ್ತಿಯಂ ಗೈದು ಗುರುಸೇವೆಯನ್ನೆಸಗುವುದು. ಒಂದುವೇಳೆ ಗುರುವಿಲ್ಲದಿದ್ದರೆ ಗುರುವಿನ ಮಗನನ್ನಾಗಲಿ, ಅಥವಾ ತನಗಿಂತ ಜ್ಞಾನದಲ್ಲಿ ದೊಡ್ಡವರನ್ನಾಗಲಿ ಸೇವಿಸಿಕೊಂಡಿರುವುದು.

೨. ಗಾರ್ಹಸ್ಥ್ಯ—ಅವಲಂಬಿಸಿದ ವೃತ್ತಿಯಿಂದ ದ್ರವ್ಯಾರ್ಜನೆಯನ್ನು ಮಾಡುತ್ತ, ತನ್ನ ಯೋಗ್ಯತೆಗೆ ಸಮಾನರಾದವರಲ್ಲಿ ಅಸ್ಪರ್ಷ ಕುಲೋತ್ಪನ್ನಳಾದ ಕನ್ಯೆಯನ್ನು ವರಿಸಿ, ವಿವಾಹಿತನಾಗಿ, ಸುಖಭೋಗಗಳನ್ನನುಭವಿಸಿ, ಬಲಿಹರಣಂಗೈದು, ಪಿತೃತರ್ಪಣವನ್ನು ಮಾಡಿ, ಅತಿಥಿ ಅಭ್ಯಾಗತರನ್ನು ಊಟ ಉಪಚಾರಗಳಿಂದ ತೃಪ್ತಿಪಡಿಸುತ್ತಿರಬೇಕು.

೩. ವಾನಪ್ರಸ್ಥಾಶ್ರಮ—ರಾಜ್ಯದ ಸುಖದುಃಖಗಳನ್ನು ಅನುಭವಿಸಿದ ಮೇಲೆ ರಾಜನು ರಾಜ್ಯಾಡಳಿತ ವಿಷಯದಲ್ಲಿ ಸಂಪೂರ್ಣವಿಮುಖನಾಗಿ, ಸತ್ಕರ್ಮಗಳನ್ನಾಚರಿಸುತ್ತ, ಬರಿ ನೆಲದ ಮೇಲೆ ಮಲಗಿ ನಿದ್ರಿಸುತ್ತಾ, ಅರಣ್ಯದಲ್ಲಿ ದೊರೆತ ಕಂದಮೂಲಾದಿಗಳನ್ನು ಭಕ್ಷಿಸುತ್ತಾ, ಜಟೆಗಳನ್ನು ಬಿಟ್ಟುಕೊಂಡು ಕೃಷ್ಣಾಜಿನವನ್ನು ಧರಿಸಿ, ವಹ್ನಿಪೂಜೆಯನ್ನು ಮಾಡುತ್ತಾ, ದೇವತಾವಿಷಯಕವಾದ ಸ್ತೋತ್ರಗಳನ್ನು ಮಾಡುತ್ತಾ, ಪಿತೃಗಳಿಗೆ ತಿಲತರ್ಪಣವನ್ನು ಬಿಡುತ್ತಾ, ಅತಿಥಿ ಅಭ್ಯಾಗತರನ್ನು ಊಟ ಉಪಚಾರಗಳಿಂದ ತೃಪ್ತಿಗೊಳಿಸಿ ಸಮೀಚೀನ ನಡತೆಗಳಿಂದ ಕಾಲಕಳೆಯುತ್ತಿರಬೇಕು.

೪. ಸನ್ಯಾಸಾಶ್ರಮ—ಇಂದ್ರಿಯಗಳನ್ನು ಸಂಪೂರ್ಣವಾಗಿ ಸ್ವಾಧೀನದಲ್ಲಿಟ್ಟುಕೊಂಡು ಎಲ್ಲಾ ಕರ್ಮಗಳನ್ನುಳಿದು, ದ್ರವ್ಯಾಪೇಕ್ಷೆಯೆಂಬುದನ್ನು ಸಂಪೂರ್ಣವಾಗಿ ತ್ಯಜಿಸಿ, ಜನಸಮುದಾಯದಿಂದ ದೂರನಾಗಿ ಒಂದು ಸ್ಥಳದಲ್ಲಿಯೂ ನಿಲ್ಲದೆ, ತಿರುಗಿಕೊಂಡಿದ್ದು ಜೀವನಕ್ಕಾಗಿ ಭಿಕ್ಷೆಬೇಡುತ್ತಾ, ಅರಣ್ಯಗಳಲ್ಲಿ ವಾಸಿಸುತ್ತಾ, ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ನಿರ್ಮಲಚಿತ್ತವುಳ್ಳವನಾಗಿರಬೇಕು.

ಮಾನವನು ತನ್ನ ಧರ್ಮವನ್ನು ತಿಳಿದು ಆಚರಣೆಯಲ್ಲಿ ತರುತ್ತಾ ಇದ್ದರೆ, ಅದರಿಂದಲೇ ಅವನು ಸ್ವರ್ಗವನ್ನು ಪಡೆವನು. ಹಾಗಲ್ಲದೆ ಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಿದುದಾದರೆ, ಲೋಕವು ಕ್ರಮೇಣ ನಾಶಕ್ಕೆ ಹೇತುವಾಗಿ, ಜಾತಿ ಮತ್ತು ಧರ್ಮವೆಂಬುದೇ ನಿರ್ನಾಮವಾಗುವುದು. ಈ ಕಾರಣದಿಂದ ರಾಜನಾದವನು ತನ್ನ ಪ್ರಜೆಗಳು ಎಂದಿಗೂ ತಮ್ಮ ತಮ್ಮ ಧರ್ಮಗಳನ್ನುಲ್ಲಂಘಿಸದಂತೆ ಆಚರಣೆಯಲ್ಲಿ ತರುತ್ತಿರುವಂತೆ ನೋಡಿಕೊಂಡಿರಬೇಕು. ಯಾವನು ತನ್ನ ಕರ್ತವ್ಯಗಳನ್ನುಲ್ಲಂಘಿಸದೆ ನಡೆಸಿಕೊಂಡು ಬರುತ್ತಾ, ಆರ್ಯಮತಾನುಸಾರವಾದ ಪದ್ಧತಿಗಳನ್ನು ಅನುವರ್ತಿಸಿಕೊಂಡು ಬರುತ್ತಾ, ದೈವಿಕಭಕ್ತಿಯನ್ನು ಹೊಂದಿ, ಮತಾನುಸಾರವಾದ ಧರ್ಮದ ಕಟ್ಟಳೆಗಳನ್ನು ಕೈಕೊಳ್ಳುತ್ತಾ, ಜೀವಿತಕಾಲವನ್ನು ನಡೆಸಿಕೊಂಡು ಬರುತ್ತಿರುವನೋ, ಅವನೇ ಇಹಲೋಕದಲ್ಲಿ ಸಂತೋಷಚಿತ್ತನಾಗಿ ಜೀವಿಸಿಕೊಂಡಿದ್ದು, ಪರದಲ್ಲಿ ಪರಮಪದವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಯಾವ ರಾಜ್ಯದ ಮಾನವರು ವೇದದಲ್ಲಿ ನಿರೂಪಿಸಿದಂತೆ ನಡೆಯುತ್ತಾ ಬರುವರೋ, ಆ ರಾಜ್ಯವು ಕ್ರಮೇಣ ಅಭಿವೃದ್ಧಿಗೆ ಬಂದು ಬಹುಕಾಲ ನಿಂತಿರುವುದರಲ್ಲಿ ಸಂದೇಹವಿಲ್ಲ.

(ಸಶೇಷ)

ದೊಡ್ಡ ಲೋಕಕ್ಷಯಕಾರಿಯಾವದು ಮದ್ಯಾರ್ಕ (ಸಾರಾಯ.)

(ಡಾ|| ಜಾನ್ ಹಾರ್ವಿ ಕೆಲ್ಲಾಗ್ ಇವರಿಂದ).

ಕಳೆದ ಸಂಚಿಕೆಯಿಂದ ಮುಂದುವರಿದುದು.

ಶೀತೋಷ್ಣಕಾಲಗಳೆರಡರಲ್ಲಿಯೂ ಮದ್ಯರಸವು ದೇಹಕ್ಕೆ ಶತ್ರು!

“ಕಾರ್ಟೂಮ್” ಎಂಬುದನ್ನು ಶತ್ರುಗಳಿಂದ ಕಾಪಾಡುವುದಕ್ಕಾಗಿ [illegible] ಸೈನ್ಯಾಧಿಪತಿಯು ಆಫ್ರಿಕದಲ್ಲಿ ಒಂದು ತೀವ್ರವಾದ ಬೇಸಿಗೆಯಲ್ಲಿ ತನ್ನ ದೊಡ್ಡ ಸೇನೆಗಳನ್ನು ಸಾಗಿಸಿಕೊಂಡುಹೋದಾಗ, ಮದ್ಯಪಾನದಿಂದುಂಟಾದ ಕೆಡಕನ್ನು ತಿಳಿದು, ಆ ಕಾಲದಲ್ಲಿ ತನ್ನ ಸೈನ್ಯಗಳಿಗೆ ಆ ದುರಭ್ಯಾಸವನ್ನು ನಿಲ್ಲಿಸಿಬಿಟ್ಟುದರಮೇಲೆಯೇ, ತಮ್ಮ ಸೈನ್ಯಕ್ಕೆ ಅಲ್ಲಿ ಜಯವುಂಟಾಯಿತೆಂದು ಅನುಭವದಿಂದ ತಿಳಿದು ಹೇಳಿರುವನು. ಆದುದರಿಂದ ಬೇಸಿಗೆಯಲ್ಲಿ ಮದ್ಯಪಾನವು ಅಪಾಯಕರವು.

ಚಳಿಯಿಂದ ಬಾಧೆಪಡುವನೊಬ್ಬನು ಸಾರಾಯವನ್ನು ಕುಡಿದೊಡನೆ ಮೈಗೆ ಕಾವುಂಟಾದಂತೆ ತೋರುವದು. ಅದರ ಮೇಲೆ ಮದ್ಯದಲ್ಲಿ ಬಹಳ ಗುಣವುಂಟೆಂದು ಅವನು ನೆನೆಸುವನು. ಆದರೆ ಹಿಂದೆ ಉತ್ತರಧ್ರುವವನ್ನು ಕಂಡುಹಿಡಿಯುವ ಪ್ರಯತ್ನಕ್ಕಾಗಿ ಹೊರಟವರು ಕೆಲವರು, ಅಲ್ಲಿಯ ಚಳಿಗೆ ಸಾರಾಯದಿಂದ ಉಪಶಮನವುಂಟೆಂದು ಭ್ರಮಿಸಿ, ಮೊದಮೊದಲು ಮದದ್ರಾವಕಗಳನ್ನು ತಮ್ಮ ಸಂಗಡ ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಮದ್ಯರಸವು ಶೀತಲವಿದ್ದಾಗ ತಾತ್ಕಾಲಿಕವಾಗಿ ಮೈಗೆ ಉಷ್ಣವನ್ನುಂಟುಮಾಡಿದಂತೆ ತೋರಿದರೂ, ಕೊನೆಗೆ ಅದರ ದುಷ್ಪರಿಣಾಮವು ಕಾರ್ಯೋತ್ಸಾಹವನ್ನು ತಗ್ಗಿಸಿ, ಮೈಯಲ್ಲಿ ಹೆಚ್ಚು ಶೈತ್ಯಕ್ಕೆ ಅವಕಾಶಕೊಡುವುದೆಂದು ತಿಳಿದುಬಂದುದರ ಮೇಲೆ, ಪಿಯರಿ ಎಂಬವರು ತಮ್ಮ ಸೈನ್ಯದಲ್ಲಿ ಒಬ್ಬರಿಗಾದರೂ ಮದ್ಯವನ್ನು ಕುಡಿಯಲು ಅನುಮತಿಸಲಿಲ್ಲವು. ಶೀತಳವಿದ್ದಲ್ಲಿ ಸಾರಾಯಕ್ಕಿಂತಲೂ ಅಪಾಯಕರವಾದುದು ಬೇರೊಂದಿಲ್ಲವೆಂದು ತಿಳಿದುಬಂದಿತು. ಈಚೆಗೆ ಆ ಉತ್ತರಧ್ರುವದಕಡೆಗೆ ಹೊಸ ಶೋಧನೆಗಳಿಗಾಗಿ ಹೋಗತಕ್ಕವರಾರೂ ಮದದ್ರಾವಕಗಳನ್ನು ತೆಗೆದುಕೊಂಡು ಹೋಗುವುದಿಲ್ಲ.

ಮದ್ಯವು ಮಹಾವಂಚಕವಾದುದು.

ಮೇಲೆ ಹೇಳಿದ ವಿವರಗಳಿಂದ ಮದ್ಯಪಾನದಿಂದ ಎಷ್ಟು ಕೆಡುಕುಗಳುಂಟೆಂದು ತಿಳಿಯಬಹುದು. ಅದರಲ್ಲಿ ಗುಣವುಂಟೆಂದು ತಿಳಿದಿರುವುದು ಕೇವಲ ಭ್ರಮವೆಂದು ಇದರಿಂದ ಎಲ್ಲರಿಗೂ ಗೊತ್ತಾಗಬಹುದು.

ಬ್ರಾಂದಿ ಮುಂತಾದುವು ಆಪತ್ಕಾಲಕ್ಕೆ ಬಹಳ ಯದೆಂದು ತಿಳಿದು ಅನೇಕರು ಅದನ್ನು ಮನೆ ಯಾವಾಗಲೂ ಇಟ್ಟಿರುವುದುಂಟು. ಇದರಿಂದ ವೈ ಹೋಗುವವರೇ ಹೊರತು ಬೇರೆಯಲ್ಲ.

ಇದರಂತೆಯೇ ಹಸಿವುಳ್ಳವರಿಗೂ, ಮದ್ಯರಸ ಬುದು ಮೋಸಮಾಡಿ ಮುಟಾಳಪಟ್ಟವನ್ನೇ ಕ ವುದು. ಮದ್ಯವನ್ನು ಕುಡಿದಮೇಲೆ ಹಸಿವಡಗ ತೋರಿದರೂ ಅವನಿಗೆ ಆಹಾರವು ಬೇಕಾಗಿಯೇ ವುದು. ಹಾಗೆಯೇ ಬಹಳ ಶ್ರಮಪಟ್ಟು ದಣಿದವ ಹೆಂಡವನ್ನು ಕುಡಿಸಿದರೆ ಶ್ರಮಪರಿಹಾರವಾ ತೋರಬಹುದು. ಆದರೇನು? ಅವನಿಗೆ ದೇಹದಲ್ಲಿ ಶ್ರಮಚಿಹ್ನಗಳಿದ್ದೇ ಇರುವುವು. ಇದೇ ರೀತಿ ಕೇವಲ ಬಡಮನುಷ್ಯನೊಬ್ಬನು ತಾನು ಮದ್ಯವ ಕುಡಿದು ದೊಡ್ಡ ಹಣಗಾರನೆಂದು ತೋರಿಸಿಕೊಳ್ಳ ದಕ್ಕಾಗಿ, ಕಂಡಕಂಡವರಿಗೆಲ್ಲ ಅದರಿಂದ ಔತಣ ಮ ಆರಂಭಿಸಿ, ಕೊನೆಗೆ ಅಂಗಡಿಗೆ ಕೊಡಲು ಬೇಕಾ ದುಡ್ಡಿಲ್ಲದೆ ಕಣ್ಣುಬಿಡುವ ಸಂಭವವುಂಟು.

ಮದ್ಯವನ್ನು ಕುಡಿಸಿದ ಒಂದು ಬಡ ಮೀನಿನ ದುರವಸ್ಥೆ.

ಮಧುಸಾರದ ವಿಷವೇಗವೆಂತೆಂಬುದನ್ನು ಪರಿ ಸುವುದಕ್ಕಾಗಿ, ನಮ್ಮ ರಸಾಯನ ಕಾರ್ಯಶಾಲೆ ಒಮ್ಮೆ ಒಂದು ಶೋಧನವನ್ನು ನಡೆಸಿದೆವು. ಒ ಗ್ಯಾಲನ್ ನೀರನ್ನು ಶುದ್ಧಮಾಡಿಟ್ಟುಕೊಂಡು, ರಲ್ಲಿ ಒಳ್ಳೇ ಕೊಬ್ಬಿಬೆಳೆದಿದ್ದ ಒಂದು ಮೀನ ತಂದುಬಿಟ್ಟೆವು. ಆ ನೀರನ್ನು ತೆಳುವಾದ ಬೀರಿ ಮಾಡುವುದಕ್ಕೆ ತಕ್ಕಷ್ಟು ಮದದ್ರಾವಕವನ್ನು ಅದ ಬಿಟ್ಟೆವು. ಅದುವರೆಗೂ ಆ ಮೀನು ಸಾಧಾರಣ ಯಲ್ಲಿಯೇ ಇದ್ದಿತು. ಆಮೇಲೆ ಸ್ವಲ್ಪ ಹೊತ್ತಿ ಗಾಗಿ ಆ [illegible]ರುವ ನೀರು ತನಗೆ ಅಪಾ ಕರವೆಂದು ತೋರಿದಹಾಗಿದೆ. ಅಲ್ಲಿಂದ ಹೊ ಬರಲು ಪ್ರಯತ್ನಿಸಿತು. ಆಮೇಲೆ ಕ್ರಮಕ್ರಮವ ಹುಚ್ಚು ಹಿಡಿದಂತ ಹಾರಾಡತೊಡಗಿತು. [illegible] ದಂತೆ ನಲಿದಾಡಲಾರಂಭಿಸಿತು. ಬೆನ್ನು ಕೆಳಗಾ ಈಜುವುದು, ತಲೆಕೆಳಗಾಗಿ ನಿಲ್ಲುವುದು, ಹೀಗೆಲ್ಲ ಮಾಡುತ್ತಿತ್ತು. ಸರಿಯಾಗಿ ಸಾರಾಯವನ್ನು ಪಾನ ಮಾಡಿದ [illegible]ಕೂಡ ಅದರಷ್ಟು ಚೇಷ್ಟೆಗಳನ್ನು ಮಾಡಲಾರದು. ಚೆನ್ನಾಗಿ ಕುಡಿದ, ಮನುಷ್ಯನ ಅ ಸ್ಥೆಗಳೆಲ್ಲ ಅದರಲ್ಲಿ ಕಾಣಿಸುತ್ತಿದ್ದುವು. ಹೀಗೆ 30 ನಿ ಷಗಳು ಅಲೆದಾಡಿ ಕೊನೆಗೆ ಮೃತಿಹೊಂದಿತು.

ಸಸ್ಯಜಾತಿಗಳಿಗೂ ಸಾರಾಯದಿಂದ ಇದೇ ಅವ ಣವುಂಟಾಗುವುದು. ತೆಳುವಾಗಿ ಸಾರಾಯ ಬೆರ ನೀರನ್ನು ಗಿಡಗಳಿಗೆ ಸುರಿದರೆ ಕಾಲಕ್ರಮದಿಂದ ಅ ಎಲೆಗಳು ಬಿಳುಪಾಗುತ್ತ ಬಂದು, ಶೀಘ್ರದಲ್ಲಿ ಗಿಡ ಸಾಯುವುದು. ಮೃಗಜಾತಿಗೂ, ಮನುಷ್ಯವರ್ಗಕ್ಕ ಇದೇ ದುಷ್ಪರಿಣಾಮವೇ ಹೊರತು ಬೇರೆಯಿಲ್ಲ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿ ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷ ಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊ ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿ ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಲ್ಲಿಪ್ಪಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆ
ಮೈಸೂರು.

ಸ್ತ್ರೋಕ್ತ ದಿವ್ಯೌಷಧಗಳು.

ೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಧಿ ಹೆಸರು	ತೊಲಿ	ಮುಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ವಂಗ	೧	೩—೦—೦
ಗ	೧	೧—೦—೦
ಭಸ್ಮಗಳು.		
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಹಭಸ್ಮ	೧	೦—೧೨—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಳಿಭಸ್ಮ	೧	೦—೮—೦
ಸಭಸ್ಮ	೧	೦—೮—೦
ಭಸ್ಮ	೧	೦—೮—೦
ಮೂರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦—೧೨—೦
ಕಭಸ್ಮ	೧	೩—೦—೦
ತ್ರಾಭಸ್ಮ	೧	೪೦—೦—೦
ಳಭಸ್ಮ	೧	೦—೮—೦
ಭಸ್ಮ	೧	೦—೪—೦
ಭಸ್ಮ	೧	೦—೪—೦
ಪ್ಪಿನ ಭಸ್ಮ	೧	೦—೮—೦
ಗದ ಕೋಡಿನ ಭಸ್ಮ	೧	೦—೮—೦
ಂತಿಹರತಾಲಭಸ್ಮ	೧	೦—೮—೦
ರಿ (೧ನೇ ನಂಬರ್)	೧	೫೦—೦—೦
ರಿ (೨ನೇ ನಂಬರ್)	೧	೪೦—೦—೦
ತ ಸೂರ್ಯಪುಟಿ	೧	೧—೦—೦
ತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ತೊಳೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣೆ ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಯಬೇಕೆಂದು ಕೋರುತ್ತೇವೆ.

ಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಜಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು “**ವೀರಶೈವರತ್ನ**” ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಋತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1. 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋಂ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬೇನೆ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆಹಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಫಿಂಗ್ ಕಫ್ ರಿಮೆಡಿ—ಕಫ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್‍ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೇನೆ, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಕಿತ್ಸೆ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ “ಆರೋಗ್ಯಭಾಗ್ಯದ ನೀತಿಸೂತ್ರ” ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಶರಪೂರಿನಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಣೆ ಸ್ಟ್ಯಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.

[36] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು,** ದ. ಕ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗತೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳತು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ [illegible] ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ನಡಸಲು [illegible] ವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, [illegible] ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಯ ಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ವಿಶೇಷ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[17] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ

पंडित श्रीकाशीनाथशास्त्री यांचें भाषण (मराठी)	೮ ಆ
Speeches by Pandit Shri Kashinatha Shastri (*English*)	12
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಲಿಂಗೋತ್ಪತ್ತಿ ಲಾಕೆಟ್ಸ್	೨
ಕೇನೋಪನಿಷತ್ (ವೀರಶೈವಭಾಷ್ಯ)	೧
ಈಶಾವಾಸ್ಯೋಪನಿಷತ್ (ಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ವ
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧನಶ್ಯದಪುಡಿಯ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ
ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ

(Registered Trade Mark)

ಗಳನ್ನು ಕೊಟ್ಟಿರು
ರು. ಪ್ರಸಿದ್ಧವಾದ
ನಶ್ಯದ ಪುಡಿಯ
ಸ್ವಸ್ಥವಾಗುವ ವ
ಧಿಗಳು ಯಾವವೆ
ರೆ:—ಪಿನಶಿ, ಒ
ತಲೆನೋವು, ತಲೆ
ಳ್ಳಿನ ರೋಗಗ
ಕಣ್ಣುಗಳಲ್ಲಿ ಉಂ
ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ
ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ
ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ
ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ
ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ
ಪರಿಮಳವಾಗುವುದು. ಇದನ್ನು ಅನೇಕ ಪ್ರಭು
ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ
ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[18] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

EGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಮೇ ೧೯೩೩ [ಸಂಚಿಕೆ ೩

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇ ಾಂತರ್ಗತ ವೀರಶೈವಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊದ ಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗೃಹೀತವಾಗಿರುವುದಲ್ಲದೆ, ಅಗಸ್ತ್ಯ, ಧೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪತಿ ಂಡಿತ, ಸಂಜನಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊದ ಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗುರು ಾರ್ವಭೌಮರನ್ನು ಬಹು ಉಪಾಧ್ಯಾಯ (ಶಿಕ್ಷಕ)ನ [illegible] ಸ್ತುತಿಗಳು ವಿಶೇಷವಾಗಿ ಸಂಗೃಹೀತಗಳಾಗಿರು ವು. ಈ ಗ್ರಂಥವು ಶ್ಲಾಘ್ಯಯನು ತಾನು ಅನ್ಯರಿಂದ ಡಿಂದ ಯಾವ ಯಾವ [illegible] ಕಾಲದಲ್ಲೂ ನೂರಿಂ [illegible] ದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಿವಯೋಗಿಗಳ ಮಹತ್ವ.

ಕಳೆದ ಅಂಗಿರಸ ಸಂ|| ಫಾಲ್ಗುಣ ಮಾಸದಲ್ಲಿ ಶಿವಮೊಗ್ಗ ಸ್ಟ್ರಿಕ್ಟ ಹೊನ್ನಾಳಿ ತಾ|| ಗೋವಿನಕೋವಿ. ಶ್ರೀ ಹಾಲಸ್ವಾಮಿಗಳ ದಾಸೋಹಮಠದ ಶ್ರೀ ಚಿಕ್ಕಹಾಲಸ್ವಾಮಿಗಳು ತಮ್ಮ ಶಾಖಾಮಠಗಳ ವಿಚಾರಣಾರ್ಥವಾಗಿಯೂ ಅವುಗಳ ಜೀರ್ಣೋದ್ಧಾರಕ್ಕಾಗಿಯೂ ತಮ್ಮ ಮೂಲಪೀಠವೆನಿಸಿದ ಶ್ರೀ ಶ್ರೀಶೈಲಕ್ಷೇತ್ರದ ಜಗದ್ಗುರು ವಿಶ್ವಾರಾಧ್ಯರ ಕೃಪಾವಿಶೇಷವಂ ಪಡೆದು ದೇಶಸಂಚಾರವಮಾಡುತ್ತ ತಿಪಟೂರು ಗ್ರಾಮಕ್ಕೆ ದಯಮಾಡಿಸಿದರು. ಆಗರ್ಭಶ್ರೀಮಂತರಾದ ಜಿ. ಕೆ. ಮಲ್ಲಪ್ಪನವರು ತಾವು ಕಟ್ಟಿಸುತ್ತಿರುವ ನೂತನಗೃಹದ ಶ್ರೇಯೋಭಿವೃದ್ಧಿಯನ್ನು ಅಪೇಕ್ಷಿಸುತ್ತ ಶಿವಯೋಗಿಗಳಾದ ಚಿಕ್ಕ ಹಾಲಸ್ವಾಮಿಗಳವರ ಸನ್ನಿಧಾನದಲ್ಲಿ ಪ್ರಾರ್ಥಿಸಿಕೊಳ್ಳಲು ಶಿವಯೋಗೀಶ್ವರರು ತಮ್ಮ ದಿವ್ಯದೃಷ್ಟಿಯಿಂದ ಆ ನೂತನಗೃಹದ ಆವರಣದಲ್ಲಿ ಸುಮಾರು ೧೦-೧೨ ಅಡಿಯ ಕೆಳಭಾಗದಲ್ಲಿ ಕಪ್ಪುಶಿಲೆಯ ಪುರಾತನಕಾಲದ ವೀರೇಶ್ವರ ವಿಗ್ರಹವೊಂದು ಅಧೋಮುಖವಾಗಿ ಶಯನಮಾಡಿರುವುದೆಂದು ಅಮೃತವಾಣಿಯಿಂದ ಅಪ್ಪಣೆಕೊಡಿಸಿದರು. ಈ ವಿಷಯವನ್ನು ಅಲ್ಲಿ ನೆರದಿದ್ದ ಮಹಾಜನಗಳು ಕೇಳಿ ಆಶ್ಚರ್ಯಪಟ್ಟು ಇದನ್ನು ಪರೀಕ್ಷಿಸುವುದಕ್ಕಾಗಿ ಆ ವಿಗ್ರಹವನ್ನು ಶಿವಯೋಗಿಗಳಿಂದಲೇ ಮೇಲಕ್ಕೆ ತೆಗೆಯಿಸಬೇಕೆಂದು ಆಲೋಚಿಸಿ ಶ್ರೀಗಳವರಲ್ಲಿ ಬಿನ್ನೈಸಿಕೊಂಡರು. ಅದಕ್ಕೆ ಶ್ರೀಗಳು ಒಪ್ಪಿಕೊಂಡು 15 ದಿವಸಗಳವರೆಗೂ ನಿರಶನವ್ರತಧಾರಿಗಳಾಗಿ ಮಹಾರುದ್ರಪೂಜಾಭಿಷೇಕ ಕಾರ್ಯಗಳನ್ನು ನಡೆಯಿಸುತ್ತ ಕೊನೆಯ ದಿವಸ ರಾತ್ರಿ 2 ಘಂಟೆಯ ಸಮಯದಲ್ಲಿ ಮಹಾಜನಗಳ ಸಮಕ್ಷಮದಲ್ಲಿ ಭೂಮಿಯನ್ನು ಅಗೆಯಿಸಿ ವೀರೇಶನ ಮೂರ್ತಿಯನ್ನು ಮೇಲಕ್ಕೆ ಎತ್ತಿಸಿ ಮಹಾಜನಗಳಿಗೆ ದರ್ಶನಮಾಡಿಸಿದರು. ಬಳಿಕ ಆ ಗೋತ್ರಪುರುಷನಾದ ವೀರೇಶನನ್ನು ತಿಪಟೂರಿನಲ್ಲಿರುವ ಆನಂದಾಶ್ರಮದಲ್ಲಿ ಪ್ರತಿಷ್ಠೆ ಮಾಡಿಸಿದರು. ಅದು ಈಗ ಮ|| ರಾ|| ಮಲ್ಲಪ್ಪನವರ ಕುಟುಂಬವರ್ಗದ ಶ್ರೇಯಾರ್ಥವಾಗಿ ನಿತ್ಯವೂ ಪೂಜೋಪಚಾರಗಳನ್ನು ಹೊಂದುತ್ತಲಿದೆ. ಮತ್ತು ತಿಪಟೂರು ಜಿ. ಕೆ. ಮಲ್ಲಪ್ಪನವರ ತಂದೆಯವರಾದ ಗುರುಪಾದಪ್ಪನವರ ಕೊಟ್ಟೂರಪ್ಪನವರ ವಂಶಾಭಿವೃದ್ಧಿಗಾಗಿ ಕೃಪಾಶೀರ್ವಾದವನ್ನು ಮಾಡುತ್ತಲಿರುವ ಆ ಶಿವಯೋಗಿಗಳನ್ನು ಮರೆತರೆ ದೊರೆತ ಆ ರತ್ನವನ್ನು ಕಳೆದುಕೊಂಡಂತಾಗುವದು. ಕೆಲಮುಜನರು ಇಂಥ ಸದ್ವಂಶದವರಿಗೆ ಕುಂದುಕವನ್ನು ಉಂಟುಮಾಡುವ ದುರಾಲೋಚನೆಮಾಡಿ ಅವರ ಮನೆಯಲ್ಲಿ ನಡೆಯುವಕಾರ್ಯವಿದ್ದರೂ ನಿಲ್ಲಿಸಿರುವುದನ್ನು ನೋಡಿದರೆ ಬಹಳ ವಿಷಾದಕರವಾದ ಸಂಗತಿಯಾಗಿರುತ್ತದೆ. ಶ್ರೀ ಶಿವಯೋಗಿಗಳ ಮಹತ್ವವು ತುಮಕೂರು, ಬೆಂಗಳೂರು, ಶಿವಮೊಗ್ಗ, ಸಾಗರ ಮುಂತಾದ ಪ್ರಾಂತ್ಯಗಳಲ್ಲಿ ಅನೇಕವಿಧವಾಗಿ ನಿದರ್ಶನಕ್ಕೆ ಬಂದಿರುತ್ತದೆ. ಈ ಮೇಲ್ಕಂಡ ಜಿ. ಕೆ. ಮಲ್ಲಪ್ಪನವರ ಮನೆಗೆ ಇದುವರೆಗೂ ಅನೇಕ ವಿರಕ್ತ ಮಹಾತ್ಮರು ಪಟ್ಟಾಧಿಕಾರಿಗಳು ವೇದಶಾಸ್ತ್ರಕಾರರು ಮುಂತಾದವರು ಬಂದಿರುತ್ತಾರೆ. ಯಾರೂ ಈ ಕುಟುಂಬದ ಶ್ರೇಯೋಭಿವೃದ್ಧಿಯನ್ನು ಇಂತಹ ಪ್ರತ್ಯಕ್ಷ ರೀತಿಯಿಂದ ತೋರಿಸಿರುವದಿಲ್ಲ. ಇಂಥ ಸುಸಮಯವನ್ನು ಕಳೆದುಕೊಂಡರೆ ಮುಂದೆ ದೊರೆಯುವದು ದುರ್ಲಭ. ಈಗಲಾದರೂ ಜಿ. ಕೆ. ಮಲ್ಲಪ್ಪನವರು ಕುತ್ಸಿತ ಜನಗಳ ಮಾತಿಗೆ ಕಿವಿಗೊಡದೆ ತಮ್ಮ ವಂಶಾಭಿವೃದ್ಧಿಸಾಧಕವಾದ ಸತ್ಕಾರ್ಯಗಳನ್ನು ಈ ಹಿಂದೆ ದಯಮಾಡಿಸಿದ್ದ ಶಿವಯೋಗಿಗಳಿಂದಲೇ ನಡೆಸಿಕೊಂಡರೆ ಸುಖವಾಗುವದು.

ವಂಶಹಿತಾಭಿಮಾನಿ.

ಒಳದೇಶದ ವೃತ್ತಾಂತಗಳು.

ಸರ್ಕಾರಿ ಸೇವಿಂಗ್ಸ್ ಬ್ಯಾಂಕುಗಳಲ್ಲಿ 5 ವರ್ಷಗಳವರೆಗೆ ಇಡುವ ಫಿಕ್ಸೆಡ್ ಡಿಪಾಜಿಟ್‌ಗಳಿಗೆ ಇದುವರೆಗೆ ಕೊಡುತ್ತಿದ್ದ ಶೇಕಡಾ 4½ ರೂಪಾಯಿ ಬಡ್ಡಿಯನ್ನು ಸರ್ಕಾರದವರು ಹಂಗಾಮಿಯಾಗಿ ನಿಲ್ಲಿಸಿರುತ್ತಾರೆ

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ಪದ್ಧತಿಯಮೇರೆಗೆ ರಾಜಧಾನಿಯ ಜಗನ್ಮೋಹನಬಂಗಲೆಯಲ್ಲಿ ಜೂನ್ 5ನೆಯ ತಾರೀಖು ಸೋಮವಾರ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗುವದು.

ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಎಫ್. ಎ. ಹ್ಯಾಮಿಲ್ಟನ್‌ರವರು ಕಳೆದವಾರ [illegible] ಕ್ಯಾಂಬೆಲ್ ಎಂಬಾಕೆಯನ್ನು ವಿವಾ[illegible]ಕೊಂಡರು. ವಧೂವರರ ವಯಸ್ಸು 54 ಮತ್ತು 57!

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ 'ಫೈನ್ ಆರ್ಟ್ಸ್ ಸೊಸೈಟಿ'ಯ ನೇತೃತ್ವದಲ್ಲಿ ಪ್ರತಿವರ್ಷದ ಪದ್ಧತಿಯಮೇರೆಗೆ 3 ನೇ ವಾರ್ಷಿಕ ಕಲಾಪ್ರದರ್ಶನವು ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಲ್ಲಿ ಇದೇ ಮೇ 29ನೆಯ ತಾರೀಖಿನಿಂದ ಜೂನ್ 15ನೇ ತಾರೀಖಿನವರೆಗೆ ನಡೆಯುವದು.

ಮೈಸೂರು ರಾಜಧಾನಿ, ಮೈಸೂರು, ಹುಣಸೂರು ಮತ್ತು ಎಡತೊರೆ ತಾಲೂಕುಗಳು ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರ ಖುದ್ದು ವಿಚಾರಣೆಗೆ ಒಳಪಟ್ಟಿರಬೇಕೆಂದೂ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇತರ ತಾಲೂಕುಗಳು ಮತ್ತೊಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಮೇಲ್ವಿಚಾರಣೆಯಲ್ಲಿರಬೇಕೆಂದೂ, ಅವರ ಕಚೇರಿಯು ನಂಜನಗೂಡಿನಲ್ಲಿರತಕ್ಕದ್ದೆಂದೂ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಕಳೆದ ಮೇ 7 ನೆಯ ತಾರೀಖು ಭಾನುವಾರದ ದಿವಸ ಶಿವಮೊಗ್ಗಾ ಟೌನ್ ಅಂಗಡಿಬೀದಿಯಲ್ಲಿ ಹಿಂದೂ ಮಹಮ್ಮದೀಯರಲ್ಲಿ ಹೊಡೆದಾಟವಾಗಿ ಅನೇಕ ಅಂಗಡಿಗಳೂ, ಮನೆಗಳೂ, ಹಾಗೂ ಒಂದು ದೇವಸ್ಥಾನವೂ ಸುಡಲ್ಪಟ್ಟವು. ಒಟ್ಟು ಸುಮಾರು 2-3 ಲಕ್ಷ ರೂಪಾಯಿಗಳ ನಷ್ಟವಾಗಿರುವದೆಂದೂ, ಹೊಡೆದಾಟದಲ್ಲಿ ಒಬ್ಬ ಮಹಮ್ಮದೀಯನು ಮೃತಪಟ್ಟನೆಂದೂ, ಮೂರುಜನ ಮಹಮ್ಮದೀಯರಿಗೂ, ಹನ್ನೊಂದುಜನ ಹಿಂದೂಗಳಿಗೂ ತುಂಬಾ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವದೆಂದೂ ತಿಳಿದುಬಂದಿದೆ. ಕೆಲವು ವಾರಗಳ ಹಿಂದೆ ಅಲ್ಲಿ ನಡೆದ ಒಂದು ಕುಸ್ತಿಯ ಸಲುವಾಗಿ ಉಭಯ ಜನಾಂಗದವರಿಗೂ ದ್ವೇಷವು ಹುಟ್ಟಿದ್ದಿತಂತೆ! ಸರಕಾರದವರು ಪುನಃ ಗಲಾಟೆಯು ನಡೆಯದಂತೆ ಬೆಂಗಳೂರಿನಿಂದ ಸೈನ್ಯವನ್ನು ಕಳುಹಿಸಿ ಗಲಾಟೆಗೆ ಮುಖ್ಯ ಕಾರಣರೆಂದು ತಿಳಿದುಬಂದ ಕೆಲವರನ್ನು ದಸ್ತಗಿರಿಮಾಡಿರುತ್ತಾರೆ. ವಿಚಾರಣೆಯು ನಡೆಯುತ್ತಿರುವದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಮನುಷ್ಯನು ಇಂದು ಆಚರಿಸಿದ ಪಾತಕದ ಫಲವನ್ನು ಕಾಲಾಂತರದಲ್ಲಿಯೋ, ಜನ್ಮಾಂತರದಲ್ಲಿಯೋ ಭೋಗಿಸುವನು. 'ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೆ' ಎಂಬಂತೆ, ತೀವ್ರ ತೀವ್ರತರಾದಿ ಶುಭಾಶುಭಕರ್ಮಗಳ ಫಲಭೋಗವು ಈ ಜನ್ಮದಲ್ಲಿಯೇ ಘಟಿಸುವುದೆಂಬ ಸಂಗತಿಯಾದರೂ ಮರೆಯಲ್ಪಡತಕ್ಕದ್ದಲ್ಲ. ದೇವರೇ! ನಾನು ಈ ಜನ್ಮದಲ್ಲಿ ಯಾವಬಗೆಯ ಪಾಪಕೃತ್ಯವನ್ನೂ ಮಾಡಿದವನಲ್ಲ. ಅದರೆ, ನನಗೆ ಈಗ ಇಂತಹ ದುಃಖವನ್ನನುಭವಿಸುವ ಪ್ರಸಂಗವೇಕೆ ಪ್ರಾಪ್ತವಾದುದು? ಎಂಬುದಾಗಿ ಈಶ್ವರನಿಗೆ ಮೊರೆಯಿಡತಕ್ಕ ಜನರೂ ಕಡಿಮೆಯಿಲ್ಲ. ಈ ದುಃಖಾನುಭವವು ಈಶ್ವರಪ್ರೇರಿತವಾದುದಾದರೂ ತಮ್ಮ ಪುರಾಕೃತಕರ್ಮಫಲವೆಂಬುದು ಅವರ ಲಕ್ಷ್ಯದಲ್ಲಿ ಬಾರದಿರುವುದೇ ಅವರ ಆ ವಿಪರೀತ ತಿಳಿವಳಿಕೆಗೆ ಕಾರಣವಾಗಿರುವುದು. ಆದಾಗ್ಯೂ ಪುರಾತನರು:—

ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।
ಶನೈರಾವರ್ತಮಾನಸ್ತು ಕರ್ತ್ಯುರ್ಮೂಲಾನಿ ಕೃನ್ತತಿ ॥

ಆಚರಿಸಲ್ಪಟ್ಟ ಅಧರ್ಮವು ಈ ಲೋಕದಲ್ಲಿ ಗೋವಿನಂತೆ ತತ್ಕಾಲದಲ್ಲಿಯೇ ಫಲಪ್ರದವಾದುದಲ್ಲ. ಆ ಅಧರ್ಮವು [illegible] (ತನೆಯ ಆವೃತ್ತಿ, ಅವಕಾಶವು ಸಿಕ್ಕೊಡನೆಯೇ [illegible]) ಮೆಲ್ಲಮೆಲ್ಲನೆ ಕರ್ತನಲ್ಲಿ [illegible] ಗೊಳಿಸುವುದು. (ಮನು. ೪-೧೭೨)

ಎಂಬ ಮುಂತಾದ ಅನುಭವಸಿದ್ಧವಾದ ಸಿದ್ಧಾಂತವನ್ನು ಹೇಳಿಟ್ಟಿರುವರು. ಅದ್ದರಿಂದ, ನಾಸ್ತಿಕರಾದ ಅಸುರವೃತ್ತಿಯುಳ್ಳ ಜನರು ಯಾವುದನ್ನು ಮಾಡಿದರೂ, ಹೇಗೆ ಆಚರಿಸಿದರೂ ಕೂಡ ಧಾರ್ಮಿಕರು ಅಂತಹ ಪಾತಕರ ಸಂಸರ್ಗದಿಂದ ದೂರಿರುವುದೇ ಲೇಸು.

ಕೇವಲ ವಿಷಯಾಸಕ್ತರೂ ಅಸುರವೃತ್ತಿಯುಳ್ಳವರೂ ಆದ ಜನರನ್ನು ಒಂದುಬಗೆಯಾದ ಎಚ್ಚರದಪ್ಪಿದ ಸ್ಥಿತಿಯಲ್ಲಿರುವರೆಂದೇ ಹೇಳಲಭ್ಯಂತರವಿಲ್ಲ. ಅವರಿಗೇನು? ಕುಲದ ಉತ್ಕರ್ಷವಾದರೂ ಅಷ್ಟೇ, ಅಪಕರ್ಷವಾದರೂ ಅಷ್ಟೇ! ಆ ಬಗ್ಗೆ ಅವರು ಸುಖದುಃಖಗಳೆಂದನ್ನೂ ಅಭಿಮಾನಿಸಿಕೊಳ್ಳುವುದಿಲ್ಲ. ಭರ್ತೃಹರಿಯು ವಿಷಯಲೋಲುಪರಾದ ಅಸುರವೃತ್ತಿಯ ಜನರನ್ನು ಹೀಗೆ ಬಣ್ಣಿಸಿದ್ದಾನೆ:—

ಜಾತಿರ್ಯಾತು ರಸಾತಲಂ ಗುಣಗಣಸ್ತಸ್ಯಾಪ್ಯಧೋಗಚ್ಛತಾ
ಚ್ಛೀಲಂ ಶೈಲತಟಾತ್ಪತತ್ವಭಿಜನಃ ಸಂದಹ್ಯತಾಂ ವಹ್ನಿನಾ ।
ಶೌರ್ಯೇವೈರಿಣಿ ವಜ್ರಮಾಶು ನಿಪತತ್ವರ್ಥೋಽಸ್ತು ನಃ ಕೇವಲಂ
ಯೇನೈಕೇನ ವಿನಾ ಗುಣಾಸ್ತೃಣಲವಪ್ರಾಯಾಃ ಸಮಸ್ತಾ ಇಮೇ ॥

ಜಾತಿಯು ರಸಾತಳಕ್ಕಿಳಿಯಲಿ, ಗುಣಸಮೂಹವಾದರೋ ಅದಕ್ಕೂ ಕೆಳಗೆ ಹೋಗಿಬೀಳಲಿ, ಶೀಲವು ದೊಡ್ಡಬೆಟ್ಟದಮೇಲಿಂದುರುಳಿಬಿದ್ದು ನಾಶವಾಗಲಿ, ಕುಲವನ್ನು ಅಗ್ನಿಯು ದಹಿಸಲಿ, (ಕುಲಕ್ಕೆ ಬೆಂಕೀ ಹಚ್ಚಿ) ವೈರಿಯಂತಿರುವ ಈ ಶೌರ್ಯದ ಮೇಲೆ ವಜ್ರವು ಬೀಳಲಿ, ಹೀಗೆ ಸರ್ವವೂ ನಷ್ಟವಾಗಿಹೋಗಲಿ. ಆದರೆ ಯಾವುದರ ಅಪೇಕ್ಷೆಯಿಂದ ಇವೆಲ್ಲವೂ ಕಸದಕಡ್ಡಿಗಳಂತೆ ಕಾಣಲ್ಪಡುವುವೋ ಆ ಧನವೊಂದೇ ನಮಗೆ ಸಿಕ್ಕಿದರೆ ಸಾಕು.

ಈ ಮೇಲೆ ವರ್ಣಿಸಲ್ಪಟ್ಟಂತೆಯೇ ಆಧುನಿಕ ಜನರ ಸ್ಥಿತಿಯೂ ಇರುವುದೆಂದು ಧಾರಾಳವಾಗಿ ಹೇಳಬಹುದು. ಅವರು ಧನಪ್ರಾಪ್ತಿಗಾಗಿಯೂ, ವಿಷಯೋಪಭೋಗಕ್ಕಾಗಿಯೂ ಬೇಕಾದುದನ್ನು ಮಾಡಲು ಸಿದ್ಧರಾಗಿರುತ್ತಾರೆ. ಸುಧಾರಕರೆನಿಸಿಕೊಳ್ಳುವವರು ಕೂಡ ತಮಗೆ ಸಲ್ಲದಕಾರ್ಯಗಳಲ್ಲಿ ಹೇಸದೆ ಕೈಹಾಕುತ್ತಿರುವರು. **'ಜೇನುಂ ಕಾಮ ತೇನಾ ಥೀ ಥಾಯ। ಬಿಜೊ ಕರೇಕೋ ಗೋಥಾ ಖಾಯ॥'** ಯಾವನಿಗೆ ಯಾವ ಕೆಲಸವು ತಕ್ಕದ್ದೋ ಅದು ಅವನಿಗೇ ಒಪ್ಪುವುದು. ಅದಕ್ಕೆ ಯೋಗ್ಯನಲ್ಲದ ಬೇರೊಬ್ಬನು ಅದನ್ನು ಮಾಡಹೋದರೆ ಜಾರಿಬೀಳುವನು. ಎಂಬ ಗುರ್ಜರ ನಾಣ್ಣುಡಿಯು ಅಂಥವರನ್ನು ಲಕ್ಷೀಕರಿಸಿಯೇ ಪ್ರಸಿದ್ಧವಾಗಿರುವುದು. ಶಾಸ್ತ್ರಜ್ಞರೆನಿಸುವವರಲ್ಲಿಯೂ ಕೆಲವರು ಧನಾಢ್ಯರ ರಂಜನೆಗಾಗಿ ಪ್ರಸಂಗಾನುಸಾರ ಮಿಥ್ಯಾಶಾಸ್ತ್ರವನ್ನಾದರೂ ಹೇಳಲು ಹುದುಗುವುದಿಲ್ಲ. 'ಬ್ರಾಹ್ಮಣಸ್ಯತು ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೆ' ಈ ಬ್ರಾಹ್ಮಣಜನ್ಮವು ತುಚ್ಛವಾದ ವಿಷಯೋಪಭೋಗದ ಸಲುವಾಗಿಯೇ ಇರುವುದಿಲ್ಲವೆಂಬುದನ್ನು ಅವರು ಮರೆತಿರಬಹುದೇನು? ಮನುವು:—

ಅನಭ್ಯಾಸೇನ ವೇದಾನಾಮಾಚಾರಸ್ಯ ಚ ವರ್ಜನಾತ್ ।
ಆಲಸ್ಯಾದನ್ನದೋಷಾಚ್ಚ ಮೃತ್ಯುರ್ವಿಪ್ರಾಞ್ಜಿಘಾಂಸತಿ ॥

ವೇದಗಳನ್ನು ಅಭ್ಯಾಸಮಾಡದಿರುವುದರಿಂದಲೂ, ಧರ್ಮಶಾಸ್ತ್ರವಿಹಿತವಾದ ಆಚಾರವನ್ನು ಬಿಡುವುದರಿಂದಲೂ, ಅಲಸ್ಯದಿಂದಲೂ ಅನ್ನದೋಷದಿಂದಲೂ ಮೃತ್ಯುವು ಬ್ರಾಹ್ಮಣರನ್ನು ಅಕಾಲದಲ್ಲಿಯೇ ಎಳೆದೊಯ್ಯಲಿಚ್ಛಿಸುವುದು. (ಮನು. ೫-೪)

ಎಂಬುದಾಗಿ ನಿರೂಪಿಸಿರುವ ಈ ಮಾತಿನ ಅನುಭವವು ಈಗ ಪ್ರತ್ಯಕ್ಷವಾಗಿ ಕಾಣಬರುವುದೋ ಹೇಗೆ? ಎಂಬ ವಿಚಾರವು ಹಾಗಿರಲಿ. ಶಾಸ್ತ್ರಜ್ಞರು ಕೂಡ ತಮ್ಮ ಸುಸಂಸ್ಕೃತಬುದ್ಧಿಸ್ವಾತಂತ್ರ್ಯವನ್ನೇ ಕಳೆದುಕೊಂಡಿರುವರೋ ಏನೋ ಎಂಬಂತೆ ಕಾಣಬರುವುದರಬಗ್ಗೆ ನಮ್ಮ ಮನವು ಮಿಡುಕುವುದು. 'ಬುಭುಕ್ಷಿತೈರ್ವ್ಯಾಕರಣಂ ನಭುಜ್ಯತೆ ಪಿಪಾಸಿತೈಃ ಕಾವ್ಯರಸೋ ನಪೀಯತೆ' ಎಂಬುದನ್ನು ಎಲ್ಲರೂ ಬಲ್ಲರು. ಅದರೆ ಅದಕ್ಕೂ ವಿಶಿಷ್ಟಮರ್ಯಾದೆಯಿಲ್ಲವೇ? ತಮ್ಮನ್ನು ಗುರುವರ್ಗದವರೆಂದು ಹೇಳಿಕೊಳ್ಳುವವರೇ ಸ್ವಾಧ್ಯಾಯಾಭಾವದಿಂದ ಅಜ್ಞರೂ, ಅನ್ನದೋಷದಿಂದ ತೇಜೋಹೀನರೂ, ಅಲಸ್ಯದಿಂದ ಕರ್ಮಭ್ರಷ್ಟರೂ, ಸ್ವಧರ್ಮಾನುಷ್ಠಾನನ್ಯೂನತೆಯಿಂದ ಸತ್ವವಿಲ್ಲದವರೂ, ಆತ್ಮೋನ್ನತಿಯ ವಿಚಾರವಿಲ್ಲದ್ದರಿಂದ ಅಜಿತೇಂದ್ರಿಯರೂ, ಹಣದಾಸೆಯಿಂದೋ ಸ್ವಪ್ರತಿಷ್ಠೆಗಾಗಿಯೋ ತಮ್ಮ ಕುಲ, ಧರ್ಮ, ನೀತಿ ಮರ್ಯಾದೆಗಳನ್ನು ಕೆಡಿಸಿಕೊಂಡು ವೇದಾಗಮಗಳನ್ನು ದುರ್ಲಕ್ಷಿಸಿ ಸುಧಾರಕರೆಂಬವರ ಕಳ್ಳುಪಿಗಳಾಗಿ ನಟಿಸುವವರೂ, ಯಾರಾದರೇನು? ತಾವೇ ಉನ್ಮಾರ್ಗಗಾಮಿಗಳಾಗಿರುವವರು ಶಿಷ್ಯರಿಗೆ ಸನ್ಮಾರ್ಗದರ್ಶಕರಾಗುವುದುಂಟೇ? [illegible] ಸರ್ವರೂ ಉನ್ಮಾ [illegible] ಅವಶ್ಯಕತೆಯನ್ನು ಬಯಸುತ್ತಾರೆ; ಅವರ ಈ ಬಯಕೆಗೆ ಅವರ ಹೃದಯದಲ್ಲಿರುವ ಆನುವಂಶಿಕ ಸಂಸ್ಕಾರವೇ ಹೇತುವಾಗಿರುವುದು. ಅಂತಹ ಸಂಸ್ಕಾರದ ವೃದ್ಧಿಗಾಗಿಯೇ ವೇದಾಗಮಾದಿ ಧಾರ್ಮಿಕ ಗ್ರಂಥಗಳ ಅವಲೋಕನೆಯೂ ಧರ್ಮನಿಷ್ಠರ ಸಂಸರ್ಗವೂ ಸ್ವಧರ್ಮಾಚರಣೆಯಲ್ಲಿ ನಿಷ್ಠೆಯೂ ಅವಶ್ಯವಾದುವು.

ಒಟ್ಟಿನಲ್ಲಿ ಪ್ರತ್ಯಭಿಜ್ಞಾಮಾಹೇಶ್ವರ ವಂಶೀಯನಾದ ಕ್ಷೇಮೇಂದ್ರನು:—

ಧರ್ಮಃ ಶರ್ಮ ಪರತ್ರಚೇಹಚ ನೃಣಾಂ ಧರ್ಮೋಽನ್ಧಕಾರೇರವಿಃ
ಸರ್ವಾಪತ್ಪ್ರಶಮಕ್ಷಮಃ ಸುಮನಸಾಂ ಧರ್ಮೋ ನಿಧಿರ್ಮೂಲ್ಯವಾನ್ ।
ಧರ್ಮೋಬನ್ಧುರಬಾನ್ಧವೇ ಪೃಥುಪಥೇಧರ್ಮಃ ಸುಹೃನ್ನಿಶ್ಚಲಃ
ಸಂಸಾರೋರುಮರುಸ್ಥಲೇಸುರತರುರ್ನಾಸ್ತ್ಯೇವ ಧರ್ಮಾತ್ಪರಃ ॥

ಧರ್ಮವು ಇಹಾಮುತ್ರಗಳಲ್ಲಿ ಸುಖಪ್ರದವಾದುದು; ಅದುವೇ ಮೋಹಾಂಧಕಾರವನ್ನು ತೊಲಗಿಸುವುದರಲ್ಲಿ ಸೂರ್ಯನಂತಿರುವುದು, ಧರ್ಮವೆಂಬುದು ಸರ್ವಾಪತ್ತುಗಳನ್ನೂ ಹೋಗಲಾಡಿಸುವುದರಲ್ಲಿ ಸಮರ್ಥವಾಗಿದೆ; ಧರ್ಮವೇ ಸಜ್ಜನರ ಅಮೂಲ್ಯವಾದ ನಿಧಿಯು, ಯಾವಸ್ಥಳದಲ್ಲಿ ಬಂಧುಬಳಗದವರಿರುವುದಿಲ್ಲವೋ ಅಂತಹ ದೊಡ್ಡ ದಾರಿಯಲ್ಲಿ (ಪರಲೋಕಮಾರ್ಗದಲ್ಲಿ) ಆ ಧರ್ಮವೇ ಮಾನವರ ಬಂಧುವಾಗಿರುವುದು; ಅದುವೇ ನಿಜವಾದ ಗೆಳೆಯನೂ, ಸಂಸಾರವೆಂಬ ವಿಶಾಲವಾದ ಮರುಭೂಮಿಯಲ್ಲಿ ಕಲ್ಪವೃಕ್ಷವೂ ಆಗಿರುವುದು. ಅದ್ದರಿಂದ, ಧರ್ಮಕ್ಕಿಂತಲೂ ಶ್ರೇಷ್ಠವಾದುದು ಅನ್ಯದಾವುದೂ ಇಲ್ಲವೆಂದು ತಿಳಿಯತಕ್ಕದ್ದು.

ಎಂಬುದಾಗಿ ಸ್ವಾನುಭವಸಿದ್ಧವಾದುದನ್ನೇ ನಿರೂಪಿಸಿರುವನಾದುದರಿಂದ ಧರ್ಮವೇ **"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ"** (ಮ. ನಾ. ಉ. ೨-೬) ಎಂಬಂತೆ, ವಿಶ್ವಪ್ರಪಂಚಕ್ಕೆ ಆಧಾರವಾಗಿದೆ, ಅಂತಹ ಧರ್ಮಮಾರ್ಗವನ್ನನುಸರಿಸಿ ನಡೆದು ತಮ್ಮ ಅಂತಿಮಧ್ಯೇಯವನ್ನು ಸಾಧಿಸಿಕೊಂಡು ಕೃತಾರ್ಥರಾಗಬೇಕೆಂಬ ಹಂಬಲವುಳ್ಳವರೇ ಮನುಷ್ಯೋತ್ತಮರು. ಅವರೇ ಧರ್ಮದಲ್ಲಿ ಶ್ರದ್ಧೆಯನ್ನು ಬಲಿಸಲು ಬಯಸುವರು. ಈ ಬಯಕೆಯು **"ವೇದೋಽಖಿಲೋ ಧರ್ಮಮೂಲಮ್"** (ಮನು. ೨-೬) **"ವೇದೋಧರ್ಮಮೂಲಮ್"** (ಗೌ. ಸೂ. ೧.) ಎಂಬ ವಚನಾನುಸಾರವಾಗಿ, ಧರ್ಮದ ಮರ್ಮವನ್ನು ಬೋಧಿಸತಕ್ಕ ವೇದವನ್ನು ಮುಖ್ಯಪ್ರಮಾಣವೆಂದು ನಂಬುವುದರಿಂದೇ ಸಿದ್ಧಿಸುವುದಾದ್ದರಿಂದ, ಈಗ ನಾವು 'ವೇದವು' ಅಂದರೇನು? ಎಂಬ ವಿಷಯವನ್ನಧಿಕರಿಸಿ ವಿವೇಚಿಸಲುದ್ಯುಕ್ತರಾಗುತ್ತೇವೆ.

ಮೊದಲು 'ವೇದ' ಎಂಬ ಶಬ್ದದ ಅರ್ಥವೇನೆಂಬುದನ್ನು ಕಂಡುಕೊಳ್ಳುವಾ! 'ವಿದ್-ಜ್ಞಾನೇ' ಎಂಬ ಧಾತುವಿಗೆ 'ಹಲಶ್ಚ' ಎಂಬ ಸೂತ್ರದಿಂದ, 'ಘಞ್' ಪ್ರತ್ಯಯವು ಹತ್ತಿ 'ವೇದ' ಎಂಬ ಶಬ್ದವು ಸಿದ್ಧವಾಗುತ್ತದೆ. ಈ ವೇದವೆಂಬುದೇ 'ಶ್ರುತಿ' ಎಂದು ಹೇಳಲ್ಪಡುವುದು. 'ಶ್ರು-ಶ್ರವಣೆ' ಎಂಬ ಧಾತುವಿಗೆ 'ಕ್ತಿನ್' ಪ್ರತ್ಯಯವು ಹತ್ತಿ 'ಶ್ರುತಿ' ಎಂಬ ಶಬ್ದಸಿದ್ಧಿಯಾಗುತ್ತದೆ. ಸೃಷ್ಟಿಯಾರಂಭಮೊದಲಾಗಿ ಈ ಹೊತ್ತಿನವರೆಗೆ ಯಾವುದರ ಮೂಲ ವಾಗಿ ಶಾಂಭವಜ್ಞಾನವು ಬ್ರಹ್ಮಾದಿಗಳಿಂದ ಶ್ರವಣಮಾಡಲ್ಪಟ್ಟದೋ ಅದು 'ಶ್ರುತಿ' ಯೆನಿಸುವುದು.

ವೈದಿಕಸಾಹಿತ್ಯದಲ್ಲಿ 'ವೇದ' ಎಂಬುದೊಂದೇ ಶಬ್ದ ಪ್ರಯೋಗಿಸಲ್ಪಡದೆ 'ವೇದಸ್' ಎಂಬ ಶಬ್ದವೂ ನಿರ್ದೇಶಿಸಲ್ಪಟ್ಟಿದೆ. ಇವೆರಡರಲ್ಲಿ 'ವೇದ' ಎಂಬ ಶಬ್ದವು ಪುಲ್ಲಿಂಗಿಯು 'ವೇದಸ್' ಎಂಬ ಶಬ್ದವು ನಪುಂಸಕಲಿಂಗಿಯು, ಇವೆರಡೂ ಶಬ್ದಗಳು 'ವಿದ್' ಧಾತುವಿನಿಂದ ನಿಷ್ಪನ್ನಗಳಾಗಿವೆ. ವೇದದ ಬಹುಸ್ಥಾನಗಳಲ್ಲಿ ಸಾಮಾನ್ಯತಃ ಇವೆರಡೂ ಶಬ್ದಗಳ ಪ್ರಯೋಗ ಕಾಣಬರುವುದು. 'ವಿದ್' ತಿ. ಅರಿವು. (೨ ನೇ ಗಣ); ಮತ್ತು, 'ವಿದ್' ದೊರಕಿಸುವಿಕೆ (೬ ನೇ ಗಣ); ಎಂಬಿವೆರಡು ಬಗೆಯ ಧಾತುಗಳಿಗನುಸರಿಸಿರುವ ಅರ್ಥಗಳಲ್ಲಿ, ವೇದಶಬ್ದಾರ್ಥವು ಮೊಟ್ಟಮೊದಲು ಇದುವೇ ಅಭಿಮತವಾಗಿದ್ದಿತೆಂದು ನಿಶ್ಚ ಸಲು ಶಕ್ಯವಿಲ್ಲವಾದರೂ ವೇದದಲ್ಲಿಯೇ ಕೆಲವೆಡೆಯಲ್ಲಿ ವೇದಶಬ್ದದರ್ಥವು ಜ್ಞಾನವೆಂದೂ, ವೇದಾಧ್ಯಯನವೆಂದೂ, ಬ್ರಹ್ಮಯಜ್ಞವೆಂದೂ ಹಲವುತೆರನಾಗಿ ಹೇಳಲ್ಪಡುವಂತೆ 'ವೇದಸ್' ಶಬ್ದಾರ್ಥವಾದರೂ ಜ್ಞಾನವು ಅಥವಾ ಧನವು ಎಂದು ನಿರೂಪಿ ಲ್ಪಡುವುದು. ಇದರಿಂದ 'ವೇದ' ಮತ್ತು 'ವೇದಸ್' ಎಂಬ ಶಬ್ದಗಳಿಗೆ ನಿಶ್ಚಿತಾರ್ಥವೇ ಇಲ್ಲವೆಂದು ಭಾವಿಸಲಾಗದು. ಅವೆ ರಡೂ ಶಬ್ದಗಳ ಆ ಆ ಅರ್ಥಗಳು ಬೇರೆ ಬೇರೆ ವಾಕ್ಯಗಳಲ್ಲಿ ಸಂದರ್ಭಾನುಸಾರವಾಗಿ ಹೇಳಲ್ಪಟ್ಟರೂ ಒಟ್ಟಿನ ಮೇಲೆ ಬಹು ಸ್ಥಳಗಳಲ್ಲಿ ಜ್ಞಾನವೂ, ಧನವೂ ಎಂಬರ್ಥಗಳಲ್ಲಿಯೇ ಪರ್ಯವಸಾನಾಭಿಪ್ರಾಯವು ಸ್ಫುಟವಾಗಿ ಗೋಚರವಾಗುವುದರಿಂದೇ ವೇದಾ ರ್ಥಪ್ರಕಾಶಕರಾದ ಸ್ಕಂದಸ್ವಾಮಿ, ಯಾಸ್ಕ ಮೊದಲಾದವ ವೇದದ ಬೇರೆ ಬೇರೆ ವಾಕ್ಯಗಳಲ್ಲಿ [illegible] ಬರೆದಿದ್ದಾರೆ. ಮೇಲೆ ಹೇಳಿದ ಜ್ಞಾನವು ಅಥವಾ ಧನವು ಎಂಬ ಎರಡು ವಿಧವಾದ ಅರ್ಥಗಳಲ್ಲಿಯಾದರೋ ಜ್ಞಾನಾರ್ಥವನ್ನು ಧನಕ್ಕೂ, ಧನಾರ್ಥವನ್ನು ಜ್ಞಾನಕ್ಕೂ ರೂಪಕದಿಂದ ನಿರ್ದೇಶಿಸಲ್ಪಟ್ಟಿರುವುದೆಂದು ತಿಳಿಯಲು ಬಾಧಕವಿಲ್ಲವಾದುದರಿಂದ, ವೇದವೆಂದರೆ ಜ್ಞಾನವು, ಪವಿತ್ರಜ್ಞಾನವು; ಧರ್ಮಸಂಬಂಧಜ್ಞಾನವು: ಅರ್ಥಾತ್ ಶಾಂಭವಜ್ಞಾನರೂಪಧನವೆಲೋಕ (ಮೋಕ್ಷಕ) ವೇ.

ಇನ್ನು, 'ವೇದಸ್' ಶಬ್ದದ ಪ್ರಚಾರವಿಲ್ಲದೆ 'ವೇದ' ಎಂಬ ಶಬ್ದವೇ ಬಳಕೆಯಲ್ಲಿರಲು ಕಾರಣವೇನೆಂದರೆ, 'ವೇದಸ್' ಶಬ್ದಾರ್ಥವು ಮೊದಲು ಧನವೆಂದೂ ಬಳಿಕ ಜ್ಞಾನವೆಂದೂ ಅರಿಯಲ್ಪಟ್ಟುದಾಗಿ ಕೆಲವು ಕಾಲಾನಂತರದಲ್ಲಿ ವೇದಶಬ್ದದ ಅರ್ಥವು ಜ್ಞಾನವೆಂಬುದಾಗಿಯೇ ನಿಶ್ಚಿತವಾಗಿ ಸರ್ವತ್ರ ವಿಶೇಷತಃ ಪ್ರಚುರವಾದಕರುವಾಯ 'ವೇದಸ್' ಶಬ್ದೋಚ್ಚಾರವು ಹಿಂದುಳಿದು 'ವೇದ' ಎಂಬ ಹೆಸರೇ ಬಂದಿರಬಹುದೆಂದು ಬಲ್ಲವರ ಸೊಲ್ಲು.

ಶ್ರೀ ರೇಣುಕಮಹರ್ಷಿಯು (ಸಿ. ೫-೫)—

ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ ।
ವೇದಾನುಸರಣಾದೇಷಾಂ ಪ್ರಾಮಾಣ್ಯಮಿತಿನಿಶ್ಚಿತಮ್ ॥

ಎಲೈ ಅಗಸ್ತ್ಯಮುನಿಯೇ! ವೇದವು ಅಪೌರುಷೇಯವಾದುದರಿಂದ ಅದು ಸ್ವತಃಪ್ರಮಾಣವೆನಿಸುವುದು. ಮುಖ್ಯಪ್ರಮಾಣಭೂತವಾದ ಆ ವೇದವನ್ನು ಅನುಸರಿಸಿರುವ ಈ ಸಾಂಖ್ಯಾದಿ ಸಿದ್ಧಾಂತಗಳಾದರೂ ಪ್ರಮಾಣವಾದುವೆಂದು ಶಾಸ್ತ್ರಜ್ಞರ ನಿಶ್ಚಿತಾಭಿಪ್ರಾಯವು. ಎಂದುಪದೇಶಿಸುವ ಪೂರ್ವೋಕ್ತ ವೇದಪ್ರಾಮಾಣ್ಯ ಮುಖ್ಯತೆಯನ್ನು ಪುರಸ್ಕರಿಸಿದ್ದಾನೆ. ಅದುಕಾರಣವೇ ವೇದಕ್ಕೆ ಈಶ್ವರಪ್ರಣೀತತ್ವ (ಅಪೌರುಷೇಯತ್ವ) ವಿದೆಯೆಂದು ಭಾರತೀಯರ ಬಲವಾದ ಶ್ರದ್ಧೆಯುಂಟು. ಈ ತೆರವಾದ ಶ್ರದ್ಧೆಯು ಭಾರತೀಯರಲ್ಲಿ ವೃದ್ಧಿಪಡಲು ಬಹುತರವಾಗಿ ಋಷಿಗಳ 'ಮನ್ತ್ರದ್ರಷ್ಟಾರಃ' ಎಂಬ ವಿಶೇಷಣವನ್ನು ಹಚ್ಚುತ್ತಿಯವರ ಮುಖ್ಯಕಾರಣವಾಗಿದೆ.

ಮನ್ತ್ರದ್ರಷ್ಟಾರೋ ಹಿ ಋಷಯಃ । ಅಂದ ಋಷಿಗಳು ತಪಃಪ್ರಭಾವದಿಂದ ಈಶ್ವರನ ಕೃಪೆಗೆ ಪಾತ್ರರಾ ತನ್ಮೂಲಕ ಅನಾದಿಸಿದ್ಧಗಳಾದ ಮಂತ್ರಗಳನ್ನು ಸಾಕ್ಷಾತ್ಕಾ ಮಾಡಿಕೊಂಡರು, ಎಂಬರ್ಥವು.

ಬೇರೆಬೇರೆ ಕಾಲಗಳಲ್ಲಿ, ಬೇರೆಬೇರೆ ಋಷಿಗಳಿಂದ ಬೇ ಬೇರೆ ಸೂಕ್ತಗಳು ರಚಿಸಲ್ಪಟ್ಟಿರುವುವೆಂದು ಕೆಲಂಬರು ನು ವರಾದ್ದರಿಂದ ವೇದವು ಮನುಷ್ಯಕೃತವಲ್ಲ (ಅಪೌರುಷೇಯ ವೆಂದು ಹೇಳುವುದು ಹೇಗೆ? ಎಂದು ಶಂಕಿಸಲಾಗದು. ಅನಾ

[illegible] ಯುಯುಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ [illegible]
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪ

ಸಿದ್ಧವಾದ ಪರಾ ಅಪರಾರೂಪವೇದವಿದ್ಯೆ (ಶ್ರೌತವಿದ್ಯೆ) ನ್ನು ವಿಷ್ಣ್ವೀಶ್ವರರೂ, ಬ್ರಹ್ಮಾದಿದೇವತೆಗಳೂ, ಪರಮೇಶ್ವರ ದೇ ಪಡೆದರೆಂಬ ಅರ್ಥಬೋಧಕಗಳಾದ ವಾಕ್ಯಗಳನ್ನು ನಾವು ಆಗಮಪರಿಜ್ಞಾನ' ವೆಂಬ ಪುಟ್ಟೋಲೆಯಲ್ಲಿ ಗಟ್ಟಿಗೊಳಿಸಿರುವೆ ವೆ! ಮತ್ತು, ಶ್ವೇತಾಶ್ವತರೋಪನಿಷತ್ತಿನಲ್ಲಿ (ಅ. ೬- ೧೮)—

ಬ್ರಹ್ಮಾಣಂ ವಿದಧಾತಿ ಪೂರ್ವಂ ।
ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ॥

ಎಂದಿರುವ ವಚನಾರ್ಥವನ್ನು ವ್ಯಾಸಮುನಿಯು ಸೂತಸಂಹಿತೆ ಲ್ಲಿ (ಸ. ೧).

ಹ್ಮಾಣಂ, ಮುನಯಃ! ಪೂರ್ವಂ ಸೃಷ್ಟ್ವಾ ತಸ್ಮೈ ಮಹೇಶ್ವರಃ ।
ತ್ತವಾನಖಿಲಾನ್ ವೇದಾನಾತ್ಮನ್ಯೇವಸ್ಥಿತಾನಿಮಾನ್ ॥

ಎಂಬುದಾಗಿ ನಿರೂಪಿಸಿದ್ದಾನೆ. ಇದರ ಭಾವವನ್ನು ವ್ಯಾಖ್ಯಾ ರನಾದ ಮಾಧವಾಚಾರ್ಯನು—

ಸ್ವಯಮೇವ ಲೀಲಯಾ ಸಕಲ ವೇದಗ್ರಹಣ ಮರ್ಥಂ ಬ್ರಹ್ಮಾಣಂ ನಿರ್ಮಾಯ ಸ್ವಾತ್ಮನಿ ತ್ಯಮವಸ್ಥಿತಾ ಏವ ವೇದಾಸ್ತಸ್ಮೈದತ್ತಾಃ । ನ ನಿತ್ಯಸಿದ್ಧವೇದಸಮರ್ಪಣೇ ಶಿವಸ್ಯೋಪಾ ಧ್ಯಾಯತುಲ್ಯತಾ । ಉಪಾಧ್ಯಾಯೋ ಹಿ ಸ್ವಯ ನ್ಯತೋಲಬ್ಧ್ವಾ ಶಿಷ್ಯಾನಧ್ಯಾಪಯತಿ। ಶಿವಸ್ತು ವಮನ್ಯತೋಽಧೀತೆ, ಸ್ವಾತ್ಮನಿ ನಿತ್ಯಮವಸ್ಥಿತಾ ನೇವ ತೇಷಾಂ ಬ್ರಹ್ಮದ್ವಾರಾ ಸಂಪ್ರದಾಯಂ ವರ್ತಯತಿ ॥

ಅಂದರೆ, ಮಹೇಶ್ವರನು ತಾನೇ ಲೀಲೆಯಿಂದ ಸಕಲ ವೇದಗ ನ್ನು ಗ್ರಹಿಸಲು ಶಕ್ತನಾದ ಬ್ರಹ್ಮನನ್ನು ಹುಟ್ಟಿಸಿ ತನ್ನಲ್ಲಿ ನಿತ್ಯ ರನ್ನೇದಗಳನ್ನು ಅವನಿಗೆ ಕರುಣಿಸಿದನು. ಹೀಗೆ ವೇದ ಸಾರ್ವಭೌಮರನ್ನು [illegible] ಉಪಾಧ್ಯಾಯ (ಶಿಕ್ಷಕ)ನ ನವು. ಈ ಗ್ರಂಥವು [illegible] ಯನು ತಾನು ಅನ್ಯರಿಂದ [illegible] ರರಿಂದ ಬೋಧಿಸಲ್ಪಟ್ಟವನಲ್ಲವಾದುದರಿಂದ ತನ್ನಲ್ಲಿ ಯಾರಾ ಲೂ ಸ್ವತಃ ಸಿದ್ಧಗಳಾದ ವೇದಗಳ ಸಂಪ್ರದಾಯವನ್ನು ಜಗತ್ತಿ ಲ್ಲಿ ಬ್ರಹ್ಮನ ಮುಖದಿಂದ ಪ್ರಚುರಗೊಳಿಸಿದ್ದಾನೆ, ಎಂಬುಲ್ಲೇಖಿ ರುವನು. ಸಿದ್ಧಾಂತಶಿಖಾಮಣಿಕಾರನಾದರೂ ಇದೇ ಅಭಿಪ್ರಾ ಯವನ್ನು ಸೂಚಿಸಿದ್ದಾನೆ (೨-೧೫). ವೇದಪ್ರವರ್ತಕರು ಅನೇಕ ರುವರಾದ್ದರಿಂದ ಅವರವರ ಸಂಪ್ರದಾಯವಾದರೂ ಬೇರೆಬೇರೆ ಆಗಿ ಹಬ್ಬಿದೆ. ಉದಾಹರಣಾರ್ಥವಾಗಿ—

ಹ್ಮಣಃ ಸಕಲಾನ್ ವೇದಾನ್ ವಸಿಷ್ಠಃಪ್ರಾಪ್ತವಾನೃಷಿಃ ।
ಚ್ಛಕ್ತಿಸ್ತತೋ ಧೀಮಾನ್ ಪರಾಶರಮಹಾಮುನಿಃ ॥
ರಾಶರಾನ್ಮಹಾಬುದ್ಧಿರ್ವೇದವ್ಯಾಸಮಹಾಮುನಿಃ ।

ಬ್ರಹ್ಮನಿಂದ ವಸಿಷ್ಠನು ಸಕಲ ವೇದಗಳನ್ನು ಪಡೆದನು, ಆ ಸಿಷ್ಠನಿಂದ ಶಕ್ತಿಮುನಿಯೂ, ಶಕ್ತಿಯಿಂದ ಬುದ್ಧಿಶಾಲಿಯಾದ ರಾಶರನೂ, ಪರಾಶರನಿಂದ ವ್ಯಾಸನೂ ಹೀಗೆ ಮಂತ್ರದ್ರಷ್ಟರ ಸಂಪ್ರದಾಯವಿರುವುದು. ಅದ್ದರಿಂದ, ಮಂತ್ರದ್ರಷ್ಟರೆಂದರೆ ಮನ್ತ್ರ ಕರ್ತರೆಂದರ್ಥವಲ್ಲ, ಆ ಬಗ್ಗೆ ಪ್ರಮಾಣವೂ ಇಲ್ಲ. ಇನ್ನು, **ಮಂತ್ರಕೃತಾಂಸ್ತೋನ್ಮೈಃ'** (ಋ. ೯-೧೧೪-೨). **ಮಂತ್ರಕೃತಾಮೃಷೀಣಾಮ್'** (ರಘುವಂಶ. ೫-೪) ಮ್ಯಾದಿಪ್ರಯೋಗಗಳಿರುವುದು ಕಂಡುಬರಬಹುದಾದರೂ **'ದಕ್ಷಿ ಣತಃ, ಉದಙ್ಮುಖೋ ಮಂತ್ರಕಾರಃ'** । ಎಂದು ನವಗೃಹ್ಯಸೂತ್ರದಲ್ಲಿ (೧-೮-೨) ಮಂತ್ರಕಾರನು ದಕ್ಷಿಣದಿಕ್ಕಿ ಉತ್ತರಾಭಿಮುಖನಾಗಿ ಕುಳಿತುಕೊಳ್ಳಬೇಕು, ಎಂದು ಹೇಳಲ್ಪಡುವಾಗ ಮಂತ್ರಕಾರಶಬ್ದವು ಮಂತ್ರಗಳನ್ನು ರಚಿಸು ವನು ಎಂಬರ್ಥವನ್ನು ಬೋಧಿಸುವುದಿಲ್ಲ. 'ಕಾರ' ಎಂಬುದು ಕ್ಯದಲ್ಲುಳ್ಳ ಅನೇಕ ಶಬ್ದಗಳು ವ್ಯವಹಾರದಲ್ಲಿಯೂ ಇರುತ್ತವೆ. ವರ್ಣಕಾರಃ, ಲೋಹಕಾರಃ ಇತ್ಯಾದಿ ಶಬ್ದಗಳಿಂದ ಸುವರ್ಣ, ಲೋಹಾದಿಗಳನ್ನು ತೆಗೆದುಕೊಂಡು ಅವುಗಳನ್ನು ರೂಪಾಂತರ ಗೊಳಿಸಿಕೊಡತಕ್ಕವರೆಂದು ಹೇಳಲ್ಪಡುತ್ತಾರೆ. ಅವರು ಸುವರ್ಣಾ ದ್ಯರ್ಥಗಳನ್ನು ಮಾಡುವುದಿಲ್ಲ. ವಿದ್ಯಮಾನವಾದ ಆ ಸುವ ರ್ಣಾದಿಗಳ ರೂಪವನ್ನು ಪರಿವರ್ತನೆಗೊಳಿಸಿಕೊಡುತ್ತಾರೆ.

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಬ್ರಹ್ಮಚರ್ಯ.

ಲೇಖಕ: (ಶ್ರೀಕ್ಷೇತ್ರಕಾಶಿ ಜಗದ್ಗುರು ವಿಶ್ವಾರಾಧ್ಯ ಗುರುಕುಲ ನಿವಾಸಿ ಸಿದ್ಧಲಿಂಗಕುಮಾರ, ಬಂಕಾಪುರ.)

ಸದ್ಯದಲ್ಲಿ ಎಲ್ಲ ಕಡೆಗೂ ಅಕಾಂತಿ, ರೋಗ, ಶೋಕ, ಬಲಹೀನತಾ, ಅಕಾಲಮೃತ್ಯು, ದರಿದ್ರತಾ, ಚಿಂತಾ, ಈರ್ಷ್ಯಾ, ದ್ವೇಷಾ, ಹಿಂಸಾ, ಅಸತ್ಯ ಇತ್ಯಾದಿ ದೋಷಗಳು ಕಾಣಿಸಲಿಕ್ಕೆ ಹತ್ತಿರುತ್ತವೆ. ದೊಡ್ಡ ದೊಡ್ಡ ಶಾಸ್ತ್ರಜ್ಞರೂ, ವಿದ್ಯಾರ್ಥಿಗಳೂ, ಧನವಂತರೂ ಕೂಡಾ ಈ ದೋಷದಲ್ಲಿ ಮುಳುಗಿ ಚಿಂತಾಕ್ರಾಂತರಾಗುತ್ತಲಿದ್ದಾರೆ ಇದರ ಮುಖ್ಯ ಕಾರಣವೇನಿರಬಹುದೆಂಬುದನ್ನು ಅಲೋಚನೆಮಾಡುವಲ್ಲಿ ಬ್ರಹ್ಮಚರ್ಯವ್ರತಾಭಾವವೇ ಮುಖ್ಯಕಾರಣವೆಂದು ತೋರುತ್ತದೆ. ನಾಲ್ಕು ಆಶ್ರಮಗಳಿಗೆ ತಳಹದಿಯಾಗಿರತಕ್ಕ ಈ ಬ್ರಹ್ಮಚರ್ಯಾಶ್ರಮವನ್ನು ಸಂಪಾದಿಸಿಕೊಳ್ಳದಿದ್ದರೆ ಈ ನಾಲ್ಕು ಅಂತಸ್ತಿನ ದೊಡ್ಡ ಇಮಾರತಿಯು ಅಕಾಲದಲ್ಲಿ ದುಸ್ಥಿತಿಯನ್ನು ಹೊಂದುತ್ತದೆಂಬುವಲ್ಲಿ ಸಂಶಯವಿಲ್ಲ. ನಮ್ಮ ಪೂರ್ವಿಕರು ನೂರು ವರ್ಷ ಸಂಪೂರ್ಣವಾಗಿ ಬದುಕುತ್ತಿದ್ದರು. ಇದರ ಕಾರಣವೇನು? ಬಾಲ್ಯದಿಂದ 25 ವಯಸ್ಸಿನವರೆಗೆ ಬ್ರಹ್ಮಚರ್ಯವನ್ನು 25 ರಿಂದ 50 ವಯಸ್ಸಿನವರೆಗೆ ಗೃಹಸ್ಥಾಶ್ರಮವನ್ನೂ 50 ರಿಂದ 75 ರವರೆಗೆ ವಾನಪ್ರಸ್ಥಾಶ್ರಮವನ್ನೂ 75 ರಿಂದ 100 ವಯಸ್ಸಿನವರೆಗೆ ಸನ್ಯಾಸಾಶ್ರಮವನ್ನೂ ಹೊಂದುತ್ತ ಅನಂತರ ಮೃತ್ಯುವಿಗೆ ಈಡಾಗುತ್ತಿದ್ದರು. ಇದಕ್ಕೆ ಯಾರದಾದರೂ ಪ್ರಶ್ನೆ ವಿರಬಹುದು. 100 ವರ್ಷದೊಳಗಾಗಿ ಮೃತ್ಯುವನ್ನು ಹೊಂದತಕ್ಕವರು ಎಷ್ಟೋ ಜನರು ಇರುತ್ತಾರೆ ಅರ್ಥಾತ್ ಇದರ ಅಭಿಪ್ರಾಯವು ಹೀಗೆ ಇರುವುದಿಲ್ಲ. ಯಾವ ಪುರುಷನು ಕಾಯವಾಕ್ ಮನಸ್ಸಿನಿಂದ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತಾನೋ ಆ ಪುರುಷನು 100 ವರ್ಷಪರ್ಯಂತರವಾಗಿ ಬಾಳುತ್ತಾನೆಂದು ನಿಸ್ಸಂಶಯವಾಗಿ ಹೇಳಬಹುದು. ಈಗಿನವರು ಚತುರಾಶ್ರಮ ಪರಿಪಾಲನೆಯಲ್ಲಿ ಜಾಗರೂಕರಾಗಿಲ್ಲ. "ಬ್ರಹ್ಮಚರ್ಯೇಣ ತಪಸಾ ದೇವಾ ಮೃತ್ಯುಮುಪಾಘ್ನತ" ದೇವತೆಗಳು ತಮ್ಮ ಬ್ರಹ್ಮಚರ್ಯರೂಪವಾದ ತಪಸ್ಸಿನಿಂದ ಮೃತ್ಯುವನ್ನು ಜಯಿಸಿರುವರು. ಮತ್ತು ಭೀಷ್ಮಪಿತಾಮಹನು ಇಚ್ಛಾಮರಣಶಾಲಿಯೆಂದು ಎಲ್ಲರೂ ಚರಿತ್ರದಲ್ಲಿ ಓದುವಂತೆ; ಮತ್ತು ಹನುಮಾನ್ ಲಕ್ಷ್ಮಣ ಇತ್ಯಾದಿ ಮಹಾಪುರುಷರು ತಮ್ಮ ಬ್ರಹ್ಮಚರ್ಯಬಲದಿಂದ ಯಾವ ಯಾವ ಕಾರ್ಯಗಳನ್ನು ಮಾಡಿದರೆಂಬುದು ಸುಶ್ರು [illegible] ಮತ್ತು ಇತ್ತೀಚೆಗೆ ಸ್ವಾಮಿ ವಿವೇಕಾನಂದರನ್ನು ಎಲ್ಲರೂ ಬಲ್ಲರು, ಬ್ರಹ್ಮಚರ್ಯವಂದರಿಂದಲೇ ಇವರೆಲ್ಲರೂ ಇಷ್ಟು ಪ್ರಖ್ಯಾತಿಪಡೆದರು. ಪ್ರತ್ಯಕ್ಷಸ್ಥಿತಿಯಲ್ಲಿ ನಮ್ಮ ಭರತಖಂಡದಲ್ಲಿರತಕ್ಕ ವಿದ್ಯಾರ್ಥಿಗಳಲ್ಲಿ ಇಂತಹ ಉತ್ತಮವಾದ ಬ್ರಹ್ಮಚರ್ಯವ್ರತವು ಬಹುಮಟ್ಟಿಗೆ ಕಡಿಮೆಯಾಗುತ್ತ ಬಂದಿದೆ. ಅಧ್ಯಯನಕ್ಕೆ ಮೂಲಸ್ವರೂಪವಾಗಿರತಕ್ಕ ಈ ಬ್ರಹ್ಮಚರ್ಯವನ್ನು ಯಾರು ಕಾಪಾಡಿಕೊಳ್ಳುವದಿಲ್ಲವೋ ಅವನು ವಿದ್ಯೆಯಲ್ಲಿ ಉಚ್ಚತರಗತಿಯನ್ನು ಎಂದೂ ಹೊಂದಲಾರನೆಂದು ನಿರ್ಭಯದಿಂದ ಹೇಳಬಹುದು. ಅನೇಕ ವಿದ್ಯಾರ್ಥಿಗಳಲ್ಲಿ ನಾನಾ ಪ್ರಕಾರವಾದ ಸಹವಾಸದೋಷದಿಂದ ಬ್ರಹ್ಮಚರ್ಯಘಾತುಕವಾದ ದುಷ್ಟಚಟಗಳು ತಲೆದೋರುತ್ತ ಬಂದಿವೆ. ಇಂತಹ ಕುಕರ್ಮಗಳಿಂದ ಒಳ್ಳೇ ಬಾಳೆದಿಂಡಿನಂತೆ ಕೋಮಲವಾದ ಶರೀರವು ಘೋರವಾದ ಅಪಾಯಕ್ಕೀಡಾಗುತ್ತಾ ಬಂದಿತು. ಹೀಗೆ ಬ್ರಹ್ಮಚರ್ಯವನ್ನು ಹಾಳುಮಾಡಿಕೊಳ್ಳುವುದರಿಂದ ಶೀಘ್ರವಾಗಿ ಮೃತ್ಯುಮಾತೆಯು ಬಾಯಿಗೆ ಸಿಕ್ಕು ಸೇರಬೇಕಾಗಿದೆ. ಚಿಕ್ಕ ವಯಸ್ಸಿನಲ್ಲಿ ವೀರ್ಯನಷ್ಟವಾಗುವದರಿಂದ ಶರೀರದಲ್ಲಿ ಅನೇಕಪ್ರಕಾರವಾದ ರೋಗಗಳು ತಲೆಹಾಕುವವು. ರಕ್ತನಾಡಿಯ ಗಮನವು ಮಂದವಾಗುತ್ತದೆ. ಮುಖವು ಕಳೆಗುಂದುತ್ತದೆ. ಯಾವ ಕೆಲಸಕ್ಕೂ ಇಚ್ಛೆಯಾಗುವದಿಲ್ಲ. ಊಟವನ್ನು ಮಾಡಿದ್ದು ಪರಿಪಾಕವಾಗದೇ ಇರೋಣ ಮಲಮೂತ್ರಗಳು ವೇಳ್ಯಕ್ಕೆ ಸರಿಯಾಗಿ ಬರದೇ ಇರೋಣ ಯಾವ ಪದಾರ್ಥವನ್ನು ಭುಂಜಿಸಿದರೂ ರುಚಿಯಾಗದೇ ಇರೋಣ ಮುಂತಾದ ದುಷ್ಟ ಚಿಹ್ನಗಳುಂಟಾಗುತ್ತವೆ. ನವಯುವಕರಲ್ಲನೇಕರು ಇಂತಹ ದುರಾಚಾರದಿಂದಿರುವದರಿಂದಲೇ ನಮ್ಮ ರಾಷ್ಟ್ರವು ರೋಗಗಳ ತವರುಮನೆಯಾಗಿರುತ್ತದೆ. "ಮರಣಂ ಬಿಂದುಪಾತೇನ ಜೀವನಂ ಬಿಂದುಧಾರಣಾತ್" ಅರ್ಥಾತ್ ಶರೀರದಿಂದ ಒಂದು ಹನಿವೀರ್ಯವು ಸ್ಖಲನವಾದರೂ ಅದು ಮರಣಸ್ವರೂಪವಾಗುತ್ತದೆ. ಅದೇ ವೀರ್ಯದ ಒಂದು ಬಿಂದುಧಾರಣವು ಜೀವನಸ್ವರೂಪವಾಗುತ್ತದೆ. ಶರೀರದಲ್ಲಿ ಎರಡು ಪ್ರಕಾರವಾದ ರಕ್ತಗಳಿರುತ್ತವೆ ಒಂದು ಮಾಮೂಲಿರಕ್ತ ಮತ್ತೊಂದು ಬಿಳೇರಕ್ತ (ವೀರ್ಯ) ಯಾವ ಕಾರಣದಿಂದಾದರೂ ಒಂದು ಹನಿ ರಕ್ತವು ಹೊರಗೆ ಸೋರಿದರೂ ಅಷ್ಟರಿಂದಲೇ ಎಷ್ಟೋ ಚಿಂತೆಯಲ್ಲಿ ಮುಳುಗುತ್ತಾರೆ. ಹೀಗಿದ್ದರೂ ದುಷ್ಟಚಟಗಳಿಂದ ಅಲ್ಪಸುಖಕ್ಕಾಗಿ ಶರೀರಕ್ಕೆ ರಾಜಸ್ವರೂಪವಾದ ಅತ್ಯಧಿಕವಾದ ಬ್ರಹ್ಮತೇಜಸ್ಸನ್ನುಂಟುಮಾಡತಕ್ಕ ವೀರ್ಯರತ್ನವನ್ನು ನಾಶಮಾಡಿಕೊಳ್ಳುವದು ಎಷ್ಟು ಮೂಢತನವು?

ಯಥಾ ಪಯಸಿ ಸರ್ಪಿಸ್ತು ಗುಡಶ್ಚೇಕ್ಷುರಸೇ ಯಥಾ ।
ಏವಂ ಹಿ ಸಕಲೇ ಕಾಯೇ ಶುಕ್ರಂ ತಿಷ್ಠತಿ ದೇಹಿನಾಂ ॥

ಹಾಲಿನಲ್ಲಿ ತುಪ್ಪವಿರುವಂತೆಯೂ, ಕಬ್ಬಿನಲ್ಲಿ ಬೆಲ್ಲವಿರುವಂತೆಯೂ, ವೀರ್ಯವಾದರೂ ಶರೀರದಲ್ಲಿ ವ್ಯಾಪಿಸಿರುತ್ತದೆ. ಅದ್ದರಿಂದ ಹಾಲಿನಿಂದ ಬೆಣ್ಣೆಯನ್ನು ತೆಗೆಯಬೇಕಾದರೆ ಮಥನಮಾಡಬೇಕಾಗುವಂತೆಯೂ ಕಬ್ಬಿನಲ್ಲಿ ಬೆಲ್ಲವನ್ನು ಮಾಡಬೇಕಾದರೆ ಗಾಣದಲ್ಲಿ ಹಾಕಿ ಹಿಂಡುವಂತೆಯೂ ಒಂದು ಬಿಂದುವೀರ್ಯವನ್ನುಂಟುಮಾಡಲು ಇಡೀ ಶರೀರವನ್ನು ಮಥನಮಾಡಬೇಕಾಗುತ್ತದೆ. ಬೆಣ್ಣೆಯನ್ನು ತೆಗೆದನಂತರ ಹಾಲು ಯಾವ ಪ್ರಕಾರವಾಗಿ ನಿಸ್ತೇಜವೋ ಹಾಲು ಹಿಂಡಿದನಂತರ ಕಬ್ಬು ಯಾವ ಪ್ರಕಾರ ಅಸಾರವಾಗಿ ಪುಡಿಪುಡಿಯಾಗುವದೋ ಅದೇ ಪ್ರಕಾರವಾಗಿ ಶರೀರದಿಂದ ವೀರ್ಯವನ್ನು ಹಿಂಡಿದರೆ ಶರೀರವು ಚಪ್ಪಟೆಯಾಗಿಯೂ, ಪುಡಿಪುಡಿಯಾಗಿಯೂ, ನಿಸ್ತೇಜವಾಗಿಯೂ ಆಗುವದು. ನಾಡಿಗಳು ಸಡಿಲಹೋಗುವವು. ಅಲಸ್ಯ ಪ್ರಾಪ್ತವಾಗುವದು, ಚಾಂಚಲ್ಯ, ಓದುವಲಕ್ಕೆ ಮನಸ್ಸು ಆಗದೇ ಇರೋಣ, ಯಾವ ಕೆಲಸಕ್ಕೂ ಇಚ್ಛೆಯಾಗದೇ ಇರೋಣ ಇತ್ಯಾದಿ ಹೀನಸ್ವಭಾವಗಳುಂಟಾಗುತ್ತವೆ.

ಇವತ್ತು ನಾವು ಊಟಮಾಡಿದ ಪದಾರ್ಥದಿಂದ 30 ದಿವಸಕ್ಕೆ ವೀರ್ಯವು ಪರಿಪಾಕವಾಗುತ್ತದೆ. 40 ಸೇರು ಅನ್ನದಿಂದ 1 ಸೇರು ರಕ್ತವುಂಟಾಗುತ್ತದೆ. 1 ಸೇರು ರಕ್ತದಿಂದ 2 ತೊಲಾ ವೀರ್ಯವುಂಟಾಗುತ್ತದೆ. ದಿವಸಕ್ಕೆ 1 ಪಕ್ಕಾಸೇರು ಅನ್ನವನ್ನು ಉಣ್ಣುವವನಿಗೆ 40 ದಿವಸಕ್ಕೆ 2 ತೊಲಾ ವೀರ್ಯವುಂಟಾಗುತ್ತದೆ. ಇಂಥ ಅಮೂಲ್ಯವಾದ ವೀರ್ಯವನ್ನು ಮುಷ್ಟಿಮೈಥುನಾದಿ ಹೀನಕಾರ್ಯಗಳಿಂದ ಕಳೆದುಕೊಳ್ಳುವವರು ಎಷ್ಟೋ ಜನರುಂಟು. ಇದರಿಂದ ಶರೀರಕ್ಕೆ ಯಾವದುಸ್ಥಿಯುಂಟಾಗುತ್ತೆಂದು ವಾಚಕರೇ ಊಹಿಸತಕ್ಕದ್ದು. ಅದರೆ ಇದರಿಂದ ಗೃಹಸ್ಥಾಶ್ರಮವನ್ನೇ ವಹಿಸಕೂಡದೆಂದು ಅರ್ಥಮಾಡಲಾಗದು. ಇದರ ಮುಖ್ಯತಾತ್ಪರ್ಯವೇ ಬೇರೆಯಾಗಿರುವದು. ಈ ವಿಷಯದಲ್ಲಿ ರಾ|| ರಾ|| ವೆಂಕಟೇಶ ಶ್ರೀನಿವಾಸ ಮಿರಜ ಇವರು ತಮ್ಮ ಅನುವಾದ ಬ್ರಹ್ಮಚರ್ಯ ಪುಸ್ತಕದಲ್ಲಿ ಸಾಕ್ರೆಟೀಸನಿಗೂ ಅವನ ಶಿಷ್ಯನಿಗೂ ಆಗಿರತಕ್ಕ ಸಂವಾದಗಳನ್ನು ಈ ಪ್ರಕಾರ ಬರೆದಿರುತ್ತಾರೆ. ಗುರುಗಳಿಗೆ ಶಿಷ್ಯನು ಪ್ರಶ್ನೆಯನ್ನು ಮಾಡುತ್ತಾನೆ. ಶಿಷ್ಯ—ಗುರುಗಳೇ! ಗೃಹಸ್ಥಾಶ್ರಮಿಗಳು ಸ್ತ್ರೀಭೋಗವನ್ನು ಎಷ್ಟುಸಾರೆ ಮಾಡಬೇಕು? ಗುರು—ಆಯುಷ್ಯದಲ್ಲಿ ಒಂದುಸಾರೆ. ಶಿಷ್ಯ—ಇದರಿಂದ ತೃಪ್ತಿಯಾಗದಿದ್ದರೆ? ಗುರು—ವರ್ಷದಲ್ಲಿ ಒಂದುಸಾರೆ. ಶಿಷ್ಯ—ಇದರಿಂದಲೂ ತೃಪ್ತಿಯಾಗದಿದ್ದರೆ? ಗುರು—ತಿಂಗಳಲ್ಲಿ ಒಂದು ಸಾರೆ. ಶಿಷ್ಯ—ಇದರಿಂದಲೂ ತೃಪ್ತಿಯಾಗದಿದ್ದರೆ? ಗುರು—ಕಡೆಗೆ ತಿಂಗಳಲ್ಲಿ ೨ ಸಾರೆ ಮಾಡಿದರೆ ಮೃತ್ಯುವು ತೀವ್ರವೇ ಬರುವದು. ಶಿಷ್ಯ—ಇದರಿಂದಲೂ ತೃಪ್ತಿಯಾಗದಿದ್ದರೆ? ಗುರು—ಮೊದಲು ಸಿದಿಗೆಯನ್ನು ಕಟ್ಟಿಟ್ಟು ಅನಂತರ ಇಚ್ಛೆಬಂದಹಾಗೆ ಮಾಡಬಹುದೆಂದು ಹೇಳಿರುತ್ತಾರೆ. ನೋಡಿರಿ, ತಿಂಗಳಲ್ಲಿ ಎಷ್ಟೋ ಸಾರೆ ಸ್ತ್ರೀಸೌಖ್ಯವನ್ನು ಹೊಂದುವರುಂಟು. ತಮ್ಮ ಪ್ರಕೃತಿಯನ್ನು ಕ್ಷೀಣವಮಾಡಿಕೊಳ್ಳುವದಲ್ಲದೆ, ಅವರಿಂದ ಜನಿಸಿದಕ್ಕೆ ಪುತ್ರಪೌತ್ರಾದಿಸಂತತಿಯೇ ಅಶಕ್ತವಾಗಿಹೋಗುತ್ತದೆ. ಇದರಿಂದ [illegible] ಮರಣಕ್ಕೀಡಾಗುತ್ತಾರೆ. ವೀರ್ಯಧಾರಣೆಯನ್ನು ಮಾಡಿಕೊಂಡಿರತಕ್ಕ ಪುರುಷನನ್ನು ನೋಡಿರಿ, ಎಷ್ಟು ತೇಜಸ್ವಿಯಾಗಿಯೂ, ಬಲಶಾಲಿಯಾಗಿಯೂ, ಕಾರ್ಯಪ್ರವೀಣನಾಗಿಯೂ, ವೃದ್ಧಾವಸ್ಥೆಯಲ್ಲಿಯೂ ಕೂಡಾ ತರುಣನಂತೆ ಕಾಣಿಸುತ್ತಾನೆ. ಈಗಿನ ತರುಣರನ್ನು ನೋಡಿದರೆ, ಮುಪ್ಪಿನವರಿಗಿಂತಲೂ ಮುಪ್ಪಿನವರಾಗಿರುತ್ತಾರೆ. ಗಲ್ಲಗಳೂ ಕಣ್ಣುಗಳೂ ಒಳಗೆ ಸೇರಿರುತ್ತವೆ. ವಿಶೇಷ ಮಾತನಾಡುವದಕ್ಕೂ ಕೂಡಾ ಅಶಕ್ತರಾಗಿರುತ್ತಾರೆ. 25 ವರ್ಷದೊಳಗಾಗಿಯೇ ವೃದ್ಧಾವಸ್ಥೆಯನ್ನು ಹೊಂದಿ ಮುಪ್ಪಿನವರು ಬಡಿಗೆಯನ್ನು ಹಿಡಿದುಕೊಂಡಂತೆ ಇವರಾದರೂ ವಾಕಿಂಗ್‌ಸ್ಟಿಕ್ ಎಂದು ಹೆಸರಿಟ್ಟು ಅದನ್ನು ಹಿಡಿದುಕೊಂಡು ತಿರುಗಾಡುತ್ತಿರುವ ನನ್ನ ಮಿತ್ರಗೃಹಸ್ಥಾಶ್ರಮಿಗಳೇ ಇತ್ತಕಡೆ ಗಮನವನ್ನು ಕೊಡಿರಿ.

ಸ್ಮರಣಂ ಕೀರ್ತನಂ ಕೇಲಿಃ ಪ್ರೇಕ್ಷಣಂ ಗುಹ್ಯಭಾಷಣಂ ।
ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾನಿಷ್ಪತ್ತಿರೇವಚ ॥
ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ ।
ವಿಪರೀತಂ ಬ್ರಹ್ಮಚರ್ಯ ಮನುಷ್ಠೇಯಂ ಮುಮುಕ್ಷುಭಿಃ ॥

ಅರ್ಥಾತ್—ಸ್ಮರಣ ಅಂದರೆ ಮನಸ್ಸಿನಲ್ಲಿ ಸ್ತ್ರೀಯರ ಸ್ಮರಣೆ ಮಾಡೋಣ, ಕೀರ್ತನ ಅಂದರೆ ಅವರ ಗುಣವರ್ಣನೆಯನ್ನು ಮಾಡೋಣ, ಕೇಲಿ ಅಂದರೆ ಅವರ ಕೂಡ ಆಟವನ್ನಾಡುವದು, ಪ್ರೇಕ್ಷಣ ಅಂದರೆ ಸ್ತ್ರೀಯರನ್ನು ದುಷ್ಟಭಾವನೆಯಿಂದ ನೋಡುವದು ಗುಹ್ಯಭಾಷಣ ಅಂದರೆ ಅವರ ಕೂಡ ಏಕಾಂತ ಮಾತುಗಳನ್ನಾಡುವದು, ಸಂಕಲ್ಪ ಅಂದರೆ ಸ್ತ್ರೀಪ್ರಾಪ್ತಿಯ ಸಲುವಾಗಿ ಮನಸ್ಸಿನಲ್ಲಿ ನಾನಾತರದ ಸಂಕಲ್ಪವನ್ನು ಮಾಡುವದು, ಅಧ್ಯವಸಾಯ ಅಂದರೆ ಅವರನ್ನು ಹೊಂದುವದರ ಸಲುವಾಗಿ ಪ್ರಯತ್ನವನ್ನು ಮಾಡುವದು, ಕ್ರಿಯಾನಿಷ್ಪತ್ತಿ ಅಂದರೆ ಸಾಕ್ಷಾತ್ ಮೈಥುನವನ್ನು ಇಚ್ಛಿಸುವದು. ಈ ಯಾವ ೮ ಪ್ರಕಾರವಾದ ಮೈಥುನಗಳನ್ನು ಬ್ರಹ್ಮಚಾರಿಗಳು, ಮೋಕ್ಷಾಪೇಕ್ಷೆಯುಳ್ಳವರು ತ್ಯಜಿಸಬೇಕಾಗುತ್ತದೆ. ಹಾಗೆ ದೂರೀಕರಿಸದೆ ಇದ್ದಪಕ್ಷದಲ್ಲಿ,

ಆಯುಸ್ತೇಜೋ ಬಲಂ ವೀರ್ಯಂ ಪ್ರಜ್ಞಾ ಶ್ರೀಶ್ಚ ಮಹದ್ಯಶಃ ।
ಪುಣ್ಯಂ ತಥಾ ಪ್ರೀತಿಮತ್ತ್ವಂ ಹನ್ಯತೇಽಬ್ರಹ್ಮಚರ್ಯಯಾ ॥

ಎಂತು ಬ್ರಹ್ಮಚರ್ಯವ್ರತವನ್ನು ಧಾರಣಮಾಡದೇ ಇದ್ದರೆ ಆಯುಷ್ಯ, ಶಕ್ತಿ, ವೀರ್ಯ, ಬುದ್ಧಿ, ಲಕ್ಷ್ಮಿ, ಪುಣ್ಯಫಲ ಮತ್ತು ತೇಜ ಕೀರ್ತಿ ಪುಣ್ಯ ಇವೆಲ್ಲವುಗಳೂ ನಾಶವಾಗುತ್ತವೆ. ಅದ್ದರಿಂದ ವಾಚಕಮಹಾಶಯರೇ ಸರ್ವ ಪುರುಷಾರ್ಥಗಳಿಗೂ ಮೂಲಾಧಾರವಾದ ಪವಿತ್ರವಾದ ಬ್ರಹ್ಮಚರ್ಯ ಪರಿಪಾಲನೆಯಲ್ಲಿ ಅದಕ್ಕು ಜಾಗರೂಕರಾಗಿದ್ದರೆ ಬೇಗನೆ ನಿಮ್ಮ ಇಷ್ಟಾರ್ಥಗಳು ಕೈಗೂಡುವುದಲ್ಲದೆ ಬಲಶಾಲಿಯಾಗಿಯೂ, ಯಶಸ್ವಿಗಳಾಗಿಯೂ ಆಗಿ ದೀರ್ಘಕಾಲ ಬದುಕುವಿರೆಂದು ಪ್ರಾರ್ಥಿಸುತ್ತೇನೆ.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಮೇ ತಾ|| ೧೫ ನೇ ಸೋಮವಾರ.

ಲೌಕಿಕಧಾರ್ಮಿಕಾಚರಣೆ.

ಪರಮಾಸ್ತಿಕ್ಯಾಧಾರದಲ್ಲಿ ನಿಂತಿರುವ ನಮ್ಮ ಭಾರತ ಪ್ರಪಂಚದಲ್ಲಿ ಕಾಲಮಹತ್ವದಿಂದ ಈಗ ಎತ್ತ ನೋಡಿದರೂ ಸ್ವಧರ್ಮದ್ವೇಷವೆಂಬುದು ವಿಷದಂತೆ ವ್ಯಾಪಿಸುತ್ತ ಬರಹತ್ತಿದೆ. ಈಗಿನ ನೂತನ ವಿದ್ಯಾಸಂಸ್ಕೃತಿಯ ತೆಳವಿಗೆ ಸಿಕ್ಕು ಅನೇಕರು ಸ್ವರಾಜ್ಯಲಾಭವೇ ಪುರುಷಾರ್ಥದ ಪರಮಾವಧಿಯೆಂದು ಪರಿಭಾವಿಸುತ್ತ ಆತ್ಮೋದ್ಧಾರಸಾಧಕಗಳಾದ ಧರ್ಮಗಳನ್ನು ಬಹು ಹೀನಾಯವಾಗಿ ಕಾಣುತ್ತ ಬರಹತ್ತಿರುತ್ತಾರೆ. ಇವರ ಉಪಟಳದಿಂದ ಸನಾತನಧರ್ಮವೇ ಮೂಲೋತ್ಪಾಟನವಾಗುತ್ತಿರುವುದಲ್ಲದೆ ಸನಾತನಧರ್ಮಾಂತರ್ಗತಗಳಾದ ಆಯಾಯ ಮತಧರ್ಮಗಳಂತೂ ಭಿನ್ನಭಿನ್ನಗಳಾಗಿಹೋಗುತ್ತಲಿವೆ. ನಮ್ಮ ಸನಾತನಧರ್ಮಕ್ಕೆ ವಿರೋಧಿಗಳಾದವರಿಂದ ಇಂತಹ ವಿಪ್ಲವಗಳುಂಟಾಗುತ್ತಿದ್ದರೆ ಸನಾತನೀಯರೆಲ್ಲರೂ ಒಟ್ಟುಗೂಡಿ ಅಂಥ ವಿರೋಧಿಗಳನ್ನು ನಿಗ್ರಹಿಸಿ ಸುಲಭವಾಗಿ ಧರ್ಮರಕ್ಷಣೆ ಮಾಡಬಹುದಾಗಿತ್ತು. ಆದರೆ ಈಗ ಇತರರಾರೂ ನಮ್ಮ ಧರ್ಮಧ್ವಜವನ್ನು ಮುರಿಯಲು ಬಂದಿಲ್ಲ. "ಕುಲಕ್ಕೆ ಮೃತ್ಯು ಕೊಡಲಿಯ ಕಾವು" ಎಂಬ ಗಾದೆಯಂತೆ ನಮ್ಮ ಸನಾತನಧರ್ಮಾವಲಂಬಿಗಳಲ್ಲಿಯೇ ಕೆಲವರು ಧರ್ಮವನ್ನು ಹಾಳುಮಾಡಲು ಕಟಿಬದ್ಧರಾಗಿ ನಿಂತಿರುತ್ತಾರೆ. ಧರ್ಮಪಕ್ಷದವರೆಂತಲೂ ಧರ್ಮದ್ವೇಷಪಕ್ಷದವರೆಂತಲೂ ಪ್ರಕೃತದಲ್ಲಿ ನಮ್ಮ ಭಾರತೀಯ ಸಹೋದರರಲ್ಲಿಯೇ ಎರಡು ಪಕ್ಷಗಳುಂಟಾಗಿವೆ. ಒಂದು ಮನೆಯಲ್ಲಿರುವವರಲ್ಲಿ ಯಾವಾಗ ಕಲಹವು ಉತ್ಪನ್ನವಾಯಿತೋ ಆಗ ಬಹುಕಾಲದಿಂದ ಸ್ಥಿರವಾಗಿ ನಿಂತಿರುವ ಗೃಹಲಕ್ಷ್ಮಿಯು ಸಹ ಇದ್ದಲ್ಲಿಯೇ ಮಾಯವಾಗುವುದರಲ್ಲಿ ಸಂಶಯವಿಲ್ಲ.

ಭಾರತೀಯರಾದ ನಾವುಗಳೆಲ್ಲರೂ ಒಂದು ಕುಟುಂಬಕ್ಕೆ ಸೇರಿದವರಾಗಿದ್ದೇವೆಂಬುದನ್ನು ತಿಳಿಯದೆ ಒಬ್ಬರಿಗೊಬ್ಬರು ಕಲಹವನ್ನು ಮಾಡುತ್ತ ಬಂದರೆ ಭಾರತಲಕ್ಷ್ಮಿಯು ಕಾಲಿಗೆ ಬುದ್ಧಿಯನ್ನು ಹೇಳುವುದಿಲ್ಲವೆ? ಅನೂಚಾನವಾಗಿ ನಾವುಗಳು ಯಾವ ದೇಶದಲ್ಲಿ ವಾಸಮಾಡಿರುವೆವೋ, ಆ ದೇಶದ ನಡೆನುಡಿಗಳು ಯಾವ ರೀತಿಯಾಗಿರುವುವೋ, ಮತ್ತು ಯಾವ ಯಾವ ಧರ್ಮಗಳು ಇಹಪರಸುಖಗಳಿಗೆ ಸಾಧನಗಳೆಂದು ಸರ್ವಜ್ಞರಾದ ಋಷಿಗಳು ನಿಯಾಮಕಮಾಡಿರುವರೋ, ಅವುಗಳನ್ನು ಬಿಟ್ಟು ಕದಲದೆ ಇರುವುದೇ ವಿವೇಕಿಗಳಾದ ಮಾನವರ ಕರ್ತವ್ಯವಾಗಿರುವದು. ಆದರೆ ಇದರಿಂದ ನಮ್ಮ ಭಾರತೀಯರಿಗೆ ಸ್ವಾತಂತ್ರ್ಯವು ಬೇಡವೆಂದಾಗಲಿ, ನಾಗರಕತೆಯು ಬೇಡವೆಂದಾಗಲಿ, ರಾಜಕೀಯಾಂಗಣದಲ್ಲಿ ಕೆಲಸ ಮಾಡಬಾರದೆಂದಾಗಲಿ ಯಾರೂ ಭಾವಿಸಬಾರದು. ಅವಶ್ಯಮಟ್ಟಿಗೆ ಎಲ್ಲಾ ಭಾಗದಲ್ಲಿಯೂ ಮುಂದುವರಿಯಲೇಬೇಕು. ಆದರೆ ಸ್ವಧರ್ಮವಿರೋಧಿಯಾದ ಸ್ವಾತಂತ್ರ್ಯವನ್ನಾಗಲಿ ನಾಗರಕತೆಯನ್ನಾಗಲಿ ಯಾರೂ ಅಪೇಕ್ಷಿಸಬಾರದು. ಹಾಗೆ ಧರ್ಮವಿರೋಧಿಯಾದ ಸ್ವಾತಂತ್ರ್ಯವನ್ನೇ ಅಪೇಕ್ಷಿಸುವುದಾದರೆ ಅದು ಕೇವಲ ಪಶುಲಕ್ಷಣದಲ್ಲಿ ಸೇರುವುದಲ್ಲದೆ ಮಾನವಲಕ್ಷಣದಲ್ಲಿ ಸೇರುವುದಿಲ್ಲ. ಮಾನವನು ಯಾವಾಗಲೂ ಧರ್ಮನಿಬಂಧನೆಗೆ ಒಳಪಟ್ಟಿರುತ್ತಾನೆ. ಅವನು ಐಹಿಕಸೌಖ್ಯವನ್ನು ಹೇಗೆ ಬಯಸುವನೋ ಹಾಗೆ ಪಾರಮಾರ್ಥಿಕಸೌಖ್ಯವನ್ನೂ ಅಪೇಕ್ಷಿಸುವ ಸ್ವಭಾವದವನಾಗಿರುತ್ತಾನೆ. ಯಾವ ಖಂಡದಲ್ಲಿ ನೋಡಿದರೂ ಪ್ರತಿಯೊಂದು ಜನಾಂಗವು ಒಂದೊಂದು ಧರ್ಮವನ್ನು ಅವಲಂಬಿಸಿಯೇ ಇರುವುದು. ಎಂಥ ನಾಗರಕತೆಯ ಪರಾಕಾಷ್ಠದಶೆಯನ್ನು ಪಡೆದಿದ್ದರೂ ಯಾರೂ ತಮ್ಮ ತಮ್ಮ ಧರ್ಮಗಳನ್ನು ಬಿಟ್ಟಿಲ್ಲವು. ಏನೊಂದೂ ಚಾಕಚಕ್ಯವನ್ನು ಕಾಣದಿರುವ ಕಾಡಿನಲ್ಲಿ ವಾಸಮಾಡಿದ ಮುಗ್ಧಜನಗಳೂ ಸಹ ತಾವು ತಿಳಿದಮಟ್ಟಿಗೂ ಧರ್ಮಮಾರ್ಗದಲ್ಲಿದ್ದುಕೊಂಡೇ ಇತರ ವ್ಯವಹಾರಗಳನ್ನು ನಡೆಯಿಸುತ್ತಿರುವರು. ಇನ್ನು ಊರೊಳಗಿದ್ದು ಬೇಕಬೇಕಾದ ಅನುಕೂಲತೆಗಳನ್ನು ಪಡೆದಿದ್ದರೂ ಧರ್ಮವೆಂಬ ಅಡಿಗಲ್ಲನ್ನೇ ಒತ್ತರಿಸಿ ನಾಗರಕತೆಯೆಂಬ ಆಕಾಶದಲ್ಲಿ ಹಾರಾಡುತ್ತಿದ್ದರೆ ಅಂಥವರನ್ನು ಮಾನವಧರ್ಮಕ್ಕೊಳಪಟ್ಟವರೆಂದು ಹೇಗೆತಾನೆ ಹೇಳಲಾದೀತು? ನಾವು ಹಿಂದಿನ ಜನ್ಮದಲ್ಲಿ ಧರ್ಮಮಾರ್ಗದಲ್ಲಿದ್ದು ಈಶ್ವರಪ್ರೀತಿಸಾಧಕಗಳಾದ ಕರ್ಮಗಳನ್ನು ಮಾಡಿದ್ದುದರಿಂದಲೇ ಈ ಜನ್ಮದಲ್ಲಿ ಧರ್ಮಾಧರ್ಮಜ್ಞಾನಶಕ್ತಿಯುಳ್ಳ ಮನುಷ್ಯದೇಹವನ್ನು ಪಡೆದಿರುವೆವೆಂಬುದನ್ನು ನಮ್ಮ ಹಿರಿಯರ ಉಕ್ತಿಯಿಂದಲೂ ಶ್ರುತಿ ಸ್ಮೃತಿ ವಾಕ್ಯಗಳಿಂದಲೂ ಚನ್ನಾಗಿ ಅರಿತಿದ್ದರೂ ಕೇವಲ ಸ್ವಾತಂತ್ರ್ಯಸೌಖ್ಯವನ್ನೇ ಮುಖ್ಯಧ್ಯೇಯವನ್ನಾಗಿಟ್ಟುಕೊಳ್ಳುವುದು ನಮ್ಮ ಭಾರತಧರ್ಮಾನುಯಾಯಿಗಳಿಗೆ ಅತ್ಯಂತ ಹೇಯಾಸ್ಪದವೇ ಸರಿ. ಮನುಷ್ಯನಿಗೆ ಪ್ರಾಣವೇ ಮೂಲಾಧಾರವಾದುದು. ಅಂಥ ಪ್ರಾಣವೇ ಹೋದಮೇಲೆ ಅವನು ಹೆಣವೆನಿಸಿಕೊಳ್ಳುವನಷ್ಟೆ! ಅದರಂತೆ ನಮ್ಮ ಭಾರತೀಯಜನಾಂಗಕ್ಕೆ ಧರ್ಮವೆಂಬುದು ಪ್ರಾಣದಂತಿರುತ್ತದೆ. ಅಂತಹ ಧರ್ಮರತ್ನವನ್ನೇ ಹಾಳುಮಾಡಿಕೊಂಡು ಕೇವಲ ಐಹಿಕಸುಖಕ್ಕಾಗಿ ವಿಜೃಂಭಿಸುತ್ತಿದ್ದರೆ ಅಂಥವರನ್ನು ಜೀವವಿಲ್ಲದ ಹೆಣದಂತೆ ಭಾವಿಸಬೇಕಾಗುತ್ತದೆ. ನಮ್ಮ ದೇಹವು ಎತ್ತ ಚಲಿಸಿದರೂ ಅತ್ತ ಪ್ರಾಣವೂ ಚಲಿಸುವಂತೆ ನಾವು ಎಂಥ ರಾಜಕೀಯಸ್ವಾತಂತ್ರ್ಯದಲ್ಲಿ ಪ್ರವೇಶಿಸಿದರೂ ಧರ್ಮದೊಂದಿಗೆ ಪ್ರವೇಶಿಸಬೇಕಲ್ಲದೆ ದೇವರ ಪ್ರೀತಿಯನ್ನು ಸಂಪಾದಿಸುವ ಧರ್ಮವನ್ನು ನಿರಾಕರಿಸಿ ಮನಸ್ವಿಯಾಗಿ ವರ್ತಿಸುವುದರಿಂದ ನಮ್ಮ ಆತ್ಮವನ್ನು ನಾವೇ ಘಾತಿಸಿಕೊಂಡಂತಾಗುತ್ತದೆ. ಈ ಪ್ರಪಂಚವೆಂಬ ದೊಡ್ಡರಂಗಸ್ಥಲದಲ್ಲಿ ಅನಾದಿಕಾಲದಿಂದಲೂ ಪ್ರತಿಯೊಬ್ಬರೂ ವ್ಯವಹರಿಸುತ್ತಲೇ ಇದ್ದಾರೆ. ಇಂಥ ಪ್ರಪಂಚವ್ಯವಹಾರವನ್ನು ಬಿಡುವುದು ಯಾರಿಂದಲೂ ಸಾಧ್ಯವಿಲ್ಲ. ಆದರೂ ಮಗುವು ತಾಯಿಯ ಒಂದು ಸ್ತನವನ್ನು ಪಾನಮಾಡುತ್ತಿದ್ದರೂ ಇನ್ನೊಂದು ಸ್ತನದ ಮೇಲೆ ಕೈಯನ್ನು ಇಟ್ಟುಕೊಂಡಿರುವಂತೆ ಪ್ರತಿಯೊ[illegible] ಪ್ರಪಂಚ ವ್ಯವಹಾರದಲ್ಲಿ ದೃಷ್ಟಿಯನ್ನಿಟ್ಟಿದ್ದರೂ ಇನ್ನೊಂದು ದೃಷ್ಟಿಯನ್ನು ಧಾರ್ಮಿಕ ವ್ಯವಹಾರದಲ್ಲಿಡಲೇಬೇಕು. ಇದೇ ವಿವೇಕಭೂಯಿಷ್ಠವಾದ ಮಾನವನ ಸ್ವಭಾವಸಿದ್ಧ ಗುಣವಾಗಿರುತ್ತದೆ. ಆದರೆ ಏಕಕಾಲದಲ್ಲಿಯೇ ಧಾರ್ಮಿಕ, ಲೌಕಿಕ ವ್ಯವಹಾರಗಳೆರಡರಲ್ಲಿ ದೃಷ್ಟಿಯನ್ನಿಡುವುದು ಅಸಂಭವವೆಂದೂ, ಲೌಕಿಕಕರ್ಮಾನುಷ್ಠಾನ ಸಮಯದಲ್ಲಿ ಧಾರ್ಮಿಕಕರ್ಮಗಳನ್ನೂ ಧಾರ್ಮಿಕಕರ್ಮಾನುಷ್ಠಾನಸಮಯದಲ್ಲಿ ಲೌಕಿಕಕರ್ಮಗಳನ್ನೂ ನಡೆಸಲು ಆಗುವುದಿಲ್ಲವಾದುದರಿಂದ ಒಂದನ್ನು ಬಿಡಲೇಬೇಕಾಗುವದೆಂದೂ ಅನೇಕರು ಆಶಂಕೆಯನ್ನು ಮಾಡುವುದುಂಟು. ಲೋಕದಲ್ಲಿ ನರ್ತಕಿಯು ತನ್ನ ತಲೆಯಮೇಲೆ ಕುಂಭವನ್ನಿರಿಸಿ ರಂಗಸ್ಥಲದಲ್ಲಿ ನರ್ತನಮಾಡುತ್ತ ಸಭಿಕರ ಚಿತ್ತಾಕರ್ಷಣಕಾರಿಯಾದ ಅನಂತ ಹಾವಭಾವಾದಿವೈಖರಿಯನ್ನು ತೋರಿಸುತ್ತಿದ್ದರೂ ಆಕೆಯ ಮನೋಭಾವವೆಲ್ಲವೂ ತಲೆಯ ಮೇಲಿರುವ ಕುಂಭದಲ್ಲಿಯೇ ನಾಟಕೊಂಡಿರುವಂತೆ, ಪರಮಾಸ್ತಿಕರಾದ ನಮ್ಮ ಭಾರತೀಯರು ಈಗಿನ ಕಾಲಾನುಸಾರವಾಗಿ ಎಂಥ ರಾಜಕೀಯ ನರ್ತನಾಂಗಣದಲ್ಲಿ ಪ್ರವೇಶಿಸಿದರೂ ತಮ್ಮ ಇಹಪರಸುಖಕ್ಕೆ ಸಾಧಕಗಳಾದ ಧರ್ಮಗಳಲ್ಲಿ ಮನಸ್ಸನ್ನಿಟ್ಟಿರಬೇಕು. ಇದೇ ವಿಷಯವನ್ನು ಶ್ರೀಮನ್ನಿಜಗುಣಾರಾಧ್ಯರು "ಜಾಣನು ಲೌಕಿಕ ಪರಮಾರ್ಥವೆರಡನುಮಾಣದೆ ಕೂಡಿ ನಡೆಸುತಿಹನಿಂತು" ಎಂದು ಹೇಳಿರುವರು. ಅದುದರಿಂದ ಪ್ರತಿಯೊಬ್ಬರೂ ಒಂದೇ ಕಡೆಗೆ ದೃಷ್ಟಿಯನ್ನಿಡದೆ ಲೌಕಿಕ ಧಾರ್ಮಿಕಗಳೆರಡರಲ್ಲಿಯೂ ದೃಷ್ಟಿಯನ್ನಿಟ್ಟು ಪರಶಿವನ ಕೃಪೆಗೆ ಪಾತ್ರರಾಗಬೇಕೆಂಬಾಶಿಸುತ್ತೇವೆ.

ಲೀಪ್ಜಿಗ್ ನಗರದ ಒಬ್ಬ ಉಪಾಧ್ಯಾಯರು 38 ವರ್ಷಗಳ ಪೂರ್ವದಲ್ಲಿ ಒಬ್ಬ ವಿದ್ಯಾರ್ಥಿಯನ್ನು ಶಿಕ್ಷಿಸುವಾಗ ಕಣ್ಣಿಗೆ ಪೆಟ್ಟುಬಿದ್ದಿತ್ತು. ಈಗ್ಗೆ 2 ವರ್ಷಗಳ ಹಿಂದೆ ಆ ಕಣ್ಣಿಗೆ ಏನೋ ಬಾಧೆಯುಂಟಾಗಿ ಕಡೆಗೆ ಕಣ್ಣುಗುಡ್ಡೆಯನ್ನು ಸಂಪೂರ್ಣವಾಗಿ ತೆಗೆಯಬೇಕಾಗಿ ಬಂದಿತು. ಅದಕ್ಕಾಗಿ ಮ್ಯಾಜಿಸ್ಟ್ರೇಟರು ಕಣ್ಣು ಕಳೆದುಕೊಂಡವನಿಗೆ ಉಪಾಧ್ಯಾಯನಿಂದ 1,500 ರೂಪಾಯಿಗಳ ಪರಿಹಾರ ದ್ರವ್ಯವನ್ನು ಕೊಡಿಸಿದರು!

ವರ್ತಮಾನಸಂಗ್ರಹ

ಗಾಂಧಿಯವರು ಉಪವಾಸವ್ರತವನ್ನು ಪ್ರಾರಂಭಿಸಿದಕೂಡಲೇ ಕಾರಾಗೃಹದಿಂದ ಬಿಡುಗಡೆಮಾಡಲ್ಪಟ್ಟರು.

ಪಟಿಯಾಲಾ ಮಹಾರಾಜರು ತಮ್ಮ ಉಪಯೋಗಕ್ಕಾಗಿ 300 ಮೋಟಾರುಗಳನ್ನು ಇಟ್ಟುಕೊಂಡಿರುವರಂತೆ!

ಪ್ರಪಂಚದಲ್ಲೆಲ್ಲಾ ಮೊದಲನೆಯ ವರ್ತಮಾನಪತ್ರವು 1524 ನೆಯ ವರ್ಷದಲ್ಲಿ ಜರ್ಮನಿಯಲ್ಲಿ ಪ್ರಕಟವಾಯಿತಂತೆ!

ಜರ್ಮನಿಯ ಪದಚ್ಯುತ ಚಕ್ರವರ್ತಿಗಳಾದ ಕೈಜ ವರ ಪೂರ್ವಜರು ಫ್ರೆಂಚ್‌ದೇಶಸ್ಥರೆಂದು ಒಬ್ಬ ಚರಿತ್ರಶೋಧಕನು ಪ್ರಸಿದ್ಧಪಡಿಸಿರುವನು.

ಫ್ರಾನ್ಸ್ ಸರಕಾರದವರು 10,000 ಬಾಲಕರಿಗೆ ಏರೋಪ್ಲೇನುಗಳಲ್ಲಿ ಭೂಗೋಳಶಾಸ್ತ್ರದ ಶಿಕ್ಷಣವನ್ನು ಕೊಡಲು ಏರ್ಪಾಡುಮಾಡಿರುವರು.

ಈ ಪ್ರಪಂಚದಲ್ಲಿ ಒಟ್ಟು 27,50,000 ಮೋಟಾರ್ ಬೈಸಿಕಲ್‌ಗಳು ಉಪಯೋಗದಲ್ಲಿರುವವು! ಇದರಲ್ಲಿ 100 ಕ್ಕೆ 85 ಭಾಗವು ಯೂರೋಪಿನಲ್ಲಿರುವದಂತೆ!

ನಾಗರಹಾವಿನ ವಿಷವು ರಕ್ತದಲ್ಲಿ ಬೆರೆದರೆ ಮಾತ್ರ ಅಪಾಯಕರವಂತೆ! ಅದನ್ನೇ ಹೊಟ್ಟೆಯೊಳಕ್ಕೆ ಸೇವಿಸಿದರೆ ಯಾವ ಅಪಾಯವೂ ಆಗುವುದಿಲ್ಲವಂತೆ!

ಮಾಡ್ರಿಡ್ ನಗರದಲ್ಲಿ ಸಿನಿಮಾಗಳನ್ನು ನೋಡುವದಕ್ಕೆ ಹೋಗಿದ್ದಾಗ ಮಳೆಯು ಬಂದರೆ ಕಂಪೆನಿಯವರು ಎಲ್ಲರಿಗೂ ಛತ್ರಿಗಳನ್ನು ಕೊಡುವರಂತೆ!

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ 12,00 ಚಲನಚಿತ್ರ (ಸಿನಿಮಾ) ಗೃಹಗಳಿರುವವಂತೆ! ಮತ್ತು ಒಂದುವಾರಕ್ಕೆ 6,00,00,000 ಜನರು ಚಿತ್ರಗಳನ್ನು [illegible] ನೋಡುವರಂತೆ!

ಪ್ಯಾರಿಸ್ ನಗರದಲ್ಲಿ 'ಫ್ಲೋರಾ' ಎಂಬ ಹಸುವಿರುವದು. ಅದಕ್ಕೆ 4 ಕೊಂಬುಗಳು, 4 ಮೂಗಿನ ಹೊಳ್ಳೆಗಳು, ಎರಡು ನಾಲಗೆಗಳು, 2 ಬೆನ್ನುಮೂಳೆಗಳು ಮತ್ತು 3 ಕಣ್ಣುಗಳು ಇರುವವಂತೆ!

ಅಮೇರಿಕಾದೇಶದ ಕೆಲಕೆಲವು ಹೆರಿಗೆ ಆಸ್ಪತ್ರೆಗಳಲ್ಲಿ ಶಿಶುಗಳು ಜನನವಾದಕೂಡಲೆ (ಒಂದಕ್ಕೊಂದು ಬದಲಾಗಿ ಹೋಗಬಹುದೆಂಬ ಸಂಶಯದಿಂದ) ಅವುಗಳ ಕಾಲುಗಳ ಗುರುತುಗಳನ್ನು ತೆಗೆದುಕೊಳ್ಳುವರಂತೆ!

ವಿಲ್ಸನ್ ಪರ್ವತದ ಪರೀಕ್ಷಾಲಯದಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸ ದೂರದರ್ಶಕ ಯಂತ್ರದ ಸಹಾಯದಿಂದ 81,00,00,00,00,00,00,00,00,000 ಮೈಲುಗಳ ದೂರದಲ್ಲಿರುವ ಗ್ರಹಗಳನ್ನು ಸುಲಭವಾಗಿ ನೋಡಬಹುದಂತೆ!

ಬೆಲ್ಗ್ರಾವ್ ಎಂಬ ನಗರದಲ್ಲಿ 4 ಜನ ಕಳ್ಳರು ಒಂದು ಬ್ಯಾಂಕಿನಲ್ಲಿ 18,750 ರೂಪಾಯಿಗಳನ್ನು ಅಪಹರಿಸಿ, ಹಣಕ್ಕೆ ರಶೀತಿಯನ್ನು ಕಳುಹಿಸುವೆವೆಂದು ಬ್ಯಾಂಕಿನ ಮ್ಯಾನೇಜರಿಗೆ ಟೆಲಿಫೋನ್ ಮಾಡಿದರಂತೆ! ವಿಚಿತ್ರ ಕಳ್ಳರು!

ಈಗಿನ ದಂತಶಾಸ್ತ್ರದಲ್ಲಿರುವ ಕೆಲವು ನ್ಯೂನಾತಿರೇಕಗಳ ದೆಸೆಯಿಂದ, ಕ್ರಮೇಣ ಈ ಪ್ರಪಂಚದ ಜನರೆಲ್ಲರೂ ದಂತರಹಿತರಾಗುವರೆಂದು ಮೆಲ್ಬೋರ್ನ್ ವಿಶ್ವವಿದ್ಯಾನಿಲಯದ ಡಾಕ್ಟರ್ ಆಸ್ಬರ್ನ್ನವರ ಅಭಿಪ್ರಾಯವಾಗಿರುವದು!

ಕ್ಯಾಲಿಫೋರ್ನಿಯಾದೇಶಕ್ಕೆ ಸೇರಿದ ಜರ್ಸಿ ದ್ವೀಪದಲ್ಲಿ ಕೆಲವುಜನರು ಮಿಸೆಸ್ ಸೊವಾರೊ ಎಂಬ ಸ್ತ್ರೀಯನ್ನು ಸಜೀವವಾಗಿ ಹೂಳಿ ಮೇಲ್ಭಾಗದಲ್ಲಿ ಬೆಂಕಿಯನ್ನು ಹಚ್ಚಿದರಂತೆ! ಪೋಲೀಸರು ಈ ಸಂಬಂಧವಾಗಿ 8 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಅಮೇರಿಕೆಗೆ ಸೇರಿದ ದಕ್ಷಿಣಕಾರೋಲಿನಾದೇಶದಲ್ಲಿ ಬೆಳೆಯುವ ಮರಗಳಿಗೆ ಕೆಂಪು, ನೀಲಿ, ಹಸರು, ಹಳದಿ ಮೊದಲಾದ ಬಣ್ಣಗಳ ಇಂಜಕ್ಷನ್ ಕೊಡುವರಂತೆ! ಇದರಿಂದ ಆ ಮರಗಳನ್ನು ಕಡಿದು ಕೊಯಿದಾಗ, ಅವು ಮನೋಹರವಾದ ಬಣ್ಣಗಳಿಂದ ಕೂಡಿರುವವಂತೆ!

ಸ್ಟ್ರಿಯಾ ದೇಶಕ್ಕೆ ಸೇರಿದ ಗ್ರ್ಯಾಜ್‌ನಗರದ ಪಾಲಿಟಿಯವರು ಸತ್ತನಾಯಿಗಳ ಗೋರಿಗಳಿಗೆ 1ಕ್ಕೆ 5 ರೂ. ಯಂತೆಯೂ, ಗೋರಿಯಮೇಲೆ ನ್ನು ಇಟ್ಟರೆ ವರ್ಷ 1ಕ್ಕೆ 17 ರೂ. ಯಂತೆಯೂ ಸುನ್ನು ಕೊಡಬೇಕೆಂದು ಅಪ್ಪಣೆಮಾಡಿರುತ್ತಾರೆ.

ಂದೂಸ್ಥಾನವು ಫ್ರಾನ್ಸ್, ಸ್ಪೇನ್, ಜರ್ಮನಿ, ಬ್ರಿಟನ್, ಇಟಲಿ, ಬಲ್ಗೇರಿಯಾ, ರೋಮೇನಿ ಹಂಗೇರಿ, ಜುಗೋಸ್ಲೇವಿಯಾ, ಪೋರ್ಚುಗಲ್, ಸ್ಲೋವೇಕಿಯಾ, ಆಸ್ಟ್ರಿಯಾ, ಲಾಟ್ವಿಯಾ, ಂ, ಸ್ವಿಟ್ಜರ್ಲೆಂಡ್ ಮತ್ತು ಲಿಥುಯೇನಿಯಾ ಗಳನ್ನು ಒಟ್ಟುಗೂಡಿಸಿದಷ್ಟು ವಿಸ್ತೀರ್ಣವುಳ್ಳ ದುವುದು!

ಜಿಪ್ಟ್ ದೇಶದ ಸೈನ್ಯದ ಅಧಿಕಾರಿಗಳಾದ ಲೆಫ್ಟ ಕರ್ನಲ್ ಹರ್ಷಹಿಲಾ ಎಂಬವರು ಮರುಭೂ ಲ್ಲಿ ಒಂದು ಕತ್ತೆಯ ಮೇಲೆ ಕುಳಿತು ಪ್ರಯಾಣ ತ್ತಿದ್ದಾಗ, ಕಳೆದ ಘೋರಯುದ್ಧಕಾಲದ ಒಂ ಂದು ಸಿಡಿಮದ್ದು ಇದ್ದಕ್ಕಿದ್ದ ಹಾಗೆ ಸಿಡಿದು, ತಕ್ಷಣವೇ ಮೃತಪಟ್ಟಿತು. ಹಿಲಾಲರವರಿಗೆ ಯಾವ ಅಪಾಯವೂ ಆಗಲಿಲ್ಲ!

|| ಗಾಂಧಿಯವರು ತಮ್ಮ ಸಂಕಲ್ಪದ ಪ್ರಕಾರ ಸೋಮವಾರ ಉಪವಾಸವನ್ನು ಪ್ರಾರಂಭಿಸಿ ಡಾಕ್ಟರುಗಳು ಹಗಲಿರುಳೂ ಗಾಂಧಿಯವರ ತಿಯನ್ನು ನೋಡಿಕೊಳ್ಳುತ್ತಿರುವರು. ಗಾಂ ರು ಈ ಉಪನ್ಯಾಸದಿಂದ ಗಾಂಧಿಯವರ ಕ್ಕೆ ಯಾವ ಅಪಾಯವುಂಟಾಗಲಾರದೆಂದು ರು ಅಭಿಪ್ರಾಯಪಡುತ್ತಿರುವರು.

ಂಡನ್ನಿನ ಪ್ರಾಣಿಪ್ರದರ್ಶನಾಲಯದಲ್ಲಿರುವ ಪ್ರಾ ಲ್ಲೆಲ್ಲಾ ಹಿಂದುಸ್ಥಾನದ ಘೇಂಡಾಮೃಗವೇ ತ ಬೆಲೆಯುಳ್ಳದಂತೆ! ಅದರ ಬೆಲೆಯು 15,000 ಯಿಗಳೆಂದು ಅಂದಾಜುಮಾಡಲ್ಪಟ್ಟಿರುವದು. ವ ಪಕ್ಷಿಗಳಲ್ಲೆಲ್ಲಾ 'ಕಿಂಗ್ ಪೆಂಗ್ವಿನ್' ಎಂಬ [illegible] ಅತ್ಯಂತ ಬೆಲೆಯುಳ್ಳವು ! ಕ್ರಯ 1 ಕ್ಕೆ 1,125 ರೂಪಾಯಿಗಳು!

ಸ್ಪೇನ್‌ದೇಶದಲ್ಲಿ ಆರುಜನ ದರೋಡೆಕೋರರು ದಾ ಲ್ಲಿ ಹೋಗುತ್ತಿದ್ದ ಒಬ್ಬ ಮನುಷ್ಯನ ಮೇಲೆ ಅವನನ್ನು ಹೊಡೆದು ಅವನಲ್ಲಿದ್ದ ಹಣವನ್ನು ಗೆಮಾಡಿ ಹೊರಡುವಷ್ಟರಲ್ಲಿ ದರೋಡೆಕೋರರ ಬ್ಬನು ತಾವು ಹೊಂಚುಕಾಯುತ್ತಿದ್ದ ಮನು ಅತನಲ್ಲವೆಂದು ಹೇಳಲು, ಕಳ್ಳರು ತಾವು ಸುಲಿಗೆ ದಿದ್ದ ಹಣವನ್ನು ಅವನಿಗೆ ಹಿಂತಿರುಗಿಕೊಟ್ಟು ಕ್ಷಮಾಪಣೆಯನ್ನು ಕೇಳಿ ಹೊರಟುಹೋ ತೆ!

ಇಂಗ್ಲೆಂಡಿನಲ್ಲಿರುವ "ರಾಯಲ್ ಸ್ಕಾಟ್" ಎಂಬ ಪ್ರಪಂಚದ ಇಂಜನ್ನುಗಳಲ್ಲೆಲ್ಲಾ ಅತ್ಯಂತ ದೊಡ್ಡ ಜನ್ನಾಗಿರುವದು. ಸದ್ಯಃ ಆ ಇಂಜನ್ನನ್ನು ಸಂ ರ್ಣವಾಗಿ ಅಮೇರಿಕೆಯ ಚಿಕಾಗೋ ನಗರದಲ್ಲಿ ಲಿರುವ "ವರ್ಲ್ಡ್ಸ್ ಫೇರ್" ಎಂಬ ಅದ್ಭುತ ರ್ಶನಕ್ಕೆ ಕಳುಹಿಸಿರುತ್ತಾರೆ. ಪ್ರದರ್ಶನವು ಮುಗಿದ ದ ಆ ಇಂಜನ್ನು ಸಂಯುಕ್ತಸಂಸ್ಥಾನ ಮತ್ತು ಾ ದೇಶದಲ್ಲಿ ಅನೇಕ ಸಹಸ್ರಮೈಲುಗಳ ದೂರ ಯಾಣಮಾಡಿದನಂತರ ಪುನಃ ಜಹಜಿನಲ್ಲಿ ಇಗ್ಲೆಂ ತರಲ್ಪಡುವದು.

ಗಂಡಾ ಗ್ರಾಮದ ಒಬ್ಬ ಮಹಮ್ಮದೀಯನು ಹೆಂಗಸನ್ನು ಯಾವುದೋ ದ್ವೇಷದಮೇಲೆ ದು ಅವಳ ಶರೀರವನ್ನು ತನ್ನ 5 ಜನ ಪತ್ನಿಯ ತುಂಡುತುಂಡಾಗಿ ಕತ್ತರಿಸಿಸಿದನು. ಪೋಲೀ ವಿಚಾರಣೆಗೆ ಪ್ರಾರಂಭಿಸಿದಾಗ, ಆ ಮಹಮ್ಮದೀ ತನ್ನ ಪತ್ನಿಯರು ಗುಟ್ಟನ್ನು ಎಲ್ಲಿ ಬಹಿರಂಗ ಸುವರೋ ಎಂಬ ಭಯದಿಂದ ತನ್ನ 5 ಜನ ಪತ್ನಿ ನ್ನೂ 8 ಜನ ಮಕ್ಕಳನ್ನೂ ಕೊಂದು, ತಾನೊಬ್ಬ ಸೈಕಲ್ಲಿನ ಮೇಲೆ ಓಡಿಹೋದನು. ದಾರಿಯಲ್ಲಿ ಲ್ ಮುರಿದುಹೋಗಲು, ಸ್ವಲ್ಪದೂರ ನಡೆದು ಗಿ ಅನಂತರ ಒಂದು ಮರಕ್ಕೆ ನೇಣುಹಾಕಿ ಡು ಸತ್ತನು.

ಪೇನ್ ದೇಶಕ್ಕೆ ಸೇರಿದ ಬಾರ್ಸಿಲೋನಾ ಕಾರಾ ಲ್ಲಿರುವ ರಾಜಕೀಯ ಕೈದಿಗಳೆಲ್ಲರೂ ಒಟ್ಟಾಗಿ ತಮಗೆಲ್ಲರಿಗೂ ಪ್ರತಿನಿತ್ಯವೂ ಸ್ನಾನಕ್ಕೆ ಏರ್ಪಾಡು ಮಾಡಬೇಕೆಂದೂ, ಪ್ರತಿಯೊಬ್ಬರ ಕೋಣೆಯಲ್ಲಿಯೂ ಒಂದೊಂದು ವೈರ್‌ಲೆಸ್ ಯಂತ್ರವನ್ನಿಡಬೇಕೆಂದೂ, ಅಡಿಗೆಮಾಡುವದಕ್ಕೂ, ಕೊಠಡಿಗಳನ್ನು ಸ್ವಚ್ಛಮಾಡುವದಕ್ಕೂ ಸ್ತ್ರೀಯರನ್ನೇ ನೇಮಿಸಬೇಕೆಂದೂ, ಇದುವರೆಗೆ ತಮ್ಮ ಪ್ರತಿದಿನದ ಆಹಾರಕ್ಕೆ ಖರ್ಚುಮಾಡುತ್ತಿರುವ 9 ಪೆನ್ನಿಗಳನ್ನು 1 ಶಿಲಿಂಗಿಗೆ ಹೆಚ್ಚಿಸಬೇಕೆಂದೂ, ಹಾಗೆ ಮಾಡದಿದ್ದರೆ ತಾವೆಲ್ಲರೂ ಒಟ್ಟಾಗಿ ಕೂಡಿ ದಂಗೆಯೆದ್ದು ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗುವೆವೆಂದೂ ಅಧಿಕಾರಿಗಳಿಗೆ ಒಂದು ನೋಟೀಸ್ ಕೊಟ್ಟಿರುವರಂತೆ!

ಇಟಲೀದೇಶಕ್ಕೆ ಸೇರಿದ ವೆನಿಸ್‌ನಗರದಲ್ಲಿ 'ಗ್ರ್ಯಾಂಡ್ ಕೆನಾಲ್' ಎಂಬ ದೊಡ್ಡ ಕಾಲುವೆಯಿರುವದು. ಕೆಲವು ದಿವಸಗಳಹಿಂದೆ ಈ ಕಾಲುವೆಯಮೇಲೆ ಕೇವಲ ಮೋಟಾರುಗಳ ಉಪಯೋಗಕ್ಕೆಂದು ಒಂದು ಹೊಸ ಸೇತುವೆಯು ಕಟ್ಟಲ್ಪಟ್ಟಿತು. ವೆನಿಸ್‌ನಗರದ ಮೇಯರ್‌ರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವ ದಿವಸ ಮೇಯರ್ರವರ ಮೋಟಾರು ಸೇತುವೆಯ ಮೇಲೆ ಹೋಗುವದರೊಳಗಾಗಿ ಸಮೀಪದಲ್ಲಿ ನಿಂತಿದ್ದ ಒಂದಾನೊಂದು ಗಾಡಿಯ ಕುದುರೆಯು, ಇದ್ದಕ್ಕಿದ್ದ ಹಾಗೆ ಬೆದರಿ ಗಾಡಿಯನ್ನು ಎಳೆದುಕೊಂಡು ಸೇತುವೆಯ ಮೇಲೆ ಹೊರಟುಹೋಯಿತಂತೆ! ಆ ಸೇತುವೆಯಮೇಲೆ ಕುದರೆಗಳನ್ನೇ ಬಿಡಕೂಡದೆಂದು ಸರಕಾರದವರು ಉದ್ದೇಶಪಟ್ಟಿರಲು, ಅದೃಷ್ಟವಶಾತ್ ಕುದುರೆಯೇ ಸೇತುವೆಯ ಪ್ರಥಮಪ್ರವೇಶವನ್ನು ಮಾಡಿದುದನ್ನು ಕಂಡು ಎಲ್ಲರೂ ಕುದುರೆಯನ್ನು ಹೊಗಳಿದರಂತೆ!

ಅಂಬಾಲಾನಗರದ ಸಮೀಪದಲ್ಲಿರುವ ಒಂದಾನೊಂದು ಗ್ರಾಮದಲ್ಲಿ ನಾರಾಯಣ ಮತ್ತು ಭಕ್ತು ಎಂಬ ಇಬ್ಬರು ಅಣ್ಣತಮ್ಮಂದಿರಿದ್ದರು. ಇವರಿಬ್ಬರೂ ಕೃಪಣತನದಿಂದ ಅಪಾರ ದ್ರವ್ಯವನ್ನು ಸಂಪಾದಿಸಿದ್ದರು. ಕೆಲವು ದಿವಸಗಳ ಹಿಂದೆ ಭಕ್ತುವು ರೋಗಗ್ರಸ್ತನಾದನು. [illegible] ತನ್ನ ಸಹೋದರನಾದ ನಾರಾಯಣನನ್ನು ಸ್ವಲ್ಪ ನೀರು ಕೊಡುವಂತೆ ಕೇಳಲು, ಭಕ್ತುವು ನೀರು ಕೊಡಬೇಕಾದರೆ ಮೊದಲು ನೀನು ಸಂಪಾದಿಸಿದ ಹಣವನ್ನೆಲ್ಲಾ ಇಟ್ಟಿರುವ ಸ್ಥಳವನ್ನು ತಿಳಿಸಬೇಕೆಂದು ಹೇಳಿದನು. ಭಕ್ತುವು ಅದನ್ನು ಬಹಿರಂಗಪಡಿಸದೇ ಇದ್ದುದರಿಂದ ನಾರಾಯಣನು ಅವನಿಗೆ ನೀರನ್ನು ಕೊಡದೆ ಕಡೆಗೆ ಭಕ್ತುವು ಮೃತಪಟ್ಟನು. ಕೆಲವು ದಿವಸಗಳು ಕಳೆದಮೇಲೆ ನಾರಾಯಣನ ಪತ್ನಿಯು ಗಂಡನಿಗೆ ತಿಳಿಸದೆ ತನ್ನ ಅಳಿಯನಿಗೆ ಸ್ವಲ್ಪ ಹಣ ಕೊಟ್ಟಳು. ನಾರಾಯಣನಿಗೆ ಇದು ತಿಳಿದಕೂಡಲೇ ಅವನಿಗೆ ಬುದ್ಧಿಭ್ರಮಣೆಯಾಗಿ, ಅನ್ನಾಹಾರಗಳನ್ನು ತ್ಯಜಿಸಿ, ಕಡೆಗೆ ಆತ್ಮಹತ್ಯವನ್ನು ಮಾಡಿಕೊಂಡನು!

ಪ್ಯಾರಿಸ್ ನಗರದಲ್ಲಿ ಒಬ್ಬ ತರುಣನು ತನ್ನ ನರ್ತನಚಾತುರ್ಯದಿಂದ ಇಬ್ಬರು ತರುಣಿಯರನ್ನು ಮರುಳುಗೊಳಿಸಿ ಒಬ್ಬಳನ್ನು ಪ್ರೀತಿಸುತ್ತಿದ್ದ ವಿಷಯವು ಇನ್ನೊಬ್ಬಳಿಗೆ ತಿಳಿಯದಂತೆ ಇಬ್ಬರನ್ನೂ ಪ್ರೀತಿಸುತ್ತಿದ್ದನು. ಒಬ್ಬಳು ಆಂಗ್ಲೇಯಳು, ಇನ್ನೊಬ್ಬಳು ಅಮೇರಿಕೆಯವಳು. ಇಬ್ಬರೂ ಧನಾಢ್ಯರು. ಆ ತರುಣಿಯರಿಬ್ಬರೂ ಇವನನ್ನು ವಿಶೇಷವಾಗಿ ಪ್ರೀತಿಸುತ್ತ, ಅವನಿಗೆ ಬೇಕಾದ ಹಾಗೆ ಆಭರಣಾದಿಗಳನ್ನು ಕೊಡುತ್ತಿದ್ದರು. ಒಂದು ದಿನ ಇವನ ಗುಟ್ಟು ಆ ತರುಣಿಯರಿಗೆ ಗೊತ್ತಾಗಿಹೋಯಿತು. ಆಗ ಅವರಿಬ್ಬರೂ ಇವನನ್ನು ಉಪಾಯದಿಂದ ಒಂದು ಕೊಠಡಿಯಲ್ಲಿ ಸೇರಿಸಿಕೊಂಡು ಕೆಲವು ಜನ ತಮ್ಮ ಸ್ನೇಹಿತರ ಸಹಾಯದಿಂದ ಅವನಿಗೆ ಕೊಟ್ಟಿದ್ದ ಪದಾರ್ಥಗಳನ್ನೆಲ್ಲ ಹಿಂತಿರುಗಿ ತೆಗೆದುಕೊಂಡಿದ್ದಲ್ಲದೆ ಅವನ ಮೈಮೇಲಿದ್ದ ಬಟ್ಟೆಗಳನ್ನೆಲ್ಲಾ ತೆಗೆಯಿಸಿ, ಮೈತುಂಬಾ ಟಾರನ್ನುಬಳಿದು ಮೇಲೆ ಪಕ್ಷಿಯ ಪುಕ್ಕಗಳನ್ನು ಅಂಟಿಸಿ ಮೋಟಾರಿನಲ್ಲಿ ಕರೆದುಕೊಂಡುಹೋಗಿ ಅವನು ವಾಸವಾಗಿದ್ದ ಕಟ್ಟಡದ ಹತ್ತಿರ ಬಿಟ್ಟುಹೊರಟುಹೋದರು. ಈ ವಿಷಯವಾಗಿ ತರುಣನು ಪೋಲೀಸರಿಗೆ ಕಂಪ್ಲೇಂಟನ್ನು ಕೊಟ್ಟನು; ಆದರೆ ಪೋಲೀಸರು ಆ ತರುಣಿಯರ ಮೇಲೆ ಯಾವ ಕ್ರಮವನ್ನೂ ಜರುಗಿಸಲಿಲ್ಲವಂತೆ

ಮಳೆಯು ಭೂಮಿಯ ಮೇಲೆ ಸೆಕೆಂಡ್ 1 ಕ್ಕೆ 1,60,00,000 ಟನ್ ನೀರನ್ನು ಸುರಿಸುವದಂತೆ!

ವಿಚಿತ್ರಪ್ರಪಂಚ.

ಚೀನಾ ಭಾಷೆಯಲ್ಲಿ 30,000 ಅಕ್ಷರಗಳಿರುವವಂತೆ!

ಈ ಭೂಮಿಗೆ 20,00,00,000 ವರ್ಷ ವಯಸ್ಸಾಗಿರುವದಂತೆ!

ಕೆಲವು ಸಣ್ಣ ಸಣ್ಣ ಹುಳುಗಳಿಗೆ ಕಾಲಿನಲ್ಲಿ ಕಿವಿಗಳಿರುವವಂತೆ!

15,000 ಜನರಲ್ಲಿ ಒಬ್ಬರು ಮಾತ್ರ 100 ವರ್ಷದವರೆಗೆ ಜೀವಿಸಿರುವರಂತೆ!

ಕಪ್ಪೆಚಿಪ್ಪಿನ ಹುಳುವು 13 ತಿಂಗಳುಗಳಲ್ಲಿ ಸುಮಾರು 4 ಸಾರೆ ತನ್ನ ರೂಪವನ್ನು ಬದಲಾಯಿಸುವದಂತೆ!

ಗ್ರೇಟ್‌ಬ್ರಿಟನ್ ದೇಶದ ಸುತ್ತಮುತ್ತಲೂ ಸುಮಾರು 6,000 ಸಣ್ಣ ಸಣ್ಣ ದ್ವೀಪಗಳಿರುವುವು!

ಒಂಟೆ ಮತ್ತು ಹಂದಿ, ಈ ಎರಡು ಪ್ರಾಣಿಗಳ ವಿನಾ ಇತರ ಎಲ್ಲ ಪ್ರಾಣಿಗಳೂ ನೀರಿನಲ್ಲಿ ಈಜಬಲ್ಲವು!

ಒಂದು ಸಣ್ಣ ಚಮಚದಲ್ಲಿ ಹಿಡಿಸುವಷ್ಟು 'ರೇಡಿಯಂ' ಎಂಬ ಲೋಹಕ್ಕೆ 9,00,000 ರೂಪಾಯಿಗಳ ಕ್ರಯವಾಗುದಂತೆ!

ನಮ್ಮ ಶರೀರದಲ್ಲಿರುವ ಮಾಂಸಖಂಡಗಳಲ್ಲೆಲ್ಲಾ ಕಣ್ಣಿನ ರೆಪ್ಪೆಗಳಲ್ಲಿರುವ ಮಾಂಸಖಂಡಗಳೇ ಅತ್ಯಂತ ಚುರುಕಾಗಿರುವವು!

2,700 ಮೈಲುಗಳು ಉದ್ದವಿರುವ ಅಟ್ಲಾಂಟಿಕ್ ಸಾಗರವನ್ನು ತಂತೀ ವರ್ತಮಾನವು ಮೂರು ಸೆಕೆಂಡಿನಲ್ಲಿ ದಾಟುವದು!

ಎಷ್ಟೇ ಹಗುರವಾದ ಬೆಂಡಾದರೂ ನೀರಿನಲ್ಲಿ 204 ಅಡಿಗಳ ಆಳದವರೆಗೆ ಮುಳುಗಿಸಲ್ಪಟ್ಟರೆ ಅನಂತರ ಮೇಲಕ್ಕೆ ಏಳುವುದಿಲ್ಲವಂತೆ!

ಇರುವೆಗಳು ತಮ್ಮ ಬಾಯಿಯಿಂದ ತಮಗಿಂತಲೂ 3,000 ದಷ್ಟು ಹೆಚ್ಚು ತೂಕವುಳ್ಳ ಪದಾರ್ಥಗಳನ್ನು ಸುಲಭವಾಗಿ ಎತ್ತಬಲ್ಲವಂತೆ!

ನಾವು ನಡೆಯುವಾಗ, ಪ್ರತಿಯೊಂದುಸಾರೆ ಹೆಜ್ಜೆಯನ್ನು ಮುಂದಕ್ಕೆ ಇಟ್ಟಾಗಲೂ, ನಮ್ಮ ದೇಹದಲ್ಲಿ 43 ಮಾಂಸಖಂಡಗಳು ಚಲಿಸುವವಂತೆ!

ಶಬ್ದವು ಶೈತ್ಯವಿಲ್ಲದ ಗಾಳಿಯಲ್ಲಿ ಒಂದು ಸೆಕೆಂಡಿಗೆ 1,442 ಅಡಿಗಳ ದೂರ ಪ್ರಯಾಣ ಮಾಡುವದು. ಆದರೆ ನೀರಿನಲ್ಲಿ 4,900 ಅಡಿಗಳ ದೂರ ಪ್ರಯಾಣ ಮಾಡುವದಂತೆ!

ಈ ಪ್ರಪಂಚದಲ್ಲಿರುವ ಮರುಭೂಮಿಗಳಲ್ಲೆಲ್ಲಾ ಸೈಬೀರಿಯಾ ಮರುಭೂಮಿಯೇ ಅತ್ಯಂತ ದೊಡ್ಡದು! ಇದು ಈ ಭೂಮಿಯ ಒಟ್ಟು ವಿಸ್ತೀರ್ಣದಲ್ಲಿ ಒಂಭತ್ತನೆಯ ಒಂದು ಭಾಗದಷ್ಟು ದೊಡ್ಡದಾಗಿರುವದು!

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಆರುವರ್ಷಗಳು ತುಂಬಿ ಏಳನೇ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು ಮಾತ್ರ** ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ಸಂ.——

ಶ್ರೀ ಶಿವಕಥಾಪ್ರಶಂಸೆ,

ಬೀರೂರು.

ಕಳೆದ ಏಪ್ರಿಲ್ ತಿಂಗಳು ತಾ॥ ೧೮-೪-೩೩ ರ ಲಾಗಾಯ್ತು ತಾ॥ ೨೫-೪-೩೩ ರ ವರೆಗೆ ಈ ಊರಿನ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿ ಪ್ರತಿ ದಿವಸ ಸಾಯಂಕಾಲ ಸಂಸ್ಥಾನ ರಾಮದುರ್ಗದ ಕಡೆಯಿಂದ ಆಗಮಿಸಿರುವ ವೇ॥ ವೀರಾರ್ಯ ಹಿರೇಮಠ ಸುರಕೋಡ ಇವರು ಕೆಲವು ಶಿವಕಥೆಗಳನ್ನು ಮಾಡಿದರು. ಇವರಿಗೆ ತಕ್ಕಷ್ಟು ಧನಸಹಾಯ ಮಾಡಬೇಕಾಗಿ ಇಲ್ಲಿಯ ಪ್ರಜಾಮುಖಂಡರು ತರುಣ ಸಂಘದವರು ಸಹ ಮೇಲ್ಕಂಡ ಶಿವಕಥಾ ವಿದ್ವಾನ್ ವೀರಾರ್ಯರಿಂದ ಸಪ್ತಾಹ ಏರ್ಪಾಟು ಮಾಡಿಸಿದ್ದರು. ಕೀರ್ತನಕಾರರು ತಮ್ಮ ಕಥೆಗಳಲ್ಲಿ ಅನಸೂಯಾ, ಅಹಲ್ಯಾ, ಗಿರಿಜಾಕಲ್ಯಾಣ, ಹೇಮರಡ್ಡಿ ಮಲ್ಲಮ್ಮ, ವಿದ್ಯಾಹರಣ, ಗಾರುಡಗರ್ವಭಂಗ ಮೊದಲಾದ ಸತ್ಕಥೆಗಳನ್ನು ಕಾಲಕ್ಕೆ ತಕ್ಕ ಹಾಗೆ ಯೋಜನೆಮಾಡಿ ಬಹು ಯುಕ್ತಿಯುಕ್ತವಾಗಿ ಪ್ರತಿಪಾದಿಸಿದರು. ನಿತ್ಯವೂ ಅನೇಕ ಜನಗಳು ಸೇರುತ್ತಿದ್ದರು. ಸಪ್ತಾಹ ಪರಿಸಮಾಪ್ತಿ ಕಾಲದಲ್ಲಿ ಶ್ರೀ ಶಿವಕಥಾ ಪಂಡಿತ ಜ॥ ನಂಜುಂಡಾರಾಧ್ಯರು ಮ॥ ಶಿವಮೂರ್ತಿಶಾಸ್ತ್ರಿಗಳು ಸಮಯೋಚಿತವಾದ ಭಾಷಣದಿಂದ ಶಿವಕಥಾವಿದ್ವಾನ್ ಶ್ರೀ॥ ವೀರಾರ್ಯರವರ ಗುಣಪ್ರಶಂಸೆ ಮಾಡಿ ವಂದನೆಗಳನ್ನರ್ಪಿಸಿದರು. ಶ್ರೋತೃಜನಗಳು ಕಥಾಶ್ರವಣದಿಂದ ಮತ್ತೊಮ್ಮೆ ವಿದ್ಯಾಹರಣವೆಂಬ ಕಥೆಯನ್ನು ಮಾಡಿಸಬೇಕೆಂಬ ಕುತೂಹಲವುಳ್ಳವರಾಗಿದ್ದರು. ಕಥಾಸಂದರ್ಭದಲ್ಲಿ ಮಧ್ಯೆ ಮಧ್ಯೆ ಶ್ರೀ॥ ಸಂಗೀತವಿದ್ವಾನ್ ಸದಾಶಿವಾರ್ಯರ ಹಾಡುಗಾರಿಕೆಯು ಜನಗಳಿಗೆ ಮನೋರಂಜನೆಯಾಗಿತ್ತು. ಇಂತಹ ಪ್ರತಿಭೆಯುಳ್ಳ ಕೀರ್ತನಕಾರರು ಅಪೂರ್ವವೆಂದು ಸಮಸ್ತ ವರ್ಗದವರು ಹೊಗಳಿದರು. ಈ ವಿಷಯದಲ್ಲಿ ಒಳ್ಳೇ ಯೋಗ್ಯತೆಯನ್ನು ಪಡೆದವರಾಗಿ ಹಿಂದೆ ಕೈ॥ ಕೀರ್ತನಶಿರೋಮಣಿ ವೇ॥ ಪಂಡಿತ ಬಸವಲಿಂಗ ಶಾಸ್ತ್ರಿಗಳವರಲ್ಲಿದ್ದ ವಿಷಯಗಳನ್ನು ಅನುಕರಣಮಾಡಿರುವುದರಿಂದ ಇವರಿಗೆ ಅಭಿನವ ಬಸವಲಿಂಗಶಾಸ್ತ್ರಿಗಳವರೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಇಂತಹ ಪ್ರಸಿದ್ಧ ಕೀರ್ತನಕಾರರನ್ನು ಬೀರೂರಿನ ಮಹಾ ಜನಗಳು ೨೦ ದಿವಸಗಳ ವರೆಗೆ ಇಟ್ಟುಕೊಂಡಿದ್ದು ಬೇರೆಬೇರೆ ಸ್ಥಳಗಳಲ್ಲಿಯೂ ಜಯಂತಿಶಾಲೆಗಳಲ್ಲಿಯೂ ಕಥೆಗಳನ್ನು ಮಾಡಿಸಿ ವಿಶೇಷ ಸನ್ಮಾನದಿಂದ ಸತ್ಕರಿಸಿದ ಮಹನೀಯರಿಗೂ, ಶಿವಕಥಾ ವಿದ್ವಾಂಸರಿಗೂ ಈಶ್ವರನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಓರ್ವ ಶಿವಕಥಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಕಟನೆ.

ಶ್ರೀ ಕೊಣ್ಣೂರು ಹಿರೇಮಠದ ಶ್ರೀ ಪಟ್ಟದಸ್ವಾಮಿಗಳ ಸನ್ನಿಧಿಯಿಂದ ನಮ್ಮ ಶಿಷ್ಯಸಂಪ್ರದಾಯದವರಿಗೆ ಶುಭಾಶೀರ್ವಾದಪೂರ್ವಕ ತಿಳಿಯಪಡಿಸುವದೇನಂದರೆ— ಧಾರವಾಡ ಜಿಲ್ಲಾ ನರಗುಂದ ಪೇಟಾಪೈಕಿ ಕೊಣ್ಣೂರು ಗ್ರಾಮವು ಮಲಪ್ರಭಾನದಿಯ ದಡದಲ್ಲಿರುವುದರಿಂದ ಹೊಳೆಯ ಕೊಣ್ಣೂರೆಂದು ರೂಢಿಯುಂಟು. ಇಲ್ಲಿಯ ಹಿರೇಮಠವು ಬಹು ಪುರಾತನಕಾಲದಿದ್ದು ಶ್ರೀ ಮಜ್ಜಗದ್ಗುರು ವಿಶ್ವಾರಾಧ್ಯರ ಶಾಖಾಮಠವಾಗಿದೆ. ಇಲ್ಲಿ ಅನೇಕಮಂದಿ ಪಟ್ಟಾಧಿಕಾರಿಗಳು ಮಹಿಮಾಶಾಲಿಗಳಾಗಿ ಹೋದರು. ಈ ಮಠದ ಶಿಷ್ಯಸಂಪ್ರದಾಯದವರು ಕರ್ನಾಟಕ, ಬಳ್ಳಾರಿ, ಮೈಸೂರುಸ್ಟೇಟ್, ನಿಜಾಮಇಲಾಖಾ, ಆಂಧ್ರ, ಮಹಾರಾಷ್ಟ್ರಾದಿ ಪ್ರಾಂತಗಳಲ್ಲಿ ಅನೇಕಜನರಿದ್ದಾರೆ. ಈಗ್ಗೆ ಕೆಲವು ದಿವಸಗಳಿಂದ ಮಠದಲ್ಲಿ ಅಧಿಕಾರಿಗಳಿಲ್ಲದಕಾರಣ ಶಿಷ್ಯವರ್ಗದ ಕಾಗದಪತ್ರಗಳು ಗುಪ್ತವಾಗಿವೆ. ನಾವೀಗ ಪೂರ್ಣ ಹೊಸಬರಾಗಿರುವುದರಿಂದ ಜಾತ್ಯಂಧನನ್ನು ಅರಣ್ಯದಲ್ಲಿ ಬಿಟ್ಟಂತಾಗಿದೆ. "ಗುರುಭಕ್ತಿರಹಿತನಿಗೆ ಪರಮುಕ್ತಿ ಇಲ್ಲ" 'ನಗುರೋರಧಿಕಂ' 'ಶಾಸ್ತ್ರತತ್ವಂ ಗುರೋಃಪರಂ' ಇತ್ಯಾದಿ ವೇದವಾಕ್ಯಗಳಿಂದಲೂ, "ಹರಮುನಿದರೆ ಗುರುಕಾಯ್ವನು" ಇವೇ ಮೊದಲಾದ ಪ್ರಾಚೀನರ ಪವಿತ್ರೋಕ್ತಿಗಳಿಂದಲೂ, ಗುರುವಿಗಿಂತಲೂ ಅಧಿಕವಾದ ವಸ್ತುವು ಲೋಕದಲ್ಲಿ ಯಾವದೂ ಇಲ್ಲವೆಂದು ಸಿದ್ಧವಾಗುತ್ತದೆ.

ಗುರುಭಕ್ತಿವಿಹೀನಸ್ಯ ಸಮಸ್ತಾ ನಿಷ್ಫಲಾಃ ಕ್ರಿಯಾಃ |
ಅನುಷ್ಠಿತಾಅಪಿವ್ಯರ್ಥಾ ಸ್ವೈರಿಣೀವ್ರತವತ್ಪುನೇ ||

ಲೋಕದಲ್ಲಿ ವ್ಯಭಿಚಾರಿಣಿಯಾದ ಸ್ತ್ರೀಯಳು ಎಷ್ಟು ನಿಯಮೋಪವಾಸಾದಿವ್ರತಗಳನ್ನು ಆಚರಿಸುತ್ತಿದ್ದರೂ ಆ ವ್ರತಗಳೆಲ್ಲವೂ ಹೇಗೆ ನಿಷ್ಫಲಗಳಾಗುವವೋ ಅದರಂತೆ ಗುರುಭಕ್ತಿಯಿಲ್ಲದ ಮಾನವನು ಎಷ್ಟು ಪುಣ್ಯಕರ್ಮಗಳನ್ನು ಆಚರಿಸಿದರೂ ಅವುಗಳು ನಿಷ್ಫಲವಾಗುವುವಲ್ಲದೆ ಫಲಕಾರಿಗಳಾಗುವದಿಲ್ಲವೆಂದು ಪಾರಮೇಶ್ವರಾಗಮದಲ್ಲಿ ಹೇಳಲ್ಪಟ್ಟಿರುವುದರಿಂದ ಎಂಭತ್ತನಾಲ್ಕು ಲಕ್ಷ ಜೀವರಾಶಿಗಳಲ್ಲಿ ಶ್ರೇಷ್ಠವಾದ ಮಾನವನು ಐಹಿಕಸುಖಶ್ರೇಯಸ್ಸಾಧಕಗಳಾದ ಪುಣ್ಯಕರ್ಮಗಳನ್ನು ಗುರುಭಕ್ತಿಯೆಂಬ ಮೂಲಾಧಾರದಲ್ಲಿಯೇ ಆಚರಿಸಬೇಕು. ಗುರುವಿಲ್ಲದೆ ಮಾಡಿದ ಸತ್ಕರ್ಮಗಳು ಫಲವನ್ನು ಕೊಡುವುದಿಲ್ಲವು. ಆದುದರಿಂದ ಗುರುಭಕ್ತಿಶೀಲರಾದ ಈ ಕೊಣ್ಣೂರು ಹಿರೇಮಠದ ಶಿಷ್ಯರು ತಮ್ಮ ಹೆಸರು ವಿಳಾಸ ಸಹಿತ ತಿಳಿಸಿದಲ್ಲಿ ಉತ್ತರವನ್ನು ಬರೆಯುತ್ತೇವೆ. ದರ್ಶನಾಪೇಕ್ಷಿಗಳ ಬಳಿಗೆ ಪ್ರತ್ಯಕ್ಷ ಬರಲು ಸಿದ್ಧರಿದ್ದೇವೆ. ಗುರುಗಳಾದವರು ತಾವೇ ಬರುವರೆಂದು ಉದಾಸೀನ ಮಾಡಬೇಡಿರಿ. ಕೆಲವು ಮೋಸಗಾರರು ನಾವೇ ಕೊಣ್ಣೂರು ಹಿರೇಮಠದವರೆಂದು ಬರುತ್ತಿರುವರು. ನೀವು ಅವರನ್ನು ನಂಬಬೇಡಿರಿ. ಒಮ್ಮೆ ನಮ್ಮಗಳಿಗೆ ಪರಿಚಯ ಮಾಡಿಕೊಟ್ಟು ಶ್ರೀ ಗುರುಗಳ ದರ್ಶನಾಶೀರ್ವಾದಲಾಭವನ್ನು ಪಡೆಯಬೇಕೆಂದು ಸೂಚಿಸುತ್ತೇವೆ.

ಶ್ರೀ ಪಟ್ಟದಸ್ವಾಮಿಗಳು ಹಿರೇಮಠ,
ಮು-ಪೋ-ಕೊಣ್ಣೂರು, ಡಿ॥ ಧಾರವಾಡ.

ಚಾಣಕ್ಯನ ಅರ್ಥಶಾಸ್ತ್ರನೀತಿ

~~ಪ್ರಥಮಭಾಗ (೧ ನೇಯ ಅಧ್ಯಾಯ)~~

21-5-74 ~~ವಿದ್ಯಾಸಮುದ್ದೇಶ.~~

~~[ಕೌಟಿಲ್ಯ— [illegible]]~~

~~(ಮುಂದುವರಿದುದು.)~~

~~೩ನೆಯ ಅಧ್ಯಾಯ~~—ವಾರ್ತೆ ಮತ್ತು ದಂಡನೀತಿ.

೧. ವಾರ್ತಾಶಾಸ್ತ್ರವನ್ನು ಪಠಿಸುವವನು ವ್ಯವಸಾಯ, ಪಶುಪಾಲನೆ ಮತ್ತು ವ್ಯಾಪಾರಲಕ್ಷಣ ಇವುಗಳನ್ನು ತಿಳಿದುಕೊಳ್ಳುವನು. ಅಲ್ಲದೆ ಈ ಶಾಸ್ತ್ರವು ಧಾನ್ಯ, ಬೆಳೆ, ಚಿನ್ನ, ವನಫಲ, ಕೈಗಾರಿಕೆ ಇವುಗಳನ್ನು ಪಡೆಯುವ ವಿಧಾನಗಳನ್ನು ಬೋಧಿಸುತ್ತದೆ. ಈ ಶಾಸ್ತ್ರಮರ್ಯಾದಾನುಸಾರವಾಗಿ ನಡೆಯುವುದರಿಂದ ಭಂಡಾರ ಮತ್ತು ಸೈನ್ಯ ಇವುಗಳ ಸಹಾಯದಿಂದ ರಾಜನಾದವನು ತನ್ನ ಮತ್ತು ವೈರಿ ಪಕ್ಷದವರ ಸೈನ್ಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ವೈರಿಯನ್ನು ನಿಗ್ರಹಿಸುವ ವಿಧಾನವನ್ನು ತಿಳಿಯುವನು.

೨. ದಂಡನೀತಿಶಾಸ್ತ್ರವಾದರೋ, ರಾಜಕೀಯ ನಿಬಂಧನಾನುಸಾರವಾಗಿ ಅಪರಾಧಿಗಳಿಗೆ ವಿಧಿಸಲ್ಪಡಬೇಕಾಗಿರುವ ಶಿಕ್ಷಾಕ್ರಮಗಳನ್ನು ತಿಳಿಯಪಡಿಸುವುದು. ಇದರಿಂದ ರಾಜ್ಯಪರಿಪಾಲನಾಕ್ರಮವೂ, ರಾಜ್ಯಸಂಪಾದನೆಯ ಮಾರ್ಗವೂ, ರಾಜ್ಯಪುರೋಭಿವೃದ್ಧಿಯ ರೀತಿಯೂ, ಶೇಖರಿಸಿಟ್ಟ ರಾಜಕೋಶದಿಂದ ಯೋಗ್ಯರಾದವರಿಗೆ ಧನವನ್ನು ಸನ್ಮಾರ್ಗದಲ್ಲಿ ವಿನಿಯೋಗಿಸಬೇಕಾದ ಮಾರ್ಗಗಳೂ ತಿಳಿವಳಿಕೆಗೆ ಬರುವುವು. ಅಲ್ಲದೆ ಈ ಶಾಸ್ತ್ರವು ಉತ್ತಮವಾದ ಮಾರ್ಗದಲ್ಲಿ ವಿಚಕ್ಷಣತೆಯಿಂದ ನಡೆಯುವುದಾದರೆ ಪ್ರಪಂಚವು ಅಭಿವೃದ್ಧಿಗೆ ಬರುವ ಮಾರ್ಗವನ್ನು ಬೋಧಿಸಲು ಒಂದು ಹದಿಪಾಯದಂತಿರುವುದು.

ಚಾಣಕ್ಯನು ತನ್ನ ಗುರುವು ನೀತಿಶಾಸ್ತ್ರದ ವಿಷಯವಾಗಿ ಹೇಳುವ ಅಭಿಪ್ರಾಯವೇನೆಂದರೆ:—"ಯಾರು ಈ ಪ್ರಪಂಚವು ಅಭಿವೃದ್ಧಿಸ್ಥಿತಿಗೆ ಬರಬೇಕೆಂದು ಆಶಿಸುವರೋ ಅಂಥವರು ದಂಡಶಾಸ್ತ್ರವನ್ನು ಓದಿ ತಿಳಿಯಬೇಕು. ಪ್ರಜೆಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿದ್ದರೆ ಇಂತಹ ಶಾಸ್ತ್ರಕ್ಕಿಂತ ಸರ್ವೋತ್ತಮವಾದುದು ಬೇರೊಂದಿಲ್ಲ" ಎಂದು ಹೇಳಿರುವನು.

೩. ಚಾಣಕ್ಯನು ಈ ಅಭಿಪ್ರಾಯವನ್ನು ಕುರಿತು "ಯಾವನು ಕ್ರೂರವಾದ ಶಿಕ್ಷೆಯನ್ನು ಜನರಿಗೆ ವಿಧಿಸುತ್ತಾನೆಯೊ ಅಂಥವನು ಪ್ರಜೆಗಳನ್ನು ತೊಂದರೆಗೊಳಮಾಡಿದವನಾಗುತ್ತಾನೆ. ಯಾರು ಸಾಧಾರಣವಾಗಿ ಪ್ರಜೆಗಳನ್ನು ಶಿಕ್ಷಿಸುವರೋ ಅವನನ್ನು ಜನರು ಕಂಡರೆ ಹೊಟ್ಟೆಕಿಚ್ಚು ಪಡುವರು. ಎಲ್ಲಿ ಶಿಕ್ಷೆಯನ್ನು ವಿಧಿಸುವುದು ಯೋಗ್ಯವೆಂದು ತೋರಿಬರುವುದೋ ಅಂತಹ ಸ್ಥಳದಲ್ಲಿ ಶಿಕ್ಷೆಯನ್ನು ವಿಧಿಸಿದುದಾದರೆ ಅವನು ಯೋಗ್ಯನೆಂದೆನಿಸಿಕೊಳ್ಳುವನು" ಎಂದು ಹೇಳುವನು.

೪. ಶಿಕ್ಷೆಯು ಸಾಮಾನ್ಯವಾಗಿ ವಿಧಿಸಲ್ಪಟ್ಟರೆ ಜನರು ಸತ್ಯವಂತರಾಗಿಯೂ, ಐಶ್ವರ್ಯವಂತರಾಗಿಯೂ, ಸೌಖ್ಯಭಾಜಕರಾಗಿಯೂ ಆಗುವರು. ಹೊಟ್ಟೆಕಿಚ್ಚನ್ನು ತಾಳಿ, ಕುಪಿತರಾಗಿ ಅಪರಾಧಿಗಳಿಗೆ ಶಿಕ್ಷೆಗಳನ್ನು ವಿಧಿಸಿದರೆ ಆಗ್ಗೆ ಜನರು ಸಂಸಾರವಿದೂರರಾಗಿ ಪ್ರಪಂಚದ ಹಂಬಲನ್ನೇ ತ್ಯಜಿಸಿರುವ ಆಶ್ರಮವಾಸಿಗೂ, ಸನ್ಯಾಸಿಗಳಿಗೂ ಕೋಪೋದ್ರೇಕವಾಗುವುದೆಂದು ಹೇಳುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಅಪರಾಧಿಯು ಸಂಸಾರಿಯಾಗಿದ್ದಲ್ಲಿ ಅವನಿಂಗ ತನ್ನ ಸಂಸಾರಕ್ಕುಂಟಾಗಬಹುದಾದ ತೊಂದರೆಗಳು ಅಪ್ಪೆನ್ನೆಂದು ಹೇಳಲಸಾಧ್ಯವಾಗುವುದು.

೫. ಈ ಕಾರಣದಿಂದ ಒಂದುವೇಳೆ ಶಿಕ್ಷೆ ಅಪರಾಧಿಗಳಿಗೆ ವಿಧಿಸದಿದ್ದ ಪಕ್ಷದಲ್ಲಿ 'ದೊಡ್ಡ ಸಣ್ಣಮೀನನ್ನು ನುಂಗಿಬಿಡುವದು' ಎಂಬ ತಕ್ಕಂತೆ ಬಲಿಷ್ಠನು ಬಲಹೀನನನ್ನು ಆಕ್ರಮ ಮಾಡಿ, ವಿಶೇಷವಾಗಿ ಬಂಧಿಸಿ ಹಾಳುಮಾಡ ಈಗ ನ್ಯಾಯಾನ್ಯಾಯ ತೀರ್ಮಾನವೇ ಇ ಪಕ್ಷದಲ್ಲಿ ಬಲಾಬಲಗಳನ್ನು ನೋಡಿಕೊಂಡು ಬ ತನು ಬಲಹೀನನನ್ನು ನಾಶಮಾಡಿಯೇಬಿಡು ಹೀಗಾಗದಂತಿರಲು ನ್ಯಾಯಾಧಿಪತಿಯೊಬ್ಬನಿದ್ದ ದರೆ ಒಬ್ಬನು ಮತ್ತೊಬ್ಬನನ್ನು ಹಿಂಸಿಸಲು ಅ ವಾಗಿ, ಜನಗಳಿಗೆ ಈತನ ವಿಷಯದಲ್ಲಿ ವಿಶೇಷ ಕೆಯು ಇದ್ದೇ ಇರುವುದು.

೬. ಈ ಲೋಕದಲ್ಲಿರುವ ಜನರು ಅನಾ ವಾಗಿ ಬಂದಿರುವ ನಾಲ್ಕು ವರ್ಣದವರಾಗಿ ಆಶ್ರಮಧರ್ಮಮಾರ್ಗಗಾಮಿಗಳಾಗಿಯೂ ಇರುವ ಮಹಾರಾಜನು ತನ್ನ ಧರ್ಮವನ್ನು ಬಿಡದೆ, ರಾಜ್ಯ ವಿಚಕ್ಷಣೆಯಿಂದ ತನ್ನ ಪ್ರಜೆಗಳನ್ನು ನಡೆಯಿಸಿಕೊ ಬರುತ್ತಿದ್ದರೆ ಜನರೂ ತಮ್ಮ ತಮ್ಮ ಜಾತಿಧರ್ಮಗ ಬಿಡದೆ ಉಚಿತ ಜೀವನೋಪಾಯಕಾರ್ಯಗಳನ್ನು ಸಿಕೊಂಡು ಬಂದು, ನಿರಾತಂಕವಾಗಿ ಜೀವಿಸಿಕೊ ತ್ತಿರುವರು. ಹಾಗಿಲ್ಲದಪಕ್ಷದಲ್ಲಿ ರಾಜ್ಯವಿನಾ ಕಾರಣವಾಗಿ ಎಲ್ಲವೂ ನಾಶಹೊಂದುವುದರಲ್ಲಿ ಸಂಶಯವಿಲ್ಲ.

೪ ನೆಯ ಅಧ್ಯಾಯ-ವೃದ್ಧಸಂಯೋಗ.

೧. ಮೊದಲು ಹೇಳಿರುವ ನಾಲ್ಕು ಶಾಸ್ತ್ರ ಮೊದಲು ಮೂರು ಶಾಸ್ತ್ರಗಳು ಮಾತ್ರ ದಂಡ ಶಾಸ್ತ್ರಕ್ಕೆ ಅಧೀನವಾಗಿರುವುವು. ಶಿಕ್ಷಾಕ್ರಮವ ಬೋಧಿಸುವ ದಂಡನೀತಿಶಾಸ್ತ್ರವೊಂದರಲ್ಲಿ ಪ್ರಜಾ ಮವೂ, ಪ್ರಾಣರಕ್ಷಣೆಯೂ ಉಂಟಾಗುವ ಮಾ ಗಳನ್ನು ಬೋಧಿಸುವ ಮಾರ್ಗಗಳಿರುವವು.

೨. ಶಿಕ್ಷಾಕ್ರಮವು ಸ್ವಾಭಾವಿಕ ಯೆಂತ ಮತ್ತೊಂದು ಮನುಷ್ಯಕೃತಶಿಕ್ಷೆಯೆಂತಲೂ ಎರಡು ವಿಧವು ಶಿಕ್ಷಾರ್ಹರಾದವರಿಗೆ ಮಾತ್ರ ಕಾರ್ಯವಿ ಕ್ಷಣಾಮಾರ್ಗವನ್ನು ಬೋಧಿಸುವುದರಿಂದ ಅವ ಸಹಾಯ ಸಂಪತ್ತುಂಟಾಗುವುದು. ವಿಧೇಯ ತಾಳ್ಮೆ, ವಿಷಯಗ್ರಹಣಾಭಿಲಾಷೆ, ಜ್ಞಾಪಕಶಕ್ತಿ ಪದಾರ್ಥಯೋಗ್ಯತಾ ತಾರತಮ್ಯಜ್ಞಾನ, ವಿವೇಕ ಬುದ್ಧಿವಾದಗ್ರಹಣ, ಯೋಚನೆಮಾಡುವಸ್ವಭಾ ಇಂತಹ ಉತ್ತಮಗುಣಗಳುಳ್ಳವರು ಮಾತ್ರ ಶಾ ಗಳನ್ನು ಓದಿದರೆ, ಅವು ಅವರಿಗೆ ವಿಶೇಷ ಸಹಾಯ ಕರವಾಗಿರುವುವು. ಇಂತಹ ಗುಣಗಳು ಯಾರಲ್ಲಿಲ್ಲವೋ ಅಂಥವರಿಗೆ ಆ ಶಾಸ್ತ್ರಗಳು ಯಾವ ಪ್ರಯೋಜನಕಾ ಯಾಗಿರಲಾರವು.

ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅಂಗಿನಪೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟ್ ಕುಗಳು ಮತ್ತು ಫೋಟೋ ಬ್ಲಾಕುಗಳನ್ನು ಮಾಡುತ್ತೇವೆ.
[22]

ಸ್ತ್ರೋಕ್ತ ದಿವ್ಯೌಷಧಗಳು.

ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಲಭ್ಯದಲ್ಲಿ ದೊರೆಯುವವು.

ಹೆಸರು	ತೊಲಿ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಧೂರ	೧	೨—೦—೦
ಧೂರ	೧	೪—೦—೦
ಧೂರ	೧	೪—೦—೦
ಧೂರ	೧	೪—೦—೦
ವಂಗ	೧	೩—೦—೦
	೧	೧—೦—೦
ಭಸ್ಮಗಳು.		
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಭಸ್ಮ	೧	೦—೧೨—೦
ಸ್ಮ	೧	೦—೮—೦
ಸ್ಮ	೧	೦—೮—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಸ್ಮ	೧	೦—೮—೦
ರಭಸ್ಮ	೧	೦—೮—೦
ಕಾಭಸ್ಮ	೧	೦—೧೨—೦
ಭಸ್ಮ	೧	೩—೦—೦
ಭಸ್ಮ	೧	೪೨—೦—೦
ಭಸ್ಮ	೧	೦—೮—೦
ಸ್ಮ	೧	೦—೪—೦
ಸ್ಮ	೧	೦—೪—೦
[illegible]		೦—೮—೦
ಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ರಿ (೧ನೇ ನಂಬರ್)	೧	೫೦—೦—೦
ರಿ (೨ನೇ ನಂಬರ್)	೧	೪೦—೦—೦
ಜಿತ ಸೂರ್ಯಪುಟಿ	೧	೧—೦—೦
ಜಿತ ಅಗ್ನಿಪುಟಿ	೧	೦—೮—೦

ಪೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಗೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ು ಕಳುಹಿಸುವೆವು.

(ಸಕೀಪ ಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ದೇಶೀಪೇಟಾಮಾರ್ಟ್

ಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ ದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ಕೊಳೆ ಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣೆ ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಬೇಕೆಂದು ಕೋರುತ್ತೇವೆ.

ಂತೆ! ಂದು ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.
ದಾಗ, ಸ್ವೇ **ಎಸ್. ಎಗ್. ಹೊಸಮನೆ,**
ನಂತೆ ವಲ್ಲಿಕೇರಿ॥ **ಗುಳೇದಗುಡ್ಡ, ಡಿ॥ ಬಿಜಾಪುರ.**

ನೂತನಗ್ರಂಥ ! ನೂತನಗ್ರ

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳೀಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಸಂಕಟಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೆರತಿರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

[illegible] ಸ್ಪೆಸಿಫಿಕ್—[illegible] ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಡಿಬ್ಬಿಗೆ ಆಣೆ 0-9-0, 1 ಡಿಬ್ಬಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬೇನೆ, ಬಹಳ ಬೆವರು, ಮೆದುಳು ಬಿಸಿ, ಕಣ್ಣೆಂಪಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಕ್ಕೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಾಸಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಡಿಬ್ಬಿಗೆ 0-9-0, 1 ಡಿಬ್ಬಿಗೆ ರು. 1-0-0.

ರ್‍ಹ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು [illegible] ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಚಿಲ್ಲ ಮದ್ದುಗಳೂ ಹೋಮಿಯೊಪಥಿ ಔಷಧಿಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾಠದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[37] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳತು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಛರ್ದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಸ್ವೀಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[18] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशीनाथशास्त्री यांचें भाषण (मराठी)	೮
Speeches by Pandit Shri Kashinatha Shastri (*English*)	1
ವೇದೋಕ್ತಶಿವಪೂಜಾವಿಧಿ	೧
ವೀರಶೈವರತ್ನ	೧
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಲಿಂಗೋತ್ಪತ್ತಿ ಲಾಕೆಟ್ಸ್	
ಕೇನೋಪನಿಷತ್ (ವೀರಶೈವಭಾಷ್ಯ)	೧
ಈಶಾವಾಸ್ಯೋಪನಿಷತ್ (ಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧
लिंगधारणचंद्रिका (संस्कृत)	
महानारायणोपनिषत् (वीरशैवभाष्य-संस्कृत)	
वीरशैवेंदुशेखर (संस्कृत)	

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸು ೫ ರೂ. ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆ ಪುಸ್ತಕ ಕಮಿಶನ್ [illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಮ್ಮಿ ಶೀತಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರಿಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇ ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾ

(Registered Trade Mark)

ಗಳನ್ನು ಕೊಟ್ಟಿ ರು. ಪ್ರಸಿದ್ಧವಾ ನಶ್ಯದ ಪುಡಿ ಸ್ವಸ್ಥವಾಗುವ ಧಿಗಳು ಯಾವ ರೆ:—ಪಿನಸಿ, ತಲೆಸೋವು, ಲ್ಲಿನ ರೋಗ ಕಣ್ಣುಗಳಲ್ಲಿ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦

ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ

[19] ಪೋ. ಬಾ. ೫೧೧, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೯ನೇ ಮೇ ೧೯೩೩ [ಸಂಚಿಕೆ ೫

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ರಾಣವನ್ನು ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾದ ವೇ|| ನಂಜನಗೂಡು ಕಂಠಶಾಸ್ತ್ರಿಗಳೆಂಬ ಕವಿಪುಂಗವರು ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾರೆ. ಈ ಕವಿ ಕವಿತಾಸರಣಿಯು ಅಸದೃಶವಾದುದು. ಇವರ ಕವಿತಾಮಹತ್ತ್ವವನ್ನು ಇಡೀ ರ್ಣಾಟಕದೇಶವೇ ಕೊಂಡಾಡುತ್ತದೆ. ಪುರಾಣವನ್ನು ಸಂಪೂರ್ಣವಾಗಿ ಪರಿಶೀಲಿಸಿದರೆ ಮಹಾಕವಿಗಳ ಯೋಗ್ಯತೆಯು ಸ್ಪಷ್ಟವಾಗಿ ಕಂಡುಬರುವುದು. ಈ ಪುರಾಣದಲ್ಲಿ [illegible] ಶ್ರೀ [illegible] ಗುರುಸಾರ್ವಭೌಮನ [illegible] ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗ ುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರ ಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ರಂದರದಾಸರು ಯಾವ ರೀತಿಯಾಗಿ ಮನೋಹರ ದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರು ರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ೇಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿ ಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸ ಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಜರ್ಮನ್ ದೇಶದಲ್ಲಿ ಯಾವುದಾದರೂ ಮತಕ್ಕೆ ರಿದವರಿಗೆ ಶೇಕಡಾ 13 ರಂತೆ ಹೆಚ್ಚಿನ ವರಮಾನ ಗೆಯನ್ನು ವಿಧಿಸುವರಂತೆ! ಈ ತೆರಿಗೆಯನ್ನು ತಪ್ಪಿ ಳ್ಳುವದಕ್ಕಾಗಿ 30,00,000 ಜರ್ಮನ್ನರು ತಾವು ಾವ ಮತಕ್ಕೂ ಸೇರಿದವರಲ್ಲವೆಂದು ಹೇಳುವರಂತೆ!

ಸ್ವೀಕಾರ

ಧಾರವಾಡ ಡಿ|| ಗದಗಶಹರ ನಿವಾಸಿಗಳಾದ ವೇ|| ಗುರುಸ್ವಾಮಿ ಮಠದ ಶಿವಲಿಂಗಾರ್ಯರ ಪುತ್ರ ಚಿ|| ಶ್ರೀಕರನಿಗೆ ನೆರವೇರಿದ 5 ನೇ ವರ್ಷದ ವರ್ಧಂತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಸ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಒಬ್ಬ ಧನಾಢ್ಯನಾದ ಜಮೀನ್ದಾರರನ್ನು ಕೊಲ್ಲಬೇಕೆಂದು ಪಿತೂರಿ ನಡೆಸಿದರೆಂಬ ಅಪಾದನೆಯಮೇಲೆ ಗಾಬಾತ್ನ ಸೆಷನ್ಸ್ ಜಡ್ಜರವರು 18 ಜನರಿಗೆ ಜೀವಾವಧಿ ದ್ವೀಪಾಂತರವಾಸದ ಶಿಕ್ಷೆಯನ್ನು ವಿಧಿಸಿದರು. ಮತ್ತು ಪಂಚಾಯಿತರ ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರರ ಶಿಫಾರಸಿನ ಮೇಲೆ ಇಬ್ಬರನ್ನು ಮಾತ್ರ 5 ವರ್ಷಗಳನಂತರ ಬಿಡುಗಡೆಮಾಡಬಹುದೆಂದು ಸರಕಾರಕ್ಕೆ ಸೂಚಿಸಿರುತ್ತಾರೆ.

ಮೈಸೂರು ಗೆಜಿಟ್.

'ಮೈಸೂರು ಸ್ಟೇಟ್ ಟ್ರೂಪ್ಸ್'ನ ಚೀಫ್ ಕಮ್ಯಾಂಡೆಂಟರಾದ ಕರ್ನಲ್ ಜೆ. ಸಿ. ಲಾಕ್, ಸಿ.ಐ.ಇ., ಇವರಿಗೆ ಜೂನ್ 6ನೇ ತಾರೀಖಿನ ಆರಾಭ್ಯ 6 ತಿಂಗಳ ರಜೆಯು ಕೊಡಲ್ಪಟ್ಟಿರುವದು. ಈ ಅವಧಿಯಲ್ಲಿ ಮೈಸೂರು ಲ್ಯಾನ್ಸರ್ಸ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಬಿ. ಪಿ. ಕೃಷ್ಣೇ ಅರಸರವರು ಚೀಫ್ ಕಮ್ಯಾಂಡೆಂಟರ ಕೆಲಸವನ್ನು ಬದಲಿ ನೋಡುವರು.

ಬೆಂಗಳೂರಿನ ಸಬಾರ್ಡಿನೇಟ್ ಜಡ್ಜರಾದ ಮಿ|| ಎಚ್. ಕೆ. ವೀರಬಸವಯ್ಯನವರು ಬಿ.ಎ., ಬಿ. ಎಲ್ ರವರಿಗೆ ಮೇ 22ನೇ ತಾರೀಖಿನಿಂದ 20 ದಿವಸಗಳ ರಜೆಯು [illegible] ಬೆಂಗಳೂರು ಸ್ಮಾಲ್ ಕಾಜ್ ಕೋರ್ಟಿನಲ್ಲಿ ಜಡ್ಜರಾಗಿರುವ ಮಿ|| ಆರ್. ಪುಟ್ಟರಾಜೇ ಅರಸ್ ಎಂ.ಎ., ಬಿ.ಎಲ್., ರವರು ತಮ್ಮ ಕೆಲಸದ ಜೊತೆಗೆ ಸಬ್ ಕೋರ್ಟಿನ ಕೆಲಸವನ್ನೂ ನೋಡಿಕೊಳ್ಳುವರು.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಫಸ್ಟ್ ಗ್ರೇಡ್ ಅಸಿಸ್ಟೆಂಟ್ ಸರ್ಜನ್ನರಾಗಿದ್ದ ಮಿ|| ಎಸ್. ಎನ್. ನಾರಾಯಣಪ್ರಸಾದ್‌ರವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ದಾವಣಗೆರೆ ಲೋಕಲ್ ಫಂಡ್ ಡಿಸ್ಪೆನ್ಸರಿಯ ಅ|| ಸರ್ಜನ್ನರಾದ ಮಿ|| ವಿ. ಎಲ್. ಪಡಕೆಯವರು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಸ್ಪತ್ರೆಯ ಅ|| ಸರ್ಜನ್ನರಾದ ಮಿ|| ಎ. ಬಿ. ರೇಣುರವರು ಭದ್ರಾವತಿ ಐರನ್‌ವರ್ಕ್ಸ್ ಡಿಸ್ಪೆನ್ಸರಿಗೂ, ಭದ್ರಾವತಿಯಲ್ಲಿ ಆಕ್ಟಿಂಗ್ ಅ|| ಸರ್ಜನ್ನರಾದ ಮಿ|| ಎಸ್. ಚೊಕ್ಕಂ ಅಯ್ಯಂಗಾರ್ಯರು ದಾವಣಗೆರೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಅಮೇರಿಕೆಯ ನೂತನ ಅಧ್ಯಕ್ಷರಾದ ಮಿ|| ರೂಸ್‌ವೆಲ್ಟರವರು ತಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆಮಾಡುವದಕ್ಕೋಸ್ಕರ 25 ಲಕ್ಷ ಜನರನ್ನೊಳಗೊಂಡ 'ಫೆಡರಲ್ ಕನ್‌ಸರ್ವೇಷನ್ ಕಾರ್ಪ್ಸ್' ಎಂಬ ಕೆಲಸಗಾರರ ಸೈನ್ಯವನ್ನು ನಿರ್ಮಾಣಮಾಡಿರುತ್ತಾರೆ. ಪ್ರಾರಂಭದಲ್ಲಿ ಪ್ರತಿಯೊಂದು ದೊಡ್ಡದೊಡ್ಡ ನಗರಗಳಿಂದಲೂ ಕೆಲವರನ್ನು ಸೇರಿಸಿಕೊಂಡು 25,000 ಜನರು ಕೂಡಿದ ಕೂಡಲೇ ಅವರಿಗೆ ಸೈನಿಕರಂತೆ ಶಿಕ್ಷಣಕೊಡುವರು. ಅನಂತರ ಅವರನ್ನು 100 ಅಥವಾ 200 ಜನರಿಗೆ ಒಂದರಂತೆ ಬೇರೆಬೇರೆ ಗುಂಪುಗಳನ್ನಾಗಿ ಮಾಡಿ ಕಾಡುಗಳಲ್ಲಿರುವ ಕ್ಯಾಂಪುಗಳಲ್ಲಿ ಕೆಲಸಮಾಡುವುದಕ್ಕೆ ಕಳುಹಿಸುವರು. ಅಲ್ಲಿ ಅವರ ಊಟಉಪಚಾರಗಳಲ್ಲದೆ ದಿನ 1 ಕ್ಕೆ 0-12-0 ಯ ಸಂಬಳವನ್ನು ಕೊಡುವರು. ಇದರಂತೆ 25 ಲಕ್ಷ ಜನರಾಗುವವರೆಗೂ ಮಾಡುವರು. ಪ್ರತಿಯೊಬ್ಬರೂ 6 ತಿಂಗಳುಗಳವರೆಗೆ ಕೆಲಸಮಾಡುವೆವೆಂದು ಮೊದಲು ಪ್ರಮಾಣಮಾಡಬೇಕು!

27-5-74

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ,
ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ವೇದದಲ್ಲಿಯ ವಾಕ್ಯಗಳಾದರೂ ವಾಲ್ಮೀಕಿ-ವ್ಯಾಸ-ಕಾಳಿದಾಸ ಮೊದಲಾದವರ ವಾಕ್ಯಗಳಂತೇ ಇವೆ. ವಾಲ್ಮೀಕಿ ಮೊದಲಾದವರ ವಾಕ್ಯಗಳು ಪೌರುಷೇಯಗಳಾಗಿರುವಂತೆ, ವೇದವಾಕ್ಯಗಳಾದರೂ ಪೌರುಷೇಯಗಳೆನಿಸಿಕೊಳ್ಳಬಹುದಲ್ಲವೇ? ಎಂಬ ಆಕ್ಷೇಪದ ಸಮಾಧಾನವು ಹೇಗೆಂದರೆ—ವಾಲ್ಮೀಕಿ, ವ್ಯಾಸ ಮುಂತಾದ ಪುರುಷರು ರಾಮಾಯಣಭಾರತಾದಿ ಗ್ರಂಥಕರ್ತೃಗಳೆಂಬ ಸಂಗತಿಯು, ಆ ಆ ಗ್ರಂಥನಿರ್ಮಾಣಸಮಯದಲ್ಲಿದ್ದ ಜನರಿಂದ ಪ್ರತ್ಯಕ್ಷ ಅರಿಯಲ್ಪಟ್ಟುದಾಗಿ ತತ್ಕಾಲಾನಂತರದಲ್ಲಿಯೂ ಬಿಡುವಿಲ್ಲದೆ ಪಾರಂಪರ್ಯವಿಡಿದು ಈವರೆಗೂ ಸರ್ವತ್ರ ವಿದಿತವಾಗಿರುವಂತೆ, ಒಬ್ಬಾನೊಬ್ಬ ಪುರುಷನು ವೇದವನ್ನು ರಚಿಸಿದನೆಂಬುದು ಪ್ರಸಿದ್ಧವಿಲ್ಲ.

ವೇದಪ್ರವರ್ತಕರಾದ ಋಷಿಗಳ ವಚನಗಳು ಈಶ್ವರಪ್ರೇರಿತಗಳೆನಿಸುವಲ್ಲಿ, ಕಾಳಿದಾಸಾದಿಗಳ ವಾಕ್ಯಗಳಾದರೂ ಈಶ್ವರಪ್ರೇರಿತಗಳೇ ಎಂದು ಏಕೆ ತಿಳಿಯಬಾರದು? ಎಂದು ಶಂಕಿಸುವವರಿಗೆ ನಾವು ಹೇಳುವುದೇನೆಂದರೆ, ವಸ್ತುತಃ ಎಲ್ಲವೂ ಈಶ್ವರಪ್ರೇರಿತವೇ ಎಂಬುದರ ಅರಿವು ನಮಗೂ ಇರುವುದು. ಆದರೆ ವಿಶ್ವಪ್ರಪಂಚವು ಪ್ರಕೃತಿಯ ವಿಕೃತಿಯೆಂಬ ತಿಳಿವಳಿಕೆಯುಳ್ಳ ನೀವಾದರೂ ಕೆಲವು ಕಾರ್ಯವರ್ಗದಲ್ಲಿ ಕೇವಲ ಪುರುಷಬುದ್ಧಿಕೃತಸಂಬಂಧವೇ ಇರುವುದೆಂಬ ಸಂಗತಿಯ [illegible] ಅಲ್ಲಿ ಕೇವಲ ಈಶ್ವರಪ್ರೇರಣೆಯು ಸಾಕ್ಷಾತ್ಸಂಬಂಧವುಳ್ಳ ವಾಕ್ಯಗಳಿಗೂ ಪುರುಷಬುದ್ಧಿರಚಿತ ವಾಕ್ಯಗಳಿಗೂ ತಾರತಮ್ಯವೇ ಇಲ್ಲವೇನು? ಈ ವಿಷಯದಲ್ಲಿ ನಾವು ಎರಡು ಮಾತುಗಳನ್ನು ಹೆಚ್ಚು ಹೇಳುತ್ತೇವೆ. ಪ್ರತಿಭಾಶಕ್ತಿಸಂಪನ್ನನೂ, ವ್ಯುತ್ಪತ್ತಿಯುಳ್ಳವನೂ ಕವಿಯೆನಿಸುವನು. ಪ್ರತಿಭೆಯ ಲಕ್ಷಣವನ್ನಾದರೋ ಸಾಹಿತ್ಯಕಾರರು ಬಹುವಿಧವಾಗಿ ಬಣ್ಣಿಸಿದ್ದಾರೆ. ಭಟ್ಟತೌತನು :—

ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾ ಮತಾ ।
ತದನು ಪ್ರಾಣನಾ ಜೀವದ್ವರ್ಣನಾ ನಿಪುಣಃ ಕವಿಃ ॥

ಎಂದು ಕಾವ್ಯಕೌತುಕದಲ್ಲಿ ಹೇಳಿದ್ದಾನೆ. ಕಾವ್ಯಾಲಂಕಾರಸೂತ್ರಕಾರನಾದ ವಾಮನನು—"**ಕವಿತ್ವಬೀಜಂ ಪ್ರತಿಭಾನಮ್**" ಎಂದು ಪ್ರತಿಭೆಯ ಲಕ್ಷಣವನ್ನು ತೋರಿಸಿ—

'ಕವಿತ್ವಬೀಜಂ ಜನ್ಮಾಂತರಗತಸಂಸ್ಕಾರವಿಶೇಷಃ ಕಶ್ಚಿತ್ । ಯಸ್ಮಾದ್ವಿನಾ ಕಾವ್ಯಂ ನ ನಿಷ್ಪದ್ಯತೆ, ನಿಷ್ಪನ್ನಂ ವಾವಹಾಸಾಯತನಂ ಸ್ಯಾತ್ ॥'

ಎಂಬುದಾಗಿ ವೃತ್ತಿಯಲ್ಲಿ (೧-೩-೧೬) ಅದರ ಸ್ಪಷ್ಟೀಕರಣವನ್ನು ಮಾಡುತ್ತಾನೆ. ಪ್ರತಿಭೆ ಅಂದರೆ ಪೂರ್ವಜನ್ಮದ ವಿಶಿಷ್ಟಸಂಸ್ಕಾರವು. ಈ ಸಂಸ್ಕಾರಮೂಲಕವಲ್ಲದ ಕಾವ್ಯನಿರ್ಮಾಣವು ಹಾಸ್ಯಕ್ಕೆ ಗುರಿಯಾಗುವುದು. ರುದ್ರಟನಾದರೂ ಇದನ್ನೇ ಅನುವಾದಮಾಡುವವನಾಗಿ (೧-೧೫-೧೬)—

ಮನಸಿ ಸದಾ ಸುಸಮಾಧಿನಿ ವಿಸ್ಫುರಣಮನೇಕಧಾಭಿಧೇಯಸ್ಯ ।
ಅಕ್ಲಿಷ್ಟಾನಿ ಪದಾನಿಚ ವಿಭಾಂತಿ ಯಸ್ಯಾಮಸೌ ಶಕ್ತಿಃ ॥
ಪ್ರತಿಭೇತ್ಯಪರೈರುದಿತಾ, ।

ಎಂದು ಪ್ರತಿಭಾಶಕ್ತಿಯ ಲಕ್ಷಣವನ್ನು ಸೂಚಿಸಿದ್ದಾನೆ. ಅಂದರೆ ಮನಸ್ಸನ್ನು ಸ್ಥಿರಗೊಳಿಸಿ ವರ್ಣಿಸಲ್ಪಡತಕ್ಕ ವಿಷಯವನ್ನು ಅನೇಕ ಪ್ರಕಾರವಾದ ಸುಲಭಶಬ್ದಗಳಿಂದ ಬಣ್ಣಿಸಲು ಸಾಧನವಾದ ಸ್ಫುರಣವೇ ಪ್ರತಿಭಾಶಕ್ತಿಯು. ರುದ್ರಟನ ಅಭಿಪ್ರಾಯಾನುಸಾರವಾಗಿ ಪ್ರತಿಭೆಯು ಸ್ವಾಭಾವಿಕವೂ ಇರಬಹುದು, ಇಲ್ಲವೆ ಪರಿಶ್ರಮಪೂರ್ವಕವಾಗಿ ಸಂಪಾದಿಸಿದುದೂ ಇರಬಹುದು; ಯಾವುದಕ್ಕಾದರೂ ಪೂರ್ವಜನ್ಮದ ವಿಶಿಷ್ಟಸಂಸ್ಕಾರಾನುಗಾಮಿತ್ವವು ತಪ್ಪದೆಂಬ ಸಂಗತಿಯನ್ನು ನಾವು ಈ ಮೇಲೆ ಭಟ್ಟತೌತನ ನುಡಿಯಿಂದ ಸಿದ್ಧಗೊಳಿಸಿದ್ದೇವೆ. ಆದರೆ ಅವೆರಡರಲ್ಲಿ ಸ್ವಾಭಾವಿಕ ಪ್ರತಿಭೆಯೇ ಶ್ರೇಷ್ಠವಾದುದು.

ಇನ್ನು, ಪ್ರತಿಭೆಯೊಂದರಿಂದೇ ಸಾಗದು; ವ್ಯುತ್ಪತ್ತಿಯೂ ಕಾವ್ಯಹೇತುವಾಗಿರುವುದರಿಂದ ಕವಿಗೆ ಪ್ರತಿಭಾಶಕ್ತಿಯು ಸ್ವಾಭಾವಿಕವಾಗಿದ್ದರೂ ಪರಿಶ್ರಮಸಾಧ್ಯವಾದ ವ್ಯುತ್ಪತ್ತಿಯ ಅವಶ್ಯಕತೆಯೂ ಉಂಟು; ಈ ಬಗ್ಗೆ ನಾವು ಸಾಹಿತ್ಯದರ್ಪಣದ ಕನ್ನಡ ಟೀಕೆಯಲ್ಲಿ ಬಿಚ್ಚಿಹೇಳಿದುದನ್ನೇ ಇಲ್ಲಿ ಉಲ್ಲೇಖಿಸುತ್ತೇವೆ. ಅನೇಕ ಶಾಸ್ತ್ರಗಳ ಪರಿಶೀಲನೆಯು ವ್ಯುತ್ಪತ್ತಿಯೆನಿಸುವುದು. ಕವಿಗೆ ಇದೊಂದು ವಿಷಯವು ವರ್ಣಿಸಲಿಕ್ಕೆ ಬಾರದೆನ್ನುವಹಾಗಿಲ್ಲ. ಅಂದರೆ ಯಾವುದಾದರೊಂದು ಶಾಸ್ತ್ರದ ಜ್ಞಾನವು ವಿಶಿಷ್ಟಮರ್ಯಾದೆಯವರೆಗಾದರೂ ಅವಶ್ಯವಿರಲೇಬೇಕೆಂಬುದನ್ನು ಬೇರೆ ಹೇಳಬೇಕಿಲ್ಲ; ನಾಟಕದಲ್ಲಿ ಯಾವಯಾವ ವಿಷಯಗಳ ಅಂತರ್ಭಾವವಿರುವುದೆಂಬುದನ್ನು ಪ್ರತಿಪಾದಿಸುವಲ್ಲಿ ನಾಟ್ಯಶಾಸ್ತ್ರಕಾರನು (೧೯-೧೧೭)—

ನ ತದ್ಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ ।
ನ ತತ್ಕರ್ಮ ನ ವಾ ಯೋಗೋ ನಾಟಕೇ ಯನ್ನ ದೃಶ್ಯತೇ ॥

ಎಂದು ಹೇಳುತ್ತಾನೆ; ಅಂದರೆ ನಾಟಕದಲ್ಲಿ ಇಂತಹದೊಂದು ವಿಷಯವು ಬರುವುದಿಲ್ಲವೆಂತಿಲ್ಲ. ಎಷ್ಟು ಹೆಚ್ಚು ವಿಷಯಗಳ ಜ್ಞಾನವಿರುವುದೋ ವ್ಯುತ್ಪತ್ತಿಯೂ ಅಷ್ಟು ಹೆಚ್ಚಾಗುವುದು. ಅದರ ಪ್ರಮಾಣವನ್ನನುಸರಿಸಿ ಕಾವ್ಯನಿರ್ಮಾಣಕರ್ತೃತ್ವ ಪಾತ್ರತೆಯಾದರೂ ಅಧಿಕವಾಗುವುದು. ಇದೇ ವಿಷಯವನ್ನು ರುದ್ರಟನೂ (೧-೧೮) ಹೇಳುತ್ತಾನೆ.

ಛಂದೋ ವ್ಯಾಕರಣಕಲಾ, ಲೋಕಸ್ಥಿತಿ ಪದ ಪದಾರ್ಥವಿಜ್ಞಾನಾತ್ ।
ಯುಕ್ತಾಯುಕ್ತವಿವೇಕೋ ವ್ಯುತ್ಪತ್ತಿರಿಯಂ ಸಮಾಸೇನ ॥

ವಾಗ್ಭಟಾಲಂಕಾರದಲ್ಲಿಯೂ ವ್ಯುತ್ಪತ್ತಿಯ ವ್ಯಾಖ್ಯೆಯು ಹೀಗೇ ಇದೆ (೧-೫)—

ಶಬ್ದ ಧರ್ಮಾರ್ಥಕಾಮಾದಿ ಶಾಸ್ತ್ರೇಷ್ವಾಮ್ನಾಯ ಪೂರ್ವಿಕಾ ।
ಪ್ರತಿಪತ್ತಿರಸಾಮಾನ್ಯಾ ವ್ಯುತ್ಪತ್ತಿರಭಿಧೀಯತೆ ॥

ವ್ಯಾಕರಣ, ಧರ್ಮಶಾಸ್ತ್ರ, ಶಬ್ದಕೋಶ, ಗಜಪರೀಕ್ಷೆ, ಅಶ್ವಪರೀಕ್ಷೆ, ರತ್ನಪರೀಕ್ಷೆ, ಧರ್ಮಶಾಸ್ತ್ರ, ಷಡಂಗಸಹಿತವಾದ ವೇದಗಳನ್ನೂ, ಆಗಮಗಳನ್ನೂ ಅಧ್ಯಯನಮಾಡಿ ಅವುಗಳ ರಹಸ್ಯಾರ್ಥ [illegible] ವನ್ನು [illegible]ಗಿ ಅರಿತುಕೊಳ್ಳುವುದೇ ವ್ಯುತ್ಪತ್ತಿ [illegible] ಯಾಗಿ, ಪ್ರತಿಭಾಶಕ್ತಿಗಾದರೂ ವ್ಯುತ್ಪತ್ತಿಯ ಸಹಾಯವು ಬೇಕು. ಅವೆರಡೂ ಉಳ್ಳವನೇ ಉತ್ತಮ ಕವಿಯೆನಿಸುವನು.

ಇನ್ನು, ಪ್ರಕೃತಪ್ರಸಂಗದ ಕಡೆ ದೃಷ್ಟಿಯನ್ನು ಹೊರಳಿಸುವಾ! ಕಾವ್ಯರಚನೆಯ ಆದಿಸ್ವರೂಪವು ಈಶ್ವರೀಯ ಜ್ಞಾನಮಯವಾದ ವೇದದಿಂದೇ ಪ್ರಕಟವಾಗಿರುವುದು. ಹೇಗೆಂದರೆ—ಋಗ್ವೇದವು ಪ್ರಾಮುಖ್ಯವಾಗಿ ಧರ್ಮಬೋಧಕವಾದುದೆನಿಸಿಕೊಳ್ಳುವುದು. ಆ ಮೇರೆಗೆ ಅದರಲ್ಲಿ ಬಹಳ ಕುಶಲತೆಯಿಂದ ಮಾಡಲ್ಪಟ್ಟ ದೇವತೆಗಳ ಪ್ರಾರ್ಥನೆಗಳೇ ವಿಶೇಷವಾಗಿವೆ. ಆದರೂ ಅದರಲ್ಲಿಯು ಸಹ ಯಥಾರ್ಥವಾಗಿ ಕಾವ್ಯಗಳೆಂದು ಹೇಳಲಿಕ್ಕೆ ಬರುವಂಥ ಎಷ್ಟೋ ಭಾಗಗಳು ಕಂಡುಬರುತ್ತವೆ. ಋಗ್ವೇದದೊಳಗಣ ಅನೇಕ ಸೂಕ್ತಗಳ ಹಾಗೂ ವಿಶೇಷತಃ ಉಷಾದೇವಿಯ ಸೂಕ್ತದಲ್ಲಿ ಸರಸಕಾವ್ಯದ ಎಷ್ಟೋ ಉದಾಹರಣೆಗಳನ್ನು ತೋರಿಸಬಹುದು. ೧ನೆಯ ಮಂಡಲದ ೧೨೪ನೆಯ ಸೂಕ್ತವನ್ನು ನೋಡಿರಿ!

ಅಭ್ರಾತೇವ ಪುಂಸಏತಿ ಪ್ರತೀಚೀಗರ್ತಾರುಗಿವ ಸನಯೇಧನಾನಾಮ್ ।
ಜಾಯೇವ ಪತ್ಯ ಉಶತೀ ಸುವಾಸಾ ಉಷಾ ಹಸ್ರೇವ ನಿರಿಣೀತೇ ಅಪ್ಸಃ ॥

ಎಂದು ಆ ಸೂಕ್ತದ ೭ ನೆಯ ಮಂತ್ರವಿದೆ. ಧನಪ್ರಾಪ್ತಿಗಾಗಿ ನ್ಯಾಯಸ್ಥಾನದ ಸೋಪಾನಗಳನ್ನೇರುತ್ತಿರುವ ಭ್ರಾತೃಹೀನಳಾದ ಸ್ತ್ರೀಯಂತೆಯೂ, ಸುಂದರವಾದ ವಸ್ತ್ರವನ್ನುಟ್ಟುಕೊಂಡು ಗಂಡನೆದುರಿಗೆ ಬರುವ ಕಾಮಿನಿಯಂತೆಯೂ, ನಗೆಮೊಗದ ಚದುರೆಯಂತೆಯೂ ಆ ಉಷೆಯು ತನ್ನ ಸ್ವರೂಪವನ್ನು ಪ್ರಕಟಿಸುತ್ತಿರುವಳು. ಎಂಬ ಆಶಯದ ವರ್ಣನೆಯುಳ್ಳ ಈ ಮಂತ್ರದಲ್ಲಿ ನಮ್ಮ ಗ್ರಹಿಕೆಯಂತೆ ಮೂರು ಉಪಮೆಗಳಿವೆ. ಅವುಗಳಲ್ಲಿ ಕಡೆಯ ಎರಡಾದರೋ ಯಾವ ದೇಶದಲ್ಲಿಯ ಯಾವ ಕಾವ್ಯದಲ್ಲಾದರೂ ಜೋಡಿಸಲು ಯೋಗ್ಯವಾಗಿವೆ. ಅದೇ ಮಂಡಲದ ೧೬೪ ನೆಯ ಸೂಕ್ತದಲ್ಲಿಯ ಎಷ್ಟೋ ಮಂತ್ರಗಳನ್ನು ನೋಡಿರಿ. ಅವುಗಳಲ್ಲಿ—

ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರೇಕಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋಽಭಿಚಾಕಶೀತಿ ॥

ಎಂಬ ೨೦ ನೆಯ ಮಂತ್ರವು ಜೀವನನ್ನೂ ಶಿವನನ್ನೂ ಎರಡು ಪಕ್ಷಿಗಳ ಉಪಮೆಯೊಡನೆ ಬಣ್ಣಿಸುವುದು. ಜಗನ್ನಾಥನು ಈ ಮಂತ್ರವನ್ನು ರಸಗಂಗಾಧರವೆಂಬ ಗ್ರಂಥದಲ್ಲಿ ಅತಿಶಯೋಕ್ತಿಯ ವೈದಿಕೋದಾಹರಣೆಯೆಂದು ಉಲ್ಲೇಖಿಸಿದ್ದಾನೆ. ಜೋಡಿಯಿಂದಿರುವ ಒಬ್ಬರಿಗೊಬ್ಬರು ಗೆಳೆಯರಾದ ಎರಡು ಪಕ್ಷಿಗಳು ಒಂದೇ (ಅರಳಿಯ) ಗಿಡವನ್ನಾಶ್ರಯಿಸಿರುತ್ತವೆ. ಅವುಗಳಲ್ಲಿ ಒ[illegible] ಆ ಗಿಡದ ಹಣ್ಣನ್ನು ತಿನ್ನುವುದು, ಎರಡನೆಯದಾದರೆ [illegible] ಏನೊಂದನ್ನೂ ತಿನ್ನದೆ ತಟಸ್ಥವಾಗಿ ನೋಡುತ್ತಿರುವುದು; ಎಂ[illegible]ದಾಗಿ ಆ ವರ್ಣನೆಯ ಆಶಯದಲ್ಲಿರುವ ಕಲ್ಪನೆಯು ಬಹು ಸ[illegible]ವಾಗಿದೆ. ಮತ್ತು ಅಲಂಕಾರಶಾಸ್ತ್ರದಲ್ಲಿ ಹೇಳಲ್ಪಡುವ ರ[illegible]ಕಾತಿಶಯೋಕ್ತಿಯೆಂಬ ಅಲಂಕಾರವು ಅದರಲ್ಲಿ ಸಾಧಿಸಲ್ಪಟ್ಟ[illegible]. ಇದೇ ಸೂಕ್ತದಲ್ಲಿಯ ೧೧ ನೆಯ ಮಂತ್ರವು—

ದ್ವಾದಶಾರಂ ನಹಿ ತಜ್ಜರಾಯ ವರ್ವರ್ತಿ ಚಕ್ರಂ [illegible] ಪರಿದ್ಯಾಮೃತಸ್ಯ [illegible]
ಆಪುತ್ರಾ ಅಗ್ನೇ ಮಿಥುನಾಸೋಅತ್ರ ಸಪ್ತಶತಾ[illegible] ವಿಂಶತಿಶ್ಚತಸ್ಥುಃ [illegible]

ಎಂದಿರುವುದು. ಇದರಲ್ಲಿ ಸಂವತ್ಸರವು ಋತುವಿನ [illegible]ಗಳನ್ನೂ [illegible] ವೆಂದು ಕಲ್ಪಿಸಿ ವರ್ಣಿಸಲ್ಪಟ್ಟಿದೆ. ಸಾಮಾನ್ಯಚಕ್ರಕ್ಕಿಂತಲೂ [illegible] ಚಕ್ರವು ವಿಲಕ್ಷಣವಾದುದೆಂದು ಬಣ್ಣಿಸಲ್ಪಟ್ಟಿರುವುದರಿಂದ [illegible] ವ್ಯತಿರೇಕಾಲಂಕಾರವು ಸೂಚಿತವಾಗಿದೆ. ಮತ್ತು, (ಋ. [illegible] ೧೬೪-೨೧)—(೬-೫೫-೫) ಇತ್ಯಾದಿ ಮಂತ್ರಗಳಲ್ಲಿ ಶ್ಲೇ[illegible] ವನ್ನು ಸಾಧಿಸುವ ಪ್ರಯತ್ನವಿದ್ದುದಾಗಿ ಕಂಡುಬರುವ[illegible] (ಋ. ೬-೭೫-೧೪ ; ೬-೭೫-೧೭)—(ಕೃ. ಸಂ—೪-೬-೬-[illegible] ಕೃ. ಬ್ರಾ. ೩-೪-೪-೯)—(ವಾಜ. ಸಂ—೨೦-೨೦) ಇತ್ಯಾ[illegible] ಸ್ಥಳಗಳಲ್ಲಿ ಬಹುಮನೋಹರಗಳಾದ ಉಪಮೆಗಳಿವೆ. ಈ ಪ್ರ[illegible]ರವಾಗಿ ವೇದಸಂಹಿತೆಗಳಲ್ಲಿ ಹೇಗೆ ಸರಸವಾದ ಕಾವ್ಯದ ಉದಾ[illegible]ಗಳು ದೃಗ್ಗೋಚರವಾಗುತ್ತಿವೆಯೋ, ಹಾಗೇ ಬ್ರಹ್ಮಜ್ಞಾ[illegible] ವಿವೇಚಕಗಳಾದ ಉಪನಿಷತ್ತುಗಳಲ್ಲಿಯೂ ಇರುವವು. ಮು[illegible]ಕೋಪನಿಷತ್ತಿನ—'**ಧನುರ್ಗೃಹೀತ್ವೌಪನಿಷದಮ್**' [illegible] (೨-೨-೩) ಎಂಬ ಮಂತ್ರದಲ್ಲಿ ಬ್ರಹ್ಮಸಾಧನೋಪಾಯವು ಸು[illegible]ರವಾದ ರೂಪಕದಿಂದ ತೋರಿಸಲ್ಪಟ್ಟಿದೆ. ಕಠೋಪನಿಷತ್ತಿನ— '**ಆತ್ಮಾನಂ ರಥಿನಂ ವಿದ್ಧಿ**' (೧-೩-೩) ಎಂಬ ಮೊದಲಾ[illegible] ಮಂತ್ರಗಳಲ್ಲಿಯೂ ರೂಪಕಾಲಂಕಾರವು ಪೋಣಿಸಲ್ಪಟ್ಟಿರುವುದು.

ಹಾಗೂ, (ಋ. ಸಂ—೧೦-೧೦೮ ; ೩-೩೩ ; ೧-೧೬೫ ; ೧-೧೭೦ ; ೧-೧೭೯ ; ೪-೧೮ ; ೪-೪೨ ; ೭-೩೩ ; ೧೦-೨೮ ; ೧೦-೫೧ ; ೧೦-೫೩ ; ೧೦-೮೬ ; ೧೦-೯೫ ; ಎಂಬಿಷ್ಟು ಸ್ಥ[illegible]ಗಳಲ್ಲಿ ಸಂವಾದಗಳಿವೆ. ಈ ವೈದಿಕಸಂವಾದಗಳೆಂದರೆ ಮುಂ[illegible] ಸಂಸ್ಕೃತವಾಙ್ಮಯದಲ್ಲಿ ವಿಕಾಸವನ್ನು ಹೊಂದಿದ ನಾಟಕಗ[illegible] ಆದಿಸ್ವರೂಪವೇ ಎಂದು ಧಾರಾಳವಾಗಿ ಹೇಳಬಹುದು. ಮತ್ತು (ಕೃ. ಸಂ—೭-೫-೯-೩ ; ಕೃ. ಬ್ರಾ. ೧-೨-೬೬) ಇವುಗಳಲ್ಲಿ [illegible] ಶೂದ್ರರೂ ಲಟಿಕೆಕಾಳಗವಾಡುವುದರ ವರ್ಣನೆಯುಂಟು, ಇದರಲ್ಲಿಯೂ ಮುಂದಿನ ನಾಟಕವಿಕಾಸದ ಬೀಜಗಳಿವೆ. ಯಜ್ಞದಲ್ಲಿ '**ಬ್ರಹ್ಮೋದ್ಯ**' ಎಂಬ ಕೂಟಪ್ರಶ್ನೆಗಳುಮಾಡಲ್ಪಡುತ್ತವೆ; ಅವು (ಕೃ. ಸಂ. ೭-೪-೧೮)—'**ಕಿಂ ಸ್ವಿದ್ಧಿಮಸ್ಯ ಭೇಷಜಂ ಕಿಂ ಸ್ವಿದಾವಪನಂಮಹತ್**' ಎಂಬಲ್ಲಿಯೂ (ವಾ. ಸಂ—೨೩ ; ಕೃ. ಬ್ರಾ. ೩-೯-೫) ಎಂಬಲ್ಲಿಯೂ ಇವೆ. ಅವು ಮುಂದಿನ ಪ್ರಹೇಲಿಕಾದಿಗಳಿಗೆ ಬೀಜರೂಪಗಳಾಗಿವೆ.

ಸಾರಾಂಶ, ಸೃಷ್ಟ್ಯಾರಂಭಕಾಲೀನರಾದ ಮಹರ್ಷಿಗಳ ನಿರ್ಮಲವಾದ ಹೃದಯದಲ್ಲಿ ಪರಶಿವಪ್ರೇರಿತವಾದ ಜ್ಞಾನಮಯ ಕಾವ್ಯಕಸ್ಫುರಣವು ಮೊದಲಿನದಾದುದರಿಂದ ಅದುವೇ ಮುಂದಿನ ಸರ್ವವಾಙ್ಮಯವಿಕಾಸಕ್ಕೆ ಬೀಜಭೂತವಾಗಿರುವುದು. ಕಾಲಿದಾಸಾದಿಗಳ ಹೃದಯದಲ್ಲಿ ಸ್ಫುರಿಸಿದ ಪ್ರತಿಭೆಯಾದರೋ ಪರಂಪರಾಗತವಾದ ಜ್ಞಾನವೇ ಆಧಾರವಾಗಿ ಉಳ್ಳದ್ದೂ ಸಂಸ್ಕಾರಪೂರ್ವಕವೂ ಆದುದರಿಂದ, ಅದು ಈಶ್ವರಪ್ರೇರಿತಮಾತ್ರವಾದುದಲ್ಲ; ಅದುಕಾರಣವೇ ಆದ್ಯರಾದ ಮಹರ್ಷಿಗಳ ವಾಕ್ಯಗಳು ಅಪೌರುಷೇಯಗಳೆಂದೂ ಕಾಳಿದಾಸಾದಿಗಳ ವಚನಗಳು ಪೌರುಷೇಯಗಳೆಂದೂ ನಾವು ಒತ್ತಿ ಹೇಳುತ್ತೇವೆ. ಪ್ರಾಮುಖ್ಯವಾಗಿ ಕಾಳಿದಾಸನ '**ವಾಗರ್ಥಾವಿವ ಸಂಪೃಕ್ತೌ**' ಎಂಬ ನಮಸ್ಕ್ರಿಯಾತ್ಮಕ ಮಂಗಲವಚನ ಸ್ಫೂರ್ತಿಯು—

ಶಬ್ದಜಾತಮಶೇಷಂತು ಧತ್ತೇ ಶರ್ವಸ್ಯ ವಲ್ಲಭಾ ।
ಅರ್ಥಸ್ವರೂಪಮಖಿಲಂ ಧತ್ತೇ ಮುಗ್ಧೇನ್ದುಶೇಖರಃ ।

ಎಂಬುದಾಗಿ ಶಿವಪುರಾಣ (ವಾ. ಸಂ.) ವರ್ಣಿತವಾದ ಶಬ್ದಾರ್ಥಗಳ ಅವಿನಾಭೂತ ಸಂಬಂಧಾತ್ಮಕ ಶಿವಶಕ್ತಿಸ್ವರೂಪವನ್ನನುಸಂಧಾನಮಾಡುವಪೂರ್ವಕ ಈ ಮಹಾಕವಿಯು ಶೈವಾಗಮದೀಕ್ಷಿತನೆಂಬ ಭಾವವನ್ನು ಬಯಲಿಗಿರಿಸಿರುವುದು. ಹೀಗೆ ವೇದಾಗಮರೂಪ ಶಿವಶಾಸ್ತ್ರಾನುಕರಣಶೀಲರಾದ ಕಾಲಿದಾಸಾದಿ ಕವಿಪ್ರಣೀತ ಗ್ರಂಥಗಳು ಈಶ್ವರಪ್ರೇರಿತಗಳೆನಿಸಿದರೂ ಅಪೌರುಷೇಯಗಳೆಂದು ಸಿದ್ಧವಾಗುವುದಿಲ್ಲ. ಹಾಗೂ ಅಪೌರುಷೇಯಗಳಾದ ವೇದಗಳಂತೆ ಅವು ನಿತ್ಯವಾದುವೂ ಅಲ್ಲ.

ವೇದಗಳು ಶಬ್ದಮಯಗಳಾದ್ದರಿಂದ, ಅವುಗಳಿಗೆ ನಿತ್ಯತ್ವವು ಸಿದ್ಧಿಸದು; ಯಾಕೆಂದರೆ ಶಬ್ದವು ಕಾರ್ಯರೂಪವಾದುದರಿಂದ ಕೊಡದಂತೆ ಅನಿತ್ಯವಾಗಿದೆ. ಕೊಡವು ಹೇಗೆ ಉತ್ಪನ್ನವಾಗಿ ನಾಶ[illegible]ವಾಗುವುದೋ ಹಾಗೆ ಶಬ್ದವಾದರೂ ಹುಟ್ಟಿದ ತರುವಾಯ ಅ[illegible]ವುದು; ಆದ್ದರಿಂದ ಶಬ್ದವು ಅನಿತ್ಯವಾಗಿರುವಮೂಲಕ ಶಬ್ದಮಯವಾದ ವೇದಗಳೂ ಅನಿತ್ಯವಾಗಿವೆ? ಎಂಬ ಈ ಕೋಟಿಕ್ರಮವು ಸರಿಯಾದುದಲ್ಲ. ಶಬ್ದವು ನಿತ್ಯರೂಪವಾದುದೂ ಕಾರ್ಯರೂಪವಾದುದೂ ಎಂದು ಎರಡು ವಿಧವಾಗಿದೆ. ಪರಮಾತ್ಮನ ಜ್ಞಾನದೊ[illegible]ವ ಶಬ್ದಾರ್ಥಗಳ ಸಂಬಂಧವು ನಿತ್ಯವಾದುದು. ವ್ಯವಹಾರ[illegible]ತಕ್ಕ ಶಬ್ದಗಳು ಕಾರ್ಯರೂಪಗಳಾದ್ದರಿಂದ ಅನಿತ್ಯವಾದುವು. [illegible]ನ ಜ್ಞಾನಕ್ರಿಯೆಗಳು ನಿತ್ಯವಾದುವು. ಯಾಕೆಂದರೆ—ಅವ[illegible] ಅವೆರಡೂ ಅವಿನಾಭಾವರೂಪಸಂಬಂಧವಿಂದಿರುತ್ತವೆ. ವೇದ[illegible]ದರೋ ಪರಮೇಶ್ವರನ ಜ್ಞಾನರೂಪಗಳಾದ್ದರಿಂದ ಅವು [illegible]ಾಗಿರಲೇಬೇಕು. ಎಂದೂ ಅವುಗಳಿಗೆ ಅನಿತ್ಯತ್ವವು ಘಟಿಸದು.

[illegible]ಳಯಸಮಯದಲ್ಲಿ ಜಗತ್ತೆಲ್ಲಾ ಪ್ರಕೃತಿಯಲ್ಲಿ ಅಡಗು[illegible]. ಆಗ ಈ ದೃಶ್ಯಮಾನ ಸ್ಥೂಲವಸ್ತುಗಳಲ್ಲಿ ಯಾವುದೂ [illegible]ಯುವುದಿಲ್ಲ. ಅಂತಹಕಾಲದಲ್ಲಿ ಪಠನಪಾಠನವ್ಯವಹಾರ[illegible]ಲಿ ಪುಸ್ತಕಗಳಾಗಲಿ ಏನೊಂದೂ ಇಲ್ಲದಿರುವಾಗ ವೇದಗಳು [illegible]ವ ಬಗೆಹೇಗೆ? ಅದ್ದರಿಂದ ವೇದಗಳು ನಿತ್ಯವಾದುವುಗ[illegible]? ಎಂದಾಕ್ಷೇಪಿಸುವುದು ಮನುಷ್ಯರ ವ್ಯವಹಾರವನ್ನೂ [illegible]ಕಗಳನ್ನೂ ಅನುಲಕ್ಷಿಸಿರುವುದು ಸರಿಯೇ. ಆದರೆ ನಾವು [illegible]ನಮಯಗಳಾದ ವೇದಗಳು ನಿತ್ಯವೆಂದೇ ಹೇಳುತ್ತೇವೆ. [illegible]ಗಳ ಮೇಲೆ ಬರೆದ ಬರಹವು ಅಳಿಸಿಹೋಗಬಹುದು. ಶಿವ[illegible]ವದೇ? ಪಠನಪಾಠನ ಪರಂಪರೆಯಡಗಿದರೂ ಜ್ಞಾನವು [illegible]ಶವಾಗಬಲ್ಲುದೇ? ಜ್ಞಾನಮಯವೇದಗಳು ಈಶ್ವರನಲ್ಲಿ[illegible]ವ ವಿದ್ಯಮಾನಗಳಾಗಿರುತ್ತವೆ. ಪರಮಾತ್ಮನಜ್ಞಾನವು ನಿತ್ಯವೂ [illegible]ಭಿಚಾರಿಯೂ ಆದುದರಿಂದ ವೇದಗಳಲ್ಲಿಯ ಶಬ್ದಾರ್ಥಸಂ[illegible]ವು ಇಂದಿನಂತೆ ಹಿಂದೆಯೂ ಇದ್ದಿತು. ಮುಂದೆಯೂ ಇರು[illegible].

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೀರಶೈವಮತಸ್ಥಾಪಕರು ಯಾರು?

[illegible]ಖಕರು—ನೀಲಕಂಠಶಿವಾಚಾರ್ಯ ಚಿಂಚೋಳಿ ಬೃಹನ್ಮಠ]

[illegible] ಯಾವುದೇ ಒಂದು ಮತವನ್ನಾಗಲಿ ಅಥವಾ ಒಂದು ಸಣ್ಣ [illegible]ಕ್ಕೆಯನ್ನೇ ಆಗಲಿ ಸ್ಥಾಪಿಸಬೇಕಾದರೆ ಒಬ್ಬ ಸ್ಥಾಪನಾ[illegible]ನು ಇರಲೇಬೇಕಾದ್ದರಿಂದ ನಮ್ಮ ವೀರಶೈವ ಮತವನ್ನು [illegible]ಮೇಶ್ವರನ ಪಂಚಮುಖಗಳಿಂದುದಯಿಸಿದ ಪಂಚಾಚಾರ್ಯರೇ [illegible]ಪಿಸಿರುತ್ತಾರಲ್ಲದೆ ಬೇರೆ ಯಾರೂ ಸ್ಥಾಪಿಸಿರುವದಿಲ್ಲ. ಆದರೆ [illegible]ಚಾಚಾರ್ಯರೇ ಸ್ಥಾಪಿಸಿದರೆಂಬುವದಕ್ಕೆ ಆಧಾರಗಳೇನೆಂದು [illegible]ಲೇಕರು ಪ್ರಶ್ನೆಮಾಡುವುದುಂಟು. ಈಮಹನೀಯರಿಂದಲೇ ಈ [illegible]ತವು ಸ್ಥಾಪಿಸಲ್ಪಟ್ಟಿತೆಂಬುವದಕ್ಕೆ ಸ್ವಸಿದ್ಧಾಂತ ಗ್ರಂಥಗಳೂ [illegible]ದಾಗಮೋಪನಿಷತ್ತುಗಳೂ ಪರಮಪ್ರಮಾಣಗಳಾಗಿರುತ್ತವೆ. [illegible]ವುಗಳಿಗಿಂತಲೂ ಅಧಿಕಗಳಾದ ಪ್ರಮಾಣಗ್ರಂಥಗಳು ಲೋಕ[illegible] [illegible] ಪುವದಕ್ಕೋಸ್ಕರ ಸಮಸ್ತಭೂಮಂಡಲದಲ್ಲಿ ಸಂಚರಿಸಿ ನಾಸ್ತಿಕಮತಗಳನ್ನು ಖಂಡಿಸಿ ಪ್ರತಿಯೊಬ್ಬರೂಶಿವಪೂಜಾದಿ ಧ್ಯಾನಾದಿಗಳಿಂದ ಕೈವಲ್ಯಸುಖವನ್ನು ಪಡೆಯಲೆಂದೂ ಶಿವನೇ ದೇವೋತ್ತಮನು. ಶಿವನಿಗಿಂತಲೂ ಅಧಿಕವಾದ ವಸ್ತುವು ಜಗತ್ತಿನಲ್ಲಿ ಇಲ್ಲವೆಂದೂ ಈ ವಿಸ್ತಾರವಾದ ಪ್ರಪಂಚವು ಪರಶಿವನಿಂದಲೇ ಉದ್ಭವಿಸುವುದೆಂದೂ ಮಾನವರಿಗೆ ಬೋಧಿಸಿ ಶಿವಭಕ್ತಿಯ ಬೀಜವನ್ನು ಬಿತ್ತಿದರು. ಆಗಿನಕಾಲದಲ್ಲಿ ಎಲ್ಲಿ ನೋಡಿದರೂ ಶಿವನ ಜಯಜಯಕಾರವೇ! ಎಲ್ಲಿ ನೋಡಿದರೂ ಶಿವಲಿಂಗಸ್ಥಾಪನೆಗಳೇ! ಎಲ್ಲಿ ನೋಡಿದರೂ ಪಂಚಾಕ್ಷರ ಜಪಪ್ರಭಾವವೇ ಇದ್ದಿತು. ಇತ್ತೀಚೆಗೆ ಕೆಲವು ಆಚಾರ್ಯರು ಉದ್ಭವಿಸಿ ಭಿನ್ನಭಿನ್ನ ಮತಗಳನ್ನು ಸ್ಥಾಪಿಸಿ ಭಿನ್ನಭಿನ್ನ ಮತಗಳನ್ನು ಉಪದೇಶಿಸಿದುದರಿಂದ ವೀರಶೈವ ಸಿದ್ಧಾಂತವು ಹೀನಾವಸ್ಥೆಗೆ ಬಂದಿತೆಂದು ತಿಳುಹಿಸಲು ವಿಷಾದವೆನಿಸುತ್ತದೆ.

ಈ ಯಾವತ್ತು ವಿಷಯಗಳನ್ನು ಪರ್ಯಾಲೋಚಿಸಿದ್ದಾದರೆ ಪೂರ್ವಕಾಲದಲ್ಲಿ ಭೂಮಂಡಲದಲ್ಲೆಲ್ಲ ಶಿವಭಕ್ತಿಯು ವಿಶೇಷವಾಗಿ ಪ್ರಚಾರವಾಗಿದ್ದಿತೆಂದೂ ಭಗವತ್ಪಾದರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರೇ ಇದಕ್ಕೆ ಕಾರಣವಾಗಿರುತ್ತಾರೆಂದೂ ನಿಸ್ಸಂಶಯವಾಗಿ ಹೇಳಬೇಕಾಗಿದೆ. ಆದುದರಿಂದಲೇ ಸುಪ್ರಭೋದಾಗಮದಲ್ಲಿ—

ತಸ್ಮಾತ್ಸ್ವಾಚ್ಛ ಗಿರಿಜೇ ಪಂಚಾನನ ಸಮುದ್ಭವಾಃ ।
ಮದಾದಿ ಸರ್ವಲೋಕಾನಾಂ ಜಗದ್ಗುರುವರೋತ್ತಮಾಃ ॥

ಶ್ರೀಮತ್ಪಂಚಾಚಾರ್ಯರು ನನ್ನ ಲೋಕವೊದಲುಮಾಡಿಕೊಂಡು ಹದಿನಾಲ್ಕು ಲೋಕಗಳಿಗೂ ಕೂಡ ಜಗದ್ಗುರುಗಳಾಗಿರುತ್ತಾರೆಂದು ಶ್ರೀ ಪರಮೇಶ್ವರನು ಪಾರ್ವತಿಗೆ ಉಪದೇಶಿಸುತ್ತಾನೆ. ಬ್ರಹ್ಮವಿಷ್ಣು ಮೊದಲಾದ ದೇವತೆಗಳಿಗೂ ಕೂಡ ಪರಮಪೂಜ್ಯರಾದ ಪಂಚಾಚಾರ್ಯರು ಲಿಂಗಧಾರಣ ಶಿವಸಿದ್ಧಾಂತೋಪದೇಶಗಳನ್ನು ಮಾಡಿದರೆಂದು ಪಾಶುಪತತಂತ್ರಾದಿಗಳು ಮುಕ್ತಕಂಠದಿಂದ ಸಾರುತ್ತವೆ. ಕೈವಲ್ಯಸುಖವನ್ನು ಕೊಡುವ ಲಿಂಗಧಾರಣ ಪದ್ಧತಿಯು ಈ ಪೂಜ್ಯಪಾದರಿಂದಲೇ ಸ್ಥಾಪಿಸಲ್ಪಟ್ಟಿರುವುದರಿಂದಲೂ, ಮತ್ತು ಲಿಂಗಧಾರಣ ವಿಷಯವು ವೇದಗಳಲ್ಲಿ ಉಕ್ತವಾಗಿರೋಣದರಿಂದಲೂ ಈ ಲಿಂಗಧಾರಣಕ್ಕೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರೇ ಮೂಲಕಾರಣರಾಗಿರುತ್ತಾರೆ. ಭಗವತ್ಪಾದರುಗಳು ಉಳಿದ ಮತಾಚಾರ್ಯರಂತೆ ತಂದೆತಾಯಿಗಳ ಗರ್ಭದಿಂದ ಉದ್ಭವಿಸದೆ ಕೇವಲ ಲಿಂಗೋದ್ಭವರಾಗಿರುತ್ತಾರೆಂದು ಅನೇಕ ಧರ್ಮಗ್ರಂಥಗಳು ಸಾರುತ್ತಿವೆ. ಶ್ರೀ ರೇಣುಕಾಚಾರ್ಯರು ಕೊಲ್ಲಿಪಾಕಿ ಸೋಮೇಶ್ವರಲಿಂಗದಿಂದಲೂ, ಶ್ರೀ ದಾರುಕಾಚಾರ್ಯರು ವಟವೃಕ್ಷ ಸಿದ್ಧೇಶ್ವರಲಿಂಗದಿಂದಲೂ, ಶ್ರೀ ಏಕೋರಾಮಾರಾಧ್ಯರು ದ್ರಾಕ್ಷಾರಾಮೇಶ್ವರದ ರಾಮನಾಥಲಿಂಗದಿಂದಲೂ, ಶ್ರೀ ಪಂಡಿತಾರಾಧ್ಯರು ಶ್ರೀಶೈಲಮಲ್ಲಿಕಾರ್ಜುನಲಿಂಗದಿಂದಲೂ ಶ್ರೀ ವಿಶ್ವಾರಾಧ್ಯರು ಕಾಶೀವಿಶ್ವನಾಥಲಿಂಗದಿಂದಲೂ ಉದ್ಭವಿಸಿ ತಮ್ಮಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ರಕ್ಷಣಶಿಕ್ಷಣಕ್ಕಾಗಿ ಪಂಚಪೀಠಗಳನ್ನು ಸ್ಥಾಪಿಸಿದ್ದಾರಲ್ಲದೆ ಪ್ರತಿಯೊಂದು ನಗರಗ್ರಾಮಗಳಲ್ಲಿಯೂ ಶಾಖಾಮಠಗಳನ್ನು ಸ್ಥಾಪಿಸಿದ್ದಾರೆ. ಇದರಿಂದ ವೀರಶೈವಮತವನ್ನು ನೆಲೆಗೊಳಿಸಿದವರು ಶ್ರೀಮಜ್ಜಗದ್ಗುರು ಪಂಚಾಚಾರ್ಯರೇ ಆಗಿರುತ್ತಾರಲ್ಲದೆ ಇನ್ನೊಬ್ಬರಲ್ಲವೆಂದು ಸ್ಪಷ್ಟವಾಗುತ್ತದೆ. ರೇಣುಕಾದಿಮಹಾಚಾರ್ಯಾಃ ಸೋಮನಾಥಾದಿಸಂಭವಾಃ । ಸ್ಥಾಪಯಾಂತಿಸ್ಮ ಭೂಲೋಕೇ ವೀರಶೈವಮತಂಪರಂ ॥ ಎಂಬುವ ಆಗಮೋಕ್ತಿಯಂತೆ ಶ್ರೀಮತ್ಪಂಚಾಚಾರ್ಯರೇ ಮತಸ್ಥಾಪಕರೆಂದು ಸಿದ್ಧವಾಗುವದು. ಇದರಂತೆ ಅನೇಕ ಆಗಮೋಪನಿಷತ್ತುಗಳಲ್ಲಿ ಆಧಾರಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ಹೀಗಿರಲು ವೇದವಿರೋಧಿಗಳಾದ ಸಂಕರಜಾತಿಯವರು ಬಸವನೇ ಮತಸ್ಥಾಪಕನೆಂದೂ ಮತ್ತು ಬಸವನೇ ಜಗದ್ಗುರುವೆಂದೂ ಬೊಗಳಹತ್ತಿ ತಮ್ಮ ಅಜ್ಞಾನವನ್ನು ಪ್ರಕಟಿಸುತ್ತಾರಲ್ಲದೆ ಬೇರೊಂದಿಲ್ಲ.

ಕೆಲಜನ ಸೂಳೆಯಮಗನಂಥ ಭಂಡರು ತಮ್ಮ ಮನಸ್ಸಿಗೆ ತೋರಿ ತೋರಿದ ಹಾಗೆಲ್ಲ ಬರೆಯುತ್ತಿರುವುದನ್ನು ನೋಡಿದರೆ ಇವರ ನಾಸ್ತಿಕತೆಯ ಪರಕಾಷ್ಠದಶೆಯನ್ನು ಅಷ್ಟಿಷ್ಟೆಂದು ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ. ಕೆಲಧೂರ್ತರು ಪೂಜ್ಯವಚನಗಳನ್ನಾರಿಸಿಕೊಂಡು ಕೆಲವು ಪದಕ್ಕೆ ಅಪಾರ್ಥವನ್ನು ಕಲ್ಪಿಸಿ ಎತ್ತಿಗೆ ದೇಕಾಯಿ ಎಂದು ಕರೆಯುವಂತೆ ಬಸವನೇ ಮತಸ್ಥಾಪಕನೆಂದೂ ಮತ್ತು ಅವನೇ ಜಗದ್ಗುರುವೆಂದೂ ಆರೋಪಿಸುತ್ತ ಸ್ವೈಜಾರ್ಥವನ್ನು ಸಂಗೋಪನಮಾಡುತ್ತ ಶ್ರುತ್ಯಾಗಮಸಿದ್ಧಾಂತಗ್ರಂಥಗಳ ಭಯವಿಲ್ಲದೆ ಮನಗಳದಂತೆ ನುಗ್ಗುತ್ತಿರುವುದರಿಂದ ಯಾವ ಪುರುಷಾರ್ಥವನ್ನು ಸಾಧಿಸಿದಹಾಗಾಯಿತೋ ತಿಳಿಯದು. ಹೀಗೆ ಸಮಾಜದಲ್ಲಿ ಗೊಂದಲವನ್ನೆಬ್ಬಿಸುವ ಮೂರ್ಖರು ತಮ್ಮ ವಕ್ರಮಾರ್ಗವನ್ನು ಬಿಟ್ಟು ಪ್ರಮಾಣಭೂತಗಳಾದ ಧರ್ಮಗ್ರಂಥಗಳನ್ನು ಓದಿ ನಿಜಾಂಶವನ್ನು ತಿಳಿದುಕೊಂಡು ಎಂದಿಗೆ ಭಗವತ್ಪಾದಾಚಾರ್ಯರ ಪ್ರೀತಿಗೆ ಪಾತ್ರರಾಗುವರೋ ನೋಡಬೇಕಾಗಿದೆ

ಉತ್ಸಾಹಪಂಚರತ್ನಂ.

ಒಂದು ಕೈಲಿ ಘಟ್ಟಿಯನ್ನು ಒಂದು ಕೈಲಿ ಪೊರಕೆಯಂ ।
ಅಂದವಾಗಿ ಕೊಂಡು ಬೀದಿಯನ್ನು ಶುದ್ಧಿಮಾಡುವಾ ॥
ಸಂದವಾದರನ್ನು ತಮ್ಮ ಕಾರ್ಯದಿಂದೆ ವಿಸರುವಾ ।
ಮಂದಭಾಗ್ಯರೆಲ್ಲ ಮಿಕ್ಕರೀಮಹೀತಳಾಗ್ರದೊಳ್ ॥೧॥
ಎಲ್ಲ ಜಾತಿ ಮೂರ್ಖರೆಲ್ಲ ಕೂಟವನ್ನು ಕೂಡುತಾ ।
ಖುಲ್ಲರಾಗಿ ಜಾತಿಭೇದವಿಲ್ಲವೆಂದು ಪೇಳುತಾ ॥
ಎಲ್ಲ ಕೀಳರಲ್ಲಿಯೂಟಕೂಟವನ್ನು ಮಾಡುತಾ ।
[illegible] ॥೨॥
ಮಾದರನ್ನು ಮುಟ್ಟಿಕೆಟ್ಟು ಮಾದರಲ್ಲಿ ಸೇರುವಾ ।
ಮಾದರೀಗೆ ತಮ್ಮ ಮುಕ್ತಿದೇವರೆಂದು ಪೇಳುವಾ ॥
ಮಾದ, ಮಾದರೆಂದು ಪಕ್ಷ ಸ್ವಪಕ್ಷದಲ್ಲಿ ಚೀರುವಾ ।
ಮಾದದೆನ್ನಮೆಟ್ಟಿಕೊಂಡ ಚೆಪ್ಪರೆಲ್ಲ ಕೆಟ್ಟರೈ ॥೩॥
ಮಾದರನ್ನು ಮೇಲುಮಾಳ್ಪ ವೃದ್ಧಸರ್ಪಸೀಗಳು ।
ನ್ಯಾದರಿಂದ ಸಾಧುವಿಕ್ರವರ್ಯನನ್ನು ಕೈಲಿನಾ ॥
ಬಾಧೆಗೀಡುಮಾಳ್ಪೆನೆಂಬ ಸಂಜ ಕಾರುತಿರ್ಪುದೆಂ ।
ದಾದಿದೇವ ನಿನ್ನ ಭಕ್ತನೇಕೆ ಭೀಕರನಾಗುವಂ? ॥೪॥
ದೇವದೇವ ನೀನು ಕೊಟ್ಟ ವೇದಧರ್ಮವಲ್ಲಿಯಂ ।
ದೇವ ಧರ್ಮಭಕ್ತಿಯುಳ್ಳ ಭಕ್ತಲೋಕದಲ್ಲಿ ನಾಂ ॥
ದೇವ ನಿನ್ನ ಸಾಕ್ಷಿಯಾಗಿ ನಿಚ್ಚ ಪರ್ಚಿಸುತ್ತಿರಲ್ ।
ಹೇವವಿಲ್ಲದಾ ಕುಮಾರ್ಗರೀಗ ರೇಗಿ ಸಾವರೈ ॥೫॥

|| ಸತ್ಯಾನ್ನಾಸ್ತಿ ಪರೋಧರ್ಮಃ ||

(ಇತಿ ಶ್ರುತಿಃ)

ಶಾರ್ದೂಲರತ್ನತ್ರಯಂ.

ಮಾಂಧಾತಾದಿನೃಪೇಂದ್ರವರ್ಧಿತ ಸುಚಾತುರ್ವರ್ಣ್ಯಧರ್ಮಂಗಳಂ | ಗಾಂಧಾರಾದಿ ಸುರಾಗದಿಂ ಜರಿದು ಧರ್ಮಕ್ರಾಂತಿಯಂ ಮಾಡುತಂ || ಗಾಂಧೀಮೋಹಕೆಸಿಲ್ಕಿ ಧರ್ಮಮತಿಯಂ ಪೋಗಾಡಿ ಚೀರಾಡುವಾ | ಗಾಂಧೀಭಕ್ತರಿಗೇನ್ನ ಚಿತ್ರಮತಿಯೋ ನಾ ಕಾಣೆ ನಾರಾಯಣಾ ||೧||

ಗಾಂಧೀದೀಕ್ಷೆಯ ಕೊಂಡು, ಕೊಂದು ತಮ ಪೂರ್ವಾಚಾರಮಾರ್ಗಂಗಳಂ | ನಾಂಧೀರೂಪವಿದೆಂದು ಬೀದಿಗುಡಿಸುತ್ತಾ, ನೋಡದಿಂದಂ ಮಲಂ || ಗಾಂಧೀಟೌಕದೊಳೊಟ್ಟುಗೂಡಿ ಶ್ವಪಚಂಪಾರಾವನುಂ ಮಾಡುವಾ | ಗಾಂಧೀಭಕ್ತರಿಗೇನ್ನನಾಶಮತಿಯೋ ನಾ ಕಾಣೆ ನಾರಾಯಣಾ ||೨||

ಗಾಂಧೀ ತನ್ನಯ ಕರ್ಮರಾಶಿಫಲಮಂ ದೈವಾಜ್ಞೆಯಿಂ ಭೋಗಿಸಲ್ | ತಾಂಧೀಪೋಗಲಮೋಢ್ಯಮಂ ಬಳದೊಡೀಗಾಂಧೀಜವರ್ ಹೇಸಿಗಳ್ || ತಾಂಧೀಹೀನತೆಯಿಂದಮೋಢ್ಯ ಬಳವರ್ ಪೇಳಲ್ಲಂ ಲೀಗುವರ್ | ಗಾಂಧೀಭಕ್ತರಿಗೇನ್ನನಾಶಮತಿಯೋ ನಾ ಕಾಣೆ ನಾರಾಯಣಾ ||೩||

ಎಸ್. ವಿ. ವೆಂಕಟಸುಬ್ಬಯ್ಯ.

ಇದೇ ಸರಣಿಯೊಳದೇ ವಿಷಯಮಂ ಕುರಿತು ಶತಕವೊಂದಂ ರಚಿಸಬೇಕೆಂಬುದ್ದೇಶಮುಂಟು. ಮಹಾಜನ ಪ್ರೋತ್ಸಾಹಂ ದೊರೆತೊಡೆ ಶೀಘ್ರದೊಳ್ ಶತಕಂ ಸಿದ್ಧಮಕ್ಕುಂ.

ಹರವನಹಳ್ಳಿ, } ಇತಿ ಮಹಾಜನವಿಧೇಯ,
5-5-33. } ಎಸ್. ವಿ. ವೆಂಕಟಸುಬ್ಬಯ್ಯ.

ಚಾಣಕ್ಯನ ಅರ್ಥಶಾಸ್ತ್ರನೀತಿ.

[ಲೇಖಕ—ಕನ್ನಡಕವಿ ಅನವಟ್ಟಿ ರಾಮರಾಯರು.]
(ಮುಂದೆ ಸಾಗಿದುದು.)

ಪ್ರಥಮಭಾಗ (೪ ನೆಯ ಅಧ್ಯಾಯ)

ವೃದ್ಧಸಂಯೋಗ.

ಶಾಸ್ತ್ರಾಭ್ಯಾಸವೂ, ಆಚರಣಕ್ರಮಗಳೂ

೧. ಇವುಗಳಲ್ಲಿ ಚೆನ್ನಾಗಿ ಜ್ಞಾನಾಭಿವೃದ್ಧಿಯನ್ನು ಪಡೆಯಬೇಕೆಂದು ಅಪೇಕ್ಷಿಸುವವರು ಆಯಾಶಾಸ್ತ್ರಗಳಲ್ಲಿ ತೇರ್ಗಡೆಯನ್ನು ಹೊಂದಿದ ಮಹನೀಯರ ಶುಶ್ರೂಷೆಮಾಡಿ ಶಾಸ್ತ್ರಗಳನ್ನು ಕಲಿತು, ಅವುಗಳಲ್ಲಿ ನಿರೂಪಿಸಿರುವಂತೆ ಕಟ್ಟಳೆಗಳನ್ನು ಆಚರಣೆಗೆ ತರಬೇಕಾಗಿರುವುದೇ ಪ್ರಾಮುಖ್ಯವಾಗಿದೆ.

೨. ಬಾಲಕನಾದವನು ಚೂಡಾಕರ್ಮವು ನೆರವೇರಿದ ಮೇಲೆ, ಅಕ್ಷರಾಭ್ಯಾಸವನ್ನು ಮಾಡಿ, ಮಗ್ಗಗಳನ್ನು ಕಲಿತುಕೊಳ್ಳಬೇಕು. ಅನಂತರ ವೇದಗಳನ್ನು ಅಭ್ಯಾಸಮಾಡಿ, ಶಾಸ್ತ್ರಜ್ಞಾನಿಗಳಾದವರಲ್ಲಿ ಆನ್ವೀಕ್ಷಿಕಿಶಾಸ್ತ್ರವನ್ನೂ ಸರ್ಕಾರದ ಮೇಲ್ವಿಚಾರಣಾಕರ್ತರಾಗಿ ನಿಪುಣರಾದವರಲ್ಲಿ ವಾರ್ತೆ ಎಂಬ ಶಾಸ್ತ್ರವನ್ನೂ ದಂಡನೀತಿ ಶಾಸ್ತ್ರವನ್ನು ಅಭ್ಯಾಸಮಾಡಿ ಅದನ್ನು ಅನುಷ್ಠಾನದಲ್ಲಿ ಇಟ್ಟುಕೊಂಡಿರುವವರಲ್ಲಿ ದಂಡನೀತಿಶಾಸ್ತ್ರವನ್ನೂ ಓದಿ ನಿಪುಣನಾಗಬೇಕು.

೩. ರಾಜಪುತ್ರನಾದವನು 16 ನೆಯ ವರ್ಷದವರೆಗೂ ಬ್ರಹ್ಮಚರ್ಯಾಶ್ರಮದಲ್ಲಿರಬೇಕು. ದೀಕ್ಷಾಸಮಾವರ್ತನವನ್ನು ನಡೆಯಿಸಿ, ಗೋದಾನವನ್ನು ಮಾಡಿ ವಿವಾಹಮಾಡಿಕೊಳ್ಳಬೇಕು.

೪. ರಾಜಪುತ್ರನನ್ನು ಯೋಗ್ಯವಾದ ಶಿಕ್ಷಾಕ್ರಮದಲ್ಲಿಟ್ಟು ಯೋಗ್ಯನನ್ನಾಗಿ ಮಾಡಬೇಕೆಂದಿದ್ದರೆ, [illegible] ತ್ಯವನ್ನು ಹೊಂದಿರುವವರ ಹತ್ತಿರದಲ್ಲಿ ಯಾವಾಗಲೂ ಇರುವಂತೆ ಮಾಡಬೇಕು. ಇಂಥವರ ಸಹವಾಸದಿಂದಲೇ ಶಿಕ್ಷಾಕ್ರಮವೆಂಬುದು ಸ್ಥಿರವಾದ ಹದಿಪಾಯದಂತೆ ನಿಲ್ಲುವುದು.

೫. ಅವನನ್ನು ಮಧ್ಯಾಹ್ನಕಾಲದಲ್ಲಿ ಸೈನ್ಯವಿಷಯಕವಾದ ಶಾಸ್ತ್ರಗಳನ್ನು ಓದುವಂತೆ ಏರ್ಪಡಿಸುತ್ತಾ, ಚತುರಂಗಬಲವೆನಿಸಿದ ಆನೆ, ಕುದುರೆ, ರಥ ಮತ್ತು ಆಯುಧಗಳು ಈ ವಿಷಯಗಳಲ್ಲಿಯೂ ಹೆಚ್ಚು ತಿಳಿವಳಿಕೆಯುಳ್ಳವನನ್ನಾಗಿ ಮಾಡುತ್ತಿರಬೇಕು. ಅಲ್ಲದೆ ಪುರಾಣಾದಿಗಳನ್ನು ಶ್ರವಣಮಾಡಿಸುತ್ತಿರಬೇಕು.

೬. ಪುರಾಣಪ್ರಸಿದ್ಧರಾದವರ ಜೀವನಚರಿತ್ರೆಗಳನ್ನು ತಿಳುಹಿಸುತ್ತಾ, ಧರ್ಮಶಾಸ್ತ್ರ ಅರ್ಥಶಾಸ್ತ್ರಗಳ ಮರ್ಮಗಳನ್ನು ತಿಳುಹಿಸುತ್ತಿರಬೇಕು.

೭. ಪ್ರತಿದಿವಸ ಹಗಲೂ ರಾತ್ರಿಕಾಲಗಳಲ್ಲಿ ಹೊಸಪಾಠಗಳನ್ನು ಹೇಳಿಸಿಕೊಳ್ಳುತ್ತಾ, ಹಳೆಯ ಪಾಠಗಳನ್ನು ವಿರಾಮಕಾಲಗಳಲ್ಲಿ ಮನನಮಾಡುತ್ತಿರಬೇಕು. ಹಿಂದೆ ಕೇಳಿದ ಮತ್ತು ಓದಿದ ವಿಷಯಗಳಲ್ಲಿ ಗುರುವು ವಿದ್ಯಾರ್ಥಿಯನ್ನು ಆಗಾಗ್ಗೆ ಪ್ರಶ್ನೆಮಾಡುತ್ತಿರಬೇಕು.

೮. ಈ ರೀತಿಯಾದ ವಿಷಯಗ್ರಹಣದಿಂದ ಜ್ಞಾನವು ಹೆಚ್ಚುವುದು. ಈ ಜ್ಞಾನದಿಂದ ಯೋಗವು—ತಿಳಿದುದನ್ನು ಆಚರಣೆಯಲ್ಲಿ ತರುವುದು—ಸಿದ್ಧಿಸುವುದು. ಇದರಿಂದ ರಾಜಪುತ್ರನು ತನ್ನನ್ನು ತಾನು ತಿಳಿದು ಭಗವಂತನನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಳ್ಳುವನು. ಇದು ವಿದ್ಯಾಸಾಮರ್ಥ್ಯವೆಂದು ಹೇಳಿಸಿಕೊಳ್ಳುವುದು.

೯. ರಾಜನಾದವನು ವಿದ್ಯಾವೈಭವದಿಂದ ಮೆರೆಯುತ್ತಾ, ಶಾಸ್ತ್ರಗಳಲ್ಲಿ ನಿರ್ಮಲಜ್ಞಾನವಂತನೆನಿಸುತ್ತಾ, ತನ್ನ ಪ್ರಜೆಗಳನ್ನು ಸೌಖ್ಯದಿಂದ ಕಾಪಾಡಿಕೊಂಡು ಬರುತ್ತಾ, ಪ್ರಜೆಗಳ ಇಷ್ಟಾರ್ಥಗಳನ್ನು ಸಮಯೋಚಿತವಾಗಿ ಸಲ್ಲಿಸುತ್ತಾ, ಜಿತಮನಸ್ಕನಾಗಿರಬೇಕು.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಆರುವರ್ಷಗಳು ತುಂಬಿ ಏಳನೇ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೩ ನೇ ಮೇ ತಾ|| ೨೯ ನೇ ಸೋಮವಾರ.

ಶಿವೋಪಾಸನೆ.

ನಾವು [illegible] ಅಂತರುಪಾಸನೆ [illegible] ಯು ಎ[illegible] ಅವಶ್ಯಕವೋ ಬಹಿರುಪಾಸನೆಯೂ ಅಷ್ಟೇ ಅವಶ್ಯಕವೆಂಬ ವಿಷಯವನ್ನು ತೋರಿಸಿದ್ದೆವು. ಈಗಲೂ ಅದೇ ವಿಷಯವನ್ನು ಮುಂದುವರಿಸುವೆವು.

ಕಾಯದಲ್ಲಿಯೂ ವಚನದಲ್ಲಿಯೂ ಮನಸ್ಸಿನಲ್ಲಿಯೂ ಶಿವನನ್ನು ಉಪಾಸನೆ ಮಾಡುವುದೇ ಶಾಸ್ತ್ರವಿಹಿತವಲ್ಲದೆ ಕೇವಲ ಶರೀರದಲ್ಲಾಗಲಿ, ಕೇವಲ ಮನಸ್ಸಿನಲ್ಲಾಗಲಿ, ಕೇವಲ ವಚನದಲ್ಲಾಗಲಿ ಶಿವನನ್ನುಪಾಸಿಸುವುದು ಶಾಸ್ತ್ರವಿಹಿತವಲ್ಲ.

ತಸ್ಯಾಭಿಧ್ಯಾನಾದ್ಯೋಜನಾತ್ತತ್ವಭಾವಾದ್ಭೂಯಶ್ಚಾಂತೇ
ವಿಶ್ವಮಾಯಾನಿವೃತ್ತಿಃ |

ತಸ್ಯ-ಆ ಪರಮೇಶ್ವರನನ್ನು, ಅಭಿಧ್ಯಾನಾತ್-ಅಂತರಂಗದಲ್ಲಿ ಧ್ಯಾನಿಸುವುದರಿಂದಲೂ, ಯೋಜನಾತ್-ಸ್ಥೂಲಶರೀರದಲ್ಲಿ ಆ ಪರಮೇಶ್ವರನನ್ನು ಧರಿಸಿ ಪೂಜಿಸುವುದರಿಂದಲೂ, ಸಕಲಮಾಯಾನಿವೃತ್ತಿಃ-ಜನನಮರಣರೂಪವಾದ ದುಃಖವು ನಾಶವಾಗುತ್ತದೆ ಎಂದು ಶ್ರುತಿಯಲ್ಲಿಯೂ ಬಹಿರಂತರುಪಾಸನೆಯು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ. ಮತ್ತು

ಜೀವಮುಕ್ತಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾ
ದಾಶ್ರಿತತ್ವಾದಿನಾ ತದ್ಯೋಗಾತ್ |

ಎಂದು ವ್ಯಾಸಋಷಿರಚಿತವಾದ ಬ್ರಹ್ಮಸೂತ್ರವು ಸಹ ಕೇವಲ ಪ್ರಾಣಲಿಂಗೋಪಾಸನೆಯನ್ನು ವಿಧಿಸದೆ ತ್ರಿವಿಧೋಪಾಸನೆಯನ್ನು ಸ್ಪಷ್ಟವಾಗಿ ವಿಧಿಸುವುದರಿಂದ ಮುಮುಕ್ಷುಗಳಾದ ಪುರುಷರು ಅಂತರುಪಾಸನೆಯಂತೆ ಬಹಿರುಪಾಸನೆಯನ್ನೂ ಮಾಡಬೇಕೆಂಬುದೇ ಸಿದ್ಧಾಂತವು. ಇನ್ನು ಆ ಉಪಾಸನಾಕ್ರಮವು ಮಾನಸ, ವಾಚಿಕ, ಕಾಯಿಕವೆಂದು ಮೂರು ಬಗೆಯಾಗಿದೆ.

ಮಾನಸೋಪಾಸನಂ ಕುರ್ಯಾದ್ಧೃದಯೇ ದಹರೇಽಪಿ ವಾ |
ಪಂಚಾಕ್ಷರ್ಯಾದಿ ಗಾಯತ್ರ್ಯಾ ರುದ್ರಸೂಕ್ತಾದಿಭಿಸ್ಸದಾ ||
ವಾಚಿಕೋಪಾಸನಂ ಪ್ರೋಕ್ತಂ ಧೃತಲಿಂಗೇ ಶಿವಾತ್ಮಕೇ |
ಪಾಣಿಪೀಠೇ ತಥಾ ವಹ್ನೌ ಸ್ಥಂಡಿಲೇ ವಾ ವಿಧಾನತಃ ||
ಕಾಯಿಕೋಪಾಸನಂ ಕಾರ್ಯಂ ಶ್ರದ್ಧಾಭಕ್ತಿಸಮನ್ವಿತಂ |
ಏವಂ ತ್ರಿಕರಣೈರೀಶವಿಶ್ವರೋಪಾಸನಂ ದ್ವಿಜಃ |
ಕುರ್ವನ್ಮುಕ್ತಿಮವಾಪ್ನೋತಿ ವೈದಿಕೋ ನಾನ್ಯಹೇತುನಾ ||

ದಹರಾಕಾಶದಲ್ಲಿ ಪ್ರಾಣಲಿಂಗವನ್ನು ಅನವರತವೂ ಧ್ಯಾನಿಸುತ್ತಿರುವುದೇ ಮಾನಸೋಪಾಸನೆಯೆನಿಸುತ್ತದೆ. ಪಂಚಾಕ್ಷರಿ, ಗಾಯತ್ರಿ, ರುದ್ರಸೂಕ್ತ ಮುಂತಾದ ವೇದವಚನಗಳನ್ನುಚ್ಚರಿಸುತ್ತಿರುವುದೇ ವಾಚಕೋಪಾಸನೆಯೆನಿಸುತ್ತದೆ. ಹಸ್ತಪೀಠದಲ್ಲಾಗಲಿ ಅಗ್ನಿಯಲ್ಲಾಗಲಿ ಸ್ಥಂಡಿಲಾದಿಗಳಲ್ಲಾಗಲಿ ಆ ಲಿಂಗರೂಪನಾದ ಪರಶಿವನನ್ನು ಅಷ್ಟವಿಧಾರ್ಚನೆಯಿಂದ ಪೂಜಿಸುತ್ತಿರುವುದೇ ಕಾಯಕೋಪಾಸನೆಯೆನಿಸುತ್ತದೆ. ಯಾವ ವೈದಿಕನಾದ ದ್ವಿಜನು ಯಾವಾಗಲೂ ಇಂಥ ಕಾಯ ವಾಕ್ ಮನಸ್ಸುಗಳೆಂಬ ತ್ರಿಕರಣಗಳಿಂದ ಪ್ರತಿದಿವಸವೂ ಲಿಂಗರೂಪ ಪರಶಿವನನ್ನು ಶರೀರದಲ್ಲಿ ವಿಧಾನೋಕ್ತವಾಗಿ ಪೂಜಿಸುತ್ತಲೂ ವಚನದಲ್ಲಿ ವೇದಮಂತ್ರಗಳಿಂದ ಪಠಿಸುತ್ತಲೂ ದಹರಾಕಾಶದಲ್ಲಿ ಧ್ಯಾನಿಸುತ್ತಲೂ ಇರುವನೋ ಅವನು ಈ ಜನನಮರಣರೂಪವಾದ ದುಃಖದಿಂದ ಪಾರಾಗಿ ಮುಕ್ತಿಸಾಮ್ರಾಜ್ಯವನ್ನು ಪಡೆಯುವನಲ್ಲದೆ ಈ ಮೂರು ಉಪಾಸನೆಗಳನ್ನು ಬಿಟ್ಟು ಬೇರೆ ಯಾವುದರಿಂದಲೂ ಮೋಕ್ಷವನ್ನು ಪಡೆಯಲಾರನು.

ಎಂದು ಸ್ಕಾಂದಪುರಾಣವು ಸಹ ಆ ಶ್ರುತ್ಯರ್ಥವನ್ನು ಸ್ಪಷ್ಟವಾಗಿ ಅನುವಾದನಮಾಡುವುದರಿಂದ ಬಹಿರುಪಾಸನೆ ಅಂತರುಪಾಸನೆಗಳಿಲ್ಲದೆ ಮುಕ್ತಿಯನ್ನು ಬಯಸುವವನು ಮೇಘಗಳ ಸುಳಿವಿಲ್ಲದೆ ಶುಭ್ರವಾದ ಆಕಾಶದಲ್ಲಿ ಮಳೆಯನ್ನಪೇಕ್ಷಿಸುವ ಅಜ್ಞನಿಗೆ ಸಮಾನನಾಗುವನೆಂಬುವಲ್ಲಿ ಆವ ಸಂಶಯವೂ ಇಲ್ಲವು. ಕಾಯಕೋಪಾಸನೆಯಂ ಬಿಟ್ಟು ಕೇವಲ ಅಂತರುಪಾಸನೆಯನ್ನು ಮಾಡುವುದರಿಂದ ಈಶ್ವರಾನುಗ್ರಹದಿಂದ ಬಂದ ಈ ಸ್ಥೂಲಶರೀರವೇ ವ್ಯರ್ಥವಾಗುವದು. ಅಂತರುಪಾಸನೆಯನ್ನು ಬಿಟ್ಟು ಕೇವಲ ಕಾಯಕೋಪಾಸನೆಮಾಡುವುದರಿಂದ ಅಂತರಂಗವು ಶುದ್ಧಿಯಾಗದು. ಬಾಯಲ್ಲಿ ವೇದಮಂತ್ರಗಳನ್ನು ಪಠಿಸುವುದನ್ನು ಬಿಟ್ಟು ಕೇವಲ ಕಾಯಕಮಾನಸೋಪಾಸನೆಗಳನ್ನು ಮಾಡುವದರಿಂದ ವಾಗಿಂದ್ರಿಯಶುದ್ಧಿಯಾಗದು. ಕಾಯ, ವಾಕ್ಕು, ಮನಸ್ಸು [illegible] ವನ್ನು [illegible] ಅಂಕುಶಕ್ಕೊಳ[illegible] ಹೊರತು ಮಾನವನಿಗೆ ಈಶ್ವರಾನುಗ್ರಹವಾಗುವುದಿಲ್ಲ. ಇದೇ ತ್ರಿಕರಣಶುದ್ಧಿಯೆಂದು ಆರ್ಯರ ಅಭಿಮತವಾಗಿದೆ. "ವಚಸ್ಯೇಕಂ ಮನಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ" ಮನಸ್ಸಿನಲ್ಲಿ ಏನನ್ನು ಧ್ಯಾನಿಸುತ್ತಿರುವನೋ ಮಾತಿನಲ್ಲಿ ಅದನ್ನೇ ಉಚ್ಚರಿಸುತ್ತಲೂ ಶರೀರದಲ್ಲಿ ಅದನ್ನೇ ಮಾಡುತ್ತಲೂ ಇರುವುದೇ ದೊಡ್ಡವರ ದಿನಚರ್ಯವೆಂದು ಅಭಿಯುಕ್ತಿಯಿರುತ್ತದೆ. ಜಗಜ್ಜನಕನಾದ ಪರಮೇಶ್ವರನು ಆಕಾಶದಂತೆ ಸರ್ವವ್ಯಾಪಕನಾಗಿರುವುದರಿಂದ ಅವನು ಅಲ್ಪಜ್ಞನಾದ ಮಾನವನಿಗೆ ಪ್ರತ್ಯಕ್ಷವಾಗಬೇಕಾದರೆ ಸ್ಥೂಲೋಪಾಸನೆಯೂ ಅಂತರುಪಾಸನೆಯೂ ಅವಶ್ಯಕವು. ಸಾಧಾರಣವಾಗಿ ಲೋಕದಲ್ಲಿ ವಿದ್ಯೆಯೆಂಬುದು ಒಂದು ಜ್ಞಾನರೂಪಗುಣವಾಗಿದ್ದರೂ ಅದು ಎಲ್ಲರಿಗೂ ಸ್ವಾಧೀನವಾಗಲಾರದು. ಅದು ಸ್ವಾಧೀನವಾಗುವುದಕ್ಕಾಗಿ ಆ ವಿದ್ಯೆಯನ್ನು ತಿಳಿದವರು ಸುಲಭವಾಗಿ ವಿದ್ಯಾರ್ಥಿಗಳಿಗೆ ತಿಳಿಯಲೆಂದು ಅನೇಕ ಗ್ರಂಥರೂಪಗಳಿಂದ ಬರೆದಿಟ್ಟು ಅದನ್ನು ಓದುವುದಕ್ಕೆ ಅನೇಕ ಸಾಧನೆಗಳನ್ನು ಕಲ್ಪಿಸಿರುತ್ತಾರೆ. ಗುರುಮುಖದಿಂದ ಕಾಯಕ್ಲೇಶಪಟ್ಟು ಆ ಸ್ಥೂಲಾಕಾರಗಳಾದ ಗ್ರಂಥಗಳನ್ನು ಬಾಯಿಯಲ್ಲಿ ಉಚ್ಚರಿಸುತ್ತ ನಿದ್ರಾಲಸ್ಯಗಳಿಲ್ಲದೆ ಮನಸ್ಸಿನಲ್ಲಿ ಅದನ್ನೇ ಧ್ಯಾನಿಸುತ್ತಿದ್ದರೆ ಆ ಸೂಕ್ಷ್ಮವಾದ ವಿದ್ಯೆಯು ಅವನ ಸ್ವಾಧೀನವಾಗುತ್ತದೆ. ಅದರಂತೆ ವ್ಯಾಪಕನಾದ ಪರಮೇಶ್ವರನ ಸ್ವರೂಪವನ್ನು ಕ್ರಮವಾಗಿ ಎಲ್ಲರಿಗೂ ಪ್ರತ್ಯಕ್ಷಗೊಳಿಸುವುದಕ್ಕಾಗಿ ಆ ಪರಮೇಶ್ವರನ ಸಾಕ್ಷಾತ್ಕಾರವನ್ನು ಪಡೆದ ಮಹರ್ಷಿಗಳು ಲೋಕಕಲ್ಯಾಣಕ್ಕಾಗಿ ಪರಮೇಶ್ವರನ ಶಕ್ತಿಯಿಂದೊಡಗೂಡಿದ ಅನಂತ ಸ್ಥೂಲಾಕಾರಗಳನ್ನು ಕಲ್ಪಿಸಿ ಸಾಧನೋಪಾಯಗಳನ್ನು ತಿಳಿಸಿರುತ್ತಾರೆ. ಹೀಗೆ ಬಾಹ್ಯಶರೀರದಲ್ಲಿ ಸ್ಥೂಲೋಪಾಸನೆಯನ್ನು ಮಾಡದೆ ಬಾಯಿಯಲ್ಲಿ ಆ ಪರಮಾತ್ಮನ ನಾಮಗಳನ್ನುಚ್ಚರಿಸದೆ ಕೇವಲ ಮನಸ್ಸಿನಲ್ಲೇ ಪರಮಾತ್ಮನನ್ನುಪಾಸನೆಮಾಡುತ್ತೇನೆಂದು ಹೇಳಿಕೊಳ್ಳುವನು. ಗ್ರಂಥಗಳನ್ನು ಪಡೆಯದೆ ಆ ಗ್ರಂಥಗಳಲ್ಲಿ ಹೇಳಿರುವ ವಚನಗಳನ್ನು ಪದೇ ಪದೇ ಉಚ್ಚರಿಸದೆ ಮನಸ್ಸಿನ ಸಹಾಯವೊಂದರಿಂದಲೇ ವಿದ್ವಾಂಸನಾಗುತ್ತೇನೆಂದು ಹೇಳುವ ಮೂಢನಿಗೆ ಸಮನಾಗಿ ಹೋಗುತ್ತಾನೆ. ಸ್ಥೂಲಾಕಾರದಲ್ಲಿರುವ ಗ್ರಂಥಗಳನ್ನು ಅಭ್ಯಾಸಮಾಡದಿದ್ದರೆ ಇವನಿಗೆ ಜ್ಞಾನರೂಪವಾದ ವಿದ್ಯೆಯು ಸ್ವಾಧೀನವಾಗಲಾರದು ? ಅದಕಾರಣವೇ ಹಿಂದಿನವರು ಆ ಸೂಕ್ಷ್ಮವಾದ ವಿದ್ಯೆಯನ್ನು ಕಲ್ಪಿತವಾದ ಪುಸ್ತಕರೂಪದಲ್ಲಿ ತೋರಿಸಿ ಆ ಪುಸ್ತಕದ ಸಹಾಯದಿಂದಲೇ ಆ ವಿದ್ಯೆಯು ಆತನಿಗೆ ಸ್ವಾಧೀನವಾಗುವಂತೆ ಮಾಡಿರುವುದರಿಂದ ಈಗ ಎಲ್ಲರೂ ಗುರುಮುಖದಿಂದ ಆ ಪುಸ್ತಕಗಳನ್ನು ಓದಿ ಸುಲಭವಾಗಿ ವಿದ್ವಾಂಸರಾಗಹತ್ತಿರುತ್ತಾರೆ. ಹಾಗೆ ಕಲ್ಪಿತವಾದ ಒಂದೊಂದು ಸ್ಥೂಲಾಕಾರವಾದ ಲಿಪಿಯಲ್ಲಿ ಆ ವಿದ್ಯೆಯನ್ನು ಅವರು ಬರೆದಿಡದಿದ್ದಲ್ಲಿ ಮಾನವಜಾತಿಯಲ್ಲಿ ವಿದ್ಯೆಯೆಂಬುವುದೇ ಇಲ್ಲದಂತಾಗಿ ಎಲ್ಲರೂ ಪಶುಗಳಂತೆ ಕೇವಲ ಆಹಾರನಿದ್ರಾಮೈಥುನಾದಿಗಳಲ್ಲಿ ಮಾತ್ರ ಆಸಕ್ತರಾಗಿರಬೇಕಾಗುತ್ತಿತ್ತು.

"ಮಣ್ಣನ್ನು ಬಿಟ್ಟು ಮಡಕೆಯಿಲ್ಲ, ತನ್ನನ್ನು ಬಿಟ್ಟು ದೇವರಿಲ್ಲ" ಎಂಬ ಗಾಥೆಯನ್ನು ಮಾತ್ರ ಹೇಳಿಕೊಂಡು ನಾನೇ ದೇವರಾಗಿರುತ್ತೇನೆಂದು ಹುಚ್ಚನಂತೆ ಬಾಯಿಯಲ್ಲಿ ಹೇಳಿಕೊಂಡು ಸ್ಥೂಲಶರೀರದಲ್ಲಿ ಆ ದೇವರ ಉಪಾಸನೆಮಾಡದಿದ್ದಲ್ಲಿ ಅಂತಹ ದೇವರು ತನಗೆ ಸಂಭವಿಸಿದ ಭವರೋಗವನ್ನು ಎಂದೂ ಪರಿಹರಿಸಲಾರನು. ದೇವರ ಸ್ವರೂಪವು ತನಗೆ ಗೋಚರವಾಗಿ ಭವರೋಗವು ನಷ್ಟವಾಗುವುದಕ್ಕಾಗಿ ಋಷಿಗಳು ಸ್ಥೂಲಾಕಾರವಾಗಿ ದೇವರ ಆಕಾರವನ್ನು ಅವರವರ ಮತಾನುಸಾರವಾಗಿ ಅನಂತರೂಪಗಳಿಂದ ಕಲ್ಪಿಸಿಕೊಟ್ಟಿರುತ್ತಾರೆ. ವೀರಶೈವಮತಾಚಾರ್ಯರಾದ ರೇಣುಕಾದಿಪಂಚರ್ಷಿಗಳು ಸುಲಭವಾಗಿ ಆ ಭಗವಂತನು ಪ್ರತ್ಯಕ್ಷವಾಗಲೆಂಬ ಮಹೋದ್ದೇಶದಿಂದ ದಹರಾಕಾಶದಲ್ಲಿ ರಾರಾಜಿಸುವ ಲಿಂಗರೂಪಿ ಪರಮೇಶ್ವರನನ್ನು, ವೃತ್ತ, ಪೀಠ, ಗೋಮುಖ, ನಾಳ, ಗೋಳಕ ಎಂಬ ಐದು ಸೂತ್ರಗಳಿಂದೊಡಗೂಡಿದ ಕಲ್ಪಿತ ಚಿತ್ರಕದಲ್ಲಿ [illegible] ಮಂತ್ರಶಕ್ತಿಯಿಂದ ನೆಲಗೊಳಿಸಿ ಶಿವದೀಕ್ಷೆಯಿಂದ ಪರಿಶುದ್ಧವಾದ ದೇಹದಲ್ಲಿ ಧಾರಣಮಾಡಿ "ಪರಬ್ರಹ್ಮಾಭಿದಂಲಿಂಗಂ ಪಶುಪಾಶವಿಮೋಚಕಂ" ಎಂಬ ಪ್ರಮಾಣದಂತೆ ಆ ಲಿಂಗಕ್ಕೆ ಭವಪಾಶವಿಚ್ಛೇದಿಯಾದ ಶಿವಲಿಂಗವೆಂಬ ಅಭಿಧಾನವನ್ನು ಇಟ್ಟಿರುತ್ತಾರೆ.

ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನಮನಃ
ಪ್ರಚಾರಃ |
ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಯಃ ಪೂಜಯತ್ಯಂಗ ಸ
ವೀರಶೈವಃ ||

ಆ ಇಷ್ಟಲಿಂಗವನ್ನು ಹಸ್ತಪೀಠದಲ್ಲಿಟ್ಟು ಪೂಜಿಸುವವನೇ ವೀರಶೈವನೆಂದು ಹೇಳಿರುವದರಿಂದ ಗುರುವಿನಿಂದ ಅನುಗ್ರಹೀತವಾದ ಸ್ಥೂಲಲಿಂಗೋಪಾಸನೆಯಿಲ್ಲದವನಿಗೆ ನೈಜವಾದ ಬ್ರಹ್ಮಲಿಂಗದಸ್ವರೂಪಸಾಕ್ಷಾತ್ಕಾರವಾಗಲಾರದೆಂದು ಸ್ಪಷ್ಟವಾಗುತ್ತದೆ. ಹೀಗೆ ಎಲ್ಲಾ ಮತೀಯರು ದೇವರ ಒಂದೊಂದು ನಾಮಗಳಿಂದ ಕಲ್ಪಿತವಾದ ಒಂದೊಂದು ಆಕಾರವನ್ನು ಪೂಜಿಸಿ ಬ್ರಹ್ಮಸಾಕ್ಷಾತ್ಕಾರಮಾಡಿಕೊಂಡಿರುವರಲ್ಲದೆ ಸ್ಥೂಲೋಪಾಸನೆಯ ಗಂಧವೇ ಇಲ್ಲದೆ ಯಾರಿಗೂ ಬ್ರಹ್ಮಸಾಕ್ಷಾತ್ಕಾರವಾಗಿಲ್ಲ. ಅಗಸ್ತ್ಯಾದಿ ಮಹರ್ಷಿಗಳು ಸಹ ಒಂದೊಂದು ಆಕಾರವನ್ನು ಕಲ್ಪಿಸಿಕೊಂಡೇ ಬ್ರಹ್ಮಸಾಕ್ಷಾತ್ಕಾರ ಪಡೆದರೆಂಬುವದಕ್ಕೆ ಅವರು ಪೂಜಿಸಿದ ಅಗಸ್ತ್ಯೇಶ್ವರ, ವ್ಯಾಸೇಶ್ವರ, ಮುಂತಾದ ವಿಗ್ರಹಗಳೇ ಸಾಕ್ಷಿಗಳಾಗಿವೆ. ಇಂಥ ವೇದಾಗಮವಿಹಿತಗಳಾದ ಸ್ಥೂಲೋಪಾಸನೆಗಳನ್ನು ಕೆಲ ಆಧುನಿಕಸಮಾಜದವರು ಕಿತ್ತೊಗೆಯಲು ಹವಣಿಸಿರುತ್ತಾರೆ. ಭಾರತಧರ್ಮಮಂದಿರದ ತಳಹದಿಯಂತಿರುವ ಆ ಪರಬ್ರಹ್ಮಸ್ಮಾರಕವಾಗಿರುವ ವಿಗ್ರಹಾರಾಧನೆಯೇ ಇಲ್ಲದ ಮೇಲೆ ಭಾರತಧರ್ಮಕ್ಕೇನೇ ಜಲಾಂಜಲಿಕೊಡುವ ಪ್ರಸಕ್ತಿಬರುವುದು. ಆದುದರಿಂದ ಸೃಷ್ಟ್ಯಾರಂಭದಿಂದ ಬಂದಿರುವ ಶಾಸ್ತ್ರಸಿದ್ಧವಾದ ಸ್ಥೂಲೋಪಾಸನೆಯನ್ನು ಅಂಥ ಅವೈದಿಕರ ಮಾಯಾಜಾಲಕ್ಕೆ ಬಿದ್ದು ತಮ್ಮ ನಿಜಧರ್ಮದಿಂದ ದೂರರಾಗದಂತೆ ಜಗದೀಶ್ವರನು ಎಲ್ಲರಿಗೂ ಸದ್ಬುದ್ಧಿಯನ್ನೀಯಲಿ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ವಿಯನ್ನಾನಗರದಿಂದ ನೃತ್ಯಮಾಡುವ ಎರಡು ಕುದುರೆಗಳನ್ನು ತರಿಸಿರುತ್ತಾರೆ.

ಕೆಮ್ಮಣ್ಣುಗುಂಡಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಕಳೆದ ಶುಕ್ರವಾರದ ದಿವಸ ರಾಜಧಾನಿಗೆ ಆಗಮಿಸಿದರು.

ಈ ದಿವಸ ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಬ್ರಿಟಿಷ್ ರೆಸಿಡೆಂಟರವರು ರಾಜಧಾನಿಗೆ ದಯಮಾಡಿಸಿದರು. ಗೌರವಾರ್ಥವಾಗಿ 13 ತೋಪುಗಳು ಹಾರಿಸಲ್ಪಟ್ಟವು.

ಇದೇ ಮೇ 24 ನೇ ತಾರೀಖಿನ ದಿವಸ ಬೆಂಗಳೂರು ನಗರದ ನರಸಿಂಹರಾಜರೋಡಿನಲ್ಲಿ ಬರುತ್ತಿದ್ದ ಒಂದು ಮಿಲಿಟರಿ ಲಾರಿಗೆ 15 ವರ್ಷದ ಒಬ್ಬ ಹುಡುಗನು ಸಿಕ್ಕಿ ಮೃತಪಟ್ಟನು.

ಈ ಸಾರೆ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವಕ್ಕೆ ಬ್ರಿಟಿಷ್ ರೆಸಿಡೆಂಟರೂ, ಇಂದೋರು ಸಂಸ್ಥಾನದ ಹೋಳ್ಕರ್ ಮಹಾರಾಜರೂ, ವೆಂಕಟಗಿರಿ ಮಹಾರಾಜರವರೂ ಆಗಮಿಸುವರೆಂದು ತಿಳಿದುಬಂದಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರೊಫೆಸರಾದ ಡಾಕ್ಟರ್ ಎ. ಸುಬ್ಬರಾಯರಿಗೆ ಅಮೇರಿಕೆಯ 'ಕಾರ್ನ ವಿದ್ಯಾಸಹಾಯಕ ಫಂಡಿ' ನವರು 2 ವರ್ಷಗಳವರೆಗೆ ವರ್ಷ 1 ಕ್ಕೆ 320 ಪೌಂಡುಗಳ ವೇತನವನ್ನು ಕೊಡುವರೆಂದು ತಿಳಿದುಬಂದಿದೆ.

ಕುಪ್ಪಸ್ವಾಮಿ, ರತ್ನಂ ಎಂಬ ಇಬ್ಬರು ಕೆಲಸಗಾರರು ರೈಲ್ವೇ ಗೂಡ್ಸ್ ಷೆಡ್ಡಿನಲ್ಲಿದ್ದ ಮೂಟೆಗಳಿಂದ ತೊಗರಿಯನ್ನು ಕದ್ದುಕೊಂಡು ಹೋಗುತ್ತಿದ್ದರೆಂಬ ಆಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಇಬ್ಬರಿಗೂ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿದರು!

ಬೆಂಗಳೂರು ನಗರದ ಮಾರ್ಕೆಟ್ಟಿನಲ್ಲಿರುವ ಅಬ್ದುಲ್ ತ್ತಾರ್ ಎಂಬ ವ್ಯಾಪಾರಿಯು ಕಡಿಮೆ ತೂಕದ ಟ್ಟುಗಳನ್ನಿಟ್ಟುಕೊಂಡು ಗಿರಾಕಿಗಳಿಗೆ ಮೋಸಮಾಡು ದ್ದನೆಂಬ ಕಾರಣದಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಅಪರಾಧಿಗೆ 20 ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದು ವಾರ ಸಜೆಯನ್ನು ವಿಧಿಸಿದರು.

ಮೈಸೂರು ಸಂಸ್ಥಾನದಲ್ಲಿರುವ ಕಾರ್ಖಾನೆಗಳಲ್ಲಿ ಕೂಲಿಮಾಡತಕ್ಕ ಹೆಂಗಸರು 9 ತಿಂಗಳಿಗೆ ಕಡಿಮೆಯಿಲ್ಲದಂತೆ ಕೆಲಸಮಾಡಿ ಗರ್ಭಿಣಿಯರಾದರೆ ಅಂಥವರಿಗೆ ಪ್ರಸವಿಸುವದಕ್ಕೆ ಮುಂಚೆ ನಾಲ್ಕು ವಾರಗಳು ಮತ್ತು ಪ್ರಸವಿಸಿದನಂತರ ನಾಲ್ಕು ವಾರಗಳವರೆಗೆ ದಿನ 1 ಕ್ಕೆ 0 ಆಣೆಗೆ ಕಡಿಮೆಯಿಲ್ಲದಂತೆ ಸಹಾಯದ್ರವ್ಯವನ್ನು ಕೊಡತಕ್ಕದ್ದೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

1932 ನೇ ಇಸವಿ ಜುಲೈ 17 ನೇ ತಾರೀಖಿನ ದಿವಸ ಾಸಿಪಾಳ್ಯದಲ್ಲಿ ಒಂದು ಖೂನಿಯು ನಡೆದು ಆ ಸಂಬಂಧದಲ್ಲಿ ಪೋಲೀಸರು ಖಲಂಧರ್ ಎಂಬವನನ್ನು ಅನುಮಾನದಮೇಲೆ ದಸ್ತಗಿರಿಮಾಡಿ ವಿಚಾರಣೆಗೆ ಗುರಿ ಸಿದ್ದರು. ಬೆಂಗಳೂರು ಡಿವಿಜನ್ ಸೆಷನ್ಸ್ ಜಡ್ಜರು ಮೊಕದ್ದಮೆಯನ್ನು ವಿಚಾರಿಸಿ, ಇದೇ ಮೇ 25 ತಾರೀಖಿನ ದಿವಸ ಆಪಾದಿತನು ನಿರಪರಾಧಿ ದು ಹೇಳಿ ಬಿಡುಗಡೆಮಾಡಿದರು!

ಇದೇ ಮೇ 21 ನೇ ತಾರೀಖಿನ ದಿವಸ ಬೆಂಗಳೂರು ಸಿಟಿ ಸ್ಪೆಷಲ್ ಮಾಜಿಸ್ಟ್ರೇಟರವರು ಬಿನ್ನಿಮಿಲ್ಲಿನ ದಲನೇ ಮೊಕದ್ದಮೆಯ ಜಡ್ಜ್ ಮೆಂಟನ್ನು ಹೇಳಿ ರ್ಜುಮಾಡಲ್ಪಟ್ಟಿದ್ದ 5 ಜನರನ್ನೂ ನಿರಪರಾಧಿಗಳು ಹೇಳಿ ಬಿಡುಗಡೆಮಾಡಿದರು. 15 ಜನ ಅಪಾ ಪೈಕಿ 10 ಜನರನ್ನು ಈ ಮೊದಲೇ ಬಿಡುಗಡೆಮಾಡಿ . 2 ನೇ ಮೊಕದ್ದಮೆಯಲ್ಲಿ ಇಬ್ಬರನ್ನು ಬಿಡುಗ ಾಡಿ 3 ಜನರಿಗೆ ತಲಾ 50 ರೂಪಾಯಿ ಜುಲ್ಮಾನೆ ದರೆ ಆರಾರು ತಿಂಗಳ ಕಠಿಣಸಜೆಯನ್ನು ವಿಧಿಸಿ

ರಾಜಧಾನಿಯಲ್ಲಿರುವ ನ್ಯಾಯತೀರ್ಥ ಆಸ್ಥಾನವಿ ನ್ ಶ್ರೀ ಶಾಂತರಾಜ ಶಾಸ್ತ್ರಿಗಳ ಸಂಪಾದಕತ್ವದಲ್ಲಿ 'ವಿವೇಕಾಭ್ಯುದಯ'ವೆಂಬ ಒಂದು ಹೊಸದಾದ ರೀತಿಯ ಮಾಸಪತ್ರಿಕೆಯು ಈ ದಿವಸ ಉದಯವಾಗುತ್ತದೆ. ಈ ಪತ್ರಿಕೆಗೆ ಸಾಮಾಜಿಕ ನೈತಿಕ ಸಾಹಿತ್ಯ ಮುಂತಾದ ಸರ್ವಜನೋಪಕಾರಿಗಳಾದ ವಿಷಯಗಳೇ ಮುಖ್ಯಧ್ಯೇಯಗಳಾಗಿರುತ್ತವೆ. ಸಂಪಾದಕರು ಆಸ್ತಿಕರೂ ಚತುರಮತಿಗಳೂ ಧೈರ್ಯಶಾಲಿಗಳೂ ಆಗಿರುವುದರಿಂದ ಈ ಪತ್ರಿಕೆಯು ನಮ್ಮ ಭಾರತಜನಾಂಗದಲ್ಲಿ ವಿವೇಕಾಭ್ಯುದಯವನ್ನುಂಟುಮಾಡಿ ತನ್ನ ನಾಮವನ್ನು ಸಾರ್ಥಕಗೊಳಿಸುವುದರಲ್ಲಿ ಆವ ಸಂದೇಹವೂ ಇಲ್ಲ. ಆದುದರಿಂದ ಈ ಪತ್ರಿಕೆಗೆ ಧರ್ಮದೃಷ್ಟಿಯುಳ್ಳ ಆಸ್ತಿಕಮತಾನುಯಾಯಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ವರ್ತಮಾನಸಂಗ್ರಹ

ಜರ್ಮನ್ ದೇಶದಲ್ಲಿ ಸ್ತ್ರೀಯರು ಕನ್ನಡಕಗಳನ್ನು ಧರಿಸಕೂಡದೆಂದು ಒಂದು ಹೊಸಕಾನೂನು ಹೊರಟಿರುವದಂತೆ !

ಗಾಂಧಿಯವರ 21 ದಿವಸಗಳ ಉಪವಾಸವ್ರತವು ಈ ದಿನ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಮುಕ್ತಾಯವಾಗುವದು !

ಚೀನಾ ಜಪಾನ್ ಯುದ್ಧವು ನಿಂತು ಇಬ್ಬರಿಗೂ ಒಪ್ಪಂದವಾಯಿತೆಂದು ತಿಳಿದುಬಂದಿದೆ. ವಿವರಗಳು ಇನ್ನೂ ಹೊರಬಿದ್ದಿಲ್ಲ.

ಶ್ರೀಯುತ ಸುಭಾಷ ಚಂದ್ರ ಬೋಸರಿಗೆ ಚಿಕಿತ್ಸೆಗಾಗಿ ಜರ್ಮನಿಗೆ ಹೋಗಬಹುದೆಂದು ಇಂಡಿಯಾ ಸರಕಾರದವರು ಅನುಮತಿಯನ್ನು ಕೊಟ್ಟಿರುತ್ತಾರೆ.

ಇದೇ ಮೇ 25 ನೇ ತಾರೀಖಿನ ದಿವಸ ವಿಜಯನಗರದ ಸಮೀಪದಲ್ಲಿರುವ ವಂಟಿಕೋಲ ಅಗ್ರಹಾರ ಎಂಬ ಹಳ್ಳಿಗೆ ಬೆಂಕಿಯುಬಿದ್ದು ಗ್ರಾಮದಲ್ಲಿದ್ದ 200 ಮನೆಗಳು ಸುಟ್ಟು ಭಸ್ಮವಾದವು.

ಜಪಾನ್ ದೇಶಕ್ಕೆ ಸೇರಿದ ಕಾಮೊಗಾವಾ ಎಂಬ ಸಮುದ್ರ ತೀರದ ಹತ್ತಿರ ಸಮುದ್ರ ಮಧ್ಯದಲ್ಲಿ ನೀರು ಮೇಲಕ್ಕೆ ಎದ್ದು, 70 ಟನ್ ತೂಕವಿದ್ದ 'ವಿಜಾಜ್ಞ ಮಾರು' ಎಂಬ ಹಡಗನ್ನು 400 ಗಜಗಳ ದೂರಕ್ಕೆ ಎತ್ತಿಹಾಕಿತಂತೆ !

ಇಟಲೀ ದೇಶಕ್ಕೆ ಸೇರಿದ ವಿಯನ್ನಾ ನಗರದಲ್ಲಿ ಭಯಗ್ರಸ್ತರಾದ ಜನರಿಗೆ ಅಂಗರಕ್ಷಕರನ್ನು ನೇಮಿಸಿಕೊಡುವ ಒಂದು ಹೊಸ ಸಂಸ್ಥೆಯು ಏರ್ಪಾಡಾಗಿರುವದು. ಈ ಅಂಗರಕ್ಷಕರೆಲ್ಲರೂ ಬಲಾಢ್ಯರಾದ ಪೈಲ್ವಾನರಾಗಿರುವರಂತೆ !

ಪ್ಯಾರಿಸ್ ನಗರದ ಆರೋಗ್ಯಶಾಖಾಧಿಕಾರಿಗಳು ಆ ನಗರದಲ್ಲಿ 30,00,000 ಇಲಿಗಳಿರುವವೆಂದೂ, ಅವು ಪ್ರತಿ ವರ್ಷವೂ 3,00,00,000 ರೂಪಾಯಿಗಳ ಬೆಲೆಯಾಗುವಷ್ಟು ಆಹಾರ ಸಾಮಗ್ರಿಗಳನ್ನು ನಾಶಮಾಡುವವೆಂದೂ ಅಂದಾಜು ಮಾಡಿರುತ್ತಾರೆ.

ಪೋಲೆಂಡಿನಲ್ಲಿ ಅತ್ಯಂತ ಧನಾಢ್ಯರಾದ ಪ್ರಿನ್ಸ್ ಆಫ್ ಪ್ಲೆಸ್ ಎಂಬುವರು ಒಂದು ಕರಾರು ಪತ್ರಕ್ಕೆ ಸ್ಟಾಂಪನ್ನು ಹಚ್ಚಲಿಲ್ಲವೆಂಬ ಕಾರಣದ ಮೇಲೆ ಪೋಲೆಂಡ್ ಸರಕಾರದವರು ಅವರಿಗೆ 30,00,000 ರೂಪಾಯಿಗಳ ಅರ್ಥದಂಡವನ್ನು ವಿಧಿಸಿರುವರಂತೆ !

ಲಂಡನ್ನಿನ ಮೃಗಾಲಯದಲ್ಲಿ ಮೃತಪಟ್ಟ ಒಂದು ಉಷ್ಟ್ರಪಕ್ಷಿಯ ಹೊಟ್ಟೆಯಲ್ಲಿ 3 ಕೈಚೀಲಗಳು, 2 ಕರವಸ್ತ್ರಗಳು, ಒಂದು ಬಾಚಣಿಗೆ, ಒಂದು ಫಿಲಂ ಸುತ್ತುವ ಗಾಲಿ, ಒಂದು ಸೀಸದಕಡ್ಡಿ, ಒಂದು ಬೀಗದಕೈ, ಒಂದು ಹಾರದ ತುಂಡು, 2 ಗುಂಡಿಗಳು ಮತ್ತು 4 ನಾಣ್ಯಗಳು ಇದ್ದವಂತೆ !

ಅಮೇರಿಕೆಯ 'ಗ್ರೆಟ ಗಾರ್ಬೊ' ಎಂಬ ಸುಪ್ರಸಿದ್ಧ ಸಿನಿಮಾನಟಿಯು 2 ವರ್ಷಗಳ ಅವಧಿಯಲ್ಲಿ 2 ಚಲನಚಿತ್ರಗಳಲ್ಲಿ ಪಾತ್ರವಹಿಸಲು 24,00,000 ರೂಪಾಯಿಗಳ ಸಂಬಳಕ್ಕೆ ಒಪ್ಪಿಕೊಂಡಿರುತ್ತಾಳೆ ! ಅಂದರೆ ಅವಳ ವರಮಾನವು ಇಂಗ್ಲೆಂಡಿನ ಮುಖ್ಯಮಂತ್ರಿಗಳ ಸಂಬಳಕ್ಕೆ 30 ರಷ್ಟಾಗುವದು !

ಕರ್ನಾಪುರದಲ್ಲಿ ಕಾಳಿರಾಂ ಎಂಬ ರೈಲ್ವೇ ಕ್ಲಾರ್ಕನು 9 ಜನ ಸ್ತ್ರೀಯರನ್ನು ಹಣಸಂಪಾದನೆಗೋಸ್ಕರ ಬಲಾತ್ಕಾರವಾಗಿ ತನ್ನ ಮನೆಯಲ್ಲಿಟ್ಟುಕೊಂಡಿದ್ದನೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟಿರುವನು ! ಈ 9 ಜನ ಸ್ತ್ರೀಯರು ಪಂಜಾಬಿನ ನಾನಾಭಾಗಗಳಿಂದ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದರಂತೆ !

ಅಮೇರಿಕೆಯ ಸಂಯುಕ್ತ ಸಂಸ್ಥಾನಕ್ಕೂ ಇಂಗ್ಲೆಂಡಿಗೂ ಇದ್ದ ವೈಮನಸ್ಯವು ಹೋಗಿ ಶಾಂತಿಸ್ಥಾಪನೆಯಾಗಿ 150 ವರ್ಷಗಳಾದವು ! ಇದರ ಜ್ಞಾಪಕಾರ್ಥವಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟರವರು 5.00,00,000 ಸ್ಪೆಷಲ್ ಸ್ಟಾಂಪುಗಳನ್ನು ತಯಾರಿಸಿ ದೇಶದಲ್ಲೆಲ್ಲಾ ಬಿಕರಿಗೆ ಇಡಬೇಕೆಂದು ಅಪ್ಪಣೆಮಾಡಿರುತ್ತಾರೆ.

ಸಾತಾರಾ ನಗರದಲ್ಲಿ ಕೆಲವು ದಿವಸಗಳ ಹಿಂದೆ ಭಯಂಕರವಾದ ಸುಂಟರಗಾಳಿಯು ಬಂದು ಒಬ್ಬ ಹೆಂಗಸಿನ ಕಂಕುಳಲ್ಲಿದ್ದ ಮಗುವನ್ನು ಬಹುದೂರದವರೆಗೆ ಎತ್ತಿಕೊಂಡು ಹೋಗಿರುವದು. ಮಗುವು ಏನಾಯಿತೆಂಬುದು ಇನ್ನೂ ಪತ್ತೆಯಾಗಿಲ್ಲ. ರೈಲ್ವೇಸ್ಟೇಷನ್ನಿನ ಮೇಲ್ಛಾವಣಿಯು ಕಿತ್ತುಹೋಗಿ 40 ಗಜಗಳ ದೂರಕ್ಕೆ ಬಿಸಾಡಲ್ಪಟ್ಟಿತ್ತು !

ಭಾರತೀಯ ಪ್ರಾಚೀನ ಶಾಸ್ತ್ರಗ್ರಂಥಗಳನ್ನು ಪುನರುಜ್ಜೀವನಗೊಳಿಸುವದಕ್ಕಾಗಿ ಕಲ್ಕತ್ತೆಯಲ್ಲಿ 'ಇಂಡಿಯನ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು. ಇವರು ಪ್ರಾರಂಭದಲ್ಲಿ ಚತುರ್ವೇದಗಳನ್ನೂ ಸಂಚಿಕೆಗಳ ರೂಪದಲ್ಲಿ ಹೊರಡಿಸುವರು ! ಸದ್ಯಃ ಋಗ್ವೇದಸಂಹಿತೆಯ ಪ್ರಕಟನೆಯನ್ನು ಕೈಕೊಂಡಿರುವರು.

ಮಾಂಟ್‌ಗೊಮರಿ ನಗರದ ಲಾಲಾ ಅನಂತರಾಂ ಎಂಬ ಬ್ಯಾರಿಸ್ಟರರು ತಮ್ಮ ಹೆಂಡತಿಯನ್ನು ಅಪಾರವಾದ ಹಣಕ್ಕೆ ಜೀವವಿಮೆ ಮಾಡಿಸಿ ಅನಂತರ ಆಕೆಯನ್ನು ಜೊತೆಯಲ್ಲಿ ಕಾಶ್ಮೀರಕ್ಕೆ ಕರೆದುಕೊಂಡು ಹೋಗುತ್ತಾ, ದಾರಿಯಲ್ಲಿ ವಿಷಹಾಕಿ ಕೊಂದರೆಂಬ ಅಪಾದನೆಯ ಮೇಲೆ ರಾಮಬಾಣ. ಕೈಯ ಡಬ್ಬಿಗೆ ಆಣೆ ೦||೦ರಿ ನಲ್ಲಿ ದಸ್ತಗಿರಿ ಮಾಡಲ್ಪಟ್ಟಿರುವರು.

ಹೀಲ್ಸಾ ನಗರದ ಪೋಲೀಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಇಬ್ಬರು ತರುಣರು ಒಬ್ಬ ಸ್ತ್ರೀಯ ಸಲುವಾಗಿ ಮೊಕದ್ದಮೆ ಮಾಡಿರುವರು. ಇಬ್ಬರೂ ಆ ಸ್ತ್ರೀಯು ತನ್ನನ್ನೇ ಮದುವೆಮಾಡಿಕೊಂಡಳೆಂದು ಹೇಳುವರು. ಮೊಕದ್ದಮೆಯು ತೀರ್ಮಾನಿಸಲ್ಪಡುವವರೆಗೆ ಹುಡುಗಿಯು ಅವಳ ತಾಯಿಯ ಬಳಿಯಲ್ಲಿರತಕ್ಕದ್ದೆಂದು ಮ್ಯಾಜಿಸ್ಟ್ರೇಟರು ಅಪ್ಪಣೆಮಾಡಿರುವರು.

ಆಳ್ವಾರ್ ಸಂಸ್ಥಾನದಲ್ಲಿ ಆರ್ಥಿಕದುರವಸ್ಥೆಯಿಂದಲೂ ಇತರ ಕಾರಣಗಳಿಂದಲೂ ವಿಶೇಷ ಅವ್ಯವಸ್ಥೆಯುಂಟಾಗುವುದರಿಂದ ಇಂಡಿಯಾ ಸರ್ಕಾರದವರು ಸದರಿ ಸಂಸ್ಥಾನದ ಆಡಳಿತವನ್ನು ತಾವೇ ವಹಿಸಿಕೊಂಡಿರುತ್ತಾರೆ. ಆಳ್ವಾರ್ ಮಹಾರಾಜರು ಅಧಿಕಾರವನ್ನು ಇಂಡಿಯಾ ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿರುವ ಮಿ|| ವೈಲಿಯವರಿಗೆ ವಹಿಸಿ ಅಬೂ ಪರ್ವತಕ್ಕೆ ಹೋಗಿರುತ್ತಾರೆ. ಅಲ್ಲಿಂದ ಅವರು ಎರಡು ವರ್ಷಗಳ ಕಾಲ ಪಾಶ್ಚಾತ್ಯದೇಶದಲ್ಲಿ ಸಂಚರಿಸುವರೆಂದೂ ಈ ಅವಧಿಯಲ್ಲಿ ಅವರ ಸ್ವಂತ ವೆಚ್ಚಕ್ಕಾಗಿ ವರ್ಷ 1 ಕ್ಕೆ 3 ಲಕ್ಷ ರೂಪಾಯಿಗಳು ಕೊಡಲ್ಪಡುವವೆಂದೂ ತಿಳಿದುಬಂದಿದೆ.

ಜಮಾಲಪುರದಲ್ಲಿ ಹಾದು ಶೇಕ್ ಎಂಬುವನ ಕೊಲೆಗೆ ಕಾರಣರೆಂಬ ಆಪಾದನೆಯಮೇಲೆ ಅಸಿರಾನ್ ಬೀಬಿ ಎಂಬ 15 ವರ್ಷದ ತರುಣಿಯೂ, ಕಾಯೆಮುದ್ದೀನ್ ಶೇಕ್ ಎಂಬ ಅವಳ ಪತಿಯೂ ದಸ್ತಗಿರಿಮಾಡಲ್ಪಟ್ಟಿರುವರು. ಕಾಯೆಮುದ್ದೀನ್ ಶೇಕನು ಮನೆಯಲ್ಲಿಲ್ಲದ ಸಮಯದಲ್ಲಿ ಹಾದು ಶೇಕನು ಮನೆಯೊಳಕ್ಕೆ ನುಗ್ಗಿ ಅಸಿರಾನ್ ಬೀಬಿಯ ಮಾನಭಂಗಮಾಡಲು ಪ್ರಯತ್ನಿಸಿದನೆಂದೂ, ಅಸಿರಾನ್ ಬೀಬಿಯು ಹಾದುಶೇಕನನ್ನು ಹೊರಕ್ಕೆ ಕಳುಹಿಸಲು ತನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡಿ, ಕಡೆಗೆ ಮಿತಿಮೀರಿ ಬಂದಾಗ ಕೈಗೆಸಿಕ್ಕಿದ ಒಂದು ಬರ್ಚಿಯಿಂದ ಅವನನ್ನು ತಿವಿದಳೆಂದೂ, ತಿಳಿದುಬಂದಿರುವದು. ಪೋಲೀಸರು ತನಿಖೆ ಮಾಡುತ್ತಿರುವರು.

ಹಲ್ಲುಗಳಿಗೂ ದೇಹಾರೋಗ್ಯಕ್ಕೂ ಇರುವ ಸಂಬಂಧ.

ಶುಚಿಯಾದ ಮತ್ತು ಕ್ರಮವಾದ ದಂತಪಂಕ್ತಿಯು ಸ್ತ್ರೀಯರ ಮತ್ತು ಪುರುಷರ ಮುಖಸೌಂದರ್ಯವನ್ನು ಹೆಚ್ಚಿಸುವುದು. ಆದರೆ ನೂರರಲ್ಲಿ 50 ಮಂದಿ, ತಮ್ಮ ಯೌವನದಶೆಯ ಪ್ರಥಮಭಾಗವು ಕಳೆಯುವಷ್ಟರಲ್ಲಿಯೇ ಈ ಭಾಗ್ಯವನ್ನು ಕಳೆದುಕೊಳ್ಳುವರು.

ಹಲ್ಲುಗಳ ಆಕೃತಿಯು ಮುಖಲಕ್ಷಣಕ್ಕೆ ಹೇಗೆ ಸಹಕಾರಿಯೋ ಹಾಗೆಯೇ ಶುಚಿಯಾದ ಒಳ್ಳೆಯ ದಂತಪಂಕ್ತಿಗಳೂ, ನಿರ್ಮಲವಾದ ಬಾಯಿಯೂ ಶರೀರಾರೋಗ್ಯಕ್ಕೂ, ಚಿರಾಯುಷ್ಯಕ್ಕೂ ಸಹಕಾರಿಗಳು. ಆದರೂ ದಂತ ನೈರ್ಮಲ್ಯದ ವಿಷಯದಲ್ಲಿಯೂ, ಬಾಯಿಯ ಶುಚಿತ್ವದ ವಿಷಯದಲ್ಲಿಯೂ ಅನೇಕರು ಅಲಕ್ಷ್ಯದಿಂದಿರುವರು. ಈ ವಿಷಯದಲ್ಲಿ ಅಜಾಗರೂಕತೆಯಿಂದಿದ್ದಲ್ಲಿ, ದೇಹದ ಮಿಕ್ಕ ಭಾಗಗಳೆಲ್ಲ ಆರೋಗ್ಯದಿಂದಿದ್ದರೂ, ಇದೇ ಅನೇಕ ರೋಗಗಳಿಗೂ, ಅಕಾಲವಾರ್ಧಕ್ಯಕ್ಕೂ ಕೊನೆಗೆ ಮರಣಕ್ಕೂ ದಾರಿಯಾಗುವುದು.

ಬಲಹೀನತೆ, ನಿದ್ರೆ ಬಾರದಿರುವಿಕೆ, ನರಗಳ ಬಾಧೆ, ಮನೋವಿಕಲ್ಪ, ಅಜೀರ್ಣ, ಎದೆಯ ಬಡಿತ ಮುಂತಾದುವೂ, ಇನ್ನೂ ಪ್ರಬಲವಾದ ಅನೇಕ ವ್ಯಾಧಿಗಳೂ ಹಲ್ಲುಗಳ ಮತ್ತು ಬಾಯಿಯ ವಿಷಯದಲ್ಲಿ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದರಿಂದಲೇ ಗುಣವಾಗಿಯೂ ಇವೆ.

ಹಲ್ಲುಗಳ ಜೋಡಣೆ.

ಮನುಷ್ಯರಿಗೆ ಸಾಮಾನ್ಯವಾಗಿ 32 ಹಲ್ಲುಗಳಿರಬೇಕು. ಅವುಗಳಲ್ಲಿ ಕೋರೆಹಲ್ಲುಗಳು 8, ಮುಂದಿನ ಹಲ್ಲುಗಳು 4, ಅರೆಯುವ ಹಲ್ಲುಗಳು 8, ದವಡೆಯ ಹಲ್ಲುಗಳು 12. ಹೀಗೆ ಮೊತ್ತಕ್ಕೆ, ಮೇಲಿನ ಪಂಕ್ತಿಯಲ್ಲಿ 16 ಹಲ್ಲುಗಳೂ ಇರುವುವು.

ಮೇಲುಸಾಲಿನಲ್ಲಿಯೂ, ಕೆಳಸಾಲಿನಲ್ಲಿಯೂ ಮುಂಭಾಗದಲ್ಲಿರುವ ಹಲ್ಲುಗಳು ಹರಿತವಾಗಿ ಉಳಿಯಂತಿರುವುವು. [illegible] ಶ್ಯಕವೋ ಬಹಿರುಪಾಸನೆಯ[illegible]ಗೆ, ಈ ಹಲ್ಲುಗಳಿಂದಲೇ [illegible] ಪದಾರ್ಥಗಳನ್ನು [illegible] ಕಡಿದು ಚೂರುಮಾಡಬೇಕಾಗುವುದು. ಆದುದರಿಂದ ಇದಕ್ಕೆ ಕಡಿಯುವ ಹಲ್ಲುಗಳೆಂದು ಹೆಸರು.

ಆ ಹಲ್ಲುಗಳ ಪಕ್ಕದಲ್ಲಿರುವ ಹಲ್ಲುಗಳಿಗೆ ನಾಯಿಹಲ್ಲು ಅಥವಾ ಕೋರೆಹಲ್ಲುಗಳೆಂದು ಹೆಸರು. ಇವು ನಾಯಿ, ಬೆಕ್ಕು ಮುಂತಾದ ಪ್ರಾಣಿಗಳಿಗೆ ಬಹಳ ಮುಖ್ಯವಾಗಿರುವುವು. ಮೇಲಿನ ಸಾಲಿನಲ್ಲಿ ಉದ್ದವಾಗಿಯೂ, ಮೊನಚಾಗಿಯೂ ಇರುವ ಇಂತಹ ಎರಡು ಹಲ್ಲುಗಳುಂಟು. ಇವಕ್ಕೆ "ಕಣ್ಣು ಹಲ್ಲು" ಗಳೆಂದೂ ಹೆಸರುಂಟು.

"ಬೈಕಸ್ ಪಿಡ್" ಎಂಬ ಅರೆಯುವ ದಂತಗಳಿಗೆ ಮೇಲುಭಾಗದಲ್ಲಿ, ಆಹಾರಗಳನ್ನು ಅರೆಯುವುದಕ್ಕಾಗಿ ಎರಡು ಹಲ್ಲುಗಳಿರುವುವು. ಈ ಹಲ್ಲುಗಳು ಕೋರೆಹಲ್ಲುಗಳಿಗೂ, ದವಡೆಹಲ್ಲುಗಳಿಗೂ ಮಧ್ಯಭಾಗದಲ್ಲಿವೆ.

ಆಹಾರವನ್ನು ಚನ್ನಾಗಿ ಅರಿಯುವುದಕ್ಕೆ ಸಹಕಾರಿಗಳಾದುವು ದವಡೆಹಲ್ಲುಗಳು. ಈ ಹಲ್ಲುಗಳ ಮೇಲುಭಾಗದಲ್ಲಿ, ನಾವು ತಿಂದ ಗಟ್ಟಿಪದಾರ್ಥಗಳನ್ನು ಚೆನ್ನಾಗಿ ಅರೆದು, ಅದು ಜೊಲ್ಲುರಸದೊಡನೆ ಸೇರುವಂತೆ ಮಾಡಲು, ಬಟ್ಟಲಿನ ಆಕೃತಿಯ ಹಳ್ಳಗಳಿರುವುವು. ಈ ಹಲ್ಲುಗಳ ನೆತ್ತಿಯಲ್ಲಿ ಎರಡು ಮೂರು ಸಣ್ಣ ಹಲ್ಲುಗಳಿರುವುವು. ಆಹಾರ ಜೀರ್ಣಕ್ಕೆ ಈ 12 ಹಲ್ಲುಗಳೂ ಬಹಳ ಮುಖ್ಯವಾದುದರಿಂದ, ಇವುಗಳ ರಕ್ಷಣೆಯ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು.

ಅನೇಕರು ಹಲ್ಲುಗಳೂ ಎಲುಬುಗಳೆಂದು ಭಾವಿಸಿ, ಅನೇಕವೇಳೆ ಅವುಗಳನ್ನು ಅಸ್ಥಿಪಂಜರಗಳೊಡನೆ ಸೇರಿಸುವುದುಂಟು. ಆದರೆ ಅವು ಎಲುಬಲ್ಲ.

ಹಲ್ಲುಗಳು ಡೆಂಟೈನ್ ಎಂಬ ಕೊಳವೆಯ ಆಕೃತಿಯ ಒಂದು ಗಟ್ಟಿಪದಾರ್ಥದಿಂದ ಮಾಡಲ್ಪಟ್ಟುವು. ಅವುಗಳ ಮೇಲೆ ಎಲ್ಲಾ ಭಾಗದಲ್ಲಿಯೂ ಗಟ್ಟಿಯಾಗಿ ಗಾಜಿನಂತೆ ಹೊಳಪುಳ್ಳ ಎನಾಮಲ್ ಎಂಬ ಪದಾರ್ಥದ ಹೊದಿಕೆಯಿರುವುದು. ಈ ಎನಾಮಲಿಗೆ ಸ್ವಲ್ಪವೂ ಅಪಾಯವಾಗದಂತೆ ನೋಡಿಕೊಳ್ಳಬೇಕು. ಆ "ಎನಾಮಲ್" ಎಂಬುದು ಒಂದಾವರ್ತಿ ಹೋದಲ್ಲಿ ಪುನಃ ಬೆಳೆಯಲಾರದು.

ಹಲ್ಲುಗಳ ಮಧ್ಯಭಾಗವು, "ಟೂತ್ ಪಲ್ಪ್" ಎಂಬ ಹೆಸರುಳ್ಳ, ನರಗಳ ಮತ್ತು ರಕ್ತನಾಳಗಳ ಸೇರುವಿಕೆಯಿಂದಾಗಿದೆ. ಈ ರಕ್ತನಾಳಗಳ ಮೂಲಕವೇ ಹಲ್ಲುಗಳು ಬೆಳೆಯುವುದಕ್ಕೆ ಬೇಕಾದ ಸಾಮಗ್ರಿಗಳೊದಗುವುವು. ಮತ್ತು ಅವು ಚೆನ್ನಾಗಿ ಬೆಳದಮೇಲೆ, ದೃಢವಾಗಿ ನಿಲ್ಲುವುದಕ್ಕೂ ಇವೇ ಸಹಕಾರಿಗಳಾಗುವುವು. ಈ ಹಲ್ಲುಗಳು ಎಲುಬಿನಂತೆಯೇ ಇರುವ ಸಿಮೆಂಟೆಂಬ ಪದಾರ್ಥದಿಂದ ದವಡೆಯ ಎಲುಬುಗಳಲ್ಲಿರುವ ಗುಳಿಗಳಲ್ಲಿ ಬಂಧಿಸಲ್ಪಟ್ಟಿವೆ.

ದಂತರಕ್ಷಣೆಯ ಉಪಾಯಗಳು.

ಹಾಲುಹಲ್ಲುಗಳು ಬಿದ್ದು, ಬೇರೆ ಹಲ್ಲುಗಳು ಹುಟ್ಟಿದಮೇಲೆ, ಅವುಗಳ ಅಂಟು ಕೆಟ್ಟುಹೋಗದಂತಿರುವುದಕ್ಕಾಗಿಯೂ, ಹಲ್ಲುಸಂದುಗಳಲ್ಲಿ ಪಾಚಿಗಳು ಸೇರಿ ಹಲ್ಲುಗಳನ್ನು ಕೆಡಿಸದಂತೆ ರಕ್ಷಿಸುವುದಕ್ಕಾಗಿಯೂ ಪ್ರಾರಂಭದಶೆಯಿಂದ, ಅವುಗಳಿಗೆ ಕೆಲಸವನ್ನು ಕೊಡುತ್ತಿರಬೇಕು.

ಚೆನ್ನಾಗಿ ಸುಟ್ಟ ರೊಟ್ಟಿಯಲ್ಲಿ, ಗಟ್ಟಿಭಾಗವನ್ನು ತಿನ್ನುವುದರಿಂದ, ಹಲ್ಲಿಗೆ ಒಳ್ಳೆಯ ಸಾಧನೆಯನ್ನು ಕಲ್ಪಿಸಿದಂತಾಗುವುದು. ಮಿಷಣರವೆಯಿಂದ ಮಾಡಿದ ಬಿಳಿಯ ರೊಟ್ಟಿ, ವಿಶೇಷವಾಗಿ ಬೇಯಿಸಿದ ಆಹಾರ, ಸಕ್ಕರೆಯ ಪದಾರ್ಥಗಳು, ಅಂಟುಪದಾರ್ಥಗಳು ಇವುಗಳನ್ನು ವಿಶೇಷವಾಗಿ ಸೇವಿಸುವುದರಿಂದ ಹಲ್ಲುಗಳಿಗೆ ಕೆಲಸವು ಕಡಿಮೆಯಾಗಿ, ಅವು ಕೆಡುವುದಕ್ಕೆ ಆಸ್ಪದವುಂಟಾಗುವುದು.

ಗಟ್ಟಿಯಾದ ಆಹಾರಪದಾರ್ಥಗಳು, ರೊಟ್ಟಿಯ ಚೂರುಗಳು, ಧಾನ್ಯಗಳು, ಹಣ್ಣುಕಾಯಿಗಳು ಇವುಗಳನ್ನು ಅಧಿಕವಾಗಿ ಸೇವಿಸುವುದರಿಂದಲೂ, ಆಹಾರವನ್ನು ಚೆನ್ನಾಗಿ ಅಗಿದು ತಿನ್ನುವುದರಿಂದಲೂ, ಆಹಾರಗಳನ್ನು ಸೇವಿಸಿದಮೇಲೆ ಸಾಧ್ಯವಾದಾಗಲೆಲ್ಲ ಬ್ರಷ್ಷುಗಳಿಂದ ಉಜ್ಜಿ ತೊಳೆಯುತ್ತಾ ಬರುವುದರಿಂದಲೂ, ಹಲ್ಲುಗಳು ಕೆಡುವುದಕ್ಕೆ ಆಸ್ಪದವು ಕಡಿಮೆಯಾಗಿ ಅವು ಆರೋಗ್ಯಸ್ಥಿತಿಯಲ್ಲಿರುವುವು.

ಹಲ್ಲುಗಳ ನಿರ್ಮಲತೆಯ ವಿಷಯದಲ್ಲಿ ಅಜಾಗರೂಕತೆಯಿಂದಿರುವುದು, ಆಹಾರ ಸೇವನೆಯ ವಿಷಯದಲ್ಲಿ ತಕ್ಕ ನಿಯಮಗಳನ್ನು ಅವಲಂಬಿಸದಿರುವುದು, ಈ ಮುಂತಾದುವುಗಳಿಂದ ಹಲ್ಲುಗಳ ಮೇಲೂ, ಅವುಗಳ ಪಕ್ಕದಲ್ಲಿರುವ ಸಂದುಗಳಲ್ಲೂ ಆಹಾರದ ಚೂರುಗಳು ಅಂಟಿಕೊಂಡು, ಅಲ್ಲಿಯೇ ಕೊಳೆತು, ಹುಳಿತು, ಹಲ್ಲುಗಳ ಒಳಭಾಗಕ್ಕೂ ಪ್ರವೇಶಿಸಿ ಅವು ಕೆಡುವುದಕ್ಕೆ ಕಾರಣವಾಗುವುದು.

ಬ್ರಷ್ಷು, ಹಲ್ಲುಪುಡಿಗಳು ಮುಂತಾದ ದಂತ ಶೋಧಕ ಪದಾರ್ಥಗಳು.

ನೀವು ಉಪಯೋಗಿಸುವ ಬ್ರಷ್ಷುಗಳು ಮೆತ್ತಗೂ ಬಿಗಿಯಾಗಿಯೂ ಇರಬೇಕು. ಮತ್ತು ಅವು ಯಾವಾಗಲೂ ಶುಭ್ರವಾಗಿರಬೇಕು. ಮೇಲುಸಾಲಿನ ದಂತಗಳನ್ನು ಉಜ್ಜುವಾಗ ಬ್ರಷ್ಷನ್ನು ಅಧೋಮುಖವಾಗಿ ಹಿಡಿದು ಉಜ್ಜಬೇಕು. ಕೆಳಗಿನ ಸಾಲಿನ ಹಲ್ಲುಗಳನ್ನು ಉಜ್ಜುವಾಗ ಬ್ರಷ್ಷನ್ನು ಊರ್ಧ್ವಮುಖವಾಗಿ ಹಿಡಿದು ಉಜ್ಜಬೇಕು. ಹೀಗೆ ಉಜ್ಜುವುದರಿಂದ ಬಾಯಿಯು ನಿರ್ಮಲವಾಗಿಯೂ ಆರೋಗ್ಯಕರವಾಗಿಯೂ ಇರುವುದು.

ಹಲ್ಲುಗಳನ್ನು ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಉಜ್ಜುವುದು ತಪ್ಪು. ಇದರಿಂದ ಆಹಾರದ ಚೂರುಗಳೆಲ್ಲವೂ ಹಲ್ಲುಸಂದುಗಳಲ್ಲಿ ಸೇರಿ ಅಲ್ಲಿಯೇ ಕೊಳೆತು, ಹಲ್ಲುಗಳಲ್ಲಿ ಕ್ರಿಮಿಗಳು ಸೇರುವುದಕ್ಕೂ, ಪಾಚಿ ಕಟ್ಟುವುದಕ್ಕೂ ಕಾರಣವಾಗುವುವು. ಅಲ್ಲದೆ ಹಲ್ಲಿನ ಮೇಲಿರುವ ಎನಾಮಲ್ ಎಂಬ ಆವರಣವೂ ಕಿತ್ತುಹೋಗುವುದು. ಹಲ್ಲು ಕೆಟ್ಟರೆ ಹೊಸ ಹಲ್ಲುಗಳನ್ನು ಕಟ್ಟಿಸಬಹುದು. ಇವು ಸ್ವಭಾವಜನ್ಯವಾದ ಹಲ್ಲುಗಳಷ್ಟು ಪ್ರಯೋಜನಕಾರಿಗಳಾದುವಲ್ಲ. ಆದರೂ ತಿನ್ನುವ ಆಹಾರವು ಜೀರ್ಣಿಸಿ ರಕ್ತಗತವಾಗಲು ಅವು ಬಹಳಮಟ್ಟಿಗೆ ಸಹಕಾರಿಗಳಾಗುವುವು. ಸ್ವಭಾವಜನ್ಯವಾದ ಹಲ್ಲುಗಳ ವಿಷಯದಲ್ಲಿ ಹೇಗೋ, ಹಾಗೆಯೇ ಈ ಹಲ್ಲುಗಳ ನಿರ್ಮಲತೆಯವಿಚಾರದಲ್ಲಿಯೂ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಅವುಗಳನ್ನು ಅಡಿಗಡಿಗೆ ಬ್ರಷ್ಷುಗಳಿಂದಉಜ್ಜುತ್ತಿರಬೇಕು. ಇಲ್ಲದಿದ್ದರೆ ಬಾಯಿಯಿಂದ ದುರ್ವಾಸನೆಯು ಹೊರಟು, ನಿಶ್ವಾಸದ ಗಾಳಿಯನ್ನು ಕೆಡಿಸುವುದು. ಇದರಿಂದ ಆ ಹಲ್ಲುಗಳು ಆರೋಗ್ಯಕ್ಕೆ ಸಹಕಾರಿಗಳಾಗುವುದು ತಪ್ಪಿ, ಕ್ರಿಮಿಗಳಿಗೆ ಆಶ್ರಯಸ್ಥಾನಗಳಾಗುವುವು. ಅಶುದ್ಧವಾದ ಕೃತಕದಂತಗಳು ನಾವು ತಿನ್ನುವ ಆಹಾರವನ್ನು ಒಡನೆ ವಿಷಮಿಶ್ರಮಾಡಿ ರೋಗಕಾರಣಗಳಾಗುವುವು.

ಆ. ಚಂ



ಫೋಟೋ, ಲೈನ್, ಬ್ಲಾಕುಗಳು
ಹಿತ್ತಾಳೆ. ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರಿಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರುಮಾಡುತ್ತೇವೆ. [24]

ಶ್ರೀ ಜಗದ್ಗುರು ಪಂಚಾಚಾರ್ಯ
ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇದಾಂತರ್ಗತ ವೀರಲೈಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಭೇದಾಗಮ, ಪಾಶುಪತತಂತ್ರ, ಮೊ ಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಆಗಸ್ತ್ಯ, ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀ ಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊ ಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗು ಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿ ವುವು. ಈ ಗ್ರಂಥವು ೨೩೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾ ದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸ ದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳ ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ರಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಹಭಸ್ಮ	೧	೦-೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ತ್ರಭಸ್ಮ	೧	೦—೮—೧
ಂಡೂರಭಸ್ಮ	೧	೦—೮—೦
ರ್ಣಮಾಕ್ಷಿಕಾಭಸ್ಮ	೧	೦-೧೨—೦
ಭ್ರಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	[illegible]	[illegible]
ರಂಗದ ಕೋಡಿನ ಭಸ್ಮ	೧	೦—೮—೦
ೀದಂತಿಹರತಾಳಭಸ್ಮ	೧	೦—೮—೦
ತ್ರಿ (೧ನೇ ನಂಬರ್)	೧	೫೦—೦
ತ್ರಿ (೨ನೇ ನಂಬರ್)	೧	೪೦—೦
ಾಜಿತ ಸೂರ್ಯಪುಟಿ	೧	೧—೦
ಾಜಿತ ಅಗ್ನಿಪುಟಿ	೧	೦—೮

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಗೆ ಟಿಕೀಟ (ಸ್ಟ್ಯಾಂಪು) ಕಳುಹಿಸಿದಲ್ಲಿ ಕ್ಯಾಟ ಕಳುಹಿಸುವೆವು.

ಳಾಸ—ಮ್ಯಾನೇಜರ್,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಒಬಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ ಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ತೊಳೆ ಯು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ರೂ ತರಿಸಿಕೊಂಡು ಇವುಗಳ ಅನುಭವವನ್ನು ಬೇಕೆಂದು ಕೋರುತ್ತೇವೆ.

1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನಿ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳುದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ದಮ್ಮು, ಬಿಗಿತರುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

[illegible] ಫೀವರ್ ಸ್ಪೆಸಿಫಿಕ್—ಮಕ್ಕಳ ಸರ್ವ[illegible] ಶೀಪಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಸೀರ, ಕೋಬಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಡಿತ, ನೆತ್ತಿಉರಿ, ನಿದ್ರೆಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಫಿಂಗ್ ಕಫ್ ರೆಮೆಡಿ—ಒಣ ಕೆಮ್ಮು, ಒಣ ಕೆಮ್ಮು, ಶ್ವಾಸಕಟ್ಟುವ ಕಾಲಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, [illegible] ಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮು ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಇಷ್ಟು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನದಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟ್ಯಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[39] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಹಕ್ಕಿ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಪ್ರೀತಿಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[20] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	[illegible]
[illegible]	೮ ಆಣೆ
[illegible]	[illegible]
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशीनाथशास्त्री यांचें भाषण (मराठी)	೮ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

...ಪುದರಿಂದ... ೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ... [illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ...

(Registered Trade Mark)

...ಗಳನ್ನು ಕೊಟ್ಟಿರು... ರು. ಪ್ರಸಿದ್ಧವಾದ... ನಶ್ಯದ ಪುಡಿಯಿಂ... ಸ್ವಸ್ಥವಾಗುವ ವ್ಯಾ... ಧಿಗಳು ಯಾವವೆಂ... ರೆ:—ಪಿನಸಿ, ಒ... ತಲೆನೋವು, ತಲೆ... ಲ್ಲಿನ ರೋಗಗ... ಕಣ್ಣುಗಳಲ್ಲಿ ಉಂಟಾ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ... ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾ...

[21]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

...ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಜೂನ್ ೧೯೩೩ [ಸಂಚಿಕೆ ೬

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣವನ್ನು ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾದ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳೆಂಬ ಕವಿಪುಂಗವರು ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾರೆ. ಈ ಕವಿಗಳ ಕವಿತಾಸರಣಿಯು ಅಸದೃಶವಾದುದು. ಇವರ ಕವಿತಾಮಹತ್ತ್ವವನ್ನು ಇಡೀ ಕರ್ಣಾಟಕದೇಶವೇ ಕೊಂಡಾಡುತ್ತದೆ. ಪುರಾಣವನ್ನು ಸಂಪೂರ್ಣವಾಗಿ ಪರಿಶೀಲಿಸಿದರೆ ಈ ಮಹಾಕವಿಗಳ ಯೋಗ್ಯತೆಯು ಸ್ಪಷ್ಟವಾಗಿ ಕಂಡುಬರುವುದು. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.



ಫೋಟೊ, ಲೈನ್, ಬ್ಲಾಕುಗಳು ಹಿತ್ತಾಳೆ, ಸೀಸದ, ಬ್ಲಾಕುಗಳು ಅರಗಿನಶೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

...ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ...ಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ...ಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ...ಡುತ್ತೇವೆ.

[25]

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಫ್ರೆಂಚ್ ಸರಕಾರದವರು ಮಿಲಿಟರಿ ಖರ್ಚಿನಲ್ಲಿ 7,50,00,000 ರೂಪಾಯಿಗಳನ್ನು ಕಡಿಮೆಮಾಡಿರುತ್ತಾರೆ. ಆದರೆ ಬ್ರಿಟಿಷ್ ಸರಕಾರದವರು 9,75,00,000 ರೂಪಾಯಿಗಳನ್ನು ಹೆಚ್ಚು ವೆಚ್ಚಮಾಡಬೇಕೆಂದು ನಿರ್ಧರಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶಿವಮೊಗ್ಗೆಯ ಪ್ರಜಾಮುಖಂಡರು 10 ಲಕ್ಷ ರೂಪಾಯಿಗಳ ಬಂಡವಾಳದಿಂದ ಒಂದು ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಆಲೋಚಿಸುತ್ತಿರುವರು.

ಮಧುಗಿರಿಯ ಪೋಲೀಸ್ ಇನ್ಸ್ಪೆಕ್ಟರ್ ಆಫೀಸಿನ ರೈಟರಾಗಿದ್ದ ವೆಂಕಟರಾಜು ಎಂಬವನು ಒಂದು ಟಿ. ಎ. ಬಿಲ್ಲಿನ ಬಾಬ್ತು 150 ರೂ. ಗಳನ್ನು ದುರುಪಯೋಗಪಡಿಸಿಕೊಂಡನೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ.

ರಾಜಧಾನಿಗೆ ನೀರನ್ನು ಒದಗಿಸುವ 'ಫಿಲ್ಟರು'ಗಳಲ್ಲಿ ಆಗಾಗ್ಗೆ ಏನಾದರೊಂದು ತೊಂದರೆಯು ಸಂಭವಿಸಿ ಜನರಿಗೆ ನೀರಿನ ಕೊರತೆಯುಂಟಾಗುವದರಿಂದ ಇದನ್ನು ತಪ್ಪಿಸಲು ಬಳಗೋಳದಲ್ಲೂ ಮತ್ತು ಫಿಲ್ಟರ್ ಬೆಡ್ಸಲ್ಲೂ ಒಂದೊಂದು ಹೊಸಯಂತ್ರವನ್ನು ತರಿಸುವದಕ್ಕಾಗಿ ಸರಕಾರದವರು 45,000 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರು ಕಂಟ್ರೋಲರ್ ಆಫೀಸಿನ ಗುಮಾಸ್ತೆಯಾಗಿದ್ದ ಶರ್ಮ ಎಂಬವರು ಸುಳ್ಳುಚೆಕ್ಕುಗಳನ್ನು ಬರೆದು ಮೇಲಿನ ಅಧಿಕಾರಿಗಳಿಂದ ರುಜು ಮಾಡಿಸಿ, ಸದರಿ ಚೆಕ್ಕುಗಳ ಹಣವನ್ನು ದುರುಪಯೋಗಪಡಿಸಿಕೊಂಡರೆಂಬ ಕಾರಣದಮೇಲೆ ಸಿಟಿಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ವಿಚಾರಣೆ ನಡೆದು, ಅಪರಾಧಿಗೆ 1 ವರ್ಷ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಮಳವಳ್ಳಿಯ ಪೋಸ್ಟ್‌ಮಾಸ್ಟರಾದ ಎಸ್. ಎಸ್. ರಾಜಾರಾಯರೆಂಬುವರು ಪೋಸ್ಟಾಫೀಸಿನ ಹಣದಲ್ಲಿ ಸುಮಾರು 3,000 ರೂ. ಗಳ ವರೆಗೆ ದುರುಪಯೋಗಿಸಿಕೊಂಡಿರುವರೆಂಬ ಕಾರಣದಮೇಲೆ ಪೋಲೀಸರು ಅವರನ್ನು ದಸ್ತಗಿರಿಮಾಡಿ ತನಿಖೆಕ್ರಮಗಳನ್ನು ಜರುಗಿಸುತ್ತಿರುವರು. ದುರುಪಯೋಗಪಡಿಸಲ್ಪಟ್ಟ ಹಣದಲ್ಲಿ 2,500 ರೂ. ಗಳು ವಸೂಲಾಗಿರುವವೆಂದು ತಿಳಿದುಬಂದಿದೆ.

ರಾಜಧಾನಿಯ ಜೈನಮಂಡಲಿಯ ವಿದ್ಯಾರ್ಥಿನಿಲಯದಲ್ಲಿ ಕಳೆದ ಸೋಮವಾರ ಸಾಯಂಕಾಲ ರಾಜಕವಿಭೂಷಣ ಮ|| ಎಚ್. ಲಿಂಗರಾಜ ಅರಸರವರ ಅಧ್ಯಕ್ಷತೆಯಲ್ಲಿ "ವಿವೇಕಾಭ್ಯುದಯ" ಎಂಬ ಮಾಸಪತ್ರಿಕೆಯ ಪ್ರಾರಂಭೋತ್ಸವವು ನಡೆಯಿತು. ಜೈನಮಂಡಲಿಯ ಗುರುಪೀಠವನ್ನಾರೋಹಿಸಿದ ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿಸ್ವಾಮಿಗಳು ಆಶೀರ್ವದಿಸಿ ಕಳುಹಿಸಿದ್ದ ಪತ್ರಿಕೆಯನ್ನು ಸಭೆಯಲ್ಲಿ ಓದಿದರು. ಬಳಿಕ ಅಧ್ಯಕ್ಷರು ಪಾರಲೌಕಿಕ ಸುಖಸಾಧನಗಳಾದ ಧಾರ್ಮಿಕವಿಷಯಗಳನ್ನು ಪ್ರತಿಪಾದಿಸುವ ಪತ್ರಿಕೆಗಳ ಆವಶ್ಯಕತೆಯನ್ನೂ ಮತ್ತು ಸಂಪಾದಕರಾದ ಶ್ರೀ|| ಶಾಂತರಾಜಶಾಸ್ತ್ರಿಗಳ ಪ್ರಯತ್ನಶೀಲತೆಯನ್ನೂ ವಿವರಿಸಿ ಹೇಳಿದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ
ಅಥವಾ
ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ,
ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಇನ್ನು 'ವೇದಗಳು ನಿತ್ಯವಾದುವು' ಎಂಬ ಮಾತು ಯಾರಿಗೆ ಒಪ್ಪಿಗಿಲ್ಲವೋ ಅಂತಹ ವಾದಿಗಳು ಪೂರ್ವದಲ್ಲಿಯೂ ಇದ್ದರು. ಈಗಲೂ ಇರುತ್ತಾರೆ. ಮುಂದಾದರೂ ಇರುವವರೇ. ಏಕೆಂದರೆ ಸೂಕ್ಷ್ಮಬುದ್ಧಿಗೇ ಸೂಕ್ಷ್ಮಾರ್ಥಜ್ಞಾನವಾಗುವುದೇ ಹೊರತು ಸ್ಥೂಲಬುದ್ಧಿಗಾಗದು. ಬುದ್ಧಿಯು ಸೂಕ್ಷ್ಮವಾಗುವುದಕ್ಕೆ ಶಾಸ್ತ್ರಸಂಸ್ಕಾರವೂ ವಿಹಿತಸದಾಚಾರವೂ ಎಂಬಿವುಗಳ ಅವಶ್ಯಕತೆಯುಂಟು. 'ವೇದವು ನಿತ್ಯವಾದುದು' ಎಂಬುದರ ಅರ್ಥವು ಸೂಕ್ಷ್ಮತರವಾಗಿದೆ. ಅದು ಲೌಕಿಕ ಪಂಡಿತರಿಗಾದರೂ ಒಮ್ಮಿಗೇ ಗೊತ್ತಾಗುವುದಿಲ್ಲ; ಪ್ರತ್ಯಕ್ಷಪ್ರಮಾಣದಿಂದ ಸ್ಥೂಲಪದಾರ್ಥಗಳು ಕಾಣಲ್ಪಡುತ್ತವೆ, ಸೂಕ್ಷ್ಮವೂ ವಿಪ್ರಕೃಷ್ಟವೂ (ದೂರವಿರುವುದೂ) ವ್ಯವಹಿತವೂ ಆದ ಪದಾರ್ಥವು ಇಂದ್ರಿಯಗಳಿಗೆ ವಿಷಯ (ಗೋಚರ) ವಾಗುವುದಿಲ್ಲ. ಈ ಬಗ್ಗೆ ಸಾಂಖ್ಯರ ಅಭಿಪ್ರಾಯವನ್ನು ವಿವೇಚನೆಯ ನೆರವಿಗಾಗಿ ನಾವಿಲ್ಲಿ ತೋರಿಸುತ್ತೇವೆ. ಪ್ರಕೃತಿಯು, ಮಹತ್ತು ಮೊದಲಾದ ಸೂಕ್ಷ್ಮತರ ಪದಾರ್ಥಗಳಲ್ಲಿ ಪ್ರತ್ಯಕ್ಷಪ್ರಮಾಣದ ಪ್ರವೃತ್ತಿಯು ಸಂಭವಿಸದಿರಲು ಯಾವ ಯಾವ ಕಾರಣಗಳಿರುವುವೆಂಬುದನ್ನು ನಿರ್ದೇಶಿಸುವ ಅಪೇಕ್ಷೆಯಿಂದ ಸಾಂಖ್ಯಕಾರಿಕಾಕಾರನಾದ ಈಶ್ವರಕೃಷ್ಣನು ನುಡಿವುದೇನೆಂದರೆ—

ಅತಿದೂರಾತ್ಸಾಮೀಪ್ಯಾದಿಂದ್ರಿಯಘಾತಾನ್ಮನೋಽನವಸ್ಥಾನಾತ್ ।
ಸೌಕ್ಷ್ಮ್ಯಾದ್ವ್ಯವಧಾನಾದಭಿಭವಾತ್ಸಮಾನಾಭಿಹಾರಾಚ್ಚ ॥೭॥

(೧) ಆಕಾಶದಲ್ಲಿ ಬಹಳ ಮೇಲಕ್ಕೆ ಹಾರಿಹೋದ ಹಕ್ಕಿಯು ಕಣ್ಣಿಗೆ ಕಾಣಿಸದಿರಲು, ಅತಿದೂರತ್ವವೇ ಕಾರಣವಾಗಿದೆ; ಹಾಗೂ ಆ ಹಕ್ಕಿಯ ಶರೀರದ ಅಲ್ಪತ್ವವೂ ಅದರ ಅತಿದೂರತ್ವದ ಸಹಕಾರಿಕಾರಣವಾಗಿರುವುದು. ಏಕೆಂದರೆ—ವಸ್ತುವಿನ ಕೇವಲ 'ದೂರತ್ವ'ವೇ ಪ್ರತ್ಯಕ್ಷಪ್ರಮಾಣದ ಅಪ್ರವೃತ್ತಿಗೆ ನಿಮಿತ್ತವೆನ್ನುವುದಾದರೆ ಅತಿದೂರದಲ್ಲಿರುವ ಸೂರ್ಯ, ಧ್ರುವನಕ್ಷತ್ರ ಮುಂತಾದ ಪದಾರ್ಥಗಳು ಕಾಣಲ್ಪಡುತ್ತಿರಲಿಲ್ಲವಾದುದರಿಂದ ಅಲ್ಪಪರಿಮಾಣವುಳ್ಳವಸ್ತುವು ಅತಿದೂರದಲ್ಲಿರುವುದಾದರೆ ಅದರ ಪ್ರತ್ಯಕ್ಷಜ್ಞಾನವಾಗುವುದಿಲ್ಲವೆಂದರಿಯಬೇಕು.

(೨) ಕಣ್ಣಿಗೆ ಹಚ್ಚಿದ ಕಾಡಿಗೆಯು ಅಥವಾ ಕಣ್ಣಿನಲ್ಲಿ ಸೇರಿದ ಕರ್ಪೂರಾದಿಗಳ ಕಣವು ಮುಂತಾದುದು ಅತಿಸಾಮೀಪ್ಯ ಮೂಲಕ ಕಣ್ಣಿಗೆ ಕಾಣಿಸುವುದಿಲ್ಲ.

(೩) ಇಂದ್ರಿಯಗೋಲಕದ ಉಪಘಾತವಾದರೂ ವಸ್ತುವಿನ ಪ್ರತ್ಯಕ್ಷಜ್ಞಾನ (ಇಂದ್ರಿಯಗೋಚರ) ವಾಗುವುದಿಲ್ಲ. ಉಪಘಾತವೆಂದರೆ, ಪ್ರಾಯಶಃ ನಾಶವೆಂದೇ ತಿಳಿಯಲು ಅಡ್ಡಿಯಿಲ್ಲ; ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗೋಲಕಗಳಲ್ಲಿ ವಿಕಾರವುಂಟಾಗುವುದರಿಂದ ಏನೂ ಕಾಣಲ್ಪಡುವುದಿಲ್ಲ. ಶಬ್ದವಾದರೂ ಕೇಳಬರುವುದಿಲ್ಲ. ವಾಸನೆಯು ತಗಲುವುದಿಲ್ಲವೆಂದು ಹೇಳುವ ಸಂಗತಿಯು ಪ್ರಸಿದ್ಧವಾಗಿದೆ.

(೪) ಮನವು ಅನವಸ್ಥಿತವಿದ್ದಾಗಲೂ ಪ್ರತ್ಯಕ್ಷಪ್ರಮಾಣ ಪ್ರವೃತ್ತಿಯು ಘಟಿಸದು; ಹೇಗೆಂದರೆ ಮನಸ್ಸು ಚಿಂತನಾದಿಗಳಲ್ಲಿ ಬೆರೆದಿರಲು ಕಿವಿಗಳಿಂ ಮುಚ್ಚಿಲ್ಲದಿದ್ದಾಗ್ಯೂ ಸಮೀಪದ ಶಬ್ದವು ಸಹ ಕೇಳಬರುವುದಿಲ್ಲ. ಇದರಿಂದ ಮನವು ಒಂದು ಇಂದ್ರಿಯದೊಡನೆ ಸಂಯುಕ್ತವಾಗಿರಲು ಮತ್ತೊಂದಿಂದ್ರಿಯದ ವಿಷಯಗ್ರಹಣವೆಂಬ ಕಾರ್ಯವು ಸಂಭವಿಸದೆಂಬುದೂ ಸಿದ್ಧವಾಗುವುದು. ಈ ಬಗ್ಗೆ '**ಅನ್ಯತ್ರಮನಾ ಅಭೂವಂ ನಾಶ್ರೌಷಮ್। ಅನ್ಯತ್ರಮನಾ ಅಭೂವಂ ನಾಪಶ್ಯಮ್ ।**'—ನನ್ನ ಮನಸ್ಸು ಬೇರೊಂದು ವಿಷಯದೊಳಾಸಕ್ತವಾಗಿದ್ದುದರಿಂದ ನಾನದನ್ನು ಕೇಳಲಿಲ್ಲ, ನೋಡಲಿಲ್ಲವೆಂಬ ಶ್ರುತಿವಚನವೂ ಇದೇ ಮಾತನ್ನು ಹೇಳುವುದು.

(೫) ಪ್ರತ್ಯಕ್ಷಪ್ರಮಾಣದ ಅಪ್ರವೃತ್ತಿಗೆ ಸೂಕ್ಷ್ಮತ್ವವೆಂಬುದೂ ಕಾರಣವಾಗಿದೆ. '**ಇಂದ್ರಿಯಾಯೋಗ್ಯತ್ವಂ ಸೂಕ್ಷ್ಮತ್ವಂ**' । ಯಾವ ಪದಾರ್ಥವು ಇಂದ್ರಿಯಗಳಿಗೆ ವಿಷಯವಾಗಲು ಯೋಗ್ಯವಾದುದಲ್ಲವೋ ಅದು ಸೂಕ್ಷ್ಮವೆನಿಸುವುದು. ಇಂತಹ ಸೂಕ್ಷ್ಮಪದಾರ್ಥಗಳಲ್ಲಿಯೂ ಪ್ರತ್ಯಕ್ಷದ ಪ್ರವೃತ್ತಿಯಾಗಲು ಶಕ್ಯವಿಲ್ಲ.

(೬) 'ವ್ಯವಧಾನ' ವೆಂಬುದು ಪ್ರತ್ಯಕ್ಷದ ಪ್ರವೃತ್ತಿಗೆ ಪ್ರತಿಬಂಧಕವಾಗಿದೆ. ವ್ಯವಧಾನವೆಂದರೆ, ಅಡ್ಡಿಯು; ಗೋಡೆ, ಪರದೆ, ಗಿಡ, ಗುಡ್ಡ ಮೊದಲಾದುವು ನಡುವಿರುವವು; ನಡುವೆ ಗೋಡೆಯಿರಲು ಅದರ ಮುಂದಿನ ಒಡವೆ ತೋರದು. ಆದ್ದರಿಂದ ಗೋಡೆಯು ವ್ಯವಧಾನವೆನಿಸುವುದು; ಹೀಗೆ ಪರದೆ (ಜವನಿಕೆ) ಯು, ಗಿಡವು ಮುಂತಾದವುಗಳಿಗೂ ವ್ಯವಧಾನತ್ವವಿದೆ; ಈ ವ್ಯವಧಾನವು ಪ್ರತ್ಯಕ್ಷಜ್ಞಾನವನ್ನು ಪ್ರತಿಬಂಧಿಸು (ಅಡ್ಡಿಮಾಡು) ವುದು.

(೭) 'ಅಭಿಭವ' ವೆಂಬುದೂ ಪ್ರತ್ಯಕ್ಷಪ್ರತಿಬಂಧಕವು. ಬಲವಾದ ಸಜಾತೀಯ ಪದಾರ್ಥದ ಸಂಬಂಧವಾಗುವಿಕೆಯು ಅಭಿಭವವೆನಿಸುವುದು; ಹೇಗೆಂದರೆ, ಸೂರ್ಯಪ್ರಕಾಶ ಸಂಬಂಧ ಮೂಲಕ ಚಂದ್ರಪ್ರಭೆಯು ಕಾಣಿಸುವುದಿಲ್ಲ; ನಕ್ಷತ್ರಗಳೂ ತೋರುವುದಿಲ್ಲ.

(೮) 'ಸಮಾನಾಭಿಹಾರ' ವು. ಸಮಾನಗುಣಗಳಿಂದ ಕೂಡಿದ ಪದಾರ್ಥಗಳ ಬೆರಿಕೆಯು; ಎಮ್ಮೆಯ ಹಾಲಿನೊಡನೆ ಬೆರೆದ ಹಸುವಿನ (ಆಕಳದ) ಹಾಲು ಬೇರೆಯಾಗಿ ಅರಿಯಲುಬಾರದು.

(೯) 'ಅನುದ್ಭವ' ವೆಂದರೆ, ಭವಿಷ್ಯತ್ಕಾರ್ಯಗಳು ಸೂಕ್ಷ್ಮರೂಪದಿಂದ ಉಪಾದಾನ ಕಾರಣದಲ್ಲಿರುವವು; ಮುಂದೊದಗುವ ಕಾರ್ಯರೂಪವಾದ ಕೊಡವು ಮೊದಲು ಮಣ್ಣೆಂಬುಪಾದಾನದಲ್ಲಿ 'ಅನುದ್ಭವ' ವಾಗಿರುವುದು.

ಈ ರೀತಿಯಾಗಿ, ಸಾಂಖ್ಯರು ಪ್ರತ್ಯಕ್ಷಪ್ರಮಾಣದ ಅಪ್ರವೃತ್ತಿಯ ಒಂಬತ್ತು ಕಾರಣಗಳನ್ನು ಹೇಳುವರು; ಅವುಗಳಲ್ಲಿ ಅನೇಕ ಕಾರಣಗಳು ಸರ್ವವಾದಿಗಳಿಗೂ ಸಂಮತವಾಗುವಹಾಗಿವೆ. ಪ್ರಕೃತದಲ್ಲಿ, ವೇದದ ನಿತ್ಯತ್ವವೆನ್ನುವುದಾದರೂ ಸೂಕ್ಷ್ಮತರವಾದರ್ಥವನ್ನೊಳಗೊಂಡಿದೆ. ಹೀಗೆ ಅದು ಸೂಕ್ಷ್ಮಕ್ಕಿಂತಲೂ, ಸೂಕ್ಷ್ಮತರವಾಗಿರುವ ಕಾರಣದಿಂದೇ ನಾವು ಅದನ್ನು ಸೂಕ್ಷ್ಮತರವೆಂದು ಪ್ರತಿಪಾದಿಸುತ್ತೇವೆ.

ಸೂಕ್ಷ್ಮವೂ, ದೂರವೂ, ನಡುವೆಯೂ, ಅತಿಸಮೀಪವೂ ಇರುವ ಪದಾರ್ಥವು ಅನುಮಾನದಿಂದಾದರೂ ವಿಷಯವಾಗಬಹುದು; ಆದರೆ ವೇದನಿತ್ಯತ್ವದ ಅರ್ಥವಾದರೋ ಪ್ರಾಧಾನ್ಯವಾಗಿ ಅನುಮಾನಕ್ಕಾದರೂ ವಿಷಯವಾಗಲಾರದು. ಒಂದಾನೊಂದು ವಸ್ತುವು ಸಾಕ್ಷಾತ್ತಾಗಿ ಇಂದ್ರಿಯಗಳಿಗೆ ವಿಷಯ (ಗೋಚರ) ವಾಗದಿದ್ದರೂ ಲಿಂಗದಿಂದ (ಹೇತುವಿನಿಂದ) ಅದರ ಜ್ಞಾನವು ಸಂಭವಿಸುವುದು. ಹೇಗೆಂದರೆ, ಹೊಗೆಯಿಂದ ಬೆಂಕಿಯು ಅರಿಯಲ್ಪಡುವುದು. ಮಳೆಯಿಲ್ಲದೆ ಹೊಳೆ ಪೂರವು ಬಂದಿರುವುದನ್ನು ಕಂಡು ಮೇಲ್ಗಡೆ ಮಳೆಯಾಗಿರಬಹುದೆಂಬ ಊಹೆಯಾಗುವುದು; ಈ ಮೇರೆಗೆ ಅನುಮಾನಕ್ಕೆ ಲಿಂಗದ ಪ್ರತ್ಯಕ್ಷಪ್ರಮೆಯದಾದರೂ ಅವಶ್ಯಕತೆಯುಂಟು. ಆದರೆ 'ವೇದವು ನಿತ್ಯವಾದುದು' ಎಂಬರ್ಥವು ಅನುಮಾನದಿಂದಾದರೂ ಸಿದ್ಧಿಸದು. ಏಕೆಂದರೆ, ಅನುಮಾನಕ್ಕೆ ಅವಶ್ಯವಿರಬೇಕಾದ ವ್ಯಾಪ್ತಿ (ಸಾಹಚರ್ಯನಿಯಮ) ಜ್ಞಾನಾದಿ ಸಾಮಗ್ರಿಗಳು ಅಲ್ಲಿರುವುದಿಲ್ಲ. ಹಾಗೂ ಪ್ರತ್ಯಕ್ಷಪ್ರಮಾಣಕ್ಕಿಂತ ಅನುಮಾನಪ್ರಮಾಣವು ದುರ್ಬಲವಾದುದಷ್ಟೇ! ಪ್ರತ್ಯಕ್ಷಾನುಮಾನಪ್ರಮಾಣಗಳೆರಡೂ ಲೌಕಿಕಗಳಾದ್ದರಿಂದ ಲೋಕವ್ಯವಹಾರಕ್ಕುಪಯೋಗವಾದವುಗಳೂ ದೃಷ್ಟವಿಷಯಕಗಳೂ ಆಗಿವೆ. ಶ್ರುತಿಯೆಂಬ ಮೂರನೆಯ ಶಬ್ದಪ್ರಮಾಣವು ಪ್ರಾಮುಖ್ಯವಾಗಿ ಅದೃಷ್ಟಾರ್ಥಗೋಚರದಲ್ಲಿ ಪ್ರಮಾಣವಾಗಿದೆ. ಆದ್ದರಿಂದ, ವೇದವು ನಿತ್ಯವಾದುದೆಂಬ ವಿಷಯವು ಪ್ರತ್ಯಕ್ಷಾನುಮಾನಪ್ರಮಾಣಗಳಿಂದ ತಿಳಿಯಲ್ಪಡದಾದಕಾರಣ ಸೂಕ್ಷ್ಮತರವಾಗಿದೆ.

ಪರಮೇಶ್ವರನಿಂದ ವೇದವು ಉತ್ಪನ್ನವಾಗಿದೆಯಷ್ಟೇ! ಹಾಗಾದರೆ ವೇದಕ್ಕೂ ಪರಮೇಶ್ವರನಿಗೂ ಜನ್ಯಜನಕಭಾವವು ಸಿದ್ಧಿಸುವುದು. ವೇದದ ಉತ್ಪತ್ತಿಯವಿಷಯವಾಗಿ—"**ತಸ್ಮಾದ್ಯಜ್ಞಾತ್ಸರ್ವಹುತಋಚಃ ಸಾಮಾನಿಜಜ್ಞಿರೇ**" (ಋ. ಸಂ. ೧೦-೯೦) ಎಂಬ ಮಂತ್ರವು ಪ್ರಮಾಣವಾಗಿದೆ. ಈ ಮಂತ್ರವು ಪರಮೇಶ್ವರನಿಗೆ ವೇದಕಾರಣತ್ವವನ್ನು ಹೇಳುವುದರಿಂದ, ಯಾವುದು ಹುಟ್ಟಿದುದೋ ಅದು ಕಾರ್ಯವೆನಿಸುವುದು. ಕುಂಬಾರನಿಂದ ಮಾಡಲ್ಪಡುವ ಕೊಡವೆಂಬ ಕಾರ್ಯರೂಪವಾದ ಪದಾರ್ಥವು ಅನಿತ್ಯವೆನಿಸುವಂತೆ ಈಶ್ವರನಿಂದುತ್ಪನ್ನವಾದ ಕಾರ್ಯರೂಪವೇದವಾದರೂ ಅನಿತ್ಯವಾದುದಲ್ಲವೆ? ಎಂಬುದಾಗಿ ಪ್ರಾಚೀನ ತಾರ್ಕಿಕರ ಪೂರ್ವಪಕ್ಷವಿದು. ಅವರು ಮೊದಲು ತರ್ಕದಿಂದ ವೇದದ ಅನಿತ್ಯತ್ವವನ್ನು ಸಿದ್ಧಪಡಿಸಿ ಆ ಬಳಿಕ ಕೇವಲ ಉಪೋದ್ಬಲಕ (ಸ್ವಾಭಿಪ್ರಾಯಪುಷ್ಟ್ಯರ್ಥ) ವಾಗಿ ಶ್ರುತಿಯನ್ನು ನಿರ್ದೇಶಮಾಡಿದ್ದಾರೆ. ಆಧುನಿಕ ತಾರ್ಕಿಕರಾದರೂ ಬಹುತರವಾಗಿ ಹೀಗೇ ಪೂರ್ವಪಕ್ಷಮಾಡುತ್ತಾರೆ.

ಪ್ರಾಚೀನ ನೈಯಾಯಿಕರು, ಸಾಂಖ್ಯರು ಮೊದಲಾದವರೂ ಶಬ್ದಪ್ರಮಾಣವನ್ನು ಅಂಗೀಕರಿಸುತ್ತಿದ್ದರೆಂಬುದೇನೋ ನಿಜ; ಆದರೂ ಅವರು ತರ್ಕವನ್ನನುಸರಿಸಿ ಶಬ್ದಪ್ರಮಾಣವನ್ನು ಯೋಜನೆಮಾಡುವವರಾಗಿದ್ದರು. ಆಧುನಿಕ ತಾರ್ಕಿಕರಾದರೋ ವೈದಿಕಶಬ್ದವನ್ನು ಪ್ರಾಯಶಃ ಪ್ರಮಾಣವೆಂದೊಪ್ಪುವದಿಲ್ಲವಾದ್ದರಿಂದ ಅವರು ಶುಷ್ಕತರ್ಕದಮೇಲೆ ವಿಶೇಷವಾಗಿ ಕೈಯಾಡಿರುವರು. ಮೀಮಾಂಸಕರು ಅದೃಷ್ಟಾರ್ಥವುಳ್ಳ ಶ್ರುತಿಯನ್ನೇ ನಿರಪವಾದ ಪ್ರಮಾಣವೆಂದೊಪ್ಪತಕ್ಕವರಾದುದರಿಂದ, ಅವರು ಮೊದಲು ಶ್ರುತಿವಚನಾನುಸಾರವಾದ ಸಿದ್ಧಾಂತವನ್ನು ಹೇಳಿ ತರುವಾಯ ಅದನ್ನು ಸೋಪಪತ್ತಿಕವಾಗಿ (ತರ್ಕಶುದ್ಧವಾಕ್ಯಗಳಿಂದ) ಸಿದ್ಧಪಡಿಸುತ್ತಾರೆ. ಈ ಹಳಬರ ದಾರಿಯನ್ನು ಹಿಡಿದೇ ನಾವಾದರೂ ಈಗ ಮೇಲಿನ ಆಕ್ಷೇಪದ ಸಮಾಧಾನವನ್ನು ಮಾಡುವಾ!

ಶ್ರುತಿ ಸ್ಮೃತಿಗಳ ಆಧಾರದಿಂದ 'ವೇದವು ನಿತ್ಯವಾದುದು' ಎಂಬರ್ಥವೇ ಸಿದ್ಧಿಸುತ್ತದೆ. "**ವಾಚಾ ವಿರೂಪ ನಿತ್ಯಯಾ**"—ಹೇ ವಿರೂಪದೇವತೆಯೇ! ಈ ಹಿಂದೆ ನಾವು ಉಲ್ಲೇಖಿಸಿದ 'ಅನಾದಿನಿಧನಾ' ಎಂಬ ಮಹಾಭಾರತದ ಶಾಂತಿಪರ್ವಸ್ಥವಾಕ್ಯದ ತಾತ್ಪರ್ಯವಾದರೂ ವೇದವು ನಿತ್ಯವಾದುದೆಂಬಾಶಯವನ್ನೇ ದೃಢಪಡಿಸುವುದು. ಆ ವಾಕ್ಯದ ಗೂಢಾರ್ಥವು ಹೀಗಿದೆ—'ಸ್ವಯಂಭುವೆನಿಸುವ ಪರಮೇಶ್ವರನು ಸೃಷ್ಟಿಯಾರಂಭದಲ್ಲಿ ಆದ್ಯಂತರಹಿತವಾದುದರಿಂದ ನಿತ್ಯವೂ, ದಿವ್ಯವೂ (ಅಲೌಕಿಕ, ಅಮಾನುಷವೂ) ಆದ ವೇದಮಯವಾಕ್ಕನ್ನು ಹೊರಗೆಡಹಿದನು. ನಿತ್ಯವೂ ದಿವ್ಯವೂ ಆದ ಆ ವೇದವಾಣಿಯಿಂದೇ ಸರ್ವಪ್ರವೃತ್ತಿ (ಸರ್ವಪದಾರ್ಥೋತ್ಪತ್ತಿ) ಯುಂಟಾದುದು.' ಎಂಬೀ ವಾಕ್ಯದಲ್ಲಿರುವ ಸ್ವಯಂಭು' ವೆಂಬ ಶಬ್ದವು ಮಹೇಶ್ವರವಾಚಕವಾದುದೆಂಬಭಿಪ್ರಾಯಬೋಧಕವಾದ ನುಡಿಯು ಅದೇ ಮಹಾಭಾರತ ಶಾಂತಿಪರ್ವದ ಬೇರೊಂದು ವಾಕ್ಯದಲ್ಲಿ ಸ್ಪಷ್ಟವಾಗಿರುವುದು—

ನಾಮರೂಪಂಚ ಭೂತಾನಾಂ ಕರ್ಮಣಾಂ ಚ ಪ್ರವರ್ತನಮ್ ।
ವೇದಶಬ್ದೇಭ್ಯ ಏವಾದೌ ನಿರ್ಮಮೇ ಸ ಮಹೇಶ್ವರಃ ॥

ಆ ಮಹೇಶ್ವರನು ಸೃಷ್ಟಿಯಾರಂಭದಲ್ಲಿ ಸರ್ವಭೂತಗಳ ನಾಮರೂಪಗಳನ್ನೂ, ಕರ್ಮದ ಪ್ರವೃತ್ತಿಯನ್ನೂ ವೇದಶಬ್ದಗಳಿಂದೇ ನಿರ್ಮಿಸಿದನು. ಇದೇ ಅರ್ಥವನ್ನು ಅಕ್ಷರಶಃ ಮನುಸ್ಮೃತಿಯಲ್ಲಿಯೂ ಕಾಣಬಹುದು. (೧-೨೧)—

ಸರ್ವೇಷಾಂ ತು ನಾಮಾನಿ ಕರ್ಮಾಣಿಚ ಪೃಥಕ್ ಪೃಥಕ್ ।
ವೇದಶಬ್ದೇಭ್ಯ ಏವಾದೌ ಪೃಥಕ್ ಸಂಸ್ಥಾಶ್ಚ ನಿರ್ಮಮೆ ॥

ಆ ಮಹೇಶ್ವರನು ಸರ್ವ ವಸ್ತುಗಳ ನಾಮಗಳನ್ನೂ ಕರ್ಮಗಳನ್ನೂ ಲೌಕಿಕ ಸಂಸ್ಥೆಯನ್ನೂ ಬೇರೆಬೇರೆಯಾಗಿ ನಿರ್ಮಿಸಿದನು. ಮಹೇಶ್ವರನು ವೇದಶಬ್ದಗಳಿಂದ ಸರ್ವಸೃಷ್ಟಿಯನ್ನು ನಿರ್ಮಿಸಿದನು ಎಂದು ಹೇಳಲ್ಪಡುವ ಮೇಲಿನ ಅಭಿಪ್ರಾಯವನ್ನು ಇನ್ನಷ್ಟು ಹೆಚ್ಚಾಗಿ ಅರಿತುಕೊಳ್ಳಬೇಕಾದರೆ ಅದಕ್ಕೆ ಬೀಜಭೂತವಾದ ಶೈವಾಗಮಾರ್ಥವನ್ನು ಶರಣುಹೊಕ್ಕರೇನೇ ನಮ್ಮ ಬಯಕೆಯು ಕೈಸಾರ್ವುದು.

ಪ್ರಮಾತೃ, ಪ್ರಮಾಣ, ಪ್ರಮೇಯರೂಪವಾದ ವಿಶ್ವಪ್ರಪಂಚವು ಷಡಧ್ವಮಯವಾಗಿರುವುದು. ವರ್ಣ, ಪದ, ಮಂತ್ರ, ಕಲಾ, ತತ್ತ್ವ, ಭುವನವೆಂಬಿವೇ ಅಧ್ವಗಳು; ಇವುಗಳಲ್ಲಿ ಮೊದಲಿನವು ಮೂರು ವಾಚಕ (ಶಬ್ದ) ರೂಪವಾದುವೂ, ಉಳಿದ ಮುಂದಿನ ಮೂರು ವಾಚ್ಯ (ಅರ್ಥ) ರೂಪವಾದುವೂ ಎಂದು ವಿವೇಕವು. ಪರಶಿವನು ಶಕ್ತಿಯುಕ್ತನು, ಆದ್ದರಿಂದ ಆ ಶಿವನು ತಾನು ಅರ್ಥರೂಪನೂ ಅವನ ಸ್ವಾತ್ಮೀಯಶಕ್ತಿಯು ಶಬ್ದರೂಪವೂ ಆಗಿರುವುದರ ಭಾವವನ್ನು ಹಿಂದೆ ನಾವು 'ಶಬ್ದಜಾತಮಶೇಷಂ ತು' ಎಂಬ ಶಿವಪುರಾಣವಾಕ್ಯವನ್ನು ಉದ್ಧರಿಸುವ ಪೂರ್ವಕವಾಗಿ ಸ್ಪಷ್ಟೀಕರಿಸಿದ್ದೇವೆ. ಈಗಾದರೂ ಶಬ್ದಾರ್ಥರೂಪವಾದ ವಿಶ್ವಪ್ರಪಂಚವು ಆ ಶಿವಶಕ್ತಿವಿಲಾಸವೆಂದೇ ಹೇಳುತ್ತೇವೆ. ಆ ಮಹೇಶ್ವರನಲ್ಲಿ ಸ್ವಾತ್ಮೀಯ ಶಕ್ತಿಯ ಉಚ್ಛಲನೆಯುಂಟಾಗುವಿಕೆಯೇ 'ನಾದ' ವೆನಿಸಿತು. ಅಂದರೆ ಸೃಷ್ಟಿಮೂಲಾರಂಭದಲ್ಲಿ ಚಿಚ್ಛಕ್ತಿಯಸ್ಫುರಣದಿಂದ ಶುದ್ಧಮಾಯೆಗೆ (ಪರಬಿಂದುವಿಗೆ) ಕಾರ್ಯೋನ್ಮುಖತೆಯು ಚಲನೆಯುಂಟಾದುದೇ 'ನಾದ' ವು; ಈ 'ನಾದ' ವೇ ಶಬ್ದತತ್ತ್ವಕ್ಕೆ ಮೂಲಭೂತವಾಗಿದೆ. ನಾದಕಾರಿಕೆಯಲ್ಲಿ ಶ್ರೀರಾಮಕಂಠಾಚಾರ್ಯನು—

ಸ ಮಹಾಮಾಯಾಜನ್ಯೋ ನಾದಃ ಪರಮಾರ್ಥವಾಚಕೋ ಭವತಿ ।
ಯೇನ ಸ್ಥೂಲಂ ಶಬ್ದಂ ಮನ್ತ್ರಂ ತನ್ಮಾತ್ರಕಂ ಭವೇದ್ವ್ಯಾಪಿ ॥

ಎಂದು ನಿರೂಪಿಸುವುದರಿಂದ, ಶಿವತತ್ತ್ವದಲ್ಲಿ ಶಕ್ತಿರೂಪಭೂತವೇ ಆದ ಅವಬೋಧರೂಪ ವಿಮಲಜ್ಞಾನವು ಮೊತ್ತಮೊದಲು ನಾದರೂಪದಿಂದ ಸೂಕ್ಷ್ಮವಾಗಿ ಆವಿರ್ಭವಿಸಿದುದಾಗಿ, ಅದುವೇ ಮುಂದೆ ಸ್ಥೂಲಶಬ್ದರೂಪವನ್ನು ಹೊಂದಿ ಮಂತ್ರ (ವೇದ) ತಂತ್ರ (ಸಿದ್ಧಾಂತ)ವಾಙ್ಮಯರೂಪವಾಗಿ ಪಸರಿಸಿತೆಂದು ಸಿದ್ಧವಾಗುವುದು. ಧರೆಮೊದಲಾಗಿ ಮೂಲಬಿಂದುವೇ ಕಡೆಯಾದ ಸರ್ವತತ್ತ್ವಗಳಿಗೂ ಪರಶಿವನು ಮೂಲಭೂತನಾದ್ದರಿಂದ ಅವನಿಗೆ 'ಶಿವತತ್ತ್ವ'ವೆಂಬ ಸಂಜ್ಞೆಯುಂಟಾಗಿದೆ. ಒಂದೆಯಾದ ಈ ಶಿವತತ್ತ್ವವು ನಿಷ್ಕಲ (ಅವ್ಯಕ್ತ) ವಾಗಿದೆ. ಇದರ (ಶಿವತತ್ತ್ವದ) ವ್ಯಕ್ತತೆಯೇ 'ಸಕಲ'ವೆಂದು ಹೇಳಿಸಿಕೊಳ್ಳಲ್ಪಡುವುದು. ಇದುವೇ ಈಶ್ವರತತ್ತ್ವವು; ಇದನ್ನೇ ಮಹೇಶ್ವರನೆಂದು ಕೊಂಡಾಡುವರು. ಈ ಮಹೇಶ್ವರನ ನಿಷ್ಕಲಸ್ವರೂಪವನ್ನೇ 'ಸ್ವಯಂಭು' ಮುಂತಾದ ಶಬ್ದಗಳಿಂದ ಶ್ರುತಿಸ್ಮೃತೀತಿಹಾಸಪುರಾಣಗಳು ಬಣ್ಣಿಸುತ್ತವೆ. ಆದ್ದರಿಂದ, ಈ ಮಹೇಶ್ವರನೇ ವೇದಶಬ್ದಗಳಿಂದ ಸರ್ವಪ್ರಪಂಚವನ್ನು ನಿರ್ಮಿಸಿದನೆಂದು ಹೇಳುವುದು ನಿರವದ್ಯವಾದುದು. ಹಾಗೂ ಪರಶಿವನ ವಿಮಲಜ್ಞಾನವೇ ಕ್ರಮವಾಗಿ ಸ್ಥೂಲಶಬ್ದರೂಪವನ್ನು ಧರಿಸಿದ ಶ್ರುತಿಗೆ ನಿತ್ಯತ್ವವು ನಿಷ್ಪ್ರತ್ಯೂಹವಾಗಿದೆ. ಈ ವಿಷಯದಲ್ಲಿ ಶೈವಾಗಮತತ್ತ್ವಜ್ಞರು ಏನುಹೇಳುವರೋ ಅದನ್ನಷ್ಟು ನೋಡಿ ಮುಂದೆ ಸಾಗುವಾ! ಈಶಾನಶಿವಾಚಾರ್ಯರು 'ಪದ್ಧತಿ'ಯ ಕ್ರಿಯಾಪಾದದ ಪ್ರಥಮಪಟಲದಲ್ಲಿ ಹೀಗೆ ಹೇಳುತ್ತಾರೆ.

ಸ ಶಿವಃ ಸ್ವಮುಖೋದ್ಭೂತೈರಾಗಮೈಸ್ತು ಪರಾಪರೈಃ ।
ಅನುಗೃಹ್ಣಾತಿ ಹಿ ಜಗದ್ಭೋಗಮೋಕ್ಷಪ್ರಸಿದ್ಧಯೇ ॥೪೩॥

ಆ ಶಿವನು ಜಗತ್ತಿನಲ್ಲಿಯ ಜೀವರಿಗೆ ಭೋಗ ಮೋಕ್ಷಗಳು ಸಿದ್ಧಿಸುವುದಕ್ಕೋಸ್ಕರ ತನ್ನ ಮುಖಗಳಿಂದ ಪರ (ಕಾಮಿಕಾದಿ) ಅಪರ (ಋಗಾದಿ) ಆಗಮ (ಶ್ರುತಿ) ಗಳನ್ನು ಹುಟ್ಟಿಸುವವನಾಗಿ ಸರ್ವರನ್ನು ಅನುಗ್ರಹಿಸುತ್ತಾನೆ. ಮತ್ತು—

ಅನಾದಿಃ ಸ ಶಿವೋ ಮುಖ್ಯೋ ಯಥಾಽನ್ಯೇಭ್ಯೋ ವಿಲಕ್ಷಣಃ ।
ತಥಾ ತದ್ವದನೋದೀರ್ಣಾ ವಾಚೋಽನ್ಯೇಭ್ಯೋ ವಿಲಕ್ಷಣಾಃ ॥
ಶಿವಾಗಮಾಶ್ಚ ವೇದಾಶ್ಚ ನಿತ್ಯಾ ಏವ ಪ್ರಮಾಣತಃ ।
ನಿತ್ಯಾಃ ಶಿವಾಗಮಾ ವೇದ್ಯಾಃ ಶಿವೇನಾದಾವಭೇದತಃ ॥
ನಿತ್ಯಸಿದ್ಧಾತ್ತ್ವಭಿವ್ಯಕ್ತಾಸ್ತಸ್ಮಿಂಸ್ತೇಽನಾದಯೋ ಯತಃ ॥

ಅನಾದಿಯಾದ ಆ ಶಿವನು ಹೇಗೆ ಅನ್ಯರಿಗಿಂತ ವಿಲಕ್ಷಣನಾಗಿರುವನೋ, ಹಾಗೆ ಅವನ (ಆ ಶಿವನ) ಮುಖಗಳಿಂದುದಯಿಸಿದ ವಾಕ್ಯಗಳಾದರೂ ಅನ್ಯರ ವಾಕ್ಯಗಳಿಗಿಂತ ವಿಲಕ್ಷಣವಾದುವು; ಆದುದರಿಂದ ಶಿವನ ವಚನಗಳೆನಿಸುವ ಶಿವಾಗಮಗಳೂ ವೇದಗಳೂ ನಿತ್ಯವಾದುವೂ ಪ್ರಮಾಣಭೂತಗಳೂ ಆಗಿವೆ. ಏಕೆಂದರೆ, ಶಿವನು ಅನಾದಿ ಸಂಸಿದ್ಧನೂ, ನಿತ್ಯನೂ, ಆಗಿದ್ದಾನೆ. ಅವನಲ್ಲಿ ಅಭೇದರೂಪದಿಂದ ಶಿವಾಗಮಗಳು ವೇದಗಳೊಂದಿಗೆ ಅನಾದಿನಿತ್ಯಸಿದ್ಧಗಳಾಗಿರತಕ್ಕುವು. ಹೀಗೆ ಅನಾದಿಯೂ, ನಿತ್ಯನೂ ಆದ ಶಿವನಿಂದ ಅಭಿವ್ಯಕ್ತಗಳಾದ ಆಗಮಗಳೂ ವೇದಗಳೂ ನಿತ್ಯಪ್ರಮಾಣಗಳಾಗಿವೆ.

(ಸಶೇಷ)

ವೀರಶೈವಮತವು ರಾಜಕೀಯತೊತ್ತಿನ ಕೂಸಲ್ಲ.

ಲೇಖಕ—'ದೈವಜ್ಞವಿನೋದ' ಶಿರೋಳ.

ಸುಪ್ರಸಿದ್ಧವಾದ ವೀರಶೈವಮತದ ತತ್ತ್ವದ ತಿರುಳನ್ನರಿಯದ ಕೆಲಜನ ಮರುಳ ಶಿಖಾಮಣಿಗಳು ರಾಜಕೀಯತೊತ್ತಿನ ಕೂಸಾಗಿ ತಾಳಲು ಹವಣಿಸುವರು. ಹನ್ನೆರಡನೆಯ ಶತಮಾನದಲ್ಲಿ ಬಸವನು ರಾಜಸೇವಾಸಕ್ತನಾಗಿದ್ದು ರಾಜ್ಯದಾಶೆಗಾಗಿ ಮತಧರ್ಮವಿರೋಧವಾಗಿ ಮಾಡಬಾರದ ಕೃತಿಗಳನ್ನು ಮಾಡಿ ಅತ್ತ ರಾಜ್ಯವನ್ನೂ ಪಡೆಯದೆ, ಇತ್ತ ಧರ್ಮಾನುಷ್ಠಾನವನ್ನೂ ಆಚರಿಸದೆ ಕೃಷ್ಣಾನದಿಯ ಪಾಲಾದನು. ಈ ವಿಷಯವು ಇತಿಹಾಸಾದಿಗಳಲ್ಲಿ ಚಿತ್ರೀಕರಿಸಲ್ಪಟ್ಟಿದೆ. (ಬಸವನು ಮತೋದ್ಧಾರ ಮಾಡಿದನೆಂದೂ, ಕನ್ನಡ ವಾಙ್ಮಯವನ್ನು ಬೆಳಕಿಗೆ ತಂದನೆಂದೂ, ಕನ್ನಡ ವಚನಶಾಸ್ತ್ರವು ಇವನಿಂದಲೇ ಆಯಿತೆಂದೂ ಅನ್ನುವದು ಅಸತ್ಯವಾದುದು. ವಚನಪ್ರಚಾರವು ವಿಜಯನಗರದ ರಾಜ್ಯಾರಂಭದಿಂದ ಆಯಿತು. ಕೆಲಜನ ಪಂಡಿತರು ಈ ಕನ್ನಡವಚನಗಳಿಗೆ ತಮ್ಮ ಮುದ್ರಿಕೆಯನ್ನಿಡದೆ, ಬಸವ-ಚನ್ನಬಸವ-ನಾಗವ್ವ-ನೀಲವ್ವ ಮೊದಲಾದ ಅಕ್ಷರಶೂನ್ಯರ ಮುದ್ರಿಕೆಯನ್ನೊತ್ತಿ ಪ್ರಚಾರಮಾಡಿದರು. ವಚನದ ನಿಜಾಂಶದಬಗ್ಗೆ ಇನ್ನೊಂದು ಲೇಖನವನ್ನು ಬರೆಯುತ್ತೇವೆ) ಮಾನವಕೋಟಿಯ ಉದ್ಧಾರವು ಧರ್ಮನಿಯಮದಿಂದಲೇ ಆಗುವದು. ಲೌಕಿಕ-ವ್ಯವಹಾರೋಪಯುಕ್ತವಾದ ರಾಜಕೀಯಕ್ಷೇತ್ರವು ಮಾನವರಿಗೆ ಅವಶ್ಯಬೇಕಾದರೂ ಅದು ಧಾರ್ಮಿಕಸೂತ್ರಾನುವರ್ತಿಯಾಗಿ ಸಾಗಿದರೆ ಮಾತ್ರ ಯಶಸ್ಸನ್ನು ಪಡೆಯುವದು. ಎಲ್ಲದಕ್ಕೂ ಧರ್ಮವೇ ಮೂಲಾಧಾರವಾದದ್ದು. ಇಷ್ಟೇ ಅಲ್ಲ; 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂಬಂತೆ ವಿಶ್ವಪ್ರಪಂಚದ ಕಳಶದಿಯೇ ಧರ್ಮವಾಗಿದೆ. ಜಗತ್ತಿನ ಜೀವನಾಧಾರವೇ ಧರ್ಮವು. ಮತಧರ್ಮಗಳು ಸಾಮಾನ್ಯವಾಗಿ ಸಂಕುಚಿತವಾದುವುಗಳಲ್ಲ. ವಿಶಾಲವಾದ ವಿಶ್ವಧರ್ಮದ ಅಂತಿಮಧ್ಯೇಯವನ್ನೇ ಸಾಧಿಸುವವಾಗಿವೆ. ಭಾರತೀಯರ ಮತಧರ್ಮಗಳು ಭಿನ್ನಭಿನ್ನವಾಗಿ ಅನುಸರಿಸಲ್ಪಟ್ಟರೂ ಅವುಗಳ ಕಡೆಯಮೆಟ್ಟಲುಗಳಲ್ಲಿ ಜೀವನಬಂಧನದ ಬಿಡುಗಡೆಯನ್ನೇ (ಮೋಕ್ಷ) ಸಾರುತ್ತಿರುವವು. ವೀರಶೈವಮತಧರ್ಮಗಳು ಲೌಕಿಕವ್ಯವಹಾರಕ್ಕೆ ಅಪ್ಪುಗೆಯನ್ನು ಕೊಡುವದಿಲ್ಲ. ಪಾರಮಾರ್ಥಿಕ ಪಥಗಾಮಿಯಾಗಿ ಮಾನವನನ್ನೇ ಬೋಧಿಸುತ್ತಲಿರುವ, ಈ 'ವೀರಶೈವ' ಮತಾಭಿಧಾನವು ಇದೇ ಅರ್ಥವನ್ನೇ ವ್ಯಕ್ತಮಾಡುವದು. ಇನ್ನು ಲೌಕಿಕ ಪಾರಮಾರ್ಥಿಕವೆರಡು ಮಾರ್ಗಗಳೂ ವೀರಶೈವರಿಗೆ ಅವಶ್ಯ ಬೇಕಾದ್ದರಿಂದ ಇವೆರಡರ ಹಾದಿಗೂ ಸ್ವಧರ್ಮದ ಹೊಳಪುಬೇಕು. ಧಾರ್ಮಿಕದ ದಿವ್ಯಬೆಳಕಿಲ್ಲದೆ ಹಾದಿಯನ್ನು ಹಿಡಿದ ಮಾನವನು ಅಧೋಗತಿಯನ್ನು ಸೇರುವನು. ಈಗ ಲೌಕಿಕದಲ್ಲಿ ಕೆಲವರು ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಿಸಿ ಫಲವನ್ನು ಪಡೆಯಬೇಕೆಂಬ ಹವಣಿಯಿಂದ ಅಧರ್ಮದ ಬೀಜವನ್ನೂರತೊಡಗಿದ್ದಾರೆ. ಸನಾತನ ಧರ್ಮವನ್ನು ಕೈಬಿಟ್ಟು ನಾಸ್ತಿಕಮಾರ್ಗವನ್ನು ಹಿಡಿದ ಇವರಿಗೆ ಆ ರಾಜಕೀಯ ಸ್ವತ್ತಾದರೂ ದೊರೆಯಲಾರದು. ಆದರೆ ರಾಜಕೀಯ ರಂಗಭೂಮಿಯಲ್ಲಿ ಧರ್ಮಧ್ವಜಧಾರಿಗಳಾಗಿ ಪ್ರವೇಶಿಸಿದರೆ ಜಯವು ತಾನೇ ಸಿಗುವದು. ಧರ್ಮಶೂನ್ಯರಿಗೆ ಇಹಲೋಕದ ಸುಖವು ದೊರೆಯದೆ ಪರಲೋಕದ ಗತಿಯೂ ಸಿಗಲಾರದು. ವೀರಶೈವಮತದ ಧರ್ಮವು ರಾಜಕೀಯ ಕಾರ್ಯಕಲಾಪಗಳ ಪಾಲುಗಾರರಾಗಲು ಮತೀಯರಿಗೆ ಮತಧರ್ಮವನ್ನೇ ಪ್ರಧಾನಾಂಗವಾಗಿ ಬೋಧಿಸುವದು. ಈ ಮತದಲ್ಲಿ ಬಸವನ ಹೊರತು ರಾಜಸೇವಾಕಾರ್ಯದಲ್ಲಿ ತೊಡಗಿ ಮತಧರ್ಮಗಳನ್ನು ಯಾರೂ ಹಾಳುಮಾಡಲಿಲ್ಲ. ೯ ನೇ ಶತಮಾನದಲ್ಲಿದ್ದ ದಾಸಿಮಯ್ಯನೆಂಬ ಮಹಾಶಿವಶರಣನು ಜಯಸಿಂಹ ಮೊದಲಾದ ರಾಜರನ್ನು ಗುರುಮುಖದಿಂದ ವೀರಶೈವರನ್ನಾಗಿ ಮಾಡಲು ಧರ್ಮಧ್ವಜವನ್ನು ಹಿಡಿದುಕೊಂಡಿದ್ದನು. ಅದಕ್ಕಿಂತ ಪ್ರಾಚೀನಕಾಲದ ಶ್ರೀಜಗದ್ಗುರು ರೇಣುಕಾದ್ಯಾಚಾರ್ಯರು ರಾಜಾಧಿರಾಜರನ್ನು ವೀರಶೈವರನ್ನಾಗಿ ಮಾಡಿ ಪ್ರಪಂಚದಲ್ಲೆಲ್ಲ ವೀರಶೈವಮತಸಾಮ್ರಾಜ್ಯವನ್ನು ನೆಲೆಗೊಳಿಸಿದರು. ಬಹುದಿವಸದ ಹಿಂದಿನ ಪುರಾಣದ ಮಾತಿಗೆ ಇಂದಿನವರು ಪಾಪಬುದ್ಧಿಯಿಂದ ಮೂಗುಮುರಿದರೂ ೧೪ ೧೫-೧೬-೧೭ ನೇ ಶತಮಾನಗಳಲ್ಲಿ ವೀರಶೈವ ಗುರುಪೀಠಾಧಿಕಾರಿಗಳು ರಾಜಕಾರ್ಯದಲ್ಲಿ ಪ್ರವೇಶಿಸಿ ಧರ್ಮಕಾರ್ಯಕ್ಕೆ ಜಯ ಸಂಪಾದಿಸಿದ ಐತಿಹಾಸಿಕ ವಿಷಯಗಳು ಸುವರ್ಣಾಕ್ಷರಗಳಿಂದ ಬರೆಯಿಡತಕ್ಕವಾಗಿವೆ. ಅಖಿಲಹಿಂದೂಧರ್ಮದ ಮೇಲೆ ದಾಳಿಯನ್ನು ಮಾಡುತ್ತ ಹಿಂದೂಧರ್ಮದ ಕಡುವೈರಿಗಳಾದ ಮಹಮ್ಮದೀಯರ ರಾಜ್ಯಭಾರದಲ್ಲಿಯೂ ಸಹ ವೀರಶೈವ ಗುರುಪೀಠಾಧಿಕಾರಿಗಳೂ ಶರಣರೂ, ತಮ್ಮ ಆತ್ಮಶಕ್ತಿಯ ಬಲದಿಂದ ಧರ್ಮವನ್ನು ಕಾಯ್ದುಕೊಂಡು ಧಾರ್ಮಿಕ ತೇಜಸ್ಸಿನ ಬಲದಿಂದ ಆ ಮಹಮ್ಮದೀಯ ಅರಸರ ಕಲ್ಲೆದೆಯನ್ನು ಕರಗಿಸಿ ಕರುಣಾಶಾಲಿಯಾದುದನ್ನಾಗಿ ಮಾಡಿರುವರು. ಹಿಂದೂಧರ್ಮದ ದೇವಾಲಯಗಳನ್ನು ನಾಶಮಾಡಲು ಹೊರಟ ಔರಂಗಜೇಬಬಾದಶಹನು ಕಾಶೀಜಗದ್ಗುರು ವಿಶ್ವಾರಾಧ್ಯರ ಪೀಠದ ಸಮೀಪಕ್ಕೆ ಹೋದೊಡನೆ ಅಲ್ಲಿಯ ಧಾರ್ಮಿಕವಾತಾವರಣದ ಪ್ರಭಾವಕ್ಕೇನೇ ಭ್ರಾಂತನಾಗಿ ಜಗದ್ಗುರುಗಳಲ್ಲಿ ನಿಸ್ಸೀಮವಾದ ಭಕ್ತಿಯಿಂದ ಅರ್ಪಿಸಿದ ಶಾಸನವು ಸುಪ್ರಸಿದ್ಧವಾಗಿ ಈಗಲೂ ಆ ಪೀಠದಲ್ಲಿ ಶೋಭಿಸುತ್ತಿರುವದು. ಇದೇ ಕಾಲದಲ್ಲಿ ಅಂದರೆ ಔರಂಗಜೇಬನ ಸಮಕಾಲದಲ್ಲಿ ಕರ್ನಾಟಕದಲ್ಲಿಯೂ ಮಹಮ್ಮದೀಯರೇ ರಾಜ್ಯಭಾರ ಮಾಡುತ್ತಲಿದ್ದದ್ದು ಸರಿಯಷ್ಟೆ? ವಿಜಾಪುರದ ಅಲ್ಲೀ ಅದಿಲ್‌ಶಹನ ಆಳಿಕೆಗೊಳಪಟ್ಟ ಕರ್ನಾಟಕವು ಧರ್ಮಜಾಗ್ರತೆಯಲ್ಲಿ ಮುಂದಡಿಯಿಟ್ಟು ಯಶೋಭಾಗಿಯಾಗಿದೆ. ಶ್ರೀ ಶಿವಪ್ಪಯ್ಯನೆಂಬ ಶರಣನು ವೀರಶೈವ ಧರ್ಮರಕ್ಷಣೆಗಾಗಿ ಆ ಕಾಲದಲ್ಲಿ ಬಹಳ ಕೆಲಸ ಮಾಡಿರುವನು. ವೀರಶೈವವನ್ನು ಜಾಗ್ರತಗೊಳಿಸಿ ಕರ್ನಾಟಕದ ಯಾವದ್ಭಾಗಗಳಲ್ಲಿಯೂ ಗುರುಮಠಗಳನ್ನು ಸ್ಥಾಪಿಸಿದ್ದಾನೆ. ಆ ಮಠಗಳಿಗೆ ಅದೇ ಕಾಲದ ಮಹಮ್ಮದೀಯ ಅರಸರೇ ಭೂಮಿ ಮೊದಲಾದವುಗಳನ್ನು ಉಂಬಳಿಯಾಗಿ ಕೊಟ್ಟಿದ್ದಾರೆ. ಬದಾಮಿಯ ಪ್ರಾಂತಾಧಿಕಾರಿಯಾದ ಮಿರ್ಜಾ ಇಸಾಕೋ ಸಾಹೇಬನು ಶಿವಪ್ಪಯ್ಯನವರಿಗೆ ಅತ್ಯಂತ ಭಕ್ತಿಯಿಂದ ಮಠಾದಿಗಳನ್ನು ಸ್ವತಃ ಕಟ್ಟಿಸಿ ಚಿರಸ್ಥಾಯಿಯಾದ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿದ್ದಾನೆ. ಅದು ಈಗಲೂ ಬ್ರಿಟಿಷ್ ಸರ್ಕಾರದಿಂದ ನಡೆಯುತ್ತಲಿದೆ. ಶಿವಪ್ಪಯ್ಯನವರು ವೀರಶೈವ ಧರ್ಮದ ಪತಾಕೆಯನ್ನು ಮಹಮ್ಮದೀಯರ ಧರ್ಮಪ್ರಚಾರದ ರಭಸದಲ್ಲಿಯೇ ಎತ್ತಿಹಿಡಿದು ಕೀರ್ತಿಕಾಯರಾಗಿದ್ದಾರೆ. ಈ ಶರಣನು ಸ್ಥಾಪಿಸಿದ ೬೪ ಮಠಗಳು ಈಗಲೂ ವಿರಾಜಿಸುತ್ತಲಿವೆ. ಹೀಗೆ ಗುರುಸಾರ್ವಭೌಮರೂ, ಶರಣರೂ ವೀರಶೈವಮತೋದ್ಧಾರಕರಾಗಿ ಸ್ವಧರ್ಮಜ್ಯೋತಿಯ ಪ್ರಕಾಶದಲ್ಲಿಯೇ ಲೌಕಿಕ ವ್ಯವಹಾರೋಚಿತ ಕಾರ್ಯಗಳಾದ ರಾಜಕೀಯ ಕಾರ್ಯದಲ್ಲಿಯೂ ತಮ್ಮ ದಿವ್ಯಪ್ರಭಾವದಿಂದ ಬೆಳಗಿದರು. ಈಗಿನ ಅಧುನಿಕ ಸುಧಾರಕರು ಸರಕಾರೀ ನೌಕರಿಯ ಎಂಜಲಕ್ಕೆ ಬಾಯಿ ನೀರು ಕರೆದು ಧರ್ಮದ ಹಂಗಿಲ್ಲದೆ ಧುಮುಕುತ್ತಿರುವರು. ರಾಜಕೀಯ ವಿಚಾರದಲ್ಲಿ ಧರ್ಮದ ತೊಡಕಿಲ್ಲವೆಂದು ಹೇಳುತ್ತ ಧರ್ಮಶೂನ್ಯರಾಗಿ ಜೀವವಿಲ್ಲದ ಶವದಂತೆ ನೃತ್ಯಮಾಡ ತೊಡಗಿದ್ದು ಕಲಿಕಾಲಪ್ರಭಾವವೆಂದು ಹೇಳಬೇಕಾಗಿದೆ. ಅಖಿಲವೀರಶೈವಜನಾಂಗವು ಈಗಿನ ಹೊಸಗಾಳಿಗೆ ಮೈಗೊಡದೆ ಸನಾತನ ವೀರಶೈವಧರ್ಮದಲ್ಲಿ ನಿಷ್ಠೆಯುಳ್ಳವರಾಗಿ ಸ್ವಧರ್ಮಾನುಷ್ಠಾನದಿಂದಲೇ ಸ್ವರಾಜ್ಯಲಕ್ಷ್ಮಿಯನ್ನು ಪಡೆಯಬೇಕು. ಧರ್ಮಮೂಲಕ ಸಂಪಾದಿಸಿದುದೇ ನ್ಯಾಯವಾದ ಸ್ವರಾಜ್ಯವು. ಓಡುವ ಜಗತ್ತಿನೊಡನೆ ವೀರಶೈವರು ಓಡದೆ ನಿಂತರೆ ಹೇಡಿಗಳೆಂದು ಹೇಳಿಸಿಕೊಳ್ಳುವರು. ಆದ್ದರಿಂದ ಈಗಿನ ಹೊಸ ಬೆಳಕಿನಲ್ಲಿ ಓಡುವವರೊಡನೆ ನಾವೂ ಓಡೋಣವೆಂದು ಕೆಲವರು ಹೇಳುತ್ತಲಿದ್ದಾರೆ. ಸರಿ, ಮೊಲದಂತೆ ಓಡಿ ಭಯ ತೀರದೊಡನೆ ನೆಲಕೊರೆದು ಬೀಳುವದಕ್ಕಿಂತ ಹಿಂದುಮುಂದಿನ ವಿಚಾರವನ್ನು ತಿಳಿದು ಆನೆಯಂತೆ ನಿರ್ಭಯವಾಗಿ ಹೋಗುವದು ಹಿತವಲ್ಲವೇ? ಆನೆಯನ್ನೇರಿದವನಿಗೆ ಶ್ವಾನನ ಭಯವಿಲ್ಲವಷ್ಟೆ? ಧರ್ಮದಿಂದ ಬಡಿದಾಡಿ ಧರ್ಮಮೂರ್ತಿಗಳಾಗಿ ಭಾರತಸ್ವಾತಂತ್ರ್ಯ ಸಮರದಲ್ಲಾಗಲಿ ಅಥವಾ ಬ್ರಿಟಿಷ್ ಸರ್ಕಾರದ ಕೃಪಾಛತ್ರದಲ್ಲಿರಬೇಕೆಂಬ ಹಂಬಲಿಗರ ಹವಣಿಕೆಯ ಸಂಭ್ರಮದಲ್ಲಾಗಲಿ ವೀರಶೈವರು ತಮ್ಮ ಮತಧರ್ಮವನ್ನು ಬಿಡದೆ ಆಚರಿಸಲೆಂದು ವಿನೋದನು ಹಾರೈಸುತ್ತಲಿದ್ದಾನೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕಂಪಲಿ ಸಾಂಗತ್ರಯೀಪಾಠಶಾಲಾ ಪರೀಕ್ಷಾ ಫಲಿತಾಂಶವು.

"ನಭವತಿಪುನರುಕ್ತಂ ಭಾಷಿತಂ ಸಜ್ಜನಾನಾಂ" ಎನ್ನುವಂತೆ ಈ ಗ್ರಾಮದ ಶ್ರೀಮಂತ ಶ್ರೀ|| ಕಲ್ಲಿಗಿ ಗುಂಡಪ್ಪನವರ ಧರ್ಮಪತ್ನಿಯವರಾದ ಶ್ರೀಮತಿ ಗಂಗಮ್ಮನವರೂ ಇವರ ದತ್ತಪುತ್ರರಾದ ಕೆಂಚಬಸವಪ್ಪನವರೂ ಧರ್ಮಾರ್ಥವಾಗಿ ಎರಡು ಸಾವಿರ ರೂಪಾಯಿಗಳನ್ನು ವಾಗ್ದಾನಮಾಡಿ ಅದರ ಬಡ್ಡಿರೂಪವಾಗಿ ೧೫ ರೂಪಾಯಿಗಳನ್ನು ಅವ್ಯಾಹತವಾಗಿ ಸಲ್ಲಿಸುತ್ತಿರುವ ಮೂಲಕ ೨ ವರುಷಗಳಿಂದಲೂ ಅವರ ಪೋಷಕತ್ವದಿಂದಲೇ ನಡೆಯುತ್ತಿರುವ ಈ ಪಾಠಶಾಲೆಗೆ ವೇ|| ವಿದ್ವಾನ್ ಅಮರನಾಥಶಾಸ್ತ್ರಿಗಳು, ಹಿರೇಮಠ, ಬನ್ನಿಗೋಳ ಇವರು ಅಧ್ಯಾಪಕರಾಗಿದ್ದು ಸದ್ಯಃ ೧೩ ಜನ ವಿದ್ಯಾರ್ಥಿಗಳಿರುವರು. ಇಲ್ಲಿ ಸಾಹಿತ್ಯದರ್ಪಣಾದಿ ಗ್ರಂಥಗಳನ್ನು ಅಭ್ಯಾಸಮಾಡುವವರು ಇರುವರಲ್ಲದೆ ನಾಲ್ವರು ಇಂಟರ್‌ಪರೀಕ್ಷೆಗೂ ನಾಲ್ವರು ವಿದ್ವಾನ್ ಪರೀಕ್ಷೆಗೂ ಕುಳಿತಿರುತ್ತಾರೆ. ಈ ವರ್ಷ ಇಂಟರ್‌ಪರೀಕ್ಷೆಗೆ ಕುಳಿತ ನಾಲ್ವರಲ್ಲಿ ಕಾವರಗೇರಿ ಈಶ್ವರಶರ್ಮ ಹಚ್ಚೊಳ್ಳಿ ಮಹಾಂತಶರ್ಮ ಇವರಿಬ್ಬರೂ ಉತ್ತಮಶ್ರೇಣಿಯಲ್ಲಿ ಪಾಸಾಗಿರುತ್ತಾರೆ. ಈ ಪಾಠಶಾಲೆಯಲ್ಲಿ ಇನ್ನೂ ನಾಲ್ಕು ಜನ ಇಂಟರ್ ಅಥವಾ ವಿದ್ವಾನ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಭೋಜನಾದಿ ಅನುಕೂಲತೆಯು ಉಚಿತವಾಗಿ ಮಾಡಲ್ಪಡುತ್ತದೆ. ಬರಲಿಚ್ಛಿಸುವವರು ಇದೇ ಜೂನ್ ತಿಂಗಳ ಅವಧಿಯೊಳಗಾಗಿ ಬೇಗನೆ ಬರತಕ್ಕದ್ದೆಂದು ತಿಳಿಸುವ.

ಸಾಂಗತ್ರಯೀಪಾಠಶಾಲಾ ಸೆಕ್ರೆಟರಿ,
ಕಂಪ್ಲಿ ಜಿ|| ಬಳ್ಳಾರಿ.

ಪರಳೀಪ್ರಕರಣದ ಉತ್ಪಾದಕ.

ಶ್ರೀ ಶಿವಕೋಟಿವೀರಭದ್ರಾರ್ಯರ ಶಿವೈಕ್ಯ.

ಸ್ವಗ್ರಾಮದಲ್ಲಿ ಗತವೈಶಾಖ ಬ|| ೭ ಸೋಮವಾರ (15-5-33) ಹಗಲು ಮೂರು ಘಂಟೆಗೆ ಆಂಧ್ರವೀರಶೈವರಲ್ಲಿ ಸುಪ್ರಸಿದ್ಧರಾದ ಶ್ರೀ ಶಿವಕೋಟಿ ವೀರಭದ್ರಾರ್ಯರು ಶಿವಸಾಯುಜ್ಯವನ್ನೈದಿದರೆಂಬ ವಜ್ರಪಾತದಂತಹ ವಾರ್ತೆಯನ್ನು ತಿಳಿಸುವಾಗ ವಿಶೇಷವಾಗಿ ಅವರ ಅಲ್ಪವಯಸ್ಸನ್ನು (ಸುಮಾರು, ೪೦ ವರ್ಷ) ನೆನಿಸಿಕೊಂಡು ಬಹಳವಾಗಿ ವಿಷಾದಿಸುತ್ತೇನೆ. ಈ ಮಹನೀಯರು ಬಾಲ್ಯದಿಂದಲೂ ಶಿವಪೂಜಾನುಷ್ಠಾನಗರಿಷ್ಠರಾಗಿದ್ದರಲ್ಲದೆ ಅನುಪಮವಾದ ಶಿವಾಲಯವನ್ನು ನಿರ್ಮಿಸಿ ಅದ್ಭುತವಾದ ಶಿವಕೋಟಿಯನ್ನು ಚಿತ್ರಿಸಿ ಶಿವಭಜನಾಸಂಘಗಳನ್ನು ನೆಲೆಗೊಳಿಸಿ ಅನೇಕಾನ್ನದಾನಮಾಡಿ ತಮ್ಮ ಸಮಸ್ತ ಜೀವಿತವನ್ನು ಶಿವನಿಗೋಸ್ಕರ ಸವೆಸಿ ಆಂಧ್ರ ವೀರಶೈವರಲ್ಲಿ "ಶಿವಶರಣ" ರೆಂಬ ಪ್ರಶಸ್ತಿಗೆ ಗುರಿಯಾಗಿದ್ದರು. ಇವರ ಅನುಷ್ಠಾನ ಸಮಾಪ್ತಿಯಲ್ಲಿ ಶಾಂತಿರೂಪವಾದ ಸುಪ್ರಸಿದ್ಧ "ಪರಳೀ ಮಹಾರುದ್ರಾಭಿಷೇಕಪ್ರಕರಣ" ದಲ್ಲಿ ವೀರಶೈವವಿಜಯವಾಗಬೇಕಾದರೆ ಈಶ್ವರಾನುಗ್ರಹದೊಂದಿಗೆ ಇವರ ಮಹಾನುಷ್ಠಾನವೂ ಅದೃಷ್ಟೋಪಕಾರವಾಗಿದ್ದಿತು. ಮಹಾದುಃಖಸಾಗರದಲ್ಲಿ ಮುಳಿಗಿರುವ ಇವರ ಮಾತೃಪಿತೃಭ್ರಾತೃಕಳತ್ರ ಚತುಷ್ಟಯಕ್ಕೆ ಸಮವೇದನೆಯನ್ನು ಪ್ರಕಟಿಸುವದರಲ್ಲಿ ಆಂಧ್ರ ವೀರಶೈವರೊಡನೆ ಕರ್ನಾಟಕ ಮಹಾರಾಷ್ಟ್ರ ವೀರಶೈವರೂ ಸಮ್ಮಿಳಿತರೆಂದು ಸಂಭಾವಿಸುತ್ತೇನೆ.

ಜಿ. ಮ. ವೀ. ಶ. ಶಾಸ್ತ್ರಿ.

ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರಲ್ಲಿರುವ ಶ್ರೀಮತಿ ಚಿಕ್ಕಬಸಮ್ಮಯ್ಯನವರ ಛತ್ರಕ್ಕೆ ಸೇರಲಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳು ಚಾಲ್ತಿಮಾಹೆ ತಾರೀಖು 15 ರೊಳಗೆ ಈ ಕೆಳಗೆ ರುಜುಮಾಡಿರುವವರಿಗೆ ಅಪ್ಲಿಕೇಷನ್ ಕೊಡತಕ್ಕದ್ದು. ಡೇಟು ಮೀರಿ ಬರುವ ಅಪ್ಲಿಕೇಷನ್‌ಗಳಿಗೆ ಸಿಗಾಕೊಡಲಾಗುವುದಿಲ್ಲ.

ಎಂ. ಪಿ. ಚನ್ನಪ್ಪ,
(ರಿಟೈರ್ಡ್ ಶಿರಸ್ತೇದಾರ್)
ಕನ್ವಿನರ್, 93, ಮಾನಂದವಾಡಿ ರೋಡು,
2-6-33. ಮೈಸೂರು.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಜೂನ್ ತಾ|| ೫ ನೇ ಸೋಮವಾರ.

ಶ್ರೀಮನ್ಮಹಾರಾಜರವರ ೫೦ ನೆಯ ವರ್ಧಂತೀಮಹೋತ್ಸವ.

ಧರ್ಮಮೂರ್ತಿಗಳಾಗಿ ಅವತರಿಸಿ ಮೈಸೂರು ಮಹಾಸಂಸ್ಥಾನವನ್ನಾಳುತ್ತಿರುವ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ೫೦ ನೆಯ ವರ್ಷದ ವರ್ಧಂತ್ಯುತ್ಸವವು ಪದ್ಧತಿಪ್ರಕಾರ ನಿನ್ನೆ ದಿವಸ ರಾಜಧಾನಿಯಲ್ಲಿ ಅತಿವೈಭವದಿಂದ ನೆರವೇರಿತು. ಪ್ರಾತಃಕಾಲ ಮಂಗಲ [illegible] ಮಹಾಪ್ರಭುಗಳ ಆಯುರ್ವರ್ಷಸೂಚಕಗಳಾದ ೫೦ ತೋಪುಗಳು ಹಾರಿಸಲ್ಪಟ್ಟವು. ಆಸ್ತಿಕಶಿಖಾಮಣಿಗಳಾದ ಮಹಾಪ್ರಭುಗಳು ತಮ್ಮ ಸಂಧ್ಯಾವಂದನೇಷ್ಟದೇವತಾಪೂಜಾದಿ ನಿತ್ಯಕರ್ಮಗಳನ್ನು ಪೂರೈಸಿಕೊಂಡು ದಿವ್ಯವಸ್ತ್ರಾಭರಣಭೂಷಿತರಾಗಿ ೧೧-೩೦ ಘಂಟೆಗೆ ಸರಿಯಾಗಿ ಕಲ್ಯಾಣಮಂಟಪಕ್ಕೆ ದಯಮಾಡಿಸಿ ಗುರುಪೂಜೆಯನ್ನು ನಡೆಯಿಸಿ ಸುಂದರತರವಾದ ಭದ್ರಾಸನವನ್ನಲಂಕರಿಸಿದರು. ರಾಜಭಕ್ತಿದ್ಯೋತಕಲಕ್ಷಣಗಳಿಂದೊಡಗೂಡಿದ ರಾಜಬಂಧುಗಳೂ, ಮಂತ್ರಿಗಳೂ, ಉಪಮಂತ್ರಿಗಳೂ, ಇತರ ಸರ್ಕಾರಿಯುದ್ಯೋಗಿಗಳೂ ಪುರಪ್ರಮುಖರೂ ಮುಜರೆಯನ್ನು ಮಾಡಿ ನಿಯಮಿತವಾದ ಸ್ಥಾನಗಳಲ್ಲಿ ಸಾಲ್ವಿಡಿದು ಕುಳಿತರು. ಸುಪ್ರಸಿದ್ಧ ವಾದ್ಯಗಾರರ ನಾನಾವಿಧ ವಾದ್ಯಧ್ವನಿಗಳೂ, ಮೃದುಮಧುರವಾದ ವಿದ್ವಾಂಸರ ಗಾನಾಲಾಪಗಳೂ, ಜಯಜಯಧ್ವನಿಗಳೂ, ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದ್ದುವು. ಮಠಾಧಿಕಾರಿಗಳ ಮತ್ತು ವೈದಿಕೋತ್ತಮರ ಆಶೀರ್ವಾದಗಳೂ, ಸಭಿಕರ ಮತ್ತು ಸೈನಿಕರ ಮುಜುರೆಗಳೂ ನಡೆದ ಬಳಿಕ ಸಭಿಕರಿಗೆ ಪುಷ್ಪಹಾರಾದಿ ವಿನಿಯೋಗವು ನಡೆದು ಸಭೆಯು ಉಪಸಂಹೃತವಾಯಿತು.

ಮಧ್ಯಾಹ್ನ ೫-೪೫ ಘಂಟೆಯ ಸಮಯಕ್ಕೆ ಮಹಾಪ್ರಭುಗಳ ಉತ್ಸವವು ಗಜಾಶ್ವಾದಿಚತುರಂಗಮಹಾಬಲಸಹಿತವಾಗಿಯೂ, ಸಕಲರಾಜಬಿರುದಾವಳಿಸಹಿತವಾಗಿಯೂ ಅರಮನೆಯಿಂದ ದೊಡ್ಡಪೇಟೆ ಮಾರ್ಗವಾಗಿ ಹೊರಟಿತು. ಮಹಾಪ್ರಭುಗಳು ರತ್ನಖಚಿತವಾದ ಸುವರ್ಣಾಭರಣಗಳಿಂದ ಅಲಂಕೃತವಾದ ದಿವ್ಯಾಶ್ವವನ್ನು ಆರೋಹಣಮಾಡಿದ್ದರು. ಚಂದ್ರಮಂಡಲದಂತೆ ನೇತ್ರಾಹ್ಲಾದವನ್ನುಂಟುಮಾಡುತ್ತಿರುವ ಭಾವಿಪ್ರಭುಗಳಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರವರು ಭವ್ಯವಸ್ತ್ರಾಭರಣ ಭೂಷಿತರಾಗಿ ದಿವ್ಯಾಶ್ವವನ್ನಾರೋಹಿಸಿ ಮಹಾಪ್ರಭುಗಳ ಪಾರ್ಶ್ವದಲ್ಲಿ ಶೋಭಿಸುತ್ತಿದ್ದರು. ಪ್ರೇಕ್ಷಕರಾಗಿ ಬಂದ ಪ್ರಜಾಸಮುದಾಯವು ರಾಜಭಕ್ತಿಯಿಂದಲೂ ಶಿಸ್ತಿನಿಂದಲೂ ದಾರಿಯುದ್ದಕ್ಕೂ ಉಭಯ ಪಾರ್ಶ್ವಗಳಲ್ಲಿ ನಿಂತುಕೊಂಡಿದ್ದು ಪ್ರಭುದರ್ಶನದಿಂದುಂಟಾದ ಸಂತೋಷದಿಂದ ಹಸ್ತಗಳನ್ನು ಮೇಲಕ್ಕೆತ್ತಿ ಜಯಜಯಕಾರಗಳನ್ನು ಮಾಡುತ್ತಿದ್ದರು. ಉಭಯ ಮಹಾರಾಜರ ಅಮೃತಮಯಕಟಾಕ್ಷಧಾರೆಯು ಉಭಯಪಾರ್ಶ್ವಗಳಲ್ಲಿ ಕಿಕ್ಕಿರಿದು ನಿಂತಿರುವ ಪ್ರಜಾಮಂಡಲಿಯಮೇಲೆ ಪ್ರವಹಿಸುತ್ತಿದ್ದಿತು. ಉತ್ಸವವು ಕ್ಲಾಕ್‌ಟವರಿನ ಬಳಿ ಬಂದೊಡನೆಯೇ ಮಹಡಿಯ ಮೇಲೆ ನಿಂತುಕೊಂಡಿದ್ದ ಯೂರೋಪಿಯನ್ನರು ಪುಷ್ಪವೃಷ್ಟಿಗರೆಯುತ್ತ ಜಯಘೋಷವನ್ನು ಮಾಡಿದರು. ದೊಡ್ಡಪೇಟೆಯಲ್ಲಿರುವ ಪ್ರಮುಖ ವರ್ತಕರು ತಮ್ಮ ತಮ್ಮ ಅಂಗಡಿಯ ಮುಂಭಾಗದಲ್ಲಿ ಮಹಾರಾಜರವರ ಚಿತ್ರಪಟವನ್ನು ಅಲಂಕರಿಸಿ ನಯವಿನಯಭಯಭಕ್ತಿಯಿಂದೊಡಗೂಡಿ ಉಭಯ ಪ್ರಭುಗಳಿಗೆ ಹಾರತುರಾಯಿಗಳನ್ನು ಸಮರ್ಪಿಸುತ್ತಿದ್ದರು. ಉತ್ಸವವು ಹಳೇ ಬಾಡಿಗಾರ್ಡ್ ಲೈನಿನವರೆಗೆ ಹೋಗಿ ಬಲಭಾಗಕ್ಕೆ ತಿರುಗಿ ಗೌರ್ನಮೆಂಟ್ ಹೌಸನ್ನು ಸೇರಿತು. ಸೈನ್ಯದ ಮರ್ಯಾದೆಯು ನಡೆಯುತ್ತಿರಲು ಮಹಾಪ್ರಭುಗಳವರು ಅಶ್ವದಿಂದಿಳಿದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿ ಮೈದಾನದಲ್ಲಿ ಚತುರಂಗಬಲವನ್ನು ಪರಾಂಬರಿಸಿದ ನಂತರ ರಾತ್ರಿ ೮-೩೦ ಘಂಟೆಯ ಸಮಯಕ್ಕೆ ವಿದ್ಯುದ್ದೀಪಮಾಲಿಕೆಗಳಿಂದಲೂ ಮಲ್ಲಿಕಾಕುಟ್ಮಲಗಳಿಂದಲೂ ಅಲಂಕೃತವಾದ ಭವ್ಯಮೋಟಾರಿನಲ್ಲಿ ಮಂಡಿಸಿದರು. ಉತ್ಸವವು ಗೌರ್ನಮೆಂಟ್‌ಹೌಸಿನ ಪಶ್ಚಿಮಭಾಗದಲ್ಲಿರುವ ಹೆಬ್ಬಾಗಲಿನಿಂದ ಹೊರಟು ಸೆಂಟ್ರಲ್ ಪೋಲೀಸ್ ಸ್ಟೇಷನ್ನಿನ ಹತ್ತರ ನಕ್ಷತ್ರಮಾಲೆಯಂತೆ ಶೋಭಿಸುತ್ತಿರುವ ವಿದ್ಯುದ್ದೀಪಗಳ ತೋರಣಮಾಲೆಗಳಿಂದ ಝುಗಝುಗಿಸುತ್ತಿರುವ ದೊಡ್ಡಪೇಟೆಯಲ್ಲಿ ಹಾಯ್ದು ಸುಮಾರು ೯-೪೦ ಘಂಟೆಯ ಸಮಯಕ್ಕೆ ಅರಮನೆಯನ್ನು ಸೇರಿತು.

ಪ್ರಜಾಭ್ಯುದಯವೇ ಸ್ವಾಭ್ಯುದಯವೆಂದು ತಿಳಿದು ರಾಜ್ಯವಾಳುತ್ತಿರುವುದೇ ರಾಜಧರ್ಮವೆಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿರುವಂತೆ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರು [illegible] ಮನಸ್ಸುಗಳಲ್ಲಿಯೂ ದೇಶಾಭ್ಯುದಯಸಾಧಕಗಳಾದ ಕಾರ್ಯಗಳನ್ನೆಸಗುತ್ತ ಪ್ರಜಾಯೋಗಕ್ಷೇಮಕಾರಿಗಳಾದುದರಿಂದ ಪ್ರಪಂಚದಲ್ಲಿರುವ ರಾಜರಿಗೆಲ್ಲಾ ಆದರ್ಶಪ್ರಾಯರಾಗಿದ್ದಾರೆ. ಇವರ ಪ್ರಜಾಪಾಲನ ಧುರೀಣತೆಯೂ, ದೈವನಿಷ್ಠೆಯೂ, ಶಮದಮಾದಿಗುಣಸಂಪನ್ನತೆಯೂ, ಧರ್ಮರಕ್ಷಣಾಚತುರತೆಯೂ, ಗುರುದೇವತಾಭಕ್ತಿಪರತೆಯೂ, ನೀತಿಕುಶಲತೆಯೂ ಅನಿತರಸಾಧಾರಣವಾದುದೆಂಬುದಕ್ಕೆ ಉತ್ಸವಕಾಲದಲ್ಲಿ ಮಹಾಪ್ರಭುಗಳ ದರ್ಶನಾರ್ಥಿಗಳಾಗಿ ದೂರದೂರದೇಶಗಳಿಂದ ಅನೇಕರು ಬರುತ್ತಿರುವುದೇ ನಿದರ್ಶನವಾಗಿರುತ್ತದೆ.

ಯದ್ಯಪಿ ಕ್ಷಿತಿಪಾಲಾನಾಮಾಜ್ಞಾ ಸರ್ವತ್ರಗಾ ಸ್ವಯಂ |
ತಥಾಪಿ ಶಾಸ್ತ್ರದೀಪೇನ ಚರನ್ತ್ಯೇವ ಸತಾಂ ಮತಃ ||

ರಾಜ್ಯಭಾರಮಾಡುತ್ತಿರುವ ಮಹಾರಾಜರುಗಳು ಹೇಗೆ ಆಜ್ಞೆಮಾಡಿದರೂ ಹಾಗೆಯೇ ನಡೆಯುತ್ತದೆ. ಪ್ರಭುಗಳ ಆಜ್ಞೆಗೆ ತಡೆಯೇ ಇಲ್ಲ. ಅವರು ಲೋಕಕಲ್ಯಾಣಕರವಾದ ಆಜ್ಞೆಮಾಡಿದರೂ ಮಾಡಬಹುದು; ಲೋಕಾನಿಷ್ಟಕರವಾದ ಆಜ್ಞೆಮಾಡಿದರೂ ಮಾಡಬಹುದು; ಪ್ರಭುಶಕ್ತಿಯಮುಂದೆ ಯಾವ ಶಕ್ತಿಯೂ ನಡೆಯುವುದಿಲ್ಲ. ಜಗದೀಶ್ವರನು ಪ್ರಭುಗಳಿಗೆ ಇಂಥ ಸರ್ವಸ್ವಾತಂತ್ರ್ಯವನ್ನು ದಯಪಾಲಿಸಿದ್ದರೂ ಅಂಥ ಪ್ರಭುಶಕ್ತಿಯನ್ನು ಸ್ವೇಚ್ಛೆಯಾಗಿ ಉಪಯೋಗಿಸಬಾರದು. ಮನೆಯಲ್ಲಿ ಅಪಾರವಾದ ರತ್ನಗಳಿವೆಯೆಂದು ಆ ರತ್ನಗಳನ್ನು ಯೋಗ್ಯಸ್ಥಾನದಲ್ಲಿ ಧರಿಸದೆ ಅಯೋಗ್ಯಸ್ಥಾನದಲ್ಲಿ ಧರಿಸಬಾರದು. ಈಶ್ವರಾನುಗ್ರಹೀತವಾಗಿ ಬಂದ ಅಪ್ರತಿಹತವಾದ ಪ್ರಭುಶಕ್ತಿಯನ್ನು ಶಾಸ್ತ್ರವೆಂಬ ದೀಪವನ್ನು ಹಚ್ಚಿಕೊಂಡು ಆ ದೀಪದ ಬೆಳಕಿನಲ್ಲಿಯೇ ಉಪಯೋಗಿಸಬೇಕು. ಇದೇ ಉತ್ತಮ ಮಹಾರಾಜರ ಲಕ್ಷಣವು. ಎಂಬ ರಾಜನೀತಿಯಂತೆ, ನಮ್ಮ ಮಹಾರಾಜರವರಾದರೂ ತಮ್ಮ ಪ್ರಭುಶಕ್ತಿಯನ್ನು ಧರ್ಮಶಾಸ್ತ್ರವೆಂಬ ದೀಪದ ಬೆಳಕನ್ನು ಮುಂದಿರಿಸಿಕೊಂಡೇ ಉಪಯೋಗಿಸುವರಲ್ಲದೆ ಶಾಸ್ತ್ರದೀಪವನ್ನು ನಂದಿಸಿ ಅಂಧಕಾರದಲ್ಲಿ ಪ್ರಭುತ್ವಶಕ್ತಿಯನ್ನು ಉಪಯೋಗಿಸುವವರಲ್ಲವೆಂಬುದು ಪ್ರಪಂಚಕ್ಕೇನೇ ವಿದಿತವಾಗಿರುತ್ತದೆ. ಹೀಗೆ ಧರ್ಮದಿಂದ ರಾಜ್ಯವಾಳುತ್ತಿದ್ದುದರಿಂದಲೇ ದೇಶೀಯ ಪ್ರಜೆಗಳೂ ವಿದೇಶೀಯ ಪ್ರಜೆಗಳೂ ಏಕಕಂಠದಿಂದ ನಮ್ಮ ಮಹಾರಾಜರವರ ರಾಜ್ಯವನ್ನು ರಾಮರಾಜ್ಯಕ್ಕೂ, ನಮ್ಮ ಮಹಾರಾಜರನ್ನು ಶ್ರೀರಾಮನಿಗೂ, ಜನಕಮಹರ್ಷಿಗಳಿಗೂ ಹೋಲಿಸುತ್ತಿರುವುದನ್ನು ನಾವು ಅನೇಕ ಪತ್ರಿಕೆಗಳಲ್ಲಿ ಓದುತ್ತಲಿದ್ದೇವೆ.

ಸ್ವೇಚ್ಛಾವಿಹಾರಕ್ಕೆ ಪ್ರತಿಬಂಧಕವನ್ನಾಚರಿಸುತ್ತಿರುವ ಧರ್ಮವೆಂಬ ಮಹಾಪುರುಷನನ್ನು ನುಗ್ಗುಬಡಿಯುವುದಕ್ಕಾಗಿ ಪಾಪಮಯವಾದ ಕಲಿಪುರುಷನ ಬಾಯಿಯಿಂದ ಹೊರಡುತ್ತಿರುವ ಘೋರ ವಿಷಮಯವಾದ ಗಾಳಿಯು ಈಗ ಎತ್ತನೋಡಿದಡತ್ತ ಬೀಸುತ್ತಿರುವದು. ಈ ಗಾಳಿಯ ಏಟನ್ನು ಅನುಭವಿಸಲಾರದೆ ಧರ್ಮವೆಂಬ ಮಹಾಪುರುಷನು ಕಂಗೆಟ್ಟು ಸುತ್ತಿಸುತ್ತಿ ಎಲ್ಲಿಯೂ ಆಶ್ರಯ ಸಿಕ್ಕದೆ ಶ್ರೀಕೃಷ್ಣಭೂಪಾಲನನ್ನಾಶ್ರಯಮಾಡಿರುವನೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ |
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ||

ಎಂಬ ಶ್ರೀಕೃಷ್ಣನುಕ್ತಿಯಂತೆ ಧರ್ಮಸಂಸ್ಥಾಪನೆಗಾಗಿ ಯದುಕುಲಾಬ್ಧಿಯಲ್ಲಿ ಸಂಜನಿಸಿದ ಅಪರ ಕೃಷ್ಣನಂತೆ ಪರಿಶೋಭಿಸುತ್ತಿರುವ ಶ್ರೀಕೃಷ್ಣಭೂಪಾಲರು ಗ್ಲಾನಿಹೊಂದಿರುವ ಧರ್ಮವೆಂಬ ಮಹಾಪುರುಷನಿಗೆ ಸಂಪೂರ್ಣ ಕರಾವಲಂಬನವನಿತ್ತು ಗೌರವಿಸುತ್ತಿರುವುದರಿಂದ ಭಾರತಧರ್ಮವು ಇನ್ನೂ ಉಜ್ಜೀವಿತವಾಗಿದೆ. ಹಾಗೆ ನಮ್ಮ ಮಹಾರಾಜರವರೂ ಈ ಧರ್ಮಕ್ಕಾಶ್ರಯಕೊಡದಿದ್ದಲ್ಲಿ "ನಾಮಾಪಿ ನಶ್ರೂಯತೇ" ಎಂಬಂತೆ ಧರ್ಮವು ನಿರ್ನಾಮವಾಗಿ ಹೋಗುತ್ತಿದ್ದಿತು. ಅಲ್ಲದೆ ಧರ್ಮವೃಕ್ಷದ ಛಾಯೆಯಲ್ಲಿ ವಾಸಮಾಡಿದ ಗುರುಜನಗಳೂ, ವೈದಿಕರೂ, ಪಂಡಿತೋತ್ತಮರೂ, ಸಾಧುಸತ್ಪುರುಷರೂ ಅಧರ್ಮದ ಬಿಸಿಲಿನ ತಾಪದಿಂದ ಬಳಲಿ ಬೆಂಡಾಗುತ್ತಿದ್ದರು.

ಇಂಥ ಧರ್ಮಾವತಾರಿಗಳಾದ ಶ್ರೀಕೃಷ್ಣಭೂಪೋತ್ತಮರು ಲೌಕಿಕಧರ್ಮಗಳನ್ನೂ, ವೈದಿಕಧರ್ಮಗಳನ್ನೂ ಸದಾ ಅಭಿವೃದ್ಧಿಗೊಳಿಸುತ್ತಿರುವರು. ಇವೆರಡು ಧರ್ಮಗಳೂ ನಮ್ಮ ಪ್ರಭುಗಳವರಿಗೆ ಎರಡು ನೇತ್ರಗಳಂತೆ ಪರಿಶೋಭಿಸುತ್ತಿರುವವು. ಅನೇಕ ರಾಜರು ಲೌಕಿಕಧರ್ಮದೃಷ್ಟಿಯನ್ನು ತೆರೆದು ವೈದಿಕಧರ್ಮದೃಷ್ಟಿಯನ್ನು ಮುಚ್ಚಿಕೊಂಡಿರುವುದರಿಂದ ವಿಷಮದೃಷ್ಟಿಯುಳ್ಳವರಾಗಿದ್ದಾರೆ. ನಮ್ಮ ಪ್ರಭುಗಳು ಮಾತ್ರ ಎರಡು ದೃಷ್ಟಿಗಳನ್ನೂ ಸಮವಾಗಿ ತೆರೆದಿರುವುದರಿಂದ ಸಮದೃಷ್ಟಿಯುಳ್ಳವರಾಗಿರುತ್ತಾರೆ. ಇಂಥ ಸಾಕ್ಷಾದ್ಧರ್ಮಮೂರ್ತಿಗಳ ಜನ್ಮದಿನೋತ್ಸವವನ್ನು ಪ್ರತಿಯೊಬ್ಬ ಸನಾತನ ಧರ್ಮಿಯೂ ಗುರುಗಳ ಜಯಂತಿಯನ್ನು ಮಾಡುವಂತೆ ಮಾಡುವುದು ನ್ಯಾಯವೂ, ಧರ್ಮವೂ ಆಗಿದೆ. ನಮ್ಮನ್ನಾಳುವ ಮಹಾಪ್ರಭುಗಳಿಗೆ ಈಶ್ವರಾನುಗ್ರಹದಿಂದ ಇಂದಿಗೆ ೪೯ ವರ್ಷಗಳು ತುಂಬಿ ೫೦ ನೆಯ ವರ್ಷವು ಪದಾರ್ಪಣಮಾಡಿತು. ಆ ದಯಾಘನನಾದ ಪರಶಿವಮೂರ್ತಿಯು ಧರ್ಮಾವತಾರಿಗಳಾದ ನಮ್ಮ ಮಹಾಪ್ರಭುಗಳಿಗೆ ಅನಂತ ಸಂವತ್ಸರಗಳವರೆಗೂ ದೀರ್ಘಾಯುರ್ಭಾಗ್ಯವನ್ನು ಕರುಣಿಸಿ ಇಂಥ ಅನಂತ ವರ್ಧಂತ್ಯುತ್ಸವಗಳು ನಡೆಯುವಂತೆ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಮೈಸೂರು ಸರಕಾರದವರು 1932-33 ನೇ ವರ್ಷದಲ್ಲಿ ಗ್ರಾಮಾಂತರಗಳಲ್ಲಿ ಕುಡಿಯುವ ನೀರನ್ನು ಒದಗಿಸುವದಕ್ಕಾಗಿ ಬಾವಿಗಳನ್ನು ತೋಡಿಸಲು 50,000 ರೂಪಾಯಿಗಳನ್ನು ತೆಗೆದಿಟ್ಟು ಅದನ್ನು ಈ ಕೆಳಗೆ ವಿವರಿಸಿರುವಂತೆ ವಿನಿಯೋಗಿಸಬೇಕೆಂದು ಅಪ್ಪಣೆಮಾಡಿರುತ್ತಾರೆ. ಬೆಂಗಳೂರು ಡಿ|| 4,000 ರೂ. ಕೋಲಾರ ಡಿ|| 8,000 ರೂ. ತುಮಕೂರು 4,000 ರೂ. ಮೈಸೂರು 6,000ರೂ. ಹಾಸನ 4,000ರೂ. ಶಿವಮೊಗ್ಗ 6,000 ರೂ. ಕಡೂರು 5,000, ರೂ. ಚಿತ್ರದುರ್ಗ 7,800 ರೂ. ಮತ್ತು ಹಾಸನ ಡಿ|| ಬೋರ್ಡ್, 5,200 ರೂ. ಈ ಹಣವನ್ನು ಉಪಯೋಗಿಸುವ ಅಧಿಕಾರವು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರಿಗೆ ವಹಿಸಲ್ಪಟ್ಟಿರುತ್ತದೆ.

ವರ್ತಮಾನಸಂಗ್ರಹ

ಬರ್ಮಾ ಎಣ್ಣೆ ಕಂಪೆನಿಯವರು ಈ ಸಾರೆ ತಮ್ಮ ರುದಾರರಿಗೆ ಶೇಕಡಾ 20 ರಂತೆ ನಫೆಯನ್ನು ಹಂಚಿ ತ್ತಾರೆ.

ಅಮೇರಿಕೆಯ 'ಹಾಲಿವುಡ್' ನಲ್ಲಿರುವ ಸಿನಿಮಾ ಡಿಯೋಗಳಲ್ಲಿ ಫಿಲಂಗಳನ್ನು ತೊಳೆದು ಮಿಕ್ಕುಳಿದ ನಲ್ಲಿ ಪ್ರತಿವರ್ಷವೂ 1,50,000 ರೂಪಾಯಿಗಳ ಯು ದೊರೆಯುವದಂತೆ!

ಇಂಗ್ಲೆಂಡಿನಲ್ಲಿ ವಿಮಾನಗಳನ್ನು ತಯಾರಿಸುವ ಒಂ ನೊಂದು ಕಂಪೆನಿಯವರು ಗಂಟೆಗೆ ಸುಮಾರು 300 ಲುಗಳ ವೇಗದಲ್ಲಿ ಹೋಗುವ ಹೊಸ ವಿಮಾನ ಂತ್ರವೊಂದನ್ನು ತಯಾರಿಸಿರುವರು.

ಬ್ರೆಜಿಲ್‌ದೇಶದ 'ರೀಜನರೇಷನ್‌ಪಾರ್ಟಿ' ಎಂಬ ಘದವರು ಸ್ತ್ರೀಪುರುಷರೆಲ್ಲರೂ 30 ವರ್ಷದೊಳಗಿ ಮದುವೆಮಾಡಿಕೊಳ್ಳಲೇಬೇಕೆಂದು ಒಂದು ಕಾ ನನ್ನು ಜಾರಿಗೆ ತರಲು ಸರ್ಕಾರವನ್ನು ಒತ್ತಾಯ ಸುತ್ತಿರುವರು.

ಈ ಸಾರೆ ಚಕ್ರವರ್ತಿಯವರ ವರ್ಧಂತಿಮಹೋತ್ಸ ವ ಸಮಯದಲ್ಲಿ ರಾಜಮಂತ್ರಪ್ರವೀಣ ಮಿ|| ಕೆ. ರ್ಥರವರಿಗೆ ರಾವ್‌ಬಹದ್ದೂರ್ ಎಂಬ ಬಿರುದೂ, ಳ್ಳೇಗಾಲದ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ ದ ಶ್ರೀ|| ಜಿ. ಪಿ. ಮಲ್ಲಪ್ಪನವರಿಗೆ ರಾವ್‌ಸಾಹೇಬ್ ಬ ಬಿರುದೂ ಕೊಡಲ್ಪಟ್ಟಿರುವುದೆಂದು ತಿಳುಹಿಸಲು ತೋಷಿಸುತ್ತೇವೆ.

ಲೆನಿನ್‌ಗ್ರಾಡ್‌ನಗರದ ಎಲೆಕ್ಟ್ರೋ-ಟೆಕ್ನಿಕಲ್ ಇನ್ ಟ್ಯೂಟಿನ ಒಬ್ಬ ವಿದ್ಯಾರ್ಥಿಯು ನಮ್ಮ ಹೃದಯ ೀಶದ ಚಲನೆಗಳನ್ನು ವೈರ್‌ಲೆಸ್ ಮೂಲಕ ದೂರ ಶಗಳಿಗೆ ಕಳುಹಿಸಬಹುದಾದಂಥ ನೂತನ ಯಂತ್ರ ೊಂದನ್ನೂ, ಹಾಗೂ ಪ್ರಿಂಟಾದ ಅಥವಾ ಕೈಲಿಬರೆದ ಯಗಳನ್ನು ಮನುಷ್ಯರಂತೆ ಓದಬಲ್ಲ ಯಂತ್ರವೊಂ ನ್ನೂ ತಯಾರಿಸಿರುವನಂತೆ!

ಢಕ್ಕಾನಗರದಲ್ಲಿರುವ ಒಂದಾನೊಂದು ಶಿವದೇವಾ ದ ಮಹಾಂತರಾದ ಸ್ವಜಾನಂದರೆಂಬವರು ವಿವಾಹಿತ ಸ್ತ್ರೀಯೊಡನೆ ದೇವಾಲಯದಲ್ಲಿ ಮಸಂಗಮಾಡಿದರೆಂಬ ಕಾರಣದಮೇಲೆ ವಿಚಾರ ೊಳಗಾಗಿರುತ್ತಾರೆ. ಸ್ತ್ರೀಯು ಒಬ್ಬ ಜಮೀನ್ ರದ ದ್ವಿತೀಯಪತ್ನಿಯಾಗಿದ್ದು ಗಂಡನನ್ನು ಬಿಟ್ಟು ವಾಸವಾಗಿದ್ದಳು. ಇವಳಿಗೆ ಗಂಡನಿಂದ ದೊರೆಯುತ್ತಿದ್ದ ಮಾಸಾಶನವು ಈ ಗಲಭೆಯಾದನಂತರ ನಿಲ್ಲಿಸಲ್ಪಟ್ಟಿರುವದು.

ನ್‌ಮಾರ್ಕ್‌ದೇಶದ ಒಬ್ಬಾನೊಬ್ಬ ಪ್ರಸಿದ್ಧ ಶಾ ನು 'ಫೊಲಿಫೋಟೋ' ಎಂಬ ಹೊಸತರಹದಿಂದ ಟೋ ತೆಗೆಯುವ ಕ್ಯಾಮರಾವೊಂದನ್ನು ತಯಾರಿಸಿ ನನು. ಇದರ ಸಹಾಯದಿಂದ 35 ಸೆಕೆಂಡುಗಳಲ್ಲಿ ಫೋಟೋಗಳನ್ನು ತೆಗೆಯಬಹುದಂತೆ! ಈ ಕ್ಯಾಮ ಲ್ಲಿ ಫೋಟೋ ತೆಗೆಯಿಸಿಕೊಳ್ಳುವವರು ಗಂಭೀರ ಕುಳಿತಿರಬೇಕೆಂಬ ನಿರ್ಬಂಧವಿಲ್ಲ. ಕೈಕಾಲುಗ ಬೇಕಾದ ಹಾಗೆ ಅಳ್ಳಾಡಿಸುತ್ತಿದ್ದರೂ ಟೋ ಚೆನ್ನಾಗಿ ಬರುವದಂತೆ!

ದಕ್ಷಿಣ ಆಫ್ರಿಕೆಯಲ್ಲಿ ಇಬ್ಬರು ನಿಗ್ರೋ ಕೈದಿ ಕಾರಾಗೃಹದಲ್ಲಿ ಶಿಕ್ಷೆಯನ್ನನುಭವಿಸುತ್ತಿರುವಾಗ ು ಮತ್ತು ಅರ್ಧ ಪೌಂಡುಗಳ ಕೃತಕನೋಟುಗ ತಯಾರು ಮಾಡಿ ಶಿಕ್ಷೆಯ ಅವಧಿಯನ್ನು ಪೂ ಜೈಲಿನಿಂದ ಬಿಡುಗಡೆ ಹೊಂದಿದ ಅಪರಾಧಿಗಳಿಗೆ ುತ್ತಿದ್ದರಂತೆ! ಅಧಿಕಾರಿಗಳು ಇದಕ್ಕಾಗಿ ಆ ಗ್ರೋ ಕೈದಿಗಳಿಗೆ 5 ವರ್ಷಗಳ ಕಠಿಣ ಸಜೆಯನ್ನು ರುತ್ತಾರೆ. ಆದರೆ ಆ ನೀಗ್ರೋ ಕೈದಿಗಳು ಜೈಲಿ ನೋಟುಗಳನ್ನು ತಯಾರು ಮಾಡುವದಕ್ಕೆ ಸಲಕ ಗಳನ್ನು ಹೇಗೆ ಒದಗಿಸಿಕೊಂಡರೆಂಬುದೇ ಯಾರಿ ತಿಳಿಯದಾಗಿದೆ.

ಫ್ರಾನ್ಸ್ ದೇಶದ ಮಿಲಿಟರಿ ಅಧಿಕಾರಿಗಳು ಶತ್ರು ದ ವಿಮಾನಗಳು ತಮ್ಮ ದೇಶದಮೇಲೆ ದಾಳಿಯಿಡ ಮಾಡಲು ಆಕಾಶದಲ್ಲಿ ಸುಮಾರು 1300 ಅಡಿಗಳ ಎತ್ತರದಿಂದ ತಂತಿಬಲೆಗಳನ್ನು ತೂಗುಹಾಕಬೇಕೆಂದು ಟೌಲ್ನ್ ಎಂಬ ಪ್ರದೇಶದಲ್ಲಿ ಪರೀಕ್ಷೆಗಳನ್ನು ನಡೆಯಿಸುತ್ತಿರುವರು. ಈ ಬಲೆಗಳು ಸರ್ವದಾ ಆಕಾಶದಲ್ಲಿ ತೇಲಾಡುತ್ತಿರುವ 2 ಬೆಲೂನ್‌ಗಳಿಗೆ ಕಟ್ಟಲ್ಪಡುವವಲ್ಲದೆ ಸಾಮಾನ್ಯವಾಗಿ ಕಣ್ಣಿಗೆ ಕಾಣಿಸದಂತೆ ಮಾಡಲ್ಪಡುವವಂತೆ! ಶತ್ರುವಿಮಾನಗಳು ಈ ತಂತಿಗೆ ಬಡಿದ ಕೂಡಲೇ ವಿಮಾನಗಳು ಮುರಿದು ಕೆಳಕ್ಕೆ ಬೀಳುವವಂತೆ!

ಪಿಟ್ಸ್‌ಬರ್ಗ್‌ನಗರದಲ್ಲಿ ಒಬ್ಬಮನುಷ್ಯನು 'ಓಹಿಯೋ' ನದಿಯ ಸೇತುವೆಯ ಮೇಲಿನಿಂದ ನದಿಗೆ ಧುಮುಕಿದನು. ಇದನ್ನು ದೂರದಿಂದಲೇ ಕಂಡ ಒಬ್ಬ ಪೋಲೀಸಿನವನು ಓಡಿಹೋಗಿ ನೋಡುವಲ್ಲಿ ನದಿಗೆ ಬಿದ್ದ ಮನುಷ್ಯನು ಸರಸರನೆ ದಡಕ್ಕೆ ಈಜಿಕೊಂಡು ಬರುತ್ತಿದ್ದನು. ಸ್ವಲ್ಪ ಹೊತ್ತಾದನಂತರ ಪೋಲೀಸಿನವನು ಅವನನ್ನು ಹಿಡಿದು ಪ್ರಶ್ನೆಮಾಡಿದಾಗ ಆ ಮನುಷ್ಯನು ಆತ್ಮಹತ್ಯಮಾಡಿಕೊಳ್ಳಬೇಕೆಂದು ನದಿಗೆ ಧುಮುಕಿದೆನೆಂದೂ, ಆದರೆ ಅಷ್ಟರಲ್ಲಿಯೇ ತಾನು 5 ವರ್ಷಗಳ ಹಿಂದೆ ಬ್ಯಾಂಕಿನಲ್ಲಿ 15 ಪೌಂಡುಗಳನ್ನಿಟ್ಟುದು ಜ್ಞಾಪಕಕ್ಕೆ ಬಂದದ್ದರಿಂದ ದಡಕ್ಕೆ ಈಜಿ ಬಂದೆನೆಂದೂ ಹೇಳಿದನಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ನೀರು ಎತ್ತುವ ಚಕ್ರವು 'ಮ್ಯಾನ್' ದ್ವೀಪದಲ್ಲಿರುವ ಲ್ಯಾಕ್ಸಿ ಎಂಬ ಗ್ರಾಮಕ್ಕೆ ಅರ್ಧಮೈಲು ದೂರದಲ್ಲಿರುವದು. 1854 ನೇ ಇಸವಿಯಲ್ಲಿ ಸದರಿ ಗ್ರಾಮದ ಜಾರ್ಜ್ ಕ್ಯಾಸ್‌ಮೆಂಟ್ ಎಂಬಾತನು ಸೀಸದ ಗಣಿಗಳಿಂದ ನೀರನ್ನು ಎತ್ತುವದಕ್ಕಾಗಿ ಈ ಅದ್ಭುತವಾದ ಯಂತ್ರವನ್ನು ನಿರ್ಮಿಸಿದನಂತೆ! ಈ ಚಕ್ರವು 227 ಅಡಿಗಳ ಸುತ್ತಳತೆಯುಳ್ಳದ್ದಾಗಿಯೂ, ಒಂದು ಕಡೆಯಿಂದ ಮತ್ತೊಂದು ಕಡೆಗೆ 72½ ಅಡಿಗಳ ಉದ್ದವುಳ್ಳದ್ದಾಗಿಯೂ, 6 ಅಡಿ ಅಗಲವುಳ್ಳದ್ದಾಗಿಯೂ ಇದ್ದು, ಇದು 1200 ಅಡಿಗಳ ಆಳದಿಂದ ನಿಮಿಷವೊಂದಕ್ಕೆ 250 ಗ್ಯಾಲನ್‌ಗಳ ನೀರನ್ನು ಮೇಲಕ್ಕೆ ಎತ್ತುವದಂತೆ! ಹಾಗೂ ಈ ಯಂತ್ರದ ಕಂಭದ ಸುತ್ತಲೂ ಹಾಕಿರುವ ಏಣಿಯಲ್ಲಿ 95 ಮೆಟ್ಟಲುಗಳಿರುವವಂತೆ!

ಬ್ಯೂಡಾಪೆಸ್ಟ್ ನಗರದ ಆಂಡ್ರೂ ಕೊವಾಟ್ಸೋ ಎಂಬ ತರುಣನು ಧನಾಢ್ಯಳೂ, ಸುಂದರಳೂ ಆದ ಒಬ್ಬ ಯುವತಿಯನ್ನು ಮದುವೆಯಾಗಬೇಕೆಂದು ಪ್ರಯತ್ನಿಸಿದನು. ಆ ತರುಣಿಯು ಇವನನ್ನು ಮದುವೆಯಾಗಲು ಇಷ್ಟವಿಲ್ಲದೆ ನಿರಾಕರಿಸಲು ಅವಳನ್ನು ಕೊಲ್ಲಬೇಕೆಂದು ಗುಂಡು ಹಾರಿಸಿದನು. ಇದರಿಂದ ಅವನಿಗೆ 3 ವರ್ಷಗಳ ಕಾರಾಗೃಹವಾಸವು ಪ್ರಾಪ್ತವಾಯಿತು. ಕಾರಾಗೃಹದಿಂದ ಬಿಡುಗಡೆ ಹೊಂದಿದನಂತರ ಪುನಃ ಅವಳನ್ನು ಹುಡುಕಿಕೊಂಡು ಹೊರಟನು. ಅವಳು ಮತ್ತೊಬ್ಬನನ್ನು ಮದುವೆಯಾಗಿದ್ದಳು. ಆಗ ಅವಳು ವಾಸವಾಗಿದ್ದ ಮನೆಗೆ ಬೆಂಕಿಹಚ್ಚಿ ಪುನಃ 2 ವರ್ಷಗಳ ಕಠಿಣ ಸಜೆಗೆ ಗುರಿಯಾದನು. ಬಿಡುಗಡೆಯಾದನಂತರ ಪುನಃ ಹುಡುಕಿಕೊಂಡು ಹೋಗಿ ನೋಡಿದಾಗ ಅವಳು ವಿಧವೆಯಾಗಿದ್ದಳು. ಆಗ ಪುನಃ ಅವಳೊಡನೆ ಸ್ನೇಹ ಬೆಳಸಿ ಮದುವೆಯಾದನಂತೆ!

ಆಫ್ರಿಕಾದೇಶದ ಕಾಡುಗಳಲ್ಲಿ ಒಬ್ಬ ಬೇಟೆಗಾರನು ಒಂದು ಕುಂಟುತ್ತಾ ಇದ್ದ ಆನೆಯನ್ನು ಕಂಡು ಅದನ್ನೇ ಹಿಂಬಾಲಿಸಿಕೊಂಡು ಹೋದನು. ಆನೆಯು ಸ್ವಲ್ಪ ದೂರ ನಡೆದು ಮುಂದಕ್ಕೆ ಹೆಜ್ಜೆಯನ್ನು ಇಡಲಾರದೆ ನೆಲದ ಮೇಲೆ ಬಿದ್ದುಬಿಟ್ಟಿತು. ಬೇಟೆಗಾರನು ಸಮೀಪಕ್ಕೆ ಹೋಗಿ ನೋಡಿ ಆನೆಯ ಕಾಲಿನಲ್ಲಿದ್ದ ಒಂದು ದೊಡ್ಡ ಮುಳ್ಳನ್ನು ಕಿತ್ತು ಬಂದನು. ಕೆಲವು ಕಾಲ ಕಳೆದ ನಂತರ ಬೇಟೆಗಾರನು ಒಂದುದಿನ ಯಾವುದೋ ಒಂದು ಸರ್ಕಸ್ಸಿಗೆ ಹೋಗಿ ಕಡೆಯ ತರಗತಿಯಲ್ಲಿ ಕುಳಿತಿದ್ದನು. ಇವನಿಂದ ಮುಳ್ಳು ತೆಗೆಯಿಸಿಕೊಂಡಿದ್ದ ಆನೆಯೂ ಆ ಸರ್ಕಸ್ಸಿನಲ್ಲಿಯೇ ಇದ್ದಿತು. ಅದು ಇವನಿಂದ ಹೊಂದಿದ ಉಪಕಾರವನ್ನು ಮರೆಯದೆ ಇವನನ್ನು ಕಂಡಕೂಡಲೇ ಸಮೀಪಕ್ಕೆ ಬಂದು ಅವನನ್ನು ಸೊಂಡಿಲಿನಿಂದ ಎತ್ತಿ ಉಚ್ಚ ತರಗತಿಯಲ್ಲಿ ಕುಳ್ಳರಿಸಿತಂತೆ!

ಸಿಂಧ್‌ಪ್ರಾಂತಕ್ಕೆ ಸೇರಿದ ಸುಕ್ಕೂರು ಎಂಬಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಲಾಯಡ್ ಬ್ಯಾರೇಜ್ ಎಂಬುದೇ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ಅಣೆಕಟ್ಟಾಗಿರುವದು. ಸದ್ಯಃ ಇದರ ನೀರಿನಿಂದ 60,00,000 ಎಕರೆಗಳ ಜಮೀನು ಸಾಗುವಳಿಯಾಗುತ್ತಿರುವದು. ಈ ಕಟ್ಟೆಗೆ 66 ದ್ವಾರಗಳಿರುವುವು. ಪ್ರತಿಯೊಂದು ದ್ವಾರವೂ 60 ಅಡಿಗಳ ಅಗಲವಾಗಿದ್ದು, ಪ್ರತಿಯೊಂದು ದ್ವಾರಕ್ಕೂ ಅದ್ಭುತ ಆಕಾರದ ಒಂದೊಂದು ಬಾಗಿಲಿರುವದು. ಇದರಿಂದ 7 ಕಾಲುವೆಗಳು ಹೊರಟಿರುವುವು. ಅದರಲ್ಲಿ ಎಲ್ಲಕ್ಕಿಂತಲೂ ದೊಡ್ಡದಾದ ರೊಹುರಿ ಕಾಲುವೆಯು 200 ಮೈಲುಗಳ ಉದ್ದವಾಗಿದ್ದು, ಇದಕ್ಕೆ 2300 ಮೈಲುಗಳ ಉದ್ದವುಳ್ಳ ಶಾಖಾ ಕಾಲುವೆಗಳಿರುವುವು. ಈ ಅಣೆಕಟ್ಟೆಯಿಂದ ಸಾಗುವಳಿಯಾಗುವ ಭೂಮಿಯಲ್ಲಿ ಪ್ರತಿವರ್ಷವೂ 20,000,00 ಟನ್ ಧಾನ್ಯ ಮತ್ತು ಹತ್ತಿಯು ಬೆಳೆಯುವದು. ಈ ಅಣೆಕಟ್ಟು ಮತ್ತು ಕಾಲುವೆಗಳಿಗಾಗಿ ಒಟ್ಟು 18,00,00,000 ರೂಪಾಯಿಗಳು ಖರ್ಚಾಗಿರುವವಂತೆ!

ಬಂಗಾಳಕ್ಕೆ ಸೇರಿದ ಬಹೆರಾ ಎಂಬ ಊರಿನಲ್ಲಿ ಒಬ್ಬ ಮುನಿಸಿಪಲ್ ವ್ಯಾಕ್ಸಿನೇಟರು (ದೇವಿಹಾಕತಕ್ಕವರು) ಕೆಲವು ದಿವಸಗಳು ಪರಸ್ಥಳಕ್ಕೆ ಹೋಗಿದ್ದು ಊರಿಗೆ ಹಿಂತಿರುಗಿ ಬಂದನಂತರ ತನ್ನ ಪತ್ನಿಯ ನಡವಳಿಕೆಯ ವಿಷಯದಲ್ಲಿ ಕೆಲವು ದೂರುಗಳನ್ನು ಕೇಳಿದನು. ಆದರೂ ಆತನು ಅದನ್ನು ನಂಬದೆ ಸುಮ್ಮನಿದ್ದನು. ಒಂದು ದಿನ ರಾತ್ರಿ ಅವನು ಕಣ್ಣುಮುಚ್ಚಿಕೊಂಡು ಮಲಗಿದ್ದಾಗ ಅವನ ಪತ್ನಿಯು ಗಂಡನು ನಿದ್ರಿಸುತ್ತಿರುವನೆಂದು ಭಾವಿಸಿ, ಎದ್ದು ಹೊರಕ್ಕೆ ಹೊರಟಳು. ಗಂಡನು ಪತ್ನಿಯ ಹಿಂದೆಯೇ ಹೋಗಿ ನೋಡಲು ಅವಳು ಒಂದು ಮಾವಿನ ತೋಪಿಗೆ ಹೋಗಿ ಅಲ್ಲಿ ಇಬ್ಬರು ಪುರುಷರೊಡನೆ ವಿಹರಿಸುತ್ತಿರುವುದನ್ನು ನೋಡಿ ಮಾತನಾಡದೆ ಹಿಂತಿರುಗಿ ಬಂದುಬಿಟ್ಟನು. ಮರುದಿನದ ಬೆಳಗ್ಗೆ ಆತನು ತನ್ನ ಪತ್ನಿಗೆ ಅಡಿಗೆಮಾಡಕೂಡದೆಂದೂ ಮಾಡಿದರೆ ಊಟಮಾಡುವದಿಲ್ಲವೆಂದೂ ಹೇಳಿದನು. ಇದಕ್ಕೆ ಅವಳು ಜರಿದು ಉತ್ತರಕೊಡಲು ಗಂಡನು ಕೋಪದಿಂದ ಕೈಗೆ ಸಿಕ್ಕಿದ ಒಂದು ಕಬ್ಬಿಣದ ತುಂಡನ್ನು ಅವಳ ತಲೆಯ ಮೇಲೆ ಎಸೆದನು. ಅದರಿಂದ ಅವಳ ತಲೆಯು ಒಡೆದು ಕೂಡಲೇ ಮೃತಪಟ್ಟಳು. ಅಷ್ಟರಲ್ಲಿ ಅವನ ಇಬ್ಬರು ನಾದಿನಿಯರೂ ಹಾಗೂ ಮತ್ತೊಬ್ಬ ಬನಿಯಾನ ಪತ್ನಿಯೂ ಅಲ್ಲಿಗೆ ಓಡಿಬಂದು ಅವನನ್ನು ಬಯ್ಯಲು ಅವನು ಕೋಪದಿಂದ ಆ ಮೂವರನ್ನೂ ಹೊಡೆದು ಕೊಂದು ಅನಂತರ ತಾನಾಗಿಯೇ ಪೋಲೀಸರ ವಶವಾದನು. ಪೋಲೀಸರು ತನಿಖೆಮಾಡುತ್ತಿರುವರು!

ನಾಗಪುರದ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ದಾದ ಮತ್ತು ಲಾಹು ಎಂಬ ಇಬ್ಬರು ಸ್ನೇಹಿತರು ಒಂದುದಿನ ಒಟ್ಟಿಗೆ ಕೂಡಿ ಮತ್ತೊಂದು ಹಳ್ಳಿಗೆ ಊಟಕ್ಕೆ ಹೋಗಿದ್ದು ದಾದಾ ಒಬ್ಬನೇ ಹಿಂತಿರುಗಿ ಬಂದನು. ಲಾಹುವು ಎಷ್ಟು ಹೊತ್ತಾದರೂ ಹಿಂತಿರುಗಿ ಬಾರದಿರಲು ಅವನ ಮನೆಯವರು ಗಾಬರಿಯಿಂದ ಪೋಲೀಸರಿಗೆ ವರ್ತಮಾನಕೊಟ್ಟರು. ಕೂಡಲೇ ಪೋಲೀಸರು ದಾದಾನನ್ನು ದಸ್ತಗಿರಿಮಾಡಿ, ಲಾಹುವನ್ನು ಕೊಂದನೆಂಬ ಅಪವಾದನೆಯನ್ನು ಹೊರಿಸಿ ವಿಚಾರಣೆಗೆ ಗುರಿಪಡಿಸಿದರು. ಕೆಲವು ದಿವಸಗಳನಂತರ ಗೊಂಡಿಯಾ ಎಂಬ ಊರಿನಲ್ಲಿ ಕೋರ್ಟಿನಲ್ಲಿ ದಾದಾನ ವಿಚಾರಣೆಯು ನಡೆಯುತ್ತಿರಲು ಖೂನಿಮಾಡಲ್ಪಟ್ಟಿರುವನೆಂದು ಭಾವಿಸಲ್ಪಟ್ಟಿದ್ದ ಲಾಹುವು ನೆಟ್ಟಗೆ ಕೋರ್ಟಿಗೆ ಬಂದು ಮ್ಯಾಜಿಸ್ಟ್ರೇಟರ ಮುಂದೆ ತಾನೇ ಲಾಹುವೆಂದೂ, ಸುಳ್ಳು ಅಪವಾದನೆಯ ಮೇಲೆ ವಿಚಾರಣೆಗೆ ಗುರಿಯಾಗಿರುವ ತನ್ನ ಸ್ನೇಹಿತನನ್ನು ಬಿಡುಗಡೆಮಾಡಬೇಕೆಂದೂ ಹೇಳಿದನು. ಮ್ಯಾಜಿಸ್ಟ್ರೇಟರು ಅವನ ಮಾತನ್ನು ನಂಬದೆ ಅವನ ಮನೆಯವರನ್ನು ಕರೆಯಿಸಿ ವಿಚಾರಿಸಲು ಆ ಮನುಷ್ಯನು ನಿಜವಾಗಿಯೂ ಲಾಹುವೆಂದು ವ್ಯಕ್ತವಾಯಿತು. ಅನಂತರ ಪೋಲೀಸರು ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಂಡರು. ವಿಚಾರಿಸುವಲ್ಲಿ, ಊಟಕ್ಕೆ ಹೋದ ದಿವಸ ಲಾಹುವು ಮಧ್ಯಮಾರ್ಗದಲ್ಲಿ ಬೇರೆ ಜರೂರಾಗಿ ಒದಗಿದ ಕಾರ್ಯಾರ್ಥವಾಗಿ ತನ್ನ ಸ್ನೇಹಿತನಿಗೂ ಹೇಳದೆ ಅಕೋಲಾ ಡಿಸ್ಟ್ರಿಕ್ಟಿಗೆ ಹೊರಟುಹೋದನೆಂದೂ, ಅಲ್ಲಿ ಯಾರಿಂದಲೋ ತನ್ನ ಸ್ನೇಹಿತನಿಗೆ ಒದಗಿರುವ ವಿಪತ್ತನ್ನು ತಿಳಿದು ಕೂಡಲೇ ಹಿಂತಿರುಗಿ ಬಂದನೆಂದೂ ತಿಳಿಯಬಂದಿತು.

ಇಲಿಗಳ ಹಾವಳಿ.

(ಎಚ್. ಜಿ. ರೋಸನಾ ಎಂಬುವರಿಂದ.)

ಮನುಷ್ಯನು ವಾಸಿಸುವೆಡೆಗಳಲ್ಲೆಲ್ಲಾ ಇಲಿಗಳೂ ಇವೆ. ಅವೂ ಮನುಷ್ಯರಂತೆ ಎಲ್ಲಾ ವಾಯುಗುಣಗಳಿಗೂ, ಹೊಂದಿಕೊಳ್ಳಬಲ್ಲುವು. ಇಲಿಗಳಂತೆ ಸರ್ವಸಾಧಾರಣವಾಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹರಡಿರುವ ಮತ್ತು ಜನರಿಗೆ ಕೆಡಕುಮಾಡುವ ಪ್ರಾಣಿಗಳೇ ಅಪೂರ್ವ.

ಕೆಲವು ಇಲಿಗಳು ಅತಿಶೀತಲವಾದ ಪ್ರದೇಶಗಳಲ್ಲಿಯೇ ಹುಟ್ಟಿ ಬೆಳೆಯುತ್ತವೆ, ಕೆಲವು ಅತ್ಯುಷ್ಣಪ್ರದೇಶಗಳಲ್ಲಿ ವಾಸಿಸುತ್ತವೆ.

ಇಲಿಗಳಿಂದ ಮನುಷ್ಯರಿಗೆ ಹಿಂಸೆಯು ಹೆಚ್ಚು. ಆರೋಗ್ಯಕ್ಕೂ ಅವು ಹಾನಿಕರಗಳು. ಮನುಷ್ಯನಿಗೆ ಬರಬಹುದಾದ ಹಲವು ವ್ಯಾಧಿಗಳು ಅವುಗಳಿಗೆ ತಗಲುವದರಿಂದ, ಮರಣಾಂತವಾದ ಅಪಾಯಕ್ಕೂ ಕಾರಣಗಳು. ಪ್ಲೇಗ್‌ರೋಗದ ಸೋಂಕು ಮುಖ್ಯವಾಗಿ ಇಲಿಗಳಿಂದ ಹರಡುವುದು. ಅವುಗಳ ಸಂಚಾರಶಕ್ತಿಯೋ ಅತ್ಯದ್ಭುತವಾದುದು. ಅವು ಎಲ್ಲಾ ಪದಾರ್ಥಗಳಿಗೂ ಬಾಯಿ ಹಾಕುವದರಿಂದಲೇ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಪ್ಲೇಗನ್ನು ಹರಡಿರುವವು. ಅನೇಕ ಸಾಂಕ್ರಾಮಿಕ ರೋಗಗಳು ಒಬ್ಬ ಮನುಷ್ಯನೊಡನೆ ಮತ್ತೊಬ್ಬನಿಗೆ ಆಗುವ ಸಂಪರ್ಕಗಳಿಂದ ಹರಡುವವು. ಆದರೆ ಇಲಿಗಳ ಪ್ರಾಬಲ್ಯವಿಲ್ಲದಿದ್ದರೆ ಪ್ಲೇಗ್ ವ್ಯಾಧಿಯೇ ಬರುವದಿಲ್ಲ.

ಇಲಿಗಳಂತೆಯೇ ಬೇರೆ ಹಲವು ಪ್ರಾಣಿಗಳಿಗೂ ಪ್ಲೇಗು ತಗಲುವ ಸಂಭವವುಂಟಾದುದರಿಂದ, ಅವೂ ಈ ವ್ಯಾಧಿಯನ್ನು ಹರಡಬಹುದು. ಕಾಲಿಫೋರ್ನಿಯಾದಲ್ಲಿ ಈ ರೋಗವು [illegible] ಗಳ ಮೂಲಕ ಹರಡುತ್ತದೆ. ಅಳ್ಳುಗವಾ [illegible] ಸೋಂಕು ಅಲ್ಲಲ್ಲಿ [illegible] ಇದುವರೆಗೂ ಪ್ರಪಂಚದಲ್ಲೆಲ್ಲಾ [illegible] ಶ್ರೀಮಂತ ಪ್ಲೇಗ್‌ರೋಗವು. 1910 ನೆಯ ವರ್ಷದಲ್ಲಿ ಮಂಚೂರಿಯಾದಲ್ಲಿ ತಲೆದೋರಿತು. ಇದಕ್ಕೆ ಟರ್‌ಬಗ್ ಎಂಬ ರೋಮಶಜಾತಿಯ ಜಂತುಗಳು ಕಾರಣವಾಗಿದ್ದುವು. ದಕ್ಷಿಣ ಅಮೇರಿಕಾದಲ್ಲಿರುವ ಒಂದಾನೊಂದು ಗ್ರಾಮದಲ್ಲಿ, ಗಿನಿದ್ವೀಪದ ಸಣ್ಣ ಹಂದಿಗಳು ಈ ಪ್ಲೇಗ್‌ರೋಗವನ್ನು ಹರಡಿದುವು. ರೇವುಗಳಲ್ಲಿ ಇಲಿಗಳಿಂದಲೇ ಪ್ಲೇಗ್‌ರೋಗವು ವಿಶೇಷವಾಗಿ ಹರಡುವದು.

ಸಾಂಕ್ರಾಮಿಕ ರೋಗಗಳಲ್ಲೆಲ್ಲ ಪ್ಲೇಗ್‌ರೋಗವು ಅತ್ಯುಗ್ರವಾದುದು. ಮಧ್ಯಕಾಲದಲ್ಲಿ, ಯೂರೋಪಿನ ಕಾಲುಭಾಗದ ಜನರು ಈ ರೋಗದಿಂದಲೇ ಮರಣವನ್ನು ಹೊಂದಿದರು. ಡಾನಿಯಲ್ ಡೆಫೋ ಎಂಬ ಪ್ರಸಿದ್ಧ ಇಂಗ್ಲೀಷ್ ಕವಿಯು ಬರೆದಿರುವ 'ರಾಬಿನ್‌ಸನ್ - ಕ್ರೂಸೋ' ಎಂಬ ಗ್ರಂಥಕ್ಕಿಂತಲೂ ಆತನು 'ಪ್ಲೇಗ್‌ವರುಷದ ಪತ್ರಿಕೆ' ಎಂದು ಬರೆದಿರುವ ಪುಸ್ತಕಕ್ಕೆ ಪ್ರಾಮುಖ್ಯವು ಹೆಚ್ಚೆಂದು ಹೇಳಬಹುದು. ಪ್ಲೇಗ್‌ರೋಗವು ದಿನೇದಿನೇ ವೃದ್ಧಿಯಾಗುತ್ತಿರುವದಲ್ಲದೆ, ಅದರಿಂದ ಮೊದಲಿಗಿಂತಲೂ ಈಗೀಗ ಮರಣಸಂಖ್ಯೆಯೂ ಹೆಚ್ಚುತ್ತಿದೆ. 1893 ನೆಯ ಇಸವಿಯಿಂದ 1923 ನೆಯ ಇಸವಿಯ ವರೆಗಿನ 30 ವರ್ಷಕಾಲಗಳಲ್ಲಿ, ಪ್ಲೇಗ್‌ರೋಗವೊಂದರಿಂದಲೇ ಇಂಡಿಯಾದೇಶದಲ್ಲಿ ಆದ ಮರಣಸಂಖ್ಯೆಯು 10,784,391 ವರೆಗೆ ಏರಿದೆ.

ಪ್ಲೇಗ್‌ವ್ಯಾಧಿಯಲ್ಲಿ ಎರಡು ವಿಧಗಳುಂಟು, ಒಂದರಲ್ಲಿ ಜ್ವರವು ಬಂದು ಗಡ್ಡೆಗಳಾಗುವವು. ಮತ್ತೊಂದರಲ್ಲಿ ವಿಷಮಜ್ವರವು ಮಾತ್ರ ಕಾಣಿಸಿಕೊಳ್ಳುವದು. ಇಲಿಗಳ ಮೇಲೆ ಮುತ್ತಿಕೊಂಡಿರುವ ಪ್ಲೇಗ್‌ಚಿಗಟಗಳು ಕಚ್ಚುವದರಿಂದ ಮಾತ್ರ ಪ್ಲೇಗ್‌ರೋಗವು ಬರುವದು. ಆದುದರಿಂದ ಇದರ ಪ್ರಚಾರಕ್ಕೆ ಚಿಗಟಗಳೇ ಕಾರಣಗಳು. ಮತ್ತು ಅವು ಇಲಿಗಳಿಂದ ಮನುಷ್ಯರಿಗೆ ವ್ಯಾಪಿಸುವುದೇ ಹೊರತು, ಮನುಷ್ಯರಿಗೆ ತಗಲುವದಿಲ್ಲ. ಇದನ್ನು ಅಂಟುಜಾಡ್ಯವಲ್ಲವೆಂದು ಹೇಳಿದರೂ ಹೇಳಬಹುದು. ಆದರೆ ವಿಷಮ ಶೀತಜ್ವರದ ಪ್ಲೇಗು, ಮೊದಲು ಶ್ವಾಸಕೋಶಗಳ ಕಾರ್ಯವನ್ನು ತಪ್ಪಿಸುವುದು. ಸಾಧಾರಣವಾದ ವಿಷಮಶೀತಜ್ವರದಂತೆ ಇದೂ ಅಂಟುಜಾಡ್ಯವಾದರೂ, ಇಂತಹ ಪ್ಲೇಗ್‌ವ್ಯಾಧಿಯು ಬಹಳ ವಿರಳವಾಗಿ ಕಾಣಿಸುವದು.

ಪ್ಲೇಗ್‌ರೋಗವೊಂದಕ್ಕಲ್ಲದೆ, ಇಲಿಗಳು ಇನ್ನೂ ಅನೇಕ ರೋಗಗಳಿಗೆ ಕಾರಣಗಳು. ಟ್ರಿಚಿನಾ ಎಂಬ ವ್ಯಾಧಿಗೂ, ರೋಗಹಿಡಿದ ಹಂದಿಯ ಮಾಂಸವನ್ನು ತಿನ್ನುವದರಿಂದ ಪ್ರಾಪ್ತವಾಗುವ ಟ್ರಿಚಿನಾಸಿಸ್ ಎಂಬ ವ್ಯಾಧಿಗೂ ಇಲಿಗಳೇ ಕಾರಣಗಳು. ಸಾಂಕ್ರಾಮಿಕವಾದ ಅರಶಿನಕಾಮಾಲೆಗೂ ಇಲಿಗಳು ಕಾರಣಗಳು. ಇದು ಪ್ರಪಂಚದ ಇಲಿಗಳಿಗೆಲ್ಲ ಸಾಮಾನ್ಯ ವ್ಯಾಧಿಯೆನ್ನಬಹುದು. ಒಂದು ಬಗೆಯ ಕ್ರಿಮಿಗಳೇ ಇದಕ್ಕೆ ಕಾರಣವು. ಆ ರೋಗದ ತೀವ್ರತೆಯು ದೇಶಕಾಲಭೇದಗಳನ್ನನುಸರಿಸಿ ಹೆಚ್ಚು ಕಡಿಮೆಯಾಗುವುದು. ಈ ಸೋಂಕು ಜಾತಿಯ ಕಾಮಾಲೆಯು ಯೂರೋಪ್ ಮತ್ತು ಅಮೇರಿಕಾ ಖಂಡಗಳಿಗಿಂತ ಜಪಾನಿನಲ್ಲಿ ಪ್ರಬಲವಾಗಿರುವುದು.

ಕ್ಯಾಂಪುಗಳಲ್ಲಿ ವಾಸಮಾಡುತ್ತ, ಕಂದಕಗಳಲ್ಲಿ ನಿಂತು ಯುದ್ಧಮಾಡುವ ಯುದ್ಧಭಟರಲ್ಲಿ ಈ ವ್ಯಾಧಿಯು ಹರಡುವದು ಹೆಚ್ಚು. ಅಮೇರಿಕದ ದೇಶೀಯಕಲಹದಲ್ಲಿ, ಅವರ ಸೈನಿಕರಪೈಕಿ ಸುಮಾರು 71691 ಮಂದಿ ಇದೇ ವ್ಯಾಧಿಯಿಂದ ಸತ್ತರು. ದಕ್ಷಿಣ ಆಫ್ರಿಕದ ಯುದ್ಧದಲ್ಲಿ ಕೂಡ ಬ್ರಿಟಿಷ್ ಸೈನಿಕರಲ್ಲಿ 5648 ಮಂದಿ ಇದೇ ಕಾಮಾಲೆಯಿಂದ ಸತ್ತರು. ಕಳೆದ ಘೋರಯುದ್ಧದಲ್ಲಿಯೂ ಈ ವ್ಯಾಧಿಯಿಂದ ಅನೇಕರು ಸತ್ತಿರುವರು.

ಕುಷ್ಠರೋಗವು ಕೂಡ ಇಲಿಗಳಿಗೆ ಬರುವದಲ್ಲದೆ ಇಲಿಗಳಿಂದ ಇಲಿಗಳಿಗೆ ಹರಡುವದು. ಆದರೆ ಮನುಷ್ಯರಿಗೆ ಬರುವ ಕುಷ್ಠರೋಗಗಳಿಗೂ, ಇಲಿಗಳಿಗೆ ಬರುವ ಕುಷ್ಠರೋಗಗಳಿಗೂ ಇರತಕ್ಕ ಪರಸ್ಪರ ಭೇದವೂ, ಸಂಬಂಧವೂ ಮಾತ್ರ ಇನ್ನೂ ತಿಳಿದಿಲ್ಲ. ರೋಗವು ಹರಡತಕ್ಕ ರೀತಿಯೂ, ಅದು ವಿಶೇಷವಾಗಿ ಹರಡದಿರಲು ಅನುಸರಿಸಬೇಕಾದ ನಿಯಮಗಳೂ ಈಗಿನ ಶೋಧನೆಗಳಿಂದ ಬಹಳ ಮಟ್ಟಿಗೆ ತಿಳಿಯಲು ಅನುಕೂಲವುಂಟು.

ಇಲಿಗಳು ಮನುಷ್ಯರಿಗೆ ಹಾನಿಯನ್ನುಂಟುಮಾಡುವ ತೀರಿ ಹುಳ, ಹೇನು ಮುಂತಾದ ಅನೇಕ ಕ್ರಿಮಿಗಳಿಗೆ ಆಶ್ರಯಸ್ಥಾನವಾಗಿರುವುವು. ಆಹಾರವನ್ನು ವಿಷಸಂಯೋಜಕವಾಗಿ ಮಾಡುವ ಒಂದಾನೊಂದು ಜಾತಿಯ ಕ್ರಿಮಿಯನ್ನು ಈ ಇಲಿಗಳು ಸಾಗಿಸುವುವು. ಬಚ್ಚಲಗುಂಡಿ ಮುಂತಾದುವುಗಳಿಂದ ವಿಷಮಶೀತಜ್ವರದ ಕ್ರಿಮಿಗಳನ್ನು ಸಾಗಿಸಿಕೊಂಡುಬಂದು ಅಂಗಡಿಗಳಲ್ಲಿಯೂ, ಅಡಿಗೆಯ ಮನೆಗಳಲ್ಲಿಯೂ ಇಟ್ಟಿರುವ ಆಹಾರಪದಾರ್ಥಗಳನ್ನು ಕೆಡಿಸುವುವು.

ಇಲಿಗಳು ಕಚ್ಚಿದರೆ, ಕೆಲವುವೇಳೆ ಆ ವಿಷದಿಂದಲೇ ಜ್ವರ ಬರುವುದುಂಟು. ಗಾಯವು ಗುಣವಾದಮೇಲೂ ಕೂಡ ಜ್ವರ ಕಾಣಿಸಿಕೊಳ್ಳುವುದು. 1918 ನೆಯ ಇಸವಿಯವರೆಗಿನ ಲೆಕ್ಕವನ್ನು ನೋಡಿದುದರಲ್ಲಿ, ಇಂಥ ಸಂಭವಗಳು 80 ಮಾತ್ರ ಇವೆ. ಈ ಪೈಕಿ ಶೇಕಡಾ 10 ಜನರು ಸತ್ತಿರುವರು.

ಪಟ್ಟಣಗಳಲ್ಲಿಯೂ ಹೊಲಗದ್ದೆಗಳಲ್ಲಿಯೂ ವಾಸಮಾಡುತ್ತಿರುವ ಇಲಿಗಳ ಸಂಖ್ಯೆಯು ಎಷ್ಟಿರಬಹುದೆಂದು ಯಾರೂ ಊಹಿಸಲಾರರು. ಅಲ್ಲಲ್ಲಿ ಬಿಲಗಳನ್ನು ತೋಡಿಕೊಳ್ಳಲು ಅವ[illegible]ಕಾಶವು ದೊರೆತು, ಅವುಗಳಿಗೆ [illegible] ಅವ ವಂತಿದ್ದರೆ [illegible] ಆಹಾರವೂ ಸುಲಭವಾಗಿ ಸಿಕ್ಕು[illegible]ತವಾದ [illegible] ಬಹುಜಾಗ್ರತೆಯಾಗಿ ವೃದ್ಧಿಹೊಂದುವುವು.

ಸಾಮಾನ್ಯವಾದ ಇಲಿಗಳು ವರುಷಕ್ಕೆ 3 ಸಲದಿಂದ 5 ಸಲದವರೆಗೂ ಮರಿಗಳನ್ನು ಹಾಕುತ್ತವೆ. ಪ್ರತಿಸಲವೂ 6 ರಿಂದ 9 ರವರೆಗೆ ಮರಿಗಳನ್ನು ಹಾಕುವುವು. ಕೆಲವು ಸಮಯಗಳಲ್ಲಿ 10 ರಿಂದ 23 ರವರೆಗೆ ಮರಿಗಳನ್ನು ಹಾಕುವುದೂ ಉಂಟು. ಆದುದರಿಂದ ಅಲ್ಲಲ್ಲಿ ಇಲಿಗಳು ಹಾಕಿದ ಮರಿಗಳೆಲ್ಲಾ ಬದುಕಿದ್ದಲ್ಲಿ ಮೂರುವರ್ಷಕಾಲದೊಳಗಾಗಿ 3,00,00,00,000 ದಷ್ಟಾಗುವುವು. ಪ್ರಾಯಶಃ ಒಂದು ಕಾಡಿಲಿಯು ಎರಡು ವರುಷಕಾಲ ಬದುಕುವುದು. ಇಲಿಗಳು ಯಾವಾಗಲೂ ಕಳ್ಳನಂತೆ ಮನುಷ್ಯರಿಗೆ ಕೇಡನ್ನೇ ಮಾಡುವ ಚಾಳಿಯುಳ್ಳವುಗಳಾದುದರಿಂದ, ಹಗಲುಹೊತ್ತಿನಲ್ಲಿ ವಿಶೇಷ ಧೈರ್ಯದಿಂದ ಸಂಚರಿಸಲಾರವು.

ಇಲಿಗಳು ರೋಗಗಳನ್ನು ಹರಡುವುದುಮಾತ್ರವಲ್ಲ, ಆಹಾರವಸ್ತುಗಳನ್ನೆಲ್ಲ ತಿಂದು, ಚೆಲ್ಲಿ, ಪ್ರಪಂಚಕ್ಕೆ ಅಧಿಕವಾಗಿಯೂ ಬಹಳ ನಷ್ಟಗಳನ್ನುಂಟುಮಾಡುತ್ತಿವೆ. ಇಂಡಿಯಾದಲ್ಲಿಯೂ, ರಷ್ಯಾದಲ್ಲಿಯೂ ಆಗುವ ಕ್ಷಾಮಗಳಿಗೆ ಇಲಿಗಳು ಕಾರಣಗಳು. ಇದಕ್ಕಾಗಿಯೇ 'ಅತಿವೃಷ್ಟಿರನಾವೃಷ್ಟಿರ್ಮೂಷಕಾಶ್ಶಲಭಾಶ್ಶುಕಾಃ | ಅತ್ಯಾಸನ್ನಾಶ್ಚ ರಾಜಾನಃ' ಎಂದು ಕ್ಷಾಮಕಾರಣಗಳಾದ ಷಡೀತಿಬಾಧೆಗಳಲ್ಲಿ ಇಲಿಗಳನ್ನೂ ಸೇರಿಸಿದೆ.

ಈ ಕೆಳಗೆ ವಿವರಿಸಿರುವ ನಾಲ್ಕು ಜಾತಿಯ ಇಲಿಗಳು ಎಲ್ಲೆಲ್ಲೂ ವಾಸಮಾಡುತ್ತಿವೆ.

1. ಮನೆಗಳಲ್ಲಿ ಸಂಚರಿಸುವ ಸಾಮಾನ್ಯ ಇಲಿ.
2. ಇಂಗ್ಲೀಷ್ ಕಪ್ಪು ಇಲಿ.
3. ಹಂದರದ ಇಲಿ, ಅಥವಾ ಈಜಿಪ್ಟಿನ ಇಲಿ.
4. ಕೆಂಪು ಕಪ್ಪು ಸೇರಿದ ನಾರ್ವೇ ಇಲಿ.

ಮನೆಗಳಲ್ಲಿ ಸಂಚರಿಸುವ ಸಾಮಾನ್ಯಜಾತಿಯ ಇಲಿಯು ಬಹಳ ಸಣ್ಣದಾದುದರಿಂದ, ಬಹು ಸಣ್ಣ ಸಣ್ಣ ಸಂದುಗಳಲ್ಲಿ ಸೇರಿ ತಪ್ಪಿಸಿಕೊಳ್ಳಬಲ್ಲುದು. ಆದುದರಿಂದ ಇತರ ಎಲ್ಲಾ ಜಾತಿಯ ಇಲಿಗಳಿಗಿಂತಲೂ ಇದರ ಪ್ರಾಬಲ್ಯವು ಹೆಚ್ಚು. ಬೂದುಗೆಂಪು ಬಣ್ಣದ (ನಾರ್ವೇ) ಇಲಿಯು ಕೂಡ ಬಿಲಗಳನ್ನು ತೋಡಿ, ಅವುಗಳಲ್ಲಿ ಅವಿತುಕೊಳ್ಳುವುದರಿಂದ ಇವುಗಳ ಹಾವಳಿಯನ್ನು ತಗ್ಗಿಸುವುದೂ ಕಷ್ಟವು. ಹಂದರದ ಇಲಿಯು ಬಹಳ ಜಾಗ್ರತೆಯಾಗಿ ಮರವನ್ನು ಹತ್ತಬಲ್ಲುದು.

ಬೂದುಗೆಂಪು ಬಣ್ಣದ ಇಲಿಯು ಕಟ್ಟಡಗಳಲ್ಲಿ ನೆಲಮಾಳಿಗೆ ಮುಂತಾದ ಕೆಳಭಾಗದ ಸಂದುಗಳಲ್ಲಿ ವಾಸಮಾಡುವವು. ರಾತ್ರಿಯಕಾಲಗಳಲ್ಲಿ ಆಹಾರಕ್ಕಾಗಿ ಹೊರಗೆ ಬರುವವು. ಹಂದರದಿಲಿಗಳೂ, ಕಪ್ಪು ಇಲಿಗಳೂ ಗೋಡೆಯ ಸಂದುಗಳಲ್ಲಿ ಸೇರಿಕೊಂಡಿರುವವು. ಈ ಇಲಿಗಳು ಬಹಳ ಸುಲಭವಾಗಿ ಮರಹತ್ತಬಲ್ಲುವು. ಉಷ್ಣವಲಯಗಳಲ್ಲಿ ಈ ಇಲಿಗಳು ಮರಗಳ ಪೊಟ್ಟರೆಗಳಲ್ಲಿ ವಾಸಿಸುವವು.

ಬೆಳಕಿನಲ್ಲಿ ಹೊರಗೆ ಬಂದರೆ ಇಲಿಗಳಿಗೆ ಚೆನ್ನಾಗಿ ಕಣ್ಣು ಕಾಣಿಸುವುದಿಲ್ಲ. ಚೆನ್ನಾಗಿ ಬೆಳಕಿರುವ ಪ್ರದೇಶಗಳಲ್ಲಿ ಅವು ಮೆಲ್ಲಗೆ ಹರಿದು ಹಂದರಗಳ ಮೇಲೆಯೂ, ಗೋಡೆಯ ಸಂದುಗಳಲ್ಲಿಯೂ ಬಹಳ ಜಾಗ್ರತೆಯಾಗಿ ಓಡುವವು. ಇದರಿಂದ ಅವುಗಳ ಮೀಸೆಗಳು ಬಹಳ ಸೂಕ್ಷ್ಮವಾದುವೆಂದೂ, ಆ ಮೀಸೆಗಳ ಮೂಲಕ ಅವು ತಾವಿರುವ ಪ್ರದೇಶವನ್ನು ತಿಳಿಯುವುವೆಂದೂ ಭಾವಿಸಬಹುದು. ಅವು ಯಾವಾಗಲೂ ಇಕ್ಕಟ್ಟಾದ ಪ್ರದೇಶಗಳಲ್ಲಿಯೇ ವಿಶೇಷವಾಗಿ ಸಂಚರಿಸುವುದರಿಂದ ಇಲಿಯ ಬೋನುಗಳನ್ನು ಆ ದಾರಿಗಳಲ್ಲಿಡುವದೊಳ್ಳೆಯದು.

ಇಲಿಗಳಿಂದಾಗುವ ಧಾನ್ಯನಷ್ಟವೂ ಅಪರಿಮಿತವಾಗಿರುವದು. ಗಿಡಗಳು ಮೊಳಕೆಹೊರಡುವಾಗಲೇ ಅವು ಅವುಗಳನ್ನು ಕಡಿದು ನಷ್ಟಪಡಿಸುವವು. ಕಲಾಪತ್ತು ರೇಷ್ಮೆ ಮುಂತಾದ ಬೆಲೆಬಾಳುವ ವಸ್ತ್ರಗಳನ್ನೂ ಜಮಖಾನಗಳನ್ನೂ ಕಡಿದು ನಾಶಮಾಡುವವು. ಮಾರ್ಕೆಟ್ಟುಗಳಲ್ಲಿ ಸೇರಿಕೊಂಡು ಹೂಗಳು, ಹಣ್ಣು ಹಂಪಲುಗಳು, ತರಕಾರಿಗಳು ಮುಂತಾದುವುಗಳನ್ನೆಲ್ಲ ನಾಶಪಡಿಸುವವು. ಅವು ತಿಂದು ನಷ್ಟವಾಗುವದಕ್ಕಿಂತಲೂ ಅವು ಮುಟ್ಟಿದಮಾತ್ರದಿಂದ ಆಗುವ ಪದಾರ್ಥ ನಷ್ಟವು ಹೆಚ್ಚು. ಬೆಂಕಿಕಡ್ಡಿಗಳನ್ನು ಬಾಯಿಂದ ಕಚ್ಚಿಕೊಂಡು ಹೋಗಿ, ಸುತ್ತುಮುತ್ತಲಿನ ಹುಲ್ಲುಮೆದೆಗಳಿಗೂ, ಹಂದರಗಳಿಗೂ ಇಡುವುದರಿಂದ, ಇಲಿಗಳು ಮನೆ ಬೆಂಕಿಹಚ್ಚುತ್ತವೆಂದರೂ ಅತಿಶಯೋಕ್ತಿಯಲ್ಲ. ಬಿಲಗಳನ್ನು ತೋಡಿ ಕೆಳ ಕಟ್ಟಿಗಳನ್ನು ಕೆಡಿಸುವದು, ಮೊಟ್ಟೆಗಳನ್ನು ಒಡೆ ನಾಶಪಡಿಸುವದು, ಅಸ್ತಿಭಾರ, ಬಾಗಿಲು, ನೆಲ, ಮುಂತಾದುವುಗಳಲ್ಲಿ ಸಂದುಗಳನ್ನು ಕೊರೆದು ಕೆಡಿಸುವುದು. ಈ ರೀತಿಗಳ ಅವು ಮಾಡುವ ನಷ್ಟಗಳನ್ನು ಇಷ್ಟಿಷ್ಟೆಂದು ಹೇಳಲಾಗುವದಿಲ್ಲ.

ಇಲಿಗಳನ್ನು ನಾಶಮಾಡುವ ಉಪಾಯಗಳು.

ಇಲಿಗಳನ್ನು ಸಂಪೂರ್ಣ ನಾಶಮಾಡುದೇನೋ ಅಸಾಧ್ಯವೇ. ಅವು ಬಹಳ ಚಟುವಟಿಕೆಯುಳ್ಳ ಪ್ರಾಣಿಗಳು. ಕೆಲವು ಇಲಿಗನ್ನು ಕೊಂದಷ್ಟೂ, ಮಿಕ್ಕ ಇಲಿಗಳಿಗೆ ಸೌಕರ್ಯವು ಹೆಚ್ಚಿ, ಅವುಗ ಪ್ರಾಬಲ್ಯವು ಅಧಿಕವಾಗುವದು. ಆದುದರಿಂದ ಅವುಗಳಿಂ ನಮ್ಮ ದೇಹಕ್ಕೆ ಅಪಾಯವಾಗದಂತೆಯೂ, ಪದಾರ್ಥಗಳು ನಷ್ಟವಾಗದಂತೆಯೂ ನೋಡಿಕೊಳ್ಳುವದೊಂದೇ ಸಾಧ್ಯವಾದ ಉಪಾಯವು. ಇಲಿಗಳ ಹಾವಳಿಯು ತಗ್ಗಲು ಇಲಿಗಳು ಸೇರುವದಕ್ಕೆ ಅವಕಾಶವಿಲ್ಲದಂತೆ ಮೇಲ್ಕಾವಣಿಗಳನ್ನು ಕಟ್ಟಿಸುವದು, ಆಹಾರ ಪದಾರ್ಥಗಳು ಇಲಿಗಳಿಗೆ ಸಿಕ್ಕದಂತೆ ಭದ್ರವಾಗಿಡುವದು, ಇಲಿಗಳ ಶತ್ರುಗಳನ್ನು ಸಾಕುವದು, ಬೋನುಗಳನ್ನಿಟ್ಟು ಅವುಗಳನ್ನು ಹಿಡಿಯುವದು, [illegible] ವಿಷವನ್ನಿಟ್ಟು ಕೊಲ್ಲುವುದು, ಇವೆಲ್ಲ ಅವುಗಳ ಹಾವಳಿಯನ್ನು ತಗ್ಗಿಸುವ ಉಪಾಯಗಳು.

ಹದ್ದು, ಗೂಬೆ, ಹಾವು, ಬೆಕ್ಕು, ನಾಯಿ ಮುಂತಾದವು ಇಲಿಗಳ ಪರಮ ಶತ್ರುಗಳು. ಇಲಿಗಳಿಂದಾಗುವ ಮೊಟ್ಟೆ ಮೊದಲಾದವುಗಳ ನಷ್ಟವು ಮಿಕ್ಕ ಎಲ್ಲಾ ದುಷ್ಟಮೃಗಗಳ ಮೂಲಕ ಆಗುವದಕ್ಕಿಂತಲೂ ಹೆಚ್ಚು.

ಇಲಿಗಳಿಗೆ ತಿಂಡಿಯಪದಾರ್ಥಗಳು ಸಿಕ್ಕದಂತೆ ಪದಾರ್ಥಗಳನ್ನು ಭದ್ರವಾಗಿ ಮುಚ್ಚಿಡಬೇಕಾದುದು ಎಲ್ಲಕ್ಕಿಂತಲೂ ಮುಖ್ಯವು. ಇಲಿಗಳು ಚೆನ್ನಾಗಿ ತಿಂದು ಕೊಬ್ಬಿ ಅಡಿಗಡಿಗೆ ಮರಿಗಳನ್ನು ಹೆಚ್ಚಾಗಿ ಹಾಕುವವು. ಇಲಿಗಳಿಗೆ ಆಹಾರವು ಸಿಕ್ಕದಂತಿದ್ದರೆ ಅವುಗಳ ಹಾವಳಿಯು ಬಹಳಮಟ್ಟಿಗೆ ತಗ್ಗುವದು. ಮನೆಯಲ್ಲಿ ಕಸ್ಮಲಾದಿಗಳನ್ನು ಅಲ್ಲಲ್ಲಿ ಗುಡ್ಡೆಮಾಡಿಡದೆ, ಉಕ್ಕಿನ ತೊಟ್ಟಿಗಳಲ್ಲಿಟ್ಟು ಅಡಿಗಡಿಗೆ ಸುಡಿಸಬೇಕು. ಇಲ್ಲದಿದ್ದರೆ ಅವಕ್ಕೆ ನಾವೇ ಸ್ಥಳವನ್ನು ಕಲ್ಪಿಸಿಕೊಟ್ಟಂತಾಗುವದು.

ಅವುಗಳನ್ನು ಹಿಡಿಯುವದಕ್ಕಾಗಿ ಇಡತಕ್ಕ ಬೋನುಗಳ ಮಾದರಿಯನ್ನೂ, ಅವುಗಳಲ್ಲಿಡುವ ತಿಂಡಿಗಳನ್ನೂ ಅಡಿಗಡಿಗೆ ಬದಲಾಯಿಸುತ್ತಿರಬೇಕು. ಬೇರಿಯಮ್‌ಕಾರ್ಬೊನೇಟ್ ಎಂಬುದು ಇಲಿಗಳನ್ನು ಕೊಲ್ಲಲು ಅತ್ಯುತ್ತಮವಾದ ವಿಷವು. ಸ್ಟ್ರಿಚ್‌ನೈನ್ ಮತ್ತು ಆರ್‌ಸೆನಿಕ್ ಎಂಬ ವಿಷಪದಾರ್ಥಗಳನ್ನೂ ಇಲಿಗಳ ನಾಶಕ್ಕಾಗಿ ಇಡುವದುಂಟು. ಆದರೆ ಮಕ್ಕಳು ಅವುಗಳನ್ನು ತಿಂದ ಅನರ್ಥಗಳು ಸಂಭವಿಸಬಹುದು. ಫಾಸ್‌ಫರಸ್ ಎಂಬ ವಿಷಪದಾರ್ಥವು ಸುಲಭವಾಗಿ ಹತ್ತಿಕೊಳ್ಳಬಹುದಾದುದರಿಂದ, ಅದನ್ನಿಟ್ಟರೆ ಬೆಂಕಿಯ ಅನಾಹುತಕ್ಕೆ ಅವಕಾಶಕೊಟ್ಟಂತಾಗುವುದು. ಅಲ್ಲದೆ ಇಲಿಗಳಿಗೆ ವಿಷವನ್ನು ಕೊಟ್ಟು ಕೊಲ್ಲುವದರಿಂದ, ಅವು ಅಲ್ಲಲ್ಲೇ ಸತ್ತುಬಿದ್ದು, ದುರ್ವಾಸನೆಗಳಿಗೆ ಅವಕಾಶವಾಗುವದರಿಂದ, ಮನೆಗಳಲ್ಲಿಯೂ, ಮನೆಗಳ ಸಮೀಪದಲ್ಲಿಯೂ ವಿಷವನ್ನಿಡದಿರುವುದೇ ಉತ್ತಮವು.

ಕಣಜಗಳು, ಲಾಯಗಳು ಮುಂತಾದ ದೂರಸ್ಥಳಗಳಲ್ಲಿ ಇಲಿಗಳ ಹಾವಳಿಗಳನ್ನು ತಗ್ಗಿಸಲು ಬೇರೆ ಅವಕಾಶವಿಲ್ಲದುದರಿಂದ ಅಂಥಾ ಸ್ಥಳಗಳಲ್ಲಿ ವಿಷಗಳನ್ನು ಪ್ರಯೋಗಿಸಬಹುದು. ವಿಷಗಳನ್ನಿಡುವ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು. ದೊಡ್ಡ ಇಲಿಗಳಿಗೆ ಬುದ್ಧಿಸಾಮರ್ಥ್ಯವು ಹೆಚ್ಚು. ಆದುದರಿಂದ ವಿಷಗಳನ್ನು ಇಲಿಗಳಿಗೆ ತಿಳಿಯದಂತೆ ಇಟ್ಟು, ಅವುಗಳು ವಿಶೇಷವಾಗಿ ಸಂಚರಿಸುವ ಇಕ್ಕಟ್ಟಾದ ಪ್ರದೇಶಗಳಲ್ಲಿಡಬೇಕು.

ಇಲಿಗಳ ಹಾವಳಿಯನ್ನು ತಗ್ಗಿಸಲು ಬೋನುಗಳನ್ನಿಡುವುದು, ಬೆಕ್ಕು ಮುಂತಾದುವುಗಳನ್ನು ಸಾಕುವುದೂ ಮುಖ್ಯವಾದುವು. ಮನೆಗಳಿಗೆ ಇಲಿಗಳು ವಿಶೇಷವಾಗಿ ಸೇರದಂತೆ ಮೇಲ್ಕಾವಣಿಗಳನ್ನು ಕಟ್ಟುವದರಲ್ಲಿಯೂ ಬಹಳ ಪ್ರಯೋಜನ ಉಂಟು. ಆಗಲೂ ಜಾಗರೂಕರಾಗಿದ್ದು, ಇಲಿಗಳು ತಲೆಹಾಕಿದೊಡನೆ ಅವುಗಳನ್ನು ನಾಶಮಾಡಲು ಪ್ರಯತ್ನಿಸಬೇಕು. ದೊಡ್ಡ ಬಂಗಲೆಗಳಲ್ಲಿ ಇಲಿಗಳು ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸುಲಭವಾಗಿ ಹೋಗದಂತಿರಲು ತಟ್ಟಿಗಳನ್ನು ನೇತುಬಿಡಬೇಕು.

ಹಡಗುಗಳಲ್ಲಿಯೂ ಬೇರೆ ಚಿಕ್ಕ ಸ್ಥಳಗಳಲ್ಲಿಯೂ ಗಂಧಕ ಅಥವಾ ಸಯನೈಡ್ ಹೊಗೆಯನ್ನು ಹಾಕಿ ಇಲಿಗಳನ್ನು ನಾಶಪಡಿಸುವರು. ಈ ಹೊಗೆಗಳು ಅಪಾಯಕರಗಳಾದುದರಿಂದ, ಇವು ಮನುಷ್ಯರಿಗೆ ತಟ್ಟದಂತೆ ಜಾಗರೂಕವಾಗಿರಬೇಕು.

ಇಲಿಗಳ ನಾಶಕ್ಕೆ ಜನರೆಲ್ಲರೂ ಹೆಲ್ತ್ ಆಫೀಸರಿಗೆ ತಕ್ಕ ಸಹಾಯಗಳನ್ನು ಮಾಡಿ ಅವರು ಹೇಳಿದ ಉಪಾಯಗಳಂತೆ ನಡೆಯಬೇಕು. ಮೇಲಾಗಿ, ಕಣಜಗಳು, ಉಗ್ರಾಣಗಳು, ಅಡಿಗೆಯಮನೆಗಳು, ಕಟುಕರ ಅಂಗಡಿಗಳು ಮೊದಲಾದ ಆಹಾರಪದಾರ್ಥಗಳಿರುವ ಸ್ಥಳಗಳಲ್ಲಿ ಇಲಿಗಳು ಸೇರಲು ಅವಕಾಶವಿರಬಾರದು. ಆಹಾರಪದಾರ್ಥಗಳು ದೊರೆತ ಸ್ಥಳಗಳಲ್ಲಿ ಇಲಿಗಳು [illegible]ರವು. ವೃದ್ಧಿಯನ್ನೂ ಹೊಂದಲಾರವು.

ಆರೋಗ್ಯವಿಧಿಗಳಿಗೆ ಶುಚಿತ್ವವು ಹೇಗೆ ಕಳಕಳಿಯೋ ಹಾಗೆಯೇ ಈ ಇಲಿಗಳ ವಿಷಯದಲ್ಲಿಯೂ ಅದು ಬಹಳ ಮುಖ್ಯವಾದುದು.

ಓರಿಯಂಟಲ್ ವಾಚ್ ಮನ್ ಮತ್ತು
ಹೆರಾಲ್ಡ್ ಆಫ್ ಹೆಲ್ತ್.'

ಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ರಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಹಭಸ್ಮ	೧	೦—೧೨—೦
ಂಗಭಸ್ಮ	೧	೦—೮—೦
ಂಗಭಸ್ಮ	೧	೦—೮—೦
ತ್ತಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಭ್ರಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ೀದಂತಿಹರತಾಲಭಸ್ಮ	೧	೦—೮—೦
ತ್ರಿ (೧ನೇ ನಂಬರ್)	೧	೫೦—೦—೦
ತ್ರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟ	೧	೧—೦—೦
ಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ತೊಳೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿ ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಯಬೇಕೆಂದು ಕೋರುತ್ತೇವೆ.

ದೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯೂಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಬಲಿ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-0.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣಿಹಿಡಿತ, ನಿತ್ರಾಣ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುವು ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಪಿಂಗ್ ಕಫ್ ರಿಮೆಡಿ—ಕಫಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮು, ಇತ್ಯಾದಿ ಕೆಮ್ಮಿನರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾವುಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ತುರಿ ಮೇಯುವುದು, ತುರಿ, ಉರಿಬರುವದು ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು-ಬರೆಯಿರಿ.

☞ ಬಿಳ್ಳ ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿನೋಡುವ ದೃಷ್ಟಿಚಿತ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವದು. ಪರವೂರಿನಲ್ಲಿರುವ ರೋಗಿಗಳು ಈ ಪುಸ್ತಕದ VIII ರಿಂದ X ನೇ ಪಾನಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[40] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ). **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯುಳ್ಳದ್ದಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮು, ಉಬ್ಬಸ, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಕಣ್ಣುಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಕಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ [illegible]ಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಯಾಮವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಕಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನುಷ್ಯನಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[21] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	....	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತಮೀಮಾಂಸಾ	....	೨ ಆಣೆ
ಶಿವಶಕ್ತಿವಿಲಾಸ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	....	೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	....	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಜನಪಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೮ ಆಣೆ

पंडित श्रीकाशीनाथशास्त्री यांचें भाषण (मराठी)	....	८ आणे.
Speeches by Pandit Shri Kashinatha Shastri (*English*)		12 As.
ವೇದೋಕ್ತಶಿವಪೂಜಾವಿಧಿ	....	೧೦ ಆ
ವೀರಶೈವರತ್ನ	....	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆ
ಸಚಿತ್ರ ರೇಣುಕವಿಜಯ	....	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ
ಲಿಂಗೋತ್ಪತ್ತಿ ಲಾಕೆಟ್ಸ್	....	೨ ಆ
ಕೇನೋಪನಿಷತ್ (ವೀರಶೈವಭಾಷ್ಯ)	....	೧ ರೂ
ಈಶಾವಾಸ್ಯೋಪನಿಷತ್ (ಭಾಷ್ಯ)	....	೧ ರೂ
ವೀರಶೈವಸಿದ್ಧಾಂತಸುಧಾಕರ	....	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	....	೧ ರೂ
लिंगधारणचंद्रिका (संस्कृत)	....	३ रु
महानारायणोपनिषत् (वीरशैवभाष्य-संस्कृत)	....	१ रु
वीरशैवेंदुशेखर (संस्कृत)	....	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ… ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ… ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು."

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

		ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆರೆ ಗ್ಲೆಸ್		೧—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆರೆ	....	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆರೆ ಗ್ಲೆಸ್	....	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆರೆ ಗ್ಲೆಸ್	....	೦—೦—೯
ಪಟ್ಟಾಭಿಷೇಕದ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆರೆ ಗ್ಲೆಸ್		೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	....	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	....	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಘರ್ಘದಿಂದ ಅವತರಿಸುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗ್ಲೆಸ್	....	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆರೆ ಗ್ಲೆಸ್	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗ್ಲೆಸ್	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗ್ಲೆಸ್	....	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	....	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	....	೦—೦—೪

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ… ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್… ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ…

(Registered Trade Mark)

ಗಳನ್ನು ಕೊಟ್ಟಿರು… ರು. ಪ್ರಸಿದ್ಧವಾದ… ನಶ್ಯದ ಪುಡಿಯಿಂ… ಸ್ವಸ್ಥವಾಗುವ ವ್ಯಾ… ಧಿಗಳು ಯಾವವೆಂ… ರೆ:—ಪಿನಸಿ, ಒಂ… ತಲೆನೋವು, ತಲೆ… ಲ್ಲಿನ ರೋಗಗ… ಕಣ್ಣುಗಳಲ್ಲಿ ಉಂಟ… ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ… ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ … ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ… ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟ… ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು… ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ… ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ… ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ… ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು…

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪…
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ…

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[22] ಪೋ. ಬಾ. ೫೧೦, ಮದರಾ…

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ…

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

…ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

…ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ಜೂನ್ ೧೯೩೩ [ಸಂಚಿಕೆ ೭

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು …ರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ …ರಾಣವನ್ನು ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾದ ವೇ|| ನಂಜನಗೂಡು …ಕಂಠಶಾಸ್ತ್ರಿಗಳೆಂಬ ಕವಿಪುಂಗವರು ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾರೆ. ಈ ಕವಿ…ಗಳ ಕವಿತಾಸರಣಿಯು ಅಸದೃಶವಾದುದು. ಇವರ ಕವಿತಾಮಹತ್ತ್ವವನ್ನು ಇಡೀ …ರ್ಣಾಟಕದೇಶವೇ ಕೊಂಡಾಡುತ್ತದೆ. ಪುರಾಣವನ್ನು ಸಂಪೂರ್ಣವಾಗಿ ಪರಿಶೀಲಿಸಿದರೆ …ಈ ಮಹಾಕವಿಗಳ ಯೋಗ್ಯತೆಯು ಸ್ಪಷ್ಟವಾಗಿ ಕಂಡುಬರುವುದು. ಈ ಪುರಾಣದಲ್ಲಿ …೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋ…ರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗ …ಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ …ಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರ …ತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು …ರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.



…ಡಿಸ್ಟ್ರಿಕ್ಟ್‌ಬೋರ್ಡ್, ರೆಪ್ರೆಜೆಂಟೆಟೀವ್ ಮತ್ತು …ಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ…ಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು…ಡುತ್ತೇವೆ. [26]

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಚಿಕಾಗೋ ನಗರದ ಆಸ್ಪತ್ರೆಯಲ್ಲಿ ಸ್ಥೂಲಕಾಯದ ಚಿಕಿತ್ಸೆಗಾಗಿ 8,00,000 ಓಲ್ಟುಗಳ ಶಕ್ತಿಯುಳ್ಳ ಒಂದು ಎಕ್ಸ್-ರೇ ಕೊಳವೆಯನ್ನು ಇಟ್ಟಿರುವರು. ಇದರ ಶಕ್ತಿಯು 22,50,00,000 ರೂಪಾಯಿಗಳ ಬೆಲೆಯುಳ್ಳ ರೇಡಿಯಂ ಲೋಹದ ಶಕ್ತಿಗೆ ಸಮಾನವಾಗುವದಂತೆ!

ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ.

ಮೇಲ್ಕಂಡ ಕಂಪನಿಯವರು ಯಾತ್ರಿಕರ ಸೌಕರ್ಯಕ್ಕೋಸ್ಕರ ಈಗ ಹೊಸದಾಗಿ ಒಂದು ಸ್ವತಂತ್ರವಾದ ರೈಲ್ವೇಗಾಡಿಯನ್ನು ಏರ್ಪಡಿಸಿದ್ದಾರೆ. ಈ ರೈಲ್ವೇಗಾಡಿಯು ಕಳೆದ ಏಪ್ರಿಲ್ ತಿಂಗಳು ೧೭ ನೆಯ ತಾರೀಖಿನ ದಿವಸ ಹುಬ್ಬಳ್ಳಿಪಟ್ಟಣವನ್ನು ಬಿಟ್ಟು, ಪಂಢರಪೂರ, ನಾಸಿಕ, ಮುಂಬಯಿ, ದಿಲ್ಲಿ, ಆಗ್ರಾ, ಉಜ್ಜಯಿನಿ, ಪ್ರಯಾಗ, ಕಾಶೀ, ರಾಮೇಶ್ವರ, ಕಾಂಚೀ, ಕಲ್ಕತ್ತಾ, ಮದರಾಸ್ ಮೊದಲಾದ ಅನೇಕ ಮುಖ್ಯ ಮುಖ್ಯ ಪಟ್ಟಣಗಳನ್ನೂ, ಮುಖ್ಯ ಮುಖ್ಯ ಪುಣ್ಯಕ್ಷೇತ್ರಗಳನ್ನೂ ಸಂಚರಿಸಿ, ಮೇ 30 ನೇ ತಾರೀಖಿಗೆ ಮೈಸೂರುರಾಜಧಾನಿಗೆ ಆಗಮಿಸಿ 1 ನೇ ತಾರೀಖಿಗೆ ಪುನಃ ಹುಬ್ಬಳ್ಳಿಯನ್ನು ಸೇರಿತು. ಈ ಗಾಡಿಯಲ್ಲಿ ಯಾತ್ರಿಕರು ಒಟ್ಟು ೩೦೦ ಜನರಿದ್ದು ಅದರಲ್ಲಿ ಕೇವಲ ವೀರಶೈವರೇ ೨೫೦ ಜನಗಳ ವರೆಗೆ ಇದ್ದರು. ಈ ಕಂಪನಿಯ ಮ್ಯಾನೇಜರರಾದ ಮ|| ರಾ|| ಜೆ ಎ. ಶಿರೂರ ಎಂಬವರು ಉತ್ಸಾಹಿಗಳೂ, ಕಾರ್ಯದಕ್ಷರೂ ಆಗಿರುವರು. ಇವರು ವೀರಶೈವರಿದ್ದು ರೈಲ್ವೇ ಗಾಡಿಯ ವ್ಯವಸ್ಥೆಯನ್ನು ಬಹು ತೃಪ್ತಿಕರವಾಗಿ ಇಟ್ಟಿದ್ದಾರೆ. ಜನರ ಆರೋಗ್ಯರಕ್ಷಣೆಗಾಗಿ ಡಾಕ್ಟರರೂ, ಆಚಾರರಕ್ಷಣೆಗಾಗಿ ಪಟ್ಟದಸ್ವಾಮಿಗಳವರೂ, ಗಾಡಿಯ ಜತೆಯಲ್ಲಿಯೇ ಇರುವರು. ಈ ಯಾತ್ರಿಕರಲ್ಲಿ ಬಹುಜನರು ಒಳ್ಳೇ ಆಚಾರಶೀಲರಾಗಿದ್ದು, ಅವರ ಆಚಾರಾದಿಗಳಿಗೆ ಯಾವ ಕೊರತೆಯೂ ಬಾರದಂತೆ ಮ್ಯಾನೇಜರರು ಸರಿಯಾದ ವ್ಯವಸ್ಥೆಮಾಡಿದ್ದನ್ನು ನೋಡಿ ಪರಮಸಂತೋಷವೆನಿಸಿತು. ಇಲ್ಲಿಗೆ ಬಂದ ಪ್ರತಿಯೊಬ್ಬ ಯಾತ್ರಿಕರೂ ಮ್ಯಾನೇಜರರನ್ನು ಕೊಂಡಾಡುವವರೇ ಆಗಿದ್ದರು. ಈತರಹದ ಸೌಕರ್ಯವನ್ನು ಇದುವರೆಗೆ ಯಾರೂ ಮಾಡಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ರೈಲ್ವೆಚಾರ್ಜಾದರೂ ಇಷ್ಟು ದೂರಪ್ರಯಾಣಕ್ಕೆ ಬಹುಮಟ್ಟಿಗೆ ಕಡಿಮೆಮಾಡಲ್ಪಟ್ಟಿದೆ. ಫರ್ಸ್ಟ್‌ಕ್ಲಾಸ್ ೧೪೦ ರೂ. ಸೆಕೆಂಡ್‌ಕ್ಲಾಸ್ ೩೧೦ ರೂ.

ಈ ಗಾಡಿಯು ಪುನಃ ಅಕ್ಟೋಬರ್ ೧ ನೇ ತಾರೀಖಿನ ದಿವಸ ಭರತಖಂಡದ ಯಾತ್ರೆಗಾಗಿ ಹುಬ್ಬಳ್ಳಿಯಿಂದ ಹೊರಡುವದು. ಈ ಸಾರೆ ಈ ಗಾಡಿಯು ಲಂಕೆಗೂ ಸಹ ಹೋಗತಕ್ಕದ್ದಾಗಿದೆ. ಎಲ್ಲಾ ತರಹದ ಸುವ್ಯವಸ್ಥೆಯಿಂದ ಕ್ಷೇತ್ರಯಾತ್ರೆಗಾಗಿ ಸಿದ್ಧವಾಗಿರುವ ಈ ರೈಲ್ವೇಗಾಡಿಯ ಉಪಯೋಗವನ್ನು ಸರ್ವರೂ ಮಾಡಿಕೊಂಡು ಭರತಖಂಡದಲ್ಲಿರುವ ಸಮಸ್ತ ಪವಿತ್ರಕ್ಷೇತ್ರಗಳನ್ನು ಸಂದರ್ಶಿಸಿ ಧನ್ಯರಾಗಬೇಕೆಂದು ಬಯಸುತ್ತೇವೆ. ಹೆಚ್ಚಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಹುಬ್ಬಳ್ಳಿಯಲ್ಲಿರುವ ಮೇಲ್ಕಂಡ ಕಂಪನಿಯ ಮ್ಯಾನೇಜರರಿಗೆ ಬರೆದುತಿಳಿದುಕೊಳ್ಳಬಹುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ಬಜೆಟ್ ಅಧಿವೇಶನ)

5 ನೆಯ ಜೂನ್ 1933

ಪ್ರಜಾಪ್ರತಿನಿಧಿ ಸಭೆಯ ಸದಸ್ಯರೇ.—ಈ ಅಧಿವೇಶನಕ್ಕೆ ತಮ್ಮಗಳನ್ನು ಆದರದಿಂದ ಬರಮಾಡಿಕೊಂಡು ಮುಂದಿನ ವರ್ಷದ ಆಯವ್ಯಯಗಳ ವಿಚಾರವನ್ನು ಶ್ರೀಮನ್ ಮಹಾರಾಜರವರ ಆಜ್ಞಾನುಸಾರವಾಗಿ ತಮ್ಮಗಳಿಗೆ ಪ್ರಕಟಪಡಿಸುವುದು ನನಗೆ ವಿಶೇಷ ಸಂತೋಷಕರವಾಗಿದೆ. ಯಾವ ವರ್ಷಕ್ಕಾಗಿ ಬಜೆಟ್ಟನ್ನು ತಯಾರ್ಮಾಡಲಾಗುವುದೋ ಅದರ ಹಿಂದಿನ ಎರಡು ವರ್ಷಗಳ ಆಯವ್ಯಯಗಳನ್ನು ಕುರಿತು ಪ್ರಸ್ತಾಪಿಸುವುದು ಇಂತಹ ಸಂದರ್ಭಗಳಲ್ಲಿ ವಾಡಿಕೆಯಾದ ಪದ್ಧತಿಯಾಗಿದೆ. ಆದಕಾರಣ, ಆ ಪದ್ಧತಿಯನ್ನೇ ಅನುಸರಿಸಿ, 1931-32 ಮತ್ತು 1932-33 ನೆಯ ಸಾಲುಗಳ ಆಯವ್ಯಯದ ಸ್ಥಿತಿಯನ್ನು ಕುರಿತು ಸಂಕ್ಷೇಪವಾಗಿ ಸೂಚಿಸುತ್ತೇನೆ.

1931-32 ನೆಯ ಸಾಲಿನ ವಾಸ್ತವಿಕ ಲೆಕ್ಕಗಳು.

ಕಳೆದ ಅಕ್ಟೋಬರು ತಿಂಗಳಲ್ಲಿ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಈ ಸಭೆಯಲ್ಲಿ ಭಾಷಣ ಮಾಡಿದಾಗ್ಗೆ 1931-32 ನೆಯ ಸಾಲಿನ ತಾತ್ಕಾಲಿಕವಾದ ವಾಸ್ತವಿಕ ಲೆಕ್ಕಗಳು ಸಿದ್ಧವಾಗಿದ್ದುವು. ಅವುಗಳ ಮೇರೆಗೆ ಹುಟ್ಟುವಳಿಯು ಒಟ್ಟು 338 ಲಕ್ಷ ರೂಪಾಯಿಗಳಾಯಿತೆಂದೂ, ವೆಚ್ಚವು ಒಟ್ಟು 356 ಲಕ್ಷ ರೂಪಾಯಿಗಳಾಯಿತೆಂದೂ ಆಗ್ಗೆ ಅವರು ಸೂಚಿಸಿದ್ದರು. ಅಷ್ಟರಾಗಿ ತಯಾರಾದ ವಾಸ್ತವಿಕ ಲೆಕ್ಕಗಳ ಪ್ರಕಾರ ಈ ನಿರೀಕ್ಷಣೆಯು ಸ್ಥಿರಪಟ್ಟಿರುತ್ತದೆ ಮತ್ತು ಸಾಲ ತೀರುವೆಯ ನಿಧಿಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿ 18½ ಲಕ್ಷ ರೂಪಾಯಿಗಳ ಕಂಟ್ರಿಬ್ಯೂಷನ್ನು ತೆಗೆದಿಟ್ಟ ತರುವಾಯ ಆ ವರ್ಷದ ಹುಟ್ಟುವಳಿ ಲೆಕ್ಕಗಳ ಫಲಿತಾಂಶವಾಗಿ 18½ ಲಕ್ಷ ರೂಪಾಯಿಗಳಷ್ಟು ಮೊಬಲಗು ವೆಚ್ಚಕ್ಕೆ ಸಾಲದೇ ಬಂದಿರುತ್ತದೆ. ನಮ್ಮ ಹುಟ್ಟುವಳಿಗಳು ಬಹು ವಿಶೇಷವಾಗಿ ತಗ್ಗಿಹೋದುದೂ, ಹಾಗೆ ತಗ್ಗಿದುದರ ದೆಸೆಯಿಂದುಂಟಾಗತಕ್ಕ ಕಷ್ಟವನ್ನು ತಪ್ಪಿಸುವುದಕ್ಕೋಸ್ಕರ ವೆಚ್ಚವನ್ನು ಕಡಿಮೆಮಾಡಲು ಬಹು ತೀವ್ರವಾದ ಏರ್ಪಾಡುಗಳನ್ನು ಕೈಕೊಂಡುದೂ ಆ ವರ್ಷದಲ್ಲಿಯೇ ಎಂಬ ವಿಷಯವನ್ನು ಸದಸ್ಯರ ಗಮನಕ್ಕೆ ತರಬೇಕಾಗಿದೆ. ಹಾಗೆ ಕೈಕೊಂಡ ಏರ್ಪಾಡುಗಳ ಫಲಿತಾಂಶವಾಗಿ ಹುಟ್ಟುವಳಿಗೆ ಖರ್ಚು ಬೀಳುವ ನಮ್ಮ ಒಟ್ಟು ವೆಚ್ಚವು ಅದರ ಹಿಂದಿನ ವರ್ಷದಲ್ಲಿ ಆಗಿದ್ದುದಕ್ಕಿಂತಲೂ 38½ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಯಿತು.

1932-33 ನೆಯ ಸಾಲಿನ ತಿದ್ದುಪಾಟಾದ ಅಂದಾಜುಗಳು.

ಚಾಲ್ತಿ ವರ್ಷದ ಬಜೆಟ್ಟಿನಲ್ಲಿ ಒಟ್ಟು 353 ಲಕ್ಷ ರೂಪಾಯಿಗಳ ಹುಟ್ಟುವಳಿಯಾಗುವುದೆಂದೂ, ಹುಟ್ಟುವಳಿಗೆ ಖರ್ಚುಬೀಳುವ ವೆಚ್ಚವು ಒಟ್ಟು 363 ಲಕ್ಷ ರೂಪಾಯಿಗಳಾಗಿ 10 ಲಕ್ಷ ರೂಪಾಯಿಗಳು ವೆಚ್ಚಕ್ಕೆ ಸಾಲದೆಹೋಗುವುದೆಂದೂ ಅಂದಾಜು ಮಾಡಲಾಗಿದ್ದಿತು.

ಕೆಲವು ಬದಲಾವಣೆಗಳು.—ಕೆಲವು ಹುಟ್ಟುವಳಿಯ ಬಾಬುಗಳನ್ನೂ, ವೆಚ್ಚದ ಬಾಬುಗಳನ್ನೂ ಹೆಡ್ಡುಗಳಿಗೆ ಸೇರಿಸುವುದರಲ್ಲಿ ಬದಲಾವಣೆಗಳನ್ನು ಮಾಡಿರುವುದರಿಂದ ಬಜೆಟ್ ಅಂದಾಜುಗಳಿಗೂ, ತಿದ್ದುಪಾಟಾದ ಅಂದಾಜುಗಳಿಗೂ ಕೆಲವು ವ್ಯತ್ಯಾಸಗಳಿರುತ್ತವೆ. ಆದಕಾರಣ, ತಿದ್ದುಪಾಟಾದ ಅಂದಾಜುಗಳನ್ನು ಕುರಿತು ಪ್ರಸ್ತಾಪಿಸುವುದಕ್ಕೆ ಮುಂಚಿತವಾಗಿ ಈ ಬದಲಾವಣೆಗಳನ್ನು ಸೂಚಿಸಿ ಬಜೆಟ್ ಅಂದಾಜುಗಳಿಗೂ, ತಿದ್ದುಪಾಟಾದ ಅಂದಾಜುಗಳಿಗೂ ಯಾವ ಭಾಗಗಳಲ್ಲಿ ವ್ಯತ್ಯಾಸಗಳಿರುತ್ತವೆಯೆಂಬುದನ್ನು ವಿವರಿಸುವುದು ಅನುಕೂಲವೆಂದು ಭಾವಿಸುತ್ತೇನೆ. ಫೈನಾನ್ಸ್ ಮತ್ತು ಟ್ಯಾಕ್ಸೇಷನ್ ಸಮಿತಿಯವರ ಅನುಮತಿಯೊಡನೆ ಮಾಡಿರುವ ಈ ಬದಲಾವಣೆಗಳನ್ನು ಈ ಕೆಳಗೆ ಕಂಡ ಮೂರು ತರಗತಿಗಳಾಗಿ ವಿಂಗಡಿಸಬಹುದು—

(1) ನಿವ್ವಳ ಹುಟ್ಟುವಳಿಗಳಿಂದ ತಮ್ಮ ಸವೆಯಲು ಕಿಮ್ಮತ್ತು ಭರ್ತಿಯ ನಿಧಿಗಳಿಗೆ (ಡಿಪ್ರೀಸಿಯೇಷನ್ ಫಂಡುಗಳಿಗೆ) ಕಂಟ್ರಿಬ್ಯೂಷನುಗಳನ್ನು ಒದಗಿಸುವುದಕ್ಕೆ ಸಾಧ್ಯವಿರುವ ಮೂಲಧನದ ಉದ್ಯಮಗಳ ಲೆಕ್ಕಗಳಲ್ಲಿ ಈ ಕಂಟ್ರಿಬ್ಯೂಷನುಗಳನ್ನು ಈ ವರ್ಷದ ಬಜೆಟ್ಟಿನಲ್ಲಿ ಸೇರಿಸಲಿಲ್ಲ. ಈ ಕಂಟ್ರಿಬ್ಯೂಷನುಗಳು ಅವಶ್ಯಕವಾಗಿವೆ. ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬಿಟ್ಟುಬಿಟ್ಟರೆ ಆ ಉದ್ಯಮಗಳ ನಿವ್ವಳ ಹುಟ್ಟುವಳಿಗಳು ಹೆಚ್ಚಾಗಿ ಕಂಡು ಅವುಗಳ ಆಯವ್ಯಯಗಳ ನಿಜಸ್ಥಿತಿಯ ವಿಚಾರದಲ್ಲಿ ತಪ್ಪು ತಿಳುವಳಿಕೆಗೆ ಅವಕಾಶವಾಗುತ್ತದೆ. ಆದಕಾರಣ, ತಿದ್ದುಪಾಟಾದ ಅಂದಾಜುಗಳಲ್ಲಿ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

(2) ಜಮೀನ್ ಹಕ್ಕುಗಳ ದಾಖಲಾತಿಯ ಶಿಸ್ತಿನ ಪ್ರಕಾರ ವಸೂಲಾಗುವ ಫೀಜುಗಳು ಆ ಶಿಸ್ತನ್ನು ಜಾರಿಗೆ ತರುವ ಸಂಬಂಧದಲ್ಲಿ ಮಾಡಬೇಕಾದ ವೆಚ್ಚಕ್ಕೆ ಹಣವನ್ನೊದಗಿಸುವುದಕ್ಕೋಸ್ಕರ ಉದ್ದಿಷ್ಟವಾಗಿವೆ. ಕ್ಷಾಮನಿವಾರಣೆಯ ಫಂಡಿನ ಮೇಲಿನ ಬಡ್ಡಿಯು ನೀರಾವರಿ ಕಾಮಗಾರಿಗಳ ವೆಚ್ಚಕ್ಕೆ ಹಣವನ್ನೊದಗಿಸುವುದಕ್ಕಾಗಿ ಮಾತ್ರವೇ ವಿನಿಯೋಗಿಸಲ್ಪಡತಕ್ಕದಾಗಿದೆ.

ಪೆಟ್ರೋಲ್ ತೆರಿಗೆಯ ಹುಟ್ಟುವಳಿಯ ಪೈಕಿ ಇಂಡಿಯಾ ಸರ್ಕಾರದವರಿಂದ ನಮ್ಮ ಸಂಸ್ಥಾನದ ಭಾಗಕ್ಕಾಗಿ ಬರುವ ಮೊಬಲಗನ್ನು ನಿರ್ದಿಷ್ಟವಾದ ತರಹೆಯ ರಸ್ತೆಯ ಕಾಮಗಾರಿಗಳಿಗಾಗಿ ಮಾತ್ರವೇ ಉಪಯೋಗಿಸತಕ್ಕದಾಗಿದೆ. ಈ ರೀತಿಯಾಗಿ ಈ ಮೂರು ಬಾಬುಗಳ ಹುಟ್ಟುವಳಿಗಳೂ ಸರ್ವಸಾಮಾನ್ಯವಾದ ಉದ್ದೇಶಗಳಿಗೆ ಹಣವನ್ನೊದಗಿಸುವ ಹುಟ್ಟುವಳಿಗಳಿಗೆ ಸೇರತಕ್ಕವುಗಳಲ್ಲ. ಆದಕಾರಣ, ಅವುಗಳನ್ನೇ ಪ್ರತ್ಯೇಕವಾಗಿಟ್ಟು ಅವುಗಳನ್ನು ಯಾವ ಯಾವ ಕಾರ್ಯಗಳಿಗಾಗಿ ವಿನಿಯೋಗಿಸಬೇಕಾಗಿದೆಯೋ ಆಯಾ ಕಾರ್ಯಗಳಿಗಾಗಿಯೇ ಉಪಯೋಗಿಸತಕ್ಕದಾಗಿದೆ.

(3) ಕೆಲವು ಕಂಟ್ರಿಬ್ಯೂಷನುಗಳಿವೆ. ಅವು ವಸ್ತುತಃ ವೆಚ್ಚದಲ್ಲಿಯೇ ಕಡಿಮೆಯಾಗುವ ಸ್ವಭಾವದವುಗಳಾಗಿವೆ. ಆದಕಾರಣ, ಅಂತಹ ಕಂಟ್ರಿಬ್ಯೂಷನುಗಳನ್ನು ಹುಟ್ಟುವಳಿಗಳ ಬಾಬಿನಲ್ಲಿ ತೋರಿಸುವುದಕ್ಕೆ ಬದಲಾಗಿ ವೆಚ್ಚಗಳ ಬಾಬಿನಲ್ಲಿ ತೋರಿಸುವುದು ಯುಕ್ತವಾಗಿದೆ.

ಈ ಮೇಲ್ಕಂಡ ಬದಲಾವಣೆಗಳನ್ನು ಮಾಡಿದ ತರುವಾಯ ಚಾಲ್ತಿ ವರ್ಷದ ಬಜೆಟ್ಟಿನಲ್ಲಿ 333 ಲಕ್ಷ ರೂಪಾಯಿಗಳ ಹುಟ್ಟುವಳಿ ಬರುವುದೆಂತಲೂ, 356 ಲಕ್ಷ ರೂಪಾಯಿಗಳ ವೆಚ್ಚವಾಗುವುದೆಂತಲೂ, 23 ಲಕ್ಷ ರೂಪಾಯಿಗಳಷ್ಟು ಮೊಬಲಗು ವೆಚ್ಚಕ್ಕೆ ಸಾಲದೇ ಬರುವುದೆಂತಲೂ ಅಂದಾಜು ಬದಲಾಯಿಸಲ್ಪಡುವುದು. ಆದರೆ ತಿದ್ದುಪಾಟಾದ ಅಂದಾಜುಗಳ ಮೇರೆಗೆ 333 ಲಕ್ಷ ರೂಪಾಯಿಗಳ ಹುಟ್ಟುವಳಿಯಾಗುವುದೆಂತಲೂ, 354 ಲಕ್ಷ ರೂಪಾಯಿಗಳ ವೆಚ್ಚವಾಗಿ 21 ಲಕ್ಷ ರೂಪಾಯಿಗಳಷ್ಟು ಹಣವು ವೆಚ್ಚಕ್ಕೆ ಸಾಲದೇ ಬರುವುದೆಂತಲೂ ನಿರೀಕ್ಷಿಸಲಾಗಿದೆ. ಬಜೆಟ್ಟಿಗೂ ತಿದ್ದುಪಾಟಾದ ಅಂದಾಜುಗಳಿಗೂ ಗಣನೀಯವಾದ ಕೆಲವು ವ್ಯತ್ಯಾಸಗಳಿವೆ. ಅವುಗಳನ್ನು ಈ ಮುಂದೆ ವಿವರಿಸುತ್ತೇನೆ. ಆದರೆ, ಈಗ ನಮಗೆ ಕಂಡುಬಂದಿರುವಂತೆ ಚಾಲ್ತಿ ವರ್ಷದ ಆಯವ್ಯಯಗಳ ಸ್ಥಿತಿಯಲ್ಲಿ, ತಿದ್ದುಪಾಟಾದ ಅಂದಾಜುಗಳು ಒಟ್ಟಿನಲ್ಲಿ ಬಹುಮಟ್ಟಿಗೆ ಬಜೆಟ್ ಅಂದಾಜುಗಳಿಗೆ ಸರಿಸಮವಾಗಿವೆ.

ಹುಟ್ಟುವಳಿ—ಬಜೆಟ್ ಅಂದಾಜುಗಳಿಗೂ, ತಾತ್ಕಾಲಿಕವಾದ ವಾಸ್ತವಿಕ ಲೆಕ್ಕಗಳಿಗೂ ಇರುವ ವ್ಯತ್ಯಾಸಗಳ ಪೈಕಿ ಹೆಚ್ಚು ಪ್ರಾಮುಖ್ಯವಾದುವುಗಳನ್ನು ಕುರಿತು ಈಗ ಪ್ರಸ್ತಾಪಿಸುತ್ತೇನೆ. ಹುಟ್ಟುವಳಿಯ ಲೆಕ್ಕಗಳಲ್ಲಿ ಕೆಲವು ಬಾಬುಗಳ ಹುಟ್ಟುವಳಿಯು ಒಟ್ಟು 14 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುತ್ತದೆ. ಆದರೆ ಇದಕ್ಕೆ ಸಮವಾಗುವಂತೆ ಮತ್ತೆ ಕೆಲವು ಬಾಬುಗಳ ಹುಟ್ಟುವಳಿಯು ತಗ್ಗಿಹೋಗಿರುತ್ತದೆ. ಗಂಧದೆಣ್ಣೆಯ ಬಾಬಿನ ಹುಟ್ಟುವಳಿಯು ಬಹುಮಟ್ಟಿಗೆ ಕಡಿಮೆಯಾಗಿರುತ್ತದೆ. ಒಟ್ಟು 26½ ಲಕ್ಷ ರೂಪಾಯಿ ಹುಟ್ಟುವಳಿಯಾಗುವುದೆಂದು ಬಜೆಟ್ ಅಂದಾಜುಗಳಲ್ಲಿ ನಿರೀಕ್ಷಿಸಿದ್ದುದಕ್ಕೆ ವಸ್ತುತಃ 17 ಲಕ್ಷಕ್ಕಿಂತ ಹೆಚ್ಚು ಹುಟ್ಟುವಳಿ ಬರಲಾರದೆಂದು ಕಂಡುಬಂದಿದೆ. ರೈಲ್ವೆಗಳ ಬಾಬಿನ ಹುಟ್ಟುವಳಿಯು ಸುಮಾರು 6 ಲಕ್ಷ ರೂಪಾಯಿಗಳಷ್ಟು ಕಡಿಮೆ ಬಂದಿದೆ. ಇದಕ್ಕೆ ಸವೆಯಲು ಕಿಮ್ಮತ್ತು ಭರ್ತಿಯ ನಿಧಿಗೆ ಕೊಡುತ್ತಿದ್ದ ಕಂಟ್ರಿಬ್ಯೂಷನು ಮೊಬಲಗನ್ನು ಹೆಚ್ಚಿಸಿದುದೂ ಮತ್ತು ಮದ್ರಾಸ್ ಮತ್ತು ಸದರನ್ ಮರಾಠಾ ರೈಲ್ವೆ ಕಂಪನಿಯವರ ಆಡಳಿತದಲ್ಲಿರುವ ನಮ್ಮ ಲೈನುಗಳ ನಿವ್ವಳ ಹುಟ್ಟುವಳಿಯು ಕಡಿಮೆಯಾದುದೂ ಕಾರಣಗಳಾಗಿವೆ. ಅರ್ವಿನ್ ನಾಲೆಯ ಅಸರಿಯ ಜಮೀನುಗಳಿಗೆ ನಾವು ನಿರೀಕ್ಷಿಸಿದ್ದಷ್ಟು ನೀರನ್ನು ಜನಗಳು ತೆಗೆದುಕೊಳ್ಳದೇ ಹೋದುದರಿಂದ ಕೃಷ್ಣರಾಜಸಾಗರ ವಿದ್ಯುಚ್ಛಕ್ತಿ ಮತ್ತು ನೀರಾವರಿ ಕಾಮಗಾರಿಗಳ ನೀರು ಸರದಿಯ ಬಾಬಿನಿಂದ ಬರಬೇಕಾದ ಹುಟ್ಟುವಳಿಯು ಸುಮಾರು 2 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ. ಕಬ್ಬಿಣದ ಕಾರ್ಖಾನೆಯಿಂದ ಸುಮಾರು 1 ಲಕ್ಷ ರೂಪಾಯಿಗಳಷ್ಟು ನಷ್ಟವಾಗಬಹುದೆಂದು ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದುದಕ್ಕೆ 2 ಲಕ್ಷ ರೂಪಾಯಿಗಳಷ್ಟು ನಷ್ಟವಾಗುವುದೆಂದು ಕಂಡುಬಂದಿದೆ. ಚಿನ್ನದ ಬೆಲೆಯು ಹೆಚ್ಚಿರುವುದರಿಂದ ರಾಜಾದಾಯದ ಬಾಬಿನಲ್ಲಿ ನಮ್ಮ ಹುಟ್ಟುವಳಿಯು ಸುಮಾರು 4 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುತ್ತದೆ. ವಿವಿಧ ಬಾಬುಗಳಲ್ಲಿ ಹುಟ್ಟುವಳಿಯು ಹೆಚ್ಚಿರುವುದಕ್ಕೆ ಸೆಕ್ಯೂರಿಟಿಗಳ ಮಾರಾಟದಿಂದ ಬಂದ ಲಾಭವೂ, ಯುದ್ಧದಿಂದ ಆದ ನಷ್ಟವನ್ನು ಕಟ್ಟಿಕೊಡುವುದಕ್ಕಾಗಿ ಜರ್ಮನಿಯವರಿಂದ ಪಾವತಿಯಾದ ಮೊಬಲಗಿನ ಪೈಕಿ ನಮ್ಮ ಭಾಗಕ್ಕೆ ಬರಬೇಕಾದ ಹಣವು ನಮಗೆ ಬಂದುದೂ ಕಾರಣಗಳಾಗಿವೆ. ಸ್ಟ್ಯಾಂಪುಗಳು, ಬೆಂಗಳೂರು ದಂಡಿನ ಹುಟ್ಟುವಳಿ ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳು—ಈ ಬಾಬುಗಳಲ್ಲಿ ನಮ್ಮ ಹುಟ್ಟುವಳಿಗಳು ಅಲ್ಪಸ್ವಲ್ಪ ಹೆಚ್ಚಿರುತ್ತವೆ.

ವೆಚ್ಚ—ಇನ್ನು ವೆಚ್ಚದ ವಿಚಾರ. ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಇಲಾಖೆಗಳಲ್ಲಿ ಕಡಿಮೆಯಾಗಿರುತ್ತವೆಯೆಂಬ ಮುಖ್ಯಾಂಶವನ್ನು ತಾವು ಗಮನಿಸಬಹುದಾಗಿದೆ. ವೆಚ್ಚವನ್ನು ಬಹಳ ಹಿಡಿತದಿಂದ ನಡಸಿ ಹತೋಟಿಯಲ್ಲಿಟ್ಟಿದೆಯೆಂಬ ಅಂಶವು ಇದರಿಂದ ವ್ಯಕ್ತವಾಗುತ್ತದೆ. ಕೆಲವು ಬಾಬುಗಳಲ್ಲಿ ವೆಚ್ಚವು ಸ್ವಲ್ಪಮಟ್ಟಿಗೆ ಹೆಚ್ಚಿರುತ್ತದೆ. ಆದರೆ, ನಾನು ಮೇಲೆ ಸೂಚಿಸಿರುವಂತೆ ಇಲಾಖೆ ಗ್ರ್ಯಾಂಟುಗಳಲ್ಲಿ ಉಳಿತಾಯವಾಗಿರುವ ಮೊಬಲಗುಗಳು ಇವಕ್ಕಿಂತಲೂ ಹೆಚ್ಚಾಗಿವೆ.

ತಿದ್ದುಪಾಟಾದ ಅಂದಾಜುಗಳ ಮೇರೆಗೆ 21 ಲಕ್ಷ ರೂಪಾಯಿಗಳು ವೆಚ್ಚಕ್ಕೆ ಸಾಲದೇ ಕೊರತೆಯಾಗಿರುವುದು ಸರಿಯಷ್ಟೆ. ಈ ಕೊರತೆಯು ಸಾಲತೀರುವೆಯ ನಿಧಿಗೆ ಸುಮಾರು 19 ಲಕ್ಷ ರೂಪಾಯಿಗಳ ಪೂರಾ ಕಂಟ್ರಿಬ್ಯೂಷನನ್ನೂ ಒದಗಿಸಿದನಂತರ ಕಂಡುಬಂದಿರುವುದೆಂದು ಸೂಚಿಸಬೇಕಾಗಿದೆ.

1933-34 ನೆಯ ಸಾಲಿನ ಬಜೆಟ್ ಅಂದಾಜುಗಳು.

ಸಾಮಾನ್ಯ ಲಕ್ಷಣಗಳು—ಮುಂದಿನ ಸಾಲಿನ ಆಯವ್ಯಯಗಳ ಕಾರ್ಯಕ್ರಮವನ್ನು ಕುರಿತು ಈಗ ಪ್ರಸ್ತಾಪಿಸುವೆನು. ಇದನ್ನು ತಮಗೆ ಪ್ರಕಟಪಡಿಸುವುದಕ್ಕೆ ಮೊದಲು ಬಜೆಟ್ಟಿನ ಸಾಮಾನ್ಯ ಲಕ್ಷಣಗಳನ್ನು ವಿವರಿಸುತ್ತೇನೆ. ಪ್ರಪಂಚದ ಆರ್ಥಿಕ ದುಸ್ಥಿತಿಗಳು ನಿವಾರಣೆಯಾಗುವ ಸೂಚನೆಗಳು ಇನ್ನೂ ಕಂಡುಬರುವುದಿಲ್ಲ. ಮತ್ತು ಸ್ಥಿತಿಗಳು ಪೂರ್ವದಲ್ಲಿದ್ದಂತೆ ಸರ್ವಸಾಧಾರಣವಾದ ಯಥಾರೀತಿಗೆ ಪುನಃ ಯಾವಾಗ ಬರುವುವೆಂಬುದನ್ನು ಹೇಳಲು ಇನ್ನೂ ಸಾಧ್ಯವಿಲ್ಲದಂತೆ ಇದೆ. ಆದುದರಿಂದ ಮುಂದಿನ ವರ್ಷದಲ್ಲಿ ಪದಾರ್ಥಗಳ ಧಾರಣೆವಾಸಿಗಳು ಸಾಮಾನ್ಯವಾಗಿ ಹೆಚ್ಚುವುವೆಂದಾಗಲಿ ಅಥವಾ ಉತ್ಪತ್ತಿಯಾದ ವಸ್ತುಗಳಿಗೆ ಹೆಚ್ಚಾದ ಗಿರಾಕಿಗಳು ಬರುವುವೆಂದಾಗಲಿ ನಿರೀಕ್ಷಿಸುವುದೂ, ಅಂಥ ನಿರೀಕ್ಷಣೆಯ ಆಧಾರದಮೇಲೆ ಹುಟ್ಟುವಳಿ ಅಂದಾಜುಗಳನ್ನು ತಯಾರ್ಮಾಡುವುದೂ ಯುಕ್ತವಾಗಿ ತೋರುವುದಿಲ್ಲ. ಆದರೆ, ನಮ್ಮ ಹುಟ್ಟುವಳಿಗೆ ಆಧಾರವಾದ ಹಲವು ಬಾಬುಗಳ ವರಮಾನವು ಈಗಾಗಲೇ ಕೇವಲ ಕನಿಷ್ಠ ಪರಿಮಿತಿಗೆ ಇಳಿದು ಹೋದೀತೆಂದು ನಿರೀಕ್ಷಿಸಬೇಕಾದುದೇನೂ ಇರುವುದಿಲ್ಲ. ಆದುದರಿಂದ ನಮ್ಮ ಹುಟ್ಟುವಳಿಯ ಮುಖ್ಯ ಬಾಬುಗಳ ಪರಿಸ್ಥಿತಿಯು ಒಟ್ಟಿನಲ್ಲಿ ಈಗ ಇರುವಂತೆಯೇ ಮುಂದೆಯೂ ಇರುವುದೆಂದು ಭಾವಿಸಿದ್ದೇವೆ. ಮತ್ತು ಮುಂದಿನ ಸಾಲಿನಲ್ಲಿ ಈ ಬಾಬುಗಳಿಂದ ಬರುವ ಹುಟ್ಟುವಳಿಯನ್ನು ಬಹಳ ಜಾಗರೂಕತೆಯಿಂದ ಅಂದಾಜುಮಾಡಿದ್ದೇವೆ. ಕೆಲವು ಬಾಬುಗಳಲ್ಲಿ ಮಾತ್ರ ಹುಟ್ಟುವಳಿಯು ಸ್ವಲ್ಪ ಮಟ್ಟಿಗೆ ಹೆಚ್ಚಾಗಬಹುದೆಂದು ನಿರ್ದಿಷ್ಟವಾದ ಅಂಶಗಳ ಆಧಾರದ ಮೇಲೆ ನಿರೀಕ್ಷಿಸಲಾಗಿದೆ. ಮುಂದಿನ ವರ್ಷದ ಸಾಲತೀರುವೆಯ ನಿಧಿಯ ಸೆಕ್ಯೂರಿಟಿಗಳ ಮೇಲಣ ಬಡ್ಡಿಯು 6 ಲಕ್ಷ ರೂಪಾಯಿಗಳಾಗುವುದು. ಈ ಮೊಬಲಗನ್ನು ಆ ನಿಧಿಗೆ ಸೇರಿಸುವುದಕ್ಕೆ ಬದಲಾಗಿ ಸಾಮಾನ್ಯ ಹುಟ್ಟುವಳಿಗಳ ಒಂದು ಭಾಗವಾಗಿ ಭಾವಿಸಲಾಗಿದೆ. ನಮ್ಮ ಸಾಲಗಳನ್ನು ಪರಿವರ್ತನಗೊಳಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಆಲೋಚಿಸುತ್ತಿದ್ದೇವೆ. ಈ ಏರ್ಪಾಡುಗಳ ಪ್ರಕಾರ ಸಾಲತೀರುವೆಯ ನಿಧಿಗೆ ನಾವು ಕೊಡುವ ಕಂಟ್ರಿಬ್ಯೂಷನ ಮೊಬಲಗು ಕಡಿಮೆಯಾಗಿ, ಮೇಲೆ ಸೂಚಿಸಲ್ಪಟ್ಟ ಬಡ್ಡಿಯನ್ನು ಹುಟ್ಟುವಳಿಯೆಂತ ಭಾವಿಸಲು ಸಾಧ್ಯವಾಗುವುದು.

ಸಂಬಳಗಳನ್ನು ಕಡಿಮೆಮಾಡಿರುವ ವಿಷಯ—ನಮ್ಮ ಹುಟ್ಟುವಳಿಗಳು ಉತ್ತಮಸ್ಥಿತಿಗೆ ಬಾರದೆ ಮುಗ್ಗಟ್ಟಿನಲ್ಲಿಯೇ ಇರುವುದರಿಂದ ಸಂಬಳಗಳನ್ನು ಪುನಃ ಭರ್ತಿಮಾಡುವುದಕ್ಕೆ ಅವಕಾಶಕೊಡಲು ಸಾಧ್ಯವಿಲ್ಲದೇ ಹೋಗಿದೆ. ಯಾವ ಆರ್ಥಿಕ ಕಾರಣಗಳ ಮೇಲೆ ಈ ಕಡಿತವಾದ ಏರ್ಪಾಡನ್ನು ಕೈಕೊಳ್ಳಬೇಕಾಯಿತೋ ಆ ಕಾರಣಗಳು ಇನ್ನೂ ತಪ್ಪದೆ ಇದ್ದೇ ಇವೆ. ಆದುದರಿಂದ ಮುಂದಿನ ವರ್ಷವೂ ಸಹ ಈ ಏರ್ಪಾಡನ್ನು ಜಾರಿಯಲ್ಲಿಟ್ಟಿರಬೇಕಾದುದು ಅವಶ್ಯಕ. ಆದರೆ ಒಂದು ವಿಚಾರದಲ್ಲಿ ಮಾತ್ರ ಈ ಏರ್ಪಾಡಿನಿಂದುಂಟಾಗುವ ಕಷ್ಟವನ್ನು ಕಡಿಮೆಮಾಡಿ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕಾದುದು ಯುಕ್ತವೆಂದು ಪರ್ಯಾಲೋಚಿಸಲಾಗಿದೆ. ಮಾಹೆಯಾನಾ 40 ರೂಪಾಯಿಗಳ ವರೆಗೆ ಸಂಬಳಗಳನ್ನು ಪಡೆಯುತ್ತಿರುವ ಆಫೀಸರುಗಳು ಈಗ ತಮ್ಮ ತಲಬಿನಲ್ಲಿ ಶೇಕಡಾ 5 ರಷ್ಟು ಮೊಬಲಗನ್ನು ಬಿಟ್ಟುಕೊಡಬೇಕಾಗಿದೆ. ಈ ದರದಲ್ಲಿ ಅವರ ಸಂಬಳಗಳನ್ನು ಬೋತಾಮಾಡಿದರೆ ಅವರಿಗೆ ತೊಂದರೆಯುಂಟಾಗುತ್ತದೆ ಯಾದಕಾರಣ ಅಂಥ ಆಫೀಸರುಗಳ ವಿಷಯದಲ್ಲಿ, ಶೇಕಡಾ 5 ಕ್ಕೆ ಬದಲಾಗಿ ಶೇಕಡಾ 2½ ಯಂತೆ ಸಂಬಳಗಳನ್ನು ಬೋತಾಮಾಡಬೇಕೆಂದು ತೀರ್ಮಾನಿಸಲಾಗಿದೆ.

ಶ್ರೀಮನ್ ಮಹಾರಾಜರವರ ಖಾಸ್ ಬೊಕ್ಕಸದಿಂದಲೂ ಮತ್ತು ರಾಜಮನೆತನದವರ ಪೆನ್ಷನು ಮೊಬಲುಗುಗಳಿಂದಲೂ ಬರುವ ಕಂಟ್ರಿಬ್ಯೂಷನುಗಳು—ಸರ್ಕಾರಕ್ಕೆ ಪ್ರಾಪ್ತವಾಗಿರುವ ಹಣಕಾಸಿನ ಮುಗ್ಗಟ್ಟನ್ನು ಕಡಿಮೆಮಾಡುವ ಉದ್ದೇಶದಿಂದ ಶ್ರೀಮನ್ ಮಹಾರಾಜರವರು ತಮ್ಮ ಖಾಸ್ ಬೊಕ್ಕಸದಿಂದ ಅನುಗ್ರಹಿಸಿರುವ ದ್ರವ್ಯಸಹಾಯವೂ ಮತ್ತು ರಾಜಮನೆತನದವರು ತಮ್ಮ ಪೆನ್ಷನುಗಳಿಂದ ಕೊಡುವ ಹಣವೂ ಸಹ ಮುಂದಿನ ಸಾಲಿನಲ್ಲಿಯೂ ದೊರೆಯುವುವಾಗಿವೆ. ಆದುದರಿಂದ ಈ ಮೊಬಲುಗುಗಳನ್ನು ಮುಂದಿನ ಸಾಲಿನ ಬಜೆಟ್ಟಿನಲ್ಲಿಯೂ ಲೆಕ್ಕಕ್ಕೆ ಸೇರಿಸಿಕೊಳ್ಳಲಾಗಿದೆ.

ಹುಟ್ಟುವಳಿ—ನಾನು ವಿವರಿಸಿರುವ ರೀತಿಯಲ್ಲಿ ರಚಿಸಲ್ಪಟ್ಟಿರುವ ಮುಂದಿನ ಸಾಲಿನ ಬಜೆಟ್ಟಿನಲ್ಲಿ ಒಟ್ಟು 343½ ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನು ನಿರೀಕ್ಷಿಸಿದ್ದೇವೆ; ಮತ್ತು ಹುಟ್ಟುವಳಿಗೆ ಖರ್ಚುಬೀಳುವ ವೆಚ್ಚವು 362 ಲಕ್ಷ ರೂಪಾಯಿಗಳಾಗುವುದೆಂದು ಅಂದಾಜು ಮಾಡಿದೆ. ಆದಕಾರಣ ವೆಚ್ಚಕ್ಕೆ ಸಾಲದೆ ಬರುವ ಕೊರತೆಯು 18½ ಲಕ್ಷ ರೂಪಾಯಿಗಳಷ್ಟು ಆಗುವುದೆಂದು ನಿರೀಕ್ಷಿಸಿದೆ. ಬಜೆಟ್ಟು ಅಂದಾಜುಗಳಿಗೂ ಮತ್ತು ತಿದ್ದುಪಾಟಾದ ಅಂದಾಜುಗಳಿಗೂ ಕೆಲವು ಬಾಬುಗಳಲ್ಲಿ ಮಾತ್ರ ವ್ಯತ್ಯಾಸಗಳಿರುತ್ತವೆ. ಅವುಗಳ ಪೈಕಿ ಮುಖ್ಯವಾದ ವ್ಯತ್ಯಾಸಗಳನ್ನು ಮಾತ್ರ ತಮ್ಮ ಅವಗಾಹನೆಗೆ ತರುತ್ತೇನೆ. ಗಂಧದೆಣ್ಣೆಯ ಮಾರಾಟದಿಂದ ಬರುವ ಒಟ್ಟು ಹುಟ್ಟುವಳಿಯು ಚಾಲ್ತಿ ಸಾಲಿಗಿಂತಲೂ 1 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುವುದೆಂದು ಭಾವಿಸಲಾಗಿದೆ. ಕಳೆದ ಕೆಲವು ಕಾಲದಿಂದಲೂ ಈ ಪದಾರ್ಥದ ಗಿರಾಕಿಯು ವಿಪರೀತವಾಗಿ ತಗ್ಗಿರುವುದೇ ಹೀಗೆ ಭಾವಿಸುವುದಕ್ಕೆ ಕಾರಣ. ನಮ್ಮ ಹುಟ್ಟುವಳಿಯ ಮುಖ್ಯ ಬಾಬುಗಳ ಪೈಕಿ ಇದೂ ಒಂದು ಬಾಬಾಗಿದೆ. ಆದರೆ, ಕಳೆದ ಕೆಲವು ವರುಷಗಳ ಹಿಂದೆ ಈ ಹುಟ್ಟುವಳಿಯು ಒಂದೇ ಸಾರಿ ಬಹುಮಟ್ಟಿಗೆ ತಗ್ಗಿದುದು ಈಗಲೂ ಹಾಗೆಯೇ ತಗ್ಗಿನಲ್ಲಿಯೇ ಇದೆ. ಈ ಬಾಬಿನಿಂದ 1928-29 ನೆಯ ಸಾಲಿನಲ್ಲಿ 39 ಲಕ್ಷ ರೂಪಾಯಿಗಳ ಹುಟ್ಟುವಳಿ ಬಂದಿದ್ದಿತು. ಆದರೆ, ಪ್ರಸ್ತು ತಿಗಳನ್ನು ನೋಡಿದರೆ ಮುಂದಿನ ಸಾಲಿನಲ್ಲಿ ಈ ಬಾಬಿನಿಂದ 6 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹುಟ್ಟುವಳಿಯನ್ನು ನಿರೀಕ್ಷಿಸುವುದು ಯುಕ್ತವೆಂದು ನಮಗೆ ತೋರುವುದಿಲ್ಲ.

ಗಂಧದೆಣ್ಣೆಯು ನಿಕ್ಕಗಟ್ಟಲೆ ಉಪಯೋಗಕ್ಕೆ ಅತ್ಯವಶ್ಯವಾಗಿ ಬೇಕಾದ ಪದಾರ್ಥವಲ್ಲ. ಯಾವಾಗಲಾದರೂ ಸಂತೋಷಕ್ಕಾಗಿ ಉಪಯೋಗಿಸುವ ವಸ್ತುಗಳ ಪೈಕಿ ಒಂದಾಗಿದೆ. ಪ್ರಸ್ತುತದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ದುಸ್ಥಿತಿಯ ದೆಸೆಯಿಂದ ಜನಗಳಿಗೆ ಪದಾರ್ಥಗಳನ್ನು ಕೊಳ್ಳುವ ಶಕ್ತಿಯು ಬಹುಮಟ್ಟಿಗೆ ತಗ್ಗಿಹೋಗಿದೆ; ಹೀಗಿರುವ ಸಂದರ್ಭದಲ್ಲಿ ಈ ಪದಾರ್ಥಕ್ಕೆ ಗಿರಾಕಿಯು ಬಹುಮಟ್ಟಿಗೆ ಕಡಿಮೆಯಾಗುವುದು ಸ್ವಾಭಾವಿಕವಾಗಿಯೇ ಇದೆ. ಗಂಧದೆಣ್ಣೆಯ ಮಾರಾಟವನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾದ ವಿಶಿಷ್ಟ ಏರ್ಪಾಡುಗಳನ್ನೂ ನಾವು ಕೈಕೊಂಡಿದ್ದೇವೆ ಮತ್ತು ಕೈಕೊಳ್ಳುತ್ತಲೂ ಇದ್ದೇವೆ. ಹಾಲಿ ಒದಗಿರುವ ಆರ್ಥಿಕದುಸ್ಥಿತಿಯು ಎಲ್ಲಾ ಕಡೆಗಳಲ್ಲಿಯೂ ನಿವಾರಣೆಯಾಗಿ ಸ್ಥಿತಿಗಳು ಉತ್ತಮಪಟ್ಟಲ್ಲಿ ಈ ಎಣ್ಣೆಗೆ ಗಿರಾಕಿಯು ಪುನಃ ಒದಗಿ, ಈ ಬಾಬಿನಿಂದ ನಮಗೆ ಹೆಚ್ಚು ಕಡಿಮೆಯಾಗಿ ಹಿಂದೆ ಬರುತ್ತಿದ್ದಷ್ಟು ವರಮಾನವೇ ಮುಂದೂ ಬರುವುದೆಂದು ನಿರೀಕ್ಷಿಸಬಹುದಾಗಿದೆ. ಬೆಂಗಳೂರು ದಂಡಿನ ಹುಟ್ಟುವಳಿ ಬಾಬಿನಿಂದ 1½ ಲಕ್ಷ ರೂಪಾಯಿಗಳಷ್ಟು ಹೆಚ್ಚು ವರಮಾನವು ಬರುವುದೆಂದು ನಿರೀಕ್ಷಿಸಿದ್ದೇವೆ. ಕಳೆದ ಯುದ್ಧದಲ್ಲಿ ಉಂಟಾದ ನಷ್ಟಕ್ಕಾಗಿ ಜರ್ಮನಿಯವರು ಪಾವತಿಮಾಡಿದ ಮೊಬಲಗಿನಿಂದ ನಮಗೆ ಚಾಲ್ತಿ ಸಾಲಿನಲ್ಲಿ ಅನಾವೃತ್ತ ಸ್ವಭಾವದ ಒಂದು ವರಮಾನವು ಬಂದಿತು. ಮತ್ತು ಸೆಕ್ಯೂರಿಟಿ ಪತ್ರಗಳ ಮಾರಾಟದಿಂದಲೂ ಸ್ವಲ್ಪ ನಫೆ ಬಂದಿತು. ಮುಂದಿನ ಸಾಲಿನಲ್ಲಿ ಈ ರೀತಿಯಾದ ವರಮಾನದ ಬಾಬುಗಳು ಯಾವುವೂ ಇಲ್ಲದಿರುವುದರಿಂದ ವಿವಿಧ ಬಾಬುಗಳಿಂದ ಬರತಕ್ಕ ವರಮಾನವು ತಗ್ಗಿರುತ್ತದೆ. ವಿದ್ಯುಚ್ಛಕ್ತಿಯ ಹುಟ್ಟುವಳಿಯಲ್ಲಿ ಒಂದು ಲಕ್ಷ ರೂಪಾಯಿಗಳಷ್ಟು ಮೊಬಲಗು ಹೆಚ್ಚಿರುತ್ತದೆ. ವಿದ್ಯುಚ್ಛಕ್ತಿಗೆ ಗಿರಾಕಿಯು ಹೆಚ್ಚುತ್ತಿರುವುದೇ ಈ ಆಧಿಕ್ಯಕ್ಕೆ ಕಾರಣ. ಬೆಂಗಳೂರು ನೀರು ಸರಬರಾಯಿಯ ಹೊಸ ಏರ್ಪಾಡಿನಿಂದ ಬರತಕ್ಕ ಹುಟ್ಟುವಳಿಯು ಮುಂದಿನ ಸಾಲಿನ ಬಜೆಟ್ಟಿನಲ್ಲಿ ಸೇರಿಸಲ್ಪಟ್ಟಿದೆ. ಈ ಹುಟ್ಟುವಳಿಯು ಬಜೆಟ್ಟಿನಲ್ಲಿ ಸೇರುವುದಕ್ಕೆ ಇದೇ ಮೊದಲು. ಈ ಹುಟ್ಟುವಳಿಯ ಲೆಕ್ಕಕ್ಕೆ ಸಂಬಂಧಪಟ್ಟ ಕೆಲವು ಅಂಶಗಳನ್ನು ಇನ್ನೂ ತೀರ್ಮಾನಮಾಡಿರುವುದಿಲ್ಲ. ಈ ತೀರ್ಮಾನದ ನಿರೀಕ್ಷಣೆಯಲ್ಲಿ ಈ ಏರ್ಪಾಡಿನಿಂದ 1½ ಲಕ್ಷ ರೂಪಾಯಿಗಳಷ್ಟು ನಿವ್ವಳ ವರಮಾನವು ಬರುವುದೆಂದು ಸುಮಾರಾಗಿ ಅಂದಾಜುಮಾಡಲಾಗಿದೆ.

ವೆಚ್ಚ—ಯಾವುದೊಂದು ಬಾಬಿನಲ್ಲಿಯೂ ವೆಚ್ಚವು ವಿಶೇಷವಾಗಿ ಹೆಚ್ಚಿರುವುದಿಲ್ಲವಾದ ಕಾರಣ ಈ ವಿಚಾರದಲ್ಲಿ ಸದಸ್ಯರ ಗಮನಕ್ಕೆ ತರಬೇಕಾದ ಮುಖ್ಯಾಂಶವು ಯಾವುದೂ ಇರುವುದಿಲ್ಲ. ಬಹಳಮಟ್ಟಿಗೆ ಎಲ್ಲಾ ಇಲಾಖೆಗಳ ವೆಚ್ಚವೂ ಚಾಲ್ತಿ ಸಾಲಿನ ವೆಚ್ಚದ ಮಟ್ಟದಲ್ಲಿಯೇ ಇದೆ. ಮತ್ತು ಕೆಲವು ಸಂದರ್ಭಗಳಲ್ಲಿ ಚಾಲ್ತಿ ಸಾಲಿನ ವೆಚ್ಚಕ್ಕಿಂತಲೂ ಕಡಿಮೆಯಾಗಿಯೇ ಇದೆ. ಸಿಬ್ಬಂದಿಯನ್ನು ತಗ್ಗಿಸಿದುದರ ಫಲಿತಾಂಶವಾಗಿ ಆಫೀಸರುಗಳನ್ನು ನಿವೃತ್ತರು ಮಾಡಿಸಿದುದರಿಂದ ಪೆನ್ಷನುಗಳ ಬಾಬಿನಲ್ಲಿ ವೆಚ್ಚವು ಸುಮಾರು 1½ ಲಕ್ಷ ರೂಪಾಯಿಗಳಷ್ಟು ಹೆಚ್ಚಿದೆ. ಜರೂರಾದ ಕೆಲವು ಕಟ್ಟಡಗಳನ್ನು ಕಟ್ಟಬೇಕಾಗುವುದರಿಂದಲೂ, ಕೆಲವು ಕುದುರೆಗಳನ್ನು (ರೀಮೌಂಟುಗಳನ್ನು) ಕೊಂಡುಕೊಳ್ಳಬೇಕಾಗುವುದರಿಂದಲೂ ಮತ್ತು ಇನ್ಫೆಂಟ್ರಿ (ಪದಾತಿ) ಸೈನ್ಯದ ಪುನರ್ವ್ಯವಸ್ಥೆಯ ಏರ್ಪಾಡಿನ ಮೇರೆಗೆ ಎರಡು ತುಕಡಿಗಳನ್ನು ಏರ್ಪಡಿಸಬೇಕಾಗುವುದರಿಂದಲೂ ಸೈನ್ಯದ ಬಾಬಿನಲ್ಲಿ ಸುಮಾರು 1½ ಲಕ್ಷ ರೂಪಾಯಿಗಳ ವೆಚ್ಚವು ಹೆಚ್ಚುವುದು.

ಆಯವ್ಯಯದ ಪರಿಸ್ಥಿತಿ.

ಮೇಲೆ ತಿಳಿಸಿದ ಪ್ರಕಾರ ಮುಂದಿನ ಸಾಲಿನ ಆಯವ್ಯಯಗಳಲ್ಲಿ ಹುಟ್ಟುವಳಿಗಿಂತಲೂ ವೆಚ್ಚವು 18½ ಲಕ್ಷ ರೂಪಾಯಿಗಳಷ್ಟು ಹೆಚ್ಚುವುದಾಗಿದೆ. ಈ ಹೆಚ್ಚಿಗೆಯ ಸ್ವಭಾವವೇನು ಮತ್ತು ಯಾವ ಕಾರಣಗಳಿಗಾಗಿ ಇದಕ್ಕೆ ಅವಕಾಶ ಕೊಡಬೇಕಾಗಿ ಬಂದಿತು ಎಂಬುದನ್ನು ಈಗ ನಾನು ವಿವರಿಸುತ್ತೇನೆ. ಉತ್ಪಾದಕವಾದ ಕೆಲವು ಕಾಮಗಾರಿಗಳ ನಿವ್ವಳ ವರಮಾನದಿಂದ ಅವುಗಳ ಸವೆಯಲು ಕಿಮ್ಮತ್ತು ಭರ್ತಿಯ ನಿಧಿಗಳಿಗೆ ಕೊಡಬೇಕಾದ ಕಂಟ್ರಿಬ್ಯೂಷನುಗಳನ್ನು ತೆಗೆದಿಡಲಾಗಿದೆ. ಆದಕಾರಣ ಅಂಥ ಕಾಮಗಾರಿಗಳಿಗಾಗಿ ಅಂದಾಜು ಮಾಡಿರುವ ವೆಚ್ಚಗಳಲ್ಲಿ ಸವೆಯಲು ಕಿಮ್ಮತ್ತು ಭರ್ತಿಯ ನಿಧಿಗಳಿಗೆ ಸಲ್ಲಬೇಕಾದ ಕಂಟ್ರಿಬ್ಯೂಷನು ಮೊಬಲಗುಗಳನ್ನೂ ಸೇರಿಸಿರುತ್ತೇವೆ. ಅಲ್ಲದೆ ಸಾಲತೀರುವೆ ನಿಧಿಗಾಗಿ ಸಾಲಿಯಾನಾ ನಿವಡಾಯಿಸಲ್ಪಡಬೇಕಾದ ಸುಮಾರು 19 ಲಕ್ಷ ರೂಪಾಯಿಗಳ ಪೂರಾ ಮೊಬಲಗನ್ನೂ ಬಜೆಟ್ಟಿನಲ್ಲಿ ಒದಗಿಸಿರುತ್ತೇವೆ. ಇದೂ ಅಲ್ಲದೆ ಮತ್ತೊಂದು ವಿಷಯವನ್ನು ಸಹ ಈ ಸಂಬಂಧದಲ್ಲಿ ಸೂಚಿಸಬೇಕಾಗಿದೆ. ನಮ್ಮ ಸ್ಟರ್ಲಿಂಗ್ ರೈಲ್ವೆ ಸಾಲತೀರುವೆಯ ನಿಧಿಯ ಸೆಕ್ಯೂರಿಟಿಗಳಿಂದ ಸಾಲಿಯಾನಾ ಬರತಕ್ಕ 5 ಲಕ್ಷ ರೂಪಾಯಿಗಳ ಬಡ್ಡಿಯ ವರಮಾನವನ್ನು ಒಂದು ಹುಟ್ಟುವಳಿಯ ಬಾಬನ್ನಾಗಿ ಸೇರಿಸಿಕೊಳ್ಳಬೇಕಾದುದು ಸಹಜವಾಗಿಯೇ ಇದೆ. ಆದರೂ ಸಹ ಈ ಮೊಬಲಗನ್ನು ಮೂಲಧನದ ವೆಚ್ಚಕ್ಕಾಗಿ ಒಂದು ಬಗೆಯ ರಿಜರ್ವಿನಂತೆ ನಾವು ಭಾವಿಸುತ್ತಿದ್ದೇವೆ. ಆದಕಾರಣ, ಮುಂದಿನ ವರುಷದ ಬಜೆಟ್ಟಿನಲ್ಲಿಯೂ ಸಹ ಇದೇ ಏರ್ಪಾಡನ್ನೇ ಬದಲಾಯಿಸದೆ ಇಟ್ಟುಕೊಂಡಿದ್ದೇವೆ. ಈಗ ನಮಗೆ ಪ್ರಾಪ್ತವಾಗಿರುವಂಥ ಅಪೂರ್ವವಾದ ಹಣಕಾಸಿನ ಮುಗ್ಗಟ್ಟಿನ ಕಾಲದಲ್ಲಿ ರಿಜರ್ವ್ ಫಂಡುಗಳಿಗೆ ಹಾಕುವ ಕಂಟ್ರಿಬ್ಯೂಷನುಗಳನ್ನು ಹಂಗಾಮಿಯಾಗಿ ಸ್ವಲ್ಪಕಾಲದವರೆಗೆ ನಿಲ್ಲಿಸುವುದು ಅಥವಾ ಕಡಿಮೆ ಮಾಡುವುದು ನ್ಯಾಯಸಮ್ಮತವಾಗದೆ ಇರಲಾರದು. ಈ ಏರ್ಪಾಡನ್ನು ನಾವು ಅನುಸರಿಸಿದ್ದಲ್ಲಿ ಹುಟ್ಟುವಳಿಯೂ ವೆಚ್ಚವೂ ಸಮಾನವಾಗಿರುವಂತೆ ಸಮತೂಕದ ಬಜೆಟ್ಟನ್ನು ತಯಾರ್ಮಾಡಬಹುದಾಗಿದ್ದಿತು. ಆದರೆ ಈಗಿನ ನಿಜಸ್ಥಿತಿಯು ಹೇಗಿರುವುದೆಂಬುದನ್ನು ತೋರಿಸಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಅದೇ ಪ್ರಕಾರ, ಮಾಮೂಲು ಮೇರೆಗೆ ಎಲ್ಲ ದೇಣಿಗೆಗಳಿಗೂ ಮತ್ತು ರಿಜರ್ವುಗಳಿಗೂ ಹಣವನ್ನೊದಗಿಸಿದ ತರುವಾಯ ಕಂಡುಬರುವ ಸ್ಥಿತಿಯನ್ನು ಬಜೆಟ್ಟಿನಲ್ಲಿ ಕಾಣಿಸಲಾಗಿದೆ. ನಮ್ಮ ಸಾಲಿಯಾನಾ ಬಜೆಟ್ಟುಗಳನ್ನು ಸಮತೂಕಕ್ಕೆ ತರಬೇಕಾದರೆ ಈಗ ಇರುವ 20 ಲಕ್ಷ ರೂಪಾಯಿಗಳ ವ್ಯತ್ಯಾಸವು ಹೋಗಬೇಕು. ಬಜೆಟ್ಟನ್ನು ಕೂಡಿದಮಟ್ಟಿಗೂ ಜಾಗ್ರತೆಯಾಗಿ ಸಮತೂಕಕ್ಕೆ ತರಬೇಕಾದುದು ಅತ್ಯವಶ್ಯಕವೆಂಬ ಅಂಶವೂ, ಅತಿ ಪ್ರಾಮುಖ್ಯವಾದುದೆಂಬ ವಿಷಯವೂ ನಮಗೆ ಸಂಪೂರ್ಣವಾಗಿ ಮನಗಂಡಿದೆ. ಈ ಧ್ಯೇಯವನ್ನೇ ನಾವು ಎಡಬಿಡದೆ ಗಮನದಲ್ಲಿಟ್ಟುಕೊಂಡಿರುತ್ತೇವೆ. ನಮ್ಮ ಹುಟ್ಟುವಳಿಗಳು ಹಠಾತ್ತಾಗಿ ಬಹಳಮಟ್ಟಿಗೆ ಕಡಿಮೆ ಬಿದ್ದುಹೋಗಿ ನಮ್ಮ ಆರ್ಥಿಕಸ್ಥಿತಿಯು ಆಯತಪ್ಪಿಹೋಗಿದೆ. ಅವುಗಳನ್ನು ಪೂರ್ವದ ಸ್ಥಿತಿಗೆ ತರಬೇಕಾದರೆ ಸ್ವಲ್ಪಕಾಲ ಬೇಕಾಗುವುದು. ವೆಚ್ಚವನ್ನು ತಗ್ಗಿಸುವುದಕ್ಕಾಗಿ 1931 ನೆಯ ಮಾರ್ಚಿ ತಿಂಗಳಲ್ಲಿ "ರಿಟ್ರೆಂಚ್‌ಮೆಂಟ್" ಸಮಿತಿಯೊಂದನ್ನು ನೇಮಕಮಾಡಿದುದು ಈ ಸಭೆಯವರಿಗೆ ವೇದ್ಯವೇ ಇದೆ. ಆ ಸಮಿತಿಯವರು ಖರ್ಚುಬಾಬುಗಳಲ್ಲಿ ಸುಮಾರು ಅರ್ಧ ಕೋಟಿ ರೂಪಾಯಿಗಳನ್ನು ಮಿಗುತಾಯ ಮಾಡಬೇಕೆಂದು ಸಲಹೆಗಳನ್ನು ಕೊಟ್ಟರು. ಸರ್ಕಾರದವರು ಅವುಗಳ ಪೈಕಿ ಅನೇಕ ಸಲಹೆಗಳನ್ನು ಒಪ್ಪಿಕೊಂಡು ಸಮಿತಿಯವರು ಸಲಹೆಮಾಡಿದ ಒಟ್ಟು ಮೊಬಲಗಿಗೆ ಸರಿಹೋಗುವಂತೆ ನಾನಾ ರೀತಿಗಳಲ್ಲಿ ವೆಚ್ಚವನ್ನು ಕಡಿಮೆ ಮಾಡಿದರು. ಸಾಧ್ಯವಾಗಿ ಕಂಡುಬಂದ ಎಲ್ಲಾ ಬಾಬುಗಳಲ್ಲಿಯೂ ವೆಚ್ಚವನ್ನು ಮಿತಪಡಿಸಲಾಗಿದೆ. ಮತ್ತು ವಿಶೇಷ ಹಿಡಿತದಿಂದ ವೆಚ್ಚವನ್ನು ನಡಿಸುತ್ತಾ ಹತೋಟಿಯಲ್ಲಿಟ್ಟಿದೆ. ಆದರೂ ಅಲ್ಲಿಲ್ಲಿ ವೆಚ್ಚವನ್ನು ಅಲ್ಪಸ್ವಲ್ಪ ಕಡಿಮೆ ಮಾಡಲು ಇನ್ನೂ ಅವಕಾಶವು ಇಲ್ಲವೆಂಬುದು ನನ್ನ ಅಭಿಪ್ರಾಯವಲ್ಲ. ಈ ವಿಷಯಕ್ಕೆ ನಾವು ನಿರಂತರವೂ ಗಮನ ಕೊಡುತ್ತಲೇ ಬರುತ್ತೇವೆ. ಆದರೆ ನಾನು ಒತ್ತಿ ಹೇಳಬೇಕೆಂದಿರುವ ವಿಷಯವೇನೆಂದರೆ—ಅನೇಕ ವರ್ಷಗಳಿಂದಲೂ ಕ್ರಮಗೊಳಿಸಿ ನಡಿಸುತ್ತಿರುವ ಜನೋಪಯುಕ್ತವಾದ ಏರ್ಪಾಡುಗಳಲ್ಲಿ ಕೆಲವನ್ನು ಕುದ್ವಾಂಗವಾಗಿ ಬಿಟ್ಟುಬಿಡುವುದಾದಲ್ಲಿ ಹೊರತು ಇತರ ಯಾವ ವಿಧದಲ್ಲಿಯೂ ಬಾರಿಭಾರೀ ಮೊತ್ತಗಳನ್ನು ಉಳಿಸುವುದಕ್ಕೆ ಅವಕಾಶವಿಲ್ಲ. ಈಗಿನ ಆರ್ಥಿಕ ದುರವಸ್ಥೆಯೂ, ಹಣಕಾಸಿನ ಮುಗ್ಗಟ್ಟೂ ಕೇವಲ ಅಸಾಧಾರಣವಾದುವುಗಳು. ಆದಕಾರಣ ಇವು ಹೀಗೆಯೇ ನಿಲ್ಲುವುದಿಲ್ಲವೆಂದೂ, ಈಗಿನ ಪರಿಸ್ಥಿತಿಯು ಹೆಚ್ಚು ಕಾಲ ವಿಳಂಬವಿಲ್ಲದೆ ಉತ್ತಮಪಡುವುದೆಂದೂ ಹಾರೈಸುವುದೇನೂ ಅಯುಕ್ತವಲ್ಲ. ಪರಿಸ್ಥಿತಿಯು ಮೇಲ್ಪಡುವುದೆಂದು ನಿರೀಕ್ಷಿಸುವುದು ಯುಕ್ತವೆಂಬುದಕ್ಕೆ ಹುಟ್ಟುವಳಿಯ ಒಂದು ಬಾಬನ್ನು ಒಂದು ಉದಾಹರಣೆಯಾಗಿ ಸೂಚಿಸುತ್ತೇನೆ. 1929-30 ನೆಯ ಸಾಲಿಗೆ ಅಖೈರಾದ ಐದು ವರುಷಗಳಲ್ಲಿ ಗಂಧದೆಣ್ಣೆಯಿಂದ ಸಾಲಿಯಾನಾ ಸರಾಸರಿ 33 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ಹುಟ್ಟುವಳಿಯಾಗುತ್ತಿದ್ದಿತು. ಈ ಹುಟ್ಟುವಳಿಯು ಈಗ ಈ ಮೊಬಲಗಿನಲ್ಲಿ ಅರ್ಧಕ್ಕಿಂತ ಕಡಿಮೆಯಾಗಿರುವುದು ಕೇವಲ ತಾತ್ಕಾಲಿಕವಾಗಿದೆಯೆಂದೇ ಭಾವಿಸಬೇಕು. ಈ ಎಣ್ಣೆಗೆ ಗಿರಾಕಿಯು ಪೂರ್ವಸ್ಥಿತಿಗೆ ಬರುವುದೆಂದೂ, ಆಗ್ಗೆ ಈ ಬಾಬಿನ ಹುಟ್ಟುವಳಿಯು ಹೆಚ್ಚುವುದೆಂದೂ ನಿರೀಕ್ಷಿಸುವುದು ನೆರವೇರಲಾರದ ನಿರೀಕ್ಷೆಯಾಗಿ ಕಾಣುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿನ ಹಲವು ಸರ್ಕಾರಗಳ ಮುಂದಿನ ವರ್ಷದ ಬಜೆಟ್ಟುಗಳಲ್ಲಿ ಹುಟ್ಟುವಳಿಗೂ ವೆಚ್ಚಕ್ಕೂ ಅಲ್ಲಿಗಲ್ಲಿಗೆ ಸರಿಹೋಗುವಂತಿದೆ ಮತ್ತೆ ಕೆಲವು ಸರ್ಕಾರಗಳ ಬಜೆಟ್ಟುಗಳಲ್ಲಿ ಹುಟ್ಟುವಳಿಗಿಂತಲೂ ವೆಚ್ಚವೇ ಹೆಚ್ಚಾಗಿದೆ. ಕೆಲವು ಸರ್ಕಾರಗಳ ಬಜೆಟ್ಟುಗಳಲ್ಲಂತು ವೆಚ್ಚಕ್ಕೆ ಹಣ ಸಾಲದ ಕೊರತೆಯು ವಿಶೇಷ ಹೆಚ್ಚಾಗಿದೆ. 1930-31 ನೆಯ ಸಾಲಿನಲ್ಲಿ ನಮಗೆ 62 ಲಕ್ಷ ರೂಪಾಯಿ ವೆಚ್ಚಕ್ಕೆ ಸಾಲದೆ ಹೋಯಿತು. ಆದರೆ ನಾವು ಕೈಕೊಂಡ ನಾನಾ ಏರ್ಪಾಡುಗಳ ಫಲಿತಾಂಶವಾಗಿ ಮುಂದಿನ ವರ್ಷ 18½ ಲಕ್ಷ ರೂಪಾಯಿಗಳು ಮಾತ್ರ ವೆಚ್ಚಕ್ಕೆ ಕಡಿಮೆಯಾಯಿತು. ಆಯವ್ಯಯದಲ್ಲಿರತಕ್ಕ ಈ ವ್ಯತ್ಯಾಸವು ಆತಂಕಕ್ಕೆ ಕಾರಣವಾಗಬೇಕಾದುದಿಲ್ಲ. ಹುಟ್ಟುವಳಿಗಿಂತ ವೆಚ್ಚವು ಹೆಚ್ಚಾಗಿರುವ ಈಗಿನ ಸ್ಥಿತಿಯು ಕೇವಲ ತಾತ್ಕಾಲಿಕವಾದುದೇ ಸರಿ. ಆದರೆ ಈಗ ಸಾಲದೆ ಬಂದಿರುವ 18½ ಲಕ್ಷ ರೂಪಾಯಿಗಳ ಕೊರತೆಯನ್ನೂ ಸಹ ನಿವಾರಣೆಮಾಡಬೇಕೆಂಬುದನ್ನು ಮುಖ್ಯವಾಗಿಟ್ಟುಕೊಂಡು ನಾನಾ ಇಲಾಖೆಗಳಿಂದಲೂ ಜನಗಳಿಗೆ ದೊರೆಯುತ್ತಿರುವ ಉಪಯೋಗಗಳನ್ನು ತಪ್ಪಿಸುವಂತೆ ಮಿತವ್ಯಯದ ಏರ್ಪಾಡುಗಳನ್ನು ಮಾಡುವುದು ವಿವೇಕವಾಗಿ ಕಾಣುವುದಿಲ್ಲ. ದುರದೃಷ್ಟವಶದಿಂದ ಈ ವಿಷಮಸ್ಥಿತಿಗಳೇ ಮುಂದೆಯೂ ಇರುವುದಾದರೆ ಈ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾದುದು ಅವಶ್ಯಕವಾಗುವುದು. ಆಗ್ಗೆ, ಹಿಂತೆಗೆಯದೆ ಎಂತಹ ತೊಂದರೆಗೂ ಸಿದ್ಧವಾಗಿ ಆ ಏರ್ಪಾಡುಗಳನ್ನು ನಡಿಸಬೇಕಾಗುವುದು.

ಪೊಗದಿಯ ಹೊರೆ.

ನಮ್ಮ ಹುಟ್ಟುವಳಿಯಿಂದ ಕೊಡಬೇಕಾಗಿರುವ ಮತ್ತು ಆಧುನಿಕ ರಾಜನೀತಿಗೆ ಸಮ್ಮತವಲ್ಲದ ಮತ್ತು ರಾಜ್ಯಾಡಳಿತಕ್ಕೆ ಕುಂದಕವನ್ನು ಮಾಡುವ, ತತ್ರಾಪಿ ಈಗ ಇರತಕ್ಕ ತೀವ್ರವಾದ ಹಣಕಾಸಿನ ಮುಗ್ಗಟ್ಟಿನಲ್ಲಿ ಇನ್ನೂ ತೊಂದರೆಯನ್ನುಂಟುಮಾಡುವ ಭಾರವು ಬಂದಿರುವುದು. ಅದನ್ನು ಮುಖ್ಯವಾಗಿ ಗಮನಕ್ಕೆ ತರಬೇಕಾಗಿದೆ. ನಾನು ಸೂಚಿಸುತ್ತಿರುವುದು ಪೊಗದಿಯ ಮಾತು. ಇದರ ವಿಷಯವು ಪದೇಪದೇ ಪ್ರಸ್ತಾಪಿಸಲ್ಪಟ್ಟಿದೆ. ಆದಕಾರಣ ಅದರ ವಿಷಯವನ್ನು ಮತ್ತೆ ವಿಶದವಾಗಿ ಚರ್ಚಿಸಲು ಇಚ್ಛಿಸುವುದಿಲ್ಲ. ಆದರೂ ಪೊಗದಿಯ ನಿವಾರಣೆಯ ನ್ಯಾಯವಾದ ಪರಿಹಾರವು ನಮಗೆ ದೊರೆಯುವ ವರೆಗೂ ಅದರ ವಿಚಾರವನ್ನು ಸೂಚಿಸದೇ ಬಿಡುವುದು ಸಾಧ್ಯವೇ ಇಲ್ಲ. ನಮ್ಮಿಂದ ಪೊಗದಿಯನ್ನು ತೆಗೆದುಕೊಳ್ಳುತ್ತಿರುವುದು ಅನ್ಯಾಯವೆಂಬುದನ್ನು ಅನೇಕ ವರ್ಷಗಳಿಂದಲೂ ನಾವು ವಿಶದಪಡಿಸುತ್ತಲೇ ಇದ್ದೇವೆ. ಇದು ಅಯುಕ್ತವೂ ಅನ್ಯಾಯವೂ ಆಗಿದೆಯೆಂಬ ಅಂಶವೇನೋ ಈಚೆಗೆ ಅಂಗೀಕೃತವಾಗಿದೆ. ಆದಾಗ್ಯೂ ಅದರ ಫಲವಾಗಿ ನಮಗೆ ದೊರೆಯಬೇಕಾದ ಪರಿಹಾರವು ಮಾತ್ರ ಇನ್ನೂ ದೊರೆಯಲಿಲ್ಲ. ಈಗಾಗಲೇ ನಾವು ಅರ್ಧಕೋಟಿ ರೂಪಾಯಿಗಳ ವರೆಗೂ ನಮ್ಮ ವೆಚ್ಚವನ್ನು ತಗ್ಗಿಸಿದ್ದೇವೆ. ಆದರೂ ಕೂಡ ನಮ್ಮ ಆಯವ್ಯಯಗಳನ್ನು ಸಮತೂಕಕ್ಕೆ ತರುವುದಕ್ಕಾಗಿ ಹಣವನ್ನು ಮಿಗಿಸುವುದಕ್ಕೆ ಇನ್ನು ಹೆಚ್ಚಾದ ಅವಕಾಶವಿಲ್ಲ. ವರಮಾನವು ಕಡಿಮೆಯಾಗಿರುವುದರಿಂದಲೂ ಮತ್ತು ಎಲ್ಲಿಲ್ಲಿಯೂ ವಿಶೇಷವಾಗಿ ವೆಚ್ಚವನ್ನು ಬೋತಾಮಾಡಿರುವುದರಿಂದಲೂ ಆಡಳಿತಕ್ಕೆ ಕೇವಲ ಅವಶ್ಯಕವಾದ ಖರ್ಚುವೆಚ್ಚಗಳಿಗೂ ಸಹ ಹಣವನ್ನೊದಗಿಸುವುದು ಅಸಾಧ್ಯವಾಗಿ ಪರಿಣಮಿಸಿದೆ. ಆದರೂ ಇಂತಹ ಕಾಲದಲ್ಲಿಯೂ ವರುಷ ವರುಷವೂ ನಾವುಗಳು 24½ ಲಕ್ಷ ರೂಪಾಯಿಗಳನ್ನು ಪೊಗದಿಯಾಗಿ ಕೊಡಬೇಕಾಗಿದೆ. ಇಂಡಿಯಾ ಸರಕಾರದವರು ವಿಧಾಯಕ ಮಾಡಿರುವ ಸುಂಕದ ತೆರಿಗೆಗಳೇ ಮುಂತಾದ ನಾನಾ ಬಾಬುಗಳಿಂದ ಇಂಡಿಯಾ ಸರಕಾರದವರಿಗೆ ಸಂಸ್ಥಾನದಿಂದ ಸಲ್ಲುತ್ತಿರುವ ಭಾರೀ ಮೊಬಲಗಿನ ಜೊತೆಗೆ ಈ ಭಾರೀ ಮೊಬಲಗೂ ಸಹ ಸಂದಾಯವಾಗುತ್ತಿದೆ. ಇಂಡಿಯಾದೇಶಕ್ಕೆ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಟ್ಟು ಅದರ ಪ್ರಕಾರ ನಾನಾ ಪ್ರಾಂತ್ಯಗಳವರು ವಹಿಸಬೇಕಾದ ಕೇಂದ್ರ ಸರ್ಕಾರದ ವೆಚ್ಚದ ಭಾಗವು ಯುಕ್ತರೀತಿಯಲ್ಲಿ ತೀರ್ಮಾನವಾದಾಗ್ಗೆ ಮೈಸೂರು ಸಂಸ್ಥಾನದವರು ಕೊಡಬೇಕಾಗಬಹುದಾದಕ್ಕಿಂತ ಕಡಿಮೆಯಿಲ್ಲದೆ ಈ ಸುಂಕದ ತೆರಿಗೆ ಮುಂತಾದ ಪರೋಕ್ಷವಾದ ಬಾಬುಗಳಿಂದ ಪಾವತಿಯಾಗುತ್ತಲೇ ಇದೆ. ಆದಕಾರಣ ಅದರ ಜೊತೆಗೆ ಪ್ರತ್ಯಕ್ಷವಾಗಿ ವರುಷ ವರುಷವೂ ತೆಗೆದುಕೊಳ್ಳುತ್ತಿರುವ ಈ ಪೊಗದಿಯ ಹಣವು ಸುತರಾಂ ಅನ್ಯಾಯವಾದುದು. ಈ ಪೊಗದಿಯನ್ನು ಕೂಡಲೆ ತೆಗೆದುಹಾಕಬೇಕೆಂಬ ನಮ್ಮ ಕೋರಿಕೆಯು ಸಾಧುವಾದುದೆಂದು ಅಧಿಕಾರಿಗಳಿಗೆ ಮನದಟ್ಟು ಮಾಡಲು ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಏಕಪ್ರಕಾರವಾಗಿ ಮಾಡುತ್ತಿರುವ ಪ್ರಯತ್ನಗಳು ಸಫಲವಾಗಿ ನೆರವೇರಲೆಂಬುದೂ, ನಮ್ಮ ಸಂಸ್ಥಾನದ ಹುಟ್ಟುವಳಿಯಿಂದ ವಹಿಸಬೇಕಾಗಿರುವ ದುರ್ಭರವಾದ ಈ ಪೊಗದಿಯ ಹೊರೆಯು ನಿವಾರಣೆಯಾಗಿ ಅದರ ದೆಸೆಯಿಂದ ಆಡಳಿತಕ್ಕೆ ಹಣ ಸಾಲದಂತಾಗಿರುವ ಪರಿಸ್ಥಿತಿಯು ಪರಿಹಾರವಾಗಿ ಅನುಕೂಲವಾಗಲೆಂಬುದೂ ನಮ್ಮೆಲ್ಲರ ಹಾರೈಕೆಯಾಗಿದೆ.

ಮೂಲಧನದ ಆತಕ.

ನಾವು ಇಲ್ಲಿಯವರೆಗೆ ಹುಟ್ಟುವಳಿಗೆ ಸಂಬಂಧಪಟ್ಟ ಆಯವ್ಯಯದ ವಿಷಯವನ್ನು ಹೇಳಿದ್ದಾಯಿತು. ಈಗ ನಮ್ಮ ಮೂಲಧನಕ್ಕೆ ಸಂಬಂಧಪಟ್ಟ ಆತಕದ ವಿಷಯವನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಸಲಾಗುವುದು. ನಮ್ಮ ಸಾಲದ ಸ್ವಭಾವವೆಂತಹುದು, ಅದು ಎಷ್ಟಿದೆ, ಅದರ ಬಡ್ಡಿ ಮೊದಲಾದ ಬಾಬುಗಳಿಗೆ ತಗಲುವ ಹಣವೆಷ್ಟು, ಅದರಿಂದ ನಾವು ಏರ್ಪಡಿಸಿರುವ ಮೂಲಧನದ ಆಸ್ತಿಗಳಾವುವು,—ಈ ವಿಚಾರಗಳಲ್ಲಿ ಸರಿಯಾದ ತಿಳುವಳಿಕೆಯನ್ನು ಇಟ್ಟುಕೊಳ್ಳುವುದು ಅತ್ಯಾವಶ್ಯಕ. ಹಾಗೆ ಮಾಡಿದಲ್ಲಿ ತಪ್ಪು ಅಭಿಪ್ರಾಯಗಳುಂಟಾಗುವ ಸಂಭವವೇನೂ ಇರುವುದಿಲ್ಲ.

ಮೂಲಧನದ ಕಾರ್ಯಕ್ರಮಗಳು 1933-34.

ಚಾಲ್ತಿ ಸಾಲಿನೊಡನೆ ಅಖೈರಾದ ಮೂರು ವರ್ಷಗಳಲ್ಲಿ ಮೂಲಧನದ ಕಾಮಗಾರಿಗಳಿಗೆ ಸರಾಸರಿ ಸಾಲಿಯಾನಾ 70 ಲಕ್ಷ ರೂಪಾಯಿಗಳು ವೆಚ್ಚವಾಗಿವೆ. ಆದರೆ ಮುಂದಿನ ವರುಷದ ಬಜೆಟ್ಟಿನಲ್ಲಿ ಈ ಕಾಮಗಾರಿಗಳಿಗಾಗಿ 30 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದೆ. ಈ ರೀತಿಯಲ್ಲಿ ಈ ಕಾಮಗಾರಿಗಳಲ್ಲಿನ ಖರ್ಚು ವಿಶೇಷವಾಗಿ ಕಡಿಮೆಯಾಗಿದೆ. ಹಾಲಿ ಕೆಲಸ ನಡೆಯುತ್ತಿರುವ ಕಾಮಗಾರಿಗಳಿಗೆ ಮಾತ್ರ ಹಣವನ್ನು ಹಂಚಿರುವುದಲ್ಲದೆ ಇಂತಹ ಕಾಮಗಾರಿಗಳನ್ನೂ ಸಹ ಹಣಕಾಸಿನ ಮುಗ್ಗಟ್ಟಿನಿಂದ ನಿಧಾನವಾಗಿ ನಡಿಸುವಂತೆ ಮಾಡಿ ಕನಿಷ್ಠ ಪಕ್ಷ ಬೇಕಾದ ಗ್ರ್ಯಾಂಟುಗಳನ್ನು ಮಾತ್ರ ಬಜೆಟ್ಟಿನಲ್ಲಿ ಸೇರಿಸಲಾಗಿದೆ.

ಸಾಲದ ಪರಿಸ್ಥಿತಿ.

ಈಗ ನಾವು ಮಾಡಿರುವ ಸಾಲವು ಒಟ್ಟಿನಲ್ಲಿ 737½ ಲಕ್ಷ ರೂಪಾಯಿಗಳಷ್ಟು ಇದೆ. ಈ ಸಾಲಕ್ಕೆ ಪ್ರತಿಯಾಗಿ 261½ ಲಕ್ಷದಷ್ಟು ಸಾಲತೀರುವೆಯ ನಿಧಿಗಳಿವೆ. ಈ ನಿಧಿಗಳೆಲ್ಲಾ ಸೆಕ್ಯೂರಿಟಿಗಳ ರೂಪದಲ್ಲಿವೆ. ಇನ್ನು ಉಳಿಯುವ ಸಾಲವೆಂದರೆ 476 ಲಕ್ಷ ರೂಪಾಯಿಗಳು. ಇದು ನಾವು ರೈಲ್ವೆಗಳಿಗಾಗಿಯಾಗಲಿ ಅಥವಾ ಕೃಷ್ಣರಾಜಸಾಗರ ವಿದ್ಯುಚ್ಛಕ್ತಿ ಮತ್ತು ನೀರಾವರಿ ಕಾಮಗಾರಿಗಳಿಗಾಗಿಯಾಗಲಿ ಹಾಕಿರುವ ಹಣಕ್ಕಿಂತಲೂ ಬಹುಮಟ್ಟಿಗೆ ಕಡಿಮೆಯಾಗಿದೆ. ನಾವು ಮಾಡಿರುವ ಸಾಲದ ಹಣದಿಂದ ಈ ರೀತಿಯಾಗಿ ಲಾಭದಾಯಕವಾದ ಮೂಲಧನದ ರೂಪದ ಸ್ವತ್ತುಗಳೇ ಏರ್ಪಟ್ಟಿರುತ್ತವೆ. ನಮಗೆ ಲಾಭದಾಯಕವಲ್ಲದ ಅಥವಾ ನಿರರ್ಥಕವಾದ ಯಾವ ಏರ್ಪಾಡುಗಳಿಗೂ ಸಾಲದ ಹಣವನ್ನು ವೆಚ್ಚಮಾಡಿಲ್ಲ. ಸಾಲಗಳ ಪೈಕಿ ಕ್ಲುಪ್ತವಾದ ಅವಧಿಯು ನಿಗದಿಯ

(6ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.
೧೯೩೩ನೇ ಜೂನ್ ತಾ|| ೧೨ನೇ ಸೋಮವಾರ.

ಧರ್ಮಾಚರಣೆ.

ವೇದಾವಲಂಬಿಗಳಾದ ಭಾರತೀಯರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸಂಪಾದಿಸಬೇಕು. ಈ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೆಂಬುದೇ ಪರಮಪುರುಷಾರ್ಥವು. ಇದನ್ನು ಧರ್ಮ ಅರ್ಥ ಕಾಮಗಳೆಂಬ ತ್ರಿವಿಧಪುರುಷಾರ್ಥಗಳಿಲ್ಲದೆ ಸಾಧಿಸಲು ಶಕ್ಯವಿಲ್ಲ. ಇವು ಮೂರೂ ಮನಸ್ಸನ್ನು ಶುದ್ಧಗೊಳಿಸುವ ಉಪಾಯಗಳಾಗಿವೆ. ಇವುಗಳಲ್ಲಿ ಧರ್ಮವೆಂಬುದು ಮಾತ್ರ ಅತ್ಯಂತ ಮುಖ್ಯವಾದುದು. "ಯತೋಽಭ್ಯುದಯ ನಿಶ್ಶ್ರೇಯಸ ಸಿದ್ಧಿಸ್ಸಧರ್ಮಃ" ಇಹಸುಖವೂ ಪಾರಲೌಕಿಕಸುಖವೂ ಯಾವುದರಿಂದುಂಟಾಗುವುದೋ ಅದೇ ಧರ್ಮವೆಂದು ಕಣಾದರು ಹೇಳಿರುವ ವಾಕ್ಯವನ್ನು ಪರಿಶೀಲಿಸಿದ್ದಾದರೆ ಧರ್ಮದಿಂದಲೇ ಅರ್ಥಕಾಮಗಳು ಸಿದ್ಧಿಸುವವು. ಅರ್ಥಕಾಮಗಳ ಅನುಭವವೇ ಐಹಿಕಸೌಖ್ಯವೆನಿಸುತ್ತದೆ. ಮೋಕ್ಷವೇ ಪಾರಲೌಕಿಕಸುಖವೆನಿಸುತ್ತದೆ. ಈ ಮೂರಕ್ಕೂ ಧರ್ಮವೇ ಮೂಲವು. ಧರ್ಮರಹಿತನಿಗೆ ಅರ್ಥವಿಲ್ಲ. ಕಾಮವಿಲ್ಲ. ಮೋಕ್ಷವೆಂಬುದಂತೂ ಮೊದಲೇ ಇಲ್ಲ. ಆದುದರಿಂದ ಭಾರತೀಯರ ಜೀವಮಾನವೆಲ್ಲ ಧರ್ಮವೆಂಬಾಧಾರದಲ್ಲಿಯೇ ನಿಂತಿರುತ್ತದೆ. ಇಂಥ ಆಧಾರಭೂತವಾದ ಧರ್ಮವನ್ನು ತೆಗೆದುಹಾಕಿ ಇನ್ನುಳಿದ ಅರ್ಥಕಾಮಮೋಕ್ಷಗಳನ್ನು ಪಡೆಯುತ್ತೇನೆಂಬುವವನು ಭೂಮ್ಯಾಧಾರವಿಲ್ಲದೆ ಮನೆ ಕಟ್ಟುತ್ತೇನೆಂದು ಪ್ರಯತ್ನಿಸುವ ಮೂರ್ಖಮಾನವನಿಗೆ ಸಮಾನನಾಗುತ್ತಾನೆ. ಇದರಿಂದ ನಮ್ಮ ಭಾರತಭೂಮಿಯಲ್ಲಿ ಜನ್ಮಧಾರಣಮಾಡಿದ ಲೌಕಿಕರೇ ಆಗಲಿ, ವೈದಿಕರೇ ಆಗಲಿ ಯಾರೂ ಧರ್ಮನಿಬಂಧನೆಯನ್ನು ಮೀರಿ ವರ್ತಿಸಬಾರದು. ಆದರೆ ಈಗಿನ ನವೀನರಾಜ್ಯಾಂಗದಲ್ಲಿ ಪ್ರವೇಶಿಸಿದ ಹಲಕೆಲವರು ಕೇವಲ ಐಹಿಕಸೌಖ್ಯವೊಂದರಲ್ಲಿಯೇ ದೃಷ್ಟಿಯನ್ನಿಟ್ಟು ತಮ್ಮ ಇಹಸುಖಕ್ಕೆ ಪ್ರತಿಬಂಧಕವನ್ನುಂಟುಮಾಡುವ ಧರ್ಮಗಳಾವುವುಂಟೋ ಅಂಥವುಗಳನ್ನೆಲ್ಲಾ ತೆಗೆದು ಅನುಕೂಲವಾದವುಗಳೇನಾದರೂ ಇದ್ದರೆ ಅಂಥ ಧರ್ಮಗಳನ್ನು ಅಂಗೀಕರಿಸುತ್ತೇವೆಂದು ಹೇಳುವರು. ಇಂಥವರು ಈಗೀಗ ನಮ್ಮ ಭರತಖಂಡದಲ್ಲಿ ಅನೇಕರು ಕಾಣಿಸಿಕೊಳ್ಳುತ್ತಲಿದ್ದಾರೆ. ಇವರ ಮಾತುಗಳನ್ನು ನಾವು ಒಪ್ಪುವುದಾದರೆ ಅಲ್ಲಿಗೆ ಮನುಷ್ಯನಿಗೆ ಇಹಸೌಖ್ಯವೆಂಬುದೊಂದೇ ಪ್ರಧಾನವಾದುದೆಂದು ಹೇಳಿದಂತಾಯಿತು. ನಮ್ಮ ಭರತಖಂಡದಲ್ಲಿ ಅನಾದಿಕಾಲದಿಂದ ಬಂದ ಶ್ರುತಿಸ್ಮೃತಿಪುರಾಣಗಳು ಯಾವವಿಧವಾದ ಇಹಸುಖವನ್ನು ಪಡೆಯಬೇಕಾಗಿದ್ದರೂ ಆ ಸುಖಸಾಧನಗಳಾದ ಉಪಾಯಗಳೆಲ್ಲವೂ ಧರ್ಮಕ್ಕೆ ವಿರೋಧಗಳಾಗಿರಕೂಡದೆಂದೂ, ಧರ್ಮಕ್ಕೆ ವಿರುದ್ಧಗಳೆಂದು ಕಂಡುಬರುವ ಅಂಥ ಸುಖಸಾಧನೋಪಾಯಗಳನ್ನೆಲ್ಲ ಬಿಟ್ಟುಬಿಡಬೇಕೆಂದೂ ಪದೇ ಪದೇ ಭಾರತೀಯರನ್ನು ಎಚ್ಚರಿಸುತ್ತಿದ್ದರೂ ಅಂಥ ವೇದಶಾಸ್ತ್ರಪುರಾಣಗಳ ಭಯವಿಲ್ಲದೆ ಇಹಸುಖಕ್ಕೆ ವಿರುದ್ಧವಾದ ಧರ್ಮಗಳನ್ನು ಬಿಡುತ್ತೇವೆಂದು ಪ್ರತಿಭಟಿಸುವುದು ಮಹಾಮೂರ್ಖರ ಕರ್ತವ್ಯವಲ್ಲದೆ ವಿವೇಕಿಗಳ ಕರ್ತವ್ಯವಲ್ಲ.

ಯಾವನು ಧರ್ಮವನ್ನು ಒತ್ತರಿಸಿ ಕೇವಲ ಐಹಿಕಸೌಖ್ಯವೊಂದರಲ್ಲಿಯೇ ಲೋಲನಾಗುವನೋ ಅವನು ವಿಷಯಲಂಪಟನೆಂದೂ ಪುಣ್ಯಪಾಪವಿಚಾರವಿಲ್ಲದವನೆಂದೂ ಎರಡುಕಾಲುಳ್ಳ ವಿಲಕ್ಷಣಪಶುವೆಂದೂ ಶಾಸ್ತ್ರವು ಹೇಳುತ್ತದೆ. ಇಂಥ ಚಾರ್ವಾಕನಿಗೆ ಮಾಡುವ ಧರ್ಮೋಪದೇಶವು ಕಿವುಡನ ಕಿವಿಯಲ್ಲಿ ಜಪಮಾಡಿದಂತೆ ವ್ಯರ್ಥವಾಗಿಹೋಗುತ್ತದೆ. ಯಾರು ದೇವರುಂಟು, ಪರಲೋಕವುಂಟು, ಪಾಪಕರ್ಮಗಳುಂಟು, ಪುಣ್ಯಕರ್ಮಗಳುಂಟು, ಜನ್ಮಾಂತರಗಳುಂಟೆಂದು ನಂಬಿರುವರೋ ಅವರಿಗೆ ಮಾತ್ರ ಈ ಶ್ರುತಿಸ್ಮೃತ್ಯಾಗಮಾದಿ ಶಾಸ್ತ್ರಗಳು ಸಂಬಂಧಿಸುತ್ತವೆಯೇ ಹೊರತು ಉಳಿದವರಿಗೆ ಸಂಬಂಧಿಸುವುದಿಲ್ಲ. ಇಂಥ ಧರ್ಮದ್ವೇಷಿಗಳಿಗೆ ಶ್ರುತ್ಯಾಗಮಾದಿಗಳನ್ನು ಕಂಡರೆ ವಿಷಕಾರುವುದು ಸ್ವಭಾವವಾಗಿದೆ.

~~ಷೋಡಶಕಲಾಭರಿತನಾದ ಚಂದ್ರನು ರಾತ್ರಿಯಲ್ಲಿ ಉಪಪತಿಯನ್ನು ಹುಡುಕಿಕೊಂಡು ಹೊರಟ ಜಾರಿಣಿಗೂ, ಕದಿಯುವುದಕ್ಕಾಗಿ ಹೊರಟ ಚೋರನಿಗೂ ಅನಿಷ್ಟಕರವಾಗಿಯೇ ತೋರಿದರೂ ಅಷ್ಟುಮಾತ್ರದಿಂದ ಚಂದ್ರನು ನಿಂದಾಸ್ಪದನಾದಂತೆ, ಸ್ವೇಚ್ಛಾವಿಹಾರಕ್ಕೆ ತಡೆಕಟ್ಟುವ ಧರ್ಮವನ್ನು ದ್ವೇಷಿಸಿದ ಮಾತ್ರದಿಂದ ಧರ್ಮದ ಪಾವಿತ್ರ್ಯವು ಕಡಿಮೆಯಾಗಲಾರದು. ಈಗಿನ ವಾತಾವರಣದಲ್ಲಿ ಇತರ ಜನಾಂಗದಲ್ಲಿ ನಡೆಯಲುಪಕ್ರಮಿಸಿದ ಧರ್ಮವಿದ್ವೇಷಬುದ್ಧಿಯ ಸಂಸರ್ಗಜಾಡ್ಯವು ವೀರಶೈವಜನಾಂಗದಲ್ಲಿಯೂ ಹಬ್ಬಲು ಹತ್ತಿರುವುದನ್ನು ನೋಡಿದರೆ ಬಹು ವಿಷಾದವೆನಿಸುತ್ತದೆ. ವೀರಶೈವನು ಯಾವಾಗಲೂ ತನ್ನ ದೇಹದಲ್ಲಿ ದೇವತಾಸಂಬಂಧವುಳ್ಳವನಾಗಿರುವುದರಿಂದ ಈತನು ಅಧರ್ಮಮಾರ್ಗದ ದಿಕ್ಕನ್ನು ಕಣ್ಣಿನಿಂದ ಸಹ ನೋಡಕೂಡದು. ಲಿಂಗಾಂಗಿಯಾದ ಮಾನವನು ಎಂದು ಅಧರ್ಮಕ್ಕೆ ಬೀಳುವನೋ ಅಂದೇ ತನ್ನ ದೇಹದಲ್ಲಿ ಧರಿಸಿರುವ ಲಿಂಗದಲ್ಲಿರುವ ದೇವತ್ವವು ನಿಲ್ಲುವುದಿಲ್ಲ. ಪ್ರಪಂಚದಲ್ಲಿ ಮತಾಚಾರ್ಯರು ಮೋಕ್ಷವನ್ನು ಹೊಂದಲು ಮಾನವರಿಗೆ ಯಾವ ಯಾವ ಧರ್ಮಮಾರ್ಗಗಳನ್ನು ಶಾಸ್ತ್ರಮುಖದಿಂದ ಉಪದೇಶಿಸಿರುವರೋ ಆಯಾಯ ಧರ್ಮಮಾರ್ಗವನ್ನು ಬಿಡದೆ ಸಕಲ ವಿಧವಾದ ಐಹಿಕ ಸುಖಾದಿಗಳನ್ನು ಪಡೆಯಬೇಕಾದುದು ಪ್ರತಿಯೊಬ್ಬ ಮತೀಯರ ಕರ್ತವ್ಯವು. ಹಿಂದೆ ಸಾರ್ವಭೌಮ ಪದವಿಯನ್ನು ಅನುಭವಿಸುತ್ತಿದ್ದ ರಾಜಾಧಿರಾಜರು ತಾವು ಪ್ರಪಂಚವನ್ನೇ ಬದಲಾಯಿಸುವ ಶಕ್ತಿಯನ್ನು ಪಡೆದಿದ್ದರೂ, ಧರ್ಮವೆಂಬ ಎಲ್ಲೆಯನ್ನು ಮೀರಿ ಯಾರೂ ರಾಜ್ಯವನ್ನಾಳಲಿಲ್ಲ. ಈಗಲೂ ಇಡೀ ಭರತಖಂಡವನ್ನಾಳುತ್ತಿರುವ ಬ್ರಿಟಿಷ್ ಪ್ರಭುಗಳೂ ಸಹ ಅನೂಚಾನವಾಗಿ ಬಂದ ತಮ್ಮ ಮತಧರ್ಮಗಳನ್ನು ಬಿಟ್ಟಿಲ್ಲ. ಹೀಗಿದ್ದರೂ ಹಿಂದಿನ ಕಾಲವೇ ಬೇರೆ, ಈಗಿನ ಕಾಲವೇ ಬೇರೆ, ಆಗಿನಕಾಲಕ್ಕೆ ಆ ಧರ್ಮವು ಶೋಭಿಸಿದ್ದರೂ ಈಗಿನಕಾಲದಲ್ಲಿ ಅದು ಶೋಭಿಸದೆಂದು ಹೇಳಿಕೊಂಡು ಸನಾತನಧರ್ಮಾನುಷ್ಠಾನಗಳಿಗೆ ತರ್ಪಣ ಕೊಡುವುದು ಯಾರಿಗೂ ಭೂಷಣವಲ್ಲ. ಅಂಥ ಬದಲಾವಣೆಗಳನ್ನೆಲ್ಲ ಕೇವಲ ಐಹಿಕಸೌಖ್ಯಸಾಧಕಗಳಾದ ಪ್ರಾಪಂಚಿಕ ವಿಷಯಗಳಲ್ಲಿ ಉಪಯೋಗಿಸಬೇಕಲ್ಲದೆ ಧರ್ಮವನ್ನೇ ಪ್ರಾ~~ [illegible] ಧರ್ಮವೆಂಬುದು ಯಾವಾಗಲೂ ಬದಲಾವಣೆಯಾಗತಕ್ಕದ್ದಲ್ಲ. ಹಾಗೆ ಧರ್ಮಬದಲಾವಣೆಯಾಗುವುದಾದರೆ ಅಂಥ ಅಸ್ಥಿರವಾದ ಧರ್ಮದಿಂದ ಯಾವುದುತಾನೆ ಸಿದ್ಧಿಸೀತು? ಆದುದರಿಂದ ಮುಕ್ತಿರೂಪವಾದ ಕಾರ್ಯವು ಹೇಗೆ ಸದಾ ಏಕರೂಪವಾಗಿರುವುದೋ ಅದಕ್ಕೆ ಕಾರಣರೂಪವಾದ ಧರ್ಮವೂ ಏಕರೂಪವಾಗಿರಬೇಕಾಗುತ್ತದೆ. ಕಾರಣದಲ್ಲಿದ್ದ ಗುಣಗಳೇ ಕಾರ್ಯದಲ್ಲಿ ಇರಬೇಕಾಗುತ್ತವೆ. ಧರ್ಮವು ಅಸ್ಥಿರವಾದರೆ ಅದರಿಂದಾಗುವ ಮುಕ್ತಿಯೂ ಅಸ್ಥಿರವಾದುದೆಂದೇ ತಿಳಿಯಬೇಕಾಗುತ್ತದೆ. ಅದರೆ ಇತರ ಸಿದ್ಧಾಂತಗಳ ರೀತಿಯಾಗಿ ಒಂದು ಜನ್ಮವು ವ್ಯರ್ಥವಾದರೆ ಮತ್ತೊಂದು ಜನ್ಮದಲ್ಲಾದರೂ ಮುಕ್ತಿಯನ್ನು ಪಡೆಯಬಹುದೆಂದು ಸಮಾಧಾನವಿರುವುದರಿಂದ ಈ ಜನ್ಮದಲ್ಲಿ ಧರ್ಮವನ್ನು ಬಿಟ್ಟರೂ ಕ್ರಮೇಣ ಸುಧಾರಿಸಿಕೊಳ್ಳಬಹುದು. ವೀರಶೈವಸಿದ್ಧಾಂತರೀತಿಯಾಗಿಯಾದರೋ ಇದೇ ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯಬೇಕಾಗಿರುವುದರಿಂದಲೂ ವೀರಶೈವಮತದಲ್ಲಿ ಜನ್ಮವೆತ್ತಿದ ಮಾನವನು ಚರಮಶರೀರಿಯೆನಿಸಿಕೊಳ್ಳುವುದರಿಂದಲೂ, ಮೋಕ್ಷವೆಂಬ ಪುರುಷಾರ್ಥವನ್ನು ಈ ಜನ್ಮದಲ್ಲಿಯೇ ಸಾಧಿಸಬೇಕೆಂಬ ಜವಾಬ್ದಾರಿಯು ಈತನಮೇಲೆ ಬಿದ್ದಿರುವುದರಿಂದಲೂ ವೀರಶೈವನೆನಿಸಿಕೊಳ್ಳುವವನುಮಾತ್ರ ಧರ್ಮವನ್ನು ಬಿಡಲೇ ಕೂಡದು. ಒಂದುವೇಳೆ ವೀರಶೈವನು ಧರ್ಮದಿಂದ ಪತಿತನಾದರೆ ಕುಂಟುಬಿದ್ದ ಕುದುರೆಯಂತೆ ಯಾವಾಗಲೂ ಕಳಂಕಿಯೆನಿಸಿಕೊಳ್ಳುವನು. ಆದುದರಿಂದ ವೀರಶೈವಮತೀಯರು ಮುಕ್ತಿಸಾಧಕವಾದ ತಮ್ಮ ಮತಧರ್ಮಗಳಿಗೆ ಮಾತ್ರ ಲೋಪಬರದಂತೆ ನೋಡಿಕೊಳ್ಳಬೇಕಾಗಿದೆ. ಈಗಿನಕಾಲದ ಲೌಕಿಕಾಭಿನಿವಿಷ್ಟರಾದ ಕೆಲಜನ ಕನ್ವರ್ಟರು ಕ್ಷಣಿಕಸುಖದ ಆಶೆಗಾಗಿ ತಮ್ಮ ಆತ್ಮೋದ್ಧಾರಕವಾದ ಲಿಂಗಧರ್ಮಕ್ಕೆ ಅತ್ಯಂತ ವಿರುದ್ಧಗಳಾದ ಅಧರ್ಮಕಾರ್ಯಗಳಲ್ಲಿ ತೊಡಗಿ ಪವಿತ್ರವಾದ ವೀರಶೈವಸಿದ್ಧಾಂತಕ್ಕೆ ಕಳಂಕವನ್ನುಂಟುಮಾಡಲು ಹತ್ತಿರುತ್ತಾರೆ. ಇಂಥವರಿಗೆ ಈಶ್ವರನು ಸದ್ಬುದ್ಧಿಯನ್ನೀಯಲಿ.

ಒಳದೇಶದ ವೃತ್ತಾಂತಗಳು.

ಇಂದೋರಿನ ಮಹಾರಾಜರಾದ ಯಶವಂತರಾವ್ ಹೋಳ್ಕರ್‌ರವರು ಮೊನ್ನೆ 2 ನೇ ತಾರೀಖಿನ ದಿವಸ ನೀಲಗಿರಿಯಿಂದ ರಾಜಧಾನಿಗೆ ಆಗಮಿಸಿದರು.

ಮೈಸೂರು ಪ್ರಜಾಪ್ರತಿನಿಧಿಸಭೆಯು ಬಜೆಟ್ ಅಧಿವೇಶನವು ಪದ್ಧತಿಯಮೇರೆಗೆ ಜೂನ 5 ನೇ ತಾರೀಖು ಸೋಮವಾರ ದಿವಸ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗಿ ಜೂನ 10 ನೆಯ ತಾರೀಖಿಗೆ ಮುಕ್ತಾಯವಾಯಿತು.

ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಸೋಪ್ ಫ್ಯಾಕ್ಟರಿಯ ಸೂಪರಿಂಟೆಂಡೆಂಟರೂ ಗವರ್ನಮೆಂಟ್ ಇಂಡಸ್ಟ್ರಿಯಲ್ ಕೆಮಿಸ್ಟರೂ ಆದ ಶ್ರೀ|| ಎಸ್. ಜಿ. ಶಾಸ್ತ್ರಿಯವರು ಬರುವ ದಸರಾ ಎಗ್ಜಿಬಿಷನ್ ಕಮಿಟಿಯ ಸಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ದೇವನಹಳ್ಳಿ ತಾಲೂಕು ಜಾಗಲೂರಿನ ಮುನಿವುರ್ಜಿ ಎಂಬವನು ತನ್ನ ಹೆಂಡತಿಯಾದ ವೆಂಕಟಿ ಎಂಬವಳನ್ನು ಕೊಲೆಮಾಡಿದನೆಂಬ ಕಾರಣದಮೇಲೆ ಬೆಂಗಳೂರು ಸೆಷನ್ಸ್ ಜಡ್ಜರವರು ವಿಚಾರಣೆಮಾಡಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರು.

ಮೈಸೂರು ಸರಕಾರದವರು ಬರುವ ಜುಲೈ 15 ನೇ ತಾರೀಖಿನ ದಿವಸ ನಡೆಯಬೇಕಾಗಿದ್ದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಹೊಸ ಮೆಂಬರರ ಚುನಾವಣೆಯನ್ನು ಮತ್ತೊಂದು ಅಧಿವೇಶನವಾಗುವವರೆಗೆ ಮುಂದುವರಿಸಿರುತ್ತಾರೆ.

ಶ್ರೀಮನ್ಮಹಾರಾಜರವರು ಕೆಮ್ಮಣ್ಣುಗುಂಡಿಯಿಂದ ರಾಜಧಾನಿಗೆ ಕೆಲವು ಜನ ಹಾವುಹಿಡಿಯುವವರನ್ನು ಕರೆಯಿಸಿರುವರು. ಇವರು ಇದುವರೆಗೆ ಸುಮಾರು 20-25 ಹಾವುಗಳನ್ನು ಹಿಡಿದು ಅವುಗಳನ್ನು ಸಂಹರಿಸದೆ ಸಜೀವವಾಗಿ ನಗರದಹೊರಕ್ಕೆ ಸಾಗಿಸಿರುತ್ತಾರೆ.

ಇದೇ ಜೂನ 10 ನೇ ತಾರೀಖು ಶನಿವಾರ ದಿವಸ ಮೈಸೂರು ಬ್ಯಾಂಕಿನಲ್ಲಿ ಶ್ರೀ ಲಕ್ಷ್ಮೀಕಾಂತರಾಜ ಅರಸರವರ ಗುಮಾಸ್ತರೊಬ್ಬರು ಬ್ಯಾಂಕಿನಿಂದ ಹಣವನ್ನು ಪಡೆದು ಬ್ಯಾಂಕಿನ ವರಾಂಡಾದಲ್ಲಿ ಅದನ್ನು ಎಣಿಸುತ್ತಾ ಕುಳಿತಿದ್ದಾಗ ಯಾವನೋ ಒಬ್ಬ ತರುಣನು ಸಮಯವನ್ನು ಕಾದಿದ್ದು 500 ರೂಪಾಯಿಗಳ ನೋಟಿನ ಕಂತೆಯೊಂದನ್ನು ಅಪಹರಿಸಿಕೊಂಡು ಪರಾರಿಯಾದನು. ಪೋಲೀಸರು ತನಿಖೆಕ್ರಮಗಳನ್ನು ನಡೆಸುತ್ತಿರುವರು.

ಈ ಸಾರೆ ನಡೆದ ಶ್ರೀಮನ್ಮಹಾರಾಜರವರ ವರ್ಧಂತೀಮಹೋತ್ಸವಸಮಯದಲ್ಲಿ 'ವೃತ್ತಾಂತಪತ್ರಿಕೆ'ಯ ಉಪಸಂಪಾದಕರಾದ ಮ|| ರಾ|| ಟಿ. ಕೃಷ್ಣರಾಯರಿಗೂ, ಮೈಸೂರು ಸಂಸ್ಥಾನದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದು ರಿಟೈರಾಗಿ ಹಾಲಿ ರಾಜಧಾನಿಯ ಮುನಿಸಿಪಲ್ ಕೌನ್ಸಿಲರಾಗಿರುವ ಮ|| ರಾ|| ಕೆ. ಎನ್. ವೆಂಕಟಕೃಷ್ಣಯ್ಯನವರಿಗೂ ಹಾಗೂ ಮ|| ರಾ|| ಎಂ. ಕೇಶವಯ್ಯನವರಿಗೂ ಇನ್ನು ಮುಂದೆ ಖಾಸಾ ಹಾರಗಳನ್ನು ಹಾಕತಕ್ಕದ್ದೆಂದು ಮಹಾರಾಜರವರು ಅಪ್ಪಣೆಮಾಡಿರುತ್ತಾರೆ.

ಕಳೆದ ಜೂನ 3 ನೆಯ ತಾರೀಖು ಶನಿವಾರ ಬೆಂಗಳೂರು ನಗರದ ಚಾಮರಾಜಪೇಟೆಯಲ್ಲಿ ಒಬ್ಬ 10 ವರ್ಷದ ಹುಡುಗಿಯು ಮೃತಪಟ್ಟಳೆಂದು ತಿಳಿದು ಅವಳನ್ನು ಸ್ಮಶಾನಕ್ಕೆ ಸಾಗಿಸಿ, ಚಿತೆಯಮೇಲಿಟ್ಟು ಅಗ್ನಿಸಂಸ್ಕಾರಮಾಡುವಸಮಯದಲ್ಲಿ ಹುಡುಗಿಯು ಉಸಿರಾಡುವುದನ್ನು ಕಂಡು, ಅವಳನ್ನು ಚಿತೆಯಮೇಲಿಂದ ಕೆಳಕ್ಕಿಳಿಸಿ ಉಪಚರಿಸಲು ಹುಡುಗಿಗೆ ಸ್ವಲ್ಪಹೊತ್ತಿನಲ್ಲಿಯೇ ಚೆನ್ನಾಗಿ ಜ್ಞಾನವುಂಟಾಯಿತೆಂದೂ, ಆ ಪ್ರಾಯಶ್ಚಿತ್ತಕ್ಕಾಗಿ ಆ ಹುಡುಗಿಯನ್ನು ಕೂಡಲೆ ಕಾಶಿಗೆ ಕರೆದೊಯ್ದರೆಂದೂ ತಿಳಿದುಬಂದಿದೆ.

ವರ್ತಮಾನಸಂಗ್ರಹ

ಲಂಡನ್ನಿನ ಮೃಗಾಲಯದಲ್ಲಿ ಎರಡು ಘಟಸರ್ಪ ಗೆ ಗಾಜಿನ ಕಣ್ಣುಗಳನ್ನು ಇಟ್ಟಿರುವರಂತೆ!

ಅಮೇರಿಕೆಗೆ ಸೇರಿದ ಇಂಡಿಯಾನಾ ದ್ವೀಪದಲ್ಲಿ ವ ಲೂಯಿಬೇಕರ್ ಎಂಬವರ ಒಂದು ಬೆಕ್ಕು 4 ಲಿನ ಮರಿಗಳನ್ನು ಸಾಕಿಕೊಂಡಿರುವದಂತೆ!

ಕಳೆದ ಜೂನ 3 ನೇ ತಾರೀಖಿನ ದಿನಸ ದೆಹಲಿ ಕ್ಸ್‌ಪ್ರೆಸ್ ಇಂಜಿನ್ನು ರೈಲ್ವೇ ಟ್ರೇನಿಗೆ ಬಹಳ ಜೋ ಗಿ ಢಿಕ್ಕಿಹೊಡೆದದ್ದರಿಂದ 15 ಜನರಿಗೆ ಘಾಯಗ ದುವು.

ಚಾಂದಾ ಡಿಸ್ಟ್ರಿಕ್ಟಿಗೆ ಸೇರಿದ ಭಾನಾತ್ತ ಪೋ ಸ್ ಸ್ಟೇಷನ್ನಿನ ಸಮೀಪದಲ್ಲಿ ಒಂದು ನರಭಕ್ಷಕ ಲಿಯು ಸೇರಿಕೊಂಡು ಸುಮಾರು 150 ಜನರನ್ನು ಂದಿರುವದಂತೆ! ಸರಕಾರದವರು ಅದನ್ನು ಕೊಂದ ರಿಗೆ 200 ರೂ. ಗಳ ಬಹುಮಾನವನ್ನು ಕೊಡುವು ಗಿ ಪ್ರಕಟಿಸಿರುವರು.

ಪ್ರೇಗ್‌ದೇಶದ ಒಬ್ಬಾನೊಬ್ಬ ಗಣಿತಶಾಸ್ತ್ರಜ್ಞನು ತಿಯೊಬ್ಬ ಮನುಷ್ಯನ ಪೂರ್ವಜರನ್ನೂ ಲೆಕ್ಕ ಾಡುತ್ತಾ ಹೋದರೆ ಕ್ರಿ. ಶಕ. 1 ನೆಯ ರ್ಷದಲ್ಲಿ ಈಗಿನ ಪ್ರತಿಯೊಬ್ಬ ಮನುಷ್ಯಗೂ 60,00,00,00,00,00,00,00,000 ಜನ ಪೂರ್ವಜರಿರು ರೆಂದು ಲೆಕ್ಕ ಹಾಕಿರುವರು!

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ಸೇರಿದ ಾನ್ಸಸ್‌ದೇಶದ ಟೈಲರ್ ಎಂಬ ಊರಿನಲ್ಲಿ ೂರ್ಜ್‌ಹಾರ್ವ್ ಎಂಬ ನಿಗ್ರೋ ಮನುಷ್ಯನು ತ್ತೊಬ್ಬನನ್ನು ಖೂನಿಮಾಡಿದನೆಂಬ ಅಪಾದನೆಯ ೇಲೆ 7½ ನಿಮಿಷಗಳಲ್ಲಿ ದಸ್ತಗಿರಿಮಾಡಲ್ಪಟ್ಟನು. ಜಡ್ಜ ಅವನಿಗೆ 25 ವರ್ಷಗಳ ಕಠಿಣಶಿಕ್ಷೆಯನ್ನು ವಿಧಿ ದರು.

ಆಸ್ಟ್ರೇಲಿಯಾದೇಶದ ಸರ್ ಮ್ಯಾಕ್‌ಫರ್ಸ ಬರ್ಟ್ಸನ್ ಎಂಬ ಕೋಟ್ಯಧೀಶ್ವರರು ಲಂಡನ್ನಿ ದ ಆಸ್ಟ್ರೇಲಿಯಾದೇಶದ ಮೇಲ್ಬೋರ್ನ ನಗರಕ್ಕೆ 000 ಮೈಲುಗಳ ದೂರದ ಒಂದು ವಿಮಾನದ ಸಂದ್ಯ ನ್ನು ಏರ್ಪಡಿಸಿರುವರು. ಇದರಲ್ಲಿ ಗೆದ್ದ ವೈಮಾನಿಕ 1,50,000 ರೂಪಾಯಿಗಳ ಬಹುಮಾನವನ್ನು ಡುವರಂತೆ!

ಪರ್ಶಿಯಾದೇಶದಲ್ಲಿ ಯಾರೂ ಮದ್ಯಪಾನ ಮಾಡ ಡದೆಂದು ಒಂದು ಹೊಸಕಾನೂನು ಜಾರಿಗೆ ತರ ಟ್ಟಿರುವದು! ಹಾಗೆಯಾರಾದರೂ ಕಾನೂನಿಗೆ ವಿರು ವಾಗಿ ಮದ್ಯಪಾನ ಮಾಡಿದರೆ ಅಂಥವರ ಮೂಗಿಗೆ ಂದು ಹಿತ್ತಾಳೆಯ ಬಳೆಯನ್ನು ನೇತುಹಾಕಿ ಅದಕ್ಕೆ ಂದು ಹಗ್ಗವನ್ನು ಕಟ್ಟಿ ಬೀದಿಬೀದಿಗಳಲ್ಲೆಲ್ಲಾ ಮೆರ ಗೆ ಮಾಡುವರಂತೆ! ಸ್ತುತ್ಯ!

ಒಂದು ಘಂಟೆಗೆ ನೂರು ಮೈಲುದೂರ ಹೋಗಬಲ್ಲ ವಾ ಮನುಷ್ಯನ ನಡಿಗೆಗಿಂತಲೂ ನಿಧಾನವಾಗಿ ೀಗಬಲ್ಲ ಒಂದು ಹೊಸವಿಮಾನಯಂತ್ರವು ಈಗ ನೇ ತಯಾರಿಸಲ್ಪಟ್ಟಿರುವದು. ಈ ವಿಮಾನವು ರುವದಕ್ಕೆ 50 ಚದರಗಜಗಳಷ್ಟು ಪ್ರದೇಶವಿದ್ದರೆ ಕಂತೆ! ಇಳಿಯಬೇಕಾದರೆ ಇತರ ವಿಮಾನಗಳಂತೆ ಕ್ಕೆ ಬಯಲುಪ್ರದೇಶದ ಅವಶ್ಯಕತೆಯಿರದೆ ನೆಟ್ಟಗೆ ಲಿನಿಂದ ಕೆಳಕ್ಕೆ ಇಳಿಯುವದಂತೆ!

ಅಮೇರಿಕೆಗೆ ಸೇರಿದ ಲಾಸ್ ಆಂಗೆಸ್ ನಗರದಲ್ಲಿ ತಂಗಿಯರಿಬ್ಬರು ಒಂದು ಚಕ್ರಬಂಧ ಸಮಸ್ಯೆಯ ಪೂರ್ಣಮಾಡಬೇಕೆಂದು ಪ್ರಯತ್ನಿಸಿ ಒಂದುದಿನ ಕ್ಕಾಗಿ ಅರ್ಧರಾತ್ರಿಯವರೆಗೂ ಕಷ್ಟಪಟ್ಟು ಕಡೆ ಅದೂ ಪೂರ್ಣವಾಗದಿರಲು ಕಡೆಗೆ ಅದನ್ನು ಹಾ ಯೇ ಮೇಜಿನಮೇಲಿಟ್ಟು ಹೋಗಿ ಮಲಗಿಕೊಂಡರು. ಗೆ ಎದ್ದು ನೋಡಲು ಸಮಸ್ಯೆಯು ಪೂರ್ಣವಾ ಟ್ಟಿದ್ದುದನ್ನು ಕಂಡು ಆಶ್ಚರ್ಯಪಟ್ಟು ಇದಕ್ಕೆ ರಣವೇನೆಂದು ಪರೀಕ್ಷಿಸಿದಾಗ ರಾತ್ರಿ ಯಾವನೋ ನು ಒಳಕ್ಕೆ ಬಂದು ಪೆಟ್ಟಿಗೆಯಲ್ಲಿದ್ದ 150 ರೂ. ನ್ನು ಕದ್ದುಕೊಂಡು ಹೋಗಿದ್ದನೆಂದೂ, ಅವನೇ ಸ್ಯೆಯನ್ನು ಪೂರ್ಣಮಾಡಿದನೆಂದೂ ಗೊತ್ತಾಯಿ ೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ವೃದ್ಧನೆನಿಸಿದ ಲಿಚಿಂಗ್‌ಯುನ್ ಎಂಬ ವೃದ್ಧನು ಕೆಲವು ದಿವಸಗಳ ಹಿಂದೆ ತನ್ನ ಜನ್ಮಸ್ಥಳವಾದ ಕಿಯಾಸೀನ್ ಎಂಬ ಊರಿನಲ್ಲಿ ಮೃತಪಟ್ಟನು! ಸಾಯುವಾಗ ಇವನಿಗೆ 256 ವರ್ಷಗಳಾಗಿದ್ದುವಂತೆ! ಇವನಿಗೆ ಅನೇಕ ಪತ್ನಿಯರಿದ್ದು ಕಡೆಯವಳು 100 ವರ್ಷಗಳ ಹಿಂದೆ ಮೃತಳಾದಳಂತೆ! ಇಷ್ಟು ವೃದ್ಧನಾದರೂ ಅವನು ಕಡೆಯವರೆಗೂ 60-70 ವರ್ಷದವನಂತೆಯೇ ಕಾಣಿಸುತ್ತಿದ್ದನು. ಅವನು ಚಿಕ್ಕವಯಸ್ಸಿನಲ್ಲಿ ಒಂದಾನೊಂದು ಕಾಲದಲ್ಲಿ ಪರ್ವತಗಳ ಮಧ್ಯೆ ಕೆಲವು ಮೂಲಿಕೆಗಳನ್ನು ಹುಡುಕುತ್ತಿದ್ದಾಗ ಅಪೂರ್ವವಾದ ಮೂಲಿಕೆಯೊಂದನ್ನು ಕಂಡು ಅದನ್ನು ಸೇವಿಸಿದ್ದುದರಿಂದ ಇಷ್ಟು ದೀರ್ಘಕಾಲ ಜೀವಿಸಿದ್ದನಂತೆ!

ಡೇಲಾವೇರ್‌ನಗರದ ಮೈರ್ಲ್ಟ್ ಟ್ರೀ ಎಂಬವರು 11 ವರ್ಷಕಾಲ ಮೌನವ್ರತವನ್ನಾಚರಿಸಿ ಕೆಲವು ದಿವಸಗಳ ಹಿಂದೆ ಅದನ್ನು ಮುಕ್ತಾಯಗೊಳಿಸಿದರಂತೆ! 12 ವರ್ಷಗಳ ಹಿಂದೆ ಅವರು ಬಾಸ್ಟನ್‌ನಗರದಲ್ಲಿ ಕೆಲವು ಸ್ನೇಹಿತರಿಂದ ಹಣವನ್ನು ಪಡೆದು ತನ್ನ ಭಾವನೊಡನೆ ಪಾಲಿನಮೇಲೆ ವ್ಯಾಪಾರಕ್ಕೆ ಪ್ರಾರಂಭಿಸಿದರು. ಒಂದು ವರ್ಷವಾದನಂತರ ಭಾವನು ಕೈಗೆಸಿಕ್ಕಿದುದನ್ನೆಲ್ಲಾ ದೋಚಿಕೊಂಡು ಓಡಿಹೋಗಿ ಆತ್ಮಹತ್ಯ ಮಾಡಿಕೊಂಡನು. ಆಗ ಮಿ|| ಟ್ರೀರವರು ತಮ್ಮ ಸ್ನೇಹಿತರ ಹಣವನ್ನು ಪೂರ್ತಿಯಾಗಿ ತೀರಿಸುವವರೆಗೆ ಮಾತನಾಡುವದಿಲ್ಲವೆಂದು ಶಪಥಮಾಡಿದ್ದರಂತೆ! ಅದರಂತೆ ಅವರು ಎಲ್ಲವನ್ನೂ ಪಾವತಿಮಾಡಿ ಅನಂತರ ಮೌನವನ್ನು ತ್ಯಜಿಸಿದರಂತೆ!

ಬೆಸ್ಸರೇಬಿಯಾ ದೇಶಕ್ಕೆ ಸೇರಿದ ಸಿರ್ಸಿಲಿಯಾ ಎಂಬ ಗ್ರಾಮದಲ್ಲಿ ಪ್ರತಿನಿತ್ಯವೂ ರಾತ್ರಿಯವೇಳೆಯಲ್ಲಿ 1-2 ಕುರಿಗಳು ಮಾಯವಾಗುತ್ತಲೇ ಇದ್ದುವು. ಗ್ರಾಮಸ್ಥರು ಯಾವುದೋ ಒಂದು ದುಷ್ಟಮೃಗವೇ ಇದಕ್ಕೆ ಕಾರಣವಾಗಿರಬೇಕೆಂದು ಊಹಿಸಿ ಒಂದು ದಿನ ರಾತ್ರಿ ಊರಹೊರಗಿನ ಹೊಲದಹತ್ತಿರ ಹೊಂಚು ಕಾಯುತ್ತಿರಲು ತೋಳನಂತಿದ್ದ ಒಂದು ಅದ್ಭುತ ಆಕೃತಿಯು ಹೊಲದ ಮಧ್ಯದಲ್ಲಿ ಸುಳಿದಾಡುತ್ತಿರುವದನ್ನು ಕಂಡು ಅದಕ್ಕೆ ಸರಿಯಾಗಿ ಗುರಿಯಿಟ್ಟು ಗುಂಡಿನಿಂದ ಹೊಡೆದು ಕೊಂದರು. ಹತ್ತಿರಕ್ಕೆ ಹೋಗಿ ನೋಡಿದಾಗ ತಮ್ಮ ಗ್ರಾಮಸ್ಥನೊಬ್ಬನು ತೋಳದ ಚರ್ಮವನ್ನು ಹೊದ್ದು ಸತ್ತು ಬಿದ್ದಿದ್ದನಂತೆ! ಅವನೇ ಪ್ರತಿನಿತ್ಯವೂ ತೋಳನ ವೇಷದಿಂದ ಬಂದು ಕುರಿಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದನಂತೆ!

ಲಾಸ್ ಆಂಗಲ್ಸ್ ನಗರದ ಒಂದಾನೊಂದು ನಾಟಕ ಕಂಪೆನಿಯ ಏಜಂಟನಾದ ಫ್ರಾಂಕ್‌ಜಾಯ್ಸ್ ಎಂಬಾತನು 1931 ನೇ ಇಸವಿಯಲ್ಲಿ ಒಂದು ದಿನ ಕೇವಲ ದಾಕ್ಷಿಣ್ಯಕ್ಕಾಗಿ ಮಿಸ್. ಎಸ್ಟಿಲ್ ಟೇಲರ್ ಎಂಬ ಸಿನಿಮಾ ನಟಿಯನ್ನು ಅವಳ ಬಂಗಲೆಗೆ ಬಿಡಲು ತನ್ನ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರಲು ದಾರಿಯಲ್ಲಿ ಮೋಟಾರು ಅಕಸ್ಮಾತ್ತಾಗಿ ಒಂದು ತಾಳೆಮರಕ್ಕೆ ಬಡಿದು ಮಿಸ್. ಟೇಲರಳಿಗೆ ಕೆಲವು ಗಾಯಗಳಾದುವು. ಮಿಸ್. ಟೇಲರಳು ಈ ಅನಾಹುತದಿಂದ ತನ್ನ ಸಿನಿಮಾ ನೌಕರಿಗೆ ತೊಂದರೆಯಾಯಿತೆಂದು ಹೇಳಿ 4,50,000 ರೂಪಾಯಿಗಳ ಪರಿಹಾರಕ್ಕೆ ಫ್ರಾಂಕ್‌ಜಾಯ್ಸನ ಮೇಲೆ ದಾವೆಯನ್ನು ಹೂಡಿದಳು. ಮ್ಯಾಜಿಸ್ಟ್ರೇಟರು ಕೇಸನ್ನು ವಿಚಾರಣೆಮಾಡಿ ಫ್ರಾಂಕ್‌ಜಾಯ್ಸನು 60,000 ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ತೀರ್ಮಾನಿಸಿರುತ್ತಾರೆ.

ವಿಚಿತ್ರಪ್ರಪಂಚ.

ಬೆಳಕು ಒಂದು ಕ್ಷಣಕ್ಕೆ 1,86,000 ಮೈಲುಗಳ ದೂರಹೋಗಬಲ್ಲದಂತೆ!

ಚಿಟ್ಟೆ ಹುಳುಗಳ ರೆಕ್ಕೆಯು 1/2,00,000 ಅಂಗುಲದಷ್ಟು ಸೂಕ್ಷ್ಮವಾಗಿರುವದಂತೆ!

ಖಗೋಳಶಾಸ್ತ್ರಜ್ಞರು ಸೂರ್ಯಗ್ರಹಕ್ಕಿಂತಲೂ ಆಚೆಗೆ ಬಹಳದೂರದಲ್ಲಿರುವ ಎಸ್. ಡೊರಾಡಸ್ ಎಂಬ ಅದ್ಭುತವಾದ ನಕ್ಷತ್ರವೊಂದನ್ನು ಶೋಧನಮಾಡಿರುವರು. ಈ ಗ್ರಹವು ಸೂರ್ಯನಿಗಿಂತಲೂ ಎಷ್ಟೋ ನೂರು ಹೆಚ್ಚು ಶಾಖವುಳ್ಳದಾಗಿದ್ದು, ಅದನ್ನು ಸೂರ್ಯನಿರುವ ಸ್ಥಳದಲ್ಲಿರಿಸುವದಾದರೆ ಈ ನಮ್ಮ ಭೂಮಂಡಲವು ಕ್ಷಣಮಾತ್ರದಲ್ಲಿ ಸುಟ್ಟು ಭಸ್ಮವಾಗುವದಂತೆ!

ರಾತ್ರಿಯ ವೇಳೆಯಲ್ಲಿ ಏರೋಪ್ಲೇನುಗಳ ಸಂಚಾರಕ್ಕೆ ಅನುಕೂಲಿಸುವಂತೆ ಕಟ್ಟಲ್ಪಟ್ಟಿರುವ ದೀಪಗೃಹಗಳಲ್ಲೆಲ್ಲಾ ಪ್ಯಾರಿಸ್ಸಿಗೂ, ಆಲ್ಜಿರಿಸ್ಸಿಗೂ ಮಧ್ಯದಲ್ಲಿ, 'ಕೋಟ್ ಡಿ'ಅರ್' ಎಂಬಲ್ಲಿ ಕಟ್ಟಲ್ಪಟ್ಟಿರುವ ದೀಪಗೃಹವೇ ಅತ್ಯಂತ ದೊಡ್ಡದಾಗಿರುವದು. ಅದು ಸುಮಾರು 1,00,00,00,000 ಮೇಣದಬತ್ತಿಗಳ ಪ್ರಕಾಶವುಳ್ಳದಾಗಿದ್ದು, ಅದರ ಪ್ರಕಾಶವು 30 ಮೈಲುಗಳವರೆಗೂ ಕಾಣಿಸುವದಂತೆ!

ಇಂಗ್ಲೆಂಡಿನ ಡರ್ಬಿಷೈರಿಗೆ ಸೇರಿದ ಛೆಸ್ಟರ್ ಫೀಲ್ಡ್ ಎಂಬ ಊರಿನಲ್ಲಿ ಪತ್ನೀಪುತ್ರರನ್ನು ಮಾರುವ ವಿಚಿತ್ರ ವ್ಯಾಪಾರವು ನಡೆಯುವದಂತೆ! ಒಬ್ಬನು ತನ್ನ ಪತ್ನಿಯನ್ನೂ ಇಬ್ಬರು ಮಕ್ಕಳನ್ನೂ ಮತ್ತೊಬ್ಬನಿಗೆ ಒಂದು ಮೋಟಾರುಬೈಸಿಕಲ್ಲಿಗೆ ಮಾರಿದನಂತೆ! ಇನ್ನೊಬ್ಬನು ತನ್ನ ಪತ್ನಿಯನ್ನು ಮತ್ತೊಬ್ಬನ ವಶಕ್ಕೆ ಒಪ್ಪಿಸಿ ಅದಕ್ಕಾಗಿ ತಿಂಗಳಿಗೆ 15 ರೂ. ಗಳನ್ನು ತೆಗೆದುಕೊಳ್ಳುವನಂತೆ! ಮತ್ತಿಬ್ಬರು ತಮ್ಮ ಪತ್ನಿಯರನ್ನು ಒಬ್ಬರಿಗೊಬ್ಬರು ಬದಲಾಯಿಸಿಕೊಂಡಿರುವರಂತೆ!

ವಿದ್ಯುಚ್ಛಾಸ್ತ್ರಪ್ರವೀಣರು ಕಾಯಿಲೆಯವರು ಮಲಗುವ ಕೊಠಡಿಗಳಲ್ಲಿ ಉರಿಸುವದಕ್ಕೂ ಮತ್ತು ಗಡಿಯಾರಗಳ ಮುಖಕ್ಕೆ ಬೆಳಕು ಬೀಳುವದಕ್ಕೂ ಉಪಯೋಗವಾಗುವಂತೆ ಒಂದು ಹೊಸತರಹದ ಎಲೆಕ್ಟ್ರಿಕ್ ಬಲ್ಬುಗಳನ್ನು ತಯಾರಿಸಿರುವರು. ಇದರ ಒಳಗಿರುವ ತಂತಿಯು 410/1000 ಅಂಗುಲದಷ್ಟು ಸಣ್ಣಗಿರುವದಂತೆ! ಅಂದರೆ ಇಂಥ 5 ತಂತಿಗಳನ್ನು ಒಟ್ಟುಗೂಡಿಸಿದರೆ ತಲೆಗೂದಲಿನಷ್ಟು ದಪ್ಪವಾಗುವದು. ವಜ್ರದ ಹರಳಿನಲ್ಲಿ ಸೂಕ್ಷ್ಮವಾದ ರಂಧ್ರವನ್ನು ಮಾಡಿ ಅದರಲ್ಲಿ ಇಷ್ಟು ಸೂಕ್ಷ್ಮವಾದ ತಂತಿಯನ್ನು ಎಳೆಯುವದಂತೆ! ಇದನ್ನು ಸ್ಪ್ರಿಂಗಿನೋಪಾದಿಯಲ್ಲಿ ಸುತ್ತಿ ಬಲ್ಬಿನೊಳಕ್ಕೆ ಸೇರಿಸುವರು. ಒಂದು ಅಂಗುಲ ಉದ್ದವಿರುವ ಇಂಥ ಸುರುಳಿಯಲ್ಲಿ 1500 ಸುತ್ತುಗಳಿದ್ದು, ಒಂದಕ್ಕೊಂದು ತಗಲದಂತೆ ತಯಾರಿಸಲ್ಪಡುವವಂತೆ!

ಲೀಸ್ಟರ್ ನಗರದಲ್ಲಿದ್ದ ಡ್ಯಾನಿಯಲ್ ಲ್ಯಾಂಬರ್ಟ್ ಎಂಬವನು ಪ್ರಪಂಚದಲ್ಲೆಲ್ಲಾ ಅತ್ಯಂತ ಸ್ಥೂಲವಾದ ಶರೀರವುಳ್ಳವನೆಂದು ನಿರ್ಧರಿಸಲ್ಪಟ್ಟಿರುವನು. ಇವನು ಮೃತನಾಗುವದಕ್ಕೆ ಕೆಲವು ದಿವಸಗಳ ಹಿಂದೆ 739 ಪೌಂಡುಗಳ ತೂಕವುಳ್ಳವನಾಗಿದ್ದನು. ಅವನ ಎದೆಯ ಸುತ್ತಳತೆಯು 9 ಅಡಿ 4 ಅಂಗುಲ. ಕಾಲುಗಳ ಸುತ್ತಳತೆ 36 ಅಂಗುಲ. ಇವನು 560 ಪೌಂಡುಗಳ ತೂಕವುಳ್ಳ ವಸ್ತುವನ್ನು ಸುಲಭವಾಗಿ ಹೊತ್ತುಕೊಂಡು ಹೋಗುತ್ತಿದ್ದನಂತೆ! ಒಂದಾನೊಂದು ದಿವಸ ಒಂದು ಸಾಕಿದ ಕರಡಿಯು ಬೀದಿಯಲ್ಲಿ ಒಂದು ನಾಯಿಯನ್ನು ಕಚ್ಚುತ್ತಿರಲು ಇವನು ತನ್ನ ಮುಷ್ಟಿಯಿಂದ ಕರಡಿಯನ್ನು ಬಡಿದು ಓಡಿಸಿದನಂತೆ! ಇವನು ನೀರಿನಲ್ಲಿ ಲೀಲಾಜಾಲವಾಗಿ ಈಜುತ್ತಿದ್ದನು. ಹಾಗೆ ಈಜುವಾಗ ಇವನ ಸ್ಥೂಲಶರೀರವು ನೀರಿನ ಮೇಲ್ಭಾಗದಲ್ಲಿ ಎದ್ದು ಕಾಣಿಸುತ್ತಿದ್ದು, ಅನೇಕ ಸಂದರ್ಭಗಳಲ್ಲಿ ಬೆನ್ನಿನ ಮೇಲೆ ಇಬ್ಬರನ್ನು ನಿಲ್ಲಿಸಿಕೊಂಡು ಈಜುತ್ತಿದ್ದನಂತೆ! ಇವನಿಗೆ ಉಡುಪುಗಳನ್ನು ತಯಾರಿಸಲು 300 ರೂಪಾಯಿಗಳು ಖರ್ಚಾಗುತ್ತಿದ್ದವು. ಇವನು ತನ್ನ 40 ನೇ ವಯಸ್ಸಿನಲ್ಲಿ ಮೃತಪಟ್ಟನು.

ಸ್ವೀಕಾರ

ಧಾರವಾಡ ಜಿ|| ಹೊಳೆ ಆಲೂರು ಗ್ರಾಮದ ಪದ್ಮಸಾಲಿ ಸಮಾಜದವರು ಅಲ್ಲಿಯ ವೀರಶೈವ ಸಮಾಜಕ್ಕೆ ಅರಿಕೆಮಾಡಿಕೊಂಡು ಲೇಖ ಕಳುಹಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂ. ಯು ವೇ|| ಭಿಕ್ಷಾವೃತ್ತಿ ಹಿರೇಮಠದ ರೇವಣಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

(3ನೆಯ ಪುಟದಿಂದ ಮುಂದುವರಿದುದು.)

ಗದೆ ಇರುವ ಒಂದು ಸಾಲವಿದೆ. ಅದನ್ನು ತೀರಿಸಬಹುದಾಗಿದೆ. ಈ ಸಾಲದ ಮೊಬಲಗು 161 ಲಕ್ಷ ರೂಪಾಯಿಗಳು. ಇದಕ್ಕೆ ಶೇಕಡ 4 ರಂತೆ ಬಡ್ಡಿ. ಈ ಸಾಲವನ್ನು ಬಿಟ್ಟರೆ, ಕ್ಲುಪ್ತವಾದ ಅವಧಿಯು ಪೂರೈಸಿದ ತರುವಾಯ ವಾಪಸು ಕೊಡತಕ್ಕ ಸಾಲದ ಮೊಬಲಗು 315 ಲಕ್ಷ ರೂಪಾಯಿಗಳು ಮಾತ್ರವಾಗಿದೆ. ನಾವು ಮಿತಿಮೀರಿ ಸಾಲಮಾಡಿದ್ದೇವೆಂದೂ ಅಥವಾ ಸಾಲಗಳಿಂದ ದೊರೆತ ಮೊಬಲಗು ಯುಕ್ತವಾದ ರೀತಿಯಲ್ಲಿ ಉಪಯೋಗವಾಗಿಲ್ಲವೆಂದೂ ಕೆಲವರು ಅಭಿಪ್ರಾಯಪಡುತ್ತಿರುವುದು ಸರಿಯಲ್ಲವೆಂದು ಇದರಿಂದ ಕಂಡುಬರುವುದು.

ಸಾಲದ ಮೇಲಣ ಬಡ್ಡಿ.

ಸಾಲದ ಮೇಲಣ ಬಡ್ಡಿಯನ್ನು ಕೊಡುವುದಕ್ಕಾಗಿ ಮಾಡಬೇಕಾದ ವೆಚ್ಚವು ಕಳೆದ ಕೆಲವು ವರುಷಗಳ ಕಾಲದಲ್ಲಿ ಹೆಚ್ಚಿದೆ. ಈ ಹೆಚ್ಚುಗೆಯು ನಮ್ಮ ಆಯವ್ಯಯಗಳಲ್ಲಿ ಕಂಡುಬರುವ ಒಂದು ನ್ಯೂನತೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವೂ ಕೂಡ ಸರಿಯಾದುದಲ್ಲ. ಏಕೆಂದರೆ, ಸ್ಪಷ್ಟವಾಗಿ ಕಂಡುಬರುವ ಕೆಲವು ಅಂಶಗಳನ್ನೇ ಅವರು ಗಮನಿಸದೆ ಆ ರೀತಿಯಾಗಿ ಅಭಿಪ್ರಾಯಪಟ್ಟಿದ್ದಾರೆ. ಬಡ್ಡಿಯನ್ನು ಸಲ್ಲಿಸುವುದಕ್ಕಾಗಿ ನಾವು ಹಣವನ್ನು ವೆಚ್ಚಮಾಡುವುದೇನೋ ನಿಜವಾದರೂ ಸಾಲದ ಹಣದಿಂದ ಮಾಡಿರತಕ್ಕ ಏರ್ಪಾಡುಗಳಿಂದ ವರಮಾನವೂ ಬರುತ್ತದೆ. ಸಾಲದ ಮೇಲೆ ಕೊಡತಕ್ಕ "ಬಡ್ಡಿಯು ಹೆಚ್ಚಾಗಿದೆಯೋ ಅಥವಾ ಸಾಲದ ಹಣವನ್ನು ವಿನಿಯೋಗಿಸಿ ಮಾಡಿರುವ ಏರ್ಪಾಡುಗಳಿಂದ ಬರತಕ್ಕ ವರಮಾನವು ಹೆಚ್ಚಾಗಿದೆಯೋ ಎಂಬುದನ್ನೂ ಮತ್ತು ನಮ್ಮ ಆಯವ್ಯಯಗಳ ಲೆಕ್ಕವು ಯಾವ ಕಳವಳಕ್ಕೂ ಅವಕಾಶವಿಲ್ಲದ ಸುವ್ಯವಸ್ಥಿತವಾದ ಸ್ಥಿತಿಯಲ್ಲಿದೆಯೋ ಇಲ್ಲವೋ ಎಂಬುದನ್ನೂ ನಿರ್ಧರಿಸಬೇಕಾದರೆ ಈ ಎರಡು ಅಂಶಗಳನ್ನೂ ಗಮನಿಸಬೇಕಾದುದು ಅವಶ್ಯಕ. "ಆದರೆ ಈ ವಿಷಯದಲ್ಲಿ ತಪ್ಪು ತಿಳಿವಳಿಕೆಯುಂಟಾಗಿರುವುದಕ್ಕೆ ನಾವು ಮೂಲಧನದ ಕಾಮಗಾರಿಗಳ ಆಯವ್ಯಯದ ಫಲಿತಾಂಶಗಳ ಲೆಕ್ಕವನ್ನು ತೋರಿಸುವುದರಲ್ಲಿ ಅನುಸರಿಸುತ್ತಿರುವ ಬಾಬುವಾರು ವಿಂಗಡಿಕೆಯ ಈಗಿನ ವಿಧಾನವೇ ಸ್ವಲ್ಪಮಟ್ಟಿಗೆ ಕಾರಣವೆಂದು ತೋರುತ್ತದೆ. ಈ ವಿಧಾನವನ್ನು ಈಗ ಪ್ರಸ್ತಾಪಿಸುತ್ತೇನೆ. ಆಯವ್ಯಯಗಳ ದೃಷ್ಟಿಯಿಂದ ನೋಡಿದರೆ ಬಂಡವಾಳದ ಕಾಮಗಾರಿಗಳಿಂದ ದೊರೆಯುವ ನಿವ್ವಳ ವರಮಾನವೇ ಅವುಗಳ ಮೇಲೆ ವಿನಿಯೋಗವಾಗಿರುವ ಮೂಲಧನದ ಬಡ್ಡಿಯಾಗಿದೆ. ಆದರೆ, ನಾವು ಈ ವರಮಾನವನ್ನು ಬಡ್ಡಿಯ ಬಾಬಿನಲ್ಲಿ ತೋರಿಸುವುದಿಲ್ಲ. ಆ ಕಾಮಗಾರಿಗಳಿಗೆ ಹಣವನ್ನೊದಗಿಸುವದಕ್ಕಾಗಿ ಎತ್ತಿದ ಸಾಲಗಳೂ ಸೇರಿ ಎಲ್ಲಾ ದೇಣಿ ಬಾಬುಗಳಿಗಾಗಿ ಸಲ್ಲಿಸಿದ ಬಡ್ಡಿಯನ್ನು ವೆಚ್ಚದ ಭಾಗದಲ್ಲಿ ಬಡ್ಡಿಯ ಬಾಬಿನಲ್ಲಿ ತೋರಿಸಲಾಗಿದೆ. ನಾವು ಹಣವನ್ನು ವಿನಿಯೋಗಿಸಿ ನೆರವೇರಿಸಿದ ಕಾರ್ಯಗಳ ಪೂರಾ ಲೆಕ್ಕಗಳನ್ನು ಕೊಡುವುದರಲ್ಲಿ ಒಂದು ಮಾರ್ಗವನ್ನು ಅನುಸರಿಸಬೇಕು. ಅಂದರೆ, ನಾವು ನಡೆಸಿರತಕ್ಕ ಆ ಎಲ್ಲಾ ಕಾರ್ಯಗಳಿಂದಲೂ ಬರುವ ವರಮಾನವನ್ನು ಜಮಾ ಬಾಬಿನ ಕೆಳಗೂ ಮತ್ತು ಆ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಎಲ್ಲಾ ರೂಪಗಳಲ್ಲಿಯೂ ಬರಮಾಡಿಕೊಂಡ ಹಣಗಳ ಮೇಲಿನ ಬಡ್ಡಿಯನ್ನು ಖರ್ಚು ಬಾಬಿನ ಕೆಳಗೂ ನಮೂದಿಸಬೇಕಾದುದು ಅವಶ್ಯಕ. ಮುಂದಣ ವರುಷದ ಬಜೆಟ್ಟಿನ ಪ್ರಕಾರ ಈ ಲೆಕ್ಕವು ಹೇಗಿರುವುದೆಂಬುದನ್ನು ಈಗ ಪರಿಶೀಲಿಸಬಹುದು. ಬಡ್ಡಿಯ ಎಲ್ಲಾ ಬಾಬುಗಳಿಂದಲೂ ಬರುವ ಒಟ್ಟು ವರಮಾನವು 79 ಲಕ್ಷ ರೂಪಾಯಿಗಳು. ಆದರೆ ಸಾಲ ಮತ್ತು ಇತರ ದೇಣಿಗಳ ಮೇಲಣ ಬಡ್ಡಿಗಾಗಿ ಕೊಡುವ ಒಟ್ಟು ಖರ್ಚಿನ ಮೊಬಲಗು 53 ಲಕ್ಷ ರೂಪಾಯಿಗಳು. ನಾವು ನಡಿಸಿರುವ ಏರ್ಪಾಡುಗಳಿಂದ ಬರುವ ವರಮಾನವು ಅದರಿಂದ ಬಡ್ಡಿಗಾಗಿ ನಾವು ಕೊಡುವ ವೆಚ್ಚಕ್ಕಿಂತಲೂ ಬಹಳ ಹೆಚ್ಚಾಗಿದೆಯೆಂದು ಇದರಿಂದ ಕಂಡುಬರುವುದು.

ನಮ್ಮ ಬಂಡವಾಳದ ಕಾಮಗಾರಿಗಳಿಗೆ ಸ್ವಲ್ಪಮಟ್ಟಿಗೆ ಹುಟ್ಟುವಳಿಗಳಿಂದಲೂ, ಸ್ವಲ್ಪಮಟ್ಟಿಗೆ ಸಾಲದ ಮೊಬಲಗುಗಳಿಂದಲೂ ಹಣವನ್ನೊದಗಿಸಲಾಗಿದೆ. ಆ ಕಾಮಗಾರಿಗಳಿಗಾಗಿ ವೆಚ್ಚವಾದ ಮೊಬಲಗುಗಳಿಂದ ನ್ಯಾಯವಾದ ಪ್ರತಿಫಲವು ದೊರೆಯುತ್ತಿದೆಯೋ ಎಂಬುದನ್ನು ನಾವು ನೋಡಬಹುದು. ಬಂಡವಾಳದ ನಮ್ಮ ಎಲ್ಲಾ ಉದ್ಯಮಗಳಿಗಾಗಿ ಲೆಕ್ಕಗಳ ಮೇರೆಗೆ ವೆಚ್ಚವಾಗಿರುವ ಒಟ್ಟು ಮೊಬಲಗು 1,544 ಲಕ್ಷ ರೂಪಾಯಿಗಳು, ಮತ್ತು ಕಬ್ಬಿಣದ ಕಾರ್ಖಾನೆ ಒಂದು ಹೊರತು ಉಳಿದ ಎಲ್ಲಾ ಉದ್ಯಮಗಳ ಸವೆಕಲು ತಿದ್ದುಕು ಭರ್ತಿಯ ರಿಜರ್ವುಗಳಿಗೆ ಹಣವನ್ನು ವಿನಿಯೋಗಿಸಿದ ತರುವಾಯ, ಮುಂದಣ ವರುಷ ಅವುಗಳಿಂದ ಬರುವ ನಿವ್ವಳ ವರಮಾನವು 52 ಲಕ್ಷ ರೂಪಾಯಿಗಳು, ಎಂದರೆ, ಸುಮಾರು ಶೇಕಡ 3½ ರಂತೆ ಬಡ್ಡಿ ದೊರೆತ ಹಾಗಾಗುವುದು. ಯಾವುದೊಂದು ಹುಟ್ಟುವಳಿಯನ್ನೂ ಕೊಡುವ ಸ್ಥಿತಿಗೆ ಇನ್ನೂ ಬರದೇ ಇರುವ ಕೆಲವು ಕಾಮಗಾರಿಗಳಿವೆ. ಕೃಷ್ಣರಾಜಸಾಗರ ಜಲಾಶಯದ ನೀರಾವರಿಯ ಭಾಗವೂ ಮತ್ತು ಸಂಬಂಧಪಟ್ಟ ನಾಲೆಯ ಕಾಮಗಾರಿಗಳೂ ಇನ್ನೂ ವರಮಾನವನ್ನು ಕೊಡುವ ಸ್ಥಿತಿಗೆ ಬಂದಿರುವುದಿಲ್ಲ. ಈ ಕಾಮಗಾರಿಗಳಿಗಾಗಿ ತಗಲಿರುವ ಸುಮಾರು 300 ಲಕ್ಷ ರೂಪಾಯಿಗಳನ್ನು ಬಡ್ಡಿಯ ಲೆಕ್ಕಾಚಾರದಲ್ಲಿ ಬಿಟ್ಟುಬಿಟ್ಟಲ್ಲಿ ವರಮಾನವನ್ನು 1,244 ಲಕ್ಷ ರೂಪಾಯಿಗಳ ಮೇಲೆ ಲೆಕ್ಕ ಮಾಡಬೇಕಾಗುವುದು, ಹಾಗೆ ಮಾಡಿದಲ್ಲಿ ಶೇಕಡ 4 ರಂತೆ ಬಡ್ಡಿ ಬಂದಂತಾಗುವುದು. ಅಭೂತಪೂರ್ವವಾದ ಆರ್ಥಿಕ ದುಸ್ಥಿತಿಯುಂಟಾಗಿರುವ ಈ ಕಾಲದಲ್ಲಿ ಶೇಕಡ 4 ರಂತೆ ಬಡ್ಡಿ ಬರುವುದನ್ನು ಸಮರ್ಪಕವೆಂದೇ ಹೇಳಬಹುದು. ಒಟ್ಟಿನಲ್ಲಿ ನಮ್ಮ ಬಂಡವಾಳದ ಕಾಮಗಾರಿಗಳೆಲ್ಲವೂ ಸೇರಿ ಒಂದೇ ಒಂದು ಆರ್ಥಿಕ ಉದ್ಯಮದಂತೆ ಎಣಿಸಲ್ಪಟ್ಟರೆ ಅವುಗಳ ಸ್ಥಿತಿಯು ಕೇವಲ ಸಮರ್ಪಕವಾಗಿದೆಯೆಂದೇ ತೋರುತ್ತದೆ.

[ಸಶೀಷ.]

ಶ್ರೀ ಜಗದ್ಗುರು ಪಂಚಾಚಾರ್ಯರೇ ಪ್ರಸೀದಂತು.

ಜಂಗಮರು ಯಾರು?

ಲೇಖಕ—ಶ್ರೀ|| ಷ|| ಬ್ರ|| ನೀಲಕಂಠಶಿವಾಚಾರ್ಯರು,
ಚಿಂಚೋಳಿ.

ಅನಾದಿಯಲ್ಲಿ ಶಕ್ತಿವಿಶಿಷ್ಟಾದ್ವೈತಾತ್ಮಕ ವೀರಶೈವಮತವನ್ನು ಪರಮಪೂಜ್ಯರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಸ್ಥಾಪಿಸಿದ ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾದುದಾಗಿದೆ. ಈ ಗುರುಸಾರ್ವಭೌಮರು ಭರತಖಂಡದಲ್ಲಿ ಸರ್ವತೋಮುಖವಾಗಿ ವ್ಯಾಪಿಸಿದ ವೀರಶೈವಮತದ ರಕ್ಷಣ-ಶಿಕ್ಷಣಾದಿಗಳಿಗೋಸ್ಕರ ಪ್ರತಿಯೊಂದು ನಗರಗ್ರಾಮಗಳಲ್ಲಿ ಶಾಖಾಮಠಗಳನ್ನು ಸ್ಥಾಪಿಸಿದ್ದಾರೆ. ಈ ಮಠಾಧಿಪತಿಗಳಾದ ಚರಮೂರ್ತಿಗಳೇ ಜಂಗಮರೆಂದು ಲೋಕದಲ್ಲಿಯೂ, ಶಾಸ್ತ್ರದಲ್ಲಿಯೂ ಪ್ರಸಿದ್ಧರಾಗಿದ್ದಾರೆ. ಈ ಮಹನೀಯರ ತಪಃಪ್ರಭಾವದಿಂದಲೇ ವೀರಶೈವಮತವು ಜಗತ್ತಿನಲ್ಲಿ ಬಹು ಪೂಜ್ಯಮತವೆಂದು ವಿಖ್ಯಾತಿಗೊಂಡಿತು. ಈ ಜಂಗಮ ಮೂರ್ತಿಗಳ ಅಪಾರವಾದ ಮಹಿಮೆಯನ್ನು ಕಂಡು, ಭರತಖಂಡವನ್ನು ಏಕಚ್ಛತ್ರಾಧಿಪತ್ಯದಿಂದಾಳಿದ ಅನೇಕಾನೇಕ ಜನ ಹಿಂದೂ ಮಹಾರಾಜರು—ಅಕಬರ, ಜಹಂಗೀರ, ಹುಮಾಯೂನ, ಔರಂಗಜೇಬ ಮೊದಲಾದ ಮುಸಲ್ಮಾನ ಮಹಾರಾಜರೂ ಗುರುವಿಗೆ ತನುವನ್ನೂ, ಲಿಂಗಕ್ಕೆ ಮನವನ್ನೂ, ಜಂಗಮಕ್ಕೆ ಧನವನ್ನೂ ಅರ್ಪಿಸಬೇಕೆಂಬ ಶಾಸ್ತ್ರವಚನದಂತೆ ಅನೇಕ ವಿಧವಾದ ದಾನಗಳನ್ನು ಮಾಡಿದ್ದಾರೆ. ಅವರು ಕೊಟ್ಟ ಭೂಮಿ ಜಹಗೀರುಗಳು ಈ ವರೆಗೂ ವಿರಾಜಮಾನಗಳಾಗಿರುತ್ತವಲ್ಲದೆ ಇವರ ಸ್ವಾಧೀನದಲ್ಲಿಯೂ ಇರುತ್ತವೆ. ಈ ವಿಷಯದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠ (ಜಂಗಮವಾಡಿಮಠ) ಇತ್ಯಾದಿ ಗುರುಸ್ಥಾನಗಳೇ ಸಾಕ್ಷಿಗಳಾಗಿವೆ. ಬ್ರಿಟಿಷ ಸರಕಾರದವರಾದರೂ ಆ ದಾನಗಳನ್ನು ಯಥಾಪ್ರಕಾರವಾಗಿ ನಡೆಯಿಸುತ್ತ ಬಂದಿ ~~ನಮ್ಮ ಜಂಗಮರಲ್ಲಿ ರಾಜಾಧಿಮಾನ್ಯಗಳಾದ ಮಠಗಳನ್ನೂ ಮಠಾಧಿಪತಿಗಳಾದ ಚರಮೂರ್ತಿಗಳನ್ನೂ~~ [illegible] ಗಮಸ್ವರೂಪವನ್ನರಿಯದ ವೇಷಧಾರಿ ಸನ್ಯಾಸಿಗಳು ತಾವೇ ಜಂ ಮರೆಂದೂ, ಇವರ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವದಕ್ಕೆ ನಾವೇ ಸಮರ್ಥರಲ್ಲದೆ ಆಚಾರ್ಯರು ಆಗುವುದಿಲ್ಲವೆಂದೂ ಬಡಬ ಸುತ್ತಿರುವರು. ಇದನ್ನು ನೋಡಿದರೆ ಸೂರ್ಯನನ್ನು ಧಿಕ್ಕರಿ ಜಗತ್ತಿನ ಕತ್ತಲೆಯನ್ನು ನಾಶಮಾಡುತ್ತೇನೆಂದು ಜಂಭಕೊಚ್ಚಿಕೊಳ್ಳುವ ಹೊನ್ನಿಹುಳದಂತೆ ಇವರು ಲೋಕದಲ್ಲಿ ಹಾಸ್ಯಾಸ್ಪ ರಾಗುತ್ತಾರೆಂದು ಬೇರೆ ಹೇಳಬೇಕಾಗಿಲ್ಲ. ವೀರಶೈವ ಮ ಗ್ರಂಥಗಳಲ್ಲಿ—

> ಚರಮೂರ್ತಿಂವಿನಾದೇವಿ ಅನ್ಯೋ ನೈವಹಿ ಜಂಗಮಃ |
> ಚರಮೂರ್ತ್ಯಭಿಧಾನೇನ ಜಂಗಮಃ ಕಥಿತೋಧ್ರುವಂ ||
> ಅನ್ಯಥಾಯಸ್ತು ಜಾನಾತಿ ರೌರವಂ ನರಕಂವ್ರಜೇತ್ |

ಎಂದು ಹೇಳಲ್ಪಟ್ಟಿರುತ್ತದೆ. ಓ ಪಾರ್ವತಿಯೇ! ಚರಮೂ ತಿಯೇ ಜಂಗಮನಿರುತ್ತಾನೆ; ಇನ್ನೊಬ್ಬನೆಂದೂ ಆಗುವದಿಲ್ಲ. ಈ ಚರಮೂರ್ತಿಯನ್ನು ಅನ್ಯಥಾಭಾವಿಸಿದ್ದಾದರೆ ರೌರವ ನರ ವನ್ನು ಹೊಂದುತ್ತಾನೆಂದು ಉಪದೇಶಿಸಿರುತ್ತಾನೆ. ಈ ರೀ ಯಾಗಿ ಧರ್ಮಗ್ರಂಥೋಕ್ತ ವಿಷಯವನ್ನರಿಯದ ದಷ್ಟರಾದ ಸನ್ಯಾಸಿಗಳು ಇನ್ನಾದರೂ ತಮ್ಮ ವಕ್ರಮಾರ್ಗವನ್ನು ಬಿಟ್ಟು ಜಗದಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಶ್ರೈ ಸುಖವನ್ನು ಪಡೆಯಬೇಕೆಂದಾಶಿಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯ
ಸ್ತೋತ್ರರತ್ನಾಕರ.

ಗುರುಭಕ್ತರ ಉದ್ಧಾರಕ್ಕಾಗಿ ಮೇಲ್ಕಂಡ ಗ್ರಂಥವು ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಯಜುರ್ವೇ ದಾಂತರ್ಗತ ವೀರಶೈವಲಿಂಗ್ಯೋಪನಿಷತ್ತು, ಸ್ವಯಂಭುವಾಗಮ, ಸುಪ್ರಬೋಧಾಗಮ, ಪಾಶುಪತತಂತ್ರ ಮೊ ಲಾದ ಪವಿತ್ರಗ್ರಂಥಗಳಲ್ಲುಕ್ತವಾಗಿರುವ ಆಚಾರ್ಯರ ವರ್ಣನೆಯು ಸಂಗ್ರಹೀತವಾಗಿರುವುದಲ್ಲದೆ, ಅಗಸ್ತ್ಯ ವಿಭೀಷಣ, ಚೋಳಭೂಪಾಲ, ಶಿವಯೋಗಿಶಿವಾಚಾರ್ಯ, ಶಂಕರಾಚಾರ್ಯ, ಸಿದ್ಧನಾಥಶಿವಾಚಾರ್ಯ, ಶ್ರೀಪ ಪಂಡಿತ, ನಂಜಣಾಚಾರ್ಯ, ಅನಾದಿ ತೋಂಟದ ಸಿದ್ಧಲಿಂಗಯತಿ, ಷಡಕ್ಷರಕವಿ, ಬೊಮ್ಮರಸ ಇವರೇ ಮೊ ಲಾದ ಅನೇಕ ಜನ ಮಹರ್ಷಿಗಳು, ಚಕ್ರವರ್ತಿಗಳು, ರಾಜರು, ಭಾಷ್ಯಕಾರರು, ಸುಪ್ರಸಿದ್ಧ ಕವಿಗಳು ಈ ಗು ಸಾರ್ವಭೌಮರನ್ನು ಬಹುಭಕ್ತಿಭಾವದಿಂದ ಕೊಂಡಾಡಿರುವ ಸ್ತುತಿಗಳು ವಿಶೇಷವಾಗಿ ಸಂಗ್ರಹೀತಗಳಾಗಿ ವುವು. ಈ ಗ್ರಂಥವು ೨೨೪ ಪುಟಗಳಿಂದ ಕೂಡಿರುವುದು. ಈ ರೀತಿಯಾಗಿ ಯಾವ ಕಾಲದಲ್ಲೂ ಯಾರಿ ದಲೂ ಸಂಗ್ರಹಿಸಲ್ಪಡದೆ ಇರತಕ್ಕ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ, ಭಜನಾಸಂ ದವರೂ, ವಿದ್ಯಾರ್ಥಿಗಳೂ ತರಿಸಿಕೊಂಡು ನಾನಾತರಹವಾಗಿರತಕ್ಕ ಜಗದಾಚಾರ್ಯರ ಪವಿತ್ರಸ್ತೋತ್ರಗಳನ್ನು ಪಠಿಸಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.**

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,
ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೧೯—೧೧—೧೯೩೩ ಪೂರಾ ೫೦ ದಿವಸಗಳಲ್ಲಿ ಶ್ರೀಕಾಶೀ, ರಾಮೇಶ್ವರ, ಲಂಕಾ ಮೊದಲಾದ ೩೧ ಕ್ಷೇತ್ರಗಳ ಮಹಾಯಾತ್ರೆಯು ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು.

ಸದರಿ ಕಂಪನಿಯ ಎಂಜಂಟರಿಗಳಿಂದ ಪಡಜವಾನುಗಳು ಕಿರ್ದಿ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕ ಕಂಪನಿಗೆ ತಿಳಿಸತಕ್ಕದ್ದು.

ಜಿ. ಎ. ಶಿರೂರ,
ಮ್ಯಾನೇಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ.

ತಾ|| ೧—೬—೧೯೩೩.

ಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ರಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ರಿ (೧ನೇ ನಂಬರ್)	೧	೫೦—೦—೦
ರಿ (೨ನೇ ನಂಬರ್)	೧	೪೦—೦—೦
ಜಿತ ಸೂರ್ಯಪುಟ	೧	೧—೦—೦
ಜಿತ ಅಗ್ನಿ ಪುಟ	೧	೦—೮—೦

ೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಗಳನ್ನು ನಿಪುಣರಾದ ನೇಯ್ಗೆಯವರಿಂದ ಮನೋ ರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ತೊಳೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣೆ ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಮಬೇಕೆಂದು ಕೋರುತ್ತೇವೆ.

ೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಮ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಚಿಕಿತ್ಸೆಸಿದ್ಧಿಯ ಮದ್ದುಗಳು.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಶೀತಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. ಪ್ರಯಾಣಿಕರಿಗೆ ಹೆಚ್ಚು ಆದಾಯಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫ್ಲೂಫ್ಯುಗೊ ಬಿಲ್ಲೆ—ಕೆಮ್ಮು, ರಕ್ತ, ಬೀಳುವ ಕಫ, ಎದೆನೋವು, ಪಾರ್ಶ್ವನೋವು ಇತ್ಯಾದಿ ಶ್ವಾಸಕೋಶದ ರೋಗಗಳಿಗೆಲ್ಲ ಗುಣಕರ. ಕ್ರಯ 60, 100, 500 ಕ್ಕೆ ರೂ. 1, 1-8-0, 7-0-0.

ಫಿವರ್ ಸ್ಪೆಸಿಫಿಕ್—ಮಕ್ಕಳ ಸರ್ವಸಾಧಾರಣವಾದ ಎಲ್ಲಾ ಜ್ವರಗಳಿಗೆ ವಿಶೇಷಪಟ್ಟ ಮಾತ್ರೆಗಳು, ಶೀತಜ್ವರ, ಕೆಮ್ಮು, ಹುಳಜ್ವರ, ಅಜೀರ್ಣಜ್ವರ, ಮೈಲಿಗೆ, ಕೋರ, ಕೋಟಲೆ ಮುಂತಾದ ಎಲ್ಲಾ ಜ್ವರಗಳಿಗೆ ಗುಣಕರವಾಗಿದೆ. ಕ್ರಯ ಅರ್ಧ ಔನ್ಸಿಗೆ ಆಣೆ 0-9-0, 1 ಔನ್ಸಿಗೆ ರೂ. 1-0-6.

ಬ್ರೈನ್ ಸ್ಪೆಸಿಫಿಕ್—ತಲೆಬಿಸಿ, ಬಹಳ ಬೆವರು, ಮೆದುಳು ಬಿಸಿ, ಕಣ್ಣುಹಿಡಿತ, ನೆತ್ತಿಉರಿ, ನಿದ್ರಾಭಂಗ, ಚಂಚಲತೆ ಇತ್ಯಾದಿ ಮೆದುಳುರೋಗಗಳನ್ನು ಈ ಮಾತ್ರೆಗಳು ಗುಣಪಡಿಸುವುದು ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ 1-0-0.

ಹೂಪಿಂಗ್ ಕಫ್ ರೆಮೆಡಿ—ಕಕ್ಕೆ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಾಳಕೆಮ್ಮು, ಇತ್ಯಾದಿ ಕೆಮ್ಮುರೋಗಗಳಿಗೆ ಸಿದ್ಧೌಷಧವಾಗಿದೆ. ಕ್ರಯ ಅರ್ಧ ಔನ್ಸಿಗೆ 0-9-0, 1 ಔನ್ಸಿಗೆ ರು. 1-0-0.

ರ್ಯುಮೋ ಬಾಮು—ಎಲ್ಲಾ ತರದ ವಾತನೋವುಗಳಿಗೂ, ಕೆಮ್ಮು, ಶೀತ, ಎದೆನೋವು, ಸೊಂಟನೋವು, ಬೀಗು, ಗಂಟುಗಳ ಬಾತುವಿಕೆಗಳಿಗೆ ರಾಮಬಾಣ. ಕ್ರಯ ಡಬ್ಬಿಗೆ ಆಣೆ 0-8-0, ಡಜನ್ನಿಗೆ ರು. 5-4-0.

ರಿಂಗ್ ವಾರ್ಮ್ ಬಾಮು—ನಾನಾಬಗೆಯ ಚರ್ಮರೋಗಗಳೂ ದದ್ದು, ಹುಳ ಮೇಯುವುದು, ತುರಿ, ಉರಿಬರುವ ಇತ್ಯಾದಿ ಅಂಟುರೋಗಗಳ ಸಿದ್ಧೌಷಧವಾಗಿದೆ. ಕ್ರಯ ಡಬ್ಬಿಗೆ ಆಣೆ 0-5-0, ಡಜನ್ನಿಗೆ ರು. 3-0-0.

ಎಲ್ಲಾ ಕಡೆ ಏಜಂಟರು ಬೇಕಾಗಿದೆ. ಅಪೇಕ್ಷಕರು ಬರೆಯಿರಿ.

☞ ಟಿಷ್ಯು ಮದ್ದುಗಳೂ ಹೋಮಿಯೊಪತಿ ಔಷಧಗಳೂ ನಮೂನೆವಾರು ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಅಪೇಕ್ಷಕರಿಗೆ "**ಆರೋಗ್ಯಭಾಗ್ಯದ ನೀತಿಸೂತ್ರ**" ಎಂಬ ಪುಸ್ತಕವು ಉಚಿತವಾಗಿ ಕಳುಹಿಸಲ್ಪಡುವುದು. ಪರಪೂರಿಸಲ್ಲಿರುವ ರೋಗಗಳು ಈ ಪುಸ್ತಕದ VIII ರಿಂದ X ನೇ ಪಾಟಿನಲ್ಲಿರುವ ರೋಗಲಕ್ಷಣಗಳನ್ನು ಒಂದುಕಾಲಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ, ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

THE MALARIANA Co., No. 21, (Hampanakatte), MANGALORE.
[41] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ), **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಉಬ್ಬಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಹಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತರಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುಮಾಡಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರಕ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[22] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

(Registered Trade Mark)

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ ಗಳನ್ನು ಕೊಟ್ಟಿ ರು. ಪ್ರಸಿದ್ಧವಾದ ನಶ್ಯದ ಪುಡಿಯಿ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆ ರೆ:—ಪೀನಸಿ, ಬ ತಲೆನೋವು, ತಲೆ ಲ್ಲಿನ ರೋಗಗ ಕಣ್ಣುಗಳಲ್ಲಿ ಉಂ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ ಪರಿಮಳವಾಗುವುದು. ಇದನ್ನು ಅನೇಕ ಪ್ರಭು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-

ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[23] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಜೂನ್ ೧೯೩೩ [ಸಂಚಿಕೆ ೯

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣವನ್ನು ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾದ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳೆಂಬ ಕವಿಪುಂಗವರು ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾರೆ. ಈ ಕವಿಗಳ ಕವಿತಾಸರಣಿಯು ಅಸದೃಶವಾದುದು. ಇವರ ಕವಿತಾಮಹತ್ತ್ವವನ್ನು ಇಡೀ ಕರ್ಣಾಟಕದೇಶವೇ ಕೊಂಡಾಡುತ್ತದೆ. ಪುರಾಣವನ್ನು ಸಂಪೂರ್ಣವಾಗಿ ಪರಿಶೀಲಿಸಿದರೆ ಈ ಮಹಾಕವಿಗಳ ಯೋಗ್ಯತೆಯು ಸ್ಪಷ್ಟವಾಗಿ ಕಂಡುಬರುವುದು. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರಿಜೆಂಟೇಟೀವ್ ಮತ್ತು ಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ ುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಾಡುತ್ತೇವೆ. [27]

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಪುರಂದರದಾಸರು ಯಾವ ರೀತಿಯಾಗಿ ಮನೋಹರವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿಸಿರುವರೋ, ಅದರಂತೆಯೇ ಜಗದಾಚಾರ್ಯರ ವಿಷಯದಲ್ಲಿ ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅನೇಕ ಪದಗಳು ಬಹು ಮನೋಹರವಾಗಿ ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರತಿಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರಹಿಸಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಗಾಂಧಿಯವರ ದೇಹಸ್ಥಿತಿಯ ಸಲುವಾಗಿ ಕಾನೂನುಭಂಗದ ಚಳುವಳಿಯು ಜುಲೈ 31 ರ ವರೆಗೂ ನಿಲ್ಲಿಸಲ್ಪಟ್ಟಿರುವದೆಂದು ಕಾಂಗ್ರೆಸ್ ಪ್ರೆಸಿಡೆಂಟರಾದ ಮಿ|| ಅಣೆಯವರು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಸ್ವೀಕಾರ

ಧಾರವಾಡ ಡಿ|| ಗದಗ ತಾ|| ಬೆಟಗೇರಿ ನಿವಾಸಿಗಳಾದ ಮ|| ರಾ|| ನೀಲಪ್ಪಗೌಡಾ ಶಿವನಗೌಡಾ ಹಿರೇಮನಿ ಪಾಟೀಲ ಇವರ ಸವಿವಾಹಬಂಧುಗಳಾದ ಚಿ|| ರಾ|| ಸಿದ್ದನಗೌಡ ಮಾಸ್ತರ ಬನ್ನಿಗೋಳ ಇವರಿಗೆ ರೋಣ ತಾಲೂಕು ನೆರೆಗಲ್ಲ ಗ್ರಾಮದಲ್ಲಿರುವ ಮ|| ರಾ|| ಶಿವಬಸಪ್ಪಾ ಕೊಟಗಿ ಇವರ ಪುತ್ರಿ ಚಿ|| ಸೌ|| ಪಾರ್ವತವ್ವ ಉರ್ಫ ಗುರುಸಿದ್ಧವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 4 ರೂ. ವಧುವಿನ ಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 5 ರೂ. ಗಳು ಮ|| ರಾ|| ನೀಲಪ್ಪಗೌಡಾ ಶಿವನಗೌಡಾ ಹಿರೇಮನಿ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾಲೂಕು ಯಳಗೋಡು ನಿವಾಸಿಗಳಾದ ಮ|| ರಾ|| ರಾ|| ಸಾಹುಕಾರ್ ದುಮ್ಮಿತಿಪ್ಪೇರುದ್ರಪ್ಪನವರ ಜ್ಯೇಷ್ಠಪುತ್ರಿ ಚಿ|| ಸೌ|| ಸರ್ವಮಂಗಳಮ್ಮನನ್ನು ದಾವಣಗೆರೆ ಮ|| ರಾ|| ಮಾಗಾನಹಳ್ಳಿ ಚನ್ನವೀರಪ್ಪನವರ ಪುತ್ರ ಚಿ|| ರಾ|| ವೀರಬಸಪ್ಪನಿಗೂ, ಸದರಿ ಮ|| ರಾ|| ದುಮ್ಮಿತಿಪ್ಪೇರುದ್ರಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ಮ|| ರಾ|| ಮಾಗಾನಹಳ್ಳಿ ಷಡಕ್ಷರಪ್ಪನವರ ಪುತ್ರ ಚಿ|| ರಾ|| ಪಣ್ಯಬಸಪ್ಪನಿಗೂ ಕೊಟ್ಟು ಯಳಗೋಡಿನಲ್ಲಿ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 4 ರೂ. ಗಳು ವೇ|| ಹಿರೇಮಠದ ಷಡಕ್ಷರಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ತಾಲೂಕು ಹುಮ್ಮಿಗಿಯಲ್ಲಿರುವ ಮ|| ರಾ|| ವರದ ಫಕೀರಪ್ಪನವರ ಪುತ್ರ ಚಿ|| ರಾ|| ವೀರಪ್ಪನಿಗೆ ಸದರಿ ತಾಲೂಕು ಹುಳ್ಳಿಕೇರಿಯಲ್ಲಿರುವ ಮ|| ರಾ|| ಬಳ್ಳೊಳ್ಳಿ ಗುರುಪಾದಪ್ಪನವರ ಪುತ್ರಿ ಚಿ|| ಸೌ|| ಚನ್ನವೀರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಲ್ಪಟ್ಟ 2 ರೂ. ಗಳು ಗುರುಭಕ್ತಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ವರ್ತನಹಳ್ಳಿಯಲ್ಲಿರುವ ಮ|| ರಾ|| ಚಿರಸ್ತಹಳ್ಳಿ ಚಂದ್ರಶೇಖರಪ್ಪನವರ ಮಾತೃ ಶ್ರೀಮತಿ ಬಸವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಮ|| ರಾ|| ಉತ್ತಂಗಿ ಶಿವನಾಗಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ರಥೋತ್ಸವಕ್ಕೆ ತಡೆ.

ಬೆಲವಂತರ.

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕದಲ್ಲಿ ಬೆಲವಂತರವೆಂಬ ಚಿಕ್ಕ ಗ್ರಾಮವಿದೆ. ಆ ಗ್ರಾಮದಲ್ಲಿ ಶ್ರೀ ಕಲ್ಮೇಶ್ವರ ದೇವರೆಂಬ ಸಾರ್ವಜನಿಕದೇವರಿದ್ದು ಆ ದೇವರ ಜಾತ್ರೆಯಾಗುತ್ತದೆ. ಪದ್ಧತಿಪ್ರಕಾರ ಹೋದವರ್ಷ ಜಾತ್ರೆಯಾಯಿತು. ಜಾತ್ರೆಯ ಮುನ್ನಾ ಸಣ್ಣ ಓಣಿಯವರು ದೊಡ್ಡ ಓಣಿಯ ಪ್ರಮುಖರಿಗೆ, ನಿಮ್ಮ ಓಣಿಯಲ್ಲಿಯೂ ತೇರು ಹಾಯಿಸೋಣವೇ ಎಂದು ಕೇಳಿದ್ದಕ್ಕೆ ದೊಡ್ಡ ಓಣಿಯವರು ಆಗಲಿ ಎಂದು ಒಪ್ಪಿದರು. ತಾರೀಖು ೨೬ ಜೂನ್ ೧೯೩೩ ನೆಯ ಸೋಮವಾರ ಸಾಯಂಕಾಲ ೫|| ಘಂಟೆಗೆ ತೇರು ಸಾಗಿತು. ದೊಡ್ಡ ಓಣಿ ದಾಟಿ ಅಗಸಿಗೆ ತೇರು ಬಂದು ಅಲ್ಲಿಂದ ಸಣ್ಣ ಓಣಿಯ ಕಡೆಗೆ ಎಳೆಯಲಿಕ್ಕೆ ಹೋಗಲು ಒಪ್ಪಿದ ಜನರೇ ತೇರಿನ ಮುಂದೆ ಬಂದು ಹರಕತ್ತು ಮಾಡಿದರು. ಹೀಗೇಕೆ ಮಾಡುವಿರೆಂದು ಸಣ್ಣ ಓಣಿಯವರು ಕೇಳಲಾಗಿ ಮೊದಲೇ ಹಾಯಗೊಡುವದಿಲ್ಲವೆಂದು ಹೇಳಿದ್ದರೆ ತೇರು ಹರಕತ್ತು ಆಗುತ್ತಿತ್ತು. ಆದಕಾರಣ ಹಾಗೆ ಹೇಳಿದೆವೆಂದು ಹರಕತ್ತು ಮಾಡಿದವರೆಂದರು. ಹರಕತ್ತು ಆದೀತೆಂದು ಪ್ರಥಮಸಂಶಯಹುಟ್ಟಿದ್ದು ಅದಕ್ಕೂ ಹರಕತ್ತಾಯಿತು. ಊರಲ್ಲಿ ಪಾರ್ಟಿಗಳೇನೂ ಇಲ್ಲ. ಆದರೆ ಹಿಂದಕ್ಕೆ ೧೩-೧೪ ವರ್ಷಗಳಾಚೆಗೆ ಪಾರ್ಟಿಗಳಿದ್ದವು. ಅಲ್ಲಿಂದ ಇಲ್ಲಿಯವರೆಗೂ ಈಗ್ಯೂ ಊರಲ್ಲಿ ಏಕವಾಗಿರುತ್ತದೆ. ಹಿಂದಕ್ಕೆ ಪಾರ್ಟಿಯಲ್ಲಿ ಸೇರಿದ ಒಬ್ಬಿಬ್ಬರಿಗೆ ಮಾತ್ರ ಅದರ ಭಾವನೆ ಅಳಿದುಹೋಗಿಲ್ಲ. ಇದಲ್ಲದೆ ಊರಲ್ಲಿ ಪಂಚರೆಂಬುವರ ಪೈಕಿ ಮೇಲ್ಕಂಡ ಒಬ್ಬಿಬ್ಬರು ಇರುತ್ತಾರೆ. ಅವರು ಮಾಡಿದ್ದೇ ಮಾನ್ಯವು. ಹಿಂದಿನ ಭಾವನೆಯೇ ತೇರಿನ ಹರಕತ್ತಿಗೆ ಮುಖ್ಯ ಕಾರಣವು. ಈಗ ತೋರಿಸುವ ಕಾರಣಗಳು ಸರಿಯಾದವಲ್ಲ. ಜಾತ್ರೆಗೆ ಬಂದಂಥ ಹಳ್ಳಿಯಜನರು ಹಿರೇಮಠ ಮತ್ತು ಚನ್ನಬಸವೇಶ್ವರಶಿವಯೋಗಿಗಳವರ ಮಠಕ್ಕೆ ದೂರದಿಂದ ಬಂದಂಥ ಸಭ್ಯಗೃಹಸ್ಥರು ಹರಕತ್ತು ಮಾಡಬೇಡಿರಿ. ದೇವರ ಕೆಲಸವೆಂದು ನಾನಾರೀತಿ ಹೇಳಿದರು. ಆದರೆ ಅವರು ಎಂದಿಗಾದರೂ ನಮ್ಮ ಓಣಿಯಲ್ಲಿಯೇ ಹಾಯತಕ್ಕ ಮಾಮೂಲ ಅದೆ. ಸಣ್ಣ ಓಣಿಯಲ್ಲಿ ಹಾಯಗೊಡುವದಿಲ್ಲವೆಂದು ಉತ್ತರ ಕೊಟ್ಟರು. ಹಠವನ್ನು ಸಾಧಿಸುವವರಿಗೆ ಉಪದೇಶ ನಾಟುವದೇ ? ಮುಂದೆ ತೇರು ದೇವರ ಮೂರ್ತಿ ಸಹಿತ ಪೋಲೀಸರ ತಾಬೆಯಾಗಿ ಮೂರು ದಿವಸ ಪೂಜೆಯಿಲ್ಲದೆ ಅಗಸಿಯಲ್ಲಿ ಮೆರೆಯಬೇಕಾಯಿತು. ಮಾಮೂಲ ಮಾಮೂಲವೆಂದೆನ್ನುವ ಅಣ್ಣಗಳೇ, ಪ್ರತಿಯೊಂದು ಕಾರ್ಯವನ್ನು ಮಾಡಬೇಕಾದರೆ ಮಾಮೂಲಪ್ರಕಾರ ನಾವು ಮಾಡುತ್ತೇವೆಯೋ ? ಹಿಂದಿನವರ ನಡೆನುಡಿಗಳಂತೆ ನಮ್ಮ ನಡೆನುಡಿಗಳಿರುವವೇ ? ಹಿಂದಿನವರು ಹೇಳುವದೊಂದು ಮಾಡುವದೊಂದು ಮಾಡುತ್ತಿದ್ದರೇ ? ದೇವರ ತೇರು ಇಂಥಿಂಥ ನಿರ್ದಿಷ್ಟವಾದ ಸ್ಥಳಗಳಲ್ಲಿಯೇ ಹೋಗಬೇಕೆಂಬುದಕ್ಕೇನಾದರೂ ಸನದುಗಳಿರುವವೋ ? ತೇರು ಊರತುಂಬಾ ಹಾಯ್ದರೆ ಯಾರಿಗೆ ಲುಕ್ಸಾನ ಆಗುತ್ತದೆ ? ಹೀಗಿದ್ದು ಪ್ರತಿಬಂಧಮಾಡುವದೆಲ್ಲಿಯ ನ್ಯಾಯ ? ಹಿಂದೆ ಹಾಗೆ ಮಾಡಿದ್ದರು, ಹೀಗೆಮಾಡಿದ್ದರೆನ್ನುವದು ತರವಲ್ಲ. ಬೇರೆ ಉದಾಹರಣೆಯೇಕೆ ? ಮೊನ್ನೆ ಮೊನ್ನೆ ನೀವೇ ವೀಳ್ಯಕಾರ್ಯದಲ್ಲಿ ಸಕ್ಕರಿ. ವೀಳ್ಯ ಹಂಚುವದರ ಬದಲಾಗಿ ಹತ್ತು ರೂಪಾಯಿ ನೇಮಿಸಿರುವಿರಿ. ಎಷ್ಟೋ ಬಡಜನರು ಗೋಳಾಡುವರಲ್ಲವೇ ? ಊರಲ್ಲಿ ಹಿಂದೆ ಯಾರಾದರೂ ವೀಳ್ಯಕಾರ್ಯಕ್ಕೆ ರೂಪಾಯಿ ಮಾಡಿದ್ದರೇನು ? ಅದೂ ಇರಲಿ: ಊರಲ್ಲಿ ಧರ್ಮಸಂಬಂಧದ ಕೆಲಸಗಳಲ್ಲಿ ನಿಮ್ಮಂತೆ ಗುರುಗಳನ್ನು ಬಿಟ್ಟು ಹಿಂದಿನವರು ಜನರಿಗೆ ತಾವೇ ದಂಡಮಾಡುತ್ತಿದ್ದರೇನು ? ದೈವಾಚಾರಕ್ಕೆ ಬಂದಂಥ ಹಣವನ್ನು ಏನೊಂದು ಲೆಖ್ಖಪತ್ರವಿಲ್ಲದೆ ದೇವಸ್ಥಾನಗಳಿಗೆ ವಿನಿಯೋಗಿಸದೆ ಹಿಂದಿನವರು ನಿಮ್ಮಂತೆ ಮಾಡುತ್ತಿದ್ದರೇನು ? ನಿಮಗಾದರೆ ಮಾಮೂಲು ಇಲ್ಲ. ಉಳಿದವರಿಗೆ ಮಾತ್ರ ಮಾಮೂಲೇನು, ಇದು ಯೋಗ್ಯವಾಗುವದೇ ? ಒಂದೇ ಊರಲ್ಲಿ ನೀವೆಲ್ಲರೂ ಅಣ್ಣತಮ್ಮಂದಿರಂತೆ ಇದ್ದು ಒಂದೇಜಾತಿಯವರಾದ ನೀವು ದ್ವೇಷ ಮಾಡುವದೆ ? ಅಹಂಕಾರವು ತರವಲ್ಲ. ನಾನು ಅಂದರೆ ನನಗಿಂತಲೂ ಮೇಲು ಇದ್ದಾರೆ. ಅರುವಿನ ಜನ್ಮಕ್ಕೆ ಬಂದ ಮೇಲೆ ಅಡಿಗಡಿಗೆ ಬಹುಎಚ್ಚರದಿಂದ ನಡೆಯಬೇಕು. ಮೇಲ್ಕಂಡ ಮಾತಾಗಿ ಒಂದು ವರ್ಷವಾದರೂ ಈ ವರ್ಷ ಜಾತ್ರೆಮಾಡಬೇಕೆಂದು ಕೆಲವರು ಅಭಿಪ್ರಾಯಪಟ್ಟು ಪರ ಊರಿನ ಬುದ್ಧಿವಂತರನ್ನು ಕರೆದುಕೊಂಡು ಬಂದು ವಿಚಾರಕ್ಕೆ ನಿಂತಾಗ, ಬುದ್ಧಿವಂತರು ಹೇಳಿದಂತೆ ಕೇಳುತ್ತೇವೆಂದು ಸರ್ವರೂ ಒಪ್ಪಿಗೆಯನ್ನು ಕೊಡಲು ತೇರು ಹರಕತ್ತು ಮಾಡಿದ ಒಬ್ಬಿಬ್ಬರು ನಮ್ಮಂತೆಯೇ ನಿರ್ಣಯ ಹೇಳಿದರೆ ನಾವು ಒಪ್ಪುತ್ತೇವೆಂದು ಹೇಳಿದರು. ತಮ್ಮ ಬಂಧುಗಳನ್ನೇ ಮೋಸಗೊಳಿಸಿದವರಿಗೆ ಪರಊರಿನ ಬುದ್ಧಿವಂತರ ಮಾತನ್ನು ಅಲ್ಲಗಳೆಯುವದೇನು ದೊಡ್ಡಮಾತು ? ಭಕ್ತಿವಹಿಸಿ ಜಾತ್ರೆ ಮಾಡುತ್ತೇವೆಂದು ಅಗಸೀಬಾಗಿಲದಲ್ಲಿ ಮೂರು ದಿವಸ ದೇವರನ್ನು ಪೂಜೆಯಿಲ್ಲದೆ ಬಿಟ್ಟು ತಮ್ಮ ತಮ್ಮ ಮನೆಗಳಲ್ಲಿ ಉಂಡುಟ್ಟು ಅಟ್ಟಹಾಸದಿಂದ ಮೆರೆದರು. ಬೆಲವಂತರದ ಜನಗಳೇ ? ಇನ್ನು ಮೇಲೆ ನಿಮ್ಮ ಮತ್ಸರದ ಅಜ್ಞಾನದ ಮಾರ್ಗವನ್ನು ಬಿಡಿರಿ. ಇಷ್ಟೇ ನನ್ನ ಸವಿನಯ ಬೇಡಿಕೆ. ಜಗತ್ತಿನಲ್ಲಿ ಏನು ನಡೆದಿದೆ ಎಂಬುದನ್ನು ಕಣ್ತೆರೆದು ನೋಡಿರಿ. ನಿಮ್ಮಲ್ಲಿಯ ವೈರಭಾವವನ್ನು ಬಿಡಿರಿ. ಸ್ವತಂತ್ರತೆಯ ಗಾಳಿಯು ಜಗತ್ತಿನಲ್ಲಿ ಬೀಸುತ್ತಿರುವಾಗ ನಿಮಗೆ ಎಳ್ಳಷ್ಟು ಸೋಂಕಿಲ್ಲವೇ ? ಆದದ್ದಾಗಿ ಒಂದು ವರ್ಷವಾದರೂ ದಾರಿಗೆ ಬಂದಿರಬಹುದೆಂದು ನೋಡಿದರೆ ಇನ್ನೂ ಅದೇ ಮತ್ಸರಭಾವವೇ ? ಜಾತಿಯ ಅಭಿಮಾನ ಸ್ವಲ್ಪಾದರೂ ಇರಲಿ. ಸಮಾಜಸುಧಾರಣೆ, ಸಮಾಜ ಏಕೀಕರಣವೆಂದು ಇಡೀ ಸಮಾಜವೇ ಬಡಬಡಿಸುತ್ತಿರುವಾಗ ನೀವು ಹೀಗೆ ವರ್ತಿಸುವದು ಸರ್ವಥಾ ಯೋಗ್ಯವಲ್ಲ. ಈ ಪ್ರಕಾರ ಮಾಡುವದರಿಂದ ನಿಮ್ಮ ಕಾಲ ಮೇಲೆ ನೀವೆ ಕಲ್ಲು ಚಲ್ಲಿಕೊಳ್ಳುವಿರಿ. ಮನಸ್ಸಿನಲ್ಲಿಯ ಕುಕಲ್ಪನೆಗಳನ್ನು ಹೊರಗೆಡವಿರಿ. ನಿಮಗೆ ತಿಳಿಯದಿದ್ದರೂ ನಿಮಗಿಂತ ಬಲ್ಲವರಿಂದ ತಿಳಿದು ವರ್ತಿಸಿರಿ. ನಿಮ್ಮ ಊರೆಂದರೆ ಉಳಿದ ಊರುಗಳಂತಲ್ಲ. ಬೆಲವಂತರವೆಂಬ ಊರನ್ನು ಅರಿಯದವರೇ ಇಲ್ಲ. ಯಾವ ಮಹನೀಯನು ಜಗದುದ್ಧಾರಕ್ಕಾಗಿ ಚನ್ನಬಸವೇಶ್ವರಶಿವಯೋಗಿ ಎಂಬ ಹೆಸರಿನಿಂದ ಅವತಾರ ತಾಳಿರುವನೋ ಅಂಥ ಯೋಗಿವರೇಣ್ಯನ ಆಜ್ಞೆಯಂತೆ ನಡೆಯಬಾರದೆ ? ಆ ಮಹಾತ್ಮನಿಂದ ಬೆಲವಂತರವೆಂಬುದು ಪಾವನವಾಗಿದೆಯಲ್ಲವೇ ? 'ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆಹಾಲ' ಎಂಬಂತೆ ಕಣ್ಣಿದ್ದರೂ ಕುರುಡರಾಗಿರುವಿರಿ. ಆ ಶಿವಯೋಗಿವರ್ಯನ ದರ್ಶನಕ್ಕೋಸುಗ ಎಲ್ಲೆಲ್ಲಿಂದ ಎಂಥೆಂಥ ವ್ಯಕ್ತಿಗಳು ಬರುವರೆಂಬದನ್ನು ನೀವು ಅರಿಯದ ಮಾತೆ ? ಬೆಲವಂತರದ ಜನಗಳೇ, ಆ ಮಹಿಮನ ಸನ್ನಿಧಿಯಲ್ಲಿರುವವರಾದ ನೀವೇ ಧನ್ಯರು! ಆದರೆ ಇನ್ನು ಮುಂದೆ ಸಾರ್ವಜನಿಕ ಕೆಲಸಗಳಲ್ಲಿ ಸರ್ವರೂ ಭೇದಭಾವನೆಯಿಲ್ಲದೆ ವರ್ತಿಸುವಂತೆ ಬೆಲವಂತರದ ಪ್ರಮುಖರಿಗೆ ಸದ್ಬುದ್ಧಿಯನ್ನೀಯಲೆಂದು ಶ್ರೀ ಶಿವಯೋಗಿವರ್ಯರನ್ನು ಬೇಡಿಕೊಳ್ಳುತ್ತೇನೆ. ಸಮಾಜಬಾಂಧವರೇ, ಎಲ್ಲಿಯವರೆಗೆ ಅತ್ತತ್ತ ಅಲೆದಾಡುವ ಮತ್ತು ಬುದ್ಧಿಯ ಜನರ ದರ್ಶನವು ಹೋಗುವದಿಲ್ಲವೋ ಅಲ್ಲಿಯವರೆಗೆ ಸಮಾಜಸುಧಾರಣೆಯೆಂದು ಬಡಬಡಿಸಿದರೇನಾಗುವದು ? ಮೇಲ್ಕಂಡ ವಿಷಯವು ಸಮಾಜದ ಮತ್ತು ಸಾರ್ವಜನಿಕದ ಹಿತದ ಸಂಬಂಧವುಳ್ಳದ್ದರಿಂದ ಈ ಲೇಖಕೊಡುವ ಅವಶ್ಯಬಿತ್ತು. ಮನಸ್ಸಿನ ತಳಮಳಿಕೆಯೇ ಲೇಖಕ್ಕೆ ಕಾರಣವಾಗಿದೆ.

ಓರ್ವ ಸಮಾಜಸೇವಕ.

ವೀರಶೈವಮತ ಏಕೀಕರಣ.

ಲೇಖಕ—ದೈವಜ್ಞ ವಿನೋದ

ಭಾರತ ಸಾಮ್ರಾಜ್ಯದಲ್ಲಿರುವ ವೀರಶೈವಮತವು ಐಕ್ಯತೆಯಿಲ್ಲದೆ ನರಳುತ್ತಿರುವದು ಸರಿಯಷ್ಟೆ! ಮತದ ನಿಜಸ್ವರೂಪಜ್ಞಾನಪ್ರಕಾಶವು ಮತಸಾಮ್ರಾಜ್ಯದ ಮೇಲೆ ವಿಸ್ತರಿಸಿದ್ದರೆ ಹೀಗಾಗುತ್ತಿದ್ದಿಲ್ಲ. ಮತಾಚರಣೆಗಳೂ ಮತತತ್ವಗಳೂ ಬುಡವಿಲ್ಲದ ಪಾತ್ರೆಯಂತೆ ಉರುಳಾಡತೊಡಗಿವೆ. ಮನದಿಚ್ಛೆಯಂತೆ ಉರುಳಾಡುತ್ತಿರುವ ಮತೀಯರು ಈಗ ನಿಜಸಿದ್ಧಾಂತದ ನೆಲಗಟ್ಟನ್ನು ಕಂಡುಹಿಡಿದು ಮತಮಹೋನ್ನತಿಯ ಮಂದಿರವನ್ನು ಕಟ್ಟಬೇಕು. ವೀರಶೈವರಲ್ಲಿ ನಾನಾ ಪಂಗಡಗಳುಂಟಾಗಿರುವದು ವಿಹಿತವಲ್ಲ. ಭವಸಾಗರವನ್ನು ದಾಟಿಸಲು ಸರ್ವಸಮರ್ಥವಾದ ಈ ವೀರಶೈವ ಮತವೆಂಬ ನೌಕೆಯನ್ನು ಆಶ್ರಯಿಸಿದ ಯಾವತ್ತರೂ ಪರಸ್ಪರ ದ್ವೇಷಾಸೂಯೆಗಳಿಂದ ಹೊಡೆದಾಡುತ್ತ ಕುಳಿತರೆ ತಾವು ಕುಳಿತ (ಆಶ್ರಯಿಸಿದ) ನೌಕೆಯು ಯಾವ ದಡಕ್ಕೂ ಮುಟ್ಟದೆ ಮಧ್ಯದಲ್ಲಿಯೇ ಮುಳುಗುವದು. ಅದ್ದರಿಂದ ನಮ್ಮ ಮಹಾನೌಕೆಯು ೪೦ ಲಕ್ಷ ಜನಸಂಖ್ಯೆಯನ್ನು ಕೂಡಿಸಿಕೊಂಡು ಈ ಪ್ರಪಂಚವೆಂಬ ಮಹಾಸಾಗರದಲ್ಲಿ ಸುಖರೂಪವಾಗಿ ತೇಲಾಡುತ್ತ ಪಾರಮಾರ್ಥಿಕ (ಮೋಕ್ಷ) ವೆಂಬ ದಡವನ್ನು ಮುಟ್ಟಬೇಕಾದರೆ ನಾವೆಷ್ಟು ಜಾಗರೂಕತೆಯಿಂದಲೂ ಐಕ್ಯತೆಯಿಂದಲೂ ಇರಬೇಕಾಗುವದೆಂಬುದನ್ನು ಪ್ರತಿಯೊಬ್ಬ ವೀರಶೈವನೂ ವಿಚಾರಿಸಬೇಕಾಗಿದೆ. ಈ ಮತರಕ್ಷಣೆಗಾಗಿ ಮತೋದ್ಧಾರಕರಾದ ಪಂಚಪೀಠಾಧಿಪತಿಗಳು ಅಲ್ಲಲ್ಲಿ ಸಂಚರಿಸತೊಡಗಿರುವದರಿಂದ ವೀರಶೈವಮತದ ಘನತೆಯು ಪ್ರಪಂಚಕ್ಕೆಲ್ಲ ತಿಳಿಯತೊಡಗಿದೆ. ಪಂಚಪೀಠದವರ ಹೆಸರನ್ನೆತ್ತಿದೊಡನೆಯೇ ಕೆಲಜನ ಸ್ವಮತೀಯರ ಕಿವಿಯಲ್ಲಿ ಕಾಸಿದ ಸೀಸದರಸವನ್ನು ಹೊಯ್ದಂತಾಗತೊಡಗಿದೆ. ಕ್ಷುದ್ರವೃತ್ತಿಯ ಪಶುಗಳು ಬೇಕುಬೇಕಾದಂತೆ ಜಿಗಿದಾಡಿ ಈಗ ಸಾಲ್ಹಿಡಿದು ಹೋಗುವದೆಂದರೆ ಅವುಗಳಿಗೆ ಕಷ್ಟಸಾಧ್ಯವಾಗಿದೆ ಇವು ಬೇಕಾದಂತೆ ಸಾಲುಬಿಟ್ಟು ಸೆರಿದಾಡಿ ಮಂಗನಂತೆ ಹಲ್ಗಿರಿದರೂ ಸಾಲುಹಿಡಿಸಿ ಮತಸಿದ್ಧಾಂತ ಜ್ಞಾನಸಫಲದಾಯಕವಾದ ಬೀಜವನ್ನು ಬಿತ್ತಲು ಸೊಂಟಕಟ್ಟಿದ ಮಹಾನುಭಾವರು ಇವರನ್ನು ಇಂದಿಲ್ಲ ನಾಳೆಗಾದರೂ ದಾರಿಗೆ ತರುವರು. ಅನಾದಿಕಾಲದಿಂದಲೂ ವೀರಶೈವ ಮತವನ್ನು ಪೋಷಿಸಿ-ಭೂಷಿಸಿ ವಿಸ್ತಾರಗೊಳಿಸಿದವರಾದ ಶ್ರೀ ಜಗದ್ಗುರು ಪಂಚಪೀಠಾಧಿಕಾರಿಗಳು ತಮ್ಮ ಕರ್ತವ್ಯಸೂತ್ರವನ್ನು ಕೈಯ್ಯಲ್ಲಿ ತೆಗೆದುಕೊಂಡಿರುವರು. ಈ ಪೂಜ್ಯಪಾದರ ಪುಣ್ಯಾಭಿಧಾನದಿಂದ ಪ್ರಕಟವಾಗುವ "ಪಂಚಾಚಾರ್ಯಪ್ರಭಾ" ಪತ್ರಿಕೆಯು ಮತೋದ್ಧಾರಕ್ಕಾಗಿ ಪ್ರತಿವಾರವೂ ಹೊರಟು ಧರ್ಮಜಾಗ್ರತೆಯನ್ನು ಮಾಡುತ್ತಲಿರುವದು ಸುಪ್ರಸಿದ್ಧವದೆ. ಈ ಪತ್ರಿಕೆಯ ಯೋಗ್ಯತೆಯನ್ನು ಇದೇ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಮಾಲೆಯಲ್ಲಿ ಪ್ರಸಿದ್ಧಿಸುವದು ಅಪ್ರಸಕ್ತವಾದರೂ ಜನರ ತಿಳುವಳಿಕೆಗಾಗಿ ಎರಡು ಮಾತುಗಳನ್ನು ಬರೆಯಬೇಕಾಯಿತು. ಈ ಪತ್ರಿಕೆಯಲ್ಲಿರುವ ಮತಸಂಬಂಧ ಲೇಖಗಳನ್ನು ಪರಮತೀಯ ಪತ್ರಿಕಾಕಾರರು ಆಗಿಂದಾಗ್ಗೆ ತೆಗೆದುಕೊಂಡು ಇದರ ಘನತೆಯನ್ನು ಕೊಂಡಾಡುತ್ತಿರುವರು. ಸ್ವಮತೀಯರಲ್ಲಿ ಹೊರಡುವ ಕೆಲವು ಪತ್ರಿಕೆಗಳು ಈ ಪತ್ರಿಕೆಗೆ ವಿರುದ್ಧವಾಗಿ ಯಾವಾಗಲೂ ಇದನ್ನು ದೂಷಿಸುವ ಕಾರ್ಯದಲ್ಲಿ ತೊಡಗಿವೆ. ನಿಂದಕರಿಂದಲೇ ಮಹಾತ್ಮರ ಪ್ರಕಾಶವು ಬಯಲಿಗೆ ಬರುತ್ತದೆ. ಪಂಚಪೀಠದ ಮೇಲೆ ವಿಷಕಾರುತ್ತಿರುವ ಈ ನಿಂದಕವರ್ಗವು ನಿಜವಾಗಿ ವೀರಶೈವಮತ ಸಂಜಾತವಾಗಿರಲಿಕ್ಕಿಲ್ಲವೇ ? ಅಥವಾ ಪಂಚಾಚಾರ್ಯರ ಗೋತ್ರಸೂತ್ರಾದಿಗಳನ್ನು ಹೇಳುತ್ತಿರಲಿಕ್ಕಿಲ್ಲವೆ ? ಗೋತ್ರಸೂತ್ರಗಳ ಹಂಗಿಲ್ಲದೆ ಅತಿಶೂದ್ರರು ಕೂಡ ಎಷ್ಟೋ ಬೆಡಗು ಮೊದಲಾದವುಗಳಿಂದ ಕೂಡಿರುವಾಗ ಇವರಿಗೆ ಯಾವ ಗೋತ್ರವೂ ಇಲ್ಲದೆ, "ಯಾವ ಗೋತ್ರ ? ಶಿವಗೋತ್ರ. ಯಾವ ಕುಲ ? ಶಿವಕುಲ." ಎಂಬ ಗೊಡ್ಡುವಚನದ ಮಡ್ಡಿನಿಂದ ತಮ್ಮ ದಡ್ಡತನವನ್ನು ಹೊರಗೆಡವಿ ಗವರ್ನಮೆಂಟ್ ಕಾನೂನಿನಲ್ಲಿ ಅತಿಶೂದ್ರತಂಗತಿಗೆ ಸೇರಬೇಕೆಂದು ಹಾರೈಸುತ್ತಿರುವ ಈ ನಿಂದಕರಿಗೆಂದು ಬುದ್ಧಿ ಬರುವದೋ ತಿಳಿಯದಾಗಿದೆ! ಗೋತ್ರ-ಸೂತ್ರಗಳಿಂದಲೂ, ವರ್ಣಾಶ್ರಮಗಳಿಂದಲೂ ಶೋಭಿಸುತ್ತಿರುವ ನಮ್ಮ ಮತವನ್ನು ಹಾಳುಮಾಡಲು ಈ ನಿಂದಕವರ್ಗವು ಮುಂದುಬರತೊಡಗಿದೆ. ಇದರಿಂದ ಮತದಲ್ಲಿ ಬಹಳ ಅನರ್ಥಗಳಾಗತೊಡಗಿವೆ. ಏಕೀಕರಣದ ಪ್ರಯತ್ನಕ್ಕೆ ಈ ಗುರುದ್ರೋಹಿಗಳ ಹಾವಳಿಯು ಅಡ್ಡಬರತೊಡಗಿದೆ. ಸಾವಧಾನದಿಂದ ಮತೋನ್ನತಿಯ ಕಾರ್ಯಗಳನ್ನು ಸುಲಭೋಪಾಯಗಳಿಂದ ಮಾಡಬೇಕೆಂದು ಯಾವ ರೀತಿಯಿಂದ ಮಾಡಹೋದರೂ ಈ ಕುಹಕಿಗಳು ಸಮಾಜವನ್ನು ಕೆಡಿಸತೊಡಗಿದ್ದಾರೆ. ಈ ವರ್ಗವು ಆಶ್ರಯಿಸಿದ ಬಸವಾದಿಗಳ ವಿಚಾರವು ಏಕೀಕರಣಕ್ಕೆ ವಿಘ್ನಕಾರಿಯೆಂದೂ ಇದರಗೊಡವೆಯನ್ನು ಬಿಟ್ಟು ಮತದ ನಿಜತತ್ವವನ್ನೇ ಪ್ರಚಾರಮಾಡಿರೆಂದೂ ಪ್ರಮುಖರ ಅಭಿಪ್ರಾಯವು ಬಂದುದರಿಂದ ಹಾಗೆಯೇ ಸಾಗಿಸತೊಡಗಿದೆ. ಈ ಮಂಗಮುಖಿಗಳು ಕೆಲವು ಕುಹಕಸನ್ಯಾಸಿಗಳ ಬೆನ್ನುಹತ್ತಿ ಚಳವಳಿಯನ್ನು ಮಾಡಿ ಸಮಾಜವನ್ನು ಕೆಡಿಸುತ್ತಿರುವರು. ಈ ಗುರುದ್ರೋಹಿಗಳು ಯಾವರೀತಿಯಿಂದಾದರೂ ಪ್ರಸಿದ್ಧಿಗೆ ಬರಬೇಕೆಂದು ಮತವಿಚಾರ ಕ್ರಾಂತಿಯಲ್ಲಿ ಪ್ರವೇಶಿಸಿದರು. ಇದರಿಂದ ತಮಗೆ ಯಾವ ಲಾಭವಾಗದೆ, ಮುಖಕ್ಕೆ ಕಪ್ಪುಮಸಿಯನ್ನು ಹಚ್ಚಿಕೊಂಡು ಈಗ ನಡೆದಿರುವ ಗಾಂಧಿಯವರ ಅಸ್ಪೃಶ್ಯತೆಯ ಚಳವಳಿಯಲ್ಲಾದರೂ ಪ್ರತಿಷ್ಠೆಯು ಸಿಗಬಹುದೆಂದು ಅದರಲ್ಲಿ ಸೇರಿರುವರು. ಸ್ವಮತದನೆಲೆಯನ್ನರಿಯದೆ ಧುಮುಕಿ-ತೇಲಿ-ಮುಳುಗುತ್ತಿರುವಾಗ ಮತದ ನಿಜಸಿದ್ಧಾಂತ ನೌಕೆಯನ್ನು ಏರದೆ ಮಧ್ಯದಲ್ಲಿ ತೇಲಿಬಂದ ಅಧರ್ಮರೂಪೀ ಅಸ್ಪೃಶ್ಯನಿವಾರಣೆಯೆಂಬ ಒಡಕು ಬುರಡೆಯನ್ನು ಹಿಡಿದ ಈ ಮಂದಮತಿಗಳಿಗೆ ಯಾವಗತಿಯಾಗುವದೋ ತಿಳಿಯದಾಗಿದೆ !! ಈ ಗುರುದ್ರೋಹಿಗಳಿಗೆ ಸಮಾಜವು 'ಛೀ' ಹಾಕಿ ನಮ್ಮ ಸಮಾಜನೌಕೆಯನ್ನು ದಾಟಿಸಲು ಸರ್ವಸಮರ್ಥರಾದ ಶ್ರೀ ಜಗದ್ಗುರು ಪಂಚಪೀಠದವರ ಆಜ್ಞಾನುಸಾರವಾಗಿ ಸಮಾಜದಲ್ಲಿ ನರ್ತನಮಾಡುತ್ತಿರುವ ಅನೈಕ್ಯತೆ ಎಂಬ ರಾಕ್ಷಸಿಯನ್ನು ಹೊಡೆದೋಡಿಸಿ ವೀರಶೈವಮತದ ಏಕೀಕರಣವಾಗುವಂತೆ ಹವಣಿಸಬೇಕಾಗಿ ಹಾರೈಸುತ್ತೇನೆ.

ಪಬ್ಲಿಕ್ ಸರ್ವಿಸ್.

ಪಬ್ಲಿಕ್ ಸರ್ವಿಸ್ಸಿನಲ್ಲಿ ಎಲ್ಲಾ ಕೋಮಿನ ಪ್ರತಿನಿಧಿ ಳೂ ಇರಬೇಕೆಂದು ಬ್ರಿಟಿಷ್ ಇಂಡಿಯಾದಲ್ಲಿ ಮಾ ವೇ ಅಲ್ಲದೆ ನೇಟಿವ್ ಸಂಸ್ಥಾನಗಳಲ್ಲಿಯೂ ಕೂಡ ಲಾಟೆಯು ನಡೆಯುತ್ತಲಿದೆ. ಇದು ಸಾಧ್ಯವಲ್ಲ. ಂಸ್ಥಾನಗಳಲ್ಲಿ ಒಬ್ಬರು ಪ್ರಭುಗಳಿರಬೇಕು. 3 ಜನ ೊದಲ್ಗೊಂಡು 20 ಜನಗಳವರೆಗೂ ಮಂತ್ರಿಪದವಿ ಲ್ಲಿರಬಹುದು. ಆದರೂ ಮುಖ್ಯಮಂತ್ರಿಗಳೊಬ್ಬರಿರ ಕು. ಜವಾಬ್ದಾರೀ ಅಧಿಕಾರಿಗಳು ನೂರಾರು ಜನ ವರೆಗೂ ಇರಬಹುದು. ಮಿನಿಸ್ಟರಂಥ ಅಧಿಕಾರಿ ು ಸಾವಿರಾರು ಜನಗಳವರೆಗೂ ಇರಬಹುದು. ಪ್ರತಿ ಂದು ಕೋಮಿಗೂ ಒಬ್ಬ ಪ್ರಭುಗಳನ್ನು ಮಾಡು ದು ಸಾಧ್ಯವೇ ? ಪ್ರತಿಯೊಂದು ಜಾತಿಯಿಂದಲೂ ಲಾಟೆ ಮೊಜ್ಮೇಸರರನ್ನೂ, ಡೆಪ್ಯುಟೀಕಮಿಷನರು ನ್ನೂ, ಅಸಿಸ್ಟೆಂಟ್ ಕಮಿಷನರುಗಳನ್ನೂ, ಅಮಲ್ದಾ ರನ್ನೂ, ಇತರ ಮಿನಿಸ್ಟೀರಿಯಲ್ ಅಧಿಕಾರಿಗಳನ್ನೂ ುನಾಯಿಸುವುದು ಅಸಾಧ್ಯ. ಈ ಕೆಲಸಗಳಿಗೆ ವಿದ್ಯಾಭ್ಯಾಸವೂ, ಇತರ ಶಿಕ್ಷಣಗಳೂ ಬೇಕು. ಯಾವ ಯಾವ ಕೋಮುಗಳಲ್ಲಿ ತಕ್ಕ ಯೋಗ್ಯತೆಯುಳ್ಳವ ರುತ್ತಾರೋ ಅವರಿಗೆ ಪೋಟಾಪೋಟಿ ಪರೀಕ್ಷೆ ಗಳನ್ನು ಹಾಕಿ ತೇರ್ಗಡೆಯಾದವರಲ್ಲಿ, ದಕ್ಷರನ್ನು ಜನ ಂಖ್ಯೆಗೆ ಅನುಸಾರವಾಗಿ ಕೋಮುವಾರು ಪ್ರತಿನಿಧಿ ಗಳನ್ನು ಚುನಾಯಿಸಿಕೊಂಡರೆ, ಎಲ್ಲಾ ಕೋಮುಗ ಗೂ ಉಪಕಾರಮಾಡಿದಂತಾಗುತ್ತದೆ. ಸರಕಾರದ ಲಸವು ಸಮರ್ಪಕವಾಗಿ ನಡೆಯುವುದಕ್ಕೆ ಅವಕಾಶ ಾಗುತ್ತದೆ. ಹೀಗೆ ಮಾಡುವುದು ಉತ್ತಮವೆಂದು ಮ್ಮ ಶಾಸನದರವರಿಗೂ, ನಮ್ಮ ಗೌರ್ನಮೆಂಟಿನವ ಗೂ ಮನೋಭಾವವು ಹುಟ್ಟಿರುವುದಾಗಿ ತಿಳಿಯಬ ತ್ತದೆ. ಇದು ನಿಜವಾದ ಪಕ್ಷದಲ್ಲಿ ಈ ದೇಶದ ನಗಳು ಭಾಗ್ಯವಂತರೆಂದೇ ಹೇಳಬಹುದು. ಹಾಗೆ ಾಗ್ಯವಂತರಾಗಲೆಂದು ನಾನು ಕೋರುತ್ತೇನೆ.

ಭೀಷ್ಮ.

ವಿವಾಹಗಳು.

[ಮ|| ರಾ|| ಎಂ. ವಿ. ಯವರಿಂದ]

ಫ್ರಾನ್ಸ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ೇಕ ಸ್ತ್ರೀ-ಪುರುಷರು ಕೇವಲ ಸ್ವಾರ್ಥಪರರಾಗಿರು ರೆ. ವಿಷಯಸುಖಗಳಲ್ಲಿ ಇವರಿಗೆ ಆಸಕ್ತಿಯು ಳ ಬಲವಾಗಿರುವುದು. ವಿವಾಹವನ್ನು ಮಾಡಿ ಂಡು ಸಂಸಾರಿಗಳಾಗಿದ್ದರೆ, ಕಷ್ಟಸುಖಗಳೆರಡೂ ರೆಯುವುವು. ಬುದ್ಧಿಶಾಲಿಗಳಾದವರಿಗೆ ಸಂಸಾರ ಕಷ್ಟಕ್ಕಿಂತಲೂ ಸುಖವು ಹೆಚ್ಚಾಗಿರುವುದು. ದ್ಧಿಯಿಲ್ಲದವರಿಗೆ ಸೌಖ್ಯಕ್ಕಿಂತಲೂ ಕಷ್ಟವು ಹೆಚ್ಚಾ ುವುದು. ಪರಿಣಾಮಫಲವನ್ನು ಪರ್ಯಾಲೋಚಿಸಿ, ಂದುಗಾರಿಕೆಗೆ ಬೀಳದೆ, ಯುಕ್ತಾಹಾರಗಳಲ್ಲಿ ತೃಪ್ತ ಾಗಿ, ಜಿತೇಂದ್ರಿಯರಾಗಿ ಅರಿಷಡ್ವರ್ಗಗಳನ್ನು ೋಟೆಯಲ್ಲಿಟ್ಟುಕೊಂಡಿರತಕ್ಕವರಿಗೆ ಸಂಸಾರವೇ ರ್ಗವಾಗುವುದು. ಇದನ್ನು ತಿಳಿದುಕೊಳ್ಳದೆ ಇರತ ರಿಗೆ ಸಂಸಾರವು ನರಕವಾಗಿ ತೋರುವುದುಂಟು. ಕ್ಕೆ ಅವರ ಅಜ್ಞಾನವೇ ಮುಖ್ಯಕಾರಣ. ಜ್ಞಾನ ಸಂಪಾದಿಸಿಕೊಂಡು ಸಂಸಾರವೇ ಸ್ವರ್ಗವಾಗು ಮಾಡಿಕೊಳ್ಳುವ ಪ್ರಯತ್ನವನ್ನು ಮಾಡದೆ, -ಪುರುಷರು ಪುತ್ರಸಂತಾನವಾಗದಂತೆ ವಿಷಯೋ ೋಗಗಳನ್ನು ಅನುಭವಿಸಬೇಕೆಂದು ಪ್ರಯತ್ನವನ್ನು ುತ್ತಲಿದ್ದಾರೆ. ಈ ಪ್ರಯತ್ನವು ಫ್ರಾನ್ಸ್ ಮೊದ ದೇಶಗಳಲ್ಲಿ ಬಹಳ ಬಲವಾಗಿರುವುದು. ಜನಸಂ ಯು ಕಡಮೆಯಾಗುತ್ತಲಿರುವುದು. ಸ್ತ್ರೀಯರು ಣಿಯರಾಗದಂತೆ ಮಾಡಲ್ಪಟ್ಟಿರುವ ಬರ್ತ್ ಟ್ರೋಲ್ ಏರ್ಪಾಡೇ ಇದಕ್ಕೆ ಮುಖ್ಯಕಾರಣ. ಸ್ತ್ರೀ-ಪುರುಷರೂ ಹೀಗೆ ಸ್ವಾರ್ಥಪರರಾದರೆ, ವರ್ಷಗಳಲ್ಲಿ ಜನಸಂಖ್ಯೆಯೇ ಕಡಮೆಯಾಗು . ದೇಶವೇ ನಾಶವಾಗುವುದು. ಹೀಗಾಗದಿ ದು ಈಗ ಜರ್ಮನಿ ಮೊದಲಾದ ದೇಶಗಳಲ್ಲಿ ಸ್ಥರಾದ ಜನಗಳಿಗೆ ಪ್ರೋತ್ಸಾಹವನ್ನು ಮಾಡುವುದಕ್ಕೆ ಏರ್ಪಾಡಾಗಿರುವುದು. ಮಕ್ಕಳುಳ್ಳ ಸ್ತ್ರೀ-ಪುರುಷರಿಗೆ ಪಬ್ಲಿಕ್ ಸರ್ವಿಸ್, ಪ್ರೈವೇಟ್ ಸರ್ವಿಸ್, ಕೂಲಿ ಮೊದಲಾದುವುಗಳು ದೊರೆಯುವುವು. ವಿವಾಹ ಮಾಡಿಕೊಳ್ಳತಕ್ಕವರಿಗೆ ಸರಕಾರದವರು ಸಾಲಗಳನ್ನು ಕೊಡುವರು. ವಿವಾಹವಿಲ್ಲದ ಸ್ತ್ರೀ-ಪುರುಷರಿಗೆ ಕೂಲಿಯೂ ಕೂಡ ದೊರೆಯದಂತೆ ಏರ್ಪಾಡುಮಾಡುತ್ತಲಿರುವರು. ಸಂಸಾರಿಗಳ ಇನ್‌ಕಂ-ಟ್ಯಾಕ್ಸ್ ಮೊದಲಾದ ಕಂದಾಯಗಳನ್ನು ಕೂಡ ಕೊಡುತ್ತಲಿರುವರು. ಯಾರು ಹೆಚ್ಚು ಮಕ್ಕಳನ್ನು ಹೊಂದಿರುವರೋ, ಅವರಿಗೆ ಬಹುಮಾನರೂಪವಾದ ಇನಾಮನ್ನು ಕೊಡುವರು. ಮಕ್ಕಳ ಪ್ರದರ್ಶನಗಳು ನಡೆಯುವುವು. ಆರೋಗ್ಯದೃಢಕಾಯರಾದ ಮಕ್ಕಳನ್ನು ಹೊಂದಿರತಕ್ಕವರಿಗೆ ಸರ್ಟಿಫಿಕೇಟುಗಳು, ಇನಾಮುಗಳು ಕೊಡಲ್ಪಡುವುವು. ಈ ಬರ್ತ್ ಕಂಟ್ರೋಲ್ ಏರ್ಪಾಡುಗಳು ಇಂಡಿಯಾದೇಶಕ್ಕೂ ಕೂಡ ಬಂದಿರುವುವು. ವಿದ್ಯಾವಂತರಾಗಿಯೂ, ವಿದ್ಯಾವತಿಯರಾಗಿಯೂ ಇರತಕ್ಕವರು ಅನೇಕರು ಮದುವೆಮಾಡಿಕೊಳ್ಳುವುದನ್ನು ಬಿಟ್ಟು, ಸ್ವೇಚ್ಛಾವಿಹಾರಿಗಳಾಗುವುದಕ್ಕೆ ಉಪಕ್ರಮಿಸಿರುವರು. "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ" ಎಂಬ ಗಾದೆಗೆ ಅನುಸಾರವಾಗಿ ಕೆಲವು ದಿವಸಗಳಲ್ಲಿಯೇ ವಿವಾಹಬಂಧಗಳು ಅತ್ಯಂತಶಿಥಿಲವಾಗಿ ನಮ್ಮ ದೇಶದ ಜನಸಂಖ್ಯೆಯೇ ಕಡಮೆಯಾಗುವ ಸಂಭವವೂ ಬರಬಹುದು. ಇದಲ್ಲದೆ ಭ್ರೂಣಹತ್ಯೆ, ಶಿಶುಹತ್ಯೆ, ಆತ್ಮಹತ್ಯೆ, ಪತಿಪತ್ನಿಯರ ಹತ್ಯೆ ಇವೇ ಮೊದಲಾದುವುಗಳು ಬಹಳವಾಗಿ ಹೆಚ್ಚಬಹುದು. ಇವುಗಳನ್ನು ನಿರೋಧಿಸುವುದಕ್ಕೋಸ್ಕರ ಜರ್ಮನಿ, ಫ್ರಾನ್ಸ್ ಮೊದಲಾದ ದೇಶದವರು ವಿವಾಹಕ್ಕೆ ಹೇಗೆ ಪ್ರೋತ್ಸಾಹವನ್ನು ಮಾಡುತ್ತಲಿರುವರೋ ಹಾಗೆ ಪ್ರೋತ್ಸಾಹಮಾಡುವುದನ್ನು ಉಪಕ್ರಮಿಸಬೇಕು, ಇದಕ್ಕಾಗಿ ಭಾರತೀಯ ಪ್ರಭುಗಳು ಇಂಡಿಯಾ ಗೌರ್ನಮೆಂಟಿನವರು ಮತ್ತು ಮಹಾಜನಗಳೂ ಯಥಾಶಕ್ತಿ ಸಹಾಯಮಾಡಿ, ಗೃಹಸ್ಥರಾದ ಸಂಸಾರಿಗಳಿಗೆ ಸರಿಯಾದ ಪ್ರತಿಫಲವುಳ್ಳ ಉದ್ಯೋಗಗಳನ್ನು ಕಲ್ಪಿಸುವ ಏರ್ಪಾಡನ್ನು ಮಾಡಬೇಕು. ಯಾರಿಗೂ ಭಾರವಾಗದಂತೆ ಈ ಕೆಲಸವನ್ನು ಮಾಡುವುದು ಕಷ್ಟವಲ್ಲ. ಇದು ಮಹಾಜನಗಳ ಪರ್ಯಾಲೋಚನಗೆ ಬರಲೆಂದು ನಾನು ಕೋರುತ್ತೇನೆ.

ಎಂ. ವಿ.

ಗೂಗೆಗಳ ಘೂತ್ಕಾರ.

ಲೇಖಕ—ದೈವಜ್ಞ ವಿನೋದ

ಅಮಂಗಲಧ್ವನಿಗೈಯ್ಯುತ್ತಿರುವ ಗೂಗೆಗಳು ಯಾವ ಸ್ವರದಿಂದ ಕೂಗಿದರೂ ಅದು ನಿಂದ್ಯವಾದುದೇ! ಅವು ಕಾರ್ಗತ್ತಲೆಯಲ್ಲಿ ಮಾತ್ರ ತಮ್ಮ ಗೂಡನ್ನು ಬಿಟ್ಟು ಹೊರಬಿದ್ದು ಮನದಿಚ್ಛೆಯಂತೆ ಹಾರಾಡಿ ಆನಂದದಿಂದ ಘೂತ್ಕಾರಮಾಡುತ್ತಿರುವವು. ಸ್ವಲ್ಪ ಬೆಳಕಿನ ಹೊಳಪು ಕಂಡೊಡನೆ ತಮ್ಮ ಗೂಡಿನಲ್ಲಿ ಸೇರುತ್ತವೆ ಗೂಡಿನೊಳಗಿನ ಕಗ್ಗತ್ತಲೆಯನ್ನು ನೋಡಿ ಹೊರಗಿನ ಬೆಳಕನ್ನು ನೋಡುವದಾಗದೆ ಅಲ್ಲಿಯೂ ಘೂತ್ಕಾರವನ್ನು ಮಾಡುವವು. ರಾತ್ರಿಯಿದ್ದಾಗ ಕೂಗಿದ್ದನ್ನು ನಿಶಾಚರರು (ಕಳ್ಳರು-ವಿಟಗಾರರು) ಮಾತ್ರ ಕೇಳುವರು. ಪೊದರಿನೊಳಗೆ ಹೊಕ್ಕು ಕೂಗಿದ್ದನ್ನು ಯಾರೂ ಕೇಳುವದಿಲ್ಲ. ಒಟ್ಟಿನ ಮೇಲೆ ಗೂಗೆಗಳ ಘೂತ್ಕಾರವನ್ನು ಸಜ್ಜನರು ಯಾವಾಗಲೂ ಕೇಳುವದಿಲ್ಲ. ಈ ಗೂಗೆಗಳಂತೆ ಮಾನವರಲ್ಲಿಯೂ ಕೆಲವರಿರುತ್ತಾರೆ. ಧರ್ಮಜ್ಞಾನಶೂನ್ಯರಾಗಿ ಅಧರ್ಮರೂಪಿಕತ್ತಲೆಯಲ್ಲಿ ತಿರುಗಾಡಿ ಕತ್ತಲೆಯ (ಅವಿವೇಕತನ) ಕವಲರಿಕೆಯ ಹಣ್ಣನ್ನು ತಿನ್ನುತ್ತ ಧರ್ಮಪ್ರಕಾಶವನ್ನು ನಿಂದಿಸುತ್ತಿರುವರು. ಈ ಗೂಗೆಗಳ ವರ್ಣನೆಯು ವಿನೋದನಿಗೆ ನೆನಪಾಗುತ್ತಿದ್ದಿಲ್ಲ; ಆದರೆ ಸೊಲ್ಲಾಪೂರದಲ್ಲಿ ಇಂಥ ಗೂಗೆಗಳು ಇರುವದಾಗಿ ತಿಳಿದುದರಿಂದ ಬರೆಯಬೇಕಾಯಿತು. ಸೊಲ್ಲಾಪುರಕ್ಕೆ ಸದ್ಧರ್ಮ ಸಿಂಹಾಸನಾಧೀಶ್ವರರಾದ ಶ್ರೀಮದುಜ್ಜಯಿನೀ ಜಗದ್ಗುರುಗಳವರನ್ನು ಅಲ್ಲಿಯ ಸುಪ್ರಸಿದ್ಧ ವೀರಶೈವರೂ ಇತರ ಮತೀಯರೂ ಪ್ರಾರ್ಥನೆ ಮಾಡಿಕೊಂಡು ಮಹೋತ್ಸವದಿಂದ ಬರಮಾಡಿಕೊಂಡಿದ್ದು ಸರಿಯಷ್ಟೆ! ಈ ಉತ್ಸವದ ವೈಭವಾತಿಶಯವನ್ನು ಬಣ್ಣಿಸಿ ಬರೆಯುವಷ್ಟು ಶಕ್ತಿಯು ನನ್ನ ಚಿಕ್ಕ ಲೇಖನಿಯಲ್ಲಿಲ್ಲ. ಶ್ರೀಜಗದಾಚಾರ್ಯ ಪಂಚಕರ ದಿವ್ಯ ಪ್ರಕಾಶವೇ ಪ್ರಪಂಚವನ್ನೆಲ್ಲ ಉದ್ಧರಿಸಲು ಈಗ ಆಯಾಯ ಪೀಠಗಳಲ್ಲಿ ಉದಯವಾಗಿದೆ. ಶ್ರೀಮದುಜ್ಜಯಿನೀ ಸದ್ಧರ್ಮ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಬ್ರಹ್ಮತೇಜೋಬಲವನ್ನು ನೋಡಿ ಸಹನಮಾಡಿಕೊಳ್ಳದ ಕೆಲಜನರು ಮೂಲೆಯಲ್ಲಿ ಕೂಡಿ ತಮ್ಮ ಧರ್ಮದ್ರೋಹದ ಪಾಪಬುದ್ಧಿಯ ಪ್ರದರ್ಶನವನ್ನು ವೃತ್ತಪತ್ರಿಕೆಗಳಲ್ಲಿ ಹೊರಗೆಡವಿದ್ದಾರೆ. ವೀರಶೈವ ಮತೋದ್ಧಾರಕರಾದ ಶ್ರೀ ಜಗದ್ಗುರುಗಳ ವಿಷಯದಲ್ಲಿ ವಿಷವನ್ನು ಕಾರಿಕೊಂಡು ಪಾಪಗ್ರಸ್ತರಾಗುವ ಇವರಿಗೆ ಕಾಲನು ಯಾವ ಶಿಕ್ಷೆಯನ್ನು ವಿಧಿಸುವನೋ ತಿಳಿಯದಾಗಿದೆ. ಈಗ ಗುರುದ್ರೋಹಿಗಳ ದೂಷಿತ ಬರವಣಿಗೆಯ ದುಷ್ಟ ಲೇಖನಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸುವ ಸಂಪಾದಕರ ಹೃದಯವಾದರೂ ಸಂಕುಚಿತಭಾವನೆಯ ಕೊಳಚೆಯಾಗಿದೆ. ಇಂಥ ಕುಟಿಲ ಲೇಖಗಳಿಂದ ಪತ್ರಿಕೆಗಳಿಗೆ ಯಶಸ್ಸು ಬರಲಾರದು. ಅಧರ್ಮಿಗಳ ಹಾವಳಿಯು ಇಲ್ಲದಾಗಿ ಎಲ್ಲರೂ ಗುರುಭಕ್ತಿನಿಷ್ಠರಾಗಿರುವಂತೆ ಪ್ರಯತ್ನಿಸಬೇಕು. ಕುಹಕರ ಕುಂಟಚೇಷ್ಟೆಗಳಿಗೆ ಅವಕಾಶಕೊಟ್ಟರೆ ಅವರಿಂದ ನಮ್ಮ ಸಮಾಜವಿಘಾತವಾಗುವದು. ಸಮಾಜೋದ್ಧಾರ ದೃಷ್ಟಿಯಿಂದ ನೀಚಬರವಣಿಗೆಗಳನ್ನು ತಡೆಯಲೇಬೇಕು. ಗುರುದ್ರೋಹ ಪಿಶಾಚಗ್ರಸ್ತರಾದವರಿಗೆ ಸೊಲ್ಲಾಪುರದಂಥ ನಗರದೊಳಗಿನ ೧-೨ ಗೂಗೆಗಳ ಘೂತ್ಕಾರವನ್ನು ಪ್ರಕಾಶಪಡಿಸುವದು ವಿಹಿತವಾಗಿದ್ದರೂ, ನಿಜವಾದ ವೀರಶೈವನಿಗೆ ಇದು ಸಹನವಾಗದು. ಜಾತಿಸಂಕರರು ಮಾತ್ರ ಆನಂದಪಡಬಹುದು. ಶ್ರೀ ಜಗದ್ಗುರುಗಳ ದಿವ್ಯಾಗಮನದಿಂದ ಇಡೀ ಸೊಲ್ಲಾಪುರವೇ ಆನಂದೋತ್ಸವ ಸಂಭ್ರಮದಲ್ಲಿರುವಾಗ ಈ ಗೂಗೆಗಳ ಘೂತ್ಕಾರವನ್ನು ಯಾರು ಕೇಳುವರು ?

ಮೈಸೂರಿನ ಪರಿಚಯ.

(ಲೇಖಕರು: ಎಸ್. ವಿ. ಗೋವಿನಕೊಪ್ಪ, ಹುಬ್ಬಳ್ಳಿ.)

ಈಗ ಒದಗಿರುವ ಗ್ರೀಷ್ಮಋತುವಿನಲ್ಲಿ ನಾನು ಮೈಸೂರನ್ನು ನೋಡಲಿಚ್ಛಿಸಿ, ಮೈಸೂರು ನಗರವನ್ನು ಸೇರಿ ಅಲ್ಲಿ ನೋಡಬಹುದಾದ್ದೆಲ್ಲವನ್ನೂ ನೋಡುತ್ತಿರುವಷ್ಟರಲ್ಲೇ ಮೈಸೂರು ದೇಶವನ್ನಾಳುವ ಶ್ರೀ ಕೃಷ್ಣರಾಜೇಂದ್ರರ ವರ್ಧಂತ್ಯುತ್ಸವವು ಲಭಿಸಿತು. ದೇವೇಂದ್ರನ ಆಸ್ಥಾನದಂತಿರುವ ಭವ್ಯವಾದ ಅರಮನೆಯಿಂದ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರ ಕುಮಾರರಾದ ಜಯಚಾಮರಾಜೇಂದ್ರ ಒಡೆಯರವರೂ ಅಶ್ವಾರೋಹಣಮಾಡಿ ಚತುರಂಗಬಲದೊಡನೆ ಸಕಲ ಬಿರುದಾವಳಿಗಳ ಸಮೇತ ಹೊರಟ ಉತ್ಸವವು ಶ್ರೀರಾಮಚಂದ್ರನ ಮಹೋತ್ಸವವನ್ನು ನೆನಪಿಗೆ ತರುತ್ತಿತ್ತು. ಇಲ್ಲಿಯ ವಿದ್ಯುಚ್ಛಕ್ತಿಯ ದೀಪೋತ್ಸವವು ನಕ್ಷತ್ರಮಂಡಲವೆಲ್ಲವೂ ಒಟ್ಟುಗೂಡಿ ಬಂದು ಒಂದೆಡೆಯಲ್ಲಿ ಸಾಲ್ಗಿಡಿದು ನಿಂತಂತೆ ತೋರುತ್ತಿತ್ತು. ಈ ನಕ್ಷತ್ರಮಂಡಲದ ಮಧ್ಯದಲ್ಲಿ ಶ್ರೀ ಕೃಷ್ಣರಾಜೇಂದ್ರರವರು ಚಂದ್ರಮಂಡಲದಂತೆ ತೋರುತ್ತಿದ್ದರು. ಈ ದೃಶ್ಯವನ್ನು ನೋಡದ ಮಾನವನ ಜನ್ಮವೇ ವ್ಯರ್ಥವೆಂದು ಅಂದುಕೊಂಡೆನು. ಮೇಲಾಗಿ ಇಲ್ಲಿಯ ಪ್ರಸಿದ್ಧ ಶಿಲ್ಪಕಲಾಕೋವಿದರಾದ ಶ್ರೀ ಸಿದ್ಧಲಿಂಗಸ್ವಾಮಿಯವರನ್ನು ಸಂದರ್ಶಿಸಬೇಕೆಂಬ ಕುತೂಹಲವು ಹುಟ್ಟಿ ಅವರೆಡೆಗೆ ಹೋದೆನು. ಇವರ ದರ್ಶನವಾದ ಕೂಡಲೆ ನನಗುಂಟಾಗಿದ್ದ ಶಿಲ್ಪಕಲೆಯ ಬಾಯಾರಿಕೆಯು ಇವರ ಅಮೃತಮಯವಾದ ವಾಣಿಯಿಂದ ಶಾಂತವಾಯಿತು. ಆ ದಿವಸವೇ ಒಂದು ಮೂರ್ತಿಪ್ರತಿಷ್ಠಾಕಾರ್ಯವು ಒದಗಿತ್ತು. ಮೂರ್ತಿನಿರ್ಮಾಣ ಕ್ರಮವನ್ನೂ ಪ್ರತಿಷ್ಠಾಕ್ರಮವನ್ನೂ ವಿಧ್ಯುಕ್ತವಾಗಿ ಮಾಡತಕ್ಕವರು ಈಗಲೂ ನಮ್ಮಲ್ಲಿ ಸಿಗುವರೇ ಎಂದು ಅತ್ಯಂತ ತವಕಪಡುತ್ತಿದ್ದವನಿಗೆ ಪೂರ್ವಪುಣ್ಯದಿಂದ ಇಂಥ ಸುಸ

[6ನೇ ಪುಟವನ್ನು ನೋಡಿ]

೮-೪-೭೪

ಪಂಚಾಚಾರ್ಯ ಪ್ರಭಾ.

೧೯೨೪ ಮೈ — ೬

೧೯೩೩ನೇ ಜೂನ್ ತಾ|| ೨೬ನೇ ಸೋಮವಾರ.

ಆಸ್ತಿಕ್ಯ.

ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವನೂ ತನ್ನ ದೇಹರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿ ಹೇಗೆ ಆಸಕ್ತನಾಗಿರುವನೋ, ಹಾಗೆ ದೇಹದೊಳಗೆ ವಾಸಮಾಡಿದ ಆತ್ಮನ ರಕ್ಷಣೆಯಲ್ಲಿಯೂ ಆಸಕ್ತನಾಗಿರಬೇಕು. ಅಂಥ ಆತ್ಮರಕ್ಷಣೆಗೆ ಧರ್ಮಾಚರಣೆಯೇ ಸಾಧನವಾಗಿದೆ. ನಾವು ಈ ದೇಹವಿರುವವರೆಗೂ ಎಷ್ಟರಮಟ್ಟಿಗೆ ಧರ್ಮಾಚರಣೆಯನ್ನು ಮಾಡುತ್ತ ಬರುತ್ತೇವೆಯೋ, ಅಷ್ಟರಮಟ್ಟಿಗೆ ಈ ದೇಹದಲ್ಲಿ ಗೂಢವಾಗಿರುವ ಆತ್ಮಶಕ್ತಿಯು ದಿನಕ್ರಮೇಣ ವಿಕಾಸವಾಗುತ್ತ ಹೋಗುವದು. ಕೃಷೀವಲನು ಕೃಷಿಕರ್ಮಾಚರಣೆಯಿಂದ ತನ್ನ ಗದ್ದೆಯನ್ನು ಹೇಗೆಹೇಗೆ ಹಸನುಮಾಡುತ್ತ ಬರುವನೋ, ಹಾಗೆ ಹಾಗೆ ಆ ಗದ್ದೆಯಲ್ಲಿ ಬಿತ್ತಿದಬೀಜದಲ್ಲಿದ್ದ ಗುಪ್ತವಾದ ಶಕ್ತಿಯು ಪ್ರಕಾಶಹೊಂದುತ್ತ ಅಂಕುರಿಸಿ ಪಲ್ಲವಿಸಿ ಕುಸುಮಿತವಾಗಿ ಫಲಿತವಾಗುತ್ತದೆ. ಅಲ್ಲಿಗೆ ಆ ಬೀಜವು ಸಾರ್ಥಕವಾದಂತಾಗುವುದು. ಹಾಗೆ ಶಾಸ್ತ್ರೀಯವಾಗಿ ಕೃಷಿಕರ್ಮವನ್ನಾಚರಿಸದೆ ಇದ್ದರೆ ಕ್ಷೇತ್ರದಲ್ಲಿ ಬಿತ್ತಿದ ಆ ಬೀಜವು ಯದ್ಯಪಿ ಅಂಕುರಿಸುವ ಶಕ್ತಿಯನ್ನು ಸ್ವಭಾವದಿಂದ ಪಡೆದಿದ್ದರೂ, ಅದಕ್ಕನುಕೂಲವಾದ ಸಹಕಾರಿಕಾರಣಗಳಿಲ್ಲದ ಪ್ರಯುಕ್ತ ಆ ಶಕ್ತಿಯು ಅಲ್ಲಿಯೇ ಕುಂಠಿತವಾಗಿ ಹೋಗುತ್ತದೆ. ಅದರಂತೆ ನಮ್ಮ ದೇಹವೆಂಬ ಸುಕ್ಷೇತ್ರದಲ್ಲಿ ಗುಪ್ತವಾಗಿರುವ ಆತ್ಮನು ಪರಮಾತ್ಮನ ಅಂಶಭೂತನಾಗಿದ್ದುದರಿಂದ ಸ್ವಭಾವವಾಗಿ ಪರಮಾತ್ಮನನ್ನು ಸೇರುವ ಶಕ್ತಿಯನ್ನು ತಾನು ಪಡೆದಿದ್ದರೂ, ಆ ಶಕ್ತಿಯನ್ನು ವಿಕಾಸಗೊಳಿಸಲು ಸಹಕಾರಿಕಾರಣಗಳಾದ ಧರ್ಮಾಚರಣೆಗಳಿಲ್ಲವಾದರೆ ಆ ಆತ್ಮನ ಶಕ್ತಿಯು ಅಲ್ಲಿಯೇ ಸಂಕುಚಿತಾವಸ್ಥೆಯಲ್ಲಿದ್ದು, ಕಾರಾಗೃಹದಲ್ಲಿ ಸಿಕ್ಕಿ ಬಿದ್ದ ಮನುಷ್ಯನಂತೆ ಪ್ರತಿದಿವಸವೂ ಪರಿತಪಿಸಬೇಕಾಗುವದು. ಮನುಷ್ಯದೇಹಧಾರಿಯಾದ ಆತ್ಮನಿಗೆ ಮುಕ್ತಿಯೇ ಮುಖ್ಯಪ್ರಯೋಜನವು. ಇನ್ನುಳಿದವುಗಳೆಲ್ಲವೂ ಅದಕ್ಕೆ ಸಹಕಾರಿಗಳು. ಮಾನವಜನ್ಮಧಾರಿಗಳಲ್ಲಿ ಮೋಕ್ಷವನ್ನು ಸಂಪಾದಿಸುವವನೇ ಉತ್ತಮನು ; ಮೋಕ್ಷವನ್ನು ಬಿಟ್ಟು ಅರ್ಥಾರ್ಜನಪೂರ್ವಕವಾಗಿ ಧರ್ಮಕಾಮಗಳನ್ನು ಸಂಪಾದಿಸುವವನೇ ಮಧ್ಯಮನು; ಧರ್ಮಮೋಕ್ಷಗಳನ್ನು ಬಿಟ್ಟು ಕೇವಲ ಅರ್ಥಕಾಮಗಳನ್ನು ಸಂಪಾದಿಸುವವನೇ ಅಧಮನು; ಧರ್ಮ, ಅರ್ಥ, ಮೋಕ್ಷಗಳನ್ನೆಲ್ಲಾ ಬಿಟ್ಟು ಕೇವಲ ಕಾಮಾಸಕ್ತನಾದವನೇ ಅಧಮಾಧಮನು; ಎಂದು ಶಾಸ್ತ್ರವು ಬೋಧಿಸುತ್ತಿರುವುದರಿಂದ ಪ್ರತಿಯೊಬ್ಬ ಅಸ್ತಿಕನೂ ಮೋಕ್ಷವೆಂಬ ಮಹಾ ಪ್ರಯೋಜನವನ್ನು ಲಕ್ಷ್ಯವಾಗಿಟ್ಟುಕೊಂಡು ಅದಕ್ಕನುಕೂಲವೆನಿಸಿದ ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ, ಪಡೆಯಬೇಕಲ್ಲದೆ ಮುಖ್ಯಧ್ಯೇಯವಾದ ಮೋಕ್ಷವನ್ನೇ ಬಿಟ್ಟು ಕೇವಲ ಅರ್ಥಕಾಮಗಳಲ್ಲಿಯೇ ಆಸಕ್ತರಾಗಬಾರದು. ಇದೇ ಉತ್ತಮಪುರುಷನ ಲಕ್ಷಣವಾಗಿದೆ.

ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ |
ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ||
ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ |
ತಸ್ಮಾನ್ಮಾಂ ಶರಣಾಗತಂ ಶರಣದ ತ್ವಂ ರಕ್ಷ ರಕ್ಷಾಧುನಾ ||

ನಮ್ಮ ಕಣ್ಣೆದುರಿಗೇನೆ ಆಯುಷ್ಯವು ನಶಿಸಿಹೋಗುತ್ತಲಿದೆ. ಯೌವನವು ಪ್ರತಿದಿವಸವೂ ಕ್ಷೀಣಿಸುತ್ತಲೇ ಬರುತ್ತದೆ. ಕಳೆದದಿವಸಗಳೆಲ್ಲವೂ ಮುಂದೆ ಬರಲಾರವು. ಸಂಪತ್ತಾದರೂ ನೀರಿನ ಮೇಲೆ ಏಳುವ ಅಲೆಗಳಂತೆ ಅತ್ಯಂತ ಚಂಚಲವಾಗಿದೆ. ಪ್ರಾಣವು ಮಿಂಚಿನಂತೆ ತೋರಿ ಅಡಗುವ ಸ್ವಭಾವವುಳ್ಳದ್ದಾಗಿದೆ. ಆದುದರಿಂದ ಎಲೈ ಪರಮಾತ್ಮನೇ! ಇವುಗಳಲ್ಲೆಲ್ಲಾ ಜಿಹಾಸೆಯುಳ್ಳವನಾಗಿ ನಿನ್ನಲ್ಲಿ ಮರೆಹೊಕ್ಕಿರುವೆನು. ನನ್ನನ್ನು ರಕ್ಷಿಸಿ ಶರಣಾಗತರಕ್ಷಕನೆಂಬ ಬಿರುದನ್ನು ನೀನುಳಿಸು. ಎಂದು ಆತ್ಮಾನಾತ್ಮ ವಿಚಾರವುಳ್ಳ ಮಹಾತ್ಮರ ವಾಣಿಯನ್ನು ಪರಿಶೀಲಿಸಿ ನೋಡಿದ್ದಾದರೆ ಆತ್ಮನು ಪುನಃ ಈ ಕ್ಷಣಿಕವಾದ ದೇಹವನ್ನು ಧರಿಸದಂತೆ ಮಾಡಿಕೊಳ್ಳುವುದೇ ಮಾನವಜನ್ಮದ ಮುಖ್ಯಧ್ಯೇಯವೆಂದು ತಿಳಿದುಬರುತ್ತದೆ. ಸೃಷ್ಟಿಸ್ಥಿತಿಸಂಹಾರಕರ್ತನಾದ ಪರಮೇಶ್ವರನು ಧರ್ಮಾಚರಣೆಯೆಂಬ ಸಾಮಗ್ರಿಯನ್ನೊದಗಿಸಿ ತನ್ನನ್ನು ಆರಾಧಿಸಿ ಸರ್ವರೂ ದುಃಖವೆಂಬ ಮಹಾಭಾರವನ್ನು ಇಳುಹಿ ವಿಶ್ರಾಂತರಾಗಲೆಂದೇ ವಿವೇಕಶಕ್ತಿಯಿಂದೊಡಗೂಡಿದ ಮನುಷ್ಯ ದೇಹವನ್ನು ಸೃಷ್ಟಿಸಿ ಈತನ ಸೌಕರ್ಯಕ್ಕಾಗಿಯೇ ಭೂಮಿ, ಜಲ, ತೇಜಸ್ಸು, ವಾಯು, ಆಕಾಶ ಮುಂತಾದವುಗಳನ್ನು ದಯಪಾಲಿಸಿರುತ್ತಾನೆ. ಇವುಗಳನ್ನು ಮಾಡುವ ಶಕ್ತಿಯು ಮನುಷ್ಯನಿಗಿಲ್ಲವು. ಇಂಥ ಸಲಕರಣೆಗಳನ್ನೆಲ್ಲಾ ಒದಗಿಸಿರುವ ಪರಮಾತ್ಮನಲ್ಲಿ ಮನುಷ್ಯನು ತಾನಿರುವವರಿವಿಗೂ ಕೃತಜ್ಞತಾಭಾವವುಳ್ಳವನಾಗಿರಲೇಬೇಕು. ಆತನು ಕೊಟ್ಟ ಕೈಗಳಿಂದ ಆತನನ್ನು ಪೂಜಿಸುತ್ತಿರುವುದೂ, ಆತನು ಕೊಟ್ಟ ಕಿವಿಗಳಿಂದ ಆತನ ಕಥೆಗಳನ್ನು ಕೇಳುತ್ತಲಿರುವುದೂ, ಆತನು ಕೊಟ್ಟ ನಾಲಗೆಯಿಂದ ಆತನ ಗುಣಗಾನವನ್ನು ಮಾಡುತ್ತಲಿರುವುದೂ, ಆತನು ಕೊಟ್ಟ ಶಿರಸ್ಸಿನಿಂದ ಆತನನ್ನು ನಮಸ್ಕರಿಸುತ್ತಿರುವುದೂ, ಆತನು ಕೊಟ್ಟ ಮನಸ್ಸಿನಿಂದ ಆತನನ್ನು ಧ್ಯಾನಿಸುತ್ತಲಿರುವುದೂ ಇತ್ಯಾದಿ ಪರಮಾತ್ಮಸಂಬಂಧ ಕ್ರಿಯೆಗಳೇ ಮೋಕ್ಷವನ್ನು ಸಾಧಿಸುವ ಧರ್ಮಾಚರಣೆಗಳಾಗಿರುತ್ತವೆ. ಈ ಮಾರ್ಗವನ್ನು ಬಿಟ್ಟು ಪರಮಾತ್ಮನು ತನ್ನ ಸ್ವರೂಪವನ್ನು ತಿಳಿಯುವುದಕ್ಕಾಗಿ ಕೊಟ್ಟ ಇಂಥ ಶಕ್ತಿಯನ್ನೂ, ಬುದ್ಧಿಯನ್ನೂ, ಇಂದ್ರಿಯಗಳನ್ನೂ ಸಫಲಗೊಳಿಸದೆ ಕೇವಲ ಬಾಹ್ಯಾಡಂಬರದ ಸೊಬಗಿಗಾಗಿ ಉಪಯೋಗಿಸುವವನು ದೈವದ್ರೋಹಿಯೂ ಕೃತಘ್ನನೂ ಆಗುವನೆಂಬುವಲ್ಲಿ ಸಂಶಯವಿಲ್ಲ.

ಕರಾಳಾಕಾರವಾಗಿ ವ್ಯಾಪಿಸುತ್ತಿರುವ ಈಗಿನ ವಿದ್ಯಾಸಂಸರ್ಗಜಾಡ್ಯದಿಂದ ನಮ್ಮ ಭಾರತೀಯರಲ್ಲಿ ಇಂಥ ಮೋಕ್ಷಸಾಧನವಾದ ಸನಾತನ ಪದ್ಧತಿಗಳೆಲ್ಲವೂ ಒಂದೊಂದಾಗಿ ನಷ್ಟವಾಗುತ್ತ ಸ್ವಚ್ಛಂದನವನಿತಾದಿ ವಿಷಯಾಸಕ್ತಿಯು ಹೆಚ್ಚುತ್ತ ಬರಲುಪಕ್ರಮವಾಗಿರುವುದನ್ನು ನೋಡಿದರೆ ಇವರು ದೇಹವೇ ಆತ್ಮವೆಂದು ತಿಳಿದುಕೊಂಡಿರುವ ನಿಜವಾದ ಆತ್ಮನನ್ನು ಮರೆತುಬಿಟ್ಟಿರುವ ಚಾರ್ವಾಕವಾದಿಗಳನ್ನು ಅನುಕರಿಸಬಹುದೆಂದು ಏಕೆ ಹೇಳಬಾರದು ?

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ |
ತಸ್ಮಾತ್ಸರ್ವಪ್ರಯತ್ನೇನ ಋಣಂ ಕೃತ್ವಾ ಘೃತಂ ಪಿಬೇತ್ ||

ದೇಹವು ಅಗ್ನಿಯಲ್ಲಿ ಸುಟ್ಟು ಬೂದಿಯಾದ ಮೇಲೆ ಪುನಃ ಹುಟ್ಟುವುದೆಂತು? ಆದ್ದರಿಂದ ಈ ದೇಹವಿರುವುದರೊಳಗಾಗಿಯೇ ಯಾರ ಮನೆ ಮುರಿದರೇನು? ಯಾರಿಗೆ ವ್ಯಥೆಯನ್ನುಂಟುಮಾಡಿದರೇನು? ದೇವರಿಲ್ಲ, ಪರಲೋಕವಿಲ್ಲ, ದೇಹಾತಿರಿಕ್ತಆತ್ಮನೇ ಸುಳ್ಳು, ತಾನು ಮಾತ್ರ ಸುಖವಾಗಿದ್ದರೆ ಅಲ್ಲಿಗೆ ಪುರುಷಾಯುಷ್ಯದ ಫಲವಾಯಿತೆಂದು ತಿಳಿದು ಪಶುಗಳಂತೆ ವರ್ತಿಸುವವನೇ ಚಾರ್ವಾಕವಾದಿಯೆನಿಸುತ್ತಾನೆ. ಇಂಥ ನಾಸ್ತಿಕವಾದಿಗಳು ಹಿಂದಿನಿಂದಲೂ ನಮ್ಮ ಭರತಖಂಡದಲ್ಲಿದ್ದರು. ಅಂಥವರು ದೈವ ಗುರು ಶಾಸ್ತ್ರಗಳನ್ನು ನಂಬಿರುವ ನಮ್ಮ ಸನಾತನಧರ್ಮಗಳಲ್ಲಿ ಮಾತ್ರ ಸೇರಿಸಲ್ಪಟ್ಟಿರಲಿಲ್ಲ. ಕೊಲೆಗಡಕನಾದ ಮಹಾಪರಾಧಿಯನ್ನು ರಾಜಾಧಿಕಾರಿಯು ಕಳಂಕಿತವಾದ ಒಂದು ದೊಡ್ಡ ಮುದ್ರೆಯನ್ನೊತ್ತಿ ಪ್ರತ್ಯೇಕವಾದ ಒಂದು ಸ್ಥಾನದಲ್ಲಿರಿಸುವಂತೆ ನಮ್ಮ ಪೂರ್ವಋಷಿಗಳು ಇಂಥ ದೇಹಾತ್ಮವಾದಿಗಳ ತಂಡವನ್ನು ನಾಸ್ತಿಕ ಎಂಬ ಒಂದು ಮುದ್ರೆಯನ್ನೊತ್ತಿ ಸನಾತನ ಗುಂಪಿನಿಂದ ಪ್ರತ್ಯೇಕವಾಗಿರಿಸುತ್ತಿದ್ದರು. ಇತ್ತೀಚೆಗೆ ಇಂಥ ದುರ್ವಾದವು ಆಸ್ತಿಕರಲ್ಲಿಯೇ ಹಬ್ಬುತ್ತ ಬಂದಿರುವುದು ಬಹು ವಿಷಾದಾಸ್ಪದವಾದ ಸಂಗತಿಯಾಗಿದೆ. ದೇಹವೇ ಬೇರೆ, ಆತ್ಮನೇ ಬೇರೆಯೆಂದು ಶ್ರುತಿಸ್ಮೃತ್ಯಾಗಮಗಳು ಸಾರುತ್ತಿರುವುದಲ್ಲದೆ ಪ್ರತ್ಯಕ್ಷಾನುಭವದಿಂದಲೂ ಸಿದ್ಧವಾಗುತ್ತದೆ. ಹೀಗೆ ದೇಹಕ್ಕಿಂತಲೂ ಪ್ರತ್ಯೇಕವಾಗಿರುವ ಪುಣ್ಯಪಾಪಗಳ ವಾಸನಾನುಗುಣವಾಗಿ ಫಲಾಫಲಗಳನ್ನು ಅನುಭವಿಸುವುದಕ್ಕೆ ಸಿದ್ಧವಾಗಿರುವ ಆತ್ಮನನ್ನು ಧರ್ಮವೆಂಬ ಮಹಾಕವಚವನ್ನು ಹಾಕಿ ರಕ್ಷಿಸಬೇಕಲ್ಲದೆ ಈ ಕವಚವನ್ನು ಕಿತ್ತುಹಾಕಿ ಅಧರ್ಮವೆಂಬ ವಿಷವನ್ನು ಲೇಪಿಸಿ ಬಹುಜನ್ಮಗಳ ಪುಣ್ಯಫಲದಿಂದ ಬಂದ ಈ ಮಾನವಾತ್ಮನನ್ನು ಅಧೋಗತಿಗೀಡುಮಾಡದೆ, ಎಲ್ಲರೂ ಆಸ್ತಿಕಶಿಖಾಮಣಿಗಳೆಂಬ ಬಿರುದನ್ನು ಪಡೆದು ಪರಮೇಶ್ವರಪ್ರೀತಿಯನ್ನು ಪಡೆಯಲಿ.

ಒಳದೇಶದ ವೃತ್ತಾಂತಗಳು.

ಮೈಸೂರು ಸರಕಾರದವರು ಬೀರೂರು ಅರಸಾಳು ರೈಲನ್ನು ಮುಂದೆ ಆನಂದಪುರದವರೆಗೆ ಬಡಾವಣೆ ಮಾಡುವದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಚನ್ನಪಟ್ಟಣ ತಾ|| ನಾಗವಾರಗ್ರಾಮದಲ್ಲಿ ಒಂದೇ ಒಂದು ತೆಂಗಿನ ಬುರುಡೆಯಲ್ಲಿ 5 ಸಸಿಗಳು ಹೊರಟಿದ್ದು ಒಂದು ವರ್ಷದೊಳಗಾಗಿ ಆ ಸಸಿಗಳಲ್ಲೆಲ್ಲಾ ಹೊಂಬಾಳೆಯು ಹೊರಟಿರುವದಂತೆ!

ಮೈಸೂರು ಸರಕಾರದವರು ಬೆಂಗಳೂರು ಮುನಿಸಿಪಾಲಿಟಿಗೆ ಬೆಂಗಳೂರುನಗರದ ಅಭಿವೃದ್ಧಿಗೋಸ್ಕರ ಶೇಕಡಾ 5 ರೂ. ಬಡ್ಡಿಯಮೇರೆ 10 ಲಕ್ಷ ರೂಪಾಯಿಗಳನ್ನು ಸಾಲಕೊಡಲು ಒಪ್ಪಿರುತ್ತಾರೆ.

ಮೈಸೂರು ಸರಕಾರದವರು ನಾಟಕ ಮುಂತಾದ ವಿನೋದಗಳಮೇಲೆ 4 ಆಣೆಯ ಮೇಲೆ 8 ಆಣೆಯವರೆಗೆ 3 ಕಾಸಿನಂತೆಯೂ, 8 ಆಣೆಯ ಮೇಲ್ಪಟ್ಟು ರೂ. 1 ಕ್ಕೆ 2 ಆಣೆಯಂತೆಯೂ ತೆರಿಗೆಯನ್ನು ವಸೂಲುಮಾಡತಕ್ಕದ್ದೆಂದು ಅಪ್ಪಣೆಮಾಡಿರುತ್ತಾರೆ.

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ರಾಮೇಶ್ವರದೇವಸ್ಥಾನದ ಪೂಜಾರಿಗಳಾದ ಶ್ರೀಕಂಠಯ್ಯ ಎಂಬುವರು ಕಳೆದ ಜೂನ್ 17 ನೆಯ ತಾರೀಖಿನ ಶನಿವಾರ ಪ್ರಾತಃಕಾಲ ಅಭಿಷೇಕಕ್ಕಾಗಿ ನೀರು ತರುತ್ತಿದ್ದಾಗ ಇದ್ದಕ್ಕಿದ್ದ ಹಾಗೆ ನೆಲಕ್ಕುರುಳಿ ಮೃತಪಟ್ಟರು.

ಚನ್ನಪಟ್ಟಣದ ತಾ|| ಮಳೂರು ಹೋಬಳಿ ಕೆಲಗೆರೆ ಗ್ರಾಮದಲ್ಲಿರುವ ಕರೀಗೌಡರ ಮಗ ಬೋರೇಗೌಡ ಎಂಬುವರ 3 ವರ್ಷದ ಕನ್ಯೆಯು ಈಗ್ಗೆ ಒಂದು ತಿಂಗಳ ಹಿಂದೆ ಋತುಮತಿಯಾಗಿರುವಳಂತೆ! ಈ ಹೆಣ್ಣುಮಗುವಿನ ಅಂಗಗಳೆಲ್ಲವೂ ವಯಸ್ಸಾದ ಸ್ತ್ರೀಯರಿಗಿರುವಂತೆಯೇ ಇರುವವಂತೆ!

ಜೂನ್ 22 ನೇ ತಾರೀಖಿನ ದಿವಸ ಬೆಂಗಳೂರು ಸೀತಾಪತಿ ಅಗ್ರಹಾರದಲ್ಲಿ ಒಂದು ಮನೆಯಲ್ಲಿ ಸ್ಟೋವಿನ ಉರಿಯು ತಾಕಿ ಇಬ್ಬರುಬಾಲಕರ ಮೈ ಮೇಲಿನ ಬಟ್ಟೆಗಳು ಹತ್ತಿಕೊಂಡು ವಿಶೇಷ ಗಾಯಗಳಾದವು. ಬಾಲಕರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರೂ ಏನೂ ಫಲವಾಗದೆ ಮೃತಿಹೊಂದಿದರು.

ಇದೇ ಜೂನ್ 22ನೇ ತಾರೀಖಿನ ದಿವಸ ನ್ಯಾಯವಿಧಾಯಕಸಭೆಯಲ್ಲಿ ಮ|| ರಾ|| ಎಚ್. ಸಿ. ದಾಸಪ್ಪನವರು ಕಾಶೀ, ತಿರುಪತಿ ಮತ್ತು ಸುಬ್ರಹ್ಮಣ್ಯಕ್ಷೇತ್ರಗಳಲ್ಲಿರುವ ಅನ್ನಸತ್ರಗಳಿಗಾಗಿ ಮೈಸೂರು ಸರ್ಕಾರದವರು ವೆಚ್ಚಮಾಡುತ್ತಿರುವ ಹಣವನ್ನು ನಿಲ್ಲಿಸಬೇಕೆಂಬ ಬಗ್ಗೆ ಒಂದು ಸೂಚನೆಯನ್ನು ತಂದಿದ್ದರು. ಈ ವಿಷಯವು ಸ್ವಲ್ಪಹೊತ್ತು ಚರ್ಚೆಯಾಗಿ, ಕಡೆಗೆ ಓಟಿಗೆ ಹಾಕಿದಾಗ ಬಹುಮತದಿಂದ ತಿರಸ್ಕರಿಸಲ್ಪಟ್ಟಿತು.

ಬೆಂಗಳೂರಿನಲ್ಲಿ ಒಬ್ಬ ಹುಡುಗನು ಮಲಗಿಕೊಂಡಿದ್ದಾಗ ಮತ್ತೊಬ್ಬ ದೊಡ್ಡವನು ತಮಾಷೆಗಾಗಿ ಅವನ ನಡುವಿನಮೇಲೆ ಕುಳಿತಿದ್ದುದರಿಂದ ಆ ಹುಡುಗನ ಅವಯವಗಳೇ ಬದಲಾವಣೆ ಹೊಂದಿ ಒಂದು ಕಾಲು ಉದ್ದವಾಗಿಯೂ, ಒಂದು ಕಾಲು ಚಿಕ್ಕದಾಗಿಯೂ ಆಯಿತು! ಆ ಹುಡುಗನ ಬಂಧುಗಳು ಅವನನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿದರೆಂದೂ, ಬಾಲಕನ ಅವಯವಗಳು ಪುನಃ ಕ್ರಮಪಡುತ್ತಿರುವವೆಂದೂ ತಿಳಿದುಬಂದಿದೆ.

ಜೂನ್ 23 ನೇ ತಾರೀಖಿನ ದಿವಸ ಬೆಂಗಳೂರಿನ ಶಿವಾನಂದ ನಾಟಕಶಾಲೆಯ ಸಮೀಪದಲ್ಲಿ ಕಾನಕಾನಹಳ್ಳಿಯ ನಿವಾಸಿಯೊಬ್ಬನು ಒಂದು ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದಾಗ ಮದ್ರಾಸಿನ ಕಿವುಡ ಮತ್ತು ಮೂಗರ ಪಾಠಶಾಲೆಯ ಪ್ರಿನ್ಸಿಪಾಲರವರು ಹಿಂದಿನಿಂದ ಮೋಟಾರಿನಲ್ಲಿ ಬಂದರೆಂದೂ, ದೊಡ್ಡವನು ತಪ್ಪಿಸಿಕೊಂಡನೆಂದೂ, ಮಗುವು ಮೋಟಾರಿನ ಚಕ್ರಕ್ಕೆ ಸಿಕ್ಕಿ ಛಿದ್ರಛಿದ್ರವಾಗಿ ತಕ್ಷಣವೇ ಮೃತಪಟ್ಟಿತೆಂದೂ ತಿಳಿದುಬಂದಿದೆ.

ಲವು ದಿವಸಗಳ ಹಿಂದೆ ಬೆಂಗಳೂರು ಮಲ್ಲೇಶ್ವ ಒಂದು ಮೋಟಾರ್ ಲಾರಿಯು ವೇಗವಾಗಿ ತ್ತಿದ್ದುದನ್ನು ಕಂಡು ಪೋಲೀಸರು ತಡೆದು ಪರೀ ವಾಗ ಅದರಲ್ಲಿ 3000 ತೆಂಗಿನಕಾಯಿಗಳು ಇದ್ದು ೂ, ಸುಂಕ ಕೊಡದೆ ಇದ್ದುದರಿಂದ ಲಾರಿಯನ್ನು ವಾಗಿ ಬಿಟ್ಟುಕೊಂಡು ಹೋಗುತ್ತಿದ್ದನೆಂದೂ ತಿಳಿ ಂದುದರಿಂದ ಲಾರಿಯನ್ನು ಅಬ್ಕಾರಿ ಇಲಾಖೆ ರ ವಶಕ್ಕೆ ಒಪ್ಪಿಸಿದರು. ಅಬ್ಕಾರಿ ಇಲಾಖೆ ರು ಡ್ರೈವರ ಮೇಲೆ ಮೊಕದ್ದಮೆ ಹೂಡಲು ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಡ್ರೈ 70 ರೂ. ಜುಲ್ಮಾನೆಯನ್ನು ವಿಧಿಸಿದರು.

ವರ್ತಮಾನಸಂಗ್ರಹ

ಬೂಡಾಪೆಸ್ಟ್ನಗರದ ಪೋಲೀಸರು ಪರಾಯಿಗಳ ಧರಿಸುವ ಸ್ತ್ರೀಯರನ್ನು ದಸ್ತಗಿರಿಮಾಡಿ ವಿಚಾ ಗುರಿಪಡಿಸುವರಂತೆ!

ಅಂದಮಾನದ್ವೀಪದಲ್ಲಿ 38 ಖೈದಿಗಳು ಉಪವಾಸವನ್ನು ಕೈಕೊಂಡಿರುವರು! ಇವರಲ್ಲಿ 8 ಜನರು ಯಸ್ಥಿತಿಯಲ್ಲಿರುವರು.

ಅಸ್ಪೃಶ್ಯತಾನಿವಾರಣಚಳವಳಿಯಲ್ಲಿ ಯಾರೂ ವಹಿಸಕೂಡದೆಂದು ಮದರಾಸ್ ಸರಕಾರದವರು ು ಸರ್ಕ್ಯುಲರ್ ಹೊರಡಿಸಿರುತ್ತಾರೆ.

ರುವ ಜುಲೈ 1 ನೇ ತಾರೀಖಿನಿಂದ ಮುಂಬಯಿ ಅಟ್ಲಾಸ್ ಮಿಲ್ಲುಗಳು ನಿಲ್ಲಿಸಲ್ಪಡುವವು. ಇದ 1500 ಜನರಿಗೆ ಕೆಲಸವಿಲ್ಲದಂತಾಗುವದು!

ರ್ಥಿಕ ದುರವಸ್ಥೆಯ ದೆಸೆಯಿಂದ ಅಮೇರಿಕೆಯ ಯುಕ್ತ ಸಂಸ್ಥಾನಗಳಲ್ಲಿ 1931ನೇ ವರ್ಷದಲ್ಲಿ 88 ಜನರೂ, 1932 ನೇ ವರ್ಷದಲ್ಲಿ 23,000 ರೂ ಆತ್ಮಹತ್ಯಮಾಡಿಕೊಂಡರಂತೆ!

ಾಂಗ್ರೆಸ್ಸಿನ ಕಾರ್ಯದರ್ಶಿಗಳೂ ಮೀರತ್ತಿನಲ್ಲಿರುವ ಧಿ ಆಶ್ರಮದ ನಿವಾಸಿಗಳೂ ಆದ ಶ್ರೀ|| ಗಿರಧಾರಿ ಲನಿಯವರು ಎಮರ್ಜೆನ್ಸಿ ಪವರ್ಸ್ ಆಕ್ಟಿನ ಪ್ರ ಪೂನಾದಲ್ಲಿ ದಸ್ತಗಿರಿಮಾಡಲ್ಪಟ್ಟರು.

ೀ ಲಾ ಶ್ರೀ ಶಿವಷಣ್ಮುಗ ಶಿವಜ್ಞಾನ ಶಿವಾಚಾ ಸ್ವಾಮಿಗಳವರು ತಿರುಪ್ಪಪುಲಿಯೂರಿನಲ್ಲಿರುವ ದ್ಧಾಂತ ಪಾಠಶಾಲೆಗೆ 10,000 ರೂ. ಗಳನ್ನು ರ್ಥವಾಗಿ ಕೊಟ್ಟಿರುವರು! ಸ್ತುತ್ಯ!

ಕ್ಷಿಣಆಫ್ರಿಕಾದೇಶಕ್ಕೆ ಸೇರಿದ ವೆಂಟರ್ಸ್ಡ್ರಾಪ್ ಊರಿನಲ್ಲಿ ಒಂದು ಕೋಳಿಯು ಒಂದು ಹಾವಿ ನೆ 5 ನಿಮಿಷಗಳ ವರೆಗೆ ಕಾದಾಡಿ, ಕಡೆಯಲ್ಲಿ ಳಿಯೇ ಹಾವನ್ನು ಕೊಂದುಹಾಕಿತಂತೆ!

ಹಲಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಮೆಂಬರರಾದ ಬಹದ್ದೂರ್ ವಾಜಿಯುದ್ದೀನರವರು ಮುಂದಿನ ಯವಿಧಾಯಕಸಭೆಯಲ್ಲಿ ಮದ್ಯಪಾನನಿರೋಧ ಾನಿನ ಬಗ್ಗೆ ಒಂದು ಬಿಲ್ಲನ್ನು ಚರ್ಚೆಗೆ ತರ ವರು.

ಗ್ಗೆ ಕೆಲವು ದಿವಸಗಳ ಹಿಂದೆ ಬಂಗಾಳಾ ಪ್ರಾಂ ಸೇರಿದ ಚಿತ್ರಸೇನಪುರದ ಪೋಸ್ಟಾಫೀಸಿಗೆ ಕೆಲವು ಸಶಸ್ತ್ರರಾದ ಯುವಕರು ನುಗ್ಗಿ ಅಲ್ಲಿದ್ದ ನಗದು ವನ್ನೂ, ಸ್ಟ್ಯಾಂಪುಗಳನ್ನೂ ಅಪಹರಿಸಿಕೊಂಡು ದರೆಂದು ತಿಳಿದುಬಂದಿದೆ. ಪೋಲೀಸರು ತನಿಖೆ ುತ್ತಲಿದ್ದಾರೆ.

ಂಗ್ಲೆಂಡಿನ ಸರ್ ಜೇಮ್ಸ್ಜೀನ್ಸ್ ಎಂಬ ಪ್ರಸಿದ್ಧ ಜ್ಞರೊಬ್ಬರು ಹೊಸದೊಂದು ಎಲೆಕ್ಟ್ರಿಕ್ ಕಿರ ನ್ನು ಕಂಡುಹಿಡಿದಿರುವರು! ಈ ಕಿರಣಗಳ ಸಹಾ ಂದ ಶತ್ರುಸೈನ್ಯವನ್ನು ಕ್ಷಣಮಾತ್ರದಲ್ಲಿ ಧ್ವಂಸ ಡಬಹುದಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಗಡಿ ರವು ಪ್ಯಾರಿಸ್ನಗರದ 'ಈಫಿಲ್ ಟವರ್' ಎಂಬ ಅಡಿ ಎತ್ತರವುಳ್ಳ ಕಟ್ಟಡದಮೇಲೆ ಸ್ಥಾಪಿಸಲ್ಪ ವದು. ಈ ಗಡಿಯಾರದ ಮುಖಬಿಲ್ಲೆಯು 66 ಅಗಲವಾಗಿರುವದಂತೆ!

ಹಲಿಯ ಒಬ್ಬ ಪೋಲೀಸ್ ಕಾನ್ಸ್ಟೇಬಲ್ಲನು ಕಲ್ಲುಗಳನ್ನು ಕದಿಯುತ್ತಿದ್ದನೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿರುವನು! ಪೋಲೀಸರು ಅಪಾದಿತನ ಮನೆಯನ್ನು ಜಪ್ತುಮಾಡಿದಾಗ ಅನೇಕ ಬೈಸಿಕಲ್ಗಳು ದೊರೆತವಂತೆ!

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ಸೇರಿದ ಅಲಬಾಮಾ ಎಂಬ ಸಣ್ಣ ರಾಜ್ಯದಲ್ಲಿ ಹಣದ ಅಭಾವದ ದೆಸೆಯಿಂದ 2,400 ಪಾಠಶಾಲೆಗಳು ಮುಚ್ಚಲ್ಪಟ್ಟಿರುವವು! ಇದರಿಂದ 7,000 ಜನ ಉಪಾಧ್ಯಾಯರಿಗೆ ಕೆಲಸವಿಲ್ಲವಾಗಿರುವದು!

ಇಂಗ್ಲೆಂಡಿಗೆ ಸಮೀಪದಲ್ಲಿರುವ 'ಮ್ಯಾನ್' ಎಂಬ ದ್ವೀಪದಲ್ಲಿ ಒಂದು ಮೋಟಾರ್ ಸೈಕಲ್ ಪಂದ್ಯವು ಜರುಗಿತು. ಇದರಲ್ಲಿ ಸ್ಟ್ಯಾನ್ಲಿ ಉಡ್ಸ್ ಎಂಬವರು 264 ಮೈಲುಗಳ ದೂರವನ್ನು 3 ಗಂಟೆ 65 ನಿಮಿಷ ಮತ್ತು 35 ಸೆಕೆಂಡುಗಳಲ್ಲಿ ಸಂಚರಿಸಿ ಪಂದ್ಯದಲ್ಲಿ ಜಯಶಾಲಿಗಳಾದರಂತೆ!

ಕಾನ್ಪೂರನಗರದ ಮುನಿಸಿಪಲ್ ಇನ್ಸ್ಪೆಕ್ಟರೂ, ಅಸ್ಪೃಶ್ಯತಾನಿವಾರಣಾಚಳವಳಿಯಲ್ಲಿ ಮುಂದಾಳುಗಳೂ ಆಗಿದ್ದ ಒಬ್ಬಾನೊಬ್ಬ ಪಂಡಿತರು ಒಬ್ಬ ಹರಿಜನ ಬಾಲಿಕೆಯ ಮೇಲೆ ಬಲಾತ್ಕಾರವಾಗಿ ಅತ್ಯಾಚಾರವನ್ನು ನಡೆಯಿಸಿ ಪರಾರಿಯಾಗಿರುವರಂತೆ! ಪೋಲೀಸರು ಅವರನ್ನು ಹುಡುಕುತ್ತಿರುವರು!

"ವೆರಿಂಗ್ರೋಡ್" ಎಂಬ ಊರಿನಲ್ಲಿ ನಾಜಿಪಂಗಡದ ಜನರು ಮಾರ್ಕೆಟ್ ಚೌಕದಲ್ಲಿ 5 ಅಡಿ ಎತ್ತರವಾದ ಒಂದು ದೊಡ್ಡ ಕೋಳವನ್ನು ನೆಟ್ಟಿರುವರಂತೆ! ನಾಜಿಗಳ ಮತ್ತು ಹೆರ್ ಹಿಟ್ಲರ್ರವರ ಸರಕಾರದ ವಿಷಯವಾಗಿ ಸುಳ್ಳುಸುದ್ದಿಗಳನ್ನು ಹುಟ್ಟಿಸಿದವರನ್ನೆಲ್ಲಾ ಆ ಕೋಳಕ್ಕೆ ಹಾಕುವರಂತೆ!

ಲೀಪ್ಜಿಗ್ನಗರದಲ್ಲಿ ನೊಣಗಳನ್ನು ನಾಶಮಾಡುವ ಒಂದು ಹೊಸಯಂತ್ರವು ನಿರ್ಮಿಸಲ್ಪಟ್ಟಿರುವದು. ಈ ಯಂತ್ರವು ಖುರ್ಚಿಯ ಆಕಾರದಲ್ಲಿದ್ದು ಅದರಮೇಲೆ ಇಟ್ಟಿರುವ ಸಕ್ಕರೆಯ ಆಶೆಗಾಗಿ ನೊಣಗಳು ಹಾರಿಬಂದು ಖುರ್ಚಿಯಮೇಲೆ ಕುಳಿತಕೂಡಲೇ ಎಲೆಕ್ಟ್ರಿಕ್ ಕರೆಂಟಿನಿಂದ ತಕ್ಷಣವೇ ಮೃತಿಹೊಂದುವುವಂತೆ!

ಸಿಲೋನಿನ ಟಿ. ಎ. ಪೇರಿರಾ ಎಂಬುವರು ಇದೇ ಜೂನ್ 21 ನೇ ತಾರೀಖಿನ ದಿವಸ ತ್ರಿವಾಂಡ್ರಂ ಎಕ್ಸ್ಪ್ರೆಸ್ ಟ್ರೇನಿನಲ್ಲಿ ಮದರಾಸಿಗೆ ಪ್ರಯಾಣಮಾಡುತ್ತಿದ್ದಾಗ ತಿರುಚನಾಪಳ್ಳಿಯ ಸ್ಟೇಷನ್ನಿನ ಸಮೀಪದಲ್ಲಿ ಅವರ ಬಳಿಯಲ್ಲಿದ್ದ 22,500 ರೂ ಗಳ ಆಭರಣಗಳನ್ನು ಯಾರೋ ಅಪಹರಿಸಿಕೊಂಡು ಹೋದರಂತೆ! ಪೋಲೀಸರು ಕಳ್ಳರನ್ನು ಹುಡುಕುತ್ತಿರುವರು.

ವಿಯನ್ನಾನಗರದಲ್ಲಿ ಪ್ರಿನ್ಸ್ಸ್ಟಾರ್ ಹೆಂಬರ್ಗ್ ಎಂಬ ರಾಜಕುಮಾರರೊಬ್ಬರು ಒಂದು ಹೋಟೇಲಿನಲ್ಲಿ ಒಬ್ಬ ನೀಗ್ರೋ ಹೆಂಗಸನ್ನು ಹಾಸ್ಯಮಾಡಲು ಆಕೆಯು ಕುಪಿತಳಾಗಿ ಅವರ ಮೂಗನ್ನು ಚೆನ್ನಾಗಿ ಕಚ್ಚಿದಳಂತೆ! ನಾಜೀಪಂಗಡದ ವೃತ್ತಪತ್ರಿಕೆಯಲ್ಲಿ ಈ ವಿಷಯವು ಪ್ರಕಟಿಸಲ್ಪಡಲು, ರಾಜಕುಮಾರರು ಸದರೀ ಪತ್ರಿಕಾಕರ್ತರ ಮೇಲೆ ದಾವೆಯನ್ನು ಹೂಡಿದರು! ಕೋರ್ಟಿನವರು ವಿಚಾರಣೆಯನ್ನು ನಡೆಯಿಸಿ ರಾಜಕುಮಾರರಿಗೆ 15 ಪೌಂಡುಗಳ ಪರಿಹಾರದ್ರವ್ಯವನ್ನು ಕೊಡಿಸಿದರು.

ವಾರ್ಸಾನಗರದ 40 ವರ್ಷ ವಯಸ್ಸಿನ ಜೋಸೆಫ್ ವೈರೊಬೆಕ್ ಎಂಬಾತನನ್ನು ಯಾವುದೋ ಒಂದು ಅಪರಾಧದ ಮೇಲೆ ಪೋಲೀಸರು ದಸ್ತಗಿರಿಮಾಡಿ ಕೈಕೋಳಗಳನ್ನು ತೊಡಿಸಲು ಆತನು ಕೈಕೋಳಗಳನ್ನು ಹಲ್ಲಿನಿಂದ ಮುರಿದು ನುಂಗಿಬಿಟ್ಟನು! ವಿಚಾರಣೆಯನ್ನು ನಡೆಸಿದ ಜಡ್ಜರು ಈ ವಿಷಯವಾಗಿ ಪ್ರಶ್ನೆಮಾಡಿದಾಗ ಅಪರಾಧಿಯು ನಾಣ್ಯಗಳನ್ನು ಗಡಿಯಾರಗಳನ್ನೂ ಹಾಗೂ ಇನ್ನೂ ಅನೇಕ ಸಣ್ಣ ಸಣ್ಣ ಕಬ್ಬಿಣದ ಸಾಮಾನುಗಳನ್ನು ನುಂಗುವದು ತನಗೆ ಮೊದಲಿನಿಂದಲೂ ಅಭ್ಯಾಸವಾಗಿರುವದೆಂದು ಉತ್ತರವಿತ್ತನು! ಜಡ್ಜರು ಅವನಿಗೆ ಒಂದು ತಿಂಗಳ ಸಜೆಯನ್ನು ವಿಧಿಸಿದರು!

ಬಿಜಾಪುರ ಡಿ|| ಗುಳೇದಗುಡ್ಡ ಶಹರದಿಂದ 50 ಜನರು ಭರತಖಂಡದ ಮಹಾಕ್ಷೇತ್ರಯಾತ್ರೆಗಳಿಗಾಗಿ ಗೌರೀಶಂಕರ ಕಂಪನಿಯ ಟ್ರೇನಿನಿಂದ ಹೋಗಿ ಯಾವತ್ತೂ ಯಾತ್ರೆಗಳನ್ನು ಸೌಖ್ಯದಿಂದ ಮಾಡಿಕೊಂಡು ಬಂದ ಸಂತೋಷಕ್ಕಾಗಿ ಅಲ್ಲಿಯ ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದವರು ಶ್ರೀ ನಿರಂಜನ ನೀಲಕಂಠಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶುಭಾಗಮನದ ಸಭೆಯನ್ನು ಕೂಡಿಸಿ ಯಾತ್ರಿಕರನ್ನು ಆದರಸತ್ಕಾರಗಳಿಂದ ಸಂತೋಷಗೊಳಿಸಿದರು. ಯಾತ್ರಿಕರು ತಮ್ಮ ಪ್ರವಾಸದ ವಿಷಯವನ್ನೆಲ್ಲಾ ಓದಿ ಹೇಳಿದರು. ಕ್ಷೇತ್ರಗಳ ಮಹತ್ವದ ಬಗ್ಗೆ ಅನೇಕರ ಭಾಷಣಗಳಾದವು.

ಈಗ್ಗೆ ಸುಮಾರು 6-7 ದಿವಸಗಳ ಹಿಂದೆ ತಂಜಾವೂರಿನ 4 ಜನರು ಸುಮಾರು ಹತ್ತು ಸಾವಿರ ರೂಪಾಯಿಗಳ ಬೆಲೆಬಾಳುವ ಬೆಳ್ಳಿಯನ್ನು ಸುಂಕಕೊಡದೆ ಕಾರಿಕಲ್ಲಿಗೆ ಮೋಟಾರಿನಲ್ಲಿ ಸಾಗಿಸಿಕೊಂಡು ಹೋಗುತ್ತಿದ್ದರು. ಪುದುಚೇರಿಯ ಸುಂಕದ ಅಧಿಕಾರಿಯು ಇದನ್ನು ತಿಳಿದು ಮತ್ತೊಂದು ಮೋಟಾರಿನಲ್ಲಿ ಅವರನ್ನು ಬೆನ್ನಟ್ಟಿ ಹೋದನು. ಬೆಳ್ಳಿಯನ್ನು ಸಾಗಿಸುತ್ತಿದ್ದವರು ಅಧಿಕಾರಿಯ ಕೈಯ್ಯಿಂದ ತಪ್ಪಿಸಿಕೊಳ್ಳಲು ಮೋಟಾರನ್ನು ಬಹು ವೇಗವಾಗಿ ಬಿಟ್ಟುಕೊಂಡು ಹೋಗುತ್ತಿರಲು, ಮಧ್ಯಮಾರ್ಗದಲ್ಲಿ ಮೋಟಾರು ಒಂದು ಕೆರೆಯ ಏರಿಗೆ ತಗುಲಿ ಕೆರೆಯೊಳಕ್ಕೆ ಮಗುಚಿಕೊಂಡು 4 ಜನರೂ ಮೃತಪಟ್ಟರು. ಅನಂತರ ಹಿಂದೆ ಬಂದ ಅಧಿಕಾರಿಯು ತನ್ನ ಕಡೆಯವರಿಂದ ಮೋಟಾರನ್ನೂ ಬೆಳ್ಳಿಯನ್ನೂ ಮೇಲಕ್ಕೆತ್ತಿಸಿ, ಜಪ್ತುಮಾಡಿಕೊಂಡು ಹೋದನು.

ಸಯಾಂದೇಶದಿಂದ ರಕ್ತಪಾತವಿಲ್ಲದ ಮತ್ತೊಂದು ಕ್ರಾಂತಿಯ ಸಮಾಚಾರವು ಬಂದಿರುವುದು. ಕಳೆದ ವರ್ಷ ಅಲ್ಲಿ ನಡೆದ ಕ್ರಾಂತಿಗೆ ಮುಖ್ಯನಾಯಕರೂ ಸೈನ್ಯದ ಕಮ್ಯಾಂಡರ್ ಇನ್ಚೀಫರೂ ಆಗಿದ್ದ ಬಹೋಲ್ಬಾಲ್ ಅಬಯೂಹರವರು ಕನ್ಸರ್ವೇಟಿವ್ ಸರ್ಕಾರವನ್ನು ಮುಕ್ತಾಯಮಾಡಿ, ಸ್ಟೇಟ್ಕೌನ್ಸಿಲ್ಲಿನ ಅಧ್ಯಕ್ಷರನ್ನೂ ಇತರ ಮಂತ್ರಿಗಳನ್ನೂ ಬಂಧಿಸಿ, ಸರಕಾರೀ ಕಟ್ಟಡಗಳ ಸುತ್ತಲೂ ಸೈನ್ಯವನ್ನು ಇಟ್ಟರು. ಸಯಾಮಿನ ರಾಜರು ಹುವಾಹಿನ್ ಎಂಬಲ್ಲಿರುವ ಬೇಸಿಗೆ ವಿಶ್ರಾಂತಿಗೃಹದಿಂದ ಹಿಂತಿರುಗಿ ಬಂದು ಮತ್ತೊಂದು ಸ್ಟೇಟ್ ಕೌನ್ಸಿಲ್ಲನ್ನು ಸ್ಥಾಪಿಸುವವರೆಗೆ ಅಬಯೂಹರವರೇ ಸರ್ವಾಧಿಕಾರಿಗಳಾಗಿರುವರಂತೆ! ಈಚೆಗೆ ಬಂದಿರುವ ವರ್ತಮಾನದಿಂದ ಸಯಾಂರಾಜರಾದ ಪ್ರಜಾಧಿಪೋಕರು ಹಬೆಯೂಹರವರ ವರ್ತಮಾನವನ್ನು ಒಪ್ಪಿ, ಹೊಸಸರ್ಕಾರದ ಸ್ಥಾಪನೆಗಾಗಿ ಅವಶ್ಯಕವಾದ ಏರ್ಪಾಡುಗಳನ್ನು ಮಾಡುತ್ತಿರುವರೆಂದು ತಿಳಿದುಬರುತ್ತದೆ.

ಮೈಸೂರು ಗೆಜೆಟ್.

ಫ್ರೆಂಚ್ರಾಕ್ಸ್ ಸ್ಪೆಷಲ್ ಫಸ್ಟ್ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ವಿ. ಕಂದಾಸ್ವಾಮಿಪಿಳ್ಳೆ, ಬಿ.ಎ., ಬಿ.ಎಲ್. ರವರಿಗೆ ಮೈಸೂರು ಲ್ಯೂನೆಸಿ ರೆಗ್ಯುಲೇಷನ್ನಿನ ಪ್ರಕಾರವಾಗಿ ಮ್ಯಾಜಿಸ್ಟ್ರೇಟರ ಅಧಿಕಾರವು ಕೊಡಲ್ಪಟ್ಟಿದೆ.

ನಂಜನಗೂಡು ಸ್ಪೆಷಲ್ ಫಸ್ಟ್ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಸಿ. ಬಿ. ಶ್ರೀನಿವಾಸರಾವ್, ಎಂ.ಎ., ಎಲ್ಎಲ್.ಬಿ., ರವರಿಗೆ ಮೈಸೂರು ಲ್ಯೂನೆಸಿ ರೆಗ್ಯುಲೇಷನ್ನಿನ ಪ್ರಕಾರವಾಗಿ ಮ್ಯಾಜಿಸ್ಟ್ರೇಟರ ಅಧಿಕಾರವು ಕೊಡಲ್ಪಟ್ಟಿದೆ.

ಬೆಂಗಳೂರು ಸಬಾರ್ಡಿನೇಟ್ ಜಡ್ಜರಾದ ಮಿ|| ಎಚ್. ಕೆ. ವೀರಬಸವಯ್ಯನವರು, ಬಿ.ಎ.,ಬಿ.ಎಲ್. ರವರಿಗೆ ಮೇ 19 ನೇ ತಾರೀಖಿನ ಸರ್ಕ್ಯುಲರಿನಲ್ಲಿ ಕೊಡಲ್ಪಟ್ಟಿದ್ದ 20 ದಿವಸಗಳ ರಜೆಯು ಇನ್ನೂ ಎರಡು ವಾರಗಳ ವರೆಗೆ ಹೆಚ್ಚಿಸಲ್ಪಟ್ಟಿದೆ.

ಈಗಿನ ರೆಪ್ರೆಜೆಂಟೆಟಿವ್ ಅಸೆಂಬ್ಲಿಯ ಅವಧಿಯು 1934 ನೇ ಇಸವಿ ಮಾರ್ಚಿ ತಿಂಗಳ ಕಡೆಯ ವರೆಗೆ ಹೆಚ್ಚಿಸಲ್ಪಟ್ಟಿದೆ. ಮತ್ತು ಹೊಸ ಮೆಂಬರುಗಳ ಚುನಾವಣೆಯು ಈ ಮೊದಲು ಪ್ರಕಟಿಸಲ್ಪಟ್ಟಿದ್ದಂತೆ 1933ನೇ ಇಸವಿ ಜುಲೈ 15 ನೇ ತಾರೀಖಿನ ದಿವಸ ನಡೆಯದೆ 1934 ನೇ ಇಸವಿ ಮಾರ್ಚಿ 3 ನೇ ತಾರೀಖಿನ ದಿವಸ ನಡೆಯುವದು.

[೩ನೇ ಪುಟದಿಂದ ಮುಂದುವರಿದುದು]

ಮಯವು ದೊರಕಿತೆಂದು ನಾನೂ ಅವರ ಜೊತೆಯಲ್ಲಿ ಅಲ್ಲಿಗೆ ಹೋದೆನು. ಇವರಿಂದಲೇ ನಿರ್ಮಿತವಾದ ಶ್ರೀನಿವಾಸದೇವರ ಪ್ರತಿಷ್ಠಾಂಗವಾಗಿ ಶ್ರೀವೈಷ್ಣವ ಬ್ರಾಹ್ಮಣರಿಂದ ಪಾಂಚರಾತ್ರಾಗಮಪ್ರಕಾರ ಕಾರ್ಯಕ್ರಮಗಳು ನಡೆದು ವೇದ ಮತ್ತು ಪ್ರಬಂಧಗಳ ಪಾರಾಯಣಗಳಾಗುತ್ತಿತ್ತು. ಈ ಶುಭಮುಹೂರ್ತದಲ್ಲಿ ಸ್ವಾಮಿಗಳು ಯಾಗಶಾಲೆಗೆ ದಯಮಾಡಿ ಶಯ್ಯಾಧಿವಾಸದಲ್ಲಿದ್ದ ಬಿಂಬದ ಸಮೀಪದಲ್ಲಿ ವಿಧ್ಯುಕ್ತವಾದ ಪಂಚಬ್ರಹ್ಮ ಕಳಶಸ್ಥಾಪನೆಮಾಡಿ ಮಂತ್ರತಂತ್ರಾದಿಗಳ ಯೋಜನೆಯಿಂದ ನೇತ್ರೋನ್ಮೀಲನ ಮತ್ತು ಅಷ್ಟಬಂಧನಾದಿಗಳನ್ನು ಬಹು ದಕ್ಷತೆಯಿಂದ ನೆರವೇರಿಸಿದರು. ಮೂರ್ತಿಯಾದರೂ ನಾಲ್ಕು ಹಸ್ತ ಪ್ರಮಾಣ ಎತ್ತರವುಳ್ಳದಾಗಿ ಅತ್ಯಂತ ಸೌಂದರ್ಯದಿಂದೊಡಗೂಡಿ ಸಾಕ್ಷಾದ್ವಿಷ್ಣುವೇ ಮೂರ್ತೀಭವಿಸಿದಂತೆ ಕಾಣುತ್ತಿತ್ತು. ವೇದಪಾರಾಯಣಾದಿಂದಲೂ ಮಂತ್ರತಂತ್ರಾದಿಗಳಿಂದಲೂ ಕೂಡಿದ್ದ ಆ ಯಾಗಶಾಲೆಯು ಸಾಕ್ಷಾದ್ವೈಕುಂಠದಂತೆ ಭಾಸವಾಗುತ್ತಿತ್ತು. ಆಗಮಿಕರ ಮತ್ತು ಶಿಲ್ಪಿಗಳ ಏಕಮತ್ಯವೂ, ಕಾರ್ಯದಕ್ಷತೆಯೂ, ಪ್ರಾಚೀನಕಾಲದ ದೊಡ್ಡವರಾದಿ ಪ್ರಭುಗಳ ಸಂಪ್ರದಾಯದಂತೆಯೂ ವೃತ್ತಿತ್ತು. ಈಗಿನ ನಾಸ್ತಿಕರ ವಾತಾವರಣದಲ್ಲಿ ಭಕ್ತಿಜ್ಞಾನದಾಯಕವಾದ ಇಂಥ ಉತ್ತಮೋತ್ತಮ ಕಾರ್ಯಕ್ಕೆ ಅವಕಾಶವನ್ನು ಕಲ್ಪಿಸಿದ ಶ್ರೀಮಾನ್ ವೈ. ವೆಂಕಟರಮಣಯ್ಯನವರು ಎಷ್ಟು ಧನ್ಯರೊ, ಎಷ್ಟು ಅದೃಷ್ಟಶಾಲಿಗಳೋ? ಇವರಿಗೆ ಪರಮಾತ್ಮನು ಇಷ್ಟಾರ್ಥವನ್ನೀಯಲಿ! ಅಸ್ತು!

ಮತ್ತೊಂದೇನೆಂದರೆ, ಅದೇ ಮೊಹಲ್ಲಾದಲ್ಲಿ ಇದೇ ಬಹುಳ ನವಮಿ ಶುಕ್ರವಾರ ಮತ್ತೊಂದು ಪ್ರತಿಷ್ಠಾಕಾರ್ಯವೊದಗಿತು. ಅಲ್ಲಿಗೂ ಶ್ರೀಯವರ ಜತೆಯಲ್ಲಿ ನಾನೂ ಹೋಗಿದ್ದೆನು. ಈ ಪ್ರತಿಷ್ಠೆಯು ಹಿಂದಿನ ಜಕಣಾಚಾರ್ಯರನ್ನು ನೆನಪಿಗೆ ತರುತ್ತಿತ್ತು. ಶ್ರೀಯವರು ಮೂರ್ತಿನಿರ್ಮಾಣಕ್ರಮಮಾತ್ರವಲ್ಲ, ಪ್ರತಿಷ್ಠಾಕರ್ಮಕುಶಲರೂ ಆಗಿದ್ದಾರೆ. ಅಮೃತಶಿಲಾಮಯವಾದ ಶ್ರೀ ಸೀತಾರಾಮ ಆಂಜನೇಯರ ದಿವ್ಯಮೂರ್ತಿಗಳ ನಿರ್ಮಾಣಮೊದಲುಗೊಂಡು ಕುಂಭಾಭಿಷೇಕದವರೆಗೂ ಶ್ರೀಯವರ ಹಸ್ತದಿಂದಲೇ ವಿಧ್ಯುಕ್ತವಾಗಿ ನೆರವೇರಿಸಿದುದನ್ನು ನೋಡಿ ಆತ್ಮಾನಂದವುಂಟಾಯಿತು. ಪ್ರಾಚೀನಕಾಲದಿಂದಲೂ ಇದೇ ರೀತಿಯಲ್ಲಿ ವಿಧ್ಯುಕ್ತವಾಗಿ ಅಲ್ಲಲ್ಲಿ ಅನೇಕದೇವತಾ ಪ್ರತಿಮೆಗಳು ಸ್ಥಾಪಿಸಲ್ಪಡುತ್ತ ಬಂದಿರುವುದರಿಂದಲೇ ಇನ್ನೂ ನಮ್ಮಲ್ಲಿ ಆಸ್ತಿಕ ಬುದ್ಧಿಯು ಚಿಗುರುತ್ತಲೇ ಇರುತ್ತದೆ. ಯಾವ ಮತವಾದರೇನು? ಆಸ್ತಿಕತೆಯಿಂದಲೇ ಜ್ಞಾನ ಉಂಟಾಗಬೇಕು, ಜ್ಞಾನದಿಂದಲೇ ಮೋಕ್ಷವಾಗಬೇಕು, ಈ ಮೂರ್ತಿಗಳ ಪ್ರತಿಷ್ಠೆಯನ್ನು ಮಾಡಿಸಿದ ಶ್ರೀರಾಮದಾಸರೇ, ನೀವೇ ಧನ್ಯರು, ಧನ್ಯರು, ಇದರಂತೆಯೇ ನಮ್ಮ ದೇಶದ ಎಲ್ಲೆಡೆಯಲ್ಲಿಯೂ ಇಂಥ ಭಕ್ತಿಜ್ಞಾನವರ್ಧಕಗಳಾದ ದೇವತಾಕಾರ್ಯಗಳನ್ನು ಮಾಡಲು ಎಲ್ಲರಿಗೂ ಮನಸ್ಸನ್ನುಂಟುಮಾಡಲೆಂದು ಶ್ರೀ ಪರಾತ್ಪರನಾದ ಪರಬ್ರಹ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಧರಾದೇವಿಯ ನೊಂದ ನುಡಿಗಳು.

"ಅಯ್ಯೋ! ತಾಳಲಾರೆ, ತಾಳಲಾರೆ, ಈ ತಾಪವನ್ನ! ಹೊಟ್ಟೆಯಲ್ಲಿ ಬೇಗುದಿಗೊಂಡು ಎಲ್ಲೆಲ್ಲಿಯೂ ನಾನು ಸುರಿಸುತ್ತಿರುವ ಕಣ್ಣೀರುಗಳನ್ನು ಒರಸಿ ಸಂತೈಸುವವರು ಒಬ್ಬರೂ ಇಲ್ಲದಂತಾಯಿತಲ್ಲ! ಏನು ಮಾಡಲಿ! ಯಾರಲ್ಲಿ ಹೇಳಿಕೊಳ್ಳಲಿ!

"ಅಹಹ! ಹಿರಿಯರು ನನಗೆ ಯಾವುದೋ ಒಂದು ಕಾರಣದಿಂದ ಇಟ್ಟಿದ್ದ 'ಧರಾ', 'ಧರಿತ್ರೀ', 'ಧರಣೀ', 'ಧಾರಿಣೀ'—ಎಂಬ ಹೆಸರುಗಳು ದುಃಖವನ್ನು ತಡೆದುಕೊಳ್ಳತಕ್ಕವಳು ಎಂಬರ್ಥದಲ್ಲಿಯೋ ಈಗ ನನಗೆ ಸಲ್ಲುವಂತಾದವಲ್ಲ! ಇಷ್ಟು ಜನ ಮಕ್ಕಳನ್ನು ಹೆತ್ತರೂ ನನ್ನ ಶೋಕವನ್ನು ಪರಿಹರಿಸುವ ಪುತ್ರನು ಒಬ್ಬನೂ ನನಗೆ ಇಲ್ಲದಂತಾಯಿತಲ್ಲ! ಕಾಲಗತಿಯು ಏನು ವಿಚಿತ್ರ!

"ಅಯ್ಯೋ! ನನ್ನ ಬಲಗಣ್ಣಿನಂತಿದ್ದ ಯೂರೋಪುಖಂಡವೆಲ್ಲ ನನ್ನ ಗರ್ಭದಲ್ಲಿರುವ ಕಬ್ಬಿಣವನ್ನೆಲ್ಲ ತೆಗೆದು ಕಾಯಿಸಿ ಶಸ್ತ್ರಾಸ್ತ್ರಗಳನ್ನು ಏರ್ಪಡಿಸುವ ಕುಲುಮೆಯಾಗಿ ಬಿಟ್ಟಿದೆಯಲ್ಲ! ಸಮುದ್ರದ ನೀರನ್ನೆಲ್ಲ ಗೆಜ್ಜೆಗುದಿಗೇರಿಸಿ ಆವಿಯನ್ನಾಗಿಸುವ ಕೊಪ್ಪರಿಗೆಯಾಗಿದೆಯಲ್ಲ! ಮದ್ದುಗುಂಡುಗಳನ್ನು ರಾಶಿಹಾಕಿದ ಮಹಾಪರ್ವತಗಳ ಶ್ರೇಣಿಯಾಗಿಬಿಟ್ಟಿತಲ್ಲ! ವಿಷದ ಗಾಳಿಯನ್ನು ಹೊರಗೆಡಹುವ ನಾಗಲೋಕವಾಗಿಬಿಟ್ಟಿತಲ್ಲ! ಮುನ್ನೀರಿನ ಮೇಲೆ ಮುನಿದು ಮುಂಬರಿದು ಕಂಡಕಂಡವರನ್ನು ಕಾಳಗಕ್ಕೆಂದು ಕಾಲ್ಕೆರೆದು ಕಚ್ಚಾಟಕ್ಕಿಡುವ ಕೀಳ್ಪಡೆಗಳನ್ನು ತುಂಬಿದ ಜಹಜುಗಳ ಜಾಲವಾಗಿಬಿಟ್ಟಿತಲ್ಲ! ಸಿಕ್ಕ ಕಡೆ ಸಿಟ್ಟಿನ ಸಿಡಿಮದ್ದುಗಳನ್ನು ಸಾಗಿಸುವ ಆಕಾಶಯಾನಗಳ ಆಗರವಾಗಿಬಿಟ್ಟಿತಲ್ಲ! ಹೆಸರು ಮಾತ್ರಕ್ಕೆ ಕ್ರಿಸ್ತಭಕ್ತರಾಗಿ ನಡತೆಯಲ್ಲಿ ಹಿಂಸಾದೇವಿಯ ಕಾಲುಹಿಸುಕುತ್ತಿರುವರಲ್ಲ! ಅಯ್ಯೋ! ಇನ್ನೇನು ಗತಿ!

"ಅಯ್ಯೋ! ನನ್ನ ಎಡಗಣ್ಣಿನಂತಿದ್ದ ಅಮೇರಿಕದ ಪಾಡನ್ನು ಏನು ಹೇಳಲಿ! ಸ್ವಾತಂತ್ರ್ಯಕ್ಕೆಂದು ಬಂದು ಸೇರಿದ ಈ ನನ್ನ ಮಕ್ಕಳು ಯಂತ್ರದಾಸ್ಯಕ್ಕೆ ಕಟ್ಟುಬಿದ್ದಾಗಿನಿಂದ ಇವರ ಆಸೆಗೆ ಅಡಿಮುಡಿಯಿಲ್ಲದಂತಾಗಿಬಿಟ್ಟಿದೆಯಲ್ಲ! ಮೊನ್ನೆತಾನೆ ಮಹಾಯುದ್ಧವನ್ನು ಮಧ್ಯಸ್ಥರಾಗಿ ನಿಲ್ಲಿಸಿದೆವೆಂದು ಹೆಮ್ಮೆಪಡುತ್ತಿರುವ ಈ ಮರುಳರು ಯೂರೋಪಿನವರ ಯುದ್ಧೋದ್ಯೋಗದ ಹಾಡುಗಳಿಗೇ ತಾಳಹಾಕಿಕೊಂಡು ಕುಣಿಯುವದಕ್ಕೆಂದು ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುತ್ತಿರುವರಲ್ಲ! ಅಯ್ಯೋ! ಹಗಲುಗುರುಡರೇ! ನಿಮಗಿನ್ನೇನು ಗತಿ!

"ಈ ನಡುವೆ ಇರುವ ಏಷಿಯಖಂಡದ ಅವಸ್ಥೆಯನ್ನು ಯಾರಿಗೆ ಅರಿಕೆಮಾಡಲಿ! ಇಲ್ಲಿ ಶಾಂತಿಸಾಗರದಲ್ಲಿದ್ದ ಜಪಾನಿನ ಜನರು ಕೂಡ ಪಶ್ಚಿಮದ ನಾಗರಿಕತೆಯ ಸುಳಿಗಾಳಿಯೊಳಗೆ ಸಿಕ್ಕಿ ಅನರ್ಥಕರವಾದ ಅರ್ಥಾರ್ಜನೆಯೇ ಪರಮಪುರುಷಾರ್ಥವೆಂದು ನಿಶ್ಚಯಿಸಿಬಿಟ್ಟರಲ್ಲ! ಬುದ್ಧಭಗವಂತನ ಬೋಧೆಗಳನ್ನು ಮೂಲೆಗೊತ್ತರಿಸಿ ನೆರೆಯ ಚೀಣವನ್ನು ಛಿನ್ನಾಭಿನ್ನವಾಗಿ ಮಾಡುವದಕ್ಕೆ ಉಜ್ಜುಗಿಸಿರುತ್ತಾರಲ್ಲ! ಹಾದಿಯಲ್ಲಿ ಹೋಗುತ್ತಿದ್ದ ಹೆಮ್ಮಾರಿಯನ್ನು ಮನೆಯೊಳಕ್ಕೆ ಬಂದು ಹೋಗೆಂದು ಮನ್ನಣೆಯಿಂದ ಕರೆಯುವ ಮಹಾಮೂರ್ಖರಂತೆ ಪಡುವಣದಿಕ್ಕಿನ ಮಾಯಾಯೋಧರಿಗೆ ಚೀನಾದೇಶವೇ ರಂಗಸ್ಥಳವಾಗಲೆಂಬ ಮಂಗಲಾಶಾಸನವನ್ನು ಮಾಡುವದಕ್ಕೆ ಮೊದಲುಮಾಡಿರುವರಲ್ಲ! ಅಯ್ಯೋ! ಇವರಿಗೇನು ಗತಿ!

"ರಷ್ಯದವರ ಗತಿಯನ್ನಂತೂ ಹೇಳುವಂತೆಯೇ ಇಲ್ಲ. ನಿರಂಕುಶಪ್ರಭುಗಳೂ ಅವರಿಗೆ ನೆರವಾಗಿದ್ದ ಧರ್ಮಗುರುಗಳೂ ನೆಲಮಟ್ಟವಾಗಿ ಹೇಳುವದಕ್ಕೆ ಹೆಸರಿಲ್ಲದಂತಾಗಬೇಕೆಂಬ ಸತ್ಸಂಕಲ್ಪದಿಂದ 'ಧರ್ಮ', 'ದೇವರು' ಎಂಬ ಸೊಲ್ಲೇ ಇಲ್ಲದಂತೆ ಐದು ವರ್ಷಗಳಲ್ಲಿ ಆ ಸಂಗಡದವರನ್ನೆಲ್ಲ ಸದೆಬಡಿದು ನಿತ್ಯಶಾಂತಿಯನ್ನು ಪಡೆಯುವದಕ್ಕೆಂದು ಸೊಂಟಕಟ್ಟಿರುವರು! ನಿರಂಕುಶವರ್ತನೆಯನ್ನು ಕಿತ್ತುಹಾಕುವದಕ್ಕೂ ಒಂದು ನಿರಂಕುಶವರ್ತನೆ! ಯುದ್ಧವನ್ನು ಕಡೆಗಾಣಿಸುವ ಕ್ಕೊಂದು ಯುದ್ಧವನ್ನು ಹೂಡುವವರ ನಾಟಕದ ಗಿನ ಒಂದಂಕವೇ ಇದಲ್ಲವೇ! ಮಕ್ಕಳಿರ, ಇ ನಿಮಗೆ ಸುಖವಾಗಿದ್ದರೆ ಸ್ವಸ್ತ್ಯಸ್ತು!

"ಇನ್ನು ಭರತಖಂಡದಿಂದ ನನಗಾಗಿರುವ ದು ಡದ ಭಾರವನ್ನು ನಾನು ಹೇಗೆ ಹೊರಲಿ! ಇಲ್ಲಿ ಧರ್ಮಪ್ರಿಯರಾದ ಭೂಸುರರು ಎಲ್ಲಿಯೋ ಅವಿತುಕೊ ಡಿರುವರು; ವೀರರಾದ ಕ್ಷತ್ರಿಯಮಹಾರಾಜರು ಮ ಯವಾದರು; ದೇಶದ ಸಂಪತ್ತಿಗೂ ಗೋಧನಕ್ಕೂ ಆಸರೆಯಾಗಿದ್ದ ವೈಶ್ಯಶಿರೋಮಣಿಗಳು ಕಂಡವರ ಯಲ್ಲಿ ವ್ಯಾಪಾರವನ್ನು ಕೊಟ್ಟು ಕಣ್ಮರೆಯಾದರು ತ್ರೈವರ್ಣಿಕರೇ ಇಲ್ಲದ ಮೇಲೆ ಇನ್ನು ಶೂದ್ರ ಬಂತು? ಹರಿ! ಹರಿ! ಹಿಮಾಲಯದಿಂದ ಕನ್ಯಾ ಮಾರಿಯ ವರೆಗೆ ಎಲ್ಲೆಲ್ಲಿಯೂ ಅಸ್ಪೃಶ್ಯರೇ ಆದರ ನಾನು ಹೆಚ್ಚು, ತಾನು ಹೆಚ್ಚೆಂದು ಕಾದಾಡುತ್ತಿರು ರಲ್ಲ! ಕೊರಳುದ್ದಕ್ಕೆ ಹುಗಿಸಿಕೊಂಡು ಮುಗಿಲುದ್ದ ಹಾರುವೆನೆಂಬವರ ಹಾಗೆ ತಾವೆಲ್ಲರೂ ಪತಿತರಾಗಿ ವೆಂಬುದನ್ನರಿಯದೆ ಪತಿತೋದ್ಧಾರವನ್ನು ಮಾಡು ವೆಂದು ಪ್ರತಾಪವನ್ನು ಕೊಚ್ಚಿಕೊಳ್ಳುತ್ತಿರುವರ ಇಲ್ಲಿ ಮುಸಲಮಾನರಿದ್ದಾರೆ, ಶಾಂತಿಯಿಲ್ಲ; ಪಾ ಗಳಿದ್ದಾರೆ, ಪರಿಶುದ್ಧಿಯಿಲ್ಲ; ಕ್ರಿಶ್ಚಯನ್ನರಿದಾ ಬೌದ್ಧರಿದ್ದಾರೆ, ಅನ್ಯೋನ್ಯಮೈತ್ರಿಯಿಲ್ಲ. ಅಯ್ಯೋ ಯಾವ ಮತವು ಇಲ್ಲಿಗೆ ಬಂದರೂ ಮತದ ತತ್ತ್ವವ ಮಾತ್ರ ಈ ನನ್ನ ಮಕ್ಕಳು ಅನುಸರಿಸರಲ್ಲ! ಮ ಭೇದವನ್ನೇ ಬಡಿದಾಟಕ್ಕೆ ಮೂಲವಾಗಿ ಮಾಡಿಕೊ ರುವರಲ್ಲ! ಅಯ್ಯೋ! ಈ ಸಂಕಟವನ್ನು ನಾನು ಗೆತಾನೆ ತಡೆದುಕೊಳ್ಳಲಿ! ಯಾರಿಗೆ ಮೊರೆಯಿಡಲಿ!

"ಭಗವಂತನೆ, ಕರುಣಾಮಯನೆ, ಸರ್ವಜ್ಞ ಸರ್ವಶಕ್ತನೆ! ನಿನ್ನನ್ನು ಮರೆಹೊಕ್ಕಿರುವೆನು. ಹಿ ನೀನು ಭೂಭಾರವನ್ನು ಕಳೆದದ್ದು ಹೆಚ್ಚಲ್ಲ; ಅ ನೀನು ಮಾಯಾವಿಗಳಾದ ರಕ್ಕಸರನ್ನು ಸುದ ಚಕ್ರದಿಂದ ಒಕ್ಕಲಿಕ್ಕಿದ್ದೇನೂ ಅತಿಶಯವಲ್ಲ. ಇಗೋ ಇಂದು ವೇದಗಳು ಹೋದವು! ವೇದಾಂತವು ಕೋರರನ್ನು ಸೇರಿತು! ಜ್ಞಾನವು ಮೌನವಾಯಿ ನಿನ್ನ ಗೀತೆಯು ಬರಿಯ ಮಾತಾಯಿತು! ಇದಿ ಸಮಯ, ನಿನ್ನ ಅವತಾರಕ್ಕೆ! ವರ್ಣಾಶ್ರಮಗ ಮಣ್ಣುಪಾಲಾಗಿವೆ! ಧರ್ಮವು ಹೆಮ್ಮೆಯಾಗಿ ಮೋಕ್ಷವು ಶಿಕ್ಷೆಯಾಗಿದೆ! ಅರ್ಥಕಾಮಗಳು ಅ ಳುತ್ತಿವೆ! ಪರಮೇಶ್ವರನೇ! ನಿನ್ನ ಈಶ್ವರತ್ವದಲ್ಲಿ ರಿಗೆ ಸಂದೇಹವಾಗತೊಡಗಿದೆ! ಪ್ರತಿಯೊಬ್ಬನೂ ನೇ ಶ್ರೀಧರನೆಂದೂ ಮಾಧವನೆಂದೂ ಹೇಳಿಕೊಳ್ಳು ಲಿದ್ದಾನೆ! ಅಧರ್ಮವು ಅಟ್ಟಕ್ಕೇರಿದೆ! ಕಾಮಕ್ರೋ ಲೋಭಗಳು ತಾಂಡವವಾಡುತ್ತಿವೆ! ನಾನೀ ದುಃ ಗುರುಭಾರವನ್ನು ತಾಳಲಾರೆನು! ರಕ್ಷಿಸು, ರಕ್ಷಿಸು

[ಅಧ್ಯಾತ್ಮಪ್ರಕಾಶ.]

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೧೯—೧೧—೧೯೩೩ ಪೂರ ೫೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾ ೩೧ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೫೦ ರೂ. ಮಕ್ಕ ಅರ್ಧ ಚಾರ್ಜ. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವ

ಸದರಿ ಕಂಪನಿಯು ಎಂಜಿನ್ ರೆಂಟಿಗಳಿಂದ ಪಡಜಮೀನುಗಳು ಕಿರ್ದೀ ಮಾಡಿಕೊಡಲ್ಪಡುವ ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂ ಕಂಪನಿಗೆ ತಿಳಿಸತಕ್ಕದ್ದು.

[3]

ಜೆ. ಎ. ಶಿರೂರ,

ತಾ|| ೧—೬—೧೯೩೩.

ಮ್ಯಾನೇಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬ

ಸ್ತ್ರೋಕ್ತ ದಿವ್ಯೌಷಧಗಳು.

ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಧಿ ಹೆಸರು	ತೊಲಿ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಂಧೂರ	೧	೪—೦—೦
ಂಧೂರ	೧	೪—೦—೦
ಂಧೂರ	೧	೪—೦—೦
ವಂಗ	೧	೩—೦—೦
ಗ	೧	೧—೦—೦
ಭಸ್ಮಗಳು.		
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಪ್ರಭಸ್ಮ	೧	೦—೮—೦
ಭಸ್ಮ	೧	೦-೧೨—೦
ಸ್ಮ	೧	೦—೮—೦
ಸ್ಮ	೧	೦—೮—೦
ಳಭಸ್ಮ	೧	೦—೮—೦
ಭಸ್ಮ	೧	೦—೮—೦
ಸ್ಮ	೧	೦—೮—೦
ರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦-೧೨—೦
ಭಸ್ಮ	೧	೩—೦—೦
ತ್ರಭಸ್ಮ	೧	೪೦—೦—೦
ಲಭಸ್ಮ	೧	೦—೮—೦
ಸ್ಮ	೧	೦—೪—೦
ಸ್ಮ	೧	೦—೪—೦
ನ ಭಸ್ಮ	೧	೦—೮—೦
ಗದ ಕೋಡಿನ ಭಸ್ಮ	೧	೦—೮—೦
ಂತಿಹರತಾಲಭಸ್ಮ	೧	೦—೮—೦
ರ (೧ನೇ ನಂಬರ್)	೧	೫೦—೦—೦
ರ (೨ನೇ ನಂಬರ್)	೧	೪೦—೦—೦
ಕ ಸೂರ್ಯಪುಟಿ	೧	೧—೦—೦
ತ ಅಗ್ನಿಪುಟಿ	೧	೦—೮—೦

ಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ತು, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಕಳುಹಿಸುವೆವು.

ಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ದೇಶೀಪೇಟಾಮಾರ್ಟ್

ಲ್ಲಿ ತಯಾರಾಗುವ ದೇಶಿಮೆಯ ಪೇಟಾಗಳು ತ್ರಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ನ್ನು ಚತುರರಾದ ನೇಯ್ಗೆಯವರಿಂದ ಮನೋ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ತ್ತು ನಯವಾಗಿಯೂ ಇರುವದರಿಂದ ತೊಳೆ ಬಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣೆ ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ತರಿಸಿಕೊಂಡು ಇವುಗಳ ಅನುಭವವನ್ನು ಕೆಂದು ಕೋರುತ್ತೇವೆ.

ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇವರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಲಿಜಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ಎಲ್ಲಾ ಸಾರಸತ್ವಗಳಲ್ಲಿ ರಕಂ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಇತರ ಮದ್ದುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಮಲೇರಿಯಾನ ಕಂಪೆನಿ,

(ಹಂಪನಕಟ್ಟೆ), 21, ಮಂಗಳೂರು. [43]

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ಸೇವಕ, ಚರ್ಮ ರೋಗಗಳ್ನೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗಗಳಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಶ್ವಾಸಕೋಶಗಳ ರೋಗಕ್ಕೆ ಕಂಪೌಂಡ್ ಸಿರಪು ಫೋಸ್ಪರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ '**ಕಂಪೌಂಡು ಸಿರಪು ಫೋಸ್ಪರ**' ತರಿಸಿ ಕುಡಿಯಿರಿ.

8 ಔನ್ಸಿಗೆ ರೂ. 3-8-0

SREE SITHARAGHAVA VAIDYASALA

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ಪದಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಪ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಯಾಮವನ್ನು ಮಾಡಲವಕಾಶವಿಲ್ಲದೆ ಕುಳಿತಲ್ಲೇ ಕುಳಿತಿರಬೇಕಾದವರಿಗೂ, ಸ್ತ್ರೀಪುರುಷರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[24] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತವಿಮರ್ಶಾ	....	೨ ಆಣೆ
ಶಿವಶಕ್ತಿವಿಲಾಸ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	....	೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	....	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೬ ಆಣೆ

पंडित श्रीकाशीनाथशास्त्री यांचें भाषण (मराठी)	....	೮ ಆ
Speeches by Pandit Shri Kashinatha Shastri (*English*)		12 A
ವೇದೋಕ್ತಶಿವಪೂಜಾವಿಧಿ	....	೧೦
ವೀರಶೈವರತ್ನ	....	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨
ಸಚಿತ್ರ ರೇಣುಕವಿಜಯ	....	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧
ಲಿಂಗೋತ್ಪತ್ತಿ ಲಾಕೆಟ್ಸ್	....	೨
ಕೇನೋಪನಿಷತ್ (ವೀರಶೈವಭಾಷ್ಯ)	....	೧
ಈಶಾವಾಸ್ಯೋಪನಿಷತ್ (ಭಾಷ್ಯ)	....	೧
ವೀರಶೈವಸಿದ್ಧಾಂತಸುಧಾಕರ	....	೨
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	....	೧
लिंगधारणचंद्रिका (संस्कृत)	....	३
महानारायणोपनिषत् (वीरशैवभाष्य-संस्कृत)	....	१
वीरशैवेंदुशेखर (संस्कृत)	....	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮನೋಹರವಾದ ಫೋಟೋಗಳು.

		ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ		೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	....	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	....	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	....	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ		೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	....	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	....	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	....	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	....	೦—೦—೯
ದಟ್ಟಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	....	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ

(Registered Trade Mark)

ಗಳನ್ನು ಕೊಟ್ಟಿ
ರು. ಪ್ರಸಿದ್ಧವಾ
ನಶ್ಯದ ಪುಡಿಯ
ಸ್ವಸ್ಥವಾಗುವ
ಧಿಗಳು ಯಾವ
ರೆ:—ಪಿನಸಿ,
ತಲೆನೋವು, ತ
ಲ್ಲಿನ ರೋಗಗ
ಕಣ್ಣುಗಳಲ್ಲಿ ಉ
ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮು
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ
ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ
ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರು
ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ
ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ
ಪರಿಮಳವಾಗುವುದು. ಇದನ್ನು ಅನೇಕ ಪ್ರ
ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪ
ಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾ
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೦

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[25] ಪೋ. ಬಾ. ೫೧೦, ಮದರ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

EGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಜುಲೈ ೧೯೩೩ [ಸಂಚಿಕೆ ೧೦

ರೇಣುಕವಿಜಯಪುರಾಣಂ.

ಶ್ರಾವಣಮಾಸವು ಸಮೀಪಿಸಿತು! ಪ್ರತಿಯೊಂದು ಗ್ರಾಮದಲ್ಲಿಯೂ ಈ ಮಹಾಪುರಾಣವನ್ನು ಕೇಳಿ ಧನ್ಯರಾಗಬೇಕು!

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು
ರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ
ರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು
ಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ
ರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ.
ರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ
ೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ
ರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಯಜಮಾನ್ ಅಂಡ್ ಸನ್ಸ್
ರಬ್ಬರ್
ಮೊಹರು
ಸ್ಟ್ಯಾಂಪ್

ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ರ್ಸ್ ಬೋರ್ಡು, ರೆಪ್ರೆಜೆಂಟೇಟಿವ್ ಮತ್ತು
ಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ
ಮತ್ತು ಫೋಟೋ ಬ್ಲಾಕುಗಳನ್ನು ತಯಾರು
ತ್ತೇವೆ. [28]

ತ್ತಾ, ಪೌರಸಭೆಯ ಲೈಟಿಂಗ್ ಇನ್ಸ್‌ಪೆಕ್ಟರಾದ
ಸ್. ಸಿ. ರಾಯ್ ಚೌಧುರಿಯವರು ಒಂದು
ಎಲೆಕ್ಟ್ರಿಕ್ ಯಂತ್ರವನ್ನು ನಿರ್ಮಿಸಿರುವರು.
ಂತ್ರದ ಸಹಾಯದಿಂದ ರಸ್ತೆಯಲ್ಲಿ ಹಾಕಿರುವ
ಕ್ ದೀಪಗಳು ನಿಯಮಿತಕಾಲಕ್ಕೆ ತಾವಾಗಿ
ಂಡು ನಿಯಮಿತಕಾಲಕ್ಕೆ ಆರಿಹೋಗುವವಂತೆ!

ಸ್ವೀಕಾರ

ಚಿತ್ರದುರ್ಗ ಡಿ|| ಯಳಗೋಡು ನಿವಾಸಿಗಳಾದ ಮ|| ರಾ|| ರಾ|| ಸಾಹುಕಾರ್ ದುಮ್ಮಿ ತಿಪ್ಪೇರುದ್ರಪ್ಪನವರ ಜ್ಯೇಷ್ಠಪುತ್ರಿ ಚಿ|| ಸೌ|| ಸರ್ವಮಂಗಳಮ್ಮನನ್ನು ದಾವಣಗೆರೆ ಮ|| ರಾ|| ಮಾಗಾನಹಳ್ಳಿ ಚನ್ನವೀರಪ್ಪನವರ ಪುತ್ರ ಚಿ|| ರಾ|| ವೀರಬಸಪ್ಪನಿಗೂ, ಸದರಿ ಮ|| ರಾ|| ದುಮ್ಮಿತಿಪ್ಪೇರುದ್ರಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ಮ|| ರಾ|| ಮಾಗಾನಹಳ್ಳಿ ಷಡಕ್ಷರಪ್ಪನವರ ಪುತ್ರ ಚಿ|| ರಾ|| ಷಣ್ಮುಖಪ್ಪನಿಗೂ ಕೊಟ್ಟು ಯಳಗೋಡಿನಲ್ಲಿ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ದಾವಣಗೆರೆಯಲ್ಲಿರುವ ಶ್ರೀ ಮಹೇಶ್ವರಸ್ವಾಮಿಗೆ ಒಂದು ತಾಮ್ರದ ಭಾಂಡೆಯು ಸಮರ್ಪಿಸಲ್ಪಟ್ಟಿತು. ಇದೇ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 4 ರೂ. ಗಳು ವೇ|| ಹಿರೇಮಠದ ಷಡಕ್ಷರಯ್ಯನವರ ದ್ವಾರಾ ತಲ್ಪಿರುತ್ತವೆ.

ಅನಂತಪುರ ಜಿಲ್ಲಾ ಮಡಕಶಿರಾ ತಾ|| ಅಮರಾಪುರದಲ್ಲಿರುವ ಮ|| ರಾ|| ವೀರಭದ್ರಪ್ಪನವರ ಪುತ್ರ ಚಿ|| ವೀರಣ್ಣನಿಗೆ ಮಧುಗಿರಿ ತಾ|| ಜಕ್ಕೇನಹಳ್ಳಿಯಲ್ಲಿರುವ ಮ|| ರಾ|| ಬಾಳಪ್ಪನವ ಪುತ್ರಿ ಚಿ|| ಸೌ|| ಪುಟ್ಟಮ್ಮನನ್ನು ಕೊಟ್ಟು ನಿಶ್ಚಯಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 1 ರೂ. ಮತ್ತು ವಧುವಿನ ಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 2 ರೂ. ಗಳು ಮ|| ರಾ|| ಗೊಂಚಿಕಾರು ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ರಾಣೇಬೆನ್ನೂರಿನಲ್ಲಿರುವ ಮ|| ರಾ|| ಕುಬಸದ ವೀರಪ್ಪನವರ ಪುತ್ರ ಚಿ|| ಮರಿಗಪ್ಪನವರಿಗೆ ನೀಮತಿಯಲ್ಲಿರುವ ಮ|| ರಾ|| ಹರಿಹರದ ಮುರಿಗಪ್ಪನವರ ಪುತ್ರಿ ಚಿ|| ಸೌ|| ಸಿದ್ದಮ್ಮನನ್ನು ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಮ|| ರಾ|| ಹೊಮ್ಮರಡಿ ಸಂಗಪ್ಪನವರ ದ್ವಾರಾ ತಲ್ಪಿರುತ್ತದೆ.

ಶಿಕಾರಿಪುರದ ತಾ|| ಮಾರವಳ್ಳಿ ಗ್ರಾಮದಲ್ಲಿರುವ ಚನ್ನಗಿರಿ ಮಠದ ವೇ|| ಮಲ್ಲಪ್ಪಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ಹಾರನಹಳ್ಳಿ ಉಜ್ಜನಿಮಠದ ವೇ|| ಶಿವಲಿಂಗಪ್ಪಯ್ಯನವರ ಜ್ಯೇಷ್ಠಪುತ್ರ ಚಿ|| ಸ|| ರುದ್ರಾರಾಧ್ಯನಿಗೂ, ಶಿರಾಳಕೊಪ್ಪದ ಮಠದ ವೇ|| ತೋಟದಯ್ಯನವರ ಪುತ್ರಿ ಚಿ|| ಸೌ|| ಬಸವಮ್ಮನನ್ನು ಸದರಿ ಶಿವಲಿಂಗಪ್ಪಯ್ಯನವರ ದ್ವಿತೀಯ ಪುತ್ರ ಚಿ|| ಸೌ|| ಗುರುಬಸವಾರಾಧ್ಯನಿಗೂ, ಕಾಗಿನೆಲ್ಲಿಯಲ್ಲಿರುವ ಮಠದ ವೇ|| ಸಿದ್ಧಲಿಂಗಯ್ಯನವರ ಪುತ್ರಿ ಚಿ|| ಸೌ|| ಸಿದ್ದಮ್ಮನನ್ನು ಮಾರವಳ್ಳಿಯಲ್ಲಿರುವ ಚನ್ನಗಿರಿ ಮಠದ ವೇ|| ಮಲ್ಲಪ್ಪಯ್ಯನವರ ಪುತ್ರ ಚಿ|| ಸ|| ಸ್ಕೂಲ್‌ಮಾಸ್ಟರ್ ಎಂ. ವೀರಾರಾಧ್ಯನಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 3 ರೂ. ಗಳು ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಶ್ರೀಮದುಜ್ಜಯಿನೀ ಮಠದಲ್ಲಿ ನಡೆದ ಶ್ರೀ ಜಗದ್ಗುರು ಪಂಚಾಚಾರ್ಯಭಜನಾಸಮಯದಲ್ಲಿ ಹುಲಿಗೇರಿ ಜವಳಿ ಮ|| ರಾ|| ಗುರುಬಸವಪ್ಪನವರ ಪುತ್ರ ಹಾಲಪ್ಪನವರ ಹೆಚ್ಚು ಬೆಲೆಯುಳ್ಳ ವಜ್ರದುಂಗುರವು ಕಳೆದುಹೋಗಿದ್ದು ಗುರುಕೃಪೆಯಿಂದ ದೊರೆಕಿದುದಕ್ಕಾಗಿ ಸದರಿ ಹಾಲಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ದೆಹಲಿಯ ಸುತ್ತಮುತ್ತ ಪ್ರಾಂತದಲ್ಲಿ ಮಳೆಯ ದೆಸೆಯಿಂದ ಬಹಳ ಅನಾಹುತವಾಗಿರುವದು. ಅನುರೋಟಿಲ್ಲಿಗೆ ಸೇರಿದ 10 ಗ್ರಾಮಗಳೂ, ಜೆಸಿಯಾಬಾದಿನ ಸಮೀಪದಲ್ಲಿದ್ದ ದೇಲಪುರವೆಂಬ ಗ್ರಾಮವೂ ಸಂಪೂರ್ಣವಾಗಿ ಕೊಚ್ಚಿಹೋಗಿರುವವು.

ಕೆಲವು ದಿನಗಳ ಹಿಂದೆ ಕೆಲವುಜನ ಯಾತ್ರಿಕರು ಬದರೀನಾಥಕ್ಕೆ ಪ್ರಯಾಣಮಾಡುತ್ತಿರಲು ದಾರಿಯಲ್ಲಿ ವಿಶೇಷ ಮಳೆ ಮತ್ತು ಗಾಳಿಯು ಪ್ರಾಪ್ತವಾಗಲು, ಅವರು ಒಂದು ಬಂಡೆಯ ಮರೆಯಲ್ಲಿ ನಿಂತುಕೊಂಡರು. ಅಷ್ಟರಲ್ಲಿ ಒಂದು ದೊಡ್ಡ ಮಂಜಿನಗಡ್ಡೆಯು ಅವರ ಮೇಲೆ ಉರುಳಿ ಬಿದ್ದು ಎಲ್ಲರೂ ಮೃತಪಟ್ಟರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಸನಾತನ ಧರ್ಮಬೋಧಕರ ಆಗಮನ,

ಹಿರೇಬಂಡಿ.

ಸಮಾಜಬಂಧುಗಳೇ, ರಾಯಚೂರು ಜಿಲ್ಲಾ ಕುಷ್ಟಗಿ ತಾಲೂಕ ಪೈಕಿ ಹಿರೇಬಂಡಿಗ್ರಾಮಕ್ಕೆ ಸಮಾಜೋದ್ಧಾರಕ ಷ|| ಬ್ರ|| ಶ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಮಿತಿ ರವಿವಾರದೊಡನೆ ದಯಮಾಡಿಸಿ ತಾ|| 19-6-33 ನೆಯ ದಿವಸ ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ನೋಟೀಸ್ ಹಚ್ಚಿದ ಪ್ರಕಾರ ಸಭೆಗೆ ಸ್ವಮತ ಪರಮತೀಯ ಸ್ತ್ರೀಪುರುಷರು ಬಂದಿದ್ದರು. ಅಧ್ಯಕ್ಷರಾದ ಮಹಾಸ್ವಾಮಿಗಳು ಜಗನ್ನಿಯಾಮಕನಾದ ಪರಮಾತ್ಮನು ಜಗತ್ತಿನಲ್ಲಿ ಅನೇಕ ಪ್ರಾಣಿಗಳನ್ನು ಸೃಷ್ಟಿ ಮಾಡಿರುತ್ತಾನೆ. ಹುಲಿ, ಸಿಂಹ, ಕಾಡಾನೆ ಮೊದಲಾದ ಕ್ರೂರ ಪ್ರಾಣಿಗಳು ಕ್ರಿಮಿಕೀಟ ಪತಂಗಾದಿಗಳೂ ಸಹ ಈ ಸೃಷ್ಟಿಯಲ್ಲಿ ಸೇರಿವೆ. 'ಜಂತೂನಾಂ ನರಜನ್ಮ ದುರ್ಲಭಂ' ಎಂಬಂತೆ ಮನುಷ್ಯಜನ್ಮ ದೊರೆಯುವದು ದುರ್ಲಭವೇ ಸರಿ. ಹಿಂದಿನ ಜನ್ಮದಲ್ಲಿ ದಾನಧರ್ಮಾದಿಗಳನ್ನೂ ಜಪತಪಾದಿಗಳನ್ನೂ ಮಾಡಿದ ಪುಣ್ಯಪ್ರಭಾವದಿಂದಲೇ ಈ ಮನುಷ್ಯಜನ್ಮವು ಪ್ರಾಪ್ತವಾಗಿರುವದು. ಇಂಥ ಜನ್ಮವು ಮೋಕ್ಷವನ್ನು ಹೊಂದದೆ ಯಮಲೋಕವನ್ನು ಹೊಂದಿದರೆ ನಿರರ್ಥಕವಾಗುವುದೆಂಬ ವಿಷಯವನ್ನು ಸರ್ವರಿಗೂ ತಿಳಿಯುವಂತೆ ಸ್ವಾರಸ್ಯವಾಗಿ ಬೋಧಮಾಡಿದ್ದಲ್ಲದೆ ಸನಾತನಧರ್ಮ ಅಂದರೆ ಇವತ್ತಿನ ಧರ್ಮವಲ್ಲ. ಅನಾದಿಸಂಸಿದ್ಧವಾದ ಧರ್ಮ. ಇದು ಧರ್ಮಗುರುಗಳಿಂದಲೇ ಸಿದ್ಧಿಸುತ್ತದೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. 'ನ ವೀರಶೈವಸದೃಶಂ ಮತಮಸ್ತಿ ಜಗತ್ರಯೇ' ಎಂಬೀ ವಾಕ್ಯವನ್ನೇ ಮಾದರಿಯನ್ನಾಗಿಟ್ಟುಕೊಂಡು ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವಮತವನ್ನು ಸ್ಥಾಪಿಸಿ, ಈ ಮತಕ್ಕೆ ಇಷ್ಟು ಮಹತ್ವಕೊಟ್ಟಪ್ರಯುಕ್ತ ಅನೇಕ ಋಷಿಪುಂಗವರು, ರಾಜಾಧಿರಾಜರು ಸಹ ಈ ಧರ್ಮದಲ್ಲಿ ಕೇವಲ ಭಕ್ತಿಯನ್ನು ವಹಿಸಿ ಮಹಾಗುರುಗಳಿಂದ ಶಿವದೀಕ್ಷೆಯಂ ಪಡೆದು ಪುಣ್ಯವನ್ನುಂಟುಮಾಡುವ ಲಿಂಗಮೂರ್ತಿಯನ್ನು ಸದಾ ದೇಹದಲ್ಲಿ ಧರಿಸಿಕೊಂಡು ತ್ರಿಕಾಲದಲ್ಲಿ ಪೂಜಿಸಿ ಕೃತಾರ್ಥರಾಗಿರುವರು. ಈ ಮಹನೀಯರಂತೆ ನೀವಾದರೂ ಕೂಡ 'ಆಚಾರಃ ಪ್ರಥಮೋ ಧರ್ಮಃ' ಎಂಬೀ ವಾಕ್ಯವನ್ನು ಮರೆಯದೆ ಸ್ತ್ರೀ ಪುರುಷರು ಸದಾಚಾರನಿಷ್ಠಾಧುರೀಣರಾಗಿ ಅಷ್ಟಾವರಣಗಳಲ್ಲಿ ಭಕ್ತಿವಹಿಸಿ ಆಣವ, ಮಾಯಾಕಾರ್ಮಿಕಮಲಗಳನ್ನು ಹೋಗಲಾಡಿಸಿ ದೀಕ್ಷಾಸಂಪನ್ನರಾಗಿ ಇಷ್ಟಲಿಂಗವನ್ನು ಸದಾ ದೇಹದಲ್ಲಿ ಧರಿಸಿ ಆ ಲಿಂಗಮೂರ್ತಿಯನ್ನು ತ್ರಿಕಾಲದಲ್ಲಿ ಪೂಜಿಸುವದೇ ವೀರಶೈವ ಮಾನವನ ಕರ್ತವ್ಯವಾಗಿದೆ. ಕೆಲ ಸ್ತ್ರೀಪುರುಷರು ಲಿಂಗದ ಪರಿವಿಲ್ಲದೆ ಹಾಗೆ ಹುಟ್ಟಿದಂತೆ ತಿರುಗುತ್ತಾ ಅನಾಚಾರಕ್ಕೆ ಬಿದ್ದು ಕೇವಲ ದರಿದ್ರರಾಗಿರುವರು. ಆಚಾರವೇ ಒಂದು ಸಂಪತ್ತು, ಅನಾಚಾರವೇ ಒಂದು ವಿಪತ್ತು ಎಂದು ತಿಳಿಯದೆ ಮನಸ್ವಿಯಾಗಿ ನಡೆಯುತ್ತಾರೆ. ಅನಾಚಾರವನ್ನು [illegible] ಮಾಡಿ ಸರ್ವರೂ ಸದಾಚಾರದಿಂದ ನಡೆದು ದೇವತ್ವವನ್ನೂ ಋಷಿತ್ವವನ್ನೂ ಪಡೆಯಬೇಕೆಂದು ಅನೇಕ ಉದಾಹರಣೆಗಳನ್ನು ಕೊಟ್ಟು ತಮ್ಮ ಅಮೃತವಾಣಿಯಿಂದ ಬೋಧಮಾಡಿದರು. ಈ ಮಹಾಸಭೆಗೆ ಹಿರೇಮಠದ ವೇ|| ರಾಚಯ್ಯ ಶಾಸ್ತ್ರಿ, ಶ್ರೀಮಂತ ದೇಸಾಯಿ ಕೆಂಚಬಸಪ್ಪನವರು, ಶ್ರೀಯುತ ವಕೀಲ ಕಳಕನಗೌಡ್ರು, ಪೋ|| ಪಾಟೀಲ ಗೂಳನಗೌಡ್ರು, ಕುಂಕದ ಕಾಡಪ್ಪನವರು ಸಭಾಕಾರ್ಯದಲ್ಲಿ ಮುಂದಾಳುಗಳಾಗಿ ಒಳ್ಳೇ ಕಳಕಳಿಯಿಂದ ಕಾರ್ಯಮಾಡಿ ಧನ್ಯರಾದರು. ಸಮಾಜಬಂಧುಗಳೇ ಚಿಕ್ಕಮಣ್ಣೂರು ಸ್ವಾಮಿಗಳು ಸನಾತನಧರ್ಮದ ವಿಷಯವಾಗಿ ಬೋಧಮಾಡಲಿಕ್ಕೆ ಸರ್ಕೀಟು ಹೊರಡಿಸಿ ಪ್ರತಿಯೊಂದು ಗ್ರಾಮದಲ್ಲಿ ಸಭೆಗಳನ್ನು ಮಾಡುತ್ತ ಸರ್ವಮತೀಯರಿಗೂ ಬೋಧಮಾಡುತ್ತಲಿದ್ದಾರೆ. ಈ ಮಹಾತ್ಮರ ಸರ್ಕೀಟು ಯಾವ ಯಾವ ಗ್ರಾಮಗಳಿಗೆ ದಯಮಾಡಿಸುತ್ತದೆಯೋ ಆ ಗ್ರಾಮದ ಪ್ರಮುಖರು ಸಭೆಮಾಡಿಸಿ ಸರ್ವರಿಗೂ ಬೋಧಮಾಡಿಸಿ ಸ್ವಹಸ್ತ ಪಂಚಪತ್ರಗಳಿಂದ ಸಹಾಯಮಾಡಿ ಕೃತಾರ್ಥರಾಗಬೇಕೆಂದು ತಿಳಿಸುವ,

ಸಂಗನಗೌಡ ಬಸನಗೌಡ್ರು, ಪುರಗಿ.

ಯಡತೊರೆ ಹೊಸಪಟ್ಟಣದ ಬಡಾವಣೆ.

ಶ್ರೀ ಕೃಷ್ಣರಾಜನಗರದ ಅಣೆಕಟ್ಟೆಯಿಂದ ಮುಳುಗಡೆಯಾಗುವ ಹಳೇ ಯಡತೊರೆ ಟೌನಿಗೆ ಬದಲಾಗಿ ಈಗ್ಗೆ 3-4 ವರ್ಷಗಳಿಂದ ಹಳೇ ಟೌನಿಗೆ ಎರಡು ಮೈಲಿದೂರದಲ್ಲಿರುವ ಎತ್ತರವಾದ ಪ್ರದೇಶದಲ್ಲಿ ಹೊಸ ಪಟ್ಟಣವನ್ನು ಕಟ್ಟಲು ಉಪಕ್ರಮವಾಗಿ ಈ ವರಿವಿಗೆ ನಾಲ್ಕು ನೂರು ಮನೆಗಳು ಕಟ್ಟಲ್ಪಟ್ಟು ಇನ್ನೂ ಅನೇಕ ಮನೆಗಳು ಕಟ್ಟಲ್ಪಡುತ್ತಿವೆ. ಇಲ್ಲಿ ಅನೇಕ ಭಾರಿ ಬಂಗಲೆಗಳನ್ನು ಬಹಳ ಅಂದವಾಗಿ ಕಟ್ಟಿರುತ್ತಾರೆ. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಅಭಿಧಾನವನ್ನು ಈ ಹೊಸ ಪಟ್ಟಣಕ್ಕೆ ಇಡಬೇಕೆಂದು ಪುರವಾಸಿಗಳ ಮತ್ತು ಘನ ಸರ್ಕಾರದವರ ಅಭಿಪ್ರಾಯವಿರುವದರಿಂದ ಈವರಿವಿಗೆ ಕಟ್ಟಿರತಕ್ಕ ಮನೆಗಳನ್ನು ಅವರವರ ಶಕ್ತಿಮೀರಿ ಕಟ್ಟಿರುತ್ತಾರೆ. ಮುಂದೆಯೂ ಕಟ್ಟುವವರು ಅದೇ ರೀತಿ ಉತ್ಸಾಹಿಗಳಾಗಿರುತ್ತಾರೆ. ಈ ಹೊಸ ಪಟ್ಟಣದ ಪುರೋಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿಯಿಂದ ಕೆಲಸ ಮಾಡುತ್ತಿರುವ ಮ|| ರಾ|| ಸಾಹುಕಾರ್ ಬಳೆ ಸಿದ್ಧಲಿಂಗಶೆಟ್ಟರವರ ಮೆಹನತ್ತು ತುಂಬಾ ಶ್ಲಾಘನೀಯವಾಗಿರುತ್ತದೆ. ಮ|| ರಾ|| ಸಾಹುಕಾರರು ಈ ಹೊಸ ಪಟ್ಟಣದಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಧರ್ಮಾರ್ಥವಾಗಿ ಇಪ್ಪತ್ತುಸಾವಿರ ರೂಪಾಯಿಗಳಲ್ಲಿ ಬಹಳ ಅಂದವಾಗಿ ಕಟ್ಟಿಸುತ್ತಿರುತ್ತಾರೆ. ಸದರಿ ಕಟ್ಟಡದ ಶಂಕುಸ್ಥಾಪನಾಮಹೋತ್ಸವವು ಈ ಸಾಲಿನ ಫೆಬ್ರವರಿ ತಿಂಗಳಲ್ಲಿ ಶ್ರೀಮದ್ಯುವರಾಜರವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತಷ್ಟೆ. ಈ ನೂತನ ಪುರವನ್ನು ಮಾದರಿ ಪಟ್ಟಣವನ್ನಾಗಿ ಮಾಡಬೇಕೆಂದು ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರಾದ ಸರ್ ಮಿರ್ಜಾರವರ ಸಂಪೂರ್ಣ ಅಭಿಪ್ರಾಯವಿರುವದರಿಂದ ಮ|| ರಾ|| ಸಾಹುಕಾರರು ತುಂಬಾ ಮುತುವರ್ಜಿಯಿಂದ ಪುರೋಭಿವೃದ್ಧಿ ವಿಷಯದಲ್ಲಿ ತಮ್ಮ ತನುಮನಧನವನ್ನು ಧಾರೆಯೆರೆಯುತ್ತಾ ಇರುತ್ತಾರೆ. ಈ ಪಟ್ಟಣದ ಅಭಿವೃದ್ಧಿ ವಿಷಯದಲ್ಲಿ ಸಹಾಯಕರಾದ ಮೈಸೂರು ಸಬ್‌ಡಿವಿಜನ್ ಆಫೀಸರವರ ಮತ್ತು ಈ ಪಟ್ಟಣದ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀಯುತ ಕೆ. ಬಸವರಾಜ ಅರಸರವರ ಮೆಹನತ್ತು ತುಂಬಾ ಪ್ರಶಂಸನೀಯವಾಗಿರುತ್ತದೆ. ಸರ್ ಮಿರ್ಜಾರವರು ಲಂಡನ್ ನಗರದಿಂದ ದಯಮಾಡಿಸಿದ ಕೂಡಲೇ ಈ ಪಟ್ಟಣದ ಮತ್ತು ಹೆರಿಗೆ ಆಸ್ಪತ್ರೆಯ ಪ್ರವೇಶೋತ್ಸವವು ಶ್ರೀಮನ್ಮಹಾರಾಜರವರಿಂದ ನೆರವೇರತಕ್ಕದ್ದಾಗಿರುತ್ತದೆ. ಅಷ್ಟರೊಳಗೆ ಸರ್ಕಾರದವರು ಪೂರ್ಣ ಕೃಪೆಯಿಟ್ಟು ಈ ಹೊಸ ಪಟ್ಟಣಕ್ಕೆ ಬಂದು ಮುನಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ದಯಪಾಲಿಸಿದಲ್ಲಿ ಈ ಟವನ್ ಮಾದರಿ ಪಟ್ಟಣವಾಗುವುದರಲ್ಲಿ ಸಂದೇಹವಿಲ್ಲ. ಈ ಪಟ್ಟಣಕ್ಕೆ ಸದ್ಯದಲ್ಲಿಯೇ ಎಲೆಕ್ಟ್ರಿಕ್ ದೀಪವು ಬರುವುದರಲ್ಲಿದೆ. ಈ ಹೊಸ ಪಟ್ಟಣಕ್ಕೆ ಮಹಾಸ್ವಾಮಿಯವರು ದಯಮಾಡಿಸುವುದರೊಳಗೆ ಪುರೋಭಿವೃದ್ಧಿಗೆ ಅವಶ್ಯಕವಾದ ಡ್ರೈನೇಜು, ರೋಡುಗಳನ್ನು ಸರಿಪಡಿಸುವುದು, ನೀರಿನ ಅನುಕೂಲತೆಯನ್ನು ಹೆಚ್ಚಿಸುವುದು ಮುಂತಾದ ಕಾರ್ಯಗಳು ಘನ ಸರಕಾರದವರಿಂದ ನೆರವೇರತಕ್ಕದ್ದಾಗಿರುತ್ತವೆ. ಪುರವಾಸಿಗಳ ಬೇಡಿಕೆಯನ್ನು ಸಫಲಗೊಳಿಸಿ ಪ್ರಭುಗಳ ಮೆಚ್ಚುಗೆಗೆ ಪಾತ್ರವಾದ ಈ ಕಾರ್ಯಗಳನ್ನು ಘನ ಸರಕಾರದವರು ನೆರವೇರಿಸಬೇಕಾಗಿ ಕೋರುತ್ತೇವೆ.

ಪುರವಾಸಿಗಳು.

ದನಕರುಗಳ ರಕ್ಷಣೆ.

ಈ ತಿಂಗಳ 17 ನೇ ತಾರೀಖಿನಲ್ಲಿ ಬೆಂಗಳೂರಿನಲ್ಲಿ ವೆಟರ್ನರಿ ಮೆಡಿಕಲ್ ಅಸೋಸಿಯೇಷನ್ ಎಂಬ ಪಶುವೈದ್ಯಸಂಘದ 5 ನೆಯ ವಾರ್ಷಿಕಮಹಾಸಭೆಯು ನಡೆಯಿತು. ವ್ಯವಸಾಯದ ಇಲಾಖೆಯ ಡೈರೆಕ್ಟರುಗಳಾದ ಡಾ|| ಕೋಲ್ಮನ್‌ರವರು ಅಗ್ರಾಸನವನ್ನು ವಹಿಸಿದ್ದರು. ಈ ಸಂಸ್ಥಾನದ ವೆಟರ್ನರಿ ಇಲಾಖೆಯ ಡೆಪ್ಯುಟೀಡೈರೆಕ್ಟರ್ ಯಜ್ಞನಾರಾಯಣಯ್ಯರ್‌ರವರೂ ಎಲ್ಲಾ ಇನ್ಸ್‌ಪೆಕ್ಟರುಗಳೂ ದಯಮಾಡಿಸಿದ್ದರು. ಒಂದು ಗ್ರೂಪ್ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಪ್ರೆಸಿಡೆಂಟರವರು ಭಾಷಣವನ್ನು ಮಾಡಿದರು. ವ್ಯವಸಾಯದ ಇಲಾಖೆಯವರು ಶ್ರದ್ಧೆಯಿಂದ ಕೆಲಸ ಮಾಡಿದರೆ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಬೇಕಾದ ಕೆಲಸವೆಲ್ಲಾ ನಡೆಯುವುವು. ಚಿನ್ನ ಬೆಳ್ಳಿ ಮೊದಲಾದುವುಗಳನ್ನು ರೂಢಿಸತಕ್ಕವರು ಮಾಡತಕ್ಕ ಗಣಿಗಳ ಕೆಲಸಕ್ಕಿಂತಲೂ ಈ ಇಲಾಖೆಯವರು ಮಾಡತಕ್ಕ ಕೆಲಸವು ಉತ್ತಮವಾದದ್ದು. ಚಿನ್ನಬೆಳ್ಳಿಯನ್ನು ತಿಂದು ಜೀರ್ಣಿಸುವುದಕ್ಕೆ ಆಗುವುದಿಲ್ಲ. ಈ ಇಲಾಖೆಯವರ ಮೆಹನತ್ತಿನಿಂದ ಅನ್ನವಸ್ತ್ರಗಳೇ ಮೊದಲಾದ ಸಕಲ ಭೋಗ್ಯವಸ್ತುಗಳು ನಿರ್ಮಾಣವಾಗುತ್ತವೆ. ಪ್ಯಾರಿಸ್ ಮೊದಲಾದ ಪಟ್ಟಣಗಳಲ್ಲಿ ಒಂದು ಎಕರೆ ಜಮೀನಿನಲ್ಲಿ ಶಾಸ್ತ್ರೋಕ್ತವಾದ ವ್ಯವಸಾಯದಿಂದ ವರ್ಷಕ್ಕೆ 18 ಸಾವಿರ ರೂಪಾಯಿನ ಬೆಳೆಯನ್ನು ತೆಗೆಯುತ್ತಾರೆ. ಅಮೇರಿಕಾ ಮೊದಲಾದ ಖಂಡಗಳಲ್ಲಿ ಕೃಷಿಗರು, ಪ್ಯಾರಿಸ್ ಮೊದಲಾದ ಯೂರೋಪ್‌ಖಂಡದ ಕೃಷಿಗರನ್ನು ವಿಚಾರಿಸಿರುತ್ತಾರೆ. ಸಕಲ ಪ್ರಾಣಿಗಳಿಂದಲೂ ವಿಸರ್ಜಿಸಲ್ಪಟ್ಟ ಜಲಮಲಗಳನ್ನು ಕೂಡ ಶೇಖರಿಸಿ ಅವುಗಳು ಚಿನ್ನ, ಬೆಳ್ಳಿ ನವರತ್ನಗಳು ಮೊದಲಾದುವುಗಳಿಗಿಂತ ಹೆಚ್ಚು ಬೆಲೆಯುಳ್ಳವುಗಳಾಗುವಂತೆ ಮಾಡುತ್ತಾರೆ. ಜರ್ಮನ್ ಮೊದಲಾದ ದೇಶಗಳಲ್ಲಿ ಪ್ರತಿಯೊಂದು ಮನೆಯಲ್ಲಿಯೂ ವಿಸರ್ಜಿಸಲ್ಪಟ್ಟ ಜಲಮಲಗಳು ಶೇಖರಿಸಲ್ಪಟ್ಟು ಅವುಗಳ ಸಾರವು ವಾಯುಮಂಡಲಕ್ಕೆ ಸೇರದಂತೆ ಮಾಡಿ ಅವುಗಳನ್ನು ಜಮೀನುಗಳಲ್ಲಿ ಹಳ್ಳತೋಡಿ ಮುಚ್ಚಿಟ್ಟು ಪೈರುಗಳಿಗೆ ಉಪಯೋಗಿಸುತ್ತಾರೆ. ಪ್ರತಿನಿಮಿಷದಲ್ಲಿಯೂ, ಸಸ್ಯಾದಿಗಳಲ್ಲಿಯೂ, ಕ್ರಿಮಿಕೀಟಗಳಲ್ಲಿಯೂ, ನಷ್ಟವಾಗತಕ್ಕ ಎಲೆಗಳು, ಶವಗಳು ಮೊದಲಾದುವುಗಳನ್ನೆಲ್ಲಾ ಶೇಖರಿಸಿ ಅವುಗಳು ಕೂಡ ಲೋಕೋಪಕಾರವಾದ ಗೊಬ್ಬರವಾಗುವಂತೆ ಮಾಡಿಕೊಳ್ಳುವರು. ಸಕಲಕೆಲಸಗಳನ್ನೂ ಪಂಚಭೂತಗಳ ಸಹಾಯದಿಂದಲೂ, ಯಂತ್ರಗಳ ಸಹಾಯದಿಂದಲೂ, ಮಾಡಿಸಿ ಕೋಟ್ಯಂತರ ಜನಗಳು ಮಾಡತಕ್ಕ ಕೆಲಸಗಳನ್ನು ಜನಗಳಿಗೂ, ದನಕರುಗಳಿಗೂ, ಸ್ವಲ್ಪವೂ ಕಷ್ಟವಿಲ್ಲದಂತೆ ಮಾಡಿಸುವರು. ನಾನಾವಿಧವಾದ ಧಾನ್ಯಗಳನ್ನೂ, ತರಕಾರಿಗಳನ್ನೂ, ಗೆಡ್ಡೆಗೆಣಸುಗಳನ್ನೂ, ಹಣ್ಣು-ಹಂಪಲುಗಳನ್ನೂ, ಹಾಲು, ಮೊಸರು, ಬೆಣ್ಣೆ, ಮೊದಲಾದುವುಗಳನ್ನೂ ದನಗಳಿಗೆ ಪುಷ್ಟಿಕರವಾದ ಮೇವನ್ನೂ ಬೆಳೆಯುವರು. (We can make wealth out of filth) ಎಂಬುದಾಗಿ ಬ್ರಿಟಿಷ್ ಜನಗಳಲ್ಲಿ ಗಾದೆಯು ಇರುವುದು. ಅಮೇಧ್ಯದಿಂದಲೂ ಕೂಡ ಅಷ್ಟೈಶ್ವರ್ಯಗಳನ್ನು ಪಡೆಯುತ್ತೇವೆಂದು ಇದಕ್ಕೆ ಅರ್ಥ. ಈ ವಿಷಯದಲ್ಲಿ ನಾಗರೀಕತೆಯುಳ್ಳ ಕೃಷಿಗರಿಗೂ, ನಮ್ಮ ದೇಶದ ಕೃಷಿಗರಿಗೂ ಇರತಕ್ಕ ವ್ಯತ್ಯಾಸವನ್ನು ನೋಡಿದರೆ ಸಂಕಟವಾಗುತ್ತದೆ. ಚಾನಲ್ ಐಲೆಂಡ್ಸ್ ಎಂಬ ದ್ವೀಪಗಳಲ್ಲಿ ದನಗಳನ್ನು ಸಾಕುತ್ತಾರೆ. ಈ ದ್ವೀಪಗಳಿಗೆ ಜರಸಿ, ಗರ್ನ್ಸಿ, ಅಲ್ಡರನೆ ಮತ್ತು ಸಾರ್ಕ್ ಎಂಬುದಾಗಿ ಹೇಳುವರು. ಈ ದ್ವೀಪದಲ್ಲಿ ಹಸುಗಳು ಆನೆಯ ಮರಿಗಳಂತೆ ಇರುವುವು. ಒಂದೊಂದು ಹಸುವು 18-20 ಸೇರು ಹಾಲನ್ನು ಕೊಡುವುವು. ಕಾನ್‌ಕ್ರೀಟ್ಸ್ ಸಿಮೆಂಟ್‌ನಲ್ಲಿ ಕೊಳಗಳನ್ನು ತೋಡಿ ಹಾಲನ್ನು ತುಂಬಿ ಯಂತ್ರಗಳ ಸಹಾಯದಿಂದ ಅದರಿಂದ ಬೆಣ್ಣೆಯನ್ನು ತೆಗೆದುಕೊಂಡು ಉಳಿದ ಹಾಲಿಗೆ ಗಿರಾಕಿ ಸಿಕ್ಕದಿದ್ದರೆ ಗೊಬ್ಬರಕ್ಕೆ ಹಾಕಿಬಿಡುವರು. ನಮ್ಮ ದೇಶದ ರೈತರನ್ನೂ, ಅವರ ಮನೆ ಹೆಂಗಸರನ್ನೂ ಈ ದ್ವೀಪಗಳನ್ನು ನೋಡಿಕೊಂಡು ಬರುವುದಕ್ಕೆ ಕಳುಹಿಸಿದರೆ ನಮ್ಮ ದೇಶವು ವೃದ್ಧಿಗೆ ಬರುವುದಕ್ಕೆ ಎಷ್ಟೋ ಸಹಾಯವಾಗುವುದು. ಶಾಸ್ತ್ರೋಕ್ತವಾದ ವ್ಯವಸಾಯದಿಂದ ದೇಶದ ಉತ್ಪತ್ತಿಯನ್ನು ಬಹಳವಾಗಿ ಹೆಚ್ಚಿಸಬಹುದು. ಕಸ, ಕಡ್ಡಿ, ಅಮೇಧ್ಯ ಮೊದಲಾದುವುಗಳನ್ನೆಲ್ಲಾ ಚಿನ್ನಕ್ಕಿಂತಲೂ ನವರತ್ನಗಳಿಗಿಂತಲೂ ಹೆಚ್ಚಾದ ಬೆಲೆಯುಳ್ಳವುಗಳಾಗುವಂತೆ ಮಾಡುವುದು ಕಷ್ಟವಲ್ಲ. ಹೀಗೆ ಮಾಡಬೇಕಾದರೆ ಸರಕಾರದವರು ವ್ಯವಸಾಯದ ಇಲಾಖೆಗೆ ವಿಶೇಷ ಪ್ರೋತ್ಸಾಹವನ್ನು ಕೊಡಬೇಕು. ಸಂಪತ್ತನ್ನು ಹೆಚ್ಚಿಸಿ ಅದನ್ನು ಅನುಭವಿಸಬೇಕು. ಭಾರತೀಯರಾದ ನಮ್ಮ ಪ್ರಭುಗಳು ಮತ್ತು ಅಧಿಕಾರಿಗಳು ಈ ರಹಸ್ಯವನ್ನು ಸರಿಯಾಗಿ ತಿಳಿದಿಲ್ಲ. ಈ ಭರತಖಂಡದ ನಿರ್ಭಾಗ್ಯತೆಗೆ ಇದೇ ಮುಖ್ಯಕಾರಣ. ಮೋಟಾರ್ ಕಾರುಗಳನ್ನು ಮಾಡಿ [illegible] ದಿನಕ್ಕೆ 25 ರೂಪಾಯಿಗಳನ್ನು ಕೊಟ್ಟು ಕೆಲಸಗಾರರನ್ನೆಲ್ಲಾ ಕುಬೇರರನ್ನಾಗಿ ಮಾಡಿ ತನ್ನ ಭಾಗಕ್ಕೆ ದಿನಕ್ಕೆ 25 ಲಕ್ಷ ರೂಪಾಯಿಗಳು ಬರುವಂತೆ ಮಾಡಿಕೊಂಡಿರುವ ಫೋರ್ಡಿನ ಕಾರ್ಖಾನೆಯನ್ನು ನೋಡಿಕೊಂಡು ಬರುವುದಕ್ಕೆ ಈ ಭರತಖಂಡದ ಪ್ರಭುಗಳನ್ನೂ, ದಿವಾನರೇ ಮೊದಲಾದ ಅಧಿಕಾರಿಗಳನ್ನು ಕಳುಹಿಸಿದರೆ ನಮ್ಮ ದೇಶಕ್ಕೆ ಎಷ್ಟೋ ಮಂಗಳವಾಗುವುದು. ನಮ್ಮ ಕೃಷಿ, ಕೈಗಾರಿಕೆಗಳು ವೃದ್ಧಿಗೆ ಬರುವುವು. ನಮ್ಮ ಸಂಪತ್ತು ಹೆಚ್ಚುವುದು. ನಮ್ಮ ದಾರಿದ್ರ್ಯವು ತಗ್ಗುವುದು. ಇಂಥಾ ವಿಷಯಗಳನ್ನು ಪ್ರಚಾರಕ್ಕೆ ತರುವುದಕ್ಕೆ ನಾವು ಪರದೇಶಿಯರನ್ನು ತರುತ್ತೇವೆ. ದತ್ತಪುತ್ರನಿಗೆ ಪಿತೃಭಕ್ತಿಯು ಎಷ್ಟುಮಟ್ಟಿಗೆ ಇರುವುದೋ, ಪರದೇಶಿಯರಿಗೆ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂಬ ಅಭಿನಿವೇಶವು ಅದಕ್ಕಿಂತಲೂ ಹೆಚ್ಚಾಗಿರುವುದಿಲ್ಲ. ಪೀಟರ್ ದಿ ಗ್ರೇಟ್ ಎಂಬವನು ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಸಂಚಾರ ಮಾಡಿ ಯಾವ ಯಾವ ದೇಶಗಳಲ್ಲಿ ಯಾವ ಯಾವ ಕೃಷಿ, ಕೈಗಾರಿಕೆಗಳು ವಿಶೇಷ ಫಲದಾಯಕಗಳಾಗಿರುವುವೋ, ಯಾವ ಯಾವ ದೇಶಗಳಲ್ಲಿ ಕೃಷಿ ಕೈಗಾರಿಕೆಯನ್ನು ಮಾಡುವುದರಲ್ಲಿ ಯಾರು ಸಮರ್ಥರೋ ಅವರಿಗೆ ಭಾರೀ ಸಂಬಳಗಳನ್ನು ಕೊಟ್ಟು ತಮ್ಮ ದೇಶಕ್ಕೆ ಕರೆದುಕೊಂಡು ಹೋಗಿ ತಮ್ಮ ಪ್ರಜೆಗಳಿಗೆ ಶಿಕ್ಷಣವನ್ನು ಕೊಡುವಂತೆ ಮಾಡಿ 30-40 ವರ್ಷಗಳೊಳಗಾಗಿ ಅನ್ನವಸ್ತ್ರಗಳಿಗೆ ಇಲ್ಲ ತಾಪತ್ರಯ ಪಡುತ್ತಿದ್ದ ಸಕಲ ಜನಗಳೂ ಉದ್ಯೋಗದಿಂದ ಕುಬೇರರಾಗುವಂತೆ ಮಾಡಿದನು. ಮಹಾತ್ಮನಾದ ಮಿಕೋ ಎಂಬುವ ಪೀಟರಿನ ಮೇಲುಪಂಕ್ತಿಯನ್ನು ಅನುಕರಿಸಿ ಲೋಕಯಾತ್ರೆಯ ನ್ನು ಮಾಡಿ ಕೃಷಿ, ಕೈಗಾರಿಕೆ ವ್ಯಾಪಾರ ಮೊದಲಾದ ಸಕಲ ಗಳಲ್ಲಿಯೂ, ಸಿವಿಲ್, ಮಿಲಿಟರಿ ಇಲಾಖೆಗಳ ವಿಚಾರಗಳಲ್ಲಿ ಯೂ, ಸಂಪದಭಿವೃದ್ಧಿಗೆ ಸಾಧಕವಾದ ಶಾಸ್ತ್ರಗಳ ಪರಿಜ್ಞಾ ಗಳಲ್ಲಿಯೂ ಯಾರು ಅತ್ಯಂತ ಸಮರ್ಥರೋ ಅವರಿಗೆ ದೊ ಸಂಬಳಗಳನ್ನು ಕೊಟ್ಟು ಜಪಾನ್ ದೇಶಕ್ಕೆ ಕರೆದುಕೊಂಡು ಹೋ 50 ವರ್ಷಗಳೊಳಗಾಗಿ ಜಪಾನ್ ದೇಶದ ಸ್ತ್ರೀಪುರುಷರೆಲ್ಲರೂ ಸ ಶಾಸ್ತ್ರಪ್ರವೀಣರಾಗುವಂತೆ ಮಾಡಿದನು. ಇದೇ ರೀತಿಯ ನಮ್ಮ ದೇಶದಲ್ಲಿಯೂ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಜನ ನಿಪುಣರಾಗುವಂತೆ ಮಾಡಿದರೆ ನಮ್ಮ ದೇಶವು ಬಹು ಶೀ ವಾಗಿ ಉನ್ನತಸ್ಥಿತಿಯನ್ನು ಪಡೆಯುವದರಲ್ಲಿ ಸಂದೇಹವಿಲ್ಲ.

ಸತ್ಯವಾ

ಪ್ರಭುಗಳ ಕರ್ತವ್ಯ.

ಅನೇಕ ಪ್ರಭುಗಳು ತಮ್ಮ ಕರ್ತವ್ಯವನ್ನು ತಿಳಿದುಕೊಂ ಧರ್ಮದಿಂದ ನಡೆಯುವುದಿಲ್ಲ. ಅಧಿಕಾರಿಗಳು ಕೂಡ ರೀತಿಯಲ್ಲಿರುವರು. ಇದಕ್ಕೆ ಕಾರಣವೇನೆಂದು ಕೆಲವರು ಕೇ ವರು. ಪ್ರಜೆಗಳ ನಿರಾಸಕ್ತಿಯೇ ಇದಕ್ಕೆ ಮುಖ್ಯಕಾರ ಇವರು ತಮ್ಮ ಜಾತಿಭೇದ, ಮತಭೇದ, ಕೋಮಿನಭೇದಗ ಪ್ರತಿನಿಧಿಗಳಾಗಿ ತಾವು ಕೊಡತಕ್ಕ ಕಂದಾಯಕ್ಕೆ ಸರಿ ಪ್ರತಿಫಲವು ತಮಗೆ ಬರುವಂತೆ ಮಾಡಿಕೊಳ್ಳುವ ವಿಷಯ ಏಕಮತ್ಯವಿಲ್ಲದಿರುವುದೇ ಇವರ ದುರ್ಗತಿಗೆ ಮುಖ್ಯಕಾ ಪ್ರಜೆಗಳು ತಮ್ಮ ಹಕ್ಕುಬಾಧ್ಯತೆಗಳಿಗೋಸ್ಕರ ಎಲ್ಲಾ ಭಾವಗಳನ್ನೂ ಮರೆತು ಏಕಮತ್ಯದಿಂದ ಹೋರಾಡುವು ಕಲಿತುಕೊಳ್ಳಬೇಕು. ಈ ವಿಷಯದಲ್ಲಿ ನಿಸ್ಪೃಹರಾಗಿಯೂ ನಿರ್ಭೀತರಾಗಿಯೂ, ನಿರ್ದಾಕ್ಷಿಣ್ಯಪರರಾಗಿಯೂ ಇರಬೇ ಅಧಿಕಾರಿಗಳು ಧರ್ಮಿಷ್ಠರಾಗಿದ್ದರೆ ಅವರನ್ನು ದೇವರಂತೆ ಸಬೇಕು. ಅವರು ಪ್ರಜೆಗಳ ಕ್ಷೇಮಕ್ಕೆ ಕಂಟಕರಾ ಕಮತ್ಯದಿಂದ ಅವರನ್ನು ತಿದ್ದಬೇಕು. ತಿದ್ದುವುದಸಾಧ್ಯವಾದರೆ ಅವರನ್ನು ಯಮಧರ್ಮರಾಜನಿಗೆ ಒಪ್ಪಿಸಬೇಕು. ಇದು ಪ್ರಜೆಗಳ ಕರ್ತವ್ಯ. ಇದನ್ನು ತಿಳಿದುಕೊಂಡು ಅನುಷ್ಠಾನದಲ್ಲಿಟ್ಟುಕೊಳ್ಳ ಕ್ಕ ಪ್ರಜೆಗಳಿಗೆ ಸಕಲ ಪುರುಷಾರ್ಥಗಳೂ ಪ್ರಾಪ್ತಿಯಾಗುವುವು ದನ್ನು ಸುವರ್ಣಾಕ್ಷರಗಳಲ್ಲಿ ಬರೆದು ನವರತ್ನಗಳಿಂದ ಅಲಂಕರಿಸಿ ತಿ ನಿಮಿಷದಲ್ಲಿಯೂ ಪರಮಧ್ಯೇಯವನ್ನಾಗಿ ಯಾರು ಇಟ್ಟುಕೊ ವರೋ ಅವರಿಗೆ ಸಕಲ ಸನ್ಮಂಗಳಗಳೂ ಉಂಟಾಗುವುವು. ಧಿಕಾರಿಗಳೂ ಕೂಡ ಇಹಪರ ಸೌಖ್ಯಗಳನ್ನು ಹೊಂದಬೇ ದರೆ ಈ ಮಹಾವಾಕ್ಯದ ಅಭಿಪ್ರಾಯವನ್ನು ಅನುಷ್ಠಾನಕ್ಕೆ ದುಕೊಳ್ಳಬೇಕು. ರಾಜಯೋಗದಲ್ಲಿ ಪ್ರಜಾರಂಜನೆಯೇ ಮು ವಾದದ್ದು. ಪ್ರಜೆಗಳ ಕಷ್ಟಸುಖಗಳನ್ನು ಪ್ರಜೆಗಳಿಂದಲೂ, ಜೆಗಳ ಪ್ರತಿನಿಧಿಗಳಿಂದಲೂ ತಿಳಿದುಕೊಂಡು ದುಷ್ಟರನ್ನು ಶಿಷ್ಟ ನ್ನಾಗಿ ಮಾಡಿ ಸರ್ವರನ್ನೂ ರಕ್ಷಿಸುವುದು ಪ್ರಜಾರಂಜನೆಯೆನಿಸಿ ಳ್ಳುವುದು. ಪ್ರಜೆಗಳಲ್ಲಿ ಪೂರ್ವಾಪರಜ್ಞರು ಅಧಿಕಾರಿಗಳ ನ್ಯೂನಾತಿರಿಕ್ತಗಳನ್ನು ತಿಳಿಸುವುದು ಪ್ರಜೆಗಳಿಗೆ ಕ್ಷೇಮವುಂಟಾಗ ಕ್ಕ ಸಲಹೆಗಳನ್ನು ಕೊಡುವುದು ಇವುಗಳೆಲ್ಲಾ ಮುಖ್ಯ ಕರ್ತ . ಎಲ್ಲಾ ಇಲಾಖೆಗಳಲ್ಲಿಯೂ ಕಾನ್‌ಫರೆನ್ಸ್‌ಗಳನ್ನು ಮಾಡಿ ಅವರ ಸಲಹೆಗಳನ್ನು ಪ್ರತಿನಿಧಿಗಳೂ ಮತ್ತು ಶಾಸನಸಭೆಯ ರೂ ಪರ್ಯಾಲೋಚಿಸಿ ತಮ್ಮ ಸಲಹೆಯನ್ನು ಕೊಡುವಂತೆ ಮಾ ದರೆ ಪ್ರಭುಗಳ ಕೆಲಸಗಳು ಸುಲಭವಾಗಿ ನಡೆಯುವುವು.

ಭೀಷ್ಮ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ವಿವಾಹಮಹೋತ್ಸವಸಂಬಂಧವಾದ ಸಂತೋಷಕೂಟ.

ಹಾರನಹಳ್ಳಿ.

ಶಿಕಾರಿಪುರದ ತಾಲೂಕು ಮಾರವಳ್ಳಿ ಗ್ರಾಮದಲ್ಲಿರುವ ಚನ್ನ ರಿ ಮಠದ ವೇ|| ಮಲ್ಲಪ್ಪಯ್ಯನವರ ಗೃಹದಲ್ಲಿ ಸದರಿ ಮಲ್ಲ ಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನಿಗೂ, ಹಾರನಹಳ್ಳಿ ಶ್ರೀಮದುಜ್ಜಯಿನೀ ಮಠದ ವೇ|| ಶಿವಲಿಂಗಪ್ಪಯ್ಯನವರ ಪುತ್ರ ಸ|| ರುದ್ರಾರಾಧ್ಯನಿಗೂ. ಶಿರೋಳಕೊಪ್ಪದ ಮಠದ ವೇ|| ಟದಯ್ಯನವರ ಪುತ್ರಿ ಚಿ|| ಸೌ|| ಬಸವಮ್ಮನಿಗೂ, ಹಾರನಹಳ್ಳಿ ಶ್ರೀಮದುಜ್ಜಯಿನೀ ಮಠದ ವೇ|| ಶಿವಲಿಂಗಪ್ಪಯ್ಯನವರ ಯಪುತ್ರ ಚಿ|| ಸ|| ಗುರುಬಸವಾರಾಧ್ಯನಿಗೂ ಕಾಗಿನಲ್ಲಿಯ ರುವ ಮಠದ ವೇ|| ಸಿದ್ಧಲಿಂಗಯ್ಯನವರ ಪುತ್ರಿ ಚಿ|| ಸೌ|| ಸಿದ್ಧ ನಿಗೂ, ಚನ್ನಗಿರಿ ಮಠದ ವೇ|| ಮಾರವಳ್ಳಿಯಲ್ಲಿರುವ ಮಲ್ಲಪ್ಪ ಯ್ಯನವರ ಪುತ್ರ ಚಿ|| ಸ|| ಸ್ಕೂಲ್ ಮಾ|| ಎಂ. ವೀರಾರಾಧ್ಯನಿಗೂ ದೇ ಶ್ರೀಮುಖನಾಮ ಸಂವತ್ಸರದ ಜ್ಯೇಷ್ಠ ಬ|| ೧೦ ಯು ವೇ|| ಹಳ್ಳೂರು ಹಿರೇಮಠದ ಓಂಕಾರಶಾಸ್ತ್ರಿಗಳ ದ ಪೌರೋಹಿತ್ಯದಿಂದ ಪಂಚಪ್ರತಿಕಲಶಸ್ಥಾಪನಾಪೂರ್ವಕ ವಾಗಿ ಪಾಣಿಗ್ರಹಣಮಹೋತ್ಸವವು ನೆರವೇರಿದ ತರುವಾಯ ಈ ವದಂಪತಿಗಳೂ ಹಾಗೂ ಬಂಧುಮಿತ್ರರು ಸಹಾ ಶಿವಮೊಗ್ಗಾ || ಹಾರನಹಳ್ಳಿ ಶ್ರೀಮದುಜ್ಜಯಿನೀಮಠಕ್ಕೆ ವಿವಾಹಸಮಯ ತಿಯಂತೆ ಆಗಮಿಸಿದರು. ಆದಿನ ನೆರವೇರಿದ ಅಂತ್ಯಕ್ಷತಾ ಮಯದಲ್ಲಿ ಹಾರನಹಳ್ಳಿ ಮತ್ತು ಕಸಬಾ ಭಜನಾಸಂಘದವರು ಮಜ್ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಸುಶ್ರಾವ್ಯ ಗಿ ಮಾಡಿದನಂತರ ಶ್ರೀಮದುಜ್ಜಯಿನೀಮಠದ ಚರಮೂರ್ತಿ ಹಾಸ್ವಾಮಿಗಳವರೂ ಹಾಗೂ ಬೆಳಕಿ ಬೃಹನ್ಮಠದ ಶ್ರೀ ಪಟ್ಟದ ಹಾಸ್ವಾಮಿಗಳವರೂ ಅಧ್ಯಕ್ಷರಾಗಿದ್ದು ಇವರ ಸಮ್ಮುಖ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವ ದ ಗಿರಿಜಾಕಲ್ಯಾಣವೆಂಬ ಶಿವಸಂಕೀರ್ತನೆಯು ಶ್ರೀಗುರು ಕ್ತ, ವೀರಶೈವಧರ್ಮ, ಸತೀಹಿತೋಪದೇಶ ಇತ್ಯಾದ್ಯನೇಕ ರಸಪೂರಿತವಾಗಿ ಸರ್ವಜನಹೃದಯಂಗಮವಾಗುವಂತೆ ಅನು ದವಾಡಲ್ಪಟ್ಟಿತು. ಬಳಿಕ ವೇ|| ಓಂಕಾರಶಾಸ್ತ್ರಿಗಳವರು ಷ್ಟಾವರಣವಿಚಾರವಾಗಿ ಸಮಸ್ತ ಜನರ ಮನಸ್ಸಿನಮೇಲೆ ಪರಿ ಮಹೊಂದುವಹಾಗೆ ಭಾಷಣಮಾಡಿದುದಲ್ಲದೆ ಕೀರ್ತನಕಾ ಗುಣಕಥನವನ್ನು ಮಾಡಿ ತಮ್ಮ ವಿದ್ಯಾಪಕ್ಷಪಾತತ್ವ ನ್ನು ಪ್ರಕಾಶಗೊಳಿಸಿದರು. ಅನಂತರ ವೇ|| ಶಿವರುದ್ರಶಾಸ್ತ್ರಿ ವರು ಸಮಯಕ್ಕೆ ತಕ್ಕ ಭಾಷಣವನ್ನು ಮಾಡಿ ಈ ಹಮಹೋತ್ಸವವು ಶ್ರೀ ಜಗದ್ಗುರು ಪಂಚಾಚಾರ್ಯರ ಶೀರ್ವಾದಬಲದಿಂದ ನೆರವೇರಲ್ಪಟ್ಟ ಜ್ಞಾಪಕಾರ್ಥವಾಗಿ ಪಂಚಾಚಾರ್ಯ ಪ್ರಭಾಪೋಷಕಕ್ಕೋಸುಗ ಪ್ರತಿ ಟ್ಟ ವರನಕಡೆಯ ಕರ್ತೃಗಳಿಂದ ಒಂದೊಂದು ರೂಪಾಯಿ ತೆ ಮೂರು ರೂಪಾಯಿಗಳನ್ನು ತೆಗೆಯಿಸಿದ ಕೂಡಲೇ ಸರ್ವ ಕರತಾಡನದಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯ ಘೋಷವನ್ನು ಮಾಡಿದಬಳಿಕ ಸಮಸ್ತ ಮಹಾಜನರಿಗೂ ಫಲಪುಷ್ಪ ಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಅಧ್ಯಕ್ಷರಾದ ಮಹಾ ಮಿಗಳವರ ದಿವ್ಯಹಸ್ತದಿಂದ ಕೀರ್ತನಕಾರರಿಗೂ ಪುರೋ ರಿಗೂ ಭಜನಾಸಂಘದವರಿಗೂ ಪರಸ್ಥಳದಿಂದ ಬಂದಿದ್ದ ಶವಿದ್ಯಾರ್ಥಿಗಳಿಗೂ ದ್ರವ್ಯರೂಪದಿಂದಾಶೀರ್ವದಿಸಲ್ಪಟ್ಟು ಘೋಷವಾದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಮರುದಿನ ಬೆಳಗಿನ ಹತ್ತುಗಂಟೆಯಿಂದ ರಾತ್ರಿ ಹನ್ನೆರಡು ಮಾನಿಗೂ ಸ್ಥಳಪರಸ್ಥಳದ ಭಕ್ತಮಾಹೇಶ್ವರರಾದಿಯಾಗಿ ಮೃಷ್ಟಾನ್ನಭೋಜನದಿಂದ ತೃಪ್ತಿಗೊಂಡು ಶ್ರೀ ಚರಮೂರ್ತಿಸ್ವಾಮಿಗಳವರ ಭಕ್ತವಾತ್ಸಲ್ಯವನ್ನೂ ಮಾಹೇಶ್ವರಾಭಿಮಾನವನ್ನೂ ಸವಿಸ್ತರವಿವಾಹಮಹೋತ್ಸವದ ವೈಭವವನ್ನೂ ವಿವಿಧವಾಗಿ ಕೊಂಡಾಡುತ್ತಾ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಈ ರೀತಿಯಾಗಿ ಕಾರ್ಯವು ವಿಚಕ್ಷಣೆಯಿಂದ ನೆರವೇರಲು ಕಾರ್ಯದರ್ಶಿಗಳಾಗಿದ್ದ ವೇ|| ಓಂಕಾರಶಾಸ್ತ್ರಿಗಳವರ ಹಾಗೂ ಮ|| ರಾ|| ಯಜಮಾನ್ ಜವಳಿ ಗುರುಬಸವಪ್ಪನವರ ಪುತ್ರರಾದ ಮುರಿಘೀ ರುದ್ರಪ್ಪನವರ ದಕ್ಷತೆಯೇ ಕಾರಣೀಭೂತವಾಗಿರುವದು.—ಶ್ರೀ ಜಗದ್ಗುರು ಪಂಚಾಚಾರ್ಯರು ಈ ನೂತನ ವಧೂವರರಿಗೂ ನೆರೆದಿದ್ದ ಸಮಸ್ತಮಹೋದಯರಿಗೂ ಕಾರ್ಯದರ್ಶಿಗಳಿಗೂ ಚಿರಾಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂದು ಹಾರೈಸುವ,

ಗುರುಸೇವಾಭಿಲಾಷಿ

ಮಹಾಸಭೆಯವರ ಮನೆಮುರಕತನ.

ಬರೆದವ—'ದೈವಜ್ಞ ವಿನೋದ'

ಈ ಸಾರಿ ಧಾರವಾಡದಲ್ಲಿ ಕೂಡಿದ್ದ ಮಹಾಸಭೆಯ ಬಗ್ಗೆ ಮಥಿತಾರ್ಥವನ್ನು ಹೊರಗೆಡವದೆ ಮೌನವಾಗಿರಬೇಕೆಂದಿದ್ದೆನು; ಆದರೆ ಜಾತಿಸಂಕರಕಾರಕನಾದ ವೇಶ್ಯಾಪುತ್ರನು ತನಗೆ ಸಭೆಯಲ್ಲಿ ಚೆಲ್ಲಾಟದ ಅಟ್ಟಹಾಸವು ಸಿಕ್ಕಿತೆಂದು ಉಬ್ಬಿ, ಕೊಬ್ಬಿದ ಬರವಣಿಗೆಯನ್ನು ಬರೆದುದರಿಂದ ಸಭೆಯ ಹೆಸರನ್ನು ತೆಗೆದುಕೊಳ್ಳಬೇಕಾಯಿತು. ಸಭೆಯ ದಿವ್ಯಸ್ವರೂಪದ ಪ್ರಕಾಶವನ್ನು ಬಣ್ಣಿಸಿ ಬರೆಯುವದು ಆಗದೆ ಅದನ್ನು ವರ್ಣಿಸಲು ಕಾಳು-ಬೇಳೆಗಳ ಪಾಲಿಗೆ ಬಿಟ್ಟದ್ದೇನೆ. ಸಭೆಯಲ್ಲಿ ಅಸ್ಪೃಶ್ಯತಾ ನಿವಾರಣೆಯ ಠರಾವು ಬಹು ಅಟ್ಟಹಾಸದಿಂದ ನರ್ತನಮಾಡಿತು. ಇದಕ್ಕೆ ಮುಂಗೈಕೋಳು ಎನಿಸಿದ ಗುಣಮಠಕಲ್ಲ ವಿರಕ್ತ ಮಹಾಶಯರು ಕರಿಯಾದ ಶೀರೆಯನ್ನುಡಿಸಿ ತಲೆಬಾಚಿದರು. ಮಾತಿನಮಲ್ಲರ ಕುಸ್ತಿಯನ್ನು ಸಭೆಯ ಹೊರಭಾಗದಲ್ಲಿ ಘಂಟೆಯನ್ನು ಬಾರಿಸುತ್ತ ನಿಂತಿದ್ದ ವಿಜಾಪೂರ ಪ್ರಾಂತದ ಪ್ರಸಿದ್ಧ ಛಲವಾದಿಯೊಬ್ಬನು ನೋಡಿ ಗಹಗಹಿಸಿ ನಗುವವರ ಕೂಡ ಬಾಯಿಗೆ ಬಂದಂತೆ ಇವರನ್ನು ಬಯ್ಯುತ್ತಿದ್ದನು. ಏಕೆಂದರೆ—ಅವನಿಗೆ ಸಭೆಯೊಳಗೆ ಬರಲಿಕ್ಕೆ ಅಪ್ಪಣೆ ಕೊಡಲಿಲ್ಲ. ಅಂಗಲಾಚಿ ಬೇಡಿಕೊಂಡನು. ಅತ್ತ ಉದ್ದ ಬಿದ್ದನು. ಅಸ್ಪೃಶ್ಯತಾ ನಿವಾರಣೆ ಠರಾವು ಪಾಸಾಗುವಾಗ ಅಸ್ಪೃಶ್ಯನು ಹೊರಗಿದ್ದರೆ ಅವನಿಗೆ ಅವಮಾನವಲ್ಲವೆ? ಬಸವಣ್ಣನ ವಂಶಾವಳಿಯಲ್ಲಿ ಸೇರಿದವರೆಂದು ಹೇಳಿಕೊಳ್ಳುವ ಗುಣಮಠಕಲ್ಲರವರು ಭಾಷಣ ಮಾಡುತ್ತ "ನಿಜವಾಗಿ ನಾವು ಬಸವನ ಭಕ್ತರಾಗಿದ್ದರೆ ಬಸವನಂತೆಯೂ ಬಸವನ ಶಿಷ್ಯರಂತೆಯೂ ಛಲವಾದಿ ಮೊದಲಾದವರೊಡನೆ ಬಳಿಕ ಭೋಜನ ಮಾಡಬೇಕು ಮತ್ತು ಮಧುವಯ್ಯ, ಹರಳಯ್ಯನಂತೆ ಶರೀರ ಸಂಬಂಧಾದಿಗಳನ್ನು ಮಾಡಬೇಕೆಂದುಸುರಿದರು. ಇವರ ಆವೇಶದ ಭಾಷಣವನ್ನು ಕೇಳಿ ಹೊರಗಿದ್ದ ಛಲವಾದಿಯು ಹರ್ಷಪುಲಕಿತನಾಗಿ ಹೊರಗಡೆಯಲ್ಲಿಯೇ ಘಂಟೆಯನ್ನು ಬಾರಿಸಿದನು. (ಈ ಬಾಯ್ಬಡುಕ ಸನ್ಯಾಸಿಗಳ ಮಾತು ಹೊರಗಷ್ಟೇ ಒಳಗಿಲ್ಲವೆಂದು ಬಾರಿಸಿದನು.) ಈ ಠರಾವಿನಿಂದ ಆ ಸಭೆಗೆ ಬಹಳ ಬೆಲೆ ಬಂದಂತಾಯಿತು. ಆ ಠರಾವನ್ನು ಗಾಂಧಿಯವರ ಕಡೆಗೆ ಕಳಿಸಿದರೆ ಅವರೂ ಆನಂದಿಸುವರು. ಆದರೆ ಈ ಛಲವಾದಿಯು ಈ ಸಭೆಯವರ ಮನೆಮುರಕತನವನ್ನು ಅದೇ ಗಾಂಧಿಯವರಿಗೆ ತಿಳಿಸಿದರೆ ಅವರು ಈ ಠರಾವನ್ನು ಬಹಳವಾಗಿ ಮೆಚ್ಚಿಕೊಳ್ಳಬಹುದಲ್ಲವೆ? ವೀರಶೈವ ಮತಧರ್ಮದ ಮಹತ್ವಾತಿಶಯದ ತಿರುಳಿನ ಸವಿಯನ್ನರಿಯದ ಮರುಳರ ಜಾತ್ರೆಯಲ್ಲಿ ಯಾವ ಹೊಲಸು ಪದಾರ್ಥಗಳಾದರೂ ಮಾರಬಹುದು. ಮತ್ತು ಆ ಜಾತ್ರೆಯಲ್ಲಿ ಜಾತಿಹೀನ ಜಾತಿಸಂಕರ ಕಾಳು-ಬೇಳೆಗಳು (೨) ತಿರುಗಾಡಬಹುದು. ಅದು ಏನೇ ಇರಲಿ, ಅಖಿಲ ಭಾರತೀಯ ವೀರಶೈವರು ತಮ್ಮ ನಿಜಧರ್ಮಸಿದ್ಧಾಂತಸ್ವರೂಪವನ್ನು ವಿಮರ್ಶನ ಬುದ್ಧಿಯಿಂದ ಅರಿಯಬೇಕಾಗಿ ಹಾರೈಸುತ್ತೇನೆ. ಈಗ ಕೆಲ ಕಪಟಿ ಸನ್ಯಾಸಿಗಳು ಯಾವ ಮಹಾತ್ಮರ ವಂಶದವರೆಂದು ಹೇಳುತ್ತಾರೆಯೋ ಅಂಥ ಪರಮ ತಪೋನಿಧಿಗಳಾದ ವಿರಕ್ತಶಿಖಾಮಣಿಗಳಾದ ಶ್ರೀಮನ್ನಿರಂಜನ ಮರಿತೋಂಟದಾರ್ಯರು ತಾವು ಬರೆದ 'ವೀರಶೈವಪ್ರದೀಪಿಕೆ' ಎಂಬ ಗ್ರಂಥದಲ್ಲಿ—

ಭವಿನಾಶಯನಾದಾನಾತ್ಸಂಪರ್ಕಾತ್ಸಹಭೋಜನಾತ್ |
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ||

ಎಂದು ಪ್ರತಿಪಾದಿಸಿದ ವಿಷಯವು ಇವರ ಕರ್ಣಕುಹರದಲ್ಲಿ ಪ್ರವೇಶಿಸಿರಲಿಕ್ಕಿಲ್ಲವೇ? ಈ ವಾಚಾಳಿಗಳು ಈ ಪ್ರಮಾಣಕ್ಕೆ ಸಹ ಮೂಗು ಮುರಿದು ಅಸ್ಪೃಶ್ಯರಿಗೂ ಒಂದು ಲಿಂಗಪನ್ನು ಕಟ್ಟದರಾಯಿತೆಂದು ಹೇಳಬಹುದು. ಆಗಲಿ, ಪರೋಪಕಾರಿಗಳಾದ ಇವರು ಅವರಿಗೆಲ್ಲರಿಗೂ ಲಿಂಗಕಟ್ಟಿ ಅವರ ಕಾಯಕದ ಭಂಗೀಬುಟ್ಟಿ ಕಸಬರಿಗೆಯನ್ನು ಧರಿಸಿ ಏಕಕಾಲದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಿಬಿಡಲಿ; ಆಗ ಸನಾತನ ಧರ್ಮಜ್ಯೋತಿಯು ತನ್ನ ಪ್ರಖರವಾದ ಉಗ್ರಕಿರಣಗಳಿಂದ ಇವರಿಗೆ ಬುದ್ಧಿಗಲಿಸುವದು. ಮತಸಂರಕ್ಷಣೆಗಾಗಿಯೂ ಅದೇ ಮತಾಭಿಮಾನ ಪುಣ್ಯನಾಮಾಶ್ರಯದಲ್ಲಿ ತಮ್ಮ ಜಾತಿ ಕುಲಕಟ್ಟುಗಳನ್ನು ಕಾಪಾಡಿಕೊಂಡು ಸುಖವಾಗಿ ಪ್ರಪಂಚ ಮಾಡುತ್ತಿರುವ ಜನಗಳನ್ನು 'ಅದನ್ನು ಬಿಟ್ಟು ಇದನ್ನು ಹಿಡಿ, ಇದನ್ನು ಬಿಟ್ಟು ಅದನ್ನು ಹಿಡಿ' ಎಂದು ಗುಲ್ಲೆಬ್ಬಿಸಿ ತಾವು ಮಾತ್ರ ಬಾಯಿಪುರಾಣ ಹೇಳುವ ಘಂಟಿಗಿನ್ನೇನ್ನಬೇಕೋ ತಿಳಿಯದಾಗಿದೆ. ಇಂಥವರನ್ನು ಕೂಡಿಕೊಂಡು ಮಹಾಸಭೆಯವರು ಮತಧರ್ಮ ವಿರೋಧಗಳಾದ ಅನುಷ್ಠಿಸಲ್ಪಡಲು ಅಸಾಧ್ಯಗಳಾದ ಠರಾವುಗಳನ್ನು ಪಾಸುಮಾಡಿದ್ದು ಎಷ್ಟು ಜನ ವೀರಶೈವರಿಗೆ ಒಪ್ಪಿಗೆಯಾಗಿ ಆನಂದಿಸುವರೋ ಅವರಿಗೇ ಗೊತ್ತು. ವೇಶ್ಯಾಕುಲಸಂಜಾತನು ತನ್ನ ವೈಯ್ಯಾರದ ನರ್ತನದ ಹಾವಭಾವವನ್ನು ಪ್ರಕಟಗೊಳಿಸಿರುವದೊಂದು ಅವನಿಗೆ ಭೂಷಣವೆಂದು ವಿನೋದನ ಎಚ್ಚರಿಕೆ!

ನಮ್ಮ ಜೀವನದ ಗುಟ್ಟು.

ಲೇಖಕ—ದೈವಜ್ಞವಿನೋದ ಶಿರೋಳ.

ಈಗಿನ ಭಾರತೀಯರ ದೇಹಸಂಪತ್ತು ಹಾಳಾಗಿ ಹೋಗಿರುವದೆಂಬುವದು ನಿರ್ವಿವಾದದ ಮಾತಾಗಿದೆ. ದೇಹಾರೋಗ್ಯನಾಶವಾಗಲು ಇಂದ್ರಿಯನಿಗ್ರಹವಿಲ್ಲದುದೇ ಪ್ರಬಲವಾದ ಕಾರಣವು. ಇಂದ್ರಿಯನಿಗ್ರಹವೆಂದರೆ ಪಂಚಜ್ಞಾನೇಂದ್ರಿಯವನ್ನೂ ಪಂಚಕರ್ಮೇಂದ್ರಿಯವನ್ನೂ ಇವುಗಳ ಸ್ವಾಮಿಯಾದ ಮನಸ್ಸೆಂಬ ಅಂತರಿಂದ್ರಿಯವನ್ನೂ ಜಯಿಸಿದರೆ ಸಾಕು; ಅಲ್ಲಿಗೆ ಜೀವನದ ಮುಖ್ಯ ಇಡಿಗಂಟಾದ ಇಂದ್ರಿಯನಿಗ್ರಹ ಮಾಡಿದಂತಾಗುವದು. ಇದಕ್ಕೆ 'ಬ್ರಹ್ಮಚರ್ಯ' ವೆನ್ನುವರು. ಬ್ರಹ್ಮಚರ್ಯದ ಮಹತ್ವಾತಿಶಯಗಳನ್ನು ಲೇಖನ ವಿಶಾರದರು ಬೇಕಾದಷ್ಟು ಬರೆಯಲಿ. ವಾಙ್ಮಯ ವಿಶಾರದರು ವಾಚನಗ್ರಂಥಗಳನ್ನು ಪ್ರಕಟಿಸಲಿ. ವಕ್ತೃತ್ವಶಾಲಿಗಳು ಆವೇಶಪೂರಿತ ಭಾಷಣ ಪ್ರವಾಹವನ್ನು ಪ್ರಪಂಚದ ಮೇಲೆಲ್ಲ ಪಸರಿಸಿದರೂ ಬ್ರಹ್ಮಚರ್ಯದ ಕಿಮ್ಮತ್ತು ಭಾರತೀಯರ ಕಣ್ಣಿಗೆ ಕಾಣದಂತಾಗಿದೆ. ನಮ್ಮ ನಾಡಿನ ಎತ್ತು, ಎಮ್ಮೆಯ ಕತ್ತೆ ಕುದುರೆಗಳ ಮುಖದ ಮೇಲಿನ ತೇಜಸ್ಸಿನ ಸಹಸ್ರಾಂಶವಾದರೂ ಎದೆಯನ್ನು ಸೆಟೆಸಿ ಕಾಪ್ಪತಿರುವುತ್ತಿರುವ ಹೊಸತರುಣರ ಮುಖದ ಮೇಲಿಲ್ಲ. ಇಂದ್ರಿಯ ಸ್ತಂಭನ ಮತ್ತು ನಿಯಮಿತೋಪಯೋಗ ಮಾಡುತ್ತಿರುವದರಿಂದಲೇ ಪಶುಗಳಿಗೆ ಇಂಥ ಕಳೆಯು ಬಂದಿದೆ. ತ್ರಿಲೋಕವನ್ನೇ ಬುಡಮೇಲು ಮಾಡಿಬಿಡುವ ಸಾಮರ್ಥ್ಯವನ್ನು ಸಹ ಸಂಪಾದಿಸುವ ದಿವ್ಯಶಕ್ತಿಯನ್ನು ಪಡೆದಿರುವ ಮಾನವಪ್ರಾಣಿಯು ವೀರ್ಯದ ವಿಷಯದಲ್ಲಿ ಮಾತ್ರ ಪಶುಗಳಿರುವಂತೆ ಇದ್ದರೆ ಸಾಕು, ಹೆಚ್ಚಿಗೆ ಏನುಮಾಡಬೇಕಾಗಿಯೂ ಇಲ್ಲ. ಇದರಿಂದಲೇ ಬೇಕಾದಷ್ಟು ಕಲ್ಯಾಣವಾಗುತ್ತದೆ. ಪಶುಗಳಿಗೆ ಗರ್ಭವುಂಟಾಗುವ ಕಾಲಕ್ಕೆ ಕಾಮೋತ್ತೇಜಕವಾಗುವದು. ಅದೇ ಸಮಯಕ್ಕೆ ಗಂಡು ಪಶುವಿಗೆ ವೀರ್ಯಸ್ಖಲನವಾಗುವದು. ಇದರಿಂದ ಶಾಶ್ವತವಾಗಿ ಗರ್ಭನಿಲ್ಲುವದು. ಗರ್ಭನಿಂತ ಬಳಿಕಾಗಲಿ ಗರ್ಭಾವಸ್ಥೆಯ ಕಾಲವು ಬಾರದ ಪೂರ್ವದಲ್ಲಾಗಲಿ ಒಂದಕ್ಕೊಂದು ವೀರ್ಯಪತನಮಾಡಿಕೊಳ್ಳುವದಿಲ್ಲ. ಗರ್ಭನಿಂತಬಳಿಕಂತೂ ಗಂಡುಪಶುವಿಗೂ ಹೆಣ್ಣುಪಶುವಿಗೂ ಸಂಬಂಧದ ಸೋಂಕೇ ಇರುವುದಿಲ್ಲ. ಆದರೆ ವಿವೇಚನಾಶಕ್ತಿಯುಳ್ಳ ಮನುಷ್ಯರ ಕಡೆಗೆ ಹೊರಳಿ ನೋಡಿದರೆ ಇವರು ಹಡೆದ ಹೊರಸಿನ ಪದರಿನಲ್ಲಿಯು ಕೂಡಾ ಹಣಕಿಹಾಕುತ್ತಿರುವ ದುಷ್ಟವಿಘಾತಕತನವನ್ನು ಬರೆಯುವಾಗ ನಮ್ಮ ಲೇಖನಿಗೂ ಅಸಹ್ಯತೆಯು ಬಂದು ಮುಂದೆ ಸಾಗದಂತಾಗುವುದು. ಜೀವನದ ಗುಟ್ಟನ್ನು ಕಾಪಾಡಬೇಕೆನ್ನುವ ಮಹಾನುಭಾವರು ವೀರ್ಯದ ಬೆಲೆ ಎಷ್ಟೆಂಬುದನ್ನು ಮೊದಲು ತಿಳಿಯಬೇಕು. ವಸ್ತುವಿನ ಬೆಲೆ ತಿಳಿದ ಬಳಿಕ ಅದರ ಬಗ್ಗೆ ಕಾಳಜಿ ಮಾಡಬೇಕಾಗುತ್ತದೆ. ಬೆಲೆಯುಳ್ಳ ಆಭರಣಗಳನ್ನು ಭದ್ರವಾದ ತ್ರಿಜೋರಿಯಲ್ಲಿಟ್ಟು ಬೆಲೆ ಇಲ್ಲದವುಗಳನ್ನು ಬೇಕಾದಲ್ಲಿ ಚಲ್ಲಿದರೂ ಅಡ್ಡಿಯಿಲ್ಲ. ವೀರ್ಯದ ಬೆಲೆ ಎಷ್ಟು? ಅಂದರೆ ಭೌತಿಕಶಾಸ್ತ್ರಜ್ಞರು ವೀರ್ಯೋತ್ಪತ್ತಿಯ ಕ್ರಮವನ್ನು ತಿಳಿಸಿ ಇದು ಮಹತ್ವದೆಂದು ಉಸುರಬಹುದು. ಇಷ್ಟೇ ಅಲ್ಲ; ವೀರ್ಯದಿಂದಲೇ ಜೀವನವೆಂದು ಸಿದ್ಧಾಂತಗೊಳಿಸುವರು. ವೀರ್ಯಕ್ಕೂ ಜೀವನಿಗೂ ನಿಕಟ ಸಂಬಂಧವಿದೆ. ವೀರ್ಯಪಾತವಾದೊಡನೆ ಜೀವನಾಂತ್ಯವು ಸಮೀಪಿಸುವದು. ಕೆಲವು ಪ್ರಾಣಿಗಳು ವೀರ್ಯಪತನವಾದೊಡನೆ ಮೃತ್ಯುವಶವಾಗುತ್ತವೆ. ವೀರ್ಯರಕ್ಷಣೆಯೇ ಜೀವನಾಧಾರವು. ಜೀವವಿರುವಾಗಲೇ ಧರ್ಮಸಂಗ್ರಹವು. ಧರ್ಮಾಚರಣೆಯ ರಕ್ಷಣೆಯೇ ಬ್ರಹ್ಮಚರ್ಯದ ನೆಲಗಟ್ಟು. ಬ್ರಹ್ಮಚರ್ಯದ ತಳಹದಿಯೇ ನಮ್ಮ ಜೀವನದ ಗುಟ್ಟು.

೧೦, ಮುದರ
ಪ್ರಿ ಪ್ರಕಟಿಸಲ್ಪ

ಸೊಲ್ಲಾಪುರ ಪಟ್ಟಣದಲ್ಲಿ ನೆರವೇರಿದ

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ.

ಪರಮ ತಪೋನಿಧಿಗಳೂ ಗುರುಸಾರ್ವಭೌಮರೂ ಸಾಕ್ಷಾತ್ ಶಿವಸ್ವರೂಪಿಗಳೂ ಆದ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವವು ತಾ|| ೧೨-೬-೧೯೩೩ ನೆಯ ದಿವಸ ಸೊಲ್ಲಾಪುರ ಪಟ್ಟಣದಲ್ಲಿ ಅಸಾಧಾರಣವೈಭವದಿಂದ ನೆರವೇರಿದ ವಿಷಯವು ಈ ಮೊದಲೇ ನಮ್ಮ ಪತ್ರಿಕಾವಾಚಕರಿಗೆಲ್ಲಾ ತಿಳಿದುದಾಗಿದೆ. ಸೊಲ್ಲಾಪುರ ಶಹರದಲ್ಲಿರುವ ಸುಪ್ರಸಿದ್ಧ ಶ್ರೀಮಂತರೆಲ್ಲರೂ ಅನಿತರ ಸಾಧಾರಣವಾದ ಗುರುಭಕ್ತಿಯಿಂದೊಡಗೂಡಿ ಜಗದ್ಗುರುಗಳನ್ನು ತಮ್ಮ ನಗರಕ್ಕೆ ಬಿಜಮಾಡಿಸಿಕೊಂಡು ಬಂದುದು ಅವರ ನಿಸ್ಸೀಮಗುರುಭಕ್ತಿಯ ಲಕ್ಷಣವನ್ನು ಸೂಚಿಸುತ್ತದೆ. ಪ್ರತಿದಿವಸವೂ ಜಗದ್ಗುರುಗಳವರು ಭಕ್ತವೃಂದಕ್ಕೆ ತತ್ತ್ವಾಮೃತವನ್ನು ಪಾನಮಾಡಿಸಿ ಸಕಲರನ್ನು ಧನ್ಯರನ್ನಾಗಿ ಮಾಡುತ್ತಿದ್ದಾರೆ. ಗುರುಭಕ್ತಶಿಖಾಮಣಿಗಳು ಜಗದ್ಗುರುಗಳನ್ನು ತಮ್ಮ ತಮ್ಮ ಮನೆಗೆ ಬಿಜಮಾಡಿಸಿಕೊಂಡು ಬಂದು ಪಾದಪೂಜಾದಿಗಳನ್ನು ನೆರವೇರಿಸುತ್ತಿದ್ದಾರೆ. ಸದ್ಯಃ ಸೊಲ್ಲಾಪುರ ಪಟ್ಟಣವು ಸಾಕ್ಷಾತ್ ಶಿವಲೋಕದಂತೆ ಪರಿಶೋಭಿಸುತ್ತಿರುವುದು. ಇಂಥ ಮಂಗಲಸಮಯದಲ್ಲಿ ಒಂದೆರಡು ಅನಾಮಧೇಯವ್ಯಕ್ತಿಗಳು ದುಷ್ಟವಿರಕ್ತರ ಪ್ರೇರಣೆಯಿಂದ ವಿಘ್ನಗಳನ್ನಾಚರಿಸಲುದ್ಯುಕ್ತರಾದರೂ ಸಹ ಆ ವಿಘ್ನಗಳು ಜಗದಾಚಾರ್ಯರ ಕೃಪಾವಿಶೇಷದಿಂದ ಧ್ವಂಸವಾಗುತ್ತಿರುವುವೆಂಬ ವಿಷಯವನು ಬೇರೆ ಹೇಳಬೇಕಾಗಿಲ್ಲ. ಸೊಲ್ಲಾಪುರ ಪಟ್ಟಣದಲ್ಲಿರುವ ಸಮಸ್ತ ವೀರಶೈವ ಗುರುಭಕ್ತರು ಹಾಗೂ ಮುಸಲ್ಮಾನರು, ಮಾರವಾಡಿಗಳು, ಗುಜ್ಜರು ಇವರೇ ಮೊದಲಾದವರು ಜಗದ್ಗುರುಗಳವರ ವಿಷಯದಲ್ಲಿ ಅಸಾಧಾರಣವಾದ ಭಕ್ತಿಯನ್ನು ತೋರ್ಪಡಿಸುತ್ತಿರುವಾಗ, ಎಲ್ಲಿಯಾದರೂ ಒಂದೆರಡು ಅಷ್ಟದರಿದ್ರ ಅನಾಮಧೇಯವ್ಯಕ್ತಿಗಳು ವಿರೋಧಮಾಡಿದರೆ ಅವುಗಳ ಮಾತಿಗೆ ಬೆಲೆಯು ಬಂದೀತೇ? ೨೦-೩೦ ಸಾವಿರ ಜನ ವೀರಶೈವಗುರುಭಕ್ತರಿಂದ ಕೂಡಿದ ಈ ಪಟ್ಟಣದಲ್ಲಿ ಒಬ್ಬಿಬ್ಬ ಅನಾಮಧೇಯರು ಗುರುಕಾರ್ಯಕ್ಕೆ ವಿಘ್ನಮಾಡುತ್ತೇವೆನ್ನುವುದು, ಮೇರೆದಪ್ಪಿ ಪ್ರವಹಿಸುತ್ತಿರುವ ಮಹಾಪ್ರವಾಹದ ಮುಂದೆ ಹುಲ್ಲುಕಡ್ಡಿಯನ್ನು ಎದುರು ಇಟ್ಟಂತೆಯೇ ಸರಿ!

ಒಳದೇಶದ ವೃತ್ತಾಂತಗಳು.

ಕುಚ್ ಬಿಹಾರಿನ ಮಹಾರಾಣಿಯವರು ಕೆಲವು [illegible]ಸಗಳ ಹಿಂದೆ ತಮ್ಮ ಮಕ್ಕಳ ಸಮೇತ ರಾಜಧಾ[illegible] ಬಂದು ಲಲಿತಮಹಲಿನಲ್ಲಿ ಶ್ರೀಮನ್ಮಹಾರಾಜರ ಆತಿಥ್ಯವನ್ನು ಸ್ವೀಕರಿಸುತ್ತಿರುವರು.

ಕೆಲವು ದಿವಸಗಳ ಹಿಂದೆ ರಾಜಧಾನಿಯ ಈದಿಗಾ[illegible] ಒಂದು ಶಿಶುವೂ, ಟ್ರೇನಿಂಗ್ ಕಾಲೇಜಿನ ಕಾಂ[illegible]ಂಡಿನಲ್ಲಿ ಒಂದು ಶಿಶುವೂ ಕೊಲ್ಲಲ್ಪಟ್ಟು ಬಿಸಾಡ[illegible]ಟ್ಟಿದ್ದುವು. ಪೋಲೀಸರು ತನಿಖೆ ಮಾಡುತ್ತಿರುವರು.

ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿರುವ [illegible] ಪಿ. ಸೂರ್ಯನಾರಾಯಣಶೆಟ್ಟಿ ಬಿ.ಎ., [illegible].ಎಲ್.ಬಿ., ಯವರು ಮೈಸೂರು ಡಿಸ್ಟ್ರಿಕ್ಟ್ [illegible]ಟಿಕಮಿಷನರವರ ಪರ್ಸನಲ್ ಅಸಿಸ್ಟೆಂಟರಾಗಿ [illegible]ರ್ಮಾಯಿಸಲ್ಪಟ್ಟಿರುವರು.

ಇದೇ ಜುಲೈ 13 ನೇ ತಾರೀಖಿನಿಂದ ಸಿಮ್ಲಾದಲ್ಲಿ [illegible]ಯಲಿರುವ ಕೈಗಾರಿಕೆಗಳ ಕಾನ್ಫರೆನ್ಸಿಗೆ ಮೈಸೂರು ಸರಕಾರದ ದ್ವಿತೀಯ ಸಚಿವರಾದ ಮ|| ಎಸ್. ಪಿ. ರಾಜಗೋಪಾಲಾಚಾರಿಯವರೂ, ವ್ಯವಸಾಯದ ಇಲಾಖಾ ಡೈರೆಕ್ಟರಾದ ಡಾಕ್ಟರು ಎಲ್. ಸಿ. ಕೋಲ್ಮನ್‌ರವರೂ, ಕೈಗಾರಿಕೆ ಮತ್ತು ವಾಣಿಜ್ಯಇಲಾಖಾ ಡೈರೆಕ್ಟರಾದ ಮಿ|| ಎ. ವಿ. ರಾಮನಾಥನ್‌ರವರೂ ಇಷ್ಟರಲ್ಲೇ ಪ್ರಯಾಣಮಾಡುವರೆಂದು ತಿಳಿದುಬಂದಿದೆ.

ಈ ಸಾರಿ ನವರಾತ್ರಿ ಮಹೋತ್ಸವಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ವಸ್ತು ಪ್ರದರ್ಶನದ ಕಮಿಟಿಗೆ [illegible] ರಾ|| ಗಳಾದ ಜೋಡಿದಾರ್ ಬಿ. ಶ್ರೀನಿವಾಸಯ್ಯಂ[illegible]ರ್ಯರು, ಎಸ್. ಸಿ. ಮಲ್ಲಯ್ಯನವರು, ಅಬ್ದುಲ್ [illegible]ತ್ತಾರ್ ಸೇಟರು, ರಾವ್‌ಸಾಹೇಬ್ ಎಂ. ರಾಮ[illegible]ಮಿಯವರು, ಪಿ. ಸುಬ್ರಾಮಶೆಟ್ಟರವರು, ವಿ. ಎಲ್. [illegible]ರಾಂರವರು, ಮಿಸೆಸ್ ಡಬ್ಲ್ಯು. ಎಚ್. ಥಿಯೋ[illegible]ಲ್ಡ್‌ರವರು—ಮತ್ತು ಶ್ರೀ|| ವೈ. ಕೆ. ಅಮೃತಾಬಾ[illegible]ಯವರು ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಈ ಸಾರಿ ನಡೆದ ನಮ್ಮನ್ನಾಳುವ ಶ್ರೀಕೃಷ್ಣರಾಜ [illegible]ಯರ್‌ರವರ 50 ನೆಯ ವರ್ಷವರ್ಧಂತಿಮಹೋ[illegible]ವದಲ್ಲಿ ಅನೇಕ ವಿದ್ವಾಂಸರಿಗೆ ವಿದ್ವದ್ವೇತನವು [illegible]ರಕಿತು. ಈ ಸಮಯದಲ್ಲಿ ವೀರಶೈವ ವಿದ್ವಾಂಸ[illegible] ರಾಜಧಾನಿಯಲ್ಲಿರುವ ಶಂ|| ಶ್ರೀ ಹೊಸಮಠದ [illegible]ಮೂರ್ತಿ ಬಸವಲಿಂಗಸ್ವಾಮಿಗಳಿಗೂ, ಬಳ್ಳಾರಿಯ[illegible]ವ ನಾಗೇಶಶಾಸ್ತ್ರಿಗಳಿಗೂ ಈ ಆಸ್ಥಾನವಿದ್ವತ್ಪದ[illegible]ನ್ನು ಶ್ರೀಮನ್ಮಹಾಪ್ರಭುಗಳು ದಯಪಾಲಿಸಿದರು. [illegible] ಸಮಯದಲ್ಲಿ ಕನ್ನಡ ಕವಿಗಳಾ[illegible] ರಾ|| ಅನ[illegible] ರಾಮರಾಯರಿಗೆ 100 [illegible] ರೂಪಾ[illegible] ಬಹು[illegible]ನದ್ರವ್ಯವೂ, ಅವರಿಂದ [illegible]ಚಿಸಲ್ಪಟ್ಟ 'ಕರ್ಣಾ[illegible]ಕೃತಿರತ್ನಮಾಲಾ' ಎಂಬ [illegible] ಗ್ರಂಥವ ಛಾಪಿಸಿ[illegible]ಟಿಸುವದಕ್ಕಾಗಿ 275 [illegible] ರೂಪಾಯಿಗಳುಹುಮಾ[illegible] ಕೊಡಲ್ಪಟ್ಟವು. ಹಾ[illegible]ಗೂ ಇವರನ್ನ ಆಸ್ಥಾನ[illegible]ದ್ವಾಂಸರನ್ನಾಗಿಯೂ [illegible] ಮಾಡಿರುತ್ತಾರೆ.

ರಾಜಧಾನಿಯಲ್ಲಿರುವ [illegible] ಶ್ರೀಮನ್ಮಹಾರಾಜರವರ [illegible]ದಲ್ಲಿ ಕಳೆದ ತಿಂಗಳು [illegible] 22 ನೇ ಬೃಹಸ್ಪತಿವಾರ [illegible] ಸೋಮಯಾಗವು [illegible] ಪ್ರಾರಂಭಿಸಲ್ಪ[illegible] 26 ನೇ [illegible]ಮವಾರ ದಿವಸ ಸಮಾ[illegible]ಗೊಳಿಸಲ್ಪ[illegible]ತು. ಈ [illegible]ಗಕ್ಕಾಗಿ ಯಜ್ಞ ಕರ್ಮ[illegible]ಹಸ್ಯವನ್ನು [illegible] ಅನೇಕ [illegible]ತರು ಸ್ಥಲಪರಸ ಲಗ[illegible]ಂದ ಆಗಮಿ[illegible]. ಯಜ್ಞ[illegible]ಯಲ್ಲಿ ಭಾಗವನ್ನು ವಹಿಸಿ[illegible]ರು. ಈ ಯಜ್ಞಕಾರ್ಯ[illegible]ಕ್ಕಾಗಿ ಶ್ರೀಮನ್ಮಹಾ[illegible]ರಾಜರವರಿಂದಲೂ ಶೃಂ[illegible] ಸ್ವಾಮಿಗಳವರಿಂದಲೂ [illegible] ಕೂಡ್ಲಿಮಠ ಮೊದಲಾದ [illegible]ಗಳಿಂದಲೂ ದ್ರವ್ಯ[illegible]ಹಾಯವು ಒದಗಿದಿ[illegible]ತು. [illegible] ಯಜ್ಞಕಾರ್ಯಕ್ಕೆ [illegible]-7 ಸಾವಿರ ರೂ[illegible]ಪಾಯಿಗಳ [illegible] ಖರ್ಚಾಗಿರಬಹು[illegible]ದು. ಯಜ್ಞ ವ[illegible] 4 ನೆಯ [illegible] ಕೆಲವರು ಪ್ರ[illegible] ಪತ್ರಿಕೆಗಳನ್ನು [illegible] ಹೊರಡಿಸಿ [illegible] ಶಾಲೆಯಬಳಿ[illegible] ಹೋಗಿ ಗಲಾಟೆ [illegible] ಮಾಡಿದ್ದ [illegible] ಪೋಲೀಸರಿಂದ [illegible]ಸಿಯಲ್ಪಟ್ಟು [illegible] ವಿಮ್ಯಾಜಿ[illegible]ಸ್ಟ್ರೇಟ್ ಕೋರ್ಟಿನ[illegible] [illegible]ರುಜನಗಳಮೇಲೆ ಕೇಸು [illegible] ದೆ.

ವರ್ತಮಾನಸಂಗ್ರಹ

ಸುಮಾತ್ರಾದ್ವೀಪದಲ್ಲಿ ಒಂದು ದೊಡ್ಡ ಭೂಕಂಪವಾಗಿ 250 ಜನರು ಮೃತಪಟ್ಟರು.

1932 ನೇ ವರ್ಷದಲ್ಲಿ 1,50,00,00,000 ರೂಪಾಯಿಗಳ ಭಂಗಾರವು ಭೂಮಿಯಿಂದ ತೆಗೆಯಲ್ಪಟ್ಟಿತು.

ಜಪಾನ್ ಸರಕಾರದವರು ಬರುವ ವರ್ಷ ಯುದ್ಧ ಸಾಮಗ್ರಿಗಳಿಗಾಗಿ 60,00,00,000 ರೂ ಗಳನ್ನು ವೆಚ್ಚಮಾಡುವರಂತೆ!

ನ್ಯೂಗಿನಿ ದೇಶದಲ್ಲಿರುವ 'ಮಾಂಡುಗುಮಾ' ಎಂಬ ಜನಾಂಗದ ಸ್ತ್ರೀಯರು ಯಾವಾಗಲೂ ಅವಳಿ ಮಕ್ಕಳನ್ನೇ ಹೆರುವರಂತೆ!

ಶ್ರೀ|| ಗಂಗಾಧರರಾವ್ ದೇಶಪಾಂಡೆಯವರು ಕಳೆದ ಜೂನ್ 28 ನೆಯ ತಾರೀಖಿನ ದಿವಸ ಯರವಾಡಾ ಜೈಲಿನಿಂದ ಬಿಡುಗಡೆಮಾಡಲ್ಪಟ್ಟರು.

ಗಾಂಧಿಯವರ ಆಶ್ರಮದಲ್ಲಿದ್ದ ಒಂದು ಕೊಲಕ್ಕೆ ಬೆಂಕಿಬಿದ್ದು ಸುಮಾರು 1000 ರೂ. ಬೆಲೆಬಾಳುವ ಹುಲ್ಲೂ, ಕಟ್ಟಡಗಳೂ ಸುಟ್ಟು ಭಸ್ಮವಾದವು.

ವಿಲಿಯಂ ಎಚ್. ಹಾರ್ಪರ್ ಎಂಬ ಶ್ರೀಮಂತರೊಬ್ಬರು ತಮ್ಮ ಮೃತ್ಯುಪತ್ರದಲ್ಲಿ ತಮ್ಮ ಪ್ರೀತಿಪಾತ್ರನಾದ ಗಿಣಿಗೆ 4,000 ರೂಪಾಯಿಗಳನ್ನು ಕೊಟ್ಟಿರುವರು.

ಕ್ಯಾಪ್ಟನ್ ಫ್ರಾಂಕ್ಸ್ ಹಾಕ್ಸ್ ಎಂಬಾತನು ಲಾಸ್ ಅಂಗಲ್ಸ್ ನಗರದಿಂದ ನ್ಯೂಯಾರ್ಕ್‌ನಗರದ ವರೆಗಿರುವ 2,440 ಮೈಲುಗಳ ದೂರವನ್ನು 13 ಗಂಟೆ 27 ನಿಮಿಷಗಳಲ್ಲಿ ವಿಮಾನದಲ್ಲಿ ಪ್ರಯಾಣಮಾಡಿದನು.

ತಿರುವಾಂಕೂರು ಮಹಾರಾಜರು ಲಂಡನ್ನಗರದಲ್ಲಿ ಒಂದು ಔತಣವನ್ನು ಏರ್ಪಡಿಸಿರುವರು. ಇದಕ್ಕಾಗಿ ಮಲಬಾರಿನಿಂದ ವಿಮಾನದ ಮೂಲಕ 3 ಕಟ್ಟು ಹಪ್ಪಳಗಳು ರವಾನಿಸಲ್ಪಟ್ಟಿದ್ದು, ಇವುಗಳ ಬೆಲೆ 139 ರೂ. ಗಳಂತೆ!

ರೇವಾ ಸಂಸ್ಥಾನದ ಮಹಾರಾಜರು ತಮ್ಮ ದೇಶದಲ್ಲಿ ಖಾದಿಯ ಕೈಗಾರಿಕೆಗೆ ಪ್ರೋತ್ಸಾಹಕೊಡುವ ಉದ್ದೇಶದಿಂದ ಕೈನೂಲು ಮತ್ತು ಕೈಮಗ್ಗದಲ್ಲಿ ನೇಯಲ್ಪಟ್ಟ ಖಾದಿಗೆ ಸುಂಕವನ್ನು ವಸೂಲ್ಮಾಡಕೂಡದೆಂದು ಅಪ್ಪಣೆಮಾಡಿರುವರು.

ಡಿಲಾವೇರ್ ಪ್ರಾಂತಕ್ಕೆ ಸೇರಿದ ಡೋವರ್ ಎಂಬ ಊರಿನ ಗವರ್ನರವರು ಕತ್ತಲೆಯಾದನಂತರ ರಸ್ತೆಗಳಲ್ಲಿ ತಿರುಗಾಡುವವರೆಲ್ಲರೂ ತಮ್ಮ ಬೂಟ್ಸುಗಳಿಗೆ ಒಂದು ಎಲೆಕ್ಟ್ರಿಕ್ ದೀಪವನ್ನು ಹಾಕಿಕೊಳ್ಳಬೇಕೆಂದು ಅಪ್ಪಣೆಮಾಡಿರುವರಂತೆ!

ಪಾಶ್ಚಿಮಾತ್ಯದೇಶಗಳಲ್ಲೆಲ್ಲಾ ಸೌಂದರ್ಯವತಿಯರ ಸ್ಪರ್ಧೆಯನ್ನು ಏರ್ಪಡಿಸುವದು ಸರ್ವಸಾಮಾನ್ಯವಾಗಿ ಹೋಗಿರುವದು. ಆದರೆ ಈಗ ಅಮೇರಿಕೆಯ ಕ್ಯಾಂಬರ್‌ವೆಲ್ ನಗರದಲ್ಲಿ ಕೆಲವರು ಕುರೂಪಿ ಸ್ತ್ರೀಯರಿಗಾಗಿ ಒಂದು ಸ್ಪರ್ಧೆಯನ್ನು ಏರ್ಪಡಿಸಿರುವರು. ಇದುವರೆಗೆ ಇಬ್ಬರು ಮಾತ್ರ ಆ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದಿರುವರಂತೆ!

ಕಳೆದ ಜೂನ್ 25 ನೇ ತಾರೀಖಿನ ದಿವಸ ಭಾರತೀಯ ಇತಿಹಾಸ ಸಂಶೋಧಕ ಶಾಲೆಯ 23 ನೇ ವಾರ್ಷಿಕೋತ್ಸವವು ಪುಣೆಯಲ್ಲಿ ಜರುಗಿತು. ಈ ಸಂಬಂಧವಾಗಿ ಏರ್ಪಡಿಸಲ್ಪಟ್ಟಿದ್ದ ಪ್ರದರ್ಶನದಲ್ಲಿ ಒಂದು ಢಕ್ಕಾ ಮಸ್ಲಿನ್ನಿನ ಸೀರೆಯು ಪ್ರದರ್ಶಿಸಲ್ಪಟ್ಟಿತ್ತು. ಆ ಸೀರೆಯು 16 ಮೊಳ ಉದ್ದವಿದ್ದು ಮಾಚಿಸಪೆಟ್ಟಿಗೆಯೊಳಗೆ ಸೇರಿಸಬಹುದಾದಷ್ಟು ತೆಳ್ಳಗಿದ್ದಿತಂತೆ!

ಕೇನ್ಸಾಸ್‌ನಗರದ ಆರ್ಥರ್‌ಮೇಯರ್‌ರವರ 25 ವರ್ಷದ ಮಿಸ್ ಮೇರಿ ಮ್ಯಾಕ್‌ಎಲಾಯ್ ಎಂಬ ಪುತ್ರಿಯು ಒಂದು ದಿನ ಸ್ನಾನಮಾಡುತ್ತಿದ್ದಾಗ ಇಬ್ಬರು ದರೋಡೆಕೋರರು ಬಲಾತ್ಕಾರವಾಗಿ ಮನೆಗೆ ನುಗ್ಗಿ ಅವಳನ್ನು ಜೊತೆಯಲ್ಲಿ ಸೆಳೆದುಕೊಂಡು ಹೋದರು. ಆರ್ಥರ್ ಮೇಯರ್‌ರವರು 90,000 ರೂಪಾಯಿಗಳನ್ನು ಕಳುಹಿಸಿದನಂತರ ಅವಳನ್ನು ಬಿಡುಗಡೆಮಾಡಿದರಂತೆ!

ಸರ್ಬಿಯಾದೇಶಕ್ಕೆ ಸೇರಿದ ಲಿಂಗ್‌ಫೀಲ್ಡ್ ಎಂಬ ಊರಿನ ಒಬ್ಬ ಮನುಷ್ಯನು ಅನೇಕ ವರ್ಷಗಳಿಂದಲೂ ಕಿವುಡನಾಗಿದ್ದನು. ಒಂದು ದಿನ ಅವನಿಗೆ ವಿಮಾನದಲ್ಲಿ ಕುಳಿತು ಪ್ರಯಾಣಮಾಡುವ ಪ್ರಸಂಗವು ಬಂದಿತು. ವಿಮಾನದ ಪ್ರಯಾಣವು ಮುಗಿಯುವ ಹೊತ್ತಿಗೆ ಆ ವಿಮಾನದ ಯಂತ್ರದಿಂದ ಉಂಟಾಗುತ್ತಿದ್ದ ಅಪಾರ ಶಬ್ದದಿಂದ ಅವನ ಕಿವುಡು ಸಂಪೂರ್ಣವಾಗಿ ಗುಣವಾಗಿದ್ದಿತಂತೆ!

ನೂಯಾರ್ಕ್‌ನಗರದಲ್ಲಿರುವ 'ಮೆಟ್ರೊಪಾಲಿಟನ್ ಒಪೆರಾ ಹೌಸ್' ಎಂಬ ನಾಟ್ಯಶಾಲೆಯಲ್ಲಿ 20 ವರ್ಷಗಳಿಂದಲೂ ಬಾಗಿಲು ಕಾಯುತ್ತಿದ್ದ ಕ್ಯಾಪ್ಟನ್ ಎಡ್ವರ್ ಎಂಬಾತನು ಕೆಲವು ದಿವಸಗಳ ಹಿಂದೆ ಮೃತಪಟ್ಟನು. ಆ ನಾಟ್ಯಶಾಲೆಗೆ ಬರುತ್ತಿದ್ದ ನಟಿಯರೆಲ್ಲರೂ ಒಳಕ್ಕೆ ಬರುವಾಗಲೂ ಹೊರಕ್ಕೆ ಹೋಗುವಾಗಲೂ ಒಂದೊಂದು ಸಾರೆ ಅವನನ್ನು ಚುಂಬಿಸುವದು ಪದ್ಧತಿಯಾಗಿದ್ದಿತಂತೆ!

ಆಸ್ಟ್ರೇಲಿಯಾ ದೇಶದಲ್ಲಿ ಬಿಳಿ ಜನರು ದೇಶೀಯ ಜನರ ಸ್ತ್ರೀಯರೊಡನೆ ಅಕ್ರಮವಾದ ಸ್ನೇಹವನ್ನು ಬೆಳೆಯಿಸಿ ಅದರಿಂದ ಉತ್ಪನ್ನರಾಗುವ ಕುಲಹೀನರ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಾ ನಡೆದಿರುವದರಿಂದ ಅಲ್ಲಿಯ ಸರಕಾರದವರು ಇನ್ನು ಮುಂದೆ ಬಿಳೀ ಜನರಾರೂ ದೇಶೀಯ ಸ್ತ್ರೀಯರೊಡನೆ ಸಂಬಂಧವನ್ನು ಬೆಳೆಯಿಸಕೂಡದೆಂದು ಒಂದು ಕಾನೂನನ್ನು ಹೊರಡಿಸಿರುವರು.

ಚಿಕಾಗೋ ನಗರದ ವಿಲಿಯಂ ಡಿಕ್ಸನ್ ಎಂಬವರು ಒಂದು ನಾಯಿಯನ್ನೂ ಒಂದು ಬೆಕ್ಕನ್ನೂ ಸಾಕಿರುವರು. ಬೆಕ್ಕು 2 ಮರಿಗಳನ್ನೂ, ಎರಡುದಿನಗಳು ಕಳೆದ ನಂತರ ನಾಯಿಯು 3 ಮರಿಗಳನ್ನೂ ಹಾಕಿದವು. ಈಗ ಆ ಬೆಕ್ಕು ಮತ್ತು ನಾಯಿಯು ತಮ್ಮ ಮರಿಗಳನ್ನೆಲ್ಲಾ ಒಟ್ಟುಗೂಡಿಸಿ. ಒಂದು ದಿನ ಬೆಕ್ಕು ಇನ್ನೊಂದು ದಿನ ನಾಯಿ ಹೀಗೆ ಸರದಿಯ ಮೇಲೆ ಆ ಮರಿಗಳನ್ನು ಉಪಚರಿಸುವವಂತೆ!

ಅರ್ಜೆಂಟಿನಾ ದೇಶಕ್ಕೆ ಸೇರಿದ ಮ್ಯಾರಿಯಾನಾಸ್ ಎಂಬಲ್ಲಿ ಒಂದು ನಾಯಿಯು ಜೇನು ಹುಳುಗಳ ಗುಂಪೊಂದನ್ನು ಅಟ್ಟಿಸಿಕೊಂಡು ಹೋಗಿ ಆ ಗುಂಪಿನ ರಾಣಿಯನ್ನು ಹಿಡಿದು ಕೊಂದಿತು. ಇದರಿಂದ ಕೋಪಗೊಂಡ ಇತರ ಹುಳುಗಳು ಆ ನಾಯಿಯನ್ನು ಮುತ್ತಿಕೊಂಡು ಕಚ್ಚಿ ಕೊಂದವು. ಅವುಗಳು ಅಷ್ಟಕ್ಕೇ ತೃಪ್ತಿಹೊಂದದೆ ಅದೇ ಮಾರ್ಗವಾಗಿ ಬಂದ ಇನ್ನೂ ನಾಲ್ಕಾರು ನಾಯಿಗಳನ್ನು ಕೊಂದು ಕಡೆಯಲ್ಲಿ ಎಲ್ಲವೂ ಒಟ್ಟಾಗಿ ಸಮೀಪದಲ್ಲಿದ್ದ ಒಂದಾನೊಂದು ನದಿಗೆ ಹೋಗಿ ಮುಳುಗಿ ಪ್ರಾಣಬಿಟ್ಟವಂತೆ!

ಇಟಲಿ ದೇಶಕ್ಕೆ ಸೇರಿದ್ದ ವಿಯನ್ನಾ ನಗರದ ಸಮೀಪದಲ್ಲಿರುವ ಗ್ರಾಜ್ ಎಂಬ ಊರಿನಲ್ಲಿ ಗ್ರ್ಯಾಸ್‌ಮನ್ ಉರುಫ್ ರಾಮುಸ್ ಎಂಬಾತನು ಸುಮಾರು 100 ಜನರಿಗೆ ಗುಪ್ತವಾದ ಶಸ್ತ್ರಚಿಕಿತ್ಸೆಯನ್ನು ಮಾಡಿದನೆಂಬ ಕಾರಣದಮೇಲೆ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವನು. ಈತನು ಕೆಲವು ಮೆಡಿಕಲ್ ವಿದ್ಯಾರ್ಥಿಗಳ ಸಹಾಯದಿಂದ, ನಿರುದ್ಯೋಗಿಗಳೂ, ಬಹುಪುತ್ರವಂತರೂ ಆದ ಜನರಿಂದ 45 ರೂ. ನಂತೆ ಚಾರ್ಜನ್ನು ವಸೂಲು ಮಾಡಿ ಪುನಃ ಮಕ್ಕಳನ್ನು ಪಡೆಯದಂತೆ ಗುಪ್ತವಾದ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದನಂತೆ! ಪೋಲೀಸರು ರಾಮುಸ್‌ನನ್ನೂ ವಿದ್ಯಾರ್ಥಿಗಳನ್ನೂ ದಸ್ತಗಿರಿ ಮಾಡಿರುವರು.

ವಿಯನ್ನಾ ನಗರದ ಒಬ್ಬ ಸ್ತ್ರೀಯು ಕೆಲವು ದಿವಸಗಳವರೆಗೆ ತನ್ನ ಮನೆಗೆ ಬೀಗಹಾಕಿಕೊಂಡು ಹೋಗಬೇಕಾಗಿ ಬರಲು ತಾನಿಲ್ಲದವೇಳೆಯಲ್ಲಿ ಕಳ್ಳರು ಮನೆಗೆ ನುಗ್ಗಬಹುದೆಂದು ಊಹಿಸಿ, ಹಜಾರದ ಮೇಜಿನ ಮೇಲೆ 15 ರೂಪಾಯಿಗಳ ನೋಟನ್ನೂ, ಒಂದು ಪ್ಯಾಕೆಟ್ ಸಿಗರೇಟುಗಳನ್ನೂ ಇಟ್ಟು ಮನೆಗೆ ನುಗ್ಗಬಹುದಾದ ಕಳ್ಳರಿಗೆ ಅಲ್ಲಿಟ್ಟಿರುವ ಹಣವನ್ನು ಸಂತೋಷದಿಂದ ತೆಗೆದುಕೊಂಡು ಹೋಗಬಹುದೆಂದೂ, ಇತರ ಸಾಮಾನುಗಳನ್ನು ಯಾವುದನ್ನೂ ಮುರಿದು ಹಾಳು ಮಾಡಕೂಡದೆಂದೂ ಒಂದು ಚೀಟಿಯನ್ನು ಬರೆದಿಟ್ಟು ಹೊರಟುಹೋದಳಂತೆ! ಅವಳು ಹಿಂತಿರುಗಿಬಂದು ನೋಡಿದಾಗ ನಿಜವಾಗಿಯೂ ಕಳ್ಳರು ಬಂದು ಇತರ ಯಾವ ಪದಾರ್ಥಗಳನ್ನೂ ಮುಟ್ಟದೆ ಹಣವನ್ನು ಮಾತ್ರ ತೆಗೆದುಕೊಂಡು ಹೋಗಿದ್ದರಂತೆ!

ಅಸ್ಪೃಶ್ಯೋದ್ಧಾರವೆಂದರೆ ಹೋಳಿಯ ಹಬ್ಬವೇನು?

ಬೆಳಗಾಂವ ಜಿಲ್ಲೆಗೆ ಸೇರಿದ ಹೂಲಿ ಎಂಬ ಗ್ರಾಮವು ಅತ್ಯಂತ ಪ್ರಸಿದ್ಧವಾಗಿದ್ದು ಇಲ್ಲಿ ಅನೇಕ ದೇವಾಲಯಗಳೂ, ತೀರ್ಥಗಳೂ ಇರುವುವು. ಇಂಥ ಪವಿತ್ರವಾದ ಸ್ಥಾನಕ್ಕೆ ಹಿಂದೆ ದಕ್ಷಿಣಕಾಶಿ ಎಂಬ ಅಭಿಧಾನವಿತ್ತೆಂದು ಶಿಲಾಲೇಖಗಳ ಆಧಾರದಿಂದ ತಿಳಿದುಬರುತ್ತದೆ.

ಇಲ್ಲಿ ಈಗ್ಗೆ ಅಂದಾಜ ೩೦೦೦ ಜನಸಂಖ್ಯೆಯಿರುತ್ತಿದ್ದು ಗ್ರಾಮವು ದಿನೇದಿನೇ ಕ್ಷೀಣದಶೆಯನ್ನು ಹೊಂದುತ್ತ ಇರುವದು. ಇದರ ಕಾರಣವೇನೆಂದರೆ—ಇಲ್ಲಿಯ ಮುಖ್ಯ ದಂಧೆಯು ಶೇತಕಿಯಾಗಿರುತ್ತದೆ. ಅಂದಮೇಲೆ ಈಗಿನ ಕಾಲಕ್ಕೆ ಹೇಳುವದೇನು? ಹೀಗಿದ್ದರೂ ಕೂಡ ಇಲ್ಲಿಯ ಯಾವತ್ತೂ ಮತದವರು ಐಕ್ಯದಿಂದ ಇರುವರು. ಇಂಥ ಈ ಗ್ರಾಮದಲ್ಲಿ ಅಸ್ಪೃಶ್ಯವರ್ಗದ ಚಲವಾದಿ ಮತ್ತು ಮಾದಿಗರೆಂಬ ಎರಡುವರ್ಗಗಳು ಇರುತ್ತಿದ್ದು ಇವರಲ್ಲಿ ಆಗಿಂದಾಗ್ಗೆ ಸ್ಪೃಶ್ಯಾಸ್ಪೃಶ್ಯ ಸಂಬಂಧವಾಗಿ ತಮ್ಮತಮ್ಮೊಳಗೆ ಬಡಿದಾಡುತ್ತಿರುವದನ್ನು ನೋಡಿ ಊರ ಸಭ್ಯಗೃಹಸ್ಥರು ಅವರಿಗೆ ಬುದ್ಧಿವಾದವನ್ನು ಹೇಳುತ್ತಿರುವದರಿಂದ ಅವರು ತಮ್ಮ ತಮ್ಮಲ್ಲಿ ಸೂಳೆಯರ (ಜೋಗತಿಯರ) ನ್ನು ಬಿಡುವ ಪದ್ಧತಿಯನ್ನು ಕಡಿಮೆ ಮಾಡಿರುವರು. ದೇವಿಜಾತ್ರೆ, ಮೊಹರಂ ಇತ್ಯಾದಿ ಕಾರ್ಯಗಳಲ್ಲಿ ಕುರಿ ಕೋಳಿಗಳ ಹಿಂಸೆಮಾಡುವ ಪದ್ಧತಿಯನ್ನು ಸಹ ತೆಗೆದುಹಾಕಿರುವರು. ಮತ್ತು ಊರಜನರ ಸದ್ಬೋಧದಿಂದ ಅವರು ತಮ್ಮತಮ್ಮೊಳಗೆ ಅಸ್ಪೃಶ್ಯದ ಭಾವನೆಯನ್ನು ತೆಗೆದುಹಾಕಿ ಉಭಯರೂ ಒಂದೇ ಶಾಲೆಯಲ್ಲಿ ತಮ್ಮತಮ್ಮ ಮಕ್ಕಳನ್ನು ಕಲಿಸ್ವಲಿಕ್ಕೆ ಒಪ್ಪಿಗೆಯನ್ನು ಕೊಟ್ಟಿರುವರು. ಹೀಗಿದ್ದರೂ ಇವರಲ್ಲಿ ಅನ್ನೋದಕವ್ಯವಹಾರವು ಮಾತ್ರ ನಡೆಯುವದಿಲ್ಲ. ಆದ್ದರಿಂದ ಲೋ|| ಬೋರ್ಡಿನವರು ಅವರವರಿಗೆ ಬೇರೆ ಬೇರೆ ಎರಡು ಭಾವಿಗಳನ್ನು ಕಟ್ಟಿಸಿ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿರುವರು. ಹೀಗಿದ್ದ ನಮ್ಮ ಗ್ರಾಮಕ್ಕೆ ಹಿಂದೆ ತಾ|| ೨೩-೫-೩೩ ನೆಯ ದಿವಸ ಬೆಳಗಾಂವ ಮುರಗೋಡ ಕಡೆಯಿಂದ ನಾಲ್ಕು ಜನ ತರುಣರು 'ಅಸ್ಪೃಶ್ಯರ ಉದ್ಧಾರ, ಅಸ್ಪೃಶ್ಯರ ಉದ್ಧಾರ, ಗಾಂಧಿ ಮಹಾರಾಜಕಿ ಜೈ' ಅನ್ನುತ್ತ ಊರಲ್ಲಿ ಸಂಚರಿಸಲು, ಇದನ್ನು ಕೇಳಿದ ಇಲ್ಲಿಯ ಸಭ್ಯಜನರು ಆ ತರುಣರಿಗೆ ಇಲ್ಲಿಯ ಅಸ್ಪೃಶ್ಯವರ್ಗದವರಾದ ಚಲವಾದಿ ಮತ್ತು ಮಾದಿಗರೆಂಬ ಎರಡು ವರ್ಗದಲ್ಲಿದ್ದ ಸ್ಪೃಶ್ಯಾಸ್ಪೃಶ್ಯದ ಬಡಿದಾಟವನ್ನು ಅವರಿಗೆ ಬುದ್ಧಿಹೇಳಿ ಕಡಿಮೆಮಾಡಿದರೆ ನಿಮ್ಮ ಉದ್ದೇಶ ಸಫಲವಾಗುವದೆಂದು ಹೇಳಿದರೂ ಕೂಡ ಅದನ್ನು ಲಕ್ಷ್ಯಕ್ಕೆ ತರದೆ ಮತ್ತು ಈ ದಿವಸ ಸಾಯಂಕಾಲಕ್ಕೆ ಊರಜನರ ಸಮ್ಮತಿಯಿಲ್ಲದೆಯೂ ಮತ್ತು ಅಸ್ಪೃಶ್ಯರು ಇವರ ಮಾತಿಗೆ ಒಪ್ಪಿಕೊಳ್ಳದಿದ್ದರೂ ಕೂಡ ಇಲ್ಲಿಯ ಒಬ್ಬಿಬ್ಬರ ಸಹಾಯದಿಂದ ಇಬ್ಬರು ಚಲವಾದಿಯರಿಂದ ಕೆರೆಯನ್ನೂ ಅಸ್ಪೃಶ್ಯವರ್ಗದ ಒಬ್ಬ ದಾಸಯ್ಯನಿಂದ ಒಂದು ಭಾವಿಯನ್ನೂ ಬಲಾತ್ಕಾರದಿಂದ ಮುಟ್ಟಿಸಿದರು. ಕೂಡಲೇ ಊರಲ್ಲಿ ಅಶಾಂತತೆಯು ಉತ್ಪನ್ನವಾಗಿ ಅವರನ್ನು ಹುಡುಕಲಿಕ್ಕೆ ಕೆಲವರು ಪ್ರಾರಂಭಮಾಡಲು ಅಷ್ಟರಲ್ಲಿ ಅವರು ತಮ್ಮ ಕಾಲುಗಳಿಗೆ ಬುದ್ಧಿ ಹೇಳಿದರು. ಇತ್ತಕಡೆ ಊರಲ್ಲಿ ಆದ ಅಶಾಂತತೆಯನ್ನು ಸಭ್ಯಜನರು ತಮ್ಮತಮ್ಮೊಳಗೆ ಹೇಳಿ ಶಾಂತತೆಯನ್ನು ನೆಲೆಗೊಳಿಸಿ ತಮ್ಮತಮ್ಮ ಧರ್ಮದಪ್ರಕಾರ ಕೆರೆ ಭಾವಿಯನ್ನು ಶುದ್ಧಗೊಳಿಸಿಕೊಂಡರು. ಈಗ್ಗೆ ಊರಲ್ಲಿ ಮೊದಲಿನಂತೆ ಶಾಂತತೆಯಿರುವದು. ಈ ಪ್ರಕಾರ ಆ ಆ ಊರ ಮತ್ತು ಆ ಆ ಪ್ರಾಂತದ ಪರಿಸ್ಥಿತಿಯನ್ನು ತಿಳಿಯದೆ ಮತ್ತು ಅಲ್ಲಿಯ ಬಹುಜನರ ಸಮ್ಮತಿ ಇಲ್ಲದೆ ಈಗಿನ ತರುಣರು ಮಾಡುವದು ಅಸ್ಪೃಶ್ಯೋದ್ಧಾರವೋ ಅಥವಾ ಹೋಳಿಯ ಹಬ್ಬವೋ? ವಾಚಕರೇ ಊಹಿಸತಕ್ಕದ್ದು. ಮುಂದೆ ಆ ತರುಣರು ಪುನಃ ಬೆಳಗಾಂವಿಗೆ ಹೋಗುವ ಮಾರ್ಗದಲ್ಲಿ ಕೆಲ ಕೆಲವು ಗ್ರಾಮಗಳಲ್ಲಿ ಇಲ್ಲಿಯಂತೆ ಆಚರಿಸಲು ಅಸ್ಪೃಶ್ಯೋದ್ಧಾರಕ್ಕೆ ಬದಲು ತಾವೇ ಜನರಿಂದ ಅನೇಕ ಪ್ರಕಾರ ಉದ್ಧಾರವಾಗಿ ಹೋದದ್ದನ್ನು ಮರೆತು ಬೆಳಗಾಂವಿಯ ಮಾರುತಿ ದೇವಾಲಯದೊಳಗೆ ಮೇಲಕ್ಕೆ ಕೈ ಎತ್ತಿ ಹೂಲಿಯಲ್ಲಿ ಯಾವತ್ತೂ ಪ್ರಮುಖ ಜನರ ಸಮ್ಮತಿಯಿಂದ ಕೆರೆ, ಭಾವಿ, ಗುಡಿಗಳಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸಿದೆವೆಂದು ತಮ್ಮ ಪೌರುಷವನ್ನು ಹೇಳಿದ ಈ ತರುಣರಿಗೆ ಏನನ್ನಬೇಕು? ಮತ್ತು ಇವರ ಹೇಳಿಕೆಯಂತೆ ಅಲ್ಲಿ ತೊರಡುವ ಸಂಯುಕ್ತ ಕರ್ನಾಟಕ ಪತ್ರದ ಮೇ ಆಖೈರಾದ ಸಂಚಿಕೆಯಲ್ಲಿ ಪ್ರಕಟವಾದದ್ದನ್ನು ಕೇಳಿದರೆ ಆ ಪತ್ರಕರ್ತರಿಗೆ ಯಾವ ವಂದನೆಯನ್ನರ್ಪಿಸಬೇಕು? ಏಕೆಂದರೆ ಪತ್ರಿಕಾಕರ್ತರು ತಮ್ಮ ಪತ್ರದೊಳಗೆ ಯಾವ ಯಾವ ಸ್ಥಾನಗಳ ಲೇಖಗಳನ್ನು ಪ್ರಕಟಗೊಳಿಸಬೇಕಾಗುವದೋ ಆ ಆ ಸ್ಥಾನಗಳ ನಿಜಸ್ಥಿತಿಯನ್ನು ತಿಳಿದು ಈಗಿನ ಸುಧಾರಣೆಯ ಕಾಲದಲ್ಲಿ ಪ್ರಕಟಿಸುವದು ಅವರ ಆದ್ಯಕರ್ತವ್ಯವಾಗಿರುತ್ತದೆ. ಇದನ್ನು ಮರೆತು ಕೆಲವು ತರುಣರು ಜನಸಮ್ಮತಿಯಿಲ್ಲದ ಕಾರ್ಯಕ್ಕೆ ಕೈಹಾಕಿ ಪ್ರತಿಯೊಬ್ಬರಲ್ಲಿ ಅಶಾಂತತೆಯನ್ನು ನೆಲೆಗೊಳಿಸುವ ತಮ್ಮ ಲೇಖಗಳನ್ನೂ ವ್ಯಾಖ್ಯಾನಗಳನ್ನೂ ಜನಸಮುದಾಯದಲ್ಲಿ ಪ್ರಚಾರಗೊಳಿಸಿ ತಮ್ಮ ಹೆಸರನ್ನು ಮುಂದೆ ಮಾಡಿಕೊಳ್ಳುವ ಭರದಲ್ಲಿ ಬಿದ್ದು ದೇಶಹಿತದ ಕಾರ್ಯವನ್ನು ಮಾಡತಕ್ಕ ಮಹನೀಯರಿಗೆ ಕಂಟಕರಾಗುತ್ತಿರುವರು. ಇಂಥವರಿಗೆ ಜಗದೀಶನು ಪ್ರಾಯಶ್ಚಿತ್ತವನ್ನು ಕೊಡುವದರಲ್ಲಿ ಏನೂ ಅಭ್ಯಂತರವಿಲ್ಲ. ಇಂಥ ಲೋಕಕಂಟಕರು ಯಾರಾದರೂ ತಮ್ಮ ಊರಿಗೆ ಬಂದಕೂಡಲೇ ಅಲ್ಲಿಯವರು ಅವರಿಗೆ ಯೋಗ್ಯ ಪ್ರಾಯಶ್ಚಿತ್ತವನ್ನು ಕೊಡುವದೇ ಯೋಗ್ಯಕರ್ತವ್ಯವಾಗಿರುವದು. ಈ ಕಾರ್ಯವನ್ನು ಯಾವತ್ತರೂ ತಪ್ಪದೇ ಮಾಡಿಕೊಂಡು ಈಗಿನ ಸಮಯದ ಸುಧಾರಣೆಯಲ್ಲಿ ಆದಷ್ಟು ಅನುಕೂಲತೆಯನ್ನು ಒದಗಿಸಿಕೊಂಡು ದಿನೇದಿನೇ ಮುಂದಕ್ಕೆ ಹೆಜ್ಜೆಯನ್ನಿಟ್ಟು ನಮ್ಮ ನಮ್ಮೊಳಗೆ ಶಾಂತತೆಯನ್ನು ಕಾಪಾಡಿಕೊಳ್ಳುವದನ್ನು ಮರೆಯಬಾರದೆಂದು ಯಾವತ್ತೂ ವಾಚಕರಿಗೆ ತಿಳಿಸಿ ಈ ನನ್ನ ಸತ್ಯವಾರ್ತೆಯ ಲೇಖವನ್ನು ಸಮಾಪ್ತಿಗೊಳಿಸುವೆನು.

ಓರ್ವ ಸತ್ಯವಾದಿ.

ರಾಜಧಾನಿಯಲ್ಲಿ ಮ|| ರಾ|| ದೇವೇಂದ್ರಪ್ಪನವರ ಶ್ಲಾಘ್ಯವಾದ ಸಂಗೀತ.

ರಾಜಧಾನಿಯಲ್ಲಿರುವ ಅರಮನೆ ಸಂಗೀತವಿದ್ವಾನ್ ಮ|| ರಾ|| ದೇವೇಂದ್ರಪ್ಪನವರು ಕಳೆದ ತಿಂಗಳು 30 ನೆಯ ತಾರೀಕಿನ ದಿವಸ ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಸಭೆಯವರ ನಿವಾಸಸ್ಥಾನದಲ್ಲಿ ತಮ್ಮ ಶಿಷ್ಯಮಂಡಲಿಯೊಡಗೂಡಿ ಸಂಗೀತಕಛೇರಿಯನ್ನು ಮಾಡಿದರು. ಸಂಗೀತವು ಸುಮಾರು ರಾತ್ರಿ 7 ಘಂಟೆಗೆ ಪ್ರಾರಂಭವಾಗಿ 11 ಘಂಟೆಗೆ ಮುಕ್ತಾಯವಾದರೂ ಇವರ ಶ್ರಾವ್ಯವಾದ ಗಾನಾಲಾಪದ ಮಾಧುರ್ಯವನ್ನು ಎಷ್ಟು ಪಾನಮಾಡಿದರೂ ಸಭಿಕರಾರಿಗೂ ಅಲಂಬುದ್ಧಿಯೇ ಹುಟ್ಟದೆ ಎಲ್ಲರೂ ಆನಂದ ಪ್ರವಾಹದಲ್ಲಿ ಮುಳುಗೇಳುತ್ತಿದ್ದರು. ಇವರ ಅದ್ಭುತವಾದ ಹಾಡುಗಾರಿಕೆಯು ಪಂಡಿತಪಾಮರರಿಗೆ ತಲೆದೂಗಿಸುವಂತೆ ಮಾಡಿತು. ಸಂಗೀತವಿದ್ಯೆಯಲ್ಲಿ ಅತ್ಯಂತ ಖ್ಯಾತರಾಗಿದ್ದ ಮಹಾಪ್ರಭುಗಳ ಕೃಪೆಗೆ ಪೂರ್ಣ ಪಾತ್ರರಾಗಿದ್ದ ಶ್ರೀ|| ಗಾನವಿಶಾರದ ಬಿಡಾರ ಕೃಷ್ಣಪ್ಪನವರು ತಮ್ಮಲ್ಲಿರುವ ಗಾನವಿದ್ಯೆಯನ್ನು ಉದಾರ ಭಾವದಿಂದ ಅನೇಕರಿಗೆ ದಾನಮಾಡಿದುದರಿಂದ ಆ ಮಹೋದಯರು ಸ್ಥೂಲಕಳೇಬರವನ್ನು ಬಿಟ್ಟಿದ್ದರೂ ಶಿಷ್ಯಮುಖಾಂತರವಾಗಿ ಅವರ ಯಶಶ್ಶರೀರವು ಭೂಮಿಯಲ್ಲಿ ಸ್ಥಿರವಾಗಿ ನಿಂತಿರುತ್ತದೆ. ಅಂಥ ಶಿಷ್ಯಕೋಟಿಯಲ್ಲಿ ಮ|| ರಾ|| ದೇವೇಂದ್ರಪ್ಪನವರು ಪ್ರಧಾನಶಿಷ್ಯರಾಗಿದ್ದಾರೆ. ಆದರೆ ಅವರ ಶಿಷ್ಯಮಂಡಲಿಯವರು ಇದುವರೆವಿಗೂ ವಾದ್ಯವಾದನಗಳಲ್ಲಿ ಖ್ಯಾತರಾಗಿರುವಂತೆ ಹಾಡುಗಾರಿಕೆಯಲ್ಲಿ ಅಷ್ಟು ಖ್ಯಾತರಾದವರು ಯಾರೂ ಇಲ್ಲವೆಂದು ಅನೇಕರು ಅಲ್ಲಲ್ಲಿ ಗೊಣಗುಟ್ಟುತ್ತಿದ್ದರು. ಆದರೆ ಅವರ ಸಚ್ಛಿಷ್ಯರಾದ ಮ|| ರಾ|| ದೇವೇಂದ್ರಪ್ಪನವರು ಸಭಾಮುಖದಲ್ಲಿ ತಮ್ಮ ಗುರುಗಳಂತೆಯೇ ಬಹು ಪ್ರೌಢಿಮೆಯಿಂದ ಗಾನಮಾಡಿ ಸಭಿಕರ ಚಿತ್ತಾಕರ್ಷಣವನ್ನುಂಟುಮಾಡುವುದರಲ್ಲಿ ದಕ್ಷತೆಯುಳ್ಳವರಾಗಿರುವುದರಿಂದ ಶ್ರೀ|| ಕೃಷ್ಣಪ್ಪನವರ ಯಶೋವಲ್ಲರಿಯು ಇವರ ಆಶ್ರಯದಿಂದ ಪ್ರಪಂಚದಲ್ಲೆಲ್ಲಾ ಹಬ್ಬಲು ಅವಕಾಶವಾಯಿತು. ನಮ್ಮ ಭರತಖಂಡದಲ್ಲಿ ಸಂಗೀತಕೋವಿದರೂ, ವೈದ್ಯಶಾಸ್ತ್ರಕೋವಿದರೂ ಮೊದಲಾದವರು ಪೂರ್ವಕಾಲದಲ್ಲಿ ಅನಂತವಾಗಿದ್ದರು. ಇತ್ತೀಚೆಗೆ ಅಂಥ ವಿದ್ವಾಂಸರು ಸಂಕುಚಿತ ಭಾವದಿಂದ ತಮ್ಮ ವಿದ್ಯೆಯನ್ನು ಇನ್ನೊಬ್ಬರಿಗೆ ಹೇಳಿಕೊಡದೆ ಇದ್ದುದರಿಂದ ಸಕಲಕಲಾಪರಿಪೂರ್ಣವಾದ ನಮ್ಮ ಭರತಭೂಮಿಯಲ್ಲಿ ಬರಬರುತ್ತ ಕಲೆಗಳೆಲ್ಲವೂ ನಷ್ಟವಾಗುತ್ತ ಬಂದವು. ಇದರಿಂದ ನಮ್ಮ ಭರತಖಂಡವು ಸತ್ವಶೂನ್ಯವಾಯಿತು. ತಥಾಪಿ ಸಂಗೀತವಿದ್ವಾಂಸರ ಹೃದಯವಂತೂ ಸ್ವಭಾವವಾಗಿ ಸಂಕುಚಿತವಾದದ್ದು. ಆದರೆ ಗತಿಸಿದ ಬಿಡಾರ ಕೃಷ್ಣಪ್ಪನವರು ಈ ಸ್ವಭಾವಕ್ಕೆ ಎಡೆಗೊಡದೆ ತಮ್ಮ ವಿದ್ಯೆಯನ್ನು ಜಾತಿ-ಮತವೈಷಮ್ಯಗಳಿಲ್ಲದೆ ಭಕ್ತಾರ್ಥಿಗಳಾಗಿಬಂದ ವಿದ್ಯಾರ್ಥಿಗಳಿಗೆಲ್ಲಾ ಧಾರಾಳವಾಗಿ ವಿದ್ಯಾಭಿಕ್ಷೆಯನ್ನು ಕೊಟ್ಟಿರುವರೆಂಬುವದಕ್ಕೆ ಅವರ ಶಿಷ್ಯರೇ ಸಾಕ್ಷಿಯಾಗಿದ್ದಾರೆ. 'ಯಥಾ ಗುರುಸ್ತಥಾ ಶಿಷ್ಯಃ' ಎಂಬುಕ್ತಿಯಂತೆ ಮ|| ದೇವೇಂದ್ರಪ್ಪನವರೂ ಸಹ ಗುರುಗಳ ಮೇಲ್ಪಂಕ್ತಿಯನ್ನನುಸರಿಸಿ ಅನೇಕ ಶಿಷ್ಯರನ್ನು ತಯಾರುಮಾಡಿ ಸಭೆಗಳಲ್ಲಿ ತಮ್ಮ ಜೊತೆಯಲ್ಲಿ ಹಾಡಿಸುತ್ತಿರುವುದು ಗಾನವಿದ್ಯಾಭಿಲಾ
ರಿಗೆಲ್ಲಾ ಬೋಧಪ್ರದವಾದುದಾಗಿದೆ. ಇದರಂತೆಯೇ ಇ
ಜಲತರಂಗಾದಿವಾದ್ಯಗಳನ್ನು ಬಾರಿಸುವದರಲ್ಲಿಯೂ ಅಸಾಧಾ
ವಾದ ಪಾಂಡಿತ್ಯವನ್ನು ಪಡೆದಿರುತ್ತಾರೆ. ಇವರ ಕೀರ್ತಿ
ಇವರ ಗುರುಗಳ ಕೀರ್ತಿಯಂತೆ ಎಲ್ಲೆಲ್ಲಿಯೂ ವ್ಯಾಪಿಸು
ಭಗವಂತನು ಅನುಗ್ರಹಿಸುವುದಲ್ಲದೆ, ಆಯುರಾರೋಗ್ಯ
ಸಂಪತ್ಸಮೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತ

ಪ್ರತ್ಯಕ್ಷ

ದುಃಖವಾರ್ತೆಯು.

ಜಿಲ್ಲಾ ಬೆಳಗಾಂವ, ಮು|| ಹೂಲಿ.

ನಮ್ಮ ಗ್ರಾಮದಲ್ಲಿ ಅತ್ಯಂತ ಸಭ್ಯಗೃಹಸ್ಥರಾದ
ಮಲ್ಲಪ್ಪ ಸಜ್ಜನ ಇವರು ಇದೇ ತಾ|| ೧೯-೬-೩೩ ನೆ
ವಾರ ಪ್ರಾತಃಕಾಲಕ್ಕೆ ಇನ್‌ಫ್ಲುಯೆಂಜಾರೋಗದಿಂದ
ಭೌತಿಕದೇಹವನ್ನು ತ್ಯಜಿಸಿದ ಸುದ್ದಿಯು ಊರಲ್ಲೆಲ್ಲ ತಿಳಿ
ದಲೇ ಇಲ್ಲಿಯ ಯಾವತ್ತೂ ಮತದವರು ಬಂದು ಇವರ ಸಮಾ
ರ್ಯವನ್ನು ಇಲ್ಲಿಯ ಪಂಚವಣ್ಣಿಗೆ ಬೃಹನ್ಮಠದ ಪೂಜ್ಯಪಾದ
ನೀಲಕಂಠಶಿವಾಚಾರ್ಯರವರ ಅಪ್ಪಣೆಯಪ್ರಕಾರ ಸಂಜೆಯ
ಗಂಟೆಗೆ ವಿಧ್ಯುಕ್ತವಾಗಿ ಜರುಗಿಸಿದರು. ಸದರಿ ಮಲ್ಲಪ್ಪನ
ಇಲ್ಲಿಯ ಸ್ಥಳ ಪಂಚರಿದ್ದು ಕೋ. ಆ. ಸೊಸೈಟಿಯ
ಸ್ಥಾಪಿತ ಸಭಾಸದರಿದ್ದು ಇಲ್ಲಿಯ ಸಾರ್ವಜನಿಕ ಕೆಲಸ
ಮತ್ತು ಪಂಚವಣ್ಣಿಗೆ ಬೃಹನ್ಮಠದಲ್ಲಿ ಸ್ಥಾಪಿಸಿದ ವೀ
ಧರ್ಮೋತ್ತೇಜಕ ಸಂಸ್ಥೆಯ ಕೆಲಸವನ್ನು ಅತಿದಕ್ಷ
ಮಾಡುತ್ತಿದ್ದರು. ಇವರ ತಂದೆಯವರು ಜನಹಿತಕ್ಕಾಗಿ ಕ
ಕೆರೆಯ ವ್ಯವಸ್ಥೆಯನ್ನು ಚನ್ನಾಗಿ ಇಟ್ಟಿದ್ದು ನಂದಿಕೇಶ್ವರದೇ
ಲಯವನ್ನು ಸ್ಥಾಪಿಸಿ ದೇವತಾಪ್ರತಿಷ್ಠೆಯನ್ನು ಪುನಃ
ಶ್ರೀ ಗುರುಲಿಂಗಜಂಗಮ ಸೇವೆಯಲ್ಲಿ ಸದಾ ನಿರತರಾಗಿ
ಇವರು ತಮ್ಮ ೫೦ ವರ್ಷವಯಸ್ಸಿನಲಿಯೇ ಶಿವೈಕ್ಯರಾ
ಅತ್ಯಂತ ದುಃಖದಾಯಕವೆಂದು ಬೇರೆ ಹೇಳಬೇಕಾಗಿಲ್ಲ.
ರಿಂದ ಇವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲಿ.

ಶ್ರೀಗುರುತತ್ತ್ವಪದಗಳು.

ಈ ಪುಸ್ತಕವು ಹೊಸದಾಗಿ ಮುದ್ರಿಸಲ್ಪಟ್ಟ
ಪುರಂದರದಾಸರು ಯಾವ ರೀತಿಯಾಗಿ ಮನೋ
ವಾದ ಹಾಡುಗಳನ್ನು ಭಕ್ತಿರಸಪ್ರಧಾನವಾಗಿ ರಚಿ
ವರೋ, ಅದರಂತೆಯೇ ಜಗದಾಚಾರ್ಯರ ವಿಷಯ
ಲೋಕೋದ್ಧಾರಕ್ಕಾಗಿ ಅವರ ಅಂಕಿತದಿಂದ ಅ
ಪದಗಳು ಬಹು ಮನೋಹರವಾಗಿ ರಚಿಸಲ್ಪ
ಮುದ್ರಿಸಲ್ಪಟ್ಟಿರುವವು. ಈ ಗ್ರಂಥವನ್ನು ಪ್ರ
ಯೊಬ್ಬ ಗುರುಭಕ್ತರೂ ಅವಶ್ಯವಾಗಿ ಸಂಗ್ರ
ಬೇಕು.

ಬೆಲೆ ೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆ
ಮೈಸೂರು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿ

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿ ಪ್ಲಾಸ್—೧೧—೧೯೩೩ ಪ
೫೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮುಕ್ತಿಯೂ, ಭುವನೇಶ್ವರ, ಅಂತಾ ಮೊದಲ
೩೧ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ತ್ರ ಚಾರ್ಜ್ ೧೪೦ ರೂ. ಮಕ್ಕ
ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪ ಅವ್ರಗಾರ ಮಕೊಳ್ಳಿರಿ. ಬೆಲೆ
ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪ
ಸದರಿ ಕಂಪನಿಯು ಏಜಂಟರುಗಳಿಂದ ಪಡಬಯಿಸ್ಸಿ ಅ ಗಲಿಚ್ಛಿಸುವವರು ಗ್ರಾಹಕ
ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾ
ಕಂಪನಿಗೆ ತಿಳಿಸತಕ್ಕದ್ದು.

ತಾ|| ೧—೬—೧೯೩೩.

ಮ್ಯಾನೇಜರ, ಶ್ರೀ

ಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ
ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು
ಸುಲಭಕ್ರಯದಲ್ಲಿ ದೊರೆಯುವವು.

ಷಧಿ ಹೆಸರು	ತೊಲೆ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ವಂಗ	೧	೩—೦—೦
ಂಗ	೧	೧—೦—೦
ಭಸ್ಮಗಳು.		
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಭಸ್ಮ	೧	೦—೧೨—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಳಭಸ್ಮ	೧	೦—೮—೦
ನಭಸ್ಮ	೧	೦—೮—೦
ಭಸ್ಮ	೧	೦—೮—೦
ಮೂರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦—೧೨—೦
ಕಭಸ್ಮ	೧	೩—೦—೦
ತ್ರಭಸ್ಮ	೧	೪೦—೦—೦
ಲಭಸ್ಮ	೧	೦—೮—೦
ಭಸ್ಮ	೧	೦—೪—೦
ಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಳಭಸ್ಮ	೧	೦—೮—೦
ರಿ (೧ನೇ ನಂಬರ್)	೧	೫೦—೦—೦
ರಿ (೨ನೇ ನಂಬರ್)	೧	೪೦—೦—೦
ಚಿತ ಸೂರ್ಯಪುಟಿ	೧	೧—೦—೦
ಚಿತ ಅಗ್ನಿಪುಟಿ	೧	೦—೮—೦

ೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ
ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು
ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.
೧ ಣೆ ಟಿಕೇಟ (ಸ್ಟ್ಯಾಂಪು) ಕಳುಹಿಸಿದಲ್ಲಿ ಕ್ಯಾಟ
ಕಳುಹಿಸುವೆವು.

ಲಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು
ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ
ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ.
ಗಳನ್ನು ಚತುರರಾದ ನೇಯ್ಗೆಯವರಿಂದ ಮನೋ
ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ
ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ
ಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆ
ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ
ವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿ
ವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲ
ರೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ
ಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು
ಬೇಕೆಂದು ಕೋರುತ್ತೇವೆ.

ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಪ್ಪಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೊಮಿಯೋಪತಿ ಔಷಧಗಳೂ ನಮ್ಮಲ್ಲಿ ಎಲ್ಲಾ ಸಾಧನಸ್ಥಗಳಲ್ಲಿ ರಕಂ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಇತರ ಮದ್ದುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ನೆಗಡಿ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಶ್ವಾಸಕೋಶಗಳ ರೋಗಕ್ಕೆ ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೆ '**ಕಂಪೌಂಡು ಸಿರಪು ಫೋಸ್ಫರ**' ತರಿಸಿ ಕುಡಿಯಿರಿ.

8 ಔನ್ಸಿಗೆ ರೂ. 3-8-0.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [44]

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ವೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಪ್ರೀತಿಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[25] **ಬ್ರ್ಯಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೫ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೫ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೬ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೬ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೬ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशीनाथशास्त्री यांचें भाषण (मराठी)	೮ आणे
Speeches by Pandit Shri Kashinatha Shastri (*English*)	12 As
ವೇದೋಕ್ತಶಿವಪೂಜಾವಿಧಿ	೧೦ ಆ
ವೀರಶೈವರತ್ನ	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಲಿಂಗೋತ್ಪತ್ತಿ ಲಾಕೆಟ್ಸ್	೨ ಆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ ಸಹಿತ)	೧ ರೂ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೧—೩
ಸದ್ಯಃ ಶ್ರೀಶಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯ ಶ್ಲೇಷ್ಮದ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವವು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೯-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[26] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಕದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಜುಲೈ ೧೯೩೩ [ಸಂಚಿಕೆ ೧೧

ರೇಣುಕವಿಜಯಪುರಾಣಂ.

ಶ್ರಾವಣಮಾಸವು ಸಮೀಪಿಸಿತು! ಪ್ರತಿಯೊಂದು ಗ್ರಾಮದಲ್ಲಿಯೂ ಈ ಮಹಾಪುರಾಣವನ್ನು ಕೇಳಿ ಧನ್ಯರಾಗಬೇಕು!

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ ರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಜೀರಿಗೆಯವರ ಜಗಿದಾಟ.

ಲೇಖಕ—ದೈವಜ್ಞ ವಿನೋದ.

‘ವೀರಶೈವಮತವು ರಾಜಕೀಯ ಕ್ಷೇತ್ರಕ್ಕೆ ಯೋಗ್ಯವಲ್ಲ’ ವೆಂಬ ಲೇಖಕ್ಕೆ ಜೀರಿಗೆ ಎಂಬವರು ಪ್ರತಿ ಲೇಖವನ್ನು ಬರೆದು ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದ್ದಾರೆ. ನನ್ನ ಲೇಖವನ್ನು ಸರಿಯಾ ಓದಿನೋಡಿ ತಮ್ಮ ಅಭಿಪ್ರಾಯವನ್ನು ಹೊರಗೆಡಹಬೇಕಾ ತ್ತು. ನಮ್ಮ ಮತದ ಉದಾತ್ತ ತತ್ವಗಳು ಕ್ಷಣಿಕವಾದ ಜ್ಯಾಂಗಭೋಗದಾಶೆಗೆ ಮನಸೋಲತಕ್ಕ ಕ್ಷುದ್ರತತ್ವಗಳಲ್ಲ; ಧರ್ಮಾನುಷ್ಠಾನತತ್ಪರತೆಯಿಂದ ಜಾಗ್ರತೆಯಾಗಿ ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಿಸಬೇಕೆಂಬುವುದೇ ನನ್ನ ಲೇಖದ ಉದ್ದೇ . ಇದಲ್ಲದೆ ಮತದ ನಿಜಸಿದ್ಧಾಂತ ತತ್ವವನ್ನು ಅರಿತು ಅದ ಪೇಕ್ಷೆಗಾಗಿಯೂ ಬರೆದಿರುವೆನು. ಇದೇ ರೀತಿಯಾಗಿ ರಾಜಕೀ ಕ್ಷೇತ್ರದಲ್ಲಿ ಪ್ರವೇಶಿಸಿ ರಾಜಾಧಿರಾಜರನ್ನು ತಮ್ಮ ಶಿಷ್ಯ ನ್ನಾಗಿ ಮಾಡಿಕೊಂಡ ಗುರುಪೀಠಾಧಿಕಾರಿಗಳ ಹಾಗೂ ಶಿವಶರ ಐತಿಹಾಸಿಕ ವಿಷಯಗಳನ್ನೊಳಗೊಂಡ ಲೇಖವನ್ನು ಕಣ್ಣೆತ್ತಿ ನೋಡದ ಶ್ರೀ ಜಗದ್ಗುರು ಪಂಚಾಚಾರ್ಯರ ನಿಂದಾರೂಪ ಬುದ್ಧಿಯಿಂದ ಆ ಭಗವತ್ಪಾದರು ಈಚಿನವರೆಂದೂ ಅವರು ಸ್ವತಃ ತಾವೇ ಮತಸ್ಥಾಪನಾಚಾರ್ಯರೆಂದು ಬರೆದಿಲ್ಲ ವರೆಂದೂ ಬಸವನು ವಚನಗಳನ್ನು ಬರೆದಿರುವದರಿಂದ ಅವನು ಸಿದ್ಧಾಂತ ಸಂಸ್ಥಾಪನಾಚಾರ್ಯನೆಂದೂ ಬರೆದಿರುವ ಅಮಂಗಲ ಖವನ್ನು ನೋಡಿದರೆ ನಗೆಬರುತ್ತದೆ. ಜೀರಿಗೆಯವರ ಲೇಖ ು ಆಚಾರ್ಯರ ಬಗ್ಗೆ ಅಸೂಯೆಯ ಅಟ್ಟಹಾಸವನ್ನು ಬಿಟ್ಟ ರಿಸ ತೊಡಗಿದೆ. ಗುರುದ್ರೋಹಿಗಳಾದ ಸನ್ಯಾಸಿಗಳ ಹಾವಳಿ ಬಲೆಯಲ್ಲಿ ಸಿಕ್ಕಿದ ಕೆಲ ಜನರು ಪಂಚಪೀಠದವರಿಗೆ ವಂಚಕ ಗಿ ತಮ್ಮ ಸಂಚಿನ ಜಾಲದಾಳಿಯನ್ನು ಬೀಸತೊಡಗಿದ್ದಾರೆ ರುದ್ರೋಹವು ಸಾಮಾನ್ಯವಾದುದಲ್ಲ. ಈ ಗುರುದ್ರೋಹ ು ಕಾಡಿಚ್ಚಿನ ಜಳಕ್ಕೆ ನೊಂದು ಬೆಂದು ಎಂದೆಂದೂ ಇಂಥ ಹವನ್ನೆಸಗುವದಿಲ್ಲವೆಂದು ಪಶ್ಚಾತ್ತಾಪ ಹೊಂದುತ್ತ ಗುರು ನಿಷ್ಠರಾಗಲು ಈಗೀಗ ಅನೇಕರು ಮುಂದಾಗ ತೊಡಗಿ ರೆ. ಅವರೆಲ್ಲರ ನಾಮಧೇಯಗಳನ್ನು ಉದಾಹರಣೆಯಿಂದ ಪ್ರಕಟಿಸುವದು ಪ್ರಸಕ್ತವಲ್ಲವಾದ್ದರಿಂದ ಬಿಟ್ಟಿದೆ. ಇನ್ನು ಮತಧರ್ಮ ವಿಚಾರವಾಗಿ ವಾದಭೂಮಿಕೆಯಲ್ಲಿ ಪ್ರವೇಶಿಸಿ ಪ್ರಚಂಡರೂಪವಾಗಿ ವಾದವಿವಾದಗಳನ್ನು ಮಾಡಬಹುದು. ಆದರೆ ಜೀರಗೆಯವರ ಲೇಖನಮಾಲೆಯಲ್ಲಿ ಆಚಾರ್ಯರ ಬಗ್ಗೆ ಸ್ವಲ್ಪಾದರೂ ಭಕ್ತಿಯ ಅಂಕುರವು ಸಹ ಸಿಗಲಾರದು. ಬಸವನನ್ನು ಬೆಳಕಿಗೆ ತರುವ ಅಬ್ಬರದಲ್ಲಿ ಶಿವಶರಣರ ಕಾಲ ವ್ಯತ್ಯಾಸಗೊಳಿಸಿದ್ದಾರೆ. ೯ ನೇ ಶತಮಾನದಲ್ಲಿದ್ದ ದೇವರದಾಸಿಮಯ್ಯನು ಬಸವನ ಕೂಡ ಕೆಲಸ ಮಾಡಿದನೆಂದು ಬರೆದಿರುವ ಇವರ ಸಂಶೋಧನ ಬುದ್ಧಿಗೆ ಬೆಲೆ ಇಲ್ಲ. ಇತಿಹಾಸಜ್ಞರು ಇವರ ಬಿಕ್ಷತನವನ್ನು ನೋಡಿ ನಗದಿರರು. ಬಸವನಿಗೂ ದೇವರದಾಸಿಮಯ್ಯನಿಗೂ ಮೂರು ಶತಮಾನಗಳು ಅಂತರವಾಗಿದ್ದರೂ ಜೀರಿಗೆಯವರು ಬಸವನ ಶಿವಾನುಭವ ಮಂಟಪದಲ್ಲಿ ಮೋಹರ ತಕ್ಕಯ್ಯ, ಮಾದರ ಚೆನ್ನಯ್ಯ ಮೊದಲಾದ ಬಸವನ ಗುರುಗಳ ಪಂಕ್ತಿಯಲ್ಲಿ ದೇವರದಾಸಿಮಯ್ಯನು ಮುಪ್ಪಿನ ಶರಣನಾಗಿದ್ದನಂತೆ! ಸರಿ, ಗುರುನಿಂದಾಗ್ರಸ್ತರಾದವರಿಗೆ ಹಿಂದುಮುಂದಿನ ವಿಚಾರವು ಬರುವದು ಹೇಗೆ? “ಎತ್ತು ಮುಂದು; ಗಾಡಿ ಹಿಂದು ಗಾಡಿ ಮುಂದು ಮಾಡಿ ಎತ್ತು ಹಿಂದು ಮಾಡುವುದಕ್ಕಾಗುತ್ತದೆಯೇ?” ಎಂದು ಇವರ ಹಂಬಲದ ಹಳಸಿಕೆಯನ್ನು ನೋಡಿದರೆ ಪರಮವಿಷಾದವಾಗುತ್ತದೆ. ಬಸವನು ಮೋಹರ ಮಾದರನ್ನು ಸ್ತುತಿಮಾಡಿದ್ದಾನೆ. ಆಚಾರ್ಯರನ್ನು ಏಕೆ ಸ್ತುತಿಸಿಲ್ಲ? ಆದ್ದರಿಂದ ಬಸವನಿಗಿಂತ ಪೂರ್ವದಲ್ಲಿ ಆಚಾರ್ಯರೇ ಇದ್ದಿಲ್ಲವೆಂದು ಬರೆಯುವ ಜೀರಗೆಯವರ ಬುದ್ಧಿಯು ಜೀರಿಗಿಂತ ಸಣ್ಣದಾಗಿದೆ. ಈ ರೀತಿ ಬರೆಯುವ ಜೀರಿಗೆಯವರ ಲೇಖಗಳ ಕಡೆಗೆ ಯಾರೂ ಗಮನಕೊಡದಿದ್ದರೂ ಸಾಮಾನ್ಯ ಜನಗಳಿಗೆ ಇದು ಭ್ರಮೆಯನ್ನುಂಟುಮಾಡಬಹುದೆಂದು ಜೀರಿಗೆಯವರ ಸಮಾಚಾರವನ್ನು ತೆಗೆದುಕೊಳ್ಳಬೇಕಾಯಿತು.

* * *

ಕೋಹತ್ ನಗರಕ್ಕೆ 3 ಮೈಲು ದೂರದಲ್ಲಿರುವ ತಪ್ಪಿ ಎಂಬ ಗ್ರಾಮದಲ್ಲಿ ಬಜ್‌ಗುಲ್‌ಖಾನ್ ಎಂಬ ಒಬ್ಬ ವೃದ್ಧನಿರುವನು. ಇವನಿಗೆ 160 ವರ್ಷ ವಯಸ್ಸಾಗಿದ್ದು ಅವನಿಗೆ 99 ಮತ್ತು 100 ವರ್ಷಗಳ ಇಬ್ಬರು ಮಕ್ಕಳಿರುವರಂತೆ!

ವಿಚಿತ್ರಪ್ರಪಂಚ.

ಪ್ರೊಫೆಸರ್ ಅರ್ನೆಸ್ಟ್ ಜಾನೆಕ್ ಎಂಬವರು ಈ ನಮ್ಮ ಭೂಮಿಯು 1000 ವರ್ಷಗಳಿಗೆ 5 ಅಂಗುಲ ದಂತೆ ಅಳತೆಯಲ್ಲಿ ಚಿಕ್ಕದಾಗುತ್ತಿರುವದೆಂದು ನಿರ್ಧರಿಸಿರುವರು.

ನ್ಯೂಯಾರ್ಕ್‌ನಗರದಲ್ಲಿ ಒಂದು ಹೊಸತರಹ ಚಲನಚಿತ್ರದ ಕ್ಯಾಮರಾವು ತಯಾರಿಸಲ್ಪಟ್ಟಿರುವದು. ಇದು ಒಂದು ಸೆಕೆಂಡಿಗೆ 2,500 ಫೋಟೋಗಳನ್ನು ತೆಗೆಯುವದಂತೆ!

ಆರ್ಕ್‌ಟಿಕ್ ಸಮುದ್ರದ ಸಮೀಪದಲ್ಲಿ ನಾಲ್ಕು ಕಾಲುಗಳುಳ್ಳ ಒಂದು ವಿಚಿತ್ರವಾದ ಮೀನು ದೊರೆತಿರುವದು! ಅದು ನೆಲದಮೇಲೆ ಇತರ ಪ್ರಾಣಿಗಳಂತೆ ನಡೆಯುವದಂತೆ!

ಸ್ಕಾಟ್ಲಂಡ್ ದೇಶದ ಬ್ಯಾಂಕುಗಳಲ್ಲಿ ಖೋಟಾ ನಾಣ್ಯಗಳನ್ನು ಪತ್ತೆಮಾಡಲು ಕೋತಿಗಳು ನೇಮಿಸಲ್ಪಟ್ಟಿರುವವು. ಈ ಕೋತಿಗಳು ಪ್ರತಿಯೊಂದು ನಾಣ್ಯವನ್ನೂ ಕಚ್ಚಿ, ಖೋಟಾನಾಣ್ಯವನ್ನು ತೆಗೆದುಹಾಕುವವಂತೆ!

ಚಿಕಾಗೋನಗರದಲ್ಲಿ ನಡೆಯುತ್ತಿರುವ ‘ವರ್ಲ್ಡ್ಸ್ ಫೇರ್’ ಎಂಬ ಪ್ರದರ್ಶನದಲ್ಲಿ ಒಂದು ಅತ್ಯಾಶ್ಚರ್ಯಕರವಾದ ‘ಶಬ್ದಕೋಶ’ ವು ಪ್ರದರ್ಶನಕ್ಕಿಡಲ್ಪಟ್ಟಿರುವದು. ಇದು ಒಬ್ಬ ಮನುಷ್ಯನಷ್ಟು ಎತ್ತರವಾಗಿದ್ದು, ವಿದ್ಯುಚ್ಛಕ್ತಿಯಿಂದ ತನ್ನಷ್ಟಕ್ಕೆ ತಾನೇ ತೆರೆದು ಮುಚ್ಚಿಕೊಳ್ಳುವದು. ಇದರ ಮುಂಭಾಗದಲ್ಲಿ ಮೇಲಕ್ಕೆ ‘ಫೋಟೋ ಎಲೆಕ್ಟ್ರಿಕ್ ಐ’ ಎಂಬ ವಿದ್ಯುತ್ಸಾಧನವು ಪ್ರಕಾಶಿಸುತ್ತಿರುವದು. ಯಾರಾದರೂ ಆ ಕೋಶದಲ್ಲಿ ತಾವು ನೋಡಬೇಕೆಂದಿರುವ ಶಬ್ದವನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡು ಅದರ ಮುಂದೆ ನಿಂತುಕೊಂಡರೆ, ಮೇಲ್ಭಾಗದಲ್ಲಿ ಉರಿಯುತ್ತಿರುವ ‘ಫೋಟೋ ಎಲೆಕ್ಟ್ರಿಕ್ ಐ’ ದೀಪವು ಆತನ ಮನಸ್ಸಿನಲ್ಲಿರುವದನ್ನು ಕೂಡಲೇ ಗ್ರಹಿಸುವದಂತೆ! ಮತ್ತು ಆ ಅದ್ಭುತ ಆಕಾರದ ಕೋಶದ ಪುಟಗಳು ತಮಗೆ ತಾವೇ ತಿರುವಿ ಬೇಕಾದ ಶಬ್ದವಿರುವ ಪುಟಕ್ಕೆ ಬಂದು ನಿಲ್ಲುವದಂತೆ! ಹಾಗೂ ಮೇಲಿನಿಂದ ಪ್ರಕಾಶಿಸುವ ದೀಪದ ಬೆಳಕು ಗೊತ್ತಾದ ಶಬ್ದದ ಮೇಲೆ ಬೀಳುವದಂತೆ!

ಸ್ವೀಕಾರ

ಮೈಸೂರು ರಾಜಧಾನಿಯಲ್ಲಿರುವ ಪಂಡಿತ ಶ್ರೀ|| ಹೊಸಮಠದ ಚರಮೂರ್ತಿ ಬಸವಲಿಂಗಸ್ವಾಮಿಗಳವರು ತಮಗೆ ಅಸ್ಥಾನವಿದ್ವತ್ಸ್ಥಾನವು ಪ್ರಾಪ್ತವಾದ ಸಂತೋಷಕ್ಕಾಗಿ ಶ್ರೀ ಜಗದಾಚಾರ್ಯರ ಹೆಸರಿನಿಂದ 5 ರೂ. ಗಳನ್ನು ಸಮರ್ಪಿಸಿ ಪ್ರಭಾಪೋಷಣಕ್ಕೋಸ್ಕರ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೇಸಾಗಿದುದು.)

ಈ ಮೇಲಿನ ವಿಚಾರಸರಣಿಯನ್ನೇ ಸಮರ್ಥಿಸುವ ವಿಚಾರಸೂತ್ರದ ಶೈಲಿಯನ್ನೂ ನಾವಿಲ್ಲಿ ತೋರಿಸುತ್ತೇವೆ. ಬಾದರಾಯಣಮುನಿಯು—'**ಶಬ್ದ ಇತಿಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್**' (ಬ್ರ. ಸೂ. ೧-೩-೨೮). ಎಂದು ಸೂತ್ರಿಸಿದ್ದಾನೆ. ಈ ಸೂತ್ರದಲ್ಲಿ ಪರಬ್ರಹ್ಮಾಭಿಧನ ಶಿವನು ವೇದ (ನಾದದ ಪರಿಣಾಮರೂಪವಾದ ಶಬ್ದತತ್ತ್ವ) ಪೂರ್ವಕವಾಗಿಯೇ ವಿಶ್ವಪ್ರಪಂಚವನ್ನು ನಿರ್ಮಿಸುವನೆಂದು ಹೇಳಲ್ಪಟ್ಟಿದೆ. ಇದರ ತಾತ್ಪರ್ಯವೇನೆಂದರೆ, ಇಂದ್ರ, ವಸು, ರುದ್ರ ಮೊದಲಾದ ದೇವತೆಗಳಿಗೆ ಬೇರೆ ಬೇರೆ ಶರೀರಗಳಿರುವುವಾದ್ದರಿಂದ ಆ ಎಲ್ಲ ದೇವತೆಗಳೂ ಶರೀರಾದಿಗಳುಳ್ಳವರೆಂದು ಪೂರ್ವಸೂತ್ರದಿಂದ ಹೇಳಲ್ಪಡಲು ಈ ವಿಷಯವಾಗಿ ವಾದಿಯು ಆಕ್ಷೇಪಿಸುತ್ತಾನೆ; ಹೇಗೆಂದರೆ, ಇಂದ್ರಾದಿದೇವತೆಗಳೂ ಶರೀರವುಳ್ಳವರೇ ಎನ್ನುವದಾದರೆ ದೇವಾದಿವಾಚಕಗಳಾದ ಶಬ್ದಗಳಲ್ಲಿ ವಿರೋಧವು ಘಟಿಸುವುದು; ಏಕೆಂದರೆ, ಅನಾದಿಯಾದ ಶಬ್ದವು ಅನಾದಿಯಾದ ಅರ್ಥದೊಡನೆ ನಿತ್ಯಸಂಬಂಧವಿರುವುದನ್ನೊಪ್ಪಿ ವೇದವು ತನ್ನರ್ಥದಲ್ಲಿ ಎರಡನೆಯ ಪ್ರಮಾಣದ ಅಪೇಕ್ಷೆಮಾಡುವುದಿಲ್ಲವಾದಕಾರಣ ಅದರಲ್ಲಿ ನಿರಪೇಕ್ಷಪ್ರಾಮಾಣ್ಯವು ಸಿದ್ಧಿಸುವುದೆಂದು ಪೂರ್ವಮೀಮಾಂಸೆಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ನೀವಾದರೋ ಈಗ ಇಂದ್ರಾದಿಶಬ್ದಗಳಿಗೆ 'ಅನಿತ್ಯಶರೀರವ್ಯಕ್ತಿಗಳು' ಎಂಬರ್ಥವನ್ನಂಗೀಕರಿಸುವಿರಿ, ಈ ನಿಮ್ಮ ನುಡಿಯಿಂದ ಶಬ್ದಾರ್ಥಗಳ ಸಂಬಂಧವೂ ಅನಿತ್ಯವೆನಿಸುವುದಲ್ಲವೆ? ಶಬ್ದವು ನಿತ್ಯವಾಗಿರುವಂತೆ ಅದರ ಅರ್ಥವಾದರೂ ನಿತ್ಯವಾಗಿರುವುದಾದರೆ, ಅವೆರಡರ ಸಂಬಂಧವೂ ನಿತ್ಯವಾದುದೆಂದೊಪ್ಪಬಹುದು. ಮೀಮಾಂಸಕರಾದರೋ ನಿತ್ಯವಾದರ್ಥದೊಡನೆ ನಿತ್ಯವಾದ ಶಬ್ದದ ನಿತ್ಯಸಂಬಂಧವನ್ನಂಗೀಕರಿಸಿಯೇ ಅದರ ನಿರಪೇಕ್ಷಪ್ರಾಮಾಣ್ಯವನ್ನು ಹೇಳುತ್ತಾರೆ. ಆದರೆ, ಈ ನಿಮ್ಮ ಹೇಳುವಿಕೆಯ ಮೇರೆಗೆ ಇಂದ್ರಾದಿಶಬ್ದಗಳ ಸಂಬಂಧವು ಶರೀರವ್ಯಕ್ತಿಗಳೊಡನಿರುವುದೆಂದು ತಿಳಿದುಬರುವುದು; ಶರೀರಗಳಾದರೋ ಹುಟ್ಟತಕ್ಕವುಗಳು, ನೀವು ಹುಟ್ಟುವ ದೇಹವ್ಯಕ್ತಿಗಳನ್ನು ಪ್ರತ್ಯಕ್ಷಪ್ರಮಾಣದಿಂದಂತೇ 'ಈ ಶರೀರಕ್ಕೆ ಹರದತ್ತನನ್ನಬೇಕು' 'ಇವನಿಗೆ ಧನದಮಿತ್ರನೆನ್ನಬೇಕು' ಎಂಬ ಸಂಕೇತಮಾಡುವಿರಿ. ಅಂದರೆ ಆ ಆ ವ್ಯಕ್ತಿಗಳು ಹುಟ್ಟಿದ ಬಳಿಕ ಆ ಆ ಹೆಸರಿಡುವಿರಷ್ಟೇ! ಹೀಗೆ ಆ ಆ ಶಬ್ದಗಳಿಗೆ ಬೇರೊಂದು ಪ್ರಮಾಣದ ಹಂಗಿರುವುದು ಕಂಡುಬರುತ್ತದೆ. ಇದರಿಂದ ಇಂದ್ರಾದಿಗಳಿಗೂ ಶರೀರವಿರುವುದೆನ್ನುವಲ್ಲಿ ಅವರ ಹೆಸರಾದರೂ ಅವರವರ ಶರೀರೋತ್ಪತ್ತಿಯ ತರುವಾಯವೇ ಸಂಭವಿಸುವುದೆಂಬುದು ಸ್ಪಷ್ಟವಾಗುವುದಾದ್ದರಿಂದ ಇಂದ್ರಾದಿ ದೇವತೆಗಳು ಸಶರೀರಿಗಳೆಂದೊಪ್ಪಿದರೆ ಆ ಇಂದ್ರಾದಿ ಶಬ್ದಗಳಲ್ಲಿ ಹೇಗೆ ವಿರೋಧವಾಗುವುದು?

ಎಂಬ ಪೂರ್ವಪಕ್ಷವು '**ಶಬ್ದ ಇತಿಚೇತ್**' ಎನ್ನುವ ಸೂತ್ರಾವಯವದಿಂದ ಸಂಭವಿಸಲು, ಸಿದ್ಧಾಂತಿಯಾದ ಬಾದರಾಯಣಮುನಿಯು '**ನಾತಃಪ್ರಭವಾತ್**' ಎಂಬ ಮೊದಲಾದ ಸೂತ್ರಾವಯವದಿಂದ ಹೀಗೆ ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ—'**ಅತಃಪ್ರಭವಾತ್**' ಅಂದರೆ ವೈದಿಕಶಬ್ದಗಳಿಂದೇ ದೇವತೆಗಳು ಮೊದಲಾಗಿ ಸರ್ವಜಗತ್ತೂ ಉತ್ಪತ್ತಿಯಾಗಿರುವುದರಿಂದ ಶಬ್ದಗಳಲ್ಲಿ ವಿರೋಧವಾಗದು. (ಶಬ್ದಾರ್ಥಗಳ ನಿತ್ಯಸಂಬಂಧವು ಬಾಧಿಸಲ್ಪಡದು) ವಸು, ರುದ್ರ, ಆದಿತ್ಯ, ವಿಶ್ವ **ಶ್ರೀ ಜಗದ್ಗುರು** [illegible] ದೇವತೆಗಳು ಹುಟ್ಟತಕ್ಕವರಾದ್ದರಿಂದ ಅವರು ದೇವ ನಾಮ[illegible] **ಮದಾರಸಿಂಹಾಸನ** [illegible] ವಸುರುದ್ರಾದಿದೇವತೆಗಳು (ಅರ್ಥ ಅನಿತ್ಯರೆನಿಸುವರೆಂದೂ, ಆ [illegible] ಗಳು) ಅನಿತ್ಯವಾಗಲು ಅವರ ಹೆಸರಿನ ಶಬ್ದಗಳೂ ಅನಿತ್ಯವೆಂದಂಗೀಕರಿಸಬೇಕಾಗುವುದೆಂದೂ ನಿಮ್ಮ ಹೇಳುವಿಕೆಯಲ್ಲವೇ! [illegible], ವಸು ಮೊದಲಾದ ಶಬ್ದಗಳು ಆಕೃತಿ (ಜಾತಿ) ವಾಚಕಗಳಾಗಿರುವುದರಿಂದ ಅವು ವಸುರುದ್ರಾದಿವ್ಯಕ್ತಿಗಳ ಹೇತುವೆನಿಸಿ ಮೊದಲೇ ಸಿದ್ಧವಾಗಿರುತ್ತವೆ. ಆದ್ದರಿಂದ ಆ ಶಬ್ದಗಳಿಗೆ ಅನಿತ್ಯತ್ವವಿರುವುದಿಲ್ಲ. ಮನುಷ್ಯ, ಪಶು ಮೊದಲಾದ ಶಬ್ದಗಳು ಜಾತಿವಾಚಕಗಳಾಗಿವೆ ವ್ಯಕ್ತಿವಾಚಕಗಳಲ್ಲ; ಅದುಕಾರಣವೇ ಆ ಶಬ್ದಗಳು ಈಗಿರುವ ಮತ್ತು ಮುಂದೆ ಹುಟ್ಟುವ ಮನುಷ್ಯ, ಪಶು ಮೊದಲಾದ ಪ್ರಾಣಿಗಳುತ್ಪತ್ತಿಗಿಂತ ಮೊದಲೇ ಸಿದ್ಧವಾಗಿರುವಂತೆ ಅವುಗಳರ್ಥವಾದರೂ ಹೇಗೆ ಇರುತ್ತವೆಯೋ ಹಾಗೆ ಸೃಷ್ಟಿಯಾರಂಭದಲ್ಲಿ ವಸುರುದ್ರಾದಿದೇವತೆಗಳ ವ್ಯಕ್ತಿಗಳು ಹುಟ್ಟುವುದಕ್ಕಿಂತ ಮುಂಚೇ ಆ ದೇವತೆಗಳ ಜಾತಿವಾಚಕಶಬ್ದಗಳೂ ಅವುಗಳ ಬೇರೆಬೇರೆ ಅರ್ಥಗಳೂ ಇದ್ದೇ ಇರುತ್ತವೆ. ಏಕೆಂದರೆ, ಶಬ್ದವು ಅರ್ಥವಿಲ್ಲದೆ ಹೇಗೆ ಇರಲಾರದೋ ಹಾಗೆ ಅರ್ಥವು ಶಬ್ದವಿಲ್ಲದೆ ಇರಲಾರದು ಎಂಬ ನಿಯಮವಿದೆ. ಈ ಸೃಷ್ಟಿಯು ಸಾದಿಯಾಗಿದ್ದರೆ ಮೊದಲು ಅರ್ಥವು ತರುವಾಯ ಶಬ್ದವು ಎಂದು ಹೇಳಬಹುದಾಗಿತ್ತು; ಆದರೆ ಸೃಷ್ಟಿಯು ಸಾದಿಯಲ್ಲ, ಅನಾದಿಯು. ಕಾರಣವಿಲ್ಲದೆ ಕಾರ್ಯವು ಘಟಿಸದಷ್ಟೇ! ಸೃಷ್ಟಿಯು ಕಾರ್ಯವಾದುದರಿಂದ ಅದರಕಾರಣವು ಮೊದಲೇ ಇರಬೇಕಾಗುವುದು. ಈ ವಿಶ್ವಪ್ರಪಂಚಕಾರ್ಯವು '**ಶಿವಶಕ್ತಿವಿಲಾಸ**' ವಲ್ಲವೇ? ಚಂದ್ರಚಂದ್ರಿಕೆಗಳಂತಿರುವ ಶಿವಶಕ್ತಿಗಳ ಸ್ವರೂಪಭೂತಗಳಾದ ಶಬ್ದಾರ್ಥಗಳು ಅನಾದಿಸಿದ್ಧವಾದ್ದರಿಂದ ಅವುಗಳ ನಿತ್ಯಸಂಬಂಧಕ್ಕೆ ಚ್ಯುತಿಯಿಲ್ಲ.

ಇನ್ನು, 'ಹರದತ್ತ' ನೆಂಬಾತನು ಹುಟ್ಟಿದಬಳಿಕ ಅವನ ಹೆಸರು ಬುದ್ಧಿಕಲ್ಪಿತವಾದುದರಿಂದ 'ಹರದತ್ತ' ನೆಂಬ ಶಬ್ದವು 'ಹರದತ್ತ'ನು ಎಂಬರ್ಥದೊಡನೆ ಸಂಬಂಧವಾಗುವಂತೆ, ವಸುರುದ್ರಾದಿ ಅರ್ಥಗಳು (ವ್ಯಕ್ತಿಗಳು) ಹುಟ್ಟಿದನಂತರ ಆ ಆ ಹೆಸರುಗಳು ಕಲ್ಪಿಸಲ್ಪಟ್ಟವುಗಳಾಗಿ ಆ ಶಬ್ದಾರ್ಥಗಳ ಸಂಬಂಧವಾಗುತ್ತಿರುವ ಪಕ್ಷದಲ್ಲಿ ಅದು ಪುರುಷಬುದ್ಧಿಕಲ್ಪಿತವೆನ್ನಬಹುದಾಗಿದ್ದಿತು. ಹಾಗೂ ಪುರುಷನ ಬುದ್ಧಿಯು ಅನ್ಯಪ್ರಮಾಣಾಧೀನವಾದು (ಪ್ರತ್ಯಕ್ಷಾದಿಪ್ರಮಾಣಾಂತರಾಪೇಕ್ಷೆಯುಳ್ಳದು) ದೆಂಬೀ ದೋಷಮೂಲಕ ವೇದದ ನಿರಪೇಕ್ಷಪ್ರಾಮಾಣ್ಯಕ್ಕೆ ಹಾನಿಯೊದಗುತ್ತಿತ್ತು; ಆದರೆ, ಈ ನ್ಯಾಯವು ಆದಿಸೃಷ್ಟಿಗೆ ಸಂಬಂಧಪಡುವುದಿಲ್ಲ. ಈ ಮೇಲೆ ನಿರ್ದೇಶಿಸಿದಂತೆ ವಸ್ವಾದಿಶಬ್ದಗಳು ವ್ಯಕ್ತಿವಾಚಕಗಳಾಗಿರದೆ ಜಾತಿವಾಚಕಗಳಾಗಿವೆ. ಪರಶಿವನು ವೇದಶಬ್ದದಿಂದ (ನಾದವೆಂಬ ಅಪರಪರ್ಯಾಯನಾಮವುಳ್ಳ ಶಬ್ದತತ್ತ್ವದಿಂದ) ವಿಶ್ವಪ್ರಪಂಚವನ್ನು ಹುಟ್ಟಿಸಿದನು. ಹಾಗೂ, ಅನಾದಿಪರಂಪರಾ ಪ್ರವಾಹರೂಪವಾದ ಈ ಜಗತ್ತನ್ನು ಮಹೇಶ್ವರನು '**ಧಾತಾ ಯಥಾ ಪೂರ್ವಮಕಲ್ಪಯತ್**' ಎಂಬ ಪ್ರಮಾಣಾನುಸಾರವಾಗಿ ಪೂರ್ವಕಲ್ಪದಲ್ಲಿದ್ದ ಪದಾರ್ಥಗಳಂತೆ ಈ ಕಲ್ಪದಾರಂಭದಲ್ಲಿಯೂ ಆ ಆ ಪದಾರ್ಥಗಳನ್ನು ಹುಟ್ಟಿಸುವನಾದ್ದರಿಂದ ವೇದವು ನಿತ್ಯವಾಗಿದೆ.

ಇನ್ನು ಶಬ್ದಪ್ರಮಾಣವು ಶಬ್ದದ ಅರ್ಥದ ಮಟ್ಟಿಗೇ ಪ್ರಮಾಣವೆನಿಸುವುದು. ಪ್ರತ್ಯಕ್ಷಾನುಮಾನಗಳೆಂಬ ಈ ಎರಡು ಪ್ರಮಾಣಗಳ ಸಹಾಯವಿಲ್ಲದೆ ಅದಕ್ಕೆ ಸತ್ಯಾಸತ್ಯಗಳ ನಿರ್ಣಯಸಾಮರ್ಥ್ಯವಿಲ್ಲದುದರಿಂದ ನಿರಪೇಕ್ಷಪ್ರಮಾಣವೆನಿಸುವ ವೇದವೆಂಬ ಶಬ್ದಪ್ರಮಾಣದಮೇಲೇ ಹೆಚ್ಚು ಶ್ರೆಯಮಾಡಿದವು ನಮಗೆ ಮಾತ್ರ ಸರಿದೋರದೆಂದು ನಾವು ಖಂಡಿತವಾಗಿ ಹೇಳುತ್ತೇವೆ' ಎಂದಾಕ್ಷೇಪಿಸುವ ಈಗಿನ ಚತುರಚೆನ್ನಿಗರಾದ ಚಿಣ್ಣರಿಗೊಂದೆರಡು ಚೆಲ್ವನುಡಿಗಳನ್ನು ಹೇಳುವಾ!

ಪ್ರಮಾಣವೆಂದರೇನು?—'**ಅಜ್ಞಾತಾರ್ಥಜ್ಞಾಪಕತ್ವಂ ಪ್ರಮಾಣತ್ವಮ್**' ಎಂದು ಪ್ರಮಾಣದ ಲಕ್ಷಣವಿದೆ; ತಿಳಿಯಲ್ಪಡದ ವಿಷಯವನ್ನು ತಿಳುಹಿಸಿಕೊಡುವುದು. ಎಂದು ಈ ವಾಕ್ಯದರ್ಥವು. ಪ್ರತ್ಯಕ್ಷವೂ ಅನುಮಾನವೂ ಎಂಬಿವೆರಡರ ಸಹಾಯದಿಂದೇ ಶಬ್ದಪ್ರಮಾಣವು ಸತ್ಯಾಸತ್ಯಗಳನ್ನು ನಿರ್ಣಯಿಸುವಲ್ಲಿ ಸಮರ್ಥವಾಗುವುದಾದರೆ ಮೂರನೆಯ ಪ್ರಮಾಣದ ಅವಶ್ಯಕತೆಯೇ ಇಲ್ಲ; ಬೌದ್ಧರಾದರೂ ನಿಮ್ಮ ಹಾಗೆ, ಪ್ರತ್ಯಕ್ಷಾನುಮಾನಗಳೆಂಬ ಎರಡೇ ಪ್ರಮಾಣಗಳನ್ನೊಪ್ಪುತ್ತಾರೆ. ಅವರು ಸ್ವತಂತ್ರವಾದ ವೈದಿಕಪ್ರಮಾಣವನ್ನು ಮನ್ನಿಸುವುದಿಲ್ಲ. ಈ ಸಂಗತಿಯನ್ನು ಅವರು ಸ್ಪಷ್ಟವಾಗಿಯೇ ಹೇಳುತ್ತಾರೆ; ನೀವು ಮಾತ್ರ ಶಬ್ದಪ್ರಮಾಣವು ಸ್ವತಂತ್ರವಾದುದಲ್ಲವೆಂದೂ ಅದು ಪ್ರತ್ಯಕ್ಷಾನುಮಾನಗಳ ಬೆಂಬಲದಿಂದ ಪ್ರಮಾಣವೆನಿಸುವುದೆಂದೂ ಹೇಳುವಿರಿ; ಈ ನಿಮ್ಮ ಹೇಳುವಿಕೆಯಲ್ಲಿಯೂ ಬೌದ್ಧರ ನುಡಿಯಲ್ಲಿಯೂ ವ್ಯತ್ಯಾಸವೇನೂ ಕಂಡುಬರುವುದಿಲ್ಲ, ಅಥವಾ ಈ ನಿಮ್ಮ ಆಕ್ಷೇಪದ ವಚನಗಳು ಇಂಗ್ಲಿಷ ಸಂಪ್ರದಾಯವನ್ನನುಸರಿಸಿಯೇ ಇದ್ದರೂ ಇರಬಹುದು; ಹೇಗೇ ಇರಲಿ!

ಶಬ್ದಪ್ರಮಾಣವು ಅನ್ಯಪ್ರಮಾಣದ ಬೆಂಬಲವುಳ್ಳದ್ದೆನ್ನುವ ಪಕ್ಷದಲ್ಲಿ ಅದು ಸ್ವತಃ ಪ್ರಮಾಣವಾಗಲಾರದು. ಒಬ್ಬ ನೆಟ್ಟ ಮುದುಕನು ಒಂದು ಚಿಕ್ಕಮಗುವಿಗೆ 'ಕುದುರೆಯು ಓಡುತ್ತದೆ' ಎಂದು ಹೇಳಲು, ಆ ಹಸುಳನು 'ಮುತ್ತಾ! ನೀನು ಅದು ಹೇಗೆ ಹೇಳುತ್ತೀಯೇ?' ಎಂದು ಕೇಳಿದಾಕ್ಷಣವೇ, ಆ ಮುತ್ತ (ಅಜ್ಜ)ನು ಓಡುತ್ತಿರುವ ಕುದುರೆಯ ಕಡೆ ಬೆಟ್ಟುಮಾಡಿ 'ಅಕ್ಕೋ! ನೋಡಿದೆಯಾ?' ಎಂದು ತೋರಿಸಲು ಅದರಿಂದ ಆ ಹುಡುಗನಿಗೆ ಪ್ರತ್ಯಕ್ಷಾನುಭವವಾಗುವುದು. ಆದರೆ, '**ಸ್ವರ್ಗಕಾಮೋಯಜೇತ**' '**ನಸಪುನರಾವರ್ತತೇ**' '**ಸ್ಥಾಣುಮನ್ಯೇನು ಸಂಯಂತಿ** [illegible] **ಯಥಾ ಶ್ರುತಮ್**' '**ಧ್ರುವಂಜನ್ಮ ಮೃತಸ್ಯ ಚ**' ಎಂಬೀ ಮೊದಲಾದ ವಾಕ್ಯಗಳು ನಿಜವಾದುವೇ ಎಂಬುದು ಹೇಗೆ? ಎಂದು ಯಾವನಾದರೊಬ್ಬ ಹಿರಿಯನೇ ವಿಚಾರಿಸಿದರೆ ಆ ಶ್ರುತಿಸ್ಮೃತಿವಾಕ್ಯಗಳು ಪ್ರಮಾಣಭೂತವಾದುವೆಂಬುದನ್ನು ಅವನಿಗೆ ನಿಶ್ಚಯಮಾಡಿಕೊಡುವುದಕ್ಕೆ ವೈದಿಕರು ಪ್ರತ್ಯಕ್ಷಾನುಮಾನಗಳಲ್ಲಿ ಯಾವುದನ್ನು ಸಹಾಯಕ್ಕಾಗಿ ತೆಗೆದುಕೊಳ್ಳಬೇಕು? ಅವೆರಡೂ ಪ್ರಮಾಣಗಳ ಹಂಗಿನವಲ್ಲದ ಆ ವೈದಿಕವಾಕ್ಯಗಳಿಗೆ ಅಪ್ರಮಾಣವೆನ್ನಬೇಕೋ? ಅವಕ್ಕೆ ಇತರ ಪ್ರಮಾಣಗಳ ಸಹಾಯವಿಲ್ಲದ್ದರಿಂದ ಅಪ್ರಮಾಣಗಳೇ ಎಂದು ಹೇಳುವುದಾದರೆ 'ಶಬ್ದವು ಮೂರನೆಯ ಪ್ರಮಾಣವು' ಎಂದು ಹೇಳುವುದರಲ್ಲಿ ಏನರ್ಥವಿದೆ?

ಯಾವ ವಾಕ್ಯವು ಅನ್ಯಪ್ರಮಾಣನಿರಪೇಕ್ಷವಾದುದೋ ಅದು ನಿಯಮವಾಗಿ ಸ್ವತಃಪ್ರಮಾಣವೇ ಆಗಿರುವುದು. ವೇದವು ಸ್ವತಃಪ್ರಮಾಣವಾಗಿರುವುದಾದಕಾರಣವೇ ಅದು ಅನ್ಯಪ್ರಮಾಣಸಾಪೇಕ್ಷವೆನಿಸಿಕೊಳ್ಳುವುದಿಲ್ಲ; ಈ ವಿಷಯದಲ್ಲಿ ವೈದಿಕಸಾಂಪ್ರದಾಯಿಕರ ಪರಿಭಾಷೆಯೆಂತಿರುವುದೆಂಬುದನ್ನೂ ಜಿಜ್ಞಾಸಾಬುದ್ಧಿಯುಳ್ಳವರು ಪರಾಮರ್ಶಿಸಬೇಕು. ಸಾಯಣಾಚಾರ್ಯನು ಕೃಷ್ಣಯಜುರ್ವೇದೀಯ ತೈತ್ತಿರೀಯ ಸಂಹಿತೆಯ ಭಾಷ್ಯಾರಂಭದಲ್ಲಿ ವೇದದ ಲಕ್ಷಣವನ್ನು ಹೀಗೆ ಉಲ್ಲೇಖಿಸಿದ್ದಾನೆ—'**ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋರಲೌಕಿಕಮುಪಾಯಂ ಯೋ ಗ್ರನ್ಥೋ ವೇದಯತಿ ಸ ವೇದಃ**' ಯಾವ ಗ್ರಂಥವು ಇಷ್ಟವಾದ ಸುಖದ ಪ್ರಾಪ್ತಿಗೂ ಅನಿಷ್ಟವಾದ ದುಃಖದ ಪರಿಹಾರಕ್ಕೂ ಅಲೌಕಿಕೋಪಾಯವನ್ನು ತಿಳುಹಿಕೊಡುವುದೋ ಅದುವೇ ವೇದವು. ಪ್ರಾಣಿಗಳಿಗೆ ಯಾವಾಗಲೂ ಸುಖವೇ ಇಷ್ಟವು. ದುಃಖವು ಅನಿಷ್ಟವಾಗಿರುವುದರಿಂದ, ತಮಗಿಷ್ಟವಾದ ಸುಖವು ಲಭಿಸಬೇಕೆಂದೂ ಅನಿಷ್ಟವಾದ ದುಃಖದ ಪರಿಹಾರವಾಗಬೇಕೆಂದೂ ಸರ್ವಪ್ರಾಣಿಗಳಿಚ್ಛೆಯಿರುವುದು ಸ್ವಾಭಾವಿಕವು. 'ವೇದವು ಸುಖದ ಪ್ರಾಪ್ತಿಗೂ ದುಃಖದ ನಿವೃತ್ತಿಗೂ ಅಲೌಕಿಕೋಪಾಯಜ್ಞಾನವನ್ನುಂಟುಮಾಡಿಕೊಡುವುದು.' ಎಂಬ ಲಕ್ಷಣಬೋಧಕವಾಕ್ಯದಲ್ಲಿರುವ ಅಲೌಕಿಕಪದದಿಂದ ಲೌಕಿಕೋಪಾಯಗಳು ವ್ಯಾವೃತ್ತಿಗೊಳಿಸಲ್ಪಟ್ಟಿವೆ. ವನಿತೆ, ಗಂಧ, ಪೂಮಾಲೆ ಮೊದಲಾದುವು ಇಲ್ಲವೆ ಅನುಕೂಲಗಳಾದ ಶಬ್ದಾದಿವಿಷಯಗಳು ಸುಖಸಾಧನವಾದುವೆಂಬುದು ಅನುಭವಸಿದ್ಧವಾಗಿರುವಂತೆ ಔಷಧಸೇವನೆ ಮೊದಲಾದುದು ರೋಗಜನ್ಯವಾದ ಅನಿಷ್ಟದುಃಖದ ನಿವೃತ್ತಿಗುಪಾಯವೆಂಬುದೂ ಪ್ರತ್ಯಕ್ಷಪ್ರಮಾಣದಿಂದರಿಯಲ್ಪಡುವುದು. ಮತ್ತು, ಅನ್ಯರ ಅನುಭವದ ಮೇಲಿಂದ ತನಗಾದರೂ ಆ ಆ ಉಪಾಯಗಳಿಂದ ಸುಖದ ಪ್ರಾಪ್ತಿಯೂ ದುಃಖದ ನಿವೃತ್ತಿಯೂ ಆಗಬಹುದೆಂಬ ಅನುಮಾನವೂ ಸಂಭವಿಸುವುದು; ಹಾಗೂ, ಆ ಅನುಮಿತಿಜ್ಞಾನದಿಂದ ಮನುಷ್ಯನು ಆ ಆ ಉಪಾಯಗಳನ್ನಾಶ್ರಯಿಸುತ್ತಿರುವುದೂ ಪ್ರಸಿದ್ಧವಿದೆ. ಇದೇ ಮೇರೆಗೆ ಉತ್ತರ (ಮುಂದಿನ) ಜನ್ಮದ ಸುಖಾದಿಗಳ ಉಪಾಯವನ್ನಾದರೂ ಅನುಮಾನದಿಂದರಿಯಬಹುದು; ಆದ್ದರಿಂದ ವೇದವೆಂಬ ಅಲೌಕಿಕೋಪಾಯಬೋಧಕಗ್ರಂಥದ ಹಂಗು ನಮಗೇಕೆ? ಎಂದು ಶಂಕಿಸಲಾಗದು. ಏಕೆಂದರೆ, ಪ್ರತ್ಯಕ್ಷಾನುಮಾನಗಳೆಂಬಿವೆರಡೂ ಲೌಕಿಕಪ್ರಮಾಣಗಳು. ಲೌಕಿಕೋಪಾಯಗಳಿಂದ ಲೌಕಿಕಗಳಾದ ಇಷ್ಟಪ್ರಾಪ್ತ್ಯನಿಷ್ಟಪರಿಹಾರಗಳು ಸಂಭವಿಸುವುವು. ಲೌಕಿಕೋಪಾಯವು ಈ ಜನ್ಮದಲ್ಲಿಯೇ ಉಪಯೋಗವಾಗುವುದೇ ಹೊರತು ಮುಂದಿನ ಜನ್ಮಕ್ಕುಪಯೋಗವಾಗಲಾರದು. ಮತ್ತು, ಅನುಮಾನದಿಂದ ಮುಂದಿನ ಜನ್ಮದ ಸುಖಾದಿಗಳ ಉಪಾಯಜ್ಞಾನವಾಗುವುದಾದರೂ ಸಾಮಾನ್ಯವೇ ಅಲ್ಲದೆ ವಿಶೇಷೋಪಾಯಜ್ಞಾನವು ಅನುಮಾನದಿಂದಾಗಲಾರದು. ಜ್ಯೋತಿಷ್ಟೋಮಾದಿಯಾಗವು ಉತ್ತರಜನ್ಮದಲ್ಲಿ ಇಷ್ಟವಾದ ಸ್ವರ್ಗವೆಂಬ ಸುಖಕ್ಕೆ ಕಾರಣವಾಗಿರುವುದೆಂದೂ ಕಲಂಜಭಕ್ಷಣವು (ನಂಜುವರಿದ ಕಣೆಯಿಂದ ಕೊಲ್ಲಲ್ಪಟ್ಟ ಜಂಕೆಯ ಅಗಡುತಿಂಬುದು) ಮೊದಲಾದ ಅಕಾರ್ಯಗಳನ್ನು ಬಿಡುವುದು ಮುಂದಿನ ಜನ್ಮದ ಅನಿಷ್ಟಪರಿಹಾರಕ್ಕೆ ಹೇತುವಾಗಿರುವುದೆಂದೂ ಜ್ಞಾನವಾಗಬೇಕಾದರೆ ವೇದವನ್ನುಳಿದು ಬೇರೆ ಯಾವ ಅನುಮಾನಗಳಿಂದ ತಾರ್ಕಿಕಶಿರೋಮಣಿಗಾದರೂ ಶಕ್ಯವಿಲ್ಲ. ಆದ್ದರಿಂದ 'ಇಷ್ಟಪ್ರಾಪ್ತ್ಯನಿಷ್ಟಪರಿಹಾರಗಳಿಗೆ ಅಲೌಕಿಕೋಪಾಯವನ್ನು ಬೋಧಿಸುವ ಗ್ರಂಥವೇ ವೇದವು' ಎಂದು ಹೇಳಲ್ಪಟ್ಟ ವೇದಲಕ್ಷಣವು ನಿರ್ದುಷ್ಟವಾಗಿದೆ.

ಇದೇ ಅಭಿಪ್ರಾಯದ ತಿರುಳನ್ನು ಇನ್ನಿಷ್ಟು ತೆರೆದಿಡುವಾ! 'ಅಜ್ಞಾತವಾದ ಅರ್ಥ (ವಿಷಯ) ದಿರವನ್ನು ಸರಿಯಾಗಿ ತಿಳುಹಿಸಿಕೊಡುವುದು'; ಎಂದು ಪ್ರಮಾಣದ ಸಾಮಾನ್ಯ ಲಕ್ಷಣವು. ಪ್ರತ್ಯಕ್ಷಪ್ರಮಾಣವು ಅಂದರೆ ಪ್ರತ್ಯಕ್ಷಜ್ಞಾನಕರಣವು. ಕಣ್ಣು ಮೊದಲಾದ ಇಂದ್ರಿಯಗಳ ಮತ್ತು ಅವುಗಳಿಗೆ ವಿಷಯವಾದ ಕೊಡ ಮೊದಲಾದ ಪದಾರ್ಥಗಳ ಸಂಯೋಗಾದಿಕದಿಂದುಂಟಾಗುವ ಜ್ಞಾನವು ಪ್ರತ್ಯಕ್ಷಜ್ಞಾನವೆನಿಸುವುದು; ಪ್ರತ್ಯಕ್ಷಜ್ಞಾನಕ್ಕೆ (ಪ್ರತ್ಯಕ್ಷಪ್ರಮೆಗೆ) ಕರಣ (ಸಾಧನ) ವಾದ ಚಕ್ಷುರಾದಿಕವು ಪ್ರತ್ಯಕ್ಷಪ್ರಮಾಣವು. ಅನುಮಾನಾದಿ ಅನ್ಯಪ್ರಮಾಣಗಳಾದರೂ ಅಜ್ಞಾತಾರ್ಥಬೋಧಕಗಳಾದ್ದರಿಂದ ಅವುಗಳಿಗೂ ಪ್ರಮಾಣಗಳೆನ್ನುತ್ತಾರೆ. ಬೇರೆ ಬೇರೆ ಶಾಸ್ತ್ರಕಾರರು ಬೇರೆ ಬೇರೆ ಪ್ರಮಾಣಗಳನ್ನು ಅಂಗೀಕರಿಸುತ್ತಾರೆ. ಈಗ ಅವುಗಳ ವಿಚಾರದ ಕಡೆ ಮನೋವೃತ್ತಿಯನ್ನು ಹರಿಯಗೊಡದೆ ವೇದಪ್ರಾಮಾಣ್ಯವೆಂತಿರುವುದೆಂಬುದನ್ನು ಮಾತ್ರ ಹೇಳಬೇಕಾಗಿದೆ.

ಸರ್ವ ಪ್ರಮಾ[illegible]ಗಳಲ್ಲಿ ಪ್ರತ್ಯಕ್ಷ, ಅನುಮಾನ, ಶಬ್ದವೆಂಬ ಈ ಮೂರು ಪ್ರಮಾಣಗಳೇ ಮುಖ್ಯವಾದುವು. ಅವುಗಳಲ್ಲಿ ಮೊದಲನೆರಡು ಕೇವಲ ಲೌಕಿಕಗಳು, ಅಂದರೆ ಲೋಕವ್ಯವಹಾರದ ಮೇಲಿಂದ ಸಿದ್ಧವಾದುವು. ಇಲ್ಲಿ 'ಲೋಕ' ವೆಂಬ ಶಬ್ದವು ಪ್ರಾಣಿವಾಚಕವಾಗಿರುವುದರಿಂದ ಪ್ರತ್ಯಕ್ಷಾನುಮಾನಗಳೆಂಬೆರಡು ಪ್ರಮಾಣಗಳೂ ಪ್ರಾಣಿಗಳ ವ್ಯವಹಾರದಿಂದೇ ಸಿದ್ಧಿಸುತ್ತವೆ. ಮನುಷ್ಯೇತರ (ಪಶುಪಕ್ಷ್ಯಾದಿ) ಪ್ರಾಣಿಗಳೂ ತಮ್ಮ ಚಕ್ಷುರಾದಿ ಇಂದ್ರಿಯಗಳಿಂದ ಇಷ್ಟಾನಿಷ್ಟವಸ್ತುಗಳನ್ನು ತಿಳಿದುಕೊಳ್ಳುವುವು. ಇಷ್ಟೇ ಅಲ್ಲ; ಇಷ್ಟವಸ್ತುವಿನಕಡೆ ಪ್ರವೃತ್ತಿಯೂ ಅನಿಷ್ಟವಸ್ತುವಿನ ಕಡೆ ನಿವೃತ್ತಿಯೂ ಅವುಗಳಲ್ಲಿ ಕಂಡುಬರುವುವು. ಹಾಗೂ, ಅವುಗಳಿಗೆ ಇಷ್ಟಾನಿಷ್ಟ ವಸ್ತುಗಳ ಜ್ಞಾನವು ಕೇವಲ ಇಂದ್ರಿಯಗಳಿಂದೇ ಆಗುವುದಿಲ್ಲ; ಆ ಪಶ್ವಾದಿಗಳು ಹೊರಗಿನ ಕಾರಣಗಳಿಂದ (ಬಾಹ್ಯಸೂಚಕ ಚಿನ್ಹಗಳಿಂದ) ಉ

ಷ್ಟಾನಿಷ್ಟ ವಸ್ತುಗಳನ್ನರಿತುಕೊಳ್ಳುತ್ತವೆ. ಯಾವನಾದರೊಬ್ಬನು ತನ್ನ ಕೈಯಲ್ಲಿ ಒಂದು ಬಗೆಯ ತಿನ್ನಲ್ಪಡತಕ್ಕ ಪದಾರ್ಥವನ್ನು ಹಿಡಿದುಕೊಂಡು ಸೌಮ್ಯಶಬ್ದಗಳಿಂದ ಕರೆಯುತ್ತಾನೆಂಬುದನ್ನು ನೋಡಿದೊಡನೇ ಆಕಳು, ನಾಯಿ, ಬೆಕ್ಕು, ಸಾಕಿದ ಗಿಳಿ, ಳಿವಾಳ ಮುಂತಾದ ಪ್ರಾಣಿಗಳು ಆ ಮನುಷ್ಯನ ಬಳಿಗೆ ಬರುವು; ಆದರೆ ಬೇರೊಬ್ಬನು ಕೈಯಲ್ಲಿ ಕೋಲನ್ನು ತೆಗೆದುಕೊಂಡು ಕಣ್ಣು ಕಿಸಿದು ಗಟ್ಟಿಯಾಗಿ ಕಿಟ್ಟಿ ದೀಯೆಂದರಚುತ್ತ ತಮ್ಮರಿಗೆ ಬರುತ್ತಿರುವುದನ್ನು ಕಂಡು ಇವನು ನಮ್ಮನ್ನು ಹೊಡೆಯಕ್ಕೆ ಬರುವನೆಂದೂಹಿಸಿ (ತರ್ಕಿಸಿ) ಆ ಸ್ಥಳದಿಂದ ಓಡಿಹೋಗುವು. ಇದರಿಂದ ಮನುಷ್ಯರಂತೆ ಪಶುಪಕ್ಷ್ಯಾದಿ ಪ್ರಾಣಿಗಳಿಗಾದೂ ಪ್ರತ್ಯಕ್ಷಜ್ಞಾನವಿರುವಂತೆ ಅನುಮಿತಿಜ್ಞಾನವಾದರೂ ಇರುದೆಂಬ ಸಂಗತಿಯು ಸಿದ್ಧಿಸುವುದು.

ಯಾವ ಜ್ಞಾನವಾದರೂ ಪ್ರಾಣಿಗಳ ಬುದ್ಧಿತತ್ತ್ವವನ್ನವಲಂಬಿಸಿರುವುದು. ಯಾವನ ಬುದ್ಧಿಯು ಎಷ್ಟು ಶುದ್ಧವೂ ಸುಸಂಸ್ಕೃತವೂ ಆಗಿರುವುದೋ ಅಷ್ಟು ಅವನಿಗೆ ಅಧಿಕಸ್ಪಷ್ಟವೂ ನಿರ್ದೋಷವೂ ಆದ ಜ್ಞಾನವಾಗುವುದು. ಯಾವನ ಬುದ್ಧಿಯು ಷ್ಟು ಅಶುದ್ಧವೂ (ಮಲಿನ)ವೂ ಅಸಂಸ್ಕೃತವೂ ಇರುವುದೋ ವನ ಜ್ಞಾನವಾದರೂ ಅಷ್ಟೇ ಅಸ್ಪಷ್ಟವೂ, ಅಸ್ಪಷ್ಟತರವೂ, ಸ್ಪಷ್ಟತಮವೂ ಇರುವುದೆಂಬ ವಿಷಯದಲ್ಲಿ ಸಂದೇಹವೇ ಇಲ್ಲ. ದುಕಾರಣವೇ ಸರ್ವಮನುಷ್ಯರ ಜ್ಞಾನವಾದರೂ ಒಂದೇ ಬಗೆಯಾಗಿರುವುದಿಲ್ಲ. ಅವುಗಳಲ್ಲಿ ಕೆಲವರ ಬುದ್ಧಿಯು ತೀವ್ರವಾಗಿಯೂ, ಕೆಲವರ ಬುದ್ಧಿಯು ತೀವ್ರತರವಾಗಿಯೂ, ಕೆಲವರ ದ್ಧಿಯು ತೀವ್ರತಮವಾಗಿಯೂ ಇರುತ್ತವೆ. ಮತ್ತು, ಇದಕ್ಕೆ ಪರೀತವಾಗಿಯೂ ಬೇರೆ ಬೇರೆ ಜನರ ಬುದ್ಧಿಗಳು ಮಂದವೂ ಂದತರವೂ ಮಂದತಮವೂ ಆಗಿರುವುದನ್ನು ನಾವು ನೋಡುತ್ತೇವೆ, ಅದರ ಕಾರಣವೂ ನಿಶ್ಚಿತವಾಗಿರುವುದು. ಸಾತ್ವಿಕ, ಜಸ, ತಾಮಸರೂಪ ಆಹಾರವಿಹಾರಗಳಿಂದಲೂ ಪೂರ್ವವಾಸನಾದಿಗಳಿಂದಲೂ ಬುದ್ಧಿತತ್ತ್ವವು ಶುದ್ಧವೂ, ಮಲಿನ ಮಲಿನತರಾದಿ ವೃತ್ತಿಯುಳ್ಳದ್ದೂ ಆಗುತ್ತದೆ. ಪುಣ್ಯಾಚರಣೆಯುಳ್ಳವರಿಗೆ ಅವರ ಪುಣ್ಯಕರ್ಮಾನುಸಾರವಾಗಿ ಪದಾರ್ಥಗಳ ಯಥಾರ್ಥಜ್ಞಾನವೂ ಪೂರ್ವದಲ್ಲಿ ಅನುಭವಿಸಲ್ಪಟ್ಟ ಪದಾರ್ಥಗಳ ಯಥಾಸ್ಮರಣವೂ ಮತ್ತು ಪಾಪಾಚರಣೆಯುಳ್ಳವರಿಗೆ ಅವರ ಪಾಪರ್ಮಾನುಸಾರವಾಗಿ ಪದಾರ್ಥಗಳ ವಿಪರೀತಜ್ಞಾನವೂ ಸ್ಮರಣವಾಗದಿರುವಿಕೆಯೂ ಇಲ್ಲವೆ ವಿಪರೀತಸ್ಮರಣವೂ ಎಂಬೀ ಪರಿಣಾಮಗಳು ಸರ್ವಾಂತರ್ಯಾಮಿಯಾದ ಪರಶಿವನ ಪ್ರೇರಣೆಯಿಂದೊದಗುವವೆಂಬರ್ಥವು ಭಗವಂತನಿಂದ (ಗೀ. ೧೫) ಬೋಧಿಸಲ್ಪಟ್ಟಿದೆ. ರ್ವ ಪ್ರಾಣಿಗಳ ಬುದ್ಧಿಯೂ ಸ್ಥೂಲರೂಪವಾದ ಪ್ರತ್ಯಕ್ಷಜ್ಞಾನದಲ್ಲಿ ಸಮರ್ಥವಾಗಿದೆ. ಕೆಲವು ಪಶುಪಕ್ಷ್ಯಾದಿಪ್ರಾಣಿಗಳಿಗೆ ಲವಾದ ಅನುಮಿತಿಜ್ಞಾನದಲ್ಲಿಯೂ ಸಮರ್ಥವಾದ ಬುದ್ಧಿರುವುದು ಕಂಡುಬರುತ್ತದೆ; ಆದರೆ ಸೂಕ್ಷ್ಮವೂ ಸೂಕ್ಷ್ಮತರವೂ ಮೊದಲಾದ ಪ್ರತ್ಯಕ್ಷಜ್ಞಾನಗಳನ್ನೂ ಅನುಮಿತಿಜ್ಞಾನನ್ನೂ ಮಾಡಿಕೊಳ್ಳುವದಕ್ಕೆ ಸಮರ್ಥವಾದ ಬುದ್ಧಿಯು ತ್ರ ಮನುಷ್ಯನ ಹೊರತಾಗಿ ಬೇರೆ ಯಾವ ಪ್ರಾಣಿಗಳಲ್ಲಿಯೂ ೋರಿಬರುವುದಿಲ್ಲ. ಮನುಷ್ಯರಲ್ಲಿಯೂ ಅದರ ಪ್ರಮಾಣವು ಂದೇ ಬಗೆಯಾಗಿರದೆ ನ್ಯೂನಾಧಿಕರೂಪದಿಂದ ಹಲವು ತೆರನಾಗಿರುವುದು. ಇದಕ್ಕೆ ಕಾರಣವು ಅವರವರ ಪೂರ್ವಾರ್ಜಿತಪುಣ್ಯಪಗಳೇ ಎಂದೂಹಿಸಲ್ಪಡುವುದು. ಮನುಷ್ಯರ ನ್ಯೂನಾಧಿಕದ ಬುದ್ಧಿ, ಸಾಮರ್ಥ್ಯದಲ್ಲಿಯೂ ಸಾತ್ವಿಕ, ರಾಜಸ, ತಾಮಸವೆಂಬ ಮೂರು ತೆರನಾಗಿರುವಿಕೆಯು ಭಗವದ್ಗೀತೆಯ ೧೪-೧೬-೧೭-೧೮ ಎಂಬೀ ಅಧ್ಯಾಯಗಳಲ್ಲಿ ಬೇರೆಬೇರೆ ಬಗೆಯಿಂದ ಬಣ್ಣಿಸಲ್ಪಟ್ಟಿದೆ.

ಈ ರೀತಿಯಾಗಿ, ಪ್ರತ್ಯಕ್ಷಾನುಮಾನಗಳೆಂಬೆರಡು ಪ್ರಮಾಣಗಳೂ ಸಾಧಾರಣವಾಗಿ ಸರ್ವಪ್ರಾಣಿಗಳಲ್ಲಿ ಕಂಡುಬರುವುದರಿಂದ ವು ಶುದ್ಧಲೌಕಿಕ (ವ್ಯಾವಹಾರಿಕ) ಗಳೆನಿಸುತ್ತವೆ. ಶಬ್ದವೆಂಬ ಮೂರನೆಯ ಪ್ರಮಾಣವಾದರೋ ಹಾಗಲ್ಲ, ಅದು ಲೌಕಿಕವೂ, ಅಲೌಕಿಕವೂ ಎಂದು ಉಭಯವಿಧವಾಗಿದೆ. ಏಕೆಂದರೆ, ಶಬ್ದಪ್ರಮಾಣದಿಂದ ಲೌಕಿಕಾಲೌಕಿಕಗಳೆಂಬ ಎರಡು ವ್ಯವಹಾರಗಳೂ ಆಗುತ್ತವೆ. ಚಾರ್ವಾಕ, ಬೌದ್ಧಾದಿ ಕೆಲವು ವಾದಿಗಳು ಶಬ್ದವನ್ನು ಪ್ರಮಾಣವೆಂದು ಮನ್ನಿಸುವುದಿಲ್ಲ. ಕೆಲವರು ಲೌಕಿಕ ಆಪ್ತರ (ಯಥಾರ್ಥವನ್ನು ನುಡಿವವರ) ಶಬ್ದವನ್ನು ಪ್ರಮಾಣವೆನ್ನುತ್ತಾರೆ. ದರೆ, ಅಲೌಕಿಕ (ವೇದವೆಂಬ) ಶಬ್ದವನ್ನು ಪ್ರಮಾಣವೆಂದು ಪ್ಪಿಸುವುದಿಲ್ಲ. ಆದರೂ, ಶಬ್ದವೆಂಬ ಮೂರನೆಯ ಪ್ರಮಾಣವನ್ನು ಂಗೀಕರಿಸದೆ ಮನುಷ್ಯನ ವ್ಯವಹಾರವೇ ಸಾಗುವಂತಿಲ್ಲ. ಎಲ್ಲಿ ತ್ಯಕ್ಷಾನುಮಾನಗಳ ಪ್ರವೃತ್ತಿಗವಕಾಶವಿಲ್ಲವೋ ಅಲ್ಲಿ ಶಬ್ದಂದೇ ವ್ಯವಹಾರವು ಜರುಗುವುದು, ಈಗಲಾದರೋ ಇಪ್ಪತ್ತನೆಯ ತಮಾನವಷ್ಟೇ! ತಾರು, ಪಾಕೀಟು, ವರ್ತಮಾನಪತ್ರ, ಟೆಲಿಫ್, ರೇಡಿಯೊ ಎಂಬೀರೂಪವಾದ ಶಬ್ದಜಾಲದಿಂದೇ ನುಷ್ಯರ ಎಷ್ಟೋ ವ್ಯವಹಾರಗಳು ನಡೆದಿರುತ್ತವೆ. ಆದ್ದರಿಂದ, ೌಕಿಕಶಬ್ದವನ್ನಾದರೂ ಪ್ರಮಾಣವೆಂದೊಪ್ಪದ ಚಾರ್ವಾಕಾದಿಂಬರಿರುತ್ತಿದ್ದರೂ ಈ ನವಯುಗದಲ್ಲಿ ಲೌಕಿಕಶಬ್ದವನ್ನು ಮಾಣವೆಂದು ಮನ್ನಿಸದ ಮಾನವನು ಎಲ್ಲಿಯಾದರೂ ಹುಡುಕಿರೆ ಸಿಕ್ಕಬಹುದೇನು? ಎಂಬ ಸಂದೇಹಕ್ಕಾಸ್ಪದವಿರುವದಾಯೂ, ಈ ಸುಶಿಕ್ಷಣಕಾಲದಲ್ಲಿ ವೇದವೆಂಬ ಅಪೌರುಷೇಯ ಬ್ದರಾಶಿಯನ್ನು ಸಹ ಪ್ರಮಾಣವೆಂದು ಮನ್ನಿಸದಿರುವ ಮಾನವಯೂ ಬಹಳ ದೊಡ್ಡದಾಗಿದೆ; ಇದೇನು ಸುಶಿಕ್ಷಣದ ಪರಿಣಾವೋ!

ಈ ಹಿಂದೆ ನಾವು ಅಜ್ಞಾತಾರ್ಥಬೋಧಕತ್ವವು ಪ್ರಮಾಣದ ಮಾನ್ಯವಾದ ಲಕ್ಷಣವೆಂದು ಹೇಳಿದ್ದೇವೆ. ಆ ಲಕ್ಷಣವು ಪ್ರತ್ಯಕ್ಷಾನುಮಾನಗಳಲ್ಲಿರುವಂತೆ ಲೌಕಿಕಶಬ್ದಪ್ರಮಾಣದಲ್ಲಿಯೂ ಇರುವುದು. ಈ ಪ್ರಮಾಣದಲ್ಲಿ ಲಕ್ಷ್ಯದಲ್ಲಿಡಬೇಕಾದ ಒಂದು ನಿಯಮವಿದೆ, ಅದನ್ನು ನಾವಿಲ್ಲಿ ತೋರಿಸುತ್ತೇವೆ. ಎಲ್ಲಿ ಪ್ರತ್ಯಕ್ಷಪ್ರಮಾಣದ ಪ್ರವೃತ್ತಿಯಾಗದೋ ಆ ವಿಷಯದಲ್ಲಿ ಲಿಂಗ (ಹೇತು) ಮೂಲಕ ಅನುಮಾನವು ಪ್ರವೃತ್ತಿಸುವುದು. ಎಲ್ಲಿ ಪ್ರತ್ಯಕ್ಷಾನುಮಾನಗಳೆರಡೂ ಪ್ರವೃತ್ತಿಸಲಾರವೋ ಅಲ್ಲಿ ಶಬ್ದಪ್ರವೃತ್ತಿಯುಂಟು. ಈ ಸೃಷ್ಟಿಯಲ್ಲಿರುವ ಸ್ಥೂಲವೂ, ಸಾವಯವವೂ ರೂಪಾದಿಗಳಿಂದ ಕೂಡಿದುವೂ ಆದ ಪದಾರ್ಥಗಳಲ್ಲಿ ಪ್ರತ್ಯಕ್ಷವಿಷಯದ ಯೋಗ್ಯತೆಯಿರುವುದು. ಕೆಲವು ಸೂಕ್ಷ್ಮವೂ, ಅಸನ್ನಿಕೃಷ್ಟವೂ (ದೂರದಲ್ಲಿರುವ ಪದಾರ್ಥವೂ) ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ. ಅಂದರೆ, ಕಣ್ಣು ಮೊದಲಾದ ಇಂದ್ರಿಯಗಳಿಗೆ ಅವುಗಳ ಜ್ಞಾನವಾಗುವುದಿಲ್ಲ. ಆದರೆ, ಅವು ಕೆಲವು ಬಾಹ್ಯಸೂಚಕಚಿನ್ಹಗಳಿಂದರಿಯಲ್ಪಡುತ್ತವೆ; ದೂರದಲ್ಲಿ ಕಂಡುಬರುವ ಹೊಗೆಯನ್ನು ನೋಡಿದಾಗ ಅಲ್ಲಿರತಕ್ಕ ಕಾಣಲ್ಪಡದ ಬೆಂಕಿಯ ಅನುಮಿತಿಜ್ಞಾನವಾಗುವುದು. ಆ ಆ ಗೋಲಕಗಳಲ್ಲಿರುವ ನೇತ್ರಾದಿ ಇಂದ್ರಿಯಗಳು ನಮಗೆ ಪ್ರತ್ಯಕ್ಷವಾಗಿ ಗೋಚರವಾಗುವುದಿಲ್ಲವಾದರೂ ರೂಪ, ಶಬ್ದ ಮೊದಲಾದ ವಿಷಯಗಳ ಜ್ಞಾನವಾಗುವ ಮೂಲಕ ಅವುಗಳ ಇರುವಿಕೆಯು ಸಿದ್ಧಿಸುವುದು.

(ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಗುರುಮಹಿಮೆ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ಹುಲಿಗೇರಿ ಜವಳಿ ಗುರುಬಸಪ್ಪನವರ ಪುತ್ರ ಹಾಲಪ್ಪನೆಂಬ ಓರ್ವ ಶ್ರೀ ಜಗದ್ಗುರು ಭಜನಾಪ್ರಿಯನು, ವಿವಾಹಮಹೋತ್ಸವ ಸಮಯದಲ್ಲಿ ಅನನ್ಯಭಕ್ತಿಭಾವದಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಮಾಡುತ್ತಿರುವಾಗ್ಗೆ ಅಕಸ್ಮಾತ್ ಹೆಚ್ಚಿನ ಬೆಲೆಯುಳ್ಳ ವಜ್ರದ ಉಂಗುರವು ಕಳೆದು ಹೋಗಿ ನಿರಾಶಾಭಾವದಿಂದ ಪರಿತಪಿಸುತ್ತಿರಲು, ಮರುದಿನವೇ ಅದು ಪರಸ್ಥಳದ ಓರ್ವ ಮಹಾಶಯನ ಕೈಗೆ ಸಿಕ್ಕಿ ಸದರಿ ಮಾಲೀಕನನ್ನು ಕರೆಯಿಸಿಕೊಂಡು, ಪದಾರ್ಥವನ್ನು ವಿಶ್ವಾಸಪೂರ್ವಕವಾಗಿ ಕೊಟ್ಟಿದ್ದುದನ್ನು ನೋಡಿದರೆ, ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮೆಯೂ, ಹಾಲಪ್ಪನ ಭಕ್ತಿಯುತ ಭಜನಾಸಕ್ತಿಯೂ, ಪದಾರ್ಥವನ್ನು ಕೊಟ್ಟ ಪರಸ್ಥಳದ ಮಹಾಶಯರ ನಿಷ್ಕಳಂಕ ಹೃದಯವೂ ಎಂತಹುದೆಂಬುದನ್ನು ವ್ಯಕ್ತಗೋಳಿಸುತ್ತದೆ.

ಈ ಅಮೂಲ್ಯಪದಾರ್ಥವು ಶ್ರೀಗುರುಕೃಪೆಯಿಂದ ದೊರೆತುದರ ಸಂತೋಷಾರ್ಥವಾಗಿ ಸದರಿ ಹಾಲಪ್ಪನು ಭಕ್ತಿಯಿಂದ ಪಂಚಾಚಾರ್ಯಪ್ರಭಾಪೋಷಣಕ್ಕಾಗಿ ಒಂದು ರೂಪಾಯಿಯನ್ನು ಸಮರ್ಪಿಸಿ ಅದನ್ನು ವೇ|| [illegible] ಗುಬ್ಬಿ ಶಿವರುದ್ರಶಾಸ್ತ್ರಿಗಳವಶಕ್ಕೆ ಒಪ್ಪಿಸಿದನು.

ಓರ್ವ ಪ್ರತ್ಯಕ್ಷದರ್ಶಿ.

ಕಡೂರು ಡಿಸ್ಟ್ರಿಕ್ಟ್ ಬೋರ್ಡು.

ಇದೇ ಜುಲೈ 14ಕ್ಕೆ ನಡೆಯಲಿರುವ ಕಡೂರು ಡಿಸ್ಟ್ರಿಕ್ಟ್ ಬೋರ್ಡ್ ವೈಸ್‌ಪ್ರೆಸಿಡೆಂಟರ ಚುನಾವಣೆಗೆ ಅಜ್ಜಾರ್ ಕಾಫೀ ಪ್ಲ್ಯಾಂಟರ್ ಬಿ. ಪಿ. ಬಸಪ್ಪಶೆಟ್ಟರು ಉಮೇದುವಾರರಾಗಿದ್ದಾರೆಂದು ತಿಳಿಯಬರುತ್ತೆ. ಇವರು ಕಳೆದ 6 ವರ್ಷಗಳಿಂದಲೂ ಪ್ರಜಾಪ್ರತಿನಿಧಿಸಭೆಯಲ್ಲೂ ಮತ್ತು ಎರಡುವರ್ಷಗಳು "ಫೈನಾನ್ಸ್ ಮತ್ತು ಟ್ಯಾಕ್ಸೇಷನ್" ಕಮಿಟಿಯಲ್ಲೂ ಮೆಂಬರಾಗಿದ್ದು ತೃಪ್ತಿಕರವಾಗಿ ಕೆಲಸಮಾಡಿರುವರಲ್ಲದೆ ಅಸೆಂಬ್ಲಿಯಿಂದ ಮೊನ್ನೆ ತಾನೆ ನಡೆದ ವಿಶ್ವವಿದ್ಯಾನಿಲಯದ "ಸೆನೆಟ್" ಚುನಾವಣೆಯಲ್ಲಿ ಉತ್ತೀರ್ಣರಾಗಿ ಪ್ರಜಾಪ್ರತಿನಿಧಿಸಭೆಯ ಸದಸ್ಯರುಗಳ ಗೌರವಕ್ಕೂ ಮತ್ತು ನಂಬಿಕೆಗೂ ಪಾತ್ರರಾಗಿರುತ್ತಾರೆ. ಇವರು ತರುಣರಾಗಿದ್ದಾಗ್ಯೂ ಇವರು ಮಾಡಿರುವ ಅಲ್ಪಸ್ವಲ್ಪ ದೇಶಸೇವೆಯಿಂದಲೂ ಮತ್ತು ಕಾರ್ಯದಕ್ಷತೆಯಿಂದಲೂ ಪ್ರಜೆಗಳ ಮತ್ತು ಪ್ರಭುತ್ವದವರ ಪ್ರೀತಿಗೆ ಪಾತ್ರರಾಗಿರುತ್ತಾರೆ. ಈ ಸಮಯದಲ್ಲಿ ಬೋರ್ಡಿನ ಸದಸ್ಯರುಗಳು ತಮ್ಮ ಒಳ್ಳೇ ತಿಳುವಳಿಕೆಯನ್ನು ಉಪಯೋಗಿಸಿ ಇವರನ್ನೇ ಚುನಾಯಿಸಬಹುದೆಂದು ಬಲವಾದ ನಂಬಿಕೆಯು ಎಲ್ಲೆಲ್ಲೂ ಹರಡಿದೆ. ಈ ಮಹಾಶಯರಿಗೆ ಚುನಾವಣೆಯಲ್ಲಿ ಜಯವಾಗಲೆಂದು ಹಾರೈಸುವ,

ಓರ್ವ ಡಿಸ್ಟ್ರಿಕ್ಟ್ ಬೋರ್ಡಿನ ಹಿತಾಕಾಂಕ್ಷಿ.

ವಕೀಲರಿಗೆ ಶ್ರೀನಿವಾಸಶಾಸ್ತ್ರಿಗಳ ಉಪದೇಶ.

ಕೇವಲ ಹಣಗಳಿಸುವ ದೃಷ್ಟಿಯಿಂದ ಈ ವಕೀಲಿಯ ಉದ್ಯೋಗವನ್ನು ಕೈಕೊಳ್ಳುವದು ವಿಹಿತವಲ್ಲ. ಇದು ಸಮಾಜಕ್ಕೆ ಕಲ್ಯಾಣಮಾಡುವಂಥ ಪವಿತ್ರ ಉದ್ಯೋಗವು. ಇತ್ತೀಚೆಗೆ ಬಹು ಜನ ವಕೀಲರು ಹಣದೊರಕಿಸುವದೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು, ಅಡ್ಡದ ಸಡ್ಡದ ಮಾರ್ಗದಿಂದ ನಡೆಯುತ್ತಿರುವದರಿಂದ ಈ ಉದ್ಯೋಗದ ಯೋಗ್ಯತೆಯನ್ನು ಬಹಳ ಹಗುರು ಮಾಡಿದ್ದಾರೆ. ಈ ಉದ್ಯೋಗದ್ವಾರದಿಂದ ಮಾನವಜಾತಿಗೆ ಉಪಕಾರ ಮಾಡುವಂಥ ಅನೇಕ ಸತ್ಕೃತಿಗಳಿರುವವು. ಸಮಾಜದಲ್ಲಿಯ ದುಷ್ಟರಿಗೆ ಶಿಕ್ಷೆ ಮಾಡಿಸುವದೂ, ಸತ್ಪುರುಷರಿಗೆ ಹಿತ ಮಾಡುವದೂ ಇವೆರಡೂ ಘಟಿಸುವವು. ಇದರಿಂದ ಸಮಾಜದಲ್ಲಿ ಶಾಂತತೆಯುಳಿದು ಸಮಾಜದ ಉನ್ನತಿಯಾಗುವದು. ವಿದ್ಯಾರ್ಥಿಬಂಧುಗಳೇ, ಇದೇ ದೃಷ್ಟಿಯಿಂದ ನೀವು ಈಗಿನಿಂದಲೇ ಕಾಯಿದೆಯ ಅಭ್ಯಾಸ ಮಾಡಿರಿ. ಈ ಮಹತ್ವದ ವಿಷಯದ ಕಡೆಗೆ ನೀವು ದುರ್ಲಕ್ಷ್ಯಮಾಡಬೇಡಿರಿ.

ಸರ್ವಸಾಧಾರಣ ಜನರಿಗೆ ಕಾಯಿದೆಯ ತಿಳುವಳಿಕೆ ಇರುವದಿಲ್ಲ. ಅದಕಾರಣ ಅವರು ವಕೀಲರ ಮೇಲೆ ಪೂರ್ಣ ವಿಶ್ವಾಸವಿಟ್ಟು ತಮ್ಮ ಖಟ್ಲೆಗಳನ್ನು ಕೋರ್ಟಿನಲ್ಲಿ ಅವರಿಗೆ ಒಪ್ಪಿಸುತ್ತಾರೆ. ಇಂಥ ಪ್ರಸಂಗದಲ್ಲಿ ವಕೀಲರು ಯಾವತರದ ಮೋಹಪಾಶದಲ್ಲಿಯೂ ಸಿಲುಕದೆ ತಮ್ಮ ಪಕ್ಷಕಾರರ ಹಿತಕ್ಕೆ ಏನೂ ಬಾಧೆಬರದಂತೆ ಎಚ್ಚರಪಟ್ಟು ನಿಷ್ಕಲಂಕ ವರ್ತನವನ್ನಿಟ್ಟುಕೊಳ್ಳಬೇಕು. ಅದರಂತೆ ನ್ಯಾಯಾಧೀಶರ ಮುಂದೆ ಖಟ್ಲೆಯ ವಿಷಯವನ್ನು ಮಂಡಿಸುವಾಗ್ಗೆ ಮುನ್ನಾದಿವಸವೇ ಖಟ್ಲೆಯ ವಿಷಯವನ್ನು ಸ್ವತಃ ವಕೀಲರು ಚನ್ನಾಗಿ ಮನನಮಾಡಿಕೊಂಡು ನ್ಯಾಯಾಧೀಶರಿಗೆ ತಪ್ಪುತಿಳುವಳಿಕೆಯಾಗದಂತೆ ಎಚ್ಚರಪಡತಕ್ಕದ್ದು.

ಈಗ ಪಕ್ಷಕಾರರಿಗಿಂತಲೂ ವಕೀಲರೇ ಬಹಳಾಗಿರುವದರಿಂದ ವಕೀಲಿಯ ಉದ್ಯೋಗವೇ ಕೆಟ್ಟು ಹೋಗಿರುವದರಿಂದ ಆ ಧಂದೆಯಲ್ಲಿ ಹೆಸರಿಗೆ ಬರುವದು ಬಹಳ ಕಠಿಣವಾಗಿದೆ. ಈ ವಿಷಯದ ಮೇಲೆ ಡಾ. ಬೆಸೆಂಟರವರು ಬಹಳ ದಿವಸದ ಹಿಂದೆ ಮಾತಾಡಿದ್ದು ನನ್ನ ಸ್ಮರಣೆಯಲ್ಲಿದೆ. ಅವರು ತಮ್ಮ ಭಾಷಣದಲ್ಲಿ ಹೇಳಿದ್ದು "ಬ್ರಾಹ್ಮಣರಂಥ ಶ್ರೇಷ್ಠವರ್ಣದವರು ವಕೀಲಿಯ ಉದ್ಯೋಗ ಮಾಡುವದನ್ನು ನೋಡಿ ನನಗೆ ಖೇದವಾಗುತ್ತದೆ. ಈ ಧಂದೆಯಲ್ಲಿ ನಾನಾತರದ ಮೋಹಪಾಶಗಳು; ಆದರೆ ಬ್ರಾಹ್ಮಣರು ಮೋಹದಿಂದ ಅಲಿಪ್ತರಾಗಿರುವದು ಅವಶ್ಯವು." ಇದನ್ನು ಅಗ್ಗಿ ಪ್ರಾಮುಖ್ಯವಾಗಿ ಹೇಳಿದರು. ಅವರು ಶ್ರೋತೃಸಮುದಾಯಕ್ಕೆ ಈ ಪ್ರಕಾರ ಪ್ರಶ್ನೆಮಾಡಿದರು. "ನೀವು ಮೋಹಪಾಶದಿಂದ ಸಿಡಿದು ನಿಂತು ಸನಾತನ ಹಿಂದೂಧರ್ಮವನ್ನು ಪಾಲಿಸುವಿರೋ? ನೀವು ಹಿಂದೂ ಕಾಯಿದೆಗಳ ಪರಿಶೀಲನವನ್ನು ಮೂಲ ಧರ್ಮಗ್ರಂಥದಿಂದ ಮಾಡುವಿರೋ? ಏನೂ ಇಲ್ಲ. ನಿಜವಾಗಿ ಕೇವಲ ವ್ಯಾಪಾರದೃಷ್ಟಿಯಿಂದ ಎಷ್ಟೋ ಸಾರಿ ನಿಮ್ಮ ಅಮೂಲ್ಯಬುದ್ಧಿವಂತಿಕೆಯನ್ನು ಮಾರಿಕೊಳ್ಳುತ್ತಿರುವದಿಲ್ಲವೋ? ನಿಮ್ಮ ಗೌರವ, ಯೋಗ್ಯತೆ, ಧ್ಯೇಯ ಇವುಗಳ ಬಗ್ಗೆ ಸ್ವಲ್ಪಾದರೂ ಅಭಿಮಾನ ಹಿಡಿಯುವದು ವಿಹಿತವು. ಯಾವ ಖಟ್ಲೆಯಲ್ಲಿ ನಿಮ್ಮ ಪಕ್ಷಕಾರನಿಗೆ ಯಶಸ್ಸು ದೊರೆಯುವದಿಲ್ಲವೆಂದು ನಿಮ್ಮ ಮನಸಾ ನಿಶ್ಚಯವಾಗಿ ತಿಳಿದುಬರುವದೋ ಅಂಥ ಖಟ್ಲೆಗಳನ್ನು ಸ್ವೀಕರಿಸಿ ಪಕ್ಷಕಾರರ ದುಡ್ಡನ್ನು ವ್ಯರ್ಥ ಹಾಳುಮಾಡಬೇಡಿರಿ. ಮತ್ತು ನಿಮ್ಮ ಪಕ್ಷಕಾರರ ಪತಿಯಿಂದ ಆಗುವ ಸಾಕ್ಷಿಗಳು ಖೊಟ್ಟಿ ಎಂದು ತಿಳಿದರೆ ಅಂಥ ಸಾಕ್ಷಿಗಳನ್ನು ತೆಗೆದು ಹಾಕಿರಿ. ಬ್ರಾಹ್ಮಣಧರ್ಮದ ಪಾಲನ ಮಾಡುವದಿದ್ದರೆ ಈ ಎರಡು ನಿಯಮಗಳ ಉಲ್ಲಂಘನ ಮಾಡಬಾರದು."

ಸದ್ಯದಲ್ಲಿ ವಕೀಲಿಯ ಉದ್ಯೋಗವು ಬಹಳ ಕೆಟ್ಟಿರುವದೆಂದು ಹೇಳಿದರೆ ತಪ್ಪಾಗದು. ವಕೀಲರ ಗೊಡವಿಗೆ ಹೋಗದೆ, ಅವರ ಮರ್ಜಿ ಹಿಡಿಯದೆ ಯಾವನು ತನ್ನ ಸಂಸಾರ ಸಾಗಿಸುವನೋ ಅವನೇ ನಿಜವಾದ ಸುಖಿಯೆಂದು ಜನರು ಆಡಿಕೊಳ್ಳುವರು. ಇದನ್ನು ಹೋಗಲಾಡಿಸುವದು ನಿಮ್ಮ ಕರ್ತವ್ಯವು. ಪಕ್ಷಕಾರರು ಯಾವುದಾದರೊಂದು ಸಂಕಟದಲ್ಲಿ ಸಿಕ್ಕು ಹಣಕ್ಕಾಗಿ ದುಃಖದಿಂದ ನಿಮ್ಮ ಬಳಿಗೆ ಬರುವರು. ಕೂಡಲೇ ಅವರನ್ನು ಸಮಾಧಾನಪಡಿಸಿ ಧೈರ್ಯಗೊಟ್ಟು ನಿಮ್ಮ ಬುದ್ಧಿಮತ್ತೆಯಿಂದ ಅವರಿಗೆ ಯೋಗ್ಯ ನ್ಯಾಯ ಸಿಗುವಂತೆ ಮಾಡುವದು ನಿಮ್ಮ ಪವಿತ್ರ ಕರ್ಮವಾಗಿರುವದು. ಇದರ ಮೇಲಿಂದ ಅವರ ದೈವಪರೀಕ್ಷೆಯು. ಒಂದುವೇಳೆ ವಾದಿಪ್ರತಿವಾದಿಯರ ಒಡಂಬಡಿಕೆಯಾಗುವ ಸುಸಂಧಿಯು ದೊರೆತರೆ ನಿಮಗೆ ಅಲ್ಪಸ್ವಲ್ಪ

(6ನೇ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೩ ನೇ ಜುಲೈ ತಾ|| ೧೦ ನೇ ಸೋಮವಾರ.

ಮಿಶ್ರವಿವಾಹ.

ಗಾಂಧಿಯವರು ೨೧ ದಿವಸಗಳವರೆಗೆ ಉಪವಾಸ ವ್ರತವನ್ನು ನೆರವೇರಿಸಿದ ಪುಣೆಯ ಪರ್ಣಕುಟಿಯಲ್ಲಿ ತಮ್ಮ ಮಗನಾದ ದೇವದಾಸನಿಗೂ ಬ್ರಾಹ್ಮಣಜಾತಿಯಲ್ಲಿ ಹುಟ್ಟಿದ ಶ್ರೀಯುತ ರಾಜಗೋಪಾಲಾಚಾರ್ಯರ ಪುತ್ರಿಯಾದ ಸೌ|| ಲಕ್ಷ್ಮಿಗೂ ಕಳೆದ ತಿಂಗಳು ವಿವಾಹ ಸಂಬಂಧವನ್ನು ನಡೆಯಿಸಿದರಷ್ಟೆ! ಈ ಸಂದರ್ಭದಲ್ಲಿ ಸನಾತನಧರ್ಮಾವಲಂಬಿಗಳಾದ ಭಾರತೀಯರು, ವೈಶ್ಯಜಾತಿಯವರಿಗೆ ಬ್ರಾಹ್ಮಣಪುತ್ರಿಯನ್ನು ತಂದು ವಿವಾಹಮಾಡುವುದು ಶಾಸ್ತ್ರವಿರುದ್ಧವೆಂದು ಹೇಳಿದ್ದಕ್ಕೆ ಗಾಂಧಿಯವರು ಇದು ಶಾಸ್ತ್ರವಿರುದ್ಧವಲ್ಲವೆಂದೂ ಹಾಗೆ ಶಾಸ್ತ್ರವಿರುದ್ಧವಾಗಿದ್ದರೆ ಇದಕ್ಕೆ ನಾನು ಅನುಮತಿಯನ್ನು ಕೊಡುತ್ತಿರಲಿಲ್ಲವೆಂದೂ ಹೇಳಿರುತ್ತಾರೆ. ಈ ಹೇಳಿಕೆಯನ್ನು ಯಾವ ಧರ್ಮಶಾಸ್ತ್ರಕಾರರೂ ಒಪ್ಪುವುದಿಲ್ಲ. ಬ್ರಾಹ್ಮಣರು ಬ್ರಾಹ್ಮಣರಲ್ಲಿಯೇ, ಕ್ಷತ್ರಿಯರು ಕ್ಷತ್ರಿಯರಲ್ಲಿಯೇ, ವೈಶ್ಯರು ವೈಶ್ಯರಲ್ಲಿಯೇ, ಶೂದ್ರರು ಶೂದ್ರರಲ್ಲಿಯೇ ಕನ್ಯಾದಾನ ಪ್ರತಿಗ್ರಹಣಗಳನ್ನು ಮಾಡಬೇಕಲ್ಲದೆ ಬ್ರಾಹ್ಮಣಕನ್ಯೆಯನ್ನು ವೈಶ್ಯನು ತರುವುದಾಗಲಿ ವೈಶ್ಯಕನ್ಯೆಯನ್ನು ಬ್ರಾಹ್ಮಣನಿಗೆ ಕೊಡುವುದಾಗಲಿ ಮಾಡಕೂಡದು. ಹಾಗೆ ಭಿನ್ನಜಾತಿಗಳಲ್ಲಿ ಮಾಡಲ್ಪಡುವ ವಿವಾಹವು ಧರ್ಮಶಾಸ್ತ್ರರೀತಿಯಾಗಿ ಅನುಲೋಮ ಪ್ರತಿಲೋಮ ವಿವಾಹಗಳಲ್ಲಿ ಸೇರುವುದಲ್ಲದೆ ಕ್ರಮಪ್ರಾಪ್ತವಾದ ವಿವಾಹವಾಗಲಾರದು. ಈ ಶಾಸ್ತ್ರವಿಚಾರವೊತ್ತಟ್ಟಿಗಿರಲಿ. ಆದರೆ ಗಾಂಧಿಯವರು ಅಸ್ಪೃಶ್ಯೋದ್ಧಾರದೀಕ್ಷೆಯನ್ನು ವಹಿಸಿ ಇದಕ್ಕಾಗಿಯೇ ತಮ್ಮ ಪ್ರಾಣವನ್ನು ಸಹ ಬಿಡಲು ಸಿದ್ಧರಾಗಿ 21 ದಿವಸ ಉಪವಾಸವ್ರತವನ್ನು ಸಡ ಮಾಡಿದರು. ಈ ಉಪವಾಸವ್ರತವು ಪೂರೈಸಿದ ಸ್ವಲ್ಪ ದಿವಸಗಳೊಳಗಾಗಿಯೇ ತಮ್ಮ ಪುತ್ರನಿಗೆ ಬ್ರಾಹ್ಮಣಕುವರಿಯನ್ನು ತಂದು ತಮ್ಮ ಅಧಿಪತ್ಯದಲ್ಲಿಯೇ ವಿವಾಹಮಹೋತ್ಸವವನ್ನು ಬಹು ಆಟ್ಟಹಾಸದಿಂದ ನಡೆಸಿದರು. ವೈಶ್ಯಜಾತಿಯ ಗಾಂಧಿಯವರು ತಮ್ಮ ಪುತ್ರನಿಗೆ ಬ್ರಾಹ್ಮಣ ಕುವರಿಯನ್ನು ತಂದು ಸಂತೋಷಪಡುವುದಕ್ಕಿಂತಲೂ ಅಸ್ಪೃಶ್ಯಜಾತಿಯ ಕನ್ಯೆಯನ್ನು ತಂದು ಇಷ್ಟು ಸಂಭ್ರಮದಿಂದ ಮದುವೆಯನ್ನು ನೆರವೇರಿಸಿದ್ದರೆ, ಈಗ ಹೂಡಿರುವ ಅಸ್ಪೃಶ್ಯೋದ್ಧಾರಕಾರ್ಯಕ್ಕೆ ತಾನೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂತಾಗುತ್ತಿದ್ದಿತು. ಗಾಂಧಿಯವರು ನಮ್ಮ ಭರತಖಂಡದಲ್ಲಿ ಅನಾದಿಕಾಲದಿಂದ ರೂಢಮೂಲವಾಗಿಯೂ, ಶಾಸ್ತ್ರಸಿದ್ಧವಾಗಿಯೂ ಬಂದಿರುವ ಅಸ್ಪೃಶ್ಯತ್ವವನ್ನು ಕಳೆದು ಭೋಜನಪ್ರತಿಭೋಜನ ಮಾಡುವುದರಿಂದಲೂ ದೇಹಸಂಬಂಧವನ್ನು ಮಾಡುವುದರಿಂದಲೂ ಸ್ಪೃಶ್ಯಾಸ್ಪೃಶ್ಯವೆಂಬ ಭೇದವನ್ನೇ ತೆಗೆದುಹಾಕಬೇಕೆಂಬ ಸಂಕಲ್ಪವುಳ್ಳವರಾಗಿ ಅಸ್ಪೃಶ್ಯರನ್ನು ದೇವಾಲಯಗಳಿಗೆ ನುಗ್ಗಿಸುವುದೂ, ಅವರೊಡನೆ ಭೋಜನಾದಿವ್ಯವಹಾರವನ್ನು ಬೆಳೆಯಿಸುವದೂ, ದೇಹಸಂಬಂಧವನ್ನು ಬೆಳೆಯಿಸುವದೂ, ಇದಕ್ಕೇನಾದರೂ ವಿಘ್ನವೊದಗಿದರೆ ನಿರಶನವ್ರತವನ್ನು ಮಾಡುವದೂ ಇವೇಮುಂತಾದ ಕಾರ್ಯಗಳಲ್ಲಿ ಮಗ್ನರಾಗುತ್ತ ಬಂದಿರುವರು. ಅಸ್ಪೃಶ್ಯತೆಯನ್ನು ತೊಲಗಿಸಬೇಕೆಂದು ಬಹುದಿವಸಗಳವರೆಗೂ ಒಬ್ಬ ಅಸ್ಪೃಶ್ಯಕನ್ಯೆಯನ್ನು ಸಾಕಿ ಅವಳನ್ನು ಓರ್ವ ಬ್ರಾಹ್ಮಣಕುವರನಿಗೆ ಕೊಟ್ಟು ವಿವಾಹವನ್ನು ಮಾಡಿಸಿದರು. ಈಗ ಅದೇ ಅಸ್ಪೃಶ್ಯೋದ್ಧಾರಧ್ಯೇಯದಿಂದಲೇ ಉಪವಾಸ ವ್ರತವನ್ನು ಸಹ ಮಾಡಿದ ಈ ಮಹಾಶಯರು ತಮ್ಮ ಸಾಕ್ಷಾತ್ ಔರಸಪುತ್ರನಿಗೆ ತಮ್ಮ ಧ್ಯೇಯದಂತೆ ಅಸ್ಪೃಶ್ಯಕನ್ಯೆಯನ್ನು ತರದೆ ಬ್ರಾಹ್ಮಣಕುಮಾರಿಯನ್ನೇ ತಂದು ಮದುವೆ ನಡೆಯಿಸಿದುದನ್ನು ನೋಡಿದರೆ 'ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡು' ಎಂಬ ಗಾದೆಯು ಇವರಲ್ಲಿ ಅಕ್ಷರಶಃ ಅನ್ವಯಿಸುತ್ತದೆ. ಹೀಗೆ ಆಚರಿಸುವ ಇವರ ಪ್ರತಿಜ್ಞೆಯನ್ನು ಸತ್ಯಪ್ರತಿಜ್ಞೆಯೆಂದು ಹೇಗೆತಾನೆ ಹೇಳಲಾದೀತು? ಪಂಚಮರ ಕನ್ಯೆಯನ್ನು ಬ್ರಾಹ್ಮಣನಿಗೆ ಕೊಟ್ಟಮೇಲೆ ಆ ಬ್ರಾಹ್ಮಣ ಕನ್ಯೆಯನ್ನು ಪಂಚಮರಿಗೆ ಕೊಡಿಸುವುದಲ್ಲದೆ ತಾವೂ ಅವಶ್ಯಕವಾಗಿ ಪಂಚಮ ಕನ್ಯೆಯನ್ನೇ ತಮ್ಮ ಮಗನಿಗೆ ತಂದುಕೊಳ್ಳಬಹುದಾಗಿತ್ತು. ಹೀಗೆ ಮಾಡದೆ ತಮಗಿಂತಲೂ ಉತ್ತಮ ಕುಲದಲ್ಲಿ ಬಂಧುತ್ವವನ್ನು ಮಾಡಿರುವದನ್ನು ನೋಡಿ ಅಸ್ಪೃಶ್ಯಜನಗಳು ಗಾಂಧಿಯವರ ವಿಷಯದಲ್ಲಿ ಶಂಕಾಕುಲಿತಮನಸ್ಕರಾಗಿದ್ದಾರೆ. ಆದರೆ ಗಾಂಧಿಯವರು ನಾನೇನು ಮಾಡುವುದಕ್ಕಾದೀತು. ನನ್ನ ಅಭಿಪ್ರಾಯದಂತೆ ಈ ವಿವಾಹವು ನಡೆದಿದ್ದರೆ ಓರ್ವ ಪಂಚಮ ಕನ್ಯೆಯನ್ನೇ ನನ್ನ ಮಗನಿಗೆ ಮಾಡಿಕೊಳ್ಳಬಹುದಾಗಿತ್ತು. ಈ ವಿವಾಹವು ಹಾಗೆ ನನ್ನ ಅನುಮತಿಯಿಂದಾಗಿಲ್ಲ. ಕನ್ಯಾವರಗಳೇ ಒಬ್ಬರಿಗೊಬ್ಬರು ಒಪ್ಪಿಕೊಂಡಿರುವುದರಿಂದ ಇದನ್ನು ನಿರೋಧಿಸಲು ಆಗಲಿಲ್ಲವೆಂದು ಹೇಳಬಹುದು. ಗಾಂಧಿಯವರ ಪುತ್ರನಾಗಲಿ ಶ್ರೀಯುತ ರಾಜಗೋಪಾಲಾಚಾರ್ಯರ ಪುತ್ರಿಯಾಗಲಿ ಇವರ ಮೇಲ್ಪಂಕ್ತಿಯನ್ನೇ ತೀಡುತ್ತ ರಾಷ್ಟ್ರಕಾರ್ಯದಲ್ಲೂ ಅಸ್ಪೃಶ್ಯೋದ್ಧಾರಕಾರ್ಯದಲ್ಲೂ ಹಗಲಿರುಳೂ ಕಾರ್ಯವ್ಯಗ್ರತೆಯುಳ್ಳವರಾಗಿರುವರಲ್ಲದೆ ಇವರ ಕುಮಾರನು ಅನೇಕಸಾರೆ ರಾಜಕೀಯ ಬಂದಿಯಾಗಿರುತ್ತಾನೆ. ಈತನು ಗಾಂಧಿಯವರ ಆಜ್ಞೆಯನ್ನು ಶಿರಸಾಧಾರಣಮಾಡಲಾರನೆಂಬ ಊಹೆಯು ಕೇವಲ ಅಸಂಭವನೀಯವೇ ಸರಿ. ಹಾಗೆ ಒಂದುಪಕ್ಷ ಬ್ರಾಹ್ಮಣಕುಮಾರಿಯನ್ನೇ ಮದುವೆಯಾಗುತ್ತೇನೆಂದು ಹಠಹಿಡಿದಿದ್ದರೆ ಆಗ ಇವರು ಅಸ್ಪೃಶ್ಯರಿಗೋಸ್ಕರ ಶುದ್ಧೋಪವಾಸವ್ರತಾಚರಣೆಮಾಡಿದಂತೆ ಈ ಬ್ರಾಹ್ಮಣ ಕುಮಾರಿಯ ವಿವಾಹವು ನನ್ನ ಅಸ್ಪೃಶ್ಯೋದ್ಧಾರ ಕಾರ್ಯಕ್ಕೆ ವಿರೋಧವು. ಇದನ್ನು ನಿಲ್ಲಿಸುವುದಕ್ಕಾಗಿ ಮತ್ತೊಂದು ಸಾರೆ ನಿರಶನವ್ರತವನ್ನು ಕೈಗೊಂಡಿದ್ದರೆ, ಎಂದಿಗೂ ಈ ಪ್ರತಿಲೋಮವಿವಾಹವು ನೆರವೇರುತ್ತಿರಲಿಲ್ಲ. ಅಸ್ಪೃಶ್ಯ ಕನ್ಯೆಯನ್ನು ಬ್ರಾಹ್ಮಣಯುವಕನಿಗೆ ವಿವಾಹಮಾಡಿಸಿದಂತೆ ವೈಶ್ಯಯುವಕನಾದ ತಮ್ಮ ಪುತ್ರನಿಗೂ ಒಂದು ಅಸ್ಪೃಶ್ಯಕನ್ಯೆಯನ್ನು ತಂದು ಮದುವೆಮಾಡಿಸಿದ್ದರೆ ಕೊಡುವದೂ ತರುವುದೂ ಎರಡರಲ್ಲಿಯೂ ಸಮತೆಯೆಂಬುವದುಂಟಾಗುತ್ತಿತ್ತು. ಹಾಗೆಮಾಡದೆ ತಮ್ಮ ಮಗನಿಗೆ ಮಾತ್ರ ಉತ್ತಮಜಾತಿಯ ಕನ್ಯೆಯನ್ನು ತೆಗೆದುಕೊಂಡು ಯಾವನೋ ಒಬ್ಬ ಬ್ರಾಹ್ಮಣಜಾತಿಯ ಯುವಕನಿಗೆ ಮಾತ್ರ ಅಸ್ಪೃಶ್ಯಕನ್ಯೆಯನ್ನು ವಿವಾಹಮಾಡಿಸಿದ್ದರಿಂದ ಇವರ ವಿಷಮಪರಿವರ್ತನೆಯು ವ್ಯಕ್ತವಾಗುತ್ತದೆ. ಲೋಕದಲ್ಲಿ ಬಾಯಿಯಲ್ಲಿ ಹೇಳುವುದನ್ನು ಕಾರ್ಯದಲ್ಲಿ ನಡೆಯಿಸದಿದ್ದರೆ ಅದು ಸತ್ಪುರುಷರ ಲಕ್ಷಣವಲ್ಲ. ಹಿಂದೆ ಇಂಥ ಶಾಸ್ತ್ರವಿರುದ್ಧವಾದ ಮಿಶ್ರವಿವಾಹಗಳನ್ನು ಮಾಡಿಸಲು ಅನೇಕರು ಉದ್ಯುಕ್ತರಾಗಿ ತಾವುಗಳೇ ಅನೇಕ ವಿಧಗಳಾದ ಕಷ್ಟಗಳಿಗೀಡಾದರಲ್ಲದೆ ಇಂಥ ಮಿಶ್ರವಿವಾಹ ಪದ್ಧತಿಯು ಮಾತ್ರ ಜಾರಿಗೆ ಬರಲಿಲ್ಲವು. ಸೃಷ್ಟಿಕಾಲದಿಂದಲೂ ನಮ್ಮ ಭರತಖಂಡದಲ್ಲಿ ಮುಕ್ತಿಸಾಧನಾರ್ಥವಾಗಿ ಬಂದ ವರ್ಣಾಶ್ರಮಧರ್ಮಗಳನ್ನು ಅತ್ಯಲ್ಪವೂ, ತುಚ್ಛವೂ, ಕ್ಷಣಿಕವೂ ಆದ ರಾಜ್ಯಸಾಧನೆಗಾಗಿ ಹಾಳುಮಾಡಿ ಕೇವಲ ಐಹಿಕಸೌಖ್ಯವನ್ನು ಪಡೆಯುವದು ವಿವೇಕಿಗಳಾದ ವೇದಧರ್ಮಾವಲಂಬಿಗಳ ಕರ್ತವ್ಯವಲ್ಲ. ಇಂಥ ವಿಷಮವಿವಾಹಗಳು ನಡೆಯುವುದರಿಂದ ವರ್ಣಸಂಕರಪ್ರಯೋಜನವೊಂದೇ ಫಲವಾಗುವುದಲ್ಲದೆ ಇನ್ನಾವ ಸೌಖ್ಯವೂ ಇವರಿಗೆ ದೊರೆಯಲಾರದು.

ಬೆಂಗಳೂರು ಪೋಲೀಸ್ ಟ್ರೇನಿಂಗ್ ಸ್ಕೂಲು ಗುಮಾಸ್ತನಾಗಿದ್ದ ನಾರಾಯಣನೆಂಬವನು ಅಧಿಕಾರಿಗಳ ರುಜುವನ್ನು ತಾನೇ ಮಾಡಿ ಖಜಾನೆಯಿಂದ ಹಣವನ್ನು ಪಡೆದು ದುರುಪಯೋಗಪಡಿಸಿದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಅಪರಾಧಿಗೆ 18 ತಿಂಗಳ ಕಠಿಣಸಜಾ, 500 ರೂಪಾಯಿ ಜುಲ್ಮಾನೆ ತಪ್ಪಿದರೆ ಮತ್ತೆ 6 ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಒಳದೇಶದ ವೃತ್ತಾಂತಗಳು.

ಶ್ರೀ ಕೂಡ್ಲಿ ಶೃಂಗೇರಿ ಮಠದ ಸ್ವಾಮಿಗಳು ಕಳೆದ ಬುಧವಾರ ಬೆಳಗ್ಗೆ ರಾಜಧಾನಿಗೆ ಆಗಮಿಸಿದರು. ಗೌರವಾರ್ಥವಾದ 11 ತೋಪುಗಳು ಹಾರಿಸಲ್ಪಟ್ಟವು.

ಮೈಸೂರು ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನವು ಸೆಪ್ಟಂಬರ್ 30 ನೇ ತಾರೀಖಿನ ದಿವಸ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವದು.

ಲಾರ್ಡ್ ವಿಲಿಂಗ್ಡನ್‌ರವರು ಬರುವ ನವಂಬರ್ ತಿಂಗಳಲ್ಲಿ ತಿರುವಾಂಕೂರಿಗೆ ಹೋಗುವರೆಂದೂ, ಹಾಗೆಯೇ ಮೈಸೂರು ಸಂಸ್ಥಾನಕ್ಕೂ ಬರುವರೆಂದೂ ತಿಳಿದುಬಂದಿದೆ

ಶಿವಮೊಗ್ಗೆಯಲ್ಲಿ ನಡೆದ ಗಲಭೆಗಳ ಸಂಬಂಧವಾಗಿ ಪೋಲೀಸರು 22 ಜನ ಹಿಂದುಗಳ ಮೇಲೂ 61 ಜನ ಮುಸಲ್ಮಾನರ ಮೇಲೂ ಮೊಕದ್ದಮೆಯನ್ನು ಹೂಡಿರುತ್ತಾರೆ. ವಿಚಾರಣೆಯು ಈ ವಾರ ಪ್ರಾರಂಭವಾಗುವದು.

ಪಾರ್ಲಿಮೆಂಟ್ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಸಾಕ್ಷ್ಯಹೇಳಲು ಲಂಡನ್ನಿಗೆ ಪ್ರಯಾಣಮಾಡಿರುವ ಸರ್ ಮಿರ್ಜಾಮಹಮುದ್ ಇಸ್ಮಾಯಿಲ್‌ರವರು ಆಗಸ್ಟ್ ತಿಂಗಳ ಮೊದಲನೇ ವಾರದಲ್ಲಿ ಅಲ್ಲಿಂದ ಹಿಂತಿರುಗುತ್ತಾರೆಂದು ತಿಳಿದುಬಂದಿದೆ.

ಬೇಲೂರು ದೇವಾಲಯದಲ್ಲಿ ನೆಲವನ್ನು ಅಗಿಯುತ್ತಿದ್ದಾಗ 19 ಭಂಗಾರದ ಇಟ್ಟಿಗೆಗಳು ದೊರೆತವೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆದರೆ ಸರಕಾರದವರು ಆ ವಿಷಯವು ನಿರಾಧಾರವಾದದ್ದೆಂದೂ, ಅಲ್ಲಿ ಗಿಲ್ಟಾದ 13 ಹಿತ್ತಾಳೆ ತಟ್ಟೆಗಳು ಮಾತ್ರ ದೊರೆತವೆಂದೂ ಪ್ರಕಟಿಸಿರುತ್ತಾರೆ.

ರಾಜಧಾನಿಯ ಪೋಲೀಸ್ ಕೋಆಪರೇಟಿವ್ ಸೊಸೈಟಿಯ ರೈಟರಾಗಿದ್ದ ಭಾಸ್ಕರರಾವ್ ಎಂಬಾತನು ಸೊಸೈಟಿಯ ಬಾಬತು 900 ರೂಪಾಯಿಗಳನ್ನು ದುರುಪಯೋಗ ಪಡಿಸಿದನೆಂಬ ಕಾರಣದಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗೆ 6 ತಿಂಗಳ ಕಠಿಣ ಸಜಾ ಮತ್ತು 300 ರೂ. ಜುಲ್ಮಾನೆಯನ್ನು ವಿಧಿಸಿದರು.

ಈಗ್ಗೆ 8-10 ದಿವಸಗಳ ಹಿಂದೆ ನಂಜನಗೂಡು ಸ್ಟೇಷನ್‌ಮಾಸ್ಟರವರು ಟಿಕೇಟು ಬಿಕರಿಮಾಡಿದ ಬಾಬ್ತು ಸುಮಾರು 570 ರೂಪಾಯಿಗಳನ್ನು ಒಂದು ಚೀಲದಲ್ಲಿಕಟ್ಟಿ ಮೇಜಿನಮೇಲಿಟ್ಟು ಯಾರೊಡನೆಯೋ ಮಾತನಾಡುತ್ತಿದ್ದಾಗ ಹಣದ ಚೀಲವನ್ನು ಯಾರೋ ಅಪಹರಿಸಿದರೆಂದೂ, ಪೋಲೀಸರು ತನಿಖೆಮಾಡುತ್ತಿರುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಮೊದಲನೇ ಮತ್ತು ಎರಡನೇ ಮುನಸೀಫ್ ಕೋರ್ಟುಗಳಲ್ಲಿ ನೌಕರರಾಗಿದ್ದ ರಂಗಸ್ವಾಮಯ್ಯರ್ ಮತ್ತು ರಾಘಣ್ಣ ಎಂಬುವರು ಕೋರ್ಟಿನ ಹಣಕಾಸುಗಳನ್ನು ದುರುಪಯೋಗಪಡಿಸಿರುತ್ತಾರೆಂಬ ಕಾರಣದ ಮೇಲೆ ಪೋಲೀಸರು ತನಿಖೆ ಕ್ರಮಗಳನ್ನು ನಡೆಸಿರುತ್ತಾರೆ. ಮೊದಲನೆಯವರು ಎಲ್ಲಿಯೋ ಪರಾರಿಯಾಗಿರುವರೆಂದೂ, ಎರಡನೆಯವರು ನಿರ್ಬಂಧಿಸಲ್ಪಟ್ಟಿರುವರೆಂದೂ ತಿಳಿದುಬಂದಿದೆ.

ಕಳೆದ ಜುಲೈ 6 ನೇ ತಾರೀಖಿನ ದಿವಸ ಬೆಂಗಳೂರು ಸೆಂಟ್ ಜೋಸೆಫ್ಸ್ ಸ್ಕೂಲಿನ ಟಿ. ಸುಂದರೇಶ್ವರರಾವ್ ಎಂಬ ವಿದ್ಯಾರ್ಥಿಯು ಲಾಲ್‌ಬಾಗ್ ರೋಡಿನಿಂದ ನರಸಿಂಹರಾಜರಸ್ತೆಯ ಚೌಕಕ್ಕೆ ಬೈಸಿಕಲ್ಲಿನ ಮೇಲೆ ಬರುತ್ತಿದ್ದಾಗ ನರಸಿಂಹರಾಜರಸ್ತೆಯಿಂದ ಬರುತ್ತಿದ್ದ ಒಂದು ಮೋಟಾರು ಢಿಕ್ಕಿಹೊಡೆದು, ವಿದ್ಯಾರ್ಥಿಯ ತಲೆಯು ಒಡೆದು ಕೂಡಲೇ ಜ್ಞಾನತಪ್ಪಿ ಬಿದ್ದನು. ಅವನನ್ನು ಅದೇ ಮೋಟಾರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆತರಲು, ಅವನು ದಾರಿಯಲ್ಲಿಯೇ ಮೃತಪಟ್ಟನು. ಪೋಲೀಸರು ತನಿಖೆ ಮಾಡುತ್ತಿರುವರು.

ವರ್ತಮಾನಸಂಗ್ರಹ

ವಾ ಸಂಸ್ಥಾನದ ಮಹಾರಾಜರು ತಮ್ಮ ಸಂಸ್ಥಾ ಕಾಡುಗಳಲ್ಲಿ 13 ಭಾರೀ ಹುಲಿಗಳನ್ನು ಶಿಕಾರಿ ದರು.

ರೇಲಿಯ ಒಬ್ಬ ಪೋಲೀಸ್ ಇನ್ಸ್ಪೆಕ್ಟರವರು ಧಿಕಾರಿಗಳ ಅಪ್ಪಣೆಯಂತೆ ತಮ್ಮ ಹಣೆಯ ಮೇ ಚಿನ್ಹೆಯನ್ನು ಅಳಿಸಲಾರದೆ ತಮ್ಮ ಕೆಲಸಕ್ಕೆ ನಾಮೆ ಕೊಟ್ಟರು!

ಲೈ 1 ನೇ ತಾರೀಖಿಗೆ ಅಖೈರಾದ ವಾರದಲ್ಲಿ 6,567 ರೂಪಾಯಿಗಳ ಬೆಲೆಯುಳ್ಳ ಭಂಗಾರವು ಬಯಿಯಿಂದ ಪರದೇಶಗಳಿಗೆ ರವಾನಿಸಲ್ಪಟ್ಟಿತು. ವರೆಗೆ ರವಾನಿಸಲ್ಪಟ್ಟ ಭಂಗಾರದ ಒಟ್ಟು ಬೆಲೆ 1,44,38,30,903.

ಾಹೋರಿನ ಸಮೀಪದಲ್ಲಿರುವ ಸನವಾರಿನ ಲಾ ರಾಯಲ್ ಮಿಲಿಟರಿ ಸ್ಕೂಲಿನ ಪ್ರಿನ್ಸಿಪಾಲ ರಿವರೆಂಡ್ ಇ. ಎಸ್. ಹಂಟ್‌ರವರು ಕೆಲವು ರ್ಥಿಗಳೊಡನೆ ಶಾಲೆಯ ಕೊಳದಲ್ಲಿ ಈಜುತ್ತಿ ಮುಳುಗಿ ಮರಣಹೊಂದಿದರು.

ಂಗ್ಲೆಂಡ್ ದೇಶಕ್ಕೆ ಸೇರಿದ ಗ್ಲಾಸ್ಗೋ ನಗರದ ಪೋಲಾಕ್ ಬ್ಲೂ ಎಂಬ ಒಬ್ಬ ಮ್ಯಾಜಿಸ್ಟ್ರೇಟ ಒಂದಾನೊಂದು ಹೋಟಲಿನಲ್ಲಿ ಬಹಳ ಅನುಚಿತ ಯಲ್ಲಿ ವರ್ತಿಸಿದರೆಂಬ ಕಾರಣದಮೇಲೆ 5 ಪೌಂಡು ಜುಲ್ಮಾನೆ ತಪ್ಪಿದರೆ 20 ದಿವಸಗಳ ಸಜೆಗೆ ಗುರಿಯಾದರು.

ಅಮೇರಿಕಾದೇಶಕ್ಕೆ ಸೇರಿದ ಕಾನಕರ್ ಎಂಬ ನಲ್ಲಿ ರಾತ್ರಿ 9 ಘಂಟೆಯಾದನಂತರ ಗಂಡಸ ನೆ ಕೂಡಿ ಬಹಿರಂಗಪ್ರದೇಶಗಳಲ್ಲಿ ವಿಹರಿಸುವ ಯರನ್ನು ದಸ್ತಗಿರಿಮಾಡಿ ಅವರವರ ಮನೆಗಳಿಗೆ ಬರುವದಕ್ಕಾಗಿ ಅನೇಕ ಸ್ತ್ರೀ ಪೋಲೀಸರು ಸಲ್ಪಟ್ಟಿರುವರಂತೆ! ಸ್ತುತ್ಯ!

ಲ್ಕತ್ತೆಯಲ್ಲಿ ಬಾಬು ಚರಣಚಂದ್ರರಾಯ್ ಎಂಬ ರ್ಥಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ 12 ಫೇಲಾಗಿ 13 ನೇ ಸಾರಿ ತೇರ್ಗಡೆಹೊಂದಿದ ! ಈತನಂತೆ ಬಹು ಚುರುಕುಬುದ್ಧಿಯುಳ್ಳ ಒಬ್ಬ ಯು ಬಳ್ಳಾರಿಯಲ್ಲಿರುವನಂತೆ! ಆತನ ಸಂಸ್ಕೃ ರೀಕ್ಷಾ ಫಲಿತಾಂಶವಾದರೂ ಇದೇ ಪ್ರಕಾರವಾಗಿ ದಂತೆ!

ನಾರ್ ಡಿ ಸೀವ್ರ್ ಎಂಬುವರು ಭೂಮಿಯ ಲೆ ಮೋಟಾರಿನಂತೆ ನಡೆಯುವ ಮತ್ತು ಅವಶ್ಯಕ ಗ ಆಕಾಶದಲ್ಲಿ ವಿಮಾನದಂತೆಯೂ ಸಂಚರಿಸು ಒಂದು ಹೊಸಯಂತ್ರವನ್ನು ತಯಾರಿಸಿರುವರು. 'ಹಾರುವ ಮೋಟಾರು' ಎಂದು ಹೆಸರು. ಸರಾಸರಿ ಗಂಟೆಗೆ 100 ಮೈಲುಗಳ ವೇಗದಲ್ಲಿ ರಿಸಬಲ್ಲದು!

ಅಮೇರಿಕೆಯಲ್ಲಿ ಕೆಲವು ದಿವಸಗಳ ಹಿಂದೆ ಒಂದು ಯಾವುದೋ ಒಂದು ಸಣ್ಣಪ್ರಾಣಿಯನ್ನು ನುಂಗುತ್ತಿತ್ತು! ಅಷ್ಟರಲ್ಲಿ ಒಂದು ರಣ ಹಾರಿಬಂದು ಹಾವನ್ನು ಮೇಲಕ್ಕೆ ಎತ್ತಿ ಡು ಹೋಗುತ್ತಿರಲು ಆದರ ರೆಕ್ಕೆಯು ವಿದ್ಯುಚ್ಛ ತಂತಿಗೆ ಬಡಿದು ಆ ಮೂರು ಪ್ರಾಣಿಗಳೂ ಬೂದಿಯಾದುವಲ್ಲದೆ, ತಂತಿಯು ಹರಿದು ಕಾಡುಗಿಚ್ಚಿಗೇ ಪ್ರಾರಂಭವಾಯಿತಂತೆ!

ರ್ಸಾ ನಗರದ ಸಮೀಪದ ಒಂದು ಗ್ರಾಮದಲ್ಲಿ ದಿನ ರಾತ್ರಿ ಒಬ್ಬಕಳ್ಳನು ಒಂದು ಮನೆಗೆ ಕಳ್ಳತನಮಾಡಿ ಅನಂತರ ಅದರ ಪಕ್ಕದಲ್ಲಿದ್ದ ಗುಪ್ತ ಎಂಬವರ ಮನೆಗೆ ನುಗ್ಗಿದನು. ಅಷ್ಟು ಗೆ ಸರಿಯಾಗಿ ಅಲ್ಲಿದ್ದ ಒಂದು ಗಡಿಯಾರವು ಯನ್ನು ಬಾರಿಸಿ ಮನೆಯವರನ್ನು ಎಚ್ಚರಗೊಳಿ ಕಳ್ಳನು ಗಾಬರಿಯಾಗಿ ತಾನು ಕದ್ದುತಂದಿದ್ದ ರ್ಥಗಳನ್ನೆಲ್ಲಾ ಅಲ್ಲಿಯೇ ಬಿಟ್ಟು ಪರಾರಿಯಾದ !

ಂಡನ್ನಿನಲ್ಲಿ ನಡೆಯುತ್ತಿರುವ ಆರ್ಥಿಕ ಸಮ್ಮೇಳ ಪ್ರಪಂಚದ ನಾನಾ ದೇಶಗಳಿಂದಲೂ ಪ್ರತಿನಿಧಿ ಬಂದಿರುವರಷ್ಟೆ! ಈ ಸಂದರ್ಭವು ತಮಗೆ ಬಹಳ ಅನುಕೂಲವಾಗಿರುವದೆಂದು ತಿಳಿದು ಚತುರರಾದ ಕೆಲವು ಕಳ್ಳರು ಲಂಡನ್ನಿಗೆ ಬಂದಿರುವರಂತೆ! ಇವರು ಕೆಲವು ದಿವಸಗಳ ಹಿಂದೆ ಒಂದು ಟ್ರೇನಿನಲ್ಲಿ 15,000 ರೂಪಾಯಿಗಳ ಬೆಲೆಬಾಳುವ ಆಭರಣಗಳನ್ನು ಅಪಹರಿಸಿದರು. ಅವರನ್ನು ಹಿಡಿಯಲು ಪೋಲೀಸರು ವಿಶ್ವಪ್ರಯತ್ನವನ್ನು ಮಾಡುತ್ತಿರುವರು.

ಕಳೆದವರ್ಷ ಇಂಗ್ಲೆಂಡಿಗೆ ಜಪಾನ್ ಮೊದಲಾದ ದೇಶಗಳಿಂದ ಸುಮಾರು 5,00,00,000 ಎಲೆಕ್ಟ್ರಿಕ್ ಬಲ್ಬುಗಳು ರವಾನಿಸಲ್ಪಟ್ಟವು. ಈ ಬಲ್ಬುಗಳು ಅಲ್ಲಿ ಇಂಗ್ಲೆಂಡ್‌ದೇಶದ ಬಲ್ಬುಗಳಿಗಿಂತ ಅತ್ಯಂತ ಕಡಿಮೆ ದರಕ್ಕೆ ಮಾರಲ್ಪಡುವವು. ಅಂದರೆ ಬ್ರಿಟಿಷ್ ಬಲ್ಬುಗಳು 1 ಕ್ಕೆ 1 ಷಿಲಿಂಗ್ 11 ಪೆನ್ನಿಗಳಾದರೆ ಜಪಾನ್ ಬಲ್ಬುಗಳು 100 ಕ್ಕೆ 6 ಷಿಲಿಂಗ್ 8 ಪೆನ್ನಿಗಳಂತೆ ಮಾರಲ್ಪಡುವವು. ಇದೇ ರೀತಿ ಇನ್ನೂ ಕೆಲವು ಕಾಲ ನಡೆದರೆ ಇಂಗ್ಲೆಂಡಿನ ಬಲ್ಬಿನ ಕಾರ್ಖಾನೆಗಳನ್ನೆಲ್ಲಾ ಮುಚ್ಚಬೇಕಾಗುವದಂತೆ!

ಮೆಲ್ಬೋರ್ನ್ ನಗರದಲ್ಲಿ ಒಬ್ಬ ದನಕರುಗಳ ವ್ಯಾಪಾರಿಯು ಮಾರಾಟಕ್ಕೆ ಅನೇಕ ಹಸುಗಳನ್ನೂ ಮತ್ತು ಗೂಳಿಗಳನ್ನೂ ಹೊಡೆದುಕೊಂಡು ಬರುತ್ತಿರುವಾಗ ಒಂದು ದೊಡ್ಡ ಗೂಳಿಯು ಬೆದರಿ ಜನಗಳ ಮೇಲೆ ನುಗ್ಗಿಬಿಟ್ಟಿತು. ಅದನ್ನು ಹಿಡಿಯಲು ಯಾರಿಂದಲೂ ಸಾಧ್ಯವಾಗದಿರಲು ಪೋಲೀಸರು ಅದರ ಮೇಲೆ 7 ಸಾರೆ ಗುಂಡು ಹಾರಿಸಿದರು. ಅದರಿಂದ ಗೂಳಿಗೆ ಏನೂ ಆಗದೆ ಅದು ಮತ್ತಷ್ಟು ಕೋಪದಿಂದ ಪೋಲೀಸರ ಮೇಲೆ ನುಗ್ಗಿತು. ಕಡೆಗೆ ದೊಡ್ಡ ಫಿರಂಗಿಯನ್ನು ತಂದು ಅದನ್ನು ಕೊಂದರಂತೆ!

ಪ್ಯಾರಿಸ್‌ನಗರದಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಯೊಡನೆ ಜಗಳವಾಡಿ ಕಡೆಗೆ ಅವಳನ್ನು ಕೊಂದನು. ಮ್ಯಾಜಿಸ್ಟ್ರೇಟರು ಅವನಿಗೆ 5 ವರ್ಷಗಳ ಸಜೆಯನ್ನು ವಿಧಿಸಿ, ಅದು ಅವನ ಮೊದಲನೆಯ ಅಪರಾಧವೆಂಬ ಕಾರಣದಮೇಲೆ ಕೂಡಲೇ ಬಿಡುಗಡೆಮಾಡಿದರು. ಇವನ ಮಾವನು ತನ್ನ ಮಗಳನ್ನು ಕೊಲೆಮಾಡಿದುದಕ್ಕಾಗಿ ಅಳಿಯನಿಂದ ತನಗೆ ಏನಾದರೂ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಅರ್ಜಿಹಾಕಿದಾಗ ಮ್ಯಾಜಿಸ್ಟ್ರೇಟರು ಅಳಿಯನಿಂದ 2 ಪೆನ್ನಿ (ಒಂದಾಣೆ 8 ಪೈ) ಗಳ ಪರಿಹಾರವನ್ನು ಕೊಡಿಸಿದರಂತೆ! ವಿಚಿತ್ರನ್ಯಾಯ!

ಆಸ್ಟ್ರೇಲಿಯಾ ದೇಶದಲ್ಲಿ ಹೆಗ್ಗಣಗಳಿಂದ ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳ ಬೆಲೆಯುಳ್ಳ ದವಸಧಾನ್ಯಗಳು ನಾಶವಾಗುವವು. ಇದಕ್ಕಾಗಿ ಅಲ್ಲಿಯ ರೈತರು, ತಮ್ಮ ಹೊಲಗಳಿಗೆ ಮೇಲ್ಕಂಡ ಪ್ರಾಣಿಗಳು ನುಗ್ಗದಂತೆ ದೊಡ್ಡದೊಡ್ಡ ಘಟಸರ್ಪಗಳನ್ನು ಸಾಕಿರುವರಂತೆ! ಹೀಗೆ ಘಟಸರ್ಪಗಳಿರುವ ಪ್ರದೇಶವನ್ನು ಹೆಗ್ಗಣಗಳು ಕೂಡಲೇ ಬಿಟ್ಟು ಹೋಗುವವಲ್ಲದೆ, ಅದರಿಂದ ರೈತರಿಗೆ ಬೆಳೆಯು ನಾಶವಾಗದೇ ಇರುವದೊಂದು, ಮತ್ತು ತಮಗೆ ಉಪಯೋಗವಿಲ್ಲದ ಸರ್ಪಗಳನ್ನು ಮಾರುವದರಿಂದ ಅಪಾರವಾದ ಹಣ ಬರುವದೊಂದು ಹೀಗೆ ಎರಡುವಿಧವಾದ ಅನುಕೂಲಗಳಾಗುವವು. ಈ ಸರ್ಪಗಳ ಚರ್ಮದಿಂದ ಬಹಳ ಬೆಲೆಯುಳ್ಳ ಕಾಲಿನ ಜೋಡುಗಳೂ ಮತ್ತು ಹಣದ ಚೀಲಗಳೂ ತಯಾರಾಗುವವಂತೆ!

ಆಫ್ರಿಕಾದೇಶಕ್ಕೆ ಸೇರಿದ ಹೈಟಿ ಎಂಬಲ್ಲಿ ಡಾಲ್ಫಿನ್ ಎಂಬ ಒಬ್ಬ ನೀಗ್ರೋಮನುಷ್ಯನು ಉಬ್ಬಸರೋಗದಿಂದ ನರಳುತ್ತಿರಲು ಡಾಕ್ಟರರು ಅವನಿಗೆ ರಾಯ್ಲು ಎಂಬ ಗಿಡದ ಪುಡಿಯನ್ನು ಸೇವಿಸುವಂತೆ ಹೇಳಿದರು. ಆದರೆ ಅವನು ಆ ಪುಡಿಯನ್ನು ಡಾಕ್ಟರರು ಹೇಳಿದುದಕ್ಕಿಂತಲೂ ಹೆಚ್ಚುಪ್ರಮಾಣದಲ್ಲಿ ತೆಗೆದುಕೊಳ್ಳಲಾರಂಭಿಸಿದನು. ಇದರಿಂದ ಅವನಿಗೆ ಮೂರ್ಛೆರೋಗವು ಪ್ರಾಪ್ತವಾಯಿತು. ಅವನ ಕಣ್ಣುಗಳೇ ಕಾಣಿಸದಂತಾದವು. ದಿನದಿನಕ್ಕೆ ಅವನ ದೇಹಸ್ಥಿತಿಯು ಕೆಡುತ್ತಾಬಂದಿತು. ಹೀಗೆ 3-4 ತಿಂಗಳುಗಳು ಕಳೆಯುವಷ್ಟರಲ್ಲಿ ಅವನ ಕಣ್ಣು ಪುನಃ ಕಾಣಿಸಲಾರಂಭಿಸಿದುದಲ್ಲದೆ, ಕರ್ರಗಿದ್ದ ಅವನ ಮೈಬಣ್ಣವು ಬೆಳ್ಳಗಾಗಿದ್ದಿತಂತೆ! ಇದನ್ನು ಕಂಡು ಅಲ್ಲಿಯ ಡಾಕ್ಟರರು ಚಕಿತರಾಗಿ ಆ ಗಿಡವನ್ನು ಪರೀಕ್ಷಿಸುತ್ತಿರುವರಂತೆ!

ಕೇನ್ಸಾಸ್‌ನಗರದ ಲಾರ್ಡ್‌ಮೇಯರ್‌ರವರ ಪುತ್ರಿಯಾದ ಮಿಸ್ ಮೇರಿ ಮ್ಯಾಕ್ ಎಲಾಯಳನ್ನು ಯಾರೋ ಕಳ್ಳರು ಸೆಳೆದುಕೊಂಡು ಹೋಗಿದ್ದರೆಂದೂ, ಲಾರ್ಡ್‌ಮೇಯರವರು 90,000 ರೂಪಾಯಿಗಳನ್ನು ಕೊಟ್ಟನಂತರ ಅವಳನ್ನು ಬಿಡುಗಡೆ ಮಾಡಿದರೆಂದೂ, ಕಳೆದವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೇ! ಈಗ ಆ ಕಳ್ಳರು ಮೇರಿಯು ಬಹಳ ಯೋಗ್ಯರೀತಿಯಲ್ಲಿ ನಡೆದುಕೊಂಡಳೆಂದೂ, ಇದೇ ರೀತಿ ಜನರನ್ನು ಸೆಳೆದುಕೊಂಡುಹೋಗಿ ಅವರ ಬಂಧುಗಳಿಂದ ಹಣವನ್ನು ಸುಲಿಗೆಮಾಡುವ ಇತರ ಕಳ್ಳರಿಗೂ ತಾವು ಈಕೆಯನ್ನು ಶಿಫಾರಸುಮಾಡುವೆನೆಂದೂ ಒಂದು ಯೋಗ್ಯತಾಪತ್ರವನ್ನು ಕಳುಹಿಸಿರುವರಂತೆ! ಮೇರಿಯೂ ಸಹ ಕಳ್ಳರು ತನ್ನ ವಿಷಯದಲ್ಲಿ ಬಹಳ ಯೋಗ್ಯರೀತಿಯಲ್ಲಿ ವರ್ತಿಸಿದರೆಂದು ಹೇಳುತ್ತಿರುವಳಲ್ಲದೆ, ಅವರಿಂದ ಕೊಡಲ್ಪಟ್ಟ ಒಂದು ಪುಷ್ಪಗುಚ್ಛವನ್ನು ಬಹು ಪ್ರೀತಿಯಿಂದ ತನ್ನ ಬಳಿಯಲ್ಲಿಟ್ಟುಕೊಂಡಿರುವಳಂತೆ! ಪೋಲೀಸರು ಈ ಸಂಬಂಧವಾಗಿ ಆಗಲೇ 7 ಜನರನ್ನು ದಸ್ತಗಿರಿ ಮಾಡಿರುವರಾದರೂ ನಿಜವಾದ ಕಳ್ಳರು ಇಂಥವರೇ ಎಂಬುದು ಇನ್ನೂ ನಿರ್ದಿಷ್ಟವಾಗಿ ಗೊತ್ತಾಗಿರುವದಿಲ್ಲ.

ಘೋರಯುದ್ಧದ ಪೂರ್ವದಲ್ಲಿ ಜರ್ಮನಿಯಲ್ಲಿ ಕಾಗದದ ಮಾರ್ಕುಗಳು ನಿಜವಾದ ನಾಣ್ಯಗಳಂತೆ ಚಲಾವಣೆಯಲ್ಲಿದ್ದಾಗ ಜೆಕೊ ಸ್ಲೋವೇಕಿಯಾದೇಶದ ಆಗಸ್ಟ್ ಹ್ಯಾಂಡಲ್‌ಮನ್ ಎಂಬೊಬ್ಬ ಧನಾಢ್ಯನಾದ ವರ್ತಕನು ತನ್ನ ಬಳಿಯಲ್ಲಿದ್ದ ಕೋಟ್ಯಂತರ ರೂಪಾಯಿಗಳ ಬೆಲೆಯುಳ್ಳ ಚಿನ್ನಬೆಳ್ಳಿಯನ್ನೆಲ್ಲಾ ಜರ್ಮನಿಗೆ ತೆಗೆದುಕೊಂಡುಹೋಗಿ ಕಾಗದದ ಮಾರ್ಕುಗಳನ್ನು ತೆಗೆದುಕೊಂಡು ಇಟ್ಟುಕೊಂಡನು. ಕೆಲವು ಕಾಲ ಕಳೆಯುವಷ್ಟರಲ್ಲಿ ಆ ಕಾಗದದ ಮಾರ್ಕುಗಳಿಗೆ ಬೆಲೆಯೇ ಇಲ್ಲದಂತಾಯಿತು. ಅವನ ವ್ಯಾಪಾರದಲ್ಲಿಯೂ ನಷ್ಟವಾಯಿತು. ಕಡೆಗೆ ತನ್ನ ಜೀವನವನ್ನು ಸಾಗಿಸುವದಕ್ಕೂ ಸಹ ಮಾರ್ಗವಿಲ್ಲದಾಗಲು ಅವನು ಒಂದು ಸಣ್ಣ ಗುಡಸಲಿನಲ್ಲಿ ಬಡವನಂತೆ ವಾಸಮಾಡಲಾರಂಭಿಸಿದನು. ಮತ್ತು ತನ್ನ ಬಳಿಯಲ್ಲಿದ್ದ ಪೇಪರ್ ಮಾರ್ಕುಗಳನ್ನೆಲ್ಲಾ ಆ ಗುಡಸಲಿನ ಗೋಡೆಗಳಿಗೆ ಹತ್ತಿಸಿದನು. ಈಗ ಅವನ ವಿಚಿತ್ರ ಗುಡಸಲಿನ ಪ್ರಖ್ಯಾತಿಯು ಎಲ್ಲ ಕಡೆಗೂ ಹರಡಿ, ಅದನ್ನು ನೋಡಲು ಜನರು ತಂಡೋಪತಂಡವಾಗಿ ಬರಲಾರಂಭಿಸಿರುವರಂತೆ! ಈಗ ಆ ಗುಡಸಲನ್ನು ನೋಡಲು ಟಿಕೆಟ್ ಹಾಕಿರುವದರಿಂದ ಆಗಸ್ಟನಿಗೆ ಅದರಿಂದ ಬೇಕಾದಷ್ಟು ಹಣವು ಉತ್ಪತ್ತಿಯಾಗುತ್ತಿರುವದಂತೆ!

ಜೋಧಪುರನಗರದ ಮಹಾರಾಣಿಯವರು ಬೀದಿಯಲ್ಲಿ ಓಡಾಡುವ ಬಡನಾಯಿಗಳಿಗಾಗಿ ಊರಹೊರಗೆ ಒಂದು ದೊಡ್ಡಮನೆಯನ್ನು ಕಟ್ಟಿಸಿರುವರು. ಈ ನಾಯಿಗಳ ಆಹಾರಕ್ಕಾಗಿ ಪ್ರತಿನಿತ್ಯವೂ ಸ್ವಲ್ಪ ಹಿಟ್ಟು ಕಳುಹಿಸಲ್ಪಡುತ್ತಿತ್ತು. ನಾಯಿಗಳು ಅದನ್ನು ತಿನ್ನುತ್ತಿರಲಿಲ್ಲವಾಗಿ, ಅಲ್ಲಿ ನೇಮಿಸಲ್ಪಟ್ಟಿದ್ದ ಝಾಡಮಾಲಿಗಳೇ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಮಹಾರಾಣಿಯವರ ಸದುದ್ದೇಶವು ನೆರವೇರುವುದಕ್ಕೆ ಅವಕಾಶವಿಲ್ಲದಂತಿತ್ತು. ಒಂದಾನೊಂದು ದಿನ ಈ ವರ್ತಮಾನವು ಮಹಾರಾಣಿಗೆ ತಿಳಿದುಬರಲು ಅವರು ಅತ್ಯಂತ ದುಃಖಭರಿತರಾಗಿ, ನಾಯಿಗಳ ರಕ್ಷಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನೇಮಿಸಲ್ಪಟ್ಟಿದ್ದ ಪೋಲೀಸ್ ಸೂಪರಿಂಟೆಂಡೆಂಟರನ್ನು ಕರೆಯಿಸಿ, ಆಕ್ಷೇಪಿಸಿದುದಲ್ಲದೆ, ಆ ನಾಯಿಗಳಿಗಾಗಿ 50 ರೂಪಾಯಿ ಬೆಲೆಬಾಳುವ ಆಹಾರಪದಾರ್ಥಗಳನ್ನು ಕಳುಹಿಸಿ, ಅವುಗಳು ಅದನ್ನು ತಿಂದ ವರ್ತಮಾನವು ಬರುವವರೆಗೂ ತಾವು ಊಟಮಾಡುವುದಿಲ್ಲವೆಂದು ಹಟಮಾಡಿದರಂತೆ! ಪೋಲೀಸ್ ಸೂಪರಿಂಟೆಂಡೆಂಟರವರು ನಾಯಿಗಳು ಹಿಟ್ಟನ್ನು ತಿನ್ನದಿರುವ ವರ್ತಮಾನವನ್ನು ತಿಳಿಸಲು ರಾಣಿಯವರು ಇನ್ನುಮುಂದೆ ಅವುಗಳು ತಿನ್ನುವಂಥ ಪದಾರ್ಥವನ್ನೇ ಕೊಡಬೇಕೆಂದು ಅಪ್ಪಣೆ ಮಾಡಿದರು.

(3ನೇ ಪುಟದಿಂದ ಮುಂದುವರಿದುದು.)

ಹಣದ ಹಾನಿಯಾದರೂ ಅದನ್ನು ಸ್ವಾರ್ಥತ್ಯಾಗದಿಂದ ಸಹಿಸಿ ಉಭಯರ ವ್ಯಾಜ್ಯವನ್ನು ಮುರಿದು ಅವರನ್ನು ಸುಖದ ಹಾದಿಗೆ ಹಚ್ಚಿರಿ. ನಿಮ್ಮ ವಿದ್ಯಾ ಹಾಗೂ ಬುದ್ಧಿಯ ಮಾರಾಟ ಮಾಡಿ ಕುಬೇರರಾಗುವದಕ್ಕಿಂತ ಕಾಯಿದೆಯ ಜ್ಞಾನದ ಸದುಪಯೋಗಮಾಡಿ ಸುದಾಮನಾಗಿರುವದು ಲೇಸು. ಅಂದರೇನೇ ನಿಮ್ಮ ಜೀವನದ ಹಾಗೂ ಆಯುಷ್ಯದ ಸಾರ್ಥಕವಾಗುವದು.

ಆರೋಗ್ಯದಿಂದ ಬದುಕುವ ಕ್ರಮಗಳು.

೧. ಶ್ವಾಸೋಚ್ಛ್ವಾಸಕ್ರಮ.

ನೀವು ಸರಿಯಾಗಿ ಶ್ವಾಸಿಸುವಿರೋ? ಆರೋಗ್ಯದಿಂದ ಜೀವಿಸುವುದಕ್ಕೆ ಕ್ರಮವಾಗಿ ಶ್ವಾಸಿಸುವುದೇ ಮೂಲಾಧಾರವೆಂಬುದನ್ನು ತಿಳಿದುಕೊಂಡಿರುವಿರೋ? ಮೂಗಿನಮೂಲಕವಾಗಿ ಶ್ವಾಸವನ್ನು ಎಳೆಯುವಾಗ, ಆ ಗಾಳಿಯು ಶ್ವಾಸನಾಳಕ್ಕೆ ಹೋಗಿ ಸೇರುವುದಕ್ಕೆ ಮೊದಲು, ಮೂಗಿನ ರಂಧ್ರಗಳು ಹೊರಗಿನ ಗಾಳಿಯಲ್ಲಿರುವ ಧೂಳು ಮುಂತಾದ ಕೆಟ್ಟ ವಸ್ತುಗಳನ್ನೆಲ್ಲಾ ತಡೆದಿಟ್ಟು, ಶುದ್ಧವಾದ ಗಾಳಿಯನ್ನು ಮಾತ್ರ ಒಳಕ್ಕೆ ಬಿಡುವುದು. ಹಾಗಿಲ್ಲದೆ ಬಾಯಿಂದ ಶ್ವಾಸವನ್ನೆಳೆಯುವುದಾದರೆ, ಅದಕ್ಕವಕಾಶವಿಲ್ಲದೆ ಅನೇಕ ಕಶ್ಮಲಗಳು ಶ್ವಾಸಕೋಶಗಳಿಗೆ ಹೋಗಿ ಸೇರಿ ಅಪಾಯಕ್ಕೆ ಕಾರಣವಾಗುವುದು. ಈ ಅಂಶವನ್ನು ನೀವು ಗಮನಿಸಿರುವಿರೋ? ಅನೇಕರು ಬಾಯಿಂದಲೇ ಉಸಿರಾಡುತ್ತಿದ್ದರೂ, ಆ ತಪ್ಪನ್ನು ತಾವು ತಿಳಿಯದೆ, ತಾವು ಯಾವಾಗಲೂ ಮೂಗಿನಿಂದಲೇ ಶ್ವಾಸಿಸುತ್ತಿರುವುದಾಗಿ ಹೇಳುವರು. ಅವರು ಹೇಳುವುದು ನಿಮಗೂ ನಿಜವೆಂದು ತೋರಬಹುದು. ನೀವು ಸೂಕ್ಷ್ಮ ದೃಷ್ಟಿಯಿಂದ ಗಮನಿಸಿ ನೋಡಿದರೆ, ಅದರ ನಿಜಾಂಶವನ್ನು ತಿಳಿಯಬಹುದು. ಇದರ ಪರೀಕ್ಷೆಗಾಗಿ ನಿಮ್ಮ ಬಾಯನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಮೂಗಿನಿಂದ ಶ್ವಾಸಿಸುವುದಕ್ಕೆ ಪ್ರಯತ್ನಿಸಿರಿ. ಸ್ವಲ್ಪ ಹೊತ್ತಿನಲ್ಲಿಯೇ ನಿಮಗೆ ಏನೋ ಕಷ್ಟವಾಗಿ ತೋರಬಹುದು. ಆದುದರಿಂದ ಸಾಮಾನ್ಯವಾಗಿ ಅನೇಕರು ಬಾಯಿಂದ ಶ್ವಾಸಿಸುತ್ತಿರುವರೆಂದು ತಿಳಿಯಬಹುದು.

ನೀವು ಮೂಗಿನಿಂದ ಉಸಿರಾಡುವುದನ್ನೇ ಅಭ್ಯಾಸಕ್ಕೆ ತಂದರೆಮಾತ್ರ, ಆಮೇಲೆ ಅದು ಸರ್ವಸಾಧಾರಣವಾಗಿ ಸುಲಭವಾಗುವುದು. ಮೂಗಿನಿಂದ ಉಸಿರಾಡತಕ್ಕವರು ಮೂಗಿನ ರಂಧ್ರಗಳನ್ನು ಆಗಾಗ ಶುದ್ಧಮಾಡಿಕೊಳ್ಳಬೇಕು. ಕೈಯನ್ನು ದೊನ್ನೆಯಹಾಗೆ ಮಾಡಿ ಅದರಲ್ಲಿ ನೀರು ತುಂಬಿಕೊಂಡು ಆ ನೀರನ್ನು ಮೂಗಿನ ರಂಧ್ರದ ಮೂಲಕವಾಗಿ ಮೇಲಕ್ಕೆ ಎಳೆದುಕೊಳ್ಳಬೇಕು. ಒಂದು ರಂಧ್ರದಿಂದ ನೀರನ್ನೆಳೆಯುವಾಗ ಮತ್ತೊಂದು ರಂಧ್ರವನ್ನು ಬೆರಳಿನಿಂದ ಒತ್ತಿಹಿಡಿದುಕೊಳ್ಳಬೇಕು. ಮೊದಮೊದಲು ಈ ಕಾರ್ಯವು ನಿಮಗೆ ಕಷ್ಟವಾಗಿ ತೋರಬಹುದು. ಬಾಯಿಂದಲೇ ಉಸಿರಾಡಿ ಅಭ್ಯಾಸವುಳ್ಳವರಿಗೆ ಬಹಳಮಟ್ಟಿಗೆ ಇದು ಸಾಧ್ಯವಲ್ಲವೆಂದೂ ತೋರಬಹುದು. ಇದಲ್ಲದೆ, ಮೂಗಿನಿಂದ ನೀರನ್ನೆಳೆಯುವಾಗ ಸ್ವಲ್ಪ ಕಷ್ಟವೂ, ನೋವೂ ಆಗಬಹುದು. ಇದೊಂದನ್ನೂ ಲಕ್ಷ್ಯಮಾಡದೆ ಸ್ವಲ್ಪ ದಿನಗಳವರೆಗೆ ಸಾಧನೆಮಾಡಿದರೆ ಆಮೇಲೆ ಅದು ಸುಲಭವಾಗುವುದು. ಹೀಗೆ ಮೂಗಿನಿಂದಲೇ ಶ್ವಾಸಿಸುವುದನ್ನು ಬಳಕೆಗೆ ತಂದುಕೊಂಡಮೇಲೆ, ದೀರ್ಘವಾಗಿ ಶ್ವಾಸವನ್ನೆಳೆದು ಬಿಡುವ ರೀತಿಯನ್ನು ಕಲಿಯಬೇಕು. ಕೆಲವರು ಸಹಜವಾಗಿಯೇ ಬೇಗಬೇಗನೆ ಉಸಿರು ಬಿಡುವರು. ಬೇರೆ ಕೆಲವರು ಶ್ವಾಸವನ್ನು ಅತಿ ದೀರ್ಘವಾಗಿ ಎಳೆದು ಬಿಡುವರು. ಹೊಟ್ಟೆಯ ತಳಭಾಗದಿಂದ ಶ್ವಾಸವನ್ನೆಳೆದುಬಿಡುವವರೂ ಉಂಟು. ಅರ್ಧ ಶ್ವಾಸವನ್ನಾದರೂ ಎಳೆಯುವವರು ಅಪೂರ್ವವು. ಹೀಗಿರುವಾಗ ಸರಿಯಾಗಿ ಶ್ವಾಸವನ್ನೆಳೆದುಬಿಡುವವರಿಲ್ಲವೆಂದೇ ಹೇಳಬಹುದು.

೨ ಜಲಪಾನಕ್ರಮ.

ಗಾಳಿಯನ್ನು ಬಿಟ್ಟರೆ, ಎರಡನೆಯದು ತಣ್ಣೀರು. ನೀರನ್ನು ಹೆಚ್ಚಾಗಿ ಕುಡಿದಷ್ಟೂ ಅದು ದೇಹವನ್ನು ತೊಳೆದು ಶುದ್ಧೀಕರಿಸುವುದು. ಆದರೆ, ಆ ನೀರಿಗೆ ಸ್ವಲ್ಪ ಹಣ್ಣಿನ ರಸವನ್ನು ಸೇರಿಸಿಡುವುದು ಉತ್ತಮವು. ದಿನವೊಂದಕ್ಕೆ ಎಷ್ಟು ನೀರನ್ನು ಕುಡಿಯಬೇಕೆಂಬ ಪ್ರಮಾಣವು ಮಾತ್ರ ಆಯಾ ಮನುಷ್ಯನ ದೇಹಪ್ರಕೃತಿಯನ್ನು ಅನುಸರಿಸಿದೆ.

೩ ಸ್ನಾನಕ್ರಮ.

ದೇಹಾರೋಗ್ಯಕ್ಕೆ ಪ್ರತಿದಿನವೂ ಸ್ನಾನಮಾಡಬೇಕಾದುದು ಮುಖ್ಯವು. ತಣ್ಣೀರಿನಲ್ಲಿಯೇ ಸ್ನಾನ ಮಾಡಬೇಕೆಂಬ ವಿಧಿಯಿಲ್ಲ. ಅವರವರ ದೇಹಕ್ಕೆ ಅನುಕೂಲಿಸುವಂತೆ ತಣ್ಣೀರಿನಲ್ಲಿಯೋ, ಅಥವಾ ಬಿಸಿನೀರಿನಲ್ಲಿಯೋ ಸ್ನಾನಮಾಡಬಹುದು. ಆದರೆ, ನೀರಿನ ಶೀತೋಷ್ಣಸ್ಥಿತಿಯು ಅವರವರ ದೇಹದಲ್ಲಿ ರಕ್ತದ ಉಷ್ಣಾಂಶಕ್ಕೆ ಹೊಂದಿದಂತಿರಬೇಕಾದುದವಶ್ಯವು. ಇದನ್ನು ಅವರವರೇ ತಮ್ಮ ದೇಹಾನುಗುಣವಾಗಿ ಗಮನಿಸಿ ತಿಳಿದುಕೊಳ್ಳಬೇಕು. ಸ್ನಾನಮಾಡುವುದಕ್ಕೆ ಮೊದಲು ದೇಹವನ್ನು ಗಟ್ಟಿಯಾಗಿ ಉಜ್ಜಿ, ರಕ್ತಸಂಚಾರಕ್ಕೆ ಉತ್ತೇಜನವುಂಟಾಗುವಂತೆ ಮಾಡಬೇಕು. ಹೀಗೆ ಮೈಯನ್ನುಜ್ಜುವುದರಲ್ಲಿ, ದೇಹದೊಳಗೆಲ್ಲಾ ರಕ್ತಸಂಚಾರದಿಂದ ಒಂದು ಹೊಸ ಕಾಂತಿಯು ಉಂಟಾಗುವಂತಿರಬೇಕು. ಕೊನೆಯಪಕ್ಷ ವಾರಕ್ಕೆರಡುಸಾರಿ ಮಲಗುವುದಕ್ಕೆ ಮುಂಚೆ ಬಿಸಿನೀರಿನ ಸ್ನಾನವನ್ನು ಮಾಡಬೇಕು. ಇದರಿಂದ ಚರ್ಮರಂಧ್ರಗಳೊಳಗಿನ ಕೊಳೆಗಳೆಲ್ಲಾ ಹೊರಬೀಳುವುವು. ನಿಮ್ಮ ಮೈಗೆ ಹೊಳಪೂ, ಅಂದವೂ ಬರಬೇಕಾದರೆ, ಚರ್ಮವು ಶುದ್ಧವಾಗಿ, ಮಲಕೋಶವು ಚೆನ್ನಾಗಿ ಕೆಲಸಮಾಡತಕ್ಕವುಗಳಾಗಿಯೂ, ಜೀರ್ಣಾಂಗಗಳು ಒಳ್ಳೇ ಆರೋಗ್ಯಸ್ಥಿತಿಯಲ್ಲಿಯೂ ಇರಬೇಕು.

ಪ್ರತಿಮನುಷ್ಯನಿಗೂ ತಾನು ಸುಖವಾಗಿಯೂ, ಇತರರ ಕಣ್ಣಿಗೆ ಅಂದವಾಗಿಯೂ ಇರಬೇಕೆಂಬ ಅಭಿಪ್ರಾಯವೇನೋ ಇದ್ದೇಇರುವುದು. ಆ ಇಷ್ಟವು ಕೈಗೂಡಬೇಕಾದರೆ, ಮೇಲೆ ಹೇಳಿದ ಸ್ನಾನ, ಪಾನ, ಶುಚಿತ್ವ ಮೊದಲಾದ ನಿಯಮಗಳಲ್ಲಿ ತಪ್ಪದೆ ನಡೆಯುತ್ತಿರಬೇಕಲ್ಲದೆ, ಆರೋಗ್ಯಜೀವನಕ್ಕೆ ಅಂಗಸಾಧನೆಯನ್ನು ಮುಖ್ಯವೆಂದು ಭಾವಿಸಬೇಕು.

೪ ಆಹಾರಕ್ರಮ.

ಅನೇಕರು ಮಾಂಸಾಹಾರವು ಮೈಗೆ ಬಲಕಾರಿಯೆಂದು ಕೇಳಿ ಅದನ್ನೇ ನಂಬುವರು. ಇದು ಸರಿಯಲ್ಲ. ಏಕೆಂದರೆ, ಶಾಕಾಹಾರಿಗಳಿಗೂ ತಮ್ಮ ಪದ್ಧತಿಯೇ ಉತ್ತಮವೆಂಬ ನಂಬಿಕೆಯುಂಟು. ಅವರು ಹಾಗೆಯೇ ನಡೆದು ಒಳ್ಳೇ ದೃಢಾಂಗರಾಗಿರುವುದುಂಟು. ಆದುದರಿಂದ ನಿಮ್ಮ ನಿಮ್ಮ ಮೈಗೆ ಅನುಕೂಲಿಸುವ ಆಹಾರವೆಂತಹುದೆಂಬುದನ್ನು ನೀವೇ ನಿರ್ಧರಿಸಿಕೊಳ್ಳಬೇಕು. (ಈ ಭಾಗದಲ್ಲಿ ಹೊರೇಸ್ ಫ್ಲೆಚ್ಚರ್ ಎಂಬವರ 'ಗ್ಲಟ್ಟನ್' ಮುಂತಾದ ಪುಸ್ತಕಗಳನ್ನೋದಿ ಅವರ ಸೂಚನೆಗಳನ್ನು ತೆಗೆದುಕೊಂಡರೆ ಬಹಳ ಗುಣವುಂಟು.) ಎಷ್ಟೇ ಪ್ರಿಯವಸ್ತುವಾಗಿದ್ದರೂ ಮೀರಿ ಭುಂಜಿಸಬಾರದು. ಅಧಿಕ ಭೋಜನವೇ ಅಪಾ ಗಳಿಗೆಲ್ಲಾ ಮೂಲಕಾರಣವು.

ಒಳ್ಳೇರುಚಿಕೊಡುವ ಆಹಾರವನ್ನು ಚೆನ್ನಾಗಿ ದು ನುಂಗುವುದನ್ನು ಕಲಿತುಕೊಳ್ಳಬೇಕು. ಪ್ರತಿದಿನ ನದಿಂದಲೂ, ವ್ಯಾಯಾಮದಿಂದಲೂ ಯಾವಾಗಲ ಮೈಯನ್ನು ಶುದ್ಧವಾಗಿಡಬೇಕು. ಎಂದಾದರೂ ನಿ ಮನಸ್ಸಿಗೆ ಬೇಸರವೂ, ಮೈಗೆ ಶ್ರಮವೂ ಕಂಡು ದರೆ, ಅದಕ್ಕೆ ಆಹಾರದೋಷವೇ ಕಾರಣವಾಗಿರಬೇಕು ಇಲ್ಲವೇ ಆ ದಿನ ನೀವು ತಕ್ಕಷ್ಟು ನೀರನ್ನು ಕುಡಿ ದಿರಬೇಕು. ಇವೆರಡರಲ್ಲಿ ಯಾವುದೋ ಒಂದು ಕಾ ಣವಿರಬೇಕೆಂದು ತಿಳಿದು, ಒಂದು ದಿನದಮಟ್ಟಿಗೆ ಉ ವಾಸವಿದ್ದು, ಅಧಿಕವಾಗಿ ನೀರನ್ನು ಕುಡಿದು, ಶು ವಾದ ಗಾಳಿಯನ್ನು ಶ್ವಾಸಿಸಿರಿ! ನಾಲ್ಕೈದು ಸ ಭೋಜನಗಳನ್ನು ಬಿಟ್ಟುಬಿಟ್ಟರೂ ಅದರಿಂದ ಗುಣವೇ ಆಗಲೂ ನಿಮ್ಮ ದೇಹಾಯಾಸವು ತೀರದಿದ್ದರೆ, ಒಳ್ ರಕ್ತಸಂಚಾರವಾಗುವ ಹಾಗೆ ಕೆಲಸಮಾಡಿರಿ. ಆರೋ ಗ್ಯವೆಂಬುದೂ ಸೋಂಕುರೋಗಗಳಂತೆ ಸಾಂಕ್ರಾ ವೇ! ಆದುದರಿಂದ ನಾವು ಆರೋಗ್ಯವನ್ನು ಸಂಪಾ ಸಬೇಕಾದರೆ, ಆರೋಗ್ಯವಂತರೊಡನೆ ಕೂಡಾಡು ಆರೋಗ್ಯನಿಯಮಗಳನ್ನು ಗ್ರಹಿಸಬೇಕು.

ಯಜಮಾನ್ ಅಂಡ್ ಸನ್ಸ್
ರಬ್ಬರ್ ಮೊಹರು ಫ್ಯಾಕ್ಟರಿ
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್ ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ ಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾ ಮಾಡುತ್ತೇವೆ. [29]

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,
ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ನೇ ಯಾತ್ರಾಪ್ರಯಾಣ ತಾ|| ೧—೧೦—೧೯೩೩ ರಿಂದ ತಾ|| ೧೯—೧೧—೧೯೩೩ ಪೂರಾ ೫೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೩೧ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವದು.

ಸದರಿ ಕಂಪನಿಯು ಎಂಜಿನ ರೆಂಟಿಗಳಿಂದ ಪಡಜಮಾನುಗಳು ಕಿರ್ದಿ ಮಾಡಿಕೊಡಲ್ಪಡುವದು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[6]

ತಾ|| ೧—೬—೧೯೩೩.

ಜಿ. ಎ. ಶಿರೂರ,
ಮ್ಯಾನೇಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ.

ಸ್ತ್ರೋಕ್ತ ದಿವ್ಯೌಷಧಗಳು.

ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಷಧಿ ಹೆಸರು	ತೊಲೆ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಂಧೂರ	೧	೨—೦—೦
ಂಧೂರ	೧	೪—೦—೦
ಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ವಂಗ	೧	೩—೦—೦
ಗ	೧	೧—೦—೦
ಭಸ್ಮಗಳು.		
ಭಸ್ಮ	೧	೪೦—೦—೦
ಸ್ಮ	೧	೪—೦—೦
ಭಸ್ಮ	೧	೦—೮—೦
ಭಸ್ಮ	೧	೦—೧೨—೦
ಸ್ಮ	೧	೦—೮—೦
ಸ್ಮ	೧	೦—೮—೦
ಳಭಸ್ಮ	೧	೦—೮—೦
ಭಸ್ಮ	೧	೦—೮—೦
ಸ್ಮ	೧	೦—೮—೦
ರಭಸ್ಮ	೧	೦—೮—೦
ಮಕ್ಷಿಕಾಭಸ್ಮ	೧	೦—೧೨—೦
ಭಸ್ಮ	೧	೩—೦—೦
ತ್ರಭಸ್ಮ	೧	೪೦—೦—೦
ಲಭಸ್ಮ	೧	೦—೮—೦
ಸ್ಮ	೧	೦—೪—೦
ಸ್ಮ	೧	೦—೪—೦
ಪ್ಪಿನ ಭಸ್ಮ	೧	೦—೮—೦
ಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ರ (೧ನೇ ನಂಬರ್)	೧	೫೦—೦—೦
ರ (೨ನೇ ನಂಬರ್)	೧	೪೦—೦—೦
ಕ ಸೂರ್ಯಪುಟ	೧	೧—೦—೦
ತ ಅಗ್ನಿಪುಟ	೧	೦—೮—೦

ಟ್— ಈ ಔಷಧಾಲಯದಲ್ಲಿ ಸರ್ವಪ್ರಕಾ ಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಕಳುಹಿಸುವೆವು.

ಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ೀಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ದೇಶೀಪೇಟಾಮಾರ್ಟ್

ಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಮತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ನ್ನು ಚತುರರಾದ ನೇಯ್ಗೆಯವರಿಂದ ಮನೋ ದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿ ಮತ್ತು ನಯವಾಗಿಯೂ ಇರುವದರಿಂದ ತೊಳೆ ಯು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ ಾಗಲೂ ಹಡಗೆ ಹೊಸಪೇಟಾಗಳಂತೆಯೇ ಕಾಣೆ ಶಿರೋಭೂಷಣವಾದ ಈ ಪೇಟಾಗಳು ಎಲ್ಲ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ ರೂ ತರಿಸಿಕೊಂಡು ಇವುಗಳ ಅನುಭವವನ್ನು ಬೇಕೆಂದು ಕೋರುತ್ತೇವೆ.

1 ಗಜ (ಪಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎನ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕರ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಫಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಟಿಂಕ್ಚರುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ನೀವಸ, ದರ್ದ ರೋಗಗಳೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

[45] 8 ಔನ್ಸಿಗೆ ರೂ. 3-8-0

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡದೆ ಎಂತಹ ಕಠಿನವಾದ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. [illegible] ರೋಗಗಳಿಗೆ [illegible] ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂಧುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮೂತ್ರದ ಎಳತು (ತಕ್ಕೆ ಎಳೆ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ [illegible] ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. [illegible] ವ್ಯಾಪಾರವನ್ನು [illegible] ಈ ಮಾತ್ರೆಗಳು [illegible] ಈ ಮಾತ್ರೆಗಳಲ್ಲಿ [illegible] ರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ [illegible] ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ [illegible] ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[26] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ

पंडित श्रीकाशीनाथशास्त्री यांचे भाषण (मराठी)	८ आ
Speeches by Pandit Shri Kashinatha Shastri (*English*)	12
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಲಿಂಗೋತ್ಪತ್ತಿ ಲಾಕೆಟ್ಸ್	೨
ಕೇನೋಪನಿಷತ್ (ವೀರಶೈವಭಾಷ್ಯ)	೧
ಈಶಾವಾಸ್ಯೋಪನಿಷತ್ (ಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೮—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಬಾಳೇ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

(Registered Trade Mark)

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ ಗಳನ್ನು ಕೊಟ್ಟ ರು. ಪ್ರಸಿದ್ಧವಾ ನಸ್ಯದ ಪುಡಿ ಸ್ವಸ್ಥವಾಗುವ ಧಿಗಳು ಯಾವ ರೆ:—ಪಿನಸಿ, ತಲೆನೋವು, ಳ್ಳಿನ ರೋಗಗ ಕಣ್ಣುಗಳಲ್ಲಿ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮು ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರು ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ.
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[27] ಪೋ. ಬಾ. ೫೧೦, ಮದ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

EGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಜುಲೈ ೧೯೩೩ [ಸಂಚಿಕೆ ೧೨

ರೇಣುಕವಿಜಯಪುರಾಣಂ.

್ರಾವಣಮಾಸವು ಸಮೀಪಿಸಿತು! ಪ್ರತಿಯೊಂದು ಗ್ರಾಮದಲ್ಲಿಯೂ ಈ ಮಹಾಪುರಾಣವನ್ನು ಕೇಳಿ ಧನ್ಯರಾಗಬೇಕು!

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ ರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಯಜಮಾನ್ ಅಂಡ್ ಸನ್ಸ್
ಫೋಟೋ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅಂಗಡಿತೀಟು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸಲ್ಪಡುವವು.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್ ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ ಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಡುತ್ತೇವೆ. [30]

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ LZ ಎಂಬ ಆಕಾಶವಿಮಾನವು ಜರ್ಮನಿಯಲ್ಲಿ ತಯಾರಾಗುತ್ತಿರುವದು. ಇದರಲ್ಲಿ ಸುಮಾರು 70-80 ಜನ ಸ್ಥಳವಿರುವದಲ್ಲದೆ ಗಂಟೆಗೆ 100 ಮೈಲಿಯ ವೇಗ ಪ್ರಯಾಣಮಾಡಬಲ್ಲದಂತೆ! ಈ ಅದ್ಭುತ ವಿಮಾನ ಸುಮಾರು 818 ಅಡಿಗಳಷ್ಟು ಉದ್ದವಾಗಿರುವದು!

ರಾ|| ಬ|| ಚೌಗುಲೆಯವರ ನಿಧನ.

ಕೊಲ್ಹಾಪುರ ಸಂಸ್ಥಾನದ ಹೈಕೋರ್ಟ್ ಚೀಫ್ ಜಡ್ಜರಾಗಿದ್ದ ರಾ|| ಬ|| ಚೌಗುಲೆಯವರು ದಮ್ಮಿನ ರೋಗದಿಂದ ಶಿವಾಧೀನರಾದರೆಂಬ ಸಂಗತಿಯನ್ನು ಕೇಳಿ ವಿಷಾದವೆನಿಸುತ್ತದೆ. ಇವರು ವೀರಶೈವರಾಗಿದ್ದು ಭಕ್ತಿಶಾಲಿಗಳೂ ವಿವೇಕಿಗಳೂ ಆಗಿದ್ದರು. ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ವಿಚಿತ್ರಪ್ರಪಂಚ

ಇಟಲಿ ದೇಶಕ್ಕೆ ಸೇರಿದ ಫಾಗಿಯಾ ಎಂಬ ಊರಿನಲ್ಲಿ ಒಬ್ಬ ಕೂಲಿಕಾರನ ಪತ್ನಿಯು ಏಕಕಾಲದಲ್ಲಿ 3 ಗಂಡು, 2 ಹೆಣ್ಣು ಹೀಗೆ 5 ಮಕ್ಕಳನ್ನು ಹೆತ್ತಿರುವಳು. 5 ಮಕ್ಕಳೂ ಸುರಕ್ಷಿತವಾಗಿರುವವಂತೆ!

ಬಂಗಾಳಾ ದೇಶಕ್ಕೆ ಸೇರಿದ ಚಿತಗಾಂಗಿನ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಗರ್ಭಿಣಿಯಾಗಿದ್ದ ಒಬ್ಬ ರೈತರ ಹೆಂಗಸು ಕೆಂಪು ಮತ್ತು ಬಿಳೀ ಬಣ್ಣಗಳಿಂದ ಕೂಡಿದ 100 ಮೊಟ್ಟೆಗಳನ್ನು ಪ್ರಸವಿಸಿದಳಂತೆ!

ಪೂರ್ವ ಆಫ್ರಿಕಾದೇಶದಲ್ಲಿ ದೊರೆಯುವ ಕೆಲವು ಜಾತಿಯ ಬಸವನಹುಳುಗಳು ಆಹಾರವಿಲ್ಲದೆ ಅನೇಕ ವರ್ಷಗಳವರೆಗೆ ಜೀವಿಸುತ್ತಿರುವವಂತೆ! ಕೆಲವು ವರ್ಷಗಳ ಹಿಂದೆ ಇಂಗ್ಲೆಂಡಿನ 'ನ್ಯಾಚುರಲ್ ಹಿಸ್ಟರಿ ಮ್ಯೂಜಿಯಂ' ನಲ್ಲಿ ಮೃತಪಟ್ಟಿದೆಯೆಂದು ಭಾವಿಸಲ್ಪಟ್ಟಿದ್ದ ಒಂದು ಬಸವನ ಹುಳುವು ಪ್ರದರ್ಶಿಸಲ್ಪಟ್ಟಿತ್ತು. ಅದು ಹಾಗೆಯೇ 2½ ವರ್ಷಗಳವರೆಗೆ ಬಿದ್ದಿದ್ದು ಅನಂತರ ಎಚ್ಚೆತ್ತು ಓಡಾಡಲಾರಂಭಿಸಿತಂತೆ!

ಜಪಾನ್‌ದೇಶಕ್ಕೆ ಸೇರಿದ ಶಿರೋಹಾಮಾ-ಕೋ ಎಂಬ ಊರಿನ ಜುರು ಕಿಶೊ ಎಂಬ 92 ವರ್ಷದ ಮುದುಕಿಯು ಕಾಯಿಲೆಯಾಗಿದ್ದು ಮೃತಪಟ್ಟಳು. ಶವವನ್ನು ಸ್ಮಶಾನಕ್ಕೆ ಸಾಗಿಸುವದಕ್ಕಾಗಿ ಅವಳನ್ನು ಪೆಟ್ಟಿಗೆಯಲ್ಲಿ ಹಾಕಿ ಅಂತ್ಯವಿಧಿಗಳನ್ನು ನೆರವೇರಿಸುತ್ತಿರುವಷ್ಟರಲ್ಲಿ ಶವದ ಪೆಟ್ಟಿಗೆಯಲ್ಲಿ ಶಬ್ದವಾಗುವದನ್ನು ಕಂಡು ಹತ್ತಿರವಿದ್ದವರು ಪೆಟ್ಟಿಗೆಯನ್ನು ತೆರೆಯಲು ಮುದುಕಿಯು ಥಟ್ಟನೆ ಮೇಲಕ್ಕೆದ್ದು ಅಂತ್ಯಕ್ರಿಯೆಗಾಗಿ ಸಮೀಪದಲ್ಲಿಯೇ ಮಾಡಿ ಇಟ್ಟಿದ್ದ ರೊಟ್ಟಿಯನ್ನು ತೆಗೆದುಕೊಂಡು ತಿನ್ನಲಾರಂಭಿಸಿದಳಂತೆ!

ಚಿಕಾಗೋ ನಗರದಲ್ಲಿ ನಡೆಯುತ್ತಿರುವ 'ವರ್ಲ್ಡ್ಸ್ ಫೇರಿ' ನಲ್ಲಿ ಬೆಂಕಿಯ ಕಡ್ಡಿಯಿಂದ ಎಲೆಕ್ಟ್ರಿಕ್ ದೀಪವನ್ನು ಹತ್ತಿಸಬಲ್ಲ ಒಂದು ಆಶ್ಚರ್ಯಕರವಾದ ಯಂತ್ರವು ಪ್ರದರ್ಶಿಸಲ್ಪಟ್ಟಿರುವದು. ಅದರಲ್ಲಿ ಒಂದು ಎಲೆಕ್ಟ್ರಿಕ್ ಬಲ್ಬು, ವಿದ್ಯುಚ್ಛಕ್ತಿಯಿಂದ ಕೂಡಿರುವ ಒಂದು ಪಾತ್ರೆಯೂ 'ಫೋಟೋಟ್ಯೂಬ್' ಅಥವಾ 'ಎಲೆಕ್ಟ್ರಿಕ್ ಐ' ಅಂದರೆ 'ವಿದ್ಯುಚ್ಛಕ್ತಿಯ ಕಣ್ಣು' ಎಂಬ ಸಾಧನಗಳಿರುವವು. ಬೆಂಕಿಯ ಕಡ್ಡಿಯನ್ನು ಹಚ್ಚಿ 'ಎಲೆಕ್ಟ್ರಿಕ್ ಕಣ್ಣಿ'ನ ಮುಂದೆ ಹಿಡಿದಕೂಡಲೇ ಅದರಲ್ಲಿ ವಿದ್ಯುಚ್ಛಕ್ತಿಯುಂಟಾಗಿ ಮತ್ತೊಂದು ಪಾತ್ರೆಯಲ್ಲಿ ಶೇಖರವಾಗುವದು. ಸಾಕಾದಷ್ಟು ವಿದ್ಯುಚ್ಛಕ್ತಿಯು ಶೇಖರವಾದ ಕೂಡಲೇ ಬಲ್ಬು ಹತ್ತಿ ಉರಿಯಲಾರಂಭಿಸುವದು!

ಸ್ವೀಕಾರ

ಬೆಲವಂತರ ಹಿರೇಮಠದ ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಮಠಕ್ಕೆ ತಮ್ಮ ಮೊಮ್ಮಗನಾದ ಶಿವಲಿಂಗಾರ್ಯನನ್ನು ಪಟ್ಟಾಧಿಕಾರಕ್ಕೆ ನಿಯಮಿಸಿ ವ್ಯವಸ್ಥಾಪತ್ರವನ್ನು ಬರೆಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂ. ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಡಾಕ್ಟರ್ ಹರ್ಡೀಕರ್‌ರವರು ಲೋಕಮಾನ್ಯ ಬಾಲಗಂಗಾಧರ ತಿಲಕರವರ ಜ್ಞಾಪಕಾರ್ಥವಾಗಿ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ್ದ ತಿಲಕ್ ಗ್ರಂಥಾಲಯವನ್ನು ಸರ್ಕಾರದವರು 150 ರೂಪಾಯಿಗಳಿಗೆ ಮಾರಿದರೆಂದೂ, ಅದರಲ್ಲಿ 12,000 ರೂಪಾಯಿಗಳ ಬೆಲೆಯುಳ್ಳ ಗ್ರಂಥಗಳಿದ್ದವೆಂದೂ ಪ್ರಕಟಿಸಲ್ಪಟ್ಟಿದೆ. ಕಾನೂನುಭಂಗ ಚಳವಳಿಯ ಸಂಬಂಧದಲ್ಲಿ ಸರ್ಕಾರದವರು ಸದರಿ ಗ್ರಂಥಾಲಯವನ್ನು ಅಕ್ರಮಕೂಟವೆಂದು ಸಾರಿದ್ದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದರಿದುದು.)

ಹಿಮಾಲಯದಲ್ಲಿ ಸಂಭವಿಸಿದ ಯಾವುದಾದರೊಂದು ಸಂಗತಿಯು ದೂರದಲ್ಲಿರುವ ನಮಗೆ ಪ್ರತ್ಯಕ್ಷವಾಗಿ ಕಾಣಿಸಲು ಶಕ್ಯವಿಲ್ಲ. ಬಹುದೂರವಾಗಿರುವುದರಿಂದ ಬಾಹ್ಯಸೂಚಕವಾದ ಯಾವ ಚಿಹ್ನವೂ ಪ್ರತೀತಿಯಾಗುವುದಿಲ್ಲ. ಆದರೆ ಆ ವಿಷಯಕವಾದ ಸರ್ವವೃತ್ತಾಂತವೂ ನಮಗೆ ಆಪ್ತವಾಕ್ಯಗಳ ಮೂಲಕ ತಿಳಿದುಬರುವುದು. ಧಾರವಾಡದಲ್ಲಿ ಸಂಭವಿಸಿದ ಯಾವುದಾದರೊಂದು ಸೋಜಿಗದ ಸುದ್ದಿಯು ವಿಜಾಪುರದಲ್ಲಿರುವ ನಮಗೆ ಮರುದಿವಸ ವರ್ತಮಾನಪತ್ರದಿಂದ ಗೊತ್ತಾಗುವುದು. ಈ ಸರಣಿಯನ್ನನುಸರಿಸಿ ಯೋಚಿಸಿದರೆ ಆಪ್ತನ (ಅಂದರೆ ವಿಶ್ವಸನೀಯವೂ ಯಥಾರ್ಥವೂ ಆದುದನ್ನೇ ನುಡಿವ ಪ್ರಾಮಾಣಿಕ ಮನುಷ್ಯನ) ಮಾತಿನಿಂದಲೂ ನಮಗೆ ಅಜ್ಞಾತವಾದ ವಿಷಯದ ನಿಜವಾದ ಜ್ಞಾನವಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಆದ್ದರಿಂದ, ಪ್ರತ್ಯಕ್ಷಾನುಮಾನಗಳೆಂಬೆರಡು ಪ್ರಮಾಣಗಳಿಂದಲೂ ಅರಿಯಲ್ಪಡಲಾರದ ವಿಷಯವು ಶಬ್ದಮೂಲಕವಾಗಿಯೇ ಸಮನಿಸುವುದೆಂಬ ಮಾತನ್ನು ಶಬ್ದಪ್ರಮಾಣದ ವಿಷಯದಲ್ಲಿ ಮೂಗು ಮುರಿವ ಮುಂದಾಳುಗಳಾದರೂ ಒಪ್ಪಲೇಬೇಕಾಗುವುದು.

ಇದೇ ನ್ಯಾಯವು ಅಲೌಕಿಕ ಶಬ್ದಕ್ಕಾದರೂ ಸಂಬಂಧಿಸುವುದು. ಪ್ರತ್ಯಕ್ಷಾನುಮಾನಗಳಿಂದಲೂ ಲೌಕಿಕಶಬ್ದಪ್ರಮಾಣದಿಂದಲೂ ಸಿದ್ಧಿಸದ ಅತೀಂದ್ರಿಯವಿಷಯದ ಜ್ಞಾನವು ಅಲೌಕಿಕ ಶಬ್ದಮೂಲಕವಾಗಿ ಸಿದ್ಧಿಸುವುದು. ಕಳೆದುಹೋದ ಜನ್ಮವು, ಮುಂದೊದಗುವ ಜನ್ಮವು, ಈ ಜನ್ಮವೆತ್ತಿದುದರ ಕಾರಣವು, ಪರಲೋಕಕ್ಕೆ ಸಾಧನವು, ಶಿವಾಭಿವ್ಯಕ್ತಿಯ ಗುಟ್ಟು, ಸ್ವಸ್ವರೂಪಾವಸ್ಥಿತಿಯ ಮಟ್ಟು, ವಿಶ್ವಪ್ರಪಂಚೋತ್ಪತ್ತಿಯ ಪರಿಯು ಅದರ ಕಾರಣವು ಎಂಬೀ ಮೊದಲಾದುದೆಲ್ಲವೂ ಅತೀಂದ್ರಿಯವಿಷಯಗಳಾದುದರಿಂದ ಅವುಗಳ ಜ್ಞಾನವು ಯಾವುದರಿಂದಾಗುವುದೋ ಅದುವೇ ಶ್ರುತಿಯು, ವೇದವು, ಆಗಮವು. ಹೀಗೆ ಶ್ರುತಿಯು ಮನುಷ್ಯರ ಬುದ್ಧಿಗೆ ನಿಲುಕದ ಈ ಮೇಲೆ ಹೇಳಿದ ಅತೀಂದ್ರಿಯ ವಿಷಯಗಳನ್ನು ಸರಿಯಾಗಿ ತಿಳಿಸಿಕೊಡುವುದರಿಂದ ಅದರ ಪ್ರಾಮಾಣ್ಯವು ಸ್ವತಃ ಸಿದ್ಧವಾಗಿರುವುದು. ಪ್ರತ್ಯಕ್ಷಾನುಮಾನಗಳೂ ಲೌಕಿಕಶಬ್ದಗಳೂ ಎಂಬಿವುಗಳ ಪ್ರಾಮಾಣ್ಯವು ಸ್ವತಃ ಸಿದ್ಧವಲ್ಲ, ಪರತಃ ಸಿದ್ಧವಾದುದು; ಹೇಗೆಂದರೆ, ಚಂದ್ರನು ಒಬ್ಬನೇ ಇರುವನಲ್ಲವೇ ? ಆದರೆ ಯಾವನೋ ಒಬ್ಬನಿಗೆ ಎರಡಾಗಿ ಕಾಣಿಸುವನು; ಹಾಗೆ ತೋರುವುದು ಪ್ರತ್ಯಕ್ಷಪ್ರಮಾಣದಿಂದೇ ಅಲ್ಲವೇ ? ಪ್ರತ್ಯಕ್ಷಾನುಭವ ವಿರುದ್ಧವಾಗಿ ಚಂದ್ರಗಳಿಬ್ಬರೆನ್ನುವುದು ಪ್ರತ್ಯಕ್ಷಪ್ರಮಾಣದಿಂದ ಅದು ಹೇಗೆ ತಾನೇ ಸಂಭವಿಸುವುದು ? ಆದರೆ ಉಳಿದ ಎಲ್ಲ ಜನರಿಗೂ ಚಂದ್ರನು ಒಬ್ಬನೇ ಕಾಣಿಸುತ್ತಾನೆ. ಅಂದಬಳಿಕ ಇಬ್ಬರು ಚಂದ್ರರನ್ನು ಕಾಣುವಾತನ ಪ್ರತ್ಯಕ್ಷಜ್ಞಾನವು ಪ್ರಮಾಣವೆನಿಸುವುದೇ ? ಮತ್ತೊಬ್ಬನು ಮುಚ್ಚಂಜೆಯಲ್ಲಿ ಮೋಟುಮರವನ್ನು ಕಂಡು ಇವನೊಬ್ಬ ಮನುಷ್ಯನಿಲ್ಲಿ ನಿಂತಿರುವನೆಂದು ತಿಳಿವನು. ಆದರೆ, ಯಾವನಿಗೆ ಮೋಟುಮರವು ಕಾಣುತ್ತಿರುವುದೋ ಅವನಿಗೆ ಮನುಷ್ಯನು ತೋರುವುದಿಲ್ಲ; ಆದುದರಿಂದ, ಒಬ್ಬ ಚಂದ್ರನನ್ನು ಇಬ್ಬರೆಂದು ನೋಡುವಾತನ ಪ್ರತ್ಯಕ್ಷಜ್ಞಾನವೂ, ಮೋಟುಮರವನ್ನು ಮನುಷ್ಯನೆಂದು ತಿಳಿಯುವವನ ಪ್ರತ್ಯಕ್ಷಜ್ಞಾನವೂ ಯಥಾರ್ಥವಲ್ಲ. ಔಷಧೋಪಚಾರಗಳಿಂದ ನೇತ್ರದೊಳಗಿನ ತಿಮಿರಾದಿ ದೋಷವು ನಿವೃತ್ತಿಯಾ [illegible] ಗಲು ಇಬ್ಬರು ಚಂದ್ರರನ್ನು [illegible]ವರೂ ಚಂದ್ರನೊಬ್ಬನೇ ಇದ್ದಾನೆಂದು ನಿಶ್ಚಯವಾಗುವುದು. ಮೋಟುಮರದ ಬಳಿಗೆ ಹೋಗಿ ಅದನ್ನು ಕೈಮುಟ್ಟಿ ನೋಡಿದೊಡನೇ ಮೊದಲು ಮನುಷ್ಯನೆಂದು ತಿಳಿದವನಿಗಾದರೂ ಇದು ಕೊರಡೆಂಬ ನಿಶ್ಚಯವಾಗುವುದು. ಹೀಗೆ, ಪ್ರತ್ಯಕ್ಷಜ್ಞಾನದ ಪ್ರಾಮಾಣ್ಯವು ವಿಷಯದ ಸತ್ಯತೆಯನ್ನೂ, ಸಾಧನದ ನಿರ್ದೋಷತೆಯನ್ನೂ ಅವಲಂಬಿಸಿರುವುದಾದ್ದರಿಂದ ಅದಕ್ಕೆ ಸ್ವತಃ ಪ್ರಾಮಾಣ್ಯವಿಲ್ಲ. ಇದೇ ಮೇರೆಗೆ ಅನುಮಾನಪ್ರಮಾಣವಾದರೂ ಸದೋಷ ನಿರ್ದೋಷಗಳೆಂಬಕಾರಣಗಳಿಂದ ಅಯಥಾರ್ಥವೂ, ಯಥಾರ್ಥವೂ ಎಂಬ ಉಭಯವಿಧ ಜ್ಞಾನಗಳಿಗೆ ಹೇತುವಾಗಿರುವುದರಿಂದ ಅದರಲ್ಲಿಯೂ ಸ್ವತಃ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ. ಹಾಗೂ, ಲೌಕಿಕಶಬ್ದಪ್ರಮಾಣದಲ್ಲಿಯೂ ದ್ವೈವಿಧ್ಯವಿದೆ: ಶಬ್ದವು ಪುರುಷಾಧೀನವಾಗಿರುವುದರಿಂದ ಸರ್ವರೂ ಆಪ್ತರೇ ಆಗಿರುವರೆಂಬ ನಿಯಮವಿರುವುದಿಲ್ಲ. ಪರೋಪದೇಶಕುಶಲರೆಂದು ಹಸರುವಾಸಿಗಳಾದ ಮಿಗಿಲಾದ ವಾಗ್ಮಿಗಳಲ್ಲಿಯೂ ಅಜ್ಞಾನ, ಮೂಲಾಗ್ರಹ, ವಿಪ್ರಲಂಭ, ವಿಪರೀತಜ್ಞಾನ, ಸ್ವಾರ್ಥವೇ ಮುಂತಾದ ದೋಷಗಳು ಸಂಭವಿಸುವುದರಿಂದ ಅವರ ವಚನನಿಚಯವನ್ನು ಸರ್ವಥಾ ಸರ್ವದಾ ಪ್ರಮಾಣವೆಂದೊಪ್ಪಲಾಗುವುದಿಲ್ಲ. ಅದುಕಾರಣವೇ, ತಾರ್ಕಿಕಾದಿಗಳು **'ಆಪ್ತವಾಕ್ಯಂ ಪ್ರಮಾಣಮ್'—'ಆಪ್ತಸ್ತು ಯಥಾರ್ಥವಕ್ತಾ'** ಆಪ್ತನ ವಾಕ್ಯವು ಪ್ರಮಾಣವು, ಯಥಾರ್ಥವಾದುದನ್ನು ನುಡಿವಾತನೇ ಆಪ್ತನು; ಎಂದು ಹೇಳುವವರಾಗಿ ಶಬ್ದಪ್ರಮಾಣವೆಂದರೆ ಯಾವುದೆಂಬುದನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಲೌಕಿಕಶಬ್ದಗಳೆಲ್ಲವೂ ಪ್ರಮಾಣವೇನಲ್ಲ.

ಅನ್ಯಶಾಸ್ತ್ರಗಳನ್ನರಿವಲ್ಲಿ ಪ್ರಮಾಣವಾದ ಶ್ರುತಿಯು ಯಾವನೊಬ್ಬ ಮನುಷ್ಯನಿಂದ ರಚಿತವಾದುದಲ್ಲ. ಮನುಷ್ಯರಿಗೆ ಅತೀಂದ್ರಿಯಜ್ಞಾನವಿರದು. ಮನುಷ್ಯರ ಜ್ಞಾನಸಾಧನೆಗಳು ಮರ್ಯಾದಿತವಾದುವು. ಅವು ಇದ್ದಷ್ಟಾದರೂ ಸರ್ವದಾ ನಿರ್ದೋಷವಾದುವೇ ಎಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಸರ್ವಜ್ಞರಲ್ಲದ ಮನುಷ್ಯರ ಜ್ಞಾನದಲ್ಲಿ ಭ್ರಾಂತಿಮೂಲಕತ್ವವು ಸಂಭವಿಸುವ ಮೂಲಕ ಅವರ ಶಬ್ದಗಳಾದರೂ ಯಥಾರ್ಥವಾದ ಶಬ್ದರೂಪ ಮೂಲಪ್ರಮಾಣದ ಅಪೇಕ್ಷೆಯಿರುವುದರಿಂದ ಲೌಕಿಕಶಬ್ದಪ್ರಮಾಣವಾದರೂ ಪರತಃ ಪ್ರಮಾಣವೆನಿಸುವುದು. ಆದರೆ ವೇದವು ನಿತ್ಯವಾದುದರಿಂದ ಅದರಲ್ಲಿ ವಕ್ತೃವಿನ ದೋಷವು ಸಂಭವಿಸದು. ಆದ್ದರಿಂದ ಅದು ಸ್ವತಃಪ್ರಮಾಣವಾಗಿರುವುದು; ಪ್ರಕೃತ ಪ್ರಸಂಗದ ಮುಖ್ಯಾಂಶವನ್ನು ನಾವು ಈಗ ಮುಕ್ತಾಯಗೊಳಿಸುವೆವು. ಪರಾಶರಸ್ಮೃತಿಯ ವ್ಯಾಖ್ಯಾನದಲ್ಲಿ—**'ಗ್ರನ್ಥಾಸ್ತಾವ ದ್ವಿವಿಧಾಃ ಸ್ವತಃಪ್ರಮಾಣಾಃ ಪರತಃಪ್ರಮಾಣಾಶ್ಚ । ಅಪೌರುಷೇಯಾಣಾಮತಏವ ಸ್ವತಃಪ್ರಮಾಣಾನಾಂ ವೇದಾನಾಂ ನಪ್ರಮಾಣಾನ್ತರಸಾಪೇಕ್ಷತ್ವಮ್ । ಕುತಃ ಅನ್ಯಾನಪೇಕ್ಷತ್ವಾತ್ । ತದಿತರಾಣಾಂ ಪೌರುಷೇಯಾಣಾಮತಏವ ಪರತಃ ಪ್ರಮಾಣಾನಾಂ ಸ್ಮೃತಿಪುರಾಣಾದೀನಾಂ ಮೂಲಪ್ರಮಾಣಸಾಪೇಕ್ಷತ್ವಮ್ ।'** ಎಂದಿರುವುದರ ತಾತ್ಪರ್ಯವು ಸಂಕ್ಷಿಪ್ತವಾಗಿ ಹೀಗಿದೆ. ಸ್ವತಃಪ್ರಮಾಣರೂಪವಾದುವೂ ಪರತಃ ಪ್ರಮಾಣವಾದುವೂ ಎಂದು ಗ್ರಂಥಗಳು ದ್ವಿವಿಧವಾಗಿವೆ. ಅಪೌರುಷೇಯಗಳಾದ್ದರಿಂದ ಸ್ವತಃಪ್ರಮಾಣಗಳಾಗಿರುವ ವೇದಗಳಿಗೆ ಅನ್ಯಪ್ರಮಾಣಗಳ ಅಪೇಕ್ಷೆಯಿರುವುದಿಲ್ಲ; ಏಕೆಂದರೆ, ಅವುಗಳಿಗೆ ಬೇರೆ ಪ್ರಮಾಣಗಳ ನೆರವು ಬೇಕಾಗಿಲ್ಲ. ಅವುಗಳಿಗಿಂತ ಬೇರೆಯಾದುವೂ ಪೌರುಷೇಯಗಳೂ ಅದುಕಾರಣವೇ ಇತರ ಪ್ರಮಾಣಗಳ ಹಂಗುಳ್ಳವುಗಳೂ ಆದ ಸ್ಮೃತಿಪುರಾಣಾದಿಗ್ರಂಥಗಳಿಗೆ ಮೂಲಪ್ರಮಾಣದ (ಶ್ರುತಿಯ) ಅಪೇಕ್ಷೆಯುಂಟು.

'ಯಾವ ಆದೇಶಪ್ರಮಾಣದಿಂದ ಅಶ್ರುತವು ಶ್ರುತವಾದುದೂ, ಅತರ್ಕಿತವು ತರ್ಕಿತವಾದುದೂ, ಅವಿಜ್ಞಾತವು ವಿಜ್ಞಾತವಾದುದೂ ಆಗುವುದೋ ಆ ಜ್ಞಾನವೇ ಸರ್ವಜ್ಞಗುಣಾನ್ವಿತವು' ಎಂಬ ಛಾಂದೋಗ್ಯೋಪನಿಷದ್ವಚನಾನುಸಾರವಾಗಿ ಶಾಂಭವಜ್ಞಾನವು (ಶ್ರೌತವಿದ್ಯೆಯು) ಈಶ್ವರೋಪದಿಷ್ಟವಾದುದರಿಂದ ಸಮಾಮ್ನಾಯವೆನಿಸಿ ವಿಶ್ವೇಶ್ವರ ಮೊದಲಾದವರಿಂದ ಈವರೆಗೆ ಪರಂಪರೆಯಿಂದ ಬಂದುದಾಗಿದೆ. ಶಾರದಾತಿಲಕದೊಳು ಮೊದಲನೆಯ ಪಟಲದ ವ್ಯಾಖ್ಯಾನದಲ್ಲಿ ಉದ್ಧೃತವಾದ—**'ಮಹೇಶ್ವರಮುಖಾದ್ಜ್ಞಾತ್ವಾ ಗುರುರ್ಯಸ್ತ್ವಪಸಾ ಮನ್ತ್ರಂ ಸಂಸಾಧಯತಿ ಶುದ್ಧಾತ್ಮಾ ಪೂರ್ವಂ ಸಯುಷಿಃ'** ಎಂಬ ಗೌತಮವಾಕ್ಯಾನುಸಾರವಾಗಿಯೂ ಸೃಷ್ಟಿಯಾರಂಭದಲ್ಲಿ ಮಹೇಶ್ವರನಿಂದನುಗ್ರಹೀತರಾದ ಶುದ್ಧಾತ್ಮರಾದ ಮಹರ್ಷಿಗಳು; ಕೀಟಭ್ರಮರನ್ಯಾಯದಂತೆ ಪರಶಿವಾನುಸಂಧಾನಬಲದಿಂದ ತತ್ಸ್ವರೂಪವೇ ತಾವಾದ ಆ ಶಾಂಭವಜ್ಞಾನಸಂಪನ್ನರು ಆ ಪರಶಿವನಿಗನ್ಯರೇ ? ಆ ದಿವ್ಯಜ್ಞಾನಿಗಳ ವೃತ್ತಿಯು ಅಂತರ್ಮುಖವಾಗಿರುವುದರಿಂದ ಅದು ಪರಶಿವಾಕಾರದ ಹೊರತು ಅನ್ಯಾಕಾರವನ್ನು ಸಹಿಸದು. ಪರಶಿವನ ತಾದಾತ್ಮ್ಯವಶದಲ್ಲಿರುವ ಆ ಶುದ್ಧಾತ್ಮರಲ್ಲುಂಟಾದ ದಿವ್ಯಜ್ಞಾನದ ಸ್ಫುರಣವೇ ವೇದವು. ಭೌತಿಕವಿದ್ಯಾನಿಷ್ಣಾತರು ಆ ದಿವ್ಯಜ್ಞಾನಿಗಳನ್ನು ಹೋಲಬಲ್ಲರೇ ? ಈಗಣ ಭೌತಿಕವಿದ್ಯೆಯು ವಿಶೇಷತಃ ಸ್ವೇಚ್ಛಾವಿಹಾರವೇ ಧ್ಯೇಯವಾಗಿ [illegible] ... ಅಲ್ಪದಾಗಿ[illegible]ದರಿಂದ ವೈಷಯಿಕ ಸುಖದ ವಾಸನೆಯೆಂಬ ಬಾಯಾರಿಕೆ (ನೀರಡಿಕೆ) ಯನ್ನು ಹೆಚ್ಚಿಸುವುದಾಗಿದೆ. ಅಧ್ಯಾತ್ಮವಿದ್ಯೆಯಾದರೋ ಅದನ್ನು ಪರಿಹರಿಸಲು ಮುಂಬೊಳ್ಳುವುದಾಗಿದೆ. ಭೌತಿಕಜ್ಞಾನವು ಕೇವಲ ನಿರುಪಯೋಗವಾದುದೇ ಎಂದು ನಮ್ಮ ಅಭಿಪ್ರಾಯವಲ್ಲ; ಆದರೆ ಅದರಿಂದ ವ್ಯಾವಹಾರಿಕ ಪ್ರಯೋಜನವೇ ಅಧಿಕವಾಗಿರುವುದು. ಭೌತಿಕವಸ್ತುಗಳು ಪ್ರಕೃತಿಯ ಪರಿಣಾಮರೂಪಗಳಾದುದರಿಂದ ಅನಿಯತತ್ವ ಧರ್ಮವೇ ಅವುಗಳ ಹುಟ್ಟುಗುಣವು. ಇಂಥವುಗಳ ಜ್ಞಾನವಾದರೂ ಇಂದಿಲ್ಲ ಮುಂದೆ ಪೂರ್ಣತೆಯನ್ನು ಹೊಂದಿ ತನ್ಮೂಲಕ ನಮಗೆ ಶಾಶ್ವತವಾದ ಆನಂದವು ದೊರಕಬಹುದೆಂಬ ಭರವಸೆಯಾದರೂ ಬಾಯಾರಿ ಬಳಲಿದ ಪಶುಗಳು ಬಿಸಿಲುದೊರೆಯನ್ನು ನೆಚ್ಚಿದರಿಯೇ ಸರಿ ! ಅಂಗಕರಣೇಂದ್ರಿಯ ವಿಷಯಗಳನ್ನೆಲ್ಲ ಉರಿಕರ್ಪುರದಂತೆ ಲಿಂಗಮಯಗಳನ್ನಾಗಿ ಮಾಡಿ, ಲಿಂಗ (ಬ್ರಹ್ಮ) ವೇ ಉಳಿವೆಯಾಗಿ ಮೆರೆವ ಮುಕ್ತಾತ್ಮರಾದ ಆ ಮಹರ್ಷಿಗಳನ್ನು ವಿಷಯಾರಣ್ಯದಲ್ಲಿ ವಿಹರಿಸುವ ನಮ್ಮ ಹಾಗೇ ಅಂದರೆ ಪಾಶಬದ್ಧರಾದ ಪಶು (ಜೀವಿ) ಗಳಂತೆ ಭಾವಿಸಿ ಅವರಾದರೂ ಸೃಷ್ಟಕೋಟಿಯಲ್ಲಿ ಪರಿಗಣಿಸಲ್ಪಡುವುದರಿಂದ ನಮ್ಮ ಹಾಗೇ ಮನುಷ್ಯರೇ ಅಲ್ಲವೋ ? ಎಂದು ಗಳಹುವವರ ವ್ಯ[illegible]ಲ್ಲವೂ ಬಲವಾಗಿ ಬೀಸುವ ಪಶುವಣಗಾಳಿಯು ಸೋಂಕಿಸಿಂ ಮರಗಟ್ಟಿರಬಹುದೆಂದೂಹಿಸುವುದು ಪ್ರಾಮಾದಿಕವೆನಿಸಲಾರದಷ್ಟೇ !

ಭಗವದ್ಗೀತೆಯ [illegible]ನೆಯ ಅಧ್ಯಾಯದಲ್ಲಿ ವೇದಗಳ ನ್ಯೂನತೆಯನ್ನು ಸೂಚಿಸತಕ್ಕ ಕೆಲವು ವಾಕ್ಯಗಳಿವೆ. ಅವು ಯಾವುವೆಂದರೆ—**'ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ।' 'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ' 'ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ'** ಎಂಬ ಮುಂತಾದ ವಾಕ್ಯಗಳು ವೇದಗಳನ್ನು ಹೀಯಾಳಿಸುವುದುಂಟೋ ? ಅಥವಾ ಆ ಗೀತಾವಚನಗಳೇ ಅಪ್ರಮಾಣವಾದುವೋ ? ಎಂದರೆ, ಆ ಗೀತಾವಾಕ್ಯಗಳು ವೇದಗಳಲ್ಲಿ ನಿಕೃಷ್ಟತೆಯನ್ನಾರೋಪಿಸಲು ಪ್ರವರ್ತಿಸಿದವಲ್ಲ; ಮತ್ತು ಗೀತೆಯು ಸ್ಮೃತಿಯೆನಿಸಿಕೊಳ್ಳುವುದರಿಂದ ಅದರ ವಚನಗಳಿಂದ ವೇದಗಳಿಗೆ ನಿಕೃಷ್ಟತ್ವವಾದರೂ ಸಂಭವಿಸದು. 'ನಹಿ ನಿನ್ದಾ ನಿನ್ದ್ಯಂ ನಿನ್ದಿತುಂ ಪ್ರವರ್ತತೇ ಕಿಂತು ವಿಧೇಯಂ ಸ್ತೋತುಮ್' ಎಂಬೀ ಮೀಮಾಂಸೆಯ ನ್ಯಾಯವನ್ನು ಸಾರವಾಗಿ ಪ್ರಮಾಣಗ್ರಂಥಗಳಲ್ಲಿ ಆಪಾತತಃ ಪ್ರತೀತಿಯಾಗುವ ನಿಂದೆಯಾದರೋ ಮುಖ್ಯವಾಗಿ ತಿರಸ್ಕಾರೋದ್ದೇಶವಾಗಿರುವುದಿಲ್ಲ; ವಿಹಿತವಾದುದನ್ನೇ ವಿರುದ್ಧವಾದ ಲಕ್ಷಣದಿಂದ ಸ್ತುತಿಸುವುದೇ ನಿಂದೆಯ ಹೊಟ್ಟೆಯೊಳಗಿನ ತಿರುಳು. ಹೇಗೆಂದರೆ, ಯಾವನೋ ಒಬ್ಬನು ಕೇವಲ ವೇದಾಧ್ಯಯನದಲ್ಲಿಯೇ ತೊಡಗಿರುವುದು ಕಾಣಬಂದರೆ, ಆ ದ್ವಿಜನನ್ನು ಕುರಿತು—ಎಲೆಯ್ಯಾ ! ನೀನು ಕೇವಲ ವೇದಪಠನಾಸಕ್ತನಾಗಿದ್ದೀಯೆ. ಅದ್ದರಿಂದ ನೀನು ಕೇವಲ ಸ್ತಂಭನು; ನೀನೊಬ್ಬ ಭಾರವಾಹಕನೇ ಸರಿ ! ಎಂದು ಮೊದಲಾಗಿ ನುಡಿವುದು ನಿಂದೆಯೆನಿಸಿದರೂ, ಅದರ ತಾತ್ಪರ್ಯವಾದರೋ ವೇದಾಧ್ಯಯನಾನಂತರ (ವೇದಾಕ್ಷರಗ್ರಹಣಾನಂತರ) ದಲ್ಲಿ ಶಾಸ್ತ್ರಾಧ್ಯಯನ, ಧರ್ಮಜಿಜ್ಞಾಸೆಗಳನ್ನು ಅವಶ್ಯವಾಗಿ ಮಾಡಬೇಕೆಂಬ ವಿಹಿತಾರ್ಥವನ್ನನುಸರಿಸಿಯೇ ಇರುವುದು. ಹಾಗೇ ಗೀತೆಯೊಳಗಿನ ಪೂರ್ವೋಕ್ತ ವಚನಗಳಲ್ಲಿ ವೇದಗಳ ನಿಂದೆಯುಂಟೆಂದು ಭಾಸವಾಗುವುದಾದರೂ, ಆ ವಾಕ್ಯಗಳ ತಾತ್ಪರ್ಯವು ಹಾಗಿಲ್ಲ; ಮತ್ತೇನೆಂದರೆ—ಅಧ್ಯಾತ್ಮಜ್ಞಾನದ ದೃಷ್ಟಿಯಿಂದ (ನಿವೃತ್ತಿಧರ್ಮಾಚರಣಾಪೇಕ್ಷೆಯಿಂದ) ಕರ್ಮಕಾಂಡಾತ್ಮಕ ವೇದಭಾಗವು ಅಲ್ಪಫಲಪ್ರದವಾದುದರಿಂದ ಅದರಲ್ಲಿ ಅಸ್ವಾರಸ್ಯವನ್ನು ತೋರಿಸುವ ಅಭಿಪ್ರಾಯದಿಂದೇ ಆ ನಿಂದೆಯು ಮುಂದುವರಿದಿದೆ.

ಮತ್ತು ಗೀತೆಯಾದರೂ ಸ್ವಾತಂತ್ರ್ಯದಿಂದ ಹಾಗೆ ನಿಂದಿಸತಕ್ಕದ್ದಲ್ಲ. ಮೂಲಶ್ರುತಿವಚನಗಳನ್ನನುಸರಿಸಿಯೇ ಆ ನಿಂದೆಯನ್ನು ವ್ಯಕ್ತಪಡಿಸಿರುವುದು. ಆ ಗೀತೆಯು ಆಗಮೋಪನಿಷತ್ತುಗಳ ಪುನರುಕ್ತಿರೂಪವಾದುದೆಂಬುದನ್ನು ಸಚೇತನರೆಲ್ಲರೂ ಬಲ್ಲರು. ಆಗಮೋಪನಿಷದ್ಗೀತಾದಿ ಗ್ರಂಥಗಳಲ್ಲಿ ಕಾಣಬರುವ ಕರ್ಮಕಾಂಡಾತ್ಮಕ ವೇದಭಾಗದೆಡೆಗಿನ ಅರುಚಿಯನ್ನು ವ್ಯಕ್ತಪಡಿಸತಕ್ಕ ವಾಕ್ಯಗಳಾದರೂ ಕರ್ಮಾಧಿಕಾರಿಗಳಾದ ಜೀವರು ಆ ಕರ್ಮಗಳನ್ನೇ ಅನುಷ್ಠಿಸಕೂಡದೆಂಬ ವಿವಕ್ಷಿತಾರ್ಥವುಳ್ಳವುಗಳಲ್ಲ. ಮತ್ತು ಪ್ರತ್ಯಭಿಜ್ಞಾ ಮಾಹೇಶ್ವರರಲ್ಲಿ ಮುಖಂಡನಾದ ಅಭಿನವಗುಪ್ತಾಚಾರ್ಯನು ಗೀತಾರ್ಥಸಂಗ್ರಹವೆಂಬ ವ್ಯಾಖ್ಯಾನದಲ್ಲಿ—

'ವೇದಾಸ್ತ್ರೈಗುಣ್ಯೇನ ಕಾರಣೇನ ವಿಶೇಷೇಣ ಚಿನ್ವನ್ತಿ ಬಧ್ನನ್ತೀತಿ ಬನ್ಧಕಾಃ । ಯಸ್ಮಾತ್ಸುಖದುಃಖಮೋಹಬುದ್ಧ್ಯಾ ಕರ್ಮಾಣಿ ವೈದಿಕಾನಿ ಕ್ರಿಯಮಾಣಾನಿ ಬನ್ಧಕಾನಿ, ಅತಸ್ತ್ರೈಗುಣ್ಯಂ ಕಾಮರೂಪಂ ತ್ಯಾಜ್ಯಮ್ । ಯದಿತು ವೇದದೂಷಣಪರಮೇತದಭವಿಷ್ಯತ್, ಪ್ರಕೃತಂ ಯುದ್ಧಕರಣಂ ವ್ಯಘಟಿಷ್ಯತ; ವೇದಾದನ್ಯಸ್ಯ ಸ್ವಧರ್ಮನಿಶ್ಚಾಯಕತ್ವಾಭಾವಾತ್ । ಯೇಷಾಂ ತು ಫಲಾಭಿಲಾಷೋ ವಿಗಲಿತಸ್ತೇಷಾಂ ನ ವೇದಾ ಬನ್ಧಕಾಃ, ಯತೋ ವೇದಾಃ ಪರಂ ತೇಷಾಂ ಸಮ್ಯಗ್ಜ್ಞಾನೋಪಯೋಗಿನಃ ।' (ಗೀ. ೨-೪೫)

ಎಂಬುದಾಗಿ ನಿರೂಪಿಸಿರುವುದರ ಭಾವವು ಸಹೃದಯಭಾವಗ್ರಾಹ್ಯವಾಗಿರುವುದಲ್ಲವೇ ? ಅಂತಲ್ಲ ಪ್ರತ್ಯಭಿಜ್ಞಾ ಮಾಹೇಶ್ವರರಿಗೂ ಕೂಡ ಮಾರ್ಗದರ್ಶಕರಾದ ಪುರಾತನ ವೀರಮಾಹೇಶ್ವರರ ಮತೀಯನಾದ ಲೋಕೇಶಾರಾಧ್ಯನ ವಚನವಾದರೂ ಹೇಗಿದೆ ನೋಡಿರಿ ?

ಕಿಂ ವೇದೈಃ ಸ್ಮೃತಿಭಿಃ ಪುರಾಣಪಠನೈಃ ಶಾಸ್ತ್ರೈರ್ಮಹಾವಿಸ್ತರೈಃ
ಸ್ವರ್ಗಗ್ರಾಮಕುಟೀನಿವಾಸಫಲದೈಃ ಕರ್ಮಕ್ರಿಯಾವಿಭ್ರಮೈಃ ।
ಮುಕ್ತ್ವೈಕಂ ಭವದುಃಖಭಾರರಚನಾವಿಧ್ವಂಸಕಾಲಾನಲಂ
ಸ್ವಾತ್ಮಾನಂದಪದಪ್ರವೇಶಕಲನಂ ಶೇಷೈರ್ವಣಿಗ್ವೃತ್ತಿಭಿಃ ।

ವಿಲ್ಲರ್ ಕೆರೆಯಲ್ಲಿ ಬಿದ್ದು ಪ್ರಾಣವನ್ನು ಕಳೆದು ಂಡನಂತೆ !

ಇದೇ ಜುಲೈ 7 ನೇ ತಾರೀಖು ಶುಕ್ರವಾರದ ದಿವಸ ಕೂರಿನಿಂದ ಕ್ವಾತ್ಸಂದ್ರಕ್ಕೆ ಟಪಾಲನ್ನು ತೆಗೆದು ಡು ಹೋಗುತ್ತಿದ್ದ 16 ವರ್ಷದ ಅಂಚೆ ಜವಾನ ಯಾರೋ ಕೊಂದುಹಾಕಿ ಅವನ ಬಳಿಯಲ್ಲಿದ್ದ ರೂಪಾಯಿಗಳನ್ನು ಅಪಹರಿಸಿಕೊಂಡು ಹೋದ ೂ, ಪೋಲೀಸರು ಈ ಸಂಬಂಧವಾಗಿ ಮುದ್ದ ಮತ್ತೊಬ್ಬ ಅಂಚೆ ಜವಾನನನ್ನು ದಸ್ತಗಿರಿಮಾ ತ್ತಾರೆಂದೂ ತಿಳಿದುಬಂದಿದೆ.

ಬೆಂಗಳೂರು ಸಿಟಿ ಮುನಿಸಿಪಾಲಿಟಿಯಲ್ಲಿ ಬಿಲ್ ಕಲೆ ಾಗಿದ್ದ ಬಿ. ಪಾರ್ಥಸಾರಥಿ ಎಂಬಾತನು ಜನರಿಂದ ಲು ಮಾಡಿದ್ದ ಮನೆ ಕಂದಾಯದ ಬಾಬ್ತು 800 ಾಯಿಗಳನ್ನು ದುರುಪಯೋಗಪಡಿಸಿಕೊಂಡನೆಂಬ ಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ಯಿಸಿ, ಅಪರಾಧಿಗೆ ಒಂದು ವರ್ಷ ಕಠಿಣ ಸಜಾ ರೂಪಾಯಿ ಜುಲ್ಮಾನೆ, ತಪ್ಪಿದರೆ ಮತ್ತೆ 6 ತಿಂಗಳ ಸಜೆಯನ್ನು ವಿಧಿಸಿದ್ದಾರೆ.

ಇದೇ ಜುಲೈ 11 ನೆಯ ತಾರೀಖಿನ ದಿವಸ ರಾತ್ರಿ ಕೆರೆ ರೈಲ್ವೇ ಸ್ಟೇಷನ್ನಿನಲ್ಲಿ ಎರಡು ಗಾಡಿಗಳು ಂದಕ್ಕೊಂದು ಢಿಕ್ಕಿ ಹೊಡೆದು ಭಯಂಕರ ಅನಾಹು ಾಗಿರುವದು. ಅನೇಕರು ಸತ್ತಿರುವರಲ್ಲದೆ ಅನೇಕರಿಗೆ ಯಗಳಾಗಿವೆ. ಮರಣಹೊಂದಿದವರು—ಬೀರೂರಿನ ಯ್ಯ (೬೩ ವರ್ಷ), ತರೀಕೆರೆಯ ಮುಂದ್ರೆ ಮದ ಮೇಲೇಗೌಡ (೪೫), ತರೀಕೆರೆಯ ಕುತುಬು (೦), ಮುಸೇನೀಸಾಬ್ (೧೫), ಬಾಣಾವರದ ರಹಿ ಷರೀಫ್ (೪೦), ದೋರ್ನಹಳ್ಳಿ ಗ್ರಾಮದ ಯ್ಯ (೪೬), ಕೂಡಲೂರಿನ ಮಲ್ಲಪ್ಪ (೫೫), ರೂರಿನ ಚನ್ನವೀರಯ್ಯ (೨೩), ಚನ್ನಗಿರಿ ತಾಲೂ ಸೆಲ್ಲೂರಿನ ಕಲೇಗೌಡ (೩೨), ಚಿಕ್ಕಮಗಳೂರಿನ ಗುರುರಾವ್ (೫೦), ಕೊರಟಗೆರೆ ತಾಲೂಕಿನ ಯ್ಯ (೪೦), ಬೀರೂರಿನ ಮಹೇಶ್ವರಯ್ಯ (೪೦), ಣಾವರದ ಸೈಯ್ಯದ್ ಅಮೀರ್ (೩೫), ಬೀರೂ ಬೋರಣ್ಣ ಮತ್ತು ಜಿ. ಶಿವರುದ್ರಯ್ಯ. ಇವರ ಶಿವಮೊಗ್ಗಾ ಆಸ್ಪತ್ರೆಯಲ್ಲಿ ೧ ಮರಣವಾಗಿದೆ. ಯಹೊಂದಿದವರು—ನರಸಿಂಗ (೩೮), ಪೊನ್ನು ಮಿ (೪೬), ಗಂಗಾಣಿ ಹುಸೇನ್ (೧೬), ರಾಮು ಸಾ (೪೮), ಶಿವಮೊಗ್ಗಾ ರೈಲ್ವೆ ಫೈರ್‌ಮ್ಯಾನ್ . ಥಾಮಸ್ (೨೬), ಪಾಭಾ, ಚಿಕ್ಕದೇವನೂರಿನ ನಾಚಾರ್ (೩೦), ಹೊಸಹಳ್ಳಿಯ ಮಲ್ಲಸೆಟ್ಟಿ), ಅಕ್ಕಮ್ಮ (೨೮), ಬೀರೂರಿನ ಮಹಮದ್ ಲ್ (೩೮), ದೇವನಹಳ್ಳಿಯ ಬಾದುಲ್ಲಾಸಾ), ಶಿವಮೊಗ್ಗಾದ ಸುಬ್ಬರಾಯ (೨೫), ಬೀರ ಳ್ಳಿಯ ಮುರಗಪ್ಪ (೪೦), ಬೀರೂರಿನ ಬಿ. ಸಿ. ಳಪ್ಪ (೩೮) ಮತ್ತು ಬೀರೂರಿನ ಬೇಲೂರಣ್ಣ.

ವರ್ತಮಾನಸಂಗ್ರಹ

ಸರ್ ತೇಜ್ ಬಹದ್ದೂರ್ ಸಪ್ರೂರವರು ಇದೇ 26 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಡಿಯಾಕ್ಕೆ ಹಿಂತಿರುಗುವರು.

ಚರಿತ್ರಾರ್ಹವಾದ ದೆಹಲಿ ಕೋಟೆಯು ಅಜ್ಮೀರ್ ಸ ಬಳಿ ಕುಸಿದುಬಿದ್ದು ಇಬ್ಬರು ಹುಡುಗರೂ, ದು ಕುದುರೆಯೂ ಮೃತರಾದರು.

ಬೀಬಿ ಬ್ಯಾರ್ನ್ ಎಂಬ ಸ್ಕಾಟ್ಲೆಂಡಿನ ಸಿನಿಮಾ ನಟಿ ಬ್ಬಳು ತನ್ನ ಕಾಲುಗಳನ್ನು 60,000 ರೂಪಾಯಿ ಇನ್ಷೂರ್ ಮಾಡಿಸಿರುವಳಂತೆ !

ಳಿಗಿರಿ ಬ್ಯಾಂಕಿನ ದರೋಡೆಯಲ್ಲಿ ಅಪಾದಿತರಾ 5 ಜನ ಅಪರಾಧಿಗಳಿಗೆ ಮ್ಯಾಜಿಸ್ಟ್ರೇಟರು ಆಮ ಂತ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಿದರು.

30 ಜನ ತುರ್ಕಸ್ಥಾನದವರು ಯುರೋಪ್‌ದೇಶವನ್ನು ಕತ್ತೆಯ ಮೇಲೆ ಪ್ರಯಾಣಮಾಡಲು ಹೊರಟಿರುವರಂತೆ ! ಇದಕ್ಕಾಗಿ ಪ್ರಿಂಕಿಪೂ ದ್ವೀಪದ ಪ್ರಸಿದ್ಧ ಕತ್ತೆಗಳನ್ನು ತರಿಸಿರುವರಂತೆ ! ವಿಚಿತ್ರಪ್ರಯಾಣ !

ಇಂಡಿಯಾ ಸರಕಾರದವರು ಶೀಘ್ರದಲ್ಲಿಯೇ ಹತ್ತು ರೂಪಾಯಿನ ಹೊಸ ನೋಟುಗಳನ್ನು ಜಾರಿಗೆ ತರುವರೆಂದೂ, ಅವು ಈಗಿನ ನೋಟುಗಳಿಗಿಂತ ಆಕಾರದಲ್ಲಿ ಸ್ವಲ್ಪ ಚಿಕ್ಕವಾಗಿರುವವೆಂದೂ ತಿಳಿದುಬಂದಿದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಚಿಕಾಗೋ ನಗರದಲ್ಲಿ ದರೋಡೆಕೋರರನ್ನು ಅಡಗಿಸುವುದಕ್ಕಾಗಿ ಪ್ರತಿವರ್ಷವೂ 60,00,00,000 ರೂ.ಗಳನ್ನೂ, ನ್ಯೂಯಾರ್ಕ್ ನಗರದಲ್ಲಿ 37,50,00,000 ರೂಪಾಯಿಗಳನ್ನೂ ವೆಚ್ಚಮಾಡುವರಂತೆ !

ಸರ್ ಆಲ್‌ಫ್ರೆಡ್ ವಾಟ್ಸನ್‌ರನ್ನು ಕೊಲೆಮಾಡಲು ಪ್ರಯತ್ನಿಸಿದ ಅನುರಘೋಷ್ ಎಂಬ ಯುವಕನಿಗೆ ಆಶ್ರಯವಿತ್ತರೆಂಬ ಕಾರಣದ ಮೇಲೆ ಕಲ್ಕತ್ತಾ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಬಿರೇನರಾಯ್ ಎಂಬುವರಿಗೆ 18 ತಿಂಗಳ ಕಠಿಣಸಜೆಯನ್ನು ವಿಧಿಸಿದರು.

ಚಕ್ರವರ್ತಿಯವರು ಕೆಲವು ದಿವಸಗಳ ಹಿಂದೆ ಆರ್ಥಿಕ ಪರಿಷತ್ತಿಗೆ ಬಂದಿದ್ದ ಅಧಿಕಾರಿಗಳೆಲ್ಲರಿಗೂ ಒಂದು ದೊಡ್ಡ ಔತಣವನ್ನು ಏರ್ಪಡಿಸಿದ್ದರು ! ಆ ಔತಣಕ್ಕೆ ವಿವಾಹವಿಚ್ಛೇದನವನ್ನು ಹೊಂದಿದವರಾರೂ ಬರಕೂಡದೆಂದು ಅಧಿಕಾರಿಗಳೆಲ್ಲರಿಗೂ ಎಚ್ಚರಿಕೆಯು ಕೊಡಲ್ಪಟ್ಟಿದ್ದಿತಂತೆ !

ಕೊಲ್ಹಾಪುರದ ಕಾಲೇಜಿನಲ್ಲಿ ರಾವ್‌ಸಾಹೇಬ್ ಎಸ್. ಪಿ. ಸಾವಂತರವರು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದಾಗ ಸಮೀಪದ ಒಂದು ಗಣಿಯಿಂದ ಒಂದು ದೊಡ್ಡ ಬಂಡೆಯು ಹಾರಿಬಂದು ಕಾಲೇಜಿನ ಚಾವಣಿಯ ಮೇಲಿನಿಂದ ಶ್ರೀ|| ಸಾವಂತರವರ ಮೇಲೆ ಬಿದ್ದು ಅವರು ಕೂಡಲೇ ಮೃತಪಟ್ಟರು.

ಅಮೇರಿಕೆಯ ನ್ಯೂಜೆರ್ಸಿ ದೇಶಕ್ಕೆ ಸೇರಿದ ಕ್ಯಾಂಡನ್ ಎಂಬ ನಗರದಲ್ಲಿ ಮೋಟಾರಿನಲ್ಲಿ ಬರತಕ್ಕ ಪ್ರೇಕ್ಷಕರಿಗಾಗಿಯೇ ಒಂದು ಹೊಸ ಸಿನಿಮಾ ಮಂದಿರವು ಕಟ್ಟಲ್ಪಡುತ್ತಿರುವದು. ಈ ಮಂದಿರವು 400 ಮೋಟಾರುಗಳನ್ನು ಹಿಡಿಸುವಷ್ಟು ದೊಡ್ಡದಾಗಿದ್ದು, ಪ್ರೇಕ್ಷಕರು ಮೋಟಾರಿನಲ್ಲಿ ಕುಳಿತುಕೊಂಡೇ ಸಿನಿಮಾ ನೋಡಬಹುದಂತೆ !

ಸಂದ್ಯಾಲಿನಲ್ಲಿ ಒಂದು ಹಳ್ಳವನ್ನು ತೋಡುತ್ತಿರುವಾಗ ಕೂಲಿ ಜನರಿಗೆ ಕೆಲವು ರೋಮನ್ ಚಿನ್ನದ ನಾಣ್ಯಗಳು ದೊರೆತವು. ಅವುಗಳಲ್ಲಿ ಕೆಲವನ್ನು ಆ ಕೂಲಿಗಳೇ ತೆಗೆದುಕೊಂಡು ಹೋಗಿ ಮಾರಿಕೊಂಡರು. ಉಳಿದ ನಾಣ್ಯಗಳನ್ನು ಸರ್ಕಾರದವರು ತಮ್ಮ ವಶಪಡಿಸಿಕೊಂಡು ಟ್ರೆಜರಿಯಲ್ಲಿಟ್ಟಿರುವರು. ಆ ನಾಣ್ಯಗಳ ಬೆಲೆ ಸುಮಾರು 1000 ರೂಪಾಯಿಗಳಾಗಬಹುದೆಂದು ಊಹಿಸಲ್ಪಟ್ಟಿದೆ.

ಮಾಂಚೂರಿಯಾ ದೇಶದಲ್ಲಿ ರೈಲ್ವೇ ಪ್ರಯಾಣವು ಬಹಳ ಅಪಾಯಕರವಾದದ್ದು ! ಕಳೆದ 16 ತಿಂಗಳುಗಳಲ್ಲಿ ದರೋಡೆಕೋರರು 'ಚೈನೀಸ್ ಈಸ್ಟರ್ನ್ ರೈಲ್ವೇ' ಕಂಪೆನಿಯ 50 ಜನ ನೌಕರರನ್ನು ಸಂಹರಿಸಿದರು ! 800 ಜನರನ್ನು ಗಾಯಪಡಿಸಿದರು ! 1000 ಜನರನ್ನು ಸೆಳೆದೊಯ್ದರು ! 5 ಇಂಜನ್‌ಗಳೂ, 1,500 ರೈಲ್ವೇ ಗಾಡಿಗಳೂ ಮತ್ತು ಅನೇಕ ರೈಲ್ವೇ ಕಟ್ಟಡಗಳೂ ಹಾಳುಮಾಡಲ್ಪಟ್ಟವು !

ರಸಿಯಾದ ಒಬ್ಬ 23 ವರ್ಷದ ಯುವಕನು 'ಮಾನೋಸೈಕಲ್' ಎಂಬ ಒಂದು ಚಕ್ರದ ಗಾಡಿಯ ಮೇಲೆ ಪ್ರಪಂಚವನ್ನು ಸುತ್ತಲು ಹೊರಟಿರುವನು. ಇವನು ಈಗಾಗಲೇ ಜರ್ಮನಿ, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಹಾಲೆಂಡ್, ಹಂಗೇರಿ, ರೋಮೇನಿಯ, ಟರ್ಕಿ, ಯುಗೊಸ್ಲೇವಿಯ, ಆಸ್ಟ್ರಿಯ ಮೊದಲಾದ ದೇಶಗಳನ್ನು ಸುತ್ತಿರುವನೆಂದೂ, ಇದುವರೆಗೆ 9,400 ಮೈಲುಗಳ ದೂರ ಪ್ರಯಾಣ ಮಾಡಿರುವನೆಂದೂ ತಿಳಿದುಬಂದಿದೆ.

ಅಜ್ಮೀರ್ ನಗರದ ಸಮೀಪದಲ್ಲಿರುವ ಒಂದು ಕೆರೆಯ ಹತ್ತಿರ ನಾಲ್ಕು ಜನ ರಜಪೂತ ಬಾಲಕಿಯರು ತಿರುಗಾಡುತ್ತಿದ್ದಾಗ, ಅವರ ಜೊತೆಯಲ್ಲಿದ್ದ ದಾದಿಯು ಅಕಸ್ಮಾತ್ ಕಾಲುಜಾರಿ ನೀರಿನಲ್ಲಿ ಬಿದ್ದಳು. ಅವಳನ್ನು ಬದುಕಿಸುವ ಪ್ರಯತ್ನದಲ್ಲಿ ಆ ನಾಲ್ಕು ಜನ ಹುಡುಗಿಯರೂ ನೀರಿನ ಪಾಲಾದರು. ಅಷ್ಟರಲ್ಲಿ ಯಾವನೋ ಒಬ್ಬನು ಓಡಿಬಂದು ಇಬ್ಬರು ಬಾಲಕಿಯರನ್ನು ಮೇಲಕ್ಕೆ ಎಳೆದು ಬದುಕಿಸಿದನು. ಉಳಿದವರನ್ನು ಬದುಕಿಸಲು ಪ್ರಯತ್ನಿಸುವಷ್ಟರಲ್ಲಿ ತಾನೇ ಮುಳುಗಿಹೋದನು.

ಜಪಾನಿನ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಕೆಲವು ಜನರು ಬ್ರಿಟಿಷ್ ರಾಯಭಾರಿಗಳ ಮತ್ತು ಸರಕಾರಿ ಅಧಿಕಾರಿಗಳ ವಿರುದ್ಧವಾಗಿ ಒಂದು ದೊಡ್ಡ ಸಂಧಾನವನ್ನು ನಡೆಸುತ್ತಿರುವರೆಂದು ತಿಳಿದುಬಂದಿರುವದರಿಂದ ಸರಕಾರದವರು ಸದರಿ ಅಧಿಕಾರಿಗಳ ವಾಸಸ್ಥಳಗಳ ಸುತ್ತಲೂ ಬಲವಾದ ಕಾವಲನ್ನು ಇರಿಸಿ, ಅನುಮಾನ ಬಂದವರಲ್ಲಿ ಅನೇಕರನ್ನು ದಸ್ತಗಿರಿಮಾಡಿರುತ್ತಾರೆ. ಈ ಸಂಧಾನಕಾರರು ಜಪಾನಿನ ಮುಖ್ಯಮಂತ್ರಿ ಮತ್ತು ಸೈನ್ಯದ ಮಂತ್ರಿಗಳ ಮೇಲೆ ಗುರಿಯಿಟ್ಟಿದ್ದರೆಂದು ತಿಳಿದುಬಂದಿದೆ.

ಉಗಂಡರ್ ನಗರದಲ್ಲಿ ಸ್ಥಾಪಿಸಿರುವ ವಿದ್ಯುಚ್ಛಕ್ತಿಯ ಯಂತ್ರಗಳು ಸರಿಯಾಗಿ ಕೆಲಸಮಾಡದೆ ಇರುವದರಿಂದ ಆ ಯಂತ್ರಗಳಿಗೆ 2,000 ಬಾಲಕರನ್ನು ಬಲಿಕೊಡುವರೆಂದೂ, ಅದಕ್ಕಾಗಿ ಅನೇಕ ಜನ ಮೋಟಾರ್ ಲಾರಿ ಡ್ರೈವರುಗಳು ಒಂದು ವಿಧವಾದ ಮಾಯಾಕನ್ನಡಿಯನ್ನು ಬಾಲಕರಿಗೆ ತೋರಿಸಿ, ಅವರನ್ನು ಬಲಾತ್ಕಾರವಾಗಿ ತಮ್ಮ ಲಾರಿಗಳಲ್ಲಿ ಕುಳ್ಳಿರಿಸಿ ಕರೆದುಕೊಂಡುಹೋಗುವರೆಂದೂ, ಒಂದು ವಿಚಿತ್ರ ಸುದ್ದಿಯು ಫಿಲ್ಲಾಪುರ ಎಂಬ ಗ್ರಾಮದಲ್ಲಿ ಹಬ್ಬಿ ಅಲ್ಲಿಯ ನಿವಾಸಿಗಳೆಲ್ಲರೂ ಭಯಗ್ರಸ್ತರಾಗಿರುವರು.

ದಕ್ಷಿಣ ಆಫ್ರಿಕಾದೇಶಕ್ಕೆ ಸೇರಿದ ರಿವರ್ಸ್‌ಡೇಲ್ ಡಿಸ್ಟ್ರಿಕ್ಟಿನಲ್ಲಿ 'ಬ್ರೋಕನ್ ಟೋ' ಎಂಬ ಹೆಸರಿನ ನರಿಯು ರಾತ್ರಿಯವೇಳೆಗಳಲ್ಲಿ ಗ್ರಾಮಗಳಿಗೆ ನುಗ್ಗಿ ಕಳೆದ ಎರಡು ವರ್ಷಗಳಲ್ಲಿ ಸುಮಾರು 600 ಕುರಿಗಳನ್ನು ಕೊಂದಿರುವದಂತೆ ! ಅದನ್ನು ಹಿಡಿಯುವದಕ್ಕಾಗಿ 10 ಜನರು ಸಶಸ್ತ್ರರಾಗಿ 30 ಬೇಟೆನಾಯಿಗಳೊಡನೆ ಎಷ್ಟು ಹುಡುಕಿದರೂ ಅದು ಯಾರ ಕೈಗೂ ಸಿಕ್ಕದೆ ತಿರುಗುತ್ತಲೇ ಇರುವದು. ಈಗ ರೈತರು ಅದನ್ನು ಹಿಡಿದುಕೊಟ್ಟವರಿಗೆ 450 ರೂಪಾಯಿಗಳ ಬಹುಮಾನ ಕೊಡುವದಾಗಿ ಪ್ರಕಟಿಸಿರುವರು.

ಈಗ್ಗೆ ಕೆಲವು ದಿವಸಗಳ ಹಿಂದೆ ಸಿಕಂದರಪುರಕ್ಕೆ ಸಮೀಪದಲ್ಲಿರುವ ಒಂದಾನೊಂದು ಗ್ರಾಮದಲ್ಲಿ ಒಬ್ಬ ಹೆಂಗಸು ತನ್ನ ಮಗುವಿನೊಡನೆ ಮನೆಯ ಹೊರಭಾಗದಲ್ಲಿ ಮಲಗಿರಲು, ಮಧ್ಯರಾತ್ರಿಯ ಸಮಯದಲ್ಲಿ ಒಂದು ಚಿರತೆಯು ಬಂದು ಮಗುವನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿತು. ಅಷ್ಟರಲ್ಲಿ ಆ ಸ್ತ್ರೀಯು ಎಚ್ಚರಗೊಂಡು ತಾನು ಮಲಗಿದ್ದ ಹಾಸಿಗೆಯನ್ನು ಚಿರತೆಯ ಮೇಲೆ ಹಾಕಿ ಬಹು ಧೈರ್ಯದಿಂದ ಮಗುವನ್ನು ರಕ್ಷಿಸಿದಳು. ಚಿರತೆಯು ಕೋಪದಿಂದ ಅವಳ ಮೇಲೆ ಬಿದ್ದು ಗಾಯಪಡಿಸಿದರೂ ಆಕೆಯು ಹೆದರದೆ ಅದರೊಡನೆ ಹೋರಾಡುತ್ತಿರುವಷ್ಟರಲ್ಲಿ ನೆರೆಹೊರೆಯವರು ಓಡಿಬಂದು ಚಿರತೆಯನ್ನು ಕೊಂದರು. ಸದ್ಯಃ ಆಕೆಯು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವಳು.

ಗ್ವಾಲಿಯರಿನ ವಿದ್ಯಾರ್ಥಿಯೊಬ್ಬನು ಪ್ರತಿದಿನವೂ ವಿಹಾರಾರ್ಥವಾಗಿ ಒಂದು ಗುಡ್ಡದಮೇಲಕ್ಕೆ ಹೋಗುತ್ತಿದ್ದು ಒಂದು ದಿನ ಗುಡ್ಡದಮೇಲೆ ಕೂತಿದ್ದ ಸ್ಥಳದಲ್ಲೇ ತನ್ನ ಟೋಪಿಯನ್ನು ಮರೆತು ಬಂದುದರಿಂದ ಅದನ್ನು ತರಲು ರಾತ್ರಿ ಪುನಃ ಗುಡ್ಡಕ್ಕೆ ಹೋದನು. ರಾತ್ರಿ 10 ಗಂಟೆ ಸಮಯದಲ್ಲಿ ಹಿಂತಿರುಗಿ ಬರುತ್ತಿದ್ದಾಗ್ಗೆ ಒಬ್ಬ ಸಾಧುವು ಸಿಕ್ಕಿದನು. ಆತನು ಒಂದು ಬುಟ್ಟಿತುಂಬ ಪೂರಿಗಳನ್ನು ಹೊತ್ತು ತರುತ್ತಿದ್ದನು. ಈ ಹುಡುಗನನ್ನು ಕಂಡೊಡನೆ ಸಾಧುವು ತನ್ನ ಹೊರೆಯಲ್ಲಿ ಅರ್ಧವನ್ನು ತೆಗೆದುಕೊಳ್ಳಬೇಕೆಂದು ಕೇಳಲು ವಿದ್ಯಾರ್ಥಿಯು ಒಪ್ಪಿ ಅವನಸಂಗಡ ಬರುತ್ತಿರುವಾಗ್ಗೆ ಸಾಧುವು ಮಾಯವಾದನು. ಹಿಂದೆ ಒಬ್ಬ ಪೋಲೀಸನವನಿಗೂ ಇದೇ ರೀತಿ ಆಗಿದ್ದಿತಂತೆ ! ಶಾಸ್ತ್ರಜ್ಞರು ಈ ವಿಚಿತ್ರಕ್ಕೆ ಕಾರಣವನ್ನು ಪರೀಕ್ಷಿಸುತ್ತಿರುವರು.

ರೈತರ ಸಾರ್ವಜನಿಕಸಭೆ.

ಸೊರಬ ತಾಲೂಕು.

ಸೊರಬ ತಾ|| ಜಡೆಹೋಬಳಿಯ ರೈತರ ಸಾರ್ವಜನಿಕಸಭೆಯು ತಾರೀಖು 6-7-1933 ನೆಯ ಗುರುವಾರ ದಿವಸ ಕೋಡಿಕೊಪ್ಪದ ಶ್ರೀ ರಾಮೇಶ್ವರದೇವಸ್ಥಾನದಲ್ಲಿ ಮ|| ರಾ|| ಮಾಳಗಿ ವೀರಪ್ಪಗೌಡರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪೂರ್ವಭಾವಿಯಾಗಿ ತಿಳಿಸಿದಮೇರೆಗೆ ಸಭೆಯಲ್ಲಿ ನೂರಾರುಮಂದಿ ರೈತರು ಹಾಜರಿದ್ದರು. ಡಿ|| ಮೆಂಬರಾದ ಶ್ರೀ|| ಗುರುನಾಥಕೃಷ್ಣನಾಡಿಗೇರವರು ಸಭೆಯ ಉದ್ದೇಶವನ್ನೂ, ರೈತಪ್ರಜೆಗಳಿಗೆ ಈಗ ಒದಗಿರುವ ಕಷ್ಟವನ್ನೂ ರೈತರ ಅಭಿವೃದ್ಧಿಗಾಗಿ ಮಾಡಬೇಕಾದ ಕಾರ್ಯಕ್ರಮಗಳನ್ನೂ ಕುರಿತು, ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನಂತರ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಈ ಕೆಳಗೆ ಕಂಡ ತೀರ್ಮಾನಗಳು ಮಾಡಲ್ಪಟ್ಟವು. ಈ ವರ್ಷ ನಮ್ಮ ಪ್ರಾಂತದಲ್ಲಿ ಅಕಾಲದಲ್ಲಿ ಬಂದ ಅತಿವೃಷ್ಟಿಯಿಂದ ವಿಶೇಷ ನಷ್ಟವು ಸಂಭವಿಸಿರುತ್ತದೆ. ಎಷ್ಟೋ ಜಮೀನುಗಳು ಬಿತ್ತದೆಯೂ, ಕೆಲವು ಬಿತ್ತನೆಯಾಗಿ ನೀರುಮಣ್ಣಾಗಿಯೂ, ವ್ಯವಸಾಯಗಾರರ ಕೆಲಸಗಳಿಗೆ ಅನುಕೂಲವಿಲ್ಲದೆಯೂ, ಅಧಿಕವಮುಗ್ಗಟ್ಟಿನ ಹೊಡೆತದಿಂದಲೂ ರೈತರಿಗೆ ಅಪಾರವಾದ ನಷ್ಟವು ಪ್ರಾಪ್ತವಾಗಿದ್ದು, ಸಂಪೂರ್ಣ ಕಂದಾಯದ ಹೊರೆಯನ್ನು ಹೊರುವುದಕ್ಕೆ ಅಸಾಧ್ಯವಾಗಿದೆ. ಆದ್ದರಿಂದ ಈ ವರ್ಷದ ಪಹಣಿ ಅಣೇವಾರಿಯನ್ನು ಮಾಡುವುದರಲ್ಲಿ ಪ್ರಜಾಹಿತಕರವಾದ ಮತ್ತು ಸರಕಾರದವರಿಗೆ ಯುಕ್ತಕಂಡುಬರುವ ಸಲಹೆಗಳೊಂದಿಗೆ ಒಂದು ಕಿಸ್ತು ಅಥವಾ ರೀತಿಯನ್ನು ಅನುಸರಿಸಬೇಕೆಂದೂ ಸೀಬವಾಗಿ ಹಾನಿಗೀಳಪಟ್ಟಿರುವ ಗ್ರಾಮಗಳಿಗೆ ಮತ್ತು ರೈತರಿಗೆ ಕಂದಾಯ ಮಾಫಿಯೇ ಮೊದಲಾದ ಅವಶ್ಯಕವಾದ ಮತ್ತು ನ್ಯಾಯವಾದ ಪರಿಹಾರಗಳನ್ನು ಕೊಡಬೇಕೆಂದೂ, ಈಗಿರುವ ಪರಿಸ್ಥಿತಿಯು ಸಮತೂಕಕ್ಕೆ ಬರುವವರೆಗೆ ಈಗಿರುವ ಕಂದಾಯವನ್ನು ಕೊಡುವ ಕಿಸ್ತುಗಳನ್ನು ನಾಲ್ಕರಿಂದ ಆರರವರೆಗೆ ಹೆಚ್ಚಿಸಬೇಕೆಂದೂ, ಮುಂದಿನ ವ್ಯವಸಾಯಾಭಿವೃದ್ಧಿಗೆ ಅಂದರೆ ಬೀಜ, ಎತ್ತುಗಳು ಮತ್ತು ಮೇವನ್ನು ಕೊಂಡುಕೊಳ್ಳುವದಕ್ಕೆ ತಕಾವಿ, ಲ್ಯಾಂಡ್ ಇಂಪ್ರೂಮೆಂಟ್ ಸಾಲಗಳನ್ನು ಹೆಚ್ಚಿಸಿ ಬಡ್ಡಿದರದಲ್ಲಿ ರಿಯಾಯಿತಿಯನ್ನೂ ಹೆಚ್ಚು ಕಂತುಗಳ ಸೌಲಭ್ಯವನ್ನೂ ಕಲ್ಪಿಸಿಕೊಡಬೇಕೆಂದೂ ಈ ಸಭೆಯವರು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಘನವೆತ್ತಿದ ದಯಾಳು ಪ್ರಭುತ್ವದವರೂ, ಪ್ರಭುತ್ವದ ಪ್ರತಿನಿಧಿಗಳೂ, ಪ್ರಜಾಪ್ರತಿನಿಧಿಯ ಸದಸ್ಯರೂ ಈ ವಿಷಯಕ್ಕೆ ಗಮನಕೊಟ್ಟು ತಮ್ಮ ಪ್ರಜಾವಾತ್ಸಲ್ಯವು ಸಾರ್ಥಕವಾಗುವಂತೆ ಮಾಡುವರೆಂದು ಈ ಸಭೆಯವರು ಸಂಪೂರ್ಣವಾಗಿ ನಂಬಿರುತ್ತಾರೆ. ಸಭಾಕಾರ್ಯವು ಪೂರೈಸಿದನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾಯಿತು. ಈ ಸಭೆಯು ಯಶಸ್ವಿಯಾಗಿ ನಡೆಯುವಂತೆ ಮಾಡಿದ ಶ್ರೀ|| ಗುರುನಾಥಕೃಷ್ಣನಾಡಿಗರವರನ್ನು ಅಭಿವಂದಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಶಿವಪ್ಪಗೌಡ ಗಿಂಡಿ.

8-7-74

ಶ್ರಾವಣಮಾಸವು ಬಂದಿತು.

~~(ದೈವಜ್ಞವಿನೋದ, ತರೀಕೆರೆ)~~

ಆರ್ಯರು ಸಂಶೋಧಿಸಿದ ವಿಚಾರ ತರಂಗಗಳು ನಮ್ಮನ್ನು ಆನಂದಸಾಗರದಲ್ಲಿ ಲೋಲಾಡಹಚ್ಚಿ ಮನಾನಂದಗೊಳಿಸುತ್ತವೆ. ಮಾನವ ಪ್ರಾಣಿಗಳ ಉದ್ಧಾರಕ್ಕಾಗಿ ಸನಾತನ ಧರ್ಮಪದ್ಧತಿಗಳು ಏರ್ಪಟ್ಟಿವೆ. ಹಬ್ಬ ಹುಣ್ಣಿವೆ ಪರ್ವಕಾಲಗಳ ನಿರ್ಣಯಗಳು ಬಹು ಚೆನ್ನಾಗಿರುತ್ತವೆ. ದೇಶ, ಕಾಲ, ಋತುಗಳಿಗನುಗುಣವಾಗಿ ಆಯಾಯ ವಿಧಿಗಳನ್ನು ಗೊತ್ತುಮಾಡಿದ್ದಾರೆ. ಚೈತ್ರಾದಿಯಾಗಿ ಫಾಲ್ಗುಣ ಮಾಸಾಂತ್ಯದವರೆಗೆ ಬರುವ ಹಬ್ಬಗಳ ವೈಭವವು ಋತುಕಾಲಕ್ಕೆ ತಕ್ಕಂತೆ ಇರುತ್ತದೆ. ಈ ಹಬ್ಬಗಳೆಲ್ಲ ಇಡೀ ಭಾರತದಲ್ಲಿ ಒಂದೇ ವಿಧವಾಗಿಲ್ಲ. ಆಯಾಯ ದೇಶದ ಹವೆಯ ಮಾನದಂತೆ ಅವರವರು ಆಚರಿಸುತ್ತಾರೆ. ದಕ್ಷಿಣ ಪ್ರಾಂತದವರ ಹವೆಯು ಉಷ್ಣಕರವಾಗಿದ್ದು ಅವರು ಮೂರುಕಾಲಗಳಲ್ಲಿ ಸ್ನಾನಮಾಡಿ ಶಿವಾರ್ಚನೆಮಾಡಬೇಕೆಂದು ಕಟ್ಟಪ್ಪಣೆ ಮಾಡಿದ್ದಾರೆ. ಉತ್ತರದ ಹಿಮಾಲಯ ವಾಸಿಗಳಿಗೆ ಈ ಮೂರು ಕಾಲದ ಸ್ನಾನವನ್ನು ವಿಧಿಸಿದರೆ ಅವರಿಗೆ ಆ ದಿವಸವೇ ಸ್ವರ್ಗಾರೋಹಣವಾಗುವದು. ನಮ್ಮ ನಾಡಿಗೆ ಹನ್ನೆರಡು ಮಾಸಗಳಲ್ಲಿ ಶ್ರಾವಣಮಾಸಕ್ಕೆ ಬಹಳ ಬೆಲೆ ಇರುವದು. ಶ್ರಾವಣಮಾಸವೆಂದರೆ ನಮ್ಮವರಿಗೆ ಅತ್ಯಂತ ಪವಿತ್ರವಾದುದು. ಶೈವ-ವೀರಶೈವರಿಗಂತೂ ಪರಮಪೂಜ್ಯಕರವಾದುದು. ಎಲ್ಲಿ ನೋಡಿದರೂ ಶಿವಾಲಯಗಳಲ್ಲಿ ಶಿವಲಿಂಗಪೂಜಾವೈಭವವೂ, ಶಿವಭಜನೆಯೂ, ಶಿವಕೀರ್ತನಗಳೂ, ಶಿವಪುರಾಣಶ್ರವಣವೂ ಒಳ್ಳೇಭಕ್ತಿಯಿಂದ ನೆರವೇರುತ್ತವೆ. ಶ್ರಾವಣಮಾಸದ ಹವೆಗನುಸರಿಸಿ ಪೂಜಾ ಶ್ರವಣಾದಿಗಳನ್ನು ಇಟ್ಟಿದ್ದಾರೆ. ~~[illegible] ಅವಗಳನ್ನು ಅಡಗಿಸುತ್ತವೆ. [illegible] ಈ ಮಾಸವು [illegible] ಈ ಶ್ರಾವಣಮಾಸದಲ್ಲಿ [illegible]~~ ಶ್ರವಣವು ನವವಿಧ ಭಕ್ತಿಗಳಲ್ಲಿ ಮೊದಲನೆಯದು. ಕೇಳಿದನಂತರವೇ ತಿಳುವಳಿಕೆಯು ಬರುವದು. ಪುರಾಣಶ್ರವಣವು ಮಾನವನಿಗೆ ನೀತಿ ಮಾರ್ಗವನ್ನು ಕಲಿಸುವದು. ಧರ್ಮನಿಷ್ಠನನ್ನಾಗಿ ಮಾಡುವದು. ಪುಣ್ಯಕರ್ಮವನ್ನು ಬೋಧಿಸುವದು. ಪುರಾಣಶ್ರವಣದಿಂದಾಗತಕ್ಕ ಲಾಭಗಳು ವೇದಾಗಮೋಪನಿಷತ್ತುಗಳಿಂದಲೂ ಆಗುವುದಿಲ್ಲ. ವೇದವಂತೂ ರಾಜಾಜ್ಞೆಯಂತೆ ಇರುವದು. ರಾಜನು ಯಾವ ಆಜ್ಞೆಯನ್ನು ಮಾಡುವನೋ ಅದಕ್ಕೆ ಪ್ರತೀಕಾರವಿಲ್ಲ. ವೇದಪ್ರಮಾಣವು ಹೀಗಿದೆ ಅಂದರೆ ಅದು ಏಕೆ? ಎಂದು ಕೇಳುವಂತಿಲ್ಲ. " ಯದ್ವೇದಾತ್ ಪ್ರಭುಸಂಮಿತಾದಧಿಗತಂ ಶಬ್ದಪ್ರಧಾನಾಚ್ಚಿರಂ | ಯಚ್ಚಾರ್ಥಪ್ರವಣಾತ್ ಪುರಾಣವಚನಾದಿಷ್ಟಂ ಸುಹೃತ್ಸಂಮಿತಾತ್ " || ವೇದಕ್ಕಿಂತಲೂ ಪುರಾಣದಿಂದ ಮಾನವನಿಗೆ ಶೀಘ್ರಕಲ್ಯಾಣವಾಗುವದು. ವೇದದೊಳಗಿನ ದೊಡ್ಡ ದೊಡ್ಡ ತುತ್ತುಗಳನ್ನು ನುಂಗುವಷ್ಟು ನಮ್ಮ ಗಂಟಲವು ದೊಡ್ಡದಾಗಿಲ್ಲ. ಪುರಾಣವು ಹಡೆದ ತಾಯಿಯಂತೆ ಸಣ್ಣಸಣ್ಣ ತುತ್ತುಗಳನ್ನು ಮಾಡಿ ಉಣಿಸಿ ಪೋಷಿಸುವದು. ಪುರಾಣಶ್ರವಣದಲ್ಲಿ ಪರಮಾತ್ಮನ ಲೀಲೆಗಳನ್ನು ಕೇಳುವುದರ ಕೂಡ ಅಧ್ಯಾತ್ಮವಿಚಾರ, ಕರ್ಮಮಾರ್ಗ, ಉಪಾಸನಾಮಾರ್ಗ, ಯೋಗಮಾರ್ಗ, ವ್ರತಗಳಮಹಿಮೆ, ತೀರ್ಥಗಳ ಮಹಿಮೆ, ದಾನಗಳ ಶ್ರೇಷ್ಠತೆ, ವಿವಿಧಮಂತ್ರಗಳು, ವಿವಿಧವಸ್ತುಗಳು, ಮಾತೃ-ಪಿತೃಭಕ್ತಿ, ಗುರುಭಕ್ತಿ, ಶಿವಭಕ್ತಿಗಳ ಮೇಲ್ಮೆಯನ್ನು ದಾರಾಳವಾಗಿ ಕೇಳಲು ಅನುಕೂಲವಿರುತ್ತದೆ. ಇವೆಲ್ಲ ವಿಷಯಗಳಿಂದ ಶೋಭಿಸುತ್ತಿರುವದೇ ಪುರಾಣವು. ~~[illegible]~~? ಎಲ್ಲಿ ನೋಡಿದರೂ ಶಿವಪ್ರತಿಗಳೂ, ಶಿವಾರ್ಚನಾತತ್ಪರರೂ, ಶಿವಭಜನಾಸಕ್ತರೂ ಕಾಣುತ್ತಿರುವರು. ಈ ಶ್ರಾವಣವು ಆತ್ಮನಿಗೆ ವಿಕಾಸತೆಯನ್ನುಂಟುಮಾಡಿಕೊಡುವ ಪರಿಪಕ್ವಕಾಲವಾಗಿದೆ. ಸನಾತನ ಧರ್ಮಾಭಿಮಾನಿಗಳು ಈ ಶ್ರಾವಣಮಾಸದಲ್ಲಿ ಪುರಾಣಶ್ರವಣಾದಿಕಾರ್ಯಗಳನ್ನು ಹೆಚ್ಚಾಗಿಮಾಡಿ ಪರಿಶುದ್ಧರಾಗಬೇಕು. ಶ್ರಾವಣ ಮಾಸವು ಬಂದಿತು. ಇದಕ್ಕಾಗಿ ಶ್ರೀ ಜಗದ್ಗುರು ರೇಣುಕವಿಜಯ ಪುರಾಣವು ಕನ್ನಡ ಭಾಮಿನಿಷಟ್ಪದಿಯಲ್ಲಿ ಸೊಗಸಾದ ಮುದ್ರಣದಿಂದ ಉದಯವಾಗಿದೆ. ಇದನ್ನು ತರಿಸಿ, ಪಠಿಸಿ-ಪೂಜಿಸಿ-ಶ್ರವಣಮಾಡಿ ಧನ್ಯರಾಗಬೇಕು.

ಚಿನ್ನದ ಪ್ರಭಾವ

ಚಿನ್ನವು ಲೋಹಗಳಲ್ಲಿ ಅಪೂರ್ವವಾದದ್ದು. ಆದುದರಿಂದಲೇ ಇದಕ್ಕೆ ಅಸಾಧಾರಣ ಬೆಲೆಯು ಕೊಡಲ್ಪಟ್ಟಿರುವುದು. ಚಿನ್ನವೆಂದರೆ, ದ್ರವ್ಯವೆಂದರ್ಥ. ಯಾರಲ್ಲಿ ಚಿನ್ನವಿರುವುದೋ, ಅವನು ಪಂಡಿತನೆಂಬುದಾಗಿ ಭಾವಿಸಲ್ಪಡುವನು. ಅವನು ಸತ್ಕುಲಪ್ರಸೂತನೆಂಬುದಾಗಿ ಪರಿಗಣಿಸಲ್ಪಡುವನು. ವಕ್ತೃಗಳಲ್ಲಿ ಅವನು ಶ್ರೇಷ್ಠನೆಂದು ಭಾವಿಸಲ್ಪಡುವನು. ಕುರೂಪಿಯಾಗಿದ್ದಾಗ್ಯೂ, ಅವನು ಸುಂದರಪುರುಷನೆಂದು ಭಾವಿಸಲ್ಪಡುವನು. ಸಕಲಸದ್ಗುಣಗಳೂ ಕೂಡ ಧನಿಕನಿಗಾರೋಪಿಸಲ್ಪಡುವುವು. ಧನವಿಲ್ಲದವನು ಸಕಲಗುಣಸಂಪನ್ನನಾಗಿ ದೇವರಿಗೆ ಸಮಾನನಾಗಿದ್ದಾಗ್ಯೂ ಅವನು ಗುಣಹೀನನಂತೆ ಭಾವಿಸಲ್ಪಡುವನು. ಧನಿಕನಾದವನು ಬೇಕಾದಪದಾರ್ಥವನ್ನು ಕರೆಯುದೆಂದು ಸಾಧಿಸುವ ಶಕ್ತಿಯನ್ನೂ ಹೊಂದುವನು. ಸತ್ಯವನ್ನು ಅಸತ್ಯವೆಂದು ಪ್ರತ್ಯಯವನ್ನು ಉಂಟುಮಾಡುವ ಶಕ್ತಿಯು ದ್ರವ್ಯಮಹಿಮೆಯಿಂದ ಅವನಿಗುಂಟಾಗುವುದು. ಅವನು ನೀಚರನ್ನು ಮಹಾತ್ಮರೆಂದು ಭಾವಿಸಲ್ಪಡುವಂತೆ ಮಾಡಬಲ್ಲನು. ವೃದ್ಧರನ್ನು ತರುಣರನ್ನಾಗಿಯೂ, ತರುಣರನ್ನು ವೃದ್ಧರನ್ನಾಗಿಯೂ, ಹೇಡಿಗಳನ್ನು ಶೂರರನ್ನಾಗಿಯೂ, ಶೂರರನ್ನು ಹೇಡಿಗಳನ್ನಾಗಿಯೂ ಮಾಡುವ ಶಕ್ತಿಯು ಅವನಿಗೆ ಬರುವುದು. ಚಿನ್ನದ ಮಹಿಮೆಯಿಂದ ಆಗದಿರತಕ್ಕ ಕೆಲಸಗಳಿಲ್ಲ. ಗುರುಗಳು, ಜಗದ್ಗುರುಗಳು, ಅಧಿಕಾರಿಗಳು ಇವರೇ ಮೊದಲಾದವರಲ್ಲಿ ದ್ರವ್ಯದ ಆಸೆಯಿಂದ ಗುಲಾಮರಾಗುವುದಕ್ಕೆ ಒಪ್ಪದೆ ಇರತಕ್ಕ ಜನಗಳೇ ಅಪೂರ್ವ. " Every man has his prize " ಎಂಬುದಾಗಿ ಲೋಕವ್ಯವಹಾರಜ್ಞರಾದ ವಾಲ್‌ಪೋಲ್‌ರವರು ಹೇಳಿರುವರು. ಇದು ಸುಳ್ಳಲ್ಲ. ಈ ಹಳದಿ ಲೋಹವು ಸಜ್ಜನರನ್ನು ಕೂಡ ನರಕಕ್ಕೆ ಕಳುಹಿಸಬಲ್ಲದು. ಜಾತಿ, ಮತ, ಕೋಮು ಮೊದಲಾದುವುಗಳ ಬಂಧನಗಳನ್ನು ಸಡಲಿಸಬಲ್ಲದು. ಪಾಪಿಷ್ಠರಿಗೂ ಕೂಡ ಪುಣ್ಯವಂತರಿಗರ್ಹವಾದ ಪದವಿಯನ್ನು ಕೊಡಬಲ್ಲದು. ನ್ಯಾಯವಾದಿಗಳನ್ನು ಅಪ್ರಾಮಾಣಿಕರನ್ನಾಗಿ ಮಾಡಬಲ್ಲದು. ಪತಿವ್ರತಾಶಿರೋಮಣಿಗಳನ್ನು ವಾರನಾರಿಯರನ್ನಾಗಿ ಮಾಡಬಲ್ಲದು. ಭಯಂಕರವಾದ ಮೋಹರೋಗಗಳಿಂದ ಪೀಡಿತರಾದವರು ಪುನಃ ವಿಷಕನ್ನಿಕೆಯರ ದಾಸರಾಗುವಂತೆ ಮಾಡಬಲ್ಲದು. ಪುಣ್ಯಕ್ಷೇತ್ರಗಳನ್ನು ಪಾಪಕ್ಷೇತ್ರಗಳನ್ನಾಗಿ ಮಾಡಬಲ್ಲದು. ದೇವತೆಗಳನ್ನು ಕೂಡ ಪಿಶಾಚಿಗಳನ್ನಾಗಿ ಮಾಡಬಲ್ಲದು. ಚಿನ್ನವು ಬೆಂಕಿಗೆ ಸಮಾನವಾದದ್ದು. ಒಳ್ಳೆಯ ಕೆಲಸಗಳಿಗೆ ಉಪಯೋಗಿಸಿದರೆ ನರಕವನ್ನು ಕೂಡ ಇದು ಸ್ವರ್ಗವನ್ನಾಗಿ ಮಾಡುವುದಕ್ಕೆ ಸಾಧಕವಾಗುವುದು. ಇದನ್ನು ಧರ್ಮದಿಂದ ವಿನಿಯೋಗಿಸಿ, ಮಹಾತ್ಮರು ಸಕಲಸಂಪತ್ತುಗಳಲ್ಲಿಯೂ ಅಗ್ರಗಣ್ಯವಾದ ಸಾಯುಜ್ಯವನ್ನು ಸಂಪಾದಿಸುವರು. ಅದನ್ನು ದುರ್ವಿನಿಯೋಗಮಾಡಿ ದೇವರಿಗೆ ಸಮಾನರಾದವರೂ ಕೂಡ ರಾವಣಾದಿಗಳಂತೆ ಅಧೋಗತಿಗೆ ಬಂದಿರುವರು. ಈ ವಿಷಯಗಳನ್ನು ಸರ್ವರೂ ಪರ್ಯಾಲೋಚಿಸಿ ಚಿನ್ನದಮೇಲಿನ ದುರಾಶೆಯಿಂದುಂಟಾಗತಕ್ಕ ಅನರ್ಥಗಳನ್ನು ತಪ್ಪಿಸಿಕೊಳ್ಳುವುದು ಸರ್ವರ ಕರ್ತವ್ಯ. ದ್ರವ್ಯಾರ್ಜನೆ ಮಾಡುವುದು ತಪ್ಪಲ್ಲ, ಆದರೆ ಅದರ ದುರ್ವಿನಿಯೋಗದಿಂದ ಆಗತಕ್ಕ ಅನರ್ಥಗಳನ್ನು ತಪ್ಪಿಸಿಕೊಳ್ಳುವುದು ಸರ್ವರ ಕರ್ತವ್ಯ.

M. Venkatakrishnayya, Mysore.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೧೯—೧೧—೧೯೩೩ ಪೂರಾ ೫೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ, ರಾಮೇಶ್ವರ, ಲಂಕಾ ಮೊದಲಾದ ೩೧ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೫೧೦ ರೂ. ಥರ್ಡ ಕ್ಲಾಸ್ ೧೬೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಶನ್ ಕೊಡಲ್ಪಡುವದು.

ಸದರಿ ಕಂಪನಿಯು [illegible] ರೆಂಟಿಗಳಿಂದ [illegible] ಕಿರ್ದಿ ಮಾಡಿಕೊಡಲ್ಪಡುವದು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು. [7]

ಜಿ. ಎ. ಶಿರೂರ,
ತಾ|| ೧—೬—೧೯೩೩. ಮ್ಯಾನೇಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಮುತ್ತಿನಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗ ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು [illegible] ನೋಡಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೊಕ್ಕಾದ ಕಾಶ್ಮೀರದೇಶದ [illegible] ಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆ[illegible] ಬಹು ಜಾಗ್ರತೆಯಾಗಿ ಸ್ವಚ್ಛವಾಗುವುವು. ಅಲ್ಲದೆ [illegible] ಗಳೂ ಕಡೆಗೆ ಹೊಸಪೇಟಾಗಳಂತೆಯೇ ಕಾಣೆ[illegible]. ಶಿರೋಭೂಷಣವಾದ ಈ ಪೇಟಾಗಳು ಎಲ್ಲ [illegible] ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿ[illegible] ತರಿಸಿಕೊಂಡು ಇವುಗಳ ಅನುಭವವನ್ನು [illegible] ಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ)ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು " **ವೀರಶೈವರತ್ನ** " ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಪಿಲ್ಲ್ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಸಹ ಈ ಪಿಲ್ಲುಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಫ್ಫ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

☞ ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಹಿತಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ್— ಉಬ್ಬಸ, ನೀವಸ, ದಮ್ ರೋಗಗಳೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ '**ಕಂಪೌಂಡು ಸಿರಪು ಫೋಸ್ಫರ**' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

[46] 8 ಔನ್ಸಿಗೆ ರೂ. 3-8-0

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲೂಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೀಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ತಡೆಕಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯುಳ್ಳವರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[27] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಲಿಂಗೋತ್ಪತ್ತಿ ಲಾಕೆಟ್ಸ್	೨
ಕೇನೋಪನಿಷತ್ (ವೀರಶೈವಭಾಷ್ಯ)	೧
ಈಶಾವಾಸ್ಯೋಪನಿಷತ್ (ಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ

(Registered Trade Mark)

ಗಳನ್ನು ಕೊಟ್ಟಿ
ರು. ಪ್ರಸಿದ್ಧವಾ
ನಶ್ಯದ ಪುಡಿ
ಸ್ವಸ್ಥವಾಗುವ
ಧಿಗಳು ಯಾವ
ರೆ:—ಪಿನಸಿ,
ತಲೆನೋವು, ತ
ಳ್ಳಿನ ರೋಗಗ
ಕಣ್ಣುಗಳಲ್ಲಿ ಉ
ಗತಕ್ಕ ಸರ್ವವ್ಯಾಧಿಗಳೂ ಬಿಂದೋಪ ಮುಂ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ
ಲ್ಲಿಟ್ಟ ಕಟಿ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ
ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರು
ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯ
ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ
ಪರಿಮಳವಾಗುವುದು. ಇದನ್ನು ಅನೇಕ ಪ್ರ
ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪ
ಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ.
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[28] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

EGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಜುಲೈ ೧೯೩೩ [ಸಂಚಿಕೆ ೧೩

ರೇಣುಕವಿಜಯಪುರಾಣಂ.

ಶ್ರಾವಣಮಾಸವು ಬಂದಿತು! ಪ್ರತಿಯೊಂದು ಗ್ರಾಮದಲ್ಲಿಯೂ ಈ ಮಹಾಪುರಾಣವನ್ನು ಕೇಳಿ ಧನ್ಯರಾಗಬೇಕು!

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ರ್ನಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ ರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶ್ರಾವಣಮಾಸದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘ ಸ್ಥಾಪನಾವಶ್ಯಕತೆ.

ಜಗತ್ತಿನಲ್ಲಿರುವ ಸಮಸ್ತ ಪ್ರಾಣಿಗಳಿಗೂ "ಸುಖಸ್ಯಾನಂ ದುಃಖಂ ದುಃಖಸ್ಯಾನಂತರಂ ಸುಖಂ" ಎಂಬಂತೆ ಸುಖ ಗಳು ಮೇಲಿಂದ ಮೇಲೆ ಬರುತ್ತಿರುವವು. ಯಾವಾಗಲೂ ವೇ ಇರುವದಾದರೆ ಮಾನವರು ನಾಸ್ತಿಕರಾಗುತ್ತ ಗುರು ಶಿವಭಕ್ತಿ ಶೂನ್ಯರಾಗುತ್ತ ಧರ್ಮಭ್ರಷ್ಟರಾಗುತ್ತ ಬರುವ ದೇವರು ಸುಖದುಃಖಗಳೆರಡನ್ನೂ ಸಮವಾಗಿ ಹಂಚಿರು ನೆ. ಮಾನವ ಪ್ರಾಣಿಯು ದುಃಖವನ್ನು ಪರಿಹರಿಸಿ ಮುಕ್ತಿ ವನ್ನು ಕೊಡುವ ಅಧಿಕಾರವು ಗುರುವಿಗೆ ಮಾತ್ರವಿರುತ್ತದೆ. ವಾಂಶವಲೇ "ಮದಾದಿ ಸರ್ವಲೋಕಾನಾಂ ಜಗದ್ಗುರು ಶ್ವರಾಃ" ಅಂದರೆ ಪಾರ್ವತಿಯೇ, ನನ್ನ ಪಂಚಮುಖಗ ಉತ್ಪನ್ನರಾದ ಶ್ರೀರೇಣುಕಾದಿ ಪಂಚಾಚಾರ್ಯರು ಸಪ ಲೋಕಗಳಿಗೂ ಗುರುಗಳಾಗಿದ್ದಾರೆಂದು ಪರಶಿವನು ದೇಶ ಮಾಡಿರುತ್ತಾನೆ. ಆದ್ದರಿಂದ ಅಯ್ಯಾ! ಭಕ್ತಮಹೇ ರೇ! ಪ್ರತಿಯೊಂದು ಗ್ರಾಮಗಳ ಮಠಗಳಲ್ಲಿ ಆಗಲಿ ಶಿವದೇವಾ ಗಳಲ್ಲಿ ಆಗಲಿ ಸದ್ಯಃ ಪ್ರಾಪ್ತವಾಗಿರುವ ಶ್ರಾವಣಮಾಸದಲ್ಲಿ ಜಗದ್ಗುರು ಪಂಚಾಚಾರ್ಯರ ಭಜನಾಸಂಘವನ್ನು ಸ್ಥಾಪಿಸಿ ದಲ್ಲಿ ಶಿವಭಜನೆ ಗುರುಭಜನೆಯನ್ನು ಮಾಡುತ್ತ ಪಂಚಾಚಾ ರ ಭಾವಪಟವನ್ನು ಇಟ್ಟು ಕಾಯ ವಾಕ್ ಮನಸ್ಸುಗಳಿಂದ ಯನ್ನು ಮಾಡಬೇಕು. ಗುರುಭಜನೆ ಶಿವಭಜನೆಗಳಿಲ್ಲದ ಇದರಿಂದ ಪ್ರತಿಯೊಂದು ದೇಶವೂ ಅನೇಕ ತರದ ಗಗಳಿಂದಲೂ, ಧನಕ್ಷಯದಿಂದಲೂ, ವೃಷ್ಟಿಪ್ರತಿಬಂಧದಿಂ ಕಷ್ಟಪಡುತ್ತಿರುವದನ್ನು ನೋಡಿದರೆ ವಿಷಾದವೆನಿಸುತ್ತದೆ. ಧ್ಯಾನ ಶಿವಧ್ಯಾನವೇ ಇಂಥ ಕಷ್ಟಗಳ ಪರಿಹಾರಕ್ಕೆ ಉಪಾ ದೆ ಇನ್ನಾವ ಉಪಾಯಗಳೂ ಪ್ರಯೋಜನಕಾರಿಗಳಲ್ಲ. ರಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಶ್ರೀ ಜಗದ್ಗುರು ಚಾರ್ಯರ ಭಜನಾಸಂಘವನ್ನು ಸ್ಥಾಪಿಸಿ ದಿನೇ ದಿನೇ ಯಿಂದ ಭಜನೆಯನ್ನು ಮಾಡುತ್ತ ಗ್ರಾಮದ ಬೀದಿಗಳಲ್ಲೆಲ್ಲ ಸಂಚರಿಸಿದ್ದಾದರೆ ಪೀಡೆಪಿಶಾಚಿಗಳೂ ಅಲ್ಲಲ್ಲಿ ಹರಡಿಕೊಳ್ಳುತ್ತಿರುವ ರೋಗಗಳೂ ಶಾಂತವಾಗುತ್ತವೆ. ಈ ವಿಷಯವನ್ನು ಪ್ರತ್ಯೇಕ ನೋಟೀಸಿನಿಂದಾಗಲಿ ಹಸ್ತಬರವಣಿಗೆಯಿಂದಾಗಲಿ ನಿಮ್ಮ ನಿಮ್ಮ ಸ್ನೇಹಿತರಿರುವ ಅಜುಬಾಜು ಗ್ರಾಮಗಳಿಗೆ ತಿಳುಹಿಸಿದ್ದಾದರೆ ಸಾವಿರಾರು ಗೋವುಗಳನ್ನು ದಾನಮಾಡಿದಷ್ಟು ಪುಣ್ಯಕ್ಕೆ ಭಾಗಿಗಳಾಗುತ್ತೀರಿ. ಭಜನಾಸಂಘಕ್ಕೆ ಬೇಕಾಗುವ ಸ್ತೋತ್ರಗ್ರಂಥಗಳು ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ದೊರೆಯುತ್ತವೆ. ತರಿಸಿ ಕಲಿತುಕೊಂಡು ಕೃತಾರ್ಥರಾಗಬೇಕೆಂದು ತಿಳಿಸುವ,

ಸನಾತನಧರ್ಮಬೋಧಕರಾದ
ರೇವಣಸಿದ್ಧಶಿವಾಚಾರ್ಯಪಟ್ಟದ ಸ್ವಾಮಿಗಳು,
ಹಿರೇಮಠ ಚಿಕ್ಕಮಗಳೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಕೃತಜ್ಞತೆ.

ಮಾನ್ಯರೇ—ನನ್ನ ಪ್ರಾರ್ಥನೆಯಂತೆ ತಾವು ವಿ. ಪಿ. ದ್ವಾರಾ ಕಳುಹಿಸೋಣವಾದ ರೇಣುಕವಿಜಯಪುರಾಣವು ದಿಯಾಗಿ ಕೆಲವು ಗ್ರಂಥಗಳು ನನ್ನ ಕರಗತವಾದುವು. ಈ ರೇಣುಕವಿಜಯಪುರಾಣವನ್ನು ಆಮೂಲಾಗ್ರವಾಗಿ ಓದಿ ತಿಳಿದು ಧನ್ಯನಾದೆನು. ಮಹಾಗುರು ಲೀಲಾಸಂಬಂಧವಾದ ಗಹನ ವಿಚಾರಗಳನ್ನು ಕುರಿತು ಗ್ರಂಥರೂಪದಲ್ಲಿ ಬರೆಯಬೇಕಾದರೆ ಪ್ರತಿಭಾಶಾಲಿಗಳಾದ ಮಹಾಕವಿಗಳೇ ಬೇಕೆಂಬ ವಿದ್ವನ್ಮಣಿಗಳ ಅಭಿಪ್ರಾಯದಂತೆ ಈ ರೇಣುಕವಿಜಯಪುರಾಣ ಗ್ರಂಥಕರ್ತರು ಸಹ ಆ ದಿವ್ಯವಿಭೂತಿಗಳ ಮಣಿಮಾಲಿಕೆಯಲ್ಲಿ ಒಬ್ಬರಾಗಿರುತ್ತಾರೆ ಶ್ರೀಗುರು ಸಾರ್ವಭೌಮರ ಮಹೋಪದೇಶ ವಚನಾಮೃತದ ಸವಿಯುಣ್ಣಬಯಸುವವರ ಮನೋಭಿಲಾಷೆಯು—ಈ ಪುರಾಣ ಶ್ರವಣಾನಂದದಿಂದ ನೆರವೇರುವದರಲ್ಲಾವ ಸಂದೇಹವೂ ಇಲ್ಲವೆಂಬುದೇ ನನ್ನ ದೃಢನಂಬಿಕೆ. ಸಂಗೀತಕಲಾಭಿಜ್ಞರಾದ ಕೀರ್ತನಕಾರ ಪುರಾಣಿಕ ಭಜನಾಸಕ್ತರೇ ಮೊದಲಾದವರಿಗಂತೂ ಗಾನರೂಪವಾಗಿ ಹೇಳಿ ಆನಂದಗೊಳಿಸಲುತ್ಸಾಹವಿಕ್ಕುವ ನವರಸಭರಿತವಾದೀ ಪುರಾಣವನ್ನು ಅಲ್ಪಜ್ಞನಾದ ನಾನು ವರ್ಣಿಸಲಸಮರ್ಥನಾಗಿರುವೆನು. ಇಂತಹ ಸರಳ ಕವಿತಾರಚನೆಯಿಂದೊಡಗೂಡಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಪಾವನಾದ್ಭುತ ಲೀಲಾಜಾಲದಿಂದೆಸೆಯುವೀ ಪುರಾಣವನ್ನು ಪಠಿಸಿ, ಭಜಿಸಿ, ನುತಿಸಿ, ವಂದಿಸಿ ಆನಂದಿಸುವ ಭಾಗ್ಯವನ್ನು ನಮ್ಮಗಳಿಗೆಲ್ಲ ದೊರಕಿಸಿಕೊಟ್ಟು ಲೋಕೋಪಕಾರವನ್ನು ಮಾಡಿರುವ ಗ್ರಂಥಕರ್ತರಾದ ಆಸ್ಥಾನವಿದ್ವಾನ್ ವೇ॥ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಗೂ ಪ್ರೋತ್ಸಾಹಕರಾದ ವೇ॥ ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಗೂ ನನ್ನ ಪ್ರೇಮಾಭಿವಂದನೆಗಳನ್ನು ಸಮರ್ಪಿಸಿ ಈ ಮಹೋದಯರ ಶ್ರಮವು ಸಫಲಗೊಳ್ಳುವಂತೆ ದಯೆಗೆಯ್ಯಲು ಶ್ರೀ ಜಗದ್ಗುರು ರೇಣುಕಾಚಾರ್ಯರನ್ನು ಅನನ್ಯಭಾವದಿಂದ ಪ್ರಾರ್ಥಿಸುವ,

ಬಿ. ಎಸ್. ಗುರುಶಾಂತಪ್ಪಶ್ರೇಷ್ಠಿ,
ಹಾರನಹಳ್ಳಿ, ಜಿ॥ ಶಿವಮೊಗ್ಗಾ.

ಗೂಡಿನಿಂದ ಹೊರಬಿದ್ದ ಗೂಗೆಯ ಪರಿಣಾಮ.

ಗುರುದ್ರೋಹವೆಂಬ ಕತ್ತಲೆಯಲ್ಲಿ ತಿರುಗಾಡುತ್ತಲಿದ್ದ ಗೂಗೆಯು ಸುಮ್ಮನೆ ಗೂಡಿನಲ್ಲಿರಬಾರದೇ? ಅಜ್ಞಾನತಿಮಿರ ಭಾಸ್ಕರನಾದ ಜಗದ್ಗುರುವರೇಣ್ಯನ ಆಗಮನದ ದಿವ್ಯಪ್ರಕಾಶವನ್ನು ನೋಡಿ ಗೂಡಿನೊಳಕ್ಕೆ ಹೊಕ್ಕು (ವೇಶ್ಯಾಪುತ್ರನ ಮರೆಯಲ್ಲಿ ಅಡಗಿ) ಘೂತ್ಕಾರ ಮಾಡುವದು ಏಕೆ ಬೇಕಾಗಿತ್ತು? ವೇಶ್ಯಾಪುತ್ರನ ಹೊಯ್ಮಾಲಿತನವನ್ನು ಹಾಳುಮಾಡಿ ಅವನ ಅನಂತವೇಷಗಳ ಕಕ್ಕಶವನ್ನು ಪ್ರಪಂಚಕ್ಕೆಲ್ಲಾ ಪ್ರಚಾರಮಾಡಿಕೊಡಗಿದ ದೈವಜ್ಞವಿನೋದನು ಗೂಡುಬಿಟ್ಟು ಹೊರಬಿದ್ದ ಗೂಗೆಗಳ ಅವತಾರವನ್ನು ಸಮಾಪ್ತಿಗೊಳಿಸದಿರನು. ಇನ್ನು ಸ್ವಲ್ಪ ಪಾಪದ ಫಲಭೋಗದಾಶೆಯು ಇದ್ದರೆ ಗೂಡಿನೊಳಗೇ ಇದ್ದು ಅದನ್ನು ಭೋಗಿಸಲಿ. ಅದೇ ಪಾಪಬುದ್ಧಿಯಿಂದ ಹೊರಬಿದ್ದರೆ ವಾಕ್ವಿನೋದನೊಬ್ಬನೇ ಏಕೆ? ಇಡೀ ಪ್ರಪಂಚವೇ ಗೂಗೆಗಳ ಸದ್ದಡಗಿಸುವದು. ಕರುಣವೇಷಧಾರಿಯಾದ ಗೂಗೆಯೇ ಜೋಕೆ!

ಯಮ.

ಜಗದ್ಗುರುಗಳವರ ಆಗಮನ.

ಸೊಲ್ಲಾಪುರದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಘಕ್ಕೆ ಆಷಾಢ ಬ॥ ೫ ದಿವಸ ಶ್ರೀಮದುಜ್ಜಯಿನೀ ಜಗದ್ಗುರುಗಳವರು ಆಗಮಿಸಿ ಧರ್ಮಬೋಧೆಯನ್ನು ಮಾಡಿ ಸಂಘವು ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದರು. ಈ ಸಮಯದಲ್ಲಿ ಸಾವಿರಾರು ಜನರು ಆಗಮಿಸಿದ್ದರು.

ಓರ್ವ ಗುರುಭಕ್ತ.

ದಕ್ಷಿಣ ಆಫ್ರಿಕಾ ದೇಶದಲ್ಲಿರುವ ಕಿಂಬರ್ಲಿ ನಗರದಲ್ಲಿ ಲೋಕಪ್ರಸಿದ್ಧವಾದ ವಜ್ರದ ಗಣಿಯೊಂದಿರುವದು. ಈ ಗಣಿಯು ಕಿಂಬರ್ಲಿ ನಗರದ ಮಧ್ಯದಲ್ಲಿದ್ದು 12,000 ಅಡಿಗಳ ಅಗಲವಾಗಿಯೂ, ಸುಮಾರು 2 ಫರ್ಲಾಂಗುಗಳಷ್ಟು ಆಳವಾಗಿಯೂ ಇರುವದು. ಇದುವರೆಗೆ ಇದರಿಂದ ಸುಮಾರು 6½ ಟನ್ನಿನಷ್ಟು ವಜ್ರದ ಹರಳುಗಳನ್ನು ತೆಗೆದಿರುವರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಕುಂಭಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆಸಾಗಿದುದು.)

ಶ್ರೌತಸೂತ್ರಕಾರರು—'**ಮನ್ತ್ರಬ್ರಾಹ್ಮಣಯೋರ್ವೇದನಾಮಧೇಯಮ್**' (ಹಿರಣ್ಯ. ಶ್ರೌ. ೧—೧) ಎಂದು ಸೂಚಿಸುವ ಮೇರೆಗೆ ವೇದವು, ಸಂಹಿತೆ ಬ್ರಾಹ್ಮಣಗಳೆಂಬ ಎರಡು ಭಾಗವುಳ್ಳದ್ದಾಗಿದೆ. ಬ್ರಾಹ್ಮಣದೊಳಗಣ ಕೊನೆಯ ಕೆಲವು ಭಾಗಗಳು ಆರಣ್ಯಕಗಳೆಂತಲೂ ಉಪನಿಷತ್ತುಗಳೆಂತಲೂ ಹೇಳಿಸಿಕೊಳ್ಳಲ್ಪಡುತ್ತವೆ. ಅದು ಕಾರಣವೇ, ಆರಣ್ಯಕಗಳ ಹಾಗೂ ಉಪನಿಷತ್ತುಗಳ ಹೊರತಾಗಿ ಉಳಿದ ಭಾಗವೆಲ್ಲವೂ ಬ್ರಾಹ್ಮಣವೆಂಬ ಸಂಜ್ಞೆಯನ್ನು ತಳೆದಿರುವುದು. ಈ ವಿಧವಾದ ವೇದವಾಙ್ಮಯ ಭಾಗಗಳಲ್ಲಿ ಮೊದಲನೆಯ ಭಾಗವು ಸಂಹಿತೆಯು. ಇಂತಹ ಸಂಹಿತೆಗಳಾದರೋ ಪೂರ್ವದಲ್ಲಿ ಬಹುಳವಾಗಿದ್ದುವೆಂಬುದೆಂದು ಊಹೆಯಾಗುವುದು. ಈಗಲಾದರೂ ಋಗ್ಯಜುಸ್ಸಾಮಾಥರ್ವಗಳೆಂಬ ಈ ನಾಲ್ಕೇ ವೇದಗಳು ಸರ್ವತ್ರಪ್ರಸಿದ್ಧಗಳಾಗಿರುವುದರಿಂದ ಪ್ರತಿಯೊಂದು ವೇದದ ಒಂದೊಂದು ಸಂಹಿತೆಯ ಮೇರೆಗೆ ನಾಲ್ಕು ಸಂಹಿತೆಗಳಿರುತ್ತವೆ.

ಸಂಹಿತಾ ಎಂಬುದರ ಅರ್ಥವನ್ನು ಯಾಸ್ಕಾಚಾರ್ಯನು—'**ಪರಃಸನ್ನಿಕರ್ಷಃಸಂಹಿತಾ**' (ನಿರು. ಅ. ೧, ಖಂ. ೧೭, ಸೂ. ೪) ಉತ್ಕೃಷ್ಟವಾದ ಸಂಬಂಧವು ಸಂಹಿತೆಯು ಎಂದು ಹೇಳಿರುವನಲ್ಲದೆ, ಸಂಹಿತೆಯ ಲಕ್ಷಣವನ್ನು ಬೋಧಿಸತಕ್ಕ '**ಪದಪ್ರಕೃತಿಃಸಂಹಿತಾ**' (ಋ. ಪ್ರಾತಿಶಾ. ಪ. ೨; ಸೂ. ೧.) ಪದಗಳ ಪ್ರಕೃತಿ (ವಿಕಾರ) ಭೂತವಾದುದು ಸಂಹಿತೆಯು; ಎಂಬ ಶೌನಕಮುನಿಯ ವಾಕ್ಯವನ್ನಾದರೂ ಅಂಗೀಕರಿಸಿರುವನು. '**ಸಂಹಿತಾ**' ಎಂಬ ಶಬ್ದದ ಅರ್ಥವನ್ನು ವೈಯಾಕರಣರು ಸ್ವಲ್ಪ ಭಿನ್ನವಾಗಿ ಯೋಜಿಸುವರು. ಪಾಣಿನಿಯು (೧-೪-೧೦೯) ಅಕ್ಷರಗಳ ಇಲ್ಲವೆ ಶಬ್ದಗಳ ಅತಿಸಾಮೀಪ್ಯರೂಪ ಸಂಯೋಗಕ್ಕೆ ಸಂಹಿತೆಯೆಂಬ ಸಂಜ್ಞೆಯನ್ನು ಸೂಚಿಸಿದ್ದಾನೆ. ಪ್ರಕೃತದಲ್ಲಿ ವಿವಕ್ಷಿತವಾದ ಸಂಹಿತೆ ಶಬ್ದಾರ್ಥವನ್ನು ನಾವೀಗ ತೋರಿಸುತ್ತೇವೆ. ಒಂದೇ ವಿಷಯಕ್ಕೆ ಸಂಬಂಧಿಸಿದ ಸರ್ವಪ್ರಕಾರದ ವಾಙ್ಮಯವನ್ನು ಒಕ್ಕಟ್ಟಿಗೆ (ಒಂದು ಕಡೆ) ಕೂಡಿಸಿ ದೊಡ್ಡ ಗ್ರಂಥವನ್ನಾಗಿ ಮಾಡಲ್ಪಟ್ಟುದಕ್ಕೆ 'ಸಂಹಿತಾ' ಎನ್ನುವರು. ಪ್ರತಿಯೊಂದು ಶಾಖೆಯ ಇಂತಹ ಸಂಹಿತಾ ಗ್ರಂಥಗಳು ಪ್ರಸಿದ್ಧವಾಗಿವೆ. **ಶಾಕಲ ಸಂಹಿತೆ, ಬಾಷ್ಕಲ ಸಂಹಿತೆ, ತೈತ್ತಿರೀಯ ಸಂಹಿತೆ, ರೌದ್ರೀ ಸಂಹಿತೆ, ವಾಜಸನೇಯಿ ಸಂಹಿತೆ, ಮೈತ್ರಾಯಣೀ ಸಂಹಿತೆ, ಕಾಠಕ ಸಂಹಿತೆ, ಸಾಮವೇದೀಯರಾಣಾಯಣೀಯ ಸಂಹಿತೆ, ಅಥರ್ವವೇದೀಯ ಪೈಪ್ಪಲಾದ ಸಂಹಿತೆ** ಎಂಬಿವು ಮೊದಲಾದ ಸಂಹಿತಾ ಗ್ರಂಥಗಳು ಉಪಲಬ್ಧವಾಗಿವೆ. ಈ ವಿಧವಾದ ಸಂಹಿತೆಗಳಿಗೆ ಶಾಖೆಗಳ ಇಲ್ಲವೆ ಅವುಗಳ ಸಂಗ್ರಾಹಕರ ಹೆಸರುಗಳಿಡಲ್ಪಟ್ಟಿರುತ್ತವೆ. ತಾಂತ್ರಿಕಶ್ರುತಿಯೆಂದು ಪ್ರಸಿದ್ಧವಾಗಿರುವ ಶೈವಾಗಮವಾಙ್ಮಯವಾದರೂ ಕಾಮಿಕ, ಪಾರಮೇಶ್ವರ ಮೊದಲಾದ ಹೆಸರುಗಳಿಂದ ಬೇರೆಬೇರೆ ಸಂಹಿತಾ ರೂಪವಾಗಿರುವುದು. ಈ ವೈದಿಕ ತಾಂತ್ರಿಕವಾಙ್ಮಯವನ್ನನುಸರಿಸಿರುವ ದೊಡ್ಡದೊಡ್ಡ ಪುರಾಣಗ್ರಂಥಗಳಿಗಾದರೂ ಸಂಹಿತೆಗಳೆನ್ನುವ ಪದ್ಧತಿಯುಂಟು. ಆದ್ದರಿಂದ ಸ್ಕಾಂದ, ಶೈವ, ಲೈಂಗ್ಯಾದಿಪುರಾಣಗಳಿಗೂ ಮಹಾಭಾರತವೆಂಬ ಇತಿಹಾಸಕ್ಕೂ ಸಂಹಿತೆಗಳೆಂದು ಹೇಳುವ ಪರಿಪಾಟಿಯಿದೆ.

ಇದರಿಂದ ಮೊದಲು ವೇದದ ಪದಪಾಠವಿದ್ದಿತೆಂದೂ, ಬಳಿಕ ಸಂಧಿನಿಯಮಾನುಸಾರವಾಗಿ ಶಬ್ದಗಳ ಸಂಧಿರಚನೆಯಾಗಿ ಸಂಹಿತಾ ಪಾಠವಾದುದೆಂದೂ ತಿಳಿಯಬರುತ್ತದೆ. ಸಂಹಿತೆಗಳು ಛಂದೋಬದ್ಧಗಳಾಗಿರುತ್ತವೆ. ಪರಿಶೀಲಿಸಿದರೆ ಪ್ರಾಚೀನತಮ ಆರ್ಯಋಷಿಗಳ ಕಾವ್ಯಮಯ ಸಹಜೋದ್ಗಾರಗಳು ಋಕ್ಸಂಹಿತೆಯಲ್ಲಿಯೇ ಕಂಡು ಬರುತ್ತವೆ. ಆರ್ಯವಂಶೀಯರಾದ ಪ್ರಾಚೀನ ಮನುಷ್ಯರ ಆಚಾರ, ವಿಚಾರ, ಆಹಾರ, ವಿಹಾರ ಮತ್ತು ಆ ಕಾಲದ ಪರಿಸ್ಥಿತಿ ಮುಂತಾದುದಕ್ಕೆ ಸಂಬಂಧಿಸಿದ ಜ್ಞಾನವು ನಮಗೆ ಋಗ್ವೇದದಲ್ಲಿ ಚೆನ್ನಾಗಿ ದೊರೆಯುವುದು.

ಪಾಠಕ್ರಮಾಲೋಚನೆಯ ಭೇದಮೂಲಕ ಸಂಹಿತೆಯು ಎರಡು ವಿಧವಾಗಿ ಪಠಿಸಲ್ಪಡುವುದು. ಮೊದಲನೆಯ ಪದ್ಧತಿಗೆ ನಿರ್ಭುಜವೆಂದೂ ಎರಡನೆಯದಕ್ಕೆ ಪ್ರತೃಣವೆಂದೂ ಹೇಳುತ್ತಾರೆ. ಅವುಗಳಲ್ಲಿ ಮೂಲದ ಅವಿಕಲಪಾಠವುಳ್ಳುದೇ ನಿರ್ಭುಜಸಂಹಿತೆಯು. ಹೇಗೆಂದರೆ, 'ಅಗ್ನಿಮೀಳೆ ಪುರೋಹಿತಮ್' ಎಂಬುದರ ಪಾಠವು 'ಅಗ್ನಿಮೀಳೆ ಪುರೋಹಿತಂ' ಎಂದಿರುವುದು. ಅದರ ಮೂಲವು ವಿಶ್ಲೇಷಣಪದದಿಂದ ಪಠಿಸಲ್ಪಡುವುದಾದರೆ ಅದು ಪ್ರತೃಣಸಂಹಿತೆಯೆನಿಸುವುದು. ಈ ಪ್ರತೃಣಸಂಹಿತೆಯಲ್ಲಿ ಪದಸಂಹಿತೆ, ಕ್ರಮಸಂಹಿತೆ ಮೊದಲಾದ ಭೇದಗಳಿವೆ. ಸಂಧಿ ವಿರಾಮಾದಿಗಳ ವಿಚಾರಕ್ಕಾಸ್ಪದವಾದುದು ಪದಸಂಹಿತೆಯು. ಹೇಗೆಂದರೆ, ಋಕ್ಸಂಹಿತೆಯ 'ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್' ಎಂಬ ಪ್ರಥಮಮಂತ್ರವು ಪದಪಾಠದಲ್ಲಿ—'ಅಗ್ನಿಮ್, ಈಳೆ, ಪುರಃ, ಹಿತಮ್, ಯಜ್ಞಸ್ಯ, ದೇವಮ್, ಋತ್ವಿಜಮ್' ಎಂದು ಪಠಿಸಲ್ಪಡುವುದು. ಅದರ, ಕ್ರಮಸಂಹಿತೆಯ ಪಾಠವು ಸ್ವಲ್ಪವಿಚಿತ್ರವಾಗಿದೆ—'ಅಗ್ನಿಂ ಈಳೆ ಪುರೋಹಿತಂ. ಪುರೋಹಿತಂ ಯಜ್ಞಸ್ಯ, ಯಜ್ಞಸ್ಯದೇವಂ, ದೇವಂ ಋತ್ವಿಜಮ್' ಜಟಾಪಾಠವು ಇದಕ್ಕೂ ವಿಚಿತ್ರವಾಗಿದೆ—'ಅಗ್ನಿಂ ಈಳೆ, ಈಳೆ ಅಗ್ನಿಂ, ಅಗ್ನಿಂ ಈಳೆ; ಈಳೆ ಪುರೋಹಿತಂ, ಪುರೋಹಿತಂ ಈಳೆ, ಈಳೆ ಪುರೋಹಿತಂ; ಪುರೋಹಿತಂ ಯಜ್ಞಸ್ಯ, ಯಜ್ಞಸ್ಯ ಪುರೋಹಿತಂ, ಪುರೋಹಿತಂ ಯಜ್ಞಸ್ಯ; ಯಜ್ಞಸ್ಯ ದೇವಂ, ದೇವಂ ಯಜ್ಞಸ್ಯ, ಯಜ್ಞಸ್ಯ ದೇವಂ; ದೇವಂ ಋತ್ವಿಜಂ, ಋತ್ವಿಜಂ ದೇವಂ, ದೇವಂ ಋತ್ವಿಜಂ;' | ಘನಪಾಠವಾದರೋ ಬಹು ಘನವಾಗಿದೆ—'ಅಗ್ನಿಂ ಈಳೆ ಈಳೆ ಅಗ್ನಿಂ ಅಗ್ನಿಂ ಈಳೆ ಪುರೋಹಿತಂ ಪುರೋಹಿತಂ ಈಳೆ ಅಗ್ನಿಂ ಅಗ್ನಿಂ ಈಳೆ ಪುರೋಹಿತಂ ಈಳೆ ಪುರೋಹಿತಂ ಪುರೋಹಿತಂ ಈಳೆ ಈಳೆ ಪುರೋಹಿತಂ ಯಜ್ಞಸ್ಯ ಯಜ್ಞಸ್ಯ ಪುರೋಹಿತಂ ಈಳೆ ಈಳೆ ಪುರೋಹಿತಂ ಯಜ್ಞಸ್ಯ ಪುರೋಹಿತಂ ಯಜ್ಞಸ್ಯ ಯಜ್ಞಸ್ಯ ಪುರೋಹಿತಂ ಪುರೋಹಿತಂ ಯಜ್ಞಸ್ಯ ದೇವಂ ದೇವಂ ಯಜ್ಞಸ್ಯ ಪುರೋಹಿತಂ ಪುರೋಹಿತಂ ಯಜ್ಞಸ್ಯ ದೇವಂ ಯಜ್ಞಸ್ಯ ದೇವಂ ದೇವಂ ಯಜ್ಞಸ್ಯ ಯಜ್ಞಸ್ಯ ದೇವಂ ಋತ್ವಿಜಂ ಋತ್ವಿಜಂ ದೇವಂ ಯಜ್ಞಸ್ಯ ಯಜ್ಞಸ್ಯ ದೇವಂ ಋತ್ವಿಜಮ್' | ಎಂದಿರುವ ಈ ಆಮ್ರೇಡನವು, ಮೂಲಪಾಠವು ಯಾರಿಂದಲೂ ಬೇರೊಂದು ಅಕ್ಷರವು ಸಹ ಪ್ರಕ್ಷಿಪ್ತವಾಗದಂತೆ ಸನ್ನಿವೇಶ ಶುದ್ಧವಾಗಿರಬೇಕೆಂಬ ಸದುದ್ದೇಶಮೂಲಕವಾಗಿರುವುದು. ಈ ವಿಧವಾದ ಪಾಠಕ್ರಮಗಳಲ್ಲಿ **ಮಾಲಾ, ಶಿಖಾ, ಲೇಖಾ, ಧ್ವಜ, ದಂಡ, ರಥ**ವೆಂಬುದಾಗಿ ಇನ್ನೂ ಕೆಲವಿವೆ. ಬರಹದ ಹಬ್ಬುಗೆಗೆ ಭಯಪಟ್ಟು ನಾವಿಲ್ಲಿ ಅವುಗಳನ್ನು ಉಲ್ಲೇಖಿಸದಿರುವೆವು. ಜಿಜ್ಞಾಸಾ ಬುದ್ಧಿಯುಳ್ಳವರು ವಿಕೃತವಲ್ಲೀ ಮೊದಲಾದ ಗ್ರಂಥಗಳಿಂದರಿತುಕೊಳ್ಳಬಹುದು.

ಈಶ್ವರನಿಂದುಪದಿಷ್ಟವಾದ ವೇದವು ಮೊದಲು ಒಂದೇ ಇದ್ದಿತೆಂದೂ ಅದು ಮುಂದೆ ಬ್ರಹ್ಮನ ನಾಲ್ಕು ಮುಖಗಳಿಂದ ನಾಲ್ಕು ಭಾಗಗಳಾಗಿ ಪ್ರಕಟವಾಯಿತೆಂದೂ ಕೆಲವು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಮತ್ತು, ಬ್ರಹ್ಮನು ಸ್ವಾಯಂಭುವಮನ್ವಂತರದಲ್ಲಿ ಮನುವನ್ನು ಕುರಿತು ಚತುಷ್ಪಾದಾತ್ಮಕವಾದ ಒಂದೇ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡೆಂದು ಆಜ್ಞಾಪಿಸಿದನೆಂಬ ಸಂಗತಿಯು ವಾಯುಪುರಾಣದಲ್ಲಿ (ಅ. ೬೦; ೨—೮) ಪ್ರತಿಪಾದಿಸಲ್ಪಟ್ಟಿದೆ. ವೈವಸ್ವತಮನ್ವಂತರದಲ್ಲಿ ವ್ಯಾಸನು ಮತ್ತೆ ವೇದವನ್ನು ವಿಭಾಗಗೊಳಿಸಿದನೆಂಬರ್ಥಬೋಧಕವಾಕ್ಯಗಳು ಭಾರತ, ಭಾಗವತಗ್ರಂಥಗಳಲ್ಲಿವೆ. ಭಾಗವತದಲ್ಲಾದರೋ ಈ ಬಗ್ಗೆ (೧. ೪; ೧೨. ೬;) ವಿಸ್ತಾರವಾಗಿ ಹೇಳಲ್ಪಟ್ಟಿದೆ. ಮಹೀಧರನು ವಾಜಸನೇಯಿ (ಶುಕ್ಲಯಜು) ಸಂಹಿತೆಯ ಭಾಷ್ಯಾರಂಭದಲ್ಲಿ—'ತತ್ರಾದೌ ಬ್ರಹ್ಮಪರಂಪರಯಾ ಪ್ರಾಪ್ತಂ ವೇದಂ ವೇದವ್ಯಾಸೋ ಮನ್ದಮತೀನ್ ಮನುಷ್ಯಾನ್ವಿಚಿನ್ತ್ಯ ತತ್ಕೃಪಯಾ ಚತುರ್ಧಾ ವ್ಯಸ್ಯ ಋಗ್ಯಜುಃಸಾಮಾಥರ್ವಾಖ್ಯಾಂಶ್ಚತುರೋ ವೇದಾನ್ ಪೈಲವೈಶಮ್ಪಾಯನಜೈಮಿನಿಸುಮನ್ತುಭ್ಯಃ ಕ್ರಮಾದುಪದಿದೇಶ' | ವೇದವ್ಯಾಸನು ಕಾಲಕ್ರಮೇಣ ಜನರು ಮಂದಮತಿಗಳಾಗುತ್ತಿರುವದನ್ನವಲೋಕಿಸಿ, ಬ್ರಹ್ಮಪರಂಪರೆಯಿಂದ ಬಂದ ವೇದವನ್ನು ಆ ಬ್ರಹ್ಮನ ಪ್ರೇರಣೆಯಿಂದೇ ಋಕ್, ಯಜುಸ್ಸು, ಸಾಮ, ಅಥರ್ವವೆಂಬ ಸಂಜ್ಞೆಯುಳ್ಳ ನಾಲ್ಕು ವಿಭಾಗಗಳನ್ನಾಗಿ ಮಾಡಿ, ಅವನ್ನು ಅನುಕ್ರಮವಾಗಿ ಪೈಲ, ವೈಶಂಪಾಯನ, ಜೈಮಿನಿ, ಸುಮನ್ತು ಎಂಬ ಈ ನಾಲ್ಕು ಮಂದಿ ಶಿಷ್ಯರಿಗೆ ಉಪದೇಶಿಸಿದನು; ಎಂದು ಹೇಳಿರುವನು. ಹೀಗೆ, ವೇದವನ್ನು ವಿಭಾಗಗೊಳಿಸಿದುದರಿಂದೇ ಕೃಷ್ಣದ್ವೈಪಾಯನಮುನಿಗೆ 'ವೇದವ್ಯಾಸ'ನೆಂಬ ಹೆಸರುಂಟಾಯಿತು. ಆ ವೇದವ್ಯಾಸನು ಪ್ರಾಚೀನಸಂಹಿತೆಗಳನ್ನೇ ಸುವ್ಯವಸ್ಥಿತವಾಗಿ ಸಂಕಲನಮಾಡಿ ತನ್ನ ನಾಲ್ಕು ಮಂದಿ ಶಿಷ್ಯರಿಗೆ ಬೋಧಿಸಲು, ಮುಂದೆ ಋಕ್ಸಂಹಿತೆಯ ಪ್ರವರ್ತಕನಾದ ಪೈಲನಿಗೆ ಇಬ್ಬರು ಶಿಷ್ಯರಾಗಿ ಆ ವೇದವನ್ನು ಗ್ರಹಿಸಿದರು; ಈ ಶಿಷ್ಯಪರಂಪರೆಯಲ್ಲಿ ಬಾಷ್ಕಲ, ಶಾಕಲರೆಂಬಿಬ್ಬರು ಶಿಷ್ಯರು ಆ ವೇದವನ್ನು ಹೆಚ್ಚಾಗಿ ಹಬ್ಬಿಸಿದರು. ವೈಶಂಪಾಯನನು ವೇದವ್ಯಾಸನಿಂದ ತನಗುಪದಿಷ್ಟವಾದ ಯಜುಃಸಂಹಿತೆಯನ್ನು ತನ್ನ ಅನೇಕ ಶಿಷ್ಯರಿಗೆ ಕಲಿಸಿದನು. ಅವರಲ್ಲಿ ಯಜ್ಞವಲ್ಕ್ಯನೆಂಬವನೂ ಶಿಷ್ಯನಾಗಿದ್ದನು; ಇವನಿಗೂ ವೈಶಂಪಾಯನನಿಗೂ ಕಾರಣಾಂತರದಿಂದ ಪರಸ್ಪರ ವೈಮನಸ್ಯವುಂಟಾಗಲು ಯಾಜ್ಞವಲ್ಕ್ಯನು ತಾನು ಗ್ರಹಿಸಿದ ವೇದವನ್ನು ಕಾರಿ ಹೊರಚೆಲ್ಲಿದನು; ಅದನ್ನು ವೈಶಂಪಾಯನನ ಬೇರೆ ಶಿಷ್ಯರು ತಿತ್ತಿರಿಪಕ್ಷಿಗಳ ರೂಪದಿಂದ ಗ್ರಹಿಸಿದರು. ಅಂದಿನಿಂದ ಆ ಶಿಷ್ಯರಿಗೆ 'ತೈತ್ತಿರೀಯ'ರೆಂಬಭಿಧಾನವುಂಟಾಯ್ತು. ವೈಶಂಪಾಯನನಿಗೋಸ್ಕರ ಕೆಲವು ಶಿಷ್ಯರು ವ್ರತಾಚರಣೆಗಳನ್ನು ಮಾಡತೊಡಗಿದ್ದರಿಂದ ಅವರಿಗೆ ಚರಕಾಧ್ವರ್ಯುಗಳೆಂಬ ನಾಮವುಂಟಾಯಿತು. ಯಾಜ್ಞವಲ್ಕ್ಯನು ಸೂರ್ಯನನ್ನು ಆರಾಧಿಸಿ ಎರಡನೆಯ ಯಜುಃಸಂಹಿತೆಯನ್ನು ದೊರಕಿಸಿದನು. ಅದುವೇ ಶುಕ್ಲಯಜುರ್ವೇದವೆಂದೂ, ವಾಜಸನೇಯಸಂಹಿತೆಯೆಂದೂ ಪ್ರಸಿದ್ಧವಾಗಿದೆ. ಜೈಮಿನಿಯು ವ್ಯಾಸನಿಂದ ಪಡೆದ ಸಾಮವೇದವನ್ನು ತನ್ನ ಮಕ್ಕಳಿಗೂ ಶಿಷ್ಯರಿಗೂ ಕಲಿಸಿದನು; ಇವನ ಶಿಷ್ಯಪರಂಪರೆಯಲ್ಲಿ ಪೌಷ್ಯಂಜಿ ಮೊದಲಾದವರು ಪ್ರಸಿದ್ಧಿಗೆ ಬಂದರು. ಸುಮಂತನು ತನ್ನ ಅಥರ್ವವೇದವನ್ನು ಕಬಂಧನಿಗುಪದೇಶಿಸಿದನು; ಅವನು ತನ್ನ ಇಬ್ಬರು ಶಿಷ್ಯರಿಗೆ ಅವೇದವನ್ನು ಬೋಧಿಸಿದನು. ಅವರಿಬ್ಬರಲ್ಲಿ ವೇದದರ್ಶನೆಂಬಾತನಿಗೆ ನಾಲ್ಕು ಮಂದಿಯೂ ಪಥ್ಯನೆಂಬುವವನಿಗೆ ಮೂರುಮಂದಿಯೂ ಶಿಷ್ಯರಾದರು.

ಋಗ್ವೇದವು:—

ಋಕ್, ಎಂಬ ಶಬ್ದದಿಂದ 'ಕಾಂತಿಯು' ಮೊದಲಾದ ಅರ್ಥಗಳು ಅರಿಯಲ್ಪಡುವವು. ಯಾಸ್ಕನು ಮುಂತಾದವರು 'ಅರ್ಚಯನ್ತಿ ಅನಯಾ ಇತಿ ಋಕ್' ಎಂದು ಹೇಳುವ ಮೇರೆಗೆ ಪ್ರಕೃತದಲ್ಲಿ, ದೇವತೆಗಳ ಸ್ತೋತ್ರರೂಪವಾದ ಮಂತ್ರಕ್ಕೆ '**ಋಕ್**' ಎಂಬ ಸಂಜ್ಞೆಯುಂಟು. ಅದುಕಾರಣವೇ, ಋಕ್ಕುಗಳು ಅಂದರೆ ಸ್ತುತಿಗಳು ಎಂಬುದಾಗಿ ಹೇಳುವುದು ಬಳಕೆಯಲ್ಲಿದೆ. ಋಗ್ವೇದಕ್ಕೆ ಕಾತ್ಯಾಯನಪ್ರಣೀತ ಸರ್ವಾನುಕ್ರಮಣಿಯೂ, ಶೌನಕಪ್ರಣೀತ ಅನುವಾಕಾನುಕ್ರಮಣಿಯೂ ಇರುವವು. ಅವುಗಳಿಗೆ ವೃತ್ತಿರೂಪ ಟೀಕೆಗಳೂ ಇವೆ; ಆ ಟೀಕೆಗಳ ಕೊನೆಯಲ್ಲಿ ಟೀಕಾಕಾರನು ತನ್ನ ಹೆಸರನ್ನು ಷಡ್ಗುರುಶಿಷ್ಯನೆಂದು ತಿಳಿಸುವನು. ಆತನ ಆರು ಮಂದಿ ಗುರುಗಳು (೧) ವಿನಾಯಕ, (೨) ತ್ರಿಶೂಲಾಂಕ, (೩) ಗೋವಿಂದ, (೪) ಸೂರ್ಯ, (೫) ವ್ಯಾಸ, (೬) **ಶಿವಯೋಗಿ** ಎಂಬುದಾಗಿ ಹೇಳಲ್ಪಡುವರು. ಆ ಸರ್ವಾನುಕ್ರಮಣಿಯ ವೃತ್ತಿಯಲ್ಲಿ '**ಋಗಂತಬಾಹುಲ್ಯಾದೃಗ್ವೇದಃ**' ಎಂದು ಹೇಳಲ್ಪಡುವ ಮೇರೆಗೆ, ಮೊದಲನೆಯ ಸಂಹಿತೆಯ ಮಂತ್ರಗಳಲ್ಲಿ ದೇವತಾಸ್ತೋತ್ರರೂಪವಾದುವೇ ವಿಶೇಷವಾಗಿರುವುದರಿಂದ 'ಋಗಂತವು' ಅಧಿಕವಾಗುಳ್ಳದ್ದು 'ಋಗ್ವೇದ' ವೆನಿಸುವುದು.

ಈ ಋಗ್ವೇದ ಶಾಖೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಚರಣವ್ಯೂಹದಲ್ಲಿ ಋಗ್ವೇದ ಶಾಖೆಗಳು ೫; ಯಜುರ್ವೇದ ಶಾಖೆಗಳು ೮೬; ಸಾಮವೇದ ಶಾಖೆಗಳು ೧೦೦೦; ಅಥರ್ವವೇದ ಶಾಖೆಗಳು ೯; ಎಂದು ಹೇಳಲ್ಪಟ್ಟಿವೆ. ಶೌನಕೀಯ ಋಕ್ಪ್ರಾತಿಶಾಖ್ಯದಲ್ಲಿ—ಶಾಕಲ, ಬಾಷ್ಕಲ, ಆಶ್ವಲಾಯನ, ಸಾಂಖ್ಯಾಯನ, ಮಾಂಡೂಕವೆಂಬಿವು ಮುಖ್ಯಶಾಖೆಗಳೆಂದೂ ಐತರೇಯ, ಕೌಷೀತಕಿ, ಶೈಶಿರ, ಪೈಂಗಾದಿಗಳು ಉಪಶಾಖೆಗಳೆಂದೂ ಪ್ರತಿಪಾದಿಸಲ್ಪಟ್ಟಿದೆ. ಪಾತಂಜಲಮಹಾಭಾಷ್ಯದಲ್ಲಿ, ಶಬ್ದಪ್ರಯೋಗದ ವಿಸ್ತಾರವನ್ನು ತೋರಿಸುವುದಕ್ಕಾಗಿ—'**ಚತ್ವಾರೋ, ವೇದಾಃ ಸಾಙ್ಗಾಃ ಸರಹಸ್ಯಾ ಬಹುಧಾ ಭಿನ್ನಾಃ, ಏಕವಿಂಶತಿಧಾ ಬಾಹ್ವೃಚ್ಯಂ ಏಕಶತಮಧ್ವರ್ಯುಶಾಖಾಃ | ಸಹಸ್ರವರ್ತ್ಮಾ ಸಾಮವೇದಃ | ನವಧಾಽಥರ್ವಣೋ ವೇದಃ**' ಋಗ್ವೇದ ಶಾಖೆಗಳು ೨೧, ಯಜುರ್ವೇದ ಶಾಖೆಗಳು ೧೦೦, ಸಾಮವೇದ ಶಾಖೆಗಳು ೧೦೦೦, ಅಥರ್ವವೇದ ಶಾಖೆಗಳು ೯ ಎಂದು ನಿರ್ದೇಶಿಸಲ್ಪಟ್ಟಿವೆ. ಈ ಮಹಾಭಾಷ್ಯವಚನಾನುಸಾರವಾಗಿ ವೈದಿಕಶಾಖೆಗಳ ಸಂಖ್ಯೆಯು ಒಂದುಸಾವಿರದಮೇಲೆ ಒಂದು ನೂರು ಮೂವತ್ತು (೨೧+೧೦೦+೧೦೦೦+೯=೧೧೩೦) ಆಗುವುದು. ಆದರೆ ಇಷ್ಟೆಲ್ಲ ಶಾಖೆಗಳು ಈಗೆಲ್ಲಿವೆ? ಕಾಲಪ್ರವಾಹದಲ್ಲಿ ಅಡಗಿವೆ! ಅಧ್ಯಯನ ಸಂಪ್ರದಾಯ ಪ್ರವರ್ತಕರಾದ ಶಾಕಲಾದ್ಯಾಚಾರ್ಯರ ಪ್ರವಚನ ಭೇದವು ಶಾಖಾಭೇದ ವ್ಯವಹಾರಕಾರಣವಾಗಿರುವುದರಿಂದ—

ಶಾಂಖಾಶ್ವಲಾಯನಾ ಶ್ಚೈವ ಮಾಂಡೂಕೋ ಬಾಷ್ಕಲಸ್ತಥಾ |
ಬಹ್ವೃಚಾ ಋಷಯಃ ಸರ್ವೇ ಪಂಚೈತೇ ಏಕವೇದಿನಃ ||

ಎಂಬ ವಾಕ್ಯವು ಪ್ರಚಾರದಲ್ಲಿರುವುದು. ಆದರೆ ಈಗ ಋಗ್ವೇದದ ಶಾಕಲ ಶಾಖೆಯು ಶಾಕಲ ಸಂಹಿತೆಯೊಂದೇ ಸರ್ವತ್ರ ಪ್ರಸಿದ್ಧವಾಗಿದೆ. ಈಚೆಗೆ ಬಾಷ್ಕಲ ಸಂಹಿತೆಯೂ ಉಪಲಬ್ಧವಾಯಿತೆಂದೆಂಬ ಸುವಾರ್ತೆಯು ಕೇಳಿಕೆಯಲ್ಲಿದೆ. ಎಷ್ಟು ಶಾಖೆಗಳೋ ಅಷ್ಟೇ ಸಂಹಿತೆಗಳೂ ಬ್ರಾಹ್ಮಣಗಳೂ ಆರಣ್ಯಕಗಳೂ ಉಪನಿಷತ್ತುಗಳೂ, ಶ್ರೌತಸೂತ್ರಗಳೂ ಗೃಹ್ಯಸೂತ್ರಗಳೂ, ಇರಬೇಕೆಂಬುದು ಸಿದ್ಧಾಂತವು. ಆ ಆ ಶಾಖಾನುಯಾಯಿಗಳು ತಮ್ಮ ತಮ್ಮ ಸಂಹಿತೆಗಳನ್ನು ಅಧ್ಯಯನಮಾಡಿ ತಮ್ಮ ವಿಶಿಷ್ಟ ಶ್ರೌತಸೂತ್ರದಿಂದ ಶ್ರೌತಕಾರ್ಯವನ್ನೂ ಗೃಹ್ಯಸೂತ್ರದಿಂದ ಗೃಹ್ಯಸಂಸ್ಕಾರಗಳನ್ನೂ ನೆರವೇರಿಸಬೇಕಾದುದು ನ್ಯಾಯವು. ಚರಣವ್ಯೂಹಾದಿ ಗ್ರಂಥಗಳಲ್ಲಿ ಬ್ರಾಹ್ಮಣದ ಶಾಖೆಗಳೂ ಸೂತ್ರಗಳೂ ಇನ್ನಾರಕ್ಕೆ

ಟ್ಟಿರುವುದಾಗಿ ಹೇಳಿದೆ. ಆದರೆ ಅವುಗಳ ಪ್ರತಿಯೊಂದು ಶಾಖೆ ೂ ಸೂತ್ರಗ್ರಂಥವೂ ಉಪಲಬ್ಧವಿಲ್ಲವಾದರೂ ಕೆಲಕೆಲವು ಖೆಗಳ ಅನುಯಾಯಿಗಳು ಈಗಲೂ ದೃಷ್ಟಿಗೋಚರವಾಗುತ್ತಿ ವರು. ಯಾವ ಯಾವ ಕಾಲದಲ್ಲಿ ಯಾವ ಯಾವ ದೇಶದಲ್ಲಿ ಾವ ಯಾವ ಶಾಖೆಗಳೂ ಸೂತ್ರಗಳೂ ಪ್ರಚಾರದಲ್ಲಿದ್ದುವೆಂಬು ಸರಿಯಾಗಿ ತಿಳಿಯಬೇಕಾದರೆ ವೈದಿಕವಾಙ್ಮಯೇತಿ ಾಸದ ಸಹಾಯವು ಅವಶ್ಯವಾದುದು.

ಭಗವದ್ಗೀತೆಯಲ್ಲಿ (೧೦-೨೬) ನಾರದನು 'ದೇವರ್ಷಿ' ದು ಉಲ್ಲೇಖಿಸಲ್ಪಟ್ಟಿದ್ದಾನೆ. ಸಾಮವೇದಕ್ಕೆ ಸಂಬಂಧಿಸಿದ ಂದೋಗ್ಯೋಪನಿಷತ್ತಿನ ಏಳನೆಯ ಅಧ್ಯಾಯದಲ್ಲಿ ಸನತ್ಕು ಾರ ನಾರದರ ಸಂವಾದವಿದೆ. ಸನತ್ಕುಮಾರನು ನಾರದನಿಗೆ ಹ್ಮೋಪದೇಶವನ್ನು ಮಾಡಿರುವನು. ಸನತ್ಕುಮಾರಋಷಿಯು ರಾಣಗ್ರಂಥಗಳಲ್ಲಿಯಾದರೋ ಪ್ರಸಿದ್ಧನಾಗಿರುವನು. ಆದರೆ ದಿಕವಾಙ್ಮಯದಲ್ಲಿಯು ಸಹ ಅವನ ಹೆಸರು ಕಂಡುಬರುವುದು. ತ್ತು, ಆ ಸನತ್ಕುಮಾರಋಷಿಗೆ ಸ್ಕಂದ (ಕುಮಾರ) ನೆಂಬ ಸರೂ ಇದ್ದಿತೆಂಬುದು ಮೇಲೆ ನಿರ್ದಿಷ್ಟವಾದ ಉಪನಿಷತ್ತಿನ ನೆಯ ಅಧ್ಯಾಯದ '**ತಂ ಸ್ಕಂದಮಿತ್ಯಾಚಕ್ಷತೆ**' ಬ ಸಮಾಪ್ತಿವಾಕ್ಯದಿಂದ ಅರಿಯಲ್ಪಡುವುದು. ಹೀಗೆ ವೇದ ಲೀನವಾದ ಕೆಲವು ಋಷಿಗಳಿಗೆ ಎರಡೆರಡು ಹೆಸರುಗಳಿದ್ದು ನ್ನು ನಾವು ವೈದಿಕಸಾಹಿತ್ಯದಲ್ಲಿ ವಿಶೇಷವಾಗಿ ಕಂಡುಕೊಳ್ಳ ಬಹುದು. ಎರಡು ಹೆಸರುಗಳಲ್ಲಿ ಒಂದು ವ್ಯಕ್ತಿನಾಮವೂ ತ್ತೊಂದು ವಂಶನಾಮವೂ ಆಗಿರುವವು. ಈ ಮೇರೆಗೆ, ದೇವ ಯಾದ ಸನತ್ಕುಮಾರನಿಗಾದರೂ ಎರಡು ಹೆಸರುಗಳು ಪ್ರಸಿದ್ಧ ಗಿದ್ದುವು. ಅವುಗಳಲ್ಲಿ ಸನತ್ಕುಮಾರನೆಂಬ ಹೆಸರು ವ್ಯಕ್ತಿ ಚಕವೂ 'ಸ್ಕಂದ' ನೆಂಬಭಿಧಾನವು ವಂಶವಾಚಕವೂ ಆಗಿದ್ದು ಂದೇ ಈ ಮೇಲೆ ಹೇಳಲ್ಪಟ್ಟಿರುವಂತೆ ವೈದಿಕವಾಙ್ಮಯದಲ್ಲಿ ನತ್ಕುಮಾರನು '**ಸ್ಕಂದ**' ನೆಂಬ ವಂಶನಾಮದಿಂದಲೂ ವರ್ಣಿ ಲ್ಪಡುವನು.

'**ಸಂಖ್ಯಾ ವಂಶ್ಯೇನ**' (೨—೧—೧೯) ಎಂಬ ಪಾಣಿ ಯಸೂತ್ರದಲ್ಲಿರುವ ವಂಶಶಬ್ದದ ವ್ಯಾಖ್ಯೆಯನ್ನು ಮಾಡುವಾಗ ದ್ವಾಂಸರು '**ವಂಶೋ ದ್ವಿಧಾ ವಿದ್ಯಯಾ ಜನ್ಮನಾ**' ಎಂದು ಬರೆದು ವಿದ್ಯಾವಂಶವನ್ನೊಪ್ಪಿರುವರು. ಈಗಲೂ ದಿಕರೆನಿಸುವವರಲ್ಲಿಯಾದರೋ ಅನೇಕ ವಿಹಿತಾಚಾರಪ್ರಸಂಗ ಲ್ಲಿ ಇಂತಹ ಗೋತ್ರದವನೂ ಇಂತಹದೊಂದು ಶಾಖೆಯ ಾಗೂ ಸೂತ್ರದ ಅಧ್ಯಯನ ಮಾಡತಕ್ಕವನೂ ಎಂದು ನಿರ್ದೇಶಿಸ ುವುದು ವಿದ್ಯಾವಂಶದ ಮತ್ತು ಜನ್ಮವಂಶದ ಗಮಕವಾಗಿದೆ. ವಿಚಾರಪರತೆಯಿಂದ ಯೋಚಿಸಿದರೆ ಸನತ್ಕುಮಾರನಿಗೆ ಸ್ಕಂದ' ನೆಂಬ ಹೆಸರು ವಿದ್ಯಾವಂಶವನ್ನುಲಕ್ಷಿಸಿರುವುದೆಂದು ಹೇಳಲಭ್ಯಂತರವಿಲ್ಲ.

ಪ್ರಾಚೀನಗುರುಗಳೆನಿಸುವ ಸ್ಕಂದ, ನಂದಿ, ಭೃಂಗಿ ಮೊದ ಾದವರು ಸನತ್ಕುಮಾರಾದಿ ದೇವರ್ಷಿಗಳಿಗೆ ಬ್ರಹ್ಮವಿದ್ಯೋಪ ೇಶಕರಾಗಿರುವರೆಂಬ ಸಂಗತಿಯಾದರೋ ವೈದಿಕವಾಙ್ಮಯದಲ್ಲಿ ೂ ಪುರಾಣಗ್ರಂಥಗಳಲ್ಲಿಯೂ ಪ್ರಸಿದ್ಧವಾಗಿರುವುದು. ದೇವ ಗಳಿಗೆ ಹಿರಿಯರಾದ ಆ ಸ್ಕಂದ, ನಂದಿ, ಭೃಂಗಿ ಮೊದಲಾದ ರು ಆ ಆ ವೇದಶಾಖೆಗಳ ಪ್ರವರ್ತಕರಿದ್ದರೆಂದೂ ತಿಳಿಯಬರು ದೆ; ಅದುಕಾರಣವೇ ಅವರ ಶಿಷ್ಯರೆನಿಸುವ ಬೇರೆ ಬೇರೆ ಶಾಖಾ ವರ್ತಕರಾದ ಸನತ್ಕುಮಾರಾದಿಗಳು ಮಂತ್ರದ್ರಷ್ಟರೆನಿಸಿಕೊಳ್ಳು ರೆ. ಈ ಮಾತಿನ ಸತ್ಯತೆಯು ಛಾಂದೋಗ್ಯದಲ್ಲಿ ಅದರ ಪ್ರವ ಕಾರನು ಉಲ್ಲೇಖಿಸಿರುವ ಪ್ರಾಚೀನಮಂತ್ರಗಳನ್ನು ಪರಾ ಶೀಸಿದರೆ ಮನವರಿಕೆಯಾಗದಿರದು.

(ಸಶೇಷ).

ಚೌಡದಾನಪುರದ ವಿರೂಪಾಕ್ಷ ಒಡೆಯರ ಚೀರಾಟ.

ಮೇಲ್ಕಂಡ ಮಹಾಶಯರು ಶರಣಕರ್ನಾಟಕದ ೨ನೆಯ ರೀಖಿನ ಸಂಚಿಕೆಯಲ್ಲಿ ಒಂದು ಲೇಖವನ್ನು ಬರೆದು ಪಂಚಾ ಾಚಾರ್ಯರ ಬಗ್ಗೆ ಯದ್ವಾತದ್ವಾ ಚೀರಾಡಿದ್ದಾರೆ. ಈ ತರ ದ ಗುರುನಿಂದಾಸ್ಪದವಾದ ಅಮಂಗಲ ಬರವಣಿಗೆಯಿಂದ ಇವರಿಗೆ ವ ಪುರುಷಾರ್ಥವು ಬರುವದೋ ತಿಳಿಯದಾಗಿದೆ. ರಾಜೀ ನಾಮೆ ಪ್ರಕರಣದಿಂದ ಇವರು ತಣ್ಣಗಾಗಿರಬಹುದೆಂದು ಎಲ್ಲ ರೂ ಭಾವಿಸಿದ್ದರು. ಆದರೆ ಕಲಿತ ಚಾಳಿಯು ಕಲ್ಲು ಹಾಕಿದರೂ ೋಗದೆಂಬ ಗಾದೆಯ ಮಾತಿನಂತೆ ಅದು ಎಂದಾದರೂ ಹೋ ತೀತೇ? ಇವರು ಇಂದೋರದಲ್ಲಿ ಆಚರಿಸುವ ಪುರಾಣವು ಭಾರಿ ಅದೆ. ದನ್ನು ಸಮಯಬಂದರೆ ಪ್ರಸ್ತಾಪಿಸೋಣ! ಗುರುವರ್ಗದವರಲ್ಲಿ ದಸ್ತ ಕಲಹವು ಬೇಕಾಗಿಲ್ಲವೆಂದು ಸುಮ್ಮನಿದ್ದಂತೆ ಇವರು ಟ್ಟಕ್ಕೆ ಏರ ಹತ್ತಿದ್ದಾರೆ. ಅದನ್ನು ಇಳಿಸದೆ ಗತ್ಯಂತರವಿಲ್ಲದಾ ದೆ. ಪಂಚಾಚಾರ್ಯರೆಂಬುದೇ ಸುಳ್ಳಂತೆ! ದೇವರಿಲ್ಲೆನ್ನುವ ನಾಸ್ತಿಕರ ಜತೆಗೆ ಗುರುಗಳಿಲ್ಲವೆನ್ನುವ ಇವರೊಬ್ಬರು ಸೇರಿದಂ ತಾಯಿತು. ಪಂಚಾಚಾರ್ಯರು ಸುಳ್ಳಾದರೆ ಅದರ ಹಿಂದೆಯೇ ವರು ಹುಟ್ಟಿದಪ್ಪನವರೆನ್ನುವುದು ಸುಳ್ಳಾಗುವುದಿಲ್ಲವೇ? ಇವರ ಕರು ಇವರಿಗೆ ನೀವು ಹುಟ್ಟಿದಪ್ಪನವರಲ್ಲ; ನಾವೂ ನೀವೂ ದೇ ಎಂದು ಹೇಳಿದರೆ ಇವರ ಕಣ್ಣು ಕೆಂಪಾಗಲಿಕ್ಕಿಲ್ಲವೇ? ಈ ಟ್ಟಿದಪ್ಪನವರಿಗೆ ಪಂಚಾಚಾರ್ಯರು ಯಾವಾಗ ಸುಳ್ಳಾದರೋ ವರ ಹಿಂದೆಯೇ ಲಿಂಗವೂ ಸುಳ್ಳಾಗುವದಿಲ್ಲವೇ? ಇವರು ಮೂರ್ತಿಪೂಜಾವೈರಿಗಳಾದ ಆರ್ಯಸಮಾಜದವರಲ್ಲಿ ಓಡಿರುವುದರಿಂದ ಅದನ್ನೂ ಸಹ ತಿರಸ್ಕರಿಸಲಿಚ್ಛಿಸುವರೋ ಏನೋ ಎಂದು ಸಂಶಯವು ಬರುತ್ತದೆ. ಇರಲಿ; ಇವರ ಬರವಣಿಗೆಯು ಒಂದಕ್ಕೊಂದು ಸಂಬಂಧವಿರದೆ ಹುಚ್ಚರ ಬರವಣಿಗೆಯಂತಿದೆ. ಲೇಖದ ಆದಿಯಲ್ಲಿ ಪಂಚಾಚಾರ್ಯರೆಂಬುದು ಸುಳ್ಳು ಎಂದು ಪ್ರಾರಂಭಿಸಿ, "ಬ್ರಾಹ್ಮಣಸ್ಯ ಸಮಾಖ್ಯಾತಂ" ಇತ್ಯಾದಿ ಲಿಂಗಧಾರಣಪರವಾದ ಶ್ಲೋಕಗಳನ್ನು ಬರೆಯುತ್ತಾ ಹೋಗಿದ್ದಾರೆ. ಇವರು ಬರೆದಿರುವ ಶ್ಲೋಕಗಳನ್ನು ಎಲ್ಲರೂ ನೋಡಿದ್ದಾರೆ; ಯಾರೂ ನೋಡಿಲ್ಲವೆಂದು ಹಿಗ್ಗಿ ಹಿಗ್ಗಿ ಬರೆದುಕೊಂಡಿರುವಂತೆ ತೋರುತ್ತದೆ. ಹಾಗಿದ್ದರೆ ಅದು ಭ್ರಾಂತಿಯೇ ಸರಿ! ಈ ಒಡೆಯರ ಬರವಣಿಗೆಯನ್ನು ನೋಡಿದರೆ ಇವರಂಥ ಮಬ್ಬುಜನರೇ ಜಗತ್ತಿನಲ್ಲಿರಲಿಕ್ಕಿಲ್ಲವೆಂದು ತೋರಬರುತ್ತದೆ. ಯಾಕೆಂದರೆ—ಇವರು ವೀರಶೈವಮತದಲ್ಲಿ ಸೂತಕಗಳೇ ಇಲ್ಲವೆಂದು ಬರೆದಿರುತ್ತಾರೆ. ಹೀಗೆ ನುಡಿಯುವವರು ಶೂದ್ರಧರ್ಮವಲ್ಲದೆ ಬೇರೆಯಲ್ಲ. ಈ ಮತದಲ್ಲಿ ಶಿವಪೂಜಾದಿಗಳ ಮಟ್ಟಿಗೆ ಸೂತಕಾದಿಗಳಿರುವದಿಲ್ಲವಲ್ಲದೆ ಉಳಿದ ಕಾಲದಲ್ಲಿ ಉಂಟೆಂದು ಪ್ರಾಚೀನ ಗ್ರಂಥಕಾರರೆಲ್ಲರೂ ಸ್ವೀಕರಿಸಿದ್ದರೂ, ಅದನ್ನು ತಿಳಿದುಕೊಳ್ಳಲು ಬುದ್ಧಿಯು ಸಾಲದೆ ಮನಸ್ಸಿಗೆ ಬಂದಂತೆ ಬರೆದಿರುವದು ಅತ್ಯಂತ ಹೇಯವಾಗಿದೆ. ಈ ಮತದಲ್ಲಿ ಗೋತ್ರಸೂತ್ರಗಳಿಲ್ಲವೆಂದು ಬರೆದಿರುವುದನ್ನು ನೋಡಿದರೆ ಇವರ ಬೆಪ್ಪತನಕ್ಕೆ ಎಣೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಭರತಖಂಡದಲ್ಲಿ ಸೂತ್ರಗೋತ್ರಗಳಿಲ್ಲದವರು ಶೂದ್ರರು ಮತ್ತು ಅಂತ್ಯಜರು ಇರುತ್ತಾರೆ. ಈ ತತ್ವವು ಇವರಿಗೆ ಗೊತ್ತೇ? ವೀರನಂದ್ಯಾದಿ ಪಂಚಗೋತ್ರಗಳು ಶಿವಾಗಮಗಳಲ್ಲುಕ್ತವಾಗಿರುವುದನ್ನು ಈ ಮಹಾಶಯರು ನೋಡಿಲ್ಲವೇ? ನೋಡಿದ್ದರೂ ಅವು ಸುಳ್ಳೆಂದು ಹೇಳಲು ಇವರು ಹಿಂಜರಿಯುವಂತೆ ತೋರಲಿಲ್ಲ. ಇದೇ ರೀತಿಯಾಗಿ ಯದ್ವಾತದ್ವಾ ಹೇಳಿದ್ದರಿಂದ ದೇವಸ್ಥಾನದ ಕೇಸೆಲ್ಲಾ ಹಾಳಾಗಿ ಹೋಯಿತು. ಜಾತಿಯಿಲ್ಲ ಕುಲವಿಲ್ಲವೆಂದು ಇವರು ಹೇಳುವುದಕ್ಕೆ ಬೇರೆ ಕಾರಣವಿರುವದೆಂದು ಇತ್ತೀಚೆಗೆ ತಿಳಿಯಿತು. ಅಲ್ಲ ಸುಮ್ಮನ್ಯಾಕೆ ಈ ಅನಿಷ್ಟಮಾರ್ಗವನ್ನು ಹಿಡಿಯುವದು ಅತ್ಯಂತ ಅಯೋಗ್ಯವಾಗಿದೆ. ಪರಳಿಪ್ರಕರಣದಲ್ಲಿ ಈ ಘನಪಂಡಿತರ ಮಾತು ಕೇಳಿದ್ದರೆ ಇಡೀ ಸಮಾಜಕ್ಕೇನೇ ಹಜಾಮತ್ ಆಗುತ್ತಿತ್ತು. ಧರ್ಮಶಾಸ್ತ್ರದಂತೆಯೂ ರೂಢಿಯಂತೆಯೂ ಅಲ್ಲಿ ವರ್ಣಾಶ್ರಮ ವಿಷಯಗಳನ್ನು ಪ್ರತಿಪಾದಿಸಿದ್ದರಿಂದಲೇ ಈ ಮತಕ್ಕೆ ಗೌರವವು ಬಂದಿತು. ಈ ಪುಣ್ಯಾತ್ಮರಂತೆ ಈ ಮತದಲ್ಲಿ ಜಾತಿಯಿಲ್ಲ, ಕುಲವಿಲ್ಲ, ಗೋತ್ರಗಳಿಲ್ಲ, ಸೂತ್ರಗಳಿಲ್ಲ, ಸೂತಕಗಳಿಲ್ಲ, ಇತ್ಯಾದಿಯಾಗಿ ಪ್ರತಿಪಾದಿಸಿದ್ದರೆ ಈ ಜನಾಂಗದವರನ್ನು ಪರಳಿ ವೈದ್ಯನಾಥನ ದೇವಾಲಯದ ಬಾಗಿಲದ ಬಳಿಗೆ ಬರಗೊಡುವುದೆಂತಿರಲಿ, ದೂರದಲ್ಲಿಯೇ ಕುತ್ತಿಗೆಗೆ ಕೈಕೊಟ್ಟು ನೂಕುತ್ತಿದ್ದರು. ಹೈದರಾಬಾದದಲ್ಲಿ ಹಾನಗಲ್ಲ ಸ್ವಾಮಿಗಳು ಬಂದದ್ದರಿಂದ ಇವರ ಯಾವ ಆಟವೂ ನಡೆಯದಂತಾಗಲು, ಆಗ ಇವರು ಆಚಾರ್ಯಪಕ್ಷದವರ ಬೆನ್ನುಬಿದ್ದರು. ಆಚಾರ್ಯಪಕ್ಷದವರ ಸಾಕ್ಷಿಗಳ ಮೂಲಕ ಜಡ್ಜರವರಿಗೆ ಈ ಮತದ ಶ್ರೇಷ್ಠತ್ವವು ತೋರಿದ್ದರಿಂದ ಅವರು ಸರಿಯಾದ ಜಡ್ಜಮೆಂಟನ್ನು ಬರೆದರು. ಈ ವಿಷಯವೆಲ್ಲಾ ಹೈದರಾಬಾದಿಗೆ ಸ್ವತಃ ಹೋದವರಿಗೆ ಮಾತ್ರ ಗೊತ್ತಿರುವುದಲ್ಲದೆ ಅನ್ಯರಿಗೆ ತಿಳಿಯದು. ಇರಲಿ; ಅನಾದಿಕಾಲದಿಂದ ಪ್ರಚಾರದಲ್ಲಿರುವ ಶಿವಾಗಮೋಕ್ತಗಳಾದ ಸೂತ್ರಗಳ ಹೆಸರುಗಳು ಈ ಮಹಾಮೂರ್ತಿಗಳಿಗೆ ಅಮಂಗಲವಾಗಿರುವವಂತೆ! ಅಮಂಗಲ ಸ್ವಭಾವದವರಿಗೆ ಎಲ್ಲವೂ ಅಮಂಗಲವೇ! ಮಂಗಲಸ್ವಭಾವದವರಿಗೆ ಎಲ್ಲವೂ ಮಂಗಲವೇ! ಶಿವಾಗಮಗಳಲ್ಲಿರತಕ್ಕ ಸೂತ್ರಗಳಿಗೆ ಅಮಂಗಲವೆಂದು ಬರೆಯುವದು ಮಹಾಪಾಪವಲ್ಲವೇ? ಈ ಪುಣ್ಯಾತ್ಮರು ಆರ್ಯಸಮಾಜದಲ್ಲಿ ಓಡಿರುವುದರಿಂದ ದಯಾನಂದನಂತೆ ಆಗಮಗಳಿಗೂ ಪುರಾಣಗಳಿಗೂ ಪ್ರಾಮಾಣ್ಯವನ್ನು ಒಪ್ಪುವಂತೆ ತೋರುವುದಿಲ್ಲ. ಆದುದರಿಂದಲೇ ಹೀಗೆ ಮನಸ್ಸಿಗೆ ಬಂದಂತೆ ಮಿತಿಮೀರಿ ಚೀರಾಡಹತ್ತಿದ್ದಾರೆ. ಒಬ್ಬರು ತೋರಿಸುವ ಗ್ರಂಥಗಳಿಗೆ ಪ್ರಮಾಣವಲ್ಲವೆಂದರೆ ಇವರು ತೋರಿಸುವ ಗ್ರಂಥಗಳಿಗೆ ಮತ್ತೊಬ್ಬರು ಪ್ರಮಾಣವಲ್ಲವೆನ್ನುತ್ತಾರೆ. ಆಕಾಶಕ್ಕೆ ಕತವನ್ನು ಮುಟ್ಟಿಸುವುದು ಶಕ್ಯವೇ? ಗೋತ್ರಸೂತ್ರಗಳನ್ನು ಅಯ್ಯನವರು ಹುಟ್ಟಿಸಿದ್ದಾರೆಂದು ಬೆಪ್ಪತನದಿಂದ ಬರೆದಿರುವ ಈ ಹುಟ್ಟಿದಪ್ಪನವರು ತಾವು ಅಯ್ಯನವರಲ್ಲವೇ? ಅಯ್ಯನವರಲ್ಲವೆಂದರೆ ಭಕ್ತರೇ ಹೇಗೆ? ಅದನ್ನಾದರೂ ಸ್ಪಷ್ಟಪಡಿಸಲಿ. ಇವರ ಬಂಧುಗಳೆಲ್ಲರೂ ಅಯ್ಯನವರ ವಿಷಯಕ್ಕೆ ಎಷ್ಟೋ ಅಭಿಮಾನ ವಹಿಸಿ ಕಾರ್ಯಮಾಡುತ್ತಿರುವಾಗ ಇದೊಂದು ವ್ಯಕ್ತಿಯು ಮಾತ್ರ ಲೋಕವಿರುದ್ಧವಾಗಿ ಹೋಗುತ್ತಿರುವುದನ್ನು ನೋಡಿ ಸೋಜಿಗವೆನಿಸುತ್ತದೆ. ಪಂಚಾಚಾರ್ಯರ ಹೆಸರುಗಳು ಯಾವ ಪ್ರಾಚೀನಗ್ರಂಥಗಳಲ್ಲಿಯೂ ಹೇಳಿಲ್ಲವೆಂದು ಈ ಘನಪಂಡಿತರು ಬರೆದಿರುವುದನ್ನು ನೋಡಿದರೆ, ಆಚಾರ್ಯರ ವಿಷಯದಲ್ಲಿ ಇವರಿಗೆ ಎಷ್ಟು ಅಸೂಯೆಯಿರಬಹುದೆನ್ನುವದು ವೇದ್ಯವಾಗುತ್ತದೆ. ತಮ್ಮ ಮಹಿಮಾಪ್ರಭಾವದಿಂದ ಮಹಾ ಮಹಾ ಮುನಿಗಳನ್ನೂ ಚಕ್ರವರ್ತಿಗಳನ್ನೂ ಶಿಷ್ಯರನ್ನಾಗಿ ಮಾಡಿಕೊಂಡು ಜಗದ್ವಿಖ್ಯಾತ ಪವಿತ್ರ ಚರಿತ್ರರಾಗಿರುವ ಆಚಾರ್ಯರ ಮೇಲೆ ಇಂಥ ಒಂದೆರಡು ಅನಾಮಧೇಯ ವ್ಯಕ್ತಿಗಳು ಅಸೂಯೆ ಪಡುವುದು ಸೂರ್ಯನನ್ನು ನೋಡಿ ಗೂಗೆಯು ಅಸೂಯೆಪಟ್ಟಂತೆಯೇ ಸರಿ! ಇಂಥ ಭಕ್ತಿಹೀನರು ಅಸೂಯೆಪಟ್ಟಾಗೆಲ್ಲಾ ಆ ಮಹನೀಯರ ಪ್ರಭಾವವು ದಿನೇ ದಿನೇ ಜಗತ್ತಿನಲ್ಲಿ ಅಭಿವೃದ್ಧಿಯಾಗುವುದಲ್ಲದೆ. ವೀರಶೈವರಲ್ಲದ ಯಾವುದೋ ಒಂದು ಮೂಲೆಯಲ್ಲಿ ಕೆಲಸವಿಲ್ಲದೆ ಕುಳಿತುಕೊಂಡು ಮನಸ್ಸಿಗೆ ಬಂದಂತೆ ಬರೆದರೆ ಜನರು ಏನಂದಾರೆಂಬ ಭೀತಿಯಾದರೂ ಇವರಿಗೆ ಇದ್ದಂತೆ ತೋರುವುದಿಲ್ಲ. ಇರಲಿ; ಈ ಘನಪಂಡಿತರು ಯಾವ ಯಾವ ಮತಗ್ರಂಥಗಳನ್ನು ನೋಡಿದ್ದಾರೆಯೋ? ಇದು ಯಾರಿಗೂ ತಿಳಿಯದಾಗಿದೆ. ಪಂಚಾಚಾರ್ಯರೆಂಬ ಹೆಸರೇ ಮತಗ್ರಂಥಗಳಲ್ಲಿಲ್ಲವೆಂದು ಬರೆಯಬೇಕಾದರೆ ಇವರ ದಬಾವಣಕ್ಕೆ ಬೇರೆಯೇ? ಹೀಗೆ ಬರೆಯುತ್ತ ಜನರನ್ನು ವಂಚಿಸಿದರೆ ದೇವರು ಶಾಸನಮಾಡಲಿಕ್ಕಿಲ್ಲವೇ? ಹೊರಗೆ ಜನಕ್ಕೆ ಹೆದರದಿದ್ದರೂ ಒಳಗೆ ಅಂತರಾತ್ಮನಿಗಾದರೂ ಹೆದರಬಾರದೇ? ವೀರಾಗಮ-ಸ್ವಯಂಭುವಾಗಮ-ಸುಪ್ರಭೇದಾಗಮ ಮೊದಲಾದ ಶಿವಾಗಮಗಳಲ್ಲಿ ಆಚಾರ್ಯರ ಹೆಸರುಗಳನ್ನು ಈ ಮಹಾಪಂಡಿತರು ನೋಡಿರಲಿಕ್ಕಿಲ್ಲವೇನು? ನೋಡದಿದ್ದರೆ ಮದ್ರಾಸ್ ಓರಿಯಂಟಲ್ ಮೊದಲಾದ ಲೈಬ್ರರಿಗಳಿಂದ ಪುಸ್ತಕಗಳನ್ನು ತರಿಸಿಕೊಂಡು ನೋಡಿ ಭ್ರಾಂತಿಯಿಂದ ದೂರಾಗಬೇಕು. ವೀರಲಿಂಗೋಪನಿಷತ್ತು, ಪಾಶುಪತತಂತ್ರಾದಿಗಳನ್ನು ನೋಡಿಲ್ಲವೇ? ಪ್ರಾಚೀನರಾದ ನಿಜಗುಣ ಶಿವಯೋಗಿಗಳು ವಿವೇಕಚಿಂತಾಮಣಿಯಲ್ಲಿಯೂ, ಶ್ರೀಪತಿ ಪಂಡಿತರು ಶ್ರೀಕರಭಾಷ್ಯದಲ್ಲಿಯೂ, ಶಿವಯೋಗಿಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿಯೂ, ವೀರಣಾರಾಧ್ಯರು ಶಿವಾಧಿಕ್ಯ ಶಿಖಾಮಣಿಯಲ್ಲಿಯೂ, ಷಡಕ್ಷರಕವಿಗಳು ತಾವು ರಚಿಸಿದ ಎಲ್ಲಾ ಗ್ರಂಥಗಳಲ್ಲಿಯೂ ಪಂಚಾಚಾರ್ಯರ ಹೆಸರುಗಳನ್ನು ತೆಗೆದುಕೊಂಡು ಕೊಂಡಾಡಿರುವುದನ್ನು ನೋಡಿಲ್ಲವೇ? ಇದಲ್ಲದೆ ವೀರಶೈವ ಸದಾಚಾರಸಂಗ್ರಹ, ವೇದಾಂತಸಾರವೀರಶೈವಚಿಂತಾಮಣಿ, ವೀರಶೈವ ಧರ್ಮಶಿರೋಮಣಿ, ವೀರಶೈವಾಚಾರ ಕೌಸ್ತುಭ, ದೀಕ್ಷಾವಿಧಿ, ವಿವಾಹವಿಧಿ, ಲಿಂಗಧಾರಣದೀಪಿಕಾ, ಮತಸ್ಥಲ ನಿರ್ಣಯ, ಪದ್ಮರಾಜಪುರಾಣ, ಆರಾಧ್ಯಚರಿತ್ರೆ, ವೀರಶೈವಾದರ್ಶ, ಶಿವತತ್ವರತ್ನಾಕರ, ಮಹಾನಾರಾಯಣೋಪನಿಷದ್ಭಾಷ್ಯ, ತೈತ್ತಿರೀಯೋಪನಿಷದ್ಭಾಷ್ಯ, ಶೈವಪಂಚಕ, ವೀರಶೈವಾಚಾರಪ್ರದೀಪಿಕಾ, ವೀರಶೈವೋತ್ಕರ್ಷಪ್ರದೀಪಿಕಾ ಇವೇ ಮೊದಲಾದ ಸಾವಿರಾರು ವೀರಶೈವ ಮತಗ್ರಂಥಗಳಲ್ಲಿ ಆಚಾರ್ಯರ ಹೆಸರಿರುವದನ್ನು ಈ ಘನಪಂಡಿತರು ನೋಡಿದಂತೆ ಕಾಣಲಿಲ್ಲ. ಈ ಆಚಾರ್ಯರ ಬಗ್ಗೆ ಪ್ರಾಚೀನ ಕವಿಗಳು ಬರೆದ ರೇಣುಕಚರಿತ್ರ, ರೇಣುಕವಿಜಯ, ರೇವಣಸಿದ್ಧೇಶ್ವರಪುರಾಣ, ರೇವಣಸಿದ್ಧೇಶ್ವರಕಾವ್ಯ, ರೇವಣಸಾಂಗತ್ಯ, ರೇವಣಸಿದ್ಧರಗಳೆ, ಮರುಳಸಿದ್ಧ ಚರಿತ್ರ, ಚತುರಾಚಾರ್ಯ ಪುರಾಣ, ಪಂಚಾಚಾರ್ಯಪುರಾಣ ಇತ್ಯಾದಿ ಚರಿತ್ರಗ್ರಂಥಗಳನ್ನು ಇವರು ನೋಡಿಲ್ಲವೇ? ಮೂರ್ತಿಪೂಜಾ ವಿರೋಧಿಗಳಾದ ಆರ್ಯಸಮಾಜದವರಲ್ಲಿ ಅಭ್ಯಾಸ ಮಾಡಿದ ಈ ಮಹಾಪಂಡಿತರ ಕಣ್ಣಿಗೆ ಈ ಅಲ್ಲ ಗ್ರಂಥಗಳು ಕಾಣಿಸಲಿಕ್ಕಿಲ್ಲವಲ್ಲವೇ? ಪಾಪ! ಅಸೂಯೆಯ ಮಬ್ಬಿನ ಅಬ್ಬರದಲ್ಲಿ ಇವು ಹೇಗೆ ಕಾಣಿಸ್ಯಾವು? ಲೋಕವಿಖ್ಯಾತರಾದ ಅನಂತಾನಂತ ಜನ ಪಂಡಿತರು ಆ ಗುರುಚಕ್ರವರ್ತಿಗಳ ಪವಿತ್ರಾಭಿಧಾನವನ್ನು ತಮ್ಮ ತಮ್ಮ ಗ್ರಂಥಗಳಲ್ಲಿ ಮಂಗಲಕ್ಕಾಗಿ ತೆಗೆದುಕೊಂಡಿದ್ದರೂ ಇದನ್ನೆಲ್ಲಾ ಮರೆಮಾಚಿ ಜನರನ್ನು ವಂಚಿಸಲುದ್ಯುಕ್ತವಾಗಿರುವುದು ಮಹಾ ಧೂರ್ತತನವಲ್ಲವೇ? ಆಚಾರ್ಯರಿಗೆ ಅಮಂಗಲ ವಾಕ್ಯಗಳನ್ನು ಪ್ರಯೋಗಿಸಿರುವ ಈ ಒಡೆಯರ ವರ್ತನಕ್ಕೆ ಎಷ್ಟು ಧಿಕ್ಕಾರವನ್ನಿಟ್ಟರೂ ಸ್ವಲ್ಪವೇ ಸರಿ! ಇನ್ನಾದರೂ ಇವರು ತಮ್ಮ ವಕ್ರಮಾರ್ಗವನ್ನು ಬಿಟ್ಟು, ಆಚಾರ್ಯರಲ್ಲಿ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕು. ಹಾಗೆ ಮಾಡದೆ ಆರ್ಯಸಮಾಜದ ಗತ್ತನ್ನೇ ಹಿಡಿದು ಕುಣಿದಾಡ್ಡಿದರೆ, ನಾವಾದರೂ ಸನಾತನ ಧರ್ಮದ ಮುದ್ದಲಿಯನ್ನು ಹಿಡಿದು ಬಾರಿಸಬೇಕಾಗುತ್ತದೆ. ಆದ್ದರಿಂದ ಇವರು ಇಷ್ಟಕ್ಕೇ ಎಚ್ಚತ್ತು ನಮ್ಮ ನಮ್ಮಲ್ಲಿ ಕಲಹ ಬೇಡೆಂದು ತಿಳಿದು ಶಾಂತರಾಗಿರುವುದು ಲೇಸು. ಈ ವಿಷಯವನ್ನು ಇವರು ಶಾಂತಮನಸ್ಸಿನಿಂದ ಯೋಚಿಸಬೇಕು. ಹಾಗೆ ಯೋಚಿಸದೆ ಪುನಃ ಪುನಃ ಪ್ರವೇಶಮಾಡಿದರೆ ಸೇರಿಗೆ ಸವ್ವಾಸೇರು ಅದೆ ಎನ್ನುವುದನ್ನು ಮಾತ್ರ ಮರೆಯಬಾರದು.

ಗುರುಭಕ್ತ ಕಂಠೀರವ.

ಜಯ ಜಗದ್ಗುರುಪಂಚಕ.

ಕಾಕಾಸಾಹೇಬರ ಕಾಪಟ್ಯ.

ದುಷ್ಟಶಕ್ತಿಯೂ, ಕಾಪಟ್ಯವೂ ಬಹುದಿವಸ ಎಂದೂ ಮುಚ್ಚಿರಲಾರವು. ಸತ್ಯಕ್ಕೆ ಜಯವು ಸಿಗಲೇಬೇಕಾಗಿದೆ. ಸಿಗದಿದ್ದರೆ 'ಸತ್ಯಮೇವ ಜಯತೆ' ಎಂಬ ವಾಕ್ಯಕ್ಕೆ ಅಪವಾದ ಬಂದೀತು? ಆದರೂ ದುಷ್ಟರೂ, ಕಪಟಿಗಳೂ ಈಗ ಹೆಚ್ಚಾಗಿದ್ದಾರೆ. ಅವರಿಗೆ ದುಷ್ಟತನ, ಕಪಟತನಗಳೇ ಪರಮಪುರುಷಾರ್ಥಗಳಾಗಿವೆ. ಎಲುವನ್ನು ಕಚ್ಚುವ ಶ್ವಾನಕ್ಕೆ ಆ ಎಲುವೇ ಪರಮಾಮೃತವಾಗಿರುತ್ತದೆ. ಶ್ವಾನವು ಅದನ್ನು ತನ್ನ ಯೋಗ್ಯತೆಗನುಸರಿಸಿ ತಿಳಿಯುವದು ನಿಜವೇ! 'ಕಾಗೆಗೆ ಹಿರಿಯತನ ಕೊಟ್ಟರೆ ಕಟ್ಟೇರಿಯನ್ನೆಲ್ಲ ಹೊಲಸುಮಾಡಿತು' ಎಂಬುವಂತೆ ಕೆಲವು ಕಪಟಿಗಳು ಸಮಾಜವನ್ನೆಲ್ಲ ಹೊಲಸುಮಾಡಹತ್ತಿರುತ್ತಾರೆ. ಅದರೆ ಈವರೆಗೂ ಅವು ಕಾಗೆಗಳಿದ್ದರೂ ಯಾರಿಗೂ ಕಾಗೆಗಳೆಂದು ತಿಳಿಯಲಿಲ್ಲ. ಈಗ ಮಾತ್ರ ಅವುಗಳ ಸಂಪೂರ್ಣ ಜಾತಿ, ಬಣ್ಣ, ನೀತಿಗಳನ್ನು ತಿಳಿದ ಓರ್ವ ಪಂಡಿತಾಗ್ರಣಿಯು ಉದಯವಾದನಂತರ, ಇವು ಕಾಗೆಗಳು ಇವುಗಳ ವರ್ಣವು ಕಪ್ಪು ಇತ್ಯಾದಿ ವಿಷಯಗಳು ತಿಳಿಯಹತ್ತಿದವು. ಮಹನೀಯರೇ? ಕಾಗೆಗಳ ಸ್ವಭಾವವು ನಿಮಗೆ ಗೊತ್ತಿರಬಹುದಲ್ಲವೇ! ಯಾರಾದರೂ ಗಿಡದಡಿಯಲ್ಲಿ ನೆರಳಿಗೆ ಕುಳಿತಿದ್ದರೆ ಅವರ ಮೇಲೆ ಮಲವಿಸರ್ಜನೆಮಾಡುತ್ತವೆ. ಇಂಥ ದುಷ್ಟಸ್ವಭಾವದ ಕಾಗೆಗಳನ್ನು ಮನೆಯಲ್ಲಿ ತಂದು ಮನೆಯ ಯಜಮಾನತ್ವವನ್ನು ಕೊಟ್ಟಮೇಲೆ ಕೇಳುವದೇನು? ಅವುಗಳ ಚೆಲ್ಲಾಟವೇ ಚೆಲ್ಲಾಟ! ಸಾಕಿದ ಯಜಮಾನನನ್ನು ಸಹ ಲೆಕ್ಕಿಸದೆ ನಾನೇ ನಿನ್ನ ಯಜಮಾನನು, ನೀನು ನನ್ನ ಸೇವಕನು, ಎಂದು ಅಮಂಗಲವಾಗಿ

[6ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೩ ನೇ ಜುಲೈ ತಾ|| ೨೪ ನೇ ಸೋಮವಾರ.

ಜ್ಞಾನಕಾಂಡದ ಶ್ರೇಷ್ಠತೆ.

"ನಾವೇದವಿನ್ಮನುತೇ ತಂ ಬೃಹಂತಂ" ಯಾವನು ವೇದವನ್ನು ತಿಳಿಯುವುದಿಲ್ಲವೋ ಅವನಿಗೆ ದೇವರ ಸ್ವರೂಪವು ಗೋಚರವಾಗುವುದಿಲ್ಲವೆಂದು ಶ್ರುತಿಯು ಬೋಧಿಸಿರುವುದರಿಂದ ಮುಮುಕ್ಷುಗಳಾದ ಪುರುಷರು ವೇದೋಕ್ತಕರ್ಮಾನುಷ್ಠಾನವನ್ನು ಮಾಡಬೇಕೆಂದು ಸ್ಪಷ್ಟವಾಗುತ್ತದೆ. ವೇದದಲ್ಲಿ ಕರ್ಮಕಾಂಡವೆಂತಲೂ ಜ್ಞಾನಕಾಂಡವೆಂತಲೂ ಎರಡು ಭಾಗಗಳುಂಟು. ಇವುಗಳಲ್ಲಿ ಕರ್ಮಕಾಂಡವು ಸ್ವರ್ಗಾದಿ ನಶ್ವರ ಫಲಸಾಧನಗಳಾದ ಯಾಗಾದಿ ಕರ್ಮಕಲಾಪವನ್ನು ಬೋಧಿಸುತ್ತದೆ. ಜ್ಞಾನಕಾಂಡವು ಮುಕ್ತಿಸಾಧನವಾದ ಪರಮಾತ್ಮಸ್ವರೂಪವನ್ನು ಬೋಧಿಸುತ್ತದೆ. ವೇದಮತಾನುಯಾಯಿಗಳೆಲ್ಲರೂ ಪೂರ್ವಕಾಂಡ, ಉತ್ತರಕಾಂಡಗಳೆರಡನ್ನೂ ಪ್ರಮಾಣವೆಂದು ಒಪ್ಪಲೇಬೇಕು. ವೇದೋಕ್ತಗಳಾದ ಕರ್ಮಗಳನ್ನು ಯಾರು ಆಚರಿಸುವರೋ ಅವರೇ ವೈದಿಕರೆಂತಲೂ, ಯಾರು ವೇದವಿಧಿಯನ್ನು ಮೀರುವರೋ ಅವರೇ ಅವೈದಿಕರೆಂತಲೂ ಸನಾತನಧರ್ಮಾವಲಂಬಿಗಳಲ್ಲಿ ದೃಢವಾದ ನಂಬಿಕೆಯು ಅನಾದಿಕಾಲದಿಂದ ಬಂದಿರುವುದಲ್ಲದೆ ಅನೇಕ ಪ್ರಮಾಣಗಳೂ ಇದೇ ಅಭಿಪ್ರಾಯವನ್ನು ಪ್ರತಿಪಾದಿಸುತ್ತವೆ

ನಮ್ಮ ಸನಾತನಧರ್ಮಾವಲಂಬಿಗಳಾದ ವೈದಿಕರಲ್ಲಿ ಕೆಲವರು ಆ ವೇದದೊಳಗಿರುವ ಪೂರ್ವಕಾಂಡವನ್ನೇ ಅವಲಂಬಿಸಿ, ಅಲ್ಲಿ ಹೇಳಿದ ಅಸಂಖ್ಯ ಕರ್ಮಗಳೊಳಗೆ ಯಾವುದಾದರೂ ಕೆಲವು ಕರ್ಮಗಳನ್ನು ಮಾತ್ರ ಅನುಷ್ಠಿಸುತ್ತ ಅಷ್ಟರಲ್ಲಿಯೇ ವಿಶ್ರಾಂತರಾಗಿದ್ದಾರೆ. ಇನ್ನು ಕೆಲ ವೈದಿಕರು ಮುಂದಣ ಜ್ಞಾನಕಾಂಡೋಕ್ತಗಳಾದ ಬ್ರಹ್ಮವಿಚಾರದಲ್ಲೂ ತತ್ಸಾಧಕಗಳಾದ ಬ್ರಹ್ಮೋಪಾಸನೆಯಲ್ಲೂ ಆಸಕ್ತರಾಗಿರುತ್ತಾರೆ. ಇನ್ನು ಕೆಲವರು ನಿಷ್ಕಾಮನಾಬುದ್ಧಿಯಿಂದ ಕರ್ಮಕಾಂಡೋಕ್ತಗಳಾದ ಕರ್ಮಗಳನ್ನು ಅನುಷ್ಠಿಸಿ ಬ್ರಹ್ಮಕಾಂಡೋಕ್ತಗಳಾದ ಉಪಾಸನಾಮಾರ್ಗದಲ್ಲೂ ಪ್ರವೇಶಿಸುತ್ತಾರೆ. ಹೀಗೆ ಅವರವರ ಮತಸಿದ್ಧಾಂತಾನುಸಾರವಾಗಿ ಸಕಲ ವೈದಿಕಮತಾನುಯಾಯಿಗಳು ವೇದವೆಂಬ ಮಹಾವೃಕ್ಷವನ್ನವಲಂಬಿಸಿಯೇ ತಮ್ಮ ತಮ್ಮ ಇಚ್ಛಾನುಗುಣವಾದ ಕರ್ಮಬ್ರಹ್ಮೋಪಾಸನೆಗಳನ್ನು ಮಾಡುತ್ತ ಫಲಗಳನ್ನು ಪಡೆಯುತ್ತಿರುವರು. ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಪೂರ್ವಕಾಂಡೋಕ್ತ ಕರ್ಮಗಳಿಗೆಲ್ಲಾ ಪ್ರಾಮಾಣ್ಯವನ್ನು ಅಂಗೀಕರಿಸಿದರೂ ಸ್ವರ್ಗಾದಿಸಾಧನವಾದ ಜ್ಯೋತಿಷ್ಟೋಮಾದಿ ಯಾಗಗಳ ಸ್ವರೂಪವನ್ನು ಪ್ರತಿಪಾದಿಸುವ ಪೂರ್ವಕಾಂಡಕ್ಕಿಂತಲೂ ನಿತ್ಯಸುಖಪ್ರದವಾದ ಬ್ರಹ್ಮಸ್ವರೂಪವನ್ನೂ ಬ್ರಹ್ಮೋಪಾಸನಾಕ್ರಮವನ್ನೂ ಪ್ರತಿಪಾದಿಸುವ ಉತ್ತರಕಾಂಡಕ್ಕೆ ಪ್ರಾಬಲ್ಯವನ್ನು ಹೇಳಿರುತ್ತಾರೆ.

ಕರ್ಮಕಾಂಡೋಕ್ತಕರ್ಮಭ್ಯೋ ವಾಕ್ಯಂ ಪ್ರಾಬಲ್ಯಮೇವ ಹಿ|
ಬ್ರಹ್ಮಕಾಂಡಸ್ಯ ಕಾಚಾಕ್ಷರತ್ನಯೋರಿವ ಯತ್ನತಃ ||
ಅಂಗಾಂಗಿತ್ವಸ್ಯ ಚೋಕ್ತತ್ವಾತ್ ಜ್ಞಾನಪ್ರಾಬಲ್ಯವಾದಕಃ |
ನಕರ್ಮಣಾ ನಪ್ರಜಯಾ ಧನೇನೇತ್ಯಾದಿವಾಕ್ಯಕಃ ||
ಜ್ಞಾನೈಕನಾಶ್ಯತಾ ಪಾಶಸ್ಯೇತ್ಯೇವಂ ಚ ವ್ಯವಸ್ಥಿತೇ |
ನ ಕರ್ಮಕಾಂಡವೈಯರ್ಥ್ಯಂ ಶ್ರುತ್ಯರ್ಥಪ್ರಾಪ್ತಿಪುರಸ್ಸರಂ ||

ಈ ರೀತಿಯಾಗಿ ಕ್ರಿಯಾಸಾರವೆಂಬ ವೀರಶೈವಸಿದ್ಧಾಂತಗ್ರಂಥವು ಆಚಾರ್ಯಭಗವತ್ಪಾದರ ಅಭಿಪ್ರಾಯವನ್ನೇ ಅನುವಾದಮಾಡಿರುತ್ತದೆ. ಅಂದರೆ ಪೂರ್ವಕಾಂಡದಲ್ಲಿ ಹೇಳಲ್ಪಟ್ಟ ಕರ್ಮಗಳೆಲ್ಲವೂ ಅನಿತ್ಯಫಲಪ್ರದವಾದುದರಿಂದ ದುರ್ಬಲವಾದವುಗಳು. ಬ್ರಹ್ಮಕಾಂಡದಲ್ಲಿ ಹೇಳಲ್ಪಟ್ಟ ಕ್ರಮಗಳೆಲ್ಲವೂ ನಿತ್ಯಫಲಪ್ರದವಾದುದರಿಂದ ಪ್ರಬಲವಾದವುಗಳು. ಗಾಜಿನ ಮಣಿಗಳಿಗೂ ರತ್ನಗಳಿಗೂ ಬಹಳ ವ್ಯತ್ಯಾಸವುಂಟು. ಗಾಜಿನ ಮಣಿಗಳು ಅತ್ಯಲ್ಪ ಬೆಲೆಯುಳ್ಳವುಗಳಾಗಿಯೂ, ರತ್ನಗಳು ಬಹಳ ಬೆಲೆಯುಳ್ಳವುಗಳಾಗಿಯೂ ಇರುವುದರಿಂದ ಕರ್ಮಕಾಂಡದಲ್ಲಿ ಹೇಳಿದ ಹಿಂಸಾಪ್ರದವಾದ ಪಶುಕರ್ಮಗಳನ್ನು ಅನುಷ್ಠಿಸಿ ಅಲ್ಪಫಲವನ್ನು ಹೊಂದುವುದಕ್ಕಿಂತಲೂ, ಜ್ಞಾನಕಾಂಡದಲ್ಲಿ ಹೇಳಿದ ಮೋಕ್ಷದಾಯಕಗಳಾದ ಪತಿಕರ್ಮಗಳನ್ನನುಷ್ಠಿಸಿ ಅನಾದಿಕಾಲದಿಂದ ಜೀವಾತ್ಮನೆಂಬ ಪಶುವಿನ ಕೊರಳಿಗೆ ಬಿದ್ದಿರುವ ಅಜ್ಞಾನಪಾಶವನ್ನು ನಾಶಗೊಳಿಸಿ ಮುಕ್ತಿಸೌಖ್ಯವನ್ನು ಹೊಂದುವುದೇ ಉತ್ತಮವೆಂದು ವ್ಯವಸ್ಥೆಗೊಳಿಸಲ್ಪಟ್ಟಿರುತ್ತದೆ. ಇದರಿಂದ ಕರ್ಮಕಾಂಡಕ್ಕಿಂತ ಜ್ಞಾನಕಾಂಡವೇ ಆತ್ಮೋದ್ಧಾರಕ್ಕೆ ಅತ್ಯಂತ ಪ್ರಬಲವಾದ ಸಾಧನವೆಂದು ಹೇಳುವುದೇ ಸಿದ್ಧಾಂತಶಾಸ್ತ್ರದ ಆಶಯವಲ್ಲದೆ ವೇದದೊಳಗಿರುವ ಕರ್ಮಕಾಂಡಕ್ಕೆ ವೈಯರ್ಥ್ಯವನ್ನು ಹೇಳಬೇಕೆಂಬುದಲ್ಲ.

"ಭಿನ್ನರುಚಿರ್ಹಿಲೋಕಃ" ಎಂಬುಕ್ತಿಯಂತೆ ಒಬ್ಬೊಬ್ಬರ ಇಷ್ಟವು ಒಂದೊಂದು ವಿಧವಾಗಿರುತ್ತದೆ. ಕೆಲವರು ಐಹಿಕಸೌಖ್ಯದಲ್ಲಿ ಲೋಲರಾಗಿದ್ದಾರೆ. ಕೆಲವರು ಐಹಿಕಸೌಖ್ಯದೊಂದಿಗೆ ಸ್ವರ್ಗಾದಿಸೌಖ್ಯಾಭಿಲಾಷಿಗಳಾಗಿದ್ದಾರೆ. ಇನ್ನು ಕೆಲವರು ಜಗತ್ಸೃಷ್ಟಿಕರ್ತನಾದ ಪರಮಾತ್ಮನ ಸ್ವರೂಪವನ್ನು ತಿಳಿದು ಘೋರವಾದೀ ಭವಪಾಶವನ್ನು ನಾಶಗೊಳಿಸಲಪೇಕ್ಷೆಯುಳ್ಳವರಾಗಿದ್ದಾರೆ.

ಗೃಹೀತಾರಸ್ತು ಸಾಮರ್ಥ್ಯಾನುಗುಣ್ಯೇನೈವ ಕೇವಲಂ |
ಗೃಹ್ಣಂತಿ ನೈವ ಚಾನ್ಯಸ್ಯ ದೂಷಣಾಯೈವ ಕಲ್ಪ್ಯತೇ ||
ಏವಂ ಸಾಮಾನ್ಯತೋ ವೇದಪ್ರಾಮಾಣ್ಯೇ ಸತಿ ತತ್ಸು ವೈ |
ಸ್ವಾಧಿಕಾರಾನುಸಾರೇಣ ವೈದಿಕೇಷು ಪ್ರವರ್ತತೆ ||

ಈ ರೀತಿಯಾಗಿ ವೀರಶೈವಸಿದ್ಧಾಂತಗ್ರಂಥಗಳಲ್ಲಿ ಹೇಳಿರುವುದರಿಂದ ಯಾರಿಗೆ ಎಷ್ಟೆಷ್ಟು ಕರ್ಮಗಳನ್ನು ಮಾಡಲಿಚ್ಛೆಯಿರುವುದೋ, ಅವರವರ ಸಾಮರ್ಥ್ಯವು ಎಷ್ಟೆಷ್ಟಿರುವುದೋ, ಯಾರಿಗೆ ಯಾವ ಯಾವ ಫಲದಲ್ಲಿ ಪ್ರವೃತ್ತಿಯಿರುವುದೋ, ಯಾರು ತಮ್ಮ ತಮ್ಮ ಮತಸಿದ್ಧಾಂತಕ್ಕೆ ವಿರುದ್ಧವಿಲ್ಲದಂತೆ ವೇದೋಕ್ತಕರ್ಮಗಳಲ್ಲಿ ಅಧಿಕಾರವನ್ನು ಪಡೆದಿರುತ್ತಾರೆಯೋ, ಆಯಾಯ ಮತಾಚಾರ್ಯರ ಅನುಜ್ಞೆಯು ಎಷ್ಟರಮಟ್ಟಿಗೆ ಆಗಿರುವುದೋ, ಅಷ್ಟಷ್ಟುಮಟ್ಟಿಗೆ ಆಯಾಯ ವೈದಿಕಕರ್ಮಾನುಷ್ಠಾನದಲ್ಲಿ ತೊಡಗುವುದು ಸಮಸ್ತ ವೈದಿಕಮತೀಯರ ಕರ್ತವ್ಯವಾಗಿದೆ. ಇದರಿಂದ ವೇದವು ಯಾರಿಗೂ ಅಪ್ರಮಾಣಭೂತವಾದಂತಾಗಲಿಲ್ಲ. ವೇದದಲ್ಲಿರುವ ಆದ್ಯಂತ ಕರ್ಮಾನುಷ್ಠಾನವನ್ನಾಗಲಿ ಆದ್ಯಂತ ಪರಮಾತ್ಮಾನುಷ್ಠಾನವನ್ನಾಗಲಿ ಮಾಡಲು ಯಾರಿಂದಲೂ ಶಕ್ಯವಿಲ್ಲ. ಕ್ರಮವಾಗಿ ವೇದದಲ್ಲಿರುವ ಪೂರ್ವಕಾಂಡೋಕ್ತ ಕರ್ಮಗಳನ್ನೆಲ್ಲಾ ಮಾಡಿಯೇ ಮುಂದೆ ಪ್ರವೇಶಿಸಬೇಕೆಂಬ ನಿಯಮವಿಲ್ಲ. ತಮ್ಮ ತಮ್ಮ ಅಧಿಕಾರಾನುಗುಣವಾಗಿ ವೇದದ ಯಾವ ಭಾಗವನ್ನು ಆಚರಿಸಿದರೂ ವೈದಿಕತ್ವವು ಸಿದ್ಧವೇ ಆಗಿದೆ. ಅಂಥವರಿಗೆ ಯಾವ ಕ್ರಮಭಂಗದೋಷವೂ ಸಂಭವಿಸಲಾರದು.

ಕ್ರಮಸೋಪಾನಮಾರ್ಗೇಷು ತ್ರಯಾಣಾಮಥವಾ ದ್ವಯೋಃ |
ಅತಿಕ್ರಮೇಣ ಚಾರೂಢೇ ಸೋಪಾನೋತ್ಪಾಟನಂ ನಹಿ ||

ಒಂದು ಸರೋವರಕ್ಕಿಳಿದು ಸ್ನಾನಪಾನಾದಿಗಳನ್ನು ಮಾಡುವುದರ ಸೌಕರ್ಯಕ್ಕಾಗಿ ಅನೇಕ ಸೋಪಾನ (ಮೆಟ್ಟಲು) ಗಳು ಏರ್ಪಡಿಸಲ್ಪಟ್ಟಿದ್ದರೂ, ಶಕ್ತಿಯುಳ್ಳ ಪುರುಷನು ಅವುಗಳಲ್ಲಿ ಒಂದೆರಡು ಮೆಟ್ಟಲುಗಳನ್ನು ಬಿಟ್ಟು ಏರುತ್ತಿದ್ದರೂ ಇಳಿಯುತ್ತಿದ್ದರೂ ಅದು ಹೇಗೆ ಸೋಪಾನೋತ್ಪಾಟನವನ್ನು ಮಾಡಿದಂತಾಗುವುದಿಲ್ಲವೋ ಹಾಗೆ ಸಮುದ್ರದಂತೆ ವಿಸ್ತೃತವಾದ ವೇದದಲ್ಲಿ ಅವರವರ ಅಧಿಕಾರಾನುಗುಣವಾಗಿ ಯಾವ ಭಾಗವನ್ನನುಸರಿಸಿದರೂ ವೈದಿಕತ್ವವೆಂಬುದು ಎಲ್ಲರಲ್ಲಿಯೂ ಅಪ್ರತಿಹತವಾಗಿ ವರ್ತಿಸುತ್ತದೆ. ಸನ್ಯಾಸಿಗಳು ಅನುಷ್ಠಿಸುವ ವೇದಭಾಗವನ್ನು ಗೃಹಸ್ಥರು ಅನುಷ್ಠಿಸುವುದಿಲ್ಲ. ಗೃಹಸ್ಥರು ಅನುಷ್ಠಿಸುವ ವೇದಭಾಗವನ್ನು ಸನ್ಯಾಸಿಗಳು ಅನುಷ್ಠಿಸುವುದಿಲ್ಲ. ಹೀಗಿದ್ದರೂ ಇವರೆಲ್ಲರೂ ತಮ್ಮ ತಮ್ಮ ಮತಾನುಸಾರವಾಗಿಯೂ ಆಶ್ರಮಾನುಸಾರವಾಗಿಯೂ ವೇದಮತಾನುಯಾಯಿಗಳೆನಿಸಿಕೊಂಡಿರುತ್ತಾರೆ. ಬ್ರಹ್ಮಕಾಂಡದಲ್ಲಿಯೂ ಸಹ ಕೆಲವರು ಶಿವಾಧಿಕ್ಯಪ್ರತಿಪಾದಕವಾದ ಮಂತ್ರಭಾಗವನ್ನು ಅನುಷ್ಠಿಸುತ್ತಾರೆ. ಕೆಲವರು ವಿಷ್ಣ್ವಾಧಿಕ್ಯಪ್ರತಿಪಾದಕವಾದ ಮಂತ್ರಭಾಗವನ್ನು ಅನುಷ್ಠಿಸುತ್ತಾರೆ. ಅಷ್ಟುಮಾತ್ರದಿಂದ ಯಾರೂ ಅವೈದಿಕರೆನಿಸದೆ ವೈದಿಕರೆನಿಸಿಕೊಂಡೇ ಬಂದಿರುತ್ತಾರೆ. ಇದರಿಂದ ಅವರವರ ಸಿದ್ಧಾಂತಾನುಸಾರವಾಗಿ ವೇದದಲ್ಲಿ ಯಾವ ಭಾಗವನ್ನಾದರೂ ಅನುಸರಿಸಬಹುದಲ್ಲದೆ ವೇದಭಾಗವನ್ನೆಲ್ಲಾ ಅನುಸರಿಸಬೇಕೆಂಬ ನಿಯಮವಿಲ್ಲವೆಂದು ಸ್ಪಷ್ಟವಾಯಿತು. ಪ್ರಕೃತದಲ್ಲಿ ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು "ಅಮೃತಸ್ಯ ದೇವ ಧಾರಣೋ ಭೂಯಾಸಂ" "ಶಿವ ಏಕೋ ಧ್ಯೇಯಃ ಶಿವಂಕರಸ್ಸರ್ವಮನ್ಯತ್ಪರಿತ್ಯಜ್ಯ" ಇತ್ಯಾದಿ ಪ್ರಬಲ ಶ್ರುತಿಗಳ ಆಧಾರದಿಂದ ಶಿವೇತರ ದೇವತಾತ್ಯಾಗಬುದ್ಧಿಯಿಂದ ಶಿವನೊಬ್ಬನಲ್ಲಿಯೇ ಲೋಲಾಡಲೆಂಬುದ್ದೇಶದಿಂದ ಅನಿತ್ಯಫಲದಾಯಕವಾದ ಪಶುಯಾಗಾದಿಗಳನ್ನು ಹೇಳುವ ವೇದವಾಕ್ಯಗಳಿಗೆ ದುರ್ಬಲತ್ವವನ್ನು ಹೇಳಿ ನಿತ್ಯಫಲಪ್ರದವಾದ ಬ್ರಹ್ಮಕಾಂಡಕ್ಕೆ ಪ್ರಾಬಲ್ಯವನ್ನು ಹೇಳಿರುತ್ತಾರೆ. ಈ ಅರ್ಥದಲ್ಲಿ—

ಪೂರ್ವಕಾಂಡಪ್ರಸಿದ್ಧಾನಾಮಗ್ನಿಷ್ಟೋಮಾದಿಕರ್ಮಣಾಂ |
ವೀರಶೈವೀಯಧರ್ಮಾಣಾಂ ಪರಸ್ಪರವಿರೋಧತಃ ||
ಅಗ್ನಿಷ್ಟೋಮಾದಿಮಂತ್ರಾಣಾಮೇವಂ ತದುಪಯೋಗಿನಾಂ |
ಸರ್ವೇಷಾಂ ವೇದಭಾಗಾನಾಂ ವೀರಶೈವೀಯಕರ್ಮಣಿ ||
ಶೇಷಾಣಾಂ ಶಿವಯುಕ್ತಾನಾಮಮೃತಸ್ಯಾದಿರೂಪಿಣಃ |
ಪರಸ್ಪರವಿರೋಧೇನ ಬಹುವೇದಾನುಸಾರತಃ |
ವೀರಶೈವೋಪಯುಕ್ತಾನಾಂ ಮಂತ್ರಾಣಾಮೇವ ವೈಘನಃ ||

ಎಂಬ ಕ್ರಿಯಾಸಾರೋಕ್ತಿಗಳು ಜಾಗರೂಕಗಳಾಗಿರುತ್ತವೆ ಆದುದರಿಂದ ನಶ್ವರಫಲಧಾಯಕಗಳಾದ ಪೂರ್ವಕಾಂಡಕರ್ಮಗಳಿಗಿಂತಲೂ, ಶಾಶ್ವತಫಲದಾಯಕಗಳಾದ ಬ್ರಹ್ಮಕಾಡೋಕ್ತ ಪತಿಕರ್ಮಗಳನ್ನಾಚರಿಸಿ ಮುಕ್ತಾತ್ಮರಾಗುವುದು ಸರ್ವರ ಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ಜೀವನಕ್ಕೋಸ್ಕರ ಕಾಡುಪ್ರದೇಶದಿಂದ ಮುತ್ತುಗದೆಲೆಯ ಪಿಂಡಿಗಳನ್ನು ತಲೆಯ ಮೇಲೆ ತಂದು ಮಾರಿಕೊಳ್ಳುವ ಜನರಿಗೆ ಫಾರೆಸ್ಟ್ ರೇಂಜ್ ಆಫೀಸರುಗಳು ಎಲೆಗಳನ್ನು ಉಚಿತವಾಗಿ ಕೊಡಬೇಕೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ರಾಜಧಾನಿಯ ಮುನಿಸಿಪಲ್ ಆಫೀಸಿನಲ್ಲಿ ಗುಮಾಸ್ತರಾಗಿದ್ದ ಶ್ರೀಕಂಠಯ್ಯ ಎಂಬವರು ಕೆಲವು ದಿವಸಗಳಿಂದಲೂ ಪಾರ್ಶ್ವವಾಯುವಿನಿಂದ ನರಳುತ್ತಿದ್ದು, ಆ ಬಾಧೆಯನ್ನು ತಾಳಲಾರದೆ ಕಳೆದ ಭಾನುವಾರ ದೊಡ್ಡಕೆರೆಯಲ್ಲಿ ಬಿದ್ದು ಆತ್ಮಹತ್ಯಮಾಡಿಕೊಂಡರು.

ಬೆಂಗಳೂರು ನಗರದಲ್ಲಿರುವ ಮೋಟಾರ್ ಟ್ರೇನಿಂಗ್ ಸ್ಕೂಲಿನಲ್ಲಿ ಒಬ್ಬರು ಕುಳಿತುಕೊಳ್ಳಬಹುದಾದಂಥ ಒಂದು ವಿಮಾನವನ್ನು ತಯಾರಿಸಿರುವರು. ಇದು ಅಂತರಿಕ್ಷದಲ್ಲಿ ಹಾರಾಡುವುದಕ್ಕೆ ಯೋಗ್ಯವಾಗಿದೆಯೇ ಎಂಬ ಬಗ್ಗೆ ಪರೀಕ್ಷೆಯು ನಡೆಯುತ್ತಿರುವದು.

ಸಂಬಳಕ್ಕಾಗಿ ನೌಕರಿ ಮಾಡತಕ್ಕವರು ಯಜಮಾನರೊಡನೆ ಕರಾರನ್ನು ಮಾಡಿಕೊಂಡಿದ್ದು, ಸದರಿ ಕರಾರನ್ನು ಉಲ್ಲಂಘಿಸಿ ನಡೆದರೆ ಅಂಥವರನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಕೂಡದೆಂಬ ಬಗ್ಗೆ ಸರಕಾರದವರು ಒಂದು ಹೊಸ ಕಾನೂನನ್ನು ಮಾಡಿ, ಅದು ಬರುವ ಅಕ್ಟೋಬರ್ 1 ನೇ ತಾರೀಖಿನಿಂದ ಜಾರಿಗೆ ಬರತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ.

ಇದೇ ಜುಲೈ 18 ನೇ ತಾರೀಖಿನ ದಿವಸ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ನನ್ನಸಾಬಿ ಎಂಬ ಖೈದಿಯು ಭೋಗಯ್ಯ ಎಂಬ ಮತ್ತೊಬ್ಬ ಖೈದಿಯ ತಲೆಯನ್ನು ಕಲ್ಲಿನಿಂದ ಗಾಯಪಡಿಸಿದನು. ಅಧಿಕಾರಿಗಳು ಅವನನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದರು. ಆದರೆ ಪೆಟ್ಟು ಬಹಳ ಬಲವಾಗಿದ್ದುದರಿಂದ ಭೋಗಯ್ಯನು 19 ನೇ ತಾರೀಖಿನ ಬೆಳಗ್ಗೆ ಆಸ್ಪತ್ರೆಯಲ್ಲಿಯೇ ಮೃತಿಹೊಂದಿದನು. ಪೋಲೀಸರು ತನಿಖೆಮಾಡುತ್ತಿರುವರು.

ಈಗ್ಗೆ ಕೆಲವು ದಿವಸಗಳ ಹಿಂದೆ ತರೀಕೆರೆಯಲ್ಲಿ ಒಂದು ವಿಷಾದಕರವಾದ ರೈಲ್ವೇ ಅನಾಹುತವು ನಡೆಯಿತಷ್ಟೆ! ಈ ಅನಾಹುತದಲ್ಲಿ ಸಿಕ್ಕಿ ನರಳುತ್ತಿದ್ದವರಿಗೆ ಸಹಾಯ ಮಾಡಲು ಅನೇಕಾನೇಕ ಜನರು ಸ್ಟೇಷನ್ನಿಗೆ ಬಂದಿದ್ದರು. ಅದರಂತೆ ತರೀಕೆರೆ ಅಸಿಸ್ಟೆಂಟ್

ಸ್ಟೇಷನ್ ಮಾಸ್ಟರರೂ ಸಹ ಸಂಸಾರ ಸಮೇತರಾಗಿ ತಮ್ಮ ಮನೆಗೆ ಬೀಗಹಾಕಿಕೊಂಡು ಸ್ಟೇಷನ್ ಪ್ಲಾಟ್‌ಫಾರಮ್ಮಿಗೆ ಬಂದಿರಲು, ಯಾರೋ ಕೆಲವು ದುರಾತ್ಮರು ಅದೇ ಸಮಯದಲ್ಲಿ ಅವರ ಮನೆಗೆ ನುಗ್ಗಿ ಸುಮಾರು 300 ರೂ. ಬೆಲೆಬಾಳುವ ಪದಾರ್ಥಗಳನ್ನು ಅಪಹರಿಸಿರುತ್ತಾರೆಂದು ತಿಳಿದು ಬಂದಿದೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಸಾಯಂಕಾಲದ ಹೊತ್ತಿನಲ್ಲಿ, 16-17 ವರ್ಷ ವಯಸ್ಸಿನ ಒಬ್ಬ ಕಪ್ಪು ಹುಡುಗಿಯು ರಾಜಧಾನಿಯ ದೊಡ್ಡಪೇಟೆಯಲ್ಲಿ ಒಬ್ಬರ ಮನೆಗೆ ಬಂದು, ತಾನು ಈಗ ತಾನೇ ಮದರಾಸಿನಿಂದ ಬಂದೆನೆಂದೂ ಬೆಳಗಾದನಂತರ ಯಾವುದಾದರೊಂದು ಬೋರ್ಡಿಂಗಿಗೆ ಸೇರಿಕೊಂಡು ವಿದ್ಯೆಯನ್ನು ಕಲಿಯುವೆನೆಂದೂ, ಆ ರಾತ್ರಿ ಮಲಗುವದಕ್ಕೆ ಸ್ವಲ್ಪ ಸ್ಥಳಕೊಡಬೇಕೆಂದೂ ಕೇಳಿ ಅವರ ಮನೆಯಲ್ಲಿಯೇ ಊಟಮಾಡಿ ಮಲಗಿದ್ದವಳು, ಬೆಳಗಿನ ಝಾವದಲ್ಲಿ ಎದ್ದು ಒಂದು ಹಾರ್ಮೋನಿಯಮ್ಮನ್ನೂ ಕೈಗೆ ಸಿಕ್ಕಿದ ಕೆಲವು ಸಣ್ಣ ಸಣ್ಣ ಸಾಮಾನುಗಳನ್ನೂ ಎತ್ತಿಕೊಂಡು ಪರಾರಿಯಾಗಿರುತ್ತಾಳೆ. ಪೋಲೀಸರು ತನಿಖೆ ಮಾಡುತ್ತಿರುವರು. ಈ ತರಹದ ಮೋಸಗಾರರಿಂದ ಸರ್ವರೂ ಎಚ್ಚರಾಗಿರಬೇಕು.

ಮೈಸೂರು ರಾಜಧಾನಿಯಲ್ಲಿ ಆಸ್ಥಾನ ವಿದ್ವಾನ್ ನ್ಯಾಯತೀರ್ಥ ಜೈನಶಾಸ್ತ್ರವಿಶಾರದ ಎ. ಶಾಂತಿರಾಜ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುವ ವಿವೇಕಾಭ್ಯುದಯವೆಂಬ ಮಾಸಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಕೈವಶವಾಗಿದೆ. ಈ ಪತ್ರಿಕೆಯಲ್ಲಿ ಪತ್ರಿಕೆಯ ಮುಖ್ಯೋದ್ದೇಶವು ಪ್ರತಿಪಾದಿಸಲ್ಪಟ್ಟಿದ್ದು ಅನೇಕ ನೀತಿಬೋಧಕಗಳಾದ ಲೇಖಗಳಿರುತ್ತವೆ. ಅನಾದಿಕಾಲದಿಂದ ನಮ್ಮ ಭಾರತೀಯರ ಹೃದಯದಲ್ಲಿ ನೆಲೆಗೊಂಡಿದ್ದ ಧರ್ಮ ಜಾಗ್ರತಿಯು ಈಗ ಬೀಸುತ್ತಿರುವ ನವನಾಗರಕತೆಯೆಂಬ ವಿಷಮವಾತಾವರಣದಲ್ಲಿ ಲುಪ್ತಪ್ರಾಯವಾಗಿ ಹೋಗಿರುವುದರಿಂದ ಇಂಥ ಸಮಯದಲ್ಲಿ ಇಂತಹ ಧಾರ್ಮಿಕ ಪತ್ರಿಕೆಗಳು ಅತ್ಯವಶ್ಯವಾದುದರಿಂದ ಧರ್ಮಾಭಿಮಾನಿಗಳು ಇದರ ಅಭಿವೃದ್ಧಿಗೆ ಸಹಾಯಕರಾಗಬೇಕಾಗಿ ಕೋರುತ್ತೇವೆ.

ಮೈಸೂರು ಗೆಜೆಟ್.

ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರವರು ಮೈಸೂರು ಸಿಟಿ ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡಿನ ಮೆಂಬರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಸರಕಾರದವರು ಚಾಮರಾಜನಗರ ತಾಲೂಕಿಗೆ ಸೇರಿದ ಕಾಡುಗಳಲ್ಲಿ 5 ವರ್ಷಗಳವರೆಗೆ ಯಾರೂ ಜಿಂಕೆಗಳನ್ನು ಹಿಡಿಯಕೂಡದೆಂದೂ ಅಥವಾ ಶಿಕಾರಿ ಮಾಡಕೂಡದೆಂದೂ ಅಪ್ಪಣೆ ಮಾಡಿರುತ್ತಾರೆ.

ಮೈಸೂರು ಸರ್ಕಾರದ ಜನರಲ್ ಸೆಕ್ರೆಟರಿಗಳಾದ ಮಿ|| ಎಚ್. ವಿ. ರಾಮಸ್ವಾಮಿ ಎಂ.ಎ., ಬಿ. ರವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜೆಯು ಜುಲೈ ತಿಂಗಳ ಅಂತ್ಯದವರೆಗೆ ಹೆಚ್ಚಿಸಲ್ಪಟ್ಟಿದೆ.

ಅಸಿಸ್ಟೆಂಟ್ ಕಂಟ್ರೋಲರಾದ ಮಿ|| ಕೆ. ಗುರುದತ್ತ, ಇವರಿಗೆ ಜುಲೈ 19 ನೇ ತಾರೀಖಿನಿಂದ ತಿಂಗಳ ಪಕ್ಕಿನ ರಜೆಯು ಕೊಡಲ್ಪಟ್ಟಿದೆ. ಈ ಅವಧಿಯಲ್ಲಿ ಕಂಟ್ರೋಲರ್ ಆಫೀಸಿನ ಸೀನಿಯರ್ ಸೂಪರಿಂಟೆಂಡೆಂಟರಾದ ಮಿ|| ಕೆ. ಶ್ರೀನಿವಾಸಮೂರ್ತಿ ರವರು ಅಸಿಸ್ಟೆಂಟ್ ಕಂಟ್ರೋಲರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ರೈಲ್ವೇ ಆಡಿಟರಾದ ಮಿ|| ಎ. ಎಸ್. ವಾಚಾರ್ ಎಂ.ಎ. ಇವರು ಅಫಿಷಿಯೇಟಿಂಗ್ ಫೈನಾನ್ಷಿಯಲ್ ಸೆಕ್ರೆಟರಿಗಳಾಗಿರುವ ಅವಧಿಯಲ್ಲಿ ಅಸಿಸ್ಟೆಂಟ್ ಆಡಿಟರಾಗಿರುವ ಮಿ|| ಎಚ್. ವಿ. ಶ್ರೀಕಂಠಯ್ಯ ಬಿ. ಎ. ಎಲ್‌ಎಲ್. ಬಿ. ಕಾಂ. ರವರು ಆಡಿಟರಾಗಿಯೂ ರೈಲ್ವೇ ಆಡಿಟ್ ಡಿಪಾರ್ಟ್‌ಮೆಂಟಿನ ಸೂಪರಿಂಟೆಂಡೆಂಟರಾಗಿರುವ ಮಿ|| ಟಿ. ಜಿ. ಗಾರವೇಲು ಶೆಟ್ಟರು ಅಸಿಸ್ಟೆಂಟ್ ಆಡಿಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಯೇಸುಕ್ರಿಸ್ತನು ಧರಿಸುತ್ತಿದ್ದ ವಸ್ತ್ರವೊಂದು ಟ್ರೈಯರ್ ನಗರದಲ್ಲಿ ದೊರೆತಿರುವದಂತೆ!

ಮದ್ರಾಸ್ ಸರ್ಕಾರದವರು ಸರಕಾರೀ ನೌಕರರಾರೂ ಅಸ್ಪೃಶ್ಯರ ಚಳವಳಿಯಲ್ಲಿ ಭಾಗ ವಹಿಸಕೂಡದೆಂದೂ, ಅದರಿಂದ ಬಹಳ ತೊಂದರೆಗಳು ಸಂಭವಿಸುವವೆಂದೂ ಎಚ್ಚರಿಕೆ ಕೊಟ್ಟಿರುತ್ತಾರೆ.

ಹಂಗೇರಿ ರಾಜಮನೆತನದ ಕಡೆಯ ರಾಜಕುಮಾರರಾದ ಪ್ರಿನ್ಸ್ ಪೋರ್ಫಿಯಾ ಎಂಬವರು ತುಂಬಾ ಐಶ್ವರ್ಯವಂತರು. ಹಂಗೇರಿ ಮತ್ತು ಆಸ್ಟ್ರಿಯಾ ದೇಶಗಳ ಯುದ್ಧದಲ್ಲಿ ಇವರು ತಮ್ಮ ಐಶ್ವರ್ಯವನ್ನೆಲ್ಲಾ ಕಳೆದುಕೊಂಡರು. ಈಗ ತಿನ್ನುವದಕ್ಕೆ ಏನೂ ಗತಿಯಿಲ್ಲದೆ ಬ್ಯುಡಾಪೆಸ್ಟ್ ನಗರದಲ್ಲಿರುವ ವರ್ಕ್‌ಹೌಸಿನಲ್ಲಿ ತನ್ನನ್ನು ಇಟ್ಟುಕೊಳ್ಳಬೇಕೆಂದು ಅರ್ಜಿಹಾಕಿಕೊಂಡಿರುವರಂತೆ!

ಜಯಪೂರ್ ಮಹಾರಾಜರ ಮುಂದಾಳುತನದಲ್ಲಿ ಇಂಗ್ಲೆಂಡಿನಲ್ಲಿ ಪೋಲೋ ಆಡುವುದಕ್ಕೆ ಹೋಗಿರುವ 'ಇಂಡಿಯನ್ ಪೋಲೋ ಟೀಮಿ'ನವರು ಸರ್ವತೋಮುಖವಾದ ಜಯವನ್ನು ಸಂಪಾದಿಸುತ್ತಿರುವರು. ಆದರೆ ಆ ಟೀಮಿಗಾಗಿ ಜಯಪುರ ಮಹಾರಾಜರು ಅಪಾರದ್ರವ್ಯವನ್ನು ವೆಚ್ಚಮಾಡಿರುವರಂತೆ! ಟೀಮಿನಲ್ಲಿರುವ ಪ್ರತಿಯೊಂದು ಕುದುರೆಯ ಬೆಲೆಯು 15,000 ರೂ. ಗಳೆಂದೂ, ಪ್ರತಿಯೊಂದು ಕುದುರೆಗೂ ಕನಿಷ್ಠಪಕ್ಷ 3 ಜನ ಜವಾನರಿರುವರೆಂದೂ ಲಂಡನ್ ಪತ್ರಿಕೆಗಳು ಪ್ರಕಟಿಸಿರುವವು!

ಉತ್ತರ ಅಮೇರಿಕಾ ದೇಶದಲ್ಲಿರುವ ಲೋಕಪ್ರಸಿದ್ಧವಾದ ನಯಾಗರಾ ಜಲಪಾತದಲ್ಲಿ ಒಬ್ಬ 18 ವರ್ಷದ ಯುವಕನು ಬಿದ್ದು ಸುಮಾರು 2½ ಗಂಟೆಗಳಲ್ಲಿ ಈಚೆಯ ದಡದಿಂದ ಆಚೆಯ ದಡವನ್ನು ಹೋಗಿ ಸೇರಿದನು. ನೀರಿನ ಸೆಳೆತದಿಂದ 2-3 ಸಾರೆ ಕೊಚ್ಚಿಕೊಂಡು ಹೋಗುವಂತಾದರೂ ಆ ಯುವಕನು ಬಹುಸಾಹಸದಿಂದ ದಡವನ್ನು ಸೇರಿದನೆಂದು ತಿಳಿದು ಬಂದಿದೆ. ಇಂಥ ಅಪಾಯಕರವಾದ ಪ್ರಯತ್ನವನ್ನು ಮಾಡಿದುದು ಕಾಯಿದೆಗೆ ವಿರೋಧವೆಂದು ಪೋಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ.

ಲಾಹೋರ್ ಡಿಸ್ಟ್ರಿಕ್ಟ್ ಕೋರ್ಟಿನ ಸಮೀಪದಲ್ಲಿ ಒಂದು ಮಹಮ್ಮದೀಯರ ಪ್ರಾರ್ಥನಾಮಂದಿರದಲ್ಲಿ ಕೆಲವುಜನ ಮಹಮ್ಮದೀಯ ಸ್ತ್ರೀಯರು ಪ್ರಾರ್ಥನೆ ಮಾಡುತ್ತಿದ್ದಾಗ ಅವರಿಗೆ ಒಂದು ಎಳೇಮಗುವು ಅಳುವ ಸ್ವರವು ಕೇಳಿಸಿತು. ಎಲ್ಲರೂ ಆಶ್ಚರ್ಯದಿಂದ ಹುಡುಕಲು, ಪ್ರಾರ್ಥನಾಮಂದಿರದ ಮತ್ತೊಂದು ಕಡೆಯಲ್ಲಿ ಒಂದು ಶಿಶುವು ಅಳುತ್ತಾ ಮಲಗಿತ್ತು. ಅವರು ಕೂಡಲೇ ಪೋಲೀಸರಿಗೆ ವರ್ತಮಾನವನ್ನು ತಿಳುಹಿಸಿದರು. ಪೋಲೀಸರು ಎಷ್ಟು ವಿಚಾರಿಸಿದರೂ ಆ ಮಗುವು ಯಾರದೆಂಬುದು ತಿಳಿಯದಿರಲು ಕಡೆಗೆ ಅದನ್ನು ಮಕ್ಕಳಿಲ್ಲದ ಒಂದು ಸಂಸಾರಕ್ಕೆ ಕೊಟ್ಟುಬಿಟ್ಟರು.

ರಾಯಬರೇಲಿಯ ನಿವಾಸಿಯಾದ ಒಬ್ಬನು ತನ್ನ ಪತ್ನಿಯ ವಿಷಯದಲ್ಲಿ ಅನುಮಾನ ಹೊಂದಿದವನಾಗಿ ಅದನ್ನು ಪರೀಕ್ಷಿಸಲು, ಒಂದು ದಿನ ಪರಸ್ಥಳಕ್ಕೆ ಹೋಗಿ ಬರುವೆನೆಂದು ಹೇಳಿ ಹೊರಟು ಸಮೀಪದಲ್ಲಿಯೇ ಅವಿತುಕೊಂಡಿದ್ದನು. ಸಾಯಂಕಾಲ ಆತನ ಪತ್ನಿಯು ಒಂದು ತೋಟಕ್ಕೆ ಹೋಗಿ ಅಲ್ಲಿ ಮತ್ತೊಬ್ಬ ತರುಣನನ್ನು ಎದುರುಗೊಂಡಳು. ಪತಿಯಾದವನು ಇವರೀರ್ವರ ಪ್ರೇಮದ ಮಾತುಗಳನ್ನು ಮರೆಯಲ್ಲಿ ನಿಂತು ಕೇಳಿ ಕೋಪವನ್ನು ತಡೆಯಲಾರದೆ, ಜೊತೆಯಲ್ಲಿ ತಂದಿದ್ದ ಕೊಡಲಿಯಿಂದ ಇಬ್ಬರ ತಲೆಗಳನ್ನೂ ಕತ್ತರಿಸಿ, ಎರಡು ತಲೆಗಳನ್ನೂ ಹಿಡಿದುಕೊಂಡು ಡಿಸ್ಟ್ರಿಕ್ಟ್ ಜಡ್ಜರ ಬಳಿಗೆ ಹೋಗಿ ತಾನೇ ಪೋಲೀಸರ ವಶವಾದನು.

ಮುಂಬಯಿಯ ಭಾರೀ ಹತ್ತಿ ವ್ಯಾಪಾರಿಗಳಲ್ಲೊಬ್ಬರಾದ ಶಂಕರಲಾಲ್ ಹಿಮತ್‌ಲಾಲ್ ಎಂಬವರು ಕಳೆದ 15 ನೇ ತಾರೀಖು ಬೆಳಗ್ಗೆ 9 ಗಂಟೆಯ ಸಮಯದಲ್ಲಿ ಮನೆಗೆ ಹೋಗುವದಾಗಿ ಹೇಳಿ ಆಫೀಸಿನಿಂದ ಹೊರಟರು. ಆದರೆ ಅವರು ನಿಜವಾಗಿಯೂ ಎಲ್ಲಿಗೆ ಹೋದರೆಂಬುದು ಸಾಯಂಕಾಲದವರೆಗೂ ಯಾರಿಗೂ ತಿಳಿಯಲಿಲ್ಲ. ಸಾಯಂಕಾಲ 5 ಗಂಟೆಯ ಹೊತ್ತಿಗೆ ಕಳ್ಳರು ತನ್ನನ್ನು ಅಪಹರಿಸಿಕೊಂಡು ಹೋಗಿರುವದಾಗಿಯೂ, ಕೂಡಲೇ 5000 ರೂಪಾಯಿಗಳನ್ನು ಕಳುಹಿಸದಿದ್ದರೆ ತನ್ನನ್ನು ಬಿಡುವದಿಲ್ಲವೆಂದೂ ಗುಮಾಸ್ತೆಗೆ ಒಂದು ಕಾಗದವು ಬಂದಿತು. ಗುಮಾಸ್ತನು ವಿಚಾರವನ್ನು ಕೂಡಲೇ ಪೋಲೀಸರಿಗೆ ತಿಳುಹಿಸಿದನು. ಅವರು ವಿಚಾರಿಸುತ್ತಿರುವಷ್ಟರಲ್ಲಿ ಮರುದಿವಸ ಸಾಯಂಕಾಲ ಹಿಮತ್‌ಲಾಲರ ಮೃತಶರೀರವು ಸಮುದ್ರ ತೀರದಲ್ಲಿ ಸಿಕ್ಕಿತು. ಪೋಲೀಸರು ತನಿಖೆ ಮಾಡುತ್ತಿರುವರು.

ಜಬ್ಬಲ್ಪುರ ಡಿಸ್ಟ್ರಿಕ್ಟಿಗೆ ಸೇರಿದ ಬರಿಲಾ ಎಂಬ ಊರಿನ ಸಮೀಪದಲ್ಲಿ ಒಂದು ಮೋಟಾರ್ ಬಸ್ಸು ಹೋಗುತ್ತಿದ್ದಾಗ ಅದರ ಮೇಲ್ಭಾಗದಲ್ಲಿ ಇಟ್ಟಿದ್ದ ಒಂದು ಕರೀ ಪೆಟ್ಟಿಗೆಯಿಂದ 2 ಹಾವುಗಳು ಹೊರಗೆ ಬಂದು ಡ್ರೈವರಿನ ಮೇಲೆ ಬಿದ್ದವು. ಇದರಿಂದ ಡ್ರೈವರನು ಗಾಬರಿಯಾಗಲು, ಬಸ್ಸು ಹತೋಟಿ ತಪ್ಪಿ ಮೊಗಚಿಕೊಂಡಿತು. ಬಸ್ಸಿನಲ್ಲಿದ್ದ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರರವರು ಮೇಲೆ ಇಟ್ಟಿದ್ದ ಪೆಟ್ಟಿಗೆಯನ್ನು ತೆರೆದು ಅದರಲ್ಲಿ ಇನ್ನೂ ಅನೇಕ ಹಾವುಗಳಿದ್ದುದನ್ನು ಕಂಡು ಭೀತಿಯಿಂದ ಹಿಂದಕ್ಕೆ ಸರಿದರು. ಅಷ್ಟರಲ್ಲಿ ಮತ್ತೊಬ್ಬ ಪ್ರಯಾಣಿಕನು ಆ ಪೆಟ್ಟಿಗೆಯು ತನ್ನದೆಂದೂ, ಅದರಲ್ಲಿ 300 ಹಾವುಗಳಿರುವವೆಂದೂ, ಅವುಗಳ ಪೈಕಿ 2 ಹಾವುಗಳು ತಪ್ಪಿಸಿಕೊಂಡು ಹೊರಕ್ಕೆ ಬಂದಿರಬಹುದೆಂದೂ, ತಾನೊಬ್ಬ ಹಾವಾಡಿಗನೆಂದೂ ಹೇಳಿದನು. ಈ ಅನಾಹುತದಲ್ಲಿ ದೈವವಶಾತ್ ಯಾರಿಗೂ ಅಪಾಯವಾಗಲಿಲ್ಲ.

ಗಯಾದ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ದೀಪನಾರಾಯಣಸಿಂಗ್ ಎಂಬವರು ಅಕಸ್ಮಾತ್ತಾಗಿ ಒಬ್ಬ ನಾಯಕಸಾನಿಯಲ್ಲಿ ಮೋಹಿತರಾದರು. ಈ ವಿಷಯವು ಮೇಲಿನ ಅಧಿಕಾರಿಗಳಿಗೆ ತಿಳಿದು ಬರಲು ಅವರು ದೀಪನಾರಾಯಣಸಿಂಗರನ್ನು ಬೇರೆ ಕಡೆಗೆ ವರ್ಗಮಾಡಿದರು. ಆದರೆ ಸಿಂಗರವರು ತಮ್ಮ ಪ್ರೇಯಸಿಯನ್ನು ಬಿಟ್ಟಿರಲಾರದೆ ಅವಳನ್ನೂ ತಮ್ಮ ಜೊತೆಯಲ್ಲೇ ಬರುವಂತೆ ಕರೆದರು. ಆದರೆ ಅವಳು ಅದಕ್ಕೆ ಒಪ್ಪದಿರಲು ಸಿಂಗರವರು ತುಂಬಾ ನಿರಾಶರಾಗಿ ಆತ್ಮಹತ್ಯಮಾಡಿಕೊಂಡರು. ಸಾಯುವ ಮುಂಚೆ ಅವರು ತಮ್ಮ ಪತ್ನಿಗೂ, ಸರ್ಕಾರಕ್ಕೂ, ಜನಸಾಮಾನ್ಯಕ್ಕೂ ಬೇರೆ ಬೇರೆ ಕಾಗದಗಳನ್ನು ಬರೆದಿಟ್ಟಿದ್ದರು. ತಮ್ಮ ಪತ್ನಿಗೆ ಬರೆದಿರುವ ಕಾಗದದಲ್ಲಿ ನಿನಗೆ ಇಷ್ಟಬಂದರೆ ಬೇರೆಯವರನ್ನು ಮದುವೆಮಾಡಿಕೊಳ್ಳಬಹುದೆಂದೂ ಮಗನ ವಿದ್ಯಾಭ್ಯಾಸವನ್ನು ಮಾತ್ರ ಚೆನ್ನಾಗಿ ಮಾಡಿಸಬೇಕೆಂದೂ ಬರೆದಿರುತ್ತಾರೆ. ಜನಸಾಮಾನ್ಯಕ್ಕೆ ಬರೆದಿರುವ ಕಾಗದದಲ್ಲಿ ಯಾರೂ ವಾರನಾರಿಯರ ಕಪಟಮೋಹಕ್ಕೆ ಮರುಳಾಗಬಾರದೆಂದು ಬರೆದಿರುತ್ತಾರೆ.

ಸ್ವೀಕಾರ

ಬಿಜಾಪುರ ಡಿ|| ಜತ್ತಸಂಸ್ಥಾನ ನಿವಾಸಿಗಳಾದ ಮಲ್ಲಪ್ಪ ಸಾತಪ್ಪ ಕೋರಿ ಇವರ ತಾಯಿಯವರ, ಪತ್ನಿಯವರ ಮತ್ತು ಪುತ್ರಿಯ ಪ್ರಕೃತಿಯು ಜಗದಾಚಾರ್ಯರ ಆಶೀರ್ವಾದಬಲದಿಂದ ಸುಧಾರಿಸಿ ಗುಣವಾದ ಸಂತೋಷಕ್ಕಾಗಿ ಬಿಜಾಪುರಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗ ಶಿವಾಚಾರ್ಯ ಪಟ್ಟದಸ್ವಾಮಿಗಳವರ ಅಪ್ಪಣೆಯಮೇರೆಗೆ ಸದರಿಯವರು ಪ್ರಭಾಪೋಷಣಕ್ಕೋಸ್ಕರ **4** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮಿರಜಸಂಸ್ಥಾನಕ್ಕೆ ಸೇರಿದ ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ರಾ|| ಶ್ರೀಮಂತ ಬಾಸಗೌಡರು ಬಹದ್ದೂರ್ ದೇಸಾಯಿ ಇವರು ಪುತ್ರಪೌತ್ರಾದಿ ಸಕಲಸಂಪತ್ತನ್ನನುಭವಿಸಿ 76 ನೆಯ ವಯಸ್ಸಿನಲ್ಲಿ ಶಿವಾಧೀನರಾದ ಸಮಯದಲ್ಲಿ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ಸದರಿ ಗ್ರಾಮದ ಹಿರೇಮಠಾಧ್ಯಕ್ಷರಾದ ವೇ|| ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೆಯ ಪುಟದಿಂದ ಮುಂದುವರಿದುದು.]

ನುಡಿಯುವವು. ಈ ವಿಷಯದಲ್ಲಿ ಒಂದು ಸಣ್ಣ ಕಥೆಯುಂಟು. ಅದೇನೆಂದರೆ—ಒಂದುಊರಲ್ಲಿ ಒಂದು ಗಿಳಿಗೂ, ಕಾಗೆಗೂ, ಗೆಳೆತನ ಬೆಳೆದಿತ್ತು. ಸರಳಸ್ವಭಾವದ ಮತ್ತು ಸರ್ವರಿಗೂ ಪ್ರಿಯವಾದ ಗಿಳಿಯು ಕಾಗೆಯಲ್ಲಿ ವಿಶ್ವಾಸವಿಟ್ಟು ನಡೆಯುತ್ತಿತ್ತು. ಗುಣದಿಂದಲೂ, ಬಣ್ಣದಿಂದಲೂ, ಕಪ್ಪು ಇದ್ದ ಕಾಗೆಯು ಮೇಲೆ ಮೃದುವಿದ್ದಂತೆ ತೋರಿಸಿ, ಒಳಗೆ ತನ್ನ ಕಪಟತನವು ಯಾವಾಗ ಸಾಧಿಸೀತು? ಎಂದು ಚಡಪಡಿಸುತ್ತಿತ್ತು. ಗುಣದಿಂದಲೂ, ವರ್ಣದಿಂದಲೂ ಅತಿಮನೋಹರವಾದ ಶುಕವು ತನ್ನ ಸರ್ವ ಕಾರ್ಯಗಳಿಗೂ ಈ ಕಾಕಾಸಾಹೇಬರನ್ನು ಕರೆಯದೆ ಕಾರ್ಯವನ್ನೇ ಮಾಡುತ್ತಿರಲಿಲ್ಲ. ಈ ಶುಕರಾಜನು ವೈರಾಗ್ಯಶೀಲನಿದ್ದ ಮೂಲಕ ಯಾವ ಪ್ರಾಪಂಚಿಕ ವಿಷಯಗಳಿಗೂ ಲಕ್ಷ್ಯಗೊಡುತ್ತಿದ್ದಿಲ್ಲ. ಆದರೆ ಸರ್ವರೂ ಶುಕರಾಜನನ್ನು ಒಳ್ಳೆ ಪ್ರೀತಿಯಿಂದ ಒಯ್ದು ಪಂಜರದಲ್ಲಿಟ್ಟು ನಾನಾವಿಧವಾದ ಭಕ್ಷ್ಯಗಳನ್ನು ತಿನ್ನಲು ಕೊಡುತ್ತಿದ್ದರು. ಶುಕವು ಅದೊಂದನ್ನೂ ಲೆಕ್ಕಿಸದೆ ತನ್ನ ಆತ್ಮಾನಂದದಲ್ಲಿಯೇ ಇರುತ್ತಿತ್ತು. ಇವರ ಮಿತ್ರತ್ವವನ್ನು ಸ್ವೀಕರಿಸಿದ ಕಾಕಾಸಾಹೇಬರು ಬಹಳೇ ಅಸೂಯೆಪಡಹತ್ತಿದರು. ಜನರು ಶುಕರಾಜನನ್ನು ಪ್ರೀತಿಸಿದಂತೆ ನನ್ನನ್ನೇಕೆ ಪ್ರೀತಿಸುವದಿಲ್ಲವೆಂದು ಹೊಟ್ಟೆಕಿಚ್ಚಿನಿಂದ ಹೊತ್ತುಗಳೆಯ ಹತ್ತಿದರು. ಒಂದುದಿವಸ ಯಾರೂ ಇಲ್ಲದ ಸಮಯದಲ್ಲಿ ಕಾಕಾಸಾಹೇಬರು ಆ ಶುಕರಾಜನ ಸಮೀಪದಲ್ಲಿ ಹೋಗಿ—ಅಯ್ಯಾ, ಶುಕರಾಜಾ? ನಿನಗೂ ನನಗೂ ಮಿತ್ರತ್ವವಿದ್ದು ಬಹು ದಿವಸಗಳಾದರೂ ಮೊದಮೊದಲು ನಿನ್ನ ಪಂಜರದಲ್ಲಿ ನೀನು ತಿಂದನಂತರ ಉಳಿದದ್ದನ್ನು ನನಗೆ ಕೊಡುತ್ತಿದ್ದಿ; ಈಗ ಯಾಕೆ ನನಗೆ ಕೊಡುವದಿಲ್ಲ? ನಿನ್ನಲ್ಲಿ ಭೇದವುಂಟಾಯಿತೇ ಹೇಗೆ? ಎಂದು ಕೇಳಲು, ಶುಕರಾಜನು "ಕಾಕಾಸಾಹೇಬರೇ? ಭೇದಭಾವವೆಂದರೇನು? ಇದು ನನಗೆ ಗೊತ್ತಿಲ್ಲ. ಆದರೆ ಮನೆಯ ಮಾಲಕನು ನನಗೆ ಮೊದಮೊದಲು ತಿನ್ನಲಿಕ್ಕೆ ಹೆಚ್ಚು ಹಾಕುತ್ತಿದ್ದನು. ಆದರೆ ಈಗ ನನಗೆ ಎಷ್ಟು ಬೇಕೋ ಅಷ್ಟೇ ಹಾಕುತ್ತಿರುವನು" ಆದ್ದರಿಂದ ನಿನಗೆ ಉಳಿಯದು ಎಂದು ಹೇಳಿತು. ಆಗ ಕಾಕಾಸಾಹೇಬರು ಒಂದು ಯುಕ್ತಿಯನ್ನು ತೆಗೆದು, ಒಳ್ಳೇದು ಶುಕರಾಜನೇ? ನಿನಗೊಂದು ಯುಕ್ತಿಯನ್ನು ಹೇಳುತ್ತೇನೆ. ಹೊರಗೆಬಾ ಎನಲು, ಶುಕರಾಜನು ಹೊರಗೆ ಬರಲು—ಕಾಕಾಸಾಹೇಬರು ಶುಕರಾಜನನ್ನು ಕೊಂದು ತಾನು ಆ ಪಂಜರದಲ್ಲಿ ಸೇರಬೇಕೆಂದು ಶುಕರಾಜನನ್ನು ಕಲ್ಲಿದ್ದಲಿಯಂತೆ ಥಳಥಳ ಹೊಳೆಯುವ ತನ್ನ ಉದ್ದಾದ ಚುಂಚಿನಿಂದ ಚುಚ್ಚಲುದ್ಯುಕ್ತವಾಯಿತು. ಆಗ್ಗೆ ಮಾಲಕನು [illegible] ಯಿಂದ ಕಾಕಾಸಾಹೇಬರ ಸ್ವಾಗತಮಾಡಿ, ಮು[illegible]ಸಾಧನನ ಕಡೆಗೆ ಇವರ ತಿಕಾರ್ಟ್ ಮಾಡಿ ಕಳುಹಿಸಿದನು. ಅಂತ[illegible]ವು ಬಹು ದಿವಸ ಬಾಳದು. ಇದರಂತೆಯೇ ನಮ್ಮ ವೀರಶೈವ ಸಮಾಜದಲ್ಲಿ ಕಾಕಾಸಾಹೇಬರ ಗುಂಪೊಂದುಂಟು. ಆ ಗುಂಪು ಯಾವದೆಂದು ಹೇಳುವ ಅವಶ್ಯಕತೆಯೇ ಇರುವದಿಲ್ಲ. ಸರ್ವರಿಗೂ ಗೊತ್ತಿದ್ದರೂ ನೊನ್ನೆ ಸೋಲಾಪುರಕ್ಕೆ ಉಜ್ಜಯನಿ ಜಗದ್ಗುರುಗಳವರು ದಯಮಾಡಿಸುವಾಗ್ಗೆ ಈ ಕಾಕಾಸಾಹೇಬರು ಮಾಡಿದ ಕಾಪಟ್ಯದಿಂದಲೇ ಚೆನ್ನಾಗಿ ಗೊತ್ತಾಗಿದೆ. ಎಲೈ ವೀರಶೈವೀಯರೇ? ಈ ಕಾಕಾಸಾಹೇಬರು ಯಾವಾಗ್ಗೆ ಏನು ಮಾಡುವರೋ ತಿಳಿಯದು. ಇವರ ಬಲೆಗೆ [illegible] ಬೀಳಕೂಡದು. ಕಾಕಾಸಾಹೇಬರೇ? ನಿಮ್ಮ ಕಾಪಟ್ಯವನ್ನು ಬಿಟ್ಟುಬಿಡಿರಿ; ಹಿಡಿದರೆ ತಕ್ಕ ಫಲವನ್ನು ಅನುಭವಿಸುವಿರಿ; ಅನುಭವಿಸುತ್ತಿರುವಿರಿ; ಅನುಭವಿಸಬೇಕಾಗುವದು. ಕಾಗೆಯು ಗಿಳಿಯ ಸಮೂಹದಲ್ಲಿ ಕೂಡಬಹುದೇ?

ಓರ್ವ ಕಾಕಾಸಾಹೇಬರ ಪರಿಚಯಸ್ಥ.

'ತತ್ವಜ್ಞ'ನ ತುಂಟತನ.

(ಬರೆದವ—ದೈವಜ್ಞವಿನೋದ)

'ಮಹಾಸಭೆಯವರ ದೋಷಗಳನ್ನು ಮುಚ್ಚಿಕೊಳ್ಳುವದಕ್ಕಾಗಿ 'ತತ್ವಜ್ಞ' ನು 'ನವಕರ್ನಾಟಕ'ದಲ್ಲಿ ಉದಯವಾದದ್ದು ನೋಡಿ ನನಗೆ ಪರಮ ಸಂತೋಷವಾಯಿತು. ಮಹಾಸಭಾದೋಷಗಳ ಒಂದು ದೃಶ್ಯವನ್ನು ಪಂಚಾಚಾರ್ಯಪ್ರಭಾಪತ್ರಿಕೆ ಮತ್ತು ಮದ್ರಾಸದಲ್ಲಿ ಹೊರಡುವ ಉಜ್ವಲರಾಷ್ಟ್ರೀಯವಾರಪತ್ರಿಕೆಯಾದ ಪ್ರಜಾಮತಪತ್ರಿಕೆ ಇವುಗಳಲ್ಲಿ ನಾನು ಪ್ರಕಟಿಸಿದ್ದುದು ಸರಿಯಷ್ಟೆ! ಪ್ರಜಾಮತದ ಸಂಪಾದಕರು ಈ ಸಭೆಯ ಕೃತಿಗಳನ್ನು ನಿಷೇಧಿಸಿದ್ದನ್ನು ನೋಡಿ ಬುದ್ಧಿಗಲಿಯದೆ 'ತತ್ವಜ್ಞ'ನು ಮಹಾಸಭೆಯ ಕೃತಿಗಳನ್ನು ಮತ್ತಷ್ಟು ಬಯಲಿಗೆ ತರಬೇಕೆಂದು ಮುಂದಾಗಿದ್ದಾನೆ. ತತ್ವಜ್ಞಶಿರೋಮಣಿಯೇ? ಮಹಾಸಭೆಯ ಇದೊಂದು ಕೃತಿ ಏಕೆ? ಈ ೧೧ ನೇ ಸಭೆಯ ಸರ್ವಾಂಗದಲ್ಲಿಯೂ ಶೋಭಿಸುವ ಧರ್ಮಾನ್ವೇಷಣವನ್ನು ನೋಡುವ ಪ್ರೀತಿಯಿದ್ದರೆ ಮುಂದಕ್ಕೆ ಬಾ. ಈಗ ನೀನು ನವಕರ್ನಾಟಕದಲ್ಲಿ ಬಡಬಡಿಸಿದ ವಿಷಯವು ನನ್ನ ಲೇಖದ ಪರಾಮರ್ಶವನ್ನು ಮಾಡಿರುವದೇ? "ಮಹಾಸಭೆಯವರು ಅಸ್ಪೃಶ್ಯತಾನಿವಾರಣೆಯ ಠರಾವನ್ನು ಪಾಸು ಮಾಡಿಕೊಂಡರು. ಆದರೆ ಅಸ್ಪೃಶ್ಯನಾದ ಛಲವಾದಿ ರುದ್ರಪ್ಪನ ಬಗ್ಗೆ ಸ್ಪೃಶ್ಯತೆಯ ಪರಮಾವಧಿಯನ್ನು ತೋರಿಸಿ ಗಾಂಧಿಯವರ ಸಮಾಧಾನಕ್ಕಾಗಿ ಅಸ್ಪೃಶ್ಯತಾನಿವಾರಣೆಯ ಗಿಲೀಟಿನ ಠರಾವನ್ನು ಮಾಡಿಕೊಂಡರೆಂದು" ಪ್ರತಿಪಾದಿಸಿದ ಲೇಖವನ್ನು ಪೂರ್ಣವಾಗಿ ಓದಬೇಕಾಗಿತ್ತು. ತತ್ವಜ್ಞನು ನನ್ನ ಲೇಖದ ಶಿರೋನಾಮವನ್ನಷ್ಟೇ ನೋಡಿ ಗಡಿಬಿಡಿಯಿಂದ ಬರೆದಂತೆ ಕಾಣುತ್ತದೆ. ಲೇಖಗಳ ಖಂಡನಮಂಡನಗಳ ಜ್ಞಾನವಿಲ್ಲದೆ ಬರೆಯುವದು ಯೋಗ್ಯವಲ್ಲ. ನನ್ನ ಲೇಖದ ಆರಂಭದ ವಾಕ್ಯಗಳನ್ನಷ್ಟು ಪರಿಶೀಲಿಸಿದ್ದರೆ ತತ್ವಜ್ಞನಿಗೆ ಅವಾಚ್ಯ ಶಬ್ದಗಳನ್ನು ಬರೆದು ಅತಿಹೇಯವಾದ ವಿಷಯಗಳಿಂದ ವಾಚಕರಿಗೆ ವಿಷಾದವನ್ನುಂಟುಮಾಡುವ ಪ್ರಸಂಗವೇ ಬರುತ್ತಿದ್ದಿಲ್ಲ. ಆಗಲಿ ಆಡಬಾರದ ಮಾತುಗಳನ್ನು ಆಡುತ್ತಿರುವ ತತ್ವಜ್ಞನಿಗೆ ಮಹಾಸಭೆಯವರು ಮಾಡಬಾರದ ಕೃತಿಗಳನ್ನು ಮಾಡಿದ್ದು ನೋಡಿ ಸಂತೋಷದ ಉಬ್ಬಿನಲ್ಲಿ ಮಬ್ಬಿನಿಂದ ಬರೆಯುವ ಪ್ರೇರಣೆಯಾಗಿರಬಹುದು. ಹೇಗಾದರೂ ಮಹಾಸಭೆಯು ಧಾರವಾಡದ ದರ್ಬಾರಹಾಲಿನಲ್ಲಿ ೩ ತಾಸು, ನಾಟಕ ಥಿಯೇಟರಿನಲ್ಲಿ (ಸಾಮಾನ್ಯ ನಾಟಕಕ್ಕೆ ಸಹ ಕೂಡದಷ್ಟು ಜನರಿಂದ) ೪|| ತಾಸು; ಅಂತೂ ಸಾಡೇಸಾತ (೭||) ತಾಸುಗಳಲ್ಲಿ ಕೂಡಿ ಲೆಕ್ಕವಿಲ್ಲದಷ್ಟು ಠರಾವುಗಳನ್ನು ಪಾಸುಮಾಡಿಕೊಂಡಿತು. ಈ ಮಹಾಸಭೆಯ ಸೃಷ್ಟಿವೈಚಿತ್ರ್ಯವನ್ನು ನಮ್ಮ ವೀರಶೈವಮತ ಬಾಂಧವರಷ್ಟೇ ಏಕೆ? ಇಡೀ ಪ್ರಪಂಚವೇ ಇದರ ಹುಟ್ಟಿನ ಗುಟ್ಟನ್ನು ತಿಳಿದಿರುವದು. ಆದರೂ ಆಗಲಿ, ಯಾರಿಗೂ ಬೇಕಾಗದ ಈ ಸಭೆಯಿಂದ ಆಗಬೇಕಾದುದೇನು? ಮತಧರ್ಮವಿಚಾರವಾಗಿ ಬಾಯಿತೆರೆದರೆ ಗುರುವರ್ಗ-ವಿರಕ್ತವರ್ಗದ ಜಗಳವು ಬಣ್ಣಗೆಡಿಸುವದು. ಇನ್ನು ರಾಜಕೀಯ ವಿಚಾರವಾಗಿ ಮಾತಾಡಿದರೆ ಸಾಕು; ಸಹಕಾರವಾದಿಗಳಿಗೆ ಅಸಹಕಾರವು ಬೇಡ ಅಸಹಕಾರವಾದಿಗಳಿಗೆ ಸಹಕಾರವು ಬೇಡ; ಇವೆರಡರ ಗೊಂದಲವು ಸಭೆಯವರಿಗೆ ಬೇಕಾಗಿದ್ದು ಸರಿ! ಧಾರ್ಮಿಕ ವಿಚಾರಕ್ಕೆ ಶೂನ್ಯವು (೦) ಬಿದ್ದರೆ ರಾಜಕೀಯ ವಿಚಾರಕ್ಕೆ (×) ಕತ್ತರಿಗುರುತು ಬಿತ್ತು. ಮಹಾಸಭೆಯು ಮಾಸಭೆಯಾದ ವೀರಶೈವ ರಾಜಕೀಯ ಪರಿಷತ್ತಿನ ಗೊಂದಲವಂತೂ ಬರೆದು ಹೇಳಿದರೆ ತೀರುವಂತಿಲ್ಲ. ಆ ಸಭೆಯಲ್ಲಿ ಅವಮಾನ ಹೊಂದಿ ಎದ್ದು ಹೋದವರನ್ನೂ, ಸದ್ದು ಮಾಡಿ ಖುರ್ಚಿಗಳಿಂದ ಗುದ್ದಿಸಿಕೊಂಡು ತಲೆಒಡಕೊಂಡು ರಕ್ತ ಕಂಡವರನ್ನೂ ಕೇಳಿದರೆ ಮಹಾಸಭೆಯ ಮರ್ಮವನ್ನು ಅವರು ಚೆನ್ನಾಗಿ ಹೇಳುವರು. ತತ್ವಜ್ಞನೇ? ಮಹಾಸಭೆಯು ಅಮಂಗಲವಾದ ಇತಿಹಾಸವು ಸಾಕೆ? ಇನ್ನೂ ಬೇಕಾದರೆ ಅದೇ ಸಭೆಯಲ್ಲಿ ಅಗ್ರಸ್ಥಾನದ ಮೇಜಿನ ಅಡಿಯಲ್ಲಿ ಪಾದರಕ್ಷೆಗಳಿಂದ ಶೋಭಿಸುವ ಸ್ಥಳದಲ್ಲಿಟ್ಟ ಪವಿತ್ರ ನೀರನ್ನು ಮಾತಾಡಿ ಮಾತಾಡಿ ದಣಿದವರು ಕುಡಿದು ವೀರಶೈವಮತದ ಪಾವಿತ್ರ್ಯವನ್ನು ತೋರಿಸಿದ ಮಹಾನುಭಾವರನ್ನು ಕೇಳು; ಅಥವಾ ಇಷ್ಟಕ್ಕೆ ಸುಮ್ಮನಾಗಿರು. ಇಷ್ಟಕ್ಕೇ ತುಷ್ಟನಾಗದಿದ್ದರೆ ದೈವಜ್ಞವಿನೋದನೊಡನೆ ವಿನೋದಮಾಡಿ ಆಮೋದಹೊಂದಲು ಸಿದ್ಧನಾಗಿರು.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ ಪರ್ಯಟನ ಶುಭಾಗಮನಮಹೋತ್ಸವ.

ಶ್ರೀ ಗಿರಿರಾಜಸೂರ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಪರ್ಯಟನ ಗುರುಸ್ವಾಧಿಕಾರಿಗಳಾದ ಶ್ರೀ|| ಷ|| ಬ್ರ|| ಕೌಂಡಿನ್ಯಪುರಿ ಹಿರೇಮಠದ ಶ್ರೀ ಶಿವಶಂಕರ ಶಿವಾಚಾರ್ಯ ಪಟ್ಟದಸ್ವಾಮಿಗಳು (ವೇದಾಂತಭೂಷಣ) ಇವರು ಧರ್ಮೋದ್ಧಾರಾರ್ಥವಾಗಿ ದೇಶಮಧ್ಯದಲ್ಲಿ ಸಂಚರಿಸುತ್ತಾ, ವೋಳೆ, ವೀರಾಪುರ, ಹಾಲರವಿ, ಗೂಳ್ಯ ಮುಂತಾದ ಗ್ರಾಮಗಳ ಭಕ್ತರ ಭಕ್ತಿಯನ್ನು ಸ್ವೀಕರಿಸಿ ಆಲೂರು ತಾಲೂಕು ಹೊಳಲಗುಂದಿ ಗ್ರಾಮದ ಸದ್ಭಕ್ತಮಂಡಲಿಯವರ ಪ್ರಾರ್ಥನಾನುಸಾರವಾಗಿ ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಕಾಡಪ್ಪ ಕಂಬಾಳಿಮಠದ ವೇ|| ಸಣ್ಣಮಲ್ಲಯ್ಯನವರು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾ|| 17-7-33 ಸೋಮವಾರ ಸಾಯಂಕಾಲ 5 ಘಂಟೆಗೆ ಆನೆ ಕುದರೆ ಮುಂತಾದ ಸಕಲ ಸಿಬ್ಬಂದಿಯೊಡನೆ ಹೊಳಲಗುಂದಿಗೆ ಆಗಮಿಸುವವರೊಳಗಾಗಿ ಪ್ರಮುಖರಾದ ವೇ|| ಮಠದ ಶರಭಯ್ಯನವರು, ಮಟಪತ್ತಿ ಯಯ್ಯನವರು, ಅಡಿವಯ್ಯನವರು, ಜಾದ್ವಿಖ್ಯಾತರೂ ಆಗ ಶ್ರೀಮಂತರೂ ಜಿಲ್ಲಾ ಬೋರ್ಡ ಮೆಂಬರರೂ ಆದ ಮ|| ಗೌಡರ ಬಸವನಗೌಡರು ತಾಲೂಕ ಬೋರ್ಡ ವೈಸ್ ಪ್ರೆಸಿಡೆ ರಾದ ಮ|| ರಾ|| ಅಮರೇಗೌಡರು ನವಲಿ ಹಂಪಣ್ಣ, ಮರ ರಾಚಪ್ಪ, ಬೊಗ್ಗರು ನಾಗಪ್ಪ, ದಾಸನಗೌಡರ ಚನ್ನಪ್ಪ ಶೆಟ್ಟಿ ಬಸಣ್ಣ ಇವರೇ ಮುಂತಾದ ಸದ್ಭಕ್ತಮಾಹೇಶ್ವರರು ಕರಾಲಯುಕ್ತರಾಗಿ ಸಿದ್ಧರಾಗಿದ್ದರು. ಗುರುಸಂದರ್ಶನಾನಂ ಸಕಲ ಬಿರುದಾವಳಿಗಳಿಂದಲೂ, ಅನೇಕ ವಿಧಗಳಾದ ಧ್ವಜಗ ದಲೂ, ಅನೇಕ ವಿಧವಾದ ವಾದ್ಯವೈಭವದಿಂದಲೂ ಉತ್ಸವ ತಳಿರು ತೋರಣ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟ ರಾಜಮಾ ದಲ್ಲಿ ಹೊರಟು ಪುರದಮುಂಭಾಗದಲ್ಲಿರುವ ಮಠಕ್ಕೆ ಬಂ ತಲ್ಪಿತು. ಅನಂತರ ಶ್ರೀಗಳವರು ತಮ್ಮ ಅಮೃತವಾಣಿಯಿ ಸಭಿಕರಿಗೆ ಆನಂದವಾಗುವಂತೆ ಶ್ರೀ ಜಗದ್ಗುರು ಪಂಚಾಚಾ ಭಗವತ್ಪಾದರ ಮಹಿಮೆಯನ್ನೂ ಶಿವಸಿದ್ಧಾಂತವನ್ನೂ ಬೋ ಸಿದರು. ಅನಂತರ ಮಹಾಸಂಸ್ಥಾನದ ಸರ್ವಾಧಿಕಾರಿಗಳ ವೇ|| ಮಲ್ಲಯ್ಯನವರು ಶ್ರೋತೃಗಳ ಮನಸ್ಸಿನಲ್ಲಿ ಪ್ರತಿಬಿಂ ವಂತೆ 'ಜಂತೂನಾಂ ನರಜನ್ಮ ದುರ್ಲಭಂ' ಎಂಬ ವಿಷಯದ ಮೇ ಅನೇಕ ಲೌಕಿಕ ಉದಾಹರಣೆಗಳನ್ನು ಕೊಟ್ಟು ಸ್ವಾರಸ್ಯ ವಾಗಿ ಭಾಷಣಮಾಡಿದರು. ಇಷ್ಟಕ್ಕೆ ಕಾಲಾತೀತವಾದ ಕಾ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಶ್ರೀ ಜಗದ್ಗುರು ಶ್ರೀ ಮನ್ನಾಗಲೂಟಿ ಭಿಕ್ಷಾವರ್ತಿ ಮಹಾರಾ ಜೈ" ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟ

ಮಠಪತ್ತಿ ಜಡಯ್ಯ, ಹೊಳಲಗುಂ

ಫೋಟೋ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡ, ರೆಪ್ರೆಜೆಂಟೇಟೀವ್ ಮ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾ ಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾ ಮಾಡುತ್ತೇವೆ. [31]

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೧೯—೧೧—೧೯೩೩ ಪ್ರ ೫೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲ ೩೧ ಕ್ಷೇತ್ರಗಳ ಮಹಾಯಾತ್ರೆಯು. ಸೆಕೆಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಶನ್ ಕೊಡಲ್ಪಡುವ

ಸದರಿ ಕಂಪನಿಯು ಎಂಜಿನ್ ಕಂಪನಿಗಳಿಂದ ಪಡಮಾನುಗಳು ಕಿರ್ದಿ ಮಾಡಿಕೊಡಲ್ಪಡುವ ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂ ಕಂಪನಿಗೆ ತಿಳಿಸತಕ್ಕದ್ದು. [8]

ಜಿ. ಎ. ಶಿರೂರ,
ಮ್ಯಾನೇಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬ

ತಾ|| ೧—೬—೧೯೩೩.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ರಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೋಹಭಸ್ಮ	೧	೦-೧೨—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಾಳೆಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಸ್ತಭಸ್ಮ	೧	೦—೮—೦
ಂದೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦-೧೨—೦
ಪ್ರಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ವಡಿಭಸ್ಮ	೧	೦—೪—೦
ಪ್ಪಿಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾ ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ಗೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಸಿದ್ಧಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.**

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಜೆಲ್ಲಿ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರಹಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ. 60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಫ್ಫಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ. ½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪಥಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಸೂಚೀಪತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [47]

ಕಂಪೌಂಡ್ ಸಿರಪು ಬ್ಲಟ್— ಉಬ್ಬಸ, ನೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವದಕ್ಕೂ ಬಲವಾದ ಔಷಧವಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೆ '**ಕಂಪೌಂಡು ಸಿರಪು ಫೋಸ್ಫರ**' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ಪಾರಿಗೊಡಿಸದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗದೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅತೀಸಾರಭೇದಿ, ಮಕ್ಕಳ ಎರವು (ಡಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಹೊಸ ಜಾಗ ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, [illegible] ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ, ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[28] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ...	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಪ್ತ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	[illegible]—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿ[illegible]ಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ [illegible] ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ [illegible] ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ [illegible] ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು

[29]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಜುಲೈ ೧೯೩೩ [ಸಂಚಿಕೆ ೧೪

ರೇಣುಕವಿಜಯಪುರಾಣಂ.

ಶ್ರಾವಣಮಾಸವು ಬಂದಿತು! ಪ್ರತಿಯೊಂದು ಗ್ರಾಮದಲ್ಲಿಯೂ ಈ ಮಹಾಪುರಾಣವನ್ನು ಕೇಳಿ ಧನ್ಯರಾಗಬೇಕು!

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿವಶರಣಮಹಾಸ್ವಾಮಿ ಎಂಬವನ ಬಾಯಿಬಡಕತನ.

ಲೇಖಕ—ಸರ್ವಜ್ಞವಿನೋದ, ದಾವಣಗೆರೆ.

ಈ ಬಾಯಿಬಡಕನು ತಾ|| ೧೭-೭-೩೩ ನೇ ಬೋಧಾಮೃತ ಪತ್ರಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿ ಅದರಲ್ಲಿ ಬಾಯಿಗೆ ಬಂದಂತೆ ಹರಟೆ ಕೊಚ್ಚಿಕೊಂಡಿರುವನು. ಇವನು ಬರೆದಿರುವುದು [illegible] ತೋರಿಸುತ್ತಿದೆ. ಇವನು ತಂದೆಗೆ ಮಗನೆಂದೂ ಮಗನಿಗೆ ತಂದೆಯೆಂದೂ ಕಲ್ಪಿಸಿ ವ್ಯಕ್ತಪಡಿಸಿರುವನು. ಇವನು ಮಹಾಸ್ವಾಮಿ ಎಂದು ತನ್ನ ಹೆಸರಿಗೆ ತಾನೇ ಬರೆದುಕೊಂಡಿರುವನು. ಎಲ್ಲಿಗೆ ಮಹಾಸ್ವಾಮಿಯಾಗಿರುವನೋ ತಿಳಿಯದಾಗಿದೆ. ಬಹುಶಃ [illegible]ಗೆ ಮಹಾಸ್ವಾಮಿಯಾಗಿರಬಹುದು. ಎಲೈ ಬಾಯಿಬಡಕನೇ, ಇತ್ತಕಡೆಗೆ ಸ್ವಲ್ಪ ಲಕ್ಷ್ಯಕೊಡು. ವೀರಶೈವಾದರ್ಶ [illegible] ಗ್ರಂಥದಲ್ಲಿ—

[illegible] |
[illegible]
ಕ್ರಿಯಾಂ ||
[illegible] |
[illegible] ||
[illegible] |
[illegible] ||
[illegible] |
[illegible] ||

ಇತ್ಯಾದಿ ಪರಮಪ್ರಮಾಣಭೂತಗ್ರಂಥಗಳ ಆಧಾರಗಳಿಂದ ಸ್ಪಷ್ಟವಾಗುವದೇನಂದರೆ—ಯಾವನು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಸೇವಾಸಕ್ತನಾಗಿ ಅವರ ಕಡೆಯಿಂದ ಮುಕ್ತಿದಾಯಕವಾದ ದೀಕ್ಷೆಯನ್ನು ಪಡೆದುಕೊಂಡು ಅವರ ಕಡೆಯಿಂದಲೇ [illegible] ತಿಳಿದು ಮಲತ್ರಯವನ್ನು ದೂರಮಾಡಿ [illegible] ಮಾಡದೆ ಕೇವಲ ಭಿಕ್ಷೆ [illegible] ಗ್ರಾಮವನ್ನು ಬಿಟ್ಟು ಅರಣ್ಯವನ್ನು ಸೇರಿ ಪರಮಪೂಜ್ಯರಾದ ಪಂಚಾಚಾರ್ಯರನ್ನು ಮನಸ್ಸಿನಿಂದ ಧ್ಯಾನಿಸುತ್ತ ಹಾಗೂ ಪೂಜಿಸುತ್ತ ಇರುತ್ತಾನೆಯೋ ಅವನೇ ನಿರಾಭಾರಿ ವೀರಶೈವನೆಂದು ಇವರ ಅಭಿಪ್ರಾಯವಿರುತ್ತದೆ. ಹೀಗಿದ್ದು ಶಿವಯೋಗಮಂದಿರದಿಂದ ವಿರಕ್ತರಲ್ಲಿ ದುರಭಿಮಾನದಿಂದ ಗುರುತ್ವವನ್ನೂ ಪೂಜ್ಯತ್ವವನ್ನೂ ಶಾಸ್ತ್ರವಿರುದ್ಧವಾಗಿ ಪ್ರಸಿದ್ಧಪಡಿಸುವುದು ಇವನಿಗೆ ಒಂದು [illegible] ಕಲಂಕವೇ ಸರಿ. ಇದಲ್ಲದೆ, ಆದ್ಯಾಚಾರ್ಯ [illegible] ಗುರುಗಳು ವಿರಕ್ತರಲ್ಲಿಯೇ ತೀರ್ಥಪ್ರಸಾದವನ್ನು ಸ್ವೀಕರಿಸುವರೆಂದು ಈತನು ಅಭಿಪ್ರಾಯಪಟ್ಟಿರುವನು. ಇದರಂತೆ ವಿರಕ್ತರಲ್ಲಿ ಧರ್ಮಶಾಸ್ತ್ರಜ್ಞಾನವಿಲ್ಲದ [illegible] ಆಚರಿಸುತ್ತಿರಬಹುದು. ಧರ್ಮಶಾಸ್ತ್ರಜ್ಞಾನಿಗಳಾದರೂ ವಿರಕ್ತರಲ್ಲಿ ಪಾದೋದಕಪ್ರಸಾದವನ್ನು ಸ್ವೀಕರಿಸುವುದಿಲ್ಲ. ಜ್ಞಾನಿಗಳಾದ ವಿರಕ್ತರು ಪಾದೋದಕಪ್ರಸಾದವನ್ನು ಕೊಡುವುದಿಲ್ಲ. ವಿರಕ್ತರಲ್ಲಿ ತೀರ್ಥಪ್ರಸಾದಗಳನ್ನು ಸ್ವೀಕರಿಸಬಾರದು ಎನ್ನುವುದೇ ವೀರಶೈವಶಾಸ್ತ್ರಶಾಸನವು. ವಿರಕ್ತರಿಂದ ಉಜ್ಜಯಿನಿ ಸ್ವಾಮಿಗಳು ಪಾದೋದಕಪ್ರಸಾದವನ್ನು ಸ್ವೀಕಾರಮಾಡಿದ್ದರೆಂದು ಬರೆದುಕೊಂಡಿರುವನು. ಇಂಥ ಅಸತ್ಯವಾದ ಬರವಣಿಗೆಯನ್ನು ಬರೆದಿರುವುದನ್ನು ನೋಡಿದರೆ ಈತನ [illegible] ಇಲ್ಲವೆಂದು ಹೇಳಬೇಕಾಗುತ್ತದೆ. [illegible] ವಿರಕ್ತರನ್ನು ಸೇವಿಸಿದರೆಂದು ಹೇಳುವುದೂ [illegible] ಇಂಥ [illegible] ಬರವಣಿಗೆಗೆ ನಮ್ಮ ಧಿಕ್ಕಾರವಿರಲಿ. ಶಾಂತಂಪಾಪಂ! ಶಾಂತಂಪಾಪಂ!!

ಗುರುಸ್ಥಲದವರಾದ ವಿರಕ್ತರಲ್ಲಿ ಮುಮುಕ್ಷುತ್ವವನ್ನು ಕಲ್ಪಿಸುವುದು ಹಾಸ್ಯಾಸ್ಪದವಲ್ಲವೇ? [illegible] ಪಂಚಾಚಾರ್ಯರೇ ಮುಖ್ಯಗುರುಗಳಾಗಿರುತ್ತಾರೆ. ಅವರಿಂದ [illegible] ಸರ್ವರಿಗೆ ಅವರ ಸಾಮರ್ಥ್ಯವು ಹ್ಯಾಗೆ ಬಂದೀತು? ಆದಕಾರಣ ಪಂಚಪ್ರಕಾರರಾದ ಆಚಾರ್ಯರು ಪಂಚಪೀಠಗಳಿಗೆ ಅಧಿದೇವತೆಗಳೂ ಪಂಚಸಿಂಹಾಸನಗಳಿಗೆ ಅಧಿಪತಿಗಳೂ ಜಗದ್ಗುರುಗಳೂ ಆಗುತ್ತಾರೆ. ಇಂಥ ಜಗದ್ಗುರುಗಳನ್ನು ಹಾಗೂ ಅವರ ಶಿಷ್ಯರಾದ ಗುರುಸ್ಥಲದವರನ್ನು ಸಾಮಾನ್ಯ ಗುರುಭಾವದಿಂದ ಯಾವ ನರಾಧಮರು ಪೂಜಿಸುತ್ತಾರೆಯೋ ಅಂಥವರು ನರಕವನ್ನು ಹೊಂದುತ್ತಾರೆ. ಪಂಚಸಿಂಹಾಸನಾಧಿಪತಿಗಳಿಗೆ ನಾವು ಸಮಾನರೆಂದು ಯಾರು ಹೇಳುವರೋ ಅವರಿಗೆ ಶಸ್ತ್ರಗಳಿಂದ [illegible] ಬೇಕೆಂದು ಪರಮೇಶ್ವರನು ಪಾರ್ವತಿಗೆ ಉಪದೇಶಿಸಿದ್ದಾನೆ. ೧೬೬೯ ರಲ್ಲಿ ಹೈದರಲ್ಲಿಯಿಂದ ಸೆರೆಯಲ್ಲಿಡಲ್ಪಟ್ಟ ಮದಕರಿ ನಾಯಕನಿಂದ ಕಟ್ಟಿಸಿ ಸ್ಥಾಪಿಸಲ್ಪಟ್ಟ ಚಿತ್ರಕಲ್ಲು ದುರ್ಗದ ವಿರಕ್ತ ಮಠಕ್ಕೆ ಅಧಿಕಾರಿಗಳಾದ ಗುರುಸಿದ್ಧಸ್ವಾಮಿಗಳೆಂಬವರು ಕನ್ನಡದಲ್ಲಿ ಹಾಲಾಸ್ಯಪುರಾಣವನ್ನು ಬರೆದಿರುತ್ತಾರೆ. ಅದರಲ್ಲಿ ಶ್ರೀ ಜಗದ್ಗುರು ರೇಣುಕರನ್ನು ಸದ್ಗುರು, ಮಹಾಗುರು, ಎಂಬದಾಗಿ ಸ್ತುತಿ ಮಾಡಿರುತ್ತಾರೆ. ನೋಡಿರಿ! ಯಥಾರ್ಥ ಶಾಸ್ತ್ರಜ್ಞರ ಆಚರಣೆಯು ಹೇಗಿರುತ್ತದೆ? ಮಹಾತಪಸ್ವಿಗಳೂ ಜ್ಞಾನಿಗಳೂ ಜಿತೇಂದ್ರಿಯರೂ ಹಾಗೂ ಮಹಾವಿರಕ್ತರೂ ಆದ ಇವರೆಲ್ಲರೂ ರೇಣುಕಾದ್ಯಾಚಾರ್ಯರಲ್ಲಿಯೂ ಹಾಗೂ ತಮಗೆ ದೀಕ್ಷೆಯನ್ನು ಕೊಟ್ಟ ಗುರುಗಳಲ್ಲಿಯೂ ಅಸಾಧಾರಣವಾದ ಗುರುಭಕ್ತಿಯನ್ನು ತೋರಿಸಿ ಶಿಷ್ಯರಾಗಿ ನಡೆದು ತೋರಿದ್ದಾರೆ. ಹೀಗಿದ್ದು ಅವರಂತೆ ಒಂದರಲ್ಲಿಯೂ ಸಮರ್ಥರಾಗದ ಈಗಿನ ಕೆಲವು ಸಣ್ಣಪುಟ್ಟ ಅಜ್ಞಾನಿವಿರಕ್ತರು ಮತಗ್ರಂಥಗಳ ಅಭಿಪ್ರಾಯವನ್ನು ಲಕ್ಷಿಸದೆ ಅದರಂತೆ ವರ್ತಿಸದೆ ಅಥವಾ ತಮ್ಮ ಪೂರ್ವಜರ ಮಾರ್ಗವನ್ನಾದರೂ ಹಿಡಿದು ಆಚರಿಸದೆ ಮತಸ್ಥಾಪನಾಚಾರ್ಯರಲ್ಲಿಯೂ ಹಾಗೂ ತಮಗೆ ದೀಕ್ಷೆಯನ್ನು ಕೊಟ್ಟ ಗುರುಗಳಲ್ಲಿಯೂ ಶಿಷ್ಯಭಾವವನ್ನು ಪ್ರಕಟಮಾಡದೆ ಉದ್ಧಟತನದಿಂದ ಅವರಿಗೆ ಎದುರಾಗಿ ನಡೆಯಹತ್ತಿರುತ್ತಾರೆ. ಇವರಿಗೆ ದೇವರು ಯಾವ ಶಾಸನವನ್ನು ಮಾಡುವನೋ ತಿಳಿಯದಾಗಿದೆ. ಇವರ ವರ್ತನಕ್ಕೆ ಧಿಕ್ಕಾರ! ಧಿಕ್ಕಾರ!! ಈ ಲೇಖಕನು ಈ ವಿಷಯವನ್ನೆಲ್ಲಾ ವಿಚಾರಮಾಡಿ ನೋಡಿ ದುರ್ಮಾರ್ಗದ ಬರವಣಿಗೆಯನ್ನು ಬಿಟ್ಟು ಸನ್ಮಾರ್ಗದಲ್ಲಿ ವರ್ತಿಸಿ ಗುರುಕೃಪೆಗೆ ಪಾತ್ರನಾಗಬೇಕು.

ರಾಜಧಾನಿಯ ಮುನಿಸಿಪಲ್ ಕೌನ್ಸಿಲರುಗಳ ಅವಧಿಯು ಈ ವರುಷದ ಅಂತ್ಯಕ್ಕೆ ಮುಗಿಯುವದರಿಂದ ಡಿಸೆಂಬರ್ 16 ನೇ ತಾರೀಖಿನ ದಿವಸ ಹೊಸಮೆಂಬರುಗಳ ಚುನಾವಣೆಯು ನಡೆಯುವದು.

ಯಜಮಾನ್ ಅಂಡ್ ಸನ್
ಫೋಟೊ, ಲೈನ್, ಬ್ಲಾಕುಗಳು
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್ ಬೋರ್ಡ್, ರೆಪ್ರೆಜೆಂಟಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.

[32]

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ವೇದಸಂಹಿತೆಗಳ ಪ್ರಚಾರಕಾಲದಲ್ಲಿಯೇ ಅಧ್ಯಾತ್ಮವಿದ್ಯೆಯ ಪ್ರವರ್ತಕರಾದ ಆತ್ಮಯಾಜಿಗಳ (ಅಪ್ರಾಕೃತ ಬ್ರಾಹ್ಮಣವರ್ಗೀಯರ) ಸಂಪ್ರದಾಯವು ಪ್ರಸಿದ್ಧವಾಗಿದ್ದುದರಿಂದೇ ಯಾಜ್ಞಿಕವರ್ಗದ ಬ್ರಾಹ್ಮಣರನ್ನು ಎಚ್ಚರಿಸಲಿಕ್ಕೆ ಆತ್ಮಯಾಜಿಗಳ ಆ ಆ ಶಾಖೆಗಳು ಯಜ್ಞಸಂಸ್ಥೆಯ ಪ್ರಗತಿಕಾಲದಲ್ಲಿಯೇ ಪಸರಿಸಿದ್ದವು. ಆ ಆ ಶಾಖಾಪ್ರವರ್ತಕರ ಹೆಸರುಗಳನ್ನು ಸಂಹಿತೆಗಳಲ್ಲಿಯೇ ಪರಮದೇವತಾವಾಚಕಶಬ್ದಗಳಿಂದ ಕೊಂಡಾಡಿರುವುದನ್ನು ಕಾಣಬಹುದು. ಕಾಠಕಸಂಹಿತೆಯಲ್ಲಿಯೂ (೧೭-೧೧), ಮೈತ್ರಾಯಣೀಸಂಹಿತೆಯಲ್ಲಿಯೂ (೨-೯-೧) 'ತತ್ಪುರುಷಾಯ ವಿದ್ಮಹೇ ಕಾರ್ತಿಕೇಯಾಯ ಧೀಮಹಿ ತನ್ನಃ ಸ್ಕಂದಃ ಪ್ರಚೋದಯಾತ್' ಎಂಬುದಾಗಿರುವುದು. ಸೋಮಶಂಭುಶಿವಾಚಾರ್ಯರು 'ಪದ್ಧತಿ'ಯಲ್ಲಿ ವೇದಪಾರಾಯಣವಿಧಿನಿರೂಪಣಾವಸರದೊಳು 'ಸ್ಕಂದಸೂಕ್ತಂ ತಥೈವಚ' ಎಂದು ನಿರೂಪಿಸಿರುವುದರಿಂದಲೂ, ಸ್ಕಂದೋಪನಿಷತ್ತು ಉಪಲಬ್ಧವಿರುವುದರಿಂದಲೂ ಸ್ಕಂದನಂದ್ಯಾದಿ ಪ್ರಾಚೀನಗುರುಗಳು ವೇದಶಾಖಾಪ್ರವರ್ತಕರೆಂಬುದು ನಿರ್ವಿವಾದಸಿದ್ಧವು. ಮತ್ತು, ಸೂತಸಂಹಿತೆಯಲ್ಲಿ (೩-೧)—

ಆತ್ಮವಿದ್ಯಾರತಃ ಶ್ರೀಮಾನ್ ಶ್ವೇತಾಶ್ವತರಪುತ್ರಕಃ |
ಶ್ವೇತಾಶ್ವತರ ಶಾಖಾಯಾಃ ಶ್ರದ್ಧಯೈವ ಪ್ರವ
ರ್ತಕಃ ||೩೩||
ಶತರುದ್ರಸಮಾಖ್ಯಸ್ಯ ಶತರುದ್ರೀಯ ಭಕ್ತಿಮಾನ್ |
ಪಂಚಪ್ರಸ್ಥಾನಸೇತುಜ್ಞಃ ಶ್ರೀಮತ್ಪಂಚಾಕ್ಷರ
ಪ್ರಿಯಃ ||೩೪||
ಶಿವಸಂಕಲ್ಪಭಕ್ತಶ್ಚ ಶಿವಸೂಕ್ತಪ್ರವರ್ತಕಃ |
ಲಿಂಗಸೂಕ್ತಪ್ರಿಯಃ ಕೈವಲ್ಯೋಪನಿಷತ್ಪ್ರವರ್ತಕಃ
||೩೫||

ಎಂದು ನಿರೂಪಿಸಲ್ಪಟ್ಟಿರುವ ವಾಕ್ಯಗಳಲ್ಲಿ ಕಂಡುಬರುವ ಬೇರೆ ಬೇರೆ ಸೂಕ್ತಗಳ ಹಾಗೂ ಉಪನಿಷತ್ತುಗಳ ಪ್ರವರ್ತಕರಾದರೂ, ಆ ಸ್ಕಂದ ನಂದ್ಯಾದಿಪ್ರಾಚೀನಗುರುಗಳ ಶಾಖಾನುವರ್ತಿಗಳೇ ಆಗಿದ್ದಾರೆ.

ಆ ಪ್ರಾಚೀನಗುರುಗಳ ವಂಶಪರಂಪರೆಯಾದರೂ ಭರತಖಂಡದಲ್ಲಿ ಮೊದಲಿನಿಂದಲೂ ಬಿಡುವಿಲ್ಲದೆ ಪಸರಿಸಿದುದರ ಉದಾಹರಣೆಗಳಾದರೂ ಇವೆ. ೧೩ ನೆಯ ಶತಮಾನದಲ್ಲಿದ್ದ ಸೋಮನಾಥನು ಸುಪ್ರಸಿದ್ಧನಾದ ವೇಮನಾರಾಧ್ಯವಂಶೀಯನು. ಇವನು ತನ್ನಿಂದ ರಚಿಸಲ್ಪಟ್ಟ 'ಅನುಭವಸಾರ'ವೆಂಬ ತೆನುಗುಗ್ರಂಥದಲ್ಲಿ—

ಭೃಂಗಿರಿಟಿಗೋತ್ರುಡನು ಗುರು |
ಲಿಂಗ ತನೂಜುಂಡ ಶಿವಕುಲೀನುಡು ದುರ್ಯಾಂಕ ||
ಸಂಗ ವಿವರ್ಜಿತ ಚರಿತುಡು |
ಜಂಗಮಲಿಂಗ ಪ್ರಸಾದ ಸತ್ಪ್ರಾಣುಂಡನ್ ||

ಎಂಬ ಕಂದಪದ್ಯದಿಂದ ತಾನು ಭೃಂಗಿಗೋತ್ರದವನೆಂದೂ ಗುರುಲಿಂಗ ತನುಜ (ಪುತ್ರ)ನೆಂದೂ ಸೂಚಿಸಿದ್ದಾನೆ.

ಈ ವಿಧವಾದ ವಿಚಾರಗಳಿಗುಪಯುಕ್ತಗಳಾದ ಸಂಗತಿಗಳನ್ನು ಇವಕ್ಕಿಂತ ಚೆನ್ನಾಗಿ ಅರಿತುಕೊಳ್ಳಬೇಕಾದರೆ, ಅವುಗಳಿಗೆ ಸಂಬಂಧಪಟ್ಟ ವೈದಿಕವಾಙ್ಮಯವನ್ನೂ ಪ್ರಾಚೀನೇತಿಹಾಸಬೋಧಕಗ್ರಂಥಗಳನ್ನೂ ಪ್ರಯತ್ನಪೂರ್ವಕ ಸಂಶೋಧಿಸಬೇಕು.

ಸಂಸ್ಕೃತಪುಸ್ತಕಗಳ ಬೃಹತ್ಸೂಚಿಯನ್ನು ನೋಡುವುದರಿಂದ ತಿಳಿದುಬರುವುದೇನೆಂದರೆ, ಜರ್ಮನಿಯ ಬರ್ಲಿನ್ ಲಾಯಬ್ರರಿಯೊಂದರಲ್ಲಿಯೇ ನಾಲ್ವತ್ತು ಸಾವಿರ ಹಸ್ತಲಿಖಿತ ಸಂಸ್ಕೃತಪುಸ್ತಕಗಳೂ ಮತ್ತು ಲಂಡನ್ನಿನ ಇಂಡಿಯಾ ಹೌಸ್ ಪುಸ್ತಕಾಲಯದಲ್ಲಿ ಮೂವತ್ತು ಸಾವಿರ ಪುಸ್ತಕಗಳೂ ಇರುತ್ತವಂತೆ! ಸದ್ಧರ್ಮಾಭಿಮಾನಿಗಳಾದ ಲಕ್ಷಾಧೀಶರು ಅತ್ತ ಕಡೆ ಒಂದುಸಾರೆ ಲಕ್ಷ್ಯಗೊಟ್ಟರೆ ಬೇಕಾದಷ್ಟು ಅನುಕೂಲತೆಯುಂಟಾಗಬಹುದಲ್ಲವೇ?

ಪ್ರಕೃತವನನುಸರಿಸುವಾ! ಈ ಮೇಲೆ ಹೇಳಿದಂತೆ, ಶಾಖೆ ಹೇಳುವುದೊಂದು ಶಾಖೆ, ಪಠಿಸುವುದೊಂದು ಬೇರೆ ಸಂಹಿತೆ; ಅನ್ಯರ ಬ್ರಾಹ್ಮಣವನ್ನು ತಮ್ಮದೆಂದೂ ತಮ್ಮ ಶಾಖೆಗೆ ಸಂಬಂಧಪಡ ಶ್ರೌತಸೂತ್ರವನ್ನೂ ಗೃಹ್ಯಸೂತ್ರವನ್ನೂ ತಮ್ಮದೆಂದು ಹೇಳುವುದೂ ಮೊದಲಾದ ವಿಷಯವಷ್ಟೆಯು ಈಗ ಅಲ್ಲಲ್ಲಿ ಕಂಡುಬರುತ್ತಿರುವುದಕ್ಕೆ ಈ ಕಾಲದಲ್ಲಿ ಪ್ರಾಚೀನ ವೈದಿಕಸಾಹಿತ್ಯವು ಚೆನ್ನಾಗಿ ಉಪಲಬ್ಧವಿಲ್ಲದುದೇ ಕಾರಣವು. ಈ ಕಾರಣದಿಂದೇ ಆಶ್ವಲಾಯನರು ತಮ್ಮ ಸಂಹಿತೆಯಿಲ್ಲದುದರಿಂದ ಶಾಕಲಶಾಖೆಯ ಶಾಕಲಸಂಹಿತೆಯನ್ನೇ ತಮ್ಮ ಸಂಹಿತೆಯೆಂದು ಪಠಿಸುತ್ತಾರೆ. ಈ ಶಾಖಾವಲಂಬಿಗಳು ಮಹಾರಾಷ್ಟ್ರದಲ್ಲಿಯೂ ಕರ್ನಾಟಕದಲ್ಲಿಯೂ ವಿಶೇಷವಾಗಿದ್ದಾರೆ. ಆಶ್ವಲಾಯನ ಶಾಖೆಯ ಆಶ್ವಲಾಯನ ಶ್ರೌತಸೂತ್ರವೂ ಗೃಹ್ಯಸೂತ್ರವೂ ಉಪಲಬ್ಧವಿರುವುದರಿಂದ ಅವುಗಳನ್ನು ಮುಂದಿಟ್ಟುಕೊಂಡು ತಮ್ಮ ಶ್ರೌತಸ್ಮಾರ್ತಕರ್ಮಗಳನ್ನು ಅನುಷ್ಠಿಸುತ್ತಾರೆ. ಮತ್ತು, ಅವರಿಗೆ ಬ್ರಾಹ್ಮಣಗ್ರಂಥಗಳೂ ಇಲ್ಲ, ಐತರೇಯ ಶಾಖೆಗಳ ಬ್ರಾಹ್ಮಣಾರಣ್ಯಕೋಪನಿಷತ್ತುಗಳನ್ನೇ ಅವರು (ಆಶ್ವಲಾಯನ ಶಾಖೆಗಳು) ಮನ್ನಿಸುತ್ತಾರೆ. ಒಟ್ಟಿನಲ್ಲಿ, ಆಶ್ವಲಾಯನ ಶಾಖೆಗಳ ಬಳಿಯಲ್ಲಿ ಈಗ ಅವರ ನಿಜವಾದ ಸ್ವತ್ತು ಶ್ರೌತಗೃಹ್ಯಸೂತ್ರಗಳೆರಡೇ. ಇರಲಿ. ಈಗ ಆಶ್ವಲಾಯನ ಶಾಖೆಯವರಿಗೆ ಸಂಬಂಧಪಟ್ಟ ವೈದಿಕ ಗ್ರಂಥಗಳ ಹೆಸರನ್ನು ನಾವಿಲ್ಲಿ ತೋರಿಸುತ್ತೇವೆ.—

ಶಾಕಲಸಂಹಿತಾ	(ಶಾಕಲ ಶಾಖಾ)
ಐತರೇಯ ಬ್ರಾಹ್ಮಣ ಐತರೇಯ ಆರಣ್ಯಕ ಐತರೇಯ ಉಪನಿಷದ್	ಐತರೇಯ ಶಾಖಾ.
ಆಶ್ವಲಾಯನ ಶ್ರೌತಸೂತ್ರ ಆಶ್ವಲಾಯನ ಗೃಹ್ಯಸೂತ್ರ	ಆಶ್ವಲಾಯನ ಶಾಖಾ.

ಈ ರೀತಿಯಾಗಿ, ಋಗ್ವೇದಸಂಹಿತೆಯ ಬೇರೆ ಬೇರೆ ಶಾಖೆಗಳಲ್ಲಿ 'ಶಾಕಲ'ವೆಂಬ ಒಂದೇ ಶಾಖೆಯು ಈಗ ಸರ್ವತ್ರ ಪ್ರಚಾರದಲ್ಲಿರುವುದರಿಂದ 'ಋಗ್ವೇದವು' ಅಂದರೆ ಶಾಕಲಪಾಠವೆಂದೇ ಆಯಿತಕ್ಕದ್ದು. ಈ ವೇದದಲ್ಲಿ ಒಟ್ಟಿಗೆ ೧೦೫೫೨ ಮಂತ್ರಗಳಿವೆ. ಈ ಮಂತ್ರಗಳ ವಿಭಾಗವು ಎರಡು ತೆರನಾಗಿ ಮಾಡಲ್ಪಟ್ಟಿದೆ. ಹೇಗೆಂದರೆ, ಒಬ್ಬ ಋಷಿಯೋ ಒಂದು ದೇವತೆಯನ್ನಾಗಲಿ ಒಂದಕ್ಕಿಂತ ಹೆಚ್ಚು ದೇವತೆಗಳನ್ನಾಗಲಿ ಯಾವ ಯಾವ ಮಂತ್ರದಲ್ಲಿ ಸ್ತುತಿಸಿರುವನೋ ಆ ಮಂತ್ರದ ಸಮುದಾಯಕ್ಕೆ 'ಸೂಕ್ತ'ವೆಂಬ ಸಂಜ್ಞೆ. ಈಗ ಸರ್ವತ್ರ ಪಠಿಸಲ್ಪಡುವ ಶಾಕಲಶಾಖಾನುಸಾರವಾಗಿ ಋಗ್ವೇದಸೂಕ್ತಗಳ ಸಂಖ್ಯೆಯು ೧೦೧೭ ಉಂಟು. ಎಂಟನೆಯ ಮಂಡಲದಲ್ಲಿ ಖಿಲಾಂಶಗಳೆಂದು ತಿಳಿದುಬರುವ ೧೧ ವಾಲಖಿಲ್ಯ ಸೂಕ್ತಗಳನ್ನೂ ಕೂಡಿಸಿದರೆ ೧೦೨೮ ಸೂಕ್ತಗಳಾಗುವವು. ಸೂಕ್ತದಲ್ಲಿ ಸಾಧಾರಣವಾಗಿ ಮಂತ್ರಗಳ ಸಂಖ್ಯೆಯು ೯-೧೦ ಉಂಟು. ಆದರೆ ಕೆಲವು ಸೂಕ್ತಗಳಲ್ಲಿ ಮೂರು ಮಂತ್ರಗಳೂ ಬೇರೆ ಕೆಲವು ಸೂಕ್ತಗಳಲ್ಲಿ ೪-೫ ಮಂತ್ರಗಳೂ ಕಾಣಬರುವವು. ಬೃಹದ್ದೇವತೆಯಲ್ಲಿ—ಋಷಿಸೂಕ್ತ, ದೇವತಾಸೂಕ್ತ, ಛಂದಃಸೂಕ್ತ; ಎಂಬ ಮೂರು ವಿಧ ಸೂಕ್ತಗಳ ಲಕ್ಷಣವು ಪ್ರತಿಪಾದಿಸಲ್ಪಟ್ಟಿದೆ. ಅವುಗಳಲ್ಲಿ,

ಋಷಿಸೂಕ್ತವು—'ಇನ್ದ್ರಂ ವಿಶ್ವಾ ಅವೀವೃಧನ್' ಎಂಬುದರ ಮೊದಲಿರುವ ವಿಂಶತಿವರ್ಗಸಮಾಪ್ತಿಯವರೆಗೂ ಏಕಋಷಿಸೂಕ್ತವು. ಆ ಸರ್ವಋಚೆಗಳೂ ಮಧುಚ್ಛಂದನಿಂದ ಸಾಕ್ಷಾತ್ಕರಿಸಿಕೊಳ್ಳಲ್ಪಟ್ಟಿವೆ. 'ಇಂದ್ರಂ ವಿಶ್ವಾ ಅವೀವೃಧನ್' ಎಂಬ ಅಷ್ಟಕವು ಎರಡನೆಯ ಋಷಿಸೂಕ್ತವು. ಆ ಋಚೆಗಳ ದ್ರಷ್ಟನು ಮಧುಚ್ಛಂದನ ಮಗನಾದ ಜೇತೃವು.

ದೇವತಾಸೂಕ್ತವು—'ಅಗ್ನಿಮೀಳೇ ಪುರೋಹಿತಂ' ಇತ್ಯಾದಿ ೯ ಋಚೆಗಳುಳ್ಳ ಮೊದಲಿನ ದೇವತಾಸೂಕ್ತವು ಅಗ್ನಿದೇವತಾಕವಾದುದು. 'ವಾಯವಾಯಾಹಿ ದರ್ಶನೇತಿ' ಎಂಬ ೯ ಋಚೆಗಳುಳ್ಳ ಎರಡನೆಯ ದೇವತಾ ಸೂಕ್ತವು, ವಾಯುದೇವತಾಕವಾದುದು.

ಛಂದಃಸೂಕ್ತವು—'ಅಗ್ನಿಮೀಳೇ' ಎಂದಾರಂಭಿಸಿ ೧೮ ವರ್ಗಪರ್ಯಂತವಾದುದು. 'ಗಾಯನ್ತಿ ತ್ವಾ ಗಾಯತ್ರಿಣಃ' ಎಂಬುದರ ಮೊದಲಿರುವ ಗಾಯತ್ರೀಛಂದೋಬದ್ಧವಾದ ಮೊದಲಿನ ಛಂದಃಸೂಕ್ತವು. ಉಳಿದವುಗಳ ಉದಾಹರಣೆಗಳನ್ನು ಅರಿತುಕೊಳ್ಳತಕ್ಕದ್ದು.

ಈ ಮೂರು ವಿಧವಾದ ಸೂಕ್ತಗಳು ಕರ್ಮಗಳಲ್ಲಿ ವಿನಿಯೋಗಿಸಲ್ಪಡುವ ರೀತಿಯು ಬ್ರಾಹ್ಮಣಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದು. ಐತರೇಯಬ್ರಾಹ್ಮಣದ ೫-೬ ನೆಯ ಪಂಚಿಕೆಗಳನ್ನು ನೋಡಿದರೆ ಗೊತ್ತಾಗುವುದು.

ಕೆಲವು ಸೂಕ್ತಗಳ ಒಂದು ಗುಂಪಿಗೆ 'ಅನುವಾಕ'ವೆಂಬ ಸಂಜ್ಞೆ. ಇಂಥಹ ಅನುವಾಕಗಳು ಋಗ್ವೇದದಲ್ಲಿ ಒಟ್ಟಿಗೆ ೮೫ ಇವೆ. ಕೆಲವು ಅನುವಾಕಗಳು ಕೂಡಿದ್ದುದಕ್ಕೆ 'ಮಂಡಲ'ವೆನ್ನುವರು. ಇಂಥಹ ಮಂಡಲಗಳು ೧೦ ಇರುವುವು. ಋಙ್ಮಂತ್ರಗಳ ಮಂಡಲ, ಅನುವಾಕ, ಸೂಕ್ತ ಎಂಬ ಈ ತೆರದ ವರ್ಗೀಕರಣವು ಬಹಳ ಪ್ರಾಚೀನವಾದುದೆಂದು ತಿಳಿಯಲ್ಪಡುವುದು.

ಋಕ್ಸಂಹಿತೆಯನ್ನು ಮತ್ತೊಂದುವಿಧವಾಗಿ ವಿಂಗಡಿಸಿರುವುದು ಹೇಗೆಂದರೆ, ಮಂತ್ರಸಂಖ್ಯೆಯು ೧೦೫೫೨ ಎಂದು ಮೇಲೆ ಹೇಳಲ್ಪಟ್ಟಿರುವುದಷ್ಟೆ! ಕೆಲವು ಮಂತ್ರಗಳು ಕೂಡಿದ ಒಂದು ಗುಂಪಿಗೆ 'ವರ್ಗ'ವೆನ್ನುವರು. ಇಂಥಹ ವರ್ಗಗಳು ಒಟ್ಟಿಗೆ ೨೦೦೬ ಇರುವವು. ಕೆಲವು ವರ್ಗಗಳು (ಪ್ರಾಯಶಃ ೩೩) ಕೂಡಿದ ಗುಂಪಿಗೆ 'ಅಧ್ಯಾಯ'ವೆಂಬ ಸಂಜ್ಞೆ. ಇಂಥಹ ಅಧ್ಯಾಯಗಳು ಒಟ್ಟಿಗೆ ೬೪ ಇವೆ. ಅವುಗಳ ಪ್ರತಿಯೊಂದು ಎಂಟು ಅಧ್ಯಾಯ ಸಮುದಾಯವು 'ಅಷ್ಟಕ'ವೆನಿಸುವುದು. ಇಂಥಹ ಅಷ್ಟಕಗಳು ಋಗ್ವೇದದಲ್ಲಿ ೮ ಇವೆ. ಹೀಗೆ ವಿಂಗಡಿಸುವ ಬಗೆಯು ಮೇಲೆ ಹೇಳಿದುದರಂತೆ ಹಳೆಯದಲ್ಲ. ವರ್ಗವಿಭಾಗವೂ, ಅಧ್ಯಾಯವಿಭಾಗವೂ ಅಧ್ಯಾಪಕರ ಸಂಪ್ರದಾಯಕ್ಕೆ ಅನುಗತವಾದುದೆಂದೇ ಹೇಳಬಹುದು. ಪ್ರಭಾದರ್ಶಪರಾಯಣ ಮತಿಗಳ ಸೌಲಭ್ಯಕ್ಕಾಗಿ ಆ ಎರಡೂ ವರ್ಗೀಕರಣಗಳನ್ನು ಮತ್ತೆ ಇಲ್ಲಿ ಸ್ಪಷ್ಟವಾಗಿ ಬರೆದು ತೋರಿಸುವೆವು.

ಋಕ್ಸಂಹಿತೆ—ಮಂಡಲಗಳು ೧೦; ಅನುವಾಕಗಳು ೮೫; ಸೂಕ್ತಗಳು ೧೦೨೮; ಮಂತ್ರಗಳು ೧೦೫೫೨.

ಅಷ್ಟಕಗಳು ೮; ಅಧ್ಯಾಯಗಳು ೬೪; ವರ್ಗಗಳು ೨೦೦೬; ಮಂತ್ರಗಳು ೧೦೫೫೨.

ಮೊದಲನೆಯ	ಮಂಡಲದಲ್ಲಿ	೨೪	ಅನುವಾಕಗಳು.	೧೯೧	ಸೂಕ್ತಗಳು
ಎರಡನೆಯ	„	೪	„	೪೩	„
ಮೂರನೆಯ	„	೫	„	೬೨	„
ನಾಲ್ಕನೆಯ	„	೫	„	೫೮	„
ಐದನೆಯ	„	೬	„	೮೭	„
ಆರನೆಯ	„	೬	„	೭೫	„
ಏಳನೆಯ	„	೬	„	೧೦೪	„
	„	೧೦	„	೯೨ (ಮತ್ತು ವಾಲಖಿಲ್ಯ ಸೂಕ್ತಗಳು)	
ಒಂಭತ್ತನೆಯ	.	೭	„	೧೧೪	„
ಹತ್ತನೆಯ	„	೧೨	„	೧೯೧	„

ಋಗ್ವೇದದಲ್ಲಿ ಒಟ್ಟಿಗೆ ೧೫೩೮೨೬ ಪದಗಳೂ, ೪೩೨೦೦೦ ಅಕ್ಷರಗಳೂ ಇವೆ. ಮಂತ್ರಗಳ ಸಂಖ್ಯೆಯು ೧೦೫೫೨ ಎಂದು ಈ ಮೇಲೆ ಹೇಳಿದೆ. ಆದರೆ ಕೆಲವರು ಅವು ೧೦೪೦೨ ಎಂದೂ ಮತ್ತೆ ಕೆಲವರು ೧೦೬೨೨ ಎಂದೂ ಅಭಿಪ್ರಾಯಪಡುತ್ತಾರೆ.

ಈ ಮೇಲೆ ಹೇಳಿದ ಋಕ್ಸಂಹಿತೆಯು ಶಾಕಲಾದಿ ಐದು ಶಾಖೆಗಳಲ್ಲಿ ಯಾವದರೋ ಮೂರನೆಯ ನಾಲ್ಕನೆಯ ಶಾಖೆಗಳಲ್ಲಿ ಶಾಖೆಗಿಂತ ವಿಶೇಷವಾದ ಪಾಠಭೇದವಿದ್ದಿಲ್ಲವೆಂದು ತಿಳಿದುಬರುವುದು. ಶಾಕಲರಿಂದ ಖಿಲರೂಪವಾದುವೆಂದು ಅಂಗೀಕರಿಸಲ್ಪಟ್ಟ ೧೧ ವಾಲಖಿಲ್ಯಸೂಕ್ತಗಳನ್ನು ಆಶ್ವಲಾಯನರು ಮೂಲಾಂಶಗಳೆಂದು ಮನ್ನಿಸಿದರು. ಶಾಂಖಾಯನರು ಅವುಗಳಲ್ಲಿ ಕೆಲವು ಮಂತ್ರಗಳನ್ನು ಬಿಟ್ಟು ಅವನ್ನು ಸ್ವೀಕರಿಸಿದರು. ಆದ್ದರಿಂದ ಕೆಲವು ಪುರಾಣಗಳಲ್ಲಿ ಶಾಕಲಬಾಷ್ಕಲ ಮಾಂಡೂಕಗಳೆಂಬ ಮೂರು ಶಾಖೆಗಳೇ ಪರಿಗಣಿಸಲ್ಪಡುತ್ತವೆ. ಮಾಂಡೂಕಶಾಖಾನುಸಾರವಾದ ಪಾಠಭೇದವು ಮೊದಲೇ ಯಾವ ಕಾಲದಲ್ಲಿಯೋ ನಾಮಶೇಷವನ್ನು ಪಡೆದಿರುವುದರಿಂದೇ ಈಗ ಎಲ್ಲಿಯೂ ಅದರ ವಾರ್ತೆಯು ಸಹ ಕೇಳಲ್ಪಡುವುದಿಲ್ಲ. ಇನ್ನು, ಶಾಕಲ ಬಾಷ್ಕಲಗಳೆಂಬ ಎರಡು ಶಾಖೆಗಳಲ್ಲಿ, ಬಾಷ್ಕಲರ ಪಾಠದಲ್ಲಿ ಶಾಕಲರ ಪಾಠಕ್ಕಿಂತ ವಿಶೇಷವೇನೆಂದರೆ—ಎಂಟು ಸೂಕ್ತಗಳ ಸಂಯೋಜನವೂ ಮೊದಲನೆಯ ಮಂಡಲದಲ್ಲಿ ಕೆಲವು ಭಾಗದ ಸ್ಥಾನಪರಿವರ್ತನವೂ ಮಾಡಲ್ಪಟ್ಟಿರುವುದೆಂಬುದನ್ನು ಅರ್ವಾಚೀನವೈದಿಕಗ್ರಂಥಗಳಿಂದ ಅರಿಯುತ್ತೇವೆ. ಆ ವಿಶೇಷಾಂಶವು ಈಗಣ ಸಂಹಿತಾಪಾಠದಲ್ಲಿ ದೊರೆಯುವುದಿಲ್ಲ. ಒಟ್ಟಿನಲ್ಲಿ ಶಾಕಲಪಾಠವೊಂದೇ ಈಗ ಸರ್ವಸಮ್ಮತವಾಗಿರುವುದು.

ಈ ಋಕ್ಸಂಹಿತೆಯಲ್ಲಿರುವ ಹತ್ತು ಮಂಡಲಗಳೂ ಒಂದು ವಿಧವಾಗಿಯೇ ಇಲ್ಲ. ಅದರೂ ೧ರ ಮುಂದಿನ ೭ರ ತನಕ (೨-೩-೪-೫-೬-೭) ಎಂಬ ೬ ಮಂಡಲಗಳು ಸ್ವಲ್ಪ ಸಮಾನತೆಯನ್ನು ಪಡೆಯುತ್ತವೆ. ಹೇಗೆಂದರೆ, ಇವುಗಳಲ್ಲಿ ಪ್ರತಿಯೊಂದು ಮಂಡಲವು ಒಬ್ಬೊಬ್ಬ ಗೋತ್ರೀಯಋಷಿಯಿಂದ ಹೊರಹೊಮ್ಮಿದುದೆಂದು ಹಳೆಯವಾದ ನುಡಿಗಳಿಂದಲೂ ಒಳಗಣ ಹೇತುವಿನಿಂದಲೂ ತಿಳಿದುಬರುತ್ತದೆ. ಈ ಆರು ಮಂಡಲಗಳು ಆ ಆ ಗೋತ್ರೀಯ (ವಂಶೀಯ)ರಾದ ಮಹಾನುಭಾವರಿಂದೇ ಪರಂಪರೆಯಿಂದ ಬೇರೆ ಬೇರೆಯಾಗಿ ಬಹುಕಾಲದಿಂದಲೂ ಚೆನ್ನಾಗಿ ಕಾಪಾಡಲ್ಪಟ್ಟು ಮುಂದೆ ಒಟ್ಟುಗೂಡಿಸಿದವಾಗಿರುವುವು. ಹೀಗೆ ಒಂದೊಂದು ಗೋತ್ರಸಂಬಂಧದಿಂದ ಗೋತ್ರಮಂಡಲಗಳೆನಿಸುವ ಇವುಗಳಲ್ಲಿ ಸೂಕ್ತಗಳ ಸೇರುವೆಯು ಮುಖ್ಯಮಂಡಲಗಳಿಗಿಂತಲೂ ಬೇರೆ ಬಗೆಯಾಗಿದೆ. ಮೊದಲನೆಯ ಎಂಟನೆಯ, ಹತ್ತನೆಯವುಗಳಲ್ಲಿ ಒಂದೊಂದು ಮಂಡಲಪ್ರವರ್ತಕರು ಒಬ್ಬನೇ ಅಲ್ಲ, ಬಹುಜನ ದ್ರಷ್ಟಾರಿರುವರು; ಈ ಮೂರು ಮಂಡಲಗಳಲ್ಲಿಯೂ ಆ ಆ ಋಷಿಯ ಸಂಬಂಧದೊಡನೆ ವಿಂಗಡಿಸಿದ ಶತಾರ್ಚಿನ ಮುಂತಾದ ಅನೇಕ ಸೂಕ್ತಸಮುಚ್ಚಯಗಳು ಕಂಡುಬರುವವು. ಅಂದರೆ—

ಮಧುಚ್ಛನ್ದಪ್ರಭೃತಯೋಽಗಸ್ತ್ಯಾನ್ತಾ ಆದ್ಯಮ
ಣ್ಡಲೇ |
ಯೇ ಸನ್ತಿ ಋಷಯಸ್ತೇ ವೈ ಸರ್ವೇ ಪ್ರೋಕ್ತಾಃ
ಶತರ್ಚಿನಃ |

ಎಂಬ ವಾಕ್ಯಾನುಸಾರವಾಗಿ, ಮೊದಲನೆಯ ಮಂಡಲಪ್ರವರ್ತಕರಾದ ಮಧುಚ್ಛಂದನೇ ಮೊದಲಾಗಿ ಅಗಸ್ತ್ಯನವರೆಗಿರುವ ಋಷಿಗಳೆಲ್ಲ ಶತರ್ಚಿನರೆನಿಸುವರು. ಪೂರ್ವಾಚಾರ್ಯರಿಂದ 'ಶತರ್ಚಿನ' ಪದದ ನಿರ್ವಚನವು ಹೀಗೆ ಮಾಡಲ್ಪಟ್ಟಿದೆ—

ದದರ್ಶಾದೌ ಮಧುಚ್ಛನ್ದಾದ್ಯಧಿಕಂ ಯದ್ಯಚಾಂ
ಶತಮ್ |
ತತ್ಸಾಹಚರ್ಯಾದನ್ಯೇಽಪಿ ವಿಜ್ಞೇಯಾಸ್ತೇ ಶತರ್ಚಿನಃ ||

ಮೊದಲು ಮಧುಚ್ಛಂದನು ನೂರರ ಮೇಲ್ಪಟ್ಟು ಋಚೆಗಳ ಪ್ರವರ್ತಕನಾದುದರಿಂದ ಅವನಿಗೆ 'ಶತರ್ಚಿ'ಯೆಂಬ ಸಾಮಾನ್ಯವಾದ ಹೆಸರುಬಂದಿದೆ. ಅವನ ಸಾಹಚರ್ಯಮೂಲಕವಾಗಿ ಇತರರಿಗೂ ಶತರ್ಚಿಗಳೆಂದು ನುಡಿವುದಾದರೋ ಕೊಡೆಯನ್ನು ಹಿಡಿದವನೊಬ್ಬನೇ ಆದರೂ ಅವನ ಸಂಗಡಿಗರಿಗೂ 'ಛತ್ರಿಣಃ' ಕೊಡೆಯುಳ್ಳವರೆಂದು ಕರೆಯುವ ರೀತಿಯಂತಿದೆ.

ಈ ಗುಟ್ಟಿನ ಗಂಟನ್ನು ಇಷ್ಟಷ್ಟು ಸಡಲಿಸುವಾ! ಮೊದಲನೆಯ ಮಂಡಲವನ್ನು ಶತರ್ಚಿಸಂಜ್ಞಕರಾದ ಅನೇಕ ಋಷಿಗಳು ಸಾಕ್ಷಾತ್ಕರಿಸಿಕೊಂಡಿರುವರು. ಮೊದಲನೆಯ ಮಂಡಲದೊಳಗಿನ ೧ ರಿಂದ ೧೦ ಸೂಕ್ತಗಳಲ್ಲಿರುವ ೧೦೩ ಋಚೆಗಳನ್ನು ಮಧುಚ್ಛಂದನು ಸಾಕ್ಷಾತ್ಕರಿಸಿಕೊಂಡವನಾದ್ದರಿಂದ ಅವನಿಗೆ (ಅಂದರೆ, ನೂರರ ಮೇಲ್ಪಟ್ಟು ಋಚೆಗಳನ್ನು ಕಂಡುಕೊಂಡವನಾದ ಮಧುಚ್ಛಂದನಿಗೆ) ಶತರ್ಚಿ ಎಂಬ ಸಾಮಾನ್ಯವಾದ ಹೆಸರುಂಟಾಯಿತು. ಅದರಮೇಲಿಂದ ಸಂಪೂರ್ಣಮಂಡಲಪ್ರವರ್ತಕರಾದ ಬೇರೆಬೇರೆ ಋಷಿಗಳಿಗಾದರೂ ಶತರ್ಚಿಗಳೆಂಬ ಹೆಸರಿನಿಂದ ಕರೆವುದುಂಟು. ಆಶ್ವಲಾಯನ ಗೃಹ್ಯಸೂತ್ರದಲ್ಲಿ (೩-೪-೨) ಮೊದಲನೆಯ ಮಂಡಲಪ್ರವರ್ತಕರಾದ ಋಷಿಗಳ ತರ್ಪಣಮಾಡುವದಕ್ಕೋಸ್ಕರ 'ಶತರ್ಚಿನಸ್ತೃಪ್ಯನ್ತು' ಎಂಬ ಉಲ್ಲೇಖವಿದೆ.

ಅದರ ಮುಂದಿನ ಎರಡನೆಯ ಮಂಡಲವು ಮೊದಲಾಗಿ ಒಂಭತ್ತನೆಯ ಮಂಡಲದವರೆಗಿರುವ ಸೂಕ್ತಗಳ ಪ್ರವರ್ತಕರು 'ಮಾಧ್ಯಮ'ರೆಂಬ ಹೆಸರಿನಿಂದ ಸಂಬೋಧಿಸಲ್ಪಡುತ್ತಾರೆ. ಒಂಭತ್ತನೆಯ ಮಂಡಲದ ಸಂವಿಧಾನವಾದರೋ ಋಷಿಸಂಬಂಧದ ಕಟ್ಟಳೆಗೊಳಪಟ್ಟುದಲ್ಲ; ಅದರೊಳಗಣ ಎಲ್ಲಾ ಸೂಕ್ತಗಳಿಗೂ ಸೋಮದೇವತೆಯೇ ಧ್ಯೇಯವಾಗಿರುವುದರಿಂದ ದೇವತಾಸಂಬಂಧವುಳ್ಳದ್ದಾಗಿದೆ. ಇದರಲ್ಲಿ ಸೂಕ್ತಗಳ ಸಮುಚ್ಚಯ (ಜೊತೆಗೂಡುವಿಕೆ) ಗಳು ಆ ಆ ಛಂದೋಜಾತಿಗಳನುಸಾರವಾಗಿ ಪ್ರಕಟವಾಗಿವೆ. ಯಾವ ಯಾವ ಜಾತಿಯ ಛಂದೋಬದ್ಧಗಳಾದ ಸೂಕ್ತಗಳು ಎಷ್ಟಿರುವುವೋ ಅವೆಲ್ಲವೂ ಆ ಆ ಛಂದೋಜಾತಿಗಳ ಪರಿವಿಡಿದು ಬೇರೆಬೇರೆ ಜೋಡಣೆಗೊಳಿಸಿದವುಗಳಾಗಿವೆ. ಗೋತ್ರಮಂಡಲಗಳ ಸೂಕ್ತಸಮುಚ್ಚಯಗಳಾದರೋ ದೇವತೆಗಳ ಸಂಬಂಧಕ್ಕೊಳಪಟ್ಟಿವೆ. ಎಂಟನೆಯ ಮಂಡಲದ ಸೂಕ್ತಗಳಲ್ಲಿ ಗೋತ್ರಮಂಡಲಗಳ ಸೂಕ್ತಗಳಂತೆ ಅನ್ಯೋನ್ಯಸಂಬಂಧವಿರುವುದು ತೋರಿಬರುವುದಾದರೂ, ಇದು (೮ ನೆಯ ಮಂಡಲವು) ಗೋತ್ರಮಂಡಲವೆನಿಸದು. ಏಕೆಂದರೆ—ಇದರ ದ್ರಷ್ಟಾರು ಏಕಗೋತ್ರೀಯರಲ್ಲ.

ಇದರ ದ್ರಷ್ಟಾರಲ್ಲಿ ಕಣ್ವಗೋತ್ರೀಯರಿಗೆ ಪ್ರಾಧಾನ್ಯವಿರುವುದರಿಂದ ಹೆಚ್ಚುಗಾರಿಕೆಯುಳ್ಳದ್ದೇ ಲೆಕ್ಕಿಸಲ್ಪಡುವುದೆಂಬ ನ್ಯಾಯಾನುಸಾರವಾಗಿ ಇದನ್ನು ಒಂದು ಗೋತ್ರದವರೇ ಕಂಡುಕೊಂಡರೆಂಬುದು ಸಮ್ಮತಿಸುವುದಲ್ಲವೇ? ಎಂದರೆ ಇದರಲ್ಲಿರುವ ಸೂಕ್ತಗಳ ಜೋಡಣೆಯ ಬಗೆಯು, ಇದು ಗೋತ್ರಮಂಡಲಕ್ಕಿಂತ ಬೇರೆಯಾದುದೆಂಬುದನ್ನು ತಿಳಿಸುವುದು. ಆದ್ದರಿಂದ ಇದು ಗೋತ್ರಮಂಡಲದಲ್ಲಿ ಪರಿಗಣಿಸಲ್ಪಡದು

ಮೊದಲನೆಯ ಮಂಡಲದ ಪೂರ್ವಾರ್ಧವು (೫೦ ಸೂಕ್ತಗಳು) ಎಂಟನೆಯ ಮಂಡಲವನ್ನು ಹೋಲುತ್ತದೆ. ಹೇಗೆಂದರೆ—ಆ ೫೦ ಸೂಕ್ತಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಕಣ್ವಗೋತ್ರೀಯರಿಂದ ಕಂಡದ್ದಾಗಿದೆ. ಎಂಟನೆಯ ಮಂಡಲದಲ್ಲಿ ಕಣ್ವಗೋತ್ರೀಯರಿಂದ ಅರಿಯಲ್ಪಟ್ಟ ಗಾನಾನುಕೂಲಗಳಾದ ಕೆಲವು ಛಂದೋವಿಶೇಷಗಳು ಇದರ ಪೂರ್ವಾರ್ಧದಲ್ಲಿ ಪ್ರಯೋಗಿಸಲ್ಪಟ್ಟಿವೆ. ಮತ್ತು ಇವೆರಡರಲ್ಲಿಯೂ ಸಮಾನವಾದ ಅರ್ಥಗಳೂ ಸಮಾನವಾದ ರೂಪಗಳೂ ಉಳ್ಳ ಅನೇಕ ವಾಕ್ಯಗಳು ದೊರೆಯುತ್ತವೆ. ಹೀಗಿದ್ದರೂ ಇವೆರಡರಲ್ಲಿ ಪ್ರಾಚೀನತರವಾದ ಭಾಗವು ಯಾವುದು? ಇಷ್ಟು ನಿಕಟಸಂಬಂಧವುಳ್ಳ ಇವುಗಳನ್ನು ಬೇರೆಬೇರೆ ಭಾಗದಲ್ಲಿ ಸೇರಿಸಲು ಕಾರಣವೇನಿರಬಹುದು? ಎಂಬ ಬಗ್ಗೆ ನಿಜವಾದ ಸಂಗತಿಯನ್ನು ತೋರಿಸುವುದು ಹಗುರಲ್ಲ; ಆದರೂ ಮೊದಲನೆಯ ಎಂಟನೆಯ ಮಂಡಲಗಳ ಅವಿಭಾಗಕಾಲವು ಬೇರೆಬೇರೆಯಾದುದರಿಂದಾಗಲಿ, ಕಣ್ವಗೋತ್ರೀಯಶಾಖೆಗಳು ಎರಡು ಹುಟ್ಟಿದುದರಿಂದಾಗಲಿ ಆ ತೆರವಾದ ಸೇರುವೆಯು ಉಂಟಾಗಿರುವುದೆಂದು ಹೇಳಬಹುದು.

(ಸಶೇಷ).

ಶರೀರಸಂಪತ್ತು.

ಬರೆದವ—ದೈವಜ್ಞವಿನೋದ, ಶಿರೋಳ.

ಮಾನವನಿಗೆ ಭೋಗ್ಯಗಳಾದ ಎಂಟುವಿಧದ ಸಂಪತ್ತುಗಳಲ್ಲಿ ಶರೀರಸಂಪತ್ತು ಮೊದಲನೆಯದು ಮತ್ತು ಅತ್ಯಂತ ಶ್ರೇಷ್ಠವಾದದ್ದು. ಶರೀರಸಂಪದಭಿವೃದ್ಧಿಯೆಂದರೆ ಶರೀರವನ್ನು ಆರೋಗ್ಯಸ್ಥಿತಿಯಲ್ಲಿಟ್ಟುಕೊಂಡು ರೋಗೋಪದ್ರವದ ಬಲೆಗೆ ಸಿಲ್ಕದೆ ದೇಹದ ಪುಷ್ಟತೆಯನ್ನು ಹೆಚ್ಚಿಸುವುದು. ಸಕಲೈಶ್ವರ್ಯಗಳು ಶರೀರಸಂಪತ್ತಿನ ನೆಲಗಟ್ಟಿನ ಮೇಲೆ ನಿಂತಿರುವವು. ತಳಹದಿಯೇ ಇಲ್ಲವಾದರೆ ಅವುಗಳು ನಿಲ್ಲುವ ಬಗೆ ಎಂತು? ಚಂದ್ರಕಾಂತಶಿಲೆಗಳಿಂದ ನಿರ್ಮಿಸಿದ ಆನಂದಭವನ (ಮನೆ) ಇದೆ; ಧನಕನಕಾದಿ ಸಂಪತ್ತುಗಳು ಆ ಮನೆಯಲ್ಲಿ ಹೇರಳವಾಗಿವೆ. ಊಟದ ಆಹಾರ ಪದಾರ್ಥಗಳ ವರ್ಣನೆಯು ನೆನೆದಾದರೆ ಬಾಯಿಯಲ್ಲಿ ನೀರುಬರುತ್ತಲಿದೆ. ಹಗಲು ರಾತ್ರಿ ವಿಶ್ರಾಂತಿಗಾಗಿ ಮಲಗುವ ಕೊಠಡಿಯ ಹಾಸಿಗೆ ಆಸನಗಳ ವೈಭವವೂ ಬೇಕಾದಷ್ಟಿದೆ. ಇಷ್ಟಲ್ಲದೆ ಸಂಪತ್ತಿಗೆ ತಕ್ಕ ನಾರೀರತ್ನಗಳೂ ಇರುವವೆಂದು ಹೇಳುವದೇ ಬೇಡ. ಆದರೆ ಇವೆಲ್ಲವುಗಳ ಭೋಗವನ್ನು ಅನುಭವಿಸುವ ಶ್ರೀಮಂತನ ಶರೀರಸಂಪತ್ತೊಂದು ಇರದಿದ್ದರೆ ಆನಂದಭವನವು ಸ್ಮಶಾನದಂತೆ ಕಾಣುವದು. ಧನಕನಕಾದಿ ರತ್ನಗಳು ಕೀಳುಪದಾರ್ಥವಾಗಿ ಕಾಣುವವು. (ಒಡವೆಗಳನ್ನು ಧರಿಸುವಷ್ಟು ಶಕ್ತಿ ಸಹ ಇಲ್ಲ.) ಅಮೃತ ಸದೃಶ ಆಹಾರಪದಾರ್ಥಗಳು ವಿಷದಂತಾಗುವವು. ಸರಿ; ರೂಪವತಿಯರೂ, ನವತರುಣಿಯರೂ ಆದ ಕಾಂತೆಯರನ್ನು ಕಂಡೊಡನೆ ಇವನ ಕಂಠವೇ ಕರಗಿ ಅವರಿಗೆ ಕೂಡಲೆಯೇ ಶರಣಾಗತನಾಗುವ ಪ್ರಸಂಗಬರುವದು. ಶರೀರಸಂಪತ್ತಿನ ಮುಂದೆ ಉಳಿದ ಸಂಪತ್ತುಗಳನ್ನು ನಿವಾಳಿಸಿ ಒಗೆಯಬಹುದು. ಯಾವನು ಶರೀರಸಂಪತ್ತನ್ನು ಕಾಪಾಡಿಕೊಳ್ಳುವನೋ ಅವನಿಗೆ ಉಳಿದ ಸಂಪತ್ತುಗಳ ಹಂಗಿರುವದಿಲ್ಲ. ದೇಹಬಲಶಾಲಿಯಾದವನು ಮುರುಕಗುಡಿಸಲಿನಲ್ಲಿದ್ದರೂ ದುಃಖಪಡುವದಿಲ್ಲ. ಅವನಿಗೆ ಊಟದ ಪದಾರ್ಥಗಳೇ ಸಿಕ್ಕದ್ದರೂ ಅವುಗಳನ್ನು ಭುಂಜಿಸಿ ಅರಗಿಸಿಕೊಳ್ಳುವನು. "ಅವನೇನು? ಕಲ್ಲು ತಿಂದು ದಕ್ಕಿಸಿಕೊಳ್ಳುವನು" ಎಂಬ ಹಳೆಯ ನುಡಿಯಲ್ಲಿಯೂ ಸೊಗಸಾದ ತಿಳುವಂಟು. ದೇಹದ ಬೆಳವಣಿಗೆಯನ್ನು ಸತತ ಬೆಳೆಯುತ್ತಿದ್ದ ಭಂಟಿಗೆ ಮೆತ್ತನ್ನ ಗಾದೆಯು ಬೇಡ, ಎರಿಯ ಹೆಂಟೆಯ ಹೊಲದಲ್ಲಿ ಮಲಗಿ ಸುಖನಿದ್ರೆ ಮಾಡುವನು. ಇಹಲೋಕದ ಸುಖಭೋಗಾಪೇಕ್ಷೆಗಳು ಅದನ್ನು ಅಪೇಕ್ಷಿಸುವ ದೇಹವೆಂಬ ಕಬ್ಬಿಣಪೆಟ್ಟಿಗೆಯನ್ನು ಭದ್ರವಾಗಿಟ್ಟುಕೊಳ್ಳಬೇಕು. ಅದು ಕಳ್ಳರಿಗೆ (ರೋಗ) ಸಾಧ್ಯವಾಗದಂತೆಯೂ ಅಕಸ್ಮಾತ್ ಅಗ್ನಿ (ಮೃತ್ಯು) ನಾರಾಯಣನಿಗೆ ಆಹುತಿಯಾಗುವ ಪ್ರಸಂಗಬಂದರೂ ಒಳಗಿರುವ ಜೀವರತ್ನವನ್ನು ಯಮನು ಅಪಹರಿಸಲು ಬಾರದಷ್ಟು ದೇಹಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ದೇಹವನ್ನು ಬಲಪಡಿಸಿಕೊಂಡರೆ ರೋಗೋಪದ್ರವವನ್ನಷ್ಟೆ ಏಕೆ? ಮೃತ್ಯುವನ್ನು ಸಹ ತಡೆಯುವ ಶಕ್ತಿಯು ಬರುವದು. ಮಾರುತಿಯು ವಜ್ರದೇಹಿಯಾದುದರಿಂದಲೇ ಚಿರಜೀವಿಯಾದನು. ದೇಹಾರೋಗ್ಯವನ್ನು ಬಯಸುವವನು ವ್ಯಾಯಾಮ ಸಾಧನೆಯನ್ನು ಮಾಡಬೇಕು. ದೇಹಸಂಪದಭಿವೃದ್ಧಿಗಾಗಿಯೇ ಆರ್ಯರು ೨೫ ವರ್ಷಗಳವರೆಗೆ ಗುರುಕುಲಾಶ್ರಮದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಬೇಕೆಂದು ವಿಧಿಯನ್ನು ಗೊತ್ತುಮಾಡಿದರು. ಈ ಬ್ರಹ್ಮಚರ್ಯಾಶ್ರಮದ ಮಹತ್ವಾತಿಶಯವು ಸಾಮಾನ್ಯವಾದುದಲ್ಲ. ಶರೀರದ ತೇಜವು ವೃದ್ಧಿಯಾಗುತ್ತಿರುವದು. ಸಕಲ ವಿದ್ಯೆಗಳೂ ಸಾಧ್ಯವಾಗುವವು. ಶರೀರಬಲವನ್ನೂ ವಿದ್ಯಾಭಿವೃದ್ಧಿಯನ್ನೂ ಹೊಂದಿ ಗುರುಕುಲಾಶ್ರಮದಿಂದ ಹೊರಬಿದ್ದ ಬ್ರಹ್ಮತೇಜಸ್ವಿಗಳು ಗೃಹಸ್ಥಾಶ್ರಮವನ್ನಾಗಲಿ, ಆ ಜನ್ಮ ಬ್ರಹ್ಮಚರ್ಯಾಶ್ರಮವನ್ನಾಗಲಿ, ಸರ್ವಸಂಗಪರಿತ್ಯಾಗಮಾಡಿದ ಸನ್ಯಾಸಾಶ್ರಮವನ್ನಾಗಲಿ ಸ್ವೀಕರಿಸಿ ಜಗತ್ತನ್ನುದ್ಧರಿಸುತ್ತಿದ್ದರು. ಬ್ರಹ್ಮಚರ್ಯಾಶ್ರಮಪಾಲನೆಗೆ ಗುರುಕುಲಾಶ್ರಮಗಳು ಈಗ ಲೋಪವಾಗಿವೆ. ಈಗಿನ ಶಾಲೆಕಾಲೇಜುಗಳ ಸ್ಥಿತಿಯಂತೂ ಇದ್ದಷ್ಟು ಬ್ರಹ್ಮಚರ್ಯವನ್ನು ಹಾಳುಮಾಡತಕ್ಕಂಥದಾಗಿದೆ. ಅದು ಏನೇ ಇರಲಿ, ನಮ್ಮ ಆರ್ಯಾವರ್ತದಲ್ಲಿ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ದೇಹಬಲಗೊಳಿಸುವ ಗರಡೀಮನೆಗಳು ಬೇಕಾದಷ್ಟಿದ್ದವು. ಅವೆಲ್ಲ ಈಗ ಲೋಪವಾಗಿ ಅವುಗಳ ಸ್ಥಳದಲ್ಲಿ ಈಗ ಲೋಕಶತ್ರುಗಳಾದ ಚಹಾದಂಗಡಿಗಳಾಗಿವೆ. ವಿವೇಕ ಶಾಲಿಗಳಾದವರು ಶರೀರ ಸಂಪತ್ತಿನ ಬೆಲೆಯನ್ನು ತಿಳಿದು ಅದನ್ನು ಪೋಷಿಸಬೇಕು.

ಸನಾತನಧರ್ಮಬೋಧಕರ ಆಗಮನ.

ದಾವಣಗೇರಿ.

ರಾಯಚೂರ ಜಿಲ್ಲಾ ಪೈಕಿ ದಾವಣಗೇರಿ ಗ್ರಾಮಕ್ಕೆ ಸನಾತನ ಧರ್ಮಬೋಧಕರಾದ ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಕುಷ್ಟಗಿಯಿಂದ ಆಗಮಿಸಿದರು. ಪುರಪ್ರಮುಖರಾದ ಪಾಟೀಲ ಬಸನಗೌಡರು, ಮಾಲಿಪಾಟೀಲ, ಅಯ್ಯನಗೌಡರು ಮಾಡಗಿರಿ, ಪೋಲೀಸಪಾಟೀಲ ಪಂಪನಗೌಡರು ಮೊದಲಾದ ಜನಬಳಕವರು ತಾ|| ೨೮-೬-೩೩ ನೆಯ ದಿವಸ ಸ್ವಮತಾಭಿಮಾನಿಯರನ್ನೆಲ್ಲಾ ಕೂಡಿಸಿ, ವೀರಭದ್ರದೇವಸ್ಥಾನದಲ್ಲಿ ಮೂರು ದಿವಸ ಸಭೆಯನ್ನು ನಡೆಸಿದರು. ಸಭೆಗೆ ಭಕ್ತಸ್ತ್ರೀಪುರುಷರು ಬಹುಭಕ್ತಿಯಿಂದ ಬರುತ್ತಿದ್ದರು. ಅಧ್ಯಕ್ಷರಾದ ಸ್ವಾಮಿಗಳು, ನಾವೆಲ್ಲರೂ ಭಂಗುರವಾದ ಪ್ರಪಂಚದಲ್ಲಿ ಮುಳುಗಿ ಜನನಮರಣಾದಿಗಳಿಗೆ ಸಿಲುಕಿ ಬಳಲಿ ಬಳಲಿ ಬೆಂಡಾಗುತ್ತಲಿದ್ದೇವೆ. ನಮ್ಮ ಅಜ್ಞಾನವೇ ಇದಕ್ಕೆ ಮೂಲಕಾರಣವೆಂದು ಹೇಳಬಹುದು. ಏಕೆಂದರೆ ಗಾಣದ ಎತ್ತು ಕಣ್ಣನ್ನು ಕಟ್ಟಿಕೊಂಡು ಬಿಡದೆ ಹೇಗೆ ತಿರುಗುತ್ತದೆಯೋ ಅದರಂತೆ ನಾವಾದರೂ ಈ ಭವಚಕ್ರವೆಂಬ ಗಾಣವನ್ನು ತಿರುಗಲಿಕ್ಕೆ ಹತ್ತಿದ್ದೇವೆ. ಇನ್ನಾದರೂ ಅಜ್ಞಾನಾಂಧಕಾರವನ್ನು ದೂಡಿ ಪಾರಮಾರ್ಥಿಕಸುಖವನ್ನು ಪಡೆದು ಕೃತಾರ್ಥರಾಗಬೇಕೆಂದು ಅನೇಕ ಉದಾಹರಣೆಗಳಮೂಲಕ ವೇದಾಂತವಿಷಯವನ್ನು ಬೋಧಿಸಿದ್ದಲ್ಲದೆ, ಪ್ರಾಣಿಗಳನ್ನು ಹಿಂಸೆಮಾಡಬಾರದೆಂದೂ, ಕನ್ಯಾವಿಕ್ರಯಮಾಡಬಾರದೆಂದೂ, ಮಾಡಿದರೆ ಮುಂದೆ ಅವರು ಪಶುಜನ್ಮದಲ್ಲಿ ಬೀಳಬೇಕಾಗುತ್ತದೆಂದೂ ಬಹುಸರಳವಾಗಿ ಬೋಧಿಸಿದರು. ಇವರ ಬೋಧಾಮೃತವನ್ನು ಸರ್ವರೂ ಪಾನಮಾಡಿ ತಲೆದೂಗಿದರು. ಇವರು ನಮ್ಮ ಗ್ರಾಮಕ್ಕೆ ದಯಮಾಡಿ ಬೋಧಮಾಡೋಣದರಿಂದ ನಮಗೆ ಎಲ್ಲಾ ವಿಷಯಗಳು ತಿಳಿದವೆಂದು ಜನರು ಪರಸ್ಪರ ಮಾತನಾಡುತ್ತ ಸ್ವಾಮಿಗಳನ್ನು ಕೊಂಡಾಡುತ್ತಿದ್ದರು. ಧರ್ಮಗುರುಗಳಾದವರು ಭಕ್ತರಿಗೆ ಬೋಧಮಾಡಿ ಅವರಲ್ಲಿ ಬಹುದಿವಸಗಳಿಂದ ಅಂಟಿಕೊಂಡಿರುವ ಅಜ್ಞಾನವನ್ನು ಬಿಡಿಸಿ ಧರ್ಮದಲ್ಲಿ ಭಕ್ತಿಯು ನೆಲೆಗೊಳ್ಳುವಂತೆ ಮಾಡಬೇಕು. ಇದನ್ನೆಲ್ಲಾ ಬಿಟ್ಟು 'ಗುರವೋ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ' ಎಂಬಂತೆ ಶಿಷ್ಯರ ದುಡ್ಡು ಸೆಳೆದು ಕೊಂಡುಹೋಗುವ ಗುರುಗಳೇ ಬಹಳಜನರು ಇದ್ದಾರೆ. ಸಜ್ಜನರಲ್ಲಿ ಬೋಧಮಾಡುವವರೇ ಇಲ್ಲದಾಗಿದೆ. ಚಿಕ್ಕಮಣ್ಣೂರು ಸ್ವಾಮಿಗಳು ಅನೇಕ ಪ್ರದೇಶದಲ್ಲಿ ಸಂಚರಿಸಿ, ಬೋಧಮಾಡುವ ಕಾರ್ಯವು ಬಹುಮತದವರಿಗೆ ಸ್ತುತ್ಯವಾಗಿದೆ. ಈ ಸ್ವಾಮಿಗಳು ಯಾವಯಾವ ಗ್ರಾಮಕ್ಕೆ ದಯಮಾಡಿಸುತ್ತಾರೆಯೋ ಆ ಗ್ರಾಮದ ದೈವದವರು ಸಹಾಯಮಾಡಿ ಸಭೆಯನ್ನು ಮಾಡಿ ಸರ್ವರಿಗೂ ಬೋಧೆಯನ್ನು ಮಾಡಿಸಿದ್ದಾದರೆ ಪುಣ್ಯಕ್ಕೆ ಭಾಗಿಗಳಾಗುತ್ತಾರೆಂದು ಬೇರೆ ಹೇಳಬೇಕಾಗಿಲ್ಲ. ಸರ್ವರೂ ಈ ಪುಣ್ಯಕಾರ್ಯದಲ್ಲಿ ಸೇರಿ ಕಾರ್ಯಮಾಡಬೇಕು. ಈ ದಾವಣಗೇರಿ ಗ್ರಾಮದಲ್ಲಿ ಸಭೆಗೆ ಕರೆಕೊಟ್ಟಿದ ವೀರಸಂಗಪ್ಪನವರು, ಸಿಂಪರ ಶಿವಣ್ಣನವರು ರುದ್ರಪ್ಪನವರು ಸಹಾಯವನ್ನುಮಾಡಿ ಧನ್ಯರಾದರು. ಇವರಂತೆ ಸರ್ವರೂ ಸಹಾಯಮಾಡಬೇಕೆಂದು ತಿಳಿಸುವ,

ಸಂಗಪ್ಪ ಗುರಿಕಾರ, ದಾವಣಗೇರಿ.

ವಾದಭೂಮಿ.

(ಬರೆದವ—ದೈವಜ್ಞ ವಿನೋದ.)

ವಾದಭೂಮಿಯ ಲಕ್ಷಣಗಳನ್ನರಿತು ವಾದಗ್ರಸ್ತ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಯುತ್ತಿರುವದು ಲೇಖನಕಾರರ ಕರ್ತವ್ಯವು. ವಾದಭೂಮಿಯಲ್ಲಿ ತಮ್ಮ ಲೇಖವು ಚೆನ್ನಾಗಿ ವಿಮರ್ಶೆಹೊಂದಿ ಪ್ರಕಾಶವನ್ನು ಹೊಂದಬೇಕೆಂಬವರು ತಮ್ಮ ಲೇಖವನ್ನು ಪ್ರಮಾಣದರೂಪ ನೆಲಗಟ್ಟಿನೊಡಗೂಡಿ ಕಳುಹಿಸಬೇಕು. ಅಪ್ರಮಾಣದ ಅವಲಕ್ಷಣ ಲೇಖಗಳಿಗೆ ಶೋಧಕರು ಅಮಂಗಲದಾರುತಿಯನ್ನು ಮಾಡುವರು. ಸಯುಕ್ತಿಕ ಸಪ್ರಮಾಣದ ಸರಳ ಲೇಖದ ಸರಣಿಯನ್ನು ಸದಸದ್ವಿವೇಕಿಗಳು ಸರಿಯಾಗಿ ಸಂಶೋಧಿಸಿ ಸದುತ್ತರ ಸನ್ಮಂಗಲಗಳಿಂದ ಸ್ವಾಗತವನ್ನು ಬಯಸುವರು. ಲೇಖನವಾದ ಭೂಮಿಯು ಬಹಳ ಮಹತ್ವದ್ದಿರುವದು. ಇದರಲ್ಲಿ ಪ್ರವೇಶಿಸುವವನು ಸರ್ವಸಮರ್ಥನಾಗಿರಬೇಕು. ಅಂಜುತ್ತ ಅಳುಕುತ್ತ ಪರರ ಪ್ರೇರಣೆಯಿಂದ ಪರನಿಂದೆಯ ಲೇಖವನ್ನು ಪ್ರಕಟಿಸಿದ್ದಕ್ಕೆ ಪ್ರತಿಭಟಿಸಿ ಬರೆಯುವ ಪ್ರಾಜ್ಞರ ಪ್ರಬಲಲೇಖದ ಸಿಂಹಗರ್ಜನೆಗೆ ಹೆದರಿ ಮೂಲೆಹಿಡಿಯುವ ಮಹಾನುಭಾವರೇ ಈಗ ಬಹಳವಾಗಿದ್ದಾರೆ. ಪ್ರತಿಸ್ಪರ್ಧೆಯಿಂದ ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ಸನ್ಮಾರ್ಗಾವಲಂಬನೆಯಿಂದ ವಾದಭೂಮಿಯಲ್ಲಿ ಪ್ರವೇಶಿಸುವ ಲೇಖಗಳನ್ನು ಓದುವ ಓದುಗರಿಗೆ ಆನಂದವಾಗುವದು. ವಾದಗ್ರಸ್ತಲೇಖಕನು ಐತಿಹಾಸಿಕ ಪ್ರಮಾಣದಾತೆಯಿಂದ ಬರೆದ ಲೇಖಕ್ಕೆ ಪ್ರತಿವಾದಿ ಲೇಖಕನು ಪುರಾಣದ ರಗಳೆಯ ಬರವಣಿಗೆಯನ್ನು ಬರೆಯುವದು. ಅಥವಾ ಪುರಾಣಪುಣ್ಯಕಥೆಯ ವಿಚಾರದ ಬಗ್ಗೆ ಬರೆದರೆ ವಚನಶಾಸ್ತ್ರದ ಗಂಟನ್ನು ಬಿಚ್ಚುವದು ಹೀಗೆ ಯದ್ವಾತದ್ವಾ ಪ್ರಕಟವಾಗುವ ಲೇಖಗಳನ್ನು ಓದಿದ ವಾಚಕರು ಇಂಥ ಲೇಖಗಳು ಪ್ರಕಟವಾಗುವ ಪತ್ರಿಕೆಗಳಿಗೆ ಗೌರವವನ್ನು ಹಿಂದಿನವಾಗಿ ಕೊಡುವದಿಲ್ಲ. ವಾದಗ್ರಸ್ತಲೇಖಗಳನ್ನು ತಮ್ಮ ಬುದ್ಧಿಶಕ್ತಿಯಿಂದ ಚಿಂತನಾತ್ಮಕವಾಗಿ ಬರೆಯಬೇಕೆನ್ನುವವರು ತಾವು ಬರೆದ ಲೇಖವನ್ನು ವಾಚಕರ ಮುಂದಿಡುವಾಗ ತಾವು ಯಾವ ಲೇಖವನ್ನು ಖಂಡಿಸಬೇಕಾಗಿರುವದೋ ಅದನ್ನು ಇದ್ದಕ್ಕಿದ್ದಂತೆ ಇಡಬೇಕಾಗುತ್ತದೆ. ಅಥವಾ ಅದರ ಮೂಲಸಾರಾಂಶವನ್ನಾದರೂ ಅದಕ್ಕೆ ಚ್ಯುತಿಬಾರದಂತೆ ತೆಗೆದುಕೊಳ್ಳಬೇಕು. ವಿಷಯ ವಿಮರ್ಶೆಮಾಡದೆ ವಿಪರೀತ ಭಾವನೆಯಿಂದ ಬರೆಯುವದು ಯೋಗ್ಯವಲ್ಲ. "ಕಲ್ಯಾಣದ ಬಸವನ ಅಕ್ಕನೆಂದು ಹೇಳಿಸಿಕೊಳ್ಳುವ ನಾಗವ್ವನು ಯಾರು? ಯಾರವಳು? ಯಾವ ಜಾತಿಯವಳು? ಅವಳ ಗಂಡನಾರು? ಅವಳ ಹೆಸರಿನ ವಚನಗಳು ಅನ್ಯಕೃತಗಳೋ? ಅವಳಿಂದಲೇ ಆದವುಗಳೋ?" ಎಂದು ಒಂದು ವಾದ ವಿಷಯವು ಪ್ರಕಟವಾದರೆ ಅದಕ್ಕೆ ಸಪ್ರಮಾಣವಾಗಿ ಉತ್ತರವನ್ನೀಯಬೇಕಲ್ಲವೇ? ಹಾಗಿಲ್ಲದೆ ಈಗ ಆ ವಾದದಗೊಡವೆಗೆ ಹೋಗದೆ 'ಪ್ರಮಥನಿಂದಕರು' 'ಶರಣದೂಷಕರು' 'ವಿರಕ್ತವಿರೋಧಿಗಳು' ಎಂದು ಹಂತಬಂಗದ ಬಡಬಡಿಕೆಗೆ ಪ್ರಾರಂಭಮಾಡುವರು. 'ವಾದೇವಾದೇ ಜಾಯತೇ ತತ್ವಬೋಧಃ' ಎಂಬ ಪ್ರಮಾಣದಂತೆ ಯೋಗ್ಯವಾದ ವಾದಭೂಮಿಯೊಳಗಿನ ಲೇಖಗಳ ಮಥನದಿಂದ ನಿಜವಾದ ವಿಷಯರತ್ನವು ಹೊರಬೀಳುವದು. 'ಪ್ರಕೃತ ತಾರನೇ ದಂತಭಂಗಃ' ಎಂಬಂತಾದರೆ ಮಾತ್ರ ಹಾಸ್ಯಾಸ್ಪದಕ್ಕೆ ಗುರಿಯಾಗಬೇಕಾಗುತ್ತದೆ. ವಾದಭೂಮಿಯ ಲೇಖಕರು ಪರಸ್ಪರವಾಗಿ ಸಹಾನುಭೂತಿಯುಳ್ಳವರಾಗಿರಬೇಕು. ಪರಸ್ಪರವಾಗಿ ಲೇಖಗಳನ್ನು ಬರೆಯುವಾಗ ಮಾತ್ರ ತಮ್ಮ ಗಂಭೀರತೆಯನ್ನು ವ್ಯಕ್ತಪಡಿಸಬೇಕಲ್ಲದೆ ವ್ಯಕ್ತಿವೈಷಮ್ಯದಭಾವವನ್ನು ಪ್ರಕಟಿಸಬಾರದು. ನ್ಯಾಯಕೋರ್ಟುಗಳಲ್ಲಿ ವಾದಿ-ಪ್ರತಿವಾದಿಗಳ ವಕೀಲರು ಪ್ರತಿಭಟಿಸಿ ಕಾಯದೆ ಸ್ವರೂಪವನ್ನು ತಮ್ಮ ತಮ್ಮ ಪಕ್ಷದಂತೆ ಜಗ್ಗುತ್ತಿರುವಾಗ ಪ್ರಬಲವಾಗಿ ಒದರಾಡುವರು. ಅದೇ ವಕೀಲರು ಕೋರ್ಟಬಿಟ್ಟು

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೩ ನೇ ಜುಲೈ ತಾ|| ೩೧ ನೇ ಸೋಮವಾರ.

ವೇದಾಜ್ಞಾಪಾಲನ.

ವೇದವೆಂಬುದು ಸೃಷ್ಟಿಪೂರ್ವದಿಂದಲೂ ಪರಮೇಶ್ವರನ ಮುಖಗಳಿಂದಾವಿರ್ಭವಿಸಿರುವ ಆನುಪೂರ್ವಿಯಾದ ದಿವ್ಯವಾಣಿಯಾದುದರಿಂದ ಅದು ಅಪೌರುಷೇಯವಾಣಿಯೆನಿಸಿಕೊಂಡಿರುವುದಲ್ಲದೆ ಅಲ್ಲಿ ಹೇಳಿರತಕ್ಕದ್ದೆಲ್ಲವೂ ಯಥಾರ್ಥವಾದುದಾಗಿದೆ. ಸಕಲ ಶಾಸ್ತ್ರಕಾರರೂ ಈ ವೇದವನ್ನು ನಿತ್ಯ ವೆಂದು ಒಪ್ಪಿಕೊಂಡಿರುವುದರಿಂದ, ವೇದದಲ್ಲಿ ಹೇಳಲ್ಪಟ್ಟುದುದೆಲ್ಲವೂ ಪ್ರಮಾಣವೆಂದೇ ಸಿದ್ಧವಾಗುತ್ತದೆ. ವೇದವು ಪರಮೇಶ್ವರನ ಆಜ್ಞಾರೂಪವಾಗಿರುತ್ತದೆ. ಈ ಪರಮೇಶ್ವರಾಜ್ಞೆಯನ್ನು ಯಾರೂ ಮೀರಬಾರದು. ತಂದೆಯ ಆಜ್ಞೆಯನ್ನು ಪಾಲಿಸುವವನೇ ಸತ್ಪುತ್ರನೆನಿಸುವಂತೆ ಭಾರತಭೂಮಿಯಲ್ಲಿ ಜನ್ಮವೆತ್ತಿದವರೆಲ್ಲರೂ ಲೋಕ ಜನಕನಾದ ಪರಮೇಶ್ವರನ ಆಜ್ಞಾರೂಪವಾದ ವೇದವಾಣಿಯನ್ನು ಪಾಲಿಸಿ ಆಸ್ತಿಕರೆನಿಸಿಕೊಳ್ಳಬೇಕು. ಯಾವನು ವೇದವನ್ನು ಸುಳ್ಳೆಂದು ಹೇಳುವನೋ ಅವನು ದೇವರಿಲ್ಲವೆಂದು ಹೇಳಲು ಭಯಪಡುವುದಿಲ್ಲ. ದೇವರನ್ನು ಪ್ರತ್ಯಕ್ಷವಾಗಿ ನೋಡಿಯೇ ದೇವರುಂಟೆಂದು ಯಾರೂ ಹೇಳುವುದಿಲ್ಲ. ದೇವರಿದ್ದಾನೆಂಬುವುದನ್ನು ಆಪ್ತವಾಕ್ಯದಿಂದಲೇ ನಿಶ್ಚಯಮಾಡಿಕೊಳ್ಳಬೇಕಾಗಿದೆ.

ಅಂಥ ಆಪ್ತ ವಾಕ್ಯವೆಂದರೆ ಈಶ್ವರನ ವಾಣಿಯೇ ಹೊರತು ಇನ್ನಾವುದೂ ಆಗಲಾರದು. ಇದನ್ನೇ ಶಾಸ್ತ್ರಕಾರರು ಶಬ್ದಪ್ರಮಾಣವೆನ್ನುತ್ತಾರೆ. ಲೋಕದಲ್ಲಿ ಆಪ್ತನಾದ ಪುರುಷನು ಏನು ಹೇಳಿದರೂ ಅದನ್ನು ನಂಬಲೇಬೇಕು. ಅವನು ಹೇಳುವುದೆಲ್ಲವೂ ಹಿತಕ್ಕಾಗಿಯೇ ಹೊರತು ಅಹಿತಕ್ಕಾಗಿ ಯಾವುದೂ ಇರುವುದಿಲ್ಲ. ಅಂಥ ಅಹಿತವನ್ನು ತೋರುವವನು ಆಪ್ತನೇ ಅಲ್ಲ. ಆಪ್ತನೆಂದರೆ "ಯಥಾರ್ಥವಕ್ತಾ" ಇದ್ದದ್ದು ಇದ್ದ ಹಾಗೆ ಬೋಧಿಸುವವನೇ ಆಪ್ತನು. ಅದರಂತೆ ತನ್ನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿ ಪ್ರಾಣಿಗಳ ತಾರತಮ್ಯಾನುಸಾರವಾಗಿ ಹಿತಾನುಕೂಲವಾದ ಧರ್ಮಮಾರ್ಗವನ್ನು ಅಹಿತಾನುಕೂಲಗಳಾದ ಅಧರ್ಮಮಾರ್ಗಗಳನ್ನೂ ಸರ್ವತೋಮುಖವಾಗಿ ವೇದವು ಬೋಧಿಸುತ್ತದೆ. ಈಶ್ವರನ ಮಕ್ಕಳಂತಿರುವ ಮಾನವರೆಲ್ಲರೂ ಪರಮಾಪ್ತನಾದ ಪರಮೇಶ್ವರನ ವೇದರೂಪವಾದ ಶಾಸನವನ್ನು ಶ್ರದ್ಧೆಯಿಂದ ಪಾಲಿಸುವುದರಿಂದ ಅವರಿಗೆಂದೂ ಹಾನಿಯು ತಟ್ಟುವುದಿಲ್ಲ. ವೇದವು ಒಳ್ಳೆಯ ಕೆಲಸವನ್ನು ಮಾಡುವುದರಿಂದಾಗುವ ಸುಖವನ್ನೂ ಕೆಟ್ಟ ಕೆಲಸವನ್ನು ಮಾಡುವುದರಿಂದಾಗುವ ದುಃಖವನ್ನೂ ಬೋಧಿಸುತ್ತದೆ. ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ತಾನು ಸುಖವನ್ನು ಪಡೆಯಬೇಕೆಂದು ಬಯಸುವನಲ್ಲದೆ ದುಃಖವನ್ನು ಬಯಸುವುದಿಲ್ಲ. ಆದರೂ ಕೆಲವರು ದುಃಖಸಾಧನಗಳಾದ ಕೆಲಸಗಳನ್ನು ಸುಖಸಾಧನಗಳೆಂದು ಭ್ರಮಿಸಿ ವೇದಶಾಸನವನ್ನು ಮೀರಿ ತಾವು ಮಾಡುವುದೆಲ್ಲವೂ ನ್ಯಾಯವೆಂದು ಭ್ರಮಿಸಿರುತ್ತಾರೆ. ಆಪ್ತವಾಕ್ಯವೆನಿಸಿದ ವೇದವು ಮುಂದೆ ಬಂದು ನಿಂತಿದ್ದರೂ ಅದನ್ನು ಲಕ್ಷ್ಯಮಾಡದೆ ಮಾಡಬಾರದ ಕಾರ್ಯವನ್ನು ಮಾಡಿ ದೈವದ್ರೋಹಿಗಳಾಗಿ ಅಲೆಯುವದು ಮಾನವಜನ್ಮಕ್ಕೆ ಅತ್ಯಂತ ಹೇಯವಾದ ಕಾರ್ಯವೆಂದು ಸ್ಪಷ್ಟವಾಗುತ್ತದೆ.

ಪರಮೇಶ್ವರನು ಶಿಷ್ಟಮಾರ್ಗವೇ ಧರ್ಮವೆಂದೂ ಅನಿಷ್ಟಮಾರ್ಗವೇ ಅಧರ್ಮವೆಂದೂ ಒಂದು ನಿಯಮವನ್ನು ಮಾಡಿರುತ್ತಾನೆ. "ವೇದಬೋಧಿತೇಷ್ಟಸಾಧನತಾಕೋಧರ್ಮಃ" "ವೇದಬೋಧಿತಾನಿಷ್ಟಸಾಧನತಾಕೋ ಅಧರ್ಮಃ" ಎಂಬ ಅಭಿಯುಕ್ತೋಕ್ತಿಯು ಸಹ ಇದನ್ನೇ ಬೋಧಿಸುತ್ತದೆ. ಆದುದರಿಂದ ವೇದವು ಯಾವುದನ್ನು ಅನಿಷ್ಟವೆಂದು ಬೋಧಿಸುತ್ತದೆಯೋ ಅದನ್ನು ಅಧರ್ಮವೆಂತಲೂ, ಯಾವುದನ್ನು ಇಷ್ಟವಾದುದೆಂದು ಬೋಧಿಸುತ್ತದೆಯೋ ಅದನ್ನು ಧರ್ಮವೆಂತಲೂ ತಿಳಿದುಕೊಂಡು ಧರ್ಮಾಧರ್ಮಗಳನ್ನು ನಿಶ್ಚಯಗೊಳಿಸಿಕೊಳ್ಳಬೇಕಲ್ಲದೆ ತಮಗಿಷ್ಟವಾದುದೆಲ್ಲವೂ ಧರ್ಮವೆಂದೂ ತಮಗನಿಷ್ಟವಾದುದೆಲ್ಲವೂ ಅಧರ್ಮವೆಂದೂ ಯಾರೂ ತಿಳಿಯಬಾರದು. ಇದ್ದೇ ಸನಾತನಧರ್ಮದ ರಹಸ್ಯವು. ಲೋಕದಲ್ಲಿ ~~ಮಹಾರಾಜನು~~ ತನ್ನ ಪ್ರಜಾಸುಖಕ್ಕಾಗಿ ಒಂದು ಶಾಸನವನ್ನು ಮಾಡಿ ಆ ಶಾಸನವನ್ನು ಯಾರು ಮುರಿಯುತ್ತಾರೆಯೋ ಅವರು ~~ರಾಜ~~ದ್ರೋಹಿಗಳೆಂದು ಭಾವಿಸಿ ಅಂಥವರಿಗೆ ಶಾಸನಪ್ರಕಾರವಾಗಿ ಶಿಕ್ಷೆಯನ್ನು ವಿಧಿಸು~~ತ್ತಾನೆ~~. ಯಾರು ಆ ಶಾಸನವನ್ನು ಪಾಲಿಸುತ್ತಾರೆಯೋ ಅವರನ್ನು ಅನುಗ್ರಹಿಸುತ್ತಾನೆ. ಅದರಂತೆ ಚತುರ್ದಶಭುವನಗಳನ್ನೂ ಲೀಲಾಮಾತ್ರದಿಂದ ಆಳುತ್ತಿರುವ ದೇವತಾಸಾರ್ವಭೌಮನಾದ ಪರಮೇಶ್ವರನು ವೇದವೆಂಬ ಶಾಸನದ್ವಾರಾ ಈ ಲೋಕವನ್ನು ಆಳುತ್ತಿರುವನು. ಯಾವನು ವೇದದಲ್ಲಿ ನಿಷೇಧಿಸಲ್ಪಟ್ಟಿರುವ ದುರ್ಮಾರ್ಗದಲ್ಲಿ ಪ್ರವೇಶಿಸುತ್ತಾನೆಯೋ ಅವನು ಘೋರವಾದ ಶಿಕ್ಷೆಗೆ ಗುರಿಮಾಡಲ್ಪಟ್ಟು ನರಕಾದಿ ಹೀನಜನ್ಮಗಳಿಗೆ ಒಯ್ಯಲ್ಪಡುತ್ತಾನೆ. ಯಾವನು ಈಶ್ವರ ಶಾಸನವನ್ನು ಸ್ವಲ್ಪಮಾತ್ರವೂ ಮೀರದಂತೆ ಪಾಲಿಸುತ್ತಾನೆಯೋ ಅವನು ಈ ಮನುಷ್ಯಜನ್ಮಕ್ಕಿಂತಲೂ ಉತ್ತಮವಾದ ದೇವತಾಜನ್ಮಕ್ಕೇರಿಸಲ್ಪಡುವನು.

ಹೀಗಿದ್ದರೂ ಕೆಲವರು ಇಂಥ ಪರಮಾಪ್ತನಾದ ಈಶ್ವರನ ಶಾಸನವನ್ನು ಬಹಳ ಹಗುರಾಗಿ ಕಾಣುತ್ತ ಬಂದಿರುವುದನ್ನು ನೋಡಿದರೆ ಇದು ಪಾಪಮಯವಾದ ಕಲಿಯುಗದ ಪ್ರಭಾವವೆಂದೇ ಹೇಳಬೇಕಾಗಿದೆ. ಎಲ್ಲಿ ನೋಡಿದರೂ ವೇದಶಾಸನೋಲ್ಲಂಘನಕಾರಿಯಾದ ವರ್ತನೆಗಳೂ, ಆ ವೇದವೆಂಬ ಈಶ್ವರನ ಶಾಸನವನ್ನು ಪ್ರಚಾರಮಾಡುವ ಗುರುಗಳ ತಿರಸ್ಕಾರಶಬ್ದವೂ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡುತ್ತಿರುವ ಪ್ರಭುತ್ವನಿರಾಕರಣ ಶಬ್ದಗಳೂ ಕೇಳಿಬರುವವಲ್ಲದೆ, ತಮ್ಮಗಳ ಮೇಲೆ ಯಾರ ಶಾಸನವೂ ಇಲ್ಲದಂತೆ ನಿರಂಕುಶರಾಗಬೇಕೆಂಬ ಹವಣಿಕೆಯು ಅನೇಕರಲ್ಲಿ ಒಡಮೂಡುತ್ತಲಿರುವುದು. ಇದರಿಂದ ಪ್ರಪಂಚವು ಅನಾಯಕತ್ವವನ್ನಾಗಲಿ ಬಹುನಾಯಕತ್ವವನ್ನಾಗಲಿ ಹೊಂದಿ ಉತ್ತರೋತ್ತರ ಅನರ್ಥಪರಂಪರೆಯನ್ನನುಭವಿಸುವುದೇ ಫಲವಲ್ಲದೆ ಇನ್ನಾವುದೂ ಫಲವಿಲ್ಲ.

~~ಅಷ್ಟಾಭಿಶ್ಚ ಸುರೇಂದ್ರಾಣಾಂ ಮಾತ್ರಾಭಿರ್ನಿರ್ಮಿತೋ ನೃಪಃ~~

ಎಂಬಂತೆ ಪ್ರಜಾಪಾಲಕರಾದ ಮಹಾರಾಜರಾದರೂ ಕೇವಲ ದೇವಾಂಶಸಂಭೂತರಾದ್ದರಿಂದ ವೇದಶಾಸನವನ್ನು ಯಾರೂ ಮೀರದಂತೆ ಪ್ರಜೆಗಳನ್ನು ಶಿಕ್ಷಿಸುವದು ಅವರ ಕರ್ತವ್ಯವಾಗಿದೆ. ಹಾಗೆ ಶಿಕ್ಷೆ ಮಾಡದೆಹೋದರೆ, ದಂಡಧರನಾದ ಪಶುಪಾಲಕನು ಕಾಡಿನಲ್ಲಿ ಎಚ್ಚರದಿಂದ ಪಶುಗಳನ್ನು ರಕ್ಷಿಸದೆ ನಿದ್ರಾಸಕ್ತನಾಗಿದ್ದರೆ ಆ ಪಶುಗಳು ಎತ್ತಬೇಕಾದರೂ ನುಗ್ಗಿ ಕಂಡಕಂಡವರ ಹೊಲಗಳನ್ನು ಮೇದು ಏಟುಗಳನ್ನು ತಿಂದು ವ್ಯಾಘ್ರಾದಿ ಕ್ರೂರಜಂತುಗಳ ಬಾಯಿಗೆ ಶಿಕ್ಕಿ ಅನರ್ಥವನ್ನನುಭವಿಸುವ ಪ್ರಸಕ್ತಿಯು ಬರುವಂತೆ ರಾಜರ ಆಲಸ್ಯದಿಂದ ಜನಗಳು ವೇದಶಾಸನವನ್ನು ಮೀರಿ ಅಧರ್ಮಗಳಲ್ಲಿ ಕಾಲಿಟ್ಟು ಈ ಮಾನವಜನ್ಮದ ಮುಖ್ಯೋದ್ದೇಶವನ್ನೇ ಹಾಳುಮಾಡಿದಂತಾಗುತ್ತದೆ. ಆದುದರಿಂದ ~~ಪ್ರಭುಗಳಾದವರು ವೇದಧರ್ಮಾದಂತೆ ಶಾಸನಮಾಡಬೇಕು.~~ ವೇದಮಾರ್ಗಾನುಯಾಯಿಗಳೆಲ್ಲರೂ ವೇದಾಜ್ಞೆಯನ್ನು ಶಿರಸಾವಹಿಸಿ ಪಾಲಿಸಬೇಕು. ಇದೇ ಸನಾತನಧರ್ಮಾನುಯಾಯಿಗಳ ಮುಖ್ಯ ಧರ್ಮವಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ ವರ್ಷ ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಿಂದ 1,20,000 ರೂಪಾಯಿಗಳ ನಿವ್ವಳ ಉತ್ಪತ್ತಿಯು ದೊರೆಯಿತು.

ಮೈಸೂರು ಸಂಸ್ಥಾನದ ಯುವರಾಜರವರು ಸದ್ಯಃ ಪ್ಯಾರಿಸ್ಸಿನಲ್ಲಿದ್ದು, ದಸರಾಮಹೋತ್ಸವಕ್ಕೋಸ್ಕರ ಮುಂದಿನ ತಿಂಗಳು ಇಲ್ಲಿಗೆ ಬರುವರೆಂದು ತಿಳಿದುಬಂದಿದೆ.

ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಆಗಸ್ಟ್ 5 ನೇ ತಾರೀಖಿನ ದಿವಸ ಲಂಡನ್ನಿನಿಂದ ಹೊರಟು 25 ನೇ ತಾರೀಖಿನ ದಿವಸ ಮುಂಬಯಿಗೆ ಬರುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಚಾಮರಾಜ ಮತ್ತು ಕೃಷ್ಣರಾಜ ಮೊಹಲ್ಲಾಗಳಲ್ಲಿ ಅಲ್ಲಲ್ಲೇ ಪ್ಲೇಗ್‌ರೋಗವು ತಲೆದೋರಿ ಇದುವರೆಗೆ 5-6 ಜನರು ಮೃತಪಟ್ಟಿರುತ್ತಾರೆ. ಆರೋಗ್ಯ ಇಲಾಖೆಯವರು ರೋಗವು ಹರಡದಂತೆ ಜನರಿಗೆ ಇನಾಕ್ಯುಲೇಷನ್ ಮಾಡಲು ಉಪಕ್ರಮಿಸಿರುತ್ತಾರೆ.

ಸರಕಾರದವರು ಬೆಂಗಳೂರು ನಗರಕ್ಕೆ ಸೇರಿದ ಬ ವನಗುಡಿ, ವಿಶ್ವೇಶ್ವರಪುರ, ಗವಿಪುರ ಮುಂತಾ ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸುವದಕ್ಕಾಗಿ ಜೋಡಿನಲ್ಲಿಗಳನ್ನು ಹಾಕಿಸಲು 35,000 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರಿನಲ್ಲಿರುವ ಸ್ಟೇಟ್ ಹುಜೂರ್ ಟ್ರೆಜ ಯಲ್ಲಿ ಗುಮಾಸ್ತೆಯಾಗಿದ್ದ ಆರ್. ಎಸ್. ಶರ್ಮ ಎಂ ವರು ಲೆಕ್ಕದಲ್ಲಿ ವ್ಯತ್ಯಾಸಮಾಡಿ 350 ರೂಪಾಯಿಗ ಳನ್ನು ದುರುಪಯೋಗಿಸಿಕೊಂಡರೆಂಬ ಕಾರಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ 18 ತಿಂಗಳ ಕಠಿಣ ಸಜೆಯನ್ನೂ 500 ರೂ. ಗ ಜುಲ್ಮಾನೆಯನ್ನೂ ವಿಧಿಸಿದರು.

ಬೆಂಗಳೂರು ನಗರದ ಪೋಲೀಸರು ಕಳುವಿ ಅಪಾದನೆಯಮೇಲೆ ನರಸಿಂಹಮೂರ್ತಿ, ಕೃಷ್ಣಮೂರ್ತಿ, ನಟರಾಜು ಎಂಬ ಮೂವರನ್ನು ದಸ್ತಗಿರಿಮಾಡಿರುತ್ತಾರೆ. ಇವರು ಕೆಲವು ದಿವಸಗಳಿಂದಲೂ ಚಾಮ ರಾಜಪೇಟೆ, ಬಸವನಗುಡಿ, ಚಿಕ್ಕಪೇಟೆ ಮೊದಲಾ ಕಡೆಗಳಲ್ಲಿ ಬಟ್ಟೆಬರೆಗಳನ್ನು ಕದ್ದು, ಅವುಗಳನ್ನು ಮಾರ್ವಾಡಿ ಅಂಗಡಿಗಳಲ್ಲಿ ಒತ್ತೆಯಿಟ್ಟಿದ್ದರಂತೆ!

ಮೈಸೂರು ಸರಕಾರದಲ್ಲಿ ಅಸಿಸ್ಟೆಂಟ್ ಕಮಿಷನ ರಾಗಿದ್ದು ರಾಜಬಂಧುವರ್ಗದಲ್ಲಿ ಒಬ್ಬರಾಗಿದ್ದ ಶ್ರೀ|| ಡಿ. ಕೃಷ್ಣೇಅರಸ ಬಿ. ಎ. ಇವರು ಹಲ್ಲುನೋವಿ ದೆಸೆಯಿಂದ ಮಿರಜಿಯಲ್ಲಿ ಚಿಕಿತ್ಸೆಹೊಂದುತ್ತಿದ್ದು ಕಳೆ ವಾರ ವಿಧಿವಶರಾದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಇವರಿಗೆ ಇನ್ನೂ 39 ವರ್ಷ ವಯಸ್ಸಾಗಿದ್ದಿತು. ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ಇದೇ ಜುಲೈ 27 ನೆಯ ತಾರೀಖಿನ ದಿವಸ ಬೆಂಗಳೂರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಸಿ. ಎಂ. ಎಚ್. ರಣಜೋಧಸಿಂಗರವರು ಕ್ರೈಂ ಬ್ರಾಂಚ್ ಪೋಲೀಸ್ ಆಫೀಸರೊಡನೆ ಗಾಣಿಗ ಪೇಟೆ ಮರಿಮುನಿಯಣ್ಣನಗಲ್ಲಿಯಲ್ಲಿರುವ ಯಜಮಾ ನಂಜುಂಡಪ್ಪ ಎಂಬವರ ಮನೆಗೆ ನುಗ್ಗಿ ಅಲ್ಲಿ ಜೂಜಾ ಡುತ್ತಿದ್ದ ಕೆಲವು ಜನರನ್ನು ದಸ್ತಗಿರಿಮಾಡಿರುತ್ತಾರೆ. ಅಲ್ಲಿ ಸುಮಾರು 15-20ಜನರು ಜೂಜಾಡುತ್ತಿದ್ದರೆಂದೂ ಕೆಲವರು ಕೈಗೆಸಿಕ್ಕದೆ ತಪ್ಪಿಸಿಕೊಂಡಿರುತ್ತಾರೆಂದೂ ತಿಳಿದುಬಂದಿದೆ.

ಬೆಂಗಳೂರು ಸಿಟಿ ಪೋಸ್ಟ್ ಆಫೀಸಿಗೆ ಸೇರಿ ಪಾಪಾಚಟ್ಟಿ ಎಂಬ ಟಪ್ಪಾಲ್ ಜವಾನನು 50 ರೂ ಮನಿಯಾರ್ಡರಿನ ಹಣವನ್ನು ದುರುಪಯೋಗಪಡಿ ಕೊಂಡನೆಂಬ ಆಪಾದನೆಯ ಮೇಲೆ ಅಸಿಸ್ಟೆಂಟ್ ಸೆಷನ್ಸ್ ಜಡ್ಜರಾದ ಮ|| ರಾ|| ಎಚ್. ಕೆ. ವೀರಬ ವಯ್ಯನವರು ವಿಚಾರಣೆ ನಡೆಯಿಸಿ, ಪಾಪಾಚಟ್ಟಿಗೆ ವರ್ಷ ಕಠಿಣಸಜೆ ಮತ್ತು 200 ರೂ. ಜುಲ್ಮಾನೆ ಸಹ ವಿಧಿಸಿ, ಜುಲ್ಮಾನೆ ಹಣದಲ್ಲಿ 50 ರೂಪಾಯಿಗಳನ್ನು ಮನಿಯಾರ್ಡರ್ ಕಳುಹಿಸಿದವರಿಗೆ ಕೊಡತಕ್ಕದ್ದೆಂದು ಆರ್ಡರ್ ಮಾಡಿರುತ್ತಾರೆ.

ನಿನ್ನೆ ದಿವಸ ಸಾಯಂಕಾಲ 5 ಗಂಟೆಯ ಸಮಯ ದಲ್ಲಿ ರಾಜಧಾನಿಯ ಸಂಸ್ಕೃತಪಾಠಶಾಲೆಯ ಮು ಭಾಗದಲ್ಲಿ ಚಾಮರಾಜಬಸ್ತಿಯ ಕಡೆಯಿಂದ ಬ ಒಂದು ಮೋಟಾರು ಪಾಠಶಾಲೆಯ ಚೌಕದಲ್ಲಿ ಪ ಯಮೇರೆಗೆ ಎಡಭಾಗಕ್ಕೆ ತಿರುಗಿತು. ಅದೇ ಸಮಯ ದಲ್ಲಿ ಮುನಿಸಿಪಲ್ ಆಫೀಸ್ ಕಡೆಯಿಂದ ಬೈಸಿಕಲ್ ಮೇಲೆ ಬರುತ್ತಿದ್ದ ಒಬ್ಬ ಹುಡುಗನು ಎಡಭಾಗದ ಸೈಕಲ್ಲನ್ನು ಬಿಟ್ಟುಕೊಂಡು ಬರದೆ ಬಲಭಾಗದಲ್ಲಿ ಬ ವೇಗವಾಗಿ ಬರುತ್ತಿದ್ದನು. ಅಷ್ಟರಲ್ಲಿ ತನ್ನೆದು ಬಂದುದನ್ನು ಕಂಡು, ಗಾಬರಿಯಾಗಿ ಸೈಕಲ್ಲನ್ನು ಎ ಭಾಗಕ್ಕೆ ತಿರುಗಿಸಬೇಕೆಂದು ಪ್ರಯತ್ನಿಸಿದನು. ಆ

ಕಲ್ಲಿಗೆ ಬ್ರೇಕು ಇಲ್ಲದ್ದರಿಂದ ಹತೋಟಿ ತಪ್ಪಿ, ಸ್ತೆಯ ಮಧ್ಯದಲ್ಲಿ ಇರುವ ದೀಪದ ಕಂಭಕ್ಕೆ ಢಿಕ್ಕಿ ಹೊಡೆದನು. ಸುಮಾರು ½ ಅಂಗುಲ ದಪ್ಪವಿದ್ದ ಗಾಜು ರುಚೂರಾಗಿಹೋಯಿತು. ಹುಡುಗನ ತಲೆ ಮತ್ತು ಮುಖಕ್ಕೂ ಪೂರಾ ಏಟು ಬಿದ್ದು ಜ್ಞಾನತಪ್ಪಿತು. ಕಲ್ಲು ಮುರಿದುಹೋಯಿತು. ಹುಡುಗನು ಕೂಡಲೇ ಸ್ಪತ್ರೆಗೆ ಸಾಗಿಸಲ್ಪಟ್ಟನು.

ಮೈಸೂರು ಗೆಜೆಟ್.

ಮೈಸೂರು ಮಹಾರಾಣಿಯವರ ಕಾಲೇಜಿನ ಮು ಧಿಕಾರಿಗಳ ಹೆಸರನ್ನು 'ಸೂಪರಿಂಟೆಂಡೆಂಟ್' ನ್ನುವದರಿಂದ 'ಪ್ರಿನ್ಸಿಪಾಲ್' ಎಂದು ಬದಲಾ ಸಿದೆ.

ಶಿಕಾರಿಪುರದ ಸಬ್‌ಡಿವಿಜನ್ನಿನ ಅಸಿಸ್ಟೆಂಟ್ ಜನಿಯರಾದ ಮಿ|| ಎಂ. ಕೃಷ್ಣರಾಯರವರಿಗೆ ಗಸ್ಟ್ 1 ನೆಯ ತಾರೀಖಿನಿಂದ 3 ತಿಂಗಳ ರಜೆಯು ಡಲ್ಪಟ್ಟಿದೆ.

ಮಾಲೂರು ತಾಲೂಕಿನ ಅಮಲ್ದಾರರಾದ || ಜಿ. ವಿ. ನಾರಾಯಣಶೆಟ್ಟರವರಿಗೆ ಆಗಸ್ಟ್ 7ನೆಯ ರೀಖಿನಿಂದ 20 ದಿವಸಗಳ ಪ್ರಿವಿಲೇಜ್ ರಜೆಯು ಡಲ್ಪಟ್ಟಿದೆ.

ಕೃಷ್ಣರಾಜಸಾಗರ ವರ್ಕ್ಸಿನಲ್ಲಿ ಅಸಿಸ್ಟೆಂಟ್ ಇಂಜ ರಾಗಿರುವ ಮಿ|| ಬಿ. ಸಿಂಗಯ್ಯಂಗಾರ್‌ರವರು ಸೂರು ಸರ್ಕಲ್ಲಿಗೂ, ಮಿ|| ಕೆ. ಎಸ್. ಗಂಗಾಧರ ರು ಮೈಸೂರು ಸರ್ಕಲ್ಲಿನಿಂದ ಶಿವಮೊಗ್ಗಾ ಸರ್ಕ ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕೋಲಾರದ ಚಿನ್ನದಗಣಿಯ ಹೆರಿಗೆ ಆಸ್ಪತ್ರೆಯಲ್ಲಿ ನ್ನರಾಗಿರುವ ಮಿಸೆಸ್ ಬಿ. ಪೆರ್ರಿಟ್‌ರವರು ಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ, ಶಿವ ಗ್ಗಾ ಡಿ|| ಆಸ್ಪತ್ರೆಯಲ್ಲಿ ಸರ್ಜನ್ನರಾಗಿರುವ ಮಿಸೆಸ್ ಎ. ಜೆ. ಲೂಯಿಯವರು ತುಮಕೂರು ಡಿ|| ಸ್ಪತ್ರೆಗೂ, ಕೋಲಾರದ ಡಿ|| ಆಸ್ಪತ್ರೆಯಲ್ಲಿರುವ ಸೆಸ್ ಮಥುರಾಬಾಯಿ ಅಕ್‌ಗಾಂವಕರವರು ಕೋಲಾರದ ಚಿನ್ನದಗಣಿಯ ಹೆರಿಗೆ ಆಸ್ಪತ್ರೆಗೂ, ತುಂಕೂ ಡಿ|| ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ನರಾಗಿ ಮಿಸ್ ಕೆ. ಎ. ಅಪ್ಪಯ್ಯ ಇವರು ಶಿವಮೊಗ್ಗಾ ಆಸ್ಪತ್ರೆಗೂ, ಮೈಸೂರು ಕೃಷ್ಣರಾಜೇಂದ್ರ ತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ನರಾಗಿರುವ ಮಿಸೆಸ್ ಎಂ. ಮೈಲ್ಸ್‌ರವರು ಕೋಲಾರದ ಡಿ|| ಆಸ್ಪತ್ರೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಜರ್ಮನಿಯಲ್ಲಿ ನೃತ್ಯವನ್ನು ಕಲಿಸಬಲ್ಲ ಒಂದು ಯಂತ್ರವನ್ನು ತಯಾರಿಸಿರುವರು.

ಪ್ಯಾರಿಸ್‌ನಗರದ ಪ್ರೊಫೆಸರ್ ಡಿ. ಅರ್ಸೊನಲ್ ವರು ತಮ್ಮ ಪ್ರಯೋಗಶಾಲೆಯಲ್ಲಿ ಕೃತಕ ತು ಮತ್ತು ಗುಡುಗನ್ನು ಉತ್ಪನ್ನಮಾಡಿರುವ !

ಲಂಡನ್ನಿನಲ್ಲಿ ಅಸಹ್ಯಕರಗಳಾಗಿರುವ ಮನೆಗಳನ್ನು ದು ಹೊಸಮನೆಗಳನ್ನು ಕಟ್ಟಿಸಲು ಸರ್ಕಾರದವರು 52,0,00,000 ರುಪಾಯಿಗಳನ್ನು ಮಂಜೂರು ಮಾಡಿ ರಂತೆ!

ಈಗ್ಗೆ ಕೆಲವು ದಿವಸಗಳ ಹಿಂದೆ ಒಂದು ದಿನ ಬೆಳ ಝಾವದಲ್ಲಿ ಮುಂಬಯಿಯಲ್ಲಿ ಭೂಕಂಪವಾಯಿ ಆದರೆ ಅದೃಷ್ಟವಶಾತ್ ಯಾವ ಅನಾಹುತವೂ ಟಾಗಲಿಲ್ಲ.

ಜೆಕೊಸ್ಲೋವೇಕಿಯಾದೇಶದಲ್ಲಿ ಮೋಟಾರುಗಳ ಕ್ಕಾಗಿ ಸಂಪೂರ್ಣ ಗಾಜಿನಿಂದಲೇ ಒಂದು ರಸ್ತೆ ತಯಾರಿಸುತ್ತಿರುವರಂತೆ! ಈ ರಸ್ತೆಯಲ್ಲಿ ಟಾರುಗಳು ಗಂಟೆ 1 ಕ್ಕೆ 125 ಮೈಲುಗಳ ವೇಗ ಹೋಗಬಲ್ಲವಂತೆ!

ಮಿಯನ್ನಾ ನಗರದ ಸಮೀಪದಲ್ಲಿರುವ ಕಾರಂತಿಯಾ ನಗರದ ಅಧಿಕಾರಿಗಳು ಕಂದಾಯದ ಬಾಕಿಯನ್ನು ಮರದ ತುಂಡುಗಳ ಮೂಲಕವಾಗಿ ವಸೂಲುಮಾಡುತ್ತಿರುವರು. ಈ ಮರದ ತುಂಡುಗಳನ್ನು ಚಳಿಗಾಲದಲ್ಲಿ ಸರಕಾರೀ ಕಟ್ಟಡಗಳಲ್ಲಿ ಉರಿಸುವದಕ್ಕೆ ಉಪಯೋಗಿಸುವರಂತೆ!

ಕಳೆದ ಜನವರಿ ತಿಂಗಳಲ್ಲಿ ಡೇರಾ ಇಸ್ಮಾಯಿಲ್ ಖಾನ್ ನಗರದ ಜೈಲಿನಲ್ಲಿ ಕೆಲವು ಜನ ಖೈದಿಗಳು ಹೊಡೆದಾಡಿ ಅನೇಕರು ಮೃತಪಟ್ಟರಷ್ಟೇ! ಮ್ಯಾಜಿಸ್ಟ್ರೇಟರು ಇದರ ಬಗ್ಗೆ ವಿಚಾರಣೆ ನಡೆಯಿಸಿ, 13 ಜನ ಅಪರಾಧಿಗಳಿಗೆ ಮರಣದಂಡನೆಯನ್ನೂ 5 ಜನರಿಗೆ ಆ ಮರಣಾಂತಶಿಕ್ಷೆಯನ್ನೂ ವಿಧಿಸಿರುತ್ತಾರೆ.

ಮಧುರಾನಗರದ ಸಮೀಪದಲ್ಲಿರುವ ಪೆರಿಯಾಕುಳಂ ಎಂಬ ಊರಿನಲ್ಲಿ ಒಬ್ಬ ಯುವಕನು ಸರ್ಕಸ್‌ಕಂಪೆನಿಯ ಆನೆಗೆ ಒಂದು ತೆಂಗಿನಕಾಯಿಯ ಚಿಪ್ಪಿನಲ್ಲಿ ಸುಣ್ಣವನ್ನು ತುಂಬಿ ತಿನ್ನುವದಕ್ಕೆ ಕೊಟ್ಟನು. ಆನೆಯು ಸಮಯಕಾದಿದ್ದು ಮರುದಿವಸ ಅವನನ್ನು ಸೊಂಡಲಿನಿಂದ ಎತ್ತಿ ನೆಲಕ್ಕೆ ಅಪ್ಪಳಿಸಿತು. ಹುಡುಗನು ಆಸ್ಪತ್ರೆಯಲ್ಲಿ ಮೃತಪಟ್ಟನು.

ದುಂಕಾ ಎಂಬ ಗ್ರಾಮದ ಪೋಲೀಸ್ ಸ್ಟೇಷನ್ನಿನಲ್ಲಿ ಒಬ್ಬ ಪೋಲೀಸನು ಕೆಲವು ಮಹತ್ವದ ರಿಕಾರ್ಡುಗಳನ್ನು ತನ್ನ ಬಳಿಯಲ್ಲಿಟ್ಟುಕೊಂಡು ನಿದ್ರಿಸುತ್ತಿದ್ದಾಗ ಒಂದು ಹಸುವು ಸ್ಟೇಷನ್ನಿಗೆ ನುಗ್ಗಿ ಸದರಿ ರಿಕಾರ್ಡುಗಳನ್ನು ತಿಂದಿತೆಂಬ ಕಾರಣದಮೇಲೆ ಹಸುವಿನ ಯಜಮಾನನನ್ನು ಪೋಲೀಸರು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಇದೇ ಜುಲೈ 22 ನೇ ತಾರೀಖು ಶನಿವಾರದ ದಿವಸ ಕರಾಚಿನಗರದಲ್ಲಿ ಅಪಾರವಾದ ಮಳೆಯು ಬಂದು ಅನೇಕ ಕಟ್ಟಡಗಳು ನೆಲಸಮವಾದವು. ಅನೇಕರು ಮನೆಯನ್ನು ಬಿಟ್ಟು ಹೊರಕ್ಕೆ ಬರಲಾರದೆ ಮೋಟಾರ್ ಲಾರಿಗಳಲ್ಲಿ ಅವರನ್ನು ಬೇರೆ ಕಡೆಗೆ ಸಾಗಿಸಬೇಕಾಯಿತು. ಮಳೆಯ ದೆಸೆಯಿಂದ ಸುಮಾರು 10 ಲಕ್ಷ ರೂಪಾಯಿಗಳ ಧಾನ್ಯವು ನಾಶವಾಗಿರುವದಂತೆ!

ಬಂಗಾಳಾ ಪ್ರಾಂತದ ಪ್ರಸಿದ್ಧ ದೇಶಭಕ್ತರೂ, ಕಾಯಿದೆಭಂಗ ಚಳವಳಿಯ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟು, ರಾಜಕೀಯ ಬಂದಿಗಳಾಗಿಯೂ ಇದ್ದ ಶ್ರೀಯುತ ಜೆ. ಎಂ. ಸೇನಗುಪ್ತರವರು ಜುಲೈ 23 ನೇ ತಾರೀಖಿನ ದಿವಸ ಬೆಳಗಿನ ಝಾವ ಸುಮಾರು 1-45 ಗಂಟೆಯ ಸಮಯದಲ್ಲಿ ರಾಂಚಿಯಲ್ಲಿ ಮೃತಪಟ್ಟರು. ಇವರ ಮೃತಶರೀರವು ಕಲ್ಕತ್ತೆಗೆ ಸಾಗಿಸಲ್ಪಟ್ಟು ದಹಿಸಲ್ಪಟ್ಟಿತು.

ಇದೇ ಜುಲೈ 25 ನೇ ತಾರೀಖು ರಾತ್ರಿ ಬಂಗಾಲಾ ಗವರ್ನರವರು ರೈಲಿನಲ್ಲಿ ಫರಿದ್‌ಪುರದಿಂದ ಕಲ್ಕತ್ತೆಗೆ ಪ್ರಯಾಣಮಾಡಿದರು. ಆ ಸಮಯದಲ್ಲಿ ಯಾರೋ ಕೆಲವರು ಗವರ್ನರು ಬರುವ ರೈಲನ್ನು ಸಿಡಿಮದ್ದಿನಿಂದ ಮುರಿಯಬೇಕೆಂದು ಪ್ರಯತ್ನಿಸಿದರು. ಆದರೆ ಸಿಡಿಮದ್ದು ಗವರ್ನರ ರೈಲು ಬರುವದಕ್ಕೆ ಮುಂಚಿತವಾಗಿಯೇ ಸಿಡಿಯಿತು. ದೈವವಶಾತ್ ಯಾರಿಗೂ ಯಾವ ಅಪಾಯವೂ ಆಗಲಿಲ್ಲ.

ತುರ್ಕಿದೇಶಕ್ಕೆ ಸೇರಿದ ಉಸ್ತಾಂಬೊನಗರದ ಹಸೆ ಆಘು ಎಂಬಾತನು ತನ್ನ ನೆರೆಯವನೊಡನೆ ಜಗಳವಾಡಿ ಅವನ ಕೆನ್ನೆಯಮೇಲೆ ಹೊಡೆದನು. ನ್ಯಾಯಾಧೀಶರು ವಿಚಾರಣೆಮಾಡಿ ಅಪರಾಧಿಗೆ 1 ಪೌಂಡ್ ಜುಲ್ಮಾನೆಯನ್ನು ವಿಧಿಸಿದರು. ಹಸನ್ನನು ಜುಲ್ಮಾನೆಯನ್ನು ಸಂತೋಷದಿಂದ ಕೊಟ್ಟು ಹೊರಕ್ಕೆ ಬಂದಕೂಡಲೇ ತನ್ನ ವೈರಿಯ ಕೆನ್ನೆಗೆ ಮತ್ತೆ 9 ಸಾರೆ ಹೊಡೆದು ಪುನಃ 9 ಪೌಂಡುಗಳ ದಂಡವನ್ನು ಕೊಟ್ಟನಂತೆ!

ವೀಲೀಪೋಸ್ಟ್ ಎಂಬ ಪ್ರಸಿದ್ಧ ವೈಮಾನಿಕನು ಇದೇ ಜುಲೈ 15 ನೆಯ ತಾರೀಖಿನ ದಿವಸ ನ್ಯೂಯಾರ್ಕಿನಿಂದ ವಿಮಾನದ್ಲೇನಿನಲ್ಲಿ ಹೊರಟು ಪ್ರಪಂಚದ ಸ್ಥಳಾನ್ನ ಸುತ್ತಿಕೊಂಡು ಜುಲೈ 23 ನೆಯ ತಾರೀಖಿನ ದಿವಸ ಬೆಳಗ್ಗೆ ನ್ಯೂಯಾರ್ಕ್‌ನಗರಕ್ಕೆ ಹಿಂತಿರುಗಿದನು. ಇದಕ್ಕೆ ಬಟ್ಟು 187 ಗಂಟೆಗಳಕಾಲವು ಹಿಡಿಯಿತು. ಇದಕ್ಕಿಂತಲೂ ಜಾಗ್ರತೆಯಾಗಿ ಇದುವರೆಗೆ ಮತ್ತಾರೂ ಪ್ರಪಂಚವನ್ನು ಸುತ್ತಿ ಬಂದಿರುವದಿಲ್ಲ.

ಕ್ಯಾಲಿಫೋರ್ನಿಯಾ ದೇಶದ ಒಬ್ಬ ತರುಣ ಶಾಸ್ತ್ರಜ್ಞನು 16 ಅಥವಾ ಅದಕ್ಕಿಂತಲೂ ಹೆಚ್ಚು ಅಂಕಿಗಳುಳ್ಳ ದೊಡ್ಡ ದೊಡ್ಡ ಸಂಖ್ಯೆಗಳ ಗುಣಾಂಕಗಳನ್ನು ಬಹು ಸುಲಭವಾಗಿ ಕಂಡುಹಿಡಿಯುವ ಒಂದು ಯಂತ್ರವನ್ನು ತಯಾರಿಸಿರುವನಂತೆ! ಇಂಥ ದೊಡ್ಡ ಸಂಖ್ಯೆಗಳ ಗುಣಾಂಕಗಳನ್ನು ಸಾಧಾರಣ ರೀತಿಯಲ್ಲಿ ಕಂಡುಹಿಡಿಯಬೇಕಾದರೆ ದಿನ 1ಕ್ಕೆ 10 ಗಂಟೆಯ ಮೇರೆ 300 ವರ್ಷಗಳ ವರೆಗೆ ಲೆಕ್ಕಮಾಡಬೇಕಾಗುವದಂತೆ!

ದೆಹಲಿಯಲ್ಲಿ ವಾಸವಾಗಿರುವ ಒಬ್ಬ ಮಹಮ್ಮದೀಯ ವ್ಯಾಪಾರಿಯು ಮಂಚದಮೇಲೆ ಹತ್ತು ರೂಪಾಯಿಯ ಒಂದು ನೋಟನ್ನು ಇಟ್ಟು ಮಂಚದ ಕಾಲಿಗೆ ಒಂದು ಆಡನ್ನು ಕಟ್ಟಿದ್ದನು. ಆಡು ಆ ನೋಟನ್ನು ತಿಂದುಬಿಟ್ಟಿತು. ಆ ವ್ಯಾಪಾರಿಯು ಕೂಡಲೇ ಗಾಬರಿಹೊಂದಿದವನಾಗಿ ನೋಟಿನ ನಂಬರನ್ನಾದರೂ ಪತ್ತೆಮಾಡಬೇಕೆಂದು ಆಡನ್ನು ತತ್‌ಕ್ಷಣವೇ ಕೊಂದು ಆದರ ಹೊಟ್ಟೆಯಲ್ಲಿ ನೋಡಿದಾಗ ಒಂದು ಕಾಗದದ ಮುದ್ದೆಯು ಮಾತ್ರ ಸಿಕ್ಕಿತಂತೆ!

ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಅಪಾರವಾದ 'ಕ್ವಿನೈನ್' ಎಂಬ ಜ್ವರದ ಔಷಧವು ಕಳುವಾಗಿರುವದೆಂಬ ಕಾರಣದಮೇಲೆ ಪೋಲೀಸರು ತನಿಖೆಮಾಡುತ್ತಿರುವರು. ಈ ಸಂದರ್ಭದಲ್ಲಿ ಸರಕಾರದವರು ಜೈಲಿನ 5 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ, ಒಬ್ಬ ಗುಮಾಸ್ತನನ್ನು ದಸ್ತಗಿರಿ ಮಾಡಿರುವರು. ಇದೇ ಸಂದರ್ಭದಲ್ಲಿ ಪೋಲೀಸರು ಒಬ್ಬ ಔಷಧವ್ಯಾಪಾರಿಯನ್ನೂ ದಸ್ತಗಿರಿ ಮಾಡಿರುವರೆಂದೂ, ಇದುವರೆಗೆ 1000 ರೂ. ಬೆಲೆ ಬಾಳುವಷ್ಟು 'ಕ್ವಿನೈನ್' ಪತ್ತೆಯಾಗಿರುವದೆಂದೂ ತಿಳಿದುಬಂದಿದೆ.

ಉತ್ತರ ಕಾರೊಲಿನಾ ದೇಶಕ್ಕೆ ಸೇರಿದ ಹೈಪಾಯಿಂಟ್ ಎಂಬ ಊರಿನಲ್ಲಿ 'ಸೈಂಟಿಫಿಕ್ ಕ್ಲಬ್' ಎಂಬ ಸಂಸ್ಥೆಯ ಮೆಂಬರರಾದ 4 ಜನ ತರುಣರು ಒಂದು ಅಸ್ಥಿ ಪಂಜರದ ಫೋಟೋ ತೆಗೆಯಬೇಕೆಂಬ ಉದ್ದೇಶದಿಂದ ಸ್ಮಶಾನಕ್ಕೆ ಹೋಗಿ ಅಲ್ಲಿ ಒಂದು ಸಮಾಧಿಯನ್ನು ಅಗೆದರು. ಪೋಲೀಸರು ಇದನ್ನು ತಿಳಿದು ಆ 4 ಜನ ಹುಡುಗರ ಮೇಲೆ ಫಿರ್ಯಾದು ಮಾಡಲು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ, ಸದರಿ ತರುಣರು ಪ್ರತಿಯೊಬ್ಬರೂ 5 ರಾತ್ರಿಗಳನ್ನು ಒಬ್ಬಂಟಿಗರಾಗಿ ಆ ಸ್ಮಶಾನದಲ್ಲಿ ಕಳೆಯಬೇಕೆಂಬ ಶಿಕ್ಷೆಯನ್ನಿತ್ತರು. ಒಳ್ಳೇ ಶಿಕ್ಷೆ!

ವೀಮಾರ್‌ದೇಶದ ಲೇಬರ್ ಆಫೀಸಿನ ಡೆಪ್ಯುಟಿ ಡೈರೆಕ್ಟರಾದ ಹೆರ್‌ವೆಲ್ಟ್ ಎಂಬವರು ಬಹು ವಿಚಿತ್ರ ರೀತಿಯಲ್ಲಿ ಆತ್ಮಹತ್ಯಮಾಡಿಕೊಂಡರು. ಇವರು ಒಂದು ದಿನ ಒಂದು ವಿಮಾನ್ಲೇನನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ವಿಮಾನ್ಲೇನು ನಗರದ ಮೇಲೆ ಹಾರುತ್ತಿರುವಾಗ ಅದನ್ನು ನಡೆಸುತ್ತಿದ್ದವನಿಗೂ ಸಹ ತಿಳಿಯದಂತೆ ಇದ್ದಕ್ಕಿದ್ದ ಹಾಗೆ ಕೆಳಕ್ಕೆ ಧುಮುಕಿಬಿಟ್ಟರು! ಆತ್ಮಹತ್ಯಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ತಾವು ವಿಮಾನ್ಲೇನಿನಲ್ಲಿ ಹೊರಟೆನೆಂದು ಒಂದು ಕಾಗದವನ್ನು ಬರೆದು ಇಟ್ಟಿದ್ದರಂತೆ! ಆದರೆ ಕಾರಣವನ್ನು ಮಾತ್ರ ಬರೆದಿರಲಿಲ್ಲ.

ಸ್ವೀಕಾರ

ಮೂಡಿಗೆರೆ ತಾಲೂಕು ಚಿನ್ನಿಗಗ್ರಾಮವಾಸಿಗಳಾದ ಮ|| ರಾ|| ಹೊಸಮನೆ ಮಸಣಯ್ಯನವರ ಮನೆಯಲ್ಲಿ ಮ|| ರಾ|| ಮಲ್ಲಯ್ಯನವರಿಗೂ, ಚಿ|| ಸೌ|| ಮರಿಪುಟ್ಟಮ್ಮನವರಿಗೂ ನಡೆದ ವಿವಾಹಸಮಯದಲ್ಲಿ ನೇ|| ಮುಪ್ಪಿನಯ್ಯನವರ ಮತ್ತು ಮ|| ರಾ|| ಮುಪ್ಪಿನಗೌಡರ ಪ್ರೋತ್ಸಾಹದ ಮೇರೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ 3 ರೂಪಾಯಿಗಳು ಮ|| ರಾ|| ಸ್ಕೂಲ್‌ಮಾಸ್ಟರ್ ಬಿ. ಶಿವಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೆಯ ಪುಟದಿಂದ ಮುಂದುವರಿದುದು].

ಹೊರಗೆ ಬಂದೊಡನೆಯೇ ಉಭಯರೂ ಕೈ-ಕೈ ಹಿಡಿದುಕೊಂಡು ನಗುತ್ತ-ಕೆಲುತ್ತ ಹೋಗುವರು. ನಮ್ಮ ವಾದಭೂಮಿಯ ಲೇಖಕರೂ ತಮ್ಮ ಲೇಖದ ಸತ್ಯತೆಗಾಗಿ ಸಪ್ರಮಾಣವಾಗಿ ಬೇಕಾದ ಹಾಗೆ ಬರೆಯಲಿ ; ಆದರೆ ವಿಷಯಾಂತರವೆಂಬ ಪರದೆಯ ಮರೆಗೆ ನಿಂತು ಬಲ್ಲಬಲ್ಲಂತೆ ಬರೆಯಬಾರದು. ಉಭಯರ ವಿಷಯಗಳು ಜೋಡಣೆಯಾಗಿ ತಮ್ಮ ತಮ್ಮದು ನಿಜವಾಗಿರುವದೆಂಬುದನ್ನು ಹೊರಗೆಡವಬೇಕು. ಈಗ ದೈವಜ್ಞ ವಿನೋದನ ಲೇಖಗಳ ಮೇಲೆ ಯಾವಾಗಲೂ ಕಣ್ಣಿಟ್ಟಮಹಾಶಯರು ವಕ್ರಮಾರ್ಗವನ್ನು ಹಿಡಿಯದೆ ಸರಳಮಾರ್ಗದಿಂದ ಬರೆಯಬೇಕಾಗಿ ವಿನೋದನ ಅಭಿಲಾಷೆಯು.

ಸಾಬೂನುಗಳು.

(ಒರಿಸ್ಸಾ ಪ್ರಾಂತದಲ್ಲಿ ಕಟಕ್‍ನಗರದ ಕುಷ್ಠರೋಗಿಗಳ ಆಸ್ಪತ್ರೆಯ ಮುಖ್ಯಾಧಿಕಾರಿಗಳಾದ ಡಾ|| ಜಿ. ಆರ್. ರಾವ್, ಡಿ. ಟಿ. ಎಮ್. ಇವರಿಂದ)

ಆಮ್ಲಪದಾರ್ಥಗಳನ್ನು (Alkalics) ಕೊಬ್ಬು ವಿಶೇಷವಾಗಿರುವ ಎಣ್ಣೆಯೊಡನೆ ಸೇರಿಸಿ ಸೋಪುಗಳನ್ನು ತಯಾರುಮಾಡುವರು. ಎಣ್ಣೆಗಳಲ್ಲಿರುವ ಕೊಬ್ಬಿನ ದ್ರಾವಕಗಳ ಕ್ಷಾರವೇ ಈ ಸಾಬೂನುಗಳೆನಬಹುದು. ಅದಕ್ಕೆ ನಾವು ಉಪಯೋಗಿಸುವ ಎಣ್ಣೆಯ ರೀತಿಗನುಸಾರವಾಗಿ ಸಾಬೂನುಗಳನ್ನು (1) ಪ್ರಾಣಿಸಂಬಂಧವಾದುವೆಂದೂ, (2) ಸಸ್ಯಸಂಬಂಧವಾದುವೆಂದೂ ಎರಡು ಮುಖ್ಯಭಾಗಗಳಾಗಿ ವಿಂಗಡಿಸಬಹುದು.

(1) ಪ್ರಾಣಿಗಳ ಕೊಬ್ಬು ಸೇರಿರುವ ಸಾಬೂನುಗಳು :—ಪ್ರಾಣಿಗಳಿಂದ ತೆಗೆದ ಕೊಬ್ಬುಗಳಿಗೆ ಕಾಸ್ಟಿಕ್‍ಸೋಡಾಪುಡಿಯನ್ನು ಸೇರಿಸಿ, ಇವುಗಳನ್ನು ತಯಾರಿಸುವರು. ಈ ಸೋಪುಗಳನ್ನು ತಯಾರಿಸುವ ಕ್ರಮವು, ಆಯಾ ದೇಶಗಳಲ್ಲಿ ವಿಶೇಷವಾಗಿ ಸಿಕ್ಕುವ ಪ್ರಾಣಿಜಾತಿಗಳನ್ನನುಸರಿಸಿದೆ. ಕುರಿಗಳು, ಆಡುಗಳು, ಹಸುಗಳು, ಹೋರಿಗಳು, ಹಂದಿಗಳು, ದೊಡ್ಡದೊಡ್ಡ ಮೀನುಗಳು, ತಿಮಿಂಗಿಲಗಳು ಇವುಗಳ ಕೊಬ್ಬುಗಳನ್ನೆಲ್ಲಾ ಇದಕ್ಕೆ ಉಪಯೋಗಿಸುವುದುಂಟು.

(2) ಸಸ್ಯಸಂಬಂಧವಾದ ಸೋಪುಗಳು :—ಈಗ ವಿಶೇಷವಾಗಿ ಸ್ನಾನಾದಿಗಳಿಗೆ ಉಪಯೋಗಿಸುತ್ತಿರುವ ಸೋಪುಗಳೆಲ್ಲ ಈ ಜಾತಿಯ ಸೋಪುಗಳೇ ! ಇವುಗಳ ಬಣ್ಣ, ವಾಸನೆ ಮುಂತಾದ ಭಿನ್ನಸ್ವಭಾವಗಳೆಲ್ಲ ಇವುಗಳನ್ನು ತಯಾರಿಸಲು ಉಪಯೋಗಿಸುವ ಎಣ್ಣೆಗಳಿಗೆ ಅನುಸಾರವಾಗಿರುವುದು. ಸೋಪುಗಳನ್ನು ತಯಾರಿಸುವುದಕ್ಕೆ ಈ ಕೆಳಗೆ ವಿವರಿಸಿರುವ ಎಣ್ಣೆಗಳನ್ನುಪಯೋಗಿಸುವರು.

(1) ತೆಂಗಿನೆಣ್ಣೆ (2) ಕಡಲೆಕಾಯಿಯ ಎಣ್ಣೆ (3) ಲಿನ್‍ಸೀಡ್ ಎಣ್ಣೆ (4) ಕೈಯೆಣ್ಣೆ (5) ಆಲಿವ್ ಎಣ್ಣೆ (6) ತಾಳೆಯೆಣ್ಣೆ; ಅಪೂರ್ವವಾಗಿ ಬಾದಾಮಿಯೆಣ್ಣೆ, ಸೌತೇಬೀಜದೆಣ್ಣೆ ಇವುಗಳನ್ನೂ ಉಪಯೋಗಿಸುವುದುಂಟು. ಮನುಷ್ಯರ ಮೈಯನ್ನು ತೊಳೆಯುವುದಕ್ಕೆ ಉಪಯೋಗಿಸುವ ಸೋಪಿನಲ್ಲಿ, ಒಳ್ಳೆಯ ಸುವಾಸನೆಯನ್ನು ಕೊಡಲು ಯಾವುದಾದರೂ ಕೆಲವು ವಾಸನಾದ್ರವ್ಯಗಳನ್ನು ಸೇರಿಸುವರು. ಈ ಪದಾರ್ಥಗಳು ಸುಗಂಧಪುಷ್ಪಗಳಿಂದ ತಯಾರಿಸಿದುವುಗಳು.

ಒಳ್ಳೆಯ ಸೋಪಿನಲ್ಲಿರಬೇಕಾದ ಗುಣಗಳು :—ಒಳ್ಳೆಯ ಸೋಪಿನಲ್ಲಿ ಆಮ್ಲಪದಾರ್ಥಗಳಾಗಲಿ, ಕೊಬ್ಬಿನ ದ್ರಾವಕಗಳಾಗಲಿ ವಿಶೇಷವಾಗಿರಕೂಡದು. ಆಮ್ಲಪದಾರ್ಥವು ವಿಶೇಷವಾಗಿದ್ದಲ್ಲಿ ಚರ್ಮವು ಒರಟಾಗುವುದು. ಕೊಬ್ಬಿನ ದ್ರಾವಕಗಳು ವಿಶೇಷವಾಗಿದ್ದಲ್ಲಿ, ಚರ್ಮದಲ್ಲಿ ಉರಿಯು ಪ್ರಾರಂಭಿಸುವುದು. ಕೊಬ್ಬಿನ ದ್ರಾವಕಗಳೂ, ಆಮ್ಲಪದಾರ್ಥಗಳೂ ತಕ್ಕ ಪ್ರಮಾಣದಲ್ಲಿ ಸೇರಿರಬೇಕು. ಇವೆರಡೂ ತಕ್ಕ ಪ್ರಮಾಣದಲ್ಲಿ ಸೇರಿರುವುದೇ ಉತ್ತಮವಾದ ಸೋಪುಗಳ ಲಕ್ಷಣವು.

ಅಲ್ಲದೆ, ಒಳ್ಳೆಯ ಸೋಪು ಮೃದುವಾಗಿರಬೇಕು. ಮತ್ತು ಅದರಲ್ಲಿ ಗಟ್ಟಿಯಾದ (gritty) ಚೂರುಗಳಿರಬಾರದು. ಬಹಳ ಮಂದವಾಗಿಲ್ಲದ ಭಾವಿಯ ನೀರಿನಲ್ಲಿ ವಿಶೇಷವಾಗಿ ನೊರೆಯು ಕಾಣಿಸುವುದೂ ಒಳ್ಳೇಸೋಪಿನ ಲಕ್ಷಣವು.

ಒಳ್ಳೆಯ ಸೋಪಿನಿಂದ ದೇಹವನ್ನುಜ್ಜಿ ಸ್ನಾನಮಾಡಿದರೆ, ದೇಹದಮೇಲಿರುವ ಜಿಡ್ಡುಪದಾರ್ಥಗಳನ್ನೂ, ದೇಹದಲ್ಲಿ ಉತ್ಪತ್ತಿಯಾಗಿ ಚರ್ಮದ ಮೇಲಿರುವ ಬೆವರನ್ನೂ, ಬೇರೆ ಧೂಳುಗಳನ್ನೂ ಚೆನ್ನಾಗಿ ಹೋಗಲಾಡಿಸುವುದು.

ಸೋಪಿನಿಂದ ದೇಹವನ್ನು ಚೆನ್ನಾಗಿ ತೊಳೆದುಕೊಂಡಮೇಲೆ, ಚರ್ಮವು ಒರಟಾಗಿಯೂ, ಒಣಗಿದಂತೆಯೂ ಇರಕೂಡದು. ಸೋಪನ್ನು ಉಪಯೋಗಿಸದಕೂಡಲೆ, ಚರ್ಮವು ನುಣ್ಣಗೆ ಮೃದುವಾಗಿಯೂ ಆಗಕೂಡದು. ಸೋಪನ್ನುಪಯೋಗಿಸುವುದರಿಂದ, ಚರ್ಮದಮೇಲೆ ಕುಳಿತಿರುವ ಧೂಳನ್ನೂ, ಜಿಡ್ಡಿನ ಪದಾರ್ಥಗಳನ್ನೂ ಹೋಗಲಾಡಿಸುವುದೊಂದು ಹೊರತು, ಚರ್ಮದಮೇಲೆ ಯಾವ ನ್ಯೂನತೆಯೂ ಕಾಣಕೂಡದು. ನಾವು ಈಗ ಸ್ನಾನಕ್ಕೆ ಉಪಯೋಗಿಸುತ್ತಿರುವ ಸೋಪಿನಲ್ಲಿ, ಕೆಲವು ಕೊರತೆಗಳುಂಟು. ಅವುವೆಂದರೆ, ಅದನ್ನು ಉಪಯೋಗಿಸಿದಕೂಡಲೆ ಚರ್ಮವು ಒರಟಾಗಿಯೂ, ಒಣಗಿದಂತೆಯೂ ಆಗುವುದು. ನಾನು ಎಷ್ಟೋ ವಿದೇಶೀಯ ಸೋಪುಗಳನ್ನೂ, ಸ್ವದೇಶೀ ಸೋಪುಗಳನ್ನೂ ಪರೀಕ್ಷೆ ಮಾಡುತ್ತಿರುವೆನು. ಈ ಮೇಲೆ ವಿವರಿಸಿದ ಕೊರತೆಗಳೇನೂ ಇಲ್ಲದಿರುವ ಸ್ವದೇಶೀಸಾಬೂನುಗಳ ಸಂಖ್ಯೆಯು ಬಹಳ ಕಡಿಮೆ. ಈ ಮೇಲೆ ಹೇಳಿದ ದೋಷಗಳಿಲ್ಲದಿರುವ ವಿದೇಶೀಸೋಪುಗಳಲ್ಲಿ (1) ಪಿಯರ್ಸ್ ಗ್ಲಿಸರೈನ್‍ಸೋಪು (2) ರೈಟ್ಸ್ ಕೋಲ್‍ಟಾರ್ ಸೋಪು (3) ಪಾಮ್ ಆಲಿವ್‍ಸೋಪು, ಎಂಬಿವು ಮುಖ್ಯವಾದುವು. ನಮ್ಮ ದೇಶದಲ್ಲಿ ಸಾಬೂನನ್ನು ತಯಾರಿಸತಕ್ಕವರನೇಕರು. ಅವುಗಳಲ್ಲಿ ಎಲ್ಲಾ ಪದಾರ್ಥಗಳೂ ತಕ್ಕ ಪ್ರಮಾಣದಲ್ಲಿ ಸೇರುವಂತೆ ನೋಡಿಕೊಳ್ಳದಿರುವುದು ಬಹಳ ಶೋಚನೀಯವಾದ ವಿಷಯವು. ನಮ್ಮ ದೇಶದಲ್ಲಿ ತಯಾರಾಗುತ್ತಿರುವ ಸೋಪುಗಳಲ್ಲಿ ವಿದೇಶೀ ಸೋಪುಗಳಂತೆ ಎಲ್ಲಾ ಪದಾರ್ಥಗಳೂ ತಕ್ಕ ಪ್ರಮಾಣಗಳಲ್ಲಿ ಸೇರಿರುವುದಿಲ್ಲ. ಇದರಿಂದ ನಾನು ವಿದೇಶೀಸೋಪುಗಳ ಪ್ರಚಾರವನ್ನೇ ಪ್ರೋತ್ಸಾಹಿಸುತ್ತಿರುವೆನೆಂದು ಭಾವಿಸಕೂಡದು. ಒಳ್ಳೆಯ ಗುಣವು ಎಲ್ಲಿದ್ದರೂ ಅದನ್ನು ಶ್ಲಾಘಿಸುವುದು ನ್ಯಾಯವು.

ಸೋಪುಗಳನ್ನುಪಯೋಗಿಸುವ ರೀತಿ—ಪ್ರಾಣಿಗಳ ಕೊಬ್ಬು ಸೇರಿರುವ ಸಾಬೂನುಗಳನ್ನು ಸ್ನಾನಕ್ಕೆ ಉಪಯೋಗಿಸುವವರು ಕಡಿಮೆ. ಅಂತಹ ಕೆಲವು ಸೋಪುಗಳಲ್ಲಿ ಕೆಟ್ಟ ವಾಸನೆ ಇರುವುದು. ಪ್ರಾಣಿಗಳ ಕೊಬ್ಬು ಬಹಳ ಜಾಗ್ರತೆಯಾಗಿ ಕೆಟ್ಟು ಹೋಗುವುವು. ಮತ್ತು ಅವುಗಳನ್ನು ಉಪಯೋಗಿಸಿದ ಸೋಪುಗಳಲ್ಲಿಯೂ ಕೆಟ್ಟವಾಸನೆಯು ಬರುವುದು. ಅಮೇರಿಕಾದೇಶದಲ್ಲಿ ಅವುಗಳನ್ನು 'ಗ್ರೀನ್‍ಸೋಪು'ಗಳೆಂದು ಕರೆಯುವರು. ಮತ್ತು ಅವುಗಳನ್ನು ತಿಕ್ಕಿ ತೊಳೆಯುವ ಕೆಲಸಗಳಿಗೆಮಾತ್ರ ಉಪಯೋಗಿಸುವರು. ವಿದೇಶೀಯರು ನಮ್ಮ ದೇಶಗಳಿಗೆ ಬಂದು, ಇಲ್ಲಿ ಮಾರುತ್ತಿರುವ ಸುಲಭಬೆಲೆಯ ಸಾಬೂನುಗಳೆಲ್ಲ ಈ ಗುಂಪಿಗೆ ಸೇರಿದವುಗಳೇ ! ಆದುದರಿಂದ ಈ ಸಾಬೂನುಗಳನ್ನು ನಾವು ಸ್ನಾನಕ್ಕೆ ಉಪಯೋಗಿಸಬಾರದು.

ಸಸ್ಯಸಂಬಂಧವಾದ ಎಣ್ಣೆಗಳಿಂದಲೇ ತಯಾರಿಸಿದ ಸಾಬೂನು- ಸ್ನಾನಕ್ಕೆ ಪ್ರಾಯಶಃ ಈ ಸಾಬೂನುಗಳನ್ನೇ ಉಪಯೋಗಿಸುವರು. ನಮ್ಮ ಚರ್ಮದ ಮೇಲಿರುವ ಜಿಡ್ಡಿನ ಪದಾರ್ಥಗಳನ್ನೂ, ಇತರ ಕಶ್ಮಲಗಳನ್ನೂ ಹೋಗಲಾಡಿಸುವುದಕ್ಕಾಗಿ ನಾವು ಸೋಪುಗಳನ್ನುಪಯೋಗಿಸಬೇಕೇ ಹೊರತು, ಚರ್ಮದ ಬಣ್ಣವು ಬದಲಾಯಿಸುವ ಉದ್ದೇಶದಿಂದಲ್ಲ. ಅನೇಕಮಂದಿ ಸ್ತ್ರೀಯರು ಸಾಬೂನುಗಳನ್ನು ತಪ್ಪದೆ ಉಪಯೋಗಿಸುವುದರಿಂದ, ತಮ್ಮ ದೇಹದಲ್ಲಿ ಹೊಸಬಣ್ಣವೊಂದು ಬರುವುದೆಂದು ಭಾವಿಸಿರುವರು. ಇದು ತಪ್ಪು. ಒಳಭಾಗದ ಚರ್ಮದಲ್ಲಿ ಕೆಲವು ಗೂಡುಗಳಿರುವುವು. ದೇಹದ ಬಣ್ಣವು ಅದರಲ್ಲಿರುವ ಪದಾರ್ಥಗಳನ್ನನುಸರಿಸುವುದು. ನಮ್ಮ ದೇಹದಲ್ಲಿ ಮೇಲಿನ ಪರೆ ಮತ್ತು ಒಳಗಿನ ಚರ್ಮವೆಂದೂ 2 ಚರ್ಮಗಳಿರುವುವು. ಮೇಲಿನ ಚರ್ಮದ ಕೆಳಭಾಗದಲ್ಲಿ, ದೇಹದ ಒಳಭಾಗಗಳೊಡನೆ ಸಂಬಂಧವನ್ನು ಹೊಂದಿದ ಒಳಚರ್ಮವುಂಟು. ಇದೇ ವಾಸ್ತವವಾದ ಚರ್ಮವು. ಮೇಲಿನ ಪರೆಯಲ್ಲಿ ರಕ್ತನಾಳಗಳಾಗಲಿ, ನರಗಳಾಗಲಿ ಇರುವುದಿಲ್ಲ. ಇದರ ಬೆಳವಣಿಗೆ ಸಹಕಾರಿಯಾಗಿರುವುದು ರಕ್ತದಿಂದ ತಯಾರಾದ ಒಂದು ದ್ರಾವಕವು. ಒಳಭಾಗದ ಚರ್ಮದಲ್ಲಿ ಅನೇಕ ರಕ್ತಕಣಗಳೂ ಮತ್ತು 'ಪಾಪಿಲೆ' ಎಂಬ ಚಾಚಿಕೊಂಡಿರುವ ಭಾಗಗಳೂ ಇವೆ. ಈ ಗಂಟುಗಳಲ್ಲಿರುವ ಸಣ್ಣ ಸಣ್ಣ ರಕ್ತನಾಳಗಳು ಆ ಒಳಚರ್ಮಕ್ಕೆ ರಕ್ತವನ್ನೊದಗಿಸುವುವು. ಈ ಗಂಟುಗಳ ಕೆಳಗೆ 'ಬೇಸಲ್ ಎಪಿತೀಲಿಯಮ್' ಎಂಬ ಪದರವಿರುವುದು. ಈ ಪದರದಲ್ಲಿರುವ ರಕ್ತಕಣಗಳಲ್ಲಿ ಪಿಗ್‍ಮೆಂಟ್ ಎಂಬುದೂ, ಮೇಲಾನೋಬ್ಲಾಸ್ಟ್ಸ್ ಎಂಬ ಹೆಸರುಳ್ಳ ಕೆಲವು ರಕ್ತಕಣಗಳೂ ಇರುವುವು. ಈ ಪಿಗ್‍ಮೆಂಟಿನಿಂದ ಪ್ರತಿಯೊಬ್ಬರ ದೇಹದ ಬಣ್ಣವೂ ಉಂಟಾಗುವುದು. ಬೇಸಿಲ್ ಎಪಿತೀಲಿಯಮ್ ಎಂಬುದರ ಮೇಲುಭಾಗಗಳಲ್ಲಿರುವ ಅನೇಕ ರಕ್ತಕಣಗಳ ಪದರಗಳೊಳಭಾಗಕ್ಕೆ ನೀರಿಳಿಯಲಾರದು. ಆದುದರಿಂದ ಪಿಗ್‍ಮೆಂಟ್ ಕಣಗಳು ಬಹಳ ಒಳಭಾಗದಲ್ಲಿರುವುದರಿಂದಲೂ, ಮೇಲುಭಾಗದಲ್ಲಿ ನೀರಿಳಿಯದ ಪದಾರ್ಥವಿರುವುದರಿಂದಲೂ, ಅವು ಅಪಾಯಕ್ಕೀಡಾಗದೆ ಸುರಕ್ಷಿತವಾಗಿರುವುವು. ಇದರಿಂದ ಸೋಪುಗಳನ್ನು ಯಾವರೀತಿಯಲ್ಲಿ ಉಪಯೋಗಿಸಿದರೂ ಚರ್ಮದ ಬಣ್ಣವನ್ನು ಏನೂ ಮಾಡಲಾರವು. ಮೇಲೆ ಹೇಳಿದಂತೆ ಚರ್ಮದ ಮೇಲಿನ ಜಿಡ್ಡುಪದಾರ್ಥಗಳನ್ನು ಕಶ್ಮಲಗಳನ್ನೂ ಹೋಗಲಾಡಿಸುವುದೇ ಅದರ ಪ್ರಯೋಜನವು.

ಚರ್ಮವನ್ನು ಶುದ್ಧಿಗೊಳಿಸುವುದಕ್ಕೆ, ಸುಮ್ಮನೆ ಸೋಪ ಸವರಿ ನೀರನ್ನು ಸುರಿದುಕೊಂಡರೆ ಸಾಲದು. ಬಹಳ ಗಟ್ಟಿಯ ಯಾಗಲಿ, ಮೃದುವಾಗಿಯಾಗಲಿ ಇಲ್ಲದಿರುವ ಯಾವುದಾದ ನಾರಿನಿಂದ ಚರ್ಮವೆಲ್ಲವನ್ನೂ ಚೆನ್ನಾಗಿ ತಿಕ್ಕಬೇಕು. ಮೈ ನ್ನುಜ್ಜುವುದಕ್ಕೆ ಪಶ್ಚಿಮದೇಶಗಳಲ್ಲಿ ಸ್ಪಂಜುಗಳನ್ನು ಉಪಯೋ ಸುವರು. ನಮ್ಮ ದೇಶದಂತಿರುವ ಉಷ್ಣದೇಶಗಳಲ್ಲಿ ಸ್ಪಂಜ ಳಿಂದ ಪ್ರಯೋಜನವಿಲ್ಲ. ಬಹಳ ಪ್ರಯೋಜನಕಾರಿಯಾಗಿ ಸು ಭವಾಗಿ ದೊರೆಯುವ ಹೀರೇಕಾಯಿಯ ಒಣಗಿದ ಸಿಪ್ಪೆಯು ಇದ ಒಳ್ಳೆಯ ಸಾಧನವು. ಕಾಲಾಣೆ ಕೊಟ್ಟರೆ ಇದು ಎಲ್ಲಾ ಗ್ರಾ ಯ ಅಂಗಡಿಗಳಲ್ಲಿಯೂ ದೊರೆಯುವುದು. ಇದು ಬಹ ಟ್ಟಿಯೂ ಅಲ್ಲ, ಮೃದುವೂ ಅಲ್ಲ. ಇದೊಂದೇ ಮೃದುವಾ ಚರ್ಮಗಳಿಗೆ ತಕ್ಕಂತಿರುವುದು. ಮೈಗೆಲ್ಲಾ ಸೋಪನ್ನು ಹಾಕಿ ಮೇಲೆ ಬಲವಾಗಿ ತಿಕ್ಕದಿದ್ದರೆ, ಸೋಪಿನ ಚೂರುಗಳು ನಮ್ಮ ಚರ್ಮದಲ್ಲಿರುವ ಸಾವಿರಾರು ರಂಧ್ರಗಳನ್ನು ಮುಚ್ಚಿಕೊಂ ಚರ್ಮದಮೇಲೆ ಯಾವುದೋ ಸಣ್ಣಪುಡಿಗಳನ್ನು ಬಳದಂತಾ ಚರ್ಮದಿಂದ ಬೆವರು ಹೊರಡುವುದಕ್ಕೆ ತಡೆಯಾಗಿ, ಅನೇ ಚರ್ಮವ್ಯಾಧಿಗಳಿಗೆ ಕಾರಣವಾಗುವುವು.

ಔಷಧಿಪದಾರ್ಥಗಳನ್ನು ಸೇರಿಸಿದ ಸಾಬೂನುಗಳು:— ಈಗೀಗ ವಿದ್ಯಾವಂತರಾದ ಕೆಲವರು, ತಮಗೆತಮಗೆ ಬೇಕಾ ಔಷಧಪದಾರ್ಥಗಳು ಸೇರಿದ ಯಾವುದಾದರೊಂದು ಸಾಬೂನ ಉಪಯೋಗಿಸುತ್ತಿರುವರು. ಔಷಧಪದಾರ್ಥಗಳು ಸೇರಿದ ಸೋಪುಗಳಿಂದ ದೇಹಕ್ಕಾಗುವ ಉಪಯೋಗವೇನೆಂಬುದು ಇ ನಿರ್ಧರವಾಗಿ ತಿಳಿದಿಲ್ಲ. ಸೋಪುಗಳೊಡನೆ ಉಪಯೋಗಿಸ ರುವ ಕೆಲವು ಪದಾರ್ಥಗಳು, ಕೊಬ್ಬು ಹೆಚ್ಚಾಗಿರುವ ಎಣ್ಣೆಗ ಡನೆ ಸೇರಿದಾಗ ಅವುಗಳ ಗುಣಗಳು ಕಡಿಮೆಯಾಗುವುವು. ಕೆಲವು ಪದಾರ್ಥಗಳು ನಾವು ಸೋಪುಗಳನ್ನು ಬಳದು ಉ ನೀರುಸುರಿದುಕೊಳ್ಳುವಷ್ಟು ಶೀಘ್ರಕಾಲದಲ್ಲಿ ಯಾವ ಗು ವನ್ನೂ ತೋರಿಸಲಾರವು. ಆರೋಗ್ಯಕರವಾದ ಚರ್ಮವಿರುವ ರಿಗೆ ಈ ಔಷಧಪದಾರ್ಥಗಳು ಸೇರಿರುವ ಸಾಬೂನುಗಳ ಇತರ ಸೋಪುಗಳಿಂದಾಗುವುದಕ್ಕಿಂತ ಅಧಿಕ ಪ್ರಯೋಜನವೇ ಕಾಣದು. ಆದುದರಿಂದ ಅವುಗಳನ್ನು ನಿತ್ಯವೂ ಉಪಯೋ ಬೇಕಾದುದಿಲ್ಲ.

ಚರ್ಮವು ಬಹಳ ಮೃದುವಾಗಿಯೂ, ಸೂಕ್ಷ್ಮವಾಗಿ ಇರುವವರು, ಔಷಧಪದಾರ್ಥಗಳು ವಿಶೇಷವಾಗಿ ಸೇರಿರುವ ಪ ರ್ಥಗಳನ್ನುಪಯೋಗಿಸಿದರೆ, ಅವರ ಚರ್ಮದಲ್ಲಿ ಉರಿ ಪ್ರಾರಂಭಿಸಬಹುದು. ಸೂಕ್ಷ್ಮವಾದ ಚರ್ಮವಿರುವ ಕೆಲ ಮೈಮೇಲೆ ಟಿಂಚರ್ ಆಫ್ ಅಯೋಡಿನ್ ಅಥವಾ ಬಿನ್ ಅ ಡೈಡ್ ಆಫ್ ಮರ್ಕ್ಯುರಿ ಮುಂತಾದ ದ್ರಾವಕಗಳನ್ನು ಒ ವರ್ತಿ ಸವರಿದರೂ ಚರ್ಮದಲ್ಲಿ ಉರಿಯು ಕಾಣಿಸಿಕೊಳ್ಳುವು ಮತ್ತು ಮೇಲಿನ ಚರ್ಮವು ಉರಿದುಹೋಗುವುದು. ಅಂಥ ವೈದ್ಯರ ಸಲಹೆಯನ್ನು ಕೇಳದೆ ಔಷಧಪದಾರ್ಥಗಳು ಸೇರಿ ಸಾಬೂನುಗಳನ್ನು ಪ್ರತಿದಿನವೂ ಉಪಯೋಗಿಸಬಾರದು. ಸಾ ನುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ, ಅ ಲಿಂದ ಕೆಡಕೇ ಹೆಚ್ಚು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೯—೧೧—೧೯೩೩ ಪೂರ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲ ಳಲ ಕ್ಷೇತ್ರಗಳ ಮಹಾಯಾತ್ರೆಯು. ಸೆಕೆಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವ
ಸದರಿ ಕಂಪನಿಯು ಎಂಜಿನ ಕಂಟೆಗಳಿಂದ ಪಡಜವಾನುಗಳು ಕಿರ್ದೀ ಮಾಡಿಕೊಡಲ್ಪಡುವ ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶ ಕಂಪನಿಗೆ ತಿಳಿಸತಕ್ಕದ್ದು. [9]

ಜಿ. ಎ. ಶಿರೂರ,
ತಾ|| ೧—೬—೧೯೩೩. ಆರ್ಗನಾಯಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ರ್ಣಮಕರಧ್ವಜ	೧	೨೦—೦—೦
ರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ಸಿಂಧೂರ	೧	೩—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೨—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಕಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ತಳಿಭಸ್ಮ	೧	೦—೮—೦
ಜಿನಭಸ್ಮ	೧	೦—೮—೦
ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ರ್ಣಪಕ್ಷಿಕಾಭಸ್ಮ	೧	೦—೧೨—೦
ಕಭಸ್ಮ	೧	೨—೦—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಪ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡಲೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಡಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವಾ ಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯುಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯುಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂತುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1. 1.8.0, 7-0-0

ಹೂಪಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಾಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

☞ ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪೀಠಿಕಾಪತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಟಿ—ಉಬ್ಬಸ, ನೆಗಡಿ, ದಮ್ ರೋಗಗಳನ್ನೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.
8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಪರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ '**ಕಂಪೌಂಡು ಸಿರಪು ಫೋಸ್ಪರ**' ತರಿಸಿ ಕುಡಿಯಿರಿ.
ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [48] 8 ಔನ್ಸಿಗೆ ರೂ. 3-8-6.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಜೀರ್ಣಜ್ವರ, ಇನ್‍ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[29] **ಬ್ರ್ಯಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशिनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ರಚನೆಯ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಅಚಲಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ
ರು. ಪ್ರಸಿದ್ಧವಾದ
ನಶ್ಯದ ಪುಡಿಯಿಂ
ಸ್ವಸ್ಥವಾಗುವ ವ್ಯಾ
ಧಿಗಳು ಯಾವವೆಂ
ದರೆ:—ಪಿನಸಿ, ಒಂ
ತಲೆನೋವು, ತಲೆ
ಲ್ಲಿನ ರೋಗಗಳು
ಕಣ್ಣುಗಳಲ್ಲಿ ಉಂಟಾ
ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ
ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಬ್ಲಾಪಶಕ್ತಿ
ಯನ್ನು ನೆಪ ಹೆಚ್ಚುಮಾಡುತ್ತದೆ. ಮೂರುಬಿಲ್ಲೆ
ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು
ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ
ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ
ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ
ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[30] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

EGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ನೇ ಆಗಸ್ಟ್ ೧೯೩೩ [ಸಂಚಿಕೆ ೧೫

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ ಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ವೃದ್ಧಪಿತಾಮಹ ದಯಾಸಾಗರ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ೯೦ ನೆಯ ವರ್ಷದ ವರ್ಧಂತಿಮಹೋತ್ಸವ.

ವಿಜ್ಞಾಪನೆ.

ಮಹನೀಯರೇ,

ಮೈಸೂರು ಸಂಸ್ಥಾನದ ಸಾರ್ವಜನಿಕ ಜೀವನಕ್ಕೆ ಜನ್ಮದಾತ ಗಿಯೂ, ಅನೇಕ ಸಂಸ್ಥೆಗಳ ಚಾಲಕರಾಗಿಯೂ ಮತ್ತು ಸಹ ರು ಜನ ಮೈಸೂರಿನ ಯುವಕರಿಗೆ ವಿದ್ಯಾಗುರುಗಳಾಗಿಯೂ ದೇಶಸೇವೆ, ಭಾಷಾಸೇವೆಗಳಿಗಾಗಿಯೇ ಅಹರ್ನಿಶಿಯೂ ರ್ವಸ್ವವನ್ನೂ ಅರ್ಪಿಸಿ, ಪ್ರಜೋಪಕಾರವನ್ನು ಮಾಡುತ್ತಿರುವ ಮಾನ್ ದಯಾಸಾಗರ ವೃದ್ಧಪಿತಾಮಹ ಎಂ. ವೆಂಕಟಕೃಷ್ಣ ನವರ ತೊಂಭತ್ತನೆಯ ವರ್ಷವರ್ಧಂತಿಯು ಬರುವ ಗೋಕು ಷ್ಟಮಿ ದಿನ ನೆರವೇರುತ್ತದೆ.

ಈ ಸಂತೋಷ ಸಮಾರಂಭವನ್ನು 13-8-33 ನೇ ಭಾನುವಾರ ಚಿತರೀತಿಯಲ್ಲಿ ಸಂಭ್ರಮದಿಂದ ಆಚರಿಸಿ, ಆ ಮಹನೀಯರಿಗೆ ನಿವಾಸಿಗಳ ಪರವಾಗಿ ಅಭಿನಂದನೆಯನ್ನರ್ಪಿಸಿ ಅವರ ಶಿಷ್ಯ ಟಿಯು ಕೃತಜ್ಞತಾಪೂರ್ವಕವಾದ ಭಕ್ತಿವಿಶ್ವಾಸಗಳನ್ನು ಸಬೇಕೆಂದು ನಿರ್ಧರಿಸಲಾಗಿರುತ್ತದೆ.

ಇದಕ್ಕಾಗಿ ಅವಶ್ಯಕವಾದ ಕಾರ್ಯಕ್ರಮಗಳನ್ನು ನಡೆಸಲು || ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ದು ಸಮಿತಿಯು ನಿಯಮಿಸಲ್ಪಟ್ಟಿರುತ್ತದೆ. ಈ ಸಮಾರಂಭವು ಸಾಂಗವಾಗಿ ನೆರವೇರಲು ತಾವು ಉದಾರವಾಗಿ ದ್ರವ್ಯ ಯವನ್ನಿತ್ತು ಸಮಿತಿಯವರೊಡನೆ ಸಹಕರಿಸಬೇಕಾಗಿ ವಿನಂತಿ. ಚಂದಾ ದ್ರವ್ಯವನ್ನು ಸಮಿತಿಯ ಕೋಶಾಧ್ಯಕ್ಷರಾದ ರಾವ್ ಹೇಬ್ ಎಂ. ರಾಮಸ್ವಾಮಿಯ್ಯಂಗಾರಿಗಾಗಲಿ, ಸೆಕ್ರೆಟರಿಯವರಿ ಗಲಿ ಪಾವತಿಮಾಡಬಹುದು.

ಆಗರಂ ರಂಗಯ್ಯ, ಬಿ. ಕೆ. ಮಾಧವರಾವ್,
ಕಾರ್ಯದರ್ಶಿಗಳು.

ಶ್ರೀ ರೇಣುಕವಿಜಯಪುರಾಣಪ್ರವಚನ, ಬಾರ್ಶಿ.

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾಂಸರಾದ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ವಿರಚಿತವಾಗಿರುವ ರೇಣುಕವಿಜಯ ಮಹಾಪುರಾಣವು ಶ್ರಾವಣ ಶು|| ೨ ಯಿಂದ ಪರಾಂಡಕರ ಶ್ರೀ ಪಟ್ಟದಸ್ವಾಮಿಗಳವರ ಮಠದಲ್ಲಿ ಪ್ರಾರಂಭಿಸಲ್ಪಟ್ಟಿರುವುದು. ಶ್ರೀ ವಿರೂಪಾಕ್ಷಸ್ವಾಮಿ ದೇಶಿಕೇಂದ್ರ ಲಾತೂರ ಇವರು ಪುರಾಣವನ್ನು ಮರಾಠಿ ಭಾಷೆಯಿಂದ ಭಾಷಾಂತರಮಾಡಿ ಬಹು ಮನೋಹರವಾಗಿ ಹೇಳುತ್ತಿರುವರು. ಇವರ ಪುರಾಣಪ್ರವಚನ ಸರಣಿಯು ಅತ್ಯದ್ಭುತವಾದುದು. ದಿನೇ ದಿನೇ ಶ್ರೋತೃ ಸಮುದಾಯವು ಹೆಚ್ಚುತ್ತಲಿದ್ದು ಮಠದಲ್ಲಿ ಜನರು ಕುಳಿತುಕೊಳ್ಳಲಿಕ್ಕೆ ಸ್ಥಾನವು ದೊರೆಯುವುದೇ ದುರ್ಲಭವಾಗಿದೆ. ಈ ಗುರುಸಾರ್ವಭೌಮರ ಪವಿತ್ರ ಚರಿತ್ರವನ್ನು ಕೇಳಿ ಮಹಾರಾಷ್ಟ್ರ ದೇಶದ ವೀರಶೈವಮಂಡಲಿಯು ಆನಂದಸಾಗರದಲ್ಲಿ ಲೋಲಾಡುತ್ತಿದೆ.

ವ್ಯವಸ್ಥಾಪಕ.

ಶಿರೋಳ.

ಶ್ರೀ ಶಿರೋಳ ಹಿರೇಮಠದಲ್ಲಿ ಶ್ರೀಮುಖನಾಮ ಸಂವತ್ಸರ ಶ್ರಾವಣಮಾಸಾರಂಭದಿಂದ ಪ್ರತಿದಿನ ಸಾಯಂಕಾಲ ೭ ಘಂಟೆಯಿಂದ ೯ ಘಂಟೆಯವರೆಗೆ ಶ್ರೀ ಜಗದ್ಗುರು ರೇಣುಕವಿಜಯಪುರಾಣಪ್ರವಚನವು ನೆರವೇರುತ್ತಲಿದೆ. ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶ ದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ನಡುಗುತ್ತಲಿದ್ದ ತಲೆಯನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅತ್ಯದ್ಭುತ ಲೀಲೆಗಳನ್ನು ಮಾಡಿ ಸಮಸ್ತ ಪ್ರಪಂಚವಂದ್ಯರಾದ ಈ ಜಗದ್ಗುರುಗಳ ಪುರಾಣಪ್ರವಚನದ ಶ್ರವಣಾಮೃತವನ್ನು ಸವಿಯಲು ಸಮಸ್ತರೂ ಸಕಾಲಕ್ಕೆ ಆಗಮಿಸಿ ಸದ್ಗುರುವಿನ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಷಡಕ್ಷರಯ್ಯ ಹಿರೇಮಠ.

ಮೈಸೂರು ಗೆಜೆಟ್.

ಕೋಲಾರದ ಮುನಿಸೀಫರಾದ ಮಿ|| ಎಸ್. ಶಾಮಯ್ಯಂಗಾರ್ ಬಿ.ಎ.,ಎಲ್‌ಎಲ್.ಬಿ, ಇವರಿಗೆ ಕೊಟ್ಟಿರುವ ರಜೆಯು ಮತ್ತೊಂದು ತಿಂಗಳು ಹೆಚ್ಚಿಸಲ್ಪಟ್ಟಿದೆ.

ನರಸಿಂಹರಾಜಪುರದ ಮುನಸೀಫರಾದ ಮಿ|| ಎ. ಎಸ್. ಗೋವಿಂದರಾಜುಲು ಮೊದಲಿಯಾರ್ರವರಿಗೆ ಕೊಟ್ಟಿರುವ ರಜೆಯು ಪುನಃ 4 ತಿಂಗಳವರೆಗೆ ಹೆಚ್ಚಿಸಲ್ಪಟ್ಟಿದೆ.

ಅಗ್ರಿಕಲ್ಚರಲ್ ಡಿಪಾರ್ಟುಮೆಂಟಿನ ಸೀನಿಯರ್ ಅಸಿಸ್ಟೆಂಟರಾದ ಮಿ|| ಎಂ. ರಂಗನಾಯಕಲುನಾಯ್ಡುರವರಿಗೆ ಕೊಟ್ಟಿರುವ ಪ್ರಿವಿಲೇಜ್‌ರಜೆಯು 15 ದಿನಗಳವರೆಗೆ ಹೆಚ್ಚಿಸಲ್ಪಟ್ಟಿದೆ.

ಸಿಡ್ಲಘಟ್ಟ ತಾಲೂಕಿನ ಆಕ್ಟಿಂಗ್ ಅಮಲ್ದಾರರಾದ ಮಿ|| ಎ. ಸುಂದರಂ ಮೊದಲಿಯಾರ್‌ರವರು ಗುಂಡಿಬಂಡೆ ಸಬ್ ತಾಲೂಕಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಇದುವರೆಗೆ ಮೈನರ್ ಮುನಿಸಿಪಾಲಿಟಿಯಾಗಿದ್ದ ಮಂಡ್ಯವನ್ನು ಟೌನ್‌ಮುನಿಸಿಪಾಲಿಟಿಯನ್ನಾಗಿ ಮಾಡಿ ಇನ್ನುಮುಂದೆ ಅಲ್ಲಿಂದ ಪ್ರಜಾಪ್ರತಿನಿಧಿಸಭೆಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ದುರ್ವಿರಕ್ತರ ಹಾವಳಿ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವು ಅತ್ಯಂತ ಶ್ರೇಷ್ಠವಾದುದಾಗಿದೆ. ಈ ಮತಕ್ಕೆ ಸಮಾನವಾದ ಮತವು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಇಂಥ ಪರಮಪವಿತ್ರವಾದ ವೀರಶೈವಮತದಲ್ಲಿ ಹುಟ್ಟಿದವನೇ ಧನ್ಯನು! ಅನೇಕ ಜನ್ಮಗಳಲ್ಲಿ ಪುಣ್ಯವನ್ನು ಮಾಡಿದವನೇ ಈ ಮತದಲ್ಲಿ ಹುಟ್ಟುತ್ತಾನೆ. ಅನೇಕ ಜನ್ಮಗಳನ್ನೆತ್ತಿ ಮುಕ್ತಿಯನ್ನು ಪಡೆಯುವುದಕ್ಕಿಂತ ವೀರಶೈವ ಮತದಲ್ಲಿ ಹುಟ್ಟಿ ಒಂದೇ ಜನ್ಮದಲ್ಲಿ ಮುಕ್ತಿಯನ್ನು ಪಡೆಯುವದು ಉತ್ತಮವಾಗಿದೆ. ಅಂದಮೇಲೆ ಇಂಥ ಉದಾತ್ತವಾದ ವೀರಶೈವ ಮತವನ್ನು ವರ್ಣಿಸಲು ಬೃಹಸ್ಪತಿಯೂ ಸಹ ಸಮರ್ಥನಾಗಲಾರನೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಹೀಗೆ ಸರ್ವಮತಗಳಲ್ಲಿ ಶಿರೋಮಣಿಯೆನಿಸುವ ಈ ವೀರಶೈವಮತದಲ್ಲಿ ೧೨ ನೆಯ ಶತಮಾನದಲ್ಲಿ ಅಂದರೆ ಬಸವನಕಾಲದಲ್ಲಿ ಅಲ್ಲಮಪ್ರಭು ಎಂಬುವನು ಇದ್ದನು. ಇವನ ಸಾಂಪ್ರದಾಯಕರೆನಿಸಿಕೊಳ್ಳುವ ಕೆಲವು ವಿರಕ್ತರು ಪರಮ ಪವಿತ್ರವಾದ ವೀರಶೈವಮತದಲ್ಲಿ ಇಲ್ಲದ್ದೊಂದು ಕೋಲಾಹಲವನ್ನೆಬ್ಬಿಸುತ್ತಿದ್ದಾರೆ. ಮತ್ತು ಈ ವಿರಕ್ತರು ವಿರಕ್ತ ಎಂಬ ಶಬ್ದದ ಅರ್ಥವನ್ನೇ ತಿಳಿಯದವರಾಗಿ ಸಂಸಾರಿಗಳಂತೆ ಬಹು ಹೇಯವಾದ ಮಾರ್ಗದಲ್ಲಿ ಹೋಗುತ್ತಿದ್ದಾರೆ. ಇದು ಸರ್ವಥಾ ಯೋಗ್ಯವಲ್ಲ. ಯಾವನು ಈ ಹೇಯವಾದ ಸಂಸಾರದಲ್ಲಿ ಪ್ರೇಮವನ್ನಿಡದೆ ಹೊನ್ನು ಹೆಣ್ಣು ಮಣ್ಣು ಈ ಮೂರನ್ನು ತೃಣದಂತೆ ತಿಳಿಯುವನೋ ಅವನೇ ವಿರಕ್ತನು. ಒಂದು ಪಕ್ಷದಲ್ಲಿ ತಾನ ವಿರಕ್ತನೆನಿಸಿಕೊಂಡು ಹೊನ್ನು ಮೊದಲಾದ ವಿಷಯಗಳಲ್ಲಿ ಲೋಲನಾದರೆ ಅವನು ಆರೂಢಪತಿತನೆನಿಸಿಕೊಳ್ಳುತ್ತಾನೆ. ಅವನಂಥ ಪಾಪಿಯು ಯಾವನೂ ಇಲ್ಲ. ಸೂತ್ರಾಗಮದಲ್ಲಿ (ಸುವರ್ಣರತ್ನ ಪ್ರಮುಖವಸ್ತು ವೃದ್ಧ್ಯೈ ಪಜೀವನಾತ್ ಅತಿ ವರ್ತನೀಯದಿ ಚರೇತ್ಸೋಽಯಂಪಾತಕಿನಾಂವರಃ) ಎಂದು ಹೇಳಲ್ಪಟ್ಟಿರುತ್ತದೆ. ಇದೂ ಅಲ್ಲದೆ ಈ ವಿರಕ್ತರಿಗೆ ಯಾವನಾದರೂ ಧನವನ್ನು ಕೊಟ್ಟದ್ದೇ ಆದರೆ ಅವನು ನರಕವನ್ನು ಹೊಂದುವನೆಂದು ಸುಪ್ರಬೋಧಾಗಮದಲ್ಲಿ 'ಯತಯೇ ಕಾಂಚನಂ ದತ್ವಾ ದಂತಾಚ ನರಕಂ ವ್ರಜೇತ್' ಎಂದು ಹೇಳಲ್ಪಟ್ಟಿರುತ್ತದೆ. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಇರಲಿ. ಪ್ರಕೃತದಲ್ಲಿ ಕೆಲವಿರಕ್ತರ ಆಚರಣೆಗಳನ್ನಷ್ಟು ವಿಚಾರಮಾಡೋಣ. ಈಗಿನ ವಿರಕ್ತರು ಯಾವಾಗಲೂ ಆಶೆಯೆಂಬ ಪಿಶಾಚಿಯಿಂದ ಗ್ರಸ್ತರಾಗಿ ತಮಗೆ ಉಚಿತವಾದ ಮಾರ್ಗವನ್ನು ಬಿಟ್ಟು ದುರ್ಮಾರ್ಗಿಗಳಾಗಿ (ಉದರನಿಮಿತ್ತಂ ಬಹುಕೃತವೇಷಃ) ಎಂಬಂತೆ ಹೊಟ್ಟೆ ತುಂಬಿಕೊಳ್ಳುವದರ ಸಲುವಾಗಿ ಬಜಾರದಲ್ಲಿ ತಿರುಗುವ ವೇಷಧಾರಿ ಸನ್ಯಾಸಿಗಳಂತೆ ಕಾವಿಯ ಮರ್ಯಾದೆಯನ್ನು ಅರಿಯದೆ ಕಾಷಾಯಾಂಬರಧಾರಿಗಳಾಗಿ ನಾವು ಕಾಲೇಜುಗಳನ್ನು ಸ್ಥಾಪಿಸುತ್ತೇವೆ, ನಾವು 'ಅರುವತ್ತುಮೂರುಮಂದಿ ಪುರಾತನರ ಪೂಜೆಮಾಡುತ್ತೇವೆ, ನಮಗೆ ಅಷ್ಟು ದ್ರವ್ಯಬೇಕು ಇಷ್ಟು ದ್ರವ್ಯಬೇಕು ಎಂದು ಡಂಭಾಚಾರವನ್ನು ಕೊಚ್ಚಲಾಗಿ ಮೂಢಭಕ್ತರು ಕಪಟಸನ್ಯಾಸಿಗಳ ಕಪಟವನ್ನರಿಯದೆ ಇವರ ಆಡಂಬರವನ್ನು ನೋಡಿ ಮತ್ತು ಇವರ ವಾಗ್ಜಾಲದಲ್ಲಿ ಸಿಲ್ಕಿ ಬೇಡಿದಷ್ಟು ದ್ರವ್ಯವನ್ನು ಕೊಡಲು, ಆ ದ್ರವ್ಯದಿಂದ ಮಠದ ಆಸ್ತಿಯನ್ನು ಬೆಳೆಯಿಸಿ ಗೃಹಸ್ಥರಂತೆ ಸಂಸಾರದ ಕೊಳಚಿಯಲ್ಲಿ ಬೀಳುತ್ತಿರುವರು. ಇದಲ್ಲದೆ ಈ ಸನ್ಯಾಸಿಗಳಿಗೆ ಅಡ್ಡಪಲ್ಲಕ್ಕಿಯ ಉತ್ಸವವಾಗಬೇಕಂತೆ! ಬಾಯಲ್ಲಿ ವಿರಕ್ತರೆಂದು ಹೇಳಿ ನಮಗೆ ಅಡ್ಡಪಲ್ಲಕ್ಕಿಯ ಉತ್ಸವವಾಗಬೇಕೆಂದು ಹೇಳಲು ಇವರ ನಾಲಿಗೆಯಾದರೂ ಹೇಗೆ ಎದ್ದಿತು?

ಮಹಾಶಯರೇ ನೋಡಿರಿ? ವಿರಕ್ತರೇ ಪಲ್ಲಕ್ಕಿಯಲ್ಲಿ ಕೂಡು ಮೆರೆಯಬೇಕಾಗಿದ್ದರೆ ಪಾಶುಪತತಂತ್ರದಲ್ಲಿ—

ನಾಂದೋಲಿಕಾಂ ಸಮಾರೋಹೇದಶ್ವಾರೋಹಣ ವರ್ಜಿತಃ |

ಎಂದು ಯಾಕೆ ಹೇಳಬೇಕಾಗಿತ್ತು. ನೋಡಿರಿ ಯಾವನು ನಿಜವಾದ ವಿರಕ್ತನೋ ಅವನು ಪಲ್ಲಕ್ಕಿ ಅಶ್ವಾರೋಹಣ ಮೊದಲಾದ ಉತ್ಸವಗಳಿಗೆ ಎಂದೂ ಮೆಚ್ಚುವದಿಲ್ಲ. ಇದೂ ಅಲ್ಲದೆ ಇಂಥ ಕಪಟಿಗಳಿಗೆ ಭಗವತ್ಪಾದರಾದ ರೇಣುಕಾದಿ ಪಂಚಾಚಾರ್ಯರ ಉತ್ಕರ್ಷವು ಸಹಿಸುವದಿಲ್ಲ. ಶ್ರೀ ಪಂಚಾಚಾರ್ಯರು ಯಾವ ಯಾವ ಸ್ಥಳದಲ್ಲಿ ಭಕ್ತಕೋಟಿಯನ್ನು ಉದ್ಧರಿಸುವದಕ್ಕೋಸ್ಕರ ಹೋಗುವರೋ ಈ ದುರ್ವಿರಕ್ತರು ಆ ಆ ಸ್ಥಳಗಳಿಗೆಲ್ಲ ಹೋಗಿ ಇಲ್ಲದೊಂದು ದುರ್ಬೋಧವನ್ನು ಮಾಡಿ ಭಕ್ತರನ್ನು ಸೆಳೆದುಕೊಂಡು ತಾವು ಗುರುನಿಂದೆಗೆ ಪಾತ್ರರಾಗುವದಲ್ಲದೆ ಮುಗ್ಧರಾದ ಭಕ್ತರನ್ನೂ ಕೂಡ ಪಾಪಕೂಪದಲ್ಲಿ ದೂಡಲಿಕ್ಕೆ ಹೋಗುವರು. ಈ ಪ್ರಕಾರವಾಗಿ ಗುರುನಿಂದೆಯನ್ನು ಮಾಡಿದ್ದೇ ಆದರೆ ಆಗುವದೇನು? ಗೂಗಿಯು ಸೂರ್ಯನನ್ನು ನಿಂದಿಸಿದ್ದೇ ಆದರೆ ಆ ತೇಜೋಮಯನಾದ ಸೂರ್ಯನಿಗೆ ಕಳಂಕವೇನಾದರೂ ಬರುವದೇ? ಜಾರಚೋರರು ರಾತ್ರಿಯಲ್ಲಿ ಚಂದ್ರನನ್ನು ನಿಂದಿಸಿದ್ದೇ ಆದರೆ ಆ ಶೀತಕಿರಣನಿಗೆ ಕುಂದೇ? ಬೆಂಕಿಹುಳವು ರಾತ್ರಿಯಲ್ಲಿ ಮಿಣುಕ್ ಎಂದು ಹಾರಾಡಿದರೆ ಕತ್ತಲೆಯನ್ನು ನಾಶಮಾಡೀತೇ? ಅದರಂತೆ ಅಲ್ಪರಾದ ವಿರಕ್ತರು ಗುರುಸಾರ್ವಭೌಮರ ದೂಷಣೆಯಲ್ಲಿ ತೊಡಗಿದರೆ ಅದರಿಂದ ಗುರುಗಳಿಗಾದ ಕುಂದಾದರೇನು? ಇದಲ್ಲದೆ ಇವರು ಶಾಸ್ತ್ರವಿರುದ್ಧವಾಗಿ ವೀರಶೈವ ಮತವನ್ನು ಸಾಂಕರ್ಯಗೊಳಿಸಬೇಕೆಂದು ಮೂಢರದ್ದಲ್ಲಿಗೆ ಹೋಗಿ ವೀರಶೈವ ಮತದಲ್ಲಿ ಜಾತಿಗಳಿಲ್ಲವೆಂತಲೂ ಯಾವ ಜಾತಿಯಲ್ಲಾದರೂ ಕನ್ಯಾದಾನಾದಿ ವ್ಯವಹಾರಾದಿಗಳನ್ನು ಮಾಡಬೇಕೆಂತಲೂ ವೀರಶೈವರಿಗೆ ಅಸ್ಪೃಶ್ಯದೋಷವಿಲ್ಲವೆಂತಲೂ ಹೇಳುವರು. ಇವರು ಯಾವ ಯಾವ ಧರ್ಮಗ್ರಂಥಗಳನ್ನು ನೋಡಿದ್ದಾರೆಯೋ ತಿಳಿಯದಾಗಿದೆ. ನೋಡಿದ ಪಕ್ಷದಲ್ಲಿ ಈ ಮಹಾಶಯರು ನಮ್ಮ ಸಮಾಜದಲ್ಲಿ ಜಾತಿಸಾಂಕರ್ಯದ ಕೋಲಾಹಲವನ್ನು ಎಬ್ಬಿಸುತ್ತಿದ್ದಿಲ್ಲ. ಒಂದುವೇಳೆ ನಮ್ಮ ಸಮಾಜದಲ್ಲಿ ಜಾತಿಭೇದಗಳೇ ಇಲ್ಲವಾದರೆ ವೀರಶೈವ ಸಿದ್ಧಾಂತ ಗ್ರಂಥಗಳೆಲ್ಲವೂ ಏಕಮುಖದಿಂದ ಜಾತಿಗಳಿರುವವೆಂದು ಘಂಟಾಘೋಷವಾಗಿ ಸಾರುತ್ತವೆ ಇರಲಿ, ಪೂರ್ವಕಾಲದಲ್ಲಿ ಸದಾಚಾರದಿಂದ ತುಂಬಿತುಳುಕುತ್ತಿದ್ದ ನಮ್ಮ ವೀರಶೈವ ಸಮಾಜವು ಈಗ ನಾಲ್ಕು ಐದು ವರುಷಗಳಿಂದ ಅತ್ಯಂತ ಹೀನಾವಸ್ಥೆಗೆ ಬಂದಿರುತ್ತದೆ. ಇದು ಕಪಟಸನ್ಯಾಸಿಗಳ ಪ್ರಭಾವವು. ಈ ವಿರಕ್ತರು ಗಾಂಧಿಯವರಿಂದ ಹೊರಟ ಅಸ್ಪೃಶ್ಯತಾ ನಿವಾರಣವು ನಮಗೂ ಕೂಡ ಯೋಗ್ಯವದೆ. ನಾವಾದರೂ ಈ ಅಸ್ಪೃಶ್ಯತಾನಿವಾರಣವನ್ನು ಮಾಡಬೇಕು. ಈ ಅಸ್ಪೃಶ್ಯತಾ ನಿವಾರಣವನ್ನು ಪ್ರಮುಖ ಶ್ರೇಷ್ಠನಾದ ಬಸವನು ಅನುಸರಿಸಿದ್ದಾನೆ. ಎಂದು ಈ ಅರಣ್ಯಪಂಡಿತರು ಅಲ್ಲಲ್ಲಿಯೇ ಉದ್ಗಾರಮಾಡುತ್ತಲಿದ್ದಾರೆ. ಧಾರವಾಡ ೧೧ನೇ ವೀರಶೈವ ಮಹಾಸಭೆಯಲ್ಲಿಯೂ ಇಂಥ ಯಾವನೋ ಒಬ್ಬ ಕಪಟಸನ್ಯಾಸಿಯಮೂಲಕನು ಈ ಅಸ್ಪೃಶ್ಯತಾ ನಿವಾರಣ ಮಾಡಬೇಕೆಂದು ಠರಾವು ಪಾಸು ಮಾಡಿರುತ್ತಾರೆ. ಇದು ಸರ್ವಥಾ ತಪ್ಪು. ಆ ಬಸವನ ಕಾಲದಲ್ಲಿ ಮಾದರ ಹರಳಯ್ಯನ ಮಗನಿಗೂ, ಬ್ರಾಹ್ಮಣ ಮಧುವಯ್ಯನ ಮಗಳಿಗೂ ಯಾವಾಗಲಗ್ನವಾಯಿತೋ ಆಗಲೇ ಆ ಬಸವನು ಕಲ್ಯಾಣಪಟ್ಟಣವನ್ನು ಬಿಟ್ಟು ಓಡಿಹೋದನು. ಇದನ್ನರಿಯದೆ ವಿರಕ್ತರು ಆ ಬಸವನನ್ನು ಮುಂದೆ ಮಾಡಿ ಬಸವನೇ ಜಗದ್ಗುರು, ಬಸವನೇ ಮತಸ್ಥಾಪಕನು ಎಂದು ಅವನ ಉತ್ಕರ್ಷವನ್ನು ಮಾಡುತ್ತಿದ್ದಾರೆ. ಇದು ನಿಜವಾದ ಉತ್ಕರ್ಷವಲ್ಲ, ತಮ್ಮ ಕಾರ್ಯ ಸಾಧಿಸುವದರ ಸಲುವಾಗಿಯಾಗಲಿ, ಭಕ್ತರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವದರ ಸಲುವಾಗಿಯಾಗಲಿ ಇಂಥ ಅಪಸಿದ್ಧಾಂತ ಮಾರ್ಗದಲ್ಲಿ ಕಾಲಿಡುತ್ತಲಿದ್ದಾರೆ. ಅಯ್ಯೋ ಗುರುನಿಂದೆಯೆಂಬ ಪಾಪದ ಕೊಳಚಿಯಲ್ಲಿ ಬಿದ್ದು ಹೊರಳಾಡುವ ವಿರಕ್ತರೇ, ಪ್ರತಿಯೊಂದು ಮಾತಿಗೆ ಬಸವನನ್ನು ಮುಂದಿಟ್ಟು ನಿಮ್ಮ ಪಕ್ಷವನ್ನು ಸಾಧಿಸಲು ಹೋದರೆ ಅದೆಂದೂ ನೆರವೇರಲಾರದು; ಇಂಥ ಕಾಡುಮಾರ್ಗದಲ್ಲಿ ನೀವು ಹೋಗುವುದರಿಂದ ನಿಮ್ಮ ಕಾಲುಗಳಿಗೆ ಎಂಥ ಮುಳ್ಳುಗಳು ತಗಲಿ ಎಷ್ಟು ಭವಣೆಪಡಬೇಕೋ ತಿಳಿಯದಾಗಿದೆ. ಇನ್ನಾದರೂ ಈ ವಕ್ರಮಾರ್ಗಗಳಿಂದ ಹಿಂತಿರುಗಿ ಶ್ರೀ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವ ಸಿದ್ಧಾಂತ ಪ್ರಕಾರವಾದ ಪವಿತ್ರ ಸನ್ಯಾಸವನ್ನು ಸ್ವೀಕರಿಸಿ ಇಹದಲ್ಲೂ ಪರದಲ್ಲೂ ಧನ್ಯಾತ್ಮರಾಗಿ ನೀವು ಧರಿಸಿದ ವಿರಕ್ತನಾಮವನ್ನು ಅನ್ವರ್ಥಕ ಮಾಡಿಕೊಳ್ಳಿರಿ.

ಶರಣಬಸವಶರ್ಮಾ, ಅರಕೇರಿ.

|| ಶ್ರೀಃ ||

ನಂಜನಗೂಡಿನಲ್ಲಿ ನೆರವೇರಿದ ಸಂಗೀತವಿದ್ವತ್ಸಮ್ಮೇಲನದ ಅಧ್ಯಕ್ಷರಾದ ರಾಜಕವಿಭೂಷಣ ಶ್ರೀಮಾನ್ ಎಚ್. ಲಿಂಗರಾಜ ಅರಸರವರು ಮಾಡಿದ ಭಾಷಣ.

ಸಭಿಕಮಹಾಶಯರೆ,

ನಂಜನ್ನು ಉಂಡು ನಂಜುಂಡೇಶ್ವರನೆಂದು ಪ್ರಸಿದ್ಧಿಯನ್ನು ಪಡೆದ ಪರಮೇಶ್ವರನ ಕ್ಷೇತ್ರವಿದು ನಂಜನಗೂಡು. ಈಶ್ವರನು ತಾಂಡವದಲ್ಲಿ ಆಸಕ್ತನಾಗಿರುವುದರಿಂದ ತಾಂಡವೇಶ್ವರನೆನಿಸಿರುವನು. ಅವನಿಗೆ ನಟರಾಜನೆಂದೂ ಹೆಸರಿರುವುದು. ಆ ನಟರಾಜನ ಈ ಕ್ಷೇತ್ರದಲ್ಲಿ ನೃತ್ತಗೀತವಾದ್ಯಾತ್ಮಕವಾದ ಸಂಗೀತವನ್ನು ತಿಳಿದವರ ಸಮ್ಮೇಲನವು ನಡೆಯುವುದು ನ್ಯಾಯವಾಗಿರುವುದು.

'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ'

ಎನ್ನುವಂತೆ ಶಿಶು ಪಶು ಫಣಿಗಳೂ ಗಾನರಸವನ್ನು ತಿಳಿಯುತ್ತವೆನ್ನುವಾಗ ಮನುಷ್ಯಸಾಮಾನ್ಯಕ್ಕೆ ಗಾನರಸಾಸ್ವಾದನಶಕ್ತಿಯು ಸಹಜವಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಗಾನಜ್ಞಾನಕ್ಕೂ ಗಾನರಸಜ್ಞಾನಕ್ಕೂ ತುಂಬ ಭೇದವಿರುವುದು. ಗಾನಜ್ಞರೇ ಈ ಸಮ್ಮೇಲನದಲ್ಲಿ ಅಧ್ಯಕ್ಷರಾಗಲು ಅರ್ಹರಲ್ಲದೆ, ಕೇವಲ ಗಾನರಸಜ್ಞನಾದ ನಾನು ಅರ್ಹನಲ್ಲ. ಆದರೂ ಈ ಸಮ್ಮೇಲನದ ಪ್ರಸಿಡೆಂಟರವರಾದ ಮ|| ಸುಬ್ರಹ್ಮಣ್ಯಯ್ಯನವರು ಕಾರ್ಯದರ್ಶಿಗಳಾದ ಮ|| ಚಂದ್ರಶೇಖರಯ್ಯನವರು ಮತ್ತು ಮ|| ಆರಾಧ್ಯರು ಇವರುಗಳ ನಿರ್ಬಂಧದಿಂದಲೂ ಸಂಗೀತಶಾಸ್ತ್ರ ಪ್ರೋತ್ಸಾಹದಲ್ಲಿ ನನಗೆ ಆಸಕ್ತಿಯಿರುವುದರಿಂದಲೂ ನಾನು ಕಥಂಚಿತ್ ಈ ಅಧ್ಯಕ್ಷಪದವಿಯನ್ನು ವಹಿಸಿರುವೆನು. ಆದುದರಿಂದ ನನ್ನ ಭಾಷಣದಲ್ಲಿ ಲೋಪದೋಷಗಳಿದ್ದರೆ ಅವುಗಳನ್ನು ತಾವು ಮನ್ನಿಸಬೇಕೆಂದು ಪ್ರಾರ್ಥಿಸುವೆನು.

ನೃತ್ತ, ಗೀತ, ವಾದ್ಯಗಳಿಗೆ ಮೂರಕ್ಕೂ ಸಂಗೀತವೆಂದು ಹೆಸರು. ನಾರದಮಹರ್ಷಿಯೂ ಭರತಾಚಾರ್ಯನೂ ಸಂಗೀತಕ್ಕೆ ಮೊದಲನೆಯ ಪ್ರವರ್ತಕರೆಂದು ತಿಳಿದುಬರುವುದು. ದುಂದುಭಿ, ಆಡಂಬರ, ಭೂಮಿದುಂದುಭಿ, ವನಸ್ಪತಿ, ಅಘಾಟಿ, ಕರ್ಕರಿ, ಕಾಂಡವೀಣಾ, ವಾಣ, ವೀಣಾ, ತೂಣವ, ನಾಡೀ ಮೊದಲಾದ ವಾದ್ಯಗಳೂ ನೂರು ತಂತಿಗಳುಳ್ಳ ಶತತಂತ್ರೀ ಎಂಬ ವೀಣೆಯೂ ವೇದದಲ್ಲಿ ಹೇಳಲ್ಪಟ್ಟಿರುವುವು. ಗವಾಮಯನವೆಂಬ ಯಜ್ಞದಲ್ಲಿ ದೇವದಾಸಿಗಳ ನರ್ತನವಾದಮೇಲೆ ಯಜ್ಞವು ಮುಗಿಯುತ್ತಿದ್ದಿತೆಂದು ಯಜುರ್ವೇದದಿಂದ ತಿಳಿದುಬರುವುದು. ಮುಖ್ಯ ರಾಗದಲ್ಲಿ ಹಾಡಲ್ಪಟ್ಟ ಋಗ್ವೇದದ ಮಂತ್ರಗಳೇ ಗೀತಗಳಾಗಿ ಸಾಮವೇದವನ್ನುಂಟುಮಾಡಿರುವುವು. ಋಗ್ವೇದದ ಋಕ್ಪ್ರಾತಿಶಾಖ್ಯವೆಂಬ ವ್ಯಾಕರಣದಲ್ಲಿ ಸಪ್ತಸ್ವರಗಳ ವಿಚಾರವು ಹೇಳಲ್ಪಟ್ಟಿದೆ. ಅಶ್ವಮೇಧಯಜ್ಞದಲ್ಲಿ ಕುದುರೆಯು ಭೂಸಂಚಾರವನ್ನು ಮಾಡಿಕೊಂಡು ಹಿಂದಿರುಗಿ ಬರುವವರೆಗೆ ಒಂದು ವರ್ಷಕಾಲ ವೈಣಿಕರು ಯಾಗಶಾಲೆಯಲ್ಲಿ ದೀಕ್ಷಿತನಾದ ರಾಜನ ಮುಂದೆ ಪ್ರತಿದಿನ ಹಾಡುತ್ತಿದ್ದರೆಂದು ತಿಳಿದುಬರುವುದು.

ಶ್ರೀರಾಮನನ್ನು ಯುವರಾಜನನ್ನಾಗಿ ಮಾಡುವ ಸಂದರ್ಭದಲ್ಲಿ ಅವನ ವೈದುಷ್ಯವನ್ನು ಪ್ರಶಂಸಿಸುವಾಗ ಅವನ ಸಂಗೀತ ನೈಪುಣ್ಯವನ್ನೂ ಪ್ರಶಂಸಿಸಿರುವರು.

'ವ್ಯಾವಹಾರಿಕಶಿಲ್ಪಾನಾಂ ವಿಜ್ಞಾತಾರ್ಥವಿಭಾಗವಿತ್ |
ಗಾನ್ಧರ್ವೇ ಚ ಭುವಿ ಶ್ರೇಷ್ಠೋ ಬಭೂವ ಭರತಾಗ್ರಜಃ ||'

ಹೀಗೆ ಶ್ರೀರಾಮನು ಗಾಂಧರ್ವವಿದ್ಯೆಯಲ್ಲಿ ನಿಪುಣನಾಗಿದ್ದನೆಂದು ಹೇಳಿದೆ. ರಾವಣನು ಸಂಗೀತವನ್ನು ತಿಳಿದಿದ್ದನೆಂದು ರಾವಣನ ಮಡದಿಯರೂ ಸಂಗೀತಜ್ಞರಾಗಿದ್ದರೆಂದೂ ಸುಗ್ರೀವನ ಅಂತಃಪುರದಲ್ಲಿ ರಾಜಕುಮಾರಿಯರೆಲ್ಲರೂ ಅತಿಮನೋಹರವಾಗಿ ಗಾಯನವಾದನಗಳನ್ನು ಮಾಡುತ್ತಿದ್ದರೆಂದೂ ರಾಮಾಯಣದಿಂದ ತಿಳಿದುಬರುವುದು. ಲವಕುಶರು ಜಾತಿಭೇದಗಳನ್ನು ಮಾಡುತ್ತ ರಾಮಾಯಣವನ್ನು ಹಾಡಿ ಸಭೆಯನ್ನೆಲ್ಲ ಮೋಹಗೊಳಿಸುತ್ತಿದ್ದರೆಂದು ಹೇಳಲ್ಪಟ್ಟಿರುವುದು. ಇಲ್ಲಿ ಜಾತಿಯೆಂದರೆ ರಾಗಕ್ಕೆ ಹೆಸರು.

ದೇವಾಲಯಗಳಲ್ಲಿ ಸಂಗೀತವು ಪ್ರಧಾನವಾಗಿದ್ದಿತೆಂದು ಅರುವತ್ತುಮೂರು ಪುರಾತನರ ಚರಿತ್ರೆಯಿಂದ ತಿಳಿದುಬರುವುದು. ಸಂಗೀತವಿಲ್ಲದೆ ನಾಟಕವನ್ನು ಆಡಲಾಗುವುದಿಲ್ಲವೆಂಬುದು ನಮಗೆಲ್ಲ ವಿದಿತವಾಗಿರುವುದು. ಭರತನಾಟ್ಯಶಾಸ್ತ್ರವು ಸಂಗೀತಪ್ರಧಾನವಾಗಿ ಕ್ರಿಸ್ತಶಕಾರಂಭದಲ್ಲಿ ಬರೆಯಲ್ಪಟ್ಟುದಾಗಿರುವುದು. ಇದರಲ್ಲಿ 25 ನೆಯ ಅಧ್ಯಾಯವು ಸಂಗೀತವನ್ನು ಬೋಧಿಸುವುದು. ಅದರಲ್ಲಿ ಸ್ವರ, ಶ್ರುತಿ, ಮೂರ್ಛನೆ, ಜಾತಿ ಮೊದಲಾದ ವಿಷಯಗಳು ವರ್ಣಿಸಲ್ಪಟ್ಟಿರುವುವು. ನಾರದಶಿಕ್ಷೆಯಲ್ಲಿ ಭರತನಾಟ್ಯಶಾಸ್ತ್ರಕ್ಕಿಂತಲೂ ಹೆಚ್ಚಾಗಿ ರಾಗವಿಚಾರವು ಮಾಡಲ್ಪಟ್ಟಿರುವುದು. ಕ್ರಿಸ್ತಶಕ 12 ನೆಯ ಶತಮಾನದಲ್ಲಿ ಜಯದೇವನು ಹಾಡುವದಕ್ಕಾಗಿಯೇ "ಗೀತಗೋವಿಂದ" ವೆಂಬ ಅಷ್ಟಪದಿಯನ್ನು ಬರೆದನು. ಇದೇ ಕಾಲದಲ್ಲಿ ದೇವಗಿರಿರಾಜರ ಆಸ್ಥಾನದಲ್ಲಿ ಶಾರ್ಙ್ಗದೇವನು "ಸಂಗೀತರತ್ನಾಕರ" ವೆಂಬ ಪ್ರಸಿದ್ಧವಾದ ಗ್ರಂಥವನ್ನು ಬರೆದನು. ಈತನು ಮುಖಾರಿಯನ್ನು ಶುದ್ಧರಾಗವನ್ನಾಗಿ ಹೇಳಿರುವನು. ಅದಕ್ಕೆ ಈಗ "ಕನಕಾಂಗಿ" ಎಂದು ಹೆಸರಿರುವುದು. ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ಹಿಂದುಸ್ಥಾನೀ ಸಂಗೀತವು ಅಭಿವೃದ್ಧಿಗೆ ಬಂದಿತು. ಇದಕ್ಕೂ ಕರ್ನಾಟಕ ಸಂಗೀತಕ್ಕೂ ಇರುವ ಭೇದವು ನಮಗೆಲ್ಲ ತಿಳಿದ ವಿಷಯವಾಗಿರುವುದು. ಅಲ್ಲಾವುದ್ದೀನನ ಆಸ್ಥಾನದಲ್ಲಿದ್ದ ಅಮೀರ್ ಖುಸ್ರು ಎಂಬವನು ಗಾಯನಶಾಸ್ತ್ರದಲ್ಲಿ ಚತುರನಾಗಿದ್ದನು. "ಹಮೀರುಕಲ್ಯಾಣಿ" ಎಂಬ ರಾಗವು ಈತನಿಂದ ಪ್ರಸಿದ್ಧಿಗೆ ಬಂದಿತು. ಈತನು ಪರ್ಷಿಯನ್ ಮತ್ತು ಹಿಂದೂಪದ್ಧತಿಗಳನ್ನು ಮಿಶ್ರಮಾಡಿ ಹಾಡಲಾರಂಭಿಸಿದನು. ಈ ರೀತಿಗೆ "ಕವಾಲಿ" ಎಂದು ಹೆಸರಿರುವುದು.

ಮೊಗಲಾಯಿ ದೊರೆಗಳು ತಮ್ಮ ತಮ್ಮ ಗೋರಿಗಳನ್ನು ಅತಿವಿಧವಾದ ಕಟ್ಟಡಗಳನ್ನು ಕಟ್ಟಲು ದಕ್ಷಿಣದೇಶದಿಂದ ಶಿಲ್ಪಿಗಳನ್ನು ಕರೆಸಿಕೊಂಡಂತೆ ಸಂಗೀತಗಾರರನ್ನೂ ಕರೆಸಿಕೊಂಡರೆಂದು ಮಹಮ್ಮದೀಯ ಚರಿತ್ರಕಾರರು ಬರೆದಿರುವರು.

ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಚೈತನ್ಯನ ವೈಷ್ಣವಮತದ ಪ್ರಚಾರವಾದಾಗ ಸಂಕೀರ್ತನೆ ಮತ್ತು ನಗರಕೀರ್ತನೆ ಹಾಡುಗಳ ಪದ್ಧತಿಗಳು ಆರಂಭವಾದವು. 1542 ರಿಂದ 16 ವರೆಗೆ ಭರತಖಂಡದ ಚಕ್ರವರ್ತಿಯಾದ ಅಕ್ಬರ್ ಮಹಾಶಯನು ಸಂಗೀತವನ್ನು ಬಹು ಅಭಿವೃದ್ಧಿಗೆ ತಂದನು. ಹಿಂದೂಸ್ಥಾನೀ ರಾಗಗಳು ಆತನ ಕಾಲದಲ್ಲಿ ಅನೇಕ ವ್ಯತ್ಯಾಸಗಳನ್ನು ಹೊಂದಿದುವು. ದರ್ಬಾರಿ ಸಂಗೀತವು ಆತನ ಕಾಲದಲ್ಲಿ ಆರಂಭವಾಯಿತು. ಅಕ್ಬರನ ದರ್ಬಾರಿನಲ್ಲಿ ತಾನ್ಸೇನ್ ಎಂಬ ದೊಡ್ಡ ಗವಾಯಿಯಿದ್ದನು. ಈತನ ಗುರುವು ಹರಿದಾಸಸ್ವಾಮಿಯೆಂಬುವನು. ಹರಿದಾಸನು ಬೃಂದಾವನದವನು, ಆ ಕಾಲದಲ್ಲಿ ಅತಿ ದೊಡ್ಡ ಸಂಗೀತಗಾರನಾಗಿದ್ದನು. ತಾನ್ಸೇನನು "ರಬಾಬ್" ಎಂಬ ವಾದ್ಯವನ್ನು ಕಲ್ಪಿಸಿದನು. ಸಂಗೀತಪಿತಾಮಹನೆನಿಸಿ ಪ್ರಸಿದ್ಧಿಯನ್ನೈದಿದ ಪುಂಡರೀಕವಿಟ್ಠಲನೂ ಇದೇ ಕಾಲದಲ್ಲಿ ಪ್ರಸಿದ್ಧನಾಗಿದ್ದನು. ಮೀರಾಬಾಯಿಯೂ ತುಲಸೀದಾಸನೂ ಇದೇ ಕಾಲದಲ್ಲಿ ಪ್ರಸಿದ್ಧರಾಗಿದ್ದರು. ಪುಂಡರೀಕವಿಟ್ಠಲನು ಔತ್ತರೀಯ ಮತ್ತು ದಾಕ್ಷಿಣಾತ್ಯಗಾನಗಳೆರಡನ್ನೂ ಬಲ್ಲವನಾಗಿದ್ದನು. ದೊರೆಯಾದ ಬುರಾನ್‌ಖಾನನು "ಸಂಗೀತವೆಲ್ಲ ಕೆಟ್ಟು ಹೋಗುತ್ತಿದೆ. ನೀನು ಕ್ರಮಪಡಿಸು" ಎಂದು ಹೇಳಿದುದನ್ನು ಅನುಸರಿಸಿ ಪುಂಡರೀಕನು ನಾಲ್ಕು ಗ್ರಂಥಗಳನ್ನು ಬರೆದನೆಂದು ತಾನೇ ಹೇಳಿಕೊಂಡಿದ್ದಾನೆ. ಷಡ್ರಾಗಚಂದ್ರೋದಯ, ರಾಗಮಾಲಾ, ರಾಗಮಂಜರಿ, ನರ್ತನನಿರ್ಣಯ ಎಂಬಿವೇ ನಾಲ್ಕು ಗ್ರಂಥಗಳು. ವಿಜಯನಗರ ಮಹಾರಾಜನಾದ ಅಚ್ಯುತರಾಯನ ಕಾಲದಲ್ಲಿ ರಾಮಾಮಾತ್ಯನೆಂಬ ಸೇನಾಧಿಪತಿಯು ಗಾನ ಪದ್ಧತಿಯನ್ನು ಚೆನ್ನಾಗಿ ವರ್ಣಿಸಿ "ಸ್ವರಮೇಲಕಲಾನಿಧಿ" ಎಂಬ ಗ್ರಂಥವನ್ನು ಬರೆದನು. 1605 ರಲ್ಲಿ ಸೋಮನಾಥನು "ರಾಗವಿಬೋಧ" ಎಂಬ ಗ್ರಂಥವನ್ನು ಬರೆದನು. ಜನ್ಯಜನಕರಾಗಗಳು ಮತ್ತು ವಿಕೃತಸ್ವರದ ಶ್ರುತಿಗಳು ಇದರಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿರುವುವು.

ಇದೇ ಸಮಯದಲ್ಲಿ ವೆಂಕಟಮಖಿಯೆಂಬ ಸಂಗೀತಶಾಸ್ತ್ರಜ್ಞನು ಬರೆದ 'ಚತುರ್ದಂಡಿಪ್ರಕಾಶಿಕಾ' ಎಂಬ ಗ್ರಂಥವು ಈಗ ಕರ್ನಾಟಕ ಸಂಗೀತದಲ್ಲಿರುವ ರಾಗಪದ್ಧತಿಗೆ ಆಧಾರವಾಗಿರುವುದು. ಇದರಲ್ಲಿ 72 ಮೇಲಕರ್ತರಾಗಗಳೂ ಅವುಗಳ ಜನ್ಯರಾಗಗಳೂ ಹೇಳಲ್ಪಟ್ಟಿರುವುವು.

ಷಾಜಹಾನನು ಸಂಗೀತದಲ್ಲಿ ಅಭಿಮಾನಶಾಲಿಯಾಗಿದ್ದನು. ಜಗನ್ನಾಥಪಂಡಿತನು ಇವನ ಆಸ್ಥಾನದಲ್ಲಿದ್ದನು. ಷಾಜಹಾನನು ಈತನಿಗೆ ಕವಿರಾಜನೆಂಬ ಬಿರುದನ್ನು ಕೊಟ್ಟದ್ದಲ್ಲದೆ ಈತನಷ್ಟು ತೂಕ ಬೆಳ್ಳಿಯನ್ನೂ ಕೊಟ್ಟನೆಂದು ತಿಳಿದುಬರುವುದು. ಔರಂಗಜೇಬನು ಸಂಗೀತಗಂಧವನ್ನೇ ಅರಿಯದೆ ಅವರಂಗಜೇಬ ಎಂದರೆ ಸಂಗೀತರಂಗಸ್ಥಾನದ ಹೊರಗೆ ಜೀವಿಸುತ್ತಿದ್ದನೆಂಬ ಸಾರ್ಥಕನಾಮಧೇಯವುಳ್ಳವನಾಗಿದ್ದನು.

ಪುರಂದರವಿಟ್ಠಲನು ಕನ್ನಡದಲ್ಲಿ ಅನೇಕ ದೇವರ ನಾಮಗಳನ್ನು ರಚಿಸಿ ಸಂಗೀತಶಿಕ್ಷೆಯನ್ನು ಕ್ರಮಪಡಿಸಿದನು. ಈತನು ಮಾಡಿದ ಕ್ರಮವೇ ಈಗಲೂ ಪ್ರಚಾರದಲ್ಲಿದೆ.

ಔತ್ತರೀಯರು ತಮ್ಮ ಗಾನವನ್ನು ಕ್ರಮಕ್ಕೆ ತರಲು ಪ್ರಯತ್ನಮಾಡುತ್ತಿರುವಾಗಲೇ ದಾಕ್ಷಿಣಾತ್ಯರು ಬಹು ಮುಂದುವರಿದವರಾಗಿದ್ದರು. ತಂಜಾವೂರಿನಲ್ಲಿ ಕ್ರಿ. ಶ. ಸುಮಾರು 1800-1856 ರಲ್ಲಿ ರಾಮಬ್ರಹ್ಮನ ಮಗನಾದ ತ್ಯಾಗರಾಜನು ಬಹುಪ್ರಸಿದ್ಧನಾಗಿದ್ದನು. ಈತನು ದೇವರು ನಾದಾತ್ಮಕನೆಂದೂ ನಾದೋಪಾಸನೆಯು ಮುಕ್ತಿಗೆ ಸಾಧನವೆಂದೂ ನಂಬಿ ತನ್ನ ಜೀವಿತಸುಖದುಃಖಗಳನ್ನೆಲ್ಲ ಸಂಗೀತದಲ್ಲಿ ವರ್ಣಿಸಿರುವನು. ದಾಕ್ಷಿಣಾತ್ಯಗಾನದ ಅಭ್ಯುನ್ನತಿಗೆ ಈತನ ಕೃತಿಗಳೇ ಮುಖ್ಯ ಕಾರಣವಾಗಿರುವುವು. ಸಂಗೀತದಲ್ಲಿ ಸಂಗತಿಗಳನ್ನು ಹಾಡಲುಪಕ್ರಮಿಸಿದವನೇ ಈತನು. ಭಾವಪುಷ್ಟಿಯಿಂದ ಹಾಡಿದುದನ್ನು ಬೇರೆಬೇರೆ ವಿಧದಲ್ಲಿ ಹಾಡುವುದಕ್ಕೆ ಸಂಗತಿಯೆಂದು ಹೆಸರಾಗಿರುವುದು. ಗೋವಿಂದಸ್ವಾಮಿ, ಮುತ್ತುಸ್ವಾಮಿದೀಕ್ಷಿತ, ಶ್ಯಾಮಶಾಸ್ತ್ರಿ ಇವರೆಲ್ಲರೂ ತ್ಯಾಗರಾಜನ ಕಾಲದಲ್ಲಿಯೇ ಪ್ರಸಿದ್ಧರಾಗಿದ್ದರು.

ಇದೇ ಕಾಲದಲ್ಲಿ ಕೊಚ್ಚಿ ಅನಂತಶಯನ ದೇಶಗಳ ದೊರೆಗಳು ಸಂಗೀತದಲ್ಲಿ ಅತಿನಿಪುಣರಾಗಿದ್ದರು. ಇವರಲ್ಲಿ ಪೆರುಮಾಳ್ ಮಹಾರಾಜನು ಬಹು ಪ್ರಸಿದ್ಧನಾದವನು. ಈ ಮಹಾರಾಜನು ಆರು ಭಾಷೆಗಳಲ್ಲಿ ಪ್ರಬಂಧಗಳನ್ನು ರಚಿಸಿದ್ದಾನೆ. ರಾಜಾಶ್ರಯವೇ ವೈಣಾರಿಕಶಿಲ್ಪದ ಏಳಿಗೆಗೆ ಮುಖ್ಯವಾದ ಕಾರಣವು. ಆದುದರಿಂದಲೇ ದಾಕ್ಷಿಣಾತ್ಯಗಾನವು ಅತಿಪರಿಷ್ಕೃತವಾಗಿರುವುದು. ಔತ್ತರೀಯಗಾನವು ಪರಿಷ್ಕೃತವಾಗದೆ ನಾನಾವಿಧವಾಗಿ ಹಾಡಲ್ಪಡುವುದು.

ಕ್ರಮವಾದ ಕಂಪನಗಳುಳ್ಳ ಶಬ್ದಸಂತಾನವೇ ಸಂಗೀತವೆನಿಸಿಕೊಳ್ಳುವುದು. ಕಂಪನಗಳು ಅಕ್ರಮವಾಗಿದ್ದಲ್ಲಿ ಕೇವಲ ಶಬ್ದವೆನಿಸುತ್ತವೆ. ಅವು ಮನೋರಂಜಕಗಳಾಗಿರುವುದಿಲ್ಲ. ನಮ್ಮ ದೇಶದಲ್ಲಿ ಹಿಂದುಸ್ಥಾನೀ ಸಂಗೀತವೆಂದೂ, ಕರ್ನಾಟಕ ಸಂಗೀತವೆಂದೂ ಸಂಗೀತವು ಎರಡು ವಿಧವಾಗಿದೆ. ಇವೆರಡಕ್ಕೂ ಆಧಾರವೊಂದೇ ಆಗಿರುವುದು. ಅಂತಹ ಆಧಾರವು ಪ್ರಾಚೀನ ಸಂಸ್ಕೃತಗ್ರಂಥಗಳೇ. ಶೈಲಿಮಾತ್ರ ಬೇರೆಯಾಗಿರುವುದು. 'ಸರಿಗಮಪದನಿ' ಎಂಬ ಸಪ್ತಸ್ವರಗಳೇ ಈ ಎರಡು ಗಾನಕ್ಕೂ ಮೂಲಾಧಾರವಾಗಿರುವುವು. ಪಾಶ್ಚಾತ್ಯ ಸಂಗೀತಕ್ಕೆ ಇವೆರಡನ್ನೂ ಹೋಲಿಸಿ ನೋಡಿದಲ್ಲಿ ಸಮಾನವಾದ ಅಂಶಗಳು ಕಂಡುಬರುವುವು.

ನಮ್ಮ ಸಂಗೀತದಲ್ಲಿ ರಾಗವೇ ಮುಖ್ಯತತ್ತ್ವವಾಗಿರುವುದು. ಅದರಲ್ಲಿ ಸ್ವರಗಳ ಆನುಪೂರ್ವಿಯು ಬಹುಮಟ್ಟಿಗೆ ಸಂಪ್ರದಾಯಕ್ರಮದಿಂದ ಕಟ್ಟುನಿಟ್ಟಾಗಿರುತ್ತದೆ. ಪ್ರತಿಯೊಂದು ರಾಗಕ್ಕೂ ಅದರ ಭಾವವೂ ಅದನ್ನು ಹಾಡತಕ್ಕ ಕಾಲವೂ ಗೊತ್ತಾಗಿರುವುವು. ಆಯಾ ರಾಗದ ಜೀವಸ್ವರವೂ ಗೊತ್ತಾಗಿಯೇ ಇರುವುದು. ಈ ವಿಧವಾದ ಲಕ್ಷಣಗಳು ಹಿಂದುಸ್ಥಾನೀ ಕರ್ನಾಟಕ ಸಂಗೀತಗಳೆರಡಕ್ಕೂ ಸಮವಾಗಿರುವುವು. ಪಾಶ್ಚಾತ್ಯರ ಸಂಗೀತದಲ್ಲಿ ರಾಗವಿಲ್ಲ. ಯಾವುದು ಬೇಕಾದರೂ ಜೀವಸ್ವರವಾಗುವುದು. ಕಿವಿಗಿಂಪಾಗುವಂತೆ ಅನೇಕ ಸ್ವರಮೇಲನವೇ ಪಾಶ್ಚಾತ್ಯಸಂಗೀತದ ಮುಖ್ಯತತ್ತ್ವವಾಗಿರುವುದು.

ಅನುಸ್ವರಗಳು, ಗಮಕ, ಭಾವ, ವಿವಿಧಜಾತಿ, ಕಾಲ ಇವೇ ನಮ್ಮ ಸಂಗೀತಕ್ಕೆ ಜೀವಕಳೆಯನ್ನು ತುಂಬುತ್ತವೆ. ಇವೊಂದೂ ಪಾಶ್ಚಾತ್ಯ ಸಂಗೀತದಲ್ಲಿಲ್ಲ. ಸಂಪ್ರದಾಯಶುದ್ಧವಾಗಿ ತಾಳಕ್ಕೆ ಸರಿಯಾಗಿ ಹಾಡುವುದು ನಮ್ಮ ಸಂಗೀತಗಾರರ ಧ್ಯೇಯವಾಗಿರುವುದು. ಪಾಶ್ಚಾತ್ಯರಲ್ಲಿ ಕಂಠಧ್ವನಿ ಶಾರೀರವಿನ್ಯಾಸಗಳು ಇವೇ ಮುಖ್ಯವಾದುವುಗಳು. ಶಾರೀರವಿನ್ಯಾಸಕ್ಕೆ ಪಾಶ್ಚಾತ್ಯರಲ್ಲಿರುವಷ್ಟು ಪ್ರಾಶಸ್ತ್ಯವು ನಮ್ಮಲ್ಲಿಲ್ಲ. ಶಾರೀರಸ್ವರಮಾಧುರ್ಯಗಳನ್ನು ಅವರು ಗಮನಿಸುವರು. ರಾಗವನ್ನೂ, ತಾಳವನ್ನೂ ನಮ್ಮವರು ಗಮನಿಸುವರು. ಮಂದ್ರಸ್ಥಾಯಿಯಲ್ಲಿ ಹಾಡು ಶ್ರುತಿಗೆ ಸೇರದೆ ಇರಬಹುದು. ತಾರಸ್ಥಾಯಿಯಲ್ಲಿ ಶಾರೀರವು ಸಣ್ಣದಾಗಿ ಒಡೆಯಬಹುದು. ನಿಜವಾದ ಶಾರೀರವೇ ಇಲ್ಲದಿರಬಹುದು. ಅವರೂ ಪಾಂಡಿತ್ಯವೊಂದನ್ನೇ ಗಮನಿಸಿ, ಇವೆಲ್ಲವನ್ನೂ ಅವರು ಗಮನಿಸುವುದಿಲ್ಲ. ಲಕ್ಷಣಗ್ರಂಥಗಳನ್ನು ನೋಡಿದರೆ ಇವೆಲ್ಲವೂ ಸರಿಯಾಗಿ ಕಾಣುವುದಿಲ್ಲ. ಲಕ್ಷಣಗ್ರಂಥಗಳಲ್ಲಿ ಸುಶಾರೀರಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ. ಸಂಗೀತವು ವಸ್ತುತಃ ವೃದ್ಧಿಯನ್ನೈದಬೇಕಾದರೆ, ಶಾರೀರಕ್ಕೆ ಪ್ರಾಧಾನ್ಯವನ್ನು ಕೊಡಬೇಕು. ಶಾರೀರವಿಲ್ಲದವರು ವಾದ್ಯವನ್ನು ಬಾರಿಸುವದನ್ನಾದರೂ ಕಲಿಯಬೇಕು.

ಸಂಗೀತವು ಜನಸಾಮಾನ್ಯಕ್ಕೆ ಮನೋಹರವಾದ ವಿದ್ಯೆಯು. ಶೃಂಗಾರಾದಿ ನವರಸಗಳಿಗೂ ಉಚಿತವಾದ ರಾಗಗಳು ಏರ್ಪಟ್ಟಿರುವುವು. ಕರುಣಾರಸವನ್ನು ತೋರಿಸಲು ಮುಖಾರಿಯನ್ನು ಹಾಡುವರು. ಶಾಂತಿವೈರಾಗ್ಯಗಳನ್ನು ತೋರಿಸಲು ದೇವಗಾಂಧಾರಿಯಲ್ಲಿ ಹಾಡುವರು. ವಿಷಯವೈಚಿತ್ರ್ಯದಿಂದ ಹಾಸ್ಯಭೀಭತ್ಸಭಯಾನಕರಸಗಳನ್ನು ಪುಷ್ಟೀಕರಿಸಿ ಅನುಕೂಲವಾದ ರಾಗಗಳಲ್ಲಿ ಪದಗಳನ್ನು ಹಾಡುವರು. ಮುಖ್ಯವಾಗಿ ಸಂಗೀತಸಾಹಿತ್ಯಗಳೆರಡೂ ಸೇರಿ ಸಹೃದಯ ಹೃದಯಾನಂದವನ್ನುಂಟುಮಾಡುವಂತೆ, ಒಂದೊಂದೇ ಮಾಡಲಾರವು. ಈ ಕಾಲದ ಸಂಗೀತಗಾರರು ಸಾಹಿತ್ಯವನ್ನು ಉಚ್ಚರಿಸುವಾಗ ನಿರರ್ಥಕವಾಗಿ ತೋರುವಂತೆ ಉಚ್ಚರಿಸಿ ಕೃತಿ ಮೊದಲಾದುವುಗಳನ್ನು ಹಾಡುವರು. ಇದರಿಂದ ಹಾಡಿನ ಅರ್ಥಸ್ವಾರಸ್ಯವು ನಷ್ಟವಾಗುವುದು. ಪುರಾಣವನ್ನು ಹೇಳುವವರು ಸಂಗೀತವಿಲ್ಲದೆ ಕಥೆಯನ್ನೇ ಹೇಳುವರು. ಇದರಿಂದ ಅರ್ಥಾಕರ್ಷಣೆಯು ನಷ್ಟವಾಗುವುದು. ಆದುದರಿಂದ ಸಂಗೀತಗಾರರು ಕೃತಿಯ ಪದದ ಅರ್ಥವು ಕೇಳುವವರಿಗೆ ಚೆನ್ನಾಗಿ ಬೋಧೆಯಾಗುವಂತೆ ಹಾಡುವುದನ್ನು ಪ್ರಚಾರದಲ್ಲಿ ತರಬೇಕಾಗಿರುವುದು.

ಭಾರತಾದಿಗಳನ್ನು ಓದುವವರು ಶೃಂಗಾರಾದಿ ರಸಗಳ ವರ್ಣನೆಗೆ ಅನುಗುಣವಾದ ರಾಗಗಳನ್ನು ಹಾಡುವುದನ್ನು ಕಲಿತು ಆಯಾ ರಸವರ್ಣನೆಗಳನ್ನು ಅನುಗುಣವಾದ ರಾಗಗಳಲ್ಲಿ ಓದುವುದನ್ನು ಕಲಿಯಬೇಕು.

ಇದೆಲ್ಲವನ್ನೂ ಸಾಧಿಸಬೇಕಾದಲ್ಲಿ ಸಂಗೀತವನ್ನು ಅಭಿವೃದ್ಧಿಗೆ ತರಬೇಕು.

1. ಇದಕ್ಕಾಗಿ ಪ್ರಥಮತಃ ನಮ್ಮ ದೇಶದಲ್ಲಿ ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ಸಂಗೀತವನ್ನು ಸ್ವಲ್ಪವಾದರೂ ಕಲಿಯಬೇಕು. ಹಾಡುವುದಕ್ಕೆ ಶಾರೀರವಿಲ್ಲದವರು ಪಾಶ್ಚಾತ್ಯರಂತೆ ವಾದ್ಯವನ್ನಾದರೂ ಬಾರಿಸಲು ಕಲಿಯಬೇಕು.

2. ಅಲ್ಲಲ್ಲಿ ಗಾಯನಸಮಾಜ, ಸಂಗೀತಪಾಠಶಾಲೆಗಳನ್ನು ಸ್ಥಾಪಿಸಬೇಕು.

3. ಪುರಂದರದಾಸ ತ್ಯಾಗರಾಜ ಮೊದಲಾದ ಸಂಗೀತಪ್ರವರ್ತಕರ ಪುಣ್ಯದಿನಗಳಲ್ಲಿಯಾಗಲಿ ಜನ್ಮದಿನಗಳಲ್ಲಿಯಾಗಲಿ ಸಂಗೀತಜ್ಞರು ಸಭೆ ಸೇರಿ ಜನರಿಗೆ ಸಂಗೀತದಲ್ಲಿ ಆಸಕ್ತಿಯುಂಟಾಗುವಂತೆ ಸಂಗೀತಮಹೋತ್ಸವಗಳನ್ನು ನಡೆಸಬೇಕು.

4. ನಮ್ಮ ಯೂನಿವರ್ಸಿಟಿಯಲ್ಲಿಯೂ ಬಿ. ಎ. ಪರೀಕ್ಷೆಗೆ ಸಂಗೀತವನ್ನು ಒಂದು ಐಚ್ಛಿಕಶಾಸ್ತ್ರವನ್ನಾಗಿ ಕಲ್ಪಿಸಿ ಪಾಠಕ್ರಮವನ್ನು ಏರ್ಪಡಿಸಬೇಕು.

5. ಸಂಗೀತಪಾರಂಗತರಾಗಿರುವವರು ಪ್ರಾಚ್ಯ ಪಾಶ್ಚಾತ್ಯ ಹಿಂದುಸ್ಥಾನೀ ಕರ್ನಾಟಕ ಸಂಗೀತಗಳಲ್ಲಿ ಲೋಪದೋಷಗಳನ್ನು ಪರೀಕ್ಷಿಸಿ ಹೊಸ ಹೊಸದಾದ ಗಾನರಚನಾಕ್ರಮಗಳನ್ನು ಕಲ್ಪಿಸಬೇಕು.

6. ಸಾಧ್ಯವಾದಲ್ಲಿ ಹಿಂದುಸ್ಥಾನೀ ಕರ್ನಾಟಕಸಂಗೀತಗಳನ್ನು ಮಿಶ್ರಮಾಡಿ ಮಧುರವಾಗಿ ಹಾಡುವ ಕ್ರಮವನ್ನು ಹೊರಡಿಸಬೇಕು. ಹೀಗೆ ಹೊಸ ಹೊಸದಾದ ರಚನೆಗಳನ್ನೂ ಗಾನಪದ್ಧತಿಗಳನ್ನೂ ಪ್ರಸಿದ್ಧಿಗೆ ತರುವುದಕ್ಕಾಗಿ, ವಲ್ ರ್ ಎಕ್ಸಾಮಿನ್ ಕಾನ್ಫರೆನ್ಸನ್ನು ಮಾಡುತ್ತಿರುವಂತೆ, ಆಗಾಗ್ಗೆ ಆಯಾ ಸ್ಥಳಗಳಲ್ಲಿ ಇಂತಹ ಸಂಗೀತವಿದ್ವತ್ಸಮ್ಮೇಲನಗಳನ್ನು ಸೇರಿಸಬೇಕು.

ಈ ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ 6 ನೆಯದಾದ ರಾಜಭಕ್ತಿಯ ನಿರ್ಣಯವಿಷಯದಲ್ಲಿ ನಾನು ವಿಜ್ಞಾಪಿಸಬೇಕಾದುದನ್ನು ಇಲ್ಲಿಯೇ ಸೂಚಿಸಲು ನಿಮ್ಮೆಲ್ಲರ ಅನುಮತಿಯನ್ನು ಪ್ರಾರ್ಥಿಸುತ್ತೇನೆ.

ಪ್ರಕೃತದಲ್ಲಿ ಪ್ರಜಾಸ್ವರಾಜ್ಯಕಾಲವು ಅಂಕುರಿಸುತ್ತಿರುವುದು. ರಾಜ್ಯದ ಆದಾಯವೆಚ್ಚಗಳಲ್ಲಿ ಪ್ರಜಾಸ್ವಾತಂತ್ರ್ಯವೇ ಹೆಚ್ಚಾಗಿ ರಾಜರ ಕೋಶದ ಆದಾಯವು ಕಡಮೆಯಾಗುತ್ತಿರುವುದು. ಆದುದರಿಂದ ಚತುಷ್ಷಷ್ಟಿಕಲೆಗಳೂ ವೃದ್ಧಿಯಾಗುವಂತೆ ಪೂರ್ವಕಾಲದ ಹಾಗೆ ರಾಜರುಗಳೇ ಧನಸಹಾಯವನ್ನು ಮಾಡಬೇಕೆಂದರೆ ಅದು ನ್ಯಾಯವಾಗಿ ಕಾಣುವುದಿಲ್ಲ. ರಾಜ್ಯಕೋಶದ ಅಧಿಕಾರವನ್ನು ಬಯಸುತ್ತಿರುವ ಪ್ರಜೆಗಳು ಕಲೆಗಳ ಮತ್ತು ವಿದ್ಯೆಗಳ ಪುನರಭಿವೃದ್ಧಿಗೆ ಆಶ್ರಯರಾಗಿ ರಾಜ್ಯಾದಾಯದಿಂದಲಾಗಲಿ ತಮ್ಮಲ್ಲಿಯೇ ಚಂದಾಮೂಲಕ ಧನವನ್ನು ಗಳಿಸಿಯಾಗಲಿ ಸಹಾಯಮಾಡಬೇಕಾದುದು ಅತ್ಯವಶ್ಯ ಕರ್ತವ್ಯವಾಗಿರುವುದು. ಈಗ ಯಾರೂ ಅದರಂತೆ ಮಾಡುತ್ತಿರುವುದಿಲ್ಲ. ನಮ್ಮ ಶ್ರೀಮನ್ಮಹಾಸ್ವಾಮಿಯವರಾದರೋ ಪೂರ್ವಪದ್ಧತಿಗಿಂತ ಹೆಚ್ಚಾಗಿ ಕಲಾಕೋವಿದರಿಗೂ ವಿದ್ಯಾವಂತರಿಗೂ ಆಶ್ರಯವನ್ನಿತ್ತು ಧನಸಹಾಯವನ್ನು ಮಾಡುತ್ತಿರುವರು. ಪ್ರತಿವರ್ಷದ ನವರಾತ್ರಿಯಲ್ಲಿಯೂ ವರ್ಷವರ್ಧಂತಿಮಹೋತ್ಸವಕಾಲದಲ್ಲಿಯೂ ಸಂಗೀತಜ್ಞರಿಗೂ ನಾಟಕಮಂಡಲಿಯವರಿಗೂ ಸರ್ವದಾ ಕವಿಗಳಿಗೂ ಧನಸಹಾಯ ಮಾಡಿ ಸಂಗೀತ ನಾಟಕ ಕವಿತಾರಚನೆಗಳನ್ನು ಪುರೋಭಿವೃದ್ಧಿಗೆ ತರುತ್ತಿರುವುದು ನಿಮಗೆಲ್ಲ ವಿದಿತವಾಗಿರುವುದು. ಮಹಾಸ್ವಾಮಿಯವರು ಈ ಸಮ್ಮೇಲನಕ್ಕೂ ನೂರು ರೂಪಾಯಿಗಳನ್ನು ದಯಪಾಲಿಸಿರುವುದು ಮಹಾಪ್ರಸಾದವೆಂದೂ ಅವರಿಗೆ ಸಂಗೀತವಿದ್ಯೆಯಲ್ಲಿರುವ ಅಭಿರುಚಿಪ್ರದರ್ಶಕವೆಂದೂ ಸಮ್ಮೇಲನದ ಪುರೋಭಿವೃದ್ಧಿಗೆ ಈ ನೂರು ರೂಪಾಯಿಗಳು ನೂರು ಉಪಾಯ—ಸಾಧನಗಳಂತಿರುವುವೆಂದೂ ಭಾವಿಸಿ ನಾವೆಲ್ಲರೂ ನಮ್ಮ ಮಹಾಪ್ರಭುಗಳವರಿಗೆ ತುಂಬ ಕೃತಜ್ಞರಾಗಿರಬೇಕು.

ನಮ್ಮ ಶ್ರೀಮನ್ಮಹಾಸ್ವಾಮಿಯವರು ಹಾಕಿರುವ ಮೇಲುಪಂಕ್ತಿಯನ್ನನುಸರಿಸಿ ನಾವುಗಳೆಲ್ಲರೂ ನಮ್ಮಲ್ಲಿ ಚಂದಾಮೂಲಕ ಕೂಡಿಸಿದ ದ್ರವ್ಯದಿಂದ ಈ ಕಾಲದಲ್ಲಿ ನಮಗೆ ಬೇಕಾದ ಕಲೆಗಳನ್ನಾಗಲಿ ವಿದ್ಯೆಗಳನ್ನಾಗಲಿ ಕಲಿತು ಪ್ರವೀಣರಾಗುವವರಿಗೆ ಧನಸಹಾಯವನ್ನು ಮಾಡಿ ಆಯಾ ಕಲೆಗಳನ್ನೂ ವಿದ್ಯೆಗಳನ್ನೂ ಪುರೋವೃದ್ಧಿಗೆ ತಂದಲ್ಲಿ ನಾವು ನಮ್ಮ ಮಹಾಪ್ರಭುಗಳವರಿಗೆ ಕೃತಜ್ಞತೆಯನ್ನು ಕಾರ್ಯತಃ ತೋರಿಸಿದಂತಾಗುವುದು.

ಪ್ರಕೃತದಲ್ಲಿ ನಮ್ಮ ಮಹಾಸ್ವಾಮಿಯವರಿಂದ ಪೋಷಿತರಾಗಿ ಅಥವಾ ಬಹುಮಾನಿತರಾಗಿ ಇಲ್ಲಿ ಈ ಸಂಗೀತವಿದ್ವತ್ಸಮ್ಮೇಲನಕ್ಕೆ ಬಂದಿರುವ ಸಂಗೀತಜ್ಞರಿಗೆ ನೀವೆಲ್ಲರೂ ಪ್ರೋತ್ಸಾಹವನ್ನು ಕೊಡುತ್ತಿರುವುದನ್ನು ನೋಡಿ ನಮ್ಮ ಮಹಾಸ್ವಾಮಿಯವರು ಸಂತೋಷಚಿತ್ತರಾಗುವರೆಂದು ನಾನು ನಿಶ್ಚಯವಾಗಿ ಹೇಳಬಲ್ಲೆನು. ಇದೇರೀತಿಯಲ್ಲಿ ನಿಮ್ಮ ಪ್ರಯತ್ನಗಳು ಸಕಲ ಕಲಾವಿದ್ಯಾಭಿವೃದ್ಧಿಗಾಗಿ ಏರ್ಪಟ್ಟು 'ಯಥಾ ರಾಜಾ ತಥಾ ಪ್ರಜಾಃ' ಎಂಬಂತೆ ಮಹಾಸ್ವಾಮಿಯವರ ಮೇಲುಪಂಕ್ತಿಯನ್ನನುಸರಿಸಿ ರಾಜಭಕ್ತಿಯುತರಾದ ಅವರ ಪ್ರಜೆಗಳು ನಡೆಯುತ್ತಾರೆಂಬ ಯಶಸ್ಸು ನಿಮ್ಮಗಳಿಗುಂಟಾಗಲೆಂದೂ ಸಕಲ ಕಲಾಕೋವಿದರಾದ ಯಾವ ಮಹಾಪ್ರಭುಗಳವರ ರಾಮರಾಜ್ಯದಲ್ಲಿ ಸಕಲ ಕಲೆಗಳೂ ದಿನೇ ದಿನೇ ವೃದ್ಧಿಹೊಂದುವುದಕ್ಕೆ ಉದಾರಾಶ್ರಯವು ಕೊಡಲ್ಪಡುತ್ತಿರುವುದೋ ಯಾವ ಮಹಾಸ್ವಾಮಿಯವರ ಪುತ್ರವತ್ಪ್ರಜಾಪರಿಪಾಲನಕ್ರಮವೂ ಸತ್ಯಸದಾಚಾರನಿಷ್ಠೆಯೂ ದೈವಭಕ್ತಿಯೂ ಶಾಂತಸ್ವಭಾವವೂ ಲೋಕವಿಖ್ಯಾತವಾಗಿರುವುವೋ ಅಂತಹ ದಯಾಮೂರ್ತಿಗಳಾದ ನಮ್ಮ ಮಹಾಪ್ರಭುಗಳವರಿಗೂ ರಾಜಬಂಧುವರ್ಗಕ್ಕೂ ದೀರ್ಘಾಯುರಾರೋಗ್ಯಭಾಗ್ಯಗಳನ್ನಿತ್ತು ಕಾಪಾಡಲೆಂದೂ ಶ್ರೀ ನಂಜುಂಡೇಶ್ವರಸ್ವಾಮಿಯನ್ನು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಪಾಶ್ಚಾತ್ಯ ದೇಶಗಳಲ್ಲಿ ಭಾರತೀಯಭಾಷಾ ಸಾಹಿತ್ಯಗಳ ವ್ಯಾಸಂಗ.

ಡಾಕ್ಟರ್ ಎ. ಎನ್. ನರಸಿಂಹಯ್ಯ, ಎಂ. ಎ., ಎಲ್. ಟಿ., ಪಿ. ಎಚ್ ಡಿ (ಲಂಡನ್) ಇವರು ಲಂಡನ್ ನಗರದಲ್ಲಿ "ಕಂಪ್ಯಾರೆಟಿವ್ ಫಿಲಾಲಜಿ" (ಭಾಷೆಗಳ ಪರಸ್ಪರ ಸಂಬಂಧದ ವಿಷಯ) ಎಂಬ ವಿಷಯವನ್ನು ವ್ಯಾಸಂಗಮಾಡಿ ಪಿ. ಎಚ್. ಡಿ ಡಿಗ್ರಿಯನ್ನು ತೆಗೆದುಕೊಂಡು ನಾಲ್ಕಾರು ದಿನಗಳ ಹಿಂದೆ ಹಿಂತಿರುಗಿ ಬಂದಿರುವರು. ಇವರು ಸೆಂಟ್ರಲ್ ಕಾಲೇಜಿನ ಗಣಿತಶಾಸ್ತ್ರಭವನದಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಈ ಬಗೆಯ ಭಾಷಾ ಸಂಬಂಧವಾದ ಭಾಷಣ ಮಾಡಿದರು. ಉಪನ್ಯಾಸಕರು ಹಿಂದಿನಂತೆಯೇ ಕೋಟು ಪೇಟಾಗಳನ್ನು ಧರಿಸಿ ಪಂಚೆಯುಟ್ಟು ತಮ್ಮ ಹೊಸ ಅನುಭವಗಳನ್ನು ಸರಳವಾದ ಕನ್ನಡದಲ್ಲಿ ಸುಮಾರು ಒಂದೂವರೆ ಘಂಟೆಗಳ ಕಾಲ ಮಾತಾಡಿದರು. ಅವರ ಭಾಷಣದ ಸಾರಾಂಶವು ಅನೇಕ ಹೊಸ ಅಂಶಗಳನ್ನೊಳಗೊಂಡಿತ್ತು. ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಸಾಮಾನ್ಯವಾಗಿ ಯೂನಿವರ್ಸಿಟಿಗಳಲ್ಲಿಯೂ ಸಂಸ್ಕೃತಕ್ಕೆ ಒಂದು ಪೀಠವನ್ನಿತ್ತಿರುವರು. ಎಡಿಂಬರೋ, ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಡಬ್ಲಿನ್‌ಗಳಲ್ಲಿ ಮಾತ್ರವಲ್ಲ. ಹಾಲೆಂಡ್, ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಜರ್ಮನಿ ಮುಂತಾದ ಯೂನಿವರ್ಸಿಟಿಗಳೂ ಸಂಸ್ಕೃತಕ್ಕೆ ತುಂಬಾ ಮನ್ನಣೆ ಮಾಡುತ್ತಿವೆ. ಲಂಡನ್ನಿನಲ್ಲಿ ನಾನು ವ್ಯಾಸಂಗ ಮಾಡಿದ ವಿದ್ಯಾಶಾಲೆಯಲ್ಲಿ ತೆಲುಗು, ಕನ್ನಡ, ತಮಿಳು ಉರ್ದು, ಚೈನಿ, ಜಪಾನಿ ಮುಂತಾದ ಪ್ರಪಂಚದ ನಾನಾ ಬಗೆಯ ಭಾಷೆಗಳಿಗೆಲ್ಲ ಒಟ್ಟೊಬ್ಬ ಪ್ರೊಫೆಸರ್ ಇರುವರು. ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗಿಂತ ಪ್ರೊಫೆಸರುಗಳೇ ಹೆಚ್ಚಿಗೆ ಇರುವರು. ಇವರು ವಿದ್ಯಾರ್ಥಿಗಳಿಗೆ ಬೋಧಿಸುವುದಲ್ಲದೆ ಇತರ ಕಾಲದಲ್ಲಿ ಆಯಾ ವಿಷಯವಾಗಿ ಸಂಶೋಧನೆ ನಡೆಯಿಸಿ ವರ್ಷಕ್ಕೆ ಒಂದಾದರೂ ಪುಸ್ತಕವನ್ನು ಪ್ರಕಟಿಸಬೇಕೆಂಬ ನಿಬಂಧನೆಯುಂಟು. ಇಂತಹ ಕಾರ್ಯಗಳಿಗಾಗಿ ಒಂದು ದೊಡ್ಡ ನಿಧಿಯು ಇರುವುದು. ಈ ಬಗೆಯ ವ್ಯಾಸಂಗ ಮಾಡುವವರಿಗೆ ಅಲ್ಲಿ ಅನೇಕ ಸೌಕರ್ಯಗಳುಂಟು.

ಪ್ರೊಫೆಸರುಗಳು ಸಂಸ್ಕೃತದಿಂದ ಮೊದಲು ಮಾಡಿಕೊಂಡು ಪ್ರಪಂಚದ ಎಲ್ಲ ಭಾಷೆಗಳ ಪ್ರೊಫೆಸರುಗಳೂ ಒಂದೆಡೆ ಸೇರಿ ವಿದ್ಯಾರ್ಥಿಗಳಿಗೆ ತುಂಬಾ ಅಕ್ಕರೆಯಿಂದಲೂ ವಿಶ್ವಾಸದಿಂದಲೂ ಬೋಧಿಸುವ ಸೌಕರ್ಯವುಂಟು. ಹೀಗೆ ಎಲ್ಲಾ ಭಾಷಾ ವಿಶಾರದರೂ ಒಟ್ಟಿಗೆ ಸೇರಿರುವದರಿಂದ ಅನೇಕ ಸೌಕರ್ಯಗಳುಂಟು.

ಸರಸ್ವತಿ ಭಂಡಾರ—ಪ್ರತಿಯೊಂದು ಯೂನಿವರ್ಸಿಟಿಯಲ್ಲಿಯೂ ಮುಖ್ಯವಾಗಿ ಲಂಡನ್ ನಗರದಲ್ಲಿ ಲೈಬ್ರರಿಯು ತುಂಬಾ ಪ್ರಖ್ಯಾತಿ ಪಡೆದಿದೆ. ಸಾಹಿತ್ಯ ಚಕ್ರವರ್ತಿಗಳಾಗಿರುವಂತಹವರೇ ಆಯಾ ಲೈಬ್ರರಿಗಳ ಪ್ರಧಾನ ಪಟ್ಟದಲ್ಲಿರುವರು. ಅವರು ತಮ್ಮ ಲೈಬ್ರರಿಯಲ್ಲಿರುವ ಎಲ್ಲಾ ಗ್ರಂಥಗಳನ್ನೂ ಪರಿಶೀಲಿಸಿ, ವಿಷಯ ವಿಭಾಗಮಾಡಿ ಒಂದು ಇಂಡೆಕ್ಸ್ (ವಿಷಯ ಸೂಚಕವಾದ ಪಟ್ಟಿ) ಮಾಡಿಟ್ಟಿರುವರು. ವಾಚಕರು ಲೈಬ್ರರಿಯನ್ ಬಳಿ ಬಂದು ತಮಗೆ ಅಗತ್ಯವಿರುವ ವಿಷಯದ ಮೇಲೆ ಇರುವ ಪುಸ್ತಕಗಳಾವುವೆಂದು ಕೇಳಿದರೆ ಆ ಪುಸ್ತಕಗಳನ್ನೂ ಅವುಗಳ ಯೋಗ್ಯತೆಯನ್ನೂ ತಿಳಿಯ ಹೇಳುವರು. ಇಂತಹ ಲೈಬ್ರರಿಗಳಲ್ಲಿ ಪುರುಷರಿಗಿಂತಲೂ ಸ್ತ್ರೀಯರೇ ಹೆಚ್ಚಾಗಿ ಕೆಲಸ ಮಾಡುವರು. ಅವರೂ ಅನೇಕ ಭಾಷಾ ಪಂಡಿತರಾಗಿಯೇ ಇರುವರು. ಇಂತಹ ಲೈಬ್ರರಿಯಲ್ಲಿ ನಮ್ಮಲ್ಲಿ

[6 ನೆಯ ಪುಟವನ್ನು ನೋಡಿ.]

25-3-74

ಪಂಚಾಚಾರ್ಯ ಪ್ರಭಾ.

೧೯೩೩ ನೇ ಆಗಸ್ಟ್ ತಾ|| ೭ ನೇ ಸೋಮವಾರ.

ವೈದಿಕಕರ್ಮಾನುಷ್ಠಾನ.

ಶ್ರೀ ಜಗದ್ಗುರು ಪಂಚಾಚಾರ್ಯರಿಂದ ವೀರಶೈವಸಿದ್ಧಾಂತವು ವೇದಾಧಾರದಿಂದ ಸ್ಥಾಪಿಸಲ್ಪಟ್ಟಿದ್ದರೂ, ವೇದದಲ್ಲಿರುವ ಎಲ್ಲ ಕರ್ಮಗಳನ್ನೂ ವೀರಶೈವರು ಅನುಷ್ಠಿಸಬೇಕೆಂದು ನಿರ್ಬಂಧಿಸಲ್ಪಟ್ಟಿಲ್ಲ. ವೇದದ ಕೆಲವೆಡೆಯಲ್ಲಿ ಐಹಿಕ ಫಲಸಾಧಕಗಳಾದ ಕರ್ಮಗಳು ಹೇಳಲ್ಪಟ್ಟಿರುತ್ತವೆ. ಕೆಲವೆಡೆಯಲ್ಲಿ ಆಮುಷ್ಮಿಕಫಲಸಾಧಕಗಳಾದ ಕರ್ಮಗಳು ಹೇಳಲ್ಪಟ್ಟಿರುತ್ತವೆ. ಇನ್ನು ಕೆಲವೆಡೆಯಲ್ಲಿ ಐಹಿಕಾಮುಷ್ಮಿಕೋಭಯಸಾಧಕಗಳಾದ ಕರ್ಮಗಳು ಹೇಳಲ್ಪಟ್ಟಿರುತ್ತವೆ. ಇನ್ನು ಕೆಲವೆಡೆಯಲ್ಲಿ ಮುಕ್ತಿಸಾಧಕಗಳಾದ ಪರಮಾತ್ಮೋಪಾಸನಾರೂಪಗಳಾದ ಕರ್ಮಗಳು ಹೇಳಲ್ಪಟ್ಟಿರುತ್ತವೆ. ಇವುಗಳಲ್ಲಿ ಯಾರು ಕೇವಲ ಇಹಲೋಕದ ಸೌಖ್ಯದಲ್ಲಿ ಅಪೇಕ್ಷೆಯುಳ್ಳವರಾಗಿರುತ್ತಾರೆಯೋ, ಯಾರು ಪರಲೋಕದ ಸೌಖ್ಯದಲ್ಲಿ ಅಪೇಕ್ಷೆಯುಳ್ಳವರಾಗಿರುತ್ತಾರೆಯೋ, ಯಾರು ಉಭಯಸೌಖ್ಯದಲ್ಲಿ ಅಪೇಕ್ಷೆಯುಳ್ಳವರಾಗಿರುತ್ತಾರೆಯೋ, ಅವರು ಆಯಾಯ ಫಲಸಾಧಕಗಳಾದ ಕರ್ಮಗಳನ್ನನುಷ್ಠಿಸುವರು. ಯಾರು ಇವುಗಳಲ್ಲಿ ನಿರಪೇಕ್ಷಾಬುದ್ಧಿಯಿಂದ ಮುಕ್ತಿಯನ್ನಪೇಕ್ಷಿಸುತ್ತಾರೆಯೋ ಅವರು ಮುಕ್ತಿಸಾಧನವಾದ ಕರ್ಮವನ್ನನುಷ್ಠಿಸುತ್ತಾರೆ. ಆಯಾಯ ಮತಸ್ಥಾಪನಾಚಾರ್ಯರು ವಿಧಿಸಿರುವಂತೆ ಎಲ್ಲರೂ ನಡೆಯುವದು ಆಸ್ತಿಕಮಹಾಜನಗಳ ಸ್ವಭಾವವಾಗಿರುತ್ತದೆ. ಆದರೆ ಶ್ರೀ ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಸಿದ್ಧಾಂತವಾದರೋ ಐಹಿಕಾಮುಷ್ಮಿಕ ಫಲಗಳು ಅಲ್ಪಗಳಾದುದರಿಂದ ತತ್ಸಾಧಕಗಳಾದ ಕರ್ಮಗಳೂ ಅಲ್ಪಗಳೆಂದೂ, ಮುಕ್ತಿಸೌಖ್ಯವೇ ಶ್ರೇಷ್ಠವಾದುದರಿಂದ ತತ್ಸಾಧಕಗಳಾದ ಕರ್ಮಗಳೇ ಅನುಷ್ಠೇಯಗಳೆಂದೂ ಪ್ರತಿಪಾದಿಸುವುದರಿಂದ ವೇದದೊಳಗಿರುವ ಮುಕ್ತಿಸಾಧಕಗಳಾದ ಕರ್ಮಗಳನ್ನು ವೀರಶೈವರು ಅನುಷ್ಠಿಸಬೇಕಲ್ಲದೆ, ಐಹಿಕಾಮುಷ್ಮಿಕಫಲಸಾಧಕಗಳಾದ ಕರ್ಮಗಳನ್ನು ಅನುಷ್ಠಿಸಬಾರದು. ಶ್ರೀ ಪಂಚಾಚಾರ್ಯಭಗವತ್ಪಾದರು ವೇದವೆಂಬ ಮಹಾಸಮುದ್ರದಲ್ಲಿ ಮುಳುಗಿ ದೇವತಾಸಾರ್ವಭೌಮನಾದ ಶಿವನೆಂಬ ಅನರ್ಘ್ಯವಾದ ರತ್ನವನ್ನು ಹುಡುಕಿ ವೀರಶೈವಸಿದ್ಧಾಂತವೆಂಬ ಮಹಾಮಂದಿರದ ಗರ್ಭಗೃಹದಲ್ಲಿರಿಸಿರುತ್ತಾರೆ. ಆ ಮಹಾರತ್ನಜ್ಯೋತಿಯು ಶೈವಸಿದ್ಧಾಂತವನ್ನೆಲ್ಲಾ ಕೋಟಿಸೂರ್ಯಜ್ಯೋತಿಯಂತೆ ಬೆಳಗುತ್ತಲಿದೆ. "ವಿದ್ಯಾಸು ಶ್ರುತಿರುತ್ಕೃಷ್ಟಾರುದ್ರೈಕಾದಶಿನೀ ಶ್ರುತೌ | ತತ್ರ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರದ್ವಯಂ" ಅಂದರೆ ಚತುಷ್ಷಷ್ಟಿವಿದ್ಯೆಗಳೊಳಗೆಲ್ಲಾ ವೇದವು ಉತ್ಕೃಷ್ಟವಾದುದು. ಆ ಶ್ರುತಿಯಲ್ಲಿ ಏಕಾದಶರುದ್ರವು ಶ್ರೇಷ್ಠವಾದುದು. ಆ ಏಕಾದಶರುದ್ರದಲ್ಲಿ ಪಂಚಾಕ್ಷರೀ ಮಂತ್ರವು ಶ್ರೇಷ್ಠವಾದುದು. ಅದರೊಳಗೆ ಶಿವ ಎಂಬ ನಾಮವು ಶ್ರೇಷ್ಠವಾದುದೆಂದು ಆರ್ಯೋಕ್ತಿಯಿರುವುದರಿಂದ ವೇದದಲ್ಲಿರುವ ಸಕಲದೇವತೆಗಳೆಂಬ ರತ್ನಮಾಲಿಕೆಯಲ್ಲಿ ಶಿವನು ಜೀವರತ್ನಪ್ರಾಯನಾಗಿರುತ್ತಾನೆ. ಇಂಥ ಶಿವನನ್ನು ಪ್ರೀತಿಪಡಿಸುವುದರಿಂದ, ಮಹಾರಾಜನು ಯಾರನ್ನು ಪ್ರೀತಿಸುವನೋ ಅವರನ್ನು ಆ ಮಹಾರಾಜನ ಅಧಿಕಾರಿಗಳೆಲ್ಲರೂ ಪ್ರೀತಿಸುವಂತೆಯೂ, ವೃಕ್ಷದ ಮೂಲಕ್ಕೆ ನೀರೆರೆದರೆ ಮೇಲಿರುವ ಶಾಖೋಪಶಾಖೆಗಳೆಲ್ಲಾ ಪರಿತೃಪ್ತಗಳಾಗುವಂತೆಯೂ ಶಿವನ ಅಂಶಭೂತರಾದ ಸಕಲದೇವತೆಗಳೂ ತುಷ್ಟರಾಗಲೇಬೇಕು. ಹಾಗಿಲ್ಲದೆ—

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ |
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ||

ಯಾವನು ಮಹಾಕಾಶವನ್ನು ತೆಗೆದುಕೊಂಡು ತನ್ನ ದೇಹದಲ್ಲಿ ಬಟ್ಟೆಯಂತೆ ಹೊದ್ದುಕೊಳ್ಳುತ್ತಾನೆಯೋ ಅಂಥವನಿಗೆ ಮಾತ್ರ ಶಿವನನ್ನು ಉಪಾಸಿಸದಿದ್ದರೂ ಶಿವನನ್ನು ತಿಳಿಯದಿದ್ದರೂ ಈ ಜನನಮರಣಾತ್ಮಕವಾದ ದುಃಖವು ನಿವೃತ್ತಿಯಾದೀತು. ಅಂದರೆ ಶಿವೋಪಾಸನೆಮಾಡದಿದ್ದವರು ಈ ಸಂಸಾರವೆಂಬ ಮಹಾಬಂಧವನ್ನು ತಪ್ಪಿಸಿಕೊಳ್ಳಲಾರರೆಂದು ಈ ಶ್ರುತಿಯ ತಾತ್ಪರ್ಯವು. ಇಂಥ ಶಿವೋಪಾಸನೆಯಲ್ಲಿ ಅಗ್ರೇಸರರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ತಾವು ಸ್ಥಾಪಿಸಿದ ವೀರಶೈವಮತವೆಂಬ ವಿಶಾಲವಾದ ರಾಜ್ಯದಲ್ಲಿ ಶಿವೋಪಾಸನೆಯ ಮಹತ್ತ್ವವನ್ನು ಪ್ರಕಾಶಪಡಿಸಿ, "ಶಿವಏಕೋಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ" ಹಲವು ಉಪಾಸನೆಗಳನ್ನು ಮಾಡಿ ಮನಸ್ಸನ್ನು ಚಂಚಲಗೊಳಿಸುವುದಕ್ಕಿಂತಲೂ ಎಲ್ಲವನ್ನೂ ಬಿಟ್ಟು, ಮುಕ್ತಿಸೌಖ್ಯವನ್ನೀಯುವ ಶಿವನೊಬ್ಬನನ್ನೇ ಉಪಾಸಿಸುವದುತ್ತಮವೆಂಬ ಶ್ರುತ್ಯರ್ಥವನ್ನೂ "ಅಮೃತಸ್ಯ ದೇವಧಾರಣೋ ಭೂಯಾಸಂ" ಯಾರು ಮೋಕ್ಷಕಾಂಕ್ಷಿಗಳೋ ಅವರು ಆ ಶಿವನ ಮುಖ್ಯಚಿಹ್ನವೆನಿಸಿದ ಶಿವಲಿಂಗದ ಸಂಬಂಧವು ಪ್ರತಿಯೊಂದು ದೇಹದಲ್ಲಿಯೂ ಇರಲೇಬೇಕೆಂಬ ಶ್ರುತ್ಯರ್ಥವನ್ನೂ ಪ್ರಕಾಶಪಡಿಸಿದರು. ಹೀಗೆ ಶ್ರೀ ಪಂಚಾಚಾರ್ಯರು ವೇದವೆಂಬ ಮಹಾರಣ್ಯವನ್ನು ಶೋಧಿಸಿ ಸಂಜೀವಿನಿಯಂತಿರುವ ಶಿವೋಪಾಸನೆಯ ಕ್ರಮವನ್ನು ಹೊರಗೆಡವಿ ಜಗದ್ವಂದ್ಯರಾದರು. ಆಮುಷ್ಮಿಕಸಾಧಕಗಳಾದ ಕರ್ಮಭಾಗಗಳನ್ನೂ ಐಹಿಕಸೌಖ್ಯಸಾಧಕಗಳಾದ ಕರ್ಮಭಾಗಗಳನ್ನೂ ಅನುಷ್ಠಿಸದೆ ಕೇವಲ ಮುಕ್ತಿಸಾಧಕವಾದ ಶಿವೋಪಾಸನಾವಿಧಾಯಕ ಕರ್ಮಗಳನ್ನು ಮಾತ್ರ ಅನುಷ್ಠಿಸುವುದೇ ವೀರಶೈವಸಿದ್ಧಾಂತವಾಗಿದೆ.

ತತ್ರಾಪಿ ವೀರಶೈವಾನಾಂ ತತ್ಪ್ರವೃತ್ತ್ಯಾಂತ ಉಚ್ಯತೇ |
ರತ್ನಾಪಣೇ ನಿವಿಷ್ಟಾನಾಂ ವಿವಿಧಾನಾಂ ಕ್ರಮೇಣಹಿ ||
ಕಾಚಮುಕ್ತಾಮರಕತಪ್ರಭೃತೀನಾಂ ಯಥಾ ಧನೀ |
ಶ್ರೇಯಾಧಿಕಾರಾನುಗುಣಾದ್ಗೃಹ್ಣಾಯೇತ್ತದಶಕ್ರಯಂ ||

ವೇದವು ರತ್ನಗಳನ್ನು ಮಾರುವ ಒಂದು ದೊಡ್ಡ ಅಂಗಡಿಯಂತಿರುತ್ತದೆ. ರತ್ನದ ಅಂಗಡಿಯಲ್ಲಿ ವ್ಯಾಪಾರಿಯು ಗಾಜಿನ ಮಣಿಗಳು, ಮುತ್ತುಗಳು, ಪಚ್ಚೆಗಳು ಮುಂತಾದ ನಾನಾಪ್ರಕಾರವಾದ ರತ್ನಗಳನ್ನು ಮಾರಾಟಕ್ಕಿಟ್ಟಿರುತ್ತಾನೆ. ಅನೇಕ ವ್ಯಾಪಾರಿಗಳು ಅಂಗಡಿಗೆ ಹೋದರೂ ಅವರವರ ಯೋಗ್ಯತಾನುಸಾರವಾಗಿ ರತ್ನಗಳನ್ನು ಕೊಂಡುಕೊಳ್ಳುತ್ತಾರಲ್ಲದೆ, ಅಂಗಡಿಯಲ್ಲಿರುವ ರತ್ನಗಳನ್ನೆಲ್ಲವನ್ನೂ ತೆಗೆದುಕೊಳ್ಳುವುದಿಲ್ಲ. ಅಂಗಡಿಗಾರನು ಅವರವರಿಗೆ ಬೇಕಾದ ಹಾಗೆ ಗಾಜಿನಮಣಿಗಳನ್ನೂ ಉತ್ತಮರತ್ನಗಳನ್ನೂ ತೋರಿಸುತ್ತಾನೆ. ಅಷ್ಟುಮಾತ್ರದಿಂದ ಅವನಿಗಾಗಲಿ ರತ್ನಗಳನ್ನು ಮಾರಾಟಕ್ಕೆ ತೆಗೆದುಕೊಳ್ಳುವವನಿಗಾಗಲಿ ಯಾವ ಹಾನಿಯೂ ಸಂಭವಿಸದು. ಇದರಂತೆ ಸಕಲ ಮತೀಯರೂ ಅವರವರ ಮತಾಚಾರ್ಯರು ವಿಧಿಸಿರುವಂತೆ ವೇದದಲ್ಲಿರುವ ಒಂದೊಂದು ಕರ್ಮಗಳನ್ನು ನಿಯಮದಿಂದ ಅನುಷ್ಠಿಸುತ್ತಾರೆ. ತಮ್ಮ ಮತಕ್ಕೆ ವಿರೋಧವಾದುದನ್ನು ಅನುಷ್ಠಿಸುವುದಿಲ್ಲ. ಇದರಿಂದ ಯಾರಿಗೂ ಯಾವ ದೋಷವನ್ನೂ ಹೇಳಲು ಸಾಧ್ಯವಿಲ್ಲ. ಅದರಂತೆ ವೀರಶೈವರು ವೇದವೆಂಬ ರತ್ನದ ಅಂಗಡಿಯಲ್ಲಿರುವ ಬಹುಬೆಲೆಯುಳ್ಳ ಮುಕ್ತಿಸಾಧಕ ಶಿವೋಪಾಸನೆಯೆಂಬ ಮಹಾರತ್ನವನ್ನು ಮಾತ್ರ ಗ್ರಹಿಸಿರುವರು. ಈ ರೀತಿಯಾಗಿ ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಅನುಜ್ಞೆಯನ್ನಿತ್ತಿರುವುದನ್ನು ಪ್ರತಿಯೊಬ್ಬ ವೀರಶೈವನೂ ಗಮನಕ್ಕೆ ತಂದು ಅದರಂತೆ ಆಚರಿಸಿ ಮೋಕ್ಷಸುಖವನ್ನನುಭವಿಸಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಹರಿಕಥಾಸಪ್ತಾಹವನ್ನು ಮಾಡುತ್ತಿದ್ದ ನಾರಾಯಣಶಾಸ್ತ್ರಿ ಎಂಬವರನ್ನು ಕಾರವಾರದ ಪೋಲೀಸರ ಅಪೇಕ್ಷೆಯಂತೆ ರಾಜಧಾನಿಯ ಪೋಲೀಸರು ದಸ್ತಗಿರಿಮಾಡಿ ಕಳುಹಿಸಿರುತ್ತಾರೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಈ ತಿಂಗಳು ೬ನೆಯ ತಾರೀಖಿನ ದಿವಸ ಚಿತ್ರದುರ್ಗ ಡಿ|| ಚಳ್ಳಕೆರೆ ಟವನ್ನಿಗೆ ದಯಮಾಡಿಸಿದರೆಂದು ತಿಳಿದುಬರುತ್ತದೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಗಂಜಾಮು ಮುಂತಾದ ಗ್ರಾಮಗಳಲ್ಲಿ ಅಪಾರವಾದ ಆನೆಕಲ್ಲಿನ ಮಳೆಯು ಸುರಿದು ಹೆಂಚುಗಳೆಲ್ಲಾ ಚೂರುಚೂರಾದುದಲ್ಲದೆ, ಜನರಿಗೆ ವಿಶೇಷ ನಷ್ಟವೂ ಸಂಭವಿಸಿತೆಂದು ತಿಳಿದುಬಂದಿದೆ.

ರಾಜಧಾನಿಯ ವೃದ್ಧಪಿತಾಮಹ ಶ್ರೀವರ್ಮಾ ಎಂ. ವೆಂಕಟಕೃಷ್ಣಯ್ಯನವರ 90ನೆಯ ವರ್ಷವರ್ಧಂತ್ಯುತ್ಸವವನ್ನು ಆಚರಿಸುವದಕ್ಕಾಗಿ ಶ್ರೀವರ್ಮಾ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯನಿರ್ವಾಹಕಸಮಿತಿಯು ಏರ್ಪಟ್ಟಿರುವದು.

ಮೈಸೂರು ವಿಶ್ವವಿದ್ಯಾನಿಲಯಸಂಘದ ವಾರ್ಷಿಕ ಚುನಾವಣೆಗಳು ಇದೇ ಆಗಸ್ಟ್ 1 ಮತ್ತು 2 ರಲ್ಲಿ ನಡೆದು ಮ|| ರಾ|| ಎಸ್. ಟಿ. ಶಿವಸ್ವಾಮಿಯವರು ವೈಸ್‌ಪ್ರೆಸಿಡೆಂಟರಾಗಿಯೂ ಮ|| ರಾ|| ಸಿ. ನರಸಿಂಹಮೂರ್ತಿ ಬಿ.ಎ., (ಆನರ್ಸ್)ರವರು ಸೆಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟಿರುತ್ತಾರೆ.

ತರೀಕೆರೆ ರೈಲ್ವೇ ಅನಾಹುತದ ಸಂಬಂಧವಾಗಿ ಡ್ರೈವರಾಗಿದ್ದ ಶಿವಾನಂದಂ, ಗಾರ್ಡ್ ಎಚ್. ವಿ. ಪ್ರಸಾದ್ ಮತ್ತು ಅಂಡರ್‌ಗಾರ್ಡ್ ನಾಗರತ್ನಂ ಈ ಮೂವರ ಮೇಲೂ ಮೊಕದ್ದಮೆಯು ಹೂಡಲ್ಪಟ್ಟಿರುವದು. ಈ ಮೂವರೂ ಅರೆಸ್ಟುಮಾಡಲ್ಪಟ್ಟಿದ್ದು ಜಾಮೀನಿನ ಮೇಲೆ ಬಿಡಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕೆಲವು ದಿವಸಗಳಿಂದಲೂ ಅನೇಕ ಕಡೆಗಳಲ್ಲಿ ಕಳ್ಳತನಮಾಡಿ ಸಿಕ್ಕಿಬಿದ್ದ ದೇವಪುತ್ರ, ರಮ್ನಹಳ್ಳಿ ಮರಿ, ಮಹಮದ್ ಗೌಸ್ ಮತ್ತು ಅಬ್ದುಲ್ ಸತ್ತಾರ್ ಎಂಬ 4 ಜನ ಹಳೇ ಕಳ್ಳರಿಗೆ ಸಿಟಿ ಮ್ಯಾಜಿಸ್ಟ್ರೇಟರು ಕ್ರಮವಾಗಿ 6 ತಿಂಗಳು, 1 ತಿಂಗಳು, 2 ತಿಂಗಳು ಮತ್ತು 6 ತಿಂಗಳು ಕಠಿಣ ಸಜೆಯನ್ನು ವಿಧಿಸಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ರಾಜಧಾನಿಯಲ್ಲಿ 6 ತಿಂಗಳುಗಳ ವರೆಗೆ ಯಾರೂ ರಾಷ್ಟ್ರೀಯ ಧ್ವಜವನ್ನು ಏರಿಸಕೂಡದೆಂದೂ, ಮೆರವಣಿಗೆ ಮಾಡಕೂಡದೆಂದೂ ಮಾಡಿದ್ದ ಪ್ರತಿಬಂಧಕ ಆರ್ಡರು ಕಳೆದ ವಾರಕ್ಕೆ ಮುಗಿದುಹೋದುದರಿಂದ ಡಿ|| ಮ್ಯಾಜಿಸ್ಟ್ರೇಟರು ಸದರಿ ನಿರ್ಬಂಧವು ಮತ್ತೆ 6 ತಿಂಗಳುಗಳವರೆಗೆ ಜಾರಿಯಲ್ಲಿರತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ.

ರಾಜಧಾನಿಯ ಚಾಮರಾಜಪೇಟೆಯಲ್ಲಿರುವ ಲೋಕಹಿತೈಷಿ ಶ್ರೀ|| ಎಚ್. ನಂಜುಂಡರಾಜ ಅರಸರವರ ಏಕಪುತ್ರರಾದ ಶ್ರೀ|| ಎಚ್. ಎನ್. ಲಿಂಗರಾಜ ಅರಸರವರು ಕೆಲವು ಕಾಲದಿಂದಲೂ ಕ್ಷಯರೋಗದಿಂದ ನರಳುತ್ತಿದ್ದು ಕಳೆದ ಜುಲೈ 29ನೇ ತಾರೀಖು ಶನಿವಾರ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಕಾಲಮರಣದಿಂದ ವೃದ್ಧರಾದ ತಂದೆತಾಯಿಗಳಿಗೂ, ಧರ್ಮಪತ್ನಿಗೂ ಮತ್ತು ಆರುಜನ ಸಣ್ಣಮಕ್ಕಳಿಗೂ ಉಂಟಾಗಿರುವ ದುಃಖವನ್ನು ಅಷ್ಟೆಂದು ಹೇಳಲು ಸಾಧ್ಯವಿಲ್ಲ. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ಇದೇ ಆಗಸ್ಟ್ 4ನೇ ತಾರೀಖಿನ ದಿವಸ ಮಧ್ಯಾಹ್ನ ಮೈಸೂರು ಜನರಲ್ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸಿನಲ್ಲಿ ಒಂದು ಆಶ್ಚರ್ಯಕರವಾದ ಕಳ್ಳತನವು ನಡೆಯಿತು. ಇನ್ಷೂರೆನ್ಸ್ ಡಿಪಾರ್ಟ್‌ಮೆಂಟಿನ ಗುಮಾಸ್ತನು 7 ಇನ್ಷೂರ್ ಕವರುಗಳನ್ನು ರಿಜಿಸ್ಟರಿನಲ್ಲಿ ದಾಖಲುಮಾಡಿ ಪೆಟ್ಟಿಗೆಯಲ್ಲಿಡುವದಕ್ಕೋಸ್ಕರ ಅಕೌಂಟೆಂಟರ ಕೊಠಡಿಗೆ ತೆಗೆದುಕೊಂಡು ಹೋಗಿ ರಿಜಿಸ್ಟರನ್ನೂ, ಇನ್ಷೂರ್ ಕವರುಗಳನ್ನೂ ಮೇಜಿನಮೇಲಿಟ್ಟು ಮೊಹರುಮಾಡುವ ಜವಾನನನ್ನು ಕರೆದುಕೊಂಡು ಬಂದು ನೋಡುವಷ್ಟರಲ್ಲಿ ರಿಜಿಸ್ಟರ್ ಮತ್ತು 7 ಇನ್ಷೂರ್ ಕವರುಗಳು ಅಪಹರಿಸಲ್ಪಟ್ಟಿದ್ದುವು. ಪೋಲೀಸರು ಶೋಧಿಸುವರು.

ನಂಜನಗೂಡು ಮಹಾಕ್ಷೇತ್ರದಲ್ಲಿ ಕಳೆದವಾರ ಸಂಗೀತವಿದ್ವಾಂಸರ ಸಮ್ಮೇಳನವು ನೆರವೇರಿತು. ಆ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಮೆ|| ರಾಜಕವಿಭೂಷಣ ಎಚ್. ಲಿಂಗರಾಜ ಅರಸರವರು ವಹಿಸಿದ್ದರು. ಅಧ್ಯಕ್ಷಮಹಾಶಯರು ತಮ್ಮ ಭಾಷಣದಲ್ಲಿ ಸಂಗೀತಶಾಸ್ತ್ರದ ಮರ್ಮವನ್ನು ಬಹುಚೆನ್ನಾಗಿ ವರ್ಣಿಸಿರುವರು. ಪ್ರತಿಯೊಬ್ಬರೂ ಅಧ್ಯಕ್ಷರ ಈ ಸರ್ವೋತ್ತಮ ಭಾಷಣವನ್ನು ಓದಿನೋಡಿ ಅನೇಕ ಮಹತ್ವದ ವಿಷಯಗಳನ್ನು ತಿಳಿದುಕೊಳ್ಳಲೆಂಬಾಶೆಯಿಂದ [illegible] ಪತ್ರಿಕೆಯಲ್ಲಿ ಸದರಿ ಭಾಷಣವನ್ನು ಸಂಪೂರ್ಣವಾಗಿ ಮುದ್ರಿಸಿರುತ್ತೇವೆಯಾದುದರಿಂದ, ವಾಚಕರು ಓದಿನೋಡಿ ಆನಂದತುಂದಿಲಹೃದಯರಾಗಬೇಕೆಂದಾಶಿಸುತ್ತೇವೆ.

ರಾಜಧಾನಿಯ ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಸರ್ಜನ್ನರಾಗಿಯೂ, ಮೆಡಿಕಲ್ ಕಾಲೇಜಿನ ಪ್ರೊಫೆಸರಾಗಿಯೂ ಇದ್ದ ಡಾಕ್ಟರ್ ಸಾಂಬಶಿವರಾವರು ಇದೇ ಆಗಸ್ಟ್ 2ನೇ ತಾರೀಖಿನ ರಾತ್ರಿ ಇದ್ದಕಿದ್ದಹಾಗೆ ಹೃದಯಚಲನೆಯು ನಿಂತು, ಮೃತಪಟ್ಟರೆಂದು ತಿಳುಹಿಸಲು ವಿಷಾದಿಸುತ್ತೇವೆ. ಇವರು ವೈದ್ಯವಿದ್ಯಾನಿಪುಣರೂ, ಸ್ವಾಭಾವಿಕವಾಗಿ ಶಾಂತಸ್ವಭಾವದವರೂ, ಪರಹಿತಕಾಂಕ್ಷಿಗಳೂ ಆಗಿದ್ದುದರಿಂದ ಅಸಂಖ್ಯಜನರ ಕೃತಜ್ಞತೆಗೆ ಪಾತ್ರರಾಗಿದ್ದರು. ಕಾಲೇಜಿನ ವಿದ್ಯಾರ್ಥಿಗಳಿಗಂತೂ ಇವರು ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದರು. ಇವರ ಅಕಾಲಮರಣದಿಂದ ವೈದ್ಯಇಲಾಖೆಗೂ, ಮೆಡಿಕಲ್ ಕಾಲೇಜಿಗೂ ಅಪಾರನಷ್ಟವುಂಟಾಯಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ

ಮಿಸ್ ಹೇಜಲ್ ವಿಂಟರ್ ಎಂಬ ಹುಟ್ಟುಕುರುಡಳಾದ ಸ್ತ್ರೀಯು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರಥಮತರಗತಿಯಲ್ಲಿ ತೇರ್ಗಡೆಹೊಂದಿರುವಳಂತೆ!

ನಾಗಪುರಕ್ಕೆ ಸುಮಾರು 10 ಮೈಲು ದೂರದಲ್ಲಿರುವ ಕೆಂಪ್ಟಿ ಎಂಬ ಗ್ರಾಮದಲ್ಲಿ ವಿಶೇಷ ಮಳೆಯು ದೆಸೆಯಿಂದ 50 ಮನೆಗಳು ಕೊಚ್ಚಿ ಹೋದವು. ಇಬ್ಬರು ಮೃತಪಟ್ಟರು.

ಫ್ರೆಂಚ್ ಸರಕಾರದವರು ಮೊರಾಕೊ ದೇಶದಲ್ಲಿ ರೈಲ್ವೇ, ಬಂದರುಗಳು, ನಾಗುವಳಿ ಕಾರ್ಯಗಳೇ ಮೊದಲಾದ ಸಾರ್ವಜನಿಕಕಾರ್ಯಗಳಿಗಾಗಿ 12,00,00,000 ರೂ. ಗಳನ್ನು ವೆಚ್ಚಮಾಡುವರಂತೆ!

ಲಾಹೋರ್ ಜನರಲ್ ಪೋಸ್ಟಾಫೀಸಿನಲ್ಲಿ 1,400 ರೂಪಾಯಿಗಳಿಗೆ ಇನ್ಷೂರ್ ಮಾಡಲ್ಪಟ್ಟಿದ್ದ ಒಂದು ಪಾರ್ಸಲ್ ಯಾರಿಂದಲೋ ಅಪಹರಿಸಲ್ಪಟ್ಟಿರುವದು. ಪೋಲೀಸರು ತನಿಖೆ ಮಾಡುತ್ತಿರುವರು.

ಸುಪ್ರಸಿದ್ಧ ಸಿನಿಮಾ ನಟರೂ, ಮತ್ತು ಸಿನಿಮಾ ಪ್ರಪಂಚದಲ್ಲಿ ಆದರ್ಶದಂಪತಿಗಳೂ ಆಗಿದ್ದ ಡಗ್ಲಸ್ ಫೇರ್‌ಬ್ಯಾಂಕ್ಸ್ ಮತ್ತು ಮೇರಿ ಪಿಕ್‌ಫರ್ಡರು ವಿವಾಹವಿಚ್ಛೇದ ಮಾಡಿಕೊಳ್ಳಬೇಕೆಂದು ನಿರ್ಧರಿಸಿರುವರಂತೆ!

ಮೆಕ್ಸಿಕೋ ದೇಶದ ಸಮುದ್ರತೀರದಲ್ಲಿ ಭಯಂಕರವಾದ ಬಿರುಗಾಳಿ ಮತ್ತು ಮಳೆಯು ಪ್ರಾಪ್ತವಾಗಿ ಸುಮಾರು 20 ಚದರ ಮೈಲಿಗಳಷ್ಟು ಪ್ರದೇಶದಲ್ಲಿದ್ದ ಗ್ರಾಮಗಳು ಸಂಪೂರ್ಣವಾಗಿ ನಾಶವಾದವು. 15 ಜನರು ಮೃತಪಟ್ಟರು.

ಮೊದಲನೆಯ ಗ್ವಾಲಿಯರ್ ಇನ್‌ಫೆಂಟ್ರಿಗೆ ಸೇರಿದ ಸಯಿದ್‌ಅಲಿ ಎಂಬ ಶಿಪಾಯಿಯು ಒಬ್ಬ ಚಿಕ್ಕಹುಡುಗಿಯನ್ನು ಬಲಾತ್ಕಾರವಾಗಿ ಸೆಳೆದುಕೊಂಡುಹೋದನೆಂಬ ಕಾರಣದಮೇಲೆ 5 ವರ್ಷ 9 ತಿಂಗಳು ಕಠಿಣ ಸಜೆಗೆ ಗುರಿಯಾದನು.

ಸಿಲೋನ್ ದ್ವೀಪದ ಮರುಣಾಳುಗಳರ ಎಂಬ ಗ್ರಾಮದಲ್ಲಿ 6 ವಾರದಲ್ಲಿ 16 ಖೂನಿಗಳು ನಡೆದಿರುವವಂತೆ! ಆ ಊರಿಗೆ ಹೊಸಬರಾಗಿ ಬಂದ ಮ್ಯಾಜಿಸ್ಟ್ರೇಟರು 40 ದಿವಸಗಳಲ್ಲಿ ಮೇಲ್ಕಂಡ 16 ಖೂನಿ ಮೊಕದ್ದಮೆಗಳನ್ನು ವಿಚಾರ ಮಾಡಿದರಂತೆ!

ಅಜ್ಮೀರನಗರದಲ್ಲಿ ಭಿಸ್ತಿಗಳಿಗೂ (ನೀರುಹೊರುವವರು) ಮತ್ತು ಜೋಶಿಗಳಿಗೂ (ಮಹಮ್ಮದೀಯ ಹಾಲುಮಾರುವವರು) ಚತಿಯಾರಿಮಂಡಿಯಲ್ಲಿ ಕೈಕೈ ಹತ್ತಿ ಇಬ್ಬರಿಗೆ ವಿಶೇಷಗಾಯಗಳೂ 8 ಜನರಿಗೆ ಸಾಮಾನ್ಯಗಾಯಗಳೂ ಆಗಿರುವುವು.

ಕಳೆದ ವರ್ಷ ಸ್ಪೇನ್‌ದೇಶದ ನಿವಾಸಿಗಳು ಹದಿನೆಂಟು ಕೋಟಿ ರೂಪಾಯಿಗಳ ಬೆಲೆಬಾಳುವ ಹೊಗೆಸೊಪ್ಪನ್ನು ಉಪಯೋಗಿಸಿದರಂತೆ! ಸ್ಪೇನ್ ದೇಶದ ಸ್ತ್ರೀಯರು ವಿಶೇಷವಾಗಿ ಧೂಮಪಾನಮಾಡಲು ಪ್ರಾರಂಭಿಸಿರುವುದೇ ಇದಕ್ಕೆ ಕಾರಣವಂತೆ!

ಇಂಗ್ಲೆಂಡಿನ ಮಿಡಲ್‌ಸೆಕ್ಸ್ ಡಿಸ್ಟ್ರಿಕ್ಟಿಗೆ ಸೇರಿದ ಎನ್‌ಫೀಲ್ಡ್‌ವಾಷ್ ಎಂಬಲ್ಲಿ ವಿಲಿಯಂ ಬೋಗಿಸ್ ಎಂಬುವರು ಕಪ್ಪೆಗಳ ಪರೀಕ್ಷೆಗಾಗಿ ಒಂದು ಪಾಠಶಾಲೆಯನ್ನು ಏರ್ಪಡಿಸಿರುವರು. ಅಲ್ಲಿ ಅವರು 120 ಕಪ್ಪೆಗಳನ್ನು ಸಾಕುತ್ತಿದ್ದು ಅವುಗಳಿಗೆ ಅನೇಕ ಆಟಪಾಟಗಳನ್ನು ಕಲಿಸುವರಂತೆ!

ಇಂಡಿಯಾನಾ ದ್ವೀಪಕ್ಕೆ ಸೇರಿದ ವಾಲ್ಕಾಕ್ಟ್ ಎಂಬ ಊರಿನಲ್ಲಿ ವಾಸವಾಗಿರುವ ಮಿ|| ಎಚ್. ಎಚ್. ಷೈಕ್‌ಲಾತ್ ಎಂಬವರ ತೋಟದ ಕೊಳದಲ್ಲಿ ಒಂದು ಬಸವನಹುಳುವಿಗೂ 20 ಅಂಗುಲ ಉದ್ದವಾದ ಒಂದು ಹಾವಿಗೂ ಜಗಳಹತ್ತಿ ಬಸವನಹುಳುವೇ ಹಾವನ್ನು ಕೊಂದುಹಾಕಿತಂತೆ!

ಪ್ಯಾರಿಸ್ ನಗರದ ಸಮೀಪದಲ್ಲಿದ್ದು ಪ್ರಪಂಚದಲ್ಲೆಲ್ಲಾ ದೊಡ್ಡದೆನಿಸಿದ್ದ ಒಂದು ಹತ್ತೀ ಗಡಂಗಿಗೆ ಅಕಸ್ಮಾತ್ ಬೆಂಕಿಬಿದ್ದು ಅದರಲ್ಲಿದ್ದ 33,000 ಹತ್ತಿಯ ಮೂಟೆಗಳು ಅಗ್ನಿದೇವನಿಗೆ ಆಹುತಿಯಾದುವು ಸುಮಾರು 60,00,000 ರೂ. ಗಳ ನಷ್ಟವಾಗಿರುವದೆಂದು ಅಂದಾಜು ಮಾಡಲ್ಪಟ್ಟಿರುವದು.

ಇದೇ ಆಗಸ್ಟ್ 1ನೇ ತಾರೀಖಿನ ಸಾಯಂಕಾಲ ರಾಷ್ಟ್ರೀಯಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ|| ಅಣೆಯವರು ಮುಂಬಯಿಯ ಚೌಪಾತಿ ಸಮುದ್ರತೀರದಲ್ಲಿ ಕೈ|| ಲೋಕಮಾನ್ಯ ಬಾಲಗಂಗಾಧರ ತಿಲಕರವರ ಶಿಲಾಪ್ರತಿಮೆಯ ಅನಾವರಣಮಹೋತ್ಸವವನ್ನು ನೆರವೇರಿಸಿದರು. ಈ ಮಹೋತ್ಸವಕ್ಕೆ ಸುಮಾರು 1,50,000 ಜನರು ಆಗಮಿಸಿದ್ದರು.

ಡೆಲ್ಲಿಯಲ್ಲಿ ಗುಮಾಸ್ತರಿಗೆ 600 ಮನೆಗಳನ್ನೂ, ಅಧಿಕಾರಿಗಳಿಗೆ 30 ಬಂಗಲೆಗಳನ್ನೂ, ನ್ಯಾಯವಿಧಾಯಕಸಭೆಯ ಸದಸ್ಯರಿಗೆ 30 ಬಂಗಲೆಗಳನ್ನೂ, ಕಡಿಮೆ ಖರ್ಚಿನಿಂದಾಗುವ ಈ ಕಾಲದಲ್ಲಿಯೇ ಕಟ್ಟಿಸಬೇಕೆಂದು ಸೆಕ್ರೆಟರಿ ಆಫ್ ಸ್ಟೇಟರವರು ಏರ್ಪಾಡುಮಾಡಿರುವರು! ಮತ್ತು, ಇದಕ್ಕಾಗಿ ಇಂಡಿಯಾ ಸರಕಾರದವರು 1,00,00,000 ರೂಪಾಯಿಗಳನ್ನು ವೆಚ್ಚಮಾಡಲಿರುವರು.

ಕಳೆದ ಜುಲೈ 27ನೇ ತಾರೀಖಿನ ದಿವಸ ಪಂಡಿತ ಮದನ ಮೋಹನ ಮಾಳವೀಯರವರು ಮುಂಬಯಿಯಿಂದ ಕಾಶಿಗೆ ಪ್ರಯಾಣ ಮಾಡಿದರು. ಚ್ಯಾಕಿ ಎಂಬ ಸ್ಟೇಷನ್ನಿನಲ್ಲಿ ಗಾಡಿಯು ಇನ್ನೂ ಮೆಲ್ಲಗೆ ಹೋಗುತ್ತಿದ್ದಾಗ, ಗಾಡಿಯು ನಿಂತಿರುವದೆಂದು ಭಾವಿಸಿ ಅವರು ಕೆಳಕ್ಕಿಳಿದು ಮುಗ್ಗರಿಸಿ ಬಿದ್ದುಬಿಟ್ಟರು. ಆದರೆ ದೈವವಶಾತ್ ಅವರಿಗೆ ಯಾವ ಅಪಾಯವೂ ಆಗಲಿಲ್ಲ.

ಹೈದರಾಬಾದ್ (ಸಿಂಧ್) ನಗರದಲ್ಲಿ ಒಂದು ಸರ್ಕಸ್ ಪ್ರದರ್ಶನವು ನಡೆಯುತ್ತಿದ್ದಾಗ ಸಿಂಹಗಳನ್ನು ಕೂಡಿದ್ದ ಬೋನಿನ ಒಂದು ಭಾಗವು ಕೆಳಕ್ಕೆ ಬಿದ್ದುಬಿಟ್ಟಿತು. ಬೋನಿನೊಳಗಿದ್ದ 5 ಸಿಂಹಗಳ ಪೈಕಿ 1 ಸಿಂಹವು ಹೇರಿಯೊಳಕ್ಕೆ ನುಗ್ಗಲು ಜನರು ಗಾಬರಿಯಿಂದ ಸಿಕ್ಕಿದಹಾಗೆ ಓಡಲಾರಂಭಿಸಿದರು. ಅಷ್ಟರಲ್ಲಿ ಸರ್ಕಸ್ಸಿನವರು ಉಪಾಯದಿಂದ ಸಿಂಹವನ್ನು ಪುನಃ ಬೋನಿನೊಳಕ್ಕೆ ಸೇರಿಸಿದರು.

ಜಪಾನ್‌ದೇಶದ ಮುಖ್ಯಪಟ್ಟಣವಾದ ಟೋಕಿಯೋ ನಗರದ ಪೋಲೀಸರು 'ಬ್ಲಡ್ ಬ್ರದರ್‌ಹುಡ್' ಎಂಬ ಸಂಸ್ಥೆಗೆ ಸೇರಿದ 53 ಜನ ಪ್ರಮುಖ ಮೆಂಬರರನ್ನು ದಸ್ತಗಿರಿ ಮಾಡಿರುತ್ತಾರೆ. ಇವರೆಲ್ಲರೂ ಜಪಾನಿನ ಮುಖ್ಯ ಅಧಿಕಾರಿಗಳನ್ನು ಕೊಲ್ಲಬೇಕೆಂದೂ ಹಾಗೂ ಪ್ರಾಮುಖ್ಯಗಳಾದ ಕೆಲವು ಬ್ಯಾಂಕುಗಳನ್ನೂ ಸರಕಾರೀ ಮತ್ತು ಖಾಸಗಿ ಕಟ್ಟಡಗಳನ್ನೂ ಲೂಟಿಮಾಡಬೇಕೆಂದೂ ಒಳಸಂಚು ನಡೆಸುತ್ತಿದ್ದರಂತೆ! ಕಳೆದ ವರ್ಷ ಜಪಾನಿನ ಮುಖ್ಯಮಂತ್ರಿಗಳಾಗಿದ್ದ 77 ವರ್ಷದ ಎಂ. ಇನುಕಾಯ್ ಎಂಬವರನ್ನು ಕೊಂದುದಕ್ಕಾಗಿ ಮೇಲ್ಕಂಡ ಬ್ಲಡ್ ಬ್ರದರ್‌ಹುಡ್ಡಿನ 15 ಜನ ಮೆಂಬರರು ದಸ್ತಗಿರಿಮಾಡಲ್ಪಟ್ಟು ಅವರ ವಿಚಾರಣೆಯು ಇನ್ನೂ ನಡೆಯುತ್ತಲೇ ಇರುವದು! ಈಗಿನ ಸಂಚಿಗೂ ಹಿಂದಿನ ಕೊಲೆಗೂ ಬಹಳ ನಿಕಟವಾದ ಸಂಬಂಧವಿರುವದೆಂದೂ, ಒಳಸಂಚು ಪೋಲೀಸರಿಗೆ ತಿಳಿದ ಕೂಡಲೇ ಅನೇಕ ಜನ ಮೆಂಬರರು ತಲೆತಪ್ಪಿಸಿಕೊಂಡು ಓಡಿಹೋಗಿರುತ್ತಾರೆಂದೂ ಪೋಲೀಸರು ಹೇಳುತ್ತಿರುವರು.

ಕಳೆದ ಘೋರಯುದ್ಧಾನಂತರ ವಾರ್ಸೇಲ್ಸಿನ ಕರಾರಿನ ಪ್ರಕಾರವಾಗಿ ಜರ್ಮನಿಯವರು ಮಿಲಿಟರಿ ಏರೋಪ್ಲೇನು (ವಿಮಾನ) ಗಳನ್ನು ಕಟ್ಟಕೂಡದೆಂಬ ಬಗ್ಗೆ ನಿರ್ಬಂಧವಿರುವದು. ಆದುದರಿಂದ ಜರ್ಮನಿ ದೇಶದಲ್ಲಿ ಸಿವಿಲ್ ಏರೋಪ್ಲೇನುಗಳನ್ನು ಮಾತ್ರ ತಯಾರಿಸುವರು. ಈ ಸಿವಿಲ್ ಏರೋಪ್ಲೇನುಗಳು ಯಾವವಿಧದಲ್ಲಿಯೂ ಮಿಲಿಟರಿ ಏರೋಪ್ಲೇನುಗಳನ್ನು ಹೋಲುವುದಿಲ್ಲವಾದರೂ, ಇವು ಅತ್ಯಂತ ವೇಗವುಳ್ಳವುಗಳಾಗಿರುವವಲ್ಲದೆ ಇವುಗಳ ರಚನೆಯು ಬಹಳ ಕುಶಲತೆಯಿಂದ ಕೂಡಿರುವದು. ಏಕೆಂದರೆ ಕ್ಷಣಮಾತ್ರದಲ್ಲಿ ಇವುಗಳನ್ನು ಮಿಲಿಟರಿ ಏರೋಪ್ಲೇನುಗಳಂತೆ ಬಾಂಬ್ ಹಾಕುವ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದಂತೆ! ಜರ್ಮನಿಯಲ್ಲಿ ಕೆಲವು ಗುಪ್ತಕಾರ್ಖಾನೆಗಳಲ್ಲಿ ಇನ್ನೂ ವೇಗವಾಗಿ ಹೋಗಬಲ್ಲ ಏರೋಪ್ಲೇನುಗಳು ತಯಾರಿಸಲ್ಪಟ್ಟಿರುವವಂತೆ! ಇವುಗಳನ್ನೆಲ್ಲಾ ಕ್ಷಣಮಾತ್ರದಲ್ಲಿ ಮಿಲಿಟರಿ ಏರೋಪ್ಲೇನುಗಳನ್ನಾಗಿ ಮಾಡಬಹುದೆಂದು ವಾರ್ತೆಯು ಯೂರೋಪಿನ ಇತರ ಸರಕಾರಗಳಿಗೆ ಗಾಬರಿಯನ್ನುಂಟುಮಾಡಿರುವದು! ಸದ್ಯಃ ಜರ್ಮನಿಯವರು ಯೂರೋಪಿನಲ್ಲೆಲ್ಲಾ ಅತ್ಯಂತ ಶ್ರೇಷ್ಠತರದ ಕೆಲವು ಹೊಸಏರೋಪ್ಲೇನುಗಳನ್ನು ಕಟ್ಟುತ್ತಿರುವರು! ಇದಕ್ಕಾಗಿ ವೆಚ್ಚ 90,00,000 ರೂ. ಗಳು!

ಗಾಂಧಿಯವರಿಗೆ ಶಿಕ್ಷೆ.

ಜುಲೈ 31ನೇ ತಾರೀಖು ರಾತ್ರಿ 1-30 ಗಂಟೆಯ ಸಮಯದಲ್ಲಿ ಅಹಮದಾಬಾದಿನ ಪೋಲೀಸ್ ಸೂಪರಿಂಟೆಂಡೆಂಟರವರು ಸಿಬ್ಬಂದಿ ಸಮೇತವಾಗಿ ಸೇಟ್ ರಾಮಚೋಡ್‌ದಾಸರ ಬಂಗಲೆಗೆ ಹೋಗಿ ಗಾಂಧಿಯವರನ್ನೂ, ಶ್ರೀ|| ಕಸ್ತೂರಿಬಾಯಿಯವರನ್ನೂ, ಮಹದೇವದೇಸಾಯರವರನ್ನೂ, ಅವರ ಆಶ್ರಮನಿವಾಸಿಗಳಾಗಿದ್ದ 16 ಜನ ಗಂಡಸರನ್ನೂ ಮತ್ತು 16 ಜನ ಹೆಂಗಸರನ್ನೂ ದಸ್ತಗಿರಿ ಮಾಡಿ, ಎಲ್ಲರನ್ನೂ ಕೂಡಲೇ ಎರವಾಡಾಕ್ಕೆ ಕರೆದೊಯ್ದರು. ಅನಂತರ ೪ನೆಯ ತಾರೀಖಿನ ದಿವಸ ಬೆಳಿಗ್ಗೆ ಅವರನ್ನು ಬಿಡುಗಡೆಮಾಡಿ, ಪೂನಾದಲ್ಲಿಯೇ ಇರಬೇಕೆಂದು ನಿರ್ಬಂಧದ ಆರ್ಡರನ್ನು ಜಾರಿಮಾಡಿದರು. ಆದರೆ ಗಾಂಧಿಯವರು ಆ ಆರ್ಡರನ್ನು ಕೂಡಲೇ ಮುರಿದುದರಿಂದ ಅಧಿಕಾರಿಗಳು ಅವರನ್ನು ಪುನಃ ದಸ್ತಗಿರಿಮಾಡಿದರು. ಡಿ|| ಮ್ಯಾಜಿಸ್ಟ್ರೇಟರು ಎರವಾಡಾ ಕಾರಾಗೃಹದಲ್ಲಿಯೇ ವಿಚಾರಣೆ ನಡೆಯಿಸಿ ಒಂದು ವರ್ಷ ಸಾದಾಸಜೆಯನ್ನು ವಿಧಿಸಿದರು.

ಹೊಸತರಹದ ರೈಲ್ವೇಗಾಡಿ.

ಏರೋಪ್ಲೇನುಗಳಲ್ಲಿ ಪ್ರಯಾಣಮಾಡುವ ಪದ್ಧತಿಯು ಪಾಶ್ಚಿಮಾತ್ಯ ದೇಶಗಳಲ್ಲಿ ದಿನದಿನಕ್ಕೆ ಹೆಚ್ಚಾಗುತ್ತ ನಡೆದಿರುವದರಿಂದ ರೈಲ್ವೇಯವರಿಗೆ ಉತ್ಪತ್ತಿಯೂ ಕಡಿಮೆಯಾಗುತ್ತಾ ನಡೆದಿರುವದು. ಏರೋಪ್ಲೇನುಗಳು ರೈಲುಗಳಿಗಿಂತಲೂ ಜಾಗ್ರತೆಯಾಗಿ ಪ್ರಯಾಣಮಾಡಬಲ್ಲವೆಂಬುದೇ ಇದಕ್ಕೆ ಮುಖ್ಯಕಾರಣವು. ಅದಕ್ಕಾಗಿ ಅಮೇರಿಕಾದೇಶದ ಕೆಲವು ಇಂಜನಿಯರುಗಳು ಒಂದು ಹೊಸತರಹದ ರೈಲುಗಾಡಿಯನ್ನು ತಯಾರುಮಾಡಿರುತ್ತಾರೆ. ಈ ಗಾಡಿಯು ಸಂಪೂರ್ಣವಾಗಿ ಅಲ್ಯುಮಿನಿಯಂ ಲೋಹದಿಂದ ತಯಾರಿಸಲ್ಪಟ್ಟಿದ್ದು, ಇಂಜನ್ನಿನ ಸಮೇತ ಒಟ್ಟು ಸುಮಾರು 120 ಟನ್ನುಗಳ ತೂಕವುಳ್ಳದ್ದಾಗಿರುವದು. ಇದರಲ್ಲಿ 116 ಜನ ಪ್ರಯಾಣಿಕರು ಮಾತ್ರ ಕುಳಿತುಕೊಳ್ಳಬಹುದು. ಇದು ಗಂಟೆ 1ಕ್ಕೆ 110 ಮೈಲುಗಳ ವೇಗದಲ್ಲಿ ಹೋಗಬಲ್ಲದಂತೆ!

ಅದ್ಭುತಾಕಾರದ ಮನುಷ್ಯ.

ಫಿಲಡೆಲ್ಫಿಯಾನಗರದಲ್ಲಿ ಜೋಸೆಫ್ ರಾಗ್ಗಿಯೋ ಎಂಬ ಮನುಷ್ಯನಿರುವನು. ಇವನು ತೂಕದಲ್ಲಿ ಸುಮಾರು 896 ಪೌಂಡುಗಳಿದ್ದು, ಪ್ರಪಂಚದಲ್ಲೆಲ್ಲಾ ಅತ್ಯಂತ ಕೊಬ್ಬಿದ ಮನುಷ್ಯನೆಂದು ಪ್ರಸಿದ್ಧಿಹೊಂದಿರುವನು. ಇವನ ಶರೀರವು ಮನೆಯಿಂದ ಹೊರಕ್ಕೆ ಬರಲಾರದಷ್ಟು ಸ್ಥೂಲವಾಗಿರುವದಂತೆ!

(3ನೆಯ ಪುಟದಿಂದ ಮುಂದುವರಿದುದು.)

ದೊರೆಯದಿರುವ ಅನೇಕ ಉತ್ತಮ ಗ್ರಂಥಗಳೂ ಕೈ ಬರಹದ ಪ್ರತಿಗಳೂ ಉಂಟು. ಈಗಲೂ ಅಲ್ಲಿ ಇಂತಹ ಸಂಗ್ರಹವು ಮುಂದರಿಯುತ್ತಲೇ ಇದೆ.

ಉಚ್ಚಾರ ಕ್ರಮವನ್ನು ಕಂಡುಹಿಡಿಯುವ ಸೌಕರ್ಯ.

ಬೇರೆ ಬೇರೆ ಭಾಷೆಗಳ ಉಚ್ಚಾರದ ಪರಸ್ಪರ ಸಂಬಂಧ ಮತ್ತು ಭೇದಗಳನ್ನು ಕಂಡುಹಿಡಿಯಲು "ಕೈಮೋಗ್ರಾಫ್" ಎಂಬ ವಿದ್ಯುತ್ ಯಂತ್ರವನ್ನು ಉಪಯೋಗಿಸುವರು. ಈ ಯಂತ್ರದ ಮುಂದೆ ಉಚ್ಚಾರಮಾಡಿದರೆ ಆಯಾ ಅಕ್ಷರಗಳು ಉತ್ಪತ್ತಿಯಾಗುವ ಸ್ಥಳ ಹೊಂದುವ ಮಾರ್ಪಾಟುಗಳನ್ನು ತೋರಿಸುವುದು. ನಾನೂ ಪ್ರಯತ್ನಪಟ್ಟು ದಾಕ್ಷಿಣಾತ್ಯ ಭಾಷೆಗಳ ಮಿತ್ರರನ್ನು ಕರೆತಂದು ಮಾತಾಡಿ ನೋಡಿದ್ದರಲ್ಲಿ ಅನೇಕ ಹೊಸ ಅಂಶಗಳು ಹೊರಬಿದ್ದವು. ಇಂತಹ ಯಂತ್ರವು ಪಂಜಾಬ್ ಯುನಿವರ್ಸಿಟಿಯಲ್ಲಿ ಒಂದು ಮಾತ್ರವಿದೆ. ಇದರ ಬೆಲೆಯಾದರೂ ಇನ್ನೂರು ಮುನ್ನೂರು ರೂಪಾಯಿಗಳು ಆಗಬಹುದು. ಇದಲ್ಲದೆ ಈ ಉಚ್ಚಾರ ಕ್ರಮವನ್ನು ಕಂಡುಹಿಡಿಯಲು ಕೃತಕವಾದ ಬಾಯಿಯ ಒಳಭಾಗಗಳನ್ನು ಮಾಡಿ ಮಾತಾಡಿಸುವುದರಿಂದ ನಾಲಗೆಯು ಚಲಿಸಿ ಗುರ್ತು ಮಾಡುವುದು. ಇದರ ಸಹಾಯದಿಂದಲೂ ಕೆಲವು ಅಂಶಗಳನ್ನು ಕಂಡುಹಿಡಿಯುವರು. ಒಬ್ಬ ಜರ್ಮನ್ ಪ್ರೊಫೆಸರ್ ಮಾತನಾಡುತ್ತಿರುವಾಗ ಎಕ್ಸ್‌ರೇ ಫೋಟೋಗಳನ್ನು ತೆಗೆದು ಉಚ್ಚಾರದ ಪರಸ್ಪರ ಹೋಲಿಕೆ ವ್ಯತ್ಯಾಸಗಳನ್ನೂ ಕಂಡುಹಿಡಿಯುವನು. ಅಲ್ಲಿ ನಾನಾ ಬಗೆಯ ಸೌಕರ್ಯಗಳಿರುವವು.

ಅಲ್ಲಿಯ ವಿದ್ವಾಂಸರು ತಮ್ಮ ಕಾಲವನ್ನೆಲ್ಲಾ ವಿನಿಯೋಗಿಸಿ ಶೋಧನೆಗಳನ್ನು ನಡೆಸುತ್ತಿರುವರು. ಬೈನಾ ಜರ್ಮನ್ ರಾಜ್ಯಗಳ ಸರಕಾರದವರು ತಮ್ಮ ತಮ್ಮ ಭಾಷಾ ವಿಷಯ ಶೋಧನೆಗೆ ದ್ರವ್ಯ ಸಹಾಯ ಮಾಡುತ್ತಿರುವರು. ಸಂಸ್ಕೃತಕ್ಕೆ ಅಪರಿಮಿತವಾದ ಮನ್ನಣೆಯೂ ಗಮನವೂ ಕೊಡಲಾಗಿದೆ. ಆದರೆ ಕನ್ನಡಕ್ಕಾಗಿ ಕೆಲಸಮಾಡುವವರು ಕೆಲವರು ಮಾತ್ರ (ಇಂಗ್ಲೆಂಡಿನಲ್ಲಿ ಮೂರು ನಾಲ್ವರು ಜರ್ಮನೀ, ಅಮೇರಿಕ ಪ್ರಾಂತ್ಯಗಳಲ್ಲಿ ಒಬ್ಬಿಬ್ಬರು) ಇರುವರು. ಇತರ ಕಡೆಗಳಲ್ಲಿ ಕನ್ನಡಕ್ಕೆ ಸ್ಥಾನ ದೊರೆಯಬೇಕಾಗಿದೆ. ನಮ್ಮ ಪ್ರೊಫೆಸರವರು ತಮ್ಮ ಉಪನ್ಯಾಸಗಳನ್ನು ಪರಿಸಮಾಪ್ತಿಗೊಳಿಸುವಾಗ "ನೀವು ನಾನು ಕಂಡುಹಿಡಿದಿರುವುದಕ್ಕಿಂತ ಒಂದೆರಡು ಅಂಶಗಳನ್ನು ಕಂಡುಹಿಡಿದು ಪ್ರಪಂಚಕ್ಕೆ ಕೊಟ್ಟರೆ ಅದೇ ನನಗೆ ಗುರುಸಂಭಾವನೆ. ನಿಮ್ಮಲ್ಲಿ ಕೆಲವರು ಕಾಡು ಜನರ ಭಾಷೆಗಳನ್ನು ಆರಿಸಿಕೊಂಡು ಅವಕ್ಕೆ ವ್ಯಾಕರಣ ಬರೆದರೆ ಆಗ ಸರಸ್ವತಿಗೆ ಮತ್ತಷ್ಟು ಆನಂದವಾಗುವುದು" ಎಂದು ಹೇಳಿ ಪರಿಸಮಾಪ್ತಿಗೊಳಿಸಿದರು. ನಾವು ಇಂತಹ ಸೌಕರ್ಯಗಳನ್ನು ಒದಗಿಸಿಕೊಂಡು ನಮ್ಮ ಕನ್ನಡಕ್ಕೆ ಕೂಡ ಈ ಬಗೆಯ ಶೋಧನೆಗಳನ್ನು ಮಾಡಿ ನಮ್ಮ ಮಾತೃಭಾಷೆಯನ್ನು ಬೆಳಸಬೇಕು, ಸಿಂಗರಿಸಬೇಕು ಎಂದು ಹೇಳಿದರು.

1933 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಸ್ತಿಹಾರ್ನಾಮೆ.

1933 ನೆಯ ಇಸವಿಯ ಸೆಪ್ಟೆಂಬರ್ 20 ನೆಯ ತಾರೀಖಿನ ಲಾಗಾಯತು ಅಕ್ಟೋಬರ್ 4 ನೆಯ ತಾರೀಖಿನವರೆಗೆ ನಡೆಯುವ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಸ್ತ್ರೀ ಶಾಖೆಯೊಂದನ್ನು ಏರ್ಪಡಿಸಲಾಗುವುದು. ಈ ಶಾಖೆಗೆ, ಬಾಲಕಿಯರು ಅಥವಾ ಸ್ತ್ರೀಯರು ತಯಾರುಮಾಡಿದ ಈ ಕೆಳಗೆ ಕಂಡ ವಸ್ತುಗಳನ್ನು ಮುಖ್ಯತಃ ಕಳುಹಿಸಬಹುದು :—

(1) (ಗಂಡಸರು, ಹೆಂಗಸರು ಅಥವಾ ಮಕ್ಕಳು ಧರಿಸುವ) ಉಡುಪುಗಳು. (2) ನಾನಾವಿಧವಾದ ಗೋಟುಕೆಲಸದ ಸಾಮಾನುಗಳು. (3) ಬಣ್ಣದಚಿತ್ರಗಳು (ಚಿತ್ರಪಟಗಳು ಮತ್ತು ನಾನಾ ಚಿತ್ರಲೇಖನಗಳು.) (4) ಅಲಂಕಾರದ ವಸ್ತುಗಳು. (5) ನಾನಾಬಗೆಯ ಕಸೂತಿ ಕೆಲಸಗಳು. (6) ದಾಂತೆಗೆದುಮಾಡಿದ ಚಿತ್ರದ ಕೆಲಸ. (7) ನಾನಾಬಗೆಯ ಹೆಣಿಗೆಯ ಕೆಲಸಗಳು. (8) ಕಲಾಬತ್ತಿನ ಕೆಲಸ. (9) ಮಣಿಕೆಲಸ. (10) ಬಟ್ಟೆಯ ಮೇಲೆ ಮತ್ತು ಕಾಗದದ ಮೇಲೆ ಹೂವಿನಚಿತ್ರಗಳನ್ನು ಹಾಕಿರುವುದು. (11) ಜಾಳಿಗೆ ಕೆಲಸ. (12) ಬಾಗಿಲುಗಳಿಗೆ ಹಾಕುವ ಚಾಪೆಗಳು, ಜಂಖಾನೆಗಳು ಮತ್ತು ನೆಯ್ಗೆಯ ಮಾದರಿ ವಸ್ತುಗಳು. (13) ಕೈಯಿಂದ ನೂತನೂಲು. (14) ನಾನಾತರಹೆಯ ಮುತ್ತಗಳು. (15) ವಿಧವಿಧವಾದ ಬಣ್ಣಹಾಕಿರುವ ನಾನಾಬಗೆಯ ವಸ್ತುಗಳು. (16) ಕೈಯಲ್ಲಿ ಹಿಡಿಯುವ ನಾನಾವಿಧವಾದ ಚೀಲಗಳು. (17) ಕೈಯಿಂದ ತಯಾರುಮಾಡಿದ ನಾನಾತರಹೆಯ ಉಪಯುಕ್ತ ವಸ್ತುಗಳು.

(a) ಸ್ತ್ರೀ ಶಾಖೆಗೆ ಕಳುಹಿಸಲ್ಪಡುವ ವಸ್ತುಗಳನ್ನು ಮೈಸೂರು ಎಗ್ಜಿಬಿಷನ್ ಸಮಿತಿಯ ಸೆಕ್ರೆಟರಿಯವರು 1933 ನೆಯ ಇಸವಿ ಸೆಪ್ಟೆಂಬರ್ 1 ನೆಯ ತಾರೀಖಿನ ಲಾಗಾಯತು 15 ನೆಯ ತಾರೀಖಿನವರೆಗೆ ಎಗ್ಜಿಬಿಷನ್ ಕಟ್ಟಡದಲ್ಲಿ ಅಂಗೀಕರಿಸುವರು. ಸೆಪ್ಟೆಂಬರ್ 15 ನೆಯ ತಾರೀಖು ಕಳೆದ ಮೇಲೆ, ಪ್ರದರ್ಶನಕ್ಕೆ ಕಳುಹಿಸಲ್ಪಡುವ ವಸ್ತುಗಳನ್ನು ಅಂಗೀಕರಿಸುವುದಿಲ್ಲ. ಈ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುವುದು.

(b) ಹಿಂದಿನ ವರುಷಗಳಲ್ಲಿ ಪ್ರದರ್ಶಿಸಲ್ಪಟ್ಟ ವಸ್ತುಗಳನ್ನು ಅಂಗೀಕರಿಸುವುದಿಲ್ಲ.

(c) ನೀರುಬಿದ್ದು ಅಳಿಸಿರುವ ವಸ್ತುಗಳನ್ನು ಅಂಗೀಕರಿಸುವುದಿಲ್ಲ.

(d) ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಡುವವರು ತಮ್ಮ ವಸ್ತುಗಳಿಗೆ ಸರಿಯಾಗಿ ಚೀಟಿಗಳನ್ನು ಹಚ್ಚಿರಬೇಕು. ಪ್ರದರ್ಶನ ವಸ್ತುವಿನ ಹೆಸರೇನು ಮತ್ತು ಅದು ಯಾವ ತರಹೆಯ ವಸ್ತು—ಎಂಬುವನ್ನೂ ಮತ್ತು ಪ್ರದರ್ಶಕರ ಹೆಸರು ಮತ್ತು ವಿಳಾಸಗಳನ್ನೂ ಅಚ್ಚು ಅಕ್ಷರಗಳಲ್ಲಾಗಲಿ ಅಥವಾ ಟೈಪ್‌ರೈಟರಿನಿಂದಲಾಗಲಿ ಬರೆದು ಪ್ರತಿಯೊಂದು ವಸ್ತುವಿಗೂ ಭದ್ರವಾಗಿ ಕಟ್ಟಬೇಕು.

(e) ಸ್ತ್ರೀ ಶಾಖೆಯಲ್ಲಿ ಸ್ಥಳವು ಸ್ವಲ್ಪವೇ ಇರುವುದರಿಂದ ಚುನಾಯಿಸಲ್ಪಟ್ಟ ವಸ್ತುಗಳನ್ನು ಮಾತ್ರ ಕಳುಹಿಸಬೇಕಾಗಿ ಕೋರಲಾಗಿದೆ.

(f) ಸ್ತ್ರೀ ಪ್ರದರ್ಶನಕ್ಕಾಗಿ ಕಳುಹಿಸಲ್ಪಡುವ ವಸ್ತುಗಳನ್ನು ಅಂಗೀಕರಿಸುವ ಅಥವಾ ಅಂಗೀಕರಿಸದೇ ಇರುವ ವಿಷಯದಲ್ಲಿ, ಎಗ್ಜಿಬಿಷನ್ ಸಮಿತಿಯವರ ತೀರ್ಮಾನವು ಅಖೈರಾಗಿರತಕ್ಕದ್ದು.

(g) ಎಗ್ಜಿಬಿಷನ್ ನಡೆಯುವ ಕಾಲದಲ್ಲಿ, ಮೈಸೂರು ನಗರದ ಸ್ತ್ರೀಯರಿಗೆ ಮಾತ್ರ ಆಟಪಾಟಗಳನ್ನು ಏರ್ಪಡಿಸಲಾಗುವುದು.

ಎಸ್. ಜಿ. ಶಾಸ್ತ್ರಿ,
ಎಗ್ಜಿಬಿಷನ್ ಸಮಿತಿಯ ಸೆಕ್ರೆಟರಿ.

ಇಂಗ್ಲೆಂಡಿನಲ್ಲಿ ಭಾರತೀಯ ವಿದ್ಯಾರ್ಥಿಗಳು

ಭಾರತ ವಿದ್ಯಾರ್ಥಿಗಳ ಶೋಚನೀಯ ಪರಿಸ್ಥಿತಿ.

'ದೂರಕ್ಕೆ ಬೆಟ್ಟ ನುಣ್ಣಗೆ' ಎಂಬುದೊಂದು ಕನ್ನಡ ಗಾದೆ. ೬ ಸಾವಿರ ಮೈಲಿಗಳ ದೂರದಲ್ಲಿರುವ ಇಂಗ್ಲೆಂಡಿನ ವಿದ್ಯಾಭ್ಯಾಸದ ರೀತಿನೀತಿಯು ನಮ್ಮ ಕಣ್ಣಿಗೆ ಅರಿತುಸುರಿತ ವಿದ್ಯಾಶಿಕ್ಷಣದಂತೆ ತೋರುತ್ತದೆ. ಈಗೀಗ ಪಾಶ್ಚಿಮಾತ್ಯವಿದ್ಯೆಗೆ ನಮ್ಮ ಭಾರತೀಯ ಯುವಕರು ದಿನೇದಿನೇ ಹೆಚ್ಚು ಗಮನ ಕೊಡ ಲಾರಂಭಿಸಿದ್ದಾರೆ. ಈ ಗಮನಕೊಡುವಿಕೆಗೂ ಒಂದು ಕಾರಣವುಂಟು. ನಮ್ಮನ್ನಾಳುವವರು ಬ್ರಿಟಿಷರು. ಅವರ ದೇಶ ಇಂಗ್ಲೆಂಡು. ಹೀಗಿರುವಾಗ ಈ ನಮ್ಮ ಭಾರತಭೂಮಿಯು ರಾಜ್ಯಾಡಳಿತದ ಲಗಾಮನ್ನು ಪಡೆದಿರುವ ನಮ್ಮಾಳರಸರು ತಮ್ಮ ನಾಡಾದ ಪಾಶ್ಚಿಮಾತ್ಯದೇಶದ ಡಿಗ್ರಿಯ ಹೊರೆಯೊಂದನ್ನು ಪಡೆದು ತಮ್ಮ (ನಮ್ಮಾಳರಸರ) ದೇಶಕ್ಕೆ ಈ ರೀತಿಯಲ್ಲೂ ಸ್ವಲ್ಪ ಹಣವನ್ನು ಈ ನಮ್ಮ ಭಾರತದೇಶದಿಂದ ಸೇರಿಸಿದವರಿಗೆ ತಮ್ಮ ಕೈ-ಕೆಳಗೆ ಈ ನಮ್ಮ ಭಾರತದಲ್ಲಿ ಕೆಲಸಗಳನ್ನು ಕೊಡುವುದು ಸಹಜವಾಗಿಯೇ ಇದೆ. ಈ ಕೆಲಸಗಳ ಆಸೆಯಿಂದ ನಮ್ಮವರು ಮನಸೋತು ಪಾಶ್ಚಿಮಾತ್ಯ ಡಿಗ್ರಿಯೊಂದನ್ನು ಪಡೆದುಬರಲು ತಮ್ಮ ಸರ್ವಸ್ವವನ್ನೂ ಮಾರಿ ಹಣಕೂಡಿಸಿಕೊಂಡು ಪಾಶ್ಚಿಮಾತ್ಯದೇಶಕ್ಕೆ ಹೋಗಿಬರುತ್ತಾರೆ. ಸುಖದಿಂದಿದ್ದ ತಂದೆಯನ್ನು ಕಷ್ಟಕ್ಕೆ ಈಡುಮಾಡುತ್ತಾರೆ. ತಂದೆ ಸಂಪಾದಿಸಿದ್ದ ಆಸ್ತಿಗಳನ್ನು ಮಾರಿ ಪಾಶ್ಚಿಮಾತ್ಯ ವಿದ್ಯಾಭ್ಯಾಸಕ್ಕೆ ಆ ಧನವನ್ನೆಲ್ಲಾ ಹೊಯ್ಯುತ್ತಾರೆ. ತಂದೆತಾಯಿಗಳನ್ನು ಬಸ್ವತ್ತುಂಡು ಜೀವಿಸುವವರನ್ನಾಗಿ ಮಾಡಿಹೋಗುತ್ತಾರೆ. ಆದರೆ ಈ ನಮ್ಮ ಭಾರತಸಹೋದರ ಯುವಕರು ಅಲ್ಲಿಗೆ ಹೋದ (ಪಾಶ್ಚಿಮಾತ್ಯದೇಶಕ್ಕೆ) ಉದ್ದೇಶವನ್ನು ಫಲಕಾರಿಯನ್ನಾಗಿ ಮಾಡಿಕೊಂಡು ಬರುವರೇ? ಹೀಗೆ ಬರುವವರ ಸಂಖ್ಯೆಯು ಬಹಳ ಕಮ್ಮಿ. ಹೀಗೆ ಓದುವದಕ್ಕೆ ಹೋದ ಅನೇಕ ಯುವಕರು ಪಾಶ್ಚಿಮಾತ್ಯ ಸ್ತ್ರೀಯರ ಮೋಹಜಾಲದಲ್ಲಿ ಸಿಲುಕಿ ಬಿದ್ದು ಒದ್ದಾಡುತ್ತಾರೆ. ತಂದೆತಾಯಿಗಳು ಓದಿಗಾಗಿ ಇಲ್ಲಿಂದ ಕಳಿಸಿದ ಹಣವನ್ನು ಅಲ್ಲಿನ ಬೆಡಗು ವೈಯ್ಯಾರದ ಮೋಹಜಾಲದ ಬಲೆಯನ್ನೊಡ್ಡುವ ಆಂಗ್ಲೇಯಸ್ತ್ರೀಯರ ಬಾಯಿಗೆ ಕೆರುತ್ತಾರೆ. ಇಲ್ಲದ ಸಲ್ಲದ ರೋಗಗಳನ್ನು ಪಡೆದು ಅತ್ಯಂತಕಷ್ಟದಿಂದ ತಮ್ಮ ಮಾತೃಭೂಮಿಗೆ ಹಿಂತಿರುಗುತ್ತಾರೆ. ಕೆಲವು ಸಹೋದರರಂತೂ ಪಾಶ್ಚಿಮಾತ್ಯ ದೇಶದ ಇಂದ್ರಜಾಲದ ಮೋಹದ ಬೆಡಗಿಗೆ ಬೆರಗಾಗಿ ಅಲ್ಲೇ ಜೀವಿಸಲಾರಂಭಿಸುತ್ತಾರೆ. ಮಾತೃಭೂಮಿಯನ್ನು ಮರೆಯುತ್ತಾರೆ. ಹೆತ್ತ ತಂದೆತಾಯಿಗಳನ್ನು ಮರೆಯುತ್ತಾರೆ. ವಿವಾಹಿತರಾದ ಪತ್ನೀ-ಪುತ್ರರನ್ನು ನೆನೆಯದಾಗುತ್ತಾರೆ. ಈ ವಿಷಯಗಳೆಲ್ಲಾ ಬರೀ ಊಹೆಗಳೆಂದು ವಾಚಕರಿಗೆ ತೋಳೆಯಬಹುದು. ಆದರೆ ಇವು ಊಹೆಗಳಲ್ಲ. ಲೇಖಕನ ಮನದಮುಂದೆ ಬಂದ ಚಿತ್ರಗಳಲ್ಲ. ಈಗ—ಈ ಗಳಿಗೆಯಲ್ಲಿ—ನಡೆಯುತ್ತಿರುವ ನಿಜವಿಷಯಗಳಿವು.

ಅದಮಟ್ಟಿಗೂ, ಇಂಗ್ಲೆಂಡಿನಲ್ಲೀಗ ವಿದ್ಯಾಭ್ಯಾಸಕ್ಕೆ ಬರುತ್ತಿರುವ ಪರಕೀಯ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಈಗ ಇಂಗ್ಲೆಂಡಿನಲ್ಲಿ ಒಂದು ಕಮಿಟಿ ಏರ್ಪಡಿಸಿದ್ದಾರೆ. ಈ ಕಮಿಟಿಯು ಕರ್ತವ್ಯ ಗ್ರೇಟ್‌ಬ್ರಿಟನ್ನಿಗೆ ವಿದ್ಯಾಭ್ಯಾಸಕ್ಕೆಂದು ಬರುವ ವಿದ್ಯಾರ್ಥಿಗಳ ಅನುಕೂಲತೆಗೆ ಹೆಚ್ಚು ಗಮನಕೊಡುವುದು. ಈ ಕಮಿಟಿಯ ಸ್ಥಾಪನೆಗಾಗಿ ಭಾರತೀಯರ ವಂದನೆಗಳು ಈ ಕಮಿಟಿಯ ಸ್ಥಾಪಕರಿಗೆ ಸಲ್ಲಬೇಕಾಗಿದೆ. ಪಾಶ್ಚಿಮಾತ್ಯದೇಶಕ್ಕೆ ವಿದ್ಯಾರ್ಥಿಯೆಂಬ ಹೆಸರಿನಿಂದ ಹೋಗುವ ನಮ್ಮ ಭಾರತೀಯ ತರುಣರ ಮತ್ತೊಂದು ಶೋಚನೀಯ ಪರಿಸ್ಥಿತಿಯು ೧೯೩೧-೩೨ ನೆಯ ಸಾಲಿನ ಲಂಡನ್ ವಿದ್ಯಾಶಾಖೆಯವರು ಪ್ರಕಟಿಸಿರುವ ವರದಿಯಿಂದ ವ್ಯಕ್ತವಾಗುತ್ತದೆ. ಅದರಲ್ಲಿ ಅನೇಕ ವಿದ್ಯಾರ್ಥಿಗಳು ಲಂಡನ್ ವಿದ್ಯಾಭ್ಯಾಸವನ್ನು ಕೈಕೊಳ್ಳಲಿಕ್ಕೆ ಬೇಕಾದಷ್ಟುಮಟ್ಟಿನ ವಿದ್ಯಾಭ್ಯಾಸವನ್ನು ಹೊಂದದೆ ಇಂಡಿಯಾದೇಶದಿಂದ ಬರುವರೆಂದೂ, ಅನೇಕವೇಳೆಗಳಲ್ಲಿ ಸಾಕಾದಷ್ಟು ಹಣವಿಲ್ಲದೆ ಇಂಗ್ಲೆಂಡಿಗೆ ಬರುವರೆಂದೂ ಪ್ರಕಟಿಸಲಾಗಿದೆ. ಇದೂ ಒಂದು ಶೋಚನೀಯಸ್ಥಿತಿಯೇ ಸರಿ.

ಬಿ. ಪ

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,
ಹುಬ್ಬಳ್ಳಿ.

೧ ನೇ ಯಾತ್ರಾ ೧೬-೪-೩೩ ರಿಂದ ೧-೬-೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೫—೧೧—೧೯೩೩ ಪ್ರಯಂತ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವದು.

ಸದರಿ ಕಂಪನಿಯು ಎಂಜಂಟರಿಂದ ಪಡಜವಿಾನುಗಳು ಕಿರ್ದಿ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[10]

ತಾ|| ೧—೬—೧೯೩೩.

ಜಿ. ಎ. ಶಿರೂರ,
ಆರ್ಗನಾಯಜರ, ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕನಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ಪ್ರಕಾರ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳು, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪತಿಕಸೂತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಡ್—ಉಬ್ಬಸ, ಸೀತಳ, ದದ್ರು ರೋಗಗಳನ್ನೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೆ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [49]

8 ಔನ್ಸಿಗೆ ರೂ. 3-8-0.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳತು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಪ್ರಾಪ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[30]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ

पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೨—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಶಿ, ಒಂ ತಲೆನೋವು, ತಲೆ ಳ್ಳಿನ ರೋಗಗ ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[31] ಪೋ. ಬಾ. ೫೧೦, ಮದರಾಸ್

ಮೈಸೂರು ಸುಬ್ಬರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೪ನೇ ಆಗಸ್ಟ್ ೧೯೩೩ [ಸಂಚಿಕೆ ೧೬

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [33]

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಆರ್ಥರ್ ಪಾಲುಂಬೋ ಎಂಬ ಪ್ರಸಿದ್ಧ ಚೋ ನು ಬಹು ಆಶ್ಚರ್ಯಕರವಾದ ರೀತಿಯಲ್ಲಿ ಕಾರಾಗೃ ದಿಂದ ತಪ್ಪಿಸಿಕೊಂಡು ಹೋಗಿರುವನು. ಆತನು ವಾರಗಳವರೆಗೂ ಯಾವ ವಿಧವಾದ ಆಹಾರವನ್ನೂ ಗೆದುಕೊಳ್ಳದೆ ವ್ಯಾಯಾಮವನ್ನು ಮಾತ್ರ ತಪ್ಪದೆ ಮಾಡುತ್ತಿದ್ದನು. ಇದರಿಂದ ಅವನು ದಿನದಿನಕ್ಕೆ ಕೃಶ ಾಗುತ್ತ ಬಂದು ಕಡೆಗೆ ಅವನನ್ನು ಕೂಡಿದ್ದ ಜೈಲಿನ ಕಿಟಕಿಯ ಮೇಲ್ಭಾಗದಲ್ಲಿ ೭ ಅಂಗುಲ ಅಗಲವಾ ದ ಸಂದಿಯಿಂದ ತಪ್ಪಿಸಿಕೊಂಡು ಹೊರಟು ಹೋಗಿದ್ದಾನೆ.

ಹಿಂದೂಸ್ಥಾನದಲ್ಲಿ ನೂತನರಾಜ್ಯಭಾರಪದ್ಧತಿಯು ಸ್ಥಾಪಿಸಲ್ಪಡುವದಕ್ಕೆ ಮುಂಚಿತವಾಗಿ ಬೇರೆಬೇರೆ ಅಧಿಪತ್ಯಗಳ ಆರ್ಥಿಕತೊಂದರೆಗಳನ್ನು ಹೋಗಲಾಡಿಸಬೇಕೆಂದೂ, ಸಂಸ್ಥಾನಗಳ ವೊಗದಿಗಳನ್ನು ವಜಾಮಾಡುವ ವಿಷಯದಲ್ಲಿ ಡೇವಿಡ್ಸನ್ ಕಮಿಟಿಯವರು ಶಿಫಾರಸುಮಾಡಿದ್ದಂತೆ ವೊಗದಿಯನ್ನು ಕ್ರಮೇಣ ಕಡಮೆ ಮಾಡಲಾಗುವದೆಂದೂ, ಆದರೆ ಆರ್ಥಿಕಮುಗ್ಗಟ್ಟಿನ ದೆಸೆಯಿಂದ ಈ ವಿಷಯವಾಗಿ ಸದ್ಯ ಏನೂ ಮಾಡಲಾಗುವದಿಲ್ಲವೆಂದೂ ಸರ್ ಸ್ಯಾಮ್ಯುಯಲ್ ಹೋರ್‌ರವರು ಲಂಡನ್ನಗರದ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ತಿಳುಹಿಸಿದರು.

ಮೈಸೂರು ಗೆಜೆಟ್.

ಶಿವಮೊಗ್ಗ ಸರ್ಕಲ್ ಅಸಿಸ್ಟೆಂಟ್ ಇಂಜನಿಯರಾದ ಮಿ|| ವೈ. ರಾಮಸ್ವಾಮಿ, ಬಿ.ಎ, ಸಿ.ಇ., ರವರಿಗೆ ಎರಡು ವರ್ಷಗಳ ರಜೆಯು ಕೊಡಲ್ಪಟ್ಟಿದೆ.

ಆನರರಿ ಅಸಿಸ್ಟೆಂಟ್ ಇಂಜನಿಯರಾದ ಮಿ|| ವೈ. ಎಲ್. ಚಂದ್ರಶೇಖರಯ್ಯನವರು ಮೈಸೂರು ಸರ್ಕಲ್ಲಿನಿಂದ ಶಿವಮೊಗ್ಗ ಸರ್ಕಲ್ಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಸರ್ಕಲ್ ಸಬ್ ಇಂಜನಿಯರಾದ ಮಿ|| ಎಂ. ಜಿ. ಸಿಂಗಾರಯ್ಯಂಗಾರ್‌ರವರು ಜುಲೈ ೧ನೇ ತಾರೀಖಿನಿಂದ ೨೦೦ ರೂ. ಸಂಬಳದ ಮೇಲೆ ಆನರರಿ ಅಸಿಸ್ಟೆಂಟ್ ಇಂಜನಿಯರ ದರ್ಜೆಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಮೈಸೂರು ಮಹಾರಾಣೀಕಾಲೇಜಿನ ಇಂಗ್ಲೀಷ್ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಕನಕಲಕ್ಷ್ಮಮ್ಮ ಎಂ.ಎ. ಇವರಿಗೆ ಆಗಸ್ಟ್ ೧ನೇ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಫರ್ಲೋ ರಜೆಯು ಕೊಡಲ್ಪಟ್ಟಿದೆ.

ಬೆಂಗಳೂರಿನ ಸಬ್‌ಜಡ್ಜರಾದ ಮಿ|| ಎಚ್. ಕೆ. ವೀರಬಸವಯ್ಯನವರು ಬಿ.ಎ., ಬಿ.ಎಲ್. ಇವರಿಗೆ ಇದೇ ಆಗಸ್ಟ್ ೧೨ನೇ ತಾರೀಖಿನಿಂದ ೧೧ ದಿವಸಗಳ ಫರ್ಲೋರಜೆಯು ಕೊಡಲ್ಪಟ್ಟಿರುವದು. ಬೆಂಗಳೂರು ಸ್ಮಾಲ್ ಕಾಸ್ ಕೋರ್ಟಿನ ಮಿ|| ಆರ್. ಪುಟ್ಟರಾಜೇ ಅರಸ್ ಎಂ.ಎ., ಬಿ.ಲ್., ರವರು ಮೇಲ್ಕಂಡ ಅವಧಿಯಲ್ಲಿ ಸಬ್‌ಕೋರ್ಟಿನ ಕೆಲಸವನ್ನೂ ನೋಡಿಕೊಳ್ಳುವರು.

ಜಲಂಧರ ನಗರದ ಧಾನು ಎಂಬ ಜಮೀನ್ದಾರ ತರುಣನು ಅಮ್ಮು ಎಂಬ ಒಬ್ಬ ಸ್ತ್ರೀಗೆ ಸಿಗರೇಟುಗಳನ್ನು ಕೊಟ್ಟನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ಆತನಿಗೆ ಒಂದುತಿಂಗಳ ಸಜಾ ಮತ್ತು ೨೫ ರೂ. ಗಳ ಜುಲ್ಮಾನೆಯನ್ನು ವಿಧಿಸಿರುವರು.

ಗ್ವಾಲಿಯರ್ ನಗರದ ಸಮೀಪದ ಒಂದು ಗ್ರಾಮದಲ್ಲಿ ಒಬ್ಬ ರಜಪೂತಸ್ತ್ರೀಯು ಗರ್ಭಿಣಿಯಾಗಿದ್ದು ಪ್ರಸವವೇದನೆಯನ್ನು ಸೈರಿಸಲಾರದೆ ಯಾರಿಗೂ ತಿಳಿಯದಂತೆ ಹೊರಕ್ಕೆ ಹೋಗಿ ಮನೆಯ ಹೊರಗಿದ್ದ ಒಂದು ಭಾವಿಯಲ್ಲಿ ಬಿದ್ದುಬಿಟ್ಟಳು. ಈ ಶಬ್ದವನ್ನು ಕೇಳಿದ ಕೂಡಲೇ ಮನೆಯಲ್ಲಿದ್ದವರು ಓಡಿಬಂದು ಕೂಡಲೇ ಅವಳನ್ನು ಭಾವಿಯಿಂದ ಮೇಲಕ್ಕೆ ಎತ್ತಿದರು. ಆದರೆ ಅವಳು ಭಾವಿಯಿಂದ ಮೇಲಕ್ಕೆ ಬರುವಷ್ಟರಲ್ಲೇ ಶಿಶುವು ಜನನವಾಗಿ ಭಾವಿಯೊಳಕ್ಕೆ ಬಿದ್ದಿತು. ಸುತ್ತಲೂ ನೋಡುತ್ತ ನಿಂತಿದ್ದ ಕೆಲವು ಜನ ಗಂಡಸರು ಭಾವಿಯೊಳಕ್ಕೆ ಇಳಿದು ಮಗುವನ್ನು ಮೇಲಕ್ಕೆ ಎತ್ತಿದರು. ಮಗು ಮತ್ತು ಬಾಣಂತಿ ಇಬ್ಬರೂ ಸೌಖ್ಯವಾಗಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ
ಅಥವಾ
ಪ್ರಭಾದರ್ಶ

ಲೇಖಕರು:—ಶ್ರೀ ಕುಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ಪ್ರಥಮೋಲ್ಲಾಸವು.

(ಮುಂದೆ ಸಾಗಿದುದು.)

ಒಂಭತ್ತನೆಯ ಮಂಡಲವು ಎಂಟು ಮಂಡಲಗಳ ತರುವಾಯ ಸಂಘಟಿತವಾದುದೆಂಬಲ್ಲಿ ಸಂದೇಹವೇ ಇಲ್ಲ. ಅದರಲ್ಲಿ ಅಡಕವಾಗಿರುವ ಸೂಕ್ತಸಮುದಾಯವು ಗೋತ್ರಮಂಡಲಗಳನ್ನು ಕಂಡವರ ಮಧ್ಯದಲ್ಲಿಯೇ ಹೊರಹೊಮ್ಮಿರಬಹುದು. ಆದರೆ ಅವು ಯಾವುದೋ ಕಾರಣದಿಂದ ಗೋತ್ರಮಂಡಲಗಳಲ್ಲಿ ಸೇರಿಸಲ್ಪಡದೆ ಬಿಕ್ಕಿ ಪ್ರಕಟವಿದ್ದು ಪಶ್ಚಾತ್ಕಾಲದಲ್ಲಿ ಜೋಡಣೆಗೊಳಿಸಿದುದಾಗಿ ಒಂದು ಮಂಡಲ ಸ್ವರೂಪವನ್ನೇ ಪಡೆದಿರುವುದೆಂದು ತಿಳಿದುಬರುತ್ತದೆ. ಅದರಲ್ಲಿ ಕೆಲವು ಸೂಕ್ತಗಳು ಹಳೆಯವಲ್ಲವೆಂದು ಕೆಲವರು ವಾದಿಸುವರು. ಆದರೂ ಬಹುಭಾಗವು ವೈದಿಕಸಾಹಿತ್ಯದ ಆರಂಭಕಾಲದಲ್ಲಿಯೇ ಮೈದೋರಿರುವುವು. ಒಂಭತ್ತನೆಯ ಮಂಡಲದ ಸೂಕ್ತಗಳ ಪ್ರಕಟನೆಯ ಕಾಲಭೇದಗಳು ಸಂಭವಿಸುವುವಾದರೂ ವಿಮರ್ಶಿಸುವುದಕ್ಕೆ ಸಾಕಷ್ಟು ಉಪಕರಣಗಳು ದೊರೆಯದ್ದರಿಂದ ಈಗ ಅವು ದುರ್ಬೋಧಗಳಾಗಿವೆ.

ಇನ್ನು ಹತ್ತನೆಯ ಮಂಡಲದ ಬಗ್ಗೆ ಸ್ವಲ್ಪ ವಿಚಾರಮಾಡುವಾ! ಈ ಮಂಡಲವು ಹಿಂದಿನಿಂದ ಸಂಘಟಿತವಾದುದು; ಇಷ್ಟೇ ಅಲ್ಲ; ಇದರಲ್ಲಿಯ ಸೂಕ್ತಗಳಾದರೂ ಮುಂಚಿನ ಒಂಭತ್ತು ಮಂಡಲಗಳು ಚೆನ್ನಾಗಿ ಬಳಕೆಯಲ್ಲಿ ಬಂದ ತರುವಾಯವೇ ಆವಿರ್ಭೂತಗಳಾಗಿರುವುವು. ಹೇಗೆಂದರೆ—ಇದರ ಸೂಕ್ತಗಳ ಪ್ರವರ್ತಕರು ಮುಂಚಿನ ಒಂಭತ್ತು ಮಂಡಲಗಳ ಪರಿಚಯವು ತಮಗಿದ್ದಿತೆಂಬುದನ್ನು ಆಗಾಗ್ಗೆ ಹೊರಗೆಡಹುತ್ತಿರುವರು. ಇದರಲ್ಲಿ ಇಪ್ಪತ್ತರಿಂದ ಇಪ್ಪತ್ತಾರರವರೆಗಿರುವ ಷಟ್‌ಸೂಕ್ತಾತ್ಮಕ ಭಾಗವು '**ಅಗ್ನಿಮೀಳೆ**' ಎಂಬ (ಋಗ್ವೇದದ) ಮೊದಲನೆಯ ಮಂತ್ರದ ಕುರುಹಿನಿಂದ ಆರಂಭಿಸಲ್ಪಟ್ಟದ್ದಾಗಿದೆ. ಅದು ಕಾರಣವೇ ಹತ್ತನೆಯ ಮಂಡಲದ ಪ್ರಕಟನೆಯ ಕಾಲದಲ್ಲಿ ಮುಂಚಿನ ಒಂಭತ್ತು ಮಂಡಲಗಳು ಇದ್ದವೆಂದು ಊಹಿಸಲು ಶಕ್ಯವಿದೆ. ಮತ್ತು ಇದು ಸೋಮಮಂಡಲದ (ಒಂಭತ್ತನೆಯ ಮಂಡಲದ) ಮುಂದೆ ಜೋಡಿಸಲ್ಪಟ್ಟಿರುವುದರಿಂದಲೂ, ಮೊದಲನೆಯ ಮಂಡಲದಷ್ಟೇ ಸೂಕ್ತಗಳಿಂದ ಕೂಡಿರುವುದರಿಂದಲೂ ಈ ಮಂಡಲವು ಪರಿಶಿಷ್ಟ ಸೂಕ್ತ ಸಮುದಾಯರೂಪವಾದುದೆನಿಸುವುದು. ಈ ಮಂಡಲವು ಹಿಂದಿನಿಂದ ಪ್ರಕಟವಾದುದೆನಿಸಿದರೂ ಇದರಲ್ಲಿಯ ಪರಿಶಿಷ್ಟಾತ್ಮಕ ಸೂಕ್ತಗಳು ಮಾತ್ರ ಪೂರ್ವಮಂಡಲಗಳಲ್ಲಿ ಕಾಣಬರುವ ಖಿಲಾಂಶಗಳಿಗಿಂತಲೂ ಬುನಾದಿಯವಾದವುಗಳೇ. ಈ ಮಂಡಲದಲ್ಲಿ ೧ ರಿಂದ ೧೯೯ ರವರೆಗಿರುವುವು ಮಹಾಸೂಕ್ತಗಳೆಂದೂ, ಅವುಗಳ ಮುಂದಿನವು ಕ್ಷುದ್ರಸೂಕ್ತಗಳೆಂದೂ ಹೇಳಲ್ಪಡುವುವು. ಬೃಹದ್ದೇವತೆಯಲ್ಲಿ '**ದಶರ್ಚಾಯಾ ಅಧಿಕಂ ಮಹಾಸೂಕ್ತಂ ವಿದುರ್ಬುಧಾಃ**' ಎಂಬ ಮೊದಲಾದ ವಾಕ್ಯಗಳಿಂದ ನಿರೂಪಿಸಲ್ಪಟ್ಟಿರುವ ಮೇರೆಗೆ, ಒಂದು ಋಚೆ ಮೊದಲಾಗಿ ಹತ್ತು ಋಚೆಗಳುಳ್ಳದು ಕ್ಷುದ್ರಸೂಕ್ತವೆಂದೂ ೧೦ ರಿಂದ ಹೆಚ್ಚು ಋಚೆಗಳುಳ್ಳದು ಮಹಾಸೂಕ್ತವೆಂದೂ ಸಾಂಕೇತಿಕ ಹೆಸರುಗಳಿರುವುವು. ಒಟ್ಟಿನಲ್ಲಿ ಮಧ್ಯದಲ್ಲಿರುವವರು '**ಮಾಧ್ಯಮ**' ರೆನಿಸುತ್ತಾರೆ. ಅಂದರೆ ದ್ವಿತೀಯಾದಿ ನವಮಾಂತಗಳಾದ ಮಂಡಲಗಳಲ್ಲಿರುವ ಋಷಿಗಳು 'ಮಾಧ್ಯಮ' ರು. ಮೊದಲನೆಯ ಮಂಡಲದ ದ್ರಷ್ಟರು ಶತರ್ಚಿಗಳು; ಎರಡನೆಯ ಮಂಡಲದ ದ್ರಷ್ಟನು ಗೃತ್ಸಮದನು; ಮೂರನೆಯ ಮಂಡಲದ ದ್ರಷ್ಟನು ವಿಶ್ವಾಮಿತ್ರನು; ನಾಲ್ಕನೆಯ ಮಂಡಲದ ದ್ರಷ್ಟನು ವಾಮದೇವನು; ಐದನೆಯ ಮಂಡಲದ ದ್ರಷ್ಟನು ಅತ್ರಿಯು; ಆರನೆಯ ಮಂಡಲದ ದ್ರಷ್ಟನು ಭರದ್ವಾಜನು; ಏಳನೆಯ ಮಂಡಲದ ದ್ರಷ್ಟನು ವಸಿಷ್ಠನು; ಎಂಟನೆಯ ಮಂಡಲದ ದ್ರಷ್ಟರು ಪ್ರಗಾಥರು; ಒಂಭತ್ತನೆಯ ಮಂಡಲದ ದ್ರಷ್ಟರು ಪಾವಮಾನ್ಯರು; ಹತ್ತನೆಯ ಮಂಡಲದ ದ್ರಷ್ಟರು ಕ್ಷುದ್ರಸೂಕ್ತರು ಮತ್ತು ಮಹಾಸೂಕ್ತರು ಎಂದು ಆಶ್ವಲಾಯನ ಗೃಹ್ಯಸೂತ್ರಾರ್ಥವನ್ನನುಸರಿಸಿ ಹೇಳಿವೆ. ಋಗ್ವೇದಾನುಕ್ರಮಣಿಯಲ್ಲಿ ೧, ೯, ೧೦ ಎಂಬೀ ಮಂಡಲಗಳೊಳಗಿನ ಪ್ರತಿಯೊಂದು ಸೂಕ್ತ ಪ್ರವರ್ತಕ ಋಷಿಗಳ ಹೆಸರುಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಕೆಲವು ಸ್ತ್ರೀಯರ ಹೆಸರುಗಳೂ ಬಂದಿವೆ.

ಋಗ್ವೇದದ ಸರ್ವ ಸೂಕ್ತಗಳೂ ಒಂದೇ ಕಾಲದಲ್ಲಿಯೇ ಆವಿರ್ಭವಿಸಿರುವುದಿಲ್ಲ. ಭಾಷೆಯ ರೀತಿಯು ಹತ್ತನೆಯ ಮಂಡಲವೊಂದನ್ನು ಉಳಿದು, ಮಿಕ್ಕ ಮಂಡಲಗಳ ಸರ್ವಸೂಕ್ತಗಳಲ್ಲಿಯೂ ಬಹುಮಟ್ಟಿಗೆ ಒಂದೇ ವಿಧವಾಗಿರುವುದು. ಅವುಗಳ ಶೈಲಿಯಲ್ಲಿಯೂ ಕಲ್ಪನಾಸರಣಿಯಲ್ಲಿಯೂ ಭೇದವು ಕಂಡುಬರುವುದಾದರೂ, ಭಾಷೆಯ ರೀತಿಯಲ್ಲಿ ಯಾವ ಭೇದವೂ ತೋರುವುದಿಲ್ಲ. ಸೂಕ್ತಘಟನೆಯೂ ಛಂದೋಬಂಧನೆಯೂ ವಿಷಯವರ್ಣನೆಯೂ ಮುಂತಾದುದನ್ನು ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿದರೆ ಋಗ್ವೇದದ ಹತ್ತು ಮಂಡಲಗಳ ಪ್ರಕಟನೆಯಕಾಲವು ಬೇರೆ ಬೇರೆಯಾಗಿರುವುದೆಂದು ಗೊತ್ತಾಗುವುದು.

ಇತರ ವೇದಗಳಲ್ಲಿ ಪಾಠಭೇದವು ಅಲ್ಲಲ್ಲಿ ಕಾಣಬರುವುದು. ಆದರೆ ಋಗ್ವೇದವು ಮಿಕ್ಕ ಮೂರು ವೇದಗಳ ಆವಿರ್ಭಾವಕಾಲಗಳಲ್ಲಿಯೂ ಹೀಗೆಯೇ ಇದ್ದಿತಾದುದರಿಂದ ಇದರ ಪಾಠಾಂತರಗಳು ಎಂದೂ ಸಂಭವಿಸಿರುವುದಿಲ್ಲ. ವೈದಿಕಗ್ರಂಥಶೇಖರಾಯಮಾಣವಾದ ಈ ಋಗ್ವೇದವು ಮೊದಲಿನಿಂದಲೂ ಯಾವ ವಿಕಾರಕ್ಕೂ ಒಳಪಡದಂತೆ ಬಲು ಎಚ್ಚರಿಕೆಯಿಂದ ಕಾಪಾಡಲ್ಪಟ್ಟಿರುವುದರಿಂದೇ ಎಲ್ಲಾ ಕಾಲದಲ್ಲಿಯೂ ಒಂದೇ ವಿಧವಾಗಿ ಉಳಿದಿರುವುದು. ಮಿಕ್ಕ ವೇದಗಳೂ ಕರ್ಮಕಲಾಪಗಳೂ ಮೈದೋರುವುದಕ್ಕಿಂತ ಮೊದಲೇ ಅನೂಚಾನ ಪರಂಪರೆಯಿಂದ ಈ ಪೂಜ್ಯಗ್ರಂಥವು ವೈದಿಕಸಾಹಿತ್ಯಭವನಾರಂಭಮೂಲಸ್ತಂಭಾಯಮಾನವಾಗಿದೆ.

ಹಿಂದಿನಿಂದ ತಲೆದೋರಿದ ಯಜುಸ್ಸಾಮಾಥರ್ವಣವೇದಗಳಲ್ಲಿ, ಅವರಿಗೆ ಋಗ್ವೇದದಲ್ಲಿ ಹೇಗೋ ಹಾಗೆ ಮನವೊಲಿಕೆಯು ಇದ್ದುದು ಕಾಣಬರುವುದಿಲ್ಲ. ಏಕೆಂದರೆ, ಅವುಗಳು ಹೊಸದಾಗಿ ಮೈದೋರಿದ ಯಜ್ಞಕ್ರಿಯೆಗಳನ್ನು ನೆರವೇರಿಸುವುದಕ್ಕೆ ಅನುಕೂಲವಾಗುವಂತೆ ಇಷ್ಟಾನುಸಾರವಾಗಿ ಋಗ್ವೇದದಿಂದ ಎತ್ತಿ ತೆಗೆದುಕೊಳ್ಳಲ್ಪಟ್ಟವುಗಳೂ ಹೊಸದಾಗಿ ಜೋಡಿಸಲ್ಪಟ್ಟವುಗಳೂ ಆದ ಸೂಕ್ತಗಳ ಸಮುದಾಯದಿಂದ ಕೂಡಿವೆ. ಅದುಕಾರಣವೇ, ಇತರ ವೇದಗಳ ಪ್ರವರ್ತಕರಾದ ಪರಮರ್ಷಿಗಳು ತಾವು ಕಂಡುಕೊಂಡ ವೇದಗಳಿಗಿಂತ ಮೊದಲು ಪ್ರಚಾರದಲ್ಲಿದ್ದ ಋಗ್ವೇದವನ್ನು ಆದರಾತಿಶಯದಿಂದ ಸಂರಕ್ಷಿಸಿದರು.

ವಸ್ತುತತ್ತ್ವವನ್ನು ಪರಿಭಾವಿಸಿದರೆ, ಈ ಋಗ್ವೇದವು ಎರಡು ಕಾಲಗಳಲ್ಲಿ ಎರಡುಬಗೆಯ ಅವಸ್ಥೆಯನ್ನು ಅನುಭವಿಸಿರುವುದೆಂದು ತಿಳಿದುಬರುತ್ತದೆ. ಹೇಗೆಂದರೆ—ಇದು ಇತರ ವೇದಗಳ ಪ್ರಚಾರಕ್ಕಿಂತ ಮೊದಲು ಬಹುಕಾಲದವರೆಗೆ ಸಂಹಿತೆಯ ರೂಪವನ್ನು ಪಡೆಯದೆ ಹಾಗೇ ಇದ್ದಿತು. ಕೆಲವು ಕಾಲಾನಂತರದಲ್ಲಿ ಶಬ್ದವಿದ್ಯೆಯ ನಿಯಮಗಳಿಂದ ಸಂಹಿತೆಯ ರೂಪವಾದ ಪರಿಣಾಮವನ್ನು ಪಡೆಯಿತು. ಆವಿರ್ಭವಿಸಿದ ಕಾಲದ ಮೊದಲ್ಗೊಂಡು ಕೇವಲ ಅನೂಚಾನ (ಗುರುವಿನ ಬಾಯಿಯಲ್ಲಿದ್ದು ಸಾಂಗವಾಗಿ ಅಧ್ಯಯನಮಾಡುವ) ಪದ್ಧತಿಯಿಂದ ಬಂದ ಈ ವೇದವು ಸಂಹಿತೆಯ ಕಾಲದಲ್ಲಿ ಪದಗಳ ಕೊನೆಯ ವರ್ಣವಿಕಾರಗಳಿಂದ ಸ್ವರೂಪಭೇದವನ್ನು ತಳೆಯಿತು. ಸಂಹಿತೆಯ ಪಾಠವು ಬುನಾದಿಯ ಪಾಠಕ್ಕಿಂತಲೂ ಎಷ್ಟೋ ಭೇದಗಳನ್ನು ಹೊಂದಿರುವುದು. ಆದರೆ ಈ ಭೇದಗಳಾದರೋ ಅನ್ಯಶಬ್ದಗಳ ಮೂಲಕವಾದವುಗಳಲ್ಲ. ಇದರಲ್ಲಿ ಒಳ್ಳೆಯ ಶಬ್ದವಾವುದು, ಸುಮ್ಮವೋ, ದುಮ್ಮವೋ? ಎಂಬೀ ತೆರದ ಶಬ್ದಸಂದೇಹವು ಸಂಭವಿಸದು. ಹಾಗಾದರೆ ಈ ವಿಧವಾದ ಭೇದಗಳಿರುವುದೇತಕ್ಕೆ? ಎಂದರೆ, ಈ ಭೇದಗಳು ಪ್ರಾಧಾನ್ಯವಾಗಿ ಲೌಕಿಕಸಂಸ್ಕೃತದಲ್ಲಿರುವ ಸಂಧಿನಿಯಮಗಳ ಎಡೆಯಾಟದಿಂದ ಹುಟ್ಟಿವೆ. ಹೇಗೆಂದರೆ—ಮೊದಲು 'ತುವಂ ಹಿ ಅಗ್ನೇ' ಎಂಬೀ ರೂಪದಿಂದ ಇದ್ದುದು ಹಿಂದಿನಿಂದ 'ತ್ವಂ ಹ್ಯಗ್ನೇ' ಎಂಬೀ ರೂಪವನ್ನು ಪಡೆಯಿತು. 'ತುವಮ್' ಎಂಬಲ್ಲಿ 'ತ್ವಮ್' ಎಂದೂ 'ಹಿ ಅಗ್ನೇ' ಎಂಬಲ್ಲಿ 'ಹ್ಯಗ್ನೇ' ಎಂದೂ ಮೊದಲಾದ ಈ ವಿಕಾರವು ಸಂಧಿನಿಮಿತ್ತಕವಾಗಿದೆ. ಪಠಿಸುವಾಗ ಕಿವಿಗೆ ಇಂಪಾಗಿ ಕೇಳಬರುವಂತೆ ಮಾಡುವ ಬಯಕೆಯಿಂದ ಪ್ರವರ್ತಿಸಲ್ಪಟ್ಟ ಈ ಸಂಧಿನಿಯಮವು ಛಂದೋಲಕ್ಷಣಕ್ಕೂ ಅನುಕೂಲವಾಗಿದೆ. ಹೀಗೆ ಸಂಹಿತೆಯ ಪಾಠವು ಸಿದ್ಧವಾದರೂ ಈ ವೇದದ ಪೂರ್ವರೂಪವನ್ನು ತಿಳಿಯಲು ಶಕ್ಯವಿದೆ. ಈ ಸಂಹಿತಾ ಪಾಠದಲ್ಲಿ ಬುನಾದಿಯ ಶಬ್ದದೋಷಗಳೂ, ಸ್ವರಭೇದಗಳೂ, ವೈಕಲ್ಪಿಕರೂಪಭೇದಗಳೂ ಕಾಯ್ದಿಡಲ್ಪಟ್ಟಿವೆ. ಅವುಗಳನ್ನು ಅನಾಯಾಸವಾಗಿ ತೆಗೆಯಲು ಬರುವಂತಿದ್ದರೂ ಹಾಗೆ ಮಾಡಿರುವುದಿಲ್ಲ. ಈ ಮುಂತಾದ ವಿಶೇಷ ಸಂಗತಿಗಳು ಈ ಋಗ್ವೇದವು ಮೊದಲನೆಯ ಅವಸ್ಥೆಯಲ್ಲಿದ್ದ ಕೆಲವು ಶಬ್ದದೋಷಗಳನ್ನೂ, ಎರಡನೆಯ ಅವಸ್ಥೆಯಲ್ಲಿ ಸೇರಿಸಿದ ಸಂಧಿನಿಮಿತ್ತಕಗಳಾದ ವಿಕಾರಗಳನ್ನೂ ಬಿಟ್ಟು ಮಿಕ್ಕ ಸರ್ವವಿಷಯಗಳಲ್ಲೂ ಬುನಾದಿಯಿಂದ ಪರಂಪರೆಯಿಂದ ತನ್ನ ಪರಿಶುದ್ಧತೆಯನ್ನು ಕಳೆದುಕೊಳ್ಳದೆ ಉಳಿದಿರುವುದೆಂದು ಸೂಚಿಸುತ್ತವೆ. ಬ್ರಾಹ್ಮಣ ಭಾಗಗಳಲ್ಲಿ ಕಂಡುಬರುವ ಋಗ್ವೇದ ವಿಷಯಕವಾದ ವಿಚಾರವನ್ನು ಪರಿಶೀಲನೆ ಮಾಡಿದರೆ ಈಗಿನ ಋಗ್ವೇದ ಪಾಠವು ಬ್ರಾಹ್ಮಣ ಭಾಗಗಳ ಪ್ರಚಾರಕಾಲದಲ್ಲಿ ಯಜುರ್ವೇದದ ಗದ್ಯಭಾಗಕ್ಕಿಂತಲೂ ವಿಶೇಷವಾದ ಪ್ರತಿಷ್ಠೆಯನ್ನು ಪಡೆದಿದ್ದಿತೆಂದು ತಿಳಿಯಲ್ಪಡುವುದು.

ಯಜುರ್ವೇದವು:—

ಈ ಸಂಹಿತೆಯೊಳಗಿನ ಋಚೆಗಳು ಯಜ್ಞಕರ್ಮಗಳಲ್ಲಿ ಉಪಯುಕ್ತಗಳಾಗುವಂತೆ ಅನುಕ್ರಮವಾಗಿ ಒತ್ತಟ್ಟಿಗೆ ಸೇರಿಸಲ್ಪಟ್ಟಿವೆ. ಒಟ್ಟಿನಲ್ಲಿ, ಈ ಸಂಹಿತೆಯಾದರೋ ದ್ರವ್ಯಮಯ ಯಜ್ಞಕರ್ಮಗಳಲ್ಲಿ ಮುಖಂಡರೆನಿಸುವ ಅಧ್ವರ್ಯುಪುರೋಹಿತರಿಗೆ ಉಪಯುಕ್ತಗಳಾದ ಋಚೆಗಳ ಸಂಗ್ರಹಾತ್ಮಕ ಪುಸ್ತಕವೆಂದು ಹೇಳಿಸಿಕೊಳ್ಳಲ್ಪಡುವುದು. ಇದ ಕೃಷ್ಣ, ಶುಕ್ಲಗಳೆಂಬ ಎರಡು ತೆರದ ಪಾಠಭೇದಗಳುಳ್ಳದ್ದಾಗಿರುವುದೆಂಬ ಸಂಗತಿಯನ್ನು ಹಿಂದೆ ನಾವು ಹೇಳಿದ್ದೇವೆ. ಯಜುರ್ವೇದವು ಇದೊಂದು ಪುಸ್ತಕವೆಂದು ಮೇಲೆ ನಾವು ಬರೆದುದರಿಂದ ಆ ಕಾಲದಲ್ಲಿ ಯಾವನೋ ಒಬ್ಬ ಪುರುಷನಿಂದ ಬರೆಯಲ್ಪಟ್ಟ ಪುಸ್ತಕರೂಪವಾಗಿದ್ದಿತೆಂದು ತಿಳಿಯಲಾಗದು. ಮೊದಲಿನ ಅಧ್ಯಾಪಕರಾದ ಗುರುಗಳ ಪರಂಪರೆಯಿಂದ ಮುಖೋದ್ಗತವಾಗಿದ್ದುದನ್ನೇ ಅವರ ಶಿಷ್ಯ-ಪ್ರಶಿಷ್ಯರು ಬಾಯಿಂದ ಕಲಿತು ನೆನಪಿನಲ್ಲಿಟ್ಟುಕೊಳ್ಳುತ್ತ ಬಂದುದು. ಈ ರೀತಿಯಾದ ಪ್ರವಚನಭೇದಮೂಲಕ ಅನೇಕ ಶಾಖಾರೂಪದಿಂದ ಯಜುರ್ವೇದಾಧ್ಯಾಯಿಗಳು ಬೇರೆಬೇರೆಯಾದರು. ಚರಣವ್ಯೂಹದಲ್ಲಿ ಯಜುರ್ವೇದದ ೮೬ ಭೇದಗಳುಂಟೆಂದು ಹೇಳಲ್ಪಟ್ಟಿದೆ. ಆದರೆ, ಆ ಎಲ್ಲ ಶಾಖೆಗಳ ಹೆಸರುಗಳು ಹೇಳಲ್ಪಟ್ಟಿಲ್ಲ; ಎಷ್ಟು ಹೆಸರುಗಳು ತೋರಿಸಲ್ಪಟ್ಟಿವೆಯೋ ಅವನ್ನು ನಾವಿಲ್ಲಿ ಬರೆಯುತ್ತೇವೆ:—ಚರಕವೆಂಬುದು ೧೨ ಭೇದಗಳುಳ್ಳದ್ದಾಗಿದೆ. ಅವು ಚರಕ, ಆಹ್ವರಕ, ಕಠ, ಪ್ರಾಚ್ಯಕಠ, ಕಪಿಷ್ಠಲಕಠ, ಚಾರಾಯಣೀಯ, ವಾರಾಯಣೀಯ, ವಾರ್ತಾಂತವೀಯ, ಶ್ವೇತಾಶ್ವತರ, ಔಪಮನ್ಯವ, ಪಾತಾಂಡಿನೀಯ, ಮೈತ್ರಾಯಣೀ ಎಂದಿವೆ. ಮೈತ್ರಾಯಣೀ ಶಾಖೆಯಲ್ಲಿ ಮತ್ತೆ ೬ ಭೇದಗಳುಂಟಾಗಿವೆ. ಅವು.—ಮಾನವ, ವಾರಾಹ, ದುಂದುಭ, ಛಗಲೇಯ (ಛಾಗಲೇಯ) ಹಾರಿದ್ರವೀಯ, ಶ್ಯಾಮಾಯನೀಯ ಎಂದಿವೆ. ತೈತ್ತಿರೀಯದಲ್ಲಿ ಔಖೇಯ (ಔಖೀಯ), ಖಾಂಡಿಕೇಯ ಎಂಬ ಮುಖ್ಯವಾದೆರಡು ಶಾಖೆಗಳಿವೆ. ಅವುಗಳಲ್ಲಿ ಖಾಂಡಿಕೇಯದ ಶಾಖೆಗಳು ಐದು. ಅವು ಕಾಲೇತ, ಶಾಟ್ಯಾಯನೀ, ಹಿರಣ್ಯಕೇಶೀ, ಭಾರದ್ವಾಜೀ, ಆಪಸ್ತಂಬೀ ಎಂದಿವೆ. ಮತ್ತು ವಾಜಸನೇಯ ಶಾಖೆಯಭೇದಗಳು:—ಜಾಬಾಲ, ಬೌಧ್ಯಾಯನ (ಬೌಧೇಯ), ಕಾಣ್ವ, ಮಾಧ್ಯಂದಿನೇಯ, (ಮಾಧ್ಯಂದಿನ), ಶಾಫೇಯ, ತಾಪನೀಯ, ಕಪೋಲ, ಪೌಂಡ್ರವತ್ಸ, ಆವಟಿಕ, ಪರಮಾವಟಿಕ, ಪಾರಾಶರ, ವೈಣೇಯ, ವೈಧೇಯ, ಅದ್ಧ, ಬೌಧೇಯ (ಬಾಧ್ಯಶ್ವ, ವಗಾನೇಯ) ಎಂದಿವೆ. ಈ ಮೇಲಿನ ಶಾಖೆಗಳ ಹೆಸರಿನ ಪಾಠಭೇದಗಳು ಬೇರೆಬೇರೆ ಪ್ರತಿಗಳಲ್ಲಿ ಭಿನ್ನಭಿನ್ನಗಳಾಗಿವೆ.

ಇಂದಿನವರೆಗೆ ಯಜುರ್ವೇದದ ಆರು ಸಂಹಿತೆಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಮೊದಲನೆಯದು, ಕಾಠಕಸಂಹಿತೆಯು. ಕಠಶಾಖೆಯ ಈ ಸಂಹಿತೆಯು ಕಾಲವೈಚಿತ್ರ್ಯದಿಂದ ಭರತಖಂಡವನ್ನು ತ್ಯಜಿಸಿ, ಹಸ್ತಲಿಖಿತರೂಪವಾಗಿ ಜರ್ಮನ್‌ದೇಶದ ರಾಜಧಾನಿಯಾದ ಬರ್ಲಿನ್‌ಪಟ್ಟಣದ ಲಾಯಬ್ರರಿಯಲ್ಲಿ ಎಷ್ಟೋ ಕಾಲವಡಗಿದ್ದು, ಗೌರಕಾಯರಿಂದ ಗೌರವಿಸಲ್ಪಟ್ಟು ಅವರಿಂದ ಮುದ್ರಿತವಾಗಿದೆ.

೨ನೆಯದು ಕಪಿಷ್ಠಲಕಠಸಂಹಿತೆ. ಇದೂ ಅಚ್ಚಾಗಿದೆ. (೩) ಮೈತ್ರಾಯಣೀಸಂಹಿತೆ, ಇದು ಮೈತ್ರಾಯಣೀಶಾಖೆಯ ಸಂಹಿತೆಯು. ಇವೆರಡೂ ವಿದೇಶಗಳಲ್ಲಿಯೇ ಪ್ರಸಿದ್ಧಗೊಳಿಸಲ್ಪಟ್ಟಿವೆ. (೪) ತೈತ್ತಿರೀಯಸಂಹಿತೆ, ಇದು ತೈತ್ತಿರೀಯಶಾಖೆಯಸಂಹಿತೆಯು; ಇದು ಸಾಯಣಭಾಷ್ಯದೊಡನೆ ಪುಣ್ಯಪುರದಲ್ಲಿ ಮುದ್ರಿತವಾಗಿದೆ. ಈ ಮೇಲೆ ನಿರ್ದಿಷ್ಟಗಳಾದ ನಾಲ್ಕು ಸಂಹಿತೆಗಳ ಪರಸ್ಪರ ನಿಕಟಸಂಬಂಧವಿದೆ. ಮತ್ತು ಇವು 'ಕೃಷ್ಣಯಜುರ್ವೇದ' ದೊಳಗಿನವು. ಇವುಗಳಿಗೆ ತೀರಬೇರೆಯಾಗಿ ಕಂಡುಬರುವದು ವಾಜಸನೇಯಸಂಹಿತೆಯು. ಇದಕ್ಕೆ ಶುಕ್ಲಯಜುರ್ವೇದವೆನ್ನುತ್ತಾರೆ. ಇದರಲ್ಲಿ ಕಾಣ್ವ, ಮಾಧ್ಯಂದಿನವೆಂಬ ಎರಡು ಶಾಖೆಗಳಿವೆ. ಆದರೆ, ಇವೆರಡರಲ್ಲಿಯೂ ವಿಶೇಷ ಭೇದವಿರುವುದಿಲ್ಲ. ಉವ್ವಟ ಮಹೀಧರರ ಭಾಷ್ಯಗಳೊಡನೆ ಮಾಧ್ಯಂದಿನಸಂಹಿತೆಯು ಮುಂಬಯಿ ನಿರ್ಣಯಸಾಗರ ಮುದ್ರಣಾಲಯದಲ್ಲಿಯೂ, ಸಾಯಣಭಾಷ್ಯದೊಡನೆ ಕಣ್ವಸಂಹಿತೆಯು ಅಜಮೀರದಲ್ಲಿಯೂ ಅಚ್ಚಾಗಿವೆ. ಹೀಗೆ ಮಾಧ್ಯಂದಿನ, ಕಾಣ್ವ ಎಂಬೆರಡು ಸಂಹಿತೆಗಳನ್ನೂ ಗ್ರಹಿಸಿ ಯಜುರ್ವೇದದ ಆರು ಸಂಹಿತೆಗಳು ಪ್ರಸಿದ್ಧವಾಗಿರುತ್ತವೆ.

ಮೊದಲಿನದು ಚರಕಶಾಖೆಯು. ಅದರ ಉಪಶಾಖೆಯೇ ಕಪಿಷ್ಠಲವೆಂಬುದು; ಇವೆರಡು ಶಾಖಾವಲಂಬಿಗಳು ಪೂರ್ವದಲ್ಲಿ ಪಂಜಾಬದೇಶದಲ್ಲಿಯೂ, ಕಾಶ್ಮೀರದೇಶದಲ್ಲಿಯೂ ವಾಸಿಸುತ್ತಿದ್ದರು. ಅವರಲ್ಲಿ ಕಠಶಾಖಾನುಯಾಯಿಗಳು ಈಗಲೂ ಕಾಶ್ಮೀರದೇಶದಲ್ಲಿ ಕಂಡುಬರುವರು. ಕಪಿಷ್ಠಲರಾದರೋ ಮೂಲಸಹಿತವಾಗಿ ನಷ್ಟರಾಗಿರುವರು. ಮೊದಲಿಗರಿಂದ 'ಕಾಲಾಪ' ರೆಂದು ಕರೆಯಲ್ಪಡುತ್ತಿದ್ದ ಮೈತ್ರಾಯಣಶಾಖೀಯರು ಮೊದಲು ನರ್ಮದಾನದೀಮುಖದಿಂದ ದಕ್ಷಿಣಕ್ಕೆ ನಾಶಿಕದವರೆಗೆ ಹಬ್ಬಿದ್ದರು. ಈಗಲಾದರೋ ಆ ಶಾಖೀಯರು ನರ್ಮದೆಯ ಉತ್ತರಕ್ಕಿರುವ ಗುಜರಾತದೇಶದಲ್ಲಿಯೂ, ಅಹಮದಾಬಾದನಗರದಲ್ಲಿಯೂ ಅದರ ಪಶ್ಚಿಮಕ್ಕಿರುವ ಮೋರ್ವಿಪುರದಲ್ಲಿಯೂ ವಿರಳವಾಗಿರುವರೆಂದು ಕೇಳಲ್ಪಡುತ್ತಾರೆ. ಕಠ, ಕಾಲಾಪವೆಂಬಿವೆರಡು ಶಾಖೆಗಳು ಕ್ರಿ. ಶ. ಆರಂಭಕ್ಕಿಂತ ಪೂರ್ವದಲ್ಲಿ ಸರ್ವತ್ರ ವಿಶೇಷಪ್ರಚಾರವಾಗಿದ್ದುವು. ಅದುಕಾರಣವೇ ಪತಂಜಲಿಯು ಕಾಠಕವೂ ಕಾಲಾಪಕವೂ ಪ್ರತಿಯೊಂದು ಗ್ರಾಮದಲ್ಲಿ ಪಠಿಸಲ್ಪಡುವುದು ಎಲ್ಲಕಡೆ ಕೇಳಲ್ಪಡುವುದೆಂದು ಹೇಳುವನು. ಹಾಗೂ, ಅಯೋಧ್ಯೆಯಲ್ಲಾದರೂ ಈ ಶಾಖಾದ್ವಯವು ಅತ್ಯಾದರದೊಡನೆ ಪುರಸ್ಕರಿಸಲ್ಪಟ್ಟಿದ್ದಿತೆಂದು ರಾಮಾಯಣದಿಂದ ತಿಳಿದುಬರುವುದು. ಆದರೆ, ತೈತ್ತಿರೀಯ ವಾಜಸನೇಯಗಳೆಂಬ ಯಜುಃಶಾಖೆಗಳ ಹಬ್ಬುಗೆಯು ಬೆಳೆದುದರಿಂದ ಕಾಠಕಕಾಲಾಪಗಳ ಏಳಿಗೆಯಾಗಲಿಲ್ಲ. ತೈತ್ತಿರೀಯ ಶಾಖಾವಲಂಬಿಗಳು ಮೊದಲು ನರ್ಮದೆಯ ದಕ್ಷಿಣತೀರದಲ್ಲಿ ವಿಶೇಷವಾಗಿರುತ್ತಿದ್ದರು. ತೈತ್ತಿರೀಯ ಪ್ರಧಾನಭೂತವಾದ ಉಪಶಾಖೆಯೆನಿಸುವ ಆಪಸ್ತಂಬಶಾಖೀಯರು ಈಗಲೂ ಗೋದಾವರೀ ತೀರದಲ್ಲಿರುವರು. (ಆಂಧ್ರದೇಶದಲ್ಲೂ, ದ್ರಾವಿಡದೇಶದಲ್ಲೂ ಇದ್ದಾರೆ.) ಮತ್ತೊಂದು ಉಪಶಾಖೆಯಾದ ಹಿರಣ್ಯಕೇಶಿ ಶಾಖಾನುವರ್ತಿಗಳು ಗೋದಾವರಿಯ ಸಮೀಪದ ದಕ್ಷಿಣಭಾಗದಲ್ಲಿದ್ದಾರೆ. ವಾಜಸನೇಯಶಾಖೀಯರು ಮೊದಲು ಗಂಗಾತೀರದಲ್ಲಿ ವಿಶೇಷವಾಗಿದ್ದರು. ಈಗ ಎಲ್ಲಕಡೆಗೂ ಹಬ್ಬಿದ್ದಾರೆ.

ತೈತ್ತಿರೀಯಸಂಹಿತೆಯಲ್ಲಿ ಏಳು ಕಾಂಡಗಳಿವೆ. ಪ್ರತಿಯೊಂದು ಕಾಂಡವೂ ಅನೇಕ ಪ್ರಪಾಠಕಗಳಿಂದ ವಿಭಕ್ತವಾಗಿದೆ. ಆ ಪ್ರಪಾಠಕಗಳಲ್ಲಿಯೂ ಅನೇಕ ಅನುವಾಕಗಳಿವೆ. ಅಂದರೆ ಕೃಷ್ಣಯಜುರ್ವೇದವೆಂದು ಪ್ರಸಿದ್ಧವಾಗಿರುವ ತೈತ್ತಿರೀಯಸಂಹಿತೆಯಲ್ಲಿ ೭ ಕಾಂಡ (ಅಷ್ಟಕ)ಗಳೂ, ೪೪ ಪ್ರಪಾಠಕ (ಪ್ರಶ್ನ)ಗಳೂ, ೬೫೧ ಅನುವಾಕಗಳೂ, ೨೧೯೮ ಮಂತ್ರಗಳೂ, ೧೧೦೯೯೬ ಅಕ್ಷರಗಳೂ ಇವೆ.

ಶುಕ್ಲಯಜುರ್ವೇದವೆಂಬ ವಾಜಸನೇಯ (ಮಾಧ್ಯಂದಿನೀಯ) ಸಂಹಿತೆಯಲ್ಲಿ ೪೦ ಅಧ್ಯಾಯಗಳೂ, ೩೦೩ ಅನುವಾಕಗಳೂ, ೧೯೭೫ ಮಂತ್ರಗಳೂ, ೮೮೮೭೫ ಅಕ್ಷರಗಳೂ ಇವೆ. ಈ ಸಂಹಿತೆಯಲ್ಲಿಯೂ ಕಣ್ವಸಂಹಿತೆಯಲ್ಲಿಯೂ ಪ್ರತಿಪಾದ್ಯವಿಷಯವು ಒಂದೇ ಆಗಿದೆ. ವಿಷಯಗಳ ಜೋಡಣೆಯಾದರೂ ಸಮಾನವಾಗಿದೆ. ಆದರೆ, ಇವೆರಡರಲ್ಲಿರುವ ಭೇದವಾದರೋ ಕೇವಲ ಪಠನಪ್ರಕಾರದಿಂದುಂಟಾದುದು; ಅದಾದರೂ ಕೇವಲ ಗದ್ಯಾತ್ಮಕವಾದ ಅರ್ಥವಾದ ಭಾಗದಲ್ಲೇ ಇರುವುದು, ಪದ್ಯಾತ್ಮಕವಾದ ಮಂತ್ರಭಾಗದಲ್ಲಿರುವುದಿಲ್ಲ. ಇವೆರಡೂ ಶಾಖೆಯವರು ಉತ್ತರಭಾಗದಲ್ಲಿಯೂ ದಕ್ಷಿಣದೇಶದ ಕೆಲವೆಡೆಯಲ್ಲಿಯೂ ಇರುವರು. ಈ ಶಾಖಾಧ್ಯಯನಪರಾಯಣರು 'ಷ' ಎಂಬಕ್ಷರವನ್ನು 'ಖ' ಎಂದುಚ್ಚರಿಸುತ್ತಾರೆ. ಸುಪ್ರಸಿದ್ಧವಾದ ಪುರುಷಸೂಕ್ತದ 'ಸಹಸ್ರಶೀರ್ಷಾ ಪುರುಷಃ' ಎಂಬ ಪ್ರಥಮ ಮಂತ್ರವನ್ನು ಆಶ್ವಲಾಯನ ಶಾಖೆಯವರು ಗಂಭೀರಸ್ವರದಿಂದ '**ಸಹಸ್ರಶೀರ್ಷಾಪುರುಷಃ**' ಎಂದು ಪಠಿಸುವರಷ್ಟೇ! ಆದರೆ ಅದನ್ನೇ ಶುಕ್ಲಯಜುರ್ವೇದಿಗಳು '**ಸಹಸ್ರಶೀರ್ಖಾ ಪುರುಖಃ**' ಎಂದುಚ್ಚರಿಸುವರು. ಇದಲ್ಲದೆ ಭಿನ್ನೋಚ್ಚಾರಗಳೂ ಅವರ ಸಂಪ್ರದಾಯದಲ್ಲಿವೆ.

ಸಾಮವೇದವು:—

ಇದರಲ್ಲಿ ೧೮೧೦ ಮಂತ್ರಗಳಿವೆ. ಅವುಗಳಲ್ಲಿ ೭೫ ಋಚೆಗಳನ್ನು ಬಿಟ್ಟು ಉಳಿದ ಮಂತ್ರಗಳೆಲ್ಲವೂ ಋಕ್ಸಂಹಿತೆಯೊಳಗಿನವೇ ಇವೆ. ಸಾಮವೇದದಲ್ಲಿ ಪೂರ್ವಾರ್ಚಿಕ ಮತ್ತು ಉತ್ತರಾರ್ಚಿಕ ಎಂದು ಎರಡು ಭಾಗಗಳಿವೆ. 'ಆರ್ಚಿಕ' ಎಂದರೆ ಋಚೆಗಳ ಸಮೂಹವು. ಮೊದಲನೆಯ ಆರ್ಚಿಕದಲ್ಲಿ ಆರು ಪ್ರಪಾಠಕಗಳೂ, ಉತ್ತರಾರ್ಚಿಕದಲ್ಲಿ ಒಂಭತ್ತು ಪ್ರಪಾಠಕಗಳೂ ಇವೆ. ಉತ್ತರಾರ್ಚಿಕವೆಂದರೆ ಸಂಗೀತಪುಸ್ತಕವಾಗಿರುವುದು.

ಬುನಾದಿ ಈ ಮೂರು ಸಂಹಿತೆಗಳೇ ಮಿಗಿಲಾದ ಪವಣಗಳೆನಿಸಿದ್ದವು. ಅದು ಕಾರಣವೇ ಹಳೆಯ ಓಲೆಗಳಲ್ಲಿ '**ತ್ರಯೀ ವಿದ್ಯಾ**' ಎಂಬ ಬಳಕೆಯಿದ್ದಿತು. ಎಷ್ಟೋ ದಿವಸಗಳ ತರುವಾಯ ನಾಲ್ಕನೆಯ ಅಥರ್ವಸಂಹಿತೆಯು ಇತರ ಸಂಹಿತೆಗಳೊಡನೆ ಪರಿಗಣಿಸಲ್ಪಟ್ಟಿದೆ. ಈ ವೇದದ ಹೆಸರು ಇತರ ವೇದಗಳಲ್ಲಿರುವುದಿಲ್ಲ. ಈ ವೇದದಲ್ಲಾದರೋ ಆ ಮೂರುವೇದಗಳ ಹೆಸರುಗಳಿವೆ. ಅಥರ್ವವೇದದಲ್ಲಿ ಋಗ್ವೇದದ ೧೨೦೦ ಋಚೆಗಳು ಕಾಣಬರುವುವು. ಅಥರ್ವವೇದದ ಭಾಷೆಯು ಇತರ ವೇದಗಳ ಭಾಷೆಗಿಂತ ಹಿಂದಿನದೆಂದು ತಿಳಿದುಬರುವುದು. ಎಂಬ ಮೊದಲಾದ ಆಕ್ಷೇಪಗಳು ತಲೆದೋರುತ್ತವೆ. ಆದರೆ 'ಅಥರ್ವಣ'—'ಅಂಗಿರಸ' 'ಭೃಗು' ಎಂಬಭಿಧಾನವುಳ್ಳವರು ವೇದಕಾಲೀನರಲ್ಲವೇ? ಇವರ ಹೆಸರುಗಳು ಋಗ್ವೇದದಲ್ಲಿ ಬಂದಿವೆ; ತೈತ್ತಿರೀಯ ಸಂಹಿತೆಯಲ್ಲಿ ಋಗ್ಯಜುಃಸಾಮವೇದಗಳೊಡನೆ 'ಅಂಗಿರಸ' ವೆಂಬ ಹೆಸರೂ ವಾಜಸನೇಯ ಸಂಹಿತೆಯಲ್ಲಿ 'ಅಥರ್ವಣ' ವೆಂಬ ನಾಮವೂ ಕಾಣಲ್ಪಡುವುವು. ಗೋಪಥಬ್ರಾಹ್ಮಣದಲ್ಲಿ (೧-೯)—'**ಶ್ರೇಷ್ಠೋ ಹಿ ವೇದಸ್ತಪಸೋಧಿಜಾತೋ ಬ್ರಹ್ಮಜ್ಞಾನಾಂ ಹೃದಯೇ ಸಂಬಭೂವ**' (೧-೧೬)—'**ಚತ್ವಾರೋ ವಾ ಇಮೇ ವೇದಾ ಋಗ್ವೇದೋ ಯಜುರ್ವೇದಃ ಸಾಮವೇದೋ ಬ್ರಹ್ಮವೇದಃ**' ಎಂಬುದಾಗಿ ಅಥರ್ವವೇದವು ಬ್ರಹ್ಮವೇದವೆನಿಸಿಕೊಳ್ಳುವುದರಿಂದ ಶ್ರೇಷ್ಠವಾದುದೆಂದು ಹೇಳಲ್ಪಟ್ಟಿದೆ. ಇನ್ನು ಅಥರ್ವವೇದದಲ್ಲಿ ಋಙ್ಮಂತ್ರಗಳು ಸೇರಿಸಲ್ಪಟ್ಟಿವೆಯೆಂದು ಹೇಳುವುದಕ್ಕಿಂತ, ಋಗ್ವೇದದಲ್ಲಿಯೇ ಅಥರ್ವಮಂತ್ರಗಳ ಸೇರ್ಪಡೆಯಾಗಿರಬಹುದೆಂದು ನುಡಿಯಬಾರದೇಕೆ? ಒಂದೇ ಅಖಂಡವಾದ ವೇದವು ನಾಲ್ಕು ಸಂಹಿತೆಗಳ ರೂಪವಾಗಿ ವಿಭಕ್ತವಾಗಿರುವುದೆಂದು ಈ ಹಿಂದೆ ನಾವು ಹೇಳಿದ ಸಂಗತಿಯನ್ನು ಸ್ಮರಿಸಿ ಸರಳದಾರಿಯನ್ನು ಹಿಡಿದರೆ ಆ ವೇದವು ಮುಂಚಿನದು ಈ ವೇದವು ಹಿಂಚಿನದು ಎಂಬೀಕಲ್ಪನೆಗೆ ಆಸ್ಪದವೆಲ್ಲಿದೆ? ಮತ್ತು, ಆ ಋಗಥರ್ವಸಂಹಿತೆಗಳ ಭಾಷೆಯ ಪ್ರಾಚೀನಾರ್ವಾಚೀನತ್ವಸಾಧಕಯುಕ್ತಿಯಾದರೂ ನಿತಾಂತ ನಿರ್ಮೂಲವಾದುದು. ಋಕ್ಸಂಹಿತೆಯಲ್ಲಾದರೋ ಭಾಷೆಯ ಪ್ರಯೋಗವು ಒಂದೇ ವಿಧವಾಗಿರುವುದೇ? ಅಥರ್ವವೇದದಲ್ಲಿಯಾದರೋ ಇತರ ವೇದಗಳಲ್ಲಿಯೂ ಅರ್ವಾಚೀನ ವೈದಿಕ ಸಾಹಿತ್ಯದಲ್ಲಿಯೂ ಕಾಣಬಾರದ ಪ್ರಾಚೀನತಮ ಶಬ್ದಗಳಿರುವುದಿಲ್ಲವೇ? ಋಗ್ಯಜುಃಸಾಮಸಂಹಿತೆಗಳು ಪ್ರಾಮುಖ್ಯತೆಯಿಂದ ಯಜ್ಞಕ್ರಿಯೆಗಳಿಗುಪಯುಕ್ತವಾದುವಾಗಿ ಕರ್ಮಕಾಂಡಸಾಂಪ್ರದಾಯಿಕರಿಂದ 'ವೇದ-ತ್ರಯೀ' ಎಂಬ ಶಬ್ದವೇ ಮುಂದುವರಿಸಲ್ಪಟ್ಟಿದೆ. ಅಥರ್ವವೇದವು ಯಜ್ಞಕ್ರಿಯಾಸಂಬಂಧ ರಹಿತವಾದುದೆಂದು ಹೇಳಿಸಿಕೊಳ್ಳದಿರುವುದಕ್ಕಾಗಿ ತದ್ವಿಷಯಕ್ಕೆ ತನ್ನ ಕೊನೆಯಕಾಂಡದಲ್ಲಿ ಸ್ಥಳಕೊಟ್ಟಿದೆ. ಐಹಿಕ, ಪಾರತ್ರಿಕ, ಮೋಕ್ಷರೂಪಶ್ರೇಯಸ್ಸಾಧಕಗಳಾದ ಆಚಾರ ವಿಚಾರಗಳನ್ನೊಳಗೊಂಡ ಅಥರ್ವವೇದವು ಯಾವಾಗಲೂ ಎಲ್ಲರಿಂದಲೂ ಸಮಾಮ್ನಾಯ ರೂಪವಾದುದೆಂದು ಪರಿಗ್ರಹಿಸಲ್ಪಟ್ಟುದಾಗಿದೆ. ಮಹಾಭಾರತದಲ್ಲಿ ಈ ವೇದವು ಇತರ ವೇದಗಳಂತೆಯೇ ಪರಮಪ್ರಮಾಣಭೂತವಾದುದೆಂದು ವರ್ಣಿಸಲ್ಪಟ್ಟಿದೆ. ಪಾತಂಜಲ ಮಹಾಭಾಷ್ಯದಲ್ಲಿ ಅಥರ್ವವು ಪ್ರಥಮವೇದವೆಂದು ನಿರೂಪಿಸಲ್ಪಟ್ಟಿರುವದು. ಇದರಲ್ಲಿ ಮುಖ್ಯವಾಗಿ ಅಥರ್ವನ್ ಮತ್ತು ಅಂಗಿರಸ್ ಎಂಬ ಎರಡುವಿಧವಾದ ಮಂತ್ರವಿಭಾಗಗಳಿರುವುದರಿಂದ ಇದರ ಹಳೆಯ ಹೆಸರು 'ಅಥರ್ವಾಂಗಿರಸ' ಎಂದಿರುವುದು. ಅಥರ್ವವೇದವೆಂಬ ಅರ್ವಾಚೀನನಾಮವು 'ಅಥರ್ವಾಂಗಿರಸ' ವೆಂಬ ಹೆಸರಿನ ಸಂಕ್ಷಿಪ್ತರೂಪವು. ಈ ಅಥರ್ವ ವೇದದ ಪೈಪ್ಪಲಾದ, ಲೌದ, ಮೌದ, ಶೌನಕೀಯ, ಜಾಜಲ, ಜಲದ, ಬ್ರಹ್ಮವದ, ದೇವದರ್ಶ, ಚಾರಣವೈದ್ಯ ಎಂಬ ಒಂಭತ್ತು ಶಾಖೆಗಳಿವೆ. ಈಗ ಸರ್ವತ್ರ ಶೌನಕೀಯ ಸಂಹಿತೆಯೇ ವಿಶೇಷಪ್ರಚಾರದಲ್ಲಿದೆ. ಇದರಲ್ಲಿ ೨೦ ಕಾಂಡಗಳೂ, ೭೩೧ ಸೂಕ್ತಗಳೂ, ೫೯೭೭ ಮಂತ್ರಗಳೂ ಇವೆ. ಈ ವೇದದ ಶಾಖಾವಲಂಬಿಗಳು ಮಹಾರಾಷ್ಟ್ರ ಮತ್ತು ಗುಜರಾತಬ್ರಾಹ್ಮಣರಿರುವರು.

ಈ ರೀತಿಯಾಗಿ ವೈದಿಕಸಾಹಿತ್ಯದಲ್ಲಿ ನಾಲ್ಕುವಿಧ ಸಂಹಿತೆಗಳಿರುತ್ತವೆ. ಪೂರ್ವಕಾಲದಲ್ಲಿ ವಿಶುದ್ಧಜ್ಞಾನಿಗಳಾದ ಮಹರ್ಷಿಗಳಿಂದ ಸಾಕ್ಷಾತ್ಕರಿಸಲ್ಪಟ್ಟವುಗಳಾಗಿ ಪಿತಾಪುತ್ರ, ಗುರುಶಿಷ್ಯ, ಪರಂಪರೆಯಿಂದ ಬಂದ ಈ ವೇದಗಳ ಅಧ್ಯಯನವೇ ಪರಮಧರ್ಮವೆಂದು ಪುರೋಹಿತರ ವಂಶಗಳಲ್ಲಿ ಬಲವಾದ ನಂಬಿಕೆಯಿದ್ದಿತು. ಆ ಸಮಯದಲ್ಲಿ ವೇದಗಳು ಪ್ರಕ್ರಿಯೆಗಳಿಗೆ ಸರಿಯಾಗಿ ಸಂಗ್ರಹಿಸಲ್ಪಟ್ಟು ಮೇಲೆ ಹೇಳಿದಂತೆ ಸಂಹಿತೆಗಳೆಂಬ ಹೆಸರನ್ನು ತಾಳಿ ಶಾಶ್ವತವಾದ ಪ್ರತಿಷ್ಠೆಯನ್ನು ಪಡೆದಿದ್ದವು.

ಪ್ರಥಮೋಲ್ಲಾಸವು ಸಂಪೂರ್ಣವಾದುದು.

ಶ್ರೀಶೈಲಮಹಾಕ್ಷೇತ್ರದ

ಮಹಾಶಿವರಾತ್ರಿ ಮತ್ತು ಯುಗಾದಿ ಉತ್ಸವಗಳ ವರದಿ 1933.

ಶ್ರೀಶೈಲ.

ಕರ್ನೂಲ್ ಡಿ|| ನಂದಿಕೊಟಕೂರು ತಾಲೂಕು ಶ್ರೀಶೈಲದಲ್ಲಿರುವ ಶ್ರೀಮಲ್ಲಿಕಾರ್ಜುನಸ್ವಾಮಿಯವರ ದೇವಾಲಯವು ಭರತಖಂಡದಲ್ಲಿರುವ, ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಮತ್ತು ಶ್ರೀ ಭ್ರಮರಾಂಬಾ ದೇವಾಲಯವು ಭರತಖಂಡದಲ್ಲಿರುವ ಹದಿನೆಂಟು ಶಕ್ತಿಗಳಲ್ಲಿ ಒಂದಾಗಿದೆ. ಈ ಕಾರಣದಿಂದ ಈ ದೇವತೆಗಳು ಭರತಖಂಡದಲ್ಲಿರುವ ಸಮಸ್ತ ಹಿಂದುಗಳ ಸೇವೆಗೆ ಪಾತ್ರರಾಗಿರುತ್ತಾರೆ.

ದೇವಾಲಯದ ಟ್ರಸ್ಟಿಗಳು.

ಪುಷ್ಪಗಿರಿ ಪೀಠದ ಶ್ರೀ ಶಂಕರಾಚಾರ್ಯ ಶ್ರೀಮದಭಿನವೋದ್ದಂಡ ವಿದ್ಯಾನರಸಿಂಹಭಾರತೀಸ್ವಾಮಿಗಳವರು ಈ ದೇವಾಲಯದ ಟ್ರಸ್ಟಿಗಳಾಗಿರುತ್ತಾರೆ.

ಮೇಲ್ವಿಚಾರಣೆ.

ದೇವಾಲಯದ ಮೇಲ್ವಿಚಾರಣೆಯು ಕರ್ನೂಲ್ ಡಿಸ್ಟ್ರಿಕ್ಟ್ ಕೋರ್ಟಿನಿಂದ 5-2-1929 ರಲ್ಲಿ 5 ಜನ ಮೆಂಬರುಗಳಿಂದ ಕೂಡಿದ 'ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್' ಎಂಬ ಬೋರ್ಡಿಗೆ ವಹಿಸಲ್ಪಟ್ಟಿತು. ಬೋರ್ಡಿನವರು 22-2-33 ಮತ್ತು 27-3-33 ನೇ ತಾರೀಖುಗಳ ದಿವಸ ಕ್ರಮವಾಗಿ ಶಿವರಾತ್ರಿ ಮತ್ತು ಯುಗಾದಿ ಉತ್ಸವಗಳನ್ನು ನೆರವೇರಿಸಿದರು.

ಉತ್ಸವಗಳ ಅವಧಿ.

ಉತ್ಸವಗಳು ಡಿಸೆಂಬರ್ ತಿಂಗಳ ಮಧ್ಯಭಾಗದಲ್ಲಿ ಮಕರಸಂಕ್ರಾಂತಿಯ ದಿವಸ ಶ್ರೀ ಪಾರ್ವತೀದೇವಿ ಮತ್ತು ಮಲ್ಲಿಕಾರ್ಜುನಸ್ವಾಮಿಯವರ ವಿವಾಹದಿಂದ ಪ್ರಾರಂಭವಾಗುವವು. ವಿವಾಹವು ಒಂದು ದಿವಸದಲ್ಲಿ ಮುಗಿದುಹೋಗುವದು ಮತ್ತು ಆ ದಿನ ಬೆಂಚರಿಗೆ ಅನ್ನೋದಕಗಳನ್ನು ಕೊಡಲಾಗುವದು. ಈ ಉತ್ಸವಕ್ಕೆ ಯಾತ್ರಿಕರಾರೂ ಬರುವದಿಲ್ಲ.

ಶಿವರಾತ್ರಿ ಮತ್ತು ಯುಗಾದಿ.

ಶಿವರಾತ್ರಿಯಾದನಂತರ ಚೈತ್ರ ಶುದ್ಧ ಪೌರ್ಣಿಮೆಯವರೆಗೆ ಒಂದು ವಾರದವರೆಗೂ ನಿತ್ಯೋತ್ಸವಗಳೂ, ಮಂಗಳವಾರಗಳಲ್ಲಿ ಶ್ರೀ ಭ್ರಮರಾಂಬಾದೇವಿಗೆ ವಿಶೇಷ ಪೂಜೆಗಳೂ ನಡೆಯುವುವು. ಈ ಕಾಲದಲ್ಲಿ ಕರ್ಣಾಟಕಪ್ರಾಂತಗಳಿಂದ ಭಕ್ತಾದಿಗಳು ವಿಶೇಷವಾಗಿ ಬರುವರು.

ಯುಗಾದಿ ಮತ್ತು ಮೈಸೂರು.

'ಮೈಸೂರು ಕನ್ಯಾ' ಎಂದು ಪ್ರಸಿದ್ಧಿಯನ್ನು ಪಡೆದಿರುವ ಶ್ರೀ ಭ್ರಮರಾಂಬಾ ದೇವಿಯನ್ನು ಮೈಸೂರು ಜನರು ತಮ್ಮ ದೇಶದವಳೆಂದು ಹೇಳುತ್ತಾರೆ. ಮೈಸೂರು ಸಂಸ್ಥಾನದಿಂದ ಅನೇಕಜನ ಭಕ್ತರು ಇಪ್ಪತ್ತು ಮೂವತ್ತು ಜೊತೆ ಎತ್ತುಗಳೊಡನೆ ಕಾಲ್ನಡಿಗೆಯಿಂದಲೇ ಪ್ರಯಾಣಮಾಡಿ ಯುಗಾದಿಯ ದಿವಸ ದೇವಸ್ಥಾನವನ್ನು ತಲುಪುತ್ತಾರೆ. ಹೊಸವರ್ಷದ ದಿವಸ ಅವರು ಶ್ರೀ ಭ್ರಮರಾಂಬೆಗೆ ವಿಶೇಷ ಪೂಜೆಗಳನ್ನು ಮಾಡಿ ನೂತನ ವಸ್ತ್ರಾಭರಣಗಳನ್ನು ಸಮರ್ಪಿಸಿ, ಕುಸುಮಗಳಿಂದ ಅಲಂಕರಿಸುತ್ತಾರೆ. ಮತ್ತು ದೇವಿಯ ಮೈಮೇಲಿಂದ ಒಂದೆರಡು ಪುಷ್ಪಗಳು ಕೆಳಕ್ಕೆ ಬೀಳುವವರೆಗೂ ದೇವಿಯ ಮುಂದೆ ನರ್ತನಮಾಡುತ್ತಾರೆ. ದೇವಿಯ ಅಂಗದ ಗೊತ್ತಾದ ಭಾಗದಿಂದ ಬೀಳುವ ಪುಷ್ಪಕ್ಕೆ ಅವರು ವಿಶೇಷ ಮಹತ್ವವನ್ನು ಕೊಡುತ್ತಾರೆ. ಅವರು ಆ ಪುಷ್ಪಗಳನ್ನು ಬಹಳ ಪವಿತ್ರವಾದುವುಗಳೆಂದು ಭಾವಿಸಿ, ತಮ್ಮೊಡನೆ ತೆಗೆದುಕೊಂಡುಹೋಗುತ್ತಾರೆ. ಅನಂತರ ಅವರು ಮಲ್ಲಿಕಾರ್ಜುನ ದೇವಾಲಯದ ಮುಂದೆ ಹಾಡುಗಳನ್ನು ಹಾಡುತ್ತಾರೆ. ಮತ್ತು ಶ್ರೀ ಭ್ರಮರಾಂಬಾದೇವಿಯನ್ನು ಬಹಳದೂರದಿಂದ ಕರೆತಂದಿರುವದರಿಂದ ಆಕೆಯನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಬೇಕೆಂದು ಪ್ರಾರ್ಥಿಸುವರು. ಈ ಕಾರ್ಯಕ್ರಮಗಳು ಬಹು ಸಂತೋಷದಾಯಕಗಳಾಗಿರುತ್ತವೆ.

ಕಂಬಿಗಳು.

ಕಂಬಿಯವರು ಎನ್ನುವವರು, ಕರ್ನಾಟಕಪ್ರಾಂತ್ಯದ ವೀರಶೈವ ಜನಾಂಗದಲ್ಲಿ ಪಕ್ಷಸ್ವತಂತ್ರರಾಗಿ ಪ್ರಾಮುಖ್ಯತೆಯನ್ನು ಪಡೆದಿರುವ ಜನರಿಗೆ ಸಂಬಂಧಪಟ್ಟ ಪವಿತ್ರ ಭಕ್ತರಾಗಿರುತ್ತಾರೆ. ಅವರು ಪ್ರತಿ ವರ್ಷವೂ ದೇವಸ್ಥಾನಕ್ಕೆ ಬಂದು ತಮ್ಮ ಯಜಮಾನರಿಗೆ ಪ್ರಸಾದವನ್ನು ತೆಗೆದುಕೊಂಡು ಹೋಗುತ್ತಾರೆ. ಈ ಪವಿತ್ರಕಾರ್ಯಕ್ಕಾಗಿಯೇ ಅವರು ಕಳುಹಿಸಲ್ಪಡುತ್ತಾರೆ ಮತ್ತು ಅದಕ್ಕಾಗಿ ಪ್ರತಿಫಲವೂ ಕೊಡಲ್ಪಡುತ್ತದೆ.

ಶ್ರೀಶೈಲವು ವೀರಶೈವಜನಾಂಗದವರಿಂದ ಭೂಲೋಕದ ಕೈಲಾಸದಂತೆ ಗೌರವಿಸಲ್ಪಡುತ್ತದೆ. ಕಂಬಿಗಳಿಂದ ಪೂಜೆಮಾಡಿಸುವದು ಬಹಳ ಪುರಾತನ ಪದ್ಧತಿಯಾಗಿದೆ. ರೈಲ್ವೇ ಸಂಬಂಧವು ಇಲ್ಲದೇ ಇದ್ದಾಗ, ದೇವಾಲಯದ ಪೂಜೆಯು, ದೇವಸ್ಥಾನಕ್ಕೆ ಖುದ್ದಾಗಿ ಬರುವದಕ್ಕೆ ಸಾಧ್ಯವಿಲ್ಲದ ಭಕ್ತರಿಂದ ಕಳುಹಿಸಲ್ಪಟ್ಟ ಕಂಬಿಗಳ ಮುಖಾಂತರ ನಡೆಯುತ್ತಿತ್ತು ಮತ್ತು ಈ ಪದ್ಧತಿಯು ಇನ್ನೂ ಆಚರಣೆಯಲ್ಲಿದೆ. ಶ್ರೀಶೈಲಕ್ಕೆ ಹೋಗಿ ಬರುವದು ಸಾಧ್ಯವಿಲ್ಲವೆಂದೂ, ಈ ಪುಣ್ಯಕ್ಷೇತ್ರಕ್ಕೆ ಪ್ರಯಾಣಮಾಡಿ ಜೀವಸಹಿತ ಹಿಂತಿರುಗುವುದು ಅಸಂಭವವೆಂದೂ, ಕೆಲವು ಜನರ ಮನಸ್ಸಿನಲ್ಲಿ ಒಂದು ವಿಧವಾದ ಭೀತಿಯು ಇನ್ನೂ ಇದ್ದೇ ಇರುವದು.

ಗಣಾಚಾರಿಗಳು.

ಗಣಾಚಾರಿಗಳೆನ್ನುವವರು ಉತ್ತರ ಹಿಂದೂಸ್ಥಾನದ ಪಂಡಾ ಜನರಂತೆ ಯಾತ್ರಿಕರನ್ನು ಒಟ್ಟುಗೂಡಿಸಿ, ಅವರಿಗೆ ಮಾರ್ಗವನ್ನು ತೋರಿಸುವರು ಮತ್ತು ಅದಕ್ಕಾಗಿ ಅವರಿಂದ ಪ್ರತಿಫಲಗಳನ್ನು ಹೊಂದುವರು.

ಕಂಬಿಗಳ ಮತ್ತು ಗಣಾಚಾರಿಗಳ ಸಂಖ್ಯೆಯು ವರ್ಷವರ್ಷಕ್ಕೂ ಕಡಿಮೆಯಾಗುತ್ತ ನಡೆದಿರುವದು. ರೈಲ್ವೇ ಮತ್ತು ಮೋಟಾರ್ ಸರ್ವಿಸುಗಳಿಂದ ಪ್ರಯಾಣದ ಕಷ್ಟವೂ ಮತ್ತು ಅಪಾಯವೂ ಬಹಳಮಟ್ಟಿಗೆ ಕಡಿಮೆಯಾಗಿರುವದೇ ಇದಕ್ಕೆ ಕಾರಣವಾಗಿರಬಹುದು.

ಯಾತ್ರಿಕರ ಸಂಖ್ಯೆ.

ಎಲ್ಲ ಕಡೆಯಲ್ಲಿಯೂ ಆವರಿಸುವ ಆರ್ಥಿಕ ಮುಗ್ಗಟ್ಟು, ಶಿವರಾತ್ರಿ ಮತ್ತು ಯುಗಾದಿ ಉತ್ಸವಗಳಿಗೆ ಬರುತ್ತಿದ್ದ ಯಾತ್ರಿಕರ ಸಂಖ್ಯೆಯ ಮೇಲೂ ತನ್ನ ಪ್ರಭಾವವನ್ನು ಬೀರಿರುವದು. ಕಳೆದವರ್ಷ ಶಿವರಾತ್ರಿಯ ಕಾಲದಲ್ಲಿ 6,100 ದರ್ಶನದ ಟಿಕೆಟ್ಟುಗಳು ಮಾರಲ್ಪಟ್ಟಿದ್ದು, ಈ ಸಾರೆ ಅದು 5,000 ಕ್ಕೆ ಇಳಿದಿರುತ್ತದೆ. ಕಳೆದ ವರ್ಷ 20,000 ಜನ ಯಾತ್ರಿಕರು ಬಂದಿದ್ದು ಈ ಸಾರೆ 15,000 ಜನರು ಮಾತ್ರ ಬಂದಿದ್ದರೆಂದು ಅಂದಾಜು ಮಾಡಲ್ಪಟ್ಟಿರುವದು.

ಕಳೆದ ವರ್ಷ ಯುಗಾದಿಯಲ್ಲಿ 607 ದರ್ಶನದ ಟಿಕೆಟ್ಟುಗಳು ಮಾರಲ್ಪಟ್ಟಿದ್ದು, ಈ ಸಾರೆ 778 ಟಿಕೆಟ್ಟುಗಳು ಮಾರಲ್ಪಟ್ಟವು.

ಶಿವರಾತ್ರಿ ಉತ್ಸವಕ್ಕೆ ಶ್ರೀಯುತರುಗಳಾದ ಕೆ. ಎಸ್. ವೆಂಕಟಾಚಲ ಅಯ್ಯರ್, ಡಿ|| ಜಡ್ಜ್, ಕರ್ನೂಲ್, ರಾವ್‌ಸಾಹೇಬ್ ಬೆಳ್ಳಿಯಪ್ಪ, ಡಿ|| ಫಾರೆಸ್ಟ್ ಆಫೀಸರ್, ಕರ್ನೂಲ್, ಕೆ. ಎಸ್. ಬಸವರಾಜೇ ಅರಸ್, ಸಬ್-ಡಿವಿಜನಲ್ ಆಫೀಸರ್, ಮೈಸೂರು, ಮಲ್ಲಿಕಾರ್ಜುನಪ್ಪ, ರಿಟೈರ್ಡ್ ಜೈಲ್ ಸೂಪರಿಂಟೆಂಡೆಂಟ್, ಮೈಸೂರು, ಮತ್ತು ಎಸ್. ಎಸ್. ಅಲೂರು, ಸಬ್-ಜಡ್ಜ್, ಇಸ್ಲಾಂಪೂರ, ಸಾತಾರಾ ಡಿ|| ಇವರೇ ಮೊದಲಾದ ದೊಡ್ಡದೊಡ್ಡ ಅಧಿಕಾರಿಗಳು ಆಗಮಿಸಿದ್ದರು. ಪೂನಾ, ಮುಂಬಯಿ, ಅಹಮದಾಬಾದ, ಹೈದರಾಬಾದ ಮತ್ತು ಸೋಲಾಪುರದಿಂದಲೂ ಅನೇಕ ಜನ ಪ್ರಮುಖ ಯಾತ್ರಿಕರು ಆಗಮಿಸಿದ್ದರು.

ಜಾತ್‌ಫ್ರೇಲ್ ಸಂಸ್ಥಾನದ ಮಹಾರಾಣಿಯವರು ಯುಗಾದಿಯಲ್ಲಿ ಯುವರಾಜರೊಡನೆ ದೇವಸ್ಥಾನಕ್ಕೆ ಆಗಮಿಸಿದ್ದರು.

ಆರೋಗ್ಯರಕ್ಷಣೆಯ ಏರ್ಪಾಡುಗಳು.

ಆರೋಗ್ಯರಕ್ಷಣೆಯ ಏರ್ಪಾಡುಗಳು ಕರ್ನೂಲ್ ಡಿ|| ಹೆಲ್ತ್ ಆಫೀಸರಾದ ಕ್ಯಾಪ್ಟನ್ ಟಿ. ಆರ್. ರಂಗಸ್ವಾಮಿ, ಎಂ.ಬಿ.ಬಿ.ಎಸ್. ಬಿ.ಎಸ್.ಎಸ್.ಸಿ., ಡಿ.ಪಿ.ಆರ್.ಓ. ರವರ ಖುದ್ದು ಮೇಲ್ವಿಚಾರಣೆಗೆ ಒಳಪಟ್ಟಿದ್ದವು.

ಸಾಕಾದಷ್ಟು ವಸತಿಗೃಹಗಳನ್ನು ಏರ್ಪಡಿಸಲಾಗಿತ್ತು ಮತ್ತು ಎಲ್ಲ ಜೋಪಡಿಗಳೂ ಆಕ್ರಮಿಸಲ್ಪಟ್ಟಿದ್ದವು. ಕೆಲವು ಜೋಪಡಿಗಳು ಸಮರ್ಪಕವಾಗಿರಲಿಲ್ಲ. ಮುಂದಿನ ವರ್ಷ ಈ ನ್ಯೂನತೆಯನ್ನು ಹೋಗಲಾಡಿಸುವ ವ್ಯವಸ್ಥೆಯನ್ನು ಮಾಡಲಾಗುವದು. ಪ್ರಮುಖರಾದ ಅಧಿಕಾರಿಗಳಿಗೂ ಮತ್ತು ಯಾತ್ರಿಕರಿಗೂ ದೇವಾಲಯದ ಪ್ರಾಕಾರದ ಹೊರಭಾಗದಲ್ಲಿ ವಸತಿಯನ್ನೇರ್ಪಡಿಸಲಾಗಿತ್ತು.

ನೀರಿನ ವ್ಯವಸ್ಥೆ.

ನೀರು ಸಮೃದ್ಧಿಯಾಗಿ ಒದಗಿಸಲ್ಪಟ್ಟಿತ್ತು. ದೇವಾಲಯದ ಪ್ರಾಕಾರದ ಒಳಗಿರುವ ಭಾವಿಗಳಿಗೆ ದೇವಾಲಯದ ಪಶ್ಚಿಮದಿಕ್ಕಿನಲ್ಲಿರುವ ಎನುಗುಲಚೆರುವು ಕೆರೆಯೇ ಮುಖ್ಯಆಧಾರವಾಗಿದೆ. ಕೆರೆಯಲ್ಲಿ ಸಾಕಾದಷ್ಟು ನೀರು ಇದ್ದುದರಿಂದ ದೇವಾಲಯದ ಪ್ರಾಕಾರದ ಒಳಗಿರುವ ಭಾವಿಗಳು ಒಣಗಲಿಲ್ಲ.

ಕರ್ನೂಲ್ ಡಿಸ್ಟ್ರಿಕ್ಟ್ ಬೋರ್ಡಿನವರು ದೇವಾಲಯದ ಈಶಾನ್ಯದಿಕ್ಕಿನಲ್ಲಿರುವ ಕೆರೆಯಿಂದ ಪಂಪಿನ ಮೂಲಕ ನೀರನ್ನು ಎತ್ತಿಸಿ ತೊಟ್ಟಿಗಳನ್ನು ಭರ್ತಿಮಾಡಿಸುತ್ತಲೇ ಇದ್ದರು. ಯಾತ್ರಿಕರು ಈ ತೊಟ್ಟಿಗಳ ನೀರನ್ನು ನಲ್ಲಿಗಳ ಮೂಲಕ ಉಪಯೋಗಿಸಿಕೊಳ್ಳುತ್ತಿದ್ದರು.

[6ನೆಯ ಪುಟವನ್ನು ನೋಡಿ.]

ರೇಣುಕವಿಜಯಪುರಾಣಪ್ರವಚನ.



ಬಹು ಮನೋಹರವಾಗಿ ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾದ ವೇ|| ನಂಜನಗೂಡು ಶ್ರೀಕಂಠ ಶಾಸ್ತ್ರಿಗಳವರು ಕನ್ನಡದಲ್ಲಿ ಭಾಮಿನೀಷಟ್ಪದೀರೂಪದಿಂದ ಶ್ರೀ ಜಗದ್ಗುರು ರೇಣುಕಾರ್ಯರ ಪವಿತ್ರ ಚರಿತ್ರವನ್ನು "ರೇಣುಕವಿಜಯಪುರಾಣ" ಎಂಬ ಹೆಸರಿನಿಂದ ರಚಿಸಿರುವ ವಿಷಯವು ಸರ್ವರಿಗೂ ವೇದ್ಯವಾದುದಾಗಿದೆ. ಈ ಕವಿಗಳ ಕವಿತಾಶಕ್ತಿಯು ಅತ್ಯದ್ಭುತವಾದುದು. ಇವರ ಕವಿತಾಶಕ್ತಿಯನ್ನು ಇಡೀ ಕರ್ನಾಟಕದೇಶವೇ ಮುಕ್ತಕಂಠದಿಂದ ಕೊಂಡಾಡುತ್ತದೆ. ಇಂಥ ಮಹಾಕವಿಗಳಿಂದ ವಿರಚಿತವಾಗಿರುವ ಈ ಮಹಾಪುರಾಣದ ರಚನಾರೀತಿಯನ್ನು ಬೇರೆ ಕೊಂಡಾಡಬೇಕಾಗಿಲ್ಲ. ಸದ್ಯಃ ಪ್ರಾಪ್ತವಾಗಿರುವ ಪರಮಪವಿತ್ರವಾದ ಶ್ರಾವಣಮಾಸದಲ್ಲಿ ಈ ಮಹಾಪುರಾಣವು ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಅತ್ಯಂತ ವೈಭವದಿಂದ ಪ್ರಾರಂಭಿಸಲ್ಪಟ್ಟಿರುವ ವಿಷಯವನ್ನು ಕೇಳಿದರೆ ಯಾವ ಗುರುಭಕ್ತರಿಗೆ ಸಂತೋಷವಾಗಲಿಕ್ಕಿಲ್ಲ? ಅನೇಕ ಜನರು ತಾವು ವೀರಶೈವಮತಾನುಯಾಯಿಗಳಾಗಿದ್ದರೂ ತಮ್ಮ ಮತಸ್ಥಾಪನಾಚಾರ್ಯರ ಲೀಲೆಗಳನ್ನೇ ಅರಿಯದಾಗಿದ್ದರು. ಆಚಾರ್ಯರ ಚರಿತ್ರಗಳೆಲ್ಲಾ ಮೂಲೆಗುಂಪಾಗಿ ಬಿದ್ದುಹೋಗಿದ್ದವು. ಅವೆಲ್ಲವೂ ಈಗೀಗ ಜಗದಾಚಾರ್ಯರ ಆಶೀರ್ವಾದಬಲದಿಂದ ಒಂದೊಂದಾಗಿ ಹೊರಬೀಳಹತ್ತಿರುವುದು ವೀರಶೈವಜನಾಂಗದ ಸುಕೃತವಿಶೇಷವೆಂದೇ ಹೇಳಬೇಕಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣದಂತೆಯೇ ಉಳಿದ ಆಚಾರ್ಯರ ಪುರಾಣಗಳಾದರೂ ಕ್ರಮೇಣ ಪ್ರಕಟವಾಗುತ್ತ ಹೋಗಬೇಕಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರ ಪವಿತ್ರಚರಿತ್ರಗಳು ಪ್ರಾಚೀನ ಕವಿಗಳಿಂದ ಹೇರಳವಾಗಿ ರಚಿಸಲ್ಪಟ್ಟವೆ. ಈ ಪೂಜ್ಯಪಾದರ ಪವಿತ್ರಚರಿತ್ರಗಳು ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ ಮೊದಲಾದ ಪ್ರಾಚೀನ ಪುಸ್ತಕಾಲಯಗಳಲ್ಲಿ ದೊರೆಯುತ್ತವೆ. ಆಂಧ್ರದೇಶನಿವಾಸಿಗಳಾದ ಆರಾಧ್ಯಬ್ರಾಹ್ಮಣ ಬಂಧುಗಳಲ್ಲಿ ಸಂಸ್ಕೃತಭಾಷೆಯಲ್ಲಿ ದೊರೆಯುತ್ತವೆ. ಇವುಗಳನ್ನೆಲ್ಲಾ ಶೋಧಿಸುವ ಕಾರ್ಯದಲ್ಲಿ ಗುರುಭಕ್ತರು ಮುಂದುವರಿದು ಪುಣ್ಯಕರವಾದ ಈ ಮಹಾಕಾರ್ಯವನ್ನು ಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸದ್ಯಃ ರೇಣುಕವಿಜಯಪುರಾಣವನ್ನು ಪ್ರಾರಂಭಿಸಿರುವ ಪ್ರತಿಯೊಂದು ಗ್ರಾಮದವರೂ ಗುರುಸಾರ್ವಭೌಮರ ಪವಿತ್ರಚರಿತ್ರವನ್ನು ಶ್ರವಣಮಾಡಿ ಧನ್ಯರಾಗಬೇಕಲ್ಲದೆ ಸಮಾಪ್ತಿಸಮಯದಲ್ಲಿ ಮಹಾಗಣಾರಾಧನೆಯನ್ನು ನೆರವೇರಿಸಿ ಸಮಾಪ್ತಿಮಹೋತ್ಸವವನ್ನು ಅಸಾಧಾರಣವೈಭವದಿಂದ ನೆರವೇರಿಸಬೇಕೆಂದಾಶಿಸುತ್ತೇವೆ. ಈ ವರ್ಷ ಯಾವ ಯಾವ ಗ್ರಾಮಗಳಲ್ಲಿ ಈ ಮಹಾಪುರಾಣವು ಪ್ರಾರಂಭವಾಗಿದೆಯೋ ಆಯಾ ಗ್ರಾಮದವರೆಲ್ಲರೂ ಪುರಾಣಮಹೋತ್ಸವಸಂಬಂಧಗಳಾದ ಲೇಖಗಳನ್ನು ನಮ್ಮಲ್ಲಿಗೆ ಕಳುಹಿಸಬೇಕು. ಕಳುಹಿಸಿದಲ್ಲಿ ಎಲ್ಲಾ ವಿಷಯವೂ ಪತ್ರಿಕೆಯಲ್ಲಿ ಪ್ರಸಿದ್ಧಿಸಲ್ಪಡುವುದು. ಇದರಂತೆಯೇ ಮುಂದಿನ ಸಂವತ್ಸರದ ಶ್ರಾವಣ ಮಾಸದಲ್ಲಿಯಾದರೂ ಗುರುಭಕ್ತರು ಇದಕ್ಕಿಂತಲೂ ಹೆಚ್ಚು ಉತ್ಸಾಹದಿಂದಲೂ, ಭಕ್ತಿಯಿಂದಲೂ ಈ ಪುರಾಣ ಪ್ರವಚನಕಾರ್ಯವನ್ನು ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಇಹಪರಸುಖಸಂಪತ್ತನ್ನು ಹೊಂದಬೇಕೆಂದು ಬಯಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ಆಗಸ್ಟ್ ೮ ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕಮಹೋತ್ಸವವು ನಡೆದ ದಿನವೆಂದು ರಾಜಧಾನಿಯಲ್ಲಿ ೨೧ ಗುಂಡುಗಳು ಹಾರಿಸಲ್ಪಟ್ಟವು.

ಲಂಡನ್ನಿಗೆ ಪ್ರಯಾಣಮಾಡಿದ್ದ ನಮ್ಮ ಸಂಸ್ಥಾನದ ದಿವಾನ್‌ಸಾಹೇಬರವರು ಈ ತಿಂಗಳು ೨೬ ನೆಯ ತಾರೀಖಿನ ದಿವಸ ಬೆಂಗಳೂರಿಗೆ ಆಗಮಿಸುವರೆಂದು ತಿಳಿದುಬರುತ್ತದೆ.

ವೃದ್ಧಪಿತಾಮಹ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ವರ್ಧಂತ್ಯುತ್ಸವವು ಇದೇ ಆಗಸ್ಟ್ ೨೨ ನೇ ತಾರೀಖು ಭಾನುವಾರ ದಿವಸ ನಡೆಯತಕ್ಕದ್ದೆಂದು ನಿರ್ಧರಿಸಲ್ಪಟ್ಟಿದೆ.

ಸದ್ಯಃ ಎಂ. ಎಸ್. ಎಂ. ರೈಲ್ವೆ ಕಂಪೆನಿಯವರ ವಶದಲ್ಲಿರುವ ಬೆಂಗಳೂರಿನಿಂದ ಹರಿಹರದವರೆಗಿನ ಮತ್ತು ಬೆಂಗಳೂರಿನಿಂದ ಹಿಂದೂಪುರದವರೆಗಿನ ರೈಲ್ವೇ ಲೈನುಗಳನ್ನು ೧೯೩೬ ನೆಯ ವರ್ಷದಲ್ಲಿ ಕಂಪೆನಿಯವರು ಮೈಸೂರುಸರಕಾರಕ್ಕೆ ಒಪ್ಪಿಸುವವರಾಗಿದ್ದಾರೆ.

ಸೊರಬ ತಾಲೂಕು ಆನವಟ್ಟಿ ಹೋಬಳಿ ಹಿರೇಇಡಗೋಡು ಗ್ರಾಮದ ಹತ್ತರ ಒಂದು ಹುಲಿಯು ಸೇರಿಕೊಂಡು ದನಕರುಗಳನ್ನು ಕೊಂದು ರೈತರಿಗೆ ತುಂಬಾ ನಷ್ಟವನ್ನುಂಟುಮಾಡುತ್ತಿರುವದರಿಂದ ಸದರಿ ಹುಲಿಯನ್ನು ಎರಡು ತಿಂಗಳೊಳಗಾಗಿ ಯಾರು ಬೇಕಾದರೂ ಶಿಕಾರಿಮಾಡಬಹುದೆಂದು ಫಾರೆಸ್ಟ್ ಕನ್ಸರ್ವೇಟರವರು ಅಪ್ಪಣೆಮಾಡಿರುತ್ತಾರೆ.

ಬೆಂಗಳೂರು ನಗರದ ಮಾಡರ್ನ್ ಹಿಂದೂ ಹೋಟೆಲಿನಲ್ಲಿದ್ದ ಮ|| ದೇಶಮುಖಿ ಗೋವಿಂದರಾಯರೆಂಬವರು ಮದರಾಸಿನಲ್ಲಿ ಕೆಲವು ಜನರಲ್ಲಿ ಹಣವನ್ನು ಸಾಲಮಾಡಿ ಮೋಸಪಡಿಸಿದರೆಂಬ ಕಾರಣದಮೇಲೆ, ಮದರಾಸ್ ಪೋಲೀಸರ ಅಪೇಕ್ಷೆಯಂತೆ ಬೆಂಗಳೂರು ಪೋಲೀಸರು ಕಳೆದ ೫ ನೆಯ ತಾರೀಖು ಶನಿವಾರ ಬೇಗ್ಗೆ ಅವರನ್ನು ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ರಾಜಧಾನೀ ನಿವಾಸಿಗಳಾದ ಹೊಸಮಠದ ಪಂ|| ಚರಮೂರ್ತಿ ಶ್ರೀ ಬಸವಲಿಂಗಸ್ವಾಮಿಗಳವರನ್ನು ನಮ್ಮ ಶ್ರೀಮನ್ಮಹಾರಾಜರವರು ಆಸ್ಥಾನವಿದ್ವಾಂಸರನ್ನಾಗಿ ಮಾಡಿದ ಸಂತೋಷಕ್ಕೋಸ್ಕರ ಬೆಂಗಳೂರು ವೀರಶೈವ ವಿದ್ಯಾವರ್ಧಕ ಫಂಡಿನವರೇ ಮೊದಲಾದ ಮೈಸೂರು ದೇಶದ ನಾನಾ ಭಾಗದವರು ತಮ್ಮ ತಮ್ಮಲ್ಲಿ ಸಭೆಗೂಡಿ ತಮ್ಮ ಆನಂದವನ್ನು ವ್ಯಕ್ತಗೊಳಿಸಿ ಮಹಾಪ್ರಭುಗಳವರಿಗೆ ತಮ್ಮ ಕೃತಜ್ಞತೆಯನ್ನು ಸಮರ್ಪಿಸಿರುತ್ತಾರೆ.

ಇದೇ ಆಗಸ್ಟ್ ೬ ನೆಯ ತಾರೀಖಿನ ದಿವಸ ಬೆಂಗಳೂರುನಗರದ ಪೋಲೀಸರು ಧಾರವಾಡದ ಪೋಲೀಸರ ಅಪೇಕ್ಷೆಯಂತೆ ಬೆಂಗಳೂರುನಗರದ ಮುನಿಸಿಪಲ್ ಕೌನ್ಸಿಲರೂ, ಅಡ್ವೋಕೇಟರೂ ಆದ ಶ್ರೀ|| ಎಸ್. ವೆಂಕಟಪತಯ್ಯನವರನ್ನು ದಸ್ತಗಿರಿಮಾಡಿ ಕಂಟೋನ್ಮೆಂಟ್ ಪೋಲೀಸರ ವಶಕ್ಕೆ ಒಪ್ಪಿಸಿದರು. ಮರುದಿನ ದಂಡಿನ ಮ್ಯಾಜಿಸ್ಟ್ರೇಟರು ಅವರನ್ನು ಧಾರವಾಡಕ್ಕೆ ಕಳುಹಿಸಿದರೆಂದೂ, ೧೦ ನೇ ತಾರೀಖಿನ ದಿವಸ ಧಾರವಾಡದ ಡಿ|| ಮ್ಯಾಜಿಸ್ಟ್ರೇಟರು ಅವರನ್ನು ವಿಚಾರಣೆಗಾಗಿ ಕಾರವಾರಕ್ಕೆ ಕಳುಹಿಸಿದರೆಂದೂ ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ವಾಸವಾಗಿದ್ದ ೧೬ ವರ್ಷದ ಮಾಣಿಕ್ಯಮ್ಮ ಎಂಬ ಸ್ತ್ರೀಯಳು ಕಳೆದ ಭಾನುವಾರ ಹಗಲುಹೊತ್ತಿನಲ್ಲಿ ಮನೆಯ ಬಾಗಿಲನ್ನು ಹಾಕಿಕೊಂಡು ಸೀರೆಗೆ ಸೀಮೆಯೆಣ್ಣೆಯನ್ನು ಹುಯ್ದು ಹಚ್ಚಿಕೊಂಡು ಆತ್ಮಹತ್ಯಮಾಡಿಕೊಂಡಳು. ಇವಳು ಉರಿಯ ಬೇಗೆಯಿಂದ ನರಳುತ್ತಿದ್ದುದನ್ನು ಕೇಳಿದ ಅಕ್ಕಪಕ್ಕದ ಮನೆಯವರು ಮನೆಗೆ ಹೋಗಿ ಚಿಕಿತ್ಸೆಮಾಡಿಸಿದರೂ ಪ್ರಯೋಜನವಾಗಲಿಲ್ಲ. ಶಿಪಾಯಿ ಕೆಲಸದಲ್ಲಿದ್ದ ಇವಳ ಪತಿಯು ನಂಜನಗೂಡಿನಿಂದ ಬಂದು ತನಗೆ ಯಾರ ಮೇಲೂ ಅನುಮಾನವಿಲ್ಲವೆಂದು ಹೇಳಿಕೆಯನ್ನು ಕೊಟ್ಟನಂತರ ಪೋಲೀಸರು ಶವ ಸಂಸ್ಕಾರಕ್ಕೆ ಅವಕಾಶಕೊಟ್ಟರು.

ಈಗ್ಗೆ ಕೆಲವು ದಿವಸಗಳ ಹಿಂದೆ ಯಲ್ಲಮ್ಮ ಎಂಬೊಬ್ಬ ಮೊದಲಿಯಾರ್ರ ಹೆಂಗಸು ಒಂದು ಹಳ್ಳಿಯಿಂದ ಶಿವಮೊಗ್ಗೆಗೆ ಬರುತ್ತಿರುವಾಗ ದಾರಿಯಲ್ಲಿ ಕೆಂಚಪ್ಪ, ಮಹಮದ್ ಬಾಷಾ ಎಂಬ ಇಬ್ಬರು ತರುಣರು ಅವಳನ್ನು ಅಡ್ಡಗಟ್ಟಿ, ಅವಳ ಮೈಮೇಲಿದ್ದ ಆಭರಣಗಳೆಲ್ಲವನ್ನೂ (ಮಾಂಗಲ್ಯವನ್ನೂ ಸಹಬಿಡದೆ) ಸುಲಿಗೆಮಾಡಿ, ಅವಳ ಮಾನಭಂಗಮಾಡಲು ಪ್ರಯತ್ನಿಸಿದರೆಂದೂ, ಆಗ ಆಕೆಯು ತಾನು ಮನೆಯಲ್ಲಿ ಒಂಟಿಯಾಗಿರತಕ್ಕವಳೆಂದು ಹೇಳಿ, ಉಪಾಯದಿಂದ ಅವರಿಬ್ಬರನ್ನೂ ಜೊತೆಯಲ್ಲಿಯೇ ರೈಲ್ವೇ ಸೇತುವೆಯವರೆಗೂ ಕರೆದುಕೊಂಡು ಬಂದು, ಅಲ್ಲಿ ಜನರನ್ನು ಕಂಡಕೂಡಲೇ ಅವರಿಬ್ಬರನ್ನೂ ಬಿಗಿಯಾಗಿ ಹಿಡಿದುಕೊಂಡು ಗಟ್ಟಿಯಾಗಿ ಕೂಗಿಕೊಂಡಳೆಂದೂ, ಕೂಡಲೇ ಜನರು ಮತ್ತು ಪೋಲೀಸರು ಓಡಿಬಂದು ಅವರನ್ನು ದಸ್ತಗಿರಿಮಾಡಿದರೆಂದೂ, ಪೋಲೀಸರು ಯಲ್ಲಮ್ಮನ ಮತ್ತು ಅವಳ ಗಂಡನ ಹೇಳಿಕೆಯನ್ನು ತೆಗೆದುಕೊಂಡು, ಅಪರಾಧಿಗಳ ಮೇಲೆ ಮೊಕದ್ದಮೆ ಹೂಡಿರುತ್ತಾರೆಂದೂ ತಿಳಿದುಬಂದಿದೆ.

ವರ್ತಮಾನಸಂಗ್ರಹ

ಹಿಂದೂಸ್ಥಾನದಲ್ಲಿ ೩೦,೦೦,೦೦೦ ಜನ ಕಿವುಡರಿರುವರಂತೆ!

ರಾಮಾಯಣದ ರಾವಣನು ಬ್ರಾಹ್ಮಣನೋ ಅಲ್ಲವೋ ಎಂಬ ಬಗ್ಗೆ ಮೀರತ್ ನಗರದಲ್ಲಿ ಒಂದು ದೊಡ್ಡ ಚರ್ಚೆಯು ನಡೆಯುತ್ತಿರುವದು.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಪೂರ್ವತೀರಪ್ರದೇಶದಲ್ಲಿ ಬಿಸಲಿನ ತಾಪದಿಂದ ಒಂದು ವಾರದಲ್ಲಿ ಸುಮಾರು ೧೦೦ ಜನರು ಮೃತಪಟ್ಟರು.

ಇಂಗ್ಲೆಂಡಿನ ಸುಮಾರು ೧೧,೦೦೦ ಜನ ರೈತರು 'ಟಿತ್' ಎಂಬ ಧಾರ್ಮಿಕತೆರಿಗೆಯನ್ನು ಕೊಡುವದಿಲ್ಲವೆಂದು ದೊಡ್ಡ ಚಳವಳಿಯನ್ನು ಹೂಡಿರುವರು.

ಇಂಗ್ಲೀಷರು ಅಮೇರಿಕೆಗೆ ಕೊಡಬೇಕಾದ ಸಾಲಕ್ಕಾಗಿ ಹಿಂದೂಸ್ಥಾನದಿಂದ ರವಾನಿಸಲ್ಪಟ್ಟ ಬೆಳ್ಳಿಯ ಪೈಕಿ ೩೪೩ ಟನ್ಗಳ ಬೆಳ್ಳಿಯು ಅಮೇರಿಕೆಗೆ ಸಲ್ಲಿಸಲ್ಪಟ್ಟಿರುವದಂತೆ!

ರಸ್ತೆಗಳಲ್ಲಿ ಮೋಟಾರುಕಾರುಗಳು ವಿಶೇಷವಾಗಿ ಓಡಾಡುವದರಿಂದ, ಅವುಗಳಿಂದ ಕಾರ್ಬನ್ ಮಾನಾಕ್ಸೈಡ್ ಎಂಬ ವಿಷದ ಗಾಳಿಯು ಹೊರಟು ಅನೇಕ ವ್ಯಾಧಿಗಳಿಗೆ ಕಾರಣವಾಗುವದಂತೆ!

ಲೆಸ್ಲಿ ಹವರ್ಡ್ ಎಂಬ ನಟಶ್ರೇಷ್ಠನಿಗೆ ಒಂದು ಚಲನಚಿತ್ರದಲ್ಲಿ ಪಾತ್ರವಹಿಸಲು ಕಂಪೆನಿಯವರು ೨,೪೦,೦೦೦ ರೂಪಾಯಿಗಳನ್ನು ಕೊಡುವದಾಗಿ ಹೇಳಿದರೂ, ಆತನು ಅದನ್ನು ನಿರಾಕರಿಸಿದನಂತೆ!

ಲಾಹೋರ್ ಕಂಟೋನ್ಮೆಂಟಿನಲ್ಲಿ ಇದ್ದಕ್ಕಿದ್ದಹಾಗೆ ಪ್ರಚಂಡಬಿರುಗಾಳಿಯೆದ್ದು ಅನೇಕ ಮನೆಗಳು ನೆಲಸಮವಾದವು. ಅನೇಕ ದನಕರುಗಳು ನಾಶವಾದುವು. ಆದರೆ ಜನರಾರಿಗೂ ಅಪಾಯವುಂಟಾಗಲಿಲ್ಲ.

ಚಪ್ರಾನಗರದ ಒಬ್ಬ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರು ಸದರಿ ಬೋರ್ಡಿನ ಒಬ್ಬಾನೊಬ್ಬ ಕಂಟ್ರಾಕ್ಟದಾರನ ಪಾಲುದಾರರಾಗಿದ್ದರೆಂಬ ಕಾರಣದಮೇಲೆ ಕ್ರಿಮಿನಲ್ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ.

ಇದೇ ಆಗಸ್ಟ್ 4 ನೇ ತಾರೀಖಿನ ದಿವಸ ಗಂಗಾನದಿಯಲ್ಲಿ ಒಂದು ದೋಣಿಯು ಅಕಸ್ಮಾತ್ ಮುಳುಗಿಹೋಯಿತು. ದೋಣಿಯಲ್ಲಿದ್ದ ೩೬ ಜನರಲ್ಲಿ ೨೨ ಜನರು ನೀರಿನ ಪಾಲಾದರು. ೧೪ ಜನರು ಮಾತ್ರ ರಕ್ಷಿಸಲ್ಪಟ್ಟರು.

ಡಾಕ್ಟರ್ ಎಂ. ಎ. ಅನ್ಸಾರಿಯವರು ಆರೋಗ್ಯನಿಮಿತ್ತವಾಗಿ 'ವಿಕ್ಟೋರಿಯಾ' ಎಂಬ ಹಡಗಿನಲ್ಲಿ ಯೂರೋಪಿಗೆ ಪ್ರಯಾಣಬೆಳೆಸಿದರು. ನವೆಂಬರ್ ತಿಂಗಳಲ್ಲಿ ಅವರು ಹಿಂತಿರುಗಿ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ಯಾರಿಸ್ ನಗರದ ಹೆನ್ರಿ ಲೇಮೇರು ಎಂಬಾತನು ಮೇಡಂ ವೈರೋನ್ ಎಂಬಾಕೆಯನ್ನು 3 ಸಾರೆ ವಿವಾಹವಾಗಿ 3 ಸಾರೆ ವಿವಾಹ ವಿಚ್ಛೇದಮಾಡಿಕೊಂಡನು. ಅವನು ಪುನಃ ಅವಳನ್ನೇ ೪ ನೇ ಸಾರೆ ಮದುವೆಯಾಗಿರುವನಂತೆ!

ಸಿನಿಮಾಚಿತ್ರಗಳು ಯಾವಾಗಲೂ ಕತ್ತಲೆಯಲ್ಲಿ ಪ್ರದರ್ಶಿಸಲ್ಪಡುವವಷ್ಟೇ! ಆದರೆ ಇಟಲಿದೇಶದ ಒಬ್ಬ ಶಾಸ್ತ್ರಜ್ಞನು ಒಂದು ಹೊಸಯಂತ್ರವನ್ನು ತಯಾರು ಮಾಡಿ, ಅದರಿಂದ ಬೆಳಕಿನಲ್ಲಿಯೇ ಚಲನಚಿತ್ರಗಳನ್ನು ತೋರಿಸುವಂತೆ ಮಾಡಿರುವನು.

ಲಾಹೋರಿನ ಸಿ. ಐ. ಡಿ. ಕಾನ್ಸ್ಟೆಬಲನೊಬ್ಬನು ಒಬ್ಬ ವರ್ತಕನನ್ನು ಲಾಠಿಯಿಂದ ಹೊಡೆದು ಮೃತಿಹೊಂದುವಂತೆ ಮಾಡಿದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಅಪರಾಧಿಗೆ ೭ ವರ್ಷಗಳ ಕಠಿಣಸಜೆಯನ್ನು ವಿಧಿಸಿದರು.

ಯೂರೋಪ್ ದೇಶದಲ್ಲಿ ಸಂಚರಿಸುತ್ತಿರುವ ತಿರುವಾಂಕೂರು ಮಹಾರಾಜರು, ಅವರ ತಾಯಿ, ಸಹೋದರ ಮತ್ತು ಸಹೋದರಿಯರು, ನಿನ್ನೆಯ ದಿವಸ ಬ್ರಿಂಡಸಿಯಿಂದ ಹೊರಡುವವರಿದ್ದು ಆಗಸ್ಟ್ ೨೪ ಕ್ಕೆ ಮುಂಬಯಿ ತಲಪುವರೆಂದು ತಿಳಿದುಬಂದಿದೆ.

ಅಲಹಾಬಾದಿನಲ್ಲಿರುವ 'ಮೆಯೋಹಾಲ್' ನ ಸಮೀಪದಲ್ಲಿ ಒಂದು ದಿನ ಬೆಳಗ್ಗೆ ಅಳಿಲುಗಳು ಟೆಲಿಫೋನ್ ತಂತಿಗಳನ್ನು ಕಡಿದು ತುಂಡುಮಾಡಿದ್ದವಂತೆ! ಅದನ್ನು ಪುನಃ ಕ್ರಮಪಡಿಸಲು ೬ ಗಂಟೆಗಳ ಕಾಲವು ಹಿಡಿದುದರಿಂದ ಅನೇಕರಿಗೆ ತುಂಬಾ ತೊಂದರೆಯಾಯಿತು.

ಸ್ಪೇನ್‌ದೇಶದ ಸಾರಗೋಸಾದಲ್ಲಿ ಒಬ್ಬ ಸೈನ್ಯದ ಅಧಿಕಾರಿಯು ಮನೆಗೆ ಬಂದ ಕೂಡಲೇ ಆತನ ೫ ವರ್ಷದ ಮಗನು ಓಡಿ ಬಂದು ತಂದೆಯನ್ನು ತಬ್ಬಿಕೊಂಡನು. ಆದರೆ ಹುಡುಗನ ಕೈತಗಲಿ ತಂದೆಯ ಜೇಬಿನಲ್ಲಿದ್ದ ಪಿಸ್ತೂಲು ಹಾರಿ ಹುಡುಗನು ಕೂಡಲೇ ಮೃತಪಟ್ಟನು.

ಜರ್ಮನ್ ಪೋಲೀಸರು ಬರ್ಲಿನ್‌ನಗರದ ಬ್ರಾಡ್‌ಕಾಸ್ಟ ಕಂಪೆನಿಯ ಹೇರ್ ಆಲ್ಫ್ರೆಡ್ ಬ್ರೌನ್ ಎಂಬವರನ್ನೂ, ೪ ಜನ ಅಧಿಕಾರಿಗಳನ್ನೂ ದಸ್ತಗಿರಿ ಮಾಡಿರುವರು. ಇವರು ಮೊದಲಿನಿಂದಲೂ ಹೆಚ್ಚು ಸಂಬಳವನ್ನು ತೆಗೆದುಕೊಳ್ಳುತ್ತಿರುವದೇ ಇವರ ದಸ್ತಗಿರಿಗೆ ಕಾರಣವಂತೆ!

ಅಮೇರಿಕೆಯ ಪೀಟರ್ ಮೆಂಟಿಸ್ ಎಂಬಾತನ ಬಳಿಯಲ್ಲಿ ಅಂಗೋರಾದೇಶದ ಒಂದು ಬೆಕ್ಕು ಇದ್ದಿತು. ಸದರಿ ಬೆಕ್ಕು ಒಂದು ದಿನ ಮೋಟಾರಿಗೆ ಸಿಕ್ಕಿ ಮೃತಪಟ್ಟಿತು. ಅದಕ್ಕಾಗಿ ಪೀಟರನು ಮೋಟಾರ್ ಡ್ರೈವರನಮೇಲೆ ೬೦೦೦ರೂ. ಗಳ ಲುಕ್ಸಾನಿಗೆ ದಾವೆಯನ್ನು ಹೂಡಿರುವನಂತೆ!

ಅಮೇರಿಕಾದೇಶದ ಯಂಗ್ ರಿಚರ್ಡ್ ಸ್ಮಾರ್ಟ್ ಎಂಬ ತರುಣನಿಗೆ ಇದ್ದಕ್ಕಿದ್ದಹಾಗೆ ೬,೦೦,೦೦,೦೦೦ ರೂಪಾಯಿಗಳ ಆಸ್ತಿಯು ದೊರಕಿತು. ಇಷ್ಟು ಅಪಾರವಾದ ಹಣವನ್ನು ಏನುಮಾಡಬೇಕೆಂದು ತಿಳಿಯದೆ, ಬಹಳವಾಗಿ ಯೋಚಿಸಿ ಕಡೆಗೆ ತಾನೊಬ್ಬ ನಟನಾಗಬೇಕೆಂದು ನಿರ್ಧರಿಸಿದನಂತೆ!

ಜಪಾನ್‌ಸರ್ಕಾರದವರು ಯುದ್ಧದ ಹಡಗುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ನಿರ್ಧರಿಸಿರುವದರಿಂದ, ಅಮೇರಿಕಾ ದೇಶದವರೂ ಸಹ ಹೊಸದಾಗಿ ೨೧ ಯುದ್ಧದ ಹಡಗುಗಳನ್ನು ಕಟ್ಟಬೇಕೆಂದು ನಿರ್ಧರಿಸಿರುವರು. ಮತ್ತು ಇದಕ್ಕಾಗಿ ೭೫,೦೦,೦೦,೦೦೦ ರೂಪಾಯಿಗಳನ್ನು ವೆಚ್ಚಮಾಡುವರಂತೆ!

ಬೀರಾರ್ ಪ್ರಾಂತದ ಕಾಂಗ್ರೆಸ್‌ಸಮಿತಿಯ ಅಧ್ಯಕ್ಷರಾಗಿದ್ದ ಮಿ|| ವೀರ ವಾಮನರಾವ್ ಜೋಶಿಯವರು ತಮ್ಮ ಅಧ್ಯಕ್ಷಪದವಿಗೆ ರಾಜೀನಾಮೆಯನ್ನು ಕೊಟ್ಟು, ಮತ್ತೊಂದು ಹೊಸಪಂಗಡವನ್ನು ಸ್ಥಾಪನೆಮಾಡಿ, ಅದಕ್ಕೆ ಎಲ್ಲ ಕಾಂಗ್ರೆಸ್ಸಿನವರೂ ಸೇರಬೇಕೆಂದು ಪ್ರಾರ್ಥಿಸಿಕೊಂಡಿರುವರು.

ಆಸ್ಟ್ರಿಯಾದೇಶಕ್ಕೆ ಸೇರಿದ ಬ್ರೂನ್ ಎಂಬ ನಗರದಲ್ಲಿ ಒಬ್ಬ ಹೆಂಗಸು ಗುಂಡಿನಿಂದ ಆತ್ಮಹತ್ಯಮಾಡಿಕೊಂಡಳು. ಇದರಿಂದ ಅವಳು ಮೃತಪಟ್ಟಿದುದಲ್ಲದೆ, ಗುಂಡಿನೇಟು ಸಮೀಪದಲ್ಲಿದ್ದ ನಾಲ್ಕಂತಸ್ತಿನ ಒಂದು ಹೋಟೆಲಿಗೆ ಬಡಿದು 9 ಜನರು ಕೂಡಲೇ ಮೃತಪಟ್ಟರು. 37 ಜನರಿಗೆ ತುಂಬಾ ಗಾಯಗಳಾದುವು.

ಹೊಸ ದೆಹಲಿ ನಗರಕ್ಕೆ ಸೇರಿದ ಮುನಿಸಿಪಲ್ ವರ್ಕ್‌ಷಾಪಿನಲ್ಲಿ ಕೂಲಿಯವರು ಕಸದರಾಶಿಯನ್ನು ಹೊರಕ್ಕೆ ಸಾಗಿಸುತ್ತಿದ್ದಾಗ ಕೆಲವು ಬಂದೂಕಗಳೂ, ಕತ್ತಿ ಮೊದಲಾದ ಆಯುಧಗಳೂ, ಉಕ್ಕಿನ ಕವಚಗಳೂ ಸಿಕ್ಕಿದವೆಂದೂ, ಅವು ಇಂಗ್ಲೀಷರು ಈ ದೇಶಕ್ಕೆ ಬರುವುದಕ್ಕಿಂತಲೂ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದವುಗಳೆಂದೂ ತಿಳಿದುಬಂದಿದೆ.

ಇಟಲಿ ಸರಕಾರದವರು ಮಿಲಾನ್ ನಗರದ ಸಮೀಪದಲ್ಲಿರುವ ಬಯಲು ಪ್ರದೇಶದಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಆಕಾಶಯಾನಗಳ ನಿಲ್ದಾಣವನ್ನು ಕಟ್ಟಬೇಕೆಂದು ಯೋಚಿಸುತ್ತಿರುವರು. ಈ ಹೊಸ ನಿಲ್ದಾಣವು ಸುಮಾರು ೬ ಚದರ ಮೈಲುಗಳ ವಿಸ್ತಾರವಾಗಿದ್ದು, ಅದನ್ನು ಕಟ್ಟಲು ಸುಮಾರು ೧,೨೦,೦೦,೦೦೦ ರೂ. ಗಳು ವೆಚ್ಚವಾಗುವವಂತೆ!

ಸಿಂಗಪೂರನಗರದ ಸಮೀಪದಲ್ಲಿ ಒಬ್ಬ ಮಲಯಾದೇಶಸ್ಥನ ಆಡು ಎಲ್ಲಿಯೋ ಹೋಗಿ ತಪ್ಪಿಸಿಕೊಂಡಿತು. ಆತನು ಅದನ್ನು ಹುಡುಕುತ್ತಾ, ದಾರಿಯಲ್ಲಿ ಒಂದು ನದೀದಡದಮೇಲೆ ೨೨ ಅಡಿ ಉದ್ದವಾಗಿದ್ದ ಒಂದು ಘಟಸರ್ಪವನ್ನು ಕಂಡು ಅದನ್ನು ಗುಂಡಿನಿಂದ ಹೊಡೆದು ಕೊಂದನು. ತಪ್ಪಿಸಿಕೊಂಡಿದ್ದ ಇವನ ಆಡು ಆ ಘಟಸರ್ಪದ ಹೊಟ್ಟೆಯಲ್ಲಿಯೇ ಇದ್ದಿತಂತೆ!

ಅಖಿಲಪ್ರಪಂಚದ ಟ್ರಾವೆಲ್ ಸಮ್ಮೇಲನವು ಕೈರೋನಗರದಲ್ಲಿ 1935 ನೇ ವರ್ಷದ ಫೆಬ್ರವರಿ ತಿಂಗಳಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿರುವದು. ಸಮ್ಮೇಲನವು ಸುಮಾರು ಎರಡು ತಿಂಗಳವರೆಗೆ ನಡೆಯುವದೆಂದೂ ಅದರಲ್ಲಿ ಅಂತರರಾಷ್ಟ್ರೀಯ ಟ್ರಾವಲ್ ಸರ್ವಿಸ್ಸನ್ನು ಉತ್ತಮಗೊಳಿಸುವದಕ್ಕೆ ಅವಶ್ಯಕವಾದ ನಿಬಂಧನೆಗಳು ಏರ್ಪಡುವವೆಂದೂ ತಿಳಿದುಬರುತ್ತದೆ.

ಇಸ್ತಾಂಬೂಲ್ ನಗರದಲ್ಲಿರುವ ಹಾದ್‌ಜಿ ಬೇ ಎಂಬ ಮಹಮ್ಮದೀಯನಿಗೆ ೩೯ ಜನ ಗಂಡುಮಕ್ಕಳೂ ೫ ಜನ ಹೆಣ್ಣುಮಕ್ಕಳೂ ಇರುವರಂತೆ! ತುರ್ಕಸ್ಥಾನದ ಸುಲ್ತಾನರು ಇವರಿಗೆ ಪ್ರತಿವರ್ಷವೂ ಜೀವನೋಪಾಯಕ್ಕೆ ಸಾಕಾದಷ್ಟು ಗೋಧಿಯನ್ನು ಕೊಡುತ್ತಿದ್ದರು. ಆದರೆ ಈಗ ಅದು ನಿಲ್ಲಿಸಲ್ಪಟ್ಟಿರುವದರಿಂದ ಹಾದ್‌ಜಿಯು ತನಗೆ ಪೆನ್ಷನ್ ಕೊಡಿಸಬೇಕೆಂದು ಮುಸ್ತಫಾ ಕೇಮಾಲ್‌ಪಾಷಾರವರಿಗೆ ಅರ್ಜಿಯನ್ನು ಹಾಕಿಕೊಂಡಿರುವನು.

ಫ್ರೆಂಚ್ ದೇಶಕ್ಕೆ ಸೇರಿದ ಕೋಡೋಸ್ ಮತ್ತು ರಾಸಿ ಎಂಬ ಇಬ್ಬರು ವೈಮಾನಿಕರು ಅಮೇರಿಕೆಯ ನ್ಯೂಯಾರ್ಕ್‌ನಗರದಿಂದ ಸಿರಿಯಾ ದೇಶದ ರಾಯಕ್‌ವರೆಗೆ ಅಂದರೆ ಸುಮಾರು ೫೯೦೦ ಮೈಲುಗಳವರೆಗೂ ಎಲ್ಲಿಯೂ ಇಳಿಯದೆ ೫೪ ಗಂಟೆ ೪೫ ನಿಮಿಷಗಳಲ್ಲಿ ಸಂಚರಿಸಿದರು. ಇಂತಹ ಅದ್ಭುತ ಸಾಹಸಕ್ಕಾಗಿ ಫ್ರಾನ್ಸ್ ಸರಕಾರದವರು ಅವರಿಗೆ ೧೦ ಲಕ್ಷ ಫ್ರಾಂಕುಗಳ ಬಹುಮಾನವನ್ನು ಕೊಡಬೇಕೆಂದು ನಿರ್ಧರಿಸಿರುವರು.

ಶ್ರೀ|| ದೇವದಾಸ್ ಗಾಂಧಿಯವರು ೬ ತಿಂಗಳ ಕಾಲ ಸಂಪೂರ್ಣವಾಗಿ ಸಂಚಾರಸುಖಾನುಭವಮಾಡಬೇಕೆಂದು ಪತ್ನೀಸಮೇತರಾಗಿ ದೆಹಲಿಗೆ ಪ್ರಯಾಣ ಬೆಳೆಸಿದರು. ಆದರೆ ದೇವದಾಸರು ದೆಹಲಿಯಲ್ಲಿ ಇಳಿದ ಕೂಡಲೇ ಅಲ್ಲಿಯ ಪೋಲೀಸರು ಅವರಮೇಲೆ ನಿರ್ಬಂಧದ ಆರ್ಡರನ್ನು ಜಾರಿಮಾಡಿದರು. ದೇವದಾಸರು ತಾವು ಕಾನೂನುಭಂಗದಲ್ಲಿ ಭಾಗವಹಿಸುವದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರೂ, ಪೋಲೀಸರು ಅವರನ್ನು ದಸ್ತಗಿರಿಮಾಡಿದರು. ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಅವರಿಗೆ 6 ತಿಂಗಳ ಸಜೆಯನ್ನು ವಿಧಿಸಿದರು.

[3ನೆಯ ಪುಟದಿಂದ ಮುಂದುವರಿದುದು.]

ದೀಪ.

ಎಲೆಕ್ಟ್ರಿಕ್ ಯಂತ್ರವು ಅಕಸ್ಮಾತ್ತಾಗಿ ಕೆಟ್ಟುಹೋದುದರಿಂದ ಬಹಳ ನಿರಾಶೆಗೆ ಕಾರಣವಾಯಿತು. ಆದುದರಿಂದ ಪೂರ್ವಭಾವಿಯಾಗಿ ಸಿದ್ಧಪಡಿಸಲ್ಪಟ್ಟಿದ್ದ ಗ್ಯಾಸ್ ಪೆಟ್ರೊಮ್ಯಾಕ್ಸ್ ಲಾಂದ್ರಗಳಿಂದ ಬೆಳಕನ್ನು ಒದಗಿಸಲಾಯಿತು.

ಕಸಗುಡಿಸುವದು.

ನೆಲದಲ್ಲಿ ಹಳ್ಳಗಳನ್ನು ತೋಡಿಸಿ ಕೆಲವು ಕಕ್ಕಸುಗಳನ್ನು ಕಟ್ಟಿಸಲಾಗಿತ್ತು; ಮತ್ತು ಸಾಕಾದಷ್ಟು ಜನ ಕಸ ಗುಡಿಸುವವರನ್ನೂ ಮತ್ತು ತೋಟಿಗಳನ್ನೂ ನೇಮಿಸಲಾಗಿತ್ತು. ದೇವಾಲಯದ ಸಮಿಪದಲ್ಲಿ ಯಾರೂ ಹೇಸಿಗೆಯನ್ನು ಮಾಡದಂತೆ ಪೋಲೀಸರು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು.

ಆಸ್ಪತ್ರೆ.

ನಂದಿಕೊಟಕೂರು ತಾಲೂಕು ಬೋರ್ಡಿನವರು ಆಸ್ಪತ್ರೆಯನ್ನು ನೋಡಿಕೊಳ್ಳುವದಕ್ಕಾಗಿ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನ್ನರನ್ನು ಕಳುಹಿಸಿದ್ದರು.

ರೋಗಾದ್ಯುಪದ್ರವಗಳು.

ಉತ್ಸವಗಳು ಯಾವ ವಿಧವಾದ ರೋಗಾದಿಗಳೂ ಇಲ್ಲದೆ ನಡೆದವು. ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರುವಂತೆ ಸಹಾಯಮಾಡಿದ ಎಲ್ಲ ಅಧಿಕಾರಿವರ್ಗದವರಿಗೂ, ಬಾಲಚಮೂಗಳಿಗೂ ಮತ್ತು ಸ್ವಯಂಸೇವಕರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ರೈಲ್ವೇ ರಿಯಾಯಿತಿ.

ಬಾಗಲಕೋಟೆಯ ವ್ಯಾಪಾರ ಸಂಘದ ಸೆಕ್ರೆಟರಿಯವರ ಪ್ರಾರ್ಥನಾನುಸಾರವಾಗಿ ರೈಲ್ವೇ ಅಧಿಕಾರಿಗಳು ಶ್ರೀಶೈಲಕ್ಕೋಸ್ಕರ ಹುಬ್ಬಳ್ಳಿ, ಧಾರವಾಡ ಮತ್ತು ಸೋಲಾಪುರದಿಂದ ನಂದ್ಯಾಲ ಸ್ಟೇಷನ್ನಿಗೆ ಹೋಗತಕ್ಕ ಯಾತ್ರಿಕರಿಗೆ ರಿಯಾಯಿತಿಯನ್ನು ತೋರಿಸುತ್ತಾರೆ. ರೈಲ್ವೇ ಅಧಿಕಾರಿಗಳು ಇತರ ಕಡೆಗಳಿಂದ ಬರತಕ್ಕ ಯಾತ್ರಿಕರಿಗೂ ಇದೇ ರೀತಿ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ತಕ್ಕ ಏರ್ಪಾಡನ್ನು ಮಾಡಲಾಗುವದು.

ಪೂಜೆ.

ಈ ವರ್ಷವೆಲ್ಲಾ ಪೂಜೆಯು ಸಾಂಗವಾಗಿ ನೆರವೇರಿತು. ಪೂಜಾಸಮಿತಿಯ ಮೆಂಬರುಗಳು ದೇವಾಲಯದಲ್ಲಿ ಪೂಜೆಯು ಕ್ರಮವಾಗಿ ನಡೆಯುವಂತೆ ಸಹಾಯ ಮಾಡುತ್ತಿರುತ್ತಾರೆ. ಪೂಜಾಸಮಿತಿಯ ಉದ್ದೇಶವನ್ನೂ, ಖಾಯಂ ಮತ್ತು ವಾರ್ಷಿಕ ಮೆಂಬರುಗಳ ಹೆಸರುಗಳನ್ನೂ ಮತ್ತು 500 ಜನ ಖಾಯಂ ಚಂದಾದಾರರನ್ನು ಕೂಡಿಸುವದಕ್ಕೋಸ್ಕರ ಒಂದು ವಿಜ್ಞಾಪನೆಯನ್ನೂ ಪ್ರತ್ಯೇಕ ವರದಿಯಲ್ಲಿ ಪ್ರಕಟಿಸಲಾಗಿದೆ.

ಅನ್ನಸತ್ರಗಳು.

ಬ್ರಾಹ್ಮಣರಿಗೆ ಅನ್ನಪೂರ್ಣ ಅನ್ನಸತ್ರವನ್ನು ನಡೆಯಿಸಲಾಯಿತು. ಪದ್ಧತಿಯ ಮೇರೆ ಬಡವರಿಗೂ ಮತ್ತು ಸಾಧುಗಳಿಗೂ ಅಕ್ಕಿಯನ್ನು ಹಂಚಲಾಯಿತು. ವೀರಶೈವ ಜನಾಂಗದವರ ಅಪೇಕ್ಷೆಯಂತೆ ಈ ವರ್ಷ ಶಿವರಾತ್ರಿ ಮತ್ತು ಯುಗಾದಿ ಉತ್ಸವಕಾಲಗಳಲ್ಲಿ ವೀರಶೈವರಿಗೂ ಅನ್ನಸತ್ರವನ್ನು ನಡೆಯಿಸಲಾಯಿತು. ಆದರೆ ದೇವಾಲಯದ ಫಂಡಿನಿಂದ ಈ ಹೆಚ್ಚಿನ ಖರ್ಚನ್ನು ನಡೆಯಿಸುವದು ಸಾಧ್ಯವಿಲ್ಲ. ಆದ್ದರಿಂದ ವೀರಶೈವ ಜನಾಂಗದವರಿಗೂ ಹಾಗೂ ಇತರ ಯಾತ್ರಿಕರಿಗೂ ಅನ್ನಸತ್ರಗಳನ್ನು ನಡೆಯಿಸುವದಕ್ಕಾಗಿ ಫಂಡನ್ನು ಕೂಡಿಸಲು ಬೇರೆ ವಿಜ್ಞಾಪನಾಪತ್ರಿಕೆಯನ್ನು ಹೊರಡಿಸಲಾಗುವದು.

ಅಭಿವೃದ್ಧಿಕಾರ್ಯಗಳು.

ಈ ವರ್ಷ ಮಾಡಿದ ಅಭಿವೃದ್ಧಿಕಾರ್ಯಗಳ ಮತ್ತು ರಿಪೇರಿ ಕಾರ್ಯಗಳ ಪಟ್ಟಿಯನ್ನು ಇದರ ಸಂಗಡ ಸೇರಿಸಿದೆ. ಇನ್ನೂ ಅನೇಕ ಕಾರ್ಯಗಳನ್ನು ಮಾಡಬೇಕಾಗಿರುವದು. ಅವುಗಳನ್ನು ಹಣವು ಅನುಕೂಲವಾದ ಹಾಗೆ ಕೈಕೊಳ್ಳಲಾಗುವದು.

ಹಣಕಾಸಿನ ವಿಷಯ.

ಲೆಖ್ಖಗಳನ್ನು ತನಿಖೆ ಮಾಡಿದನಂತರ ಜಮಾಖರ್ಚಿನ ತಪ್ಸೀಲ್ ಪಟ್ಟಿಯನ್ನು ಪ್ರಕಟಿಸಲಾಗುವದು.

ಬಿ. ನರಸಪ್ಪ,
ಸೆಕ್ರೆಟರಿ.

ಪಿ. ರಾಮಯ್ಯ,
ಪ್ರೆಸಿಡೆಂಟ್,
ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್.

ಓಂ ನಮಶ್ಶಿವಾಯ.

ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ, ಶ್ರೀಶೈಲಂ.

1933 ನೇ ಇಸವಿಯಲ್ಲಿ ಸಮರ್ಪಿಸಲ್ಪಟ್ಟ ಕಾಣಿಕೆಗಳು ಮತ್ತು ಅಭಿವೃದ್ಧಿಕಾರ್ಯಗಳು.

1. ಕರ್ನೂಲಿನ ಬ್ರಂ|| ಶ್ರೀ|| ಡಬ್ಲ್ಯೂ. ಶಿವರಾಮಯ್ಯಗಾರು ಬಿ.ಎ., ಬಿ.ಎಲ್., ಅಡ್ವೊಕೇಟ್ ಇವರು ಎರಡು ಹೊಸ ವಿಗ್ರಹಗಳನ್ನು ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಸಮೇತವಾಗಿ ಸಮರ್ಪಿಸಿದರು. 19-2-33 ನೇ ದಿವಸ ಸಂಪ್ರೋಕ್ಷಣೆಯು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು.

2. ತೆನಾಲಿಯ ಶ್ರೀಯುತ ಕಾಕಮಾನು ಆಂಜನೇಯಲುಗಾರು ಚಿನ್ನದ ಪ್ಲೇಟ್ ಮಾಡಿದ ಎರಡು ಶಿಖರಗಳನ್ನು (ಒಂದು ದೊಡ್ಡದು ಒಂದು ಸಣ್ಣದು) ಸಮರ್ಪಿಸಿದರು. 19-9-33 ನೇ ದಿವಸ ಅವುಗಳು ವಿಧ್ಯುಕ್ತವಾಗಿ ಪ್ರತಿಷ್ಠಿಸಲ್ಪಟ್ಟವು

3. ದೇವಸ್ಥಾನದ ಫಂಡಿನಿಂದ ಮೆ. ಸುರಾಜ್‌ಮಲ್ ಲಲ್ಲೂಭಾಯಿ ಅಂಡ್ ಕಂ., ಮದರಾಸ್ ಇವರಲ್ಲಿ 2,660 ರೂಪಾಯಿಗಳ ವೆಚ್ಚದಿಂದ ಒಂದು ಮನೋಹರವಾದ ಬೆಳ್ಳಿಯ ನಂದಿವಾಹನವನ್ನು ಮಾಡಿಸಲಾಯಿತು.

4. ಉತ್ಸವವು ಮತ್ತಷ್ಟು ಆಕರ್ಷಣೀಯವಾಗಿರಲೆಂಬ ಉದ್ದೇಶದಿಂದ ಒಂದು ಹೊಸ ಪಲ್ಲಕ್ಕಿಯು ಮಾಡಿಸಲ್ಪಟ್ಟಿದೆ.

5. ತೆನಾಲಿಯ ಶ್ರೀ|| ಕಾಕಮಾನು ಆಂಜನೇಯಲುಗಾರು ತೆನಾಲಿಯ ಭಕ್ತರಿಂದ 57 ಪಾತ್ರೆಗಳನ್ನು ಶೇಖರಿಸಿ ಅವುಗಳ ಮೇಲೆ ದಾತೃಗಳ ಹೆಸರುಗಳನ್ನು ಕೆತ್ತಿಸಿ ದೇವಾಲಯದ ಅನ್ನಸತ್ರಕ್ಕೆ ಸಮರ್ಪಿಸಿರುತ್ತಾರೆ.

6. ಸೋಲಾಪುರದ ಶ್ರೀ|| ಗುರುಶಾಂತಪ್ಪನವರು ಉಮ್ರಜಿ, ಬಿ.ಎ., ಎಲ್‌ಎಲ್.ಬಿ., ಪ್ಲೀಡರ್ ಇವರು ಸಮರ್ಪಿಸಿದ ನಗದು 200 ರೂ. ಗಳಿಂದ ವೀರಶೈವರ ಅನ್ನಸತ್ರಕ್ಕೆ ಪಾತ್ರೆಗಳನ್ನು ಕೊಂಡುಕೊಳ್ಳಲಾಯಿತು.

ಮ್ಯಾನೇಜ್‌ಮೆಂಟ್ ಬೋರ್ಡಿನ ಪರವಾಗಿ ಕರ್ನೂಲಿನ ಅಡ್ವೊಕೇಟ್ ಬ್ರಂ|| ಶ್ರೀ|| ಶಿವರಾಮಯ್ಯನವರನ್ನೂ, ತೆನಾಲಿಯ ಶ್ರೀ ಕಾಕಮಾನು ಆಂಜನೇಯಲುರವರನ್ನೂ, ಸೋಲಾಪುರದ ಪ್ಲೀಡರ್ ಶ್ರೀ|| ಗುರುಶಾಂತಪ್ಪನವರನ್ನೂ ಹಾಗೂ ತೆನಾಲಿಯ ಭಕ್ತಮಂಡಳಿಯನ್ನೂ, ಅವರುಗಳು ಸಮರ್ಪಿಸಿದ ಮಹತ್ವದ ಕಾಣಿಕೆಗಳಿಗಾಗಿ ವಂದಿಸುತ್ತೇನೆ. ಮತ್ತು ಇದೇ ರೀತಿ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಸೇವೆಯನ್ನು ನಿರಂತರವೂ ಮಾಡುತ್ತಿರುವಂತೆ ಈ ಮಹಾಶಯರಿಗೆಲ್ಲಾ ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕರುಣಿಸುವಂತೆ ಶ್ರೀ ಭ್ರಮರಾಂಬಾ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯನ್ನು ಪ್ರಾರ್ಥಿಸುತ್ತೇನೆ.

ಪಿ. ರಾಮಯ್ಯ, ಪ್ರೆಸಿಡೆಂಟ್.
ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್.

ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನ, ಶ್ರೀಶೈಲಂ.

ಕಟ್ಟಡಗಳ ರಿಪೇರಿಗಳು ಮತ್ತು ಅಭಿವೃದ್ಧಿಕಾರ್ಯಗಳು.

ದಕ್ಷಿಣದಿಕ್ಕಿನ ಗೋಪುರದಿಂದ ಹೊರಡುವ ರಸ್ತೆಗೆ ಪಶ್ಚಿಮದಲ್ಲಿ 9 ಮಂಟಪಗಳನ್ನು ಪುನಃ ಕಟ್ಟಿಸಲಾಯಿತು. ಈ ಮಂಟಪಗಳ ಬಹಳ ಜೀರ್ಣವಾಗಿದ್ದ ಹಿಂಭಾಗದ ಗೋಡೆಗಳನ್ನು ಅಂದವಾಗಿ ಕೆತ್ತಿದ ಕಲ್ಲುಗಳಿಂದ ಕಟ್ಟಿಸಲಾಯಿತು. ಈ ಮಂಟಪಗಳ ಮೇಲಿರುವ ಗೋಪುರಗಳನ್ನೂ ಹೊಸದಾಗಿ ಕಟ್ಟಿಸಲಾಯಿತು. ನೆಲಕ್ಕೆ ಒರಟು ಜಲ್ಲಿಯನ್ನು ಹಾಕಿಸಲಾಯಿತು.

2. ಮಲ್ಲಿಕಾರ್ಜುನಸ್ವಾಮಿಯ ದೇವಾಲಯದ ಹೆಬ್ಬಾಗಿಲಿನ ದಕ್ಷಿಣದಲ್ಲಿ ಶ್ರೀ ಭ್ರಮರಾಂಬಾ ದೇವಾಲಯಕ್ಕೆ ಹೋಗುವ ದಾರಿಯಲ್ಲಿದ್ದ 3 ಪಾಳುಮಂಟಪಗಳನ್ನು ಹೊಸದಾಗಿ ಕಟ್ಟಿಸಲಾಯಿತು. ಬಿದ್ದುಹೋದ ಮಧ್ಯದ ಗೋಡೆಗಳನ್ನು ಇಟ್ಟಿಗೆ ಮತ್ತು ಗಾರೆಯಲ್ಲಿ ಕಟ್ಟಿಸಲಾಯಿತು. ಈ ಮಂಟಪಗಳನ್ನು ಕಟ್ಟಿಸಿದ ಖರ್ಚನ್ನು ಶ್ರೀಶೈಲ ಜೀರ್ಣೋದ್ಧಾರ ಬೋರ್ಡಿನ ಮೆಂಬರರಾದ ಬಾಗಲಕೋಟೆ ತಾ|| ಶಿರೂರಿನ ಶ್ರೀ|| ಶ್ರೀಶೈಲಪ್ಪಶೆಟ್ಟರು ಕೊಡುವದಾಗಿ ವಾಗ್ದಾನಮಾಡಿರುತ್ತಾರೆ.

3. ಶಿಖರೇಶ್ವರಕ್ಕೆ ಹೋಗುವ ದಾರಿಯಲ್ಲಿ ಕೆಟ್ಟುಹೋಗಿದ್ದ ಮೆಟ್ಟಿಲುಗಳನ್ನು ರಿಪೇರಿಮಾಡಿಸಲಾಯಿತು. ಪ್ರಾಕಾರದ ಗೋಡೆಯನ್ನು ಪುನಃ ಕಟ್ಟಿಸಿ ಶಿಖರದ ಮೇಲೆ ಜಲ್ಲಿಯನ್ನು ಹಾಕಿಸಲಾಯಿತು.

4. ಅನ್ನಪೂರ್ಣಸತ್ರದಲ್ಲಿ ಎರಡು ಗಾರೆಯ ತೊಟ್ಟಿಗಳನ್ನು ಕಟ್ಟಿಸಲಾಯಿತು. ಹಾಗೂ ಸತ್ರದ ನೆಲಕ್ಕೆ ಒರಟು ಜಲ್ಲಿಯನ್ನು ಹಾಕಿಸಲಾಯಿತು.

ಶ್ರೀ ಅಂಬಾದೇವಾಲಯದ ರಿಪೇರಿ.

5. ಅಂಬಾದೇವಾಲಯದ ಒಳಗೂ ಮತ್ತು ಹೊರಗೂ ಇದ್ದ ಹೊಲಸನ್ನೆಲ್ಲಾ ತೆಗೆಯಿಸಿ ಕಲ್ಲು ಮತ್ತು ಮಣ್ಣಿನಿಂದ ಅನೇಕ ಜಗಲಿಗಳನ್ನು ಕಟ್ಟಿಸಲಾಯಿತು. (12,993 ಘನ ಅಡಿ).

ಜೋಪಡಿಗಳನ್ನು ಹಾಕಲು ಅನುಕೂಲಿಸುವಂತೆ ಅನೇಕ ಮಣ್ಣಿನ ಗೋಡೆಗಳನ್ನು ರಿಪೇರಿ ಮಾಡಿಸಿ, ಮಣ್ಣಿನ ಗುಡ್ಡೆಗಳನ್ನು ಸಮಮಾಡಿಸಲಾಯಿತು.

6. ಅಂಬಾಗೋಪುರವನ್ನು ರಿಪೇರಿ ಮಾಡಿಸಲಾಯಿತು. ಬಿದ್ದುಹೋದ 8 ಮಂಟಪಗಳನ್ನು ರಿಪೇರಿ ಮಾಡಿಸಲು ಪ್ರಾರಂಭಿಸಿದೆ. ಮುಂದಿನ ಶಿವರಾತ್ರಿಯೊಳಗಾಗಿ ಅದನ್ನು ಪೂರ್ತಿಸಲಾಗುವದು.

ಭರತಖಂಡದಲ್ಲಿರುವ ಭಕ್ತರೆಲ್ಲರ ಸಹಾಯದಿಂದ ರಿಪೇರಿ ಕಾರ್ಯಗಳನ್ನೆಲ್ಲಾ ಇನ್ನು ಸ್ವಲ್ಪಕಾಲದಲ್ಲೇ ಪೂರ್ತಿಸಬಹುದೆಂದು ಮ್ಯಾನೇಜ್‌ಮೆಂಟ್ ಬೋರ್ಡಿನವರು ಭಾವಿಸಿರುತ್ತಾರೆ.

1930-31 ನೇ ಇಸವಿಯಲ್ಲಿ ಮಾಡಿಸಿದ ಮುಖ್ಯವಾದ ಕಾರ್ಯಗಳು.

	ರೂ. ಆ. ಪೈ.
ಕಬ್ಬಿಣದ ಚೌಕಟ್ಟುಗಳಿಂದ ಯಾತ್ರಿಕರಿಗೆ ಜೋಪಡಿಗಳನ್ನು ಕಟ್ಟಿಸಿದ್ದು	2000—0—0
ಎಲೆಕ್ಟ್ರಿಕ್ ಯಂತ್ರಕ್ಕೆ (ಸಲಕರಣೆಗಳ ಸಮೇತ)	4300—0—0
ಮಲ್ಲಿಕಾರ್ಜುನಸ್ವಾಮಿಯ ದೇವಾಲಯದಿಂದ ಹೊರಗೆ ಬರುವ ದಾರಿಯಲ್ಲಿ ಮೊದಲನೇ ಗೋಪುರವನ್ನು ಕಟ್ಟಿಸಿದುದಕ್ಕೆ	800—0—0
ಅಂಬಾದೇವಾಲಯದೊಳಕ್ಕೆ ಹೋಗುವ ದಾರಿಯಲ್ಲಿ ಗೋಪುರವನ್ನು ಕಟ್ಟಿಸಿದುದಕ್ಕೆ	600—0—0
ಅಂಬಾದೇವಾಲಯದ ಪಶ್ಚಿಮದಿಕ್ಕಿನ ಗೋಡೆಯನ್ನು ಕಟ್ಟಿಸಿ, ಪಶ್ಚಿಮದ್ವಾರವನ್ನು ತೆಗೆದುದಕ್ಕೆ	830—0—0
ಮಲ್ಲಿಕಾರ್ಜುನಸ್ವಾಮಿಯ ದೇವಾಲಯದಲ್ಲಿ ತಾಮ್ರದಲ್ಲಿ ಕೆತ್ತಿದ ಧ್ವಜಗಳನ್ನು ಪಶ್ಚಿಮ ಮತ್ತು ಪೂರ್ವ ದ್ವಾರಗಳಲ್ಲಿ ಸ್ಥಾಪಿಸಿದ್ದಕ್ಕೆ	1200—0—0
ದೇವಾಲಯದ ಈಶಾನ್ಯದಿಕ್ಕಿನಲ್ಲಿರುವ ಕೊನೇರುವಿನಿಂದ ಕೆಸರನ್ನು ತೆಗೆಯಿಸಿದುದಕ್ಕೆ	300—0—0
ಶಿಖರೇಶ್ವರದಲ್ಲಿರುವ ಕೊನೇರುವಿನಿಂದ ಕೆಸರನ್ನು ತೆಗೆಯಿಸಿದುದಕ್ಕೆ	200—0—0
ಒಟ್ಟು	10230—0—0

ಓಂ ನಮಶ್ಶಿವಾಯ.

ವಿಜ್ಞಾಪನಾ.

ಶ್ರೀಶೈಲ ಶ್ರೀಭ್ರಮರಾಂಬಾ ಮಲ್ಲಿಕಾರ್ಜುನ ಪೂಜಾಸಮಿತಿ.

ಈಗ ಕೈಕೊಂಡಿರುವ ಜೀರ್ಣೋದ್ಧಾರಕಾರ್ಯಕ್ಕೆ ಅತ್ಯವಶ್ಯಕವಾದ ಅಂಗವಾಗಿ, ಆಗಮಾನುಸಾರವಾಗಿ ಪ್ರತಿನಿತ್ಯವೂ ಹಾಗೂ ಹಾಗೂ ಹೆಚ್ಚು ಕಟ್ಟಳೆ ದಿವಸಗಳಲ್ಲಿಯೂ ಪೂಜೆಯು ತಪ್ಪದೆ ನಡೆಯುವಂತೆ ತಕ್ಕ ಏರ್ಪಾಡುಗಳನ್ನು ಮಾಡಿರುತ್ತದೆ. ಈ ಪ್ರದೇಶವು ಕೇವಲ ಮಲೇರಿಯಾ ರೋಗದ ಪ್ರದೇಶವಾಗಿರುವುದರಿಂದ ಯಾವ ಅರ್ಚಕನೂ ಒಂದು ತಿಂಗಳಿಗಿಂತ ಹೆಚ್ಚಾಗಿ ರೋಗಗ್ರಸ್ತನಾಗದೆ ಇರಲಾರನು. ಆದುದರಿಂದ ದೇವಾಲಯದಲ್ಲಿ ಕೆಲ

ಮಾಡಲು ಬೇರೆಬೇರೆ ಅರ್ಚಕರುಗಳನ್ನು ಸರದಿಯಮೇಲೆ ಕಳುಹಿಸಲಾಗುತ್ತಿದೆ. ಇದಕ್ಕಾಗಿ ವೆಚ್ಚವು ಬಹಳವಾಗುವದು. ಹೀಗೆ ತಗಲುವ ಹೆಚ್ಚಿನ ಖರ್ಚನ್ನು ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನ ಪೂಜಾಸಮಿತಿಯ ಮೆಂಬರರಿಂದ ವರ್ಷ 1ಕ್ಕೆ 6 ರೂ. ಗಳಂತೆ ಅಥವಾ ಲೈಫ್‌ಮೆಂಬರರಿಂದ ಒಂದೇಸಾರೆ 100 ರೂ. ಗಳಂತೆ ಬರುವ ಹಣದಿಂದ ಒದಗಿಸಲಾಗುತ್ತಿದೆ.

ಈಗಾಗಲೇ 7 ಜನ ಮೆಂಬರರು ಒಟ್ಟಿಗೆ 100 ರೂ. ಮತ್ತು ಅದಕ್ಕಿಂತಲೂ ಹೆಚ್ಚಾಗಿ ದಾನಮಾಡಿರುತ್ತಾರೆ. ವರ್ಷ 1ಕ್ಕೆ 6 ರೂ. ನಂತೆ ಕೊಡುವ ಮೆಂಬರರು 80 ಜನರಿರುತ್ತಾರೆ. ಪೂಜೆಯ ಖರ್ಚಿಗೆ ಹಣವನ್ನು ಒದಗಿಸಲು 1000 ರೂ. ಗಳನ್ನು ಚಿರಸ್ಥಾಯಿಯಾದ ನಿಧಿಯನ್ನಾಗಿ ಇಟ್ಟಿರುತ್ತದೆ. ಮ್ಯಾನೇಜ್‌ಮೆಂಟ್ ಬೋರ್ಡಿನವರು 500 ಜನ ಲೈಫ್ ಮೆಂಬರರನ್ನು ಸೇರಿಸಿ, ಅವರಿಂದ ಕೊಡಲ್ಪಡುವ 50,000 ರೂ. ಗಳನ್ನು ಒಂದು ಬ್ಯಾಂಕಿನಲ್ಲಿಟ್ಟು ಬರುವ ಬಡ್ಡಿಯಿಂದ ಪೂಜಾಕಾರ್ಯಗಳು ನಿರಾತಂಕವಾಗಿ ನಡೆಯುವಂತೆ ಮಾಡಬೇಕೆಂದು ಉದ್ದೇಶಿಸಿರುತ್ತಾರೆ. ಈ ಉದ್ದೇಶವು ನೆರವೇರುವವರೆಗೂ ಪೂಜಾಸಮಿತಿಗೆ ಮೆಂಬರರಾಗಿ ಸೇರುವ ಭಕ್ತರಿಂದ ವರ್ಷವೊಂದಕ್ಕೆ 6 ರೂ. ಗಳಂತೆ ಚಂದಾ ವಸೂಲು ಮಾಡಲಾಗುವದು. ಅವರಿಗೆ ಪ್ರತಿತಿಂಗಳೂ ಟಪಾಲಿನ ಮೂಲಕ ಪ್ರಸಾದವನ್ನು ಕಳುಹಿಸಲಾಗುವದು. ಲೈಫ್‌ಮೆಂಬರರ ಮತ್ತು ದಾತೃಗಳ ಹೆಸರುಗಳು ಹಿತ್ತಾಳೆಯ ಹಲಗೆಗಳ ಮೇಲೆ ಕೆತ್ತಲ್ಪಟ್ಟು ದೇವಾಲಯದಲ್ಲಿ ಶಾಶ್ವತವಾಗಿ ತೂಗಹಾಕಲ್ಪಡುವವು.

ದಾತೃಗಳ ಮತ್ತು ಲೈಫ್ ಮೆಂಬರರ ಪಟ್ಟಿಯನ್ನು ಇದರ ಸಂಗಡ ಸೇರಿಸಿದೆ.

ದಾತೃಗಳ ಹೆಸರು ಮತ್ತು ದಾನವಿವರ.

1. ಶ್ರೀ|| ಕೆ. ಜಿ. ನಾಯರ್‌ರವರು ಅಫ್‌ಜಲ್‌ಗಂಜ, ಹೈದರಾಬಾದ, (ಡೆಕ್ಕನ್) —ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ಧ್ವಜಸ್ತಂಭದ ಸ್ಥಾಪನೆ.
2. ಶ್ರೀ|| ಚೆಂಡೂರು ನಾಗಭೂಷಣಂ ಪಂತುಲುಗಾರು, ಆಂಧ್ರ ಇಂಜನಿಯರಿಂಗ್ ಕಂಪೆನಿ ಬೆಜವಾಡ—ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಪಶ್ಚಿಮಕ್ಕೆ ಧ್ವಜಸ್ತಂಭದ ಸ್ಥಾಪನೆ.
3 ಶ್ರೀ|| ಧರ್ಮಪುರಿ ಕೋಟಿವಾಲೆ ಶೇಷಗಿರಿರಾಯರು, S/o ವೆಂಕೋಬರಾಯರು ಜಮ್ಮಲಮಡುಗು —28 ತೊಲ ತೂಕವುಳ್ಳ ಚಿನ್ನದ ಕವಚವನ್ನು ಶ್ರೀ ಮಲ್ಲಿಕಾರ್ಜುನಸ್ವಾಮಿಗೆ ಸಮರ್ಪಿಸಿದರು.
4. ಶ್ರೀ|| ಡಬ್ಲ್ಯೂ. ಶಿವರಾಮಯ್ಯಗಾರು, ಬಿ.ಎ., ಬಿ.ಎಲ್., ಪ್ಲೀಡರ್, ಕರ್ನೂಲ್—ಎರಡು ವಿಗ್ರಹಗಳನ್ನು ಸಮರ್ಪಿಸಿದರು.
5. ಶ್ರೀ|| ಕಾಕಮಾನು ಆಂಜನೇಯಲುಗಾರು, ತೆನಾಲಿ—ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯಕ್ಕೆ ಎರಡು ಚಿನ್ನದ ಪ್ಲೇಟ್ ಮಾಡಿದ ಶಿಖರಗಳನ್ನು ಸಮರ್ಪಿಸಿದರು.
6. ಶ್ರೀ|| ಗುರುಶಾಂತಪ್ಪನವರು ಉಮ್ರಜಿ, ಸೋಲಾಪುರ—ವೀರಶೈವರ ಅನ್ನಸತ್ರಕ್ಕೆ ಪಾತ್ರೆಗಳನ್ನು ಸಮರ್ಪಿಸಿದರು.

ಲೈಫ್ ಮೆಂಬರರು.

1. ಶ್ರೀ ಬಲದೇವದಾಸ್ ಬಿಜೋರಿಯಾರವರು,
   130 ಮಚ್ಚಾ ಬಜಾರ್, ಕಲ್ಕತ್ತಾ
2. ಶ್ರೀ|| ವಾಸುದೇವ ವಿನಾಯಕ ಪಟವರ್ಧನ,
   ರಿಟೈರ್ಡ್ ಹೆಡ್ಮಾಸ್ತರ, ಠಾಕೂರದ್ವಾರ,
   ಕೆಮಲ್ ಚಾಳ, ಮುಂಬಯಿ ನಂ. 2.
3. ಶ್ರೀ|| ಗೊಟ್ಟುಪಾಟಿ ಸುಬ್ಬರಾವ್‌ಗಾರು,
   ಪ್ಲೀಡರ್, ಸಿಂಗಾರೇಣಿ ಕಾಲಿಯರ್ಸ್,
   (ವಯಾ) ಬೆಜವಾಡಾ.
4. ಶ್ರೀಮತಿ ಸಖೂಬಾಯಿ ನರಹರಿಸೇಟ್ ಪಾಂಡಕೆ,
   ವಾಲುಕೇಶ್ವರ ರೋಡ್, ಬಂಗಲೆ ನಂ. 32,
   ಮುಂಬಯಿ ಪೋಸ್ಟ್, ಬ್ರಾಂಚ್ ನಂ. 6.
5. ಶ್ರೀ|| ಯಾದವಾನ ಲಕ್ಷ್ಮೀನಾರಾಯಣ, ಮೈನರ್
   ಗಾರ್ಡಿಯನ್ ಪುಲ್ಲಮ್ಮ, ಕೊಲ್ಲಾಪುರಂ ಸಂಸ್ಥಾನಂ,
   ಮುದಕೊಂಡ ಪೋಸ್ಟ್, ನಂದಿಕೊಟಕೂರು ತಾ||
6. ಮ|| ರಾಮನಾರಾಯಣ ಅಂಡ್ ಕಂ.,
   ನಂ. 414, ಮಿಂಟ್‌ಸ್ಟ್ರೀಟ್, ಸಾಹುಕಾರಪೇಟೆ ಮದರಾಸು.
7. ಬ್ರ|| ಶ್ರೀ|| ಕೋಟಿಸಾಹುಕಾರ್
   ಶ್ರೀ ಶಾಂತಯ್ಯನವರು, ಕೊಣನೂರು,
   ಅರಕಲಗೂಡು ತಾ|| ಹಾಸನ ಡಿ|| (ಮೈಸೂರು)

ಮ್ಯಾನೇಜ್‌ಮೆಂಟ್ ಬೋರ್ಡಿನ ಪರವಾಗಿ ನಾನು ಎಲ್ಲ ಭಕ್ತರಿಗೂ ತಿಂಗಳು 1 ಕ್ಕೆ 6 ರೂ. ಗಳಂತೆ ದಾನಮಾಡಿ ಪೂಜಾಸಮಿತಿಯ ಮೆಂಬರರಾಗಿಯಾಗಲೀ ಅಥವಾ ಒಟ್ಟಿಗೆ 100 ರೂ. ಗಳನ್ನು ದಾನಮಾಡಿ ಲೈಫ್ ಮೆಂಬರರಾಗಿಯಾಗಲಿ ಆಗಬೇಕೆಂದೂ, ಮತ್ತು ತನ್ಮೂಲಕ ಶ್ರೀ ಭ್ರಮರಾಂಬಾ ಮತ್ತು ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ನಿತ್ಯಪೂಜೆಯು ಸಾಂಗವಾಗಿ ನೆರವೇರುವಂತೆ ಮಾಡಬೇಕೆಂದೂ ಪ್ರಾರ್ಥಿಸುತ್ತೇನೆ.

ಪಿ. ರಾಮಯ್ಯ.
ಪ್ರೆಸಿಡೆಂಟ್, ಶ್ರೀಶೈಲಂ ಮ್ಯಾನೇಜ್‌ಮೆಂಟ್
ಬೋರ್ಡ್, ಕೊಯಿಲ್‌ಕುಂಟ್ಲ.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,
ಹುಬ್ಬಳ್ಳಿ.

೧ನೇ ಯಾತ್ರಾ ೧೬—೪—೩೩ ರಿಂದ ೧—೬—೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೯—೧೧—೧೯೩೩ ಪೂರಾ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವದು.

ಸದರಿ ಕಂಪನಿಯು ಎಂಜಿನ್ ರೆಂಟಿಗಳಿಂದ ಪಡಜವಿಮಾನುಗಳು ಕಿರ್ದೀ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[11]

ಮೈಸೂರ್ ಏಜಂಟರು—
ದಿ ಯೂನಿವರ್ಸಲ್ ಟ್ರೇಡಿಂಗ್‌ಕಂಪೆನಿ,
(ಆಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಜಿ. ಎ. ಶಿರೂರ,
ಆರ್ಗನಾಯಜರ,
ಶ್ರೀ ಗೌರೀಶಂಕರ ಕಂಪೆನಿ, ಹುಬ್ಬಳ್ಳಿ.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಫಿಂಗ್ ಕಫ್ ರೆಮೆಡಿ— ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [50]

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ಸೇವಕ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮುಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿದೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[31]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ

पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಲಿಂಗೋತ್ಪತ್ತಿ ಲಾಕೆಟ್ಸ್	೨ ಆಣೆ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಕಾಂಚನಗಿರಿಯಂತೆ ವಿರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[32] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ.
ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ಆಗಸ್ಟ್ ೧೯೩೩ [ಸಂಚಿಕೆ ೧೮

ವಿರೂಪಾಕ್ಷಒಡೆಯರ ಅಮಂಗಲಬರಹ.

ಬೌದಾನಪುರದ ವಿರೂಪಾಕ್ಷ ಒಡೆಯರು ಇಂದೋರಲ್ಲಿ ಆನಂದಲೋಲರಾಗಿ ಕುಳಿತು ಮನಬಂದಂತೆ ಗುರುನಿಂದೆಯನ್ನು ಮಾಡುತ್ತ ಲೇಖನಗಳನ್ನು ಬರೆಯುತ್ತಿರುವುದು ಸರ್ವರಿಗೂ ತಿಳಿದುದಾಗಿದೆ. ಇವರ ಅಮಂಗಲಾಭಿಪ್ರಾಯವನ್ನು ಅನೇಕರು ಆಗಿಂದಾಗ್ಗೆ ಖಂಡಿಸುತ್ತಿರುವರು. ಆದಾಗ್ಯೂ ಇವರು ತಮ್ಮ ವಕ್ರಮಾರ್ಗವನ್ನು ಬಿಡದೆ ಗುರುನಿಂದೆಯಲ್ಲಿಯೇ ತಮ್ಮ ಆಯುಷ್ಯವನ್ನು ವೆಚ್ಚಮಾಡುತ್ತ ಸಮಾಜದಲ್ಲಿ ಗೊಂದಲವನ್ನೆಬ್ಬಿಸುತ್ತಿರುವರು. ಇವರು ಸ್ಟಾರ್ ಪತ್ರಿಕೆಯಲ್ಲಿ ಲಿಂಗಧಾರಣಚಂದ್ರಿಕೆಗೆ ಕನ್ನಡ ಭಾಷಾಂತರವೆಂಬ ಹೆಸರಿನಿಂದ ಒಂದು ಲೇಖನವನ್ನು ಬರೆಯುತ್ತಿರುವರು. ಆ ಲೇಖದಲ್ಲಿ ಲಿಂಗಧಾರಣಚಂದ್ರಿಕೆಯ ಮಾತುಗಳು ಎಲ್ಲಿಯೋ ಹಾರಿಹೋಗಿರುತ್ತವೆ. ಆದರೆ ಕೇವಲ ಅಸಂಬದ್ಧಗಳಾದ ಗುರುನಿಂದೆಯ ಮಾತುಗಳೇ ತುಂಬಿರುತ್ತವೆ. ಈ ತರಹದ ಗುರುನಿಂದಾತ್ಮಕವಾದ ಅಮಂಗಲಬರವಣಿಗೆಯಿಂದ ಅನೇಕ ಜನ ಗುರುಭಕ್ತರ ಮನಸ್ಸಿಗೆ ನೋವನ್ನುಂಟುಮಾಡುತ್ತಿರುವ ಇವರಿಗೆ ಯಾವ ಫಲವು ದೊರೆಯುವದೋ ತಿಳಿಯದಾಗಿದೆ. ಇತ್ತೀಚೆಗೆ ಸ್ಟಾರ್ ಪತ್ರಿಕೆಯಲ್ಲಿ ಸುಳ್ಳವೂ ಅಮಂಗಲಕರವೂ ಆದ ಒಂದು ಲೇಖವು ಪ್ರಕಟವಾಗಿದೆ. ಆ ಲೇಖದಲ್ಲಿ ಲಿಂಗದ ನಿಂದೆಯೂ ಲಿಂಗೋದ್ಭವರಾದ ಆಚಾರ್ಯರ ನಿಂದೆಯೂ ತುಂಬಿರುವುದು. ಆರ್ಯಸಮಾಜದಲ್ಲಿ ಓದಿ ಅದೇ ತತ್ತ್ವವನ್ನು ತಲೆಯಲ್ಲಿ ತುಂಬಿಕೊಂಡು ದೇವರ ವಿಷಯದಲ್ಲಿಯೂ ಆಚಾರ್ಯರ ವಿಷಯದಲ್ಲಿಯೂ ಯದ್ವಾತದ್ವಾ ಬರೆಯುತ್ತಿರುವುದು ಅತ್ಯಂತ ಹೇಯವಾಗಿದೆ. "**ಕಲ್ಲನ್ನು ಒಡೆದು ಕಡೆದ ಮೂರ್ತಿಯು ಕಲ್ಲಾಗಿ ತೋರುವುದಲ್ಲದೆ ಚೇತನದಂತೆ ತೋರಲಾರದು.**" ಎಂದು ಈ ಘನ ಪಂಡಿತರು ಬರೆದಿರುವುದನ್ನು ನೋಡಿದರೆ ಸೋಜಿಗವೆನಿಸುತ್ತದೆ. ಪ್ರಾಣಪ್ರತಿಷ್ಠೆಯಿಂದ ಚೇತನಾತ್ಮಕವಾಗಿ ಮೋಕ್ಷದಾಯಕವಾಗಿರುವ ಶಿವಲಿಂಗಕ್ಕೆ 'ಕಲ್ಲು' ಎಂದು ಬರೆಯಬೇಕಾದರೆ ಇವರ ವರ್ತನವು ಯಾವರೀತಿಯಾಗಿರಬಹುದೆನ್ನುವುದನ್ನು ವಾಚಕರೇ ಯೋಚಿಸಬೇಕಾಗಿದೆ. ನಿಜವಾದ ಭಾರತೀಯನು ಶಿವಲಿಂಗಮೂರ್ತಿಯ ವಿಷಯದಲ್ಲಿ ಈ ತರಹದ ತುಚ್ಛವಾದ ಅಭಿಪ್ರಾಯವನ್ನು ಎಂದಾದರೂ ಬರೆದಾನೋ? ಶಿವಲಿಂಗಕ್ಕೆ ಕಲ್ಲೆಂದು ಬರೆಯುವ ಈ ಪುಣ್ಯಾತ್ಮರು ತಮ್ಮ ಎದೆಯ ಮೇಲೆ ಆ ಕಲ್ಲನ್ನು ಏಕೆ ಕಟ್ಟಿಕೊಂಡಿರುವರು? ಅದನ್ನು ತೆಗೆದುಹಾಕಬಾರದೇಕೆ? ಅದನ್ನು ತೆಗೆದುಹಾಕಿದರೆ ಯಾವ ಲಿಂಗಧಾರಿಗಳೂ ಕೈಮೇಲೆ ನೀರು ಹಾಕಲಾರರೆಂದು ತಿಳಿದು ಬಿಟ್ಟಿರಬಹುದೇನು? ಭಕ್ತಿವಿಶ್ವಾಸಗಳಿಲ್ಲದೆ ಸುಮ್ಮನೆ ಜನರಂಜನಕ್ಕಾಗಿ ಲಿಂಗವನ್ನು ಕಟ್ಟಿಕೊಂಡಿರುವುದು ಎಂದೂ ಭೂಷಣವಲ್ಲ! ಶಿವಲಿಂಗಮೂರ್ತಿಗೆ ಕಲ್ಲೆನ್ನುವವರು ಆ ಕಲ್ಲನ್ನು ಕಲ್ಲಿನಲ್ಲಿಯೇ ಹಾಕಿಬಿಡಬೇಕು. ಇದು ಉತ್ತಮಪುರುಷರ ಲಕ್ಷಣ! ಹೀಗೆ ಮಾಡುವುದನ್ನು ಬಿಟ್ಟು ಯಾವ ಕಾರಣದಿಂದಲೋ ಲಿಂಗವನ್ನು ಧರಿಸುತ್ತ ಸಮಯವು ಬಂದಾಗ್ಗೆ ಅದನ್ನು ನಿಂದಿಸುತ್ತ ಸ್ವೇಚ್ಛೆಯಾಗಿ ಬರೆಯುತ್ತಿರುವುದು ಸುತರಾಂ ಹೇಯವಾಗಿದೆ. ಇವರು ಶಿವಲಿಂಗದ ವಿಷಯದಲ್ಲಿ ಬರೆದಿರುವ ಅಮಂಗಲವಾಕ್ಯವು ವೀರಶೈವರ ಮನಸ್ಸಿಗೆಲ್ಲಾ ವಿಶೇಷ ವ್ಯಸನವನ್ನುಂಟುಮಾಡಿದೆ. ಇವರ ಈ ತರಹದ ಹೇಯವೂ, ನಿಂದ್ಯವೂ, ತುಚ್ಛವೂ, ಅಮಂಗಲವೂ, ಮಹಾಪಾಪದಾಯಕವೂ, ದುಷ್ಟವೂ, ಭ್ರಷ್ಟವೂ ಆದ ಬರವಣಿಗೆಗೆ ಭರತಖಂಡವಾಸಿಗಳಾದ ಶಿವಲಿಂಗಪೂಜಕರೆಲ್ಲಾ ಧಿಕ್ಕಾರವನ್ನಿಡುತ್ತಿರುವರು. ಪಾಪದಾಯಕವಾದ ಈ ಬರವಣಿಗೆಗೆ ಶತಶಃ ಧಿಕ್ಕಾರವಿರಲಿ.

ಇನ್ನು ಈ ಮಹಾನುಭಾವರು ಬರೆದಿರುವ ಮತ್ತೊಂದು ಅಮಂಗಲ ವಿಷಯವನ್ನು ವಿಮರ್ಶಿಸೋಣ!

'**ಕಲ್ಲಿನಲ್ಲಿ ಎಲ್ಲಿಯಾದರೂ ಹುಟ್ಟುವುದುಂಟೇ? ಅಥವಾ ಕಲ್ಲಿನಲ್ಲಿ ಹುಟ್ಟಿದಮಾತ್ರಕ್ಕೆ ಮಹತ್ತ್ವ ಬರುವದೇ?**' ಎಂದು ಈ ಪಟಿಂಗನವರು ಬರೆದಿರುತ್ತಾರೆ. ಅಪ್ಪಾ! ಪಟಿಂಗನವರೇ ಶ್ರೀ ಜಗದ್ಗುರು ರೇಣುಕಾದ್ಯಾಚಾರ್ಯರು ಕಲ್ಲಿನಲ್ಲಿ ಹುಟ್ಟಿದರೆಂದು ಯಾವ ಗ್ರಂಥಗಳೂ ಹೇಳುವುದಿಲ್ಲ. ಶಿವಲಿಂಗಮುಖದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿದರೆಂದು ಪರಮಪ್ರಮಾಣಭೂತಗಳಾದ ಶಿವಾಗಮಗಳೂ, ಸಿದ್ಧಾಂತಶಿಖಾಮಣ್ಯಾದಿ ಪ್ರಾಚೀನಮತಗ್ರಂಥಗಳೂ ಮುಕ್ತಕಂಠದಿಂದ ಸಾರುತ್ತವೆ. ಈ ವಿಷಯವು ತಮ್ಮ ಮಬ್ಬುಕಣ್ಣುಗಳಿಗೆ ಕಾಣಿಸದಿರುವುದು ಆಶ್ಚರ್ಯವಲ್ಲ! ಸ್ವಲ್ಪಮಟ್ಟಿಗೆ ಆ ಘನವಾದ ಮಬ್ಬನ್ನು ಆಸ್ತಿಕ್ಯವೆಂಬ ಅಂಜನದಿಂದ ದೂರಮಾಡಿಕೊಂಡು ಶುದ್ಧಹೃದಯದಿಂದ ಓದಿನೋಡಿಕೊಳ್ಳಬೇಕು.

ಸ್ವಯಂಭುವಾಗಮದಲ್ಲಿ—

ದ್ರಾಕ್ಷಾರಾಮೇ ರಾಮನಾಥಲಿಂಗೇ ಯುಗಚತುಷ್ಟಯೇ | ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ||೧೫|| ಸುಧಾಕುಂಡಾಖ್ಯಸುಕ್ಷೇತ್ರೇ ಲಿಂಗೇ ಶ್ರೀ ಮಲ್ಲಿಕಾರ್ಜುನೇ | ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ||೧೬|| ತಥಾ ರೇವಣಸಿದ್ಧಸ್ಯ ಕೊಲ್ಲಿಪಾಕಿಪುರೋತ್ತಮೇ | ಸೋಮೇಶಲಿಂಗೇ ಜನನಮಾವಾಸಃ ಕದಲೀಪುರೇ ||೧೭|| ತದ್ವನ್ಮರುಲಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ | ಸಿದ್ಧೇಶಲಿಂಗೇ ಜನನಂ ಸ್ಥಾನಮುಜ್ಜಯಿನೀಪುರೇ ||೧೮|| ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ | ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ||೧೯||

ಈ ಪ್ರಕಾರವಾಗಿ ಪಂಚಾಚಾರ್ಯರು ರಾಮನಾಥ, ಮಲ್ಲಿಕಾರ್ಜುನ, ಸೋಮನಾಥ, ಸಿದ್ಧೇಶ್ವರ, ವಿಶ್ವನಾಥಲಿಂಗಗಳಿಂದ ಅವತರಿಸಿದರೆಂದು ಸ್ವಯಂಭುವಾಗಮವು ಸಾರುತ್ತದೆ. ಈ ವಿಷಯವನ್ನು ಕೈ|| ವಾರದಮಲ್ಲಪ್ಪನವರಿಂದ ಮುದ್ರಿಸಲ್ಪಟ್ಟ ವೀರಶೈವ ಸದಾಚಾರಸಂಗ್ರಹದ ೩೫ ನೆಯ ಪುಟದಲ್ಲಿ ನೋಡಿಕೊಳ್ಳಬೇಕು. ಅಲ್ಲದೆ ವೀರಾಗಮದ ಸಹಸ್ರಕೋಟಿ ಸಂಹಿತೆಯಲ್ಲಿಯೂ ಪಾಶುಪತತಂತ್ರದಲ್ಲಿಯೂ ವಿಶೇಷವಾಗಿ ಪ್ರತಿಪಾದಿಸಲ್ಪಟ್ಟ ಆಚಾರ್ಯರ ಲಿಂಗಾವತಾರ ವಿಷಯವನ್ನು ನೋಡಿ ಭ್ರಾಂತಿಯಿಂದ ದೂರಾಗಬೇಕು.

ಸಿದ್ಧಾಂತಶಿಖಾಮಣಿಯಲ್ಲಿ—

ಶ್ರೀಶೈಲಸ್ಯೋತ್ತರೇ ಭಾಗೇ ತ್ರಿಲಿಂಗವಿಷಯೇ ಶುಭೇ | ಕೊಲ್ಲಿಪಾಕ್ಯಭಿಧಾನೋಽಸ್ತಿ ಕೋಽಪಿ ಗ್ರಾಮೋ ಮಹತ್ತರಃ ||೩೩|| ಸೋಮೇಶ್ವರಾಭಿಧಾನಸ್ಯ ತತ್ರ ವಾಸವತೋ ಮಮ | ಅಸ್ಮಾನ್ಮಾನುಷಂ ಭಾವಂ ಲಿಂಗಾತ್ಪ್ರಾದುರ್ಭವಿಷ್ಯಸಿ ||೩೪|| ಮದೀಯಲಿಂಗಸಂಭೂತಂ ಮದ್ಭಕ್ತಪರಿಪಾಲಕಂ | ವಿಸ್ಮಿತಾ ಮಾನುಷಾಃ ಸರ್ವೇ ತ್ವಾಂ ಭಜಂತು ಮದಾಜ್ಞಯಾ ||೩೫|| ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ | ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ ||೩೬||

ಈ ಪ್ರಕಾರವಾಗಿ ೩ ನೆಯ ಪರಿಚ್ಛೇದದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಸೋಮನಾಥಲಿಂಗಾವತಾರ ವಿಷಯವು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಇದಲ್ಲದೆ ಶ್ರೀ ರೇಣುಕಾದ್ಯಾಚಾರ್ಯರ ಲಿಂಗಾವತಾರ ವಿಷಯವು ಅವರವರ ಪವಿತ್ರಚರಿತ್ರೆಗಳಲ್ಲಿಯೂ ಅನೇಕಾನೇಕ ಪ್ರಾಚೀನ ಗ್ರಂಥಗಳಲ್ಲಿಯೂ ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಲೇಖವಿಸ್ತಾರಭಯದಿಂದ ಪ್ರಮಾಣಗಳನ್ನು ಬರೆಯುವದನ್ನು ಇಷ್ಟಕ್ಕೆ ನಿಲ್ಲಿಸಿದ್ದಾಗಿದೆ. ಇಷ್ಟು ಗ್ರಂಥಗಳಿದ್ದಾಗ್ಯೂ ಈ ಘನಪಂಡಿತರಿಗೆ ಈ ವಿಷಯವು ತೋರದಿರುವುದು ಅಸೂಯೆಯ ಪ್ರಭಾವವೆಂದೇ ಹೇಳಬೇಕಾಗಿದೆ.

ಇನ್ನು ಈ ಘನಪಂಡಿತರು ಬಹುಬುದ್ಧಿಯನ್ನು ಖರ್ಚುಮಾಡಿ "ಬಹು ಗಟ್ಟಿಯಾಗಿರುವ ಕಲ್ಲಿನಲ್ಲಿ ಹುಟ್ಟುವುದು ಹೇಗೆ? ಇದು ಸುಳ್ಳು" ಎಂದು ಯದ್ವಾತದ್ವಾ ಚೀರಾಡಿರುವರು. ಹೀಗೆ ಮನಸ್ಸಿಗೆ ಬಂದಂತೆ ಚೀರಾಡಿರುವ ಈ ಪುಣ್ಯಾತ್ಮರ ಬುದ್ಧಿಯನ್ನು ಬ್ರಹ್ಮನು ಎಷ್ಟು ಗಡುತರವಾಗಿ ಮಾಡಿರಬಹುದೆಂದು ಯೋಚಿಸಬೇಕಾಗಿದೆ. ಇವರು ಸನಾತನಧರ್ಮದ ದೊಡ್ಡದೊಡ್ಡ ಪಂಡಿತರಲ್ಲಿದ್ದು ಗುರುಸೇವೆ ಮಾಡಿ ನಿಜವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರೆ ಹೀಗೆಂದಿಗೂ ಅಡ್ಡದಾರಿಯನ್ನು ಹಿಡಿಯುತ್ತಿದ್ದಿಲ್ಲ. ಮೂರ್ತಿಪೂಜಾವಿರೋಧಿಗಳಾದ ಆರ್ಯಸಮಾಜದವರ ತತ್ತ್ವವನ್ನೇ ಹಿಡಿದಿದ್ದರಿಂದ ಈ ರೀತಿ ವಕ್ರಮಾರ್ಗವನ್ನು ಹಿಡಿದಿದ್ದಾರೆ. ಇರಲಿ; ವಾಚಕರೇ! ಯೋಗಿಗಳಾದವರು ಕಠಿನವಾದ ಶಿಲೆಯಲ್ಲೇಕೆ? ಶಿಲೆಯನ್ನು ಭೇದಿಸತಕ್ಕ ವಜ್ರದಲ್ಲಿಯೂ ಸಹ ಪ್ರವೇಶಿಸಬಹುದೆಂದು ಯೋಗಶಾಸ್ತ್ರಜ್ಞರು ಯೋಗಶಾಸ್ತ್ರಗ್ರಂಥಗಳಲ್ಲಿ ವಿಶದವಾಗಿ ಪ್ರತಿಪಾದಿಸಿದ್ದಾರೆ. ಈ ಘನಪಂಡಿತರಿಗೆ ಯೋಗಶಾಸ್ತ್ರದ ಪರಿಚಯವೆಲ್ಲಿ? ಇಂದೋರಲ್ಲಿ ಇವರ ಯೋಗಶಾಸ್ತ್ರವೇ ಬೇರೆಯಾಗಿರುತ್ತದೆ. ಅಸ್ತು!

ಯೋಗಶಾಸ್ತ್ರ ಕರ್ತನಾದ ಪತಂಜಲಿಮಹರ್ಷಿಯು—

"**ತತೋಽಣಿಮಾದಿಪ್ರಾದುರ್ಭಾವಃ ಕಾಯಸಂಪತ್ತದ್ಧರ್ಮಾನಭಿಘಾತಶ್ಚ**"

ಇತ್ಯಾದಿ ಸೂತ್ರಗಳಿಂದ ಯೋಗಿಯಲ್ಲಿ ಅಣಿಮಾದ್ಯಷ್ಟಸಿದ್ಧಿಗಳ ಮಹಿಮೆಯನ್ನು ಹೇಳಿರುವನು. ಈ ಸೂತ್ರಗಳಿಗೆ ವೃತ್ತಿಯನ್ನು ಬರೆದ ಭೋಜದೇವನು ತನ್ನ ವೃತ್ತಿಯಲ್ಲಿ—

"**ಯಥಾ ಪರಮಾಣುತ್ವಂ ಪ್ರಾಪ್ತೋ ವಜ್ರಾದೀನಾಮಪ್ಯಂತಃ ಪ್ರವಿಶತಿ**"

ಅಂದರೆ ಪರಮಾಣುತ್ವಸಿದ್ಧಿಯನ್ನು ಪಡೆದ ಯೋಗಿಯು ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು ಎಂದು ಬರೆದಿದ್ದಾನೆ. ಅಂದಮೇಲೆ, ಶಿವಯೋಗಿಶಿಖಾಮಣಿಗಳೆನಿಸಿಕೊಂಡ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಯೋಗಮಹಿಮೆಯಿಂದ ಶಿವಲಿಂಗಮುಖದಿಂದ ಅವತರಿಸುವುದರಲ್ಲೇನಾಶ್ಚರ್ಯವು? ಈ ವಿಷಯವನ್ನು ಈ ಘನಪಂಡಿತರು ಶುದ್ಧಮನಸ್ಸಿನಿಂದ ತಿಳಿದುಕೊಂಡು ಪವಿತ್ರಹೃದಯರಾಗಬೇಕು. ಯಮನ ಬಾಧೆಯನ್ನು ಸಹಿಸಲಾರದೆ ಶಿವಲಿಂಗವನ್ನಾಲಿಂಗಿಸಿ ಶಿವಲೀನಮನಸ್ಕನಾದ ಮಾರ್ಕಂಡೇಯನನ್ನು ಉದ್ಧರಿಸುವುದಕ್ಕೋಸ್ಕರ ಶ್ರೀ ಪರಮೇಶ್ವರನು ಶಿವಲಿಂಗಮುಖದಿಂದಲೇ ಅವತರಿಸಿ ಯಮನ ಗರ್ವವನ್ನು ನಾಶಮಾಡಿದ ವಿಷಯವು ಈ ಮಹಾಪಂಡಿತರಿಗೆ ಗೊತ್ತಿರಲಿಕ್ಕಿಲ್ಲವೇ? ಚರಿತ್ರಾದಿಗಳನ್ನು ತಿಳಿಯದಿದ್ದರೆ ಪ್ರತಿಯೊಬ್ಬರ ಮನೆಯಲ್ಲಿ ಶೋಭಿಸುತ್ತಿರುವ ಫೋಟೋಗಳನ್ನಾದರೂ ನೋಡಬಾರದಾಗಿತ್ತೇ? ಇದನ್ನೆಲ್ಲಾ ನೋಡದೆ ಕಲ್ಲಿನಲ್ಲಿ ಹುಟ್ಟುವುದು ಲೋಕವಿರೋಧವಲ್ಲವೇ? ಎಂದು ಬರೆದಿರುವುದು ಬೆಪ್ಪತನವಲ್ಲವೇ? ಅಘಟಿತಘಟನ ಸಾಮರ್ಥ್ಯಶಾಲಿಗಳಿಗೆ ಯಾವುದುತಾನೇ ಅಸಾಧ್ಯವು? ಲೀಲಾಮಾತ್ರದಿಂದ ಸೃಷ್ಟಿಸ್ಥಿತಿಸಂಹಾರಾದಿಗಳನ್ನು ಮಾಡಬಲ್ಲ ಪ್ರಮಥಪುಂಗವರ ವಿಷಯದಲ್ಲಿ ಮನಬಂದಂತೆ ಬರೆಯುತ್ತಿರುವುದು ಅತ್ಯಂತ ಹೇಯವಾಗಿದೆ. ಅಸ್ತು!

ಇನ್ನು ಈ ಘನಪಂಡಿತರ ಬೇರೊಂದು ಅಮಂಗಲ ವಿಷಯವನ್ನು ವಿಮರ್ಶಿಸೋಣ! ಈ ಮಹಾಪಂಡಿತರು ಶ್ರೀ ಜಗದ್ಗುರು ವಿಶ್ವಾರಾಧ್ಯರ ಹೆಸರೇ ಯಾವ ಗ್ರಂಥಗಳಲ್ಲಿಯೂ ಇಲ್ಲವೆಂದು ಬರೆದಿದ್ದಾರೆ. ಈಗ ಕೆಲವುದಿವಸಗಳ ಹಿಂದೆ ಪಂಚಾಚಾರ್ಯರ ಹೆಸರುಗಳೇ ಗ್ರಂಥಗಳಲ್ಲಿಲ್ಲವೆಂದು ಬರೆದು ಈಗ ಸ್ವಲ್ಪ ತಲೆಯು ಸುಧಾರಣೆಗೆ ಬಂದಮೇಲೆ ವಿಶ್ವಾರಾಧ್ಯರ ಹೆಸರು ಇಲ್ಲವೆಂದು ಬರೆದಿದ್ದಾರೆ. ಹೀಗೆ ಕ್ಷಣಕ್ಷಣಕ್ಕೆ ಇವರ ಬುದ್ಧಿಯು ಬದಲಾಯಿಸುತ್ತ ಹೇಗೇಗೋ ಬರೆಯುತ್ತಿರುವುದನ್ನು ನೋಡಿದರೆ ಇವರಿಗೆ

[೫ನೆಯ ಪುಟವನ್ನು ನೋಡಿ.]

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ದ್ವಿತೀಯೋಲ್ಲಾಸವು.

(ಮುಂದೆ ಸಾಗಿದುದು.)

ಈಗ ಉಪಲಬ್ಧವಿರುವ ಬ್ರಾಹ್ಮಣಗ್ರಂಥಗಳ ಹೆಸರುಗಳನ್ನೂ, ಸಂಕ್ಷಿಪ್ತವಾಗಿ ಅವುಗಳೊಳಗಿನ ವಿಷಯಗಳನ್ನೂ ಇಲ್ಲಿ ಬರೆದು ತೋರಿಸುತ್ತೇವೆ:—

ಐತರೇಯಬ್ರಾಹ್ಮಣವು:—ಋಗ್ವೇದಕ್ಕೆ ಸಂಬಂಧಿಸಿದವುಗಳಾದ ಐತರೇಯವೂ ಕೌಷೀತಕಿಯೂ ಎಂಬ ಈ ಎರಡು ಬ್ರಾಹ್ಮಣಗಳಲ್ಲಿ ಐತರೇಯವು ಪ್ರಧಾನತಮವಾದುದು. ಇದರಲ್ಲಿ ಎಂಟು ಪಂಚಿಕೆಗಳಿವೆ. ಪ್ರತಿಯೊಂದು ಪಂಚಿಕೆಗೆ ಐದೈದರಂತೆ ಒಟ್ಟು ನಾಲ್ವತ್ತು ಅಧ್ಯಾಯಗಳುಂಟು. ಇದರ ಸಂಗ್ರಾಹಕನು ಅಥವಾ ಪ್ರಕಾಶಕನು ಮಹಿದಾಸ ಐತರೇಯನು. ಈ ಬ್ರಾಹ್ಮಣದಲ್ಲಿ ಪ್ರಾಮುಖ್ಯತೆಯಿಂದ ಸೋಮಯಾಗ, ಅಗ್ನಿಹೋತ್ರ, ರಾಜಸೂಯ ಎಂಬ ಕ್ರಿಯೆಗಳು ವರ್ಣಿಸಲ್ಪಟ್ಟಿವೆ.

ಕೌಷೀತಕಿಬ್ರಾಹ್ಮಣವು:—ಇದು ಋಗ್ವೇದದ ಶಾಂಖಾಯನವೆಂಬ ಎರಡನೆಯ ಬ್ರಾಹ್ಮಣವು. ಇದಕ್ಕೇ ಕೌಷೀತಕಿಯೆಂಬ ಮತ್ತೊಂದು ಹೆಸರುಂಟು; ಇದರಲ್ಲಿ ಮೂವತ್ತು ಅಧ್ಯಾಯಗಳಿವೆ. ಮೊದಲನೆಯ ಆರು ಅಧ್ಯಾಯಗಳಲ್ಲಿ ಅಗ್ನ್ಯಾಧಾನವು, ಅಗ್ನಿಹೋತ್ರವು, ದರ್ಶಪೂರ್ಣಮಾಸದ ಇಷ್ಟಿಯು, ಋತುಯಾಗವು ಮುಂತಾದ ವಿಷಯಗಳಿವೆ. ಏಳರಿಂದ ಮೂವತ್ತರವರೆಗಿರುವ ಅಧ್ಯಾಯಗಳಲ್ಲಿ ಐತರೇಯಬ್ರಾಹ್ಮಣದಲ್ಲಿ ಹೇಳಲ್ಪಟ್ಟಿರುವಂತೇ ಸೋಮಯಾಗದ ವರ್ಣನೆಯಿದೆ.

ಬ್ರಾಹ್ಮಣಗ್ರಂಥ ಸಮುದಾಯದಲ್ಲಿ ವರ್ಣಿಸಲ್ಪಟ್ಟಿರುವ ಪುರಾವೃತ್ತಾಖ್ಯಾನಾಂಶದಲ್ಲಿ ವಿಮರ್ಶಕರ ಪರಮಾದರವು ಎಷ್ಟಿರುವುದೋ ಅಷ್ಟು ಕರ್ಮಭಾಗದಲ್ಲಿರುವುದಿಲ್ಲ. ಐತರೇಯಬ್ರಾಹ್ಮಣದ ಏಳನೆಯ ಪಂಚಿಕೆಯ ಮೂರನೆಯ ಅಧ್ಯಾಯದಲ್ಲಿರುವ ಶುನಃಶೇಫಾಖ್ಯಾನವು ಅತಿರಮಣೀಯವಾಗಿದೆ. ಇನ್ನು, ಕೃಷ್ಣಯಜುರ್ವೇದೀಯ ಬ್ರಾಹ್ಮಣಗಳ ಬಗ್ಗೆ ವಿಚಾರಿಸುವಾ!

ತೈತ್ತಿರೀಯ ಬ್ರಾಹ್ಮಣವು:—ಇದು ಕೃಷ್ಣಯಜುರ್ವೇದದ (ತೈತ್ತಿರೀಯ ಸಂಹಿತೆಯ) ಉತ್ತರಭಾಗವೇ ಎಂದು ಹೇಳಬಹುದು. ತೈತ್ತಿರೀಯ ಸಂಹಿತೆಯಲ್ಲಿ ಬ್ರಾಹ್ಮಣಭಾಗವೂ ಇದೆ. ಇದರಿಂದ ತೈತ್ತಿರೀಯಬ್ರಾಹ್ಮಣದೊಳಗಿನ ಭಾಗವು ತೈತ್ತಿರೀಯ ಸಂಹಿತೆಗೆ ಹಿಂದಿನಿಂದ ಜೋಡಿಸಲ್ಪಟ್ಟಿರಬಹುದೆಂದು ಅರಿಯಲ್ಪಡುವುದು. ಇದರೊಳಗಿನ ಪುರುಷಮೇಧದ ವರ್ಣನೆ ಮುಂತಾದುದನ್ನು ವಲೋಕಿಸಿದರೆ ಯಜ್ಞಶಾಸ್ತ್ರದ ಘಟನೆಯು ನವೀನವಾದುದೆಂದು ತೋರಿಸಲ್ಪಡುವ ಕಾರಣಗಳಲ್ಲಿ ಇದೂ ಒಂದಾಗಿದೆ.

ಕಠಶಾಖೆಯಲ್ಲಿಯೂ, ಮೈತ್ರಾಯಣೀಶಾಖೆಯಲ್ಲಿಯೂ ಆಯಾ ಸಂಹಿತೆಗಳಲ್ಲಿರುವ ಗದ್ಯಭಾಗಗಳೇ ಬ್ರಾಹ್ಮಣಗಳೆಂದು ಅಂಗೀಕರಿಸಲ್ಪಟ್ಟಿವೆ. ಕಠಶಾಖೆಯ ಸಂಬಂಧವುಳ್ಳದ್ದೆಂದು ಅನುಮಾನಿಸಲ್ಪಡುವ ತೈತ್ತಿರೀಯಬ್ರಾಹ್ಮಣಭಾಗದಲ್ಲಿ (೩-೨) ನಚಿಕೇತಾಗ್ನಿಯ ಪ್ರತಿಪಾದನಾವಸರದೊಳು ಆ ಹೆಸರಿನ ಒಬ್ಬನೊಬ್ಬ ಬ್ರಾಹ್ಮಣಕುಮಾರನ (ನಚಿಕೇತನ) ಉಪಾಖ್ಯಾನವು ಉದಾಹೃತವಾಗಿದೆ. ಮೈತ್ರಾಯಣಶಾಖೆಯಲ್ಲಿ ಬ್ರಾಹ್ಮಣಭಾಗವು ಪೃಥಕ್ಕಾಗಿ ಸಿಕ್ಕುವುದಿಲ್ಲ. ಆದರೂ ಮೈತ್ರಾಯಣಸಂಹಿತೆಯ ನಾಲ್ಕನೆಯಕಾಂಡವು ವಿಧಿರೂಪವೂ, ಪರಿಶಿಷ್ಟಸ್ಥಳವೂ ಆಗಿರುವುದರಿಂದ ಅದು ಬ್ರಾಹ್ಮಣಭಾಗವೆನಿಸಿಕೊಳ್ಳಲು ಶಕ್ಯವಾಗಿದೆ.

ಶತಪಥಬ್ರಾಹ್ಮಣವು:—ಇದು ಶುಕ್ಲಯಜುರ್ವೇದದ (ವಾಜಸನೇಯ ಸಂಹಿತೆಯ) ಪ್ರಮುಖವಾದ ಬ್ರಾಹ್ಮಣಗ್ರಂಥವು. ಶುಕ್ಲಯಜುರ್ವೇದೀಯ ವಿಧ್ಯಂಶವು ಇದರಲ್ಲಿ ಸವಿಸ್ತರವಾಗಿ ನಿಬದ್ಧವಾಗಿದೆ. 'ಶತಪಥ' ವೆಂಬ ಈ ಹೆಸರು 'ಶತಂ ಪನ್ಥಾನೋ ಯಸ್ಮಿನ್' ಎಂಬ ವ್ಯುತ್ಪತ್ತಿಯಿಂದ ೧೦೦ ಅಧ್ಯಾಯಗಳುಳ್ಳದ್ದೆಂಬ ಅನ್ವರ್ಥವನ್ನನುಸರಿಸಿರುವುದು. ಸರ್ವವೈದಿಕಗ್ರಂಥಸಮುದಾಯದಲ್ಲಿ ಋಗ್ವೇದದ ತರುವಾಯ ಇದಕ್ಕೆ ಪ್ರಾಧಾನ್ಯವಿದೆ. ಮಾಧ್ಯಂದಿನರ ಪಾಠವೂ ಕಣ್ವರಪಾಠವೂ ಎಂಬುದಾಗಿ ಈ ಬ್ರಾಹ್ಮಣದ ಎರಡು ವಿಧವಾದ ಪಾಠಪದ್ಧತಿಗಳಿವೆ. ಮಾಧ್ಯಂದಿನರ ಪಾಠಾನುಸಾರವಾಗಿ ೧೪ ಕಾಂಡಗಳೂ ಕಣ್ವರ ಪಾಠಾನುರೋಧವಾಗಿ ೧೭ ಕಾಂಡಗಳೂ ಇವೆ. ಈ ಬ್ರಾಹ್ಮಣದಲ್ಲಿ ಚರಕಶಾಖೀಯರ ಅಂದರೆ, ಕೃಷ್ಣಯಜುರ್ವೇದೀಯ ಕಾಠಕ, ಕಪಿಷ್ಠಲ, ಮೈತ್ರಾಯಣಶಾಖೀಯರ ನಿಂದೆಯುಂಟು! ಅದೇನು ಕಾರಣವೋ? (೧೧-೫-೪)—(೧೧-೫-೬) ಎಂಬಲ್ಲಿ ಅನುಕ್ರಮವಾಗಿ ಉಪನಯನವೂ ಸ್ವಾಧ್ಯಾಯವಿಚಾರವೂ (೧೩-೮) ಎಂಬಲ್ಲಿ ಉತ್ತರಕ್ರಿಯೆಯೂ ಸಮಾಧಿಕಟ್ಟುವಿಕೆಯೂ ಮುಂತಾದ ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಮತ್ತು, ಈ ಬ್ರಾಹ್ಮಣವು ಸಹೃದಯಹೃದಯಾವರ್ಜಕಗಳಾದ ಉಪಾಖ್ಯಾನರತ್ನಗಳಿಗಾಕರವಾಗಿದೆ.

ತಾಂಡ್ಯಬ್ರಾಹ್ಮಣವು—ಸಾಮವೇದೀಯ ಶಾಖಾದ್ವಯಕ್ಕೆ ಸಂಬಂಧಿಸಿದವುಗಳಾದ ತಾಂಡ್ಯವೂ ತಲವಕಾರೀಯ (ಜೈಮಿನೀಯ) ವೂ ಎಂಬಿವೆರಡು ಬ್ರಾಹ್ಮಣಗಳಿವೆ. ಸಾಮವೇದೀಯ ಕೌಥುಮಶಾಖೆಯನುಸಾರವಾದುದು ತಾಂಡ್ಯಬ್ರಾಹ್ಮಣವು. ಇದುವೇ ಪಂಚವಿಂಶಬ್ರಾಹ್ಮಣವೆಂದೂ ಹೇಳಿಸಿಕೊಳ್ಳಲ್ಪಡುವುದು. ಸ್ವನಾಮಾನುಗುಣ್ಯವಾಗಿ ಇದು ೨೫ ಕಾಂಡಗಳಿಂದ ಸಂಘಟಿತವಾಗಿದೆ. ಇದಾದರೂ ಪ್ರಾಧಾನ್ಯವಾಗಿ ಸೋಮಯಾಗ ಕ್ರಿಯೆಯನ್ನೇ ನಿರೂಪಿಸುವುದು. ಇದರಲ್ಲಿಯೂ ಅನೇಕ ಪುರಾತನೋಪಾಖ್ಯಾನಗಳಿವೆ. ಇದರ ೧೭ ನೆಯ ಅಧ್ಯಾಯದೊಳಗಿನ ವಿಷಯಗಳು ವಿಚಾರಾರ್ಹಗಳಾಗಿವೆ. ಜೈಮಿನೀಯ ಬ್ರಾಹ್ಮಣವು ಬಹಳ ಪ್ರಖ್ಯಾತವಾಗಿಲ್ಲ.

ಷಡ್ವಿಂಶಬ್ರಾಹ್ಮಣವು—ಇದು ಪಂಚವಿಂಶಬ್ರಾಹ್ಮಣದ ಪರಿಶಿಷ್ಟವೆನಿಸುವುದು.

ಛಾಂದೋಗ್ಯಬ್ರಾಹ್ಮಣವು—ಇದಾದರೂ ಸಾಮವೇದೀಯ ಶಾಖೆಗೆ ಸಂಬಂಧಿಸಿದುದು. ಇದರಲ್ಲಿ ಸ್ವಲ್ಪಭಾಗವೇ ಕ್ರಿಯಾಪ್ರತಿಪಾದಕವಾಗಿದೆ. ಇದು ಸೋಮಯಾಗದ ಹೆಸರನ್ನು ಕೂಡ ಹೇಳುವುದಿಲ್ಲ. ಇದರೊಳು ಜನನ ವಿವಾಹಾದಿ ವಿಷಯಗಳೂ ಕೆಲವು ಕ್ರಿಯಾವಿಧಿಗಳೂ ಉಪದೇಶಿಸಲ್ಪಟ್ಟಿವೆ. ಕೆಲವು ದೇವತಾಸ್ತೋತ್ರಗಳೂ ಉಂಟು. ಇವೆಲ್ಲ ವಿಷಯಗಳು ಈ ಬ್ರಾಹ್ಮಣದ ಪ್ರಾರಂಭದಲ್ಲಿ ಪ್ರತಿಪಾದಿತಗಳಾಗಿವೆ. ಉಳಿದ ಅಧ್ಯಾಯಗಳು ಛಾಂದೋಗ್ಯೋಪನಿಷದಾತ್ಮಕಗಳಾಗಿವೆ.

ಇನ್ನು ಬೇರೆ ನಾಲ್ಕು ಖಂಡಕೃತಿಗಳಿಗಾದರೂ ಬ್ರಾಹ್ಮಣಗಳೆನ್ನುವುದುಂಟು. ಆದರೂ ವಸ್ತುತಃ ಅವು ಬ್ರಾಹ್ಮಣಗಳೆನಿಸಿಕೊಳ್ಳಲಾರವೆಂದು ಹೇಳಬಹುದು. ಏಕೆಂದರೆ—ಅವುಗಳಲ್ಲಿ ಸಾಮವಿಧಾನವೆಂಬುದೂ ಒಂದು ಬ್ರಾಹ್ಮಣವೆನಿಸುವುದಷ್ಟೇ! ಅದು ಅಭಿಚಾರಕರ್ಮಗಳಲ್ಲಿ ಅನುಷ್ಠಿಸಲ್ಪಡತಕ್ಕ ಮಂತ್ರಪ್ರಯೋಗಗಳನ್ನು ಪದೇಶಿಸುವುದು. ೨ ನೆಯದು ದೇವತಾಧ್ಯಾಯ ಬ್ರಾಹ್ಮಣವೆಂಬುದು ಸಾಮವೇದೀಯ ದೇವತೆಗಳನ್ನು ಸ್ತುತಿಸುವುದು. ಇದರಲ್ಲಿಯೂ ಕ್ರಿಯಾಸಂಬಂಧದ ಸುದ್ದಿಯೇ ಇಲ್ಲ. ಮೂರನೆಯ ವಂಶಬ್ರಾಹ್ಮಣವಾದರೂ ಸಾಮವೇದೀಯರಾದ ಆಚಾರ್ಯರ ವಂಶಾನುಕ್ರಮ ಮಾತ್ರವನ್ನು ವರ್ಣಿಸುತ್ತದೆ. ನಾಲ್ಕನೆಯ ಸಂಹಿತೋಪನಿಷದ್ಬ್ರಾಹ್ಮಣದಲ್ಲಿಯಾದರೋ ಐತರೇಯಾರಣ್ಯಕ ಸ್ಥಿತಿಯ ಕಾಂಡದಂತೆ ಕೇವಲ ವೇದಾಧ್ಯಯನ ರೀತಿಯು ಉಪದೇಶಿಸಲ್ಪಡುವುದರ ವಿನಾ ಯಾವ ಕ್ರಿಯೆಯನ್ನೂ ಪ್ರತಿಪಾದಿಸುವುದಿಲ್ಲ.

ಗೋಪಥಬ್ರಾಹ್ಮಣವು—ಇದು ಅಥರ್ವವೇದೀಯ ಬ್ರಾಹ್ಮಣವು. ಇದು ಸಂಹಿತೆಯೊಡನೆ ಸಾಕ್ಷಾತ್ಸಂಬಂಧವುಳ್ಳದ್ದಾಗಿ ಕಂಡುಬರುವುದಿಲ್ಲವಾದರೂ, ಇದಕ್ಕೆ ಅಥರ್ವವೇದೀಯತ್ವವು ದುರ್ನಿವಾರವಾಗಿದೆ. ಇದರಲ್ಲಿ ಎರಡೇ ಕಾಂಡಗಳಿವೆ. ಮೊದಲನೆಯ ಕಾಂಡದಲ್ಲಿ ೫ ಅಧ್ಯಾಯಗಳೂ, ಎರಡನೆಯ ಕಾಂಡದಲ್ಲಿ ಆರು ಅಧ್ಯಾಯಗಳೂ ಇರುತ್ತವೆ.

ಹೀಗೆ ಬೇರೆಬೇರೆಯಾಗಿರತಕ್ಕ ಬ್ರಾಹ್ಮಣಗ್ರಂಥಗಳಲ್ಲಿ ಬೇರೆ ಬೇರೆಗಳಾದ ಯಜ್ಞಯಾಗಾದಿಗಳು ಬೇರೆಬೇರೆ ರೀತಿಯಾಗಿ ವರ್ಣಿಸಲ್ಪಟ್ಟಿರುವುದರಿಂದ ಅವುಗಳ ಏಕವಾಕ್ಯತೆಯನ್ನು ದೃಢಪಡಿಸಲೋಸುಗವೇ ಜೈಮಿನಿಮುನಿಯು ಪೂರ್ವಮೀಮಾಂಸಾ ಸೂತ್ರಗಳನ್ನು ರಚಿಸಿದನು.

ಯಾವುದಾದರೊಂದು ಬ್ರಾಹ್ಮಣದಲ್ಲಿ ಒಂದಾನೊಂದು ವಚನದ ಅರ್ಥವನ್ನು ಅರಿತುಕೊಳ್ಳಬೇಕಾದ ಸಂದರ್ಭದಲ್ಲಿ, ಆ ವಾಕ್ಯದೊಳು ವಿಧಿಯು ಹೇಳಲ್ಪಟ್ಟಿದೆಯೋ? ಅರ್ಥವಾದವು ಹೇಳಲ್ಪಟ್ಟಿದೆಯೋ? ಶ್ರುತಿ-ಸ್ಮೃತಿಗಳಲ್ಲಿ ಪರಸ್ಪರ ವಿರೋಧವು ಕಂಡುಬರಲು ಅವುಗಳಲ್ಲಿ ಯಾವುದನ್ನು ಪ್ರಮಾಣವೆಂದೊಪ್ಪಬೇಕು? 'ಉದ್ಭಿದ್' ಎಂಬ ಮೊದಲಾದ ಶಬ್ದಗಳು ಬ್ರಾಹ್ಮಣದೊಳಗಿನ ಕೆಲವು ವಾಕ್ಯಗಳಲ್ಲಿ ತೋರಿಬಂದರೆ ಆ ವಾಕ್ಯಗಳೊಳಗಿನ 'ಉದ್ಭಿದ್' ಎಂಬ ಶಬ್ದವು ಯಾಗದ ನಾಮಧೇಯವೋ? ಅಥವಾ ಯಾಗದ ಗುಣವಾಚಕವೋ? ಶ್ರುತಿ, ಲಿಂಗ ಮೊದಲಾದ ಪ್ರಮಾಣಗಳಲ್ಲಿ ಯಾವುದನ್ನು ಅಧಿಕಪ್ರಾಬಲ್ಯವಾದುದೆಂದರಿಯಬೇಕು? ಮಂತ್ರಪಾಠದಲ್ಲಿ ಒಂದುಕ್ರಮವು ಹೇಳಲ್ಪಟ್ಟದ್ದು ಬ್ರಾಹ್ಮಣಪಾಠದಲ್ಲಿ ಅದಕ್ಕಿಂತ ಭಿನ್ನವಾದಕ್ರಮವು ಹೇಳಲ್ಪಟ್ಟಿರುವುದಾದರೆ ಅವುಗಳಲ್ಲಿ ಪ್ರಮಾಣಭೂತವಾದ ಕ್ರಮವು ಯಾವುದೆಂದು ತಿಳಿಯಬೇಕು? ಆಯಾ ಯಾಗಾದಿಕರ್ಮಗಳನ್ನು ಅನುಷ್ಠಿಸುವ ಅಧಿಕಾರವು ಯಾರಿಗಿರುವುದು? ಯಾರಿಗಿರುವುದಿಲ್ಲ? ಹೀಗೆ ಒಂದಲ್ಲ, ಎರಡಲ್ಲ, ಎಷ್ಟೋ ಪ್ರಶ್ನೆಗಳು ಹುಟ್ಟುತ್ತವೆ. ಇವುಗಳನ್ನು ಯಾವುದರ ಆಧಾರದಿಂದ ನಿರ್ಣಯಿಸಿಕೊಳ್ಳಬೇಕು? ಇವುಗಳನ್ನು ನಿರ್ಣಯಿಸಿಕೊಳ್ಳುವುದರಲ್ಲಿ ಮೀಮಾಂಸಾಶಾಸ್ತ್ರವೇ ಸಮರ್ಥವಾಗಿದೆ. ಈ ಮಾತಿನ ತಿಳುವಳಿಕೆಗಾಗಿ ಒಂದು ವಿಷಯವನ್ನು ದೃಷ್ಟಾಂತದೊಡನೆ ನಿವರಿಸುತ್ತೇವೆ. ಬ್ರಾಹ್ಮಣಗಳಲ್ಲಿ ಅನೇಕ ಯಾಗಗಳ ಉಲ್ಲೇಖವಿದೆ. ಅವುಗಳಲ್ಲಿ ಪ್ರಕೃತಿಯಾಗಗಳು ಯಾವುವು? ವಿಕೃತಿಯಾಗಗಳ ಸ್ವರೂಪವೇನು? ವಿಕೃತಿಯಾಗಗಳಲ್ಲಿ ಯಾವಯಾವ ಅಂಗಗಳು ಸ್ವೀಕರಿಸಲ್ಪಡತಕ್ಕವು? ಎಂಬಿವುಗಳ ಸ್ಪಷ್ಟವಾದ ನಿರ್ಣಯವು ಮಾಡಲ್ಪಟ್ಟಿರುವುದಿಲ್ಲ. ಆದರೆ, ಆ ಪ್ರಕೃತಿವಿಕೃತಿಗಳ ನಿರ್ಣಯವನ್ನು ಪೂರ್ವಮೀಮಾಂಸಾಶಾಸ್ತ್ರದಿಂದೇ ಅರಿತುಕೊಳ್ಳಬೇಕಾಗಿದೆ. ಹೇಗೆಂದರೆ:—'ಯತ್ರ ಸಮಗ್ರಾಂಗೋಪದೇಶಃ ಸಾ ಪ್ರಕೃತಿಃ' ಎಂಬಂತೆ ಯಾವ ಯಾಗದಲ್ಲಿ ಆ ಯಾಗಕ್ಕೆ ಅವಶ್ಯಕಗಳಾದ ಎಲ್ಲ ಅಂಗಗಳೂ ಇರುವವೋ ಅದು ಪ್ರಕೃತಿಯಾಗವೆಂಬ ಸಂಜ್ಞೆಯುಳ್ಳದ್ದಾಗಿದೆ. ಹೇಗೆಂದರೆ—'ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ' ಎಂಬ ಈ ವಾಕ್ಯದಿಂದ ದರ್ಶಪೂರ್ಣಮಾಸವೆಂಬ ಯಾಗದ ಅನುಷ್ಠಾನವು ವಿಧಿಸಲ್ಪಡುವಲ್ಲಿ, ತದಂಗಭೂತಗಳಾದ ಪ್ರಯಾಜ, ಅನುಯಾಜಾದಿಗಳಾದರೂ ಹೇಳಲ್ಪಡುತ್ತವೆ. ಅಂದರೆ ಆ ದರ್ಶಪೂರ್ಣಮಾಸ ಯಾಗಕ್ಕೆ ಸಂಬಂಧಪಟ್ಟ ಯಾವ ಅಂಗವೂ ಅನ್ಯಯಾಗದಿಂದ ಗ್ರಹಣಮಾಡಲ್ಪಡುವುದಿಲ್ಲ. ಆದರೆ, ವಿಕೃತಿಯಾಗಗಳಲ್ಲಿ ಅನುಕ್ತಗಳಾದ ಅಂಗಗಳು ಪ್ರಕೃತಿಯಾಗದಿಂದ ತೆಗೆದುಕೊಳ್ಳಲ್ಪಡುತ್ತವೆ. ಈ ರೀತಿಯಾಗಿ ಇತರ ಯಾಗಗಳಿಗೆ ಅಂಗಗಳನ್ನೊದಗಿಸಿಕೊಡುವ ಮೂಲಕವಾಗಿಯೂ, ಮೂಲ ಅಂಗಗಳಿಗೆ ಕಾರಣಭೂತವಾದ ನಿಧಿಯೆಂಬ ದೃಷ್ಟಿಯಿಂದಲೂ ಇದಕ್ಕೆ 'ಪ್ರಕೃತಿ'ಯೆಂಬ ಸಂಜ್ಞೆಯುಂಟು.

ಮತ್ತು 'ಯತ್ರ ನ ಸಮಗ್ರಾಂಗೋಪದೇಶಃ ಸಾ ವಿಕೃತಿಃ' ಎಂಬಂತೆ ಯಾವ ಯಾಗದಲ್ಲಿ ಸರ್ವಾಂಗಗಳೂ ಹೇಳಲ್ಪಡದೆ 'ಪ್ರಕೃತಿವದ್ವಿಕೃತಿಃ ಕರ್ತವ್ಯಾ' ಎಂಬ ಅತಿದೇಶವಾಕ್ಯದಿಂದ ಆ ಯಾಗಕ್ಕೆ ಪ್ರಕೃತಿಯಾಗಿರತಕ್ಕ ಯಾಗದಿಂದ ತಮಗಪೇಕ್ಷಿತಗಳಾದ ಗ್ರಹಣಪೂರ್ವಕ ಅನುಷ್ಠಿಸಲ್ಪಡುವ ಯಾಗವು ವಿಕೃತಿಯಾಗವೆನಿಸುವುದು.

ಈ ಮೇಲೆ ನಿರ್ದಿಷ್ಟವಾದ ದರ್ಶಪೂರ್ಣಮಾಸವೆಂಬ ಇಷ್ಟಿಯ ಅಂಗಭೂತಗಳಾದ ಪ್ರಯಾಜ ಮತ್ತು ಅನುಯಾಜವೆಂಬಿವೆರಡರ ಸ್ವರೂಪವನ್ನು ಇಲ್ಲಿ ವಿವರಿಸುತ್ತೇವೆ.

ಪ್ರಯಾಜ—ಇದು ಅಯ್ದು ಯಾಗಗಳದೊಂದು ಸಂಜ್ಞೆಯು. ಅಂದರೆ, (೧) ಸಮಿಧೋ ಯಜತಿ. (೨) ಇಡೋ ಯಜತಿ. (೩) ಬರ್ಹಿರ್ಯಜತಿ. (೪) ತನೂನಪಾತಂ ಯಜತಿ. (೫) ಸ್ವಾಹಾಕಾರಂ ಯಜತಿ. ಎಂಬ ಅಯ್ದು ಯಾಗಗಳಿವೆ. ಈ ಯಾಗಗಳ 'ಸಮಿಧಃ ಸಮಿಧೋ ಅಗ್ನ ಆಜ್ಯಸ್ಯ ವ್ಯನ್ತು' ಇತ್ಯಾದಿ ವಿಧಾಯಕ ಮಂತ್ರಗಳೂ ಅಲ್ಲಿ ಹೇಳಲ್ಪಟ್ಟಿವೆ. ಅವುಗಳನ್ನು ಕ್ರಮವಾಗಿ ಈ ಯಾಗಗಳಿಗೆ ಜೋಡಿಸಿ ಸಮಿಧಾದಿಯಾಗಗಳನ್ನು ನೆರವೇರಿಸುವುದೇ ಪಂಚಪ್ರಯಾಜಯಾಗಗಳು.

ಈ ಪ್ರಯಾಜ ಯಾಗಗಳ ಸ್ವತಂತ್ರವಾದ ಫಲವು ಹೇಳಲ್ಪಟ್ಟಿಲ್ಲವಾದ್ದರಿಂದ, ಇವು ದರ್ಶಪೂರ್ಣಮಾಸದ ಅಂಗಭೂತಗಳಾಗಿರುವುವೆಂದು ತಿಳಿಯತಕ್ಕದ್ದು. ಸಾರಾಂಶ, ಪ್ರಯಾಜಾದಿಗಳಿಂದ ದರ್ಶಪೂರ್ಣಮಾಸಯಾಗವನ್ನು ಮಾಡಿದರೆ ಅದರಿಂದ ಕರ್ತೃಗೆ ಸ್ವರ್ಗವೆಂಬ ಫಲವು ಸಿಕ್ಕುವುದು.

ಅನುಯಾಜ—ದರ್ಶಪೂರ್ಣಮಾಸವೆಂಬ ಯಾಗದಲ್ಲಿ ಪಂಚಪ್ರಯಾಜಗಳ ಅನುಷ್ಠಾನವು ಹೇಳಲ್ಪಟ್ಟಿರುವಂತೆ ಅನುಯಾಜಸಂಜ್ಞಕಗಳಾದ ಮೂರು ಯಾಗಗಳೂ ಹೇಳಲ್ಪಟ್ಟಿವೆ. ಈ ಅನುಯಾಜಗಳು ಇಡಾಭಕ್ಷಣಾನಂತರದಲ್ಲಿ ಉಳಿದ ಕೆಲವು ಕರ್ಮಗಳನ್ನು ಮಾಡಿದ ತರುವಾಯ ಅನುಷ್ಠಿಸಲ್ಪಡುವುವು. 'ಮಾರ್ಜಯಿತ್ವಾಽನುಯಾಜೈಶ್ಚರನ್ತಿ' ಮಾರ್ಜನವನ್ನು ಮಾಡಿದ ಬಳಿಕ ಅನುಯಾಜಗಳನ್ನು ನೆರವೇರಿಸಬೇಕೆಂಬುದಾಗಿ ಆಶ್ವಲಾಯನ ಶ್ರೌತಸೂತ್ರವು ಈ ವಿಷಯದಲ್ಲಿ ವಿಧಾಯಕ ಪ್ರಮಾಣವಾಗಿದೆ. ಹಾಗೂ, ಆಪಸ್ತಂಬ ಪರಿಭಾಷಾ ಸೂತ್ರದಲ್ಲಿಯೂ 'ಔಪಭೃತಂ ಜುಹ್ವಾಮಾನೀಯ..............ಪ್ರತೀಪಸ್ತ್ರೀನನುಯಾಜಾನ್ ಯಜತಿ' ಎಂಬುದಾಗಿ ಅನುಯಾಜಗಳು ವಿಧಿಸಲ್ಪಟ್ಟಿವೆ. ಅನುಯಾಜಗಳನ್ನು ನೆರವೇರಿಸುವ ಸಮಯದಲ್ಲಿ ಹೋತಾ ಎಂಬಾತನು ಪಠಿಸತಕ್ಕ ಮೂರು ಮಂತ್ರಗಳಿವೆ. ಅವನು ಅವುಗಳನ್ನು ಉಚ್ಚರಿಸುತ್ತಿರುವಾಗ ಆ ಆ ದೇವತೆಗಳನ್ನು ಉದ್ದೇಶಿಸಿ ಮೂರುಸಾರೆ ಹವಿಃಪ್ರಕ್ಷೇಪ ಮಾಡಲ್ಪಡುವುದೇ ಅನುಯಾಜವು. ಇನ್ನು, ದರ್ಶಪೂರ್ಣಮಾಸ, ಅಗ್ನಿಷ್ಟೋಮ, ಅಶ್ವಮೇಧ, ಸೋಮಯಾಗಾದಿಗಳ ಸ್ವರೂಪವನ್ನು ಮುಂದೆ ಚತುರ್ಥೋಲ್ಲಾಸದಲ್ಲಿ ವಿವರಿಸುವೆವು.

ಪ್ರಕೃತವನನುಸರಿಸುವಾ! ಹೀಗೆ ಬ್ರಾಹ್ಮಣಭಾಗದಲ್ಲಿ ಹೇಳಲ್ಪಡುವ ಪ್ರಕೃತಿ ವಿಕೃತಿ ಮುಂತಾದ ಯಾಗಗಳ ವಿವರಣೆಯನ್ನರಿತುಕೊಳ್ಳಲು ಮೀಮಾಂಸೆಯ ನೆರವು ಬೇಕಾಗುವುದೆಂದು ಸಿದ್ಧವಾಗುವುದು. ಹಾಗೇ, 'ಅಕ್ತಾಃ ಶರ್ಕರಾ ಉಪದಧಾತಿ' ಎಂಬ ಮುಂತಾದ ವೈದಿಕವಾಕ್ಯಗಳ ತಾತ್ಪರ್ಯವನ್ನು ಸರಿಯಾಗಿ ತಿಳಿದುಕೊಳ್ಳುವಲ್ಲಿಯೂ ಮೀಮಾಂಸಾಶಾಸ್ತ್ರದ ಸಹಾಯವು ಅವಶ್ಯವಾದುದು. ಏಕೆಂದರೆ— ಈ ಮೇಲಿನ ವೇದವಾಕ್ಯದಲ್ಲಿರುವ 'ಶರ್ಕರಾಃ' ಎಂಬ ಶಬ್ದಕ್ಕೆ ಪುಡಿಸಕ್ಕರೆಯ ಸಣ್ಣ ಹರಳುಗಳಂತಿರುವ ಮಣ್ಣಿನೊಡನೆ ಬೆರೆದ ಸುಣ್ಣಗಲ್ಲುಗಳೆಂಬರ್ಥವು. ಅವುಗಳ ಅಂಜನವನ್ನು ಮಾಡುವಲ್ಲಿ ತುಪ್ಪದಿಂದಮಾಡಬೇಕೋ, ಎಣ್ಣೆಯಿಂದ ಮಾಡಬೇಕೋ? ಅಥವಾ ರಸಾದಿಗಳಿಂದ ಮಾಡಬೇಕೋ? ಎಂಬ ಸಂಶಯವುಂಟಾಗಲು, ಆಗ ಅದರ ನಿರ್ಣಯವನ್ನು ವ್ಯಾಕರಣ, ನಿರುಕ್ತಾದಿಗಳನ್ನು ಓದಿದ ಜಾಣನು ಮಾಡಬಲ್ಲನೇ? ಮಾಡಲಾರನು. ಆದರೆ, ಮೀಮಾಂಸಾಶಾಸ್ತ್ರದ ನಿಯಮಗಳಿಂದಾದರೋ ಆ ಬಗ್ಗೆ ಸುಲಭವಾಗಿ ನಿರ್ಣಯಮಾಡಬಹುದು. ಹೇಗೆಂದರೆ, ಮೇಲೆ ನಿರ್ದಿಷ್ಟವಾದ ಮಂತ್ರದ ವಾಕ್ಯಶೇಷದಲ್ಲಿ 'ತೇಜೋವೈ ಘೃತಮ್' ಎಂಬ ವಚನವಿರುವುದರಿಂದ, ಆ ಶರ್ಕರಾಂಜನವನ್ನು ತುಪ್ಪದಿಂದೇ ಮಾಡಬೇಕೆಂಬ ನಿರ್ಣಯವನ್ನು ಮೀಮಾಂಸಾಶಾಸ್ತ್ರದ ಸಾಹಾಯ್ಯದಿಂದ ನಮಗೆ ಸುಲಭವಾಗಿ ಮಾಡಲಿಕ್ಕೆ ಬರುವುದು. ಈ ಮೇರೆಗೆ, ಕರ್ಮಕಾಂಡಬೋಧಕಗಳಾದ ವೈದಿಕವಾಕ್ಯಗಳ ತಾತ್ಪರ್ಯವನ್ನು ತಿಳಿದುಕೊಳ್ಳುವಲ್ಲಿ ಮೀಮಾಂಸೆಯು ನೆರವಾಗುವುದು. ಅದುಕಾರಣವೇ ಕುಮಾರಿಲಭಟ್ಟರು:—

ಧರ್ಮೇ ಪ್ರಮೀಯಮಾಣೇ ಹಿ ವೇದೇನ ಕರಣಾತ್ಮನಾ |
ಇತಿ ಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ ||

ಎಂದು ನಿರೂಪಿಸಿದ್ದಾರೆ. ಈ ವಾಕ್ಯದಲ್ಲಿರುವ 'ಇತಿಕರ್ತವ್ಯತಾ' ಎಂಬ ಶಬ್ದದ ಅರ್ಥವು ಹೀಗಿದೆ:—'ಕರ್ತವ್ಯಸ್ಯ ಇತಿ—ಪ್ರಕಾರಃ, ಇತಿಕರ್ತವ್ಯತಾ'—ಅಗ್ನಿಹೋತ್ರಾದಿ ಕರ್ತವ್ಯದ ಅನುಷ್ಠಾನಪ್ರಕಾರವು 'ಇತಿಕರ್ತವ್ಯತಾ' ಎಂದು ಹೇಳಲ್ಪಡುವುದು. ಯಾವದಾದರೊಂದು ವಿಧಿಯು ಶ್ರವಣ ಮಾಡಲ್ಪಟ್ಟದಾದರೆ, ಅಬಗ್ಗೆ ಕಥಂಭಾವಾಕಾಂಕ್ಷೆಯುಂಟಾಗುವುದು. ವ್ಯವಹಾರದಲ್ಲಿ 'ಕೊಡಲಿಯಿಂದ ಕಡಿಯಬೇಕು' ಎಂಬ ನುಡಿಯು ನಮ್ಮ ಕಿವಿಗೆ ಬಿದ್ದಾಗ, 'ಕಥಮ್' ಈ ಕೊಡಲಿಯಿಂದ ಕಟ್ಟಿಗೆಯನ್ನು ಹೇಗೆ ಕಡಿಯಬೇಕು? ಎಂಬ ಆಕಾಂಕ್ಷೆಯು (ಜಿಜ್ಞಾಸೆಯು) ನಮ್ಮಲ್ಲಿ ಹುಟ್ಟುವದು. ಆ ಕಥಂಭಾವಾಕಾಂಕ್ಷೆಯನ್ನು ನಿವೃತ್ತಿಗೊಳಿಸಲೋಸುಗ ಪ್ರಯೋಜಕ ಪುರುಷನಿಂದ—'ಕೊಡಲಿಯನ್ನೆತ್ತಿ ಧಾರೆಯುಳ್ಳದರ ಕಡೆಯಿಂದ ಕಟ್ಟಿಗೆಯ ಮೇಲೆ ಏಟನ್ನು ಹಾಕಿ ಕಟ್ಟಿಗೆಯನ್ನು ಕಡಿಯಬೇಕು' ಎಂದು ಹೇಳಲ್ಪಡುವುದೇ ಇತಿಕರ್ತವ್ಯತೆಯು. ಈ ದೃಷ್ಟಾಂತಾನುಸಾರವಾಗಿ, 'ದರ್ಶಪೂರ್ಣಮಾಸಗಳಿಂದ ಯಜಿಸತಕ್ಕದ್ದು' ಎಂಬ ವಾಕ್ಯದ ಶ್ರವಣಾನಂತರದಲ್ಲಿ 'ದರ್ಶಪೂರ್ಣಮಾಸಯಾಗವನ್ನು ಹೇಗೆ ಮಾಡಬೇಕು?' ಎಂದು ಹುಟ್ಟುವ ಕಥಂಭಾವಾಕಾಂಕ್ಷೆಯ ನಿವೃತ್ತಿಗೋಸ್ಕರ ಪ್ರಯಾಜ, ಅನುಯಾಜಾದಿ ಅಂಗಗಳ ಅಪೇಕ್ಷೆಯಿರುವುದು. ಅದ್ದರಿಂದ, 'ಪ್ರಯಾಜಾನುಯಾಜಾದಿ ಅಂಗಗಳನ್ನು ನೆರವೇರಿಸಿ ತನ್ಮೂಲಕ ಅಪೂರ್ವವನ್ನು ಹುಟ್ಟಿಸಿ ದರ್ಶಪೂರ್ಣಮಾಸ ಯಾಗವನ್ನನುಷ್ಠಿಸತಕ್ಕದ್ದು' ಎಂಬ ಕಥನವೇ ಇತಿಕರ್ತವ್ಯತೆಯು. 'ಕಥಮ್' ಎಂಬ ಪದವು ಪ್ರಕಾರದ ಆಕಾಂಕ್ಷೆಯನ್ನು ಸೂಚಿಸುವುದರಿಂದ, ಇತಿಕರ್ತವ್ಯತೆಯು ಯಾವಾಗಲೂ ಕ್ರಿಯಾರೂಪವೇ ಆಗಿರುವುದೆಂದರಿಯಬೇಕು. 'ಹೇಗೆ ಕಡಿಯಬೇಕು?' ಎಂಬ ಆಕಾಂಕ್ಷೆಯುದಯಿಸಲು ಆಗ ಕೇವಲ 'ಹಸ್ತಃ' ಎಂದುಚ್ಚರಿಸುವುದರಿಂದ ಆ ಆಕಾಂಕ್ಷೆಯು ಹಿಮ್ಮೆಟ್ಟದು. ಮತ್ತೇನೆಂದರೆ 'ಹಸ್ತೇನ ಉದ್ಯಮ್ಯ ನಿಪಾತ್ಯ'—'ಕೈಯಿಂದೆತ್ತಿ ಕಸುವಿನಿಂದೇಟನ್ನು ಹಾಕಿ ಕಡಿಯತಕ್ಕದ್ದು' ಎಂಬುದಾಗಿ ಕ್ರಿಯಾರೂಪವಾದ ಸಾಧನವನ್ನೇ ಹೇಳಬೇಕು. ಹೀಗೆ, ಇತಿಕರ್ತವ್ಯತೆಯು ಸ್ವಭಾವತಃ ಕ್ರಿಯಾರೂಪವಾಗಿರುವುದರಿಂದೇ ಇತಿಕರ್ತವ್ಯತಾಕಾಂಕ್ಷೆಯಲ್ಲಿ ಕ್ರಿಯೆಯ ಅನ್ವಯವಿರುವುದು. ಈ ಮಾತಿನ ಮಾಲೆಯನ್ನು ಇದಕ್ಕೂ ಹೆಚ್ಚು ಬೆಳಸುವುದು ಬೇಡ!

(ಸಶೇಷ).

ಮಹಾಂತಮಠ ಮತ್ತು ಮರಿಸ್ವಾಮಿಗಳ ಗದ್ದುಗೆ ಸಂಪ್ರೋಕ್ಷಣ.

ನಂದಿಗುಡಿ.

ಬೆಂಗಳೂರುಸಿಟಿ ಚಾಮರಾಜಪೇಟೆ ಅಕ್ಕಿಮಂಡಿ ವೇ|| ಎಸ್. ರುದ್ರಯ್ಯನವರ ವಂಶಪಾರಂಪರ್ಯವಾದ ಮಹಾಂತಮಠ ಮತ್ತು ಮರಿಸ್ವಾಮಿಗಳ ಗದ್ದಿಗೆಯು ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲೂಕ್ ನಂದಿಗುಡಿಗ್ರಾಮದಲ್ಲಿ ಶಿಥಿಲವಾಗಿದ್ದುವು. ರುದ್ರಯ್ಯನವರು ಈಗ್ಗೆ 10 ತಿಂಗಳಿಂದಲೂ ಸುಮಾರು 4000 ರೂಪಾಯಿಗಳ ಧನವ್ಯಯದಿಂದ ಕಾಮಗಾರಿಯನ್ನು ಮಾಡಿಸಿ, ಮಹಂತಿನಮಠವನ್ನೂ, ಇದಕ್ಕೆ ಸಂಬಂಧಿಸಿ 'ಶ್ರೀ ರೇಣುಕಾಚಾರ್ಯ ಭಜನಮಂದಿರ' ವನ್ನೂ, ಇದರ ಪಕ್ಕದಲ್ಲಿ ಶ್ರೀ ಮರಿಸ್ವಾಮಿಗಳ ಗದ್ದಿಗೆ ದೇವಸ್ಥಾನವನ್ನೂ, ಇವುಗಳಮೇಲೆ ಧನ್ಯವಾದ ಶ್ರೀ ರೇಣುಕಾಚಾರ್ಯರ ಮೂರ್ತಿಯಿಂದ ಶೋಭಿಸುವ ಮತ್ತು ಚತುರ್ದಿಕ್ಕುಗಳಲ್ಲಿ ಶ್ರೀ ನಂದೀಶ್ವರ ಪ್ರತಿಮೆಗಳಿಂದ ಕೂಡಿದ ಚಿತ್ರಗೋಪುರವನ್ನೂ ನೇತ್ರಾನಂದಕರವಾಗಿ ಕಟ್ಟಿಸಿ ಜೀರ್ಣೋದ್ಧಾರಮಾಡಿ ಪುಣ್ಯಭಾಗಿಗಳಾದರು.

ಇವುಗಳ ಸಂಪ್ರೋಕ್ಷಣಕಾರ್ಯಕ್ಕೆ ಧರ್ಮದರ್ಶಿಗಳಾದ ರುದ್ರಯ್ಯನವರ ಪ್ರಾರ್ಥನೆಯಂತೆ ಶ್ರೀ ನಾಗಲಾಪುರಮಠದ ಪಟ್ಟಾಧ್ಯಕ್ಷ ಶ್ರೀ ಗುರುಸಿದ್ಧರಾಜೇಂದ್ರಸ್ವಾಮಿಗಳವರು (17-8-33) ಗುರುವಾರ ನಂದಿಗುಡಿಗೆ ಆಗಮಿಸಿದರು. ಈ ಶ್ರೀಗಳವರ ಸಮ್ಮುಖದಲ್ಲಿ (18-8-33) ಶುಕ್ರವಾರ ಪ್ರಾತಃಕಾಲ 8½ ಗಂಟೆಯಿಂದ ಸಂಪ್ರೋಕ್ಷಣ ಮಹಾರುದ್ರಾಭಿಷೇಕ ಮೊದಲಾದ ಕಾರ್ಯಗಳು ಬೆಳ್ಳಾವಿ ವೇ|| ರುದ್ರಶಾಸ್ತ್ರಿಗಳು ದಂಡು ಹಲಸೂರು ಮಠದ ವೇ|| ವೀರಭದ್ರಶಾಸ್ತ್ರಿಗಳು ಭಕ್ತರಹಳ್ಳಿ ವೇ|| ರುದ್ರಶಾಸ್ತ್ರಿಗಳವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟು ಮಧ್ಯಾಹ್ನ 4 ಗಂಟೆಗೆ ಮಹಾಮಂಗಳಾರತಿಯಾಗಿ ನೆರೆದಿದ್ದ ಭಕ್ತಮಹೇಶ್ವರಮಂಡಲಿಗೆ ಪ್ರಸಾದವಿನಿಯೋಗವಾಯಿತು.

ಕಾರ್ಯದರ್ಶಿಗಳ ಆಹ್ವಾನದಂತೆ ಬೆಂಗಳೂರಿಂದ ಸಿದ್ಧಾಂತಿ ವೇ|| ಗುರುಬಸವಶಾಸ್ತ್ರಿಗಳು, ನಂದೀಶಭಾರತಿ ಪ್ರೆಸ್ ಮಲ್ಲಯ್ಯನವರು, ಮ|| ರಾ|| ಇಂಜನೀಯರ್ ಗಂಗಾಧರಪ್ಪನವರು, ಇನ್‌ಕಂಟ್ಯಾಕ್ಸ್ ಇನ್ಸ್‌ಪೆಕ್ಟರ್ ವೇ|| ಜಿ. ಕೆ. ರುದ್ರಾರಾ

ಗಾಂಧಿಯವರು ಕಾರಾಗೃಹದಲ್ಲಿ ತಮ್ಮ ಅಸ್ಪೃ ಶ್ಯೋದ್ಧಾರ ಕಾರ್ಯಕ್ಕೆ ಸಾಕಾದಷ್ಟು ಅವಕಾಶವಿಲ್ಲ ೦ಬ ಕಾರಣದಮೇಲೆ ಉಪವಾಸವ್ರತವನ್ನು ಪ್ರಾರಂ ಸಿದರು. ಇದರಿಂದ ಅವರ ದೇಹಸ್ಥಿತಿಯು ದಿನದಿನಕ್ಕೆ ಡುತ್ತಾ ಬಂದದ್ದರಿಂದ ಸರಕಾರದವರು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿಟ್ಟಿದ್ದು, ಇದೇ ೨೩ ನೆಯ ತಾರೀಖಿನ ದಿವಸ ಅವರನ್ನು ಬಿಡುಗಡೆಮಾಡಿದರು.

ಬ್ರಿಟಿಸ್ ವೆಸ್ಟ್ ಇಂಡಿಯಾದ್ವೀಪಗಳಿಗೆ ಸೇರಿದ ಮೇಕಾದ್ವೀಪದಲ್ಲಿ ವಿಶೇಷವಾಗಿ ಮಳೆಯು ಸುರಿದು ಜನರಿಗೆ ತುಂಬಾ ಕಷ್ಟನಷ್ಟಗಳನ್ನುಂಟು ಮಾಡಿದೆ. ಸುಮಾರು ೬೦,೦೦,೦೦೦ ರೂ. ಗಳಷ್ಟು ಸ್ತಿಪಾಸ್ತಿಗಳು ನಾಶವಾದವು. ಎಪ್ಪತ್ತು ಜನರು ತ್ತುಹೋದರು. ಪ್ರವಾಹದ ದೆಸೆಯಿಂದ ಕಿಂಗ್ಸ್ ಟನ್ ನಗರದ ಸೇತುವೆಗಳೆಲ್ಲಾ ಕೊಚ್ಚಿಹೋದವು.

ಅಮೇರಿಕೆಯ ಟೆಕ್ಸಾಸ್ ದೇಶಕ್ಕೆ ಸೇರಿದ ಹ್ಯಾಮಿ ಲ್ಟನ್ ಎಂಬಲ್ಲಿ ರೇಮಂಡ್ ಹ್ಯಾಮಿಲ್ಟನ್ ಎಂಬ ೨೦ ವರ್ಷದ ತರುಣನು ದಸ್ತಗಿರಿಮಾಡಲ್ಪಟ್ಟಿರುವನು. ಈ ತರುಣನು ಈಗಾಗಲೇ ಸಣ್ಣಸಣ್ಣ ಕಳ್ಳತನಗಳಿಂದ ಖೂನಿಯವರೆಗಿನ ಎಲ್ಲ ವಿದ್ಯೆಗಳಲ್ಲಿಯೂ ಚನ್ನಾಗಿ ಪರಿಶ್ರಮಹೊಂದಿರುವನಂತೆ! ಇವನ ಅಪರಾಧಗಳಿಗೆ ಒಟ್ಟಿಗೆ ಶಿಕ್ಷೆಯನ್ನು ವಿಧಿಸಿದರೆ, ೨೬೩ ವರ್ಷಗಳ ಕಾರಾಗೃಹವಾಸವನ್ನನುಭವಿಸಬೇಕಾಗುವದಂತೆ!

ಕಲ್ಕತ್ತಾನಗರದ ಒಂದು ಪೋಸ್ಟ್ ಆಫೀಸಿಗೆ ವರ್ಡಿ ಬ್ಯಾಂಕಿನ ಇಬ್ಬರು ನೌಕರರು ೧೦,೦೦೦ ರೂಪಾಯಿಗಳ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ನಾಲ್ಕು ಜನರು ಅವರನ್ನು ಅಡ್ಡ ಟ್ಟಿ ಒಬ್ಬನನ್ನು ಹೊಡೆದು ನೋಟುಗಳನ್ನು ಕಿತ್ತು ಕೊಂಡು ಮೋಟಾರುಕಾರಿನಲ್ಲಿ ತಪ್ಪಿಸಿಕೊಂಡು ಹೊರಟುಹೋದರು. ಇನ್ನೊಬ್ಬ ನೌಕರನು ಎಲ್ಲೋ ಓಡಿ ಹೋದನು. ಅವನು ಇನ್ನೂ ಪತ್ತೆಯಾಗಿರುವುದಿಲ್ಲ.

ವಿವಾಹಕಾಲದಲ್ಲಿ ಜನರು ಅನಾವಶ್ಯಕವಾದ ಖರ್ಚುಗಳನ್ನು ಸಾಧ್ಯವಾದಷ್ಟುಮಟ್ಟಿಗೂ ಕಡಮೆ ಮಾಡಬೇಕೆಂಬ ಉದ್ದೇಶದಿಂದ ಇಂದೂರಿನ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಮಸೂದೆಯು ಬಹುಮತದಿಂದ ಪಾಸಾಯಿತು. ಅಲ್ಲದೆ ವಿವಾಹ ಸಮಯದಲ್ಲಿ ಐವತ್ತು ಮಂದಿಗಿಂತಲೂ ಹೆಚ್ಚು ಜನರನ್ನು ಊಟಕ್ಕೆ ಕರೆಯಕೂಡದೆಂದೂ, ಎರಡಕ್ಕಿಂತಲೂ ಹೆಚ್ಚು ತಣವನ್ನು ನಡೆಯಿಸಕೂಡದೆಂದೂ ಆ ಮಸೂದೆಯಲ್ಲಿ ಮೂದಾಗಿದೆ.

ದಕ್ಷಿಣ ಆಫ್ರಿಕಾದೇಶದ ಮ್ಯಾಕ್‌ಫಾರ್ಲೇನ್ ಎಂಬ ಒಬ್ಬ ಪೋಲೀಸನು ಸಮುದ್ರದಲ್ಲಿ ಮುಳುಗಿ ಹೋಗುತ್ತಿದ್ದ ಒಬ್ಬನನ್ನು ಕಂಡು, ಕತ್ತಲದಲ್ಲೇ ಇದ್ದ ತಿಮಿಂಗಿಲಗಳಿಗೂ ಹೆದರದೆ, ನೀರಿನಲ್ಲಿ ಧುಮುಕಿ ವನ ಪ್ರಾಣರಕ್ಷಣೆ ಮಾಡಿದನು. ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ಬಂದ ಒಂದು ದೋಣಿಯು ಅವರಿಬ್ಬರನ್ನೂ ದಡಕ್ಕೆ ಸಾಗಿಸಿಕೊಂಡು ಹೋಯಿತು. ಪೋಲೀಸನ ಧೈರ್ಯಸಾಹಸಗಳಿಗೆ ಮೆಚ್ಚಿ ಜನರು ಅವನಿಗೆ ಒಂದು ಮೆಡಲನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

ಬ್ರಿಟಿಸ್ ಸರಕಾರದವರು ಮೆಡಿಟರೇನಿಯನ್ ಸಮುದ್ರದ ಮಾರ್ಗವನ್ನೂ ಮತ್ತು ಆಕಾಶಮಾರ್ಗವನ್ನೂ ಕ್ಷಿಸಲು ಮಾಲ್ಟಾದ್ವೀಪದಲ್ಲಿಡುವದಕ್ಕಾಗಿ ಕೆಲವು ಯುದ್ಧದ ವಿಮಾನಗಳನ್ನು ತಯಾರಿಸುತ್ತಿರುವರು. ವಿಮಾನಗಳಲ್ಲಿ ಕೆಲಸಗಾರರು ಬಹುಕಾಲದ ರೆಗೆ ಹೊರಗೆ ಬರದೆ ಅಲ್ಲಿಯೇ ಇರಲು ಅವಶ್ಯಕವಾದ ಅನುಕೂಲತೆಗಳು ಕಲ್ಪಿಸಲ್ಪಟ್ಟಿರುವವಂತೆ! ಈ ವಿಮಾನಗಳು ಗಂಟೆ ೧ಕ್ಕೆ ೧೫೦ ಮೈಲುಗಳ ವೇಗದಲ್ಲಿ ಹೋಗುವುವಲ್ಲದೆ ಎಲ್ಲಿಯೂ ನಿಲ್ಲದೆ ಒಂದುಸಾರೆಗೆ ೦೦೦ ಮೈಲುಗಳ ದೂರ ಪ್ರಯಾಣಮಾಡಬಲ್ಲವಂತೆ!

ಚೀನಾಸರಕಾರದವರು ತಮ್ಮ ರಾಜವಂಶದ ಆಭರ ದ್ಯಮೂಲ್ಯವಸ್ತುಗಳನ್ನು ಮಾರಿ, ಬಂದ ಹಣವನ್ನು ದೇಶಹಿತಕಾರ್ಯಗಳಿಗೆ ಉಪಯೋಗಿಸಬೇಕೆಂದು ಯೋಚಿಸುತ್ತಿರುವರು. ಇವುಗಳ ಬೆಲೆಯು ಸುಮಾರು ,೭೫,೦೦,೦೦,೦೦೦ ರೂಪಾಯಿಗಳಾಗುವವೆಂದೂ, ದ್ಧದ ಮುಗ್ಗಟ್ಟಿನಲ್ಲಿ ಕನಿಷ್ಠಪಕ್ಷ ೧,೫೦,೦೦,೦೦, ೦೦ ರೂಪಾಯಿಗಳಿಗೆ ಮಾರಬಹುದೆಂದೂ ಅಂದಾಜುಮಾಡಲ್ಪಟ್ಟಿರುವದು. ಆದರೆ ಚೀನಾ ಸರಕಾರದವರು ಈ ಅಪಾರ ಹಣವನ್ನು ಮದ್ದುಗುಂಡುಗಳನ್ನು ಕೊಂಡುಕೊಳ್ಳುವದಕ್ಕಾಗಿ ಉಪಯೋಗಿಸಬಹುದೆಂದು ಜಪಾನ್ ಸರಕಾರದವರು ಸಂಶಯಪಟ್ಟು, ಮಾಂಚುಕೋ ರಾಜ್ಯದ ಚಕ್ರವರ್ತಿಯ ಮುಖಾಂತರ ಈ ಐಶ್ವರ್ಯದಲ್ಲಿ ಪಾಲುಕೇಳುತ್ತಿರುವರು. ಈ ಆಭರಣಾದಿಗಳು ಪೂರ್ವದಿಂದಲೂ ಟೀನ್‌ಸ್ಟೀನ್ ನಗರದಲ್ಲಿತ್ತು. ಆದರೆ ಮೊನ್ನೆ ನಡೆದ ಚೀನಾ ಜಪಾನರ ಯುದ್ಧಕಾಲದಲ್ಲಿ, ಜಪಾನಿನ ಸೈನ್ಯಾಧಿಕಾರಿಗಳು ಮೇಲ್ಕಂಡ ಐಶ್ವರ್ಯವನ್ನು ಲೂಟಿಮಾಡಬೇಕೆಂದು ಉದ್ದೇಶಿಸಿರುವರೆಂದು ತಿಳಿದು, ಚೀನಾಸರಕಾರದವರು ಅವುಗಳನ್ನೆಲ್ಲಾ ನಾಂಕಿಂಗ್ ನಗರಕ್ಕೆ ಸಾಗಿಸಿದರು.

ಸ್ವೀಕಾರ

ಬೆಂಗಳೂರು ಡಿ|| ಹೊಸಕೋಟೆ ತಾ|| ನಂದಿಗುಡಿಯಲ್ಲಿರುವ ಮಹಂತಿನಮಠ ಮತ್ತು ಮರಿಸ್ವಾಮಿಗಳ ಗದ್ದುಗೆಯು ಜೀರ್ಣೋದ್ಧಾರಮಾಡಿಸಿ ಸಂಪ್ರೋಕ್ಷಣೆ ಮಾಡಿಸಿದ ಸಮಯದಲ್ಲಿ ಧರ್ಮದರ್ಶಿಗಳಾದ ಬೆಂಗಳೂರುಸಿಟಿ ಚಾಮರಾಜಪೇಟೆಯಲ್ಲಿರುವ ವೇ|| ಎಸ್. ರುದ್ರಯ್ಯನವರು 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿಕ್ಕಮಗಳೂರು ತಾ|| ಜಕ್ಕನಹಳ್ಳಿ ಮ|| ರಾ|| ದೊಡ್ಡಅಣ್ಣೇಗೌಡರು ಸದರಿ ತಾಲ್ಲೂಕು ಗೌತಮೇಶ್ವರದ ಮ|| ರಾ|| ಲಿಂಗೇಗೌಡರ ದ್ವಿತೀಯ ಪುತ್ರನನ್ನು ದತ್ತಪುತ್ರನನ್ನಾಗಿ ಸ್ವೀಕಾರಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು.]

ಏನೋ ಒಂದು ಘನವಾದ ಕಾರಣವಿರಬೇಕೆಂದು ತೋರಬರುತ್ತದೆ. ಇರಲಿ:

ಸುಪ್ರಭೇದಾಗಮದಲ್ಲಿ—

ಸ್ಕಂದಗೋತ್ರಾಧಿನಾಥಶ್ಚ ಮಹಾಸಿಂಹಾಸನಾಗ್ರಣೀಃ | **ವಿಶ್ವಾರಾಧ್ಯ** ಇತಿ ಖ್ಯಾತೋ ಜಗದ್ಗುರುತಮಶ್ಚ ಸಃ ||

ವಾತುಲತಂತ್ರದಲ್ಲಿ—

ಈಶಾನಾಖ್ಯಮುಖೋತ್ಪನ್ನೋ ವಿಶ್ವಕರ್ಣೇತಿ ವಿಶ್ರುತಃ | **ವಿಶ್ವಾರಾಧ್ಯೇತಿ** ತನ್ನಾಮ ತತ್ಸೂತ್ರಂ ಪಂಚವರ್ಣಕಂ ||

ಸ್ವಯಂಭುವಾಗಮದಲ್ಲಿ—

ಕಾಶ್ಯಾಂ ವಿಶ್ವೇಶ್ವರೇ ಲಿಂಗೇ **ವಿಶ್ವಾರಾಧ್ಯಸ್ಯ** ಸಂಭವಃ | ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ||

ಮಹಾನಾರಾಯಣೋಪನಿಷದ್ವೀರಶೈವಭಾಷ್ಯದಲ್ಲಿ—

"ಉದ್ಭಟಾರಾಧ್ಯವೇಮನಾರಾಧ್ಯ **ವಿಶ್ವಾರಾಧ್ಯಾ**ದಯಸ್ತು ಅಸ್ಯಾಮುಪನಿಷದಿ ದಹರೋಪಾಸನಾವಿಷಯೇ ನಾರಾಯಣಸ್ಯೋಪಾಸಕತ್ವ ಶಿವಸ್ಯೋಪಾಸ್ಯತ್ವನಿರ್ಣಯೇ ||" ಎಂದು ಬರೆಯಲ್ಪಟ್ಟಿದೆ.

ಇವೇ ಮೊದಲಾದ ಸಾವಿರಾರು ಪ್ರಾಚೀನ ಗ್ರಂಥಗಳಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪವಿತ್ರನಾಮವು ಪರಿಶೋಭಿಸುತ್ತಿರುವುದು. ಇದು ಅಸೂಯಾಂಧರಾದ ಗುರುನಿಂದಕರಿಗೆ ಹೇಗೆ ಗೊತ್ತಾಗಬೇಕು?

ನಿಜತತ್ವವು ಈ ರೀತಿಯಾಗಿದ್ದಾಗ್ಯೂ, ಇವರು ಪಾಪದ ಭಯವಿಲ್ಲದೆ ಉದ್ಧಾಮತನದಿಂದ ಆಚಾರ್ಯರ ವಿಷಯದಲ್ಲಿ ಮನಸ್ಸಿಗೆ ಬಂದಹಾಗೆ ಅಮಂಗಲ ಮಾತುಗಳನ್ನು ಬರೆಯುತ್ತಿರುವುದು ತುಚ್ಛವಾಗಿದೆ. ಇನ್ನಾದರೂ ಇವರು ಪಾಪದಾಯಕವಾದ ಈ ಕರಪತ್ರ ಗುರುನಿಂದಾರೂಪಮಾರ್ಗವನ್ನು ಬಿಟ್ಟು ಗುರುಸಾರ್ವಭೌಮರಲ್ಲಿ ಅಕೃತ್ರಿಮವಾದ ಭಕ್ತಿಯನ್ನು ವಹಿಸಿ ಧನ್ಯರಾಗಬೇಕು.

ಗುರುಕಿಂಕರ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ದ್ವಿತೀಯೋಲ್ಲಾಸವು.

(ಮುಂದೆ ಸಾಗಿದುದು.)

ಈಗ ಉಪಲಬ್ಧವಿರುವ ಬ್ರಾಹ್ಮಣಗ್ರಂಥಗಳ ಹೆಸರುಗಳನ್ನೂ, ಸಂಕ್ಷಿಪ್ತವಾಗಿ ಅವುಗಳೊಳಗಿನ ವಿಷಯಗಳನ್ನೂ ಇಲ್ಲಿ ಬರೆದು ತೋರಿಸುತ್ತೇವೆ:—

ಐತರೇಯಬ್ರಾಹ್ಮಣವು:—ಋಗ್ವೇದಕ್ಕೆ ಸಂಬಂಧಿಸಿದವುಗಳಾದ ಐತರೇಯವೂ ಕೌಷೀತಕಿಯೂ ಎಂಬ ಈ ಎರಡು ಬ್ರಾಹ್ಮಣಗಳಲ್ಲಿ ಐತರೇಯವು ಪ್ರಧಾನತಮವಾದುದು. ಇದರಲ್ಲಿ ಎಂಟು ಪಂಚಿಕೆಗಳಿವೆ. ಪ್ರತಿಯೊಂದು ಪಂಚಿಕೆಗೆ ಐದೈದರಂತೆ ಒಟ್ಟು ನಾಲ್ವತ್ತು ಅಧ್ಯಾಯಗಳುಂಟು. ಇದರ ಸಂಗ್ರಾಹಕನು ಅಥವಾ ಪ್ರಕಾಶಕನು ಮಹಿದಾಸ ಐತರೇಯನು. ಈ ಬ್ರಾಹ್ಮಣದಲ್ಲಿ ಪ್ರಾಮುಖ್ಯತೆಯಿಂದ ಸೋಮಯಾಗ, ಅಗ್ನಿಹೋತ್ರ, ರಾಜಸೂಯ ಎಂಬ ಕ್ರಿಯೆಗಳು ವರ್ಣಿಸಲ್ಪಟ್ಟಿವೆ.

ಕೌಷೀತಕಿಬ್ರಾಹ್ಮಣವು:—ಇದು ಋಗ್ವೇದದ ಶಾಂಖಾಯನವೆಂಬ ಎರಡನೆಯ ಬ್ರಾಹ್ಮಣವು. ಇದಕ್ಕೇ ಕೌಷೀತಕಿಯೆಂಬ ಮತ್ತೊಂದು ಹೆಸರುಂಟು; ಇದರಲ್ಲಿ ಮೂವತ್ತು ಅಧ್ಯಾಯಗಳಿವೆ. ಮೊದಲನೆಯ ಆರು ಅಧ್ಯಾಯಗಳಲ್ಲಿ ಅಗ್ನ್ಯಾಧಾನವು, ಅಗ್ನಿಹೋತ್ರವು, ದರ್ಶಪೂರ್ಣಮಾಸದ ಇಷ್ಟಿಯು, ಋತುಯಾಗವು ಮುಂತಾದ ವಿಷಯಗಳಿವೆ. ಏಳರಿಂದ ಮೂವತ್ತರವರೆಗಿರುವ ಅಧ್ಯಾಯಗಳಲ್ಲಿ ಐತರೇಯಬ್ರಾಹ್ಮಣದಲ್ಲಿ ಹೇಳಲ್ಪಟ್ಟಿರುವಂತೇ ಸೋಮಯಾಗದ ವರ್ಣನೆಯಿದೆ.

ಬ್ರಾಹ್ಮಣಗ್ರಂಥ ಸಮುದಾಯದಲ್ಲಿ ವರ್ಣಿಸಲ್ಪಟ್ಟಿರುವ ಪುರಾವೃತ್ತಾಖ್ಯಾನಾಂಶದಲ್ಲಿ ವಿಮರ್ಶಕರ ಪರಮಾದರವು ಎಷ್ಟಿರುವುದೋ ಅಷ್ಟು ಕರ್ಮಭಾಗದಲ್ಲಿರುವುದಿಲ್ಲ. ಐತರೇಯಬ್ರಾಹ್ಮಣದ ಏಳನೆಯ ಪಂಚಿಕೆಯ ಮೂರನೆಯ ಅಧ್ಯಾಯದಲ್ಲಿರುವ ಶುನಃಶೇಫಾಖ್ಯಾನವು ಅತಿರಮಣೀಯವಾಗಿದೆ. ಇನ್ನು, ಕೃಷ್ಣಯಜುರ್ವೇದೀಯ ಬ್ರಾಹ್ಮಣಗಳ ಬಗ್ಗೆ ವಿಚಾರಿಸುವಾ!

ತೈತ್ತಿರೀಯ ಬ್ರಾಹ್ಮಣವು:—ಇದು ಕೃಷ್ಣಯಜುರ್ವೇದದ (ತೈತ್ತಿರೀಯ ಸಂಹಿತೆಯ) ಉತ್ತರಭಾಗವೇ ಎಂದು ಹೇಳಬಹುದು. ತೈತ್ತಿರೀಯ ಸಂಹಿತೆಯಲ್ಲಿ ಬ್ರಾಹ್ಮಣಭಾಗವೂ ಇದೆ. ಇದರಿಂದ ತೈತ್ತಿರೀಯಬ್ರಾಹ್ಮಣದೊಳಗಿನ ಭಾಗವು ತೈತ್ತಿರೀಯ ಸಂಹಿತೆಗೆ ಹಿಂದಿನಿಂದ ಜೋಡಿಸಲ್ಪಟ್ಟಿರಬಹುದೆಂದು ಅರಿಯಲ್ಪಡುವುದು. ಇದರೊಳಗಿನ ಪುರುಷಮೇಧದ ವರ್ಣನೆ ಮುಂತಾದುದನ್ನು ಅವಲೋಕಿಸಿದರೆ ಯಜ್ಞಶಾಸ್ತ್ರದ ಘಟನೆಯು ನವೀನವಾದುದೆಂದು ತೋರಿಸಲ್ಪಡುವ ಕಾರಣಗಳಲ್ಲಿ ಇದೂ ಒಂದಾಗಿದೆ.

ಕಠಶಾಖೆಯಲ್ಲಿಯೂ, ಮೈತ್ರಾಯಣೀಶಾಖೆಯಲ್ಲಿಯೂ ಆ ಆ ಸಂಹಿತೆಗಳಲ್ಲಿರುವ ಗದ್ಯಭಾಗಗಳೇ ಬ್ರಾಹ್ಮಣಗಳೆಂದು ಅಂಗೀಕರಿಸಲ್ಪಟ್ಟಿವೆ. ಕಠಶಾಖೆಯ ಸಂಬಂಧವುಳ್ಳದ್ದೆಂದು ಅನುಮಾನಿಸಲ್ಪಡುವ ತೈತ್ತಿರೀಯಬ್ರಾಹ್ಮಣಭಾಗದಲ್ಲಿ (೩-೨) ನಚಿಕೇತಾಗ್ನಿಯ ಪ್ರತಿಪಾದನಾವಸರದೊಳು ಆ ಹೆಸರಿನ ಒಬ್ಬಾನೊಬ್ಬ ಬ್ರಾಹ್ಮಣಕುಮಾರನ (ನಚಿಕೇತನ) ಉಪಾಖ್ಯಾನವು ಉದಾಹೃತವಾಗಿದೆ. ಮೈತ್ರಾಯಣಶಾಖೆಯಲ್ಲಿ ಬ್ರಾಹ್ಮಣಭಾಗವು ಪೃಥಕ್ಕಾಗಿ ಸಿಕ್ಕುವುದಿಲ್ಲ. ಆದರೂ ಮೈತ್ರಾಯಣಸಂಹಿತೆಯ ನಾಲ್ಕನೆಯಕಾಂಡವು ವಿಧಿರೂಪವೂ, ಪರಿಶಿಷ್ಟಾತ್ಮಕವೂ ಆಗಿರುವುದರಿಂದ ಅದು ಬ್ರಾಹ್ಮಣಭಾಗವೆನಿಸಿಕೊಳ್ಳಲು ತಕ್ಕದ್ದಾಗಿದೆ.

ಶತಪಥಬ್ರಾಹ್ಮಣವು:—ಇದು ಶುಕ್ಲಯಜುರ್ವೇದದ (ವಾಜಸನೇಯ ಸಂಹಿತೆಯ) ಪ್ರಮುಖವಾದ ಬ್ರಾಹ್ಮಣಗ್ರಂಥವು. ಶುಕ್ಲಯಜುರ್ವೇದೀಯ ವಿಧ್ಯಂಶವು ಇದರಲ್ಲಿ ಸವಿಸ್ತರವಾಗಿ ಸಿದ್ಧವಾಗಿದೆ. 'ಶತಪಥ' ವೆಂಬ ಈ ಹೆಸರು 'ಶತಂ ಪನ್ಥಾನೋ ಯಸ್ಮಿನ್' ಎಂಬ ವ್ಯುತ್ಪತ್ತಿಯಿಂದ ೧೦೦ ಅಧ್ಯಾಯಗಳುಳ್ಳದ್ದೆಂಬ ಅನ್ವರ್ಥವನ್ನನುಸರಿಸಿರುವುದು. ಸರ್ವವೈದಿಕಗ್ರಂಥಸಮುದಾಯದಲ್ಲಿ ಋಗ್ವೇದದ ತರುವಾಯ ಇದಕ್ಕೆ ಪ್ರಾಧಾನ್ಯವಿದೆ. ಮಾಧ್ಯಂದಿನರ ಪಾಠವೂ ಕಣ್ವರಪಾಠವೂ ಎಂಬುದಾಗಿ ಈ ಬ್ರಾಹ್ಮಣದ ಎರಡು ವಿಧವಾದ ಪಾಠಪದ್ಧತಿಗಳಿವೆ. ಮಾಧ್ಯಂದಿನರ ಪಾಠಾನುಸಾರವಾಗಿ ೧೪ ಕಾಂಡಗಳೂ ಕಣ್ವರ ಪಾಠಾನುರೋಧವಾಗಿ ೧೭ ಕಾಂಡಗಳೂ ಇವೆ. ಈ ಬ್ರಾಹ್ಮಣದಲ್ಲಿ ಚರಕಶಾಖೀಯರ ಅಂದರೆ, ಕೃಷ್ಣಯಜುರ್ವೇದೀಯ ಕಾಠಕ, ಕಪಿಷ್ಠಲ, ಮೈತ್ರಾಯಣಶಾಖೀಯರ ನಿಂದೆಯುಂಟು! ಅದೇನು ಕಾರಣವೋ? (೧೧-೫-೪)—(೧೧-೫-೬) ಎಂಬಲ್ಲಿ ಅನುಕ್ರಮವಾಗಿ ಉಪನಯನವೂ ಸ್ವಾಧ್ಯಾಯವಿಚಾರವೂ (೧೩-೮) ಎಂಬಲ್ಲಿ ಉತ್ತರಕ್ರಿಯೆಯೂ ಸಮಾಧಿಕಟ್ಟುವಿಕೆಯೂ ಮುಂತಾದ ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಮತ್ತು, ಈ ಬ್ರಾಹ್ಮಣವು ಸಹೃದಯಹೃದಯಾವರ್ಜಕಗಳಾದ ಉಪಾಖ್ಯಾನರತ್ನಗಳಿಗಾಕರವಾಗಿದೆ.

ತಾಂಡ್ಯಬ್ರಾಹ್ಮಣವು—ಸಾಮವೇದೀಯ ಶಾಖಾದ್ವಯಕ್ಕೆ ಸಂಬಂಧಿಸಿದವುಗಳಾದ ತಾಂಡ್ಯವೂ ತಲವಕಾರೀಯ (ಜೈಮಿನೀಯ) ವೂ ಎಂಬಿವೆರಡು ಬ್ರಾಹ್ಮಣಗಳಿವೆ. ಸಾಮವೇದೀಯ ತಂಡಿಶಾಖೆಯನುಸಾರವಾದುದು ತಾಂಡ್ಯಬ್ರಾಹ್ಮಣವು. ಇದುವೇ ಪಂಚವಿಂಶಬ್ರಾಹ್ಮಣವೆಂದೂ ಹೇಳಿಸಿಕೊಳ್ಳಲ್ಪಡುವುದು. ಸ್ವನಾಮಾನುಗುಣ್ಯವಾಗಿ ಇದು ೨೫ ಕಾಂಡಗಳಿಂದ ಸಂಘಟಿತವಾಗಿದೆ. ಇದಾದರೂ ಪ್ರಾಧಾನ್ಯವಾಗಿ ಸೋಮಯಾಗ ಕ್ರಿಯೆಯನ್ನೇ ನಿರೂಪಿಸುವುದು. ಇದರಲ್ಲಿಯೂ ಅನೇಕ ಪುರಾತನೋಪಾಖ್ಯಾನಗಳಿವೆ. ಇದರ ೧೭ ನೆಯ ಅಧ್ಯಾಯದೊಳಗಿನ ವಿಷಯಗಳು ವಿಚಾರಾರ್ಹಗಳಾಗಿವೆ. ಜೈಮಿನೀಯ ಬ್ರಾಹ್ಮಣವು ಬಹಳ ಪ್ರಖ್ಯಾತವಾಗಿಲ್ಲ.

ಷಡ್ವಿಂಶಬ್ರಾಹ್ಮಣವು—ಇದು ಪಂಚವಿಂಶಬ್ರಾಹ್ಮಣದ ಪರಿಶಿಷ್ಟವೆನಿಸುವುದು.

ಛಾಂದೋಗ್ಯಬ್ರಾಹ್ಮಣವು—ಇದಾದರೂ ಸಾಮವೇದೀಯ ಶಾಖೆಗೆ ಸಂಬಂಧಿಸಿದುದು. ಇದರಲ್ಲಿ ಸ್ವಲ್ಪಭಾಗವೇ ಕ್ರಿಯಾಪ್ರತಿಪಾದಕವಾಗಿದೆ. ಇದು ಸೋಮಯಾಗದ ಹೆಸರನ್ನು ಕೂಡ ಹೇಳುವುದಿಲ್ಲ. ಇದರೊಳು ಜನನ ವಿವಾಹಾದಿ ವಿಷಯಗಳೂ ಕೆಲವು ಕ್ರಿಯಾವಿಧಿಗಳೂ ಉಪದೇಶಿಸಲ್ಪಟ್ಟಿವೆ. ಕೆಲವು ದೇವತಾಸ್ತೋತ್ರಗಳೂ ಉಂಟು. ಇವೆಲ್ಲ ವಿಷಯಗಳು ಈ ಬ್ರಾಹ್ಮಣದ ಪ್ರಾರಂಭದಲ್ಲಿ ಪ್ರತಿಪಾದಿತಗಳಾಗಿವೆ. ಉಳಿದ ಅಧ್ಯಾಯಗಳು ಛಾಂದೋಗ್ಯೋಪನಿಷದಾತ್ಮಕಗಳಾಗಿವೆ.

ಇನ್ನು ಬೇರೆ ನಾಲ್ಕು ಪುಸ್ತಕಗಳಿಗಾದರೂ ಬ್ರಾಹ್ಮಣಗಳೆನ್ನುವುದುಂಟು. ಆದರೂ ವಸ್ತುತಃ ಅವು ಬ್ರಾಹ್ಮಣಗಳೆನಿಸಿಕೊಳ್ಳಲಾರವೆಂದು ಹೇಳಬಹುದು. ಏಕೆಂದರೆ—ಅವುಗಳಲ್ಲಿ ಸಾಮವಿಧಾನವೆಂಬುದೂ ಒಂದು ಬ್ರಾಹ್ಮಣವೆನಿಸುವುದಷ್ಟೇ! ಅದು ಅಭಿಚಾರಕರ್ಮಗಳಲ್ಲಿ ಅನುಷ್ಠಿಸಲ್ಪಡತಕ್ಕ ಮಂತ್ರಪ್ರಯೋಗಗಳನ್ನುಪದೇಶಿಸುವುದು. ೨ನೆಯದು ದೇವತಾಧ್ಯಾಯ ಬ್ರಾಹ್ಮಣವೆಂಬುದು ಸಾಮವೇದೀಯ ದೇವತೆಗಳನ್ನು ಸ್ತುತಿಸುವುದು. ಇದರಲ್ಲಿಯೂ ಕ್ರಿಯಾಸಂಬಂಧದ ಸುದ್ದಿಯೇ ಇಲ್ಲ. ಮೂರನೆಯ ವಂಶಬ್ರಾಹ್ಮಣವಾದರೂ ಸಾಮವೇದೀಯರಾದ ಆಚಾರ್ಯರ ವಂಶಾನುಕ್ರಮ ಮಾತ್ರವನ್ನು ವರ್ಣಿಸುತ್ತದೆ. ನಾಲ್ಕನೆಯ ಸಂಹಿತೋಪನಿಷದ್ಬ್ರಾಹ್ಮಣದಲ್ಲಿಯಾದರೋ ಐತರೇಯಾರಣ್ಯಕ ಶ್ರುತಿಯ ಕಾಂಡದಂತೆ ಕೇವಲ ವೇದಾಧ್ಯಯನ ರೀತಿಯು ಉಪದೇಶಿಸಲ್ಪಡುವುದರ ವಿನಾ ಯಾವ ಕ್ರಿಯೆಯನ್ನೂ ಪ್ರತಿಪಾದಿಸುವುದಿಲ್ಲ.

ಗೋಪಥಬ್ರಾಹ್ಮಣವು—ಇದು ಅಥರ್ವವೇದೀಯ ಬ್ರಾಹ್ಮಣವು. ಇದು ಸಂಹಿತೆಯೊಡನೆ ಸಾಕ್ಷಾತ್ಸಂಬಂಧವುಳ್ಳದ್ದಾಗಿ ಕಂಡುಬರುವುದಿಲ್ಲವಾದರೂ, ಇದಕ್ಕೆ ಅಥರ್ವವೇದೀಯತ್ವವು ದುರ್ನಿವಾರವಾಗಿದೆ. ಇದರಲ್ಲಿ ಎರಡೇ ಕಾಂಡಗಳಿವೆ. ಮೊದಲನೆಯ ಕಾಂಡದಲ್ಲಿ ೫ ಅಧ್ಯಾಯಗಳೂ, ಎರಡನೆಯ ಕಾಂಡದಲ್ಲಿ ಆರು ಅಧ್ಯಾಯಗಳೂ ಇರುತ್ತವೆ.

ಹೀಗೆ ಬೇರೆಬೇರೆಯಾಗಿರತಕ್ಕ ಬ್ರಾಹ್ಮಣಗ್ರಂಥಗಳಲ್ಲಿ ಬೇರೆಬೇರೆಗಳಾದ ಯಜ್ಞಯಾಗಾದಿಗಳು ಬೇರೆಬೇರೆ ರೀತಿಯಾಗಿ ವರ್ಣಿಸಲ್ಪಟ್ಟಿರುವುದರಿಂದ ಅವುಗಳ ಏಕವಾಕ್ಯತೆಯನ್ನು ದೃಢಪಡಿಸಲೋಸುಗವೇ ಜೈಮಿನಿಮುನಿಯು ಪೂರ್ವಮೀಮಾಂಸಾ ಸೂತ್ರಗಳನ್ನು ರಚಿಸಿದನು.

ಯಾವುದಾದರೊಂದು ಬ್ರಾಹ್ಮಣದಲ್ಲಿ ಒಂದಾನೊಂದು ವಚನದ ಅರ್ಥವನ್ನು ಅರಿತುಕೊಳ್ಳಬೇಕಾದ ಸಂದರ್ಭದಲ್ಲಿ, ಆ ವಾಕ್ಯದೊಳು ವಿಧಿಯು ಹೇಳಲ್ಪಟ್ಟಿದೆಯೋ? ಅರ್ಥವಾದವು ಹೇಳಲ್ಪಟ್ಟಿದೆಯೋ? ಶ್ರುತಿ-ಸ್ಮೃತಿಗಳಲ್ಲಿ ಪರಸ್ಪರ ವಿರೋಧವು ಕಂಡುಬರಲು ಅವುಗಳಲ್ಲಿ ಯಾವುದನ್ನು ಪ್ರಮಾಣವೆಂದೊಪ್ಪಬೇಕು? 'ಉದ್ಭಿದ್' ಎಂಬ ಮೊದಲಾದ ಶಬ್ದಗಳು ಬ್ರಾಹ್ಮಣದೊಳಗಿನ ಕೆಲವು ವಾಕ್ಯಗಳಲ್ಲಿ ತೋರಿಬಂದರೆ ಆ ವಾಕ್ಯಗಳೊಳಗಿನ 'ಉದ್ಭಿದ್' ಎಂಬ ಶಬ್ದವು ಯಾಗದ ನಾಮಧೇಯವೋ? ಅಥವಾ ಯಾಗದ ಗುಣವಾಚಕವೋ? ಶ್ರುತಿ, ಲಿಂಗ ಮೊದಲಾದ ಪ್ರಮಾಣಗಳಲ್ಲಿ ಯಾವುದನ್ನು ಅಧಿಕಪ್ರಾಬಲ್ಯವಾದುದೆಂದರಿಯಬೇಕು? ಮಂತ್ರಪಾಠದಲ್ಲಿ ಒಂದುಕ್ರಮವು ಹೇಳಲ್ಪಟ್ಟದ್ದು, ಬ್ರಾಹ್ಮಣಪಾಠದಲ್ಲಿ ಅದಕ್ಕಿಂತ ಭಿನ್ನವಾದಕ್ರಮವು ಹೇಳಲ್ಪಟ್ಟಿರುವುದಾದರೆ ಅವುಗಳಲ್ಲಿ ಪ್ರಮಾಣಭೂತವಾದ ಕ್ರಮವು ಯಾವುದೆಂದು ತಿಳಿಯಬೇಕು? ಆಯಾಯ ಯಾಗಾದಿಕರ್ಮಗಳನ್ನು ಅನುಷ್ಠಿಸುವ ಅಧಿಕಾರವು ಯಾರಿಗಿರುವುದು? ಯಾರಿಗಿರುವುದಿಲ್ಲ? ಹೀಗೆ ಒಂದಲ್ಲ, ಎರಡಲ್ಲ, ಎಷ್ಟೋ ಪ್ರಶ್ನೆಗಳು ಹುಟ್ಟುತ್ತವೆ. ಇವುಗಳನ್ನು ಯಾವುದರ ಆಧಾರದಿಂದ ನಿರ್ಣಯಗೊಳಿಸಬೇಕು? ಇವುಗಳನ್ನು ನಿರ್ಣಯಗೊಳಿಸುವುದರಲ್ಲಿ ಮೀಮಾಂಸಾಶಾಸ್ತ್ರವೇ ಸಮರ್ಥವಾಗಿದೆ. ಈ ಮಾತಿನ ತಿಳವಳಿಕೆಗಾಗಿ ಒಂದು ವಿಷಯವನ್ನು ದೃಷ್ಟಾಂತದೊಡನೆ ವಿವರಿಸುತ್ತೇವೆ. ಬ್ರಾಹ್ಮಣಗಳಲ್ಲಿ ಅನೇಕ ಯಾಗಗಳ ಉಲ್ಲೇಖವಿದೆ. ಅವುಗಳಲ್ಲಿ ಪ್ರಕೃತಿಯಾಗಗಳು ಯಾವವು? ವಿಕೃತಿಯಾಗಗಳ ಸ್ವರೂಪವೇನು? ವಿಕೃತಿಯಾಗಗಳಲ್ಲಿ ಯಾವಯಾವ ಅಂಗಗಳು ಸ್ವೀಕರಿಸಲ್ಪಡತಕ್ಕವು? ಎಂಬಿವುಗಳ ಸ್ಪಷ್ಟವಾದ ನಿರ್ಣಯವು ಮಾಡಲ್ಪಟ್ಟಿರುವುದಿಲ್ಲ. ಆದರೆ, ಆ ಪ್ರಕೃತಿವಿಕೃತಿಗಳ ನಿರ್ಣಯವನ್ನು ಪೂರ್ವಮೀಮಾಂಸಾಶಾಸ್ತ್ರದಿಂದೇ ಅರಿತುಕೊಳ್ಳಬೇಕಾಗಿದೆ. ಹೇಗೆಂದರೆ:—'ಯತ್ರ ಸಮು

ಬಿದ್ದಾಗ ಸಮೀಪದಲ್ಲಿ ಯಾರೂ ಇರಲಿಲ್ಲವೆಂದೂ ತಿಳಿದುಬಂದಿದೆ.

ಇದೇ ಆಗಸ್ಟ್ ೨೧ ನೆಯ ತಾರೀಖಿನ ದಿವಸ ರಾತ್ರಿ ವಿಶೇಷ ಮಳೆಯಾಗಿ ಮೈಸೂರು ಬೆಂಗಳೂರು ಲೈನಿನಲ್ಲಿ ಸೆಟ್ಟಿಹಳ್ಳಿಗೂ ಮದ್ದೂರಿಗೂ ಮಧ್ಯದಲ್ಲಿ ೧೨೦ ಅಡಿ ಉದ್ದ ರೈಲ್ವೇ ಕಂಬಿಗಳು ಕೊಚ್ಚಿಕೊಂಡು ಹೋಗಿದ್ದುದಲ್ಲದೆ ರೈಲ್ವೇರಸ್ತೆಯಮೇಲೆ ೩ ಅಡಿಗಳ ನೀರು ಹರಿಯುತ್ತಿತ್ತು. ಇದರಿಂದ ಸುಮಾರು ೧ ದಿವಸದವರೆಗೆ ರೈಲ್ವೇಗಾಡಿಗಳ ಪ್ರಯಾಣಕ್ಕೆ ವಿಶೇಷ ತೊಂದರೆಯಾಗಿತ್ತು.

ಇದೇ ಆಗಸ್ಟ್ ೧೭ ನೇ ತಾರೀಖಿನ ದಿವಸ ಬಾಗೇಪಲ್ಲಿಯಲ್ಲಿ ಒಂದು ವಿಷಾದಕರವಾದ ಅನಾಹುತವು ನಡೆಯಿತು. ಅಂಡಾಳ್‌ಮೇಲ್ ಸರ್ವಿಸ್ಸಿನ ಷೆಡ್ಡಿನೊಳಗೆ ಪೆಟ್ರೋಲಿಗೆ ಅಕಸ್ಮಾತ್ ಬೆಂಕಿಬಿದ್ದು ಒಂದು ಬಸ್ಸು ಮತ್ತು ಒಂದು ಪ್ಲೆಷರ್‌ಕಾರು ಸಂಪೂರ್ಣವಾಗಿ ಸುಟ್ಟು ಭಸ್ಮವಾದವು. ಷೆಡ್ಡಿನೊಳಗೆ ಮಲಗಿದ್ದ ಕಂಡಕ್ಟರು ಮತ್ತು ಕ್ಲೀನರು ಪ್ರಾಣಸಹಿತ ಹೊರಗೆ ಬರುವದೇ ಕಷ್ಟವಾಯಿತು. ಅದರಲ್ಲಿ ಒಬ್ಬನಿಗೆ ಶರೀರದ ಕೆಲವು ಭಾಗವು ಸುಟ್ಟುಹೋಗಿರುವದೆಂದೂ, ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನೆಂದೂ ತಿಳಿದುಬಂದಿದೆ.

ರಾಜಧಾನಿಯ ಅನಾಥಾಲಯದ ವಿದ್ಯಾರ್ಥಿಗಳು ಸದರಿ ಅನಾಥಾಲಯದ ಸ್ಥಾಪಕರಾದ ಶ್ರೀ|| ಎಂ. ವೆಂಕಟಕೃಷ್ಣಯ್ಯನವರ ೯೦ ನೆಯ ವರ್ಷ ವರ್ಧಂತ್ಯುತ್ಸವವನ್ನು ಇದೇ ಆಗಸ್ಟ್ ೧೮ ನೇ ತಾರೀಖಿನ ದಿವಸ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಸಾಯಂಕಾಲ ಶ್ರೀ|| ವೆಂಕಟಕೃಷ್ಣಯ್ಯನವರನ್ನು ಅನಾಥಾಲಯಕ್ಕೆ ಆಹ್ವಾನಿಸಿ ಮೈಸೂರು ವಿಶ್ವವಿದ್ಯಾನಿಲಯದ ಮನಶ್ಶಾಸ್ತ್ರದ ಪ್ರೊಫೆಸರಾದ ಡಾಕ್ಟರ್ ಎಂ. ವಿ. ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸತ್ಕರಿಸಿದರು. ಡಾ|| ಗೋಪಾಲಸ್ವಾಮಿಯವರು ಶ್ರೀ|| ವೆಂಕಟಕೃಷ್ಣಯ್ಯನವರ ಪರಹಿತಕಾರ್ಯಗಳನ್ನು ಪ್ರಶಂಸಿಸಿ ಸಭಿಕರ ಪರವಾಗಿ ಅವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿದರು. ಇದರಂತೆಯೇ ಮೈಸೂರು ಪುರಜನರು ಕಳೆದ ೨೨ ನೇ ತಾರೀಖು ಮಂಗಳವಾರದ ದಿವಸ ಶ್ರೀ|| ವೆಂಕಟಕೃಷ್ಣಯ್ಯನವರಿಗೆ ಟೌನ್‌ಹಾಲಿನಲ್ಲಿ ಅಭಿನಂದನಪತ್ರಿಕೆಯನ್ನು ಸಮರ್ಪಿಸಿ ಅವರಲ್ಲಿ ತಮಗಿರುವ ವಿಶ್ವಾಸವನ್ನು ವ್ಯಕ್ತಗೊಳಿಸಿದರು. ಅನಂತರ ರಾಜಧಾನಿಯ ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆಯಾಯಿತು.

ಮೈಸೂರು ಗೆಜೆಟ್.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಜಿಯಾಲಜಿ ಲೆಕ್ಚರರಾದ ಮಿ|| ಸಿ. ಪ್ರಸನ್ನಕುಮಾರ ಎಂ.ಎಸ್‌ಸಿ. ರವರು ರಜೆಯಮೇಲಿರುವ ಮಿ|| ಚಾರಲ್ಸ್ ಪಿಚ್ಚಮುತ್ತೂರವರ ಸ್ಥಾನದಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಆಕ್ಟಿಂಗ್ ಸಬ್‌ಜಡ್ಜರಾದ ಮಿ|| ಎಂ. ಎನ್. ಸುಬ್ಬಣ್ಣ ಬಿ.ಎ.,ಎಲ್‌ಎಲ್.ಬಿ., ಇವರಿಗೆ ಆಗಸ್ಟ್ ೧ ನೆಯ ತಾರೀಖಿನವರೆಗೆ ಕೊಟ್ಟಿದ್ದ ರಜೆಯನ್ನು ಸೆಪ್ಟೆಂಬರ್ ೨೫ ನೆಯ ತಾರೀಖಿನವರೆಗೂ ಹೆಚ್ಚಿಸಿ, ದಸರಾ ರಜಾ ದಿವಸಗಳನ್ನೂ ಉಪಯೋಗಿಸಿಕೊಳ್ಳಲು ಅವಕಾಶವನ್ನು ಕೊಟ್ಟಿದೆ.

ಶಿವಮೊಗ್ಗಾ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರಾದ ಮಿ|| ವಿ. ವಿ. ಕರ್ವೆ, ಎಲ್.ಸಿ.ಇ., ಇವರಿಗೆ ಸೆಪ್ಟೆಂಬರ್ ೧ ನೇ ತಾರೀಖಿನಿಂದ ೨೫ ದಿವಸಗಳವರೆಗೆ ಪ್ರಿವಿಲೇಜ್ ರಜೆಯು ಕೊಡಲ್ಪಟ್ಟಿದೆ. ಈ ಅವಧಿಯಲ್ಲಿ ವಾಟರ್‌ಸಪ್ಲೈ ಡಿವಿಜನ್ನಿನ ಎಗ್ಜಿಕ್ಯೂಟಿವ್ ಇಂಜಿನಿಯರಾದ ಮಿ|| ಎಚ್. ಎಫ್. ಮಾರ್ಕರ್, ಎಲ್.ಸಿ.ಇ., ರವರು ಅಫಿಸಿಯೇಟಿಂಗ್ ಸೂಪರಿಂಟೆಂಡಿಂಗ್ ಇಂಜನಿಯರಾಗಿರುವರು.

ಮೈಸೂರು ಪವರ್ ಅಂಡ್ ಲೈಟಿಂಗ್ ಸೂಪರಿಂಟೆಂಡೆಂಟರಾದ ಮಿ|| ಸೀತಾರಾಮಯ್ಯನವರು ರಿಟೈರಾದ ಪ್ರಯುಕ್ತ ಬೆಂಗಳೂರು ಪವರ್ ಅಂಡ್ ಲೈಟಿಂಗಿನ

ಕ್ಟಿಂಗ್ ಸೂಪರಿಂಟೆಂಡೆಂಟರಾದ ಮಿ|| ಸಿ. ಆರ್. ನವರು ಸದರಿ ಕೆಲಸದಲ್ಲಿ ಕಾಯಂಮಾಡಲ್ಪಟ್ಟಿ ತ್ತಾರೆ. ಎಲೆಕ್ಟ್ರಿಕಲ್ ವರ್ಕ್ಸಿನ ಆಕ್ಟಿಂಗ್ ಅಸಿ ಟ್ ಸೂಪರಿಂಟೆಂಡೆಂಟರಾದ ಮಿ|| ಡಿ. ಕೃಷ್ಣ ಚಾರ್ಯರವರು ಸದರಿ ಕೆಲಸದಲ್ಲಿ ಕಾಯಂಮಾಡ ಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಳ್ಳಿಪುರವೆಂಬ ಊರಿನಲ್ಲಿ ಹತ್ತು ವರ್ಷದ ಬಾಲಿಕೆ ರಿಬ್ಬರು ಭಾವಿಯಿಂದ ನೀರು ಸೇದುತ್ತಿದ್ದಾಗ ಸಿಡಿ ಬಡಿದು ಸತ್ತರು.

ನ್ಯೂಯಾರ್ಕ್ ನಗರದ ಮಿಸೆಸ್ ಇರೀನ್ ವಾರ್ಡ್ ಂಬಾಕೆಯು ಪ್ರಪಂಚದಲ್ಲೆಲ್ಲಾ ಅತ್ಯಂತ ಅವಲಕ್ಷಣ ದ ಮನೆಯನ್ನು ಕಟ್ಟಿಸುತ್ತಿರುವಳು.

ಮಯೂರಭಂಜ್ ಮಹಾರಾಜರು ತಮ್ಮ ಸಂಸ್ಥಾ ದ ಪಾಠಶಾಲೆಗಳಲ್ಲಿ ಪ್ರತಿಯೊಬ್ಬರಿಗೂ ವ್ಯಾಯಾಮ ಾಡಿಸಬೇಕೆಂದು ಅಪ್ಪಣೆಮಾಡಿರುತ್ತಾರೆ.

ರಸಾಯನಶಾಸ್ತ್ರಜ್ಞರು ಎಂದೆಂದಿಗೂ ಒಡೆಯಲಾ ದ ಒಂದು ಹೊಸತರಹದ ಗಾಜನ್ನು ತಯಾರುಮಾಡಿ ವರು. ಸುತ್ತಿಗೆಯಿಂದ ಹೊಡೆದರೂ ಇದು ಒಡೆಯು ದಿಲ್ಲವಂತೆ!

ಅಮೇರಿಕೆಯ ಪ್ರೊಫೆಸರ್ ಸ್ಲಿಫರ್ ಎಂಬವರು ಮಿಯನ್ನು ಮೇಲ್ಭಾಗದಲ್ಲಿ ಸ್ವಲ್ಪದೂರದಿಂದ ನೋ ದರೆ ನೀಲಿಬಣ್ಣವುಳ್ಳದ್ದಾಗಿ ಕಾಣಿಸುವದೆಂದು ನಿರ್ಧ ಸಿರುವರು.

ರಷ್ಯಾದೇಶದ ರಾಜಧಾನಿಯಾದ ಮಾಸ್ಕೋನಗರ ಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದು ತನ್ನ ಸ್ವಳಕ್ಕೆ ಂತಿರುಗಿದ ಒಬ್ಬ ಪಂಜಾಬೀ ಯುವಕನನ್ನು ಪೋ ೀಸರು ದಸ್ತಗಿರಿಮಾಡಿ ಲಾಹೋರ್ ಕೋಟೆಯಲ್ಲಿ ಟ್ಟಿರುತ್ತಾರೆ.

ಇಂಗ್ಲೆಂಡ್ ದೇಶಕ್ಕೆ ಸೇರಿದ ಈಟನ್ ಕಾಲೇಜಿನ ಾಲ್ಕು ಜನ ಉಪಾಧ್ಯಾಯರು ರಜದಮೇಲೆ ಸ್ವಿಟ್ಸ ಂಡ್ ದೇಶಕ್ಕೆ ಹೋಗಿ ಆಲ್ಪ್ಸ್ ಪರ್ವತವನ್ನು ತ್ತುತ್ತಿದ್ದಾಗ ಅಕಸ್ಮಾತ್ ಕಾಲುಜಾರಿ ೯೦೦ ಅಡಿ ತ್ತರದಿಂದ ಕೆಳಗೆ ಬಿದ್ದು ಸತ್ತುಹೋದರು.

ಮಿಸ್ ಕಾನ್‌ಸ್ಟೆನ್ಸ್ ಬೆನೆಟ್ ಎಂಬ ಪ್ರಸಿದ್ಧ ಸಿನಿಮಾ ನಟಿಯು ನ್ಯೂಯಾರ್ಕಿನ ಒಬ್ಬ ದೈನಂದಿನ ತ್ರಿಕಾಕರ್ತರ ಮೇಲೆ ೭,೫೦,೦೦೦ ರೂಪಾಯಿಗಳ ರಿಹಾರಕ್ಕೆ ದಾವೆಯನ್ನು ಹೂಡಿರುವಳು. ಈಕೆಯ ನ ಸಂಬಂಧವಾದ ಕೆಲವು ವಿಷಯಗಳು ಸದರಿ ತ್ರಿಕೆಯಲ್ಲಿ ಪ್ರಕಟವಾಗಿದ್ದುದೇ ಇದಕ್ಕೆ ಕಾರಣ ಂತೆ!

ಜಬ್ಬಲ್‌ಪುರದ ಒಬ್ಬಾನೊಬ್ಬ ನಿವೃತ್ತ ಪೋಲೀಸ್ ಾನ್‌ಸ್ಟೆಬಲನು ೧೪ ವರ್ಷಗಳಕಾಲ ಕೆಲಸಮಾಡಿದ ಂತರ ತನ್ನನ್ನು ನಿಷ್ಕಾರಣವಾಗಿ ಕೆಲಸದಿಂದ ವಜಾ ಮಾಡಿದರೆಂದು ಸ್ಟೇಟ್‌ಸೆಕ್ರೆಟರಿಗಳ ಮತ್ತು ಪೋ ೀಸ್ ಸೂಪರಿಂಟೆಂಡೆಂಟರವರ ಮೇಲೆ ೧೧,೦೦೦ ರೂ. ಗಳ ಪರಿಹಾರದ್ರವ್ಯಕ್ಕೆ ದಾವೆಯನ್ನು ಮಾಡಿ ರುತ್ತಾನೆ.

ವಿಜಾಪುರ ಡಿಸ್ಟ್ರಿಕ್ಟಿನಲ್ಲಿ ಪ್ರವಾಹದದೆಸೆಯಿಂದ ಸುಮಾರು ೪೦೦ ಚದರಮೈಲಿಗಳಷ್ಟು ಪ್ರದೇಶವು ೀರಿನಿಂದ ಆವೃತವಾಗಿರುವದು. ಸುಮಾರು ೨೫೦ ಚದರಮೈಲಿಗಳಷ್ಟು ಪ್ರದೇಶದಲ್ಲಿ ಬೆಳೆಯು ಸಂಪೂರ್ಣ ನಾಶವಾಗಿರುವುದು. ಸರಕಾರದವರು ನಷ್ಟಹೊಂದಿದ ಜನರಿಗೆ ಸಾಲಕೊಡಲು ೨೫,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವರು.

ಗ್ರಾಮಾಫೋನ್, ಸಿನೆಮಾ ಮೊದಲಾದ ಅನೇಕ ಹೊಸಹೊಸ ಯಂತ್ರಗಳನ್ನು ತಯಾರಿಸಿ ಲೋಕಪ್ರಸಿದ್ಧರಾದ ಥಾಮಸ್ ಎಡಿಸನ್‌ರವರ ಪುತ್ರರಾದ ಥಿಯೋಡೋರ್ ಎಡಿಸನ್‌ರವರು ಈಗಿನ ಗ್ರಾಮಾಫೋನಿನಲ್ಲಿ ಕೆಲವು ಹೊಸವಿಷಯಗಳನ್ನು ಶೋಧಿಸುತ್ತಿರುವರು. ದು ಸಫಲವಾದರೆ ಮಾನವವರ್ಗದಲ್ಲಿಯೇ ಸಂಪೂರ್ಣವಾಗಿ ಬದಲಾವಣೆಯಾಗುವದಂತೆ!

ಗಾಂಧಿಯವರು ಕಾರಾಗೃಹದಲ್ಲಿ ತಮ್ಮ ಅಸ್ಪೃಶ್ಯೋದ್ಧಾರ ಕಾರ್ಯಕ್ಕೆ ಸಾಕಾದಷ್ಟು ಅವಕಾಶವಿಲ್ಲವೆಂಬ ಕಾರಣದಮೇಲೆ ಉಪವಾಸವ್ರತವನ್ನು ಪ್ರಾರಂಭಿಸಿದರು. ಇದರಿಂದ ಅವರ ದೇಹಸ್ಥಿತಿಯು ದಿನದಿನಕ್ಕೆ ಕೆಡುತ್ತಾ ಬಂದದ್ದರಿಂದ ಸರಕಾರದವರು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿಟ್ಟಿದ್ದು, ಇದೇ ೨೩ ನೆಯ ತಾರೀಖಿನ ದಿವಸ ಅವರನ್ನು ಬಿಡುಗಡೆಮಾಡಿದರು.

ಬ್ರಿಟಿಷ್ ವೆಸ್ಟ್ ಇಂಡಿಯಾದ್ವೀಪಗಳಿಗೆ ಸೇರಿದ ಜಮೇಕಾದ್ವೀಪದಲ್ಲಿ ವಿಶೇಷವಾಗಿ ಮಳೆಯು ಸುರಿದು ಜನರಿಗೆ ತುಂಬಾ ಕಷ್ಟನಷ್ಟಗಳನ್ನುಂಟುಮಾಡಿದೆ. ಸುಮಾರು ೬೦,೦೦,೦೦೦ ರೂ. ಗಳಷ್ಟು ಆಸ್ತಿಪಾಸ್ತಿಗಳು ನಾಶವಾದವು. ಎಪ್ಪತ್ತು ಜನರು ಸತ್ತುಹೋದರು. ಪ್ರವಾಹದ ದೆಸೆಯಿಂದ ಕಿಂಗ್ಸ್‌ಟನ್ ನಗರದ ಸೇತುವೆಗಳೆಲ್ಲಾ ಕೊಚ್ಚಿಹೋದವು.

ಅಮೇರಿಕೆಯ ಟೆಕ್ಸಾಸ್ ದೇಶಕ್ಕೆ ಸೇರಿದ ಹ್ಯಾಮಿಲ್ಟನ್ ಎಂಬಲ್ಲಿ ರೇಮಂಡ್ ಹ್ಯಾಮಿಲ್ಟನ್ ಎಂಬ ೨೦ ವರ್ಷದ ತರುಣನು ದಸ್ತಗಿರಿಮಾಡಲ್ಪಟ್ಟಿರುವನು. ಈ ತರುಣನು ಈಗಾಗಲೇ ಸಣ್ಣಸಣ್ಣ ಕಳ್ಳತನಗಳಿಂದ ಖೂನಿಯವರೆಗಿನ ಎಲ್ಲ ವಿದ್ಯೆಗಳಲ್ಲಿಯೂ ಚನ್ನಾಗಿ ಪರಿಶ್ರಮಹೊಂದಿರುವನಂತೆ! ಇವನ ಅಪರಾಧಗಳಿಗೆ ಒಟ್ಟಿಗೆ ಶಿಕ್ಷೆಯನ್ನು ವಿಧಿಸಿದರೆ, ೨೬೩ ವರ್ಷಗಳ ಕಾರಾಗೃಹವಾಸವನ್ನನುಭವಿಸಬೇಕಾಗುವದಂತೆ!

ಕಲ್ಕತ್ತಾನಗರದ ಒಂದು ಪೋಸ್ಟ್ ಆಫೀಸಿಗೆ ಮಾರ್ವಾಡಿ ಬ್ಯಾಂಕಿನ ಇಬ್ಬರು ನೌಕರರು ೧೦,೦೦೦ ರೂಪಾಯಿಗಳ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ನಾಲ್ಕು ಜನರು ಅವರನ್ನು ಅಡ್ಡಗಟ್ಟಿ ಒಬ್ಬನನ್ನು ಹೊಡೆದು ನೋಟುಗಳನ್ನು ಕಿತ್ತುಕೊಂಡು ಮೋಟಾರುಕಾರಿನಲ್ಲಿ ತಪ್ಪಿಸಿಕೊಂಡು ಹೊರಟುಹೋದರು. ಇನ್ನೊಬ್ಬ ನೌಕರನು ಎಲ್ಲೋ ಓಡಿಹೋದನು. ಅವನು ಇನ್ನೂ ಪತ್ತೆಯಾಗಿರುವುದಿಲ್ಲ.

ವಿವಾಹಕಾಲದಲ್ಲಿ ಜನರು ಅನಾವಶ್ಯಕವಾದ ಖರ್ಚುಗಳನ್ನು ಸಾಧ್ಯವಾದಷ್ಟುಮಟ್ಟಿಗೂ ಕಡಮೆ ಮಾಡಬೇಕೆಂಬ ಉದ್ದೇಶದಿಂದ ಇಂದೂರಿನ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಮಸೂದೆಯು ಬಹುಮತದಿಂದ ಪಾಸಾಯಿತು. ಅಲ್ಲದೆ ವಿವಾಹ ಸಮಯದಲ್ಲಿ ಐವತ್ತು ಮಂದಿಗಿಂತಲೂ ಹೆಚ್ಚು ಜನರನ್ನು ಊಟಕ್ಕೆ ಕರೆಯಕೂಡದೆಂದೂ, ಎರಡಕ್ಕಿಂತಲೂ ಹೆಚ್ಚು ಔತಣವನ್ನು ನಡೆಯಿಸಕೂಡದೆಂದೂ ಆ ಮಸೂದೆಯಲ್ಲಿ ನಮೂದಾಗಿದೆ.

ದಕ್ಷಿಣ ಆಫ್ರಿಕಾದೇಶದ ಮ್ಯೂಕಾಫಾರ್ಲೆನ್ ಎಂಬ ಒಬ್ಬ ಪೋಲೀಸನು ಸಮುದ್ರದಲ್ಲಿ ಮುಳುಗಿಹೋಗುತ್ತಿದ್ದ ಒಬ್ಬನನ್ನು ಕಂಡು, ಹತ್ತಿರದಲ್ಲೇ ಇದ್ದ ತಿಮಿಂಗಿಲಗಳಿಗೂ ಹೆದರದೆ, ನೀರಿನಲ್ಲಿ ಧುಮುಕಿ ಅವನ ಪ್ರಾಣರಕ್ಷಣೆ ಮಾಡಿದನು. ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ಬಂದ ಒಂದು ದೋಣಿಯು ಅವರಿಬ್ಬರನ್ನೂ ದಡಕ್ಕೆ ಸಾಗಿಸಿಕೊಂಡು ಹೋಯಿತು. ಪೋಲೀಸನ ಧೈರ್ಯಸಾಹಸಗಳಿಗೆ ಮೆಚ್ಚಿ ಜನರು ಅವನಿಗೆ ಒಂದು ಮೆಡಲನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

ಬ್ರಿಟಿಷ್ ಸರಕಾರದವರು ಮೆಡಿಟರೇನಿಯನ್ ಸಮುದ್ರದ ಮಾರ್ಗವನ್ನೂ ಮತ್ತು ಆಕಾಶಮಾರ್ಗವನ್ನೂ ರಕ್ಷಿಸಲು ಮಾಲ್ಟಾದ್ವೀಪದಲ್ಲಿಡುವದಕ್ಕಾಗಿ ಕೆಲವು ಯುದ್ಧದ ವಿಮಾನಗಳನ್ನು ತಯಾರಿಸುತ್ತಿರುವರು. ಈ ವಿಮಾನಗಳಲ್ಲಿ ಕೆಲಸಗಾರರು ಬಹಳಕಾಲದವರೆಗೆ ಹೊರಗೆ ಬರದೆ ಅಲ್ಲಿಯೇ ಇರಲು ಅವಶ್ಯಕವಾದ ಅನುಕೂಲತೆಗಳು ಕಲ್ಪಿಸಲ್ಪಟ್ಟಿರುವವಂತೆ! ಈ ವಿಮಾನಗಳು ಗಂಟೆ ೧ಕ್ಕೆ ೧೩೦ ಮೈಲುಗಳ ವೇಗದಲ್ಲಿ ಹೋಗುವುವಲ್ಲದೆ ಎಲ್ಲಿಯೂ ನಿಲ್ಲದೆ ಒಂದುಸಾರಿಗೆ ೨೦೦೦ ಮೈಲುಗಳ ದೂರ ಪ್ರಯಾಣಮಾಡಬಲ್ಲವಂತೆ!

ಚೀನಾಸರಕಾರದವರು ತಮ್ಮ ರಾಜವಂಶದ ಆಭರಣಾದ್ಯಮೂಲ್ಯವಸ್ತುಗಳನ್ನು ಮಾರಿ, ಬಂದ ಹಣವನ್ನು ದೇಶಹಿತಕಾರ್ಯಗಳಿಗೆ ಉಪಯೋಗಿಸಬೇಕೆಂದು ಯೋಚಿಸುತ್ತಿರುವರು. ಇವುಗಳ ಬೆಲೆಯು ಸುಮಾರು ೩,೭೫,೦೦,೦೦,೦೦೦ ರೂಪಾಯಿಗಳಾಗುವವೆಂದೂ, ಸದ್ಯದ ಮುಗ್ಗಟ್ಟಿನಲ್ಲಿ ಕನಿಷ್ಠಪಕ್ಷ ೧,೫೦,೦೦,೦೦,೦೦೦ ರೂಪಾಯಿಗಳಿಗೆ ಮಾರಬಹುದೆಂದೂ ಅಂದಾಜುಮಾಡಲ್ಪಟ್ಟಿರುವದು. ಆದರೆ ಚೀನಾ ಸರಕಾರದವರು ಈ ಅಪಾರ ಹಣವನ್ನು ಮದ್ದುಗುಂಡುಗಳನ್ನು ಕೊಂಡುಕೊಳ್ಳುವದಕ್ಕಾಗಿ ಉಪಯೋಗಿಸಬಹುದೆಂದು ಜಪಾನ್ ಸರಕಾರದವರು ಸಂಶಯಪಟ್ಟು, ಮಾಂಚುಕೋ ರಾಜ್ಯದ ಚಕ್ರವರ್ತಿಯ ಮುಖಾಂತರ ಈ ಐಶ್ವರ್ಯದಲ್ಲಿ ಪಾಲುಕೇಳುತ್ತಿರುವರು. ಈ ಆಭರಣಾದಿಗಳು ಪೂರ್ವದಿಂದಲೂ ಟೀನ್‌ಸ್ಟಿನ್ ನಗರದಲ್ಲಿತ್ತು. ಆದರೆ ಮೊನ್ನೆ ನಡೆದ ಚೀನಾ ಜಪಾನರ ಯುದ್ಧಕಾಲದಲ್ಲಿ, ಜಪಾನಿನ ಸೈನ್ಯಾಧಿಕಾರಿಗಳು ಮೇಲ್ಕಂಡ ಐಶ್ವರ್ಯವನ್ನು ಲೂಟಿಮಾಡಬೇಕೆಂದು ಉದ್ದೇಶಿಸಿರುವರೆಂದು ತಿಳಿದು, ಚೀನಾಸರಕಾರದವರು ಅವುಗಳನ್ನೆಲ್ಲಾ ನಾಂಕಿಂಗ್ ನಗರಕ್ಕೆ ಸಾಗಿಸಿದರು.

ಸ್ವೀಕಾರ

ಬೆಂಗಳೂರು ಡಿ|| ಹೊಸಕೋಟೆ ತಾ|| ನಂದಿಗುಡಿಯಲ್ಲಿರುವ ಮಹಂತಿನಮಠ ಮತ್ತು ಮರಿಸ್ವಾಮಿಗಳ ಗದ್ದುಗೆಯ ಜೀರ್ಣೋದ್ಧಾರಮಾಡಿಸಿ ಸಂಪ್ರೋಕ್ಷಣೆ ಮಾಡಿಸಿದ ಸಮಯದಲ್ಲಿ ಧರ್ಮದರ್ಶಿಗಳಾದ ಬೆಂಗಳೂರುಸಿಟಿ ಚಾಮರಾಜಪೇಟೆಯಲ್ಲಿರುವ ವೇ|| ಎನ್. ರುದ್ರಯ್ಯನವರು 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿಕ್ಕಮಗಳೂರು ತಾ|| ಜಕ್ಕನಹಳ್ಳಿ ಮ|| ರಾ|| ದೊಡ್ಡಅಣ್ಣೇಗೌಡರು ಸದರಿ ತಾಲ್ಲೂಕು ಗೌತಮೇಶ್ವರದ ಮ|| ರಾ|| ಲಿಂಗೇಗೌಡರ ದ್ವಿತೀಯ ಪುತ್ರನನ್ನು ದತ್ತಪುತ್ರನನ್ನಾಗಿ ಸ್ವೀಕಾರಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ.ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು.]

ಏನೋ ಒಂದು ಘನವಾದ ಕಾರಣವಿರಬೇಕೆಂದು ತೋರಿಬರುತ್ತದೆ. ಇರಲಿ;

ಸುಪ್ರಭೇದಾಗಮದಲ್ಲಿ—

ಸ್ಕಂದಗೋತ್ರಾಧಿನಾಥಶ್ಚ ಮಹಾಸಿಂಹಾಸನಾಗ್ರಣೀಃ। **ವಿಶ್ವಾರಾಧ್ಯ** ಇತಿ ಖ್ಯಾತೋ ಜಗದ್ಗುರುತಮಶ್ಚ ಸಃ॥

ಪಾಶುಪತತಂತ್ರದಲ್ಲಿ—

ಈಶಾನಾಖ್ಯಮುಖೋತ್ಪನ್ನೋ ವಿಶ್ವಕರ್ಣೇತಿ ವಿಶ್ರುತಃ। **ವಿಶ್ವಾರಾಧ್ಯೇತಿ** ತನ್ನಾಮ ತತ್ಸೂತ್ರಂ ಪಂಚವರ್ಣಕಂ॥

ಸ್ವಯಂಭುವಾಗಮದಲ್ಲಿ—

ಕಾಶ್ಯಾಂ ವಿಶ್ವೇಶ್ವರೇ ಲಿಂಗೇ **ವಿಶ್ವಾರಾಧ್ಯಸ್ಯ** ಸಂಭವಃ। ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ॥

ಮಹಾನಾರಾಯಣೋಪನಿಷದ್ವೀರಶೈವಭಾಷ್ಯದಲ್ಲಿ—

"ಉದ್ಭಟಾರಾಧ್ಯವೇಮನಾರಾಧ್ಯ **ವಿಶ್ವಾರಾಧ್ಯಾ**ದಯಸ್ತು ಅಸ್ಯಾಮುಪನಿಷದಿ ದಹರೋಪಾಸನಾವಿಷಯೇ ನಾರಾಯಣಸ್ಯೋಪಾಸಕತ್ವ ಶಿವಸ್ಯೋಪಾಸ್ಯತ್ವನಿರ್ಣಯೇ॥" ಎಂದು ಬರೆಯಲ್ಪಟ್ಟಿದೆ.

ಇವೇ ಮೊದಲಾದ ಸಾವಿರಾರು ಪ್ರಾಮಾಣಿಕ ಗ್ರಂಥಗಳಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪವಿತ್ರನಾಮವು ಪರಿಶೋಭಿಸುತ್ತಿರುವುದು. ಇದು ಅಸೂಯಾಂಧರಾದ ಗುರುನಿಂದಕರಿಗೆ ಹೇಗೆ ಗೊತ್ತಾಗಬೇಕು?

ನಿಜತತ್ತ್ವವು ಈ ರೀತಿಯಾಗಿದ್ದಾಗ್ಯೂ ಇವರು ಪಾಪದ ಭಯವಿಲ್ಲದೆ ಉದ್ಧಾಮತನದಿಂದ ಆಚಾರ್ಯರ ವಿಷಯದಲ್ಲಿ ಮನಸ್ಸಿಗೆ ಬಂದಹಾಗೆ ಅಮಂಗಲ ಮಾತುಗಳನ್ನು ಬರೆಯುತ್ತಿರುವುದು ತುಚ್ಛವಾಗಿದೆ. ಇನ್ನಾದರೂ ಇವರು ಪಾಪದಾಯಕವಾದ ಈ ನರಕದ ಗುರುನಿಂದಾರೂಪಮಾರ್ಗವನ್ನು ಬಿಟ್ಟು ಗುರುಸಾರ್ವಭೌಮರಲ್ಲಿ ಅತ್ಯುತ್ತಮವಾದ ಭಕ್ತಿಯನ್ನು ವಹಿಸಿ ಧನ್ಯರಾಗಬೇಕು.

ಗುರುಕಿಂಕರ.

ವೃದ್ಧಪಿತಾಮಹ, ದಯಾಸಾಗರ

ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ

ದಿವ್ಯಸನ್ನಿಧಿಯಲ್ಲಿ
ಮೈಸೂರು ಪುರನಿವಾಸಿಗಳು ಸಮರ್ಪಿಸಿದ

ಅಭಿನಂದನಪತ್ರಿಕೆ.

ಪೂಜ್ಯತಮರೇ,

ಸರ್ವಶಕ್ತನಾದ ಭಗವಂತನ ಅಪಾರಕೃಪೆಯಿಂದ ಇಂದು ತಮ್ಮ ತೊಂಬತ್ತನೆಯ ವರ್ಷವರ್ಧಂತಿ ಮಹೋತ್ಸವವನ್ನು ಭಕ್ತಿವಿಶ್ವಾಸಗಳಿಂದ ಆಚರಿಸುವ ಸುಯೋಗವು ನಮಗೆ ದೊರೆತುದಕ್ಕಾಗಿ ಆನಂದಭರಿತರಾಗಿರುವೆವು. ವಿದ್ಯಾಧಿಕರೂ, ವಿಶೇಷಜ್ಞರೂ, ವಿಶ್ವಮಾನ್ಯರೂ ಆದ ತಮ್ಮನ್ನು ಆದರಿಸಿ ಅಭಿನಂದಿಸಲು ಸೇರಿರುವ ನಾವುಗಳು ತಾವು ಮಾಡಿರುವ ಲೋಕೋಪಕಾರಗಳಾದ ಅಸಂಖ್ಯಾತ ಕಾರ್ಯಗಳನ್ನು ವರ್ಣಿಸಲು ಶಕ್ತರಲ್ಲ.

ತಾವು, ಅಳಿದ ಮಹಾಸ್ವಾಮಿಯವರಾದ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಆಳ್ವಿಕೆಯಲ್ಲಿಯೂ, ಶ್ರೀ ಚಾಮರಾಜೇಂದ್ರ ಒಡೆಯರವರ ಆಳ್ವಿಕೆಯಲ್ಲಿಯೂ, ನಮ್ಮ ಇಂದಿನ ಮಹಾಪ್ರಭುಗಳವರ ಆಳ್ವಿಕೆಯಲ್ಲಿಯೂ ರಾಜಸೇವೆ, ಪ್ರಜಾವರ್ಗದ ವಿದ್ಯಾಭ್ಯಾಸ, ಸಮಾಜ ಸುಧಾರಣೆ ಮುಂತಾದ ಲೋಕಹಿತಕಾರ್ಯಗಳನ್ನು ಅತಿ ಶ್ರದ್ಧೆಯಿಂದ ನಿರ್ವಹಿಸಿರುವಿರಿ.

ಅನೇಕ ವಿದ್ಯಾಲಯಗಳೂ, ಪತ್ರಿಕೆಗಳೂ, ಸಂಸ್ಥೆಗಳೂ ತಮ್ಮ ಮೇಲ್ವಿಚಾರಣೆಗೆ ಒಳಪಟ್ಟು ಸಂಸ್ಥಾನದ ಜನಸಮುದಾಯಕ್ಕೆ ಜ್ಞಾನಾಭಿವೃದ್ಧಿಯನ್ನುಂಟುಮಾಡಿರುವುವು. ಶ್ರೀ|| ಮರಿಮಲ್ಲಪ್ಪನವರ ಚಿರಸ್ಮರಣೀಯವಾದ ಧರ್ಮದ ಪಾಠಶಾಲೆಯಲ್ಲಿ ಅರ್ಧ ಶತಮಾನದಕಾಲ ತಾವು ಉಪಾಧ್ಯಾಯರಾಗಿ ಅನೇಕ ವಿದ್ಯಾವಂತರನ್ನು ದೇಶದ ಎಲ್ಲೆಡೆಯಲ್ಲಿಯೂ ಹರಡಿರುವಿರಿ. ತಮ್ಮ ಶಿಷ್ಯಮಂಡಲಿಯವರು ಸಾಮಾನ್ಯೋದ್ಯೋಗ ಮೊದಲ್ಗೊಂಡು ಸಂಸ್ಥಾನದ ಪ್ರಧಾನಪದವಿಯವರೆಗೂ ಅಧಿಕಾರಗಳನ್ನು ನಿರ್ವಹಿಸಿರುವರು. ತಮ್ಮಿಂದ ರಚಿತವಾದ ನೀತಿಬೋಧಕ ಗ್ರಂಥಗಳನ್ನು ಓದದ ಕನ್ನಡಿಗರೇ ಇಲ್ಲ. ಸ್ತ್ರೀವಿದ್ಯಾಭ್ಯಾಸಕ್ಕೆ ಮುಂದಾಳುಗಳಾಗಿ ನಿಂತು ತಾವು ನಡೆಯಿಸಿರುವ ಉದ್ಯಮವು ನಮ್ಮ ನಾಡಿಗೆ ಚಿರಸ್ಮರಣೀಯವಾದ ಉಪಕಾರವಾಗಿರುವುದು.

ತಾವು ನ್ಯಾಯವಿಧಾಯಕಸಭೆ, ಪ್ರಜಾಪ್ರತಿನಿಧಿಸಭೆ, ಪೌರಕಾರ್ಯನಿರ್ವಾಹಕಸಭೆ ಮುಂತಾದ ಸಭೆಗಳಲ್ಲಿ ಮಾಡಿರುವ ಪ್ರಜಾಸೇವೆಯು ರಾಜಕೀಯ ಪ್ರಕರಣದಲ್ಲಿ ತಮಗಿರುವ ಅದ್ಭುತಾಸಕ್ತಿಯನ್ನು ವಿಶದಗೊಳಿಸುತ್ತಿರುವುದು. ನಮ್ಮ ದೇಶದಲ್ಲಿ ನಡೆದಿರುವ ಮತ್ತು ನಡೆಯುತ್ತಿರುವ ಸಾರ್ವಜನಿಕ ಕಾರ್ಯಗಳೆಲ್ಲವೂ ತಮ್ಮ ನೇತೃತ್ವದಿಂದಲೇ ಚರಿತಾರ್ಥಗಳಾಗಿರುವುವಲ್ಲದೆ ಬೇರೆಯಲ್ಲ. ತಾವು ಆಗಾಗ್ಗೆ ಸಂಘಟಿಸಿದ ಅನೇಕ ಕಷ್ಟನಷ್ಟಗಳಿಗೆ ಎದೆಗುಂದದೆ ಅತ್ಯಂತ ಸಾಹಸದಿಂದ ಮೈಸೂರಿನವರಲ್ಲಿ ಉಂಟುಮಾಡಿರುವ ಜಾಗೃತಿಯ ಫಲವಾಗಿ ನೂರಾರುಮಂದಿ ದೇಶಸೇವಕರು ತಮ್ಮ ಅನುಯಾಯಿಗಳಾಗಿ ಪ್ರಜಾಸೇವೆಯಲ್ಲಿ ಪ್ರವರ್ತಿಸುತ್ತಿರುವ ವಿಷಯವು ನಮಗೆ ಆನಂದವನ್ನುಂಟುಮಾಡದಿರದು.

ತಮ್ಮ ದಯಾಪರತೆಯು ಅಪಾರವಾದುದು. ಕೇಳಿದವರಿಗೆ ತಮ್ಮಲ್ಲಿದ್ದುದರಲ್ಲಿ ಸ್ವಲ್ಪವನ್ನು ಕೊಡುವವರು ಹಲವರುಂಟು. ತಾವಾದರೋ ಇದ್ದುದೆಲ್ಲವನ್ನೂ ಕೊಟ್ಟು ಕೊಡುವುದಕ್ಕಿಲ್ಲವಲ್ಲಾ ಎಂದು ಹಲುಬುವವರು. ತಾವು ಗಳಿಸಿದ ಧನವೆಲ್ಲವೂ ಬಡವರಿಗಾಯಿತು. ವಿದ್ಯೆಯೆಲ್ಲವೂ ವಿದ್ಯಾರ್ಥಿಗಳಿಗಾಯಿತು. ವೇಳೆಯೆಲ್ಲವೂ ದೇಶಸೇವೆಗಾಯಿತು. ಈ ಅರ್ಥವು ತಾವು ಪರಮೋತ್ಸಾಹದಿಂದ ಸ್ಥಾಪಿಸಿ ನಡೆಯಿಸುತ್ತಿರುವ ಅನಾಥಾಲಯದಿಂದಲೇ ವ್ಯಕ್ತಗೊಂಡಿರುವುದು. "ದೇಶಸೇವೆಯೇ ಈಶಸೇವೆ", "ಪರೋಪಕಾರವೇ ಪುಣ್ಯಕರ", "ಪ್ರಾಣಿಮಾತ್ರವನ್ನು ಸಂತೋಷಪಡಿಸುವುದೇ ಈಶ್ವರಪೂಜೆ" ಎಂಬ ಮೂಲಮಂತ್ರಗಳನ್ನು ತ್ರಿಕಾಲದಲ್ಲಿಯೂ ಜಪಿಸುತ್ತಲೂ, ಆಚರಿಸುತ್ತಲೂ, ಉಪದೇಶಿಸುತ್ತಲೂ ಇರುವ ತಮಗೆ ಇಂತಹ ವರ್ಧಂತಿಮಹೋತ್ಸವಗಳು ಇತ್ಯೋಪ್ಯತಿಶಯವಾಗಿ ಬೆಳೆಯಲೆಂದೂ, ತಮ್ಮ ಉತ್ಸಾಹವೂ, ಚಟುವಟಿಕೆಯೂ, ದೇಹದಾರ್ಢ್ಯವೂ ಕಳೆಗುಂದದೆ ಬೆಳಗುತ್ತಿರಲೆಂದೂ ಶಾಂತಿ, ತುಷ್ಟಿ, ಪುಷ್ಟಿಗಳು ಉಂಟಾಗಲೆಂದೂ ಭಗವಂತನನ್ನು ಪ್ರಾರ್ಥಿಸುವ,

ತಮ್ಮ ವಿಧೇಯರಾದ,
೨೨—೮—೩೩. ಮೈಸೂರು ಪುರನಿವಾಸಿಗಳು.

ಸ್ವಾಗತಪದ್ಯಪಂಚಕಂ.

ಕಂದ|| ತಾತಾ ಮಹೀಸಿಲೋಕ |
ಖ್ಯಾತಾ, ನೀನೆಮ್ಮ ಬಿನ್ನಹಮನಾಲಿಸುತಂ ||
ಪಿತರುಹನುಗ್ರಹಿಸಿದ್ದೆ |
ನೀತಿಪರಾ ನಾವೆ ಧನ್ಯರಿಂದೇ ಸುದಿನಂ ||೧||

ಹರಿಸದೆ ತೊಂಭತ್ತನೆಯಾ |
ವರುಷದ ವರ್ಧಂತಿಯುತ್ಸವಮನಾಚರಿಸಲ್ ||
ಪುರಜನಮುಂ ಬುಧಜನಮುಂ |
ನೆರೆದಿರ್ಪರ್ ಬಾರ ತಾತ ಪೀಠಮನೇರಾ ||೨||

ಅರಿದರ ಕಲಿವಣೆ ವಿದ್ಯಾ |
ಗುರು ನಾನಾವ್ಯಕ್ತಪಕ್ರಕಾರಂ ಧೀರಂ ||
ವರ ವೆಂಕಟಕೃಷ್ಣಯನಂ |
ದೊರೆಗುಂ ಜನಮೆಮಗೆ ನೀಂ ದಯಾಸಾಗರನೈ ||೩||

ನೀನಿಲ್ಲದ ಸಂಸ್ಥೆಯನೊಂ |
ದಾಮಮನಾವರಿಯೆವಲ್ತೆ ನಮ್ಮಯ ನಾಡೊಳ್ ||
ದೀನದಯಾಸಾಗರ ನಂ |
ಮಾನಿತಗುಣವಂತ, ತಾತ, ಸುಗುಣಸಮೇತಾ ||೪||

ಹಲವುಂ ವರ್ಧಂತಿಗಳಂ |
ತಿಳಿಯೊಳ್ ನಿನಗಕ್ಕೆ ದೇಹದಾರ್ಢ್ಯಮದಿನ್ನುಂ ||
ಕೊಳಗುಗೆ ವೃದ್ಧಪಿತಾಮಹ |
ನಲವೊಂದ್ಯೆ ಸುಚಿರಮಾಪ್ತಬಂಧುಸಮೇತಂ ||೫||

ನಂ. ಶ್ರೀಕಂಠಶಾಸ್ತ್ರಿ,
ಸಂಮುಖದ ವಿದ್ವಾಂಸ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.
[35]

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿ

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂ ತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನ ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾ ದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರ ಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತ ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪು ಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವ ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾ ವಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವ ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವ ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 2

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವ ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾ ಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,

ಹುಬ್ಬಳ್ಳಿ.

೧ನೇ ಯಾತ್ರಾ ೧೬—೪—೩೩ ರಿಂದ ೧—೬—೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೯—೧೧—೧೯೩೩ ಪೂರಾ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವದು.

ಸದರಿ ಕಂಪನಿಯು ಎಂಜಿನ್ ರೆಂಟಿಗಳಿಂದ ಪಡಬಮಾನುಗಳು ಕಿರ್ದೀ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[13]

ಮೈಸೂರ್ ಏಜಂಟರು—
ದಿ ಯೂನಿವರ್ಸಲ್ ಟ್ರೇಡಿಂಗ್‌ಕಂಪೆನಿ,
(ಆಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಜಿ. ಎ. ಶಿರೂರ,
ಆರ್ಗನಾಯಜರ,
ಶ್ರೀ ಗೌರೀಶಂಕರ ಕಂಪೆನಿ, ಹುಬ್ಬಳ್ಳಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ತಾಳಿಭಸ್ಮ	೧	೦—೮—೦
ಂಬಿನಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಂಖಭಸ್ಮ	೧	೦—೪—೦
ಪರ್ದಿಭಸ್ಮ	೧	೦—೪—೦
ಪ್ಪೆಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಲಾಜಿತ ಸೂರ್ಯಪುಟಿ	೧	೧—೦—೦
ಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲ ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ನ್ನು ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡುವದಕ್ಕೋಸ್ಕರ ನಮ್ಮಲ್ಲಿ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ವಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ಕ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ಕಿನ್ನಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಫಿಂಗ್ ಕಫ್ ರೆಮೆಡಿ— ಕಕ್ಕೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

☞ ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪತ್ರಿಕೆಗೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [52]

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ನೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಔಷಧವಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ '**ಕಂಪೌಂಡು ಸಿರಪು ಫೋಸ್ಫರ**' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಛರ್ದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಚಾರದ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಬಲ್ಲವರಾಗಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಬೋಜಹಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[33]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ (೫ನೆಯ ಆವೃತ್ತಿ)	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಮೇತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವು

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಬ್ಬ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[34] ಪೋ. ಬಾ. ೫೧೦, ಮದರಾಸು.

(Registered Trade Mark)

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ಸೆಪ್ಟಂಬರ್ ೧೯೩೩ [ಸಂಚಿಕೆ ೧೯

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿಸಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**



ಫೋಟೋ, ಲೈನ್, ಬ್ಲಾಕುಗಳು ಹಿತ್ತಾಳೆ, ಸೀಸದ, ಬ್ಲಾಕುಗಳು ಅರಗಿನಶೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [36]

ಫ್ರಾನ್ಸ್‌ದೇಶದ ಚಕ್ರವರ್ತಿಯಾಗಿದ್ದು ಲೋಕಪ್ರಸಿದ್ಧನಾದ ನೆಪೋಲಿಯನ್ನನು ಜೋಸೆಫೀನ್ಳಿಗೆ 1796 ನೇ ಇಸವಿಯಿಂದ 1800 ನೇ ವರ್ಷದವರೆಗೆ ಬರೆದಿದ್ದ 8 ಪ್ರೇಮಪತ್ರಗಳು ರೋಸ್‌ಬೆರಿ ಎಂಬುವರ ಪುಸ್ತಕಾಲಯದಲ್ಲಿ 66,000 ರೂ. ಗಳಿಗೆ ಮಾರಲ್ಪಟ್ಟವಂತೆ! ಎಲ್ಬಾ ಎಂಬ ಸ್ಥಳದಿಂದ ಮೇರಿ ಲೂಯಿ ಎಂಬುವಳಿಗೆ ಬರೆದಿದ್ದ ಕಡೆಯ ಪತ್ರವು 15,000 ರೂ. ಗಳಿಗೆ ಮಾರಲ್ಪಟ್ಟಿತಂತೆ! ಸೆಂಟ್ ಹೆಲೆನಾ ದ್ವೀಪದಲ್ಲಿ ಆತನು ಮರಣಹೊಂದಿದಾಗ ಮುಖದಮೇಲೆ ಹಾಕಿದ್ದ ಚೌಕವು 600 ರೂ. ಗಳಿಗೆ ಮಾರಲ್ಪಟ್ಟಿತಂತೆ!

ಸಂಗೀತಕಛೇರಿ ಮತ್ತು ಉಚಿತ ಸನ್ಮಾನ.

ಮೈಸೂರು ಸಿಟಿ ಚೀಫ್ ಸ್ಯಾನಿಟರಿ ಇನ್ಸ್‌ಪೆಕ್ಟರಾದ ಮ|| ರಾ|| ಬಸವಲಿಂಗಶೆಟ್ಟರವರು ತಾರೀಖು 27—8—33 ನೆಯ ಭಾನುವಾರ ಶಿವರಾಂಪೇಟೆಯಲ್ಲಿರುವ ಸ್ವಗೃಹದಲ್ಲಿ ತಮ್ಮ ಕುಮಾರಿಯಾದ ಮತ್ತು ತುಮುಕೂರು ಶ್ರೀಯುತ ಭಾವಿಕಟ್ಟೆ ಬಿ. ಸಿ. ನಂಜುಂಡಯ್ಯನವರ ಧರ್ಮಪತ್ನಿಯಾದ ಚಿ|| ಸೌ|| ಅಂಬಾಬಾಯಿ ಎಂಬ ಬಾಲಕಿಯಿಂದ ಶ್ರಾವ್ಯವಾದ ಸಂಗೀತ ಕಚೇರಿಯನ್ನು ಆಸ್ಥಾನಸಂಗೀತವಿದ್ವಾಂಸರಾದ ಸಂಗೀತಶಾಸ್ತ್ರರತ್ನ ವಾಸುದೇವಾಚಾರ್ಯರೂ, ಮ|| ರಾ|| ಚಿಕ್ಕರಾಮರಾಯರೂ, ಮ|| ರಾ|| ದೇವೇಂದ್ರಪ್ಪನವರೂ, ಸಂಗೀತ ವಿದ್ವಾನ್ ಮ|| ರಾ|| ಸದಾಶಿವಪ್ಪನವರೂ, ನ್ಯಾಮತಿ ಮ|| ರಾ|| ಚನ್ನವೀರಪ್ಪನವರು, ಬಿ.ಎ., ಮತ್ತು ತುಮಕೂರು ಶ್ರೀಯುತ ಮಂಡಿಪೇಟೆ ಶಿವಪ್ಪನವರೂ ಮ|| ರಾ|| ಗುಬ್ಬಿ ಶಿದ್ದರಾಮಪ್ಪನವರೂ ಮುಂತಾದ ದೊಡ್ಡಮನುಷ್ಯರ ಸಂಮುಖದಲ್ಲಿ ನಡೆಸಿ ಸಂಗೀತಪಾಠವನ್ನು ಹೇಳಿರುವ ಮ|| ರಾ|| ಅರಕೆರೆ ನಾರಾಯಣರಾಯರಿಗೆ ಸುವರ್ಣದ ಹಸ್ತಾಭರಣವನ್ನೂ, ವಾದ್ಯಗಳನ್ನು ಬಾರಿಸಿದ ವಿದ್ವಾನ್ ತಬಲಾ ಲೀಪಪ್ಪನವರಿಗೂ, ಫಿಟೀಲ್ ರಾಮಯ್ಯನವರಿಗೂ ಭಂಗಾರದ ಉಂಗುರಗಳನ್ನೂ ಮ|| ರಾ|| ಚಿಕ್ಕರಾಮರಾಯರ ಹಸ್ತದಿಂದ ಕೊಡಿಸಿ ಸಂಗೀತವಿದ್ಯೆಯಲ್ಲಿ ತಮಗಿರುವ ಪ್ರೀತಿಗೌರವವನ್ನು ವ್ಯಕ್ತಪಡಿಸಿದರು. ಅನಂತರ ಮ|| ರಾ|| ವಾಸುದೇವಾಚಾರ್ಯರವರು ಸಂಗೀತವಿದ್ಯೆಯ ವಿಚಾರದಲ್ಲಿ ಸ್ವಾರಸ್ಯವಾದ ಭಾಷಣಮಾಡಿದರು. ಆಮೇಲೆ ಗಂಧಪುಷ್ಪ ತಾಂಬೂಲಾದಿಗಳ ವಿನಿಯೋಗವು ನಡೆಯಿತು.

ಓರ್ವ ಪ್ರೇಕ್ಷಕ.

ಎಲ್ಲಾ ಮತಸ್ಥರ ಕಾನ್ಫರೆನ್ಸ್.

ಬೊಂಬಾಯಿ ಪಟ್ಟಣದಲ್ಲಿ ಎಲ್ಲಾ ಮತದ ಪ್ರತಿನಿಧಿಗಳು ಸೇರಿ ಒಂದು ಕಾನ್ಫರೆನ್ಸನ್ನು ಮಾಡುವುದು. ಅಮೇರಿಕಾಖಂಡದ ಚಿಕಾಗೋ ಪಟ್ಟಣದಲ್ಲೂ ಕೂಡ ಇಂಥಾ ಕಾನ್ಫರೆನ್ಸು ಒಂದು ನಡೆಯುವುದು. ಈಗ್ಗೆ ಕೆಲವು ವರ್ಷಗಳಲ್ಲಿ ಚಿಕಾಗೋ ಪಟ್ಟಣದಲ್ಲಿ ನಡೆದ ಎಲ್ಲಾ ಮತಗಳ ಪಾರ್ಲಿಮೆಂಟಿನಲ್ಲಿ ನಡೆದ ಉಪನ್ಯಾಸಗಳೆಲ್ಲಾ ಮುದ್ರಿಸಲ್ಪಟ್ಟಿರುವುವು. ಅವುಗಳೆಲ್ಲಾ ಜಾರಿಗೆ ಬಂದಿದ್ದರೆ ದೇವರೇ ತಂದೆ ಸಕಲ ಜನಗಳೂ ಸಹೋದರರೂ ಮನೋವಾಕ್ಕರ್ಮಗಳ ಪಾರಿಶುದ್ಧತೆಯೇ ದೇವರಪೂಜೆ, ಪರೋಪಕಾರವೇ ಪುಣ್ಯ, ಪರಪೀಡೆಯೇ ಪಾಪ. ಅಜಿತೇಂದ್ರಿಯರಾಗಿ ಅರಿಷಡ್ವರ್ಗಗಳಿಗೆ ಅಧೀನರಾಗಿ ತಕ್ಕರಾಗಿರತಕ್ಕ ಜನಗಳಿಗೆ ಸ್ವಪ್ನದಲ್ಲಿಯೂ ಕೂಡ ಸುಖವು ದೊರೆಯುವುದಿಲ್ಲ. ಹಿಂದೂಗಳ ಪ್ರಾರ್ಥನೆಗಳಲ್ಲಿ "ಸರ್ವೇಜನಾಃ ಸುಖಿನೋಭವಂತು" ಎಂಬ ಪ್ರಾರ್ಥನೆಯನ್ನು ದೇವರು ಒಪ್ಪುತ್ತಾನೆ. ಯಾರ ಇಷ್ಟಾರ್ಥಪ್ರಾಪ್ತಿಗೂ ಬಾಧಕವಿಲ್ಲದೆ ಪ್ರತಿಯೊಬ್ಬರೂ ತಮ್ಮ ಇಷ್ಟಾರ್ಥವನ್ನು ಪಡೆದುಕೊಳ್ಳಬೇಕು. ಅಂಥ ಮನೋಭಾವವುಳ್ಳವರಿಗೆ ಜಗದೀಶ್ವರನ ಸಹಾಯವು ದೊರೆಯುವುದು. ಇಲ್ಲದವರಿಗೆ ಎಂದಿಗೂ ಸದ್ಗತಿಯಾಗುವುದಿಲ್ಲ. ಇದೇ ಇಂಥ ಕಾನ್ಫರೆನ್ಸ್‌ಗಳ ಮುಖ್ಯ ಉದ್ದೇಶ. ಈ ಉದ್ದೇಶವು ಜಾರಿಗೆ ಬರುವಂತೆ ಮಾಡಿಕೊಳ್ಳುವುದು ಎಲ್ಲ ಮುಮುಕ್ಷುಗಳಿಗೂ ಮುಖ್ಯ ಕರ್ತವ್ಯ. ಈ ಕರ್ತವ್ಯಕ್ಕೆ ಸರಿಯಾದ ಗಮನವು ಕೊಡಲ್ಪಡಲೆಂದು ಸಜ್ಜನರು ನಂಬಿ ಇದ್ದಾರೆ. ಹಾಗೆ ನಡೆದವರಿಗೆ ಖಂಡಿತವಾಗಿಯೂ ಮೋಕ್ಷವು ದೊರೆಯುವುದು.

ಚೀನಾ ದೇಶದ ಸೈನ್ಯದ ೨೬೦ ಮಂದಿ ಅಧಿಕಾರಿಗಳು ರಾಜ್ಯಕ್ರಾಂತಿಕಾರರನ್ನು ಅಡಗಿಸುವ ಉದ್ದಿಶ್ಯ ನರ್ಕಿಂಗ್ ಪ್ರಾಂತ್ಯಕ್ಕೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ರೈಲು ಅಕಸ್ಮಾತ್ ಕಂಬಿಬಿಟ್ಟು ಯಾಂಗ್‌ಟ್ಸೀ ನದಿಯಲ್ಲಿ ಬಿದ್ದುಹೋಯಿತು. ಅರವತ್ತುಮಂದಿ ಅಧಿಕಾರಿಗಳು ಸತ್ತುಹೋದರು. ಇತರರಿಗೆ ಗಾಯಗಳಾದವು. ಈ ಅನಾಹುತವು ರೈಲ್ವೆ ರಸ್ತೆಯನ್ನು ರಿಪೇರಿಮಾಡುತ್ತಿದ್ದ ಕೆಲಸಗಾರರ ಅಜಾಗರೂಕತೆಯಿಂದ ಉಂಟಾಯಿತೆಂದೂ, ಅಧಿಕಾರಿಗಳು ಅವರ ಮೇಲೆ ಬಿದ್ದು ಕೆಲವರನ್ನು ಕೊಂದುಹಾಕಿದರೆಂದೂ ವರ್ತಮಾನವಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ದ್ವಿತೀಯೋಲ್ಲಾಸವು.

(ಮುಂದೆ ಸಾಗಿದುದು.)

ಇನ್ನು, 'ಮೀಮಾಂಸಾ' ಅಂದರೇನು? ಅದರ ಇರವನ್ನು ಸ್ವಲ್ಪ ತಿಳಿಸುವಾ. ಮೀಮಾಂಸಾ ಎಂಬುದು ವಿಚಾರಪೂರ್ವಕವಾಗಿ ತತ್ತ್ವನಿರ್ಣಯವನ್ನು ಪ್ರತಿಪಾದಿಸತಕ್ಕ ಅದೊಂದು ಶಾಸ್ತ್ರವು. ಅಂದರೆ ಸಂದಿಗ್ಧವಾದ ವಾಕ್ಯದ ಯಥಾರ್ಥವಾದರ್ಥವನ್ನು ವಿಚಾರಪೂರ್ವಕವಾಗಿ ನಿರ್ಣಯಿಸತಕ್ಕ ವಿಶಿಷ್ಟವಾದ ಶಾಸ್ತ್ರವು ಮೀಮಾಂಸೆಯೆನ್ನಲ್ಪಡುವುದು. ಶ್ರುತಿಸ್ಮೃತಿಗಳ ತಾತ್ಪರ್ಯಭೂತವಾದ ಅರ್ಥ (ಧರ್ಮ) ದಲ್ಲಿ ಸಂಶಯವುಂಟಾಗಲು ಪೂರ್ವೋತ್ತರ ಸಂದರ್ಭಗಳನ್ನನುಲಕ್ಷಿಸಿ ಶ್ರುತಿಲಿಂಗಾದಿ ಪ್ರಮಾಣಗಳಿಂದ ಆ ವಾಕ್ಯಗಳ ತಾತ್ಪರ್ಯವನ್ನು ನಿಶ್ಚಯಗೊಳಿಸುವುದೇ ಮೀಮಾಂಸಾ ಶಾಸ್ತ್ರದ ಪ್ರಯೋಜನವು. ಆದ್ದರಿಂದ ವಾಕ್ಯಾರ್ಥದಲ್ಲಿ ಸಂದೇಹವುಂಟಾಗಲು ಹೇಗೆ ನಿರ್ಣಯವನ್ನು ಮಾಡಬೇಕೆಂಬುದರ ತಿಳಿವಿಗಾಗಿ ಮೀಮಾಂಸಾ ಶಾಸ್ತ್ರದ ಪದ್ಧತಿಯನ್ನು ಅರಿವುದು ಅವಶ್ಯಕವಾದುದು. ಸಮಸ್ತ ವೇದರಾಶಿಯು ಪೂರ್ವಕಾಂಡ, ಉತ್ತರಕಾಂಡವೆಂಬ ಎರಡು ಭಾಗಗಳಿಂದ ವಿಭಕ್ತವಾಗಿರುವುದಷ್ಟೇ. ಅವೆರಡರಲ್ಲಿ ಪೂರ್ವಕಾಂಡವೆಂದರೆ ಕರ್ಮಪ್ರಧಾನವಾದ ಭಾಗವು. ಉತ್ತರಕಾಂಡವೆಂದರೆ ಜ್ಞಾನಪ್ರಧಾನವಾದ ಭಾಗವು. ಅವೆರಡೂ ಭಾಗಗಳಲ್ಲಿ ಪ್ರವೃತ್ತಿ ನಿವೃತ್ತಿ ಧರ್ಮಗಳು ಪ್ರತಿಪಾದಿಸಲ್ಪಡುವುದರಿಂದ ಅವೆರಡು ಕಾಂ[illegible]ಳೊಳಗಿನ ಸಂದಿಗ್ಧವಾದ ಅರ್ಥಗಳನ್ನು [illegible] ನಿರ್ಣಯಿಸತಕ್ಕ ಮೀಮಾಂಸೆಯೂ ಇಬ್ಬಾಗ[illegible]ಗಿದೆ. ಅವೆರಡು ಮೀಮಾಂಸೆಗಳಿಗೆ ಪೂರ್ವಮೀಮಾಂಸೆ, ಉತ್ತರಮೀಮಾಂಸೆಯೆನ್ನುತ್ತಾರೆ. ಅವೆರಡರ ವಿಷಯವೂ ಫಲವೂ ಬೇರೆಬೇರೆಗಳಾಗಿವೆ. ಅವೆರಡರಲ್ಲಿ ಕರ್ಮಾನುಷ್ಠಾನ ವಿಷಯಕ ಸಂಶಯಗಳನ್ನು ನಿರ್ಣಯಿಸತಕ್ಕ ಪೂರ್ವ ಮೀಮಾಂಸಾಶಾಸ್ತ್ರವನ್ನು ಜೈಮಿನಿಮುನಿಯು ರಚಿಸಿದನು. ಈ ಪೂರ್ವ ಮೀಮಾಂಸಾ ಶಾಸ್ತ್ರದ ಸಾಂಗೋಪಾಂಗ ವಿವೇಚನೆಗೋಸ್ಕರ ಜೈಮಿನಿಯು ಒಟ್ಟು ೨೭೪೫ ಸೂತ್ರಗಳನ್ನು ನಿರ್ಮಿಸಿದ್ದಾನೆ. ಆ ಸೂತ್ರಗಳಿಂದ ಸೂಚಿಸಲ್ಪಡತಕ್ಕ ವಿಷಯ ವಿಭಾಗದ ದೃಷ್ಟಿಯಿಂದ ಎಲ್ಲ ಸೂತ್ರಗಳೊಂದುಗೂಡಿದ ಹನ್ನೆರಡು ಅಧ್ಯಾಯಗಳುಳ್ಳ ಮೀಮಾಂಸಾದರ್ಶನದಲ್ಲಿ 'ಅಥಾತೋ ಧರ್ಮಜಿಜ್ಞಾಸಾ' ಎಂಬುದು ಆದಿಮಸೂತ್ರವು; 'ಅನ್ವಾಹಾರ್ಯೇ ಚ ದರ್ಶನಾತ್' ಎಂಬುದು ಅಂತಿಮಸೂತ್ರವು. ಈ ಹನ್ನೆರಡು ಅಧ್ಯಾಯಗಳಲ್ಲಿಯೂ ಮೊದಲಿನ ಆರು ಅಧ್ಯಾಯಗಳಿಗೆ 'ಪೂರ್ವಷಟ್ಕ' ವೆಂದೂ ಮುಂದಿನ ಆರು ಅಧ್ಯಾಯಗಳಿಗೆ 'ಉತ್ತರ ಷಟ್ಕ' ವೆಂದೂ ಹೇಳುತ್ತಾರೆ. ಈ ಹನ್ನೆರಡು ಅಧ್ಯಾಯಗಳೊಳಗಿನ ವಿಷಯ ವಿಭಾಗಗಳಿಗೆ ಶಾಸ್ತ್ರೋಕ್ತಗಳಾದ ಹನ್ನೆರಡು ಹೆಸರುಗಳಿವೆ. ಅವನ್ನು ಮಾಧವಾಚಾರ್ಯರು ಎರಡು ಕಾರಿಕೆಗಳಲ್ಲಿ ಅಡಗಿಸಿದ್ದಾರೆ. ಹೇಗೆಂದರೆ—

ಧರ್ಮೋ ದ್ವಾದಶಲಕ್ಷಣ್ಯಾ ವ್ಯುತ್ಪಾದ್ಯ ಸ್ತತ್ರ
ಲಕ್ಷಣೈಃ |
ಪ್ರಮಾಣಭೇದಶೇಷತ್ವಪ್ರಯುಕ್ತಿಕ್ರಮಸಂಜ್ಞಕಾಃ ||
ಅಧಿಕಾರೋಽತಿದೇಶಶ್ಚ ಸಾಮಾನ್ಯೇನ ವಿಶೇಷತಃ |
ಊಹೋ ಬಾಧಶ್ಚ ತನ್ತ್ರಂ ಚ ಪ್ರಸಂಗಶ್ಚೋದಿತಾಃ
ಕ್ರಮಾತ್ |

(೧) ಧರ್ಮಪ್ರಮಾಣವು. (೨) ಧರ್ಮಾಧರ್ಮಭೇದಗಳು. (೩) ಶೇಷಶೇಷಿಭಾವವು. (೪) ಕ್ರತ್ವರ್ಥ ಪುರುಷಾರ್ಥಭೇದದಿಂದ ಪ್ರಯುಕ್ತಿವಿಶೇಷವು. (೫) ಶ್ರುತ್ಯರ್ಥಪಾಠಾದಿ ಕ್ರಮಭೇದವು. (೬) ಅಧಿಕಾರವಿಶೇಷವು. (೭) ಸಾಮಾನ್ಯಾತಿದೇಶವು. (೮) ವಿಶೇಷಾತಿದೇಶವು. (೯) ಊಹೆಯು. (೧೦) ಬಾಧವು. (೧೧) ತನ್ತ್ರವು. (೧೨) ಪ್ರಸಂಗವು.

ಈ ಹನ್ನೆರಡು ಅಧ್ಯಾಯಗಳಲ್ಲಿ ಮೂರನೆಯ, ಆರನೆಯ, ಹತ್ತನೆಯ ಅಧ್ಯಾಯಗಳ ಪ್ರತಿಯೊಂದರಲ್ಲಿಯೂ ಎಂಟೆಂಟು ಪಾದಗಳೂ, ಮಿಕ್ಕ ಒಂಭತ್ತು ಅಧ್ಯಾಯಗಳ ಪ್ರತಿಯೊಂದರಲ್ಲಿಯೂ ನಾಲ್ಕು ನಾಲ್ಕು ಪಾದಗಳೂ ಇವೆ. ಇವೆಲ್ಲ ಒಟ್ಟು ಅರವತ್ತು ಪಾದಗಳು; ಈ ಅರವತ್ತು ಪಾದಗಳ ಪ್ರತಿಯೊಂದರಲ್ಲಿ ಮತ್ತೆ ಅಧಿಕರಣಗಳೆಂಬುವೂ ಇರುತ್ತವೆ. ಈ ಅಧಿಕರಣಗಳು ಒಂದು ಸಾವಿರವಿರುತ್ತವೆ. ಅಧಿಕರಣವು ಅಂದರೆ, ಅವಾಂತರ ಪ್ರಕರಣವು. ಇದು ಪೂರ್ವೋತ್ತರಮೀಮಾಂಸಾ ಸಾಧಾರಣ ಸಂಜ್ಞೆಯು. ಅಂದರೆ, ಪೂರ್ವಮೀಮಾಂಸೆ, ಉತ್ತರಮೀಮಾಂಸೆಯೆಂಬ ಎರಡೂ ಮುಖ್ಯಪ್ರಕರಣಗ್ರಂಥಗಳಲ್ಲಿರುವ ಅವಾಂತರ ಪ್ರಕರಣಗಳಿಗಿರುವ ಸಂಜ್ಞೆಯು. ಹೇಗೆಂದರೆ, ಪೂರ್ವಮೀಮಾಂಸೆಯಲ್ಲಿ ಧರ್ಮವೇ ಮುಖ್ಯವಿಷಯವು. ಆದ್ದರಿಂದ, ಪೂರ್ವಮೀಮಾಂಸೆಯು ಧರ್ಮವಿಷಯಕವಾದ ಮುಖ್ಯಪ್ರಕರಣವೆನ್ನಲ್ಪಡುವುದು. ಆ ಮುಖ್ಯಪ್ರಕರಣದೊಳಗಿನ 'ಅಥಾತೋ ಧರ್ಮಜಿಜ್ಞಾಸಾ' ಎಂಬ ಪ್ರಥಮಸೂತ್ರದಿಂದ 'ಧರ್ಮವು ಜಿಜ್ಞಾಸ್ಯವು' ಎಂಬಿಷ್ಟೇ ವಿಷಯವನ್ನು ನಿಶ್ಚಿತಗೊಳಿಸತಕ್ಕ ವಾಕ್ಯಸಮುದಾಯವು ಅವಾಂತರಪ್ರಕರಣವು. ಹಾಗೇ ಉತ್ತರಮೀಮಾಂಸೆಯ ಮುಖ್ಯವಿಷಯವು ಬ್ರಹ್ಮವು. "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಪ್ರಥಮಸೂತ್ರದಿಂದ ಆ ಬ್ರಹ್ಮವು ಜಿಜ್ಞಾಸ್ಯ (ವಿಚಾರ್ಯ) ವು ಎಂಬರ್ಥವನ್ನು ಗಟ್ಟಿಗೊಳಿಸುವುದು ಅವಾಂತರಪ್ರಕರಣವು. ಈ ಅವಾಂತರಪ್ರಕರಣರೂಪವಾದ ಅಧಿಕರಣದಲ್ಲಿ ಅಯ್ದು ಅಂಶ (ಭಾಗ) ಗಳಿರುತ್ತವೆ. ಅವಾವೆಂದರೆ—

ವಿಷಯೋ ವಿಶಯಶ್ಚೈವ ಪೂರ್ವಪಕ್ಷಸ್ತಥೋ
ತ್ತರಮ್ |
ಸಂಗತಿಶ್ಚೇತಿ ಪಂಚಾಂಗಂ ಶಾಸ್ತ್ರೇಽಧಿಕರಣಂ ವಿದುಃ ||

(೧) ವಿಷಯವು. (೨) ವಿಶಯ (ಸಂಶಯ) ವು. (೩) ಪೂರ್ವಪಕ್ಷವು. (೪) ಉತ್ತರಪಕ್ಷವು. (೫) ಸಂಗತಿಯು. ಈಗ ಇವುಗಳನ್ನು ಉದಾಹರಣೆಯೊಡನೆ ಸ್ಪಷ್ಟೀಕರಿಸುತ್ತೇವೆ. ಪೂರ್ವಮೀಮಾಂಸೆಯ ಮೊದಲನೆಯ ಅಧಿಕರಣವು ಜಿಜ್ಞಾಸಾಧಿಕರಣವೆನ್ನಲ್ಪಡುವುದು. ಈ ಅಧಿಕರಣದಲ್ಲಿ ಧರ್ಮವು ಜಿಜ್ಞಾಸಿಸಲ್ಪಡತಕ್ಕದ್ದೋ, ಅಲ್ಲವೋ? ಎಂಬ ಪ್ರಶ್ನೆಯು ಪೂರ್ವಪಕ್ಷ, ಉತ್ತರಪಕ್ಷಾದಿಗಳ ಪದ್ಧತಿಯಿಂದ ವಿಚಾರಿಸಲ್ಪಟ್ಟಿರುವುದು. ಆದ್ದರಿಂದ ಇದರಲ್ಲಿ ಅವಾಂತರಪ್ರಕರಣದ ಲಕ್ಷಣವು ಸಮಂಜಸವಾಗಿರುವುದು. ಹೇಗೆ ಎಲ್ಲ ಅಧಿಕರಣಗಳಲ್ಲಿಯೂ ಯಾವುದಾದರೊಂದು ವೇದವಾಕ್ಯವು ವಿಷಯವಾಗಿರುವಂತೆ ಈ ಅಧಿಕರಣದಲ್ಲಿ 'ಸ್ವಾಧ್ಯಾಯೋಽಧ್ಯೇತವ್ಯಃ' (ತೈ. ಆ. ೧೬) ಎಂಬ ವಾಕ್ಯವು (೧) ವಿಷಯವಾಕ್ಯವು. ಈ ವಾಕ್ಯದಲ್ಲಿ ಹೇಳಲ್ಪಟ್ಟ ಮೇರೆಗೆ ಸ್ವಾಧ್ಯಾಯದ (ಸ್ವಶಾಖೆಯ) ಅಧ್ಯಯನವನ್ನು ಮಾಡಬೇಕೋ, ಮಾಡಬಾರದೋ? ಎಂಬ ಸಂಶಯಕ್ಕೆ (೨) ವಿಶಯವೆನ್ನುತ್ತಾರೆ. ಅರ್ಥವನರಿಯದೆ ವೇದಾಧ್ಯಯನಮಾಡುವುದರಿಂದ ದ್ವಿಜನು ಕೃತಾರ್ಥನಾಗಲ್[illegible]ಡುವುದಿಲ್ಲವೇ? ಎಂಬ ಮುಂತಾದ ಈ ವಿಧವಾದ ಸು[illegible]ಗಡಣವು (೩) ಪೂರ್ವಪಕ್ಷದ ಹೇಳುವಿಕೆಯು. ಆ ಪೂರ್ವಪಕ್ಷವನ್ನು ನಿರಸನಗೊಳಿಸಿ ಅರ್ಥಗ್ರಹಣಪೂರ್ವಕವಾಗಿ ಅಧ್ಯಯನಮಾಡುವುದರಿಂದೇ ಪ್ರಶ್ನೆಗಳ ತೊಡಕನ್ನು ಬಿಡಿಸಲು ಶಕ್ಯವಾಗುವುದಾದ್ದರಿಂದ, ಅರ್ಥಗ್ರಹಣಪೂರ್ವಕವಾಗಿಯೇ ಸ್ವಾಧ್ಯಾಯದ ಅಧ್ಯಯನವನ್ನು ಮಾಡತಕ್ಕದ್ದು, ಎಂಬುದಾಗಿ ಸಿದ್ಧಾಂತಗೊಳಿಸುವುದಕ್ಕೆ (೪) ಉತ್ತರಪಕ್ಷವೆಂದು ಹೇಳುತ್ತಾರೆ. ಈ ಅಧಿಕರಣದಂತೆ ಅನೇಕ ಅಧಿಕರಣಗಳು ಒಂದರ ಮುಂದೆ ಒಂದು ಬರಲು, ಆಗ ಮುಂದಿನ ಅಧಿಕರಣವು ಹಿಂದಿನ ಅಧಿಕರಣದೊಡನೆ ಹೇಗೆ ಸಂಬಂಧಪಟ್ಟಿರುವುದೆಂಬುದನ್ನು ತೋರಿಸುವಿಕೆಗೆ (೫) ಸಂಗತಿಯು ಎಂಬ ಸಂಜ್ಞೆಯುಂಟು. ಈ ಸಂಗತಿಯು ಶಾಸ್ತ್ರಸಂಗತಿಯು, ಅಧ್ಯಾಯ ಸಂಗತಿಯು, ಪಾದ ಸಂಗತಿಯು, ಅಧಿಕರಣ ಸಂಗತಿಯು ಎಂಬ ಭೇದಗಳುಳ್ಳದ್ದಾಗಿಯೂ ಕಾಣಬರುವುದು. ವಾಸ್ತವಿಕವಾಗಿ ನೋಡಿದರೆ, ಅನೇಕ ವ್ಯಾಪಕ ಭೇದಾತ್ಮಕ ಸಂಗತಿಯು ಅಧಿಕರಣದ ಅವಾಂತರವಿಭಾಗವೆನಿಸಲಾರದು. ಅದುಕಾರಣವೇ ಮೇಲಿನ ಶ್ಲೋಕದಲ್ಲಿರುವ 'ಸಂಗತಿಶ್ಚೇತಿ ಪಂಚಾಂಗಮ್' ಎಂಬುದನ್ನುಳಿದು 'ನಿರ್ಣಯಶ್ಚೇತಿ ಪಂಚಾಂಗಮ್' ಎಂದು ಬದಲುಮಾಡಿ 'ನಿರ್ಣಯವು' ಅಧಿಕರಣದ ಪಂಚಮಾವಯವವೆಂದು ಕೆಲವರು ನುಡಿವರು.

ಈ ಲಕ್ಷಣಗಳಿಂದ ಕೂಡಿರುವ ಅವಾಂತರ ಪ್ರಕರಣರೂಪಗಳಾದ ಒಂದು ಸಾವಿರ ಅಥವಾ ೯೧೫ ಅಧಿಕರಣಗಳುಳ್ಳ ದ್ವಾದಶಾಧ್ಯಾಯಾತ್ಮಕವಾದ ಪೂರ್ವಮೀಮಾಂಸೆಯನ್ನು 'ದ್ವಾದಶಲಕ್ಷಣೀ' ಎಂದೂ ಕೆಲವರು ಹೇಳುತ್ತಾರೆ. ಈ ಗ್ರಂಥದ ಹೊರತಾಗಿ 'ಸಂಕರ್ಷಣಕಾಂಡ' ಎಂಬ ಹೆಸರಿನ ನಾಲ್ಕು ಅಧ್ಯಾಯಗಳುಳ್ಳ ಬೇರೊಂದು ಗ್ರಂಥವೂ ಪ್ರಸಿದ್ಧವಾಗಿದೆ. ಅದರಲ್ಲಿ ಒಟ್ಟು ೪೩೬ ಸೂತ್ರಗಳಿವೆ. ಭಾಟ್ಟದೀಪಿಕಾಕಾರನೂ, ಖಂಡದೇವನೂ ಆ ಸೂತ್ರಗಳನ್ನು ಒಪ್ಪುವರು. ಭಾಸ್ಕರನೆಂಬ ವಿದ್ವಾಂಸನು ಆ ಗ್ರಂಥಕ್ಕೆ ಟೀಕೆಯನ್ನು ಬರೆದಿದ್ದಾನೆ. ಆದರೆ, ಪೂರ್ವದ ಯಾವ ಪ್ರತಿಷ್ಠಿತ ಗ್ರಂಥಕಾರರೂ ಈ ಸೂತ್ರಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವುದಿಲ್ಲ. ಮತ್ತು ಈ ಸೂತ್ರಗಳಲ್ಲಿ ಗ್ರಥಿತವಾದ ವಿಷಯಗಳಾದರೂ ಅಷ್ಟೊಂದು ಮಹತ್ವವಾದುವೂ ಅಲ್ಲ. ಈ ಬಗೆಯ ಅನೇಕಕಾರಣಗಳಿಂದ ಈ ಸೂತ್ರಗಳನ್ನು ಹಿಂದಿನಿಂದ ಬೇರೆಯವನೋ ಒಬ್ಬನು ಬರೆದಿರುವನು. ಆದ್ದರಿಂದ ಈ ಸೂತ್ರಗಳಿಗೂ ಜೈಮಿನಿಗೂ ಯಾವ ಸಂಬಂಧವೂ ಇರುವುದಿಲ್ಲವೆಂದು ಅನೇಕ ಪಂಡಿತರು ಅಭಿಪ್ರಾಯಪಡುತ್ತಾರೆ.

ಈ ರೀತಿಯಾಗಿ ಜೈಮಿನಿಯು ಈ ಮೀಮಾಂಸಾದರ್ಶನದ ಸೂತ್ರಗಳಿಂದ ಯಾವ ಸಿದ್ಧಾಂತವನ್ನು ಪ್ರಸ್ತಾಪಿಸಿದನೋ ಅದನ್ನು ಆದರ್ಶವಾಗಿಟ್ಟುಕೊಂಡೇ ಮುಂದೆ ಬೇರೆಬೇರೆ ಮೀಮಾಂಸಕರು ಬೇರೆಬೇರೆ ಗ್ರಂಥಗಳನ್ನು ಬರೆದಿದ್ದಾರೆ. ಮತ್ತು, ವಿದ್ಯಾರಣ್ಯರು ಪಂಚದಶಿಯಲ್ಲಿ (ಧ್ಯಾ. ೯)

ಕರ್ಮೋಪಾಸ್ತೀ ವಿಚಾರ್ಯೇತೇ ಅನುಷ್ಠೇಯಾವಿ
ನಿರ್ಣಯಾತ್ |
ಬಹುಶಾಖಾವಿಪ್ರಕೀರ್ಣಂ ನಿರ್ಣೇತುಂಕಃ
ಪೃಥುರ್ನರಃ ||
ನಿರ್ಣೀತೋಽರ್ಥಃ ಕಲ್ಪಸೂತ್ರೈರ್ಗ್ರಥಿತಸ್ತಾ
ವತಾಽಽಸ್ತಿಕಃ |
ವಿಚಾರಮಂತರೇಣಾಪಿ ಶಕ್ತೋಽನುಷ್ಠಾತು
ಮಂಜಸಾ ||

ಯಾವುದೊಂದು ಗ್ರಂಥದಿಂದಾಗಲಿ ಅಥವಾ ವಾಕ್ಯದಿಂದಾಗಲಿ ಅನುಷ್ಠೇಯವಾದ ಧರ್ಮದ ನಿರ್ಣಯವಾಗದಿರುವುದರಿಂದ, ಯಾವನಾದರೂ ಕರ್ಮೋಪಾಸನೆಗಳ ವಿಚಾರದಲ್ಲಿ ತೊಡಗುವುದು ಸ್ವಾಭಾವಿಕವಾಗಿರುವುದು. ಆದರೆ ಅನೇಕ ಶಾಖೆಗಳಲ್ಲಿ ವಿಹಿತಗಳಾದ ಕರ್ಮೋಪಾಸನೆಗಳನ್ನು ಸಕ್ರಮವಾಗಿ ಒಟ್ಟಿಗೆ ಸಂಗ್ರಹಿಸಿ ನಿರ್ಣಯಿಸಲು ನಮ್ಮಂಥವರು ಯಾರುತಾನೇ ಸಮರ್ಥರಾಗಿದ್ದಾರೆ? ಅದುಕಾರಣವೇ ಕಲ್ಪಸೂತ್ರಕಾರರು ನಿಶ್ಚಿತಾರ್ಥವನ್ನು ಸಂಗ್ರಹಿಸಿ ನಿರೂಪಿಸಿದರು. ಆಸ್ತಿಕಪುರುಷನು ಅದನ್ನು ಅರಿತುಕೊಂಡು ಯಥಾವಿಧಿ ಅನುಷ್ಠಿಸಲು ಶಕ್ತನಾಗುವನು, ಎಂದು ಹೇಳಿರುವ ಮೇರೆಗೆ ಬೋಧಾಯನ ಆಪಸ್ತಂಬ ಮೊದಲಾದವರ ಹೆಸರಿನಿಂದ ಪ್ರಸಿದ್ಧಗಳಾಗಿರುವ ಕಲ್ಪಸೂತ್ರಗಳಾದರೋ ಬ್ರಾಹ್ಮಣಭಾಗದೊಳಗಿನ ಸಂಶಯಾಸ್ಪದವಾಕ್ಯಗಳನ್ನು ನಿಷ್ಕರ್ಷಿಸಿ ಯಜ್ಞಯಾಗಾದಿ ಕರ್ಮಾನುಷ್ಠಾನದ ನಿಯಮವನ್ನು ಪ್ರತಿಪಾದಿಸತಕ್ಕವಾಗಿವೆ.

ಇನ್ನು ವಾಚಕರನ್ನು ಹೀಗೇ ಬ್ರಾಹ್ಮಣಭಾಗದ ವಿಚಾರಸರಣಿಯೆಂಬ ಹಳುವಿನ ಕಾಲುದಾರಿಯಲ್ಲಿಯೇ ಇನ್ನಷ್ಟು ಮುಂದಕ್ಕೆ ಕರೆದೊಯ್ದರೆ ಅವರಿಗೆ ಕಡುಬೇಸರವಾಗಬಹುದು; ಆದ್ದರಿಂದ ಈಗ ಅವರಿಗೆ ಅವರ ಮನಸ್ಸಿನ ಉಲ್ಲಾಸವನ್ನು ಹೆಚ್ಚುಗೊಳಿಸತಕ್ಕ ಆರಣ್ಯಕೋಪನಿಷದ್ವಾಙ್ಮಯವೆಂಬ ಬಯಲುದಾರಿಯನ್ನು ತೋರಿಸುತ್ತೇವೆ.

ಬ್ರಾಹ್ಮಣಗಳಲ್ಲಿಯೇ ಸಮಾವಿಷ್ಟಗಳಾಗಿರತಕ್ಕ ಕೆಲವು ಭಾಗಗಳು ಆರಣ್ಯಕಗಳೆಂದೂ ಉಪನಿಷತ್ತುಗಳೆಂದೂ ಹೇಳಲ್ಪಡುತ್ತವೆ. 'ಆರಣ್ಯಕವು' ಅಂದರೇನು? ಎಂಬ ಮಾತಿಗೆ ಸಾಯಣಾಚಾರ್ಯರು ತೈತ್ತಿರೀಯ ಆರಣ್ಯಕದ ಭಾಷ್ಯಾರಂಭದಲ್ಲಿ ಹೀಗೆ ಹೇಳಿದ್ದಾರೆ—

ಅರಣ್ಯಾಧ್ಯಯನಾದೇತದಾರಣ್ಯಕಮಿತೀರ್ಯತೇ |
ಅರಣ್ಯೇ ತದಧೀಯೀತೇತ್ಯೇವಂ ವಾಕ್ಯಂಪ್ರವಕ್ಷ್ಯತೇ ||
ಏತದಾರಣ್ಯಕಂ ಸರ್ವಂ ನಾವ್ರತೀಶ್ರೋತು
ಮರ್ಹತಿ ||

ವೇದದ ಯಾವ ಭಾಗವು ಅರಣ್ಯದಲ್ಲಿ ಅಧ್ಯಯನಮಾಡಲ್ಪಡುವುದೋ ಅದು 'ಆರಣ್ಯಕ'ವು. ಅರಣ್ಯದಲ್ಲಿ ಅದನ್ನು ಅಧ್ಯಯನಮಾಡಬೇಕೆಂಬ ವಾಕ್ಯವಾದರೂ ಮುಂದಿನ ಆರಣ್ಯಕಭಾಗದಲ್ಲಿಯೇ ಇರುವುದು. ದ್ವಿಜನಾದರೂ ವೇದವ್ರತಾದಿ ನಿಯಮಾನುಷ್ಠಾನವಿಲ್ಲದವನಾಗಿದ್ದರೆ ಅವನಿಗೆ ಆರಣ್ಯಕವನ್ನು ಶ್ರವಣಮಾಡುವ ಅಧಿಕಾರವಿರುವುದಿಲ್ಲ.

ಕೆಲವು ಆರಣ್ಯಕಗಳಲ್ಲಿ ಸೋಮಯಾಗಾದಿಗಳಿಗೆ ಸಂಬಂಧಪಟ್ಟ ಕ್ರಿಯಾವರ್ಗವೂ ಪ್ರತಿಪಾದಿಸಲ್ಪಟ್ಟಿರುವುದು. ಆದರೂ ಆರಣ್ಯಕಗಳಲ್ಲಿ ಯಜ್ಞಯಾಗಾದಿ ಕೃತ್ಯಗಳೇ ಮುಖ್ಯವಿಷಯಗಳಾಗಿರುವುದಿಲ್ಲ; ಮತ್ತೇನೆಂದರೆ, ಯಜ್ಞದ ಮೂಲತತ್ತ್ವಗಳನ್ನೂ ಅವುಗಳ ರಹಸ್ಯಾರ್ಥವನ್ನೂ ಪ್ರತಿಪಾದಿಸುವುದೇ ಅವುಗಳ ಧ್ಯೇಯವಾಗಿರುವುದು. ಅವುಗಳಲ್ಲಿ ಪ್ರಾಣಪುರುಷಾದಿ ಶಬ್ದಾಭಿಧೇಯನಾದ ವಿಶ್ವಾತ್ಮನ ಸ್ವರೂಪವಿಚಾರದ್ವಾರಾ ಈಶ್ವರಾಸ್ತಿತ್ವವಾದವೂ ಚೆನ್ನಾಗಿ ಸ್ಥಾಪಿಸಲ್ಪಟ್ಟಿದೆ. ಈ ವಿಚಾರಕ್ಕೆ ಸರ್ವಾತ್ಮಭಾವನೆಯನ್ನು ದೃಢಪಡಿಸಲನುಕೂಲವಾದ ರಹಸ್ಯವಿದ್ಯೆಯೂ ನೆರವಾಯಿತು. ಈ ಅಧ್ಯಾತ್ಮವಿದ್ಯೆಯು ಯಾಜ್ಞಿಕಕ್ರಿಯೆಗಳ ಹುರುಳನ್ನು ಬಲ್ಲವರೂ ಅವುಗಳ ಬಗ್ಗೆ ಬೇಸರಗೊಂಡವರೂ ಆದ ಯಜ್ಞವಿರೋಧಿಗಳ ವರ್ಗದಿಂದೇ ಪ್ರಸಾರಗೊಳಿಸಲ್ಪಟ್ಟಿತು. ಇವರೇ ವೇದ (ಆಗಮ) ದ ಉತ್ತರಭಾಗವೆನಿಸುವ ಉಪನಿಷದ್ವಿದ್ಯೆಯ (ರಹಸ್ಯವಿದ್ಯೆಯ) ಪ್ರವರ್ತಕರೆಂದು ಪ್ರಖ್ಯಾತರಾದರು. ಬ್ರಾಹ್ಮಣಾರಣ್ಯಕಗಳಲ್ಲಿ ಚರಾಚರಾತ್ಮಕವಾದ ವಿಶ್ವಪ್ರಪಂಚದ ಮೂಲಕಾರಣದ ವಿಚಾರವು ಪರಿಪಕ್ವವಾಗುವಷ್ಟರಲ್ಲಿಯೇ ಆ ವಿಚಾರದೊಡನೆ ಅಧ್ಯಾತ್ಮವಿಚಾರವೆಂಬುದೂ (ಅಂದರೆ ಸರ್ವರಲ್ಲಿಯೂ ಆತ್ಮರೂಪನಾಗಿರುವವನು ಶಿವನೊಬ್ಬನೇ ಎಂಬ ಮೊದಲಾದ ತಿಳುವೆಯೂ) ಬೆರೆದುದರಿಂದೇ ಬ್ರಾಹ್ಮಣಭಾಗಗಳೊಡನೆ ಆರಣ್ಯಕೋಪನಿಷದ್ಭಾಗಗಳೂ ಜೋಡಿಸಲ್ಪಟ್ಟವು. ಚಿತ್ತಶುದ್ಧಿಯುಳ್ಳವರು ಏಕಾಂತಸ್ಥಳದಲ್ಲಿ ಕುಳಿತು ಅಧ್ಯಯನಮಾಡತಕ್ಕ ಧರ್ಮವಾಕ್ಯಗಳು ರಹಸ್ಯವಿದ್ಯಾರೂಪಗಳಾಗಿರುವುದರಿಂದ ಇಂತಹ ವಾಕ್ಯಸಮುದಾಯವೇ 'ಉಪನಿಷದ್' ಎಂದು ಪ್ರಸಿದ್ಧವಾಗಿರುವುದು. ಈ ವಿಧವಾದ ಕೆಲವು ಪ್ರಾಚೀನ ಉಪನಿಷತ್ತುಗಳ ವಚನಗಳು ಆರಣ್ಯಕಗಳಲ್ಲಿ ಅಂಶತಃ ಅಂತರ್ಭೂತಗಳಾಗಿರುತ್ತವೆ.

ವೇದಕಾಲೀನವಾಙ್ಮಯವು ಮೊದಲು ತಾಡಿನೋಲೆ ಮೊದಲಾದವುಗಳಲ್ಲಿ ಕೈಯಿಂದ ಬರಯಲ್ಪಟ್ಟಿರಲಿಲ್ಲ, ಋಷಿಜನರ ಸಂಪ್ರದಾಯದಲ್ಲಿ ಮುಖೋದ್ಗತವಾಗಿದ್ದಿತು. ಮುಂದೆ ಕೆಲವು ಕಾಲಾನಂತರದಲ್ಲಿ ಅಧ್ಯಯನ ಅಧ್ಯಾಪನ ಸೌಕರ್ಯಾರ್ಥವಾಗಿ ಅದನ್ನು ತಾಡಿನೋಲೆ ಮೊದಲಾದ ಪತ್ರಗಳಲ್ಲಿ ಬರೆದಿಡುವ ರೂಢಿಯು ಹೆಚ್ಚಾಯಿತು. ಹೀಗೆ ಬರೆದಿಡಲ್ಪಟ್ಟ ಪ್ರಾಚೀನ ಪುಸ್ತಕಗಳಲ್ಲಿ ಬೇರೆ ಬೇರೆ ಅಧ್ಯಾಪಕರ ಅಧ್ಯಾಪನೆಯ ವಿಷಯಗಳು ಕಾಣಬರುತ್ತವೆ. ಇಂತಹದೊಂದು ವಿಷಯವನ್ನು ಇಂತಹ ಕಾಲದಲ್ಲಿಯೇ ವಿದ್ಯಾರ್ಥಿಗಳಿಗೆ ಕಲಿಸಬೇಕೆಂಬ ಪದ್ಧತಿಯಿದ್ದುದರಿಂದ ವಿದ್ಯಾರ್ಥಿಗಳು ಗುರುಗಳಲ್ಲಿ ವಿದ್ಯಾರ್ಜನೆಗಾಗಿ ಎಷ್ಟೋ ವರ್ಷಗಳವರೆಗೆ ಇರಬೇಕಾಗುತ್ತಿತ್ತು. ಅದುಕಾರಣವೇ, ಅಂತ[illegible]ಲು ಕಠಿಣವಾದ ವಿಷಯಗಳು ಅವರಿಗೆ ಕೊನೆಗೆ ಕಲಿಸಲ್ಪಡುತ್ತಿದ್ದವು. ಅವಾವ ವಿಷಯಗಳೆಂದರೆ, ಆರಣ್ಯಕಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಇರುವ ಅಧ್ಯಾತ್ಮವಿದ್ಯೆಯ ತತ್ತ್ವಗಳು. ಇವು ವೇದಗಳ ಕೊನೆಯಭಾಗಗಳಲ್ಲ, ವೇದಗಳ ಅಂತಿಮಧ್ಯೇಯಗಳು.

ತತ್ತ್ವಜ್ಞಾನಾತ್ಮಕಗಳಾದ ಉಚ್ಚತಮ ವಿಚಾರಗಳು ಬ್ರಾಹ್ಮಣಭಾಗದ ಪ್ರಚಾರಕ್ಕಿಂತ ಮುಂಚಿತವಾಗಿಯೇ ಸುಪ್ರಸಿದ್ಧವಾಗಿದ್ದವು. ಆ ಕಾಲದ ತತ್ತ್ವಜ್ಞಾನಿಗಳು (ಬ್ರಹ್ಮವಾದಿಗಳು) ತಮ್ಮ ಮತವನ್ನು ಪ್ರಸಾರಮಾಡಿದ್ದುದರ ಬಗ್ಗೆ ಋಗಾದಿಸಂಹಿತೆಗಳಲ್ಲಿರುವ ತತ್ತ್ವಜ್ಞಾನಾತ್ಮಕಗಳಾದ ಕೆಲವು ಸೂಕ್ತಗಳೇ ಸಾಕ್ಷಿಯಾಗಿವೆ. ಇದರಿಂದ, ಯಜ್ಞಶಾಸ್ತ್ರ (ಬ್ರಾಹ್ಮಣ)ಗಳ ಪ್ರಗತಿಕಾಲದಲ್ಲಿಯು ಕೂಡಾ ತಾತ್ತ್ವಿಕ ವಿಚಾರದ ಹೆಚ್ಚಳವಿದ್ದಿತೆಂದು ಹೇಳಬಹುದಾಗಿದೆ.

ಪ್ರವೃತ್ತಿ ಧರ್ಮನಿರತರಾದ ಒಂದು ವರ್ಗದ ಜನರು ತಮ್ಮ ಪ್ರವೃತ್ತಿ ಧರ್ಮಪರವಾದ ಯಜ್ಞಶಾಸ್ತ್ರದಲ್ಲಿ ಪ್ರಗತಿಯನ್ನು ಪಡೆಯುತ್ತಿರುವಾಗ ನಿವೃತ್ತಿ ಧರ್ಮಪರಾಯಣರಾದ ಇನ್ನೊಂದು ವರ್ಗದ ಜನರು ಸಮಸ್ತ ಜೀವಿಗಳ ಅಂತಿಮಧ್ಯೇಯಕ್ಕೆ ಮುಖ್ಯಸಾಧನವಾದ ಅಧ್ಯಾತ್ಮ ವಿದ್ಯೆಯ (ಪರಾವಿದ್ಯೆಯ) ಉಚ್ಚತಮವಾದ ವಿಚಾರ ಪ್ರಗತಿಯಲ್ಲಿ ತೊಡಗಿದ್ದರು. 'ಅಂದರೆ' ಈ ಶಿವಜ್ಞಾನಿಗಳು ಬಹಿರಂಗ ಯಾಜ್ಞಿಕ ಕ್ರಿಯೆಗಳಿಂದ ವಿಶೇಷವಾಗಿ ಅಲಿಪ್ತರಾಗಿದ್ದು ರಹಸ್ಯ ವಿದ್ಯೆಯ ಪ್ರಸಾರಕರಾಗಿದ್ದರು. ಇದರಿಂದ ಸೋಮ-ಕ್ಷೀರ-ದಧಿ-ಘೃತ-ಪಶು-ಹಿರಣ್ಯಾದ್ಯನೇಕ ಪದಾರ್ಥಗಳ ಸಮರ್ಪಣಪೂರ್ವಕವಾಗಿ ಎಷ್ಟೋ ದಿವಸಗಳವರೆಗೆ ಇಂದ್ರನೇ ಮೊದಲಾದ ಹಲವು ದೇವತೆಗಳನ್ನು ಕಷ್ಟಪಟ್ಟು ಆರಾಧಿಸುವುದರಿಂದ ಕೊನೆಗೆ ನಮಗೆ ಲಭಿಸುವ ಫಲವಾದರೂ ಎಂತಹುದು? ಇಂದ್ರನೆಂದರೆ ಆದಾವನು? ನಿಜವಾದ ದೇವರು ಒಬ್ಬನೇ ಇರುವನಾದರೆ ಇಂದ್ರನು, ಅಗ್ನಿಯು, ವರುಣನು, ಎಂಬ ಹೆಸರಿನ ಹಲವು ದೇವತೆಗಳನ್ನು ಆರಾಧಿಸಬೇಕೆಂಬ ಹಂಬಲವೇಕೆ? ಎಂಬ ಈ ವಿಧವಾದ ಅನೇಕ ಸಂಶಯಾತ್ಮಕ ಕಲ್ಪನೆಗಳು ಯಾಜ್ಞಿಕವರ್ಗದ ಕೆಲವರ ಮನಸ್ಸಿನಲ್ಲಿ ತಲೆದೋರಿದಾಗಲೇ ಪರಾವಿದ್ಯಾಪ್ರಸಾರಕರು ಅವರಿಗೆ ನಿಜವಾದ ದೇವರೆಂದರೆ ಯಾವನು? ಸರ್ವರಲ್ಲಿಯೂ ಆತ್ಮರೂಪದಿಂದ ಬೆಳಗುವ ಚೈತನ್ಯಕ್ಕೂ ಆ ದೇವರಿಗೂ ಸಂಬಂಧವೇನಾದರೂ ಇರುವುದೋ? ಸರ್ವಾತ್ಮರೂಪನಾದ ಆ ದೇವರನ್ನು ಹೇಗೆ ಆರಾಧಿಸಬೇಕು? ಹಾಗೆ ಆರಾಧಿಸುವುದರಿಂದ ಎಂತಹ ಫಲವು ಲಭಿಸುವುದು? ಎಂಬ ಈ ಮುಂತಾದ ವಿಷಯಗಳೇ ಮುಖ್ಯವಾಗಿ ಉಳ್ಳ ತಾತ್ತ್ವಿಕ ವಿಚಾರದ ಮರ್ಮವನ್ನು ಮನವರಿಕೆಮಾಡಿಕೊಟ್ಟು ಅಧ್ಯಾತ್ಮಿಕಧರ್ಮಾಚರಣೆಗಳನ್ನು ಬೋಧಿಸಿದರು. ಈ ಪ್ರಕಾರವಾದ ಅವರ ಉಪದೇಶಕ್ಕೆ ಕಿವಿಗೊಟ್ಟವರಲ್ಲಿ ಆ ಕಾಲದ ಯಾಜ್ಞಿಕ ಬ್ರಾಹ್ಮಣರೂ ಪ್ರಸಿದ್ಧರಾದ ಕ್ಷತ್ರಿಯರೂ ಪ್ರಮುಖರಾಗಿರುವರು. ಹಾಗೂ, ಗಾರ್ಗಿಯು ಮೊದಲಾದ ಸ್ತ್ರೀಯರು ಸಹ ಪ್ರಮುಖಬ್ರಹ್ಮವಾದಿಯರಲ್ಲಿ ಪರಿಗಣಿಸಲ್ಪಡುವರು. ಆದರೂ ಯಜ್ಞಶಾಸ್ತ್ರಪ್ರವರ್ತಕರು ತಮ್ಮ ಯಾಜ್ಞಿಕ ಕ್ರಿಯೆಗಳ ಪ್ರತಿಷ್ಠೆಗಾಗಿ ಹೆಣಗಾಡುತ್ತಲೇ ಇದ್ದರು. ಅವರಲ್ಲಿ ಶಾಕಲ್ಯ ಮೊದಲಾದವರು ಮುಖ್ಯರು. ಇದ್ದರೇನಾಯಿತು! ಒಮ್ಮೆ ಜನರ ಮನಸ್ಸಿನಲ್ಲಿ ಅಭೀಷ್ಟಸ್ವರೂಪದ ಯಾಥಾತ್ಮ್ಯವನ್ನರಿತುಕೊಳ್ಳಬೇಕೆಂಬ ಕುತೂಹಲವು ಅಧಿಕವಾಗಿ ಮುಂದುವರಿದರೆ ಅದನ್ನು ತಡೆಯಲು ಯಾರಿಂದಲೂ ಆಗದು. ಹೀಗೆ, ತತ್ತ್ವಜ್ಞಾನದ ಜಿಜ್ಞಾಸೆಯು ತಾತ್ಕಾಲೀನ ಜನರಲ್ಲಿ ದಿನದಿನಕ್ಕೆ ಹೆಚ್ಚಾಗಿ ಪರಿಣಮಿಸುವಂತೆ ಸರ್ವತೋಮುಖವಾಗಿ ಪ್ರಯತ್ನಮಾಡಿದವರೆಂದರೆ ಆತ್ಮಯಾಜಿಗಳೇ ಅಲ್ಲದೆ ಇನ್ನಾರು? ಇವರ ಅಧ್ಯಾತ್ಮತತ್ತ್ವೋಪದೇಶದ ಪ್ರಾಬಲ್ಯದಿಂದ ಆ ಕಾಲದಲ್ಲಿ ಮಹತ್ತರವಾದ ಕ್ರಾಂತಿಯೇ ಆಯಿತೆಂದು ಹೇಳಬಹುದು. ದೇಹಕ್ಕಿಂತಲೂ ಆತ್ಮನು ಬೇರೆಯಾಗಿದ್ದಾನೆ; ಸರ್ವಾತ್ಮರೂ ಪರಬ್ರಹ್ಮಾಭಿಧ ಪರಶಿವನ ಅಂಶೀಭೂತರು; ಆತ್ಮನು ತನ್ನ ಮೂಲಸ್ವರೂಪವಾದ ಶಿವತ್ವಾಭಿವ್ಯಕ್ತಿಯಿಂದೆ ಮುಕ್ತನಾಗುವನು; ಅದಕ್ಕಾಗಿ ಜ್ಞಾನ, ಧ್ಯಾನ, ವ್ರತ, ಪೂಜೆ, ಭಕ್ತಿ, ಎಂಬಿವು ಆವಶ್ಯಕವಾದವು; ಎಂಬ ಮುಂತಾದ ತತ್ತ್ವಜ್ಞಾನವಿಷಯಕವಾಗಿ ಸ್ವಾನುಭವಸಿದ್ಧವೂ ನಿಶ್ಚಿತವೂ ಆದ ವಿಚಾರಗಳನ್ನು ವೈದಿಕವಾಙ್ಮಯ ಮೂಲಕವಾಗಿ ಪ್ರಸಾರಮಾಡಿದ ಅಧ್ಯಾತ್ಮವಿದ್ಯೆಯ ಆದ್ಯಪ್ರವರ್ತಕರು ಅಯಾಜ್ಞಿಕ ವರ್ಗದ ಬ್ರಾಹ್ಮಣರೇ ಎಂಬುದು ನಿರ್ವಿವಾದ ಸಿದ್ಧವು. (ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಸದ್ಗುರುಸಂದರ್ಶನ.

ಅಯ್ಯಾ, ವರ್ಣಾಶ್ರಮಧರ್ಮರಕ್ಷಕರಾದ ವೀರಶೈವೋತ್ತಮರೇ? ಇನ್ನಾದರೂ ಜಾಗ್ರತರಾಗಬಾರದೇ? ಎಂಥ ಸುಸಂಧಿಯು? ಈ ಸಂಧಿಯು ದೊರೆತದ್ದು ನಮ್ಮಗಳ ಸುದೈವಕ್ಕೆ ಎಣೆಯೇ ಇಲ್ಲವೆಂದು ಹೇಳಲತಿಶಯೋಕ್ತಿಯಾಗಲಾರದು. ಏಕೆಂದರೆ—ವೀರಶೈವಮತಸ್ಥಾಪಕರಾದ ಪಂಚಮಹಾಚಾರ್ಯರೂ ಪರಮೇಶ್ವರನ ಮುಖದಿಂದ ಉದ್ಭವಿಸಿ ಜಗದ್ವಿಖ್ಯಾತರಾದ ಋಷಿಪುಂಗವರಿಗೆ ವಸಿದ್ಧಾಂತವನ್ನು ಪದೇಶಿಸಿ ಹೇಗೆ ಪ್ರಕಾಶಮಾನರಾದರೋ ಹಾಗೆಯೇ ಇವರ ಪೀಠಾನುವರ್ತಿಗಳಾದ ಈಗಿರುವ ಪಂಚಪೀಠಾಧೀಶ್ವರರೂ ಅಲ್ಲಲ್ಲಿ ಸಂಚರಿಸುತ್ತ, ಭಕ್ತಸಮೂಹವನ್ನುದ್ಧರಿಸುತ್ತ ಸ್ತಸಂಕೀರ್ತನ ವ್ಯಾಖ್ಯಾನ ಮುಂತಾದ ಸದ್ವಿಷಯಗಳಿಂದ ಕ್ತಿಪ್ರಭಾವವನ್ನು ಪಡಿಸುತ್ತಿರುವದನ್ನು ನೋಡಿದರೆ ಆನಂದ ನಿಸುತ್ತದೆ. ಕೆಲವು ಕಾಲದಿಂದೀ ಧರ್ಮಪೋಷಕರಾಗಮನವಾಗಿ ದುದರಿಂದ ಆಚಾರ್ಯರ ನಾಮವು ನಿಶ್ಶೇಷವಾಗಹತ್ತಿತ್ತು. ಪೀಠಾಧಿಪತಿಗಳ ಪರಿಚಯವೇ ಇಲ್ಲದಂತಾಗಿತ್ತು. ಇದರಿಂದ ಸಮಾಜದಲ್ಲಿ ಧರ್ಮನಿಬಂಧನೆಯ ವಿಚಾರಗಳು ಲಯವಾಗುತ್ತಬಂದವು. ಪೂರ್ವಜರು ಮತದ ನಿಜತತ್ವವನ್ನರಿಯಲೆಂಬುದ್ದೇಶದಿಂದಲೇ ಎಷ್ಟೋ ಗ್ರಂಥಗಳನ್ನು ರಚಿಸಿರುತ್ತಾರೆ. ಅದೇಕೆ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಸೋಲಾಪುರ ವಾರದ ಮಲ್ಲಪ್ಪನವರು ಮತಪ್ರಾಚೀನತ್ವದ ಸುಶೀಲತೆಯ ಪರವಾದ ಅನೇಕ ಗ್ರಂಥಗಳನ್ನು ದೊಡ್ಡ ವಿದ್ವಾಂಸರಿಂದ ಪರಿಶೋಧಿಸಿ ಪ್ರಸಿದ್ಧಪಡಿಸಿದ್ದು ಸಕಲರಿಗೂ ವಿದಿತವೇ ಅದೆ. ಅಲ್ಲದೆ ವರ್ತಮಾನಕಾಲದಲ್ಲಿ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕೂಡ ವೇದಾಗಮೋಪನಿಷದ್ವ್ಯಾಖ್ಯೇತಿಹಾಸಗಳ ಆಧಾರಗಳಮೇಲೆ ಅನೇಕ ಗ್ರಂಥಗಳನ್ನು ಮುದ್ರಿಸತೊಡಗಿದ್ದರಿಂದ ವೀರಶೈವಮತಕ್ಕೆ ಮಹೋಪಕಾರವಾಗುತ್ತಿರುವದು ಸರ್ವರಿಗೂ ವೇದ್ಯವಿದೆಯಷ್ಟೆ! ಸದ್ಯ ಇವರು ರಚಿಸಿದ (ವೀರಶೈವರತ್ನ) ವೆಂಬ ಗ್ರಂಥವನ್ನು ನೋಡಿದ್ದಾದರೆ ಯಾರ ಹೃದಯವು ಪ್ರಫುಲ್ಲಿತವಾಗದಿರದು? ಇದಕ್ಕಾಗಿ ಈ ಮಹಾತ್ಮರಿಗೆ ಅನೇಕ ಧನ್ಯವಾದಗಳನ್ನರ್ಪಿಸಬೇಕಾಗಿದೆ. ರತ್ನಕ್ಕಿಂತಲೂ ಶ್ರೇಷ್ಠವಾದ ವಿಷಯಗಳು ಇದರಲ್ಲಿ ಅಡಗಿವೆ. ರತ್ನವು ತನ್ನ ಪಕ್ಕದ ಸ್ಥಳವನ್ನಷ್ಟು ಪ್ರಕಾಶಿಸಿದರೆ ಇದು ಜಗತ್ತನ್ನೇ ವ್ಯಾಪಿಸಿ ಆನಂದಕುಂದಲವನ್ನಾಗಿ ಮಾಡಿದೆ. ಅಂದಬಳಿಕ ಈ ಗ್ರಂಥವು ಪ್ರತಿಯೊಬ್ಬರ ಗೃಹದಲ್ಲಿ ಇರುವುದವಶ್ಯಕವಾದಗಿದೆ. ಈ ಮಹನೀಯರು ಹೀಗೆಯೇ ಪ್ರಾಚೀನಧಾರ್ಮಿಕ ಗ್ರಂಥಗಳೆಲ್ಲವನ್ನೂ ಸಂಶೋಧಿಸಿ ಪ್ರಕಟಗೊಳಿಸುತ್ತ ಹೋದರೆ ಎಷ್ಟರಮಟ್ಟಿಗೆ ಮತಾಭಿವೃದ್ಧಿಯಾಗುವುದೆಂಬುದನ್ನು ವಾಚಕರೇ ಊಹಿಸಬಹುದು. ವೀರಶೈವಬಾಂಧವರೇ! ವೀರಶೈವಮತದ ಸಕಲ ತತ್ವಗಳಿಂದೊಡಗೂಡಿದ ರತ್ನವನ್ನೋದಿ ಸಂತೋಷಹೊಂದಿರಿ. ಇದೀ ಭರತಖಂಡದಲ್ಲಿ ಸಂಚರಿಸುವ ಜಗದ್ಗುರು ಪಂಚಾಚಾರ್ಯರ ಸಂದರ್ಶನವನ್ನು ಮಾಡಿ ಧನ್ಯರಾಗಿರಿ. ನಮ್ಮ ಸುದೈವದಿಂದ ಈಗ ಐವರಾಚಾರ್ಯರಾಗಮನವಾಗಿದೆ. ಸದ್ಯ ನೈಜಾಮ್ ಪ್ರಾಂತದಲ್ಲಿ ಭಕ್ತೋದ್ಧಾರಕ್ಕಾಗಿ ಶ್ರೀ ಜಗದ್ಗುರು ಹಿಮವತ್ಕೇದಾರ ಮಹಾಸ್ವಾಮಿಗಳವರು ದಯಮಾಡಿಸಿದ್ದಾರೆ. ಈ ಮಹಾಸ್ವಾಮಿಗಳಿಂದ ಎಷ್ಟೋ ಜನರು ವೀರಶೈವಮತತತ್ವವನ್ನು ಅರಿಯುತ್ತಲಿದ್ದಾರೆ. ಮತ್ತು ನಾನು ಮೊದಲು ಕೇದಂಗ್ರಾಮಕ್ಕೆ ಸಂದರ್ಶನಾರ್ಥವಾಗಿ ಹೋದಾಗ್ಗೆ ತಿಮ್ಮಣ್ಣನಾಯಕರಕೋಟಿ ಪರಮೇಶ್ವರಯ್ಯ ಎಂಬುವಾತನಿಗೆ ವೈದ್ಯಶಾಸ್ತ್ರವಿಷಯಗಳನ್ನೆಲ್ಲ ಪರೀಕ್ಷಿಸಿ (ವೈದ್ಯಭೂಷಣ) ವೆಂಬ ಪದವಿಯನ್ನನುಗ್ರಹಿಸಿದರು. ಹೀಗೆಯೇ ಪೀಠಾಚಾರ್ಯರು ಸಂಚರಿಸಿದಲ್ಲಿ ಅನೇಕ ವೈದ್ಯರು ವೈದ್ಯಶಾಸ್ತ್ರದಲ್ಲಿ ಪ್ರಸಿದ್ಧರಾಗಿಯೂ ಅವಿಚಾರಿಗಳು ಸುವಿಚಾರಿಗಳಾಗಿಯೂ ಆಗಬಹುದೆಂದು ಹೇಳಲು ಸಂದೇಹವಿಲ್ಲವು. ಪ್ರಿಯ ವೀರಶೈವಬಾಂಧವರೇ! ಶ್ರೀ ಆಚಾರ್ಯರಲ್ಲಿ ನಿಮ್ಮ ಭಕ್ತಿಪ್ರಭಾವವನ್ನು ಅರುಹಿ ಧನ್ಯರಾಗಬೇಕೆಂಬುದೇ ಈ ಲೇಖದ ಮುಖ್ಯಾಂಶವು.

ಓರ್ವ ಸದ್ಗುರು ಸೇವಾಭಿಲಾಷಿ.

---

೫. ಇಂದ್ರಿಯನಿಗ್ರಹ.

[ಲೇಖಕ—ಕನ್ನಡಕಲಿ ಅನವಟ್ಟಿ ರಾಮರಾಯರು.]

1. ವಿದ್ಯಾಭ್ಯಾಸದಿಂದುಂಟಾದ ಜ್ಞಾನದಿಂದಲೂ, ಅಭ್ಯಾಸದ ಸಹಾಯದಿಂದಲೂ ಪಂಚೇಂದ್ರಿಯಗಳೆಂಬ ವೈರಿಗಳನ್ನು ಜೈಸಿ, ಕಾಮ, ಕ್ರೋಧ, ಅತ್ಯಾಶೆ, ಜಂಭ, ಮದ ಮತ್ತು ಮಿತಿಮೀರಿದ ಹರ್ಷ ಇವುಗಳನ್ನು ನಮ್ಮ ಹತೋಟಿಯಲ್ಲಿಟ್ಟುಕೊಳ್ಳಬಹುದು.

2. ಪಂಚೇಂದ್ರಿಯಗಳಲ್ಲಿ ಒಂದಾದ ಕಿವಿಯಿಂದ ಧ್ವನಿಯನ್ನು ಸ್ಪರ್ಶದಿಂದ ವಸ್ತುಗಳನ್ನೂ, ನೇತ್ರಗಳಿಂದ ಬಣ್ಣಗಳನ್ನೂ, ನಾಲಗೆಯಿಂದ ರುಚಿಯನ್ನೂ ನಾಸಿಕದಿಂದ ವಾಸನೆಗಳನ್ನೂ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಂಡುಹಿಡಿಯುವುದಕ್ಕೆ ಇಂದ್ರಿಯನಿಗ್ರಹವೆಂದು ಹೆಸರು. ಶಾಸ್ತ್ರಗಳ ಮುಖ್ಯೋಪದೇಶವು ಇಂದ್ರಿಯಗಳ ಸ್ವಾಧೀನತೆಯನ್ನು ಹೊಂದಬೇಕೆಂಬ ವಿಷಯವನ್ನು ನಿರೂಪಿಸುವುದಾಗಿದೆ.

3. ಯಾವನು ಇಂದ್ರಿಯಗಳೆಂಬ ವೈರಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಿಲ್ಲವೋ ಆತನು ಒಂದುವೇಳೆ ಪ್ರಪಂಚವನ್ನೆಲ್ಲಾ ತನ್ನ ಸ್ವಾಧೀನಮಾಡಿಕೊಂಡಿದ್ದರೂ ಶೀಘ್ರದಲ್ಲಿಯೇ ನಾಶವಾಗುವನು. ಇದಕ್ಕೆ ದೃಷ್ಟಾಂತವಾಗಿ ಹಿಂದೆ ದಂಡಾಕ್ಯನೆಂಬ ಉಪನಾಮಧೇಯವುಳ್ಳ ಭೋಜಮಹಾರಾಜನು ಒಬ್ಬನೊಬ್ಬ ಬ್ರಾಹ್ಮಣ ಕನ್ಯೆಯ ಮೇಲೆ ವ್ಯಾಮೋಹವನ್ನಿಟ್ಟುದೇ ಕಾರಣವಾಗಿ ರಾಜ್ಯ ಮತ್ತು ಬಂಧು ಜನರೊಡನೆ ನಾಶವಾದನು. ಇದೇ ರೀತಿಯಾಗಿದ್ದ ವೈದೇಹಿ ನಗರದ ರಾಜನಾದ ಕೀರಳನೆಂಬಾತನೂ ನಾಶವಾದನು. ಕೋಪಕ್ಕೆ ಅಧೀನನಾದ ಚಿತ್ತವುಳ್ಳ ಜನಮೇಜಯ ರಾಜನು ಹಿಂದೆ ಬ್ರಾಹ್ಮಣರ ಮೇಲೆ ಕೋಪಗೊಂಡವನಾದುದರಿಂದಲೂ ತಾಳಜಂಘನೆಂಬಾತನು ಭೃಗುವಂಶಜರಿಂದಲೂ ನಷ್ಟಹೊಂದಿದರು.

ದುರಾಶಾಧೀನನಾದ ಐಲನು ಎಂಬಾತನು ಹಿಂದೆ ಬ್ರಾಹ್ಮಣರಿಂದ ದಂಡವನ್ನು ತೆರಿಸಿದ ಕಾರಣದಿಂದಲೂ ಅಜಬಿಂದು ಎಂಬಾತನು ಸೌವೀರನೆಂಬುವನಿಂದ ವಿಶೇಷದಂಡವನ್ನು ತೆರುವಂತೆ ಮಾಡಿದುದರಿಂದಲೂ ನಾಶವಾದರು.

4. ಲಂಕಾಧಿಪತಿಯಾದ ರಾವಣನು ಕಾಮಕ್ಕಧೀನನಾಗಿ ಪರಸ್ತ್ರೀಯಾದ ಸೀತೆಯ ಮೇಲಣ ವ್ಯಾಮೋಹದಿಂದಲೂ, ಭೂಮಿಯ ಮೇಲಣ ಆಸೆಯುಳ್ಳ ದುರ್ಯೋಧನನು ಅಪಹರಿಸಿದ ರಾಜ್ಯದಲ್ಲಿ ಪಾಂಡವರಿಗೆ ಒಂದು ಹೆಜ್ಜೆಯಷ್ಟು ಭೂಮಿಯನ್ನೂ ಕೊಡುವುದಿಲ್ಲವೆಂದು ಹೇಳಿದುದರಿಂದಲೂ ದಂಭೋದ್ಭವ, ಅರ್ಜುನ ಇವರು ಹೈಹಯವಂಶಜರನ್ನು ನಾಶಮಾಡಿದುದರಿಂದಲೂ ಇವರೆಲ್ಲಾ ದುರ್ದಶೆಯನ್ನು ಅನುಭವಿಸಿದರು. ದುರಾಶೆಯೇ ಕಾರಣವಾಗಿದ್ದ ವಾತಾಪಿಯು ಅಗಸ್ತ್ಯಋಷಿಯನ್ನು ದೂಷಿಸಿದ್ದುದರಿಂದಲೂ, ವೃಷ್ಣಿವಂಶಜರು ದ್ವೈಪಾಯನನ್ನು ದ್ವೇಷಿಸಿದುದರಿಂದಲೂ ನಾಶವಾದರು.

5. ಇದೇ ರೀತಿಯಾಗಿ ಇನ್ನೂ ಅನೇಕ ರಾಜರುಗಳೂ ಇಂದ್ರಿಯಗಳಿಗೆ ಅಧೀನರಾಗಿ ರಾಜ್ಯವಿನಾಶಕ್ಕೀಡಾಗಿ, ಬಂಧುಗಳ ಸಮೇತ ನಾಶಹೊಂದಿದರು.

6. ಶತ್ರುಗಳನ್ನು ಸ್ವಾಧೀನಪಡಿಸಿಕೊಂಡಿದ್ದ ಜಮದಗ್ನಿ ಋಷಿಯೂ, ಅಂಬರೀಷ ಮಹಾರಾಜನೂ ಇಂದ್ರಿಯವಿಜಯರೆಂಬ ಖ್ಯಾತಿಯನ್ನು ಪಡೆದು ಬಹುಕಾಲ ಸೌಖ್ಯವನ್ನನುಭವಿಸಿ ಯಶೋವಂತರಾಗಿದ್ದರು.

---

೬. ಇಂದ್ರಿಯನಿಗ್ರಹ.

ರಾಜರ್ಷಿಯಂತಿರುವವನ ಕರ್ತವ್ಯಗಳು.

ಯಾವನು ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ನಾಶಮಾಡಿರುವನೋ ಅವನೇ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರಲು ಶಕ್ತನಾಗಿರುವನು. ವಯೋವಂತರಾಗಿ ಜ್ಞಾನಿಯಾದವರೊಡನೆ ಸ್ನೇಹಮಾಡಿ ಜ್ಞಾನಸಂಪಾದನೆಯನ್ನು ಮಾಡಬೇಕು. ಜ್ಞಾನಿಯು ಯೋಗ್ಯತೆಯನ್ನು ಅವನ ಬೇಹುಗಾರರಿಂದ ತಿಳಿದುಕೊಳ್ಳಬೇಕು. ರಾಜನು ಯಾವಾಗಲೂ ಬಹಳ ಚುರುಕುಬುದ್ಧಿಯಿಂದಿದ್ದು ತನ್ನ ಸೌಖ್ಯವನ್ನು ಭದ್ರತೆಯನ್ನು ಕಾಪಾಡಿಕೊಳ್ಳುತ್ತಿರಬೇಕು. ರಾಜನಾದವನು ತನ್ನ ಕೈಕೆಳಗಿರುವವರು ಅವರವರ ಕರ್ತವ್ಯಕರ್ಮಗಳನ್ನು ನಡೆಯಿಸುತ್ತಿರುವರೋ ಇಲ್ಲವೋ ಎಂಬುದನ್ನು ತಿಳಿಯಲು ಅಧಿಕಾರವನ್ನು ಚಲಾಯಿಸುತ್ತಾ ತಿಳಿದುಕೊಳ್ಳಬೇಕು. ರಾಜನು ಇತರರು ತನಗೆ ಶಾಸ್ತ್ರಗಳನ್ನು ಬೋಧಿಸುವಕಾಲದಲ್ಲಿಯೂ ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳುತ್ತಿರಬೇಕು. ಅಲ್ಲದೆ ರಾಜನು ತಾನೇ ತನ್ನ ಪ್ರಜೆಗಳಿಗೆ ಮಹೋಪಕಾರಗಳನ್ನು ಅಂದರೆ ಅವರಿಗೆ ಹಣಸಹಾಯಮಾಡುವುದರಲ್ಲಿಯೂ, ಸತ್ಕಾರ್ಯ ಸಹಾಯಮಾಡುವುದರಲ್ಲಿಯೂ ಅವರ ಸಂಸರ್ಗವನ್ನು ಇಟ್ಟುಕೊಂಡು ಪ್ರಜೆಗಳಿಗೆ ಬೇಕಾದವನಾಗಿರಬೇಕು.

ಈ ರೀತಿಯಲ್ಲಿ ರಾಜನು ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಹೆಂಗಸರಿಗೆ ಯಾವ ವಿಧವಾದ ಬಾಧೆಗಳನ್ನೂ ಉಂಟುಮಾಡದೆ, ಇತರರ ವಸ್ತುಗಳಿಗೆ ಕುಂದುಂಟುಮಾಡದೆ ಇರಬೇಕು. ಸ್ವಪ್ನದಲ್ಲಿಯೂ ರಾಜನು ಕಾಮವೆಂಬುದನ್ನು ಯೋಚಿಸದೆಯೇ, ಸುಳ್ಳು, ಜಂಭ ಮತ್ತು ಕೆಡುಕುಕಾರ್ಯ ಇವುಗಳನ್ನು ಲೇಶಮಾತ್ರವಾಗಿಯೂ ಮನಸ್ಸಿಗೆ ತಂದುಕೊಳ್ಳಕೂಡದು ಮತ್ತು ಸುಳ್ಳು ಮತ್ತು ದುಂದುವೆಚ್ಚಗಳನ್ನು ತ್ಯಜಿಸಬೇಕು. ರಾಜನು ಉತ್ತಮನಡತೆಗಳನ್ನು ಮಿತವ್ಯಯವನ್ನು ಬಿಡದೆ ತನ್ನ ಮನೋಭಿಲಾಷೆಗಳನ್ನೇ ತೋರಿಸಿಕೊಳ್ಳುತ್ತಿರಬೇಕು. ಎಷ್ಟುಕಷ್ಟಬಂದಾಗೂ ಸೌಖ್ಯಹೀನನಾಗಬಾರದು. ಅವನು ಧರ್ಮ, ಧನ ಮತ್ತು ಅಭಿಲಾಷೆ ಇವುಗಳು ಒಂದು ಮತ್ತೊಂದಕ್ಕೆ ಸೌಖ್ಯಾಧೀನವಾಗಿರುವುದರಿಂದ ಯಾವುದರಲ್ಲಿಯೂ ಹೆಚ್ಚುಗೆ ಅವಕಾಶಕೊಡದಂತೆ, ಒಂದೇ ಕ್ರಮದಲ್ಲಿದ್ದು ಸುಖವನ್ನನುಭವಿಸುತ್ತಿರಬೇಕು. ಮೇಲೆ ಹೇಳಿದವುಗಳಲ್ಲಿ ಒಂದರಲ್ಲಿ ಮಿತಿಮೀರಿ ನಡೆಯುವುದಾದರೆ ಮೇಲೆ ಹೇಳಿದ ಸುಖಸಾಧನಗಳಲ್ಲಿ ತೊಂದರೆಗಳು ಪ್ರಾಪ್ತವಾಗಿ ಅವು ನಾಶವಾಗಿಯೇ ಹೋಗುವುವು.

ಐಶ್ವರ್ಯವೊಂದೇ ರಾಜನಿಗೆ ಪ್ರಾಮುಖ್ಯವಾದುದು. ಮತ್ತು ಮಾಡಬೇಕಾದ ಧರ್ಮಕಾರ್ಯಗಳೂ, ಮನೋಭಿಲಾಷೆಗಳೂ ಇವುಗಳೂ ನೆರವೇರಲ್ಪಡಬೇಕಾಗಿದ್ದರೆ ಧನವೇ ಮುಖ್ಯವಾದುದಾಗಿದೆ.

ರಾಜನಿಗಿರುವ ಉಪಾಧ್ಯಾಯರೂ ಮಂತ್ರಿಗಳೂ ರಾಜನು ಅಪಾಯಕ್ಕೊಳಗಾಗದಂತೆ ನೋಡಿಕೊಳ್ಳುತ್ತಾ, ಗಂಟೆಹೊಡೆಯುತ್ತಿರುವ ಕಾಲಗಳನ್ನು ಎಣಿಸುತ್ತಾ, ಪಾದಛಾಯೆಯ ಅಳತೆಯಿಂದ ತಿಳಿದಕಾಲಗಳಿಂದಲೂ ರಾಜನು ಮಾಡುತ್ತಿರುವ ಅಜಾಗರೂಕತೆಯ ಕಾರ್ಯಗಳನ್ನು ನೋಡಿ, ಅವನಿಗೆ ಹುಷಾರನ್ನು ಹೇಳುತ್ತಾ ಇರುವಾಗ್ಗೆ ರಾಜನು ಅವರ ಮಾತುಗಳಿಗೆ ಬೆಲೆಯನ್ನು ಕೊಡುತ್ತಿರಬೇಕು. ರಾಜನ ಹತ್ತಿರವಿರುವ ಯೋಗ್ಯರಿಂದಲೇ ರಾಜನ ರಾಜತ್ವವು ಕಂಗೊಳಿಸಿ ವಿರಾಜಿಸುವುದು. ಒಂದೇ ಚಕ್ರದಿಂದ ಗಾಡಿಯು ಮುಂದಕ್ಕೆ ಎಂದಿಗೂ ನಡೆದುಕೊಂಡುಹೋಗಲಾರದು. ಈ ಕಾರಣದಿಂದ ರಾಜನಾದವನು ತನ್ನ ಕಾರ್ಯಸಾಧನೆಗಳಿಗಾಗಿ ಯೋಗ್ಯರಾದ ಮಂತ್ರಿಗಳನ್ನು ಇಟ್ಟುಕೊಂಡಿದ್ದು ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತಿರಬೇಕು.

17-6-7 ಪಂಚಾಚಾರ್ಯ ಪ್ರಭಾ.

೧೯೩೩ನೇ ಸೆಪ್ಟಂಬರ್ ತಾ|| ೪ ನೇ ಸೋಮವಾರ.

ಮೂಲಾಚಾರ್ಯಭಕ್ತಿ.

ಲೋಕೇ ಗುರುತ್ವಂ ದ್ವಿವಿಧಂ ಪ್ರಾಧಾನ್ಯಾತ್ ಗೌಣತೋಪಿವಾ |
ಪ್ರಾಧಾನ್ಯೇನ ಗುರುತ್ವಂ ತು ಮನ್ಮುಖೋದ್ಭೂತಪಂಚಕೇ ||

ವೀರಶೈವಮತದಲ್ಲಿ ಗುರುತ್ವವೆಂಬುದು ಎರಡು ವಿಧವು. ಅವುಗಳಲ್ಲಿ ಒಂದು ಪ್ರಧಾನವಾದ ಗುರುತ್ವವು. ಮತ್ತೊಂದು ಗೌಣವಾದ ಗುರುತ್ವವು. ಈ ಎರಡು ವಿಧವಾದ ಗುರುತ್ವದಲ್ಲಿ ಪ್ರಧಾನಗುರುತ್ವವೆಂಬುದು ಶಿವನ ಮುಖದಿಂದುದ್ಭವಿಸಿದ ರೇಣುಕಾದಿ ಪಂಚಾಚಾರ್ಯರಲ್ಲಿಯೇ ನಿಯಮದಿಂದ ವರ್ತಿಸುವುದು. ಇತರರಲ್ಲಿ ಗೌಣವಾದ ಗುರುತ್ವವಿರುವುದಲ್ಲದೆ ಪ್ರಧಾನವಾದ ಗುರುತ್ವವಿಲ್ಲವೆಂದು ಶಿವಾಗಮಗಳು ಸ್ಪಷ್ಟವಾಗಿ ಉಲ್ಲೇಖಿಸುವುದರಿಂದ ಶ್ರೀ ಪಂಚಾಚಾರ್ಯರಲ್ಲಿರುವ ಗುರುತ್ವವೆಂಬುವದು ಅನಿತರಸಾಧಾರಣವಾದುದೆಂದು ಸ್ಪಷ್ಟವಾಗುತ್ತದೆ. ಇದರಿಂದ ವೀರಶೈವಮತದಲ್ಲಿರುವ ಗೃಹಸ್ಥಾಶ್ರಮಿಗಳಾದ ಗುರುಗಳಾಗಲಿ ಬ್ರಹ್ಮಚಾರಿಗಳಾದ ಪಟ್ಟಚರಾಧಿಕಾರಿಗುರುಗಳಾಗಲಿ ಎಲ್ಲರೂ ಪ್ರಧಾನಗುರುಗಳಾದ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅಸಾಧಾರಣಭಕ್ತಿಯಿಂದ ನಡೆದುಕೊಳ್ಳಬೇಕೆಂದು ಶಿವಾಗಮಗಳು ಶಾಸನಮಾಡುತ್ತವೆ. ಈ ಪಂಚಾಚಾರ್ಯರೇ ವೀರಶೈವಮತವನ್ನು ಸ್ಥಾಪಿಸಿ ಮುಕ್ತಿಮೂಲಗಳಾದ ವೇದಧರ್ಮಗಳನ್ನು ಪ್ರಕಾಶಗೊಳಿಸಿದ್ದರಿಂದ ಇವರಲ್ಲಿ ಪ್ರಧಾನಗುರುತ್ವವು ನೆಲೆಗೊಂಡಿರುತ್ತದೆ. ಪ್ರಪಂಚದಲ್ಲಿ ಯಾರು ಯಾವ ವಂಶದಲ್ಲಿ ಜನ್ಮವನ್ನು ಎತ್ತಿರುವರೋ, ಅವರೆಲ್ಲರೂ ಆ ವಂಶದ ಮೂಲಪುರುಷನ ಹೆಸರನ್ನೇ ಹೇಳುವುದು ಧರ್ಮಶಾಸ್ತ್ರದಿಂದಲೂ ರೂಢಿಯಿಂದಲೂ ವ್ಯವಹಾರವು ಬಂದಿರುವಂತೆ, ವೀರಶೈವಮತದಲ್ಲಿ ಜನ್ಮವನ್ನೆತ್ತಿರುವರೆಲ್ಲರೂ ಈ ಮತವನ್ನು ಸ್ಥಾಪಿಸಿದ ಶ್ರೀ ಪಂಚಾಚಾರ್ಯರ ಹೆಸರನ್ನೇ ಹೇಳುತ್ತಲೂ ಅವರ ನಾಮಾವಳಿಯನ್ನೇ ಹಗಲಿರುಳೂ ಪಠಿಸುತ್ತಲೂ ಅವರಿಂದ ಅನುಗೃಹೀತವಾಗಿರುವ ಶಿವಲಿಂಗವನ್ನು ಪೂಜಿಸುತ್ತಲೂ ಬರುವುದೇ ಅಖಿಲವೀರಶೈವರ ಧರ್ಮವಾಗಿದೆ. ಹಾಗಲ್ಲದೆ ಮತಸ್ಥಾಪನಾಚಾರ್ಯರನ್ನು ಉಪೇಕ್ಷಿಸಿ ನಾವೂ ವೀರಶೈವಮತದ ಗುರುಗಳೆಂದು ವಿಜೃಂಭಿಸುತ್ತ ಪ್ರಧಾನಗುರುಗಳನ್ನು ನಿಂದಿಸುವವರು ಹೇಗೆತಾನೆ ವೀರಶೈವರೆನಿಸಿಕೊಳ್ಳುವರು? ವಂಶದ ಮೂಲಪುರುಷರು ಆರ್ಜಿಸಿದ ಮನೆಯಲ್ಲಿಯೇ ವಾಸವಾಗಿದ್ದು, ಅವರು ಗಳಿಸಿದ ಭೂಮಿಯಿಂದ ಬರುವ ಧಾನ್ಯದಿಂದಲೇ ಜೀವಿಸುತ್ತಲಿದ್ದರೂ ಅಂಥ ಪಿತೃಗಳನ್ನೇ ಜರಿಯುವ ಮನುಷ್ಯನು ಪಿತೃದ್ರೋಹಿಯೆನಿಸಿಕೊಂಡು ಘೋರವಾದ ನರಕವನ್ನು ಹೊಂದುವಂತೆ ಪ್ರಧಾನಗುರುಗಳು ಕಟ್ಟಿದ ವೀರಶೈವಮತವೆಂಬ ಮನೆಯಲ್ಲಿ ವಾಸಮಾಡಿಕೊಂಡಿದ್ದು ಅವರಿಂದಲೇ ತಾವು ಸಾಧಾರಣಗುರುತ್ವವನ್ನು ಪಡೆದು ಅವರಿಂದನುಗ್ರಹೀತವಾದ ಶಿವಲಿಂಗವೆಂಬ ಮುಕ್ತಿಮೂಲವಾದ ಸಂಪತ್ತಿನಿಂದಲೇ ಜೀವಿಸಿಕೊಂಡಿದ್ದು ಅಂಥ ಮೂಲಗುರುಗಳಮೇಲೆ ಟೀಕೆಯನ್ನು ಮಾಡುವವರು ಗುರುದ್ರೋಹಿಗಳೆನಿಸಿ ಅಂತ್ಯದಲ್ಲಿ ಘೋರವಾದ ಯಮಶಿಕ್ಷೆಗೆ ಗುರಿಯಾಗದಿರಲಾರರು. ಸೃಷ್ಟಿಕರ್ತನಾದ ದೇವರಲ್ಲಿ ಯಾವಭಕ್ತಿಯನ್ನಿರಿಸಬೇಕೋ ಗುರುಗಳಲ್ಲಿಯೂ ಅದೇ ಭಕ್ತಿಯನ್ನಿರಿಸಬೇಕೆಂದು ಸಾರುವ "ಯಥಾದೇವೇ ತಥಾಗುರೌ" ಎಂಬ ಶ್ರುತಿಯನ್ನೂ ಲಕ್ಷ್ಯಮಾಡದೆ ಇರುವ ಇಂಥ ವೇದಬಾಹ್ಯ ಜನಗಳು ಲೋಕದಲ್ಲಿ ಅಲ್ಲಲ್ಲಿಯೇ ತಲೆಹಾಕುವುದುಂಟು. ಅಷ್ಟು ಮಾತ್ರದಿಂದ ಅವರು ತಮ್ಮ ನಾಸ್ತಿಕಸ್ವಭಾವವನ್ನು ತೋರಿಸಿಕೊಂಡಂತಾಗುವುದಲ್ಲದೆ ಮತಸ್ಥಾಪಕರಾದ ಮಹಾಗುರುಗಳಿಗೆ ಯಾವ ನ್ಯೂನತೆಯೂ ಉಂಟಾಗಲಾರದು. ಇವರ ದೂಷಣದಿಂದ ಮೂಲಾಚಾರ್ಯರ ಕೀರ್ತಿಗೆ ಯಾವ ಕೊರತೆಯೂ ಸಂಭವಿಸದು. ಲೋಕದಲ್ಲಿ ವ್ಯಭಿಚಾರಿಣಿಯರಾದ ಸ್ತ್ರೀಯರೂ, ಚೋರರೂ ತಮ್ಮ ಸ್ವೇಚ್ಛಾಚಾರಕ್ಕೆ ಪ್ರತಿಬಂಧಕನಾದ ಸೂರ್ಯನನ್ನು ದೂಷಿಸುವರು. ಅಷ್ಟುಮಾತ್ರದಿಂದ ಜಗತ್ತನ್ನು ಬೆಳಗುವ ಆ ಸೂರ್ಯನಿಗೆ ಯಾವ ಉಪಹತಿಯೂ ಉಂಟಾಗಲಾರದಷ್ಟೆ! ಯಾವನು ಶಿವಭಕ್ತನೆನಿಸಿಕೊಳ್ಳಬೇಕಾದರೂ ಗುರುಗಳೆನಿಸಿಕೊಳ್ಳಬೇಕಾದರೂ ಅವನು ಮತಸ್ಥಾಪಕರಾದ ಮಹಾಗುರುಗಳೆಂಬ ವೃಕ್ಷಗಳನ್ನೇ ಆಶ್ರಯಿಸಬೇಕು. ಈ ಆಶ್ರಯವನ್ನು ಯಾವನು ಅಪೇಕ್ಷಿಸುವುದಿಲ್ಲವೋ, ಅವನು ಅಷ್ಟಾವರಣಪಂಚಾಚಾರಲಿಂಗಾಂಗಸಾಮರಸ್ಯವೆಂಬ ಸಿದ್ಧಿಯನ್ನು ಪಡೆಯುವುದಿಲ್ಲ. ಅವನು ವೀರಶೈವ ಎಂಬ ಅಭಿಧಾನಕ್ಕೂ ಅರ್ಹನಾಗುವುದಿಲ್ಲ. ಮೂಲಗುರುಗಳೇ ಬೇಡವೆನ್ನುವವರಿಗೆ ಅವರ ಮತವೇಕೆ? ಅವರು ಅನುಗ್ರಹಿಸಿದ ಲಿಂಗವೇಕೆ? ಬಾಹ್ಯದಲ್ಲಿ ವೀರಶೈವಮತದ ಚಿಹ್ನಗಳನ್ನು ಧರಿಸಿಕೊಂಡು ಅದರಿಂದಲೇ ಹೊಟ್ಟೆಹೊರೆಯುತ್ತ ಮತಸ್ಥಾಪಕರಲ್ಲಿ ಭಕ್ತಿಶೂನ್ಯರಾಗುವುದೆಂದರೆ ದ್ರೋಹಾತ್ಮಕಕಾರ್ಯವೆಂದು ಸ್ಪಷ್ಟವಾಗುವುದು. ಕಲಿಪ್ರಾಬಲ್ಯದಿಂದ ವೀರಶೈವಮತದಲ್ಲಿ ದುಷ್ಟರೂ ಪಾಪಾತ್ಮರೂ ಆದ ಕೆಲವರು ಹುಟ್ಟಿ ಮತಸ್ಥಾಪಕರಾದ ಮಹಾಚಾರ್ಯರ ಮೇಲೆ ಟೀಕೆಗಳನ್ನು ಮಾಡತೊಡಗಿ ತಾವೂ ಜಗದಾಚಾರ್ಯರೆನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರಾಗಿದ್ದಾರೆ.

ಹಂಸಸ್ಯಗತಿಮುಚ್ಛನ್ ಪೂರ್ವಗತ್ಯಾ ವಿವರ್ಜಿತಃ |
ಇತೋಭ್ರಷ್ಟಸ್ತತೋ ಭ್ರಷ್ಟಃ ಬಕಃ ಪಂಜೋಪಿ ಕೇವಲಂ ||

"ಕೊಕ್ಕರೆಯು ಹಂಸಪಕ್ಷಿಯನ್ನು ನೋಡಿ ತಾನೂ ಅದರಂತೆ ನಡೆಯುವುದನ್ನು ಕಲಿಯಬೇಕೆಂದು ಪ್ರಯತ್ನಿಸಿ ತನ್ನಲ್ಲಿದ್ದ ಮೊದಲಿನ ನಡಿಗೆಯನ್ನೂ ಹಾಳುಮಾಡಿಕೊಂಡು ಉಭಯಭ್ರಷ್ಟವಾಗಿ ಕುಂಟುಬಿದ್ದು ಹೋಯಿತು" ಎಂಬುಕ್ತಿಯಂತೆ ಮಹಾಮಹಿಮರಾದ ಪಂಚಾಚಾರ್ಯರಂತೆ ತಾವೂ ಜಗದಾಚಾರ್ಯರೆಂದು ಹೇಳಿಕೊಂಡು ಪ್ರತಿಷ್ಠೆಗೆ ಹೊರಟು ತಮ್ಮಲ್ಲಿದ್ದ ಗೌಣವಾದ ಗುರುತ್ವವನ್ನೂ ಕಳೆದುಕೊಂಡು ಭ್ರಷ್ಟರಾಗುತ್ತ ಯಮಲೋಕದ ಹಾದಿಯನ್ನು ಹುಡುಕುತ್ತಿರುವುದನ್ನು ನೋಡಿ ಪರಮವ್ಯಸನವೆನಿಸುತ್ತದೆ. ಶ್ರೀ ಪರಮೇಶ್ವರನು ಈ ತರಹದ ನಾಸ್ತಿಕರಿಗೆಲ್ಲಾ ಸದ್ಬುದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಇದೇ ಸೆಪ್ಟೆಂಬರ್ ೯ ನೇ ತಾರೀಖಿನ ದಿವಸ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಹೊಸ ಪ್ರೆಸಿಡೆಂಟರ ಚುನಾವಣೆಯು ನಡೆಯುವದು.

ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರದಾನಸಮಾರಂಭವು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಅಕ್ಟೋಬರ್ ೧೪ ನೇ ತಾರೀಖು ಶನಿವಾರ ನಡೆಯುವದೆಂದು ತಿಳಿದುಬಂದಿದೆ.

ಬೆಂಗಳೂರು ದೊಡ್ಡಮಾವಳ್ಳಿ ಅಪ್ಪಣ್ಣಯ್ಯನ ಗಲ್ಲಿಯಲ್ಲಿ ಕಳೆದ ಶುಕ್ರವಾರ ವಿಶೇಷ ಮಳೆಯಿಂದ ಒಬ್ಬ ಕಲ್ಲುಕೆಲಸದವನ ಮನೆಯು ಕುಸಿದು ಆತನ ೧೮ ತಿಂಗಳ ಮಗುವು ಕೂಡಲೇ ಮೃತಪಟ್ಟಿತು. ಗಂಡಹೆಂಡರು ಘಾಯಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು.

ಶ್ರೀಮದ್ಯುವರಾಜರವರು ಇದೇ ಸೆಪ್ಟೆಂಬರ್ ೮ ನೇ ತಾರೀಖಿನ ದಿವಸ ಬೊಂಬಾಯಿಯನ್ನು ತಲುಪಿ ೧೦ ನೇ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿಸುವರೆಂದೂ, ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರಾದ ಶ್ರೀ|| ಕೆ. ಎಚ್. ರಾಮಯ್ಯನವರೂ ಅವರ ಜೊತೆಯಲ್ಲೇ ಬರುವರೆಂದೂ ತಿಳಿದು ಬಂದಿದೆ.

ಇದೇ ಸೆಪ್ಟೆಂಬರು ೮ ನೇ ತಾರೀಖು ಶುಕ್ರವಾರ ಕೊಚ್ಚಿ ಸಂಸ್ಥಾನದ ಮಹಾರಾಜರು ಪರಿವಾರ ಸಮೇತರಾಗಿ ಬೆಂಗಳೂರಿಗೆ ದಯಮಾಡಿ, ಅಲ್ಲಿ ೩ ದಿನಗಳವರೆಗೂ ಇದ್ದು ಅನಂತರ ರಾಜಧಾನಿಗೆ ಆಗಮಿಸಿ ಎರಡು ದಿವಸಗಳವರೆಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದು ಮುಂದಕ್ಕೆ ತೆರಳುವರೆಂದು ತಿಳಿದು ಬಂದಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಸೊರಬ ಎಂಬ ಗ್ರಾಮದಲ್ಲಿ ಓರ್ವ ಶಿಲ್ಪಿಯು ಆನೆಯದಂತದಲ್ಲಿ ಒಂದು ಸಿಂಹಾಸನವನ್ನು ಕೆತ್ತಲು ಪ್ರಾರಂಭಿಸಿ ಈಗ ಹದಿನೆಂಟು ವರ್ಷಗಳಾದವೆಂದೂ, ಅದರಲ್ಲಿ ಹಿರಿಯಣ್ಣಪ್ಪ ಎಂಬುವ ಜಿನಗಾರನು ರಾಮಾಯಣ ಭಾರತಗಳ ಚಿತ್ರಗಳನ್ನೆಲ್ಲಾ ಬಹು ಮನೋಹರವಾಗಿ ಕೊರೆದಿರುವನೆಂದೂ, ಇದರ ಬೆಲೆಯು ಒಂದು ಲಕ್ಷ ರೂಪಾಯಿಗಳಾಗುವದೆಂದೂ, ಇದನ್ನು ನೋಡಲು ಪ್ರತಿದಿವಸವೂ ಸಾವಿರಾರು ಜನರು ಹೋಗುತ್ತಿರುವರೆಂದೂ ತಿಳಿದುಬಂದಿದೆ.

ಶಿವಮೊಗ್ಗೆಯಲ್ಲಿ ಕಳೆದ ಮೇ ತಿಂಗಳಿನಲ್ಲಿ ನಡೆದ ಹಿಂದೂ ಮುಸ್ಲಿಂ ಗಲಭೆಗಳ ಸಂಬಂಧವಾಗಿ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಹಿಂದೂಗಳ ಮೇಲೆಯೂ ಮುಸಲ್‌ಮಾನರ ಮೇಲೆಯೂ ಬೇರೆ ಬೇರೆಯಾಗಿ ಮೊಕದ್ದಮೆಗಳು ನಡೆಯುತ್ತಿದ್ದವಷ್ಟೆ. ಆ ಬಗ್ಗೆ ಈಗ ೧೭ ಜನ ಹಿಂದೂಗಳು ಡಿಸ್ಚಾರ್ಜ್ ಮಾಡಲ್ಪಟ್ಟರು. ಮತ್ತು ೧೭ ಹಿಂದೂಗಳೂ ೪೪ ಮುಸ್ಲಿಂರೂ ಸೆಷನ್ಸ್ ವಿಚಾರಣೆಗೆ ಕಮಿಟ್‌ಮಾಡಲ್ಪಟ್ಟರು. ಸೆಷನ್ಸಿಗೆ ಕಮಿಟ್ ಮಾಡಲ್ಪಟ್ಟಿರುವ ಹಿಂದೂಗಳ ಪೈಕಿ ಪ್ರಮುಖರಾದ ಕೆಲವರ ಹೆಸರನ್ನು ಕೊಡಬಹುದು. ಶ್ರೀ ಜೆ. ಸಿ. ಮಹಾಲಿಂಗಪ್ಪ (ಡಿಸ್ಟ್ರಿಕ್ಟ್ ಬೋರ್ಡಿನ ಮಾಜೀ ಉಪಾಧ್ಯಕ್ಷರು) ಸಿದ್ದೋಜಿರಾವು (ಮ್ಯುನಿಸಿಪಲ್ ಕೌನ್ಸಿಲರ್), ವಿಟ್ಠಲ್‌ರಾವು, ಮುನಿಯೋಜೀರಾವು, ಸೇವೋಜೀರಾವು, ರಾಮರಾವು, ಬಾಲೂಸಿಂಗ್ ಮತ್ತು ಗಣೇಶರಾವು. ಇವರೆಲ್ಲರ ಅಂಗಡಿಗಳು ಸುಡಲ್ಪಟ್ಟು ಭಸ್ಮವಾಗಿದ್ದವು. ಶ್ರೀ ಮಹಾಲಿಂಗಪ್ಪನವರು ಸುಡಲ್ಪಟ್ಟ ಬಸವಣ್ಣನ ಗುಡಿಯ ಕಮಿಟಿ ಅಧ್ಯಕ್ಷರು. ಸೆಷನ್ಸ್ ವಿಚಾರಣೆಗೆ ಗುರಿಯಾದ ಪ್ರಮುಖ ಮುಸಲ್ಮಾನರ ಪೈಕಿ ಮಿ|| ಗಳಾದ ಮಸ್ಕಿನ್, ಮೊಹದೀನ್‌ಖಾನ್, ಷಂಸುದ್ದೀನ್, ಸೆಯದ್ ಅಹಮದ್ ಅಕ್ಬರ್‌ಸಾಬ್, ನನ್ನೇ, ಬಚ್ಚು ಸಕ್ರೆಬೆನ್, ಬಾಬಾಸಾಬ್, ಕುದ್ದೂಸ್, ಬೈಸ್ಥಲ್ ಹುಸೇನ್ ಮುಂತಾದವರಿದ್ದಾರೆ.

ಮೈಸೂರಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿಯವರು ಮೊನ್ನೆ ಶನಿವಾರ ದಿವಸ ಶ್ರೀ|| ಗುಂಡಶಾಸ್ತ್ರಿಗಳಿಂದ ನೂತನವಾಗಿ ರಚಿಸಲ್ಪಟ್ಟಿರುವ "ಮಹಿಷಾಸುರಮರ್ದಿನಿ" ಎಂಬ ನಾಟಕವನ್ನಭಿನಯಿಸಿದರು. ಈ ಮಂಡಲಿಯ ನಾಯಕರಾದ ಮ|| ರಾ|| ಎಂ. ವಿ. ಸುಬ್ಬಯ್ಯನಾಯಿಡುರವರೇ ರಾಕ್ಷಸಸಾರ್ವಭೌಮನಾದ ಮಹಿಷಾಸುರನ ಪಾತ್ರವನ್ನು ವಹಿಸಿದ್ದರಿಂದ ಮಹಿಷಾಸುರನಲ್ಲಿ ನೆಲೆಗೊಂಡಿದ್ದ ಕ್ರೌರ್ಯಾದಿ ಸ್ವಭಾವಗಳು ಪ್ರತ್ಯಕ್ಷ ದೃಷ್ಟವಾಗಿ ಸಭಿಕರ ಮನಸ್ಸು ಆನಂದಸಾಗರದಲ್ಲಿ ಓಲಾಡುತ್ತಿತ್ತು. ಮತ್ತು ಮ|| ರಾ|| ಸುಬ್ಬಯ್ಯನೆಂಬುವರು ವಹಿಸಿದ್ದ ಶ್ರೀ ಚಾಮುಂಡೇಶ್ವರೀ ಪಾತ್ರವು ಬಹು ತೃಪ್ತಿಕರವಾಗಿದ್ದಿತು. ಒಟ್ಟಿನಲ್ಲಿ ನಾಟಕದಲ್ಲಿ ಪಾತ್ರಗಳನ್ನು ವಹಿಸಿದ್ದವರೆಲ್ಲರೂ ತಮ್ಮ ತಮ್ಮ ಪಾತ್ರಗಳನ್ನೆಲ್ಲಾ ನ್ಯೂನತೆಯಿಲ್ಲದಂತೆ ಅಭಿನಯಿಸಿದ್ದರಿಂದ ನಾಟಕವು ಸರ್ವಾಂಗಸುಂದರವಾಗಿ ಶೋಭಿಸುತ್ತಿದ್ದಿತು. ನಮ್ಮ ಶ್ರೀಮನ್ಮಹಾರಾಜರವರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯ ಅಸಾಧಾರಣವಾದ ಮಹತ್ವವೂ ಲೋಕಕಂಟಕನಾದ ಮಹಿಷಾಸುರನ ಔದ್ಧತ್ಯವೂ ಈ ನಾಟಕದಲ್ಲಿ ಮುಖ್ಯ ಪ್ರೇಕ್ಷಣೀಯಗಳಾಗಿವೆ ಕಥಾಸಂವಿಧಾನವು ಸುಹೃದಯಹೃದಯಾಹ್ಲಾದಕರವಾಗಿರುವುದರಿಂದ ಪ್ರತಿಯೊಬ್ಬರೂ ಈ ನೂತನ ನಾಟಕವನ್ನು ಅವಶ್ಯಕವಾಗಿ ನೋಡತಕ್ಕುದಾಗಿದೆ. ಈ ನಾಟಕಮಂಡಲಿಯು ಇನ್ನೂ ಬಾಲ್ಯದಶೆಯಲ್ಲಿದ್ದರೂ ಸಭಿಕರಿಗೆ ತೃಪ್ತಿಕರವಾಗುವಂತೆ ಅಭಿನಯಿಸಿದುದನ್ನು ನೋಡಿದರೆ ಮುಂದೆ ಇದು ಸರ್ವತೋಮುಖವಾಗಿ ಯಶಸ್ಸನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ಕರುಣಾಮಯಳಾದ ಶ್ರೀ ಚಾಮುಂಡಾಂಬೆಯು ಈ ನೂತನಮಂಡಲಿಗೆ ಶ್ರೇಯಃಪರಂಪರೆಯನ್ನುಂಟುಮಾಡಲೆಂದು ಕೋರುತ್ತೇವೆ.

ಇದೇ ಸೆಪ್ಟೆಂಬರ್ ೧ ನೇ ತಾರೀಖಿನಿಂದ ಶ್ರೀ|| ಎಸ್. ಹಿರಿಯಣ್ಣಯ್ಯ ಎಂ.ಎ., ಬಿ.ಎಲ್. ಇವರು ರಿಟೈರಾಗುವ ಪ್ರಯುಕ್ತ ಅವರ ಸ್ಥಾನಕ್ಕೆ ಸರಕಾರದ ಚೀಫ್ ಸೆಕ್ರೆಟರಿಗಳಾಗಿರುವ ಮಿ|| ಎನ್. ಮಾಧವರಾವ್ ಬಿ.ಎ., ಬಿ.ಎಲ್ ರವರು ರೆವಿನ್ಯೂ ಕಮಿಷನರು ಮತ್ತು ಮುಜರಾಯಿ ಕಮಿಷನರಾಗಿ ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ

ಫ್ರಾನ್ಸ್, ಬೆಲ್ಜಿಯಂ ಮತ್ತು ಆಸ್ಟ್ರಿಯಾದೇಶಗಳಲ್ಲಿ ಯುದ್ಧದ ಸಿದ್ಧತೆಗಳು ಬಹು ರಭಸದಿಂದ ನಡೆಯುತ್ತಿರುವವಂತೆ!

ಈ ಭೂಮಂಡಲದಲ್ಲಿ ಸುಮಾರು 1,90,00,00,000 ಜನರು ವಾಸವಾಗಿದ್ದು ಅವರಲ್ಲಿ 50,00,00,000 ಜನರು ಇಂಗ್ಲಿಷ್ ಭಾಷೆಯನ್ನು ಮಾತನಾಡುವರಂತೆ!

ರೀವಾ ಸಂಸ್ಥಾನದ ಸಿಂಗರವಳ್ಳಿ ಎಂಬ ಹಳ್ಳಿಯಲ್ಲಿ ವಾಸವಾಗಿರುವ ಮುಹಮ್ಮದ್ ಭುಹ್ರಿಯಾ ಎಂಬ ಸ್ತ್ರೀಯು ಗರ್ಭಿಣಿಯಾಗಿದ್ದು 30 ಮೊಟ್ಟೆಗಳನ್ನು ಪ್ರಸವಿಸಿದಳಂತೆ!

1931 ನೇ ಸಪ್ಟೆಂಬರ್ 22 ನೇ ತಾರೀಖಿನಿಂದ 1933 ನೇ ಜರ್ನ ಅಖೈರ್‌ವರೆಗೆ ಇಂಡಿಯಾ ದೇಶದಿಂದ ಪರದೇಶಗಳಿಗೆ 1,41,50,00,000 ರೂಪಾಯಿಗಳ ಭಂಗಾರವು ರವಾನಿಸಲ್ಪಟ್ಟಿರುವದು!

ಲಯಲ್‌ಪುರ ಡಿಸ್ಟ್ರಿಕ್ಟಿಗೆ ಸೇರಿದ ನಿಜಾಮಪುರಿಯಾ ಎಂಬ ಗ್ರಾಮದಲ್ಲಿ ದೇವದಾಸಿಯೆಂಬ 120 ವರ್ಷದ ಮುದುಕಿಗೆ ಅನೇಕ ವರ್ಷಗಳ ಹಿಂದೆಯೇ ಹಲ್ಲುಗಳೆಲ್ಲಾ ಬಿದ್ದುಹೋಗಿದ್ದು ಈಗ ಹೊಸದಾಗಿ ಹುಟ್ಟುತ್ತಿರುವುವಂತೆ!

ಬರ್ಲಿನ ನಗರದಲ್ಲಿ ಮಿಡಿತೆಗಳ ಕಾಟವು ವಿಪರೀತವಾಗಿ ನಗರದಲ್ಲಿ ಜನರ ಮತ್ತು ವಾಹನಾದಿಗಳ ಸಂಚಾರಕ್ಕೆ ವಿಶೇಷ ಅಡಚಣೆಯುಂಟಾದುದರಿಂದ ಬೆಂಕಿಯನ್ನು ಆರಿಸುವ ಯಂತ್ರಗಳನ್ನು ತರಿಸಿ ಹುಳುಗಳನ್ನು ನಾಶಮಾಡಿದರಂತೆ!

ಇಂಗ್ಲೆಂಡ್ ದೇಶಕ್ಕೆ ಸೇರಿದ ಸಫೋಕ್‌ನಗರದ ಚಿತ್ರವಸ್ತುಗಳ ಪ್ರದರ್ಶನಶಾಲೆಯಲ್ಲಿ ಒಂದು ವಿಚಿತ್ರವಾದ ಕೈಯಿಂದ ಹಿಡಿಯುವ ಚಿತ್ರಕ್ಕೆ ಪ್ರಥಮಬಹುಮಾನವು ದೊರೆಯಿತು. ಆ ಚಿತ್ರವು 3,000 ಸ್ಟ್ರೇಮದ ಕಾಗದಗಳಿಂದ ತಯಾರಿಸಲ್ಪಟ್ಟಿದ್ದಿತಂತೆ!

ಜರ್ಮನಿಯ ಒಬ್ಬ ಪ್ರಸಿದ್ಧ ಇಂಜನಿಯರು ತಿಮಿಂಗಿಲದ ಆಕಾರವುಳ್ಳ ಒಂದು ದೊಡ್ಡ ಹಡಗನ್ನು ತಯಾರಿಸಿರುವರಂತೆ! ಈ ಹಡಗು ತಿಮಿಂಗಿಲದಂತೆಯೇ ನೀರಿನಮೇಲಾಗಲಿ, ನೀರಿನ ಒಳಗಾಗಲಿ, ಬೇಕುಬೇಕಾದಹಾಗೆಲ್ಲಾ ಸಂಚರಿಸಬಲ್ಲದಂತೆ!

ಇಟಲಿಯ ಸರ್ವಾಧಿಕಾರಿಗಳಾದ ಮಸ್ಸೋಲಿನಿಯವರು ತಮ್ಮ ಜೊತೆಯವರೆಲ್ಲರಿಗೂ, ಇನ್ನು ಮುಂದೆ ಮೋಟಾರ್‌ಬೈಸಿಕಲ್ಲುಗಳನ್ನೇ ಉಪಯೋಗಿಸಬೇಕೆಂದೂ, ರೇಷ್ಮೆಯ ಟೋಪಿಗಳನ್ನು ಉಪಯೋಗಿಸಕೂಡದೆಂದೂ ಹೊಸದೊಂದು ಆಜ್ಞೆಯನ್ನು ಹೊರಡಿಸಿರುವರು!

ಒಬ್ಬ ಯಂತ್ರಶಾಸ್ತ್ರಜ್ಞನು "ಕ್ರೌಡ್ಮೀಟರ್" ಎಂಬ ಒಂದು ವಿಚಿತ್ರವಾದ ಯಂತ್ರವನ್ನು ತಯಾರಿಸಿರುವನು. ಈ ಯಂತ್ರವು ಇಸ್ಪೀಟ್‌ಕಾರ್ಡಿನಷ್ಟು ಅಗಲವಾಗಿದ್ದು, ಅದರ ಸಹಾಯದಿಂದ ಗುಂಪಿನಲ್ಲಿರುವ ಜನರ ಸಂಖ್ಯೆಯನ್ನು ಬಹುಸುಲಭವಾಗಿ ಎಣಿಸಬಹುದಂತೆ!

ಸಧ್ಯಃ ದಿವಾನರ ಆಕ್ಟಿಂಗ್ ಪ್ರೈವೆಟ್ ಸೆಕ್ರೆಟರಿಗಳಾಗಿರುವ ಮಿ|| ಕೆ. ಸುಬ್ಬರಾವ್ ಬಿ. ಎ. ಇವರು ಮಧುಗಿರಿಯ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಜೂಯಾಲಜಿ ಲೆಕ್ಚರರಾದ ಮಿ|| ಬಿ. ಆರ್. ಶೇಷಾಚಾರ್ ಎಂ.ಎಸ್‌ಸಿ. ಇವರು ಜೂಯಾಲಜಿಯ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸಲ್ಪಟ್ಟಿರುತ್ತಾರೆ.

ಪಂಡಿತ ಜವಾಹರಲಾಲ ನೆಹರೂರವರು ಕಳೆದ ಆಗಸ್ಟ್ 30 ನೇ ತಾರೀಖಿನ ದಿವಸ ಸಾಯಂಕಾಲ ಅಲಹಾಬಾದ್ ಸೆಂಟ್ರಲ್ ಜೈಲಿನಿಂದ ಬಿಡುಗಡೆಮಾಡಲ್ಪಟ್ಟರು. ಅವರು ಕೂಡಲೇ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆಹೊಂದುತ್ತಿರುವ ತಮ್ಮ ತಾಯಿಯವರನ್ನು ನೋಡಿಕೊಂಡು ಬಂದರು.

ಕಳೆದ ಆಗಸ್ಟ್ 28 ನೇ ತಾರೀಖಿನ ದಿವಸ ಮುಂಬಯಿಯ ಬುಲಿಯನ್ ಎಕ್ಸ್‌ಛೇಂಜಿನಲ್ಲಿ 2,262 ರೂಪಾಯಿಗಳ ಸವರನ್‌ಗಳು ಮತ್ತು ಚಿನ್ನ ತುಂಬಿದ್ದ ಚೀಲವು ಯಾರಿಂದಲೋ ಅಪಹರಿಸಲ್ಪಟ್ಟಿತು. ಪೋಲೀಸರು ಅನುಮಾನದ ಮೇಲೆ ಮದಿಲಾಲ್ ಶಂಕರಲಾಲ್ ಎಂಬುವರನ್ನು ದಸ್ತಗಿರಿ ಮಾಡಿರುತ್ತಾರೆ

ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ 21,284 ಚಲನಚಿತ್ರ ಪ್ರದರ್ಶನ ಮಂದಿರಗಳಿರುವವು. ಅವುಗಳಲ್ಲಿ 20,000 ಮಂದಿರಗಳಲ್ಲಿ ಮಾತನಾಡುವ ಚಲನಚಿತ್ರಗಳು ತೋರಿಸಲ್ಪಡುವವು. ಇವುಗಳಲ್ಲಿ 2,50,000 ಜನರು ಕೆಲಸಮಾಡುವರು ಮತ್ತು ಇವುಗಳ ಒಟ್ಟು ಬಂಡವಾಳವು 75,00,00,00,000 ರೂ. ಗಳಾಗಿರುವದು.

ರಷ್ಯಾದಲ್ಲಿ ಮದುವೆಗಾಗಿ ಒಂದು ರೂಬಲ್ ಅಂದರೆ ಸುಮಾರು 1½ ರೂಪಾಯಿ ಖರ್ಚಾಗುವುದು. ಆದರೆ ದಾಂಪತ್ಯವಿಚ್ಛೇದಕ್ಕೆ ಅದರ ಎರಡರಷ್ಟು ಅಂದರೆ 3 ರೂಪಾಯಿಯು ಖರ್ಚಾಗುತ್ತದೆ. ಮತ್ತು ಒಬ್ಬಮನುಷ್ಯನು ಹೆಂಡತಿಯನ್ನು ಬಿಡಬೇಕಾದರೆ ತನ್ನ ಆದಾಯದ 1/5 ಭಾಗವನ್ನು ಪತ್ನಿಗೆ ಕೊಡಬೇಕು. ಮಕ್ಕಳಿದ್ದರೆ ದಾಂಪತ್ಯವಿಚ್ಛೇದವು ಸ್ವಲ್ಪ ಅಸಾಧ್ಯವೇ ಸರಿ!

ಪಾಟಿಯಾಲಾ ಸಂಸ್ಥಾನಕ್ಕೆ ಸೇರಿದ ಒಬ್ಬ ಪೋಲೀಸ್ ಅಧಿಕಾರಿಯು ಬಾನರ್ಾಲಾ ಎಂಬ ಊರಿನ ಸಮೀಪದಲ್ಲಿರುವ ಒಂದು ಗ್ರಾಮಕ್ಕೆ ಯಾರೋ ಬಂಧುಗಳ ಮದುವೆಗೆ ಹೋಗಿದ್ದಾಗ ಆ ಊರಿನಲ್ಲಿದ್ದ ಎಲ್ಲಾ ವಯಸ್ಕರಾದ ತರುಣಿಯರ ಫೋಟೋಗಳನ್ನೂ ತೆಗೆದುಕೊಂಡರಂತೆ! ಈ ವಿಷಯವು ಮೇಲಿನ ಅಧಿಕಾರಿಗಳಿಗೆ ತಿಳಿದು ಸದರಿ ಇನ್ಸ್‌ಪೆಕ್ಟರನ್ನು ವಿಚಾರಣೆಗೆ ಗುರಿಪಡಿಸಿರುವರಂತೆ!

ರೊಮೇನಿಯಾ ದೇಶಕ್ಕೆ ಸೇರಿದ ಜಸ್ಸಿ ಎಂಬ ಊರಿನಲ್ಲಿ ಒಂದು ಮಗುವು ಒಂದಾನೊಂದು ರಾತ್ರಿ ಕನಸಿನಲ್ಲಿ ಕಣ್ಣುಗಳನ್ನು ಕಳೆದುಕೊಂಡಂತೆ ಸ್ವಪ್ನವನ್ನು ಕಂಡಿತು. ಬೆಳಿಗ್ಗೆ ಎದ್ದು ಕಣ್ಣುಗಳನ್ನು ತೆರೆದಾಗ ನಿಜವಾಗಿಯೂ ಕಣ್ಣುಗಳು ಕಾಣಿಸದಂತಾಗಿದ್ದುವಂತೆ! ಡಾಕ್ಟರು ಈಗ ಆ ಮಗುವಿಗೆ ನೇತ್ರಪಾಟವುಂಟಾಗುವಂತೆ ಮಾಡುವೆನೆಂದು ಭರವಸೆ ಕೊಟ್ಟು ಚಿಕಿತ್ಸೆಯನ್ನು ನಡೆಸುತ್ತಿರುವರು.

ರೂತ್‌ಲೈಟ್ನಿಗ್ ಎಂಬ ಒಬ್ಬ ಯುವತಿಯು ಕಳೆದ ವರುಷ ಒಂದೇಸಮನೆ 74 ಗಂಟೆಗಳಕಾಲ ಈಜಾಡಿ ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿದ್ದಳು. ಈ ವರುಷ ಆಕೆಯು ಇನ್ನೂ ಹೆಚ್ಚು ಗಂಟೆಗಳ ಕಾಲ ಈಜಬೇಕೆಂದು ಉದ್ದೇಶಪಟ್ಟು ಎಸ್ಸೆನ್ ನಗರದ ಹತ್ತಿರ ಇರುವ ಒಂದು ಕೊಳದಲ್ಲಿ 79 ಗಂಟೆಗಳ ಹೊತ್ತು ಈಜಿದಳು. ಇದರಿಂದ ಆಕೆಗೆ ಜ್ವರಬಂದು ಆಸ್ಪತ್ರೆಯಲ್ಲಿ ಎರಡು ಮೂರು ದಿವಸ ಚಿಕಿತ್ಸೆಹೊಂದಿ ಅನಂತರ ಸತ್ತುಹೋದಳು.

ಹಂಗೇರಿದೇಶಕ್ಕೆ ಸೇರಿದ ಕೆಕ್ಸ್‌ಕೆಮೆತ್ ಎಂಬ ಗ್ರಾಮದಲ್ಲಿ ಫಾರ್ಗಾನ ಎಂಬ ತರುಣನು ಮೃತಪಟ್ಟನು. ಅವನ ಬಂಧುವರ್ಗದವರು ಮೃತಶರೀರವನ್ನು ಶವಪೆಟ್ಟಿಗೆಯಲ್ಲಿಟ್ಟು ಮುಂದಿನ ಕರ್ಮವನ್ನು ನಡೆಸುತ್ತಿರುವಷ್ಟರಲ್ಲಿ, ಮೃತನಿಗೆ ಇದ್ದಕ್ಕಿದ್ದಹಾಗೆ ಜ್ಞಾನವುಂಟಾಗಿ, ಪೆಟ್ಟಿಗೆಯಿಂದ ಹೊರಕ್ಕೆ ಬಂದು, ಏನೂ ಆಗದಿದ್ದವನಂತೆ ತನ್ನ ನೌಕರಿಗೆ ಹೊರಟುಹೋದನು. ಸಾಯಂಕಾಲದವರೆಗೆ ಕೆಲಸಮಾಡಿ, ರಾತ್ರಿ ಮನೆಯಲ್ಲಿ ಹೊಟ್ಟೆತುಂಬ ಊಟಮಾಡಿ ಮಲಗಿ, ಬೆಳಗಾಗುವದರೊಳಗಾಗಿ ನಿಜವಾಗಿಯೂ ಮೃತಪಟ್ಟಿದ್ದನಂತೆ!

ಪ್ಯಾರಿಸ್ ನಗರದಲ್ಲಿ ಅತ್ಯಂತ ಸೌಂದರ್ಯವತಿಯಾದ ಸ್ತ್ರೀಯು ಯಾರೆಂಬುದನ್ನು ನಿರ್ಧರಿಸಲು ಒಂದು ದೊಡ್ಡ ಸೌಂದರ್ಯದ ಪಂಥವು ಏರ್ಪಡಿಸಲ್ಪಟ್ಟಿತ್ತು. 'ಗ್ರೇಟ್ ಕಮಿಟಿ ಆಫ್ ಪ್ಯಾರಿಸ್' ಎಂಬ ಕೂಟದವರು ಜೊಸೆಟ್ ಕಾರ್ಟಿಜ್ ಎಂಬುವಳೇ ಅತ್ಯಂತ ಸೌಂದರ್ಯವತಿಯೆಂದು ನಿರ್ಧರಿಸಿದರು. ಆದರೆ 'ಕಮಿಟಿ ಆಫ್ ದಿ ಗ್ರ್ಯಾಂಡ್ ಪ್ರೈಜ್ ಸೈಟ್' ಎಂಬ ಕೂಟದವರು ರೆಜಿನಾ ಪ್ಯಾರಿಸ್ ಎಂಬುವಳೇ ಅತ್ಯಂತ ಸೌಂದರ್ಯವತಿಯೆಂದು ನಿರ್ಧರಿಸಿದರು. ಇದರ ಬಗ್ಗೆ ಈ ಎರಡು ಪಂಗಡಗಳಲ್ಲಿ ದೊಡ್ಡ ವಿವಾದಹುಟ್ಟಿ ತೀರ್ಮಾನಕ್ಕಾಗಿ ಒಬ್ಬರ ಮೇಲೊಬ್ಬರು ನ್ಯಾಯಾಸ್ಥಾನದಲ್ಲಿ ವ್ಯವಹಾರವನ್ನು ಹೂಡಿರುವರಂತೆ!

ಪೋಲೆಂಡ್‌ದೇಶದ ರಾಜಧಾನಿಯಾದ ವಾರ್ಸಾ ನಗರದಲ್ಲಿ ಒಬ್ಬ ಮನುಷ್ಯನು ಯಾವುದೋ ಒಂದು ಕಾರಣದಮೇಲೆ ಫಾಸೀ ಶಿಕ್ಷೆಗೆ ಗುರಿಯಾದನು. ಅವನನ್ನು ಗಲ್ಲಿಗೇರಿಸುವದಕ್ಕೆ ಸ್ವಲ್ಪಕಾಲಕ್ಕೆ ಮುಂಚೆ ಆತನು ಒಂದು ಹೊಸತರಹ ಬಂದೂಕವನ್ನು ತಯಾರು ಮಾಡಿರುವನೆಂದೂ, ಸದರಿ ಬಂದೂಕವು ಯುದ್ಧಕಾಲದಲ್ಲಿ ಇದುವರೆಗೆ ತಯಾರಿಸಲ್ಪಟ್ಟಿರುವ ಎಲ್ಲ ತರಹ ಬಂದೂಕಗಳಿಗಿಂತಲೂ ಅದ್ಭುತರೀತಿಯಲ್ಲಿ ಉಪಯೋಗಕ್ಕೆ ಬರುವದೆಂದೂ ತಿಳಿದುಬಂದದ್ದರಿಂದ ಸರಕಾರದವರು ಕೂಡಲೇ ಅವನನ್ನು ಗಲ್ಲಿಗೇರಿಸುವದನ್ನು ನಿಲ್ಲಿಸಿರುವರಂತೆ! ಆ ಬಂದೂಕದ ವಿವರಗಳು ಬಹು ಗೋಪ್ಯವಾಗಿ ಕಾದಿಡಲ್ಪಟ್ಟಿರುವುವು!

ಕೇಪ್ ಪ್ರಾವಿನ್ಸಿಗೆ ಸೇರಿದ ಸ್ವೆಲೆಂಡಾಂ ಎಂಬ ಊರಿನ ಒಂದು ಹೋಟೇಲಿನ ಸಾಮಾನುಗಳನ್ನು ಒಡೆದನೆಂಬ ಕಾರಣದಮೇಲೆ ಒಬ್ಬಾತನು ವಿಚಾರಣೆಗೆ ಗುರಿಪಡಿಸಲ್ಪಟ್ಟನು. ವಿಚಾರಣೆಯಲ್ಲಿ ಅಪರಾಧಿಯು, ಹೋಟೇಲಿನ ಯಜಮಾನಿಯು ತನ್ನ ಅತ್ತೆಯೆಂದೂ, ತಾನು 160 ಕಿಟಕಿಗಳ ಗಾಜುಗಳನ್ನೂ, ಒಂದು ಪಿಯಾನೊವನ್ನೂ, 3 ಮೇಜುಗಳನ್ನೂ, 2 ಬಾಗಿಲುಗಳನ್ನೂ, 20 ಗ್ರಾಮಾಫೋನ್ ರಿಕಾರ್ಡುಗಳನ್ನೂ, 14 ಲ್ಯಾಂಪಿನ ಚಿಮಿನಿಗಳನ್ನೂ, ಒಂದು ಅಲಾರಂ ಗಡಿಯಾರವನ್ನೂ, ಒಂದು ಬೆಳ್ಳಿಯ ಪಾತ್ರೆಯನ್ನೂ, 6 ಕಿಟಕಿಗಳ ಚೌಕಟ್ಟುಗಳನ್ನೂ, 96 ಗಾಜಿನ ಲೋಟಾಗಳನ್ನೂ, ಒಂದು ರಿಜಿಸ್ಟರನ್ನೂ, 24 ಶೀಸೆ ಮದ್ಯವನ್ನೂ ನಾಶಮಾಡಿರುವೆನೆಂದು ಹೇಳಿದನು!

ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಶಿವಪುರವೆಂಬ ಊರಿನಲ್ಲಿರುವ ಚತುರ್ಭುಜದಾಸ್ ದೇವಸ್ಥಾನದಲ್ಲಿ ಒಂದು ದಿನ ಭಕ್ತಾದಿಗಳೆಲ್ಲರೂ ಸೇರಿ ಭಜನೆಮಾಡುತ್ತಿದ್ದಾಗ, 15 ಅಡಿ ಉದ್ದವಾಗಿದ್ದು 1 ಅಡಿ ದಪ್ಪನಾಗಿದ್ದ ಒಂದು ದೊಡ್ಡ ಸರ್ಪವು ದೇವಾಲಯವನ್ನು ಪ್ರವೇಶಿಸಿತು. ಇದನ್ನು ಕಂಡಕೂಡಲೇ ಜನರೆಲ್ಲರೂ ಭೀತಿಯಿಂದ ಅಲ್ಲಿಂದ ಎದ್ದು ಓಡಲಾರಂಭಿಸಿದರು. ಅಷ್ಟರಲ್ಲಿ ಆ ದೇವಸ್ಥಾನದಲ್ಲಿಯೇ ವಾಸವಾಗಿದ್ದ ಜನಾರ್ದನಪಂತ ಎಂಬ ಸನ್ಯಾಸಿಯು ಜನರನ್ನು ನಿಲ್ಲಿಸಿ, ಸರ್ಪದ ಕಡೆಗೆ ಬಂದು "ಸ್ವಾಮಿ, ನಿನಗೆ ಗೀತೆಯನ್ನು ಕೇಳಬೇಕೆಂಬ ಅಪೇಕ್ಷೆಯಿದ್ದರೆ ಇಲ್ಲಿ ಸ್ವಸ್ಥವಾಗಿ ಕುಳಿತುಕೊ. ನಾನು ಭಗವದ್ಗೀತೆಯನ್ನು ಶ್ರವಣಮಾಡಿಸುತ್ತೇನೆ" ಎಂದು ಹೇಳಲು ಸರ್ಪವು ಅದರಂತೆ ಇದ್ದಲ್ಲಿಯೇ ಸುತ್ತಿಕೊಂಡು ಕುಳಿತುಕೊಂಡಿತು. ಅನಂತರ ಆ ಸನ್ಯಾಸಿಯು ಗೀತಾಪಾರಾಯಣಕ್ಕೆ ಪ್ರಾರಂಭಿಸಿದನು. ಇತ್ತ, ಸರ್ಪವು 4 ಅಧ್ಯಾಯಗಳು ಮುಗಿಯುವವರೆಗೂ ಸ್ವಸ್ಥವಾಗಿ ಕುಳಿತಿದ್ದು, ಅನಂತರ ಇದ್ದಕ್ಕಿದ್ದಹಾಗೆಯೇ ಮಾಯವಾಯಿತಂತೆ! ನೆರೆದಿದ್ದ ಜನರು ದೇವಾಲಯವನ್ನೆಲ್ಲಾ ಶೋಧಿಸಿದರೂ ಸರ್ಪದ ನೆಲೆಯೇ ತಿಳಿಯಲಿಲ್ಲ!

ಮಹಾಭಾರತದಲ್ಲಿ ಆರೋಗ್ಯಪಾಠಗಳು.

ಅನುಶಾಸನಿಕಪರ್ವದಿಂದ.

ಯುಧಿಷ್ಠಿರನು ಭೀಷ್ಮನನ್ನು ಕುರಿತು 'ಆಚಾರ್ಯ! ಮನುಷ್ಯನಿಗೆ ಬ್ರಹ್ಮನಿಂದ 'ಶತಾಯುಃ ಪುರುಷಃ' ಎಂಬಂತೆ ೧೦೦ ವರುಷಗಳ ಆಯುಸ್ಸು ವಿಧಿಸಲ್ಪಟ್ಟಿರುವುದು. ಅವನು ತಕ್ಕಷ್ಟು ವೀರ್ಯ ಶಕ್ತಿಗಳಿಂದ ಅಷ್ಟುಕಾಲ ಬದುಕಿರುವನೆಂದು ಹೇಳುವರಲ್ಲವೇ? ಆಚಾರ್ಯ! ಹೀಗಿರುವಾಗ ಮನುಷ್ಯರು ಬಹಳ ಬಾಲ್ಯವಯಸ್ಸಿನಲ್ಲಿರುವಾಗಲೇ ಸಾಯುವುದುಂಟಲ್ಲವೆ? ಇದರ ಕಾರಣವೇನು? ಕೆಲವರು ಪೂರ್ಣಾಯುಸ್ಸಿನಿಂದ ಬದುಕುವುದಕ್ಕೂ, ಬೇರೆ ಕೆಲವರು ಅಲ್ಪಾಯುಸ್ಸಿನಲ್ಲಿಯೇ ಮೃತಿಹೊಂದುವುದಕ್ಕೂ ಕಾರಣವೇನು? ಹೇಗೆಮಾಡಿದರೆ ಪೂರ್ಣಾಯುಷ್ಯವನ್ನು ಅನುಭವಿಸಬಹುದು. ಮನುಷ್ಯನು ಮಹಾಕಾರ್ಯಗಳಿಂದ ಕೀರ್ತಿಯನ್ನು ಸಂಪಾದಿಸುವುದು ಹೇಗೆ? ಮನುಷ್ಯನು ಸಂಪತ್ತನ್ನೂ ಅಭ್ಯುದಯವನ್ನೂ ಹೊಂದುವುದು ಹೇಗೆ? ಇವೆಲ್ಲವೂ ಲಭಿಸುವುದು ತಪಸ್ಸಿನಿಂದಲೇ? ಬ್ರಹ್ಮಚರ್ಯೆಯಿಂದಲೇ? ಮಂತ್ರಜಪಗಳಿಂದಲೇ? ಮೂಲಿಕೆಗಳಿಂದಲೇ? ಈ ಮೇಲೆ ಹೇಳಿದವುಗಳನ್ನು ಮನುಷ್ಯನು ತನ್ನ ಮನೋವಾಕ್ಕಾಯಗಳ ಪ್ರವರ್ತನೆಯಿಂದಲೇ ಪಡೆಯುವನೇ? ಆ ವಿಷಯವನ್ನು ನನಗೆ ವಿವರಿಸಿ ತಿಳಿಸಬೇಕು'

ಅದಕ್ಕೆ ಭೀಷ್ಮನು 'ಧರ್ಮರಾಜಾ! ಮನುಷ್ಯರು ಅವರವರ ನಡತೆಯಿಂದಲೇ ದೀರ್ಘಾಯುಷ್ಯವನ್ನು ಪಡೆಯುವರು. ಐಶ್ವರ್ಯವೂ, ಅಭ್ಯುದಯಗಳೂ ಬರುವುವು. ಯಾವನ ನಡತೆಯು ಅಸಂಬದ್ಧವಾಗಿಯೂ, ವಕ್ರವಾಗಿಯೂ ಇರುವುದೋ, ಅವನು ಎಂದಿಗೂ ದೀರ್ಘಕಾಲ ಜೀವಿಸಲಾರನು. ಅವನನ್ನು ಕಂಡರೆ ಸಮಸ್ತಪ್ರಾಣಿಗಳೂ ಭಯಪಡುವುವು. ಎಲ್ಲವೂ ಅವನನ್ನು ದ್ವೇಷಿಸುವುವು. ಆದುದರಿಂದ ತನ್ನ ಅಭ್ಯುದಯವನ್ನೂ, ಕ್ಷೇಮವನ್ನೂ ಕೋರತಕ್ಕ ಪ್ರತಿಯೊಬ್ಬ ಮನುಷ್ಯನೂ ಈ ಲೋಕದಲ್ಲಿ ಉತ್ತಮವಾದ ಮತ್ತು ಯೋಗ್ಯವಾದ ನಡತೆಯನ್ನು ಅವಲಂಬಿಸಬೇಕು. ಯಾರು ಅನುಚಿತವಾದ ಮಾರ್ಗದಲ್ಲಿ ಹೋಗುವರೋ, ಯಾರು ಕಾಮವಶರಾಗುವರೋ ಅಂಥವರೆಲ್ಲರೂ ಅಲ್ಪಾಯುಷ್ಯವುಳ್ಳವರಾಗುವರು. ಯಾವನು, ಕಾಮಕ್ರೋಧಗಳಿಗೆ ವಶನಾಗದೆ ಸತ್ಯವನ್ನೇ ದೃಢವಾಗಿ ಹಿಡಿದು ಪ್ರಪಂಚದಲ್ಲಿ ಯಾವ ಪ್ರಾಣಿಗಳಿಗೂ ಯಾವ ಹಿಂಸೆಯನ್ನೂ ಮಾಡದೆ ವಿಷಯಾಸಕ್ತಿ, ವಕ್ರಮಾರ್ಗ, ಅಪ್ರಮಾಣಿಕತೆ ಇವನ್ನೆಲ್ಲಾ ದೂರಮಾಡುವನೋ, ಅವನು ತನ್ನ ಪೂರ್ಣಾಯುಸ್ಸಿನವರೆಗೆ ಜೀವಿಸುವನು. ಮನುಷ್ಯನು ಬ್ರಾಹ್ಮಮುಹೂರ್ತವೆಂದು ಕರೆಯಲ್ಪಡುವ ಬೆಳಗಿನ ಜಾವದಲ್ಲಿಯೇ ನಿದ್ರೆಯಿಂದ ಎಚ್ಚರಿಕೆಗೊಳ್ಳಬೇಕು. ಕಾರ್ಯವನ್ನೂ, ಲಾಭವನ್ನೂ ಮನಸ್ಸಿನಲ್ಲಿಯೂ ಚಿಂತಿಸಬೇಕು. ಹಾಸಿಗೆಯನ್ನು ಬಿಟ್ಟು ಎದ್ದೊಡನೆ ಬಾಯನ್ನೂ, ಮುಖವನ್ನೂ ಚೆನ್ನಾಗಿ ತೊಳೆಯಬೇಕು. ಮನುಷ್ಯನು ಉದಯಿಸುತ್ತಿರುವ ಅಥವಾ ಅಸ್ತಮಿಸುತ್ತಿರುವ ಸೂರ್ಯನನ್ನು ದೃಷ್ಟಿಸಿ ನೋಡಬಾರದು. ಗ್ರಹಣ ಹಿಡಿದಾಗಲೂ ನೋಡಬಾರದು. ಮಧ್ಯಾಹ್ನದಲ್ಲಿ ಉಚ್ಚಸ್ಥಾನದಲ್ಲಿರುವಾಗಲೂ ಸೂರ್ಯನನ್ನು ನೋಡಬಾರದು. ಯಾವ ಮನುಷ್ಯನೂ ಪರಸ್ತ್ರೀಯಲ್ಲಿ ಮೋಹವನ್ನಿಡಬಾರದು. ಅವರೊಡನೆ ಸಂಬಂಧಮಾಡಬಾರದು. ಪರದಾರಗಮನಕ್ಕಿಂತಲೂ ಆಯುಷ್ಯವನ್ನು ತಗ್ಗಿಸುವುದು ಬೇರೆಯಾವುದೂ ಇಲ್ಲ. ಯಾವ ಮನುಷ್ಯನೂ ಮಲಮೂತ್ರಗಳನ್ನು ದೃಷ್ಟಿಸಿ ನೋಡಬಾರದು. ಕಾಲಿಂದ ತುಳಿಯಲೂ ಬಾರದು. ಸ್ಪರ್ಶಿಸಲೂ ಬಾರದು. ಇತರರು ಉಪಯೋಗಿಸಿದ ಬಟ್ಟೆಗಳನ್ನಾಗಲಿ, ಪಾದರಕ್ಷೆಗಳನ್ನಾಗಲಿ ಇನ್ನೊಬ್ಬನು ಉಪಯೋಗಿಸಬಾರದು. ಯಜ್ಞದಲ್ಲಿ ಉಪಯೋಗಿಸಲ್ಪಟ್ಟ ಮೃಗಗಳನ್ನು ಹೊರತು ಇತರಪಶುಗಳ ಮಾಂಸವನ್ನು ತಿನ್ನಬಾರದು. ಮೃಗಗಳ ಬೆನ್ನಿನ ಮಾಂಸವನ್ನು ತಿನ್ನಬಾರದು. ಮಲಮೂತ್ರಗಳನ್ನು ವಿಸರ್ಜಿಸಿ ಬಂದರೆ ಅಥವಾ ಬೀದಿಯಲ್ಲಿ ಸಂಚಾರಮಾಡಿಬಂದರೆ, ಕಾಲುಗಳನ್ನು ತೊಳೆಯದೆ ನೆಟ್ಟಗ ಒಳಕ್ಕೆ ಪ್ರವೇಶಿಸಬಾರದು. ವೇದಾಧ್ಯಯನವನ್ನು ಮಾಡುವುದಕ್ಕೆ ಮತ್ತು ಭೋಜನ ಮಾಡುವುದಕ್ಕೆ ಮೊದಲು ಕೈಕಾಲುಗಳನ್ನು ತೊಳೆದುಕೊಂಡು ಕುಳಿತುಕೊಳ್ಳಬೇಕು. ಹಲ್ಲುಜ್ಜುವ ಕಡ್ಡಿಗಳಿಂದಲೇ ಹಲ್ಲುಗಳನ್ನು ತಿಕ್ಕಿ ತೊಳೆದು ಶುದ್ಧಮಾಡಬೇಕು. ಸೂರ್ಯೋದಯಕಾಲದಲ್ಲಿ ಯಾವನೂ ಹಾಸಿಗೆಯಲ್ಲಿ ಮಲಗಿರಬಾರದು. ಒಂದು ಸಲ ಉಜ್ಜಿದ ಹಲ್ಲುಕಡ್ಡಿಯನ್ನು ಬಿಸಾಡಿ ಪ್ರತಿದಿನವೂ ಹೊಸ ಕಡ್ಡಿಗಳನ್ನು ಉಪಯೋಗಿಸಬೇಕು. ಶಾಸ್ತ್ರನಿಷಿದ್ಧವಲ್ಲದ ಆಹಾರಗಳನ್ನೇ ತೆಗೆದುಕೊಳ್ಳಬೇಕು. ಪೌರ್ಣಮಿ ಮತ್ತು ಅಮಾವಾಸ್ಯೆಯ ದಿನಗಳಲ್ಲಿ ಯಾವ ಆಹಾರವನ್ನೂ ತೆಗೆದುಕೊಳ್ಳಬಾರದು. ಮಲಜಲ ವಿಸರ್ಜನೆಗಳನ್ನು ಮಾಡುವಾಗ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ಅಪರಿಚಿತವಾದ ಸ್ತ್ರೀಯೊಡನೆಯಾಗಲಿ, ಗರ್ಭಿಣಿಯರು ಅಥವಾ [illegible] ಬಾಣಂತಿಯರೊಡನೆಯಾಗಲಿ ಸಂಭೋಗವನ್ನು ಮಾಡಬಾರದು. ಉತ್ತರ ಮತ್ತು ಪಶ್ಚಿಮದ ಕಡೆಗೆ ತಲೆಯನ್ನಿಟ್ಟು ನಿದ್ರೆಮಾಡಬಾರದು. ರಾತ್ರಿಯಲ್ಲಿಯಾಗಲಿ ಮೈಮೇಲೆ ಯಾವಬಟ್ಟೆಯೂ ಇಲ್ಲದೆಯಾಗಲಿ ಸ್ನಾನಮಾಡಬಾರದು. ಯಾವನೂ ಪ್ರತಿದಿನವೂ ಒದ್ದೆಬಟ್ಟೆಯನ್ನು ಉಟ್ಟುಕೊಳ್ಳಬಾರದು. ಧಾನ್ಯಗಳು ಬೆಳೆಯುವ ಹೊಲಗದ್ದೆಗಳಲ್ಲಿ ಮಲಮೂತ್ರಗಳನ್ನು ಬಿಡಬಾರದು. ಮತ್ತು ಗ್ರಾಮಕ್ಕೆ ಬಹಳ ಸಮೀಪವಾದ ಗ್ರಾಮಗಳಲ್ಲಿಯೂ ಮಲಮೂತ್ರಗಳನ್ನು ವಿಸರ್ಜಿಸಬಾರದು. ಜಲಾಶಯಗಳಲ್ಲಿಯೂ ಮಲಮೂತ್ರಗಳನ್ನು ಬಿಡಬಾರದು. ಯಾವ ಆಹಾರವನ್ನು ಭುಜಿಸುವುದಕ್ಕೂ ಮೊದಲು ಮೂರಾವರ್ತಿಗೆ ಕಡಿಮೆಯಿಲ್ಲದೆ ಬಾಯಿ ಮುಕ್ಕಳಿಸಿ ಶುದ್ಧಮಾಡಬೇಕು. ಆಹಾರವನ್ನು ಭುಜಿಸಿದಮೇಲೆಯೂ ಎರಡಾವರ್ತಿ ಬಾಯನ್ನು ಮುಕ್ಕಳಿಸಬೇಕು. ಆಹಾರವನ್ನು ಭುಜಿಸುವಾಗ ಮೌನದಿಂದ ಭುಜಿಸಬೇಕು. ತಿಂದ ಆಹಾರವನ್ನು ನಿರಾಕರಿಸಬಾರದು. ಧಾನ್ಯದ ಹೊಟ್ಟುಗಳ ಮೇಲೆಯೂ, ಕೂದಲು, ಬೂದಿ, ಎಲುಬು ಇವುಗಳಮೇಲೆಯೂ ಕುಳ್ಳಿರಬಾರದು. ಒಬ್ಬನು ಸ್ನಾನಮಾಡಿದ ಪಾತ್ರೆಯ ನೀರಿನಲ್ಲಿ ಮತ್ತೊಬ್ಬನು ಸ್ನಾನಮಾಡಬಾರದು. ಯಾವುದನ್ನು ತಿನ್ನಬೇಕಾದರೂ ಕುಳಿತಹಾಗೆಯೇ ತಿನ್ನಬೇಕು. ನಡೆಯುವಾಗಲೂ ನಿಂತಿರುವಾಗಲೂ ತಿನ್ನಬಾರದು. ಬೂದಿಯಮೇಲೆ ಮಲಮೂತ್ರಗಳನ್ನು ವಿಸರ್ಜಿಸಬಾರದು. ಭೋಜನಕ್ಕೆ ಕುಳ್ಳಿರುವಾಗ ಕಾಲನ್ನು ತೊಳೆದೇ ಕುಳ್ಳಿರಬೇಕು. ಒದ್ದೆಯಕಾಲಿನೊಡನೆ ಮಲಗಬಾರದು. ಮೈಯನ್ನು ಬೆತ್ತಲೆ ಬಿಟ್ಟುಕೊಂಡು ಮಲಗಬಾರದು. ಮತ್ತೊಬ್ಬರು ತಿಂದು ಮಿಗಿಸಿದ ಆಹಾರಪದಾರ್ಥಗಳನ್ನು ಕೈಯಿಂದ ಮುಟ್ಟಲೂ ಬಾರದು. ಒಬ್ಬನು ಮತ್ತೊಬ್ಬನ ತಲೆಯಮೇಲೆ ಹೊಡೆಯಬಾರದು. ಅವನ ತಲೆಕೂದಲನ್ನು ಹಿಡಿದು ಎಳೆಯಬಾರದು. ಸ್ನಾನಮಾಡುವಾಗ ನೀರಿನಲ್ಲಿ ಬಾರಿಬಾರಿಗೂ ತಲೆಯನ್ನು ಮುಳುಗಿಸಬಾರದು. ಇದರಿಂದ ಆಯುಸ್ಸು ಕ್ಷೀಣಿಸುವುದು. ನೀರಿನಲ್ಲಿ ತಲೆಯನ್ನು ಮುಳುಗಿ ಸ್ನಾನಮಾಡಿ ಬಂದಮೇಲೆ ದೇಹದ ಯಾವ ಅವಯವಕ್ಕೂ ಎಣ್ಣೆಯನ್ನು ಲೇಪಿಸಬಾರದು. ಸ್ವಲ್ಪ ಎಳ್ಳನ್ನು ತಿನ್ನದೆ ಆಹಾರವನ್ನು ಮುಗಿಸಬಾರದು. ತಾನು ತಿಂದು ಮಿಗಿಸಿದ ಎಂಜಲನ್ನೂ, ಎಲೆಗಳನ್ನೂ ಜನಗಳು ವಾಸಮಾಡದ ದೂರಪ್ರದೇಶಕ್ಕೆ ಬಿಸಾಡಬೇಕು. ಕೆಂಪುಬಣ್ಣದ ಹೂಗಳನ್ನು ಮುಡಿಯಬಾರದು. ಸ್ನಾನಮಾಡಿದೊಡನೆ ಮೈಗೆ ಸುಗಂಧವನ್ನು ಲೇಪಿಸಬೇಕು. ಒಬ್ಬನು ಕೆಳಗೆ ಉಡುವ ಬಟ್ಟೆಯನ್ನು ಮೇಲೆ ಹೊದಿಯುವುದಕ್ಕೂ ಹೊದೆಯುವ ಬಟ್ಟೆಯನ್ನು ಉಡುವುದಕ್ಕೂ ಉಪಯೋಗಿಸಬಾರದು. ಹಾಸಿಗೆಯಲ್ಲಿ ಮಲಗುವುದಕ್ಕೆ ಹೋಗುವಾಗ ಅದಕ್ಕಾಗಿಯೇ ಬೇರೆ ಉಡುಪನ್ನು ಉಪಯೋಗಿಸಬೇಕು. ಬೀದಿಯಲ್ಲಿ ಸಂಚಾರಮಾಡುವುದಕ್ಕೂ ಪ್ರತ್ಯೇಕವಾದ ಉಡುಪನ್ನು ಇಟ್ಟಿರಬೇಕು. ಅಮಾವಾಸ್ಯೆ, ಪೌರ್ಣಮಿ, ಮುಂತಾದ ಪರ್ವದಿನಗಳಲ್ಲಿ ಸ್ತ್ರೀಸಂಗಮವನ್ನು ಮಾಡಬಾರದು. ಆಡು, ಹಸು, ನವಿಲು, ಇವುಗಳ ಮಾಂಸವನ್ನು ತಿನ್ನಬಾರದು. ಒಣಗಿದ ಅಥವಾ ಹಳೆಯ ಮಾಂಸವನ್ನು ತಿನ್ನಬಾರದು. ಬೆಳಗ್ಗೆ ಒಂದು ಸಲ ರಾತ್ರಿಯಲ್ಲಿ ಒಂದು ಸಲಮಾತ್ರವೇ ಆಹಾರವನ್ನು ತೆಗೆದುಕೊಳ್ಳಬೇಕು. ಆ ಎರಡು ವೇಳೆಗಳಲ್ಲಿ ಹೊರತು ಬೇರೆ ಯಾವ ವೇಳೆಯಲ್ಲಿಯೂ ಭುಜಿಸಬಾರದು. ಆಹಾರವಸ್ತುಗಳಲ್ಲಿ ಕೂದಲು ಸಿಕ್ಕಿದರೆ ಅಂತಹ ಆಹಾರವನ್ನು ಭುಜಿಸಬಾರದು. ಕ್ಷೇಮಾರೋಗ್ಯವನ್ನು ಬಯಸುವವನು ಆಹಾರಾಂತ್ಯದಲ್ಲಿ ಮೊಸರನ್ನು ಕುಡಿಯಬಾರದು. ಭೋಜನವಾದ ಮೇಲೆ, ಕಣ್ಣು, ಕಿವಿ, ಮೂಗು, ಎರಡುಕೈಗಳು ಇವನ್ನೆಲ್ಲ ಚೆನ್ನಾಗಿ ತೊಳೆಯಬೇಕು. ಹಗಲುಹೊತ್ತಿನಲ್ಲಿ ಸ್ತ್ರೀಸಂಭೋಗವನ್ನು ಮಾಡಬಾರದು. ಮನೆಯ ಬಾಳಕರು, ಬಂಜೆ ಹೆಂಗಸು ಇವರಲ್ಲಿಯೂ ಸಂಗಮಿಸಬಾರದು. ಸಂಜೆಯಹೊತ್ತಿನಲ್ಲಿ ಮಲಗಿರಬಾರದು. ರಾತ್ರಿಯಲ್ಲಿ ಅತಿಥಿಗಳನ್ನು ಕರೆದು, ಊಟಮಾಡಿಸುವಾಗ ಅವರನ್ನು ಅಧಿಕವಾಗಿ ಭುಜಿಸುವುದಕ್ಕೆ ನಿರ್ಬಂಧಿಸಬಾರದು. ಊಟಕ್ಕೆ ಹೋದವನೂ ದಾಕ್ಷಿಣ್ಯಕ್ಕಾಗಿ ಮಿತಿಮೀರಿ ತಿನ್ನಲೂಬಾರದು.

ವಿವಾಹವಿಷಯದಲ್ಲಿ ಯಾವುದೊಂದು ಅಂಗವು ಹೀನವಾಗಿದ್ದರೂ, ಅಂತಹ ಕನ್ಯೆಯನ್ನು ಮದುವೆಮಾಡಿಕೊಳ್ಳಬಾರದು. ಸಮಾನಗೋತ್ರದಲ್ಲಿ ಮತ್ತು ಒಂದೇ ಪ್ರವರದ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನೂ ವಿವಾಹವಾಗಬಾರದು. ತಾಯಿಯ ಕುಲದ ಕನ್ಯೆಯನ್ನೂ ಮದುವೆಯಾಗಬಾರದು. ವಯಸ್ಸಿನಲ್ಲಿ ತನಗಿಂತಲೂ ದೊಡ್ಡವಳಾದ ಹೆಂಗಸೊಡನೆಯೂ, ಕುಷ್ಠರೋಗವುಳ್ಳ ಹೆಂಗಸೊಡನೆಯೂ ಸಂಗಮಿಸಬಾರದು. ಅಪಸ್ಮಾರ ಅಥವಾ ಕುಷ್ಠರೋಗವಿದ್ದವರಾರಾದರೂ ಹಿಂದೆ ಆ ಕುಟುಂಬದಲ್ಲಿದ್ದರೆ, ಆ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನೂ ಮದುವೆಯಾಗಬಾರದು. ಹಗಲುಹೊತ್ತು ನಿದ್ರೆಮಾಡುವುದು ಆಯುಃಕ್ಷಯಕ್ಕೆ ಕಾರಣವು. ಸೂರ್ಯೋದಯವಾದಮೇಲೆ ನಿದ್ರಿಸುವುದರಿಂದಲೂ ಆಯುಸ್ಸು ಕ್ಷೀಣಿಸುವುದು. ತನ್ನ ಪತ್ನಿಯು........ವಾ ಐದನೆಯ ದಿನದಲ್ಲಿ ಸಂಗಮಿಸುವುದರಿಂದ ಹೆಣ್ಣುಮಗುವೂ, ಆ ನೆಯ ದಿನದಲ್ಲಿ ಸಂಗಮಿಸುವುದರಿಂದ ಗಂಡುಮಗುವೂ ಹುಟ್ಟುವುದು.

ಓ ಯುಧಿಷ್ಠಿರಾ! ದೀರ್ಘಾಯುಷ್ಯವನ್ನು ಕೋರುವವನು ಅನುಸರಿಸಬೇಕಾದ ಮಾರ್ಗಗಳನ್ನು ನಿನಗೆ ನಾನು ಅದನ್ನು ಸಂಗ್ರಹವಾಗಿ ತಿಳಿಸಿದೆನು. ಇನ್ನೂ ಹೆಚ್ಚು ವಿವರಗಳನ್ನು ಕೇಳಿ ತಿಳಿಯಬೇಕೆಂಬ ಕೋರಿಕೆಯು ನಿನಗಿದ್ದರೆ, ವೇದತ್ರಯವನ್ನು ಬಲ್ಲ ಪಂಡಿತರಿಂದ ಕೇಳಿ ತಿಳಿಯಬಹುದು. ಮುಖ್ಯವಾಗಿ ಮನುಷ್ಯನ ನಡತೆಯೇ ಅವನ ಅಭ್ಯುದಯಕ್ಕೆ ಕಾರಣವು. ನಡತೆಯಿಂದಲೇ ಕೀರ್ತಿ! ನಡತೆಯಿಂದಲೇ ಮನುಷ್ಯನಿಗೆ ಆಯುರ್ವೃದ್ಧಿಯೆಂದು ತಿಳಿ!

ಅ. ಚ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನೆ ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 3

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ನೇ ಯಾತ್ರಾ ೧೬—೪—೩೩ ರಿಂದ ೧—೬—೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ನೇ ಯಾತ್ರಾಪ್ರವಾಸ ತಾ॥ ೧—೧೦—೧೯೩೩ ರಿಂದ ತಾ॥ ೨೯—೧೧—೧೯೩೩ ಪೂರಾ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜ. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವದು.

ಸದರಿ ಕಂಪನಿಯು ಎಂಜಿನ್ ರೆಂಟೆಗಳಿಂದ ಪಡಜಮೀನುಗಳು ಕಿರ್ದೀ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[14]

ಮೈಸೂರ್ ಏಜಂಟರು—
ದಿ ಯೂನಿವರ್ಸಲ್ ಟ್ರೇಡಿಂಗ್ ಕಂಪೆನಿ,
(ಆಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಜಿ. ಎ. ಶಿರೂರ,
ಆರ್ಗನಾಯಜರ,
ಶ್ರೀ ಗೌರೀಶಂಕರ ಕಂಪೆನಿ, ಹುಬ್ಬಳ್ಳಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ತಾಳಭಸ್ಮ	೧	೦—೮—೦
ಂಚಿನಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಂಖಭಸ್ಮ	೧	೦—೪—೦
ವಡಿಭಸ್ಮ	೧	೦—೪—೦
ಪ್ಪಿಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಲಾಜಿತ ಸೂರ್ಯಪುಟಿ	೧	೧—೦—೦
ಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ
ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು
ಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.
ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ
ಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ
ವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು
ಮವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ
ರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ
ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ
ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು
ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ
ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ
ಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ
ದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು
ಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು
ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ
ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ
ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ
ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ
ಭದ್ರವಾದ ಬೈಂಡನ್ನು ಮಾಡಿದೆ.

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಡಿಸ್ಸು ರೂ. 1—8—0.

ಮಲೇರಿನ್ ಪಿಲ್ಲ್—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಡಿಸ್ಸಿಗೆ 0-9.0, 1ಡಿಸ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೊಮ್ಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪಟ್ಟಿಸೂತ್ರಕ್ಕೆ ಬರೆಯಿರಿ. ಧನಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ಸೀತಸ, ದಮ್ಮು ರೋಗಗಳನ್ನೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಡಿಸ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ '**ಕಂಪೌಂಡು ಸಿರಪು ಫೋಸ್ಫರ**' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

[53] 8 ಡಿಸ್ಸಿಗೆ ರೂ. 3-8-0.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ [illegible] ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[34]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦ ಆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರ**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಹ್ಯ ಶಿಖರಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ

(Registered Trade Mark)

ಗಳನ್ನು ಕೊಟ್ಟಿ ರು. ಪ್ರಸಿದ್ಧವಾದ ನಶ್ಯದ ಪುಡಿಯ ಸ್ವಸ್ಥವಾಗುವ ವ ಧಿಗಳು ಯಾವವೆ ರೆ:—ಪಿನಸಿ, ಒ ತಲೆನೋವು, ತಲೆ ಲ್ಲಿಯ ರೋಗಗ ಕಣ್ಣುಗಳಲ್ಲಿ ಉಂ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-

ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[35] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ನೇ ಸೆಪ್ಟಂಬರ್ ೧೯೩೩ [ಸಂಚಿಕೆ ೨೦

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ದುಃಖವಾರ್ತೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ಚಿಕ್ಕೇಹಳ್ಳಿ ಗ್ರಾಮ ಒಂಯ ಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ದೇ ಶ್ರಾವಣ ಬಹುಳ ೧೪ ಭಾನುವಾರ ದಿವಸ ಶಿವಸಾಯು ವನ್ನು ಹೊಂದಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾ ವೆನಿಸುತ್ತದೆ. ಸಮಾಧಿಕಾರ್ಯಗಳೆಲ್ಲವೂ ಶ್ರೀ|| ಷ|| ಬ್ರ|| ಹಸು ಡು ಪಟ್ಟದಸ್ವಾಮಿಗಳವರಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪ ವು. ಶಿವೈಕ್ಯರಾದ ಶ್ರೀ|| ಸ್ವಾಮಿಗಳವರು ತಮ್ಮ ಜೀವಿತ ಲವನ್ನೆಲ್ಲಾ ಪುರಾಣಾದಿ ಧರ್ಮಬೋಧೆಯಲ್ಲಿಯೇ ಕಳೆದರು. ಪ್ರಾಂತ್ಯದಲ್ಲೆಲ್ಲಾ ಇವರು ಅದ್ವಿತೀಯ ಪುರಾಣಿಕರೆನಿ ಕೊಂಡು ಮೆರೆದರು. ಶ್ರೀಮದುಜ್ಜಯಿನೀ ಜಗದ್ಗುರುಗಳವರು ವರು ಹೇಳುವ ಪುರಾಣ ಪದ್ಧತಿಗೆ ಮೆಚ್ಚಿ ಇವರಿಗೆ 'ಪುರಾಣ ಚಕ್ರಿ' ಎಂಬ ಬಿರುದನ್ನು ದಯಪಾಲಿಸಿದ್ದರು. ಇಂಥವರ ಯೋಗದಿಂದ ವೀರಶೈವ ಸಮಾಜಕ್ಕೆ ವಿಶೇಷವಾದ ಕೊರತೆಯಾ ಯಿತೆಂದು ಹೇಳಲು ಯಾವ ಸಂದೇಹವೂ ಇಲ್ಲ. ಜಗದಾಚಾ ರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುವ,

ಓರ್ವ ಗ್ರಾಮವಾಸಿ.

ಜಾಂಸಗತ ಪ್ರಾಂತಕ್ಕೆ ಸೇರಿದ ಕುರಾಂಗಾ ರೈಲ್ವೇ ಷನ್ನಿನ ಸಮೀಪದಲ್ಲಿ ಮಳೆಯಿದೆಸೆಯಿಂದ ಒಂದು ಲ್ವೇ ಸೇತುವೆಯು ಬಹಳ ಅಪಾಯಸ್ಥಿತಿಯಲ್ಲಿತ್ತು. ಲ್ಲಿ ಅದೇ ಮಾರ್ಗವಾಗಿ ರೈಲು ಬರುತ್ತಿದ್ದು ಕೆಲವು ಜನ ಕೂಲಿಹೆಂಗಸರು ಕಂಡು ರೈಲು ಸೇತುವೆಯ ಮೇಲಕ್ಕೆ ಬರದಿರಲೆಂದು ಕೆಂಪುಸೀರೆ ನ್ನು ಹಿಡಿದು ರೈಲ್ವೇ ರಸ್ತೆಯಲ್ಲಿ ನಿಂತರು. ರೈಲ ಕೂಗಿಸಿದರೂ ಆ ಹೆಂಗಸರು ದಾರಿಯನ್ನು ಬಿಡದೆ ಯೇ ನಿಂತಿರಲು ಡ್ರೈವರನು ಗಾಡಿಯನ್ನು ನಿಲ್ಲಿಸ ಾಯಿತು. ರೈಲ್ವೇ ಇಲಾಖೆಯವರು ಆ ಹೆಂಗಸರ ರ್ಯ ಮತ್ತು ದೂರಾಲೋಚನೆಗೆ ಸಂತೋಷಪಟ್ಟು ರಿಗೆ ಬಹುಮಾನಮಾಡಬೇಕೆಂದು ನಿರ್ಧರಿಸಿರುವರು.

ಎವ್ಡೊಕಿಮೊವ್ ಎಂಬ ಮಹಾಧೈರ್ಯಶಾಲಿಯಾದ ರಷ್ಯಾದೇಶಸ್ಥನಾದ ವೈಮಾನಿಕನು ಲೆನಿನ್‌ಗ್ರಾಡ್ ನಗರದ ಸಮೀಪದಲ್ಲಿ ೪ ಮೈಲು ಎತ್ತರದಿಂದ ಹಾರುತ್ತಿದ್ದ ವಿಮಾನದಿಂದ ಕೆಳಕ್ಕೆ ಧುಮುಕಿ ಭೂಮಿಗೆ ೫೦೦ ಗಜಗಳ ಹತ್ತಿರಕ್ಕೆ ಬಂದಾಗ ತನ್ನ ಬೆನ್ನಿಗೆ ಕಟ್ಟಿಕೊಂಡಿದ್ದ 'ಪ್ಯಾರಷೂಟ್' ಎಂಬ ಯಂತ್ರಸಾಧನವನ್ನು ಬಿಚ್ಚಿ ಸುರಕ್ಷಿತವಾಗಿ ಭೂಮಿಗೆ ಇಳಿದನಂತೆ! ಇದುವರೆಗೆ ಇಷ್ಟು ಎತ್ತರದಿಂದ ಯಾರೂ ಕೆಳಕ್ಕೆ ಧುಮುಕಿರಲಿಲ್ಲವಂತೆ!

"ಪೀಪಲ್" ಎಂಬ ವರ್ತಮಾನಪತ್ರದ ಸಿಮ್ಲಾ ಬಾತ್ಮೀದಾರರು ಗಾಂಧಿಯವರು ಸದ್ಯ ಬಿಡುಗಡೆ ಮಾಡಲ್ಪಟ್ಟಿದ್ದರೂ, ಅವರು ಸ್ವಲ್ಪ ಹುಷಾರಾದ ಕೂಡಲೇ ಪುನಃ ಕಾರಾಗೃಹಕ್ಕೆ ಕಳುಹಿಸಲ್ಪಡುವರೆಂದೂ, ಅವರು ಯಾವ ಕಾರಣದಿಂದಾಗಲಿ ಪುನಃ ಉಪವಾಸವ್ರತವನ್ನು ಕೈಕೊಂಡರೆ ಮತ್ತೆ ಬಿಡುಗಡೆ ಮಾಡಲ್ಪಡುವರೆಂದೂ, ಇಂಡಿಯಾ ಸರಕಾರದವರು ಅವರ ವಿಷಯದಲ್ಲಿ ಕಡೆಯವರೆಗೂ ಇದೇ ನೀತಿಯನ್ನೇ ಅನುಸರಿಸುವರೆಂದೂ ತಮ್ಮ ಪತ್ರಿಕೆಗೆ ಬರೆದಿರುತ್ತಾರೆ.

ಹೈದರಾಬಾದ್ ಪೋಲೀಸ್ ಹೆಡ್ ಕ್ವಾರ್ಟರ್ಸಿನಿಂದ ಒಬ್ಬ ಖೈದಿಯು ಬಹು ಚಮತ್ಕಾರವಾಗಿ ತಪ್ಪಿಸಿಕೊಂಡಿರುವನು. ಅಂತೋಣಿ ಎಂಬಾತನು ಒಂದು ಬಂಗಲೆಯಿಂದ ಸಾವಿರಾರು ರೂಪಾಯಿಗಳನ್ನು ಕದ್ದನೆಂಬ ಕಾರಣದಮೇಲೆ 10 ತಿಂಗಳ ಸಜೆಗೆ ಗುರಿಯಾಗಿದ್ದನು. ಒಂದು ದಿನ ಅವನು ಇತರ 50 ಜನ ಖೈದಿಗಳೊಡನೆ ಕೆಲಸಮಾಡುತ್ತಿದ್ದಾಗ ಒಬ್ಬ ಪೋಲೀಸ್ ಕಾನ್ಸ್ಟೆಬಲನ ಉಡುಪನ್ನು ಹೇಗೋ ಸಂಪಾದಿಸಿ, ಇತರರಿಗೆ ತಿಳಿಯದಂತೆ ಆ ಉಡುಪನ್ನು ಧರಿಸಿ, ಎಲ್ಲರೂ ನೋಡುತ್ತಿದ್ದಹಾಗೆಯೇ ಹೊರಕ್ಕೆ ಹೊರಟು ಹೋದನಂತೆ! ಈ ವಿಚಾರವು ಅಪರಾಧಿಗಳ ಹಾಜರಿಯನ್ನು ಕೂಗಿದಾಗ ಬಹಿರಂಗವಾಯಿತಂತೆ!

ಸ್ವೀಕಾರ

ಧಾರವಾಡ ಡಿ|| ಹಾನಗಲ್ಲ ತಾ|| ಆಲೂರಿನಲ್ಲಿರುವ ವೇ|| ಮಳೆಯಯ್ಯನವರು ಹಿರೇಮಠ ದ್ಯಾಮನಕೊಪ್ಪದ ಗೌಡರ ಗುರುಸ್ವಾಮಿಮಠ ಇವರು ಮುಂಡಗೋಡ ಪೇಟಾ ಚಿಗಳ್ಳಿಯಲ್ಲಿರುವ ತಮ್ಮ ಸಹೋದರ ಚಿ|| ಉಜ್ಜಯ್ಯನವರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಗುರುಕೃಪೆಯಿಂದ ಗುಣವಾದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹೊಸಪೇಟೆ ತಾಲೂಕು ಗಂಗಲಾಪುರದ ಮ|| ರಾ|| ಪಾಟೀಲ ಮಲ್ಲನಗೌಡರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಇಂಡಿಯಾ ಸರಕಾರದವರು ಜಪಾನಿನ ಹತ್ತೀ ಬಟ್ಟೆಗಳ ಮೇಲೆ ತೆರಿಗೆಯನ್ನು ಹೆಚ್ಚಾಗಿ ವಿಧಿಸಿರುವದರಿಂದ ಜಪಾನಿನ ವ್ಯಾಪಾರವು ಬಹಳ ಕಡಿಮೆಯಾಗಿರುವದೆಂದೂ, ಈ ಪರಿಸ್ಥಿತಿಯು ಇನ್ನೂ ಮುಂದುವರಿಯುವುದಾದರೆ ಜಪಾನೀಯರು ಭರತಖಂಡದ ಸ್ವಾತಂತ್ರ್ಯದ ಚಳವಳಿಗೆ ಉತ್ತೇಜನ ಕೊಡುವರೆಂದೂ 'ಬ್ಯೂನಸ್ ಏರಸ್' ನಗರದ ವರ್ತಕರಿಗೆ ಒಂದು ಸರ್ಕ್ಯುಲರ್ ಕಳುಹಿಸಲ್ಪಟ್ಟಿರುವದಂತೆ!

ಚೀನಾಸರಕಾರದವರು ಅಮೇರಿಕೆಯ ಸಂಯುಕ್ತಸಂಸ್ಥಾನದ ಸರಕಾರದವರಿಗೆ ೩೦ ಯುದ್ಧದ ವಿಮಾನಗಳಿಗಾಗಿ ಆರ್ಡರು ಕೊಟ್ಟಿರುತ್ತಾರೆ. ಇವುಗಳ ಕ್ರಯವು ೩೦,೦೦,೦೦೦ ರುಪಾಯಿಗಳಾಗುವವೆಂದೂ, ೩ ತಿಂಗಳೊಳಗಾಗಿ ವಿಮಾನಗಳು ಚೀನಾಕ್ಕೆ ಒದಗಿಸಲ್ಪಡುವವೆಂದೂ, ಪ್ರತಿಯೊಂದು ವಿಮಾನದಲ್ಲಿಯೂ ಎರಡೆರಡು ಮಿಷನ್‌ಗನ್ನುಗಳಿದ್ದು, ಗಂಟೆಗೆ ೨೦೦ ಮೈಲುಗಳಿಗಿಂತಲೂ ಹೆಚ್ಚು ವೇಗದಲ್ಲಿ ಸಂಚರಿಸಬಲ್ಲವೆಂದೂ ತಿಳಿದುಬಂದಿದೆ.

ಫ್ರಾನ್ಸ್ ಸರಕಾರದವರು ತಮಗೆ ಒದಗಿರುವ ಹಣಕಾಸಿನ ಮುಗ್ಗಟ್ಟನ್ನು ಹೋಗಲಾಡಿಸಿಕೊಳ್ಳಲು ಒಂದು ದೊಡ್ಡ ಲಾಟರಿಯನ್ನು ಏರ್ಪಡಿಸಿರುವರು. ಟಿಕೇಟುಗಳ ಸಂಖ್ಯೆ ೧,೦೦,೦೦,೦೦೦! ಟಿಕೇಟು 1ಕ್ಕೆ ೧೫ರೂ. ಗಳಂತೆ ಮಾರಬರುವ ೧೫,೦೦,೦೦,೦೦೦ ರೂಪಾಯಿಗಳಲ್ಲಿ ಒಟ್ಟು ೧೦,೦೦,೦೦೦ ಬಹುಮಾನಗಳನ್ನು ತೆಗೆಯುವರು. ೯,೦೦,೦೦೦ ರೂಪಾಯಿಗಳ ೫ ಮೊದಲನೆಯ ಬಹುಮಾನಗಳೂ, ೧,೮೦,೦೦೦ ರೂಪಾಯಿಗಳ ೧೦೦ ಎರಡನೇ ಬಹುಮಾನಗಳೂ ಕೊಡಲ್ಪಡುವವು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ದ್ವಿತೀಯೋಲ್ಲಾಸವು.

(ಮುಂದೆ ಸಾಗಿದುದು.)

ಈ ಅಧ್ಯಾತ್ಮವಿದ್ಯೆಯು 'ರಹಸ್ಯವಿದ್ಯೆ' ಯೆಂದೂ, 'ಉಪನಿಷದ್' ಎಂದೂ, 'ಶಿವಜೀವೈಕ್ಯ ಮಹಾಬೋಧಸಂಪ್ರದಾಯ ಪ್ರವರ್ತಕ ಶಾಸ್ತ್ರ' ವೆಂದೂ ಹೇಳಲ್ಪಡುವುದು. ಉಪನಿಷದ್ಗ್ರಂಥಗಳಲ್ಲಿಯೂ 'ಇತಿ ರಹಸ್ಯಮ್' 'ಇತ್ಯುಪನಿಷದ್' ಎಂಬ ಶಬ್ದಗಳು ಅಲ್ಲಲ್ಲಿ ಪ್ರಯೋಗಿಸಲ್ಪಟ್ಟಿವೆ. ಇಂತಪ್ಪ ರಹಸ್ಯವಿದ್ಯೆಯನ್ನು ಅನಧಿಕಾರಿಗಳಿಗೆ ಉಪದೇಶಿಸಕೂಡದೆಂಬರ್ಥಸೂಚಕವಾಕ್ಯಗಳಾದರೂ ಉಪನಿಷತ್ತುಗಳಲ್ಲಿವೆ. ಛಾಂದೋಗ್ಯದಲ್ಲಿ (೩-೧೧).

ಇದಂ ವಾವ ತಜ್ಜ್ಯೇಷ್ಠಾಯ ಪುತ್ರಾಯ ಪಿತಾ ಬ್ರಹ್ಮ ಪ್ರಬ್ರೂಯಾತ್ ಪ್ರಣಾಯ್ಯಾಯ ವಾನ್ತೇವಾಸಿನೇ ||೫||

ನಾನ್ಯಸ್ಮೈ ಕಸ್ಮೈಚನ ಯದ್ಯಪ್ಯಸ್ಮಾ ಇಮಾಮದ್ಭಿಃ ಪರಿಗೃಹೀತಾಂ ಧನಸ್ಯ ಪೂರ್ಣಾಂ ದದ್ಯಾದೇತದೇವ ತತೋಭೂಯ ಇತ್ಯೇತದೇವ ತತೋಭೂಯ ಇತಿ ||೬||

ಈ ಶಿವಜ್ಞಾನವನ್ನು ತಂದೆಯು ತನ್ನ ಹಿರಿಯ ಮಗನಿಗೆ ಅಥವಾ ವಿಶ್ವಾಸವುಳ್ಳ ವಿದ್ಯಾರ್ಥಿಗೆ (ಶಿಷ್ಯನಿಗೆ) ಉಪದೇಶಿಸತಕ್ಕದ್ದು; ಅನಧಿಕಾರಿಯಾದ ಬೇರೆ ಯಾವನಾದರೊಬ್ಬನು ನಾನಾರತ್ನಗಳುಳ್ಳದ್ದೂ, ಜಲಪರಿವೇಷ್ಟಿತವೂ ಆದ ವಸುಂಧರೆಯನ್ನೇ ಅರ್ಪಣಮಾಡಿದರೂ ಅವನಿಗೆ ಉಪದೇಶಿಸಕೂಡದು. ಎಂಬುದಾಗಿ ಹೇಳಲ್ಪಟ್ಟಿದೆ. ಯೋಗಜಾಗಮದಲ್ಲಿಯೂ ಇದೇ ಅಭಿಪ್ರಾಯಾನುಸಾರವಾದ ವಚನವಿದೆ.

ಭಕ್ತಸ್ಯೈವಾತ್ಮಶಿಷ್ಯಸ್ಯ ವಿರಕ್ತಸ್ಯ ಮಹಾಮತೇಃ |
ಗುರುಣಾ ಜ್ಞಾನಿನಾ ದೇಯಮಾನಂದರಸನಿರ್ಭರಮ್ ||

ಶಿವಜ್ಞಾನಿಯಾದ ಆಚಾರ್ಯನು ತನ್ನಲ್ಲಿ ಭಕ್ತಿವಿಶ್ವಾಸವುಳ್ಳವನೂ ವಿರಕ್ತನೂ ನಿರ್ಮಲಾಂತಃಕರಣನೂ ಆದ ಶಿಷ್ಯನಿಗೆ ಸ್ವಾತ್ಮಾನಂದರಸಾನುಭವೈಕಸಾಧನವಾದ ರಹಸ್ಯವಿದ್ಯಾರೂಪಶಾಸ್ತ್ರವನ್ನು ಉಪದೇಶಿಸತಕ್ಕದ್ದು. ಶ್ರೀ ರೇಣುಕಭಗವತ್ಪಾದರೂ— **'ಪರೀಕ್ಷಿತೇಭ್ಯೋ ದಾತವ್ಯಂ ಶಿಷ್ಯೇಭ್ಯೋ ನಾನ್ಯಥಾ ಕ್ವಚಿತ್** |' ಎಂದು ಅಗಸ್ತ್ಯನಿಗೆ ಆಜ್ಞಾಪಿಸಿದ್ದಾರೆ.

ಈ ಹಿಂದೆ ನಾವು ನಿರೂಪಿಸಿರುವಂತೆ, ಗುರುಗೃಹದಲ್ಲಿ ಎಷ್ಟೋ ವರ್ಷಗಳವರೆಗೆ ವಾಸಮಾಡಿದ ವಿದ್ಯಾರ್ಥಿಗಳಿಗಾದರೂ ಈ ರಹಸ್ಯವಿದ್ಯೆಯನ್ನು ಗುರುಗಳು ಅವರಿಗೆ ಕೊನೆಗೆ ಉಪದೇಶಿಸುತ್ತಿದ್ದರೆಂಬ ಸಂಗತಿಯನ್ನು ನಾವು ಪರ್ಯಾಲೋಚಿಸಿದರೆ, ಸಂಹಿತೆ-ಬ್ರಾಹ್ಮಣ-ಆರಣ್ಯಕ-ಉಪನಿಷದ್ ಎಂಬ ವೇದಭಾಗಗಳಲ್ಲಿ ಗುರುಗಳು ವಿದ್ಯಾರ್ಥಿಗಳ ಬುದ್ಧಿತಾರತಮ್ಯಾನುಗುಣವಾಗಿ ಆ ಆ ಕಾಲಕ್ಕೆ ತಕ್ಕ ಆ ಆ ವೇದಭಾಗವನ್ನು ಕಲಿಸುತ್ತಿದ್ದರೆಂಬುದು ಸಿದ್ಧವಾಗುವುದು. ಆ ಕ್ರಮವನ್ನನುಸರಿಸಿಯೇ ಬರೆದಿಡಲ್ಪಟ್ಟ ಅಧ್ಯಾಪನೆಯ ಸರಣಿಯುಳ್ಳ ಹಳೆಯ ಕೈಬರಹದ ಓಲೆಗಳಲ್ಲಿರುವ ವೈದಿಕ ವಾಙ್ಮಯದಲ್ಲಿ ಆರಣ್ಯಕೋಪನಿಷತ್ತುಗಳು ಕೊನೆಯ ಭಾಗದಲ್ಲಿರುವುವು. ಇದನ್ನು ಕಂಡು ವಿಭ್ರಾಂತರಾದ ಕೆಲಂಬರು ಪೂರ್ವಾಪರ ವಿಚಾರವಿಲ್ಲದೆ, ಸಂಹಿತಾಬ್ರಾಹ್ಮಣಗಳು ಮೊದಲಿನವೆಂದೂ ಆರಣ್ಯಕೋಪನಿಷತ್ತುಗಳು ಹಿಂದಿನಿಂದ ಹುಟ್ಟಿದವುಗಳೆಂದೂ ನುಡಿವರು. ಇನ್ನು ಬೇರೆ ಬೇರೆಯಾಗಿರುವ ಬ್ರಾಹ್ಮಣಗ್ರಂಥಗಳು ಬೇರೆ ಬೇರೆಯಾದ ಒಂದೊಂದು ಸಂಹಿತೆಗೆ ಸಂಬಂಧಿಸಿದವುಗಳಾಗಿರುವಂತೆ, ಆರಣ್ಯಕೋಪನಿಷತ್ತುಗಳಾದರೂ ಒಂದೊಂದು ಬ್ರಾಹ್ಮಣಗ್ರಂಥಕ್ಕೆ ಸಂಬಂಧಪಟ್ಟವುಗಳಾಗಿರುವುದಕ್ಕೆ ಆ ಆ ಶಾಖಾನುವರ್ತನವೇ ಕಾರಣವಾಗಿರುವುದು. ಆದ್ದರಿಂದ, ಆ ಆ ಶಾಖಾವಲಂಬಿಗಳು ತಮ್ಮ ತಮ್ಮ ವೈದಿಕ ವಿಭಾಗಗಳನ್ನು ಅಧ್ಯಯನ ಮಾಡುತ್ತಾರೆ.

ಋಗ್ವೇದಕ್ಕೆ ಸಂಬಂಧಿಸಿದ ಐತರೇಯ ಬ್ರಾಹ್ಮಣದಲ್ಲಿಯೇ ಐತರೇಯಾರಣ್ಯಕವಿದ್ದು ಅದರಲ್ಲಿಯೇ ಐತರೇಯೋಪನಿಷತ್ತೂ ಸೇರಿಸಲ್ಪಟ್ಟಿದೆ.

ಋಗ್ವೇದದೊಳಗಿನ ಕೌಷೀತಕೀ ಬ್ರಾಹ್ಮಣದ ಕೊನೆಗೆ ಕೌಷೀತಕೀ ಆರಣ್ಯಕ ವಿರುವುದು, ಅದರದೊಂದು ಭಾಗವೇ ಕೌಷೀತಕ್ಯುಪನಿಷತ್ತು.

ಕೃಷ್ಣಯಜುರ್ವೇದದಲ್ಲಿ (ತೈತ್ತಿರೀಯಸಂಹಿತೆಯಲ್ಲಿ) ತೈತ್ತಿರೀಯ ಬ್ರಾಹ್ಮಣದ ಮುಂದೆ ತೈತ್ತಿರೀಯಾರಣ್ಯಕವಿದ್ದು, ಅದರ ಕೊನೆಯಲ್ಲಿ ತೈತ್ತಿರೀಯೋಪನಿಷತ್ತೂ, ಮಹಾನಾರಾಯಣೋಪನಿಷತ್ತೂ ಇವೆ. ಮತ್ತು ಕಾಠಕ, ಶ್ವೇತಾಶ್ವತರ, ಮೈತ್ರಾಯಣೀಯ, ಕಾಲಾಗ್ನಿರುದ್ರ, ರುದ್ರಹೃದಯ, ಕೈವಲ್ಯ, ಪಂಚಬ್ರಹ್ಮವೆಂಬ ಉಪನಿಷತ್ತುಗಳಾದರೂ ಆ ಆ ಶಾಖೆಗಳ ಪ್ರವಿಭಕ್ತರೂಪಗಳಾಗಿರುತ್ತವೆ.

ಶುಕ್ಲಯಜುರ್ವೇದದ (ವಾಜಸನೇಯಿ ಮಾಧ್ಯನ್ದಿನಸಂಹಿತೆಯ) ೪೦ನೆಯ ಅಧ್ಯಾಯವೆಲ್ಲವೂ 'ಈಶ' ಉಪನಿಷತ್ತು. ಇದೇ ಸಂಹಿತೆಗೆ ಸಂಬಂಧಪಟ್ಟ ಶತಪಥಬ್ರಾಹ್ಮಣದ ೧೪ನೆಯ ಕಾಂಡದ ಮೊದಲನೆಯ ಏಕತೃತೀಯಾಂಶಭಾಗವು ಆರಣ್ಯಕವೆನಿಸುವುದು: ಈ ಕಾಂಡದ ಕೊನೆಯಭಾಗವೆಲ್ಲಾ ಬೃಹದಾರಣ್ಯಕೋಪನಿಷತ್ತು.

ಸಾಮವೇದದ ತಾಂಡ್ಯಬ್ರಾಹ್ಮಣಕ್ಕೆ ಅಂಗಭೂತವಾದ ಆರಣ್ಯಕದ ಕೊನೆಯಲ್ಲಿಯೇ ಛಾಂದೋಗ್ಯೋಪನಿಷತ್ತಿರುವುದು. ಮತ್ತು ಜೈಮಿನೀಯ ಉಪನಿಷದ್ಬ್ರಾಹ್ಮಣವೆಂಬುದೇ ಸಾಮವೇದದ ಜೈಮಿನೀಯ ಅಥವಾ ತಲವಕಾರ ಶಾಖೆಯ ಒಂದು ಆರಣ್ಯಕವಾಗಿರುವುದು. ಅದರ ಎರಡನೆಯ ಭಾಗಕ್ಕೆ ಕೇನೋಪನಿಷತ್ತು ಅಥವಾ ತಲವಕಾರೋಪನಿಷತ್ತು ಎಂದೂ ಹೇಳುತ್ತಾರೆ. ಮತ್ತು ರುದ್ರಾಕ್ಷಜಾಬಾಲ ಮೊದಲಾದ ಇನ್ನು ಕೆಲವು ಉಪನಿಷತ್ತುಗಳೂ ಸಾಮವೇದದ ಬೇರೆ ಬೇರೆ ಶಾಖೆಗಳ ಪ್ರವಿಭಕ್ತರೂಪವಾದುವೆಂದು ಪ್ರಸಿದ್ಧವಾಗಿವೆ.

ಅಥರ್ವವೇದದ ಬೇರೆ ಬೇರೆ ಶಾಖೆಗಳಿಗೆ ಸಂಬಂಧಿಸಿದ ಮುಂಡಕ, ಮಾಂಡೂಕ್ಯ, ಪ್ರಶ್ನ, ಬೃಹಜ್ಜಾಬಾಲ, ಭಸ್ಮಜಾಬಾಲ ಮೊದಲಾದ ಉಪನಿಷತ್ತುಗಳಾಗಿರುತ್ತವೆ.

ಈ ಮೇಲೆ ಉಲ್ಲೇಖಿಸಲ್ಪಟ್ಟ ಉಪನಿಷತ್ತುಗಳಲ್ಲದೆ ಇನ್ನೂ ಎಷ್ಟೋ ಉಪನಿಷತ್ತುಗಳಿರುವುವೆಂದು ಕೆಲವರು ಹೇಳುತ್ತಾರೆ. ಅವರ ಹೇಳುವಿಕೆಯ ಪ್ರಕಾರ ಆ ಎಲ್ಲ ಉಪನಿಷತ್ತುಗಳನ್ನು ಲೆಕ್ಕಮಾಡಿದರೆ, ಅವು ೧೦೦-೧೫೦ಕ್ಕಿಂತ ಮೇಲ್ಪಟ್ಟು ಆಗುವುವು. ಮುಂಬಯಿ ನಿರ್ಣಯಸಾಗರ ಮುದ್ರಣಾಲಯದೊಡೆಯರು ೧೦೮ ಉಪನಿಷತ್ತುಗಳನ್ನೊಳಗೊಂಡ ಪುಸ್ತಕವೊಂದನ್ನು ಪ್ರಸಿದ್ಧಪಡಿಸಿರುವರು. ಪುಣೆಯ ಆನಂದಾಶ್ರಮ ಸಂಸ್ಕೃತಗ್ರಂಥಮಾಲೆಯಲ್ಲಿ ೩೨ ಉಪನಿಷತ್ತುಗಳ ಸಮುಚ್ಚಯವೂ ಪೋಣಿಸಲ್ಪಟ್ಟಿದೆ. ಮದ್ರಾಸ ಅಡಿಯಾರ್ ಪುಸ್ತಕಾಲಯಾಧ್ಯಕ್ಷರಾದ ಅ. ಮಹಾದೇವಶಾಸ್ತ್ರಿಗಳವರು ಅಷ್ಟೋತ್ತರಶತೋಪನಿಷದಂತರ್ಗತಗಳಾದ ಹದಿನೈದು ಶೈವೋಪನಿಷತ್ತುಗಳನ್ನು ಮುದ್ರಣಮಾಡಿಸಿದ್ದಾರೆ. ಆದರೆ, ಈ ಮೇಲೆ ತೋರಿಸಲ್ಪಟ್ಟ ಎಲ್ಲ ಉಪನಿಷತ್ತುಗಳಲ್ಲಿಯೂ ಹತ್ತೇ ಮುಖ್ಯವಾದುವೆಂದು ಕೆಲವರ ಅಭಿಪ್ರಾಯವಿದೆ. ಅವರಿಂದ ಹೇಳಲ್ಪಡುವ ಹತ್ತು ಉಪನಿಷತ್ತುಗಳ ಸಂಗ್ರಹದರ್ಶಕವಾದ ಒಂದು ಶ್ಲೋಕವಿರುವುದು—

ಈಶ ಕೇನ ಕಠ ಪ್ರಶ್ನ ಮುಂಡ ಮಾಂಡೂಕ್ಯ ತಿತ್ತಿರಿಃ |
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ ತಥಾ ||

ಈ ಶ್ಲೋಕವು ಯಾವ ಗ್ರಂಥದೊಳಗಿನದು? ಮತ್ತು ಇದರ ಕರ್ತನಾವನು? ಎಂಬುದು ಈ ವರೆಗೆ ನಮಗೆ ಗೊತ್ತಾಗಿಲ್ಲ. ಅದು ಹಾಗಿರಲಿ? (ಸಶೇಷ)

ರೇಣುಕವಿಜಯಪುರಾಣಶ್ರವಣ.

ಮಾವಲಿ.

ಶ್ರಾವಣಮಾಸವು ಎಲ್ಲಾ ಮಾಸಗಳಿಗಿಂತಲೂ ಹಿಂದುಗಳಿ ಅತಿ ಪವಿತ್ರತರವಾದ ಮಾಸವಾಗಿರುತ್ತದೆ. ಇಂತಹ ಪವಿತ್ರಮಾ ದಲ್ಲಿ ಹಿಂದುಗಳು ಪ್ರತಿದಿನದಲ್ಲಿಯೂ ದೇವಾಲಯ ಗುರುಮ ಇತ್ಯಾದಿ ಪವಿತ್ರಸ್ಥಳಗಳಲ್ಲಿ ಶಿವಭಜನೆ ಮಾಡುವುದೂ, ಮಹಾ ತ್ಮರ ಕಥೆಗಳನ್ನು ಓದಿಸಿ ಅದ್ಭುತಲೀಲೆಗಳನ್ನು ಕೇಳಿ ತಿಳಿದುಕೊ ಳ್ಳುವುದೂ ಪಾಪವಿಧ್ವಂಸಕವಾಗಿರುವುದೆಂಬುದು ಸರ್ವಶ್ರುತವಿ ಯಷ್ಟೆ! ಇದರಂತೆ ಸೊರಬ ತಾಲೂಕು ಮಾವಲಿ ಗ್ರಾಮಸ್ಥ ಪ್ರಮುಖರೂ, ಗುರುಭಕ್ತಿಪರರೂ ಆಗಿರುವ ವೇ|| ಮಠದ ತೋಂಟದಪ್ಪಯ್ಯನವರು, ಮ|| ರಾ|| ಗೌಡನವರ ಯಜಮಾ ಮಲ್ಲಪ್ಪಗೌಡರು, ಮ|| ರಾ|| ಮಲಕಪ್ಪಗೌಡರು, ಮ||ರಾ|| ಟಂಕಸಾಲೆ ಶಾಂತವೀರಪ್ಪಗೌಡರು, ಮ||ರಾ|| ಕೋರಿಕೊಪ್ಪದ ಲಿಂಗಪ್ಪಗೌಡರು ಇವರೇ ಮುಂತಾದವರು ಕೂಡಿ ಮಾವಲಿ ಸ್ಕೂ ಲಿನ ಅಸಿಸ್ಟೆಂಟ್ ಮಾಸ್ತರಾಗಿರುವ ವೇ|| ಸಿದ್ಧಲಿಂಗಾರ್ಯ ಕಸಬಾಮಠ ಜಡೆಕೋಟಿ ಇವರನ್ನು ಪ್ರಾರ್ಥಿಸಿಕೊಂಡಪ್ರಕಾ ಸದರಿಯವರು ಸಂಸ್ಕೃತದಲ್ಲಿ ವಿರಚಿತವಾದ ರೇಣುಕವಿಜಯವೆಂ ಪುರಾಣವನ್ನು ಶ್ರಾವಣಮಾಸಪೂರ್ತಿಯಾಗಿ ಬಹು ಸ್ವಾರಸ್ಯ ವಾಗಿ ಹೇಳಿ ಶ್ರೀ ಜಗದ್ಗುರು ರೇಣುಕರ ಅದ್ಭುತಲೀಲೆಗ ಭಕ್ತರ ಹೃದಯಕುಹರದಲ್ಲಿ ಸ್ಥಿರವಾಗಿ ನೆಲೆಗೊಳ್ಳುವಂತೆ ಮಾ ದರು. ಪುರಾಣದಲ್ಲಿ ಸಂದರ್ಭಕ್ಕೆ ತಕ್ಕಂತೆ ಲಿಂಗ, ಜಂಗಮ ಭಸ್ಮ, ರುದ್ರಾಕ್ಷಿ, ಲಿಂಗಾರ್ಚನಕ್ರಮ, ಪಂಚಾಕ್ಷರೀ ಪ್ರಭಾ ಗುರುಭಕ್ತಿ ಇತ್ಯಾದಿ ವಿಷಯಗಳನ್ನು ಅತಿ ಸ್ವಾರಸ್ಯವಾಗಿ ಪ್ರ ಪಾದಿಸಿ ಸಕಲ ಭಕ್ತರನ್ನು ಧನ್ಯರನ್ನಾಗಿ ಮಾಡಿದರು. ಇಲ್ಲಿ ಭಜನಾಸಂಘದವರು ಪ್ರತಿದಿನವೂ ಪುರಾಣಶ್ರವಣವಾದ ಮೇ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಮಾಡು ದ್ದರು. ಭಾದ್ರಪದ ಶುದ್ಧ ಪ್ರತಿಪದೆಯ ದಿವಸ ಎಲ್ಲಾ ಭಕ್ತ ಸೇರಿ ಬಂದಮ್ಮನವರ ದೇವಾಲಯದಲ್ಲಿ ಪುರಾಣಾರಾಧನೆಯ ನೆರವೇರಿಸಿದರು. ಕೊಗರಸಿ ಮಳೆಮಠದ ಶ್ರೀ ವೇ|| ಪಟ್ಟಾಧ್ಯಕ್ಷ ಸ್ವಾಮಿಗಳವರ ಪಾದಪೂಜೆಯು ವಿಧಿವತ್ತಾಗಿ ನಡೆಯಿಸಲ್ಪ ತರುವಾಯ ಸಕಲರೂ ಗುರುಸೇವಕರಾಗಿ ಆಶೀರ್ವಾದಕ್ಕೆ ಪಾ ತ್ರರಾಗಿ ಧನ್ಯರಾದರು. ಅನಂತರ ಟಿ. ಕೆ. ಎಂ. ಸಿದ್ಧಾಂತಿ ಪ್ಪಯ್ಯಶಾಸ್ತ್ರಿಗಳವರ ಸಂಗೀತಕಛೇರಿಯು ನಡೆಯಿಸಲ್ಪಟ್ಟ ಇವರು ತಮ್ಮ ಸಂಗೀತರಸದಿಂದ ಸಭಿಕರ ಮನಸ್ಸನ್ನು ಆನಂ ಸಾಗರದಲ್ಲಿ ಮುಳುಗಿಸಿದರು. ಇದೇ ದಿನ ರಾತ್ರಿ ಶ್ರೀ ಜಗ ಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಅಭೂತಪೂ ವಾಗಿ ಉತ್ಸವವನ್ನು ಮಾಡಿದರು. ಉತ್ಸವಕಾಲದಲ್ಲಿ ಪ್ರತಿ ಬ್ಬ ಭಕ್ತರೂ ನಾರಿಕೇಳಾದಿ ಫಲಗಳನ್ನೂ ಪುಷ್ಪಗುಚ್ಛಗಳ ಜಗದಾಚಾರ್ಯರ ಪಾದಗಳಿಗೆ ಅರ್ಪಿಸುತ್ತಿದ್ದರು. ಸುವಾ ಯರು ಭಕ್ತಿಪುರಸ್ಸರವಾಗಿ ನೀರಾಜನವನ್ನೆತ್ತುತ್ತಿದ್ದರು. ಈ ರೀ ಯಾಗಿ ಜಗದಾಚಾರ್ಯರ ಪಾದಸೇವೆ ಮಾಡಿದ ಮಾವಲಿ ಗ್ರಾ ಸ್ಥರೇ ಧನ್ಯರು. ಇವರು ಇತಃಪರ ಜಗದಾಚಾರ್ಯರ ಸೇವೆ ನ್ನು ತ್ರಿಕರಣಶುದ್ಧಿಯಿಂದ ಮಾಡುತ್ತ ಸಕಲೇಷ್ಟಾರ್ಥಗಳ ಪಡೆಯತಕ್ಕವರಾಗಲೆಂದು ಹಾರೈಸುತ್ತೇನೆ. ಈ ಪುರಾಣಶ್ರ ಮಾಡಿದಂಥ ಶಿ. ಸಿದ್ಧಲಿಂಗಾರ್ಯರು ಚೆನ್ನಾಗಿ ಸಂಸ್ಕೃ ಮತ್ತು ಜ್ಯೋತಿಷ ವೈದಿಕ ವಿದ್ಯಾಭ್ಯಾಸವನ್ನು ಮಾಡಿ ರಾಗಿರುತ್ತಾರೆ. ಇವರು ಕನ್ನಡ ಭಾಷೆಯಲ್ಲಿ ಹೊಸದಾ ಪಾತಿವ್ರತ್ಯಪ್ರಕಾಶ ಮತ್ತು ರಜಪೂತರಾಜ್ಯವೆಂಬ ಎರಡು ನಾ ಟಕಗಳನ್ನು ಬರೆದಿರುತ್ತಾರೆ. ಯಾರಾದರೂ ನಾಟಕ ಕಂಪನಿಯ ಬಯಸಿದಲ್ಲಿ ಯೋಗ್ಯಪ್ರತಿಫಲವನ್ನು ಹೊಂದಿ ಕಥೆಗಳನ್ನು ಕೊ ಲು ಇಷ್ಟವುಳ್ಳವರಾಗಿದ್ದಾರೆ. ಇಷ್ಟವುಳ್ಳವರು ಪತ್ರವ್ಯವಹಾ ಮಾಡಿ ತಿಳಿದುಕೊಳ್ಳಬಹುದಾಗಿದೆ. ಜನಾನುರಾಗಿಗಳಾಗಿರ ಕೆ ಸಿದ್ಧಲಿಂಗಾರ್ಯರಿಗೆ ಭಗವತ್ಪಾದ ಶ್ರೀ ರೇಣುಕಾಚಾ ರು ಆಯುರಾರೋಗ್ಯಾದಿ ಸಕಲ ಸಂಪತ್ತನ್ನು ದಯಪಾ ಪಾಲಿಸಲೆಂದು ಬೇಡುತ್ತೇನೆ.

ಗುರುಬಸಪ್ಪ ಒಡೆಯರ್.
ಪಟೇಲ್, ಅಂ

ಬಾರ್ಸಿ.

ಸೋಲಾಪುರ ಡಿ|| ಬಾರ್ಸಿ ಪಟ್ಟಣದಲ್ಲಿ ಇರುವ ಶ್ರೀ ಗು ಮೂರ್ತಿರಾಚಲಿಂಗಸ್ವಾಮಿಗಳು ಪರಾಂಡಕರ ಇವರ ಮಠದ ಆಸ್ಥಾನವಿದ್ವಾನ್ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿ ರಿಂದ ರಚಿತವಾದ ರೇಣುಕವಿಜಯಮಹಾಪುರಾಣವು ಶ್ರಾ ಮಾಸದಲ್ಲಿ ಪೂರ್ತಿಯಾಗಿ ನೆರವೇರಿ ಭಾದ್ರಪದ ಶುದ್ಧ ೫ ರ ಪರಿಸಮಾಪ್ತಿಯನ್ನು ಹೊಂದಿತು. ವೀರಶೈವಮತಸ್ಥ ಭಕ್ತ

ಶ್ರೀ ಜಗದ್ಗುರು ರೇಣುಕಾಚಾರ್ಯರ ಅದ್ಭುತ ಲೀಲೆಗಳನ್ನು ಬಾರ್ಶಿ ಶಹರನಿವಾಸಿಗಳು ಕೇಳಿ ಧನ್ಯರಾದರು. ಕಡೆಯ ದಿವಸ ಉತ್ಸವವು ಶಹರದಲ್ಲೆಲ್ಲಾ ಅಭೂತಪೂರ್ವವಾಗಿ ನೆರವೇರಿತು. ಆ ದಿವಸ ಜಗದಾಚಾರ್ಯರ ಭಾವಚಿತ್ರಕ್ಕೆ ರುದ್ರಾಭಿಷೇಕವು ವಿಧ್ಯುಕ್ತವಾಗಿ ನೆರವೇರಿ ನೆರೆದಿದ್ದ ಭಕ್ತಮಾಹೇಶ್ವರ ಸಮುದಾಯಕ್ಕೆಲ್ಲಾ ತೀರ್ಥಪ್ರಸಾದಗಳು ಅನುಗ್ರಹಿಸಲ್ಪಟ್ಟವು. ಪರಾಂಡಕರಸ್ವಾಮಿಗಳ ಮಠವು ಲತಾಪಲ್ಲವಾದಿಗಳಿಂದ ಅತ್ಯಂತ ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಈ ಯಾವತ್ತು ಕಾರ್ಯಗಳು ನೆರವೇರಿದ ನಂತರ ಶ್ರೀ ಪರಾಂಡಕರ ಮಠದ ಪಟ್ಟದಸ್ವಾಮಿಗಳವರು ಪುರಾಣವನ್ನು ಹೇಳಿದ ಶ್ರೀ ವಿರೂಪಾಕ್ಷಸ್ವಾಮಿ ದೇಶಿಕೇಂದ್ರ ಲಾತೂರು ಇವರಿಗೆ ವಸ್ತ್ರಾದಿಗಳನ್ನು ಅಶೀರ್ವದಿಸಿದರು. ಅಲ್ಲದೆ ಕೆಲ ಕೆಲ ಜನ ಭಕ್ತರೂ ಸಹ ಪುರಾಣಿಕರಿಗೆ ಯೋಗ್ಯವಾದ ಸನ್ಮಾನವನ್ನು ಮಾಡಿದರು. ಒಟ್ಟಿಗೆ ಮಹಾರಾಷ್ಟ್ರದೇಶ ನಿವಾಸಿಗಳು ಜಗದಾಚಾರ್ಯರ ಅದ್ಭುತ ಲೀಲೆಗಳನ್ನು ಕೇಳಿ ಪುನೀತರಾದರೆಂಬ ವಿಷಯವನ್ನು ಅತ್ಯಾನಂದದಿಂದ ಉದ್ಘೋಷಿಸಬೇಕಾಗಿದೆ. ಇದರಂತೆಯೇ ಶ್ರೀ ಪರಾಂಡಕರ ಮಠದ ಸ್ವಾಮಿಗಳವರು ಪ್ರತಿವರ್ಷವೂ ಪವಿತ್ರವಾದ ಶ್ರಾವಣಮಾಸದಲ್ಲಿ ಜಗದಾಚಾರ್ಯರ ಸಚ್ಚರಿತ್ರಾದಿಗಳನ್ನು ಪಠನ ಮಾಡಿಸಿ ಭಕ್ತವೃಂದವನ್ನುದ್ಧರಿಸಬೇಕೆಂದು ಕೋರುವ,

ಓರ್ವ ವೀರಶೈವ, ಬಾರ್ಶಿ.

ಬೆಲವಂತರ.

ಧಾರವಾಡ ಡಿ|| ಕಲಘಟಗಿ ತಾಲೂಕು ಬೆಲವಂತರ ಹಿರೇಮಠದ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳವರ ಮಠದೊಳಗೆ ಶ್ರಾವಣಮಾಸದಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ವಿರಚಿತವಾದ ರೇಣುಕ ವಿಜಯ ಮಹಾಪುರಾಣವು ಅತ್ಯಂತ ವೈಭವದಿಂದ ನೆರವೇರಿತು. ಹಿಂದಕ್ಕೆ ಇದೇ ಸ್ಥಳದಲ್ಲಿ ಅನೇಕ ಪುರಾಣಗಳು ನೆರವೇರಿದ್ದವು. ಆದರೆ ಈ ವರ್ಷ ಪುರಾಣಶ್ರವಣಕ್ಕೆ ಕೂಡುತ್ತಿದ್ದಷ್ಟು ಜನರು ಯಾವ ಕಾಲಕ್ಕೂ ಕೂಡುತ್ತಿದ್ದಿಲ್ಲವೆಂದು ಅತ್ಯಾನಂದದಿಂದ ಹೇಳಬೇಕಾಗಿದೆ. ಮಠವು ವಿಶಾಲವಾಗಿದ್ದರೂ ಜನಸಂದಣಿಯು ವಿಶೇಷವಾಗುತ್ತಿದ್ದುದರಿಂದ ಸ್ಥಳವೇ ಸಿಗುತ್ತಿದ್ದಿಲ್ಲ. ಇದಕ್ಕೆಲ್ಲಾ ಗುರುಸಾರ್ವಭೌಮರಾದ ಆ ಶ್ರೀ ರೇಣುಕಾಚಾರ್ಯರ ಅದ್ಭುತ ಚರಿತ್ರೆಯೇ ಮೂಲಕಾರಣವೆಂದು ಹೇಳಬೇಕಾಗಿದೆ. ಈ ವರ್ಷ ಇಲ್ಲಿಯ ಸರ್ವಭಕ್ತಮಂಡಳಿಯವರೂ ಜಗದಾಚಾರ್ಯರ ಮಹಿಮಾತಿಶಯಗಳನ್ನು ಶ್ರವಣಮಾಡಿ ಧನ್ಯರಾದರು. ಶ್ರೀ ರೇಣುಕಾಚಾರ್ಯರು ಸಮಸ್ತ ಸದ್ಭಕ್ತಮಂಡಳಿಗೆಲ್ಲಾ ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೀಯಲೆಂದು ಹಾರೈಸುವ.

ಪ್ರತ್ಯಕ್ಷದರ್ಶಿ.

ಕೊಟ್ಟೂರು.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ತೇರುಬಜಾರದಲ್ಲಿ 8-10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಲ್ಪಟ್ಟ ದೇವಾಲಯದಲ್ಲಿ ಇದೇ ಶ್ರಾವಣ ಶುದ್ಧ ೮ ಭಾನುವಾರ ದಿವಸ ಶ್ರೀ ನಂದೀಶ್ವರಮೂರ್ತಿಯ ಪ್ರತಿಷ್ಠೆಯು ಅತ್ಯಂತ ವೈಭವದಿಂದ ನೆರವೇರಿತು. ಈ ಮಹಾಕಾರ್ಯಕ್ಕಾಗಿ ಶ್ರೀ|| ಷ|| ಬ್ರ|| ಹಸುಗೋಡು ಪಟ್ಟದಸ್ವಾಮಿಗಳವರು ಶ್ರೀ|| ಷ|| ಬ್ರ|| ಮಂಗಳೂರು ಪಟ್ಟದಸ್ವಾಮಿಗಳವರು ವೇ|| ಉಜ್ಜಯಿನಿ ಶಂಕರಶಾಸ್ತ್ರಿಗಳು ಇವರೇ ಮೊದಲಾದವರು ಆಗಮಿಸಿದ್ದರು. ಈ ಮಹಾಕಾರ್ಯವು ವಿಧ್ಯುಕ್ತವಾಗಿ ನೆರವೇರಿತು. ಈ ಕಾರ್ಯವು ಪೂರೈಸಿದ ನಂತರ ಯಜಮಾನರಾದ ವೇ|| ಮಿರಾಕಳಭಟ್ಟದ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರು ಈ ನೂತನ ದೇವಾಲಯದಲ್ಲಿ ಶ್ರೀ ರೇಣುಕವಿಜಯ ಮಹಾಪುರಾಣವನ್ನು ಪ್ರಾರಂಭಿಸಬೇಕೆಂದು ಸೂಚಿಸಲಾಗಿ ಇವರ ಉತ್ತಮವಾದ ಸೂಚನೆಗೆ ಚಾ|| ಮ|| ಮೂಲೀಮನೆ ಮನ್ನಜ್ಜಪ್ಪನವರೇ ಮೊದಲಾದವರು ಅತ್ಯಂತ ಸಂತೋಷದಿಂದ ಒಪ್ಪಿಕೊಂಡು ಈ ಮಹಾಪುರಾಣವನ್ನು ಪ್ರಾರಂಭಿಸಿದರು. ಪುರಾಣವು ಸಂಗೀತ ಸಾಹಿತ್ಯಾದಿಗಳಿಂದ ಬಹು ಮನೋಹರವಾಗಿ ನೆರವೇರಿತು. ಕೊಟ್ಟೂರು ಗ್ರಾಮ ನಿವಾಸಿಗಳೆಲ್ಲಾ ಜಗದಾಚಾರ್ಯರ ಅನಂತ ಮಹಿಮೆಗಳನ್ನು ಕೇಳಿ ಧನ್ಯರಾದರು. ಇದೇ ಪ್ರಕಾರವಾಗಿ ಪ್ರತಿವರ್ಷವೂ ಈ ಗ್ರಾಮದಲ್ಲಿ ಪುರಪ್ರಮುಖರು ಗುರು ಚಕ್ರವರ್ತಿಗಳ ಪುರಾಣವನ್ನು ಸಮಸ್ತ ಜನರಿಗೆಲ್ಲಾ ಶ್ರವಣಮಾಡಿಸಿ ಸರ್ವರನ್ನೂ ಉದ್ಧರಿಸಬೇಕೆಂದು ಕೋರುವ

ಕೊಟ್ರಪ್ಪ ಕೊಟ್ಟೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಾಹೇಶ್ವರ ದೀಕ್ಷಾಸಮಾರಂಭ.

ಬಳ್ಳಾರಿ ಜಿಲ್ಲಾ ಹುವಿನಹಡಗಲಿ ತಾಲೂಕು ಪೈಕಿ (ಕಂದಗಲ್ಲು) ಪುರಗ್ರಾಮವು ತುಂಗಭದ್ರಾನದೀತೀರದಲ್ಲಿರುವುದು. ಈ ಗ್ರಾಮದಲ್ಲಿ ಪ್ರಾಚೀನಕಾಲದಿಂದಲೂ ಸೋಗಿಪುರವರ್ಗ ಕಟ್ಟಿಮನೆ ಪಟ್ಟಾಧ್ಯಕ್ಷರಾದ ಶ್ರೀ|| ಷ|| ಬ್ರ|| ಪೂರ್ವದಸ್ವಾಮಿಗಳವರು ತಮ್ಮ ಬೃಹನ್ಮಠದಲ್ಲಿ ಶಿವಯೋಗಾನುಷ್ಠಾನತತ್ಪರರಾಗಿ ಮಹಿಮಾಶಾಲಿಗಳಾಗಿದ್ದರು. ತತ್ಪೀಠಾಧಿಕಾರಿಗಳಾಗಿರುವ ಈಗಿನ ಶ್ರೀ ಸಿದ್ಧವೀರಶಿವಾಚಾರ್ಯಸ್ವಾಮಿಗಳು ಪರಮಶಾಂತಮೂರ್ತಿಗಳಾಗಿಯೂ, ಶಿವಪೂಜಾಧುರಂಧರರಾಗಿಯೂ, ಸರ್ವರಿಂದಲೂ ಮನ್ನಣೆ ಪಡೆಯುತ್ತ ತಮ್ಮ ಮಠದ ವ್ಯವಸ್ಥೆಯನ್ನು ಚೆನ್ನಾಗಿ ನಡೆಸುತ್ತಾ ವೃದ್ಧಿಗೆ ತಂದಿರುವರು. ಈ ಶ್ರೀಮುಖನಾಮಸಂವತ್ಸರದ ಶ್ರಾವಣ ಬ|| ೧೧ ಬುಧವಾರ ತಮ್ಮ ಮಠದಲ್ಲಿ ಕೆಲವು ಮಾಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರವು ಕಾವಲಿ ಭಕ್ತಾವೃತ್ತಿಮಠದ ವೇ|| ರುದ್ರಮುನಿಯಪ್ಪಯ್ಯನವರಿಂದಲೂ, ಹಿರೇಹಡಗಲಿ ಪುರಾಣಿಕಮಠದ ವೇ|| ಪರಮೇಶ್ವರಪ್ಪಯ್ಯನವರಿಂದಲೂ ವಿಧ್ಯುಕ್ತಪ್ರಕಾರ ಸ್ವಸ್ತಿ ಪುಣ್ಯಾಹವಾಚನ ನಾಂದೀ ಸಮಾರಾಧನ ಮೊದಲಾದವುಗಳಿಂದ ಸಕ್ರಮವಾಗಿ ಜರುಗಿಸಲ್ಪಟ್ಟಿತು. ತರುವಾಯ ಭೂರುದ್ರ ಮಹಾಸಂತರ್ಪಣೆಯು ಮೃಷ್ಟಾನ್ನದಾನಾದಿಗಳಿಂದಲೂ, ತಾಂಬೂಲ ದಕ್ಷಿಣೆಗಳಿಂದಲೂ ನೆರವೇರಿತು. ಈ ಸಮಾರಂಭಕ್ಕೆ ಗ್ರಾಮಾನುಗ್ರಾಮಗಳ ಭಕ್ತಮಾಹೇಶ್ವರರೂ, ಶಾಂತಪುರದ ಪಟ್ಟದಸ್ವಾಮಿಗಳೂ ಹಾಗೂ ಹುವಿನಹಡಗಲಿ ಮ|| ರಾ|| ಕೋರಿ ಗುರುಶಾಂತಪ್ಪನವರು, ಪಾಟೀಲ್ ಲಿಂಗನಗೌಡರು, ಚಿತ್ರವಾಡಿಗಿ ಶ್ರೀಮಂತ ಗುಗ್ಗರಿ ಹುಚ್ಚಪ್ಪನವರು, ನವಲಿ ಮಠದ ಶಿವರುದ್ರಯ್ಯನವರೇ ಮೊದಲಾದವರು ಆಗಮಿಸಿದ್ದರು. ಸಾಯಂಕಾಲ ಹಿರೇಹಡಗಲಿ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳವರು ದೇವನಂದನ ಮಹಾರಾಜನ ಶಿವಕೀರ್ತನವನ್ನು ನವರಸಭರಿತವಾಗಿ ಹೇಳಿದರು. ಸದರಿ ಶಾಸ್ತ್ರಿಗಳವರು ಸಮಾಜಸುಧಾರಣೆಗಾಗಿ ಗ್ರಾಮಾನುಗ್ರಾಮಗಳಲ್ಲಿ ಸಂಚರಿಸಿ ಶಿವಕೀರ್ತನಮೂಲಕ ಧರ್ಮಬೋಧಮಾಡುತ್ತಲೂ ತಮ್ಮಿಂದ ರಚಿತವಾಗಿರುವ ಸದ್ಗುರುಬೋಧ ಎಂಬ ಚಿಕ್ಕ ಪುಸ್ತಕಗಳನ್ನು ಹಳ್ಳಿಜನರಿಗೆ ಉಚಿತವಾಗಿ ಕೊಡುತ್ತಲೂ ಧರ್ಮಜಾಗ್ರತೆಯನ್ನುಂಟುಮಾಡುತ್ತಿರುವದರಿಂದ ಇವರ ಕಾರ್ಯಕ್ಕೆ ಸಂತೋಷಪಟ್ಟು ಪಟ್ಟಾಧ್ಯಕ್ಷ ಶ್ರೀಗಳವರು ಯೋಗ್ಯಸಂಭಾವನೆಯ ಮೂಲಕ ಫಲಾಶೀರ್ವಾದಗಳನ್ನಿತ್ತು ಸಂತೈಸಿದರು. ಇದರಂತೆ ಇತರ ಶ್ರೀಗಳವರೂ ಶಾಸ್ತ್ರಿಗಳವರೂ ಸಮಾಜಸುಧಾರಣೆಯ ಕಾರ್ಯದಲ್ಲಿ ತತ್ಪರರಾಗಿ ಸಮಾಜೋದ್ಧಾರಮಾಡುತ್ತಾ ಪರಶಿವಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಪ್ರತ್ಯಕ್ಷದರ್ಶಿ.

ಮಾನಪತ್ರ ಸಮಾರಂಭ ಸಭೆ.

ನಿಜಾಮ ಇಲಾಖಾ ಶಾಹಜಾನ ಅವರಾದಿಯ ಬೃಹನ್ಮಠಾಧ್ಯಕ್ಷರಾದ ಶ್ರೀ ಅಮರೇಶ್ವರಾಚಾರ್ಯರವರು ಇದುವರೆಗೆ ಕಾಶೀ, ಕಲಕತ್ತಾ, ಪಾಟ್ನಾ ಮೊದಲಾದ ಪ್ರಸಿದ್ಧಸ್ಥಾನಗಳಲ್ಲಿರುವ ಕಾಲೇಜ ಯುನಿವರ್ಸಿಟಿ ಮುಂತಾದ ಸಂಸ್ಥೆಗಳಲ್ಲಿ ಉಚ್ಚಶಿಕ್ಷಣವನ್ನು ಹೊಂದಿ ತರ್ಕಾದಿ ಶಾಸ್ತ್ರಗಳಲ್ಲಿ ಪರೀಕ್ಷೆಗಳನ್ನು ಕೊಟ್ಟು ಕಡೆಗೆ ಈ ಸಾರೆ 'ವೇದಾಂತಾಚಾರ್ಯ' ಎಂಬ ದೊಡ್ಡ ಪದವಿಯನ್ನು ಸಂಪಾದಿಸಿರುವದನ್ನು ಕಂಡು ಸದರಿ ಗ್ರಾಮವಾಸಿಗಳಾದ ಮುಸಲಮಾನ, ಮಾರವಾಡಿ, ಸ್ಮಾರ್ತ, ವೈಷ್ಣವ, ಜೈನ, ವೀರಶೈವ ಇತ್ಯಾದಿ ಸರ್ವ ಸಂಪ್ರದಾಯದ ಜನರು ತಾ|| ೯-೮ ೩೩ ನೆಯ ದಿವಸ ಭಾರಿ ಸಭೆಯನ್ನು ಕೂಡಿಸಿ ಶ್ರೀಗಳಿಗೆ ಮಾನಪತ್ರವನ್ನು ಸಮರ್ಪಿಸಿ ಅತ್ಯಂತವಾಗಿ ಸನ್ಮಾನಿಸಿದರು.

ಮಾನಪತ್ರಕೊಡತಕ್ಕವರ ಪೈಕಿ ಅಬದುಲ ರಹಿಮಾನ ತಹಶೀಲದಾರ ಸಾಹೇಬ, ಲಾಲಖಾನಸಾಹೇಬ ಜಮಾದಾರ, ಖಾಸಿಮ ಸಾಹೇಬ ಸಿಗೇದಾರ, ಮಿರಾಸಾಬ, ಆತ್ಮಾರಾಮಲಡ್ಡಾ ಶೇಟ, ರಾಜಾಸಾಬ ರಾಮಬಲ್ಲಭಜಿ ಮಂತ್ರೀ, ಕೇಶಲಾದೊರಾಮ ಚಂಡಕ, ಶೇಟ ಬದರಿನಾಥ ಮಿಹಿರಿ, ಶೇಟ ಗಂಗಾಶಿಶನ, ನಾರಾಯಣರಾವ ಸರಾಫ, ಗೋಪಾಳರಾವ ಹುಂಡೇಕರಿ, ಏಕನಾಥರಾವ ಮಾಲೀ ಪಾಟೀಲ, ಸದಾಶಿವರಾವ ಪೋಲೀಸ ಪಾಟೀಲ, ನರಸಪ್ಪಾ ಜೈನ, ವಿಶ್ವನಾಥರಾವ ಹೇಬಾರೆ, ವೀರಪ್ಪಾ ಟಂಕಾಳೆ ರಾಚಪ್ಪಾ ಅಗರೆ, ಬಸವಲಿಂಗಪ್ಪಾ ಏನಾಪುರೆ, ವಗೈರೆ ಜನರು ಸಭೆಯಲ್ಲಿ ಪ್ರಾಮುಖ್ಯರಾಗಿ ಕಾಣುತ್ತಿದ್ದರಲ್ಲದೆ ಸ್ಥಳಿಕರಲ್ಲದೆಯು ಬೇರೆ ಜನರೂ ಕೂಡ ವಿಶೇಷವಾಗಿ ಸೇರಿದ್ದರು. ಅಧ್ಯಕ್ಷರಾದ ಸ್ವಾಮಿಗಳು ತಮಗೆ ಮಾನಪತ್ರವನ್ನು ಕೊಟ್ಟು ಗೌರವಿಸಿದ ಸಮಸ್ತಜನರ ಆಭಾರವನ್ನು ಮನ್ನಿಸಿ, ಸಮಾಜ ಸುಧಾರಣೆಯ ಬಗ್ಗೆ ಕೆಲಹೊತ್ತು ಪರಿಣಾಮಕಾರಕವ್ಯಾಖ್ಯಾನ ಮಾಡಿ ಸಭಿಕರನ್ನು ಆನಂದಗೊಳಿಸಿದರು. ಸಮಸ್ತ ಜನರು ಇಂಥ ಘನವಿದ್ವಾಂಸರು, ತಪಸ್ವಿಗಳು, ಹಾಗೂ ಪವಿತ್ರವಿಚಾರಶಾಲಿಗಳು ಈ ನಮ್ಮ ನಿಜಾಮರಾಷ್ಟ್ರದೊಳಗೆ ಬೇರೆ ಯಾರೂ ಇಲ್ಲವೆಂದು ನುಡಿಯುತ್ತಿದ್ದರು. ಅನಂತರ ವೀರಭದ್ರಪ್ಪ ತುಗಾಂವಕರ, ವೀರಶೆಟ್ಟಿಪ್ಪಾ ಏನಾಪುರೆ, ಮೊದಲಾದವರ ಸಮಯೋಚಿತವ್ಯಾಖ್ಯಾನಗಳಾದವು. ಬಳಿಕ ಶ್ರೀಗಳಿಗೆ ಹಾರ ತುರಾಯಿಗಳು ಸಮರ್ಪಿಸಲ್ಪಟ್ಟು ಸಭೆಯು ಸಮಾಪ್ತಿಗೊಳಿಸಲ್ಪಟ್ಟಿತು.

ವೀರಭದ್ರಪ್ಪ ತುಗಾಂವಕರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ದುಃಖವಾರ್ತೆ.

ವಿಜಾಪುರ ಜಿಲ್ಲಾ ಪೇಠಾ ಬೀಳಗಿಯಲ್ಲಿ ಚನ್ನಬಸಪ್ಪ ಅಣ್ಣ ಗಂಗಾವತಿ. ಇವರು ಇದೇ ಶ್ರೀಮುಖನಾಮಸಂವತ್ಸರದ ಶ್ರಾವಣ ಶುದ್ಧ ೯ ಸೋಮವಾರ ರಾತ್ರಿ ೧೧ ಘಂಟೆಗೆ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ. ಸದರಿ ಚನ್ನಬಸಪ್ಪನವರು ತಮ್ಮ ವಯಸ್ಸಿನ ೩೦ ನೇ ವರ್ಷದಲ್ಲಿಯೇ ಇಲ್ಲಿಯ ಪರಮತಪಸ್ವಿಗಳಾದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯಸ್ವಾಮಿಗಳು ಹಿರೇಮಠ ಇವರಿಂದ ಶಿವದೀಕ್ಷೆಯನ್ನು ಪಡೆದು ಒಳ್ಳೇ ಧರ್ಮನಿಷ್ಠರಾಗಿ ನಿಯತಾಚಾರವನ್ನು ಪಾಲಿಸುತ್ತ ಬಂದರು. ಎಂಥ ಬಿಕ್ಕಟ್ಟಿನ ಪ್ರಸಂಗಬಂದರೂ ತಮ್ಮ ಶಿವಪೂಜಾ ನೇಮದಲ್ಲಿ ಎಂದೂ ಚ್ಯುತಿಯನ್ನು ತಂದುಕೊಳ್ಳಲಿಲ್ಲ. ಇವರ ಗುರುಭಕ್ತಿ, ಲಿಂಗನಿಷ್ಠೆ, ಜಂಗಮ ಪ್ರೇಮ ಇತ್ಯಾದಿಗಳು ವರ್ಣನೀಯವಾಗಿದ್ದವು. ಇವರು ಪ್ರಸಿದ್ಧವ್ಯಾಪಾರಿಗಳಾದಾಗ್ಯೂ ಸತ್ಯಪ್ರೇಮಗಳನ್ನೇ ತಳಹದಿಯನ್ನಾಗಿಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಕಾರಣ ಬಹುಜನರ ಪ್ರೇಮಕ್ಕೆ ಪಾತ್ರರಾಗಿದ್ದರು. "ಶರಣರ ಅರಿವು ಮರಣದಲ್ಲಿ" ಎಂಬ ಉಕ್ತಿಗನುಸಾರವಾಗಿ ಅವಸಾನ ಕಾಲಕ್ಕೆ ಓರ್ವ ಗುರುಸ್ಥಲ ಕ್ರಿಯಾಮೂರ್ತಿಗಳನ್ನು ಕರೆಯಿಸಿಕೊಂಡು ಅಸ್ವಸ್ಥರಾದಾಗ್ಯೂ ನಿತ್ಯದಂತೆ ತಮ್ಮ ಸ್ನಾನ ಪೂಜಾದಿಗಳನ್ನು ಮುಗಿಸಿಕೊಂಡು ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿ ಮಡಿಯಿಂದ ಗದ್ದುಗೆಯ ಮೇಲೆ ಕುಳಿತು ಕ್ರಿಯಾಮೂರ್ತಿಗಳಿಗೆ ಅಂತ್ಯದಾನವನ್ನರ್ಪಿಸಿ ಇನ್ನುಳಿದ ಜಂಗಮ ಮೂರ್ತಿಗಳಿಗೆ ದಾನಧರ್ಮಾದಿಗಳನ್ನು ಮಾಡಿ ಮನೆಯ ಸರ್ವಜನರಿಂದಲೂ ಜಂಗಮ ಮೂರ್ತಿಗಳಿಂದಲೂ ಅಂತ್ಯನಿರೂಪವನ್ನು ಪಡೆದು ಶಿವಧ್ಯಾನತತ್ಪರರಾಗಿ ೬೫ ನೇ ವರ್ಷದಲ್ಲಿ ನಶ್ವರವಾದ ಈ ದೇಹವನ್ನು ಬಿಟ್ಟು ಶಿವನನ್ನು ಕೂಡಿದರು. ಇವರ ಈ ಅಂತ್ಯರೀತಿಯನ್ನು ನೋಡಿ ಸರ್ವರೂ ವಿಸ್ಮಿತರಾದರು. ಇವರ ಅಕಸ್ಮಿಕ ವಿಯೋಗದಿಂದ ಇವರ ಚಿ|| ಗಳಾದ ರುದ್ರಪ್ಪ ಗುರುಸಿದ್ಧಪ್ಪ ಮೊದಲಾದ ಮನೆಯ ಸರ್ವ ಕುಟುಂಬದವರಿಗೆ ಅತ್ಯಂತ ದುಃಖವಾಗಿದೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುತ್ತೇನೆ.

ಓರ್ವ ದುಃಖಭಾಗಿ.

ಅರಬರೂ ಹಿಂದೂಗಳಾಗಿದ್ದರೇ?

[ಮೇಲ್ಕಂಡ ಶಿರೋನಾಮವುಳ್ಳ ಲೇಖನವನ್ನು ಶ್ರೀ ಜ್ಞಾನೇಂದ್ರ ದೇವಸೊಫೀ, ಮೌಲ್ವೀ ಫಾಜಿಲ್ ಇವರು 'ವಿಶಾಲಭಾರತ' ದ ಏಪ್ರಿಲ್ (೧೯೩೩) ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಮೂಲಲೇಖನದಲ್ಲಿ ಕೊಟ್ಟಿರುವ ಅರಬ್ಬೀ ಭಾಷೆಯ ಪದ್ಯಗಳನ್ನು ಕೊಡದೆ, ಅವುಗಳ ಹಿಂದೀ ಅನುವಾದವನ್ನು ಮಾತ್ರ ಕೆಳಗೆ ಕನ್ನಡಿಸಿದೆ. ಈ ಲೇಖನದಲ್ಲಿರುವ ವಿಷಯಗಳಿಂದ ಪ್ರಾಚೀನ ವಿಶಾಲಭಾರತವು ಎಷ್ಟರಮಟ್ಟಿಗೆ ಹಬ್ಬಿತ್ತೆಂಬುದು ಗೊತ್ತಾಗುವುದು. ಹಾಗಿದ್ದ ಹಿಂದೂ ಸಂಸ್ಕೃತಿಯು ಇಂದು ಕುಗ್ಗಿ ಹೀಗಾಗಲು ಕಾರಣವೇನೆಂಬುದನ್ನೂ, ಹಿಂದುಳಿದಿರುವ ಹಿಂದೂ ಮತವನ್ನು ಮುಂದಕ್ಕೆ ತರಲು ಮುಂದೇನು ಮಾಡಬೇಕೆಂಬುದನ್ನೂ ಇಂದಿನ ಸುಧಾರಕರು ಚಿಂತಿಸಬೇಕಾಗಿದೆ—ಅನುವಾದಕ, ಎಚ್. ಕೆ. ನರಸಿಂಹಮೂರ್ತಿ, ಎಂ.ಎಸ್‌ಸಿ., ಮೈಸೂರು.]

ಸೆಮಿಟಿಕ್ ಜನರು

ಪ್ರಾಚೀನ ಕಾಲದಲ್ಲಿ ಆರ್ಯರ ಸಭ್ಯತೆಯು, ಹಿಂದೂಸ್ಥಾನವನ್ನು ಮಾತ್ರವಲ್ಲದೆ ಇತರ ಭೂಭಾಗಗಳನ್ನೂ ಆವರಿಸಿತ್ತೆಂಬುದು ಕೆಲವು ಹಿಂದೂ ವಿದ್ವಾಂಸರ ಮತ. 'ಅಸ್ಪೃಶ್ಯತೆಯುಗ' ವೆಂದು ಕರೆಯಲುಬಹುದಾದ ಈ ಕಾಲದಲ್ಲಿ ಈ ಮತವನ್ನು ಪುಷ್ಟೀಕರಿಸಲು ಸಾಧಕವಾದ ಸಾಮಗ್ರಿಗಳು ದಿನ ದಿನವೂ ಅಲ್ಲಲ್ಲಿ ಸಿಗುತ್ತವೆ. ಇಸ್ಲಾಂ ಮತವು ಹುಟ್ಟುವುದಕ್ಕೆ ಮೊದಲು ಅರೇಬಿಯಾ ದೇಶದ ನಿವಾಸಿಗಳು (ಸೆಮಿಟಿಕ್ ಜನರು) ಮೂರ್ತಿ ಪೂಜಕರಾಗಿದ್ದರೆಂದು ಇತಿಹಾಸಗಳಿಂದ ತಿಳಿದುಬರುತ್ತದೆ. ಆ ದೇಶದ ಪ್ರಾಚೀನ ನಿವಾಸಿಗಳ ಕವಿತೆಗಳಿಂದ ಆ ದೇಶದವರಿಗೆ ಸೆಮಿಟಿಕ್ ಸಂಸ್ಕೃತಿಯೊಂದಿಗೆ ಆರ್ಯ ಸಂಸ್ಕೃತಿಯ ಪರಿಚಯವೂ ಆಗಿತ್ತೆಂದು ತಿಳಿದುಬರುವುದು. ಅವರ ಗ್ರಂಥಗಳಿಂದ ಅವರು ಪುನರ್ಜನ್ಮದ ವಿಷಯದಲ್ಲಿ ನಂಬಿಕೆಯುಳ್ಳವರಾಗಿದ್ದರೆಂದು ಗೊತ್ತಾಗುವುದು. '**ತಾರೀಖ್ ಫರಿಸ್ತಾ**' ಎಂಬ ಗ್ರಂಥದಲ್ಲಿ **ಹಜರತ್ ಮುಹಮ್ಮದ್ ಸಾಹೇಬರು** ಮಕ್ಕಾ ಪಟ್ಟಣವನ್ನು ಗೆದ್ದು ಅಲ್ಲಿಯ ದೇವಾಲಯಗಳಲ್ಲಿದ್ದ ದೇವಮೂರ್ತಿಗಳನ್ನು ಒಡೆಯಲು ಮೊದಲುಮಾಡಿದಾಗ, ಆಪೈಕಿ ಒಂದು ದೊಡ್ಡ ಮೂರ್ತಿಯನ್ನು ತೆಗೆದುಕೊಂಡು ಓಡಿ ಪೂಜಾರಿಗಳು ಅದನ್ನು ಹಿಂದೂಸ್ಥಾನದ **ಸೋಮನಾಥ ದೇವಾಲಯದಲ್ಲಿ** ಮತ್ತೆ ಸ್ಥಾಪಿಸಿದರೆಂದು ಬರೆದಿದೆ.

ಇಸ್ಲಾಂ ಧರ್ಮದಲ್ಲಿ ಸಹ ಆರ್ಯ ಸಂಸ್ಕೃತಿಯ ಸಂಸರ್ಗದ ಒಂದೆರಡು ಚಿಹ್ನಗಳು ಕಾಣಬರುವುವು. ಉದಾಹರಣೆಗಾಗಿ ಅಹಿಂಸಾ ತತ್ವದ ಒಂದು ಗುರುತನ್ನು ನಾವು ನೋಡಬಹುದು. ನಮ್ಮಲ್ಲಿಯ ಮುಸಲ್ಮಾನ ಸೋದರರು ಮಕ್ಕಾ ಯಾತ್ರೆ ಮಾಡುವಾಗ ಅವರು '**ಅಹರಾಮ್**' ಎಂಬ ಒಂದು ವಸ್ತ್ರವಿಶೇಷವನ್ನು ಧರಿಸಬೇಕಾಗುತ್ತದೆ. ಅವರು ಯಾತ್ರಿಕರಾಗಿ ಆ ವಸ್ತ್ರವನ್ನು ಧರಿಸಿರುವವರೆಗೆ ಅವರು ಯಾವ ಬಗೆಯ ಪಶು ಪಕ್ಷಿಗಳ ಹಿಂಸೆಯನ್ನೂ ಮಾಡಕೂಡದೆಂಬ ನಿರ್ಬಂಧವಿದೆ. ಇದರಿಂದ ಹಜರತ್ ಮುಹಮ್ಮದ್ ಸಾಹೇಬರ ಮೇಲೆ ಆರ್ಯ ಸಭ್ಯತೆಯ ಮುಖ್ಯ ಅಂಗವಾದ ಅಹಿಂಸಾತತ್ವದ ಪರಿಣಾಮವು ಸ್ವಲ್ಪ ಮಟ್ಟಿಗೆ ಆಗಿದ್ದುದರಿಂದಲೇ, ಅವರು ಸ್ವಲ್ಪ ಕಾಲದವರೆಗಾದರೂ ಅಹಿಂಸಾತತ್ವವನ್ನು ಸಮರ್ಥಿಸಿದರೆಂದು ಗೊತ್ತಾಗುವುದು.

[೬ ನೆಯ ಪುಟವನ್ನು ನೋಡಿರಿ.]

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು
ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಸೆಪ್ಟಂಬರ್ ತಾ|| ೧೧ನೇ ಸೋಮವಾರ.

ಶ್ರೀಮದುಜ್ಜಯಿನೀ ಜಗದ್ಗುರುಗಳವರ
ಅಮೋಘವಾದ ಸಹಾಯ.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಈಗ್ಗೆ ೩-೪ ತಿಂಗಳುಗಳಿಂದ ಸೊಲ್ಲಾಪುರದ ಸದ್ಭಕ್ತಮಂಡಳಿಯ ಭಕ್ತಿಯನ್ನು ಸ್ವೀಕರಿಸುತ್ತ ಅಲ್ಲಿಯೇ ವಿರಾಜಿಸುತ್ತಿರುವುದು ಸರ್ವಶ್ರುತವಷ್ಟೆ! ಸೊಲ್ಲಾಪುರ ಪಟ್ಟಣವು ವೀರಶೈವಜನಾಂಗದ ತೌರುಮನೆಯಂತಿರುವುದು. ಇಲ್ಲಿರುವಷ್ಟು ವೀರಶೈವಜನಸಂಖ್ಯೆಯು ಇನ್ನಾವ ಪಟ್ಟಣದಲ್ಲಿಯೂ ಇರುವುದಿಲ್ಲ. ಈ ಪುಣ್ಯಪತ್ತನದಲ್ಲಿ ಜನ್ಮವೆತ್ತ ಯಾವ ಪುಣ್ಯಪುರುಷರು ಅಖಿಲವೀರಶೈವಧರ್ಮಸುಧಾರಣೆಗಾಗಿ ಅಸಂಖ್ಯ ದ್ರವ್ಯವನ್ನು ನೀರಿನಂತೆ ಸೂರೆಮಾಡಿ ಅನೇಕಾನೇಕ ಮತಗ್ರಂಥಗಳನ್ನು ಮುದ್ರಣಮಾಡಿಸಿ ಈ ಭರತಭೂಮಿಯಲ್ಲಿ ತಮ್ಮ ನಿರ್ಮಲಕೀರ್ತಿಯನ್ನು ಆಚಂದ್ರಾರ್ಕವಾಗಿ ಸ್ಥಿರವಾಗಿರುವಂತೆ ಮಾಡಿಕೊಂಡರೋ, ಯಾವ ದಾನಶೂರರ ಅಸದೃಶವಾದ ಉದಾರಭಾವವನ್ನು ಸಕಲ ಮತೀಯರೂ ಈ ಹೊತ್ತಿನವರೆಗೂ ಕೊಂಡಾಡುತ್ತಿರುವರೋ, ಯಾವ ಧೀರೋದಾತ್ತರ ಹೃದಯದಲ್ಲಿ ವಾಸಮಾಡಿಕೊಂಡಿರುವ ಪರೋಪಕಾರಾದಿಸದ್ಗುಣಸಮೂಹವನ್ನು ಕಂಡು ಬ್ರಿಟಿಷ್ ಚಕ್ರವರ್ತಿಗಳು "ರಾವಬಹದ್ದೂರ್" ಎಂಬ ಅಮೋಘವಾದ ಬಿರುದನ್ನು ದಯೆಪಾಲಿಸಿದ್ದರೋ, ಅಸಾಧಾರಣವಿದ್ಯಾಪ್ರೇಮಿಗಳಾದ ಯಾವ ಗುರುಭಕ್ತಾಗ್ರಗಣ್ಯರ ಪ್ರಯತ್ನವಿಶೇಷದಿಂದ ವೀರಶೈವಗುರುವರ್ಗವು ವಿದ್ಯಾನೈಪುಣ್ಯದಿಂದ ತೇಜೋಮಯವಾಗಿ ಮೆರೆಯಲು ಪ್ರಾರಂಭಿಸಿತೋ, ಅಂಥ ಕೈ|| ಶ್ರೀಮಂತ ವಾರದ ಮಲ್ಲಪ್ಪ ಮಹೋದಯರು ತಮ್ಮ ಕಾಲದಲ್ಲಿ ಗುರುವರ್ಗದ ವಟುಗಳ ಸುಧಾರಣೆಗಾಗಿ ಒಂದು ಸಂಸ್ಕೃತವಿದ್ಯಾಲಯವನ್ನು ಸ್ಥಾಪಿಸಿದರು. ಈ ಮಹೋದಯರ ಕಾಲದಲ್ಲಿ ಈ ವಿದ್ಯಾಲಯದ ಕಾರ್ಯಕ್ರಮಗಳು ಅತ್ಯುತ್ತಮವಾಗಿ ಸಾಗುತ್ತಿದ್ದವು. ಪ್ರತಿದಿವಸವೂ ನೂರಾರು ಜನ ಮಾಹೇಶ್ವರ ವಟುಗಳು ಈ ಧರ್ಮಾತ್ಮರ ಪೋಷಣೆಯಲ್ಲಿದ್ದು ಸಂಸ್ಕೃತಶಿಕ್ಷಣವನ್ನು ಪಡೆಯುತ್ತಿದ್ದರು. ಅನೇಕ ಜನ ಪಂಡಿತರು ಈ ಪುಣ್ಯಮೂರ್ತಿಗಳ ಆಶ್ರಯದಲ್ಲಿದ್ದು ಪೋಷಣೆಯನ್ನು ಹೊಂದುತ್ತಿದ್ದರು. ಇಂಥ ತೇಜೋಮಯಮೂರ್ತಿಯು ತೇಜಸ್ಸಿನಲ್ಲಿ ಬೆರೆಯಲು ಅಂದಿನಿಂದ ಧರ್ಮಗ್ರಂಥಮುದ್ರಣಶೋಧನಾದ್ಯನೇಕ ಕಾರ್ಯಗಳು ನಿಂತುಹೋದವು. ಸಂಸ್ಕೃತ ವಿದ್ಯಾಲಯವು ಮಾತ್ರ ಶ್ರೀಮಂತ ಉಮ್ಮರಜೆ, ಶ್ರೀಮಂತ ಕಾಡಾದೆ ಮೊದಲಾದ ಧರ್ಮಾತ್ಮರ ಉದಾರಾಶ್ರಯದಿಂದ ಕೆಲವು ವರ್ಷಗಳವರೆಗೆ ನಿರ್ವಿಘ್ನವಾಗಿ ನಡೆದುಕೊಳ್ಳುತ್ತ ಬಂದಿತು. ಇತ್ತೀಚೆಗೆ ಈ ವಿದ್ಯಾಲಯದ ವ್ಯವಸ್ಥೆಯು ಕೈ|| ವಾರದ ಮಲ್ಲಪ್ಪನವರ ಪುತ್ರರಿಂದ ನಡೆಯಿಸಲ್ಪಡುತ್ತಿರುವುದೆಂದು ತಿಳಿದು ಬರುತ್ತದೆ. ಈ ಸಂಸ್ಕೃತವಿದ್ಯಾಲಯವು ಸ್ಥಾಪಿತವಾಗಿ ಇಂದಿಗೆ ೫೦ ವರ್ಷಗಳಿಗೆ ಮೇಲ್ಪಟ್ಟಿರುವುದೆಂದು ಗೊತ್ತಾಗುತ್ತದೆ. ಈ ಸಂಸ್ಕೃತವಿದ್ಯಾಲಯಕ್ಕೆ ಶ್ರೀ ಜಗದ್ಗುರುಗಳವರು ಕಳೆದ ತಿಂಗಳು ೩೧ನೆಯ ತಾರೀಖಿನ ದಿವಸ ಬಿಜಯಂಗೈಸಿ ತಮ್ಮ ಆಸ್ಥಾನ ಪಂಡಿತರಿಂದ ವಿದ್ಯಾರ್ಥಿಗಳ ಪರೀಕ್ಷೆಯನ್ನು ಮಾಡಿಸಿ ಸರ್ವವಿದ್ಯಾರ್ಥಿಗಳಿಗೂ ಪಾರಿತೋಷಕವನ್ನು ಅನುಗ್ರಹಿಸಿದ್ದುದಲ್ಲದೆ, ಈ ಮಹಾಪಾಠಶಾಲೆಯು ಚಿರಕಾಲವಾಗಿ ನಡೆಯಲೆಂಬ ಸದುದ್ದೇಶದಿಂದ ಕೈ|| ಶ್ರೀಮಂತ ವಾರದ ಮಲ್ಲಪ್ಪಮಹೋದಯರ ಸ್ಮಾರಕವಾಗಿ ೫,೦೦೦ ಐದುಸಾವಿರ ರೂಪಾಯಿಗಳನ್ನು ಆಶೀರ್ವದಿಸಿದರೆಂಬ ವಿಷಯವನ್ನು ಕೇಳಿ ಅತ್ಯಂತವಾಗಿ ಸಂತೋಷಿಸುತ್ತೇವೆ. ಸಂಸ್ಕೃತವಿದ್ಯಾಪ್ರೇಮಿಗಳಾದ ಶ್ರೀ ಜಗದ್ಗುರುಗಳವರು ಸಂಸ್ಕೃತವಿದ್ಯಾವ್ಯಾಪಕತೆಗಾಗಿ ಮಾಡಿದ ಉದಾರವಾದ ಸಹಾಯವು ಅತ್ಯಂತ ಸ್ತುತ್ಯವಾಗಿದ್ದು, ಅವರ ಮತೋದ್ಧಾರಕರ್ತೃತ್ವವನ್ನು ಸೂಚಿಸುತ್ತದೆ. ಮತಸ್ಥಾಪನಾಚಾರ್ಯರೂ, ಗುರುಸಾರ್ವಭೌಮರೂ, ಸದಾ ಶಿವಲಿಂಗಪೂಜಾಲೋಲರೂ, ಪರಮತಪಸ್ವಿಗಳೂ ಆಗಿರುವ ಶ್ರೀ ಜಗದ್ಗುರುಗಳವರ ಆಶೀರ್ವಾದಬಲದಿಂದ ಈ ಸಂಸ್ಕೃತವಿದ್ಯಾಲಯವು ಆಚಂದ್ರಾರ್ಕವಾಗಿ ಭರತಭೂಮಿಯಲ್ಲಿ ವಿರಾಜಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇವೆ. ಜಗದ್ಗುರುಗಳವರು ಆಶೀರ್ವದಿಸಿದ ದ್ರವ್ಯಕ್ಕೆ ಎಂದೂ ಚ್ಯುತಿಬಾರದಂತೆ ಅದನ್ನು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು, ಅದಕ್ಕೆ ಕೆಲಜನ ಪ್ರಮುಖರನ್ನು ಮೆಂಬರುಗಳನ್ನಾಗಿ ಮಾಡಿ, ಅದರ ಬಡ್ಡಿಯಿಂದ ಪಾಠಶಾಲೆಯ ಖರ್ಚು ಮೊದಲಾದುವುಗಳು ನಡೆಯುವಂತೆ ಚಿರಸ್ಥಾಯಿಯಾದ-ವ್ಯವಸ್ಥೆಯನ್ನು ಮಾಡುವುದು ಯೋಗ್ಯವಾಗಿದೆ. ಅಲ್ಲದೆ ಈ ಮೂಲಫಂಡಿನ ಅಭಿವೃದ್ಧಿಯ ಬಗ್ಗೆ ಸೊಲ್ಲಾಪುರದ ಮುಂದಾಳುಗಳು ಧರ್ಮಾತ್ಮರಿಂದ ದ್ರವ್ಯವನ್ನು ಸಂಗ್ರಹಿಸಿ ಲಕ್ಷಾಂತರ ರೂಪಾಯಿಗಳ ನಿಧಿಯನ್ನು ಕೂಡಿಸಿದರೆ, ವೀರಶೈವಜನಾಂಗದಲ್ಲಿ ಇದೊಂದು ಮಾದರಿಯ ಸಂಸ್ಥೆಯಾಗುವುದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಮಹಾಕಾರ್ಯಕ್ಕಾಗಿ ಸರ್ವರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಸಹಾಯಮಾಡಿ ಕೀರ್ತಿಶಾಲಿಗಳಾಗಬೇಕೆಂದು ಬಯಸುತ್ತೇವೆ. ಜಗದಾಚಾರ್ಯರ ಆಶೀರ್ವಾದಬಲದಿಂದ ಈ ಬೀಜವು ಅಂಕುರಿಸಿ ಪಲ್ಲವಿಸಿ ಫಲಿಸಿ ವೀರಶೈವಜಗತ್ತಿಗೆ ಸಂತೋಷವನ್ನುಂಟುಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಕೋಚೀನ ಸಂಸ್ಥಾನದ ಮಹಾರಾಜರವರ ಆಗಮನ.

ಈ ದಿವಸ ಪ್ರಾತಃಕಾಲ ೮|| ಘಂಟೆಗೆ ಕೋಚೀನ ಸಂಸ್ಥಾನದ ಮಹಾರಾಜರವರು ರಾಜಧಾನಿಗೆ ಆಗಮಿಸಿದರು. ನಮ್ಮ ಶ್ರೀಮನ್ಮಹಾರಾಜರವರು ಮತ್ತು ಯುವರಾಜರವರು ಅವರನ್ನು ಚತುರಂಗಬಲಸಮೇತವಾಗಿ ಎದುರ್ಗೊಂಡು ಗೌರವಿಸಿದರು. ಗೌರವಾರ್ಥವಾಗಿ ೧೭ ತೋಪುಗಳು ಹಾರಿಸಲ್ಪಟ್ಟವು. ಕೋಚೀನ ಸಂಸ್ಥಾನದ ಮಹಾರಾಜರವರು ವೃದ್ಧರಾಗಿರುವರು.

ಒಡೆಯರಬಗ್ಗೆ ವಿಚಿತ್ರ ಲೇಖಗಳು.

ನಮ್ಮ ಪತ್ರಿಕೆಯಲ್ಲಿ "ಗುರುಭಕ್ತ ಕಂಠೀರವ" ಎಂಬವರು ವಿರೂಪಾಕ್ಷ ಒಡೆಯರ ವಿಷಯದಲ್ಲಿ ಬರೆದ ಲೇಖದ ಬಗ್ಗೆ ಒಡೆಯರ ಪಕ್ಷವನ್ನು ಹಿಡಿದು ಬರೆದಿರುವ ಮೂರು ಲೇಖಗಳು ನಮ್ಮ ಕಡೆಗೆ ಬಂದಿವೆ. ಆ ಮೂರೂ ಲೇಖಗಳಲ್ಲಿ ವಿಷಯವಿಮರ್ಶೆಯಿರದೆ ಕೇವಲ ಸಿಟ್ಟಿನಿಂದ ಪ್ರಯೋಗಿಸಿದ ಕೆಟ್ಟಮಾತುಗಳೇ ತುಂಬಿರುವುವು. ಈ ತರಹದ ಬರವಣಿಗೆಯಿಂದ ಬರೆದವರಿಗೆ ಯಾವ ಪುರುಷಾರ್ಥವು ಬರುವುದೋ ತಿಳಿಯದಾಗಿದೆ. ಇದು ಹೇಗೇ ಇರಲಿ; ಆ ಮೂರೂ ಲೇಖಗಳನ್ನು ಯಾರು ಬರೆದಿರಬಹುದೆಂಬ ವಿಷಯವನ್ನು ಸದ್ಯಃ ಯೋಚಿಸಬೇಕಾಗಿದೆ. ಹಾವೇರಿ ತಾಲೂಕಿನಲ್ಲಿರುವ ಇಚ್ಚಂಗಿ ಗ್ರಾಮದ ತಿರಕಯ್ಯ ದಿವಾನ ಎಂಬ ಹೆಸರಿನಿಂದ ತಾ|| ೨೬-೮-೩೩ ರಲ್ಲಿ ಒಂದು ಲೇಖವು ಬಂದಿದೆ. ಅಜ್ಜಯ್ಯಶಾಸ್ತ್ರಿ ಕದರ ಮಂಡಲಗಿ ತಾ|| ರಾಣೆಬೆನ್ನೂರು ಎಂಬ ಹೆಸರಿನಿಂದ ತಾ|| ೩೦-೮-೩೩ ರಲ್ಲಿ ಒಂದು ಲೇಖವು ಬಂದಿದೆ. ಚನ್ನವೀರಪ್ಪ ಮೈಲಾರ ತಾ|| ಹುವ್ವಿನಹಡಗಲಿ ಎಂಬ ಹೆಸರಿನಿಂದ ತಾ|| ೩-೯-೩೩ ರಲ್ಲಿ ಒಂದು ಲೇಖವು ಬಂದಿದೆ. ಈ ಮೂರು ಜನರ ಗ್ರಾಮಗಳು ದಿಕ್ಕಿಗೊಂದಿರುತ್ತವೆಂಬುವುದು ಎಲ್ಲರಿಗೂ ತಿಳಿಯುವಂತಿದೆ. ಆದರೆ ಈ ಮೂರೂ ಲೇಖಗಳ ಅಕ್ಷರಗಳು ಒಂದೇ ವಿಧವಾಗಿದ್ದು, ಈ ಲೇಖಗಳನ್ನಿಟ್ಟು ಕಳುಹಿಸಿರುವ ಮೂರೂ ಲಕೋಟಿ (ಕವರು) ಗಳು ಒಂದೇ ವಿಧವಾಗಿರುತ್ತವೆ. ಕವರಿನ ಮೇಲೆ ಬರೆದ ಅಡ್ರೆಸ್ಸಿನ ಅಕ್ಷರಗಳೂ ಸಹ ಮೂರೂ ಒಂದೇ ವಿಧವಾಗಿರುತ್ತವೆ. ಇದರಿಂದ ಇವು ಮೂರೂ ಲೇಖಗಳು ಒಬ್ಬರವೇ ಎಂದು ಹೇಳಲು ಯಾವ ಸಂದೇಹವೂ ಇಲ್ಲ. ಮೊದಲಿನ ಇಬ್ಬರು ಲೇಖಕರು ಹಾವೇರಿ ಮತ್ತು ರಾಣೆಬೆನ್ನೂರು ತಾಲೂಕಿನವರೆಂದು ಬರೆದಿರುವರಷ್ಟೆ! ಆದರೆ ಇವರಿಬ್ಬರ ಲಕೋಟೆಗಳ ಮೇಲೆ ಬೊಂಬಾಯಿ ಸಮೀಪದಲ್ಲಿರುವ "ರತ್ನಾಗಿರಿ" ಯ ಪೋಸ್ಟ ಮುದ್ರೆಯು ಬಿದ್ದಿರುವುದು. ಇದನ್ನು ಯೋಚಿಸಿ ನೋಡಿದರೆ ಈ ಲೇಖಗಳ ಸ್ಥಿತಿಯು ಬಹು ವಿಚಿತ್ರವಾಗಿ ಕಂಡುಬರುವುದು. ಇದರಿಂದ ಈ ಲೇಖಗಳು ಯಾರ ಮೂಲಕ ಹೊರಟಿರಬಹುದೆಂಬುವುದು ಸಕಲ ಮತಿಗಳಿಗೆ ವೇದ್ಯವಾಗದೆ ಇರದು. ಹೀಗೆ ಬೇರೆ ಬೇರೆ ಹೆಸರುಗಳಿಂದ ಲೇಖಗಳು ಪತ್ರಿಕೆಗಳಲ್ಲಿ ಪ್ರಸಿದ್ಧವಾದರೆ ಇವರ ಅಭಿಮಾನವನ್ನು ಹಿಡಿದು ಎಷ್ಟು ಜನರು ಲೇಖಗಳನ್ನು ಬರೆಯುತ್ತಿರುವರಲ್ಲ? ಎಂದು ಜನರಿಗೆ ತೋರಲೆಂಬುದೇ ಉದ್ದೇಶವಿದ್ದಂತೆ ತೋರುತ್ತದೆ. ಈ ತರಹದ ಮಾರ್ಗದಿಂದ ಯಾವ ಪ್ರಯೋಜನವೂ ಇಲ್ಲವೆಂದು ಹೇಳಬಹುದಾಗಿದೆ. ಇರಲಿ; ಮತಸ್ಥಾಪನಾಚಾರ್ಯರನ್ನೂ, ಮುಕ್ತಿದಾಯಕವಾದ ಶಿವಲಿಂಗವನ್ನೂ ಮನಸ್ಸಿಗೆ ಬಂದಂತೆ ದೂಷಿಸಿ ಬರೆದು, ಲಕ್ಷೋಪಲಕ್ಷ ಜನ ಗುರುಭಕ್ತರ ಮನಸ್ಸಿಗೆ ವ್ಯಥೆಯನ್ನುಂಟುಮಾಡುತ್ತಿರುವುದು ಸರ್ವಥಾ ಭೂಷಣವಲ್ಲವೆಂದು ಹೇಳಬೇಕಾಗಿದೆ. ಧರ್ಮಶಾಸ್ತ್ರ ವಿರುದ್ಧವಾದ ಈ ತರಹದ ಬರವಣಿಗೆಗಳನ್ನು ಬರೆದು ಇಡೀ ವೀರಶೈವ ಸಮಾಜಕ್ಕೇ ವಿರೋಧವಾಗಿ ಹೋಗಬಾರದೆಂಬುದೇ ನಮ್ಮ ಆಶಯವಾಗಿದೆ.

ಇನ್ನು ನಮ್ಮ ಕಡೆಗೆ ಬಂದ ಲೇಖಗಳಲ್ಲಿ ಗದಗಿನಲ್ಲಿ ನಡೆದ ವ್ಯಾಜ್ಯದ ವಿಷಯವನ್ನೆತ್ತಿಕೊಂಡು, ಪ್ರಭಾ ಸಂಪಾದಕರು ಧಾರವಾಡ ಡಿಸ್ಟ್ರಿಕ್ಟಿಗೆ ಹೆದರಿದಂತಾಗಿದೆಯೆಂದು ಬರೆಯಲ್ಪಟ್ಟಿದೆ. ಈ ಲೇಖಕರಿಗೆ ಈ ಅಸಂಬದ್ಧಾಭಿಪ್ರಾಯವನ್ನು ಯಾವ ದೀಕ್ಷಿತನು ಹೇಳಿದನೋ ತಿಳಿಯದಾಗಿದೆ. ಈ ತರಹದ ಲೇಖವನ್ನು ಬರೆದು ತಿರಸ್ಕಾರಕ್ಕೆ ಪಾತ್ರವಾಗುವುದು ಯೋಗ್ಯವಲ್ಲ. ಇರಲಿ; ಗದಗಿನ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರು ನಮ್ಮ ವ್ಯಾಜ್ಯದವಿಷಯದಲ್ಲಿ ಆರ್ಡರ್ ಬರೆಯುವಾಗ್ಗೆ—"ಮೈಸೂರು ಸಂಸ್ಥಾನಿಕರಾಗಿರುವ ಪ್ರಭಾ ಸಂಪಾದಕರಮೇಲೆ ಮಾಡಿರುವ ಕೇಸು ಎಕ್ಸ್ಟ್ರಾಡಿಷನ್ ಆಕ್ಟಿಗೆ ಸಂಬಂಧಪಡದೆ 'ಇಂಡಿಯನ್ ಪಿನಲ್ ಕೋಡ್' ೫೦೦-೫೦೧-೫೦೨ ಸೆಕ್ಷನ್ನುಗಳಿಗೆ ಸಂಬಂಧಪಟ್ಟಿರುವುದರಿಂದ, ಆರೋಪಿಯವರನ್ನು ನಮ್ಮ ಕೋರ್ಟಿಗೆ ಕರೆಯಿಸಲಿಕ್ಕಾಗುವುದಿಲ್ಲವೆಂದೂ, ಆದುದರಿಂದ ಈ ಕೇಸನ್ನು ಫೈಲಿನಿಂದ ತೆಗೆದುಹಾಕಿದ್ದೇವೆಂದೂ ಇತ್ಯಾದಿಯಾಗಿ ಬರೆದಿದ್ದಾರೆ." ಮ್ಯಾಜಿಸ್ಟ್ರೇಟರವರು ಇಂಗ್ಲೀಷಿನಲ್ಲಿ ಬರೆದಿರುವ ಆರ್ಡರನ್ನು ಓದಿ ನೋಡಿ ಭ್ರಾಂತಿಯಿಂದ ದೂರಾಗಬೇಕು.

Copy of Order passed by the Magistrate, Gadag, on the application of Basappa Bellary, Gadag under Sections 500, 501 & 502 of I. P. C. dated 3-12-28.

Below complaint lodged by Basappa Veerappa Bellary.

ORDER.

It is alleged by the complainant that the accused has committed offences under Sections 500, 501 and 502 of I. P. C. by publishing certain defamatory matters in his Panchacharya Prabha Paper. It is admitted that the accused is a resident of Mysore State. If so, unless the offences alleged to have been committed by the accused fall under the Extradition Act, his attendance cannot be secured; offences under Sections 500, 501 and 502 of I. P. C. are not extradition offences and no warrant of arrest could be issued for his surrender to this Court unless the complainant himself arranges to secure his attendance by summons and this arrangement has already been made by this Court, but the summons have been returned unserved; and even Warrants, contrary to law have been issued; they too are returned un-executed. Whether the accused is or is not a British subject is a different question. The papers are therefore filed and the Complainant is informed of the orders passed.

Gadag, (*Sd.*) **M. M. Pathan,**
7—1—1931. M. F. C
"True Copy" Seal.

ಈ ರೀತಿಯಾಗಿ ಆರ್ಡರಾಗಿದ್ದರೂ ಮ್ಯಾಜಿಸ್ಟ್ರೇಟರ ಆರ್ಡರನ್ನೇ ಮೂಲೆಗೊತ್ತಿ ಅಸತ್ಯವನ್ನು ಬರೆದಿರುವುದು ಅತ್ಯಂತ ನಿಂದ್ಯವಾದ ಕಾರ್ಯವಾಗಿದೆ. ಅಸ್ತು! ಒಡೆಯರ ಗುರುನಿಂದಾತ್ಮಕವಾದ ಬರವಣಿಗೆಗಳ ಮೇಲೆ ಖಂಡನಾತ್ಮಕವಾಗಿ ನಮ್ಮ ಕಡೆಗೆ ಅನೇಕ ಲೇಖಗಳು ಬಂದಿವೆ. ಆದಾಗ್ಯೂ ಅವೆಲ್ಲವುಗಳಿಗೂ ನಾವು ಸ್ಥಳವನ್ನು ಕೊಡದೆ ಹಾಗೆಯೇ ಇಟ್ಟಿರುತ್ತೇವೆ. ಕಳೆದವಾರ ಸ್ವಾಂ'ಪತ್ರಿಕೆಯಲ್ಲಿ ಪ್ರಕಟವಾದ ಲೇಖದ ಮೇಲೆಯೂ ಖಂಡನಾತ್ಮಕಗಳಾದ ೨ ಲೇಖಗಳು ಬಂದಿವೆ. ಇರಲಿ; ಮತಸ್ಥಾಪನಾಚಾರ್ಯರಲ್ಲಿ ಪ್ರತಿಯೊಬ್ಬ ಲಿಂಗಾಂಗಿಗೂ ರೋಮರೋಮದಲ್ಲಿ ಗುರುಭಕ್ತಿಯು ತುಂಬಿದ್ದು, ತಮ್ಮ ಗುರುಗಳಮೇಲೆ ಯಾರಾದರೂ ನಿಂದಾತ್ಮಕ ಲೇಖಗಳನ್ನು ಬರೆದರೆ ಅವುಗಳನ್ನು ಖಂಡಿಸುವುದು ಅವರ ಕರ್ತವ್ಯವಾಗಿದೆ. ಅಷ್ಟುಮಾತ್ರಕ್ಕೆ ಅವರ ಮೇಲೆ ವೀರಾವೇಶದಿಂದ ಬಿದ್ದು ಒರಟುಮಾತುಗಳನ್ನು ಪ್ರಯೋಗಿಸುವುದು ಎಷ್ಟು ಮಾತ್ರಕ್ಕೂ ಸರಿಯಾದುದಲ್ಲ. ಅದನ್ನು ಶಾಂತಿಯನ್ನು ತಾಳುವುದು ಉತ್ತಮ! ಒಡೆಯರಾದರೂ ಇನ್ನು ಮೇಲೆ ಗುರುಗಳ ವಿಷಯದಲ್ಲಿ ಅಶ್ಲೀಲವಾಕ್ಯಗಳಿಂದಕೂಡಿದ ಲೇಖಗಳನ್ನು ಬರೆಯುವುದನ್ನು ಬಿಟ್ಟು, ಸರ್ವರಂತೆ ತಾವೂ ಗುರುಭಕ್ತಿಶೀಲರಾಗಿ ವರ್ತಿಸಿ, ಜಗದೀಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಸಂ—

ವರ್ತಮಾನಸಂಗ್ರಹ

ಇಂಗ್ಲೆಂಡ್ ದೇಶದಲ್ಲಿ ಜುಲೈ ತಿಂಗಳಲ್ಲಿ ನಿರುದ್ಯೋಗಿಗಳ ಸಂಖ್ಯೆಯು ೪,೦೦೦ ದಷ್ಟು ಹೆಚ್ಚಿರುವದಂತೆ!

ಪೋಲಿಯಕಾಫ್ ಎಂಬ ಪ್ರಸಿದ್ಧ ಶಾಸ್ತ್ರಜ್ಞರೊಬ್ಬರು ಎಂಥ ಹುಟ್ಟು ಕಿವುಡರಿಗಾದರೂ ಕಿವಿಯು ಕೇಳಿಸುವಂತೆ ಒಂದು ಹೊಸಯಂತ್ರವನ್ನು ನಿರ್ಮಿಸಿರುವರಂತೆ!

ಫ್ರೆಂಚ್ ಸರಕಾರದವರು 13 ವರ್ಷಕ್ಕಿಂತಲೂ ಚಿಕ್ಕವರಾದ ಹುಡುಗರಿಗೆಲ್ಲಾ ಶಾಲೆಗಳಲ್ಲಿ ಬಲಾತ್ಕಾರವಾಗಿ ಈಜುವದನ್ನು ಕಲಿಸಬೇಕೆಂದು ಒಂದು ಹೊಸಕಾನೂನನ್ನು ಜಾರಿಗೆ ತರಲಿರುವರು.

ಇಂಗ್ಲೆಂಡಿನ ಒಬ್ಬ ಪ್ರಸಿದ್ಧ ಇಂಜನಿಯರು ಹಾರುವ ಬೈಸಿಕಲ್ಲನ್ನು ತಯಾರುಮಾಡಿರುವರಂತೆ! ಇದಕ್ಕೆ ತಿರುಗುವ ರೆಕ್ಕೆಗಳಿದ್ದು ನೆಟ್ಟಗೆ ಮೇಲಕ್ಕೆ ಹೋಗಿ ಬೇಕಾದಲ್ಲಿ ನೆಟ್ಟಗೆ ಕೆಳಕ್ಕೆ ಇಳಿಯುವದಂತೆ!

ಜರ್ಮನಿ ದೇಶಕ್ಕೆ ಸೇರಿದ ಮ್ಯೂನ್‌ಸ್ಟರ್ ನಗರದ ಬರ್ನಾರ್ಡ್ ಷೂಮಾಕರ್ ಎಂಬವರು ಒಂದು ಟಪಾಲ್‌ಕಾರ್ಡಿನ ಮೇಲೆ ೨೫,೨೮೧ ಶಬ್ದಗಳನ್ನು ಬರೆದಿರುವರಂತೆ! ಇದನ್ನು ಬರೆಯಲು ೬|| ಗಂಟೆಗಳ ಕಾಲ ಹಿಡಿಯಿತಂತೆ! ಅದನ್ನು ಭೂತಕನ್ನಡಿಯ ಸಹಾಯದಿಂದ ಮಾತ್ರವೇ ಓದಬಹುದಂತೆ!

ಜಪಾನ್‌ದೇಶದ ರಿಯುಹೇ ಕಾಸಾಯ್ ಎಂಬ ಒಬ್ಬ ೧೯ ವರ್ಷದ ಹುಡುಗನು ಒಂದು ದಿನ ಪರ್ವತದ ತಪ್ಪಲಿನಲ್ಲಿ ಹೋಗುತ್ತಿದ್ದಾಗ ಭಯಂಕರವಾದ ಗುಡುಗಿನ ಶಬ್ದವನ್ನು ಕೇಳಿ ಅಲ್ಲಿಯೇ ಮೂರ್ಛೆ ಹೊಂದಿದನು. ಪುನಃ ಎಚ್ಚರ ಹೊಂದಿದಾಗ ಅವನ ಹುಚ್ಚತನವು ಸಂಪೂರ್ಣವಾಗಿ ಹೋಗಿದ್ದಿತಂತೆ!

ಗುರುದಾಸಪುರದ ಮಿ|| ಎಸ್. ಎನ್. ಮಹಾಂತ ಎಂಬವರು ಕಳೆದ ೫ ವರ್ಷಗಳಿಂದಲೂ ನಗುವ ಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿರುವರು. ನಗುವಿನಲ್ಲಿ ೧೮ ವಿಧಾನಗಳಿರುವವೆಂದೂ, ಯಾರನ್ನಾಗಲಿ ಎಂತಹ ಸನ್ನಿವೇಶದಲ್ಲಾಗಲಿ ತಾವು ಖಂಡಿತವಾಗಿ ನಗುವಂತೆ ಮಾಡಬಲ್ಲೆನೆಂದೂ ಅವರು ಹೇಳುತ್ತಿರುವರು.

ಜಾಸ್ಕಿಯಾದೇಶಕ್ಕೆ ಸೇರಿದ ಒಂದು ಗ್ರಾಮದ ಸಮೀಪದಲ್ಲಿ ಅಸ್ಟ್ರೋಏಟ್ಸ್ ಎಂಬ ನದಿಯು ನೀರು ತುಂಬಿ ಹರಿಯುತ್ತಿದ್ದು ಒಂದು ದಿನ ಇದ್ದಕ್ಕಿದ್ದ ಹಾಗೆ ನೀರೆಲ್ಲವೂ ಬತ್ತಿಹೋಯಿತಂತೆ! ಜನರು ಹೀಗಾಗಲು ಕಾರಣವೇನೆಂದು ಚಿಂತಿಸುತ್ತಿರುವಷ್ಟರಲ್ಲಿ ಒಂದು ಗಂಟೆಯ ನಂತರ ನೀರು ಎಂದಿನಂತೆ ಪುನಃ ಹರಿಯಲಾರಂಭಿಸಿತಂತೆ!

ಸ್ಕಾಟ್ಲೆಂಡ್‌ದೇಶದಲ್ಲಿ ೪೫ ಎಕರೆಗಳ ವಿಸ್ತಾರವಾಗಿದ್ದ ಒಂದು ಸರೋವರವು ಇದ್ದಕ್ಕಿದ್ದ ಹಾಗೆ ಒಂದು ರಾತ್ರಿಯೊಳಗಾಗಿ ಬತ್ತಿಹೋಗಿರುವದಂತೆ! ಈ ವೈಚಿತ್ರ್ಯಕ್ಕೆ ಕಾರಣವೇನೆಂದು ಪರೀಕ್ಷಿಸಿದಾಗ, ಸರೋವರದ ಮಧ್ಯದಲ್ಲಿ ೧೮ ಅಡಿ ಆಳವಾದ ಒಂದು ತೊಗರಿದ್ದು ಅದರ ಮುಖಾಂತರ ಭೂಗರ್ಭದೊಳಕ್ಕೆ ನೀರು ಹೋಗಿರುವದೆಂದು ತಿಳಿಯಬಂದಿದೆ.

ಬಂಗಾಳಾ ಪ್ರಾಂತಕ್ಕೆ ಸೇರಿದ ಮಿಡ್ನಾಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ|| ಬರ್ಗ್‌ರವರು ಇದೇ ಸೆಪ್ಟಂಬರ್ ೨ನೆಯ ತಾರೀಖು ಶನಿವಾರ ಒಂದು ಫುಟ್‌ಬಾಲ್ ಪಂದ್ಯದಲ್ಲಿ ಭಾಗ ವಹಿಸುವದಕ್ಕಾಗಿ ಆಟದ ಮೈದಾನಕ್ಕೆ ಬರುವಷ್ಟರಲ್ಲೇ ಜನರ ಗುಂಪಿನಲ್ಲಿದ್ದ ೩ ಜನ ಯುವಕರು ಅವರ ಮೇಲೆ ಗುಂಡು ಹಾರಿಸಿದುದರಿಂದ ಮಿ|| ಬರ್ಗ್‌ರವರು ಕೂಡಲೇ ಮೃತಪಟ್ಟರು. ಪೋಲೀಸರು ಆ ಯುವಕರ ಮೇಲೆ ಗುಂಡು ಹಾರಿಸಿದುದರಿಂದ ಒಬ್ಬನು ಕೂಡಲೇ ಮೃತಪಟ್ಟನು. ಮತ್ತೊಬ್ಬನಿಗೆ ಗುಂಡಿನೇಟು ತಗಲಿ, ಆಸ್ಪತ್ರೆಯಲ್ಲಿ ಮೃತಪಟ್ಟನು. ೩ನೆಯವನನ್ನು ದಸ್ತಗಿರಿ ಮಾಡಿರುವರು. ಪೋಲೀಸರು ಈ ಸಂಬಂಧವಾಗಿ ನಗರದಲ್ಲಿ ಅನೇಕ ಮನೆಗಳನ್ನು ಶೋಧಿಸಿರುವರು. ಸಶಸ್ತ್ರರಾದ ಪೋಲೀಸರು ನಗರದ ಮುಖ್ಯ ಮುಖ್ಯ ಬೀದಿಗಳನ್ನೂ ಕೆಲವು ಮನೆಗಳನ್ನೂ ಕಾಯುತ್ತಿರುವರು.

[೩ ನೆಯ ಪುಟದಿಂದ ಮುಂದುವರಿದುದು.]

ಮಕ್ಕಾಶಿಲೆ

ಇದೂ ಅಲ್ಲದೆ ಮಕ್ಕಾ ಪಟ್ಟಣದಲ್ಲಿ ಮುಸಲ್ಮಾನರಿಗೆ ಅತ್ಯಂತ ಪವಿತ್ರವಾದ ಶಿಲೆಯೊಂದು ಸ್ಥಾಪಿತವಾಗಿದೆ. ಇದರ ಹೆಸರು '**ಹಜರುಲ್‌ಅಸವದ್**' ಅಥವಾ '**ಸಂಗ್ ಅಸವದ್**' ಎಂದು. ಇದರ ಕಡೆಗೇ ತಿರುಗಿ ನಮ್ಮ ಮುಸಲ್ಮಾನ ಮಿತ್ರರು ನಮಾಜು ಮಾಡುವರು. ಈ ಶಿಲೆಯು ಸ್ಥಾಪಿತವಾಗಿರುವ ರೀತಿಯು ಸರ್ವ ಪ್ರಕಾರದಲ್ಲಿಯೂ ನಮ್ಮ ಮಹಾದೇವ ಲಿಂಗಸ್ಥಾಪನೆಯ ರೀತಿಯನ್ನೇ ಹೋಲುವುದು. ಕೆಳಗೆ ಜಲಹರಿಯ ಆಕಾರವಿದೆ. ಅದರಲ್ಲಿ ಮೂರ್ತಿಯು ಸ್ಥಾಪಿತವಾಗಿದೆ. ಮೂರ್ತಿಯು ೧೧ ಇಂಚು ಎತ್ತರವೂ ೫-೬ ಇಂಚು ದಪ್ಪವಾಗಿಯೂ ಇದೆ. ಇತಿಹಾಸಗಳಿಂದ ಆ ಮೂರ್ತಿಯು ಮೊದಲು ಸ್ಥಾಪಿತವಾದ ರೀತಿಯಲ್ಲೇ ಇದುವರೆಗೆ ಇದೆ ಎಂಬುದೂ, ಕೆಲವು ಮುಸಲ್ಮಾನ ಸರದಾರರು ಅದರಲ್ಲಿ ಬದಲಾವಣೆ ಮಾಡಲು ಇಷ್ಟಪಟ್ಟಾಗ ಹಜರತ್ ಮಹಮ್ಮದ್ ಸಾಹೇಬರು ಹಾಗೆ ಮಾಡಗೊಡಲಿಲ್ಲವೆಂಬುದೂ ತಿಳಿಯಬರುತ್ತದೆ.

ಪ್ರಾಚೀನ ಅರಬರು

ಪ್ರಾಚೀನ ಕಾಲದ ಅರೇಬಿಯಾ ನಿವಾಸಿಗಳು ಮಹಾದೇವನ ಆಕಾರವುಳ್ಳ ಒಂದು ಮೂರ್ತಿಯನ್ನು ಪೂಜಿಸುತ್ತಿದ್ದರೆಂದು ತಿಳಿದ ನಾನು ಸಂಶೋಧನ ಕಾರ್ಯಕ್ಕೆ ಕೈಹಾಕಿದೆನು. ೧೯೨೩ ನೇ ಮಾರ್ಚಿಯ 'ಅಲ್ ಹಿಲಾಲ್' ಎಂಬ ಒಂದು ಕೈರೋ (ಈಜಿಪ್ಟ್) ಪಟ್ಟಣದ ವೃತ್ತ ಪತ್ರಿಕೆಯಲ್ಲಿ ಆ ನಗರದ ಅಜಹರ್ ವಿಶ್ವವಿದ್ಯಾಲಯದ ಪಂಡಿತರೊಬ್ಬರು ಪ್ರಕಟಿಸಿದ್ದ ಕವಿತೆಯು ಸಿಕ್ಕಿತು. ಕವಿತೆಯು **ಅಬುಲ್ ಹಕಮ್** ಎಂಬ ಉಪನಾಮವುಳ್ಳ **ಉಮರ್ ಬಿನ್ ಹಾಶಿಮ್** ಎಂಬ ಪ್ರಾಚೀನ ಅರಬ್ಬಿ ಕವಿಯದು. ಕವಿಯು ಹಜರತ್ ಮಹಮ್ಮದ್ ಸಾಹೇಬರ ಚಿಕ್ಕಪ್ಪ. ಅವರಲ್ಲಿ ಪರಸ್ಪರ ಮತಭೇದವಿದ್ದುದರಿಂದ ವೈಮನಸ್ಯವಿತ್ತು. ಈ ಪ್ರಸ್ತುತದ ಸಲುವಾಗಿ ಮುಸಲ್ಮಾನರು ಆತನ ಹೆಸರನ್ನು ಅಬುಲ್ ಹಕಮ್ (ಜ್ಞಾನ ಜನಕ) ಎಂಬುದನ್ನು ಬದಲಾಯಿಸಿ, ಅಬೂ ಜಹಲ್ (ಅಜ್ಞಾನಜನಕ) ಎಂದು ಮಾಡಿದರು. ಪ್ರಾಚೀನ ಹಸ್ತಲಿಪಿಯಿಂದ ಉದ್ಧರಿಸಿ ಪತ್ರಿಕೆಯಲ್ಲಿ ಪ್ರಕಟವಾದ ಕವಿತೆಯ ಆಶಯವು ಹೀಗಿದೆ—

"ಮನುಷ್ಯನು ಕಾಮವಶನಾಗಿ ದುಷ್ಕಾರ್ಯಗಳನ್ನೇ ಧರ್ಮ, ಕರ್ತವ್ಯ, ಎಂದು ತಿಳಿಯುತ್ತಿದ್ದರೆ ಅವನು ಹೇಗೆ ಉದ್ಧಾರವಾದಾನು? ಅವನು ಅಪೇಕ್ಷೆಪಟ್ಟರೆ ಉದ್ಧಾರವಾಗಬಹುದು. ನಿರ್ಮಲ ಮನಸ್ಸಿನಿಂದ ಒಮ್ಮೆಯಾದರೂ ಮಹಾದೇವನ ಉಪಾಸನೆ ಮಾಡಿದರೆ ಧರ್ಮ ಮಾರ್ಗದಲ್ಲಿರುವ ಸೋಪಾನಗಳನ್ನೆಲ್ಲ ಒಟ್ಟಿಗೆ ದಾಟಬಹುದು. ಭಾರತ ನಿವಾಸಿಗಳು ಧರ್ಮಮಾರ್ಗವನ್ನು ತೋರಿಸುವುದರಲ್ಲಿ ಆದರ್ಶ ಗುರುಗಳಾಗಿರುವುದರಿಂದ, ಭಾರತಭೂಮಿಗೆ ಹೋದರೆ ಮನುಷ್ಯನಿಗೆ ಪುಣ್ಯವು ಸಿದ್ಧಿಸುವುದು. ಹೇ ಪ್ರಭೋ! ದುಃಖನಾಶಕವಾದ ಆ ಭಾರತವರ್ಷದ ದರ್ಶನವು ನನಗೆ ಎಂದಿಗೆ ಆದೀತು?"

ನಾನು **ಜೆರುಸಲೇಂ** ನಗರದ **ಖಲೀಫಾದಿಯಾ** ಪುಸ್ತಕಾಲಯದಲ್ಲಿ ೧೯೨೪ ರಲ್ಲಿ ನೋಡಿದ್ದ ಒಂದು ಪುಸ್ತಕವು ೧೯೨೮ ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಪ್ರಕಟಿತವಾಗಿದೆ. ಇದರ ಹೆಸರು 'ಮುಸಲ್ಮ ಸಲೂತ ಸಿಲ್ ಅಹವಾಲು ಸತ್ರಾರಾ ಇಲ್ ಜಹೂದ್' ಲೇಖಕನು ಹಾರೂನ್ ರಶೀದ್ ಬಾದಶಹನ ಆಸ್ಥಾನ ಕವಿಯಾದ 'ಅಸ್ಮಯಿ'. ಈ ಗ್ರಂಥದ ಮೊದಲನೆಯ ಭಾಗದಲ್ಲಿ ಅರೇಬಿಯಾದ ಪ್ರಾಚೀನ ಕವಿಗಳ ಇತಿಹಾಸವೂ, ಎರಡನೆಯ ಭಾಗದಲ್ಲಿ ಹಜರತ್ ಮಹಮ್ಮದ್ ಸಾಹೇಬರಿಂದ ಇತ್ತೀಚೆಗೆ ಹಾರೂನ್ ರಶೀದ್ ಬಾದಶಹನ ಪರ್ಯಂತ ಕವಿಗಳ ಇತಿಹಾಸವೂ ಇವೆ. ಗ್ರಂಥದ ಭೂಮಿಕೆಯಲ್ಲಿ ಹೀಗೆ ವರ್ಣಿತವಾಗಿದೆ—

"ಓಕಾಜ್" ಜಾತ್ರೆ

ಮಕ್ಕಾ ನಗರದಲ್ಲಿದ್ದ ದೊಡ್ಡ ದೇವಾಲಯವನ್ನು ಅರೇಬಿಯಾ ನಿವಾಸಿಗಳೆಲ್ಲರೂ ಪವಿತ್ರ ತೀರ್ಥಸ್ಥಾನವೆಂದು ತಿಳಿದಿದ್ದರು. ವರ್ಷಕ್ಕೊಮ್ಮೆ ಮಳೆಗಾಲ ಕಳೆದಮೇಲೆ ಜಾತ್ರೆ ನೆರೆದು ಲಕ್ಷಾಂತರ ಅರಬ್ಬೀಯವರು ಸೇರುತ್ತಿದ್ದರು. ಆಗ [illegible] ಒಂದು ಕವಿಸಮ್ಮೇಳನವೂ [illegible]. ಜಾತ್ರೆಯ ಹೆಸರು 'ಓಕಾಜ್' ಎಂದು. ಪ್ರಥಮಸ್ಥಾನವನ್ನು ಪಡೆದ ಕವಿಯ ಕವಿತೆಗಳು ತಾಮ್ರದ ತಗಡಿನಲ್ಲಿ ಬರೆಯಲ್ಪಟ್ಟು ದೇವಾಲಯದ ಒಳಗೆ ನೇತುಹಾಕಲ್ಪಡುತ್ತಿದ್ದುವು. ಕ್ರಮದಿಂದ ಮತ್ತೆ ಒಂಭತ್ತು ಕವಿಗಳ ಕೃತಿಗಳು ಒಂಟೆ ಮುಂತಾದುವುಗಳ ಚರ್ಮದಮೇಲೆ ಬರೆಯಲ್ಪಟ್ಟು ಹೊರಪ್ರಾಕಾರದಲ್ಲಿ ತಗಲು ಹಾಕಲ್ಪಡುತ್ತಿದ್ದುವು. ವರ್ಷಕ್ಕೆ ಹತ್ತರಂತೆ ಹೀಗೆಯೇ ಬಹುವರ್ಷಗಳವರೆಗೆ ಅನೇಕ ಕವಿತಾರತ್ನಗಳು ಆ ದೇವಾಲಯದಲ್ಲಿ ಸೇರಿದ್ದುವು. ಹಜರತ್ ಮಹಮ್ಮದ್ ಸಾಹೇಬರ ಕೈಕೆಳಗಿನ ಮುಸಲ್ಮಾನರೆಂದು ನಗರವನ್ನು ಗೆದ್ದು, ದೇವಾಲಯವನ್ನು ಮಸೀದಿಯನ್ನಾಗಿ ಬದಲಾಯಿಸತೊಡಗಿದಾಗ ಆ ಕವಿತೆಗಳೆಲ್ಲ ಬಹುಮಟ್ಟಿಗೆ ನಷ್ಟವಾದುವು. ಆದರೆ ಆ ಸೈನ್ಯದಲ್ಲಿದ್ದ **ಹಸ್ಸಾನ್‌ಬಿನ್ ಸಾಬಿತ್** ಎಂಬೊಬ್ಬ ಮುಸಲ್ಮಾನ ಕವಿಗೆ ಇದನ್ನು ಕಂಡು ದುಃಖವಾಗಿ ಅವನು ಯಾರೂ ಕಾಣದಂತೆ ಕೆಲವು ಕವಿತೆಗಳನ್ನು ಕೊಂಡೊಯ್ದನು. ಅನೇಕ ವರ್ಷಗಳಾದಮೇಲೆ ಅವನ ವಂಶದ ಮೂರನೆ ತಲೆಯಲ್ಲಿ ಮುಸಲಿಮ್ ಎಂಬೊಬ್ಬ ದರಿದ್ರನಿದ್ದನು. ಬಾಗದಾದಿನ ಬಾದಶಹ ಹಾರೂನ್ ರಶೀದನು ಕವಿತಾಪ್ರಿಯನೆಂದು ಗೊತ್ತಾದಕೂಡಲೆ ಅವನು ತನ್ನ ಪೂರ್ವಜರಿಂದ ಬಂದಿದ್ದ ಕವಿತೆಗಳನ್ನು ತೆಗೆದುಕೊಂಡು ಹೋಗಿ ಅಸ್ಮಯೀ ಕವಿಯಮೂಲಕ ಬಾದಶಹನಿಗೆ ತೋರಿಸಿದನು.

ಅಸ್ಮಯೀ ಭೂಮಿಕೆಯಲ್ಲಿ ಅವು ಒಟ್ಟು ೧೫ ಪದ್ಯಗಳಿದ್ದುವೆಂದೂ, ಆ ಪೈಕಿ ಮೂರು 'ಲಬೀ ಬಿನ್ ಅಖತಬ್ ಬಿನ್ ತುರ್ಫಾ' ಎಂಬುವನವೆಂದೂ ಬರೆದಿದ್ದಾನೆ. ಆ ಕವಿಯು ಓಕಾಜ್ ಜಾತ್ರೆಯಲ್ಲಿ ಆರು ವರ್ಷಗಳಕಾಲ ಸರ್ವಪ್ರಥಮನಾಗಿದ್ದನೆಂದೂ, ಅವನ ಕಾಲವು ಹಜರತ್ ಮಹಮ್ಮದ್ ಸಾಹೇಬರಿಗೆ ಒಂದು ಸಾವಿರವರ್ಷಗಳ ಮುಂಚೆಯೆಂದೂ ತಿಳಿಸಲ್ಪಟ್ಟಿದೆ.

ವೇದಸಂದೇಶ

ನಾನು ಜೆರುಸಲೇಮಿಗೆ ಹೋಗಿದ್ದಾಗ ಅಲ್ಲಿಯ ಖಲೀಫಾದಿಯಾ ಪುಸ್ತಕಾಲಯದ ಅಧ್ಯಕ್ಷರು ಸೈಯದ್ ಜಮಾಲ್ ಹುಸೇನಿಯವರು ನನಗೆ ಪರಮಮಿತ್ರರಾದರು. ನಾನು ಅವರ ಮನೆಯಲ್ಲೇ ಇಳಿದುಕೊಂಡಿದ್ದೆನು. ಅವರೊಂದು ದಿನ ತಮ್ಮಲ್ಲಿ ಪ್ರಾಚೀನಕಾಲದ, ತಾಮ್ರಪತ್ರಲಿಖಿತವಾದ ಕವಿತೆಗಳಿರುವುವೆಂದು ಹೇಳಿದರು. ಆಮೇಲೆ ಒಂದು ತಾಮ್ರಪತ್ರವನ್ನು ತೆಗೆದು ನನ್ನ ಮುಂದೆ ಇಟ್ಟರು. ಅದು ಮೂರಡಿ ಉದ್ದ, ಒಂದೂಕಾಲು ಅಡಿ ಅಗಲವಿತ್ತು. ಕೆಳಗೆ ನಾಲ್ಕು ಇಂಚು ಜಾಗಾ ಖಾಲಿಯಿತ್ತು. ಅಲ್ಲಿ **ಹಾರೂನ್ ರಶೀದ ಬಾದಶಹನ ಮಹಾಮಾತ್ಯ ಫಜಲ್ ಬಿನ್ ಯಹಿಯಾ** ಎಂಬಾತನ ಮೊಹರು ಹಾಕಿತ್ತು. ಕವಿತೆಯಲ್ಲಿ ೧೨ ಪದ್ಯಗಳಿದ್ದುವು. ಕವಿಯ ಹೆಸರು '**ಲಬೀ ಬಿನ್ ಅಖತಬ್**' ಎಂದು ಬರೆದಿತ್ತು.

ಈ ಕವಿತೆಗಳಲ್ಲಿ ಅತ್ಯಾಶ್ಚರ್ಯಕರವಾದ ವಿಷಯವಿತ್ತು. ಅದರ ಉಲ್ಲೇಖವು ಇದುವರೆಗೆ ಇತಿಹಾಸದಲ್ಲಿ ಎಲ್ಲಿಯೂ ಆಗಿಲ್ಲ. ಅಲ್ಲಿನ ಒಂದೆರಡು ಪದ್ಯಗಳ ಭಾವಾನುವಾದವನ್ನು ಕೆಳಗೆ ಕೊಟ್ಟಿದೆ:

"ಭಾರತಭೂಮಿಯೇ! ಯಾವ ಭೂಭಾಗದಲ್ಲಿ ಪರಮಾತ್ಮನು ತನ್ನ ಜ್ಞಾನೋಪದೇಶವನ್ನು ಮಾಡಿದನೋ ಅಂಥ ನೀನೇ ಧನ್ಯಳು! ನಮ್ಮ ಕಣ್ಣುಗಳು ಯಾವ ಜ್ಯೋತಿಯಿಂದ ಬೆಳಗುತ್ತಿವೆಯೋ ಆ ಜ್ಞಾನ ಮತ್ತು ಪ್ರಕಾಶದ ಭಂಡಾರವನ್ನು ಪ್ರಭುವು ಭಾರತವರ್ಷದಲ್ಲಿ ತನ್ನ ದೂತರ ಮೂಲಕ ಪ್ರಕಟಗೊಳಿಸಿದ್ದಾನೆ. ಈ ಜ್ಞಾನಭಂಡಾರಗಳಲ್ಲಿ ನಮಗೆ ಪ್ರಭುವು ಉಪದೇಶಮಾಡಿರುವುದೇನೆಂದರೆ, 'ಮನುಷ್ಯರೇ! ಮನುಷ್ಯ ಮಾತ್ರನ ಶ್ರೇಯಸ್ಸಿಗಾಗಿ ಪ್ರಕಟವಾಗಿರುವ ವೇದಗಳನ್ನು ಗೌರವಿಸಿರಿ. ಅದರಿಂದಲೇ ನಿಮಗೆ ಒಳ್ಳೆಯದಾಗುವುದು.' ಆ ಜ್ಞಾನಭಂಡಾರವೇ ಸಾಮ, ಯಜುರ್ವೇದಗಳು. ಸಹೋದರರೇ! ನಿಮಗೆ ಮೋಕ್ಷಾಕಾಂಕ್ಷೆಯಿದ್ದರೆ ಆ ವೇದಗಳಿಗೆ ಅನುಕೂಲವಾಗಿ ಜೀವನವನ್ನು ತಿದ್ದಿಕೊಳ್ಳಿರಿ. ಅವುಗಳಲ್ಲಿಯು ಋಕ್ ಮತ್ತು ಅತ್ತರ್ ಇವು. ನಾವು ಭ್ರಾತೃಭಾವದಿಂದಿರಬೇಕೆಂದು ತಿಳಿಸುತ್ತೇವೆ. ಇದೇ ಮೋಕ್ಷ ಮತ್ತು ಸುಖಪ್ರದವಾದ ಮಾರ್ಗ."

ಸ್ಥಳ ಸಂಕೋಚದಿಂದ ನಾನು ಆ ಕವಿತೆಗಳ ಇತಿಹಾಸವನ್ನು ಬಿಟ್ಟು ಒಂದೆರಡು ಕವಿತೆಗಳ ಅರ್ಥವನ್ನು ಮಾತ್ರ ಇಲ್ಲಿ ಕೊಡುತ್ತೇನೆ. ಎಲ್ಲ ವಿಷಯಗಳನ್ನೂ ಒಳಗೊಂಡ ಪುಸ್ತಕವೊಂದು ಇಷ್ಟರಲ್ಲಿ ಹೊರಬೀಳಲಿರುವುದು. ಅರೇಬಿಯಾದ ಮತ್ತೊಬ್ಬ ಕವಿ 'ಜರಹಮ್ ಬಿನ್ ತಾಯೀ' ಎಂಬುವನು ಹಜರತ್ ಮಹಮ್ಮದ್ ಸಾಹೇಬರಿಗೆ ಸುಮಾರು ೫೦೦ ವರ್ಷಗಳಿಗೆ ಮುಂಚೆ ಇದ್ದು ಒಂದು ಕವಿತೆಯನ್ನು ಬರೆದನು. ಅದನ್ನು ನಾವೀಗ ಕಾನ್‌ಸ್ಟಾಂಟಿನೋಪಲಿನ **ಸುಲ್ತಾನಿಯಾ** ಪುಸ್ತಕಾಲಯದಲ್ಲಿ ನೋಡಬಹುದು. ಅದರಲ್ಲಿ ಹೀಗೆ ಬರೆದಿದೆ—

"ಹೇ ಭಗವನ್! ಈ ಜಗತ್ತು ಪಾಪಿಗಳಿಂದ ಪೀಡಿತವಾದಾಗಲೆಲ್ಲಾ ನೀನು ಬಾರಿಬಾರಿಗೂ ಜಗದುದ್ಧರಣಕ್ಕಾಗಿ ಅವತರಿಸಿದ್ದೀಯೆ. ಹಾಗೂ ನಿನ್ನ ಗ್ರಂಥದಲ್ಲಿ 'ಧರ್ಮನಷ್ಟವಾಗಿ ಪಾಪವು ಹೆಚ್ಚಿದಾಗೆಲ್ಲ ಭಕ್ತರ ಉದ್ಧಾರಮಾಡಿ ಪಾಪಿಗಳಿಗೆ ಶಿಕ್ಷೆಯನ್ನು ಮಾಡಲು ಅವತರಿಸುತ್ತಿರುತ್ತೇನೆ.' ಎಂದು ಉಪದೇಶಮಾಡಿದ್ದೀಯೆ. ಪ್ರಭೋ! ನೀನು ಅವತರಿಸಿದ ಸ್ಥಾನವೇ ಧನ್ಯ! ನೀನು ಆಟವಾಡಿ, ಮಿತ್ರರಾದ ಹುಡುಗರೊಡನೆ ಹಸುಗಳನ್ನು ಮೇಯಿಸುತ್ತಿದ್ದ ಪ್ರದೇಶವೇ ಪುಣ್ಯಮಯವಾದುದು! ನಿನ್ನ ಸುಂದರ ಶ್ಯಾಮಮುಖವನ್ನು ನೋಡಿದವರಿಗೆ ಸೌಂದರ್ಯವೇ ಮೂರ್ತಿಮತ್ತಾಗಿರುವಂತೆ ತೋರುತ್ತಿತ್ತು. ನೀನು ವೇಣುಗಾನ ಮಾಡತೊಡಗಿದಾಗಂತೂ ಸ್ತ್ರೀಯರಿಗೆ ಮನೆಯಲ್ಲಿರುವುದೂ, ಪುರುಷರಿಗೆ ಕೆಲಸಮಾಡುವುದೂ ಅಸಾಧ್ಯವಾಗುತ್ತಿತ್ತು. ಗರ್ಭದೊಳಗಿನ ಶಿಶುವೂ ಕುಣಿದಾಡತೊಡಗುತ್ತಿತ್ತು. ಸ್ತ್ರೀಯರು ತಮ್ಮ ಮಕ್ಕಳಿಗೆ ಸ್ತನ್ಯಪಾನಮಾಡಿಸುವುದನ್ನೂ ಪತಿಸೇವೆ ಮಾಡುವುದನ್ನೂ ಮರೆತು ನಿನ್ನ ಮುಖಕಮಲವನ್ನು ನೋಡುವುದರಲ್ಲಿ ಮಗ್ನರಾಗುತ್ತಿದ್ದರು. ಪ್ರಭೋ! ಪೀತಾಂಬರವನ್ನುಟ್ಟು, ಕಿರೀಟಕುಂಡಲಾದಿಗಳನ್ನಿಟ್ಟು, ಕೊಳಲನ್ನು ಹಿಡಿದಿರುವ ನಿನ್ನ ರೂಪವನ್ನು ನನಗೆ ತೋರು. ನೀನು ಸ್ವರ್ಗದ ಅಪ್ಸರೆಯನ್ನು ಉದ್ಧಾರಮಾಡಿ ಪರ್ವತವನ್ನು ಒಂದೇ ಬೆರಳಿನಲ್ಲಿ ಎತ್ತಿ ಹಿಡಿದಂತೆ ನನ್ನನ್ನೂ ಉದ್ಧಾರಮಾಡು."

ಅರೇಬಿಯಾದ '**ಸೋಮರ್ ಬಿನ್ ಅದೀ**' ಎಂಬ ಮತ್ತೊಬ್ಬ ಕವಿಯು ತನ್ನ ಕವಿತೆಯಲ್ಲಿ (ಇದು ಕಾನ್‌ಸ್ಟಾಂಟಿನೋಪಲಿನ ಸುಲ್ತಾನಿಯಾ ಪುಸ್ತಕಾಲಯದಲ್ಲಿದೆ) ಹೀಗೆ ಬರೆದಿದ್ದಾನೆ:—'ರಾಜಾ ವಿಕ್ರಮನು ತನ್ನ ಕಾಲದಲ್ಲಿ ದೊಡ್ಡ ಧರ್ಮಾತ್ಮನೂ, ದಾನಶೂರನೂ ಆಗಿದ್ದನು. ಅವನ ರಾಜ್ಯದಲ್ಲಿದ್ದು ಅವನ ದರ್ಶನಮಾಡುತ್ತಿದ್ದ ಜನರೇ ಧನ್ಯರು. ನಾವು ಆ ಸಮಯದಲ್ಲಿ ಅಜ್ಞಾನ, ಮೂರ್ಖತನಗಳಲ್ಲಿ ಮುಳುಗಿದ್ದೆವು. ಕಟುಕರ ಕೈಲಿ ಸಿಕ್ಕಿದ ಕುರಿಗಳಂತೆ, ನಾವು ಸ್ವಾರ್ಥಪರರಾದ ಪಾಷಂಡಿಗಳ ಹಿಡಿತದಲ್ಲಿ ಸಿಕ್ಕಿಬಿದ್ದಿದ್ದೆವು. ಆಗ ಇಬ್ಬರು ವಿದ್ವಾಂಸರು ಬಂದು ನಮಗೆ ಧರ್ಮಾಧರ್ಮ, ಸತ್ಯಾಸತ್ಯಗಳ ತಿಳುವಳಿಕೆಯನ್ನು ಮಾಡಿಕೊಟ್ಟು ವಿದ್ಯಾಪ್ರಚಾರಮಾಡಿದರು. ಅವರಿಬ್ಬರೂ ವಿಕ್ರಮಾದಿತ್ಯನಿಂದ ಕಳುಹಿಸಲ್ಪಟ್ಟು ಭಾರತಭೂಮಿಯಿಂದ ಬಂದಿದ್ದರು!'

ಇದೇ ರೀತಿ ಚಮತ್ಕಾರ ವಿಚಾರಗಳನ್ನೊಳಗೊಂಡ ೬೦ ಕವಿತೆಗಳು ಸಿಕ್ಕಿವೆ. ಆ ಕವಿತೆಗಳಿಂದ ಪ್ರಾಚೀನ ಅರೇಬಿಯಾ ನಿವಾಸಿಗಳು ಹಿಂದೂಧರ್ಮವನ್ನು ಒಪ್ಪಿದವರಾಗಿಯೂ ಆರ್ಯಸಭ್ಯತೆಯನ್ನು ಅನುಸರಿಸಿದವರಾಗಿಯೂ ಇದ್ದರೆಂದು ಸಂಪೂರ್ಣವಾಗಿ ಸಿದ್ಧವಾಗುತ್ತದೆ. ~~(ಆಲೋಚಕರಾದ ವಿದ್ವಾಂಸರು ಈ ಲೇಖನದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಕೃತಜ್ಞರಾಗುವೆವು.)~~

(ಪ. ಸ.)

ಶ್ರೀ ಗೌರೀಶಂಕರ ಯಾತ್ರಾ ಕಂಪನಿ,

ಹುಬ್ಬಳ್ಳಿ.

೧ನೇ ಯಾತ್ರಾ [illegible] ೧೬—೪—೩೩ ರಿಂದ ೧—೬—೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿಸಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೯—೧೧—೧೯೩೩ ಪೂರ್ತಾ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾದ ೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೦೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕಳಿಗೆ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿದರೆ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ್ ಕೊಡಲ್ಪಡುವುದು.

ಸದರಿ ಕಂಪನಿಯು ಎಂಜಿನ್ ರೆಂಟಿಗಳಿಂದ ಪಡಜಮಾನುಗಳು ಕೀರ್ತಿ ಮಾಡಿಕೊಡಲ್ಪಡುವವು. ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ತಿಳಿಸತಕ್ಕದ್ದು.

[15]

ಮೈಸೂರ್ ಏಜಂಟರು—
ದಿ ಯೂನಿವರ್ಸಲ್ ಟ್ರೇಡಿಂಗ್‌ಕಂಪೆನಿ,
(ಆಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಜಿ. ಎ. ಶಿರೂರ,
ಆರ್ಗನಾಯಜರ,
ಶ್ರೀ ಗೌರೀಶಂಕರ ಕಂಪೆನಿ, ಹುಬ್ಬಳ್ಳಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೨೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೨—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೨—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೊಮ್ಮೆ ಹತ್ತುವರ್ಷಕ್ಕೊಮ್ಮೆ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬರುವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದ್ಯಾಂಟಿಕ್ ತರದಂಥ ಕಾಗದಗಳನ್ನು ಪ್ರಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 4

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ನಾಟಕಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾನ್ ಅಂಡ್ ಸನ್
ರಬ್ಬರ್ ಮೊಹರು ಫ್ಯಾಕ್ಟರಿ
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಆನಿಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡ್, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.

[37]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೇರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸ್ ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಪುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಾಂಪೌಂಡ್ ಸಿರಪು ಬ... ಉಬ್ಬಸ, ನೆಗಡಿ, ದಮ್ಮು ... ರೋಗಗಳಿಂ ... ಶ್ವಾಸಕೋಶಗಳಲ್ಲಿ ... ಮುಖ್ಯವಾದ ಕಫವನ್ನು ಸುಲಭ... ಪಡಿಸಿ ಎದೆಯ ಆಯಾ... ದಕ್ಷಿಣ ಬಲವಾದ ... ಈ ರೋಗದಿಂದ ಗುಣ... ಹೊಗಳುತ್ತಾ ಇದ್ದಾರೆ.

8 ಔನ್ಸ್ -

[2]

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಸ್ವಾ...

ಆಯುರ್ವೇ...



...ಬಲದಿಂದ ...ಪಿಗೆ 1 ರೂ. ಯನ್ನು ...ರುತ್ತಾರೆ.

...ಡ ಡಿ|| ಬಂಕಾಪುರ ತಾಲೂಕು ಹುಲ...ಮದ ಶ್ರೀ ರಾ|| ರಾ|| ವೀರಭದ್ರಪ್ಪನವರು ...ಕಟ್ಟಿ ಇವರು ಶ್ರಾವಣಮಾಸದಲ್ಲಿ ಶ್ರೀ ರೇಣುಕ...ವಿಜಯಪುರಾಣ ಮತ್ತು ರುದ್ರಾಭಿಷೇಕವನ್ನು ನೆರವೇ...ರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ನಮ...ಗೆ ಸಿದ 1 ರೂ. ಯು ಶ್ರೀ|| ಆರ್.ಜಿ. ಬಸನಾಳಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಲಂಡನ್ನಿನಲ್ಲಿ ಅಮೇರಿಕೆಯ ರಾಯಭಾರಿಗಳಾಗಿದ್ದ ಆಂಡ್ರ್ಯೂಮೆಲನ್ ಎಂಬವರು ಅಮೇರಿಕೆಯಲ್ಲೆಲ್ಲಾ ದೊಡ್ಡ ಶ್ರೀಮಂತರಾಗಿರುವರು. ಇವರಿಗೆ ವರ್ಷ ೧ ಕ್ಕೆ ೧,೫೦,೦೦೦೦೦ ರೂಪಾಯಿಗಳು ಉತ್ಪತ್ತಿಯಾಗುವವಂತೆ!

ಎಲ್ಲಾ ...ದ—27 ನೇ ಬುಧವಾರದ ...ಕಾಲ 8 ಘಂಟೆಗೆ ಪಟ್ಟದ ...ದುರೆ ಕರೆ ಬಳಿಗೆ ಬಿಜಮಾಡು... 6 ಘಂಟೆಗೆ ಪಟ್ಟದ ಆನೆ ...ಟ್ಟದ ಕುದುರೆ ಕರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್.

28 ನೇ ಗುರುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಕರೆ ಬಳಿಗೆ ಬೆಳೆದು ಅರಮನೆಗೆ 9 ಘಂಟೆಗೆ ಹಿಂದಕ್ಕೆ ಬಿಜಮಾಡುವುದು. ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ. ಸಾಯಂಕಾಲ 7 ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

29 ನೇ ಶುಕ್ರವಾರ—ಪ್ರಾತಃಕಾಲ 6-30 ಘಂಟೆಗೆ ಆಯುಧ, ಗಜಾಶ್ವ ಬನ್ನಿಮಂಟಪಕ್ಕೆ ಬಿಜಮಾಡುವುದು. ಅನಂತರ ಚಟ್ಟೀಕಾಳಗ, ಸಾಯಂಕಾಲ 4 ಘಂಟೆಗೆ ಜಂಬೂಸವಾರಿ.

30 ನೇ ಶನಿವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್. ಸಜ್ಜೆದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗಳಿಂದಲೂ ನಜರ್.

ಅಕ್ಟೋಬರ್ 1 ನೇ ಭಾನುವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಅಕಯುವ ಇಜ್ಞಯರಹಸ್ಯ	೪ ಆಣೆ
" ಮನುಷ್ಯನ, ಧರ್ಮ, ಕರ್ತವ್ಯ	೫ ಆಣೆ
ಹೇಗೆ ಉದ್ಧಾರವ	೮ ಆಣೆ
ಉದ್ಧಾರವಾಗ ಒಮ್ಮೆಯಾಗ ...ವಳಿ (ಷಡಕ್ಷರ ಕವಿಕೃತ)	೮ ಆಣೆ
ಧರ್ಮ ಪತಿಷ್ಠೆ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ೋಹರವಾದ ಫೋಟೋಗಳು.

ದಾಟಬಹುದು. ಭಕ್ತ
ವನ್ನು ತೋರಿಸುವುದರ
ರಿಂದ, ಭಾರತಭೂಮಿಗೆ
ಪುಣ್ಯವು ಸಿದ್ಧಿಸುವುದು.
ಶಕವಾದ ಆ ಭಾರತವ
ಎಂದಿಗೆ ಆದೀತು?"

ರೂ. ಆ. ಪೈ.
ತ್ರ ಅಮ್ಮಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦
ಸೂರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ
ನಾವು ಜೆರುಸಲೇಂ ನಗ್ಗಂತವನ್ನು ಪ್ರವೇಶಿಸುವ ಫೋಟೋ ಸೈಜು ೧೦×೧೪ ಬೆಲೆ
ಯದಲ್ಲಿ ೧೯೨೪ ರಲ್ಲಿ ನೋಡಿ .... ೦—೧—೨
ಶಾರ್ಕ್ ಸ್ಟಾರ್ ಟಿನೋಪಲ್ ನಗ ರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೨
ಹೆಸರು 'ಮುಸಲ್ಮಾನ ಸಭಾಸ ಪ ರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯
ಜಹೂದ್' ಲೇಖಕನು ಹಾರೂನ್ ಪವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ ೦—೧—೨
ಕವಿಯಾದ 'ಅಸ್ಮಯಿ'. ಈ ಗ್ರಂ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ .... ೦—೧—೦
ಅರೇಬಿಯಾದ ಪ್ರಾಚೀನ ಕವಿಗಳ ಇತಿ ...ಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೦
ಭಾಗದಲ್ಲಿ ಹಜರತ್ ಮಹಮ್ಮದ್ ಸಾಹೇಬರಿಂದ ಇತ್ತೀಚೆಗೆ
ಹಾರೂನ್ ರಶೀದ್ ಬಾದಶಹನ ಪರ್ಯಂತ ಕವಿಗಳ ಇತಿಹಾ .... ೦—೧—೦
ಸವೂ ಇವೆ. ಗ್ರಂಥದ ಭೂಮಿಕೆಯಲ್ಲಿ ಹೀಗೆ ವರ್ಣಿಸಲಾಗಿದೆ— .... ೦—೦—೯

ಅ ೦—೦—೯

" ಓ ಕಾಜ್ " ಜಾತ್ರೆ

ಮಕ್ಕಾ ನಗರದಲ್ಲಿದ್ದ ದೊಡ್ಡ ದೇವಾಲಯವನ್ನು ಅರೇಬಿಯಾ ನಿವಾಸಿಗಳೆಲ್ಲರೂ ಪವಿತ್ರ ತೀರ್ಥಸ್ಥಾನವೆಂದು ತಿಳಿದಿದ್ದರು. ವರ್ಷಕ್ಕೊಮ್ಮೆ ಮಳೆಗಾಲ ಕಳೆದಮೇಲೆ ಜಾತ್ರೆ ನೆರೆದು ಲಕ್ಷಾಂತರ ಅರಬ್ಬಿಯವರು ಸೇರುತ್ತಿದ್ದರು. ಆಗ ದೊಡ್ಡದೊಂದು ಕವಿಸಮ್ಮೇಳನವೂ ಆಗುತ್ತಿತ್ತು. ಜಾತ್ರೆಯ ಹೆಸರು 'ಓಕಾಜ್' ಎಂದು. ಪ್ರಥಮಸ್ಥಾನವನ್ನು ಪಡೆದ ಕವಿಯ ಕವಿತೆಗಳು ಚಾಮ್ಮದ ಹಗಡದಲ್ಲಿ ಬರೆಯಲ್ಪಟ್ಟು ದೇವಾಲಯದ ಒಳಗೆ ನೇತುಹಾಕಲ್ಪಡುತ್ತಿದ್ದವು. ಕ್ರಮದಿಂದ ಮತ್ತೆ ಒಂಭತ್ತು ಕವಿಗಳ ಕೃತಿಗಳು ಒಂಟೆ ಮುಂತಾದುವುಗಳ ಚರ್ಮದಮೇಲೆ ಬರೆಯಲ್ಪಟ್ಟು ಹೊರಪ್ರಾಕಾರದಲ್ಲಿ ಹಗಲು ಹಾಕಲ್ಪಡುತ್ತಿದ್ದವು. ವರ್ಷಕ್ಕೆ ಹತ್ತರಂತೆ ಹೀಗೆಯೇ ಬಹುವರ್ಷಗಳವರೆಗೆ ಅನೇಕ ಕವಿತಾರತ್ನಗಳು ಆ ದೇವಾಲಯದಲ್ಲಿ ಸೇರಿದ್ದವು. ಹಜರತ್ ಮಹಮ್ಮದ್ ಸಾಹೇಬರ ಕೈಕೆಳಗಿನ ಮುಸಲ್ಮಾನರೆಂದು ನಗರವನ್ನು ಗೆದ್ದು, ದೇವಾಲಯವನ್ನು ಮಸೀದಿಯನ್ನಾಗಿ ಬದಲಾಯಿಸಿಕೊಂಡಾಗ, ಆ ಕವಿತೆಗಳೆಲ್ಲ ಬಹುಮಟ್ಟಿಗೆ ನಷ್ಟವಾದುವು. ಆದರೆ ಆ ಸೈನ್ಯದಲ್ಲಿದ್ದ **ಹಸ್ಸಾನ್‌ಬಿನ್ ಸಾಬಿತ್** ಎಂಬೊಬ್ಬ ಮುಸಲ್ಮಾನ ಕವಿಗೆ ಇದನ್ನು ಕಂಡು ದುಃಖವಾಗಿ ಅವನು ಯಾರೂ ಕಾಣದಂತೆ ಕೆಲವು ಕವಿತೆಗಳನ್ನು ಕದ್ದೊಯ್ದನು. ಅನೇಕ ವರ್ಷಗ

-೦—೯
೧ನೇ ಯಾತ್ರಾ ೧೬—೪—೩೩ ರಿಂದ ೧— ೦—೯
ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸ. —೯
೨ನೇ ಯಾತ್ರಾಪ್ರವಾಸ ತಾ॥ ೧—೧—೯
೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ,
೪೮ ಕ್ಷೇತ್ರಗಳ ಮಹಾಯಾತ್ರೆಯು. ಸೆಕೆಂಡ ಕ್ಲಾ
ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು
ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ
ಸದರಿ ಕಂಪನಿಯ ಎಂಜಿನ್ ರೆಂಟಿಗಳಿಂದ
ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು.
ಕಂಪನಿಗೆ ತಿಳಿಸತಕ್ಕದ್ದು.

ಮೈಸೂರ್ ಏಜಂಟರು—
ದಿ ಯೂನಿವರ್ಸಿಲ್ ಟ್ರೇಡಿಂಗ್‌ಕಂಪೆನಿ,
(ಆಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.


(Registered Trade Mark)

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಟಿನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಏರುಬಸವ ಅಂಡ್ ಕಂಪೆನಿ ಲಿಮಿಟೆಡ್,
6] ಪೋ. ಬಾ. ೫೧೦, ಮದರಾಸು.

ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಸೆಪ್ಟಂಬರ್ ೧೯೩೩ [ಸಂಚಿಕೆ ೨೧

ರೇಣುಕವಿಜಯಪುರಾಣಂ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ಣಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀ ರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನಿಂದೊಡಗೂಡಿದೆ. ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರಚಿತ್ರಗಳು ಸೇರಿಸಲ್ಪಟ್ಟಿವೆ. ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ.

ಬೆಲೆ ೧ ರೂಪಾಯಿ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಪುರಾಣಮಹೋತ್ಸವ.

ಇಡಗುಂದಿ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನ ಸೂತ್ರಾನುವರ್ತಿಗಳಾದ ಶ್ರೀ ಪಟ್ಟಾಧ್ಯಕ್ಷ ಶಿವಾಚಾರ್ಯರಿಂದ ದೀಕ್ಷಾಪೂರ್ವಕ ಲಿಂಗಾಂಗಸಾಮರಸ್ಯಸಿದ್ಧಿಯನ್ನು ಪಡೆದು ಮಹಾಮಹಿಮಶಾಲಿಯೆನಿಸಿಕೊಂಡು ಲೋಕವಿಖ್ಯಾತನಾದ ಗುರುಜಂಗಮಪ್ರೇಮಿಯೂ ಆದ ಶರಣಬಸವನೆಂಬ ಮಹಾಶಿವಶರಣನ ಪುರಾಣಪ್ರವಚನವು ವಿಜಾಪುರ ಜಿಲ್ಲಾ ಬಾಗೇವಾಡಿ ತಾಲೂಕ ಪೈಕಿ ಇಡಗುಂದಿಯ ಕರ್ತೃಗದ್ದಿಗೆ ಶ್ರೀ ರುದ್ರೇಶ್ವರ ಪಟ್ಟದ ಮಹಾಶಿವಯೋಗಿಗಳ ಸದ್ಭಾವದಿಂದ ಪುಣ್ಯಕ್ಷೇತ್ರವೆನಿಸಿದ ಇಡಗುಂದಿ ರುದ್ರಸ್ವಾಮಿ ಬೃಹನ್ಮಠದಲ್ಲಿ ಇದೇ ಶ್ರೀಮುಖನಾಮಸಂವತ್ಸರದ ಶ್ರಾವಣಾದಿಯಿಂದ ಸದರಿ ಮಠಕ್ಕೆ ನವೀನಪಟ್ಟಾಧಿಕಾರಿಗಳಾಗಿ ಬಂದ ರುದ್ರಸ್ವಾಮಿಗಳ ಸಹೋದರರಾದ ಶ್ರೀ ವೇ॥ ಬಸವರಾಜಶಾಸ್ತ್ರಿ ಮಳೆಮಠ ಉಮಚಗಿ ಇವರ ಮುಖದಿಂದ ಜರುಗಿತು. ವಯೋವೃದ್ಧರೂ ಜ್ಞಾನವೃದ್ಧರೂ, ಪರೋಪಕಾರಪರರೂ, ಸತ್ಕಾಲಿಗಳೂ, ಶಿವಭಕ್ತಿಯುಕ್ತರೂ ಆದ ವಿರೂಪಾಕ್ಷಪ್ಪ ಶೆಟ್ಟಿ ಪಟ್ಟಣಶೆಟ್ಟಿ ಇವರೇ ನೊದಲಾದ ಸಮಸ್ತ ದೈವಸ್ಥರು ಇದೇ ಸಂವತ್ಸರ ಭಾದ್ರಪದ ಶು॥ ೮ ಸೋಮವಾರ ದಿವಸ ಲಕ್ಷ ದಳ ಬಿಲ್ವಾರ್ಚನೆ, ರುದ್ರಾಭಿಷೇಕ, ಗುರುಪಾದಪೂಜೆ, ಮಹೇಶಾರಾಧನೆಯನ್ನು ನೆರವೇರಿಸಿದರು. ೯ ಮಂಗಳವಾರ ಪ್ರಾತಃಕಾಲದಲ್ಲಿ ವಿಜಾಪುರ, ವ ಟಿಮ್ಮಬಗಿ ಕಟ್ಟಿಮನಿ, ಅರಳೀಮಠದ ಶ್ರೀ ಪಟ್ಟದಸ್ವಾಮಿಗಳವರ ಅಂದೋಳಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದಲೂ ಶಿವಭಜನಾ ಗುರುಭಜನಾಘೋಷಗಳಿಂದಲೂ ಉತ್ಸವವು ಪ್ರೇಕ್ಷಕರಿಗೆ ಅತೀವಭಕ್ತಿಯನ್ನುಂಟುಮಾಡುತ್ತಲಿತ್ತು. ರಾಜಬೀದಿಗಳು ಸಳದುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದವು. ಪಾಲಕಿ ಮಹೋತ್ಸವವು ಶ್ರೀ ವೀರಭದ್ರೇಶ್ವರದೇವಾಲಯಕ್ಕೆ ಸಲ್ಲಿತು. ಅಲ್ಲಿ ಮಂಗಲವಾದನಂತರ ಪುನಃ ಮಠಕ್ಕೆ ಮುಟ್ಟಿತು. ಬಳಿಕ ಧಾರ್ಮಿಕಸಂಬಂಧವಾಗಿ ಕೆಲವು ಉಪನ್ಯಾಸಗಳು ನಡೆದವು. ಅನಂತರ ಪ್ರಭಾಪೋಷಣೆಗಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟವು. ಪಂಚಾಚಾರ್ಯರ ಜಯಘೋಷದೊಡನೆ ಸಭಾಕಾರ್ಯವು ಸಂಪೂರ್ಣವಾಯಿತು.

ಪ್ರತ್ಯಕ್ಷದರ್ಶಿ

ಸ್ವೀಕಾರ

ಚಿಕ್ಕಮಗಳೂರು ತಾ॥ ಮುಗುಳವಳ್ಳಿಗ್ರಾಮದ ಮ॥ ರಾ॥ ಪಟೇಲ್ ವೀರಪ್ಪಗೌಡರು ತಮಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪಾಬಲದಿಂದ ಗುಣವಾದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ॥ ಮಠದ ಮುಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಚಿತ್ರದುರ್ಗ ಡಿ॥ ಜಗಲೂರು ತಾಲೂಕು ದೋಣೇಹಳ್ಳಿಗ್ರಾಮದ ಸ್ಕೂಲ್ಮಾಸ್ಟರಾದ ಶ್ರೀ॥ ಪಿ. ಎಂ. ಶಿವಲಿಂಗಾರಾಧ್ಯರು ತಮ್ಮ ಮನೋಭಿಲಾಷೆಯು ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದಬಲದಿಂದ ನೆರವೇರಿದ ಸಂತೋಷಾರ್ಥವಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ॥ ಬಂಕಾಪುರ ತಾಲೂಕು ಹುಲಗೂರುಗ್ರಾಮದ ಶ್ರೀ ರಾ॥ ರಾ॥ ವೀರಭದ್ರಪ್ಪನವರು ಆರಳೀಕಟ್ಟಿ ಇವರು ಶ್ರಾವಣಮಾಸದಲ್ಲಿ ಶ್ರೀ ರೇಣುಕವಿಜಯಪುರಾಣ ಮತ್ತು ರುದ್ರಾಭಿಷೇಕವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಶ್ರೀ॥ ಆರ್.ಜಿ. ಬಸನಾಳಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಲಂಡನ್ನಿನಲ್ಲಿ ಅಮೇರಿಕೆಯ ರಾಯಭಾರಿಗಳಾಗಿದ್ದ ಆಂಡ್ರ್ಯೂಮೆಲನ್ ಎಂಬವರು ಅಮೇರಿಕೆಯಲ್ಲೆಲ್ಲಾ ದೊಡ್ಡ ಶ್ರೀಮಂತರಾಗಿರುವರು. ಇವರಿಗೆ ವರ್ಷ ೧ಕ್ಕೆ ೧೫೦,೦೦೦೦೦ ರೂಪಾಯಿಗಳು ಉತ್ಪತ್ತಿಯಾಗುವವಂತೆ!

ದಸರಾ ಮಹೋತ್ಸವ—ಪ್ರೋಗ್ರಾಂ

(ಶ್ರೀಮುಖನಾಮಸಂವತ್ಸರದ ಆಶ್ವಯುಜ ಶುದ್ಧ)

ಸೆಪ್ಟಂಬರ್ ಮತ್ತು ಅಕ್ಟೋಬರ್, 1933.

ಸೆಪ್ಟಂಬರ್ 20 ನೇ ಬುಧವಾರ—ಪ್ರಾತಃಕಾಲ 10-30 ಘಂಟೆಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಬೆಳಸುತ್ತಾರೆ. ದಿವಾನರಿಂದಲೂ, ಖಾಸಾ ಭಾವಮೈದುನರಿಂದಲೂ, ಕೌನ್ಸಿಲರುಗಳಿಂದಲೂ, ಸರದಾರರುಗಳಿಂದಲೂ ಮತ್ತು ಮುಖ್ಯವಾದ ಅರಸರುಗಳಿಂದಲೂ ನಜರ್. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಸಿವಿಲ್ ಆಫೀಸರುಗಳಿಂದಲೂ ಮತ್ತು ಇತರ ದರ್ಬಾರಿಗಳಿಂದಲೂ ನಜರ್.

21 ನೇ ಗುರುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೋಲಿಸ್ ಆಫೀಸರುಗಳಿಂದಲೂ ನಜರ್.

22 ನೇ ಶುಕ್ರವಾರದಿಂದ—27 ನೇ ಬುಧವಾರದ ತನಕ ಪ್ರತಿದಿನ ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್.

28 ನೇ ಗುರುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬೆಳೆದು ಅರಮನೆಗೆ 9 ಘಂಟೆಗೆ ಹಿಂದಕ್ಕೆ ಬಿಜಮಾಡುವುದು. ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ. ಸಾಯಂಕಾಲ 7 ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

29 ನೇ ಶುಕ್ರವಾರ—ಪ್ರಾತಃಕಾಲ 6-30 ಘಂಟೆಗೆ ಆಯುಧ, ಗಜಾಶ್ವ ಬನ್ನಿಮಂಟಪಕ್ಕೆ ಬಿಜಮಾಡುವುದು. ಅನಂತರ ಬಟ್ಟೋಲಗ, ಸಾಯಂಕಾಲ 4 ಘಂಟೆಗೆ ಜಂಬೂಸವಾರಿ.

30 ನೇ ಶನಿವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್. ಹಿಂದಿ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗಳಿಂದಲೂ ನಜರ್.

ಅಕ್ಟೋಬರ್ 1 ನೇ ಭಾನುವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೇದಪರಿಚಯ

ಅಥವಾ

ಪ್ರಭಾದರ್ಶ

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ದ್ವಿತೀಯೋಲ್ಲಾಸವು.

(ಮುಂದೆ ಸಾಗಿದುದು.)

ಈಗ ನಾವು 'ಉಪನಿಷದ್' ಎಂಬ ಶಬ್ದದ ಅರ್ಥವೇನೆಂಬುದನ್ನು ನೋಡುವಾ! ವಿಶ್ಲಿಷ್ಟವಾಗುವಿಕೆ, ಹೋಗುವಿಕೆ, ನಾಶವನ್ನು ಹೊಂದುವಿಕೆ ಅಥವಾ ನಾಶಗೊಳಿಸುವಿಕೆ ಎಂಬರ್ಥಗಳುಳ್ಳ 'ಸದ್' ಎಂಬ ಧಾತುವಿಗೆ ಉಪ+ನಿ, ಎಂಬ ಉಪಸರ್ಗಗಳ ಜೋಡಣೆಯಾಗಿ ಉಪ+ನಿ+ಸದ್=ಉಪನಿಷದ್, ಎಂಬ ಶಬ್ದಸಿದ್ಧಿಯಾಗಿದೆ. 'ಸೀದತಿ' ಎಂಬುದು 'ಸದ್' ಧಾತುವಿನ ವರ್ತಮಾನಕಾಲದ ಕ್ರಿಯಾಪದವು 'ಸದ್' ಎಂಬ ಧಾತುವಿಗೆ ಬೇರೆಬೇರೆ ಉಪಸರ್ಗಗಳು ಹತ್ತಿ ಬೇರೆಬೇರೆ ಅರ್ಥಗಳು ಸಂಭವಿಸುತ್ತವೆ. ಉಪನಿಷತ್ತುಗಳೊಳಗೇ ಅನೇಕಸ್ಥಳಗಳಲ್ಲಿ ಕಾಣಬರುವ 'ಉಪನಿಷದ್' ಎಂಬ ಈ ಶಬ್ದಕ್ಕೆ ಅಲ್ಲಿ ಬ್ರಹ್ಮವಿದ್ಯೆಯು, 'ರಹಸ್ಯವಿದ್ಯೆಯು' ತತ್ತ್ವ (ಶಿವ) ಜ್ಞಾನವು ಎಂಬರ್ಥಗಳು ವಿವಕ್ಷಿತಗಳಾಗಿವೆ. ಆದ್ದರಿಂದ, 'ಉಪನಿಷದ್' ಎಂಬ ಶಬ್ದದ ಮೂಲ ಅರ್ಥವು—ರಹಸ್ಯವಿದ್ಯೆಯ (ಶಾಂಭವಜ್ಞಾನದ) ಉಪದೇಶವನ್ನು ಪಡೆಯುವುದಕ್ಕೋಸ್ಕರ ವಿದ್ಯಾರ್ಥಿಯು (ಮುಮುಕ್ಷು ಪುರುಷನು) ಆಚಾರ್ಯನ ಬಳಿಯಲ್ಲಿ ಕುಳಿತುಕೊಳ್ಳುವುದು; ಎಂಬುದಾಗಿಯೇ ಉಪನಿಷತ್ತುಗಳಿಗಾದರೂ ಅಭಿಪ್ರೇತವಾಗಿರುವುದೆಂದು ಸಿದ್ಧವಾಗುವುದು.

ಈ ಸೂಪನಿಷದರ್ಥವೆನಿಸುವ ರಹಸ್ಯವಿದ್ಯೆಯಾದರೋ ಆಗಮಸಂಹಿತೆಗಳ ಉತ್ತರಭಾಗದಲ್ಲಿಯೂ ಉತ್ತಮವಾಗಿ ಚಿತ್ರಿಸಲ್ಪಟ್ಟಿದೆ. ಅದುಕಾರಣವೇ, ಶಿವಜ್ಞಾನಸಿದ್ಧಕುಲಸಾರ್ವಭೌಮನು (ಸಿ. ಶಿ. ೫-೧೩) —**ವೇದಸಿದ್ಧಾನ್ತಯೋರೈಕ್ಯಮೇಕಾರ್ಥಪ್ರತಿಪಾದನಾತ್** | ಎಂದುಪದೇಶಿಸಿದ್ದಾನೆ.

ಭಾರತೀಯರ ಪ್ರಾಚೀನತತ್ತ್ವಜ್ಞಾನ ವಿಷಯಕವಾದ ವಿಚಾರಮಾಡತೊಡಗಲು, ಮೊದಲು ಆ ರಹಸ್ಯವಿದ್ಯಾವಾಙ್ಮಯಗಳೇ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಅವುಗಳಲ್ಲಿರುವ ಅತೀಂದ್ರಿಯವಿಷಯಗಳನ್ನೂ ಆ ವಿಷಯಗಳಿಗೆ ಸಂಬಂಧಪಟ್ಟ ಅಬಾಧಿತ ನಿಯಮಗಳನ್ನೂ ಪರಿಭಾವಿಸಿದರೆ, ಅವುಗಳ ಪ್ರವರ್ತಕರು ಮನುಷ್ಯರಲ್ಲಿ ಪರಿಗಣಿಸಲ್ಪಡತಕ್ಕವರಲ್ಲವೆಂಬುದನ್ನು ಸುವಿಚಾರಪರರಾದ ಯಾವ ಸಚೇತನರು ತಾನೇ ಒಪ್ಪಲಿಕ್ಕಿಲ್ಲ? ಆ ರಹಸ್ಯವಿದ್ಯಾವಾಙ್ಮಯಗಳೇ ಜಗತ್ತಿನಲ್ಲಿರುವ ಸರ್ವ ಅರ್ವಾಚೀನ ತತ್ತ್ವಶಾಸ್ತ್ರಗಳ ಉಗಮಸ್ಥಾನವಾಗಿವೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ. ತತ್ತ್ವಜ್ಞಾನ ನಿಧಿಗಳೆಂದು ಪ್ರಸಿದ್ಧಗಳಾಗಿರತಕ್ಕ ಆ ವಾಙ್ಮಯಗಳಲ್ಲಿನ ಕೆಲವು ಅಂಶಮಾತ್ರವನ್ನು ಮುಖ್ಯವಾದ ಬಂಡವಾಳವನ್ನಾಗಿ ಪರಿಗ್ರಹಿಸಿ ಅದರ ಅನುಸಂಧಾನವೆಂಬ ವ್ಯವಹಾರದಿಂದ ಅಧ್ಯಾತ್ಮವಿಚಾರದಲ್ಲಿ ಊರ್ಜಿತಾವಸ್ಥೆಯನ್ನು ಪಡೆದು ತನ್ಮೂಲಕ ತಾವು ಕೃತಾರ್ಥರಾದುದಲ್ಲದೆ, ಅನ್ಯರ ಆತ್ಮೋನ್ನತಿಗೂ ಕೂಡ ಸಹಾಯಕರೆನಿಸಿದ ಸಂತರು ಹಿಂದೆ ಎಷ್ಟೋ ಜನರಾಗಿದ್ದಾರೆ; ಈಗ ಅಂಥವರು ಸ್ವಲ್ಪ ಜನರಾದರೂ ಸಿಕ್ಕಬಹುದು; ಮುಂದಾದರೂ ಅಂಥವರು ಆಗದಿರಲಿಕ್ಕಿಲ್ಲವೆಂದು ಊಹಿಸಲವಕಾಶವಿದೆ. ಆದರೆ, ಇದನ್ನೆಲ್ಲ ಲಕ್ಷೀಕರಿಸದ ಕೆಲಂಬರು ವೇದಾಗಮಗಳಲ್ಲಿನ ಅಲ್ಪಸ್ವಲ್ಪ ವಾಕ್ಯಗಳನ್ನು ಅಪಾಂಗದೃಷ್ಟಿಯಿಂದವಲೋಕಿಸಿ ಅವನ್ನು ಸಹ ತಮ್ಮ ಸ್ವಾಭಾವಿಕ ಸಂಸ್ಕಾರೋಪೇತ ಚಿತ್ತವೃತ್ತಿಗನುಗುಣವಾಗಿ ತಲೆಕೆಳಗೆ ಮಾಡಿಹಿಡಿದು ಮುಖ್ಯವಿಷಯವನ್ನೇ ವಿಪರ್ಯಾಸಗೊಳಿಸುವ ಭ್ರಮೆಯಿಂದ, ಬ್ರಹ್ಮಾಮೃತಧಾರೆಯನ್ನು ಕರೆವ ಪರಾವಿದ್ಯಾವಾಗ್ರೂಪ ಧೇನುಗಳಿಗೂ ಕೂಡ ಹಸಿದ ಹುಲಿಗಳೆಂದು ಹೆಸರಿಟ್ಟು ಅಪಕ್ವಮತಿಗಳು ಬೆದರಿ ವೇದಾಗಮ ಬಾಹ್ಯರಾಗುವಹಾಗೆ ಅವರನ್ನು ವ್ಯಾಮೋಹಗೊಳಿಸತಕ್ಕ ವಚನನಿಚಯವನ್ನು ಬೀರುವ ಅದೊಂದು ವಿಧವಾದ ತಮ್ಮ ಕಾಯಕವನ್ನು ಸಾಗಿಸುವವರಿಗೆ ನ್ಯಾಯವಾದಿಗಳೆನ್ನಬಹುದೇನು? ಒಂದು ಮತದ ಸಾಧಾರಣಲಕ್ಷಣಲಕ್ಷಿತರಾದ ಮಾತ್ರದಿಂದೇ ಅವರು ತಾವೂ ಧರ್ಮಬೋಧಕರೇ ಎಂದು ಮುಂದುವರಿಯುವ ರೀತಿಯು '**ಅಹೂತೇಷು ವಿಹಂಗಮೇಷು ಮಶಕೋ ನಾಯಾನ್ಪುರೋವಾರ್ಯತೇ**' ಎಂಬ ಗಾದೆಗನುಸಾರವಾಗಿರುವುದಲ್ಲವೇ? ಇರಲಿ! ಮುಂದಾದರೂ ಆ ಚೆಲುವರಿಗೆ:—

ಯದಾ ಕಿಂಚಿದ್ಜ್ಞೋಹಂ ದ್ವಿಪ ಇವ
ಮದಾಂಧಃ ಸಮಭವಂ
ತದಾ ಸರ್ವಜ್ಞೋಸ್ಮೀತ್ಯಭವದವಲಿಪ್ತಂ
ಮಮ ಮನಃ |
ಯದಾ ಕಿಂಚಿತ್ಕಿಂಚಿದ್ಬುಧಜನಸಕಾಶಾದ
ವಗತಂ
ತದಾ ಮೂರ್ಖೋಸ್ಮೀತಿ ಜ್ವರ ಇವ ಮದೋ
ಮೇ ವ್ಯಪಗತಃ ||

ಎಂಬ ಪದ್ಯದ ಅರ್ಥವು ಅನುಭವಗಮ್ಯವಾಗಿ, ಆಗಾದರೂ ಅವರು—'**ಶುದ್ಧಬೀಜಾಪೋಟಿ | ಫಳೆ ರಸಾಳ ಗೋಮಟೀ ||**' ಎಂಬಂತೆ ಶುದ್ಧವಿಚಾರಗಳ ಪ್ರತಿಜ್ಞಾರೂಪಬೀಜಗಳನ್ನು ತಮ್ಮ ತೀಕ್ಷ್ಣ ಜ್ಞಾನತಂತುಗಳಲ್ಲಿ ಊರಿಕೊಳ್ಳಲಿ; ಇದು ಅವರ ಅದೃಷ್ಟದಲ್ಲಿಯೇ ಇಲ್ಲವೆನಿಸಿದರೆ ತಮ್ಮ ಪೀಳಿಗೆಯು ಹಸನಾದ ಹೊಸ ಪಿಡುಳಿನಲ್ಲಾದರೂ ಊರಿದರೆ ಸಾಕು!

ಈ ಎರಡನೆಯ ಉಲ್ಲಾಸದಲ್ಲಿ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳ ಸ್ವರೂಪವು ಸಂಕ್ಷೇಪವಾಗಿ ಪ್ರತಿಪಾದಿಸಲ್ಪಟ್ಟಿದಾಯ್ತಷ್ಟೇ! ಅವುಗಳಲ್ಲಿ ವೈದಿಕ ಆರ್ಯರ ಉಚ್ಚವಿಚಾರಗಳುಳ್ಳ ಉಪನಿಷತ್ತುಗಳಾದರೋ ಸರ್ವಮುಮುಕ್ಷುಜನೋಪಾದೇಯಗಳಾದುದರಿಂದ ಅವುಗಳ ತಾತ್ಪರ್ಯವನ್ನು ಈಗ ನಾವು ಬರೆಯಬಹುದಾಗಿದ್ದಿತು. ಹಾಗೂ, ವಾಚಕರಾದರೂ ಸನಾತನ ಆರ್ಯರ ಆಧ್ಯಾತ್ಮಿಕಜ್ಞಾನಾಮೃತಾಸ್ವಾದನೆಯಲ್ಲಿ ಉತ್ಕಂಠಿತರಾಗಿರುವುದೂ ಸಹಜವೇ ಸರಿ. ಆದರೂ ವೇದದ ಪೂರ್ವಕಾಂಡಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕೆಲಮಟ್ಟಿಗಾದರೂ ವಿವೇಚಿಸದೆ ಒಮ್ಮಿಗೇ ಉತ್ತರಕಾಂಡದ ಉಚ್ಚವಿಚಾರಗಳಿಗೆ ಕೈನೀಡುವುದು ಅಕ್ರಮವೆಂದು ಯೋಚಿಸಿದ ನಮ್ಮ ಮನಸ್ಸು ಆ ಕಾರ್ಯದಲ್ಲಿ ತೊಡಗಲು ಈಗಮಾತ್ರ ಉತ್ಸಾಹವಿಲ್ಲದುದಾಗಿದೆ.

ಈ ಹಿಂದೆ ನಿರೂಪಿಸಲ್ಪಟ್ಟ ಆ ಆ ವೇದಕ್ಕೆ ಸಂಬಂಧಿಸಿದ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳನ್ನು ವಾಚಕರ ತಿಳುವಳಿಕೆಯ ಸೌಲಭ್ಯಕ್ಕೋಸುಗ ನಿರ್ದೇಶಮಾತ್ರವಾಗಿ ಈ ಕೆಳಗ ತೋರಿಸುತ್ತೇನೆ—

ಋಗ್ವೇದಕ್ಕೆ—ಐತರೇಯಬ್ರಾಹ್ಮಣ; ಕೌಷೀತಕೀಬ್ರಾಹ್ಮಣ; ಎಂಬಿವೆರಡು. (ಸಾಂಖ್ಯಾಯನ, ಶಾಂಖಾಯನ ಶಬ್ದಗಳು ಕೌಷೀತಕಿಯ ಪರ್ಯಾಯಗಳು.)

ಕೃ. ಯ. ವೇ. ಕ್ಕೆ—ತೈತ್ತಿರೀಯಬ್ರಾಹ್ಮಣವು.

ಶು. ಯ. ವೇ. ಕ್ಕೆ—ಶತಪಥ; ಕಾಣ್ವ; ಎಂಬಿವೆರಡು ಬ್ರಾಹ್ಮಣಗಳು.

ಸಾ. ವೇ. ಕ್ಕೆ—ಪಂಚವಿಂಶ; ಷಡ್ವಿಂಶ; ಸಾಮವಿಧಾನ; ಆರ್ಷೇಯ; ಮನ್ತ್ರ; ದೇವತಾಧ್ಯಾಯ; ವಂಶ; ಸಂಹಿತೋಪನಿಷದ್; ಬ್ರಾ : ಎಂಬೀ ಬ್ರಾಹ್ಮಣಗಳು.

ಅ. ವೇ. ಕ್ಕೆ—ಗೋಪಥಬ್ರಾಹ್ಮಣವು : ಎಂಬೀ ರೀತಿಯಾಗಿ ಆ ಆ ವೇದಕ್ಕೆ ಸಂಬಂಧಿಸಿದ ಬ್ರಾಹ್ಮಣಗಳೆಂದು ತಿಳಿಯತಕ್ಕದ್ದು.

ಋ. ವೇ. ಕ್ಕೆ—ಐತರೇಯಾರಣ್ಯಕ; ಸಾಂಖ್ಯಾಯನಾರಣ್ಯಕ.

ಕೃ. ಯ. ವೇ.—ತೈತ್ತಿರೀಯಾರಣ್ಯಕ.

ಶು. ಯ. ವೇ.—ಬೃಹದಾರಣ್ಯಕ; (ಅಥವಾ) ಮಾಧ್ಯಂದಿನಶಾಖೆಯ ಬ್ರಾಹ್ಮಣದೊಳಗಣ ೧೪ ನೆಯ ಕಾಂಡವು; (ಅ) ಕಾಣ್ವಶಾಖೆಯ ಬ್ರಾಹ್ಮಣದೊಳಗಣ ೧೭ ನೆಯ ಕಾಂಡವು.

ಋ. ವೇ.—ಐತರೇಯೋಪನಿಷದ್; ಕೌಷೀತಕ್ಯುಪನಿಷದ್.

ಕೃ. ಯ. ವೇ.—ತೈತ್ತಿರೀಯೋಪನಿಷದ್; ಮೈತ್ರಾಯಣ್ಯುಪನಿಷದ್; ಕಠೋಪನಿಷದ್: ಶ್ವೇತಾಶ್ವತರೋಪನಿಷದ್; ಕಾಲಾಗ್ನಿರುದ್ರ; ರುದ್ರಹೃದಯ; ಕೈವಲ್ಯ; ಪಂಚಬ್ರಹ್ಮ.

ಶು. ಯ. ವೇ.—ಈಶಾವಾಸ್ಯೋಪನಿಷದ್; ಬೃಹದಾರಣ್ಯಕೋಪನಿಷದ್.

ಸಾ. ವೇ.—ಛಾಂದೋಗ್ಯೋಪನಿಷದ್; ಕೇನೋಪನಿಷದ್.

ಅ. ವೇ.—ಪ್ರಶ್ನ; ಮಾಂಡೂಕ್ಯ; ಮುಂಡಕ; ಬೃಹಜ್ಜಾಬಾಲ; ಭಸ್ಮಜಾಬಾಲ ಎಂಬಿವು ಉಪನಿಷತ್ತುಗಳು.

ದ್ವಿತೀಯೋಲ್ಲಾಸವು ಸಂಪೂರ್ಣವಾದುದು.

ಶ್ರೀ ನಮಃ ಪಂಚಜಗದ್ಗುರುಭ್ಯಃ

ಪುರಾಣಶ್ರವಣ ಮತ್ತು ರುದ್ರಾಭಿಷೇಕ.

ಅಷ್ಟಾವರಣ ಸಂಪನ್ನನಾದ ವೀರಶೈವನೇ ಭಕ್ತನೆನಿಸಿಕೊಳ್ಳುವನು. ಭಕ್ತಿಯು, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ, ಎಂದು ನವವಿಧವಾಗಿದೆ. ಶಿವನ ಸಂಬಂಧವಾದ ಕಥೆಗಳನ್ನು ಕೇಳುವದು ಶ್ರವಣವು, ಶಿವನನ್ನು ಸ್ತೋತ್ರಮಾಡುವದು ಕೀರ್ತನೆ, ಶಿವನನ್ನು ಹಗಲಿರುಳು ಧ್ಯಾನಮಾಡುವದು ಸ್ಮರಣ, ಶಿವನ ಚರಣಗಳನ್ನು ಸೇವಿಸುವದು ಪಾದಸೇವೆಯು, ಶಿವನನ್ನು ಪೂಜಿಸುವದು ಅರ್ಚನ, ಶಿವನನ್ನು ನಮಸ್ಕರಿಸುವದು ವಂದನ, ಶಿವನಸೇವಕನಾಗಿರುವದು ದಾಸ್ಯವು; ಶಿವನೊಡನೆ ಸ್ನೇಹಭಾವದಿಂದ ಇರುವದು ಸಖ್ಯವು, ತನುಮನಧನಗಳನ್ನು ಶಿವನಿಗರ್ಪಿಸುವದು ಆತ್ಮನಿವೇದನ, ಈ ನವವಿಧಭಕ್ತಿಯು ಪುಣ್ಯಕರ್ಮಿಗಳಿಗಲ್ಲದೆ ಪಾಪಿಷ್ಠರಿಗೆ ಘಟಿಸುವದಿಲ್ಲವು. ಯಾವನಲ್ಲಿ ಈ ನವವಿಧವಾದ ಭಕ್ತಿಯು ಸ್ಥಿರವಾಗಿರುವುದೋ ಅವನೇ ನಿಜಭಕ್ತನೆಂದು ಹೇಳಿಸಿಕೊಳ್ಳುವನು. ಇಂತೊಪ್ಪುವ ನವವಿಧಭಕ್ತಿಯಲ್ಲಿ ಉತ್ತೀರ್ಣತೆಯನ್ನು ಹೊಂದಿ ಶಿವಾನುಗ್ರಹಕ್ಕೆ ಪಾತ್ರರಾಗಿರುವ ಧಾರವಾಡ ಜಿಲ್ಲಾ ಬಂಕಾಪೂರ ತಾಲೂಕು ಪೈಕಿ ಹುಲಗೂರ ಗ್ರಾಮದಲ್ಲಿ ಸುಪ್ರಸಿದ್ಧ ಭಕ್ತಶಿರೋಮಣಿಗಳಾದ ಶ್ರೀಯುತ ರಾ|| ರಾ|| ವೀರಭದ್ರಪ್ಪನವರು ಅರಳೀಕಟ್ಟಿ, ಈ ಮಹಾಶಯರು ಕಳೆದ ಶ್ರಾವಣಮಾಸದ ಆದಿಯಿಂದ "ಅಭಿಷೇಕಪ್ರಿಯಶ್ಶಿವಃ" ಎಂಬುಕ್ತಿಯಂತೆ ಶಿವನಿಗೆ ಪ್ರಿಯಕರವಾಗುವಂತೆ ವಿಧ್ಯುಕ್ತವಾಗಿ ಶ್ರೀರುದ್ರಾಭಿಷೇಕ ಕಾರ್ಯವನ್ನು ನೆರವೇರಿಸಿದರು. ಅಭಿಷೇಕದಲ್ಲಿ ಜಲಾಭಿಷೇಕ, ಕ್ಷೀರಾಭಿಷೇಕ, ಘೃತಾಭಿಷೇಕ, ರಸಾಭಿಷೇಕಾದಿ ಅನೇಕ ಪ್ರಕಾರವುಂಟು. ಯಾವ ಅಭಿಷೇಕವನ್ನು ಮಾಡಿದರೂ ಶ್ರೀರುದ್ರಾಧ್ಯಯನವನ್ನು ಪಠಿಸುತ್ತ ಅಭಿಷೇಕವನ್ನು ಮಾಡಬೇಕು. ಇದು ಶಾಸ್ತ್ರೋಕ್ತ ಅಭಿಷೇಕವೆನಿಸಲ್ಪಡುವದು. ಹೀಗೆ ಅಭಿಷೇಕವನ್ನು ಮಾಡಿಸಿದವರಿಗೆ ಹೆಚ್ಚಿನ ಫಲವು ಪ್ರಾಪ್ತವಾಗುವದು. ಅಂದ ಮೇಲೆ ಅಭಿಷೇಕದ ಕಾಲದಲ್ಲಿ ಶ್ರೀ ರುದ್ರಾಧ್ಯಯನವನ್ನು ಪಠಿಸುವದು ಶಾಸ್ತ್ರಸಮ್ಮತವಾಗಿದೆ. ಇದರ ಕ್ರಮವಾದರೂ ಲಘುರುದ್ರ, ಮಹಾರುದ್ರ, ಅತಿರುದ್ರ, ಮುಂತಾದ ನಾನಾರೀತಿಯಾಗಿರುವದು. ಈ ರುದ್ರದಫಲಗಳಾದರೂ ಭಿನ್ನಭಿನ್ನವಾಗಿದ್ದು ಒಂದಕ್ಕಿಂತ ಒಂದು ಫಲಗಳು ಅಧಿಕವಾಗಿರುವವು. ಅದೇ ಪ್ರಕಾರ ಈ ಸದ್ಭಕ್ತ ಮಹಾಶಯರು ತಮ್ಮ ಗೃಹದಲ್ಲಿ ಶ್ರೀಮಹಾರುದ್ರಾಭಿಷೇಕವನ್ನು ಇಷ್ಟಲಿಂಗಕ್ಕೂ ಮತ್ತು ತಮ್ಮ ಕುಲದೇವರಾದ ಶ್ರೀ ವೀರಭದ್ರೇಶ್ವರನಿಗೂ ಒಂದು ತಿಂಗಳವರೆಗೆ ಅವಿಚ್ಛಿನ್ನವಾಗಿ ನೆರವೇರಿಸಿದರು.

ಈ ಮಹಾಕಾರ್ಯವನ್ನು ತಮ್ಮ ಕುಲಗುರುಗಳಾದ ಬೆಂಡಿಗೇರಿ ಕಂಬಾಳಿಮಠದವರಿಂದಲೂ, ಸಿದ್ಧಾಂತಿ, ಆರ್. ಜಿ. ಬಸನಾಳಮಠ ಇವರಿಂದಲೂ ನೆರವೇರಿಸಿದರು. ಮತ್ತು ಶ್ರಾವಣಮಾಸವು ಸಮಾಪ್ತಿಯಾಗುವವರೆಗೂ ಪ್ರತಿದಿವಸ ಸಾಯಂಕಾಲ "ಶ್ರೀ ರೇಣುಕ ವಿಜಯ" ಪುರಾಣ ಪ್ರವಚನವು ಶ್ರಾವ್ಯವಾಗಿ ನಡೆಯಿಸಲ್ಪಟ್ಟಿತು. ಈ ಪ್ರವಚನಕ್ಕೆ ಸ್ಥಲ, ಪರಸ್ಥಲದ ಗುರುಭಕ್ತಮಹನೀಯರು ಅನೇಕವಾಗಿ ಆಗಮಿಸುತ್ತ ಇದ್ದರು. ಈ ಪ್ರವಚನವು "ಗುರುಮಹತ್ವ ವೀರಶೈವ ನಿಜತತ್ತ್ವ ಅಸ್ತಿತತ್ವ" ಇತ್ಯಾದ್ಯನೇಕ ಧಾರ್ಮಿಕ ವಿಚಾರಪೂರಿತವಾದುದರಿಂದ ಶ್ರೋತೃಗಳಿಗೆ ಒಳ್ಳೇ ಪರಿಣಾಮಕರವಾಗಿತ್ತು. ಅನ್ನಸಂತರ್ಪಣ ಕಾರ್ಯವು ಸಮರ್ಪಕವಾಗಿ ನಡೆಯಿತು. ಈ ಶುಭಕಾರ್ಯ ಸಮಾರಂಭದಲ್ಲಿ ಶ್ರೀ ಪಂಚಾಚಾರ್ಯಪ್ರಭಾ ಪೋಷಣಕ್ಕೋಸ್ಕರ ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು. ಈ ಮೇಲ್ಕಂಡ ಮಹಾಶಯರಿಗೂ ಇವರ ಅಶೇಷಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ಪಂಚಾಚಾರ್ಯರು ಸುಖಶಾಂತಿಯನ್ನೀಯಲೆಂದು ಹಾರೈಸುವ.

ಗುರುಪಾದ ಸೇವಕ,
ವೇ|| ಬಿ. ಜಿ. ಚಿಕ್ಕಮಠ ಬಿ. ಎಸ್.

ಕಡೂರು ಡಿ|| ಬೀರೂರು.

ಈ ಊರಿನ ಸೇವಾಸಮಾಜದ ಕಾರ್ಯಗಳೂ ವಿಘ್ನೇಶ್ವರನ ವೈಭವಗಳೂ ವಿಜೃಂಭಣೆಯಿಂದ ನಡೆದುವು. ತಾ|| ೪-೯-೩೩ ನೇ ಸೋಮವಾರ ರಾತ್ರಿ ಪುರದ ಪ್ರಮುಖ ರಸ್ತೆಗಳಲ್ಲೆಲ್ಲಾ ಉತ್ಸವವು ನಡೆದು ಸ್ವಸ್ಥಾನಕ್ಕೆ ವಿಜಯಮಾಡಿತು. ತಾ|| ೫-೯-೩೩ ನೇ ರಾತ್ರಿ ಮ|| ರಾ|| ಹೊಳಲಕೆರೆ ಗುರುಬಸವಶಾಸ್ತ್ರಿಗಳವರ ಕೀರ್ತನವು ಖಿರೀದಿಯವರ ಛತ್ರದಲ್ಲಿ ಸ್ವಾರಸ್ಯವಾಗಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀಮಾನ್ ಕೆ. ಟಿ. ಸತ್ಯನಾರಾಯಣಸೆಟ್ಟರವರು ಯಂ. ಪ್ರೊಫೆಸರ್ ಎಸ್. ವಿ. ಮ|| ಶಾಂತಯ್ಯನವರಿಗೆ ಸದ್ರಿಯವರು ಅಭಿತೋರಿಸಿದ ಮ್ಯಾಜಿಕ್ ವಿದ್ಯೆಯ ಪ್ರೌಢತೆಯನ್ನು ಕುರಿತು ಬಹು ಆನಂದವಾಗಿ ಉಪನ್ಯಾಸಮಾಡಿ ಪ್ರೊಫೆಸರವರಿಗೆ ಒಂದು ಸುವರ್ಣಪದಕವನ್ನು ತಮ್ಮ ಅಮೃತ ಹಸ್ತದಿಂದ ನೂರಾರು ಜನ ಸ್ತ್ರೀಪುರುಷರ ಸಮ್ಮುಖದಲ್ಲಿ ದಯಪಾಲಿಸಿ ಅವರ ಶ್ರೇಯಸ್ಸನ್ನು ಕೋರಿದರು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಪರೀಕ್ಷಾಫಲಿತಾಂಶ.

ಕಾಶೀ ಗೌರ್ನಮೆಂಟ್ ಪರೀಕ್ಷಾ.

(ವೇದಾಂತಾಚಾರ್ಯಪ್ರಥಮಖಂಡದಲ್ಲಿ)
ಫಸ್ಟ್‌ಕ್ಲಾಸ್.
೧. ನೀಲಕಂಠಶಾಸ್ತ್ರಿಗಳು ಭಾನಾಪುರ.
(ಸಾಹಿತ್ಯಶಾಸ್ತ್ರಿ ಪ್ರಥಮಖಂಡದಲ್ಲಿ)
೨. ಗುರುದೇವಶಿವಾಚಾರ್ಯ ಚಿಕ್ಕಮಣ್ಣೂರು.
ಕಾಶೀವಿಶ್ವವಿದ್ಯಾಲಯದ ಪರೀಕ್ಷಾ.
(ಸಾಹಿತ್ಯಶಾಸ್ತ್ರಿ ಪ್ರಥಮಖಂಡದಲ್ಲಿ)
೩. ರುದ್ರಶರ್ಮಾ
ಕಲ್ಕತ್ತಾ ಗೌರ್ನಮೆಂಟ್ ಪರೀಕ್ಷಾ.
(ಕಾವ್ಯತೀರ್ಥದಲ್ಲಿ)
೪. ಪಟ್ಟದಸ್ವಾಮಿಗಳು ಮಹಿಸಾಳ.
೫. ಚಂದ್ರಶೇಖರಶಾಸ್ತ್ರಿಗಳು ಆರಾಧ್ಯಮಠ.
(ನ್ಯಾಯಮಧ್ಯಮದಲ್ಲಿ)
೬. ವಿಶ್ವನಾಥದೇವರು ತಾಳೀಕೋಟಿ.
(ಕಾವ್ಯಾದ್ಯದಲ್ಲಿ)
೭. ಸಂಗಮೇಶ್ವರಶಿವಾಚಾರ್ಯ ನಾರಾಯಣಪೇಟೆ.
೮. ವಿಶ್ವನಾಥದೇವರು ತಾಳೀಕೋಟಿ.
ಮಥುರಾವೃಜಮಂಡಲ ಯೂನಿವರ್ಸಿಟಿ ಪರೀಕ್ಷಾ.
(ಸಾಹಿತ್ಯಶಾಸ್ತ್ರಿ ಫಸ್ಟ್‌ಕ್ಲಾಸ್)
೯. ಸಿದ್ಧಲಿಂಗದೇವರು ಇನಾಮ ಹೊಂಗಲ.
೧೦. ಗುರುಶಾಂತದೇವರು ಶಹಾಪುರ.
ಈ ಪ್ರಕಾರ ಉತ್ತೀರ್ಣರಾಗಿರುತ್ತಾರೆ.

ಬನಾರಸ್.
ತಾ|| ೭-೯-೩೩. ನಿವೇದಕ.

ಚಾಣಕ್ಯನ ಅರ್ಥಶಾಸ್ತ್ರ.

[ಲೇಖಕ—ಕನ್ನಡಕವಿ. ಆಸ್ಥಾನವಿದ್ವಾನ್
ಅನವಟ್ಟಿ ರಾಮರಾಯರು.]

೭. ಅಮಾತ್ಯೋತ್ಪತ್ತಿ—ಎಂದರೆ ಮಂತ್ರಿಗಳನ್ನು ರಾಜನು ಏರ್ಪಡಿಸಿಕೊಳ್ಳುವ ಕ್ರಮ ಎಂದರ್ಥವು.

1. ಮಂತ್ರಿಯನ್ನು ಏರ್ಪಡಿಸಿಕೊಳ್ಳುವ ವಿಷಯದಲ್ಲಿ ಮಹರ್ಷಿಯರಾದ ಭಾರದ್ವಾಜ ಋಷಿಗಳ ಅಭಿಪ್ರಾಯವೇನೆಂದರೆ—ರಾಜನು "ಮಂತ್ರಿಗಳನ್ನು ಏರ್ಪಡಿಸಿಕೊಳ್ಳಬೇಕಾದರೆ ಬಾಲ್ಯದಲ್ಲಿ ತನ್ನೊಡನೇ ಸಹಾಧ್ಯಾಯಿಯಾಗಿದ್ದವನನ್ನೇ ಏರ್ಪಡಿಸಿಕೊಳ್ಳಬೇಕು. ಏಕೆಂದರೆ—ರಾಜನು ಅವನ ಗುಣಾತಿಶಯಗಳನ್ನು ಮೊದಲಿಂದಲೂ ತಿಳಿದವನಾಗಿರುವನು. ಅಂದರೆ ಅವನಲ್ಲಿರುವ ಶಕ್ತಿ, ಯೋಗ್ಯತೆ ಮೊದಲಾದವುಗಳನ್ನರಿತಿರುವವನಾಗಿರುವನು. ಇಂಥವನಲ್ಲಿ ನಂಬಿಕೆಯನ್ನಿಟ್ಟು ಕಾರ್ಯಗಳನ್ನು ಏರ್ಪಡಿಸಿಕೊಳ್ಳಬಹುದು." ಎಂದು ಅಭಿಪ್ರಾಯಪಡುತ್ತಾನೆ.

2. ಈ ವಿಷಯದಲ್ಲಿ ವಿಶಾಲಾಕ್ಷ ಪಂಡಿತರ ಅಭಿಪ್ರಾಯವೇನೆಂದರೆ:—"ಸಹಾಧ್ಯಾಯಿಯೂ ಒಡನಾಡಿಯೂ ಆಗಿದ್ದುದರಿಂದ ಆಟದಕಾಲದಲ್ಲಿ ಮಂತ್ರಿಯು ರಾಜನನ್ನು ಅಲಕ್ಷ್ಯದಿಂದ ಒಂದುವೇಳೆ ಕಾಣುತ್ತಿರಬಹುದು. ಆ ಕಾಲದಲ್ಲಿ ರಾಜನಲ್ಲಿ ಕಾಣಬರುವ ಅವಗುಣಗಳನ್ನು ಮೊದಲೇ ತಾನು ತಿಳಿದಿರುವವನಾದುದರಿಂದ ರಾಜನ ಗೋಪ್ಯವಾಗಿರುವ ಗುಣಾತಿಶಯಗಳನ್ನು ಬಹಿರಂಗಪಡಿಸದೇ ಇರುವನು." ಎಂದು ಅಭಿಪ್ರಾಯಪಡುವನು.

3. ಪರಾಶರರ ಅಭಿಪ್ರಾಯವೇನೆಂದರೆ—"ಭೀತಿಯೆಂಬುದು ಎಲ್ಲರಿಗೂ ಒಂದೇ. ರಾಜನು ತನ್ನಲ್ಲಿರುವ ಗುಣಗಳು ಎಲ್ಲಿ ಹೊರಪಡುವವೋ ಎಂಬ ಭೀತಿಯಿಂದ ರಾಜನು ಮತ್ತೊಬ್ಬರಲ್ಲಿರುವ ಒಳ್ಳೆಯ ಮತ್ತು ಕೆಟ್ಟಗುಣಗಳನ್ನು ತಾನು ತಿಳಿದು ಅವುಗಳನ್ನು ಅವಲಂಬಿಸಬೇಕಾಗಿ ಬರಬಹುದು. ಮತ್ತು ರಾಜನು ತನ್ನಲ್ಲಿರುವ ಗುಣಗಳು ಹೊರಪಡದಂತೆ ಮರೆಮಾಚಲೆಂದು ಅನೇಕರನ್ನು ಏರ್ಪಡಿಸಿಕೊಂಡಿದ್ದರೂ ಎಲ್ಲಿ ತನ್ನ ಗೋಪ್ಯಗುಣವು ಹೊರಪಡುವುದೋ ಎಂದು ಮಂತ್ರಿಗೆ ವಿಧೇಯನಾಗಿ ನಡೆದುಕೊಂಡೂ ಬರಬಹುದು. ಈ ಕಾರಣದ ಭೀತಿಯಿಂದ ರಾಜನು ತನಗೆ ನಂಬಿಕೆಗರ್ಹರಾಗಿಯೂ, ಪ್ರಾಣಾಪಾಯವಾಗುವ ಸಂದರ್ಭಗಳಲ್ಲಿ ಕಾಪಾಡತಕ್ಕವರಾಗಿಯೂ, ತನ್ನಲ್ಲಿ ನಿಜವಾದ ಭಕ್ತಿಯುಳ್ಳವರಾಗಿಯೂ ಇರುವವರನ್ನೇ ಏರ್ಪಡಿಸಿಕೊಳ್ಳಬೇಕು." ಎಂದು ಅಭಿಪ್ರಾಯಪಡುವನು.

4. ಪಿಶುನನು ಹೇಳುವ ಅಭಿಪ್ರಾಯವೇನೆಂದರೆ—"ರಾಜಭಕ್ತಿಯುಳ್ಳವರನ್ನು ಮಾತ್ರ ಏರ್ಪಡಿಸಿಕೊಂಡಂತಾಯಿತೇ ಹೊರತು ಬುದ್ಧಿ ಮತ್ತು ಗುಣಾತಿಶಯವುಳ್ಳವರನ್ನು ಏರ್ಪಡಿಸಿಕೊಂಡಂತಾಗಲಿಲ್ಲ. ರಾಜಾದಾಯದಲ್ಲಿ ಈಗ ಬರುತ್ತಿರುವ ಮತ್ತು ಹೆಚ್ಚು ಹುಟ್ಟುವರಿಯಾಗಬೇಕಾಗಿರುವ ಮಾರ್ಗಗಳನ್ನರಿತವರನ್ನೇ ಅರಿಸಿ ಪರೀಕ್ಷಿಸಿ ಏರ್ಪಡಿಸಿಕೊಳ್ಳಬೇಕು." ಎಂದು ಅಭಿಪ್ರಾಯಪಡುವನು.

5. ಕೌಣಪದಂತನು—"ಒಂದು ವೇಳೆ ಮೇಲೆ ಹೇಳಿದವುಗಳಲ್ಲಿ ಅಪೇಕ್ಷಿತವಾದ ಅಂತಹ ಗುಣಗಳಿದ್ದಾಗ್ಯೂ, ಇತರ ವಿಧವಾದ ಗುಣಾತಿಶಯಗಳು ಎಂದರೆ—ಮಂತ್ರಿಗಿರಬೇಕಾದ ಯೋಗ್ಯತೆಗಳು ಇವನಲ್ಲಿ ಇರದೇ ಇರಬಹುದು. ಈ ಕಾರಣದಿಂದ ಯಾರು ಪೂರ್ವದಿಂದಲೂ ತಾತ ಮತ್ತು ಮುತ್ತಾತಂದಿರ ಕಾಲಗಳಿಂದಲೂ ಮಂತ್ರಿಪದವಿಯಲ್ಲಿದ್ದರೋ ಅಂಥವರ ವಂಶದಲ್ಲಿ ಸಂಜನಿಸಿದವರನ್ನು ಏರ್ಪಡಿಸಿಕೊಳ್ಳಬೇಕು. ಇಂಥವರನ್ನು ಏರ್ಪಡಿಸಿಕೊಳ್ಳುವುದರಿಂದ ರಾಜ್ಯದ ಪೂರ್ವ ವೃತ್ತಾಂತಗಳೆಲ್ಲಾ ಅವರಿಗೆ ಚೆನ್ನಾಗಿ ತಿಳಿದಿರುವುವು. ಇಂಥವರು ಒಂದು ವೇಳೆ ರಾಜನಿಗೆ ವ್ಯತಿರಿಕ್ತರಾಗಿ ನಿಂತರೂ, ರಾಜನನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ. ಇಂತಹ ನಂಬಿಕೆಗರ್ಹವಾದ ಗುಣವೇ ಮೂಗುಪ್ರಾಣಿಗಳಲ್ಲಿಯೂ ಕಾಣಬರುವುದುಂಟಷ್ಟೆ. ಹಸುವು ಪರಿಚಯವಿಲ್ಲದ ಮತ್ತೊಂದು ಹಸುವಿನ ಜತೆಗೆ ಸೇರದೆ ಪರಿಚಯವುಳ್ಳ ಜತೆಯ ಹಸುಗಳನ್ನೇ ಸೇರಿಕೊಳ್ಳುವುದು. ಇದರಂತೆಯೇ ಸಚಿವರೂ ಇರುವರು" ಎಂದು ಅಭಿಪ್ರಾಯಪಡುವನು.

6. ಈ ವಿಷಯದಲ್ಲಿ ವಾತವ್ಯಾಧಿಗಳೆಂಬ ಮಹರ್ಷಿಯರು ಪಡುವ ಅಭಿಪ್ರಾಯವೇನೆಂದರೆ—'ಅಂತಹ ಮಂತ್ರಿಗಳು ರಾಜನ ರಾಜ್ಯದ ಮೇಲ್ವಿಚಾರಣೆಯ ಮಾರ್ಗಗಳನ್ನರಿತವರಾಗಿರಲು, ರಾಜ್ಯ ಮತ್ತು ರಾಜನನ್ನು ಸ್ವಾಧೀನಕ್ಕೆ ಒಳಪಡಿಸಿಕೊಂಡಮೇಲೆ ತಾವೇ ರಾಜರಂತೆ ಸ್ವಾತಂತ್ರ್ಯವಹಿಸಿ ರಾಜ್ಯಾಡಳಿತಗಳನ್ನು ನಡಿಸಬಹುದು. ಈ ಕಾರಣದಿಂದ ಯಾರು ರಾಜ್ಯಭಾರದಾಡಳಿತದ ಶಾಸ್ತ್ರವನ್ನರಿತಿರುವರೋ ಅಂಥವರನ್ನೇ ಏರ್ಪಡಿಸಿಕೊಳ್ಳಬೇಕು. ಅಂಥವರೇ ರಾಜ್ಯಕ್ಕೆ ನಿಜವಾದ ಪಾಲಕರು. ನಿಜವಾದ ರಾಜನು (ದಂಡಧರ) ಎಂದು ಭಾವಿಸಿ. ರಾಜನಿಗೆ ವ್ಯತಿರಿಕ್ತವಾಗಿ ನಿಲ್ಲತಕ್ಕವರಾಗಿರುವುದಿಲ್ಲ" ಎಂದು ಅಭಿಪ್ರಾಯಪಡುವನು.

7. ಈ ವಿಷಯದಲ್ಲಿ ಪ್ರಖ್ಯಾತರಾದ ಬಾಹುದಂತಿ ಎಂಬ ಶಾಸ್ತ್ರಜ್ಞರ ಮಗಳು ಪಡುವ ಅಭಿಪ್ರಾಯವೇನೆಂದರೆ—"ರಾಜಾಡಳಿತ ಶಾಸ್ತ್ರಗಳನ್ನು ಮಾತ್ರ ಓದಿ ಜ್ಞಾನವಂತನಾಗಿದ್ದರೇನು? ಕಾರ್ಯ ನಡಿಸುವುದರಲ್ಲಿ ಮಾತ್ರ ತಿಳುವಳಿಕೆಯೇ ಇಲ್ಲದವನಾಗಿದ್ದರೆ, ಅಂತಹ ರಾಜನು ನಡಿಸುವ ಕಾರ್ಯಗಳಲ್ಲಿ ವಿಶೇಷ ನ್ಯೂನತೆಗಳೇ ಕಂಡುಬರುವುವು. ಆದುದರಿಂದ ಯಾವನು ಯೋಗ್ಯವಂಶದಲ್ಲಿ ಜನಿಸಿದವನಾಗಿಯೂ, ಜ್ಞಾನವಂತನಾಗಿಯೂ ಒಳ್ಳೆಯ ಉದ್ದೇಶವುಳ್ಳವನಾಗಿಯೂ, ಧೈರ್ಯ ಮತ್ತು ರಾಜಸೇವಕನಾಗಿರಬೇಕೆಂಬ ಯೋಚನಾಪರನಾಗಿಯೂ ಇರುವನೋ ಅವನನ್ನೇ ಹುಡುಕಿ ಮಂತ್ರಿಪದವಿಗೇರ್ಪಡಿಸಿಕೊಳ್ಳುವುದು ಒಳ್ಳೆಯದು" ಎಂದು ಅಭಿಪ್ರಾಯಪಡುವಳು.

8. ಈ ರೀತಿಯಲ್ಲಿ ನಿಪುಣತೆಯನ್ನು ಸಂಪಾದಿಸಿ ಜನರ ಗುಣಾತಿಶಯಗಳನ್ನು ತಿಳಿದುಕೊಂಡು ರಾಜ್ಯದ ಯಾವ ಭಾಗದಲ್ಲಿ ಎಂತಹ ಕೆಲಸಕ್ಕೆ ಯಾರನ್ನು ಎಂತಹ ಸಮಯದಲ್ಲಿ ನೇಮಕಮಾಡಬೇಕೋ ಅಂತಹವರನ್ನೇ ರಾಜನು ಚುನಾಯಿಸಿ ಸಚಿವರನ್ನಾಗಿ ಏರ್ಪಡಿಸಿಕೊಳ್ಳಬೇಕು.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿನಾಂ.

ದಸರಾಮಹೋತ್ಸವಾಹ್ವಾನಪತ್ರಿಕಾ.

ಕರ್ನಾಟಕ, ಮಹಾರಾಷ್ಟ್ರ, ನೈಜಾಮ ದೇಶಗಳಲ್ಲಿರ
ತಕ್ಕ ಅಖಿಲ ವೀರಶೈವಮಂಡಲಿಯವರಿಗೂ
ವಿತನ್ಮತಾನುಯಾಯಿಗಳಿಗೂ ಸಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆ ಟೌನ್‌ವಾಸಿಗಳಾದ ವೀರಶೈವ ಮಂಡಲಿಯವರು ವಿಜ್ಞಾಪಿಸಿಕೊಳ್ಳುವುದೇನೆಂದರೆ—

ಶ್ರೀಮನ್ನೃಪ ಶಾಲೀವಾಹನಶಕ ೧೮೫೫ನೆಯ ಶ್ರೀಮುಖನಾಮ ಸಂವತ್ಸರದ ದಸರಾಮಹೋತ್ಸವವನ್ನು ಚಳ್ಳಕೆರೆಯಲ್ಲಿ ನೆರವೇರಿಸಬೇಕೆಂಬ ನಮ್ಮಗಳ ಪ್ರಾರ್ಥನೆಯನ್ನು ಶ್ರೀ ಮಹಾಸನ್ನಿಧಾನದವರು ಅಂಗೀಕರಿಸಿ ಅಪ್ಪಣೆಯನ್ನು ದಯಪಾಲಿಸಿದ ಪ್ರಯುಕ್ತ, ಪ್ರತಿ ಸಂವತ್ಸರದ ಪದ್ಧತಿಪ್ರಕಾರ ಇದೇ ಸಂವತ್ಸರದ ಅಶ್ವಯುಜ ಶು|| ಪಾಡ್ಯದಿಂದ (ತಾ|| ೨೦ ನೆಯ ಸೆಪ್ಟಂಬರ್ ೧೯೩೩) ಚತುರಂಗಬಲಸಮೇತ ಸಮಸ್ತ ಬಿರುದಾವಳಿಗಳೊಡನೆ ಬಹು ವಿಜೃಂಭಣೆಯಿಂದ ಶ್ರೀ|| ಮಹಾಸನ್ನಿಧಾನದವರ ಸುವರ್ಣರಜತಮಯಾಂದೋಲಿಕೋತ್ಸವವೂ, ೧೧ ನೆಯ ಶುಕ್ರವಾರ ವಿದ್ವತ್ಸಭೆಯೂ, ಪದವೀಪ್ರದಾನವೂ, ಆಲೋಚನಾವಿಷಯಗಳೂ ಜರಗುವುವು. ಆದಕಾರಣ, ಈ ಸುಸಮಯವನ್ನು ಕಳೆದುಕೊಳ್ಳದೆ ಸರ್ವರೂ ಆಗಮಿಸಿ ಶ್ರೀಮಹಾಸನ್ನಿಧಾನದವರಿಗೆ ಕಪ್ಪಕಾಣಿಕೆಗಳನ್ನರ್ಪಿಸಿ, ದರ್ಶನಾಶೀರ್ವಾದಗಳನ್ನು ಹೊಂದಿ ಧನ್ಯರಾಗುವುದಲ್ಲದೆ, ನಮ್ಮಗಳ ಮನಸ್ಸಂತೋಷಪಡಿಸಬೇಕೆಂದು ವಿನಯದಿಂದ ಪ್ರಾರ್ಥಿಸುವ,

ತಮ್ಮ ವಿಧೇಯರು,
ಚಳ್ಳಕೆರೆ. ವೀರಶೈವಮಂಡಲಿಯವರು.

ಸೂಚನೆ—ವರ್ಷಾಶನವನ್ನು ಪಡೆಯತಕ್ಕ ಸಂಗೀತ ವಿದ್ವಾಂಸರೂ, ಕೀರ್ತನಕಾರರೂ ಪ್ರತಿವರ್ಷ ಅಷ್ಟಮಿ, ನವಮಿ ತಿಥಿಗಳಿಗೆ ಬರುತ್ತಾರೆ. ಇದರಿಂದ ಎಲ್ಲರ ವಿದ್ವತ್ಪ್ರಕಾಶಕೆ ಅವಕಾಶವಿಲ್ಲದೆ ಹೋಗುವದು. ಆದುದರಿಂದ ವರ್ಷಾಶನ ಪಡೆಯಲು ಬರುವವರೆಲ್ಲರೂ ಪ್ರತಿಪದಕ್ಕೇ ಬರಬೇಕು. ಚಿತ್ರದುರ್ಗಕ್ಕೆ ರೈಲ್ವೆಯಿದೆ. ಚಿತ್ರದುರ್ಗದಿಂದ ಚೆಳ್ಳಕೆರೆ 18 ಮೈಲು. ಚಿತ್ರದುರ್ಗದಿಂದ ಮೋಟಾರ್ ಬರುತ್ತದೆ. ಬಳ್ಳಾರಿಯಿಂದ ಮೋಟಾರ್ ಬರುತ್ತದೆ.

ಸೂಚನೆ.

ನವರಾತ್ರಮಹೋತ್ಸವ ನಿಮಿತ್ತವಾಗಿ ಪ್ರತಿವರ್ಷ ಪದ್ಧತಿಯಂತೆ ಮುಂದಿನ (ತಾ|| ೨೫—೯—೩೩) ಪತ್ರಿಕೆಯು ಹೊರಡುವುದಿಲ್ಲ. ಸಂ.—

ಪಂಚಾಚಾರ್ಯ ಪ್ರಭಾ.

೧೯೩೩ನೇ ಸೆಪ್ಟಂಬರ್ ತಾ|| ೧೮ನೇ ಸೋಮವಾರ.

ಧರ್ಮಾಧರ್ಮನಿಬಂಧನ.

ಪ್ರತಿಯೊಬ್ಬ ಮಾನವನೂ ದೇವರ ಆಜ್ಞೆಗೆ ಒಳಪಟ್ಟಿರುತ್ತಾನೆ. ಆ ಆಜ್ಞೆಯು ಎಂತಹುದೆಂದು ನಾವು ತಿಳಿದುಕೊಳ್ಳಬೇಕಾದರೆ ವೇದಮೂಲಕವಾಗಿಯೂ ಅಥವಾ ಆ ವೇದಾಧಾರದಿಂದ ಹುಟ್ಟಿದ ಧರ್ಮಗ್ರಂಥಗಳ ಮೂಲಕವಾಗಿಯೂ ತಿಳಿದುಕೊಳ್ಳಬೇಕಲ್ಲದೆ ಇನ್ನಾವ ಉಪಾಯದಿಂದಲೂ ತಿಳಿಯಲು ಸಾಧ್ಯವಿಲ್ಲ. ಚರಾಚರಾತ್ಮಕವಾದೀಪ್ರಪಂಚವನ್ನು ಸೃಷ್ಟಿಸಿದ ಪರಮೇಶ್ವರನು ಲೋಕೋದ್ಧಾರಕ್ಕಾಗಿಯೇ ವೇದವನ್ನು ಸೃಷ್ಟಿಸಿರುತ್ತಾನೆ. ವೇದವೆಂಬುವದು ಮಾನವನ ಏಳಿಗೆಗೆ ಸಾಧನವಾದ ಜ್ಞಾನರತ್ನದ ನಿಕ್ಷೇಪವೇ ಆಗಿದೆ. ಯಾವ ವೇದದಲ್ಲಿ ಮುಕ್ತಿಸಾಧನವಾದ ಸಾಮಗ್ರಿಯು ಹೇಳಲ್ಪಟ್ಟಿರುತ್ತದೆಯೋ ಅದೇ ವೇದದಲ್ಲಿ ನರಕಹೇತುವಾದ ಸಾಮಗ್ರಿಯೂ ಹೇಳಲ್ಪಟ್ಟಿರುತ್ತದೆ. ಮುಖ್ಯವಾಗಿ ವೇದವು ಈಶ್ವರ ನಿರ್ಮಿತವಾದುದರಿಂದ ಪ್ರಪಂಚದಲ್ಲಿ ಪ್ರಾಣಿಗಳಿಗೆ ಯಾವುದು ದುಃಖಸಾಧನವು, ಯಾವುದು ಸುಖಸಾಧನವು ಎಂಬುದನ್ನು ತಿಳಿಸಬೇಕಾದ ಕರ್ತವ್ಯವು ಈಶ್ವರನ ಮೇಲೆಯೇ ಬಿದ್ದಿರುವುದರಿಂದ ಆ ಪರಮೇಶ್ವರನು ಹಿತಾಹಿತಗಳ ಸ್ವರೂಪವನ್ನೂ ಅವುಗಳಿಂದಾಗುವ ಫಲಾಫಲಗಳನ್ನೂ ವೇದ ದ್ವಾರಾ ನಮ್ಮಗಳಿಗೆ ತಿಳುಹಿಸಿಕೊಟ್ಟಿರುತ್ತಾನೆ.

ಪ್ರಪಂಚದಲ್ಲಿ ರಾಜ್ಯಭಾರವನ್ನು ವಹಿಸಿರುವ ಮಹಾರಾಜರು ತಮ್ಮ ದೇಶದ ಪ್ರಜೆಗಳೆಲ್ಲರೂ ಸ್ವಲ್ಪವೂ ದುಃಖವನ್ನನುಭವಿಸದೆ ಸದಾ ಸಂತೋಷಚಿತ್ತವುಳ್ಳವರಾಗಿರಲೆಂದು ಸಂಕಲ್ಪವುಳ್ಳವರಾಗಿಯೇ ತಮ್ಮ ರಾಜ್ಯದಲ್ಲಿ ಒಂದು ಕಾನೂನನ್ನು ಮಾಡಿರುವಂತೆ ಚತುರ್ದಶಭುವನಸೃಷ್ಟಿಕರ್ತನಾದ ಪರಮೇಶ್ವರನು ಸಹ ತಾನು ಸೃಷ್ಟಿಸಿದ ಪ್ರಾಣಿವರ್ಗವೆಲ್ಲವೂ ತಮ್ಮ ತಮ್ಮ ಧ್ಯೇಯವನ್ನೇ ಸಾಧಿಸಿ ಧನ್ಯಜೀವಿಗಳಾಗಲೆಂಬ ಮಹೋದ್ದೇಶದಿಂದಲೇ ಅಖಂಡವಾದ ಧರ್ಮಾಧರ್ಮಸ್ವರೂಪವನ್ನು ವಿವರಿಸುವ ವೇದರಾಶಿಯನ್ನು ಅನುಗ್ರಹಿಸಿದ್ದಾನೆ. ಇಂಥ ಅನಾದಿಸಂಸಿದ್ಧವಾದ ವೇದವನ್ನು ಹಿಂದುಹಿಂದಣ ಗುರುಜನಗಳೂ ಮಹರ್ಷಿಗಳೂ ಪರಂಪರೆಯಾಗಿ ಕಾಪಾಡಿಕೊಂಡು ಬಂದಿರುವುದರಿಂದ ಆ ವೇದವು ಇಂಥ ಕೆಟ್ಟ ಕಾಲದಲ್ಲಿಯೂ ಸ್ವಲ್ಪಸ್ವಲ್ಪವಾದರೂ ದೃಷ್ಟಿಗೆ ಗೋಚರವಾಗುತ್ತಲಿದೆ. ಆದರೆ ಈ ವೇದವನ್ನು ಮಹಾರಾಜರು ಪ್ರಜಾಸೌಕರ್ಯಕ್ಕಾಗಿ ಏರ್ಪಡಿಸಿದ ಕಾನೂನಿಗೆ ಹೋಲಿಸಿದ ಮಾತ್ರದಿಂದ ರಾಜಶಾಸನವೂ ವೇದವೂ ಸಮಾನವೇ ಎಂದು ತಿಳಿಯಬಾರದು. ಏಕಂದರೆ—ಪ್ರಜಾಸೌಕರ್ಯಕ್ಕಾಗಿ ರಾಜರಿಂದ ತಯಾರಾಗುವ ಕಾನೂನುಗಳಾದರೂ ಕಾಲಾನುಸಾರವಾಗಿ ಕೆಲವು ಭಾಗಗಳು ಬದಲಾವಣೆಯಾದರೂ ಆಗಬಹುದು. ಹಾಗೆಯೇ ಇದ್ದರೂ ಇರಬಹುದು. ಅಥವಾ ಸಂಪೂರ್ಣವಾಗಿ ಬದಲಾಯಿಸಿಯೂ ಹೋಗಬಹುದು. ಯಾವುವು ಮನುಷ್ಯಕೃತಗಳೋ ಅವು ಬದಲಾವಣೆಯನ್ನು ಹೊಂದಬಹುದು. ಮನುಷ್ಯನೆಂಬವನು ಅಲ್ಪಶಕ್ತಿಯುಳ್ಳವನಾದುದರಿಂದ ತನ್ನ ಶಕ್ತಿಗೆ ಗೋಚರವಾದಷ್ಟು ನೀತಿರೀತಿಗಳನ್ನು ಪ್ರತಿಪಾದಿಸುತ್ತಾನೆ. ಒಬ್ಬೊಬ್ಬರ ಬುದ್ಧಿಶಕ್ತಿಯು ಹೆಚ್ಚಾದಂತೆ ರೀತಿನೀತಿಗಳು ಒಂದುಕಾಲದಲ್ಲಿ ಹೆಚ್ಚುತ್ತಲೂ ಬುದ್ಧಿಶಕ್ತಿಯು ಕಡಿಮೆಯಾದ ಹಾಗೆಲ್ಲ ರೀತಿನೀತಿಗಳು ಕಡಿಮೆಯಾಗುತ್ತಲೂ ಬರುವುದರಿಂದ ಒಬ್ಬ ಮಹಾರಾಜನ ಕಾಲದಲ್ಲಿ ರಾಜ್ಯವು ಹೀನಾವಸ್ಥೆಯನ್ನೂ ಇನ್ನೊಬ್ಬ ಮಹಾರಾಜನ ಕಾಲದಲ್ಲಿ ಉತ್ತಮಾವಸ್ಥೆಯನ್ನೂ ಹೊಂದುತ್ತ ಬಂದಿರುವುದನ್ನು ನಾವುಗಳು ಕೇಳುತ್ತಲೇ ಬಂದಿರುತ್ತೇವೆ. ಹಾಗೆ ಪರಮೇಶ್ವರನೆಂಬವನು ಅಲ್ಪಶಕ್ತಿಯುಳ್ಳವನೂ ಜೀವಧರ್ಮವುಳ್ಳವನೂ ಮಾಯಾಪಾಶಬದ್ಧನೂ ಅಲ್ಲ. ಅವನು ಈ ಪರಿದೃಶ್ಯಮಾನವಾದ ಜಗತ್ತಿಗೆಲ್ಲ ಉತ್ಪತ್ತಿಕಾರಣನಾಗಿರುವುನಲ್ಲದೆ ತ್ರಿಕಾಲಾಬಾಧಿತನೂ, ಸರ್ವಜ್ಞನೂ, ನಿತ್ಯತೃಪ್ತನೂ, ಸ್ವತಂತ್ರನೂ, ಸರ್ವಶಕ್ತನೂ, ಸರ್ವಕರ್ತೃವೂ ಆಗಿರುವುದರಿಂದ ಆತನ ವೇದರೂಪವಾದ ದಿವ್ಯವಾಣಿಯಾದರೂ ಎಂದೂ ಬದಲಾವಣೆಯನ್ನು ಹೊಂದತಕ್ಕದ್ದಾಗಿಲ್ಲವು. ಇದರಿಂದ ರಾಜಾಜ್ಞೆಗೂ ವೇದಾಜ್ಞೆಗೂ ಮಹದಂತರವಿದೆಯೆಂದು ಗೊತ್ತಾಗುವುದು. ವೇದಾಜ್ಞೆಯನ್ನು ನಮ್ಮ ಪೂರ್ವದ ಕವಿಗಳು ರಾಜಾಜ್ಞೆಗೆ ಹೋಲಿಸಿದ್ದರೂ ಕೆಲವು ಸಾದೃಶಗಳನ್ನು ತೆಗೆದುಕೊಂಡು ಹೋಲಿಸಿರುವರಲ್ಲದೆ ಸಂಪೂರ್ಣಸಾದೃಶ್ಯವನ್ನು ತೆಗೆದುಕೊಂಡು ಹೋಲಿಸಿಲ್ಲ. ಲೋಕದಲ್ಲಿ ಯಾರು ರಾಜಾಜ್ಞೆಯನ್ನು ಮೀರಿ ನಡೆಯುವರೋ ಅವರು ರಾಜಕೋಪಕ್ಕೆ ಪಾತ್ರರಾಗಿ ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಅಪಕೀರ್ತಿ ಭಾಜನರಾಗುತ್ತಾರೆ ಅದರಂತೆ ವೇದಾಜ್ಞೆಯನ್ನು ಯಾರು ಮೀರುತ್ತಾರೆಯೋ ಅವರು ನರಕಕ್ಕೀಡಾಗುತ್ತಾರಲ್ಲದೆ ವೇದಕರ್ತನಾದ ಪರಮೇಶ್ವರನ ಕೋಪಕ್ಕೆ ಪಾತ್ರರಾಗುತ್ತಾರೆ. ರಾಜಾಜ್ಞೆಯನ್ನು ಯಾರೂ ಹೇಗೆ ಮೀರಬಾರದೋ ಹಾಗೆ ವೇದಾಜ್ಞೆಯನ್ನು ಯಾರೂ ಮೀರಬಾರದು ಎಂಬುವುದರಲ್ಲಿ ಆ ಕವಿಗಳಿಗೆ ತಾತ್ಪರ್ಯವಲ್ಲದೆ, ಇನ್ನಾವ ತಾತ್ಪರ್ಯವೂ ಇಲ್ಲ. ಅದ್ದರಿಂದ ರೀತಿನೀತಿಗಳ ಸುಧಾರಣೆಯ ಬಗ್ಗೆ ಕಾಲಾನುಸಾರವಾಗಿ ರಾಜಕೀಯ ಧರ್ಮಗಳು ವಿನಿಮಯವಾದಂತೆ ವೇದಧರ್ಮಗಳು ವಿನಿಮಯವನ್ನು ಹೊಂದಲಾರವು. ಸೃಷ್ಟಿಕರ್ತನಾದ ಪರಮೇಶ್ವರನು ತನ್ನ ದಿವ್ಯವಾಣಿಯಲ್ಲಿ ಯಾವುದನ್ನು ಧರ್ಮವೆಂದು ನಿಬಂಧನ ಮಾಡಿರುವನೋ ಎಷ್ಟು ಪ್ರಪಂಚಗಳು ಪ್ರಳಯವಾದರೂ ಅದು ಧರ್ಮವಾಗಿರಬೇಕು. ಯಾವುದನ್ನು ಅಧರ್ಮವೆಂದು ನಿಬಂಧನೆಮಾಡಿರುವನೋ ಅದು ಅಧರ್ಮವಾಗಿಯೇ ಇರಬೇಕು. ಇಂಥ ವೇದಾಗಮಗಳಲ್ಲಿ ಹೇಳಿರುವ ಧರ್ಮಾಧರ್ಮಗಳನ್ನೇ ಮುಖ್ಯವಾಗಿಟ್ಟುಕೊಂಡು ಋಷಿಗಳೂ, ಪೂರ್ವಾಚಾರ್ಯರೂ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ಇಂಥ ಗ್ರಂಥಗಳು ಸಹ ಆ ವೇದವೆಂಬ ತಳಹದಿಯ ಮೇಲಿರುವುದರಿಂದ ಪ್ರಮಾಣಗಳಾಗಿವೆಯೇ ಹೊರತು ಸ್ವತಃ ಪ್ರಮಾಣಗಳಾಗಿಲ್ಲವು. ಇದರಿಂದ ವೇದದಲ್ಲಿ ಯಾವುದು ಧರ್ಮವೆಂದು ನಿರ್ಣಯವಾಗಿರುವುದೋ ಅದನ್ನು ಅನುಷ್ಠಿಸುವುದರಲ್ಲಿಯೂ ಯಾವುದು ಅಧರ್ಮವೆಂದು ನಿರ್ಣಯವಾಗಿರುವುದೋ ಅದನ್ನು ತ್ಯಜಿಸುವುದರಲ್ಲಿಯೂ ಪ್ರತಿಯೊಬ್ಬ ಆಸ್ತಿಕನು ಗಮನಕೊಡಬೇಕಲ್ಲದೆ ತನಗೆ ಅನುಕೂಲವಾದುದು ಯಾವುದಾದರೂ ಇದ್ದರೆ ಅದು ಮಾತ್ರ ಗ್ರಾಹ್ಯವು, ಪ್ರತಿಕೂಲವಾದುದಿದ್ದರೆ ಅದು ಗ್ರಾಹ್ಯವಲ್ಲವೆಂಬ ದುರ್ಭಾವವನ್ನು ಮಾತ್ರ ಯಾರೂ ಮಾಡಬಾರದು. ವೇದದಲ್ಲಿ ನಿಷಿದ್ಧಗಳಾದ ಅಧರ್ಮಗಳನ್ನು ಧರ್ಮಗಳನ್ನಾಗಿಯೂ, ವಿಧಿವಿಹಿತಗಳಾದ ಧರ್ಮಗಳನ್ನೆಲ್ಲಾ ಅಧರ್ಮಗಳನ್ನಾಗಿಯೂ ಯಾರು ಪರಿಭಾವಿಸುತ್ತ ಅಧರ್ಮಗಳನ್ನು ಯಾರು ಪ್ರಚಾರಮಾಡುತ್ತ ಬರುತ್ತಾರೆಯೋ ಅಂಥ ಅಜ್ಞೋಲ್ಲಂಘನವನ್ನು ಮಾಡಿದ ಪಾಪಿಗಳಿಗೆ ಪರಮೇಶ್ವರನು ಘೋರಶಿಕ್ಷೆಯನ್ನು ಮಾಡಿಯೇ ಮಾಡುತ್ತಾನೆ. ಪ್ರತ್ಯಕ್ಷದಲ್ಲಿ ರಾಜಾಜ್ಞೆಗೆ ವಿರಾರಿ, ಕೊಲೆಗಡಕತನ, ದರೋಡೆ, ಪರದ್ರವ್ಯ ಪರಸ್ತ್ರೀ ಹರಣಾದಿ ನೀತಿವಿರುದ್ಧ ಕಾರ್ಯಗಳನ್ನು ಮಾಡುವ ರಾಜದ್ರೋಹಿಗೆ ಪ್ರತ್ಯಕ್ಷದಲ್ಲಿಯೇ ಶಿಕ್ಷೆಯು ವಿಹಿತವಾಗಿರುವಂತೆ ಅಧರ್ಮಕಾರ್ಯಗಳನ್ನು ಮಾಡುವ ಪಾಪಿಗೆ ದೇಹಾಂತದಲ್ಲಿ ಘೋರಶಿಕ್ಷೆಯು ವಿಹಿತವಾಗಿರುವುದು. ಇದೇ ಅಭಿಪ್ರಾಯವು—

ರಮಣೀಯ ಚರಣಾಃ ರಮಣೀಯಾಂ ಯೋನಿಮಾಪದ್ಯಂತೆ |
ಕಪೂಯಚರಣಾಃ ಕಪೂಯಾಂ.....................

ಯಾರು ವೇದವಿಹಿತಗಳಾದ ಪುಣ್ಯಧರ್ಮಗಳನ್ನು ಆಚರಿಸುವರೋ ಅವರು ಉತ್ತಮ ಜನ್ಮವನ್ನು ಪಡೆಯುತ್ತಾರೆಂದೂ, ಯಾರು ವೇದನಿಷಿದ್ಧಗಳಾದ ದುಷ್ಟಧರ್ಮಗಳನ್ನು ಆಚರಿಸುತ್ತಾರೆಯೋ ಅವರು ಬಹುಹೀನವಾದ ಜನ್ಮಗಳನ್ನೆತ್ತಿ ಬಳಲುತ್ತಾರೆಂದೂ ಛಾಂದೋಗ್ಯೋಪನಿಷತ್ತು ಪುಣ್ಯಪಾಪಾಚರಣೆಗಳ ಫಲಾಫಲಗಳನ್ನು ಸ್ಪಷ್ಟಪಡಿಸಿರುತ್ತದೆ. ಇದರಿಂದ ಧರ್ಮಾಧರ್ಮ ನಿರ್ಣಯವು ವೇದದಿಂದಲೇ ಆಗಬೇಕಾಗಿದ್ದರೂ ಆ ವೇದವೆಂಬುವದು ಸಮುದ್ರದಂತೆ ವಿಸ್ತೀರ್ಣವಾಗಿಯೂ ಅಸ್ಪಷ್ಟವಾಗಿಯೂ ಇರುವದರಿಂದ ಪಂಡಿತ ಪಾಮರರೆಲ್ಲರಿಗೂ ತಿಳಿಯಲಾರದು. ಅದಕ್ಕಾಗಿಯೇ ಸರ್ವಜ್ಞರೂ ಪರಮ ಕಾರುಣಿಕರೂ ಆದ ಹಿಂದಿನ ಪೂರ್ವಾಚಾರ್ಯರು ಆ ವೇದವೆಂಬ ಸಮುದ್ರದಲ್ಲಿ ಪ್ರವೇಶಿಸಿ ಧರ್ಮಗಳೆಂಬ ಶುದ್ಧರತ್ನಗಳನ್ನು ಉದ್ಧರಿಸಿ ಅನೇಕ ಸಿದ್ಧಾಂತಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳೇ ಮತಗ್ರಂಥಗಳೆಂದು ಜಗತ್ತಿನಲ್ಲಿ ಮೆರೆಯುತ್ತಲಿವೆ. ಮತಗ್ರಂಥಗಳಲ್ಲಿ ಪೂರ್ವಾಚಾರ್ಯರು ಹೇಳಿರುವ ಅಭಿಪ್ರಾಯಗಳೆಲ್ಲವೂ ವೇದಮೂಲಕವಾಗಿಯೇ ಬಂದಿರುವುದರಿಂದ ವೇದವನ್ನು ಬೋಧಿಸಿದ ಪರಮಾತ್ಮನಲ್ಲಿ ಎಷ್ಟು ಶ್ರದ್ಧೆಯಿಂದ ನಡೆಯಬೇಕಾಗಿದೆಯೋ ವೇದಾನುಯಾಯಿಗಳಾದ ಗ್ರಂಥಗಳಲ್ಲಿಯೂ ಆ ಗ್ರಂಥವನ್ನು ಬರೆದ ಸರ್ವಜ್ಞರಾದ ಪೂರ್ವಾಚಾರ್ಯರಲ್ಲಿಯೂ ಅಷ್ಟೇ ಶ್ರದ್ಧೆಯಿಂದ ನಡೆದುಕೊಳ್ಳುತ್ತ ಶ್ರೀಮದಾಚಾರ್ಯ ಭಗವತ್ಪಾದರ ಅನುಗ್ರಹ ದ್ವಾರಾ ವೇದಪುರುಷನಾದ ಪರಮೇಶ್ವರನ ಪ್ರೀತಿಯನ್ನು ಸಂಪಾದಿಸಿ ಉತ್ತಮಗತಿಯನ್ನು ಸಂಪಾದಿಸುವುದೇ ಸಮಸ್ತ ವೈದಿಕಮತಾನುಯಾಯಿಗಳ ಕರ್ತವ್ಯವಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ತಾ|| ೩೦ ನೇ ಶನಿವಾರ ಮಧ್ಯಾಹ್ನ ಪ್ರಾರಂಭವಾಗುವುದೆಂದು ತಿಳಿಯುತ್ತದೆ.

ಮೈಸೂರು ಸರ್ಕಾರದವರು ಹಿಂದುಗಳಿಗೆ ಕೊಡುವ ಎಂಟು ಹಬ್ಬಗಳ ರಜೆಗಳನ್ನು ಉರುದು ಸ್ಕೂಲುಗಳಿಗೆ ಕೊಡಬೇಕಾದ ಅಗತ್ಯವಿಲ್ಲವೆಂಬನಾಗಿ ಅಪ್ಪಣೆಮಾಡಿರುತ್ತಾರೆ.

ನಮ್ಮ ದಿವಾನ್‌ರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಕಳೆದ ಶನಿವಾರ ಸಾಯಂಕಾಲ ದೇವನಹಳ್ಳಿಗೆ ದಯಮಾಡಿ ಆ ನಗರದಲ್ಲಿ ವಿದ್ಯುಚ್ಛಕ್ತಿ ದೀಪಗಳ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ೧೬ ನೆಯ ಪದವೀಪ್ರದಾನ ಸಮಾರಂಭವು ಅಕ್ಟೋಬರು ೧೪ ನೆಯ ತಾರೀಖು ಶನಿವಾರ ಪ್ರಾತಃಕಾಲ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವದು.

ಶಿವಮೊಗ್ಗೆಯಲ್ಲಿ ಕಳೆದ ತಿಂಗಳು ತಾ|| 26 ನೇ ರಾತ್ರಿ ಬೆಂಕಿ ಬಿದ್ದು ಐದು ಮಟ್ಟಿಮನೆಗಳು ಸುಟ್ಟುಹೋದವು. ಜಾಗ್ರತೆಯಾಗಿ ಪೋಲೀಸಿನವರು ಹೋಗಿ ಬೆಂಕಿಯನ್ನು ಆರಿಸದೆ ಇದ್ದಿದ್ದರೆ ಇನ್ನೂ ೫೦ ಮನೆಗಳು ನಷ್ಟವಾಗುತ್ತಿದ್ದವು.

ಇದೇ ಸೆಪ್ಟೆಂಬರ್ 9ನೆಯ ತಾರೀಖು ಶನಿವಾರ ಮೈಸೂರು ಡಿ|| ಡೆಪ್ಯುಟಿಕಮಿಷನರಾದ ಶ್ರೀ|| ಸಿ. ಎಸ್. ಕುಪ್ಪಸಾಮಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರವರ ಚುನಾವಣೆಯು ನಡೆದು ಮ|| ರಾ|| ಬಿ. ಎಸ್. ಪುಟ್ಟಸ್ವಾಮಿಯವರಿಗೆ ಹೆಚ್ಚು ಓಟುಗಳು ದೊರೆತು ಪುನಃ ಅವರೇ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು.

ಇದೇ ಸೆಪ್ಟಂಬರ್ ೪ ನೇ ಸೋಮವಾರ ಸಾಯಂಕಾಲ ರಾಜಧಾನಿಯ ಹೊಂಬಾಳೆ ರಂಗಯ್ಯನೆಂಬುವನ ೭ ವರುಷದ ಹೆಣ್ಣುಮಗುವನ್ನು ಯಾವನೋ ಒಬ್ಬನು ಕರೆದುಕೊಂಡುಹೋಗಿ ತಿಂಡಿ ಕೊಟ್ಟು ೩|| ತೋಲಾ ತೂಕವುಳ್ಳ ಕೈಬಳೆಗಳನ್ನು ಕಳಚಿಕೊಂಡು ಹುಡುಗಿಯನ್ನು ಅರಮನೆ ಆಫೀಸ್ ರಸ್ತೆಯಲ್ಲಿ ಬಿಟ್ಟು ತಪ್ಪಿಸಿಕೊಂಡು ಹೋದನೆಂದು ತಿಳಿದುಬಂದಿದೆ. ಪೋಲೀಸಿನವರು ಕಳ್ಳನನ್ನು ಪತ್ತೆಮಾಡುತ್ತಿದ್ದಾರೆ.

ಕಳೆದ ಶುಕ್ರವಾರ ಬೆಳಗಿನ ಝಾವದಲ್ಲಿ ಕೆಂಗೇರಿ ಸ್ಟೇಷನ್ನಲ್ಲಿ ರೈಲ್ ಗಾಡಿಯು ನಿಧಾನವಾಗಿ ಹೋಗುತ್ತಿದ್ದಾಗ ರೈಲ್ವೆ ಕಾನ್‌ಸ್ಟೆಬಲ್ ನಾರಾಯಣರಾಯನು ಗಾಡಿಯನ್ನು ಹತ್ತುವ ಸಂದರ್ಭದಲ್ಲಿ ಕಾಲುಜಾರಿ ಗಾಡಿಯ ಕೆಳಗೆ ಬಿದ್ದು ಎಡದ ತೋಳು ಕತ್ತರಿಸಿಹೋಯಿತು. ರೈಲನ್ನು ಕೂಡಲೆ ನಿಲ್ಲಿಸಿ ಜ್ಞಾನ ತಪ್ಪಿದ್ದ ರಾಯನನ್ನು ಮೋಟಾರಿನಲ್ಲಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಡಾಕ್ಟರು ಪೆಟ್ಟುಬಿದ್ದಿದ್ದ ತೋಳನ್ನು ಕತ್ತರಿಸಿಹಾಕಿ ಚಿಕಿತ್ಸೆಮಾಡುತ್ತಿರುವರು.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರವರು ಶ್ರೀಮಾನ್ ಪಿ. ಮಹಾದೇನಯ್ಯನವರು ಬಿ.ಎ., ಬಿ.ಎಲ್. ಇವರನ್ನು ಮೈಸೂರು ಹೈಕೋರ್ಟಿನ ಚೀಫ್ ಜಸ್ಟೀಸರನ್ನಾಗಿ ಖಾಯಂ ಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರು ಶ್ರೀ|| ಕೆ. ಶಂಕರನಾರಾಯಣರಾಯರು ಎಂ.ಎ., ಬಿ.ಎಲ್. ಇವರನ್ನು ಮೈಸೂರು ಹೈಕೋರ್ಟಿನ ಚೀಫ್ ಜಸ್ಟೀಸರನ್ನಾಗಿ ಖಾಯಂಮಾಡಿರುತ್ತಾರೆ.

ರೆವಿನ್ಯೂಕಮಿಷನರಾಗಿ ನೇಮಿಸಲ್ಪಟ್ಟ ಮಿ|| ಎ. ರಾಘವರಾವ್ ಬಿ. ಎ., ಬಿ. ಎಲ್. ಇವರ ಸ್ಥಳದಲ್ಲಿ ಮಿ|| ಆರ್. ರಂಗರಾವ್ ಬಿ.ಎ., ಬಿ.ಎಲ್., ರವರು ಸರ್ಕಾರದ ಚೀಫ್ ಸೆಕ್ರೆಟರಿಗಳಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಮಿ|| ಡಿ. ಶ್ರೀನಿವಾಸಯ್ಯಂಗಾರ್ ಬಿ.ಎ., ಇವರು ಎಕ್ಸೈಜ್ ಕಮಿಷನರ್, ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್, ಕಮಿಷನರ್ ಆಫ್ ಇನ್‌ಕಂ ಟ್ಯಾಕ್ಸ್, ಕಮಿಷನರ್ ಆಫ್ ಸ್ಟ್ಯಾಂಪ್ಸ್, ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿರುವ 'ನ್ಯೂ ಇಂಡಿಯನ್ ಗೆಸ್ಟ್ ಕ್ವಾರ್ಟರ್ಸ್" ಕಟ್ಟಡವು ಸೆಪ್ಟೆಂಬರ್ ೨೨ ನೇ ತಾರೀಖಿನಿಂದ ಅಕ್ಟೋಬರ್ ೧೨ ನೇ ತಾರೀಖಿನವರೆಗೆ ಪರಸ್ಥಳದ ಜನರ ಅನುಕೂಲಕ್ಕೆ ದೊರೆಯುವದಿಲ್ಲ.

ವರ್ತಮಾನಸಂಗ್ರಹ

ಈ ಸಾರಿ ಕುರುಕ್ಷೇತ್ರದಲ್ಲಿ ನಡೆದ ದೊಡ್ಡ ಜಾತ್ರೆಯಲ್ಲಿ ಒಬ್ಬ ಸಾಧುವು ೧೨೫ ರೂ. ಗಳನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡು ನೀರಿನಲ್ಲಿ ಬಿದ್ದು ಮೃತಪಟ್ಟನಂತೆ!

ಜರ್ಮನ್ ಸರಕಾರದವರು ತಮ್ಮ ದೇಶದಲ್ಲಿರುವ ಬ್ರಹ್ಮಚಾರಿಗಳಾದ ಸ್ತ್ರೀಯರ ಮೇಲೆ ಒಂದು ಹೊಸತೆರಿಗೆಯನ್ನು ವಿಧಿಸಿರುವರು! ಇದರ ಉತ್ಪತ್ತಿಯು ಪುತ್ರವತಿಯರಾದ ಸ್ತ್ರೀಯರ ಹಿತಸಾಧನೆಗಾಗಿ ಉಪಯೋಗಿಸಲ್ಪಡುವದಂತೆ!

ಸೆಪ್ಟೆಂಬರ್ ೯ ನೇ ತಾರೀಖಿನ ದಿವಸ ಮುಂಬಯಿಯಿಂದ ಹೊರಟ ಕೈಸರ-ಹಿಂದ್ ಎಂಬ ಜಹಜಿನಲ್ಲಿ ೧೧,೧೬,೭೭೪ ರೂಪಾಯಿಗಳ ಭಂಗಾರವು ರವಾನೆಯಾಯಿತು. ಇದುವರೆಗೆ ರವಾನಿಸಿದ ಭಂಗಾರದ ಬೆಲೆ ೨೧,೩೧,೭೩,೫೯೯ ರೂ. ಗಳು!

ಗಾಂಧಿಯವರು ತಮ್ಮ ಮುಂದಿನ ನಡವಳಿಕೆಯ ವಿಷಯವಾಗಿ ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟು ಇನ್ನೊಂದು ವರ್ಷದವರೆಗೂ ತಾವು ಕಾನೂನುಭಂಗವನ್ನು ಆಚರಿಸುವದಿಲ್ಲವೆಂದೂ, ಅಸಂಬಂಧ ನಿರ್ಬಂಧನವನ್ನು ಅಪೇಕ್ಷಿಸುವದಿಲ್ಲವೆಂದೂ ಹೇಳಿದ್ದಾರೆ.

ಗ್ರೇಸಿ ಫೀಲ್ಡ್ಸ್ ಎಂಬ ಸಿನಿಮಾ ನಟಿಗೆ ಅವಳು ಪಾತ್ರವನ್ನು ವಹಿಸುವ ಪ್ರತಿಯೊಂದು ಚಿತ್ರಕ್ಕೂ ೩,೫೦,೦೦೦ ರೂಪಾಯಿಗಳನ್ನು ಕೊಡುವರಂತೆ! ಅಂದರೆ ಇವಳು ಸ್ಟುಡಿಯೋದಲ್ಲಿ ಕೆಲಸ ಮಾಡುವ ಪ್ರತಿನಿಮಿಷಕ್ಕೂ ೩೦ ರೂಪಾಯಿಗಳಂತೆ ಸಂಬಳ ದೊರೆತಂತಾಯಿತು.

ಇಟಲಿ ದೇಶದ ಲೆಫ್ಟನೆಂಟ್ ಟಿಟೊ ಫಾಲ್ಕೋನಿ ಎಂಬ ಸುಪ್ರಸಿದ್ಧ ಮಿಲಿಟರಿ ವಿಮಾನಕಾರರು ಅಮೇರಿಕೆಯ ಲಾಸ್ ಅಂಗಲ್ಸ ನಗರದಲ್ಲಿ ೨ ಗಂಟೆ ೮ ನಿಮಿಷ ೫೫ ಸೆಕೆಂಡುಗಳವರೆಗೆ ವಿಮಾನವನ್ನು ತಳ ಮೇಲಾಗಿ ನಡೆಯಿಸಿ, ಪ್ರಪಂಚದಲ್ಲಿ ತಳ ಮೇಲಾಗಿ ವಿಮಾನ ನಡೆಸುವದರಲ್ಲಿ ಪ್ರಥಮಸ್ಥಾನವನ್ನು ಪಡೆದರಂತೆ!

ಅಮೇರಿಕಾ ಸರಕಾರದವರು ಪ್ರಪಂಚದಲ್ಲೆಲ್ಲಾ ಅತ್ಯಂತ ವೇಗವಾಗಿ ಪ್ರಯಾಣ ಮಾಡಬಲ್ಲ ಒಂದು ಅದ್ಭುತವಾದ ವಿಮಾನವನ್ನು ತಯಾರಿಸಿರುವರಂತೆ! ಆದರೆ ಇದರ ವಿವರಗಳು ಶತ್ರುಪಕ್ಷದವರಿಗಾರಿಗೂ ತಿಳಿಯದಿರಲೆಂದು ಅದರ ವಿಷಯವಾಗಿ ಯಾವ ವಿಚಾರಗಳೂ ಬಹಿರಂಗವಾಗದಂತೆ ಬಹುಗೋಪ್ಯವಾಗಿ ಕಾದಿಡಲ್ಪಟ್ಟಿರುವವು.

ಫ್ರಾನ್ಸ್ ದೇಶಕ್ಕೆ ಸೇರಿದ ಅಸ್ಕಿಯೆರೆಸ್ ಎಂಬ ಊರಿನಲ್ಲಿ ಕೆಲವು ಜನ ಕಳ್ಳರು ಒಂದು ಅಂಗಡಿಗೆ ಕನ್ನಹಾಕಿ ಅರ್ಧ ರಾತ್ರಿಯೆಲ್ಲಾ ಕಷ್ಟಪಟ್ಟು ದೊಡ್ಡ ಕಬ್ಬಿಣದ ಪೆಟ್ಟಿಗೆಯೊಂದನ್ನು ಮೋಟಾರ್ ಲಾರಿಯಲ್ಲಿ ಸಾಗಿಸಿಕೊಂಡು ಹೋದರು. ಆದರೆ ಪೆಟ್ಟಿಗೆಯನ್ನೊಡೆದು ನೋಡಿದಾಗ ಅದರಲ್ಲಿ ೨ ಪೌ. ೨ ಶಿಲಿಂಗ್‌ಗಳು ಮಾತ್ರ ಇದ್ದವಂತೆ!

ಯೂಗೊಸ್ಲೇವಿಯಾ ದೇಶಕ್ಕೆ ಸೇರಿದ ಓಸಿಜೆಕ್ ನಗರದ ಒಬ್ಬ ನಿವಾಸಿಯು ಯಾವುದೋ ಕಾರಣದಿಂದ ಆತ್ಮಹತ್ಯಮಾಡಿಕೊಳ್ಳಬೇಕೆಂದು ತನ್ನ ಬಾಯಿಯಲ್ಲಿ ಒಂದು ಡೈನಾಮೈಟನ್ನು ಇಟ್ಟುಕೊಂಡು ಬೆಂಕಿಯನ್ನು ಹಚ್ಚಿ ಹಾರಿಸಿದನು. ಅವನಿಗೆ ಪುನಃ ಜ್ಞಾನಬಂದಾಗ ಅವನ ಬಾಯಲ್ಲಿ ೨ ಹಲ್ಲುಗಳು ಮಾತ್ರ ಮುರಿದಿದ್ದುವಲ್ಲದೆ, ಬೇರೆ ಯಾವ ಅಪಾಯವೂ ಆಗಿರಲಿಲ್ಲವಂತೆ!

ಅಮೇರಿಕೆಯ ವಾಷಿಂಗ್‌ಟನ್ ನಗರದ ಜೋಸೆಫ್ ಜಾನೆಲೊಟ್ಟಿ ಎಂಬಾತನಿಗೆ ೨೦ ಮಕ್ಕಳಿದ್ದು ಕೆಲಸವಿಲ್ಲದೆ ತೊಂದರೆಪಡುತ್ತಿದ್ದನು. ಪ್ರೆಸಿಡೆಂಟ್ ರೂಜ್‌ವೆಲ್ಟರು ಅಧಿಕಾರಕ್ಕೆ ಬಂದಮೇಲೆ ಜೋಸೇಫನಿಗೆ ಒಂದು ನೌಕರಿಯು ದೊರೆಯಿತು. ಅನಂತರ ಅವನಿಗೆ ೨೧ ನೆಯ ಮಗುವೂ (ಹೆಣ್ಣು) ಜನಿಸಿತು. ಜೊಸೆಫನು ತನಗೆ ಕೆಲಸ ದೊರೆತ ಸಂತೋಷಾರ್ಥವಾಗಿ ಆ ಶಿಶುವಿಗೆ ಎಲೀನರ್ ರೂಜ್‌ವೆಲ್ಟ್ ಎಂದು ಹೆಸರಿಟ್ಟನಂತೆ!

ಅಮೇರಿಕೆಯ ವಾಷಿಂಗ್‌ಟನ್ ನಗರದಲ್ಲಿ ನಡೆಯುತ್ತಿರುವ ನ್ಯಾಷನಲ್ ಮ್ಯೂಜಿಯಮ್ಮಿನಲ್ಲಿ ಒಬ್ಬ ಶಾಸ್ತ್ರಜ್ಞನು ಪ್ರತಿಯೊಂದು ಪಕ್ಷಿಯ ಮೈಮೇಲೂ ಎಷ್ಟೆಷ್ಟು ಗರಿಗಳಿರುವವೆಂಬುದನ್ನು ಶೋಧಿಸುತ್ತಿರುವನು. ಇದಕ್ಕಾಗಿ ಕೆಲವು ಹುಡುಗಿಯರು ನೇಮಿಸಲ್ಪಟ್ಟಿರುವರು. ಈ ಹುಡುಗಿಯರು ಒಂದು ಚಿಮುಟದಿಂದ ಗರಿಗಳನ್ನು ಒಂದೊಂದಾಗಿ ಕಿತ್ತು ಎಚ್ಚರಿಕೆಯಿಂದ ಒಂದು ಗಾಜಿನ ಶೀಸೆಯಲ್ಲಿ ಹಾಕುವರಂತೆ! ಗುಬ್ಬಿಯ ಜಾತಿಯ ಪಕ್ಷಿಗಳ ಮೈಮೇಲೆ ೨೫೦೦ ಗರಿಗಳಿರುವವಂತೆ!

ರಷ್ಯಾ ಸರಕಾರದವರು ಈಗ್ಗೆ ಕೆಲವು ದಿವಸಗಳ ಹಿಂದೆ ೧೪೯ ಮೈಲು ಉದ್ದವುಳ್ಳ ಮತ್ತು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಕಾಲುವೆಯೊಂದನ್ನು ಕಟ್ಟಿಸಿದರಷ್ಟೇ! ಈ ಕಾಲುವೆಯ ಕಾರ್ಯಗಳೆಲ್ಲವೂ ಕಾರಾಗೃಹವಾಸಿಗಳಾಗಿದ್ದ ಕೈದಿಗಳಿಂದಲೇ ಮಾಡಿಸಲ್ಪಟ್ಟಿರುವವು. ರಷ್ಯಾಸರಕಾರದವರು ಇದರಿಂದ ಆ ಕೈದಿಗಳು ಸನ್ಮಾರ್ಗಕ್ಕೆ ಬಂದಿರುವರೆಂದು ಹೇಳಿ ೧೨,೦೦೦ ಕೈದಿಗಳನ್ನು ಬಂಧನದಿಂದ ಬಿಟ್ಟಿರುವರಲ್ಲದೆ, ೫೯,೦೦೦ ಜನ ಕೈದಿಗಳ ಶಿಕ್ಷೆಯ ಅವಧಿಯನ್ನೂ ಕಡಿಮೆಮಾಡಿರುತ್ತಾರೆ.

ಅಮೇರಿಕೆಯಲ್ಲಿ ಕೆಲವು ಜನ ಶಾಸ್ತ್ರಜ್ಞರು ಕೂದಲಿಗಿಂತಲೂ ೩೦ ರಷ್ಟು ಸಣ್ಣದಾದ ಮತ್ತು ಸಾಧಾರಣ ಕಣ್ಣಿಗೆ ಅಗೋಚರವಾದ ಅತ್ಯಂತ ಸೂಕ್ಷ್ಮವಾದ ತಂತಿಯನ್ನು ತಯಾರಿಸಿರುವರಂತೆ! ಈ ತಂತಿಯು ಪ್ಲಾಟಿನಂಲೋಹದಿಂದ ತಯಾರಿಸಲ್ಪಟ್ಟಿರುವದು! ಇಂತಹ ೧೩,೦೦೦ ತಂತಿಗಳನ್ನು ಒಟ್ಟುಗೂಡಿಸಿದರೆ ಒಂದು ಅಂಗುಲ ದಪ್ಪವಾಗುವದಂತೆ! ಒಂದು ಪೌಂಡ್ ಪ್ಲಾಟಿನಂಲೋಹದಿಂದ ೨,೫೭,೦೦,೦೦೦ ಅಡಿ ತಂತಿಯನ್ನು ಎಳೆಯಬಹುದಂತೆ! ಮತ್ತು ಅದರ ಬೆಲೆಯು ೩,೪೪,೮೦,೦೦೦ ರೂಪಾಯಿಗಳಾಗುವವಂತೆ!

ರುಮೇನಿಯಾದೇಶಕ್ಕೆ ಸೇರಿದ ಒಂದು ಹಳ್ಳಿಯಲ್ಲಿ ಒಬ್ಬ ರೈತನು ತನ್ನ ೧೦ ವರ್ಷದ ಮಗನನ್ನು ಒಂದು ಮರದ ನೆರಳಿನಲ್ಲಿ ಮಲಗಿಸಿ ತಾನು ಹತ್ತಿರದಲ್ಲಿಯೇ ಹೊಲದಲ್ಲಿ ಕೆಲಸಮಾಡುತ್ತಿದ್ದನು ಅಷ್ಟರಲ್ಲಿ ಒಂದು ಹಾವು ಮಲಗಿದ್ದ ಆ ಹುಡುಗನ ಬಾಯಿಯೊಳಕ್ಕೆ ನುಗ್ಗಿಬಿಟ್ಟಿತು! ಹುಡುಗನು ಕೂಡಲೇ ಎಚ್ಚತ್ತು ಕಿರಚಿಕೊಳ್ಳಲು ರೈತನು ಓಡಿಬಂದು ನೋಡುವಷ್ಟರಲ್ಲಿ ಹಾವು ಹುಡುಗನ ಹೊಟ್ಟೆಯೊಳಕ್ಕೆ ಹೊರಟುಹೋಗಿದ್ದಿತು. ರೈತನು ಹುಡುಗನನ್ನು ಕೂಡಲೇ ಆಸ್ಪತ್ರೆಗೆ ಕರೆದುಕೊಂಡುಹೋಗಲು ಅಲ್ಲಿ ಡಾಕ್ಟರರು ಕೆಲವು ಯಂತ್ರಸಾಧನದಿಂದ ಹಾವನ್ನು ಈಚೆಗೆ ತೆಗೆದುಹಾಕಿದರಂತೆ! ಹುಡುಗನು ಈಗ ಸೌಖ್ಯವಾಗಿರುವನು.

ಝಾನ್ಸಿನಗರದ ಮುನಿಸಿಪಲ್ ಬೋರ್ಡಿನ ಸೆಕ್ರೆಟರಿಗಳಾಗಿದ್ದ ಮಿ|| ಬಿ. ಎನ್. ವರ್ಮ ಎಂಬವರು ರಜೆಯಮೇಲಿದ್ದ ಕಾಲದಲ್ಲಿ ಕಾನೂನು ಭಂಗದ ಚಳವಳಿಯ ಸಂಬಂಧವಾಗಿ ದಸ್ತಗಿರಿ ಮಾಡಲ್ಪಟ್ಟರೆಂಬ ಕಾರಣದ ಮೇಲೆ ಮುನಿಸಿಪಲ್ ಕಮಿಷನರ್‌ರವರು ಅವರನ್ನು ಕೆಲಸದಿಂದ ವಜಾಮಾಡಿದರು. ಮಿ|| ವರ್ಮರವರು ಇದಕ್ಕಾಗಿ ಮುನಿಸಿಪಲ್ ಬೋರ್ಡಿನ ಮೇಲೆ ದಾವೆಯನ್ನು ತಂದರು. ಜಡ್ಜರವರು ವಿಚಾರಣೆಯನ್ನು ಮಾಡಿ ಮುನಿಸಿಪಲ್ ಬೋರ್ಡಿನವರು ಮಿ|| ವರ್ಮರವರಿಗೆ ೪,೦೦೦ ರೂ. ಗಳ ಪರಿಹಾರವನ್ನು ಕೊಡಬೇಕೆಂದು ತೀರ್ಮಾನಮಾಡಿರುವರು.

ಜಿನಿವಾನಗರದಲ್ಲಿರುವ ಜನಾಂಗಸಂಯೋಜನಕೂಟ (Leagul of Nations) ದ ಹೊಸ ಕಟ್ಟಡವು ಪ್ರಪಂಚದ ಪಾರ್ಲಿಮೆಂಟ್ ಕಟ್ಟಡಗಳಲ್ಲೆಲ್ಲಾ ಅತ್ಯಂತ ದೊಡ್ಡದಾಗಿರುವದು. ಇದು ಒಂದುಮೈಲು ಉದ್ದವಿದ್ದು, ಏಕಕಾಲದಲ್ಲಿ ೩,೦೦೦ ಜನರು ವಾಸವಾಗಿರುವಷ್ಟು ವಿಶಾಲವಾಗಿರುವದು. ಈ ಕಟ್ಟಡವು ೧೯೩೫ ನೇ ಅಗಸ್ಟ್ ತಿಂಗಳ ಸಮಯಕ್ಕೆ ಉಪಯೋಗಕ್ಕೆ ಸಿದ್ಧವಾಗುವದು. ಆ ವೇಳೆಗೆ ಇದಕ್ಕೆ ಒಟ್ಟು ೧,೫೦,೦೦,೦೦೦ ರೂಪಾಯಿಗಳು ವೆಚ್ಚವಾಗುವವಂತೆ! ಸಭಾಮಂದಿರದಲ್ಲಿ ೩೨೦ ಜನ ಪ್ರತಿನಿಧಿಗಳಿಗೂ, ೩೧೫ ಜನ ಸೆಕ್ರೆಟರಿಗಳಿಗೂ, ೩೧೯ ಜನ ರಾಜಕಾರಣಪಟುಗಳಿಗೂ, ೪೭೬ ಜನ ಪತ್ರಿಕಾ ಪ್ರತಿನಿಧಿಗಳಿಗೂ ಮತ್ತು ೪೧೦ ಜನ ಪ್ರೇಕ್ಷಕರಿಗೂ ಸ್ಥಳವಿರುವದಂತೆ!

ಬಂಗಾಳಾ ಪ್ರಾಂತಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಹದಿನಾರು ವರ್ಷ ವಯಸ್ಸಿನ ಒಬ್ಬ ಮಹಮ್ಮದೀಯ ತರುಣಿಯು ಗಂಡನು ಊರಿನಲ್ಲಿಲ್ಲದೆ, ಒಬ್ಬಳೇ ಮಲಗಿದ್ದಾಗ, ಯಾವನೋ ಒಬ್ಬ ದುರಾತ್ಮನು ಮನೆಗೆ ನುಗ್ಗಿ ಅವಳಲ್ಲಿ ಅತ್ಯಾಚಾರ ನಡೆಸಲು ಪ್ರಯತ್ನಿಸಲು ಆಕೆಯು ಒಂದು ಬಿದಿರು ತುಂಡಿನಿಂದ ಅವನನ್ನು ಎದುರಿಸಿ ಅದರಿಂದಲೇ ಅವನನ್ನು ಕೊಂದು ತನ್ನ ಮಾನರಕ್ಷಣೆಯನ್ನು ಮಾಡಿಕೊಂಡಳು. ಪೋಲೀಸರು ಅವಳನ್ನು ದಸ್ತಗಿರಿ ಮಾಡಿ ಅವಳ ಮೇಲೆ ಖೂನಿಯ ಮೊಕದ್ದಮೆಯನ್ನು ಹೂಡಲು ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಸೆಷನ್ ವಿಚಾರಣೆಗೆ ಗುರಿಪಡಿಸಿದರು. ಮೈಮನ್‌ಸಿಂಗಿನ ಸೆಷನ್ಸ್ ಜಡ್ಜರು ಮೊಕದ್ದಮೆಯನ್ನು ವಿಚಾರಿಸಿ ಆ ಸ್ತ್ರೀಯಳ ಸಾಹಸವನ್ನು ಕೊಂಡಾಡಿ ಬಿಡುಗಡೆ ಮಾಡಿದುದಲ್ಲದೆ ಸರಕಾರದವರು ಅವಳ ಧೈರ್ಯಕ್ಕೆ ಬಹುಮಾನ ಮಾಡಬೇಕೆಂದು ಶಿಫಾರಸ್ ಮಾಡಿದರು!

ನವರಾತ್ರಮಹೋತ್ಸವಾಹ್ವಾನಪತ್ರಿಕಾ.

ಬಳ್ಳಾರಿ.

ಮಹಾಶಯರಿಗೆ ತಿಳಿಸುವದೇನೆಂದರೆ—

೧೯೩೩ ನೇ ಇಸ್ವಿ ಸೆಪ್ಟಂಬರು ತಿಂಗಳು ೨೦ ನೇ ತಾರೀಖಿಗೆ ಸರಿಯಾದ ಶ್ರೀಮುಖನಾಮಸಂವತ್ಸರದ ಆಶ್ವೀಜ ಶು|| ೧ರ ಆರಾಗಾಯಿತು ಇದೇ ಶು|| ೯ ರ ವರೆವಿಗೂ ಪ್ರತಿದಿನ ಸಾಯಂಕಾಲ ೫-೩೦ ಘಂಟೆ ಮೊದಲುಗೊಂಡು ರಾತ್ರಿ ೯-೩೦ ಘಂಟೆ ವರೆವಿಗೂ ಶ್ರೀಮಠಸ್ವಾಮಿಗಳ ಮಠದಲ್ಲಿ ಬಿಜಾಪುರದ ಬೃಹನ್ಮಠದ ಪಟ್ಟಾಧ್ಯಕ್ಷ ಪ್ರವಚನ ಬೃಹಸ್ಪತಿ ಶ್ರೀಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳಿಂದ **ಶ್ರೀ ಸಿದ್ಧಾಂತ ಶಿಖಾಮಣಿ** ಎಂಬ ಶಿವಸಿದ್ಧಾಂತ ಶಾಸ್ತ್ರಪ್ರವಚನವು ಜರುಗುವುದು. ಈ ಪ್ರವಚನಕ್ಕೂ ಮತ್ತು ವಿಜಯದಶಮಿ ದಿವಸ ಶಮಿವೃಕ್ಷದವರೆಗೂ ಹೊರಡತಕ್ಕ ಮಹೋತ್ಸವಕ್ಕೂ ತಾವು ತಮ್ಮ ಮಿತ್ರ ಮಂಡಳಿಯೊಂದಿಗೆ ಬಂದು ಮಹಾಸ್ವಾಮಿಯ ಕೃಪೆಗೆ ಪಾತ್ರರಾಗಿ ಆನಂದವನ್ನು ಹೊಂದಿ ಸುಕೃತಭಾಜನರಾಗಬೇಕಾಗಿ ಹಾರೈಸುವ,

ಕಾರ್ಯದರ್ಶಿಗಳು,

ಮಠದ ಅಧ್ಯಕ್ಷರಾದ. ವೇ|| ಮರಿಬಸವಾರಾಧ್ಯರು,
ವಿಡಪನಕಲ್ಲು ಅರಿದ್ರಮಠದ ಮರಿಸ್ವಾಮಪ್ಪ.
ಕೋರಿ ಸೂಗೂರಪ್ಪ.

ಗಂಗಾತೀರ್ಥದ ದಿವ್ಯಶಕ್ತಿ, ಮತ್ತು ಸ್ವಚ್ಛತೆ.

(ಎ. ನಾರಾಯಣಮೇಥಾ, ಬಿ.ಎ., ಸಿ.ಇ., [redacted])

ಆರೋಗ್ಯಚಂದ್ರಿಕೆಯ ಮಾರ್ಚಿತಿಂಗಳ ಸಂಚಿಕೆಯಲ್ಲಿ, ಕುಂಭಕೋಣದ ಮಹಾಮಖೋತ್ಸವವನ್ನು ಕುರಿತು ಒಂದು ಲೇಖನವು ಬರೆಯಲ್ಪಟ್ಟಿದ್ದಿತು. ಅದರಲ್ಲಿ ಆ ಪುಣ್ಯತೀರ್ಥಗಳ ಪ್ರಭಾವವನ್ನು ಕುರಿತು ಒಂದೆರಡು ಮಾತುಗಳೂ ನನ್ನ ದೃಷ್ಟಿಗೆ ಬಿದ್ದಿತು. ಆದರೆ ಅದರಲ್ಲಿ ಆ ಗಂಗಾನದಿಯ ವಿಷಯವು ಬಹಳ ಸಂಗ್ರಹವಾಗಿದ್ದಿತು. ಅದೂ ನ್ಯಾಯವೇ! ಏಕೆಂದರೆ, ಅಲ್ಲಿ ಅದನ್ನು ~~ಕುರಿತು ವಿವರವಾಗಿ ಬರೆಯುವುದಕ್ಕೆ ಅವಕಾಶವಿಲ್ಲ~~ [redacted] ನದಿಯು ಹಿಮವತ್ಪರ್ವತದಲ್ಲಿ, ಗಿರಿಪ್ರಭಾತವೆಂಬ ಸ್ಥಳದಲ್ಲಿ ಉತ್ಪನ್ನವಾಗುವುದು. ಆ ಗಿರಿಪ್ರಭಾತವೆಂಬ ಸ್ಥಳವು ಸಮುದ್ರಮಟ್ಟಕ್ಕಿಂತ ೧೩೮೦೦ ಅಡಿಗಳ ಎತ್ತರದಲ್ಲಿರುವುದು. ಗಂಗಾನದಿಯು ಗೋಮುಖವೆಂಬ ಗುಡಿಯಿಂದ ಹೊರಗೆ ಬರುವುದು. ಈ ಗೋಮುಖಿಯು ಸಮುದ್ರಮಟ್ಟಕ್ಕೆ ಮೇಲೆ ೧೩೫೭೦ ಅಡಿಗಳ ಎತ್ತರದಲ್ಲಿರುವುದು. ಇದುವರೆಗೆ ಆ ಗುಹೆಯೊಳಗೆ ಯಾರೂ ಹೋಗಿ ನೋಡಿದುದಿಲ್ಲ. ಅದುದರಿಂದ ಗಂಗೆಯ ಉತ್ಪತ್ತಿಸ್ಥಾನವನ್ನು ಕುರಿತು ನಿಶ್ಚಯವಾಗಿ ಹೇಳುವುದು ಅಸಾಧ್ಯವೇ! ಇತರ ನದಿಗಳೆಲ್ಲವೂ ಊಟೆಗಳಿಂದ ಉತ್ಪತ್ತಿಯಾಗುವುವು. ಗಂಗಾನದಿಯು ಹಾಗಲ್ಲ. ಇದು ಪರ್ವತಗಳ ಮಾರ್ಗವಾಗಿ ಬರುವುದು. ಅದರ ಅಗಲವು ಅಲ್ಲಲ್ಲಿ ವ್ಯತ್ಯಾಸವಾಗಿರುವುದು. ಹರದ್ವಾರದಲ್ಲಿ ಅದರ ಅಗಲವು ಒಂದು ಮೈಲು ಮಾತ್ರವಿರುವುದು. ಅದರ ಉತ್ಪತ್ತಿಸ್ಥಾನದಿಂದ ಹರದ್ವಾರಕ್ಕೆ ೧೮೯ ಮೈಲುಗಳಿರುವುವು. ಇವೆರಡರ ಮಧ್ಯೆ ಇರುವ ಪುಣ್ಯಸ್ಥಲಕ್ಕೆ 'ತಪೋವನ' ವೆಂದು ಹೆಸರು. ಇಲ್ಲಿಯೇ ಶ್ರೀರಾಮಲಕ್ಷ್ಮಣರಿಬ್ಬರೂ ಭಗವಂತನನ್ನು ಪೂಜಿಸಿದರೆಂದು ಹೇಳುವರು. ಕಬೀರಾಚಾರ್ಯರೂ ಇಲ್ಲಿಯೇ ವಾಸವಾಗಿದ್ದರು. ಇಲ್ಲಿಯೇ ಶ್ರೀ ಶಂಕರಾಚಾರ್ಯರು ತಪಸ್ಸನ್ನು ಮಾಡಿ, ಭಗವದನುಗ್ರಹಕ್ಕೆ ಪಾತ್ರರಾದರು. ಅಲ್ಲಿಯೇ ಕೆಲವುಕಾಲಕ್ಕೆ ಹಿಂದೆ ಶ್ರೀರಾಮತೀರ್ಥರೆಂಬುವರು ಈ ವನದಲ್ಲಿ ಸಂಚರಿಸುತ್ತ, ಭಗವಂತನೊಡನೆ ಸಂಭಾಷಿಸಿದರೆಂದೂ ಹೇಳುವರು. ಹೀಗೆ ಈ ತಪೋವನದ ವಿಷಯವಾಗಿ ಅನೇಕ ವಿಶೇಷಗಳುಂಟು. ~~ಆದರೆ ಅವುಗಳನ್ನೆಲ್ಲಾ ಇಲ್ಲಿ ಹೇಳುವುದು ಪ್ರಕೃತೋಚಿತವಲ್ಲ.~~

ಗಂಗಾನದಿಯ ಜನನವನ್ನು ಕುರಿತು ಒಂದು ಪುರಾಣದ ಕಥೆಯುಂಟು. ೬೦,೦೦೦ ಮಂದಿ ಸಗರಪುತ್ರರು, ಕಪಿಲಋಷಿಯ ಶಾಪದಿಂದ ಭಸ್ಮವಾದರೆಂದೂ, ಅವನ ವಂಶದಲ್ಲಿ ಹುಟ್ಟಿದ ಭಗೀರಥನೆಂಬ ರಾಜನು ಮಹಾತಪಸ್ಸನ್ನು ಮಾಡಿ ಗಂಗೆಯನ್ನು ಸ್ವರ್ಗದಿಂದ ಭೂಲೋಕಕ್ಕೆ ತಂದನೆಂದೂ, ಶಿವನು ಗಂಗೆಯ ವೇಗವನ್ನು ತಗ್ಗಿಸುವುದಕ್ಕಾಗಿ ಅವಳನ್ನು ತನ್ನ ಜಡೆಯಲ್ಲಿ ಧರಿಸಿಕೊಂಡನೆಂದೂ, ಪುರಾಣದಲ್ಲಿ ಹೇಳಿದೆ.

ಇದು ಕೇಳುವವರಿಗೆ ಒಂದು ಕಟ್ಟುಕಥೆಯಂತೆ ತೋರಬಹುದಾದರೂ, ನನಗೇನೋ ಅವೆಲ್ಲ ವಾಸ್ತವವೆಂದೇ ನಂಬಿಕೆಯಿದೆ. ಇದನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ಬರೆಯುವರೇ ಹೊರತು ಬೇರೆಯಲ್ಲ.

ಗಂಗಾನದಿಯಲ್ಲಿ, ನಮ್ಮ ದೇಹಕ್ಕೆ ಸುಲಭವಾಗಿ ಅಂಟಬರಲಾರದ ಕೆಲವು ಗುಣಗಳುಂಟು. ಗಂಗಾನದಿಗೆ ವಿಷಹಾರಕಶಕ್ತಿಯುಂಟೆಂದೂ ಹೇಳುವರು. ಆ ಗುಣವು ಎಂತಹುದೆಂಬುದು ಮಾತ್ರ ಯಾರಿಗೂ ತಿಳಿಯದು. ಆ ಶಕ್ತಿಗೆ ಯಾರೂ ಯಾವ ಹೆಸರನ್ನೂ ಕೊಟ್ಟಿಲ್ಲ. ಈ ಗುಣವೇ ನಮ್ಮ ದೇಹದಲ್ಲಿ ಕರತುಕೊಳ್ಳುವುದು. ಇದು ಪರಶಿವನ ಜಡೆ ಮತ್ತು ಫಾಲನೇತ್ರಕ್ಕೆ ಸಂಬಂಧಪಟ್ಟ ಶಕ್ತಿಯೆಂದೂ ಹೇಳಬಹುದು. ~~ಇದು ಏನೆಂಬುದನ್ನು ಕುರಿತು ಸರಕಾರದವರೂ, ಪರಿಶೋಧನೆಗಳನ್ನು ಮಾಡುವವರೂ ನಿಜಾಂಶವನ್ನು ಕಂಡುಹಿಡಿಯಬೇಕಾದುದವಶ್ಯವು.~~

ಸ್ಪೈಯಿನ್ ಇಟಲಿ ಮುಂತಾದ ವಿದೇಶಗಳಲ್ಲಿ ನ್ಯಾಷನಲ್ ಬೋರ್ಡೆಂಬ ಸಂಘಗಳನ್ನು ಸ್ಥಾಪಿಸಿರುವರು. ಈ ಸಂಘವು ಅಲ್ಲಲ್ಲಿ ವಿಮರ್ಶೆಗಳನ್ನೂ, ಪರಿಶೋಧನೆಗಳನ್ನೂ ಮಾಡಿ ಆರೋಗ್ಯಕರವಾದ ತೀರ್ಥಗಳಾವುವೆಂಬುದನ್ನು ಪ್ರಕಟಿಸಿರುವರು. ಈಗ ಸ್ಪೈಯಿನ್‌ದೇಶವನ್ನು ಕುರಿತು ವಿಚಾರಿಸುವೆವು.

ಜೀರ್ಣಾಂಗ ಸಂಬಂಧವಾದ ರೋಗಗಳಿಗೆ—ಅಜೀರ್ಣದೋಷಗಳಿಗೂ, ಮತ್ತು ಒಳ್ಳೆಯ ಪೋಷಣೆಯಿಲ್ಲದಿರುವುದರಿಂದುಂಟಾಗುವ ಕೊರತೆಗಳಿಗೂ ತಕ್ಕ ತೀರ್ಥಗಳು—ಗ್ಯುಪಸ್‌ಕೋವಾವಿಗೆ ಸೇರಿದ ಸೆಸ್ಟೋನಾ ಅಲಾವಾ, ವಿನಲ್ಲಿ ಸೋಬ್ರಾರ್ನ ಎಂಬ ನದಿ, ಸಾಂಟಾಂಡರಲ್ಲಿರುವ ಸೊಲಾರೆಸ್ ಹೊಜಾಯಾ, ಕಾಟಲೋನಿಯಾದಲ್ಲಿರುವ ವೋಡಾರಿಜ್, ಗ್ರೈಟರಿಜ್, ವೆರ್ಗ, ಸ್ಯಾಬರೋವಾ, ಗಾಲ್ದಾಸ್‌ಡಿ ಮಾ ಲ ಬೆ ಲಾ. ವಾಲ್ಪೋಗೋನಾ ಮತ್ತು ಸಾರ್ ಹೆಲಾರಿಯೋ ಮುಂತಾದವು ವಾಲೆನ್ಸಿಯಾದಲ್ಲಿರುವ ಹರ್ಡೋರ್‌ಡಿ ಕನ್ಫ್ರಂಟಿಸ್ ಮತ್ತು ಅಂಟಿಸಿಯೆಂಟಿ, ಜೇಯನ್ನಿನಲ್ಲಿರುವ ಮರಾವೋಲೀಜೋ, ಕಾರ್ಡೋಬಾದಲ್ಲಿರುವ ಲಾಸ್‌ಡಿ ವಿಲಾಹಾರ್ಟ್, ಗ್ರಾನಡಾವಿನಲ್ಲಿರುವ ಲಾಂಜಾರ್ನ ಮುಂತಾದ ಪ್ರದೇಶಗಳು.

ಮೂತ್ರಕೋಶ ಮತ್ತು ಮೂತ್ರಪಿಂಡ ಇವುಗಳಿಗೆ ಸಂಬಂಧಪಟ್ಟ ವ್ಯಾಧಿಗಳಿಗೆ—ಬರ್ಗೋಸಿನಲ್ಲಿರುವ ಕರ್ಕಾಂಟೆ, ಗ್ಯುಪಸ್‌ಕೋವಾದಲ್ಲಿರುವ ಅಲ್ಜೋಲಾ, ನವರೇಯಲ್ಲಿರುವ ಬೆಲಸಾಯಿನ್ ಮುಂತಾದ ತೀರ್ಥಗಳು ಉತ್ತಮವಾದುವು.

ಶ್ವಾಸಕೋಶದ ವ್ಯಾಧಿಗಳಿಗೆ—ಹ್ಯೂಯೆಸ್ಕಾವಿನಲ್ಲಿರುವ ಪಾಂಟಿಕೋಸಾ, ಗ್ಯುಪಸ್‌ಕೋವಾದಲ್ಲಿರುವ ಪಾಂಟಿಕೋಸಾ, ಗ್ಯುಪಸ್‌ಕೋವಾದಲ್ಲಿರುವ ಅರ್ಚೊರಾಗಾ, ಸಾಂಟಾಂಡರಲ್ಲಿರುವ ಅಂಟೆನೀಡಾ ಮತ್ತು ಲಿಯೆಗಾರ್ನಿಸ್, ಅಲಾವಾದಲ್ಲಿರುವ ಜುವಾಜೋ, ಗಾಲಿಕಾದಲ್ಲಿರುವ ಕಾಲಡೀಟಸ್ ಡಿಟಾಯಿ, ನವಾರ್ರೆಯಲ್ಲಿರುವ ಬೆಟೆಲು, ಅವಿಲಾದಲ್ಲಿರುವ ಸ್ವಾಸ್‌ಟಿ ನಾ, ಮೂರ್ಸಿಯಾದಲ್ಲಿರುವ ಫಾರ್ಟ್ಯೂನಾ, ಮು ತಾದ ತೀರ್ಥಗಳಂತೆ ಉಷ್ಣವಾದ ಮತ್ತು ಗಂಧ ದಿಂದ ಕೂಡಿದ ತೀರ್ಥಗಳುಂಟು. ಅವುಗಳಿಂದ ಅ ಯನ್ನು ದೇಹದೊಳಕ್ಕೆ ತೆಗೆದುಕೊಳ್ಳುವುದೂ ಉಂಟು.

ಪಾರ್ಶ್ವವಾಯು ಮತ್ತು ಆರ್ಥ್ರೈಟಿಸ್ ವ್ಯಾಧಿ ಳಿಗೆ—ಇವುಗಳಿಗೆ ಅನೇಕವಾದ ಉಷ್ಣತೀರ್ಥಗಳನ್ನು ಉಪಯೋಗಿಸುವರು ಎಂದರೆ ವಿಜ್‌ಕೇಯಾದಲ್ಲಿರುವ ಮ್ಯಾಲಿನರ್‌ಡಿ ಕಾರ್ರಾಂಜಾ, ಸಾಂಟಾಂಡರಿನಲ್ಲಿರುವ ಕಾಲ್ಡಾಸ್‌ಡಿ ಬೆಸಾಯಾ, ಪ್ಯೂಎಂಟೇವೀಸ್‌ಗೋ ಮತ್ತು ಲಾಹರ್ಮಿಡಾ, ಗಾಲೀಷಿಯಾದಲ್ಲಿರುವ ಕಲ್ಡಾಸ್‌ಟಿ ಕಂಟಿಸ್, ಲ್ಯೂಗೋ, ಮತ್ತು ಮಾಲಾ ಸ್, ರಿಯೋಜಾದಲ್ಲಿರುವ ಅರ್ನೆಡಿಲ್ಲೋ ನವಾರೇ ಲ್ಲಿರುವ ಟಿಯರ್ಮಾಸ್, ಫೈಟೆರೋಸ್ಟ್ಯೂವೋ ಮತ್ತು ಫೈಟೆರೋವೈಜೋ, ಕಾಟಲೋನಿಯಾದಲ್ಲಿರು ಕಾಲ್ಡಾಸ್‌ಡಿ ಮಾಂಟ್‌ಬೈ, ಕಾಲ್ಡಾಸ್‌ಡಿ ಎಸ್ಟ್ರಾ ಟೈಟಸ್, ಮತ್ತು ಲಾಗಾರ್ರಿಗಾ, ಜಾರಾಗೋಜಾ ಲ್ಲಿರುವ ಅಲ್ಹಾಮಾಡಿ ಅರಗೋನಿಜರಾಬಾ, ಕಾಸರ ನಲ್ಲಿರುವ ಮಾಂಟೆಮೇಯರ್, ಸಾಲಮಾಂಕಾದಲ್ಲಿರು ಲಿಡೀಸ್ಮಾ, ಮತ್ತು ರಿಟೋರ್ಟಿಲ್ಲಾ, ಸಿಡ್ಯೂಡಾಡ್ ಯಲಿನಲ್ಲಿರುವ ಪ್ಯೂಎಂಟಿ. ಕಾಲಿಯೆಂಟಿ, ಕಾಸ್ಟೆಲ್ಲಾ ಸಿನಲ್ಲಿರುವ ವಿಲ್ಲವಾಜಡಿನ್ಯೂಲಿಸ್, ವಾಲೆನ್ಸಿಯಾ ಲ್ಲಿರುವ ಬೆಲ್ಲಸ್. ಮೂರ್ಷಿಯಾದಲ್ಲಿರುವ ಅರ್ಚೇನಾ ಮತ್ತು ಅಲ್ಹಾಮಾ, ಮತ್ತು ಗ್ರಾನಡಾದಲ್ಲಿರು ಅಲ್ಹಾಮಾಡಿಗ್ರಾನಡಾ ಮತ್ತು ಜೂಜಾರ್ ಮು ತಾದುವು.

ಗ್ರಹಣೀರೋಗಕ್ಕೆ ಮತ್ತು ಗಂಡಮಾಲೆಗೆ—ಗಾಲಿಷಿಯಾದಲ್ಲಿರುವ ಲಾಟೋಜಾ ಮತ್ತು ಆರ್ಟೀ ಜೋ. ವಿಜ್ಕೇಯಾದಲ್ಲಿರುವ ಎಲ್ಗೋರಿಯೇಜ ವಾಲಡಾಲಿಡ್ಡಿನಲ್ಲಿರುವ ಮೆಡಿನಾ ಡೆಲ್ [ಕಾಂಪೋ ಅರಗಾನಿನಲ್ಲಿರುವ ಪಾರಕ್ಯೂಲಾಸ್, ಗಾಡಲಾಜ ಲ್ಲಿರುವ ಟ್ರಿಲ್ಲೋ ಅಲ್ಲಿಕಾಂಟಿಯಲ್ಲಿರುವ ಚಿಕಾ ನ ಕಾಟಲೋನಿಯಾದಲ್ಲಿರುವ ಟೋನಾ ಮತ್ತು ಸಮುದ್ರ ತೀರದಲ್ಲಿರುವ ಮತ್ತು ಆರೋಗ್ಯಕರವಾದ ಟಾಲಸೋ ಟೆರೇಪಿಯಾ ಮುಂತಾದುವು.

ಚರ್ಮವ್ಯಾಧಿಗಳಿಗೆ—ಬಾಸ್ಕ್ ಪ್ರದೇಶದಲ್ಲಿರು ಅರ್ಮೆಯಾಜ್‌ಟೆಗುವಿ, ಅರೀಷಿವಾಲೆಟಾ, ಜಾ ವಾರ್ ಮತ್ತು ವಿಲ್ಲಾರೋ, ಕಾಟಲೋನಿಯಾದ ರುವ ಲಾಪ್ಯೂಡಾ, ಗಾಲಿಕಾದಲ್ಲಿರುವ ಕಾರ್ಬಲ್ಲೊ ಕಾರ್ಬಲ್ಲಿನೋ, ಕೋರ್ಟೆಗಾಡಾ, ರಿಯೋಜಾದಲ್ಲಿರು ಗ್ರಾವೆಲಾಸ್, ಲಿಯೂನಿನಲ್ಲಿರುವ ಬೋನಾರ್ ಸಾ ಟಾಂಡರಿನಲ್ಲಿರುವ ಅಲ್ಸೀಡಾ, ವಾಲೆನ್ಸಿಯಾದಲ್ಲಿರು ಪ್ಯೂಯೆಂಟೆಪಾಡ್ರಿಡಾ, ಬರ್ಗಾಸಿನಲ್ಲಿರುವ ಕ್ಯೂಟೆ ಮುಂತಾದ ತೀರ್ಥಗಳು ಉತ್ತಮವು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ.

೧ನೇ ಯಾತ್ರಾ ೧೬—೪—೩೩ ರಿಂದ ೧—೬—೩೩ ರ ವರೆಗೆ ಇಡೀ ಭರತಖಂಡದ ಯಾತ್ರೆಯನ್ನು ಮುಗಿ ಯಾತ್ರಿಕರಿಂದ ಬಹುಮಾನಪತ್ರಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

೨ ನೇ ಯಾತ್ರಾಪ್ರವಾಸ ತಾ|| ೧—೧೦—೧೯೩೩ ರಿಂದ ತಾ|| ೨೯—೧೧—೧೯೩೩ ಪೂರ ೬೦ ದಿವಸಗಳಲ್ಲಿ ಮುಂಬಯಿ, ದಿಲ್ಲಿ, ಶ್ರೀಕಾಶೀ, ಕಲ್ಕತ್ತಾ, ಮದ್ರಾಸ್, ರಾಮೇಶ್ವರ, ಲಂಕಾ ಮೊದಲಾ ಳಲ ಕ್ಷೇತ್ರಗಳ ಮಹಾಯಾತ್ರೆಯು. ಸೆಕಂಡ ಕ್ಲಾಸ್ ೩೧೦ ರೂ. ಥರ್ಡ ಕ್ಲಾಸ್ ೧೪೦ ರೂ. ಮಕ್ಕ ಅರ್ಧ ಚಾರ್ಜು. ಹೆಚ್ಚಿನ ವಿಷಯವಾಗಿ ಪತ್ರಿಕೆಗಳನ್ನು ಇಂದೇ ಪತ್ರ ಬರೆದು ತರಿಸಿಕೊಳ್ಳಿರಿ. ತಡಮಾಡಿ ಟಿಕೆಟ್ ಸಿಗಲಾರವು. ಏಜಂಟರಾಗಲಿಚ್ಛಿಸುವವರಿಗೆ ಯೋಗ್ಯ ಪಗಾರ ಮತ್ತು ಕಮಿಷನ ಕೊಡಲ್ಪಡುವ

ಸದರಿ ಕಂಪನಿಯು ಎಂಜಿನ್ ರೆಂಟೆಗಳಿಂದ ಪಡಜವಿಮಾನುಗಳು ಕಿರ್ದೀ ಮಾಡಿಕೊಡಲ್ಪಡುವ ಹೆಚ್ಚಿನ ಸಂಗತಿಯನ್ನು ಬರೆದು ತರಿಸಿಕೊಳ್ಳಬೇಕು. ಏಜಂಟರಾಗಲಿಚ್ಛಿಸುವವರು ತೀವ್ರ ಶ್ರೀ ಗೌರೀಶಂ ಕಂಪನಿಗೆ ತಿಳಿಸತಕ್ಕದ್ದು.

[16]

ಮೈಸೂರ್ ಏಜಂಟರು—

ದಿ ಯೂನಿವರ್ಸಲ್ ಟ್ರೇಡಿಂಗ್‌ಕಂಪೆನಿ,
(ಅಂಜನೇಯಸ್ವಾಮಿ ದೇವಸ್ಥಾನದ ಬಾಜು)
ಹಳೇಅಗ್ರಹಾರ, ಮೈಸೂರು.

ಜೆ. ಎ. ಶಿರೂರ,
ಆರ್ಗನಾಯಜರ,
ಶ್ರೀ ಗೌರೀಶಂಕರ ಕಂಪೆನಿ, ಹುಬ್ಬ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೀಸಭಸ್ಮ	೧	೦—೧೨—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ತ್ರಾಳಭಸ್ಮ	೧	೦—೮—೦
ಟಿಕಭಸ್ಮ	೧	೦—೮—೦
ಸ್ಪಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಕಭಸ್ಮ	೧	೩—೦—೦
ಕ್ತಾಭಸ್ಮ	೧	೪೦—೦—೦
ವಾಳಭಸ್ಮ	೧	೦—೮—೦
ಖಭಸ್ಮ	೧	೦—೪—೦
ಡಿಭಸ್ಮ	೧	೦—೪—೦
ಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ರಿ (೧ನೇ ನಂಬರ್)	೧	೫೦—೦—೦
ರಿ (೨ನೇ ನಂಬರ್)	೧	೪೦—೦—೦
ಜಿತ **ಸೂರ್ಯಪುಟ**	೧	೧—೦—೦
ಜಿತ ಅಗ್ನಿ **ಪುಟ**	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗ. ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಸಂಸ್ಥಾನದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿರುತ್ತಿರುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಮಾಡಬೇಕೆಂಬ ಉದ್ದೇಶದಿಂದ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಪ್ರಕಟಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವಾಗಿ ಕೊಡಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

[36]

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 5

ವಿಳಾಸ—**ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾರ್ ಅಂಡ್ ಸನ್
ರಬ್ಬರ್ ಮೊಹರು ಫ್ಯಾಕ್ಟರಿ
ಫೋಟೋ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಆರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟಿಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.

[38]

ಮಲೇರಿಯಾನ ಮಲೆಜ್ವರ ಸಂಹಾರಿಣೆ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇವರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಡಿಬ್ಬಿ ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಂಪುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1-8-0, 7-0-0

ಹೂಪಿಂಗ್ ಕಫ್ ರೆಮೆಡಿ—ಕಪ್ಪಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಡುಕೆಮ್ಮುಗಳಿಗೆ ಸಿದ್ಧೌಷಧ.

½ ಡಿಬ್ಬಿಗೆ 0-9-0, 1ಡಿಬ್ಬಿಗೆ ರೂ. 1-0-0.

ಶುದ್ಧ ಟಿಕ್ಚರುಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪಟ್ಟಿಕೆಗೆ ಬರೆಯಿರಿ. ಧನ್ವಂತರಿ.

ಕಂಪೌಂಡ್ ಸಿರಪು ಬ್ಲಟ—[illegible]

8 ಡಿಬ್ಬಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—[illegible] 'ಕಂಪೌಂಡು ಸಿರಪು ಫೋಸ್ಫರ' [illegible]

ಎಲ್ಲಾ ಕಡೆಗಳಲ್ಲಿ ಏಜೆಂಟರು ಬೇಕಾಗಿದೆ.

ಮಲೇರಿಯಾನ ಕಂಪೆನಿ,

(ಹಂಪನಕಟ್ಟೆ), 21, ಮಂಗಳೂರು.

[3]

8 ಡಿಬ್ಬಿಗೆ ರೂ. 3-8-0

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SHREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ಕಾಲದಲ್ಲಿ [illegible]

[illegible] 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

[illegible] ರಿಜಿಸ್ಟರಾದ ವ್ಯಾಪಾರದ ಗುರುತನ್ನು ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ (೫ನೆಯ ಆವೃತ್ತಿ)	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಶಿವಾಸೂತ್ರಸಿದ್ಧಾಂತದರ್ಪಣ	೧೨
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ಕೇನೋಪನಿಷತ್ (ವೀರಶೈವಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟಿಪ್ಪಣಿ)	೧
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೬×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪದ್ಮ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ...	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ

(Registered Trade Mark)

ಗಳನ್ನು ಕೊಟ್ಟಿ ರು. ಪ್ರಸಿದ್ಧವಾ ನಶ್ಯದ ಪುಡಿಯ ಸ್ವಸ್ಥವಾಗುವ ಧಿಗಳು ಯಾವ ರೆ:—ಪಿನಸಿ, ತಲೆನೋವು, ತ ಳ್ಳಿಯ ರೋಗ ಕಣ್ಣುಗಳಲ್ಲಿ ಉ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ಕಫ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರಭು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋ ಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ.
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[37] ಪೋ. ಬಾ. ೫೧೦, ಮದರ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಅಕ್ಟೋಬರ್ ೧೯೩೩ [ಸಂಚಿಕೆ ೨೩

ಮೈಸೂರು ಹೈಕೋರ್ಟಿನ ಚೀಫ್‌ಜಸ್ಟಿಸರಾದ ಶ್ರೀಮಾನ್ ಪಿ. ಮಹಾದೇವಯ್ಯನವರು.

(ಜಸ್ಟಿಸ್ ಪತ್ರಿಕೆಯ ಅನುವಾದ.)

ಶ್ರೀಮಾನ್ ಪಿ. ಮಹಾದೇವಯ್ಯನವರು 1875 ನೇ ಇಸವಿಯಲ್ಲಿ ಮೈಸೂರಿನಲ್ಲಿ ಒಬ್ಬ ಪ್ರಮುಖ ವೀರಶೈವರ ಮನೆತನದಲ್ಲಿ ಜನಿಸಿ, ತಮ್ಮ ಬಾಲ್ಯದಲ್ಲೇ ಅಸಾಧಾರಣ ಬುದ್ಧಿಶಕ್ತಿಯುಳ್ಳವರೆಂಬ ಚಿಹ್ನಗಳನ್ನು ಹೊರಗೆಡವಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದನಂತರ ಇವರು ಮೈಸೂರಿನ ಮಹಾರಾಜಾಕಾಲೇಜನ್ನು ಸೇರಿ ಎಫ್. ಎ. ಪರೀಕ್ಷೆಯಲ್ಲಿ ಮೊದಲನೇ ದರ್ಜೆಯಲ್ಲಿ ಸಂಸ್ಥಾನದಲ್ಲಿ 2ನೆಯವರಾಗಿ ಉತ್ತೀರ್ಣರಾದರು. ಆಗಿನ ಪ್ರಿನ್ಸಿಪಾಲರಾಗಿದ್ದ ಮಿ|| ವೀವರ್‌ರವರು ಇವರ ವಿದ್ಯಾಪ್ರೌಢಿಮೆಗೆ ಅತ್ಯಂತ ಸಂತೋಷಿಸಿದವರಾಗಿ, ಬಿ. ಎ. ಪರೀಕ್ಷೆಯ ಫಲಿತಾಂಶವು ತಿಳಿದುಬರುವದಕ್ಕೆ ಪೂರ್ವಭಾವಿಯಾಗಿಯೇ ಇವರನ್ನು ಒಬ್ಬ ಅಧ್ಯಾಪಕರನ್ನಾಗಿ ನೇಮಿಸಿದದಲ್ಲದೆ ಆದೇ ಬಿ. ಎ. ತರಗತಿಗೆ ಪಾಠವನ್ನು ಹೇಳುವಂತೆ ಗೊತ್ತುಮಾಡಿದರು.

ಮಹಾರಾಜಾಕಾಲೇಜಿನಿಂದ ಪದವೀಧರರಾದನಂತರ ಇವರು ಮದ್ರಾಸಿನ ಲಾಕಾಲೇಜನ್ನು ಸೇರಿ 1900ದಲ್ಲಿ ಬಿ. ಎಲ್. ಡಿಗ್ರಿಯನ್ನು ಪಡೆದರು. ಮದ್ರಾಸಿನಲ್ಲಿದ್ದಾಗ ಇವರು ಕನ್ನೆಮಾರಾ ಪುಸ್ತಕಭಂಡಾರದಲ್ಲಿದ್ದ ರಿಕಾರ್ಡುಗಳನ್ನೆಲ್ಲಾ ಹುಡುಕಿ ವೀರಶೈವಮತಕ್ಕೆ ಸಂಬಂಧಪಟ್ಟ ರಿಕಾರ್ಡುಗಳೆಲ್ಲವನ್ನೂ ಆಮೂಲಾಗ್ರವಾಗಿ ಪರಿಶೋಧಿಸಿದರು. ಕಾಯಿದೆಯ ಅಭ್ಯಾಸದ ಕಡೆಗೆ ವಿಶೇಷ ಗಮನವನ್ನು ಕೊಡಬೇಕಾಗಿದ್ದರೂ, ಇವರು ತಮ್ಮ ಮತಸಂಬಂಧವಾದ ಶೋಧನೆಯನ್ನು ಮಾತ್ರ ಬಿಡದೆ ಮುಂದುವರಿಸಿ, ತಮ್ಮ 26ನೇ ವಯಸ್ಸಿನಲ್ಲಿಯೇ ಆ ವಿಷಯದಲ್ಲಿ ಪೂರ್ಣ ಪಾಂಡಿತ್ಯವುಳ್ಳವರೆಂದು ಪ್ರಸಿದ್ಧಿಹೊಂದಿದರು. 1901ನೇ ಇಸವಿಯಲ್ಲಿ ಪ್ರಸಿದ್ಧಪಡಿಸಲ್ಪಟ್ಟ "ಸೆನ್ಸಸ್ ಆಫ್ ಇಂಡಿಯಾ ರಿಪೋರ್ಟ್" ಎಂಬ ಗ್ರಂಥದ ಸಂಬಂಧದಲ್ಲಿ ಇವರ ಸಲಹೆಯು ಕೇಳಲ್ಪಟ್ಟು ಆ ಸಂಬಂಧವಾಗಿ 24ನೇ ವಾಲ್ಯೂಮಿನ 530ನೇ ಪುಟದಲ್ಲಿ ಈ ರೀತಿಯಾಗಿ ಬರೆಯಲ್ಪಟ್ಟಿದೆ.—

"ಈ ಮುಂದೆ ಹೇಳಲ್ಪಟ್ಟಿರುವ ಟಿಪ್ಪಣಿಗಳು ಮೈಸೂರಿನ ಶ್ರೀ|| ಕರಿಬಸವಶಾಸ್ತ್ರಿಗಳು ಮತ್ತು ತುಮಕೂರಿನ ಶ್ರೀಮಾನ್ ಪಿ. ಮಹಾದೇವಯ್ಯನವರು, ಬಿ.ಎ.,ಬಿ.ಎಲ್., ಇವರಿಂದ ಒದಗಿಸಲ್ಪಟ್ಟ ವಿಷಯಗಳಿಂದ ಸಂಗ್ರಹಿಸಲ್ಪಟ್ಟಿರುವುವು. ಇವರೀರ್ವರೂ ವೀರಶೈವರಾಗಿದ್ದು ಈ ಮತದ ತತ್ವಸಂಬಂಧವಾಗಿ ಬಹು ಶ್ರಮವಹಿಸಿ ಶೋಧನೆಯನ್ನು ಮಾಡಿರುತ್ತಾರೆ. ಅದರಲ್ಲಿಯೂ ಎರಡನೆಯವರು ಈ ಕಾರ್ಯಕ್ಕಾಗಿ ಒಂದು ದೊಡ್ಡ ಪುಸ್ತಕಭಂಡಾರದಲ್ಲಿದ್ದ ಇಂಗ್ಲಿಷ್ ಮತ್ತು ದೇಶಭಾಷೆಯ ಗ್ರಂಥಗಳೆಲ್ಲವನ್ನೂ ಶೋಧಿಸಿರುತ್ತಾರೆ."

ಅಡ್ಡಪಲ್ಲಕ್ಕಿಲಾಯರು.

ಇವರು ತುಮಕೂರಿನಲ್ಲಿ ವಕೀಲವೃತ್ತಿಯನ್ನು ಪ್ರಾರಂಭಿಸಿ ಸ್ವಭಾವಸಿದ್ಧವಾಗಿ ತಮ್ಮಲ್ಲಿ ನೆಲೆಸಿದ್ದ ಬುದ್ಧಿಶಕ್ತಿಯಿಂದಲೂ, ಶ್ರಮಸಹಿಷ್ಣುತೆಯಿಂದಲೂ, ಅಲ್ಪಕಾಲದಲ್ಲಿಯೇ ಅಪಾರವಾದ ಕೀರ್ತಿಯನ್ನೂ ದ್ರವ್ಯವನ್ನೂ ಸಂಪಾದಿಸಿದರು. ಇವರ ಕೀರ್ತಿಯು ಧಾರವಾಡದ ವರೆಗೂ ವ್ಯಾಪಿಸಿತು. ಅನಂತರ ಇವರು ಶ್ರೀ ಮು[illegible]ಸ್ವಾಮಿಯವರ ಪ್ರಸಿದ್ಧವಾದ ಅಡ್ಡಪಲ್ಲಕ್ಕಿ ಮೊಕದ್ದಮೆಯಲ್ಲಿ ನ್ಯಾಯವಾದಿಗಳಾಗಿ, ಸದರಿ ಮೊಕದ್ದಮೆಯಲ್ಲಿ ಜಯ ಪಡೆದು ಕೀರ್ತಿವಂತರಾದರು. ಆದುದರಿಂದ ಇಂದಿನ ವರೆಗೂ ಆ ಪ್ರಾಂತದಲ್ಲಿ ಎಲ್ಲರೂ ಇವರನ್ನು "ಅಡ್ಡಪಲ್ಲಕ್ಕಿ ಲಾಯರ್" ಎಂದೇ ಕರೆಯುತ್ತಾರೆ. ಇದು ಮತ್ತು ಇನ್ನೂ ಹಲವು ಮೊಕದ್ದಮೆಗಳಲ್ಲಿ ಪಡೆದ ಜಯದಿಂದ ಇವರು ಅಸಾಧಾರಣವಾದ ಯಶಸ್ಸನ್ನು ಸಂಪಾದಿಸಲು, ಧಾರವಾಡದ ವೀರಶೈವರು ಇವರನ್ನು ಮುಂಬಯಿ ಅಧಿಪತ್ಯದಲ್ಲಿಯೇ ತಮ್ಮ ವಕೀಲವೃತ್ತಿಯನ್ನು ನಡೆಯಿಸಬೇಕೆಂದು ಅಪೇಕ್ಷಿಸಿದರು. ಆದರೆ ಮೈಸೂರು ತನ್ನ ಹಕ್ಕನ್ನು ಮುಂದುಮಾಡಿತು. ಗತಿಸಿದ ಶ್ರೀ|| ಕಂಬೂಶೆಟ್ಟರು ಇವರನ್ನು ಮೈಸೂರು ಸರಕಾರದ ನ್ಯಾಯಖಾತೆಗೆ ಸೇರುವಂತೆ ಪ್ರೋತ್ಸಾಹಿಸಿದರು. ಆಗ್ಗೆ ಇವರು ಅದರಿಂದ ತಮಗಾದ ಅಪಾರವಾದ ಆರ್ಥಿಕ ನಷ್ಟವನ್ನು ಪರಿಗಣಿಸದೆ ಒಪ್ಪಿಕೊಂಡರು. ಆ ಸಂದರ್ಭದಲ್ಲಿ ಶ್ರೀ|| ಕಂಬೂಶೆಟ್ಟರು, "ನಿಮ್ಮಂಥ ಕುಶಲಮತಿಗಳು ಸಂಸ್ಥಾನವನ್ನು ಬಿಟ್ಟು ಹೋಗಬಾರದು. ಒಂದಾನೊಂದು ದಿವಸ ನೀವು ಹೈಕೋರ್ಟ್ ಜಡ್ಜರಾಗುವಿರೆಂದು ನಾನು ದೃಢವಾಗಿ ಹೇಳಬಲ್ಲೆನು" ಎಂದು ಭವಿಷ್ಯವನ್ನು ಹೇಳಿದರು.

ನಾಜಿರ್ ಡಿಪಾರ್ಟ್‌ಮೆಂಟಿನವರ ನಾಟಕಕಂಪೆನಿ.

1905 ನೆಯ ಇಸವಿಯಲ್ಲಿ ಶ್ರೀಮಾನ್ ಪಿ. ಮಹಾದೇವಯ್ಯನವರು ಮುನಸೀಫರಾಗಿ ನೇಮಿಸಲ್ಪಟ್ಟರು. ವಕೀಲವೃತ್ತಿಯಲ್ಲಿದ್ದವರು ಇದಕ್ಕಿಂತಲೂ ಹೆಚ್ಚಿನ ಉದ್ಯೋಗವನ್ನು ಪಡೆಯುವ ಬಾಧ್ಯತೆಯನ್ನು ಹೊಂದಿರುವದಿಲ್ಲವೆಂದು ಭಾವಿಸಲ್ಪಟ್ಟಿರುವದು. ಆಕಾಂಕ್ಷಿತರಾಗಿದ್ದ ಈ ತರುಣರಿಗೆ ಈ ಉದ್ಯೋಗವೇನೂ ಸುಗಮವಾಗಿರಲಿಲ್ಲ. ಆದರೆ ಒದಗಿದ ಕಷ್ಟಪರಂಪರೆಗಳನ್ನೆಲ್ಲಾ ಇವರು ಧೈರ್ಯದಿಂದ ಎದುರಿಸಿ ಪರಿಹರಿಸಿದುದರಿಂದ ಉತ್ತರೋತ್ತರಕ್ರಮದಲ್ಲಿ ಇವರಿಗೆ ವಿಶೇಷ ಅನುಭವವುಂಟಾಗಿ ಅದರಿಂದ ಕಾಲಕ್ರಮದಲ್ಲಿ ಇವರಿಗೆ ಬಹಳ ಸಹಾಯವಾಯಿತು. ಇವರು ಸರಕಾರಿ ಉದ್ಯೋಗವನ್ನು ಕೈಕೊಂಡ ತರುವಾಯ ಎಡೆಹಳ್ಳಿಗೆ (ಇದಕ್ಕೆ ಈಗ ನರಸಿಂಹರಾಜಪುರವೆಂದು ಹೆಸರು) ವರ್ಗಾಯಿಸಲ್ಪಟ್ಟಾಗ ನಾಜಿರ್ ಡಿಪಾರ್ಟ್‌ಮೆಂಟಿನವರು ಒಂದು ನಾಟಕ ಕಂಪೆನಿಯನ್ನು ನಡೆಯಿಸುತ್ತಿದ್ದರು. ಈ ಕಂಪೆನಿಯ ಖರ್ಚುವೆಚ್ಚಗಳಿಗಾಗಿ ಕೋರ್ಟಿನ ಹಣವು ದುರುಪಯೋಗಪಡಿಸಲ್ಪಟ್ಟಿತ್ತು, ಮತ್ತು ರಾತ್ರಿಯ ಕಾಲದಲ್ಲಿ ಕೋರ್ಟಿನ ಕುರ್ಚಿ ಮತ್ತು ಬೆಂಚುಗಳು ನಾಟಕಕ್ಕೆ ಉಪಯೋಗಿಸಲ್ಪಡುತ್ತಿದ್ದುವು. ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನ ಅಮೀನರು ನಾಟಕದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ಶ್ರೀಮಾನ್ ಪಿ. ಮಹಾದೇವಯ್ಯನವರು ಈ ಅವ್ಯವಸ್ಥೆಗಳನ್ನು ಕ್ರಮಪಡಿಸಲು ಪ್ರಯತ್ನಪಟ್ಟಾಗ ಎಲ್ಲರೂ ಒಗ್ಗಟ್ಟಾಗಿ ಪ್ರತಿಭಟಿಸಿದರು. ಆಗ ಇವರು ಹಣಕಾಸಿನ ಜವಾಬ್ದಾರಿಯನ್ನು ಹೊಂದಿದ್ದ ನಾಜರನನ್ನು ಸಸ್ಪೆಂಡ್ ಮಾಡಿದರು. ಅವನು ತಲೆತಪ್ಪಿಸಿಕೊಂಡು ಹೋದನು. ಇದುವರೆಗೆ ಅವನ ಸುಳಿವೇ ಇಲ್ಲ. ಅನಂತರ ಇವರು ಡಿಸ್ಟ್ರಿಕ್ಟ್ ಜಡ್ಜರಿಗೆ ಪತ್ರವನ್ನು ಬರೆಯಲು, ಮುಖ್ಯಪಾತ್ರಧಾರನಾದ ಅಮೀನನೂ ಸಸ್ಪೆಂಡ್ ಮಾಡಲ್ಪಟ್ಟನು. ಅಮೇಲೆ ಒಂದು ಹೆಸರಿಲ್ಲದ ಕಾಗದವು ಬಂದಿತು. ಶ್ರೀಮಾನ್ ಪಿ. ಮಹಾದೇವಯ್ಯನವರು ಸದರಿ ಕಾಗದವನ್ನು ಬರೆದವನು ಸಸ್ಪೆಂಡ್ ಮಾಡಲ್ಪಟ್ಟಿದ್ದ ಅಮೀನನೇ ಎಂಬುದನ್ನು ಪತ್ತೆಮಾಡಿದರು. ಅನಂತರ ಅವನ ವಿಚಾರಣೆಯಾಗಿ ಶಿಕ್ಷೆಗೆ ಗುರಿಯಾದನು. ಆಗಿನ ಚೀಫ್ ಜಡ್ಜರಾಗಿದ್ದ ಮಿ|| ಎ. ಇ. ಸ್ಟೀಲಿಯವರು ಇದರಿಂದ ಬಹಳ ಸಂತೋಷಭರಿತರಾಗಿ ನ್ಯಾಯಖಾತೆಯಲ್ಲಿ ಖಾಲಿಬೀಳಬಹುದಾದ ಮೊದಲನೆಯ ಕಾಯಂಸ್ಥಾನವನ್ನು (ಇತರರ ಹಕ್ಕು ಬಾಧ್ಯತೆಗಳಾವುದನ್ನೂ ಗಮನಿಸದೆ) ಶ್ರೀಮಾನ್ ಮಹಾದೇವಯ್ಯನವರಿಗೆ ಕೊಡತಕ್ಕದ್ದೆಂದು ಅಪ್ಪಣೆಮಾಡಿದರು.

ಅನಂತರ ಶ್ರೀಮಾನ್ ಪಿ. ಮಹಾದೇವಯ್ಯನವರು ಬೇರೆಬೇರೆ ಊರುಗಳಲ್ಲಿ ಹಿಂದಿನ ಮುನ್ಸೀಫರುಗಳಿಂದ ಕ್ರಮಪಡಿಸಲು ಆಗದೆ ಇದ್ದ ಅವ್ಯವಸ್ಥೆಗಳನ್ನು ಕ್ರಮಪಡಿಸುವದಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸಲ್ಪಡುತ್ತಿದ್ದರು. ಆ ಸ್ಥಳಗಳಲ್ಲಿ ಇವರು ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಪತ್ತೆಮಾಡಿ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಸೇಡು ತೀರಿಸಬೇಕೆಂಬ ಮನೋಭಾವದಿಂದಲ್ಲ! ತಪ್ಪು ಮಾಡುವವರೆಂದರೆ ಅವರಿಗೆ ಎಂದೂ ಸಹಿಸುತ್ತಿರಲಿಲ್ಲ. ತಮ್ಮ ಬುದ್ಧಿಶಕ್ತಿಯಿಂದ ಅದನ್ನು ಪತ್ತೆಮಾಡಿ ರುಜುವಾತುಗಳಿಂದ ಸಿದ್ಧಮಾಡಿ ತೋರಿಸುತ್ತಿದ್ದರು.

ಶ್ರೀರಂಗಪಟ್ಟಣದಲ್ಲಿ ಕೆಲಸವು ಬಹಳವಾಗಿ ಉಳಿದುಕೊಂಡಿದ್ದು, ಫ್ರೈಸ್ ಡಿಪಾರ್ಟ್‌ಮೆಂಟಿನ ವಿದ್ಯಮಾನಗಳಂತೂ ಅತ್ಯಂತ ಮೋಸಕರವಾಗಿದ್ದುವು. ಇದಕ್ಕಾಗಿ ಮತ್ತೊಂದು ಕೋರ್ಟನ್ನೇ ಸ್ಥಾಪಿಸಬೇಕಾದುದು ಅವಶ್ಯಕವೆಂದು ಭಾವಿಸಲ್ಪಟ್ಟಿತ್ತು. ಈ ಹೆಚ್ಚಿನ ಖರ್ಚನ್ನು ತಪ್ಪಿಸಲು ಸಾಧ್ಯವೇ ಎಂಬುದನ್ನು ಪರೀಕ್ಷಿಸಲು ಶ್ರೀಮಾನ್ ಮಹಾದೇವಯ್ಯನವರು ಅಲ್ಲಿಗೆ ವರ್ಗಾಯಿಸಲ್ಪಟ್ಟರು. ಅನೇಕ ವರ್ಷಗಳಿಂದ ಕೂಡಿಕೊಂಡಿದ್ದ ಕೆಲಸವು 12 ತಿಂಗಳುಗಳಲ್ಲಿ ಪೂರೈಸಲ್ಪಟ್ಟಿತು. ಫ್ರೈಸ್ ಡಿಪಾರ್ಟ್‌ಮೆಂಟು ಉತ್ತಮಸ್ಥಿತಿಗೆ ಬಂದಿತು ಮತ್ತು ಅದರಿಂದ ನ್ಯಾಯಖಾತೆಯ ಗೌರವವೂ ಹೆಚ್ಚಿತು.

ಹೊಳೆನರಸೀಪುರವು ಅನೇಕ ವಿರೋಧಪಂಗಡಗಳಿಂದ ಕೂಡಿದ್ದು, ನ್ಯಾಯಸ್ಥಾನದ ಗೌರವವು ಅಲ್ಪವಾಗಿತ್ತು. ಇಂಥ ಕಾಲದಲ್ಲಿ ಶ್ರೀಮಾನ್ ಮಹಾದೇವಯ್ಯನವರು ಅಲ್ಲಿಗೆ ವರ್ಗಾಯಿಸಲ್ಪಟ್ಟರು. ಇವರು ಅಲ್ಲಿಗೆ ಹೋದ ಅಲ್ಪಕಾಲದಲ್ಲಿಯೇ ಎಲ್ಲಾ ಪಂಗಡದವರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿದ್ದಲ್ಲದೆ ಎಲ್ಲರಿಗೂ ತಮ್ಮಲ್ಲಿ ನಂಬುಗೆಯುಂಟಾಗುವಂತೆ ಮಾಡಿದರು. ಇವರು ಆ ಊರನ್ನು ಬಿಟ್ಟು ಹೊರಡುವ ಕಾಲಕ್ಕೆ ಆ ಊರಿನ ವೈದಿಕಬ್ರಾಹ್ಮಣರೆಲ್ಲರೂ ಇವರನ್ನು ವ್ಯಾಸರಾಯಮಠಕ್ಕೆ ಆಹ್ವಾನಿಸಿ ಮರ್ಯಾದಿಸಿದರು. ತಮ್ಮ ಕರ್ತವ್ಯವನ್ನು ನಿರ್ವಹಿಸುವದರಲ್ಲಿ ಇವರು ಬಹು ಜಾಗ್ರತರಾಗಿದ್ದರು. ಇವರು ಶಿರಸ್ತೇದಾರರಿಗೆ ಚಾರ್ಜನ್ನು ವಹಿಸಿದನಂತರ 4 ಮೈಲುಗಳ ದೂರ ಪ್ರಯಾಣಮಾಡಿದ್ದವರು ಇದ್ದಕ್ಕಿದ್ದಹಾಗೆ ಹೊಳೆನರಸೀಪುರಕ್ಕೆ ಹಿಂತಿರುಗಿ ಕೋರ್ಟಿನ ಲೆಕ್ಕದ ಪುಸ್ತಕಗಳನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಮೊಹರುಮಾಡಿ, ತಮ್ಮನಂತರ ಕೆಲಸಕ್ಕೆ ಬರುವ ಅಧಿಕಾರಿಯೇ ಕಬ್ಬಿಣದ ಪೆಟ್ಟಿಗೆಯನ್ನು ತೆರೆಯಬೇಕೆಂದು ಕಾಗದವನ್ನು ಬರೆದಿಟ್ಟು ಹೋದರು. ಮುಂದೆ ಲೆಕ್ಕಗಳನ್ನು ಹೆಚ್ಚು ಕಡಿಮೆ ಮಾಡುವ ಪ್ರಯತ್ನಗಳು ನಡೆದಾಗ, ಇವರ ದೂರದರ್ಶಿತ್ವವು ಗೋಚರಕ್ಕೆ ಬಂದಿತು.

ಶ್ರೀಮಾನ್ ಪಿ. ಮಹಾದೇವಯ್ಯನವರು ಸಬಾರ್ಡಿನೇಟ್ ಜಡ್ಜರಾಗಿದ್ದಾಗ 'ಮೈಸೂರ್ ಲಾಸ್ ಡಿಲೇಸ್ ಕಮಿಟಿ'ಗೆ ಸಬಾರ್ಡಿನೇಟ್ ಜಡ್ಜರುಗಳ ಪರವಾಗಿ ಮೆಂಬರರಾಗಿ ನೇಮಿಸಲ್ಪಟ್ಟರು. ಇವರು ಆ ಕಮಿಟಿಯ ಕಾರ್ಯಕಲಾಪಗಳಿಗೆ ಅಮೂಲ್ಯವಾದ ಸಲಹೆಗಳನ್ನು ಕೊಟ್ಟದ್ದಲ್ಲದೆ, ಮುನ್ಸೀಫರುಗಳನ್ನು ನೇಮಕ ಮಾಡುವ ವಿಷಯದಲ್ಲಿ ಒಂದು ಸ್ಪರ್ಧೆಯನ್ನು ಏರ್ಪಡಿಸಬೇಕೆಂದು ಬಂದಿದ್ದ ಸಲಹೆಯನ್ನು ಸಕಾರಣವಾಗಿ ಖಂಡಿಸಿದರು. ಅದರಲ್ಲಿ ಇವರು ಮೊಕದ್ದಮೆಗಳನ್ನು ಕ್ಷಿಪ್ರವಾಗಿಯೂ ನ್ಯಾಯಸಮ್ಮತವಾಗಿಯೂ ಇರುವಂತೆ ತೀರ್ಮಾನಿಸಬೇಕಾದರೆ ಅವಶ್ಯಕವಾದ ಗುಣಗಳನ್ನು ಚೆನ್ನಾಗಿ ವಿಮರ್ಶಿಸಿ, ಸದರಿ ಗುಣಗಳನ್ನು ಕೇವಲ ಪರೀಕ್ಷೆಯಿಂದಲೇ ನಿರ್ಧರಿಸುವದು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಿರುವರು.

1929 ನೆಯ ಇಸವಿಯಲ್ಲಿ ಸರಕಾರದವರು ಇವರನ್ನು ಲೀಗಲ್ ರಿಮೆಂಬ್ರೆನ್ಸರ್ ಮತ್ತು ಲಾ ಸೆಕ್ರೆಟರಿಯನ್ನಾಗಿ ನೇಮಿಸಿದರು. ಆ ಅಧಿಕಾರದಲ್ಲಿ ಇವರು ಗಂಧದ ಎಣ್ಣೆ ಮೊಕದ್ದಮೆ ಮತ್ತು ರಾಜದ್ರೋಹದ ಮೊಕದ್ದಮೆ ಈ ಎರಡು ಮುಖ್ಯವಾದ ಮೊಕದ್ದಮೆಗಳನ್ನು ನಡೆಸಿದರು. ಈ ಎರಡು ಮೊಕದ್ದಮೆಗಳಲ್ಲಿಯೂ ಬಹಳ ಎಚ್ಚರಿಕೆಯಿಂದ ಕೆಲಸಮಾಡಬೇಕಾದದ್ದು ಅವಶ್ಯಕವಾಗಿತ್ತು. ಮೊದಲನೆಯ ಮೊಕದ್ದಮೆಯಲ್ಲಿ ಸರಕಾರದ 9 ಲಕ್ಷ ರೂಪಾಯಿಗಳು ಬಹಳ ಬುದ್ಧಿವಂತಿಕೆಯಿಂದ ಅಪಹರಿಸಲ್ಪಟ್ಟಿದ್ದುವು. ಶ್ರೀಮಾನ್ ಮಹಾದೇವಯ್ಯನವರು ಅಪಾರವಾದ ಕಾಗದಪತ್ರಗಳನ್ನೂ ಮತ್ತು ಕೊಡಲಾದ ಚೆಕ್ಕುಗಳನ್ನೂ ಪರಿಶೀಲಿಸಿ, ಕಡೆಯಲ್ಲಿ ಅದರಲ್ಲಿರುವ ಮೋಸದ ಭಾಗವನ್ನು ಹೊರಗೆಡವಿ ಅಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಿದರು. ಈ ಎರಡು ಮೊಕದ್ದಮೆಗಳಿಂದ ಇವರಿಗೆ ಸರ್ಕಾರದಲ್ಲಿ ಗೌರವವು ಬಹಳವಾಗಿ ಹೆಚ್ಚಿತು.

[5ನೇ ಪುಟವನ್ನು ನೋಡಿ]

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ರುದ್ರಾಭಿಷೇಕ ಮತ್ತು ಗಣಾರಾಧನ ಮಹೋತ್ಸವ.

ಹರಪನಹಳ್ಳಿ.

೨೮-೮-೩೩ ನೇ ಭಾದ್ರಪದ ಶುದ್ಧ ೮ ಸೋಮವಾರ ಹರಪನಹಳ್ಳಿ ಶ್ರೀ ಗೇಟಿನ ಬಸವೇಶ್ವರದೇವರಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ಬಹಳ ವಿಜೃಂಭಣೆಯಿಂದ ನಡೆಯಿತು. ವೇ|| ತೆಗ್ಗಿನಮಠದ ಚನ್ನವೀರಪ್ಪಯ್ಯನವರು ಮ|| ರಾ|| ಬಂಕಾಪುರದ ಕೋಟಪ್ಪನವರು, ಗೊಂಗಡಿ ಕೊಟ್ರಪ್ಪನವರು, ಬಂಕಾಪುರದ ಹನುಮಂತಪ್ಪನವರು, ಮುದುಗಲ್ಲ ಹನುಮಂತಪ್ಪನವರು, ಶೆಟ್ರ ಶಿವಪ್ಪಶೆಟ್ರು ಮೊದಲಾದವರು ಅತ್ಯಂತ ಅನಲವಿಕೆಯಿಂದ ಸರ್ವಸಂಭಾರಗಳನ್ನು ಸಿದ್ಧಪಡಿಸಿ ಒಂದು ದಿವಸ ಮುಂಚಿತವಾಗಿ ಗುರುಮಠಗಳಿಗೆ ಬಿನ್ನೈಸಿಕೊಂಡು ಸರ್ವ ಭಕ್ತಮಂಡಲಿಯವರಿಗೆ ಆಹ್ವಾನವನ್ನಿತ್ತಿದ್ದರು. ಇದೇ ಗ್ರಾಮದ ಗುರುಪಾದದೇವರ ಮಠದ ಪಟ್ಟದ ಗುರುಪಾದಸ್ವಾಮಿಗಳು, ತೆಗ್ಗಿನಮಠದ ಪಟ್ಟದ ಚಂದ್ರಶೇಖರಸ್ವಾಮಿಗಳು, ಸರ್ವಭಕ್ತಮಂಡಲಿಯವರು ಸಕಾಲಕ್ಕೆ ಆಗಮಿಸಿದರು. ಆ ದಿವಸ ಪ್ರಾತಃಕಾಲ ಆರು ಘಂಟೆಯ ಸಮಯಕ್ಕೆ ಶ್ರೀ ಬಸವೇಶ್ವರದೇವರ ಉತ್ಸವಮೂರ್ತಿಯು ಮೇಗಳಪೇಟೆಯಿಂದ ಉತ್ಸವದೊಡನೆ ಹೊಂಟಿತು. ಪ್ರತಿಯೊಂದು ಮನೆಯಲ್ಲಿಯೂ ಸ್ತ್ರೀಪುರುಷರು ಸ್ನಾನಪೂಜಾದಿಗಳಿಂದ ಪುನೀತರಾಗಿ ಉತ್ಸವಮೂರ್ತಿಯ ಆಗಮನವನ್ನೇ ನಿರೀಕ್ಷಿಸಿಕೊಂಡು ತಮ್ಮ ತಮ್ಮ ಮನೆಯ ಬಾಗಿಲಲ್ಲಿ ಕಾದಿದ್ದು ಶ್ರೀ ಉತ್ಸವಮೂರ್ತಿಗೆ ಫಲಪುಷ್ಪ ಸಮರ್ಪಣೆಮಾಡಿ ತಾವೂ ಉತ್ಸವಭಾಗಿಗಳಾಗಿ ನಡೆಯುತ್ತಿದ್ದರು. ಉತ್ಸವಮೂರ್ತಿಯು ಪ್ರಾತಃಕಾಲ ಎಂಟು ಘಂಟೆಗೆ ದೇವಸ್ಥಾನವನ್ನು ತಲ್ಪಿತು. ಕೂಡಲೆ ಭಕ್ತಮಾಹೇಶ್ವರರೆಲ್ಲಾ ಶ್ರೀ ರುದ್ರಾಭಿಷೇಕ ದರ್ಶನಾಪೇಕ್ಷಿತರಾಗಿ ಸಮೀಪದಲ್ಲಿರುವ ಹಳ್ಳದಲ್ಲಿ ಪ್ರತಿಯೊಬ್ಬರೂ ಸಚೇಲಸ್ನಾನಮಾಡಿಕೊಂಡು ದೇವಸ್ಥಾನದಲ್ಲಿ ಕಿಕ್ಕಿರಿಯುವಂತೆ ನೆರೆದಿದ್ದರು. ಕೂಡಲೆ ಹರಪನಹಳ್ಳಿ ಗುರುಪಾದದೇವರ ಮಠದ ಪಟ್ಟದಸ್ವಾಮಿಗಳು ರುದ್ರಾಭಿಷೇಕವನ್ನು ಪ್ರಾರಂಭಿಸಿದರು. ಹನ್ನೆರಡು ಘಂಟೆಗಳವರೆಗೂ ರುದ್ರಾಭಿಷೇಕವು ಅವಿಚ್ಛಿನ್ನವಾಗಿ ನಡೆಯಿತು. ಅನಂತರ ಮಂಗಳವಾದ ಮೇಲೆ ಆಗಮಿಸಿದ ಗಣಸಮೂಹಕ್ಕೆ ಅನ್ನಸಂತರ್ಪಣೆಯಾಯಿತು. ಈ ದೇವಸ್ಥಾನವು ಊರಿಗೆ ಒಂದು ಮೈಲು ದೂರದಲ್ಲಿ ರೋಡಿನ ಪಕ್ಕದಲ್ಲಿಯೇ ಇರುವದರಿಂದ ಅರಣ್ಯಪ್ರದೇಶಭೋಜನದ ಸುಖವನ್ನು ವರ್ಣಿಸಲಸದಳವಾಗಿದ್ದಿತು. ಆ ದಿವಸ ಆ ಮಾರ್ಗವಾಗಿ ಕಾಲ್ನಡಗೆಯಿಂದಲೂ, ಬಂಡಿಗಳಿಂದಲೂ, ಮೋಟಾರುಗಳಿಂದಲೂ ಪ್ರಯಾಣ ಮಾಡುವ ಜನರೆಲ್ಲರೂ ಆಹ್ವಾನಿತರಾಗಿ, ಆಗಮಿಸಿ ಭೋಜನವನ್ನು ಮಾಡಿಕೊಂಡು ಪ್ರಯಾಣಮಾಡುತ್ತಿದ್ದರು. ಆ ದಿವಸ ಒಟ್ಟಿನಮೇಲೆ ಎರಡುಸಾವಿರಜನರ ಸಂತರ್ಪಣೆಯಾಯಿತು. ಮ|| ರಾ|| ಉಲ್ಲತ್ತಿ ಪಕ್ಕೀರಪ್ಪನವರು ಬಹಳ ಕಳಕಳಿಯಿಂದ ಜನರ ಉಪಚಾರದಲ್ಲಿ ನಿರತರಾಗಿದ್ದುದು ಸ್ತೋತ್ರಾರ್ಹವಾಗಿದೆ. ಮ|| ರಾ|| ಬಂಕಾಪುರದ ಕೋಟಪ್ಪನವರು ಈ ಅಭಿಷೇಕಾರಾಧನೆಯಾಗುವದಕ್ಕೆ ಮೂಲಕಾರಣರು. ಇವರು ಮಠದಲ್ಲಿ ವೈಶ್ಯರು. ಆದರೂ ಇವರಿಗೆ ಮಾಹೇಶ್ವರರಲ್ಲಿರುವ ಭಕ್ತಿಯನ್ನು ವರ್ಣಿಸಲು ಸಾಧ್ಯವಿಲ್ಲ. ಈ ಭಕ್ತಿಯು ಇವರ ತಲೆಯಿಂದಲೇ ಉಂಟಾದದ್ದಲ್ಲ; ಇವರ ಅಜ್ಜಮುತ್ತಜ್ಜರು ಇದೇರೀತಿ ಜಂಗಮಭಕ್ತಿ ನಿರತರಾಗಿ ನಡೆದುಕೊಂಡು ಬಂದಿರುತ್ತಾರೆಂಬ ವಿಷಯವು ಹೊಸದಲ್ಲ. ಇವರ ಮನೆದೇವರು ಕೊಟ್ಟೂರು ಗುರುಬಸವೇಶ್ವರನಾದ್ದರಿಂದ ಇವರು ಜಂಗಮಭಕ್ತರಾಗಲು ಕಾರಣವಾಗಿದೆ. ಆದ್ದರಿಂದ ಶ್ರೀ ಕೊಟ್ಟೂರೇಶನು ಇವರಿಗೆ ಇದಕ್ಕಿಂತಲೂ ಅತಿಶಯವಾದ ಜಂಗಮಭಕ್ತಿಯನ್ನೂ ಆಯುರಾರೋಗ್ಯಭಾಗ್ಯವನ್ನೂ ದಯಪಾಲಿಸಿ ಪ್ರತಿಸಂವತ್ಸರವೂ ಇದರಂತೆ ರುದ್ರಾಭಿಷೇಕಗಣಾರಾಧನೆಯಲ್ಲಿ ಮುಂದಾಳಾಗುವ ಮನಸ್ಸನ್ನು ದಯಪಾಲಿಸಲೆಂದು ಬೇಡುತ್ತೇನೆ. ರುದ್ರಾಭಿಷೇಕವು ಮುಗಿದನಂತರ ಪಂಚಾಚಾರ್ಯ ಪ್ರಭಾ ಪೋಷಣೆಗಾಗಿ ಒಂದು ರೂಪಾಯಿಯು ತೆಗೆಯಿಸಲ್ಪಟ್ಟು ವೇ|| ತೆಗ್ಗಿನಮಠದ ಚನ್ನವೀರಪ್ಪಯ್ಯನವರ ವಶಕ್ಕೆ ಕೊಡಲ್ಪಟ್ಟಿತು.

ಅಂಬಲಿ ದೊಡ್ಡಭರಮಪ್ಪ. ಹರಪನಹಳ್ಳಿ.

ದಕ್ಷಿಣಕಾಶೀಕ್ಷೇತ್ರವಾದ ಮುಡುಕುತೊರೆ
ಶ್ರೀಮಲ್ಲಿಕಾರ್ಜುನಸ್ವಾಮಿಯವರ ಕೋಪಿನಲ್ಲಿ

ಕುಲಾಲಗುಂಡಬ್ರಹ್ಮಯ್ಯನವರ ಕಿಂಕರರು ಮಾಡಿರುವ ಸೇವೆ.

ಶ್ರೀ ಜಗದ್ಗುರುವಿನ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಜನ್ಮಿಸಿರುವ ಪ್ರಾಣಿಗಳಲ್ಲೆಲ್ಲಾ "ಜಂತೂನಾಂ ನರಜನ್ಮ ದುರ್ಲಭಂ" ಎಂಬಂತೆ ನರಜನ್ಮವೇ ಬಹಳ ಶ್ರೇಷ್ಠತೆಯನ್ನು ಹೊಂದಿರತಕ್ಕ ಜನ್ಮವೆಂದು ಸರ್ವಶ್ರುತವಾಗಿದೆ ಆದರೆ ತಾಯಿಯ ಜಠರದಿಂದ ಉದ್ಭವಿಸಿದ ಮಾತ್ರಕ್ಕೆ ಶ್ರೇಷ್ಠತರವಾದ ಜನ್ಮವೆಂದು ಎಣಿಸಲಿಕ್ಕಾಗದು. "ಪರೋಪಕಾರಾರ್ಥಮಿದಂ ಶರೀರಂ" ಎಂಬಂತೆ ಪರೋಪಕಾರ, ದೇಶಸೇವೆ, ರಾಜಭಕ್ತಿ, ದೈವಸೇವೆ, ಪ್ರಾಣಿದಯೆ, ಪುರಾಣಕಥಾಸಕ್ತಿ ಮೊದಲಾದ ಸದ್ಗುಣಗಳಿಂದ ಪರಿಶೋಭಿಸುತ್ತಿರುವಾತನ ಜನ್ಮವೇ ಸುಜನ್ಮವು. ಇದರಂತೆ ಕುಲಾಲಗುಂಡಬ್ರಹ್ಮಯ್ಯನವರ ಕಿಂಕರರಾದ ಮಳವಳ್ಳಿ ತಾ|| ಕೊಡಗಳ್ಳಿಗ್ರಾಮದ ಕುಲಾಲ ಕುಲದ ಯಜಮಾನರು ಮ|| ಬಸವಶೆಟ್ಟರು, ಮ|| ಪುಟ್ಟಮ್ಮನ ಮುದ್ದಪ್ಪನವರು, ಟಿ. ನರಸೀಪುರದ ತಾ|| ತಲಕಾಡು ಯ|| ಮ|| ಪುಟ್ಟಶೆಟ್ಟರು, ಮ|| ಮಾದಶೆಟ್ಟರು, ರಾಚಶೆಟ್ಟರು ಮೊದಲಾದವರು ಮೇಲ್ಕಂಡ ಸೇವೆಯನ್ನು ಮಾಡುವುದಕ್ಕೆ ಆಲೋಚಿಸಿ ಗ್ರಾಮಾಂತರಗಳಲ್ಲಿರತಕ್ಕ ಕುಲಸ್ಥರನ್ನು ಸಭೆ ಸೇರಿಸಿ ಅವರಿಂದ ಅನುಮತಿಯನ್ನು ಪಡೆದು ದೇಹಸೌಖ್ಯವನ್ನು ಎಣಿಸದೆ ತಮ್ಮ ಕಾರ್ಯಗಳಲ್ಲಿ ಇದೊಂದು ಮುಖ್ಯವಾದ ಕಾರ್ಯವೆಂದು ನಂಬಿ ಮೈಸೂರು, ಚಾಮರಾಜನಗರ, ಮಳವಳ್ಳಿ, ಬನ್ನೂರು, ಸೋಸಲೆ, ಧನಗೇರಿ, ಪಾಳ್ಯ, ಯಳಂದೂರು, ಹೆಮ್ಮಿಗೆ ಮೊದಲಾದ ಗ್ರಾಮಗಳಿಗೆ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ಹೆಸರಿನ ಮೇಲೆ ಗೋಲಕವನ್ನು ತೆಗೆದುಕೊಂಡುಹೋಗಿ ಅವರು ಭಕ್ತಿಪೂರ್ವಕವಾಗಿ ಅರ್ಪಿಸಿದ ಚಂದಾ ಮೊಬಲಗನ್ನು ಶೇಖರಿಸಿ ತಮ್ಮ ಭಕ್ತಿಯಿಂದ ಮೇಲ್ಕಂಡ ಕೋಪಿನಲ್ಲಿ ಸುಮಾರು ಎರಡು ಸಾವಿರ ರೂಪಾಯಿಗಳ ಅಂದಾಜುಳ್ಳ ಒಂದು ಶಿಲಾಮಂಟಪವನ್ನು ಸ್ಥಾಪಿಸಿರುತ್ತಾರೆ. ಇದರ ಹಿಂಭಾಗದಲ್ಲಿ ಒಂದು ಕಾಂಪೌಂಡನ್ನು ಕಟ್ಟಿಸಿ ಒಳಗಡೆ ಬಾವಿಯನ್ನೂ ಸಹ ತೆಗೆಸಿರುತ್ತಾರೆ. ಮಂಟಪಕ್ಕೆ ಆಗಬೇಕಾದ ಗೋಪುರವೇ ಮೊದಲಾದ ಕೊಂಚ ಕೆಲಸವನ್ನು ನಿಲ್ಲಿಸಿರುತ್ತಾರೆ. ಇದನ್ನೂ ಸಹ ಕ್ಷಿಪ್ರದಲ್ಲಿಯೇ ಪೂರೈಸುವ ಸಹಾಯವನ್ನು ಶ್ರೀ ಮಲ್ಲಿಕಾರ್ಜುನನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಇಂಥ ಮಂಟಪದಲ್ಲಿ ವರ್ಷಕ್ಕೊಮ್ಮೆ ಜರುಗುವ ಗಿರಿಜಾಕಲ್ಯಾಣ ಮಹೋತ್ಸವ ಕಾಲದಲ್ಲಿ ಕುಲಮಹನೀಯರೆಲ್ಲರೂ ಸೇರಿ ಶ್ರೀಮದ್ರೇಣುಕವಿಜಯ ಮಹಾಪುರಾಣ, ಪದ್ಮರಾಜಪುರಾಣ ಮೊದಲಾದವುಗಳಲ್ಲಿ ಯಾವುದಾದರೂ ಶಿವಪುರಾಣವನ್ನು ಮಾಮೂಲಾಗಿ ನಡೆಸುವ ಏರ್ಪಾಡನ್ನು ಮಾಡಿ ಉಭಯ ಸೇವೆಯಿಂದಲೂ ಧನ್ಯರಾಗುತ್ತಾರೆಂದು ನಾನು ನಂಬಿದ್ದೇನೆ. ಇಂಥ ಅಮೋಘಕಾರ್ಯಕ್ಕೆ ಪ್ರಾರಂಭಮಾಡಿದ ಮತ್ತು ಸಹಾಯಾನುಮತಿಯನ್ನು ಕೊಟ್ಟ ಮಹಾಶಯರಿಗೆಲ್ಲಾ ಇಂಥ ಸೇವಾಕಾರ್ಯಗಳಲ್ಲೇ ಆಸಕ್ತಿಯನ್ನೂ ಮತ್ತು ಇವರಿಗೆ ದೀರ್ಘಾಯುರಾರೋಗ್ಯಾಭಿವೃದ್ಧಿಗಳನ್ನೂ ಸಹ ಶ್ರೀ ಮಲ್ಲಿಕಾರ್ಜುನನು ಕರುಣಿಸಲೆಂದು ತ್ರಿಕರಣಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ತಲಕಾಡು,
19—9—1933. ಎಂ. ಸುಬ್ಬಯ್ಯ.

ಬೇದಿಬಸವನ ಬಡಬಡಿಕೆ.

ಇತ್ತೀಚೆಗೆ ಲೋಕಮತದಲ್ಲಿ "ಬೇದಿಬಸವನು" ವೀರಶೈವಸಮಾಜದಲ್ಲಿಯ ಅಂತಃಕಲಹದ ವಿಷಯವಾಗಿ ಮನಬಂದಂತೆ ಒದರುತ್ತಿರುವದನ್ನು ನೋಡಿ ವಿವೇಕಶಾಲಿಗಳಾದವರಿಗೆ ನಗೆಬರದಿರಲಾರದು. ಇನ್ನೂ ಕೆಲವುಪತ್ರಗಳಲ್ಲಿ ಕೆಲವು ಪಂಡಿತಂಮನ್ಯರು ಏನೇನೋ ಬರೆದುಕೊಳ್ಳುತ್ತಲಿರುವರು. ಇಂಥವರ ಬಡಬಡಿಕೆಯಿಂದ ವಿಶೇಷ ಪ್ರಯೋಜನವೇನೂ ಆಗದಿದ್ದರೂ ಇವರ ಹಸಿಬಿಸಿ ಪಾಂಡಿತ್ಯದ ಭ್ರಾಮಕಕಲ್ಪನೆಗಳು ಸ್ವಕೀಯ ಪರಕೀಯ ಸಮಾಜಬಂಧುಗಳನ್ನು ಸಂಶಯದಿಂದ ಬಾಧಿಸಬಹುದಾದ್ದರಿಂದ ತತ್ತ್ವಾನ್ವೇಷಿಗಳಾದ ವಾಚಕರೆದುರಿಗೆ ಕೆಲವು ಪ್ರಾಮಾಣಿಕ ವಿಚಾರಗಳನ್ನು ಮುಂದರಿಸಿದ್ದಾಗಿದೆ.

ವೀರಶೈವ ಮಹಾಸಿದ್ಧಾಂತ ಸ್ಥಾಪಕರೂ ಮತೋತ್ಪತ್ತಿ ಮತ್ತು ಮತಪ್ರಸಾರಣೆಗೆ ಕಾರಣೀಭೂತರೂ ಆದ ಮಹಾಚಾರ್ಯರನ್ನು, ಆ ಮತಸಿದ್ಧಾಂತಕ್ಕೆ ಲುಬ್ಧರಾಗಿ ಮತಾಂತರಹೊಂದಿ, ಸ್ವಪ್ರತಿಷ್ಠೆಯ ಪೀಜಾರೋಪಣೆಯಿಂದ ಗಲಭೆಯನ್ನುಂಟುಮಾಡಿದ ಕೆಲವು ವ್ಯಕ್ತಿಗಳ ಪಂಕ್ತಿಯಲ್ಲಿ ಎಳೆಯುವದು ಸಮಂಜಸವೆನಿಸಬಹುದೇ? ಪ್ರಪಂಚದಲ್ಲಿ ನಾಮಾಂಕಿತವಾದ ಯಾವದೇ ಮತದ ಇತಿಹಾಸದಲ್ಲಿಯಾದರೂ ಇಂಥ ಉದಾಹರಣೆಗಳು ದೊರೆಯುವವೋ? ಕ್ರಿಶ್ಚಿಯನ್ಮತದಲ್ಲಿ ಮತಪ್ರಸಾರಣೆಗೆ ಮತಾಭಿಮಾನದಿಂದ ಹೆಣಗಾಡಿದ ಕ್ರುಸೇಡರರೂ (Crusaders) ಮತ್ತು ಎಷ್ಟೋ ಸಾರ್ವಭೌಮ ಅರಸರೂ, ತತ್ವವೇತ್ತರೂ, ಮಾರ್ಟಿನ್‌ಲ್ಯೂಥರನಂಥ ಸುಧಾರಕಾಗ್ರಣಿಗಳೂ ಆಗಿಹೋಗಿದ್ದರೂ ಕ್ರಿಶ್ಚಿಯನ್ಮತಾವಲಂಬಿಗಳು ತಮ್ಮ ಮತಸ್ಥಾಪನಾಚಾರ್ಯನಾದ ಯೇಸುಕ್ರಿಸ್ತನನ್ನು ಈ ರೀತಿಯಾಗಿ ಸಾಮಾನ್ಯವಾಗಿ ಎಣಿಸುವದು ಕಂಡುಬರುವುದೇ? ಮುಸಲ್ಮಾನ ಮತಸ್ಥಾಪಕರಾದ ಮಹಮ್ಮದ ಪೈಗಂಬರರು ಗತಿಸಿಹೋದ ಮೇಲೆ ಎಷ್ಟೋ ಜನ ಮುಸಲ್ಮಾನ ಬಾದಶಹರೂ, ಧರ್ಮವೇತ್ತರೂ, ಅನುಭವಿಗಳೂ, ಜಗತ್ತಿನಲ್ಲೆಲ್ಲಾ ಆ ಮತವನ್ನು ಪ್ರಸಾರ ಮಾಡಿದ್ದರೂ ಈ ಹಿಂದಿನಲ್ಲೊಬ್ಬರನ್ನಾದರೂ ಪೈಗಂಬರರ ಸಮಾನರೆಂದು ಯಾವ ನಿಜವಾದ ಮುಸಲ್ಮಾನನಾದರೂ ನುಡಿಯುವನೋ? ಬುದ್ಧದೇವನ ಅನಂತರ ಅಶೋಕನಂಥ ಏಕಚಕ್ರಾಧಿಪತಿಯೂ, ಧರ್ಮಾಭಿಮಾನಿಗಳೂ, ಮತ್ತು ಅಗಣಿತ ಬೌದ್ಧಯತಿಗಳೂ, ದ್ವೀಪದ್ವೀಪಾಂತರಗಳಲ್ಲೆಲ್ಲಾ ಮತಪ್ರಸಾರಣೆ ಮಾಡಿದ್ದರೂ, ಅವರಲ್ಲಿ ಒಬ್ಬನಾದರೂ ಬುದ್ಧದೇವನ ಸಮಾನನೆಂದು ಯಾವನಾದರೂ ನಿಜವಾದ ಬೌದ್ಧಧರ್ಮಾಭಿಮಾನಿಯು ಒಪ್ಪಬಹುದೇ? ಈ ಮೇಲ್ಕಂಡ ಮತಗಳಲ್ಲಿ ಕೇವಲ ಮತಪ್ರಸಾರಣೆ ಮಾಡಿದ್ದಲ್ಲದೆ ಆ ಆ ಮತತತ್ವಗಳನ್ನು ಅಲೌಕಿಕವಾಗಿ ಆಚರಿಸಿ ತಮ್ಮ ಅಮೂಲ್ಯ ಅನುಭವಾಮೃತವನ್ನು ತಮ್ಮ ತಮ್ಮ ಮತಾನುಯಾಯಿಗಳಿಗೆ ಉಪದೇಶಗ್ರಂಥಗಳ ಮೂಲಕ ಸೂರೆಮಾಡಿಹೋದ ಮಹಾನುಭಾವರೆಷ್ಟೋ ಜನರಿರಬಹುದು. ಆಯಾ ಮತದ ಇತಿಹಾಸವನ್ನು ಅವಲೋಕಿಸಿದರೆ ಅವರನ್ನು ಅವರ ಅನಂತರ ಆಗಿಹೋದ ಗ್ರಂಥಕರ್ತೃಗಳೂ ಮತ್ತು ಕವಿಗಳೂ ಕೊಂಡಾಡಿದುದು ಗೋಚರವಾಗುವದು. ಆದರೆ ಈರೀತಿ ಗೌರವಿಸುವ ಭರದಲ್ಲಿ ಅವರನ್ನು ಯೇಸುಕ್ರಿಸ್ತ, ಮಹಮ್ಮದ ಪೈಗಂಬರ, ಬುದ್ಧದೇವ ಇವರಿಗೆ ಸಮಾನರೆಂದು ವರ್ಣಿಸಿದ್ದು ಕಂಡುಬರುವದೇ?

ಆದರೆ ವೀರಶೈವಮತದಲ್ಲಿ ಮಾತ್ರ ಸ್ಥಾಪಕರನ್ನು ಈಪರಿಯಾಗಿ ಅವಹೇಳನಮಾಡುವದನ್ನೂ, ಅವರನ್ನು ಅನಂತರ ಮತದಲ್ಲಿ ಬಂದ ಕೆಲವು ವ್ಯಕ್ತಿಗಳ ಪಂಕ್ತಿಯಲ್ಲಿ ಎಳೆಯಲೆತ್ನಿಸುವವರ ಕೃತಘ್ನತೆಯನ್ನೂ ನೋಡಿ ಸಖೇದಾಶ್ಚರ್ಯವೆನಿಸುತ್ತದೆ. ಅನಂತರ ಬಂದ ಆ ವ್ಯಕ್ತಿಗಳು ವೀರಶೈವ ತತ್ತ್ವಾವಲಂಬನೆಯಿಂದ ಕೆಲಮಟ್ಟಿಗೆ ಘನತೆಗೇರಿ ಮತಸೇವೆಯನ್ನು ಮಾಡಿದುದು ಕಂಡುಬಂದರೂ ಮತದ ಇತಿಹಾಸದಲ್ಲಿ ಅವರ ಸ್ಥಾನವು ಯಾವುದೆಂಬುದನ್ನು ಸಾರಾಸಾರವಿಚಾರ ಮಾಡುವವರು ಕಂಡುಹಿಡಿಯದೆ ಬಿಡರು. ಆ ವ್ಯಕ್ತಿಗಳನ್ನೂ ಮತ್ತು ಅವರ ಪರವಾದ ಗ್ರಂಥಗಳನ್ನೂ ವಿವೇಕಿಗಳು ಎಷ್ಟರಮಟ್ಟಿಗೆ ಗೌರವಿಸುವರೆಂಬುದನ್ನೂ

ಬೇರೆ ಹೇಳಬೇಕಾಗಿಲ್ಲ. ಇಂಥ ಜೊಳ್ಳುಸಾಹಸಗಳು ೭-೮ ನೂರು ವರ್ಷಗಳಿಂದ ನಡೆದೇ ಇದ್ದರೂ ಪರಮಾರ್ಶೇಯವಾದ ವೀರಶೈವಮತದ ಇತಿಹಾಸದಲ್ಲಿ ಈ ೭-೮ ನೂರು ವರ್ಷಗಳಕಾಲವು ಎಷ್ಟು ಅಲ್ಪಪ್ರಮಾಣದ್ದೆಂಬುದು ಒಡೆದು ಕಾಣುತ್ತದೆ. ಈ ಅಲ್ಪಕಾಲದಲ್ಲಿಯ ಕೆಲವು ವ್ಯಕ್ತಿಗಳ ಮತ್ತು ಅವರ ಅನುಚರರ ಅದೂರದೃಷ್ಟಿಯಿಂದ ಪರಮಪವಿತ್ರವಾದೀ ಮತವು ಹ್ರಾಸವಾಗುತ್ತಿರುವದನ್ನು ಅವಲೋಕಿಸಿದರೆ ಯಾವ ಧರ್ಮಾಭಿಮಾನಿಗೆ ಅನುತಾಪವಾಗದಿರದು?

ಇನ್ನು ಸ್ಥಿತ್ಯಂತರವಾಗುತ್ತಿರುವದು ಸ್ವಭಾವವಾಗಿದ್ದ ಸಮಾಜವ್ಯವಸ್ಥೆ, ಧಾರ್ಮಿಕವಿಚಾರ, ಆಚಾರ ಇವೇ ಮೊದಲಾದವುಗಳು ಆ ಆ ಕಾಲದ ತತ್ತ್ವಾನ್ವೇಷಿಗಳಿಂದ ನೂತನವಿಚಾರ, ನೂತನ ಸ್ಫೂರ್ತಿಗಳಿಂದ ಸಕಾಲದಲ್ಲಿ ಪೋಷಿತವಾಗಿ ಸಮಾಜವನ್ನು ಪುನಃ ಜಾಜ್ವಲ್ಯಗೊಳಿಸುತ್ತಿರುವದು ಅವ್ಯಾಹತವಾಗಿ ನಡೆದೇ ಇದೆ. ವೇದಧರ್ಮಕ್ಕೆ ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ಮತಾಂತರದವರಿಂದ ಎಷ್ಟೋ ಅನಾಹುತಗಳೊದಗಿದರೂ ಆ ಪರಮ ಪವಿತ್ರಧರ್ಮವು ತನ್ನ ಶಾಖೋಪಶಾಖೆಗಳಿಂದ ಇನ್ನೂ ತಲೆಯೆತ್ತಿ ನಿಂತಿರುವದು ಈ ತರಹದ ಸ್ಥಿತ್ಯಂತರಕ್ಕೆ ಸಕಾಲದಲ್ಲಿ ಈ ಧರ್ಮವು ಇಂಬುಗೊಡುತ್ತಿರುವದರಿಂದಲೇ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನೂ ಒಂದೆರಡು ವಿಚಾರಗಳು 'ಬೇದಿಬಸವ' ಸಂಘವರ ತಲೆಕೆಡಿಸುತ್ತಿರುತ್ತವೆ. ಒಂದನೆಯದು ವೀರಶೈವಮತದಲ್ಲಿ ವರ್ಣವಿಭಾಗವಿಲ್ಲೆಂಬುದು. ಎರಡನೆಯದು ಪ್ರಾಕೃತಬ್ರಾಹ್ಮಣರೆನಿಸಿಕೊಳ್ಳುವವರು ವೀರಶೈವರಿಗೆ ಶೂದ್ರರೆಂದು ಕೋರ್ಟುಗಳಲ್ಲಿ ಕೂಡ ಸಾಧಿಸಿರುವದು.

ವೀರಶೈವ ಧರ್ಮದಲ್ಲಿಯೂ ವರ್ಣವ್ಯವಸ್ಥೆಯಿದ್ದು ಅದಕ್ಕೆ ಅಪ್ರಾಕೃತವರ್ಣಾಶ್ರಮ ಧರ್ಮವೆಂದು ಧರ್ಮಗ್ರಂಥಗಳಲ್ಲಿ ಉಕ್ತವಾಗಿರುವದನ್ನು ಇವರು ಕಣ್ಣುತೆರೆದು ನೋಡಬೇಕು.

ಕಾಲಾಂತರದಿಂದ ಬೇದಿಬಸವಸಂಘವರ ಕೈಯಲ್ಲಿ ಈ ವರ್ಣವ್ಯವಸ್ಥೆಯು ಅಧೋಗತಿಗಿಳಿದಿದ್ದರೆ ಅದಕ್ಕೆ ಜವಾಬುದಾರರು ಇಂಥ ಬಸವಗಳೇ ಅಲ್ಲವೇ?

ಎರಡನೆಯದು ವೀರಶೈವರನ್ನು ಶೂದ್ರರೆಂದು ಇತರರು ಸಾಧಿಸಿರುವದು. ಇದಾದರೂ ಬೇದಿಬಸವ ಸಂಘವರ ಸ್ವಮತಾಚಾರಣೆ ಸಂಪ್ರದಾಯಗಳ ಅಜ್ಞಾನದಿಂದ ಮತ್ತು ಅಲ್ಪಸ್ವಾರ್ಥಕ್ಕಾಗಿ ಧರ್ಮವೃಕ್ಷಕ್ಕೂ ಕುಠಾರಾಘಾತಮಾಡಲೆಳೆಸುವವರ ಅಜಾಗರೂಕತೆಯಿಂದಲೇ ಬೇರೆಯವರಿಗೆ ಈ ರೀತಿ ಅಸ್ಪದವಾಗಿರುವದೆಂಬುದನ್ನು ಬೇದಿಬಸವನು ಅರಿಯದವನಾಗಿಲ್ಲ. ನಿಜವಾದ ಧರ್ಮಸ್ಪರ್ಧೆಯು ಪುನಃ ಮತಸ್ಥಾಪಕರಾದ ಪಂಚಾಚಾರ್ಯ ಜಗದ್ಗುರೂತ್ತಮರ ಕೃಪಾವಿಶೇಷದಿಂದ ಬೇಗ ಬೇದಿಬಸವಸಂಘವರೆಲ್ಲರೂ ನಿಜಜ್ಞಾನಾಪೇಕ್ಷಿಗಳಾಗಿ ನಿರಭಿಮಾನದಿಂದ ಎಂದಿನಂತೆ ಗುರುಭಕ್ತಿಯುತರಾಗಿ ನಿಜಧರ್ಮದಲ್ಲಿ ಶ್ರದ್ಧೆವಹಿಸುತ್ತ ಹೋದರೆ ಪರಸಮಾಜದಲ್ಲಿಯ ಕೆಲವು ಕ್ಷುದ್ರಮತಿಗಳ ಕ್ಷುದ್ರಾರೋಪಣೆಗಳು ತತ್ಕ್ಷಣದಲ್ಲಿ ನಾಶವಾಗಿ ಈ ಮತವು ಪೂರ್ವದಂತೆ ಸರ್ವಮತಶಿರೋರತ್ನದಂತೊಪ್ಪುತ್ತಿರುವುದರಲ್ಲಿ ಸಂಶಯವಿಲ್ಲ. ಬೇದಿಬಸವನು ತನ್ನ ಮತಧರ್ಮಶಾಸ್ತ್ರಸ್ವರೂಪವನ್ನು ಚನ್ನಾಗಿ ತಿಳಿದುಕೊಂಡು ಧನ್ಯನಾಗಬೇಕೆಂದಾಶಿಸುವ,

ಓರ್ವ ಸಮಾಜಹಿತೈಷಿ.

ವಾರದ ಸಂಸ್ಕೃತಪಾಠಶಾಲೆಯ ವ್ಯವಸ್ಥೆ.

ಸೋಲಾಪುರ.

ಸೊಲ್ಲಾಪುರದ ಶಹರದಲ್ಲಿ ಕೈ|| ವಾ|| ರಾವ್‌ಬಹದ್ದೂರ್ ವಾರದ ಮಲ್ಲಪ್ಪನವರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀಮದ್ವೀರಶೈವ ವಾರದ ಪಾಠಶಾಲೆಯು ಈಗ ೨೪ ವರ್ಷಗಳಿಂದ ಅವ್ಯಾಹತವಾಗಿ ನಡೆದುಕೊಳ್ಳುತ್ತಬಂದಿರುವದು ಸರಿಯಷ್ಟೆ! ವಾರದ ಅಪ್ಪಾಸಾಹೇಬರವರು ಶಿವಾಧೀನರಾದ ನಂತರ ಇಲ್ಲಿಯ ಶ್ರೀಮಂತ ಕೈ|| ವಾ|| ಬಂಡಪ್ಪಣ್ಣ ಕಾಡಾದೆ ಮತ್ತು ಕೈ|| ವಾ|| ರೇವಣಸಿದ್ದಪ್ಪಣ್ಣ ಉಮ್ಮರಜೆ ಇವರು ಈ ಪಾಠಶಾಲೆಗೆ ದ್ರವ್ಯವನ್ನು ಸಹಾಯಮಾಡಿ ಪುಣ್ಯಭಾಗಿಗಳಾದರು. ಇತ್ತೀಚೆಗೆ ಕೆಲವು ದಿವಸಗಳಿಂದ ಈ ಪಾಠಶಾಲೆಯ ವ್ಯವಸ್ಥೆಯು ಮ|| ರಾ|| ಮಲ್ಲಿಕಾರ್ಜುನಪ್ಪ, ಅಪ್ಪಾರಾವ್ ಪಾಟೀಲ ಇವರ ಕಡೆಗಿದ್ದು ಈ ಪಾಠಶಾಲೆಗೆ ಸರ್ಕಾರದಿಂದಲೂ ಮುನಿಸಿಪಾಲಿಟಿಯಿಂದಲೂ ಗ್ರಾಂಟ್ ದೊರಕುತ್ತಿರುವದು. ಈ ಪಾಠಶಾಲೆಯಲ್ಲಿ 40 ಜನ ವಿದ್ಯಾರ್ಥಿಗಳು ಸದ್ಯಃ ಅಭ್ಯಾಸಮಾಡುತ್ತಿರುವರು. ಈ ಪಾಠಶಾಲೆಯಲ್ಲಿ ನಡೆಯತಕ್ಕಂಥ ಅಭ್ಯಾಸಕ್ರಮವನ್ನು ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಪರಾಮರ್ಶಿಸಿ ತಮ್ಮ ಚಿತ್ತಾನಂದವನ್ನು ವ್ಯಕ್ತಗೊಳಿಸಿ ಕೈ|| ವಾ|| ಅಪ್ಪಾಸಾಹೇಬರವರ ಸ್ಮಾರಕವಾಗಿ ಈ ಪಾಠಶಾಲೆಯು ಅಚಂದ್ರಾರ್ಕವಾಗಿ ನಡೆದುಕೊಂಡು ಬರಲೆಂಬ ಸದುದ್ದೇಶದಿಂದ ಸದರಿ ಪಾಠಶಾಲೆಯ ಕಾಯಂಫಂಡಿಗಾಗಿ 5000 ರೂ. ಗಳನ್ನು ವಾಗ್ದಾನ ಮಾಡಿ ಕೆಲವು ರೂ. ಗಳನ್ನು ಮ|| ರಾ|| ವಾರದ ಚನ್ನಬಸಪ್ಪನವರ ಕಡೆಗೆ ಕೊಟ್ಟು ಸದರಿ ಪಾಠಶಾಲೆಗೆ ಖಾಸಗೀಸ್ವರೂಪವನ್ನು ತೆಗೆದುಹಾಕಿ ಸಾರ್ವಜನಿಕಸ್ವರೂಪವು ಬರುವಂತೆ ಮಾಡಿದುದು ಸ್ತೋತ್ರಾರ್ಹವಾಗಿದೆ. ಈ ಪಾಠಶಾಲೆಯು ವ್ಯವಸ್ಥೆಯು ಸರಿಯಾಗಿ ನಡೆಯಲೆಂಬ ಉದ್ದೇಶದಿಂದ ಸದರಿ ಪಾಠಶಾಲೆಯಲ್ಲಿ ತಾ|| 17-9-33 ನೆಯ ದಿವಸ ಸಾಯಂಕಾಲ ಸರ್ವಆಶ್ರಯದಾತೃಗಳ ಸಭೆಯು ಕೂಡಿತು. ಸದರಿ ಸಭೆಗೆ ಮ|| ರಾ|| ಧುಮ್ಮಾ ವಕೀಲರು ಅಧ್ಯಕ್ಷರಾಗಿದ್ದರು. ಸರ್ವಾನುಮತದಿಂದ ಪ್ರೆಸಿಡೆಂಟ್, ವೈಸ್‌ಪ್ರೆಸಿಡೆಂಟ ಮೊದಲಾದವರು ಆರಿಸಲ್ಪಟ್ಟರು.

1. ಚನ್ನಬಸಪ್ಪ ಮಲ್ಲಪ್ಪ ವಾರದ (ಅಧ್ಯಕ್ಷ).
2. ನಾಗಪ್ಪ ಬಂಡಪ್ಪ ಕಾಡಾದಿ (ಉಪಾಧ್ಯಕ್ಷ).
3. ಚನ್ನಬಸಪ್ಪ ಮಲ್ಲಪ್ಪ ವಾರದ (ಕೋಶಾಧ್ಯಕ್ಷ).
4. ಸಾತಪ್ಪ ಚವ್ಹಾಣ. 5. ಶಿವಲಿಂಗಪ್ಪ ಮಾಳಗಿ (ಸೆಕ್ರೆಟರಿಗಳು).

ಮೆಂಬರರು.

1. ನಾಗಪ್ಪ ಅರಳಪ್ಪ ಅಬ್ದುಲ್‌ಪೂರಕರ. 2. ಶಿವಬಾಳಪ್ಪ ದೇಶಮುಖ. 3. ಚನ್ನಮಲ್ಲಪ್ಪ ಲಿಗಾಡೆ. 4. ಸದಮಣ್ಣಾಪ್ಪ ದರಗೋಪಾಟೀಲ. 5. ಬಂಡಪ್ಪ ರೇವಣಸಿದ್ಧಪ್ಪ ಝುಂಜೆ. 6. ಸಿದ್ಧರಾಮಪ್ಪ ಧುಮ್ಮಾ ವಕೀಲ. 7. ಸಿದ್ಧರಾಮಪ್ಪ ಬಾನಾಪುರೆ.

ಆಡಿಟರರು.

1. ಸಿದ್ಧರಾಮಪ್ಪ ಪಟಣೆ. 2. ಸಿದ್ಧರಾಮಪ್ಪ ವಿಭೂತೆ.

ಈ ಪ್ರಕಾರವಾಗಿ ಸಭೆಯಲ್ಲಿ ಠರಾವು ಪಾಸಾದ ನಂತರ ಅಧ್ಯಕ್ಷರ ಆಭಾರವನ್ನು ಮನ್ನಿಸಿ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಶ್ರೀಯುತ ಚನ್ನಶೆಟ್ಟರವರ ನಿಧನ.

ಬಿಡದಿ.

ಕ್ಲೋಸ್‌ಪೇಟೆ ತಾಲ್ಲೂಕು ಬಿಡದಿಗ್ರಾಮದಲ್ಲಿ ವಾಸವಾಗಿದ್ದ ಪ್ರಸಿದ್ಧ ಶ್ರೀಮಂತರೂ ಶ್ರೀ ಗುರುಲಿಂಗಜಂಗಮಪ್ರೇಮಿಗಳೂ ಧರ್ಮೈಕಪರಾಯಣರೂ ಶಾಂತಶೀಲರೂ ಜನಾನುರಾಗಿಗಳೂ ಸತ್ಕಾರ್ಯದಲ್ಲಿ ಸಕಲರಿಗೂ ಆದರ್ಶಪ್ರಾಯರೂ ಆಗಿದ್ದ ಶ್ರೀಯುತ ಚನ್ನಶೆಟ್ಟರವರು ಇದೇ ಶ್ರೀಮುಖನಾಮಸಂವತ್ಸರದ ಜ್ಯೇಷ್ಠ ಶುದ್ಧ ತ್ರಯೋದಶಿ ಮಂಗಳವಾರ ತಮ್ಮ ೮೦ ನೆಯ ವಯಸ್ಸಿನಲ್ಲಿ ಶಿವೈಕ್ಯರಾದರು. ಇವರು ತಮ್ಮ ವೃದ್ಧಾಪ್ಯದಲ್ಲಿ ಪರಲೋಕವನ್ನು ಹೊಂದಿದರಾದರೂ ಇವರ ಬಂಧುಮಿತ್ರರಿಗೂ ಮತ್ತು ಬಿಡದಿ ಗ್ರಾಮವಾಸಿಗಳಿಗೂ ಇವರ ವಿಯೋಗದಿಂದ ವ್ಯಥೆಯುಂಟಾಗಿರುತ್ತದೆ. ಇವರ ಜೀವಿತಕಾಲದಲ್ಲಿ ಅನೇಕ ಸಹಸ್ರ ರೂಪಾಯಿಗಳನ್ನು ದೇವಾಲಯ ವಿದ್ಯಾಲಯಾದ್ಯನೇಕ ಧರ್ಮಕಾರ್ಯಗಳಿಗೂ ಬಂಧುಗಳ ಉದ್ಧಾರಕ್ಕೂ ವಿನಿಯೋಗಮಾಡಿರುವರು. ವಿಚಾರಪರರಾದ ಶ್ರೀಯುತ ಶೆಟ್ಟರವರು ಅಪುತ್ರವಂತರಾದ್ದರಿಂದ ತಾವು ಆರ್ಜಿಸಿದ ಅತುಳೈಶ್ವರ್ಯವು ಅಪಾತ್ರವಾಗಬಾರದೆಂಬ ಸದುದ್ದೇಶದಿಂದಲೂ ಮತ್ತು ತಮ್ಮ ಪರಲೋಕ ಕ್ರಿಯೆಯು ಸಕ್ರಮವಾಗಿ ನಡೆದು ಮುಂದೆ ತಮಗೆ ಒಳ್ಳೆಯ ಪದವಿಯು ಪ್ರಾಪ್ತಿಯಾಗಲೆಂಬಾಕಾಂಕ್ಷೆಯಿಂದಲೂ ತಮ್ಮ ಬಂಧುಗಳಾದ ಗುಬ್ಬಿಯ ಶಿವರಾತ್ರಿ ಮ|| ರಾ|| ರುದ್ರಪ್ಪನವರ ತೃತೀಯ ಪುತ್ರರಾದ ಚಿ|| ರಾ|| ರೇವಣ್ಣನವರನ್ನು ವಿಧಿಪೂರ್ವಕವಾಗಿ ದತ್ತಪುತ್ರನನ್ನಾಗಿ ಮಾಡಿಕೊಂಡು ಸ್ವೀಕೃತಪುತ್ರನಿಗೆ ಸ್ವತಃ ವಿದ್ಯಾಬುದ್ಧಿ ನಯನೀತಿಗಳನ್ನು ಕಲಿಸಿ ವಿವಾಹಮಾಡಿ ಪುತ್ರನಿಗಾದ ಪುತ್ರೋತ್ಸವಾದಿಗಳನ್ನು ಬಹಳ ಆನಂದದಿಂದ ನೆರವೇರಿಸಿ ತಮ್ಮ ಯಾವತ್ತು ಅಧಿಕಾರವನ್ನೂ ತಮ್ಮ ಚಿರಂಜೀವಿಗೆ ವಹಿಸಿ ಸದಾ ಶಿವಪೂಜಾಲೋಲರಾಗಿರುತ್ತಿದ್ದರು. ಹೀಗೆ ಸರ್ವವ್ಯವಹಾರಗಳನ್ನು ಬಿಟ್ಟಿದ್ದಾಗ್ಯೂ ಬಿಡದಿಯ ಶ್ರೀ ಬಸವೇಶ್ವರ ದೇವಾಲಯವು ಶಿಥಿಲವಾಗಿ ದೇವತಾರ್ಚನೆಯು ಸರಿಯಾಗಿ ನಡೆಯದಿದ್ದುದನ್ನು ಮನಸ್ಸಿಗೆ ತೆಗೆದುಕೊಂಡು ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಸ್ವಾಮಿಕಾರ್ಯವು ಸುಲಲಿತವಾಗಿ ನಡೆಯುವಂತೆ ಒಂದು ಸಂಘವನ್ನು ಸ್ಥಾಪನೆಮಾಡಿ ಆ ಸಂಘದ ಅಧ್ಯಕ್ಷತೆಯನ್ನು ವಹಿಸಿ ಸ್ವಾಮಿಸೇವಾಕಾರ್ಯವನ್ನು ಶ್ಲಾಘ್ಯರೀತಿಯಿಂದ ನೆರವೇರಿಸುತ್ತಿದ್ದರು. ತಾ|| ೨-೩-೧೯೩೧ ರಲ್ಲಿ ಬಿಡದಿ ಗ್ರಾಮದಲ್ಲಿ ನಡೆದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಮಹಾಸಭೆಯಲ್ಲಿ ಅಧ್ಯಕ್ಷಪದವಿಯನ್ನಲಂಕರಿಸಿ ತನ್ಮೂಲಕ ಗುರುಸೇವೆಯನ್ನು ಮಾಡಿದರು. ಇನ್ನೂ ಅನೇಕ ಗುರುದೇವತಾಕಾರ್ಯಗಳನ್ನು ಪರಮೋತ್ಸಾಹದಿಂದ ಮಾಡುತ್ತಿದ್ದುದು ಸ್ತೋತ್ರಾರ್ಹವಾಗಿರುತ್ತದೆ. ಶೆಟ್ಟರ ಅವಸಾನಕ್ಕೆ ಎಂಟು ದಿನ ಮೊದಲು ಶರೀರಕ್ಕೆ ಆಲಸ್ಯವಾಗಿ ದಿನೇದಿನೇ ಆರೋಗ್ಯಸ್ಥಿತಿಯು ಕೆಟ್ಟು ಆಹಾರವನ್ನು ಸಹ ತೆಗೆದುಕೊಳ್ಳದಂತಾದರೂ ಶಿವಜ್ಞಾನಯುತರಾಗಿದ್ದು ಶಿವೈಕ್ಯರಾದುದು ಸಕಲರಿಗೂ ಆಶ್ಚರ್ಯವನ್ನುಂಟುಮಾಡಿತು. ಶ್ರೀಯುತ ಶೆಟ್ಟರವರು ಶಿವಾಧೀನರಾದ ಬಳಿಕ ಅವರ ಪುತ್ರರಾದ ಶ್ರೀಯುತ ಸಿ. ರೇವಣ್ಣನವರು ತಮ್ಮ ಪಿತೃವಿನ ಉತ್ತರ ಕ್ರಿಯೆಯನ್ನು ನೆರವೇರಿಸಿ ಇದೇ ಸಂ|| ಭಾದ್ರಪದ ಶು|| ತ್ರಯೋದಶಿಯಲ್ಲಿ ಬೆಂಗಳೂರು ಬೇಲಿಮಠದ ಚರಮೂರ್ತಿಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳವರನ್ನು ಬರಮಾಡಿಕೊಂಡು ಅವರ ನೇತೃತ್ವದಲ್ಲಿ ಏಕಾದಶವಾರ ರುದ್ರಾಭಿಷೇಕವನ್ನು ಪ್ರಾರಂಭಮಾಡಿ ಇದೇ ಬಹುಳ ಅಷ್ಟಮಿ ಮಂಗಳವಾರ ಸಹಸ್ರಬಿಲ್ವಾರ್ಚನೆಯೊಡನೆ ಪೂರ್ಣಗೊಳಿಸಿ ಪಾದಪೂಜಾಕಾರ್ಯವನ್ನು ನೆರವೇರಿಸಿ, ನವಮಿ ಬುಧವಾರ ಶ್ರೀ ಪಟ್ಟಚರಾಧಿಕಾರಿಗಳನ್ನು ಕರೆಯಿಸಿ ವೈದಿಕವರ್ಗದಿಂದ ವೃಷಭೋತ್ಸರ್ಗ ಮಹಾಕಾರ್ಯವನ್ನು ನಡೆಯಿಸಿ, ಗೋ-ವೃಷಭ-ಹಿರಣ್ಯಾದಿ ದಶದಾನಗಳನ್ನುಮಾಡಿ ದಶಮಿ ಗುರುವಾರ ಪಂಚಭಕ್ಷ್ಯಪರಮಾನ್ನದಿಂದ ಸುಮಾರು ಮುನ್ನೂರು ಮಂದಿಯವರಿಗೆ ತೃಪ್ತಿಪಡಿಸಿ ದಕ್ಷಿಣ ವಸ್ತ್ರ ತಾಂಬೂಲಗಳನ್ನು ಕೊಟ್ಟು ಮಹಾಗಣಾರಾಧನೆಯನ್ನು ನೆರವೇರಿಸಿದರು. ಈ ಕಾರ್ಯಕ್ಕೆ ಬೆಂಗಳೂರು, ನೆಲಮಂಗಲ, ಗುಬ್ಬಿ ಮುಂತಾದ ಸ್ಥಳಗಳಿಂದ ಅನೇಕ ಮಹನೀಯರು ದಯಮಾಡಿಸಿದ್ದರು. ಶ್ರೀಯುತ ಸಿ. ರೇವಣ್ಣನವರ ಚಿಕ್ಕತಂದೆಯವರಾದ ಮ|| ರಾ|| ಚಿಕ್ಕಗಂಗಶೆಟ್ಟರವರು ಸಕಲಕಾರ್ಯಗಳಲ್ಲಿಯೂ ಭಾಗವಹಿಸಿ ಸೂಕ್ತ ಸಲಹೆಗಳನ್ನು ಕೊಟ್ಟು ನಿರ್ವಿಘ್ನವಾಗಿ ನೆರವೇರುವಂತೆ ಮಾಡಿದ್ದು ಸ್ತೋತ್ರಾರ್ಹವಾಗಿದೆ.

ಮೇಲ್ಕಂಡ ವೃಷಭೋತ್ಸರ್ಗ ಮಹಾಕಾರ್ಯ ಸಮಾರಂಭದಲ್ಲಿ ಶ್ರೀಮತ್ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ ಶ್ರೀಯುತ ಸಿ. ರೇವಣ್ಣನವರಿಂದ ಮೂರು ರೂಪಾಯಿಗಳು ಸಮರ್ಪಿಸಲ್ಪಟ್ಟವು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ಸಮಾಧಾನವನ್ನೂ ಅನುಗ್ರಹಿಸಲೆಂದು ಕೋರುವ,

ಓರ್ವ ಬಿಡದಿಗ್ರಾಮ ನಿವಾಸಿ.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಅಕ್ಟೋಬರ್ ತಾ|| ೨ನೇ ಸೋಮವಾರ.

ನವರಾತ್ರಮಹೋತ್ಸವ.

ಈ ಮಹೋತ್ಸವವು ನಮ್ಮ ಭರತಖಂಡದಲ್ಲಿ ಸುಪ್ರಸಿದ್ಧವಾದ ಹಬ್ಬವೆಂದು ಪರಿಗಣಿಸಲ್ಪಟ್ಟಿರುವುದು. ಈ ಹಬ್ಬವನ್ನು ಒಂದೊಂದು ದೇಶದಲ್ಲಿ ಒಂದೊಂದು ವಿಧವಾಗಿ ಆಚರಿಸುವರು. ಪ್ರತಿಯೊಂದು ಜನಾಂಗವೂ ಯಾವಯಾವ ವ್ಯಾಪಾರವನ್ನು ಮಾಡುತ್ತಿರುವುದೋ ಆಯಾಯ ವ್ಯಾಪಾರಸಾಧಕಗಳಾದ ಆಯುಧಸಾಮಗ್ರಿಗಳನ್ನು ಈ ನವರಾತ್ರ್ಯೋತ್ಸವಸಮಯದಲ್ಲಿ ಅತಿ ಭಕ್ತಿಯಿಂದ ಪೂಜಿಸುವ ಪದ್ಧತಿಯು ಬಂದಿರುವುದು. ಕ್ಷತ್ರಿಯರು ಜಯಸಾಧಕಗಳಾದ ಕತ್ತಿಕಠಾರಿಗಳನ್ನೂ, ವಿದ್ಯಾರ್ಥಿಗಳೂ ವಿದ್ವಾಂಸರೂ ಶಾರದಾರೂಪವಾದ ಪುಸ್ತಕಗಳನ್ನೂ, ವ್ಯವಸಾಯಗಾರರು ಮರಮುಟ್ಟುಗಳನ್ನೂ ತಮ್ಮ ಜೀವಿಕೆಗೆ ಸಾಧಕಗಳಾದುದರಿಂದ ಬಹು ಭಕ್ತಿಯಿಂದ ಆರಾಧಿಸಿ ವಿಜಯದಶಮಿಯದಿವಸ ತಮ್ಮ ಕಾರ್ಯಾರಂಭವನ್ನು ಮಾಡುತ್ತಿರುವರು. ಔತ್ತರೇಯರಲ್ಲಿ ವಿಜಯದಶಮಿಯದಿವಸ ನೂತನಗಳಾದ ಉಡುಪುಗಳನ್ನು ಧರಿಸಿಕೊಂಡು ದೇವರನ್ನಾಗಲಿ, ಗುರುಗಳನ್ನಾಗಲಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವಾದ್ಯವೈಭವದೊಂದಿಗೆ ಬನ್ನಿಮರವಿದ್ದೆಡೆಗೆ ಹೋಗಿ ಪೂಜಿಸಿ ಬನ್ನಿಯ ಚಿಗುರನ್ನು ತೆಗೆದುಕೊಂಡು ಮರಳಿ ಉತ್ಸವದೊಂದಿಗೆ ದೇವಾಲಯವನ್ನಾಗಲಿ, ಗುರುಮಠವನ್ನಾಗಲಿ ಪ್ರವೇಶಿಸಿ "ಶಮೀ ಶಮಯತೆ ಪಾಪಂ ಶಮೀ ಶತ್ರುವಿನಾಶಿನೀ" ಎಂದು ಹೇಳುತ್ತ ತಮ್ಮ ತಮ್ಮ ಬಂಧುಮಿತ್ರಾದಿಗಳಿಗೆ ನಮಸ್ಕಾರ ಪ್ರತಿನಮಸ್ಕಾರಪೂರ್ವಕವಾಗಿ ಒಬ್ಬರಿಗೊಬ್ಬರು ಬನ್ನಿಯ ಚಿಗುರನ್ನು ಕೊಡುವುದುಂಟು. ಹೀಗೆ ಮಾಡುವುದರಿಂದ ಆ ವರ್ಷವೆಲ್ಲ ಆತನು ಮಾಡುವ ಕಾರ್ಯವೆಲ್ಲ ಕೈಗೂಡುವುದೆಂದು ದೃಢವಾದ ಒಂದು ನಂಬಿಕೆಯು ಪ್ರತಿಯೊಬ್ಬರಲ್ಲಿಯೂ ರೂಢಮೂಲವಾಗಿ ಬಂದಿದೆ. ಮೈಸೂರು ರಾಜಧಾನಿಯಲ್ಲಿ ನವರಾತ್ರ್ಯೋತ್ಸವದ ಸಂಭ್ರಮವಂತೂ ಹೇಳಲಶಕ್ಯವಾಗಿದ್ದು ~~ಈ ತಿಂಗಳ ೨ನೆಯ ತಾರೀಖು ಮೊದಲುಮಾಡಿಕೊಂಡು ೨೦ ನೆಯ ತಾರೀಖಿನವರೆಗೂ~~ ರಾಜಧಾನಿಯು ಎರಡನೆಯ ಸ್ವರ್ಗಲೋಕವೇ ಆಗಿತ್ತೆಂದರೆ ಅತಿಶಯೋಕ್ತಿಯೆನಿಸಲಾರದು. ಈ ದಿವಸಗಳಲ್ಲಿ ಪ್ರತಿಸಾಯಂಕಾಲದಲ್ಲಿಯೂ ಪ್ರಭುಗಳವರು ದಿವ್ಯವಸ್ತ್ರಾಭರಣಾಲಂಕೃತರಾಗಿ ಕರ್ಣಾಟಕರಾಜ್ಯಲಕ್ಷ್ಮಿಯ ತಾಂಡವಸ್ಥಾನವೆಂದೆನಿಸುವ ರತ್ನಖಚಿತವಾದ ಸಿಂಹಾಸನವನ್ನು ಆರೋಹಣಮಾಡುತ್ತಿದ್ದರು. ರಾಜಬಂಧುಗಳೂ ಸಚಿವೋಪಸಚಿವರೂ ಪುರಪ್ರಮುಖರೂ ದೇಶಪ್ರಮುಖರೂ ಕ್ರಮವರಿತು ನಜರು ಮುಜುರೆಗಳನ್ನು ಮಾಡುತ್ತಿದ್ದರು. ಸಜ್ಜೆಯ ಮುಂದಣ ಅಂಗಣದಲ್ಲಿ ಕುಸ್ತಿ ಪಂಜಿನಾಟ ಮುಂತಾದ ವಿಧವಿಧಗಳಾದ ವಿನೋದಗಳು ನಡೆಯುತ್ತಿದ್ದವು. ~~ಅನೇಕದೇಶಗಳಿಂದ ಆಗಮಿಸಿದ್ದ ಪ್ರಸಿದ್ಧ ಸಂಗೀತವಿದ್ವಾಂಸರ ನಾಟ್ಯಗಾರರ ಸಂಗೀತವೂ ವಾದ್ಯಗಳೂ ಆಗಾಗ್ಗೆ ನಡೆಯುತ್ತಲೇ ಇದ್ದವು. ಪ್ರಸಿದ್ಧ ಸಂಗೀತಗಾರರ ಸಂಗೀತವನ್ನು ಸರ್ವರೂ ಕೇಳಿ ಸಂತೋಷಪಡಲೆಂಬ ಉದ್ದೇಶದಿಂದ ಮಹಾಪ್ರಭುಗಳವರು ಅಲ್ಲಲ್ಲಿಗೆ ಲೌಡ್‌ಸ್ಪೀಕರುಗಳನ್ನಿಡಿಸಿದ್ದರು. ಪ್ರತಿವರ್ಷವೂ ಇರುವುದಕ್ಕಿಂತಲೂ ವಿಶೇಷ ಚಮತ್ಕಾರವಾಗಿ ರಚಿಸಲ್ಪಟ್ಟಿರುವ~~ ವಿದ್ಯುದ್ದೀಪಾವಳಿಗಳ ಸೊಬಗು ಪ್ರೇಕ್ಷಕರಿಗೆ ಅಪೂರ್ವವಾದ ಸಂತೋಷವನ್ನುಂಟುಮಾಡುತ್ತಿದ್ದಿತು. ~~ಶುಕ್ರವಾರ ಪ್ರಾತಃಕಾಲ ಪದ್ಧತಿಪ್ರಕಾರವಾಗಿ ವಜ್ರಮುಷ್ಟಿಕಾಳಗ ಮುಂತಾದ ಕಾರ್ಯ~~ಗಳೆಲ್ಲ ನಡೆದನಂತರ ಮಹಾಪ್ರಭುಗಳು ಕುದುರೆಯನ್ನೇರಿ ಪಟ್ಟಾಯುಧವನ್ನಿಟ್ಟ ಚಿನ್ನದ ಪಲ್ಲಕ್ಕಿ ಮುಂತಾದವುಗಳನ್ನು ಬನ್ನಿಮಂಟಪಕ್ಕೆ ಸಾಗಗೊಳಿಸಿದರು. ಅದೇ ದಿವಸ ಮಧ್ಯಾಹ್ನ ೪ ಘಂಟೆಗೆ ನಾನಾವಿಧವಾದ ವಾದ್ಯಗಳೂ ಪ್ರಯಾಣಭೇರಿಯೂ ಮೊಳಗುತ್ತಿರಲು ಪ್ರಭುಗಳವರು ಅನರ್ಘವಾದ ಉಡುಪನ್ನು ಧರಿಸಿಕೊಂಡು ಆನೆಯಮೇಲಿಟ್ಟಿರುವ ಸುವರ್ಣರಚಿತವಾದ ಅಂಬಾರಿಯಲ್ಲಿ ಶ್ರೀಮದ್ಯುವರಾಜರವರು ಮತ್ತು ಶ್ರೀ ಜಯಚಾಮರಾಜೇಂದ್ರ ಒಡೆಯರವರೊಂದಿಗೆ ಮೂರ್ತಮಾಡಿದರು. ಕೂಡಲೆ ಪ್ರಯಾಣಸೂಚಕಗಳಾದ 21 ತೋಪುಗಳು ಹಾರಿಸಲ್ಪಟ್ಟವು. ಹಸ್ತಿಅಶ್ವರಥ ಪದಾತಿರೂಪವಾದ ಸೈನ್ಯದೊಡನೆ ಸ್ವಾರಿಯು ಸಕಲ ರಾಜಮರ್ಯಾದೆಗಳೊಂದಿಗೆ ದೊಡ್ಡಪೇಟೆ ಮಾರ್ಗವಾಗಿ ಪ್ರಯಾಣ ಬೆಳಸಿತು. ಅಲ್ಲಲ್ಲಿಗೆ ಪ್ರಜೆಗಳಿಂದ ಒಪ್ಪಿಸಲ್ಪಡುತ್ತಿದ್ದ ಪುಷ್ಪಗುಚ್ಛಾದಿಗಳನ್ನು ಪ್ರಭುಗಳು ಒಪ್ಪಿಸಿಕೊಳ್ಳುತ್ತಿದ್ದರು. ಉತ್ಸವವು ಬನ್ನಿಮಂಟಪಕ್ಕೆ ಬಿಜಮಾಡಿದನಂತರ ಶಮೀಪೂಜಾದಿ ಶುಭಾವಹವಾದ ಕರ್ತವ್ಯಗಳು ನಡೆದವು. ಬಳಿಕ ಪ್ರಭುಗಳು ಬೇರೆ ಉಡುಪುಗಳನ್ನು ಒಪ್ಪಿಸಿಕೊಂಡು ರಾತ್ರಿ 11 ಘಂಟೆಗೆ ಮಹೋತ್ಸವದೊಡನೆ ಅರಮನೆಗೆ ದಯಮಾಡಿಸಿದರು. ಆಗಮನಸೂಚಕಗಳಾದ 21 ತೋಪುಗಳು ಹಾರಿಸಲ್ಪಟ್ಟವು.

ಈ ವರ್ಷ ಭಾರತವಸ್ತುಪ್ರದರ್ಶನವು ವಿಶೇಷವಾಗಿದ್ದುದರಿಂದ ಪ್ರತಿವರ್ಷಕ್ಕಿಂತಲೂ ಹೆಚ್ಚಾಗಿ ಪ್ರೇಕ್ಷಕರು ಆಗಮಿಸಿದ್ದರು. ಮೈಸೂರು ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡಿರುವ ಸಾಕ್ಷಾದ್ಧರ್ಮಾವತಾರಿಗಳಾದ ಪ್ರಭುವರ್ಯರಿಗೂ, ಶ್ರೀಮದ್ಯುವರಾಜರವರಿಗೂ, ಭಾವೀಪ್ರಭುಗಳಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರಿಗೂ, ಶ್ರೀಜಗದ್ಗುರು ಪಂಚಾಚಾರ್ಯರು ಇತೋಽಪ್ಯತಿಶಯವಾದ ಸಕಲಸೌಭಾಗ್ಯಾದಿಗಳನ್ನುಂಟುಮಾಡಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೊಂಬಾಯಿ ಕಾಥೆವಾಡಿ ಟ್ರೇಡಿಂಗ್ ಕಂಪನಿಯ ಪತ್ರಿಕೆಯು ಈ ವಾರದ ಪತ್ರಿಕೆಯ ಜತೆಯಲ್ಲಿ ಹಂಚಲ್ಪಟ್ಟಿರುವದು.

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ದಾಸಪ್ಪ ಎಂಬವರ ೧೪ ವರ್ಷದ ಹೇಮಾವತಿ ಎಂಬ ಹುಡುಗಿಯನ್ನು ಯಾರೋ ಅಪಹರಿಸಿಕೊಂಡು ಹೋಗಿರುವರೆಂದೂ ಪೋಲೀಸರು ಪತ್ತೇತರದೂದು ನಡೆಸಿರುವರೆಂದೂ ತಿಳಿದುಬಂದಿದೆ.

ಮೈಸೂರು ಡಿಸ್ಟ್ರಿಕ್ಟ ಡೆಪ್ಯುಟಿಕಮಿಷನರವರ ಅಧ್ಯಕ್ಷತೆಯಲ್ಲಿ ನಡೆದ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರ ಚುನಾವಣೆಯು ನ್ಯಾಯವಾಗಿ ನಡೆಯಲಿಲ್ಲವೆಂದೂ, ಮತ್ತೆ ಚುನಾವಣೆಯು ನಡೆಯಬೇಕೆಂದೂ, ಮ|| ರಾ|| ಎಂ. ಸಿ. ಲಿಂಗೇಗೌಡರು ಡೆಪ್ಯುಟಿ ಕಮಿಷನರಿಗೆ ಅರ್ಜಿಯನ್ನು ಹಾಕಿರುವರೆಂದೂ ಅವರು ಅದನ್ನು ಗವರ್ನಮೆಂಟಿಗೆ ಕಳುಹಿಸಿರುವರೆಂದೂ ತಿಳಿದುಬಂದಿದೆ.

ಈಗ್ಗೆ ಕೆಲವು ದಿವಸಗಳ ಹಿಂದೆ ರಾಜಧಾನಿಯ ಚಾಮುಂಡಿ ಎಕ್ಸ್‌ಟೆನ್ಷನ್ ಹೊಸಬಂಡೀಕೇರಿಯಲ್ಲಿರುವ ೩೫ ವರ್ಷ ವಯಸ್ಸಿನ ತಿಮ್ಮ ಎಂಬವನು ಕೃಷ್ಣಾಗ್ರಕೋಲದಲ್ಲಿ ಸೀಬೆಯಮರದಿಂದ ಇಳಿದಾಗ ನೆಲದ ಮೇಲೆ ಎರಡು ನಾಗರಹಾವುಗಳಿದ್ದು, ಅದರಲ್ಲಿ ಒಂದು ಅವನನ್ನು ಕಡಿದು ಹೆಡೆಯೆತ್ತಿ ಅವನ ಉದ್ದಕ್ಕೂ ನಿಂತುಕೊಂಡಿತೆಂದೂ, ಅವನು ಕಡಿತದ ಬಾಧೆಯಲ್ಲಿಯೇ ಮನೆಗೆ ಹೋಗಿ ಜ್ಞಾನತಪ್ಪಿ ಬಿದ್ದನೆಂದೂ, ರಾಜಪರಿವಾರದ ಕಾಳಯ್ಯನೆಂಬವನು ಚಿಕಿತ್ಸೆಯನ್ನು ಮಾಡಿದುದರಿಂದ ಬದುಕಿಕೊಂಡನೆಂದೂ ತಿಳಿದುಬಂದಿದೆ.

ಕಳೆದ ಸೆಪ್ಟಂಬರ್ ೨೩ ನೆಯ ತಾರೀಖು ಭಾನುವಾರ ಸಾಯಂಕಾಲ ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರೊಫೆಸರಾದ ಮಿ|| ಎಲ್. ರಾಮರಾಯರು ತಮ್ಮ ಪತ್ನಿ ಮತ್ತು ಮಗುವಿನ ಸಮೇತ 'ಬೇಬಿಕಾರ್' ಎಂಬ ಚಿಕ್ಕ ಮೋಟಾರಿನಲ್ಲಿ ಕುಳಿತು ಹೋಗುತ್ತಿದ್ದಾಗ ಭೀಮನಕಟ್ಟೆಮಠದ ಅನಂತರಾಮಯ್ಯ ಎಂಬವರು ನಡೆಸಿಕೊಂಡು ಬರುತ್ತಿದ್ದ ಮತ್ತೊಂದು ಮೋಟಾರು ಢಿಕ್ಕಿಹೊಡೆದು ಬೇಬಿ ಮೋಟಾರು ಎಂಟು ಅಡಿಗಳ ದೂರಕ್ಕೆ ಎಸೆಯಲ್ಪಟ್ಟಿತು. ಮಿ|| ರಾಮರಾಯರಿಗೂ ಅವರ ಪತ್ನಿಯವರಿಗೂ ತುಂಬಾ ಗಾಯಗಳಾಗಿ ಇಬ್ಬರೂ ಕೂಡಲೇ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಮಗುವಿಗೆ ಯಾವ ಅಪಾಯವಾಗಲಿಲ್ಲ.

ವರ್ತಮಾನಸಂಗ್ರಹ

ಸೆಪ್ಟೆಂಬರ್ ೨೩ಕ್ಕೆ ಅಪ್ಪೈರಾದ ವಾರದಲ್ಲಿ ಮುಂಬಯಿಯಿಂದ ಪರದೇಶಗಳಿಗೆ ೧,೭೪,೬೨,೪೫೦ ರೂಪಾಯಿಗಳ ಭಂಗಾರವು ರವಾನಿಸಲ್ಪಟ್ಟಿದೆ.

ಕ್ಯಾಟಲಿನಾ ದ್ವೀಪದ ಸಮುದ್ರದಲ್ಲಿ ಒಂದು ಬಗೆಯ ವಿಚಿತ್ರ ಮೀನುಗಳಿದ್ದು, ಅವುಗಳಿಗೆ ಪಕ್ಷಿಗಳಿಗಿರುವಂತೆ ಸುಮಾರು ೩ ಅಡಿ ಉದ್ದವಾದ ೨ ರೆಕ್ಕೆಗಳಿರುವವಲ್ಲದೆ ೩೦೦ ಗಜಗಳ ವರೆಗೆ ಹಾರಬಲ್ಲವಂತೆ!

ಅಮೇರಿಕೆಯ ಇರ್ವಿನ್ ಇಂಗರ್‌ಸೋ ಎಂಬ ಒಬ್ಬ ಪ್ರಸಿದ್ಧ ಇಂಜನಿಯರರು ಒಂದು ನೂತನ ಯಂತ್ರವನ್ನು ತಯಾರಿಸಿರುವರು. ಈ ಯಂತ್ರದ ಸಹಾಯದಿಂದ ನದಿಗಳಲ್ಲಿ ಬರುವ ಪ್ರವಾಹವನ್ನು ಪೂರ್ವಭಾವಿಯಾಗಿಯೇ ತಿಳಿದುಕೊಳ್ಳಬಹುದಂತೆ!

ಆಫ್ರಿಕಾದೇಶದಲ್ಲಿ ವಿಚಿತ್ರವಾದ ಒಂದು ಜಾತಿಯ ಜಾಡರಹುಳುಗಳಿರುವವು. ಮನುಷ್ಯರು ರಾತ್ರಿಯ ಹೊತ್ತು ಮಲಗಿರುವ ವೇಳೆಯಲ್ಲಿ ಈ ಹುಳುಗಳು ಅವರಿಗೆ ಎಚ್ಚರವಾಗದಂತೆ ತಲೆಯ ಕೂದಲುಗಳನ್ನೆಲ್ಲಾ ತಿಂದುಬಿಡುವವಂತೆ!

ಪ್ರತಿಯೊಬ್ಬ ಮನುಷ್ಯನ ಶರೀರದಲ್ಲಿಯೂ ಒಂದು ಸಣ್ಣ ಇಂಜನ್ನನ್ನು ನಡೆಯಿಸುವಷ್ಟು ವಿದ್ಯುಚ್ಛಕ್ತಿಯಿರುವದಂತೆ! ಇದನ್ನು ಅಳತೆಮಾಡಬಲ್ಲ ಒಂದು ವಿಚಿತ್ರ ಯಂತ್ರವನ್ನು ಇಂಗ್ಲೆಂಡಿನ ಒಬ್ಬ ಇಂಜನಿಯರು ತಯಾರುಮಾಡಿರುವರು.

ಲಂಡನ್ನಿನ 'ಮಾರ್ಬಲ್ ಆರ್ಚ್' ಎಂಬ ಪ್ರದೇಶದ ಸಮೀಪದಲ್ಲಿ ಸಂಪೂರ್ಣವಾಗಿ ಗಾಜಿನಿಂದಲೇ ಒಂದು ಮನೆಯು ಕಟ್ಟಲ್ಪಟ್ಟಿರುವದು. ಇದಕ್ಕೆ ಉಪಯೋಗಿಸಿರುವ ಗಾಜುಗಳಿಗೆ ಕಲ್ಲನ್ನು ಎಸೆದರೂ ಬಂದೂಕಿನಿಂದ ಹೊಡೆದರೂ ಅವುಗಳು ಒಡೆಯುವದಿಲ್ಲವಂತೆ!

ಡೆಹರಾಡೂನಿಗೆ ಸಮೀಪದಲ್ಲಿರುವ ಧಾಮಾವಾಲಾ ಎಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನಸ್ತ್ರೀಯಳಿಗೆ ಒಂದು ವಿಚಿತ್ರಶಿಶುವು ಜನಿಸಿರುವದು. ಶಿಶುವಿಗೆ ಕುತ್ತಿಗೆಯೇ ಇಲ್ಲ! ಕಣ್ಣುಗಳು ಹಣೆಯಮೇಲೂ, ಕಿವಿಗಳು ಭುಜದ ಮೇಲೂ ಇರುವುವಂತೆ! ಮುಖವು ಸಾಧಾರಣ ಕೋತಿಯಂತಿರುವದಂತೆ! ಶಿಶುವು ಮೃತಪಟ್ಟಿದ್ದು 'ರಾಸ್‌ವೆಟರ್ನಿಟಿನೋಟರ್' ಎಂಬ ಸಂಸ್ಥೆಯಲ್ಲಿ ಪ್ರದರ್ಶಿಸಲ್ಪಟ್ಟಿರುವದು.

ಫ್ರಾನ್ಸ್ ಸರಕಾರದವರು ೪ ವರ್ಷಗಳಿಂದಲೂ ಅಸಾಧ್ಯಶ್ರಮವಹಿಸಿ ಗಡಿನಾಡಿನ ರಕ್ಷಣೆಯ ಸಾಧನಗಳನ್ನು ಈಗತಾನೇ ಪೂರೈಸಿರುವರು. ಈ ರಕ್ಷಣೆಯ ಸಾಧನಗಳು ಅತ್ಯಂತ ಚಾತುರ್ಯದಿಂದ ನಿರ್ಮಿಸಲ್ಪಟ್ಟಿದ್ದು, ಕೆಲವು ಭೂಮಿಯಮೇಲೂ ಕೆಲವು ಭೂಮಿಯ ಕೆಳಗೂ ಇರುವವಲ್ಲದೆ, ಎಂತಹ ಸಿಡಿಮದ್ದಿನಿಂದಲೂ ನಾಶವಾಗದಷ್ಟು ಬಲವಾಗಿರುವವು. ಇದಕ್ಕೆ ಒಟ್ಟು ೧,೦೦,೦೦,೦೦,೦೦೦ ರೂಪಾಯಿಗಳು ಖರ್ಚಾಗಿರುವವಂತೆ!

ಐರ್ಲೆಂಡ್‌ದೇಶದಲ್ಲಿ ೪೫ ಎಕರೆ ವಿಸ್ತೀರ್ಣವಾಗಿಯೂ ೩೦ ಅಡಿ ಆಳವಾಗಿಯೂ ಇದ್ದ ಒಂದು ದೊಡ್ಡ ಕೆರೆಯಲ್ಲಿ ಇದ್ದಕ್ಕಿದ್ದಹಾಗೆ ಕೆಲವು ಗಂಟೆಗಳೊಳಗಾಗಿ ನೀರೆಲ್ಲವೂ ಬತ್ತಿಹೋಯಿತು. ಒಂದು ತಿಂಗಳವರೆಗೂ ಅದರಲ್ಲಿ ನೀರೇ ಇರಲಿಲ್ಲ. ಅನಂತರ ಒಂದು ದಿನ ಆ ಕೆರೆಯ ಪಕ್ಕದಲ್ಲಿದ್ದ ಒಂದು ಭಾವಿಯಲ್ಲಿ ಇದ್ದಕ್ಕಿದ್ದಹಾಗೆ ನೀರು ಉಕ್ಕಿ ಬಂದು ಸ್ವಲ್ಪ ಹೊತ್ತಿನೊಳಗಾಗಿ ಕೊಳವು ಪೂರ್ವದಂತೆ ತುಂಬಿಕೊಂಡಿತು.

ಆಗಸ್ಟ್ ತಿಂಗಳ ಅಂತ್ಯಭಾಗದಲ್ಲಿ ಚೀನಾದೇಶದಲ್ಲಿ ಕೆಲವು ಭಾರೀ ಭೂಕಂಪಗಳಾಗಿ ಅದರಿಂದ ೫,೦೦೦ ಜನರು ಮೃತಪಟ್ಟರು. ಯಾಂಗಟ್ಸೆಕಿಯಾಂಗ್ ನದಿಯಲ್ಲಿ ಪ್ರವಾಹವು ಹೆಚ್ಚಿ ಸುತ್ತಮುತ್ತಲ ಪ್ರದೇಶದಲ್ಲೆಲ್ಲಾ ಬಹಳ ನಷ್ಟವನ್ನುಂಟುಮಾಡಿತು. ಟಾಟಂಗ್ ಎಂಬ ನಗರದಮೇಲೆ ಕಲ್ಲುಗಳ ಸುರಿಮಳೆಯಾಗಿ ಸಾವಿರಾರು ಜನರು ಮೃತಪಟ್ಟರು. ಒಂದು ದೊಡ್ಡ ಬಂಡೆಯು ಪೋಲೀಸ್ ಸ್ಟೇಷನ್ನಿನಮೇಲೆ ಬಿದ್ದು ಅದರೊಳಗಿದ್ದ ಪೋಲೀಸರೆಲ್ಲರೂ ಮೃತಪಟ್ಟರು

ಮೈಸೂರು ಸೀಮೆಯ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ರಾಜಧರ್ಮಪ್ರವೀಣ
ಶ್ರೀಮಾನ್ ಪಿ. ಮಹಾದೇವಯ್ಯನವರು.

ಈ ಮಹೋದಯರು ವೀರಶೈವಮತೀಯರು. ಮ್ಮ ಬುದ್ಧಿಪ್ರತಿಭೆಯಿಂದ ಲೋಕದಲ್ಲಿ ಅಸಾಧಾರಣ ದ ಕೀರ್ತಿಯನ್ನು ಗಳಿಸಿಕೊಂಡವರು. ಮುನಸೀಫ್ ನದಿಂದ ಅಭಿವೃದ್ಧಿಯನ್ನು ಹೊಂದುತ್ತ ಹೊಂ ತ್ತ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶ ಸ್ಥಾನ ನ್ನಲಂಕರಿಸಿದವರು. ಇವರೀ ಸಚ್ಚರಿತ್ರವನ್ನು ಈ ದಲು ನಾವು ನಮ್ಮ ಪತ್ರಿಕೆಯಲ್ಲಿ ಒಂದೆರಡು ಸಾರಿ ಪೂರ್ಣವಾಗಿ ಪ್ರಕಟಿಸಿದುದು ವಾಚಕರ ಸ್ಮೃತಿ ದಲ್ಲಿರಬಹುದು. ಮದ್ರಾಸಿನಲ್ಲಿ ಹೊರಡುತ್ತಿರುವ ಪ್ರಸಿದ್ಧವಾದ "ಜಸ್ಟಿಸ್" ಎಂಬ ಇಂಗ್ಲೀಷ ತ್ರಿಕೆಯು ಕಳೆದ ತಿಂಗಳು ೧೩ ನೆಯ ತಾರೀಖಿನ ಚಿಕೆಯಲ್ಲಿ ಈ ಮಹೋದಯರ ಗುಣಗಾನವನ್ನು ಾಡಿರುವುದು. ಆ ಪತ್ರಿಕೆಯ ಅನುವಾದವು ನವಿಮ್ಮಾ ದ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದನ್ನು ರೂ ಓದಿನೋಡಬೇಕೆಂದಾಶಿಸುತ್ತೇವೆ.

ಈ ಮಹೋದಯರು ಈಗ್ಗೆ ಕೆಲವು ದಿವಸಗಳ ರ್ವದಲ್ಲಿ ನಮ್ಮ ಮಹಾಪ್ರಭುಗಳವರಿಂದ ಹೈಕೋ ನ ಪ್ರಧಾನ ನ್ಯಾಯಾಧೀಶರಾಗಿ ನಿಯಮಿಸಲ್ಪ ರು. ಆದಾಗ್ಯೂ ಆ ಸ್ಥಾನವು ಕಾಯಂ ಆಗಿದ್ದಿಲ್ಲ. ರಿಂದ ನಾನಾಜನರು ನಾನಾವಿಧವಾದ ತರ್ಕೋಪ ರ್ಕಗಳನ್ನು ಮಾಡುತ್ತಿದ್ದರು. ಆದರೆ ಸರ್ವಜ್ಞ ರ್ಗಳಂತಿರುವ ನಮ್ಮ ಮಹಾಪ್ರಭುಗಳವರು ಈ ಹೋದಯರಲ್ಲಿರತಕ್ಕ ಅನ್ಯಾದೃಶವಾದ ಕಾಯಿದೆ ಂಡಿತ್ಯವನ್ನು ಕಂಡು ಇವರಿಗೆ ಆ ಮಹಾಸ್ಥಾನ ನ್ನು ಕಾಯಂಮಾಡಿದರು. ಇದರಿಂದ ಮೈಸೂರು ನ ಪ್ರಜೆಗಳಿಗುಂಟಾಗಿರುವ ಸಂತೋಷವು ಅಸ ನಾಗಿದೆ. ಬೊಂಬಾಯಿ, ಮದ್ರಾಸ್ ಮೊದಲಾದ ಂತನಿವಾಸಿಗಳೂ ಸಹ ಈ ಮಹಾಸ್ಥಾನಕ್ಕೆ ಇಂಥ ಣಿಗಳು ದೊರೆಯುವುದೇ ದುರ್ಲಭವೆಂದು ಉದ್ಘೋ ತ್ತಿರುವರು. ಮೈಸೂರು ಸೀಮೆಯು ಕೇವಲ ಪರಿಶುದ್ಧವಾದ ಕನ್ನಡಸೀಮೆಯಾಗಿದ್ದರೂ ಇಂದಿನವರೆಗೂ ಈ ಸೀಮೆಯ ಮುಖ್ಯ ನ್ಯಾಯಸ್ಥಾನವನ್ನು ಆಂಧ್ರರೂ, ದ್ರಾವಿಡರೂ, ಇಂಗ್ಲೀಷರೂ ಅಲಂಕರಿಸಿದ್ದರಲ್ಲದೆ ಕನ್ನಡಮಾತೆಯ ಮಕ್ಕಳಾರೂ ಅಲಂಕರಿಸಿದ್ದಿಲ್ಲ. ಆದರೆ ಈ ಸಮಯದಲ್ಲಿ ಈ ಕನ್ನಡನಾಡಿನ ಮುಖ್ಯ ನ್ಯಾಯಪೀಠವನ್ನು ಕನ್ನಡಮಾತೆಯ ಪುತ್ರನು ಅಲಂಕರಿಸಿ ಕನ್ನಡದೇಶಕ್ಕೆ ಅಸಾಧಾರಣವಾದ ಗೌರವವನ್ನುಂಟುಮಾಡಿ ಕನ್ನಡಮಾತೆಯ ವೈಭವವನ್ನು ಹೆಚ್ಚಿಸಿದುದು ಕನ್ನಡಿಗರ ಸುದೈವವೆಂದೇ ಹೇಳಬೇಕಾಗಿದೆ. ನಮ್ಮ ಮಹಾಪ್ರಭುಗಳವರು ಅಸಾಧಾರಣವಾದ ಪ್ರೇಮಾತಿಶಯದಿಂದ ಈ ಮಹೋದಯರಿಗೆ ಇಂಥ ಉನ್ನತಸ್ಥಾನವನ್ನು ಅನುಗ್ರಹಿಸಿದುದಕ್ಕಾಗಿ ಇಡೀ ಕರ್ಣಾಟಕದೇಶವೇ ಮಹಾಪ್ರಭುಗಳವರಿಗೆ ಚಿರ ಋಣಿಯಾಗಿದೆಯೆಂದು ಸಾರಿ ಸಾರಿ ಹೇಳಬಹುದಾಗಿದೆ. ಈ ವರ್ಷ ದಸರಾಮಹೋತ್ಸವಸಮಯದಲ್ಲಿ ನಮ್ಮ ಮಹಾಪ್ರಭುಗಳವರು ಇವರಲ್ಲಿ ಸ್ವಭಾವಸಿದ್ಧವಾಗಿ ವಾಸಮಾಡಿಕೊಂಡಿರುವ ರಾಜಧರ್ಮಪ್ರವೀಣತೆಯನ್ನು ಕಂಡು ಇವರಿಗೆ "**ರಾಜಧರ್ಮ ಪ್ರವೀಣ**" ಎಂಬ ಅಮೋಘವಾದ ಪದವಿಯನ್ನು ಅನುಗ್ರಹಿಸಿದುದು ಸುವರ್ಣಕ್ಕೆ ಪರಿಮಳವನ್ನು ಕೂಡಿಸಿದಂತಾಗಿದೆ. ಈ ರಾಜಧರ್ಮಪ್ರವೀಣಮಹೋದಯರು ಮಹಾಪ್ರಭುಗಳವರ ಕೃಪಾವಿಶೇಷದಿಂದ ವಿಶೇಷ ಕಾಲದವರೆಗೆ ಈ ಮಹಾಸ್ಥಾನವನ್ನಲಂಕರಿಸುವಂತಾಗಲೆಂದು ಕರ್ಣಾಟಕದೇಶೀಯರು ಜಗದೀಶ್ವರನನ್ನು ಪ್ರಾರ್ಥಿಸುತ್ತಿರುವರು. ಜಗದೀಶ್ವರನು ಈ ಮಹೋದಯರಿಗೆ ಆಯುರಾರೋಗ್ಯಭಾಗ್ಯಾಭಿವೃದ್ಧಿಯನ್ನುಂಟುಮಾಡಿ ಇವರ ದ್ವಾರಾ ಪ್ರಧಾನನ್ಯಾಯಸ್ಥಾನವು ಸರ್ವತೋಮುಖವಾಗಿ ಬೆಳಗುವಂತೆ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಸ್ವೀಕಾರ

ಬೆಂಗಳೂರು ಡಿ|| ಬಿಡದಿ ಗ್ರಾಮದ ಕೈ|| ಚನ್ನಶೆಟ್ಟರ ಹೆಸರಿನಿಂದ ಗಣಾರಾಧನೆಯ ಮೂಲಕ ವೃಷಭೋತ್ಸರ್ಗಮಹಾಕಾರ್ಯವನ್ನು ನೆರವೇರಿಸಿದ ಸಮಾರಂಭದಲ್ಲಿ ಅವರ ದತ್ತಪುತ್ರರಾದ ಮ|| ರಾ|| ಸಿ. ರೇವಣ್ಣನವರು ಜಗದಾಚಾರ್ಯರ ಪವಿತ್ರಾಭಿಧಾನದಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **3** ರೂ. ಗಳು ಮ|| ರಾ|| ಬಿ. ಸಿ. ರೇವಣ್ಣಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಕಡೂರು ತಾ|| ದೇವರಹೊಸಳ್ಳಿ ಗ್ರಾಮದ ಮ|| ರಾ|| ಕೆ. ಯಂ. ಬಸವರಾಜ ಇವರಿಗೆ ಬಹು ದಿವಸಗಳಿಂದ ಮಕ್ಕಳಾಗದಿದ್ದು ಶ್ರೀ ಜಗದ್ಗುರು ರೇವಣಸಿದ್ಧೇಶ್ವರನ ಕೃಪಾಕಟಾಕ್ಷದಿಂದ ಪುತ್ರರತ್ನವು ಜನಿಸಿ ಸದರಿ ಮಗುವಿಗೆ ರೇವಣಸಿದ್ಧನೆಂಬ ಪವಿತ್ರ ಗುರುನಾಮವನ್ನಿಟ್ಟ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಗಳು ಮ|| ರಾ|| ದಿಬ್ಬೂರು ಸ್ಕೂಲ್ ಮಾಸ್ಟರ್ ಎ. ಚನ್ನಪ್ಪನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಶಹರ ನಿವಾಸಿಗಳಾದ ಗಂಜಿಗಟ್ಟಿ ಹಿರೇಮಠದ ಶ್ರೀಮತಿ ಲಿಂಗವ್ವನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ಮ|| ರಾ|| ಕರವೀರಶೆಟ್ಟರ ರಾಚಪ್ಪನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹರಪನಹಳ್ಳಿ ಗೇಟಿನ ಬಸವೇಶ್ವರನಿಗೆ ರುದ್ರಾಭಿಷೇಕ ಮಾಡಿದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ವೇ|| ಕೊಟ್ರಬಸವಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೧ನೇ ಪುಟದಿಂದ ಮುಂದುವರಿದುದು]

ಶ್ರೀಮಾನ್ ಪಿ. ಮಹಾದೇವಯ್ಯನವರು 1931 ನೆಯ ಇಸವಿಯಲ್ಲಿ ಹೈಕೋರ್ಟಿಗೆ ನೇಮಿಸಲ್ಪಟ್ಟರು. ಮತ್ತು 1932 ನೆಯ ಇಸವಿಯಲ್ಲಿ ಅಫಿಸಿಯೇಟಿಂಗ್ ಚೀಫ್ ಜಸ್ಟಿಸರಾಗಿ ನೇಮಿಸಲ್ಪಟ್ಟರು; ಸದರಿ ಸ್ಥಾನವು ಶ್ರೀಮನ್ಮಹಾರಾಜರಿಂದ ಈಗತಾನೇ ಕಾಯಂಮಾಡಲ್ಪಟ್ಟಿರುವದು.

ಶ್ರೀಮಾನ್ ಪಿ. ಮಹಾದೇವಯ್ಯನವರು ನ್ಯಾಯಶಾಸ್ತ್ರದಲ್ಲಿ ಪ್ರವೀಣರೆಂಬುದಕ್ಕೆ ಅವರು ಅಲಂಕರಿಸಿರುವ ಉಚ್ಚಸ್ಥಾನವೇ ಸಾಕ್ಷಿಯಾಗಿರುತ್ತದೆ. ಸಂಸ್ಥಾನದ ಲಾ ರಿಪೋರ್ಟುಗಳು ಇವರ ಸ್ಪಷ್ಟವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳಿಂದ ಕೂಡಿ ಅಮೂಲ್ಯವೆನಿಸಿರುತ್ತವೆ. ಇಷ್ಟೇ ಅಲ್ಲ! ಇವರು ಸರ್ವತೋಮುಖವಾದ ಪಂಡಿತರು. ಕಲಾಕುಶಲವಿದ್ಯೆಗಳಲ್ಲಿ ಇವರಿಗೆ ಪ್ರೀತಿ ಬಹಳ. ಸಂಗೀತದಲ್ಲಿ ಇವರಿಗೆ ತುಂಬಾ ಪರಿಶ್ರಮವಿರುವದಲ್ಲದೆ ವೀಣೆಯನ್ನು ಚೆನ್ನಾಗಿ ಅಭ್ಯಾಸ ಮಾಡಿರುತ್ತಾರೆ. ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿ ಒಳ್ಳೇ ವ್ಯಾಯಾಮಗಾರರಾಗಿದ್ದು ಅನೇಕ ಟೋರ್ನಮೆಂಟುಗಳಲ್ಲಿ ಬಹುಮಾನ ಪಡೆದಿರುವರಲ್ಲದೆ ಇಂದಿಗೂ ಇವರ ಶರೀರದಾರ್ಢ್ಯತೆಯು ಒಂದೇಸಮನೆ ಇರುವದು.

ಕೆಲಸ ಮಾಡುವದರಲ್ಲಿ ಇವರನ್ನು ಅಸಮಾನರೆಂದು ಧಾರಾಳವಾಗಿ ಹೇಳಬಹುದು. ತಮ್ಮ ಕರ್ತವ್ಯವನ್ನು ನೆರವೇರಿಸುವದರಲ್ಲಿ ಇವರಿಗೆ ಸ್ವಲ್ಪವೂ ಬೇಸರವಿಲ್ಲ. ಇವರು ರಾತ್ರಿ 9 ಘಂಟೆ ಸಮಯದಲ್ಲಿ ಛೇಂಬರನ್ನು ಬಿಟ್ಟುಹೋಗುವದೇನೂ ಅಪರೂಪವಲ್ಲ. ನ್ಯಾಯವಾದಿಗಳ ಸಂಪೂರ್ಣ ವಿಶ್ವಾಸವನ್ನು ಸಂಪಾದಿಸುವದೊಂದೇ ಇವರ ಮುಖ್ಯವಾದ ಧ್ಯೇಯವಾಗಿರುವದು. ಇವರ ಮೇಲ್ಪಂಕ್ತಿಯಿಂದ ಇಂದಿನ ನ್ಯಾಯಸ್ಥಾನಗಳಲ್ಲಿ ಕರ್ತವ್ಯನಿಷ್ಠತೆ ಮತ್ತು ಕಾಯಿದೆಯ ಪಕ್ಷಪಾತವೆಂಬ ಹೊಸ ಹುರುಪು ಕಾಣುತ್ತಿರುವದು.

ಪೋಲೆಂಡ್‌ದೇಶದ ಡಂಕೆಯೋಸ್ಕಿ ಎಂಬ ಶಾಸ್ತ್ರಜ್ಞನು ೧೯೩೧ ನೆಯ ಇಸವಿಯಲ್ಲಿ ಭಂಗಾರವನ್ನು ಮಾಡುವ ವಿಧಾನವನ್ನು ಕಂಡುಹಿಡಿದನು. ಈ ಸಂಬಂಧವಾಗಿ ಏನೋ ಮೋಸ ನಡೆಯಿತೆಂದು ಅವನು ೨ ವರ್ಷ ಕಾರಾಗೃಹವಾಸಕ್ಕೆ ಗುರಿಯಾಗಿ, ಕಾರಾಗೃಹದಿಂದ ಬಿಡುಗಡೆಹೊಂದಿದಕೂಡಲೇ ಇಟಲಿಯ ರಿವೀರಾ ಎಂಬಲ್ಲಿ ಹೊಸದಾಗಿ ಒಂದು ಶೋಧನಗೃಹವನ್ನು ಏರ್ಪಡಿಸಿ ಅಲ್ಲಿ ತನ್ನ ಕಾರ್ಯವನ್ನು ಮುಂದುವರಿಸಿರುವರು. ಇವನು ಮಾಡುತ್ತಿರುವ ಶೋಧನಕಾರ್ಯವು ಫಲಪ್ರದವಾದರೆ ಅವನೊಡನೆ ಒಂದು ಭಾರಿ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಅಮೇರಿಕಾದೇಶದ ಒಂದು ಕಂಪೆನಿಯವರು ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಕನ್ನಡಿಗರೇ, ಇನ್ನಾದರೂ ಜಾಗ್ರತರಾಗಿರಿ.

೧. ಅಯ್ಯಾ! ನೀವು ಕನ್ನಡ ವರ್ತಕರಲ್ಲವೇ? ಅಂದಮೇಲೆ ಕನ್ನಡಿಗರ ಅಭಿಮಾನವು ಇರಬಾರದೆ? ಇದ್ದರೆ ಕೇಳಿರಿ! ನೀವು ವಾಸಿಸುವದು ಕನ್ನಡನಾಡು, ಉಣ್ಣುವದು ಕನ್ನಡನಾಡಿನ ಅನ್ನ. ಅಂದಮೇಲೆ ಕನ್ನಡತಾಯಿಯ ಮಕ್ಕಳಲ್ಲವೇ? ಹಾಗಾದರೆ ನಿಮ್ಮ ಮನೆತನದ ಹಳೇ ನಡೆನುಡಿಗಳನ್ನೇಕೆ ಕೈಬಿಟ್ಟಿರಿ? ಪರರ ಜಾಲಕ್ಕೆ ಮನಸೋತು ಮರೆತುಹೋಯಿತೋ? ನಿಮ್ಮಲ್ಲಿ ಅಂಥ ಯೋಗ್ಯತೆ ಇಲ್ಲವೋ? ಇದ್ದರೆ ಎಲ್ಲ ನಾಡಿನವರು ತಮ್ಮ ಪೂರ್ವಜರ ನಡೆನುಡಿಗಳನ್ನು ಆಚರಿಸುವಂತೆ ಆಚರಿಸಬಹುದಾದ ಒಂದಾದರೂ ಗುಣವು ನಿಮ್ಮಲ್ಲಿ ಇಲ್ಲವಲ್ಲ! ನಿಮಗೆ ಸ್ವಾಭಿಮಾನವಿಲ್ಲವೇ? ಇದ್ದರೆ ನಿಮಗೆ ನಿಮ್ಮ ವರ್ಷದ ಮೊದಲನೆಯ ದಿವಸ ಯಾವದು? ಗೊತ್ತಿದ್ದರೆ ಹೀಗೇಕೆ ದೀಪಾವಳಿಯಲ್ಲಿ ದುಂದುಗಾರರಾಗುವಿರಿ? ನಿಮ್ಮ ನಿಮ್ಮ ಅಂಗಡಿಗಳ ಬುಕ್ಕುಗಳನ್ನು ಏಕೆ ಬದಲುಮಾಡುವಿರಿ? ಯಾವ ನಾಡಿನವರೇ ಆಗಲಿ ವರ್ಷಾರಂಭವನ್ನು ಮಾಡಬೇಕಾದರೆ ತಮ್ಮ ನಾಡಿನ ಶಕಪುರುಷರ ಜನನದ ಮಿತಿಯನ್ನು ಗಣನಗೆ ತಂದು ಹೊಸವರ್ಷವನ್ನು ಆರಂಭಿಸುವರಲ್ಲವೇ?

೨. ಯೂರೋಪದವರು ಕ್ರೈಸ್ತನ ಮಿತಿಯನ್ನು ಜನವರಿ ಮೊದಲನೆಯ ತಾರೀಖಿನಿಂದಲೂ, ಮುಸಲ್ಮಾನರು ಮಹಮ್ಮದ ಪೈಗಂಬರರ ಹಿಜರಿ ಫಸಲಿ ಇಸ್ವಿಯ ಮೊದಲನೇ ತಾರೀಖಿನಿಂದಲೂ, ನಮ್ಮ ದಕ್ಷಿಣದವರು ಶಾಲಿವಾಹನನ ಶಕೆಯನ್ನು ಚೈತ್ರ ಶು|| ೧ ಪ್ರತಿಪದೆಯಿಂದಲೂ ಆರಂಭಿಸುತ್ತ ಬಂದಿರುತ್ತಾರೆ. ನಮ್ಮ ಪೂರ್ವಜರು ಚೈತ್ರದಿಂದಲೇ ವರ್ಷಾರಂಭವನ್ನು ಮಾಡುತ್ತ ಬಂದಿರುತ್ತಾರೆಂಬುವದಕ್ಕೆ ಅನೇಕ ಆಧಾರಗಳುಂಟು. ಚೈತ್ರ ಶು|| ೧ ಪ್ರತಿಪದೆಗೆ ಯುಗಾದಿಯೆಂದು ಗೌರವದ ಹೆಸರನ್ನಿಟ್ಟು ಹೊಸವರ್ಷವನ್ನು ಪ್ರಾರಂಭಿಸಿ ತಮ್ಮ ಲೆಖ್ಖಪತ್ರಗಳ ವಹಿ (ಬುಕ್ಕು) ಗಳನ್ನು ಬದಲು ಮಾಡುತ್ತಿದ್ದರು. ಈಗಲೂ ಕೆಲವುಕಡೆಗೆ ಚೈತ್ರದಿಂದಲೇ ಹೊಸವರ್ಷವನ್ನು ಪ್ರಾರಂಭಿಸುತ್ತಾರೆ.

೩. ಕರ್ನಾಟಕದವರು ಇತ್ತೀಚೆಗೆ ಮುಂಬಯಿ ಮತ್ತು ಉತ್ತರಹಿಂದುಸ್ಥಾನದವರ ಕೂಡ ವ್ಯಾಪಾರವನ್ನು ಹೆಚ್ಚಾಗಿ ಬೆಳೆಯಿಸಿ (ಅವರ ಭಾಷೆ ತಿಳಿಯದ ಕಾರಣ ಲೆಖ್ಖದಲ್ಲಿ ತೊಂದರೆಯಾಗಬಾರದೆಂಬ ಭಾವನೆಯಿಂದ) ಕಾರ್ತಿಕ ಶು|| ೧ (ವಿಕ್ರಮಶಕದಂತೆ) ದೀಪಾವಳಿಗೆ ವಹಿಗಳನ್ನು ಬದಲುಮಾಡಲಿಕ್ಕೆ ಹತ್ತಿದರು. ಇದೇ ರೂಢಿಯು ಎಲ್ಲರಲ್ಲಿಯೂ ವ್ಯಾಪಿಸಿ ಎಲ್ಲ ಕಡೆಯಲ್ಲಿಯೂ ದೀಪಾವಳಿಯೇ ಮುಖ್ಯದಿವಸವೆಂದು ಇತ್ತೀಚೆಗೆ ಕನ್ನಡಿಗರು ಆರಂಭಿಸಹತ್ತಿದರು. ಕನ್ನಡಿಗರಾದ ನಾವು ಇಂಥ ಸಣ್ಣಸಣ್ಣ ವಿಷಯಗಳಲ್ಲಿಯೂ ಕೂಡ ಸ್ವತಂತ್ರವೃತ್ತಿಯನ್ನು ಇಟ್ಟುಕೊಳ್ಳದೆ ನಿರಭಿಮಾನಿಗಳಾಗಿ ಪರರ ಮೇಲೆ ಅವಲಂಭಿಸುವೆವೆಂಬುದು ಇದರಿಂದ ಚನ್ನಾಗಿ ಒಡೆದು ಕಾಣುವದು.

೪. ಪ್ರತಿಯೊಂದು ನಾಡಿನವರಿಗೂ ತಮ್ಮ ನಾಡಿನ ಅಭಿಮಾನವಿರಲೇಬೇಕು. ಇಲ್ಲದಿದ್ದರೆ ನಾವು ಮನುಷ್ಯರೆಂಬ ಹೆಸರಿಗೆ ಸರ್ವಥಾ ಪಾತ್ರರಾಗಲಾರೆವು. ಆದ ಕಾರಣ ಇಲ್ಲಿಯವರೆಗೆ ಆದದ್ದಾಯಿತು; ಇನ್ನು ಮೇಲೆಯಾದರೂ ನಮ್ಮ ಕನ್ನಡ ಬಂಧುಗಳು ಜಾಗ್ರತರಾಗಿ ದೀಪಾವಳಿ ಹಬ್ಬದಲ್ಲಿ ಲೆಕ್ಕಪತ್ರದ ಗೊಡವೆಯನ್ನು ಬಿಟ್ಟುಕೊಟ್ಟು ಚೈತ್ರದಿಂದಲೇ ತಮ್ಮ ತಮ್ಮ ವ್ಯವಹಾರದ ವಹಿಗಳನ್ನು ಬದಲುಮಾಡಿಕೊಂಡು ಹೊಸವರ್ಷವನ್ನಾಗಿ ಮಾಡಿಕೊಳ್ಳಬೇಕೆಂದು ಸರ್ವ ಕನ್ನಡ ಬಂಧುಗಳಲ್ಲಿ ಪ್ರಾರ್ಥನೆ.

೫. ಕರ್ನಾಟಕದ ಪ್ರಮುಖ ವ್ಯಾಪಾರಸ್ಥರು ಈ ವಿಷಯವನ್ನು ಮನಸ್ಸಿನ ಮೇಲೆ ತೆಗೆದುಕೊಂಡು ಚೈತ್ರದಿಂದಲೇ ಲೆಕ್ಕಪತ್ರಗಳ ವಹಿ (ಬುಕ್ಕು) ಗಳನ್ನು ಬದಲಾಯಿಸುವರೆಂದು ನಂಬಿರುವ,

ಕೃತಪುರ (ಗದಗ) ಉಮಚಗಿ ಶಿವನಗೌಡ
ತಾ|| ೨೫-೯-೩೩. ಹೊಸ್ನಗುಡಿ ಬಸಪ್ಪ.

ಶ್ರೀಮದ್ವೀರಶೈವ ಸೇವಾಸಂಘ.

ಬೀರೂರು.

ಇತೀಚೆಗೆ ಪ್ರತಿಯೊಂದು ಸಮಾಜದವರೂ ಅಭಿವೃದ್ಧಿಯನ್ನು ಹೊಂದುತ್ತಿರುವುದೂ ತಮ್ಮ ತಮ್ಮ ಸಮಾಜದಲ್ಲಿಯ ಅನೈಕಮತ್ಯವನ್ನು ಹೋಗಲಾಡಿಸಲು ಸಂಘಶಕ್ತಿಯಮೂಲಕ ಪ್ರಯತ್ನಿಸುತ್ತಿರುವುದೂ ಸುಯಷ್ಟೆ! ನಮ್ಮ ವೀರಶೈವಸಮಾಜಾಭಿವೃದ್ಧಿಯನ್ನು ಮಾಡಬೇಕೆಂಬ ಸದುದ್ದೇಶದಿಂದ ಬೀರೂರಿನ ಪುರಪ್ರಮುಖರು ಬಂದು ಸಭೆಸೇರಿ ಮೇಲ್ಕಂಡ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿ ಕೆಳಗೆ ಕಂಡಂತೆ ಉದ್ದೇಶಾದಿಗಳನ್ನು ನಿರ್ಧರಿಸಲಾಯಿತು.

1. ಸಂಘದ ಉದ್ದೇಶ—ಕಾರಣಾಂತರಗಳಿಂದ ಸಮಾಜದಲ್ಲಿ ಹಬ್ಬಿರುವ ಅಸಹನೆ ಅನಾದರಣೆ ಅನೈಕತ್ಯಾದಿಗಳನ್ನು ದೂರಗೊಳಿಸಿ ವಿವೇಕ, ಏಕಮತ್ಯ ಧರ್ಮಜಾಗೃತಿ ಮುಂತಾದ ಸಮಾಜಸುಧಾರಣೆ ಮಾರ್ಗಗಳನ್ನು ವೃದ್ಧಿಗೊಳಿಸುವಿಕೆ, ಅಹಿಂಸಾ, ಪರೋಪಕಾರ, ಜನಾನುರಾಗ, ಉದ್ಯೋಗತತ್ಪರತೆ, ದೈವಭಕ್ತಿ ಮುಂತಾದ ಸುಗುಣಗಳನ್ನು ಉಪನ್ಯಾಸ, ಕೀರ್ತನೆ, ಪುರಾಣೇತಿಹಾಸಗಳ ಬೋಧನೆ ಮೂಲಕ ತಿದ್ದುವಿಕೆ, ರಾಷ್ಟ್ರ ಮತ್ತು ಸಮಾಜೋದ್ಧಾರಕರಾದ ಆಧುನಿಕ ಮಹನೀಯರ ಸಚ್ಚರಿತ್ರೆಗಳ ಪಠನ ಶ್ರವಣಗಳ ಮೂಲಕ ಸಮಾಜದ ತರುಣವರ್ಗವನ್ನು ಸುಧಾರಣೆಗೊಳಿಸುವಿಕೆ, ಮತ್ತು ದೇವತಾಸೇವಾದಿ ಸತ್ಕಾರ್ಯಗಳಲ್ಲಿ ಹಾಗೂ ಅನಾಥರಕ್ಷಣೆ ಅಪನ್ನಿವಾರಣಾದಿ ಕಾರ್ಯಗಳಲ್ಲಿ ಮುಂದುವರಿದು ಸಹಾಯಮಾಡಲು ತರಬಿಯತ್ ಮಾಡುವಿಕೆ. ಇವೇ ಮೊದಲಾದ ಉದ್ದೇಶಗಳನ್ನೊಳಗೊಂಡಿರತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು.

2. ಸಂಘದ ಧನನಿಧಿ—ಸಂಘದ ಕಾರ್ಯಕಲಾಪಗಳು ಸುಗಮವಾಗಿಯೂ, ನಿರಾತಂಕವಾಗಿಯೂ, ಚಿರಕಾಲ ನಡೆಯುವುದಕ್ಕೂ; ಮತ್ತು, ಬೇಕಾದ ಸಹಾಯಸಂಪತ್ತುಗಳನ್ನೊದಗಿಸುವದಕ್ಕೂ ಒಂದು ಧನನಿಧಿಯನ್ನೇರ್ಪಡಿಸಿ ಹಣವನ್ನು ಚಂದಾರೂಪವಾಗಿ ಶೇಖರಿಸಬೇಕೆಂಬ ಠರಾವು ನಿರ್ಣಯವಾಗಿ ಆ ದಿವಸವೇ ಸಭಿಕರಿಂದ ಸುಮಾರು 400 ರೂಪಾಯಿಗಳವರೆಗೆ ಚಂದಾರೂಪವಾಗಿ ವಾಗ್ದಾನವು ನಡೆದುದಲ್ಲದೆ ಸಾಹುಕಾರ್ ಕಾಫೀಪ್ಲಾಂಟರ್ ಶ್ರೀ|| ಪತ್ರಿ. ಕೆ. ಶಿವಪ್ಪಯ್ಯನವರಿಂದ ಸಂಘದ ಉಪಯೋಗಕ್ಕಾಗಿ ಒಂದು ವಿಶಾಲವಾದ ಕಟ್ಟಡವೂ, ಇನ್ನು ಕೆಲವು ದೊಡ್ಡ ಮನುಷ್ಯರುಗಳಿಂದ ಕುರ್ಚಿ, ಮೇಜು, ಬೆಂಚು, ಪೆಟ್ಟಿಗೆ. ಗಡಿಯಾರವೇ ಮುಂತಾದ ಸಾಮಾನುಗಳೂ ಕೊಡಲ್ಪಟ್ಟವು.

3. ಪುಸ್ತಕಭಂಡಾರ—ರಾಷ್ಟ್ರೀಯನೀತಿ, ಧರ್ಮಬೋಧನೆಗಳಿಗೆ ತಕ್ಕ ಪುರಾಣ, ಇತಿಹಾಸ, ಕಾದಂಬರಿ ಮೊದಲಾದ ವಿವಿಧ ಪುಸ್ತಕಗಳಿಂದ ಕೂಡಿದ ಒಂದು ಲೈಬ್ರರಿಯೂ ಕೆಲವು ಮಾಸಿಕ ಮತ್ತು ದೈನಿಕವೃತ್ತಪತ್ರಿಕೆಗಳಿಂದ ಕೂಡಿದ ವಾಚನ ಶಾಲೆಯೂ ಇದಕ್ಕೆ ಅಂಗವಾಗಿರಬೇಕೆಂದು ನಿರ್ಧರಿಸಿದನಂತರ ಕೆಲವರು ತಕ್ಕ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ತರಿಸಿಕೊಡಲು ವಾಗ್ದಾನಮಾಡಿದರಲ್ಲದೆ ಲೈಬ್ರರಿಗೆ ಕೆಲವು ಪುಸ್ತಕಗಳು ಆ ದಿನವೇ ಒಪ್ಪಿಸಲ್ಪಟ್ಟವು.

4. ಕಾರ್ಯನಿರ್ವಾಹಕಮಂಡಲಿ—ಈ ಸಂಘಚಾಲನೆಗೆ ಸಾಹುಕಾರ್ ಕಾಫೀಪ್ಲಾಂಟರ್ ಶ್ರೀ|| ಪತ್ರಿ ಕೆ. ಶಿವಪ್ಪಯ್ಯನವರು ಪ್ರೆಸಿಡೆಂಟರಾಗಿಯೂ, ಮ|| ಕೆ. ವಿ. ಚನ್ನಯ್ಯನವರು ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಬಿ. ಎಂ. ಹಾಲಯ್ಯನವರು, ಹೆಚ್. ಎಜ್. ಬಸಪ್ಪನವರು ಮತ್ತು ಎಸ್. ಚಿಕ್ಕವೀರಯ್ಯನವರು ಸಂಘದ ಕಾರ್ಯದರ್ಶಿಗಳಾಗಿಯೂ 35 ಜನರು ಕಮಿಟಿಯ ಮೆಂಬರರಾಗಿಯೂ ಸರ್ವಾನುಮೋದದಿಂದ ಚುನಾಯಿಸಲ್ಪಟ್ಟರು.

5. ಸ್ವಯಂಸೇವಕರ ಮಂಡಲಿ—ಸಮಾಜಸೇವಾನಿರತರಾಗಿ ಸಂಘದಲ್ಲಿ ಕೆಲಸವನ್ನು ನಿರ್ವಹಿಸಲು ಉಮೇದುವಾರರಾದ 40 ಮಂದಿ ತರುಣರ ಒಪ್ಪಿಗೆಯ ಮೇರೆಗೆ ಸ್ವಯಂಸೇವಕರ ಮಂಡಲಿಯು ಸ್ಥಾಪಿಸಲ್ಪಟ್ಟನಂತರ ಸಭೆಯಲ್ಲಿ ಗಂಧಪುಷ್ಪಾದಿಗಳು ಹಂಚಲ್ಪಟ್ಟು ಶ್ರೀ ಪರಶಿವನ ಮತ್ತು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಜಯಘೋಷದೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಉಪವಾಸದ ಪ್ರಯೋಜನವು.

ರೋಗನಿವಾರಣೆಯಲ್ಲಿ ಉಪವಾಸದ ಪ್ರಯೋಜನವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ, ರೋಗದ ಸರಿಯಾದ ಸ್ವಭಾವವನ್ನು ಚೆನ್ನಾಗಿ ತಿಳಿದಿರುವುದವಶ್ಯವು. ರೋಗವೆಂದರೇನು? ರೋಗವೆಂಬುದು ಜೀವಸಹಿತವಾದೊಂದು ಪ್ರಾಣಿಗೆ, ಅಥವಾ ಪ್ರಾಣಿಮಾತ್ರಗಳಿಗೆ, ಶತ್ರುಪ್ರಾಯವಾದುದೂ ಅಲ್ಲ. ಶರೀರದ ಅವಯವಗಳು ಪುನಃ ತಮ್ಮ ಕೆಲಸವನ್ನು ಕ್ರಮವಾಗಿ ನಡೆಸಲು ತಮ್ಮೊಳಗೆ ಮಾಡುವ ಪ್ರಯತ್ನವೇ ರೋಗವು. ಈ ರೋಗಗಳನ್ನು ಗುಣಪಡಿಸುವ, ಮತ್ತು ಶರೀರವನ್ನು ಶುದ್ಧಿಮಾಡುವ ಪ್ರಯತ್ನವು ಮೈಯಲ್ಲಿ ತಲೆದೋರಿ ವೇಗವಾಗಿ ನಡೆದರೆ, ಅದೇ ಪ್ರಬಲವಾದ ವ್ಯಾಧಿಯೆನಿಸಿಕೊಳ್ಳುವುದು. ತೀವ್ರವಾದ ವ್ಯಾಧಿಯು ಪ್ರಾರಂಭಿಸಿ, ಅದು ಹಾಗೆಯೇ ನಿಂತುಹೋಗುವುದಕ್ಕೆ ಮಧ್ಯಕಾಲದಲ್ಲಿ ಕಾಣಿಸಿಕೊಳ್ಳುವ ವ್ಯಾಧಿಸೂಚನೆಗೆ ಮಧ್ಯಸ್ಥಿತಿಯೆಂದು ಹೇಳಬಹುದು. ತಿಳಿದಾಗಲಿ, ತಿಳಿಯದೆಯಾಗಲಿ, ಪ್ರಕೃತಿನಿಯಮಾನುಸಾರವಾದ ಆರೋಗ್ಯವಿಧಿಗಳನ್ನು ಮೀರುವುದರಿಂದಲೇ ಎಲ್ಲಾ ವ್ಯಾಧಿಗಳೂ ತಲೆದೋರುವುವು. ಆ ಆಹಾರ ಜೀರ್ಣಾವಯವಗಳು, ಮತ್ತು ಅವುಗಳನ್ನು ಜೀರ್ಣಿಸಿ ರಕ್ತಗತವಾಗಿ ಮಾಡತಕ್ಕ ಅವಯವಗಳು, ಇವುಗಳಲ್ಲಿ ತೋರುವ ನ್ಯೂನಾತಿರೇಕಗಳೇ ತೀವ್ರವಾದ ವ್ಯಾಧಿಸೂಚನೆಗಳು. ಮನುಷ್ಯರಲ್ಲಿ, ಮತ್ತು ಇತರ ಪ್ರಾಣಿಗಳಲ್ಲಿ, ಅಂತಹ ವ್ಯಾಧಿಸಂದರ್ಭಗಳಲ್ಲೆಲ್ಲ ಪ್ರಕೃತಿಯೇ ಆಹಾರಾಪೇಕ್ಷೆಯನ್ನು ತಪ್ಪಿಸುವುದರಿಂದ, ಅದು ಉಪವಾಸವನ್ನೇ ವಿಧಿಸಿದಂತಾಗುವುದು. "ಪ್ರಕೃತಿಯು ಎಂದಿಗೂ ತಪ್ಪುಮಾಡುವುದಿಲ್ಲ" ವೆಂಬುದು ನ್ಯಾಯವೇ. ಎಲ್ಲಾ ಸಂದರ್ಭಗಳನ್ನು ಆಲೋಚಿಸಿದರೂ, ಮಧ್ಯಮ ಸ್ಥಿತಿಯಲ್ಲಿಯೂ, ಪ್ರಬಲವಾದ ಸ್ಥಿತಿಯಲ್ಲಿಯೂ ರೋಗಗಳಿಗೆ ಉಪವಾಸವೇ ಅತ್ಯುತ್ತಮವಾದ ಚಿಕಿತ್ಸೆಯು.

ಉಪವಾಸದಲ್ಲಿ ಎರಡು ವಿಧವಾದ ಗುಣಭಾಗಗಳಿರುವುವು. ಅದು ಎಲ್ಲಾ ಶುದ್ಧೀಕರಣಾಂಗಗಳ ಕಾರ್ಯಗಳನ್ನು ವೇಗವಾಗಿ ನಡೆಸಿ, ದೇಹವನ್ನು ಶುದ್ಧವಾಗಿಡುವುದು, ಮತ್ತು ಆಹಾರ ಜೀರ್ಣಕ್ಕೂ, ಶರೀರಪೋಷಣೆಗೂ ಸಹಕಾರಿಗಳಾದ ದೇಹಭಾಗಗಳಿಗೆ ವಿಶ್ರಾಂತಿಯನ್ನು ಕೊಡುವುದು. ನಿದ್ರೆಯಿಂದ ದೇಹವು ಆರೋಗ್ಯವನ್ನು ಹೊಂದುವಂತೆಯೇ, ವಿಶ್ರಾಂತಿಕಾಲದಲ್ಲಿಯೂ ದೇಹವು ತಾನಾಗಿ ಕ್ರಮಪಡಿಸಿಕೊಳ್ಳುವುದು. ಸಾಮಾನ್ಯವಾಗಿ ಎಲ್ಲಾ ವ್ಯಾಧಿಗಳಲ್ಲಿಯೂ, ಆಹಾರ ಜೀರ್ಣಕ್ಕೂ, ಅದು ರಕ್ತಗತವಾಗುವುದಕ್ಕೂ ಸಹಕಾರಿಗಳಾದ ಹೊಟ್ಟೆಯೂ, ಕರುಳುಗಳೂ ಬಾಧೆಗೊಳಗಾಗುವುವು. ಉಪವಾಸದಿಂದ ಶರೀರಕ್ಕೊದಗುವ ವಿಶ್ರಾಂತಿಯ ಮೂಲಕ, ಪ್ರಕೃತಿಗೆ ಅವಯವಗಳಲ್ಲಿ ತೋರುವ ಯಾವ ಬಾಧೆಯನ್ನಾದರೂ ಗುಣಪಡಿಸಲು ಅವಕಾಶವನ್ನು ಕೊಟ್ಟಂತಾಗುವುದು. ಸಾಮಾನ್ಯವಾಗಿ ಜೀರ್ಣಾವಯವಗಳಿಗೆ ಆಗುವ ಅಪಾಯವು, ಅವುಗಳ ಒಳಗಡೆಯಲ್ಲಿ ಮೃದುವೂ, ಸೂಕ್ಷ್ಮವೂ ಆದ ಭಾಗಗಳಲ್ಲಿ ಯಾವುದಾದರೂ ಬಾಧೆಗಳನ್ನು ತೋರ್ಪಡಿಸುವುದರಿಂದ, ತಕ್ಕಷ್ಟು ಕಾಲ ಉಪವಾಸವ್ರತವನ್ನಾಚರಿಸಿದಮೇಲೆ, ಆ ಅವಯವಗಳಿಗೆ ಹೊಸಬಿಟ್ಟೆಯನ್ನು ಕೊಟ್ಟಂತಾಗುವುದು. ಇದರಿಂದ ಆಹಾರಜೀರ್ಣಕಾರ್ಯಗಳು ಚೆನ್ನಾಗಿ ನಡೆದು, ಆಹಾರವು ಸುಲಭವಾಗಿ ಜೀರ್ಣಿಸಿ, ರಕ್ತಗತವಾಗುವುದು, ಮತ್ತು ದೇಹವೆಲ್ಲವೂ ಸಂಪೂರ್ಣಾರೋಗ್ಯಸ್ಥಿತಿಯನ್ನು ಹೊಂದುವುದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಾಂಸ್ಯಭಸ್ಮ	೧	೦—೮—೦
ಯಶದಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಮುತ್ತಿನಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ರಸಾಜಿತ ಸೂರ್ಯಪುಟ	೧	೧—೦—೦
ರಸಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಧರ್ಮಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನೆಯು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 7
ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾನ್ ಅಂಡ್ ಸನ್
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳಿ, ಸೀಸದ, ಬ್ಲಾಕುಗಳು
ಆಫೀಸಿನ ಸೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.
[40]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.
8 ಔನ್ಸು ರೂ. 1—8—0.
ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1. 1.8.0, 7-0-0
ಹೂಫಿಂಗ್ ಕಫ್ ರೆಮೆಡಿ—ಕಫಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಣಿಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

[illegible] ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪತ್ರಿಕೆಗೆ ಬರೆಯಿರಿ. ಧರ್ಮಾರ್ಥ.
ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ಸೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.
8 ಔನ್ಸಿಗೆ ರೂ. 3-8-0.
ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.
ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.
[5] 8 ಔನ್ಸಿಗೆ ರೂ. 3-8-0

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣತೆ [illegible] ಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ [illegible] ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೀರ್ಘಾಯುಷ್ಯಕ್ಕೂ ಆರೋಗ್ಯವರ್ಧನಕ್ಕೂ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[38] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲಿಂಗಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೮-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[39] ಪೋ. ಬಾ. ೫೧೦, ಮದರಾಸು.

(Registered Trade Mark)

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಅಕ್ಟೋಬರ್ ೧೯೩೩ [ಸಂಚಿಕೆ ೨೪

ಶ್ರೀ ಜಗದ್ಗುರು ರೇಣುಕವಿಜಯ ಪುರಾಣ ಸಮಾಪ್ತಿ ಮಹೋತ್ಸವ.

ಶಿರೋಳ.

ಸನಾತನವರ್ಧರ್ಮಜ್ಯೋತಿಯನ್ನು ಸರ್ವತ್ರ ಪ್ರಕಾಶಿಸುವಂತೆ ಮಾಡಿ ವೀರಶೈವ ಮತಾಬ್ಧಿಚಂದ್ರೋದಯರಾದ ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರ ಉದಾರಾಶ್ರಯದಿಂದ 'ಶ್ರೀ ಜಗದ್ಗುರು ರೇಣುಕವಿಜಯ ಮಹಾಪುರಾಣವು' ಪ್ರಕಟವಾಗಿರುವುದು ಸರ್ವತ್ರ ಪ್ರಸಿದ್ಧವಿರುವುದಷ್ಟೆ! ಈ ಮಹಾಪುರಾಣವು ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾಂಸರಾದ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ವಿರಚಿತವಾಗಿದ್ದು ಪಂಡಿತಜನ ಮಂಡಲಿಯು ಹರ್ಷಾಬ್ಧಿಯಲ್ಲಿ ಓಲಾಡುವಂತೆ ವಿರಾಜಿಸುತ್ತಲಿದೆ ಈ ಪುರಾಣದ ಸುಲಭಶೈಲಿಯನ್ನೂ, ಕವಿತಾಶಕ್ತಿಯನ್ನೂ, ಶಬ್ದಾರ್ಥಾಲಂಕಾರಗಳ ಜೋಡಣೆಯನ್ನೂ ಎಷ್ಟು ಬಣ್ಣಿಸಿದರೂ ತೀರದಾಗಿದೆ. ಸಮಯೋಚಿತವಾಗಿ ಹೊರಸೂಸುವ ನವರಸಪ್ರವಾಹದಲ್ಲಿ ಪ್ರವಚನಕಾರರೂ ಶ್ರೋತೃಗಳೂ ಮೈಮರೆತು ಈಸಾಡುತ್ತಿರುವರು. ಇದೇ ಶ್ರೀಮುಖನಾಮ ಸಂವತ್ಸರದಲ್ಲಿ ಪ್ರಾದುರ್ಭವಿಸಿದ ಈ ದಿವ್ಯಪುರಾಣವನ್ನು ಕರ್ನಾಟಕದ ಯಾವದ್ಭಾಗಗಳಲ್ಲಿಯೂ ಪ್ರಾರಂಭಿಸಿ ಪುರಾಣಿಕರಿಂದ ಪ್ರಾಪ್ತವಾದ ಶ್ರವಣಾನಂದವನ್ನು ಸವಿದುಂಡ ಸಮಾಚಾರವು ವೃತ್ತಪತ್ರಿಕೆಗಳಿಂದ ತಿಳಿದು ಪರಮಸಂತೋಷವಾಗುತ್ತದೆ ಈ ಪುರಾಣವು ಕರ್ನಾಟಕಭಾಷೆಯಲ್ಲಿ ಮುದ್ರಣವಾಗಿದ್ದರೂ ಮರಾಠೀಭಾಷೆಯನ್ನಾಡುವ ವೀರಶೈವರು ಸಹ ಉಭಯ ಭಾಷಾಪಂಡಿತ (ಕನ್ನಡ ಮರಾಠಿ) ರಿಂದ ಕೇಳಿ ಧನ್ಯರಾಗಿರುವದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಸುಪ್ರಸಿದ್ಧವಾದ ಈ ಶ್ರೀ ಜಗದ್ಗುರು ರೇಣುಕವಿಜಯ ಮಹಾಪುರಾಣವನ್ನು ಧಾರವಾಡ ಜಿಲ್ಲಾ ಶಿರೋಳಗ್ರಾಮದ ಸಮಸ್ತ ಪ್ರಮುಖ ಮಹಾಶಯರು ಸೇರಿ ಇಲ್ಲಿಯ ಹಿರೇಮಠದಲ್ಲಿ ಶ್ರಾವಣಮಾಸಾರಂಭದಿಂದ ಪ್ರಾರಂಭಿಸಿ ಆಶ್ವಯುಜ ಶು|| ೯ ಬುಧವಾರದವರೆಗೆ ಅತ್ಯಂತ ಮಂಗಲಕರವಾಗಿ ಸಾಗಿಸಿ ಸಮಾಪ್ತಿ ಮಹೋತ್ಸವವನ್ನು ನೆರವೇರಿಸಿದರು. ಈ ಮಹೋತ್ಸವಕ್ಕೆ ಮಂಗಲಮೂರ್ತಿಗಳಾದ ಮಂಗಳೂರು ಅರಳೆಲೆ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಪಟ್ಟದ ಮಹಾಸ್ವಾಮಿಗಳವರನ್ನು ಬರಮಾಡಿಕೊಂಡಿತ್ತು. ಆಶ್ವಯುಜ ಶು|| ೭ ಸೋಮವಾರ ಶ್ರೀ ಸ್ವಾಮಿಗಳವರ ಪಾದಪೂಜಾದಿಗಳನ್ನು ನೆರವೇರಿಸಿ ಆ ದಿವಸ ಮಾಹೇಶ್ವರರ ಆರಾಧನೆಯನ್ನು ಮಾಡಿ ಅನಾಥರಾದಿಯಾಗಿ ಹತ್ತುಸಾವಿರ ಮೇಲ್ಪಟ್ಟು ಜನಗಳಿಗೆ ಅನ್ನಸಂತೃಪ್ತಿಯನ್ನು 'ನ ಭೂತೋ ನ ಭವಿಷ್ಯತಿ' ಎಂಬಂತೆ ನೆರವೇರಿಸಿದರು. ಹಳ್ಳಿಯಾದ ನಮ್ಮ ಊರಲ್ಲಿ ಯಾವ ಕಾಲದಲ್ಲಿಯೂ ಇಂಥ ವೈಭವಾತಿಶಯಗಳು ನಡೆದಿರಲಿಲ್ಲವೆಂಬಂತೆ ಆರಾಧನಕಾರ್ಯಗಳಾದವು. ಮರುದಿವಸವೇ ಶ್ರೀ ಸ್ವಾಮಿಗಳನ್ನು ಪಂಚಕಲಶಯುಕ್ತವಾದ ಪಲ್ಲಕ್ಕಿಯಲ್ಲಿ ಮೂರ್ತಮಾಡಿಸಿ ಅತ್ಯಂತ ವೈಭವದಿಂದ ಗ್ರಾಮದ ರಾಜಬೀದಿಯಿಂದ ಹೊರಡಿಸಿ ಗ್ರಾಮದ ಪಾಟೀಲರಾದ ಶ್ರೀ ಬಸವಲಿಂಗಪ್ಪಗೌಡರ ಪ್ರಾರ್ಥನೆಯಂತೆ ಅವರ ಮನೆಗೆ ಉತ್ಸವದೊಡನೆ ಹೋಗಿ ಅವರಿಂದ ಗುರುಕಾಣಿಕೆಯು ಸಮರ್ಪಿಸಲ್ಪಟ್ಟು ಬಳಿಕ ಮಂಗಲನೀರಾಜನವಾಗಿ ಫಲಪ್ರಸಾದವು ವಿನಿಯೋಗಿಸಲ್ಪಟ್ಟಿತು. ಪುನಃ ಅಲ್ಲಿಂದ ಮಹೋತ್ಸವವು ಹೊರಟು ಜನಸಮುದ್ರದಮೇಲೆ ತೇಲಿ ಬರುತ್ತಿರುವ ಶೃಂಗರಿಸಿದ ಪಲ್ಲಕ್ಕಿಯೂ ಅದರ ಹಿಂಭಾಗದಲ್ಲಿ ಅತ್ಯಂತತೇಜೋಮಯವಾದ ಪ್ರಭಾವಳಿಯಲ್ಲಿ ಶೋಭಿಸುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಅತ್ಯದ್ಭುತ ಲೀಲಾವಳಿಯ ಭಾವಪಟದ ದಿವ್ಯನೋಟವು ದರ್ಶನೀಯವಾಗಿದ್ದವು. ಆ ದಿವಸ ಜನಸಂದಣಿಯು ವಿಶೇಷವಾಗಿದ್ದರೂ ಪ್ರತಿಯೊಬ್ಬರು ಗುರುಭಕ್ತಿಯಿಂದ ಬಹು ಶಾಂತರೀತಿಯಿಂದ ಮಹೋತ್ಸವವನ್ನು ಕೊನೆಗಾಣಿಸಿದ್ದುದು ಪರಮಸಂತೋಷದ ಸಂಗತಿಯಾಗಿದೆ. ರಾಜಬೀದಿಯಲ್ಲಿ ಅಲ್ಲಲ್ಲಿ ಕಟ್ಟಲ್ಪಟ್ಟ ಕಮಾನು (ಆರ್ಚ್)ಗಳೂ, ಆಚಾರ್ಯರ ನಾಮಾಂಕಿತದಿಂದ ಪ್ರಕಾಶಿತಗಳಾದ ಪತಾಕೆಗಳೂ ಬಹು ಶೋಭಾಯಮಾನವಾಗಿದ್ದವು. ಸುವಾಸಿನಿಯರು ಕಲಶಆರುತಿಯೊಡನೆಗೂಡಿ ಫಲ, ಪುಷ್ಪಯುಕ್ತವಾದ ಹಸ್ತವುಳ್ಳವರಾಗಿ ಜಗದಾಚಾರ್ಯವರೇಣ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣಸಮಾಪ್ತಿಯ ಮಹೋತ್ಸವದಲ್ಲಿ ಭಾಗಿಗಳಾಗಿದ್ದರು. ನೂರಾರು ಕಲಶಗಳಾರುತಿಯ ವೈಭವವು ವರ್ಣನಾತೀತವಾಗಿತ್ತು. ಆ ದಿನ ಸಾಯಂಕಾಲ ೬ ಘಂಟೆಗೆ ಮಹೋತ್ಸವದ ಕಾರ್ಯಕ್ರಮಗಳೆಲ್ಲಾ ಸಮಾಪ್ತಿಗೊಂಡವು. ರೇಣುಕವಿಜಯದ ವಿಜಯಮಹೋತ್ಸವಗಳೆಲ್ಲಾ ೨ ತಿಂಗಳವರೆಗೆ ಅತ್ಯಂತ ಮನೋಹರವಾಗಿ ಸಾಗಿದವು. ಈ ಪುರಾಣಪ್ರವಚನವನ್ನು ಇಲ್ಲಿಯ ಹಿರಿಯ ಮಠಾಧಿಕಾರಿಗಳಾದ ವೇ|| ಪಂಚಾಕ್ಷರಶಾಸ್ತ್ರಿಗಳವರು ಹೇಳಿದರು. ಸಂಗೀತವಿಶಾರದರಾದ ಹಡಗಲಿ ಗ್ರಾಮದ ಕಲ್ಲಪ್ಪನವರು ಸರಸಗಾನರೂಪದಿಂದ ಓದಿ ಸಂಗೀತದ ಸವಿಯಾದ ರಸವನ್ನುಣಿಸಿದರು. ಒಟ್ಟಿನಮೇಲೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಯಿಂದ ಪುರಾಣಾರಂಭದಿಂದಲೂ ಸಮಾಪ್ತಿಯವರೆಗೆ ಯಾವತ್ತು ಕಾರ್ಯಗಳು ಚೆನ್ನಾಗಿ ಸಾಗಿದವು. ಈ ಪುರಾಣಪ್ರವಚನಕ್ಕೆ ನರಗುಂದ, ಮಹಾಲಕರಿ ಸಾಹೇಬರವರು ಕೊಂಡವಾಡೆಯ ಸಬ್-ಇನ್ಸ್ಪೆಕ್ಟರ್‌ರವರು, ಸರ್ಕಲ್ ಅಧಿಕಾರಿಗಳೇ ಮೊದಲಾದ ಸರಕಾರಿ ಅಧಿಕಾರಿಗಳೂ, ಗುಳೇದಗುಡ್ಡ, ಗದಗ, ಬಾಗಲಕೋಟೆ, ರಾಮದುರ್ಗ, ಅನಗೋಡಿ, ಬೆಳಗಾಂವ, ಧಾರವಾಡ, ನರಗುಂದ ಮೊದಲಾದ ಗ್ರಾಮಗಳಿಂದ ಬೆಂಚ್-ಮ್ಯಾಜಿಸ್ಟ್ರೇಟರೂ, ಮಹಾಜನಗಳೂ ಆಗಮಿಸಿದ್ದರು. ನಮ್ಮ ಪೀಠಾಧಿಕಾರಿಗಳಾದ ಮ|| ಮಹಾಲಕರಿಸಾಹೇಬರವರು ಮಹಮ್ಮದೀಯರಿದ್ದು ಅವರು ಈ ಪುರಾಣಪ್ರವಚನವನ್ನು ಕೇಳಿ ಇದರಲ್ಲಿರುವ ಶಿವತತ್ವಸಿದ್ಧಾಂತದ ಮರ್ಮವು ನಮ್ಮ ಕುರಾನ ಹೋಲಿಕೆಯಂತೆಯೇ ಇರುವದೆಂದು ಹೇಳಿ ಮತಗಳ ಉಚ್ಚತತ್ವಗಳ ಬಗ್ಗೆ ಅಮೋಘವಾದ ಭಾಷಣಮಾಡಿದರು. 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಗೀತೋಕ್ತಿಯಂತೆ ಈ ಮಹಾಶಯರು ಮಾಡಿದ ಭಾಷಣವು ಬಹು ಶ್ಲಾಘನೀಯವಾಗಿತ್ತು. ಇರಲಿ. ನಮ್ಮ ಗ್ರಾಮದಲ್ಲಿ ಅದರಲ್ಲಿ ನಮ್ಮ ಗುರುವರ್ಗದ ಹಿರೇಮಠದಲ್ಲಿ ಪಟ್ಟಾಧಿಕಾರಿಗಳು ಇದ್ದಾಗ್ಗೆ ಆಗಿಂದಾಗ್ಗೆ ಪುರಾಣಪ್ರವಚನದ ಸುಗ್ಗಿಗಳಾಗುತ್ತಿದ್ದವು. ಇದೀಗ ಪಟ್ಟದ ಸ್ವಾಮಿಗಳಿಲ್ಲದೆ ೩೦ ವರುಷಗಳಾಗುತ್ತ ಬಂದವು. ಅಂದಿನಿಂದ ಮಠದಲ್ಲಿ ಪುರಾಣದ ಸೊಲ್ಲೇ ಇಲ್ಲದಾಗಿತ್ತು. ಈ ವರುಷ ಮಠಾಧಿಕಾರಿಗಳಾದ ವೇ|| ಶ್ರೀ ಪಂಚಾಕ್ಷರ ಶಾಸ್ತ್ರಿಗಳವರು ತಮ್ಮ ಮಠದ ಗತವೈಭವಾತಿಶಯಗಳ ಪುನರ್ಜನ್ಮವನ್ನುಂಟುಮಾಡಿದರು. ಪಠಿಸಿಹೋದ ಪುರಾಣಪ್ರವಚನವು ಪರಮಪವಿತ್ರವಾದ ಶ್ರೀಮುಖನಾಮಸಂವತ್ಸರದ ಶ್ರಾವಣಮಾಸದಲ್ಲಿ ಉದಯವಾಯಿತು. ಸದರಿ ಶಾಸ್ತ್ರಿಗಳು ಪುರಾಣಪ್ರವಚನವನ್ನು ಬಹು ಮನೋಹರವಾಗಿ ಬೋಧಿಸಿದರು ತಮ್ಮ ಕಂಠಶ್ರೀಯಿಂದ ಸಮಸ್ತರನ್ನು ಆನಂದಗೊಳಿಸಿದ ಹಡಗಲಿ ಮ|| ರಾ|| ಕಲ್ಲಪ್ಪನವರಿಗೆ 'ಗಾಯನ ಕಂಠೀರವ' ಎಂಬ ಪದವಿಯು ಕೊಡಲ್ಪಟ್ಟಿತು. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಮತ್ತು ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರ ಭೂಗರ್ಭಾವತಾರ, ಪಟ್ಟಾಭಿಷೇಕಮಹೋತ್ಸವ ಮೊದಲಾದ ಸಾವಿರಾರು ಫೋಟೋಗಳು ಉಚಿತವಾಗಿ ಕೊಡಲ್ಪಟ್ಟವು. ಈಗ ಪ್ರತಿಯೊಬ್ಬರ ಮನೆಯಲ್ಲಿ ಆಚಾರ್ಯರ ಭಾವಪಟಗಳು ಶೋಭಿಸುತ್ತಲಿವೆ. ಪಂಚಾಚಾರ್ಯರ ಪವಿತ್ರನಾಮಪಾರಾಯಣವು ಸರ್ವತ್ರ ವ್ಯಾಪಿಸಿದೆ. ಆಚಾರ್ಯ ಭಗವತ್ಪಾದರ ನಾಮಸ್ಮರಣೆಯೇ ಮರೆಯಾಗಿದ್ದ ಸಮಯದಲ್ಲಿ ಲೋಕಮಾನ್ಯರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ವಿಶ್ವಪ್ರಯತ್ನದಿಂದ ಈಗ ಪ್ರಪಂಚದಲ್ಲಿ ಪಂಚಾಚಾರ್ಯರ ಪವಿತ್ರಚರಿತೆಗಳೂ, ಪುರಾಣಗಳೂ ಪ್ರಚಾರವಾಗತೊಡಗಿವೆ. ವೀರಶೈವ ಮತೋದ್ಧಾರಧುರಂಧರರಾದ ಜಗದಾಚಾರ್ಯರ ದಿವ್ಯಪ್ರಭಾಪುಂಜವೇ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು. ಈ ಮಹಾಶಯರಿಂದಲೇ ವೀರಶೈವಮತದ ನಿಜತತ್ವ ಪ್ರಕಾಶಕ್ಕೆ ಬಂದಿತು. ಈ ದಿವ್ಯಪ್ರಕಾಶವು ನಮ್ಮ ಶಿರೋಳ ಗ್ರಾಮವನ್ನು ಬಹು ಚೆನ್ನಾಗಿ ಬೆಳಗಿತು. ಶ್ರೀ ಜಗದ್ಗುರು ರೇಣುಕವಿಜಯಪುರಾಣರೂಪವಾಗಿ ವೀರಶೈವಮತದ ಪ್ರಾಚೀನತೆ, ಆಚಾರ್ಯರ ಅವತಾರ, ಗುರುವರ್ಗದ ಕರ್ತವ್ಯ, ಮತಸಿದ್ಧಾಂತತತ್ವಗಳ ವಿಚಾರ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯ ಇವೆಲ್ಲವುಗಳ ಶರಣಾದಿಯಾದ ಸತ್ಕ್ರಿಯಾಚಾರ ಮೊದಲಾದ ಅನೇಕವಿಷಯಗಳನ್ನು ಪ್ರವಚನಪಟುಗಳಾದ ವೇ|| ಪಂಚಾಕ್ಷರಶಾಸ್ತ್ರಿಗಳು ಬಹು ಸೊಗಸಾಗಿ ಹೇಳುತ್ತಿದ್ದರು. ಈ ಪ್ರವಚನಕಾರ್ಯಭಾರವನ್ನೆಲ್ಲ ಗ್ರಾಮದ ಪ್ರಮುಖ ಶ್ರೀಮಂತರಾದ ಶ್ರೀ ಚೆನ್ನ ವಿರೂಪಾಕ್ಷಪ್ಪನವರು, ಶ್ರೀ ಪತ್ತಾರ ಗುರುಬಸವಯ್ಯನವರು, ಶ್ರೀ ಪತ್ತಾರ ಸಂಗಯ್ಯನವರು. ಮ|| ರಾ|| ಶಿವಪ್ಪನವರು ಸತ್ತಿಗೇರಿ, ಮ|| ರಾ|| ಕರಿಬಸಪ್ಪನವರು ಬಣಗಾರ ಮೊದಲಾದ ಮಹಾಜನಗಳು ಬಹು ಭಕ್ತಿಪೂರ್ವಕವಾಗಿ ನೆರವೇರಿಸಿದರು. ಬರುವ ವರುಷದ ಶ್ರಾವಣಮಾಸದೊಳಗಾಗಿ ಶ್ರೀ ಜಗದ್ಗುರು ದಾರುಕವಿಜಯಪುರಾಣವು ಪ್ರಕಟವಾಗಬೇಕೆಂದೂ ಪಂಚಾಚಾರ್ಯರೆಲ್ಲರ ಪುರಾಣಗಳ ಪ್ರವಚನವು ನಡೆದರೆ ಜನತೆಯ ಅಭಿರುಚಿಯು ತೃಪ್ತಿಯಾಗುವದೆಂದು ಪಂಡಿತರಲ್ಲಿ ಪ್ರಾರ್ಥಿಸಿ, ನಮ್ಮ ಪ್ರವಚನದ ಕಾರ್ಯಭಾಗಿಗಳಿಗೆಲ್ಲಾ ಶ್ರೀ ಜಗದ್ಗುರುವರೇಣ್ಯರು ನಿತ್ಯಮಂಗಲವನ್ನೀಯಲೆಂದು ಸ್ಮರಿಸುತ್ತೇನೆ.

ಗುರುಕಿಂಕರ
ಪ್ರಭಪ್ಪ ಮಲ್ಲೇಶಪ್ಪ ಕಲ್ಲಕೇರಿ, ಶಿರೋಳ.

ಬೀರೂರು.

ಈ ಊರಿನಲ್ಲಿ ಸ್ಥಾಪಿತವಾಗಿರುವ ಶ್ರೀಮದ್ವೀರಶೈವ ಸೇವಾಸಂಘದ ಅಧ್ಯಕ್ಷರಾದ ಶ್ರೀ ಕಾಫೀಪ್ಲಾಂಟರ್ ಪತ್ರೆ ಕೆ. ಶಿವಪ್ಪಯ್ಯನವರು ಮೇಲ್ಕಂಡ ಸಂಘಸ್ಥಾಪನೆಯ ಸಂತೋಷಾರ್ಥವಾಗಿ ಸದರಿ ಸಂಘದ ಸದಸ್ಯರಿಗೆ ತಾ|| ೨೧-೯-೧೯೩೩ ನೆಯ ಗುರುವಾರ ಒಂದು ಸಂತೋಷಕೂಟವನ್ನೇರ್ಪಡಿಸಿ ತಮ್ಮ ಬಂಗಲೆಯಲ್ಲೇ ನೂರಾರು ಜನಗಳಿಗೆ ಔತಣವನ್ನು ಮಾಡಿಸಿ ಸರ್ವರನ್ನೂ ಸಂತೋಷಭಾಗಿಗಳನ್ನಾಗಿ ಮಾಡಿದರು. ಆ ದಿವಸ ಸಂತೋಷಕೂಟಕ್ಕೆ ಬರ್ಮಾ ಶೆಲ್ ಆಯಿಲ್ ಕಂಪನಿ ಏಜಂಟರವರಾದ ಶ್ರೀ|| ಎಂ. ವಿ. ಮರುಳಸಿದ್ಧಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮ|| ರಾ|| ರಾಮಲಿಂಗಾಚಾರ್ಯರವರ ಸಂಗೀತವಾದ ನಂತರ ಸಂಘದ ಅಭಿವೃದ್ಧಿ ವಿಷಯವಾಗಿ ಮ|| ರಾ|| ಗಳಾದ ಚಿಕ್ಕವೀರಯ್ಯನವರು, ಎಸ್. ವಿ. ನಂಜುಂಡಯ್ಯನವರು ಮತ್ತು ಬಿ. ಆರ್. ಚೆನ್ನವೀರಪ್ಪನವರು ಭಾಷಣಮಾಡಿದರು. ಅನಂತರ ಅಧ್ಯಕ್ಷರವರು ಸಮಯೋಚಿತಭಾಷಣವನ್ನು ಮಾಡಿ ಆ ದಿವಸ ಸಂತೋಷಕೂಟವನ್ನೇರ್ಪಡಿಸಿದ ಶ್ರೀ ಶಿವಪ್ಪಯ್ಯನವರನ್ನು ಅಭಿವಂದಿಸಿದರು. ಆಗ ಶ್ರೀ ಶಿವಪ್ಪಯ್ಯನವರು ಸಮಯೋಚಿತ ಭಾಷಣವನ್ನು ಮಾಡಿ ಸಮಾಜಾಭಿಮಾನಿಗಳಾದ ಸರ್ವರನ್ನೂ ವಂದಿಸಿ ಸಭಿಕರಿಗೆ ಗಂಧಪುಷ್ಪತಾಂಬೂಲಾದಿಗಳನ್ನು ಅರ್ಪಿಸಿದನಂತರ ಸಭೆಯು ಸಮಾಪ್ತಿಗೊಂಡಿತು. ಈ ಕಾರ್ಯಕ್ಕೆ ಶ್ರೀ ಯಜಮಾನ್ ದೊಡ್ಡಮನೆ ಬಿ. ಶಾಂತಪ್ಪನವರೇ ಮೊದಲಾದ ಪುರಪ್ರಮುಖರು ಬಹು ಉತ್ಸಾಹಿಗಳಾಗಿರುವರಲ್ಲದೆ ಈ ಸಂಘವನ್ನು ಅಭಿವೃದ್ಧಿಗೆ ತರಲು ಸತತ ಪ್ರಯತ್ನಿಸುವವರಾಗಿದ್ದಾರೆ. ಈ ಸಂಘದಿಂದ ಅನೇಕ ಮಹತ್ಕಾರ್ಯಗಳು ಜರುಗಿ ಸಂಘದವರು ಕೈಕೊಂಡಿರುವ ಉದ್ದೇಶವನ್ನು ಆ ದಯಾಮಯನಾದ ಭಗವಂತನು ಈಡೇರಿಸಲೆಂದು ಪ್ರಾರ್ಥಿಸುವ,

ಓರ್ವ ಸ್ನೇಹಿಯು.

ಕಲ್ಕತ್ತೆಯ ಮಿ|| ಪಿ. ಕೆ. ಗೋಷ್ ಎಂಬವರು ಒಂದೇ ಸಮನೆ 72 ಗಂಟೆ 18 ನಿಮಿಷಗಳ ಕಾಲ ನೀರಿನಲ್ಲಿ ಈಜಿ, ಈಜುವದರಲ್ಲಿ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದಿರುವರು!

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ
ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣದ ಕೆಲವುಭಾಗಗಳು.

1933 ನೆಯ ಇಸ್ವಿ ಸೆಪ್ಟೆಂಬರ್ 30 ನೆಯ ತಾರೀಖು.

ಮಹಿಳೆಯರೇ ಮತ್ತು ಮಹಾಶಯರೇ,

ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಆದರದಿಂದ ಬರಮಾಡಿಕೊಳ್ಳುವ ಗೌರವವು ನನಗೆ ಲಭಿಸಿದೆ. ಮೈಸೂರು ಸಂಸ್ಥಾನದ ಪ್ರಜೆಗಳ ಪ್ರತಿನಿಧಿಗಳು ಸಭೆಸೇರಿ ಸಂಸ್ಥಾನದ ಆಡಳಿತ ಕಾರ್ಯಗಳಲ್ಲಿ ಭಾಗಿಗಳಾಗುವುದು ಇದು ಐವತ್ತೆಂಟನೆಯ ಸಲವಾದುದರಿಂದ ಈ ಸಲದ ಸಭೆಗೆ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುವ ಈ ಗೌರವವು ನನಗೆ ವಿಶೇಷ ಸಂತೋಷಕರವಾಗಿಯೂ ಇದೆ. ಆದರೆ ಈಗಿನ ಸಭೆಗೆ ಇದೇ ಕೊನೆಯ ಅಧಿವೇಶನವೆಂಬುದನ್ನು ಪರಿಗಣಿಸಿದರೆ, ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುವುದರಲ್ಲಿ ಆ ನನ್ನ ಸಂತೋಷವು ಏನೋ ಒಂದು ವಿಧದಲ್ಲಿ ಊನವಾದಂತೆ ತೋರುತ್ತದೆ.

ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ವಿಚಾರಗಳು.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಸರ್ಕಾರಕ್ಕೆ ಹಣದ ಅನುಕೂಲವನ್ನೊದಗಿಸುವಬಗೆ ಹೇಗೆಂಬ ವಿಚಾರವನ್ನು ನಿರ್ಧರಿಸುವುದರಲ್ಲಿ ಮೈಸೂರು ಸಂಸ್ಥಾನದವರಾದ ನಮಗೆ ಸಂಬಂಧಪಟ್ಟ, ನಮಗೆ ಬಹಳ ಆಸಕ್ತಿಯಿರುವ ಎರಡು ಸಂಗತಿಗಳೂ ನಮಗೆ ಅನುಕೂಲವಾಗಿ ವ್ಯವಸ್ಥೆಯಾಗುವುವೆಂದು ನಂಬಿದ್ದೇನೆ. ಅವುಗಳಲ್ಲಿ ಮೊದಲನೆಯದು, ಪೊಗದಿಯನ್ನು ತೆಗೆದುಹಾಕುವುದು; ಎರಡನೆಯದು, ಬೆಂಗಳೂರು ದಂಡಿನ ಪ್ರದೇಶವನ್ನು ಸಂಸ್ಥಾನಕ್ಕೆ ಬಿಟ್ಟುಕೊಡುವುದು. ರಾಜಕೀಯ ಸುಧಾರಣೆಗಳ ಸಂಬಂಧದಲ್ಲಿ ಇತ್ಯರ್ಥಪಡಿಸಬೇಕಾದ ನಾನಾ ವಿಚಾರಗಳನ್ನು ಸಕಾಲದಲ್ಲಿಯೂ ಮನುಷ್ಯ ಸ್ವಭಾವವನ್ನರಿತೂ ವ್ಯವಸ್ಥೆ ಮಾಡುವ ಅಭಿಲಾಷೆಯಿಂದ ಕೂಡಿದ ಹೊಸಮನೋಭಾವವು ಸಂಬಂಧಪಟ್ಟವರೆಲ್ಲರ ಮನಸ್ಸಿನಲ್ಲಿಯೂ ಹುಟ್ಟಿರುವುದರಿಂದ, ನಮಗೆ ಬಹಳ ಆಸಕ್ತಿಯಿರುವ ಇವೆರಡು ಸಂಗತಿಗಳೂ ಅನುಕೂಲ ರೀತಿಯಲ್ಲಿಯೇ ವ್ಯವಸ್ಥೆಯಾದಾವೆಂದು ನಾನು ನಂಬಿದ್ದೇನೆ. ಇವೆರಡೂ ಕಾರ್ಯಗಳು ಸಾಧ್ಯವೆನ್ನುವ ಮಟ್ಟಿನ ಪರಿಸ್ಥಿತಿಗೆ ಬಂದಿವೆ; ನಮ್ಮ ಬಿನ್ನಹವು ನ್ಯಾಯವಾದುದೆಂಬ ಅಂಶವು ಅಂಗೀಕೃತವಾಗಿದೆ. ಇಂಡಿಯಾಸ್ಟೇಟ್ ಸೆಕ್ರಿಟರಿಯವರಾದ ಸರ್ ಸ್ಯಾಮ್ಯುಯಲ್ ಹೋರ್‌ರವರು ಪೊಗದಿಗಳ ವಿಚಾರವನ್ನು ಪ್ರಸ್ತಾಪಿಸಿ ಭರತಖಂಡಕ್ಕಾಗಿ ಮುಂದೆ ಯಾವುದೇ ರಾಜ್ಯಾಂಗ ವ್ಯವಸ್ಥೆಯ ಶಿಸ್ತು ಏರ್ಪಟ್ಟರೂ, ಆ ಹೊಸ ಶಿಸ್ತು ಆಚರಣೆಗೆ ಬಂದೊಡನೆಯೇ ಪೊಗದಿಗಳ ಸುದ್ದಿಯೇ ಇಲ್ಲದೆ ಮಾಯವಾಗುವುದೇ ಯುಕ್ತವೆಂದು ಹೇಳಿದ್ದಾರೆ. ಅವರ ನುಡಿಗಳು ಚಿರಸ್ಮರಣೀಯವಾದವುಗಳೇ ಸರಿ.

ಈಗ ಸಂದಾಯವಾಗುತ್ತಿರುವ ಪೊಗದಿಯ ಹಣದಲ್ಲಿ ಸಂಸ್ಥಾನದ ಹುಟ್ಟುವಳಿಯ ಶೇಕಡಾ ಐದು ಭಾಗಕ್ಕಿಂತ ಹೆಚ್ಚಾಗಿರುವ ಮೊತ್ತವನ್ನು ಸದ್ಯಕ್ಕೆ ಕೂಡಲೆ ಬಿಟ್ಟುಕೊಡಬೇಕಾದುದು ಯುಕ್ತವೆಂದು ಡೇವಿಡ್ಸನ್ ಸಮಿತಿಯವರು ಸಲಹೆ ಮಾಡಿದ್ದರು. "ರೌಂಡ್ ಟೇಬಲ್" ಸಮ್ಮೇಳನಗಳವರೂ ಈ ಸಂಗತಿಯನ್ನು ಒತ್ತಿ ಒತ್ತಿ ಹೇಳಿ ತಿಳಿಸಿದರು. ಹೀಗಿದ್ದೂ ಇಂಡಿಯಾ ಸರ್ಕಾರದವರು ಈ ಲೆಖ್ಖಾಚಾರದ ಪ್ರಕಾರ ನಮ್ಮ ಸಂಸ್ಥಾನದ ಪೊಗದಿಯಲ್ಲಿ ಸದ್ಯ ಕಡಿಮೆಯಾಗಬೇಕಾದ 11½ ಲಕ್ಷ ರೂಪಾಯಿಗಳನ್ನು ಬಿಟ್ಟುಕೊಡಲು ಸಮ್ಮತಿಸದೆ ಹೋಗಿರುವುದು ನಮ್ಮೆಲ್ಲರಿಗೂ ತೀರ ವಿಷಾದಕರವಾದ ಅಂಶವಾಗಿದೆ. ಇಷ್ಟಾಯಿತು, ನಾವು ಕೋರುತ್ತಿರುವುದಾದರೂ ಏನು? ಹೊಸದಾಗಿ ಏನನ್ನಾದರೂ ಕೊಡಬೇಕೆಂದಾಗಲಿ, ಅಥವಾ ಯಾವುದಾದರೂ ರಿಯಾಯಿತಿಯನ್ನು ತೋರಿಸಬೇಕೆಂದಾಗಲಿ ನಾವು ಕೇಳುತ್ತಿಲ್ಲ. ನ್ಯಾಯವಾಗಿ ನೋಡಿದರೆ ನಮ್ಮಿಂದ ಹಣ ಪಾವತಿಯಾಗಲು ಯಾವುದೊಂದು ಕಾರಣವೂ ಇಲ್ಲದ ಮತ್ತು ಸಂಸ್ಥಾನಕ್ಕೆ ಹೊರಲಾರದ ಹೊರೆಯಾಗಿರುವ ಈ ಪೊಗದಿಯ ಹಣವನ್ನು ಬಿಟ್ಟುಬಿಡಬೇಕೆಂದು ಮಾತ್ರವೇ ನಾವು ಕೇಳಿದ್ದೇವೆ. ಈ ಕೋರಿಕೆಯು ನಡೆಯಲಿಲ್ಲವೆಂಬ ಉದ್ವೇಗವು ಸಂಸ್ಥಾನದ ಪ್ರಜೆಗಳೆಲ್ಲರ ಮನಸ್ಸನ್ನು ಆವರಿಸಿದೆ. ಮುಂದೆ ಅದು ಇನ್ನೂ ಹೆಚ್ಚುತ್ತಲೂ ಹೋಗುವುದು.

ಇನ್ನು, ಬೆಂಗಳೂರು ದಂಡಿನ ಪ್ರದೇಶದ ವಿಚಾರ. ಮೈಸೂರು ಸಂಸ್ಥಾನದ ಭಾಗವೇ ಆದ ಈ ಪ್ರದೇಶವನ್ನು ಶ್ರೀಮನ್ಮಹಾರಾಜರವರ ಅಧಿಕಾರಕ್ಕೆ ವಹಿಸುವ ವಿಚಾರದಲ್ಲಿ, ಇಂಡಿಯಾ ಸರ್ಕಾರದವರು ಶೀಘ್ರವಾಗಿಯೇ ತಕ್ಕ ಏರ್ಪಾಡುಗಳನ್ನು ಮಾಡಬಹುದೆಂದು ನಾನು ನಂಬಿದ್ದೇನೆ.

ಪೊಗದಿಯನ್ನು ತೆಗೆದುಹಾಕಬೇಕೆಂಬ ನಮ್ಮ ಕೋರಿಕೆಯೂ, ಬೆಂಗಳೂರು ದಂಡಿನ ಪ್ರದೇಶವನ್ನು ಬಿಟ್ಟುಕೊಡಬೇಕೆಂಬ ನಮ್ಮ ಕೋರಿಕೆಯೂ ಬಹುಕಾಲದಿಂದಲೂ ಇತ್ಯರ್ಥವಾಗದೆ ಉಳಿದು ಹೋಗಿವೆಯೆಂಬ ಅಂಶವನ್ನು, ಈ ಸಂಬಂಧದಲ್ಲಿ ನಾನು ಒತ್ತಿ ಹೇಳ ಸೂಚಿಸಲಿಚ್ಛಿಸುವೆನು. ಪೊಗದಿಯನ್ನು ಬಿಟ್ಟುಬಿಡಬೇಕೆಂಬ ಬಿನ್ನಹವು ಈಗ್ಗೆ ನೂರಾರುವರ್ಷಗಳಿಂದಲೂ ವ್ಯವಸ್ಥೆಯಾಗದೆ ಉಳಿದಿದೆ. ಬೆಂಗಳೂರು ದಂಡಿನ ಪ್ರದೇಶವನ್ನು ಬಿಟ್ಟುಕೊಡಬೇಕೆಂಬುದನ್ನು 1924 ನೆಯ ಇಸವಿಯಲ್ಲಿ ಮೊಟ್ಟಮೊದಲು ಕೇಳಿದೆವು. ಇಷ್ಟು ದೀರ್ಘಕಾಲದಿಂದಲೂ ಅವೆರಡೂ ಇನ್ನೂ ವ್ಯವಸ್ಥೆಯಾಗದೆ ನಿಂತಿವೆ. ಇವೆರಡೂ ಕೂಡಲೆ ವ್ಯವಸ್ಥೆಯಾಗಬೇಕಾದುದು ಸಂಸ್ಥಾನದ ವಿಚಾರದಲ್ಲಿ ಅತ್ಯಗತ್ಯವಾಗಿ ನೆರವೇರಬೇಕಾದ ವಿಚಾರ. ಭರತಖಂಡದಲ್ಲಿ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಟ್ಟೊಡನೆಯೇ ಪೊಗದಿಯೂ ತಪ್ಪಿಹೋಗಿ ಬೆಂಗಳೂರು ದಂಡಿನ ಪ್ರದೇಶವೂ ಹಿಂದಕ್ಕೆ ಬರಬೇಕಾಗುವುದೇನೋ ತೀರ ಅವಶ್ಯಕವೆನಿಸುವ ಖಂಡಿತವಾದ ಸಂಗತಿ; ಅದಕ್ಕೆ ಕಾರಣವೂ ಸ್ಪಷ್ಟವಾಗಿಯೇ ಇದೆ. ಆದರೆ ಸಂಯುಕ್ತ ಸರ್ಕಾರ ಸ್ಥಾಪನೆಗೂ ಇವೆರಡು ವಿಚಾರಗಳಿಗೂ ಸ್ವಲ್ಪವೂ ಸಂಬಂಧವಿಲ್ಲವೆಂಬುದೂ, ಇವೆರಡನ್ನೂ ಒಡನೆಯೇ ಪರ್ಯಾಲೋಚಿಸಿ ಸುಮುಖವಾಗಿ ಬಗೆಹರಿಸಬೇಕಾದುದೇ ಯುಕ್ತವೆಂಬುದೂ ಒತ್ತಾಯವಾಗಿ ನಾವು ಸೂಚಿಸಿ ಸಮರ್ಥಿಸುತ್ತಿರುವ ಅಭಿಪ್ರಾಯಗಳು.

ಆಯವ್ಯಯಗಳ ವಿಚಾರ.

1932-33 ನೆಯ ಸಾಲಿನ ಆಯವ್ಯಯಗಳ ತಿದ್ದುಪಾಟು ಅಂದಾಜುಗಳನ್ನು ಹಿಂದಿನ ಅಧಿವೇಶನದಲ್ಲಿ ತಮ್ಮ ಅವಗಾಹನೆಗೆ ತಂದಿರುವುದು ಸರಿಯಷ್ಟೆ. ಸುಮಾರು 19 ಲಕ್ಷ ರೂಪಾಯಿಗಳನ್ನು ಸಾಲತೀರ್ವೆ ನಿಧಿಗೂ, ಸುಮಾರು 12 ಲಕ್ಷ ರೂಪಾಯಿಗಳನ್ನು "ಡಿಪ್ರೀಸಿಯೇಷನ್ ಫಂಡು" ಗಳೆಂಬ ಇಳಿವರಿ ಭರ್ತಿಯ ನಾನಾ ನಿಧಿಗಳಿಗೂ ಒದಗಿಸಿದಮೇಲೆ ವೆಚ್ಚವು ಹುಟ್ಟುವಳಿಗಿಂತ 21 ಲಕ್ಷ ರೂಪಾಯಿಗಳು ಹೆಚ್ಚಾಗುವುದಾಗಿ ಆ ತಿದ್ದುಪಾಟು ಅಂದಾಜುಗಳಿಗನುಸಾರವಾಗಿ ತೋರಿಬಂದಿದ್ದಿತು.

1932-33 ನೆಯ ಸಾಲಿನ ಲೆಖ್ಖಾ ಲೆಕ್ಕಗಳು ಈಗ ಸಿದ್ಧವಾಗಿವೆ. ಅವುಗಳ ಪ್ರಕಾರ ನೋಡಿದಲ್ಲಿ, ನಾವು ಮೊದಲು ನಿರೀಕ್ಷಿಸಿದ್ದ ಹುಟ್ಟುವಳಿಗಿಂತ 4 ಲಕ್ಷ ರೂಪಾಯಿಗಳು ಹೆಚ್ಚಾಗಿ ಬಂದಿರುವಂತಿವೆ. ಹೀಗೆ ಹುಟ್ಟುವಳಿಯ ಮೊಬಲಗು ಹೆಚ್ಚಿದುದಕ್ಕೆ, ಭೂಕಂದಾಯದ ಬಾಬಿನಲ್ಲಿಯೂ, ಕೃಷ್ಣರಾಜಸಾಗರದ ವಿದ್ಯುಚ್ಛಕ್ತಿಯ ಕಾಮಗಾರಿ ಬಾಬಿನಲ್ಲಿಯೂ ಹುಟ್ಟುವಳಿಯು ಹೆಚ್ಚಾಗಿ ಬಂದುದೇ ಮುಖ್ಯಕಾರಣ. ಹುಟ್ಟುವಳಿಬಾಬಿಗೆ ಖರ್ಚುಹಾಕಿ ಅದರಿಂದ ಹಣವನ್ನೊದಗಿಸಬೇಕಾದ ವೆಚ್ಚವು ತಿದ್ದುಪಾಟು ಅಂದಾಜುಗಳ ಮೇರೆಗೆ ನಿರೀಕ್ಷಿಸಿದ್ದದಕ್ಕಿಂತ ಎರಡು ಲಕ್ಷ ರೂಪಾಯಿಗಳು ಹೆಚ್ಚಿತು. ಇಂಡಿಯಾ ಸರ್ಕಾರದಿಂದ ಪೆಟ್ರೋಲ್ ತೆರಿಗೆಯ ಸಂಬಂಧದಲ್ಲಿ ಬಂದ 5 ಲಕ್ಷ ರೂಪಾಯಿಗಳಲ್ಲಿ, ತಿದ್ದುಪಾಟು ಅಂದಾಜುಗಳ ಮೇರೆಗೆ ಗೊತ್ತುಮಾಡಿದ್ದಂತೆ 3 ಲಕ್ಷ ರೂಪಾಯಿಗಳನ್ನು ಮಾತ್ರವೇ ರಸ್ತೆಗಳನ್ನು ಸರಿಮಾಡಿಸುವ ಕಾಮಗಾರಿಗಳಿಗೆ ಕೊಡದೆ ಒಟ್ಟು 5 ಲಕ್ಷ ರೂಪಾಯಿಗಳ ಮೊತ್ತವನ್ನೂ ಕೊಟ್ಟದ್ದೇ, ಹೀಗೆ ವೆಚ್ಚವು 2 ಲಕ್ಷ ರೂಪಾಯಿಗಳು ಹೆಚ್ಚಿದುದಕ್ಕೆ ಕಾರಣ. ಅಂತು, ಇದೆಲ್ಲದರ ನಿವ್ವಳ ಫಲಿತಾಂಶವಾಗಿ ತಿದ್ದುಪಾಟು ಅಂದಾಜಿನ ಮೇರೆಗೆ ಹುಟ್ಟುವಳಿಗಿಂತ ವೆಚ್ಚವು ಹೆಚ್ಚಾಗುವಂತೆ ನಿರೀಕ್ಷಿಸಿದ್ದ ಮೊತ್ತವು 21 ಲಕ್ಷ ರೂಪಾಯಿಗಳಾಗುವುದಕ್ಕೆ ಬದಲು 19 ಲಕ್ಷ ರೂಪಾಯಿಗಳಿಗೆ ತಗ್ಗಿತು.

ಭೂಕಂದಾಯ. ಕಾಲಸ್ಥಿತಿ.

ಪ್ರಸಕ್ತವರ್ಷದಲ್ಲಿ ಮುಂಗಾರುಮಳೆಯೂ ಹಿಂಗಾರುಮಳೆಯೂ ನಾನಾ ಪ್ರದೇಶಗಳಲ್ಲಿಯೂ ಸಕಾಲದಲ್ಲಿ ಬಿದ್ದು ಅನುಕೂಲವಾಯಿತು. ಕೋಲಾರ ಡಿಸ್ಟ್ರಿಕ್ಟಿನ ಕೆಲವು ಕೆರೆಗಳ ಹೊರತು ಸಂಸ್ಥಾನದಲ್ಲಿ ಉಳಿದ ಕೆರೆಗಳೆಲ್ಲ ಸಮೃದ್ಧಿಯಾಗಿ ನೀರು ಬಂದಿತು. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಅನೇಕ ವರ್ಷಗಳಿಂದಲೂ ತಕ್ಕಷ್ಟು ನೀರೇ ಬಾರದೆಹೋಗಿದ್ದ ಅನೇಕ ಕೆರೆಗಳು ತುಂಬಿ, ಕೋಡಿಬಿದ್ದುವು. ಹದಿನೈದು ವರ್ಷಗಳಿಗಿಂತ ಹಿಂದಿನಿಂದಲೂ ಪೂರ್ತಿಯಾಗಿ ಒಣಗಿಹೋಗಿದ್ದ ಕೆಲವು ತಲಪರಿಗೆಗಳಲ್ಲಿ ಮತ್ತೆ ನೀರು ಹರಿಯಲು ಪ್ರಾರಂಭವಾಯಿತು. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಸೂಳೆಕೆರೆಯು ಕೋಡಿಬಿದ್ದು, ಏಕಪ್ರಕಾರವಾಗಿ ಎರಡುಮೂರು ತಿಂಗಳುಗಳ ಕಾಲ ನೀರು ಹರಿಯಿತು. ಕಳೆದ 20 ವರ್ಷಗಳ ಅವಧಿಯಲ್ಲಿ ಮತ್ತಾವಾಗಲೂ ಹೀಗೆ ನಡೆಯಲಿಲ್ಲ. ಪ್ರಸಕ್ತವರ್ಷದಲ್ಲಿ ವಾಣೀವಿಲಾಸ ಸಾಗರವೂ ತುಂಬಿತು. ಬೇಸಗೆಯಲ್ಲಿ ಕೂಡ ವಾಣೀವಿಲಾಸ ಸಾಗರದಿಂದ ಈ ಸಾರಿ ವ್ಯವಸಾಯಕ್ಕೆ ನೀರನ್ನು ಕೊಡಲಾಯಿತು. ಈ ರೀತಿಯಲ್ಲಿ ವ್ಯವಸಾಯಗಾರರಿಗೆ ಕಾಲಸ್ಥಿತಿಯು ಬಹಳ ಅನುಕೂಲವಾಗಿದ್ದಿತು. ತೃಪ್ತಿಕರವಾಗಿ ಬೆಳೆಯಿತು. ಸಂಸ್ಥಾನದ ಎಲ್ಲ ಪ್ರದೇಶಗಳಲ್ಲಿಯೂ ಆಹಾರ ಧಾನ್ಯಗಳು ತಕ್ಕಷ್ಟು ಪರಿಮಾಣಗಳಲ್ಲಿ ಜನರಿಗೆ ಒದಗುವ ಸೌಕರ್ಯವಿದ್ದಿತು. ಸಂಸ್ಥಾನದ ಯಾವ ಪ್ರದೇಶದಲ್ಲಿಯೂ ದನಕರುಗಳ ಮೇವಿಗೆ ತೊಂದರೆಯಾಗಲಿಲ್ಲ. ದನಕರುಗಳು ಸಾಮಾನ್ಯವಾಗಿ ಆರೋಗ್ಯವಾಗಿದ್ದುವು. ಕೂಲಿಯವರಿಗೆ ತಕ್ಕಷ್ಟು ಕೆಲಸವು ದೊರೆಯುತ್ತಿದ್ದಿತು. ದುರ್ಭಿಕ್ಷದ ದೆಸೆಯಿಂದಲೇ ಆಗಲಿ ಕೂಲಿಗೆ ಕೆಲಸ ದೊರೆಯದ ಕಾರಣದಿಂದಲೇ ಆಗಲಿ, ಅಸಾಧಾರಣ ಸ್ಥಿತಿಯೊದಗಿ ಯಾರೂ ಯಾವ ಸ್ಥಳವನ್ನೂ ಬಿಟ್ಟು ಹೋಗಬೇಕಾದ ಅವಶ್ಯಕತೆಯು ಬರಲಿಲ್ಲ.

ಕೋಲಾರ ಡಿಸ್ಟ್ರಿಕ್ಟಿನಲ್ಲಿಯೂ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿಯೂ ಕೆಲವು ಸಂದರ್ಭಗಳಲ್ಲಿ ಹೊರತು, ಉಳಿದ ಯಾವ ಸಂದರ್ಭದಲ್ಲಿಯೂ ಬೆಳೆಯು ಕೆಟ್ಟುಹೋದ ಕಾರಣಕ್ಕಾಗಿ ಕಂದಾಯವನ್ನು ಮಾಫಿಬಿಟ್ಟುಕೊಡಬೇಕಾದ ಪ್ರಸಕ್ತಿಯೇ ಹುಟ್ಟಲಿಲ್ಲ. ಧಾರಣೆಗಳು ಇಳಿದುಹೋದುದರಿಂದಲೂ, ಇತರ ಆರ್ಥಿಕ ಕಾರಣಗಳಿಂದಲೂ ರೈತರಿಗೆ ಸಂಭವಿಸಿದ ತೊಂದರೆಗಳ ನಿವಾರಣೆಗಾಗಿ 22,705 ರೂಪಾಯಿಗಳನ್ನು ಅವರಿಗೆ ಸಾಲವಾಗಿ ಕೊಟ್ಟು ಸಹಾಯ ಮಾಡಲಾಯಿತು. 1931-32 ನೇ ಸಾಲಿನಲ್ಲಿದ್ದುದಕ್ಕಿಂತ ಬತ್ತದ ಸಾಗುವಳಿ ವಿಸ್ತೀರ್ಣವು 38,079 ಎಕರೆಗಳೂ ರಾಗಿಯ ಸಾಗುವಳಿ ವಿಸ್ತೀರ್ಣವು 49,208 ಎಕರೆಗಳೂ ಹೆಚ್ಚಿದಂತೆ ವರದಿಯಾಗಿದೆ.

ಫಾರೆಸ್ಟ್ ಇಲಾಖೆ.

ಜನಜೀವನಕ್ಕೆ ಬೇಕಾಗಿ ಲಾಭಕರವಾಗಿರುವ ಮರಗಳ "ಪ್ಲಾಂಟೇಷನು" ಗಳೆಂಬ ತೋಪುಗಳನ್ನು ಬೆಳೆಯಿಸುವ ಕೆಲಸಕ್ಕೆ ಫಾರೆಸ್ಟ್ ಇಲಾಖೆಯವರು ಹಿಂದಿನಂತೆಯೇ ಪ್ರಸಕ್ತವರ್ಷದಲ್ಲಿಯೂ ವಿಶೇಷವಾಗಿ ಗಮನ ಕೊಡುತ್ತಿದ್ದರು. ಚಾಮುಂಡಿಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಬಾಬಾಬುಡನ್ ಬೆಟ್ಟ, ನಂದಿಬೆಟ್ಟ, ಇವುಗಳಲ್ಲಿ ಕಾಡುಗಳನ್ನು ಬೆಳೆಯಿಸುವ ಕೆಲಸವೂ, ಹುಲಿಕೆರೆ ತಾಕಿನಲ್ಲಿ ಹೋದ ಮರಗಳಿಗೆ ಬದಲಾಗಿ ಬೇರೆ ಮರಗಳನ್ನು ಬೆಳೆಯಿಸುವ ಕೆಲಸವೂ ಮುಂದುವರಿದುವು. ತೇಗದ ಮರಗಳ ತೋಪುಗಳನ್ನೂ, ಸೌದೆಗಾಗಿ ಉಪಯೋಗವಾಗುವ ಮರಗಳ ತೋಪುಗಳನ್ನೂ ಏರ್ಪಡಿಸಲು ಸಂಸ್ಥಾನದ ನಾನಾ ಸ್ಥಳಗಳಲ್ಲಿ ಭಾರಿ ಭಾರಿ ಒಟ್ಟಲುಗಳನ್ನು ಹಾಕಿ ಸಸಿಗಳನ್ನು ಸಿದ್ಧಪಡಿಸುವ ಏರ್ಪಾಡನ್ನು ಮಾಡಲಾಯಿತು. ವ್ಯಾಪಾರದ ಮುಗ್ಗಟ್ಟು ಯಥಾಪ್ರಕಾರವಾಗಿದ್ದುದರಿಂದ ಚೌಬೀನೆ, ಚರ್ಮವನ್ನು ಹದಮಾಡುವ ಚಕ್ಕೆಗಳು, ಮತ್ತು ಜಂಗಲು ಪಸಾರೆ ಸಾಮಾನುಗಳು, ಇವುಗಳ ಮಾರಾಟವು ಪ್ರಸಕ್ತವರ್ಷದಲ್ಲಿಯೂ ಮಟ್ಟಾಗಿದ್ದಿತು.

ನೀರಾವರಿ.

ಕೃಷ್ಣರಾಜಸಾಗರದ ಕೋಡಿಯಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ತಯಾರಾದ ಕಬ್ಬಿಣದ ಹೆಬ್ಬಾಗಿಲುಗಳನ್ನು ಸ್ಥಾಪಿಸಲಾಯಿತು. ಅವುಗಳು ತೃಪ್ತಿಕರವಾಗಿರುವಂತೆ ಈಚಿನ ಪ್ರವಾಹಕಾಲದ ಅನುಭವದಿಂದ ಕಂಡುಬಂದಿತು. ಕೃಷ್ಣರಾಜಸಾಗರದ ಕಟ್ಟೆಯಿಂದ ಸುರಂಗಮಾರ್ಗದ ಕೊನೆಯವರೆಗೆ ಇರ್ವಿನ್ ನಾಲೆಯ ಮುಖ್ಯಭಾಗದಲ್ಲಿಯೂ, ಇರ್ವಿನ್ ನಾಲೆಯ ಮದ್ದೂರು ಮತ್ತು ಕೆರೆಗೋಡು ಶಾಖೆಗಳಲ್ಲಿಯೂ ಮತ್ತು ಕಾವೇರಿ ಶಾಖೆಯ ಪ್ರಾರಂಭದ ಆರು ಮೈಲಿ ದೂರದವರೆಗೂ ನೀರಾವರಿ ವ್ಯವಸಾಯಕ್ಕೆ ನೀರನ್ನು ಕೊಡಲಾಯಿತು. ಇದರಿಂದ ಪ್ರಸಕ್ತವರ್ಷದಲ್ಲಿ 50,000 ಎಕರೆಗಳು ನೀರಾವರಿ ಸಾಗುವಳಿಗೆ ಬಂದುವು.

ಈಗಿರತಕ್ಕ ನಾಲೆಗಳ ಬಯಲಿನಲ್ಲಿ ನೀರಾವರಿ ವ್ಯವಸಾಯವನ್ನು ಹೆಚ್ಚಿಸಿ ಅಭಿವೃದ್ಧಿಗೆ ತರುವ ಕೆಲಸವು ತೃಪ್ತಿಕರವಾಗಿ ಮುಂದುವರಿಯಿತು. ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವನ್ನು 120 ಅಡಿಗಳಿಗಿಂತಲೂ ಹೆಚ್ಚಿಸುವುದು ಇನ್ನೂ ಅನೇಕ ವರ್ಷಗಳ ಕಾಲದವರೆಗೆ ಅವಶ್ಯಕವಿಲ್ಲವೆಂದೂ, 120 ಅಡಿ ಮಟ್ಟದ ನೀರೇ ಅದುವರೆಗೆ ನೀರಾವರಿ ಸಾಗುವಳಿಗೆ ಯಥೇಷ್ಟವಾಗಿ ಸಾಕಾಗುವುದರಿಂದ ಏರಿಯನ್ನು ಸದ್ಯದಲ್ಲಿ ಎತ್ತರಿಸಬೇಕಾದುದಿಲ್ಲವೆಂದೂ, ನಿರ್ಧರಿಸಲಾಯಿತು. ಆದಕಾರಣ 120 ಅಡಿಗಳ ಮಟ್ಟದ ನೀರು ಮುಳುಗಡೆಯ ಸಂಬಂಧವಾಗಿ ಮಾತ್ರವೇ ಜಮೀನುಗಳನ್ನು ಅಕ್ವೈರ್‌ಮಾಡಿ ಸರ್ಕಾರಕ್ಕೆ ಸೇರಿಸಿಕೊಳ್ಳುವಂತೆ ಗೊತ್ತುಮಾಡಲಾಗಿದೆ. ಈ ಕೆಲಸಕ್ಕಾಗಿಯೇ ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಕಮಾಡಿ ಅವರು ಮುಂದಿನ ಜನವರಿ ತಿಂಗಳ ಹೊತ್ತಿಗೆ ಕೆಲಸವನ್ನು ಪೂರೈಸಬೇಕೆಂದು ಹುಕುಂ ಮಾಡಿದೆ.

ಭೃಗುನದಿಯ ಅಣೆಕಟ್ಟು, ಹೈಂಗೆರೆ, ಮತ್ತು ಹಿಡುವದಕೆರೆ, ಇವು ಮೂರೂ ಮುಗಿದುವು. ಐದು ಇತರ ಭಾರೀ ನೀರಾವರಿ ಕಾಮಗಾರಿಗಳ ಕೆಲಸವೂ ನಡೆಯುತ್ತಿದೆ. 62 ಮೈನರ್ ಕೆರೆಗಳು ಜೀರ್ಣೋದ್ಧಾರವಾದುವು.

ಪಬ್ಲಿಕ್ ವರ್ಕ್ಸ್ ಇಲಾಖೆ.

ಹಾಸನದಲ್ಲಿ ಆಸ್ಪತ್ರೆ ಕಟ್ಟಡಗಳೂ ಮೈಸೂರಿನಲ್ಲಿ ಮೆಡಿಕಲ್ ಕಾಲೇಜು ಕಟ್ಟಡವೂ ಪೂರ್ತಿಯಾದುವು.

ಬೆಂಗಳೂರಿನಲ್ಲಿ ಹೆಂಗಸರಿಗೂ ಮತ್ತು ಮಕ್ಕಳಿಗೂ ಚಿಕಿತ್ಸೆಗಾಗಿ ವಾಣೀವಿಲಾಸ ಆಸ್ಪತ್ರೆ, ಸರ್ ಪುಟ್ಟಣ್ಣಶೆಟ್ಟಿಯವರ ನಾಮಾಂಕಿತದ ನಗರಭವನ, ಮತ್ತು ಸಂಸ್ಕೃತ ಮಹಾಪಾಠಶಾಲೆ, ಈ ಮೂರು ಕಟ್ಟಡಗಳ ಕಾಮಗಾರಿಯೂ, ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಣ್ಣಿನ ರೋಗಗಳ ಚಿಕಿತ್ಸೆಯ ಮತ್ತು ಮಕ್ಕಳ ವಾರ್ಡಿನ ಕಟ್ಟಡದ ಕಾಮಗಾರಿಯೂ ಮತ್ತು ಶಿವಮೊಗ್ಗೆಯಲ್ಲಿ ಮೆಕ್‌ಗಾನ್ ಆಸ್ಪತ್ರೆಯ ಕಾಮಗಾರಿಯೂ ನಡೆಯುತ್ತಿವೆ. ಬೆಂಗಳೂರಿನಲ್ಲಿ ರಜತೋತ್ಸವದ ಸವಿನೆನಪಿಗಾಗಿ ಸ್ಥಾಪಿಸಲ್ಪಡುವ ವೃತ್ತಿಶಿಕ್ಷಣಶಾಲೆಯ ಕಟ್ಟಡದ ಕೆಲಸವನ್ನೂ ಇಷ್ಟರಲ್ಲಿಯೇ ಪ್ರಾರಂಭಿಸಲಾಗುವುದು.

ಅಕ್ಕಿಹೆಬ್ಬಾಳಿನ ಬಳಿಯಲ್ಲಿ ಹೇಮಾವತೀನದಿಗೆ ಸೇತುವೆಯನ್ನು ಕಟ್ಟುತ್ತಿರುವುದು ಸರಿಯಷ್ಟೆ. ಆ ಸೇತುವೆಯ ಮೇಲೆ ಕೈಪಿಡಿ ಗೋಡೆಗಳು ಎರಡು ಪಾರ್ಶ್ವಗಳಲ್ಲಿಯೂ ಆಗಬೇಕಾಗಿವೆ. ಅಷ್ಟು ಹೊರತು ಸೇತುವೆಯ ಉಳಿದ ಕಾಮಗಾರಿಗಳೆಲ್ಲ ಪೂರೈಸಿವೆ. ಕಪಿಲಾನದಿಗೆ 3,45,500 ರೂಪಾಯಿಗಳ ವೆಚ್ಚದಲ್ಲಿ ಒಂದು ಸೇತುವೆಯನ್ನು ಕಟ್ಟಬಹುದೆಂದು ಮಂಜೂರಾಗಿದೆ.

ಬೆಂಗಳೂರಿಗೆ ನೀರನ್ನೊದಗಿಸುವುದಕ್ಕಾಗಿ ತಿಪ್ಪಗೊಂಡನಹಳ್ಳಿಯಲ್ಲಿ ಹೊಸದಾಗಿ ಕಟ್ಟಿದ ಅಣೆಕಟ್ಟೆಯ ಕಾಮಗಾರಿಗಳು ಕಳೆದ ಮಾರ್ಚಿ ತಿಂಗಳಿನಲ್ಲಿ ಪೂರೈಸಿದುವು. ನದಿಯ ಪಾತ್ರದ ಮಟ್ಟದಿಂದ ಮೇಲಕ್ಕೆ 116 ಅಡಿಗಳ ಎತ್ತರದ ಏರಿಯನ್ನು ಕಟ್ಟಲಾಯಿತು. ಈ ಜಲಾಶಯದಿಂದ ಬೆಂಗಳೂರಿಗೆ ನೀರು ಹೋಗುವಂತೆ ಕೊಳಾಯಿಗೆ ಮೊಟ್ಟಮೊದಲು ನೀರು ತಿರುಗಿಸುವ ಪ್ರಾರಂಭೋತ್ಸವವನ್ನು, ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜರವರು 1933 ನೇ ಇಸವಿ ಮಾರ್ಚಿ 15 ನೇ ತಾರೀಖಿನ ದಿವಸ ಕೃಪಾಪೂರ್ವಕವಾಗಿ ನೆರವೇರಿಸಿ ಆ ಕಾಮಗಾರಿಗೆ "ಶ್ರೀಚಾಮರಾಜೇಂದ್ರ ವಾಟರ್ ವರ್ಕ್ಸ್" ಎಂಬ ಹೆಸರನ್ನಿಡಬಹುದೆಂದು ಅನುಜ್ಞೆಯನ್ನು ದಯಪಾಲಿಸಿದರು. ಕಾಮ ಆಗಿರತಕ್ಕ ಕೋಡಿಯನ್ನು ನಿರ್ಮಿಸುವುದೊಂದರ ಹೊರತು ಉಳಿದ ಕೆಲಸಗಳೆಲ್ಲಾ ಪೂರೈಸಿವೆ. ಈ ಕಾಮಗಾರಿಗಳಿಗಾಗಿ ಒಟ್ಟು 52,02,053 ರೂಪಾಯಿಗಳು ವೆಚ್ಚವಾದುವು.

ವಿದ್ಯುಚ್ಛಕ್ತಿಯ ಇಲಾಖೆ.

ಈ ಇಲಾಖೆಯ ಹುಟ್ಟುವಳಿಯಲ್ಲಿ "ಡಿಪ್ರೀಸಿಯೇಷನ್ ಫಂಡ್" ಎಂಬ ಇಳಿವರಿಭರ್ತಿ ನಿಧಿಗೆ 6,50,000 ರೂಪಾಯಿಗಳನ್ನು ಕೊಟ್ಟಬಳಿಕ ಉಳಿದ ಮೊಬಲಗು 33,93,417 ರೂಪಾಯಿಗಳು.

ಮುಳುಬಾಗಿಲು ಚಿಂತಾಮಣಿ, ದೇವನಹಳ್ಳಿ ಮತ್ತು ಗೋರಿಬಿದನೂರು ಈ ಸ್ಥಳಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವ ಕಾಮಗಾರಿಯನ್ನು ಕೈಕೊಳ್ಳಲಾಯಿತು. ಗೋರಿಬಿದನೂರಿಗೂ ಮತ್ತು ದೇವನಹಳ್ಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವ ಕೆಲಸವು ಪೂರೈಸಿತು. ಕೋಲಾರದ ಚಿನ್ನದಗಣಿ, ಬೆಂಗಳೂರು, ಕಾನಕಾನಹಳ್ಳಿ ಮತ್ತು ಮೈಸೂರು ಇವುಗಳಿಗೆ ವಿದ್ಯುಚ್ಛಕ್ತಿಯು ಹೋಗುವ ಮಾರ್ಗದಲ್ಲಿ ಅಲ್ಲಲ್ಲಿ ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವ ಏರ್ಪಾಡುಗಳಿಗಾಗಿ 1933 ನೇ ಇಸವಿ ಜೂನ್ ತಿಂಗಳ ಕೊನೆಯವರೆಗೆ 19,02,158 ರೂಪಾಯಿಗಳು ವೆಚ್ಚವಾಗಿವೆ. ಈ ಮೊಬಲಗಿನ ಮೇಲೆ ಗ್ರಾಮಸ್ಥರು ಖಾತರಿಮಾಡಿಕೊಟ್ಟಿರುವ ಶೇಕಡಾವಾರು ವರಮಾನದ ಮೊಬಲಗುಗಳಿಗಿಂತ ಕಡಿಮೆ ಮೊಬಲಗುಗಳೇ ಆಯಾ ಗ್ರಾಮಗಳಿಂದ ಸದ್ಯದಲ್ಲಿ ಬರುತ್ತಿವೆ. ಆದರೆ ಈ ಏರ್ಪಾಡಿಗಾಗಿ ಸರ್ಕಾರದವರು ವೆಚ್ಚಮಾಡಿರುವ ಮೊತ್ತದ ಮೇಲೆ ತಕ್ಕಷ್ಟು ಪ್ರತಿಫಲಗಳು ಶೀಘ್ರದಲ್ಲಿಯೇ ಬರುವಂತಾಗುವುವೆಂದು ನಾನು ನಂಬಿದ್ದೇನೆ.

ಚಾಮರಾಜನಗರ, ಯಡತೊರೆ ಮತ್ತು ಹುಣಸೂರು, ಈ ಮೂರು ಊರುಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ತಗಲುವ ವೆಚ್ಚಗಳ ಅಂದಾಜುಗಳು ಸರ್ಕಾರದವರಲ್ಲಿಗೆ ಬಂದು, ಅವರ ಪರ್ಯಾಲೋಚನೆಯಲ್ಲಿವೆ.

ನೀರಾವರಿ ವ್ಯವಸಾಯಕ್ಕಾಗಿ ನೀರನ್ನೆತ್ತುವ 358 ಎಲೆಕ್ಟ್ರಿಕ್ ಪಂಪುಗಳು ಸ್ಥಾಪಿತವಾಗಿ ಪ್ರಸಕ್ತವರ್ಷದಲ್ಲಿ ಕೆಲಸ ಮಾಡುತ್ತಿದ್ದುವು. 1931—32 ನೆಯ ಸಾಲಿನಲ್ಲಿ 297 ಪಂಪುಗಳಿಂದ ಮಾತ್ರವೇ ನೀರಾವರಿಗೆ ನೀರೆತ್ತುವ ಕೆಲಸವು ನಡೆಯುತ್ತಿದ್ದಿತು.

ವಿದ್ಯುಚ್ಛಕ್ತಿಯ ಇಲಾಖೆಗೆ ಬೇಕಾದ ಟ್ರಾನ್ಸ್‌ಫಾರ್ಮರುಗಳನ್ನು ಹೊರಗಿನಿಂದ ತರಿಸಿಕೊಳ್ಳದೆ ಸ್ಥಳದಲ್ಲಿಯೇ ತಯಾರಿಸಿಕೊಳ್ಳುವುದಕ್ಕೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಒದಗಿಸಲಾಗಿದೆ. ಅವುಗಳನ್ನು ತಯಾರಿಸುವ ವಿಚಾರದಲ್ಲಿ ಶೀಘ್ರದಲ್ಲಿಯೇ ಚೆನ್ನಾಗಿ ಕೆಲಸ ನಡೆದೀತೆಂಬ ನಿರೀಕ್ಷೆ ಇದೆ. ವಿದ್ಯುಚ್ಛಕ್ತಿಯ ಇಲಾಖೆಯ ಕೆಲಸವು ಹೆಚ್ಚುತ್ತಿರುವುದರಿಂದ ಆ ಸಂಬಂಧದಲ್ಲಿ ಬೇಕಾದ ಹೆಚ್ಚು ಸಿಬ್ಬಂದಿಯನ್ನೂ, ಗ್ರಾಮಾಂತರಗಳ ಜನಗಳು ವ್ಯವಸಾಯ ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವಂತೆ ಮಾಡುವುದಕ್ಕೋಸ್ಕರ ಪ್ರಸಾರಣೆಯ ಕೆಲಸವನ್ನು ನಡೆಯಿಸುವ ಸಿಬ್ಬಂದಿಯನ್ನೂ ಮಂಜೂರು ಮಾಡಲಾಯಿತು.

ರೈಲ್ವೆ ಇಲಾಖೆ.

ಸಂಸ್ಥಾನದಲ್ಲಿ ಒಟ್ಟು 722.29 ಮೈಲಿಗಳ ದೂರದಷ್ಟು ರೈಲ್ವೆ ಮಾರ್ಗಗಳಿವೆ. ಇವುಗಳಲ್ಲಿ 450.73 ಮೈಲಿಗಳು ಸರ್ಕಾರದ ಆಡಳಿತದಲ್ಲಿಯೂ ಮತ್ತು 271.56 ಮೈಲಿಗಳು ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೆ ಕಂಪೆನಿಯ ಆಡಳಿತದಲ್ಲಿಯೂ ಇದ್ದುವು. ಒಟ್ಟು ಹುಟ್ಟುವಳಿಯು 73.43 ಲಕ್ಷ ರೂಪಾಯಿಗಳು. ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೆ ಕಂಪನಿಯವರಿಗೆ ಕೊಟ್ಟ ಉಳಿಕೆಯ ಲಾಭದ ಮೊತ್ತವೂ ಸೇರಿ ಕೆಲಸ ನಡೆಸುವ ವೆಚ್ಚವು 45.93 ಲಕ್ಷ ರೂಪಾಯಿಗಳು. "ಡಿಪ್ರೀಸಿಯೇಷನ್ ಫಂಡ್" ಎಂಬ ಇಳಿವರಿಭರ್ತಿ ನಿಧಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟ ತರುವಾಯ ರೈಲ್ವೆಗಳಿಂದ ಸಂಸ್ಥಾನಕ್ಕೆ ಬಂದ ನಿವ್ವಳ ಹುಟ್ಟುವಳಿಯು 22.63 ಲಕ್ಷ ರೂಪಾಯಿಗಳು. ರೈಲ್ವೆಗಾಗಿ ವೆಚ್ಚವಾಗಿರುವ 5.43 ಕೋಟಿ ರೂಪಾಯಿಗಳ ಮೇಲೆ ಶೇಕಡ 3.81 ರೂಪಾಯಿಗಳಂತೆ ಪ್ರತಿಫಲ ಬಂದಂತಾಯಿತು. 1931.32 ನೇ ಸಾಲಿನಲ್ಲಿ ರೈಲ್ವೆಗಳಿಂದ ಬಂದ ನಿವ್ವಳ ಹುಟ್ಟುವಳಿಯು 26.13 ಲಕ್ಷ ರೂಪಾಯಿಗಳು.

ಅರಸಾಳು ಗ್ರಾಮದಿಂದ ಆನಂದಪುರದವರೆಗೆ ರೈಲನ್ನು ಹಾಕಿಸುವ ಕಾಮಗಾರಿಯು ನಡೆಯುತ್ತಿದೆ. ಇರ್ವಿನ್ ನಾಲೆಯ ಕಾವೇರಿ ಶಾಖೆಗೆ ಎಲಿಯೂರಿನ ಬಳಿಯಲ್ಲಿ ತಾಂಡವಾಳದ ಕೊಳೆಗಳ ಸೇತುವೆಯನ್ನು ಕಟ್ಟುವ ಕೆಲಸವು ನಡೆಯುತ್ತಿದೆ.

ಜ್ಯುಡಿಷಿಯಲ್ ಇಲಾಖೆ.

1930-31 ನೇ ಸಾಲಿನಿಂದೀಚೆಗೆ ಸಿವಿಲ್ ಕೋರ್ಟುಗಳಲ್ಲಿ ದಾವೆಗಳ ಸಂಖ್ಯೆಯು ಏಕಪ್ರಕಾರವಾಗಿ ಹೆಚ್ಚುತ್ತಿದೆ. 1932-33 ನೆಯ ಸಾಲಿನಲ್ಲಿ ದಾವೆಗಳು ಪ್ರತಿಸಾವಿರಕ್ಕೆ 44 ರಂತೆ ಹೆಚ್ಚಿದುವು. ತಕ್ಸೀರುಗಳ ಸಂಖ್ಯೆಯೂ 1931-32 ನೆಯ ಸಾಲಿನಲ್ಲಿ ಪ್ರತಿಸಾವಿರಕ್ಕೆ 262 ರಂತೆ ಹೆಚ್ಚಿತು. ವಿಚಾರಣೆಗೆ ಗುರಿಯಾದ ಜನರ ಸಂಖ್ಯೆಯು ಅದೇ ಸಾಲಿನಲ್ಲಿ ಪ್ರತಿಸಾವಿರಕ್ಕೆ 73 ರಂತೆ ಹೆಚ್ಚಿತು. ತಪ್ಪು ಸಾಬೀತುಗಳ ಸಂಖ್ಯೆಯು ಪ್ರತಿಸಾವಿರಕ್ಕೆ 264 ರಂತೆ ಹೆಚ್ಚಿತು. ಬೆಂಗಳೂರಿನಲ್ಲಿರುವ ಅಡಿಷನಲ್ ಡಿಸ್ಟ್ರಿಕ್ಟ್ ಕೋರ್ಟನ್ನು 1934 ನೆಯ ಇಸವಿಯ ಬೇಸಗೆ ರಜದವರೆಗೂ ನಡೆಸಿಕೊಂಡು ಬರಲಾಗುತ್ತದೆ. ತರೀಕೆರೆಯಲ್ಲಿದ್ದ ಎರಡನೆಯ ದರ್ಜೆಯ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಹಂಗಾಮಿಯಾಗಿ ಸ್ವಲ್ಪಕಾಲ ನಿಲ್ಲಿಸಿದ್ದುದು ಸರಿಯಷ್ಟೆ. ನರಸಿಂಹರಾಜಪುರದ ಕೋರ್ಟಿನಲ್ಲಿ ಕೆಲಸವು ಹೆಚ್ಚು ಬಹಳವಾಗಿ ಬಾಕಿ ಉಳಿದ ಕಾರಣ, 1933 ನೇ ಇಸವಿ ಮಾರ್ಚಿ 25 ನೇ ತಾರೀಖಿನಿಂದ ತರೀಕೆರೆಯಲ್ಲಿ ಎರಡನೆಯ ತರಗತಿಯ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಮತ್ತೆ ಸ್ಥಾಪಿಸಲಾಯಿತು. ಮಂಡ್ಯದಲ್ಲಿರುವ ಒಂದನೆಯ ತರಗತಿಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೆಲಸವು ಬಹಳವಾಗಿ ಹೆಚ್ಚಿ ಬಾಕಿ ಉಳಿದುಹೋದಕಾರಣ 6 ತಿಂಗಳ ವರೆಗೆ ಮಂಡ್ಯದಲ್ಲಿ ಒಂದನೆಯ ತರಗತಿಯ ಮತ್ತೊಂದು ಹೆಚ್ಚಿಗೆ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಏರ್ಪಡಿಸಲಾಯಿತು. ಸಿವಿಲ್, ಜುಡಿಷಿಯಲ್ ಮತ್ತು ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಒಟ್ಟುಗೂಡಿಸಿ ಒಬ್ಬರಿಗೇ ಕೊಡುವ ಶಿಸ್ತನ್ನು ಸಾಧ್ಯವಾದ ಸ್ಥಳಗಳಲ್ಲೆಲ್ಲಾ ಆಚರಣೆಗೆ ತರುತ್ತಿರಲಾಗಿದೆ. ಅದರಿಂದ ತೃಪ್ತಿಕರವಾಗಿ ಕೆಲಸ ನಡೆಯುತ್ತಿದೆ.

ವ್ಯವಸಾಯಗಾರರ ಸಹಾಯಾರ್ಥವಾದ ರೆಗ್ಯುಲೇಷನ್ನಿನಿಂದ ಅನುಕೂಲವಾಗಿ ಕೆಲಸ ನಡೆಯುವ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯವಿದೆ. ಮಲೆನಾಡು ಅಭಿವೃದ್ಧಿಯ ಸಮಿತಿಯವರು ಆ ರೆಗ್ಯುಲೇಷನನ್ನು ಇತರ ಸ್ಥಳಗಳಲ್ಲಿಯೂ ಆಚರಣೆಗೆ ತರಬೇಕೆಂದು ಸಲಹೆ ಮಾಡಿದ್ದಾರೆ. ಆದರೆ "ಲಾ ಅಸೋಸಿಯೇಷನ್" ಎಂಬ ಲಾಯರುಗಳ ಸಂಘದವರೂ ಮತ್ತು ಆ ರೆಗ್ಯುಲೇಷನ್ನಿನ ನಿಬಂಧನೆಗಳನ್ನು ಆಚರಣೆಗೆ ತರುವ ಸಿವಿಲ್ ಕೋರ್ಟುಗಳವರೂ ಆ ರೆಗ್ಯುಲೇಷನ್ನಿನ ಪ್ರಕಾರ ನಡೆಯಬೇಕಾದ ವಿಚಾರಣೆಗಳ ದೆಸೆಯಿಂದ ದಾವೆಗಳ ತೀರ್ಮಾನವು ಬಹಳ ಸಾವಕಾಶವಾಗುತ್ತಿರುವುದಾಗಿಯೂ ಮತ್ತು ಆ ರೆಗ್ಯುಲೇಷನು ವ್ಯವಸಾಯಗಾರರಿಗೆ ನಿಜವಾಗಿಯೂ ಸಹಾಯಕವಾಗಿರುವುದೇ ಅನುಮಾನವಾಗಿದೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ಹೈಕೋರ್ಟಿನವರು ವಾಸ್ತವ ವಿದ್ಯಮಾನಗಳನ್ನು ವಿಚಾರಮಾಡಿ ಪರಿಶೀಲಿಸುತ್ತಿದ್ದಾರೆ.

ಪೋಲೀಸು ಇಲಾಖೆ.

ಪ್ರಸಕ್ತವರ್ಷದಲ್ಲಿ ಪೋಲೀಸು ಇಲಾಖೆಯ ಪುನರ್ವ್ಯವಸ್ಥೆಯು ನಡೆಯಿತು. ಕೆಳದರ್ಜೆಯ ಸಿಬ್ಬಂದಿಗೆ ಸೇರಿದವರ ಸಂಬಳಗಳೂ ಮತ್ತು ಬಡ್ತಿ ಸಂಭವಗಳೂ ಹೆಚ್ಚಲ್ಪಟ್ಟಿವೆ. ಕಾನ್‌ಸ್ಟೇಬಲುಗಳ ಸಂಬಳವು ತಿಂಗಳಿಗೆ 15 ರೂಪಾಯಿಗಳಿಗಿಂತ ಕಡಿಮೆಯಾಗಿರಕೂಡದೆಂದು ವ್ಯವಸ್ಥೆ ಮಾಡಲಾಗಿದೆ.

ಮೋಟಾರು ಬಸ್ಸುಗಳೇ ಮುಂತಾದವುಗಳ ಸಂಚಾರವನ್ನೂ ಅವುಗಳ ಮೇಲೆ ತೆರಿಗೆಗಳನ್ನು ವಿಧಿಸುವ ವಿಚಾರವನ್ನೂ ಪರಿಶೀಲಿಸಿ, ತಕ್ಕ ಸಲಹೆಗಳನ್ನು ಕೊಡುವುದಕ್ಕಾಗಿ ಸರ್ ಚಾರಲ್ಸ್ ಟಾಡ್‌ಹಂಟರ್ರವರ ಅಧ್ಯಕ್ಷತೆಯಲ್ಲಿ 1932ನೆಯ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಒಂದು ಸಮಿತಿಯು ನೇಮಕವಾಗಿದ್ದುದು ಸರಿಯಷ್ಟೆ. ಆ ಸಮಿತಿಯವರು ವರದಿಯನ್ನು ಒಪ್ಪಿಸಿದ್ದಾರೆ. ಅವರ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಸೈನ್ಯದ ಇಲಾಖೆ.

1931-32 ನೆಯ ಸಾಲಿನಲ್ಲಿ ಪದಾತಿ ಸೈನ್ಯದ ಪುನರ್ವ್ಯವಸ್ಥೆಯು ಪ್ರಾರಂಭವಾಯಿತು. ಅದು ಇನ್ನೂ ನಡೆಯುತ್ತಿದೆ. ಪದಾತಿ ಸೈನ್ಯದ 3 ನೆಯ ಬೆಟಾಲಿಯನ್ನಿನವರಿಗೆ ಆಧುನಿಕಕಾಲದ ಆಯುಧಗಳನ್ನು ಒದಗಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ.

ಪ್ರಸಕ್ತವರ್ಷ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 2,834 ಮಂದಿ ವ್ಯಾಸಂಗ ಮಾಡುತ್ತಿದ್ದರು. ಅವರಲ್ಲಿ 144 ಮಂದಿ ಹೆಂಗಸರು 1931.32 ನೇ ಸಾಲಿನಲ್ಲಿ 2,833 ಮಂದಿ ವ್ಯಾಸಂಗ ಮಾಡುತ್ತಿದ್ದರು. ನಾನಾ ಪರೀಕ್ಷೆಗಳಲ್ಲಿಯೂ 50 ಮಂದಿ ಸ್ತ್ರೀಯರು ತೇರ್ಗಡೆಯಾದರು. ಅವರಲ್ಲಿ 29 ಮಂದಿ ಸ್ತ್ರೀಯರು "ಡಿಗ್ರಿ" ಗಳೆಂಬ ಪ್ರಶಸ್ತಿಗಳನ್ನು ಪಡೆಯಲು ಅರ್ಹರಾದರು. 1925 ನೆಯ ಇಸವಿಯಲ್ಲಿ ವಿಶ್ವವಿದ್ಯಾನಿಲಯದವರು ಪುನರ್ವ್ಯವಸ್ಥೆಯ ವಿಧಾನಗಳನ್ನು ಸೂಚಿಸಿದ್ದರು. ಅದರ ಪ್ರಕಾರ ಅವರು ಕೊಟ್ಟಿದ್ದ ಸಲಹೆಗಳನ್ನು 1932 ನೆಯ ಇಸವಿಯ ಜುಲೈ ತಿಂಗಳವರೆಗೂ ಕ್ರಮಕ್ರಮವಾಗಿ ಆಚರಣೆಗೆ ತರಲಾಯಿತು. 1932 ನೆಯ ಇಸವಿಯ ಜುಲೈ ತಿಂಗಳಿನಲ್ಲಿ ಎಂ. ಎ. ಮತ್ತು ಎಂ. ಎಸ್‌ಸಿ. ತರಗತಿಗಳನ್ನು ಏರ್ಪಡಿಸಲಾಯಿತು. ಅಲ್ಲಿಗೆ ಅವರ ಸಲಹೆಗಳನ್ನೆಲ್ಲಾ ಪೂರ್ತಿಯಾಗಿ ಆಚರಣೆಗೆ ತಂದಂತಾಯಿತು. ಮೈಸೂರು ವಿಶ್ವವಿದ್ಯಾನಿಲಯದ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದಕ್ಕಾಗಿ ರಚಿಸಲ್ಪಟ್ಟಿದ್ದ ಮಸೂದಾ ಕಾನೂನಿಗೆ 1933 ನೆಯ ಇಸವಿ ಜನವರಿ 5 ನೇ ತಾರೀಖಿನ ದಿನ ಶ್ರೀಮನ್ ಮಹಾರಾಜರವರು ಒಪ್ಪಿಗೆಯನ್ನು ದಯಪಾಲಿಸಿದರು. ಅಂದಿನಿಂದ ಅದು ರೆಗ್ಯುಲೇಷನಾಯಿತು. "ಅಕ್ಯಾಡೆಮಿಕ್ ಕೌನ್ಸಿಲ್" ಎಂಬ ವಿಶ್ವವಿದ್ಯಾನಿಲಯದ ಹೆಚ್ಚಿಗೆ ಆಡಳಿತ ಸಭೆಯೊಂದನ್ನು ಹೊಸದಾಗಿ ಏರ್ಪಡಿಸಿದುದೂ, ಮತ್ತು ಪ್ರಜಾಪ್ರತಿನಿಧಿ ಸಭೆಯೇ ಮುಂತಾದ ಸಭೆಗಳಿಂದ ಪ್ರಜಾವರ್ಗದವರ ಪರವಾದ ಪ್ರತಿನಿಧಿಗಳು ವಿಶ್ವವಿದ್ಯಾನಿಲಯದ "ಸೆನೆಟ್" ಸಭೆಗೆ ಸದಸ್ಯರಾಗಿ ಬರುವುದಕ್ಕೆ ಅವಕಾಶವನ್ನು ಕಲ್ಪಿಸಿ ಆ ಸಭೆಯನ್ನು ಬದಲಾವಣೆಗೊಳಿಸಿದುದೂ, ಹೊಸ ರೆಗ್ಯುಲೇಷನ್ನಿನ ಮುಖ್ಯ ಲಕ್ಷಣಗಳು.

ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಡಿಗ್ರಿ ಪರೀಕ್ಷೆಯು ವ್ಯಾಸಂಗ ಪ್ರೌಢಿಮೆಯಲ್ಲಿ ವಿದ್ಯಾರ್ಥಿಗಳಿಗೆ ತಕ್ಕಷ್ಟು ಪರಿಶ್ರಮವನ್ನುಂಟುಮಾಡತಕ್ಕದಾಗಿದೆಯೆಂದು "ಇಂಜನಿಯರುಗಳ ಇನ್‌ಸ್ಟಿಟ್ಯೂಟ್" ಸಂಸ್ಥೆಯವರು ಸಮ್ಮತಿಸಿದರು. ಆದಕಾರಣ ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಡಿಗ್ರಿ ಪರೀಕ್ಷೆಯನ್ನು ಮಾಡಿದವರು ಆ ಸಂಸ್ಥೆಯವರಿಂದ ಅಂಗೀಕಾರವನ್ನು ಪಡೆಯಬೇಕಾದರೆ ಅವರು ನಡೆಯಿಸುವ ಅಸೋಸಿಯೇಟ್ ಮೆಂಬರ್‌ಷಿಪ್ ಪರೀಕ್ಷೆಗಳ ಎ. ಮತ್ತು ಬಿ. ಭಾಗಗಳಲ್ಲಿ ತೇರ್ಗಡೆ ಹೊಂದಬೇಕಾಗಿದ್ದ ಅವಶ್ಯಕತೆಯು ತಪ್ಪಿಹೋಯಿತು. ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಇಂಡಿಯಾ ಸರ್ಕಾರದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ನಡೆಯಿಸುವ ರೈಲ್ವೆ ಇಂಜನಿಯರಿಂಗ್ ಹುದ್ದೆಗಳ ಸ್ಪರ್ಧಾ ಪರೀಕ್ಷೆಗಳಿಗೆ ಹೋಗಬಹುದೆಂದು ಇಂಡಿಯಾ ಸರ್ಕಾರದವರು ಸಮ್ಮತಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರುಗಳೂ ಮದರಾಸ್ ಅಧಿಪತ್ಯದಲ್ಲಿ ವೈದ್ಯವೃತ್ತಿಯನ್ನು ಅವಲಂಬಿಸಲು ಅಧಿಕಾರವುಳ್ಳವರ ಹೆಸರುಗಳ ರಿಜಿಸ್ಟರುಗಳಿಗೆ ದಾಖಲಾಗಬಹುದೆಂದೂ ಮದರಾಸು ಸರ್ಕಾರದವರು ಅಂಗೀಕರಿಸಿದ್ದಾರೆ. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದವರು ಮೈಸೂರು ವಿಶ್ವವಿದ್ಯಾನಿಲಯವನ್ನು "ಅಸೋಸಿಯೇಟ್" ಸಂಸ್ಥೆಯಾಗಿ ಅಂಗೀಕರಿಸಿದ್ದಾರೆ.

ನಿಖಿಲಭಾರತೀಯ ದರ್ಶನ ಶಾಸ್ತ್ರಗಳ ಪರಿಷತ್ತಿನವರು ತಮ್ಮ ಅಧಿವೇಶನವನ್ನು 1932 ನೆಯ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಮೈಸೂರು ನಗರದಲ್ಲಿ ನಡೆಯಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆದ ಆ ಪರಿಷತ್ತಿನ ಅಧಿವೇಶನವನ್ನು ಶ್ರೀಮನ್ಮಹಾರಾಜರವರು ಸಮಾರಂಭಗೊಳಿಸಿದರು, ಇಂಡಿಯಾ ದೇಶದ ಇಂಜನಿಯರುಗಳ ಇನ್‌ಸ್ಟಿಟ್ಯೂಟಿನವರು ತಮ್ಮ ವಾರ್ಷಿಕ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಯಿಸಿದರು.

(ಸಶೇಷ.)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ೧೦೮ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ಸಿದ್ಧಾಂತಶಿಖಾಮಣಿಪ್ರವಚನ,
ಬಳ್ಳಾರಿ.

ಬಳ್ಳಾರಿ ಪಟ್ಟಣವು ಬಹುಕಾಲದಿಂದಲೂ ಮಹಾಮಹಿಮಶಾಲಿಗಳಾದ ಮರಿಸ್ವಾಮಿಗಳು ಮೊದಲಾದ ಶಿವಶರಣರ ಮತ್ತು ಅವರಿಂದ ಅನುಗ್ರಹೀತರಾದ ಸಕ್ಕರಿಕರಡಪ್ಪ ಮೊದಲಾದ ಗುರುಭಕ್ತರ ಸದನುಷ್ಠಾನ ಸದಾಚಾರಗಳಿಂದ ಈ ಮಾನವೀಯ ಪ್ರಪಂಚದ ಪರಮಭಕ್ತಿಸ್ಥಾನಗಳಲ್ಲಿ ಇದೊಂದು ಅಗ್ರೇಸರವಾಗಿದ್ದುಕೊಂಡು ಈಗಲೂ ತನ್ನ ಭಕ್ತಿಯನ್ನು ಹೊರಸೂಸಿ ಸುತ್ತುತ್ತಿರುತ್ತದೆ. ಈ ತರಹದ ಬಳ್ಳಾರಿಯ ಪರಮಪುಣ್ಯಕ್ಕೆ ಕಾರಣೀಭೂತವಾದ ಮರಿಸ್ವಾಮಿಗಳ ಮಠದಲ್ಲಿ ಪದ್ಧತಿಯಂತೆ ಅಶ್ವಯುಜ ಶು|| ೧ ರಿಂದ ಇದೇ ಶು|| ೧೦ ಪರ್ಯಂತ ಪ್ರಸಿದ್ಧರಾದ ಬೋಧಕರನ್ನು ಬರಮಾಡಿಕೊಂಡು ಅವರಿಂದ ಶ್ರಾವ್ಯವಾದ ಸದ್ಬೋಧಾಮೃತವನ್ನು ಸಮಸ್ತ ಜನರಿಗೂ ಪಾನಮಾಡಿಸತಕ್ಕ ವಿಷಯವು ಬಹುದಿವಸದಿಂದಲೂ ನಡೆದುಬಂದ ಸಂಗತಿಯಾಗಿದೆ. ಈ ವರ್ಷವಾದರೂ ಕರ್ನಾಟಕದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ವಿದ್ವತ್ಪೂರ್ಣವಾದ ಲೋಕಪ್ರವಚನಗಳ ದ್ವಾರಾ ವೀರಶೈವ ಮತತತ್ವಗಳನ್ನು ಬೋಧಿಸುವದರಲ್ಲಿ ಬೃಹಸ್ಪತಿಯೆಂದು ಪ್ರಸಿದ್ಧರಾದ ವಿಜಾಪುರ ಬೃಹನ್ಮಠಾಧ್ಯಕ್ಷ ಶ್ರೀ|| ಶಂಭುಲಿಂಗಶಿವಾಚಾರ್ಯ ಮಹಾಸ್ವಾಮಿಗಳನ್ನು ಬರಮಾಡಿಕೊಂಡು ಅವರಿಂದ ಈ ಸಾರೆ ನಡೆಸತಕ್ಕ ಸಂಕಲ್ಪವನ್ನು ಮಾಡಿಕೊಂಡ ಮಠಾಧ್ಯಕ್ಷ ವೇ|| ಮರಿಬಸವಾರಾಧ್ಯರು ಸೊಲ್ಲಾಪುರಕ್ಕೆ ಹೋಗಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರಲ್ಲಿ ತಮ್ಮ ಸಂಕಲ್ಪವನ್ನು ಅರಿಕೆಮಾಡಿಕೊಂಡು ಅವರಿಂದ ಆಜ್ಞಾಪರಿಚಯಪತ್ರವನ್ನು ತೆಗೆದುಕೊಂಡು ವಿಜಾಪುರಕ್ಕೆ ಹೋಗಿ, ತಮ್ಮ ಅಭಿಪ್ರಾಯವನ್ನು ನಿವೇದಿಸಲು ಅದಕ್ಕೆ ಶ್ರೀ ಶಿವಾಚಾರ್ಯರು ಶ್ರೀ ಜಗದ್ಗುರುವಿನ ಆಜ್ಞಾಪ್ರೇರಣೆಯಿಂದ ಧರ್ಮಾಧಿಕಾರಿಗಳಾದ ತಮ್ಮ ಕರ್ತವ್ಯವನ್ನು ಭಾವಿಸಿ ಬಳ್ಳಾರಿಗೆ ದಯಮಾಡಿಸಿ ಅಶ್ವಯುಜ ಶು|| ೧ ರಲ್ಲಿ ಪ್ರವಚನವನ್ನು ಆರಂಭಿಸಿದರು. ಆರಂಭ ದಿವಸದಲ್ಲಿ ಮಾತ್ರ ಇಲ್ಲಿಯ ಕೆಲ ಜನರು ಪ್ರವಚನವೆಂದರೆ ಏನೋ ಎಂದು ಭಾವಿಸಿ ಬಾರದಿರಬಹುದಾಗಿದ್ದರೂ ಮರುದಿವಸ ಶ್ರೀ|| ಶಿವಾಚಾರ್ಯರ ವಿದ್ವತ್ಪೂರ್ಣವಾದ ಬೋಧೆಯನ್ನು ಕೇಳಲು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬೀ ಚತುರ್ವರ್ಣದ ಅಸಂಖ್ಯಾತ ಸ್ತ್ರೀಪುರುಷರು ನೆರೆಯುತ್ತಿದ್ದರು. ಅವರಲ್ಲಿ ಶ್ರೀ|| ಷ|| ಬ್ರ|| ಹಸುಗೋಡದ ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯರು ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಸಿದ್ಧಾಪುರ, ತ್ರಿಲೋಚನ ಶಿವಾಚಾರ್ಯರು, ಶ್ರೀ|| ಷ|| ಬ್ರ|| ಬೂದಗುಂಪಿ ಪಟ್ಟಾಧ್ಯಕ್ಷರು ಇಲ್ಲಿಯ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯದ ಅಧ್ಯಾಪಕರು. ಹಾಗೂ ಅಲ್ಲಿಯ ವಿದ್ಯಾರ್ಥಿಗಳು ಹೈಸ್ಕೂಲ್ ಕನ್ನಡ ಪಂಡಿತರು ಮತ್ತು ಪಟ್ಟಣದಲ್ಲಿಯ ಮುಖ್ಯ ಮುಖ್ಯ ಅಧಿಕಾರಿಗಳು ಬರುತ್ತಿದ್ದರು. ಪ್ರವಚನಬೃಹಸ್ಪತಿಗಳು ಎಂಟು ದಿವಸಗಳ ವರೆಗೂ ಶ್ರೀ ಸಿದ್ಧಾಂತಶಿಖಾಮಣಿಯು ಆರಂಭದಲ್ಲಿರುವ ಶಿವಶಿವೆಯರ ವಂದನಾತ್ಮಕ ಮಂಗಳಗಳನ್ನೆತ್ತಿ ವೇದಾಗಮಾದಿ ಪ್ರಮಾಣಗಳೊಡನೆ ಪಂಡಿತರಿಗೂ ಪಾಮರರಿಗೂ ಸಹ ಬೋಧವಾಗುವಂತೆ ಅರ್ಥವತ್ತಾಗಿ ವಿಶದೀಕರಿಸಿದರು. 30-9-33 ನೆಯ ದಿವಸ ಶ್ರೀ ಜಗದ್ಗುರು ರಂಭಾಪುರೀ ಸಿಂಹಾಸನಾಧೀಶ್ವರರ ದರ್ಶನಾರ್ಥವಾಗಿ ಚಳ್ಳಕೆರೆಗೆ ದಯಮಾಡಿಸಿದರು. ಈಗಲೂ ಇಲ್ಲಿಯ ಮಹಾಜನಗಳು ನಮ್ಮ ಪಟ್ಟಣಕ್ಕೆ ಈ ವರೆಗೆ ವೇದಾಗಮಗಳ ರಹಸ್ಯಾರ್ಥವನ್ನು ಸ್ವಮತೀಯರೂ ಪರಮತೀಯರೂ ಒಪ್ಪುವಹಾಗೆ ಸಮಂಜಸವಾಗಿಯೂ, ಸುಲಭವಾಗಿಯೂ ಸ್ಪಷ್ಟವಾಗಿಯೂ ಬೋಧಿಸತಕ್ಕವರು ಶ್ರೀ ಶಂಭುಲಿಂಗಶಿವಾಚಾರ್ಯರಂತೆ ನಮಗೆ ದೊರಕಲಿಲ್ಲವೆಂದೂ ಇಂಥ ಧರ್ಮಾಧಿಕಾರಿಗಳು ವೀರಶೈವ ಸಮಾಜಕ್ಕೆ ಭೂಷಣಪ್ರಾಯರಾಗಿರುವರೆಂದೂ ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ದೀರ್ಘಾಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದೂ ಕೊಂಡಾಡುತ್ತಲಿರುವರು.

ಆರಾಧ್ಯಮಠದ ಮರಿಸ್ವಾಮಪ್ಪ,
ಕೋರಿಸೂಗೂರಪ್ಪ.

ಪಂಚಾಚಾರ್ಯ ಪ್ರಭಾ.

೧೯೩೩ ನೇ ಅಕ್ಟೋಬರ್ ತಾ|| ೯ನೇ ಸೋಮವಾರ.

ಮೂರ್ತಿಪೂಜೆ.

ಈ ಪ್ರಪಂಚದಲ್ಲಿರುವ ಪ್ರತಿಯೊಬ್ಬರೂ ಯಾವ ಕೆಲಸವನ್ನು ಮಾಡಬೇಕಾದರೂ ದೇವರೊಬ್ಬನು ಇದ್ದಾನೆ; ಆತನು ನಾವು ಮಾಡುವ ಕಾರ್ಯಗಳ ಬಲಾಬಲವನ್ನು ನೋಡಿ ಫಲಗಳನ್ನು ಕೊಡುತ್ತಾನೆಂಬ ದೃಢವಾದ ನಂಬಿಕೆಯನ್ನಿಟ್ಟುಕೊಂಡೇ ಕೆಲಸ ಮಾಡಬೇಕು. ಸರ್ವಸಾಕ್ಷಿಯಾದ ದೇವರನ್ನೇ ಮರೆತು ಕೆಲಸಮಾಡುವವನಿಗೆ ಯಾವ ಕೆಲಸಗಳೂ ಕೈಗೂಡುವುದಿಲ್ಲ. ದೇವರು ನಮ್ಮನ್ನು ಸೃಷ್ಟಿಮಾಡಿ, ಸಕಲವಾದ ಐಹಿಕಸೌಖ್ಯವನ್ನು ಹೊಂದಿ ಪುನಃ ನನ್ನಲ್ಲಿಯೇ ಸೇರಿ ನಿತ್ಯಸುಖ ಪಡೆಯಲೆಂಬ ಸಂಕಲ್ಪದಿಂದ ನಮಗೆ ಬುದ್ಧಿಜ್ಞಾನೇಂದ್ರಿಯಾದಿ ಸಕಲ ಸಾಮಗ್ರಿಯನ್ನು ದಯಪಾಲಿಸಿದ ಮೇಲೆ, ಅಂಥ ದೇವರನ್ನೇ ಮರೆತು ದೇವರ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವುದು ಮಾನವನ ಕರ್ತವ್ಯವಲ್ಲವೆಂಬುವದನ್ನು ಎಲ್ಲರೂ ತಿಳಿದೇ ಇರುತ್ತಾರೆ. ಇಂಥ ದೇವರು ನಮ್ಮ ಕಣ್ಣಿಗೆ ಗೋಚರನಲ್ಲದಿದ್ದರೂ ಆ ದೇವರನ್ನು ನಿಶ್ಚಯಿಸುವುದಕ್ಕಾಗಿ ಸರ್ವಜ್ಞರಾದ ನಮ್ಮ ಪೂರ್ವ ಋಷಿಗಳು ನಾಲ್ಕುಪ್ರಮಾಣಗಳನ್ನು ಹೇಳಿರುತ್ತಾರೆ. ಅವುಗಳೇ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದಪ್ರಮಾಣಗಳೆಂದು ಹೇಳಿಸಿಕೊಳ್ಳಲ್ಪಡುತ್ತವೆ. ಅವುಗಳಲ್ಲಿ ಚಕ್ಷುರಾದೀಂದ್ರಿಯಸಹಾಯದಿಂದ ಉಂಟಾಗುವ ಜ್ಞಾನವೇ ಪ್ರತ್ಯಕ್ಷಪ್ರಮಾಣವು. ಕಣ್ಣಿಗೆ ಕಾಣಿಸದ ವಸ್ತುವನ್ನು ಮತ್ತೊಂದರಿಂದ ಊಹಿಸಿ ತಿಳಿಯುವುದೇ ಅನುಮಾನಪ್ರಮಾಣವು. ಯಾವುದಾದರೊಂದು ಹೋಲಿಕೆಯಿಂದ ವಸ್ತುಜ್ಞಾನವನ್ನು ಪಡೆಯುವುದೇ ಉಪಮಾನಪ್ರಮಾಣವು. ಆಪ್ತವಾಕ್ಯವೇ ಶಬ್ದಪ್ರಮಾಣವು. ಈ ನಾಲ್ಕು ಪ್ರಮಾಣಗಳ ಸಹಾಯದಿಂದಲೇ ದೇವರಿದ್ದಾನೆಂಬುದನ್ನು ನಾವು ನಿಶ್ಚಯಿಸಿಕೊಳ್ಳಬೇಕಾಗಿದೆ. ಯಥಾರ್ಥವಾದ ಜ್ಞಾನವನ್ನುಂಟುಮಾಡಿಕೊಡುವುದಕ್ಕೆ ಸಾಧನವಾದುದರಿಂದಲೇ ಇದಕ್ಕೆ ಪ್ರಮಾಣವೆಂಬ ಹೆಸರು ಬಂದಿರುತ್ತದೆ. ಲೋಕದಲ್ಲಿ ಅನಂತ ರಾಜರೂ ಅನಂತ ಧನಿಕರೂ ಇದ್ದಾರೆ. ಇಂಥವರಿಗೆ ಧನಕನಕಾದಿ ಸಾಮಗ್ರಿಗಳು ಬೇಕಾದಷ್ಟು ಇದ್ದರೂ ಇವರ ಮನೋರಥದಂತೆ ನಡೆಯದಿದ್ದುದನ್ನು ನಾವು ಕಣ್ಣಿನಿಂದ ನೋಡುತ್ತಲಿದ್ದೇವೆ. ಯಾವುದೊಂದು ಸಹಾಯಸಂಪತ್ತನ್ನು ಪಡೆಯದೆ ದರಿದ್ರನು ಆಕಸ್ಮಿಕವಾಗಿ ತನ್ನ ಬಯಕೆಗಳನ್ನೆಲ್ಲಾ ಪಡೆದುದನ್ನು ನಾವು ನೋಡುತ್ತಲಿದ್ದೇವೆ. ಇದರಿಂದ ದೇವರಿದ್ದಾನೆಂಬುದು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗುತ್ತದೆ. ಕೋಟೆ ಕಂದುಕ ಗೋಪುರ ಪ್ರಾಸಾದ ಮೊದಲಾದವುಗಳನ್ನು ನೋಡಿ ಇವು ಯಾವನೋ ಒಬ್ಬ ಉತ್ತಮ ಶಿಲ್ಪಿಯಿಂದ ರಚಿಸಲ್ಪಟ್ಟಿರಬಹುದೆಂದು ಊಹಿಸಿ ನಿಶ್ಚಯಿಸುವಂತೆ, ಅದ್ಭುತವಾದ ಈ ಚರಾಚರಾತ್ಮಕವಾದ ಪ್ರಪಂಚವನ್ನು ನೋಡಿ ಈ ಪ್ರಪಂಚವನ್ನು ಸೃಷ್ಟಿಸಿದ ಕರ್ತನೊಬ್ಬನಿದ್ದಾನೆಂದು ತಿಳಿಯುವುದೇ ಅನುಮಾನಪ್ರಮಾಣವೆನಿಸುತ್ತದೆ. ಇನ್ನು ಸೃಷ್ಟಿಕರ್ತನಾದ ದೇವರು ಆಕಾಶಾದಿಗಳಂತೆ ವ್ಯಾಪ್ತನೂ ಪದ್ಮಪತ್ರದಂತೆ ನಿರ್ಲಿಪ್ತನೂ ಎಂದು ಅನೇಕ ಪದಾರ್ಥಗಳೊಡನೆ ಹೋಲಿಸಿ ದೇವರ ಸ್ವರೂಪವನ್ನು ತಿಳಿಯುವುದೇ ಉಪಮಾನಪ್ರಮಾಣವೆನಿಸುವದು. ದೇವರು ತಾನು ಸೃಷ್ಟಿಸಿದ ಪ್ರಪಂಚಕ್ಕೆ ಹಿತಾಹಿತ ಬೋಧೆಗಳನ್ನು ಮಾಡಿ ತನ್ನ ಸ್ವರೂಪವನ್ನು ವಿವರಿಸಿರುವ ವೇದವೇ ಶಬ್ದಪ್ರಮಾಣವು. ಈ ನಾಲ್ಕು ಪ್ರಮಾಣಗಳ ಸಹಾಯದಿಂದ ದೇವರುಂಟು, ಪರಲೋಕವುಂಟು, ಪುಣ್ಯಪಾಪಗಳುಂಟು ಎಂಬುದಾಗಿ ನಿಶ್ಚಯಿಸಿ, ಪ್ರತಿಯೊಬ್ಬ ಮಾನವನು ದೇವರ ಆಜ್ಞೆಗೆ ವಿರೋಧವಲ್ಲದಂತೆ ಈ ಪ್ರಪಂಚವೆಂಬ ರಂಗಸ್ಥಳದಲ್ಲಿ ನಿಯಮದಿಂದಲೂ ಭಯದಿಂದಲೂ ವ್ಯವಹರಿಸಬೇಕಲ್ಲದೆ ಪ್ರಪಂಚನಾಟಕಕರ್ತನೂ ಸೂತ್ರಧಾರಿಯೂ ಆದ ದೇವರನ್ನೇ ಮರೆತು ಸ್ವೇಚ್ಛೆಯಾಗಿ ವ್ಯವಹರಿಸಬಾರದು. ಅಂಥ ಸ್ವೇಚ್ಛಾವಿಹಾರಿಗಳನ್ನು ನೋಡಿ ದೇವರು ಕೋಪಿಸಿಕೊಳ್ಳುವನಲ್ಲದೆ ಪ್ರೀತಿಪಡುವುದಿಲ್ಲ. ಬೇರು ಹೇಗೆ ಹೇಗೆ ಕೆಳಗೆ ಇಳಿಯುತ್ತ ಹೋಗುವುದೋ ಹಾಗೆ ಹಾಗೆ ಮರವು ಗಟ್ಟಿಗೊಳ್ಳುವಂತೆ, ದೇವರುಂಟೆಂಬ ನಂಬಿಕೆಯು ಹೇಗೆ ಹೇಗೆ ಧೃಢಪಡುತ್ತ ಹೋಗುವುದೋ ಹಾಗೆ ಹಾಗೆ ಮನುಷ್ಯನು ಶಮದಮಾದಿಗುಣಗಳಿಗಾಕರನಾಗುತ್ತ ಬರುವನು. ಹಿಂದಿನ ಮಹರ್ಷಿಗಳು ಅಂಥ ದೇವರ ಸ್ವರೂಪವನ್ನು ಪಂಡಿತಪಾಮರರೆಲ್ಲರಿಗೂ ತಿಳಿಯಪಡಿಸುವುದಕ್ಕಾಗಿಯೇ ಕಾಶೀ ರಾಮೇಶ್ವರಾದಿ ಪವಿತ್ರಕ್ಷೇತ್ರಗಳಲ್ಲಿ ದೇವರ ವಿಗ್ರಹಗಳನ್ನು ಸ್ಥಾಪಿಸಿರುತ್ತಾರೆ. ಈ ವಿಗ್ರಹಗಳನ್ನು ನೋಡಿದವರಿಗೆ ದೇವರ ಗುಣಗಳು ದೇವರ ರೂಪವೂ ಪ್ರತಿಯೊಬ್ಬರ ಸ್ಮರಣಕ್ಕೆ ಬರಲೆಂಬುದೇ ಅವರ ಮುಖ್ಯ ಉದ್ದೇಶವು. ಸಾಮಾನ್ಯವಾಗಿ ದೇವರಿದ್ದಾನೆಂದು ತಿಳಿದುಕೊಂಡಿದ್ದರೂ ಆ ದೇವರ ಸ್ವರೂಪಸಾಕ್ಷಾತ್ಕಾರವು ಸ್ಥೂಲೋಪಾಸನೆಯಿಲ್ಲದೆ ಬೇರೆ ಮಾರ್ಗದಿಂದ ಯಾರಿಗೂ ಆಗುವುದಿಲ್ಲ. ಹಿಂದೆ ಯಾವ ಋಷಿಗಳೂ ವಿಗ್ರಹಾರಾಧನೆಯಿಲ್ಲದೆ ದೇವರ ಸಾಕ್ಷಾತ್ಕಾರವನ್ನು ಪಡೆದಿರುವುದಿಲ್ಲ. ಆ ಋಷಿಗಳು ತಮ್ಮ ಹೃದಯಾಕಾಶದಲ್ಲಿರುವ ಭಗವಂತನ ಸ್ಮರಣೆಯನ್ನೇ ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಸುಮುಹೂರ್ತದಲ್ಲಿ ವಿಧ್ಯುಕ್ತವಾದ ಒಂದೊಂದು ವಿಗ್ರಹಗಳನ್ನು ಸಹ ತಮ್ಮ ಹಸ್ತದಿಂದಲೇ ಸ್ಥಾಪಿಸಿ ಷೋಡಶೋಪಚಾರಗಳಿಂದ ಪೂಜಿಸಿ ಜನಗಳಿಗೆ ದೇವರನ್ನು ಸ್ಮರಿಸುವ ಮಾರ್ಗವನ್ನು ತೋರಿಸಿರುತ್ತಾರೆ. ವೇದಶಾಸ್ತ್ರಪುರಾಣಗಳಂತೂ ದೇವರ ಸ್ವರೂಪದಲ್ಲಿ ದೇವತಾ ವಿಗ್ರಹವನ್ನು ಆರಾಧಿಸದವರಿಗೆ ಭಗವಂತನ ಸಾಕ್ಷಾತ್ಕಾರವೆಂದಿಗೂ ಆಗಲಾರದೆಂದು ಹೇಳುತ್ತಲೇ ಇವೆ. ದೇವರ ಸ್ವರೂಪವು ಗೋವಿನಶರೀರದಲ್ಲಿ ಹಾಲು ವ್ಯಾಪಿಸಿಕೊಂಡಿರುವಂತೆ ಎಲ್ಲೆಲ್ಲಿಯೂ ವ್ಯಾಪಿಸಿದ್ದರೂ ಅದರಿಂದ ತನಗೇನೂ ಪ್ರಯೋಜನವಾಗಲಾರದು. ಕೆಚ್ಚಲಿನ ದ್ವಾರಾ ಹಾಲು ಪ್ರತ್ಯಕ್ಷವಾಗುವಂತೆ ವಿಗ್ರಹಾರಾಧನ ದ್ವಾರಾ ದೇವರು ಪ್ರತ್ಯಕ್ಷವಾಗಬೇಕಾಗಿದೆ. ಲೋಕದಲ್ಲಿ ಯಾವ ಕಾರ್ಯವನ್ನಾದರೂ ಸ್ಥೂಲಶರೀರದಲ್ಲಿ ಮಾಡದೆ ಕೇವಲ ಮನಸ್ಸಿನಲ್ಲಿ ಸ್ಮರಿಸುತ್ತಿದ್ದರೆ ಆ ಕಾರ್ಯವು ಕೈಗೂಡುವುದಿಲ್ಲ. ದೇವರು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿದ್ದರೂ ಮಂತ್ರಪೂತವಾದ ವಿಗ್ರಹದಲ್ಲಿ ವಿಶೇಷಾಕಾರನಾಗಿರುವನೆಂಬುದೇ ವೇದಾವಲಂಬಿಗಳ ನಂಬಿಕೆಯಾಗಿದೆ. ಇದರಿಂದ ಅಮೂರ್ತನಾದ ದೇವರನ್ನು ನಾವು ತಿಳಿಯಬೇಕಾದರೆ ಮೂರ್ತವಾದ ವಿಗ್ರಹಾರಾಧನೆಯನ್ನು ಮಾಡಲೇಬೇಕೆಂಬುದು ಸಿದ್ಧವಾಗುತ್ತದೆ. ಇಂಥ ವಿಗ್ರಹಾರಾಧನೆಯನ್ನು ತಿರಸ್ಕರಿಸುವಂಥ ಕೆಲ ನಾಗರಕರು ಈಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲಿದ್ದಾರೆ. ದೇವರು ರೂಪಶೂನ್ಯನಾದಮೇಲೆ ಜಡವಾದ ಕಲ್ಲುಮಣ್ಣಿನಲ್ಲಿ ಮಾಡಿದ ವಿಗ್ರಹವನ್ನೇಕೆ ಪೂಜೆಮಾಡಬೇಕೆಂಬುದೇ ಇವರ ಉದ್ಗಾರವಾಗಿದೆ.

ಹೀಗೆ ಹೇಳುವ ಈಗಿನ ನವನಾಗರಕರು ತಾವು ಮಾತ್ರ ತಮ್ಮ ಸ್ಥಾಪಕರಾದ ಮೂಲಪುರುಷರ ಪ್ರತಿಕೃತಿಗಳನ್ನೂ ಪುಸ್ತಕಗಳನ್ನೂ ಇಟ್ಟು ಪೂಜಿಸುತ್ತಿರುವುದನ್ನು ನೋಡಿದರೆ ಇದು ವಿಗ್ರಹಾರಾಧನೆಗೆ ಸೇರುವುದಿಲ್ಲವೇ? ಬಾಯಿಯಲ್ಲಿ ವಿಗ್ರಹಾರಾಧನೆ ಮಾಡಬಾರದೆಂದು ಹೇಳುತ್ತ ತಾವು ಯಾವಾಗಲೂ ವಿಗ್ರಹಾರಾಧನೆಯನ್ನೇ ಮಾಡುತ್ತಿರುವುದು ಉತ್ತಮಲಕ್ಷಣವೇ? ಲೋಕದಲ್ಲಿ ಪ್ರಸಿದ್ಧಪುರುಷರ ಫೋಟೋಗಳಲ್ಲಿ ಆ ಪ್ರಸಿದ್ಧಪುರುಷರ ಹಸ್ತಪಾದಾದಿ ನಿಜಸ್ವರೂಪವು ಒಂದೂ ಇಲ್ಲದಿದ್ದರೂ ಆ ಭಾವಚಿತ್ರವು ಆ ಪುರುಷರ ಸ್ಮಾರಕವಾಗುವಂತೆ, ದೇವವಿಗ್ರಹಗಳು ದೇವರ ಸ್ಮಾರಕವನ್ನುಂಟುಮಾಡುವುದರಿಂದ ವಿಗ್ರಹದಲ್ಲಿ ದೇವತಾಶಕ್ತಿಯಿದೆ ಎಂದು ಎಲ್ಲರ ಅನುಭವಕ್ಕೂ ಬಂದೇಬರುತ್ತದೆ. ಲೋಕದಲ್ಲಿ ತಮ್ಮ ತಂದೆತಾಯಿಗಳ ಫೋಟೋಗಳನ್ನು ನೋಡಿ ಪೂಜ್ಯಬುದ್ಧಿಯಿಂದ ಪೂಜಿಸುವಂತೆ ಈಶ್ವರನ ವಿಗ್ರಹದಲ್ಲಿ ಇದು ಕಲ್ಲು ಇದು ಮಣ್ಣು ಎಂಬ ದುಷ್ಟಭಾವನೆ ಮಾಡದೆ ಈಶ್ವರಬುದ್ಧಿಯಿಂದ ಅರ್ಚಿಸುತ್ತಲೂ, ಧ್ಯಾನಿಸುತ್ತಲೂ, ಸ್ಮರಿಸುತ್ತಲೂ ಬಂದರೆ ಆ ವಿಗ್ರಹಾರಾಧನದ್ವಾರಾ ಪರಮೇಶ್ವರನು ಸಾಕ್ಷಾತ್ಕಾರನಾಗಿ ಮುಕ್ತಿಯನ್ನೀಯುವನೆಂದು ತಿಳಿಯುವುದೇ ಸನಾತನಧರ್ಮಾನುಯಾಯಿಗಳ ಕರ್ತವ್ಯವಾಗಿರುತ್ತದೆ.

ಶಿವಾಂಕ.

ಸಂಯುಕ್ತ ಪ್ರಾಂತಕ್ಕೆ ಸೇರಿದ ಗೋರಖಪುರವೆಂಬ ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿ ಕೆಲಜನ ಆಸ್ತಿಕ ಮಹನೀಯರಿಂದ ಹಿಂದೀ ಭಾಷೆಯಲ್ಲಿ ಕೇವಲ ಭಕ್ತಿ, ಜ್ಞಾನ, ವೈರಾಗ್ಯಗಳ ಪರವಾಗಿ 'ಕಲ್ಯಾಣ' ವೆಂಬ ಹೆಸರಿನಿಂದ ಅತ್ಯುತ್ತಮವಾದ ಪತ್ರಿಕೆಯು ಪ್ರತಿತಿಂಗಳಲ್ಲಿಯೂ ಪ್ರಕಟಿಸಲ್ಪಡುತ್ತಿರುವದು. ಈ ಪತ್ರಿಕೆಯ ಸಮಗ್ರಸ್ವರೂಪವು ಈಗ್ಗೆ ಕೆಲವು ದಿವಸಗಳ ಪೂರ್ವದಲ್ಲಿ ನವಿಶ್ವಾ ಪತ್ರಿಕೆಯಲ್ಲಿ ಪ್ರಕಟವಾಗಿರುವದು ಪ್ರತಿಯೊಬ್ಬ ವಾಚಕರ ಸ್ಮೃತಿಪಥದಲ್ಲಿರಬಹುದು. ಈ ಪತ್ರಿಕೆಗೆ ೨೨೦೦೦ ಜನರು ಚಂದಾದಾರರಿದ್ದು ಪ್ರತಿತಿಂಗಳಲ್ಲಿಯೂ ಸರ್ವೋತ್ತಮವಾದ ಪವಿತ್ರಲೇಖಗಳಿಂದ ಪರಿಶೋಭಿಸುತ್ತ ಪ್ರಕಟವಾಗುತ್ತಿರುವದು. ಈ ಪತ್ರಿಕೆಯ ಸಂಪಾದಕರು ಪ್ರತಿವರ್ಷದ ಅಂತ್ಯದಲ್ಲಿ ಸರ್ವಾಂಗ ಸುಂದರವಾದ ವಿಶೇಷ ಸಂಚಿಕೆಯೊಂದನ್ನು ಹೊರಡಿಸಿ ಚಂದಾದಾರರಿಗೆಲ್ಲಾ ಉಚಿತವಾಗಿ ಕೊಡುತ್ತಿರುವದು ಅತ್ಯಂತ ಸ್ತುತ್ಯವಾದ ಕಾರ್ಯವಾಗಿದೆ. ಈ ಮೊದಲು ಗೀತಾಂಕ, ಕೃಷ್ಣಾಂಕ, ರಾಮಾಯಣಾಂಕ, ಭಕ್ತಾಂಕ, ಈಶ್ವರಾಂಕ, ಭಗವನ್ನಾಮಾಂಕ ಎಂಬ ಹೆಸರುಗಳಿಂದ ವಿಶೇಷಸಂಚಿಕೆಗಳು ಹೊರಟು ಸನಾತನ ಮತಾನುಯಾಯಿಗಳನ್ನೆಲ್ಲಾ ಆನಂದತುಂದಿಲಹೃದಯರನ್ನಾಗಿ ಮಾಡಿವೆ. ಈ ವರ್ಷ ಸಂಪಾದಕ ಮಹಾಶಯರು "ಶಿವಾಂಕ" ವೆಂಬ ಪರಮಪವಿತ್ರಾಭಿಧಾನದಿಂದ ವಿಶೇಷಸಂಚಿಕೆಯೊಂದನ್ನು ಹೊರಡಿಸಿರುವರು. ಈ ಸಂಚಿಕೆಯು ಕ್ರೌನ್ ¼ ಸೈಜಿನ ಆಕಾರದಲ್ಲಿ ಮುದ್ರಿತವಾಗಿದ್ದು ೬೬೬ ಪುಟಗಳಿಂದ ಯುಕ್ತವಾಗಿದೆ. ಈ ವಿಶೇಷಾಂಕವು ಶ್ರೀ ಪರಶಿವನ ಅನೇಕಾನೇಕ ಲೀಲಾತ್ಮಕ ಲೇಖಗಳಿಂದಲೂ ಶೈವವೀರಶೈವಸಂಬಂಧಿ ಲೇಖಗಳಿಂದಲೂ, ಅಲಂಕೃತವಾಗಿದೆ. ಈ ವಿಶೇಷಾಂಕದಲ್ಲಿ ೨೭೦ ಲೇಖಗಳು ಕೇವಲ ಶೈವಪರವಾಗಿಯೇ ಇರುವವು. ಭರತಖಂಡದಲ್ಲಿಯೂ, ಇತರ ಖಂಡಗಳಲ್ಲಿಯೂ ಸುಪ್ರಸಿದ್ಧರಾದ ಲೇಖಕರೇ ಈ ಲೇಖಗಳನ್ನು ಬರೆದಿರುವರು. ಇದರಲ್ಲಿರತಕ್ಕ ಒಂದೊಂದು ಲೇಖಕ್ಕೆ ಎಷ್ಟು ಬೆಲೆಯನ್ನು ಕೊಟ್ಟರೂ ತೀರದೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಅನೇಕ ಜನ ಮಹಾಮಹೋಪಾಧ್ಯಾಯರು, ಸಂಸ್ಕೃತ, ಇಂಗ್ಲೀಷ್ ಕಾಲೇಜುಗಳ ಪ್ರೊಫೇಸರರು, ಇಂಗ್ಲೆಂಡ್ ಜರ್ಮನಿ ಮೊದಲಾದ ದೇಶಗಳಲ್ಲಿ ಪಿ ಎಚ್. ಡಿ. ಮುಂತಾದ ಡಿಗ್ರಿಗಳನ್ನು ಸಂಪಾದಿಸಿದ ಮಹಾಶಯರು, ಬ್ಯಾರಿಸ್ಟರರು ಇವರೇ ಮೊದಲಾದವರು ಶಿವನ ವಿಷಯದಲ್ಲಿ ಬರೆದಿರತಕ್ಕ ಲೇಖಗಳು ದರ್ಶನೀಯಗಳಾಗಿವೆ. ಈ ವಿಶೇಷಾಂಕದಲ್ಲಿ ಅಲ್ಲಲ್ಲಿಗೆ ಸಂದರ್ಭಾನುಸಾರವಾಗಿ ಬಹುಮನೋಹರಗಳಾದ ಅನೇಕಾನೇಕ ಶಿವಲೀಲಾಚಿತ್ರಗಳು ಜೋಡಿಸಲ್ಪಟ್ಟಿವೆ. ನಾನಾ ತರಹದ ಬಣ್ಣಗಳಿಂದ ಬಹುಸುಂದರವಾಗಿ ಮುದ್ರಿಸಲ್ಪಟ್ಟಿರುವ ೩೧ ಚಿತ್ರಗಳು, ಎರಡು ಬಣ್ಣಗಳಿಂದ ಮುದ್ರಿಸಲ್ಪಟ್ಟಿರುವ ೭ ಚಿತ್ರಗಳು, ಒಂದು ಬಣ್ಣದಿಂದ ಮುದ್ರಿಸಲ್ಪಟ್ಟಿರುವ ೨೫೦ ಚಿತ್ರಗಳು ಈ ವಿಶೇಷಾಂಕದ ಶೋಭೆಯನ್ನು ಸರ್ವತೋಮುಖವಾಗಿ ಹೆಚ್ಚಿಸಿರುತ್ತವೆ. ಸಂಪಾದಕರು ಈ ವಿಶೇಷಾಂಕದ ಮುದ್ರಣಕ್ಕಾಗಿ ದ್ರವ್ಯವನ್ನು ನೀರಿನಂತೆ ವೆಚ್ಚಮಾಡಿದ್ದಾರೆನ್ನುವದು ಈ ಪುಸ್ತಕವನ್ನು ನೋಡಿದಮಾತ್ರದಿಂದಲೇ ಪ್ರತಿಯೊಬ್ಬರಿಗೂ ವೇದ್ಯವಾಗುವಂತಿದೆ. ಒಟ್ಟಿಗೆ ಈ ವಿಶೇಷಾಂಕವು ಶಿವಭಕ್ತರಿಗೆ ಚಿಂತಾಮಣಿಸದೃಶವಾಗಿದೆಯೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಶಿವಸಂಬಂಧಗಳಾದ ಎಲ್ಲ ವಿಷಯಗಳೂ ಈ ವಿಶೇಷಾಂಕದಲ್ಲಿರುವದರಿಂದ ಇದು ಶಿವಲೀಲಾ ಕೈಪಿಡಿಯಂತೆ ಶೋಭಿಸುತ್ತಿರುವದು. ಇದರಲ್ಲಿ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವ, ವೀರಶೈವ ಮೊದಲಾದ ಎಲ್ಲಾ ಮತಗಳ ಆಚಾರ್ಯರು ಶೈವಸಿದ್ಧಾಂತ ವಿಷಯವಾಗಿ ಲೇಖಗಳನ್ನು ಪ್ರಕಟಿಸಿರುವರಲ್ಲದೆ ಅನೇಕ ಜನ ವೀರಶೈವ ಪಂಡಿತರು ಸರ್ವೋತ್ತಮವಾದ ಲೇಖಗಳನ್ನು ಪ್ರಕಟಿಸಿರುವರು. ವೀರಶೈವಮಠಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರ ಲೀಲೆಗಳು ಭಾವಚಿತ್ರಗಳಿಂದೊಡಗೂಡಿ ಬಹುಮನೋಹರವಾಗಿ ಮುದ್ರಿಸಲ್ಪಟ್ಟಿವೆ. ಈ ವಿಶೇಷಾಂಕವು ಹಿಂದೀಭಾಷೆಯಲ್ಲಿ ಪ್ರಕಟವಾಗಿದ್ದರೂ ಪ್ರತಿಯೊಬ್ಬ ಶಿವಭಕ್ತರು ಇದನ್ನು ತರಿಸಿಯೇ ತೀರಬೇಕೆಂದು ಅತ್ಯಂತ ಕಳಕಳಿಯಿಂದ ಹೇಳುತ್ತೇವೆ. ಈ ಪುಸ್ತಕದ ಖರೀದಿಯನ್ನು ೧೦-೧೫ ರೂ. ಗಳ ವರೆಗೆ ಇಟ್ಟರೂ ಕಡಿಮೆಯೆಂದೇ ಹೇಳಬಹುದು. ಆದಾಗ್ಯೂ ಸಂಪಾದಕರು ತಮ್ಮ ಕಲ್ಯಾಣಪತ್ರಿಕೆಯ ಚಂದಾದಾರರಿಗೆ ಇಂಥ ದೊಡ್ಡ ಪುಸ್ತಕವನ್ನು ಉಚಿತವಾಗಿ ಕೊಡುತ್ತಿರುವದನ್ನು ಪರಿಶೀಲಿಸಿದರೆ ಇವರ ಔದಾರ್ಯಕ್ಕೆ ಸೀಮೆಯೇ ಇಲ್ಲವೆಂದು ಹೇಳಬಹುದಾಗಿದೆ. ಆದುದರಿಂದ ಪ್ರತಿಯೊಬ್ಬ ಶಿವಭಕ್ತರೂ ಗೋರಖಪುರದಲ್ಲಿರುವ 'ಕಲ್ಯಾಣ' ಪತ್ರಿಕೆಯ ಸಂಪಾದಕರ ಹೆಸರಿಗೆ ೪ ರೂ. ೩ ಆಣೆಗಳನ್ನು ಮಣಿಯಾರ್ಡರ್ ಮಾಡಿ ಆ ಪತ್ರಿಕೆಗೆ ಚಂದಾದಾರರಾಗಿ ಈ ಶಿವಾಂಕವನ್ನು ತರಿಸಿಕೊಂಡು ಅದರಲ್ಲಿರುವ ಅನಂತಾನಂತ ಮಹತ್ವದ ಲೇಖಗಳನ್ನೂ ಚಿತ್ರಗಳನ್ನೂ ನೋಡಿ ಧನ್ಯರಾಗಬೇಕೆಂದು ಕೋರುತ್ತೇವೆ.—೪ ರೂ. ೩ ಆ. ಗಳಲ್ಲಿಯೇ ಈ ಶಿವಾಂಕವು ಬರುವದಲ್ಲದೆ, ೧ ವರ್ಷದವರೆಗೆ 'ಕಲ್ಯಾಣ' ವೆಂಬ ಸರ್ವಾಂಗಸುಂದರವಾದ ಮಾಸಪತ್ರಿಕೆಯೂ ಸಹ ಪ್ರತಿ ತಿಂಗಳಲ್ಲಿ ತಪ್ಪದೆ ಬರುವುದು. ಇಂಥ ಸುಸಮಯವನ್ನು ಪ್ರತಿಯೊಬ್ಬ ಸನಾತನಧರ್ಮದವರೂ ಕಳೆದುಕೊಳ್ಳದೆ ಶಿವಾಂಕವನ್ನು ತರಿಸಿ ಶಿವನ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ. ಕಲ್ಯಾಣಪತ್ರಿಕೆಗೆ ಚಂದಾದಾರರಾಗುವವರು ತಮ್ಮ ಅಡ್ರೆಸ್ಸನ್ನು ಇಂಗ್ಲೀಷಿನಲ್ಲಿ ಬರೆದು ತಿಳಿಸಬೇಕು. ಅಸಾಧಾರಣವಾದ ದೇಹಶ್ರಮದಿಂದಲೂ ಬುದ್ಧಿಶ್ರಮದಿಂದಲೂ ಅರ್ಥಶ್ರಮದಿಂದಲೂ ಸ್ವಲ್ಪ ದಿವಸಗಳಲ್ಲಿಯೇ ಆ ದೇವಾಧಿದೇವನಾದ ಶ್ರೀ ಶಂಕರನ ಸಮಸ್ತ ವಿಷಯಗಳನ್ನೊಳಗೊಂಡ ಶಿವಾಂಕವನ್ನು ಪ್ರಕಟಿಸಿ, ಭರತಖಂಡದಲ್ಲಿರುವ ಸನಾತನಧರ್ಮಾನುಯಾಯಿಗಳಿಗೆ ಭಕ್ತಿಮಾರ್ಗದರ್ಶಕರಾದ ಸಂಪಾದಕ ಮಹಾಶಯರಿಗೆ ಸಮಸ್ತ ಶೈವಮಂಡಲಿಯ ಪರವಾಗಿ ನಾವು ಅನೇಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ. ಸಂ.—

ಒಳದೇಶದ ವೃತ್ತಾಂತಗಳು.

ಕೋಲಾರದ ಚಿನ್ನದಗಣಿಗಳಿಗೆ ಸೇರಿದ ರಾಬರ್ಟ್ ಪೇಟೆಯಲ್ಲಿ ಕಳೆದ ಸೆಪ್ಟೆಂಬರ್ 28 ನೆಯ ತಾರೀಖು ರಾತ್ರಿ ಒಂದು ಮನೆಯೊಳಗೆ ಒಬ್ಬ ಹೆಂಗಸೂ 10-12 ವರ್ಷ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳೂ ಮಲಗಿ ನಿದ್ರಿಸುತ್ತಿದ್ದಾಗ ಇಟ್ಟಿಗೆಯ ಗೋಡೆಯು ನೊಗಚಿ[illegible]ದು ಮೂವರೂ ಮೃತಪಟ್ಟರು.

ಸ್ಕಂದಪುರಾಣಾಂತರ್ಗತ ಕೌಮಾರಿಕಾಖಂಡವು ಬೆಂಗಳೂರು ಸಿಟಿ ಚಾಮರಾಜಪೇಟೆ ನಿವಾಸಿಗಳಾದ [illegible] ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಕನ್ನಡದಲ್ಲಿ ಉತ್ತಮರೀತಿಯಿಂದ ಅನುವಾದಮಾಡಲ್ಪಟ್ಟಿದ್ದು ಮುದ್ದಾದ ಮುದ್ರಣದಿಂದೊಡಗೂಡಿದೆ. ಇದರಲ್ಲಿ ಶಿವಸಂಬಂಧಗಳಾದ ಅನೇಕ ಕಥೆಗಳು ವಿವರಿಸಲ್ಪಟ್ಟಿವೆ. ಗ್ರಂಥವು ಸಮಸ್ತ ಸನಾತನಮತಾನುಯಾಯಿಗಳಿಂದ ಸಂಗ್ರಹಿಸಲು ಯೋಗ್ಯವಾಗಿದೆ. ೭ ರೂ. ೮ ಆಣೆ.

ಬೆಂಗಳೂರುಸಿಟಿ ಮುನಿಸಿಪಾಲಿಟಿಯವರು ಇಂಗ್ಲೀಷ್ ಔಷಧಾಲಯಗಳಮೇಲೆ ವರ್ಷ 1 ಕ್ಕೆ 30 ರೂ. ತೆರಿಗೆಯನ್ನು ವಿಧಿಸಿರುತ್ತಾರೆ. ಈ ತೆರಿಗೆಯನ್ನು ಆಯುರ್ವೇದಿಕ್ ಮತ್ತು ಯುನಾನಿ ಔಷಧಾಲಯಗಳಿಗೂ ವಿಧಿಸದೆ ಇಂಗ್ಲಿಷ್ ಔಷಧಾಲಯಗಳಿಗೆ ಮಾತ್ರ ವಿಧಿಸಿರುವದು ಪಕ್ಷಪಾತವೆಂದೂ, ಈ ತೆರಿಗೆಯಿಂದ ತಮಗೆ ಅಪಾರವಾದ ನಷ್ಟವು ಸಂಭವಿಸುವದೆಂದೂ ಇಂಗ್ಲೀಷ್ ಔಷಧಾಲಯದವರು ಮುನಿಸಿಪಾಲಿಟಿಗೆ ಅರ್ಜಿ ಹಾಕಿರುತ್ತಾರೆ.

ಮೈಸೂರು ಸಂಸ್ಥಾನದ ಕೋ-ಆಪರೇಟಿವ್ ಸೊಸೈಟಿಗಳ ರಜಿಸ್ಟ್ರಾರರಾಗಿದ್ದ ಶ್ರೀ|| ಕೆ. ಎಚ್. ರಾಮಯ್ಯನವರು ಇದೇ ಅಕ್ಟೋಬರ್ ೫ ನೆಯ ತಾರೀಖಿನ ರಾತ್ರಿ ಇದ್ದಕ್ಕಿದ್ದ ಹಾಗೇ ಮೃತಿಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ಕಾರಣದಿಂದ ೬ ನೆಯ ತಾರೀಖಿನ ದಿವಸ ಪ್ರಜಾಪ್ರತಿನಿಧಿಸಭೆಯು ನಿಲ್ಲಿಸಲ್ಪಟ್ಟಿತ್ತು. ಇವರಿಗೆ ವೃದ್ಧತಾಯಿಯೂ, ಪತ್ನಿಯೂ, ೬ ಜನ ಗಂಡುಮಕ್ಕಳೂ, ೫ ಜನ ಹೆಣ್ಣುಮಕ್ಕಳೂ ಇರುವರು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಈ ಸಾರೆಯ ನವರಾತ್ರಿಮಹೋತ್ಸವದ ಸಂಬಂಧವಾಗಿ ಶ್ರೀಮನ್ಮಹಾರಾಜರವರು ಬೆಂಗಳೂರು ಹೈಕೋರ್ಟಿನ ಚೀಫ್‌ಜಡ್ಜರಾದ ಶ್ರೀಮಾನ್ ಪಿ. ಮಹಾದೇವಯ್ಯನವರಿಗೆ 'ರಾಜಧರ್ಮಪ್ರವೀಣ' ಎಂಬ ಬಿರುದನ್ನೂ, ಸಂಸ್ಥಾನದ ರೆವಿನ್ಯೂಕಮಿಷನರಾಗಿದ್ದು ರಿಟೈರಾದ ಶ್ರೀ|| ಎಸ್. ಹಿರಿಯಣ್ಣಯ್ಯನವರಿಗೂ, ಸಂಸ್ಥಾನದ ಚೀಫ್ ಇಂಜನಿಯರಾದ ಶ್ರೀ|| ಎಂ. ಜಿ. ರಂಗಯ್ಯನವರಿಗೂ 'ರಾಜಸೇವಾಸಕ್ತ' ಎಂಬ ಬಿರುದನ್ನೂ, ಸೀನಿಯರ್ ಸರ್ಜನ್ನರಾದ ಶ್ರೀ|| ಎಸ್. ಸುಬ್ಬರಾಯರಿಗೆ 'ಶಸ್ತ್ರವಿದ್ಯಾಪ್ರವೀಣ' ಎಂಬ ಬಿರುದನ್ನೂ ಖಿಲ್ಲತ್ತುಗಳಸಮೇತ ದಯಪಾಲಿಸಿದರು.

ಈಗ್ಗೆ ಕೆಲವು ದಿವಸಗಳ ಹಿಂದೆ ಬೇಲವಾಡಿಯಿಂದ ಜಾವಗಲ್ಲಿನ ಕಡೆಗೆ ಒಂದು ಗಾಡಿಯು ಹೋಗುತ್ತಿರುವಲ್ಲಿ ಮಧ್ಯಮಾರ್ಗದಲ್ಲಿ ಬಹಳ ವೃದ್ಧಳಾಗಿದ್ದ ಒಬ್ಬ ಸ್ತ್ರೀಯು ಬಂದು ತಾನು ದಾರಿ ನಡೆಯಲಾರೆನೆಂದೂ, ಗಾಡಿಯಲ್ಲಿ ತನ್ನನ್ನು ಕರೆದುಕೊಂಡು ಹೋಗುವಂತೆ ಕೇಳಿದಳೆಂದೂ, ಗಾಡಿಯವನು ಅದರಂತೆ ಆ ಮುದುಕಿಯನ್ನು ಕುಳ್ಳಿರಿಸಿಕೊಂಡು ಹೋಗುತ್ತಿರಲು, ಅಕಸ್ಮಾತ್ ಹಿಂತಿರುಗಿ ನೋಡಿದಾಗ ಮುದುಕಿಯ ಒಂದು ಕಿವಿಯಲ್ಲಿ ದಪ್ಪವಾದ ಒಂದು ಬೀಗವೂ ಮತ್ತೊಂದು ಕಿವಿಯಲ್ಲಿ ಹೋಳಿಗೆಯೂ ಇದ್ದಿತೆಂದೂ, ಗಾಡಿಯವನು ಗಾಬರಿಯಾಗಿ ಇದೇನೆಂದು ಕೇಳಲು ಆ ಮುದುಕಿಯು, ಪ್ರತಿ ಊರಿನಲ್ಲಿಯೂ ಎಲ್ಲರೂ ತನ್ನ ಹಬ್ಬವನ್ನು ಯುಗಾದಿಯ ಹಬ್ಬದಂತೆ ಆಚರಿಸಬೇಕೆಂದೂ, ಇಲ್ಲವಾದರೆ ತನ್ನ ಕಿವಿಗೆ ಹಾಕಿರುವಂತೆ ಪ್ರತಿ ಊರಿಗೂ ಬೀಗ ಹಾಕಿಸಿ ಕೇಡನ್ನುಂಟುಮಾಡುವೆನೆಂದು ಹೇಳಿ ಮಾಯವಾದಳೆಂದೂ, ಬೇಲೂರು, ಚಿಕ್ಕಮಗಳೂರು ಮತ್ತು ಬಾಣಾವಾರ ಮೊದಲಾದ ಊರುಗಳಲ್ಲಿ ಹಬ್ಬಗಳನ್ನು ಆಚರಿಸುತ್ತಿರುವರೆಂದೂ ತಿಳಿದುಬಂದಿದೆ.

ವರ್ತಮಾನಸಂಗ್ರಹ

ಜಬ್ಬಲ್‌ಪುರದ ಸಮೀಪದಲ್ಲಿ ಇಬ್ಬರು ಸ್ತ್ರೀಯರು ಮಾರ್ಗಮಧ್ಯದಲ್ಲಿ 4 ಜನ ಗಂಡಸರ ಮೇಲೆ ಬಿದ್ದು, ಅವರ ಬಳಿಯಲ್ಲಿದ್ದ 2,500 ರೂಪಾಯಿಗಳನ್ನು ಅಪಹರಿಸಿಕೊಂಡು ಹೋದರಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ಸ್ಥೂಲಕಾಯಳೆನಿಸಿದ್ದ ಎಮಿಲಿ ಲಾಯಿಲ್ ಎಂಬವಳು ಕೆಲವು ದಿವಸಗಳ ಹಿಂದೆ ಚಿಕಾಗೋ ನಗರದಲ್ಲಿ ಮೃತಿಹೊಂದಿದಳು. ಇವಳು ೬೦೨ ಪೌಂಡು ತೂಕವಾಗಿದ್ದಳಂತೆ!

ರಷ್ಯಾ ಸರಕಾರದವರು 128 ಜನ ಪ್ರಯಾಣಿಕರನ್ನೂ, ಇತರ ಕೆಲಸಗಾರರನ್ನೂ ಹೊತ್ತುಕೊಂಡು ಹೋಗಬಲ್ಲ ಒಂದು ಅತ್ಯದ್ಭುತವಾದ ವಿಮಾನವನ್ನು ತಯಾರಿಸಿರುವರು. ಇದರ ಸಂಬಂಧವಾಗಿ ಕೆಲವು ಪರೀಕ್ಷೆಗಳು ನಡೆಯುತ್ತಿರುವುವು.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ಸೇರಿದ ಜಾಕ್ಸನ್‌ವಿಲ್ ಎಂಬ ಊರಿನಲ್ಲಿ ನಡೆಯುವಷ್ಟು ಖೂನಿಗಳು ಪ್ರಪಂಚದಲ್ಲಿ ಎಲ್ಲಿಯೂ ನಡೆಯುವುದಿಲ್ಲವಂತೆ! ಆ ಊರಿನಲ್ಲಿ ೧೯೩೨ನೇ ವರ್ಷದಲ್ಲಿ ೬೧ ಖೂನಿಗಳು ನಡೆದವಂತೆ!

ಜಪಾನ್ ಸರಕಾರದವರು ಒಂದು ನಿಮಿಷಕ್ಕೆ 10.000 ಗುಂಡುಗಳನ್ನು ಹಾರಿಸಬಲ್ಲ ಒಂದು ಹೊಸತರಹ ಮಿಷನ್‌ಗನ್ನನ್ನು ತಯಾರಿಸಿರುವರು. ಇದರಿಂದ ಚೀಣಾದೇಶದವರನ್ನು ಸುಲಭವಾಗಿ ಬಡಿದೋಡಿಸಬಹುದೆಂದು ಜಪಾನರು ಸಂತೋಷಿಸುತ್ತಿರುವರು.

ವಾರ್ಸಾನಗರದಲ್ಲಿ ಒಬ್ಬ 40 ವರ್ಷದ ಮನುಷ್ಯನು 80 ವರ್ಷದ ಒಬ್ಬ ಸ್ತ್ರೀಯನ್ನು ಮದುವೆಯಾಗಿದ್ದನು. ಆದರೆ ಅವಳು ಇವನಲ್ಲಿ ಬೇಸರಹೊಂದಿ ಬೇರೊಬ್ಬ 30 ವರ್ಷದವನನ್ನು ಮದುವೆಯಾಗಬೇಕೆಂಬ ಅಪೇಕ್ಷೆಯಿಂದ ವಿವಾಹವಿಚ್ಛೇದನವನ್ನು ಅಪೇಕ್ಷಿಸಿದಳು. ಈ ವಿಯೋಗವನ್ನು ಅವನು ತಡೆಯಲಾರದೆ ಆತ್ಮಹತ್ಯಮಾಡಿಕೊಂಡನಂತೆ!

ಜರ್ಮನ್ ದೇಶದ ಕೆಲವು ಜನ ಸಸ್ಯಶಾಸ್ತ್ರಜ್ಞರು ಬಹು ವರ್ಷಗಳಿಂದ ಕಷ್ಟಪಟ್ಟು, ಕಡೆಗೆ ಸಂಪೂರ್ಣವಾಗಿ ಕಪ್ಪು ಹೂಗಳನ್ನೇ ಬಿಡುವ ಗುಲಾಬಿಯ ಗಿಡವೊಂದನ್ನು ಬೆಳೆಯಿಸಿರುವರು. ಈ ವಿಚಿತ್ರಗಿಡವು ಸದ್ಯಃ ಜರ್ಮನಿಯ 'ಸಾಂಗರ್‌ಹಾರ್ಸ್ ರೋಜೇರಿಯಂ' ಎಂಬಲ್ಲಿ ಪ್ರದರ್ಶಿಸಲ್ಪಟ್ಟಿರುವದು. ಲಕ್ಷಾಂತರ ಜನರು ಈ ವಿಚಿತ್ರವನ್ನು ನೋಡಿಕೊಂಡುಹೋಗುತ್ತಿರುವರು.

ಫ್ರಾನ್ಸಿನ ಮಿಲಿಟರಿ ಖಾತೆಯವರು ಹೊಸದೊಂದು ಯುದ್ಧದ ವಿಮಾನವನ್ನು ತಯಾರಿಸಿರುವರು. ಈ ವಿಮಾನವು ಒಂದು ಸಾರಿಗೆ 5510 ಪೌಂಡುಗಳ ಸಿಡಿಮದ್ದನ್ನು ತೆಗೆದುಕೊಂಡು ಹಾರಬಲ್ಲದು. ಹಾಗೂ ಇದರಲ್ಲಿಟ್ಟಿರುವ 3 ಮಿಷನ್‌ಗನ್‌ಗಳಿಂದ ಯಾವ ಕಡೆಯಿಂದ ಬರುವ ಶತ್ರುಗಳನ್ನಾದರೂ ನಿಗ್ರಹಿಸಬಹುದಂತೆ! ಇದು ಗಂಟೆಗೆ 130 ಮೈಲುಗಳ ವೇಗದಲ್ಲಿ ಹೋಗಬಲ್ಲದು.

ವಿವಾಹಮಹೋತ್ಸವದ ಕಾಲದಲ್ಲಿ ಊಟಉಪಚಾರಗಳು ನಡೆದ ಮೇಲೆ ವಿವಾಹ ವಿಚ್ಛೇದನಕಾಲದಲ್ಲಿಯೂ ಊಟ ಉಪಚಾರಗಳೇಕೆ ನಡೆಯಬಾರದೆಂಬ ಪ್ರಶ್ನೆಯು ಈಗತಾನೇ ಇತ್ಯರ್ಥವಾಗಿರುತ್ತದೆ. ಕಳೆದ ವಾರ ವಿಲಿಯಂ ಪೊವೆಲ್ ಮತ್ತು ಕೆರೋಲ್ ಲೊಂಬಾರ್ಡ್ ಎಂಬವರ ವಿವಾಹ ವಿಚ್ಛೇದನವಾಗಿ ಆ ಬಗ್ಗೆ 'ಗ್ಲೋರಿಯಾ ಸ್ವಾನ್ಸನ್' ಎಂಬ ನಟಿಶ್ರೇಷ್ಠಳು ದೊಡ್ಡ ಔತಣವನ್ನು ಏರ್ಪಡಿಸಿದ್ದಳಂತೆ!

ರಷ್ಯಾದೇಶದ ಡಾಕ್ಟರ್ ಎಲ್. ಎ. ಬೋಗಾವ್ಲೆನ್ಸ್ಕಿ ಎಂಬ ಶಾಸ್ತ್ರಜ್ಞರು ಸಿಡಿಲಿನ ಸಂಬಂಧವಾಗಿ ಸೂಕ್ಷ್ಮವಾದ ವಿದ್ಯುಚ್ಛಕ್ತಿಯ ಯಂತ್ರಗಳಿಂದ ಶೋಧನಡೆಸಿ, ಸಿಡಿಲು ಭೂಮಿಗೆ ಬಡಿಯಲು ಭೂಗರ್ಭದಲ್ಲಿರುವ ಲೋಹಗಳೇ ಕಾರಣವೆಂದೂ, ಸಿಡಿಲು ಬಡಿದ ಕಡೆಗಳಲ್ಲಿ ಭೂಗರ್ಭದಲ್ಲಿ ಯಾವದಾದರೊಂದು ಲೋಹವು ಇದ್ದೇ ಇರಬೇಕೆಂದೂ ನಿರ್ಧರಿಸಿರುವರು. ಈಗ ಅವರು ಸಿಡಿಲುಬಡಿದ ಕಡೆಗಳಲ್ಲಿ ಶೋಧನಡೆಸುತ್ತ ಲೋಹವಿರುವ ಸ್ಥಳವನ್ನು ನಿರ್ಧರಿಸಲು ಉತ್ತಮವಾದ ಮಾರ್ಗವನ್ನು ಕಂಡುಹಿಡಿಯುತ್ತಿರುವರು.

ಬ್ಯುಡಾಪೆಸ್ಟ್ ನಗರದಲ್ಲಿ ಒಂದು ಹೊಸತರಹ ದರೋಡೆಯು ಪ್ರಾರಂಭವಾಗಿರುವದು. ಕೆಲವುಜನ ನೀಚರು ದೊಡ್ಡ ದೊಡ್ಡ ಅಂಗಡಿಗಳಿಗೆ ಹೋಗಿ ಏನಾದರೂ ವ್ಯಾಪಾರಮಾಡಿ, 10 ಪೆಂಗೋಗಳ (ಪೆಂಗೋ 1 ಕ್ಕೆ ಸುಮಾರು 8 ಆಣೆ) ನೋಟನ್ನು ಕೊಟ್ಟು ಅನಂತರ ಮೆಸ್ಮೆರಿಜಂ ಶಕ್ತಿಯಿಂದ ಅಂಗಡಿಯವನಿಗೆ 100 ಪೆಂಗೋಗಳ ನೋಟನ್ನು ಕೊಟ್ಟಿರುವರೆಂಬ ಭ್ರಾಂತಿಯನ್ನು ಉಂಟುಮಾಡಿ, ಚಿಲ್ಲರೆಯ ದುಡ್ಡನ್ನು ತೆಗೆದುಕೊಂಡು ಹೊರಟುಹೋಗುವರಂತೆ! ಪೋಲೀಸರು ಈ ಜನರನ್ನು ಪತ್ತೆಮಾಡಲು ವಿಶೇಷ ಪ್ರಯತ್ನ ಮಾಡುತ್ತಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನಾಧೀಶ
ಶ್ರೀ ೧೦೮ ಶಿವಾನಂದರಾಜೇಂದ್ರ ಶಿವಾಚಾರ್ಯ
ಮಹಾಸ್ವಾಮಿಗಳವರ

ದಸರಾಮಹೋತ್ಸವಸಮಾರಂಭ

ಚಳ್ಳಕೆರೆ.

ಪ್ರತಿವರ್ಷ ಪದ್ಧತಿಯಂತೆ ನೆರವೇರುವ ಶ್ರೀ ಜಗದ್ಗುರುಗಳವರ ದಸರಾ ಮಹೋತ್ಸವವನ್ನು ಚಿತ್ರದುರ್ಗ ಡಿ|| ಚಳ್ಳಕೆರೆಯ ಭಕ್ತರು ತಮ್ಮಲ್ಲಿ ನೆರವೇರಿಸುವುದಾಗಿ ಪ್ರಾರ್ಥಿಸಿ ಅಪ್ಪಣೆಯನ್ನು ತೆಗೆದುಕೊಂಡಿದ್ದರಿಂದ ಶ್ರೀಮಹಾಗುರುಗಳವರು ಅವರ ಪ್ರಾರ್ಥನೆಯನ್ನು ಚಿತ್ತಕ್ಕೆ ತಂದು ಅಪ್ಪಣೆಯನ್ನು ಕೊಟ್ಟ ಪ್ರಕಾರ ಭಕ್ತರು ಅತ್ಯುತ್ಸಾಹಿಗಳಾಗಿ ಪ್ರಕಟನ ಪತ್ರಿಕೆಗಳಿಂದ ತಮ್ಮ ಸಂಕಲ್ಪವನ್ನು ಪ್ರಕಟಿಸಿ ಕಾರ್ಯದ ಸಿದ್ಧತೆಯನ್ನಿಟ್ಟುಕೊಂಡರು. ಪ್ಯಾಕಟರಿ ಇನ್ಸ್‌ಪೆಕ್ಟರು ಸ್ಥಳನಿರ್ದೇಶ ಮತ್ತು ಮಂಟಪದ ರಚನೆಗೆ ಸಹಾಯವನ್ನು ಮಾಡಿದ್ದರಿಂದಲೂ ಶ್ರೀಮಾನ್ ತಾಲೂಕು ಅಮಲ್ದಾರ್ ಸಾಹೇಬರವರು ಈ ಮಹಾಕಾರ್ಯಕ್ಕೆ ಸಹಾಯ ಸಂಪತ್ತಿಯನ್ನಿತ್ತಿದ್ದರಿಂದಲೂ ಪೋಲೀಸ ಸೂಪರಿಂಟೆಂಡೆಂಟ ಸಾಹೇಬರವರು ಆಗಮಿಸಿ ಪ್ರಚಲಿತ ವಿಷಯವನ್ನು ಪರಿಶೀಲಿಸಿ ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು ಪೋಲೀಸ್ ಸಬ್ ಇನಸ್ಪೆಕ್ಟರ್ ಸಾಹೇಬರು ಇವರೊಡನೆ ಪೋಲೀಸ್ ಉಸ್ತುವಾರಿಯ ಬಗ್ಗೆ ತಕ್ಕ ವ್ಯವಸ್ಥೆಯನ್ನಿತ್ತಿದ್ದರಿಂದಲೂ ಶ್ರೀ ಜಗದ್ಗುರುಗಳವರ ದಸರಾ ಮಹೋತ್ಸವದ ಕಾರ್ಯಕ್ಕೆ ದಿನೆದಿನೆ ಕಳೆ ಏರುತ್ತ ಬಂದಿತು. ದರ್ಬಾರ್ ಮಂಟಪವು ವಿಸ್ತಾರವಾಗಿಯೂ ಅಂದವಾಗಿಯೂ ರಚಿಸಲ್ಪಟ್ಟಿತ್ತು. ಮಧ್ಯದಲ್ಲಿ ನಿರ್ಮಿಸಿದ್ದ ಸಿಂಹಾಸನ ವೇದಿಕೆಯು ಮನೋಜ್ಞವಾಗಿ ಮಂಗಲಪೀಠದಿಂದೊಪ್ಪುವ ಪರಶಿವನ ದರ್ಬಾರ್ ಮಂಟಪದ ಸ್ಮರಣೆಯನ್ನುಂಟುಮಾಡಿಕೊಡುತ್ತಿತ್ತು. ಮಹಾಸಂಸ್ಥಾನದ ಏಜಂಟ ವೇ|| ರಾಘವಾಂಕಪ್ಪಯ್ಯನವರು ತಮ್ಮ ಅನುಯಾಯಿಗಳೊಡನೆ ಕಾರ್ಯಕ್ರಮದ ವ್ಯವಸ್ಥೆಯನ್ನು ಸರಿಯಾಗಿಟ್ಟಿದ್ದರು. ಪದ್ಧತಿಯಂತೆ ಆಶ್ವಯುಜ ಶುದ್ಧ ಪ್ರತಿಪದದಿಂದ ಸುಮುಹೂರ್ತದಲ್ಲಿ ಕಾರ್ಯಾರಂಭವಾಯಿತು. ಬಂದ ಜನಕ್ಕೆ ಮಹಾಸಂಸ್ಥಾನದ ದಾಸೋಹದಲ್ಲಿ ಅನ್ನಸಂತರ್ಪಣೆಯು ಏರ್ಪಾಟಾಗಿತ್ತು. ಪ್ರತಿದಿವಸ ಪ್ರಾತಃಕಾಲದಲ್ಲಿ ಗಜಾಶ್ವಗಳ ಪೂಜೆಯು ವಾದ್ಯವೈಭವದಿಂದ ಪ್ರೇಕ್ಷಕರಿಗೆ ಆನಂದದಾಯಕವಾಗಿ ನಡೆದಿತ್ತು. ಸಾಯಂಕಾಲ ಆರುವರೆ ಘಂಟೆಗೆ ದರ್ಬಾರ್ ನಡೆಯತಕ್ಕದ್ದೆಂದು ನಿಯಮಿತವಾದ್ದರಿಂದ ಸಕಾಲಕ್ಕೆ ಸ್ಥಲಪರಸ್ಥಲದ ಸ್ತ್ರೀಪುರುಷ ಸಮುದಾಯವು ತಂಡತಂಡವಾಗಿ ಬರುತ್ತಿತ್ತು. ಕೀರ್ತನದವರೂ ಸಂಗೀತದವರೂ ತಮ್ಮ ತಮ್ಮ ಉಪಕರಣಗಳನ್ನು ಸಿದ್ಧಗೊಳಿಸಿಕೊಂಡು ಸೇವೆಯನ್ನು ಬಿನ್ನೈಸುವ ಕಾಲವನ್ನು ನಿರೀಕ್ಷಿಸಿಕೊಂಡಿದ್ದರು. ಗೌರ್ನಮೆಂಟಿನ ಪೋಲೀಸಿನವರೂ ಮಹಾಸಂಸ್ಥಾನದ ಪೋಲೀಸಿನವರೂ ದರ್ಪದಿಂದ ತಮ್ಮ ಕರ್ತವ್ಯವನ್ನು ಬಜಾಯಿಸುತ್ತಿದ್ದರು. ಸ್ವಯಂಸೇವಕರು ಗಂಡಸರನ್ನೂ ಹೆಣ್ಣುಮಕ್ಕಳನ್ನೂ ಉಚಿತಸ್ಥಾನಗಳಲ್ಲಿ ಕುಳ್ಳಿರಿಸುವ ವ್ಯವಸ್ಥೆಯಲ್ಲಿ ತೊಡಗಿದ್ದರು. ಶ್ರೋತೃಸಮುದಾಯದ ಮಧ್ಯದಲ್ಲಿ ಕಂಗೊಳಿಸುತ್ತಿದ್ದ ಸಿಂಹಾಸನದ ಎಡಬಲಪಾರ್ಶ್ವಗಳಲ್ಲಿ ಷ|| ಬ್ರ|| ಶ್ರೀ ಪಟ್ಟಾಧಿಕಾರಿಗಳೂ ಅವರ ಪಕ್ಕದಲ್ಲಿ ವೈದಿಕ ಪಂಡಿತರೂ ವಿದ್ಯಾರ್ಥಿಗಳೂ ಉಪವಿಷ್ಟರಾಗುತ್ತಿದ್ದರು. ಈ ಮಹೋತ್ಸವಕ್ಕೆ ವಿಭೂತಿಪುರ ಮಠ ಮತ್ತು ಬೆಂಗಳೂರು ಚಿಕ್ಕಪೇಟೆ ಮಹಂತಿನ ಮಠದ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರೂ ಸತ್ತಿಗೇರಿ ಕಟಕೋಳ ಚಿಮ್ಮಲಗಿ ಮುಂತಾದ ಗ್ರಾಮಗಳ ಶ್ರೀ|| ಷ|| ಬ್ರ|| ಪಟ್ಟಾಧಿಕಾರಿಗಳೂ, ಶ್ರೀಮಹಾಗುರುಗಳವರ ಪ್ರೇಮದ ಕಳೆಯಂತೊಪ್ಪುತ್ತಿದ್ದರು. ಸಕಲವಾದ್ಯಗಳು ಭೋರ್ಗರೆಯುತ್ತಿರಲು ಶ್ರೀಮದಾಚಾರ್ಯ ಭಗವತ್ಪಾದರು ಸಾಯಂಕಾಲ ಆರುವರೆಘಂಟೆಗೆ ಮಹೋತ್ಸವದಿಂದ ಸಭಾಮಂಟಪಕ್ಕೆ ಬಿಜಯಂಗೈಸಿ ಸುವರ್ಣರಜತ ಸಿಂಹಪೀಠವನ್ನಾರೋಹಿಸಿದ ಕೂಡಲೆ ಬೆಂಗಳೂರು ಶ್ರೀ ಮಹಂತಿನ ಮಠದ ಬೋರ್ಡಿಂಗಿನಿಂದ ಪೋಷಿತರಾಗುತ್ತಿರುವ ಗೌರ್ನಮೆಂಟ ಕಾಲೇಜ ವಿದ್ಯಾರ್ಥಿಗಳು ಮಂಜುಲವಾಣಿಯಿಂದ ವೇದಘೋಷವನ್ನು ಮಾಡುತ್ತಿದ್ದರು. ತದುಪರಿ ಸಂಗೀತವಾಗಿ ವಿಭೂತಿಪುರಮಠ ಮತ್ತು ಬೆಂಗಳೂರು ಮಹಾಂತಿನ ಮಠದ ಅಧ್ಯಕ್ಷರಾದ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರು ಮತ್ತು ಪುರಾಣರತ್ನ ವೇ|| ಬಸವಲಿಂಗ ಶಾಸ್ತ್ರಿಗಳು ಸುಣಕಲ್ಲ ಬಿದರಿ ಆರಾಧ್ಯ ಮಠ ಇವರ ಧಾರ್ಮಿಕೋಪನ್ಯಾಸಗಳಾಗುತ್ತಿದ್ದುವು. ಅನಂತರ ಅರಸಿಕೆರೆ ಮಠದ ವೇ|| ಬಸವಲಿಂಗಯ್ಯನವರು ಸ್ಕೂಲ್ ಮಾಸ್ಟರ್ ಇವರ ಕೀರ್ತನವು ಅನಂತರ ಮಹಾಸಂಸ್ಥಾನದ ವಾದ್ಯದವರ ವಾದ್ಯವೂ ವಿದೇಶೀಯವಾದ್ಯವೂ ಆಗುತ್ತಿದ್ದಂತೆ ಮಹಾಸಂಸ್ಥಾನದ ಆಫೀಸರ್ ಮತ್ತು ಇತರ ಪರಿವಾರದ ಗಜಾಶ್ವಾದಿಗಳ ವಂದನಗಳೂ ನಿಯಮಿತಕಾಲದಲ್ಲಿ ಜರುಗುತ್ತಿದ್ದುವು. ಶ್ರೀ ಜಗದ್ಗುರುಗಳವರು ದರ್ಶನಾಶೀರ್ವಾದಗಳಿಂದ ಸಭೆಯನ್ನು ಸಫಲಗೊಳಿಸಿ ತಮ್ಮ ಬಿಡಾರಕ್ಕೆ ಮಹೋತ್ಸವದಿಂದಲೇ ದಯಮಾಡಿಸುತ್ತಿದ್ದರು. ಈ ಅಭೂತಪೂರ್ವವಾದ ಮಹಾಚಾರ್ಯರ ಮಹೋತ್ಸವದಿಂದುಂಟಾದ ಶ್ರೀಮತ್ಪಂಚಾಚಾರ್ಯರ ಧರ್ಮಸಾಮ್ರಾಜ್ಯದ ಪ್ರಜೆಗಳ ಸನಾತನ ಧರ್ಮಾಭಿಮಾನದಿಂದುಂಟಾದ ಆನಂದವು ದಿನೆದಿನೆ ವೃದ್ಧಿಯಾಗುತ್ತಿದ್ದಂತೆ ಪ್ರಜೆಗಳ ಸಂಖ್ಯೆಯೂ ಹೆಚ್ಚಾಗುತ್ತ ಬಂದಿತು. ವರ್ಷಾಸನದ ಸಂಗೀತ ಮತ್ತು ವಾದ್ಯದ ವಿದ್ವನ್ಮಣಿಗಳು ಸಕಾಲಕ್ಕೆ ಬಂದು ಪ್ರತಿದಿವಸದಲ್ಲಿಯೂ ನಿಯಮಿತವೇಳೆಯಲ್ಲಿ ತಮ್ಮ ವಿದ್ಯಾಪ್ರಭಾವವನ್ನು ತೋರಿಸಿ ಸಭಿಕರನ್ನು ಆನಂದಗೊಳಿಸುತ್ತಿದ್ದರು. ಈ ಪಂಕ್ತಿಯಲ್ಲಿ ಬೆಂಗಳೂರು ಸೂಲಕುಂಟೆ ವೀರಭದ್ರಪ್ಪನವರ ಪುತ್ರಿಯಾದ ೧೦-೧೨ ವರ್ಷದ ಮುದ್ದಮ್ಮನೆಂಬ ಬಾಲಿಕೆಯೂ ಒಬ್ಬಳಾಗಿ ತನ್ನ ಮಧುರವಾದ ಗಾನದಿಂದ ಆಬಾಲವೃದ್ಧರನ್ನು ಆನಂದಗೊಳಿಸಿದ್ದುದು ಬಾಲ್ಯಶಿಕ್ಷಣಾಭಿವೃದ್ಧಿಗೆ ಕಾರಣವಾಗಿರುತ್ತದೆ. ಒಂದು ದಿವಸ ಬೀರೂರು ಶಿವಲಿಂಗಪ್ಪಯ್ಯನವರ ಪುತ್ರರಾದ ಶಾಂತಯ್ಯನವರ ಇಂದ್ರಜಾಲ ವಿದ್ಯೆಯೂ ಜರಗಿತು. ಈ ಪ್ರಕಾರ ವ್ಯಾವಹಾರಿಕ ನಿತ್ಯಕರ್ಮಗಳೊಡನೆ ಮಹಾಪೀಠದ ಗೋತ್ರಾಧಿನಾಥಸ್ವಾಮಿಗೆ ಮಹಾರುದ್ರಾಭಿಷೇಕ ಪೂಜೆಯೂ ಕಾಲಕ್ರಮಪ್ರಾಪ್ತಿ ಶ್ರೀ ಶಾರದಾಂಬಾ ಪೂಜೆಯೂ ತನ್ನಿಮಿತ್ತಕಗಳಾದ ಗಣಾರಾಧನೆಗಳೂ ನಡೆಯುತ್ತಿದ್ದುದರಿಂದ ಸನಾತನ ಧರ್ಮದ ಪ್ರಭಾವವನ್ನು ನೋಡಿ ದಣಿಯದ ಜನರನ್ನೇ ಕಾಣುವಂತೆ ಇದ್ದಿಲ್ಲ. ವಿಜಯದಶಮಿಯ ಮಹೋತ್ಸವಕ್ಕೆ ಬಿಜಾಪುರ, ಕೊಲ್ಹಾಪುರ, ಗದಗ, ಬಳ್ಳಾರಿ, ಹುಬ್ಬಳ್ಳಿ, ದಾವಣಗೆರೆ, ಹರಿಹರ, ನೇಮತಿ, ಶಿಕಾರಿಪುರ, ಸೊರಬ, ಸಾಗರ, ಬೆಂಗಳೂರು, ತುಮಕೂರು, ಚಿತಲ್‌ದುರ್ಗ, ಮೊಳಕಾಲ್ಮುರುವು, ಜಗಲೂರು, ನಾಯಕನಹಟ್ಟಿ ಪರಶುರಾಮಪುರ, ದೊಡ್ಡೇರಿ ಮುಂತಾದ ಅನೇಕ ಭಾಗಗಳಿಂದ ಬಂದ ಭಕ್ತಮಹೇಶ್ವರರು ಐವತ್ತು ಸಾವಿರಕ್ಕೆ ಕಡಿಮೆ ಇರಲಿಲ್ಲ. ಕಾಲವನ್ನತಿಕ್ರಮಿಸದೆ ಸುವರ್ಣ ರಜತಾಂದೋಲನವು ಸಾಲಂಕೃತವಾಗಿ ಸಕಲ ಬಿರುದಾವಳಿಗಳೊಡನೆ ಸಿದ್ಧಮಾಡಲ್ಪಟ್ಟಿದ್ದಿತು. ನೇಮತಿ ಭಜನಾಸಂಘದ ಭಕ್ತ್ಯುದ್ರೇಕವಾದ ಸಂಗೀತ ಭಜನೆಯೂ, ಮಹಾಸಂಸ್ಥಾನದ ವೈದಿಕ ವೇ|| ರುದ್ರಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಗಳೊಡನೆಯೂ, ಬೆಂಗಳೂರು ಕಾಲೇಜದ ವಿದ್ಯಾರ್ಥಿಗಳೂ ಸಹ ವಿಧಿವತ್ತಾಗಿ ವೇದಾಧ್ಯಯನವನ್ನು ಮಾಡುತ್ತಿರಲು ಶ್ರೀ ಜಗದ್ಗುರುಗಳವರು ಸುವರ್ಣ ರಜತಾಂದೋಲಿಕವನ್ನಾರೋಹಿಸಿದರು. ಎತ್ತನೋಡಿದತ್ತ ಜನವೇ ಜನವಾಗಿದ್ದಿತು. ಶ್ರೀ ಮಹಾಜಗದಾಚಾರ್ಯರ ತಪಃಪ್ರಭಾವವನ್ನು ಕಂಡು ಕೇಳದ ನರನೇ ಧನ್ಯನು! ಮಹೋತ್ಸವಕ್ಕೆ ಶ್ರೀಮಾನ್ ತಾಲೂಕು ಅಮಲ್ದಾರ್ ಸಾಹೇಬರವರೂ ಆಗಮಿಸಿದ್ದರು. ಪೋಲೀಸ್ ಬಂದೋಬಸ್ತು ಸಮರ್ಪಕವಾಗಿದ್ದಿತು. ಸಕಲ ವೈಭವದೊಡನೆ ಉತ್ಸವವು ಜರಗುತ್ತ ಮಹೋತ್ಸವವು ಬನ್ನಿಮಂಟಪಕ್ಕೆ ಆಗಮಿಸಿತು. ಬಳಿಕ ವಿಧಿವತ್ತಾಗಿ ಶಮೀಪೂಜೆಯು ನಡೆದು ಮಹಾಗುರು ಪುಂಗವರು ಸರ್ವರಿಗೂ ವಿಜಯಾಶೀರ್ವಾದವನ್ನಿತ್ತು ಯಥಾಪ್ರಕಾರ ಉತ್ಸವದಿಂದಲೇ ದರ್ಬಾರಮಂಟಪಕ್ಕೆ ದಯಮಾಡಿಸಿ ಸಿಂಹಾಸನವನ್ನಾರೋಹಿಸಿದನಂತರ ಬೆಂಗಳೂರು ಮಹಾಂತಿನ ಮಠದ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರು ತಾವು ರಚಿಸಿದ್ದ ನವರತ್ನಮಾಲಿಕಾ ಎಂಬ ಪದ್ಯಾವಳಿಯನ್ನೂ ಸುಣ್ಣಕಲ್ಲು ಬಿದರೆ ಆರಾಧ್ಯಮಠದ ಧರ್ಮಭಾಷಣ ವೇ|| ಹರೀಶ್ವರ ಶಾಸ್ತ್ರಿಗಳು ರಚಿಸಿದ ಪಂಚರತ್ನವೆಂಬ ಪದ್ಯಾವಳಿಯನ್ನೂ, ರಾಯದುರ್ಗದ ಹೈಸ್ಕೂಲು ತೆಲುಗುಪಂಡಿತರಾದ ವೇ|| ಕರಿಬಸವಶಾಸ್ತ್ರಿಗಳು ತಾವು ರಚಿಸಿದ್ದ ಪದ್ಯಗಳನ್ನೂ ಓದಿದರು. ಅನಂತರ ಶ್ರೀ ಜಗದ್ಗುರುಗಳವರು ಸಕಲರೂ ಧರ್ಮಾಭಿಮಾನದಿಂದ ಬಂದು ಭಾಗಿಗಳಾಗಿದ್ದುದಕ್ಕೆ ಸಂತೋಷಿಸಿ ಧರ್ಮಜಾಗರೂಕತೆಯಿಂದಲೇ ಐಹಿಕಾಮುಷ್ಮಿಕಫಲಗಳು ದೊರೆಯುತ್ತಿರುವಕಾರಣ ಸರ್ವರೂ ನಿಮ್ಮ ನಿಮ್ಮ ಧರ್ಮಗಳನ್ನು ಬಿಡದೆ ಸನಾತನಧರ್ಮನಿಷ್ಠರಾಗಿ ಸಂಪತ್ಸಂತಾನಸಿದ್ಧಿಗಳಿಂದ ವಿಜಯಶಾಲಿಗಳೂ ಆಯುಷ್ಮಂತರಾಗಬೇಕೆಂದೂ ನಮ್ಮ ದೇಶವನ್ನಾಳುವ ಶ್ರೀ ಕೃಷ್ಣರಾಜ ಮಹಾಪ್ರಭುಗಳವರು ಸ್ವಯಂಧರ್ಮಾಚರಣೆಯಲ್ಲಿದ್ದು ಸನಾತನ ಧರ್ಮಾಭಿವೃದ್ಧಿಗೆ ಅವಕಾಶವನ್ನು ಕೊಟ್ಟು ಪ್ರಜಾಪರಿಪಾಲನವನ್ನು ಮಾಡುತ್ತಿರುವರಿಂದ ರಾಜರ್ಷಿಗಳೂ ಧರ್ಮಮೂರ್ತಿಗಳೂ ಎನಿಸಿದ ಶ್ರೀಮನ್ಮಹಾರಾಜರವರು ಸಕುಟುಂಬ ಸಪುತ್ರಸಾನುಜರಾಗಿ ಆಯುರಾರೋಗ್ಯೈಶ್ವರ್ಯಾದ್ಯಖಿಲಸಂಪತ್ಸಮೃದ್ಧಿಯಿಂದ ಚಿರಕಾಲ ರಾಜ್ಯಭಾರವನ್ನು ಮಾಡಲೆಂದು ತ್ರಿವಾರ ಜಯಘೋಷದಿಂದಹರಸಿದರು. ಬಳಿಕ ಸಕಲರೂ ಕಪ್ಪಕಾಣಿಕೆಯನ್ನರ್ಪಿಸಿ ಜನ್ಮಸಾರ್ಥಕ್ಯವನ್ನು ಮಾಡಿ ಹರ್ಷಿಸುತ್ತಿರಲು ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ದಯಪಾಲಿಸಿ ತಮ್ಮ ಬಿಡಾರಕ್ಕೆ ದಯಮಾಡಿಸಿದರು. ಬಂದ ಜನಸಮುದಾಯಕ್ಕೆ ಮಹಾಸಂಸ್ಥಾನದಿಂದಲೇ ಅನ್ನದಾನವು ಮಾಡಲ್ಪಟ್ಟಿತು. ಮರುದಿನಸ ಒಂಭತ್ತು ಘಂಟೆಗೆ ಯಥಾಪ್ರಕಾರ ದರ್ಬಾರ್‌ಮಂಟಪದಲ್ಲಿಯೇ ದರ್ಬಾರ್ ನಡೆಯಿತು. ವಿದ್ಯಾವಂತರ ವಿದ್ವತ್ತು ಪರೀಕ್ಷಿಸಲ್ಪಟ್ಟು ವರ್ಷಾಸನದ ಸಂಗೀತ ವಿದ್ವಾನ್ ಪದವೀಧರ ಹರಪನಹಳ್ಳಿಮಠದ ಗವಯಿ ವೇ|| ಮರಿಕೊಟ್ರಯ್ಯನವರು ವಾದ್ಯವಾದನ ವಿದ್ವಾನ್ ಪದವೀಧರ ಕೊಟ್ಟೂರು ಕೆಂಭಾವಿಮಠದ ವೇ|| ಚನ್ನಬಸವಯ್ಯನವ ಮುಂತಾದವರಿಗೆ ಪದ್ಧತಿಯಂತೆ ಸಂಭಾವನೆಯು ಕೊಡಲ್ಪಟ್ಟಿತು. ಬೆಂಗಳೂರು ಕರಿಸಿದ್ಧಪದೆಯರ ಮಠದ ಸಿದ್ಧಾಂತಿ ವೇ|| ಗು ಬಸವಶಾಸ್ತ್ರಿಗಳು ಸಾಕಲ ಇವರಿಗೆ 'ಜ್ಯೋತಿಷಾಲಂಕಾರ' ಎಂಬ ಬಿರುದಿನೊಡನೆ ಒಂದು ಸುವರ್ಣಪದಕವೂ ತರಿಕೆರೆ ತಾಲೂಕ ಹಲಸೂರು ಮಠದ ವೇ|| ಸಿದ್ಧಾಂತಿ ಶ್ರೀಕಂಠಯ್ಯನವ "ಜ್ಯೋತಿರ್ಭೂಷಣ" ಎಂಬ ಬಿರುದಿನೊಡನೆ ಒಂದು ಸುವ ಪದಕವೂ ಒಂದು ಶಾಲೂ ಕೀರ್ತನದವರಾದ ಅರಸಿಕೆರೆ ಮ ವೇ|| ಬಸವಲಿಂಗಯ್ಯನವರು ಸ್ಕೂಲ್‌ಮಾಸ್ಟರ್ ಇವರಿಗೆ ಒಂ ಕಲಾಬತ್ತಿನ ಶಾಲೂ, ಇಂದ್ರಜಾಲ ವಿದ್ಯಾಪ್ರದರ್ಶಕರಿಗೆ 'ಇಂದ್ರಜಾಲಕೌಶಲ' ಎಂಬ ಬಿರುದಾಂಕಿತ ಸುವರ್ಣಪ ಮತ್ತು ಒಂದು ಶಾಲೂ, ವಾದ್ಯದವರಿಗೂ, ಪಿಟೀಲಿನವರಿ ಒಂದೊಂದು ಶಾಲೂ, ಬೆಂಗಳೂರು ಸಂಗೀತಬಾಲಿಕೆಗೆ ಒಂ ಸುವರ್ಣಪದಕವೂ ಕೊಡಲ್ಪಟ್ಟು ಉತ್ತರೋತ್ತರ ಸತ್ಯ ಶ್ರೇಯೋವಂತರಾಗಬೇಕೆಂದು ಹರಸಿದರು. ಈ ದಿವಸವೂ ಕ ಕಾಣಿಕೆಯು ನಡೆಯಿತು. ಬಳಿಕ ಶ್ರೀ ಜಗದ್ಗುರುಗಳವರು ಐ ಕಾಮುಷ್ಮಿಕಫಲಹೇತುಗಳಾದ ಧಾರ್ಮಿಕಲೌಕಿಕ ಸದ್ವಿಷಯ ನ್ನೊಳಗೊಂಡ ಸರ್ವಸಾಮಾನ್ಯಸದುಪದೇಶವನ್ನು ಮಾಡಿಸಿ ವಿಸ ನೆಗೆ ಅಪ್ಪಣೆಯನ್ನು ಕೊಟ್ಟು ಬಿಡಾರಕ್ಕೆ ದಯಮಾಡಿಸಿದ ಪುನಃ ಸಾಯಂಕಾಲಕ್ಕೆ ದರ್ಬಾರ್ ನಡೆಯಿತು. ಆಗ್ಯೂ ಕ ಕಾಣಿಕೆಯೂ ನಡೆದು ಸದುಪದೇಶವನ್ನು ಮಾಡಿ ಆಚಾರ್ಯ ಘೋಷದಿಂದ ಮಹಾಸಭೆಯು ವಿಸರ್ಜಿತವಾಯಿತು. ಮ ಚಾರ್ಯಪುಂಗವರ ವಿಜಯಯಾತ್ರೆಯು ಯಾವಾಗಲೂ ಆಗುತ್ತಿ ದರಿಂದ ಪ್ರಜೆಗಳು ಮಾರ್ಗಾಂತರಗಾಮಿಗಳಾಗುವುದಕ್ಕೆ ಅ ವೇ ಆಗುತ್ತಿರಲಿಲ್ಲ. ಈವಾಗ ನೈಜವಾದ ಧರ್ಮಮಾರ್ಗವು ಚಿತವಾಗಿ ಹಿಂದೆ ಅಮಾರ್ಗದಲ್ಲಿ ಪ್ರಾಪ್ತವಾದ ಸಕಲ ದೋ ಗಳೂ ನಿವೃತ್ತಿಯನ್ನು ಹೊಂದಿ ಜನ್ಮಸಾರ್ಥಕ್ಯದಿಂದ ಸಂತು ರಾಗಿ ದರ್ಶನಾಶೀರ್ವಾದಗಳನ್ನು ಹೊಂದಿ ತಮ್ಮ ತಮ್ಮ ಸ್ಥ ಗಳಿಗೆ ಹೋದರು. ಬಹುಭಾಗದ ಜನಗಳು ಮಹಾಸವಾರಿಯ ತಮ್ಮ ಪ್ರಾಂತಗಳನ್ನು ಪವಿತ್ರಗೊಳಿಸಲು ಬಿಜಯಂಗೈಸಬೇಕೆ ಪ್ರಾರ್ಥಿಸಿಕೊಂಡುದಕ್ಕೆ ಮಹಾಚಾರ್ಯರ ತಪಃಪ್ರಭಾವವೇ ಕಾರಣವಾಗಿರುತ್ತದೆ. ಎತ್ತನೋಡಿದತ್ತ ಧರ್ಮದ ಬೆಳಸು ಸು ಸುಗ್ಗಿಯೆಂದು ಹೇಳಲು ಅಭ್ಯಂತರವಿಲ್ಲ. ಜಗದೀಶ್ವರನು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಗುರುಗಳು ಸರ್ವತ್ರ ಸ ರಿಸಿ ಅವರಿಂದ ಸ್ಥಾಪಿತವಾದ ಸನಾತನಧರ್ಮವು ವಿಜಯಶಾ ಯಾಗಲು ಕೃಪೆಯನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದ

ಪ್ರಭಾಪಾಠಕರಲ್ಲಿ ಪ್ರಾರ್ಥನೆ.

'ಶೈವಭಾರತೀಭವನ' ವೆಂಬ ನಮ್ಮ ಪುಸ್ತಕಾ ಯದಲ್ಲಿ ಒಂದೂವರೆಸಾವಿರದ ಉತ್ತಮಗ್ರಂಥಗಳಿ ದನ್ನು ಪ್ರತ್ಯಕ್ಷವಾಗಿಕಂಡು, ಪಂಡಿತ ಶ್ರೀಕಾಶೀನಾ ಶಾಸ್ತ್ರಿಗಳವರು ಉಮಚಗಿ ಧರ್ಮರತ್ನ ಪಂಡಿತ ಶಂ ಶಾಸ್ತ್ರಿಗಳು ಮುಂತಾದ ಮಹನೀಯರು ಪ್ರಥಮಶ್ರೇ ಯ ಪ್ರಶಂಸೆಯನ್ನು ಮಾಡಿರುತ್ತಾರೆ. ಇಲ್ಲಿ ವೀರಶೈ ಧರ್ಮಗ್ರಂಥಗಳನ್ನೂ ಪತ್ರಿಕೆಗಳನ್ನೂ ಸಂಪೂರ್ಣವಾ ಕಾದಿಡುವ ವ್ಯವಸ್ಥೆಯು ಮಾಡಲ್ಪಟ್ಟಿದೆ. ಆದರೆ ಪ್ರ ಪತ್ರಿಕೆಯ ಕೆಲವು ಸಂಚಿಕೆಗಳು ದೊರೆಯದಿರುವ ಮ ಲಕ ಅತ್ಯಂತ ಲೋಪವೆನಿಸುತ್ತದೆ. ಪ್ರಭಾಪತ್ರಿಕೆ ಉದಾರಿಗಳೂ ಪುಣ್ಯಾತ್ಮರೂ ಆದ ಪಾಠಕಮಹಾ ದಯರು ಈ ಕೆಳಗಿನ ಸಂಚಿಕೆಗಳನ್ನು ಬುಕ್‌ಪೋ ನಿಂದ ರವಾನಿಸಿದರೆ ಅವರ ಉಪಕಾರವು ಚಿರಸ್ಮರ ಯವಾಗುವುದೆಂದು ನಿವೇದಿಸುವೆನು.

೧ ನೆಯ ವರ್ಷದಲ್ಲಿ ೧, ೨, ೪, ೬, ೧೬, ೧ ೨೧, ೨೪, ೨೫, ೨೯, ೩೧, ೩೨, ೩೪, ೩೬, ೪ ೪೧, ೪೨, ೪೩, ೪೪, ೪೬ ನೆಯ ಸಂಚಿಕೆಗ ೨ ನೆಯ ವರ್ಷದಲ್ಲಿ ೧, ೬, ೨೬, ೩೬, ೩೮, ೪ ೪೮, ೫೩, ೫೪, ನೆಯ ಸಂಚಿಕೆಗಳೂ, ೩ನೆಯ ವ ದಲ್ಲಿ ೨, ೪, ೯, ೧೧, ೧೬, ೧೭, ೨೩, ೨೪, ೨ ೨೬, ೨೯, ೩೪, ೩೫, ೩೬, ೩೮, ೩೯, ೪೦, ೪ ೪೨, ೪೩, ೪೫, ೪೬, ೪೭ನೆಯ ಸಂಚಿಕೆಗ ೪ನೆಯ ವರ್ಷದಲ್ಲಿ ೨೨, ೨೪, ೪೨ ನೆಯ ಸಂ ಗಳೂ, ೫ನೆಯ ವರ್ಷದಲ್ಲಿ ೨೬, ೪೬ ನೆಯ ಸಂ ಗಳೂ, ೬ನೆಯ ವರ್ಷದ ೨೨ ನೆಯ ಸಂಚಿಕೆಯ ಬೇಕಾಗಿವೆ. ಈ ಪರೋಪಕಾರದಲ್ಲಿ ಮುಂದುವರಿ ಬೇಕೆಂದು ಕೋರುವ,

ಸೆಕ್ರೆಟರಿ,
ಶೈವಭಾರತೀಭವನ, ಜಂಗಮವಾಡೀಮ
ಬನಾರಸ್ ಸಿಟಿ.

ರಷ್ಯಾದೇಶದ ಒಬ್ಬ ತರುಣ ಇಂಜನಿಯರು ಒಂದು ಹೊಸತರಹ ರೈಲುಗಾಡಿಯನ್ನು ತಯಾರ್ಮಾಡಿರುವನು! ಇದಕ್ಕೆ ಇತರ ಗಾಡಿಗಳಂತೆ ಚಕ್ರಗಳಿರದೆ ಸಣ್ಣ ಸಣ್ಣ ಉಕ್ಕಿನ ಗುಂಡುಗಳ ಮೇಲೆ ಉರುಳುವದು. ಆದ್ದರಿಂದ ಇದಕ್ಕೆ ಕಂಬಿಗಳೂ ಇಲ್ಲದೆ, ಟ್ರಾಂ ಗಾಡಿಗಳಿಗಿರುವಂತೆ ಕಬ್ಬಿಣದ ಪಟ್ಟಿಗಳ ಮೇಲೆ ಗಾಡಿಯು ಓಡಾಡುವದು! ಪ್ರತಿಯೊಂದು ಗಾಡಿಯಲ್ಲಿಯೂ 110 ಜನರು ಕುಳಿತುಕೊಳ್ಳುವಷ್ಟು ಅವಕಾಶವಿದ್ದು, ಗಂಟೆಗೆ 190 ಮೈಲುಗಳ ವೇಗದಲ್ಲಿ ಹೋಗಬಲ್ಲಿದಂತೆ! ಈ ಗಾಡಿಯು ಸಂಪೂರ್ಣ ವಿದ್ಯುಚ್ಛಕ್ತಿಯಿಂದ ನಡೆಯುತ್ತಿದ್ದು ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನೂ ತಾನೇ ನಿರ್ಮಿಸಿಕೊಳ್ಳುವದಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಾಮ್ರಭಸ್ಮ	೧	೦—೮—೦
ೋಹಭಸ್ಮ	೧	೦—೧೨—೦
ಂಗಭಸ್ಮ	೧	೦—೮—೦
ಾಗಭಸ್ಮ	೧	೦—೮—೦
ತ್ತಾಳಭಸ್ಮ	೧	೦—೮—೦
ಂಚಿನಭಸ್ಮ	೧	೦—೮—೦
ಸ್ಯಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಭ್ರಕಭಸ್ಮ	೧	೩—೦—೦
ುಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಬಿಭಸ್ಮ	೧	೦—೪—೦
ವಡಿಭಸ್ಮ	೧	೦—೪—೦
ತ್ತಿಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಸ್ತೂರಿ (೨ನೇ ನಂಬರ್)	೧	೪೦—೦—೦
ಾಜಿತ ಸೂರ್ಯಪುಟ	೧	೧—೦—೦
ಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ಅಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟ ಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ದಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗ ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರ ಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ದ್ಧಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರ ಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

[39]

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 8

ವಿಳಾಸ—**ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾನ್ ಅಂಡ್ ಸನ್

[illegible]

ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅಂಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.

[41]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅ ಹ ಮ ದಾ ಬಾ ದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ — ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರಹದ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1-8-0, 7-0-0

ಹೂಪಿಂಗ್ ಕಫ್ ರೆಮಡಿ— ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

☞ ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪತ್ರಿಕೆಗೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [6]

ಕಂಪೌಂಡ್ ಸಿರಪು ಬ್ಲಟ— ಉಬ್ಬಸ, ನೆಗಡಿ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೆ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಶ್ಲೇಷಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಹಾಮಹಾತಿಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦
ವೀರಶೈವರತ್ನ (೫ನೆಯ ಆವೃತ್ತಿ)	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಶಿವಸೂತ್ರಸಿದ್ಧಾಂತದರ್ಪಣ	೧೨
ಸಚಿತ್ರ ರೇಣುಕವಿಜಯ	೧ ರ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರ
ಕೇನೋಪನಿಷತ್ (ವೀರಶೈವಭಾಷ್ಯ)	೧ ರ
ವೀರಶೈವಸಿದ್ಧಾಂತಸುಧಾಕರ	೨ ರ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟಿಪ್ಪಣಿ)	೧ ರ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರ
लिंगधारणचंद्रिका (संस्कृत)	२
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ಒಳ್ಳೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಳ್ಳೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಒಳ್ಳೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ಒಳ್ಳೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಕರ್ಣದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಳ್ಳೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಳ್ಳೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಳ್ಳೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಳ್ಳೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ

(Registered Trade Mark)

ಗಳನ್ನು ಕೊಟ್ಟಿ ರು. ಪ್ರಸಿದ್ಧವಾದ ನಶ್ಯದ ಪುಡಿಯಿ ಸ್ವಸ್ಥವಾಗುವ ವ ಧಿಗಳು ಯಾವವೆ ರೆ:—ಪಿನಸಿ, ಒ ತಲೆನೋವು, ತಲೆ ಲ್ಲಿಯ ರೋಗಗ ಕಣ್ಣುಗಳಲ್ಲಿ ಉರಿ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ ಪರಿಮಳವಾಗುವುದು. ಇದನ್ನು ಅನೇಕ ಪ್ರಭು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[40] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

ಂದು ಅಧಿಕಾರಕೊಟ್ಟಿದ್ದೊಂದು. ಇವೆರಡೂ ಈ ರೆಗ್ಯುಲೇಷನ್ನಿನ ಮುಖ್ಯ ಲಕ್ಷಣಗಳು. 1933 ನೆಯ ಇಸವಿ ಜೂನ್ 30 ನೇ ತಾರೀಖಿಗೆ ಅಥವಾ ಆ ತರುವಾಯ ಆರು ತಿಂಗಳುಗಳಲ್ಲಿ ಅವ ಯು ಮುಗಿಯುತ್ತಿದ್ದ ಮೈನರ್ ಮತ್ತು ಟವನು ಮುನಿಸಿ ಸಭೆಗಳ ಕಾಲಾವಧಿಯನ್ನು, ಹೊಸ ಮುನಿಸಿಪಲ್ ರೆಗ್ಯುಲೇ ಪ್ರಕಾರ ಅವುಗಳ ಪುನರ್ವ್ಯವಸ್ಥೆಯು ನಡೆಯುವುದ 1933 ನೆಯ ಇಸವಿ ಡಿಸೆಂಬರ್ ತಿಂಗಳಿನ ಕೊನೆಯವ ಹೆಚ್ಚಿಸಲಾಯಿತು.

ಗ್ರಾಮಾಭಿವೃದ್ಧಿ.

ಮಹಿಳೆಯರೇ, ಮಹನಿಯರೇ, ಸಂಸ್ಥಾನದಲ್ಲಿ ನಡೆಯಬೇ ದ ಅತಿಮುಖ್ಯ ಕರ್ತವ್ಯವಾಗಿರುವ ಗ್ರಾಮಾಭಿವೃದ್ಧಿಯ ವಿಚಾರವನ್ನು ಕುರಿತು ಕೆಲವು ಸಂಗತಿಗಳನ್ನು ಸೂಚಿಸಲಿಚ್ಛಿಸು ನು. ನಾನು ಇದುವರೆಗೂ ಪ್ರಸ್ತಾಪಿಸಿದ ಅನೇಕ ಮೇಲ್ಪಾಡು ಗಳು ಗ್ರಾಮಗಳಿಗೂ ಮತ್ತು ಟವನುಗಳಿಗೂ ಉಭಯತ್ರ ಪ್ರಯೋಜನಕರವಾಗಿವೆ. ಕೆರೆಗಳ ಜೀರ್ಣೋದ್ಧಾರದ ವಿಚಾರ ಂದಲೂ, ರಸ್ತೆಗಳ ಮೇಲಾಟುಗಳಿಂದಲೂ ಗ್ರಾಮಗಳಿಗೆ ಪ್ರಯೋಜನವುಂಟಾಗುತ್ತದೆ. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಲವಕ್ಕೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಿಕೊಟ್ಟಿದ್ದೇನೆ. ಸ್ಕೂಲುಗಳನ್ನು ಪುನರ್ವ್ಯವಸ್ಥೆಮಾಡಿ ಉತ್ತಮಪಡಿಸಿದ್ದೇನೆ. ನಮ್ಮಲ್ಲಿ ಹಣವು ಒದಗುವ ಮಟ್ಟಿಗೂ ನೆಟ್ಟಮಾಡಿ ಸ್ಥಳಾ ರೋಗ್ಯ ಸಾಧಕವಾದ ಸಣ್ಣ ಪುಟ್ಟ "ಸ್ಯಾನಿಟರಿ" ಕಾಮಗಾರಿ ಗಳನ್ನು ನಡೆಯಿಸುತ್ತಿದ್ದೇನೆ. ಸಹಕಾರ ಚಳುವಳಿಯಿಂದ ಗ್ರಾಮಗಳಿಗೆ ಮುಖ್ಯವಾಗಿ ಪ್ರಯೋಜನವುಂಟಾಗುತ್ತದೆ. ಸಹ ಕಾರ ಸಂಘಗಳ ವಿಚಾರವು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಉಪಯೋಗಕರವಾಗಿ ಪರಿಣಮಿಸಿ ತೃಪ್ತಿಕರವಾಗಿ ಮುಂದುವರಿ ಯುತ್ತದೆ ಯೆಂಬುದು ಇದೇ ತಿಂಗಳು 26 ನೆಯ ತಾರೀಖಿನ ದಿನ ನಡೆದ ಸಹಕಾರ ಸಮ್ಮೇಳನದಲ್ಲಿ ವಿಶದವಾಗಿ ತಿಳಿಸಲ್ಪಟ್ಟಿತು. ಗ್ರಾಮಾಭಿವೃದ್ಧಿಯ ವಿಚಾರವು ಗ್ರಾಮಪಂಚಾಯಿತಿಗಳ ಮುಖ್ಯ ಕಾರ್ಯವಾಗಿದೆ. 10,600 ಗ್ರಾಮಪಂಚಾಯಿತಿಗಳು ಚಟುವಟಿಕೆ ಯಿಂದ ಕೆಲಸಮಾಡುತ್ತಿವೆ. ಅವುಗಳ ವಶದಲ್ಲಿ 30 ಲಕ್ಷ ರೂಪಾ ಯಿಗಳಷ್ಟು ಭಾರಿ ಮೊಬಲಗು ಶೇಖರವಾಗಿ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗಲು ಸಿದ್ಧವಾಗಿದೆ. ಗ್ರಾಮಗಳ ಸ್ಕೂಲುಗಳನ್ನು ತನಿಖೆಮಾಡಿ ಆದರ ನಡೆಯಿಸುವುದು, ಗ್ರಾಮ ಂಗಲುಗಳನ್ನೂ ಕೆರೆಗಳನ್ನೂ ಮತ್ತು ತೋಪುಗಳನ್ನೂ ಸರಿಯಾಗಿ ನೋಡಿಕೊಳ್ಳುವುದು, ಸಾಲುಮರಗಳನ್ನೂ ಮತ್ತು ವೃಕ್ಷಗ ನ್ನೂ ಬೆಳೆಯಿಸುವುದು, ಉತ್ತಮವಿಧದ ವ್ಯವಸಾಯದ ಮುಟ್ಟುಗಳನ್ನೂ, ಕಬ್ಬಿನ ಗಾಣಗಳನ್ನೂ ಕ್ರಯಕ್ಕೆ ತೆಗೆದು ಂಡು ಗ್ರಾಮಸ್ಥರಿಗೆ ಬಾಡಿಗೆಗೆ ಕೊಡುವುದು, ಮತ್ತು ವ್ಯವ ಯ ಶಾಸ್ತ್ರದ ಪ್ರಕಾರ ಉತ್ತಮ ವಿಧದ ಗೊಬ್ಬರವನ್ನು ಂಚುವುದು, ಈ ಕೆಲಸಗಳೂ ಸಹ ಕೆಲವು ಮುಖ್ಯವಾದ ಗ್ರಾಮಪಂಚಾಯಿತಿಗಳ ಕಾರ್ಯಕಲಾಪಗಳಲ್ಲಿ ಸೇರಿವೆ. ಗ್ರಾಮಾ ವೃದ್ಧಿಗಾಗಿ ಗ್ರಾಮಸ್ಥರು ವ್ಯಾಪಾರಕ್ಕೊಂದು ದಿವಸ ಉಚಿತ ವಾಗಿ ಕೆಲಸಮಾಡುವ ವಿಚಾರದಲ್ಲಿ ಜನರಿಗೆ ಅಭಿರುಚಿಯು ಟ್ಟಿದೆ. ಗ್ರಾಮಪಂಚಾಯಿತಿಗಳವರು ಒತ್ತಾಯವಾಗಿ ಆ ರೀತಿ ಲಸ ಮಾಡಿಸುತ್ತಿದ್ದಾರೆ. ಹೀಗೆ ನಡೆದ ಕೆಲಸಕ್ಕೆ ಕೂಲಿಯನ್ನು ಕೊಟ್ಟಿದ್ದ ಪಕ್ಷಕ್ಕೆ 1,50,000 ರೂಪಾಯಿಗಳಿಗಿಂತ ಹೆಚ್ಚಾಗಿ ಡಬೇಕಾಗುತ್ತಿದ್ದಷ್ಟು ಕೆಲಸವು 1932-33 ನೆಯ ಸಾಲಿನಲ್ಲಿ ನಡೆದುದಾಗಿ ವರದಿಯಾಗಿದೆ.

ಪ್ರಜಾಸೇವೆ ಮಾಡಬೇಕೆಂಬ ಭಾವನೆಯು ಜನರ ಮನಸ್ಸಿ ಲ್ಲಿ ನೆಲಸಿ ವೃದ್ಧಿಯಾಗುತ್ತಿರುವುದಕ್ಕೆ ಸಹ ಅನೇಕ ನಿದರ್ಶನ ಳಿವೆ. ಉಪಯೋಗಕರವಾದ ಕಟ್ಟಡಗಳು, ಸ್ಕೂಲುಗಳು, ಆಸ್ಪ ಗಳು ಮುಂತಾದ ಸೌಕರ್ಯಗಳನ್ನು ಗ್ರಾಮಾಂತರಗಳಲ್ಲಿ ಲ್ಪಿಸುವುದಕ್ಕಾಗಿ ಉದಾರವಾದ ಸಹಾಯದ್ರವ್ಯವನ್ನು ಜನ ಗಳು ಕೊಡುತ್ತಿದ್ದಾರೆ. ಪ್ರಜಾಸೇವೆಯಲ್ಲಿ ಅವರಿಗಿರುವ ಆಸ ಕ್ತಿಯು ಮುಖ್ಯವಾಗಿ ಈ ರೂಪದಲ್ಲಿ ವ್ಯಕ್ತವಾಗುತ್ತಿದೆ. ಒಟ್ಟಿ ನಮೇಲೆ ಈ ರೀತಿ ಅನೇಕ ಧರ್ಮ ಕಾರ್ಯಗಳು ನಡೆದಿರುವುದು ಮನಸ್ಸಿಗೆ ಬಹಳ ಹಿತಕರವಾಗಿದೆ. ಈ ರೀತಿ ನಮ್ಮ ಮನಸ್ಸಿಗೆ ತವಾಗುವಂತೆ ಹೆಚ್ಚು ಹೆಚ್ಚಾಗಿ ಧರ್ಮಕಾರ್ಯಗಳು ವಿಹಿತ ತಿಯಲ್ಲಿ ನಡೆಯಬೇಕಾದುದು ಆವಶ್ಯಕ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಬಗೆಯಲ್ಲಿ ಎಷ್ಟು ಸೌಕರ್ಯ ಳು ಒದಗಿದರೂ ಸಾಲದಷ್ಟುಮಟ್ಟಿಗೆ ಅಷ್ಟೊಂದು ಅಗಾಧ ವಾದ ಪ್ರಮಾಣದಲ್ಲಿ ಅವು ಬೇಕಾಗಿವೆ. ಯಾವುದೊಂದು ಗ್ರಾಮವನ್ನಾದರೂ ಆರಿಸಿ ಅಲ್ಲಿ ವಾಸವಾಗಿರುವ ಜನಗಳಲ್ಲಿ ನಾನಾ ಪಂಗಡಗಳವರ ಜೀವನವಿಧಾನಗಳನ್ನೂ ಪರಿಶೀಲಿಸಿದರೆ, ವರ ಕೆಲವು ಕೊರತೆಗಳು ಎಷ್ಟು ಅಪರಿಮಿತವಾಗಿವೆಯೆಂಬುದು ವ್ಯಕ್ತವಾಗುತ್ತದೆ. ಕೆಲವು ದೇಶಗಳಲ್ಲಿ ಜನರಿಗೆ ಸೌಕರ್ಯಗ ನ್ನು ಒದಗಿಸುವ ಉದ್ದೇಶದಿಂದ ಅತಿಕಠಿಣವಾದ ಸರ್ಕಾರಿ ಕಾರ್ಯಕ್ರಮವನ್ನು ನಿರ್ಣಯಿಸಿ ಕೆಲಸ ನಡೆಯಿಸುತ್ತಿದ್ದಾರೆ. ಲ್ಲಿ ವಸ್ತುಗಳ ಮತ್ತು ಹಣಕಾಸು ಮುಂತಾದವುಗಳ ಸ್ವಾಮ್ಯ ಒಟ್ಟು ಜನಾಂಗಕ್ಕೇ ಸೇರಿದುದೆಂದೂ, ಪ್ರಜೆಗಳಲ್ಲಿ ಕೆಲವರು ಹಳ ಧನಿಕರಾಗಿಯೂ, ಮತ್ತೆ ಕೆಲವರು ತೀರ ದರಿದ್ರರಾಗಿಯೂ ರುವುದೆಂದಿಗೂ ಯುಕ್ತವಲ್ಲವೆಂದೂ ತೀರ್ಮಾನಿಸಿ, ಅದಕ್ಕನು ರವಾಗಿ ವ್ಯಕ್ತಿಗಳ ಸ್ವಾತಂತ್ರ್ಯವನ್ನು ಕಡಿಮೆಮಾಡುವ ರ್ಯಯುತವಾದ ಕಾರ್ಯಕ್ರಮಗಳ ಮೂಲಕ ಪ್ರಜಾಸಾಮಾನ್ಯ ಗೆ ಸೌಕರ್ಯಗಳನ್ನೊದಗಿಸುತ್ತಿದ್ದಾರೆ. ಸರ್ಕಾರದವರು ಧಿಸುವ ರೀತಿಯಲ್ಲಿಯೇ ಪ್ರಜೆಗಳು ನಾನಾ ಬಗೆಯ ಜೀವನ ಧಾನಗಳನ್ನೂ ಅನುಸರಿಸುವಂತೆ ನಿರ್ಬಂಧಪಡಿಸುವ ಆವಶ್ಯಕತೆಯು ಮೈಸೂರು ಸಂಸ್ಥಾನದಲ್ಲಿ ಎಂದೆಂದಿಗೂ ಉಂಟಾಗದಿರಲೆಂದು ನಾನು ಹಾರೈಸುವೆನು. ಆದಾಗ್ಗೂ ನಾವೆಲ್ಲರೂ ಆ ರೀತಿ ಬಯಸುತ್ತ ಸುಮ್ಮನಿರುವುದೆಂದಿಗೂ ಯುಕ್ತವಲ್ಲ. ಅದಕ್ಕೆ ಬದಲಾಗಿ ಗ್ರಾಮಾಭಿವೃದ್ಧಿಕಾರ್ಯವು ನಮ್ಮಲ್ಲಿ ಪ್ರತಿಯೊಬ್ಬರಿಗೂ ಸೇರಿದ ಅವಶ್ಯ ಕರ್ತವ್ಯವೆಂಬುದನ್ನು ನಾವೆಲ್ಲರೂ ಮನದಟ್ಟುಮಾಡಿಕೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿರುವ ರೈತರೇ ಮೈಸೂರು ಸಂಸ್ಥಾನದ ಮೂಲಬಲವಾದ ಮುಖ್ಯಾಧಾರವೆಂಬುದನ್ನು ನಾವೆಲ್ಲರೂ ನಿರಂತರವೂ ನೆನಪಿನಲ್ಲಿಟ್ಟು ಮನನ ಮಾಡುತ್ತಿರಬೇಕು. ರೈತರು ಅಭ್ಯುದಯ ಹೊಂದುವಂತೆ ಮಾಡುವುದರಲ್ಲಿಯೂ, ಅಥವಾ ರೈತರ ತಿಳಿವಳಿಕೆಯು ಹೆಚ್ಚುವಂತೆ ಮಾಡುವುದರಲ್ಲಿಯೂ ಅಥವಾ ರೈತರಿಗೆ ತಮ್ಮ ಗ್ರಾಮದ ಮೇಲಿನ ಹೆಮ್ಮೆಯೂ ಅಭಿಮಾನವೂ ವೃದ್ಧಿ ಹೊಂದುವಂತೆ ಪ್ರೇರಣೆ ಮಾಡುವುದರಲ್ಲಿಯೂ ನಮಗೆ ದೊರೆಯುವ ಯಾವುದೊಂದು ಅವಕಾಶವನ್ನೂ ಕಳೆದುಕೊಳ್ಳದೆ ರೈತರಿಗೆ ಸಹಾಯಮಾಡಿ ನಾವೆಲ್ಲರೂ ಚರಿತಾರ್ಥರಾಗಬೇಕು. ತಮ್ಮ ಗ್ರಾಮವು ಸೊಬಗಿನ ಬೀಡೆಂಬ ಅಭಿಮಾನದ ಅಮೃತರಸವು ಅವರ ಹೃದಯದಲ್ಲಿ ಪ್ರವಹಿಸುವಂತೆ ಮಾಡುವುದೇ ವಿವೇಕಪೂರ್ಣವಾದ ಉತ್ತಮ ಜೀವನವಿಧಾನದಲ್ಲಿ ಅವರಿಗೆ ಆಸಕ್ತಿಯನ್ನುಂಟುಮಾಡುವ ಅಮೋಘ ಸಾಧನವಾಗಿದೆ.

30 ನೇ ಸೆಪ್ಟಂಬರು 1933.

ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನರವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಯಡತೊರೆ ಹೊಸಟವನ್ನಿಗೆ ದಿವಾನ್‌ಸಾಹೇಬರವರ ಆಗಮನ.

ದಿವಾನ್‌ಸಾಹೇಬರವರು ಈಗ್ಗೆ ಒಂದೂವರೆ ವರುಷದಿಂದೀಚೆಗೆ ಈ ಹೊಸ ನಗರಕ್ಕೆ ದಯಮಾಡಿಸಿರಲಿಲ್ಲ. ಹೊಸನಗರದಲ್ಲಿ ಮ|| ರಾ|| ಸಾಹುಕಾರ್ ಬಳೆ ಸಿದ್ದಲಿಂಗ ಶೆಟ್ಟರು ತಮ್ಮ ಮಾತೃಶ್ರೀಯವರ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಹೆರಿಗೆ ಆಸ್ಪತ್ರೆಯ ಕಟ್ಟಡದ ಕೆಲಸವು ಪೂರೈಸಿರುವುದರಿಂದ ಸದರಿ ಕಟ್ಟಡವನ್ನು ನೋಡುವುದಕ್ಕೋಸ್ಕರ ದಯಮಾಡಿಸಬೇಕೆಂದು ಮ|| ರಾ|| ಸಾಹುಕಾರರು ಪ್ರಾರ್ಥಿಸಿಕೊಂಡಿದ್ದಂತೆ ಈ ಮಾಹೆ ೩ ನೆಯ ತಾರೀಖು ಮಂಗಳವಾರ ದಿವಸ ಬೆಳಿಗ್ಗೆ 8 ಘಂಟೆಗೆ ದಿವಾನ್‌ಸಾಹೇಬರವರು ಮುದರಾಸಿನ ತಮ್ಮ ಅತಿಥಿಗಳೊಡನೆಯೂ ಪ್ರೈವೇಟ್ ಸೆಕ್ರೆಟರಿಯವರು, ರೆವಿನ್ಯೂ ಕಮಿಷನರವರು, ಚೀಫ್ ಇಂಜನೀಯರವರು ಇನ್ನೂ ಮೊದಲಾದ ಅಧಿಕಾರಿಗಳೊಡನೆಯೂ ದಯಮಾಡಿಸಿದರು. ಮುನಿಸಿಪಾಲಿಟಿಯವರು ಹಾಕಿಸಿದ್ದ ಚಪ್ಪರದಲ್ಲಿ ಪುರವಾಸಿಗಳು ಹೂವಿನ ಹಾರತುರಾಯಿಗಳನ್ನರ್ಪಿಸಿ ಸುಸ್ವಾಗತವನ್ನು ಬಯಸಿದರು. ಅನಂತರ ಹೊಸನಗರದ ಮುಖ್ಯಬೀದಿಗಳಲ್ಲಿ ಮನೆಗಳನ್ನು ಪರಾಮರ್ಶಿಸಿ ಹೆರಿಗೆ ಆಸ್ಪತ್ರೆಯ ಕಟ್ಟಡಕ್ಕೆ ದಯಮಾಡಿಸಿ ಕಟ್ಟಡವನ್ನೆಲ್ಲಾ ನೋಡಿ ಬಹಳ ಸಂತೋಷದಿಂದ ಕೆಲವು ಸಲಹೆಗಳನ್ನು ತಿಳಿಸಿ ಹೊಸಗರ್ಲ್ಸ್ ಸ್ಕೂಲು, ಪ್ರೈಮರಿ ಬಾಯ್ಸ್ ಸ್ಕೂಲನ್ನು ಪರಾಮರ್ಶಿಸಿದರು. ಅನಂತರ ಮ|| ರಾ|| ಸಾಹುಕಾರ್ ಬಳೆ ಸಿದ್ದಲಿಂಗ ಶೆಟ್ಟರ ಪ್ರಾರ್ಥನೆ ಪ್ರಕಾರ ಅವರ ಬಂಗಲೆಯಲ್ಲಿ ಫಲಾಹಾರವನ್ನು ತೆಗೆದುಕೊಂಡರು. ಅನಂತರ ಮ|| ರಾ|| ಸಾಹುಕಾರರು ಮತ್ತು ಪುರವಾಸಿಗಳು ಈ ಹೊಸ ನಗರಕ್ಕೆ ಜಾಗ್ರತೆ ಬಂದು ಮುನಿಸಿಪ್ ಮ್ಯಾಜಿಸ್ಟ್ರೇಟ್ ಕೋರ್ಟನ್ನೂ ಎಲೆಕ್ಟ್ರಿಕ್ ಲೈಟನ್ನೂ ಹೊಸನಗರಕ್ಕೆ ಸಮೀಪದಲ್ಲಿ ಒಂದು ರೈಲ್ವೆ ಸ್ಟೇಷನ್ನೂ ಸಹ ದಯಪಾಲಿಸಬೇಕೆಂದು ಪ್ರಾರ್ಥಿಸಿದ್ದಕ್ಕೆ ಆದಷ್ಟು ಜಾಗ್ರತೆ ಕೊಡುವುದಾಗಿ ಅಪ್ಪಣೆಕೊಡಿಸಿ ಮೈಸೂರಿಗೆ ೧೦ ಘಂಟೆಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಚಳ್ಳಕೆರೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳವರ ದಸರಾಮಹೋತ್ಸವ ದರ್ಬಾರ್ ಮಂಟಪದಲ್ಲಿ ತಾ|| 29-9-33 ನೇ ಸಾಯಂಕಾಲದಲ್ಲಿ ನಡೆದ ವಿದ್ವತ್ಸಭೆಯಲ್ಲಿ ಚಳ್ಳಕೆರೆ ತಾಲ್ಲೂಕು ವೀರಶೈವ ಮಂಡಲಿಯ ಪರವಾಗಿ ನಗರಂಗೆರೆ ಮಠದ ಶಿವಲಿಂಗಯ್ಯನವರು ಜೋಡುಗಡಗ ಸಜ್ಜನರಲ್ಲಿರುವ ಕನ್ಯಾಶುಲ್ಕವನ್ನು ತಪ್ಪಿಸಿದರೆ ಆ ಜನರ ಉನ್ನತಿಗೆ ಕಾರಣವಾಗುತ್ತದೆಂದು ಹೇಳಿದರು. ಇವರಲ್ಲಿ ಐದು ಗಡಗದ ಸಜ್ಜನರು ಒಪ್ಪಿದರು. ಗ್ರಾಮಾಂತರದ ಮಠಾಧಿಕಾರಿಗಳಿಗೆ ಸೂತಕಾಚಾರ ಶುದ್ಧಿಕಾರ್ಯಗಳಲ್ಲಿಯೂ ಇತರ ಸಣ್ಣಪುಟ್ಟ ವಿಚಾರಗಳಲ್ಲಿಯೂ ಸಂಸ್ಥಾನದವರ ವತಿಯಿಂದ ನಡೆಸಲು ಅಧಿಕಾರವನ್ನು ಕೊಡಬೇಕೆಂದೂ ಈ ತಾಲೂಕಿನಲ್ಲಿ ಹತ್ತುಸಾವಿರ ಜನ ಮೇಲ್ಪಟ್ಟು ವೀರಶೈವ ಜನ ಸಂಖ್ಯೆಯಿದ್ದಾಗ್ಯೂ ವಿದ್ಯಾಭ್ಯಾಸಕ್ಕೆ ಅನುಕೂಲ ಇಲ್ಲದಿರುವದರಿಂದ ತುಂಬಾ ಹೀನಸ್ಥಿತಿಯಲ್ಲಿರುತ್ತಾರೆಂದೂ, ಇಲ್ಲಿ ಅಪೂರ್ಣವಾಗಿರುವ ಹಾಸ್ಟಲ್ ಕಾರ್ಯವನ್ನು ತ್ವರಿತದಲ್ಲಿ ಪೂರೈಸಲು ಮಹಾಸ್ವಾಮಿಗಳವರನ್ನು ಪ್ರಮುಖರು ಪ್ರಾರ್ಥಿಸಿದರು. ಅನಂತರ ಮಹಾಸ್ವಾಮಿಗಳು ಇವನ್ನೆಲ್ಲಾ ಕ್ರೋಢೀಕರಿಸಿ ಮಠಾಧಿಕಾರಿಗಳು ಸಂಸ್ಥಾನದ ಪ್ರತಿನಿಧಿಗಳಾಗಿ ಪಂಚಾಚಾರ್ಯರ ಉದ್ದೇಶವನ್ನು ಕಾಪಾಡತಕ್ಕವರಾಗಿರುವದರಿಂದ ಸಂಸ್ಥಾನದ ದಸ್ತುರು ಪ್ರಕಾರ ನಡೆಸಬಹುದೆಂದೂ ಈ ಟವುನ್ನಲ್ಲಿ ಅರ್ಧಾಂಶವಾಗಿರುವ ವೀರಶೈವ ಹಾಸ್ಟಲನ್ನು ಪೂರೈಸುವದು ತಮ್ಮ ಮುಖ್ಯೋದ್ದೇಶ್ಯವೆಂದೂ ಅದಕ್ಕಾಗಿ ಪ್ರತ್ಯೇಕ ಒಂದು ಸಾವಿರ ರೂಪಾಯಿಗಳನ್ನು ಚಳ್ಳಕೆರೆಯವರು ಕೇಳದಕೂಡಲೆ ದಯಪಾಲಿಸುವದಾಗಿ ಅಪ್ಪಣೆಕೊಡಿಸಿದರು.

ಮತಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಚೌಲಕರ್ಮ.

ವಿಜಾಪುರ ಜಿಲ್ಲಾ ಚಿಮ್ಮಲಗಿ ಗ್ರಾಮದ ಮ|| ಭೀಮಗೌಡ ಮುದಿಗೌಡ ಹಿರೇಗೌಡರ ಪಾಟೀಲ ಇವರು ಮತ್ತು ಇವರ ಗರ್ಭವತಿಯರಾದ ಪತ್ನಿಯವರು ಪೂರ್ವದಲ್ಲಿ ವಿಶೇಷ ಅಜಾರಿ ಇದ್ದ ಕಾಲಕ್ಕೆ ಇವರ ತಮ್ಮಂದಿರಾದ ನನ್ನ ತೀ|| ಸಿದ್ದಲಿಂಗಗೌಡರು ನಮ್ಮ ವಂಶೋದ್ಧಾರಕ ಗುರುಗಳಾದ ಶ್ರೀ|| ಷ|| ಬ್ರ|| ಶಾಂತವೀರಪಟ್ಟದಸ್ವಾಮಿಗಳು ಕಟ್ಟಿಮನಿ ಅರಳೀಮರ, ಚಿಮ್ಮಲಗಿ ವ ವಿಜಾಪುರ ಇವರಲ್ಲಿ ರೋಗದ ವಿಷಯವನ್ನು ಹೇಳಿಕೊಳ್ಳಲು ಶ್ರೀ ಸ್ವಾಮಿಗಳವರು "ನಮ್ಮ ಮೂಲಾಚಾರ್ಯರಾದ ಶ್ರೀ ಜಗದ್ಗುರು ರೇಣುಕರ ಕೃಪಾಬಲದಿಂದ ಅವರೀರ್ವರೂ ಆರೋಗ್ಯವನ್ನು ಪಡೆದು ಪುತ್ರೋತ್ಸವವಾಗುವದೆಂದೂ, ಜನಿಸಿದ ಪುತ್ರನ ಜವಳದ ಕಾರ್ಯವನ್ನು ಶ್ರೀ ಜಗದ್ಗುರುವಿನ ಸನ್ನಿಧಿಯಲ್ಲಿ ನೆರವೇರಿಸಬೇಕೆಂದೂ ಹೇಳಿ ಧರಿಸಿಕೊಳ್ಳಲಿಕ್ಕೆ ಭಸ್ಮವನ್ನು ಆಶೀರ್ವದಿಸಿದರು. ಗುರುಗಳ ಅನುಜ್ಞೆಯಂತೆ ಆಚರಿಸುತ್ತ ಬರಲು ಶ್ರೀ ಜಗದ್ಗುರು ರೇಣುಕರ ಕೃಪಾಬಲದಿಂದ ದಂಪತಿಗಳಿಗೆ ಆರೋಗ್ಯವುಂಟಾಯಿತು. ಪುತ್ರನೂ ಜನಿಸಿದನು. ಮೊದಲು ಸಂಕಲ್ಪಿಸಿದಂತೆ ಶ್ರೀ ಜಗದ್ಗುರು ರೇಣುಕರ ಸನ್ನಿಧಿಯಲ್ಲಿ ಜವಳದ ಕಾರ್ಯವನ್ನು ಜರಗಿಸಲು ಅನನುಕೂಲತೆಯಿಂದ ಆಗಿದ್ದಿಲ್ಲ. ಶ್ರೀ ರಂಭಾಪುರೀ ಜಗದ್ಗುರುಗಳವರ ದಸರಾಮಹೋತ್ಸವವು ಚಿತ್ರದುರ್ಗ ಡಿಸ್ಟ್ರಿಕ್ಟ್ ಚಳ್ಳಕೆರೆ ತಾಲೂಕಿನಲ್ಲಿ ನೆರವೇರುವದೆಂದು ತಿಳಿದು ಬಂದುದರಿಂದ ನಮ್ಮ ಗುರುಗಳೊಡನೆ ಚಿ|| ರೇವಣಸಿದ್ಧ ಬಾಲಕನನ್ನು ಕರೆದುಕೊಂಡು ಹೋಗಿ ಜಗದ್ಗುರುಗಳವರ ಅಪ್ಪಣೆಯನ್ನು ಪಡೆದು ಅವರ ಸನ್ನಿಧಾನದಲ್ಲಿ ಜವಳದ ಕಾರ್ಯವು ನೆರವೇರಿಸಲ್ಪಟ್ಟಿತು. ಮಹಾಗುರುಗಳವರು ಬಾಲಕನಿಗೂ ಆತನ ಮಾತಾಪಿತೃಗಳಿಗೂ ಚಿರಾಯುರಾರೋಗ್ಯಭಾಗ್ಯವುಂಟಾಗಲೆಂದು ಆಶೀರ್ವದಿಸಿದರು. ಈ ಶುಭಸಮಯದಲ್ಲಿ ಮತೋದ್ಧಾರಕವಾದ ಪ್ರಭಾಪತ್ರಿಕೆಗೆ ಎರಡು ರೂಪಾಯಿಗಳು ಸಮರ್ಪಿಸಲ್ಪಟ್ಟವು. ಶ್ರೀ ಜಗದ್ಗುರುಗಳವರ ಕೃಪೆಯು ನಮ್ಮ ಮನೋರಥದಮೇಲೆ ಪೂರ್ಣವಾಗಿರಬೇಕೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇನೆ.

ಪರ್ವತಗೌಡ ಸಿ. ಪಾಟೀಲ.

ಶ್ರೀ ರೇಣುಕ ಮಹಾಪುರಾಣ ಮತ್ತು ಗಣಪತಿ ಉತ್ಸವ.

ಬೀರೂರು

ಶ್ರೀ ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯರವರ ಅಮೃತಹಸ್ತದಿಂದ ಬೀರೂರು ಶ್ರೀ ಶಿವಾನಂದಾಶ್ರಮವನ್ನು ಸ್ಥಾಪಿಸಿದ ನರಸಿಂಹರಾಜಪುರದ ಇಂ. ಸಿ. ಶಾಂತಪ್ಪ ಶೆಟ್ಟರು ಆಚಾರ್ಯ ಸೇವಾಪರರ ಧರ್ಮಪ್ರವರ್ತಕ, ಇವರು ಬೀರೂರಿನ ತಮ್ಮ ಗೃಹದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ಶ್ರಾವಣ ಮಾಸದಲ್ಲಿ ತಮ್ಮ ಆಶ್ರಮದ ಅಧ್ಯಾಪಕರಾದ ದೊಡ್ಡಗುಣಿಮಠದ ಷ. ಬ್ರ. ಪಟ್ಟದ ಗುರುಲಿಂಗಸ್ವಾಮಿಗಳವರಿಂದ ಪ್ರತಿದಿವಸವು ರುದ್ರಾಭಿಷೇಕ ಶಿವಸಹಸ್ರನಾಮಪಾರಾಯಣ ಮತ್ತು ಸಾಯಂಕಾಲ ಶ್ರೀ ಜಗದ್ಗುರು ರೇಣುಕವಿಜಯ ಪುರಾಣವನ್ನು ಹೇಳಿಸುತ್ತ ಸತ್ಕಾಲಕ್ಷೇಪವನ್ನು ಮಾಡುತ್ತ ಶ್ರಾವಣ ಅಖೈರಿನಲ್ಲಿ ಸಂತರ್ಪಣೆಮಾಡಿಸಿ ಭೂರಿದಕ್ಷಿಣೆ ವಸ್ತ್ರದಾನಾದಿಗಳಿಂದ ತೃಪ್ತಿಪಡಿಸಿದ್ದಲ್ಲದೆ ಭಾದ್ರಪದಮಾಸದಲ್ಲಿ ತಮ್ಮ ಮನೆಯಲ್ಲಿ ಇರಿಸಿದ ಗೌರೀಗಣಪತಿಗಳನ್ನು ಬಿಡುವಾಗ ತಮಗೆ ಬೇಕಾದ ದೊಡ್ಡ ಮನುಷ್ಯರನ್ನು ಕರೆಯಿಸಿ ಭೋಜನಾದಿಗಳಿಂದ ಸಂತೋಷಪಡಿಸಿದರು. ಮತ್ತು ಶ್ರೀ ಶಿವಾನಂದಾಶ್ರಮದಲ್ಲಿಯೂ ವಿದ್ಯಾರ್ಥಿಗಳಿಂದ ಗಣಪತಿಯನ್ನು ೯ ದಿವಸಗಳವರೆಗೆ ಇಡಿಸಿ ಪೂಜಾವಿನಿಯೋಗ ನಡೆಸಿ ಕಡೆ ದಿವಸದಲ್ಲಿ ಸಂತರ್ಪಣೆಮಾಡಿಸಿ ಸಾಯಂಕಾಲವೇಳೆ ಗ್ರಾಮದ ಮುಖಂಡರು ಸ್ಕೂಲು ಹೆಡ್‌ಮಾಸ್ತರು ಮೊದಲಾದವರನ್ನು ಬರಮಾಡಿಕೊಂಡು ಗಂಧತಾಂಬೂಲ ಫಲಾಹಾರಾದಿಗಳಿಂದ ತೃಪ್ತಿಪಡಿಸಿದರು. ವಿದ್ಯಾರ್ಥಿಗಳು ಪಂಚಾಚಾರ್ಯ ಭಜನಾಪೂರ್ವಕ ಗಣಪತಿ ಮತ್ತು ರೇಣುಕವಿಜಯಪುರಾಣ ಉತ್ಸವವನ್ನು ನಡೆಯಿಸಿದರು. ಈಗ ಆಶ್ರಮದಲ್ಲಿ ೧೪ ಜನ ವಿದ್ಯಾರ್ಥಿಗಳು ಓದುತ್ತಲಿದ್ದಾರೆ. ಶ್ರೀ ಗುರುವಿನ ಆಶೀರ್ವಾದದ ಕೃಪೆಯಿಂದ ಇಂಗ್ಲೀಷು ಕನ್ನಡ ಸಂಸ್ಕೃತ ಪಾಠಗಳು ನಡೆಯುತ್ತ ದಿನೇದಿನೇ ಈ ಪಾಠಶಾಲೆಯು ವೃದ್ಧಿಹೊಂದುತ್ತಾ ಇದೆ. ಇಂಥ ಧರ್ಮಕರ್ತರಾದ ಈ ಮಹನೀಯರಿಗೆ ಶ್ರೀ ಗುರುವು ಆಯುರಾರೋಗ್ಯಭಾಗ್ಯವನ್ನು ಕೊಡಲೆಂದು ಹಾರೈಸುವ.

ಓರ್ವ ವಿದ್ಯಾರ್ಥಿ.

ಪಂಚಾಚಾರ್ಯ ಪ್ರಭಾ.

೧೯೩೩ನೇ ಅಕ್ಟೋಬರ್ ತಾ|| ೧೬ನೇ ಸೋಮವಾರ.

28-1-74

ಲಿಂಗಧಾರಣದ ಉದ್ದೇಶ.

ವೀರಶೈವಮತದಲ್ಲಿ ಇತ್ತೀಚೆಗೆ ಕೆಲ ಜನ ಅನ್ಯ[illegible] ಅಲಿಂಗಿಗಳನ್ನು ಲಿಂಗಿಗಳನ್ನಾಗಿ ಮಾಡಬೇಕೆಂದು ನುಡಿಯುವ ಒಡಕು ಶಬ್ದವು ಅಲ್ಲಲ್ಲಿಯೇ ಕೇಳಿಬರುತ್ತಲಿದೆ. ಈ ಅಮಂಗಲಶಬ್ದವು ಧಾರ್ಮಿಕರಾದ ಜನಗಳ ಕಿವಿಗಳಿಗೆ ಅಶ್ರಾವ್ಯವಾಗಿರುತ್ತದೆ. ಒಂದು ಮತವನ್ನು ಬಿಟ್ಟು ಒಂದು ಮತಕ್ಕೆ ಸೇರಬೇಕಾದರೆ ಕೇವಲ ಮೋಕ್ಷವೆಂಬ ಮಹಾಸ್ಥಾನವನ್ನು ಹೊಂದುವ ಉದ್ದೇಶದಿಂದಲೇ ಸೇರಬೇಕಲ್ಲದೆ ಇನ್ನಾವ ಉದ್ದೇಶದಿಂದಲೂ ಸೇರಲಾಗದು. ಸೇರಿಸಿಕೊಳ್ಳುವವನು ಸಹ ಪಾರಮಾರ್ಥಿಕಶಕ್ತಿಯನ್ನು ಪಡೆದಿರಬೇಕಾಗುತ್ತದೆ. ಏಕೆಂದರೆ—"ಸ್ವಯಂತೀರ್ಣಃ ಪರಾನ್ ತಾರಯತಿ" ತಾನು ಈ ಭವಸಮುದ್ರವನ್ನು ದಾಟುವುದರಲ್ಲಿ ಸಮರ್ಥನಾದರೆ ಇನ್ನೊಬ್ಬರನ್ನು ತಕ್ಕ ಉಪಾಯದಿಂದ ದಾಟಿಸುತ್ತಾನೆ. ತಾನೇ ಕಾಮಕ್ರೋಧಾದಿಗಳಿಂದ ದೂಷಿತನಾಗಿದ್ದರೆ ಇನ್ನೊಬ್ಬರ ಕಾಮಕ್ರೋಧಾದಿಗಳನ್ನು ಹೋಗಲಾಡಿಸುವನೆಂಬುದು ಹಾಸ್ಯಾಸ್ಪದವು! ಏಕೆಂದರೆ—ಇಂದ್ರಿಯಜಯವಿಲ್ಲದಿದ್ದವನು ಜ್ಞಾನಿಯಾಗಲಾರನು; ಜ್ಞಾನಿಯಾಗದಿದ್ದವನು ಮೋಕ್ಷಾಧಿಕಾರಿಯೆನಿಸಿಕೊಳ್ಳಲಾರನು. ಉಪದೇಶಮಾಡುವವನಿಗಾಗಲಿ ಉಪದೇಶಪಡೆಯುವವನಿಗಾಗಲಿ ಪ್ರಥಮತಃ ಇಂದ್ರಿಯ ಜಯವೇ ಮುಕ್ತಿಮೂಲವು. ಇಂದ್ರಿಯ ಜಯವನ್ನು ಹೊಂದಿದವನು ಯಾವ ಮತದಲ್ಲಿಯಾದರೂ ಪುರುಷಾರ್ಥವನ್ನು ಪಡೆಯಬಲ್ಲನು. ಇಂದ್ರಿಯ ಜಯವಿಲ್ಲದವನು ಎಂಥ ಉತ್ಕೃಷ್ಟಮತವನ್ನು ಆಶ್ರಯಿಸಿದ್ದರೂ ಪುರುಷಾರ್ಥವನ್ನು ಪಡೆಯಲಾರನು. ಆದುದರಿಂದ ಸಾಮಾನ್ಯವಾಗಿ ಸಕಲೇಂದ್ರಿಯಜಯವೇ ಜ್ಞಾನಸಾಧನವಲ್ಲದೆ ಕೇವಲ ಒಂದು ಮತವನ್ನು ಬಿಡಿಸಿ ಇನ್ನೊಂದು ಮತಕ್ಕೆ ಸೇರಿಸಿಕೊಂಡ ಮಾತ್ರದಿಂದ ಜ್ಞಾನವು ಸಿದ್ಧಿಸುವುದಿಲ್ಲ.

ಇಂದ್ರಿಯಾಣಾಂ ತು ಸರ್ವೇಷಾಂ ಯದ್ಯೇಕಂ ಕ್ಷರತೀಂದ್ರಿಯಂ|
ತೇನಾಸ್ಯ ಕ್ಷರತಿ ಪ್ರಜ್ಞಾ ದೃತೇಃ ಪಾದಾದಿವೋದಕಂ ||

ಚರ್ಮದ ತಿತ್ತಿಯೊಳಗೆ ಬೇಕಾದಷ್ಟು ನೀರು ತುಂಬಿದ್ದರೂ ಆ ತಿತ್ತಿಯ ಯಾವುದಾದರೂ ಒಂದು ಭಾಗದಲ್ಲಿ ಒಂದು ಸೂಜಿಯ ಕೊನೆಯಷ್ಟು ತೂತುಬಿದ್ದರೆ ಆ ತೂತಿನ ದ್ವಾರಾ ಒಳಗಿರುವ ನೀರೆಲ್ಲಾ ಸುರಿದುಹೋಗುವಂತೆ, ಆ ಇಂದ್ರಿಯ ದ್ವಾರಾ ತಾನು ಅರ್ಜಿಸಿದ ಜ್ಞಾನವೆಂಬ ತಿಳಿನೀರೆಲ್ಲಾ ಸುರಿದುಹೋಗಿ ಬರಿ ಒಡಕು ಶರೀರವು ಮಾತ್ರ ಉಳಿಯುತ್ತದೆಂದು ಧರ್ಮಶಾಸ್ತ್ರಕಾರರು ಇಂದ್ರಿಯಜಯಕ್ಕೆ ಬಹಳ ಮುಖ್ಯತ್ವವನ್ನು ಕೊಟ್ಟಿದ್ದಾರೆ. ಹೀಗಿದ್ದರೂ ನಾವು ಜ್ಞಾನಿಗಳು, ಇಂದ್ರಿಯ ಜೀತಗಳು, ಪಂಡಿತೋತ್ತಮರು ಎಂದು ಹೇಳಿಕೊಂಡು ಏನೊಂದೂ ತಿಳಿಯದ ಮೂಢಜನಗಳಲ್ಲಿ ನುಗ್ಗಿ ನಿನ್ನನ್ನು ಮೋಕ್ಷಕ್ಕೇರಿಸುವೆನೆಂದು ಮಂಕುಬೂದಿಯನ್ನೆರಚಿ ಆತನಿಂದ ಅಲ್ಪಸ್ವಲ್ಪ ಧನವನ್ನು ಸೆಳೆದುಕೊಂಡು ದೀಕ್ಷೆಯನ್ನು ಮಾಡಿಸಿದಂತೆ ಮಾಡಿ ಲಿಂಗವನ್ನು ಆತನ ಕೊರಳಿಗೆ ಬಿಗಿಯುವರು. ಇಷ್ಟುಮಾತ್ರದಿಂದ ಆತನ ಚಿತ್ತವು ಎಂದಿನಂತೆ ಮೌಢ್ಯದಿಂದೊಡಗೂಡಿರುವುದಲ್ಲದೆ ಯಾವ ವಿಧನಾದ ಬದಲಾವಣೆಯೂ ಆಗಲಾರದು. ಬಾಯಿಯಲ್ಲಿ ನಾನು ವೀರಶೈವನಾದೆನೆಂದು ವಿಜೃಂಭಿಸುತ್ತಿರುವಷ್ಟರೊಳಗಾಗಿ ತನ್ನ ಪೂರ್ವಮತದ ಗುರುವು ಈ ಸಮಾಚಾರವನ್ನು ಕೇಳಿ, ಓ ನನ್ನ ಶಿಷ್ಯನು ಮತ್ತೊಬ್ಬನಿಗೆ ಶಿಷ್ಯನಾದನಲ್ಲ? ಎಂಬ ಆಗ್ರಹಗೊಂಡವನಾಗಿ ಪುನಃ ತನ್ನ ಮತದ ಪ್ರಾಶಸ್ತ್ಯವನ್ನು ಬೋಧಿಸಿ ಲಿಂಗವಿಸರ್ಜನಮಾಡಿಸಿ ಪುನಃ ತನ್ನ ಮತದ ದೀಕ್ಷೆಯನ್ನು ಕೊಡುತ್ತಾನೆ. ಹೀಗೆ ಎಷ್ಟೋ ಕಡೆಗಳಲ್ಲಿ ನಡೆದೇ ಇರುತ್ತದೆ.

ಆದ್ದರಿಂದಲೇ ಪೂರ್ವಕಾಲದಲ್ಲಿ ಒಂದು ಮತದವರನ್ನು ಇನ್ನೊಂದು ಮತಕ್ಕೆ ಸೇರಿಸಬೇಕಾದರೆ ಬ್ರಾಹ್ಮಣನಾದವನನ್ನು ಮೂರುವರ್ಷಗಳ ವರೆಗೂ, ಕ್ಷತ್ರಿಯನಾದವನನ್ನು ಆರುವರ್ಷಗಳ ವರೆಗೂ, ವೈಶ್ಯನಾದವನನ್ನು ಒಂಭತ್ತು ವರ್ಷಗಳ ವರೆಗೂ, ಶೂದ್ರನಾದವನನ್ನು ಹನ್ನೆರಡು ವರ್ಷಗಳವರೆಗೂ ಪರೀಕ್ಷಿಸಿ ಅವನು ಎಲ್ಲಾ ಧರ್ಮಿಕ ಭಾಗಗಳಲ್ಲಿಯೂ ಉತ್ತೀರ್ಣನಾಗುವದು ನಿಶ್ಚಯವಾಗಿ ಕಂಡುಬಂದರೆ ಅಂಥವನಿಗೆ ಅವನ ಜಾತಿಗನುಗುಣವಾಗಿ ಮತದೀಕ್ಷೆಯನ್ನು ಕೊಟ್ಟು ತತ್ತ್ವವನ್ನುಪದೇಶಿಸುತ್ತಿದ್ದರು. ಧರ್ಮಶಾಸ್ತ್ರಗಳೂ ಸಹ ಇದೇ ಅಭಿಪ್ರಾಯವನ್ನೇ ಉದ್ಘೋಷಿಸುತ್ತಿರುವವು. ಈಗಿನ ಕಾಲದಲ್ಲಿ ಉಪದೇಶವೆಂದರೆ ಅರಳಿಗಿಂತಲೂ ಹಗುರಾಗಿ ಹೋಗಿರುವುದರಿಂದ ಇದರ ಸತ್ವವೇ ನಷ್ಟೋನ್ಮುಖವಾಗುತ್ತ ಬಂದಿದೆ.

ಯಾವನು ನಿತ್ಯಾನಿತ್ಯವಸ್ತುವಿವೇಕಾದಿಸಾಧನಚತುಷ್ಟಯ ಸಂಪನ್ನನಾಗಿ ಚಿತ್ತಪರಿಪಾಕವನ್ನು ಪಡೆದಿರುತ್ತಾನೆಯೋ ಅಂಥವನಿಗೇನೇ ಉಪದೇಶವನ್ನು ಕೊಡಬೇಕಲ್ಲದೆ ಅನ್ಯರಿಗೆ ಕೊಡಕೂಡದು. ಅನಧಿಕಾರಿಗಳಾದವರಿಗೆ ಉಪದೇಶವನ್ನು ಕೊಟ್ಟರೆ ಆ ಉಪದೇಶವನ್ನು ಅವರಿಂದೂ ಉಳಿಸಿಕೊಳ್ಳಲಾರರು. ಮಳೆಗರೆದ ಮೇಲೆ ಭೂಮಿಯು ತನ್ನಲ್ಲಿರುವ ಕಾಠಿಣ್ಯವನ್ನು ಬಿಟ್ಟು ಮೃದುಸ್ವಭಾವವನ್ನು ಎಂದು ಪಡೆಯುತ್ತದೆಯೋ ಅಂಥ ಭೂಮಿಯನ್ನು ವ್ಯವಸಾಯಗಾರನು ಉತ್ತು ಕಾಲವರಿತು ಬೀಜವನ್ನು ಬಿತ್ತಿ ಸದಾ ರಕ್ಷಣಪರನಾಗಿದ್ದರೆ ಆ ಬೀಜವು ಯಾವ ಕ್ರಿಮಿಗಳ ಬಾಧೆಗೂ ಸಿಕ್ಕದೆ ಚನ್ನಾಗಿ ಫಲಿಸಿ ಕೃಷೀವಲನ ಮನೆಯು ಧಾನ್ಯರಾಶಿಯಿಂದ ತುಂಬುತ್ತದೆ. ಅದಿಲ್ಲದೆ ಕಠಿಣವಾದ ಯಾವುದೋ ಒಂದು ಅಸಂಸ್ಕೃತವಾದ ಭೂಮಿಗೆ ಬೀಜವನ್ನು ಬಿತ್ತಿದರೆ ಅದರಿಂದ ಪ್ರಯೋಜನವೇನು? ಏನೊಂದೂ ತಿಳಿಯದ ಕಾಡುಮನುಷ್ಯರಂತಿರುವ ಕೇವಲ ಮೂಢಜನಗಳಲ್ಲಿ ಹೋಗಿ ದುರಾಶೆಗಾಗಿ ಮತದೀಕ್ಷೆಯನ್ನು ಕೊಟ್ಟರೆ ಆ ಮತದೀಕ್ಷೆಯು ಅವರನ್ನೆಂದೂ ರಕ್ಷಿಸುವುದಿಲ್ಲ. ಮತ್ತು ತನ್ನಲ್ಲಿರುವ ಧಾರ್ಮಿಕಶಕ್ತಿಯನ್ನು ಅಲ್ಪ ಲಾಭಕ್ಕಾಗಿ ಮಾರಾಟ ಮಾಡಿದಂತಾಗುವದು. ಲೋಕದಲ್ಲಿ ಇಂಥ ನೂತನಗುರುಶಿಷ್ಯಭಾವವನ್ನು ಗಳಿಸುವುದಕ್ಕಿಂತ ಗಳಿಸದೆ ಇರುವುದೇ ಮೇಲು. ವೇದಾಗಮಾದಿಶಾಸ್ತ್ರಗಳನ್ನೋದಿದ ಪಂಡಿತೋತ್ತಮರ ಹೃದಯವು ಉಪದೇಶ ಬೀಜವನ್ನು ಬಿತ್ತುವುದಕ್ಕೆ ಯೋಗ್ಯವಾದುದರಿಂದ ಅಂಥವರಲ್ಲಿ ಬೋಧಿಸಿ, ತಮ್ಮ ಮಹತ್ತ್ವಾತಿಶಯಗಳನ್ನು ಪ್ರಕಟಿಸಿ ಹಿಂದಿನ ಮಹಾತ್ಮವರ್ಗದಲ್ಲಿ ಸೇರಿಕೊಳ್ಳಲಿ; ಅದಿಲ್ಲದೆ ಬಳ್ಳಿಯಂತೆ ಎತ್ತಬೇಕಾದರೂ ಬಗ್ಗುವ ಸ್ವಭಾವವುಳ್ಳ ಅನಧಿಕಾರಿಗಳಿಗೆ ಮತದೀಕ್ಷೆಕೊಟ್ಟರೆ ನಾಳೆ ಇನ್ನೊಬ್ಬ ಪ್ರಬಲನು ಬಂದರೆ ಆ ಮತದ ದೀಕ್ಷೆಯನ್ನು ತೆಗೆದುಕೊಳ್ಳುವರು. ಅಂತೂ ಇಂತು ಅವರ ಜನ್ಮದಲ್ಲೆಲ್ಲಾ ಮೋಕ್ಷಭ್ರಾಂತಿಯಿಂದ ಅತ್ತಿತ್ತ ಅಲೆದಾಡಬೇಕಾಗುವುದೇ ಹೊರತು ನೆಮ್ಮದಿಯೆಂಬುದೇ ಇಲ್ಲದಂತಾಗುವದು.

ಈಗ ಕೆಲವು ವರ್ಷಗಳಲ್ಲಿ ಪೂರ್ವದಲ್ಲಿ ಕೆಲವರು ದುಡ್ಡಿನಾಶೆಗಾಗಿ ಲಿಂಗವನ್ನು ಕಟ್ಟಿದರು. ಸ್ವಲ್ಪದಿವಸಗಳೊಳಗಾಗಿಯೇ ಅವರೆಲ್ಲರೂ ಮತ್ತೊಬ್ಬನ ಉಪನ್ಯಾಸ ಸಾಮರ್ಥ್ಯದಿಂದ ಲಿಂಗಗಳನ್ನೆಲ್ಲಾ ತೆಗೆದು ಹಾಕಿ ತಮ್ಮ ಪೂರ್ವಮತಕ್ಕೇನೆ ಸೇರಿಸಿಕೊಂಡು ಮೊದಲಿನ ರಂಗಪ್ಪ ವೆಂಕಪ್ಪ ಎಂಬ ಹೆಸರನ್ನೇ ಭದ್ರಗೊಳಿಸಿದರೆಂಬುದು ಎಲ್ಲರಿಗೂ ತಿಳಿದಿರಬಹುದು. ಇದು ಹಳ್ಳಿಯಿಂದ ಹಳ್ಳಿಗೆ ಹೋಗಿ ಜಾತ್ರೆಯಲ್ಲಿ ನೆರೆದಿರುವ ದೀನಪ್ರಜೆಗಳಿಗೆ ಪಾದ್ರಿಗಳು ಉಪದೇಶಮಾಡಿದಂತಾಗುತ್ತದೆ. ಹಿಂದಿನ ಅಘಟನಘಟನ ಶಕ್ತಿಯುಳ್ಳ ಮಹಾತ್ಮರಾರೂ ಇಂಥ ಕ್ಷಣಿಕವಾದ ಕಾರ್ಯವನ್ನು ಮಾಡಲಿಲ್ಲ. ಅವರು ಮಾಡಿದ ಕಾರ್ಯವೆಲ್ಲವೂ ಅಚಳಿಯದಂತೆ ಈಗಲೂ ಉಳಿದುಕೊಂಡೇ ಬಂದಿರುತ್ತವೆ. ಅವರು ಕಟ್ಟಿದ ಮನೆಯನ್ನು ರಿಪೇರಿಮಾಡಿ ಉಳಿಸಿಕೊಂಡರೆ ಸಾಕಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರು ರಚಿಸಿರುವ ವೀರಶೈವ ಧಾರ್ಮಿಕಮಂದಿರವು ಕೆಲಜನ ಶೂದ್ರಜಾತಿಯ ಲಿಂಗಧಾರಿಗಳಿಂದ ಶಿಥಿಲವಾಗುತ್ತ ಬಂದಿರುವುದರಿಂದ ಧಾರ್ಮಿಕ ಸೂತ್ರವನ್ನು ಕೈಯಲ್ಲಿ ಹಿಡಿದುಕೊಂಡಿರುವ ಗುರುವಂಶೀಯರು ಆಚಾರ್ಯನಿರ್ಮಿತವಾದ ವೀರಶೈವಮತದಲ್ಲಿ ಅನೂಚಾನವಾಗಿ ಬಂದಿರುವವರನ್ನು ಸರಿಪಡಿಸಿಕೊಳ್ಳುವುದರಲ್ಲಿ ಆಸಕ್ತರಾಗಿ ವರ್ಣಾಶ್ರಮಧರ್ಮಗಳು ನಾಶವಾಗದಂತೆ ಜಾಗರೂಕರಾಗಿ ವರ್ತಿಸಬೇಕೆಂದು ಕೋರುತ್ತೇನೆ.

ಒಳದೇಶದ ವೃತ್ತಾಂತಗಳು.

ಈಗ್ಗೆ ಕೆಲವು ದಿವಸಗಳ ಹಿಂದೆ ಗುಬ್ಬಿ ತಾಲೂಕು ಸಿಂಗನಹಳ್ಳಿ ಗ್ರಾಮದ ಸಮೀಪದಲ್ಲಿ ಒಂದು ಮೋಟಾರು ಬಸ್ಸು ಕಲ್ಲಿಗೆ ಬಡಿದು ಡ್ರೈವರು ಕೂಡಲೇ ಮೃತಪಟ್ಟನೆಂದೂ, 5-6 ಜನರಿಗೆ ತುಂಬಾ ಗಾಯಗಳಾದವೆಂದೂ ತಿಳಿದುಬಂದಿದೆ.

ದಸರಾ ಗಲಭೆಯ ಮೊಕದ್ದಮೆಗಳಲ್ಲಿ ಅಪಾದಿತರಾಗಿರುವ ಕೆಲವರು ಕೆಲವು ದಿವಸಗಳ ಹಿಂದೆ ಅಡ್ವೊಕೇಟ್ ಮ|| ರಾ|| ಕೆ. ಶೇಷಾದ್ರಿಯವರ ಮುಂದಾಳುತನದಲ್ಲಿ ದಿವಾನರವರಲ್ಲಿಗೆ ಹೋಗಿ ತಮ್ಮ ಮೇಲೆ ನಡೆಯುತ್ತಿರುವ ಮೊಕದ್ದಮೆಗಳನ್ನು ಇನ್ನು ಮುಂದುವರಿಸದೆ ಹಿಂದಕ್ಕೆ ತೆಗೆದುಕೊಂಡು ಕ್ಷಮಿಸಬೇಕೆಂದು ವಿಜ್ಞಾಪಿಸಿಕೊಂಡರೆಂದೂ ದಿವಾನರವರು ಆ ವಿಷಯವಾಗಿ ತಾವು ಆಲೋಚನೆಮಾಡಿ ಅರ್ಡರನ್ನು ಕಳುಹಿಸುವದಾಗಿ ಹೇಳಿದರೆಂದೂ ತಿಳಿದುಬಂದಿದೆ.

ಇದೇ ಅಕ್ಟೋಬರು 14 ನೇ ತಾರೀಖು ಶನಿವಾರ ಬೆಳಗ್ಗೆ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾನ್ವೋಕೇಷನ್ (ಪದವೀಪ್ರದಾನ) ಸಭೆಯು ನೆರವೇರಿತು. ರಾವ್‌ಬಹದ್ದೂರ್ ಎಸ್. ಇ. ರಂಗನಾಥಂರವರು ನೂತನ ಪದವೀಧರರನ್ನು ಕುರಿತು ಭಾಷಣವನ್ನು ಮಾಡಿದರು. ಪಾಸಾದವರಲ್ಲಿ 39 ಜನ ಎಂ.ಎ., 21 ಜನ ಬಿ.ಎ. ಆನರ್ಸ್ 120 ಜನ ಬಿ.ಎ., 47 ಜನ ಬಿ.ಟಿ., 38 ಜನ ಎಂ.ಎಸ್‌ಸಿ., 43 ಜನ ಬಿ.ಎಸ್‌ಸಿ. ಆನರ್ಸ್, 102 ಜನ ಬಿ.ಎಸ್‌ಸಿ., 32 ಜನ ಬಿ.ಇ., 8 ಜನ ಎಂ.ಬಿ.ಬಿ.ಎಸ್.

ಅರಸೀಕೆರೆ ತಾಲೂಕು ಹಾರ್ನಹಳ್ಳಿಯ ಪ್ರೈಮರಿ ಬಾಯ್ಸ್ ಸ್ಕೂಲಿನಲ್ಲಿ ಒಂದು ಪುಸ್ತಕವು ಕಳುವಾಗಲು ಸ್ಕೂಲಿನ ಉಪಾಧ್ಯಾಯರು ಒಂದು ತೆಂಗಿನಕಾಯಿಗೆ ನಾಮಹಾಕಿದು ಅದನ್ನು ಸ್ಕೂಲಿನ ಹುಡುಗರೆಲ್ಲರಿಂದಲೂ ಮುಟ್ಟಿಸುವಾಗ ಒಬ್ಬ ಹುಡುಗನು ಹೆದರಿ ಅದನ್ನು ಮುಟ್ಟುವದಿಲ್ಲವೆಂದು ಹೇಳಿದರೂ ಉಪಾಧ್ಯಾಯರು ಬಲಾತ್ಕಾರವಾಗಿ ಮುಟ್ಟಿಸಿದರೆಂದೂ ಆ ಹುಡುಗನು ನಡುಗುತ್ತ ಮನೆಗೆ ಹೋದಮೇಲೆ ವಿಪರೀತವಾಗಿ ಜ್ವರಬಂದು ಸಿಕ್ಕಿದ ಹಾಗೆ ಮಾತನಾಡುತ್ತ ಸತ್ತುಹೋದನೆಂದೂ, ಈ ವಿಚಾರವು ರೇಂಜು ಮತ್ತು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳಿಗೆ ತಿಳಿದು ಅವರು ತನಿಖೆಮಾಡುತ್ತಿರುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಚಾಮುಂಡೀ ಬಡಾವಣೆಯಲ್ಲಿರುವ ಅರಮನೆ ಪದ್ಮರಾಜ ಪಂಡಿತರ ಜೈನಬ್ರಾಹ್ಮಣ ವಿದ್ಯಾರ್ಥಿನಿಲಯದಲ್ಲಿ ಪ್ರತಿಷ್ಠಿತವಾದ ಶಾರದಾಂಬೆಗೆ ಕಿರೀಟಧಾರಣೋತ್ಸವವನ್ನೂ ಶಾರದಾ ಪೂಜೆಯನ್ನೂ ಈ ತಿಂಗಳ 12 ನೆಯ ತಾರೀಖಿನ ಗುರುವಾರ ಸಾಯಂಕಾಲ ರಾಜಕವಿಭೂಷಣ ಶ್ರೀಮಾನ್ ಹೆಚ್. ಲಿಂಗರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ವಿದ್ಯಾರ್ಥಿಗಳು ನೆರವೇರಿಸಿದರು. ಆ ಸಮಯದಲ್ಲಿ ಆಸ್ಥಾನ ವಿದ್ವಾನ್ ನ್ಯಾಯತೀರ್ಥ ಜೈನಶಾಸ್ತ್ರ ವಿಶಾರದ ಶ್ರೀಮಾನ್ ಎ. ಶಾಂತಿರಾಜ ಶಾಸ್ತ್ರಿಗಳು ಜೈನ ಸಿದ್ಧಾಂತ ತತ್ವವಿಷಯದಲ್ಲಿ ವಿದ್ವಜ್ಜನರಂಜಕವಾದ ಭಾಷಣವನ್ನು ಮಾಡಿದರು. ಅನಂತರ ಸಂಗೀತವು ನಡೆದು ಅಧ್ಯಕ್ಷರವರು ಭಾಷಣವನ್ನು ಮಾಡಿದ ಬಳಿಕ ಪ್ರಸಾದ ವಿನಿಯೋಗವು ನಡೆಯಿಸಲ್ಪಟ್ಟಿತು.

ಮಂಗಳೂರಿಂದ ಕಂಠೀರವ ಪತ್ರಿಕಾ ಸಂಪಾದಕರು ದಸರಾ ಸಂಚಿಕೆಯೆಂಬ ವಿಶೇಷ ಸಂಚಿಕೆಯೊಂದನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಈ ಸಂಚಿಕೆಯನ್ನು ನಾವು ವಿಶೇಷ ಆದರದಿಂದ ಸ್ವೀಕರಿಸಿರುತ್ತೇವೆ. ಈ ಸಂಚಿಕೆಯಲ್ಲಿ ಮೈಸೂರಿನ ಚರಿತ್ರೆ, ದಾಸಯ್ಯನ ಜೋಳಿಗೆ, ನವರಾತ್ರ್ಯೋತ್ಸವ ಮುಂತಾದ ಓದುಗರ ಮನ[illegible]ಗೆ ಆನಂದವನ್ನುಂಟುಮಾಡುವ ಅನೇಕ ಲೇಖನಗಳು ಅಡಕವಾಗಿವೆ. ಕಂಠೀರವನು ಜನ್ಮಧಾರಣಮಾಡಿ ಇಂದಿಗೆ ೧೪ ವರ್ಷಗಳಾಗಿದ್ದು ತ್ರಿಕರಣಶುದ್ಧಿಯಿಂದ ಹೇಗೆ ದೇಶಸೇವೆಯನ್ನು ಮಾಡಿತೆಂಬುದು ಈ ಸಂಚಿಕೆಯಲ್ಲಿ ವ್ಯಕ್ತವಾಗುತ್ತದೆ. ಮತ್ತು ಈ ಕಂಠೀರವನು ಹದಿನಾಲ್ಕುವರ್ಷಗಳಿಂದಲೂ ಅವಿಚ್ಛಿನ್ನವಾಗಿ ದೇಶಸೇವೆಮಾಡುತ್ತ ಬಂದಿರುವನಲ್ಲದೆ ತಿಲಮಾತ್ರವೂ ಧರ್ಮವಿರುದ್ಧವಾಗಿಯೂ ನೀತಿವಿರುದ್ಧವಾಗಿಯೂ ಕಾಲಿಡದೆ ಅನೇಕ ವಿಧವಾದ ರಾಜಕೀಯ ಧಾರ್ಮಿಕ ನೈತಿಕಾದಿ ವಿಷಯಗಳನ್ನು ಸಿಂಹಗರ್ಜನದಿಂದ ಪ್ರತಿಪಾದಿಸುತ್ತ ಬಂದಿರುವುದರಿಂದಲೂ ಈ ಕಂಠೀರವನು ತನ್ನ ನಾಮವನ್ನು ಪ್ರಪಂಚದಲ್ಲೆಲ್ಲಾ ಖ್ಯಾತಿಪಡಿಸಿಕೊಂಡಿರುತ್ತಾನೆ. ಇತೋಪ್ಯತಿಶಯವಾಗಿ ಈ ಕಂಠೀವನ ಖ್ಯಾತಿಯು ಲೋಕದಲ್ಲೆಲ್ಲಾ ಪ್ರಸಿದ್ಧಿಪಡೆದು ಎಂದಿನಂತೆ ಲೋಕಸೇವೆಯಲ್ಲಿ ಅನವರತವೂ ಆಸಕ್ತವಾಗಿರುವಂತೆ ಜಗದೀಶನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಗೆಜೆಟ್.

ಶಿವಮೊಗ್ಗಾ ಸಬ್-ಜಡ್ಜರಾದ ಮಿ|| ಸಿ. ಅಬ್ದುಲ್ ಘನಿ ಬಿ.ಎ., ಬಿ.ಎಲ್. ರವರಿಗೆ ಕೊಟ್ಟಿದ್ದ ಫರ್ಲೋ ರಜೆಯನ್ನು ಅಕ್ಟೋಬರ್ ಅಖೈರವರೆಗೂ ಹೆಚ್ಚಿಸಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಜಿಯಾಲಜಿಯ ಹಂಗಾಮಿ ಪ್ರೊಫೆಸರಾಗಿರುವ ಮಿ|| ಎಲ್. ರಾಮರಾಯರು ಜಿಯಾಲಜಿ ಪ್ರೊಫೆಸರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಸರಕಾರಿ ಸೇವಿಂಗ್ಸ್ ಬ್ಯಾಂಕುಗಳಲ್ಲಿ 5 ವರ್ಷಗಳ ಫಿಕ್ಸೆಡ್ [illegible]ಟ್ಟುಗಳಿಗೆ ಇದುವರೆಗೆ ಶೇಕಡಾ 4 ರೂಪಾಯಿನಂತೆ ಕೊಡುತ್ತಿದ್ದ ಬಡ್ಡಿಯನ್ನು ಇನ್ನು ಮುಂದೆ ಶೇಕಡಾ 3½ ರೂಪಾಯಿಗಳಿಗೆ ಕಡಿಮೆ ಮಾಡಿರುತ್ತೆ.

ರಾಕ್‌ಫೆಲ್ಲರ್ ಫೌಂಡೇಷನ್ ಸ್ಯಾನಿಟರಿ ಇಂಜನಿಯರಾದ ಮಿ|| ಜೆ. ಜೆ. ಮಾಲ್ಕಂಬೇಸ್ ರವರು ಪ್ರಯಾಣಮಾಡುವ ತಾರೀಖಿನಿಂದ ಮಿ|| ಬಿ. ಆರ್. ಗರುಡಾಚಾರ್ ಬಿ.ಎ. ಇವರು ಸಂಸ್ಥಾನದ ಸ್ಯಾನಿಟರಿ ಇಂಜನಿಯರಾಗಿ ನೇಮಿಸಲ್ಪಟ್ಟಿರುತ್ತಾರೆ.

ಸರಕಾರದ ಅರ್ಥಿಕಸೆಕ್ರೆಟರಿಗಳಾದ ಮಿ|| ಎಸ್. ಶಾಮಣ್ಣ ಬಿ.ಎ., ಇವರಿಗೆ ಕೊಟ್ಟಿದ್ದ 3 ತಿಂಗಳು ಮತ್ತು 14 ದಿವಸಗಳ ಹಕ್ಕಿನ ರಜೆಯನ್ನು ಇನ್ನೂ ಒಂದು ತಿಂಗಳ ಕಾಲ ಹೆಚ್ಚಿಸಿದೆ. ಅದರಲ್ಲಿ 5 ದಿವಸಗಳನ್ನು ಹಕ್ಕಿನ ರಜವನ್ನಾಗಿಯೂ ಉಳಿದುದನ್ನು ಫರ್ಲೋರಜವನ್ನಾಗಿಯೂ ಭಾವಿಸತಕ್ಕದ್ದು.

ಮೈಸೂರು ಪವರ್ ಅಂಡ್ ಲೈಟಿಂಗ್ ಸೂಪರಿಂಟೆಂಡೆಂಟರಾದ ಮಿ|| ಎ. ಸಿ. ಮುನಿರತ್ನಂ ಮೊದಲಿಯಾರ್ ರವರಿಗೆ ಇದೇ ಅಕ್ಟೋಬರ್ 15 ನೇ ತಾರೀಖಿನಿಂದ 10 ದಿವಸಗಳ ಪ್ರಿವಿಲೇಜ್ ರಜೆಯು ಕೊಡಲ್ಪಟ್ಟಿರುವದು. ಅ|| ಸೂಪರಿಂಟೆಂಡೆಂಟರಾದ ಮಿ|| ಎಂ. ಅಲೀಖಾನರವರು ಮೇಲ್ಕಂಡ ಅವಧಿಯಲ್ಲಿ ತಮ್ಮ ಕೆಲಸಗಳ ಜೊತೆಗೆ ಸೂಪರಿಂಟೆಂಡೆಂಟರ ಕೆಲಸಗಳನ್ನೂ ನೋಡಿಕೊಳ್ಳುವರು.

ವರ್ತಮಾನಸಂಗ್ರಹ

ದಕ್ಷಿಣ ಆಫ್ರಿಕೆಯಲ್ಲಿ ಒಂದು ವಿಚಿತ್ರಮರವಿದ್ದು ಅದನ್ನು ಗರಗಸದಿಂದ ಕತ್ತರಿಸಿದಾಗಲೆಲ್ಲಾ ಮನುಷ್ಯರಂತೆ ಕೀರುವದಂತೆ!

ಬರ್ಲಿನ್ ನಗರದಲ್ಲಿ ಒಂದು ಸಂಸ್ಥೆಯಿರುವದು! ಅದಕ್ಕೆ ಮೆಂಬರರಾಗುವವರೆಲ್ಲರೂ 350 ಪೌಂಡುಗಳ ತೂಕವಿರಬೇಕಂತೆ!

ಜಪಾನ್‌ದೇಶಕ್ಕೆ ಸೇರಿದ ಸಾತಕಿ ಎಂಬಲ್ಲಿ ಒಂದು ದೊಡ್ಡ ರಬ್ಬರು ಮರವಿರುವದು. ಅದರ ಹಾಲಿನಿಂದ ಪ್ರತಿನಿತ್ಯವೂ 700 ರೂಪಾಯಿಗಳ ರಬ್ಬರು ತಯಾರಾಗುವದಂತೆ!

ಡೊರೊತಿ ಕ್ರೋನ್ಸ್ ಎಂಬ ಒಬ್ಬ ಸಿನಿಮಾ ನಟಿಯ ಮೈಮೇಲೆ 182 ಮಚ್ಚೆಗಳಿರುವವಂತೆ! ಅವುಗಳನ್ನು ಅವಳು 3,00,000 ರೂಪಾಯಿಗಳಿಗೆ ಇನ್‌ಷ್ಯೂರ್ ಮಾಡಿಸಿರುವಳಂತೆ!

ಓದುಗರು ಅಪೇಕ್ಷಿಸಿದ ಪುಸ್ತಕವನ್ನು ಬೀರುವಿನಿಂದ ತೆಗೆದುಕೊಡುವ ಒಂದು ವಿಚಿತ್ರ ಯಂತ್ರದ ಮನುಷ್ಯನನ್ನು ಲಂಡನ್ನಿನ ಎಕನಾಮಿಕ್ಸ್ ಪಾಠಶಾಲೆಯಲ್ಲಿ ಸ್ಥಾಪಿಸಿರುವರಂತೆ!

ಪೋಲೆಂಡ್‌ದೇಶದ ಸರಕಾರದವರು ಹಣಕಾಸಿನ ಅಭಾವದಿಂದ ಆಯವ್ಯಯಗಳನ್ನು ಸರಿತೂಗಿಸಲು 10,00,00,000 ರೂ. ಗಳ ಸಾಲವನ್ನು ತೆಗೆಯಬೇಕೆಂದು ಏರ್ಪಾಡು ಮಾಡಿ, ಅದಕ್ಕಾಗಿ ಸರಕಾರೀ ನೌಕರರೆಲ್ಲರೂ ತಮ್ಮ ತಮ್ಮ ಸಂಬಳದಲ್ಲಿ 10ನೇ ಒಂದು ಭಾಗವನ್ನು ಸಾಲವಾಗಿ ಕೊಡಬೇಕೆಂದೂ, ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳು ಒಂದೊಂದು ತಿಂಗಳ ಸಂಬಳವನ್ನು ಉಚಿತವಾಗಿ ಕೊಡಬೇಕೆಂದೂ ಅಪ್ಪಣೆಮಾಡಿರುವರಂತೆ!

ಫಿಲಡೆಲ್ಫಿಯಾ ದೇಶದಲ್ಲಿ ಕೆಲವು ತಿಂಗಳುಗಳಿಂದೀಚೆಗೆ ಒಂದು ಮನೆಯ ಮುಂಭಾಗದ ವಸಾರೆಯನ್ನೂ, ಒಂದು ಟನ್ನಿಗಿಂತಲೂ ಹೆಚ್ಚು ತೂಕವುಳ್ಳ ಅನೇಕ ಕಬ್ಬಿಣದ ಪೆಟ್ಟಿಗೆಗಳನ್ನೂ, ಬಹಿರಂಗ ಚೌಕದಲ್ಲಿದ್ದ ಒಂದು ಫಿರಂಗಿಯನ್ನೂ, 4 ಅಡಿ ಚದರವಿದ್ದ ಎರಡು ಕಲ್ಲಿನ ತುಂಡುಗಳನ್ನೂ, ಒಂದು ಟೆಲಿಗ್ರಾಫ್ ಕಂಭವನ್ನೂ, ಒಂದು ಮೋಟಾರ್‌ಕಾರ್ ಇಂಜನ್ನನ್ನೂ ಮತ್ತು ಎರಡು ಕಬ್ಬಿಣದ ಗರ್ಡರುಗಳನ್ನೂ ಕಳ್ಳರು ಕದ್ದುಕೊಂಡುಹೋಗಿರುವರಂತೆ!

ಇಂಗ್ಲೆಂಡಿನ ಮೇರಿವುಡ್ಸ್ ಎಂಬ 28 ವರ್ಷ ವಯಸ್ಸಿನ ಒಬ್ಬ ಸ್ತ್ರೀಯು ಏನೋ ಮೋಸಮಾಡಿದಳೆಂಬ ಕಾರಣದಮೇಲೆ ಒಂದು ತಿಂಗಳ ಸಜೆಗೆ ಗುರಿಯಾದಳು. ಅವಳು ಜೈಲಿನಲ್ಲಿದ್ದಾಗ ಇದ್ದಕ್ಕಿದ್ದ ಹಾಗೆ ಅವಳ ಸ್ತ್ರೀಚಿನ್ಹಗಳು ಹೋಗಿ ಪುರುಷನ ಚಿನ್ಹಗಳು ತಲೆದೋರಿ ಕಾರಾಗೃಹದಿಂದ ಹೊರಕ್ಕೆ ಬರುವ ಹೊತ್ತಿಗೆ ಸಂಪೂರ್ಣ ಗಂಡಸೇ ಆಗಿದ್ದಳಂತೆ! ಜೈಲಿನ ಡಾಕ್ಟರುಗಳು ಅವಳ ಅಂಗಾಂಗಗಳನ್ನು ಚೆನ್ನಾಗಿ ಪರೀಕ್ಷಿಸಿ ಅವಳಿಗೆ ಗಂಡಸೆಂದು ಒಪ್ಪಿರುತ್ತಾರೆ.

ಬ್ರಿಟಿಷ್ ಸರಕಾರದವರ ನೇತೃತ್ವದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಎಲ್ಲ ಆಕಾಶವಿಮಾನಗಳ ಪ್ರಯಾಣದ ಒಂದು ದೊಡ್ಡ ಚಲನಚಿತ್ರವು ಈಗ ತಾನೇ ತಯಾರಿಸಲ್ಪಟ್ಟಿರುವದು. ಇದು 5 ಮೈಲು ಉದ್ದವಾಗಿದ್ದು, ಅದರಲ್ಲಿ 22 ದೇಶಗಳ ನೋಟಗಳು ಸೇರಿಸಲ್ಪಟ್ಟಿರುವವು. ವಿಮಾನಗಳು 25,000 ಮೈಲು ದೂರ ಹಾರಿರುವದನ್ನು ಅದರಲ್ಲಿ ನೋಡಬಹುದು. ಆದರೆ ಅದರ ಪೈಕಿ 3,000 ಅಡಿಗಳಷ್ಟು ಮಾತ್ರ ಬಹಿರಂಗವಾಗಿ ಪ್ರದರ್ಶಿಸಲ್ಪಡುವದು. ಉಳಿದ ಭಾಗವು ರಿಕಾರ್ಡಾಗಿ ಲೈಬ್ರರಿಯಲ್ಲಿ ಇಡಲ್ಪಡುವದಂತೆ!

ಬರ್ದ್ವಾನ್ ನಗರದ ಗ್ರಾಂಡ್‌ಟ್ರಂಕ್ ಎಂಬ ರಸ್ತೆಯು ಬಹುದಿವಸಗಳಿಂದ ಸರಿಯಾದ ರಿಪೇರಿಯಿಲ್ಲದೆ ಕೆಟ್ಟಿತ್ತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಒಂದು ದಿನ ಆ ರಸ್ತೆಯಲ್ಲಿ ಮೋಟಾರಿನಲ್ಲಿ ಹೋಗುತ್ತಿದ್ದಾಗ (ರಸ್ತೆಯು ಸರಿಯಾಗಿ ಇಲ್ಲದೆ ಇದ್ದುದರಿಂದ) ಮೋಟಾರು ಬಹಳವಾಗಿ ಅಲ್ಲಾಡಿ ಅದಕ್ಕೆ ಹಾಕಿದ್ದ ಒಂದು ಎಲೆಕ್ಟ್ರಿಕ್ ಬಲ್ಬು ಕೆಟ್ಟುಹೋಯಿತು. ಇದಕ್ಕಾಗಿ ಅವರು ಎಗ್ಸಿಕ್ಯೂಟಿವ್ ಇಂಜನಿಯರಿಗೆ ಒಂದು ನೋಟೀಸ್ ಕೊಟ್ಟು, ರಸ್ತೆಯದೆಸೆಯಿಂದ ತನಗಾದ ಲುಕ್ಸಾನು ಅಂದರೆ ಎಲೆಕ್ಟ್ರಿಕ್ ಬಲ್ಬಿನ ಕ್ರಯ ೮ ಆಣೆಯನ್ನು ಪಾವತಿಮಾಡದಿದ್ದರೆ ಅವರ ಮೇಲೆ ಕೋರ್ಟಿನಲ್ಲಿ ದಾವಾ ಮಾಡುವದಾಗಿ ತಿಳಿಸಿರುವರಂತೆ!

ಕ್ಯಾಲಿಫೋರ್ನಿಯಾದೇಶಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಚಿಕ್ಕಪುಟ್ಟ ಕಳ್ಳರ ಕಾಟವು ಬಹಳವಾಗಿರಲು, ಒಬ್ಬ ಪೋಲೀಸ್ ಮುಖ್ಯಾಧಿಕಾರಿಯು ಅವರನ್ನು ಪತ್ತೆಮಾಡಬೇಕೆಂದು ಒಂದು ಖಾಲೀಪಾಕೆಟ್ಟಿನಲ್ಲಿ "ನೀನು ಹೀಗೆ ಎಂದಾದರೂ ಮೋಸಹೋಗಿದ್ದೆಯಾ?" ಎಂದು ಒಂದು ಚೀಟಿಯನ್ನು ಬರೆದಿಟ್ಟು ಅದನ್ನು ತನ್ನ ಜೇಬಿನಲ್ಲಿಟ್ಟುಕೊಂಡು ಜನಸಂದಣಿಯಲ್ಲಿ ಒಂದುಗಂಟೆಯುವರೆಗೆ ಸುತ್ತುತ್ತಿದ್ದನು. ಕಳ್ಳರಾರೂ ಇವನ ಕೈಗೆ ಸಿಕ್ಕದೆ ಹಿಂತಿರುಗಿ ತನ್ನ ಜೇಬಿನಲ್ಲಿದ್ದ ಪಾಕೆಟ್ಟನ್ನು ತೆರೆದುನೋಡಲು ಅದರಲ್ಲಿ ತಾನು ಬರೆದಿಟ್ಟಿದ್ದ ಚೀಟಿಗೆ ಪ್ರತಿಯಾಗಿ 'ಈ ಹುಡುಗಾಟವನ್ನು ನಿಲ್ಲಿಸು' ಎಂದು ಬರೆದಿದ್ದ ಮತ್ತೊಂದು ಚೀಟಿಯಿದ್ದಿತಂತೆ!

ಪೋಲೆಂಡ್ ದೇಶದಲ್ಲಿ ಅನೇಕ ತಿಂಗಳುಗಳಿಂದಲೂ ಅಪಾರವಾಗಿ ಖೋಟಾನಾಣ್ಯಗಳು ಚಲಾವಣೆಗೆ ಬರುತ್ತಿದ್ದು ಅಲ್ಲಿಯ ಗುಪ್ತಪೋಲೀಸರು ಅವುಗಳ ಮೂಲವನ್ನು ಬಹಳ ಸಾಹಸದಿಂದ ಪತ್ತೆಹಚ್ಚಿದಾಗ ಜೋಲೀಕ್‌ಜೌನಗರದ ಕಾರಾಗೃಹದೊಳಗೆ ಅವುಗಳು ತಯಾರಾಗುತ್ತಿದ್ದುವೆಂದು ಗೊತ್ತಾಯಿತಂತೆ! ಸದರಿ ಕಾರಾಗೃಹದಲ್ಲಿ ಖೋಟಾನಾಣ್ಯಗಳು ತಯಾರು ಮಾಡುವ ಒಂದು ದೊಡ್ಡ ಕಾರ್ಖಾನೆಯೇ ಸ್ಥಾಪಿಸಲ್ಪಟ್ಟಿದ್ದು ನಾಣ್ಯಗಳ ತಯಾರಿಯೂ ಚುರುಕಾಗಿಯೇ ನಡೆದಿದ್ದಿತಂತೆ! ಕಾರಾಗೃಹವಾಸಿಗಳಲ್ಲಿ ಕೆಲವರು ಆ ವಿದ್ಯೆಯಲ್ಲಿ ಪ್ರಾವೀಣ್ಯವನ್ನು ಪಡೆದವರಾಗಿದ್ದು, ಅಲ್ಲಿನ ಅಧಿಕಾರಿಗಳೆಲ್ಲರೂ ಅದಕ್ಕೆ ಸಂಪೂರ್ಣ ಸಹಾಯ ಮಾಡುತ್ತಿದ್ದರಂತೆ!

ಲೂಧಿಯಾನಾದಲ್ಲಿ ಪ್ರಕಟವಾಗುವ 'ನಜರಿಯಾ ಎ-ಮೆಹದಿ' ಎಂಬ ಪತ್ರಿಕೆಯ ವಿಷಯವಾಗಿ 'ಖಿಲಾಫತ್' ಪತ್ರಿಕಾಕರ್ತರು ಮಾನನಷ್ಟಕರವಾದ ಕೆಲವು ಸಂಗತಿಗಳನ್ನು ಪ್ರಕಟಿಸಿದರೆಂಬ ಅಪಾದನೆಯ ಮೇಲೆ ಸದರಿ ಪತ್ರಿಕಾಕರ್ತರಾದ ಮಿ|| ಎಂ. ಹರ್ಸ್ ಲತೀಫಿ, ಬಿ.ಎ., ರವರು, 'ಖಿಲಾಫತ್' ಪತ್ರಿಕಾಕರ್ತರಾದ ಮೌಲಾನಾ ಷೌಕತ್ ಅಲಿಯವರು ಮತ್ತು ಅದರ ಪ್ರಿಂಟರ್ ಮತ್ತು ಪಬ್ಲಿಷರಾದ ಮಿ|| ಅಜೀಜ್-ಉರ್-ರಹಮಾನ್ ಇವರಿಬ್ಬರಿಗೆ ಟೆಲಿಗ್ರಾಂ ಮೂಲಕವಾಗಿ ನೋಟೀಸು ಕೊಟ್ಟು, ಕೂಡಲೇ ಕ್ಷಮಾಪಣೆ ಕೇಳಿ ಅದೇ ವಿಷಯವನ್ನು ತಮ್ಮ ಪತ್ರಿಕೆಯಲ್ಲಿಯೂ ಪ್ರಕಟಿಸದಿದ್ದರೆ, ಮುಂದಿನ ಕ್ರಮವನ್ನು ಜರುಗಿಸುವದಾಗಿ ತಿಳಿಸಿರುತ್ತಾರೆ.

ರಿಚರ್ಡ್ ಲೂಯಿನ್ಸನ್ ಎಂಬುವರು ಫ್ರಾನ್ಸಿನ 'ವ್ಯೂ' ಎಂಬ ಪತ್ರಿಕೆಯಲ್ಲಿ ಈ ಪ್ರಪಂಚದಲ್ಲಿ 17 ಜನ ಶ್ರೀಮಂತರಿರುವರೆಂದೂ ಅವರ ಐಶ್ವರ್ಯವನ್ನೆಲ್ಲಾ ಒಟ್ಟುಗೂಡಿಸಿದರೆ ಪ್ರಪಂಚದ ಸಾಲವನ್ನೆಲ್ಲಾ ತೀರಿಸಬಹುದೆಂದೂ ಪ್ರಕಟಿಸಿರುವರು ಇವರೇ ಆ ಶ್ರೀಮಂತರು!—1. ಎಡ್ಸಲ್ ಫೋರ್ಡ್ (ಅಮೇರಿಕಾ), 2. ಹೆನ್ರಿ ಫೋರ್ಡ್ (ಅಮೇರಿಕಾ), 3. ಎಡ್ವರ್ಡ್ ಡಿ ರಾತ್‌ಸಿಲ್ಡ್ (ಫ್ರಾನ್ಸ್), 4. ಡ್ಯೂಕ್ ಆಫ್ ವೆಸ್ಟ್‌ಮಿನಿಸ್ಟರ್ (ಇಂಗ್ಲೆಂಡ್), 5. ವಿಲಿಯಂ ಆಫ್ ಹೊಹೆನ್‌ಜೋಲರ್ನ್ (ಜರ್ಮನಿ), 6. ಬರೋಡಾ ಗಾಯಿಕವಾಡರವರು (ಹಿಂದೂಸ್ಥಾನ), 7. ಸರ್ ಬೆಸಿಲ್ ಜಹರಾಫ್ (ಗ್ರೀಸ್), 8. ಸೈಮನ್ ಪ್ಯಾಟಿನೊ (ಬೊಲಿವಿಯ), 9. ಲಾರ್ಡ್ ಇಜೇಗ್ (ಇಂಗ್ಲೆಂಡ್), 10. ಪ್ರಿನ್ಸ್ ಅಗಾಖಾನ್ (ಹಿಂದೂಸ್ಥಾನ), 11. ಹೈದರಾಬಾದ್ ನೈಜಾಂರವರು (ಹಿಂದೂಸ್ಥಾನ), 12. ಜೆ. ಡಿ. ಮೆಂಡಾಲ್ (ಫ್ರಾನ್ಸ್), 13. ಜಾನ್ ಡಿ. ರಾಕ್‌ಫೆಲರ್ ಜೂನಿಯರ್ (ಅಮೇರಿಕಾ), 14. ಜಾನ್ ಡಿ ರಾಕ್‌ಫೆಲರ್ ಸೀನಿಯರ್ (ಅಮೇರಿಕಾ), 15. ಲೂಯಿ ಲೂಯಿ ಡ್ರೈಫಸ್ (ಫ್ರಾನ್ಸ್), 16. ಆಂಡ್ರ್ಯೂ ಡಬ್ಲ್ಯು ಮೆಲ್ಲನ್ (ಅಮೇರಿಕಾ), 17. ಫ್ರಿಟ್ಜ್ ಥಿಸ್ಸೆನ್ (ಜರ್ಮನಿ). ಇವರುಗಳಲ್ಲೆಲ್ಲಾ ಹೈದರಾಬಾದ್ ನೈಜಾಂರವರ ಐಶ್ವರ್ಯವೇ ಪ್ರಥಮ ಸ್ಥಾನವನ್ನು ಪಡೆಯುವದಂತೆ! ಅವರ ಖಜಾನೆಯಲ್ಲಿರುವ ಭಂಗಾರ ಮತ್ತು ಜವಾಹಿರಿಯ ಬೆಲೆಯೇ ಸುಮಾರು 1,75,00,00,000 ರೂಪಾಯಿಗಳಾಗುವದಂತೆ! ಬರೋಡಾ ಗಾಯಿಕವಾಡರವರ ಐಶ್ವರ್ಯವು 52,50,00,000 ರೂ. ಗಳಾಗುವದಂತೆ!

ಅಡ್ಡಪಲ್ಲಕ್ಕಿ ಮಹೋತ್ಸವ ಪಂಢರಪುರ.

ಸೊಲ್ಲಾಪುರ ಡಿಸ್ಟ್ರಿಕ್ಟಿಗೆ ಸೇರಿದ ಜಗತ್ಪ್ರಸಿದ್ಧವಾದ ಪಂಢರಪುರದಲ್ಲಿ ಇದೇ ತಿಂಗಳು ೨೩ ನೆಯ ತಾರೀಖು ಕಾರ್ತಿಕ ಶು|| ೫ ಸೋಮವಾರ ದಿವಸ ಉಜ್ಜಯಿನೀ ಜಗದ್ಗುರುಗಳ ಅಡ್ಡಪಲ್ಲಕ್ಕಿಯ ಮಹೋತ್ಸವವು ನೆರವೇರುವದರಿಂದ ಆ ಕಾಲಕ್ಕೆ ಸರ್ವರೂ ಆಗಮಿಸಿ ಗುರುಕೃಪೆಗೆ ಪಾತ್ರರಾಗಬೇಕೆಂದು ಪಂಢರಪುರದ ವೀರಶೈವಮಂಡಳಿಯವರು ಕೋರುತ್ತಾರೆ.

ಶ್ರೀ ದೇವೀಪುರಾಣ ಸಮಾರಂಭ.

ಧಾರವಾಡ ಜಿಲ್ಲಾ ಹಾವೇರಿ ತಾ|| ಹಾವನೂರು ಗ್ರಾಮದಲ್ಲಿ ಪ್ರಮುಖರಾದ ಶರಣ್ಕಲದ ವೇ|| ಗದಿಗಯ್ಯನವರು ಇವರು ತಮ್ಮ ಮಂದಿರದಲ್ಲಿ ಅಶ್ವಯುಜ ಶು|| ೧ ರಿಂದ ವಿಜಯದಶಮಿಯವರೆಗೆ ಶ್ರೀ ದೇವೀಪುರಾಣವನ್ನು ಹಿರೇಹಡಗಲಿ ವೇ|| ವಿರೂಪಾಕ್ಷಶಾಸ್ತ್ರಿಗಳವರಿಂದ ನವರಸಾಲಂಕಾರದೊಡನೆ ಸರ್ವಜನರಿಗೂ ಶ್ರೀ ದೇವಿಯ ಮಹತ್ವಾತಿಶಯಗಳನ್ನೂ ಸತ್ಯಸದಾಚಾರನೀತಿಗಳನ್ನೂ ಚನ್ನಾಗಿ ತಿಳಿಯುವಂತೆ ಹೇಳಿಸಿದರು.

ಈ ಕಾಲದಲ್ಲಿ ಪುರಾಣಪುಣ್ಯಕಥೆಗಳೂ ಗುರುದೇವತಾದಿಗಳಲ್ಲಿ ಭಯಭಕ್ತಿಯೂ ಕಡಿಮೆಯಾಗುತ್ತ ಬಂದಿರುತ್ತವೆ. ಆದರೆ ಈ ವರುಷ ಪುಷ್ಯ ಮಾಘಮಾಸಗಳಲ್ಲಿ ಪಂಚಗ್ರಹಕೂಟ ಸಪ್ತಗ್ರಹಕೂಟವು ಇರುವುದರಿಂದ ಜಗತ್ತಿನಲ್ಲಿ ಜನರಿಗೆ ಅನೇಕವಿಧ ರೋಗಗಳೂ ನಾನಾವಿಧ ಮರಣಗಳೂ ಈತಿಬಾಧೆಗಳೂ ಉಂಟಾಗುವ ಸಂಭವವಿರುವದರಿಂದ ಈಗಿನಿಂದಲೇ ಪ್ರತಿಯೊಂದು ಗ್ರಾಮದವರು ತಮ್ಮ ತಮ್ಮಲ್ಲಿ ಶ್ರೀ ಗುರು ದೇವತಾಪುರಾಣಗಳನ್ನೂ ಶಿವಭಜನೆ ಶಿವಕೀರ್ತನ ಶಿವಪೂಜಾ ಅನ್ನದಾನ ಮುಂತಾದ ಸತ್ಕಾರ್ಯಗಳನ್ನೂ ಜರುಗಿಸುತ್ತ ಪುಣ್ಯಸಂಪಾದಿಸಿಕೊಂಡು ಆಯುರಾರೋಗ್ಯ ಸುಖಸಂಪತ್ತುಗಳನ್ನು ಹೊಂದುವವರಾಗಬೇಕೆಂದು ಪ್ರಾರ್ಥನೆ.

ಓರ್ವಸ್ಥಳಿಕ.

ಕಾಶೀ ವೀರಶೈವ ವಿದ್ವತ್ಸಂಘದ ಕಾರ್ಯಗಳು.

ಶ್ರೀ ಭೂಕೈಲಾಸ ವಾರಾಣಸೀ ಜ್ಞಾನಸಿಂಹಾಸನಾಧೀಶ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿಯ ವೀರಶೈವ ವಿದ್ವಾಂಸರು ಪ್ರಾಚೀನಕಾಲದಿಂದಲೂ ವಿದ್ಯಾಗುರುಗಳಾಗಿ ವೀರಶೈವಮತಕ್ಕೆ ಮಹದುಪಕೃತಿಯನ್ನೆಸಗುತ್ತಿರುವುದು ಸುಪ್ರಸಿದ್ಧವಷ್ಟೆ!

ಇಲ್ಲಿಯ ವಿದ್ವನ್ಮಂಡಲಿಯು ಈ ಕಾಲಕ್ಕೆ ಅತ್ಯಾವಶ್ಯಕವಾಗಿರುವ ಉಪನ್ಯಾಸ ಕಲೆಯಲ್ಲಿ ನೈಪುಣ್ಯವನ್ನು ಸಂಪಾದಿಸುವದಕ್ಕೋಸ್ಕರ ನಾಲ್ಕು ವರ್ಷಗಳ ಹಿಂದೆ ವಕ್ತೃತ್ವಕಲೋತ್ತೇಜಕ ಸಂಘವನ್ನು ಸ್ಥಾಪಿಸಿ ತನ್ಮೂಲಕ ಪ್ರತಿಯೊಂದು ಪಕ್ಷದಲ್ಲಿಯೂ ಒಂದು ಸಭೆಯನ್ನು ನೆರವೇರಿಸುತ್ತ ಅನೇಕ ಮಹತ್ವವಿಷಯಗಳನ್ನು ಭಾಷಣದ್ವಾರಾ ವಿಮರ್ಶಿಸುತ್ತಿರುವುದು ಶ್ಲಾಘನೀಯವಾಗಿದೆ. ಇದರ ವರದಿಯನ್ನು ವಿಮರ್ಶಿಸಿದ ಅನೇಕ ವಿದ್ವಾಂಸರು ಅಚ್ಚುಕಟ್ಟಾದ ಉಪನ್ಯಾಸಕನಲ್ಲಿರಬೇಕಾದ ಉತ್ಕೃಷ್ಟ ಗುಣಗಳೆಲ್ಲವೂ ಈ ಸಂಘದಲ್ಲುಂಟೆಂದು ಅಭಿಪ್ರಾಯಪಟ್ಟಿರುತ್ತಾರಲ್ಲದೆ ಈ ಸಭೆಯ ವರದಿಯನ್ನು ಆಗಿಂದಾಗ್ಗೆ ಪತ್ರಿಕಾಮುಖದಿಂದ ಪ್ರಕಟಿಸಬೇಕೆಂದು ಕೋರಿರುತ್ತಾರೆ.

ವಿಶೇಷ ಸಭೆಯು.

ಈ ವರ್ಷ ಶ್ರಾವಣಮಾಸದಲ್ಲಿ ನಿಜಾಂ ಇಲಾಖೆಯ ಉದ್ಗಿರಿ, ರಾಜೂರು, ಕರಂಜಿ, ಮುಧೋಳ ಮುಂತಾದ ಗ್ರಾಮಗಳ ನೂರಾರು ಜನ ಭಕ್ತಮಾಹೇಶ್ವರರು ಮುಧೋಳದ ಸುಪ್ರಸಿದ್ಧ ಚರವರ್ಯ ಶ್ರೀ ಮಹಾಂತಸ್ವಾಮಿಗಳವರೊಡನೆ ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದ ಸೇವೆಗೋಸ್ಕರ ಬಂದಿದ್ದರು. ಅವರಲ್ಲಿಯ ಮುಖಂಡರಾದ ಮ|| ರಾ|| ರಾ|| ವಿಶ್ವನಾಥಪ್ಪ ಚೌಂಡಾ, ಹಾವಗಿ ರೇವಪ್ಪ, ಮಡಿವಾಳಪ್ಪ ಮುಂತಾದವರ ಗುರುಭಕ್ತಿಯು ಅಸದೃಶವಾದುದೆಂದು ಬರೆಯಲು ಅತ್ಯಾನಂದವೆನಿಸುತ್ತದೆ. ಇವರು ತಾವು ಮಾಡಿಸಿತಂದ ರಜತಧಾರಾಪಾತ್ರೆಯಿಂದ ಶ್ರೀ ಮಹಾಪೀಠಕ್ಕೆ ಏಕಾದಶ ರುದ್ರಾಭಿಷೇಕವನ್ನೂ ಕೈಲಾಸಮಂಟಪದಲ್ಲಿ ಮಹಾಲಿಂಗಸ್ಥಾಪನೆಯನ್ನೂ ಮಾಡಿ ಶಿವೈಕ್ಯರಾದ ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಸಮಾಧಿಯ ಪ್ರಾಂಗಣವನ್ನು ಅಮೃತಶಿಲಾ (ಸಂಗಮರ್ಮರ್) ನಿರ್ಮಾಣದಿಂದ ಅಲಂಕರಿಸಿ ಭೂರಿಭೂರಿ ಗುರುದಕ್ಷಿಣೆಗಳನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸಿ ಶ್ರೀ ಜಗದ್ಗುರುಗಳವರ ಅನುಗ್ರಹಕ್ಕೆ ಪಾತ್ರರಾದರಲ್ಲದೆ ನಾಲ್ಕಾರು ಸಾರೆ ವಿವಿಧ ಮೃಷ್ಟಾನ್ನಗಳಿಂದ ಮಾಹೇಶ್ವರವೃಂದವನ್ನು ತೃಪ್ತಿಗೊಳಿಸಿ ಧನ್ಯರಾದರು.

ತಾ|| ೨೨-೮-೩೩ ನೆಯ ದಿವಸ ಎರಡುಘಂಟೆಗೆ ವಕ್ತೃತ್ವಕಲೋತ್ತೇಜಕ ಸಂಘದ ಪಾಕ್ಷಿಕ (೮೮ನೆಯ) ಸಮ್ಮೇಲನವು ಸಂಸ್ಥಾನದ ಭವ್ಯವಾದ ಚಿತ್ರಭವನದಲ್ಲಿ ಪ್ರಾರಂಭವಾಯಿತು. ಪಟ್ಟಚರಾಧಿಕಾರಿಗಳೂ, ಶಾಸ್ತ್ರಿಗಳೂ, ಇತರ ನೂರಾರು ಜನ ಭಕ್ತಮಾಹೇಶ್ವರರೂ ಆಗಮಿಸಿದ್ದರು. ಆದಿಯಲ್ಲಿ ಗೊಬ್ಬೂರ ಶ್ರೀಗಳವರು ಮನೋಹರವಾಗಿ ಮಂಗಳಗೀತವನ್ನು ಹಾಡಿದ ಮೇಲೆ ಈ ದಿವಸದ ಸಭಾಧ್ಯಕ್ಷಸ್ಥಾನವನ್ನು ನಿಜಾಂದೇಶದಲ್ಲಿ ಸುಪ್ರಸಿದ್ಧರೂ ತಪಸ್ವಿಗಳೂ ಆದ ಮುಧೋಳದ ಚರವರ್ಯ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳವರು ಸ್ವೀಕರಿಸಬೇಕೆಂದು ಪಂ|| ವೀರಭದ್ರಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮಹಿಷಾಳದ ಶ್ರೀ ಪಟ್ಟಾಧ್ಯಕ್ಷರು ಸಮರ್ಥನ ಮಾಡಿದೊಡನೆಯೇ ಸರ್ವಸಮ್ಮತವೆಂಬ ಕರತಾಡನದಿಂದ ಆನಂದ ಘೋಷ್ಯತ್ತಿರಲು ಮುಧೋಳದ ಶ್ರೀ ಮಹಾಸ್ವಾಮಿಗಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಆ ಮೇಲೆ ಮಹಾಪೀಠದಲ್ಲಿ ಪ್ರತಿಷ್ಠಿಸಿದ್ದ ಶ್ರೀಮದಭಿನವ ವಿಶ್ವಾರಾಧ್ಯ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರವನ್ನೂ ಅಧ್ಯಕ್ಷರನ್ನೂ ಪುಷ್ಪಮಾಲೆಗಳಿಂದ ಸತ್ಕರಿಸಲಾಯಿತು. ಅಧ್ಯಕ್ಷರ ಅಪ್ಪಣೆಯಂತೆ ಮುದೇನೂರು ಬೃಹನ್ಮಠಾಧ್ಯಕ್ಷ ಶ್ರೀ ವಾಗೀಶಶಿವಾಚಾರ್ಯರು ಸಭಾಸಂಚಾಲನ ಕಾರ್ಯವನ್ನು ನಿರ್ವಹಿಸುತ್ತ ಬಂದರು.

ಪ್ರಥಮದಲ್ಲಿ ಚಿಕ್ಕಮಣ್ಣೂರು ಗುರುದೇವ ಶಿವಾಚಾರ್ಯರು ಲಿಂಗವಿಷಯದ ಶಾಸ್ತ್ರಾಚಾರಗಳನ್ನು ಸಮರ್ಥಿಸುತ್ತ ರೂಢಾಚಾರಗಳನ್ನು ಬಹು ವಿನೋದವಾಗಿ ವಿಮರ್ಶಿಸುತ್ತ ಕರ್ನಾಟಕ ಭಾಷಣದಿಂದ ಸರ್ವಜನ ಮನೋರಂಜನ ಮಾಡಿದರು. ಆಮೇಲೆ ಶಹಪುರದ ಶ್ರೀ ಗುರುಶಾಂತದೇವರು ಮರಾಠಿ ಭಾಷೆಯಿಂದ ಭಕ್ತಿವಿಷಯವನ್ನು ಹೇಳಿದರು. ಬಳಿಕ ಗೊಬ್ಬೂರು ಬೃಹನ್ಮಠಾಧ್ಯಕ್ಷ ಚರವರ್ಯ 'ಕಾವ್ಯತೀರ್ಥ' ಶ್ರೀ ವೃಷಭಲಿಂಗಶಿವಾಚಾರ್ಯರು ವೀರಶೈವಮತವೆಂಬ ವ್ಯಾಪಕವಿಷಯದಲ್ಲಿ ಕರ್ನಾಟಕ ಭಾಷೆಯಿಂದ ಬಹುಮನೋಹರವಾಗಿಯೂ ಸಯುಕ್ತಿಕವಾಗಿಯೂ, ಸಶಾಸ್ತ್ರೀಯವಾಗಿಯೂ ಭಾಷಣಮಾಡಿದರು. ಬಳಿಕ 'ವೇದತೀರ್ಥ' ಪಂ|| ಬಿ|| ಮ|| ವೀರಭದ್ರಶಾಸ್ತ್ರಿಗಳು ವೀರಶೈವಮತದ ವಿವಿಧ ತತ್ತ್ವಗಳನ್ನು ಕುರಿತು ಒಂದೂಕಾಲು ಘಂಟೆಯ ವರೆಗೆ ಕನ್ನಡದಲ್ಲಿ ಸಂಭಾಷಿಸಿದುದನ್ನು ಸಭ್ಯರು ಶಾಂತಚಿತ್ತದಿಂದ ಲಾಲಿಸುತ್ತಿದ್ದರು. ಆ ಭಾಷಣದಲ್ಲಿ ವೈದಿಕ, ದಾರ್ಶನಿಕ, ಧಾರ್ಮಿಕ, ಸಾಮಾಜಿಕ ವಿಷಯಗಳು ಸಪ್ರಮಾಣವಾಗಿಯೂ, ಸರಸವಾಗಿಯೂ ನಿರೂಪಿತವಾದವಲ್ಲದೆ ಶಿವಾಸಿದ್ಧಾಂತವು ಸಯುಕ್ತಿಕವಾಗಿ ಶ್ರೋತೃಗಳಿಗೆ ಸಮ್ಮತವಾಗುವಂತೆ ಪ್ರತಿಪಾದಿತವಾಯಿತು. ತರುವಾಯ ಮಹಿಷಾಳ ಬೃಹನ್ಮಠಾಧ್ಯಕ್ಷ 'ಕಾವ್ಯತೀರ್ಥ' ಶ್ರೀ ಕರಿಬಸವೇಶ್ವರ ಶಿವಾಚಾರ್ಯರು ಎಲ್ಲಾ ಭಾಷಣಕಾರರ ವಿಷಯಗಳನ್ನು ಕ್ರೋಡೀಕರಿಸಿ ವಿವರಿಸುತ್ತ ಶ್ರೀ ಜಗದ್ಗುರು ಪಂಚಪೀಠಗಳ ಮಹತ್ತ್ವವನ್ನು ಪ್ರಮಾಣಪುರಸ್ಸರವಾಗಿ ಐತಿಹಾಸಿಕ ಚಿತ್ರಗಳನ್ನು ತೋರಿಸುತ್ತಲೂ ಅನಾಚಾರಗಳನ್ನು ಖಂಡಿಸುತ್ತಲೂ ಸುಮಾರು ೧ ಘಂಟೆಯ ವರೆಗೆ ಮರಾಠಿ ಭಾಷೆಯಲ್ಲಿ ಬಹುಮನೋಹರವಾಗಿ ಭಾಷಣವನ್ನು ಮಾಡಿ ಜನರಲ್ಲಿ ಪರಿಣಾಮವನ್ನುಂಟುಮಾಡಿದರು. ತದನಂತರ ಮನ್ಮಥಾರಿಯೆಂಬ ಮಾಹೇಶ್ವರ ಬಾಲಕನು 'ಶಿವಭಕ್ತಿ ಮತ್ತು ಶಿಕ್ಷಣ' ಎಂಬ ವಿಷಯವನ್ನು ಮರಾಠಿ ಭಾಷೆಯಿಂದ ಕೀರ್ತನರೂಪವಾಗಿ ಸ್ವಲ್ಪ ಕಾಲದಲ್ಲಿಯೇ ಹೇಳಿ ಸಭಿಕರನ್ನು ಆನಂದಗೊಳಿಸಿದನು. ಅನಂತರ ಪೂಜ್ಯರಾದ ಅಧ್ಯಕ್ಷಮಹೋದಯರು ಸಂಘದ ಪುಸ್ತಕದಲ್ಲಿ "ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಪಟ್ಟಚರಾಧಿಕಾರಿಗಳ ಮತ್ತು ಶಾಸ್ತ್ರಿಗಳ ಶಾಸ್ತ್ರೀಯಗಳಾದ ಅತ್ಯುತ್ತಮ ಭಾಷಣಗಳನ್ನು ಕೇಳಿ ಪರಮಾನಂದವಾಯಿತು. ಇಂಥವರಿಂದಲೇ ವೀರಶೈವ ಮತೋದ್ಧಾರವಾಗಬೇಕಾಗಿದೆ. ವೀರಶೈವಮತತತ್ತ್ವಗಳನ್ನು ಇಷ್ಟು ಸರಸವಾದ ಭಾಷೆಯಲ್ಲಿ ಕೇಳಿ ನಮ್ಮ ಭಕ್ತಮಾಹೇಶ್ವರ ಮಂಡಳಿಯು ಅತ್ಯಂತ ಸಂತುಷ್ಟವಾಗಿದೆ. ಶ್ರೀಮದಾಚಾರ್ಯರ ಕೃಪೆಯಿಂದ ನಮ್ಮ ಗುರುಕುಲವು ಅನಾದಿಕಾಲದಿಂದಲೂ ಜ್ಞಾನಪ್ರದಾನ ಮಾಡುತ್ತಿರುವ ಕಾರಣ ವೀರಶೈವಮತದ ಸನಾತನತ್ವವಿಲ್ಲಿಯವರೆಗೆ ಸುರಕ್ಷಿತವಾಗಿದೆ. ತಾವೆಲ್ಲರೂ ಸ್ವಧರ್ಮರಕ್ಷಣ ಕಾರ್ಯವನ್ನು ಇತೋಽಪ್ಯತಿಶಯವಾಗಿ ಕೈಗೊಂಡು ಜೀವನವನ್ನು ಸಾರ್ಥಕಗೊಳಿಸಬೇಕು."

ಇತ್ಯಾದ್ಯಭಿಪ್ರಾಯವನ್ನಿತ್ತಮೇಲೆ ಶ್ರೀ ವಾಗೀಶ ಶಿವಾಚಾರ್ಯರು ಅಧ್ಯಕ್ಷರ ಧನ್ಯವಾದಪುರಸ್ಸರವಾಗಿ ಸಭಾಕಾರ್ಯವನ್ನು ಉಪಸಂಹಾರ ಮಾಡಿದರು.

ಈ ಸಭಾಕಾರ್ಯದಿಂದ ಅತ್ಯಂತ ಸಂತುಷ್ಟರಾದ ಸದ್ಭಕ್ತಶಿರೋಮಣಿ ಕರಂಜಕರ್ ಶ್ರೀ ವಿಶ್ವನಾಥಪ್ಪ ಚೌಂಡಾ ಇವರು ಅತ್ಯಂತ ಭಕ್ತಿಯಿಂದ ಗುರುಕುಲದ ಸಮಸ್ತ ವಿದ್ವನ್ಮಂಡಳಿಗೆ ಸ್ವದೇಶೀಯ ಮನೋಹರಗಳಾದ ಉತ್ತರೀಯಗಳನ್ನರ್ಪಿಸಿ "ಉಪದೇಶಾಮೃತದಿಂದ ನಮ್ಮನ್ನುದ್ಧರಿಸುತ್ತಿರಬೇಕು. ತಮ್ಮ ವಸ್ತುಗಳನ್ನೇ ತಮಗೆ ಅರ್ಪಿಸುತ್ತಿರುವೆನು. ನಾನೊಬ್ಬ ತಮ್ಮ ಭಕ್ತ" ಮುಂತಾಗಿ ಹೇಳಿ ಸತ್ಕರಿಸಿ ಆನಂದಗೊಳಿಸಿದರು.

ಸಂಗೀತ ಸಭೆಯು.

ತಾ|| ೪-೯-೩೩ ನೆಯ ಸೋಮವಾರ ಸಾಯಂಕಾಲ ಶ್ರೀ ಜಗದ್ಗುರು ವಿಶ್ವಾರಾಧ್ಯಮಹಾಪೀಠದ ಸನ್ನಿಧಾನದಲ್ಲಿ ವಾರಾಣಸೀ ವೀರಶೈವ ವಿದ್ವನ್ಮಂಡಳಿಯ ಪರವಾಗಿ ಸಂಗೀತ ಸಭೆಯು ಸೇರಿದ್ದಿತು. ಸಂಸ್ಕೃತ ಭಾಷೆಯಲ್ಲಿ ಮುದ್ರಿತಗಳಾದ ಆಹ್ವಾನಪತ್ರಿಕೆಗಳ ಮೂಲಕ ಕಾರ್ಯದರ್ಶಿಗಳಾದ ಹೊಂಗಲದ ಶ್ರೀಸಿದ್ಧಲಿಂಗ ದೇವರು ಸುಸ್ವಾಗತವನ್ನಿತ್ತುದರಿಂದ ವೀರಶೈವ ವಿದ್ವಾಂಸರೂ ಸ್ಥಾನಿಕಪಂಡಿತರೂ ಇನ್ನಿತರ ಸಂಗೀತಕೋವಿದರೂ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಕೆಲವು ಪ್ರತಿಷ್ಠಿತ ಹಿಂದೂಸ್ಥಾನ ಜನರೂ, ಬಂಗಾಲಿಯವರೂ ಆಗಮಿಸಿದ್ದರು. ಬಂದವರಲ್ಲಿ ಸಾಹಿತ್ಯಾಚಾರ್ಯ ವಿದ್ಯಾಸಾಗರ ಪಂಡಿತವರ್ಯ ಬ್ರ|| ಶ್ರೀ|| ವೇ|| ಗೌರೀನಾಥಶಾಸ್ತ್ರಿಗಳು (ಪಾಠಕರು), ನ್ಯಾಯ ವೇದಾಂತಾಚಾರ್ಯ ಶ್ರೀ ಮಹೇಶ್ವರ ಶಾಸ್ತ್ರಿಗಳು, ಸಂಗೀತವಿದ್ಯಾವಿಶಾರದ ಜ್ಯೋತೀಂದ್ರಬಾಬುಗಳು, ಮೃದಂಗವಾದನನಿಪುಣ ಮಹಾದೇವಪ್ರಸಾದರು ಮುಂತಾದವರ ಹೆಸರುಗಳು ಉಲ್ಲೇಖನೀಯವಾಗಿವೆ.

ಮೊದಲು ಶ್ರೀ ಗುರುಕುಲದ ವಿದ್ವನ್ಮಂಡಲಿಯು ಮಂಗಳಾಚರಣ ರೂಪವಾಗಿ ಗುರುಭಜನೆಯನ್ನು ಪ್ರಾರಂಭಿಸಿದ ಮೇಲೆ ಪಿಟೀಲವಾದ್ಯ ನಿಪುಣರೂ ಜನ್ಮಾಂಧರೂ ಆದ ಮೈಸೂರಿನ ಎ. ಎಸ್. ಶಿವರುದ್ರಪ್ಪನವರು ಪಿಟೀಲಿನಿಂದ ಶಂಕರಾಭರಣ ರಾಗದ ತ್ಯಾಗರಾಜಕೃತಿಯೊಂದನ್ನು ಮನೋಹರವಾಗಿ ಬಾರಿಸುತ್ತಿರುವಾಗ ಶ್ರೀ ಜಗದ್ಗುರುಗಳವರ ಸ್ವಾರಿಯು ದಯಮಾಡಿತು. ಅದೇ ಸಮಯದಲ್ಲಿ ಕಾಶೀಪ್ರಾಂತದಲ್ಲಿ ಅತ್ಯಂತ ಪ್ರಸಿದ್ಧರಾದ ರಿ|| ಆ|| ಮ್ಯಾಜಿಸ್ಟ್ರೇಟ್ ರಾವಲಹದ್ದೂರ ಗೋಸಾಯಿ ಶ್ರೀರಾಮ ಶರಣಪುರೀಸ್ವಾಮಿಗಳೂ ಬಂದುದರಿಂದ ಸಭೆಗೆ ವಿಶೇಷ ಶೋಭೆಯುಂಟಾಯಿತು. ಬಳಿಕ ಕಲ್ಯಾಣ. ಮೋಹನ, ಹಂಸಧ್ವನಿ ಮುಂತಾದ ರಾಗದ ಕೃತಿಗಳು ಮನೋಹರವಾಗಿ ಬಾರಿಸಲ್ಪಟ್ಟು ಒಂದೆರಡು ಹಿಂದುಸ್ಥಾನಿಪದಗಳು ಅಂಧಗಾಯಕರಿಂದ ಹಾಡಲ್ಪಟ್ಟವು. ಇವರ ವಾದನ ವೈಖರಿಯನ್ನು ಎಲ್ಲರೂ ಶ್ಲಾಘಿಸಿದರು. ಆ ಮೇಲೆ ಪಂ|| ವೀರಭದ್ರಶಾಸ್ತ್ರಿಗಳು ಹಿಂದೀಭಾಷೆಯಲ್ಲಿ ದಾಕ್ಷಿಣಾತ್ಯ ಸಂಗೀತ ಮತ್ತು ತಂತ್ರೀವಾದ್ಯಗಳ ವಿಷಯವನ್ನು ಸಮುಚಿತವಾಗಿ ನಿವೇದಿಸಿ ಕಾಶೀವೀರಶೈವ ವಿದ್ವನ್ಮಂಡಲಿಯಲ್ಲಿ ವೃದ್ಧಪಿತಾಮಹರಾದ ಪಂಡಿತವರ್ಯ ಶ್ರೀ ಭಾಲಾಕ್ಷಶಾಸ್ತ್ರಿಗಳವರ ಅಪ್ಪಣೆಯ ಮೇರೆಗೆ ಅವರ ಹಸ್ತಸ್ಪರ್ಶದಿಂದಲೇ ವಿದ್ವನ್ಮಂಡಲಿಯಿಂದ ಬಹುಸುಂದರವಾಗಿ ಮಾಡಿಸಲ್ಪಟ್ಟ "ಫಿಟೀಲ ವಿಶಾರದ" ಎಂಬ ಪ್ರಶಸ್ತಿಯುಕ್ತವಾದ ಪದಕವು ಮ|| ರಾ|| ಶಿವರುದ್ರಪ್ಪನವರಿಗೆ ಆಶೀರ್ವದಿಸಲ್ಪಟ್ಟಿತು. ಅನಂತರ ಪಂ|| ಭಾಲಾಕ್ಷಶಾಸ್ತ್ರಿಗಳವರು ಸ್ವಂತವಾಗಿ ಶಿವರುದ್ರಪ್ಪನವರಿಗೂ, ಅವರ ತಾಯಿ, ತಂದೆ ಮೊದಲಾದವರಿಗೂ ಅಷ್ಟಮುಖರುದ್ರಾಕ್ಷಿ ರುದ್ರಾಕ್ಷಮಾಲೆ, ಶಾಲು, ಚಾಕು, ರೇಶ್ಮೆಯ ಖಾನ ಮುಂತಾದವುಗಳನ್ನು ಆಶೀರ್ವದಿಸಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು. ಆ ಮೇಲೆ ಮ|| ರಾ|| ಶಿವರುದ್ರಪ್ಪನವರು ಎದ್ದುನಿಂತು ವಾರಾಣಸೀ ವೀರಶೈವ ವಿದ್ವನ್ಮಂಡಲಿಯನ್ನು ಕುರಿತು ಕೆಳಗಿನ ಕಂದಪದ್ಯಗಳನ್ನು ಅಂದವಾಗಿ ಹಾಡಿದರು.

ಕಂದ|| ಆವುದು ನಿಜಮಾರ್ಗದ ಶಿವ |
ದೇವನ ಪದಭಕ್ತಿಯಾಗಿ ತೋರುವುದೋ ಮೇ ||
ಲಾವುದು ಪೂರ್ವಾಚಾರ್ಯರ |
ಸೇವೆಯೆ ಘನಮೆಂದು ಜಗದಿ ಸಾರುತಲಿಹುದೋ ||೧||

ಆವುದು ವೇದಾಗಮಗಳ |
ಭಾವನೆಯಿಂದಾದ ವೀರಶೈವವನೀಗಳ್ ||
ಕಾವುದರೊಳ್ ಸುಸಮರ್ಥಮ |
ದಾವುದು ಸನ್ಮಾರ್ಗಗಾಮಿಗಾನಂದಕರಂ ||೨||

ಆವುದು ದೇಶದ ಜನಹಿತ |
ಕಾವಗಮುತ್ಕರ್ಷಯತ್ನಗೈವುದೊ ಮತ್ತಿ ||
ನ್ನಾವುದು ಸಂಗೀತಕಲಾ |
ಕೋವಿದವಿದು ವೀರಶೈವವಿದ್ವತ್ಸಂಘಂ ||೩||

ಎಂದು ಹೇಳಿ ಕುಳಿತುಕೊಂಡರು. ಬಳಿಕ ಶ್ರೀ ಜಗದ್ಗುರು ಮಹಾಪೀಠದ ಪ್ರಸಾದವೆಲ್ಲರಿಗೂ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಕಾಶೀ ವೀರಶೈವ ವಿದ್ವತ್ಸಂಘ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ವೀರಶೈವ ವಿದ್ವತ್ಸಂಘವು ಪ್ರಾಚೀನಕಾಲದಿಂದ ನಡೆದುಬರುತ್ತಿದ್ದರೂ ನಿಯಮಬದ್ಧವಾಗಿ ಕಾರ್ಯನಿರ್ವಹಣಮಾಡಬೇಕೆಂಬ ಉದ್ದೇಶದಿಂದ ತಾ|| ೫-೯-೩೩ ನೆಯ ಸಾಯಂಕಾಲ ಮಹಾಸಂಸ್ಥಾನದ ಗಣಪತಿಮಂದಿರದಲ್ಲಿ ವಕ್ತೃತ್ವ ಕಲೋತ್ತೇಜಕ ಸಂಘದ ಸಭೆಯು ಸೇರಿದ್ದು ಸರ್ವಾನುಮತದಿಂದ 'ಕಾಶೀ ವೀರಶೈವ ವಿದ್ವತ್ಸಂಘವು' ಪುನರುಜ್ಜೀವನಗೊಳಿಸಲ್ಪಟ್ಟು ನಮ್ಮ ಗುರುಕುಲದಲ್ಲಿಯೇ ಇರಬೇಕೆಂದು ನಿರ್ಣಯವಾಯಿತು. ವೀರಶೈವ ಪಂಡಿತೋತ್ಕರ್ಷಸಾಧನೆ, ಧರ್ಮಪ್ರಚಾರ ಮೊದಲಾದ ಕಾರ್ಯಗಳೇ ಇದರ ಉದ್ದೇಶಗಳಾಗಿವೆ. ಇವು ನೆರವೇರಬೇಕಾದರೆ ತಕ್ಕಷ್ಟು ದ್ರವ್ಯಸಂಗ್ರಹವು ಬೇಕೆಂದು ಪ್ರಸ್ತಾಪಿಸಲಾಗಿ ತತ್ಕಾಲದಲ್ಲಿಯೇ ಕಾಶಿಗೆ ಬಂದ ಕೆಲ ಯಾತ್ರಿಕಮಹನೀಯರೂ, ಶ್ರೀ ಗುರುಕುಲದ ವಿದ್ವತ್ಸಂಘದವರೂ ಸಂತೋಷದಿಂದ ವಾಗ್ದಾನಮಾಡಿದ ಹಣವು ಸುಮಾರು ೨೦೦ ರೂಪಾಯಿಗಳಷ್ಟು ಕೂಡಿತು. ಮುಂದೆಯೂ ಇದರ ಅಭಿವೃದ್ಧಿಗೋಸ್ಕರ ವೀರಶೈವ ಮಹನೀಯರು ತಮ್ಮಲ್ಲಾಗತಕ್ಕ ವಿವಾಹಾದಿ ವಿಶೇಷ ಶುಭಕಾರ್ಯಗಳಲ್ಲಿ ಶಕ್ತ್ಯನುಸಾರವಾಗಿ ಸಹಾಯವನ್ನು ಮಾಡಬೇಕಾಗಿ ಕೋರುವೆವು. ಈ ಸಂಘಕ್ಕೆ ಪಂ|| ಭಾಲಾಕ್ಷಶಾಸ್ತ್ರಿಗಳು ಆಜೀವಸಭಾಧ್ಯಕ್ಷರಾಗಿಯೂ ಆರು ತಿಂಗಳವರೆಗೆ ಶ್ರೀ ಮಹಿಷಾಳದ ಪಟ್ಟಾಧ್ಯಕ್ಷರು ಕಾರ್ಯದರ್ಶಿಗಳಾಗಿಯೂ ಸಮ್ಮತಿಸಲ್ಪಟ್ಟರು. ಇದರ ನಿಯಮ ಮುಂತಾದ ವಿಶೇಷ ವಿಷಯಗಳು ಪ್ರಸಂಗಾನುಸಾರವಾಗಿ ಮುಂದೆ ಪ್ರಕಟಿಸಲ್ಪಡುವವು.

ನಿವೇದಕ
ಕೆ. ಬಿ. ಸ್ವಾಮಿ ಮಹಿಷಾಳ
ಕಾಶೀ ವೀರಶೈವ ವಿದ್ವತ್ಸಂಘ, ಜಂಗಮವಾಡೀ ಮಠ,
ಬನಾರಸ್ ಸಿಟಿ.

ಫ್ರೆಂಚ್ ದೇಶದ ಈಗಿನ ಪ್ರೆಸಿಡೆಂಟರಾದ ಎಂ. ಲೆಬರ್ನ್‌ರವರು ಕೆಲವು ದಿವಸಗಳ ಹಿಂದೆ ಒಂದು ದಿನ ಪ್ರಚ್ಛನ್ನವೇಷದಿಂದ ರಸ್ತೆಯಲ್ಲಿ ಹೋಗುತ್ತಿರುವಾಗ ಸೈಕಲ್ಲಿನ ಮೇಲೆ ಬರುತ್ತಿದ್ದವನೊಬ್ಬನು ಇವರಿಗೆ ಡಿಕ್ಕಿ ಹೊಡೆದು ಅವರನ್ನೂ ಬೀಳುವಂತೆಮಾಡಿ ತಾನೂ ಬಿದ್ದನು! ಲೆಬರ್ನರವರು ಮರುದಿವಸ ತನ್ನನ್ನು ಬೀಳಿಸಿದವನ ಹೆಸರನ್ನು ವಿಚಾರಿಸಿ, ಸೈಕಲ್ ರಿಪೇರಿಗಾಗಿ ಒಂದು ಚೆಕ್ಕನ್ನು ಕಳುಹಿಸಿದರಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 9

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ.

[42]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇವು ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

☞ ಶುದ್ಧ ಚಿಕಿತ್ಸಾಮದ್ದುಗಳೂ, ಹೋಮ್ಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪಟ್ಟಿಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಟ್—ಉಬ್ಬಸ, ಸೇಡಕ, ದರ್ದ್ ರೋಗಗಳನ್ನೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಪರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಪರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಮಲೇರಿಯಾನ ಕಂಪೆನಿ,
(ಪಂಪನಕಟ್ಟೆ), 21, ಮಂಗಳೂರು. [7]

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗತೆ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ ರೋಗ, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕಚೇರಿಯಲ್ಲೇ ಕೂತಿರಬೇಕಾದವರಿಗೂ, ಭೋಗಶಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಹಗಲು ರಾತ್ರಿಯಾಗಲಿ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[40]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೬ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೬ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशिनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟಿಪ್ಪಣಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

(Registered Trade Mark)

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪೀನಸಿ, ಒಂ ತಲೆನೋವು, ತಲೆಯ ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[41] ಪೋ. ಬಾ. ೫೧೦, ಮದರಾಸ್

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರದೇಶದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಅಕ್ಟೋಬರ್ ೧೯೩೩ [ಸಂಚಿಕೆ ೨೬

ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸ್‌ರವರಿಗೆ ಸನ್ಮಾನ

ಬೆಂಗಳೂರು ಸಿಟಿ.

ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸ್‌ರಾದ ಶ್ರೀಮಾನ್ ಪಿ. ಮಹಾದೇವಯ್ಯನವರಿಗೆ ಶ್ರೀಮನ್ಮಹಾರಾಜರವರು "ರಾಜಧರ್ಮಪ್ರವೀಣ" ಎಂಬ ಮಹಾಬಿರುದನ್ನು ಅನುಗ್ರಹಿಸಿದ ಸಂತೋಷಾರ್ಥವಾಗಿ, ಮೈಸೂರು ಹೈಕೋರ್ಟಿನಲ್ಲಿ ಸರಕಾರಿ ಅಡ್ವೋಕೇಟರಾದ ಮಿ|| ಎ. ಆರ್. ನಾಗೇಶ್ವರಅಯ್ಯರವರು ೯ನೆಯ ತಾರೀಖಿನ ದಿವಸ ಬಾರಿನವರ ಪರವಾಗಿ ತಮ್ಮ ಅಭಿವಂದನಗಳನ್ನು ಸಮರ್ಪಿಸುತ್ತ ಹೇಳಿದುದೇನೆಂದರೆ:—

"ಕಳೆದ ತಿಂಗಳು ದಸರಾ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ತಮಗೆ "**ರಾಜಧರ್ಮಪ್ರವೀಣ**" ಎಂಬ ಘನತರವಾದ ಬಿರುದನ್ನು ದಯಪಾಲಿಸಿದುದಕ್ಕಾಗಿ ನಾವೆಲ್ಲರೂ ಸಂತೋಷಭರಿತರಾಗಿರುತ್ತೇವೆ. 1931ನೇ ಇಸವಿಯಲ್ಲಿ ತಮ್ಮನ್ನು ಬಾರಿನವರ ಪರವಾಗಿ ಘನತೊಂದಿದ ಈ ಕೋರ್ಟಿನ ನ್ಯಾಯಾಧೀಶರನ್ನಾಗಿ ಸ್ವಾಗತಿಸುವ ಅವಕಾಶವನ್ನೂ, ಸುಮಾರು ಒಂದು ವರ್ಷದ ಹಿಂದೆ ತಾವು ಚೀಫ್ ಜಸ್ಟಿಸ್‌ರಾಗಿ ನೇಮಿಸಲ್ಪಟ್ಟಾಗ ತಮ್ಮನ್ನು ಅಭಿನಂದಿಸುವ ಅವಕಾಶವನ್ನೂ ನಾನು ಹೊಂದಿದ್ದೆನು. ಆ ಸಂದರ್ಭದಲ್ಲಿ ನಾನು ತಮ್ಮ ಮಹತ್ವದ ಜೀವನ ಚರಿತ್ರೆಯ ವಿಷಯವಾಗಿಯೂ, ಸರಕಾರದವರ ಮೆಚ್ಚುಗೆಗೆ ಪಾತ್ರರಾಗಲು ತಮ್ಮಲ್ಲಿ ನೆಲೆಸಿರುವ ಅಮೋಘಗಳಾದ ಗುಣಗಳ ವಿಷಯವಾಗಿಯೂ ಪ್ರಸ್ತಾಪಮಾಡಿದ್ದೆನು.

ಸಂಸ್ಥಾನದ ನ್ಯಾಯಶಾಖೆಯ ಮುಖ್ಯಾಧಿಕಾರವನ್ನು ವಹಿಸಿದ ಒಂದು ವರ್ಷದಲ್ಲಿ ತಾವು ಬಾರಿನ ಮೆಂಬರರಿಗೂ, ನ್ಯಾಯವಾದಿಗಳಿಗೂ ಹಾಗೂ ಜನಸಾಮಾನ್ಯಕ್ಕೂ ಸಂಪೂರ್ಣ ತೃಪ್ತಿಯುಂಟಾಗುವಂತೆ ಕಾರ್ಯಗಳನ್ನು ನಿರ್ವಹಿಸಿರುತ್ತೀರಿ. ಆದುದರಿಂದ ತಮ್ಮ ಬುದ್ಧಿಶಕ್ತಿಗೂ ಮತ್ತು ಯೋಗ್ಯತೆಗೂ ತಕ್ಕಂತೆ ಶ್ರೀಮನ್ಮಹಾರಾಜರವರಿಂದ ಸನ್ಮಾನಿಸಲ್ಪಟ್ಟಿರುವುದು ಅತ್ಯಂತ ಆನಂದದ ಸಂಗತಿಯಾಗಿರುವದು.

'**ರಾಜಧರ್ಮಪ್ರವೀಣ**' ಎಂಬ ಬಿರುದಿನ ಸರಿಯಾದ ಅರ್ಥವನ್ನು ನೋಡಿದರೆ ತಮಗೆ ಮಾಡಿರುವ ಸನ್ಮಾನದ ನಿಜವಾದ ಮಹತ್ವವು ವ್ಯಕ್ತವಾಗುವದು. 'ಪ್ರವೀಣ' ಎಂದರೆ ಪ್ರವೀಣತೆಯನ್ನು ಪಡೆದವರು ಎಂದರ್ಥ. ಆದ್ದರಿಂದ 'ರಾಜಧರ್ಮಪ್ರವೀಣ' ಎಂದರೆ 'ಶ್ರೀಮನ್ಮಹಾರಾಜರವರ ಕಾಯಿದೆಯ ಆಡಳಿತದಲ್ಲಿ ಪ್ರವೀಣತೆಯನ್ನು ಪಡೆದವರು' ಎಂದು ಅರ್ಥವಾಗುವದು. ನ್ಯಾಯಾಧೀಶರಾದವರಿಗೆ ದೊರಕುವ ಪದವಿಗಳಲ್ಲಿ ಇದಕ್ಕಿಂತಲೂ ಹೆಚ್ಚಿನ ಪದವಿಯು ಮತ್ತಾವುದೂ ಇರಲಾರದು. ತಾವು ಈ ಪದವಿಗೆ ಸಂಪೂರ್ಣ ಅರ್ಹತೆಯುಳ್ಳವರಾಗಿರುವಿರೆಂಬುದನ್ನು ನಾನೇನೂ ಹೇಳಬೇಕಾಗಿಲ್ಲ."

ಚೀಫ್‌ಜಸ್ಟಿಸ್‌ರವರ ಉತ್ತರ.

ಇದಕ್ಕೆ ಉತ್ತರವಾಗಿ ಚೀಫ್‌ಜಸ್ಟಿಸ್‌ರವರು ಹೇಳಿದುದೇನೆಂದರೆ:—ನಮ್ಮನ್ನಾಳುವ ಮಹಾಪ್ರಭುಗಳವರಿಂದ ನನಗೆ ಅನುಗ್ರಹಿಸಲ್ಪಟ್ಟ ಸನ್ಮಾನದ ಸಂಬಂಧವಾಗಿ ನನಗೆ ಮಾಡಿದ ಅಭಿನಂದನೆಗಾಗಿಯೂ, ಮತ್ತು ಸಂಸ್ಥಾನದ ನ್ಯಾಯಶಾಖೆಯ ಮುಖ್ಯಾಧಿಕಾರಿಯಾಗಿ ನಾನು ಮಾಡಿದ ಕೆಲಸಗಳ ಪ್ರಶಂಸೆಗಾಗಿಯೂ, ನಾನು ಬಾರಿನ ಮೆಂಬರರಿಗೆ ತುಂಬಾ ಕೃತಜ್ಞನಾಗಿರುತ್ತೇನೆ. ನನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿಯೂ, ಆತ್ಮಸಾಕ್ಷಿಗನುಸಾರವಾಗಿಯೂ, ಮತ್ತು ನನ್ನ ಕೈಲಾದಷ್ಟುಮಟ್ಟಿಗೆ ಎಲ್ಲರಿಗೂ ಜಾಗ್ರತೆಯಾಗಿ ನ್ಯಾಯವು ದೊರಕುವಂತೆಯೂ ನಿರ್ವಹಿಸಬೇಕೆಂಬುದೇ ನನ್ನ ಪ್ರಯತ್ನವಾಗಿದೆ. ಈ ನನ್ನ ಪ್ರಯತ್ನಗಳು ಬಾರಿನ ಮೆಂಬರರಿಂದಲೂ, ನ್ಯಾಯವಾದಿಗಳಿಂದಲೂ ಮತ್ತು ಜನಸಾಮಾನ್ಯದಿಂದಲೂ ಮೆಚ್ಚಲ್ಪಟ್ಟಿರುವದನ್ನು ನೋಡಿ ನನಗೆ ಅತ್ಯಾನಂದವುಂಟಾಗಿರುವುದು. ಈ ನನ್ನ ಪ್ರಯತ್ನವಿಶೇಷಗಳು ಫಲಕಾರಿಗಳಾಗಿ ನಡೆಯುತ್ತಿರುವುದಕ್ಕೆ ನ್ಯಾಯವಾದಿಗಳಾದ ತಮ್ಮೆಲ್ಲರ ಹೃತ್ಪೂರ್ವಕವಾದ ಸಹಾನುಭೂತಿಯೇ ಮುಖ್ಯಕಾರಣವಾಗಿರುತ್ತದೆ. ಈ ವಿಷಯವಾಗಿ ನಾನು ಹಿಂದೆ ಒಂದಾವರ್ತಿ ಪ್ರಸ್ತಾಪಿಸಿದ್ದೆನು. ಈ ಅಭಿಮಾನವು ನಾನು ಅಧಿಕಾರದಲ್ಲಿರುವವರೆಗೂ ಇದ್ದೇ ಇರುವದೆಂದು ಸಂಪೂರ್ಣವಾಗಿ ನಂಬಿರುತ್ತೇನೆ.

ತಾವೆಲ್ಲರೂ ನನ್ನ ವಿಷಯದಲ್ಲಿ ತೋರಿಸಿದ ಪ್ರೀತಿ, ವಿಶ್ವಾಸಗಳಿಗಾಗಿ ನಾನು ಮತ್ತೊಮ್ಮೆ ತಮ್ಮೆಲ್ಲರನ್ನು ವಂದಿಸುತ್ತೇನೆ.

ಶ್ರೀ ಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸ್ತ್ರೀಯರಸಭೆ, ಸೋಲಾಪುರ.

ಇದೇ ಅಕ್ಟೋಬರ್ ೧೦ ನೇ ತಾರೀಖಿನ ದಿವಸ ಸೋಲಾಪುರದ ಶ್ರೀಮದ್ವೀರಶೈವ ಮಹಿಳಾಜ್ಞಾನಮಂದಿರದಲ್ಲಿ ಶ್ರೀ ಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೀರಶೈವ ಮಹಿಳೆಯರ ಸಭೆಯು ಸೇರಿತು. ಈ ಸಂದರ್ಭದಲ್ಲಿ ಸೌ|| ಗೌರಾಬಾಯಿ ಧುಮ್ಮಾ ಮತ್ತು ಸೌ|| ಸೋನುಬಾಯಿ ಸೇಟಿ ಇವರಿಬ್ಬರು "ವೀರಶೈವ ಮತಸ್ಥಾಪಕರು" ಎಂಬ ವಿಷಯವಾಗಿ ಸಂವಾದರೂಪವಾದ ಭಾಷಣವನ್ನು ಮಾಡಿದರು. ಅನಂತರ ಸೌ|| ಸುಶೀಲಾಬಾಯಿ ಪಟಣೆ ಇವರು "ಶ್ರೀ ಮಜ್ಜಗದ್ಗುರು ಪಂಚಾಚಾರ್ಯರು ಎಲ್ಲಿ ಯಾವಕಾಲದಲ್ಲಿ ಅವತರಿಸಿದರು?" ಎಂಬ ವಿಷಯವಾಗಿ ಒಂದು ಪ್ರಬಂಧವನ್ನು ಓದಿದರು. ಸೌ|| ಗಂಗೂಬಾಯಿ ಚವ್ಹಾಣ ಇವರು ತಮ್ಮ ಮೃದುಮಧುರಧ್ವನಿಯಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ಭೂಲೋಕದಲ್ಲಿ ಅವತರಿಸಿ ಮಾಡಿದ ಮಹಾತ್ಮ್ಯಗಳ ವಿಷಯದಲ್ಲಿ ಮನೋಹರವಾದ ಉಪನ್ಯಾಸವನ್ನು ಮಾಡಿದರು. ಸೌ|| ಗೌರಾಬಾಯಿ ಧುಮ್ಮಾ ಇವರು ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಭೂಲೋಕದಲ್ಲಿ ಅವತರಿಸಿ ಮಹಮಹಾಋಷಿಗಳನ್ನು ಉದ್ಧಾರಮಾಡಿದರೆಂಬ ವಿಷಯವಾಗಿ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಬರೆದು ತಂದಿದ್ದ ಉಪನ್ಯಾಸಗಳನ್ನು ಓದಿ ಎಲ್ಲರನ್ನೂ ಸಂತೋಷಪಡಿಸಿದರು. ಅನಂತರ ಸೌ|| ಸೋನುಬಾಯಿ ಸೇಟಿ, ಸೌ|| ಗಂಗೂಬಾಯಿ ಚವ್ಹಾಣ ಮತ್ತು ಕಾರವಾಬಾಯಿ ಇವರು ಪಂಚಾಚಾರ್ಯರು ಗಗನಮಾರ್ಗವಾಗಿ ಭರತಖಂಡದಲ್ಲಿಯೂ ಇತರ ಖಂಡಗಳಲ್ಲಿಯೂ ಸಂಚರಿಸಿ ಸರ್ವತ್ರ ಶಿವಭಕ್ತಿಯನ್ನು ಪ್ರಚಾರಮಾಡಿದರೆಂಬ ವಿಷಯವಾಗಿಯೂ, ಸೌ|| ಇಂದುಮತಿ ಮಡಕಿ, ಸೌ|| ಪಾರ್ವತಿಬಾಯಿ ಶಿರಸಿ ಇವರು ಸಂವಾದರೂಪವಾಗಿ ಅಷ್ಟಾವರಣ ವಿಷಯವಾಗಿಯೂ, ಸೌ|| ಕಾಶೀಬಾಯಿ ರಿಳ್ಳೆ, ಸೌ|| ಮಹಾದೇವಿ ರಿಳ್ಳೆ ಇವರೂ ಸಹ ಸಂವಾದರೂಪವಾಗಿ ಅದೇ ಅಷ್ಟಾವರಣದ ವಿಷಯವಾಗಿಯೂ, ಸೌ|| ಗುಂಡಮ್ಮನವರು ನೀತಿಯ ವಿಷಯವಾಗಿಯೂ, ಸೌ|| ಗಂಗೂಬಾಯಿ ಚವ್ಹಾಣ ಮತ್ತು ಸೌ|| ಇಂದುಮತಿ ಮಡಕಿ ಇವರು ಚಹಾ ಕುಡಿಯುವದರಿಂದ ಉಂಟಾಗುವ ಹಾನಿಗಳ ವಿಷಯವಾಗಿಯೂ ಎಲ್ಲರ ಮನಸ್ಸಿಗೂ ಆನಂದವಾಗುವಂತೆ ಭಾಷಣಗಳನ್ನು ಮಾಡಿದರು. ಅನಂತರ ಶ್ರೀಮದ್ವೀರಶೈವ ಮಹಿಳಾಜ್ಞಾನಮಂದಿರದ ಸೆಕ್ರೆಟರಿಗಳಾದ ಸೌ|| ಭಾಗೀರಥೀಬಾಯಿ ಕಟಕ ಇವರು ಶ್ರೀ ಮಜ್ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಇಲ್ಲಿಗೆ ದಯಮಾಡಿಸಿ ಇಲ್ಲಿಯ [illegible] ಉದ್ಧರಿಸಿದ ವಿಷಯವಾಗಿಯೂ, ಶ್ರೀ ರೇಣುಕಾಚಾರ್ಯರ ಮಹಿಮೆಯ ವಿಷಯವಾಗಿಯೂ ಭಕ್ತಿಯುಕ್ತವಾದ ಭಾಷಣವನ್ನು ಮಾಡಿ ಎಲ್ಲರನ್ನೂ ಆನಂದಾಬ್ಧಿಯಲ್ಲಿ ಮುಳುಗಿಸಿದರು. ಅನಂತರ ವೀರಶೈವ ಮಹಿಳಾಜ್ಞಾನಮಂದಿರದ ಮತ್ತೊಬ್ಬ ಸೆಕ್ರೆಟರಿಗಳಾದ ಸೌ|| ಸಂಗವ್ವಾಬಾಯಿ ಮಡಕಿ ಇವರು ತಮ್ಮ ಮಂದಿರದ ವಿಷಯವಾಗಿ ಪ್ರಸಂಗೋಚಿತವಾದ ಭಾಷಣವನ್ನು ಮಾಡಿ ಶ್ರೀ ಸನ್ನಿಧಿಯವರ ಆಶೀರ್ವಾದಬಲವು ತಮ್ಮ ಮಂದಿರದ ಮೇಲೆ ಸಂಪೂರ್ಣವಾಗಿರಬೇಕೆಂದು ಪ್ರಾರ್ಥಿಸಿದರು. ಅನಂತರ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ 'ಹೆಣ್ಣುಮಕ್ಕಳ ಕರ್ತವ್ಯ' ಎಂಬ ವಿಷಯವಾಗಿ ಉಪದೇಶವನ್ನು ಮಾಡಿ ಎಲ್ಲರನ್ನೂ ಆಶೀರ್ವದಿಸಿದರು. ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಮತ್ತು ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಪ್ರತ್ಯಕ್ಷದರ್ಶಿ.

ಪ್ರಕಟನೆ.

ಪ್ರೋಗ್ರಾಂ ನಿಶ್ಚಯಿಸಿದ್ದ ಪ್ರಕಾರ ರಂಭಾಪುರೀ ಶ್ರೀ ಜಗದ್ಗುರುಗಳವರು ನಾಯ್ಕನಹಟ್ಟಿಗೆ ಅಲ್ಲಿಯ ಭಕ್ತರ ಪ್ರಾರ್ಥನಾನುಸಾರವಾಗಿ ತಾ|| ೯-೧೦-೩೩ನೆಯ ಸೋಮವಾರ ಬಿಜಯಂಗೈಸಿದರು. ಪ್ರವೇಶೋತ್ಸವವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಇಲ್ಲಿಯ ಮತ್ತು ಸುತ್ತುಮುತ್ತಣ ಗ್ರಾಮಗಳ ಕಾಣಿಕಾ ವಸೂಲಿಯೂ ನಡೆದಿದೆ. ಇಲ್ಲಿ ಒಂದುವಾರ ಕಳೆಯಬಹುದು. ಜಗಲೂರು ಭಕ್ತರೂ ದಯಮಾಡಿಸಿಕೊಂಡು ಹೋಗಲು ಬಿನ್ನವಿಸಿಕೊಂಡಿರುವರು.

H. M. Raghavankiah,
14-10-33. *Agent.*

ಶ್ರೀ ಶಂಭುಲಿಂಗಶಿವಾಚಾರ್ಯರ ಪ್ರವಚನ.

ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳವರು ಈ ತಿಂಗಳು ಮೊದಲನೆಯ ವಾರದಲ್ಲಿ ಗದಗ ಮತ್ತು ಬೆಟಗೇರಿ ಭಕ್ತರ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿ 3 ದಿವಸಗಳವರೆಗೆ ಪ್ರವಚನಮಾಡಿ ವೀರಶೈವರಾದಿಯಾಗಿ ಸಮಸ್ತ ಮತೀಯರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡಿದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಶ್ರೀ ಶಿವಾಚಾರ್ಯರ ಪ್ರವಚನಪ್ರಣಾಲಿಯು ಅಸದೃಶವಾದುದು!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ಭಕ್ತಿಯೇ ಮುಕ್ತಿಗೆ ಸೋಪಾನ.

ಗೆಜ್ಜಲಗಟ್ಟ ಸಂಸ್ಥಾನಕ್ಕೆ ಒಳಪಟ್ಟ ಚಿಕ್ಕಹೆಸರೂರು ಗ್ರಾಮದ ನಾಡಗೌಡ ವೆಂಕಮ್ಮನವರು ತಮ್ಮ ಚಿ|| ಬಸವಪ್ರಭುವಿನ ಜನನಕಾಲದ ಶಾಂತಿಗಾಗಿ ಏಕಾದಶ ವರ್ಷಗಳ ವರೆಗೆ ಮಹಾರುದ್ರಾಭಿಷೇಕವನ್ನು ನೆರವೇರಿಸುತ್ತೇವೆಂದು ಸಂಕಲ್ಪಿಸಿದ್ದರು. ಅವಸಾನಕಾಲದಲ್ಲಿ ತಮ್ಮ ಜ್ಯೇಷ್ಠ ಪುತ್ರಿಯರೂ ಸದಾಚಾರಿಗಳೂ ಆದ ಕಾಳಾಪುರದ ನಾಡಗೌಡ ಶ್ರೀಮತಿ ಅಮರಮ್ಮನವರಿಗೆ, ನಾನು ಆರು ವರ್ಷಗಳ ವರೆಗೆ ರುದ್ರಾಭಿಷೇಕವನ್ನು ಸರಿಯಾಗಿ ನಡೆಯಿಸುತ್ತ ಬಂದೆನು. ಉಳಿದೈದುವರ್ಷಗಳ ವರೆಗೆ ನಡೆಯಿಸಬೇಕೆಂದು ಹೇಳಿ ಈಗ ೩ ವರ್ಷಗಳ ಹಿಂದೆ ಶಿವಾಧೀನರಾದರು. ಅನಂತರ ಈ ಸಾಧ್ವೀಮಣಿಯರು ರಾವಣನು ವಿಭೀಷಣನಿಗೆ ತನ್ನ ಸಂಕಲ್ಪವನ್ನು ಹೇಳಿದಂತಾಯಿತೆಂದೂ ನಮ್ಮ ಗುರುಮೂರ್ತಿಗಳಿಂದ ಆ ಕಾರ್ಯವನ್ನು ನೆರವೇರಿಸಬೇಕೆಂದೂ ಪ್ರಯತ್ನಿಸಲು ನೂತನ ಗೃಹನಿರ್ಮಾಣಕಾರ್ಯವನ್ನು ಕೈಕೊಂಡ ಕಾರಣ ಅದು ಹಾಗೆಯೇ ಉಳಿಯಿತು. ಅವಿಶ್ರಾಂತಶ್ರಮವನ್ನು ವಹಿಸಿ ಮೂರುವರ್ಷಗಳಲ್ಲಿ ಗೃಹವನ್ನು ಪೂರ್ತಿಮಾಡಿ, ಗೃಹಪ್ರವೇಶ ಕಾರ್ಯವನ್ನು ಆ ಕಾಲಕ್ಕೆ ವೀರಮಾಹೇಶ್ವರವಟುಗಳ ದೀಕ್ಷಾಲಗ್ನ ಕಾರ್ಯವನ್ನು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿ ಯಶೋಭಾಗಿಗಳಾಗಿ ಮೊದಲಿನ ಮಾತೆಯ ಸತ್ಸಂಕಲ್ಪವನ್ನು ಕೊನೆಗಾಣಿಸುವದಕ್ಕಾಗಿ ತಮ್ಮ ಸಂಸ್ಥಾನದ ಗುರುಗಳೂ ವೀರಗೋತ್ರೋತ್ಪನ್ನರೂ ಬನ್ನಿಕೊಪ್ಪ, ಬೇಳೂರು, ಪೂಲಬಾವಿ ಗ್ರಾಮಗಳ ಬೃಹನ್ಮಠಾಧೀಶರೂ ಕವಿಪುಂಗವರೂ ಆಗಿರುವ ವೇ|| ಅಮರನಾಥಶಾಸ್ತ್ರಿಗಳವರನ್ನೂ ಲಕ್ಷ್ಮೀಪುರ ಜಹಗೀರದಾರ ರಂಗನಗೌಡರೇ ಮೊದಲಾದ ಬಂಧುವರ್ಗವನ್ನೂ ಮೊದಲೇ ಕರೆಯಿಸಿಕೊಂಡು ಗುನಿಬಂಟಿ ಸಂಸ್ಥಾನದ ಪಟ್ಟಸ್ಥಲಬ್ರಹ್ಮಿಗಳಾದ ಶ್ರೀ ಪಟ್ಟಾಧ್ಯಕ್ಷ ವಿರೂಪಾಕ್ಷಸ್ವಾಮಿಗಳವರ ದಿವ್ಯಪಾದಕ್ಕೆ ವೇದೋಕ್ತವಾಗಿ ಕವೀಂದ್ರರು ವೇ|| ವೀರಭದ್ರಶಾಸ್ತ್ರಿಗಳು ಕುಷ್ಟಗಿ ಅವರ ಪಾಠಶಾಲಾ ವಿದ್ಯಾರ್ಥಿಗಳು ಈ ಮಂಡಲಿಯಿಂದ ಮಹಾರುದ್ರಾಭಿಷೇಕಕಾರ್ಯವನ್ನು ನೆರವೇರಿಸಿ ಬಂದ ಗಣತಿಂತಿಣಿಗೆ ಭಕ್ಷ್ಯಭೋಜ್ಯಾದಿಗಳಿಂದಲೂ ಅರ್ಘದಕ್ಷಿಣಾತಾಂಬೂಲಾದಿಗಳಿಂದಲೂ ತೃಪ್ತಿಗೊಳಿಸಿದರು. ಆಗ್ಗೆ ಕವೀಂದ್ರರು ಇವರಲ್ಲಿರುವ ಮಾತೃಭಕ್ತಿಯ ನಿಜಗುರುಭಕ್ತಿಯ ಆನಂದೋದ್ರೇಕವನ್ನು ನೋಡಿ ಇವರಿಂದಾದ ನೂತನ ಗೃಹಕ್ಕೆ "ಶ್ರೀ ಶಿವಾನಂದ ಮಂದಿರಂ" ಎಂದು ಶ್ರೀಮದ್ರೇಣುಕ ಪೀಠದಲ್ಲಿ ಸದ್ಯ ವಿರಾಜಿಸುವ ಜಗದ್ಗುರು ಶ್ರೀ ಶಿವಾನಂದರಾಜೇಂದ್ರಶಿವಾಚಾರ್ಯರ ಪವಿತ್ರಾಭಿಧಾನವನ್ನು ಕರೆಯಲು ಸಕಲ ಮಾಹೇಶ್ವರರೂ ಪಾಠಶಾಲಾ ವಿದ್ಯಾರ್ಥಿಗಳೂ ಬಂಧುವರ್ಗದವರೂ ಜಯಘೋಷವನ್ನು ಮಾಡಿದರು. ಈ ಮಂದಿರಕ್ಕೆ ಶ್ರೀ ಶಿವಾನಂದ ಜಗದ್ಗುರುವು ಸಕಲ ಸಂಪತ್ತುಗಳನ್ನು ಕೊಡಲಿ. ಶ್ರೀಮತಿ ಅಮರಮ್ಮನವರು ಕಾಳಾಪುರಸಂಸ್ಥಾನದ ನಾಡಗೌಡ ರುದ್ರಪ್ಪನವರ ಸಹೋದರರಾದ ಮ|| ಜಡೆ ರಾವ್ ಮಹೋದಯರ ಧರ್ಮಪತ್ನಿಯರು. ಶ್ರೀಯುತ ಜಡೆ ರಾವ್ ಮಹೋದಯರು ಸಂಗೀತಜ್ಞರೂ ಆಚಾರಾಭಿಮಾನಿಗಳೂ ಇದ್ದುದರಿಂದ "ಶ್ರೀ ರೇಣುಕಾಚಾರ್ಯ ಭಜನಾಸಂಘ"ವನ್ನು ಸ್ಥಾಪಿಸಿ ಗತಿಸುವ ಕಾಲಕ್ಕೆ ಅದರ ಭಾರವನ್ನು ಇವರಿಗೆ ವಹಿಸಿ ಕೈಲಾಸವಾಸಿಗಳಾಗಲು ಇವರು ಈಗ ೨೦ ವರ್ಷಗಳ ಲಾಗಾಯತು ಕಾಳಾಪುರವನ್ನು ಬಿಟ್ಟು ಚಿಕ್ಕಹೆಸರೂರಲ್ಲಿ ಇದ್ದರೂ ಅದೇ ಹೆಸರಿನ ಸಂಘಕ್ಕೆ ಆ ಗ್ರಾಮದ ಪೋ|| ಪಾ|| ಬಸವನಗೌಡ ಮಾಲೀ ಪಾ|| ಮಲ್ಲೇಶಪ್ಪ ಇವರನ್ನು ಮೆಂಬರರನ್ನಾಗಿ ಮಾಡಿ ತಮ್ಮ ಕ್ಲಾರ್ಕ ಪಿ. ಎಂ. ಗುರುಪಾದಾರ್ಯರನ್ನು ಕಾರ್ಯದರ್ಶಿಯನ್ನಾಗಿ ಮಾಡಿ ಇಂದಿಗೂ ನಡೆಸುತ್ತಿರುವರು. ಇದಲ್ಲವೇ ಪತಿಭಕ್ತಿಯು? ಈ ಸಾಧ್ವೀಮಣಿಯರಿಗೂ, ಸಹೋದರ ಗುರುಬಸವಮ್ಮನವರಿಗೂ, ಇವರ ಚಿ|| ರಾ|| ಬಸವಪ್ರಭುವಿಗೂ ಶ್ರೀ ರೇಣುಕನು ಸದಾ ಸತ್ಸಂತತಿಯನ್ನು ಕೊಟ್ಟು ಕಾಪಾಡಲೆಂದು ನಂಬಿರುವ,

ಅಮರಾರ್ಯ ಕೋಳೀವಾಳ, ಮಾಸ್ತರ,
ಚಿಕ್ಕಹೆಸರೂರು.

ಶ್ರೀಗುರು ಮಲಯಶಾಂತೇಶ್ವರ ಪ್ರಸೀದ.

ಪುರಾಣಮಹೋತ್ಸವ,

ಹಿರೇಸಂದೂರು.

ಪಾಗಾ ಇಲಾಖಾ ಚಿತಾಪೂರ ತಾ|| ಹಿರೇಸಂದೂರು ಶ್ರೀ|| ಷ|| ಬ್ರ|| ಸದಾಶಿವಶಿವಾಚಾರ್ಯ ಸ್ವಾಮಿಗಳು ತಮ್ಮ ಬೃಹನ್ಮಠದಲ್ಲಿ ಶ್ರೀ ಮಲಯ ಶಾಂತೇಶ್ವರ ಮಹಾಶಿವಯೋಗಿಗಳ ಪುರಾಣವನ್ನು ಇದೇ ಶ್ರೀಮುಖನಾಮಸಂವತ್ಸರ ಶ್ರಾವಣಾದಿಯಲ್ಲಿ ಪ್ರಾರಂಭಿಸಿ ಭಾದ್ರಪದ ಬಹುಳ ೧೧ ಶುಕ್ರವಾರ ರುದ್ರಾಭಿಷೇಕ, ಗುರುಪಾದಪೂಜಾ ಮತ್ತು ಮಹಾಗಣಾರಾಧನೆಯನ್ನು ನೆರವೇರಿಸಿದರು. ಶನಿವಾರ ಪ್ರಾತಃಕಾಲ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನು ಶೃಂಗರಿಸಿದ ಆಂದೋಳಿಕೆಯಲ್ಲಿ ಮೂರ್ತಗೊಳಿಸಿ ತಳಿರುತೋರಣಾದಿಗಳಿಂದಲಂಕೃತವಾದ ಗ್ರಾಮದ ಮುಖ್ಯಬೀದಿಗಳಲ್ಲೆಲ್ಲಾ ಉತ್ಸವವನ್ನು ಮಾಡಲಾಯಿತು. ಮೊಳಗುವ ವಾದ್ಯಗಳಿಂದಲೂ ಭಜನೆಗಳಿಂದಲೂ, ಕೋಲಾಟವನ್ನಾಡುತ್ತಬರುತ್ತಿದ್ದ ತರುಣರ ಜಯಘೋಷಗಳಿಂದಲೂ ಉತ್ಸವವು ಶೋಭಿಸುತ್ತಿತ್ತು. ಗುರುಭಕ್ತರು ದಾರಿಯುದ್ದಕ್ಕೂ ಕಾಯಿಕರ್ಪೂರಗಳನ್ನು ಸಮರ್ಪಿಸಿ ಧನ್ಯರಾಗುತ್ತಿದ್ದರು. ಈ ರೀತಿ ಉತ್ಸವವು ಗ್ರಾಮದ ಬೀದಿಗಳಲ್ಲೆಲ್ಲಾ ಸಂಚರಿಸಿ ಮಧ್ಯಾಹ್ನ ೧೨ ಘಂಟೆಗೆ ಮಠಕ್ಕೆ ಹಿಂತಿರುಗಿತು. ಅನಂತರ ಶ್ರೀ|| ಷ|| ಬ್ರ|| ಸದಾಶಿವಶಿವಾಚಾರ್ಯರು ಅಷ್ಟಾವರಣದ ವಿಷಯವಾಗಿಯೂ, ವೀರಶೈವಮಹಾಮತಸ್ಥಾಪನಾಚಾರ್ಯರ ಹಾಗೂ ಶ್ರೀ ಮಲಯ ಶಾಂತೇಶ್ವರಸ್ವಾಮಿಗಳ ವಿಷಯವಾಗಿಯೂ ಮಹತ್ವದ ಭಾಷಣವನ್ನು ಮಾಡಿದರು. ಆಮೇಲೆ ಧಾರ್ಮಿಕ ಸಂಬಂಧವಾದ ಕೆಲವು ಭಾಷಣಗಳು ನಡೆದು ಪ್ರಭಾಪೋಷಕಶ್ರೇಯಸ್ಕರ ೧ ರೂ. ಯು ಸಮರ್ಪಿಸಲ್ಪಟ್ಟಿತು. ಮಂಗಳವನ್ನು ಹಾಡಿದ ಮೇಲೆ ಶ್ರೀಗಳವರು ಎಲ್ಲರನ್ನೂ ಆಶೀರ್ವದಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಹತ್ಕಾರ್ಯದಲ್ಲಿ ವೇ|| ಶರಣಯ್ಯನವರು ಮ|| ರಾ|| ಗೌಡಪ್ಪ ಪೋಲೀಸ ಪಾಟೀಲ, ರಾ|| ಶರಣಪ್ಪ ಪಾಟೀಲ ರಾ|| ಶಿವಶರಣಪ್ಪ ಪಾಟೀಲ, ಮ|| ರಾ|| ಹಣಮಂತರಾವ್ ಕುಲಕರ್ಣಿ, ಬಸು ಮಹಿಟು ಪಾಟೀಲ ಮಾಲಿಪಾಟೀಲ, ರಾ|| ಬಸವಲಿಂಗಪ್ಪ ಬೀರಾದಾರ, ಚಿಕ್ಕನಂದೂರು, ರಾ|| ಬಸವಲಿಂಗಪ್ಪ ಶಾಂತವೀರಶೆಟ್ಟಿ ಮಹಗಾಂವ, ರಾ|| ಬಸಪ್ಪ ಸೀತಾ, ರಾ|| ಶರಣಪ್ಪ ಸಂಗಾರಿ, ರಾ|| ಬಸಪ್ಪ ಬೀರಾದಾರ, ರಾ|| ಶರಣಪ್ಪ ಸಜಾಮಪೂರ, ರಾ|| ಈರಪ್ಪ ಬೀರಾದಾರ, ರಾ|| ವೀರಭದ್ರಪ್ಪ ಪಾಟೀಲ, ರಾ|| ವೀರಪ್ಪ ಹಡಪದ, ರಾ|| ಬಸವಣ್ಣಪ್ಪ ಮಾಸ್ತರ, ರಾ|| ಪರಶುರಾಮ ಕಲಶೆಟ್ಟಿ, ರಾ|| ಕಲ್ಲಪ್ಪ ಕುಂಬಾರ, ವೇ|| ಮರಳಸಿದ್ದಯ್ಯ ಪೂಜಾರಿ, ರಾ|| ನರಸಿಂಗರಾವ್ ಕುಲಕರ್ಣಿ, ಪೀರಾಹುಸೇನಸಾಬ ಪಿರಜಾದೆ ಮೊದಲಾದ ಸದ್ಭಕ್ತರು ಅತ್ಯಂತ ಶ್ರಮವಹಿಸಿ ಕಾರ್ಯವನ್ನು ಪೂರೈಸಿರುತ್ತಾರೆ. ಈ ಸದ್ಭಕ್ತರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನುಂಟು ಮಾಡಲೆಂದು ಹಾರೈಸುವ,

ಓರ್ವ ಗುರುಭಕ್ತ.

ಸಮಾಜಕ್ಕಾದ ಹಿತವೇನು?

ಈಗ ಎರಡು ಮೂರುವಾರಗಳಿಂದಲೂ "ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ ಬೆಂಗಳೂರು" ಇದರ ಪರವಾಗಿ ಪಾಶ್ಚಾತ್ಯದೇಶಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ವಿಜ್ಞಾಪನಾ ಪತ್ರಿಕೆಯನ್ನು ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತಿರುವುದು ಸರಿಯಷ್ಟೇ! ಸರ್ವವೀರಶೈವರೂ ವಿದ್ಯೆಗಾಗಿ ತಮ್ಮ ಶಕ್ತ್ಯನುಸಾರವಾಗಿ ಸಹಾಯ ಮಾಡಲೇಬೇಕು. ವಿದ್ಯೆಯಿಂದಲೇ ಸಮಾಜವು ಮುಂದುವರಿಯಬೇಕಾಗಿದೆ. ಆದರೆ ಈಗ ಈ ಫಂಡಿನಿಂದ ವೇತನಗಳನ್ನು ಪಡೆದು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಾಶ್ಚಾತ್ಯದೇಶಗಳಿಗೆ ಹೋಗಿ ಕಲಿತುಬಂದವರಿಂದ ಫಂಡಿಗಾದ ಲಾಭವೇನು? ಮತ್ತು ಸಮಾಜಕ್ಕಾದ ಹಿತವೇನು? ಅತ್ಯಂತ ಕಷ್ಟದಿಂದ ಜೀವನವನ್ನು ಮಾಡುತ್ತಿರುವವರು ಮೊದಲುಗೊಂಡು ಶ್ರೀಮಂತರೂ, ಕೆಲಜನ ಮಠಾಧಿಪತಿಗಳೂ ಅವರವರ ಶಕ್ತ್ಯನುಸಾರವಾಗಿ ಕೊಟ್ಟೂ ಮತ್ತು ಕೊಡುತ್ತಲೂ ಇದ್ದಾರೆ. ಇಷ್ಟು ಕಷ್ಟಪಟ್ಟು ಕೊಟ್ಟು ಕೊಡಿಸಿದ ಹಣದಿಂದ ವೇತನಗಳನ್ನು ಪಡೆದು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿ ಬಂದವರಿಂದ ಸಮಾಜಕ್ಕೆ ಆಗುತ್ತಿರುವ ಲಾಭವೇನಪ್ಪಾ ಅಂದರೆ? ಇಲ್ಲಿಂದ ಹೋಗುವಾಗ್ಗೆ ಗುರುದೇವತಾಭಕ್ತಿ, ಮಾತಾಪಿತೃಭಕ್ತಿ, ದೇಶಭಕ್ತಿ, ಸಮಾಜಪ್ರೇಮ, ಸ್ವಧರ್ಮನಿಷ್ಠೆ, ಸ್ವದೇಶ ಸ್ವಧರ್ಮ ಸಂಸ್ಕೃತಿ, ವಿನಯ ಇತ್ಯಾದಿ ಗುಣಗಳೆಲ್ಲವೂ ಇರುತ್ತವೆ. ಗುರುದೇವತಾಭಕ್ತಿ ಎಂಬುದು ಹಡಗುಹತ್ತುವಾಗಲೇ ಮರೆತು ಹೋಗುತ್ತದೆ. ಇನ್ನು ಮಾತಾಪಿತೃಭಕ್ತಿಯನ್ನಂತೂ ಕೇಳಬೇಕಾಗಿಯೇ ಇಲ್ಲ. ಗರ್ಭದೊಳಗಿನ ಶಿಶುವಿನಿಂದಲೂ ಪ್ರಾಣಕ್ಕಿಂತಲೂ ಅತಿಶಯವಾಗಿ ಸಾಕಿ ಸಲುಹಿ ಕಷ್ಟಪಟ್ಟು ಹೊಟ್ಟೆಬಟ್ಟೆಗಿಲ್ಲದೆ ಇವರು ಕೇಳಿಕೇಳಿದ ಹಾಗೆ ಹಣವನ್ನು ಸಾಲಮಾಡಿ ಇಷ್ಟು ವಿದ್ಯಾಭ್ಯಾಸ ಮಾಡಿಸಿದ್ದಕ್ಕೆ ಅವರಿಗೆ ಫಲವೇನಪ್ಪಾ ಅಂದರೆ—ಇವರ ಜೊತೆಯಲ್ಲಿ ಇವರ ಸ್ನೇಹಿತರಾರಾದರೂ ಇವರುಗಳ ಮನೆಗೆ ಬಂದಾಗ ಈ ಮುದುಕರನ್ನು ಯಾರು ಎಂದು ಕೇಳಿದರೆ, ಹೇಳುವುದೇನು ಗೊತ್ತೇ? ಇಲ್ಲೀ ಮನೆಯಲ್ಲಿ ಕೆಲಸಮಾಡಿಕೊಂಡು ಇದ್ದಾರೆಂದು ಕೆಲವರು ಹೇಳುತ್ತಾರೆ. ಇಂಥ ಮಾತಾಪಿತೃದ್ರೋಹಿಗಳ ಮುಖವನ್ನು ನೋಡಬಹುದೇ? ಇವರನ್ನು ಹುಟ್ಟಿಸಿ, ಕಷ್ಟಪಟ್ಟು ವಿದ್ಯಾಭ್ಯಾಸಮಾಡಿಸಿದ್ದರ ಫಲವಿದು! ಮಾತಾಪಿತೃಭಕ್ತಿಗೆ ಬದಲಾಗಿ ಪುತ್ರಭಕ್ತಿಯನ್ನು ಮಾತಾಪಿತೃಗಳು ಮಾಡಬೇಕಾಗಿರುತ್ತದೆ. ಸಮಾಜಪ್ರೇಮ, ಸ್ವಧರ್ಮನಿಷ್ಠೆ, ಸ್ವಧರ್ಮ ಸಂಸ್ಕೃತಿ ಇವುಗಳಂತೂ ಕನಸು ಮನಸಿನಲ್ಲಿಯೂ ಇರುವುದಿಲ್ಲ. ಸ್ವಸಮಾಜದವರನ್ನು ಕಂಡರೆ ಇವರಿಗೆ ಕಸಿಬಿಸಿಯಾಗುತ್ತದೆ. ಸ್ವಧರ್ಮನಿಷ್ಠೆಗೆ ಬದಲಾಗಿ ಸ್ವಧರ್ಮಕ್ಕೇ ತಿಲಾಂಜಲಿಯನ್ನು ಕೊಟ್ಟುಬಿಡುತ್ತಾರೆ. ಪವಿತ್ರವಾದ ಭಸ್ಮವನ್ನು ಹಣೆಗೆ ಧಾರಣೆಮಾಡಿದರೆ ತೊನ್ನು ಹಿಡಿದ ಹಾಗೆ ಕಾಣುತ್ತೆಂಬುದಾಗಿ ಹೇಳುತ್ತಾರೆ. ವೀರಶೈವರ ಗುರುತು ಒಂದೂ ಸಹ ಇವರಲ್ಲಿರುವುದಿಲ್ಲ. ಪರಮ ಪೂಜಿತವಾದ ಶ್ರೀ ಗುರುವಿನಿಂದ ಅನುಗ್ರಹಿಸಲ್ಪಟ್ಟ ಶಿವಲಿಂಗವೂ ಸಹ ಇವರ ಕೊರಳಲ್ಲಿರುವುದಿಲ್ಲವೆಂದಮೇಲೆ ಇವರಿಗೆ ವೀರಶೈವರೆಂದು ಹೇಳು ದಾದರೂ ಹೇಗೆ? ಸಕಲ ಜೀವರಾಶಿ ಮೊದಲುಗೊಂಡು ಪ್ರ ಯೊಬ್ಬ ಮಾನವರ ಹಿತಕ್ಕಾಗಿ ಪರಮಾತ್ಮನಿಂದ ಅನುಗ್ರಹಿಸಲ್ ಟ್ಟಿರುವ ಭೂಮಿ, ನೀರು, ಗಾಳಿ, ಬಿಸಲು, ಇವುಗಳ ಋಣವನ್ನು ತೀರಿಸುವುದಕ್ಕಾಗಿ ಯಾರಾದರೂ ಸ್ವಲ್ಪಕಾಲ ಅವರವರ ಮ ತತ್ವಗಳ ಪ್ರಕಾರ ಪರಮಾತ್ಮನ ಧ್ಯಾನವನ್ನು ಮಾಡಬೇಡವೇ? ಇವುಗಳನ್ನೂ ಇವರೇ ಸೃಷ್ಟಿಮಾಡಿದರೇ? ಇವರ ಸಮಾಜ ಪ್ರೇಮವೆಲ್ಲವೂ ಡ್ಯಾನ್ಸಿಂಗ್ ಕ್ಲಬ್, ಯುರೋಪಿಯನ್ ಕ್ಲಬ್ ಮೊದಲಾದ ಪಾಶ್ಚಾತ್ಯ ಸಂಸ್ಕೃತಿಗಳ ಕಡೆ ತಿರುಗಿರುತ್ತ ಮಿತವ್ಯಯವನ್ನು ಏನು ಹೇಳೋಣ! ಮೋಟಾರ್ ಕಂಪೆ ಪೆಟ್ರೋಲ್ ಕಂಪನಿ, ಬ್ರಾಂಡಿಷಾಪ್, ಯುರೋಪಿಯನ್ ಕ್ಲ ಗಳಲ್ಲಿ ಲೆಖ್ಖಗಳನ್ನು ನೋಡಿದರೆ ತಿಳಿಯುತ್ತದೆ. ಇಲ್ಲಿಂದ ಹೋ ಗುವುದು ವಿಜ್ಞಾನಶಾಸ್ತ್ರವನ್ನು ಕಲಿಯಲು! ಅಲ್ಲಿಂದ ಕಲಿ ಬಂದುದು ಈ ಶಾಸ್ತ್ರವನ್ನು! ಈ ವಿಜ್ಞಾನಶಾಸ್ತ್ರವನ್ನು ಕಲಿಯ ವುದಕ್ಕೆ ಅಷ್ಟುದೂರ ಹೋಗಬೇಕೇ? ಸ್ವದೇಶದ ಸ್ವ ರ್ಮದ ಹಣದಿಂದ ಕಲಿತ ವಿದ್ಯೆಯಿಂದ ಸ್ವಲ್ಪವಾದರೂ ಋ ವನ್ನು ತೀರಿಸಬೇಕೆಂಬ ಚಿಂತೆಯೇ ಬೇಡವೇ? ಏನೋ ವಿಜ್ಞಾ ಶಾಸ್ತ್ರವನ್ನು ಕಲಿತುಬಂದು ದೇಶದಲ್ಲಿ ಸಮಾಜದಲ್ಲಿರುವ ಅಜ್ಞಾ ನವನ್ನು ಹೋಗಲಾಡಿಸುತ್ತಾರೆಂದು ನಂಬಿದ್ದ ಸಮಾಜಹಿತಚಿ ಕರ ಆಶೆಯು ನಿರಾಶೆಯಾಯಿತು. ಅಜ್ಞಾನವು ಹೋಗುವುದಕ್ಕೆ ಬದಲಾಗಿ ಮತ್ತಷ್ಟು ಅಜ್ಞಾನವೂ ಅನಾಚಾರವೂ ಹೆಚ್ಚಾ ಯಿತು. ಇವರುಗಳ ಆಚಾರಗಳೆಂದರೆ ಬೆಳಗ್ಗೆ ಏಳುವುದಕ್ಕೆ ಮೊದಲು ಹಾಸಿಗೆಯಲ್ಲಿ ಮಲಗಿರುವಾಗಲೇ ಬಾಯಿಮುಖ ಒಂದನ್ನೂ ತೊಳೆಯದೆ ಬೆಡ್‌ಕಾಫಿ ಎಂಬುದಾಗಿ ಕಾಫಿಯನ್ನು ತೆಗೆದುಕೊಳ್ಳುವುದು. ಪೂರ್ವದ ಇವರ ವಂಶಜರಾದ ಹಿರಿಯರು ಬೆಳಗ್ಗೆ ಎದ್ದ ಕೂಡಲೆ ಶೌಚಾದಿಗಳನ್ನು ತೀರಿಸಿಕೊಂಡು ಸ್ನಾ ಶಿವಪೂಜಾದಿಗಳಿಂದ ಲಿಂಗಾರ್ಪಿತಮಾಡಿ ತೆಗೆದುಕೊಳ್ಳುತ್ತಿದ್ದ ಆಚಾರವಿಚಾರಗಳೆತ್ತ? ಇವರು ಕಲಿತು ಬಂದ ಆಚಾರಗಳೆತ್ತ ವಿಜ್ಞಾನ ಶಾಸ್ತ್ರವನ್ನು ಕಲಿಯಬಾರದೆಂದು ನನ್ನ ಅಭಿಪ್ರಾ ಯವಲ್ಲ.

ಆದರೆ ನಮ್ಮ ದೇಶದ ನಮ್ಮ ಧರ್ಮದ ಸಂಸ್ಕೃತಿಯನ್ ಮಾತ್ರ ಬಿಡಬಾರದು. ನಾವು ಎಷ್ಟೇ ಶಾಸ್ತ್ರಗಳನ್ನು ಕಲಿಯಲಿ ಎಷ್ಟೇ ದೇಶಗಳನ್ನು ನೋಡಿರಲಿ, ಎಷ್ಟೇ ಮತಗಳ ತತ್ವಗಳನ್ ತಿಳಿಯಲಿ, ನಮ್ಮ ಸಂಸ್ಕೃತಿಯನ್ನು ಬಿಟ್ಟು ಅನ್ಯಸಂಸ್ಕೃತಿಯನ್ ಅವಲಂಬಿಸಬಾರದು. ಇದಕ್ಕೆ ಪಾಶ್ಚಾತ್ಯ ದೇಶಗಳ ಮಹಾತ ರ ಮೇಲ್ಪಂಕ್ತಿಯನ್ನೂ, ಮುಸಲ್ಮಾನ ಮಹಾತ್ಮರ ಮೇಲ್ಪಂ ಯನ್ನೂ ಸ್ವಲ್ಪ ವಿಚಾರಮಾಡಿ ನೋಡಿರಿ. ಆಗ ತಮಗೇ ತಿಳಿಯ ವುದು. ಪಾಶ್ಚಾತ್ಯ ದೇಶಗಳಿಂದ ಬಂದು ಹಿಂದೂಸ್ಥಾನದ ನೆಲಸಿರುವ ಆಂಗ್ಲರ ಸಂಸ್ಕೃತಿಯನ್ನು ನೋಡಿರಿ. ಯಾವ ಆಂ ನನ್ನಾದರೂ ತಲೆಗೆ ಪೇಟಾ ಇಟ್ಟು, ನಡುವಿಗೆ ಪಂಚೇ ಉಟ್ಟು ತಲೆಯಲ್ಲಿ ಸ್ವಲ್ಪ ಕೇಶ (ಶಿಖೆ) ವನ್ನು ಬಿಟ್ಟು ಇರುವವರನ್ ತೋರಿಸಬಲ್ಲಿರಾ? ಎಷ್ಟೇ ರಾಜಕಾರಣಗಳಿದ್ದರೂ ಭಾನುವಾ ಚರ್ಚಿಗೆ ಹೋಗದೆ ಇರುವವರನ್ನು ತೋರಿಸಬಲ್ಲಿರಾ? ಎಷ್ ಹಿಂದೂಜನರ ಸಹವಾಸದಲ್ಲಿದ್ದರೂ, ಅವರ ಸಂಸ್ಕೃತಿಯನ್ ಹಿಂದೂಗಳು ಕಲಿಯಲು ಪ್ರಯತ್ನಿಸುತ್ತಾರೇ ಹೊರತು ತಾ ಮಾತ್ರ ನಮ್ಮ ಸಂಸ್ಕೃತಿಯನ್ನು ಕನಸುಮನಸಿನಲ್ಲಿಯೂ ಕ ಸರು ಅಷ್ಟೇಕೆ? ನಮ್ಮ ಹಿಂದೂಸ್ಥಾನದಲ್ಲಿಯೇ ಈಗ ನೆ ರುವ ಮುಸಲ್ಮಾನರನ್ನು ನೋಡಿರಿ? ಎಷ್ಟೇ ಹಿಂದೂ ಜೊತೆಯಲ್ಲಿರಲಿ, ನಮ್ಮ ಸಂಸ್ಕೃತಿಯನ್ನು ಅವರು ಆಚರಿಸುವುದಿ ಹೊರತು ಅನ್ಯಸಂಸ್ಕೃತಿಯನ್ನು ಬಯಸಲಾರರು. ಯಾವ ಮು ಲ್ಮಾನರ ಮನೆಯಲ್ಲಿಯಾದರೂ ಹಿಂದೂದೇವತಾ ಚಿತ್ರಪಟಗಳ ತೋರಿಸಬಲ್ಲಿರಾ? ಕೆಲವರು ಎಷ್ಟೇ ಪಾಶ್ಚಾತ್ಯ ದೇಶ ಪರ್ಯಟನವನ್ನು ಮಾಡಿರಲಿ, ಎಷ್ಟೇ ನಾಗರಕತೆಯನ್ನು ಮುಟ್ಟಿರ ಅವರ ವೇಷಭೂಷೆಗಳು ಅಚ್ಚಳಿಯದಂತೆ ಇರುವುದನ್ನು ಈಗ ನೋಡಬಹುದು. ಮತ್ತು ಎಷ್ಟೇ ರಾಜಕಾರಣದಲ್ಲಿ ತೊಡಗಿ ಸಂಜೆಯ ಕಾಲದಲ್ಲಿ ಪ್ರಾರ್ಥನೆಗೆಂದು ಸ್ವಲ್ಪ ವಿರಾಮವನ್ನು ಯದೇ ಇರುವುದಿಲ್ಲ. ಮತ್ತು ಯಾರಾದರೂ ಸ್ನೇಹಿತರು ಎ ನಲ್ಲಿ ಬಂದರೆ ಅವರು ಯಾವ ಕೋಮಿನವರಾದರೂ ಸರಿ ಎಂದು ಅವರ ಸಂಸ್ಕೃತಿಯನ್ನು ತೋರಿಸಿಯಾರೇ ಹೊರ ನಮಸ್ಕಾರವೆನ್ನುವುದಿಲ್ಲವೇ ಇಲ್ಲ. ಅಷ್ಟು ದೂರವೂ ಬೇ ನಮ್ಮ ಸಮಾಜದಲ್ಲೇ ನಮ್ಮ ಸಮಾಜದಿಂದಲೇ, ನಮ್ಮ ಹಾಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗಿ ಬಂದಿರುವ ಉತ್ತರ ದೇ ಮಹಾತ್ಮರನ್ನು ನೋಡಿರಿ? ಅವರುಗಳಿಂದ ಸಮಾಜ ಸೇವೆ ಹೇಗೆ ನಡೆಯುತ್ತಿದೆ. ಅವರೂ ನಿಮ್ಮ ಹಾಗೆ ನಾಗರೀಕತೆಯನ್ ಕಲಿತವರಲ್ಲವೇ? ಆದರೆ ನೀವೇಕೆ ನಿಮ್ಮ ಸಂಸ್ಕೃತಿಯನ್ನು ಆ ರಿಸಲು ಹಿಂಜರಿಯುತ್ತೀರಿ? ಏನು? ಆ ರೀತಿ ಆಚರಿಸಿದಲ್ಲಿ ನ ಮಾನವೇ? ಅವರವರ ಧರ್ಮಸಂಸ್ಕೃತಿಯನ್ನು ಆಚರಿಸಲು ನ ವ ನಾಗರಕನು ಹಾಸ್ಯಮಾಡಬಲ್ಲನು? ಹಾಸ್ಯಮಾಡತಕ್ಕ ವ ತತ್ವಗಳಾದರೂ ಯಾವು ಇವೆ ಹೇಳಿರಿ ನೋಡುವಾ? ಹೇಳು ಕ್ಕಾದರೂ ಮತತತ್ವ ಗೊತ್ತಿದ್ದರಲ್ಲವೇ? ಗೊತ್ತಿದ್ದರೆ ಪಾಪ ಹೀಗೆ ಆಚರಿಸುತ್ತಲೇ ಇರಲಿಲ್ಲ. ಇಂತಹ ಸಮಾಜಕ್ಕೆ ಹಿತವಿ ಇರತಕ್ಕ ವಿದ್ಯೆಗಾದರೂ ಸಮಾಜವು ಏಕೆ ಸಹಾಯಮಾಡಬೇಕು ನೂರಾರು ಜನರ ಬಾಯಿಬಡಿದು ಇಂಥವರಿಗೆ ಒಬ್ಬರಿಗೆ ಹಾ ವುದಕ್ಕಿಂತಲೂ, ವಿದ್ಯಾನುಕೂಲವಿಲ್ಲದೆ ಇರುವ ಹಳ್ಳಿಗಳ ಕ ಪ್ರಾಥಮಿಕ ವಿದ್ಯಾಭ್ಯಾಸದವರಿಗಾದರೂ ಸಹಾಯಮಾಡಿ ನೂರಾರು ಜನರು ವಿದ್ಯೆಯಲ್ಲಿ ಮುಂದುವರಿಯಬಹುದು. ರಿಗೆ ಕೊಡುವುದು ಈಗಿರುವುದಕ್ಕಿಂತಲೂ ಸಮಾಜವನ್ನು ತಲಕ್ಕೆ ಹಾಕಬೇಕೆಂತಲೋ? ಸಮಾಜಕ್ಕೆ ಹಿತವಲ್ಲದ ವಿದ್ಯೆ ನಮಗೆ ಬೇಡವೇಬೇಡ. ಆ ವಿದ್ಯೆಯಿಂದ ಸಮಾಜಕ್ಕೆ ಹಿತವಾಗಬೇಕೆನ್ನುವುದಿದ್ದರೆ ಸಮಾಜದವರೂ, ಸಂಘದವರೂ ಮೊದಲು ನಮ್ಮ ಸಂಸ್ಕೃತಿ, ನಮ್ಮ ಧರ್ಮ, ನಮ್ಮ ಆಚಾರವ್ಯವಹಾರಗಳು ಅಚ್ಚಳಿಯದಂತೆ ಉಳಿಸಿಕೊಂಡು ಹೋಗುವರೀತಿಯಲ್ಲಿ ವಿದ್ಯಾಭ್ಯಾಸವು ಪೂರೈಸುವಂತೆ ನಿಯಮಗಳನ್ನು ಮಾಡಬೇಕು. ಸುಮ್ಮನೆ ಬರೀ ನಾಗರಕತೆಯ ವಿದ್ಯಾಭ್ಯಾಸದಿಂದ ಸಮಾಜವು ಮುಂದುವರಿಯಲಾರದು. ಮೊದಲು ಧರ್ಮಸಂಸ್ಕೃತಿಯುಳಿಯುವ ಯೋಚನೆಮಾಡಿ, ಆ ಮೇಲೆ ಹಣವನ್ನು ಶೇಖರಿಸಿ, ಇನ್ನೂ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳನ್ನು ಕಳುಹಿಸಿ ಸಮಾಜಕ್ಕೆ ಹಿತವಾಗುವ ವಿಜ್ಞಾನಶಾಸ್ತ್ರಗಳನ್ನು ಕಲಿತು ಬಂದು ಸಮಾಜವನ್ನು ಮುಂದರಿಸಲು ಯೋಗ್ಯರಾಗುವಂತೆ ಮಾಡಿರಿ. ಇಂತಹ ವಿದ್ಯೆಗಾದರೂ ಸಮಾಜವು ಯಥೇಚ್ಛವಾಗಿ ದಾನಮಾಡಲಿ. ಯಾರು ಬೇಡವೆನ್ನುತ್ತಾರೆ. ಸಮಾಜದವರೂ, ಸಂಘದವರೂ ಕಾರ್ಯತತ್ಪರರಾಗುತ್ತಾರೆಂದು ನಂಬಿರುತ್ತೇನೆ.

ಎಂ. ಎಸ್. ಶಿವಪ್ಪ, ಬೆಂಗಳೂರು ಸಿಟಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೇ|| ಕವೀಂದ್ರ ಅಮರನಾಥಶಾಸ್ತ್ರಿಗಳ ಕಾರ್ಯಕ್ರಮ.

ಇವರು ಶ್ರಾವಣ ಶು ೧ ದಿವಸ ಬನ್ನಿಕೊಪ್ಪದಿಂದ ಹೊರಟು ಕೊಪ್ಪಳ ತಾಲೂಕ ಪೈಕಿ ಬೇಳೂರಲ್ಲಿರುವ ತಮ್ಮ ಬೃಹನ್ಮಠದಲ್ಲಿದ್ದು ಆ ಗ್ರಾಮಾಧಿಕಾರಿಗಳೂ ಶಿಷ್ಯಶಿರೋಮಣಿಗಳೂ ಆದ ಶ್ರೀಮಂತ ಮ|| ರಾ|| ತಮ್ಮನಗೌಡಾ ಪಾಟೀಲ ವಕೀಲ ಸಾಹೇಬ ಇವರ ಗೃಹದಲ್ಲಿ ನಾಗಪಂಚಮಿ ಮಹಾಪರ್ವವನ್ನು ತೀರಿಸಿ ಅಲ್ಲಿ ಕೂಡಿದ ಸದ್ಭಕ್ತಾದಿಗಳಿಗೆ ಪರ್ವದ ಪೂರ್ವೇತಿಹಾಸವನ್ನೂ ನಾಗೇಂದ್ರಾದಿಗಳು ಮಾಡಿದ ಲಿಂಗಪೂಜಾಮಹತ್ವವನ್ನೂ ತಿಳಿಸಿ ಅಲ್ಲಿಂದ ಕೊಪ್ಪಳಕ್ಕೆಬಂದು ಶ್ರೀಮಂತ ಮ|| ರಾ|| ಎಲ್ಲಪ್ಪಗೌಡ ಪಾಟೀಲ ವಕೀಲ ಸಾಹೇಬರಗೃಹದಲ್ಲಿ ೧೫ ದಿನಗಳವರೆಗೆ ಶ್ರೀ ಶರಣಬಸವೇಶ್ವರ ಪುರಾಣವನ್ನು ಬೋಧಿಸಿ ಅವರಿಂದ ಸನ್ಮಾನಿತರಾಗಿ. ಶ್ರೀಮತಿ ನಾಡಗೌಡ ಅಮರಮ್ಮನವರು ಆಮಂತ್ರಣವಿತ್ತ ಪ್ರಕಾರ ಚಿಕ್ಕಹೆಸರೂರಿಗೆ ಬಂದು ಶ್ರಾವಣ ಬ|| ೧೧ ದಿವಸ ಮಹಾರುದ್ರಾಭಿಷೇಕ ಕಾರ್ಯವನ್ನು ಪೂರ್ತಿಗೊಳಿಸಿ ಒಂದು ತಿಂಗಳವರೆಗೂ ಪ್ರಭುರಾಜನ ಪುರಾಣವನ್ನು ಭಕ್ತಿರಸವು ಉಕ್ಕೇರುವಂತೆ ಬೋಧಿಸಿ ಅವರು ಬಿಲ್ವವೃಕ್ಷದ ಸನ್ನಿಧಿಯಲ್ಲಿ ಮಾಡಬೇಕೆಂದಿದ್ದ ಶಿವಪೂಜಾ ಸಂಕಲ್ಪವನ್ನು ನೆರವೇರಿಸಿ ತೃಪ್ತಿಮಯರಾಗಿ ಅಲ್ಲಿಂದ ಕಾಳಾಪುರಕ್ಕೆ ತೆರಳಿ ತಮ್ಮ ಪ್ರಮುಖ ಶಿಷ್ಯರಾದ ನಾಡಗೌಡರುದ್ರಪ್ಪನವರು ಕಟ್ಟಿಸಿರುವ ಪೂಲಬಾವಿಯಕೆರೆಯನ್ನೂ ಸತ್ರವನ್ನೂ ನೋಡಿ ನಾಡಗೌಡ ಸಾಹೇಬರ ಮತ್ತು ಪ್ರಜಾಸಂಘದ ಸಮ್ಮುಖದಲ್ಲಿ ಕೆರೆಗೆ "ರೇಣುಕತಟಾಕ" ವೆಂದೂ ಸತ್ರಕ್ಕೆ "ರೇಣುಕಾಶ್ರಮ" ವೆಂದೂ ಕರೆದು ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಾಜಕೀಜಯವೆಂದು ಅನ್ನಲು ಸರ್ವರೂ ಘೋಷಿಸಿದರು. ಆ ಪ್ರಜಾವರ್ಗಕ್ಕೆ "ಉದ್ಯೋಗಿನಂ ಪುರುಷಸಿಂಹಮುಪೈತಿಲಕ್ಷ್ಮೀಃ" ಎಂಬ ತತ್ವವನ್ನು ಬೋಧಿಸಿ ಅಲ್ಲಿಗೆ ಸಮೀಪವಾದ ಸುಪ್ರಸಿದ್ಧ ಅಮರೇಶ್ವರಕ್ಷೇತ್ರಕ್ಕೆ ಹೋಗಿ ಅಮರೇಶ್ವರ ಲೀಲಾಬೋಧಕ ಮಾದ ಅಷ್ಟಕವನ್ನೂ ಮಂಗಲಸ್ತುತಿಗಳನ್ನೂ ಹಾಡಿ ಸಂದರ್ಶಿಸಿ ಹಾಗೆಯೇ ಕರುಣಾಪರರೂ, ಸಮಾಜಹಿತೈಷಿಗಳೂ ಗುರುದೇವತಾಭಕ್ತಿಪರಾಯಣರೂ ಆದ ಶ್ರೀಮಂತರಾಜಾ ವೆಂಕಟರಾವ್ ಸಾಹೇಬ ಬಹದ್ದೂರ ನಾಡಗೌಡರು ಗೆಜ್ಜಲಗಟ್ಟ ಈ ಮಹೋದಯರ ಸಂಸ್ಥಾನಕ್ಕೆ ಬಂದು ಇದೇ ಅಶ್ವಯುಜ ಬ|| ೪ ದಿವಸ ರಾಜಧಾನಿಯಲ್ಲಿ "ಗೋರಕ್ಷನಾಥಗರ್ವಹರಣ" ವೆಂಬ ರೇಣುಕಾಚಾರ್ಯರ ಅದ್ಭುತ ಲೀಲೆಯನ್ನು ಕೀರ್ತನ ರೂಪದಿಂದ ಬೋಧಿಸಿದರು. ಆ ಕಾಲಕ್ಕೆ ಸಂಸ್ಥಾನದ ಹೆಡ್‌ಕ್ಲಾರ್ಕ ವೇ|| ಮುದ್ದಯ್ಯನವರ ಪುತ್ರ ಮಹಾಂತಾರ್ಯರ ಸಂಗೀತವೂ ಶ್ರೀ|| ವಿರೂಪಾಕ್ಷಾರ್ಯರ ಮೃದಂಗದ ಬಾರಿಸುವಿಕೆಯೂ ಸಭಿಕರ ಚಿತ್ತಾಕರ್ಷಣವನ್ನುಂಟುಮಾಡುತ್ತಿದ್ದವು. ಕವೀಂದ್ರರು ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಗ್ರಂಥದಲ್ಲಿರುವ ಅನಂತಮಹತ್ವ ವಿಷಯಗಳಿಂದಲೂ ತಮ್ಮಿಂದ ರಚಿಸಲ್ಪಟ್ಟ ರೇಣುಕಾಚಾರ್ಯ ಸ್ತುತಿಮುಕ್ತಾಹಾರದ ಹಾಡಿನಿಂದಲೂ ಶ್ರೋತೃಸಮುದಾಯವನ್ನು ಎಚ್ಚರಗೊಳಿಸಲು. ವೈಷ್ಣವ ಮತೀಯರಾದ ಅನಂತರಾವ್ ಮಾಸ್ತರ ಬಾಬುರಾವ್ ಕ್ಲಾರ್ಕ ಇವರು ಸಹ ಕರತಾಡನವನ್ನು ಮಾಡಿ ತಮಗುಂಟಾದ ಆನಂದವನ್ನು ವ್ಯಕ್ತಗೊಳಿಸಿದರು. ಆಗ್ಗೆ ಶ್ರೀಮಂತ ರಾಜಾಸಾಹೇಬರೂ ಅವರ ಪ್ರತಿನಿಧಿಗಳಾದ ಅಯ್ಯನಗೌಡರೂ ಶ್ರೀಯುತ ವೆಂಕಟರಾವ್ ನಾಡಗೌಡರೇ ಮೊದಲಾದವರು ಆನಂದತುಂದಿಲಹೃದಯರಾಗಿ ಪ್ರತಿವರ್ಷ ತಪ್ಪದೆ ಬಂದು ಗುರುತತ್ವಗಳನ್ನು ಬೋಧಿಸಬೇಕೆಂದು ಅರಿಕೆಮಾಡಿಕೊಂಡು ಸಂಭಾವನೆಯನ್ನಿತ್ತು ಮನ್ನಿಸಿದರು. ಇದರಂತೆ ಕೀರ್ತನಕಾರರೂ ಶಾಸ್ತ್ರಿಗಳೂ ಈ ಭಾಗದಲ್ಲಿ ಸರ್ವತ್ರ ಸಂಚರಿಸಿ ಅಜ್ಞಾತಾವಸ್ಥೆಯಲ್ಲಿ ಇರುವ ವೀರಶೈವ ಸಮಾಜವನ್ನು ಜಗದಾಚಾರ್ಯರ ಮಹಿಮಾತಿಶಯದಿಂದ ಪ್ರಕಾಶಗೊಳಿಸಬೇಕೆಂದು ಪದೇಪದೇ ಹಾರೈಸುವೆನು.

ಚನ್ನವೀರಾರ್ಯ ಕಾಲಾಮಠ,
ಸಂಸ್ಥಾನ ಗೆಜ್ಜಲಗಟ್ಟ.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ
ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ
ಶ್ರೀ ೧೦೮ ಜಗದ್ಗುರು
ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿನಾಂ

ಸ್ತುತಿರತ್ನಮಂಜೂಷಿಕಾ.

ಜಯ ದೇಶಿಕವರ್ಯ ಸಿದ್ಧಲಿಂಗೋಜ್ಜಯಿನೀಧರ್ಮಮೃಗೇಂದ್ರಪೀಠಭೂಷ | ಮಯಿ ದೀನಜನೇ ನಿಧೇಹಿ ದೃಷ್ಟಿಂ ನಮಿತಾಭೀಷ್ಟವರಪ್ರದಾನಶೀಲ ||೧|| ಶಿವಯೋಗಸಮಾಧಿನಿಷ್ಠಲೋಲಾಮಯಮಾಯಾಪಹನಿತ್ಯಕಾಲಕಾಲ | ಭವಪಾಶವಿಖಂಡನೈಕಮೂಲಾಶಕುಲಶಲ್ಲೀಲ ಸದಾ ದಯಾಲವಾಲ ||೨|| ಜಿತಭೀಕರಲೋಕಹಾರಿಕೋಪಾಮಿತಬಾಧಾಕರಮಾನಶೋಕಲೋಭ | ನತವಾಕರಸಂಪ್ರಶಸ್ತಿಶಾಪಾದ್ಯಕಲೀಲಾಕರ ಶಂಕರಸ್ವರೂಪ ||೩|| ಶರದಿಂದುಮನೋಜ್ಞಮಂದಹಾಸಸ್ಫುರದಂಭೋಜಮುಖಾನನಪ್ರಕಾಶ | ಅರವಿಂದಸಮಾನನೇತ್ರಭಾಸಾಽವಿರತಂ ದುಃಖವಿನಾಶ ಚಿತ್ಪ್ರಕಾಶ ||೪|| ಗುರುನಾಮಸುಧಾ ಸದಾ ಜನಾನಾಂ ದುರಿತವ್ರಾತವಿನಾಶಿನೀತಿ ಸಿದ್ಧಂ | ಗುರುಸಂಸ್ಮರಣೇನ ಸಂಯುತಾ ಚೇತ್ಸ್ವಮತೇ ಕಿಂ ನಹಿ ಸಿತಾಂಶುಶುದ್ಧಂ ||೫|| ಮಿಹಿರಃ ಸ ಸಹಸ್ರಹಸ್ತಯುಕ್ತೋ ನ ಸಮರ್ಥೋಽದ್ರಿಗುಹಾತಮೋವಿನಾಶೇ | ನಿಹನಿಷ್ಯ ಗುರುಃ ಕರೈಕಕೇನ ದ್ರುತಮಂತರ್ಹಿತಜ್ಞಾತಾಂಧಕಾರಂ ||೬|| ರವಿರೀಶ ಸಿತಪ್ರಭಾವಿಕಾಸಾಜ್ಜಲಜಂ ಫುಲ್ಲಯತೇ ದಿವಾ ನ ರಾತ್ರೌ | ಸ್ಮೃತಿಮಾತ್ರತ ಏವ ದೇಶಿಕೋ ಹೃತ್ಕಮಲಂ ಸಂಸ್ಫುಟಯತ್ಯಜಸ್ರಮೇವ ||೭|| ಜನನೀಜನಕಾವಥೋ ಜನಾನಾಂ ನಹಿ ಸಂಸಾರವಿಮೋಚಕೌ ಸ್ಥಿರೇಣ | ಭವಪಾಶವಿಬಂಧನೈಕಲೋಲಾಲ್ಲಘು ಸಂತಾರಯತೇ ಗುರುಸ್ತು ಸರ್ವಾನ್ ||೮|| ನಹಿ ಚೇತಯತೇ ಘನಾಭಿಮಾನೋಽಪಿ ಬಹುವರ್ಷಂಸ್ತರುಮುಗ್ಧಸಾರಂ | ಸಹಸಾ ಕರುಣಾಸುಧೈಕಲೇಶಸ್ತ್ವ ಸಂಜೀವಯತಿ ತ್ರಿತಾಪದಗ್ಧಂ ||೯|| ಸ ಹಿ ಶೀತಕರಃ ಕ್ಷಯವೃದ್ಧಿಯುಕ್ತೋ ಬಹುಶೀತೋಽಪಿ ನೃಣಾಂ ವಿಷಾದಹೇತುಃ | ಅಪಹಾಯ ಮಜಸ್ರಸೌಖ್ಯದಾಯೀ ಸಮಶೀತೋಷ್ಣಗುಣೋ ಗುರುರ್ಜನಾನಾಂ ||೧೦|| ದವವಾಯುವಿರುಷ್ಟಕಾಷ್ಠಗುಲ್ಮಾದಿಕಮಗ್ನಿರ್ದಹತೇ ಕಿಮತ್ರ ಚಿತ್ರಂ? | ನ ಜಲಾದ್ಯಮಗ್ನಿ ಗುರುಸ್ತು ಸರ್ವಂ ದಹತೇ ಚೇತಯತೇ ವಿಚಿತ್ರಮೇತತ್ ||೧೧|| ದಹನೋ ದಹತಿ ಸ್ವಕಂಠಮೇವಾಲ್ಪಧಿಯಾ ಜಾತು ನ ಮೂರಕಃ ಸಕಂತಂ | ಗುರುರುಗ್ರತಪಃ ಕೃಶಾನೋ ದವಿಷ್ಠಾನ್ಯಯಮಾತ್ಮಸ್ಯ ವಿಪಂದತೋ ನಿಹಂತಿ ||೧೨|| ನಯನೇ ಖಲು ಶಂಕರಸ್ಯ ವಹ್ನಿಃ ಸ ತಮುಗ್ರಲೀಲ್ಯ ದದಾಹ ಮಾರಮತ್ತಿ | ಗುರುರಗ್ನಿಮಯೋಽಪಿ ಶಾಂತರೂಪೋ ನಯನೇ ದ್ವೇಽಪಿ ನಿವಿಷ್ಟ ಸರ್ವದಾಹೀ ||೧೩|| ಸಲಿಲಾಗ್ನಿದಿವಾಕರಾಕರಾದ್ಯಾ ನಿಯತೈಕೈಕಗುಣಾ ಇತಿ ಪ್ರಸಿದ್ಧಾಃ | ನನು ದೇಶಿಕ ಏಷ ನಿತ್ಯಶುದ್ಧಃ ಸಕಲೋತ್ಕೃಷ್ಟಗುಣಾಕರಾಭಿರಾಮಃ ||೧೪|| ಸ ಶಿವಃ ಸಕಲೋಽಪಿ ವಸ್ತುಜಾತೇ ಸ್ಫುಟಮೇಕೈಕಮುದಸ್ಯ ನೈಜಮಂಶಂ | ಗುರುರಾಡಿತಯಾ ಸ್ವಯಂ ಹಿ ತಸ್ಮಾದಖಿಲಾಂಶೇನ ಜನಾರ್ತಿನಾಶಹೇತೋಃ ||೧೫|| ಜಲರಾಶಿರಲಂ ಗಭೀರವೇತ್ಯಾಶಯಂ ವದಯತೇ ಕವೀಂದ್ರವೃಂದಂ | ಮಣಿಮಾರ್ಗಣಲೋಲುಪಾ ಮನುಷ್ಯಾಸ್ತದಗಾಧತ್ವಮಲಂ ವಿಜಿಜ್ಞಯಂತಿ ||೧೬|| ಅಪಿ ಚಾಬ್ಧಿರಶೇಷದುಷ್ಟಜಂತುಪ್ರಕರಾಂ ವೀಚಿಷು ಚಂಚಲಃ ಸದೈವ | ಶಿವಮುಮುಕ್ಷುಜನೈಕಮಾನಸಾಕಂಪಾದ್ಯಲಿಕೋಽಸಂಭವತಿ ಪ್ರಸಿದ್ಧಮೇತತ್ ||೧೭|| ಸಕು ಸಾಗರತೋ ಗುರುರ್ಗಭೀರೋ ನ ತಲಂ ಸ್ಪೃಶಯಿತೇ ಹಿ ಕೋಽಪಿ ತಸ್ಯ | ವಿಷಮೋಽಪಿ ನ ವಿಕ್ರಿಯಾಂ ಪ್ರಯಾಯಾದ್ಧಿ ಹಿರಂತಃ ಸ್ಥಿರತಾಮುಪೈತಿ ನಿತ್ಯಂ ||೧೮|| ಶಶಿನಂ ಸಮವೇಕ್ಷ್ಯ ವರ್ಧತೇಽಬ್ಧಿಸ್ತದಭಾವೇ ಕ್ಷಯಮೇತಿ ನೂನಮೇವ | ಕ್ಷಯವೃದ್ಧಿಯುತೋ ಗುರುರ್ವಿಶೋಽತ್ರಾಽದ್ಭುತ ಏಷ ಕ್ರಿಯಯಂ ಗುರುರ್ಗರೀಯಾನ್ ||೧೯|| ಅವಿಲಂಬಿತಮಂಬುರಾಶಿಮೇನಂ ಘಟಜನ್ಮಾ ಸಮಪಾಯಯತ್ ಕ್ಷಣೇನ | ಕರುಣಾಮೃತಪೂರ್ಣದೇಶಿಕಾಬ್ಧಿಂ ನ ಪಿಪಾಸುರ್ಭಜಕೋಟಿರಾತ್ತ್ಯಯತಾ ||೨೦|| ಕುಲಿಶಾಯುಧಮದ್ರಿಭೇದದಕ್ಷಂ ನತು ಪಿಂಡೀಕರಣೇ ಪಟುತ್ವಮೇತಿ | ಮೃದುತೋ ಹಿ ಗುರುಃ ಸಮಸ್ತಭೇತ್ತಾಽಪಿ ಪುನಃ ಸಂಕಲನೈಕಧೀರಚೇತಾಃ ||೨೧|| ಸಕಲಂ ಜಗದೇತದಂತಕಾಲೇ ಪ್ರವಿಶತ್ಯಂ ಭವತೀತಿ ವೇದವಾಕ್ಯಂ | ಗುರುತತ್ತ್ವಮಿದಂ ನ ಯಾತಿ ನಾಶಂ ಶ್ರುತಿರೇವಾಸ್ತಿ ಗುರೋಃ ಪರಂ ನ ತತ್ತ್ವಂ ||೨೨|| ಶಿವ ಏವ ಸಮಸ್ತವಿಶ್ವರೂಪೋ ಭವತೀತ್ಯೇತದಪಿ ಪ್ರಮಾಣಸಿದ್ಧಂ | ನ ತಥಾಽಪಿ ನೃಣಾಂ ಶಿವತ್ವಸಿದ್ಧಿಃ ಶಿವತೋ ಯಾಂತಿ ಗುರೋಃ ಪ್ರಸಾದತಸ್ತ್ವಂ ||೨೩|| ಬಹವಃ ಕಿಲ ಧನ್ವಿನೋ ಜಗತ್ಯಾಂ ನವಸಂಖ್ಯೇಶಮುರಂ ದ್ವಿಧಾ ವಿಧಾತುಂ | ಪ್ರಭವಂತಿ ಮಹಾಬಲಾಃ ಸನಾಸ್ತೇ ನಹಿ ಸಂಧಾತುಮಿದಂ ಪುನಃ ಪ್ರಭಿನ್ನಂ ||೨೪|| ಉಪದೇಶಶರೇಣ ದೇಶಿಕೋಽಸೌ ಶಿವಜೀವದ್ವಿವಿಧಪ್ರಭೇದಕಾರೀ | ಪುನರೇವ ಶರೇಣ ಭೇದಹಾರೀ ಗುರುಧನ್ವೀ ಸಕಲೇಷು ಧನ್ವಿಷು ಶ್ರೇಷ್ಠಃ ||೨೫|| ಗದಿತೇಷು ಪಿಬತ್ಸು ಭೇಷಜಂ ತತ್ತ್ವವಿನಾಶೇನ ಕರೋತಿ ರೋಗನಾಶಂ | ಕುರುತೇ ಭವರೋಗಶಾಂತಿಮೇಷ ಗುರುಭೈಷಜ್ಯಮಿದಂ ಕ್ಷಯಂ ನ ಯಾತಿ ||೨೬|| ಜಲಧಿರ್ಘನಮಿದಂ ಪ್ರಪನ್ನಲೋಕಾನ್ ಬಹುದೇವಾತ್ಕಲಯೀತ ವಿಶ್ವಕಾಯಾನ್ | ಅಪಿ ಮಜ್ಜಯತೇ ನ ರಕ್ಷತೇ ತನ್ನ ಹಿ ವಿಶ್ವಶ್ರುತಿಗೀತಪೂತವಾಚಾಂ ||೨೭|| ಶರಣಾಗತಮುಕ್ತಯಾಪರಾದ್ಯಾಂ ಪ್ರತಿಪತ್ಯಂ ಪರಮದ್ವಿತೀರ್ಥಯಾಽಲಂ | ಬಹಿರಂತರಭಿನ್ನಭಾವಬೋಧಾದ್ಗುರುತೀರ್ಥಂ ಸ್ವಯಮೇವ ಬಂಧಹಾರಿ ||೨೮|| ಜಲಜೇಷು ಪಿಬಂತಿ ಷಟ್ಪದಾಸ್ತೇ ಮಕರಂದಂ ತು ದಿನೈವ ನೋ ನಿಶಾಯಾಂ | ಗುರುಪಾದಸರೋಜಯುಗ್ಮಭಾಜಃ ಪರಮಾನಂದರಸಂ ಸದಾ ಪಿಬಂತಿ ||೨೯|| ಅಪವಿತ್ರಮಿದಂ ಶರೀರಮುದ್ಯಚ್ಛಿವಶಾಸ್ತ್ರಜ್ಞಶಿಖಾಕುಸುಮಾರ್ಗಂ ಚ | ಶಿವಮತ್ರ ಭವಾನ್ನಿಧಾಯ ಲಿಂಗಂ ಕುರುತೇ ಪಾವನಮೇವ ಮಂತ್ರಬೋಧಾತ್ ||೩೦|| ದುರಿತಾನಲದಗ್ಧಚಿತ್ತಸಾರಾ ನ ವಿಜಾನಂತಿ ಇಮೇ ಭವತ್ಪ್ರತಾಪಂ | ರಿಪುದೃಷ್ಟಿಭಯಾ ಸದಂತಿ ಘೋರಂ ಪರಿತಾಪಂ ಪರಿಯಂತಿ ಮಾನಹೀನಾಃ ||೩೧|| ಭವದೀಯಮಹತ್ತ್ವಸಂಪಿಧಾನೇ ಕಿಲ ಕೇಚಿತ್ಪ್ರಯತಂತಿ ಮಂದಭಾಗ್ಯಾಃ | ಫಲಮೇವ ಮಹತ್ತರಂ ಲಭಂತೇ ಫಣಿನಾಂ ವನ್ನಗವೈರಿಣಾ ಕತುಲ್ಯಂ ||೩೨|| ಗುರುರೇವ ಭವಾಮಯಾಪಹಾರೀ ಗುರುರೇವಾಖಿಲಲೋಕಸೌಖ್ಯಕಾರೀ | ಅತಏವ ವಿವಕ್ತಿ ವೇದಮಾತಾ "ಶ್ವಧಿಕಂ ನಾಸ್ತಿ ಗುರೋಃ" ರತೀವ ಧೀರಂ ||೩೩|| ಭವದರ್ಶನಸ್ಪರ್ಶನಸಂಸ್ತವಪಾದಸೇವಾನುತಿವಂದನೇಷು ಲೋಕಾಃ | ಸಕಲಾ ಅಪಿ ಸಂಪದೋ ಲಭಂತೇ ನಹಿ ಶಂಕಾ ಗುರುಸಾರ್ವಭೌಮ ಸತ್ಯಂ ||೩೪|| ಅಪರಾಧಸಹಸ್ರಭಾಜನಂ ಭೋ ಜಗದಾಚಾರ್ಯ ಜಗದ್ಗುರೋ ಜಯಿಷ್ಣೋ | ಕೃಪಯಾ ಪರಿಪಾಹಿ ಮಾಂ ಸುದೀನಂ ಶಿವಮಾ ರಕ್ಷಿತರಕ್ಷಯಾತಿ ದೈನ್ಯಂ ||೩೫|| ಶರಣಂ ಗುರುದೇವಪಾದಯುಗ್ಮಂ ಶರಣಂ ಮೇ ಗುರುವಾಕ್ಯಮೇವ ಸಾರಂ | ಶರಣಂ ಗುರುಮೂರ್ತಿರೇವ ಮೇ ಸಂತರಣೇಽಪಾರಭವಾಂಬುಧೇಃ ಸುಖೇನ ||೩೬|| ಹೃದಿ ವಾಚಿ ವಪುಷ್ಯಮಂದಮೋದಾದ್ಗುರುಮೇವಾಕುಲನೈಜಭಕ್ತಿಯೋಗಾತ್ | ಸುವಿಚಿಂತ್ಯ ವಿಮೃಶ್ಯ ಭೂರಿ ನತ್ವಾ ಭವಶಾಂತಿಂ ಸಮುಪೈಮಿ ಧನ್ಯಧನ್ಯಃ ||೩೭|| ನಹಿ ಮೇ ಮತಿರಸ್ತಿ ಶಕ್ತಿಯುಕ್ತಾ ಜಗದಾಚಾರ್ಯಭವತ್ಪ್ರಶಸ್ತಿಗಾನೇ | ತದಪಿ ಸ್ತವ ಏಷ ನಿರ್ಮಿತೋಽಭೂದ್ಭವತಾಯಾಃ ಪರಪಿಂಡದೋಷಶಾಂತ್ಯೈ ||೩೮|| ಜಯ ದೇಶಿಕರಾಜ ಯೋಗಿನಾಥಾಽಭವಲೀಲಾವಲಿಮಾಕರುಣ್ಯಭಾವ | ಕವಿಕುಂಜರಗೀಯಮಾನಗಾಥಾಽಽನತಸದ್ಭಕ್ತವಿತಾನಪಾದಪಂಕಜಾತ ||೩೯|| ಮೃಗೇಂದ್ರಂ ಮೃಗಾವೈ ಖಗೇಂದ್ರಂ ಭುಜಂಗಾ ನರೇಂದ್ರಂ ಚ ಭೂಪಾ ಧನೇಂದ್ರಂ ದರಿದ್ರಾಃ | ಬುಧೇಂದ್ರಂ ಚ ಮೂರ್ಖಾ ವಿಶಂತಿ ಚೇತ್ಥಂ ಖಿಲೇಂದ್ರಾ ಗುರುಂ ಸಂದಿಶಂ ತಿಂ ಪ್ರವೃತ್ತಾಃ ||೪೦|| ಕ್ಷುಧಾ ಪೀಡಿತಾ ವಾ ತೃಷಾ ಪೀಡಿತಾ ವಾ ರುಜಾ ಪೀಡಿತಾ ವಾ ಭಯಾ ಪೀಡಿತಾ ವಾ | ಭಜಂತೇ ಶರಣ್ಯಂ ಕಿಮೇತದ್ವಿಚಿತ್ರಂ ಜನಾಃ ಸರ್ವಪೀಡಾಗುರುಂ ನೋ ಭಜಂತೇ ||೪೧|| ಅತೋ ಮುಕ್ತಿಹೇತುರ್ಗುರುಃ ಸರ್ವಥಾ ಸ್ವೀಕೃತಾ ತಸ್ಯ ಸೇವಾ ಯದೀಷ್ಟಂ ಕಿಮನ್ಯತ್ | ಸ ಧನ್ಯಃ ಸ ಮಾನ್ಯಃ ಶರಣ್ಯಃ ಸ ಪಾತ್ರಂ ನಿಶಂ ಯೋ ಹಿ ಸೇವಾಧುರೀಣೋ ಗುರೂಣಾಂ ||೪೨||

ಸುರಮುನಿನರದೈತ್ಯಾದ್ಯಾ ಗುರೋಃ ಸೇವನೇನ |
ಸ್ಥಿರಪದಮುಖಜಗ್ಮುರ್ಭಕ್ತಿಯೋಗೇನ ಬಾಢಂ ||
ಗುರುಚರಣವಿಹೀನೈರ್ವಾರಂಭಕಂ ತತ್ಪದಂ ಚೇ |
ದ್ಗುರುಲಗಿರಣಶಸ್ತೋ ನಿತ್ಯತಾಂ ಸಂಸ್ಪೃಶಂತಿ ||೪೩||

ಕಿಮು ಬಹುಲವಚೋಭಿಃ ಸಾರಹೀನೈರ್ಮನುಷ್ಯಾ |
ಗುರುವರ ಇಹ ಸಮ್ಯಕ್ ಸೇವನೀಯಃ ಸುಖಾರ್ಥಂ ||
ನಹಿ ನಹಿ ಗುರುಸೇವಾ ನಿಷ್ಫಲಾ ಭಕ್ತಿಭಾಜಾ |
ಮಹಿಮಪದಕ್ಕದಯಾನಾಂ ಭಾತಿ ಭೀತಿಪ್ರದೇವ ||೪೪||

ಘೋರೇ ಸಂಸ್ಕೃತಿಕಾನನೇ ಭ್ರಮತರೇ ಕಾಮಾದಿಹಿಂಸ್ರೋದರೇ | ಧೀರೋಽಯಂ ಗುರುರೇವ ದುಃಖಿತಧಿಯಾಂ ಸನ್ಮಾರ್ಗಸಂದರ್ಶಕಃ || ಸ್ವಾಂತಂ ಸ್ವಾಂತಮಮುಂ ಪುನೀತಮನಸಾ ಕಾರುಣ್ಯಪೂರಂ ಗುರುಂ | ಹಾರಂಹಾರಮಘಂ ಲಭಧ್ವಮಚಿರಾನ್ನಿತ್ಯಂ ಸುಖಂ ಶಾಶ್ವತಂ ||೪೫||

ನಮೋನಮಸ್ತೇ ಶಿವಧರ್ಮಪಾಲ | ನಮೋನಮಸ್ತೇ ವಿಜಿತಾಕ್ಷಜಾಲ | ನಮೋನಮಸ್ತೇ ಮಮಬೋಧಶೀಲ | ನಮೋನಮಸ್ತೇ ವೃತಶಿಷ್ಯಮಾಲ ||೪೬|| ನಮೋನಮಸ್ತೇ ಸಿತಭಸ್ಮಫಾಲ | ನಮೋನಮಸ್ತೇ ಗುರುವಂಶಮೂಲ | ನಮೋನಮಸ್ತೇ ಬಹುಚಿತ್ರಲೀಲ | ನಮೋನಮಸ್ತೇ ವೀರಶೈವಪಾಲ ||೪೭|| ನಮೋನಮಸ್ತೇ ಭುವನಾಲಿರಕ್ಷ | ನಮೋನಮಸ್ತೇ ಧೃತಶಂಕರಾಕ್ಷ | ನಮೋನಮಸ್ತೇ ವಿನಮದ್ವಿಪಕ್ಷ | ನಮೋನಮಸ್ತೇ ಗತಿದಾನದಕ್ಷ ||೪೮|| ನಮೋನಮಸ್ತೇ ವಿಮಲಾಂತರಂಗ | ನಮೋನಮಸ್ತೇ ಶಿವಚಿತ್ತಸಂಗ | ನಮೋನಮಸ್ತೇ ಶಮಿತಾಲಿಭಂಗ | ನಮೋನಮಃ ಶ್ರೀಗುರುಸಿದ್ಧಲಿಂಗ ||೪೯||

ವೇದಾಬ್ಧಿಂ ವಿತತಂ ವಿಲೋಡ್ಯ ವಿಬುಧೈಃ ಸಂಸ್ತೂಯಮಾನಂ ಪರಂ | ಸಂಪ್ರಾಪ್ಯೋತ್ತಮಮಂಜಸಾ ಶಿವಕರಂ ಸರ್ವಾರ್ಥಸಂಪತ್ಕರಂ || ಭಾಸ್ವದ್ವರ್ಗಮತಾಭಿಧಂ ಘನಕರಂ ಪೀಯೂಷಪಾತ್ರಂ ದದೌ | ಯೋಽಸ್ಮೈ ತೇಽಸ್ತು ನಿರಂತರಂ ಜಗದಿದಂ ಶ್ರೀರೇಣುಕಾದ್ಯಂ ಮುದಾ ||೫೦||

ಗುರುವರನುತಿಮೇತಾಂ ಗಾಯತೇ ಯಃ ಪುನೀತಾಂ |
ಗುರುಮಹಿಮಸಮೇತಾಂ ಜಾತ್ಯಧೀಶೇನ ಗೀತಾಂ ||
ಪರತರಸುಖಭೋಗಾನಾಪ್ನುತೇ ಸ ಕ್ಷಮಾಯಾಂ |
ಪರಶಿವಪದಮೋಕ್ಷಸ್ಥಂತಿಮಾಯಾಂ ದಶಾಯಾಂ ||೫೧||

ಶ್ರೀಮದಾಚಾರ್ಯಪದಪರಿಚಾರಕಪದವೀಜುಷಾ
ಗಂಗಾಧರಶಿವಾಚಾರ್ಯೇಣ, ಮಹಂತಿನಮಠ,
ಬೆಂಗಳೂರು ಸಿಟಿ (ಪಾಲಿಕೊಪ್ಪ).

ಪಂಚಾಚಾರ್ಯ ಪ್ರಭಾ.

೧೯೩೩ನೇ ಅಕ್ಟೋಬರ್ ತಾ|| ೨೩ನೇ ಸೋಮವಾರ.

ಈಗಿನ ವಿದ್ಯಾಭ್ಯಾಸದ ಪರಿಣಾಮ

ಈ ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವನೂ ವಿಶೇಷವಾಗಿ ಯಾವ ಯಾವ ಸಂಸರ್ಗದಲ್ಲಿರುತ್ತಾನೆಯೋ ಆಯಾಯ ಗುಣಗಳೇ ಅವನ ಹೃದಯದಲ್ಲಿ ಒಡಮೂಡುತ್ತವೆಂಬುದು ಸರ್ವಾನುಭವಸಿದ್ಧವಾಗಿರುತ್ತದೆ. ಯಾವಾಗಲೂ ಪಾಪಾತ್ಮರ ಸಂಸರ್ಗದಲ್ಲಿರುವವನು ಪಾಪಕರ್ಮಗಳನ್ನಾಚರಿಸುವ ಸ್ವಭಾವವುಳ್ಳವನಾಗುತ್ತಾನೆ. ಪುಣ್ಯಾತ್ಮರ ಸಂಸರ್ಗದಲ್ಲಿರುವವನು ಪುಣ್ಯಕರ್ಮಗಳನ್ನಾಚರಿಸುವ ಸ್ವಭಾವವುಳ್ಳವನಾಗುತ್ತಾನೆ. ಆತ್ಮವು ಬಹು ಮೃದುಸ್ವಭಾವವುಳ್ಳದ್ದು. ಬಳ್ಳಿಯು ತನ್ನ ಸಮೀಪದಲ್ಲಿ ಏನು ಇರುತ್ತದೆಯೋ ಅದನ್ನವಲಂಬಿಸಿ ವಕ್ರಭಾವವನ್ನೋ ಋಜುಭಾವವನ್ನೋ ಹೊಂದುವಂತೆ, ದೇಹದೊಳಗಿರುವ ಆತ್ಮನೂ ಸಹ ಒಡನಾಡಿಗಳ ಸಹವಾಸದಿಂದ ರಾಜಸಸ್ವಭಾವವನ್ನಾಗಲಿ, ತಾಮಸಸ್ವಭಾವವನ್ನಾಗಲಿ, ಸಾತ್ವಿಕಸ್ವಭಾವವನ್ನಾಗಲಿ ಪಡೆಯುತ್ತಾನೆ. ಒಡನಾಡಿಗಳು ಕ್ರೂರಾತ್ಮರಾದರೆ, ಈತನೂ ಕ್ರೂರಾತ್ಮನೇ ಆಗುವನು. ಧರ್ಮಾತ್ಮರಾದರೆ ಈತನೂ ಧರ್ಮಾತ್ಮನಾಗುತ್ತಾನೆ. ಅಂತಃಕರಣವೃತ್ತಿಯೆಂಬುದು ಹರಿಯುವ ನೀರಿನಂತೆ ಬಹು ಚಂಚಲಸ್ವಭಾವವುಳ್ಳುದಾದುದರಿಂದ ಪ್ರತಿಯೊಬ್ಬ ಮಾನವನು ಸತ್ಸಹವಾಸವನ್ನು ಮಾಡಿ ಸದ್ಗುಣಗಳನ್ನು ಪಡೆಯಬೇಕಲ್ಲದೆ ದುಸ್ಸಹವಾಸವನ್ನು ಮಾಡಿ ದುರ್ಗುಣಗಳನ್ನು ಪಡೆಯಬಾರದು. ಈ ವಿಷಯದಲ್ಲಿ ಒಂದು ಚಿಕ್ಕ ಕಥೆಯುಂಟು. ಅದೇನೆಂದರೆ—

ಒಬ್ಬ ಪ್ರಯಾಣಿಕನು ಒಂದೂರಿಂದ ಮತ್ತೊಂದೂರಿಗೆ ಹೋಗುತ್ತಿರಲು ದಾರಿಯಲ್ಲಿ ಬೇಸತ್ತು ಒಂದುಮರದ ಬುಡದಲ್ಲಿ ಕುಳಿತನು. ಆ ಮರದ ಮೇಲೆ ಕುಳಿತಿದ್ದ ಒಂದು ಗಿಣಿಯು ಅವನನ್ನು ನೋಡಿ ಕತ್ತರಿಸು, ಚೂರಿಯನ್ನು ತೆಗೆದುಕೋ, ಹೊಡೆ, ತಿವಿ ಮುಂತಾದ ಕ್ರೂರ ವಾಕ್ಯಗಳನ್ನು ನುಡಿಯುತ್ತಲಿದ್ದಿತು. ಆತನು ಈ ಮಾತನ್ನು ಕೇಳಲಾರದೆ ಮುಂದಕ್ಕೆ ಹೋಗಿ ಮತ್ತೊಂದು ಗಿಡವನ್ನು ಆಶ್ರಯಿಸಿದನು. ಆ ಗಿಡದಲ್ಲಿ ಕುಳಿತಿದ್ದ ಒಂದು ಗಿಣಿಯು ಬನ್ನಿ, ಕುಳಿತುಕೊಳ್ಳಿ, ನೀರು ತೆಗೆದುಕೊಳ್ಳಿ, ದೇವರ ಆರಾಧನೆಯು ನಡೆಯುತ್ತಲಿದೆಯೇ? ಕುಶಲವೇ? ಎಂದು ನುಡಿಯಿತು. ದಾರಿಕಾರನು ಈ ವಾಕ್ಯಗಳನ್ನು ಕೇಳಿ ಆಶ್ಚರ್ಯಗೊಂಡು ಇದೇನು? ಆ ಗಿಣಿಯು ಕ್ರೂರಮಾತುಗಳನ್ನಾಡುವುದಕ್ಕೂ ನೀನು ಮೃದುನುಡಿಗಳನ್ನಾಡುವುದಕ್ಕೂ ಕಾರಣವೇನೆಂದು ಪ್ರಶ್ನೆಮಾಡಲು, ಆಗ ಆ ಗಿಣಿಯು ಹೇಳಿದ್ದೇನೆಂದರೆ—ನಾವಿಬ್ಬರೂ ಒಂದೇ ತಾಯಿಯ ಗರ್ಭದಲ್ಲಿ ಹುಟ್ಟಿದೆವಾದರೂ ಒಬ್ಬ ಬೇಟೆಗಾರನು ನಮ್ಮೀರ್ವರನ್ನು ಹಿಡಿದುಕೊಂಡುಹೋಗಿ ನನ್ನನ್ನು ಓರ್ವ ಅಹಿಂಸಾವಾದಿಯಾದ ಸಾಧುಪುರುಷನಿಗೂ, ಅದನ್ನು ಇನ್ನೊಬ್ಬ ಹಿಂಸಾವಾದಿಯಾದ ಕಟುಕನಿಗೂ ಮಾರಿದನು. ಬಹುಕಾಲದಿಂದ ನಾನು ಸಾಧುಪುರುಷನ ಸಹವಾಸದಲ್ಲಿದ್ದುದರಿಂದ ನನಗೆ ಇದೇ ಸ್ವಭಾವವುಂಟಾಯಿತೆಂದೂ, ಅದು ಆ ಕಟುಕನಲ್ಲಿರುವ ಕ್ರೂರಸ್ವಭಾವವನ್ನೇ ಪಡೆಯಿತೆಂದೂ ಉತ್ತರಕೊಟ್ಟಿತಂತೆ! ಇದರಿಂದ ಮನುಷ್ಯರು ಗುಣಾಢ್ಯರೆನಿಸಿಕೊಳ್ಳಬೇಕಾದರೂ, ದುಷ್ಟರೆನಿಸಿಕೊಳ್ಳಬೇಕಾದರೂ ಸಹವಾಸವೇ ಮುಖ್ಯ ಸಾಧನವೆಂಬುದು ಸ್ಪಷ್ಟವಾಗುತ್ತದೆ. "ಸಂಸರ್ಗಜಾ ದೋಷಗುಣಾ ಭವಂತಿ" ಎಂಬ ಶಿಷ್ಟವಾಕ್ಯವೂ ಈ ವಿಷಯದಲ್ಲಿ ಎಲ್ಲರನ್ನೂ ಎಚ್ಚರಗೊಳಿಸುತ್ತದೆ. ನಮ್ಮ ಈಗಿನ ವಿದ್ಯಾರ್ಥಿಗಳಲ್ಲಿ ಅನೇಕರು ಅಭ್ಯುದಯಸಾಧನವಾದ ಈ ಸತ್ಸಂಗವೆಂಬ ಅಮೃತಸರೋವರವನ್ನು ಬಿಟ್ಟು ಯಾವಾಗಲೂ ದುಸ್ಸಂಗವೆಂಬ ವಿಷಸರೋವರವನ್ನಾಶ್ರಯಿಸಿ ತಮ್ಮ ಪವಿತ್ರ ಸಂಪ್ರದಾಯಗಳಿಗೆಲ್ಲ ತಿಲಾಂಜಲಿಯನ್ನು ಕೊಟ್ಟು ನಾಸ್ತಿಕಪಂಥವನ್ನು ಅವಲಂಬಿಸುತ್ತಿರುವುದನ್ನು ನೋಡಿದರೆ ಬಹು ವಿಷಾದವೆನಿಸುತ್ತದೆ. ಇವರು ಹೇರಳವಾದ ದ್ರವ್ಯವನ್ನು ಖರ್ಚುಮಾಡಿ ರಾಜಕೀಯ ವಿದ್ಯೆಯನ್ನು ಕಲಿತು ತಮ್ಮ ಜನ್ಮಭೂಮಿಯಲ್ಲಿ ಉಂಟಾದ ಧರ್ಮಗ್ಲಾನಿಯನ್ನು ಹೋಗಲಾಡಿಸುವುದಕ್ಕೆ ಬದಲಾಗಿ ಸನಾತನಧರ್ಮದ ಮೂಲೋತ್ಪಾಟನ ಮಾಡುವುದರಲ್ಲಿ ಉದ್ಯುಕ್ತರಾಗಿರುವುದನ್ನು ನೋಡಿದರೆ ಇದು ಸಂಸರ್ಗದೋಷವಲ್ಲದೆ ಬೇರೊಂದಲ್ಲವೆಂದು ಸಾರಿಸಾರಿ ಹೇಳಬೇಕಾಗಿದೆ.

ಪೂರ್ವಕಾಲದಲ್ಲಿ ಯಾವ ವಿದ್ಯಾಭ್ಯಾಸ ಮಾಡಿದರೂ ಸ್ವಧರ್ಮದಿಂದ ಚ್ಯುತರಾಗುತ್ತಿರಲಿಲ್ಲ. ಈಗಿನ ನೂತನ ವಿದ್ಯಾಭ್ಯಾಸದ ಮಹಿಮೆಯಿಂದ ಧಾರ್ಮಿಕ ವಾಸನೆಗೆ ಆತ್ಮನಲ್ಲಿ ತಿಲಮಾತ್ರವೂ ಅವಕಾಶವೇ ಇಲ್ಲದಂತಾಗುತ್ತ ಬಂದಿತು. ಎಲ್ಲಿ ನೋಡಿದರೂ ಸನಾತನ ಧರ್ಮನಿಬಂಧನೆಗಳನ್ನು ಕಿತ್ತೊಗೆಯಬೇಕೆಂಬ ಕೂಗು ಕೇಳಿಬರುತ್ತದೆ. ಜಪತಪೋನುಷ್ಠಾನಗಳೆಂದರೆ ಇವರಿಗೆ ತಲೆಶೂಲಿಯೇ ಬರುತ್ತದೆ. ಗುರುದೇವರಲ್ಲಿಯೂ ಮಾತಾಪಿತೃಗಳಲ್ಲಿಯೂ ಭಕ್ತಿಯೆಂಬುದು ಇಲ್ಲವೇ ಇಲ್ಲ. ತಮ್ಮ ತಮ್ಮ ಮಾತಾಪಿತೃಗಳು ಮಾಡುತ್ತಿರುವ ಧಾರ್ಮಿಕ ಕ್ರಿಯೆಗಳನ್ನು ನೋಡಿ ಹಾಸ್ಯಮಾಡುತ್ತ ಅವರಿಗೆ 'ಓಲ್ಡ್‌ಮ್ಯಾನ್' ಎಂಬ ಬಿರುದನ್ನು ಸಹ ಕೊಟ್ಟುಬಿಡುತ್ತಾರೆ. ಲಿಂಗಪೂಜೆಯನ್ನು ಮಾಡದೆ ಅನ್ನವನ್ನು ಗ್ರಹಿಸಬಾರದು; ನಾವು ಭೋಗಿಸುವ ಪದಾರ್ಥಗಳೆಲ್ಲವೂ ಮುಂಚಿತವಾಗಿ ಈಶ್ವರಾರ್ಪಣವಾಗಬೇಕು; ವೇದಾಗಮಗಳಲ್ಲಿ ಹೇಳಿದ ನಮ್ಮ ಶಿಷ್ಟಾಚಾರವನ್ನೆಂದೂ ಬಿಡಲಾಗದು; ಮುಖಕ್ಷೌರ, ಕ್ರಾಪ್ ಮುಂತಾದವು ನಮ್ಮ ಸನಾತನಧರ್ಮಕ್ಕೆ ವಿರೋಧವು. ವಾರ ತಿಥಿಗಳನ್ನು ನೋಡದೆ ಕ್ಷೌರ ಮಾಡಿಸಬಾರದು ಎಂದು ಗುರುಹಿರಿಯರು ಹೇಳಿದರೆ ಅವರ ಮಾತುಗಳು ಇವರಿಗೆ ವಿಷಸದೃಶವಾಗುತ್ತವೆ. ಕ್ಷೌರಕ್ಕಾಗಿ ಹಜಾಮರಿಗೆ ಬದಲು ತಾವೇ ಹಜಾಮರಾಗಿ ಕ್ಷೌರಮಾಡಿಕೊಳ್ಳುತ್ತಿರುವರು. ಹಾಸಿಗೆಯಿಂದ ಎದ್ದೊಡನೆ ಸ್ನಾನ ದೇವತಾರಾಧನೆಯಿಲ್ಲದೆ ಹೋಟೆಲ್ಲಿಗೆ ಪ್ರಯಾಣ ಬೆಳೆಯಿಸುವರು. ಇಂಥ ದುರಾಚಾರಗಳೆಲ್ಲವನ್ನೂ ನಮ್ಮ ವಿದ್ಯಾರ್ಥಿಗಳು ಈಗಿನ ವಿದ್ಯಾಭ್ಯಾಸದ ಸಂಗಡವೇ ಕಲಿತುಕೊಳ್ಳುತ್ತಿರುವರು. ಸನಾತನಧರ್ಮಾಭಿವೃದ್ಧಿಗೆ ಬೀಜಭೂತರಾಗಿರುವ ಬಾಲಕರೇ ಹೀಗೆ ಮಾಡುತ್ತ ಬಂದರೆ ಸನಾತನಧರ್ಮವು ಉದ್ಧಾರವಾಗುವ ಬದಲು ಕ್ರಮವಾಗಿ ಹೇಳಲು ಹೆಸರಿಲ್ಲದಂತಾಗಲು ಅಭ್ಯಂತರವಿಲ್ಲ. ಈಗಿನ ವಾತಾವರಣ ದೋಷದಿಂದ ಎಳೆಯ ಮರದಂತೆ ಕೋಮಲವಾದ ಸ್ವಭಾವವುಳ್ಳ ಬಾಲವಿದ್ಯಾರ್ಥಿಗಳ ಚಿತ್ತವೃತ್ತಿಯು ದಿನೇದಿನೇ ಹೀಗೆ ಬದಲಾವಣೆ ಹೊಂದುತ್ತ ಬರುವುದರಿಂದ ಭಾರತಧರ್ಮದ ಸಮಾಪ್ತಿಕಾಲವೆಂದೇ ಹೇಳಬೇಕಾಗುತ್ತದೆ. ಆದುದರಿಂದ ವಿದ್ಯಾರ್ಥಿಗಳು ಯಾವ ರಾಜಕೀಯ ವಿದ್ಯೆಗಳನ್ನು ಕಲಿಯಬೇಕಾಗಿದ್ದರೂ ಆ ವಿದ್ಯೆಗಳೆಲ್ಲವೂ ಸನಾತನ ಧರ್ಮಧ್ವಜವನ್ನು ಹಾಳುಮಾಡದಂಥವುಗಳಾಗಿರಬೇಕು. ರಾಜಕೀಯ ಮತ್ತು ಧಾರ್ಮಿಕ ಇವೆರಡೂ ಎರಡು ಕಣ್ಣುಗಳಂತಿರುತ್ತವೆ. ಇವುಗಳಲ್ಲಿ ಒಂದು ಐಹಿಕಸೌಖ್ಯಸಾಧಕವೂ, ಒಂದು ಆಮುಷ್ಮಿಕ ಸೌಖ್ಯಸಾಧಕವೂ ಆಗಿವೆ. ಮನುಷ್ಯನಾದವನು ಈ ಎರಡೂ ಸುಖಗಳನ್ನು ಪಡೆಯಬೇಕಾಗಿದೆ. ಆದ್ದರಿಂದ ಈಗಿನ ನವತರುಣರು ದುಸ್ಸಹವಾಸಕ್ಕೆ ಬೀಳದೆ ಸತ್ಸಹವಾಸದಲ್ಲಿದ್ದು ಬಹಿಸ್ಸೌಖ್ಯಸಾಧನವಾದ ರಾಜಕೀಯ ವಿದ್ಯೆಯನ್ನೂ ಅಂತಸ್ಸೌಖ್ಯಸಾಧನವಾದ ಧಾರ್ಮಿಕವಿದ್ಯೆಯನ್ನೂ ಕಲಿತು ತಮ್ಮ ಜನ್ಮಸಿದ್ಧವಾದ ಸನಾತನಧರ್ಮಕ್ಕೆ ಲೋಪವನ್ನು ತಂದುಕೊಳ್ಳದಂತೆ ಆಚರಿಸಬೇಕು. ಕೇವಲ ಚಾರ್ವಾಕಮತದಂತೆ ವಿಷಯೋಪಭೋಗಸುಖವೇ ನಿತ್ಯಸುಖವೆಂಬ ಭ್ರಮಕ್ಕೆ ಬಿದ್ದು ಅಧೋಗತಿಗೀಡಾಗಬಾರದಂತೆ ಈಶ್ವರನು ಇವರಿಗೆ ಸದ್ಬುದ್ಧಿಯನ್ನೀಯಲಿ.

ಒಳದೇಶದ ವೃತ್ತಾಂತಗಳು.

ಮೈಸೂರು ನ್ಯಾಯವಿಧಾಯಕ ಸಭೆಯು ಬೆಂಗಳೂರು ದಿವಾನರ ಕಚೇರಿಯಲ್ಲಿ ಡಿಸೆಂಬರು 18 ನೇ ತಾರೀಖಿನಿಂದ ಒಂದು ವಾರದವರೆಗೆ ನಡೆಯುವದು.

ಲಾರ್ಡ್‌ವೆಲ್ಲಿಂಗ್‌ಡನ್‌ರವರು ಪತ್ನೀ ಸಮೇತರಾಗಿ ಡಿಸೆಂಬರು 2 ನೇ ತಾರೀಖಿನ ದಿವಸ ರಾಜಧಾನಿಗೆ ಆಗಮಿಸಿ 5 ನೇ ತಾರೀಖಿನವರೆಗೆ ಇದ್ದು ಮುಂದಕ್ಕೆ ಪ್ರಯಾಣಮಾಡುವರೆಂದು ತಿಳಿದುಬಂದಿದೆ.

ಬೆಂಗಳೂರು ಸಿಟಿ ಲಾಲ್‌ಬಾಗಿನಲ್ಲಿ ಹನುಮಂತಪ್ಪನೆಂಬ ಪೋಲೀಸ್ ಕಾನ್‌ಸ್ಟೆಬಲನು ಶ್ರೀನಿವಾಸರಾಯರೆಂಬುವರನ್ನು ದುರ್ಭಾಷೆಗಳನ್ನಾಡಿ ಅವಮಾನ ಪಡಿಸಿದನೆಂಬ ಕಾರಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಸದರಿ ಕಾನ್‌ಸ್ಟೆಬಲನಿಗೆ 15. ರೂ ಜುಲ್ಮಾನೆಯನ್ನು ವಿಧಿಸಿದರು.

ಇದೇ ಅಕ್ಟೋಬರು 19 ನೇ ತಾರೀಖಿನ ದಿವಸ ಬೆಂಗಳೂರಿಂದ ಕೋಲಾರಕ್ಕೆ ಹೋಗುತ್ತಿದ್ದ ಮಿಕ್ಸೆಡ್ ಗಾಡಿಯು ಚಿಕ್ಕಬಳ್ಳಾಪುರಕ್ಕೂ ಗಿಡ್ನಹಳ್ಳಿಗೂ ಮಧ್ಯೆ ಉರುಳಿ 7 ಗೂಡ್ಸ್ ವ್ಯಾಗನ್‌ಗಳು ಚೂರುಚೂರಾದವೆಂದೂ 3 ನೇ ತರಗತಿ ಗಾಡಿಯಲ್ಲಿದ್ದ ಜನರಿಗೆ ಮಾತ್ರ ಯಾವ ಅಪಾಯವೂ ಉಂಟಾಗಲಿಲ್ಲವೆಂದೂ ತಿಳಿದುಬಂದಿದೆ.

ಮೈಸೂರು ಸಂಸ್ಥಾನದ ಮಹಿಳೆಯರ 8 ನೇ ವಾರ್ಷಿಕ ಮಹಾಸಭೆಯು ಶಿವಮೊಗ್ಗೆಯಲ್ಲಿ ನವೆಂಬರು 3 ನೇ ತಾರೀಖಿನ ದಿವಸ ಪ್ರಾರಂಭವಾಗುವದೆಂದೂ ಲೇಡಿ ಮಿರ್ಜಾ ಇಸ್ಮಾಯಿಲ್‌ರವರು ಸಭೆಯ ಅಧ್ಯಕ್ಷತೆಯನ್ನು ವಹಿಸುವರೆಂದೂ, ಈ ಸಂಬಂಧದಲ್ಲಿ ಸ್ತ್ರೀಯರ ಕಲಾಕೌಶಲ್ಯದ ಪ್ರದರ್ಶನವೂ ನಡೆಯುವದೆಂದೂ ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಗೌರಮ್ಮ ಎಂಬ ಹುಡುಗಿಗೆ ಮದುವೆಯಾಗಿ ರಾತ್ರಿ ನಿದ್ರೆಮಾಡುತ್ತಿದ್ದಾಗ ಮದುವೆಗೆ ಬಂದಿದ್ದ ಚಿನ್ನಸ್ವಾಮಿ ಎಂಬುವನು ಅವಳ ಕತ್ತಿನಲ್ಲಿದ್ದ ಅಡ್ಡಿಕೆಯನ್ನು ಅಪಹರಿಸಲು ಪ್ರಯತ್ನಿಸಿ ಸಿಕ್ಕಿಬಿದ್ದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ 6 ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

ಮೈಸೂರು ಸರಕಾರದವರು ಭದ್ರಾವತಿಯಲ್ಲಿ ತಯಾರುಮಾಡುತ್ತಿರುವ ಕಬ್ಬಿಣ ಮತ್ತು ಕಬ್ಬಿಣದ ಪೈಪ್‌ಗಳಿಗೆ ಜಪಾನಿನವರ ಸ್ಪರ್ಧೆಯಿಂದ ಸರಿಯಾದ ಮೌಲ್ಯವು ದೊರೆಯದೆ ನಷ್ಟಸಂಭವಿಸುತ್ತಿರುವದರಿಂದ, ಪರದೇಶಗಳಿಂದ ಬರುವ ಕಬ್ಬಿಣದ ಸಾಮಾನುಗಳಿಗೆ ಹೆಚ್ಚು ಸುಂಕವನ್ನು ಹಾಕಿ 20 ವರ್ಷಗಳವರೆಗಾದರೂ ಈ ಸ್ವದೇಶೀ ಕೈಗಾರಿಕೆಯನ್ನು ರಕ್ಷಿಸಬೇಕೆಂದು ಇಂಡಿಯಾ ಸರಕಾರಕ್ಕೆ ತಿಳಿಸಿದ್ದರು. ಅದಕ್ಕಾಗಿ ಈಗ ಒಂದು ಪಂಚಾಯಿತಿಯು ನೇಮಕವಾಗಿದ್ದು, ಅವರು ಹಿಂದೂಸ್ಥಾನದ ಸಮಸ್ತ ಕಬ್ಬಿಣದ ಕಾರ್ಖಾನೆಗಳ ಆಡತಳಿಗಳನ್ನೂ ಖುದ್ದಾಗಿ ನೋಡಿ ತಿಳಿಯುತ್ತಿರುವರು. ಅದರಂತೆ ಸದರಿ ಪಂಚಾಯಿತಿಯವರು ಕಳೆದವಾರ ಬೆಂಗಳೂರು ಮಾರ್ಗವಾಗಿ ಭದ್ರಾವತಿಗೆ ಹೋಗಿ ಎರಡು ದಿವಸಗಳವರೆಗೆ ಅಲ್ಲಿಯ ವಿದ್ಯಮಾನಗಳನ್ನೆಲ್ಲಾ ಪರಿಶೀಲಿಸಿ ಮುಂದಕ್ಕೆ ಪ್ರಯಾಣಬೆಳೆಸಿದರು.

ಕೋಲಾರದ ಡಿ|| ಚಿಂತಾಮಣಿಯಲ್ಲಿ ಪಂಡಿತ ರಾಮಸ್ವಾಮಿಶಾಸ್ತ್ರಿಗಳ ಪುತ್ರಿ ಮಹಾಲಕ್ಷ್ಮಮ್ಮನೆಂಬ ಬ್ರಾಹ್ಮಣವಿತಂತುವನ್ನು ಅಪಹರಿಸಿಕೊಂಡು ಹೋಗಿ ಬಲಾತ್ಕಾರವಾಗಿ ಅಬ್ದುಲ್ ಸಲಾಂ ಎಂಬುವನಿಗೆ ನಿಕಾಮಾಡಿಸಿದರೆಂಬ ಕಾರಣದಮೇಲೆ ಪೋಲೀಸರು ದಸ್ತಗಿರಿಸಾಹೇಬ್, ಅಬ್ದುಲ್‌ಷುಕೂರ್, ಲಜ್‌ಬಾಬಾಸೇಟ್, ಅಬ್ದುಲ್ ಸಲಾಂ, ಮಹಮದ್‌ಹುಸೇನ್, ಅಬ್ದುಲ್‌ಖಾದರ್ ಎಂಬ ಆರು ಜನರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದ್ದರು. ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಜೆ ಪರಮಶಿವಯ್ಯನವರು ಮೊಕದ್ದಮೆಯನ್ನು ವಿಚಾರಣೆಮಾಡಿ 1-2ನೇ ಅಪರಾಧಿಗಳನ್ನು ಖುಲಾಸೆಮಾಡಿ ಉಳಿದ 4 ಜನರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುತ್ತಾರೆ. ಸರಕಾರದ ಪರವಾಗಿ ಬೆಂಗಳೂರು ಡಿ|| ಪಬ್ಲಿಕ್ ಪ್ರಾಸಿಕ್ಯೂಟರಾದ ಮಿ|| ಜಿ. ಎಸ್. ದೊರಸ್ವಾಮಿಅಯ್ಯರವರೂ, ಅಪರಾಧಿಗಳ ಪರವಾಗಿ ಬೆಂಗಳೂರಿನ ಅಡ್ವೋಕೇಟ್ ಮಿ|| ಪಿ. ರಾಜರತ್ನಂರವರೂ ವಕಾಲತ್ತು ವಹಿಸಿದ್ದರು. ಜಡ್ಜ್‌ಮೆಂಟಿನಲ್ಲಿ ಮ್ಯಾಜಿಸ್ಟ್ರೇಟರು ಚಿಂತಾಮಣಿ ಪೋಲೀಸ್ ಇನ್‌ಸ್ಪೆಕ್ಟರಾದ ಮಿ|| ಸಯದ್ ಜಹಿರುದ್ದೀನ್‌ರವರ ವರ್ತನವನ್ನು ಖಂಡಿಸಿರುತ್ತಾರೆ. ಈಚೆಗೆ ಸರಕಾರದವರು ಇವರನ್ನು ಚಿಂತಾಮಣಿಯಿಂದ ಬೇರೆಕಡೆಗೆ ವರ್ಗಾಯಿಸಿರುತ್ತಾರೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ

ಸ್ಪೇನ್ ದೇಶದಲ್ಲಿ ಒಬ್ಬನು ಬಾಯಿಯಲ್ಲಿ ಸಿಡಿಮದ್ದನ್ನು ಇಟ್ಟುಕೊಂಡು ಆತ್ಮಹತ್ಯ ಮಾಡಿಕೊಂಡನು!

ಯೂರೋಪ್ ದೇಶದ ಜನರು ಸುಮಾರು 2,25,00,00,000 ರೂ. ಗಳ ಬಂಗಾರವನ್ನು ಶೇಖರಿಸಿರುವನಂತೆ!

ಜಪಾನ್ ದೇಶದಲ್ಲಿ ಮರಣ ಹೊಂದುವವರ ಸಂಖ್ಯೆಗಿಂತಲೂ ಹೆಚ್ಚಾಗಿ ಪ್ರತಿ ನಿಮಿಷದಲ್ಲಿಯೂ 4 ಮಕ್ಕಳು ಜನಿಸುವವಂತೆ!

ಚೀನಾದೇಶದಲ್ಲಿ 40,00,00,000 ಜನರು ವಾಸವಾಗಿದ್ದು ಇವರ ಪೈಕಿ 20,00,00,000 ಜನರು ನಿರುದ್ಯೋಗಿಗಳಾಗಿರುವರಂತೆ!

ಬಂಗಾಳಾ ಪ್ರಾಂತದ ಕೆಲವು ಭಾಗಗಳಲ್ಲಿ ಸೆಪ್ಟೆಂಬರು 3 ನೇ ತಾರೀಖಿನಿಂದ 25 ನೇ ತಾರೀಖಿನವರೆಗೆ 26 ಡಕಾಯಿತಿಗಳು ನಡೆದಿರುವವಂತೆ!

ಕರಾಚಿ ಪ್ರಾಂತಕ್ಕೆ ಸೇರಿದ ಖೈರಪುರದ 18 ವರ್ಷದ ಒಬ್ಬ ತರುಣನು ಇದ್ದಕ್ಕಿದ್ದ ಹಾಗೆ ಅಂಗಾಂಗಳ ಬದಲಾವಣೆಯಿಂದ ಸ್ತ್ರೀಯಾಗಿರುವನಂತೆ!

ಸಿನಿಮಾ ಪ್ರದರ್ಶನಗಳು ಎರಡು ಗಂಟೆ ಎಳು ನಿಮಿಷಗಳಿಗಿಂತಲೂ ಹೆಚ್ಚು ಹೊತ್ತು ನಡೆಯಕೂಡದೆಂದು ಜರ್ಮನಿ ಸರಕಾರದವರು ಹೊಸದಾಗಿ ಅಪ್ಪಣೆ ಮಾಡಿರುವರು!

ಜರ್ಮನಿದೇಶದಲ್ಲಿ ಗುಣಹೊಂದಲು ಸಾಧ್ಯವಿಲ್ಲದ ರೋಗಗಳಿಂದ ನರಳುವವರನ್ನು ಅವರು ಇಷ್ಟಪಟ್ಟರೆ ಯಾತನೆಯುಂಟಾಗದ ರೀತಿಯಲ್ಲಿ ಸಾಯಿಸಬಹುದೆಂಬ ಅರ್ಥಕ್ಕೆ ಒಂದು ಕಾನೂನನ್ನು ಜಾರಿಯಲ್ಲಿ ತರಬೇಕೆಂದಿರುವರಂತೆ!

ನ್ಯೂಯಾರ್ಕ್ ನಗರದಿಂದ ಚಿಕಾಗೋ ನಗರಕ್ಕೆ ಪ್ರಯಾಣಮಾಡುತ್ತಿದ್ದ ಒಂದು ವಿಮಾನವು ಚೆಸ್ಟರ್ನ್ ನಗರದ ಸಮೀಪದಲ್ಲಿ ಹತ್ತಿಕೊಂಡು ಉರಿದು ಹೋಯಿತು. ವಿಮಾನದಲ್ಲಿ ಪ್ರಯಾಣಮಾಡುತ್ತಿದ್ದ 7 ಜನರೂ ಮೃತಪಟ್ಟರು.

ಲಂಡನ್ನಿನಲ್ಲಿ ವಾಸವಾಗಿರುವ ಹಿಂದೂ ನಿವಾಸಿಗಳು ಈ ವರ್ಷ ನವರಾತ್ರಿಯ ಕಾಲದಲ್ಲಿ ನವಮಿಯ ದಿವಸ ಲಂಡನ್ನಿನ ರೀಜಂಟ್ ಪಾರ್ಕಿನಲ್ಲಿ ಆಯುಧಪೂಜೆಯನ್ನು ನೆರವೇರಿಸಿದರಂತೆ! ಲಂಡನ್ನಿನಲ್ಲಿ ಆಯುಧಪೂಜೆಯು ಇದೇ ಮೊದಲನೇ ಸಾರಿ ನಡೆಯಿತಂತೆ!

ಯೂಗೋಸ್ಲೇವಿಯಾ ದೇಶಕ್ಕೆ ಸೇರಿದ ಜಾಗ್ರೆಬ್ ಡಿಸ್ಟ್ರಿಕ್ಟಿನಲ್ಲಿ ಹೂಗಳ ಬೆಳವಣಿಗೆಯು ವಿಪರೀತವಾಗಿದ್ದು ಬೆಲೆಯು ಬಹಳ ಕಡಿಮೆಯಾಗಿರುವದರಿಂದ ಅಲ್ಲಿಯ ತೋಟಗಾರರು ತಮ್ಮಲ್ಲಿ ಬೆಳೆಯುವ ಹೂಗಳಲ್ಲಿ 3 ನೆಯ ಒಂದು ಭಾಗವನ್ನು ನಾಶಮಾಡಬೇಕೆಂದು ನಿರ್ಧರಿಸಿರುವರಂತೆ!

ಚೌನಿಹಜರಾ ಎಂಬ ಪ್ರಸಿದ್ಧ ಡಕಾಯಿತನು ಹಾರಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯು ನಡೆಯುತ್ತಿದ್ದ ಹಾಗೆಯೇ ಪೋಲೀಸರಿಂದ ಬಿಡಿಸಿಕೊಂಡು ಕಿಟಕಿಯಿಂದ ಹೊರಕ್ಕೆ ಹಾರಿ ಪರಾರಿಯಾಗಿರುವನು! ಇವನ ಮೇಲೆ ಎರಡು ಖೂನಿಗಳ ಅಪಾದನೆಯು ಹೊರಿಸಲ್ಪಟ್ಟಿದ್ದಿತಂತೆ!

ಬರ್ದ್ವಾನ್ ನಗರದ ಸಮೀಪದಲ್ಲಿರುವ ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ಒಂದು ಮೋಟಾರ್ ಗಾಡಿಯು ಒಬ್ಬ ವರ್ತಕನ ಮಗನ ಮೇಲೆ ಹರಿದು ಹುಡುಗನಿಗೆ ಪ್ರಾಣಾಪಾಯ ಸ್ಥಿತಿಯನ್ನುಂಟುಮಾಡಿತು. ಪೋಲೀಸರು ಗಾಡಿಯಲ್ಲಿದ್ದ ಇಬ್ಬರು ಯೂರೋಪಿಯನ್ನರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಚಿಲಿ ದೇಶಕ್ಕೆ ಸೇರಿದ ಸಾಂಟಿಯಾಗೋ ನಗರದ ಸೆಂಟ್ರಲ್ ಸ್ಟೇಷನ್ನಿನಿಂದ ಒಬ್ಬ ಕಳ್ಳನು ಒಂದು ರೈಲ್ವೇ ಇಂಜನ್ನನ್ನೇ ಕದ್ದುಕೊಂಡು ಹೋಗಿದ್ದನು. ರೈಲ್ವೇ ಅಧಿಕಾರಿಗಳು ಮತ್ತೊಂದು ಇಂಜನ್ನಿನಲ್ಲಿ ಅವನ ಬೆನ್ನುಹತ್ತಿ ಹಿಡಿದಾಗ, ಕಳ್ಳನು ಇಂಜನ್ನಿನಲ್ಲಿದ್ದ ಕೆಲವು ಸಾಮಾನುಗಳಿಗಾಗಿ ತಾನು ಹಾಗೆ ಮಾಡಿದುದಾಗಿ ಹೇಳಿದನು!

ಇದೇ ಅಕ್ಟೋಬರ್ 17 ನೆಯ ತಾರೀಖಿನ ದಿವಸ 6 ರಷ್ಯನ್ ಏರೋಪ್ಲೇನುಗಳು ಮಂಚೂರಿಯಾ ದೇಶದ ರಾಜಧಾನಿಯಾದ ಸಿಂಕಿಂಗ್ ಎಂಬ ನಗರದಮೇಲೆ 13 ಸಿಡಿಮದ್ದುಗಳನ್ನು ಹಾಕಿದವೆಂದೂ ಇದರಿಂದ 20 ಜನ ಜಪಾನೀಯರು ಮೃತಿಹೊಂದಿದರೆಂದೂ ತಿಳಿದುಬಂದಿದೆ. ಅಧಿಕಾರಯುತವಾದ ವರದಿಯು ಇನ್ನೂ ಪ್ರಕಟವಾಗಿಲ್ಲ

ವಿಶಾಖಪಟ್ಟಣದ ಕಲ್ಯಾಣಸುಂದರಂ ಎಂಬ ಒಬ್ಬ ಡಾಕ್ಟರು ತಮ್ಮ ಕೊಠಡಿಯ ಮೇಜಿನಮೇಲೆ ಯಾವುದೋ ವಿಷಪದಾರ್ಥವನ್ನಿಟ್ಟು ಹೋಗಿದ್ದರು. 5 ಮತ್ತು 3 ವರ್ಷ ವಯಸ್ಸಿನ ಅವರ ಇಬ್ಬರು ಗಂಡುಮಕ್ಕಳು ತಿಳಿಯದೆ ಅದನ್ನು ಕುಡಿದುಬಿಟ್ಟರು. ಚಿಕ್ಕವನು ಕೂಡಲೇ ಮೃತಪಟ್ಟನು. ದೊಡ್ಡವನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ದಕ್ಷಿಣಮೆಕ್ಸಿಕೊ ದೇಶಕ್ಕೆ ಸೇರಿದ 'ಸಾಂಟಾ ಮೇರಿಯಾ ಡೆಲ್ ಟೂಲ್" ಎಂಬ ಗ್ರಾಮಕ್ಕೆ ಸೇರಿದ ಸ್ಮಶಾನದಲ್ಲಿ 'ಸೈಪ್ರಸ್' ಎಂಬ ಒಂದು ಮರವಿರುವುದು. ಈ ಮರದ ಮುಂಡವು ಬುಡದಿಂದ 4 ಅಡಿ ಎತ್ತರದಲ್ಲಿ 130 ಅಡಿಗಳ ಸುತ್ತಳತೆಯುಳ್ಳದ್ದಾಗಿದ್ದು ಸಸ್ಯಶಾಸ್ತ್ರಜ್ಞರು ಅದು ಹುಟ್ಟಿ ಸುಮಾರು 6,000 ವರ್ಷಗಳಾಗಿರಬಹುದೆಂದು ಊಹಿಸಿರುವರು!

ಅಮೇರಿಕೆಯ ಟೆನ್ನಿಸ್ ಎಂಬ ಊರಿನಲ್ಲಿ 9 ವರ್ಷದ ಒಬ್ಬ ಹುಡುಗನು ಸುಮಾರು 700 ದಿವಸಗಳಿಂದ ಒಂದೇ ಸಮನೆ ನಿದ್ರೆ ಮಾಡುತ್ತಿರುವನು! ಹುಡುಗನು ಎಚ್ಚರಹೊಂದುವ ಲಕ್ಷಣಗಳು ಈಗೀಗ ಕಂಡುಬರುತ್ತಿರುವವಂತೆ! ಅಂತೂ ನೂರಾರು ಜನ ಡಾಕ್ಟರರು ಅವನನ್ನು ಪರೀಕ್ಷಿಸಿದಾಗ್ಯೂ, ಕಾಯಿಲೆಯು ಇಂಥಾದ್ದೆಂಬುದು ಇದುವರೆಗೆ ಯಾರಿಗೂ ತಿಳಿದಿಲ್ಲವಂತೆ!

ಸೊರ್ಜಾ ನಗರದ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರವರ ಮಗಳು ವಿದ್ಯಾವತಿಯಾಗಿದ್ದಳು. ಇವಳನ್ನು ಗ್ರಾಮಾಂತರಕ್ಕೆ ವಿವಾಹಮಾಡಿ ಕೊಟ್ಟಿದ್ದರು. ಇವಳು ಹಳ್ಳಿಯಲ್ಲಿರಲು ಇಷ್ಟಪಡದೆ ಗಂಡನಮನೆಗೆ ಹೋಗದೆ ಇದ್ದಳು. ತಂದೆತಾಯಿಗಳು ಬಲಾತ್ಕಾರ ಮಾಡಲು, ಕೊಠಡಿಗೆ ಹೋಗಿ ಮೈಗೆ ಸೀಮೆಯೆಣ್ಣೆಯನ್ನು ಹಾಕಿಕೊಂಡು ಬೆಂಕಿ ಹೊತ್ತಿಸಿಕೊಂಡು ಮೃತಪಟ್ಟಳು.

ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾದ ಮಿ|| ಸಿ. ಲಕ್ಷ್ಮಣರಾವ್ ಬಿ.ಎ., ಬಿ.ಎಲ್. ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 1934 ನೇ ಇಸವಿ ಜುಲೈ 21 ನೇ ತಾರೀಖಿನವರೆಗೆ ರಜೆಯು ಕೊಡಲ್ಪಟ್ಟಿರುವದು. ಸದ್ಯಃ ರಜೆಯ ಮೇಲಿರುವ ಮಿ|| ಆರ್. ರಾಮಯ್ಯನಾಯಿಡು ಬಿ.ಎ., ಇವರು ಶಿವಮೊಗ್ಗ ಡಿ|| ಟ್ರೆಜರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. (ಈ ಮೊದಲು ಇವರನ್ನು ಕಡೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ವರ್ಗಾಯಿಸಿದೆಯೆಂದು ಮಾಡಿದ್ದ ಆರ್ಡರನ್ನು ವಜಾಮಾಡಲಾಗಿದೆ.)

ಅಮೇರಿಕೆಯಲ್ಲಿ ಪ್ರತಿವರ್ಷವೂ ಹೃದಯದ ದೌರ್ಬಲ್ಯದಿಂದ 3,00,000 ಜನರು ಮೃತಿಹೊಂದುವರಂತೆ! ಇದರ ಪೈಕಿ 100 ರಲ್ಲಿ 99 ಜನರ ಮರಣಕ್ಕೆ ಕಾಫೀ ಕುಡಿಯುವದೇ ಮೂಲಕಾರಣವಾಗಿರುವದಂತೆ! ಕಾಫಿಯಲ್ಲಿ ಕ್ಯಾಫೀನ್ ಎಂಬ ಒಂದುಬಗೆಯ ಮಾದಕ ವಸ್ತುವಿದ್ದು, ಕಾಫಿಯ ನಿತ್ಯಸೇವನೆಯಿಂದ ಹೃದಯದ ದೌರ್ಬಲ್ಯವು ದಿನದಿನಕ್ಕೆ ಹೆಚ್ಚುತ್ತಾ ಹೋಗುವದಂತೆ!

ಮಿ|| ರಾಂಪಾ ಎಂಬ ಒಬ್ಬ ಆಂಗ್ಲೇಯರು ಇಬ್ಬರು ಮಿತ್ರರೊಡನೆ ಇಂಡಿಯಾ ರಬ್ಬರಿನಿಂದ ತಯಾರಾದ 15 ಅಡಿ ಉದ್ದವಿರುವ ಒಂದು ಸಣ್ಣ ದೋಣಿಯಲ್ಲಿ ಇಂಡಿಯಾ ದೇಶಕ್ಕೆ ಬರಬೇಕೆಂದು ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿರುವರು. ಅವರು ನೀಲಗಿರಿಗೆ ಹೋಗಿ ಅಲ್ಲಿ ವಾಯುರೋಗವನ್ನು ಪರಿಹರಿಸಬಲ್ಲ ಒಂದು ಅಮೂಲ್ಯವಾದ ಮೂಲಿಕೆಯನ್ನು ಶೋಧಿಸಿ ತೆಗೆದುಕೊಂಡು ಸ್ವದೇಶಕ್ಕೆ ಹಿಂತಿರುಗುವರಂತೆ!

ಚೀನಾದೇಶದ ಶಾಂಘಾಯ್ ಎಂಬ ನಗರದಲ್ಲಿ ರಸ್ತೆಯನ್ನು ಅಗೆಯುತ್ತಿದ್ದಾಗ ಈಗ್ಗೆ ಸುಮಾರು 500 ವರ್ಷಗಳ ಹಿಂದೆ ಹೂಳಲ್ಪಟ್ಟಿದ್ದ ಒಬ್ಬ ಹೆಂಗಸಿನ ಶವವು ದೊರಕಿತು. ಶವಕ್ಕೆ ಶ್ರೀಮಂತರ ಉಡಿಗೆಗಳನ್ನು ಹಾಕಿದ್ದು, ಅದಕ್ಕೆ ಲೇಪಿಸಿದ್ದ ಸುಗಂಧದ್ರವ್ಯಗಳಿಂದ ಸ್ವಲ್ಪವೂ ಕೆಡದೆ ಇದ್ದಿತಂತೆ! ಆದರೆ ಶವದ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದ ಸ್ವಲ್ಪ ಹೊತ್ತಿನೊಳಗಾಗಿ ಶವವೂ ಅದರ ಬಟ್ಟೆಗಳೂ ಕಪ್ಪಾಗಿ ಹೋದವಂತೆ!

ಬಾಸ್ನಿಯಾ ದೇಶಕ್ಕೆ ಸೇರಿದ ಬಾಂಜಲೂಕಾ ಎಂಬ ಊರಿನಲ್ಲಿ ಸಾಯಂಕಾಲವಾದಕೂಡಲೇ ಕೋಟ್ಯಾಂತರ ಚಿಟ್ಟೆ ಹುಳುಗಳು ಊರಿನಮೇಲೆ ಬಿದ್ದು ಜನಗಳ ಸಂಚಾರಕ್ಕೂ ಇತರ ಕೆಲಸಕಾರ್ಯಗಳಿಗೂ ಬಹಳ ತೊಂದರೆಯನ್ನುಂಟುಮಾಡಿ, ಬೆಳಗಾದಕೂಡಲೇ ಪುನಃ ಮೇಲಕ್ಕೆ ಹಾರಿಹೋಗುವವಂತೆ! ಇವುಗಳ ಕಾಟವನ್ನು ತಡೆಯಲಾರದೆ ಆ ಊರಿನ ಅಂಗಡಿಗಳು ಮತ್ತು ಹೋಟಲಿನವರೆಲ್ಲಾ ಸಾಯಂಕಾಲವಾದಕೂಡಲೇ ಬಾಗಿಲುಗಳನ್ನು ಮುಚ್ಚಿ ದೀಪಗಳನ್ನು ಆರಿಸಿಬಿಡುವರಂತೆ!

ಇಡೀ ಪ್ರಪಂಚದಲ್ಲಿ ಒಟ್ಟು 3,35,68,295 ಮೋಟಾರುಗಳು ಉಪಯೋಗದಲ್ಲಿರುವವು. ಅವುಗಳ ಪೈಕಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿಯೇ 2,43,17,020 ಮೋಟಾರುಗಳಿರುವವಂತೆ! ಫ್ರಾನ್ಸಿನಲ್ಲಿ 18,45,400; ಇಂಗ್ಲೆಂಡಿನಲ್ಲಿ 13,85.472; ಕೆನಡಾದಲ್ಲಿ 11,06,408; ಜರ್ಮನಿಯಲ್ಲಿ 6 16,200; ಆಸ್ಟ್ರೇಲಿಯಾದಲ್ಲಿ 5,33,833; ಇಟಲಿಯಲ್ಲಿ 3,23,336 ಅರ್ಜೆಂಟಿನಾದಲ್ಲಿ 3,07,347; ನ್ಯೂಜೀಲೆಂಡಿನಲ್ಲಿ 1,90,547; ಬೆಲ್ಜಿಯಮ್ಮಿನಲ್ಲಿ 1 82,689; ಸ್ಪೇನಿನಲ್ಲಿ 1,59,200 ಮೋಟಾರುಗಳಿರುವವು. ಆದರೆ ನಮ್ಮ ಭರತಖಂಡದಲ್ಲಿ ಮೇಲ್ಕಂಡ ಎಲ್ಲಾ ದೇಶಗಳಿಗಿಂತಲೂ ಹೆಚ್ಚು ಜನರಿರುವರಾದರೂ ಹತ್ತರಲ್ಲಿ ಒಂದು ಭಾಗದಷ್ಟು ಮೋಟಾರುಗಳು ಸಹ ಇರುವದಿಲ್ಲವಂತೆ!

ಸ್ವೀಕಾರ

ಸೊಲ್ಲಾಪುರ ನಿವಾಸಿಗಳಾದ ವೇ|| ನಂದಿಮಠದ ನೂರಂದಯ್ಯನವರು ತಮ್ಮ ಮಠಕ್ಕೆ ಉಜ್ಜಯಿನೀ ಜಗದ್ಗುರುಗಳನ್ನು ಬಿಜಮಾಡಿಸಿಕೊಂಡು ಹೋಗಿ ಶಿವದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ವೇ|| ಕಲ್ಲಯ್ಯಸ್ವಾಮಿ ಕಾಕೇಗಾಂವಕರ ಇವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಚಿಮ್ಮಲಗಿ ಗ್ರಾಮದ ಮ|| ರಾ|| ಭೀಮಗೌಡ ಹಿರೇಗೌಡರ ಇವರ ಪುತ್ರನ ಚೌಲಕರ್ಮದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಸಿ. ಪರ್ವತಗೌಡರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಿರಿಯಾಳಗ್ರಾಮದ ಮ|| ರಾ|| ಶೆಟ್ರಿ ಮರುಳಪ್ಪನವರು ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಜಾತಿಸಂಕರಕಾರರಿಗೆ ಬೋಧೆ.

ಬರೆದವ—ದೈವಜ್ಞ ವಿನೋದ.

ಸಂಕರೋ ನರಕಾಯೈವ ಕುಲಘ್ನಾನಾಂ
ಕುಲಸ್ಯ ಚ |
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋ
ದಕಕ್ರಿಯಾಃ ||

ಜಾತಿಸಂಕರಕಾರರು ಕುಲಘಾತಕರಾಗಿ ನರಕಭಾಗಿಗಳಾಗುವರು. ಕುಲಘಾತಕನ ಪಿತೃಗಳು ಪಿಂಡೋದಕ ಕ್ರಿಯಾಹೀನರಾಗಿ ನರಕಕ್ಕಿಳಿಯುವರು ಎಂದು ಗೀತೆಯು ಬೋಧಿಸುತ್ತದೆ. ಹಾಯ್! ಹಾಯ್ ಇದೆಂಥ ಪಾಪದ ಪರಮಾವಧಿಯು! ವಿಶ್ವಪ್ರಪಂಚದಲ್ಲಿ ಶೋಭಿಸುತ್ತಲಿರುವ ವೀರಶೈವಮತ ಸಾಮ್ರಾಜ್ಯದೊಳಗೆ ಅನೇಕ ಜಾತಿ ಪಂಗಡಗಳಿದ್ದರೂ ಅವೆಲ್ಲವುಗಳ ಸಿದ್ಧಾಂತವು ಶಕ್ತಿವಿಶಿಷ್ಟಾದ್ವೈತಾತ್ಮಕವಾಗಿದೆ. ಈ ತತ್ವದ ತಿರುಳನ್ನರಿಯದ ಮರುಳರ ಗುಂಪೊಂದು ವಿಜಾಪುರ ಪ್ರಾಂತದಲ್ಲಿಯೂ, ಹುಬ್ಬಳ್ಳಿ ಪ್ರಾಂತದಲ್ಲಿಯೂ ತಲೆ ಎತ್ತಿದೆ. ಈ ಗುಂಪಿಗೆ "ಜಾತಿಭೇದಗಳಿಲ್ಲ, ಗುರುವರ್ಗವಿಲ್ಲ, ಭಕ್ತವರ್ಗವಿಲ್ಲ, ಗುರುಗಳಿಲ್ಲ, ಶಿಷ್ಯರಿಲ್ಲ, ಹೆಚ್ಚು ಇಲ್ಲ, ಕಡಿಮೆ ಇಲ್ಲ, ಸ್ತ್ರೀಯರಿಲ್ಲ, ಪುರುಷರಿಲ್ಲ, ನಪುಂಸಕರಿಲ್ಲ, ಗಂಡಸಿಲ್ಲ, ಹೆಂಡತಿ ಇಲ್ಲ" ಅಂತೂ ಇಂತೂ ಏನೂ ಇಲ್ಲ. ಈ ನಾಸ್ತಿಕ ವರ್ಗಕ್ಕೆ ಇರುವದಾದರೂ ಏನು? ಬಾಯ್ಬಡುಕತನದಿಂದ ಬಂಡಾಚಾರವನ್ನು ಬೆಳೆಯಿಸಿ ಕುಲಭ್ರಷ್ಟತೆಯ ಪಾಪವನ್ನು ಗಳಿಸಿಕೊಳ್ಳುವದು. ಒಂದು ವಕ್ತ ಬಾಯ್ಬಡುಕತನದ ಹವ್ಯಾಸವನ್ನು ಬಿಟ್ಟು ಕೃತಿಯ ಮೂಲಕ ಈಗ ರೂಢಿಯಲ್ಲಿ ತಮಗಿಂತ ಕೆಳಗಿನ ತರಗತಿಯಲ್ಲಿ ಪರಿಗಣಿಸಲ್ಪಡುವವರಿಗೆ ತಮ್ಮ ಹೆಣ್ಣುಕೊಟ್ಟು ಅವರ ಹೆಣ್ಣು ತೆಗೆದುಕೊಂಡು ತಮ್ಮ ಬಾಯಿಂದ ಪುರಾಣಕ್ಕೆ ಮಂಗಳಾರತಿಯನ್ನು ಮಾಡಿಕೊಂಡಲ್ಲಿ ಅದೊಂದು ರೀತಿಯಿಂದ ಯೋಗ್ಯವಾದುದು. ಇದನ್ನು ಬಿಟ್ಟು ತಮ್ಮ ದುಷ್ಟವಾದವನ್ನು ತಮಗಿಂತಲೂ ಹೆಚ್ಚಿನ ಜಾತಿಯವರೊಡನೆ ಸಂಬಂಧ ಬೆಳೆಸಲು ಮಾಡುತ್ತಿರುವದನ್ನು ನೋಡಿದರೆ ಇವರ ದುಷ್ಟಮಾರ್ಗವು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ತೋರುತ್ತದೆ. ಯಾವ ನೀಚಜಾತಿಯ ಬೀಜಕ್ಕೋ ಹುಟ್ಟಿದ ಸೂಳೆಯ ಮಗನಂತೂ ನಾನಾತರಹದ ವೇಷವನ್ನು ತೊಡಹತ್ತಿದ್ದಾನೆ. ಹಿಂದಿನ ಜನ್ಮದಲ್ಲಿ ಅನಂತಾನಂತ ಪಾಪಗಳನ್ನು ಮಾಡಿದ ಈ ಪಾಪಿಯು ತನ್ನ ಪಾಪಕರ್ಮಕ್ಕನುಸಾರವಾಗಿ ಬಹುಜನ ಗಂಡರುಳ್ಳ ಸೂಳೆಯಮಗನಾಗಿ ಹುಟ್ಟಿದನು. ಇನ್ನಾದರೂ ಇವನು ಪುಣ್ಯವನ್ನು ಗಳಿಸದೆ ಘೋರವಾದ ಪಾಪಕಾರ್ಯವನ್ನು ಮಾಡಹತ್ತಿರುವನು. ಇವನಿಗೆ ದೇವರು ಮುಂದೆ ಯಾವ ಯೋನಿಯಲ್ಲಿ ಹುಟ್ಟಿಸುವನೋ ತಿಳಿಯದಾಗಿದೆ. ಈಗ ಕೆಲವರು ಜಾತಿಸಂಕರಕಾರ್ಯಕ್ಕೆ ಕೈಹಾಕಿ ಹೊಂದುತ್ತಿರುವ ಅವಮಾನ ಅಪಯಶಸ್ಸುಗಳ ಪರಿವೆ ಇಲ್ಲದೆ ಮಾನಹೀನರಾಗಿ ನಿಂತಿರುವದನ್ನು ನೋಡಿದರೆ ಪರಮಾಶ್ಚರ್ಯವಾಗುವದು. ಜಾತಿತಾರತಮ್ಯದಲ್ಲಿರುವ ಅನೇಕವಾದ ಗುಣಧರ್ಮದ ಘನತೆಯನ್ನು ಸಂಹಿತೆ-ಸ್ಮೃತಿ-ಭಾಷ್ಯಾದಿಗ್ರಂಥಗಳು ಬಹು ಸೊಗಸಾಗಿ ಕೊಂಡಾಡುತ್ತವೆ. ಈ ಉದ್ಗ್ರಂಥಗಳನ್ನು ಕಣ್ತೆರೆದು ನೋಡುವ ಶಕ್ತಿಯಿಲ್ಲದೆ ವಿಜಯನಗರದ ರಾಜ್ಯಭಾರದಕಾಲದಲ್ಲಿ ಬಸವ-ಚೆನ್ನಬಸವ ಅಲ್ಲಮಾದಿಗಳ ಮುದ್ರಿಕೆಗಳಿಂದ ಉದಯವಾದ ವಚನ ವಾಙ್ಮಯದಂತೆ ಈಗಿನ ಕಾಲದಲ್ಲಿಯೂ ಈ ಜಾತಿ ಸಂಕರಕಾರರು ವಚನಗಳನ್ನು ರಚಿಸಿ ಸಂಬೆರಿಕೆಯನ್ನುಂಟುಮಾಡತೊಡಗಿದ್ದಾರೆ. ಈಗಿನ ಲಿಂಗಧಾರಿಗಳಾದ ಕೆಲಜನ ಶೂದ್ರರು ಇಂಥ ಶುಷ್ಕವಚನಗಳಿಂದ ಜಾತಿ ಸಾಂಕರ್ಯದ ಹುಟ್ಟುಗೆಯುಮಟ್ಟನ್ನು ಮಾತಿನ ಮೂಲಕವಾಗಿ ಹಬ್ಬಿಸಲು ಪ್ರಯತ್ನಿಸಿ ಅಲ್ಲಲ್ಲಿ ಉಗುಳಿಸಿಕೊಳ್ಳುತ್ತಿರುವುದು ಪ್ರಸಿದ್ಧವೇ ಇದೆ. ಇದು ಇವರ ಹೀನಮಾರ್ಗವನ್ನು ತೋರಿಸುವುದಲ್ಲದೆ ಬೇರೆಯಲ್ಲ. ಇನ್ನಾದರೂ ಈ ಶೂದ್ರರು ನರಕಹೇತುವಾದ ಜಾತಿಸಾಂಕರ್ಯಕಾರ್ಯವನ್ನು ತ್ಯಜಿಸಲಿ, ಕೈಗಂಟಿನ ವಚನರಚನೆಗೆ ನೀರೆರೆಯಲಿ. ತಮ್ಮ ಕುಲಾಭಿಮಾನವಿರಲಿ. ತಮ್ಮ ವಂಶವೃಕ್ಷವು ಯಾವ ಮತಭೂಮಿಯಲ್ಲಿ ಬೆಳೆದಿರುವದೋ ಆ ಮತದ ಸಂಪೂರ್ಣ ಅಭಿಮಾನಜ್ಯೋತಿಗಳಾಗಲಿ. ಇದ್ದ ಭೂಮಿಯನ್ನೂ ಹುಟ್ಟಿದ ವೃಕ್ಷವನ್ನೂ ಜೋಪಾನಮಾಡಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದು ದೈವಜ್ಞವಿನೋದನ ಆಶೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಕಂಪ್ಲಿ ತಗ್ಗಿನಮಠದ ಪಟ್ಟದಸ್ವಾಮಿಗಳವರ ಪಲ್ಲಕ್ಕಿ ಮತ್ತು ದೇವೀಪುರಾಣಮಹೋತ್ಸವ.

ಸಣಾಪುರ.

ಹೊಸಪೇಟಿ ತಾ|| ಸಣಾಪುರ ಗ್ರಾಮದಲ್ಲಿರುವ ಚಾಮಲಾಪುರದ ಭಜನಾ ಗಂಗಾಧರಪ್ಪನವರು ಇದೇ ಶ್ರೀಮುಖ ಸಂ|| ಆಶ್ವಯುಜ ಶು|| ಬುಧವಾರದಿಂದ ದೇವೀಪುರಾಣವನ್ನು ಪ್ರಾರಂಭಿಸಿದರು. ಪೂಜಾರಿ ವೀರಭದ್ರಯ್ಯನವರು ಪುರಾಣವನ್ನು ಓದುತ್ತಲೂ ಮತ್ತು ನಿಕ್ಕದಲ್ಲಿ ಯೇಳುಬೆಂಚಿ ಹಿರೇಮಠದ ಸ್ಕೂಲ್ಮಾಸ್ಟರ್ ಸಿದ್ಧಯ್ಯನವರು ಅಷ್ಟಾವರಣ ಶಿವಾಧಿಕ್ಯ ಆಚಾರ ವಿಚಾರಗಳ ಮೇಲೆ ಉಪನ್ಯಾಸಮಾಡುತ್ತಲೂ ಇದ್ದರು. ಗಣಾರಾಧನೆಯು ಪ್ರತಿದಿವಸದಲ್ಲಿಯೂ ಜರುಗುತ್ತಲೇ ಇದ್ದಿತು. ಆಶ್ವಯುಜ ಶು|| ೧೦ ಗುರುವಾರ ಪುರಾಣಸಮಾಪ್ತಿಯನ್ನು ಮಾಡಿ ಸಾಯಂಕಾಲ ಶೃಂಗರಿಸಲ್ಪಟ್ಟ ಅಂದೋಲಿಕೆಯಲ್ಲಿ ಸದರಿ ಶ್ರೀಗಳವರನ್ನು ಮೂರ್ತಮಾಡಿಸಿ ಸಕಲವಾದ್ಯವೈಭವಗಳಿಂದಲೂ ಶಿವಭಜನೆಯಿಂದಲೂ ಉತ್ಸವವು ಹೊರಟು ಶ್ರೀ ವೀರೇಶ್ವರದೇವಾಲಯಕ್ಕೆ ಹೋಗಿ ಅಲ್ಲಿರುವ ಶಮೀವೃಕ್ಷವನ್ನು ವಿಧ್ಯುಕ್ತವಾಗಿ ಪೂಜಿಸಿ ೧೦ ಘಂಟೆಗೆ ಶ್ರೀ ದೇವೀಪುರಾಣದ ಮಂಟಪಕ್ಕೆ ಉತ್ಸವವು ಆಗಮಿಸಿತು. ಶ್ರೀಗಳವರು ಭದ್ರಾಸನವನ್ನಲಂಕರಿಸಿ ತಮ್ಮ ಅಮೃತವಾಣಿಯಿಂದ ಕೂಡಿದ್ದ ಭಕ್ತರಿಗೆ ಅಷ್ಟಾವರಣ ವಿಷಯವನ್ನು ಬೋಧಿಸಿದರು. ಸ್ಕೂಲ್ಮಾಸ್ಟರ್ ಸಿದ್ಧಯ್ಯನವರು ಪತಿವ್ರತಾಮಹಿಮೆಯನ್ನೂ ಸುಮಂಗಲೆಯರು ಇರತಕ್ಕ ನಡವಳಿಗಳನ್ನೂ ಸರಸವಾಗಿ ಬೋಧಿಸಿದರು. ಅನಂತರ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ರಡ್ಡಿ ಕರಿಬಸವನಗೌಡರು ಮತ್ತು ವೀರಭದ್ರಗೌಡರು, ಕನಕಗಿರಿ ದೊಡ್ಡಬಸಪ್ಪನವರು ಇನ್ನು ಮುಂತಾದ ಅನೇಕ ಭಕ್ತರು ಈ ಕಾರ್ಯದಲ್ಲಿ ಭಾಗಿಗಳಾಗಿದ್ದರು. ಗಂಗಾಧರಪ್ಪನವರ ಭಕ್ತಿಯು ಅತ್ಯಂತ ಶ್ಲಾಘನೀಯವಾಗಿದೆ. ಜಗದ್ಗುರು ಪಂಚಾಚಾರ್ಯರು ಈ ಮಹಾಶಯರಿಗೆ ದೀರ್ಘಾಯುರಾರೋಗ್ಯಭಾಗ್ಯಗಳನ್ನು ಕೊಟ್ಟು ಕಾಪಾಡಲಿ. ಈ ಮಂಗಲಕಾರ್ಯದ ಸಮಯದಲ್ಲಿ ಪ್ರಭಾಪೋಷಣೆಗೋಸ್ಕರ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಕಾನ್ವೊಕೇಷನ್.

ಮೈಸೂರು ಅರಮನೆ ಮರಹಮ್ಮತ್ ಇಲಾಖಾ ದರೋಗ್ ಶಿವಲಿಂಗದೇವರ ಮಕ್ಕಳು ಎಸ್. ಮುರಿಗೇಂದ್ರಸ್ವಾಮಿ ಎಂಬವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ವರ್ಷ ನಡೆದ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಇದೇ ಅಕ್ಟೋಬರ್ ತಿಂಗಳು 14 ನೇ ಶನಿವಾರ ನಡೆದ ಕಾನ್ವೊಕೇಷನ್ನಲ್ಲಿ ಪಟ್ಟಾಂಕಿತರಾದುದು ಸಂತೋಷಪ್ರದವಾಗಿದೆ.

ಇವರು ವಂಶಪಾರಂಪರ್ಯವಾಗಿ ಮೈಸೂರುಮಹಾರಾಜರ ಸಂತತಿಯವರಿಂದ ಪೋಷಿಸಲ್ಪಟ್ಟ ವೀರಶೈವಮಠೀಯರಾಗಿರುತ್ತಾರೆ. ಇವರು 1910 ನೇ ಇಸವಿ ಡಿಸೆಂಬರ್ ತಾರೀಖು 20 ರಲ್ಲಿ ಜನಿಸಿ ತಮ್ಮ ಐದನೆಯ ವರ್ಷದಲ್ಲಿ ಈಗಿನ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಕೃಪಾಪಾತ್ರರಾಗಿ ಅವರು ದಯಪಾಲಿಸಿದ ಸ್ಕಾಲರ್‌ಷಿಪ್ ಸಹಾಯದಿಂದ ದಿವಂಗತರಾದ ರಾವ್‌ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಎಂಟ್ರೆನ್ಸ್ ಕ್ಲಾಸಿನವರೆಗೂ ಓದಿ ಅನಂತರ ಮಹಾರಾಜಾ ಕಾಲೇಜಿನಲ್ಲಿ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆಂದು ಕೇಳಿ ಸಂತೋಷಿಸುತ್ತೇನಲ್ಲದೆ ಇವರಿಗೆ ದೇವರು ಚಿರಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಿ ಕಾಪಾಡಲೆಂದು ಸದಾ ದೇವರನ್ನು ಪ್ರಾರ್ಥಿಸುತ್ತೇನೆ ಮತ್ತು ವೀರಶೈವ ಜನಾಂಗವು ಇವರಂತೆ ಇಹೋತ್ಕರ್ಷಯವಾಗಿ ವಿದ್ಯಾವಂತರಿಂದ ತುಂಬಿ ತುಳುಕಾಡಲೆಂದು ಹಾರೈಸುತ್ತೇನೆ.

ವೀರಶೈವ ಮಹಾಭಿಮಾನಿ.

~~ಶರೀರದ ಆರೋಗ್ಯ.~~

ನಿದ್ರೆ - ಆರೋಗ್ಯ -

ಎಸ್. ರಾಮಕೃಷ್ಣನ್ (ವೇಲೂರ್)

ವಿಶ್ರಾಂತಿ—ದಿನಕ್ಕೆ ಕೆಲವುಕಾಲದವರೆಗಾದರೂ ದೇಹಕ್ಕೆ ವಿಶ್ರಾಂತಿ ಇರಬೇಕು. ದೇಹದ ಕೆಲಸವು ಸರಿಯಾಗಿ ನಡೆಯಬೇಕಾದರೆ, ವಿಶ್ರಾಂತಿಯಿರುವುದವಶ್ಯವು. ಅದಿಲ್ಲದಿದ್ದರೆ ವ್ಯಾಧಿಯುಂಟಾಗುವುದು. ನಿದ್ರೆ ಮಾಡುವುದರಿಂದ ದೇಹಕ್ಕೆ ವಿಶ್ರಾಂತಿಯುಂಟಾಗಿ, ಅದರಿಂದ ಕಶ್ಮಲಗಳೆಲ್ಲವೂ ನಮ್ಮ ದೇಹದಲ್ಲಿ ತಂಗದೆ, ಮರುದಿನಕ್ಕೆ ದೇಹವು ಕೆಲಸಕ್ಕೆ ಸಿದ್ಧವಾಗುವುದು.

ಆದುದರಿಂದ, ಚೆನ್ನಾಗಿ ನಿದ್ರಿಸಬೇಕು. ಸುಖವಾದ ನಿದ್ರೆಯು ಬರಬೇಕೆಂದರೆ, ಈ ಕೆಳಗೆ ಕಾಣಿಸಿರುವ ವಿಧಿಗಳನ್ನನುಸರಿಸಬೇಕು.

(೧) ನಿದ್ರೆಮಾಡುವುದಕ್ಕೆ ಮೊದಲು ಅಧಿಕವಾಗಿ ಊಟಮಾಡಬಾರದು. ಅದು ನಿದ್ರೆಯನ್ನು ಕೆಡಿಸಿಬಿಡುವುದು. ನಿದ್ರೆಗೆ ಹೋಗುವುದಕ್ಕೆ ಕೊನೆಯಪಕ್ಷ ೨ ಗಂಟೆಗಳ ಮುಂಚೆಯೇ ಆಹಾರವನ್ನು ತೆಗೆದುಕೊಳ್ಳಬೇಕು.

(೨) ನಿದ್ರೆಮಾಡುವುದಕ್ಕೆ ಮೊದಲು ಯಾವ ಚಿಂತಾವ್ಯಸನಗಳೂ ಇರಕೂಡದು.

(೩) ನಿದ್ರಿಸುವ ಸ್ಥಳದಲ್ಲಿ ಶುದ್ಧವಾದ ಗಾಳಿಯ ಸಂಚಾರವು ಬೇಕು. ಆ ಸ್ಥಳವೂ ಶುದ್ಧವಾಗಿರಬೇಕು.

(೪) ಸಾಯಂಕಾಲದಲ್ಲಿ ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ವೇಗವಾಗಿ ನಡೆಯುವುದರಿಂದಲೂ ಸುಖವಾದ ನಿದ್ರೆಬರುವುದು.

(೫) ಕಾಫಿ. ಟೀ, ಹೊಗೆಸೊಪ್ಪು, ಮುಂತಾದ ಉತ್ತೇಜಕ ವಸ್ತುಗಳನ್ನು ಪ್ರಯೋಗಿಸಬಾರದು. ಪ್ರತಿದಿನವೂ ತಪ್ಪದೆ ಮಲವಿಸರ್ಜನೆಯಾಗುತ್ತಿರಬೇಕು.

ಸಾಧಾರಣವಾಗಿ ಒಬ್ಬ ಮನುಷ್ಯನು ದಿನಕ್ಕೆ ೨೪ ಗಂಟೆಗಳಲ್ಲಿ ೮ ಗಂಟೆಗಳಕಾಲದವರೆಗಾದರೂ ನಿದ್ರೆಮಾಡಬೇಕು. ಎಂದರೆ, ಅವನು ದಿನದ ಮೂರರಲ್ಲಿ ಒಂದು ಭಾಗವನ್ನು ನಿದ್ರೆಯಲ್ಲಿ ಕಳೆಯಬೇಕು. ಆದರೆ, ನಿದ್ರೆಯು ಅವನ ಆರೋಗ್ಯಕ್ಕೂ, ಅವನ ವಯಸ್ಸಿಗೂ ತಕ್ಕಂತೆ ಬೇರ್ಪಡುವುದು. ಸಾಧಾರಣವಾಗಿ ನಿದ್ರೆಯ ಕಾಲವನ್ನು ಈ ಕೆಳಗೆ ಕೊಟ್ಟಿದೆ.

ವಯಸ್ಸು	ಗಂಟೆಗಳು
ಮೊದಲನೆಯ ವರ್ಷದಲ್ಲಿ	ದಿನಕ್ಕೆ ೨
ಎರಡನೆಯ ವರ್ಷದಿಂದ	
೫ ನೆಯ ವರ್ಷದವರೆಗೆ	„ ೧
೫ ವರ್ಷದಿಂದ ೧೦ ರ ವರೆಗೆ	„ ೧
೧೦ ರಿಂದ ೧೮ರ ವರೆಗೆ	„
ದೊಡ್ಡವರಿಗೆ	„

ಶರೀರದಲ್ಲಿ ಆರೋಗ್ಯವಿಲ್ಲದಿದ್ದವರಿಗೆ ಅಧಿಕನಿದ್ರೆಯು ಬೇಕು. ವ್ಯಾಧಿಯನ್ನು ಗುಣಪಡಿಸುವುದರಲ್ಲಿ ವಿಶ್ರಾಂತಿಯು ಒಂದು ಮುಖ್ಯವಾದ ಅಂಶವು.

ರಾತ್ರಿ ಶೀಘ್ರವಾಗಿ ನಿದ್ರಿಸುವುದಕ್ಕೂ, ಬೆಳಗ್ಗೆ ಶೀಘ್ರವಾಗಿ ಏಳುವುದಕ್ಕೂ ಪ್ರಯತ್ನಿಸಬೇಕು. ಅರ್ಧರಾತ್ರಿಗೆ ಮೊದಲು ಒಂದುಗಂಟೆ ನಿದ್ರೆಮಾಡುವುದು, ಅದರಿಂದಾಚೆಗೆ ೨ ಗಂಟೆಗಳ ನಿದ್ರೆಗೆ ಸಮಾನವು.

ಕೆಳಗೆಕಂಡ ಆರೋಗ್ಯ ವಿಧಿಗಳು ಬಹಳ ಉಪಯೋಗವಾಗಿರುವುವು.

(೧) ಆಹಾರದಲ್ಲಿಯೂ, ಪಾನಮಾಡುವುದರಲ್ಲಿಯೂ, ವ್ಯಾಯಾಮದಲ್ಲಿಯೂ, ನಿದ್ರೆಯಲ್ಲಿಯೂ, ಕೆಲಸದಲ್ಲಿಯೂ, ಸಂತೋಷದಲ್ಲಿಯೂ, ಯಾವುದರಲ್ಲಿಯೂ, ಮಿತವಾಗಿರಬೇಕು. ಯಾವುದರಲ್ಲಿಯೂ ಮಿತವಾಗಿರುವುದೇ ಉತ್ತಮವಾದ ಆರೋಗ್ಯವಿಧಿಯಾಗುವುದು.

(೨) ತಿಂಗಳಿಗೆ ಒಮ್ಮೆಯಾದರೂ ಅಥವಾ ಎರಡುವಾರಗಳಿಗೊಮ್ಮೆಯಾದರೂ ಒಂದುವೇಳೆ ಮಾತ್ರ ಉಪವಾಸವಿರಬೇಕು. ಇದರಿಂದ ಅವಯವಗಳೆಲ್ಲವೂ ಶುದ್ಧವಾಗಿ ಚಟುವಟಿಕೆಯಾಗಿ ಕೆಲಸಮಾಡಬಹುದು.

(೩) ಹಲ್ಲುಗಳನ್ನು ಹಲ್ಲುಪೋಣದಿಂದ ಬ್ರಷ್ಷಿನ ಮೂಲಕವಾಗಿ ತೊಳೆದು ಶುದ್ಧವಾಗಿಸಿ ಗಟ್ಟಿಯಾಗಿರುವಂತೆ ಕಾಪಾಡಬೇಕು. ಆಗಾಗ ಹಲ್ಲುಗಳಿಗೆ ತಕ್ಕ ವ್ಯಾಯಾಮವನ್ನು ಕೊಡಬೇಕು.

(೪) ದೇಹವನ್ನು ಆಗಾಗ ಸೂರ್ಯರಶ್ಮಿಯು ಮುಟ್ಟುವಂತೆ ತೆರೆದಿಡಬೇಕು. ಸೂರ್ಯರಶ್ಮಿಯು ದೇಹದ ವಿಷಕ್ರಿಮಿಗಳನ್ನು ಕೊಲ್ಲುವುದು.

(೫) ನಿಮ್ಮ ಕೆಲಸದಲ್ಲಿ ಮಾರ್ಪಾಡಿರಬೇಕಾದುದು ಅವಶ್ಯವಾದುದರಿಂದ, ನೀವು ಪ್ರತಿದಿನವೂ ಏನಾದರೂ ಆಟವಾಡುತ್ತಿರಬೇಕು.

(೬) ಮದಹುಟ್ಟಿಸುವ ಪಾನಗಳು, ಹೊಗೆಸೊಪ್ಪು, ಇವು ನರಗಳಿಗೆ ಸಂಬಂಧವಾದ ಮತ್ತು ಶ್ವಾಸ ಸಂಬಂಧವಾದ ಅವಯವಗಳನ್ನು ಕೆಡಿಸುವುದರಿಂದ, ಅವುಗಳನ್ನು ಬಿಟ್ಟುಬಿಡಬೇಕು.

(೭) ಮನಸ್ಸು ಸಂತೋಷವಾಗಿಯೂ, ನೆಮ್ಮದಿಯಾಗಿಯೂ ಇರಬೇಕು. ಇತರಜನರಲ್ಲಿ ಪ್ರೀತಿಯುಳ್ಳವನಾಗಿರಬೇಕು. ಕೋಪ, ವಿರೋಧ, ಅತ್ಯಾಶೆ, ಚಿಂತೆ ಇವುಗಳನ್ನೆಲ್ಲ ನೀಗಬೇಕು. ಏಕೆಂದರೆ, ಇವುಗಳೆಲ್ಲ ಆರೋಗ್ಯಕ್ಕೆ ಶತ್ರುಗಳಾಗಿರುವುವು.

(೮) ಸ್ತ್ರೀ ಸಂಭೋಗದಲ್ಲಿ ಮಿತವಿರಬೇಕು. ಅದು ಆರೋಗ್ಯಕ್ಕೆ ಕೆಡಕನ್ನುಂಟುಮಾಡುವುದು.

(೯) ಉಗುರುಗಳನ್ನೂ, ಕೂದಲುಗಳನ್ನೂ ಆಗಾಗ ತೆಗೆಸದೆ ಬೆಳೆಸಿಬಿಟ್ಟರೆ, ಅವುಗಳಲ್ಲಿ ವಿಷವಿರುವದರಿಂದ, ಅವು ನಮ್ಮ ದೇಹದಲ್ಲಿ ವಿಷಸಂಬಂಧವನ್ನುಂಟುಮಾಡುವವು.

(೧೦) ತೇವವಾದ ಕಾಲುಗಳೊಡನೆ ಕುಳಿತುಕೊಂಡರೂ, ಅಥವಾ ನಿದ್ರಿಸಿದರೂ ಅವು ಮೂತ್ರಪಿಂಡಗಳನ್ನೂ, ಶ್ವಾಸಕೋಶಗಳನ್ನೂ ಕೆಡಿಸುವುವು.

(೧೧) ಕೂದಲನ್ನೂ ಚರ್ಮವನ್ನೂ ಶುದ್ಧವಾಗಿ ಕಾಪಾಡಬೇಕು. ಇಲ್ಲದಿದ್ದರೆ ದೇಹಸೌಂದರ್ಯವು ತಗ್ಗಿಹೋಗುವುದು.

(೧೨) ಹಸಿಯ ಕಾಯಿಪಲ್ಯಗಳನ್ನೂ, ರುಚಿಯಾದ ಹಣ್ಣುಗಳನ್ನೂ, ಬೀಜಗಳನ್ನೂ, ತಿನ್ನುವುದೊಳ್ಳೆಯದು. ಕಾರವಾದ ವಸ್ತುಗಳನ್ನೂ, ಮಿಠಾಯಿ ಮೊದಲಾದ ಸೀಪದಾರ್ಥಗಳನ್ನೂ, ತಿನ್ನಕೂಡದು.

(೧೩) ಕ್ಷಯರೋಗ, ಕುಷ್ಠರೋಗ, ಸಿಡುಬು, ವಿಷಜ್ವರಗಳು, ಮುಂತಾದುದರಿಂದ ಬಾಧೆಪಡುವ ಜನರಲ್ಲಿ ಸಂಪರ್ಕ ಮಾಡಬಾರದು.

(೧೪) ನಿಮ್ಮ ದೃಷ್ಟಿಯು ಸರಿಯಾಗಿರಬೇಕೆಂದರೆ ಸೂರ್ಯರಶ್ಮಿಯಲ್ಲಿ ಓದಬೇಕು. ಸೂರ್ಯನನ್ನು ನೇರವಾಗಿ ನೋಡಕೂಡದು. ಅತಿ ಪ್ರಕಾಶವಾದ ಬೆಳಕಿನಲ್ಲಿಯೂ ಓದಕೂಡದು. ಸಣ್ಣ ಸಣ್ಣ ಅಚ್ಚುಗಳನ್ನು ಓದಕೂಡದು ಮಲಗಿಕೊಂಡು, ಅಥವಾ ಬಂಡಿಯಲ್ಲಿ ಹೋಗುತ್ತಾ, ಓದಕೂಡದು. ಕಣ್ಣುಗಳಲ್ಲಿ ಧೂಳು ಸೇರುವ ಹಾಗೆ ತೆರೆದಿಡಕೂಡದು. ತಂಪಾದ ಎಣ್ಣೆಯನ್ನು ತಲೆಗೆ ಲೇಪಿಸಬೇಕು.

(೧೫) ಹಿಂದೆ ನಡೆದುಹೋದವುಗಳನ್ನು ಮರೆತು ಮುಂದೆ ನಿಮಗೆ ಒಳ್ಳೆಯದಾಗುವುದಕ್ಕಾಗಿ ನಿಮ್ಮ ಗಮನವನ್ನೆಲ್ಲ ಅದರಲ್ಲಿಡಬೇಕು.

(೧೬) ನಿಮಗೆ ಜಯವುಂಟಾಗಬೇಕೆಂದು ಯಾವಾಗಲೂ ಭಗವಂತನನ್ನು ಪ್ರಾರ್ಥಿಸುತ್ತಿರಿ!

ಅ. ಚಂ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೪—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಅಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರು,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 10

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮುಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾನ್ ಅಂಡ್ ಸನ್ಸ್

ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಸೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [43]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರಗುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1, 1-8-0, 7-0-0

ಹೂಪಿಂಗ್ ಕಫ್ ರೆಮಿಡಿ—ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಫಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

☞ ಶುದ್ಧ ಟಿಂಕ್ಚರುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪಟ್ಟಿಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ನೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೊಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [8]

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

SREE SITHARAGHAVA
VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ ಪ್ಲೇಗು, ಎದೆಭಾರ ಅಜೀರ್ಣದ ಹೊಟ್ಟೆನೋವು ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಪದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸಕ್ತಿಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರ ಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸೆ ಬೆಲೆ 4 ಅಣೆ ಮಾತ್ರವೇ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ).

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.
[41]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦ ಆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಿಶಿ, ಒಂ ತಲೆನೋವು, ತಲೆ ಳ್ಳಿಯ ರೋಗಗ ಕಣ್ಣುಗಳಲ್ಲಿ ಉಂಟ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಲೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ

[42] ಪೋ. ಬಾ. ೫೧೧, ಮದರಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

REGISTERED No. M.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ನೇ ಏಪ್ರೆಲ್ ೧೯೩೪ [ಸಂಚಿಕೆ ೫೩

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ.

೨೨ ನೆಯ ಏಪ್ರಿಲ್ ೧೯೩೪ ರಲ್ಲಿ ರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯು ಮಾಡಿದ ಗೊತ್ತುವಳಿ.

ಕರ್ನಾಟಕಸಾಹಿತ್ಯಪರಿಷತ್ತಿನ ಕಾರ್ಯನಿರ್ವಾಹಕಮಂಡಲಿ ಈ ಅಧಿವೇಶನವು ಬಳ್ಳಾರಿ ಜಿಲ್ಲೆಯ ಆದೋನಿ, ಆಲೂರು, ದುರ್ಗ ಮೊದಲಾದ ಕಡೆಗಳಲ್ಲಿ ಇರುವ ಕನ್ನಡ ಪಾಠಶಾಲೆ ನ್ನು ತೆಗೆದು ಹಾಕಿಸಲು ಆಂಧ್ರರು ಪ್ರಯತ್ನಿಸುತ್ತಿರುವರೆಂಬು ನ್ನು ಕೇಳಿ ವಿಷಾದಿಸುತ್ತದೆ. ಮತ್ತು ಮದರಾಸು ಸರಕಾರದ ಬಳ್ಳಾರಿ ಜಿಲ್ಲೆಯ ವಿದ್ಯಾಶಾಖೆಯ ಅಧಿಕಾರಿಗಳೂ ಇಂಥ ಯತ್ನಗಳ ವಿಷಯದಲ್ಲಿ ಅಸಮ್ಮತಿಯನ್ನು ತೋರಿಸಬೇಕೆಂದೂ ರಿ ಜಿಲ್ಲೆಯ ಕನ್ನಡ ಸ್ವರೂಪವನ್ನು ಕಾಪಾಡಬೇಕೆಂದೂ ರ್ಥಿಸುತ್ತದೆ. ಕನ್ನಡ ಪಾಠಶಾಲೆಗಳನ್ನು ತೆಗೆದುಹಾಕುವ ಅಥವಾ ದುರ್ಬಲಪಡಿಸುವುದಕ್ಕೆ ಪ್ರತಿಯಾಗಿ, ಮದರಾಸು ರವು ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಕನ್ನಡದ ಯಾಸೌಕರ್ಯಗಳನ್ನು ಬಲಪಡಿಸಿ ವಿಸ್ತರಪಡಿಸಲು ಹೆಚ್ಚು ವನ್ನು ಕೊಡಬೇಕೆಂದು ಈ ಮಂಡಲಿಯು ಅಭಿಪ್ರಾಯಪಡು . ಹೊಸಪೇಟೆಯಲ್ಲಿರುವ ಕನ್ನಡ ಟ್ರೈನಿಂಗ್ ಸ್ಕೂಲನ್ನು ಇದರಸಂಖ್ಯೆಯನ್ನು) ಮುಚ್ಚಬೇಕೆಂದು ಬಳ್ಳಾರಿ ಜಿಲ್ಲೆಯ ಮಂಡಿ ವಿದ್ಯಾಶಾಖೆಯ ಅಧಿಕಾರಿಗಳು ಶಿಫಾರಸು ಮಾಡಿ ರೆಂಬ ವ [illegible] ಮಾಚಾರದ ವಿಚಾರದಲ್ಲಿ ಮಂಡಲಿಯು ತನ್ನ ಆಗ್ರಹ [illegible] ಅಸಮಾಧಾನವನ್ನು ಸೂಚಿಸುತ್ತ ಈ ಮೇಲ್ಕಂಡ [illegible] ಕರ್ನಾಟಕ ವಿದ್ಯಾ ಸಂಘವು ಕೊಪ್ಪಳದಲ್ಲಿ [illegible] ನೆಯ ಮಾರ್ಚಿ ೨೦ರಲ್ಲಿ ಮಾಡಿದ ಗೊತ್ತುವಳಿಯನ್ನು ಮಂಡಲಿಯು ಪುಷ್ಟೀಕರಿಸುತ್ತದೆ. ಇದೇ ವಿಚಾರದಲ್ಲಿ ರ್ಣಾಟಕಸಾಹಿತ್ಯ ಸಮ್ಮೇಳನವು ಬೆಳ್ಗಾಂವಿಯಲ್ಲಿ ಕಳೆದ ಡಿಸೆಂ ನಲ್ಲಿ ಅಂಗೀಕಾರ ಮಾಡಿದ ನಿರ್ಣಯಗಳಿಗೆ ಮದರಾಸು ಸರ ರದ ಗಮನವನ್ನು ಸೆಳೆಯುತ್ತದೆ. ರಾಜ್ಯಾಧಿಪತ್ಯದ ಕನ್ನಡ ಪ್ರದೇಶಗಳ ಭಾಷಾಸಂಸ್ಕೃತಿಗಳ ಐಕ್ಯತೆಯನ್ನು ಒದೆಯುವಂತೆ ಕಾಪಾಡಲು ಮದರಾಸು ಸರಕಾರವನ್ನು ಈ ಮಂಡಲಿಯು ನಂಬಿಕೊಂಡಿರುತ್ತದೆ.

ಹಲಕೂರು ಸಾಹುಕಾರ್ ಧರ್ಮಧುರಂಧರ ಮರುಳಸಿದ್ದಪ್ಪಶೆಟ್ಟರವರು 17-4-34 ರಲ್ಲಿ ಶಿವಾಧೀನರಾದರೆಂಬುದನ್ನು ಕೇಳಿ ಬಹಳ ವಿಷಾದಪಡುತ್ತೇವೆ. ಸುಪ್ರಸಿದ್ಧ ಗುರುಭಕ್ತರಲ್ಲಿ ಒಬ್ಬರಾಗಿದ್ದ ಇವರ ವಿಯೋಗವು ಸಮಾಜಕ್ಕೆ ವಿಷಾದಾಸ್ಪದವಾಗಿದೆ. ಈಶ್ವರನು ಇವರ ಕುಟುಂಬವರ್ಗಕ್ಕೆ ದುಃಖಶಮನವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇವೆ.

ರಾಜಧಾನಿಯಲ್ಲಿ ಭೀಕರ ಕೊಲೆ !

ನಿನ್ನೆ ಭಾನುವಾರ (29-4-34) ರಾತ್ರಿ ಮೈಸೂರು ಹಳೇ ಅಗ್ರಹಾರದಲ್ಲಿರುವ ಚಿಕ್ಕಬಸವೇಶ್ವರ ದೇವಾಲಯದ ಸಮೀಪದಲ್ಲಿ ಒಬ್ಬರ ಮನೆಯಲ್ಲಿ ಯಾರೋ 3 ಜನ ಪರಸ್ಥಳದವರು ಮಲಗಿಕೊಂಡಿದ್ದರು. ಸಮರಾತ್ರಿಯಲ್ಲಿ ಅವರ ಪೈಕಿ ಇಬ್ಬರು 3 ನೆಯವನನ್ನು ಖೂನಿಮಾಡಿ ಅವನ ಬಳಿಯಲ್ಲಿದ್ದ ಹಣವನ್ನು ಅಪಹರಿಸಿಕೊಂಡು ಪರಾರಿಯಾಗಿರುತ್ತಾರೆ. ಪೋಲೀಸರು ತನಿಖೆಮಾಡುತ್ತಿರುವರು.

ಬೀಹಾರ್ ಪ್ರಾಂತದಲ್ಲಿ ಭೂಕಂಪವಾದ ಪ್ರದೇಶದಲ್ಲಿರುವ 150 ರೂ. ಗಳಿಗಿಂತಲೂ ಕಡಿಮೆ ಸಂಬಳವನ್ನು ತೆಗೆದುಕೊಳ್ಳುವ ಸರಕಾರಿ ನೌಕರರಿಗೆ 3 ತಿಂಗಳ ಸಂಬಳವನ್ನು ಮುಂಗಡವಾಗಿ ಕೊಡತಕ್ಕದ್ದೆಂದು ಇಂಡಿಯಾ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವದ ಕಾಲದಲ್ಲಿ ರಾಜಧಾನಿಯಲ್ಲಿ ದ್ವಿತೀಯ ವಾರ್ಷಿಕ ಸ್ವದೇಶೀ ವಸ್ತುಪ್ರದರ್ಶನವು ಜೂನ್ 18 ನೇ ತಾರೀಖಿನಿಂದ 8-10 ದಿವಸಗಳ ವರೆಗೆ ನಡೆಯುವದು.

ಇಂಡಿಯಾ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಮೆಂಬರರಾದ ಸರ್ ಜೋಸೆಫ್ ಭೋರ್‌ರವರು ಏಪ್ರಿಲ್ 25 ನೇ ತಾರೀಖಿನ ದಿವಸ ಸಪತ್ನೀಕರಾಗಿ ಬೆಂಗಳೂರಿಗೆ ಆಗಮಿಸಿದರು. ಮರುದಿವಸ ದ್ವಿತೀಯ ಸಚಿವರೊಡನೆ ಮಂಡ್ಯಕ್ಕೆ ಹೋಗಿ ಸಕ್ಕರೆಯ ಕಾರ್ಖಾನೆಯನ್ನು ನೋಡಿ ಸಾಯಂಕಾಲ ಹಿಂತಿರುಗಿ ಬೆಂಗಳೂರಿಗೆ ಬಂದರು. 28ನೇ ತಾರೀಖಿನ ದಿವಸ ಅವರು ಸಿಮ್ಲಾಕ್ಕೆ ಪ್ರಯಾಣ ಮಾಡಿದರೆಂದು ತಿಳಿದುಬಂದಿದೆ.

ಮೈಸೂರು ಸರಕಾರದವರು ಈ ಕೆಳಗೆ ಕಂಡ ದೊಡ್ಡ ಮನುಷ್ಯರನ್ನು ಎರಡು ವರ್ಷಗಳ ವರೆಗೆ ರಾಜಧಾನಿಯ ಬೆಂಚ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿ, ಎರಡನೇ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಕೊಟ್ಟಿರುತ್ತಾರೆ.—ಶ್ರೀ॥ ಬಸವರಾಜ ಅರಸರವರು, ಶ್ರೀ॥ ಹುಸೇನ್ ಅಲೀಖಾನ್‌ರವರು, ಶ್ರೀ॥ ಸಾಹುಕಾರ್ ದೊಡ್ಡಜವರಪ್ಪನವರು ಮತ್ತು ಶ್ರೀ॥ ಪಿ. ಕೆ. ಕೃಷ್ಣಯ್ಯಂಗಾರ್ಯರವರು.

ಕಳೆದ ಮಂಗಳವಾರ ಮಧ್ಯಾಹ್ನ ರಾಜಧಾನಿಯ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಸಮೀಪದಲ್ಲಿ ಜನಾನಾ ಮಿಷನ್‌ಗೆ ಸೇರಿದ ಮಿಸ್ ಫ್ರಾಡ್‌ಷಾಂ ಎಂಬಾಕೆಯ ಮೋಟಾರು ರಾಮಾನುಜಯ್ಯಂಗಾರ್ ಎಂಬ 60 ವರ್ಷದ ವೃದ್ಧರ ಮೇಲೆ ಹರಿದು ವಿಶೇಷವಾಗಿ ಘಾಯಪಡಿಸಿತು. ಕೂಡಲೇ ಅವರನ್ನು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಿದರು. ಆದರೆ ಚಿಕಿತ್ಸೆಯನ್ನು ಮಾಡುತ್ತಿದ್ದಂತೆಯೇ ಅಯ್ಯಂಗಾರ್ಯರು ಮೃತಿಹೊಂದಿದರು. ಪೋಲೀಸರು ತನಿಖೆ ಮಾಡುತ್ತಿರುವರು.

ಬೆಂಗಳೂರು ನಗರದ ಮ॥ ಶಿವಲಿಂಗಪ್ಪನವರ ಕುಮಾರಿ 10 ವರ್ಷದ ಚಿ॥ ಬೋರಮ್ಮನೆಂಬ ಬಾಲಕಿಯು ಕಳೆದ ಭಾನುವಾರ ಬೆಳಿಗ್ಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆಯ ವರೆಗೆ ಕೆಂಪಾಂಬುಧಿ ಕೆರೆಯಲ್ಲಿ ಈಜಿದಳು. ದ್ವಿತೀಯ ಸಚಿವರು, ಮುನಿಸಿಪಲ್ ಪ್ರೆಸಿಡೆಂಟರೇ ಮೊದಲಾದವರು ಈ ಹುಡುಗಿಯ ಸಾಹಸವನ್ನು ನೋಡಿ ಅತ್ಯಂತ ಸಂತೋಷಪಟ್ಟುದುದಲ್ಲದೆ ಅನೇಕ ಚಿನ್ನ ಬೆಳ್ಳಿ ಪಾತ್ರೆಗಳನ್ನೂ ಉಡುಗೊರೆಗಳನ್ನೂ ಬಹುಮಾನವಾಗಿ ಕೊಟ್ಟರು. ಈಕೆಯ ಸಾಹಸವನ್ನು ಇದುವರೆಗೆ ಹಿಂದೂಸ್ಥಾನದಲ್ಲಿ ಯಾರೂ ಮಾಡಿಲ್ಲವೆಂದು ತಿಳಿದುಬಂದಿದೆ.